





ಸಂಪುಟ ೧

ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ

ಪ್ರಧಾನ ಸಂಪಾದಕ

ಪ್ರೊ. ಅಂಬಳಿಕೆ ಹಿರಿಯಣ್ಣ

ಕಾರ್ಯನಿರ್ವಾಹಕ ಸಂಪಾದಕ

ಪ್ರೊ. ಆರ್ವಿಯಸ್ ಸುಂದರಂ

ಸಂಪಾದಕ

ಪ್ರೊ. ಸ.ಚಿ. ರಮೇಶ




ದಕ್ಷಿಣ ಭಾರತೀಯ
ದೇಶೀ ಕೃಷಿವಿಜ್ಞಾನ ಕೋಶ

ಸಂಪುಟ ೧

ಅಂಜೂರ ಅಂಜೂರ ಪುಷ್ಟಿದಾಯಕ ಹಣ್ಣು ನೀಡುವ ಮರಗಳಲ್ಲಿ ಒಂದು. ಇದು ಅತ್ತಿಯ ಜಾತಿಗೆ ಸೇರಿದ ಮರ. ಇದನ್ನು ಅಂಜರ, ಅಂಜೀರ, ಅಂಜುರ, ಅಂಜೂರಿ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು ಫೈಕಸ್‌ಕ್ಯಾರಿಸೇ. ಇದು ಮೊರೇಸಿ ಕುಟುಂಬಕ್ಕೆ ಸೇರಿದೆ.

ಜನಪದ ಮತ್ತು ಶಿಷ್ಟಕಾವ್ಯಗಳಲ್ಲಿ ಇದರ ಉಲ್ಲೇಖಗಳಿವೆ.

I. **ಜನಪದ ಸಾಹಿತ್ಯ : (ಅ) ಬಂಜೆಯ ಮನಿಮುಂದ ಅಂಜೂರಗಿಡಹುಟ್ಟಿ**
ಟೊಂಗಿ, ಟೊಂಗಿಗೊಂದು ಗಿಳಿ ಕುಳಿತು
ಹೇಳ್ಯಾವ ಬಂಜಿ ನಿನ ಬಾಳು ಹೆರವರಿಗೆ.
(ಗರತಿಯ ಹಾಡು)

ಆ) ಅಂಜರದ್ಹಣ್ಣಾಕಿ ಸಲವಿದನಲ ತಂಗಿ (ಮಲ್ಲಿಗೆ ದಂಡೆ-48)

II. ಶಿಷ್ಟ ಸಾಹಿತ್ಯ : (ಅ) ಅಂಜರ, ಅಂಜರಮುಂ ಖರ್ಜೂರಮುಂ..... ಮಂಜುಳದು-ದ್ಯಾನವನದೊಳಿರ್ಪವು ಪೆಂಪಿಂ (ಹಮ್ಮೀರ ಕಾವ್ಯ 4-15), (ಆ) ಅಂಜೀರ: ಕಾನಡಾ ತೋಟಗಳಲ್ಲಿ ಕಿತ್ತಳೆ, ಕಂಜಿ, ಅಂಜೀರ ...... ಫಲಗಳು ಬೆಳೆಯುತ್ತವೆ (ಕ. ಭಾಗ, 276). (ಇ) ಇವಲ್ಲದೆ ಮತ್ತೊಂದು ಕಡೆಗೆ ಅಂಜೀರವನ್ನು (ಕೃಷಿಜ್ಞಾನ ಪ್ರದೀಪಿಕೆ. 143), (ಈ) ಅಂಜೂರ : ಉತ್ತುತ್ತೆ ಜೇನು ಅಂಜುರ ಶೇಪು (ವಾದಿರಾಜರ ಕೀರ್ತನೆ 1-149-2) ಪಾಂಡುರಂಗ ಪೇಠಕರು ; ಅಂಜೂರಿಯ ಗಿಡಗಳೂ ಅತ್ತೀ ಆಲದ ಮರಗಳೂ ಒಂದೇ ಜಾತಿಯೊಳಗಿನವು (ಕನ್ನಡ ಎರಡನೇ ಪುಸ್ತಕ, ಪು. 29). ಇದರಿಂದ ಅಂಜೂರದ ಪ್ರಾಚೀನತೆ ಮತ್ತು ಜನಪ್ರಿಯತೆಯನ್ನು ತಿಳಿಯಬಹುದು.

ಇದರ ಮೂಲಸ್ಥಳ ಏಷ್ಯಾ ಮೈನರಿನಲ್ಲಿರುವ ಕಾರಿಕ ಪ್ರದೇಶ. ಭಾರತ, ಆಫ್‌ಘಾನಿಸ್ಥಾನ, ಅರೇಬಿಯಾ ಮತ್ತು ಜಪಾನ್ ದೇಶಗಳನ್ನೊಳಗೊಂಡಂತೆ; ಯುರೋಪಿನ ಮೆಡಿಟರೇನಿಯನ್ ಸಮುದ್ರ ತೀರ ಪ್ರದೇಶಗಳಲ್ಲಿ, ತುರ್ಕಿಸ್ತಾನದಿಂದ ಸ್ಪೇನಿನವರೆಗೂ ಹಾಗೂ ಅಮೆರಿಕಾದಲ್ಲಿಯೂ ಇದರ ವ್ಯವಸಾಯವುಂಟು. ಅಂಜೂರವನ್ನು ಭಾರತ ದೇಶದ ಮಹಾರಾಷ್ಟ್ರ(ಪೂಣೆ), ಕರ್ನಾಟಕ (ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಬೀದರ್ ಮುಂತಾದವು), ಆಂಧ್ರ ಪ್ರದೇಶದ (ಅನಂತಪುರ), ತಮಿಳುನಾಡು, ಕೇರಳ, ಪಂಜಾಬ ಹಾಗೂ ಉತ್ತರ ಪ್ರದೇಶದ ಹಲವೆಡೆಗಳಲ್ಲಿ ಬೆಳೆಯುತ್ತಾರೆ.

ಸಾಮಾನ್ಯವಾಗಿ ಇದರ ಎತ್ತರ 18-20 ಅಡಿ. ಸಮಭಾಜಕ ವೃತ್ತ ಪ್ರದೇಶ ಹಾಗೂ ಭಾರತದ ಪಶ್ಚಿಮ ಘಟ್ಟಗಳ ಕೆಲವೆಡೆಗಳಲ್ಲಿ ಅತ್ತಿ, ಆಲದ ಮರದ ಹಾಗೆಯೇ ಸಮೃದ್ಧವಾಗಿ ಬೆಳೆಯುತ್ತದೆ. ಕಾಂಡವು ಪೊಳ್ಳಾಗಿರುತ್ತದೆ. ಎಲೆಗೆ ತೊಟ್ಟಿದ್ದು, ಪತ್ರ ಅಂಡಾಕಾರವಾಗಿ ಅಥವಾ ವೃತ್ತಾಕಾರವಾಗಿ ಅಭಿಮುಖ ಜೋಡನೆಯಲ್ಲಿರುತ್ತದೆ. ಸೀಳಿದ ಅಂಚಿದ್ದು 3 ರಿಂದ 6 ಹಾಲೆಗಳಿರುತ್ತವೆ. ಎಲೆಯ ಮೇಲ್ಭಾಗ ಒರಟಾಗಿದ್ದು ತಳಭಾಗದಲ್ಲಿ ರೋಮಗಳಂತಹ ರಚನೆಗಳಿವೆ. ಹಣ್ಣುಗಳು ಎಲೆಗಳ ಕಂಕುಳಲ್ಲಿ ಪೇರಳೆ ಹಣ್ಣಿನಾಕಾರದಲ್ಲಿರುತ್ತವೆ. ಅವುಗಳ ಗಾತ್ರ ಮತ್ತು ವರ್ಣಗಳಲ್ಲಿ ವ್ಯತ್ಯಾಸವುಂಟು.



ಪುಷ್ಪ ಮಂಜರಿಯೂ ಅತ್ತಿಯ ರಚನೆಯನ್ನೇ ಹೋಲುತ್ತದೆ. ಮಂದವಾದ ರಸದಿಂದೊಡಗೂಡಿದ ಶಲಾಕೆಯ ಮೇಲ್ಭಾಗದ ಕೋಶದೊಳಗಡೆ ಪುಟ್ಟ ಹೂಗಳಿರುತ್ತವೆ. ಪರಾಗಸ್ಪರ್ಶಕ್ರಿಯೆ ಗೊಂಚಲಿನಲ್ಲಿರುವ ಹೂಗಳ ಸ್ವರೂಪವನ್ನವಲಂಬಿಸಿದೆ. ಅಂಜೂರ ಬೀಜರಹಿತವಾಗಿದ್ದು, ಅವುಗಳನ್ನು ನಿರ್ಲಿಂಗ ರೀತಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.

III. ಅಂಜೂರ ಕೃಷಿಯುನ್ನು ಮುಖ್ಯವಾಗಿ ನಾಲ್ಕು ವಿಧಗಳಲ್ಲಿ ವರ್ಗೀಕರಿಸಬಹುದು.

(ಅ) ಅಸಾಧಾರಣ ಅಂಜೂರ : ಹೂಗೊಂಡೆಯಲ್ಲಿ ಹೆಣ್ಣು ಹೂಗಳು ಮಾತ್ರವಿದ್ದು, ಪರಾಗಸ್ಪರ್ಶವಿಲ್ಲದೆ ಅಥವಾ ಗರ್ಭಾಂಕುರವಿಲ್ಲದೆ ಕೋಶ ಬೆಳೆದು ಹಣ್ಣಾದರೆ ಅದು ಸಾಧಾರಣ ಅಂಜೂರ.

(ಆ) ಸ್ಮಿರ್ನಗ ಅಂಜೂರ : ಇದರ ಹೂಗೊಂಚಲಿನಲ್ಲಿ ಗಂಡು ಮತ್ತು ಹೆಣ್ಣು ಹೂಗಳಿರುತ್ತವೆ. ಶಲಾಕಾಗ್ರ ತುಂಡಾಗಿರುತ್ತದೆ. ಅಂಡಾಶಯಗಳನ್ನು ಉತ್ತೇಜನಗೊಳಿಸಿದರೆ ಹಣ್ಣುಗಳು ರೂಪುಗೊಳ್ಳುತ್ತವೆ. ಅಂದರೆ ಪರಾಗಕ್ರಿಯೆಗೆ ಪ್ರಚೋದನೆಯನ್ನು ನೀಡುವುದು.

(ಇ) ಕ್ಯಾಪ್ರಿ ಅಂಜೂರ : ಇವುಗಳ ಹೂ ಗೊಂಚಲು ಫಲಭರಿತವಾಗಬೇಕಾದರೆ ಅನ್ಯಪರಾಗಸ್ಪರ್ಶವಾಗಲೇಬೇಕು. ಇದಕ್ಕೆ ಅತ್ತಿಯ ಕಾಯಿಯ ಹುಳುಗಳು ಅಂಜೂರವನ್ನು ಕೊರೆಯುವಂತೆ ಮಾಡುವುದರಿಂದ ಅಥವಾ ಬೇರೆ ವಿಧವಾಗಿ ಕೊರೆಯುವುದರಿಂದ ಸಂತಾನಾಭಿವೃದ್ಧಿಯನ್ನು ಮಾಡಬಹುದು. ಇದನ್ನು 'ಕ್ಯಾಪ್ರಿಫಿಕೇಷನ್' ಎಂದು ಕರೆಯುತ್ತಾರೆ.

ಈ) ಸಾನ್ಪೆಡ್ರೊ ಅಂಜೂರ : ಇದು ಮಿಶ್ರತಳಿತಯಾಗಿದ್ದು, ಮೇಲಿನಂತೆಯೇ ಇರುತ್ತದೆ.

iv. ಭೂಸ್ವರೂಪ ಮತ್ತು ಹವಾಗುಣ : ಅಂಜೂರ ವ್ಯವಸಾಯಕ್ಕೆ ಯಾವುದೇ ತೆರನಾದ ಭೂಮಿಯಾದರೂ ಸರಿ, ಆದರೆ ಮರಳು ಮಿಶ್ರಿತ ಎರೆ ಭೂಮಿ ಹಾಗೂ ಲವಣಯುಕ್ತ ಭೂಮಿಯಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಅಂಜೂರ ತೋಟಗಳಲ್ಲಿ ನೀರು ನಿಲ್ಲುವಂತಿರಬಾರದು. ಫಸಲು ಮಾಗುವ ಸಮಯದಲ್ಲಿ ಒಣಹವೆ ಇದ್ದರೆ ಉತ್ತಮ ಗುಣಮಟ್ಟದ ಹಣ್ಣುಗಳನ್ನು ಪಡೆಯಬಹುದು. ಹೆಚ್ಚು ಮಳೆಬೀಳುವ ಪ್ರದೇಶಗಳು ಅಂಜೂರ ಬೆಳೆಗೆ ಉಪಯುಕ್ತವಲ್ಲ.

v) ಕೃಷಿ ವಿಧಾನ : ಅಂಜೂರ ಕೃಷಿ ಇತರ ಹಣ್ಣಿನ ವ್ಯವಸಾಯದ ಹಾಗೆಯೇ ಆದರೂ ಸ್ವಲ್ಪ ವಿಭಿನ್ನವಾಗಿದೆ. ಮಣ್ಣಿನ ಪ್ರಾದೇಶಿಕ ವೈವಿಧ್ಯವನ್ನು ಅನುಸರಿಸಿ ಕೊಟ್ಟಿಗೆ ಹಾಗೂ ಕಾಂಪೋಸ್ಟ್ ಗೊಬ್ಬರ ನೀಡಬೇಕು. ಪ್ರಮುಖವಾಗಿ ಎರಡು ವಿಧಗಳು.

ಅ) ಕಾಂಡದ ತುಂಡು/ಗೂಟವಿಧಾನ : ಕಾಂಡವನ್ನು ಅಥವಾ ರೆಂಬೆಗಳನ್ನು 12 ಅಂಗುಲಕ್ಕೆ ಒಂದೊಂದರಂತೆ ಕತ್ತರಿಸಿ, ಹದಗೊಳಿಸಿದ ಪಾಲೆಗಳಲ್ಲಿ ಒಂದೊಂದು ಅಡಿ ಅಂತರದಲ್ಲಿ ನೆಡುತ್ತಾರೆ. ಕಂಕುಳ ಚಿಗುರೊಡೆದು ಎರಡು ಅಡಿ ಉದ್ದ ಬೆಳೆದ ಬಳಿಕ ತಡೆದು, ಅಂದರೆ 12-15 ತಿಂಗಳಲ್ಲಿ ಕಿತ್ತು 10-13 ಅಡಿ ಅಂತರವಿರುವಂತೆ ಅದಕ್ಕಾಗಿಯೇ ಸಿದ್ಧಪಡಿಸಿದ ಸಾಗುವಳಿ ಮಾಡಿದ ಭೂಮಿಯಲ್ಲಿ ನೆಡುತ್ತಾರೆ. (ಬ) ಗಿಡದಿಂದ ಟಿಸಿಲೊಡೆದ ಬಲಿತ ರೆಂಬೆಗಳನ್ನು ಬಾಗಿಸಿ ನೆಲದಲ್ಲಿ ಹೂಳಿ ಹೊಸ ಸಸ್ಯಗಳನ್ನು ಪಡೆಯಬಹುದು. ಅಂಜೂರದ ಎಲೆ ಮತ್ತು ಮೊಗ್ಗುಗಳನ್ನು ಅತ್ತಿ ಮತ್ತು ಆಲದ ಮರದ ರೆಂಬೆಗಳಿಗೆ ಸೇರಿಸಿ ಬೆಳೆಸುವುದರ ಮೂಲಕ ಹೊಸ ತಳಿಯ ಸಸ್ಯಗಳನ್ನು ಪಡೆಯಬಹುದು. ಮಣ್ಣಿನ ಗುಣಕ್ಕನುಗುಣವಾಗಿ ಸಸಿ ನೆಡುವ ಮೊದಲು ಗೊಬ್ಬರ (ಕುರಿ, ಮೇಕೆ, ಕೊಟ್ಟಿಗೆ ಗೊಬ್ಬರ)ವನ್ನು ಹಾಕಬೇಕು. ಕೆಲವು ಪ್ರದೇಶಗಳಲ್ಲಿ ಸೆಪ್ಟಂಬರ್ ತಿಂಗಳಲ್ಲಿ ಕಡಿಮೆ ಮಳೆ ಬೀಳುವ ಸಂದರ್ಭದಲ್ಲಿ ಗಿಡದ ಬುಡದ ಸುತ್ತ ಮಣ್ಣನ್ನು ಸಡಿಲಿಸಿ, ತಂತು ಬೇರುಗಳನ್ನು ಕತ್ತರಿಸಿ ಕೆಲವು ದಿವಸ ಒಣಗಲು ಬಿಡುತ್ತಾರೆ. ತದನಂತರ ಸಾಕಷ್ಟು ಗೊಬ್ಬರ ಸೇರಿಸಿ ಮಣ್ಣು ಮುಚ್ಚಿ ನೀರನ್ನು ಹಾಯಿಸುತ್ತಾರೆ. ಉತ್ತಮ ಇಳುವರಿಯನ್ನು ಪಡೆಯಲು ಆಗಾಗ ಕೆದುಕಿ ಮಣ್ಣನ್ನು ಸಡಿಲಗೊಳಿಸಬೇಕು. ಫಲಬಿಡುವ ಕಾಲದಲ್ಲಿ ಸದಾ ತೇವಾಂಶವಿರುವಂತೆ ಮತ್ತು ಹದವಾಗಿರುವಂತೆ ನೋಡಿಕೊಳ್ಳಬೇಕು. ಹೆಚ್ಚಾಗಿ ಕವಲೊಡೆದ ರೆಂಬೆಗಳನ್ನು ಪ್ರತಿವರ್ಷವು ಕತ್ತರಿಸಬೇಕು. ಪ್ರಾದೇಶಿಕವಾಗಿ ಬೇರೆ, ಬೇರೆ ತಿಂಗಳುಗಳಲ್ಲಿ ಕತ್ತರಿಸುವುದು ರೂಢಿ.

vi) ರೋಗಗಳು : ದಕ್ಷಿಣ ಭಾರತದಲ್ಲಿ ಅಂಜೂರಕ್ಕೆ ರೋಗ ಬಾಧೆ ಕಡಿಮೆ. ಕಾಡಿಗೆ ರೋಗ (ಬೂಸ್ಟ್) ಬಂದರೆ ಎಲೆಗಳು ಒಂದೊಂದರಂತೆ ಉದುರಿ ಇಳುವರಿ ಕಡಿಮೆ ಆಗುತ್ತದೆ. ಕೆಲವು ಕೀಟಗಳು ಕಾಂಡವನ್ನು ಕೊರೆಯುತ್ತವೆ. ದುಂಬಿಗಳು, ಎಲೆ, ಹಣ್ಣು ತಿಂದು ಹಾಳುಗೆಡುವಿದರೆ, ಕಂಬಳಿ ಹುಳು ಅಂಗಾಂಶಗಳನ್ನೆ ತಿಂದು ರೆಂಬೆಗಳನ್ನು ಒಣಗಿಸುತ್ತದೆ. ಇದರಿಂದ ಕೆಲವೊಮ್ಮೆ ಗಿಡ ನಾಶವಾಗಲೂಬಹುದು.

vii) ರೋಗಗಳ ಹತೋಟಿ ಕ್ರಮ : ಡಾಂಬರು ಬಳಿದ ಕಾಗದವನ್ನು ಗಿಡದ ಬುಡಕ್ಕೆ ಸುತ್ತಿ ರಕ್ಷಿಸುತ್ತಾರೆ. ತಂತಿಯನ್ನು ಬುಡಕ್ಕೆ ಸುತ್ತಿಯೂ ಗಿಡವನ್ನು ರಕ್ಷಿಸಬಹುದು. ಗಿಡ ಬಾಧಿಸುವ ಹುಳುಗಳನ್ನು ಸೀಮೆ ಎಣ್ಣೆಯಲ್ಲಿ ಹಾಕಿ ಸಾಯಿಸುತ್ತಾರೆ. ರೋಗ ತಗುಲಿದ ಹಣ್ಣುಗಳು, ಪೀಚುಗಳು ಬಿರಿಯುತ್ತವೆ. ಇಲ್ಲವೆ ಉದುರಿಹೋಗುತ್ತವೆ. ಹೆಚ್ಚು ರುಚಿಕರವಾದ ಹಣ್ಣನ್ನು ಬಾವಲಿ ಮತ್ತಿತರ ಪಕ್ಷಿ, ಪ್ರಾಣಿಗಳಿಂದ ಕಾಪಾಡಬೇಕು. ಈ ಗಿಡದ ಆಯಸ್ಸು ಕೇವಲ 15 ವರ್ಷಗಳಾಗಿದ್ದು ಎರಡು-ಮೂರು ವರ್ಷಗಳ ತರುವಾಯ ಫಸಲನ್ನು ಕೊಡಲು ಪ್ರಾರಂಭಿಸುತ್ತದೆ. ಇಳುವರಿ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಾ ಹೋಗಿ, ಗಿಡ ಮುದಿಯಾಗುತ್ತಾ ಬಂದಂತೆ ಇಳುವರಿ ಕಡಿಮೆಯಾಗಿ ಸಸ್ಯ ನಶಿಸುತ್ತದೆ. ಉತ್ತಮ ವಾತಾವರಣ, ಮಣ್ಣಿನ ಫಲವತ್ತತೆ, ಹದವರಿತು ಗೊಬ್ಬರ ಮತ್ತು ನೀರನ್ನು ಒದಗಿಸುವುದರಿಂದ ವರ್ಷಕ್ಕೆ ಎರಡು ಮೂರು ಬಾರಿ ಫಸಲನ್ನು ನಿರೀಕ್ಷಿಸಬಹುದು.

ಭಾರತದ ಕೆಲವು ಪ್ರಾಂತಗಳಲ್ಲಿ ಜುಲೈ-ಅಕ್ಟೋಬರ್ ತಿಂಗಳಲ್ಲಿ ಮೊದಲನೆಯ ಫಸಲನ್ನು, ಜನವರಿ-ಮೇ ತಿಂಗಳಿನಲ್ಲಿ ಎರಡನೇ ಫಸಲನ್ನು ಪಡೆಯುತ್ತಾರೆ. ಮೊದಲ ಫಸಲು ಹೆಚ್ಚು ಹುಳಿಯುಕ್ತವಾಗಿರುವುದರಿಂದ ಮೈಸೂರು ಮತ್ತು ಪುಣೆ ಭಾಗಗಳಲ್ಲಿ ತಿನ್ನಲು ಉಪಯೋಗಿಸುವುದಿಲ್ಲ. ಹಣ್ಣನ್ನು ಎರಡು ರೀತಿಯಲ್ಲಿ ಉಪಯೋಗಿಸಬಹುದು. 1) ಹಸಿ ಹಣ್ಣನ್ನು ನೇರವಾಗಿ ಬಳಸುವುದು. 2) ಗಿಡದಿಂದ ಉದುರಿದ ಹಣ್ಣು ಶೇಖರಿಸಿ, ಒಣಗಿಸಿಟ್ಟುಕೊಳ್ಳಬಹುದು. ಒಣಗಿಸುವ ಪದ್ಧತಿಯು ಪ್ರಾದೇಶಿಕವಾಗಿ ಭಿನ್ನವಾಗಿರುತ್ತದೆ. ದಕ್ಷಿಣ ಭಾರತದಲ್ಲಿ ಒಣಗಿಸಿ ಮಾರುವುದು ಕಡಿಮೆ. ಮಾರುಕಟ್ಟೆಯಲ್ಲಿ ದೊರೆಯುವ ಹಣ್ಣು ಪುಣೆ ಮೂಲದ್ದು. ಮರದ ತಟ್ಟೆಗಳಲ್ಲಿ ಇಟ್ಟು ಅರ್ಧ ಗಂಟೆ ಗಂಧಕದ ಹೊಗೆಯನ್ನು ಕೊಡಬೇಕು. ಹದವರಿತು ಹಣ್ಣುಗಳನ್ನು ಅದುಮಿ ಬಿಲ್ಲೆಗಳಂತೆ ಮಾಡುತ್ತಾರೆ. ಮಾರುಕಟ್ಟೆಗೆ ಬಿಡುವ ಮುನ್ನ ಎಂದರೆ ಪೆಟ್ಟಿಗೆಗೆ ತುಂಬುವ ಮೊದಲು ಶೇ. 2ರಷ್ಟು ನೀರನ್ನು ಕುದಿಸಿ ಉಪ್ಪಿನಂಶವಿರುವ ಹಣ್ಣುಗಳನ್ನು ಅದ್ದಿ ತೆಗೆಯುವರು. ಗುಣಮಟ್ಟವನ್ನು ಆಧರಿಸಿ ಇವುಗಳ ಬೆಲೆ

ನಿರ್ಧಾರವಾಗುತ್ತದೆ. ಇದರಲ್ಲಿ ಖನಿಜಾಂಶ ಮತ್ತು ಸಕ್ಕರೆ ಅಂಶವಿರುವುದರಿಂದ ಪೌಷ್ಟಿಕ ಆಹಾರವೆಂದು ಬೇಡಿಕೆ ಹೆಚ್ಚು. ಇತರ ಹಣ್ಣುಗಳಿಗೆ ಹೋಲಿಸಿದರೆ ಕಬ್ಬಿಣ (Fe), ತಾಮ್ರ (Cu) ಅಂಶ ಹೆಚ್ಚಿದ್ದು, ಸ್ವಲ್ಪ ಪ್ರಮಾಣದಲ್ಲಿ ಸತುವಿನ (Zn) ಅಂಶವಿರುತ್ತದೆ. 'A' ಮತ್ತು 'C' ಜೀವಸತ್ವ ಅಧಿಕ ಪ್ರಮಾಣದಲ್ಲಿಯೂ, 'B' ಮತ್ತು 'D' ಕಡಿಮೆ ಪ್ರಮಾಣದಲ್ಲಿಯೂ ಇರುತ್ತವೆ. ಸ್ವಲ್ಪ ಪ್ರಮಾಣದಲ್ಲಿ ಆಮ್ಲೀಯ ಗುಣವಿರುತ್ತದೆ.

viii) ಉಪಯೋಗ : ಅಂಜೂರ ಹಣ್ಣು ಮಲಬದ್ಧತೆ, ಮೂತ್ರಸ್ರಾವಕ್ಕೆ ಉತ್ತೇಜನಕಾರಿ, ಸತತ ಉಪಯೋಗದಿಂದ ರಕ್ತಹೀನತೆಯನ್ನು ತಡೆಗಟ್ಟಬಹುದು. ಕೊಯ್ಲಿನ ಅನಂತರ ಸೊಪ್ಪನ್ನು ದನಕರುಗಳಿಗೆ ಮೇವಾಗಿಯೂ ಉಪಯೋಗಿಸಬಹುದು. ಕರುಳಿನಲ್ಲಿರುವ ಜಂತು ಹುಳುಗಳ ನಾಶಕ್ಕೆ ಅಂಜೂರದ ಹಾಲು ಉಪಯುಕ್ತ. ಕೀವು ಬರುವ ವ್ರಣಕ್ಕೆ ಅಂಜೂರ ಹಣ್ಣಿನ ಪಟ್ಟಿ ಕಟ್ಟುತ್ತಾರೆ.

ಡಿ.ಎಚ್.

ಅಂಟುವಾಳ ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಮಾರ್ಜಕ (ಕೊಳೆನಾಶಕ)ಗಳಲ್ಲಿ ಒಂದು. ದ್ವಿದಳ ಜಾತಿಗೆ ಸೇರಿರುವ ಇದರಲ್ಲಿ 1100 ಪ್ರಭೇದಗಳಿದ್ದು ಅವನ್ನು 130 ಜಾತಿಗಳೆಂದು ವರ್ಗೀಕರಿಸಲಾಗಿದೆ. ಭಾರತದಲ್ಲಿ 25 ಜಾತಿಗಳಿವೆ. ಇದು ಉಷ್ಣವಲಯದ ತೀರಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಕೆಲವು ಜಾತಿಯ ಅಂಟುವಾಳದ ಗಿಡಗಳು ಮರಗಳಂತೆ ಎತ್ತರವಾಗಿ ಬೆಳೆದರೆ ಮತ್ತೆ ಕೆಲವು ಪೊದೆಗಳಂತೆಯೂ ಅಡರು ಬಳ್ಳಿಗಳಂತೆಯೂ ಬೆಳೆಯುತ್ತವೆ.



ಸಸ್ಯದಲ್ಲಿರುವ ಜೀವಕೋಶಗಳಲ್ಲಿ ಜಿಡ್ಡು ಪದಾರ್ಥವಿದೆ. ಹೂಗಳು ಬಿಡಿಬಿಡಿಯಾಗಿದ್ದು ಅನೇಕ ಸಣ್ಣ ಸಣ್ಣ ಹೂಗಳಿಂದ ಕೂಡಿದ ಮಧ್ಯಾರಂಭಿ ಪುಷ್ಪಗುಚ್ಛಗಳಿರುತ್ತವೆ. ಪುಷ್ಪಗಳಲ್ಲಿ ಏಕಲಿಂಗಿ ದ್ವಿಲಿಂಗಿ ಎಂದು ಎರಡು ಬಗೆಗಳಿವೆ. ನಾಲ್ಕು ಅಥವಾ ಐದು ದಳಗಳಿರುತ್ತವೆ. ಕೇಸರಗಳ ಮಧ್ಯೆ ಚಕ್ರಾಕಾರದ ರಸಗ್ರಂಥಿಗಳಿರುತ್ತವೆ. ಇದರಲ್ಲಿ ಎರಡು ಆವೃತ್ತಿಗಳಲ್ಲಿ ಜೋಡಣೆಗೊಂಡ ಹತ್ತು ಕೇಸರಗಳು ಇದ್ದು ಪ್ರತಿಯೊಂದು ಮೂರು ಕೋಣೆಗಳಿಂದ ಕೂಡಿದ್ದು ಬಾಗಿರುವ ಅಂಡಾಶಯಗಳಿರುತ್ತವೆ. ಅಂಟುವಾಳದ ಹಣ್ಣುಗಳು ರಸಭರಿತವಾಗಿದ್ದು ಒಣಗಿದಂತೆಲ್ಲ ಬಿರುಕು ಬಿಡುತ್ತವೆ. ಇದರ ಕೆಲವು ಜಾತಿಯ ಸಸ್ಯಗಳಲ್ಲಿ ಸಪೋಲಿನ್ ಎಂಬ ಅಂಟುದ್ರವ್ಯವಿದ್ದು ಕೊಳೆನಿವಾರಕವಾಗಿ ಬಳಸುವುದುಂಟು. ಕೆಲವು ಪ್ರಭೇದಗಳ ಹಣ್ಣುಗಳು ತಿನ್ನಲು ಯೋಗ್ಯ. ಬಳ್ಳಿಯಂತೆ ಇಲ್ಲವೆ ಪೊದೆಯಂತೆ ಬೆಳೆಯುವ ಇವನ್ನು ಬೇಲಿ ಗಿಡಗಳಾಗಿ ಬೆಳೆಸುತ್ತಾರೆ. ಇದು ಅಪ್ಪಟ ದೇಸೀ ಸಾಬೂನು ಎಂದು ಹೆಸರಾಗಿದೆ. ರೇಷ್ಮೆ ವಸ್ತ್ರಗಳ ಕೊಳೆ ತೆಗೆಯಲು ಇದನ್ನು ಬಳಸುವುದು ವಾಡಿಕೆ. ಈ ಮರದ ಎಲ್ಲ ಭಾಗಗಳೂ ಔಷಧಿಯಾಗಿ ಬಳಕೆಯಾಗುತ್ತವೆ.

ಕೆ.ಎಂ.

ಅಂತರ್ಜಲ ಭೂಮಿಯ ಒಳಗಿನ ಮಣ್ಣು ಮತ್ತು ಶಿಲೆಗಳಲ್ಲಿಯ ರಂಧ್ರಗಳಲ್ಲಿ ಅಂತರ್ಜಲ ಹುದುಗಿರುತ್ತದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ಬೀಳುವ ಮಳೆಯ ಪ್ರಮಾಣ ಮತ್ತು ಜಲವನ್ನು ಹೀರುವ ಮಣ್ಣು/ಶಿಲೆಯ ಗುಣವನ್ನು ಅವಲಂಬಿಸಿ ಅಂತರ್ಜಲ ಶೇಖರಣೆಗೊಂಡಿರುತ್ತದೆ. ಕೃಷಿಕ ಭೂಮಿಯ ಮೇಲಿನ ನೀರು ಇಂಗಿ ಹೋದಾಗ ಅಂತರ್ಜಲದ ಮೊರೆಹೋಗುತ್ತಾನೆ. ಅಗತ್ಯಬಿದ್ದಾಗ ತೋಡಿದ ಕಾಲುವೆ/ಅಡಿಪಾಯಗಳಲ್ಲಿ ನೀರು ಹೊರಹೊಮ್ಮುವುದನ್ನು ಕಂಡು ಹರ್ಷಿತನಾದ ರೈತ, ಇದನ್ನು ಕೃಷಿಗಾಗಿಯೂ ಮತ್ತಿತರ ಉಪಯೋಗ ಗಳಿಗಾಗಿಯೂ ಬಳಸಬಹುದೆಂದು ನಿಶ್ಚಯಿಸಿದ ಫಲವಾಗಿಯೇ ಹೊಲ, ತೋಟ, ಗದ್ದೆಗಳಲ್ಲಿ ಬಾವಿ ತೋಡಿ ಅಲ್ಲಿ ಉಕ್ಕುವ ನೀರನ್ನು ಬಳಸಲಾರಂಭಿಸಿದ.

ಸ್ವಾಭಾವಿಕವಾಗಿ ಬಿದ್ದ ಮಳೆ ನೀರಿನ ಅಧಿಕ ಪಾಲು ಹರಿದುಹೋಗುತ್ತದೆ. ಸ್ವಲ್ಪ ಭಾಗ ಸೂರ್ಯನ ಶಾಖದಿಂದ ಆವಿಯಾಗಿ ವಾಯುಮಂಡಲ ಸೇರಿದರೆ ಕೊಂಚ ಭಾಗ ಮರಗಿಡಗಳು ಹೀರಿಕೊಳ್ಳುತ್ತವೆ. ಅಳಿದುಳಿದ ನೀರು ಭೂಮಿಯ ಒಳಕ್ಕಿಳಿದು ಅಲ್ಲಿಯ ಮಣ್ಣು ಮತ್ತು ಶಿಲೆಗಳಲ್ಲಿ ಶೇಖರಣೆಗೊಳ್ಳುತ್ತದೆ. ನೀರಿನ ಇಂಗುವಿಕೆಯಲ್ಲಿ ಭೂಗುಣಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಸಡಿಲ ಮಣ್ಣಿನಲ್ಲಿ ಮಳೆನೀರು ತ್ವರಿತವಾಗಿ ಇಂಗುತ್ತದೆ. ಜೇಡಿಮಣ್ಣಿರುವ ಭೂಭಾಗದಲ್ಲಿ ನೀರು ಇಂಗುವುದು ತಡವಾಗುವುದರಿಂದ ನೆಲದ ಮೇಲಿನ ಹಳ್ಳಕೊಳ್ಳಗಳಲ್ಲಿ ನೀರು ಸಂಗ್ರಹವಾಗುತ್ತದೆ. ಜೇಡಿಮಣ್ಣಿರುವ ಭೂಮಿ ಇಳಿಜಾರಾಗಿದ್ದರೆ ಶೀಘ್ರವಾಗಿ ಹರಿದುಹೋಗುತ್ತದೆ. ಇಂಥ ಕಡೆ ಹರಿಯುವ ನೀರೇ ಹೆಚ್ಚು. ಸಡಿಲಮಣ್ಣು ಮತ್ತು ಮರುಭೂಮಿಗಳಲ್ಲಿ ಇಂಗುವ ನೀರಿನ ಆಳ 1000-2000 ಅಡಿಗಳು ಮಾತ್ರ. ಶಿಲೆಗಳಲ್ಲಿ ಸಂಗ್ರಹಗೊಳ್ಳುವ ನೀರಿನ ಪ್ರಮಾಣ ರಂಧ್ರಗಳಿಗನುಗುಣವಾಗಿರುತ್ತದೆ. ಶಿಲೆಗಳಲ್ಲಿ ರಂಧ್ರಗಳು ಅಧಿಕವಾಗಿದ್ದರೆ ಜಲದ ಸೆಲೆ ಹೆಚ್ಚಾಗಿರುತ್ತದೆ. ಈ ದೃಷ್ಟಿಯಿಂದ ಶಿಲೆಗಳ ರಂಧ್ರಗಳ ಗಾತ್ರ ಮತ್ತು ಅವು ಹರಡುವ ಪ್ರಮಾಣ ಮುಖ್ಯವಾಗುತ್ತದೆ. ಶಿಲೆಯಲ್ಲಿ ಸೀಳುಗಳು ಹೆಚ್ಚಾಗಿದ್ದಷ್ಟೂ ನೀರು ಹೆಚ್ಚು ಶೇಖರಗೊಳ್ಳಲು ಸಹಾಯಕವಾಗುತ್ತದೆ. ಶಿಲೆಯಲ್ಲಿಯ ಅಂತರ್ಜಲ ಎಲ್ಲೆಡೆಯೂ ಒಂದೇ ಸಮ್ಮನಾಗಿರದೆ ವ್ಯತ್ಯಾಸವಾಗುವುದು ಈ ದೃಷ್ಟಿಯಿಂದಲೇ. ಶಿಲೆ ಮರಳಿನಿಂದ ಕೂಡಿದ್ದರೆ ಶೇ. 10-15ರಷ್ಟು ಮಾತ್ರ ರಂಧ್ರಗಳಿರುತ್ತವೆ. ನೊರಜುಗಲ್ಲಿನಲ್ಲಿ ಶೇ.40ರಷ್ಟು ರಂಧ್ರಗಳಿರುತ್ತವೆ. ಈ ಕಲ್ಲಿನಲ್ಲಿ ಶೇಖರಗೊಳ್ಳುವಷ್ಟು ನೀರು ಇತರೆ ಕಲ್ಲಿನಲ್ಲಿರುವುದಿಲ್ಲ. ಜೇಡು ಆವೃತ ಶಿಲೆಯಲ್ಲಿ ಶೇ.50 ಭಾಗದಷ್ಟು ರಂಧ್ರಗಳಿದ್ದರೂ ನೀರು ಇಂಗುವುದು ಕಷ್ಟಸಾಧ್ಯ. ಭೂಮಿಯ ಮೇಲ್ಪದರದಲ್ಲಿ ಶೇಖರಣೆಗೊಂಡಿರುವ ವಲಯವನ್ನು ಸಂತೃಪ್ತವಲಯವೆಂದೂ ಕರೆಯುತ್ತಾರೆ. ಈ ಭಾಗದಲ್ಲಿ

ಇರುವ ನೀರನ್ನು ಜಲಮಟ್ಟವೆಂದು ಗುರುತಿಸುವುದುಂಟು. ಇವೆರಡರ ಮಧ್ಯೆ ವಾಯುಸಂಸರ್ಗ ಮಂಡಲವಿರುವುದರಿಂದ ಭೂಮಿಯ ಮೇಲೆ ಬಿದ್ದ ನೀರು ಇಂಗಿ ಜಲಮಟ್ಟ ಮುಟ್ಟುತ್ತದೆ.

ಎಲ್ಲ ಪ್ರದೇಶಗಳಲ್ಲೂ ಜಲಮಟ್ಟ ವರ್ಷವಿಡೀ ಒಂದೇ ಬಗೆಯಲ್ಲಿರುವುದಿಲ್ಲ. ಆಯಾ ಪ್ರದೇಶದ ಭೂಮಿಯ ಏರುತಗ್ಗುಗಳನ್ನು ಅವಲಂಬಿಸಿರುತ್ತದೆ. ಜೊತೆಗೆ ಆಯಾ ಪ್ರದೇಶದಲ್ಲಿ ಬೀಳುವ ವಾರ್ಷಿಕ ಮಳೆಯ ಪ್ರಮಾಣ ಹಾಗೂ ಹವಾಗುಣವೂ ಕಾರಣವಾಗುತ್ತದೆ. ಕೂಡಿದ ಬೆಂಗಾಡು ಪ್ರದೇಶಗಳಲ್ಲಿ ನೀರಿನ ಮಟ್ಟ ತುಂಬಾ ಆಳದಲ್ಲಿದ್ದರೆ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಸ್ವಲ್ಪ ಆಳ ಅಗೆದರೂ ಸಾಕು ನೀರು ಚಿಮ್ಮುತ್ತದೆ. ಬಯಲು ಸೀಮೆಗಳಲ್ಲಿ ಸಾಧಾರಣ ಮಳೆಯಾಗುವುದರಿಂದ ಅಂತರ್ಜಲದ ಪ್ರಮಾಣವೂ ಸಾಧಾರಣವಾಗಿರುತ್ತದೆ. ಭೂಮಿಯ ಗುರುತ್ವಾಕರ್ಷಣದಿಂದ ಅಂತರ್ಜಲ ಸದಾ ಕೆಳಮುಖವಾಗಿ ಪ್ರವಹಿಸುತ್ತಿರುತ್ತದೆ.

ಭೂಪದರಗಳ ಮೇಲಾಗುವ ಒತ್ತಡಗಳಿಂದಾಗಿ ಶಿಲೆಗಳಲ್ಲಿ ಬಿರುಕುಗಳುಂಟಾಗಿ ಅಂತರ್ಜಲ ಕೆಲವು ಪ್ರದೇಶಗಳಲ್ಲಿ ಬುಗ್ಗೆಯಾಗಿ ಹೊರಚಿಮ್ಮುತ್ತದೆ. ಕೆಲವು ಪ್ರದೇಶಗಳಲ್ಲಿ ಚಿಮ್ಮುವ ನೀರು ತಣ್ಣಗಿದ್ದರೆ ಅಪವಾದವೆಂಬಂತೆ ಇಲ್ಲೂ ಕೆಲವು ಕಡೆ ಬಿಸಿನೀರಿನ ಬುಗ್ಗೆಗಳೂ ಇವೆ. ಹೀಗೆ ಚಿಮ್ಮುವ ನೀರಿನಲ್ಲಿ ಔಷಧೀಯ ಗುಣವಿರುವುದರಿಂದ ಆರೋಗ್ಯಕ್ಕೆ ಒಳ್ಳೆಯದೆನ್ನಲಾಗಿದೆ. ಭಾರತದಲ್ಲಿ ಪಶ್ಚಿಮ ಕರಾವಳಿ, ಹಿಮಾಲಯ ತಪ್ಪಲು, ಬಿಹಾರ, ಪಶ್ಚಿಮಬಂಗಾಳ ಮೊದಲಾದ ಪ್ರದೇಶಗಳಲ್ಲಿ ಚಿಲುಮೆಗಳು ಇವೆ. ಪ್ರಕೃತಿಯಲ್ಲಿ ದೊರೆಯುವ ಗುಪ್ತಜಲ ಮಾನವನಿಗೆ ಜೀವಜಲವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಅಂತರ್ಜಲ ಪ್ರಮಾಣ ಕುಸಿಯುತ್ತಿದ್ದು ಇದನ್ನು ವೃದ್ಧಿಸಿಕೊಳ್ಳುವ ನಿಟ್ಟಿನಲ್ಲಿ ಮಾನವ ಸರ್ವರೀತಿಯಲ್ಲೂ ಕಾರ್ಯಪ್ರವೃತ್ತನಾಗುತ್ತಿದ್ದಾನೆ.

ಕೆ.ಎನ್.

ಅಗಸೆ ಆಹಾರಕ್ಕಾಗಿ ಉಪಯೋಗವಾಗುವ ಮರಗಳ ಪೈಕಿ ಇದೂ ಒಂದು. ಪ್ಯಾಪಿಲಿಯೊನೇಸೀ ಕುಟುಂಬಕ್ಕೆ ಸೇರಿದ, ಇದರಲ್ಲಿ ಎಣ್ಣೆಗೆ ಉಪಯೋಗವಾಗುವ ಲಿನ್‌ಸೀಡ್ (ನಾರಗಸೆ) ಮತ್ತು ನಾರಿಗಾಗಿ ಬೆಳೆಸುವ ಲಿನೇಸೀ ಕುಟುಂಬದ ಲಿನಮ್‌ಯುಸಿಟಾಟಿಸಿಮಮ್ ಪ್ರಭೇದಗಳೂ ಇವೆ.

ಇದರ ಮೂಲಸ್ಥಳ ಸಮಭಾಜಕ ವೃತ್ತದ ಆಗ್ನೇಯ ರಾಷ್ಟ್ರಗಳೆಂದು ಸಸ್ಯವಿಜ್ಞಾನಿಗಳು ಗುರುತಿಸಿದ್ದರು. ಬಳಿಕ ಯುರೋಪ್, ಅಮೆರಿಕ ಮತ್ತು ಆಸ್ಟ್ರೇಲಿಯಗಳಲ್ಲೂ ಇದೆಯೆಂಬುದು ತಿಳಿದುಬಂದಿತು. ಇಂದು ಏಷ್ಯ, ಆಫ್ರಿಕ ಭಾಗಗಳಲ್ಲೂ ಇದರ ಕೃಷಿ ಉಂಟು.

ಸಮಶೀತೋಷ್ಣ ವಲಯದ ಎಲ್ಲ ಪ್ರದೇಶಗಳಲ್ಲೂ ಸುಲಭವಾಗಿ ಬೆಳೆಯಬಲ್ಲದು. ಬೀಜಗಳಿಂದ ಸಸ್ಯಾಭಿವೃದ್ಧಿಯಾಗುತ್ತದೆ. ಬೇಲಿನಿರ್ಮಾಣದಲ್ಲೂ ಇದರ ಬಳಕೆಯಿದೆ. ಎಲೆ ತೋಟಗಳಲ್ಲಿ ಅಂಬುಗಳಿಗೆ ಆಶ್ರಯವಾಗಿಯೂ ಅಗಸೆ ಬಲು ಉಪಯುಕ್ತ. ಹೆಚ್ಚು ಬೇರನ್ನು ಬಿಡದೆ ದೃಢವಾಗಿಯೂ ಬೆಳೆಯದೆ ಇರುವುದರಿಂದ ಇತರ ಬೆಳೆಗಳಿಗೆ ತೊಂದರೆ ನೀಡುವುದಿಲ್ಲ. ಇದು 15-20 ಅಡಿ ಎತ್ತರ ಬೆಳೆಯುತ್ತದೆ. ಇದರ ಹೂಗಳು ಬಿಳಿ ಇಲ್ಲವೆ ಗುಲಾಬಿ ಬಣ್ಣದವು. ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಹೂಬಿಡುತ್ತದೆ. ಚಿಟ್ಟೆಗಳ ಮೂಲಕ ಪರಾಗಸ್ಪರ್ಶವಾಗುತ್ತದೆ. ಅಗಸೆ ಮರದ ಪ್ರತಿಯೊಂದು ಭಾಗವೂ ಉಪಯುಕ್ತವಾದುದು. ಎಲೆ, ಹೂ ಮತ್ತು ಕಾಯಿಗಳನ್ನು ಅಡುಗೆಗೆ ಬಳಸುವರು. ಪಶುಗಳಿಗೂ ಇದು ಒಳ್ಳೆಯ ಆಹಾರ.



ಅಗಸೆ ಎಣ್ಣೆ : ನಾರಗಸೆ ಬೀಜದಿಂದ ತೆಗೆಯುವ ಇದನ್ನು (ಲೀನ್‌ಸೀಡ್ ಆಯಿಲ್) ಆರುವ ಎಣ್ಣೆ ಮೆರುಗೆಣ್ಣೆ ಎಂದೂ ಕರೆಯುತ್ತಾರೆ. ಕೆಲವು ಪ್ರದೇಶಗಳಲ್ಲಿ ಈ ಮರವನ್ನು ನಾರು ಮತ್ತು ಎಣ್ಣೆಗಳೆರಡರ ಸಲುವಾಗಿಯೂ ಭಾರತದಲ್ಲಿ ಕೇವಲ ಎಣ್ಣೆಗಾಗಿಯೂ ಬೆಳೆಸುವುದಿದೆ. ಭಾರತದಲ್ಲಿ ಮೂರು ನಾಲ್ಕು ಜಾತಿಯ ನಾರಗಸೆ ಗಿಡಗಳನ್ನು ಬೆಳೆಸುತ್ತಾರೆ. ಹೆಚ್ಚಾಗಿ ಬೆಳೆಯುವುದು ಲಿನಮ್‌ಯುಸಿಟಾಟಿಸಿಮಮ್ ಪ್ರಭೇದ. ಕಾರಣ ಇದರಲ್ಲಿ ಶೇ. 80 ಭಾಗ ಎಣ್ಣೆಯ ಅಂಶವಿರುತ್ತದೆ. ಬೀಜಗಳನ್ನು ಗಾಣಗಳಲ್ಲಿ ಹಾಕಿ ಅರೆದು ಎಣ್ಣೆ ತೆಗೆಯುತ್ತಾರೆ. ಒಂದೆಡೆ ಶೇಖರಿಸಿಟ್ಟರೆ ತೇವ ಮತ್ತು ಅಂಟು ಪದಾರ್ಥಗಳು ತಳದಲ್ಲಿ ಉಳಿದು ಎಣ್ಣೆ ಮಾತ್ರ ಮೇಲ್ಪದರದಲ್ಲಿರುತ್ತದೆ. ಈ ಎಣ್ಣೆಯನ್ನು ಹಲವು ವರ್ಷಗಳ ಕಾಲ ಉಪಯೋಗಿಸಬಹುದು. ವಾರ್ನಿಷ್ ತಯಾರಿಕೆಯಲ್ಲಿ ಇದರ ಬೇಡಿಕೆ ಹೆಚ್ಚು. ಇದನ್ನು ಪಿಂಗಾಣಿ, ಗಾಜು, ಪ್ಲಾಸ್ಟಿಕ್ ಡಬ್ಬಿಗಳಲ್ಲಿ ತುಂಬಿಟ್ಟರೆ ಹೆಚ್ಚು ಕಾಲಬಾಳಿಕೆ ಬರುತ್ತದೆ. ಮೇಣದ ಪಟದ ಬಟ್ಟೆ, ಮುದ್ರಣ ಮತ್ತು ಲಿಥೊಗ್ರಫಿ ಮಸಿಗಳು, ಸಾಬೂನು ಪಾಲಿಷ್‌ಗಳು, ಪಟಾಕಿ- ಇವುಗಳ ತಯಾರಿಕೆಯಲ್ಲೂ ಚರ್ಮ ನಯಮಾಡಲು, ಸೆಣಬಿನ ನೇಯ್ಗೆಯ ಬಾಬಿನ್, ಕ್ರಿಕೆಟ್ ಬ್ಯಾಟ್ ಹದಮಾಡಲು ಈ ಎಣ್ಣೆ ಉಪಯುಕ್ತ. ಹಸಿಬೀಜದಿಂದ ತೆಗೆದ ಎಣ್ಣೆಯನ್ನು ಕಾಶ್ಮೀರ, ಬಿಹಾರ, ಮಧ್ಯಪ್ರದೇಶ, ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಅಡುಗೆಗೆ ಬಳಸುವುದುಂಟು. ಇದರ ಹಿಂಡಿ ದನಗಳಿಗೆ ಪುಷ್ಟಿದಾಯಕ.

ಅಗಸೆ ನಾರು : ಅಗಸೆ ಕುಟುಂಬದ ಒಂದು ಪ್ರಭೇದ. ಇದೊಂದು ವಾರ್ಷಿಕ ಬೆಳೆ. ಇದರ ನಾರು ಹಾಗೂ ಬೀಜ ಎರಡೂ ಉಪಯುಕ್ತ. ಬೀಜದಿಂದ ಎಣ್ಣೆಯನ್ನು ಕಾಂಡದಿಂದ ನಾರನ್ನೂ ತೆಗೆಯಲಾಗುತ್ತದೆ. ಇದರ ಹಿಂಡಿ ದನಗಳಿಗೆ ಉತ್ತಮ ಆಹಾರ.

ಸಸ್ಯಾಭಿವೃದ್ಧಿ : ಗಿಡ್ಡಜಾತಿಯ ಈ ಮರ 2-4 ಅಡಿ ಎತ್ತರ ಬೆಳೆಯುತ್ತದೆ. ತಾಯಿ ಬೇರಿನ ಜೊತೆಗೆ ಮಣ್ಣಿನ ಮೇಲ್ಪದರದಲ್ಲಿ ತಂತು

ಬೇರುಗಳು ಗುಂಪುಗುಂಪಾಗಿ ಹರಡಿರುತ್ತವೆ. ಇದರ ಕಾಂಡ ತೆಳ್ಳಗಿದ್ದು ಪ್ರಭೇದಕ್ಕೆ ತಕ್ಕಂತೆ ಕೊಂಬೆಗಳಿರುತ್ತವೆ. ಬೀಜದಿಂದ ಮಾತ್ರ ಸಸ್ಯಾಭಿವೃದ್ಧಿ. ಎಲೆಗಳು ಚಿಕ್ಕವು. ಹೂಗಳ ಬಣ್ಣ ನೀಲಿ ಅಥ್‌ವಾ ಬಿಳಿ. ಸ್ವಪರಾಗಸ್ಪರ್ಶಕ್ರಿಯೆಗೆ ಒಳಗಾಗುವುದು ಇದರ ವೈಶಿಷ್ಟ್ಯ. ಬೀಜ ಕಂದು ಇಲ್ಲವೆ ಕಪ್ಪು ವರ್ಣದ್ದಾಗಿದ್ದು ಹೊಳಪಿನಿಂದ ಕೂಡಿರುತ್ತದೆ. ನಾರಿಗಾಗಿ ಬೆಳೆಸುವವರು ಕಡಿಮೆ ಅಂತರದಲ್ಲಿ ಬಿತ್ತನೆ ಮಾಡಿದರೆ ಬೀಜಕ್ಕಾಗಿ ಬೆಳೆಸುವವರು ಸಸಿಗಳ ನಡುವೆ ಹೆಚ್ಚು ಅಂತರವಿರುವಂತೆ ನೋಡಿಕೊಳ್ಳುತ್ತಾರೆ. ಈ ಪ್ರಭೇದದಲ್ಲಿ ರೆಂಬೆಗಳು ಹೆಚ್ಚಾಗಿದ್ದು ಗಟ್ಟಿಮುಟ್ಟಾಗಿರುತ್ತವೆ. ಬೀಜಗಳೂ ಹೆಚ್ಚು. ಅಗಸೆ ನಾರಿನ ಸಸಿಗಳಲ್ಲಿ ಆಯಾ ಪ್ರದೇಶದ ವಾಯುಗುಣಕ್ಕನುಗುಣವಾಗಿ ಹೊಂದಿಕೊಂಡ ಪ್ರಭೇದಗಳಿರುತ್ತವೆ.

ಆಯಾ ಪ್ರದೇಶದ ವಾಯುಗುಣ, ಭೂಗುಣವನ್ನು ಅನುಸರಿಸಿ ಬಿತ್ತನೆ ಮಾಡಲಾಗುತ್ತದೆ. ಕೆಲವು ಭಾಗಗಳಲ್ಲಿ ಐದು ತಿಂಗಳಿಗೆ ಕೊಯ್ಲಿಗೆ ಬಂದರೆ, ಕೆಲವೆಡೆ ನಾಲ್ಕು ತಿಂಗಳು ಬೇಕು. ಭಾರತದಲ್ಲಿ ಗಿಡ್ಡಜಾತಿಯ ಪ್ರಭೇದವೇ ಹೆಚ್ಚು.

ಮಣ್ಣು : ಎಲ್ಲ ಮಣ್ಣುಗಳಲ್ಲೂ ಬೆಳೆಯುವ ಗುಣ ಇದಕ್ಕಿದ್ದರೂ ಜೇಡಿಮಣ್ಣು ಮತ್ತು ಸ್ವಾಭಾವಿಕ ಫಲವತ್ತತೆ ಹೆಚ್ಚಾದಷ್ಟೂ ಇಳುವರಿ ಕಡಿಮೆ. ನೊರಜುಗಲ್ಲು ಅಥವಾ ಕಲ್ಲುಭೂಮಿ ಈ ಬೆಳೆಗೆ ಯೋಗ್ಯವಲ್ಲ. ಅಲ್ಪ ಪ್ರಮಾಣದ ಫಲವತ್ತತೆ, ಮರಳಿನಿಂದ ಕೂಡಿದ ಜೇಡಿ ಮಣ್ಣು ಉತ್ತಮ. ಆರ್ಥಿಕ ದೃಷ್ಟಿಯಿಂದ ಬೆಳೆಯುವುದಾದರೆ ಭೂಮಿಯನ್ನು ಚೆನ್ನಾಗಿ ಉತ್ತು ಕಳೆ ಇಲ್ಲದಂತೆ ಹದಗೊಳಿಸುತ್ತಾರೆ. ಗೊಬ್ಬರವನ್ನು ಪ್ರತಿ ಬೆಳೆಗೆ ನೀಡದಿದ್ದರೂ ಹಿಂದಿನ ಬೆಳೆಗೆ ಕೊಟ್ಟ ಗೊಬ್ಬರವೇ ಮುಂದಿನ ಬೆಳೆಗೆ ಸಾಕಾಗುತ್ತದೆ. ಬೀಜವನ್ನು ಮೂರು ರೀತಿ ಬಿತ್ತಬಹುದು : ಸಾಲುಗಳಲ್ಲಿ ಕೈಯಿಂದ ಬಿತ್ತುವುದು, ಕೂರಿಗೆಯಿಂದ ಬಿತ್ತುವುದು, ಕೈಯಿಂದ ಎರಚುವುದು. ಮೊಳಕೆ ಚೆನ್ನಾಗಿ ಮೂಡಿ ಬರಲು ಸಣ್ಣ ಸಣ್ಣ ಪಟಗಳನ್ನು ಮಾಡಿ, ಬೀಜ ಬಿತ್ತಿ, ಗಾಳಿ ಸೇರದ ಹಾಗೆ ಹದವಾಗಿ ಮಣ್ಣಿನ ಮೇಲ್ಪದರವನ್ನು ಗಟ್ಟಿಗೊಳಿಸುತ್ತಾರೆ. ಒಂದು ಎಕರೆಗೆ ಸು. 50 ಕೆ.ಜಿ. ಬಿತ್ತನೆ ಬೀಜ ಸಾಕು. ಗಿಡ ಬೆಳೆಯುತ್ತಿದ್ದಂತೆ ಆಗಾಗ ಕಳೆ ತೆಗೆದು ಶುದ್ಧಗೊಳಿಸಬೇಕು. ಬೀಜ ಪೂರ್ಣ ಬಲಿಯುವ ಮೊದಲೇ ಕೊಯ್ಲು ಮಾಡಬೇಕು. ಗಿಡವನ್ನು ಕೊಯ್ದ ಮೇಲೆ ಮೆದೆ ಹಾಕಿ ಒಣಗಿಸುತ್ತಾರೆ.

ನಾರು ತೆಗೆಯುವ ಬಗೆ : ನಾರನ್ನು ತೆಗೆಯುವ ಕ್ರಮವೂ ವೈವಿಧ್ಯಮಯವಾದುದು. ಸಾಮಾನ್ಯವಾಗಿ ಎರಡು ವಿಧಾನಗಳನ್ನು ಬಳಸುವುದುಂಟು. ಇಬ್ಬನಿಯಲ್ಲಿಟ್ಟು ನೆನೆಸುವುದು ಒಂದು ಕ್ರಮವಾದರೆ, ನೀರಿನಲ್ಲಿ ನೆನೆಸಿಡುವುದು ಮತ್ತೊಂದು ಕ್ರಮ. ಬೇಗ ನಾರು ತೆಗೆಯಬೇಕಾದಲ್ಲಿ ನೀರಿನಲ್ಲಿ ನೆನೆಸುತ್ತಾರೆ. ನೀರು ದೊರೆಯದಿದ್ದಲ್ಲಿ ಇಬ್ಬನಿಯೇ ಗತಿ. ಬೃಹತ್ ಪ್ರಮಾಣದಲ್ಲಿ ಬೆಳೆಯುವವರು ಕೆರೆ, ಹೊಂಡ, ನದಿ, ನಾಲೆ, ಸರೋವರವಲ್ಲದೆ ಕೃತಕವಾಗಿ ನಿರ್ಮಿಸಿಕೊಂಡ ತೊಟ್ಟಿಗಳಲ್ಲೂ ನೆನೆಹಾಕುತ್ತಾರೆ. ನಿರ್ದಿಷ್ಟ ಅವಧಿಯ ತನಕ ನೆನೆಸಿದ ಅಗಸೆ ಕಾಂಡ ಮೃದುವಾಗಿ ನಾರು ತೆಗೆಯಲು ಸಿದ್ಧವಾಗಿದೆ ಎನಿಸಿದಾಗ ಹೊರತೆಗೆದು, ನೀರು ಶೋಧಿಸಿ ನಾರು ತುಂಡಾಗದ ಹಾಗೆ ಕಲ್ಲುಬಂಡೆ ಅಥವಾ ಗಾರೆಯಿಂದ ನಿರ್ಮಿಸಿದ ಪೀಠದ ಮೇಲೆ ಎಚ್ಚರಿಕೆಯಿಂದ ಬಡಿಯಬೇಕು. ಕೆಲವೊಮ್ಮೆ ಯಂತ್ರಗಳ ಸಹಾಯದಿಂದಲೂ ನಡೆಯುತ್ತದೆ. ನಾರಿನ ಮಧ್ಯೆ ಉಳಿದಿರುವ ಧೂಳನ್ನು, ಹೊಟ್ಟನ್ನು ಬೇರ್ಪಡಿಸಿ ನಾರನ್ನು ಶುದ್ಧಗೊಳಿಸಬೇಕು. ಇದು ಅತ್ಯಂತ ನಾಜೂಕಿನ ಕೆಲಸ. ನಾರನ್ನು ಬಾಚಿ ಎಳೆಗಳು ಸಿಕ್ಕಾಗದಂತೆ ಮಾಡಲಾಗುತ್ತದೆ. ಎಳೆಗಳ ಉದ್ದಕ್ಕನುಗುಣವಾಗಿ ಬೇರೆ ಬೇರೆ ಕಂತೆ ಕಟ್ಟಿ ಕಾರ್ಖಾನೆಗೆ ರವಾನಿಸುತ್ತಾರೆ.

ಬಿ.ಆರ್.

ಅಟ್ಟಪ್ಪಾಡಿಯ ದೇಶೀ ಕೃಷಿಪದ್ಧತಿ ಬತ್ತ ದಕ್ಷಿಣ ಭಾರತದ ಮುಖ್ಯ ಆಹಾರ ಬೆಳೆ. ಕೇರಳದ ಅಟ್ಟಪ್ಪಾಡಿಯ ಜನಕ್ಕೆ ಪಾರಂಪರಿಕವಾಗಿ ಏಕದಳ ಧಾನ್ಯಗಳೂ 'ಹೆಸರು' ವರ್ಗದ ದ್ವಿದಳ ಧಾನ್ಯಗಳೂ ಮುಖ್ಯ ಆಹಾರ. ಅವನ್ನೇ ಅವರು ಪ್ರಧಾನ ಬೆಳೆಯೆಂದು ಪರಿಗಣಿಸುತ್ತಾರೆ. ಕೇರಳದ ಪಾಲ್ಘಾಟು ಜಿಲ್ಲೆಯ ಅಟ್ಟಪ್ಪಾಡಿಯಲ್ಲಿ ಸಾವೆ, ರಾಗಿ, ನವಣೆ, ಹೆಸರುಕಾಳುಗಳ ಅನಂತರದ ಸ್ಥಾನ ಬತ್ತ ಪಡೆಯುತ್ತದೆ. ಅವರ ಆಚಾರಾನುಷ್ಠಾನುಗಳಲ್ಲೂ ಇದು ಎದ್ದು ಕಾಣುತ್ತದೆ.

ಕುಮರಿ ಬೇಸಾಯ ಪದ್ಧತಿಯನ್ನು ಅನುಸರಿಸಿ ಇಲ್ಲಿಯ ಜನ ಬೆಳೆ ತೆಗೆಯುತ್ತಿದ್ದಾರೆ. ಅಟ್ಟಪ್ಪಾಡಿಯಲ್ಲಿ ಎಂದಲ್ಲ- ಭಾರತದ ಎಲ್ಲೆಡೆ, ಆದಿವಾಸಿಗಳ ಬದುಕಿನಲ್ಲಿ 'ಒರಟು' ಧಾನ್ಯಗಳಿಗೂ ಹೆಸರು ವರ್ಗದ ಕಾಳುಗಳಿಗೂ ಪ್ರಧಾನ ಸ್ಥಾನವಿದ್ದುದು ಐತಿಹಾಸಿಕ ಸತ್ಯ. ಬತ್ತದ ಬೆಳೆಗೂ ಅಲ್ಲಿ ಪ್ರಾಧಾನ್ಯವಿತ್ತು. ಆದರೆ ಅಟ್ಟಪ್ಪಾಡಿಯಲ್ಲಿ ಮಾತ್ರ ಎಂದೂ ಬತ್ತದ ಬೆಳೆಗೆ ಆದಿವಾಸಿ ಜನ ಪ್ರಾಧಾನ್ಯ ಕೊಟ್ಟೇ ಇಲ್ಲ.

ಒಂದು ಕಾಲದಲ್ಲಿ ಅಟ್ಟಪ್ಪಾಡಿ ವನನಿಬಿಡವಾಗಿತ್ತು. ಆಗ ಅಲ್ಲಿ ವಾಸವಿದ್ದವರು ಆದಿವಾಸಿಗಳು ಮಾತ್ರ. ಕಾಡಿನ ಮಹತ್ತ್ವ ಅರಿತಿದ್ದ, ಪ್ರಕೃತಿಯೊಂದಿಗೆ ಸಹಬಾಳ್ವೆ ನಡೆಸಿದ್ದ ಒಂದು ಜನವರ್ಗ. ಮುಖ್ಯವಾಗಿ ಇವರು ಮೂರು ವಿಭಾಗಗಳಿಗೆ ಸೇರಿದವರು. ಕರ್ನಾಟಕದಲ್ಲಿ ಮೂಲ ಬೇರುಗಳುಳ್ಳ ಕುರುಬರು, ತಮಿಳುನಾಡಿನಿಂದ ಬಂದ ಇರುಳರು ಮತ್ತು ಇಲ್ಲೇ ಹುಟ್ಟಿಬೆಳೆದವರೆಂದು ನಂಬಲಾಗುವ ಮುಡುಗರೆಂಬ ಮಣ್ಣಿನ ಮಕ್ಕಳು.

ಕಾಡುಗಳನ್ನು ಕಡಿದು, ಸುಟ್ಟು ಆ ಪ್ರದೇಶದಲ್ಲಿ ಕೃಷಿಮಾಡುವ 'ಕುಮರಿ ಬೇಸಾಯ ಪದ್ಧತಿ'ಯನ್ನು ಇವರು ಅನುಸರಿಸುತ್ತಿದ್ದರು. ಕಾಡು ಸುಟ್ಟಬಳಿಕ ಅಲ್ಲಿ ಮೂರು ವರ್ಷಕ್ಕಿಂತ ಹೆಚ್ಚುಕಾಲ ಅವರು ನೆಲೆ ನಿಲ್ಲುತ್ತಿರಲಿಲ್ಲ. ಮತ್ತೆ ಹೊಸ ಪ್ರದೇಶಕ್ಕೆ ಹೋಗಿ ಅಲ್ಲಿ ಕುಮರಿ ಬೇಸಾಯ ಮಾಡುವುದು ಇವರ ಪದ್ಧತಿ. ಹಿಂದಿನ ಜಾಗಕ್ಕೆ ಮರಳಬೇಕಾದರೆ ಕನಿಷ್ಠ ಮೂರು ವರ್ಷಗಳು ಕಳೆಯಬೇಕು. ಕೆಲವೊಮ್ಮೆ ಒಂಬತ್ತೋ ಇನ್ನೂ ಹೆಚ್ಚು ವರ್ಷಗಳು ಸಂದ ಬಳಿಕವಷ್ಟೇ ಮರಳಿ ಬರುತ್ತಿದ್ದರು. ಕೆಲವೊಮ್ಮೆ ಎಂದೂ ಹಳೆಯ ಜಾಗಕ್ಕೆ ಮರಳಿ ಬರುತ್ತಿರಲಿಲ್ಲ.

ಕಾಡಿನ ಒಳ್ಳೆಯ ಪ್ರದೇಶವನ್ನು ಮೊದಲು ಗುರುತಿಸಬೇಕು. ಹಿಂದೆಂದೂ ಕಡಿಯದ ಕಾಡಾಗಿದ್ದರೆ ವೃಶ್ಚಿಕ (ಕಾರ್ತಿಕೈ) ಮಾಸದಲ್ಲೂ ಒಮ್ಮೆ ಕಡಿದ ಕಾಡಾಗಿದ್ದರೆ ಮಕರ (ತೈ) ತಿಂಗಳಲ್ಲೂ ಕಾಡುಕಡಿಯಲು ಆರಂಭ. ಹೊಸಕಾಡಲ್ಲಿ ಧಾರಾಳವಾಗಿ ಮರಗಳು ಇರುತ್ತವೆ. ಉರಿಸುವ ಮೊದಲು ಅವು ಸರಿಯಾಗಿ ಒಣಗಬೇಕು. ಅದಕ್ಕೆ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಆದುದರಿಂದಲೇ ಮೊದಲೇ ಕಡಿಯುವುದು. ಚೆನ್ನಾಗಿ ಒಣಗಿದ ಬಳಿಕ ಕುಂಭ (ಮಾಶಿ) ಮಾಸ ಕೊನೆಗೂ ಮೀನ (ಪಂಗುನಿ) ಆರಂಭದಲ್ಲೂ ಬೆಂಕಿಕೊಡಲಾಗುತ್ತದೆ.

ಮೀನಮಾಸದ ಆರಂಭದಲ್ಲೇ ಜೋರಾದ ಗಾಳಿಮಳೆ ಹೊಡೆಯುವುದು ನಿಶ್ಚಿತ. ಅಂಥ ಮಳೆಗಿಂತ ಮೊದಲು ಬೆಂಕಿ ಕೊಟ್ಟು ಸುಟ್ಟು ಮುಗಿಸಬೇಕು. ಮೇಷ ಮಾಸದ (ಚಿತ್ತರೈ) ವಿಷುಕಣಿ ಕಂಡ ಬಳಿಕ ಬಿತ್ತನೆ ಪ್ರಾರಂಭ. ಮೊದಲು ತೊಗರಿಯ ಬಿತ್ತನೆ, ಬಳಿಕ ಅವರೆ, ಆಮೇಲೆ ರಾಗಿ, ಸಾಮೆ, ಹರಿವೆ ಇತ್ಯಾದಿ. ತೊಗರಿಗೂ ಅವರೆಗೂ 'ಬೀಸುಬಿತ್ತನೆ'ಯ ಕ್ರಮವಿಲ್ಲ. ಅವಕ್ಕೆ 'ಸಾಲುಬಿತ್ತನೆ' ಎಂದರೆ ಮಣ್ಣಲ್ಲಿ ಉದ್ದನೆ ಸಣ್ಣಗೆ ಅಗತೆ ಮಾಡಿ ಅದರಲ್ಲಿ ನಿರ್ದಿಷ್ಟ ದೂರದಲ್ಲಿ ಎರಡು ಮೂರು ಬೀಜಗಳನ್ನು ಬಿತ್ತಲಾಗುತ್ತದೆ. ಇದು ಸಾಲು ಬಿತ್ತನೆ. ಬೀಸು ಬಿತ್ತನೆಯ ಧಾನ್ಯಗಳು ಮತ್ತು ಸಾಲುಬಿತ್ತನೆಯ ಧಾನ್ಯ/ಕಾಳುಗಳು ಬೇರೆಯಾಗಿರುವಂತೆಯೇ ಬಿತ್ತನೆ ಮಾಡುವ ಜಾಗಗಳೂ ಬೇರೆಬೇರೆಯೇ ಆಗಿರುತ್ತವೆ. ಧಾರಾಳ ಗೊಬ್ಬರದ ಫಲವತ್ತಾದ ಮಣ್ಣು ಆಗಿರುವುದರಿಂದ ಹತ್ತುದಿನಗಳಿಗೆ ಸಸಿಗಳು ಎತ್ತರಕ್ಕೆ ಬೆಳೆದು ಬಿಡುತ್ತವೆ. ಬಾಳೆ, ಸಿಹಿಕುಂಬಳ, ಚೀನಿಕಾಯಿ, ಸೌತೆ, ಸೋರೆಕಾಯಿ, ಮುಳ್ಳು ಸೌತೆ, ಬೂದು ಕುಂಬಳಕಾಯಿ ಮುಂತಾದ ತರಕಾರಿಗಳಿಗೂ ಮೇಷ ಮಾಸದಲ್ಲೇ ಬೀಜ ಹಾಕಲಾಗುತ್ತದೆ. ನವಣೆ, ಕೊತ್ತಂಬರಿ, ಮೂರು ತಿಂಗಳಲ್ಲಿ ಬೆಳೆಯುವ ಸಾಮೆ ಇತ್ಯಾದಿಗಳಿಗೆ ಪ್ರತ್ಯೇಕ ಬೀಜ ಹಾಕಲಾಗುತ್ತದೆ. ಮಳೆ ಚೆನ್ನಾಗಿ ಬಂದ ಬಳಿಕ ಮಿಥುನ ಮಾಸ(ಆನಿ)ದಲ್ಲಿ ಬತ್ತದ ಬಿತ್ತನೆ. ಸಾಮೆ, ರಾಗಿ, ಸಾಸಿವೆ, ಹರಿವೆ, ನವಣೆ, ಬತ್ತ ಮುಂತಾದುವುಗಳ ಬಿತ್ತನೆಯಾದ ಬಳಿಕ ಹಾರೆಯಿಂದ ಮಣ್ಣನ್ನು ಕಡಿದು ತಂದು ಇವುಗಳ ಮೇಲೆ ಹರಡಲಾಗುತ್ತದೆ. ಬೀಜ ಹಾಕುವ ಮುನ್ನ ನೆಲ ಹಸನು ಮಾಡುವ ಕ್ರಮವಿಲ್ಲ. ವೃಷಭ (ವೈಕಾಶಿ) ಮಿಥುನ (ಆನಿ) ತಿಂಗಳುಗಳಲ್ಲಿ ಕಳೆ ಕತ್ತರಿಸಬೇಕು. ಕಳೆಯನ್ನು ಕೀಳುವ ಪದ್ಧತಿ ಇಲ್ಲ. ಕೊಚ್ಚಿದ ಬಳಿಕ ಮಣ್ಣಿನಿಂದ ಕಳೆಯನ್ನು ಮುಚ್ಚಲಾಗುತ್ತದೆ. ಮತ್ತೆ ಕಳೆ ಬಂದರೆ ಕೊಚ್ಚಿಹಾಕುತ್ತಾರೆ. ಸಿಂಹ (ಆವಣಿ), ಕನ್ಯಾ (ಪುರುಟ್ಟಾಶಿ), ತುಲಾ (ಐಪ್ಪಶಿ), ತಿಂಗಳುಗಳಲ್ಲಿ ಕೊಯ್ಲು ನಡೆಯುತ್ತದೆ. ಇರುಳರು ಪೈರನ್ನು ಕೊಯ್ದರೆ, ಕುರುಬರು ಮತ್ತು ಮುಡುಗರು ಪೈರಿನ ತೆನೆಗಳನ್ನು ಕಿತ್ತುತೆಗೆಯುತ್ತಾರೆ. ನವಣೆಯ ಕೊಯ್ಲು ಮೊದಲು ನಡೆಯುತ್ತದೆ.

ಅಟ್ಟಪ್ಪಾಡಿಯಲ್ಲಿ ಅನನ್ಯವಾದ ಕಾಡುಧಾನ್ಯಗಳು ಮತ್ತು ಹೆಸರು ವರ್ಗದ ಧಾನ್ಯಗಳ ತಳಿಗಳಿವೆ. ಅಲ್ಲಿಯೂ ಪಡುಅಟ್ಟಪ್ಪಾಡಿ ಮತ್ತು ಮೂಡು ಅಟ್ಟಪ್ಪಾಡಿ ಪ್ರದೇಶಗಳ ಬೀಜದ ತಳಿಗಳು ಭಿನ್ನವಾಗಿವೆ. ಅಲ್ಲಿಯ ಪ್ರಮುಖ ಮೂರು ಆದಿವಾಸಿ ವರ್ಗದವರಲ್ಲಿ ಈ ಭಿನ್ನತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಈ ವೈವಿಧ್ಯ ರಾಗಿ, ಸಾಮೆ, ನವಣೆ, ತೊಗರಿ, ಅವರೆ, ಜೋಳ, ಹರಿವೆ, ಬತ್ತ ಮುಂತಾದ ಎಲ್ಲ ಪ್ರಕಾರದ ಧಾನ್ಯಾದಿಗಳಲ್ಲೂ ಇದೆ.

ಅಟ್ಟಪ್ಪಾಡಿಯ ಆದಿವಾಸಿ ಜನ ಇತರೆಡೆಗಳವರ ಹಾಗೆಯೇ ಬೆಳೆಭಾಗ್ಯ ದೇವರ ಅನುಗ್ರಹದಿಂದ ದೊರೆಯುವಂಥದ್ದೆಂದು ನಂಬುತ್ತಾರೆ. ಹಾಗಾಗಿ ಸಹಜವಾಗಿಯೇ ಕೃಷಿಯ ನಾನಾ ಹಂತಗಳಲ್ಲಿ ಬೇರೆ ಬೇರೆ ಆಚಾರ ಅನುಷ್ಠಾನ ಕ್ರಿಯೆಗಳನ್ನು ಅವರಲ್ಲಿ ಕಾಣಬಹುದು. ಬೀಜ ಹಾಕಲು ವಿಷು ಒಳ್ಳೆಯ ದಿನ. ಬೀಜ ಹಾಕುವ ಶುಭ ಸೂಚಕವಾಗಿ ಮನೆ, ಅಂಗಳ ಮುಂತಾದುವನ್ನು ಮಣ್ಣು ಲೇಪಿಸಿ ಅಂದಗೊಳಿಸುತ್ತಾರೆ. ಬೀಜಹಾಕುವ ಅಧಿಕಾರವು ಕೃಷಿ ಕೆಲಸಗಳ ಜವಾಬ್ದಾರಿಯುಳ್ಳ ಊರ ಹಿರಿಯನಾದ 'ಮಣ್ಣುಕಾರ'ನಿಗೆ.

ಇಡೀ ಊರಿಗಾಗಿ ಈತ ಸಾಂಕೇತಿಕವಾಗಿ ಈ ಕೆಲಸವನ್ನು ಮಾಡುತ್ತಾನೆ. ಬೀಜ ಹಾಕುವ ಒಳ್ಳೆಯ ದಿನವನ್ನು ಈತನೇ ನಿರ್ಧರಿಸುತ್ತಾನೆ. ನಿಶ್ಚಿತವಾದ ದಿನದಂದು ಮೊದಲೆ ಸಜ್ಜುಗೊಳಿಸಲಾದ ಕಾಡಿನ ಮೂಲೆಯೊಂದರಲ್ಲಿ ಬೆಳಗ್ಗಿನ ಹೊತ್ತು ಈತ ಬಿತ್ತನೆಯ ಕಾರ್ಯಕ್ರಮವನ್ನು ನೆರವೇರಿಸುತ್ತಾನೆ. ಸೂರ್ಯೋದಯಕ್ಕೆ ಮೊದಲು ಬಿತ್ತನೆಯ ಕೆಲಸ ಮುಗಿದಿರಬೇಕು ಎನ್ನುವುದು ಕಟ್ಟಳೆ. ಬಿತ್ತನೆ ಮಾಡುವುದನ್ನು ಯಾರೂ ನೋಡಕೂಡದು. ಮಣ್ಣುಕಾರನು ಮುಂಜಾನೆ ಎದ್ದು 'ವಿಷುಕಣಿ' ನೋಡಿದ ಬಳಿಕ ಸ್ನಾನಾದಿಗಳನ್ನು ತೀರಿಸಿ ಬೀಜದೇವತೆ ಕರುದೈವ 'ಪೇಯ್'ದ ಮುಂದೆ ನಿಂತು ಪ್ರಾರ್ಥಿಸಿ ಬೇರೆ ಬೇರೆ ಬೀಜಗಳನ್ನು ತೆಗೆದುಕೊಂಡು ಅವನ್ನು ಬೆರಕೆ ಮಾಡುತ್ತಾನೆ. ಬಳಿಕ ಇನ್ನೊಮ್ಮೆ ದೈವವನ್ನು ಪ್ರಾರ್ಥಿಸಿ ಒಬ್ಬ ಸಹಾಯಕನೊಂದಿಗೆ ಪೂರ್ವನಿಶ್ಚಿತ ಜಾಗಕ್ಕೆ ಹೋಗುತ್ತಾನೆ. ಅಲ್ಲಿ ಮಣ್ಣಿಗೆ ನಮಸ್ಕರಿಸಿ ಬೆರಕೆ ಮಾಡಿದ ಬೀಜಗಳಿಂದ ಸ್ವಲ್ಪವನ್ನು ತೆಗೆದುಕೊಂಡು ಮಂತ್ರವನ್ನು ಹೇಳಿ ಬಿತ್ತನೆ ಮಾಡುತ್ತಾನೆ. ಆಗ ನಾನಾ ಮಲೆದೈವಗಳನ್ನೂ ಕಾವೇರಿ ಅಮ್ಮನನ್ನೂ ಕರೆಯುತ್ತಾನೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಯಾವುದೇ ಲೋಪ ಬರಬಾರದೆನ್ನುವುದು ನಂಬಿಕೆ. ಬಿತ್ತನೆಯ ಕಾರ್ಯಕ್ರಮವು ಯಾವುದೇ ಕಾರಣಕ್ಕೆ ಮೊಟಕಾಗಬಾರದು. ಒಂದು ವೇಳೆ ಹುಲಿಯೇ ಬಂದರೂ ಮಣ್ಣುಕಾರನು ಬೀಜಹಾಕುವ ಕಾರ್ಯಕ್ರಮವು ಮುಗಿಯದೆ ಅಲ್ಲಿಂದ ಸರಿಯಕೂಡದು. ಬೀಜ ಹಾಕಿದ ಬಳಿಕವೂ ಅವನು ಇನ್ನೊಮ್ಮೆ ಮಣ್ಣಿಗೆ ನಮಸ್ಕಾರ ಮಾಡುತ್ತಾನೆ. ಇರುಳರ ಪ್ರಕಾರ ಮಣ್ಣುಕಾರ ಹಾಗೂ ಆತನ ಸಹಾಯಕನೂ ಕೆಲವು ದೈಹಿಕ ಲಕ್ಷಣಗಳಿಂದ ಕೂಡಿರಬೇಕು. ಕರ್ರಗೆ ಒಳ್ಳೇ ದಷ್ಟಪುಷ್ಟ ಆಳು ಆಗಿರಬೇಕು. ಯಾಕೆಂದರೆ ಧಾನ್ಯಗಳ ಗಿಡಗಳು ಪುಷ್ಟಿಯಾಗಿ ಬೆಳೆಯಬೇಕಾದರೆ ಅವರೂ ಹಾಗೆಯೇ ಇರಬೇಕು ಎಂಬುದು ನಂಬಿಕೆ.

ಅಟ್ಟಪ್ಪಾಡಿಯ ಆದಿವಾಸಿ ಕೃಷಿಕರಲ್ಲಿ ಮಳೆದೈವವನ್ನು ಸಂತಸಪಡಿಸುವುದಕ್ಕಾಗಿ ಕೆಲವು ಆಚರಣೆಗಳಿವೆ. ಕುಮರಿ ಬೇಸಾಯ ಮಳೆಯನ್ನು ಆಶ್ರಯಿಸಿಕೊಂಡಿರುವುದು ಇದಕ್ಕೆ ಮೂಲ ಪ್ರೇರಣೆ. ಹಿಂದಿನ ಕಾಲದಂತೆ ಮುಂದೆಯೂ ಒಳ್ಳೆಯ ಮಳೆ ಲಭ್ಯವಾಗಬೇಕಾದರೆ ಮಳೆಯ ದೇವತೆಯಾದ 'ಮಾರಿಆತ್ತ' (ಮಾರಿಅಮ್ಮ)ಳನ್ನು ಸಂತಸಪಡಿಸಬೇಕು ಎಂಬುದು ಆದಿವಾಸಿಗಳ ನಂಬಿಕೆ. ಮಾರಿಗಾಗಿ ನಿರ್ಮಿಸಿರುವ ಗುಡಿಯಲ್ಲಿ ಬಲಿಗಳನ್ನು ಅರ್ಪಿಸುವ ಕಾರ್ಯಕ್ರಮವು ಬಿತ್ತನೆಯ ದಿನದಂದು ನಡೆಯುತ್ತದೆ. ಬೀಜ ಹಾಕಿ ಬಂದ ಬಳಿಕ ಕೆಲವೊಮ್ಮೆ ಔತಣವಿರುತ್ತದೆ. ಊರಿನ ಜನ ಎಲ್ಲರ ಪರವಾಗಿ ಈ ಔತಣದ ಸಮಾರಾಧನೆಯ ಜವಾಬ್ದಾರಿಯನ್ನು ಮಣ್ಣುಕಾರನಿಗೆ ಕೊಡುತ್ತಾರೆ. ಸಮಾರಾಧನೆಯ ಅಡುಗೆಯನ್ನು ಬಾಳೆಯ ಎಲೆಯಲ್ಲಿ ಮೂರು ಬಾರಿ ಮಾರಿಅಮ್ಮನಿಗೆ ಅರ್ಪಿಸಿದ ಬಳಿಕ ಜನರಿಗೆ ಔತಣವನ್ನು ನೀಡುತ್ತಾರೆ.

ಕೊಯ್ಲಿನ ಸಂದರ್ಭದಲ್ಲೂ ಹೀಗೆಯೇ ಆಚರಣೆಗಳಿವೆ. ಬಿತ್ತನೆಯಲ್ಲಿಯಂತೆ ಕೊಯ್ಲಿನ ವೇಳೆಯೂ ಮಣ್ಣುಕಾರನೇ ಮೊದಲು ಕೊಯ್ಲು ಮಾಡುತ್ತಾನೆ. ಬೀಜಹಾಕಿದವನೇ ಕೊಯ್ಯಬೇಕೆಂಬುದು ನಿಯಮ. ಮಣ್ಣುಕಾರನು ಈ ಕ್ರಿಯೆಯನ್ನು ಸಾಂಕೇತಿಕವಾಗಿ ಮುಗಿಸಿದ ಬಳಿಕವೇ ಉಳಿದವರು ಕೊಯ್ಲಿಗೆ ಪ್ರಾರಂಭಿಸುತ್ತಾರೆ. ಅಂತೆಯೇ ಯಾವುದೇ ಧಾನ್ಯಗಳನ್ನು ದೈವಗಳಿಗೆ ಅರ್ಪಿಸಿದ ಬಳಿಕವಷ್ಟೆ ಉಳಿದವರು ಆಹಾರವಾಗಿ ಅವನ್ನು ಸೇವಿಸಬೇಕು. 'ತೋಡು ತಿನ್ನಲ್' ಎಂಬ ಆಚರಣೆಯನ್ನು ಕೊಯ್ಲಿನ ಮೊದಲು ಈ ಉದ್ದೇಶದಿಂದಲೇ ನೆರವೇರಿಸುತ್ತಾರೆ. ಆಪತ್ತುಗಳಾಗಲಿ ನಾಶನಷ್ಟವಾಗಲಿ ಇಲ್ಲದೆಯೇ ಬಯಸಿದ ಹಾಗೆ ಒಳ್ಳೆಯ ಬೆಳೆಯನ್ನು

ನೀಡಿ ಅನುಗ್ರಹಿಸಿದ್ದಕ್ಕಾಗಿ ಕೃತಜ್ಞತಾ ಸೂಚಕವಾಗಿ ಕರುದೈವ, ಮಾರಿದೈವ/ಮಾರಿಅಮ್ಮನಿಗೆ ಈ ಎಡೆಬಡಿಸುವ ಕಾರ್ಯಕ್ರಮ ನಡೆಯುತ್ತದೆ. ಧಾನ್ಯಗಳ ಹೊಸ ಫಸಲನ್ನು ಆಹಾರವಾಗಿ ಸೇವಿಸುವ ಸಂದರ್ಭದಲ್ಲಿ 'ತೋಡು ತಿನ್ನಲ್' ಎಂಬ ಕಾರ್ಯಕ್ರಮ. ಇದು 'ಹೊಸಅಕ್ಕಿ'ಗೆ ಅಥವಾ ಹುತ್ತರಿಗೆ ಸಮಾನವಾದ ಆಶಯವುಳ್ಳದ್ದು. ಇಲ್ಲಿಯೂ ಪ್ರಧಾನಪಾತ್ರ ಮಣ್ಣುಕಾರನದೇ. ಅವನು ಅಂದು ಮುಂಜಾನೆ ಸ್ನಾನಮಾಡಿ ನಾಲ್ಕಾರು ಜನರೊಂದಿಗೆ ಬೆಳೆ ಬೆಳೆದಿರುವ ಕಾಡಿನ ಯಾವುದಾದರೂ ಜಾಗಕ್ಕೆ ಹೋಗಿ ಒಂದು ಹಿಡಿ ಕದಿರುಗಳನ್ನು ಕೊಯ್ದು ತೆಗೆಯುತ್ತಾನೆ. ಜತೆಯಲ್ಲಿದ್ದವರೂ ಬಳಿಕ ಹಾಗೆಯೇ ಕೊಯ್ದುಕೊಳ್ಳುತ್ತಾರೆ. ಮಣ್ಣುಕಾರನು ಹಾಗೆ ಕೊಯ್ದು ತಂದ ಕದಿರುಗಳನ್ನು 'ಕದಿರುಗೊನೆ'ಯಾಗಿ ಕಟ್ಟಿ ತೂಗಲು ಬಳಸುತ್ತಾರೆ. ಉಳಿದವರು ತಂದ ಕದಿರುಗಳನ್ನು ಮಿದಿದು ದೈವಗಳಿಗೆ ಬಡಿಸಲು ಮತ್ತು 'ತೋಡು ತಿನ್ನಲು' ಬಳಸುತ್ತಾರೆ. ಸಾಮೆಗೂ ರಾಗಿಗೂ ಮಾತ್ರ ಈ ಕಾರ್ಯಕ್ರಮಗಳ ಗೌರವವು ಸಲ್ಲುತ್ತದೆನ್ನುವುದು ಗಮನಾರ್ಹ.

ಮಾರಿಯಮ್ಮನನ್ನು ಮೊದಲು ದೇವಾಲಯದಲ್ಲಿ ಪೂಜಿಸುತ್ತಾರೆ. ಬಳಿಕ ಮಣ್ಣುಕಾರನ ಮನೆಯ ಪೇಯ್ (ಕರುದೈವ)ಗೆ ಹೊಸಧಾನ್ಯದ ಔತಣವನ್ನು ಸಮರ್ಪಿಸುತ್ತಾರೆ. 'ಪುಟ್ಟು' ಮಾಡುವುದಕ್ಕೆ ರಾಗಿಯೂ ಗಂಜಿ ಮಾಡುವುದಕ್ಕೆ ಸಾಮೆಯೂ ಬಳಕೆಯಾಗುತ್ತವೆ. ಅವನ್ನು ಕೂವೆ ಎಲೆ ಅಥವಾ ನವಣೆಯ ಎಲೆಗಳಲ್ಲಿಟ್ಟು ಅರ್ಪಿಸಲಾಗುತ್ತದೆ. ದೈವಗಳಿಗೆ ಕುಡಿಯಲು ಜತೆಯಲ್ಲಿ ನೀರನ್ನು ಇಡುತ್ತಾರೆ. ಅಂದು ದುಡಿಮೆಗೆ ಪೂರ್ಣ ವಿಶ್ರಾಂತಿ. ಇದು ಸ್ಥೂಲವಾಗಿ ದೈವಗಳಿಗೆ ಅರ್ಪಿಸುವ ಮೊದಲ ಫಸಲಿನ ಸಮಾರಾಧನೆಯ ಕಾರ್ಯಕ್ರಮ ವಿವರ.

ಊರವರಿಗೆ ನೀಡುವ ಔತಣ/ಸಮಾರಾಧನೆಗಾಗಿ ಎಲ್ಲರೂ ತಮ್ಮ ತಮ್ಮ ಫಸಲಿನ ಒಂದು ಭಾಗವನ್ನು ಮಣ್ಣುಕಾರನ ಮನೆಗೆ ತಲುಪಿಸಿಕೊಡುತ್ತಾರೆ. ಮಣ್ಣುಕಾರನು ಹೊಸ ಆಹಾರವನ್ನು ಸಿದ್ಧಮಾಡಿ ಪೂಜಾದಿಗಳನ್ನು ಮಾಡಿದ ಬಳಿಕ ಎಲ್ಲರಿಗೂ ತೋಡು ತಿನ್ನಲು ಅನುಮತಿ ದೊರೆಯುತ್ತದೆ. ಧಾನ್ಯಗಳ 'ಅನ್ನ'ಕ್ಕೆ ಮೇಲೋಗರವಾಗಿ ಚೀನೀಕಾಯಿ ಮತ್ತು ತೊಗರಿಯನ್ನು ಸೇರಿಸಿ ಮಾಡಿದ ಪದಾರ್ಥವಿರುತ್ತದೆ.


ಮುಡುಗರಲ್ಲಿ ಸಾಮೆ ಕೊಯ್ಲಿನ ಸಂದರ್ಭದಲ್ಲಿ ಮೃಗಬಲಿ ಕೊಡುವ ಸಂಪ್ರದಾಯವಿದೆ. ಕೊಯ್ಲಿನ ಬಳಿಕ ಶಿವರಾತ್ರಿಯ ಹೊತ್ತಿಗೆ ಎಲ್ಲರೂ ಅಟ್ಟಪ್ಪಾಡಿಯ ಒಡೆಯನಾದ ಮಲ್ಲೇಶ್ವರನಿಗೆ ಕಾಣಿಕೆಯಾಗಿ ಧಾನ್ಯಗಳನ್ನು ನೀಡುತ್ತಾರೆ. ಒಳ್ಳೇ ಫಸಲು ಅನುಗ್ರಹಿಸಿದ್ದಕ್ಕಾಗಿ ಹೀಗೆ ಅವರು ಕೃತಜ್ಞತೆಯನ್ನು ಅರ್ಪಿಸುತ್ತಾರೆ. ಮುಂದಿನ ವರ್ಷಗಳಲ್ಲೂ ಹಾಗೆಯೇ ಒಳ್ಳೆಯ ಬೆಳೆಯನ್ನು ನೀಡುವಂತೆ ಅವನಲ್ಲಿ ಪ್ರಾರ್ಥಿಸುತ್ತಾರೆ. ಅಂತೆಯೇ ಬೆಳೆ ಕಡಿಮೆ ಬಂದ ವರ್ಷಗಳಲ್ಲಿ ಭೂಮಿತಾಯಿಯ ಕೋಪದಿಂದ ಹಾಗಾಯಿತೆಂದು ತಿಳಿದು ಮುಡುಗರು ಆಡನ್ನು ಬಲಿಕೊಟ್ಟು, ಬಳಿಕ ಅದರ ಕರುಳನ್ನು ಮಣ್ಣುಕಾರನೂ ಭಂಡಾರಿಯೂ ಕೊರಳಿಗೆ ಹಾಕಿಕೊಂಡು ಇಡೀ ಕಾಡನ್ನು ಸುತ್ತುವ ಆಚರಣೆಯನ್ನು ಮಾಡುತ್ತಾರೆ.

ಹೀಗೆ ತಮ್ಮದೇ ಆದ ಕೃಷಿಸಂಬಂಧಿ ಪದ್ಧತಿಗಳಿಂದಲೂ ಆಚರಣೆಗಳಿಂದಲೂ ಅಟ್ಟಪ್ಪಾಡಿಯ ಆದಿವಾಸಿ ಜನರು ಕೇರಳದ ಕೃಷಿ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದಾರೆ.

ಕೆ.ಕೆ.

ಅಡಕೆ ಪ್ರಪಂಚದ ಬಹುತೇಕ ಉಷ್ಣವಲಯ ದೇಶಗಳಲ್ಲಿ ಅಡಕೆ ಕೃಷಿ ಇದೆ. ತಾಳೆ, ತೆಂಗು, ಈಚಲು ಜಾತಿಗೆ ಸೇರಿದ ಈ ಮರ ಕೊಡುವ ಅಡಕೆ ವೀಳ್ಯದೆಲೆ ಜೊತೆಗೆ ಬಳಕೆಯಾಗುತ್ತದೆ. ಕನ್ನಡದಲ್ಲಿ ಕಂಗು, ಕೌಂಗು ಎಂದೂ ತಮಿಳಿನಲ್ಲಿ ಪಾಕು ಎಂದೂ ತೆಲುಗಿನಲ್ಲಿ ಪೋಕು ಎಂದೂ ಮಲಯಾಳದಲ್ಲಿ ಅಡಕ್ಕ ಎಂದೂ ಸಂಸ್ಕೃತದಲ್ಲಿ ಪೂಗಿ ಫಲ, ಬ್ರಹ್ಮವೃಕ್ಷ ಎಂದೂ ಕರೆಯುವರು. ಮಲಯ ದೇಶ ಅಡಕೆಯ ತವರೂರು. ಇದರಲ್ಲಿ 36ಕ್ಕೂ ಹೆಚ್ಚು ಪ್ರಭೇಧಗಳಿವೆ. ಅವುಗಳ ಪೈಕಿ ಕೃಷಿಯೋಗ್ಯವೂ ಹೆಚ್ಚು ಬಳಕೆಯಲ್ಲಿರುವಂಥದೂ ಅರೆಕ ಕ್ಯಟೆಚು. ಭಾರತದ ಪ್ರಮುಖ ವಾಣಿಜ್ಯ ವಾಣಿಜ್ಯ ಬೆಳೆಗಳಲ್ಲಿ ಇದೂ ಒಂದು. ಅಡಕೆ ಮತ್ತು ವೀಳ್ಯದೆಲೆ ಜೊತೆಗೂಡಿದ ತಾಂಬೂಲಕ್ಕೆ ಭಾರತದಲ್ಲಿ ಪೂಜನೀಯ ಸ್ಥಾನವಿದೆ. ಇದಿಲ್ಲದೆ ಯಾವುದೇ ಕಾರ್ಯಗಳು ಪೂರ್ಣಗೊಳ್ಳುವುದಿಲ್ಲ.

ಕನ್ನಡ ಶಾಸನಗಳಲ್ಲಿ ಹಾಗೂ ಕನ್ನಡ ಕಾವ್ಯಗಳಲ್ಲಿ ಅಡಕೆಯ ಉಲ್ಲೇಖಗಳು ಕಂಡು ಬರುತ್ತವೆ. 'ಅಡಕೆಯ ಪೇಜೆಂಗೆ ಮೂನೂಱು....' (ಎ॥ IX, 22-8, 800); 'ಅವರ ಮೇಲಿರ್ದಲೆಯಡಕೆಯುಂ' (ಪಂ.ಭಾ., 5-47 ವ); 'ಪಲ್ಲಸಂದಿಯಡಕೆಯಂತೆ' (ಧರ್ಮಾಮೃ. 9-23); 'ಸಲೆತೂಗಿ



ತೊನೆವಡಕೆಗಳ' (ತೊರರಾ. 1-9-13); 'ಐದೂವರೆ ಸಾವಿರ ಅಡಕೆ ಮರನ ಕ್ಷೇತ್ರ' (ಎಕ. VI, ಶೃಂಗೇರಿ, 12-28; 1629). 'ಅಡಕೆಗೆ ಹೋದ ಮಾನ, ಆನೆ ಕೊಟ್ಟರೂ ಬಾರದು' (ಗಾದೆ). ಈ ಉಲ್ಲೇಖಗಳು ಕರ್ನಾಟಕದಲ್ಲಿಯ ಅಡಕೆಕೃಷಿಯ ಪ್ರಾಚೀನತೆ ಮತ್ತು ಜನಪ್ರಿಯತೆಯನ್ನು ದೃಢಪಡಿಸುತ್ತವೆ. ಮಂದಿ ಮೆಲ್ಲುವ ಅಡಕೆಯನ್ನು ಕಾಯಡಕೆ, ಗೋಟಡಕೆ, ಚಿಕ್ಕಡಕೆ, ಚೂರಡಕೆ, ನೆಲವತ್ತಿ ಅಡಕೆ, ಬೆಟ್ಟಡಕೆ, ಹಣ್ಣಡಕೆ ಎಂದೆಲ್ಲ ಗುರುತಿಸಲಾಗಿದೆ.

ಸಸ್ಯ ಸ್ವರೂಪ : ಕವಲೊಡೆದು ಬೆಳೆಯದ ಮರವಿದು. ಸು. 40-80 ಅಡಿ ಎತ್ತರ ಬೆಳೆಯುವುದು, ತೆಂಗಿನ ಗರಿಯಂಥ ಸೋಗೆಗಳು ಕಾಂಡದ

ಸುತ್ತಲೂ ಇದ್ದು, ಮರ ಬೆಳೆದಂತೆಲ್ಲ ಹಣ್ಣಾಗಿ ಉದುರಿಹೋಗುತ್ತವೆ. ಎಳೆಯದರಲ್ಲಿ ಕಾಂಡ ಹಸುರಾಗಿದ್ದು ಮರ ಬೆಳೆದಂತೆಲ್ಲ ಬೂದುಮಿಶ್ರಿತ ಬಿಳಿಬಣ್ಣ ಗೋಚರಿಸುತ್ತದೆ. ಇದು ಸುಮಾರು ಐದಾರು ವರ್ಷಗಳಲ್ಲಿ ಫಲ ನೀಡುವುದು. ಇದರ ಹೂ ಆಕರ್ಷಕವಾಗಿದ್ದು ಸಿಂಗಾರ, ಹಿಂಗಾರ ಎಂದು ಕರೆಯುವರು. ಹೊಂಬಾಳೆಯು ಹೊರಭಾಗದಲ್ಲಿ ದೋಣಿಯಾಕಾರದ ಕವಚವಿರುತ್ತದೆ. ಹೆಣ್ಣು ಮತ್ತು ಗಂಡು ಹೂಗಳು ಒಟ್ಟಿಗೆ ಇರುತ್ತವೆ. ಎರಡೂ ಪರಿಮಳಪೂರಿತವಾಗಿರುತ್ತವೆ. ಮೊದಲು ಗಂಡು ಹೂ ಅನಂತರ ಹೆಣ್ಣು ಹೂ ಅರಳುತ್ತವೆ. ಪರಕೀಯ ಪರಾಗಸ್ಪರ್ಶದಿಂದ ಫಲಕಚ್ಚುತ್ತವೆ. ಹೂಬಿಟ್ಟ 8-9 ತಿಂಗಳಲ್ಲಿ ಫಲ ನೀಡುತ್ತದೆ. ಮೊದಲು ಹಸುರಾಗಿದ್ದು, ಹಣ್ಣು ಪಕ್ವಗೊಳ್ಳುವ ಹಂತದಲ್ಲಿ ಹಳದಿ ಮಿಶ್ರಿತ ಕೆಂಪು ಬಣ್ಣದ್ದಾಗಿ ಕಾಣುತ್ತದೆ. ಪಕ್ವಗೊಂಡ ಕಾಯಿಯ ಹೊರಭಾಗದಲ್ಲಿ ತೆಂಗಿನ ನಾರಿನಂಥ ಗಡುಸಾದ ಸಿಪ್ಪೆ ಇರುತ್ತದೆ. ಒಳಭಾಗದಲ್ಲಿ ಗೋಲಿಯಾಕಾರದಲ್ಲಿರುವ ತಿರುಳೇ ಅಡಕೆ.

ಕೃಷಿ : ಹೆಚ್ಚು ಮಳೆ ಬೀಳುವ, ಸದಾ ತಂಪಾದ ಹವಾಗುಣ ಹೊಂದಿರುವ ಉಷ್ಣಪ್ರದೇಶಗಳಲ್ಲಿ ಇದರ ಕೃಷಿ ಚೆನ್ನಾಗಿ ನಡೆಯುತ್ತದೆ. ಕೇವಲ ಮಲೆನಾಡು ಪ್ರದೇಶಗಳಲ್ಲಷ್ಟೇ ಅಲ್ಲದೆ ಸದಾ ನೀರು ದೊರೆಯುವ ಬಯಲು ಪ್ರದೇಶಗಳಲ್ಲೂ ಇದರ ಕೃಷಿ ನಡೆಯುತ್ತದೆ. ಸಮುದ್ರ ಮಟ್ಟದಿಂದ ಸು. 3000 ಅಡಿ ಎತ್ತರ ಪ್ರದೇಶದಲ್ಲಿ ಇದನ್ನು ಬೆಳೆಸುವರು. ಉತ್ತಮ ಇಳುವರಿಗಾಗಿ ಜಂಬಿಟ್ಟಿಗೆ ಮಣ್ಣು, ಮರಳು ಮಿಶ್ರಿತ ಮೆಕ್ಕಲು ಅಥೆಂಪು ಮಣ್ಣು ಯುಕ್ತವಾದುದು. ಸದಾ ನೀರು ನಿಲ್ಲುವುದಾಗಲಿ, ಉಪ್ಪು ಮಣ್ಣಾಗಲಿ ಇದಕ್ಕೆ ಒಗ್ಗದು. ಉತ್ತಮ ಬೀಜಗಳನ್ನು ಬಿತ್ತನೆಗೆ ಸಂಗ್ರಹಿಸಲು ಬಲಿತ ಮರದ ಉತ್ಕೃಷ್ಟ ಇಳುವರಿಯ, ಮರದ ತುಂಬ ಗೊಂಚಲು ಬಿಡುವ ಅಸಂಖ್ಯಾತ, ದೃಢವಾದ ಹಣ್ಣುಗಳನ್ನು ಕೊಡುವ ಮರದಿಂದ ಬಿತ್ತನೆ ಬೀಜಗಳನ್ನು ಆಯ್ಕೆ ಮಾಡುವರು. ಇಂಥ ಬೀಜಗಳನ್ನು ಚೆನ್ನಾಗಿ ನೆರಳಿನಲ್ಲಿ ಒಣಗಿಸಿ, ಒಟ್ಲು ಪಾತಿಗಳಲ್ಲಿ ಹಾಕಿ ಬೆಳೆಸಬೇಕು. ಬಿಸಿಲು ಇರದ ನೆರಳೂ ಇರದ ಸುಖೋಷ್ಣ ವಾತಾವರಣದಲ್ಲಿ ಬೀಜಗಳು ಚೆನ್ನಾಗಿ ಮೊಳೆತು ನಾಟಿಗೆ ಸಿದ್ಧಗೊಳ್ಳುತ್ತವೆ. ಹೀಗೆ ಸಿದ್ಧಗೊಳ್ಳಲು ಹದಿನಾರು ತಿಂಗಳಾದರೂ ಬೇಕು.

ಅಡಕೆ ತೋಟ ಮಾಡಲು ಭೂಮಿಯನ್ನು ಮೊದಲೇ ಸಿದ್ಧಗೊಳಿಸಿಕೊಳ್ಳಬೇಕು. ಒಂದೆರಡು ವರ್ಷಗಳ ಮೊದಲೇ ನಿರ್ದಿಷ್ಟ ಜಾಗದಲ್ಲಿ ಬಾಳೆ ಮತ್ತಿತರ ನೆರಳು ಕೊಡುವ ಮರಗಳನ್ನು ಬೆಳೆಸಬೇಕು. ಮಲೆನಾಡು ಪ್ರದೇಶದಲ್ಲಿ ಬಾಳೆ ಬೆಳೆಸಿದರೆ, ಬಯಲು ಸೀಮೆಯಲ್ಲಿ ಚೊಗಚೆ, ನುಗ್ಗೆ, ಅಗಸೆ ಮುಂತಾದವನ್ನು ಬೆಳೆಸುತ್ತಾರೆ. ಪೂರ್ವ ಮತ್ತು ಪಶ್ಚಿಮದಿಕ್ಕಿನಿಂದ ಬರುವ ಬಿಸಿಲು ಮತ್ತು ಗಾಳಿಯನ್ನು ನಿಯಂತ್ರಿಸಲು ಸದಾ ಹಸುರಾಗಿರುವ ಮರಗಳನ್ನು ಬೆಳೆಸುವರು. ಸಾಗುವಾನಿ, ಸರ್ವೆ, ದೇವದಾರು, ಬಕುಲಗಳು ಉತ್ತಮ. ಕಡಿಮೆ ಪ್ರದೇಶಗಳಲ್ಲಾದರೆ ಅಕ್ಕಪಕ್ಕದ ಗುಡ್ಡ ಮತ್ತು ಘಟ್ಟಗಳೇ ಗಾಳಿ, ಮಳೆ, ಬಿಸಿಲುಗಳನ್ನು ನಿಯಂತ್ರಿಸುತ್ತವೆ. ಹೆಚ್ಚು ಬಿಸಿಲು, ಹೆಚ್ಚುಗಾಳಿ ಈ ಬೆಳೆಗೆ ಉಚಿತವಲ್ಲ. 35^{o} ಸೆಂ. ಉಷ್ಣಾಂಶಕ್ಕಿಂತ ಹೆಚ್ಚು ಬಿಸಿಲು ಬಿದ್ದರೆ ಅಡಕೆಯ ಹೂಗಳು ಉದುರಿ ಮಣ್ಣಾಗುತ್ತವೆ. ಚಳಿ ಹೆಚ್ಚಾದರೂ ಗಿಡಗಳ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಮಳೆ ಹೆಚ್ಚಾದರೆ ರೋಗರುಜಿನಗಳು ಬರುತ್ತದೆ. ಮಳೆ ಕಡಿಮೆಯಾದರೂ ಇಳುವರಿ ಅಷ್ಟಕ್ಕಷ್ಟೆ. ಕರ್ನಾಟಕದ ಬಹುತೇಕ ಭಾಗಗಳಲ್ಲಿ ಅಡಕೆ ಕೃಷಿ ಉಂಟು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಘಟ್ಟ ಪ್ರದೇಶಗಳಲ್ಲಿ ಇದರ ಕೃಷಿ ಉತ್ಕೃಷ್ಟವಾಗಿದೆ. ಕೊಡಗಿನಲ್ಲಿ ಈ ಬೆಳೆಗೆ ಉತ್ತಮ ವಾತಾವರಣವಿಲ್ಲ. ತುಮಕೂರು, ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಅಡಕೆ ಬೆಳೆದರೂ ಬಯಲು ಸೀಮೆಯಲ್ಲಿ ಒಣಹವೆ ಇರುವುದರಿಂದ ಗುಣಮಟ್ಟವೂ ಇಳುವರಿಯೂ ಕಡಿಮೆ. ಇಂಥ ಭಾಗಗಳಲ್ಲಿ ಅಡಕೆ ತೋಟ ಮಾಡಲು ಹೆಚ್ಚು ಶ್ರಮ ಬೇಕು. ನೈಋತ್ಯ ದಿಕ್ಕಿನ ಬಿಸಿಲು ಮರಕ್ಕೆ ಬೀಳದಂತೆ ಅಡಕೆ ಸೋಗೆ, ತೆಂಗಿನ ಗರಿಗಳಿಂದ ತಡೆಗೋಡೆಯಂತೆ ನೆರಳು ಉಂಟುಮಾಡುವರು. ಗಿಡಗಳನ್ನು ಸಾಲಾಗಿ ಬೆಳೆಸದೆ ಗುಂಡುತೋಪುಗಳಂತೆ ನೆಟ್ಟು ಬೆಳೆಸುವುದರಿಂದ ಬಿಸಿಲು ನುಗ್ಗದೆ ಇರುವುದರಿಂದ ಮರಗಳು ಟೊಳ್ಳಾಗುವುದಿಲ್ಲ.

ಕರ್ನಾಟಕದಲ್ಲಿ ಅಡಕೆ ಬೇಸಾಯವನ್ನು ಬೆಟ್ಟದ ಇಳಿಜಾರುಗಳಲ್ಲಿ, ಕಣಿವೆಗಳಲ್ಲಿ, ಮೈದಾನದ ನಾಲೆಯಿರುವೆಡೆ, ಕೆರೆ, ಬಾವಿಗಳ ಕೆಳಭಾಗದಲ್ಲಿ (ಕೀಲೇರಿ) ಮತ್ತು ನದೀ ತೀರಗಳಲ್ಲೂ ಬೆಳೆಯುವರು. ಅಡಕೆಗಿಡಗಳನ್ನು 9 x 9 ಅಡಿ ಅಥವಾ 12 x 12 ಅಡಿ ಪಾತಿಗಳಲ್ಲಿ ನೆಡುತ್ತಾರೆ. 1.5 x 1.5 x 1.5 ಅಡಿ 2 x 2 x 2 ಅಡಿ ಅಥವಾ 3 x 3 x 3 ಅಡಿ ಆಳ ತೆಗೆಯುವರು. ಪಾತಿಗಳಲ್ಲಿ ಕೊಟ್ಟಿಗೆ ಗೊಬ್ಬರ, ಗೋಡುಮಣ್ಣು ಮತ್ತು ಹಸುರೆಲೆ ತುಂಬಿ ಕೆಲವು ದಿನ ಕೊಳೆಯಲು ಬಿಡುವುದುಂಟು. ಹೆಚ್ಚು ಮಳೆಯಾಗುವ ಪ್ರದೇಶವಾದರೆ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲೂ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿ ಜೂನ್-ಜುಲೈ ತಿಂಗಳಲ್ಲೂ ಗಿಡಗಳನ್ನು ನೆಡುವುದು ಪದ್ಧತಿ. ಅಡಕೆ ತೋಟಕ್ಕೆ ಬಹಳ ಮುತುವರ್ಜಿ ವಹಿಸಬೇಕು. ಹೆಚ್ಚು ನೀರು ನಿಲ್ಲದಂತೆ ಬಸಿ ಕಾಲುವೆಗಳನ್ನು ನಿರ್ಮಿಸಬೇಕು. ಮಳೆಯ ಪ್ರಮಾಣ ಕಡಿಮೆಯಾದರೆ ಬುಡದ ಸುತ್ತಲೂ ಒಂದೆರಡು ಅಡಿ ವೃತ್ತಾಕಾರದಲ್ಲಿ ಪಾತಿ ಮಾಡಿ ಗೊಬ್ಬರ ಕೊಡಬೇಕು. ಒಂದು ಮರಕ್ಕೆ 15 ಕೆ.ಜಿ. ಕೊಟ್ಟಿಗೆ ಗೊಬ್ಬರ, 15 ಕೆ.ಜಿ. ಹುಸುರೆಲೆ ಗೊಬ್ಬರ, ಅರ್ಧ ಕೆ.ಜಿ. ಹಿಂಡಿ, ಕಾಲು ಕೆ.ಜಿ. ಕ್ಯಾಲ್ಸಿಯಂ ಅಥವಾ ಅಮೋನಿಯಂ ನೈಟ್ರೇಟ್, 250 ಗ್ರಾಂ ಸೂಪರ್ ಫಾಸ್ಫೇಟ್, 125 ಗ್ರಾಂ ಮೂರೇಟ್ ಆಫ್ ಪೊಟ್ಯಾಷ್ ಹಾಕುವುದರಿಂದ ಉತ್ತಮ ಇಳುವರಿ ನಿರೀಕ್ಷಿಸಬಹುದು. ಮರಗಳು ಐದಾರು ವರ್ಷಗಳಲ್ಲಿ ಫಲಕೊಡಲಾರಂಭಿಸಿ 10-12 ವರ್ಷಗಳ ಬಳಿಕ ಫಲ ಕ್ರಮೇಣ ಹೆಚ್ಚಾಗಿ ಹೋಗಿ ಅರ್ಧ ಶತಮಾನದ ತನಕ ಇಳುವರಿ ಕೊಡುತ್ತಲೇ ಹೋಗುತ್ತದೆ.

ಅಡಕೆ ಕೊಯ್ಲು : ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಹಣ್ಣಾಗುವ ಮೊದಲೇ ಕೊಯ್ದು ಸಂಸ್ಕರಿಸಿ ಮಾರಾಟ ಮಾಡುವುದೂ ಉಂಟು. ಕೆಲವೆಡೆ ಪೂರ್ಣ ಹಣ್ಣಾಗುವ ತನಕ ಬಿಟ್ಟು ಕೊಯ್ಲು ಮಾಡುವರು. ಅನಂತರ 40 ದಿನ ಬಿಸಿಲಿನಲ್ಲಿ ಒಣಗಿಸಿ, ಸಿಪ್ಪೆ ಸುಲಿದು, ಬಣ್ಣ ಕಟ್ಟಿ ಮಾರಾಟಕ್ಕೊಯ್ಯುವರು. ಅಡಕೆಗಳಲ್ಲಿ ಹಸ, ಬೆಟ್ಟೆ, ಇಡಿ, ಚೂರು, ಒಟ್ಟುವೆಟ್ಟು, ನಲುವೆಟ್ಟು, ನಯಂಪಾಕ್ ಐಲಾನ್, ಇರಸೇತ್, ಪೋಟಿ, ನಿರೋಲ್ ಮತ್ತು ಚಾಲಿ ಮುಂತಾದವುಗಳನ್ನು ಸಿದ್ಧಪಡಿಸುವರು.

ಸಂಸ್ಕರಣೆ : ಅಡಕೆಯನ್ನು ಉಪಯೋಗಿಸುವ ಮೊದಲು ಹಲವು ಹಂತಗಳಲ್ಲಿ ಸಂಸ್ಕರಿಸಬೇಕಾಗುತ್ತದೆ. ಅಡಕೆ ತುಂಬ ಎಳಸಾಗಿಯೂ ಇರಬಾರದು. ಗಡುಸಾದರೂ ಸರಿಯಿರದು. ಹಾಗಾಗಿ ಹದನೋಡಿ ಕೊಯ್ಲು ಮಾಡುವರು. ಹದನೋಡಲು ಒಂದು ಅಡಕೆ ಹಣ್ಣನ್ನು ಕಿತ್ತು ಕಚ್ಚಿ

ನೋಡಿದಾಗ ಕಾಯಿ ಎರಡು ಭಾಗವಾದರೆ ಅದು ಎಳಸು ಎಂದೂ ಸಿಪ್ಪೆ ಮಾತ್ರ ಬೇರೆಯಾದರೆ ಹಾಗೂ ಅಂಟಿಲ್ಲದಿದ್ದರೆ ಹದವಾಗಿದೆಯೆಂದೂ ಅರ್ಥ. ಸಿಪ್ಪೆ ಸುಲಿಯಲೂ ಆಗದೆ ಅಂಟಿದ್ದರೆ ಅದು ತೆರಬೆಟ್ಟೆ ಎನಿಸಿಕೊಳ್ಳುತ್ತದೆ. ಅಡಕೆಯಲ್ಲಿ ಕೆಂಪಡಕೆ ಹಾಗೂ ಚಾಲಿ ಎಂದು ಎರಡು ರೀತಿಯಲ್ಲಿ ಸಂಸ್ಕರಣೆ ಮಾಡುವರು.

ಕೆಂಪಡಕೆಯಲ್ಲಿ ಆಪಿ, ಚಿಕಣಿ, ಹಸ, ಸರಕು, ಇಡಿ, ಬೆಟ್ಟೆ, ಗೋಟು, ಹಂಡ, ಉಂಡೆ, ಚೂರು ಇತ್ಯಾದಿಯಾಗಿ ಸಂಸ್ಕರಿಸಲಾಗುತ್ತದೆ. ಅಡಕೆ ಗೊನೆ ಕೊಯ್ಯುವವನನ್ನು ಗೊನೆಗೌಡೆ ಎನ್ನುವರು. ಅಡಕೆಯ ಗೊನೆಯನ್ನು ಕೊಯ್ದು ತಂದು ಚಚ್ಚಿ ಅಡಕೆ ಬೇರೆ ಸಲ್ಲು ಬೇರೆ ಮಾಡುತ್ತಾರೆ. ಅನಂತರ ಸಿಪ್ಪೆ ಸುಲಿದು ಅಡಕೆಯನ್ನು ಬೇರೆ ಬೇರೆ ರೀತಿಯಲ್ಲಿ ಸಂಸ್ಕರಿಸುವ ಕೆಲಸ ನಡೆಯುತ್ತದೆ.

ರೋಗಗಳು : ಅಡಕೆಗೆ ಕೆಲವು ರೋಗಗಳು ಬಾಧಿಸುತ್ತವೆ. ಹೇನು ಅಥವಾ ತಿಗಣೆ ಎಲೆಗಳ ಕೆಳಭಾಗದಲ್ಲಿ ಬಲೆ ಕಟ್ಟಿಕೊಂಡು ರಸವನ್ನು ಹೀರುತ್ತವೆ. ಇದನ್ನು ನಿಯಂತ್ರಿಸಲು ಎಲೆಗಳನ್ನೇ ಕತ್ತರಿಸುವರು ಮತ್ತು ಕೆಲವು ಔಷಧಿಗಳನ್ನು ಸಿಂಪಡಿಸುವರು. ಗೊಣ್ಣೆಹುಳು ಮತ್ತು ಗೊಬ್ಬರದ ಹುಳುಗಳು ಸದಾ ನೀರಿರುವ ಪ್ರದೇಶದಲ್ಲಿ ಬೆಳೆಯುವ ಮರದ ಬೇರುಗಳನ್ನು ತಿನ್ನುತ್ತವೆ. ಮೈಲುತುತ್ತ, ಸುಣ್ಣ ಮಿಶ್ರಿತ ಔಷಧಿಯನ್ನು ಸಿಂಪಡಿಸಿ ಎಲೆರೋಗ ನಿಯಂತ್ರಿಸಿದರೆ ಬೇರಿನ ರೋಗವನ್ನು ಅಡಕೆ ಮರದ ಬುಡದಲ್ಲಿ ಬೇರು ಕಾಣುವಂತೆ ಕೆತ್ತಿ ಉಪ್ಪು, ಬೇವಿನ ಹಿಂಡಿ ಮುಂತಾದವನ್ನು ಹಾಕುವುದರ ಮೂಲಕ ನಿಯಂತ್ರಿಸುವರು.

ಉಪಯೋಗಗಳು : ಅಡಕೆ ಬಹುಪಯೋಗಿ. ಮೂಲಭೂತವಾಗಿ ಇದು ತಾಂಬೂಲ ಸೇವನೆಗೆ ಬರುವಂಥದ್ದು. ಚರ್ಮ ಹದಮಾಡಲು, ಬಣ್ಣಕಟ್ಟಲು ಮಲಬದ್ಧತೆ, ಹೊಟ್ಟೆನೋವಿಗೆ ಇದರ ಸಿಪ್ಪೆಯಿಂದ ಕಾಗದ, ರಟ್ಟು ತಯಾರಿಕೆಗೆ, ಸೋಗೆಯನ್ನು ಗುಡಿಸಲುಗಳಿಗೆ ಮೇಲು ಹೊದಿಕೆಯಾಗಿ, ಕಾಂಡವನ್ನು ತೊಲೆಗಳಾಗಿ, ಕಂಬಗಳಾಗಿ, ಸೀಳಿದ ದಬ್ಬೆಗಳನ್ನು ಅಟ್ಟ ಕಟ್ಟಲು, ಬೇಲಿಗೆ, ಅಟ್ಟಣಿಗೆಗೆ, ತಾತ್ಕಾಲಿಕ ಸೇತುವೆ ನಿರ್ಮಾಣಕ್ಕೆ ಅಡಕೆ ಹಾಳೆ ಊಟ ಮಾಡಲು ಟೋಪಿ, ತಟ್ಟೆ, ದೊನ್ನೆ ತಯಾರಿಕೆಗೆ, ಹೊಂಬಾಳೆ ಕವಚವನ್ನು ದೊನ್ನೆಯಾಗಿಯೂ ಉರುವಲಿಗಾಗಿಯೂ ಮೇವಿಗಾಗಿಯೂ ಕರಕುಶಲ ವಸ್ತುಗಳ ತಯಾರಿಕೆಯಲ್ಲೂ ಬಳಸುವುದಿದೆ. ಸಿಂಗಾರವನ್ನು ದೇವರ ಪೂಜೆಗೆ, ಅಡುಗೆಗೆ, ಸಿಪ್ಪೆ ಗೊಬ್ಬರ ಮತ್ತು ಉರುವಲುಗಾಗಿ ಉಪಯುಕ್ತ.

ಚೊಗರು ಚರ್ಮ ಹದಮಾಡಲು, ಬಟ್ಟೆಗೆ ರಂಗುಕಟ್ಟಲು, ಮಸಿ (ಬರೆವಣಿಗೆ) ತಯಾರಿಕೆಗೆ ಬಳಕೆ. ಅಡಕೆ ಗುಟ್ಕ ತಯಾರಿಕೆಯಲ್ಲಿ ಬಳಕೆಗೊಂಡು ಯುವಕರ ಹವ್ಯಾಸಿ ಭಾಗವಾಗಿ ಮೆರೆಯುತ್ತಿದ್ದುದುಂಟು. ಸರ್ಕಾರ ಗುಟ್ಕವನ್ನು ನಿಯಂತ್ರಿಸಿದೆ. ಇತ್ತೀಚೆಗೆ ಅಡಕೆ ಬೆಳೆ ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ಚಿಂತನೆ ನಡೆಸಿದೆ. ಅಡಕೆಯ ಸಾಧಕ ಬಾಧಕಗಳ ಬಗ್ಗೆ ವಿಜ್ಞಾನಿಗಳು ತಲೆಕೆಡಿಸಿಕೊಂಡಿದ್ದಾರೆ.

ಎಸ್.ವಿ., ಡಿ.ವಿ.ಡಿ.

ಅಡಿಗಾಲುವೆ ಅಡಿಗಾಲುವೆ ಬಹುವಿಧಗಳಲ್ಲಿ ಉಪಯುಕ್ತವಾಗುವ ನೀರಾವರಿ ವ್ಯವಸ್ಥೆ. ರಸ್ತೆಗೆ, ಬದುವಿಗೆ, ಕಾಲುದಾರಿಗೆ ಅಡ್ಡಲಾಗಿ, ಸುರಂಗದ ಹಾಗೆ ಕಲ್ಲು ಮತ್ತು ಗಾರೆಯಿಂದ ನಿರ್ಮಿಸುತ್ತಾರೆ. ಇದರಲ್ಲಿ 22 ಅಡಿಯಿಂದ 8-10 ಅಡಿ ಅಗಲವಿರುವ ಅಡಿಗಾಲುವೆಗಳುಂಟು. ನೀರು ಹರಿಯುವ ಪ್ರಮಾಣ, ದಿಕ್ಕು ಮತ್ತು ಇಳಿಜಾರಿಗೆ ಅನುಗುಣವಾಗಿ ನಿರ್ಮಾಣವಾದ ಇದರಲ್ಲಿ ಒಂದಕ್ಕಿಂತ ಹೆಚ್ಚು ಕಣ್ಣುಗಳಿರುತ್ತವೆ.

ಕಣ್ಣುಗಳ ಅಗಲ 3 -6 ಅಡಿಯವರೆಗೂ ಇರಬಹುದು. ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ ಅಡಿಗಾಲುವೆಗಳ ಎರಡೂ ಬದಿಗಳಲ್ಲಿ ಕಲ್ಲಿನಿಂದ ಕಟ್ಟಡ ಕಟ್ಟಿ, ಸ್ವಲ್ಪ ದೂರದವರೆಗೂ ಕಲ್ಲಿನ ಹಾಸನ್ನು ಮಾಡಿರುತ್ತಾರೆ. ಅಡಿಗಾಲುವೆಯ ಮೇಲ್ಭಾಗದಲ್ಲೂ ಗಟ್ಟಿಮುಟ್ಟಾದ, ಸುಲಭವಾಗಿ ಮುರಿಯದ ಚಪ್ಪಡಿಕಲ್ಲುಗಳನ್ನು ಹಾಸುತ್ತಾರೆ. ಇತ್ತೀಚೆಗೆ, ಸಿಮೆಂಟು ಮತ್ತು ಕಬ್ಬಿಣ (ಉತ್ತಮ ದರ್ಜೆಯ) ಬಳಸಿ ಮಾಡಿದ ಹಲಗೆಗಳನ್ನು ಜೋಡಿಸಿ ಅಡಿಗಾಲುವೆಗಳ ಮೇಲ್ಭಾಗಗಳನ್ನು ಮುಚ್ಚುವುದು ಇದೆ. ಅತಿವೃಷ್ಟಿಯಿಂದಾಗುವ ಅನಾಹುತಗಳನ್ನು ತಪ್ಪಿಸಲು ಇಂದು ಹರಸಾಹಸ ಪಡುವ ಆವಶ್ಯಕತೆ ಇಲ್ಲ. ಆಧುನಿಕ ತಂತ್ರಜ್ಞಾನವನ್ನು ಬಳಸಿ ತುರ್ತುಪರಿಸ್ಥಿತಿಯಲ್ಲಿ ಪೂರ್ವಭಾವಿಯಾಗಿ ಸಿದ್ಧಗೊಂಡ ಹಲಗೆಗಳು ಇಂತಹ ಅವಘಡಗಳನ್ನು ತಪ್ಪಿಸುತ್ತವೆ.

ರಾಜಮಹಾರಾಜರ ಕಾಲದಿಂದಲೂ ಅಡಿಗಾಲುವೆಗಳ ನಿರ್ಮಾಣ ಕಾರ್ಯಗಳಿಗೆ ಚಾಲನೆ ದೊರೆತದ್ದರ ಬಗ್ಗೆ ಚರಿತ್ರೆಯಲ್ಲಿ ದಾಖಲೆಗಳಿವೆ. ವಿಜಯನಗರ ಕಾಲದಲ್ಲಿ ವಿಪುಲವಾಗಿ ಅಡಿಗಾಲುವೆಗಳ ನಿರ್ಮಾಣವಾಗಿದ್ದು, ಹಂಪಿ ಪರಿಸರದಲ್ಲಿ ಕಾಣಬಹುದು. ಅಡಿಗಾಲುವೆಗಳ ನೀರು ಕೂಡಾ ತುಂಬ ಉಪಯುಕ್ತವಾಗಿದೆ. ರೈತರು ತಮ್ಮ ಕೃಷಿ ಭೂಮಿಗಳಿಗೆ ಈ ಕಾಲುವೆಗಳ ಮುಖೇನ ನೀರುಣಿಸುತ್ತಿದ್ದರು. ಹಳ್ಳದ ಭಾಗಗಳಲ್ಲಿ ತಡೆಗೋಡೆ/ಕಟ್ಟೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಹೀಗೆ ನಿರ್ಮಾಣವಾಗುವ ಕುಂಟೆಗಳು ಕೃಷಿ ಭೂಮಿಗೆ ಬೇಕಾಗುವಷ್ಟು ನೀರನ್ನು ಒದಗಿಸುವುದಲ್ಲದೆ ಅಂತರ್ಜಲವೃದ್ಧಿಗೂ ಸಹಾಯಕ.

ಡಿ.ಎಚ್.

ಅಣಬೆ ಶಿಲೀಂಧ್ರ ಜಾತಿಗೆ ಸೇರಿದ ಸಸ್ಯ. ಸಸ್ಯ ಪ್ರಪಂಚದಲ್ಲೇ ಅತಿ ಸೂಕ್ಷ್ಮಗಾತ್ರದ ವರ್ಗಗಳಲ್ಲಿ ಒಂದಾಗಿದೆ. ಅಗ್ಯಾರಿಕೇಲಿಸ್ ವಿಭಾಗದಲ್ಲಿ ಬರುವ ಇದು ಬೆಸಿಡಿಯೋ ಬೀಜಾಣು ವರ್ಗಕ್ಕೆ ಸೇರಿದೆ. ಸ್ವಾಭಾವಿಕವಾಗಿ ಪ್ರಕೃತಿಯ ಗಾಳಿ, ನೀರು, ಬೆಳಕಿನ ಜೊತೆಗೆ ಭೂಮಿಯಲ್ಲಿಯ ಖನಿಜಾಂಶಗಳನ್ನು ಹೀರಿಕೊಂಡು ಬೆಳೆಯುತ್ತದೆ. ಬಿಳಿ ಬಣ್ಣದ ಎಳೆ ಎಳೆಯಾದ ಗಟ್ಟಿಕಾಂಡ (5-6 ಇಂಚು) ಇದ್ದು, ಮೇಲ್ಗಡೆ ಚಿಕ್ಕ ಛತ್ರಿಯಾಕಾರದ ಬಿಳಿ ಹಳದಿ ಮಿಶ್ರಿತ ಅಥವಾ ಕಂದು ಭಾಗವಿದ್ದು ಒಳಗಡೆ ಪದರು (ಗಿಲ್ಸ್) ಪದರಾಗಿರುತ್ತದೆ. ಸುಮಾರು 125 ಜಾತಿಗಳು, 4000 ಪ್ರಭೇದಗಳಿದ್ದು ಎಲ್ಲೆಡೆ ಹರಡಿಕೊಂಡಿವೆ. ವಿದ್ಯಾವಂತರು ಸೇರಿದಂತೆ ಎಲ್ಲರೂ ಅಣಬೆ ಮಾಂಸಯುಕ್ತವೆಂದು ತಿಳಿದಿದ್ದರು. ಕ್ರಮೇಣ ಸಸ್ಯ ವಿಜ್ಞಾನಿಗಳು ಅಣಬೆ ಒಂದು ಬಗೆಯ ಸಸ್ಯ ಎಂಬ ಸಂಗತಿಯನ್ನು ಖಾತ್ರಿಪಡಿಸಿದರು. ಕೃಷಿ ಕ್ಷೇತ್ರದಿಂದ ಹೊರಗಿದ್ದ ಅಣಬೆಯೂ ನೈಸರ್ಗಿಕ ಬೆಳೆಯಾಗಿ ತೇವಾಂಶ ಇರುವ ಭಾಗಗಳಲ್ಲಿ ಅಂದರೆ ಮರಗಿಡಗಳ ಕಾಂಡಗಳಿಗೆ ಅಂಟಿಕೊಂಡೋ ಹುತ್ತಗಳಿರುವ ಭಾಗಗಳಲ್ಲೋ

ಕಸದ ರಾಶಿಯಲ್ಲೋ ಇನ್ನಿತರ ಕೊಳೆತ ವಸ್ತುಗಳ ಮೇಲೋ ತನಗೆ ತಾನೇ ಬೆಳೆಯುತ್ತಿತ್ತು. ಮಾನವ ಆಹಾರಕ್ಕಾಗಿ ಹುಡುಕಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಹೊಸ ಹೊಸ ಆಹಾರದ ಜೊತೆಗೆ ಅಣಬೆಯ ಪರಿಚಯವೂ ಆಯಿತು.

ಸತ್ತ ಮರ ಗಿಡಗಳ, ಕೊಳೆತ ವಸ್ತುಗಳ, ಹಳಸಿದ ಆಹಾರ ಪದಾರ್ಥಗಳ ಮೇಲೆ ಬೆಳೆಯುವ ಅತಿ ಸೂಕ್ಷ್ಮ ಸಸ್ಯಗಳ ಗುಂಪನ್ನು 'ಫಂಗೈ' ಎಂದು ಕರೆಯಲಾಗುತ್ತದೆ. ತೆಂಗಿನಕಾಯಿ, ಬ್ರೆಡ್‌ಗಳಂತಹ ಬೇಕರಿ ತಿನಿಸುಗಳ ಮೇಲೆ ಬೆಳೆಯುವ ಬೂಸ್ಟುಗಳೂ ಇದೇ ಜಾತಿಗೆ ಸೇರುತ್ತವೆ. ಬಣ್ಣ, ಗಾತ್ರ, ರೂಪ ರಚನೆಯಲ್ಲಿ ಭಿನ್ನತೆಯನ್ನು ಹೊಂದಿರುತ್ತದೆ. 'ಫಂಗೈ' ಜಾತಿಯ ಸಸ್ಯಗಳು ಇತರ ಸಸ್ಯಗಳಂತೆ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಲಾರವು. ಕೊಳೆತಿರುವ ವಸ್ತುಗಳಿಂದ ಬೇಕಾದ ಆಹಾರವನ್ನು ಹೀರಿಕೊಂಡು ಜೀವಿಸುತ್ತವೆ.

ಅಲ್ಪ ಆಯುಷ್ಯವನ್ನು ಹೊಂದಿರುವ ಈ ಸಸ್ಯ ಆರೋಗ್ಯದ ದೃಷ್ಟಿಯಿಂದ ಹೆಚ್ಚು ಉಪಯುಕ್ತ. ಆದಿವಾಸಿಗಳಿಗೆ ಅಲ್ಲದೇ ಆದಿ ಋಷಿ ಮಹರ್ಷಿಗಳಿಗೂ ನೈಸರ್ಗಿಕ ಆಹಾರವಾಗಿತ್ತು. ಆಯುರ್ವೇದ ಗ್ರಂಥಗಳಲ್ಲಿ ಸಸ್ಯಗಳ ರಾಜ ಆದಿಮೂಲವೆಂದು ತಿಳಿದಿದ್ದ ಅಣಬೆಯ ಕುರಿತು ಪುರಾಣಗಳಲ್ಲಿಯೂ ರಾಮಾಯಣ ಮಹಾಭಾರತಗಳಲ್ಲಿಯೂ ಉಲ್ಲೇಖವಿದೆ. ಸಮತೋಲನ ಆಹಾರದಲ್ಲಿ ಅಣಬೆಯೂ ಒಂದಾಗಿತ್ತು ಎಂಬ ಉಲ್ಲೇಖವು ಸಹ ಇದೆ. ಆದರೆ ಇಂತಹ ಬಹು ಉಪಯುಕ್ತ ಆಹಾರವಾದ ಅಣಬೆಯು ಪ್ರಕೃತಿಯ ಏರುಪೇರಿನಿಂದಾಗಿ ನಿಗೂಢವಾಗಿಯೇ ಉಳಿದುಹೋಗಿತ್ತು. ಇದರ ಬೇಸಾಯದ ಬಗ್ಗೆಯಾಗಲಿ, ವೈಜ್ಞಾನಿಕ ಸಂಶೋಧನೆಗಳೇ ಆಗಲಿ ಭಾರತೀಯರ ಮಟ್ಟಿಗೂ ದೂರದ ಮಾತೇ ಆಗಿತ್ತು.

ಅಣಬೆಯಲ್ಲಿ ಎರಡು ವಿಧ : ತಿನ್ನಲು ಯೋಗ್ಯವಾದ ಅಣಬೆಗಳು, ಯೋಗ್ಯವಲ್ಲದ ಅಣಬೆಗಳು. ವಿಷಕಾರಿಕ ಅಣಬೆಗಳು ಇದ್ದರೂ ವಿಷದ ಪ್ರಮಾಣ ತುಂಬಾ ಕಡಿಮೆಯಿದ್ದು ಆರೋಗ್ಯದಲ್ಲಿ ಅಲ್ಪ ಪ್ರಮಾಣದ ವ್ಯತ್ಯಾಸಗಳಾಗಬಹುದೇ ಹೊರತು ಸಾವು - ನೋವುಗಳ ಪ್ರಮಾಣ ತೀರಾ ಕಡಿಮೆ. ಪ್ರಮುಖವಾಗಿ ಅಮಾನಿಟಾ ಎಂಬ ಗುಂಪಿಗೆ ಸೇರಿದ ಅಣಬೆಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ವಿಷವನ್ನು ಹೊಂದಿರುತ್ತವೆ. ಬಣ್ಣದ ಆಧಾರದ ಮೇಲಾಗಲಿ, ರೂಪ ರಚನೆಯ ಆಧಾರದ ಮೇಲಾಗಲಿ ವಿಷಯುಕ್ತವಾದ ಅಣಬೆ ಎಂದು ಗುರುತಿಸಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಕಪ್ಪು ಬಣ್ಣದ ಅಣಬೆ ತಿನ್ನಲು ಯೋಗ್ಯವಲ್ಲ ಬಿಳಿ ಬಣ್ಣದ ಅಣಬೆ ತಿನ್ನಲು ಯೋಗ್ಯ ಎಂಬ ನಂಬಿಕೆ ಇದೆ. ಆದರೆ ಇದಕ್ಕೆ ಯಾವುದೇ ವೈಜ್ಞಾನಿಕವಾದ ಆಧಾರವಿಲ್ಲ. ಅನೇಕ ರೀತಿಯ ಕಪ್ಪು ಬಣ್ಣದ ಅಣಬೆಗಳು ಸಹ ತಿನ್ನಲು ಯೋಗ್ಯವಾಗಿರುತ್ತವೆ. ಅಣಬೆಗಳನ್ನು ವೈಜ್ಞಾನಿಕ ಪ್ರಯೋಗಕ್ಕೆ ಒಳಪಡಿಸಿದಾಗಲೇ ವಿಷಭರಿತವೋ ಅಲ್ಲವೋ ಎಂಬುದು ಖಚಿತವಾಗಿ ತಿಳಿಯುವುದು. ಹಾಗೆಯೇ ಮತ್ತೊಂದು ಬಗೆಯ ವಿಶೇಷವಾದ ಅಣಬೆಗಳೆಂದರೆ ವಿಷಪೂರಿತವಲ್ಲದ ಅಮಲು ಬರಿಸುವ ಅಣಬೆಗಳು. ಇವು ಸಹ ವಿಷಪೂರಿತ ಅಣಬೆಗಳ ಗುಂಪಿಗೆ ಸೇರುತ್ತವೆ. ಇಂಥ ಅಣಬೆಗಳನ್ನು ತಿಂದರೆ ಬುದ್ಧಿ ಮಂಕಾಗಬಹುದು ಅಥವಾ ಗಾಂಜಾ, ಅಫೀಮುಗಳ ಸೇವನೆಯಿಂದ ಅಮಲು ಬರುವಂತೆ ಆಗಬಹುದು. ಪ್ರಮುಖವಾಗಿ ಈ ಅಣಬೆಗಳಲ್ಲಿರುವ ಜೀವ ರಾಸಾಯನಿಕ ವಸ್ತುಗಳು ಆಲ್ಕೋಹಾಲ್ ಜೊತೆ ಸೇರಿದರೆ ವಿಷಕಾರಕವಾಗುತ್ತದೆ. ಹಾಗಾಗಿ ಮದ್ಯಪಾನ ಮಾಡುವಾಗ ಈ ಅಣಬೆಗಳ ಬಳಕೆಯನ್ನು ಮಾಡಬಾರದು.



ತಿನ್ನಲು ಯೋಗ್ಯವಾದ ಅಣಬೆಗಳೇ ಸುಮಾರು 3000 ಬಗೆಯಲ್ಲಿವೆ. ಮಾರ್ಚಿಲ್ಲ, ಗೂಚಿ.... ಇತ್ಯಾದಿ ಸಾಮಾನ್ಯವಾಗಿ ಕಾಡು ಪ್ರದೇಶದಲ್ಲೇ ಅತಿ ಹೆಚ್ಚಾಗಿ ಕಂಡುಬರುತ್ತವೆ. ಸೋವಿಯತ್ ಅಂತಹ ದೇಶಗಳಲ್ಲಿ ಕಾಡು ಪ್ರಾಣಿಗಳ ಬೇಟೆಗಿಂತ ಅಣಬೆಗಳ ಸಂಗ್ರಹವೇ ಅತಿ ಹೆಚ್ಚಾಗಿ ಕಂಡು ಬರುತ್ತದೆ. ಅಂದರೆ ಇದು ಬಹಳ ಪ್ರೋಟಿನ್‌ಯುಕ್ತ ಆಹಾರವಾಗಿದ್ದು ಮಾನವನಿಗೆ ಆರೋಗ್ಯದ ದೃಷ್ಟಿಯಿಂದ ಉಪಯುಕ್ತವಾಗಿದೆ. ಭಾರತದಲ್ಲಿ ಮಾರ್ಚಿಲ್ಲ ಎಂಬ ಅಣಬೆಯೂ ಕಾಡಿನಲ್ಲಿ ದೊರಕುತ್ತಿದ್ದು ಬಹಳ ರುಚಿಕರವಾಗಿದೆ. ಇದಕ್ಕೆ ಮಾರುಕಟ್ಟೆಯಲ್ಲಿ ಬಹು ಬೇಡಿಕೆಯಿದ್ದು ಕಿಲೋ ಒಂದಕ್ಕೆ ಮುನ್ನೂರು ರೂ.ಗಳಿಗಿಂತ ಹೆಚ್ಚು. ಅಣಬೆಯ ವಿಧಗಳಲ್ಲಿ ಭಿನ್ನತೆಯಿರುವಂತೆ ಅವುಗಳ ಬೆಳವಣಿಗೆಯಲ್ಲೂ ಇದೆ. ಎಲ್ಲ ವಿಧದ ಅಣಬೆಗಳು ಏಕಕಾಲದಲ್ಲಿ ದೊರಕುವುದಿಲ್ಲ. ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರೀತಿಯ ಅಣಬೆಗಳು ಬೆಳೆಯುತ್ತವೆ.

ಅಣಬೆ ಕೃಷಿ ಇತಿಹಾಸ : ಕಾಡು - ಮೇಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಅಣಬೆಯೂ ಇಂದು ಕೃಷಿಯಲ್ಲಿದೆ. ಬೆಳೆಯಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಅಣಬೆಯ ಕೃಷಿ ಪ್ರಾಚೀನ ಕಾಲದಿಂದಲೂ ಇರುವುದನ್ನು ಕಾಣಬಹುದು. ಕೃಷಿಯಲ್ಲಿ ವೈಜ್ಞಾನಿಕತೆಯನ್ನು ಕಂಡುಕೊಂಡ ಮಾನವ ಅಣಬೆಯನ್ನು ಬೆಳೆಯಲು ಒಂದು ವಾತಾವರಣವನ್ನು ಸೃಷ್ಟಿಸಿಕೊಂಡ. ಪ್ರಕೃತಿದತ್ತ ಕೊಡುಗೆಯಿಂದಲೋ ದಟ್ಟ ಅರಣ್ಯಗಳಿಂದಲೋ ಫಲವತ್ತಾದ ಭೂಮಿ ಹೊಂದಿರುವ ಚೀನಾದಲ್ಲಿ ಹೇರಳವಾಗಿ ಲಾಭವಿರುವುದರಿಂದ ಅಲ್ಲಿಯ ಸಂಶೋಧಕರು ಅನೇಕ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಸುಮಾರು (300) ವರ್ಷಗಳ ಹಿಂದೆಯೇ ಇವರಿಗೆ ಅಣಬೆ ಕೃಷಿಯ ಬಗ್ಗೆ ತಿಳಿದಿತ್ತು. ಬತ್ತದ

ಹುಲ್ಲಿನ ಅಣಬೆ ಇಲ್ಲಿ ಹೆಸರುವಾಸಿ. 17ನೆಯ ಶತಮಾನದ ಮಧ್ಯಭಾಗದಲಲಿ ಪ್ಯಾರೀಸ್ ಪ್ರಾಂತ್ಯದ ಸುತ್ತಮುತ್ತ ಕಲ್ಲಂಗಡಿ ಬೆಳೆಗೆ ಪರ್ಯಾಯವಾಗಿ ಅಣಬೆ ಬೆಳೆಯಲು ಆರಂಭಿಸಿದರು. 20 ವರ್ಷಗಳ ಅನಂತರ ಅಲ್ಲಿಯ ರಾಜ ಉದ್ಯಾನದಲ್ಲಿ ಅಣಬೆ ಕೃಷಿ ಪ್ರಾರಂಭವಾಯಿತು. ಆದರೆ ಅಣಬೆ ಬೆಳೆಯ ವೈಜ್ಞಾನಿಕ ವಿಶ್ಲೇಷಣೆ ಆರಂಭವಾದದ್ದು 18ನೇ ಶತಮಾನದಲ್ಲಿ. 1707 ರಲ್ಲಿ ಟರ್ನ್‌ಪೋರ್ಟ್ ಎಂಬ ವಿಜ್ಞಾನಿ ಅಣಬೆ ವ್ಯವಸಾಯದ ವಿಧಾನವನ್ನು ವಿವರಿಸಿದರೆ, ತೆರೆದ ಬಯಲು ಪ್ರದೇಶದಲ್ಲಿ ಅಣಬೆ ಬೆಳೆಯುವ ವಿಧಾನವನ್ನು ಸ್ವೀಡನ್ನಿನ ಲಂಡ್‌ಬರ್ಗ್ ಎಂಬ ವಿಜ್ಞಾನಿ ವಿವರಿಸಿದನು. ಹಾಲೆಂಡಿನಲ್ಲಿ 1825 ರಲ್ಲಿ ಅಣಬೆ ಕೃಷಿ ಪ್ರಾರಂಭವಾಯಿತು. ಇಲ್ಲಿ ಕಡಿಮೆ ಉಷ್ಣತೆಯಿರುವುದರಿಂದ ಅಣಬೆ ಬೇಸಾಯಕ್ಕೆ ಅನುಕೂಲವಾಗಿದ್ದು ಅತ್ಯಂತ ಲಾಭದಾಯಕವೆನಿಸಿಕೊಂಡಿದೆ. ಇದಾದ ಕೆಲವೇ ವರ್ಷಗಳ ಅನಂತರ ಫ್ರಾನ್ಸಿನ ಗುಹೆಗಳಲ್ಲಿ ಅಣಬೆ ಬೇಸಾಯ ಆರಂಭವಾಯಿತು.

18ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಅಣಬೆ ವ್ಯವಸಾಯಕ್ಕಾಗಿಯೇ ಪ್ರತ್ಯೇಕವಾದ ಗೃಹಗಳನ್ನು ಕಟ್ಟಲಾಯಿತು. ಇದಕ್ಕೆ 'ಅಣಬೆ ಗೃಹ'ಗಳೆಂದೇ ಹೆಸರು. ಅಮೇರಿಕವು ಬಟನ್ ಅಣಬೆಗಳಿಗೆ ಹೆಸರುವಾಸಿಯಾಗಿದ್ದು ಇದರ ಬಗ್ಗೆ ವಿಸ್ತೃತವಾದ ಅಧ್ಯಯನಗಳೇ ನಡೆದಿವೆ. ಮರದ ಪೆಟ್ಟಿಗೆಗಳಲ್ಲಿ ಬಟನ್ ಅಣಬೆಗಳನ್ನು ಬೆಳೆಸುವಲ್ಲಿ ಅಮೇರಿಕನ್ನರು ಯಶಸ್ವಿಯಾದರು. 1955 ರಲ್ಲಿ ಫ್ರಾನ್ಸಿನಲ್ಲಿ ಯಾಂತ್ರೀಕೃತ ಅಣಬೆಯ ವ್ಯವಸಾಯ ಆರಂಭವಾದರೆ, 1970 ರಲ್ಲಿ ಚೀಲಗಳಲ್ಲಿ ಅಣಬೆ ಬೆಳೆಗಳನ್ನು ತೆಗೆದವರು ಫ್ರೆಂಚರು.

ಭಾರತದಲ್ಲಿ ಅಣಬೆಯ ಕೃಷಿ ಆರಂಭವಾದದ್ದು 20ನೇ ಶತಮಾನದಲ್ಲಿ. ಕೊಯಮತ್ತೂರಿನಲ್ಲಿ ಮೊದಲನೇ ಬಾರಿಗೆ ಬತ್ತದ ಹುಲ್ಲಿನ ಅಣಬೆಯ ಕೃಷಿ ಪ್ರಾರಂಭವಾಯಿತು. ಪಟಿಯಾಲಾದ ಮಹಾರಾಜರು ದೊಡ್ಡ ಪ್ರಮಾಣದಲ್ಲಿ ಬಟನ್ ಅಣಬೆಯ ವ್ಯವಸಾಯವನ್ನು 1966ರಲ್ಲಿ ಹಿಮಾಚಲ ಪ್ರದೇಶದ ಚೈನ್ ಎಂಬಲ್ಲಿ ಆರಂಭಿಸಿದರು. ಕೆಲವು ಕಾಲದ ಬಳಿಕ ಕರ್ನಾಟಕ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಉತ್ತರ ಪ್ರದೇಶದಲ್ಲಿ ಅಣಬೆಯ ವ್ಯವಸಾಯ ಜನಪ್ರಿಯವಾಯಿತು. ಕೇಂದ್ರ ಸರ್ಕಾರವು ಹಿಮಾಚಲ ಪ್ರದೇಶದ ಸೋಲಾನ್‌ನಲ್ಲಿ ಆರಂಭಿಸಿದ ಸಂಶೋಧನಾ ಪ್ರಯೋಗಾಲಯವೇ ಭಾರತದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಕ್ಕೆ ನಾಂದಿಯಾಗಿದೆ. ಪ್ರಸ್ತುತ ನಮ್ಮ ದೇಶದಲ್ಲಿ ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು ದೊಡ್ಡ ಪ್ರಮಾಣದಲ್ಲಿ ಸಂಶೋಧನೆ ನಡೆಸುತ್ತಿರುವ ಏಕೈಕ ಸಂಸ್ಥೆ. ಇಲ್ಲಿ ಅನೇಕ ಬಗೆಯ ಅಣಬೆ ಕೃಷಿಯ ಬಗೆಗೆ ಹಾಗೂ ಸಂಸ್ಕರಣೆಯ ಬಗೆಗೂ ಸಂಶೋಧನೆ ನಡೆಯುತ್ತಿದೆ.

ಬೇಸಾಯ ಪದ್ಧತಿ : ಅಣಬೆ ಬೇಸಾಯವು ಇಂದು ವೈಜ್ಞಾನಿಕವಾಗಿ ನಡೆಯುತ್ತಿದೆ. ಬೇರೆ ಬೇರೆ ಬಗೆಯ ಅಣಬೆಗಳನ್ನು ಬೇರೆ ಬೇರೆ ರೀತಿಯಲ್ಲಿ ಬೆಳೆಯಲಾಗುತ್ತದೆ.

ಚಿಪ್ಪು ಅಣಬೆ : ಇಂಗ್ಲಿಷಿನ ಆಯ್‌ಸ್ಟರ್ (ಚಿಪ್ಪು) ಅಣಬೆಯ ವೈಜ್ಞಾನಿಕ ಹೆಸರು ಪ್ಲುರೋಟಸ್, ಬಟನ್ ಅಣಬೆಯನ್ನು ಬಿಟ್ಟರೆ ಹೆಚ್ಚು ಜನಪ್ರಿಯವಾದ ಅಣಬೆಯಾಗಿದೆ. ಉತ್ತರ ಭಾರತದಲ್ಲಿ ಡಿಂಗ್ರಿ ಅಣಬೆ ಎಂದು ಹೆಸರಿದೆ. ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಸೋಲಾನಿನ ಅಣಬೆ ಸಂಶೋಧನಾ ಪ್ರಯೋಗಾಲಯ, ಮೈಸೂರಿನ ಆಹಾರ ಸಂಶೋಧನಾಲಯ, ಬೆಂಗಳೂರಿನ ರತ್ನ ಬಯಾಲಾಜಿಕಲ್ಸ್, ಕೊಯಮತ್ತೂರಿನ ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಅಣಬೆಯ ಬಗೆಗೆ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದೆ. ಇನ್ನಿತರ ಅಣಬೆಗಳಿಗಿಂತ ಬಹಳ ಸುಲಭವಾಗಿ ಬೆಳೆಯಬಹುದಾಗಿದೆ. ಇತರ ಅಣಬೆಗಳಿಗೆ ನಿರ್ದಿಷ್ಟವಾದ ಉಷ್ಣತೆಯ ಆವಶ್ಯಕತೆ ಇದ್ದು, ಈ ಅಣಬೆಯು ಕಡಿಮೆ ತೇವಾಂಶದಲ್ಲೂ ಬೆಳೆಯುತ್ತದೆ. ಚಿಪ್ಪು ಅಣಬೆಯ ತಳಿಗಳು ಪ್ಲೂರೋಟಸ್ ಸಜರ್‌ಕಾಜು, ಪ್ಲೂ, ಫ್ಲೇಬಲೇಟಸ್, ಪ್ಲೂ, ಫ್ಲೋರಿಡಾ, ಪ್ಲೂ, ಎರಿಂಜಿ ಇತ್ಯಾದಿ.

12x24 ಅಂಗುಲ ಗಾತ್ರದ ಪಾಲಿಪ್ರೊಪಲಿನ್ ಚೀಲದ ತಳಭಾಗದ ಎರಡು ತುದಿಗಳಲ್ಲಿ ಒಂದು ಸೆಂ.ಮೀ. ವ್ಯಾಸದ ರಂಧ್ರಗಳನ್ನು ಮಾಡಿಕೊಳ್ಳಬೇಕು. ಬತ್ತದ ಹುಲ್ಲನ್ನು 1-2 ಅಂಗುಲ ಉದ್ದವಿರುವಂತೆ ಕತ್ತರಿಸಿಕೊಂಡು ತಣ್ಣೀರಿನಲ್ಲಿ 6-8 ಗಂಟೆ ಕಾಲ ನೆನೆಸಬೇಕು. ಅನಂತರ ಕುದಿಯುವ ನೀರಿನಲ್ಲಿ ಅರ್ಧಗಂಟೆ ಬೇಯಿಸಿ ನೆರಳಿರುವ ಸ್ಥಳದಲ್ಲಿ ಬಟ್ಟೆಯ ಮೇಲೆ ಹರಡಿ ತಣ್ಣಗಾಗಲು ಬಿಡಬೇಕು.

ಪಾಲಿಪ್ರೊಪಲಿನ್ ಚೀಲಕ್ಕೆ ನಾಲ್ಕು ಅಂಗುಲ ಎತ್ತರದವರೆಗೆ ಹುಲ್ಲನ್ನು ತುಂಬಿ ಸ್ವಲ್ಪ ಒತ್ತಬೇಕು. ಅರ್ಧ ಹಿಡಿಯಷ್ಟು ಬೀಜವನ್ನು ಚೀಲದಲ್ಲಿ ತುಂಬಿರುವ ಹುಲ್ಲಿನ ಮೇಲೆ ಚೀಲಕ್ಕೆ ತಗಲುವಂತೆ ಅಂಚಿನಲ್ಲಿ ಮಾತ್ರ ಉದುರಿಸಬೇಕು. ಬೀಜವನ್ನು ಹಾಕಿದ ಅನಂತರ ಈ ಪದರದ ಮೇಲೆ ಮತ್ತೆ 3 ಅಂಗುಲದಷ್ಟು ಹುಲ್ಲನ್ನು ಹಾಕಬೇಕು. ಇದಾದ ಮೇಲೆ ಮತ್ತೆ ಅರ್ಧ ಹಿಡಿಯಷ್ಟು ಬೀಜವನ್ನು ಅಂಚಿನಲ್ಲಿ ಉದುರಿಸಬೇಕು. ಹೀಗೆ ಚೀಲದ ಮುಕ್ಕಾಲು ಭಾಗವಾದ ಮೇಲೆ ಚೀಲದ ಬಾಯನ್ನು ಸೇರಿಸಿ ಒಮ್ಮೆ ಭದ್ರವಾಗಿ ರಬ್ಬರ್ ಬ್ಯಾಂಡ್ ಅಥವಾ ದಾರದ ಸಹಾಯದಿಂದ ಕಟ್ಟಿ ತಂಪಾದ ಸ್ಥಳದಲ್ಲಿ ಇಡಬೇಕು. ಇದಾದ 20 ದಿನಗಳಲ್ಲಿ ಚೀಲದ ಒಳಭಾಗದಲ್ಲಿ ಬೆಳ್ಳನೆಯ ವಸ್ತು ಕಾಣಿಸಿಕೊಳ್ಳುತ್ತದೆ. ಇದೇ ಅಣಬೆಯ ಬೆಳೆವಣಿಗೆಯ ಪ್ರಾರಂಭದ ಹಂತ. ಹೀಗೆ ಹುಲ್ಲು ಪೂರ್ತಿ ಬಿಳಿಯ ವಸ್ತುವಿನಿಂದ ಆವೃತವಾದಾಗ ಚೀಲವನ್ನು ಕತ್ತರಿಸಬೇಕು. ಹುಲ್ಲಿನ ಪದರಗಳು ಎಲ್ಲವೂ ಒಂದೇ ಮುದ್ದೆಯಂತಾಗಿರುತ್ತದೆ. ಅನಂತರ ಇವುಗಳನ್ನು ಒಂದು ದಿನ ಕತ್ತಲೆಯಲ್ಲಿ ಇಟ್ಟಿಗೆ, ಹೆಂಚು ಅಥವಾ ಮರದ ಹಲಗೆಯ ಮೇಲೆ ಇರಿಸಬೇಕು. ಹೀಗೆ ಇಟ್ಟ ಮರುದಿನದಿಂದ ಬೆಳಿಗ್ಗೆ ಹಾಗೂ ರಾತ್ರಿ ನೀರನ್ನು ಸಿಂಪಡಿಸಬೇಕು. ಒಂದೆರಡು ದಿನಗಳಲ್ಲಿ ಈ ಹುಲ್ಲಿನ ಮುದ್ದೆಯ ಮೇಲೆ ಸುತ್ತಲೂ ಅಣಬೆಗಳು ಕಾಣಿಸಿಕೊಳ್ಳುತ್ತವೆ. ದೊಡ್ಡದಾದ ಅಣಬೆಗಳನ್ನು ಬ್ಲೇಡಿನಲ್ಲಿ ಕತ್ತರಿಸಿ ತೆಗೆಯಬೇಕು. ಸುಮಾರು 6-7 ದಿನಗಳ ವರೆಗೆ ಅಣಬೆಯನ್ನು ಕಟಾವು ಮಾಡಬಹುದು. ಹುಲ್ಲಿನ ಮುದ್ದೆಯಲ್ಲಿ ಅಣಬೆಗಳು ಕಾಣದೇ ಇದ್ದಾಗ ಕಟಾವು ಮುಗಿಯಿತೆಂದು ಅರ್ಥ. ಚಿಪ್ಪು ಅಣಬೆಯನ್ನು ಕಟಾವು ಮಾಡಿದ 24 ಗಂಟೆಗಳ ಒಳಗೆ ಉಪಯೋಗಿಸಬೇಕು.

ಬಟನ್ ಅಣಬೆ : ಈ ಅಣಬೆಯ ಉತ್ಪಾದನೆಗೆ ಎರಡು ಲಕ್ಷದವರೆಗೆ ಬಂಡವಾಳ ಬೇಕಾಗುತ್ತದೆ. ಲಾಭವು ಅಧಿಕವಾಗಿದ್ದು ಬಂಡವಾಳ ಹೂಡಿ ಉತ್ಪಾದಿಸುವುದರಿಂದ ನಷ್ಟವೇನಿಲ್ಲ. ಇದಕ್ಕೆ ಉಪಯೋಗಿಸುವ ಮಣ್ಣನ್ನು ಕಾಂಪೋಸ್ಟ್ ಎಂದು ಕರೆಯುತ್ತಾರೆ. ಕಾಂಪೋಸ್ಟ್‌ನ್ನು ಹಲವು ವಿಧಗಳಲ್ಲಿ ತಯಾರಿಸಬಹುದು.

ಕಾಂಪೋಸ್ಟ್ ತಯಾರಿಸುವ ಎರಡು ದಿನ ಮೊದಲು ಹುಲ್ಲನ್ನು ಪದರಗಳಾಗಿ ಮಾಡಿಕೊಳ್ಳಬೇಕು. ಹುಲ್ಲಿನ ಮೇಲೆ ನೀರು ಹಾಕುತ್ತಿರಬೇಕು. ಹಿಂದಿನ ದಿನ ಗೊಬ್ಬರ ಮತ್ತು ತೌಡುಗಳನ್ನು ಮಿಶ್ರಮಾಡಿ ನೀರನ್ನು ಬೆರೆಸಬೇಕು. ಕಾಂಪೋಸ್ಟ್ ತಯಾರಿಸುವ ದಿನ ಹುಲ್ಲು ಮತ್ತು ಗೊಬ್ಬರ ತೌಡಿನ ಮಿಶ್ರಣವನ್ನು ಚೆನ್ನಾಗಿ ಬೆರೆಸಿ 1.5 ಮೀಟರ್‌ನಷ್ಟು ರಾಶಿ ಒಡ್ಡಬೇಕು. ಕಾಂಪೋಸ್ಟ್ ಮಿಶ್ರ ಮಾಡಿದ 6ನೇ ದಿನ ಪುನಃ ಮಿಶ್ರ ಮಾಡಬೇಕು, 10 ನೇ ದಿನ ಎರಡನೇ ಬಾರಿ ಮಿಶ್ರ ಮಾಡುವಾಗ ಚಾಕ್ ಪುಡಿಯನ್ನು ಬೆರೆಸಬೇಕು. 13ನೇ ದಿನ ಮೂರು ಬಾರಿ ಕಾಂಪೋಸ್ಟನ್ನು ಮಿಶ್ರಮಾಡಿ ಚಿಪ್ಸ್‌ಮನ್ನು ಬೆರೆಸಬೇಕು. 16ನೇ ದಿನ ಹತ್ತಿಕಾಳಿನ ಪುಡಿಯನ್ನು ಮಿಶ್ರಮಾಡಬೇಕು. ಇದೇ ರೀತಿ 19, 22, 28 ನೇ ದಿನ ಏಳನೇ ಬಾರಿ ಮಿಶ್ರ ಮಾಡಬೇಕು. 26ನೇ ದಿನ ಕಾಂಪೋಸ್ಟಿಗೆ ಶೇ. 5 ರಷ್ಟು ಲಿಂಡೇನ್ ಪುಡಿಯನ್ನು ಬೆರೆಸಿ ಮರದ ತೊಟ್ಟಿಗಳಲ್ಲಿ (Tray) ಒಂದೆರಡು ಅಂಗುಲ ಕೆಳಗೆ ಅಣಬೆ ಬೀಜಗಳನ್ನು ಹಾಕಬೇಕು. ಬೀಜ ಹಾಕಿದ ಅನಂತರ ಅದರ ಮೇಲೆ ಕಾಂಪೋಸ್ಟ್‌ನ್ನು ಸ್ವಲ್ಪ ಹಾಕಬೇಕು. ಇದರ ಮೇಲೆ ಮಣ್ಣನ್ನು ಹಾಕಿ ಸಂಸ್ಕರಿತ ಕೇಸಿಂಗ್ ಮಣ್ಣನ್ನು 24 ಗಂಟೆಗಳ ಬಳಿಕ ಕಾಂಪೋಸ್ಟ್ ತೊಟ್ಟಿಗಳಲ್ಲಿ ಮೂರು ಸೆಂ.ಮೀ. ನಷ್ಟು ಮಂದವಾಗಿ ಹರಡಬೇಕು. ತೊಟ್ಟಿಗಳನ್ನು ಇಡುವ ಕೋಣೆಯಲ್ಲಿ ಹವಾನಿಯಂತ್ರಣವಿರಬೇಕು. ಮೊದಲ 8-10 ದಿನಗಳಲ್ಲಿ ಉಷ್ಣತೆಯು 23 ಸೆಂ. ಇದ್ದು ತೇವಾಂಶ ಶೇ. 85 ವಿದ್ದು ಅಗತ್ಯವಿದ್ದಲ್ಲಿ ನೀರನ್ನು ಚಿಮುಕಿಸಬೇಕು. 10-15 ದಿನದ ಅವಧಿಯಲ್ಲಿ ತೊಟ್ಟಿಗಳಲ್ಲಿ ಅಣಬೆ ಬೆಳವಣಿಗೆಯಾಗುತ್ತದೆ. ಈ ಸಂದರ್ಭದಲ್ಲಿ ಕೋಣೆಗೆ ಹೆಚ್ಚಿನ ಪ್ರಮಾಣದಲ್ಲಿ ಗಾಳಿ ಇರಬೇಕು. ಸ್ವಲ್ಪ ಅಣಬೆಯ ಭಾಗ ಕಾಣಿಸಿಕೊಂಡ ಸಂದರ್ಭದಲ್ಲಿ ನೀರನ್ನು ಹನಿಹನಿಯಾಗಿ ಬಿಡಬೇಕು. ಇದಾದ 4-5 ದಿನಗಳಲ್ಲಿ ಅಣಬೆಗಳು ಕಟಾವಿಗೆ ಬರುತ್ತವೆ. ಕಟಾವಿನ ಅವಧಿ 34 ದಿನಗಳು, ಸುಮಾರು ಮೂರು ತಿಂಗಳವರೆಗೂ ಅಣಬೆಗಳನ್ನು ಕಟಾವು ಮಾಡುತ್ತಲೇ ಇರಬಹುದು.

ಹುಲ್ಲಿನ ಅಣಬೆ ಬೇಸಾಯ : ಬಹಳ ಸುಲಭದ 15 ದಿನಗಳಲ್ಲೇ ಬೆಳೆಯಬಹುದಾದ ವಿಧಾನ. ಬೇರು, ತೆನೆ ಇಲ್ಲದ ಬತ್ತದ ಹುಲ್ಲನ್ನು ಒಂದು - ಎರಡು ಅಡಿಗಳಷ್ಟು ಇರುವಂತೆ ಕತ್ತರಿಸಿ ಹೊರೆಗಳಂತೆ ಮಾಡಿಕೊಳ್ಳಬೇಕು. ಅನಂತರ ಅರ್ಧ ಗಂಟೆಗಳ ಕಾಲ ನೀರಿನಲ್ಲಿ ಬೇಯಿಸಿ ತಂಪುಗೊಳಿಸಿ ಒಂದರ ದಿಕ್ಕಿನಲ್ಲಿ ಒಂದರಂತೆ ಜೋಡಿಸಬೇಕು. ಅಣಬೆ ಬೀಜಗಳನ್ನು ಹೊರೆಗಳ ಮೇಲೆ ತೆಳ್ಳಗೆ ಉದುರಿಸಬೇಕು. ಹೊರೆಯ ನಡುಭಾಗದಲ್ಲಿ ಬೀಜವನ್ನು ಹಾಕದೆ ಮೊದಲ ಪದರದ ಮೇಲೆ ಹುಲ್ಲಿನ ಹೊರೆಗಳ ಮತ್ತೊಂದು ಪದರವನ್ನು ಅಡ್ಡವಾಗಿ ಜೋಡಿಸಬೇಕು. ಮೊದಲ ರೀತಿಯಲ್ಲೇ ಈ ಪದರದ ಮೇಲೂ ಬೀಜವನ್ನು ಉದುರಿಸಬೇಕು. ಸು. 4-5 ಅಡಿಗಳಷ್ಟು ಎತ್ತರದವರೆಗೆ ಪದರಗಳನ್ನು ಮಾಡಬಹುದು. ಕೊನೆಯ ಪದರದಲ್ಲಿ ಪೂರ್ತಿಯಾಗಿ ಅಂದರೆ ಮಧ್ಯಭಾಗದಲ್ಲಿಯೂ ಸಹ ಬೀಜವನ್ನು ಹಾಕಬೇಕು. ಇದರ ಮೇಲೆ ಸ್ವಲ್ಪ ಹುಲ್ಲನ್ನು ಹಾಕಿ ದೊಡ್ಡ ಪ್ಲಾಸ್ಟಿಕ್ ಶೀಟನ್ನು ಅಥವಾ ಗೋಣಿ ಚೀಲವನ್ನು ಹೊದಿಸಬೇಕು. ಸುಮಾರು 10 ದಿನಗಳಲ್ಲಿ ಬೂಷ್ಟಿನಂತಹ ರಚನೆ ಕಂಡು ಬರುತ್ತದೆ. ಆಗ ಹೊದಿಕೆಯನ್ನು ದಿನ ತೆಗೆದು 2-3 ಬಾರಿ ನೀರನ್ನು ಹಾಕುತ್ತಿರಬೇಕು. 4-5 ದಿನಗಳಲ್ಲಿ ಅಣಬೆಗಳು ಕಂಡುಬರುತ್ತವೆ. ಕೋಳಿಮೊಟ್ಟೆಯಾಕಾರದ ಈ ಅಣಬೆಗಳನ್ನು ಪ್ರತಿದಿನ ಬೆಳಗಿನ ವೇಳೆಯಲ್ಲಿ ಕೀಳಬಹುದು.

ರೋಗಗಳು : ಅಣಬೆ ಬೆಳೆಗೆ ಬರುವ ರೋಗಗಳು ತೀರಾ ಕಡಿಮೆ. ಅವನ್ನು ಸುಲಭವಾಗಿ ನಿಯಂತ್ರಿಸಬಹುದು. ಅತಿಮುಖ್ಯವಾದ ರೋಗ ಪಾಚಿ. ತೇವಾಂಶವಿರುವ ಭಾಗದಲ್ಲಿ ಪಾಚಿ ಕಟ್ಟಿಕೊಳ್ಳುವ ಹಾಗೇ ಅಣಬೆ ಬೆಳೆಯ ಸಂದರ್ಭದಲ್ಲಿ ರೈತರನ್ನು ಕಾಡುತ್ತದೆ. ಬತ್ತದ ಹುಲ್ಲನ್ನು ಸರಿಯಾಗಿ ಬೇಯಿಸುವುದರಿಂದ ಇದನ್ನು ನಿಯಂತ್ರಿಸಬಹುದು. ಅಲ್ಲದೇ ಪಾಚಿ ಬಂದಿರುವ ಚೀಲದ ಭಾಗವನ್ನು ಕತ್ತರಿಸಿ ಫಾರ್ಮಲಿನ್ ದ್ರಾವಣವನ್ನು ಸಿಂಪಡಿಸಬಹುದು. ಈ ರೋಗ ಅತಿಯಾದರೆ ಕೆಲವು ದಿನಗಳ ಮಟ್ಟಿಗೆ ಕೃಷಿಯನ್ನು ನಿಲ್ಲಿಸಿ ಎಲ್ಲಾ ಕೊಠಡಿಗಳನ್ನು ಸ್ವಚ್ಛ ಮಾಡುವುದರ ಜೊತೆಗೆ ಕೀಟನಾಶಕಗಳನ್ನು ಸಿಂಪಡಿಸಬೇಕು. ಕೃಷಿಯನ್ನು ಪ್ರಾರಂಭಿಸುವ ಮೊದಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಕೀಟ ಹಾವಳಿಗಳಲ್ಲಿ ಪ್ರಮುಖವಾಗಿ ಅಣಬೆಯನ್ನು ಆಹಾರವಾಗಿ ಬಳಸುವ ಕೀಟಗಳು, ಜಿರಲೆಗಳು, ಇರುವೆಗಳನ್ನು ಕಾಣಬಹುದು. ಪ್ಲಾಸ್ಟಿಕ್ ಚೀಲಗಳೇ ಈ ಕೀಟಗಳ ಹಾವಳಿಗೆ ಕಾರಣ. ಗಾಳಿಯಾಡಲು ಪ್ಲಾಸ್ಟಿಕ್ ಚೀಲಗಳನ್ನು ರಂಧ್ರ ಮಾಡಿದಾಗ ಕೀಟಗಳಿಗೆ ಓಡಾಡಲು ಸುಲಭವಾಗುತ್ತದೆ. ಹಾಗಾಗಿ ಪಾಲಿಪ್ರೊಪಲಿನ್ (80-100 ಗೇಜ್) ಚೀಲಗಳನ್ನು ಉಪಯೋಗಿಸಬೇಕು. ಈ ಚೀಲಗಳಿಗೆ ರಂಧ್ರ ಮಾಡುವ ಆವಶ್ಯಕತೆ ಇರುವುದಿಲ್ಲ. ಇರುವೆ, ಜಿರಲೆಗಳನ್ನು ಸಾಮಾನ್ಯ ಕೀಟನಾಶಕಗಳನ್ನು ಬಳಸಿ ನಿಯಂತ್ರಿಸಬಹುದು. ಜಿರಲೆಯ ನಿಯಂತ್ರಣಕ್ಕೆ ಎಣ್ಣೆಯ ಕಮಟು ವಾಸನೆ ಬರುವ ಹಳೆಯ ಬಾಟಲಿಗಳನ್ನು ಗೋಡೆಗೆ ಒರಗಿಸಿ ಇಡಬೇಕು. ಕಮಟು ವಾಸನೆಗೆ ಆಕರ್ಷಿತಗೊಂಡು ಬಾಟಲಿಯಲ್ಲಿ ಬೀಳುತ್ತವೆ. ಆಗ ಜಿರಲೆಗಳು ನಿಯಂತ್ರಣಕ್ಕೆ ಬರುತ್ತವೆ.

ಉಪಯೋಗಗಳು : ಬಾಯಿಗೆ ರುಚಿ, ಆರೋಗ್ಯವನ್ನು ಕೊಡಬಲ್ಲ ಆಹಾರ ಅಣಬೆ. ಪ್ರೋಟೀನ್ ಖಜಾನೆ ಎಂದೇ ಹೆಸರಾಗಿರುವ ಅಣಬೆ ಮಾನವ ದೇಹಕ್ಕೆ ಉಪಯುಕ್ತವಾಗಿದೆ. ಅಣಬೆಯಲ್ಲಿನ ಪ್ರೋಟೀನ್, ವಿಟಮಿನ್, ಮಿನರಲ್, ಅಮಿನೋ ಆಸಿಡ್, ಅಂಟಿಬಯಾಟಿಕ್ ಮತ್ತು ಆಂಟಿ ಯಾಕ್ಸಿಡೆಂಟ್ ಅಂಶಗಳು ಆರೋಗ್ಯಕ್ಕೆ ಪೂರಕವಾಗಿವೆ.

ಅಣಬೆಯಲ್ಲಿ ವಿಟಮಿನ್ ಬಿ.2 ಮತ್ತು ಬಿ.3 ಇರುವುದರಿಂದ ಆಹಾರವನ್ನು ಗ್ಲೂಕೋಸ್ ಆಗಿ ಪರಿವರ್ತಿಸುತ್ತದೆ. ಕೊಬ್ಬಿನಾಂಶವಿಲ್ಲ, ಜೊತೆಗೆ ಕಡಿಮೆ ಕಾರ್ಬೋಹೈಡ್ರೇಟ್ ಹೊಂದಿದೆ. ಅಲ್ಲದೇ ನಾರಿನಂಶ ಹೆಚ್ಚಾಗಿ ಇರುವುದರಿಂದ ಬೊಜ್ಜನ್ನು ಕರಗಿಸಲು ಸಹಕಾರಿ. ಇದರಲ್ಲಿಯ ಕೆಲವು ಎಂಜೈಮು ಅಣಬೆ ಜೀರ್ಣವಾದ ಬಳಿಕ ಕೊಲೆಸ್ಟ್ರಾಲ್ ಕರಗಿಸಲು ಸಹಾಯ ಮಾಡುತ್ತದೆ. ಅಣಬೆಯಲ್ಲಿನ ನೈಸರ್ಗಿಕ ಇನ್ಸುಲಿನ್ ಮತ್ತು ಎಂಜೈಮುಗಳು ಸೇವಿಸಿದ ಆಹಾರದಲ್ಲಿಯ ಸಕ್ಕರೆ ಮತ್ತು ಸ್ಟಾರ್ಚ್ ಅಂಶವನ್ನೂ ತೆಗೆದು ಹಾಕುವುದರಿಂದ ಮಧುಮೇಹಿಗಳು ಅಣಬೆಯನ್ನು ತಿನ್ನಬಹುದು. ಎರ್ಗೊಥಿಯೊನೈನ್ ಎಂಬ ಅತಿ ಶಕ್ತಿಯುತವಾದ ಆಂಟಿ ಬಯಾಟಿಕ್ ಇದರಲ್ಲಿರುವುದರಿಂದ ದೇಹಕ್ಕೆ ರೋಗ ನಿರೋಧಕ ಶಕ್ತಿ ಒದಗಿಸುತ್ತದೆ.

ವಿಟಮಿನ್ ಡಿ ಹೊಂದಿರುವ ಏಕೈಕ ಸಸ್ಯ ಅಣಬೆ. ಮೂಳೆಗೆ ಶಕ್ತಿ ನೀಡುವ ಕ್ಯಾಲ್ಸಿಯಂ, ರಕ್ತ ಹೀನತೆಯನ್ನು ಕಡಿಮೆ ಮಾಡಬಲ್ಲ ಕಬ್ಬಿಣಾಂಶಗಳು ಇವೆ. ದಶಕಗಳಲ್ಲಿ ಸೈನಿಕರಿಗೆ ಪೌಷ್ಟಿಕ ಆಹಾರವಾಗಿ ನೀಡುತ್ತಿದ್ದ ಉಲ್ಲೇಖಗಳಿವೆ. ಕ್ಯಾನ್ಸರ್ ರೋಗಕ್ಕೆ ಮದ್ದು ಅರೆಯಲು

ಅಣಬೆಯನ್ನು ಬಳಸಲಾಗುತ್ತದೆ. ಕೆಂಪು ರಕ್ತ ಕಣ, ಬಿಳಿ ರಕ್ತ ಕಣಗಳನ್ನು ಸ್ಥಿರಗೊಳಿಸುತ್ತದೆ. ರಕ್ತನಾಳಗಳ ಹೆಪ್ಪುಗಟ್ಟುವಿಕೆಯನ್ನು ತಡೆಯುತ್ತದೆ. ಯೌವ್ವನವನ್ನು ವೃದ್ಧಿಗೊಳಿಸಿ ವೃದ್ಧಾಪ್ಯದ ಬಳಲಿಕೆ ಬಾರದಂತೆ ಮುಪ್ಪನ್ನು ಮಿತಗೊಳಿಸುತ್ತದೆ. ತಲೆನೋವು, ಕೀಲುನೋವು, ಖಿನ್ನತೆಯನ್ನು ಗುಣಪಡಿಸುತ್ತದೆ. ಸ್ತ್ರೀ ಕಾಯಿಲೆಗೆ ಬಹಳ ಉಪಯೋಗ.

ಮುಖ್ಯವಾದ ಅಂಶವೆಂದರೆ ಅಣಬೆ ಕಾಯಿಲೆಗಳಿಗೆ ಔಷದಿಯಲ್ಲ. ಕಾಯಿಲೆಗಳು ಉತ್ಪತ್ತಿಯಾಗಲು ಕಾರಣವಾದ ವಿಷಪೂರಿತ ಅಂಶಗಳನ್ನು ಕಡಿಮೆ ಮಾಡುತ್ತದೆ. ಜೊತೆಗೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೇ ರೋಗಗಳು ಬಾರದ ಹಾಗೇ ತಡೆಗಟ್ಟಲು ಸಹಕಾರಿ.

ಎಂ.ಎಂ.

ಅಣೆಕಟ್ಟು ಹರಿಯುವ ನದಿಗೆ ಅಡ್ಡಲಾಗಿ ಕಟ್ಟುವ ಕಟ್ಟಡ. ಕಟ್ಟೆಯೂ ಇದೇ ಅರ್ಥವನ್ನು ಒಳಗೊಂಡಿದ್ದರೂ ಬಹಳ ವ್ಯತ್ಯಾಸವಿದೆ. ಇಂಥ ಕಟ್ಟಡದ ಮೇಲೆ ನೀರು ತುಂಬಿ ಹರಿಯಲು ಅವಕಾಶವಿರುತ್ತದೆ. ಆದರೆ ಹರಿಯುವ ನೀರನ್ನು ತಡೆದು ನಿಲ್ಲಿಸುವಂಥದು ಕಟ್ಟೆ, ಅಣೆಕಟ್ಟ ಬಹಳ ಪ್ರಾಚೀನವಾದುದು. ಮನುಷ್ಯ ವ್ಯವಸಾಯ ಮಾಡಲು ತೊಡಗಿದಂದಿನಿಂದಲೇ ಹರಿಯುವ ನೀರನ್ನು ತಡೆದು ಕೃಷಿ ಉಪಯೋಗಕ್ಕಾಗಿ ಬಳಸಿಕೊಳ್ಳಲಾರಂಭಿಸಿದ. ನದಿ ತೀರದಲ್ಲಿ ದೊರೆಯುವ ಸ್ವಾಭಾವಿಕ ಒರಟು ಕಲ್ಲುಗಳನ್ನು ಬಳಸಿ ಒಡ್ಡುಗಳನ್ನು ನಿರ್ಮಿಸಿಕೊಂಡನು. ಅನಂತರ ಕಲ್ಲುಗಳ ಜೊತೆಗೆ ಗಾರೆಯನ್ನು ಇಟ್ಟಿಗೆಗಳನ್ನು ಬಳಸಿ ಕಟ್ಟಡ ಕಟ್ಟಿದನು. ಇಂಥ ಕಟ್ಟಡಗಳು ತಡೆಯುವ ನೀರಿನ ಪ್ರಮಾಣ ಕಟ್ಟೆಗಿಂತಲೂ (ಡ್ಯಾಮ್) ಕಡಿಮೆ. ಕಟ್ಟಡದ ಮೇಲೆ ಹರಿಯುವ ನೀರು ನಾಲೆಗಳಿಗೆ ಹರಿದು ಜಮೀನುಗಳಿಗೆ ನೀರೊದಗಿಸುತ್ತದೆ.

ಅಣೆಕಟ್ಟುಗಳಲ್ಲಿ ಎರಡು ವಿಧ : 1. ತಳಪಾಯ ಬಂಡೆಯಿಂದ ಕೂಡಿರುವಂಥದು. ಇಂಥ ಕಡೆ ಬಂಡೆ ವಿಸ್ತಾರವಾಗಿರುವುದರಿಂದ ಕೃಷಿ ಭೂಮಿ ಹೆಚ್ಚಾಗಿ ಸಿಗುವುದಿಲ್ಲ. 2. ನದೀಮುಖಜಭೂಮಿಯಲ್ಲಿ ನಿರ್ಮಿಸುವಂಥದ್ದು. ಇಂಥ ಭೂ ಪ್ರದೇಶದಲ್ಲಿ ನದಿಯ ನೀರು ದಿಬ್ಬದ ಮೇಲೆ ಹರಿಯುವುದರಿಂದ ಕೆಳಪ್ರದೇಶಗಳಲ್ಲಿರುವ ಗದ್ದೆಗಳಿಗೆ ಕಾಲುವೆಗಳ ಮೂಲಕ ಹರಿಸಲು ಅನುಕೂಲವಾಗುತ್ತದೆ. ದಕ್ಷಿಣ ಭಾರತದಲ್ಲಿ ಕಾವೇರಿ, ಕೃಷ್ಣ, ಗೋದಾವರಿ, ತುಂಗ, ಭದ್ರಾ, ಕಪಿಲ ಮೊದಲಾದ ನದಿಗಳ ಬಯಲುಗಳಲ್ಲಿ ಕೃಷಿಗೆ ಸಾಕಷ್ಟು ನೀರು ಒದಗುವುದರಿಂದ ಈ ನದಿಗಳಿಗೆ ಕಟ್ಟಿರುವ ಅಣೆಕಟ್ಟುಗಳು ಕೃಷಿಕನಿಗೆ ವರದಾನವಾಗಿವೆ.

ಅಣೆಕಟ್ಟುಕಟ್ಟುವಾಗ ಅನುಸರಿಸಬೇಕಾದ ನಿಯಮಗಳಲ್ಲಿ ಐದು ಪ್ರಮುಖವಾದವು :

1. ಅಣೆಕಟ್ಟೆಯ ಪರಿಸರದಲ್ಲಿರುವ ಭೂಭಾಗಗಳಿಗೆ ಸಮೃದ್ಧವಾಗಿ ನೀರೊದಗಿಸುವಷ್ಟು ಎತ್ತರವಿರಬೇಕು.
2. ಅಣೆಕಟ್ಟಿನ ಎರಡೂ ಕಡೆಗಳಲ್ಲಿ ಇರುವ ನಾಲೆಗಳು ಕೆಳಗಿನ ಭೂಪ್ರದೇಶಕ್ಕಿಂತ ಎತ್ತರವಾಗಿದ್ದು ಹೆಚ್ಚು ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು.
3. ನೀರನ್ನು ನಿಯಂತ್ರಿಸುವ ತೂಬುಗಳು.
4. ನದಿಗೆ ಹರಿದು ಬರುವ ಮಣ್ಣನ್ನು ಹೊರತೆಗೆಯಲು ಕೆಳಮಟ್ಟದಲ್ಲಿ ಜೋಡಿಸಿರುವ ಬಾಗಿಲುಗಳು.
5. ಪ್ರವಾಹದ ಪ್ರಮಾಣ ಹೆಚ್ಚಾದಾಗ ದಡಗಳ ಮೇಲೆ ನೀರು ಉರುಳುವುದನ್ನು ನಿಯಂತ್ರಿಸಲು ಇರುವ ಏರಿಗಳು.

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಭದ್ರಾ ಅಣೆಕಟ್ಟು ಕಲ್ಲಿನ ತಳಪಾಯದ ಮೇಲೆ ಗುಡ್ಡಗಾಡು ಪ್ರದೇಶದಲ್ಲಿ ನಿರ್ಮಿತವಾಗಿದೆ. ಇದೇ ತೆರನಾದ ಅಣೆಕಟ್ಟುಗಳನ್ನು ಕಾವೇರಿ, ಲಕ್ಷ್ಮಣತೀರ್ಥ, ಹೇಮಾವತಿ, ಕಪಿಲ, ನದಿಗೆ ಕಟ್ಟಲಾಗಿದೆ. ಇವು ನದಿಯಿಂದ ನದಿಗೆ ಎಂಬ ಸೂತ್ರದ ಆಧಾರದ ಮೇಲೆ ನಿರ್ಮಾಣಗೊಂಡಿದ್ದು ವಿಸ್ತಾರವಾದ ಭೂಪ್ರದೇಶದಲ್ಲಿ ಶಾಶ್ವತ ನೀರಾವರಿ ವ್ಯವಸ್ಥೆಯಾಗಿ ರೂಪುಗೊಂಡಿದೆ. ಅಣೆಕಟ್ಟುಗಳ ಸ್ವರೂಪವನ್ನು ಬೃಹತ್ ನದಿಗಳ ನಾಲ್ಕು ಹಂತಗಳಾಗಿ ವಿಂಗಡಿಸಬಹುದು.

ಮಳೆ ಯಥೇಚ್ಛವಾಗಿ ಬೀಳುವ ಪ್ರದೇಶವಿದ್ದು ನೀರಾವರಿ ಆವಶ್ಯಕತೆ ಇಲ್ಲದಿರುವುದು. ಬಯಲು ಸೀಮೆಯಾಗಿದ್ದು ತಳಪಾಯ ಕಲ್ಲಿನಿಂದ ಕೂಡಿರುರುವುದು. ಇದು ಅಣೆಕಟ್ಟುಗಳಿಗೆ ಉಪಯೋಗ. ಉದಾ : ಕೃಷ್ಣರಾಜಸಾಗರದಲ್ಲಿ ನದಿಗೆ ಅಡ್ಡಲಾಗಿ 130 ಅಡಿ ಎತ್ತರದ ಕಟ್ಟೆ ಕಟ್ಟಲಾಗಿದೆ.

ಹರಿಯುವ ನೀರು ಹೆಚ್ಚಿದ್ದು ಜಲಾನಯನ ಭೂಪ್ರದೇಶ ಹೆಚ್ಚಾಗಿರುತ್ತದೆ. ದಡಗಳು ಇಳಿಜಾರಾಗಿದ್ದು ನದಿಗೆ ಅಡ್ಡಲಾಗಿರುವ ಭೂಮಿ ಸಮತಟ್ಟಾಗಿರುವುದರಿಂದ ಇಂಥ ಅಣೆಕಟ್ಟಿನ ಭೂವಲಯದ ವಿಶಾಲವಾದ ಭಾಗದಲ್ಲಿ ನೀರಾವರಿ ಕೃಷಿಯನ್ನು ಮಾಡಬಹುದು.

ನದೀಮುಖಜಭೂಮಿ: ಇಲ್ಲಿಯೂ ಭೂಮಿ ಸಮತಟ್ಟಾಗಿದ್ದು ನೀರು ಸಾವಧಾನವಾಗಿ ಹರಿದರೂ ಮರಳು ಹೆಚ್ಚಾಗಿರುತ್ತದೆ. ಇಂಥ ಕಡೆ ಮರಳನ್ನು ಸ್ಥಿರೀಕರಣಗೊಳಿಸುವುದರ ಮೂಲಕ ಎಷ್ಟು ಭಾರವನ್ನಾದರೂ ತಡೆಯುವ ಸಾಮರ್ಥ್ಯ ಇದಕ್ಕೆ ಬರುತ್ತದೆ. ಮರಳು ಜಾರದಂತೆ ಇಟ್ಟಿಗೆಯ ಬಾವಿಗಳು ಮತ್ತಿತರ ವಿಧಾನಗಳಿಂದ ಮರಳನ್ನು ತಡೆದು ಕಲ್ಲು, ಗಾರೆ ಬಳಸಿ ಅಣೆಕಟ್ಟನ್ನು ಕಟ್ಟುತ್ತಾರೆ.

ಮರಳಿನ ತಳಪಾಯದ ಮೇಲೆ ಅಣೆಕಟ್ಟುಗಳನ್ನು ಮೂರು ರೀತಿ ನಿರ್ಮಿಸಬಹುದು.

1. ಕಲ್ಲಿನ ತಳಪಾಯ ನಿರ್ಮಿಸಿ ನೆಲಹಾಸಿನ ಮೇಲೆ ಅಣೆಕಟ್ಟೆಯಿಂದ ನೀರು ನೇರವಾಗಿ ದುಮುಕುವಂತೆ ಮಾಡುವುದು.

2. ಕಲ್ಲುಹಾಸು ಕಡಿದಾಗದಂತೆ ನಿರ್ಮಿಸುವುದು.

3. ಕಲ್ಲುಗುಂಡುಗಳನ್ನು ನೆಲಹಾಸು ಇಳಿಜಾರಾಗಿರುವಂತೆ ತುಂಬುವುದು.

ಅಣೆಕಟ್ಟುಗಳ ನಿರ್ಮಾಣ ಹೇಗೆ ಇರಲಿ ಕೃಷಿಕನ ಬದುಕಿನಲ್ಲಿ ಸಂಜೀವಿನಿಯಂತೆ. ಪ್ರಕೃತಿಯ ಏರುಪೇರುಗಳಿಂದಾಗಿ ಮಳೆಯ ಪ್ರಮಾಣ ಅಧಿಕವಾಗಿ ಉಕ್ಕಿ ಬರುವ ಪ್ರವಾಹಗಳನ್ನು ತಡೆಯುವುದರ ಮೂಲಕ ಕೃಷಿಯೋಗ್ಯ ಭೂಮಿಯ ಸಂರಕ್ಷಣೆಯು ಆಯಿತು. ಸಂಗ್ರಹವಾದ ನೀರಿನಿಂದ ಅನಾವೃಷ್ಟಿಯ ಕಾಲದಲ್ಲಿ ವ್ಯವಸಾಯ ಮಾಡಲು, ಮತ್ತಿತರ ಕೆಲಸಗಳಿಗೂ ನೀರಾವರಿ ವ್ಯವಸ್ಥೆಯೂ ಆಯಿತು. ಇತರ ಜಲಮೂಲಗಳಾದ ಕೆರೆ, ಬಾವಿಗಳಿಗೆ ಹೋಲಿಸಿದರೆ ಅಣೆಕಟ್ಟುಗಳಷ್ಟು

ವಿಸ್ತಾರವಾದ ಭೂಪ್ರದೇಶಕ್ಕೆ ನೀರನ್ನೊದಗಿಸುವ ಮೂಲ ಬೇರೊಂದಿಲ್ಲ. ಮಾನವನಿಗಷ್ಟೇ ಅಲ್ಲದೆ ಸಕಲ ಜೀವರಾಶಿಗಳಿಗೂ ಇಂತಹ ನೀರಾವರಿ ವ್ಯವಸ್ಥೆಗಳೇ ಆಧಾರವಾಗಿವೆ.

ಎ.ಬಿ.ಪಿ.

ಅನಾನಸ್ (ಪೈನ್ ಆ್ಯಪಲ್) ಅನಾನಸ್ ಹಣ್ಣನ್ನು ಮೊದಲು ಹೆಚ್ಚಾಗಿ ಬೆಳೆಯುತ್ತಿದ್ದ ದೇಶವೆಂದರೆ ದಕ್ಷಿಣ ಅಮೆರಿಕಾ. ಆದರೆ ಇದರ ಮಾತೃಭೂಮಿ ಬ್ರೆಜಿಲ್. ಅನಂತರ ಯೂರೋಪ್ ದೇಶಗಳಿಗೆಲ್ಲಾ ಪ್ರವೇಶಿಸಿತು ಎನ್ನಲಾಗಿದೆ. ಇಂದು ಹಲವು ದೇಶಗಳಲ್ಲಿ ಅನಾನಸ್ ಬೆಳೆಯುತ್ತಾರೆ. ಮುಖ್ಯವಾಗಿ ಭಾರತ, ಬರ್ಮಾ, ಮಲಯ, ಸಿಲೋನ್, ಹವಾಯ್ ದ್ವೀಪಗಳು, ಫಿಲಿಪೈನ್ಸ್, ಪ್ಲಾರಿಡಾ, ಆಫ್ರಿಕಾ, ಆಸ್ಟ್ರೇಲಿಯಾ ಮುಂತಾದ ಹಲವು ದೇಶಗಳಲ್ಲಿ ಅನಾನಸ್ ಬೆಳೆಯನ್ನು ಕಾಣಬಹುದು. ಈ ಹಣ್ಣು ತಿನ್ನುವುದಕ್ಕಷ್ಟೇ ಅಲ್ಲ, ಇದರ ಎಲೆಗಳನ್ನು ವಿವಿಧ ಬಟ್ಟೆಗಳ ತಯಾರಿಕೆಯಲ್ಲೂ ಬಳಸುತ್ತಾರೆ. ಹಾಗೆಯೇ ಈ



ಹಣ್ಣುಗಳನ್ನು ಇತರ ವಸ್ತುಗಳ ರಕ್ಷಣೆ ಮಾಡುವುದಕ್ಕೂ ಮತ್ತು ಸಿರಪ್ ಮಾಡುವುದಕ್ಕೂ ಹೆಚ್ಚಾಗಿ ಬಳಸುತ್ತಾರೆ. ಭಾರತದಲ್ಲಿ ವಿಶೇಷವಾಗಿ ಚೆನ್ನೈ, ತಿರುವಾಂಕೂರು, ಕೊಚ್ಚಿನ್, ಕೊಡಗು, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ತೋಟಗಾರಿಕೆ ಬೆಳೆಯಾಗಿ ಹಾಗೂ ವಾಣಿಜ್ಯ ಬೆಳೆಯಾಗಿಯೂ ಬೆಳೆಯುತ್ತಾರೆ. ಭಾರತದಲ್ಲಿ ಇದನ್ನು ಸುಮಾರು ಒಂದು ಸಾವಿರ ಎಕರೆಗಿಂತ ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತದೆ ಎಂದು ಅಂದಾಜಿಸಲಾಗಿದೆ.

ಬೇಸಾಯ : ಅನಾನಸ್ ಬೆಳೆಯಲ್ಲಿ ಕಂದು ನೆಡುವ ಪದ್ಧತಿ ರೂಢಿಯಲ್ಲಿದೆ. ಮೊದಲು ಭೂಮಿಯನ್ನು ಚೆನ್ನಾಗಿ ಉತ್ತು ಹದಮಾಡಿಕೊಳ್ಳಬೇಕು. ಒಂದು ಎಕರೆ ವಿಸ್ತೀರ್ಣದ ಭೂಮಿಗೆ ಸುಮಾರು ಇಪ್ಪತ್ತು ಗಾಡಿಯಷ್ಟು ಕೊಟ್ಟಿಗೆ ಗೊಬ್ಬರವನ್ನು ಎರಚಿ ಮಣ್ಣಿನಲ್ಲಿ ಚೆನ್ನಾಗಿ ಮಿಶ್ರವಾಗುವಂತೆ ಉಳುಮೆ ಮಾಡಬೇಕು. ನಾಲ್ಕೈದು ಬಾರಿ ಉಳುಮೆ ಮಾಡಿ ಭೂಮಿಯನ್ನು ಒಣಗಿಸಿ ಕಳೆ ಕಿತ್ತು ಹಾಕಬೇಕು. ಭೂಮಿಯನ್ನು ಹದ ಮಾಡಿಕೊಂಡ ಮೇಲೆ ಮೂರರಿಂದ ನಾಲ್ಕು ಅಡಿಗೊಂದರಂತೆ ಸಾಲುಗಳನ್ನು ಹೊಡೆಯಬೇಕು. ಗಿಡದಿಂದ ಗಿಡಕ್ಕೆ ಹದಿನೆಂಟರಿಂದ ಇಪ್ಪತ್ತು ಅಂಗುಲದಷ್ಟು ದೂರವಿರಬೇಕು. ಸಾಮಾನ್ಯವಾಗಿ ಅನಾನಸ್ ಕಂದುಗಳನ್ನು ಜೂನ್ - ಜುಲೈ ತಿಂಗಳಿನಲ್ಲಿ ನೆಡುತ್ತಾರೆ. ಮುಂಗಾರು ಮಳೆ ಬಿದ್ದ ಅನಂತರ ಅನಾನಸ್ ಬಿತ್ತನೆ ಮಾಡಲು ಪ್ರಾರಂಭಿಸಲಾಗುತ್ತದೆ. ನೀರಿನ ಹದವನ್ನು ಗಮನಿಸಿ ಕಂದುಗಳನ್ನು ನೆಡಬೇಕು. ಫಲವತ್ತಾದ ಮಣ್ಣು, ನೀರು ಮತ್ತು ಗೊಬ್ಬರ ಸರಿಯಾದ ಪ್ರಮಾಣದಲ್ಲಿದ್ದರೆ, ಕಂದುಗಳು ಬೇಗ ಬೇರು ಬಿಟ್ಟು ಬೆಳೆ ನಳನಳಿಸುವಂತೆ ಕಾಣುತ್ತದೆ. ಕಂದುಗಳನ್ನು ನೆಟ್ಟ ದಿನದಿಂದ ಸುಮಾರು ಒಂದೂವರೆ ವರ್ಷಕ್ಕೆ ಫಸಲು ಕಟಾವಿಗೆ ಬರುತ್ತದೆ. ಅನಾನಸ್ ಬೆಳೆಗೆ ಮಳೆಗಾಲದಲ್ಲಿ ಅಷ್ಟೇನೂ ನೀರಿನ ಅವಶ್ಯಕತೆಯಿರುವುದಿಲ್ಲ. ಆದರೆ ಬೇಸಿಗೆ ಕಾಲದಲ್ಲಿ ತೇವದ ಹದವನ್ನರಿತು ಮೂರ್‍ನಾಲ್ಕು ದಿನಗಳಿಗೊಮ್ಮೆ ನೀರುಣಿಸಬೇಕು. ಮಣ್ಣಿನಲ್ಲಿ ಹೆಚ್ಚಿನ ಫಲವತ್ತತೆ ಮತ್ತು ಹದವಾದ ನೀರಿನ ಸೌಕರ್ಯವಿದ್ದರೆ ಉತ್ತಮ ಇಳುವರಿ ಸಿಗುತ್ತದೆ.

ತಳಿಗಳು : ಅನಾನಸ್‌ನಲ್ಲಿ ಮಾರಿಷಸ್, ಕ್ವೀನ್ ಮತ್ತು ಕ್ಯೂ ಎಂಬ ಮೂರು ಜಾತಿಗಳಿವೆ. ಮಾರಿಷಸ್ ತಳಿಯ ಅನಾನಸ್ ಹಣ್ಣುಗಳು ಗಾತ್ರದಲ್ಲಿ ಸಣ್ಣದಾಗಿದ್ದು ಎರಡರಿಂದ ಮೂರು ಪೌಂಡುಗಳಷ್ಟು ತೂಕವಿರುತ್ತವೆ. ಇದರ ಎಲೆಗಳಲ್ಲಿ ಮುಳ್ಳುಗಳಿರುತ್ತವೆ. ಕ್ವೀನ್ ತಳಿಯ ಅನಾನಸ್ ಹಣ್ಣುಗಳು ಕೂಡ ಗಾತ್ರದಲ್ಲಿ ಸಣ್ಣದಾಗಿದ್ದು ಎರಡರಿಂದ ಎರಡೂವರೆ ಪೌಂಡು ತೂಕವಿರುತ್ತವೆ. ಇವು ತುಂಬಾ ರುಚಿಯಾಗಿದ್ದು ಕಡಿಮೆ ಅವಧಿಯಲ್ಲಿ ಫಸಲು ಕೊಯ್ಲಿಗೆ ಬರುತ್ತವೆ. ಕ್ಯೂ ತಳಿಯ ಅನಾನಸ್, ಗಾತ್ರದಲ್ಲಿ ದೊಡ್ಡವು. ಇವು ಹತ್ತರಿಂದ ಹನ್ನೆರಡು ಪೌಂಡು ತೂಕವಿರುತ್ತವೆ. ವಿಶೇಷವೆಂದರೆ ಈ ಹಣ್ಣಿನಲ್ಲಿ ಹೆಚ್ಚಿನ ನಾರಾಗಲಿ, ಮುಳ್ಳುಗಳಾಗಲಿ ಇರುವುದಿಲ್ಲ. ಸುವಾಸನೆ ಭರಿತ ರುಚಿಕರವಾದ ಈ ಹಣ್ಣುಗಳು ಎಲ್ಲರ ಕಣ್ಮನ ಸೆಳೆಯುತ್ತವೆ.

ಭೂಗುಣ : ಅನಾನಸ್ ಬೆಳೆಯು ನೀರು ಇಂಗಿ ಹೋಗುವಂತಹ ಮೆಕ್ಕಲು, ಮರಳು ಮಿಶ್ರಿತ ಕೆಬ್ಬೆ ನೆಲಗಳಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ. ಇದು ಮಣ್ಣಿನ ಫಲವತ್ತತೆಯನ್ನು ಹೀರಿಕೊಂಡು ಬೆಳೆಯುವುದರಿಂದ ಹೆಚ್ಚು ತಿಪ್ಪೆ ಗೊಬ್ಬರ ಮತ್ತು ಹಸಿರು ಗೊಬ್ಬರವನ್ನು ಹಾಕಿದರೆ ಒಳ್ಳೆಯದು. ಒಂದು ಫಸಲಿನ ಅನಂತರ ಇನ್ನೊಂದು ಫಸಲಿಗೆ ಅಗತ್ಯವಾದಷ್ಟು ಗೊಬ್ಬರವನ್ನು ಎರಚಿ ಭೂಮಿಯನ್ನು ಚೆನ್ನಾಗಿ ಹದಮಾಡಬೇಕು. ಸಾಧಾರಣವಾಗಿ ಅನಾನಸ್ ಉಷ್ಣವಲಯದ ತಂಪಾದ ಪ್ರದೇಶಗಳಲ್ಲಿ ಬಹಳ ಉಲುಸಾಗಿ ಬೆಳೆಯುತ್ತದೆಯಾದರೂ ಬಯಲು ಪ್ರದೇಶಗಳಲ್ಲೂ ನೀರು ಹಾಯಿಸಿ ಬೆಳೆಯಬಹುದು. ಹಾಗೆಯೇ ಬೆಟ್ಟ ಗುಡ್ಡಗಳ ಇಳಿಜಾರುಗಳಲ್ಲಿ ಸುಲಭವಾಗಿ ಬೆಳೆಯಬಹುದು. ಬೆಟ್ಟದ ತಪ್ಪಲು ಪ್ರದೇಶ ಅನಾನಸ್ ಬೆಳೆಗೆ ಪ್ರಶಸ್ತವಾಗಿರುತ್ತದೆ.

ರೋಗಗಳು : ಸಾಮಾನ್ಯವಾಗಿ ಅನಾನಸ್ ಬೆಳೆಯನ್ನು ನಾಶಮಾಡುವ ಕ್ರಿಮಿ ಕೀಟಗಳಿಲ್ಲವಾದರೂ ಕ್ರೌನ್‌ರಾಟ್ ಎಂಬ ರೋಗ ಹರಡುವುದು

ಕಂಡುಬರುತ್ತದೆ. ಈ ರೋಗ ಹರಡಿದಾಗ ಅನಾನಸ್ ಗಿಡದ ಸುಳಿಯಲ್ಲಿ ಕೊಳೆತಂತೆ ಕಾಣುತ್ತದೆ. ಕ್ರಮೇಣ ಗಿಡಗಳು ಸವೆದು ನಶಿಸುತ್ತಾ ಕಾಯಿ, ಹಣ್ಣುಗಳು ಉದುರುತ್ತಾ ಹೋಗುತ್ತವೆ. ಆದುದರಿಂದ ಅನಾನಸ್ ಕಂದುಗಳನ್ನು ನೆಡುವ ಮುನ್ನ ಬೇರು ಸಹಿತ ಬೋರ್ಡೋ ದ್ರಾವಕದಲ್ಲಿ ಮಿತ ಪ್ರಮಾಣದಲ್ಲಿ ಮುಳುಗಿಸಿ ನೆಡಬೇಕು. ಹಾಗೆಯೇ ನೆಟ್ಟು ಮೂರ್‍ನಾಲ್ಕು ತಿಂಗಳದ ಮೇಲೆ ಸಾಮಾನ್ಯ ಪ್ರಮಾಣದ ಬೋರ್ಡೋದ್ರಾವಕವನ್ನು ಸಿಂಪಡಿಸುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

ಉಪಯೋಗ : ಅನಾನಸ್ ಹಣ್ಣು ಬಹೋಪಯೋಗಿಯಾದದ್ದು. ತಿನ್ನಲು ಮಾತ್ರವಲ್ಲದೆ ಔಷಧಿಗೂ ಬಳಕೆ ಮಾಡುತ್ತಾರೆ. ಹಣ್ಣಿನ ಸಿಪ್ಪೆ ತೆಗೆದು ತಿರುಳನ್ನು ಚೂರು ಚೂರು ಮಾಡಿ ತಿನ್ನುವುದಲ್ಲದೆ ಫ್ರೂಟ್‌ಸಲಾಡ್ ಮಾಡಿಯೂ ಉಪಯೋಗಿಸುತ್ತಾರೆ. ಈ ಹಣ್ಣಿನ ಸಿಪ್ಪೆ ಜಾನುವಾರುಗಳಿಗೆ ಉತ್ತಮವಾದ ಆಹಾರವಾಗಿರುತ್ತದೆ. ವಿಶೇಷವಾಗಿ ಹಣ್ಣಿನ ರಸದಿಂದ 'ಸಿರಪ್' ತಯಾರಿಸುತ್ತಾರೆ. ಹಾಗೆಯೇ 'ಆಲ್ಕೋಹಾಲ್', 'ಸಿಟ್ರಿಕ್ ಆಸಿಡ್', 'ಕ್ಯಾಲ್ಸಿಯಂ ಸಿಟ್ರೇಟ್' ಮುಂತಾದ ಪದಾರ್ಥಗಳನ್ನು ತಯಾರಿಸುವುದಕ್ಕೂ ಬಳಕೆ ಮಾಡುತ್ತಾರೆ. ಅಲ್ಲದೆ ಸಂಸ್ಕರಿಸಿದ ಅನಾನಸ್ ಎಲೆಗಳ ನಾರನ್ನು ಬಟ್ಟೆ ತಯಾರಿಕೆಯಲ್ಲೂ ಬಳಕೆಮಾಡುತ್ತಾರೆ.

ಪಿ.ಸಿ.ಡಿ.

ಅಪಸಣಬು ನಾರಿಗಾಗಿ ಬೆಳೆಸುವ ಸಸ್ಯಗಳ ಪೈಕಿ ಒಂದು. ಇದನ್ನು ದಕ್ಷಿಣ ಭಾರತದ ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ ರಾಜ್ಯಗಳಲ್ಲೂ ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯ ಪ್ರದೇಶಗಳಲ್ಲಿಯೂ ಕೃಷಿ ಮಾಡುವುದುಂಟು. ಇದು 5-10 ಅಡಿ ಎತ್ತರ ಬೆಳೆಯುತ್ತದೆ. ಸಾಧಾರಣ ಮಳೆಯಾಗುವ ಎಲ್ಲ ಪ್ರದೇಶಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ. ಆದ್ದರಿಂದ ಭಾರತದಲ್ಲೂ ಇದರ ಕೃಷಿ ಹೆಚ್ಚು. ಉತ್ತಮ ಬೆಳೆಗಾಗಿ ಕೆಂಪು ಅಥವಾ ಮರಳುಮಿಶ್ರಿತ ಕೆಂಪು ಮಣ್ಣಿನಲ್ಲಿ ಬೆಳೆಸುವರು. ಚೌಳು ಭೂಮಿ ಈ ಬೆಳೆಗೆ ಯೋಗ್ಯವಲ್ಲ. ಒಂದು ಎಕರೆಗೆ ಸು. 25 ಕೆ.ಜಿ. ಬಿತ್ತನೆ ಬೀಜ ಸಾಕು. ಇದನ್ನು ಮಿಶ್ರ ಬೆಳೆಯಾಗಿಯೂ ಪ್ರತ್ಯೇಕವಾಗಿಯೂ ಬೆಳೆಸಬಹುದು. ಇತರ ಬೆಳೆಗಳ ಮಧ್ಯೆ ಬೆಳೆಸುವಾಗ ನಿರ್ದಿಷ್ಟ ಅಂತರದಲ್ಲಿ ಕೂರಿಗೆಯಿಂದ ಬಿತ್ತುತ್ತಾರೆ. ರಾಗಿ, ನವಣೆ ಮುಂತಾದ ಬೆಳೆಗಳ ಮಧ್ಯೆ ಸಾಮಾನ್ಯವಾಗಿ ಇದನ್ನು ಬೆಳೆಸುತ್ತಾರೆ. ಇದರಲ್ಲಿ ದಪ್ಪ, ಸಣ್ಣ ಬೀಜ ಕೊಡುವ ಸಸ್ಯಗಳಿವೆ. ಬೀಜ ಸಣ್ಣದಿದ್ದಷ್ಟೂ ಗಿಡ ಹೆಚ್ಚು ಕವಲೊಡೆದು ಹೆಚ್ಚು ಸೊಪ್ಪನ್ನು ಕೊಡುತ್ತದೆ. ದಪ್ಪ ಬೀಜದ ಗಿಡ ದಷ್ಟಪುಷ್ಟವಾಗಿ, ನೇರವಾಗಿ ಕವಲೊಡೆಯದೆ ಬೆಳೆಯುವಂಥದು. ನಾರಿಗೆ ಉಪಯುಕ್ತವಾದ ಸಸ್ಯವಿದು. ಎಲೆಗಳು ಸಣ್ಣಗಿದ್ದು ಒತ್ತೊತ್ತಾಗಿರುತ್ತವೆ. ಹೂಗಳು ಕಡು ಹಳದಿ ಬಣ್ಣ, ಹೆಚ್ಚು ಬೀಜವುಳ್ಳ ಗಟ್ಟಿ ಸಿಪ್ಪೆಯ ಕಾಯಿ ಇದರದು.

ಹಸುರೆಲೆಗೊಬ್ಬರವಾಗಿಯೂ ಇದರ ಉಪಯೋಗವಿದೆ. ಈ ಸಸ್ಯದ ಹೀರು ಬೇರುಗಳಲ್ಲಿ ಗಾಳಿಯಲ್ಲಿಯ ಸಾರಜನಕವನ್ನು ಶೇಖರಿಸಿಟ್ಟು ಕೊಂಡು ಭೂಸಾರವನ್ನು ಹೆಚ್ಚಿಸುವ ಗುಣವಿದೆ. ಹಾಗಾಗಿ ಬತ್ತದ ಗದ್ದೆಗಳಲ್ಲಿ ನಾಟಿ ಮಾಡುವ ಮೊದಲು ಅಪಸಣಬು ಬೀಜಬಿತ್ತಿ ತೆನೆ ಮೂಡುವ ಮೊದಲೇ ಗದ್ದೆ ಉತ್ತು ಮಣ್ಣಿನೊಳಕ್ಕೆ ಬೆರೆಸಿ ಬಿಡುವುದರಿಂದ ಭೂಮಿಯ ಫಲವತ್ತತೆ ಹೆಚ್ಚಿ ಬೆಳೆ ಉತ್ತಮ ಇಳುವರಿ ಕೊಡಲು ಸಹಕಾರಿಯಾಗುತ್ತದೆ.



ಕೊಯ್ಲು : ಹೂ ಬಿಡುವ ಸಮಯಕ್ಕೆ ಗಿಡವನ್ನು ಕೊಯ್ದು ನಾರಿಗಾಗಿ ಬಳಸುತ್ತಾರೆ. ನಾರನ್ನು ತೆಗೆಯಲು ಗಿಡವನ್ನು ಕೆಲವು ದಿವಸ ನೀರಿನಲ್ಲಿ ಇಟ್ಟು, ಕೊಳೆಸಿ ಅನಂತರ ಹೊರತೆಗೆದು ಮೃದುವಾಗಿ ಜಜ್ಜಿ ನಾರನ್ನು ಶುದ್ಧಗೊಳಿಸುತ್ತಾರೆ. ಇದರ ಹಗ್ಗ ಹುರಿ ಅಥವಾ ದಾರ ಬಲುಗಟ್ಟಿಯಾಗಿದ್ದು ಬಲೆ ನೇಯಲು ಮತ್ತು ಹಡುಗುಗಳಿಗೆ ಬಳಸುವ ದಪ್ಪ ಹಗ್ಗವನ್ನು ತಯಾರಿಸಲು ಬಳಸುತ್ತಾರೆ.

ರೋಗಬಾಧೆ : ಈ ಸಸ್ಯವನ್ನು ಕೆಲವು ಪತಂಗಗಳು/ಕೀಟಗಳು, ಹುಳುಗಳು ಬಾಧಿಸುತ್ತವೆ. ಕೀಟಗಳು ಎಲೆಯನ್ನು ತಿಂದು ಹಾಳುಮಾಡಿದರೆ; ಕೆಲವು ಜಾತಿಯ ಹುಳುಗಳು ಕಾಯಿಯನ್ನು ಹಾಳುಮಾಡುತ್ತವೆ. ಈ ಸಾಬೂನು ಮತ್ತು ಸೀಮೆಎಣ್ಣೆಯನ್ನು ಬೆರೆಸಿದ ದ್ರಾವಣವನ್ನು ಸಿಂಪಡಿಸುವುದರ ಮೂಲಕ ಈ ರೋಗ ತಡೆಗಟ್ಟಬಹುದು.

ಎನ್.

ಅಮಟೆಕಾಯಿ ವೈಲ್ಡ್ ಮ್ಯಾಂಗೊ ಹಾಗ್‌ಪ್ಲಮ್ ಎಂದು ಕರೆಯುವ ಇದು ಅನಕಾರ್ಡಿಯೇಸೀ ಕುಟುಂಬ ವರ್ಗಕ್ಕೆ ಸೇರಿದೆ. ಇದರ ಸಸ್ಯವೈಜ್ಞಾನಿಕ ಹೆಸರು 'ಸ್ಪಾಂಡಿಯಾಸ್ ಮ್ಯಾಂಗಿಫೆರಾ ವೈಲ್ಡ್'. ಭಾರತಾದ್ಯಂತ ಇದನ್ನು ಬೆಳೆಯುತ್ತಾರೆ. ಕಾಯಿ ಹಾಗೂ ಹಣ್ಣುಗಳನ್ನು ತರಕಾರಿಯಂತೆ ಬಳಸುತ್ತಾರೆ. ಚಟ್ನಿ, ಉಪ್ಪಿನಕಾಯಿ ಮತ್ತು ಜಾಮ್‌ಗಳ ತಯಾರಿಕೆಯಲ್ಲೂ ಇದರ ಉಪಯೋಗವುಂಟು.

ಅಮಟೆಕಾಯಿ ಬೆಳೆಸಲು ಇಂಥದೇ ಮಣ್ಣು ಬೇಕೆಂದೇನು ಇಲ್ಲ. ಆದರೆ ನೀರು ಇಂಗಿ ಹೋಗಬಲ್ಲ ಹಾಗೂ ಪೋಷಕಾಂಶಗಳಿರುವ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಯಾವ ಕಾಲದಲ್ಲಿ ಬೇಕಾದರೂ ಇದನ್ನು ನಾಟಿ ಮಾಡಬಹುದು. ಅಂಡಮಾನ್ ನಿಕೋಬಾರ್ ದ್ವೀಪಗಳಿಂದ ಹಿಡಿದು ಹಿಮಾಲಯ ತಪ್ಪಲುಗಳಲ್ಲೂ ಒಣಕಾಡುಗಳಲ್ಲೂ ಬೆಳೆಯಬಲ್ಲದು. ಆದರೆ ಒಣ ಹವೆ ಕಾಡುಗಳಲ್ಲಿ ಅಮಟೆ ಮರಗಳು ಹೆಚ್ಚಾಗಿ ಕಂಡುಬರುತ್ತವೆ. ಹೆಚ್ಚು ಇಳುವರಿ ಕೊಡಲು ಉತ್ತಮ ಬೆಳಕಿರಬೇಕು.

ಮಳೆಗಾಲದಲ್ಲಿ ಬೀಜ ಸುಲಭವಾಗಿ ಮೊಳಕೆಯೊಡೆಯುತ್ತದೆ. ಭ್ರೂಣ ಬಿಸಿಲಿಗೆ ಒಣಗಿ ಹೋಗದಂತೆ ಹಣ್ಣುಗಳನ್ನು ಮರಳಿನಲ್ಲಿ ರಕ್ಷಿಸಬೇಕು. ಸಸ್ಯಾಭಿವೃದ್ಧಿಯನ್ನು ಬೀಜ ಹಾಗೂ ಕಾಂಡದ ತುಂಡುಗಳಿಂದಲೂ ಮಾಡಬಹುದು. ಚೀಲಗಳಲ್ಲಿ ಬೆಳೆಸಿದರೆ ಸಸಿಗಳನ್ನು ಬೇಕಾದ ಕಡೆ ನಾಟಿ ಮಾಡಲು ಸುಲಭ. ಸಸ್ಯದ ವಯಸ್ಸು ಹೆಚ್ಚಿದಂತೆಲ್ಲಾ ನೀರಿನ ಪ್ರಮಾಣ ಮತ್ತು ಗೊಬ್ಬರ ಹೆಚ್ಚು ಬೇಕಾಗುತ್ತದೆ. ಗಿಡ ನೆಟ್ಟ ಐದು ವರ್ಷಗಳಲ್ಲಿ ಕೊಯ್ಲಿಗೆ ಬರುತ್ತದೆ.

ಇದು ಹೆಚ್ಚಿನ ಔಷಧೀಯ ಗುಣಗಳನ್ನು ಹೊಂದಿದ್ದು, ಹಣ್ಣುಗಳು ಹುಳಿ ಮತ್ತು ಒಗರಿನಿಂದ ಕೂಡಿರುತ್ತವೆ. ಯುದ್ಧದಲ್ಲಿ ವಿಷಬಾಣಗಳು ಮುಂತಾದವುಗಳಿಂದ ಆದ ಗಾಯಗಳ ವಿಷವನ್ನು ತೊಡೆದುಹಾಕುವ ಗುಣ ಇದಕ್ಕಿದೆ. ಕಿವಿನೋವಿಗೆ ಇದರ ರಸ ರಾಮಬಾಣದಂತೆ. ಕ್ಷಯರೋಗಿಗಳಿಗೂ ಇದು ಒಳ್ಳೆಯ ಔಷಧಿಯಾಗಿದ್ದು, ಅತಿಸಾರ ಮತ್ತು ವಾಂತಿಗೆ ಉಪಶಮನಕಾರಿ. ಬೇರಿನ ಕಷಾಯದ ಸೇವನೆಯಿಂದ ಮುಟ್ಟಿನ ಸ್ರಾವ ಸರಳವಾಗುತ್ತದೆ. ಇದರ ಸಿಪ್ಪೆ ಆಹ್ಲಾದಕರ ಒಗರಿನಿಂದ ಕೂಡಿದ್ದು ದೇಹಕ್ಕೆ ತಂಪನ್ನುಂಟುಮಾಡುತ್ತದೆ. ಇದರ ಮುಲಾಮನ್ನು ಹೃದಯ ಮತ್ತು ಮಾಂಸಖಂಡಗಳ ನೋವಿಗೆ ಬಳಸುತ್ತಾರೆ. ಈ ಮರ ಸ್ರವಿಸುವ ಗೋಂದನ್ನು ಧೂಪಹಾಕಲು ಬಳಸುತ್ತಾರೆ.

ಎನ್. ಆರ್.

ಅಮೃತಬಳ್ಳಿ ಔಷಧೀಯ ಸಸ್ಯಗಳ ಪೈಕಿ ಒಂದು. ಇದು ಥಲಾಮಿ ಫ್ಲೋರೇ ಉಪವರ್ಗದ ಮೆನಿಸ್ಪರ್ಮೇಸೀ ಕುಟುಂಬಕ್ಕೆ ಸೇರಿದೆ. ಟಿನೋಸ್ಪೋರ ಕಾಡಿಫೋಲಿಯ ಇದರ ವೈಜ್ಞಾನಿಕ ಹೆಸರು. ಸಂಸ್ಕೃತದಲ್ಲಿ ಅಮೃತವಲ್ಲಿ, ಕನ್ನಡದಲ್ಲಿ ಅಮೃತಬಳ್ಳಿ, ತಮಿಳಿನಲ್ಲಿ ಅಮೃದವಲ್ಲಿ, ತೆಲುಗಿನಲ್ಲಿ ಅಮೃತತೀಗ. ಮಲಯಾಳದಲ್ಲಿ ಅಮೃತು ಎಂದೂ ಕರೆಯುತ್ತಾರೆ.

ಸಸ್ಯಾಭಿವೃದ್ಧಿ : ಬೀಜ ಮತ್ತು ಬಳ್ಳಿಯ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಈ ಸಸ್ಯಕ್ಕೆ ಎಲ್ಲೆಂದರಲ್ಲಿ ಯಾವುದೇ ಆರೈಕೆಯಿಲ್ಲದೆ ಬೆಳೆಯುವ ಗುಣವಿದೆ. ಮಳೆ ಪ್ರಮಾಣ ಕಡಿಮೆ ಇದ್ದಾಗಲೂ, ಮಳೆಯಿಲ್ಲದ ಕಾಲದಲ್ಲೂ ಸಾಯದೆ ಉಳಿಯುವಂಥದ್ದು. ಇದರಲ್ಲಿ ಯಥೇಚ್ಛವಾದ ಔಷಧೀಯ ಗುಣವಿರುವುದರಿಂದ ಮನೆಯ ಅಂಗಳದಲ್ಲೊ ಅಥವಾ ತೋಟದ ನಿರುಪಯುಕ್ತ ಅಂಚಿನಲ್ಲೊ ಒಂದೆರಡು ಸಸಿಗಳನ್ನು ಬೆಳೆಸುವುದುಂಟು. ಸ್ವಲ್ಪ ನೀರು ಗೊಬ್ಬರ ಬಿದ್ದರಂತೂ ಶೀಘ್ರವಾಗಿಯೂ ಹುಲುಸಾಗಿಯೂ ಬೆಳೆದು ಹಬ್ಬಬಲ್ಲದು. ಸುಮಾರು 25-30 ಅಡಿ ಉದ್ದ ಹಬ್ಬು ಬಳ್ಳಿಗಳ ಹಾಗೆ ಹರಡುವ ಗುಣ ಇದಕ್ಕಿದೆ. ಕಾಂಡದ ತುಂಡುಗಳಿಂದ ಬೆಳೆಸಿದರೆ ಶೀಘ್ರವಾಗಿ ಬೆಳೆಯುತ್ತದೆ. ಒಂದೆರಡು ಕಣ್ಣುಗಳಿರುವ ಬಲಿತ ಕಾಂಡದ ತುಂಡುಗಳನ್ನು ಮಳೆಗಾಲದಲ್ಲಿ ನೆಡಬೇಕು. ಇದರ ಬಳ್ಳಿಗಳು ಏರುಬಳ್ಳಿಗಳಾಗಿ ಬೆಳೆಯಲು ಯಾವುದಾದರೂ ಆಸರೆಯಿದ್ದರೆ ಒಳ್ಳೆಯದು. ಸ್ವಲ್ಪ ಗೊಬ್ಬರ, ಮರಳನ್ನು ಸಿದ್ಧಪಡಿಸಿದ ಗುಂಡಿಗೆ ಸೇರಿಸಿ ಬಳ್ಳಿಯನ್ನು ನೆಟ್ಟು ತೇವವಿರುವಂತೆ ನೋಡಿಕೊಳ್ಳಬೇಕು. ಒಂದೆರಡು ತಿಂಗಳು ತೇವಾಂಶವಿದ್ದರೆ ಸಾಕು ಗಟ್ಟಿಯಾಗಿ ಬೇರೂರಿ ದಟ್ಟವಾಗಿ ಬೆಳೆದು ದಿಟ್ಟವಾಗಿ ನಿಲ್ಲುತ್ತದೆ.

ಬೀಜಗಳನ್ನು ಬಳಸಿಯೂ ಸಸ್ಯಾಭಿವೃದ್ಧಿ ಮಾಡಬಹುದು. ಬೀಜಗಳು ತುಸು ಗಟ್ಟಿಯಾಗಿರುವುದರಿಂದ ಒಂದೆರಡು ದಿನ ನೀರಿನಲ್ಲಿ ನೆನೆಸಿಡಬೇಕು. ಸಿದ್ಧಪಡಿಸಿಕೊಂಡ ಗುಂಡಿಗಳು ಅಥವಾ ಪಾಲಿಥೀನ್ ಚೀಲಗಳಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಕೊಟ್ಟಿಗೆ ಗೊಬ್ಬರ ತುಂಬಿ ಒಂದು ಚೀಲದಲ್ಲಿ 3-4 ಬೀಜಗಳನ್ನು ಬಿತ್ತಬೇಕು. ಮಳೆ ಆರಂಭವಾಗುವ ಒಂದೆರಡು ತಿಂಗಳ ಮೊದಲೇ ಈ ಕೆಲಸ ಮಾಡಿದರೆ ಮಳೆಗಾಲಕ್ಕೆ ನಾಟಿ



ಮಾಡಲು ಸಿದ್ಧವಾಗುತ್ತದೆ. ಸಸಿ ಬೆಳೆಯುವ ತನಕ ಹಿತಮಿತವಾಗಿ ನೀರುಣಿಸಬೇಕು. ಈ ಸಸಿಗಳನ್ನು ನಿರ್ದಿಷ್ಟ ಜಾಗದಲ್ಲಿ ಜೂನ್-ಜುಲೈ ತಿಂಗಳಲ್ಲಿ ನೆಟ್ಟು ನೀರು ಗೊಬ್ಬರವನ್ನು ಸರಿಯಾದ ಸಮಯಕ್ಕೆ ಒದಗಿಸಿದರೆ ಚೆನ್ನಾಗಿ ಬೆಳೆಯುತ್ತವೆ.

ಅಮೃತ ಬಳ್ಳಿಯಲ್ಲಿಯೂ ಸಾಕಷ್ಟು ಪ್ರಭೇದಗಳಿವೆ. ಕರ್ನಾಟಕದಲ್ಲಿ ಹತ್ತು ಜಾತಿಯ ಹನ್ನೆರಡು ಪ್ರಭೇದಗಳಿವೆ. ಈ ಬಳ್ಳಿಯ ತೊಗಟೆಯ ಮೇಲೆ ವಕ್ರವಕ್ರವಾದ ಉದ್ದನೆಯ ಗೆರೆಗಳಿರುತ್ತವೆ. ಇದರ ಬೇರುಗಳು ಭೂಮಿಯ ಒಳಭಾಗದಲ್ಲಷ್ಟೇ ಅಲ್ಲದೆ ಹೊರಗೆ ಕಾಣುವಂತೆಯೂ ಬೆಳೆಯುತ್ತವೆ. ಇದರ ಎಲೆಗಳು ವೀಳ್ಯದೆಲೆಯ ಆಕಾರದಂತಿದ್ದರೂ ತುಸು ತೆಳು. ಎಲೆಗಳಲ್ಲಿ ಬಲೆಯಂತೆ ಹರಡಿದ ನಾಳಗಳಿರುತ್ತವೆ. ಎಲೆಗಳು ಬಳ್ಳಿಯ ಮೇಲೆ ಅಥವಾ ತುದಿಯಲ್ಲಿ ಬೆಳೆಯುತ್ತವೆ. ಏಪ್ರಿಲ್-ಮೇ ತಿಂಗಳಲ್ಲಿ ಎಲೆ ಉದುರಿದ ಮೇಲೆ ಹೂ ಬಿಡುತ್ತವೆ. ಇದರ ಬಣ್ಣ ಹಳದಿ ಇದ್ದು ಹೆಣ್ಣು ಮತ್ತು ಗಂಡು ಹೂಗಳನ್ನು ಬಿಡುತ್ತದೆ. ಆರು ದಳಗಳುಳ್ಳ ಪುಷ್ಪಪತ್ರಗಳು ಗಂಡು ಹೂಗಳಲ್ಲಿರುತ್ತವೆ. ಹೆಣ್ಣುಹೂಗಳ ದಳಗಳು ಆಯತಾಕಾರದವು. ಹಣ್ಣು ಅಷ್ಟಿಫಲ ಮಾದರಿಯದು. ಇದರ ಬೀಜಗಳು ತೆಳು. ಅಮೃತ ಬಳ್ಳಿಗೆ ಕಾಯಿಲೆಗಳು ಕಡಿಮೆ. ಇಲ್ಲವೆಂದರೂ ಸರಿಯೆ.

ವಾಣಿಜ್ಯ ದೃಷ್ಟಿಯಿಂದ ಕೃಷಿ ಮಾಡುವಾಗ ಅಮೃತಬಳ್ಳಿಯನ್ನು ಪ್ರತ್ಯೇಕವಾಗಿ ಬೆಳೆಸಬೇಕು. ಇತ್ತೀಚೆಗೆ ಇದರ ಬೇಡಿಕೆ ಹೆಚ್ಚಾಗುತ್ತಿದ್ದು ನಿರ್ದಿಷ್ಟ ಅವಧಿಯಲ್ಲಿ ಬಳ್ಳಿಗಳನ್ನು ಕತ್ತರಿಸಿ ವ್ಯವಸ್ಥಿತವಾಗಿ ಒಣಗಿಸಿ ಮಾರುಕಟ್ಟೆಗೆ ರವಾನಿಸುವರು.

ಉಪಯೋಗಗಳು : ಇದರ ಔಷಧೀಯ ಗುಣಗಳನ್ನು ಕುರಿತು ಪ್ರಾಚೀನ ಗ್ರಂಥಗಳಾದ ಚರಕ, ಸುಶ್ರುತ ಮೊದಲಾದ ಸಂಹಿತೆಗಳಲ್ಲಿ ಉಲ್ಲೇಖವಿದೆ. ಇದು ಕುಷ್ಠರೋಗ ನಿವಾರಕ. ಪ್ರತಿದಿನ ಅಮೃತಬಳ್ಳಿ ರಸ ಸೇವಿಸುವುದರಿಂದ ದೈಹಿಕವಾಗಿ ದುರ್ಬಲರಾದವರು ಸದೃಢಕಾಯರಾಗುವರು. ಇದೊರೊಂದಿಗೆ ನೆಲ್ಲಿಕಾಯಿ ರಸ ಸೇರಿಸಿ

ಕುಡಿದರೆ ಕಾವಾಲೆ ಗುಣವಾಗುವುದು. ಇದು ಸರ್ವರೋಗ ನಿವಾರಕವೆಂದರೂ ತಪ್ಪಾಗದು.

ಕೆ.ಎಂ.

ಅರಣ್ಯ ಯಾವುದೇ ದೇಶದ ಭೂಮಿಯ ಮೇಲ್ಮೈಲಕ್ಷಣ, ವಾಯುಗುಣ, ನೀರಾವರಿ, ಪ್ರಾಣಿ ಮತ್ತು ಸಸ್ಯಸಂಪತ್ತು-ಒಟ್ಟಾರೆ ಸ್ವಾಭಾವಿಕ ಸಂಪನ್ಮೂಲಗಳ ಪ್ರಮಾಣ ಇತ್ಯಾದಿಗಳನ್ನು ನಿರ್ಧರಿಸುವಲ್ಲಿ ಆಯಾ ದೇಶದ ವಿವಿಧ ಭಾಗಗಳಲ್ಲಿ ಇರುವ ಅರಣ್ಯಗಳ ಪಾತ್ರ ಪ್ರಮುಖವಾದುದು. ಅರಣ್ಯಗಳಿಂದ ಆ ದೇಶದ ಆರ್ಥಿಕ ಸ್ಥಿತಿಯನ್ನು ಗುರುತಿಸಲು ಸಾಧ್ಯವಿದೆ. ಅರಣ್ಯಗಳು ಸಮೃದ್ಧವಾಗಿ ಇದ್ದಷ್ಟು ಆ ಭಾಗದ ನೀರಾವರಿ ಅಧಿಕಗೊಂಡು ಭೂಮಿ ಫಲವತ್ತಾಗಿ ವಾಯುಗುಣ ಹಿತವಾಗಿರುತ್ತದೆ. ಇದರಿಂದ ರಾಜ್ಯದಿಂದ ರಾಜ್ಯಕ್ಕೆ ಕೃಷಿಯ ಸ್ವರೂಪ, ಬೆಳೆಯುವ ಬೆಳೆಗಳು ವ್ಯತ್ಯಾಸಗೊಳ್ಳುತ್ತವೆ. ನಿತ್ಯಹರಿದ್ವರ್ಣದ ಕಾಡುಗಳಿರುವೆಡೆ ಸರ್ವಋತುಗಳಲ್ಲಿಯೂ ನೀರು ಲಭ್ಯವಿದ್ದು ಅಂತಹ ಜಾಗಗಳಲ್ಲಿ ಬಹುವಾರ್ಷಿಕ ಬೆಳೆಗಳಾದ ಸೇಬು, ಕಿತ್ತಳೆ, ಅನಾನಸ್ ಮೊದಲಾದ ಹೆಚ್ಚು ನೀರು ಬಯಸುವ, ಆರ್ಥಿಕವಾಗಿ ಲಾಭಗಳಿಸುವ ಫಲ ನೀಡುವ ಮರಗಳನ್ನು ಬೆಳೆಸಲು ಸಾಧ್ಯವಿದೆ. ಅರಣ್ಯಗಳು ದಟ್ಟವಾಗಿಲ್ಲದ, ಕುರುಚಲು ಕಾಡುಗಳಿರುವೆಡೆ ಮಾವು, ಹುಣಿಸೆ, ಹಲಸು ಇತ್ಯಾದಿಗಳನ್ನು ಕೃಷಿ ಮಾಡುವುದಿದೆ. ಅರಣ್ಯಗಳೇ ಇಲ್ಲದ ಬಯಲು ಪ್ರದೇಶಗಳಲ್ಲಿ ರಾಗಿ, ಜೋಳ, ಹುರುಳಿ ಮೊದಲಾದ ಮಳೆಗಾಲದಲ್ಲಿ ಮಾತ್ರ ಕೃಷಿ ಮಾಡಬಲ್ಲ ಬೆಳೆಗಳನ್ನು ಬೆಳೆಸುತ್ತಾರೆ. ಮರಳು ಗಾಡು ಪ್ರದೇಶದಲ್ಲಿ ಖರ್ಜೂರ, ಸಕ್ಕರೆ ಬಾದಾಮಿ ಇತ್ಯಾದಿ ಬೆಳೆಯುತ್ತಾರೆ.

ಅರಣ್ಯಗಳ ಬೆಳೆವಣಿಗೆಗೆ ಮುಖ್ಯವಾಗಿ ನಾಲ್ಕು ಅಂಶಗಳು ಕಾರಣವಾಗುತ್ತವೆ :

1. ಭೂಪ್ರದೇಶ, ಬೆಟ್ಟದ ಕಣಿವೆಗಳು ಮಟ್ಟಸ ಪ್ರದೇಶ, ಕೊರಕಲು, ಮರುಭೂಮಿ ಮುಂತಾದವು.

2. ಮಣ್ಣಿನ ಗುಣ : ಮಣ್ಣಿನ ರಚನೆ, ಮರಳು, ಜೇಡಿಮಣ್ಣು, ಜೌಗುಮಣ್ಣು, ಒಣಪ್ರದೇಶ.

3. ವಾಯುಗುಣ : ಭೂಮಿಯ ಶುಷ್ಕ ಮತ್ತು ತೇವಗುಣವನ್ನು ಒಳಗೊಂಡಿದ್ದು ಆಯಾಭಾಗದ ಭೌಗೋಳಿಕ ಲಕ್ಷಣ ಮತ್ತು ಕಾಲವನ್ನು ಅವಲಂಬಿಸಿರುತ್ತದೆ.

4. ಜಲದ ಪ್ರಮಾಣ : ಕಾಡುಗಳ ಬೆಳೆವಣಿಗೆ ಆಯಾ ವಲಯದ ಋತುಮಾನಕ್ಕನುಗುಣವಾಗಿರುತ್ತದೆ. ಉಷ್ಣ ಮತ್ತು ಸಮಶೀತೋಷ್ಣವಲಯದ ಬೆಳೆಗಳು ಒಂದು ತೆರನಾದರೆ ಹೆಚ್ಚು ತೇವಾಂಶವಿರುವ ಪ್ರದೇಶಗಳಲ್ಲಿ ಬೆಳೆಯುವ ಸಸ್ಯಗಳೇ ಬೇರೆ ರೀತಿ. ಮಣ್ಣು ಮತ್ತು ವಾಯುಗುಣದ ಮೇಲೆ ಗಾಳಿ ನೀರು ಬೀರುವ ಪ್ರಭಾವ ಮುಂತಾದವನ್ನನುಸರಿಸಿ ಒಂದೇ ವಲಯದಲ್ಲಿ ಭಿನ್ನ ಬಗೆಯ ಸಸ್ಯಗಳ ಬೆಳೆವಣಿಗೆ ಕೂಡಾ ಆಗುವುದುಂಟು.

ಅರಣ್ಯದ ಬೆಳೆವಣಿಗೆಗೆ ಅರಣ್ಯವೇ ಪೂರಕವಾದ ವಾತಾವರಣ ನಿರ್ಮಾಣ ಮಾಡಿಕೊಳ್ಳುತ್ತದೆ. ತನ್ನ ಒಡಲಲ್ಲೇ ಉತ್ಪಾದನೆಯಾಗುವ ಹೂ, ಬೀಜ, ಹಣ್ಣು, ಎಲೆ ಮತ್ತು ಸಸ್ಯಗಳ ವಿನಾಶ, ಮರುಹುಟ್ಟು, ವೈವಿಧ್ಯಮಯವಾದ ಸಸ್ಯಾಭಿವೃದ್ಧಿ, ಬೀಜೋತ್ಪತ್ತಿ ಮುಂತಾದ ಕ್ರಿಯೆಗಳು ಅಲ್ಲಿಯೇ ಸ್ವಾಭಾವಿಕವಾಗಿ ನಡೆಯುತ್ತವೆ. ಮರದಿಂದ ಉದುರಿದ ಕಾಯಿ, ಹಣ್ಣು, ಬೀಜೋತ್ಪತ್ತಿ ಮುಂತಾದ ಕ್ರಿಯೆಗಳು ಅಲ್ಲಿಯೇ ಸ್ವಾಭಾವಿಕವಾಗಿ ನಡೆಯುತ್ತವೆ. ಮರದಿಂದ ಉದುರಿದ ಕಾಯಿ, ಹಣ್ಣು, ಬೀಜ ಮುಂತಾದವು ಗಾಳಿಯಿಂದಲೋ ಮಳೆಯಿಂದಲೋ ಉದುರಿ ನೀರಿನ ಮೂಲಕ ಸಾಗಿ ಬಹುದೂರ ಹೋಗಿ ನದಿ, ಸಮುದ್ರಗಳ ತೀರದಲ್ಲಿ ಸಸ್ಯಾಭಿವೃದ್ಧಿ ಆಗಬಹುದು. ಪ್ರಾಣಿಗಳು, ಪಕ್ಷಿಗಳು ಹಣ್ಣುಗಳನ್ನು ತಿಂದು ಬೇರೆಡೆಗೆ ಕೊಂಡೊಯ್ದು ಅಲ್ಲಿ ಸಸ್ಯಾಭಿವೃದ್ಧಿ ಆಗಬಹುದು. ಹಣ್ಣು ಬಲಿತು ಬಿರಿದು ಬೀಜ ದೂರಕ್ಕೆ ಸಿಡಿಯಬಹುದು. ಕೆಲವೊಮ್ಮೆ ಮನುಷ್ಯಕೂಡ ಇಲ್ಲಿಂದ ಕೊಂಡೊಯ್ದು ಬೀಜಗಳನ್ನು ಮತ್ತೆಲ್ಲೋ ಬೆಳೆಸಬಹುದು. ಇಂತಹ ಬೀಜಗಳು ಋತುಮಾನಕ್ಕನುಗುಣವಾಗಿ ಮಣ್ಣಲ್ಲಿ ಬೆರೆತು ಮೊಳಕೆಯೊಡೆದು ಆಯಾ ಪರಿಸರಕ್ಕೆ ಹೊಂದಿಕೊಂಡು ಆಶ್ಚರ್ಯಕರವಾದ ರೀತಿಯಲ್ಲಿ ವನವನ್ನೇ ಸೃಷ್ಟಿಸಬಹುದು.

ಉಪಯೋಗಗಳು : 'ಕಾಡಿನಿಂದ ನಾಡು' ಎಂಬಂತೆ ಕಾಡು ಮನುಷ್ಯನಿಗೆ ಬೇಕಾದ ಉರುವಲು, ಮನೆಕಟ್ಟಲು ಬೇಕಾದ ಚೌಬೀನೆಯನ್ನೂ ಒದಗಿಸುತ್ತವೆ. ಪ್ರಕೃತಿಯ ಅಸಮತೋಲನವನ್ನು ಸರಿದೂಗಿಸಲು ಪ್ರಾಣಿಪಕ್ಷಿಗಳ ಪಾತ್ರ ಬಹಳ ಮುಖ್ಯ. ಭೂಸವೆತವನ್ನು ತಡೆಗಟ್ಟಲು, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಮತ್ತು ಇರುವ ಫಲವತ್ತತೆಯನ್ನು ಕಾಪಾಡಲು ಅರಣ್ಯಗಳು ಅತ್ಯಗತ್ಯ. ಘಟ್ಟ ಪ್ರದೇಶಗಳಿಂದ, ಕೊರಕಲುಗಳಿಂದ ಪ್ರವಾಹದೋಪಾದಿಯಲ್ಲಿ ಬರುವ ನೀರಿನ ಹರಿವನ್ನು ತಡೆದು ಜನವಾಸಿಸುವ ಪ್ರದೇಶಗಳನ್ನು ರಕ್ಷಿಸಲು ಅರಣ್ಯದ ಪಾತ್ರ ಮುಖ್ಯ. ಅರಣ್ಯಗಳು ಭೂಮಿಯ ಒಡಲಿನ ತೇವಕಾರಕ ಗುಣವನ್ನು ರಕ್ಷಿಸಲು ಅಗತ್ಯ. ಅರಣ್ಯಗಳ ಸಂವರ್ಧನೆಯಿಂದ ಜಲಾಶಯ ಪ್ರದೇಶಗಳು ವೃದ್ಧಿಗೊಳ್ಳುತ್ತವೆ. ಪ್ರಾಚೀನ ಕಾಲದಲ್ಲಿ ಇದ್ದ ಅರಣ್ಯಗಳು ಪ್ರಾಕೃತಿಕ ವಿಕೋಪದಿಂದ ಭೂಗರ್ಭದಲ್ಲಿ ಸೇರಿಹೋಗಿ ಕಲ್ಲಿದ್ದಲು, ಕಲ್ಲೆಣ್ಣೆಗಳಾಗಿ ಮಾರ್ಪಾಡಾಗಿರುವುದು ಇಂದು ಮಾನವನ ಬದುಕಿಗೆ ವರದಾನವಾಗಿದೆ.

ಆಹಾರ ಆರೋಗ್ಯಗಳನ್ನು ದಯಪಾಲಿಸುವ ಅರಣ್ಯಗಳನ್ನು ಹಾಳುಗೆಡವಿದ ವ್ಯಕ್ತಿ ಚಿನ್ನಕ್ಕಿಂತಲೂ ಅಮೂಲ್ಯವಾದುದನ್ನು ನೀಡುವಂಥದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದಾನೆ. ದಟ್ಟ ಅರಣ್ಯಗಳಿರುವೆಡೆಯಲ್ಲಿ ಸಕಲಸಂಪತ್ತೂ ಲಭ್ಯ ಎಂಬುದು ಅರಿವಿಗೆ ಬಂದಿದೆ. ಸರ್ಕಾರವೂ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ರೂಪಿಸಿದೆ. ಈ ಹಿನ್ನೆಲೆಯಿಂದ ಹುಟ್ಟಿಕೊಂಡಂಥದ್ದೇ `ಅಪ್ಪಿಕೊ ಚಳವಳಿ'.

ಕೆ.ಎಂ.

ಅರಿಸಿನ ಅರಿಸಿನ ಕರ್ನಾಟಕ ರಾಜ್ಯದ ಒಂದು ಪ್ರಧಾನ ಬೆಳೆ. ಇದನ್ನು ಸಾಂಬಾರ ಪದಾರ್ಥವಾಗಿ ಮತ್ತು ಔಷಧಿಯಾಗಿಯೂ ಬಳಸಲಾಗುತ್ತದೆ. ಇದರ ಮೂಲಸ್ಥಳ ದಕ್ಷಿಣ ಏಷ್ಯಾ. ವಲಸೆ ಬಂದಿರುವ ಈ ತಳಿಯು ಪ್ರಪಂಚದಾದ್ಯಂತ ವ್ಯಾಪಕವಾಗಿ ವಿಸ್ತರಣೆ ಹೊಂದಿದೆ. ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ, ಬೆಳಗಾವಿ, ಗುಲ್ಬರ್ಗಾ, ಬೀದರ್, ಚಾಮರಾಜನಗರ ಜಿಲ್ಲೆಗಳಲ್ಲಿ ಹೆಚ್ಚು ಬೆಳೆಯಲಾಗುತ್ತದೆ.

ಹಾಗೆಯೇ ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದಲ್ಲೂ ಅರಿಸಿನ ಬೆಳೆಯಲಾಗುತ್ತದೆ.

ಮಣ್ಣು : ಅರಿಸಿನವನ್ನು ಯಾವುದೇ ಬಗೆಯ ಮಣ್ಣಿನಲ್ಲಿ ಬೆಳೆಯಬಹುದು. ಮರಳುಮಣ್ಣು, ಜೇಡಿಮಣ್ಣು, ಕಲ್ಲು ಮಿಶ್ರಿತ ಮಣ್ಣಿನಲ್ಲಿ ಬೆಳೆಯಲಾಗುವುದಿಲ್ಲ. ಏಕೆಂದರೆ ಅರಿಸಿನದ ಕೊಂಬುಗಳು ನೆಲದಲ್ಲಿ ಸರಾಗವಾಗಿ ಇಳಿದು ನೈಜ ಆಕಾರವನ್ನು ಹೊಂದಲು ಸಾಧ್ಯವಾಗುವುದಿಲ್ಲ.



ಬಿತ್ತನೆ : ಅರಿಸಿನದ ಬಿತ್ತನೆಗೆ ಜೂನ್-ಆಗಸ್ಟ್ ತಿಂಗಳುಗಳು, ಅತೀ ಉತ್ತಮ ಕಾಲ. ಒಂದು ಎಕರೆಗೆ ಸು. 500 ಕೆ.ಜಿ. ಅರಿಸಿನದ ಕೊಂಬುಗಳು ಬಿತ್ತನೆಗೆ ಬೇಕಾಗುತ್ತವೆ. ಈ ಕೊಂಬುಗಳನ್ನು ಬಿತ್ತುವುದಕ್ಕೂ ಮೊದಲು ಒಂದು ಅಡಿ ಆಳದಷ್ಟು ಭೂಮಿಯನ್ನು ಜಾಳು ಜಾಳಾಗಿ ಹುಡಿ ಮಾಡಿ ಕೊಟ್ಟಿಗೆ ಗೊಬ್ಬರ ಮತ್ತು ಹಸುರು ಗೊಬ್ಬರವನ್ನು ಮಿಶ್ರಣ ಮಾಡಲಾಗುತ್ತದೆ. ಬಿತ್ತನೆಯ ಸಮಯದಲ್ಲಿ ಪ್ರತಿ ಎಕರೆಗೆ ಅಂದಾಜು ಶೇ. 25 ಟನ್ ಚೆನ್ನಾಗಿ ಕೊಳೆತ ಸಾವಯವ ಗೊಬ್ಬರ, 90 ಕಿ.ಗ್ರಾಂ. ರಂಜಕ 90 ಕಿ.ಗ್ರಾಂ. ಪೊಟ್ಯಾಷ್, 180 ಕಿ.ಗ್ರಾಂ. ಸಾರಜನಕ ಗೊಬ್ಬರವನ್ನು ಕೊಡಬೇಕು. ಅನಂತರ ಮಣ್ಣನ್ನು ಮೂರ್‍ನಾಲ್ಕು ಬಾರಿ ಸಡಿಲಗೊಳಿಸಿ ಸರಾಗವಾಗಿ ನೀರು ಹರಿಯುವಂತೆ ವ್ಯವಸ್ಥೆ ಕಲ್ಪಿಸಬೇಕು. 9 ರಿಂದ 10 ಸೆಂ.ಮೀ. ಎತ್ತರ ಹಾಗೂ 18 ರಿಂದ 20 ಸೆಂ.ಮೀ. ಅಗಲವಿರುವ ಬದುಗಳನ್ನು ಸಾಲಿನಿಂದ ಸಾಲಿಗೆ 22.5 ಮೀ ಅಂತರದಲ್ಲಿ ನಿರ್ಮಿಸಿ, 45 ಸೆಂ.ಮೀ. ಸಾಲುಗಳಲ್ಲಿ ಅರಿಸಿನದ ಕೊಂಬುಗಳನ್ನು ನಾಟಿ ಮಾಡಲಾಗುತ್ತದೆ. ಉಳಿದ ಶೇ. 50 ಸಾರಜನಕವನ್ನು ನಾಟಿ ಮಾಡಿದ 45 ದಿವಸಗಳ ಅನಂತರ ಕೊಡಬೇಕು. ಆಗಾಗ ಕಳೆಯನ್ನು ತೆಗೆಯುವುದು, ಹಸುರೆಲೆಗಳನ್ನು ಪಾತಿಯ ಮೇಲೆ ಹಾಕಿ ಮುಚ್ಚುವುದು ಮಾಡುವುದರಿಂದ ಸಸಿ ಉತ್ತಮವಾಗಿ ಬೆಳೆಯಲು ಸಹಕಾರಿಯಾಗುತ್ತದೆ.

ನೀರು : ಮಣ್ಣು ಮತ್ತು ಹವಾಗುಣಕ್ಕನುಗುಣವಾಗಿ ಪ್ರತಿ ಆರರಿಂದ ಎಂಟು ದಿನಕ್ಕೊಮ್ಮೆ ಚೆನ್ನಾಗಿ ನೀರು ಹರಿಸಬೇಕು. ಅರಿಸಿಣ ಬೆಳೆಯುವ ಭೂಮಿ ತೇವದ ವಾತಾವರಣದಿಂದ ಕೂಡಿರುವಂತೆ ನೋಡಿಕೊಳ್ಳುವುದು ಉತ್ತಮ.

ಕೀಟಗಳ ಹಾವಳಿ : ಎಲೆ ತಿನ್ನುವ ಹುಳು, ಕಾಂಡ ಕೊರೆಯುವ ಹುಳು, ಗೆಡ್ಡೆ ಕೊರೆಯುವ ಹುಳು ಹಾಗೂ ತ್ರಿಪ್ಸ್ ನುಸಿಯಂತಹ ಸೂಕ್ಷ್ಮ ಜೀವಿಗಳ ಹಾವಳಿ ಈ ಬೆಳೆಗೆ ಹೆಚ್ಚಾಗಿರುತ್ತದೆ.

ರೋಗಗಳು : ಅರಿಸಿನಕ್ಕೆ ಎಲೆಚುಕ್ಕಿರೋಗ, ಕೊಂಬು ಬೇರು ಕೊಳೆಯುವ ರೋಗ (ರೈಝೋವಮ್) ಮತ್ತು ಚಿಬ್ಬು ರೋಗ (ಅಂಥಾಕ್ನೋಸ್) ಮುಂತಾದ ರೋಗಗಳು ತಗುಲುವ ಸಂಭವ ಹೆಚ್ಚು.

ಹತೋಟಿ : ಅರಿಸಿನ ಬೆಳೆಗೆ ಕೀಟ ಬಾಧೆ ಅಥವಾ ರೋಗ ಕಂಡು ಬಂದರೆ 1.7 ಮಿ.ಲೀ. ಡೈಮಿತೋಯೆಟ್, 30 ಇಸಿ, ಅಥವಾ 0.5 ಮಿ.ಲೀ. ಫಾಸ್ಫಾಮಿಡಾನ್ 85 ಡಬ್ಲ್ಯೂ ಎಸ್.ಸಿ. ಅಥವಾ 2. ಮಿ.ಲೀ. ಪೋಸ್‍ಲೋನ್ 50 ಇ.ಸಿ. ಅಥವಾ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಹೀಗೆ ಯಾವುದಾದರೊಂದನ್ನು ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.

ಕಾಂಡ ಕೊರೆಯುವ ಹುಳು ಹಾಗೂ ಗೆಡ್ಡೆ ಕೊರೆಯುವ ಹುಳುವಿನ ಹತೋಟಿಗೆ ಪ್ರತಿ ಹೆಕ್ಟೇರ್‌ಗೆ 250 ಕಿ.ಗ್ರಾಂ. ಬೇವಿನ ಹಿಂಡಿ ಅಥವಾ 25 ಕಿ.ಗ್ರಾಂ. ಕಾರ್ಬೋಫ್ಯುರಾನ್ 3 ಜಿ ಹರಳುಗಳನ್ನು ಬಿತ್ತನೆ ಸಮಯದಲ್ಲಿ ಮುಂಜಾಗ್ರತವಾಗಿ ಮಣ್ಣಿನಲ್ಲಿ ಬೆರೆಸುತ್ತಾರೆ.

ಕೊಯ್ಲು : ಅರಿಸಿನ 7 ರಿಂದ 9 ತಿಂಗಳುಗಳಲ್ಲಿ ಕೊಯ್ಲಿಗೆ ಸಿದ್ಧವಾಗುತ್ತದೆ. ತೇವದ ಮಣ್ಣಿನೊಳಗೆ ಹುದುಗಿರುವ ಭಾರೀ ಗಾತ್ರದ ಕೊಂಬುಗಳನ್ನು ಕೈಗಳ ಮೂಲಕ ಅಥವಾ ಸಣ್ಣ ಹಾರೆಯ ಸಹಾಯದಿಂದ ಅತ್ಯಂತ ಜಾಗೂರೂಕತೆಯಿಂದ ಹೊರ ತೆಗೆಯುತ್ತಾರೆ. ಏಕೆಂದರೆ ಬಲವಾಗಿ ಎಳೆದಾಡಿ ಮಣ್ಣಿನಿಂದ ಬೇರ್ಪಡಿಸಿದರೆ ಅರಿಸಿನ ಕೊಂಬುಗಳು ಅರ್ಧಂಬರ್ಧ ಭೂಮಿಯಲ್ಲೇ ಉಳಿದು ಬಿಡುತ್ತವೆ. ಚೆನ್ನಾಗಿ ಕ್ಯಾಪ್ಟಾನ್ (0.2%) ಮೊನೋಕ್ರೊಟೋಫಾಸ್ (0.1%) ದ್ರಾವಣದೊಂದಿಗೆ ನೀರಿನಲ್ಲಿ ಅದ್ದಿ ತೆಗೆದ ಮೇಲೆ ನೆರಳಿನಲ್ಲಿ ಗುಡ್ಡೆ ಹಾಕಿ ಎಲೆಗಳಿಂದ ಮುಚ್ಚಬೇಕು. ಕೆಲವೊಮ್ಮೆ ಸಗಣಿಯಲ್ಲಿ ಮಣ್ಣನ್ನು ಮಿಶ್ರಣ ಮಾಡಿ ಅರಿಸಿನದ ಕೊಂಬಿನ ಮೇಲೆಲ್ಲಾ ಲೇಪಿಸುತ್ತಾರೆ.

ಸಂಸ್ಕರಣೆ : ಅರಿಸಿನದ ಕೊಂಬುಗಳನ್ನು ತಾಯಿ ಕಾಂಡದಿಂದ ಬೇರ್ಪಡಿಸಿ ಒಂದೆರಡು ದಿನ ನೆರಳಿನಲ್ಲಿ ಒಣಗಿಸಿದಾಗ ಮಣ್ಣು, ಗಾಳಿಗೆ ಆರಿ ಉದುರಿದ ಮೇಲೆ ಬಿತ್ತನೆಗೆ ಬಳಸುತ್ತಾರೆ.

ಕುದಿಸುವುದು : ಕೊಪ್ಪರಿಗೆಯಲ್ಲಿ ಅರಿಸಿನದ ಕೊಂಬುಗಳನ್ನು ನೀರಿನಲ್ಲಿ ಮುಳುಗಿಸಿ ಅದೇ ಎಲೆಗಳಿಂದ ಕೊಪ್ಪರಿಗೆಯನ್ನು ಮುಚ್ಚುತ್ತಾರೆ. ಎಲ್ಲಾ ಕೊಂಬುಗಳು ಮೃದುತ್ವ ಪಡೆಯುವವರೆಗೆ ಪರೀಕ್ಷಿಸುತ್ತಾ 45 ರಿಂದ 60 ನಿಮಿಷಗಳವರೆಗೆ ಹದವಾದ ಬೆಂಕಿಯಿಂದ ಕುದಿಸುತ್ತಾರೆ. ಹೀಗೆ ಬಿಸಿಯಾದ ಕೊಂಬುಗಳನ್ನು ಸು. 10-15 ದಿನಗಳವರೆಗೆ ಬಿದಿರಿನ ಚಾಪೆಯ ಮೇಲೆ ಹರಡಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಸು. 17 ರಿಂದ 25 ಕೆ.ಜಿ. ಸಂಸ್ಕರಣಗೊಂಡ ಅರಿಸಿನವು ದೊರಕಬೇಕಾದರೆ 100 ಕೆ.ಜಿ.

ಹಸಿ ಅರಿಸಿನದ ಆವಶ್ಯಕತೆಯಿರುತ್ತದೆ. ಚೆನ್ನಾಗಿ ಒಣಗಿಸಿದ ಅರಿಸಿನದ ಕೊಂಬುಗಳ ಮೇಲಿನ ಪೊರೆ ಮತ್ತು ಬೇರುಗಳನ್ನು ಬೇರ್ಪಡಿಸುವುದಕ್ಕೆ ಒಣಗಿದ ಒರಟಾದ ನೆಲದಲ್ಲಿ ಉಜ್ಜುತ್ತಾರೆ. ಒರಟಾದ ಡ್ರಮ್ಮಿನಲ್ಲಿ ಹಾಕಿ ಚೆನ್ನಾಗಿ ತಿರುಗಿಸಿಯೂ ಅರಿಸಿನವನ್ನು ಪಾಲಿಷ್ ಮಾಡುತ್ತಾರೆ.

ಇಳುವರಿ : ಒಂದು ಎಕರೆಯಲ್ಲಿ ಸುಮಾರು 37 ಸಾವಿರದಿಂದ 40 ಸಾವಿರ ಕೆ.ಜಿ.ಗಳಷ್ಟು ಅರಿಸಿಣ ಪಡೆಯಬಹುದು. ಅದೇ ರೀತಿ ಮಳೆಯಾಶ್ರಿತ ಸಮಯದಲ್ಲಿ ಪ್ರತಿ ಹೆಕ್ಟೇರ್‌ಗೆ 20,000 ದಿಂದ 30,000 ಹಸಿ ಅರಿಸಿಣದ ಬೆಳೆಯನ್ನು ತಕ್ಕಮಟ್ಟಿಗೆ ನಿರೀಕ್ಷಿಸಬಹುದು. ಅತೀ ಸಾಮಾನ್ಯವಾದ ಇಳುವರಿಯಿಂದಲೂ ಶೇ. 20-25 ರಷ್ಟು ತೂಕವಿರುವ ತಾಜಾ ಗೆಡ್ಡೆಗಳನ್ನು ಪಡೆಯಬಹುದೆಂದು ರೈತರು ಹೇಳುತ್ತಾರೆ.

ಇತರೆ ತಳಿಗಳು : ಅರಿಸಿಣ ಬೆಳೆಯಲ್ಲಿ ಅಮಲಾಪುರಂ, ಸೇಲಂ, ರಾಜಾಪುರಿ, ಕಡಪಾ, ಸುದರ್ಶನ್, ಸುವರ್ಣ, ಸುರೋಮ್ ಮುಂತಾದವುಗಳು ಕಂಡುಬರುತ್ತವೆ.

ಅರಿಸಿನ ಬೆಳೆಯುವುದರ ಜೊತೆಗೆ ಮಿಶ್ರ ಬೆಳೆಯಾಗಿ ತೊಗರಿ, ಮೆಣಸಿನಕಾಯಿ, ಸುವರ್ಣಗೆಡ್ಡೆ, ಈರುಳ್ಳಿ, ಅವರೇಕಾಯಿಯನ್ನೂ ಬೆಳೆಯಬಹುದು. ವರ್ಷಪೂರ್ತಿ ಬೆಳೆಯಬಹುದಾದ ಈ ಬೆಳೆಗೆ ಕಾಲಕಾಲಕ್ಕೆ ಸರಿಯಾದ ನೀರು, ಗೊಬ್ಬರ ಹಾಕುತ್ತಾ ಮತ್ತು ಕಳೆ ತೆಗೆಯುತ್ತಾ ಬಂದರೆ ಹೆಚ್ಚು ಲಾಭದಾಯಕವಾಗುವುದರಲ್ಲಿ ಸಂದೇಹವಿಲ್ಲ. ಅರಿಸಿನದ ಬೆಳೆ ನೋಡಲು ತುಂಬಾ ಅಂದವಾಗಿ, ಹಸಿರೆಲೆಗಳಿಂದ ಕಂಗೊಳಿಸುವ ಪ್ರಾಕೃತಿಕ ಸೌಂದರ್ಯಹೊಂದಿರುತ್ತದೆ. ಬಹಳ ಸರಳವಾಗಿರುವ ಈ ಗಿಡದ ಎಲೆಗಳು ಗಾತ್ರದಲ್ಲಿ ದೊಡ್ಡದಾಗಿದ್ದು ನೆಲದಿಂದಲೇ ಗಟ್ಟಿಯಾಗಿರುತ್ತವೆ. ಇದರ ಹೂ ತಿಳಿ ಹಳದಿ ಬಣ್ಣವಾಗಿದ್ದು, ಎಲೆಗಳ ತೊಟ್ಟುಗಳಿಂದ ಮುಚ್ಚಿರುತ್ತವೆ.

ಅರಿಸಿನದ ಉಪಯೋಗಗಳು : ಅರಿಸಿಣ ಅದ್ಭುತವಾದ ರೋಗ ನಿವಾರಕ ಔಷಧಿ ಗುಣವನ್ನು ಹೊಂದಿದೆ. ದಾಸ್ತಾನು ಮಾಡಿರುವ ಧಾನ್ಯಗಳಿಗೆ ನುಸಿ ಪೀಡೆಗಳಿಂದ ರಕ್ಷಿಸಲು ಅವುಗಳಲ್ಲಿ ಅರಿಸಿನದ ಪುಡಿಯನ್ನು ಮಿಶ್ರಣ ಮಾಡುತ್ತಾರೆ.

ಒಂದು ಕೆ.ಜಿ. ಅನ್ನ ಮಾಡಿ ಅದಕ್ಕೆ 50 ಗ್ರಾಂ ಅರಿಸಿನದ ಪುಡಿಯನ್ನು ಮಿಶ್ರಣ ಮಾಡಿ ಇತರೇ ದವಸ - ಧಾನ್ಯ ಬೆಳೆದ ಭೂಮಿಯಲ್ಲಿ 10 ರಿಂದ 15 ಕಡೆಗಳಲ್ಲಿ ಸಣ್ಣ ಸಣ್ಣ ಪಾತ್ರೆಯಲ್ಲಿ ಉಂಡೆಗಳನ್ನು ಮಾಡಿಡಬೇಕು. (ವಾರಕ್ಕೆ ಒಂದೆರೆಡು ಬಾರಿ ಬೆಳಗ್ಗೆ - ಮಧ್ಯಾಹ್ನ) ಇದರಿಂದ ಹಳದಿ ಅನ್ನಕ್ಕೆ ಪಕ್ಷಿಗಳು ಆಕರ್ಷಿತವಾಗಿ ತಿನ್ನಲು ಬಂದು ದವಸ - ಧಾನ್ಯಗಳ ಎಲೆಗಳಲ್ಲಿರುವ ಸಣ್ಣ ಸಣ್ಣ ಹುಳುಗಳನ್ನು ಸಹ ತಿನ್ನುತ್ತವೆ. ಹೀಗೆ ಉಪದ್ರವೀ ಪೀಡೆಗಳಿಂದ ಇತರೇ ಸಸ್ಯಗಳನ್ನು ರಕ್ಷಿಸಬಹುದು.

ಕಾಯಿಕೊರಕಹುಳು, ಕೆಂಪು ಹಿಟ್ಟಿನ ತಿಗಣೆ, ಅಕ್ಕಮೂತಿಯ ದುಂಬಿ ಮುಂತಾದ ಕ್ರಿಮಿ, ಉಪದ್ರವ ಪೀಡೆಗಳನ್ನು ಅರಿಸಿನದ ಬಳಕೆಯಿಂದ ತಡೆಗಟ್ಟಬಹುದು.

ರಕ್ತ ಶುದ್ಧಿಕಾರಕವಾಗಿ, ಶಕ್ತಿವರ್ಧಕವಾಗಿ, ಗಾಯವನ್ನು ಹೋಗಲಾಡಿಸುವುದಕ್ಕಾಗಿ ಅರಿಸಿನವನ್ನು ಬಳಸಲಾಗುತ್ತದೆ. ತಾಜಾ ಅರಿಸಿನದ ಕೊಂಬಿನಿಂದ ತೆಗೆದ ರಸವನ್ನು ಚರ್ಮಕ್ಕೆ ಲೇಪನ ಮಾಡುವುದರಿಂದ ಚರ್ಮ ರೋಗ ನಿಯಂತ್ರಿಸಬಹುದು. ಊದಿಕೊಂಡ ಕೀಲುಗಳಿಗೆ ಸುಣ್ಣದೊಡನೆ ಬೆರೆಸಿ ಪೇಸ್ಟ್‌ಮಾಡಿ ಹಚ್ಚಿಕೊಳ್ಳಬಹುದು. ಬಾಯಿ ಹುಣ್ಣು, ಶೀತ, ಕೆಮ್ಮು, ಮಧುಮೇಹ ನಿವಾರಣೆಗೆ ಕಾಯಿಸಿದ ಹಾಲಿಗೆ ಅರಿಸಿನ ಪುಡಿಯನ್ನು ಬೆರೆಸಿ ಕುಡಿಯಬಹುದು.

ಕಣ್ಣು ಬೇನೆ (ಪಿಚ್ಚುಗಟ್ಟಿದ್ದರೆ, ಧೂಳು ಸೇರಿಕೊಂಡಿದ್ದರೆ, ಬಳಲಿಕೆಯಾಗಿದ್ದರೆ) ಇದ್ದರೆ ಅರಿಸಿನದ ಕಷಾಯದ ನೀರಿನಿಂದ ತೊಳೆಯಬೇಕು.

ದಿನನಿತ್ಯ ಅಡುಗೆಗಳಲ್ಲಿ ಅರಿಸಿನದ ಪುಡಿಯನ್ನು ಇತರೇ ಮಸಾಲೆ ಪುಡಿಯೊಂದಿಗೆ ಸೇವಿಸುವುದರಿಂದ ದೇಹದಲ್ಲಿ ಪ್ರತಿರೋಧ ಶಕ್ತಿ ಹೆಚ್ಚಾಗುತ್ತದೆ.

ಸಾಮಾನ್ಯವಾಗಿ ಸೋರೇಕಾಯಿ, ಮೆಣಸಿನಕಾಯಿ, ಬೆಂಡೆಕಾಯಿ, ಚವಳಿಕಾಯಿ ಇತ್ಯಾದಿ ತರಕಾರಿಗಳ ಬೆಳೆಯ ಬೂಸ್ಟ್ ರೋಗಕಾರಕಗಳನ್ನು ನಿಯಂತ್ರಿಸಲು ಅರಿಸಿನವನ್ನು ಬಳಸಲಾಗುತ್ತದೆ. ತರಕಾರಿ ಎಲೆಗಳ ಮೇಲೆ ಬೂಸ್ಟ ರೋಗವಿದ್ದರೆ, ಕಳಾಹೀನವಾಗಿದ್ದರೆ, ಕಂದು ಬಣ್ಣಕ್ಕೆ ತಿರುಗಿದ್ದರೆ ಪಿ.ಕೆ.ಜಿ. ಅರಿಸಿನ ಪುಡಿಯನ್ನು 8 ಕೆ.ಜಿ. ಬೂದಿಯೊಂದಿಗೆ ಮಿಶ್ರಣ ಮಾಡಿ ಬೆಳಗಿನ ಸಮಯದಲ್ಲಿ ಬೆಳೆಗಳ ಮೇಲೆ ಸಿಂಪಡಿಸಬೇಕು.

ಆಕರ

ಹಿರಿಯ ಸಹಾಯಕ ತೋಟಗಾರಿಕೆ ಇಲಾಖೆ, ಚಾಮರಾಜನಗರ.

ಪೀಡೆಗಳ ಹತೋಟಿಗಾಗಿ ಸಸ್ಯಗಳು : ಅನುವಾದ ; ಪಿ. ಶ್ರೀನಿವಾಸ, ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆಕ್ಷನ್ - ಬೆಂಗಳೂರು ಮುದ್ರಣ 2000.

ವಕ್ತೃ : ಶ್ರೀ ನಂದೀಶ್ - ವಯಸ್ಸು 43, ಸೋಮವಾರಪೇಟೆ, ಚಾಮರಾಜನಗರ.

ಆರ್. ಎಸ್. ಜೆ.

ಅಲಸಂದೆ ಇದು ಅಲ್ಪಾವಧಿಯ ದ್ವಿದಳ ಧಾನ್ಯ. ಇದರ ಮೂಲಸ್ಥಾನ ಆಫ್ರಿಕಾ. ಭಾರತದ ಮೂಲಕ ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಹರಡಿಕೊಂಡಿದೆ. ಕನ್ನಡದಲ್ಲಿ ಇದನ್ನು ತಡಗುಣಿ ಎಂದೂ ಗ್ರಾಮೀಣ ಭಾಗದಲ್ಲಿ 'ತಡ್ಣಿಕಾಳು' ಎಂತಲೂ ಕರೆಯುತ್ತಾರೆ. ತೆಲುಗಿನಲ್ಲಿ 'ಅಲಸಂದುಲು', ತಮಿಳಿನಲ್ಲಿ 'ತಟ್ಟಪ್ಪೈಯಿರು', ಮಲಯಾಳದಲ್ಲಿ 'ಮಾಂಪೈರು', ಹಿಂದಿಯಲ್ಲಿ 'ಲೋಬಿಯಾಬಡಾ' ಎಂದು ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು ಡೆಲಿಕೋಸ್ ಸಿಲಿಂಡ್ರಿಕಸ್ ಅಥವಾ ಡೆಲಿಕೋಸ್ ಸಿನೆನ್ಸಿಸ್.

ಅಲಸಂದೆ ದಕ್ಷಿಣ ಭಾರತದಲ್ಲಿ ಬಹು ಪ್ರಮುಖವಾದ ಬೆಳೆಯಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರಗಳಲ್ಲಿ ಇದು ಪ್ರಮುಖ ಆಹಾರ ಬೆಳೆ. ಸಾಮಾನ್ಯವಾಗಿ ಮುಂಗಾರು ಮಳೆಯನ್ನು ಅವಲಂಬಿಸಿ ಇದನ್ನು ಬಿತ್ತನೆ ಮಾಡುತ್ತಾರೆ. ಇದರ ಮೊಳಕೆಯನ್ನು ಮೈಸೂರು ಗ್ರಾಮೀಣ ಪ್ರಾಂತ್ಯದಲ್ಲಿ 'ಸಾಲು' ಎಂದೂ ಕರೆಯುತ್ತಾರೆ. 'ಸಾಲು ಹುಟ್ಟಿದೆ' ಎಂದು ಬಳಕೆಯಲ್ಲಿದೆ. ಮುಂಗಾರು ಮಳೆಗಳು ಪುಷ್ಕಳವಾಗಿ ಬೀಳುವ ಭಾಗಗಳಲ್ಲಿ ಹೊಲಗಳಲ್ಲಿ ಬಿತ್ತಿ, ಗಿಡಗಳು ಹೂ ಬಂದಾಗ ಅದನ್ನು ಉತ್ತು ಗೊಬ್ಬರವನ್ನಾಗಿ ಪರಿವರ್ತಿಸುವ ಕ್ರಮವಿದೆ.

ಅಲಸಂದೆಯನ್ನು ಮುಖ್ಯವಾಗಿ ಖುಷ್ಕಿ ಬೆಳೆಯಾಗಿ ಬೆಳೆಯುತ್ತಾರೆ. ವ್ಯವಸಾಯ ಕ್ರಮ, ಬೀಜವರಿ ಬಿತ್ತುವ ಮತ್ತು ಕೊಯ್ಲು ಒಕ್ಕಣೆ ಮಾಡುವ ಕ್ರಮ ಹೆಸರು ಕಾಳು, ಉದ್ದುಗಳ ಹಾಗೆಯೆ. ಹೆಸರು ಬೆಳೆಗೆ ಸರಿಹೊಂದುವ ಹವಾಗುಣ, ಭೂಗುಣ, ಉಷ್ಣಾಂಶ ಮೊದಲಾದವುಗಳು ಅಲಸಂದೆ ಬೆಳೆಗೂ ಸರಿಹೋಗುತ್ತದೆ.

ಅಲಸಂದೆಯಲ್ಲಿ ಎರಡು ಜಾತಿಗಳಿವೆ. ಒಂದು ದೀರ್ಘಕಾಲ ಬೆಳೆಯುವ ದಪ್ಪಕಾಳಿನ ಜಾತಿ. ಮತ್ತೊಂದು ಅಲ್ಪಕಾಲದ ಬೆಳೆಯ ಸಣ್ಣಕಾಳಿನ ಜಾತಿ. ಇದು ಹಿಂಗಾರಿನ ಬೆಳೆ. ಕಾಳಿಗಾಗಿಯೂ ಸ್ವಲ್ಪಮಟ್ಟಿಗೆ ಮೇವಿಗಾಗಿಯೂ ಹೆಚ್ಚಾಗಿ ಗೊಬ್ಬರಕ್ಕಾಗಿಯು ಅಲಸಂದೆ ಬೆಳೆಯುತ್ತಾರೆ.

ಸ್ವಲ್ಪ ಒತ್ತಾಗಿ ಬಿತ್ತಿ ಬೆಳೆದರೆ ಹೊಲಗದ್ದೆಗಳಲ್ಲಿ ಕಳೆಯನ್ನು ನಿಯಂತ್ರಿಸಬಹುದು. ಅಲಸಂದೆಯನ್ನು ಉಷ್ಣವಲಯ ಮತ್ತು ಸಮಶೀತೋಷ್ಣವಲಯದ ಎಲ್ಲಾ ವಿಧವಾದ ಹವಾಗುಣಗಳಲ್ಲಿಯೂ ಎಲ್ಲ ವಿಧವಾದ ಮಣ್ಣುಗಳಲ್ಲಿಯೂ ನೆರಳಿರುವ ಪ್ರದೇಶದಲ್ಲಿಯೂ ಬೆಳೆಯಬಹುದು. ಇದಕ್ಕೆ ಹೆಚ್ಚಿನ ತೇವಾಂಶ ಹಾಗೂ ಉಷ್ಣಹವಾಗುಣವು ಸರಿಹೊಂದುವುದಿಲ್ಲ.



ಉತ್ತಮ ತಳಿಗಳು :

1. ಎನ್.ಪಿ. (ಐ.ಎಲ್.) 397
2. ಎನ್.ಪಿ (ಐ.ಎಲ್.) 585
3. ಪಂಜಾಬ್ ಟೈಪ್ - 1
4. ಹೈಬ್ರಿಡ್ - 2 ಮತ್ತು ಯು.ಪಿ.ಟೈಪ್ - 2

ಇವೆಲ್ಲ ತಳಿಗಳಲ್ಲಿಯೂ ಬಿತ್ತನೆ ಮಾಡಿದ 60-70 ದಿವಸಗಳಲ್ಲಿ ಸೊಪ್ಪು ಕೊಯ್ಲಿಗೆ ಸಿದ್ಧವಾಗುತ್ತದೆ.

ಎರಡು ಮೂರು ಬಾರಿ ಉಳುಮೆ ಮಾಡಿ ಹಲುಬೆ ಉಪಯೋಗಿಸಿ ಭೂಮಿ ಸಿದ್ಧಪಡಿಸಿದರೆ ಸಾಕು, ಇದೇ ಸಮಯದಲ್ಲಿ ಎಕರೆಗೆ 18 ರಿಂದ 20 ಗಾಡಿ ಕೊಟ್ಟಿಗೆ ಗೊಬ್ಬರ, 20 ಕೆ.ಜಿ. ರಂಜಕ ಮತ್ತು 10 ಕೆ.ಜಿ. ಸಾರಜನಕವನ್ನು ಒದಗಿಸುವ ರಸಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಬೇಕು.

ಬೆಳೆ ಮಾಡಲು ಮೇ/ಜೂನ್ ತಿಂಗಳುಗಳು ಸರಿಯಾದ ಕಾಲ. 18 ಅಂಗುಲದ ಸಾಲುಗಳಲ್ಲಿ 3-4 ಅಂಗುಲ ಅಂತರದಲ್ಲಿ ಬೀಜ ಬಿತ್ತಿ ಬೆಳೆದರೆ ಹೆಚ್ಚಿನ ಇಳುವರಿ ಪಡೆಯಬಹುದು. ಎಕರೆಗೆ 8 ರಿಂದ 10 ಟನ್ ಅಲಸಂದೆ ಸೊಪ್ಪಿನ ಮೇವನ್ನು ಪಡೆಯಬಹುದು. ಇದು ಹೆಚ್ಚು ಪ್ರೊಟೀನ್ ಮತ್ತು ಪೋಷಕಾಂಶಗಳನ್ನು ಹೊಂದಿದೆ.

ಕೆ.ಎಸ್.

ಅವರೆ ಸಸ್ಯ ವಿಜ್ಞಾನದಲ್ಲಿ ಇದಕ್ಕೆ ದಾಲಿಖಾಸ್ ಲ್ಯಾಬ್‌ಲ್ಯಾಬ್ ಎನ್ನುವರು. ಅವರೆಯನ್ನು ಮಿಶ್ರ ಬೆಳೆಯಾಗಿಯೂ ಕೆಲವೆಡೆಗಳಲ್ಲಿ ಮುಖ್ಯ ಬೆಳೆಯಾಗಿ ಬೆಳೆಯುವುದುಂಟು. ರಾಗಿ, ಜೋಳ ಬೆಳೆಯುವ ಭೂಗುಣವೇ ಅವರೆಗೂ ಹೊಂದುತ್ತದೆ. ಕರ್ನಾಟಕದ ಬಯಲು ಸೀಮೆಗಳಲ್ಲಿ, ತಮಿಳುನಾಡಿನ ಸೇಲಂ, ಕೊಯಮುತ್ತೂರು, ದಕ್ಷಿಣ ಆರ್ಕಾಟ್ ಜಿಲ್ಲೆಗಳಲ್ಲಿ, ಆಂಧ್ರದ ಅನಂತಪುರ, ಚಿತ್ತೂರು ಮತ್ತು ಕಡಪ ಜಿಲ್ಲೆಗಳಲ್ಲಿ ಅವರೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇದನ್ನು ತೆಲುಗಿನಲ್ಲಿ 'ಅನುಮು' ಅಥವಾ 'ಅನುಪ' ಎಂದೂ, ತಮಿಳಿನಲ್ಲಿ 'ಮೊಚ್ಚಕಾಯಿ', ಮಲಯಾಳಂ ಭಾಷೆಯಲ್ಲಿ 'ಮೊಚ್ಚಕೊಟ್ಟಕ್ಕಾಯಿ', ತುಳುವಿನಲ್ಲಿ 'ಅಬರೆ', ಒರಿಯಾ ಭಾಷೆಯಲ್ಲಿ 'ಬೆಯೋ' ಎಂತಲೂ ಕರೆಯುತ್ತಾರೆ.



ಅವರೆಯನ್ನು ಮಿಶ್ರ ಬೆಳೆಯಾಗಿಯೇ ಹೆಚ್ಚಾಗಿ ಬೆಳೆಯುವುದರಿಂದ ಪ್ರತ್ಯೇಕವಾದ ವ್ಯವಸಾಯ ಮಾಡುವ, ಗೊಬ್ಬರ ಕೊಡುವ ಅಗತ್ಯ ಕಂಡುಬರುವುದಿಲ್ಲ. ಸಾಲುಗಳಲ್ಲಿ ಬಿತ್ತನೆ ಮಾಡುವ ಕ್ರಿಯೆ ಅವರೆಗಾಗಿ ಮಾಡಬೇಕಾಗುತ್ತದೆ. ಉಳಿದಂತೆ ಇದಕ್ಕಾಗಿ ಹೆಚ್ಚಿನ ಗಮನಕೊಡಬೇಕಾಗಿಲ್ಲ. ರಾಗಿ ಬೆಳೆದ ಬಳಿಕ ಅವರೆ ಗಿಡ ಫಸಲು ಕೊಡಲಾರಂಭಿಸುತ್ತದೆ. ಹಸಿಕಾಯಿಯನ್ನು ಆಹಾರ ಪದಾರ್ಥವಾಗಿ ಬಳಸುವುದುಂಟು. ಒಣಗಿಸಿ ಕಾಳು ಮಾಡಿಕೊಂಡು ವರ್ಷವಿಡೀ ಬಳಸುವುದುಂಟು. ಹಸಿ ಅವರೆ ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳ ತನಕ ದೊರೆಯುತ್ತದೆ. ಇಡ್ಲಿ, ದೋಸೆ, ಬಾತ್, ಉಪ್ಪಿಟ್ಟು ಇತ್ಯಾದಿ ತಿಂಡಿಗಳಿಗೆ ಬಳಸುತ್ತಾರೆ.

ಅವರೆ ಹೂ ಬಿಳಿ ಅಥವಾ ಊದಾ ಬಣ್ಣದಿಂದ ಕೂಡಿರುತ್ತದೆ. ಮಿಶ್ರ ಬೆಳೆಯಾದರೆ ಎಕರೆಯೊಂದಕ್ಕೆ 3-4 ಸೇರು ಬೀಜವನ್ನು, ಪ್ರತ್ಯೇಕ ಬೆಳೆಯಾದರೆ ಎಕರೆಯೊಂದಕ್ಕೆ 15-20 ಸೇರು ಬಿತ್ತಬೇಕು. ಸಾಲುಗಳಲ್ಲಿ ಬೆಳೆದ ಬೆಳೆಯಿಂದ ಎಕರೆಗೆ 100-150 ಸೇರು ಒಣಕಾಳನ್ನು ಮತ್ತು ಪೂರ್ಣ ಬೆಳೆಯಿಂದ ಎಕರೆಯೊಂದಕ್ಕೆ 300-400 ಸೇರು ಒಣಕಾಳನ್ನು ಪಡೆಯಬಹುದು. ಅವರೆಗಿಡ ಬಳ್ಳಿಯಂತೆ ಹಬ್ಬುವುದರಿಂದ ಕಳೆಯ ಬಗ್ಗೆ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಕಳೆ ಬಲಿತು ಅದರ ಬೀಜ ಬಿತ್ತನೆಗೊಂಡು ಮುಂದಿನ ಬೆಳೆಗೆ ತೊಂದರೆಯಾಗುತ್ತದೆ.

ಚಪ್ಪರದವರೆ : ಫ್ಯಾಬೇಸಿ ಕುಟುಂಬಕ್ಕೆ ಸೇರಿದ ಈ ಅವರೆಯನ್ನು ಸಸ್ಯ ವಿಜ್ಞಾನದ ಪರಿಭಾಷೆಯಲ್ಲಿ ದಾಲಿಖಾಸ್ ಲ್ಯಾಬ್‌ಲ್ಯಾಬ್ ವರ್ ಲಿಗ್ನೋಸಾಸ್ ಎಂದು ಕರೆಯುತ್ತಾರೆ. ಇದು ಭಾರತದಲ್ಲೇ ಹುಟ್ಟಿ ಬೆಳೆದ ದೇಶೀ ತರಕಾರಿ. ಈ ಬೆಳೆಗೆ ಚಪ್ಪರದವರೆ ಎಂದು ಹೆಸರು ಬರಲು ಕಾರಣ ಅದನ್ನು ಹಬ್ಬಿಸುವಂತಹ ಚಪ್ಪರದ ಆಸರೆ. ಇದರ ಎಳೆಕಾಯಿ ಹಾಗೂ ಬೀಜ ಉತ್ತಮ ತರಕಾರಿ ಎನಿಸಿವೆ. ಭಾರತದಲ್ಲೇ ಅಲ್ಲದೆ ಚೀನಾ, ತೈವಾನ್, ಜಾವಾ, ಮಲಯ, ಹಾಂಕಾಂಗ್ ಮುಂತಾದ ದೇಶಗಳಲ್ಲಿ ಬೆಳೆಸುತ್ತಾರೆ.

ಹವಾಗುಣ : ಎಂತಹ ಭೂಮಿಯಲ್ಲಾದರೂ ಇದನ್ನು ಬೆಳೆಯಬಹುದು. ಆದರೆ ನೀರು ನಿಲ್ಲಬಾರದು. ಒಳ ಪದರಗಳಲ್ಲಿ ಗೊರಜಿಲ್ಲದ ಮರಳು ಮಿಶ್ರಿತ ಕೆಂಪುಗೋಡುಮಣ್ಣು ಅತ್ಯುತ್ತಮ. ಹೆಚ್ಚು ಬಿಸಿಲಿನಿಂದ ಕೂಡಿದ ಹವೆ ಒಳ್ಳೆಯದು. ಬಳ್ಳಿಯ ಬೆಳವಣಿಗೆ ಮಳೆಗಾಲದಲ್ಲಿ ಹೆಚ್ಚಿದ್ದರೆ ಚಳಿಗಾಲದಲ್ಲಿ ಕಡಿಮೆ ಇರುತ್ತದೆ. ಇದು ಉಷ್ಣವಲಯದ ಬೆಳೆಯಾಗಿರುವುದರಿಂದ ಅಧಿಕ ಮಳೆಯನ್ನು ತಡೆದುಕೊಳ್ಳಲಾರದು. ಈ ಬೆಳೆಯನ್ನು ಬಿತ್ತಲು ಜುಲೈ-ಆಗಸ್ಟ್ ತಿಂಗಳು ಉತ್ತಮ.

ಇದರಲ್ಲಿ ಅನೇಕ ಬಗೆಗಳಿದ್ದರೂ ನಿರ್ದಿಷ್ಟವಾದ ತಳಿಗಳು ಬೇಸಾಯದಲ್ಲಿ ಇಲ್ಲ. ಕಾಯಿಗಳ ಬಣ್ಣ, ಆಕಾರದ ಮೇಲೆ ಈ ರೀತಿ ವಿಂಗಡಿಸಬಹುದು. ಬಣ್ಣಗಳಲ್ಲಿ ಹಸುರು, ಬಿಳಿಮಿಶ್ರಿತ ಹಸುರು ಮತ್ತು ಬಿಳಿ ಹಳದಿ ವಿಧಗಳು ಕಂಡುಬರುತ್ತವೆ., ಕೆಲವು ನೀಳವಾದ ಮತ್ತು ಉದ್ದವಾದ ಕಾಯಿಗಳನ್ನು ಹೊಂದಿದ್ದರೆ ಮತ್ತೆ ಕೆಲವು ಕುಡುಗೋಲಿನಂತೆ ಬಾಗಿರುತ್ತವೆ. ಭಾರತದಲ್ಲಿ ಹೆಚ್ಚು ಬೆಳಕು ಮತ್ತು ಬಿಸಿಲಿನ ಅಗತ್ಯವಿರುವ ವಿಧಗಳೂ ಇವೆ.

ಬಿತ್ತನೆ ಮತ್ತು ನಾಟಿ : ಸಾಮಾನ್ಯವಾಗಿ ಚಪ್ಪರದವರೆಯನ್ನು ಬೀಜ್ನ ಬಿತ್ತಿಯೇ ಬೆಳೆಸುತ್ತಾರೆ. ಪ್ರತಿ ಎಕರೆಗೆ ಬಿತ್ತಲು ಉತ್ತಮ ಗುಣಮಟ್ಟದ ಬೀಜ ಒಂದೂವರೆ ಕಿ.ಗ್ರಾಂ.ನಿಂದ ಎರಡು ಕಿ.ಗ್ರಾಂ.ವರೆಗೆ ಬೇಕಾಗುತ್ತದೆ. ಚೆನ್ನಾಗಿ ಬೆಳೆದು ಒಣಗಿದ ಕಾಯಿಗಳಿಂದ ಬೀಜವನ್ನು ಆರಿಸಿಕೊಳ್ಳಬೇಕು. ಭೂಮಿಯನ್ನು ಆಳವಾಗಿ ಎರಡರಿಂದ ಮೂರುಬಾರಿ ಉತ್ತು ಸಮಮಾಡಿ 10 ಅಡಿ ಅಂತರದಲ್ಲಿ 2 ಅಡಿ ಗಾತ್ರದ ಗುಂಡಿಗಳನ್ನು ತೆಗೆದು ಎಕರೆಗೆ 4 ರಿಂದ 5 ಟನ್ ಕೊಟ್ಟಿಗೆ ಗೊಬ್ಬರದ ಜೊತೆಗೆ ಮೇಲ್ಮಣ್ಣು ಸೇರಿಸಿ ಪಾತಿ ತುಂಬಿ ನೀರು ಹಾಯಿಸಬೇಕು. ಪ್ರತಿ ಗುಂಡಿಗೆ 3-4 ಕಾಳು ಬಿತ್ತಬೇಕು. ಬಿತ್ತಿದ ಬೀಜಗಳು 4-5 ದಿನಗಳಲ್ಲಿ ಮೊಳೆಯುತ್ತವೆ.

ನೀರಾವರಿ : ಮಣ್ಣು ಮತ್ತು ಹವಾಗುಣವನ್ನು ಅನುಸರಿಸಿ ನೀರನ್ನು ಒದಗಿಸಬೇಕು. ಮಳೆ ಇಲ್ಲದ ಸಮಯದಲ್ಲಿ ಮತ್ತು ಬೇಸಗೆಗಳಲ್ಲಿ ಹೆಚ್ಚು ನೀರು ಕೊಟ್ಟರೆ ಮಳೆಗಾಲದಲ್ಲಿ ಕಡಿಮೆ ನೀರು ಸಾಕು. ಈ ಬೆಳೆಗೆ ತಿಪ್ಪೆಗೊಬ್ಬರವನ್ನು ಹೆಚ್ಚು ಬಳಸುವರು. ರಾಸಾಯನಿಕ ಗೊಬ್ಬರ ಕೊಡುವ ರೂಢಿ ಕಡಿಮೆ. ಏಕೆಂದರೆ ಇದು ತನ್ನ ಬೇರು ಗಂಟುಗಳಿಂದ ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಗುಣವನ್ನು ಹೊಂದಿದೆ. ಬಳ್ಳಿಗಳನ್ನು ಆರು ಅಡಿ ಎತ್ತರದಲ್ಲಿರುವ ತಂತಿಯ ಜಾಲರಿ ಮೇಲೆ ಅಥವಾ ಮರಗಳ ಮೇಲೆ, ಬೇಲಿಗಳ ಮೇಲೆ ಹಬ್ಬಿಸುತ್ತಾರೆ.

ಸಸ್ಯ ಸಂರಕ್ಷಣೆ : ಚಪ್ಪರದವರೆಗೆ ಸಾಮಾನ್ಯವಾಗಿ ಸೊರಗು ರೋಗ ಅಥವಾ ಕಪ್ಪುಬಣ್ಣದ ಹೇನು ಉಂಟಾಗುತ್ತದೆ. ಇಂಥ ಸಂದರ್ಭದಲ್ಲಿ ಪಂಚಗವ್ಯವನ್ನು ಗೋಮೂತ್ರ, ಗೋಮಯ, ಕ್ಷಾರ, ದದಿ, ಘೃತ. ನೀರಿನಲ್ಲಿ ಕಲಸಿ ಸಿಂಪಡಿಸಬೇಕು ಮತ್ತು ಅಂತಹ ರೋಗಯುಕ್ತ ಬಳ್ಳಿಗಳನ್ನು ಬೇರು ಸಹಿತ ಕಿತ್ತುನಾಶಪಡಿಸಬೇಕು.

ಇಳುವರಿ : ಚಪ್ಪರದವರೆ ಹಸಿರು ತರಕಾರಿ, ಏಕೆಂದರೆ ಇದು ಹಸುರು ಕಾಯಿ ಇರುವಾಗಲೇ (ಕಾಯಿಯಲ್ಲಿ ನಾರು ಮೂಡುವುದಕ್ಕೆ ಮೊದಲೇ) ಮತ್ತು ಹಸಿರುಬೀಜ ಇರುವಾಗಲೇ ಬಳಸುತ್ತಾರೆ. ಕೊಯ್ಲುಗಳನ್ನು 3-4 ದಿನಗಳಿಗೊಮ್ಮೆ ಮಾಡಬಹುದು. ಈ ಸಸ್ಯದಿಂದ ಸು. 4 ವರ್ಷದವರೆಗೆ ಇಳುವರಿ ಪಡೆಯಲು ಸಾಧ್ಯ. ಪ್ರತಿ ಗಿಡದಿಂಂದ ಕನಿಷ್ಠ 20-25 ಕಿ.ಗ್ರಾಂ. ಕಾಯಿ ಕೊಡುತ್ತದೆ.

ಕಡುಕೆಂಪು ಹಬ್ಬವರೆ (ರಮ್ನರ್ ಬೀನ್) : ಫ್ಯಾಬೇಸೀ ಕುಟುಂಬಕ್ಕೆ ಸೇರಿದ ಈ ಹಬ್ಬವರೆಯ ವೈಜ್ಞಾನಿಕ ಹೆಸರು ಫ್ಯಾಸಿಯೋಲಸ್ ಕಾಕ್ಸೀನಿಯಸ್. ಮೆಕ್ಸಿಕೋದಲ್ಲಿ ಹುಟ್ಟಿ ಬೆಳೆದ ಈ ಅವರೆ ಮೆಕ್ಸಿಕೋ, ಕೋಸ್ಟರಿಕಾ, ಪನಾಮ, ಕೊಲಂಬಿಯಾ ಮತ್ತು ಇತರೆ ದೇಶಗಳಲ್ಲಿ ಬೇಸಾಯದಲ್ಲಿದೆ. ಎಳೆಯ ಕಾಯಿಗಳ ಅಡುಗೆ ಹೆಚ್ಚು ರುಚಿಕರ. ಇದರಿಂದ ಸಾರು, ಪಲ್ಯ ಮುಂತಾದವನ್ನು ಮಾಡುತ್ತಾರೆ. ಹಸಿಯಾಗಿಯೂ ಈ ತರಕಾರಿಯನ್ನು ತಿನ್ನಬಹುದು.

ಹವಾಗುಣ : ಇದನ್ನು ಯಾವ ಬಗೆಯ ಭೂಮಿಯಲ್ಲಾದರೂ ಬೆಳೆಯಬಹುದು. ನೀರು ಬಸಿಯುವ ಮರಳು ಮಿಶ್ರಿತ ಗೋಡುಮಣ್ಣು ಅತ್ಯುತ್ತಮ. ಆರ್ದ್ರ ವಾತಾವರಣದಲ್ಲಿ ಹೆಚ್ಚು ಇಳುವರಿ ನೀಡುತ್ತದೆ. ಕೆಳಮಟ್ಟದ ಪ್ರದೇಶಗಳಲ್ಲಿ ಇಳುವರಿ ಕಡಿಮೆ ಅಧಿಕ ಪ್ರಮಾಣದ ಮಂಜು ಒಳ್ಳೆಯದಲ್ಲ.

ನಾಟಿ : ಭೂಮಿಯನ್ನು 2-3 ಬಾರಿ ಆಳವಾಗಿ ಉತ್ತು ಎಕರೆಗೆ 4-5 ಟನ್ ತಿಪ್ಪೆಗೊಬ್ಬರವನ್ನು ಸೇರಿಸಿ ಮಿಶ್ರಮಾಡಬೇಕು. ಆರು ಅಡಿ ಅಂತರದ ಸಾಲುಗಳಲ್ಲಿ ಎಕರೆಗೆ 2-3 ಕಿ.ಗ್ರಾಂ. ಬೀಜವನ್ನು ಬಿತ್ತಿದರೆ ಈ ಕಾಳುಗಳು ಒಂದು ವಾರದಲ್ಲಿ ಬೆಳೆಯುತ್ತವೆ.

ನೀರಾವರಿ : ಮಣ್ಣು ಮತ್ತು ಹವಾಗುಣಕ್ಕೆ ಅನುಗುಣವಾಗಿ 5-6 ದಿನಗಳಿಗೊಮ್ಮೆ ನೀರು ಕೊಡಬಹುದು. ನೀರಿನ ಕೊರತೆಯನ್ನು ಇದು ಸ್ವಲ್ಪ ಮಟ್ಟಿಗೆ ಸಹಿಸಿಕೊಳ್ಳಬಲ್ಲದು. 6 ಅಡಿ ಎತ್ತರದಲ್ಲಿ ರಚಿಸಿದ ತಂತಿ ಜಾಲರಿಯ ಮೇಲೆ ಹಬ್ಬಿಸಿದರೆ ಇಳುವರಿ ಉತ್ತಮ. ಈ ಉದ್ದೇಶಕ್ಕೆ ಇನ್ನಿತರ ಆಧಾರಗಳನ್ನು ಬಳಸುವುದುಂಟು. ಗಿಡ ಚೆನ್ನಾಗಿ ಬೆಳೆದ ಮೇಲೆ ಸಾಲುಗಳನ್ನು ಅಗೆದು ಕಳೆ ನಿರ್ಮೂಲನೆ ಮಾಡಬೇಕು.

ಚಪ್ಪರದವರೆಗೆ ಉಂಟಾಗುವ ರೋಗಗಳೇ ಹಬ್ಬವರೆಗೂ ಉಂಟಾಗುತ್ತದೆ.

ಇಳುವರಿ : ಬಿತ್ತಿದ ನಂತರ ಸು. ಮೂರು ವರ್ಷಗಳವರೆಗೆ ಈ ಬಳ್ಳಿ ಸತತವಾಗಿ ಇಳುವರಿ ನೀಡುತ್ತಿರುತ್ತದೆ. ಪ್ರತಿಯೊಂದು ಎಕರೆಯಿಂದ ಸು. 4 ಟನ್ ಇಳುವರಿ ಪಡೆಯಬಹುದು.

ರೆಕ್ಕೆ ಅವರೆ (ವಿಂಗ್ ಬೀನ್) : ರೆಕ್ಕೆ ಅವರೆಯೂ ಫ್ಯಾಬೇಸೀ (Fabaceae) ಕುಟುಂಬಕ್ಕೆ ಸೇರಿದ್ದು ಸೋಫೋಕಾರ್ಪಸ್ ಟೆಟ್ರಾಗೋನೋಲೋಬಸ್ ಎಂಬ ವೈಜ್ಞಾನಿಕ ಹೆಸರು ಇದಕ್ಕಿದೆ.

ಪ್ರಪಂಚದ ಆಹಾರ ಬೆಳೆಗಳಲ್ಲಿ ಅತಿಮುಖ್ಯವಾದ ಸ್ಥಾನ ಹೊಂದಿರುವ ರೆಕ್ಕೆ ಅವರೆಯ ಮೂಲಸ್ಥಾನ ಯಾವುದೆಂದು ಸರಿಯಾಗಿ ತಿಳಿದುಬಂದಿಲ್ಲ. ಬರ್ಕಿಲ್ (1935) ಅವರು 'ಮಡಗಾಸ್ಕರ್' ಅಥವಾ 'ಮಾರಿಷಸ್' ಇರಬಹುದೆಂದು ಊಹಿಸಿದ್ದಾರೆ. ಇದು ಸಹ ಬಳ್ಳಿಯಂತೆ ಹಬ್ಬುವ ಗುಣವನ್ನು ಹೊಂದಿದ್ದು ಇದರ ಬೇರು ಹೆಚ್ಚಿನ ಸಸಾರಜನಕದ ಅಂಶವನ್ನು ಹೀರುತ್ತದೆ. ಹೆಚ್ಚಾಗಿ ಎಲ್ಲರ ಮನೆಯಂಗಳಗಳಲ್ಲಿ ಕಂಡುಬರುತ್ತದೆ. ಕಾಯಿಗಳಿಗೆ ರೆಕ್ಕೆಗಳು ಮತ್ತು ನಾಲ್ಕು ಮುಖಗಳಿರುವುದರಿಂದ ಇದಕ್ಕೆ 'ರೆಕ್ಕೆ ಅವರೆ' ಎಂಬ ಹೆಸರು ಬಂದಿದೆ. ಈ ಗಿಡದ ಪ್ರತಿಯೊಂದು ಭಾಗವೂ ಉಪಯುಕ್ತವಾದುದು. ಕುಡಿ, ಚಿಗುರು ಎಲೆ, ಮೊಗ್ಗು, ಹೂ, ಕಾಯಿ ಮತ್ತು ಬೇರು ಎಲ್ಲವೂ ತರಕಾರಿಯೇ. ಕೆಲವು ಕಡೆ ಕೆಂಚಿಕಾಯಿ ಎಂದೂ ಕರೆಯುತ್ತಾರೆ.

ಹವಾಗುಣ : ಉಷ್ಣವಲಯದ ತರಕಾರಿ ಇದಾಗಿರುವುದರಿಂದ ಬಿಸಿಯಿಂದ ಕೂಡಿದ ಆರ್ದ್ರ ಹವಾಗುಣ ಇದಕ್ಕೆ ಉತ್ತಮ. ತಗ್ಗು ಪ್ರದೇಶಗಳಿಂದ ಹಿಡಿದು ಅತಿ ಎತ್ತರದ ಪ್ರದೇಶದವರೆಗೆ ಈ ಬೆಳೆಯನ್ನು ಬೆಳೆಯಬಹುದು. ಮಳೆಗಾಲದ ಆರಂಭಕಾಲ ಈ ಬೀಜವನ್ನು ಬಿತ್ತಲು ಒಳ್ಳೆಯ ಸಮಯವಾಗಿದೆ. ಗೋಡು ಮಣ್ಣಿನ ಭೂಮಿ ಈ ಬೇಸಾಯಕ್ಕೆ ಅನುಕೂಲಕರವಾಗಿದ್ದು ಕಡಿಮೆ ಸಾರವಿರುವ ಮಣ್ಣಿನಲ್ಲೂ ಇದನ್ನು ಬೆಳೆಸಬಹುದು.

ಬಿತ್ತನೆ : ಸಸ್ಯಾಭಿವೃದ್ಧಿಯನ್ನು ಬೀಜದಿಂದಲೇ ಮಾಡುವುದು. ಕಾಳು ಗಡಸಾಗಿ ಇರುವುದರಿಂದ ಬಿತ್ತುವುದಕ್ಕೆ ಮುಂಚೆ ನೀರಿನಲ್ಲಿ ನೆನೆಸಬೇಕು. ಭೂಮಿಯನ್ನು ಕನಿಷ್ಠ ಪಕ್ಷ ಎರಡು ಬಾರಿ ಉಳುಮೆ ಮಾಡಿ ಅಗೆದು ಎಕರೆಗೆ 4-5 ಟನ್ ತಿಪ್ಪೆಗೊಬ್ಬರ ಸೇರಿಸಬೇಕು. ಬಳಿಕ ನಾಲ್ಕು ಅಡಿಗೆ ಒಂದರಂತೆ ಸಾಲುಗಳನ್ನು ಮಾಡಿ ಎರಡು ಅಡಿಗೊಂದರಂತೆ ಬೀಜ ಬಿತ್ತಬೇಕು. ಗೆಡ್ಡೆಗಳನ್ನು ಬೆಳೆಸಬೇಕಾದರೆ ಸಾಲುಗಳನ್ನು ಒಂದೂ ಕಾಲು ಅಡಿ ಅಂತರದಲ್ಲಿ ಮಾಡಿ ಒಂದೂಕಾಲು ಅಡಿ ಅಂತರದಲ್ಲೇ ಬೀಜಗಳನ್ನು ಬಿತ್ತಲು ಎಕರೆಗೆ 8 ಸೇರು ಬೇಕಾಗುತ್ತದೆ. ಬಿತ್ತಿದ ಬೀಜ ಮೊಳೆಯಲು 10-12 ದಿನಗಳು ಬೇಕು. ಇದಕ್ಕೆ ಫಲವತ್ತಾದ ಭೂಮಿ ಬೇಕೇಬೇಕೆಂದೇನೂ ಇಲ್ಲ.

ನೀರಾವರಿ : ರೆಕ್ಕೆ ಅವರೆಗೆ ಹೆಚ್ಚು ನೀರು ಒದಗಿಸುವುದರಿಂದ ಇಳುವರಿ ಹೆಚ್ಚಿಸಲು ಸಾಧ್ಯ. ಒಣಹವೆಯಲ್ಲಿ ವಾರಕ್ಕೆ ಎರಡು ಬಾರಿಯಾದರೂ ನೀರು ಕೊಡಲೇಬೇಕಾಗುತ್ತದೆ. ಗಿಡ ಬೆಳೆದು ಎತ್ತರವಾದಂತೆ ಬಳ್ಳಿಗಳಿಗೆ ಆಧಾರ ಒದಗಿಸಿದರೆ ಇಳುವರಿ ಉತ್ತಮವಾಗುತ್ತದೆ. 4 ಅಡಿ ಎತ್ತರದ ತಂತಿಜಾಲರಿಯ, ಚಪ್ಪರಗಳ ಮೇಲೆ ಹಬ್ಬಿಸಿದರೆ ಒಳ್ಳೆಯದು.

ಅವರೆ ಬೆಳೆದ ಭೂಮಿಯು ಹೆಚ್ಚು ಫಲವತ್ತಾಗುವುದರಿಂದ ಇನ್ನಿತರ ಲಾಭದಾಯಕ ತರಕಾರಿಗಳನ್ನು ಈ ಭೂಮಿಯಲ್ಲಿ ಬೆಳೆಯಬಹುದು. ಕೆಲವೊಮ್ಮೆ ಮಿಶ್ರ ಬೆಳೆಯಾಗಿ ಕಬ್ಬು, ಸಿಹಿಗೆಣಸು, ಸೊಪ್ಪು ತರಕಾರಿಗಳು ಮತ್ತು ಕೆಸುವಿನ ದಂಟುಗಳ ಮಧ್ಯೆ ಅವರೆಯನ್ನು ಬೆಳೆಯುವುದುಂಟು. ಗದ್ದೆಗಳ ಅಂಚುಗಳಲ್ಲಿ, ತೋಟಗಳ ಸುತ್ತಂಚಿನಲ್ಲಿ, ಬೇಲಿಗಳ ಪಕ್ಕದಲ್ಲಿ, ಕೈ ತೋಟಗಳಲ್ಲಿ ಅವರೆ ಬೆಳೆ ಬೆಳೆಯುತ್ತಾರೆ.

ರೋಗಗಳು : ಇದಕ್ಕೆ ಹಾನಿಪಡಿಸುವ ಕೀಟ ಮತ್ತು ರೋಗಗಳು ಕಡಿಮೆ. ಅಪರೂಪಕ್ಕೆ ಬೇರುಗಳಲ್ಲಿ ದುಂಡು ಜಂತುಹುಳುಗಳು ಹಾನಿಯನ್ನುಂಟುಮಾಡುತ್ತವೆ. ಇವುಗಳಿಂದ ತೊಂದರೆಗೀಡಾದ ಬಳ್ಳಿಗಳು ಬೆಳವಣಿಗೆ ಕುಂಠಿತವಾಗಿ ಬಿಳಿಚಿಕೊಳ್ಳುತ್ತವೆ. ಅಂತಹ ಬಳ್ಳಿಗಳನ್ನು ಬೇರು ಸಹಿತ ಕಿತ್ತು ನಾಶಪಡಿಸಬೇಕು.

ಇಳುವರಿ : ಇತರ ಅವರೆ ಕಾಯಿಯಂತೆ ಎಳೆಯ ಕಾಯಿಗಳನ್ನು ಕೊಯ್ಲು ಮಾಡಬೇಕು. ಬಿತ್ತನೆ ಮಾಡಿದ ಹತ್ತು ವಾರಗಳಲ್ಲಿ ಕೊಯ್ಲು ಮಾಡಬಹುದು. ಪರಾಗಸ್ಪರ್ಶವಾದ ಎರಡು ವಾರಗಳ ಬಳಿಕ ರಸಭರಿತ, ಶುಚಿಕರವಾದ ಎಳೆಯ ಕಾಯಿಗಳನ್ನು ಪಡೆಯಬಹುದು. ಮೂರು ವಾರಗಳ ಅನಂತರ ನಾರು ಹೆಚ್ಚಾಗುತ್ತದೆ. ಕಾಳಿಗೋಸ್ಕರವಾದರೆ ಆರುವಾರಗಳ ಬಳಿಕ ಕೊಯ್ಲು ಮಾಡಬಹುದು. ಗೆಡ್ಡೆಗಳನ್ನು ಪಡೆಯಬೇಕಾದರೆ 7-8 ತಿಂಗಳು ಆದ ಮೇಲೆ ಪಡೆಯಬಹುದು. ಆಗ ಗೆಡ್ಡೆಗಳು ಸಾಮಾನ್ಯವಾಗಿ 8-10 ಸೆಂ.ಮೀ. ಉದ್ದ ಮತ್ತು 2-4 ಸೆಂ.ಮೀ. ದಪ್ಪ ಇರುತ್ತವೆ. ಪ್ರತಿ ಎಕರೆಯಿಂದ 1-5 ಟನ್ ಎಳೆಕಾಯಿ ಅಥವಾ ಒಂದು ಟನ್ ಕಾಳು ಮತ್ತು ಒಂದು ಟನ್ ಗೆಡ್ಡೆ ಇಳುವರಿ ಪಡೆಯಲು ಸಾಧ್ಯ.

ತಳಿಗಳು : ಭಾರತದಲ್ಲಿ ಈ ಬೆಳೆಯ ತಳಿಗಳು ತುಂಬಾ ಕಡಿಮೆ. ದೊಡ್ಡಕಾಯಿ ಬಿಡುವಂತಹ ಮತ್ತು ಸಣ್ಣಕಾಯಿ ಬಿಡುವಂತಹ ಎರಡು ವರ್ಗಗಳಿವೆ. ವಿದೇಶಗಳಲ್ಲಿ ನೂರಕ್ಕಿಂತಲೂ ಹೆಚ್ಚು ತಳಿಗಳಿದ್ದು ಗೆಡ್ಡೆಗಳ ಗಾತ್ರ, ಕಾಯಿಯ ಆಕಾರ, ಕಾಳುಗಳ ಗಾತ್ರ, ಆಕಾರ ಮತ್ತು ಬಣ್ಣಗಳಲ್ಲಿ ವೈವಿಧ್ಯವಿದೆ.

ಉಪಯೋಗಗಳು : ಈ ಕಾಯಿಗಳು ಅಮೈನೋ ಆಮ್ಲಗಳನ್ನೊಳಗೊಂಡಿದ್ದು, ಚಳಿಗಾಲದಲ್ಲಿ ಶರೀರವನ್ನು ಶಾಖವಾಗಿಡುವ ಗುಣವನ್ನು ಹೊಂದಿದೆ. ಇದರ ಕಾಳನ್ನು ಸಿಪ್ಪೆಯೊಂದಿಗೆ ಉಪಯೋಗಿಸಿದರೆ ಮಲಬದ್ಧತೆ ಮತ್ತು ಹೊಟ್ಟೆ ಉಬ್ಬರ ಉಂಟಾಗುವುದಿಲ್ಲ. ಇದರ ಕಾಳಿನಿಂದ ಅನೇಕ ವಿಧದ ಅಡುಗೆಗಳನ್ನು ತಯಾರಿಸುತ್ತಾರೆ. ಇದರ ಸೇವನೆಯಿಂದ ಎದೆಹಾಲು ಮತ್ತು ರಕ್ತವೃದ್ಧಿಯಾಗುತ್ತದೆ.

ಕತ್ತಿ ಅವರೆ (ಸೋರ್ಡ್ ಬೀನ್) : ಫ್ಯಾಬೇಸೀ ಕುಟುಂಬಕ್ಕೆ ಸೇರಿದ ಕತ್ತಿ ಅವರೆಯನ್ನು ಸಸ್ಯವಿಜ್ಞಾನದ ಪರಿಭಾಷೆಯಲ್ಲಿ 'ಕೆನವಾಲಿಯಾಗ್ಲಾಡಿಯೇಟ' ಎಂದು ಕರೆಯುತ್ತಾರೆ.

ಬೃಹದಾಕಾರವಾಗಿ ಬೆಳೆಯುವ ಈ ಬಳ್ಳಿ ಏಷ್ಯಾ ಮತ್ತು ಆಫ್ರಿಕಾದ ಉಷ್ಣವಲಯದಲ್ಲಿ ಹೆಚ್ಚಾಗಿದೆ. ಇದನ್ನು ಶ್ರೀಲಂಕ, ಮಯನ್ಮಾರ್, ಚೀನಾ, ಆಫ್ರಿಕ, ಅಮೆರಿಕಗಳಲ್ಲಿ ಬೆಳೆಯುತ್ತಾರೆ. ಮನೆಯಂಗಳದಲ್ಲಿ, ಕೈ ತೋಟಗಳಲ್ಲಿ ಬೆಳೆಸಬಹುದಾದ ಸಸ್ಯ. ಇವುಗಳಲ್ಲಿ ನಾರು ಮತ್ತು ಸಾರಜನಕ ಹೆಚ್ಚಾಗಿರುತ್ತದೆ. ಕಾಳುಗಳಲ್ಲಿ ಆಮ್ಲದ ಪದಾರ್ಥ ಹೆಚ್ಚಾಗಿರುವುದರಿಂದ ತೊಳೆದು ತಿನ್ನುವುದು ಒಳ್ಳೆಯದು. ಇದರ ಎಲೆಗಳ ರಸ ಚರ್ಮವ್ಯಾಧಿಗೆ ಉಪಯುಕ್ತ ಔಷಧ. ತಲೆ ಹೊಟ್ಟು ನಿವಾರಣೆಗಾಗಿಯೂ ಈ ಸೊಪ್ಪನ್ನು ಅರೆದು ಹಚ್ಚುತ್ತಾರೆ. ಸ್ವಲ್ಪಮಟ್ಟಿನ ನೀರಿನ ಬರವನ್ನು ಎದುರಿಸಿ ಬೆಳೆಯಬಲ್ಲ ಶಕ್ತಿ ಇದಕ್ಕಿದ್ದರೂ

ಮಳೆಯಾಗುವ ಹಾಗೂ ತಗ್ಗು ಪ್ರದೇಶಗಳಲ್ಲಿ ಅಧಿಕ ಫಸಲನ್ನು ನೀಡುತ್ತದೆ.

ಬಿತ್ತನೆ : ಬೀಜಗಳಿಂದ ಇದು ಸಸ್ಯಾಭಿವೃದ್ಧಿಯಾಗುತ್ತದೆ. ಬೀಜಗಳು ಗಡುಸಾದ ಕವಚವನ್ನು ಹೊಂದಿರುವುದರಿಂದ ನೀರಿನಲ್ಲಿ 24 ತಾಸು ನೆನೆಸಿ ಬಿತ್ತಬೇಕು. ಬೆಳೆಯುವ ಪ್ರದೇಶವನ್ನು ಚೆನ್ನಾಗಿ ಉತ್ತು ಹದ ಮಾಡಿ 10-20 ಟನ್ ಕೊಟ್ಟಿಗೆ ಗೊಬ್ಬರ ಮಿಶ್ರಮಾಡಬೇಕು. ಎರಡು ಮೀಟರ್ ಅಂತರದ ಸಾಲುಗಳಲ್ಲಿ ಸಣ್ಣ ಪಾತಿಗಳನ್ನು ಮಾಡಿ ಪ್ರತಿಯೊಂದರಲ್ಲಿ 2-3 ಕಾಳುಗಳನ್ನು ಮುಂಗಾರಿನಲ್ಲಿ ಬಿತ್ತಿದರೆ ಒಳ್ಳೆಯದು. ಬಳ್ಳಿಗಳು 1½ ಅಡಿ ಎತ್ತರಕ್ಕ ಬೆಳೆದಾಗ ಬಿದಿರಿನ ಕೋಲುಗಳ ಆಸರೆ ನೀಡಿ ಅನಂತರ ತಂತಿಯ ಚಪ್ಪರದ ಮೇಲೆ ಹಬ್ಬಿಸಬೇಕು.

ನೀರಾವರಿ : ಈ ಬೆಳೆಯನ್ನು ಅನಾವೃಷ್ಟಿಯಲ್ಲೂ ಬೆಳೆಸಬಹುದು. ಒಣಹವೆ ಇರುವ ಸಮಯದಲ್ಲಿ 7-10 ದಿನಗಳಲ್ಲಿ ಸ್ವಲ್ಪ ನೀರು ಹರಿಸಿದರೆ ಸಾಕು. ಬಳ್ಳಿಗಳ ಬುಡದಲ್ಲಿ ತರಗೆಲೆ ಮುಂತಾದ ಹೊದಿಕೆ ಕೊಟ್ಟರೆ ತೇವಾಂಶ ಸಂರಕ್ಷಣೆ ಆಗುತ್ತದೆ. ಆಗಿಂದಾಗ್ಗೆ ಮಣ್ಣು ಸಡಿಲಿಸಿ, ಕಳೆ ಕಿತ್ತು ನೀರು ಒದಗಿಸುತ್ತಿದ್ದರೆ ಉತ್ತಮ ಇಳುವರಿ ದೊರೆಯುತ್ತದೆ.

ರೋಗಗಳು : ಈ ಗಿಡಗಳಿಗೂ ಇತರೆ ಗಿಡಗಳಿಗೆ ಬರುವಂಥ ಕೀಟಗಳು, ಹೇನುಗಳು ಮತ್ತು ಕಾಯಿಕೊಳೆಯುವ ರೋಗ ತಗಲುತ್ತದೆ. ಇದನ್ನು ತಡೆಯಲು, ಡಿ.ಡಿ.ಟಿ., ಬೂದಿ, ಸುಣ್ಣದ ಪುಡಿ, ಗಂಜಲ, ಬೇವಿನ ಸೊಪ್ಪಿನ ಪುಡಿ ಮುಂತಾದವನ್ನು ಎರಚುತ್ತಾರೆ.

ಇಳುವರಿ : ಎಳೆಯ ಕಾಯಿಗಳನ್ನು ತರಕಾರಿಯಾಗಿ ಬಳಸಲಾಗುವುದು. ಪ್ರತಿಯೊಂದು ಸಸ್ಯವೂ ಸು. 30-40 ಕಿ.ಗ್ರಾಂ. ಕಾಯಿಗಳನ್ನು ಬಿಡಬಲ್ಲದು. ಪ್ರತಿ ಎಕರೆಯಿಂದ ಸು. 5 ಟನ್ ತಾಜಾ ಅವರೆಕಾಯಿಯನ್ನು ಪಡೆಯಬಹುದು.

ಫ್ಯಾಬೇಸೀ ಕುಟುಂಬಕ್ಕೆ ಸೇರಿದ ಎಲ್ಲ ಬಗೆಯ ಅವರೆ ಬಳ್ಳಿಗಳನ್ನು ತಂತಿ ಜಾಲರಿ ಮೇಲೆ ಹಬ್ಬಿಸುವುದುಂಟು. ಮರಳು ಮಿಶ್ರಿತ ಗೋಡುಮಣ್ಣಿನಲ್ಲಿ ಅಥವಾ ಎಲ್ಲ ಬಗೆಯ ಮಣ್ಣಿನಲ್ಲಿ ಇವು ಬೆಳೆಯುತ್ತವೆ.

ಎನ್.ಆರ್.

ಅಶೋಕ ಇದರ ವೈಜ್ಞಾನಿಕ ಹೆಸರು ಸರಕ ಅಸೋಕ ಸರಕ ಇಂಡಿಕ್ ಜೊನೇಸಿಯ ಅಸೋಕ. ತಮಿಳಿನಲ್ಲಿ ಅಸೋಗಂ, ಅನಗಮ್, ತೆಲುಗಿನಲ್ಲಿ ಅಸೋಕಮು, ವಂಜಲಮು. ಮರಾಠಿಯಲ್ಲಿ ಜಸುಂಡಿ ಅಶೋಕ, ಮಲಯಾಳಂನಲ್ಲಿ ಹೇಮಪುಷ್ಪಂ, ಮಂಜುಲ- ಎಂದು ಕರೆಯುವರು.

ಫ್ಯಾಬೇಸಿ ಎಂಬ ದೊಡ್ಡ ಸಸ್ಯವರ್ಗದಲ್ಲಿ ಸಿಸಾಲ್ಪಿನಿ ಯೋಯಿಡೀ ಉಪವರ್ಗಕ್ಕೆ ಅಶೋಕ ವೃಕ್ಷ ಸೇರಿದೆ. ಮರಳು ಮಿಶ್ರಿತ ಮಣ್ಣಿನಲ್ಲಿ ಮತ್ತು ಕಪ್ಪು ಮಣ್ಣಿನಲ್ಲಿ ಇದನ್ನು ಬೆಳೆಸಲಾಗುತ್ತದೆ. ತೇವಾಂಶ ಕೂಡಿದ ಸ್ಥಳ ಇದಕ್ಕೆ ಯೋಗ್ಯ. ಉಷ್ಣತೆ ಜಾಸ್ತಿ ಇರುವಲ್ಲಿ ಇದು ಬೆಳೆಯಲು ಸಾಧ್ಯವಿಲ್ಲ. ಬೀಜದ ಮೂಲಕ ಮತ್ತು ಬಡ್ಡಿಂಗ್, ಗ್ರಾಫ್ಟಿಂಗ್, ಏರ್‌ಲೇಯರಿಂಗ್- ರೀತಿಯಿಂದ ಸಸಿಗಳನ್ನು ತಯಾರು ಮಾಡಬಹುದು.

ಬಿತ್ತನೆ : ಅಶೋಕ ಮರದ ಬೀಜಗಳನ್ನು ಆರಿಸಿಕೊಂಡು ಬೆಚ್ಚನೆಯ ನೀರು ಅಥವಾ ಗೋಮೂತ್ರದಲ್ಲಿ ನೆನೆಸಿ ಬಿತ್ತನೆ ಮಾಡುವುದು ಉತ್ತಮ. ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ, ಗೊಬ್ಬರ ಹಾಕಿ ಮಾಡಿ ಏರು ಮಡಿಗಳನ್ನು ಸಿದ್ಧಪಡಿಸಿಕೊಂಡಿರಬೇಕು. ಅದರಲ್ಲಿ ಕುಳಿಗಳನ್ನು ಮಾಡಿ 2-3 ಬೀಜಗಳನ್ನು ಬಿತ್ತಬೇಕು. ಬಿತ್ತುವ ಬೀಜ ಹೆಚ್ಚು ದಿನ ಸಂಗ್ರಹಿಸಿಟ್ಟುಕೊಂಡಿರಬಾರದು. ಹಳೆಯ ಬೀಜವಾದರೆ ಮೊಳಕೆ



ಯೊಡೆಯುವುದಿಲ್ಲ. ಸಸಿಗಳಿಗೆ ನೆರಳಿನ ರಕ್ಷಣೆ ಅಗತ್ಯ. ಆದರೆ ಸಸಿಯ ಬುಡದಲ್ಲಿ ನೀರು ನಿಲ್ಲಬಾರದು. ಕಳೆಯನ್ನು ಆಗಾಗ ತೆಗೆದು ಹಾಕಬೇಕು. ನೀರನ್ನು ಚೆನ್ನಾಗಿ ಹಾಯಿಸುತ್ತಿದ್ದರೆ ಆರು ತಿಂಗಳಿಗೆಲ್ಲಾ ಸಸಿಯನ್ನು ನಾಟಿ ಮಾಡಬಹುದು.

ಪಾಲಿಥಿನ್ ಚೀಲಗಳಲ್ಲೂ ಬೀಜ ಬಿತ್ತನೆ ಮಾಡಬಹುದು. ಮಣ್ಣು, ಮರಳು ಮತ್ತು ಸಾವಯವ ಗೊಬ್ಬರವನ್ನು ಸಮಪ್ರಮಾಣದಲ್ಲಿ ಬೆರೆಸಿ ಪಾಲಿಥಿನ್ ಚೀಲಗಳಲ್ಲಿ ಮುಕ್ಕಾಲು ಭಾಗ ತುಂಬಿಸಿಡಬೇಕು. ಅದಕ್ಕೆ ಬೀಜವನ್ನು ಹಾಕಿ, ಪ್ರತಿದಿನ ನೀರು ಕೊಡುತ್ತಿರಬೇಕು. ಅಲ್ಲಿಯೂ ಕಳೆ ಬರುತ್ತದೆ. ಅದನ್ನು ತೆಗೆದುಹಾಕಬೇಕು. ಹಿಂದೆಲ್ಲ ಯಾರು ಇದನ್ನು ಕೃಷಿ ಮಾಡುತ್ತಿರಲಿಲ್ಲ. ಅದು ಪ್ರಕೃತಿ ಸಹಜವಾಗಿಯೇ ಬೆಳೆಯುತ್ತಿತ್ತು. ಇಂದು ಗೋಮಾಳಗಳಲ್ಲಿ, ರಸ್ತೆಯಂಚಿನಲ್ಲಿ, ಶಾಲಾ-ಕಾಲೇಜು ಆವರಣದಲ್ಲಿ ನೆರಳಿಗಾಗಿ ಬೆಳೆಸುತ್ತಾರೆ. ಹೂಬಿಟ್ಟರಂತೂ ನೋಡಲು ತುಂಬ ಸೊಗಸಾಗಿರುತ್ತದೆ. ಈ ಮರವು ಅನೇಕ ರೀತಿಯಿಂದ ಪ್ರಯೋಜನಕಾರಿ. ಕಾಂಡವು ಕಂದುಬಣ್ಣದಿಂದ ಕೂಡಿದ್ದು ಒಳಪದರ ತೊಗಟೆ ಕೆಂಪಾಗಿರುತ್ತದೆ. ಇದರಲ್ಲಿ ಕೀಟೋಸ್ಟೆರಾಲ್ ಎಂಬುದು ಈಸ್ಟ್ರೋಜನ್ ಚ್ಯೋದಕವನ್ನು ಹೊಂದಿದ್ದು, ಮಹಿಳೆಯರ ಗರ್ಭಾಶಯ ತೊಂದರೆಗಳಿಗೆ ನಿವಾರಕವಾಗಿ ಕೆಲಸ ಮಾಡುತ್ತದೆ. ಮಧುಮೇಹ ನಿವಾರಣೆಗೆ ಒಣಗಿದ ಹೂವಿನ ಚೂರ್ಣವನ್ನು ಬಳಸಲಾಗುತ್ತದೆ. ಮೂತ್ರಕೋಶದ ಕಲ್ಲುಗಳನ್ನು ಕರಗಿಸಲು ಬೀಜದ ಚೂರ್ಣದಿಂದ ಕಷಾಯವನ್ನು ಮಾಡಿ ಉಪಯೋಗಿಸುತ್ತಾರೆ. ಅಶೋಕ ಬೀಜವನ್ನು ಮೂಳೆಮುರಿತದ ಚಿಕಿತ್ಸೆಗೆ, ಹೂವನ್ನು ರಕ್ತಭೇದಿ, ಮೂಲವ್ಯಾಧಿ, ಚರ್ಮರೋಗಗಳಿಗೆ ಔಷಧಿಯಾಗಿ ಬಳಸಲಾಗುತ್ತದೆ. ಬೇರು, ಕಾಂಡ, ಎಲೆ, ತೊಗಟೆ, ಹೂವು ಮತ್ತು ಬೀಜಗಳನ್ನು ಔಷಧ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ಕೆ.ಪಿ.ಕೆ.

ಅಶ್ವಗಂಧ ಔಷಧೀಯ ಸಸ್ಯಗಳಲ್ಲಿ ಒಂದು. ಅಶ್ವಗಂಧ ಸಂಸ್ಕೃತ ಹೆಸರು. ಇದರ ಬೇರಿನ ವಾಸನೆಯು ಕುದುರೆಯ ಮೈವಾಸನೆ, ಎಲೆಯನ್ನು ಹಿಸುಕಿದಾಗ ಕುದುರೆ ಮೂತ್ರದ ವಾಸನೆಯನ್ನು ಮಾಡಿಸುವುದರಿಂದ ಹೆಸರು ಬಂದಿರಬಹುದು. ಹಾಗೂ ಕುದುರೆ ಪೌರುಷಕ್ಕೆ ಸಂಕೇತ. ಆದ್ದರಿಂದ ಅಶ್ವಗಂಧವು ಪೌರುಷ ಗುಣವನ್ನ ಹೊಂದಿದೆ. ಹಾಗಾಗಿ ಆಯುರ್ವೇದವು ಈ ಹೆಸರನ್ನುಸಂಕೇತಿಸಿರಬಹುದು. ಇದರ ವೈಜ್ಞಾನಿಕ ಹೆಸರು ವಿತಾನಿಯ ಸೊಮ್ನಿನಿಫೆರ ಹಲವಾರು ಭಾಷೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹೆಸರಿಟ್ಟಿದ್ದಾರೆ. ಇಂಗ್ಲಿಷಿನಲ್ಲಿ ವಿಂಟರ್ ಚೆರ್ರಿ ಎಂದು ಕರೆದರೆ ಕನ್ನಡದಲ್ಲಿ ಹಿರೇಮದ್ದಿನ ಗಿಡ, ಅಂಗಾರಗೆಡ್ಡೆ, ಅಮಂಗರ, ಪನ್ನೀರು, ಕಿರೆಮಲ್ಲಿನಗಿಡ ಎಂದು ಕರೆಯುತ್ತಾರೆ. ತಮಿಳಿನಲ್ಲಿ ಅಮುಕಿರನ್ ಕಿಳಂಗು ತೆಲುಗಿನಲ್ಲಿ ಪಿಳ್ಳವೆಂಡ್ರಮ್ಮು ಸಂಸ್ಕೃತದಲ್ಲಿ ತುರಂಗೀ, ಗಂಧ, ಕಟುಕ, ಅಶ್ವಾವರೋಹಕ, ವರಾಹಕರ್ಣೀ ಬಲ್ಯಾ. ವಾತಾಗ್ನಿ ಕಾಮರೂಪಿಣೀ ಮೊದಲಾದ ಹೆಸರುಗಳಲ್ಲಿ ಸಂಕೇತಿಸುವುದುಂಟು.



ನೋಡಲು ಪುಟ್ಟದಾಗಿ ತೋರುವ ಅಶ್ವಗಂಧ ಗಿಡ ಅದ್ಭುತ ಔಷಧೀಯ ಗುಣಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಈ ಸಸ್ಯವನ್ನು ಆಯುರ್ವೇದ ಮತ್ತು ಜನಪದ ವೈದ್ಯದಲ್ಲಿ ಬಳಸಿಕೊಳ್ಳಲಾಗುತ್ತದೆ.

ಅಶ್ವಗಂಧ ಇದು ಅಫ್ರಿಕಾ ಮೆಡಿಟರೇನಿಯನ್ ಪ್ರದೇಶ, ಭಾರತ ಮತ್ತು ಶ್ರೀಲಂಕ ದೇಶಗಳಲ್ಲಿ ಬೆಳೆಯುತ್ತದೆ. ಭಾರತದಲ್ಲಿ ಹಿಮಾಲಯದ ತಪ್ಪಲುಗಳಲ್ಲಿ ಇದು ಸ್ವಾಭಾವಿಕವಾಗಿ ಬೆಳೆಯುತ್ತದೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಹಿಮಾಚಲ ಪ್ರದೇಶ, ಪಂಜಾಬ್ ಮತ್ತು ಶುಷ್ಕ ಹವೆಯ ಪ್ರದೇಶಗಳಲ್ಲಿ ಇದನ್ನು ಕೃಷಿ ಮಾಡುತ್ತಿದ್ದಾರೆ. ಚೀನಾದ ಜಿನ್‌ಸೆಂಗ್‌ಗೆ ಪೈಪೋಟಿ ನೀಡುವ ಅಶ್ವಗಂಧ ಅದ್ಭುತ ಔಷಧೀಯ ಗುಣಗಳನ್ನು ಹೊಂದಿದೆ. ಆದರೆ ಜಿನ್‌ಸೆಂಗ್‌ನಷ್ಟು ಬೇಡಿಕೆಯಿಲ್ಲ. ಅದರಷ್ಟು ಪ್ರಚಾರ ಸಿಗುತ್ತಿಲ್ಲ. ಹಾಗಾಗಿ ಅಶ್ವಗಂಧವನ್ನು ಭಾರತದಲ್ಲಿ ಕೃಷಿ ಮಾಡಿ ಹೆಚ್ಚಿನ ಮಟ್ಟದಲ್ಲಿ ಪ್ರಚಾರ ಮಾಡಬೇಕಾದ ಪ್ರಸ್ತುತತೆ ಒದಗಿದೆ.

ಅಶ್ವಗಂಧವು 'ಸೊಲನೇಸಿ' ಕುಟುಂಬಕ್ಕೆ ಸೇರಿದ ಸಸ್ಯ. ಈ ಕುಟುಂಬದಲ್ಲಿ ಸುಮಾರು 90 ಜಾತಿಗೆ ಸೇರಿದ 2,600 ಪ್ರಭೇದಗಳನ್ನ ಕಾಣಬಹುದು. ಕರ್ನಾಟಕದಲ್ಲಿ 14 ಜಾತಿಗೆ ಸೇರಿದ 47 ಪ್ರಭೇದಗಳು ಕಂಡುಬರುತ್ತವೆ.

ಇದು ಸ್ವಭಾವತಃ ಮೆದು ಸಸ್ಯ. ಪೊದೆಯಾಗಿಯೂ ಹಬ್ಬು ಬಳ್ಳಿಯಂತೆಯೂ ಬೆಳೆಯುತ್ತದೆ. ಸಾಮಾನ್ಯವಾಗಿ ಮರಗಳು ವಿರಳವಾಗಿ ಕಂಡುಬರುತ್ತವೆ.

ತಾಯಿ ಬೇರು ಸಮೂಹವನ್ನು ಒಳಗೊಂಡಿರುವ ಅಶ್ವಗಂಧದ ಬೇರು. ಘಾಟು ವಾಸನೆಯಿಂದ ಕೂಡಿದ್ದು ಬೇರಿನ ರುಚಿ ಸಿಹಿಮಿಶ್ರಿತ ಹುಳಿ. ಬಹಳ ಹಿಂದಿನಿಂದ ಗ್ರಾಮೀಣ ವೈದ್ಯರು, ಪಾರಂಪರಿಕ ವೈದ್ಯರು ಮತ್ತು ಆಯುರ್ವೇದ ಪಂಡಿತರು ಅಶ್ವಗಂಧದ ಬೇರನ್ನು ಹಲವಾರು ಕಾಯಿಲೆಗಳಲ್ಲಿ ಚಿಕಿತ್ಸೆಯಲ್ಲಿ ಬಳಸಿಕೊಳ್ಳುತ್ತಾರೆ. ಆಧುನಿಕ ವಿಜ್ಞಾನದಲ್ಲಿ ಅಶ್ವಗಂಧ ಬೇರಿನ, ರಸಾಯನಿಕ ಸಂಯೋಜನೆ ಮತ್ತು ಇದರ ಔಷಧೀಯ ಗುಣಗಳ ಬಗೆಗೆ ಹಲವಾರು ಸಂಶೋಧನೆಗಳು ನಡೆಯುತ್ತಿವೆ.

ಕಾಂಡಗಳು ದುಂಡಗೆ ಮೃದುವಾಗಿರುತ್ತವೆ. ಹೊರ ಮೈಯಲ್ಲಿ ರೋಮಗಳು ಅಥವಾ ಮುಳ್ಳುಗಳು ಇರುತ್ತವೆ. ಎಲೆಗಳು ರೋಮಗಳಿಂದ ಕೂಡಿದ ಸರಳ ಅಥವಾ ಸಂಯುಕ್ತ ಮಾದರಿಯಾದದ್ದು. ಪರ್ಯಾಯ ಜೋಡಣೆ ಹೊಂದಿರುತ್ತವೆ. ಇವು ಅಂಡಾಕಾರದಲ್ಲಿದ್ದು, 10 ಸೆಂ.ಮೀ. ಉದ್ದವಿದ್ದು ಅಗಲ ಕಡಿಮೆ. ಎಲೆಯ ತುದಿ ಸ್ವಲ್ಪ ಚೂಪಾಗಿರುತ್ತದೆ. ಎಲೆಯನ್ನು ಹಲವಾರು ಕಾಯಿಲೆಗಳ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಅದರಲ್ಲೂ ಮುಖ್ಯವಾಗಿ ಮಹಿಳೆಯರ ಹಲವಾರು ಸಮಸ್ಯೆಗಳಿಗೆ ಅಶ್ವಗಂಧದ ಎಲೆಯನ್ನು ಬಳಸುತ್ತಾರೆ. ಬಾಣಂತಿಯರ ಎದೆಹಾಲಿನ ಪ್ರಮಾಣವನ್ನು ಹೆಚ್ಚಿಸಲು ಅಶ್ವಗಂಧದ ಎಲೆಯ ಕಷಾಯವನ್ನು ಕೊಡುವುದುಂಟು.

ಅಶ್ವಗಂಧದ ಹೂ ದ್ವಿಲಿಂಗಿಯಾಗಿದ್ದು ಬಣ್ಣವು ಹಸುರು ಅಥವಾ ಹಳದಿ ಮಿಶ್ರಿತವಾಗಿರುತ್ತದೆ. ಇವು ಎಲೆ ತೊಟ್ಟಿನ ಕಂಕುಳಲ್ಲಿ ಗೊಂಚಲಾಗಿ ಬಿಡುತ್ತದೆ. ಒಂದೊಂದು ಗೊಂಚಲಲ್ಲೂ ಸುಮಾರು 25 ಹೂಗಳಿರುತ್ತವೆ. ಹೂಗಳಿಗೆ ತೊಟ್ಟು ಇರುವುದಿಲ್ಲ.

ಗೋಲಾಕಾರದ ರಸಭರಿತ ಹಣ್ಣುಗಳು ಬೆರ್ರಿ ಅಥ್‌ವಾ ಕ್ಯಾಪ್ಸೂಲ್‌ಗಳಂತೆ ಇರುತ್ತವೆ. ಮೃದವಾದ ಸಿಪ್ಪೆಯಿಂದ ಕೂಡಿರುತ್ತದೆ. ಕಾಯಿ ಹಣ್ಣಾಗಿ ಪಕ್ವಗೊಂಡಾಗ ಕಿತ್ತಳೆ ಕೆಂಪು ಬಣ್ಣ ತಾಳುತ್ತದೆ. ಹಣ್ಣಿನೊಳಗೆ ಮೂತ್ರಪಿಂಡಾಕಾರದ ಬೀಜವಿರುತ್ತದೆ. ಬೀಜದ ಬಣ್ಣ ಹಳದಿ.

ಔಷಧೀಯ ಗುಣಗಳು : ಅಶ್ವಗಂಧದಲ್ಲಿ ಅಪಾರ ಔಷಧೀಯ ಗುಣಗಳು ಇರುವುದು ಕಂಡುಬಂದಿದೆ. (ಎಲೆ, ಕಾಯಿ, ಕಾಂಡ, ಬೀರು ಹಣ್ಣು) ಅಶ್ವಗಂಧದಲ್ಲಿ ವಿಥಾನಿನ್, ಸಾಮ್ನಿಫೆರಿನ್ ಎಂಬ ಔಷಧವಿರುವ ಗುಣಗಳಿರುವ ಆಲ್ಕಲಾಯ್ಡ್‌ಗಳು ಪತ್ತೆಯಾಗಿವೆ. ಅಶ್ವಗಂಧದ ಔಷಧೀಯ ಗುಣಗಳಿಗೆ ಈ ಆಲ್ಕಲಾಯ್ಡ್‌ಗಳು ಕಾರಣವೆಂದು ತಿಳಿದು

ಬಂದಿದೆ. ಎಲೆಗಳಲ್ಲಿ ಸ್ಟೆರಾಯ್ಡಲ್ ಲ್ಯಾಕ್ಟೋನ್, ಅನೊಲೈಡ್, ಸೊಮಿಟಾನ್, ಗ್ಲೂಕೋಸ್, ನಿರವಯವ ಲವಣ ಮತ್ತು ವಿಥನೋನ್‌ಗಳು ಕಂಡುಬರುತ್ತವೆ.

ಆಯುರ್ವೇದದ ಹಲವು ಗ್ರಂಥಗಳಲ್ಲಿ ಅಶ್ವಗಂಧದ ಗುಣಗಳ ಬಗೆಗೆ ಉಲ್ಲೇಖಗಳಿವೆ. ಆಯುರ್ವೇದದ ಪ್ರಕಾರ ಅಶ್ವಗಂಧವನ್ನು ಕಷಾಯ ರೂಪದಲ್ಲಿ ಬಳಸಬಹುದು. ಅದು ವೀರ್ಯಪ್ರದ, ಬಲಪ್ರದವನ್ನಾಗಿ ಮಾಡುತ್ತವೆ. ವಾತ, ಕಫಗಳನ್ನು ನಿವಾರಿಸುತ್ತದೆ. ಜೊತೆಗೆ ವಿಷ, ವ್ರಣ, ಕ್ಷಯ, ಕೆಮ್ಮು, ದಮ್ಮು ಇವುಗಳ ನಿವಾರಿಸುತ್ತದೆ. ಅಲ್ಲದೆ ಅಶ್ವಗಂಧದ ಜೊತೆ ಇತರ ಸಸ್ಯಗಳನ್ನು ಸೇರಿಸಿ ಹಲವು ರೀತಿಯ ಔಷಧಿಯನ್ನ ತಯಾರಿಸಬಹುದೆಂದು ತಿಳಿದುಬರುತ್ತದೆ.

ಸಾಮಾನ್ಯವಾಗಿ ಅಶ್ವಗಂಧದ ಬಗ್ಗೆ ತಿಳಿದಿರುವವರು ಅದರಿಂದ ಔಷಧಿಯನ್ನ ಮಾಡಿ ಸಮಸ್ಯೆ ಪೀಡಿತರಿಗೆ ಕೊಡುತ್ತಾರೆ. ಅಶ್ವಗಂಧವು ಹಲವಾರು ಸಮಸ್ಯೆಗಳನ್ನು ನಿವಾರಿಸುತ್ತದೆ. ಮಹಿಳೆಯರ ಸಮಸ್ಯೆಗಳಾದ ಗರ್ಭಪಾತ, ಗರ್ಭಕೋಶ, ಮುಟ್ಟಿನ ಸಮಸ್ಯೆಗಳಿಗೆ ಮದ್ದಾಗಿದೆ. ಅದರಂತೆ ಇವುಗಳಲ್ಲದೆ ಚರ್ಮ ಕಾಯಿಲೆಗಳಾದ ಕಜ್ಜಿ, ತುರಿಕೆ, ತೊನ್ನು ರೋಗಗಳಿಗೂ ಚಿಕಿತ್ಸೆಯಿದೆ. ಮಾನಸಿಕ ಸಮಸ್ಯೆಗಳು, ಸಂಧಿವಾತ, ನಿಶ್ಶಕ್ತಿ, ದುರ್ಬಲ ದೇಹ, ಮೂಲವ್ಯಾಧಿ, ಹೃದಯದ ಸಮಸ್ಯೆಗಳು. ಕಣ್ಣಿನ ದೃಷ್ಟಿ ಮೊದಲಾದವುಗಳ ಸಮಸ್ಯೆಗಳಿಗೆ ಅಶ್ವಗಂಧದ ಮನೆ ಮದ್ದು ಉಪಕಾರಿಯಾಗಿದೆ. ಅಲ್ಲದೆ ಪ್ರಾಣಿಗಳ ಖಾಯಿಲೆಗಳಿಗೂ ಇದು ಉಪಯುಕ್ತವಾಗಿದೆ.

ಆಧಾರ : ಮುನಿಯಾಲಗಣೇಶ ಶೆಣೈ, ಅಶ್ವಗಂಧ ಸಸ್ಯಸಂಪದ ಮತ್ತು ಆಂದೋಲನ ದಿನ ಪತ್ರಿಕೆ, 12-7-2013

ಪಿ. ಆರ್. ಕೆ.

ಅಶ್ವತ್ಥ ಇದನ್ನು ಅರಳಿಮರ ಎಂದು ಕರೆಯುತ್ತಾರೆ. ಮಾರೇಸಿ ಕುಟುಂಬಕ್ಕೆ ಸೇರಿದೆ. ಭಾರತವು ಇದರ ಉಗಮಸ್ಥಾನವಾಗಿದ್ದು ಈ ಕುಟುಂಬದಲ್ಲಿ 48 ಜಾತಿಗಳಿಗೆ ಸೇರಿದ 1200 ಪ್ರಭೇದಗಳಿವೆ. ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುವ ಅಶ್ವತ್ಥ ಬಹು ಉಪಯುಕ್ತವಾದ ಮರವಾಗಿದೆ. ದೀರ್ಘಾಯುಷ್ಯವನ್ನುಳ್ಳ ದೊಡ್ಡಗಾತ್ರದ ಮರವಿದು. ಈ ಮರವು ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕವನ್ನು ಹೊರಬಿಡುವುದಲ್ಲದೇ ವಾತಾವರಣವನ್ನು ಸುಸ್ಥಿತಿಯಲ್ಲಿಡುತ್ತದೆ.

ಸಸ್ಯ ವರ್ಣನೆ : ಎಲೆಗಳು ಹೃದಯದಾಕಾರದಲ್ಲಿದ್ದು, ತುದಿಯ ಬಾಗ ಚೂಪಾಗಿರುತ್ತವೆ. ಚಿಗುರು ಎಲೆಗಳು ತಾಮ್ರ ಬಣ್ಣದಾಗಿದ್ದು, ಬಲಿತ ಹಾಗೇ ಹಸುರು ಬಣ್ಣವನ್ನು ತಾಳುತ್ತವೆ. ಒಂದೆರಡು ತಿಂಗಳು ಎಲೆಗಳು ಉದುರಿ ಬೋಳು ಮರವಾಗಿರುತ್ತದೆ. ನವಂಬರ್‌ನಿಂದ ಜನವರಿಯವರೆಗೆ ಹೊಸ ಎಲೆಗಳು ಮೂಡುತ್ತವೆ. ಹೂವುಗಳು ಗಾತ್ರದಲ್ಲಿ ಚಿಕ್ಕದಾಗಿದ್ದು ಏಕಲಿಂಗಿಯಾಗಿವೆ. ಸುಮಾರು 80 ರಿಂದ 90 ಅಡಿಯವರೆಗೆ ಬೆಳೆಯಬಲ್ಲದು. ಕಾಂಡವು ತಿಳಿಹಳದಿ ಮಿಶ್ರಿತ ಹಸುರು ಬಣ್ಣದ ತೊಗಟೆಯನ್ನು ಹೊಂದಿರುತ್ತದೆ. ಅಗಲವು ದೊಡ್ಡದಾಗಿದ್ದು 7 ರಿಂದ 9 ಅಡಿಗಳಷ್ಟು ವ್ಯಾಪಿಸಿಕೊಳ್ಳಬಹುದು. ಅರಳಿ ಹಣ್ಣನ್ನು ತಿನ್ನಬಹುದು. ಎಲೆಗಳ ಕಂಕುಳ ಭಾಗದಲ್ಲಿ ಹಣ್ಣುಗಳನ್ನು ಬಿಡುತ್ತದೆ. ಗೋಲಾಕಾರದಲ್ಲಿ 1 ಸೆಂ.ಮೀ. ದಪ್ಪವಾಗಿರುತ್ತವೆ.

ಅಶ್ವತ್ಥ ಮರಕ್ಕೆ ಅದರ ಆಕಾರ, ಪ್ರಯೋಜನ, ಭಿನ್ನತೆಯನ್ನು ಆಧರಿಸಿ ನಾನಾ ಹೆಸರುಗಳು ಬಂದಿವೆ. ಸಾಮಾನ್ಯವಾಗಿ ಊರಿನ



ಹೊರಭಾಗದಲ್ಲಿ ಅಶ್ವತ್ಥ ಮರವನ್ನು ಬೆಳೆಸುತ್ತಿದ್ದರಿಂದ ವರ್ತಕರು ಪ್ರಯಾಣ ಮಾಡಿ ಆಯಾಸವಾದ ಸಂದರ್ಭದಲ್ಲಿ ತಮ್ಮ ಕುದುರೆಗಳನ್ನು ಅಶ್ವತ್ಥ ಮರದ ನೆರಳಿನಲ್ಲಿ ವಿಶ್ರಾಂತಿಗೆಂದು ಬಿಡುತ್ತಿದ್ದರು. ಈ ಕಾರಣದಿಂದ ಅಶ್ವತ್ಥಮರ ಎಂಬ ಹೆಸರು ಬಂತು ಎನ್ನಲಾಗುತ್ತದೆ. (ಅಶ್ವ=ಕುದುರೆ, ತ್ಥ=ಸ್ಥಳ, ಅಂದರೆ ಕುದುರೆ ಕಟ್ಟುತ್ತಿದ್ದ ಸ್ಥಳ). ಬುದ್ಧನಿಗೆ ಅರಳಿ ಮರದ ಕೆಳಗೆ ಜ್ಞಾನೋದಯವಾದ ಕಾರಣ ಇದನ್ನು 'ಬೋಧಿವೃಕ್ಷ' ಎಂತಲೂ ಕರೆಯಲಾಗುತ್ತದೆ. ಸ್ವಲ್ಪ ಗಾಳಿ ಬೀಸಿದರೂ ಅಶ್ವತ್ಥ ಮರದ ಎಲೆಗಳು ಅಲ್ಲಾಡುವುದರಿಂದ 'ಚಲಪತ್ರ' ಎಂಬ ಮತ್ತೊಂದು ಹೆಸರು ಬಂದಿದೆ. ಅಶ್ವತ್ಥಮರದ ಎಲೆಗಳು ಆನೆಗಳು ಪ್ರಿಯವಾದ ಆಹಾರವಾದ ಕಾರಣ ಗಜಾಶನ, ಗಜಭಕ್ಷ್ಯ ಎಂಬ ಹೆಸರು ಸಹ ಇದೆ. ಹಿಂದೂಗಳಿಗೆ ಪವಿತ್ರವಾದ ಮರವಾದ ಕಾರಣ ಕೇಶವ, ಪವಿತ್ರ, ಮಾಂಗಲ್ಯ, ಶಾಮಲಾ ವೃಕ್ಷವೆಂಬ ಹೆಸರುಗಳಿವೆ. ಈ ಮರಕ್ಕೆ ಸ್ವಲ್ಪ ಗಾಯವಾದರು ಹಾಲು ಸೋರು (ಒಸರು)ವುದರಿಂದ 'ಕ್ಷೀರದ್ರುಮ'ವೆಂಬ ಹೆಸರು ಇದೆ. ಅಶ್ವತ್ಥ ಮರದ ಎಲೆಯ ಬಳಕು ದೇಹದ ಯುವತಿಯರ ನಡುವನ್ನು ಹೋಲುವುದರಿಂದ 'ಗುಹ್ಯಪತ್ರ'ವೆಂಬ ಹೆಸರಿದೆ. ಜೈನರ ಆಲಯಗಳು ಮತ್ತು ಚೈತ್ಯಾಲಯಗಳ ಬಳಿ ಅಶ್ವತ್ಥಮರವಿದ್ದುದರಿಂದ ಚೈತ್ರವೃಕ್ಷವೆಂಬ ಹೆಸರಿದೆ. ವರಾಹಮಿಹಿರ ಮತ್ತು ಮನು ಗ್ರಾಮಗಳ ಗಡಿ ಜಾಗಗಳಲ್ಲಿ ಅಶ್ವತ್ಥ ಮರವನ್ನು ನೆಡುತ್ತಿದ್ದುದನ್ನು ದಾಖಲಿಸಿದ ಕಾರಣದಿಂದ ಈ ಮರಕ್ಕೆ 'ಸಾಕ್ಷಿ ವೃಕ್ಷ' ಹೆಸರು ಇದೆ. ಇಂಗ್ಲಿಷಿನಲ್ಲಿ : ಪೀಪಾಲ್, ವಿಪ್ರೋ, ಪಿಪಲ್, ಅಶ್ವತ್ಥ, ಪಿಂಪಳ, ತಮಿಳು : ಅರಸಮರಂ, ತೆಲುಗಿನಲ್ಲಿ ಅಶ್ವತ್ತಮು, ಮಲಯಾಳಂ :ಅಶ್ವತಂ, ಅವಸ್ಸೆ, ಬೋಧಿ ಎಂಬ ಹೆಸರುಗಳಿವೆ.

ಉಪಯೋಗ : ರೋಗ ನಿವಾರಣೆಯಲ್ಲಿ ಅರಳಿ ಮರವು ಮಹತ್ತರ ಪಾತ್ರವಹಿಸುತ್ತದೆ. ಎಲೆ, ತೊಗಟೆ, ಫಲ ಎಲ್ಲವೂ ಔಷಧ ಎಂದು ಆಯುರ್ವೇದ ಹೇಳುತ್ತದೆ. ಸ್ಮರಣ ಶಕ್ತಿಗೂ ಅರಳಿಮರಕ್ಕೂ ಸಂಬಂಧವಿದೆ. ಅಶ್ವತ್ಥ ಮರದಡಿಯಲ್ಲಿ ಕುಳಿತು ಧ್ಯಾನಿಸಿದರೆ ನೆನಪಿನ ಶಕ್ತಿ ಹೆಚ್ಚುವುದರ ಜೊತೆಗೆ ಮೆದುಳು ಕ್ರಿಯಾಶೀಲವಾಗಿ ಕೆಲಸ ಮಾಡುತ್ತದೆ. ದೈವತ್ವದ ಕಲ್ಪನೆಯ ಮೂಲಕ ಅಶ್ವತ್ಥಮರದ ಉಪಯೋಗವನ್ನು ಮಾನವರು ಪಡೆಯುತ್ತಿದ್ದಾರೆ.

ಅಶ್ವತ್ಥ ಮರದ ಬಗ್ಗೆ ಬಹಳ ನಂಬಿಕೆಗಳಿವೆ. ಈ ಮರದ ಸುತ್ತ 7 ಬಾರಿ ಪ್ರದಕ್ಷಿಣೆ ಹಾಕಿದರೆ ಸಮಸ್ತ ಪಾಪಗಳು ಪರಿಹಾರವಾಗುತ್ತವೆ ಎಂಬ ನಂಬಿಕೆ ಇದೆ. ಸಂತಾನವಿಲ್ಲದವರು ಅಶ್ವತ್ಥ ಮರವನ್ನು ತಮ್ಮ ಸಂತಾನವೆಂದು ಭಾವಿಸಬೇಕೆಂದು ಸ್ಕಂಧ ಪುರಾಣ ಹೇಳುತ್ತದೆ. ಅಲ್ಲದೇ ಈ ಮರವನ್ನು ಕಡಿದು ನರಕಕ್ಕೆ ಹೋಗುತ್ತಾರೆಂಬ ನಂಬಿಕೆಯು ಇದೆ. ದೈವತ್ವದ ಹಿನ್ನೆಲೆಯಲ್ಲಿ ಪಾಪ ನಿವಾರಣೆಗಾಗಿ ಯಜ್ಞ-ಯಾಗಾದಿಗಳಲ್ಲಿ, ಹೋಮ-ಹವನಗಳಲ್ಲಿ ಅಶ್ವತ್ಥ ಮರದ ಕಡ್ಡಿಯನ್ನು ಸುಡುತ್ತಾರೆ. ಧಾರ್ಮಿಕ ವ್ರತ, ಪೂಜೆಗಳಲ್ಲಿ ಅಶ್ವತ್ಥ ಮರದ ಎಲೆಯನ್ನು ಬಳಸುತ್ತಾರೆ. ಅರಳಿ ಮರಕ್ಕೆ ನೀರು ಹಾಕಿದರೆ ಹಲವು ಜನ್ಮಗಳ ಪಾಪ ಪರಿಹಾರವಾಗಿ ಮೋಕ್ಷ ದೊರೆಯುವುದೆಂದೂ ಅಶ್ವತ್ಥ ಮರದಲ್ಲಿ ಭೂತ-ಪ್ರೇತಗಳು ವಾಸಿಸುವುದಿಲ್ಲ ಎಂಬ ನಂಬಿಕೆ ಸಹ ಇದೆ.

ಪ್ರಾಣಿಗಳ ಎಲೆ, ಪಕ್ಷಿಗಳಿಗೆ ಹಣ್ಣು ಆಹಾರವಾದರೆ ಮಾನವನಿಗೆ ತನ್ನ ಅಗತ್ಯದ ವಸ್ತುಗಳ ತಯಾರಿಕೆಗೆ ಸಹಕಾರಿ. ಮರದ ಎಲೆಗಳನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಬೇಯಿಸಿದರೆ ಕೆಂಪು ಮಿಶ್ರಕಂದು ಬಣ್ಣವು ಬರುತ್ತದೆ. ಇದರಿಂದ ಬಟ್ಟೆಗಳಿಗೆ ಬಣ್ಣ ಕೊಡಬಹುದು. ಚರ್ಮ ಹದ ಮಾಡಲು ಎಲೆಗಳಲ್ಲಿರುವ ಟ್ಯಾನಿನ್ ಅಂಶ ಉಪಯೋಗುವಾಗುತ್ತದೆ. ಮರದ ತೊಗಟೆಯಿಂದ ನಾರನ್ನು ತೆಗೆದು ಹಗ್ಗ ತಯಾರಿಸಲು ಬಳಸಲಾಗುತ್ತದೆ. ಅಶ್ವತ್ಥ ಮರದ 500 ಗ್ರಾಂ ಹಾಲನ್ನು ಚೆನ್ನಾಗಿ ಕಾಯಿಸಿ ಅದಕ್ಕೆ ಸು. 250 ಗ್ರಾಂ.ನಷ್ಟು ಅಗಸೆ ಎಣ್ಣೆಯನ್ನು ಸೇರಿಸಿ ತಣಿಸಲು ಬಿಟ್ಟಾಗ ಗಟ್ಟಿಯಾದ ಅಂಟು ಸಿದ್ಧವಾಗುತ್ತದೆ. ಇದನ್ನು ವಾಹನಗಳ ಚಕ್ರಗಳ ರಂಧ್ರವನ್ನು ಮುಚ್ಚಲು ಹಾಗೂ ಆಭರಣಗಳಲ್ಲಿನ ರಂಧ್ರಗಳನ್ನು ಮುಚ್ಚಲು ಬಳಸಲಾಗುತ್ತದೆ. ಅಶ್ವತ್ಥ ಮರವು ಬಹಳ ಗಟ್ಟಿಯಲ್ಲದ ಜಾಸ್ತಿ ಕಾಲ ಉಪಯೋಗಕ್ಕೆ ನಿಲುಕದ ಮರವಾದ ಕಾರಣ ಸರಕು ಸಾಗಣೆ, ಬೆಂಕಿಪೊಟ್ಟಣ, ಮರದ ಹಲಗೆಯಂತಹ ಸಣ್ಣಪುಟ್ಟ ವಸ್ತುಗಳ ತಯಾರಿಕೆಗೆ ಬಳಸಲಾಗುತ್ತದೆ. ರಕ್ತವಿಕಾರ, ಕಫ, ಪಿತ್ತ, ವಾತ, ಕಣ್ಣಿನ ರೋಗಗಳಲ್ಲಿ ಅಶ್ವತ್ಥದ ಉಪಯೋಗವಿದೆ. ಸಹಸ್ರಾರು ಹಕ್ಕಿಗಳ ವಾಸಸ್ಥಳ ಅರಳಿಮರ. ಇದರ ಎಲೆಯ ಬೂದಿಯನ್ನು ಎಣ್ಣೆಯೊಂದಿಗೆ ಗಾಯದ ಮೇಲೆ ಹಚ್ಚಿದರೆ ಬೇಗ ವಾಸಿಯಾಗುತ್ತದೆ.

ಪರಾಮರ್ಶನ ಗ್ರಂಥಗಳು

ಅಶ್ವತ್ಥ - ಮುನಿಯಾಲ್ ಗಣೇಶ್ ಶಣೈ (ಸಸ್ಯ ಸಂಪದ-36)

ಕನ್ನಡ ವಿಶ್ವಕೋಶ, ಸಂ. 1 (ಅರಳಿ ಮರ)

ಅಂತರ್ಜಾಲ ಮಾಹಿತಿ

ಎಂ.ಎಂ.

ಅಳಲೆ ಇದು ಔಷಧೀಯ ಗುಣವುಳ್ಳ ಸಸ್ಯ. ಆಯುರ್ವೇದ ಔಷಧಿ ನೀಡುವ ವೈದ್ಯರನ್ನು ಅಳಲೆಕಾಯಿ ಪಂಡಿತರು ಎಂದು ಕರೆಯುತ್ತಿದ್ದರು.

ಅಳಲೆ ಕಾಯಿ ಭಾರತದಲ್ಲಿ ಪುರಾತನ ಕಾಲದಿಂದ ಬಳಕೆಯಲ್ಲಿದೆ. ಚೀನಾ, ಕಾಬೂಲ್ ಅಬೇರಿಕ್ ಮುಂತಾದ ದೇಶಗಳಲ್ಲಿಯು ಹೆಚ್ಚು ಪ್ರಚಲಿತವಾಗಿತ್ತು ಎಂದು ತಿಳಿದು ಬರುತ್ತದೆ.



ಅಳಲೆಯ ವೈಜ್ಞಾನಿಕ ನಾಮ ಟರ್ಮಿನೇಲಿಯ ಚೆಬುಲ. ಇದು ಕಾಂಬ್ರಿಟೇಸೀ ಕುಟುಂಬಕ್ಕೆ ಸೇರಿದೆ. ಅಳಲೆಕಾಯಿ ಭಾರತಾದ್ಯಂತ ಕಂಡುಬರುತ್ತದೆ. ಮತ್ತಿಮರ, ಬಾದಾಮಿ ಮರದ ಕುಟುಂಬಕ್ಕೆ ಸೇರುವ ಈ ಮರದಲ್ಲಿ 20 ಜಾತಿಯ 500 ಪ್ರಭೇದಗಳಿವೆ. ಕರ್ನಾಟಕದಲ್ಲಿ 6 ಜಾತಿಗಳಿಗೆ ಸೇರಿದ 14 ಪ್ರಭೇದಗಳಿವೆ. ಈ ಮರ 25-30 ಮೀಟರ್ ಎತ್ತರ ಬೆಳೆಯುತ್ತದೆ. ರೆಂಬೆ ಎಲೆ ಮೊಗ್ಗುಗಳು ಎಳೆಯವಾಗಿರುವಾಗ ಕೂದಲುಗಳು ಬೆಳೆದು ಹೊಳೆಯುತ್ತಿರುತ್ತದೆ. ಬಲಿತ ಮೇಲೆ ಕೂದಲುಗಳು ಉದುರಿ ಹೋಗುತ್ತವೆ. ಈ ಕಾಯಿಗಳನ್ನು ಕಿತ್ತು ಒಣಗಿಸಿ ಪುಡಿ ಮಾಡಿ ಹಲವಾರು ಔಷಧಿಗಳಿಗೆ ಬಳಸಲಾಗುತ್ತದೆ.

ಅಳಲೆ ಕುರುಚಲು ಸಸ್ಯವರ್ಗಕ್ಕೆ ಸೇರಿದೆ. ಎಲೆಗಳು ಸರಳವಾಗಿ ಪರ್ಯಾಯ ಮಾದರಿಯಲ್ಲಿ ಜೋಡಣೆಯಾಗಿರುತ್ತವೆ. ಹೂಗೊಂಚಲಿನಲ್ಲಿ ತೊಟ್ಟಿಲ್ಲದ ಅನೇಕ ದ್ವಿಲಿಂಗ ಪುಷ್ಪಗಳಿರುತ್ತವೆ. ಹೂಗಳ ಬಣ್ಣ ನಸು ಹಳದಿ. ಪುಷ್ಪ ಪಾತ್ರೆ ಘಂಟೆಯಾಕಾರದಲ್ಲಿರುತ್ತದೆ. ಹೂಗೊಂಚಲಿಗೆ ಸ್ಪೈಕ್ ಅಥವಾ ತೆನೆ ಎಂದು ಹೆಸರು. ಇದು ಬಿಸಿಲಿನಾಸರೆಯ ಮರ. ದೀರ್ಘ ಶುಷ್ಕತೆಯನ್ನೂ ಹಿಮಶೈತ್ಯವನ್ನು ಸಹಿಸಬಲ್ಲದು. ಹಣ್ಣುಗಳು ಗುಂಪಾಗಿಯೂ, ಒಂಟಿಯಾಗಿಯೂ ಬೆಳೆಯುತ್ತವೆ. ಹಣ್ಣುಗಳ ಗಾತ್ರ 4ಸೆಂ.ಮೀ. ಉದ್ದ ಎರಡೂವರೆ ಸೆಂ.ಮೀ. ಅಗಲ. ಹಣ್ಣಿನ ಮೇಲ್ಮೈ ನುಣುಪಾಗಿರುತ್ತದೆ. ಬಣ್ಣ ಹಳದಿ ಮಿಶ್ರ ಹಸುರು. ಹಣ್ಣಿನಲ್ಲಿ ಮಾಂಸಲವಾದ ತಿರುಳು ಮತ್ತು ಗಟ್ಟಿಯಾದ ಒಂದು ಬೀಜ ಇರುತ್ತದೆ. ಅಳಲೆಯ ಮರದಲ್ಲಿ ಹಣ್ಣುಗಳ ಆಕಾರ, ಗಾತ್ರ ಅಥವಾ ಇಳುವರಿ ಏಕರೂಪತೆ ಹೊಂದಿರುವುದಿಲ್ಲ.

ಕೃಷಿ : ಅಳಲೆಯು ಎಲ್ಲಾ ಪ್ರದೇಶಗಳಲ್ಲಿ ಸುಲಭವಾಗಿ ಬೆಳೆಯುತ್ತದೆ. ಆದರೆ ಜಿಗುಟು ಮಣ್ಣು ಮತ್ತು ಮರಳು ಮಿಶ್ರಣ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅಳಲೆಯ ಬೀಜದಿಂದ

ಸಸ್ಯಸಂವರ್ಧನೆ ಮಾಡಬಹುದು. ಜನವರಿ-ಮಾರ್ಚ್ ತಿಂಗಳಿನಲ್ಲಿ ಕಾಯಿ ಪಕ್ವಗೊಳ್ಳುತ್ತದೆ. ಅರಿಶಿನ ಬಣ್ಣಕ್ಕೆ ತಿರುಗಿದ ಹಣ್ಣುಗಳನ್ನು ಬಿಡಿಸಿ ಬೀಜವನ್ನು ಬೇರ್ಪಡಿಸಿ ಬಿತ್ತನೆಗೆ ಬಳಸುತ್ತಾರೆ. ಹಣ್ಣು ಬಿಡಿಸಿದ ಮೇಲೆ ಆರು ತಿಂಗಳ ತರುವಾಯ ಬಿತ್ತಿದರೆ ಉತ್ತಮ.

ಮರದಿಂದ ಉದುರಿದ ಕಾಯಿಗಳನ್ನು ಸಗಣಿ ಬಗ್ಗಡದಲ್ಲಿ ಎರಡು ವಾರ ಹುದುಗಲು ಬಿಟ್ಟಾಗ ಬೀಜಗಳು ಮೊಳಕೆ ಬರುತ್ತವೆ. ಈ ರೀತಿ ಮಾಡುವುದರಿಂದ ಬೀಜದಿಂದ ಉತ್ಪಾದಿಸಿದ ಸಸಿಗಳು ಚೆನ್ನಾಗಿ ಬೆಳೆಯುತ್ತವೆ. ಇದನ್ನು ಸಾಲಿನಿಂದ ಸಾಲಿಗೆ 20 ಸೆಂ.ಮೀ. ಮತ್ತು ಬೀಜದಿಂದ ಬೀಜಕ್ಕೆ 5 ಸೆಂ.ಮೀ. ಅಂತರವಿರುವಂತೆ ಬಿತ್ತಬೇಕು. ಸಸಿಗಳು 3-5 ಸೆಂ.ಮೀ. ಎತ್ತರ ಬೆಳೆದಾಗ ಮಣ್ಣು, ಮರಳು ಮತ್ತು ಸಾವಯವ ಗೊಬ್ಬರಗಳನ್ನು ಮಿಶ್ರಗೊಳಿಸಿದ ಪಾಲಿಥಿನ್ ಚೀಲಗಳಲ್ಲಿ ಬೆಳೆಸಬಹುದು. ಕಾಂಡದ ತುಂಡುಗಳಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು.

ಮಳೆಗಾಲಕ್ಕೆ ಮೊದಲು ಭೂಮಿಯನ್ನು ಸಾವಯವ ಗೊಬ್ಬರಗಳನ್ನು ಹಾಕಿ ಸಿದ್ಧಪಡಿಸಿಕೊಳ್ಳಬೇಕು. ಅನಂತರ ಸಸಿಗಳನ್ನು 45 ಸೆಂ.ಮೀ. ಆಳ 45 ಸೆಂ.ಮೀ. ಅಗಲ 45 ಸೆಂ.ಮೀ ಉದ್ದವಿರುವಂತೆ ಗುಂಡಿಗಳನ್ನು ತೆಗೆದು ಗಿಡದಿಂದ ಗಿಡಕ್ಕೆ ಮತ್ತು ಸಾಲಿನಿಂದ ಸಾಲಿಗೆ 10 ಮೀ. ಅಂತರವಿರುವಂತೆ ನಾಟಿ ಮಾಡಬೇಕು.

ಅಳಲೆಯ ಮರ ಪ್ರಾಕೃತಿಕವಾಗಿ ಸಿಗುವ ಮಳೆಯ ನೀರನ್ನೇ ಅವಲಂಬಿಸಿ ಬೆಳೆಯುತ್ತದೆ. ಬೇಸಗೆ ಕಾಲದಲ್ಲಿ ಮಾತ್ರ ನೀರನ್ನು ಒದಗಿಸಬೇಕಾಗುತ್ತದೆ.

ಕೀಟ ಬಾಧೆ : ಅಳಲೆ ಮರದಲ್ಲಿ ಹೂವು ಕಾಯಿ ತೊಟ್ಟಿಗೆ ಇರುವೆಗಳು ಬರುತ್ತವೆ. ಇವು ಕೀಟಗಳನ್ನು ನಿಯಂತ್ರಿಸುತ್ತವೆ. ಕೀಟಗಳು ಇಡುವ ಮೊಟ್ಟೆಗಳನ್ನು ತಿಂದು ನಾಶ ಮಾಡುತ್ತವೆ.

ಉಪಯೋಗಗಳು : ಇದು ವಾತ, ಪಿತ್ತ ಮತ್ತು ನೆಗಡಿ, ಕೆಮ್ಮು ಜ್ವರ ಮುಂತಾದವುಗಳಿಗೆ ಕಾಮಾಲೆ, ಅಸ್ತಮಾ, ಮೂಲವ್ಯಾದಿ ಮತ್ತು ಹೃದ್ರೋಗದಂತಹ ಗಂಭೀರ ಬೇನೆಗಳಿಗೆ ಅಳಲೆಕಾಯಿ ಪರಿಣಾಮಕಾರಿಯಾದ ಔಷಧಿಯಾಗಿದೆ. ದೇಹದ ಯಾವುದೇ ಭಾಗದಲ್ಲಿ ಗಾಯಗಳಾದರೂ ಅಳಲೆಕಾಯಿ ರಸ ಹಚ್ಚಬಹುದು. ಬಹುತೇಕ ಚರ್ಮರೋಗಗಳಾದ ಬ್ಯಾಕ್ಟೀರಿಯಾ ಮತ್ತು ಫಂಗಸ್‌ಗಳಂತಹ ರೋಗಾಣುಗಳನ್ನು ನಿಯಂತ್ರಿಸಲು ಅಳಲೆಕಾಯಿ ಆಂಟಿ ಬಯೋಟಿಕ್‌ನಂತೆ ಕೆಲಸ ಮಾಡುತ್ತದೆ.

ಅಳಲೆ ಕಾಯಿಯ ಪುಡಿಯನ್ನು ನೀರಿನೊಂದಿಗೆ ಬೆರೆಸಿ ಬಾಯಿ ಮುಕ್ಕಳಿಸಿ ಉಗುಳುವುದರಿಂದ ಬಾಯಿಹುಣ್ಣು ಮತ್ತಿತರ ವಸಡು ರೋಗ ಗುಣವಾಗುತ್ತದೆ.

ಜೀರ್ಣ ಶಕ್ತಿಯನ್ನು ವರ್ಧಿಸಲು ಮಲಬದ್ಧತೆಯನ್ನು ನೀಗಿಸಲು ಎಲ್ಲಾ ಪ್ರಕಾರದ ಕಣ್ಣುಗಳ ಬೇನೆಗೂ ಪ್ರತಿದಿನ ಮುಂಜಾನೆ ಅಳಲೆ ಕಾಯಿ ಕಷಾಯವನ್ನು ಕುಡಿದರೆ ಉಷ್ಣತೆಯನ್ನು ಸಮತೋತಲನಗೊಳಿಸುವದರ ಜೊತೆಗೆ ದೇಹದಲ್ಲಿ ಶೇಖರಿಸಲ್ಪಟ್ಟ ಅನಗತ್ಯ ಕೊಬ್ಬನ್ನು ಕರಗಿಸುತ್ತದೆ.


ಹಿರಿಯರ ಅಭಿಪ್ರಾಯದಂತೆ ಈ ಹೇಳಿಕೆಗಳನ್ನು ನೀಡಲಾಗಿದೆ.ಇಂದಿಗೂ ಮನೆಯಲ್ಲಿ ಕೆಲವು ಹಳೆಯ ಕಾಲದ ವೈದ್ಯರನ್ನು ಅಳಲೆಕಾಯಿ ಪಂಡಿತರು ಎಂದು ಕರೆಯುತ್ತಾರೆ. ಏಕೆಂದರೆ ವಿಪುಲವಾದ ಶಕ್ತಿಯನ್ನು ಹೊಂದಿದ ಅಳಲೆಕಾಯಿಯನ್ನು ಅವರು ಚೂರ್ಣ ಮಾಡಿ ತಮಗೆ ತಿಳಿದ ಹಾಗೂ ತಿಳಿಯದ ಕಾಯಿಲೆಗಳಿಗೂ ಮದ್ದಾಗಿ ಬಳಸುತ್ತಿದ್ದರಿಂದ ಇದರ ಸೇವನೆಯಿಂದ ದುಷ್ಪರಿಣಾಮವಿಲ್ಲದಿರುವುದು ಇದರ ವೈಶಿಷ್ಟ್ಯ.

ಎ.ಎಲ್.ಕೆ.

ಆಂಧ್ರಪ್ರದೇಶದ ಕೃಷಿ ಉಪಕರಣಗಳು ದೇಸಿ ಕೃಷಿಯನ್ನು ವ್ಯವಸಾಯ, ಬೇಸಾಯ, ಒಕ್ಕಲುತನ, ಸಾಗುವಳಿ ಮುಂತಾದ ಪದಗಳಿಂದ ಕರೆಯುವರು. ಸಾಮಾನ್ಯ ಅರ್ಥದಲ್ಲಿ ಕೃಷಿ ಎಂದರೆ ಹೊಲವನ್ನು ಉಳುವುದು, ಬಿತ್ತನೆ, ನೀರು ಒದಗಿಸುವುದು, ಕುಯಿಲು ಎಂದು ಹೇಳಬಹುದು. ಪುರಾಣ, ವೇದೋಪನಿಷತ್ತುಗಳಲ್ಲಿ ಕೃಷಿ ಸಮೃದ್ಧಿಯ ಬಗ್ಗೆ ಉಲ್ಲೇಖಗಳಿವೆ. ಭಾರತ ಪುರಾಣದ ಬಲರಾಮನು ನೇಗಿಲನ್ನು ತನ್ನ ಆಯುಧವಾಗಿ ಮಾಡಿಕೊಂಡಿದ್ದ. ಈ ರೀತಿಯಾಗಿ ಮಾನವನು ಕೃಷಿಕಣದಿಂದ ಇಂದಿನವರೆಗೆ ವಿವಿಧ ರೀತಿಯ ಕೃಷಿ ಉಪಕರಣಗಳನ್ನು ಉಪಯೋಗಿಸುತ್ತಾ ಬಂದಿದ್ದಾನೆ. ಭೂಮಿಯನ್ನು ಉಳುಮೆ ಮಾಡುವುದರಿಂದ ಹಿಡಿದು ಧಾನ್ಯವನ್ನು ಮನೆಗೆ ಸಾಗಿಸುವ ತನಕ ಎಲ್ಲಾ ಹಂತಗಳಲ್ಲಿ ವಿವಿಧ ರೀತಿಯ ಕೃಷಿ ಉಪಕರಣಗಳನ್ನು ಮನುಷ್ಯನು ಉಪಯೋಗಿಸುತ್ತಾ ಬಂದಿದ್ದಾನೆ.

ಪ್ರಾರಂಭದಲ್ಲಿ ಕೃಷಿಕ ಮೊನೆಚಾದ ಕಲ್ಲುಗಳಿಂದ, ಚೂಪಾದ ಗಟ್ಟಿ ಕಟ್ಟಿಗೆಯಿಂದ ದನಗಳ ಕೊಂಬುಗಳಿಂದ ನೆಲವನ್ನು ಅಗೆದು ಬೀಜ ಹಾಕುತ್ತಿದ್ದ. ಈಗಲೂ ಯಾವ ಉಪಕರಣವೂ ಇಲ್ಲದ ಸಂದರ್ಭದಲ್ಲಿ ಮನೆ ಅಂಗಳದಲ್ಲಿ ಬೀಜ ಬಿತ್ತುವುದಕ್ಕೆ, ಪಾತಿ ಮಾಡುವುದಕ್ಕೆ ಚೂಪಾದ ಕಲ್ಲು, ಕಟ್ಟಿಗೆಗಳನ್ನೆ ಉಪಯೋಗಿಸುವುದನ್ನು ನೋಡಿದರೆ ಮನುಷ್ಯನ ಕೃಷಿ, ಪರಿಸರದಲ್ಲಿ ಸಿಗುವ ವಸ್ತುಗಳಿಂದಲೆ ಪ್ರಾರಂಭವಾಯಿತೆಂದು ಹೇಳಬಹುದು.

ಅನಂತರದ ದಿನಗಳಲ್ಲಿ ಅನುಭವದಿಂದ ಬೇಕು ಬೇಡಗಳಿಗೆ ತಕ್ಕದಾದ ಪ್ರಕೃತಿಯಲ್ಲಿ ಸಿಗುವ ಗಿಡದ ಕಟ್ಟಿಗೆ, ಸಸ್ಯಗಳು, ಬಿದುರು, ಸಸ್ಯಗಳ ನಾರು, ಕಲ್ಲು, ದನಕರುಗಳ ಚರ್ಮ ಮುಂತಾದವುಗಳಿಂದ ಬೇಕಾದ ಕೃಷಿ ಉಪಕರಣಗಳನ್ನು ತಯಾರು ಮಾಡಿಕೊಂಡ. ಇವೆಲ್ಲವನ್ನೂ ಕೃಷಿಕನ ಆಯುಧಗಳೆಂದೆ ಹೇಳಬಹುದು. ಇದರಲ್ಲಿ ಮುಖ್ಯವಾಗಿ ಕೊಂಡುಕಟ್ಟಿಗೆ ಸಹಾಯದಿಂದ ಕೃಷಿ ಪ್ರಾರಂಭವಾಗಿ ನೇಗಿಲು ಆಗಿ ಪರಿವರ್ತನೆ ಆದ ಮೇಲೆ ಕೃಷಿ ಕ್ಷೇತ್ರದಲ್ಲಿ ಕ್ಷಿಪ್ರಗತಿಯಲ್ಲಿ ಬದಲಾವಣೆಗಳಾದವು. ಈ ರೀತಿ ಭೂಮಿಯನ್ನು ಉಳುಮೆ ಮಾಡುವುದಕ್ಕೆ ನಾಡು ನೇಗಿಲು ಅಸ್ತಿತ್ವಕ್ಕೆ ಬಂದ ಮೇಲೆ ಗುದ್ದಲಿ, ಪಿಕಾಸಿ, ಗಂಟೆ, ಹಲಬೆ, ಸನಿಕೆ, ಕುಂಟಿ, ಕೊರಡು ಮುಂತಾದವು ಸದಾ ಭೂಮಿಯನ್ನು ತೋಡಲು ಉಪಯೋಗಕ್ಕೆ ಬಂದವು. ಸಾಗುವಳಿ ಮಾಡಲು ಕೈಗುದ್ದಲಿ, ಸಸ್ಯಗಳಿಗೆ ನೀರು ಹಾಯಿಸಲು ಏತ, ಕಪಿಲೆ, ನೀರನ್ನು ಒಂದೆ ಪ್ರಮಾಣದಲ್ಲಿ ಹಾಯಿಸಲು ಸನಿಕೆ ಬೇಕು. ಸನಿಕೆ ಇಂದ ಬದುಗಳನ್ನು ಮಾಡುವುದಲ್ಲದೆ, ತಗ್ಗು ದಿಣ್ಣೆಗಳನ್ನು ಸರಿಪಡಿಸಿ ಸಮಾನವಾಗಿ ಎಲ್ಲಾ ಕಡೆಯೂ ನೀರು ಹರಿಯುವಂತೆ ಮಾಡಬಹುದು. ಮಣ್ಣಿನ ಹೆಂಟೆಗಳನ್ನು ಪುಡಿಮಾಡುವ 'ಹೆಂಟೆ ಮರ', ಕಳೆಯನ್ನು ತೆಗೆಯುವ ಉಪಕರಣಗಳು, ಕುಯಿಲು ಮಾಡುವುದಕ್ಕೆ, ಸುಗ್ಗಿ ಮಾಡಲು, ಧಾನ್ಯವನ್ನು


ಆಂಧ್ರಪ್ರದೇಶ
ಆದಿಲಾಬಾದ್
ಕರೀಂನಗರ
ಮೆದಕ್
ವಾರಂಗಲ್
ಖಮ್ಮಂ
ರಂಗಾರೆಡ್ಡಿ
ನಲ್ಗೊಂಡ
ಪೂರ್ವ ಗೋದಾವರಿ
ಪಶ್ಚಿಮ ಗೋದಾವರಿ
ಕೃಷ್ಣಾ
ಗುಂಟೂರು
ಮೆಹಬೂಬ್ ನಗರ್
ಕರ್ನೂಲ
ಪ್ರಕಾಶಂ
ಅನಂತಪುರಂ
ಕಡಪ
ನೆಲ್ಲೂರು
ಚಿತ್ತೂರು

ಸಾಗಿಸಲು ಅನೇಕ ಕೃಷಿ ಉಪಕರಣಗಳು ಬಳಕೆಗೆ ಬಂದಿವೆ. ಕೃಷಿ ಮಾಡುವುದಕ್ಕೆ ಆಂಧ್ರಪ್ರದೇಶ್ ರೈತರು ಉಪಯೋಗಿಸುತ್ತಿರುವ ಅನೇಕ ಕೃಷಿ ಉಪಕರಣಗಳನ್ನು ಕೆಳಗಿನಂತೆ ವಿಂಗಡಿಸಬಹುದು.

1. ನೆಲ ಬಗೆಯುವ ಉಪಕರಣಗಳು : ವಿವಿಧ ರೀತಿಯ ಹಾರೆ, ಕೋಲುಹಾರೆ, ಗುದ್ದಲಿ, ಕೈಗುದ್ದಲಿ, ಗೊರೆ, ಪಿಕಾಸಿ, ವಿವಿಧ ರೀತಿಯ ಸನಿಕೆ ಮುಂತಾದವು.
2. ಉಳುಮೆ, ಬಿತ್ತನೆ ಕಳೆ ಕೀಳುವ ಉಪಕರಣಗಳು : ನೇಗಿಲು, ಕೂರಿಗೆ, ಕುಂಟೆ, ಕೊರಕು, ಹಲುಬೆ, ಜಡ್ಡೆ ಮುಂತಾದವು.
3. ಜಲಪರಿಕರಗಳು : ಗೂಡು, ಏತ, ಕಪಿಲೆ.
4. ಬೆಳೆ ಸಂರಕ್ಷಣೆಯ ಉಪಕರಣಗಳು.
5. ಕೊಯ್ಲು ಉಪಕರಣಗಳು : ಮಚ್ಚು, ಕತ್ತಿ, ಬಿಚ್ಚುಗತ್ತಿ, ಸೊಪ್ಪುಕತ್ತಿ, ಮುಂತಾದವು.
6. ಸಂಸ್ಕರಣೆ, ಸಂಗ್ರಹಣಾ ಉಪಕರಣಗಳು : ರಾಶಿ ಸಲಕರಣೆಗಳು, ಗುಂಡು, ಮೇಟಿ, ಹಗ್ಗ, ರಾಶಿಕುಂಟೆ, ಗಾಣ, ಬೀಸುವಕಲ್ಲು, ಜರಡಿಗಳು ಮುಂತಾದವು.
7. ಸಾಗಾಟದ ಉಪಕರಣಗಳು : ವಿವಿಧ ರೀತಿಯ ಗಾಡಿಗಳು.
8. ತಟ್ಟೆ, ಬುಟ್ಟಿ, ಪುಟ್ಟಿ, ಮಂಕರಿ ಮುಂತಾದವು.
9. ಧಾನ್ಯ ಸಂರಕ್ಷಣೆಯ ಉಪಕರಣಗಳು.
10. ಏಣಿ, ಪೊರಕೆ ಮತ್ತು ಅಳತೆ ಉಪಕರಣಗಳು.
11. ಜಾನುವಾರು ಮತ್ತು ಹೈನುಗಾರಿಕೆ ಉಪಕರಣಗಳು : ಮೂಗುದಾರ, ಕೊರಟ, ಪಟ್ಟೆ, ರಸಿಲೆಯ ದಾರಗಳು ಮುಂತಾದವು.
12. ಇತರ ಉಪಕರಣಗಳು : ಚಿಕ್ಕಮು ಪೆರೆಕಾಯಿ ಮಮಲ್ಲತಿರುಗಕೈ (ಚೆಕ್ಕಾರಿ, ದೊಡ್ಡ ಚೆಕ್ಕಾರಿ) ಚೆಕ್ಕರಪಾರ, ದೊಡ್ಡಚೈಕರಕಪಾರ ಮುಂತಾದವು.

1. ನೆಲ ಬಗೆಯುವ ಉಪಕರಣಗಳು : ವಿವಿಧ ರೀತಿಯ ಗಾರೆ, ಗುದ್ದು, ಕೈಗುದ್ದು, ಗೊರೆ, ಪಿಕಾಸಿ, ವಿವಿಧ ರೀತಿಯ ಸಲಕೆಗಳನ್ನು ನೆಲ ಬಗೆಯುವುದಕ್ಕೆ ಉಪಯೋಗಿಸುತ್ತಾರೆ. ಕೃಷಿ ಬದುಕಿನಲ್ಲಿ ಇವು ಬಹುಮುಖ್ಯವಾದವು. ಕೈತೋಟ, ಪುಷ್ಪಕೃಷಿ, ತರಕಾರಿ ಅಂತಹ ಕೃಷಿ ಮಾಡುವವರಿಗೆ ಈ ಉಪಕರಣಗಳೇ ಆಧಾರ. ಗದ್ದೆಗಳಲ್ಲಿ ಇವನ್ನು ಬಳಸುವುದು ಕಡಿಮೆ. ಕೃಷಿ ಬದುಕಿನ ಎಲ್ಲಾ ಸ್ತರಗಳಿಗೂ ನೆಲ ಬಗೆಯುವ ಉಪಕರಣಗಳು ಪರಿಚಿತ. ಆಂಧ್ರಪ್ರದೇಶದ ರಾಯಲಸೀಮ ಮತ್ತು ತೆಲಂಗಾಣ ಪ್ರಾಂತ, ಕೋಕ್ತಾ ಜಿಲ್ಲೆಗಳಲ್ಲಿ ಇವುಗಳನ್ನು ಉಪಯೋಗಿಸುತ್ತಾರೆ. ಆದರೆ ವಿವಿಧ ರೀತಿಯ ಹಾರೆ ಗುದ್ದಲಿ, ಕೈಗುದ್ದಲಿ, ಪಿಕಾಸಿಗಳನ್ನು ಹೆಚ್ಚಿಗೆ ರಾಯಲಸೀಮೆ ಮತ್ತು ತೆಲಂಗಾಣ ಜಿಲ್ಲೆಗಳಲ್ಲಿ ಉಪಯೋಗಿಸುತ್ತಾರೆ. ತೋಟಗಾರಿಕೆ ಹೆಚ್ಚಾಗಿರುವ ಈ ಪ್ರಾಂತಗಳಲ್ಲಿ ತಲತಲಾಂತರದಿಂದ ಈ ಉಪಕರಣಗಳು ಬಳಕೆಯಲ್ಲಿವೆ.

ವಿವಿಧ ರೀತಿಯ ಹಾರೆ : ತೆಲುಗಿನಲ್ಲಿ ಹಾರೆಯನ್ನ 'ಗಡಪಾರ' ಅನ್ನುತ್ತಾರೆ. ಕೆಲಸಕ್ಕೆ ತಕ್ಕ ಹಾಗೆ ಹಾರೆಯ ಸ್ವರೂಪದಲ್ಲಿ ಬದಲಾವಣೆಗಳು ಬಂದಿವೆ. ಇವನ್ನು ಗಡ್ಡಪಾರ (ಹಾರೆ) ಚಿಕ್ಕದು ದೊಡ್ಡದು). ಉದ್ದ ಕಡಿಮೆ ಇರುವುದನ್ನು ಚಿಕ್ಕಹಾರೆ, ಉದ್ದ ಇರುವುದನ್ನು ಉದ್ದಹಾರೆ. ಉದ್ದ ಕಡಿಮೆ ಇರುವ ಹಾರೆ ಸುಮಾರು ನಾಲ್ಕು ಅಡಿ ಉದ್ದ ಇರುತ್ತದೆ. ಉದ್ದದ ಹಾರೆ ಆರು ಅಡಿ ಇರುತ್ತದೆ.

ಚಿಕ್ಕಹಾರೆ : ದಪ್ಪವಾಗಿದ್ದು ಒಂದು ಕಡೆ ಮಾತ್ರ ಚೂಪಾಗಿ ಇರುತ್ತದೆ. ಕಲ್ಲು ಮಿಶ್ರಿತ ನೆಲವನ್ನು ಬಗೆಯುವುದಕ್ಕೆ ಹಣ್ಣಿನ ಗಿಡಗಳನ್ನು ನೆಡುವುದಕ್ಕೆ ಬೇಕಾದ ಗುಂಡಿ ತೆಗೆಯಲು ಉಪಯೋಗಿಸುತ್ತಾರೆ.

ಉದ್ದದ ಹಾರೆ : ನೆಲ ಬಗೆಯುವುದಕ್ಕೆ, ಬಾವಿ ತೆಗೆಯುವುದಕ್ಕೆ, ಬುನಾದಿ ತೆಗೆಯುವುದಕ್ಕೆ ಸಂದರ್ಭಾನುಸಾರವಾಗಿ ಇದನ್ನು ಉಪಯೋಗಿಸುತ್ತಾರೆ. ಇದು ಸುಮಾರು ಆರು ಅಡಿ ಉದ್ದ ಇರುತ್ತದೆ. ಒಂದು ಕಡೆ ಮಾತ್ರ ಚೂಪಾಗಿ ಇರುತ್ತದೆ.

ಚಿಕ್ಕಗಡ್ಡಪಾರ : ಇದನ್ನು ನಾಲಗೆಯ ಹಾರೆ ಎಂದು ಕರೆಯುತ್ತಾರೆ. ಬೇಸಾಯದಲ್ಲಿ ಇದರ ಪ್ರಾಮುಖ್ಯ ಜಾಸ್ತಿ. ಗುಡ್ಡಗಳು ಕಡಿಯುವುದಕ್ಕೆ ಬಾವಿ ತೆಗೆಯುವುದಕ್ಕೆ, ದೊಡ್ಡಗುಂಡಿಗಳು ತೆಗೆಯುವುದಕ್ಕೆ ನಾಲಗೆಯ ಹಾರೆ ಬೇಕು. ಒಂದು ಕಡೆ ಚೂಪಾಗಿರುತ್ತದೆ. ಇನ್ನೊಂದು ಕಡೆ ಕೈಮುಂಭಾಗದಷ್ಟು ಅಗಲವಾಗಿರುತ್ತದೆ. ಚೂಪಾಗಿರುವ ತುದಿಯಿಂದ ಗುಂಡಿ ಮುಂತಾದವುಗಳನ್ನು ಮಾಡಿ ಇನ್ನೊಂದು ಕಡೆಯಿಂದ ಗುಂಡಿಯ ಅಂಚುಗಳನ್ನು ಅಳತೆಗೆ ತಕ್ಕ ಹಾಗೆ ಸರಿಮಾಡುತ್ತಾರೆ. ಅದಲ್ಲದೆ ಗುಂಡಿ ಮಾಡುವಾಗ ಬರುವ ಬೇರುಗಳು, ಕಲ್ಲುಗಳನ್ನು ಈ ನಾಲಗೆ ಇರುವ ಕಡೆಯಿಂದಲೆ ತೆಗೆಯುತ್ತಾರೆ. ದೊಡ್ಡ ಕಲ್ಲುಗಳನ್ನು ಉರುಳಿಸುವಾಗ ಕಲ್ಲಿನ ಸಂಧಿಯಲ್ಲಿ ನಾಲಗೆ ಇರುವ ಕಡೆ ತೂರಿಸಿ ಉರುಳಿಸುತ್ತಾರೆ. ರಾಯಲಸೀಮದ ಹೆಚ್ಚಿನ ಪ್ರದೇಶಗಳಲ್ಲಿ ನಾಲಗೆಯ ಹಾರೆ ಬಳಕೆ ಹೆಚ್ಚಾಗಿರುತ್ತದೆ.

ಇಲಿಗನ ಹಾರೆ : ಗದ್ದೆ, ಹೊಲಗಳಲ್ಲಿ ಇಲಿ ಹಿಡಿಯುವುದಕ್ಕೆ ಯಾನಾದಿಗರು ಇದನ್ನು ಉಪಯೋಗಿಸುತ್ತಾರೆ. ಇದರ ಉದ್ದ ಸುಮಾರು ನಾಲ್ಕು. ಒಂದು ಕಡೆ ಮಾತ್ರ ಚೂಪಾಗಿ ಇರುತ್ತದೆ.

ಮೋಟು ಗಡಾರಿ : ಇದು ಮೂರು ಅಡಿಯಿಂದ ನಾಲ್ಕು ಅಡಿ ಇದ್ದು ದಪ್ಪಗೆ ಇರುತ್ತದೆ. ಅರಿಸಿನ, ಕೆಂಗಹೆಂಡೆ ಮುಂತಾದ ಗಟ್ಟಿಪದಾರ್ಥಗಳನ್ನು ಪುಡಿಮಾಡುವುದಕ್ಕೆ ಮಾತ್ರ ಇದನ್ನು ಉಪಯೋಗಿಸುತ್ತಾರೆ. ಕಲ್ಲಿನ ಕಂಬಗಳನ್ನು ಉರುಳಿಸುವ ಎರಡು ಗಡಾರಿಗಳನ್ನು ಕೆಳಗಡೆ ಇಟ್ಟು ಸುಲಭವಾಗಿ ಉರುಳಿಸುತ್ತಾರೆ.

ಗುದ್ದಲಿ : ತೆಲುಗಿನಲ್ಲಿ ಗುದ್ದಲಿಯನ್ನು ಗುದ್ದಲಿ ಎಂದೆ ಕರೆಯುತ್ತಾರೆ. ಇವು ಎರಡು ವಿಧಗಳಿವೆ. ದೊಡ್ಡ ಗುದ್ದಲಿ, ಕೈ ಗುದ್ದಲಿ. ದೊಡ್ಡ ಗುದ್ದಲಿಯಿಂದ ಗುಡ್ಡೆ ಹಾಕಿದ ಮಣ್ಣನ್ನು, ತಿಪ್ಪೆಗೊಬ್ಬರವನ್ನು, ಪಾತಿಗಳನ್ನು ಸಡಿಲ ಮಾಡಬಹುದು. ಬೀನ್ಸ್, ಆಲುಗಡ್ಡೆ ಮುಂತಾದ ತೋಟಗಾರಿಕೆಯಲ್ಲಿ ಬದುಗಳನ್ನು ಸುರೆಯಿಂದ ಮಾಡುವುದಕ್ಕೆ ಮುಂಚಿತವಾಗಿ ದೊಡ್ಡ ಗುದ್ದಲಿಯಿಂದ ಸಣ್ಣ ಕಾಲುವೆಗಳಲ್ಲಿನ ಮಣ್ಣನ್ನು ಸಡಿಲ ಮಾಡುತ್ತಾರೆ. ಈ ಗುದ್ದಲಿಯ ಹಡೆಯನ್ನು ಹಟ್ಟಿಮರದಿಂದ ಮಾಡಿರುತ್ತಾರೆ. ಬಗೆಯುವ ಭಾಗವನ್ನು ಕಬ್ಬಿಣದಿಂದ ಮಾಡಿರುತ್ತಾರೆ. ಇದನ್ನು ಗಂಡಸರು ಮಾತ್ರ ಹೆಚ್ಚಿಗೆ ಉಪಯೋಗಿಸುತ್ತಾರೆ. ತೋಟಗಾರಿಕೆ ಇರುವವರಿಗೆ ತೋಟಗಾರಿಕೆಯ ಪ್ರಾರಂಭದ ದಿನಗಳಲ್ಲಿ ಇದರ ಉಪಯೋಗ ಹೆಚ್ಚಾಗಿರುತ್ತದೆ. ನೆಲ ಸಡಿಲವಾಗಿದ್ದರೆ ನೇಗಿಲಿನಿಂದ ಉಳುಮೆ ಮಾಡುವುದಿಲ್ಲ. ಬದಲಾಗಿ ದೊಡ್ಡಗುದ್ದಲಿಯಿಂದಲೆ ಸಣ್ಣ ಸಣ್ಣ ತೋಟಗಾರಿಕೆಯನ್ನು ಮಾಡಬಹುದು.

ಕೈ ಗುದ್ದಲಿ : ಇದರ ಕಾವು (ಹಿಡಿ) ಸುಮಾರು ಒಂದು ಅಡಿ ಉದ್ದ ಇರುತ್ತದೆ. ಇದನ್ನು ಹೆಚ್ಚಿಗೆ ಕಳೆ ತೆಗೆಯುವುದಕ್ಕೆ ಉಪಯೋಗಿಸುತ್ತಾರೆ. ಮುಖ್ಯವಾಗಿ ಮಿರ್ಚಿ, ಆಲುಗಡ್ಡೆ, ಶೇಂಗಾ, ಬೀನ್ಸ್ ಗಿಡಗಳ ಮಧ್ಯದಲ್ಲಿರುವ ಕಳೆ ಇದರಿಂದ ತೆಗೆದು ನೆಲ ಸಡಿಲ ಮಾಡಿ ಬುಡಗಳಿಗೆ ಮಣ್ಣು ಸೇರಿಸುತ್ತಾರೆ. ಮನೆಯಂಗಳದ ಅಥವಾ ಹಿತ್ತಲಿನಲ್ಲಿನ ಹೂಗಿಡಗಳು, ಹಣ್ಣಿನ ಗಿಡಗಳನ್ನು ನೆಡಲು ಸಹ ಬಳಸುತ್ತಾರೆ. ರಾಯಲಸೀಮೆ ಮತ್ತು ತೆಲಂಗಾಣ ಪ್ರಾಂತದ ರೈತರು ಗುದ್ದಲಿಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ.

ಪಿಕಾಸಿ : ತೆಲುಗಿನಲ್ಲಿ ಇದನ್ನು ಪಿಕ್ಕಿಸಿ ಅನ್ನುತ್ತಾರೆ. ಗುದ್ದಲಿಯನ್ನೇ ಹೋಲುವ ಇದಕ್ಕೆ ಎರಡು ಬಾಯಿ. ಒಂದು ಬಾಯಿ ಚೂಪಾಗಿ ಇನ್ನೊಂದು ಚಪ್ಪಟೆಯಾಗಿರುತ್ತವೆ. ಸಣ್ಣ ರೈತರು ಗಟ್ಟಿನೆಲವನ್ನು ಸಡಿಲ ಮಾಡುವುದಕ್ಕೆ, ತೋಟಗಾರಿಕೆ ಕೆಲಸಗಳನ್ನು ಮಾಡಲು ಉಪಯೋಗಿಸುತ್ತಾರೆ. ಗಡಪ ಕಬ್ಬಿಣದಿಂದ ತಯಾರಿಸುವ ಈ ಪಿಕಾಸಿಗೆ ಹಗುರವಾದ ಗಟ್ಟಿಮುಟ್ಟಾದ ಕಾವನ್ನು ಜೋಡಿಸಲಾಗುತ್ತದೆ. ಪಿಕಾಸಿಯ ಚೂಪಾದ ಭಾಗದಿಂದ ಮಣ್ಣನ್ನು ಸಡಿಲಮಾಡಿ, ಚಪ್ಪಟೆಯಾದ ಭಾಗದಿಂದ ಸಡಿಲವಾದ ಮಣ್ಣನ್ನು ಬಗೆಯುತ್ತಾರೆ.

ಸನಿಕೆ : ಇದನ್ನು 'ಶೆನಿಗೆಪಾರ' ಎಂದು ಆಂಧ್ರದ ರಾಯಲಸೀಮೆ ಜನರು ಕರೆಯುತ್ತಾರೆ. ಸನಿಕೆ ಕೆಲಸಕ್ಕೆ ತಕ್ಕ ಹಾಗೆ ಸಣ್ಣಸನಿಕೆ, ಮಧ್ಯಗಾತ್ರದ ಸನಿಕೆ, ದೊಡ್ಡಸನಿಕೆ ಎಂದು ಇರುತ್ತವೆ. ಸಣ್ಣ ಸನಿಕೆಯಿಂದ ಗಿಡಗಳ ಮಧ್ಯೆ ಪಾತಿ, ಬದುಗಳನ್ನು ಮಾಡುತ್ತಾರೆ. ತೋಟಗಾರಿಕೆಯಲ್ಲಿ ದೊಡ್ಡಪಾತಿಗಳನ್ನು ಮಾಡುವುದಕ್ಕೆ ಹಾಯಿಸಲು ಮಧ್ಯಗಾತ್ರದ ಸನಿಕೆ ಉಪಯೋಗಿಸುತ್ತಾರೆ. ಇದರ ತಟ್ಟೆ ಸುಮಾರು ಏಳು ಇಂಚಿನಷ್ಟು ಅಗಲ ಇರುತ್ತದೆ. ಮಣ್ಣನ್ನು ತಟ್ಟೆಗೆ ತುಂಬಲು ಹಾಗೆಯೇ ಗೊಬ್ಬರವನ್ನು ತಟ್ಟಿಗೆ ತುಂಬಲು ದೊಡ್ಡಸನಿಕ ಸಹಾಯವಾಗುತ್ತದೆ. ಹಾರೆ, ಪಿಕಾಸಿ, ಗುದ್ದಲಿಯಿಂದ ಅಗೆದ ಮಣ್ಣನ್ನು ತುಂಬಲು ಸನಿಕೆ ಬಳಕೆಯಾಗುತ್ತದೆ. ಮನೆ ಕಟ್ಟುವವರು ಸಿಮೆಂಟ್ ಕೆಲಸಕ್ಕೆ ಇದನ್ನು ಉಪಯೋಗಿಸುತ್ತಾರೆ.

2. ಉಳುಮೆ : ಬಿತ್ತನೆ, ಕಳೆ ಕೀಳುವ ಉಪಕರಣಗಳು : ಆಂಧ್ರಪ್ರದೇಶದ ಎಲ್ಲಾ ಜಿಲ್ಲೆಗಳಲ್ಲಿ ಉಳಿಮೆ, ಬಿತ್ತನೆ, ಕಳೆಕೀಳುವ ಉಪಕರಣಗಳು ಒಂದೇ ರೀತಿ ಇರುತ್ತವೆ. ಪ್ರಾದೇಶಿಕವಾಗಿ ಇವುಗಳ ಸ್ವರೂಪದಲ್ಲಿ, ಹೆಸರುಗಳಲ್ಲಿ ಸ್ವಲ್ಪ ವ್ಯತ್ಯಾಸಗಳಿದ್ದರೂ ಬಳುಸುವ ವಿಧಾನ, ಬಳಕೆಯಾಗುವ ಸ್ಥಳ ಎಲ್ಲವೂ ಒಂದೇ ರೀತಿ ಇರುತ್ತದೆ.

ನೇಗಿಲು : ಆಂಧ್ರದಲ್ಲಿ ನೇಗಿಲನ್ನು 'ನವಾಗಲಿ' ಎಂದು ರಾಯಲಸೀಮೆಯಲ್ಲಿ 'ಮಡಕ' ಎಂದು ಕರೆಯುತ್ತಾರೆ. ಮನುಷ್ಯನು ವ್ಯವಸಾಯ ಆರಂಭಿಸಿದ ಮೊದಲ ದಿನಗಳಲ್ಲಿ ಭೂಮಿ ಬಗೆಯಲು ಉಪಯೋಗಿಸಿದ. ಮೊದಲು ಬೇಸಾಯದ ಉಪಕರಣ ನೇಗಿಲು ಎಂದು ಹೇಳಿದರೆ ತಪ್ಪಾಗಲಾರದು. ನೇಗಿಲಿನ ವಿಚಾರ ರಾಮಾಯಣ ಮಹಾಭಾರತದ ಪುರಾಣಗಳಲ್ಲಿ ಕಾಣಿಸುತ್ತದೆ. ರಾಮಾಯಣದಲ್ಲಿ ಸೀತೆಯ ಜನನ ನೇಗಿಲಿನಿಂದಲೇ; ಹಾಗೆಯೇ ಭಾರತ ಪುರಾಣದಲ್ಲಿ ಬಲರಾಮನ ಆಯುಧ ನೇಗಿಲು ಆಗಿತ್ತು. ಬಿತ್ತನೆಗೆ ಮುನ್ನ ಗಟ್ಟಿನೆಲ ಉಳುಮೆಮಾಡಲು ಸಣ್ಣಗಾತ್ರದ ನೇಗಿಲನ್ನು ಬಳಸುತ್ತಾರೆ. ರಾಯಲಸೀಮ ಪ್ರಾಂತದಲ್ಲಿ ನೆಲ ಗಡುಸಾಗಿ ಇರುವುದರಿಂದ ಸಣ್ಣ ಗಾತ್ರದ ನೇಗಿಲು ಬಳಸುತ್ತಾರೆ. ಹಾಗೆಯೇ ತೀರಪ್ರಾಂತಗಳಲ್ಲಿನ ನೆಲ ಸಡಿಲವಾಗಿರುವುದರಿಂದ ದೊಡ್ಡಗಾತ್ರದ ನೇಗಿಲುಗಳನ್ನು ಬಳಸುತ್ತಾರೆ.

ಕಟ್ಟಿಗೆ ನೇಗಿಲು ಚೂಪಾದ ತುದಿಗೆ ಕಬ್ಬಿಣದ ಕುಳ (ಕೌರು) ಜೋಡಿಸುತ್ತಾರೆ. ಆ ಕುಳ ನೆಲವನ್ನು 'V' ಆಕಾರದಲ್ಲಿ ಕೊರೆದು ನೇಗಿಲು ಚಲಿಸಲು ಹಗುರ ಮಾಡಿ ಕೊಡುತ್ತದೆ. ನೇಗಿಲನ್ನು ಎಳೆಯಲು ಜೋಡೆತ್ತು ಬಳಸುತ್ತಾರೆ.

ನೇಗಿಲು ಇಡಿಯಾಗಿ ಒಂದೇ ಉಪಕರಣ. ಆದರೆ ಬಾಳು ಹಿಡಿಕೆ, ಈಸು, ಕುಳ, ನೊಗ, ಚಿಟಿಕೆಗಳು ಎಂಬ ಬಿಡಿಭಾಗಗಳು ಇದರಲ್ಲಿ ಇರುತ್ತವೆ. ಇವೆಲ್ಲವನ್ನೂ ಜೋಡಣೆ ಮಾಡಿದಾಗ ನೇಗಿಲು ಆಗುತ್ತದೆ. ಇದಕ್ಕೆ ದಪ್ಪವಾದ ಹಗ್ಗವನ್ನು ಕಟ್ಟಿ ಎತ್ತುಗಳ ಸಹಾಯದಿಂದ ಉಳುಮೆ ಮಾಡುತ್ತಾರೆ. ಆದರೆ ನೊಗ, ಚಿಟಿಕೆಗಳು ಬೇರೆ ಕೃಷಿ ಚಟುವಟಿಕೆಗೂ ಬಳಕೆಯಾಗುತ್ತವೆ. ಬಾಳು ದಪ್ಪವಾಗಿದ್ದು ಇನ್ನುಳಿದ ಭಾಗಗಳನ್ನು ಹಿಡಿದಿಡುತ್ತದೆ. ಬಾಳುಗೆ ಕುಳ ಜೋಡಣೆ ಆಗಿರುತ್ತದೆ. ಇದು ಭೂಮಿಯನ್ನು ಸೀಳುತ್ತದೆ. ಈಸು ನೊಗದಿಂದ ನೇಗಿಲನ್ನು ಎಳೆಯುವ ಸಾಧನ, ಇವೆಲ್ಲವನ್ನೂ ನಿಯಂತ್ರಿಸಿ ನೇಗಿಲನ್ನು ನಿರ್ವಹಣೆ ಮಾಡುವ ಭಾಗವೆ ಹಿಡಿಕೆ. ಆಳವಾಗಿ, ತೇಲಿಸಿ ಉಳುಮೆ ಮಾಡುವುದಕ್ಕೆ ಈಸನ್ನು ನೊಗದ ಹಿಂದೆ ಮುಂದೆ ಕಟ್ಟುತ್ತಾರೆ. ಈ ರೀತಿ ಉಳುಮೆ ಮಾಡುವುದು ಅನುಭವದಿಂದ ಗೊತ್ತಾಗುತ್ತದೆ. ಒಂದು ಜೊತೆ ಎತ್ತುಗಳು ಒಂದು ದಿನದಲ್ಲಿ ಅರ್ಧ ಎಕರೆಯಿಂದ ಮುಕ್ಕಾಲು ಎಕರೆ ಹೊಲವನ್ನು ಉಳುಮೆ ಮಾಡುತ್ತವೆ. ಗದ್ದೆಯನ್ನು ಉಳುಮೆ ಮಾಡುವಾಗ ಎತ್ತುಗಳ ಕಾಲುಗಳಲ್ಲಿ ಹುಣ್ಣಾಗುವುದುಂಟು. ಇಂತಹ ಸಂದರ್ಭಗಳಲ್ಲಿ ಎತ್ತಿನ ಕಾಲುಗಳಿಗೆ ಮದ್ದಿನ ಉಪಚಾರ ಮಾಡುತ್ತಾರೆ. ಕೋಣ ಹೆಚ್ಚಿಗೆ ಇರುವ ಕೃಷ್ಣಜಿಲ್ಲೆ ಮುಂತಾದ ಪ್ರದೇಶಗಳಲ್ಲಿ ಇವುಗಳ ಸಹಾಯದಿಂದ ಉಳುಮೆ ಮಾಡುತ್ತಾರೆ.

ಕೊರಡು : 'ಮರದ ತೊಲೆ'ಯನ್ನು ತೆಲುಗಿನಲ್ಲಿ 'ಪೆಂಟ್ಲಮಾನು' ಅನ್ನುತ್ತಾರೆ. ನೇಗಿಲಿಂದ ನೀರಿಲ್ಲದ ಗದೆ ಉಳುಮೆ ಮಾಡಿದ ಅನಂತರ ದಪ್ಪ ದಪ್ಪ ಹೆಂಟೆಗಳು ಮೇಲಕ್ಕೆ ಬರುತ್ತವೆ. ಬತ್ತದ ಬೆಳೆಗೆ ಉಪಯೋಗಿಸಿದ ನೀರಿಲ್ಲದ ಗದ್ದೆಗಳನ್ನು ಉಳುಮೆ ಮಾಡಿದಾಗ ಬರುವ ಈ ರೀತಿಯ ಹೆಂಟೆಗಳನ್ನು ಪುಡಿ ಮಾಡುವುದಕ್ಕೆ ಕೊರಡನ್ನು, ಮರದ ತೊಲೆಯನ್ನು ಬಳಸುತ್ತಾರೆ.

ಮರದ ತೊಲೆ : ಗಟ್ಟಿಮುಟ್ಟಾದ ದಪ್ಪವಾದ ಮರದ ತುಂಡಿನಿಂದ ಇದನ್ನು ಮಾಡುತ್ತಾರೆ. ಇದರ ಉದ್ದ ಸುಮಾರು ಆರರಿಂದ ಏಳು ಅಡಿ ಇರುತ್ತದೆ. ಇದರ ಮಧ್ಯಭಾಗಕ್ಕೆ ನೊಗ ಕಟ್ಟಿ ಕೂಪ ಮತ್ತು ಹಗ್ಗದ ಸಹಾಯದಿಂದ ಜೋಡಣೆ ಮಾಡಿ ಎತ್ತುಗಳನ್ನು ಕಟ್ಟುತ್ತಾರೆ. ತೊಲೆಯನ್ನು ಎತ್ತುಗಳು ಎಳೆಯುವಾಗ ಮರದ ತೊಲೆಯ ಮೇಲೆ ರೈತನು ಕುಳಿತು ಎತ್ತುಗಳನ್ನು ನಿಯಂತ್ರಿಸುತ್ತಾನೆ. ಹೆಂಟೆಗಳು ಸಹ ಪುಡಿಯಾಗುತ್ತವೆ.

ಕೊರಡು : ಬಗನಿ ಮರದ ತುಂಡು ಅಥವಾ ಎರಡು ಹಲಗೆಗಳನ್ನು ಅರ್ಧ ಗೋಲಾಕಾರದಂತೆ ಜೋಡಿಸಿ ಈ ಉಪಕರಣವನ್ನು ನಿರ್ಮಿಸುತ್ತಾರೆ. ಈ ಮರದ ಉದ್ದ ಎರಡರಿಂದ ಮೂರು ಮೀಟರ್ ಇರುತ್ತದೆ. ಇದಕ್ಕೆ ಮಧ್ಯದಲ್ಲಿ ಎರಡು ಕೋಲುಗಳನ್ನು ಜೋಡಣೆ ಮಾಡುತ್ತಾರೆ. ಈ ಕೋಲುಗಳಲ್ಲಿ ಹಗ್ಗವನ್ನು ಪೋಣಿಸಿ ಹಗ್ಗದಿಂದ ಕೊರಡನ್ನು ನೊಗಕ್ಕೆ

ಕಟ್ಟಿ ಎತ್ತುಗಳಿಂದ ಎಳೆಸುವುದುಂಟು. ಹೆಂಟೆಗಳು ಅರ್ಧ ಗೋಳಾಕಾರದ ಮಧ್ಯೆ ಸತತವಾದ ಘರ್ಷಣೆ ತಿಕ್ಕಾಟದಿಂದ ಪುಡಿಯಾಗುತ್ತವೆ.

ಕುಂಟೆ : ಇದನ್ನು 'ಗುಂಟವ' 'ಗುಂಟಕ' ಎಂದು ಕರೆಯುತ್ತಾರೆ. ಬಯಲುಸೀಮೆಯ ಒಣ ಬೇಸಾಯದಲ್ಲಿ ನೆಲ ಹರಗಲು, ಹದಮಾಡಲು, ಮಣ್ಣು ತಳಮೇಲಾಗಿಸಲು ಕುಂಟೆ ಬಳಸುತ್ತಾರೆ. ಆಂಧ್ರಪ್ರದೇಶದ ರಾಯಲಸೀಮೆಯಲ್ಲಿ ಕುಂಟೆ ಗಟ್ಟಿಮುಟ್ಟಾದ 6 ಅಡಿ ಉದ್ದ, ಎಂಟು ಇಂಚು ದಪ್ಪ ಇರುವ ಮರದ ತೊಲೆಯಿಂದ ಮಾಡುತ್ತಾರೆ. ಈ ತೊಲೆಗೆ 15 ಇಂಚು ಉದ್ದ ಇರುವ ಕಬ್ಬಿಣದ ಹಲ್ಲುಗಳನ್ನು 10 ಇಂಚು ಅಂತರದಲ್ಲಿ ಜೋಡಣೆ ಮಾಡಿರುತ್ತಾರೆ. ತೊಲೆ ಮಧ್ಯದಲ್ಲಿ ಮೂರು ಅಡಿ ಅಂತರದಲ್ಲಿ ಉದ್ದವಾದ ಎರಡು ಕೋಲುಗಳನ್ನು ಜೋಡಿಸಿರುತ್ತಾರೆ. ಈ ಕೋಲುಗಳ ತುದಿಯಲ್ಲಿ ಈಸನ್ನು ಹಗ್ಗದ ಸಹಾಯದಿಂದ ಕಟ್ಟಿ ಎತ್ತುಗಳನ್ನು ಕಟ್ಟುತ್ತಾರೆ. ತೊಲೆ ಮಧ್ಯದಲ್ಲಿ ಜೋಡಿಸಿರುವ ಹಿಡಿಕೆ ಸಹಾಯದಿಂದ ಕುಂಟೆಯನ್ನು ಹೊಡೆಯುತ್ತಾರೆ.

ಪೈರು ಮಂದವಾಗಿ ಇರುವ ಕಡೆ ಇದನ್ನು ಹೊಡೆಯುತ್ತಾರೆ. ಆದ್ದರಿಂದ ಪೈರಿನ ಮಧ್ಯದ ಅಂತರ ಹೆಚ್ಚಾಗುತ್ತದೆ. ಪೈರು ಚೆನ್ನಾಗಿ ಬೆಳೆಯುತ್ತದೆ. ಪೈರು ಮಂದವಾಗಿದ್ದರೆ ಫಸಲು ಚೆನ್ನಾಗಿ ಬರುವುದಿಲ್ಲವೆಂಬ ಕಾರಣಕ್ಕೆ ಕುಂಟೆ ಹೊಡೆಯುತ್ತಾರೆ. ಸಾಲಾಗಿರುವ ಶೇಂಗಾ ಗಿಡಗಳ ಮಧ್ಯದಲ್ಲಿರುವ ಕಳೆಯನ್ನು ತೆಗೆಯುವುದಕ್ಕೆ ಸಹ ಕುಂಟೆ ಹೊಡೆಯುತ್ತಾರೆ. ಕಳೆ ಬುಡಮೇಲಾಗುವುದಲ್ಲದೆ ನೆಲ ಸಡಿಲವಾಗಿ ಗಿಡ ಬೇರು ಬಿಡುವುದಕ್ಕೆ ಅನುಕೂಲವಾಗುತ್ತದೆ. ಕುಂಟೆ ಹೊಡೆದನಂತರ ಕೈಗುದ್ದಲಿಯಿಂದ ಉಳಿದ ಕಳೆಯನ್ನು ತೆಗೆದು ಮಣ್ಣನ್ನು ಗಿಡದ ಬುಡಕ್ಕೆ ತಳ್ಳುತ್ತಾರೆ. ಹೀಗೆ ಮಾಡುವುದರಿಂದ ತೇವ ಹೆಚ್ಚಿನ ಕಾಲ ಇರುತ್ತದೆ. ಶೇಂಗಾ ಅಧಿಕ ಇಳುವರಿ ಕೊಡುತ್ತದೆ. ಕುಂಟೆ ಬಳಸಿ ಉಳುಮೆ ಮಾಡುವುದೆಂದರೆ, ಅತಿ ಕಷ್ಟವಾದ ಮತ್ತು ಸೂಕ್ಷ್ಮವಾದ ಕೆಲಸ. ಕುಂಟೆ ಹೊಡೆಯುವವನಿಗೆ ಸೂಕ್ಷ್ಮ ಸಂವೇದನೆ ಇರಬೇಕು. ಮೈಯೆಲ್ಲಾ ಕಣ್ಣಾಗಿರಬೇಕು. ಎತ್ತುಗಳನ್ನು ಬಲಕೈಯಲ್ಲಿ ನಿಯಂತ್ರಿಸಬೇಕು. ಹಿಡಿಯನ್ನು ಬೇಕಾದ ಕಡೆ ಊರಬೇಕು, ಬೇಡವಾದ ಕಡೆ ಸರಿಸಬೇಕು. ಎತ್ತುಗಳು ಹಾದಿ ತಪ್ಪಿದಾಗ ಮುಳ್ಳುಕಡ್ಡಿ ಬಳಸಿ ಸರಿಮಾಡಬೇಕು. ಪೈರು ದಟ್ಟವಾಗಿ ಇರುವ ಕಡೆ ಕುಂಟೆಯನ್ನು ಒತ್ತಬೇಕು. ಕಳೆ ಇದ್ದ ಕಡೆಗೆ ಕುಂಟೆಯನ್ನು ಎತ್ತೊಯ್ಯಬೇಕು. ಇದು ರಾಗಿ ಪೈರಿನಲ್ಲಿ ಕುಂಟೆ ಹೊಡೆಯುವ ಪದ್ಧತಿ. ರಾಗಿಪೈರಿಗೆ ಆರು ಅಥವಾ ಎಂಟು ಹಲ್ಲುಗಳಿರುವ ಕುಂಟೆ ಹೊಡೆಯುತ್ತಾರೆ. ಶೇಂಗಾ ಗಿಡ ಇರುವ ಭೂಮಿಯಲ್ಲಿ ಎರಡು ನಾಲ್ಕು ಹಲ್ಲುಗಳ ಕುಂಟೆ ಹೊಡೆಯುತ್ತಾರೆ. ಕುಂಟೆ ಹೊಡೆಯುವುದು ಅತಿ ಕಷ್ಟಕರ. ಅನೇಕ ಸೂಕ್ಷ್ಮ ವಿಚಾರಗಳನ್ನು ಒಂದೆ ಸಮಯದಲ್ಲಿ ಗ್ರಹಿಸುವಂತಹ ರೈತನಿಗೆ ಮಾತ್ರ ಇದು ಸಾಧ್ಯ.

ಮೊನಚಾದ ಹಲ್ಲುಗಳಿರುವ ಕುಂಟೆಯನ್ನಲ್ಲದೆ ಕೆಲವು ಕಡೆ ಅಗಲವಾದ ಹಲ್ಲುಗಳಿರುವ ಚಿತ್ರಕುಂಟೆಯನ್ನು ಸಹ ಬಳಸುತ್ತಾರೆ. ಕೆಲಸ ಮತ್ತು ಪರಿಸರಕ್ಕೆ ತಕ್ಕ ಹಾಗೆ ವಿವಿಧ ರೀತಿಯ ಕುಂಟೆಗಳನ್ನು ಹಿಂದಿನ ಕಾಲದಲ್ಲಿ ಬಳಸುತ್ತಿದ್ದರು.

ಕೂರಿಗೆ : ಕೂರಿಗೆ ಬಿತ್ತನೆಗೆ ಬಳಸುವ ಉಪಕರಣ. ಮೂರು ಸಾಲು, ಆರು ಸಾಲು, ಹನ್ನೆರಡು ಸಾಲು- ಹೀಗೆ ವೈವಿಧ್ಯಮಯ ಕೂರಿಗೆಗಳು ತೆಲಂಗಾಣಾ ಪ್ರಾಂತದಲ್ಲಿ ಬಳಕೆಯಲ್ಲಿವೆ. ರಾಯಲಸೀಮ ಪ್ರಾಂತದಲ್ಲಿ ಕೈಯಲ್ಲೆ ನೇಗಿಲು ಸಾಲುಗಳಲ್ಲಿ ಬಿತ್ತನೆ ಹಾಕುತ್ತಾರೆ. ತೆಲಂಗಾಣಾ ಪ್ರಾಂತ್ಯದಲ್ಲಿ ಜಡ್ಡಿ ಬಟ್ಟಲುಗಳನ್ನು ಕೂರಿಗೆ ಕಟ್ಟಿ ಮಿಶ್ರಬೆಳೆ ಬಿತ್ತುವ ರೈತರು ಉಪಯೋಗಿಸುತ್ತಾರೆ.

ಗೋರ : 18 ಇಂಚು ಅಗಲ ಆರು ಅಡಿ ಉದ್ದದ ದಪ್ಪವಾದ ಹಲಗೆಯ ಕೆಳಗಿನ ಭಾಗದಲ್ಲಿ ನಾಲ್ಕು ಇಂಚು ಅಗಲವಾದ ಚೂಪಾದ ಕಬ್ಬಿಣದ ತಗುಡನ್ನು ಜೋಡಣೆ ಮಾಡಿರುವಂಥದ್ದು. ಹಲಗೆಯ ಮಧ್ಯಭಾಗದಲ್ಲಿ ಮೂರು ಅಡಿ ಅಂತರದಲ್ಲಿ ಎರಡು ಕಬ್ಬಿಣದ ಬಳೆ ಇರುತ್ತದೆ. ಇದಕ್ಕೆ ಹಗ್ಗವನ್ನು ಕಟ್ಟಿ ಎತ್ತುಗಳ ಸಹಾಯದಿಂದ ಹೊಡೆಯುತ್ತಾರೆ. ಹಲಗೆಯ ಮಧ್ಯಭಾಗದಲ್ಲಿ ಹಿಡಿ ಇರುತ್ತದೆ. ಬೇಸಾಯದ ಒಣ ಭೂಮಿಯಲ್ಲಿ ಮಣ್ಣಿನ ಗುಡ್ಡೆಗಳು ಇರುವ ಕಡೆ ಗುಡ್ಡೆಗಳನ್ನು ಸಡಿಲ ಮಾಡಿದ ಮೇಲೆ ಮಣ್ಣನ್ನು ಇನ್ನೊಂದು ಕಡೆ ಸುಲಭವಾಗಿ ತಳ್ಳುವುದಕ್ಕೆ ಗೋರ ಸಹಾಯವಾಗುತ್ತದೆ. ಬೇಸಾಯದ ಭೂಮಿಯಲ್ಲಿ ಹಳ್ಳದಿನ್ನೆಗಳನ್ನು ಸಮ ಮಾಡುವಾಗ ಇದನ್ನು ಬಳಸುತ್ತಾರೆ. ಗದ್ದೆಗಳಲ್ಲಿ ಬತ್ತದ ಪೈರನ್ನು ನಾಟಿಮಾಡುವುದಕ್ಕೆ ಮುನ್ನ ಗೋರ ಸಹಾಯದಿಂದ ಹಳ್ಳದಿನ್ನೆಗಳನ್ನು ಸರಿಮಾಡುತ್ತಾರೆ. ಹೀಗೆ ಮಾಡುವುದರಿಂದ ನೀರು ಗದ್ದೆಯಲ್ಲಿ ಎಲ್ಲಾ ಕಡೆ ಸಮತಟ್ಟಾಗಿ ನಿಲ್ಲುತ್ತದೆ.

ಹಲುಬೆ : ಆಂಧ್ರಪ್ರದೇಶ, ರಾಮಲಸೀಮೆ ಪ್ರಾಂತದಲ್ಲಿ ಹಲುಬೆಯನ್ನು 'ಪಲಿಕಿ' ಎನ್ನುತ್ತಾರೆ. ಇದು ಕುಂಟೆಯ ತರಹ ಇರುತ್ತದೆ. ಆದರೆ ಇದರ ಹಲ್ಲುಗಳನ್ನು ಸ್ವಲ್ಪ ಅಗಲವಾದ ಗಟ್ಟಿ ಕಟ್ಟಿಗೆಯಿಂದ ಮಾಡಿರುತ್ತಾರೆ. ಬಿತ್ತನೆ ಅನಂತರ ನೆಲವನ್ನು ಮಟ್ಟ ಮಾಡಲು, ಕಸಕಡ್ಡಿಯನ್ನು ಒಂದು ಕಡೆ ಸೇರಿಸಲು ಹಲುಬೆ ಬಳಸುತ್ತಾರೆ. ಹಲುಬೆಗೆ ಹನ್ನೆರಡು, ಆರು, ಮೂರು ಹಲ್ಲುಗಳಿರುತ್ತವೆ. ಕುಂಟೆಯಿಂದ ಮಾಡುವ ಎಲ್ಲಾ ಕೆಲಸವನ್ನು ಇದರಿಂದ ಮಾಡಬಹುದು. ಕುಂಟೆಯನ್ನು ಗಟ್ಟಿ ನೆಲದ ಮೇಲೆ ಹೊಡೆಯಬಹುದು. ಹಲುಬೆಯನ್ನೂ ಮಳೆಬಿದ್ದ ಅನಂತರ ಐದಾರು ದಿವಸಗಳಲ್ಲಿ ನೆಲ ಮೆತ್ತಗೆ ಇರುವಾಗ ಮಾತ್ರ ಉಪಯೋಗಿಸುತ್ತಾರೆ. ಇದರ ಹಲ್ಲುಗಳನ್ನು ಕಟ್ಟಿಗೆಯಿಂದ ಮಾಡಿರುವುದರಿಂದ ಗಡುಸಾದ ನೆಲವನ್ನು ಬಗೆಯುವುದಕ್ಕೆ ಸಾಧ್ಯವಿಲ್ಲ.

ಜಲಪರಿಕರಗಳು : ಆಂಧ್ರಪ್ರದೇಶದ ರಾಯಲಸೀಮೆಯ ಪ್ರಾಂತದಲ್ಲಿ ತೆಲಂಗಾಣಾ ಪ್ರಾಂತದ ಬಹುತೇಕ ಪ್ರಾಂತಗಳಲ್ಲಿ ಮಳೆ ಕಡಿಮೆ. ಆದ್ದರಿಂದ ನೀರಿನ ಕೊರತೆ ಸರ್ವೆ ಸಾಮಾನ್ಯ. ಆದ್ದರಿಂದ ಈ ಪ್ರಾಂತದ ಬಹುತೇಕ ರೈತರು ಮಳೆ ಆಧಾರಿತ ಇಲ್ಲವೆ ಒಣ ಬೇಸಾಯ ಮಾಡುತ್ತಿದ್ದರು. ಈ ಎರಡು ಬೇಸಾಯಗಳು ಮಳೆಯನ್ನು ಮಾತ್ರ ನಂಬಿ ಮಾಡಲು ಸಾಧ್ಯವಿಲ್ಲ. ಮಳೆಗಾಲದಲ್ಲಿ ಜಮೀನಿನ ಆಸುಪಾಸಿನಲ್ಲಿ ಸಂಗ್ರಹವಾದ ನೀರನ್ನು ಬಳಸಿಕೊಂಡು ಕೃಷಿ ಮಾಡುತ್ತಿದ್ದರು. ಬಾವಿಯನ್ನು ಅಗೆದು ಕಪಿಲೆ ಅಂತಹ ಜಲಪರಿಕರದಿಂದ ನೀರನ್ನು ಪೈರುಗೆ ಹಾಯಿಸುತ್ತಿದ್ದರು. ಕೆರೆ, ಕುಂಟೆ, ತಗ್ಗು ಪ್ರದೇಶಗಳಲ್ಲಿ ಸಂಗ್ರಹವಾದ ಮಳೆ ನೀರನ್ನು ಏತ, ಗೂಡು ಮುಂತಾದ ಜಲಪರಿಕರಗಳಿಂದ ಪೈರಿಗೆ ನೀರನ್ನು ಹಾಯಿಸುತ್ತಿದ್ದರು. ಹಳ್ಳಿಗಳಿಗೆ ವಿದ್ಯುತ್ ಬಂದನಂತರ ತೆರೆದ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಲಾಯಿತು. ಈ ಎಲ್ಲಾ ಜಲಪರಿಕರಗಳು ಮಾಯವಾದವು. ಕೊಳವೆಬಾವಿಗಳು ಬಂದ ಅನಂತರ ಈ ಜಲಪರಿಕರಗಳ ಹೆಸರು ಸಹ ತುಂಬಾ ಜನರಿಗೆ ಗೊತ್ತಾಗದಂತಾಗಿದೆ.

ಕಪಿಲೆ : ಬಯಲುನಾಡಾದ ರಾಯಲಸೀಮೆ ಮತ್ತು ತೆಲಂಗಾಣಾ ಪ್ರಾಂತಗಳಲ್ಲಿ ಕಪಿಲೆ ಇತ್ತು. ಇದನ್ನು ವ್ಯವಹಾರಿಕ ಭಾಷೆಯಲ್ಲಿ 'ಕಪಿಲ'

ಎನ್ನುತ್ತಾರೆ. ಒಣ ಬೇಸಾಯ ಮಾಡುವ ಕೃಷಿಕರು ಇದನ್ನು ಬಳಸುತ್ತಿದ್ದರು. ಇದರಿಂದ ಹದಿನೈದು ಇಪ್ಪತ್ತು ಅಡಿ ಆಳ ಇರುವ ಬಾವಿಗಳಿಂದ ನೀರನ್ನು ಎತ್ತಿ ಜಮೀನಿಗೆ ಹಾಯಿಸಬಹುದು. ಕಪಿಲೆಯಲ್ಲಿ ಎರಡು ಭಾಗ ಬಾನ (ಬಾನಿ) ಮತ್ತು ಕಾಡಿಮಾನು (ನೊಗ). ಇವಲ್ಲದೆ ರಾಟ್ನಂ(ರಾಟಿ) ತೊಂಡ್ಲಂತಾಡು (ಸೆಂಡಿನಿಗೆ ಕಟ್ಟುವ ಸನ್ನದಾದ ಹಗ್ಗ) ನೋಕು (ಬಾವಿಯ ಬಾಯಿಗೆ ಕಟ್ಟುವ ದಪ್ಪವಾದ ಮುಪ್ಪರಿಹಗ್ಗ) ಜೋಡೆತ್ತು ಸದಾ ಇರುತ್ತವೆ. ಕಪಿಲೆಯಲ್ಲಿ ಬಾನ ಮುಖ್ಯವಾದದ್ದು. ಇದನ್ನು ಚರ್ಮದಿಂದ ಮಾಡುತ್ತಾರೆ. ಸುಮಾರು 30 ಇಂಚಿನಷ್ಟು ಅಗಲ ಇರುವ ಕಬ್ಬಿಣದ ಬಳೆಗೆ ಎಮ್ಮೆ ಅಥವಾ ಕೋಣದ ಒಣಗಿದ ಚರ್ಮವನ್ನು ಹೊಲಿಯುತ್ತಾರೆ. ಹೀಗೆ ಹೊಲಿದಾಗ ದುಂಡುಗೆ ದೊಡ್ಡ ಮಡಕೆ ರೀತಿಯಲ್ಲಿರುವ ಪಾತ್ರೆ ತಯಾರಾಗುತ್ತದೆ. ಈ ಪಾತ್ರೆಯ ತಳಭಾಗದಲ್ಲಿ ಸುಮಾರು ಒಂಬತ್ತು ಇಂಚಿನಷ್ಟು ರಂಧ್ರ ಕೊರೆದು ಅದಕ್ಕೆ ಅಷ್ಟೆ ಸುತ್ತಳತೆಯ ಚರ್ಮದ ಸೊಂಡಿಲನ್ನು ಸುಮಾರು ನಾಲ್ಕು ಅಡಿ ಇರುವ ನಳಿಕೆಯನ್ನು ಜೋಡಿಸುತ್ತಾರೆ. ನಳಿಕೆಯ ಕೊನೆಯಲ್ಲಿ ಸೊಂಡಲಿನ ಹಗ್ಗ ಕಟ್ಟುತ್ತಾರೆ. ಕಬ್ಬಿಣದ ಬಲೆಗೆ ನಾಲ್ಕು ಕಬ್ಬಿಣದ ತಗುಡುಗಳನ್ನು ಮೇಲಕ್ಕೆ ಜೋಡಿಸಿ ಈ ನಾಲ್ಕನ್ನು ದಪ್ಪವಾದ ನಾಲ್ಕು ಇಂಚಿನ ಬಳೆಗೆ, ಜೋಡಿಸಿರುತ್ತಾರೆ. ಈ ಬಳೆಗೆ ಮುಪ್ಪರಿ ಹಗ್ಗವನ್ನು ಕಟ್ಟಿ ಬಾವಿಯದಡದಲ್ಲಿ ನೆಟ್ಟಿರುವ 'V' ಆಕಾರದ ಎರಡು ತೊಲೆಗಳ ಮೇಲ್ಭಾಗದಲ್ಲಿ ಒಂದು ತೊಲೆಯನ್ನು ಇಟ್ಟು ಅದರ ಮಧ್ಯದಲ್ಲಿ ರಾಟೆಯನ್ನು ಜೋಡಿಸಿರುತ್ತಾರೆ. ಇದರ ಮೇಲೆ ಬಾನಿಗೆ ಕಟ್ಟಿದ ಮುಪ್ಪರಿ ಹಗ್ಗವನ್ನು ಎಳೆದು ಅದರ ಇನ್ನೊಂದು ತುದಿಯಲ್ಲಿ ನೊಗ ಕಟ್ಟಿ ಎತ್ತುಗಳನ್ನು ಕಟ್ಟುತ್ತಾರೆ. ಸೊಂಡಲಿನ ದಾರವನ್ನು ಸದಾ ನೊಗ ಮಧ್ಯಭಾಗದಲ್ಲಿ ಕಟ್ಟುತ್ತಾರೆ. ಎತ್ತು ಬಾನಿಯನ್ನು ಎಳೆಯುವ ಸ್ಥಳ ಇಳಿಜಾರಾಗಿರಬೇಕು. ಇದನ್ನು 'ಬಾರಿ' ಎನ್ನುತ್ತಾರೆ. ಇವೆಲ್ಲವನ್ನೂ ರೈತನು ಸಿದ್ಧಮಾಡಿದ ಅನಂತರವೆ ಕಪಿಲೆ ಹೊಡೆಯುತ್ತಿದ್ದನು. ರಾಟಕ್ಕೆ ಆಧಾರವಾಗಿರುವ ತೊಲೆಗಳನ್ನು ನೆಡುವುದಕ್ಕೆ ಮೊದಲು ಬಾವಿಯ ದಡದಲ್ಲಿ ಸುಮಾರು 6 ಇಂಚಿನಷ್ಟು ದಪ್ಪ, ಒಂದು ಅಡಿ ಅಗಲ, ಹತ್ತರಿಂದ ಹನ್ನೆರಡು ಅಡಿ ಇರುವ ಕಂಬಗಳನ್ನು ಐದು ಅಡಿ ಅಂತರ ಇರುವ ಹಾಗೆ ಸಮಾನಾಂತರನಾಗಿ ಬಾವಿಯ ದಾರದಲ್ಲಿ, 'ಬಾರಿ' (ಇಳುಜಾರಿಗೆ) ನೇರಕ್ಕೆ ಮಲಗಿಸಿ ಇಡುತ್ತಾರೆ. ದಡದಿಂದ ಬಾವಿಯ ಕಡೆ ಈ ಕಂಬಗಳು ಚಾಚಿ ಇರುತ್ತವೆ. ಹೇಗೆ ಬಾವಿಯ ಕಡೆ ಚಾಚಿರುವ ಕಂಬಗಳ ತುದಿ ಮಧ್ಯದಲ್ಲಿ ರಂಧ್ರಗಳನ್ನು ಕೊರೆತು ತೊಲೆಗಳನ್ನು ಚಾಚಿಸುತ್ತಾರೆ. ಅನಂತರ ಈ ಕಂಬಗಳ ಮೇಲೆ ಭಾರವಾದ ಕಲ್ಲುಗಳನ್ನು, ಗಟ್ಟಿ ಮಣ್ಣನ್ನು ಹಾಕಿ ನೀರಿನ ಬಾನಿನ ಭಾರಕ್ಕೆ ಯಾವ ಪ್ರಮಾದವು ಆಗದಂತೆ ಇದನ್ನು ನಿರ್ಮಿಸುತ್ತಾರೆ.

ಎತ್ತುಗಳನ್ನು ಇಳಿಜಾರಿನಿಂದ (ಬಾರಿ) ಹಿಮ್ಮುಖವಾಗಿ ಬಾವಿಯ ದಡದ ಕಡೆ ನಡೆಸಿದಾಗ ಬಾನಿ ಬಾವಿಯೊಳಕ್ಕೆ ಇಳಿದು ನೀರು ತುಂಬಿಕೊಳ್ಳುತ್ತದೆ. ನೀರು ತುಂಬಿರುವುದನ್ನು ಖಚಿತಪಡಿಸಿಕೊಂಡ ಅನಂತರ ಎತ್ತುಗಳನ್ನು ಇಳಿಜಾರುಮುಖವಾಗಿ ಓಡಿಸಬೇಕು. ನೀರು ತುಂಬಿದ ಬಾನಿ ನಳಿಕೆ ಮೇಲ್ಭಾಗಕ್ಕೆ ಬರುತ್ತವೆ. ಸೊಂಡಲಿಗೆ ಕಟ್ಟಿರುವ ದಾರವನ್ನು ಕಾವಿಂದ ಅದುಮಿದಾಗ ನೀರು ಕಾಲುವೆಗೆ ಬೀಳುತ್ತದೆ. ಸೊಂಡಿಲಿಗೆ ಕಟ್ಟಿರುವ ದಾರ ಭೂಮಿಯ ಮೇಲೆ ಬಿದ್ದು ಹಾಳಾಗದಂತೆ ಉದ್ದವಾದ ರಾಟವನ್ನು ಜೋಡಿಸುತ್ತಾರೆ. ಈ ಉದ್ದವಾದ ರಾಟೆಯನ್ನು 'ಕಪುರುಸ' ಎನ್ನುತ್ತಾರೆ.

ಮೇಲೆ ಹೇಳಿರುವ ಕಪಿಲೆಗೆ ಎರಡು ಎತ್ತುಗಳನ್ನು ಬಳಸುತ್ತಿದ್ದರು. ಅನಂತಪುರಂ ಕಡಪ ಜಿಲ್ಲೆಗಳ ಕೆಲವು ಕಡೆ ಎರಡು ಜೋಡಿ ಎತ್ತುಗಳನ್ನು ಬಳಸಿ ಕಪಿಲೆ ಹೊಡೆಯುವ ವಿಧಾನ ಬಳಕೆಯಲ್ಲಿ ಇತ್ತೆಂದು ಕೇಳಿದ್ದೇವೆ.

ಏತಂ (ಏತ) : ಸಣ್ಣದಾದ ಉದ್ದವಾದ ಕಾಲುವೆಗಳಿಂದ, ಬಾವಿಗಳಿಂದ ನಾಲ್ಕರಿಂದ ಹತ್ತು ಅಡಿ ಆಳದಿಂದ ನೀರೆತ್ತುವುದಕ್ಕೆ ಹೋಗಲು ಕೆಲವೊಂದು ಕಡೆ ಈ ಪರಿಕರವನ್ನು ಬಳಸುತ್ತಿದ್ದಾರೆ. ಏತದಲ್ಲಿ ಐದಾರು ಅಡಿ ಉದ್ದ ದಪ್ಪವಾದ ಒಂದು ಕವಲು ಮರ 'y' ಆಕಾರದಲ್ಲಿ ಇರುತ್ತದೆ. ಇದನ್ನು ದಡದಲ್ಲಿ ನೆಡುತ್ತಾರೆ. ಇದರ ಮೇಲೆ ಇರುವ ಅಡ್ಡಮರ 15 ರಿಂದ 20 ಅಡಿ ಉದ್ದ ಇರುತ್ತದೆ. ಅಡ್ಡಮರ ನೀರಿರುವ ತುದಿಗೆ ಕಟ್ಟುವ 20 ರಿಂದ 25 ಅಡಿ ಉದ್ದದ ಕೋಲು. ಇದರ ತುದಿಗೆ ಕಟ್ಟಿರುವ ಬಾನಿ. ಇವುಗಳಿಂದ ಏತವನ್ನು ನಿರ್ಮಿಸಬಹುದು. ಇದಕ್ಕೆ ಅನುಭವಬೇಕು. ಏತದಿಂದ ನೀರೆತ್ತುವ ವ್ಯಕ್ತಿಗೆ ಕಾಪಿಟ್ಟುಕೊಳ್ಳಲು ಎರಡು ಅಡ್ಡಹಾಸ ಇರುತ್ತವೆ. ಐದಾರು ಅಡಿ ಇರುವ ಇವುಗಳನ್ನು ಸಮಾನಾಂತರವಾಗಿ ದೃಢವಾಗಿ ಕಟ್ಟಿರುತ್ತಾರೆ. ಇದರ ಮೇಲೆ ನಿಂತು ನೀರೆತ್ತುತ್ತಾರೆ.

ಕಾವಡಿನೀರು : ಬಲವಾದ ಬಿದಿರಿನ ದಬ್ಬೆಯ ತುದಿಗಳಿಗೆ ಎರಡು ಬಿಂದಿಗೆಗಳನ್ನು ಕಟ್ಟಿ ನೀರನ್ನು ಸಾಗಿಸಿ ಸೊಪ್ಪಿನ ತೋಟಗಾರಿಕೆಗೆ, ಹಣ್ಣಿನ ತೋಟಕ್ಕೆ ಉಪಯೋಗಿಸುವುದು. ಈಗಲೂ ಈ ಪದ್ಧತಿ ಕೋಸ್ತಾ ಪ್ರಾಂತದಲ್ಲಿ ಕೆಲವು ಕಡೆ ರೂಢಿಯಲ್ಲಿದೆ.

ಗೂಡೆ(ಗೂಡ): ಇದೊಂದು ವಿಶಿಷ್ಟವಾದ ಉಪಕರಣ. ಭೂಮಿಯ ಮಟ್ಟಕ್ಕಿಂತಲೂ ಕೆಳಗೆ ನೀರು ಇರುವಾಗ ಕೆರೆ, ಕುಂಟೆ, ಕಾಲುವೆಗಳಲ್ಲಿ ನೀರನ್ನು ಮೇಲಕ್ಕೆ ಎತ್ತುವುದಕ್ಕೆ ಇದನ್ನು ಉಪಯೋಗಿಸುತ್ತಾರೆ. ಕೆರೆ ನೀರು ತೂಬಿನಿಂದ ಬರಬೇಕು. ಆದರೆ ನೀರಿನ ಮಟ್ಟ ತೂಬು ಮಟ್ಟಕ್ಕಿಂತ ಕೆಳಗಡೆ ಹೋದಾಗ ಪೈರಿಗೆ ನೀರು ಹಾಯಿಸಬೇಕಾದರೆ 'ಗೂಡೆಯ' ಅಗತ್ಯ ಇರುತ್ತದೆ. ಗೂಡೆ ಬಿದಿರಿನ ಉಪಕರಣ, ತೆಳ್ಳಗಿರುವ ಒಂದು ಇಂಚಿನಷ್ಟು ಅಗಲ ಇರುವ ಬಿದಿರಿನ ದಬ್ಬೆಗಳಿಂದ 'V' ಆಕಾರದಲ್ಲಿ ಇದನ್ನು ಮಾಡುತ್ತಾರೆ. ಮೇಲೆ ಅಂದರೆ ಬಾಯಿ ಇರುವವರೆಗೆ ಹಿಡಿಯಷ್ಟು ದಪ್ಪಕ್ಕಿರುವ ಮರದ ಕಟ್ಟಿಗೆ ಜೋಡಿಸಿರುತ್ತಾರೆ. ಅನಂತರ ಇದಕ್ಕೆ ತಾರಿನ ಲೇಪನ ಮಾಡಿರುತ್ತಾರೆ. ಬಿದಿರಿನ ದಬ್ಬೆಗಳ ಮಧ್ಯದಲ್ಲಿರುವ ಸಂಧಿಗಳನ್ನು ತಾರಿನ ಲೇಪನದಿಂದ ಮುಚ್ಚುವುದರಿಂದ ನೀರು ಸೋರುವುದಿಲ್ಲ. ಅನಂತರ ಇದರ ಕೆಳಗಡೆ ಏಳು ಅಡಿ ಉದ್ದದ (ಹುರಿ)ಹಗ್ಗಗಳನ್ನೂ ಎರಡು ಮೇಲೆ ಎರಡು ಕೆಳಗೆ ಕಟ್ಟುತ್ತಾರೆ. ಹಗ್ಗಗಳ ಕೊನೆಯಲ್ಲಿ ಐದು ಇಂಚಿನಷ್ಟು ಉದ್ದ ಬೆರಳಿನಗಾತ್ರ ಇರುವ ಕಟ್ಟಿಗೆ ತುಂಡುಗಳನ್ನು ಸಿಕ್ಕಿಸುತ್ತಾರೆ. ಗೊಡರೇವುಗೆ ಎರಡು ಕಡೆ ಇಬ್ಬರು ನಿಂತು ಮೇಲೆ ಕೆಳಗಡೆ ಇರುವ ಪುರಿ ಹಗ್ಗದ ತುಂಡುಗಳನ್ನು ಬೆರಳಿನ ಮಧ್ಯೆ ಇಟ್ಟುಕೊಂಡು ನೀರನ್ನು ಎರಡು ಮೂರು ಅಡಿ ಕೆಳ ಭಾಗದಿಂದ ಮೇಲಕ್ಕೆ ಎತ್ತಿ ಪೈರಿಗೆ ಹಾಯಿಸುತ್ತಾರೆ. ಸಣ್ಣ ರೈತರು ಈಗಲೂ ಗೂಡೆಯನ್ನು ಉಪಯೋಗಿಸುತ್ತಿದ್ದಾರೆ.

4. ಬೆಳೆ ಸಂರಕ್ಷಣೆ ಉಪಕರಣಗಳು : ಬತ್ತ, ರಾಗಿ, ಜೋಳ ತೆನೆ ಕಟ್ಟುವಾಗ, ಕಟ್ಟಿದ ಅನಂತರ, ಕಡಲೆಕಾಯಿ ಮುಂತಾದ ಬೆಳೆಗಳು ಕಾಳುಕಟ್ಟಿನ ಸಮಯ ಮತ್ತೆ ಕೊಯ್ಲು ಮಾಡುವ ಸಮಯದಲ್ಲಿ ಬೆಳೆಯನ್ನು

ಕಾಯುವ ಹಾಗೂ ಪಕ್ಷಿಗಳಿಂದ ರಕ್ಷಿಸುವುದು ಕಷ್ಟವಾದ ಕೆಲಸ. ಬೆಳೆಗಳನ್ನೂ ರಕ್ಷಿಸುವ ವಿಧಾನಗಳಲ್ಲಿ ಮುಖ್ಯವಾದದ್ದು ಬೆದುರು ಬೊಂಬೆ.

ಬೆದುರು ಬೊಂಬೆ : 'ಬೆದುರು ಬೊಮ್ಮ' ಎಂದು 'ದಿಷ್ಟಿಬೊಮ್ಮ' ಎಂದು ರಾಯಲಸೀಮ ಪ್ರಾಂತದಲ್ಲಿ ಕರೆಯುತ್ತಾರೆ. ಐದಾರು ಅಡಿ ಉದ್ದ ಕೋಲಿಗೆ ಒಣ ಹುಲ್ಲನ್ನು ಮನುಷ್ಯನ ಆಕಾರದಂತೆ ಸುತ್ತಿ ಅದಕ್ಕೆ ಹಳೆಯ ಬಟ್ಟೆಗಳನ್ನು ಹಾಕುತ್ತಾರೆ. ಹಳೆಯ ಮಡಕೆಯನ್ನು ಮೇಲ್ಭಾಗದಲ್ಲಿ ಮನುಷ್ಯನ ತಲೆಯಂತೆ ಇಡುವುದರಿಂದ ಈ ಗೊಂಬೆ ಮನುಷ್ಯನಂತೆ ಕಾಣಿಸುತ್ತದೆ. ಇದನ್ನು ಪೈರಿನ ಮಧ್ಯದಲ್ಲಿ ನೆಡುತ್ತಾರೆ. ಗೊಂಬೆಯನ್ನು ನೋಡಿ ಮನುಷ್ಯರೆಂದು ಭ್ರಮೆಗೆ ಪ್ರಾಣಿಗಳು ಬರುವುದಿಲ್ಲ.

ಕೊಂಡಪುರಿ : ಕಾಡುಹಂದಿಗಳನ್ನು ಪ್ರಾಣಿಗಳನ್ನು ಓಡಿಸುವ ವಿಶಿಷ್ಟವಾದ ಸಾಧನ. ಒಂದು ಮಡಿಕೆಯ ಬಾಯಿಯ ಹತ್ರ ತಿಳಿಯಾಗಿರುವ ಮೇಕೆಯ ಚರ್ಮವನ್ನು ಸುತ್ತಿ ಬಿಗಿಯಾಗಿ ಕಟ್ಟುತ್ತಾರೆ. ಚರ್ಮದ ಮಧ್ಯದಲ್ಲಿ ಸಣ್ಣ ತೂತನ್ನು ಮಾಡಿರುತ್ತಾರೆ. ಅದರಲ್ಲಿ ಒಣಗಿದ ಚೂರನ್ನು ತೂರಿಸಿ ಮಡಕೆಯ ಒಳಗಡೆ ತುದಿಯಲ್ಲಿ ಗಂಟು ಹಾಕಿರುತ್ತಾರೆ. ಇದನ್ನು ಪೈರಿನ ಮಧ್ಯದಲ್ಲಿ ಅಥವಾ ಎತ್ತರವಾದ ಪ್ರದೇಶದಲ್ಲಿ ಇಟ್ಟುಕೊಂಡು ಹೆಬ್ಬೆರಳು, ತೂರುವ ಬೆರಳಿಗೆ ನೀರಿನ ತೇವ ಮಾಡಿ ಒಣಗಿದ ಚೊಂಡನ್ನು ಎರಡು ಬೆರಳುಗಳಿಂದ ಜಾರುವ ಹಾಗೆ ಎಳೆದರೆ 'ಜಿರ್ ಜಿರ್' ಎಂದು ಬರುವ ಶಬ್ದ ಎರಡು ಮೂರು ಕಿ.ಮೀ. ಕೇಳಿಸುತ್ತದೆ. ಈ ಶಬ್ದದ ರಭಸಕ್ಕೆ ಕಾಡುಪ್ರಾಣಿಗಳು ಆ ಕಡೆ ಸುಳಿದಾಡುವುದಿಲ್ಲ.

ಕವಣೆ : ಇದನ್ನು 'ಓಡಿಸಲು' ಎಂದು ತೆಲುಗಿನಲ್ಲಿ ಕರೆಯುತ್ತಾರೆ. ಹಕ್ಕಿ ಮತ್ತು ಕೋತಿಗಳನ್ನು ಓಡಿಸುವ ಮತ್ತೊಂದು ಉಪಕರಣ. ಅಂಗೈ ಅಗಲದ ಚರ್ಮದ ಹಾಳೆಯ ತುದಿಗಳಿಗೆ ಎರಡುವರೆ ಅಡಿ ಉದ್ದಿರುವ ಸಣ್ಣ ಹಗ್ಗಗಳನ್ನು ಕಟ್ಟುತ್ತಾರೆ. ಎರಡು ಹಗ್ಗಗಳ ತುದಿಗಳನ್ನು ಹಿಡಿದುಕೊಂಡು ಚರ್ಮದ ಹಾಳೆಯಲ್ಲಿ ಗುಂಡಿ ಬೀಳುತ್ತದೆ. ಈ ಗುಂಡಿಯಲ್ಲಿ ಇರುವಂತಹ ಕಲ್ಲನ್ನು ಇಟ್ಟು ಬೀಸಿದರೆ ಕಲ್ಲು ಒಂದು ಫರ್ಲಾಂಗಿನಷ್ಟು ದೂರ ಹೋಗುತ್ತದೆ. ಕಲ್ಲು ಹೋಗುವ ರಭಸಕ್ಕೆ ಹಕ್ಕಿಗಳು ಹಾರಿ ಹೋಗುತ್ತವೆ.

ಕೇಟರಬಿಲ್ಲು : 'ಕ್ಯಾರ ಬಿಲ್ಲು' ಎಂದು ತೆಲುಗಿನಲ್ಲಿ ಕರೆಯುತ್ತಾರೆ. ಸಣ್ಣದಾದ ಸುಮಾರು ಒಂಬತ್ತು ಇಂಚು ಇರುವ ಕವಲು ಮರ 'Y' ಆಕಾರದಲ್ಲಿ ಇರುವ ಕಟ್ಟಿಗೆಯ ಮೇಲಿನ ತುದಿಗಳಿಗೆ ಒಂದಿಂಚು ಅಗಲ 12 ಇಂಚು ಉದ್ದ ತೆಳ್ಳಗೆ ಇರುವ ರಬ್ಬರ್ ತುಂಡುಗಳನ್ನು ಒಂದು ಕಡೆಯ ತುದಿಗಳನ್ನು ಕಟ್ಟುತ್ತಾರೆ. ತುಂಡುಗಳ ಇನ್ನೊಂದು ಕಡೆಯ ತುದಿಗಳಿಗೆ ಎರಡಿಂಚು ಅಗಲ, ನಾಲ್ಕಿಂಚು ಉದ್ದ ಇರುವ ಚರ್ಮದ ಹಾಳೆಯ ತುದಿಗಳಿಗೆ ಕಟ್ಟಿ, ಹಾಳೆಯ ಮಧ್ಯದಲ್ಲಿ ಸಣ್ಣ ಕಲ್ಲುಗಳನ್ನು ಇಟ್ಟು ಹಕ್ಕಿ ಇರುವ ಕಡೆಗೆ ಹೊಡೆಯುತ್ತಾರೆ. ಇದನ್ನು ಎಳೆದು ಕಲ್ಲು ಬಿಟ್ಟರೆ ಮೂವತ್ತು ನಲವತ್ತು ಮೀಟರ್ ದೂರದಲ್ಲಿ ಕಲ್ಲು ಬೀಳುತ್ತದೆ. 'ಮಂಚೆ'ಯ ಮೇಲಿಂದ ಕೇಟರಿನ ಬಿಲ್ಲನ್ನು ಉಪಯೋಗಿಸಿದರೆ ಹಕ್ಕಿಗಳನ್ನು ಸುಲಭವಾಗಿ ಓಡಿಸಬಹುದು. ಇಲಿಗಳನ್ನು ಹಿಡಿಯೋದಕ್ಕೆ ಬೋನುಗಳನ್ನು ಉಪಯೋಗಿಸುತ್ತಾರೆ.

5. ಕೊಯ್ಲು ಉಪಕರಣಗಳು : ಬಿತ್ತನೆ ಮಾಡಿ, ನೀರು ಹಾಯಿಸಿ ಪೈರಿನಲ್ಲಿರುವ ಕಳೆಯನ್ನು ತೆಗೆದು, ಪಕ್ಷಿ ಪ್ರಾಣಿಗಳಿಂದ ಪೈರನ್ನು ಸಂರಕ್ಷಿಸಿದ ಅನಂತರ ಬರುವ ಫಸಲನ್ನು ಹುಲ್ಲನ್ನು ಪೈರನ್ನು ಹೂವನ್ನೂ ಕೊಯ್ಲು ಮಾಡುವುದಕ್ಕೆ, ವೀಳದೆಲೆ ಕೀಳುವುದಕ್ಕೆ, ನುಗ್ಗೆ ಮುಂತಾದವುಗಳನ್ನು ಮಾವಿನ ಹಣ್ಣುಗಳನ್ನು ಕೀಳುವುದಕ್ಕೆ, ಮೇವನ್ನು ಕತ್ತರಿಸುವುದಕ್ಕೆ, ಆಲುಗಡ್ಡೆ ಬಗೆಯುವುದಕ್ಕೆ ಹೀಗೆ ವಿವಿಧ ರೀತಿಯ ಕೆಲಸಗಳಿಗೆ ವಿವಿಧ ರೀತಿಯ ಕೊಯ್ಲು ಉಪಕರಣಗಳು ಬೇಕಾಗುತ್ತವೆ.

ನೆಲಗತ್ತಿ : 'ಚೆಯ್ಯಿಪಾರ' ಎಂದು ತೆಲುಗಿನಲ್ಲಿ ಎನ್ನುತ್ತಾರೆ. ಇದರ ಒಂದು ತುದಿಯಲ್ಲಿ ಆಕಾರದ ತಗುಡನ್ನು ಜೋಡಿಸಿರುತ್ತಾರೆ. ಕಲ್ಲು ಇರುವ ಬೇಸಾಯ ಭೂಮಿಗಳಲ್ಲಿ ಹುಲ್ಲು ಹರಡಿರುತ್ತದೆ. ಗಿಡಗಳ ಮಧ್ಯದಲ್ಲಿ ಇರುವ ಹುಲ್ಲನ್ನು ತೆಗೆಯುವುದಕ್ಕೆ ನೆಲಗತ್ತಿಯನ್ನು ಬಳಸುತ್ತಾರೆ. ಕೆಲಸಕ್ಕೆ ತಕ್ಕ ಹಾಗೆ ದೊಡ್ಡದು, ಚಿಕ್ಕದು, ಮಧ್ಯ ಗಾತ್ರದ ನೆಲಗತ್ತಿಯನ್ನು ತಯಾರಿಸುತ್ತಾರೆ. ಆಂಧ್ರಪ್ರದೇಶದ ಚಿತ್ತೂರು, ಅನಂತಪುರಂ ಜಿಲ್ಲೆಗಳ ರೈತರು ಈಗಲೂ ಇದನ್ನು ಬಳಸುತ್ತಿದ್ದಾರೆ. ದನಕರುಗಳಿಗೆ ಬೇಕಾಗುವ ಹುಲ್ಲನ್ನು ಶೇಕರಣೆ ಮಾಡುವುದಕ್ಕೆ ಈ ಪ್ರಾಂತಗಳಲ್ಲಿ 'ಚಿಕ್ಕ ದೋಕುಡು ಪಾರ' 'ದೊಡ್ಡ ದೋಕುಡು ಪಾರ' ಎಂಬ ಎರಡು ಉಪಕರಣಗಳನ್ನು ಬಳಸುತ್ತಾರೆ.

ಕುಡುಗೋಲು : ಚಿತ್ತೂರು ಮುಂತಾದ ಕಡೆ ಇದನ್ನು ' ಕೊಡವಲಿ' (ತೆಲುಗು) ಎನ್ನುತ್ತಾರೆ. ಇದರಲ್ಲಿ ಮೂರು ಭಾಗಗಳು ಇರುತ್ತವೆ. ಹಿಡಿ ಅರ್ಧಚಂದ್ರಾಕಾರದ ಕಬ್ಬಿಣದ ಭಾಗ, ಸಣ್ಣದಾದ ಒಂದು ಇಂಚು ಅಗಲದ ಕಬ್ಬಿಣದ ಬಳೆ. ಹಿಡಿಯನ್ನು ಸಾಮಾನ್ಯವಾಗಿ ಗಟ್ಟಿಬಿದುರಿನಿಂದ ಮಾಡುತ್ತಾರೆ. ಇದು ಸುಮಾರು ಆರು ಇಂಚು ಉದ್ದ ಕಾಲು ಹೆಬ್ಬರಳಿನಷ್ಟು ದಪ್ಪ ಇರುತ್ತದೆ. ಇದಕ್ಕೆ ಒಂದು ತುದಿಯಲ್ಲಿ ಅದರ ಗಾತ್ರಕ್ಕೆ ಸ್ವಲ್ಪ ಚಿಕ್ಕದಾದ ಅಗಲದ ಬಳೆಯನ್ನು ಅಳವಡಿಸಿರುತ್ತಾರೆ. ಕಬ್ಬಿಣದ ಒಂದು ಭಾಗ ಚೂಪಾಗಿರುತ್ತದೆ. ಇದನ್ನು ಬೆಂಕಿಯಲ್ಲಿ ಕಾಯಿಸಿ 'ಬಳೆ' ಭಾಗದ ಮಧ್ಯಕ್ಕೆ ಜೋಡಿಸಿರುತ್ತಾರೆ.

ಹೀಗೆ ಮಾಡಿದ ಅನಂತರ ಕಬ್ಬಿಣದ ಭಾಗದ ಚೂಪಾದ ಭಾಗವನ್ನು ಹಿಡಿದುಕೊಳ್ಳಲಾಗುತ್ತದೆ. ಹೀಗೆ ಮಾಡುವಾಗ ಕಬ್ಬಿಣದ ಬಳೆ ಇರುವುದರಿಂದ ಹಿಡಿ ಸೀಳುವುದಿಲ್ಲ. ಈ ಅರ್ಧಚಂದ್ರಾಕಾರದ ಕಬ್ಬಿಣದ ಭಾಗ ಬಾಗಿದ್ದು ಹರಿತವಾಗಿರುತ್ತದೆ. ಇದರ ಮುಂಭಾಗ ಚೂಪಾಗಿರುತ್ತದೆ. ಮಧ್ಯದಲ್ಲಿ ಅರ್ಧ ಚಂದ್ರಾಕಾರ ಇರುವುದರಿಂದ ಪೈರನ್ನು, ತೆನೆಗಳನ್ನು ಒಟ್ಟಿಗೆ ಮಾಡಿ ಸುಲಭವಾಗಿ ಕೊಯ್ಲು ಮಾಡಬಹುದು. ಜೋಳ, ಬತ್ತದ ಪೈರು, ರಾಗಿಹುಲ್ಲು (ದಂಟು) ಹೀಗೆ ಬೆಳೆಗಳನ್ನು ಕಟಾವು ಮಾಡುವಾಗ ಕುಡುಗೋಲನ್ನು ಬಳಸುತ್ತಾರೆ. ಹೀಗೆ ಬಳಸಿದ ಅನಂತರ ಕುಡುಗೋಲು ಮೊಂಡಾಗುತ್ತದೆ. ಇಂತಹ ಸಂದರ್ಭಗಳಲ್ಲಿ 'ಅರ' ಎಂಬ ಉಪಕರಣದಿಂದ ಇದನ್ನು ಹರಿತವಾಗಿ ಮಾಡುತ್ತಾರೆ. ಅರದಿಂದ ಕುಡುಗೋಲನ್ನು ಉಜ್ಜಿ ಕೊಯ್ಲು ಮಾಡುವ ಭಾಗದಲ್ಲಿ ಚಿಕ್ಕ ಚಿಕ್ಕ ಗರಗಸದ ಹಲ್ಲುಗಳಂತೆ ಉಜ್ಜುತ್ತಾರೆ. ಹೀಗೆ ಮಾಡಿದ ಮೇಲೆ ಕೊಡುಗೋಲು ಹರಿತವಾಗುತ್ತದೆ. ವಿವಿಧ ಕೋಡುಗೋಲುಗಳು ಆಕೃತಿಯಲ್ಲಿ ಸ್ವಲ್ಪ ಬದಲಾವಣೆಗಳು ಇದ್ದರೂ ಇವುಗಳ ಉಪಯೋಗ ಮಾತ್ರ ಒಂದೇ ರೀತಿ ಇರುತ್ತದೆ.

ಚಿನ್ನಕತ್ತಿ (ಚಿಕ್ಕಕತ್ತಿ) : ಸೇವಂತಿಗೆ ಹೂವನ್ನು ಕಟಾವು ಮಾಡಲು ಇದನ್ನು ಬಳಸುತ್ತಾರೆ. ಚಿತ್ತೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ರೈತರು ಸೇವಂತಿಗೆಯನ್ನು ಬೆಳೆಸುತ್ತಾರೆ. ಅಂಗೈಯಗಲ ಇರುವ ಈ ಕತ್ತಿಯನ್ನು ಕಬ್ಬಿಣದ ತಗುಡಿಂದ ಮಾಡಿರುತ್ತಾರೆ. ಇದನ್ನು ಚೂಪು ಮಾಡಿ ಸೇವಂತಿಗೆ ಹೂಗಳ ತೊಟ್ಟುಗಳನ್ನು ಕಟಾವು ಮಾಡುತ್ತಾರೆ.

ಗರಿಕುಡುಗೋಲು : ಇದನ್ನು 'ಒಂಕೆ' ಎನ್ನುತ್ತಾರೆ. ಅಂದರೆ ಡೊಂಕಾಗಿರುವುದೆಂದು ಅರ್ಥ. ಇದು ಕೆಲಸಕ್ಕೆ ತಕ್ಕ ಹಾಗೆ ಆರು ಇಂಚುನಿಂದ ಹನ್ನೆರಡು ಇಂಚು ಇರುತ್ತದೆ. ಇದರ ಕೆಳಗಿನ ತುದಿಯನ್ನು ಸಣ್ಣಗಾತ್ರದ, ಸುಮಾರು ಹದಿನೈದು ಉದ್ದದ ಗಟ್ಟಿಬಿದಿರಿಗೆ ಜೋಡಣೆ ಮಾಡಿರುತ್ತಾರೆ. ಇದರಿಂದ ಎತ್ತರದಲ್ಲಿರುವ ತೆಂಗಿನ ಗರಿಗಳನ್ನು ಸಣ್ಣ ಸಣ್ಣ ರಂಬೆಗಳನ್ನು ತುಂಡಿರಸಬಹುದು. ಹಾಗೆಯ ದನಕರುಗಳಿಗೆ ಬೇಕಾಗುವ, ಮೇಕೆಗಳಿಗೆ ಬೇಕಾಗುವ ಸೊಪ್ಪನ್ನು ಕೀಳಬಹುದು.

ದೋಟಿ : ಹತ್ತು ಹದಿನೈದು ಅಡಿ ಉದ್ದದ ಸಣ್ಣಗಾತ್ರದ ಗಟ್ಟಿಬಿದಿರಿನ ತುದಿಯಲ್ಲಿ '1' ಆಕಾರದಂತೆ, ಇರುವ ಕಬ್ಬಿಣದ ತಗಡಿನಿಂದ ಮಾಡಿದ ತುಂಡನ್ನು ಜೋಡಣೆ ಮಾಡಿದಾಗ ಅದು 'ದೋಟಿ' ಆಗುತ್ತದೆ. ಮರಗಳಲ್ಲಿರುವ ನುಗ್ಗೆಕಾಯಿ, ಸೊಪ್ಪು, ಕೆಲಸಕ್ಕೆ ಬಾರದ ಎಲೆ ಮುಂತಾದವುಗಳನ್ನು ಕೀಳುವುದಕ್ಕೆ ಇದನ್ನು ಬಳಸುತ್ತಾರೆ.

ಮಚ್ಚು : ಇದನ್ನು ಮಚ್ಚುಕತ್ತಿ, ಕತ್ತಿ ಎನ್ನುತ್ತಾರೆ. ವಿವಿಧ ರೀತಿಯ ಕೆಲಸಗಳಿಗೆ ವಿವಿಧ ರೀತಿಯ ಮಚ್ಚುಗಳು ಬಳಕೆಯಲ್ಲಿವೆ. ಇವುಗಳ ವಿನ್ಯಾಸ ಕುಡುಗೋಲಿನಂತೆ ಇರುತ್ತವೆ. ಆದರೆ ಗಾತ್ರದಲ್ಲಿ ದೊಡ್ಡವು. ಇದರ ಹಿಡೆಯು ಸದಾ ದೊಡ್ಡದಾಗಿರುತ್ತದೆ. ಕತ್ತಿಯು ಸಹ ದಪ್ಪವಾಗಿರುತ್ತದೆ. ಗದ್ದೆಗೆ ಹಾಕುವ ಸೊಪ್ಪಿನ ರೆಂಬೆಗಳನ್ನು ಕತ್ತರಿಸಿ ತುಂಡು ಮಾಡುವುದಕ್ಕೆ, ಕಾಡಿನ ಸೌದೆ ತರುವುದಕ್ಕೆ, ಮರಗಳನ್ನು ಕಡಿಯುವುದಕ್ಕೆ ಮಚ್ಚನ್ನು ಬಳಸುತ್ತಾರೆ. ಮೇವನ್ನು ತುಂಡರಿಸುವುದಕ್ಕೆ ಸಹ ಮಚ್ಚನ್ನು ಬಳಸುತ್ತಾರೆ.

ಕೊಡಲಿ : ಕೃಷಿ ವಲಯದಲ್ಲಿ ಒಂದೊಂದು ಕೆಲಸಕ್ಕೆ ಒಂದೊಂದು ರೀತಿಯ ಕೊಡಲಿಗಳು ಇವೆ. ಕೈ ಕೊಡಲಿ-ಇದನ್ನು ಕಬ್ಬನ್ನು ಕಟಾವು ಮಾಡುವುದಕ್ಕೆ ಬಳಸುತ್ತಾರೆ. ಪರಶುರಾಮನ ಕೊಡಲಿ-ಮರಗಳನ್ನು ಕತ್ತರಿಸುವುದಕ್ಕೆ ಇದನ್ನು ಬಳಸುತ್ತಾರೆ. ಭಾರವಾದ ಕೊಡಲಿಯನ್ನು-ಸೌದೆ ಸೀಳಲು ಉಪಯೋಗಿಸುತ್ತಾರೆ. ಕೊಡಲಿಗಳಿಗೆ ಎರಡು ಭಾಗ ಇರುತ್ತದೆ. ಒಂದು ಕಾವು ಇನ್ನೊಂದು ಬಾಯಿ. ಕಾವು ಮರದಿಂದ ಮಾಡಿರುವ ಒಂದು ಹಿಡಿಯಷ್ಟು ಗೂಟ, ಬಾಯಿಯನ್ನು ಗಡುಸಾದ ಕಬ್ಬಿಣದಿಂದ ಮಾಡಿ ತುದಿಯನ್ನು ಚೂಪಾಗಿ ಮಾಡಿರುತ್ತಾರೆ. ಕೈ ಕೊಡಲಿಯನ್ನು ಒಂದು ಕೈಯಿಂದಲೆ ಉಪಯೋಗಿಸಬಹುದು. ಒಂದು ಕೈಯಿಂದ ಬಳಸುವಂತಹ ಇದರ ಭಾರ ಸುಮಾರು ಅರ್ಧ ಕಿಲೋನಷ್ಟು ಇರುತ್ತದೆ. ಕಬ್ಬನ್ನು ಕಟಾವು ಮಾಡುವಾಗ ಇದನ್ನು ಬಳಸುತ್ತಾರೆ. ಪರಶುರಾಮನ ಕೊಡಲಿಯ ಭಾರ ಸುಮಾರು ಒಂದುವರೆ ಕಿಲೋನಷ್ಟು ಇರುತ್ತದೆ. ಎರಡು ಕೈಗಳಿಂದ ಇದನ್ನು ಉಪಯೋಗಿಸುತ್ತಾರೆ. ದೊಡ್ಡ ಕೊಡಲಿಯ ಭಾರ ಎರಡರಿಂದ ಮೂರು ಕಿಲೋ ಇರುತ್ತದೆ.

ವೀಳ್ಯದೆಲೆ ಉಗುರು : ವೀಳ್ಯದೆಲೆ ಕೀಳುವುದಕ್ಕೆ ಉಂಗುರಾಕಾರದ ತಗಡನ್ನು ಹೆಬ್ಬೆರಳಿಗೆ ಹಾಕಿಕೊಂಡು ಕೀಳುತ್ತಾರೆ. ಇದನ್ನು 'ಉಗುರು' ಅಂತಲೂ ಕರೆಯುತ್ತಾರೆ.

ಅರ : ಕುಡುಗೋಲನ್ನು ಚೂಪು ಮಾಡುವ ಉಪಕರಣ. ಇದನ್ನು 'ಆಕುರಾಯಿ' ಎನ್ನುತ್ತಾರೆ. ಇವೆರಡು ರೀತಿ ಇರುತ್ತವೆ. ಒಂದು ಸುಮಾರು ಎರಡು ಇಂಚು ಅಗಲ ಒಂಬತ್ತು ಇಂಚು ಉದ್ದ ಇರುತ್ತದೆ. ಮೊಂಡಾಗಿರುವ ಕುಡುಗೋಲಿನ ತುದಿಗಳನ್ನು ಇದರಿಂದ ಉಜ್ಜುತ್ತಾರೆ. ಇನ್ನೊಂದು ಅರ ಕುಡುಗೋಲಿನಂತೆ ಇರುತ್ತದೆ. ಹಿಡೆ ಇರುವುದಿಲ್ಲ. ಇದರಿಂದ ಕುಡುಗೋಲಿನ ಚೂಪಾದ ಭಾಗವನ್ನು ಗರಗಸದ ಚಿಕ್ಕ ಹಲ್ಲುಗಳಂತೆ ಕುಯುತ್ತಾರೆ.

ಜಾಲರಿ : ಮಾವನ್ನು ಸ್ವಲ್ಪವು ಪೆಟ್ಟಾಗದಂತೆ ಮರದಿಂದ ಇಳಿಸಲು ಬಳಸುವ ಉಪಕರಣ. ಹದಿನೈದು ಇಪ್ಪತ್ತು ಅಡಿ ಉದ್ದವಿರುವ ಬಿದಿರು ಕೋಲಿನ ತುದಿಯಲ್ಲಿ ಒಂದು ಬಲೆಯನ್ನು ಕಟ್ಟುತ್ತಾರೆ. ಅರ್ಧ ಮೀಟರ್ ಸಣ್ಣ ಗಾತ್ರದ ಕಂಬಿಯ ಬಳೆಯನ್ನು ಬಳಸಿ ಬಲೆಯನ್ನು ತಯಾರಿ ಮಾಡುತ್ತಾರೆ. ಇದರ ಮಧ್ಯ ಭಾಗಕ್ಕೆ ಕೋಲಿನ ತುದಿಯನ್ನು ಕಟ್ಟಿ ಮಾವನ್ನು ಇಳಿಸುತ್ತಾರೆ.

ಮೇವು ಈಳಿಗೆ : ಜಾನುವಾರುಗಳ ಮೇವನ್ನು ಸಣ್ಣಸಣ್ಣದಾಗಿ ಕತ್ತರಿಸಲು ಇದನ್ನು ಉಪಯೋಗಿಸುತ್ತಾರೆ. ಮೇವನ್ನು ಕತ್ತರಿಸುವುದಕ್ಕೆ ಹುಲ್ಲುಗತ್ತಿಯು ಸದಾ ಬಳಕೆಯಲ್ಲಿದೆ. ಹಾಗೆಯೆ ರೇಷ್ಮೆಹುಳಗಳನ್ನು ಸಾಕುವುದಕ್ಕೆ, ಹಿಪ್ಪುನೇರಳೆ ಕಡ್ಡಿಯನ್ನು, ಎಲೆಗಳನ್ನು ತುಂಡರಿಸಲು ಹಿಪ್ಪುನೇರಳೆ ಕಡ್ಡಿಯನ್ನು ಕತ್ತರಿಸುವುದಕ್ಕೆ ಹುಲ್ಲುಗತ್ತಿಯನ್ನು ಬಳಸುತ್ತಾರೆ.

6. ಸಂಸ್ಕರಣೆ-ಸಂಗ್ರಹಣೆಯ ಉಪಕರಣಗಳು : ಬೆಳೆ ಕುಯ್ಲಾದ ಮೇಲೆ ಕಣದಲ್ಲಿ ಕಾಳು ಬೇರ್ಪಡಿಸಿ, ಸ್ವಚ್ಛ ಮಾಡುವ ಕೆಲಸಗಳು ಈ ಹಂತದಲ್ಲಿ ನಡೆಯುತ್ತವೆ. ದಂಟಿನ ಸಮೇತ ರಾಗಿ ಕಟಾವು ಮಾಡಿ, ಕಟ್ಟುಗಳನ್ನು ಕಟ್ಟಿ ಒಂದು ಕಡೆ ರಾಗಿಯ ಮೆದೆ (ರಾಶಿ) ಹಾಕುತ್ತಾರೆ. ರಾಗಿಯ ತೆನೆಗಳು ಮೆದೆಯ ಒಳಗಡೆ ಇರುತ್ತವೆ. ಎರಡು ಮೂರು ತಿಂಗಳು ಮೆದೆಯ ರಾಗಿಯ ತೆನೆಗಳು ಮುಗ್ಗಿದ ನಂತರ 'ಕಣ ತಯಾರಿ ಮಾಡುತ್ತಾರೆ. ಕೆಲವರು ಸಣ್ಣ ರೈತರು ಬಂಡೆಗಳ ಮೇಲೆ ಕೈಕೋಲುಗಳಿಂದ ರಾಗಿಯನ್ನು ಸಂಘಟಿಸುತ್ತಾರೆ. ಸಮತಟ್ಟಾದ ಪ್ರದೇಶವನ್ನು ಸ್ವಚ್ಛಮಾಡಿ ಸಗಣಿಯಿಂದ ಎರಡು ಮೂರು ಸಲ ಸಾರಿಸುತ್ತಾರೆ. ಮಣ್ಣು, ಕಣದ ಒಳಗಡೆ ಸೇರದಂತೆ ನೋಡಿಕೊಳ್ಳುತ್ತಾರೆ. ಒಣಗಿದ ಕಣದಲ್ಲಿ ರಾಗಿ ಕಟ್ಟುಗಳನ್ನು ಬಿಚ್ಚಿ ಹರಡುತ್ತಾರೆ. ಅನಂತರ ಮೂರು ಅಡಿ ಉದ್ದ, ಎರಡುವರೆ ಅಡಿ ಎತ್ತರದಗುಂಡನ್ನು ಬಳಸಿ ತುಳಿಸುತ್ತಾರೆ. ಗುಂಡಿನ ಪಕ್ಕಗಳಲ್ಲಿ ಎರಡು ಕಡೆ ಕಬ್ಬಿಣದ ಅಚ್ಚು ಇರುತ್ತದೆ. ಈ ಅಚ್ಚುಗಳಿಗೆ ಮರದ ಅಡ್ಡಪಟ್ಟಿಗಳನ್ನು ಜೋಡಿಸಿ, ಮೂರು ಮರ ಜೋಡಿಸಿ ನೊಗ ಹೂಡಿ ಎತ್ತುಗಳನ್ನು ಕಟ್ಟಲಾಗುತ್ತದೆ. ಮರದ ಪಟ್ಟಿಗಳ ಮೇಲೆ ಚೌಕಾಕಾರದಲ್ಲಿ 'ಪೀಟ' (ಮಣೆ)ಯನ್ನು ತಯಾರಿ ಮಾಡುತ್ತಾರೆ. ಮೇಲೆ ಕುಂತು ಒಬ್ಬ ಮನುಷ್ಯ ಎತ್ತುಗಳನ್ನು ಕಟ್ಟುತ್ತಾನೆ. ಇದರ ಮೇಲೆ ಕುಳಿತು ಒಬ್ಬ ಮನುಷ್ಯ ಎತ್ತುಗಳನ್ನು ನಿಯಂತ್ರಿಸುತ್ತಾರೆ. ಹೀಗೆ ಈ ಗುಂಡನ್ನು ಹೊಡೆದ ರಾಗಿ ತೆನೆಗಳಿಂದ ಬೇರ್ಪಡೆ ಆಗುತ್ತದೆ. ಬೇರ್ಪಟ್ಟ ರಾಗಿನಲ್ಲಿ ಹೊಟ್ಟು ಇದ್ದರೆ ಗಾಳಿಗೆ ತೂರುವುದರಿಂದ ರಾಗಿ ಹೊಟ್ಟು ಬೇರೆ ಆಗುತ್ತವೆ. 'ತೂರಾಗಿ' ತೆನೆಗಳನ್ನುಕುಡುಗೋಲಿನಿಂದ ಕಟಾವು ಮಾಡಿ ಕಣದಲ್ಲಿ ಗುಡ್ಡೆ ಹಾಕುತ್ತಾರೆ. ನಾಲ್ಕರಿಂದ ಐದು ದಿವಸ ಬಿಸಿಲಿನಲ್ಲಿ ಒಣಗಿದ ಅನಂತರ ಕೈಕೋಲುಗಳಿಂದ ಹೊಡೆಯುತ್ತಾರೆ. ಹೀಗೆ ಮಾಡುವುದರಿಂದ ರಾಗಿ ಬೇರ್ಪಡುತ್ತದೆ.

ಇನ್ನು ಕೆಲವರು ಕಣದಲ್ಲಿ ಹರಡಿದ ರಾಗಿ ತೆನೆಗಳ ಮೇಲೆ ಜೋಡಿ ಜೋಡಿಯಾಗಿ ಕಟ್ಟಿದ ದನಗಳನ್ನು ಹಗ್ಗದಿಂದ ಪೋಣಿಸಿ ಓಡಿಸುತ್ತಾರೆ. ಇದನ್ನು 'ಬಂತಿ' (ಹಂತಿ) ಹೊಡೆಯುವುದು ಅನ್ನುತ್ತಾರೆ. ರಾಯಲಸೀಮೆಯ

ಅನೇಕ ಕಡೆಗಳಲ್ಲಿ ಈಗಲೂ 'ಗುಂಡು' ಹೊಡೆಯುವುದು, ಕೈಕೋಲುಗಳಿಂದ ಬಡಿಯುವುದು, ಹಂತಿ ಹೊಡೆಯುವ ಪದ್ಧತಿಗಳನ್ನು ರಾಗಿ ಸಂಸ್ಕರಣಕ್ಕೆ ಬಳಸುತ್ತಾರೆ.

ಕೊಂಕಿ (ಮೇಟಿಕೋಲು) : ಕಣದಲ್ಲಿ ತೆನೆ ಹಾಸಿದ ಅನಂತರ ಗುಂಡು ಹೊಡೆಯುತ್ತಿರುವಾಗ ಕೊಂಕಿ ಕೋಲುನಿಂದ ಹುಲ್ಲನ್ನು ಮೇಲಕ್ಕೆತ್ತಿ ಹರಡುತ್ತಾರೆ. ತಳಮೇಲು ಮಾಡುತ್ತಾರೆ. ಹೀಗೆ ಮಾಡುವುದರಿಂದ ಕಾಳು ಬೇರ್ಪಡದ ತೆನೆಗಳು ಮೇಲಕ್ಕೆ ಬಂದು ಗುಂಪಿನ ಕೆಳಗಡೆ ಬಿದ್ದು ಕಾಳುಗಳು ಬೇರ್ಪಡುತ್ತವೆ. ಇದಲ್ಲದೆ ಬತ್ತದ ಹುಲ್ಲನ್ನು ಒಣಗಿಸುವುದಕ್ಕೆ ಇದನ್ನು ಉಪಯೋಗಿಸುತ್ತಾರೆ. ಕೆಳಭಾಗದಲ್ಲಿ ಕೋಲಿನಿಂದ ಟಿಸಿಲೊಡೆದ ಮತ್ತೊಂದು ಟೊಂಗೆ ಇರುತ್ತದೆ. ಇದರ ಸಹಾಯದಿಂದ ಹುಲ್ಲನ್ನು ಮೇಲಕ್ಕೆ ಎತ್ತಿ ಹರಡಬಹುದು.

ಮೆಟ್ಟಿ : ಮೆಟ್ಟಿ ಐದಾರು ಅಡಿ ಎತ್ತರವಿರುತ್ತದೆ. ಮೂರು ಕಾಲುಗಳ ಮೇಲೆ ಒಂದು ಹಲಗೆ ಇಟ್ಟು ಇದನ್ನು ಮಾಡುತ್ತಾರೆ. ರಾಗಿ, ಬತ್ತಗಳನ್ನು ಹೊಟ್ಟು ಮತ್ತು ಟೊಳ್ಳು ಧಾನ್ಯದಿಂದ ಬೇರ್ಪಡಿಸುವುದಕ್ಕೆ ಇದರ ಮೇಲೆ ನಿಂತು ಧಾನ್ಯಗಳನ್ನು ಗಾಳಿಗೆ ತೂರುತ್ತಾರೆ.

ಮೊರ : 'ಚಾಟ' ಎಂದು ತೆಲುಗಿನಲ್ಲಿರುವ ಹೆಸರು. ದಿನ ನಿತ್ಯದ ಕೆಲಸಗಳಲ್ಲಿ ಇದರ ಉಪಯೋಗ ಹೆಚ್ಚಾಗಿರುತ್ತದೆ. ಕಣದಲ್ಲಿ ರಾಗಿ, ಬತ್ತವನ್ನು ಇದರ ಸಹಾಯದಿಂದಲೆ ತೂರುತ್ತಾರೆ. ಇದನ್ನು ತಯಾರಿಸುವುದರಲ್ಲಿ ಸ್ವಲ್ಪ ವೈವಿಧ್ಯ ಕಂಡುಬಂದರೂ ಉಪಯೋಗ ಮಾತ್ರ ಒಂದೆ. ಧಾನ್ಯವನ್ನು ಅಚ್ಚುಕಟ್ಟುಮಾಡಲು, ಕೆಲವೊಮ್ಮೆ ಧಾನ್ಯ ಅಳತೆಗೂ ಮೊರವನ್ನು ಬಳಸುತ್ತಾರೆ.

ಜರಡಿ : ಜರಡಿಗಳು ಕೆಲಸಕ್ಕೆ ತಕ್ಕ ಹಾಗೆ ವೈವಿಧ್ಯಮಯವಾಗಿ ಇರುತ್ತವೆ. ಕಲ್ಲು, ಕಸ ಮುಂತಾದವುಗಳಿಂದ ಧಾನ್ಯವನ್ನು ಬೇರ್ಪಡಿಸುವುದಕ್ಕೆ ಜರಡಿ ಉಪಯೋಗವಾಗುತ್ತದೆ. ಗುಂಜುಜರಡಿ, ಚೌಕಾಕಾರದ ದೊಡ್ಡ ಜರಡಿ, ಚಿಕ್ಕಜರಡಿ, ಬಿದಿರಿನ ಜರಡಿ ಎಂದು ವಿವಿಧ ರೀತಿಯ ಜರಡಿಗಳು ಬಳಕೆಯಲ್ಲಿವೆ.

ಒನಕೆ : ಬತ್ತವನ್ನು ಕುಟ್ಟುವುದಕ್ಕೆ, ಹಿಟ್ಟು ಮಾಡುವುದಕ್ಕೆ ಇದನ್ನು ಉಪಯೋಗಿಸುತ್ತಾರೆ. ಒರಳು ಕಲ್ಲಿನ ಬಾಯಿಗೆ ಕಡುವಂಚು (ಕುದುರು, ಕುಂದನಿ) ರಕ್ಷಣೆ ಇಟ್ಟು ಒನಕೆಯಿಂದ ಕುಟ್ಟುತ್ತಾರೆ. ಧಾನ್ಯವನ್ನು ಕುಟ್ಟುವ ಒನಕೆಯ ಎರಡುಕಡೆ ಕಬ್ಬಿಣದ ಬಳೆಗಳನ್ನು ಬಿಗಿದಿರುತ್ತಾರೆ. ಆದರೆ ಮನೆಯಲ್ಲಿ ಅಡುಗೆಯ ಸಂದರ್ಭದಲ್ಲಿ ಉಪಯೋಗಿಸುವಂತಹ ಚಿಕ್ಕ ಒನಕೆಗೆ ಕಬ್ಬಿಣದ ಬಳೆಗಳು ಇರುವುದಿಲ್ಲ. ಇದರ ಉದ್ದ ನಾಲ್ಕಡಿ ಮಾತ್ರ ಇರುತ್ತದೆ. ದೊಡ್ಡ ಒನಕೆ ಆರು ಏಳು ಅಡಿ ಉದ್ದ ಇರುತ್ತದೆ.

ಬೀಸುವ ಕಲ್ಲು (ರಾಗಲುರಾಯಿ) : ರಾಗಿ, ಗೋಧಿ, ಅಕ್ಕಿಯಂತಹ ಆಹಾರ ಧಾನ್ಯಗಳನ್ನು ಹಿಟ್ಟು ಮಾಡಲು ಬಳಸುವ ಉಪಕರಣ ಬೀಸುವಕಲ್ಲು. ಆಯಾ ಪ್ರದೇಶಗಳಲ್ಲಿ ಸಿಗುವ ಕಲ್ಲಿನ ಬಂಡೆಯಿಂದ ಇದನ್ನು ಮಾಡಿರುತ್ತಾರೆ. ಇದರಲ್ಲಿ ಎರಡು ದುಂಡಾದ ಕಲ್ಲುಗಳಿರುತ್ತವೆ. ಕೆಳಗಿನ ಕಲ್ಲಿನ ಮಧ್ಯದಲ್ಲಿ ಕಬ್ಬಿಣದ ಮರದ ಗೂಟ ಇರುತ್ತದೆ. ಮೇಲಿನ ಕಲ್ಲಿನ ಮಧ್ಯದಲ್ಲಿ ಗೂಟಕ್ಕೆ ತಕ್ಕ ಹಾಗೆ ರಂಧ್ರವಿರುತ್ತದೆ. ಗೂಟ ಎರಡು ಕಲ್ಲುಗಳನ್ನು ಸಂಪರ್ಕಿಸುತ್ತದೆ. ಮೇಲಿನ ಕಲ್ಲಿನ ಒಂದು ತುದಿಯಲ್ಲಿ ಇನ್ನೊಂದು ಗೂಟ ಇರುತ್ತದೆ. ಇದನ್ನು ಹಿಡಿ ಎಂದು ಕರೆಯಬಹುದು. ಇದನ್ನು ಹಿಡಿದು ಕಲ್ಲನ್ನು ತಿರಿಗುಸುತ್ತಾರೆ. ಕಬ್ಬಿಣ ಗೂಟ ಇರುವ ರಂಧ್ರದ ಮುಖಾಂತರ ಧಾನ್ಯವನ್ನು ಸುರಿಯುತ್ತಾರೆ. ಧಾನ್ಯವು ಎರಡುಕಲ್ಲುಗಳ ಮಧ್ಯೆ ಪುಡಿ ಆಗುತ್ತದೆ. ಬೀಸುವ ಕಲ್ಲುಗಳು ಸುಮಾರು 1½ ಅಡಿ ಅಗಲ ಇರುತ್ತವೆ. ಆದರೆ ಜಮೀಂದಾರಿ ಕುಟುಂಬಗಳಲ್ಲಿ, ಕೆಲಸದ ಆಟಗಳು ಹೆಚ್ಚಿಗೆ ಇರುವ ಕಡೆ ದೊಡ್ಡ ದೊಡ್ಡ ಬೀಸುವ ಕಲ್ಲುಗಳಿದ್ದವು. ಇದನ್ನು ಎತ್ತುಗಳ ಸಹಾಯದಿಂದ ತಿರುಗಿಸುತ್ತಿದ್ದರು. ಇಂತಹ ಒಂದು ಬೀಸುವಕಲ್ಲು ಮುಳಬಾಗಿಲಿನ ತಾಟಕಾ ಹರುಪನಾಯನಹಳ್ಳಿ ಬಿಸ್ಸೇಗೌಡನ ಕೋಟೆಯಲ್ಲಿದೆ. ಇದರ ಅಗಲ ಸುಮಾರು ಏಳರಿಂದ ಎಂಟು ಅಡಿ ಇರುತ್ತದೆ.

ಗಾಣ : ಗಾಣದಲ್ಲಿ ಎರಡು ರೀತಿ ವಿಧ. 'ಎಣ್ಣೆಗಾಣ' (ನೂನೆಗಾನುಗ) ಇನ್ನೊಂದು 'ಕಬ್ಬಿನ ಗಾಣ' (ಚೆರಕುಗಾನುಗ).

ಎಣ್ಣೆಗಾಣ ಎರಡು ರೀತಿ ಒಂದನ್ನು ಮರದಿಂದ ಮಾಡುತ್ತಾರೆ. ಇನ್ನೊಂದನ್ನು ಕಲ್ಲಿನಿಂದ ಮಾಡಿರುತ್ತಾರೆ. ಎಣ್ಣೆಗಾಣ ಬಹುದೊಡ್ಡ ಉಪಕರಣ. ಇದನ್ನು ಎಳೆಯಲು ಬಲಿಷ್ಠವಾದ ಎತ್ತುಗಳು ಬೇಕು. ಈ ಗಾಣದ ಉಪಕರಣವನ್ನು ಗೊಬ್ಬಿ, ಬಾಗೆ ಮರಗಳಿಂದ ಮಾಡಿರುತ್ತಾರೆ. ಮರದ ಒರಳು ಗಾಣದ ಮುಖ್ಯ ಅಂಗ. ಒರಳಿನ ಎತ್ತರ ಮೂರು ಅಡಿ ಒರಳಿನ ಮಧ್ಯೆಬೀಜ, ತೆಂಗಿನ ಚೂರು ಸುರಿಯಲು ಸ್ಥಳಾವಕಾಶ ಇರುತ್ತದೆ. ಅದರ ಮೇಲೆ "ಬೆಣ್ಣೆ" ಆಕಾರದಲ್ಲಿರುವ ಒಂದು ದೊಡ್ಡಗೂಟ. ಎತ್ತುಗಳು ತಿರುಗುತ್ತಿದ್ದರೆ ಗೂಟ ತಿರುಗುವ ಹಾಗೆ ಜೋಡಣೆ ಮಾಡಿರುತ್ತಾರೆ. ಈ ಗೂಟ ಬೀಜಗಳನ್ನು ಪುಡಿಮಾಡಿ ಎಣ್ಣೆ ತೆಗೆಯುತ್ತದೆ. ಆಂಧ್ರಪ್ರದೇಶದ ಕುಪ್ಪಂ (ಚಿತ್ತೂರು ಜಿಲ್ಲೆ) ಪ್ರಾಂತದಲ್ಲಿ ಈಗಲೂ ಕಲ್ಲಿನ ಗಾಣಗಳು ಬಳಕೆಯಲ್ಲಿವೆ.

ಆಲೆಮನೆ ಗಾಣ : ಈ ಗಾಣದಲ್ಲಿ ಉಕ್ಕಿನಿಂದ ತಯಾರಾದ ಮೂರು ಕಣೆಗಳು ಇರುತ್ತವೆ. ಎರಡು ದೊಡ್ಡವು. ಒಂದು ಚಿಕ್ಕದು. ಈ ಕಣೆಗಳು ಮೈತುಂಬಾ ತೆರೆಗಳನ್ನು ಹೊಂದಿರುತ್ತವೆ. ದೊಡ್ಡ ಕಣೆಗಳು ಒಂದುವರೆ ಅಡಿ ಎತ್ತರ ಸುಮಾರು 50 ಕೆಜಿ ಭಾರ ಇರುತ್ತವೆ. ಇದಕ್ಕೆ ಮೇಲೆ ಕೆಳಕ್ಕೆ ಇಪ್ಪತ್ತರಿಂದ ಇಪ್ಪತ್ತೈದು ಸಂಪೂರ್ಣ ಅಚ್ಚುಗಳಿರುತ್ತವೆ. ಚಿಕ್ಕದು ಸುಮಾರು 25 ಕೆ.ಜಿ.ನಷ್ಟು ತೂಕ ಇರುತ್ತದೆ. ಕಬ್ಬಿಣದಿಂದ ಮಾಡಿದ ಬಿಂದು ಅಡಿಮಣೆ ಮೇಲೆ ಈ ಮೂರನ್ನು ತೂರಿಸಿರುತ್ತಾರೆ. ಸುತ್ತುನಾಲ್ಕು ಮರದ ಕಾಲುಗಳಿಂದ ಮೇಲೆ ಮರದ ದಿಂಡುಗಳಿಂದ ಈ ಮೂರು ಕಣೆಗಳನ್ನು ಜೋಡಣೆ ಮಾಡಿರುತ್ತಾರೆ. ಈ ಕಣೆಗಳು ಎತ್ತುಗಳು ತಿರುಗುತ್ತಿದ್ದರೆ ತಿರುಗುತ್ತವೆ. ಇವುಗಳ ಮಧ್ಯದಲ್ಲಿ ಕಬ್ಬನ್ನು ಇಟ್ಟರೆ ಕಬ್ಬಿನಿಂದ ಹಾಲು ಸಂದು ಬಂದು ಅಡಿಮಣೆಯಿಂದ ದೊಡ್ಡಗಾತ್ರದ ಮಡಕೆಗೆ ಸೇರುತ್ತದೆ. ಅನಂತರ ಕಬ್ಬಿನ ಹಾಲನ್ನು ದೊಡ್ಡ ಕೊಪ್ಪರಿಗೆಯಲ್ಲಿ ಕಾಯಿಸಿ ಹದಕ್ಕೆ ಬಂದ ಬಳಿಕ ಚಿಕ್ಕ ಕೊಪ್ಪರಿಗೆ ಪಾಕವನ್ನು ಹಾಕುತ್ತಾರೆ. ಚಿಕ್ಕ ಕೊಪ್ಪರಿಗೆಯಲ್ಲಿ ಸ್ವಲ್ಪ ಬಿಸಿ ಆರಿದ ಪಾಕವನ್ನು ಮುದ್ದೆ ಕಟ್ಟುತ್ತಾರೆ. ಹೀಗೆ ಬೆಲ್ಲ ಮಾಡುವಾಗ ಹಾಲಲ್ಲಿ ಕೊಳ ಎತ್ತುವ ಉದ್ದದ ಜರಿಡಿ, ಚಿಕ್ಕ ಕೊಪ್ಪರಿಗೆಯಲ್ಲಿ ಪಾಕವನ್ನು ಬೆಲ್ಲ ಮಾಡುವುದಕ್ಕೆ ಪಾಕ, ಮಾನು, ಗೋರ ಎಂಬ ಪರಿಕರಗಳು ಬೇಕಾಗುತ್ತವೆ.

ಈಗ ಮೂರು ಕಣದ ಎತ್ತಿನಗಾಣ ಕಣ್ಮರೆಯಾಗಿದೆ. ಇದರ ಸ್ಥಾನದಲ್ಲಿ ವಿದ್ಯುತ್ತಿನ ಕ್ರಷರ್ ಬಂದಿದೆ.

7. ಸಾಗಾಟದ ಉಪಕರಣಗಳು : ಹಿಂದಿನ ಕಾಲದಲ್ಲಿ ಸಂಸ್ಕರಣೆ, ಸಂಗ್ರಹಣೆ ಆದ ಬೆಳೆಯನ್ನು ಮನೆಗೆ ಅಥವಾ ಮಾರುಕಟ್ಟೆಗೆ ಸಾಗಿಸುವ ಪ್ರಧಾನ ಸಾಗಾಟದ ವಾಹನವೆಂದರೆ 'ಬಂಡಿ' ಮಾತ್ರ. ಇದನ್ನು ಬಿಟ್ಟರೆ ಬೇರೊಂದಿಲ್ಲ. ಯಂತ್ರಗಳು, ಬಂದ ಕ್ರಮೇಣ ಬಂಡಿಗಳು ಕಣ್ಮರೆಯಾಗುತ್ತಿವೆ. ಆದರೂ ಕೆಲವು ಹಳ್ಳಿಗಳಲ್ಲಿ ಈಗಲೂ ಎತ್ತಿನ ಬಂಡಿಗಳು ಬಳಸುತ್ತಿದ್ದಾರೆ. ಮಧ್ಯಮ ವರ್ಗದ ರೈತರು, ಸಣ್ಣ ರೈತರು ಗೊಬ್ಬರ ಸಾಗಿಸುವುದಕ್ಕೆ, ಧಾನ್ಯವನ್ನು ಸಾಗಿಸುವುದಕ್ಕೆ ಬಂಡಿಗಳನ್ನೇ ಬಳಸುತ್ತಿದ್ದಾರೆ.

ಬಂಡಿಗಳು ವಿವಿಧ ರೀತಿ ಇವೆ. ರೆಂಡೆಹ್ಲ ಬಂಡಿ (ಎರಡೆತ್ತಿನ ಬಂಡಿ) ಒಂಟೆದ್ದು ಬಂಡಿ (ಒಂದೆತ್ತಿನ ಗಾಡಿ) ಸವಾರಿ ಬಂಡಿ (ಅಮಲ್ದಾರರ ಬಂಡಿ) ತಡಿಕೆಬಂಡಿ (ತಡಿಕೆ ಬಂಡಿ) ಚೆಕ್ಕಲ ಬಂಡಿ (ಹಲಗೆ ಬಂಡಿ) ಟೈರು ಬಂಡಿ ಮುಂತಾದವು ಬಂಡಿಗಳಲ್ಲಿನ ವಿಶೇಷಗಳು. ಇವುಗಳ ಸ್ವರೂಪದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಮೂಲ ಸ್ವರೂಪ, ತಯಾರಿ ಮಾಡುವ ವಿಧಾನ, ತಂತ್ರಗಾರಿಕೆ ಒಂದೇ ಆಗಿರುತ್ತದೆ. ಎರಡೆತ್ತಿನಗಾಡಿಯಲ್ಲಿ ಹೊಲದಿಂದ ಮೂಟೆಗಳನ್ನು ಸಾಗಿಸಬಹುದು. ಇದಕ್ಕೆ ಕುಕ್ಕಿ (ಬಿದಿರಿನ ಕುಕ್ಕೆ) ಹಾಕಿ ಗೊಬ್ಬರವನ್ನು ಸಾಗಾಣಿಕೆಗೆ ಮಾಡಬಹುದು. ದೊಡ್ಡ ಸವಾರಿ ಬಂಡಿಗಳಲ್ಲಿ ದೂರದ ಪ್ರಾಂತಗಳಿಗೆ ಸರಕು ಸಾಗಾಣೆ ಮಾಡುತ್ತಾರೆ. ಹೊದಿಕೆ ಇರುವುದರಿಂದ ಮಳೆ ಬಂದರೆ ಸರಕುಗೆ ಹಾನಿಯಾಗುವುದಿಲ್ಲ. ಚಿಕ್ಕ ಸವಾರಿ ಬಂಡಿಯ ಹಿಂದಿನ ಕಾಲದಲ್ಲಿ ಶ್ರೀಮಂತರ ಮನೆತನದವರು ಪ್ರಯಾಣ ಮಾಡುತ್ತಿದ್ದರು. ತೆಂಗಿನಕಾಯಿ, ಹಲಸು, ಮಾವು ಸಾಗಿಸಲು ತಡಿಕೆಗಾಡಿ ಉಪಯೋಗಕ್ಕೆ ಬರುತ್ತದೆ. ಚೆಕ್ಕಲ ಬಂಡಿ (ಹಲಗೆ ಬಂಡಿ)ಯಲ್ಲಿ ಗೊಬ್ಬರ ಸಾಗಿಸುತ್ತಾರೆ. ಈಗ ಟೈರು ಬಂಡಿ ಬಳಕೆಗೆ ಬಂದಿದೆ.

ಬಂಡಿಯ ಸ್ವರೂಪ : ಎತ್ತಿನ ಬಂಡಿಗೆ ಎರಡು ಚಕ್ರಗಳು, ಗುಂಬ, ಹಾರಕೋಲು, ಅಚ್ಚು, ಮೇಲಚ್ಚು, ಮೂಕು, ನೊಗ, ಗೂಟ, ಪಾರಪಟ್ಟಿ ಅಚ್ಚಿನಮೊಳೆ, ಅಡ್ಡಪಟ್ಟಿ ಇರುತ್ತವೆ. ಚಕ್ರಗಳನ್ನು, ಕಬ್ಬಿಣ ಮತ್ತು ಮರದಿಂದ ಸಿದ್ಧಪಡಿಸುತ್ತಾರೆ. ಒಂದು ಚಕ್ರದಲ್ಲಿ ನಾಲ್ಕೈದು ಭಾಗಗಳು ಇರುತ್ತವೆ. ಮೊದಲನೆಯದು ಚಕ್ರದ ಹೊರಗಡೆ ಮರ ಸವೆಯದಂತೆ ಹೊದಿಸಿರುವ ಮೂರು ಇಂಚಿನಷ್ಟು ಅಗಲ ಇರುವ ಕಬ್ಬಿಣದ ಬಳೆ. ಈ ಬಳೆ ಚಕ್ರದ ಬಿಡಿಭಾಗಗಳನ್ನು ಹಿಡಿದಿರುತ್ತದೆ. ಎರಡನೆಯ ಭಾಗ ಚಕ್ರಕ್ಕೆ ಹೊದಿಸಿರುವ ಮರ, 'ಹೊಟ್ಟೆಮರ'. ಒಂದು ಚಕ್ರಕ್ಕೆ ಆರು ಹೊಟ್ಟೆಮರಗಳು ಇರುತ್ತವೆ. ಇವನ್ನು ಒಂದಕ್ಕೊಂದು ಜೋಡಿಸಿದಾಗ ದುಂಡನೆಯ ಚಕ್ರವಾಗುತ್ತದೆ. ಒಂದು ಚಕ್ರಕ್ಕೆ ಹನ್ನೆರಡು ಅರಕೋಲುಗಳಿರುತ್ತವೆ. 'ಅಂದರೆ ಒಂದೊಂದು ಹೊಟ್ಟೆಮರಕ್ಕೆ ಎರಡು ಅರಕೋಲುಗಳಿರುತ್ತವೆ. ಪ್ರತಿ ಅರಕೋಲನ್ನು ಒಂದು ಕೇಂದ್ರಕ್ಕೆ ಜೋಡಿಸಿರುತ್ತಾರೆ. ಇದನ್ನು 'ಗುಂಬ' (ಕುಂಡ) ಅನ್ನುತ್ತಾರೆ. ಒಂದು ಚಕ್ರಕ್ಕೆ ಹೊರಗುಂಬ, ಒಳಗುಂಬ ಎರಡು ಭಾಗವಿರುತ್ತದೆ. ಈ ಭಾಗ ಬಿಗಿಯಾಗಿರೋದಕ್ಕೆ ಕಬ್ಬಿಣದ ಬಳೆ ಜೋಡಿಸಿ ಹನ್ನೆರಡು ರಂಧ್ರ ಮಾಡಿರುತ್ತಾರೆ. ಅರಕೋಲುಗಳನ್ನು ಈ ರಂಧ್ರಗಳಲ್ಲಿ ಜೋಡಿಸಿರುತ್ತಾರೆ. ಹೀಗಿರುವ ಎರಡು ಚಕ್ರಗಳನ್ನು ದೊಡ್ಡ ಕಬ್ಬಿಣದ ಕಂಬಿಯಿಂದ ಜೋಡಿಸುತ್ತಾರೆ. ಇದನ್ನೆ ಗಾಡಿಯ ಅಚ್ಚು ಅನ್ನುತ್ತಾರೆ. ಅಚ್ಚುಗೆ ಎರಡು ಕೊನೆಗಳಲ್ಲಿ ಉದ್ದದ ಮೊಳೆಗಳು ಇರುತ್ತವೆ. ಚಕ್ರಗಳು ಕಳಚದಂತೆ ಇವುಗಳನ್ನು ಬಳಸುತ್ತಾರೆ. ಅಚ್ಚಿನ ಮೇಲ್ಭಾಗಕ್ಕೆ ದಪ್ಪನಾದ ಎರಡುವರೆ ಅಥವಾ ಮೂರು ಅಡಿ ಉದ್ದದ ಮರದ ಕೊರಡು ('ಮೇಲಚ್ಚು') ಜೋಡಿಸುತ್ತಾರೆ. ಇದನ್ನು ಅಚ್ಚುಮಾನು ಅನ್ನುತ್ತಾರೆ. ಇದಾದ ಮೇಲೆ ನೂಕು (ಮೂಕಿ ಮಾನು) ಅನ್ನು ತಯಾರಿಸುತ್ತಾರೆ.

8. ಏಣಿ : ರೈತರು ಬೇಸಾಯ ಮಾಡುವ ಸಲುವಾಗಿ ಎಷ್ಟೊಂದು ಉಪಕರಣಗಳನ್ನು ಕಂಡು ಹಿಡಿದಿದ್ದಾರೆ. ಅಂತಹ ಉಪಕರಣಗಳಲ್ಲಿ ಏಣಿ ಒಂದು. ಇದನ್ನು ತೆಲುಗಿನಲ್ಲಿ 'ನಿಚ್ಚೆನ' ಅನ್ನುತ್ತಾರೆ. ಎಲ್ಲಾ ತರಹದ ಏಣಿಗಳು ಆಕಾರದಲ್ಲಿ ಒಂದೇ ರೀತಿ ಇರುತ್ತವೆ. ಆದರೆ ಆಯಾ ಕೆಲಸಕ್ಕೆ ತಕ್ಕಹಾಗೆ ಅದರ ಉದ್ದ ಅಗಲ ಇರುತ್ತದೆ. ಇಂತಹ ಏಣಿಗಳಲ್ಲಿ ಬಣವೆ ಏಣಿ, ಗೋಡೆ ಏಣಿ, ಬಾವಿ ಏಣಿ, ಗಿಡದ ಏಣಿ, ರಾಣಿ ಏಣಿ, ವೀಳ್ಯದೆಲೆ ತೋಟದ ಏಣಿ ಮುಂತಾದವು ಮುಖ್ಯವಾದವು. ಈ ಏಣಿಗಳನ್ನು ಗಟ್ಟಿ ಬಿದಿರಿನಿಂದ ಮಾಡುತ್ತಾರೆ. ಟೊಳ್ಳು ಬಿದಿರನ್ನು ಪುಟ್ಟಿ, ತಟ್ಟಿ, ಮಂಕರಿ ತಯಾರಿಗೆ ಉಪಯೋಗಿಸಿದರೆ ಗಟ್ಟಿಬಿದಿರನ್ನು ಏಣಿ ಮಾಡಲು ಉಪಯೋಗಿಸುತ್ತಾರೆ. ಮನೆಯಲ್ಲಿ ಉಪಯೋಗಿಸುವಂತಹ ಏಣಿ ಐದಾರು ಅಡಿ ಎತ್ತರವಿದ್ದು ಇದನ್ನೂ ಕಣಜದ ಒಳಗಡೆ ಇಳಿಯುವುದಕ್ಕೆ ಉಪಯೋಗಿಸುತ್ತಾರೆ. ಗೋಡೆ ಏಣಿಯನ್ನು ಎತ್ತರದ ಗೋಡೆಗಳನ್ನು ಸ್ವಚ್ಛ ಮಾಡುವುದಕ್ಕೆ, ಬಣವೆ ಹಾಕುವುದಕ್ಕೆ ಉಪಯೋಗಿಸುತ್ತಾರೆ. ಸುತ್ತಮುತ್ತ ಕೊಕ್ಕೆಗಳನ್ನು ಇರುವಂತಹ ಮರದ ದೊಡ್ಡ ರೆಂಬೆಯನ್ನು, ಬಾವಿಗೆ ಇಳಿಯಲು ಉಪಯೋಗಿಸುತ್ತಾರೆ. ಕೆಲವು ಕಡೆ ಬಿದಿರನ್ನು ಏಣಿಯಂತೆ ಬಾವಿಗಳಲ್ಲಿ ಉಪಯೋಗಿಸುತ್ತಾರೆ. ಬಿದಿರಿನಲ್ಲಿ ಟಿಸಿಲು ಒಡೆದಿರುವ ರೆಂಬೆಗಳನ್ನು ಒಂಬತ್ತು ಇಂಚು ಬಿಟ್ಟು ಕತ್ತರಿಸುವುದರಿಂದ ಇವುಗಳನ್ನು ಮೆಟ್ಟಿಲುಗಳಂತೆ ಬಳಸುತ್ತಾರೆ. ವೀಳ್ಯದೆಲೆ ಕೊಯ್ಯಲು ಪ್ರತ್ಯೇಕವಾದ ಏಣಿಯನ್ನು ತಯಾರಿ ಮಾಡುತ್ತಾರೆ. ಇದಕ್ಕೆ ಆಧಾರವಾಗಿ ಎರಡು ಉದ್ದವಾದ ಮರಗಳನ್ನು ಜೋಡಿಸಿರುತ್ತಾರೆ. ಇವುಗಳ ಆಧಾರದದಿಂದ ಏಣಿಯನ್ನು ಎಲ್ಲಿ ಬೇಕಾದರೂ ನಿಲ್ಲಿಸಿ ಹತ್ತಬಹುದು.

೧೨ಪೊರಕೆಗಳು : ಪೊರಕೆಯಲ್ಲಿ ಅನೇಕ ರೀತಿ ಇವೆ. ತೆಂಗಿನ ಕಡ್ಡಿ ಪೊರಕೆ, ಬಂದೇರು ಸೊಪ್ಪಿನ ಬರ್ಲು, ಈಚಲುಗರಿ ಪೊರಕೆ, ಹಂಚಿಕಡ್ಡಿ ಪೊರಕೆ ಮುಂತಾದವು.

ತೆಂಗಿನ ಕಡ್ಡಿ ಪೊರಕೆ : ಒಣಗಿದ ತೆಂಗಿನಗರಿಗಳ ಎಲೆಗಳನ್ನು ಸಿಗಿದು ಮಧ್ಯದಲ್ಲಿರುವ ಕಡ್ಡಿಗಳನ್ನು ಒಂದು ಹಿಡಿಯಷ್ಟು ಬೇರ್ಪಡಿಸಿ ತೆಂಗಿನ ಪೊರಕೆಯನ್ನು ಕಟ್ಟುತ್ತಾರೆ. ಇದರ ಹಿಂದೆ ಮುಂದೆ ಸ್ವಲ್ಪ ಸ್ವಲ್ಪ ಕತ್ತರಿಸಿ ಉಪಯೋಗಿಸಬೇಕು. ದನದ ಕೊಟ್ಟಿಗೆ, ಮನೆಯ ಮುಂಭಾಗ ಸ್ವಚ್ಛ ಮಾಡುವುದಕ್ಕೆ ತೆಂಗಿನ ಕಡ್ಡಿ ಪೊರಕೆ ಬಳಸುತ್ತಾರೆ. ಪೊರಕೆ ಹೆಚ್ಚಾಗಿ ಉಪಯೋಗಿಸಿ ಸವೆದು ಸವೆದು ಮೊಂಡುಪೊರಕೆ ಆಗುತ್ತದೆ. ಇಂತಹ ಪೊರಕೆಯಿಂದ ಹುಲ್ಲು ಚರಂಡಿಯಲ್ಲಿರುವ ಕಸ ಕಡ್ಡಿಯನ್ನು ತೆಗೆಯಲು ಉಪಯೋಗಿಸುತ್ತಾರೆ.

ಹಂಚಿಕಡ್ಡಿ ಪೊರಕೆ : ಬೆಟ್ಟ, ಗುಡ್ಡ, ಹೊಲದ ಬದುಗಳಲ್ಲಿ ಬೆಳೆಯುವ ಸಸ್ಯ. ಡಿಸೆಂಬರು, ಜನವರಿ ತಿಂಗಳುಗಳಲ್ಲಿ ತೆನೆಯ ರೀತಿ ಊಬನ್ನು ಬಿಡುತ್ತದೆ. ದನ ಕುರಿ ಕಾಯುವವರು ಊಬನ್ನು ನೋಡಿ ಮೂರ್‍ನಾಲ್ಕು ಅಡಿ ಉದ್ದ ಇರುವ ಹಾಗೆ ಕತ್ತರಿಸಿ ಶೇಖರಣೆ ಮಾಡುತ್ತಾರೆ.

ಹೀಗೆ ಶೇಖರಣೆ ಮಾಡಿದ ಕಡ್ಡಿಗಳನ್ನು ಒಣಗಿಸುತ್ತಾರೆ. ಒಣಗಿದ ಕಡ್ಡಿಗಳ ಕೊನೆಯಲ್ಲಿ ಊಬಿನಂತೆ ಇರುವ ಸಣ್ಣ ಮುಳ್ಳುಗಳನ್ನು ತೆಗೆಯುತ್ತಾರೆ. ಒಂದು ಹಿಡಿ ಕಡ್ಡಿಗಳ ಕೊನೆಗಳನ್ನು ಇನ್ನೊಂದು ಹಿಡಿ ಕಡ್ಡಿಗಳ ಕೊನೆಗಳಿಂದ ಒಡೆದರೆ ಊಬು (ಊಗು ಮುಳ್ಳು) ಉದಿರಿ ಹೋಗುತ್ತದೆ. ಒಂದು ಹಿಡಿ ಹಂಚಿಕಡ್ಡಿಗಳನ್ನು ಕಟ್ಟು ಕಟ್ಟಿದರೆ ಅದನ್ನು ಹಂಚಿಕಡ್ಡಿ ಪೊರಕೆ ಎನ್ನುತ್ತಾರೆ. ಎಲ್ಲಾ ರೀತಿಯ ಬೇಸಾಯದ ಕೆಲಸಗಳಿಗೆ ಇದು ಉಪಯೋಗಕ್ಕೆ ಬರುತ್ತದೆ.

ಬಂದೇರು ಬರ್ಲು (ಪೊರಕೆ) : ಬಂದೇರು ಗಿಡ ಎನ್ನುವುದು ಕುರುಚಲು ಗಿಡವಾಗಿದ್ದರೂ ಇದನ್ನು ಬಿಟ್ಟರೆ ಇಪ್ಪತ್ತು ಅಡಿಯ ತನಕ ಬೆಳೆಯುತ್ತದೆ. ಇದರ ಸಣ್ಣ ರೆಂಬೆಗಳನ್ನು ಆಡುಭಾಷೆಯಲ್ಲಿ 'ಬರ್ಲು' (ಒಪ್ಪಲು) ಅನ್ನುತ್ತಾರೆ. ಇಂತಹ ಸಣ್ಣ ರೆಂಬೆಗಳನ್ನು ತಂದು ಒಣಗಿಸಿದ ಅನಂತರ ಇದನ್ನು ಪೊರಕೆಯಂತೆ ಉಪಯೋಗಿಸುತ್ತಾರೆ. ಹಿಡಿಯಷ್ಟು ರೆಂಬೆಗಳನ್ನು ದಾರ ಅಥವಾ ಬಳ್ಳಿಗಳಿಂದ ಕಟ್ಟು ಕಟ್ಟುತ್ತಾರೆ. ಇದರಿಂದ ಕುರಿ, ಮೇಕೆ ದೊಡ್ಡಿಗಳಲ್ಲಿ ಹಕ್ಕೆ ಗುಡಿಸುವುದು, ಸಗಣಿ ಎತ್ತುವುದು, ಸಗಣಿಯನ್ನು ಕಣದಲ್ಲಿ ಸಾರಿಸುವುದು, ಕಸ ಗುಡಿಸುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ.

ಅಳತೆಯ ಉಪಕರಣಗಳು : ಒಂದು ಬೊಗಸೆ ನೀರು. ಹಾಗೆಯೇ ಒಂದು, ಎರಡು ಬೊಗಸೆ ಹಿಟ್ಟು, ಧಾನ್ಯವನ್ನು ಪಕ್ಕದ ಮನೆಯವರಿಗೆ 'ಸಾಲವಾಗಿ' ಕೊಡುತ್ತಿದ್ದ ರೈತಾಪಿ ಕೂಲಿ ಮಾಡುವ ಜನರಿಗೆ 'ಬೊಗಸೆ' ಅನ್ನುವುದೆ ಒಂದು ಅಳತೆ. ಹಾಗೆಯೇ ಉದ್ದ, ಅಗಲವನ್ನು ಸದಾ ಕೈಗಳಿಂದಲೆ ಅಳತೆ ಮಾಡುತ್ತಿದ್ದ, ಹೂವನ್ನು ಒಂದು 'ಮಳ' ಲೆಕ್ಕದಲ್ಲಿ ಕೊಡುತ್ತಾರೆ. ಅದಕ್ಕೆ ಕೈಯನ್ನೆ ಅಳತೆಯ ಸಾಧನವಾಗಿ ಉಪಯೋಗಿಸುತ್ತಾರೆ. ಮನುಷ್ಯನ ಅವಸರಕ್ಕೆ ತಕ್ಕ ಹಾಗೆ ವಿವಿಧ ರೀತಿಯ ಉಪಕರಣಗಳು ಅನಂತರದ ದಿನಗಳಲ್ಲಿ ಬೆಳಕಿಗೆ ಬಂದಿವೆ. ಎಣ್ಣೆ ಮುಂತಾದ ದ್ರವಗಳನ್ನು ಅಳತೆಯ ಉಪಕರಣಗಳಿಂದಲೆ ಮಾರುತ್ತಿದ್ದರು. ಅಳತೆಯ ಉಪಕರಣಗಳು ಹೀಗಿವೆ. ಚಟಾಕು, ಎರಡು ಚಟಾಕು ಒಂದು ಸೊಲಿಗೆ, ಎರಡು ಸೊಲಿಗೆಗಳು ಒಂದು ಪಾವು, ಎರಡು ಪಾವುಗಳು ಒಂದು ಅಚ್ಚೆರು (ಪಡಿ) ಎರಡು ಪಡಿಗಳು ಒಂದು ಸೇರು, ಎರಡು ಸೇರುಗಳು ಒಂದು ಪಂಚೇರು, ಎರಡು ಪಂಚೇರುಗಳು ಒಂದು ಬಳ್ಳ, ಹನ್ನೊಂದು ಸೇರು ಒಂದು ಮಣ, ಹನ್ನೆರಡು ಸೇರು, ಒಂದು ದಡಿ, ಹದಿನಾರು ಸೇರು ಒಂದಾಗಿದ್ದ, ನೂರು ಸೇರು ಒಂದು ಪುಟ್ಟಿ ಹೀಗೆ ಇರುತ್ತವೆ. ಆದರೆ ಮೇಲೆ ತಿಳಿಸಿದ ಅಳತೆಗಳ ಲೆಕ್ಕದಲ್ಲಿ ಪ್ರಾಂತೀಯ ಭೇದಗಳು ಇರುತ್ತವೆ.

11. ಜಾನುವಾರು ಉಪಕರಣಗಳು : ಹಿಂದಿನ ಕಾಲದಲ್ಲಿ ಜಾನುವಾರುಗಳೇ ರೈತನ ಸಂಪತ್ತು. ಬಿಡುವಿನ ಸಮಯವನ್ನು ಜಾನುವಾರುಗಳ ರಕ್ಷಣೆಗೆಂದು ರೈತ ಮೀಸಲು ಇಡುತ್ತಿದ್ದ. ಆ ಜಾನುವಾರುಗಳಿಗೆ ಬೇಕಾಗುವ ಎಲ್ಲ ಉಪಕರಣಗಳನ್ನು ಆತನೆ ಮಾಡಿಕೊಳ್ಳುತ್ತಿದ್ದ. ವಿಶೇಷ ಸಂದರ್ಭಗಳಲ್ಲಿ ಅವುಗಳ ಕೊಂಬುಗಳಿಗೆ ಅಣಸು (ಕೊಮ್ಮುಕುಪ್ಪಲು) ರಂಗು, ಕತ್ತಿನಪಟ್ಟಿ, ಹೊಸ ಮೂಗುದಾರ ಮುಂತಾದವುಗಳನ್ನು ಹಾಕಿ ಸಂಭ್ರಮಪಡುತ್ತಿದ್ದ. ಇಡೀ ವರ್ಷ ತನ್ನ ಉಳಿವಿಗಾಗಿ ದುಡಿದ ಮೂಕ ಪ್ರಾಣಿಗಳಿಗೆ ಈ ರೀತಿ ಕೃತಜ್ಞತೆ ಸಲ್ಲಿಸುತ್ತಾರೆ. ಕಾಲ ಎಷ್ಟು ಬದಲಾದರೂ ಈಗಲೂ ಹಳ್ಳಿಗಳ ಕಡೆ ಜಾನುವಾರು ಬಗ್ಗೆ ಆಸಕ್ತಿ ತೋರುವವರು ಇದ್ದಾರೆ. ಅಂತಹವರು ಜಾನುವಾರುಗಳಿಗೆ ಉಪಯೋಗಿಸುವ ಎಲ್ಲಾ ಪರಿಕರಗಳು ಹೀಗಿವೆ. ಇವುಗಳಲ್ಲಿಯ ಹೆಚ್ಚಿನ ಉಪಕರಣಗಳು ಹಗ್ಗದಿಂದ ಮಾಡಿರುತ್ತಾರೆ. ಈ ಹಗ್ಗಗಳನ್ನು ಪುಂಡಿನಾರು (ಗೋಗುನಾರು) ಕತ್ತಾಳೆನಾರು, ತೆಂಗಿನಾರುಗಳಿಂದಲೆ ಮಾಡುತ್ತಾರೆ.

ಮೂಗು ದಾರ : ಎಲ್ಲಾ ತರಹದ ಎತ್ತು, ಹಸು, ಕೋಣಗಳಿಗೆ ಮೂಗಿನದಾರ ಹಾಕುತ್ತಾರೆ. ಜಾನುವಾರುಗಳು ಹುಟ್ಟಿದ ಸುಮಾರು ಒಂದೆರಡು ವರ್ಷಕ್ಕೆ ಅವುಗಳ ವರ್ತನೆಯನ್ನು ನೋಡಿ ಮೂಗುದಾರ ಹಾಕುತ್ತಾರೆ. ಇದು ಸಾಮಾನ್ಯವಾಗಿ ಹತ್ತಿ ಹಗ್ಗದಿಂದ ಮಾಡಿರುವುದಾಗಿರುತ್ತದೆ. ಮೂಗು ಮೃದುವಾಗಿರುವುದರಿಂದ ಹತ್ತಿ ಹಗ್ಗವನ್ನು ಮೂಗುದಾರವಾಗಿ ಉಪಯೋಗಿಸುತ್ತಾರೆ.

ಕತ್ತಿನದಾರ ಕೊರಳಿನ ದಾರ : ದನಗಳಿಗೆ (ಎತ್ತು) ನಾರುನಿಂದ ಮಾಡಿದ ಹಗ್ಗಗಳನ್ನು ಎರಡು ಎಳೆ ಬರುವ ಹಾಗೆ ಕತ್ತಿನ ಸುತ್ತು ಕಟ್ಟುತ್ತಾರೆ. ಹಸು ಕುರಿಗಳಿಗೆ ಉಣ್ಣೆಯಿಂದ ಮಾಡಿದ ಕಪ್ಪುದಾರವನ್ನು ಕತ್ತಿನ ದಾರವಾಗಿ ಕಟ್ಟುತ್ತಾರೆ. ಕೆಲವರು ಕತ್ತಿನ ಪಟ್ಟಿಯನ್ನು ಕಟ್ಟುತ್ತಾರೆ.

ಕೈಹಗ್ಗ : ಮೂಗುದಾರ ಮತ್ತು ಕತ್ತಿನ ದಾರಕ್ಕೆ ಸೇರಿಸಿ ಸುಮಾರು ಎಂಟರಿಂದ ಒಂಬತ್ತು ಅಡಿ ಇರುವ ಉದ್ದ ದಾರವನ್ನು ಕಟ್ಟುತ್ತಾರೆ. ಈ ದಾರದಿಂದಲೆ ಎತ್ತು, ಹಸುಗಳನ್ನು ನಿಯಂತ್ರಣ ಮಾಡುವುದು.

ಕೊರಳ ಚಿಲಕ : ಮೂಗುದಾರ ಮತ್ತು ಕತ್ತಿನದಾರ ಇವೆರಡಕ್ಕು, ಅಥವಾ ಕತ್ತಿನ ದಾರ ಒಂದಕ್ಕೆ ಬಾಗಿಲಿನ ಚಿಲಕ ಇರುವ ರೀತಿಯಲ್ಲಿ ಇರುವ ಚಿಲಕವನ್ನು ಅಳವಡಿಸಿ ಅದಕ್ಕೆ ಕೈದಾರವನ್ನು ಕಟ್ಟುತ್ತಾರೆ.

ಕೋಡು ಅವಾಸ (ಕೊಮ್ಮುಕುಪ್ಪಲು) : ಚೂಪಾದ ಕೊಂಬಿನ ತುದಿಗೆ ಸಿಕ್ಕಿಸುವ ಬೆಳ್ಳಿ ಅಥವಾ ಸ್ಟೀಲಿನ ಉಪಕರಣ. ಇದರ ಕೊನೆಯ ಭಾಗದಲ್ಲಿ ಮೊಂಡಾಗಿ ಅವಾಸು ರೂಪದಲ್ಲಿರುತ್ತದೆ. ಇದಕ್ಕೆ ಗೆಜ್ಜೆಯನ್ನು ಕಟ್ಟುತ್ತಾರೆ. ಅಣಸು ಹಾಕುವುದರಿಂದ ಚೂಪಾದ ಕೊಂಬುಗಳಿಂದ ತಿವಿಯುವುದಿಲ್ಲ. ಕೊಂಬುಗಳಿಗೆ ಇವು ರಕ್ಷಣಾ ಕವಚವಾಗಿ ಇರುತ್ತವೆ. ಇವುಗಳ ಕೆಳಗಿನ ಭಾಗದಲ್ಲಿ ಅವಾಸಗಳಿಗೆ ತಕ್ಕ ಹಾಗೆ ಎತ್ತಿನ ಕೊಂಬುಗಳ ಕೊನೆಗಳನ್ನು ಕತ್ತಿಯಿಂದ ಸರಿಮಾಡಿ, ಅಣಸುಗಳ ಒಳಭಾಗದಲ್ಲಿ ಕೆಂಡವನ್ನು ಹಾಕುತ್ತಾರೆ. ಅಣಸು ಬಿಸಿ ಆದ ಮೇಲೆ ಕೆಂಡವನ್ನು ತೆಗೆದು, ಬಿಸಿಯಲ್ಲೇ ಕೊಂಬುಗಳಿಗೆ ಜೋಡಿಸಿದರೆ ಶಾಶ್ವತವಾಗಿ ಕೊಂಬುಗಳಲ್ಲೇ ಇರುತ್ತವೆ.

ಬಾರುಕೋಲು : ಎತ್ತುಗಳಿಗೆ ಚುರುಕು ಮುಟ್ಟಿಸೋದಕ್ಕೆ ಇದನ್ನು ಉಪಯೋಗಿಸುತ್ತಾರೆ. ಮೂರು ಅಥವಾ ನಾಲ್ಕು ಅಡಿ ಉದ್ದವಿರುವ ಹೆಬ್ಬೆರಳು ಗಾತ್ರದ ಗಟ್ಟಿ ಬಿದಿರಿನ ತುದಿಯಲ್ಲಿ ಪುಂಡಿನಾರಿನ ದಾರವನ್ನು ಅನೇಕ ವಿನ್ಯಾಸಗಳಲ್ಲಿ ಅಭಿರುಚಿಗೆ ತಕ್ಕಹಾಗೆ ಕಟ್ಟುತ್ತಾರೆ. ಇದನ್ನು ಬಾರುಕೋಲು ಎನ್ನುತ್ತಾರೆ.

ಗೊಟ್ಟ : ಬಿದಿರಿನಿಂದ ಇದನ್ನು ಮಾಡುತ್ತಾರೆ. ಬಿದಿರಿನ ಮಧ್ಯೆ ಅಲ್ಲಲ್ಲಿ 'ಗಣ'ಗಳು ಇದ್ದು ಒಳಭಾಗ ಒಂದಡಿ, ಹಾಗೂ ಒಂದುವರೆ ಅಡಿ ಒಂದು ಕಡೆ ಮುಚ್ಚಿರುತ್ತದೆ. ಅಲ್ಲಿಗೆ ಇದನ್ನು ಕತ್ತರಿಸಿ ಒಂದು ಕಡೆ ತೆರೆದಿರುವ ಹಾಗೆ ಇನ್ನೊಂದು ಕಡೆ ಮುಚ್ಚಿರುವ ಹಾಗೆ ತಯಾರಿಸುತ್ತಾರೆ. ಜಾನುವಾರುಗಳಿಗೆ ಮದ್ದು ಮುಂತಾದವುಗಳನ್ನು ಕುಡಿಸಲು ಇದನ್ನು ಉಪಯೋಗಿಸುತ್ತಾರೆ. ದೊಡ್ಡ, ಮಧ್ಯಮ, ಚಿಕ್ಕ ಗಾತ್ರದ ಗೊಟ್ಟಗಳು ಜಾನುವಾರುಗಳ ತಕ್ಕಹಾಗೆ ಇರುತ್ತವೆ.

ಕುಡಿತಿ (ಬಾನಿ) : ಇದನ್ನು ಕುಂಬಾರರು ಮಾಡುತ್ತಾರೆ. ಬಕೆಟ್ಟು ಆಕೃತಿಯಲ್ಲಿದ್ದು ಇದರ ಬಾಯಿಯು ಅಗಲ ಎರಡು ಅಡಿ, ಕೆಳಗಿನ ಭಾಗದ ಅಗಲ ಹದಿನೈದು ಇಂಚು ಇದ್ದು ದಪ್ಪವಾಗಿ ಇರುತ್ತದೆ. ಎತ್ತರ ಒಂದುವರೆ ಅಡಿ ಇರುತ್ತದೆ. ಇದನ್ನು ಒಂದು ಅಡಿ ಎತ್ತರದ ದಿಣ್ಣೆಯ ಮೇಲಿಟ್ಟು, ಅಲ್ಲಾಡದಂತೆ ಸುತ್ತ ಮಣ್ಣಿನಿಂದ ಕಟ್ಟುತ್ತಾರೆ. ಊಟ ಮುಗಿದ ಅನಂತರ ಅನ್ನದ ತಟ್ಟೆ ನೀರು, ಅನ್ನದ ಪಾತ್ರೆಗಳು ತೊಳೆದ ನೀರು ಮಿಕ್ಕಿದ ಅನ್ನ, ಮುದ್ದೆ, ಸಾರುಗಳನ್ನು, ನೆನೆಹಾಕಿದ ಹಿಂಡಿಗಳನ್ನು ಇದಕ್ಕೆ ಹಾಕುತ್ತಾರೆ. ಜಾನುವಾರುಗಳಿಗೆ 'ಕುಡಿತಿ'ಯ ನೀರು ಅಂದರೆ ಬಲು ಇಷ್ಟ. ಈ ರೀತಿಯ ಬಾನಿಗಳನ್ನು ಜೇಡಿ ಮಣ್ಣಿನಿಂದ ಅಲ್ಲದೆ ಕಲ್ಲು, ಮರಗಳಿಂದಲೂ ಚೌಕಾಕಾರವಾಗಿ ಮಾಡುತ್ತಾರೆ. ಜಮೀಂದಾರರ ಕೋಟೆ, ಮನೆಯ ಆವರಣಗಳಲ್ಲಿ ಕಲ್ಲಿನಿಂದ ಮಾಡಿದ 'ಕುಡಿತಿ'ಗಳನ್ನು ಇಂದಿಗೂ ಕಾಣಬಹುದು.

ಬಡಿ : ಕೆಲವು ಹಸು, ಎತ್ತುಗಳು ಕೈಗೆ ಸಿಗುವುದಿಲ್ಲ. ಇಂತಹ ಜಾನುವಾರುಗಳು ಹೊಲಗಳಿಗೆ ಹೋಗಿ ಕಳ್ಳತನದಿಂದ ಪೈರನ್ನು ತಿನ್ನುತ್ತವೆ. ಇವುಗಳನ್ನು ನಿಯಂತ್ರಣ ಮಾಡುವುದಕ್ಕೆ ಸುಮಾರು ಮೂರು ಅಡಿ ಉದ್ದ ಒನಕೆ ಗಾತ್ರದ ಮರವನ್ನು ಕತ್ತಿಗೆ ಕಟ್ಟುತ್ತಾರೆ.

ಮೂಗು ಬುಟ್ಟಿ : ಕರುಗಳು ಮಣ್ಣು ತಿನ್ನಬಾರದೆಂದು ಸಣ್ಣದಾದ ಅಥವಾ ಹಗ್ಗದಿಂದ ಮಾಡಿದ ಬುಟ್ಟಿಗಳನ್ನು ಕಟ್ಟುತ್ತಾರೆ. ಅದಲ್ಲದೆ ತಾಯಿಯ ಕೆಚ್ಚಲಿಗೆ ಪದೇಪದೆ ಬಾಯಿ ಹಾಕಬಾರದೆಂದು, ಹಾಲು ಕುಡಿಯಬಾರದೆಂದು ಮೂಗು ಬುಟ್ಟಿ ಕಟ್ಟುತಾರೆ. ಪೈರಿನಲ್ಲಿರುವ ಕಳೆಯನ್ನು ತೆಗೆಯುವಾಗ, ಎತ್ತುಗಳ ಬಾಯಿಗೆ ಬಳ್ಳಿಗಳಿಂದ ಮಾಡಿದ ಬುಟ್ಟಿಯನ್ನು ಕಟ್ಟುತ್ತಾರೆ.

ಲಾಳ : ಕೆಲಸ ಮಾಡುವ ಎತ್ತುಗಳ ಕಾಲುಗಳಿಗೆ ರಕ್ಷಣೆ ಕೊಡುವ ಸಲುವಾಗಿ ಕಬ್ಬಿಣ ಲಾಳಗಳನ್ನು ಕಟ್ಟುತ್ತಾರೆ. ಲಾಳಗಳನ್ನು ಪರಿಣಿತಿ ಹೊಂದಿದ ವ್ಯಕ್ತಿಗಳು ಮಾತ್ರ ಎತ್ತುಗಳ ನಾಲ್ಕು ಕಾಲುಗಳಿಗೆ ಕಟ್ಟುತ್ತಾರೆ.

ಮೇಲೆ ತಿಳಿಸಿರುವ ಕೃಷಿ ಉಪಕರಣಗಳು ಅಲ್ಲದೆ, ಇನ್ನೂ ಅನೇಕ ಉಪಕರಣಗಳು ಕಣ್ಮರೆ ಆಗುತ್ತಿವೆ.

ಆಕರಗಳು

ವ್ಯವಸಾಯ ಕೈಪಿಡಿ, ಗಾಂಧಿ ಕೃಷಿ ವಿಶ್ವವಿದ್ಯಾಲಯ, ಹೆಬ್ಬಾಳ, ಬೆಂಗಳೂರು.

ಕೃಷಿ ಉಪಕರಣಗಳು, ಗಾಣದಾಳು ಶ್ರೀಕಂಠ, ದೇಸಿ ಕೃಷಿ ವಿಜ್ಞಾನ, ಸಂ. 6, ಕನ್ನಡ ಪುಸ್ತಕ ಪ್ರಾಧಿಕಾರ

ಎನ್.ಟಿ.

ಆಂಧ್ರಪ್ರದೇಶದ ಕೃಷಿ – ಪಕ್ಷಿನೋಟ ಪೂರ್ವದಲ್ಲಿ ಬಂಗಾಳಕೊಲ್ಲಿ, ದಕ್ಷಿಣದಲ್ಲಿ ತಮಿಳುನಾಡು, ಪಶ್ಚಿಮದಲ್ಲಿ ಕರ್ನಾಟಕ ಮಹಾರಾಷ್ಟ್ರಗಳು, ಉತ್ತರದಲ್ಲಿ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಒಡಿಶಾ ಆಂಧ್ರಪ್ರದೇಶದ ಗಡಿರಾಜ್ಯಗಳು.

ಪ್ರಾಂತ್ಯಗಳು : ಆಂಧ್ರಪ್ರದೇಶದ ವಿಸ್ತೀರ್ಣ 2,76,755 ಚ.ಕಿ.ಮೀ. ಪ್ರಾದೇಶಿಕವಾಗಿ ಆಂಧ್ರಪ್ರದೇಶವನ್ನು ಮೂರು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ.

1. ಕೋಸ್ತಾ : ನೆಲ್ಲೂರಿನಿಂದ ಶ್ರೀಕಾಕುಳಂವರೆಗೂ ಇರುವ 9 ಜಿಲ್ಲೆಗಳು, ಶ್ರೀಕಾಕುಳಂ, ವಿಜಯನಗರಂ, ವಿಶಾಖಪಟ್ನಂ, ತೂರ್ಪು (ಪೂರ್ವ) ಗೋದಾವರಿ, ಪಶ್ಚಿಮಗೋದಾವರಿ, ಕೃಷ್ಣಾ, ಗುಂಟೂರು, ಪ್ರಕಾಶಂ, ಗೆಲ್ಲೂರು.

2. ತೆಲಂಗಾಣ : ಕೃಷ್ಣಾ, ಗೋದಾವರಿ ನದಿಗಳ ಮಧ್ಯೆಯಿರುವ 9 ಜಿಲ್ಲೆಗಳು ಆದಿಲಾಬಾದ್, ನಿಜಾಮಾಬಾದ್, ಮೆದಕ್, ರಂಗಾರೆಡ್ಡಿ, ಮಹಬೂಬ್‌ನಗರ, ನಲ್ಗೊಂಡ, ವರಂಗಲ್, ಕರೀಂನಗರ್, ಹೈದರಾಬಾದ್ ಮತ್ತು ಖಮ್ಮಂ.

3. ರಾಯಲಸೀಮೆ : ಕೃಷ್ಣಾ, ತುಂಗಭದ್ರಾ ನದಿಗಳಿಗೆ ದಕ್ಷಿಣದಲ್ಲಿರುವ 4 ಜಿಲ್ಲೆಗಳು, ಅನಂತಪುರಂ, ಕರ್ನೂಲು ಕಡಪ, ಚಿತ್ತೂರು ಕೋಟೆ ಪ್ರದೇಶ. ಒಟ್ಟು 23 ಜಿಲ್ಲೆಗಳಲ್ಲಿ ನಾಲ್ಕುಕೋಟಿ ಎಕರೆಗಳಿಗೂ ಹೆಚ್ಚಿನ ವಿಸ್ತಾರವಿದೆ. ಇದರಲ್ಲಿ ಸಾಗುವಳಿಯಾಗುತ್ತಿರುವ ಭೂಮಿ ಒಂದೂವರೆ ಎಕರೆ 50 ಲಕ್ಷಕ್ಕೂ ಹೆಚ್ಚು ಎಕರೆಗಳ ಭೂಮಿಗೆ ನೀರಿನ ಸೌಲಭ್ಯವಿದೆ. ಮಿಕ್ಕ ಭೂಮಿ ಕೇವಲ ಮಳೆಯನ್ನು ಅವಲಂಭಿಸಿದೆ. ಇಲ್ಲಿಯ ಮುಖ್ಯವಾದ ವೃತ್ತಿ ಬೇಸಾಯ.

ಬಂದರುಗಳು : ಆಂಧ್ರಪ್ರದೇಶದಲ್ಲಿ 10 ಬಂದರುಗಳಿವೆ. ವಿಶಾಖಪಟ್ಟಣಂ ರೇವುಪಟ್ಟಣ ದೇಶದಲ್ಲಿಯೇ ಮುಖ್ಯವಾದ ಬಂದರು. ಇದಾದ ಬಳಿಕ ಕಾಕಿನಾಡ ಬಂದರು (ಮಚಿಲೀಪಟ್ಟಣಂ) ಮಧ್ಯಮ ರೇವುಪಟ್ಟಣಗಳು. ಉಳಿದೆಲ್ಲವೂ ಚಿಕ್ಕವು.

ನೈಸರ್ಗಿಕ ಪ್ರಾಂತ್ಯಗಳು : 1. ಸಮುದ್ರತೀರ ಪ್ರದೇಶಗಳು, 2. ಪೂರ್ವ ಕಣಿವೆಗಳು (ತೂರ್ಪು ಕನುಮಲು) ಎನ್ನುವ ಬೆಟ್ಟಗಳ ಸಾಲುಗಳು, 3. ಪಶ್ಚಿಮದಲ್ಲಿ ಎತ್ತರವಾದ ವಿಶಾಲವಾದ ಪ್ರಸ್ಥಭೂಮಿಗಳು. ಆಂಧ್ರದ ನೆಲ ಪಶ್ಚಿಮದಿಂದ ಪೂರ್ವಕ್ಕೆ ಬಾಗಿದೆ.

ನೆಲಗಳು : ಕೋಸ್ತಾ ಮೈದಾನದಲ್ಲಿ ಮೂರು ವಿಧಗಳು.

1. **ಸಮುದ್ರಕ್ಕೆ ಹತ್ತಿರವಿರುವ ಮರಳು ನೆಲ :** ಪೆನ್ನ, ಕೃಷ್ಣಾ, ಗೋದಾವರಿ ನದಿ ಮುಖಜ ಭೂಮಿಯಲ್ಲಿ ಮರಳು ನೆಲವಿದ್ದು ಕೆಸರು ತುಂಬಿರುತ್ತದೆ. ಕೋಸ್ತಾನೆಲದಲ್ಲಿ ಮಾವು, ಗೇರುಹಣ್ಣು ತೋಪುಗಳನ್ನು ಬೆಳೆಸುತ್ತಿದ್ದಾರೆ. ವರ್ಜೀನಿಯಾ ಹೊಗೆಸೊಪ್ಪು, ಕನಕಾಂಬರ, ಒಟ್ಟಿಲುಗದ್ದೆ, ಮಲ್ಲಿಗೆ ಮುಂತಾದ ಹೂವಿನ ತೋಟಗಳಿಗೆ ಈ ನೆಲ ಅನುಕೂಲವಾಗಿದೆ.
2. **ಕರಾವಳಿ ಮರಳು ಭೂಮಿಗೆ ಅಂಟಿಕೊಂಡಿರುವ ಕಪ್ಪು 'ಒಂಡು' ಭೂಮಿ (ಮೆಕ್ಕಲು) :** ಪೆನ್ನ, ಕೃಷ್ಣ, ಗೋದಾವರಿ, ವಂಶಧಾರ ಮೆಕ್ಕಲುಭೂಮಿ ಇಂತಹುವು. ಎಲ್ಲ ತರಹದ ಧಾನ್ಯಗಳಿಗೆ, ಬಾಳೆ, ಮಾವು, ಕಬ್ಬು ಮುಂತಾದ ವಾಣಿಜ್ಯ ಬೆಳೆಗಳಿಗೆ ಪ್ರಖ್ಯಾತವಾದ ಈ ಪ್ರಾಂತ್ಯಗಳಲ್ಲಿ ಜನಸಾಂದ್ರತೆ ಹೆಚ್ಚು.
3. **ಕಪ್ಪುನೆಲ, ಪೂರ್ವ ದಿಕ್ಕಿನಲ್ಲಿಯ ಬೆಟ್ಟಗಳಿಗೆ ಮಧ್ಯೆ ಇರುವ, ಕೆಂಪು ಮರಳು ನೆಲ :** ಒಣಭೂಮಿ ಬೆಳೆಗಳಾದ ಜೋಳ, ರಾಗಿ ಮುಂತಾದ ಧಾನ್ಯಗಳಿಗೆ, ಮಾವು, ಗೇರು ಹಣ್ಣು ಮುಂತಾದ ಹಣ್ಣಿನ ತೋಟಗಳಿಗೆ ಈ ನೆಲ ಉತ್ತಮವಾಗಿದೆ. ಇವುಗಳಲ್ಲದೆ ರಾಜ್ಯಗಳಲ್ಲಿ ಹೆಚ್ಚು ಭಾಗ ಕೆಂಪು ನೆಲ. ಸೇಂದ್ರಿಯ ಅಂಶಗಳು ಫಲವತ್ತತೆ ಈ ಭೂಮಿಯಲ್ಲಿ

ಕಡಿಮೆ. ಕಡಲೇಕಾಯಿ, ಹುರುಳಿ ಬೆಳೆಯುತ್ತದೆ. ತರಕಾರಿ, ಎಣ್ಣೆ ಬೀಜ ತೆಂಗು ಬೆಳೆಯುವ 'ತುವ್ವ' ನೆಲಗಳು ತೀರ ಪ್ರಾಂತ್ಯದಲ್ಲಿಯ ಮರಳು ನೆಲಗಳು, ಆಮ್ಲಕ್ಷಾರ ಗುಣವುಳ್ಳ ಚೌಳು ಭೂಮಿ, ಕ್ಷಾರಗುಣವುಳ್ಳ ಭೂಮಿ ಸಹ ಕೆಲವು ಪ್ರಾಂತ್ಯಗಳಲ್ಲಿವೆ.

ಶೀತೋಷ್ಣಸ್ಥಿತಿ - ವರ್ಷಪಾತ : ಹವಾಗುಣದಂತೆ ಆಂಧ್ರಪ್ರದೇಶ ದಲ್ಲಿ ಕಾಲಗಳು ಮೂರು. ಮಾರ್ಚ್‌ನಿಂದ ಜೂನ್ ಬೇಸಗೆ ಕಾಲ. ಜುಲೈಯಿಂದ ಅಕ್ಟೋಬರ್ ಮಳೆಗಾಲ. ನವೆಂಬರ್‌ನಿಂದ ಫೆಬ್ರವರಿ ಚಳಿಗಾಲ. ಮೇ ತಿಂಗಳಲ್ಲಿ ಉಷ್ಣತೆ ಹೆಚ್ಚು. ಆದರೆ ಜನವರಿ ತಿಂಗಳಲ್ಲಿ ಉಷ್ಣತೆ ಅತಿ ಕಡಿಮೆಯಾಗಿರುತ್ತದೆ.

ನೈಋತ್ಯ ಮತ್ತು ಈಶಾನ್ಯ ಮಾರುತಗಳು ಮಳೆ ತರುವಂಥವು. ನೈಋತ್ಯ ಮಾರುತಗಳಿಂದ (ಜೂನ್‌ನಿಂದ ಸೆಪ್ಟೆಂಬರ್) ಬರುವ ಮಳೆಗಳಿಗೆ ಪಶ್ಚಿಮ ಮಳೆಗಳೆಂದು ತೆಲುಗಿನಲ್ಲಿ ಹೆಸರು. ಇವುಗಳನ್ನೆ ಮುಂಗಾರು (ತೊಲಕರಿ ಅಥವಾ ತೊಲಿಕಾರು) ಮಳೆ ಎನ್ನುತ್ತಾರೆ. ಇವು ಮೃಗಶಿರ ಕಾರ್ತೆಯಿಂದ ಆರಂಭವಾಗುತ್ತವೆ. ಈಶಾನ್ಯ ಮಾರುತಗಳಿಂದ ಬರುವ ಮಳೆಯನ್ನು ಪೂರ್ವಮಳೆ (ಅಕ್ಟೋಬರ್‌ನಿಂದ ನವೆಂಬರ್) ಎನ್ನುತ್ತಾರೆ.

ಆಂಧ್ರಪ್ರದೇಶದಲ್ಲಿ ವರ್ಷದ ಒಟ್ಟು ಮಳೆ 890 ಮಿ.ಮೀ. ಇದರಲ್ಲಿ ನೈಋತ್ಯ ಮಾರುತಗಳಿಂದ 593.4 ಮಿ.ಮೀ., ಈಶಾನ್ಯ ಮಾರುತಗಳಿಂದ 204.1ಮಿ.ಮೀ. ಮಳೆ ಬೀಳುತ್ತದೆ. ಸಾಧಾರಣವಾಗಿ ಆಂಧ್ರದಲ್ಲಿ ಕರಾವಳಿ ಪ್ರದೇಶದಲ್ಲಿ ಒಟ್ಟು 995.7 ಮಿ.ಮೀ. ರಾಯಲಸೀಮೆಯಲ್ಲಿ 670.4 ಮಿ.ಮೀ. ತೆಲಂಗಾಣದಲ್ಲಿ 893.2 ಮಿ.ಮೀ. ಮಳೆ ಬರುತ್ತದೆ. ಸಾಧಾರಣವಾಗಿ ಆಂಧ್ರದಲ್ಲಿ ವಾರ್ಷಿಕವಾಗಿ ಶೇ. 56 ನೈಋತ್ಯ ಮಾರುತಗಳಿಂದಲೂ, ಶೇ. 32 ಈಶಾನ್ಯ ಮಾರುತಗಳಿಂದಲೂ ಶೇ. 9 ಬೇಸಗೆ ಮಳೆಗಳಿಂದಲೂ, ರಾಯಲಸೀಮೆದಲ್ಲಿ ಶೇ. 54 ನೈಋತ್ಯ ಮಾರುತಗಳಿಂದಲೂ ಶೇ. 32 ಈಶಾನ್ಯ ಮಾರುತಗಳಿಂದಲೂ ಶೇ. 11 ಬೇಸಗೆ ಮಳೆಗಳಿಂದಲೂ, ತೆಲಂಗಾಣದಲ್ಲಿ ಶೇ. 82 ನೈಋತ್ಯ ಮಾರುತಗಳಿಂದಲೇ ಲಭಿಸುತ್ತದೆ. ರಾಯಲಸೀಮೆ ಪಶ್ಚಿಮ ಕಣಿವೆಗಳ ನೆರಳಿನಲ್ಲಿರುವುದರಿಂದ ನೈಋತ್ಯ ಮಾರುತಗಳು ತಲುಪುವುದಿಲ್ಲ. ಈಶಾನ್ಯ ಮಾರುತಗಳಿಗೆ ಆ ಪ್ರಾಂತ್ಯವೂ ಎಟುಕುವುದಿಲ್ಲ. ಪೂರ್ವ ತೀರದಿಂದ ವಾಯುಗಳು ಅಲ್ಲಿಯವರೆಗೆ ಬರುವುದಿಲ್ಲ. ಆದುದರಿಂದ ರಾಯಲಸೀಮೆಯಲ್ಲಿ ಕಡಿಮೆ ವರ್ಷಪಾತವಾಗಿ ಆಗಾಗ್ಗೆ ಬರಕ್ಕೆ ತುತ್ತಾಗುತ್ತಿದೆ. ತೆಲಂಗಾಣ ಪ್ರಾಂತ್ಯ ಪೂರ್ಣವಾಗಿ ನೈಋತ್ಯ ಮಾರುತಗಳನ್ನೇ ಅವಲಂಬಿಸಿರುವುದರಿಂದ, ಇವು ಅನಿಶ್ಚಿತ ವರ್ಷಪಾತವನ್ನು ಕೊಡುವುದರಿಂದ ಆಗಾಗ್ಗೆ ದುರ್ಭಿಕ್ಷಕ್ಕೆ ಒಳಗಾಗುತ್ತದೆ.

ಬಂಗಾಳ ಕೊಲ್ಲಿಯಲ್ಲಿ ಸಂಭವಿಸುವ ಸುಂಟರಗಾಳಿಗಳಿಗೂ ವರ್ಷಪಾತಕ್ಕೂ ಹತ್ತಿರವಾದ ನಂಟಿದೆ. ಸುಂಟರಗಾಳಿಗಳು ತೀರವನ್ನು ತಲುಪಿದಾಗ ದುರ್ಬಲವಾಗುತ್ತದೆ. ಸಮುದ್ರದಲ್ಲಿ ಸಂಭವಿಸುವ ಈ ಸುಂಟರಗಾಳಿಗಳ ವರ್ಷಪಾತವು ಕೇವಲ ತೀರ ಪ್ರದೇಶಗಳಿಗೆ ಪರಿಮಿತವಾಗಿರುತ್ತದೆ. ಆ ಮಳೆಗಳಿಗೆ ಪೂರ್ವ ಕಣಿವೆಗಳು ಕೂಡ ಕಾರಣವಾಗಿವೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಿರುಗಾಳಿಗಳಿಂದ ಕೂಡಿದ ಚಂಡಮಾರುತಗಳು ಸಹ ಆಗಾಗ್ಗೆ ಉಂಟಾಗುತ್ತವೆ.

ಅಷ್ಟಮೇಘಗಳು : ಮೇಘ ಮಾಲಿಕಾ ಶಾಸ್ತ್ರದಲ್ಲಿ ಮೇಘಗಳು ಎಂಟು ರೀತಿಯಾಗಿ ವಿಂಗಡಿಸಲ್ಪಟ್ಟಿವೆ. (ಮಿನ್ನೇರು 1968 ಪು 343-44, ನೇದುನೂರಿ ಗಂಗಾಧರಂ)

1. **ಪುಷ್ಕಲಾವರಕ ಮೇಘಗಳು :** ಇವು ಹೆಚ್ಚಾಗಿ ಸುರಿಯುತ್ತವೆ. ಈ ಮೇಘಗಳೇ ಕುಂಭದ್ರೋಣ ಮಳೆಯನ್ನು ಸುರಿಸುವಂತಹುವು.

2. **ಮಧುಮೇಘಗಳು :** ಮಧುವರ್ಣವನ್ನು ಹೊಂದಿರುತ್ತವೆ. 15 ಯೋಜನಗಳು ಉದ್ದದವರೆಗೂ ವ್ಯಾಪಿಸಿ, ನಾಲ್ಕುತೂಬುಗಳ ಮಳೆ ಸುರಿಯುತ್ತದೆಯೆಂದು ಹೇಳುತ್ತಾರೆ.

3. **ವಾಯು(ಮಂಡಲ) ಮೇಘಗಳು :** ಗೋರೋಜಿನದ ವರ್ಣವನ್ನು ಹೊಂದಿರುತ್ತವೆ. ಹಿತ್ತಾಳೆ ಬಣ್ಣದಂತೆ ಕಾಣುತ್ತವೆ. ಇವು ಕಾಣಿಸಿದರೆ ಮಳೆ ಬರುವುದಿಲ್ಲವೆನ್ನುತ್ತಾರೆ. ಇದನ್ನೇ ಜನಪದರು 'ಪುಲಿಚಾರಲಮಬ್ಬು' (ಹುಲಿಪಟ್ಟಿಗಳ ಮೋಡ) ಎಂದು ಕರೆಯುತ್ತಾರೆ. ಇವು ಹನ್ನೆರಡು ಯೋಜನಗಳ ದೂರ ವ್ಯಾಪಿಸುತ್ತವೆಯೆಂದು ಹೇಳುತ್ತಾರೆ.

4. **ರಾಜಮೇಘಗಳು :** ಕಪ್ಪು ಮತ್ತು ಬಿಳುಪು ಮೋಡದಲ್ಲಿ ತಾಮ್ರದಂತೆಯೂ ದಾಸವಳ ಹೂವಿನಂತೆಯೂ ಬಣ್ಣಗಳಿದ್ದು ಹೊಳಪು ಕಾಣಿಸಿದರೆ, ಆ ಮೋಡದಲ್ಲಿ ರಾಜ ಮೇಘಗಳಿರುವಂತೆ ತಿಳಿಯಬೇಕು. ಅಲ್ಲದೇ ಈ ಮೇಘಗಳು ವಿಂಧ್ಯೋತ್ತರ ದೇಶಗಳಲ್ಲಿ ಗಂಗಾತೀರ ಪ್ರಾಂತ್ಯಗಳಲ್ಲಿ ಮಳೆ ಸುರಿಯುತ್ತವೆಂದು ಹೇಳುತ್ತಾರೆ.

5. **ಬ್ರಾಹ್ಮಣ ಜಾತಿ ಮೇಘಗಳು :** ಕಮಲಗಳ ಬಣ್ಣದಲ್ಲಿರುತ್ತವೆ. ಗಾಳಿಯ ಅನುಕೂಲವನ್ನನುಸರಿಸಿ ಮಳೆ ಸುರಿಯುತ್ತದೆಂದು ಹೇಳುತ್ತಾರೆ.

6. **ಕ್ಷತ್ರಿಯಜಾತಿ ಮೇಘಗಳು :** ಕೆಂಪು ಬಣ್ಣವನ್ನು ಹೊಂದಿ, ಗಂಭೀರಾಕಾರದಲ್ಲಿರುತ್ತವೆ ಎಂದು ಹೇಳುತ್ತಾರೆ.

7. **ಶೂದ್ರಜಾತಿ ಮೇಘಗಳು :** ಕಪ್ಪು ಬಣ್ಣವನ್ನು ಹೊಂದಿ ಪ್ರಶಾಂತವಾಗಿರುತ್ತವೆ ಎಂದು ಹೇಳುತ್ತಾರೆ.

8. **ನೀಲಿ ಮೇಘಗಳು :** ಇಂದ್ರ ನೀಲ ಬಣ್ಣವನ್ನು ಹೊಂದಿರುತ್ತವೆಂದೂ ಬೆಂಕಿ ಬಣ್ಣದ ಹೊಳಪುಗಳು ಈ ಮೇಘಗಳಿಂದ ಹೊರಬೀಳುತ್ತವೆಂದೂ ಇವು ವಿಂಧ್ಯಗೆ ದಕ್ಷಿಣ ದೇಶಗಳಲ್ಲಿ, ಗೋದಾವರಿ ನದಿಯ ಕಡಲು ತೀರದ ಪ್ರದೇಶಗಳಲ್ಲಿಯೂ ಮಳೆ ಸುರಿಸುತ್ತವೆ ಎಂದು ಹೇಳುತ್ತಾರೆ.

ಮಳೆ ಬಗ್ಗೆ ಕೃಷಿಕರಲ್ಲಿರುವ ನಂಬಿಕೆಗಳು :

1. ಗರ್ಭ ಋತು ಸಮಯಗಳಲ್ಲಿ ಮೋಡವು ಮಧುರವರ್ಣವನ್ನು ಹೊಂದಿದ್ದರೆ, ಆ ಸಮಯದಲ್ಲಿ ಗ್ರಹ ವಕ್ರಗಳು ಇರದಿದ್ದಲ್ಲಿ, ನಾಲ್ಕು ತೂಬುಗಳ ಮಳೆ ಸುರಿಯುತ್ತದೆಂದೂ ಗ್ರಹವಕ್ರ ಸ್ಥಿತಿಯಿದ್ದರೆ ಖಂಡ ವೃಷ್ಟಿಯಾಗಿ ಬದಲಾವಣೆಯಾಗುತ್ತದೆಯೆಂದೂ ಹೇಳುತ್ತಾರೆ.

2. ನಾಲ್ಕು ದಿಕ್ಕುಗಳಲ್ಲಿಯೂ, ಆಕಾಶದಲ್ಲಿ ಮೋಡವಿದ್ದು, ಆನೆಯ ಬಣ್ಣವಿದ್ದು ಕಪ್ಪಾಗಿದ್ದರೆ ಚೆನ್ನಾಗಿ ಮಳೆ ಬರುತ್ತದೆಂದು ಹೇಳುತ್ತಾರೆ.

3. ನಾಲ್ಕು ದಿಕ್ಕುಗಳಲ್ಲಿಯೂ ಆಕಾಶದಲ್ಲಿ ವ್ಯಾಪಿಸಿದ ಮೇಘಗಳು, ಮಂದ ಗಮನದಲ್ಲಿದ್ದು, ಜಿಂಕೆಗಳಂತೆಯೂ, ಆನೆಗಳಂತೆಯೂ ಕಾಣಿಸಿದಲ್ಲಿ ಹಸನಾದ ಮಳೆ ಬರುತ್ತದೆಂದು ಹೇಳುತ್ತಾರೆ.

4. ಥಳ ಥಳ ಎಂದು ಹೊಳೆಯುವ ಮಿಂಚು, ಗುಡುಗು ಇದ್ದು ಬಿಳಿಯ ಮೋಡ ಗಗನ ತಲವನ್ನು ಕವಿದಿದ್ದರೆ ದೇಶದ ನಾಲ್ಕು ಮೂಲೆಗಳಲ್ಲಿ ಮಳೆ ಬರುವುದೆಂದು ಹೇಳುತ್ತಾರೆ.

5. ಮೋಡದಲ್ಲಿರುವ ಮೇಘಗಳು ಬಿಳಿಯ ಚಾಮರಗಳು, ಸರೋವರಗಳು, ತಟಾಕಗಳು, ಮಂಚಿಕೆಗಳು, ಆನೆಯ ಕುಂಭಫಲಗಳು, ಮೊಸಳೆಗಳು, ಬಿಳಿಯ ಬೆಟ್ಟಗಳು, ಗೋಪುರಗಳು, ತೋಟಗಳು, ವಿಮಾನಗಳು, ಛತ್ರಿಗಳು, ಖಡ್ಗಗಳು, ಎತ್ತುಗಳು, ಶಂಖಗಳು ಮುಂತಾದ ಆಕಾರಗಳಲ್ಲಿ ಕಾಣಿಸಿದರೆ ಕುಂಭದ್ರೋಣ ಮಳೆ ಬರುವುದೆಂದು ಹೇಳುತ್ತಾರೆ.

6. ಕಾಗೆಗಳು, ನರಿಗಳು, ಕೋತಿಗಳು, ಕರಡಿಗಳು, ಮೊಲಗಳು, ಬಿದ್ದು ಹೋದ ಮನೆಗಳು, ಸುಟ್ಟ ಗ್ರಾಮಗಳು, ಮುರಿದ ಒಣಗಿದ ಮರಗಳು - ಇವುಗಳ ಸ್ವರೂಪಗಳೊಂದಿಗೆ ಮೇಘಗಳು ಕಾಣಿಸಿದಲ್ಲಿ, ಅಲ್ಪವೃಷ್ಟಿ ಎಂದು ಹೇಳುತ್ತಾರೆ.

7. ಕೆಂಪು, ಹಸುರು ಬಣ್ಣಗಳು ಬೆರೆತು 'ಹೊಸ ಗೋರೋಜಿನ' ಬಣ್ಣದ ಮೇಘಗಳು, ಹಿತ್ತಾಳೆ ಬಣ್ಣದ ಮೇಘಗಳು, ಸಿಂಧೂರ ವರ್ಣದ ಮೇಘಗಳು, ಬೂದಿಬಣ್ಣದ ಮೇಘಗಳು ಅನಾವೃಷ್ಟಿ ಸೂಚಕಗಳೆಂದು ಹೇಳುತ್ತಾರೆ.

8. ಸೂರ್ಯೋದಯ, ಸೂರ್ಯಾಸ್ತಮಯ ಸಮಯಗಳಲ್ಲಿ ಆಗಸದಲ್ಲಿ ಮೋಡಗಳು ಕೆಂಪಾಗಿ ಕಾಣಿಸಿದ್ದಲ್ಲಿ ಮಳೆ ಸೂಚಕಗಳೆಂದು ಹೇಳುತ್ತಾರೆ.

9. ಬೆಟ್ಟದ ಮೇಲಕ್ಕೆ ಮೋಡಗಳು ಇಳಿದಿರುವಂತೆ ಬಾಗಿರುವುವೂ ಮೋಡಗಳಲ್ಲಿ ಹೊಳಪು ಕಾಣಿಸುವುದೂ ವಾಯುವ್ಯ ಈಶಾನ್ಯದಿಕ್ಕುಗಳಲ್ಲಿ ಮೋಡಗಳು ಸೇರುವುದೂ ಬಾರೀ ಮಳೆ ಸುರಿಯುವ ಸೂಚನೆ ಎಂದು ಹೇಳುತ್ತಾರೆ.

10. ಸೂರ್ಯನಿರಲು, ಪೂರ್ವದಲ್ಲಾಗಲಿ, ಪಶ್ಚಿಮದಲ್ಲಾಗಲಿ, ಮೋಡಗಳು ಕವಿದು ಮಿಂಚುವುದು, ಮೇಘಗಳು ಬಂಗಾರದ ಬಣ್ಣವನ್ನು ಹೊಂದಿರುವುದು, ಬಾರೀ ಮಳೆಯ ಸೂಚನೆಗಳೆಂದು ಹೇಳುತ್ತಾರೆ.

11. ದೊಡ್ಡ ಆಲದ ಮರದಂತೆ ಕಾಣಿಸುವ ಮೇಘಗಳ ಮೇಲೆ ಬಂಗಾರದ ಬಣ್ಣವುಳ್ಳ ಇನ್ನೊಂದು ಮೇಘ ಕಾಣಿಸಿದಲ್ಲಿ ಹೆಚ್ಚು ಜಡಿ ಮಳೆಗಳಿಗೆ ಸೂಚನೆ ಎಂದು ಹೇಳುತ್ತಾರೆ.

ಜಲಸಂಪನ್ಮೂಲಗಳು : ಆಂಧ್ರಪ್ರದೇಶದಲ್ಲಿ ನದಿಗಳು ಹೆಚ್ಚಾಗಿವೆ. ಕೃಷ್ಣ, ಗೋದಾವರಿ ನದಿಗಳೆರಡೂ ಮಹಾನದಿಗಳು. 1500 ಕಿ.ಮೀ. ಉದ್ದ, 3.15 ಲಕ್ಷ ಚ.ಕಿ.ಮೀ. ಪರೀವಾಹಕ ಪ್ರದೇಶವುಳ್ಳ ಗೋದಾವರಿ ದಕ್ಷಿಣ ಭಾರತದಲ್ಲಿಯೇ ಅತಿದೊಡ್ಡ ನದಿ. ಇವುಗಳಲ್ಲದೆ ದಕ್ಷಿಣದಲ್ಲಿ ಪೆನ್ನಾ, ಉತ್ತರದಲ್ಲಿ ವಂಶಧಾರಾ, ನಾಗಾವಳಿ, ಮಧ್ಯಾಂಧ್ರದಲ್ಲಿ ಮೂಸೀನದಿ ಪ್ರಮುಖವಾದವು. ಇವುಗಳಲ್ಲದೆ ಆಯಾ ಜಿಲ್ಲೆಗಳಲ್ಲಿ ಪ್ರಾಮುಖ್ಯವುಳ್ಳ ನದಿಗಳು, ಉಪನದಿಗಳು, ಚಿಕ್ಕ ಹೊಳೆಗಳು, ಹಳ್ಳಗಳು, ಚಿಲುಮೆಗಳು, ಬುಗ್ಗೆ ಕಾಲುವೆಗಳು ಹಲವಾರು ಇವೆ. ಇವುಗಳಿಂದಲೇ ಆಂಧ್ರಪ್ರದೇಶಕ್ಕೆ 'ನದೀರಾಷ್ಟ್ರ' (ನದೀರಾಜ್ಯ) ಎಂಬ ಹೆಸರು ಬಂದಿದೆ.

ಆಂಧ್ರಪ್ರದೇಶ ಭೂಭಾಗ ವಾಯವ್ಯ ದಿಕ್ಕಿನಲ್ಲಿ ಎತ್ತರವಾಗಿದ್ದು, ಆಗ್ನೇಯ ದಿಕ್ಕಿಗೆ ಬಾಗಿದೆ. ಆದುದರಿಂದ ಈ ರಾಜ್ಯದಲ್ಲಿ ಪ್ರವಹಿಸುವ ನದಿಗಳಲ್ಲಿ ಹೆಚ್ಚುಭಾಗ ವಾಯವ್ಯ ದಿಸೆಯಿಂದ ಆಗ್ನೇಯ ದಿಸೆಗೆ ಪ್ರವಹಿಸುತ್ತವೆ. ಪೆನ್ನಾ, ತುಂಗಭದ್ರ, ಕೃಷ್ಣ, ಗೋದಾವರಿ, ಅವುಗಳ ಉಪನದಿಗಳಾದ ಮಂಜೀರ, ಪ್ರಾಣಹಿತ ಹೊರತು ಮಿಕ್ಕ ನದಿಗಳೆಲ್ಲವೂ ಪೂರ್ವ ಕಣಿವೆಗಳಲ್ಲಿ ಹುಟ್ಟಿ ಬಂಗಾಳ ಕೊಲ್ಲಿಯಲ್ಲಿ ಸಂಗಮಿಸುತ್ತವೆ. ಪೂರ್ವ ಕಣಿವೆಗಳಲ್ಲಿ ವರ್ಷಪಾತವು ಕಡಿಮೆ ಇರುವುದರಿಂದ ಈ ಕಣಿವೆಗಳಲ್ಲಿ ಹುಟ್ಟಿರುವ ನದಿಗಳು ಸಹಜವಾಗಿಯೇ ಅಲ್ಪ ಜಲಪ್ರವಾಹದಿಂದ ಹರಿಯುತ್ತವೆ.

ಪಶ್ಚಿಮ ಕಣಿವೆಗಳಲ್ಲಿ ಮಹಾರಾಷ್ಟ್ರದ ನಾಸಿಕ್ ಸಮೀಪ ತ್ರಯಂಬಕದಲ್ಲಿ ಹುಟ್ಟಿ, ಆದಿಲಾಬಾದ್ ಜಿಲ್ಲೆಯ ಬಾಸರ ಹತ್ತಿರ ಗೋದಾವರಿ ನದಿ ಆಂಧ್ರಪ್ರದೇಶವನ್ನು ಪ್ರವೇಶಿಸುತ್ತದೆ. ಇದು ಮಂಜೀರಾ, ಪ್ರಾಣಹಿತ, ಇಂದ್ರಾವತಿ ಮುಂತಾದ ಉಪನದಿಗಳನ್ನು ಸೇರಿಸಿಕೊಂಡು ಗೋದಾವರಿ ಮೈದಾನ ಪ್ರದೇಶದಲ್ಲಿ ಪ್ರವೇಶಿಸಿದ ಅನಂತರ ಮಂದಗಮನದಿಂದ ಪ್ರಶಾಂತವಾಗಿ ವಿಸ್ತರಿಸಿ ಉಭಯಗೋದಾವರಿ ಜಿಲ್ಲೆಗಳಿಗೆ (ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳು) ಗಡಿಯಾಗಿ ಪ್ರವಹಿಸುತ್ತಾ ರಾಜಮಂಡ್ರಿ ಹತ್ತಿರ 2.7 ಕಿ.ಮೀ. ಅಗಲವಾಗಿ ಅಖಂಡ ಗೋದಾವರಿಯಾಗಿ, ಅನಂತರ ಗೌತಮೀ, ವಶಿಷ್ಠ ಎಂಬ ಎರಡು ಶಾಖೆಗಳಾಗಿ ಬೇರ್ಪಡುತ್ತದೆ. ಇದರ ಉಪನದಿಗಳು ಎಡಭಾಗದಲ್ಲಿ ಪ್ರಾಣಹಿತ, ಇಂದ್ರಾವತಿ, ಶಬರಿ; ಬಲಭಾಗದಲ್ಲಿ ಮಂಜೀರ, ಮನ್ನೇರು, ಪೆದ್ದವಾಗು, ಚೆಟ್ಲವಾಗು, ಕಿನ್ನೆರಸಾನಿ ಇತ್ಯಾದಿ. ಆಂಧ್ರಪ್ರದೇಶದಲ್ಲಿ ಇದರ ಉದ್ದ 729 ಕಿ.ಮೀ. ಪರೀವಾಹ ಪ್ರದೇಶವು 90.650 ಕಿ.ಮೀ. ಇರುತ್ತದೆ.

ಕೃಷ್ಣಾನದಿ ಮಹಾರಾಷ್ಟ್ರದಲ್ಲಿಯ ಮಹಾಬಲೇಶ್ವರಂ ಹತ್ತಿರ ಪಶ್ಚಿಮ ಕಣಿವೆಗಳಲ್ಲಿ ಹುಟ್ಟಿ ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳ ಮೂಲಕ ಪ್ರವಹಿಸಿ ಮೆಹಬೂಬ್ ನಗರ ಜಿಲ್ಲೆ ಮುಕ್ತಲ್ ತಾಲ್ಲೂಕದಲ್ಲಿ ಆಂಧ್ರಪ್ರದೇಶದಲ್ಲಿ ಸೇರುವವರೆಗೂ ಹೆಚ್ಚು ಕಡಿಮೆ ಕಣಿವೆಗಳಲ್ಲಿಯೇ ಪ್ರವಹಿಸುತ್ತದೆ. ಆಂಧ್ರಪ್ರದೇಶದಲ್ಲಿ ಕೃಷ್ಣಾನದಿಯು ಪ್ರವೇಶ ಮಾಡಿದ ಅನಂತರ ತುಂಗಭದ್ರಾ ನದಿಯನ್ನು ಸೇರಿಸಿಕೊಂಡು, ಹಂಸಲದೀವಿ ಎಂಬ ಪ್ರದೇಶದಲ್ಲಿ ಬಂಗಾಳ ಕೊಲ್ಲಿಗೆ ಸೇರುತ್ತದೆ. ಇದು ಕೃಷ್ಣ ಜಿಲ್ಲೆಯ ಪುಲಿಗಡ್ಡ ಸಮೀಪ ಎರಡಾಗಿ ಬೇರ್ಪಡುತ್ತದೆ. ಕೃಷ್ಣಾನದಿಯ ಒಟ್ಟು ಉದ್ದ 1200 ಕಿ.ಮೀ. ಒಟ್ಟು ವೈಶಾಲ್ಯ 2.51 ಲಕ್ಷ ಚ.ಕಿ.ಮೀ. ಆಗಲು ಆಂಧ್ರ ಪ್ರದೇಶದಲ್ಲಿ ಈ ನದಿಯ ಉದ್ದ 720 ಕಿ.ಮೀ. ತುಂಗಭದ್ರೆಯನ್ನು ಸಹ ಸೇರಿಸಿಕೊಂಡು ಇದರ ಪರೀವಾಹ ವೈಶಾಲ್ಯ ಆಂಧ್ರಪ್ರದೇಶದಲ್ಲಿ 1.92 ಲಕ್ಷ ಚ.ಕಿ.ಮೀ. ಇದರ ಉಪನದಿಗಳಲ್ಲಿ ತುಂಗಭದ್ರೆಯು ಸೇರಿಕೊಂಡು ದಿಂಡಿ, ಮೂಸೀ, ಪಾಲೇರು, ಮುನೇರು, ಭಾವನಾಸಿ, ನಾಗುಲೇರು, ಚಂದ್ರವಂಶ ಇತ್ಯಾದಿ ಪ್ರಮುಖವಾದವುಗಳು.

ಪೆನ್ನಾ ನದಿಯು ಕರ್ನಾಟಕ ರಾಜ್ಯದ ಕೋಲಾರ ಸಮೀಪದಲ್ಲಿ ನಂದಿದುರ್ಗ ಬೆಟ್ಟಗಳಲ್ಲಿ ಹುಟ್ಟಿ ಕರ್ನಾಟಕದಲ್ಲಿ 40 ಕಿ.ಮೀ. ಪ್ರವಹಿಸಿ

ಅನಂತಪುರ ಜಿಲ್ಲೆಯ ದಕ್ಷಿಣ ಗಡಿಯ ಮೂಲಕ ಆಂಧ್ರಪ್ರದೇಶ ಪ್ರವೇಶಿಸಿ ನೆಲ್ಲೂರಿಗೆ 23 ಕಿ.ಮೀ. ದೂರದಲ್ಲಿ ಊಟುಕೂರು ಸಮೀಪದಲ್ಲಿ ಬಂಗಾಳಕೊಲ್ಲಿ ಸೇರುತ್ತದೆ. ಇದರ ಉಪನದಿಗಳು ಚಿತ್ರಾವತಿ, ಜಯಮಂಗಳ, ಕಂದೇರು, ಸಗಿಲೇರು, ಪಾಪಾಗ್ನಿ, ಬೊಗ್ಗೆರು ಇತ್ಯಾದಿ.

ಆಂಧ್ರಪ್ರದೇಶದಲ್ಲಿ ಪ್ರವಹಿಸುತ್ತಿರುವ ಉಪನದಿಗಳಲ್ಲಿ ಪ್ರಮುಖವಾದದ್ದು ತುಂಗಭದ್ರಾ. ಪಶ್ಚಿಮ ಕರ್ನಾಟಕದಲ್ಲಿ ಹುಟ್ಟಿದ ತುಂಗಾ, ಭದ್ರ ಎಂಬ ಎರಡು ಚಿಕ್ಕ ನದಿಗಳು. ಈ ರಾಜ್ಯದ ಶಿವಮೊಗ್ಗ ಕೆಳಭಾಗದ ಪ್ರದೇಶದಲ್ಲಿ ಸೇರಿ ತುಂಗಭದ್ರೆಯಾಗಿ ಪ್ರವಹಿಸುತ್ತಾ ಸಂಗಮೇಶ್ವರದ ಹತ್ತಿರ ಕೃಷ್ಣಾನದಿಯಲ್ಲಿ ಸೇರುತ್ತದೆ. ಇದರ ಉಪನದಿಗಳಲ್ಲಿ ಹಗರಿ ಮುಖ್ಯವಾದದ್ದು.

ಮಂಜೀರಾನದಿಯು ತೆಲಂಗಾಣದಲ್ಲಿ ಪ್ರವಹಿಸುವ ನದಿಗಳಲ್ಲಿ ಪ್ರಮುಖವಾದದ್ದು. ಮಹಾರಾಷ್ಟ್ರದಲ್ಲಿಯ ಬಾಲಘಾಟ್ ಬೆಟ್ಟಗಳಲ್ಲಿ ಹುಟ್ಟಿ, ಆಗ್ನೇಯ ದಿಕ್ಕಿನಲ್ಲಿ ಮಹಾರಾಷ್ಟ್ರದಲ್ಲಿಯ ಉಸ್ಮಾನಾಬಾದ್ ಮೂಲಕ ಪ್ರವೇಶಿಸಿ, ಮದಕ್ ಜಿಲ್ಲೆಯ ಮೂಲಕ ಆಂಧ್ರಪ್ರದೇಶವನ್ನು ತಲುಪುತ್ತದೆ. ಇದು ಅನಂತರ ಗೋದಾವರಿ ಸೇರುತ್ತದೆ. ಇದರ ಉದ್ದ 640 ಕಿ.ಮೀ. ವಂಶಧಾರಾನದಿಯು ಒಡಿಶಾ ರಾಜ್ಯದ ಜಯಪೂರ್ ಬೆಟ್ಟಗಳಲ್ಲಿ ಹುಟ್ಟಿ ಒಡಿಶಾದಲ್ಲಿ 96 ಕಿ.ಮೀ. ಪ್ರವಹಿಸಿ ಶ್ರೀಕಾಕುಳಂ ಜಿಲ್ಲೆಯ ಪಾತಪಟ್ನಂ ಸಮೀಪದಲ್ಲಿ ಆಂಧ್ರಪ್ರದೇಶದಲ್ಲಿ ಪ್ರವೇಶಿಸಿ, ಶ್ರೀಕಾಕುಳಂ ಜಿಲ್ಲೆಯಲ್ಲಿ 128 ಕಿ.ಮೀ. ಪ್ರವಹಿಸಿ ಕಳಿಂಗಪಟ್ನಂ ಸಮೀಪ ಸಮುದ್ರವನ್ನು ಸೇರುತ್ತದೆ. ಇದರ ಉದ್ದ 224 ಕಿ.ಮೀ. ಪರೀವಾಹ ವೈಶಾಲ್ಯವು 11,400 ಚ.ಕಿ.ಮೀ.

ಮಧ್ಯಪ್ರದೇಶದ ಸಾತ್ಪೂರ ಬೆಟ್ಟಗಳಲ್ಲಿ ಹುಟ್ಟಿ ವೆಂಗಂಗ, ವಂಗಂಗ ಎಂಬ ನದಿಗಳ ಸೇರುವಿಕೆಯಿಂದ ಜೀವನದಿಯಾಗಿದೆ. ಇದು ಆದಿಲಾಬಾದ್ ಜಿಲ್ಲೆಯ ಗಡಿ ಪ್ರದೇಶದಲ್ಲಿ ಪ್ರವಹಿಸುತ್ತಾ ಚೆನ್ನೂರು ಸಮೀಪದಲ್ಲಿ ಗೋದಾವರಿ ಸೇರುತ್ತದೆ.

ಮೂಸೀನದಿಯು ಹೈದರಾಬಾದ್ ಜಿಲ್ಲೆಯ ಅನಂತಗಿರಿ ಬೆಟ್ಟಗಳಲ್ಲಿ ಹುಟ್ಟಿ ಪೂರ್ವದಿಕ್ಕಿನಲ್ಲಿ ಪ್ರವಹಿಸುತ್ತಾ ಹೈದರಾಬಾದ್ ಸಮೀಪ ಉಸ್ಮಾನ್ ಸಾಗರ್ ಕೆರೆಯಲ್ಲಿ ಬೆರೆತು, ಅಲ್ಲಿಂದ ಮುಂದಕ್ಕೆ ಹೊರಟು ನಲ್ಗೊಂಡ ಜಿಲ್ಲೆಯಲ್ಲಿ 64 ಕಿ.ಮೀ. ಪ್ರವಹಿಸಿ ಕೊನೆಗೆ ವಜೀರಾಬಾದ್ ಸಮೀಪದಲ್ಲಿ ಕೃಷ್ಣಾನದಿ ಸೇರುತ್ತದೆ. ಇದಕ್ಕೆ ಮುಚ್ಚುಕೊಂಡ ಎಂಬ ಹೆಸರಿದೆ. ಸಕಲವಾಣಿ, ಇಸಿ ಇದರ ಉಪನದಿಗಳು.

ನಾಗಾವಳಿ ನದಿಯು ಒಡಿಶಾ ರಾಜ್ಯದ ರಾಯಗಢ್ ತಾಲ್ಲೂಕಿನ ಕಲಹಾ ನದಿ ಎಸ್ಟೇಟ್‌ನಲ್ಲಿ ಹುಟ್ಟಿ, ಒಡಿಶಾಲದಲ್ಲಿ 96 ಕಿ.ಮೀ. ಪ್ರವಹಿಸಿ, ಶ್ರೀಕಾಕುಳಂ ಜಿಲ್ಲೆಯ ಮೂಲಕ ಆಂಧ್ರಪ್ರದೇಶದಲ್ಲಿ ಹೆಜ್ಜೆಯಿಟ್ಟು ಬಂಗಾಳಕೊಲ್ಲಿಯಲ್ಲಿ ಸೇರುತ್ತದೆ. ಒಟ್ಟಿಗಡ್ಡ, ಜಂಝಾವತಿ, ಸ್ವರ್ಣಮುಖಿ, ವೇದಾವತಿಯಂತಹ ಚಿಕ್ಕ ಚಿಕ್ಕ ನದಿಗಳು ನಾಗಾವಳಿಗೆ ಉಪನದಿಗಳಾಗಿವೆ.

ಆಹಾರ ಬೆಳೆಗಳು : ಆಂಧ್ರಪ್ರದೇಶ ರಾಜ್ಯವು ಮುಖ್ಯವಾಗಿ ಕೃಷಿ ಪ್ರಧಾನ ರಾಜ್ಯ. ರಾಜ್ಯದ ಹೆಚ್ಚು ಜನಸಂಖ್ಯೆ ಬೇಸಾಯವನ್ನೆ ಅವಲಂಬಿಸಿದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಶೇ. 48 ಭಾಗದಲ್ಲಿ ಬೇರೆಬೇರೆ ಬೆಳೆಗಳ ವ್ಯವಸಾಯ ಮಾಡುತ್ತಿದ್ದಾರೆ. ರೈತರು ಹೆಚ್ಚಾಗಿ ಆಹಾರ ಬೆಳೆಗಳನ್ನು ಬೆಳೆಸುವುದರಲ್ಲಿ ಆಸಕ್ತಿ ತೋರಿದ್ದಾರೆ. ಒಟ್ಟು ಕೃಷಿ ಭೂಮಿಯಲ್ಲಿ ಸುಮಾರು ಶೇ. 70 ಭಾಗದಲ್ಲಿ ಆಹಾರ ಬೆಳೆಗಳನ್ನು ಬೆಳೆಸುತ್ತಿದ್ದಾರೆ. ಇವುಗಳಲ್ಲಿ ಬತ್ತ, ಜೋಳ, ಸಜ್ಜೆ ಮುಖ್ಯವಾದುವು. ಬತ್ತ ಶೇ. 35 ಭೂ ವಿಸ್ತೀರ್ಣದಲ್ಲಿ ಬೆಳೆಯುತ್ತಾರೆ.

ವಾಣಿಜ್ಯ ಬೆಳೆಗಳಲ್ಲಿ ಕಬ್ಬು ಮುಖ್ಯವಾದದ್ದು; ಮಸಾಲೆ ದಿನಸಿಗಳಲ್ಲಿ ಮೆಣಸಿನಕಾಯಿ ಮೊದಲನೆಯ ಸ್ಥಾನದಲ್ಲಿದೆ. ಅನಂತರ ಅರಿಸಿನ, ಕೊತ್ತಂಬರಿ ಬೀಜ ಪ್ರಧಾನವಾದುವು. ಆಹಾರೇತರ ಬೆಳೆಗಳಲ್ಲಿ ಕಡಲೇಕಾಯಿ ಶೇ. 52ರಷ್ಟು ಪ್ರಾಧಾನ್ಯ ಪಡೆದಿದೆ.

ಬತ್ತ : ಆಂಧ್ರಪ್ರದೇಶದಲ್ಲಿ ಮುಂಗಾರು ಮತ್ತು ಹಿಂಗಾರು (ಖರೀಫ್ ಮತ್ತು ರಬಿ) ಅವಧಿಯಲ್ಲಿ ಬತ್ತ ಬೆಳೆಯುವರಾದರೂ ಮುಂಗಾರು ಬೆಳೆಯೇ ಹೆಚ್ಚು. ವಿವಿಧ ಜಿಲ್ಲೆಗಳ ಒಟ್ಟು ಫಸಲು ಭೂಮಿಯಲ್ಲಿ ಬತ್ತದ ಬೆಳೆಯನ್ನು ಪರಿಶೀಲಿಸಿದರೆ ಕ್ರಮವಾಗಿ ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ಕೃಷ್ಣಾ, ನೆಲ್ಲೂರು ಜಿಲ್ಲೆಗಳು ಆಧಿಕ್ಯವನ್ನು ಪಡೆದಿವೆ. ಒಟ್ಟು ಫಸಲು ಭೂಮಿಯಲ್ಲಿ 1981ರ ಅಂಕಿ ಅಂಶಗಳ ಪ್ರಕಾರ ತೀರಾಂಧ್ರ ಶೇ. 46.6, ರಾಯಲಸೀಮ ಶೇ. 12.2, ತೆಲಂಗಾಣ ಶೇ. 23 ಬತ್ತ ಬೆಳೆಸುತ್ತಿದ್ದಾರೆ. ಪ್ರಾಂತೀಯ ಕೃಷಿ ವಾತಾವರಣ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿವಿಧ ಜಿಲ್ಲೆಗಳಲ್ಲಿ ಮಸೂರಿ, ಜಯ, ತೆಲ್ಲಹಂಸ, ಸೋನಾ, ಕಾವೇರಿ, ಪದ್ಮ, ರತ್ನ, ಐ.ಆರ್.-8 ಮುಂತಾದುವು ಹೆಚ್ಚಾಗಿ ಸಾಗುವಳಿಯಾಗುತ್ತಿದೆ.

ಬತ್ತದ ಬಗೆಗಳು :

ಆಂಧ್ರಪ್ರದೇಶದಲ್ಲಿ ಹಲವಾರು ಬಗೆಯ ಬತ್ತದ ತಳಿಗಳು ಬಳಕೆಯಲ್ಲಿವೆ.

1. ಅಕ್ಕುಳ್ಳು (ಪಾಲಕ್ಕುಳ್ಳು, ತೂರ್ಪು ಅಕ್ಕುಳ್ಳು, ಬೊಂತಕ್ಕುಳ್ಳು, ಕರ್ರಕ್ಕುಳ್ಳು), 2. ಅವ್ವಾರಿ, 3. ಅಟ್ರಗಡಸನ್ನಲು, 4. ಎರಡಾಮು, 5. ಕೆಚೆಡಿ (ಪಿಚ್ಚುಕ ಸಾಂಬಾ), 6. ಕುಸುಮ, 7. ಕೃಷ್ಣ ಕಟುಕಲು, 8. ಕೊಣಾಮಣಿ (ಸೆನ್ನಕೊಣಾಮಣಿ), 9. ಗರಿಗಸನ್ನಾಲು, 10. ಗುಣಪುರು ಸನ್ನಾಲು, 11. ಚೆಲುಕ ಮುಕ್ಕು, 12. ಜಿಲಮ, 13. ಜೀಲಕರ್ರ, 14. ದಾಳುವಾಲು, 15. ನೀಟಿ ಕಾಪರಿ, 16. ನೀವಾರ ನಿವ್ವರಿ, ತೃಣ, ನಿದಾರ್ಯ, ಅರಣ್ಯಶಾಲಿ, 17. ವೃಪಾರ್ಹ, 18. ಪತಂಗ (ಪಡಗ), 19. ಪರಶುವೇದು (ಕಾಶ್ಮೀರ), 20. ಪವನಾಲು (ಪುನೇರಾ), ಪನ್ನೇರಾ, ಬೀಜಪುಷ್ಪ, ಗಂಧಪುಷ್ಪ, ದೇವ ಎಂಬ ಹೆಸರುಗಳಲ್ಲಿ ಹಲವಾರು ಪ್ರಾಂತಗಳಲ್ಲಿ ಬಳಕೆಯಲ್ಲಿವೆ, 21. ಪವಮಾನ, 22. ಪಾರ್ವತೀಯ, 23. ಪಾರಾವತ, 24. ಪಾಲಗುಮ್ಮವರಿ, 25. ಪಿಚೋಡಿ - ಇವುಗಳಲ್ಲಿ 5 ಬಗೆಗಳು. 26. ಪುಷ್ಪಾಂಡಕ, 27. ಪುಷ್ಪಾಂತಕ 28. ಬಂಗಾರು ತೀಗೆಲು, 29. ಬಂಗಾಳಾ, 30. ಬರ್ಮಾ ಸಮೃದ್ಧಿ, 31. ಬಸಂಗಿ (ಎರ್ರೀ ಬಸಂಗಿ), 32. ಬುಡಮ (ಸಾರ ಬುಡಮ, ಕೋಡಿ ಬುಡಮ), 33. ಬೊಬ್ಬಿಲಿ ಕಂಟಿ, 34. ಬೋದನ, 35. ಮಹಾರಾಜ ಭೋಗಾಲು, 36. ಮಾನ್ಯ ಭೋಗಾಲು (ಬಲರಾಮ ಭೋಗಾಲು, ಶ್ರೀರಾಮ ಭೋಗಾಲು),37. ಯುಗಂಧರ, 38. ರಸಂಗಿ (ಕೃಷ್ಣರಸಂಗಿ), 39. ರಾಜನಾಲು, 40. ರಾಜಭೋಗಾಲು, 41. ಲಕ್ಷ್ಮಣ ಪುರುಲು, 42. ವಂಕಸನ್ನಾಲು, 43. ಸೀತಕಟುಕಲು, 44. ಸುಕುಮಾರ - ಇವುಗಳನ್ನು ಮೂರು ವರ್ಗಗಳಾಗಿ ವಿಭಜಿಸುತ್ತಾರೆ.

1. ದಿಣ್ಣೆಯ ಮೇಲೆ (ಮೆರಕ) ಚೆಲ್ಲುವಂತಹುವು.

2. ಅಲ್ಪಾವಧಿ ಬತ್ತಗಳು (ತೇಲಿಕ ವರಲು) - 3 ತಿಂಗಳುಗಳಲ್ಲಿ ಫಸಲು ಕೊಡುತ್ತವೆ.

3. ದೊಡ್ಡ ಬತ್ತ (ಪೆದ್ದವರುಲು) - 4 ತಿಂಗಳು ಅವಧಿ.

ಒಟ್ಟಿನಲ್ಲಿ ಕೆಲವೊಂದು ಬಗೆ 75 ದಿನಗಳಲ್ಲಿ, ಕೆಲವು 90 ದಿನಗಳಲ್ಲಿ, ಇನ್ನೂ ಕೆಲವು 120 ದಿನಗಲ್ಲಿ ಕಟಾವುಗೆ ಬರುತ್ತವೆ. (ಮಿನ್ನೇರು, ಪು. 42, ನೇದುನೂರಿ ಗಂಗಾಧರಂ, 1968)

ರಾಯಲಸೀಮೆಯಲ್ಲಿ 'ಢಿಲ್ಲೀ ಭೋಗಾಲು' ಬತ್ತ ಹಿಂದೆ ಪ್ರಸಿದ್ಧವಾಯಿತು. ಆದರೆ ಈ ಬಗೆಯ ಬತ್ತ ಈಗ ಕಂಡುಬರುತ್ತಿಲ್ಲ. ಇಂದು ಆಂಧ್ರಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಜಗನ್ನಾಥ್, ಮಸೂರಿ, ಜಯ, 'ತೆಲ್ಲಹಂಸ', ಸೋನಾ, ಕಾವೇರಿ, ಪದ್ಮ, ರತ್ನ ಐ.ಆರ್. - 8 ಮೊದಲಾದ ಬತ್ತದ ತಳಿಗಳನ್ನು ಹೆಚ್ಚು ಕೃಷಿ ಮಾಡುತ್ತಿದ್ದಾರೆ.

ಬತ್ತದ ಬಗೆಗಳಿಗೆ ಸಂಬಂಧ ಪಟ್ಟಂತೆ ಒಂದು ಗಾದೆ ರೂಢಿಯಲ್ಲಿದೆ. 'ರೆಡ್ಡಿಗಳಲ್ಲಿ ಶಾಖೆಗಳನ್ನು, ಬತ್ತಗಳಲ್ಲಿ ಬಗೆಗಳನ್ನು ಲೆಕ್ಕಿಸಲಾರದು' ಎಂದು.

ಪ್ರಾಚೀನ ತೆಲುಗು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡ ಬತ್ತದ ತಳಿಗಳು ಇಂತಿವೆ : ಬಂಗಾರು ತೀಗೆಲು, ಗಂಗಾಜಲಮುಲು, ಕಸ್ತೂರಿ ನಿಗರಾಲು, ಕಟಕ ಸರುಲು, ಇಪ್ಪಪೂರಾಜನಾಲು, ಏನುಗು ಕೊಮ್ಮಲು, ಮಲ್ಲೆ ಶ್ರೀಗಂಧುಲು, ಮದನ ಗಂಧುಲು, ಏಲಿಕ ರಾಜನಾಲು, ಈಶ್ವರ ಪ್ರಿಯುಮುಲು, ರಾವಿ ಪೂರಾಜನಾಲು, ರತ್ನಸರುಲು, ಕುಸುಮಪೂರಾಜನಾಲು, ಗುತ್ತಿ ಬಲ್ಲುತ್ತುಲು, ಕಸ್ತೂರಿಪಟ್ಟೆಲು, ಗಂಧಪರಲು, ಮಂದಿಗಂಡ್ರಲು, ನಾಗಮಲ್ಲೆಲು, ತೀಗಮಲ್ಲೆಲು, ಕೃಷ್ಣನೀಲಾಲು, ವೆಲುವಡಾಲು, ಮನ್ಮಥಬಾಣಾಲುವ, ಮರುವಂಪು, ಮೊಲಕಲು, ಸನ್ನಮಣಿಗೆಲು, ಜುನ್ನುಬ್ರಾಲು, ಪೊನ್ನ ಶ್ರೀರಾಜನಾಲು, ಪುನುಗು ರಾಜನಮುಲು, ಮುದ್ದುಪ್ರಾಲಾರಳ್ಳು, ಮುತ್ತು ಸರುಲು, ಸನ್ನಸೂರುಲು, ಪಚ್ಚನಗ್ನೇರ್ಲು, ಕೋದಂಡರಾಮುಲು, ಕೇಸರ್ಲು, ರಾಯಸರ್ಲು, ಚಂದ್ರವಂಕಲು, ಜೀನಿಸರುಲು, ಕಾಂಭೋಜುಲು, ವಂಗಾಕು ಬುಡಮಲು, ಪೊಂಗುಬ್ರಾಲು, ಜಿಲಕಜ್ಜ ರಾಜನಾಲು, ಚಿಂತಪುವ್ವುಲು, ಗೋರುರಾಜಾನಾಲು, ಬೂದಪ್ರೋಲುರಾಜನಾಲು, ರಾಮಬಾಣಾದಿ ರೆಕ್ಕಾಮುಲು, ವೆನ್ನಮುದ್ದಲು, ಚೆಲ್ಮಬುಡಮಲು, ದಾಳುವಾಲು, ಗೊಬ್ಬಿಕಾಯಲು, ಪಲುಗುತ್ತಲು, ಪಾಲಮೀಗಡಲು, ಶ್ರೀರಂಗಾಲು, ಕಾಮುದಾರ್ಲು, ಜೆಕ್ಕ ಪಾಲಲು, ಕಾಕೆ ಜೆಕ್ಕಲು, ಪುಷ್ಪಮಂಜರುಲು, ಸೀತಾಭೋಗಸರುಲು, ಗೌರೀ ಕುಂಕಮಲು, ರಣಪೆಂಡ್ಲಿ ಕೊಡುಕುಲು, ಪಿಚ್ಚುಕಗೋಳ್ಳು, ಪ್ರಯಾಗಲು, ಗೊಜ್ಜು ಬ್ರಾಲು, ಗರುಡಸರುಲು, ಪೋತುಗಂಟರಾಜನಮುಲು, ಮೋದುಗ ತೊಡಿಮಲು ಮುದುಕಸರಲು, ಪಚ್ಚಸರುಲು, ರೆಡ್ಡಿ ಸಾಲುವಂತೆಲು ಸುಖಭೋಗುಲು, ಪಚ್ಚಕರ್ಪೂರಸರುಲು, ನಿವ್ಯರುಲು, ದೆಬ್ಬಸಲು, ನೀರುಕಾವಲು, ಗಾಜುಕಪ್ಪೆರಲು, ಕರುನಡಾಲು, ಕಂಠಸರಲು, ಸಾಲಂಕಲು, ಅಲುಗುರಾಜನುಲು, ಸಂಭಾವುಲು, ಅವಸರದಾರ್ಲು, ಮೋಹನಪು ಸುರುಲು, ಮಣಿಸರುಲು, ಮಸಿರುಲು, ಮೆಂಕನೆಲು, ಪಗಡಪುತೀಗೆಲು, ಮಡಿಪ್ರಾಲು, ದೇವಸರಲು, ಲತ್ತುಕ ಬೊತ್ತುಲು, ಲಕ್ಷ್ಮೀಮನೋಹರಾಲು, ಭಾರತೀಸೇಸಲು, ಬಾಹುಪುರುಲು, ವಜ್ರಪುದಳುಕುಲು, ವಾಸವರಾಜನಾಲು, ಜವ್ವಾಜಿ ವಂಕಲು, ಗವ್ವಸರುಲು, ಸಂಪಂಗಿ ಪೂವಡ್ಲು, ಜಾಜಿರಾಜವುುಲು, ಕಂಬೂರ ರಾಜನಾಲು, ಕನ್ನೆಸರಲು, ತಮ್ಮಿಪೂರಾಜನಾಲು, ಅಮ್ಮುಡು ಕೊಣೆಗೇಲು, ಜೀನವು ಮುಕ್ಕಲು, ಚಿಲುಕಮುಕ್ಕುಲು, ಏದು ಕಜ್ಜಿಲವಂಕೆಲು, ಇಸುಕ ರಾಜನಮುಲು, ಪುಲಿಗೊಳ್ಳವಂಕೆಲು, ಪೊಗಡಸರುಲು ಜಿಲಿತೊಗಲ ರಾಜನಮುಲು, ವಲಸರುಲು, ತೆಲ್ಲನಲ್ಲ ಚೆನ್ನಂಗುಲು, ದೀವಸರುಲು (ಹಂಸವಿಂಶತಿ 5 ಆ. 128 ಸ)

ಹೀಗೆ ಇನ್ನೂರಕ್ಕೂ ಹೆಚ್ಚು ಬತ್ತದ ಬಗೆಗಳು 'ಹಂಸವಿಶಂತಿ' ಎಂಬ ತೆಲುಗು ಕಾವ್ಯದಲ್ಲಿ ಹೆಸರಿಸಲ್ಪಟ್ಟಿವೆ. ಈ ಕಥಾ ಕಾವ್ಯವನ್ನು ಅಯ್ಯಲರಾಜು ನಾರಾಯಣಾಮಾತ್ಯನು ರಚಿಸಿದ್ದಾನೆ.

'ನೈಶ್ಯಪುರಾಣ'ದಲ್ಲಿಯೂ ಬತ್ತದ ಬಗೆಗಳನ್ನು ತಿಳಿಸಲಾಗಿದೆ. ಶ್ರೀರಾಮವಂಕೆ, ಚಿಟಿಬಲುಗುತ್ತಿ, ಶ್ರೀಕೇಸರಿ, ಶಕ್ತಿ ಶ್ರೀಧರಮು, ಈಶ್ವರಪ್ರೀತಿ, ಏನುಗುಕೊಮ್ಮು, ಪೋಡ ಸಂಪಂಗಿ, ಓಡವರಿ, ಕಸ್ತೂರಿ ನಿಕರಮು, ಕರ್ಪೂರ ಭೋಗಿ, ಕಾವಲಿಕಾಂಭೋಜಿ, ಕನಕಗಿರಿ, ದೇವಾನ್ನಮೆಲಿಮಿ, ದೇವಡನ್ನಿಯಕೊಟ್ಟಿ, ನೀರು ಚಂಚಲಿ, ಶೃಂಗಾರಭೋಗಿ, ವಂಕೆ, ಪ್ರಾಸಂಗಿ, ಸಂಪಂಗಿ, ವಾರಣಾಸಿ, ಕಾಮಧೇನು, ನಾರೇಳಿ, ಗಂದ್ರಗೋಳಿ, ವೆದುರು ಮಲಯಮು, ಬುಡಮ, ವೆಲುವಡಮು, ರಾಚಮೆಚ್ಚುನುಮುಲು, ವಂಕಿರಾಜನಮುಲು ಇತ್ಯಾದಿ.

ಜೋಳ : ಬತ್ತದ ಬಳಿಕ ಪ್ರಮುಖವಾದ ಆಹಾರಬೆಳೆ ಜೋಳ. ಆಂಧ್ರಪ್ರದೇಶದಲ್ಲಿ ಇತರ ಪ್ರಾಂತ್ಯಗಳಿಗಿಂತ ತೆಲಂಗಾಣದಲ್ಲಿ ಜೋಳದ ಬೆಳೆ ಹೆಚ್ಚು. ಒಟ್ಟು ಬೆಳೆ ಭೂಮಿಯಲ್ಲಿ ಶೇ. 27.9 ಭಾಗದಲ್ಲಿ ಇದ್ದು ಬೆಳೆ ಬೆಳೆಯಲಾಗುತ್ತದೆ. ಜೋಳದ ಮಳೆ ಆಧಾರಿತ ಬೆಳೆ.

'ಹಂಸವಿಂಶತಿ' ಮತ್ತು ನೈಶ್ಯ ಪುರಾಣ ಗ್ರಂಥಗಳಲ್ಲಿ ಹಲವಾರು ಬಗೆಯ ಬತ್ತ (ಧಾನ್ಯ)ಗಳು ಹೆಸರಿಸಲ್ಪಟ್ಟಿವೆ.

ರಾಗಿ : ಆಂಧ್ರಪ್ರದೇಶದಲ್ಲಿ ರಾಗಿ ಸಹ ಒಂದು ಮುಖ್ಯವಾದ ಬೆಳೆ. ರಾಗಿಯನ್ನು ಕೆಲವು ಪ್ರಾಂತ್ಯಗಳಲ್ಲಿ ತಮಿದೆಲು ಎಂದೂ, ಇನ್ನೂ ಕೆಲವು ಪ್ರದೇಶಗಳಲ್ಲಿ ಚೋಳ್ಳು ಎಂದೂ ವ್ಯವಹರಿಸುತ್ತಾರೆ. ರಾಗಿಯನ್ನು ಶ್ರೀಕಾಕುಳಂ, ವಿಶಾಖಪಟ್ಟಣಂ, ಪ್ರಕಾಶಂ, ಅನಂತಪುರಂ, ಚಿತ್ತೂರು, ಮಹಬೂಬ್ ನಗರ್ ಜಿಲ್ಲೆಗಳಲ್ಲಿ ಬೆಳೆಯುವರು. ಇದನ್ನು ಮಳೆಯ ಆಧಾರದಿಂದಲೂ ನೀರಾವರಿಯಿಂದಲೂ ಬೆಳೆಸುತ್ತಾರೆ.

ಗೋಧಿ : ಗೋಧಿ ಸಹ ಮುಖ್ಯ ಆಹಾರ ಬೆಳೆಯಾದರೂ, ತೆಲಂಗಾಣ, ರಾಯಲಸೀಮ ಪ್ರದೇಶಗಳಲ್ಲಿ ಮಾತ್ರ ಅತಿ ಕಡಿಮೆ ಬೆಳೆಸುವುದುಂಟು. ಕೊಜ್ಜ ಆಹಾರ ಬೆಳೆಯಾದರೂ ಈ ಬೆಳೆಯ ಉತ್ಪಾದನೆ ಕೇವಲ ಪ್ರಕಾಶಂ, ಕರ್ನೂಲು, ಅನಂತಪುರಂ, ಕಡಪ, ಮೆಹಬೂಬ್ ನಗರ ಜಿಲ್ಲೆಗಳಿಗೆ ಮಾತ್ರ ಪರಿಮಿತವಾಗಿದೆ.

ಸಜ್ಜೆ : ಆಂಧ್ರಪ್ರದೇಶದಲ್ಲಿ ಜೋಳದ ಅನಂತರದ ಸ್ಥಾನ ಸಜ್ಜೆಯದು. ರಾಯಲಸೀಮೆ ಹಾಗೂ ತೆಲಂಗಾಣ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಜ್ಜೆ ಬೆಳೆಯುವರು. ತೀರಾಂಧ್ರದ ನೆಲ್ಲೂರು, ಕಡಪ, ವಾರಂಗಲ್ ಜಿಲ್ಲೆಗಳಲ್ಲೂ ಇದು ಸ್ವಲ್ಪ ಹೆಚ್ಚೆ. ಮಳೆಗಾಲದ ಬೆಳೆಯಾದ ಇದನ್ನು ಖರೀಫ್ (ಮುಂಗಾರು)ನಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಸಾಮಾನ್ಯವಾಗಿ ಇದನ್ನು ಇತರ ಬೆಳೆಗಳೊಂದಿಗೆ ಬೆಳೆಯದೆ ಪ್ರತ್ಯೇಕವಾಗಿಯೆ ಕೃಷಿ ಮಾಡುವುದುಂಟು. ಆದರೂ ಕೆಲವು ಭಾಗಗಳಲ್ಲಿ ಜೋಳದ ಜೊತೆ ಮಿಶ್ರ ಬೆಳೆಯಾಗಿಯೂ ಬೆಳೆಯುವುದುಂಟು.

ಮುಸುಕಿನಜೋಳ (ಮೊಕ್ಕಜೊನ್ನ) : ಆಂಧ್ರಪ್ರದೇಶದಲ್ಲಿ ಆಹಾರ ಬೆಳೆಯಾಗಿ ಕೃಷಿ ಮಾಡುವ ಬೆಳೆಗಳ ಪೈಕಿ ಮುಸುಕಿನ ಜೋಳವೂ ಒಂದು. ಪ್ರಧಾನವಾಗಿ ಕರೀಂನಗರ, ವಾರಂಗಲ್, ನಿಜಾಮಾಬಾದ್, ಮೇದಕ್ ಜಿಲ್ಲೆಗಳಲ್ಲಿ ಹೆಚ್ಚಾಗಿ ಮುಸುಕಿನ ಜೋಳ ಮಳೆಗಾಲದ ಬೆಳೆಯಾಗಿದೆ. ಯಾವ ಭಾಗದಲ್ಲಿ ಹೆಚ್ಚಾಗಿ ಬೆಳೆಯುವರೊ ಆ ಭಾಗದ ಮುಖ್ಯ ಆಹಾರಧಾನ್ಯವಿದು. ಉಳಿದ ಭಾಗಗಳಲ್ಲಿ ಪಶು ಆಹಾರವಾಗಿ ಬಳಕೆಯಿದೆ. ಹಸಿಯಾಗಿ, ಬೇಯಿಸಿ, ಸುಟ್ಟು ಉಪ್ಪು ಖಾರ ಹಾಕಿ ಪಟ್ಟಣ ಪ್ರದೇಶಗಳಲ್ಲಿ ಹೆಚ್ಚಾಗಿ ತಿನ್ನುವುದುಂಟು.

ಬೇಳೆಕಾಳುಗಳು : ಆಹಾರಧಾನ್ಯಗಳಲ್ಲಿ ತೃಣ ಧಾನ್ಯಗಳು, 'ಚಿರುಧಾನ್ಯಗಳು' ಮುಖ್ಯವಾದುವು. ಬೇಳೆಕಾಳುಗಳು ಇವುಗಳಲ್ಲಿ ಪ್ರಧಾನವಾದವು. ಹೆಸರು, ತೊಗರಿ, ಕಡಲೆ, ಉದ್ದು, ಅಲಸಂದೆ, ಹುರುಳಿ, ಇತ್ಯಾದಿ. ಬೇಳೆಕಾಳುಗಳಲ್ಲಿ ಎಲ್ಲಕ್ಕಿಂತಲೂ ಮುಖ್ಯವಾದದ್ದು ಹೆಸರು ಕಾಳು ಸಾಧಾರಣವಾಗಿ ಇದನ್ನು ಮಿಶ್ರಬೆಳೆಯಾಗಿ ಬೆಳೆಸುತ್ತಿದ್ದಾರೆ. ಹೆಚ್ಚಾಗಿ ತೆಲಂಗಾಣ ಜಿಲ್ಲೆಗಳಲ್ಲಿಯೂ ಕೋಸ್ತಾಪ್ರಾಂತ್ಯದಲ್ಲಿ ಕೃಷ್ಣಾಜಿಲ್ಲೆಯಲ್ಲಿಯೂ ಬೆಳೆಸುತ್ತಿದ್ದಾರೆ. ಎಲ್ಲ ಕಾಲಗಳಲ್ಲಿಯೂ ಬೆಳೆಸುವುದುಂಟು. ಇದು ಮಳೆಯಾಧಾರಿತ ಬೆಳೆ.

ತೊಗರಿಯನ್ನು ಆಂಧ್ರಪ್ರದೇಶದ ಎಲ್ಲ ಜಿಲ್ಲೆಗಳಲ್ಲಿಯೂ ಬೆಳೆಸಿದರು ಹೆಚ್ಚಾಗಿ ಮೆಹಬೂಬ್‌ನಗರ, ಆದಿಲಾಬಾದ್, ಅನಂತಪುರಂ, ಪ್ರಕಾಶಂ, ಗುಂಟೂರು, ಕರ್ನೂಲ್, ಮೆದಕ್, ಖಮ್ಮಂ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಈ ಬೆಳೆಯು ಪ್ರಧಾನವಾಗಿ ಮಳೆಯ ಮೇಲೆ ಆಧಾರಪಟ್ಟಿದೆ. ಸಾಧಾರಣವಾಗಿ ಇದನ್ನು ಬೇರೆ ಬೆಳೆಗಳ ಜೊತೆಗೆ ಬೆಳೆಸುತ್ತಾರೆ. ತೃಣ ಧಾನ್ಯಗಳಲ್ಲಿ ಇದು ದೀರ್ಘಕಾಲಿಕ ಬೆಳೆ.

ಕಡಲೆ : ಈ ಬೆಳೆಗೆ ಕೋಸ್ತಾ, ರಾಯಲಸೀಮೆಗಿಂತಲೂ ತೆಲಂಗಾಣ ಪ್ರಾಂತ್ಯವೇ ಪ್ರಾಮುಖ್ಯ ಪಡೆದಿದೆ. ತೆಲಂಗಾಣದಲ್ಲಿ ಮೆದಕ್, ರಂಗಾರೆಡ್ಡಿ, ಮಹಬೂಬ್‌ನಗರ್ ಜಿಲ್ಲೆಗಳು ಮುಖ್ಯವಾದವು. ಇದು ಪ್ರಧಾನವಾಗಿ ರಬೀ ಬೆಳೆ.

ಉದ್ದು : ಈ ಫಸಲನ್ನು ಕೋಸ್ತಾ ಪ್ರಾಂತ್ಯದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಮುಖ್ಯವಾಗಿ ಇದು ಗುಂಟೂರು, ಕೃಷ್ಣ ಜಿಲ್ಲೆಗಳಲ್ಲಿ ಮುಖ್ಯ ಬೆಳೆಯಾಗಿ ಗುರ್ತಿಸಲ್ಪಡುತ್ತಿದೆ. ಉದ್ದಿನ್ನು ಮಿಶ್ರ ಬೆಳೆಯಾಗಿಯೂ ಪ್ರತ್ಯೇಕವಾಗಿಯೂ ಬೆಳೆಯುವುದುಂಟು.

ಹುರುಳಿ : ಎಲ್ಲ ಜಿಲ್ಲೆಗಳಲ್ಲಿ ಬೆಳೆಸಿದರೂ ತೆಲಂಗಾಣದಲ್ಲಿ ಹೆಚ್ಚು ಕೃಷಿಯಲ್ಲಿದೆ. ಹೆಚ್ಚಾಗಿ ಅಲಸಂದೆಯನ್ನು ಮಿಶ್ರ ಬೆಳೆಯಾಗಿ ಹೆಚ್ಚಾಗಿ ತೆಲಂಗಾಣದಲ್ಲಿ ಬೆಳೆಯುತ್ತಿದ್ದಾರೆ.

ವಾಣಿಜ್ಯ ಬೆಳೆಗಳು : ಆಂಧ್ರಪ್ರದೇಶದ ಎಣ್ಣೆ ಬೀಜ ಬೆಳೆಗಳಲ್ಲಿ ಕಡಲೇಕಾಯಿ ಪ್ರಮುಖವಾದದ್ದು. ಈ ಫಸಲನ್ನು ಎಲ್ಲ ಜಿಲ್ಲೆಗಳಲ್ಲಿಯೂ ಬೆಳೆಸಿದರೂ, ಮುಖ್ಯವಾಗಿ ರಾಯಲಸೀಮೆ, ತೆಲಂಗಾಣದಲ್ಲಿ ಇದಕ್ಕೆ ಹೆಚ್ಚು ಪ್ರಾಧಾನ್ಯವಿದೆ. ರಾಯಲಸೀಮೆಯಲ್ಲಿ ಅನಂತಪುರಿ, ಚಿತ್ತೂರು ಜಿಲ್ಲೆಗಳು, ತೆಲಂಗಾಣದಲ್ಲಿ ಮಹಬೂಬ್ ನಗರ ಜಿಲ್ಲೆಯಲ್ಲಿ ಈ ಫಸಲನ್ನು ಹೆಚ್ಚು ಬೆಳೆಸುತ್ತಾರೆ. ಈ ಬೆಳೆಯನ್ನು ಹೆಚ್ಚು ಭಾಗ ಖರೀಫ್ ಬೆಳೆಯಾಗಿ ಮಳೆಯ ಆಧಾರದ ಮೇಲೆ ಬೆಳೆಯುತ್ತಿದ್ದಾರೆ.

ಆಂಧ್ರಪ್ರದೇಶದಲ್ಲಿ ಮೂರು ವಿಧದ, ಕಡಲೆಕಾಯಿ ಸಾಗುವಳಿಯಲ್ಲಿವೆ. 'ಗುತ್ತಿ ವೇರುಶೆನಗ' ಅಲ್ಪಾವಧಿ ಬೆಳೆ. ಇದು ಮಳೆಯ ಆಧಾರಿತ ಬೆಳೆಯಾದುದರಿಂದ ಅಧಿಕ ಇಳುವರಿ ಕೊಡುತ್ತದೆ. ಇದನ್ನು ನೀರಾವರಿಯಿಂದಲೂ ಬೆಳೆಸುತ್ತಾರೆ. 'ಪಾರ್ಶ್ವತೀಗ' ಬಗೆ ನೀರಾವರಿ ಅನುಕೂಲವಿಲ್ಲದ ಹೊಲ ಪ್ರದೇಶಗಳಾದ ಚಿತ್ತೂರು ಪ್ರಾಂತ್ಯದಲ್ಲಿದೆ. 'ತೀಗ' ಅಥವಾ ಪಾರ್ಶ್ವತಿಗ ಬಗೆಯ ಕಡಲೆಕಾಯಿ ಹೆಚ್ಚು ವರ್ಷಪಾತ, ಕಡಿಮೆ ವರ್ಷಪಾತವಿರುವ ಪ್ರದೇಶಗಳಿಗೆ ಪರಿಮಿತವಾಗಿದೆ. ತೀಗ ಮತ್ತು ಪಾರ್ಶ್ವತೀಗ ಬಗೆಗಳು ದೀರ್ಘಕಾಲಿಕ ಬೆಳೆಗಳು.

ಹರಳು (ಅವುಡಲಬೀಜ) : ಹರಳು ಬೀಜ ಬೆಳೆಯಲ್ಲಿ ಆಂಧ್ರಪ್ರದೇಶ ಭಾರತದಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದೆ. ಹರಳುಬೀಜ ಬೆಳೆಯ ಭೂ ವಿಸ್ತೀರ್ಣ 2.72 ಲಕ್ಷ ಹೆಕ್ಟೇರು. ಈ ಫಸಲನ್ನು ಹೆಚ್ಚಾಗಿ ತೆಲಂಗಾಣ ಪ್ರಾಂತ್ಯದಲ್ಲಿಯ ನಲ್ಗೊಂಡ, ಮಹಬೂಬ್ ನಗರ್ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ. ಈ ಬೆಳೆಯನ್ನು ಕೆಲವು ಪ್ರದೇಶಗಳಲ್ಲಿ ಮಿಶ್ರ ಬೆಳೆಯಾಗಿಯೂ, ಇನ್ನು ಕೆಲವು ಪ್ರಾಂತ್ಯಗಳಲ್ಲಿ ಪ್ರತ್ಯೇಕವಾಗಿಯೂ ಬೆಳೆಸುತ್ತಿದ್ದಾರೆ. ಕಡಿಮೆ ವರ್ಷಪಾತವಿರುವ ಹೊಲಗಳು ಈ ಫಸಲಿಗೆ ಶ್ರೇಷ್ಠವಾದವು. ಇಂದಿನವರೆಗೂ ದೀರ್ಘಕಾಲಿಕ ಬಗೆಗಳು ಹೆಚ್ಚು ಪ್ರಾಚುರ್ಯದಲ್ಲಿದ್ದವು. ಇತ್ತೀಚಿನ ದಿನಗಳಲ್ಲಿ ಹೆಚ್ಚು ಉತ್ಪಾದನೆ ಕೊಡುವ 'ಅರುಣ' ಎಂಬ ಗಿಡ್ಡ ಜಾತಿಯ ತಳಿ ರೂಢಿಗೆ ಬಂದಿರುವುದರಿಂದ ಈ ಬೆಳೆಯನ್ನೇ ಹೆಚ್ಚಾಗಿ ವಿಸ್ತರಿಸಿದ್ದಾರೆ.

ಧನಿಯ : ಈ ಫಸಲನ್ನು ಹೆಚ್ಚಾಗಿ ರಾಯಲಸೀಮೆ ಪ್ರಾಂತ್ಯದ ಕರ್ನೂಲು, ಅನಂತಪುರಂ ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದಾರೆ.

ಹತ್ತಿ : ಒಂದು ಕಾಲದಲ್ಲಿ ಹತ್ತಿ ಬೆಳೆಯನ್ನು ಮಳೆ ಆಧಾರದ ಮೇಲೆ ಬೆಳೆಸುತ್ತಿದ್ದರು. ಇತ್ತೀಚೆಗೆ ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲಿ ಬೆಳೆಯುತ್ತಿದ್ದಾರೆ. ಹಲವಾರು ಬಗೆಯ ಹತ್ತಿಯನ್ನು ಬೆಳೆಸುವರು. ನಾಗಾರ್ಜುನಸಾಗರ, ಕರ್ನೂಲು, ಕಡಪ ಕಾಲ್ವೆ ತುಂಗಭದ್ರ ಪ್ರಾಜೆಕ್ಟು, ಪೊಚಂಪಾಡು ಪ್ರಾಜೆಕ್ಟು, ರಾಜೋಲಿ ಬಂಡ ಡೈವರ್ಷನ್ ಸ್ಕೀಮ್, ಕೃಷ್ಣಾ, ಗೋದಾವರಿ, ಪೆನ್ನಾ ಡೆಲ್ಟಾ ಮುಂತಾದ ನೀರಾವರಿ ಸೌಕರ್ಯವಿರುವ ಪ್ರಾಂತ್ಯಗಳಲ್ಲಿ ಹತ್ತಿ ಬೆಳೆಸುತ್ತಿದ್ದಾರೆ. ಕರ್ನೂಲ್ ಜಿಲ್ಲೆ ನಂದ್ಯಾಲದಲ್ಲಿ ಹತ್ತಿ ಸಂಶೋಧನಾ ಕೇಂದ್ರವಿದೆ.

ಕಬ್ಬು : ಕೋಸ್ತಾ ಆಂಧ್ರ ಪ್ರಾಂತ್ಯದಲ್ಲಿ ವಿಶಾಖಪಟ್ಟಂ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣ ಜಿಲ್ಲೆಗಳಲ್ಲಿಯೂ, ರಾಯಲಸೀಮೆ ಪ್ರದೇಶಗಳಲ್ಲಿ ಚಿತ್ತೂರು ಜಿಲ್ಲೆ, ತೆಲಂಗಾಣ ಪ್ರಾಂತ್ಯದಲ್ಲಿ ನಿಜಾಮಾಬಾದ್, ಮೆದಕ್ ಜಿಲ್ಲೆಗಳಲ್ಲಿ ಕಬ್ಬಿನ ಸಾಗುವಳಿ ಹೆಚ್ಚಾಗಿದೆ. ಕಬ್ಬು ಬೆಳೆ ಪ್ರಧಾನವಾಗಿ ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲಿ ಬೆಳೆಸಲ್ಪಡುತ್ತಿದೆ. ವಿಶಾಖಪಟ್ಟಂ ಜಿಲ್ಲೆಯ ಅನಕಾಪಲ್ಲಿಯಲ್ಲಿ ಕಬ್ಬು ಸಂಶೋಧನಾ ಕೇಂದ್ರವಿದೆ.

ತಂಬಾಕು : ತಂಬಾಕು ಉತ್ಪಾದನೆಯಲ್ಲಿ ಅಮೆರಿಕಾ, ಚೀನಾ ರಾಷ್ಟ್ರಗಳ ಅನಂತರ ತೃತೀಯ ಸ್ಥಾನದಲ್ಲಿರುವ ಭಾರತದಲ್ಲಿ ಆಂಧ್ರಪ್ರದೇಶ

ಮೊದಲನೆಯ ಸ್ಥಾನದಲ್ಲಿದೆ. ಭಾರತದಲ್ಲಿ ಮೊದಲನೆಯ ಬಾರಿ ಗುಂಟೂರು ಜಿಲ್ಲೆಯಲ್ಲಿ ವರ್ಜಿನಿಯಾ ತರಹದ ಹೊಗೆಸೊಪ್ಪನ್ನು ಪರಿಚಯ ಮಾಡಿದರು. ಈ ರಾಜ್ಯದಲ್ಲಿ ವರ್ಜೀನಿಯಾದೊಂದಿಗೆ 'ಲಂಕ', 'ನಾಟು' ಮುಂತಾದವನ್ನು ಬೆಳೆಯುತ್ತಿದ್ದಾರೆ.

ಮೆಣಸಿನ ಕಾಯಿ : ಮೆಣಸಿನಕಾಯಿ ಬೆಳೆ ಹೆಕ್ಟೇರು ಉತ್ಪಾದನೆ ಕೊಸ್ತಾ ಆಂಧ್ರ ಜಿಲ್ಲೆಗಳಲ್ಲಿ ಹೆಚ್ಚಾಗಿದೆ. ಗುಂಟೂರು, ಪ್ರಕಾಶಂ, ಕೃಷ್ಣಾ, ಪಶ್ಚಿಮಗೋದಾವರಿ, ಖಮ್ಮಂ, ವಾರಂಗಲ್, ಕರೀಂನಗರ್ ಜಿಲ್ಲೆಗಳಲ್ಲಿ ಈ ಫಸಲು ಹೆಚ್ಚಾಗಿದೆ. ಖರೀಫ್ ಮತ್ತು ರಬೀ ಎರಡು ಕಾಲದಲ್ಲಿಯೂ ನೀರಾವರಿ ಪ್ರದೇಶಗಳಲ್ಲಿಯೂ ನೀರಾವರಿ ಇಲ್ಲದೆಡೆಗಳಲ್ಲಿಯೂ ಇದನ್ನು ಬೆಳೆಯುತ್ತಿದ್ದಾರೆ.

ಅರಿಸಿನ : ತೆಲಂಗಾಣ ಪ್ರಾಂತ್ಯದಲ್ಲಿಯೂ, ಕೋಸ್ತಾ ಆಂಧ್ರ ಪ್ರಾಂತ್ಯದಲ್ಲಿಯೂ ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಉತ್ಪಾದನೆಯಲ್ಲಿ ಕಡಪ, ಗುಂಟೂರು, ನಿಜಾಮಬಾದ್ ಜಿಲ್ಲೆಗಳು ಮುಖ್ಯವಾದವು.

ಹಣ್ಣು ಹಂಪಲಗಳು : ಉತ್ಕೃಷ್ಟ ಮಾವಿನ ಫಸಲಿಗೆ ಆಂಧ್ರಪ್ರದೇಶ ಪ್ರಸಿದ್ಧಿ. ಮಾವುಗಳಲ್ಲಿ ಬನಗಾನಿಪಲ್ಲಿ, ಸುವರ್ಣರೇಖ, ಮಲಗೂಬ, ನೀಲಾಲು, ಬೆಂಗುಳೂರು ರಸಾಲು ಮುಂತಾದ ನಮೂನೆಗಳು ಪ್ರಧಾನವಾಗಿವೆ. ತೆಲಂಗಾಣ ಖಮ್ಮಂ, ರಾಯಲಸೀಮೆ, ಚಿತ್ತೂರು ಮುಂತಾದ ಭಾಗಗಳು ಮಾವಿನ ಕೃಷಿಗೆ ಹೆಸರಾಗಿದೆ. ಕೃಷ್ಣಾ ಮತ್ತು ಗೋದಾವರಿ ಜಿಲ್ಲೆಗಳಲ್ಲೂ ಮಾವಿನ ಕೃಷಿ ಉಂಟು.

ಇತರ ಹಣ್ಣುಗಳು : ನಿಂಬೆ, ಕಿತ್ತಳೆ, ಮೂಸಂಬಿ, ಕಮಲಾ (ಕಿತ್ತಳೆ)ಯ ಪ್ರಭೇದ ಮುಂತಾದ ಹಣ್ಣುಗಳ ತೋಟಗಳು ಪ್ರಮುಖವಾಗಿವೆ. ದಕ್ಷಿಣಭಾರತದಲ್ಲಿಯೇ ನಿಂಬೆ ಜಾತಿಗೆ ಸೇರಿದ ಹಣ್ಣುಗಳ ಕೃಷಿಯಲ್ಲಿ ಆಂಧ್ರಕ್ಕೆ ವಿಶೇಷವಾದ ಸ್ಥಾನವಿದೆ. ಈ ಹಣ್ಣುಗಳಿಗೆ ವಿದೇಶಗಳಲ್ಲಿ ಕೂಡಾ ಬೇಡಿಕೆ ಉಂಟು. ನಿಂಬೆ ತೋಟಗಳಿಗೆ ಅನಂತಪುರಂ, ಕಡಪ, ಪಶ್ಚಿಮಗೋದಾವರಿ, ನೆಲ್ಲೂರು ಜಿಲ್ಲೆಗಳು ಪ್ರಸಿದ್ಧವಾಗಿವೆ. ಬುಡಕಟ್ಟು ಜನರಿರುವ ವಿಶಾಖಜಿಲ್ಲೆಯ ಅರಕು ಕಣಿವೆಯಲ್ಲಿ, ತೂರ್ಪುಗೋದಾವರಿ ಜಿಲ್ಲೆಯ ರಂಪಚೋಡವರಂ ಪ್ರದೇಶಗಳಲ್ಲಿ ಕಮಲಾ (ಕಿತ್ತಳೆ) ಹಣ್ಣುಗಳ ಫಸಲು ಹೆಚ್ಚಾಗಿದೆ.

ದ್ರಾಕ್ಷಿಯನ್ನು ಅನಂತಪುರಂ, ರಂಗಾರೆಡ್ಡಿ ಜಿಲ್ಲೆಗಳಲ್ಲಿಯೂ, ಸೀಬೆ ಹಣ್ಣನ್ನು ಪೂರ್ಪುಗೋದಾವರಿ, ಗುಂಟೂರು, ಅನಂತಪುರಂ, ಕೃಷ್ಣ ಮೆದಕ್ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ.

ಕಡಪ ಜಿಲ್ಲೆಯ ಅನಂತರಾಜುಪೇಟ, ಮೆದಕ್ ಜಿಲ್ಲೆಯ ಸಂಗರೆಡ್ಡಿಗಳಲ್ಲಿ ಪ್ರಾದೇಶಿಕ ಫಲ ಸಂಶೋಧನಾ ಕೇಂದ್ರಗಳಿವೆ.

ಸಸ್ಯಬಾಧಿತ ಪ್ರಾಣಿ ಮತ್ತು ಕೀಟಗಳ ಹತೋಟಿ : ಹೊಲಗದ್ದೆಗಳಲ್ಲಿರುವ ಸಸ್ಯಗಳನ್ನು ಇಲಿಗಳು ಕಡಿಯುತ್ತವೆ. ತೋಟಗಳಲ್ಲಿ, ಪಾತಿಗಳಲ್ಲಿ ಹಸುರು ಕೀಟಗಳು ಸೊಪ್ಪುಗಳಿಗೆ ಕಂಬಳಿ ಹುಳಗಳು ಬೀಳುತ್ತವೆ. ಬಾಳೆ ಗಿಡಗಳನ್ನು ಕಾಡುಹಂದಿಗಳು, ಜಿಂಕೆಗಳು ತಿಂದು ಹಾಳುಮಾಡುತ್ತವೆ. ಹಸುರು ಪೈರುಗಳಿಗೆ ದೃಷ್ಟಿದೋಷ ತಾಕುತ್ತದೆ. ರೈತರು ಇವನ್ನು ನಿವಾರಿಸಲು ಹಲವು ರೀತಿಯಲ್ಲಿ ಪ್ರಯತ್ನಪಟ್ಟಿದ್ದಾರೆ. ಗೀತೆಗಳನ್ನು ಕಟ್ಟಿ ಹಾಡುವ ಮೂಲಕ ಪ್ರಾಣಿಗಳನ್ನು ಪ್ರಾರ್ಥಿಸುತ್ತಾ, ಶಾಪ ಹಾಕುತ್ತಾರೆ.

ಇಲಿಗಳಿಗೆ :

ಕಡಿಯುವವನು ಕಡಿಯುವವನು ನಿನ್ನ ಹೆಸರು
ಮುಟ್ಟಬೇಡ ತಾಕಬೇಡ ನನ್ನ ಪೈರು
ಕುರುಡಿಯಾಗಿ ಹೋಗು ಇಲಿಯಮ್ಮಾ
ಕಿವುಡಿಯಾಗಿ ಹೋಗು ಇಲಿಯಮ್ಮಾ
ನುಗ್ಗಬೇಡ ನುಗ್ಗಬೇಡ ನನ್ನ ಮನೆ

ಎಂದು ರೈತರು ತಮ್ಮ ಹೊಲಗಳ ಸುತ್ತೂ ನಡೆಯುತ್ತಾ, ಇಲಿಗಳನ್ನುದ್ದೇಶಿಸಿ ಈ ಜನಪದ ಗೀತೆಯನ್ನು ಹಾಡುವುದರಿಂದ ಇಲಿಗಳು ಹೊಲಗದ್ದೆಗಳನ್ನು ಬಿಟ್ಟು ಹೋಗುತ್ತವೆಂಬ ವಿಶ್ವಾಸ ಅವರದು.

ಹಸುರು ಕೀಟಗಳಿಗೆ : ತೋಟಗಳಿಗೆ, ಪಾತಿಗಳಿಗೆ, ಸಸ್ಯಗಳಿಗೆ ಹಸುರು ಕೀಟಗಳು ಬಿದ್ದಾಗ ರೈತರು 'ಶ್ರೀವತ್ಸ ಗೋತ್ರದ ಬ್ರಾಹ್ಮಣ'ನ ಬಳಿ ಹೋಗಿ ತಾಳೆಗರಿಯ ಮೇಲಾಗಲೀ ಕಾಗದದ ಮೇಲೆ ಆಗಲೀ

"ಶ್ರೀವತ್ಸಗೋತ್ರದವರ ಸಿಂಹ ಬಂದಿದೆ
ಹಸುರು ಕೀಟಗಳೇ ! ಹೊರಟು ಹೋಗಿ"

ಎಂಬ ಮಂತ್ರವನ್ನು ಬರೆಯಿಸಿ, ಬರೆದ ಕಾಗದಗಳಿಗೆ ಅರಿಸಿನವನ್ನು ಹಚ್ಚಿ, ಸಾಂಬ್ರಾಣಿ ಧೂಪವನ್ನು ಹಾಕಿ, ಹಸುರು ಕೀಟಗಳಿದ್ದ ಕಡೆ ಕಟ್ಟುತ್ತಾರೆ. ಹಸುರು ಕೀಟಗಳು ಆ ಜಾಗವನ್ನು ಬಿಟ್ಟು ಹೋಗುತ್ತವೆಂದು ರೈತರ ವಿಶ್ವಾಸ.

ಸಸ್ಯ ರಕ್ಷಣ ಮಂತ್ರ : ಸಸ್ಯಗಳು ಸಮೃದ್ಧವಾಗಿ ಬೆಳೆಯುತ್ತಿದ್ದರೆ ಕೃಷಿಕರಿಗೆ ನೇತ್ರಾನಂದವಾಗಿರುತ್ತದೆ. ಸಸ್ಯಗಳಲ್ಲಿ ಕಳೆ ಕಸಕಡ್ಡಿ ಇದ್ದರೆ ಕೀಟಗಳು ಸೇರಿ ಸಸ್ಯಗಳು ವಿಕಾರಗೊಳ್ಳುತ್ತವೆ. ಆದ್ದರಿಂದ ರೈತರು ಆ ವಿಕಾರವನ್ನು ಹೋಗಲಾಡಿಸಲು

ಶ್ಲೋಕ || *'ಯಕ್ಷರಾಕ್ಷಸ ಪಕ್ಷೀಣಾಂ| ಕೀಟಕೈಃ ಕ್ರಿಮಿಕೀಟಕೈಃ*
ಸರ್ವಪೀಡಾ ವಿನಾಶಾಯ| ಆಜ್ಞಾಶುದ್ಧಿ ವಿಭೀಷಣಾಃ||

ಈ ಶ್ಲೋಕವನ್ನು ಹಸಿ ತಾಳೆಗರಿಯ ಮೇಲೆ ಬರೆದು, ಚಕ್ರಾಕಾರವಾಗಿ ಸುತ್ತಿ, ಆ ಚಕ್ರಕ್ಕೆ ಅರಿಸಿನ ಹಚ್ಚಿ, ಧೂಪಹಾಕಿ, ಹೊಲದ ಮಧ್ಯೆ ಕಟ್ಟುತ್ತಾರೆ. ಇದರಿಂದ ಸಸ್ಯಗಳಿಗೆ ಎಲ್ಲಾ ತರಹದ ಪೀಡೆಗಳು ತೊಲಗಿ, ಸಮೃದ್ಧಿಯಾಗಿರುತ್ತವೆಂದು ನಂಬುತ್ತಾರೆ.

ಸಸ್ಯಸೌಭಾಗ್ಯ ಯಂತ್ರ : ಪೈರು ಸಮೃದ್ಧಿಯಾಗಿ ಬೆಳೆಯಲು, ಸಮೃದ್ಧವಾದ ಫಸಲು ಬರಲು ರೈತರು ಈ ಕೆಳಕಂಡ ಯಂತ್ರವನ್ನು ಹಾಕುತ್ತಾರೆ.

56	66	3	7	ಸರ್ವ
6	3	63	62	ಪೀಡಾ
65	60	8	1	ವಿನಾ
4	5	61	64	ಶಾದು
ಓಂ ಭಗವತಿ ನಮೋ, ನಮಃ				

ಈ ಯಂತ್ರವನ್ನು ತಾಳೆಗರಿಯ ಮೇಲಾಗಲೀ ತಾಮ್ರದ ರೇಕಿನ ಮೇಲಾಗಲೀ ಬರೆದು, ಅರಿಸಿನ ಕುಂಕುಮ ಹಚ್ಚಿ, ಸಾಂಬ್ರಾಣಿ ಧೂಪಹಾಕಿ

ಹೊಲದ ಮಧ್ಯ ಭಾಗದಲ್ಲಿ ಇಟ್ಟರೆ ಪೈರು ಚೆನ್ನಾಗಿ ಬೆಳೆಯುತ್ತದೆಂದೂ ಉತ್ತಮವಾದ ಫಸಲು ಬೆಳೆಯುತ್ತದೆಂದೂ ರೈತರ ವಿಶ್ವಾಸ. ಈ ಯಂತ್ರವನ್ನೇ ದನದ ಕೊಠಡಿಯ ಪ್ರವೇಶದ್ವಾರಕ್ಕೆ ಹಾಕಿದರೆ ಪಶುಗಳು ಕ್ಷೇಮದಿಂದ ಇರುತ್ತವೆಯೆಂದು ರೈತರು ನಂಬುತ್ತಾರೆ.

ದೃಷ್ಟಿದೋಷಕ್ಕೆ : ಸಸ್ಯಗಳು ನೋಡುವವರಿಗೆ ನಯನಾನಂದಕರವಾಗಿದ್ದಲ್ಲಿ ದೃಷ್ಟಿ ತಾಕುತ್ತದೆ. ಈ ದೋಷ ನಿವಾರಣೆಗೆ ಮಣ್ಣಿನ ಮಡಕೆಗೆ ಸುಣ್ಣ ಬಳಿದು, ಮಸಿ ಬೊಟ್ಟಿಟ್ಟು ಎಲ್ಲರಿಗೂ ಕಾಣುವಂತೆ ಹೊಲಗದ್ದೆಗಳಲ್ಲಿಡುತ್ತಾರೆ. ಕೆಲವರು ಒಣಗಿದ ಹುಲ್ಲಿಂದಾಗಲೀ, ಹಳೇ ಬಟ್ಟೆಗಳಿಂದಾಗಲೀ, ವಿಕಾರವುಳ್ಳ ಹೆಣ್ಣು ಗಂಡಿನ ಗೊಂಬೆಗಳನ್ನು ಮಾಡಿ ಹೊಲದ ಮಧ್ಯೆ ಎತ್ತರವಾಗಿಡುತ್ತಾರೆ. ಆದ್ದರಿಂದ ದೃಷ್ಟಿದೋಷ ತೊಲಗುತ್ತದೆಂದು ನಂಬಿಕೆ. ಹೊಲದಲ್ಲಿ ಕೆಲಸ ಮಾಡುವವರಿದ್ದಾರೆಂದು ಭ್ರಮಿಸಿ ಪ್ರಾಣಿ ಪಕ್ಷಿಗಳು ದೂರ ಸರಿಯುತ್ತವೆ. ಮೊದಲನೆಯದಕ್ಕಿಂತ ಎರಡನೆಯ ಅಂಶವೇ ರೈತನಿಗೆ ಹೆಚ್ಚು ಪ್ರಯೋಜನ ಎಂಬುದು ದಿಟ.

ಕೀಟಗಳ ನಿವಾರಣೋಪಾಯ : ಸೊಪ್ಪಿನ ಸಸಿಗಳಿಗೂ, ತರಕಾರಿಯ ಪಾತಿಗಳಿಗೂ, ಕಂಬಳಿ ಹುಳ ಮೊದಲಾದವು ಬೀಳುತ್ತವೆ. ಆಗ ರೈತರು ಬೂದಿ (ಕುಮ್ಮರಿ ಬೂಡಿದ)ಯನ್ನು ಅವುಗಳ ಮೇಲೆ ಚೆಲ್ಲುತ್ತಾರೆ. ಕೀಟಗಳು ನಾಶವಾಗಿ ಸಸಿಗಳು ಸಮೃದ್ಧವಾಗಿ ಬೆಳೆಯುತ್ತವೆ. ಬೂದಿಯನ್ನು ಕುಂಬಾರನ ಆವಿಗೆಯಿಂದ ತರುವಾಗ, ಮೂಟೆಯನ್ನು ಕೆಳಗೆ ಇಳಿಸಬಾರದು ಮತ್ತು ಮೂಟೆಯನ್ನು ಹೊರುವವನು ಮಾತನಾಡಬಾರದು. ಈ ನಿಯಮವನ್ನು ಪಾಲಿಸಿದಲ್ಲಿ ಒಳ್ಳೆಯ ತರಕಾರಿ ಮತ್ತು ಸೊಪ್ಪು ಬೆಳೆಯುತ್ತವೆಂದು ರೈತರು ನಂಬುತ್ತಾರೆ.

ಹೊಲಗದ್ದೆಗಳ ರಕ್ಷಣೆಯ ಚಟುವಟಿಕೆಗಳು : ವನ್ಯ ಮೃಗಗಳು ಹೊಲಗಳಿಗೆ ನುಗ್ಗಿ, ಬೆಳೆಯನ್ನು ತಿಂದು ನಾಶಪಡಿಸುತ್ತವೆ. ಕಾಡು ಹಂದಿಗಳೂ ಜಿಂಕೆಗಳೂ, ಕಡವೆಗಳೂ (ಕನುಜುಲು) ಇತ್ಯಾದಿ ಹಿಂಡು ಹಿಂಡಾಗಿ ಹೊಲಗಳಿಗೆ ನುಗ್ಗಿ ನಾಶಪಡಿಸುವುದು ರೂಢಿ. ಕಾಡುಹಂದಿಗಳನ್ನು ತೆಲುಗಿನಲ್ಲಿ 'ಜೀವಾಲು' ಎನ್ನುತ್ತಾರೆ. ಇವುಗಳನ್ನು ಹೊಲಗಳಿಗೆ ಬಾರದಂತೆ ಹೊಲದ ಸುತ್ತಲೂ, ಏಳೂ ಬೆರಣಿಗಳನ್ನಿಟ್ಟು ಸುಡುತ್ತಾರೆ. ಪ್ರಾಣಿಗಳು ಬರುವ ಸಮಯದಲ್ಲಿ ಬೆರಣಿಗಳು, ಸುಡುತ್ತಾ ಹೊಗೆ ಆವರಿಸುತ್ತಿರುತ್ತದೆ. ಹೊಗೆಯ ವಾಸನೆಗೆ ಹೆದರಿ ಪ್ರಾಣಿಗಳು ದೂರ ಹೋಗುತ್ತವೆ. ಹಣ್ಣು ಹಂಪಲುಗಳು ಪಕ್ವವಾದಾಗ, ಹಣ್ಣನ್ನು ತಿನ್ನಲು ಪಕ್ಷಿಗಳು (ಋಷಿ ಪಿಟ್ಟಲು) ಗಿಳಿಗಳೂ ಬರುವುದು ಸಹಜ. ಅವು ಬಾರದಂತೆ ಹೆದರಿಕೆಗಳನ್ನು ಮಾಡುವುದುಂಟು. ಎಂದರೆ ಬಣ್ಣ ಬಣ್ಣದ ಬಟ್ಟೆಗಳ ಬಾವುಟಗಳನ್ನು, ಹಗ್ಗಕ್ಕೆ ಶಬ್ದ ಬರುವಂತೆ ತಾಳೆಗರಿಗಳನ್ನೂ ಗಿರ‍್ರನೇ ತಿರುಗುತ್ತಾ ಗಲಗಲ ಸದ್ದು ಮಾಡುವ ಗಿಲಿಕೆಗಳನ್ನು, ಮರಗಳ ಮೇಲೆಯೂ, ಹೊಲದ ಮಧ್ಯೆಯೂ ಕಟ್ಟುತ್ತಾರೆ. ಫಲ ವೃಕ್ಷಗಳ ಕೊಂಬೆಗಳ ಮಧ್ಯೆ ಕಲ್ಲುಗಳನ್ನು ಹಾಕಿದ ಒಡೆದ ಡಬ್ಬಗಳನ್ನು ಕಟ್ಟಿ, ಡಬ್ಬಿಯ ಕೆಳಗೆ ಹಗ್ಗವನ್ನು ಉದ್ದವಾಗಿ ಕಟ್ಟಿ, ಅದರ ಸಹಾಯದಿಂದ ಡಬ್ಬಿಯನ್ನು ಅಲ್ಲಾಡಿಸುತ್ತಾ ಸದ್ದು ಮಾಡುತ್ತಾರೆ. ಆ ಸಪ್ಪಳ ಕೇಳಿ ಪಕ್ಷಿಗಳು ಹೆದರಿ ಓಡುತ್ತವೆ. ಇಂತಹ ವಿವಿಧ ಮಂತ್ರ, ತಂತ್ರ, ಯಂತ್ರ ತರಂಗಗಳಿಂದ ರೈತರು ಸಸ್ಯ ಸಂರಕ್ಷಣೆ ಮಾಡಿಕೊಳ್ಳುತ್ತಾರೆ.

ಆಕರ

ನೇದುನೂರಿ ಗಂಗಾಧರಂ, ಮಿನ್ನೇರು, 1968

ಎಂ.ಜಿ.ಎಸ್.

ಆಂಧ್ರಪ್ರದೇಶ ಕೃಷಿ ಸಂಬಂಧಿ ಆಚರಣೆಗಳು ಸಕಾಲದಲ್ಲಿ ಮಳೆ ಬಾರದಿದ್ದಾಗ ಗ್ರಾಮೀಣ ರೈತರು ಹಲವಾರು ಪ್ರಯತ್ನಗಳನ್ನು ಮಾಡುತ್ತಾರೆ. ಮಹಾಭಾರತದ ವಿರಾಟಪರ್ವವನ್ನು ಓದಿಸುವುದು ವಾಡಿಕೆ. ಕೆಲವರು ಶಿವಲಿಂಗಕ್ಕೆ ಜಲಾಭಿಷೇಕ ಮಾಡಿಸುತ್ತಾರೆ. ಸಾವಿರ ಗಡಿಗೆಗಳ ನೀರನ್ನು ಶಿವಲಿಂಗದ ಮೇಲೆ ಅಭಿಷೇಕ ಮಾಡುತ್ತಾರೆ. ಇದನ್ನು ಸಹಸ್ರ ಕುಂಭಾಭಿಷೇಕವೆನ್ನುತ್ತಾರೆ. ಗಡಿಗೆಗಳ ಬದಲಾಗಿ ಬಿಂದಿಗೆಗಳನ್ನು ಉಪಯೋಗಿದರೆ ಅದನ್ನು ಘುಟ್ಟಾಭಿಷೇಕವೆನ್ನುತ್ತಾರೆ. ಕೆಲವು ಪ್ರಾಂತ್ಯಗಳಲ್ಲಿ ವರುಣನ ಪೂಜೆಯನ್ನು ಮಾಡುತ್ತಾರೆ. ಹಾಲಿನಿಂದ ಮಾಡುವ ಅನ್ನವನ್ನು ಕ್ಷೀರಾನ್ನ, 'ಪಾಸೆಂ' (ಪಾಯಸ), ಪರಮಾನ್ನ ಎನ್ನುವ ಹೆಸರುಗಳಲ್ಲಿ ಕರೆಯುತ್ತಾರೆ. ಕ್ಷೀರಾನ್ನವನ್ನು ಮಾಡಿ ಊರಿನ ಬಯಲು ಪ್ರದೇಶದಲ್ಲಿ ಎತ್ತರವಾದ ಸ್ಥಳದಲ್ಲಿ ವರುಣ ದೇವನನ್ನು ಆಹ್ವಾನಿಸಿ ಭಕ್ತಿ ಪ್ರಪತ್ತಿಗಳಿಂದ ದೇವರ ಮಣೆಯ ಮೇಲೆ ಸುರಿದು ದೇವರ ಪ್ರಸಾದವಾಗಿ ಎಲ್ಲರೂ ಸ್ವೀಕರಿಸುತ್ತಾರೆ. ಈ ಆಚರಣೆಯನ್ನು ವರುಣನ ಪೂಜೆ ಅಥವಾ ಮಳೆ ದೇವರ ಪೂಜೆ ಎಂದು ಹೇಳುತ್ತಾರೆ. ಅಂತೆಯೇ ಮಳೆ ಬಾರದಿದ್ದಾಗ ಕಪ್ಪೆಯನ್ನು ಮೆರೆವಣಿಗೆ ಮಾಡುತ್ತಾ ಮಳೆ ದೇವರನ್ನು ಪ್ರಾರ್ಥಿಸುವುದು, ಕಪ್ಪೆ ತಾಯಿಯ ಮದುವೆಯ ಸಂಭ್ರಮ (ಕಪ್ಪತಲ್ಲಿಪೆಳ್ಳಿವೇಡುಕ), ಕಪ್ಪೆ ತಾಯಿಯ ಮದುವೆ (ಕಪ್ಪಮ್ಮ ಪೆಳ್ಳಿ) ಮುಂತಾದ ಆಚರಣೆಗಳನ್ನು ಮಾಡುತ್ತಾರೆ.

ಸ್ತ್ರೀಯರು ಒಂದ ವಂಡ್ರ ಗಪ್ಪೆಯನ್ನು ಹಿಡಿದುಕೊಂಡು, ಅದಕ್ಕೆ ಅರಿಸಿನ ಕುಂಕುಮ ಹಚ್ಚಿ, ಅರಿಸಿನದ ಬಟ್ಟೆಯೊಂದಿಗೆ ಒನಕೆಯ ಮೇಲಿಟ್ಟು, ಇಬ್ಬರು ಅದನ್ನು ಹೊರುತ್ತಿರುವಾಗ, ಮುತ್ತೈದೆಯರು ಒಂದು ತಟ್ಟೆಯಲ್ಲಿ ಅರಿಸಿನ, ಕುಂಕುಮ, ಹೂವು, ಪತ್ರೆಗಳನ್ನಿಟ್ಟು ಕೋಲುಕಡ್ಡಿಗಳಿಂದ ಬಾರಿಸುತ್ತಾ ಹಾಡುಗಳನ್ನು ಹಾಡುತ್ತಾರೆ. (ಮಿನ್ನೇರು, ಪು. 342)

ರಾಯಲಸೀಮೆ ಜಿಲ್ಲೆಗಳಲ್ಲಿ ದುರ್ಭಿಕ್ಷದ ಸಂದರ್ಭದಲ್ಲಿ ಮಳೆರಾಯನನ್ನು ಆರಾಧಿಸುತ್ತಾ, 'ಪೋಲಿ' ಹೆಸರಲ್ಲಿ ಕುರಿಗಳನ್ನು ಬಲಿಕೊಡುತ್ತಾ, ಕಪ್ಪೆಗಳ ಮದುವೆ ಮಾಡುತ್ತಾರೆ.

ಇಲ್ಲಿಯ ಉತ್ಸಾಹಿ ಯುವಕರು ವ್ಯವಸಾಯ ಭಾಗಗಳಲ್ಲಿರುವ ಹೆಣ್ಣು ಮತ್ತು ಗಂಡು ಕಪ್ಪೆಗಳನ್ನು ಹಿಡಿದು ಕುಂಕುಮ ಹಚ್ಚಿ, ಅವುಗಳನ್ನು ಬೇವಿನ ಕೊಂಬೆಗಳೊಡನೆ ಒಂದು ಉದ್ದನೆಯ ಕೋಲಿಗೆ ನೇತಾಡಿಸಿ ಕಟ್ಟಿ ಮೆರವಣಿಗೆ ಮಾಡುತ್ತಾರೆ. ಮನೆ ಮನೆಗೆ ಹೋಗಿ ಬಾಯಿ ಬಡಿದು ಕೊಳ್ಳುತ್ತಾರೆ. ಆ ಮನೆಯೊಡತಿ ಹುಡುಗರ ಮೇಲೆ ಮತ್ತು ಕಪ್ಪೆಗಳ ಮೇಲೆ ಬಿಂದಿಗೆಯಲ್ಲಿ ನೀರು ಸುರಿದು ಬತ್ತವನ್ನಾಗಲೀ ಸ್ವಲ್ಪ ಹಣವನ್ನಾಗಲೀ ಕೊಟ್ಟು ಕಳುಹಿಸುತ್ತಾಳೆ. ಹೀಗೆ ಬಂದ ಧಾನ್ಯವನ್ನು ಅಂಗಡಿಯಲ್ಲಿ ಮಾರಿ ಬಂದ ಹಣದಿಂದ ಹುರಿಗಡ್ಲೆ ಮತ್ತು ಬೆಲ್ಲವನ್ನು ಕೊಂಡು ಹಂಚಿಕೊಳ್ಳುತ್ತಾರೆ. ಇದು ಕಪ್ಪೆಗಳ ಮದುವೆ. ಇದರ ಹಿಂದೆ ಮಳೆರಾಯನನ್ನು ಪ್ರಸನ್ನ ಮಾಡಿಕೊಳ್ಳುವ ಉದ್ದೇಶವು ಕಂಡುಬರುತ್ತದೆ. ಹುಡುಗರ ಮೇಲೆ ಮತ್ತು ಕಪ್ಪೆಗಳ ಮೇಲೆ ನೀರು ಸುರಿಯುವ ಉದ್ದೇಶವನ್ನು ಮಳೆ ಬರುವುದರ ಸಂಕೇತವಾಗಿ ಸ್ವೀಕರಿಸಬೇಕಾಗಿದೆ. ಇದು ಗ್ರಾಮೀಣರ ಆಚರಣೆ ಮತ್ತು ವಿಶ್ವಾಸಗಳ ಕುರುಹಾಗಿದೆ.

ಏರುವಾಕ ಪೂರ್ಣಿಮ : ಸಾಧಾರಣವಾಗಿ ಹಳ್ಳಿಯಜನರು, ಮುಖ್ಯವಾಗಿ ಕೃಷಿಕರು ಪೂರ್ಣಿಮೆಯ ದಿನ ಈ ಹಬ್ಬವನ್ನು ಆಚರಿಸುತ್ತಾರೆ.

'ಏರು' ಎಂದರೆ ಎತ್ತುಗಳನ್ನು ಕಟ್ಟಿ ಸಿದ್ಧಪಡಿಸಿದ ನೇಗಿಲು. 'ಏರುವಾಕ' ಎಂದರೆ ಉಳುವುದನ್ನು ಪ್ರಾರಂಭಿಸುವುದು ಎಂದು ಅರ್ಥ. ಈ ದಿನ ಬೇಸಾಯಗಾರರು ನೊಗವನ್ನೂ ಎತ್ತುಗಳನ್ನು ಅರಿಸಿನ ಕುಂಕುಮ ಹಚ್ಚಿ ತೆಂಗಿನಕಾಯಿ ಒಡೆದು, ಪೂಜಿಸಿ; ಕೃಷಿ ಚಟುವಟಿಕೆಗಳಿಗೆ ಶುಭಾರಂಭವನ್ನು ಮಾಡುತ್ತಾರೆ. ಇದು ಕೃಷಿಕರಿಗೆ ಪವಿತ್ರವಾದ ದಿನ. ಹೊಸಮಳೆ ಬರುತ್ತದೆ ಎಂಬ ನಿರೀಕ್ಷೆ ಇರುತ್ತದೆ. ಆದುದರಿಂದ ಐದು ಸುತ್ತಿನಿಂದ ಒಂಬತ್ತು ಸುತ್ತಿನವರೆಗೂ ಹೊಲ ಉತ್ತು ಆ ವರ್ಷದ ವ್ಯವಸಾಯವನ್ನು ಆರಂಭಿಸುತ್ತಾರೆ. ಏರುವಾಕ ದೇವತೆ ಎನ್ನುವ ಭಾವನೆ ಅವರಲ್ಲಿರುವುದಿರಂದ, ಆ ದೇವತೆಯನ್ನು ಪೂಜಿಸಿ ಹಬ್ಬವನ್ನು ಆಚರಿಸಿ, ಆಕೆಯ ಅನುಗ್ರಹದಿಂದ ಬೆಳೆಗಳನ್ನು ಸಮೃದ್ಧವಾಗಿ ಪಡೆಯುವುದೇ ಈ ಹಬ್ಬದ ಉದ್ದೇಶ. ತೆಲಂಗಾಣದಲ್ಲಿ ಈ ಹಬ್ಬವನ್ನು 'ಅರಕ ಸಾಗಿಂಚಡಂ' ಎಂದು ಕರೆಯುತ್ತಾರೆ. 'ಅರಕ' ಎಂದರೆ ಎತ್ತು ಹೂಡಿದ ನೊಗ.

ಏರುವಾಕ ಪೂರ್ಣಿಮೆಯ ದಿನ ಬೇಸಾಯಗಾರರು ಮುಂಜಾನೆಯೆದ್ದು ಎತ್ತುಗಳನ್ನು ತೊಳೆದು, ಕೊಂಬುಗಳನ್ನು ಬಣ್ಣಗಳಿಂದ ಅಲಂಕರಿಸಿ, ಕೊಂಬು ಕಲಶಗಳನ್ನು ಕೂಡಿಸುತ್ತಾರೆ. ನೊಸಲಿಗೆ ಉದ್ದವಾದ ತಿಲಕವಿಟ್ಟು, ಕತ್ತಿಗೆ ಕಿರುಗಂಟೆಗಳನ್ನು ಕಟ್ಟಿ ಅದರ ಮೈಮೇಲೆ ಸೊಗಸಾದ ಬಣ್ಣದ ಉಡುಪುಗಳಿಂದ ಅಲಂಕರಿಸುತ್ತಾರೆ. 'ಪುಲಗ' (ಹುಗ್ಗಿ)ವನ್ನು ತಿನ್ನಿಸುತ್ತಾರೆ. ಪಾಯಸವನ್ನು ಮಾಡಿ ಬಂಧುಮಿತ್ರರ ಜೊತೆಯಲ್ಲಿ ಸೇವಿಸುತ್ತಾರೆ. ದನಕರುಗಳ ಕೊಠಡಿಯ ನೆಲವನ್ನು ಸಗಣಿಯಿಂದ ಸಾರಿಸಿ, ಗೋಡೆಗಳಿಗೆ ಸುಣ್ಣದಿಂದ ಬಿಳಿ ಮತ್ತು ಕೆಂಪು ಪಟ್ಟೆಯನ್ನು ಹೊಡೆದು. ತೋರಣಗಳಿಂದ ಅಲಂಕರಿಸಿ, ವಿಘ್ನರಾಜನನ್ನು ಪೂಜಿಸಿ, ನೈವೇದ್ಯವನ್ನು ಅರ್ಪಿಸಿ, ನೊಗವನ್ನು ಅರಿಸಿನ ಕುಂಕುಮಗಳಿಂದ ಪೂಜಿಸಿ, ನೇಗಿಲು ಕುಂಟೆ ಮುಂತಾದ ವ್ಯವಸಾಯದ ಉಪಕರಣಗಳನ್ನು ಶುಭ್ರಮಾಡಿ, ಎತ್ತುಗಳ ಕೊರಳಿಗೆ ಸೇರಿಸುತ್ತಾರೆ. ಹೆಣ್ಣು ಮಕ್ಕಳು ಆರತಿ ಮಾಡಿ ಅವುಗಳನ್ನು ಓಡಾಡಲು ಬಯಲಿನಲ್ಲಿ ಬಿಡುತ್ತಾರೆ.

ಊರಿನಬಾಗಿಲಿಗೆ ಕಟ್ಟಿದ ತೋರಣದೊಳಗಿಂದ ಎತ್ತುಗಳು ಹೋದ ಅನಂತರ, ತೋರಣದ ಸ್ವಲ್ಪಭಾಗವನ್ನು ರೈತರು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ವರ್ಷದುದ್ದಕ್ಕೂ ಅದು ರಕ್ಷೆಯನ್ನು ಕೊಡುತ್ತದೆ ಎಂಬುದು ಅವರ ನಂಬಿಕೆ. ಒಂದುವಾರದ ಮುಂಚೆಯೇ ಬಿತ್ತನೆ ಬೀಜಗಳನ್ನು ಶೇಖರಿಸಿ, ಯಾವುದಾದರೂ ದೇವಸ್ಥಾನದ ಆವರಣದ ಒಂದು ಮೂಲೆಯಲ್ಲಿ ಬಿತ್ತುತ್ತಾರೆ. ಹೀಗೆ ಬಿತ್ತಿದ ಕಾಳುಗಳು ಹಬ್ಬದ ದಿವಸಕ್ಕೆ ಮೊಳಕೆಯೊಡೆಯುತ್ತವೆ. ಅವುಗಳಲ್ಲಿ ಕೆಲವನ್ನು ರೈತರು ತಮ್ಮ ಮನೆಗೆ ತೆಗೆದುಕೊಂಡು ಹೋಗಿ ಕಣಜಗಳಲ್ಲಿಡುತ್ತಾರೆ. ಇದು ಬರುವ ವರ್ಷದಲ್ಲಿ ಒಳ್ಳೆಯ ಬೆಳೆಯನ್ನು ಕೊಡುತ್ತದೆಂದು ಅವರ ವಿಶ್ವಾಸ.

ಎತ್ತುಗಳೊಂದಿಗಿರುವ ನೇಗಿಲು ಮುಂತಾದವುಗಳನ್ನು ಮಂಗಳವಾದ್ಯಗಳಿಂದ ಮೆರವಣಿಗೆ ಮಾಡುತ್ತಾ ತಮ್ಮ ತಮ್ಮ ಹೊಲಗದ್ದೆಗಳಿಗೆ ಹೋಗುತ್ತಾರೆ. ಪೈರು ಚೆನ್ನಾಗಿ ಬರಲೆಂದು ಹರಕೆ ಮಾಡಿಕೊಳ್ಳುತ್ತಾರೆ. ಅನಂತರ ಹೊಲದಲ್ಲಿ ಮೂರು ಸಾಲನ್ನು ಉಳುತ್ತಾರೆ. ತದನಂತರ ಉಳುವಿಕೆ ಆರಂಭವಾಗುತ್ತದೆ. ಈ ಹಬ್ಬವನ್ನು ಕೆಲವು ಕಡೆ ಜ್ಯೇಷ್ಠ ಶುದ್ಧ ಪೂರ್ಣಿಮೆಯ ದಿನವೂ ಆಚರಿಸುವುದುಂಟು. ಇನ್ನೂ ಕೆಲವು ಪ್ರದೇಶಗಳಲ್ಲಿ ಮೃಗಶಿರ ಮಾಸದಲ್ಲಿಯೂ ಆಚರಿಸುತ್ತಾರೆ. ಆ ಆಚರಣೆಯಲ್ಲಿ ಹಾಡುಗಳನ್ನು ಹಾಡುತ್ತಾರೆ.

ಏರುವಕ್ಕ ಸಾಗೂರೋರನ್ನ ಚಿನ್ನನ್ನ
ನೀ ಕಷ್ಟಮಂತ ತೀರಿಂದೋರನ್ನ ಚಿನ್ನನ್ನ
ಆಲಬಿಡ್ಡಲನು ಎಂಟ ಪೆಟ್ಟುಕೊನಿ
ಸಲವ ಗುಡ್ಡಲನು ಸಂಕಪೆಟ್ಟುಕೊನಿ

ಏರುವಕ್ಕ ಎಂದರೆ ಕನ್ನಡದಲ್ಲಿ ಹೊನ್ನೇರು ಎಂದು ಅರ್ಥ. ಕರ್ನಾಟಕದ ಹೊನ್ನೇರು ಪೂಜೆ ಕೃಷಿಯ ಆರಂಭದಲ್ಲಿ ಹೇಗೆ ವಿಜೃಂಭಣೆಯಿಂದ ಮಾಡುವರೂ ಹಾಗೆ ಆಂಧ್ರಪ್ರದೇಶದಲ್ಲಿ ಈ ಸಂಪ್ರದಾಯ ರೂಢಿಯಲ್ಲಿದೆ. ಇದನ್ನು ಕುರಿತ ಅನೇಕ ಜನಪದ ಗೀತೆಗಳು ಇವೆ. ಮೇಲಿನ ಜ.ಗೀ. ಕುಟುಂಬ ಸಮೇತನಾಗಿ ರೈತ ಹೋಗಿ ಪೂಜೆ ಮಾಡುವ ಸನ್ನಿವೇಶವನ್ನು ನೆನಪಿಗೆ ತರುತ್ತದೆ. ಮಳೆ ಬಿದ್ದೊಡನೆ ಕಷ್ಟಗಳೆಲ್ಲ ಪರಿಹಾರವಾದದೆಂದು ಕುಣಿತು ಕುಪ್ಪಳಿಸುವ ಕೃಷಿಕ ಮಳೆ, ಭೂಮಿಯನ್ನೇ ದೇವರೆಂದು ಬಗೆದು ಅದಕ್ಕೆ ನಿಷ್ಠೆಯಿಂದ ನಡೆದುಕೊಳ್ಳುತ್ತಾನೆ. ಮಡಿ ಬಟ್ಟೆ ಹೊತ್ತು ಹೋಗುವರೆಂಬ ಮೇಲಿನ ಸಾಲು ಅದನ್ನು ದೃಢಪಡಿಸುತ್ತದೆ.

ಮೊಲಕ ಪುನ್ನಮ ಅಥವಾ ಮಲಕಲ ಪುನ್ನಮ : ವರ್ಷಕ್ಕೊಮ್ಮೆ ವೈಶಾಖ ಮಾಸದಲ್ಲಿ ರೈತರು ಈ ಹಬ್ಬವನ್ನು ಆಚರಿಸುತ್ತಾರೆ. ಇದನ್ನೇ ಕೆಲವು ಪ್ರಾಂತ್ಯಗಳಲ್ಲಿ 'ಏರುವಾಕ' ಎಂದು ಕರೆಯುತ್ತಾರೆ. ಮಲಕಲ ಪುನ್ನಮ ರಾಯಲಸೀಮೆಯ ಅನಂತಪುರಂ ಜಿಲ್ಲೆಯ ಕದಿರಿ ಪ್ರಾಂತ್ಯದಲ್ಲಿ ಹೆಚ್ಚು ಆಚರಣೆಯಲ್ಲಿದೆ. ಈ ಏರುವಾಕ ಪೂರ್ಣಿಮೆಯಿಂದಲೇ ರೈತರು ಕೃಷಿ ಕೆಲಸಗಳ ಬಗ್ಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ಈ ಹುಣ್ಣಿಮೆಯಿಂದ ಬಿತ್ತನೆ ಮಾಡುವವರೆಗೂ ಇರುವ ಕಾಲವನ್ನು 'ಮುಂಗಾರು' ಎಂದು ಕರೆಯುತ್ತಾರೆ.

ಈ ಹುಣ್ಣಿಮೆಯನ್ನು ಕದಿರಿ ಪ್ರಾಂತ್ಯದಲ್ಲಿ ಬಾಲಿಕೆಯರು ಹೆಚ್ಚು ಸಂಭ್ರಮದಿಂದ ಆಚರಿಸುತ್ತಾರೆ. ಹುಣ್ಣಿಮೆಯ ಐದು ದಿನಗಳ ಮುಂಚೆಯೇ ಮೊಳಕೆ (ನಾರು)ಗಳನ್ನು ಹೊಯ್ಯುತ್ತಾರೆ. ಬತ್ತ, ಗೋಧಿ, ರಾಗಿ, ಹುರುಳಿ ಮುಂತಾದ ಧಾನ್ಯಗಳನ್ನು ಬಿತ್ತನೆ ಮಾಡುತ್ತಾರೆ. ಹುಣ್ಣಿಮೆಯ ದಿವಸಕ್ಕೆ ಈ ಮೊಳಕೆಗಳು ಬೆಳೆಯಲಾರಂಭಿಸುತ್ತವೆ. ಹುಣ್ಣಿಮೆಯದಿನ ಸಾಯಂಕಾಲ ಸುಮಾರು ಏಳುಗಂಟೆಯಲ್ಲಿ ಆ ಊರಿನಲ್ಲಿರುವ ಷೋಡಶಿಯರು ಸಮೃದ್ಧಿಯಾಗಿ ಬೆಳೆದ ಮೊಳಕೆಗಳನ್ನು ತೆಗೆದುಕೊಂಡು ಆ ಊರಿನಲ್ಲಿರುವ ದೇವಸ್ಥಾನದ ಹತ್ತಿರಕ್ಕೂ 'ಬೊಡ್ಡೆಮ್ಮ' ಸಮೀಪಕ್ಕೂ ಬಾವಿಗಳ ಹತ್ತಿರಕ್ಕೂ ಹೋಗಿ ಹಾಡುಗಳನ್ನು ಹಾಡುತ್ತಾ ಪೂಜೆ ಮಾಡುತ್ತಾರೆ. ಊರಿನ ಹೊರಗಿರುವ ಅಕ್ಕಮ್ಮ, ಮಾರಮ್ಮ ಮುಂತಾದ ದೇವತೆಗಳ ಬಳಿ ಹೋಗಿ ಮೊಳಕೆಗಳನ್ನು ಹಾಕಿರುವ ಮಡಕೆಗಳನ್ನಿಡುತ್ತಾರೆ. ಮಾರನೆಯ ದಿನ ಈ ಬಾಲಕಿಯರು ಸಮೀಪವಿರುವ ಹಳ್ಳಿಗಳಿಗೆ ಹೋಗಿ 'ಮೊಲಕನೇಮುಲು' (ಮೊಳಕೆವ್ರತ) ಎಂಬ ನೆಪದಿಂದ ಮನೆ ಮನೆಗೂ ಹೋಗಿ ಹಾಡುಗಳನ್ನು ಹಾಡುತ್ತಾ ಧನ ಧಾನ್ಯಗಳನ್ನು ಶೇಖರಿಸುತ್ತಾರೆ. ಹೀಗೆ ಶೇಖರಿಸಿದ ಹಣದಿಂದ ಊರಿನ ಹೊರಗಿರುವ ಬಾವಿಯ ಹತ್ತಿರ ಎಲ್ಲರೂ ಸೇರಿ ಅಡುಗೆ ಮಾಡಿ 'ಸಂತರ್ಪಣೆ' ಮಾಡುತ್ತಾರೆ. ಇದೊಂದು ಸಂಭ್ರಮ.

ಗ್ರಾಮಗಳನ್ನು ಸುತ್ತುವ ಬಾಲಿಕೆಯರು ತಮ್ಮೊಂದಿಗೆ 'ಮೊಳಕೆ ತಂಬಿಗೆ'ಗಳನ್ನು ತೆಗೆದುಕೊಂಡು ಹೋಗುತ್ತಾರೆ. ಇವುಗಳಲ್ಲಿ ಮೊಳಕೆಗಳನ್ನಿಡುತ್ತಾರೆ. ಈ ಚೆಂಬುಗಳು ಸಾಧಾರಣವಾಗಿ ತಾಮ್ರ ಅಥವಾ ಹಿತ್ತಾಳೆಯವು. ಆಕಾರದಲ್ಲಿ ಚಿಕ್ಕವಾಗಿಯೂ ನೋಡಲು ಸುಂದರವಾಗಿಯೂ

ಇದ್ದು ಎಲ್ಲರನ್ನು ಆಕರ್ಷಿಸುತ್ತವೆ. ಹೀಗೆ ಬಾಲಿಕೆಯರು ಹಳ್ಳಿಗಳನ್ನು ಸುತ್ತಾಡುತ್ತಾ ನಾಲಕ್ಕೈಯಿದು ದಿವಸಗಳು ಹಾಡುಗಳನ್ನು ಹಾಡುತ್ತಾರೆ. ಇವುಗಳನ್ನು 'ಮೊಳಕೆ ಹಾಡುಗಳು' (ಮೊಲಕಪಾಟಲು) ಎಂದು ಕರೆಯುತ್ತಾರೆ. ಇವುಗಳು ಎರಡು ಸಾಲುಗಳನ್ನು ಹೊಂದಿರುತ್ತವೆ. ಪ್ರತಿಯೊಂದು ಹಾಡಿಗೂ 'ಕೋಲು ಕೋಲನ್ನ ಸಿಲವರಾಯಿ ಮೇಲು ಮೇಲನ್ನ' ಎನ್ನುವುದು ಪಲ್ಲವಿಯಾಗಿರುತ್ತದೆ.

ಉಪ್ಪರಿಗೆಯ ಮೇಲೆ ಮೆಣಸಿನ ಗಿಡ ನೀರಿಲ್ಲದೆ ಬಾಡಿ ಹೋಯಿತು
ಮಾವನವರ ಹೆಣ್ಣು ಮಕ್ಕಳು ಗಂಡನಿಲ್ಲದೆ ಓಡಿ ಹೋದರು ||
ಕೋಲು ಕೋಲನ್ನ ||

ಪೊಲಿಮೇರಕಟ್ಟು : ಊರಿನ ಎಲ್ಲೆಯನ್ನು ಗುರುತಿಸುವ ಗಡಿಯನ್ನು ಪೊಲಿಮೇರಕಟ್ಟು ಎನ್ನುತ್ತಾರೆ. ಊರುಕಟ್ಟುವ ಸಮಯದಲ್ಲಿಯೇ ಹೊಲದ ಮೇರೆಯನ್ನು ನಿರ್ಧರಿಸುತ್ತಾರೆ. ಸಾಧಾರಣವಾಗಿ ಸರಹದ್ದಿನ ಗುರುತಾಗಿ ಒಂದು ಕಲ್ಲನ್ನು ಅಲ್ಲಿ ನೆಡುತ್ತಾರೆ. ಊರಿನಿಂದ ಇನ್ನೊಂದು ಊರಿಗೆ ಹೋಗುವ ಎಲ್ಲ ದಾರಿಗಳಲ್ಲಿಯೂ ಈ ಎಲ್ಲೆಗಳು ಇರುತ್ತವೆ. ಇಂತಹ ಸರಹದ್ದುಗಳಲ್ಲಿ ಗಡಿರೇಖೆ ದೇವತೆ ಇರುತ್ತಾಳೆಂಬ ವಿಶ್ವಾಸವಿದೆ. ಈಕೆಯೇ ಹೊಲದ ದೇವತೆ. ವಿಶೇಷ ಸಂದರ್ಭಗಳಲ್ಲಿ ಈ ದೇವತೆಯನ್ನು ಪೂಜಿಸಿ, ಆಕೆಯ ಅನುಗ್ರಹವನ್ನು ಪಡೆಯುತ್ತಾರೆ. ಹೆಣ್ಣು ಮಗು ತವರು ಮನೆಯಿಂದ ಅತ್ತೆಯ ಮನೆಗೆ ಹೋಗುವಾಗ ಈ ಗಡಿರೇಖೆಯನ್ನು ದಾಟಲೇ ಬೇಕಾಗುತ್ತದೆ. ಆಗ ಆಕೆಯ ಮನೆಯವರು ಅಲ್ಲಿ ನಿಂತು, ಆ ದಾರಿಯ ಮಧ್ಯದಲ್ಲಿ ಮೂರು ಚಿಕ್ಕ ಕಲ್ಲುಗಳನ್ನಿಟ್ಟು, ಅವುಗಳ ಮೇಲೆ ಎಲೆ ಹೂಗಳಿರುವ ಹೊನ್ನಾವರಿಕೆ (ತಂಗೇಡು) ರೆಂಬೆಯನ್ನಿಟ್ಟು ನಮಸ್ಕಾರ ಮಾಡಬೇಕು. ಇದನ್ನು 'ಪೊಲಿಮೇರಕಟ್ಟು' (ಹೊಲದ ಮೇರೆ ಕಟ್ಟು) ಎನ್ನುತ್ತಾರೆ. ಜಾತ್ರೆ ಸಂದರ್ಭಗಳಲ್ಲಿ ಈ ಹೊಲದ ಮೇರೆ ಶಕ್ತಿಗೆ ಹೆಚ್ಚು ಪ್ರಾಧಾನ್ಯ ಕಂಡುಬರುತ್ತದೆ. ಇದೊಂದು ಜನಪದ ಆಚರಣೆ.

ಎದ್ದುಲ ದ್ಯಾವರ : ಎದ್ದುಲ ದ್ಯಾವರ ಎಂದರೆ ಎತ್ತುಗಳ ಹಬ್ಬ. ದೀಪಾವಳಿ ಹಬ್ಬದ ಅನಂತರದ (ಅಮಾವಾಸ್ಯೆಯ ಬಳಿಕ) ಸೋಮವಾರದಂದು ವರ್ಷಕ್ಕೊಮ್ಮೆ ಊರ ಹೊರಗೆ ಮೈಲು ದೂರದಲ್ಲಿ ಎತ್ತುಗಳ ದ್ಯಾವರದ ಉತ್ಸವ ನಡೆಯುತ್ತದೆ. ತಂಗಡಿ, ಸೀಮೆ ಜಾತಿ, ಹೊಂಗೆ ಮರಗಳ ಸೌದೆಗಳನ್ನು ಮಕ್ಕಳು ಒಂದರ ಮೇಲೆ ಒಂದರಂತೆ ಒಂದು ಕಡೆ ಪೇರಿಸಿಡುತ್ತಾರೆ. ಇದನ್ನು 'ಗೂಡು' ಎನ್ನುತ್ತಾರೆ. ಈ ಗೂಡಿಗೆ ಎದುರಾಗಿ ಇಲ್ಲವೆ, ಪಕ್ಕದಲ್ಲಿಯಾಗಲೀ ಗಿಡದ ಕೆಳಗೆ (ಸಾಧಾರಣವಾಗಿ ತಂಗಡಿ ಗಿಡ ಇಲ್ಲವೇ ತುಂಬೆಗಿಡ) ಕಾಟಮದೇವರನ್ನು ಇರಿಸುತ್ತಾರೆ. ಕಾಟಮರಾಯನಿಗೆ ವಿಗ್ರಹವಿಲ್ಲ. ಆದುದರಿಂದ ಆರು ಇಲ್ಲವೇ ಮೂರು ಕಲ್ಲುಗಳನ್ನು (ಎಂಟು ಇಲ್ಲವೇ ಆರು ಅಂಗುಲಗಳ ಕಲ್ಲುಗಳನ್ನು ಗುಂಡಾಗಿ ಇರಿಸಲಾಗುತ್ತದೆ) ನಿಲ್ಲಿಸುತ್ತಾರೆ. ಇವುಗಳಿಗೆ ಸುಣ್ಣ ಬಳಿದು ಕೆಂಪು ಬಣ್ಣದಲ್ಲಿ ಮೂರು ನಾಮಗಳನ್ನು ಹಚ್ಚುತ್ತಾರೆ. ಕಾಟಮರಾಯನನ್ನು ಪೂಜಿಸಿ, ತೆಂಗಿನಕಾಯಿ ಒಡೆಯುತ್ತಾರೆ. ಗೂಡಿಗೆ ಕಿಡಿಯನ್ನು ಹಚ್ಚಿಸಿ, ಕಾಟಮದೇವರ ಸುತ್ತ, ಗೂಡಿನ ಸುತ್ತ ಎತ್ತುಗಳನ್ನು ಸುತ್ತಿಸುತ್ತಾರೆ (ಪ್ರದಕ್ಷಿಣೆ ಮಾಡಿಸುತ್ತಾರೆ). ಆಗ 'ಉರುಮು' (ಉರುಮೆ) ವಾದ್ಯಗಳನ್ನು ಬಾರಿಸುತ್ತಾರೆ. ಎತ್ತುಗಳೆಲ್ಲವನ್ನು ಸುತ್ತಿಸಿದ ಅನಂತರ ಎತ್ತುಗಳೊಂದಿಗೆ ಹಿಂತಿರುಗಿ ತಮ್ಮ ತಮ್ಮ ಮನೆಗಳಿಗೆ ಹೊರಡುವಾಗ 'ಪಟಾಕಿ'ಗಳನ್ನು ಸಿಡಿಸಲಾಗುತ್ತದೆ. ಆ ದಿನ ರಾತ್ರಿ ಎತ್ತುಗಳ ಮೆರೆವಣಿಗೆ (ಉತ್ಸವ) ನಡೆಯುತ್ತದೆ. ಹಬ್ಬ ಆಚರಿಸುತ್ತಾರೆ. ಮೂರನೆಯ ದಿನ ಗೌರಮ್ಮನನ್ನು ಮಾಡಿ, ಹುಡುಗಿಯರು ದೀಪಗಳನ್ನು ಹಿಡಿದು ಮೆರೆವಣಿಗೆ ಹೋಗುತ್ತಾರೆ.

ಎತ್ತುಗಳ ದ್ಯಾವರದ ದಿನ 'ಸಜ್ಜೆ ಮುದ್ದೆ', ಕುಂಬಳಕಾಯಿ, ಹಸಿಮೆಣಸಿನಕಾಯಿಗಳೊಂದಿಗೆ 'ಕಾರಗಾಯಿ' (ಪಲ್ಯ), ಅರ್ಧಸೇರು ಅನ್ನ ಮಾಡಿದ ಪಾತ್ರೆ, ಒಂದು ಬಟಲು ಮೊಸರು, ಎರಡು ತೆಂಗಿನಕಾಯಿ (ಒಂದು ಕಾಟಮರಾಜನಿಗೆ ಮತ್ತೊಂದು ಗೂಡಿಗೆ) ತೆಗೆದುಕೊಂಡು ಹೊರಡುತ್ತಾರೆ. ಕಾಟಮದೇವರಿಗೆ ತೆಂಗಿನಕಾಯಿ ಒಡೆದು, ತೀರ್ಥವನ್ನು ಎತ್ತುಗಳ ಮೇಲೆ ಸಿಂಪಡಿಸುತ್ತಾರೆ. ಉರುಮುಗಳನ್ನು ಕಾಟಮದೇವರಿಗೆ ಎದುರಾಗಿ ಇರಿಸುತ್ತಾರೆ. ಇವುಗಳಿಗೆ ಒಂದು ಎಲೆಯಲ್ಲಿ ನೈವೇದ್ಯ (ಅನ್ನ, ಮೊಸರು) ಇಡುತ್ತಾರೆ. ಹಾಗೆಯೇ ಕಾಟಮದೇವರಿಗೂ ಒಂದು ಎಲೆಯಲ್ಲಿ ಅನ್ನ, ಮೊಸರು ನೈವೇದ್ಯವಾಗಿ ಇರಿಸುತ್ತಾರೆ. ಈ ನೈವೇದ್ಯವನ್ನು ಉಪವಾಸವಿರುವ ಪೂಜಾರಿ (ಪಶುರಕ್ಷಕ) ಸ್ವೀಕರಿಸುತ್ತಾನೆ. ಸಜ್ಜೆ ಮುದ್ದೆಗಳನ್ನು ಕಾರಗಾಯಿ (ಪಲ್ಯ)ಯನ್ನು ಎತ್ತುಗಳನ್ನು ಹಿಡಿದುಕೊಂಡು ಬಂದು ತಿರುಗಿಸಿದವರಿಗೆ ಹಂಚುತ್ತಾರೆ.

ಎತ್ತುಗಳ ಅಲಂಕಾರ ನೋಡಲು ಸುಂದರವಾಗಿರುತ್ತದೆ. ಕೊಂಬುಗಳಿಗೆ ಕುಚ್ಚು, ಹೊಸ ಅಂಚಿನ ಟೇಪುಗಳನ್ನು ಹಾಕಿ ಫಣಿಕಟ್ಟು ಕಟ್ಟುತ್ತಾರೆ. ಕುತ್ತಿಗೆಗೆ 'ಗಂಟೆಯ ಸರ', ನೆತ್ತಿಯ ಮೇಲೆ ವೀಳೆದೆಲೆಯ ಸರ, ಮುಖಕ್ಕೆ 'ಮೊಗವಾಡ'ವನ್ನು ಚೆಂಡು ಹೂಗಳಿಂದ ಕಟ್ಟುತ್ತಾರೆ. ಸೊಂಟದ ಮೇಲೆ ಬಣ್ಣದ ವಸ್ತ್ರವನ್ನು ಹೊದಿಸುತ್ತಾರೆ. ಕಣ್ಣುಗಳಿಗೆ ಚೆಂಡುಹೂಗಳನ್ನು ಕೊಂಬುಗಳಿಗೆ ಗುಮ್ಮಟ (ಗುಂಬಬು) ಗೆಜ್ಜೆಗಳನ್ನು ಕಟ್ಟಿ, ಕೆಲವರು ಕೊಂಬುಗಳಿಗೆ ಬಲೂನುಗಳನ್ನು ಕಟ್ಟಿ, 'ಬಣ್ಣದ ಹಸ್ತ' (ಹಸ್ತದ ಗುರುತು) ಎತ್ತುಗಳ ಮೇಲೆ ಹೊಡೆಯುತ್ತಾರೆ.

ಎತ್ತುಗಳ ಹಬ್ಬ ಮಾಡಿದರೆ ದೀಪಾವಳಿ ಹಬ್ಬ ಮಾಡಿದಷ್ಟು ಫಲವಂತೆ. ದ್ಯಾವರ ಮಾಡುವುದರಿಂದ ಎತ್ತುಗಳಿಗೆ ಶಾಂತಿ ನಡೆದಂತೆ ನಂಬುತ್ತಾರೆ. ಸಂಜೆ 5.30 ಗಂಟೆಗೆ ಪ್ರಾರಂಭವಾಗುವ ಎತ್ತುಗಳ ದ್ಯಾವರ ಹಬ್ಬ ಬೆಳಗಿನ ಜಾವ ಎರಡು ಗಂಟೆ ತನಕ ನಡೆಯುತ್ತದೆ. ಎತ್ತುಗಳ ಮೆರೆವಣಿಗೆಯಲ್ಲಿ 'ಉರುಮು'ಗಳನ್ನು ಬಾರಿಸುತ್ತಿದ್ದರೆ, ಕೇಕೆ ಹಾಕಿ, ಕುಣಿದು ಕುಪ್ಪಳಿಸಿ ಹಾಡುತ್ತಾರೆ. ಈ ಹಾಡುಗಳೆಲ್ಲವೂ ಕನ್ನಡದಲ್ಲಿವೆ. ಉದಾಹರಣೆಗೆ.

ಈಡು ತಿರುಗಿದ ಎತ್ತು ರಂಗಳಿಸುತ್ತ ಬರುತೈತೆ
ಊರಾಗೆ ಇದ್ದಾಳೆ ಹಿರಿಯಕ್ಕ
ಊರಾಗೆ ಇದ್ದಾಳೆ ಹಿರಿಯಕ್ಕ ಈರಮ್ಮ
ಎತ್ತಿಗಾರ ತರ್ರಾಳೆ

ಎತ್ತುಗಳ ದ್ಯಾವರ ಹಬ್ಬ ಮೂರು ದಿನಗಳು ಇದೆ ಎನ್ನುವಾಗಲೇ ಯಾದವರ ಮನೆಯಲ್ಲಿ ಹೊರಗಾದವರು (ಮುಟ್ಟಾದವರು) ಇರಬಾರದೆಂಬ ನಿಯಮವಿದೆ. ಹಬ್ಬ ಕಳೆದ ಮೂರನೆಯ ದಿನ ಮಾತ್ರವೇ ಮನೆಯೊಳಗೆ ಪ್ರವೇಶಿಸಬೇಕು. ಮನೆಯಲ್ಲಿ ಗೋಮೂತ್ರ ಸಿಂಪಡಿಸಬೇಕು. (ಎತ್ತುಗಳ ಹಬ್ಬಕ್ಕೆ ಸಂಬಂಧಿಸಿದ ಮೇಲಿನ ವಿವರಗಳನ್ನು ಅನಂತಪುರಂ ಜಿಲ್ಲೆ, ಕುಂದುರ್ಪಿ ಮಂಡಲದ ಶೀಗಲ ಹಳ್ಳಿ, ಮಲಯನೂರು, ವಡ್ಡೆ ಗ್ರಾಮಗಳಲ್ಲಿ ಸ್ವೀಕರಿಸಲಾಯಿತು.) ಈ ಮೂರು ಪ್ರಾಂತ್ಯಗಳು ಕನ್ನಡ ಭಾಷಾ ಪ್ರಭಾವಕ್ಕೆ ಒಳಗಾದ ಕರ್ನಾಟಕದ ಗಡಿ ಗ್ರಾಮಗಳು. ಆದ್ದರಿಂದಲೇ ಎತ್ತುಗಳ ದ್ಯಾವರದ ದಿನ ಹಾಡುವ ಈ ಪದಗಳು ಕನ್ನಡದಲ್ಲೇ ಇವೆ. ಅನಂತಪುರಜಿಲ್ಲೆಯಲ್ಲಿಯ ಮಡಕಶಿರಕ್ಕೆ ಹತ್ತು ಮೈಲಿದೂರದಲ್ಲಿರುವ ಅಮರಾಪುರ ಗ್ರಾಮದಲ್ಲಿ (ಇದೂ ಸಹ ಕರ್ನಾಟಕದ ಗಡೀ ಪ್ರದೇಶ)

ಎತ್ತುಗಳ ದ್ಯಾವರನ್ನು 'ದೀವಳಿಗೆ ಹಬ್ಬ' (ದೀಪಾವಳಿ ಹಬ್ಬ) ಎಂದು ಕರೆಯುತ್ತಾರೆ.

ಆವುಲಕಬ್ಬಂ : ಇದು ಆಕಳ ಹಬ್ಬ, ಕಾಟಮರಾಯನಿಗೆ ಸಂಬಂಧಪಟ್ಟಿದ್ದು. 'ಅರವತ್ತಾರು ಊರು ಸುತ್ತಿ ಆಕಳ ಹಬ್ಬ ನೋಡಬೇಕೆಂದು ಹೇಳುತ್ತಾರೆ. ಈ ಹಬ್ಬವನ್ನು ಕಾರ್ತಿಕಮಾಸದಲ್ಲಿ ಹುಣ್ಣಿಮೆಗೆ ಮುಂಚೆ ಮಂಗಳವಾರ ದಿನ ವರ್ಷಕ್ಕೊಮ್ಮೆ ಆಚರಿಸುತ್ತಾರೆ. ಆಕಳ ಹಬ್ಬ ಎತ್ತಿನ ಪರಿಷೆಯಂತೆಯೇ ನಡೆಯುತ್ತದೆ. ಆದರೆ ಕಾಟಮರಾಯನನ್ನು ಮೆರೆವಣಿಗೆ ಮಾಡುವುದು ಇಲ್ಲಿ ವಿಶೇಷ. ಇದು ಅನಂತಪುರಂ ಜಿಲ್ಲೆಯ ಕುಂದುರ್ಪಿ ಮಂಡಲದಲ್ಲಿಯ ಶಿವಮಜ್ಜನ ಹಳ್ಳಿಯಲ್ಲಿ ಆಚರಿಸುವಂಥದ್ದು. ಇಲ್ಲಿ ನೂರಕ್ಕೆ ತೊಂಬತ್ತು ಜನ ಕನ್ನಡದಲ್ಲಿಯೇ ಮಾತನಾಡುತ್ತಾರೆ.

ಬೆಳೆ ಸಮೃದ್ಧವಾಗಿ ಬೆಳೆದರೆ ವರ್ಷಕ್ಕೊಮ್ಮೆ ತಪ್ಪದೇ ಆಕಳ ಹಬ್ಬವನ್ನು ಆಚರಿಸುತ್ತಾರೆ. ಬೆಳೆ ಸರಿಯಾಗಿ ಬೆಳೆಯದೆ ಕಷ್ಟಕಾಲವಿದ್ದರೆ ಮೂರು ವರ್ಷಕ್ಕೊಮ್ಮೆ ಈ ಹಬ್ಬವನ್ನು ಆಚರಿಸುತ್ತಾರೆ. ಆಕಳ ಹಬ್ಬವನ್ನು ಮಾಡುವುದರಿಂದ ಸಕಾಲಕ್ಕೆ ಮಳೆ ಚೆನ್ನಾಗಿ ಆಗುತ್ತದೆಯೆಂದೂ ಫಸಲು ಸಮೃದ್ಧವಾಗಿ ಬೆಳೆಯುತ್ತದೆಂದೂ ಹಾಲು ಮೊಸರು ಮೊದಲಾದವುಗಳ ಕೊರತೆಯಿರುವುದಿಲ್ಲವೆಂದು ಜನಪದರ ನಂಬಿಕೆ.

ಆಕಳ ಹಬ್ಬಕ್ಕೆ ಮೊದಲ ದಿನ ಸೋಮವಾರ ರಾತ್ರಿ ಹತ್ತು ಗಂಟೆಗೆ ಊರಿನ ಒಂದು ಜಾಗದಲ್ಲಿ 'ಬೇಲಿ' ಹಾಕಿ 'ಲಕ್ಕಿ' ಎಲೆ, 'ಹತ್ತಿ' ಎಲೆ ಮತ್ತು 'ನೇರಳೆ' ಎಲೆಗಳಿಂದ 'ಪದಿ' (ಪೊದೆ) ಮಾಡುತ್ತಾರೆ. ಒಂದು ದ್ವಾರವನ್ನು ನಿರ್ಮಿಸಿ ನಾಲ್ಕು ಗೂಟಗಳನ್ನು ನೆಟ್ಟು, ತೆಂಗಿನ ಗರಿಗಳಿಂದ ಚಪ್ಪರ ಹಾಕುತ್ತಾರೆ. ಚಪ್ಪರದ ಕೆಳಗೆ ಸಗಣಿಯಿಂದ ಸಾರಿಸಿ ರಂಗೋಲಿ ಹಾಕಿ ಕಾಟಮರಾಯನನ್ನು (ಕಾಟಮರಾಯನಿಗೆ ಪ್ರತ್ಯೇಕ ವಿಗ್ರಹವಿಲ್ಲ) ಮಧ್ಯದಲ್ಲಿ ಕೂರಿಸುತ್ತಾರೆ. ಆ ಊರಿನ ದೇವರುಗಳಾದ ನರಸಿಂಹಸ್ವಾಮಿ, ಶ್ರೀಕೃಷ್ಣ, ಪೆದ್ದಕ್ಕ ರಾಯಮ್ಮ (ಆದಿಶಕ್ತಿ)ರ ವಿಗ್ರಹಗಳನ್ನು ಇಡುತ್ತಾರೆ. ಚಪ್ಪರದ ಎಡ ಭಾಗಕ್ಕೆ ಒಂದು ಆಕಳನ್ನು, ಅದರ ಕರುವನ್ನು, ರಾತ್ರಿ ಇಡೀ ಕಟ್ಟಿ ಹಾಕಿರುತ್ತಾರೆ. ಮರುದಿನ ಮುಂಜಾನೆಯೇ (ಮಂಗಳವಾರ) ಅವು ಹಾಕಿದ ಸಗಣಿಯಿಂದ, ಆಕಳು, ಕರು, ಹುಲಿಗಳಂತೆ 20 ಆಕಳು, 20 ಕರು, 20 ಹುಲಿಗಳನ್ನಾಗಿ ಮಾಡುತ್ತಾರೆ. ಅನಂತರ ದೇವರಿಗೆ ಕಲ್ಲು ಸಕ್ಕರೆ ಐದು ಒಣಕೊಬ್ಬರಿ ಗಿಂಡಿ, ಐದು ಬೆಲ್ಲದಚ್ಚು, ಮೂರು ಸೇರು ಅಕ್ಕಿ ನೈವೇದ್ಯವನ್ನಿಟ್ಟು ಎಲೆ ಪೂಜೆ ಮಾಡುತ್ತಾರೆ.

ಸಾಯಂಕಾಲ ನಾಲ್ಕು ಗಂಟೆಗೆ ಕುರಿ, ಮೇಕೆ, ಆಕಳುಗಳೆಲ್ಲವನ್ನು ಪೊದೆಯ ಮುಂದೆ ನಿಲ್ಲಿಸಿ 'ಸಾಸು' (ಅಕ್ಕಿ, ಸಜ್ಜೆ ಸೇರಿದ್ದು) ಅವುಗಳ ಮೇಲೆ ಅಕ್ಷತೆಯಂತೆ ಹಾಕುತ್ತಾರೆ. ಕಾಟಮರಾಯನಿಗೆ, ಆಕಳಿಗೆ ಪೂಜೆ ಮಾಡಿದ ಅನಂತರ 'ಪೊದೆ'ಯ ಸುತ್ತಲೂ ಮೂರು ಬಾರಿ ಸುತ್ತಿಸುತ್ತಾರೆ. ಬಂದವರಿಗೂ ಊರಿನವರಿಗೂ ಮೂರು ಪಲ್ಲ ಅಕ್ಕಿಯ (ಮೂರು ಚೀಲ) ಅನ್ನ ಮಾಡಿಸಿ ಹಾಲು ಮೊಸರಿನೊಂದಿಗೆ ಊಟ ಮಾಡಿಸುತ್ತಾರೆ. ಅನಂತರ ನೈವೇದ್ಯವನ್ನು ಎಲ್ಲರಿಗೂ ಹಂಚುತ್ತಾರೆ. ಇದಕ್ಕೂ ಮುಂಚೆ 20 ಹುಲಿ, 20 ಆಕಳು, 20 ಕರುಗಳನ್ನಾಗಿ ಮಾಡಿದ ಸಗಣಿ ಗೊಂಬೆಗಳ ಮೇಲೆ ಬೇಲಿಯನ್ನು ಹಾಕಿ ಜಲ್ಲಿಯಿಂದ ಮುಚ್ಚುತ್ತಾರೆ. (ನಾಯಿ, ನರಿ ಅವುಗಳನ್ನು ಮುಟ್ಟಬಾರದೆಂದು) ಸಾಯಂಕಾಲ ಆರುಗಂಟೆಗೆ ಈ ವಿಗ್ರಹಗಳೊಂದಿಗೆ ಊರಿನೊಳಗೆ ಮೆರೆವಣಿಗೆ ಬರುತ್ತಾರೆ. ಬೆಳಗಿನ ಜಾವ ನಾಲ್ಕು ಗಂಟೆಗೆ ಆಯಾ ವಿಗ್ರಹಗಳನ್ನು ದೇವಸ್ಥಾನಗಳಿಗೆ ಒಯ್ದು ಯಥಾ ಸ್ಥಾನದಲ್ಲಿಡುತ್ತಾರೆ. ಮೆರೆವಣಿಗೆಯಲ್ಲಿ ಕೇಕೆ ಹಾಕುತ್ತಾ ಆನಂದೋತ್ಸವಗಳಿಂದ ಹಳ್ಳಿಯ ಜನರು ಇದರಲ್ಲಿ ಭಾಗವಹಿಸುತ್ತಾರೆ. ಆಕಳ ಹಬ್ಬಕ್ಕಾಗಿ ಊರಿನಲ್ಲಿ ಐದಾರು ದಿನಗಳ ಮುಂಚಿನಿಂದಲೂ ಹಾಲು, ಮೊಸರು, ತುಪ್ಪ ತೆಗೆದಿಡುತ್ತಾರೆ. ಆಕಳಿರುವವರು ಕಡ್ಡಾಯವಾಗಿ ಹಾಲು, ಮೊಸರು ಕಾಟಮರಾಯನಿಗೆ ಕೊಡಬೇಕೆಂಬ ನಿಬಂಧನೆಯಿದೆ.

ರಾಯಲಸೀಮೆಯಲ್ಲಿ ಗಂಗಮ್ಮ ಜಾತ್ರೆಯ ಸಮಯದಲ್ಲಿ ಆಕಳುಗಳಿಗೆ 'ಪೊಂಗಲಿ' ಇಡುವುದು, ಅಲಂಕರಿಸುವುದು, ಎತ್ತುಗಳ ಸ್ಪರ್ಧೆಗಳನ್ನು ಮಾಡುವುದು ಮೊದಲಾದವು ನಡೆಯುತ್ತಿರುತ್ತವೆ. ಆದುದರಿಂದಲೇ ಗಂಗಮ್ಮ ಜಾತ್ರೆಗೆ 'ಆಕಳ ಹಬ್ಬ'ವೆಂಬ ಹೆಸರು ಬಂದಿದೆಯೆಂದು ಹೇಳಲಾಗುತ್ತದೆ. ಆದರೆ ಆಕಳ ಹಬ್ಬವೇ ಬೇರೆ, ಗಂಗಮ್ಮ ಜಾತ್ರೆಯೇ ಬೇರೆಯೆಂಬುದಾಗಿ ರಾಯಲಸೀಮೆಯಲ್ಲಿಯ ಹಿರಿಯರು ಹೇಳುತ್ತಾರೆಯೆಂಬುದಾಗಿ ಡಾ. ತಂಗಿರಾಲ ವೆಂಕಟಸುಬ್ಬರಾವು ಅವರು ತಮ್ಮ 'ಕಾಟಮರಾಜ ಕಥ'ಲು' ಸಂಪುಟ 1 ರಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ಒಪ್ಪಬಹುದು. ಏಕೆಂದರೆ ಆಕಳ ಹಬ್ಬ ಯಾದವರಿಗೆ ಸಂಬಂಧಿಸಿದುದು, ಗಂಗಮ್ಮ ಜಾತ್ರೆ ಎಲ್ಲರಿಗೂ ಸಂಬಂಧಿಸಿದುದು.

ಸಂಕ್ರಾಂತಿ : ಸೂರ್ಯನು ಮಕರರಾಶಿಗೆ ಪ್ರವೇಶಿಸುವಾಗ ಆಚರಿಸುವ ಹಬ್ಬ ಸಂಕ್ರಾಂತಿ. ಈ ಉತ್ತರಾಯಣ ಸಂಕ್ರಾಂತಿ ಅಥವಾ ಮಕರಸಂಕ್ರಾಂತಿ ಆಂಧ್ರಪ್ರದೇಶದಲ್ಲಿ ದೊಡ್ಡ ಹಬ್ಬ (ಪೆದ್ದಪಂಡುಗ). ಈ ಹಬ್ಬವನ್ನು ಜನವರಿ 13 ರಿಂದ 15ರವರೆಗೆ (ಚಾಂದ್ರಮಾನದ ಪುಷ್ಯಮಾಸ) ಆಚರಿಸುತ್ತಾರೆ. ತಮಿಳುನಾಡಿನಲ್ಲಿ 'ಪೊಂಗಲ್' ಎಂದು ಕರೆಯುತ್ತಾರೆ. ಇದು ವ್ಯವಸಾಯದ ಘನತೆಯನ್ನು ತಿಳಿಸುವ ರಾಷ್ಟ್ರೀಯ ಹಬ್ಬ. ಹೇಮಂತ ಋತುವಿನ ಕೊನೆಯಲ್ಲಿ ಬರುವ ಮಕರ ಸಂಕ್ರಾಂತಿ ಹೊತ್ತಿಗೆ ಫಸಲು ಮನೆಗೆ ಬಂದು ಸೇರುವುದರಿಂದ ಕೃಷಿಕರಿಗೆ ಇದು ವಿಶೇಷವಾದ ಹಬ್ಬ. ಮಕರ ಸಂಕ್ರಾಂತಿಯನ್ನು 'ಸುಗ್ಗಿಹಬ್ಬ' ಎಂದು ಭಾರತದ ಹಲವಾರು ರಾಜ್ಯಗಳಲ್ಲಿ ಆಚರಿಸುವುದನ್ನು ಕಾಣುತ್ತೇವೆ. ಶ್ರೀಮಂತರು - ಬಡವರೆಂಬ ಭೇದವಿಲ್ಲದೆ ಸ್ತ್ರೀಪುರುಷರು, ಮಕ್ಕಳು, ಹಿರಿಯಕಿರಿಯರು ಸಂತೋಷ ಸಂಭ್ರಮಗಳಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಇದು ಸಿರಿ ಹಬ್ಬವಾಗಿ, ಹರಕೆಗಳ ಹಬ್ಬವಾಗಿ, ದನಗಳ ಹಬ್ಬವಾಗಿ, ರೈತರ ಹಬ್ಬವಾಗಿ ಆಚರಿಸಲ್ಪಡುವುದಲ್ಲದೇ ರಂಗೋಲಿ ಹಬ್ಬ (ಮುಗ್ಗುಲಪಂಡುಗ)ವಾಗಿ, ಗಾಳಿಪಟ ಹಬ್ಬವಾಗಿ ಆಚರಿಸಲ್ಪಡುತ್ತದೆ.

ಸಂಕ್ರಾಂತಿ ಹಬ್ಬವನ್ನು ಆಚರಿಸುವುದರಲ್ಲಿ ಪ್ರಾದೇಶಿಕ ಭೇದಗಳು ಕಂಡುಬರುತ್ತವೆ. ಈ ಹಬ್ಬವನ್ನು 3,4 ದಿನಗಳ ಹಬ್ಬವಾಗಿ ಮಾಡಿಕೊಳ್ಳುತ್ತಾರೆ. ಮೊದಲನೆಯ ದಿನ ಭೋಗಿ, ಎರಡನೆಯ ದಿನ ಸಂಕ್ರಾಂತಿ, ಮೂರನೆಯದಿನ ಕನುಮ ಅಥವಾ ದನಗಳ ಹಬ್ಬ, ನಾಲ್ಕನೆಯ ದಿನ 'ಮುಕ್ಕನುಮ' ಅಥವಾ ಕನಮ ಹಬ್ಬ. ಚಿತ್ತೂರು ಜಿಲ್ಲೆಯ ಪರಿಸರ ಪ್ರಾಂತ್ಯಗಳಲ್ಲಿ ಐದನೇ ದಿನ 'ಬುಡಪಲಹಬ್ಬ' ಅಥವಾ 'ವರಸಹಬ್ಬ' ಎಂದು ಆಚರಿಸುತ್ತಾರೆ.

ಧನುರ್ಮಾಸೋತ್ಸವಗಳು ಸಂಕ್ರಾಂತಿಗೆ ಒಂದು ತಿಂಗಳ ಮುಂಚೆಯೆ ಪ್ರಾರಂಭವಾಗುತ್ತವೆ. ಧನುರ್ಮಾಸದಲ್ಲೆ ಮನೆಗಳನ್ನೂ ಕಣಜಗಳನ್ನೂ ಶುಭ್ರಗೊಳಿಸಿ ಸುಣ್ಣ ಹಚ್ಚುತ್ತಾರೆ. ಬಾಗಿಲುಗಳಿಗೂ ಹೊಸಿಲುಗಳಿಗೂ

ಬಣ್ಣ ಹಚ್ಚುತ್ತಾರೆ. ಮನೆಯ ನೆಲವನ್ನೂ ಬಾಗಿಲ ಮುಂಭಾಗವನ್ನು ರಂಗವಲ್ಲಿಯಿಂದ ಅಲಂಕರಿಸುತ್ತಾರೆ. ಸ್ತ್ರೀಯರಿಗೆ ಸಂಕ್ರಾಂತಿ ರಂಗೋಲಿಯ ಹಬ್ಬ. ರಂಗೋಲಿಯ ಮಧ್ಯದಲ್ಲಿ ಗೋವು ಸಗಣಿಯಿಂದ ಮಾಡಿದ 'ಗೊಬ್ಬೆಮ್ಮ'ನನ್ನು ಕಲಾತ್ಮಕವಾಗಿಟ್ಟು ಅರಿಸಿನ, ಕುಂಕುಮ, ಹೂಗಳಿಂದ ಅಲಂಕರಿಸುತ್ತಾರೆ. ಅವುಗಳ ಸುತ್ತಾ ತಿರುಗುತ್ತಾ ಲಯಬದ್ಧವಾಗಿ ಕೈಗಳನ್ನು ತಟ್ಟುತ್ತಾ ಹಾಡುಗಳನ್ನು ಹಾಡುತ್ತಾರೆ. ಈ ಹಬ್ಬದ ಮೊದಲನೆಯ ದಿನವನ್ನು 'ಭೋಗಿ' ಎನ್ನುತ್ತಾರೆ. ಭೋಗಿಯ ದಿನ ಮುಂಜಾನೆಯೇ ಮನೆಯ ಮುಂದೆ ಗೊಬ್ಬಳ್ಳಿಂದ ಮಾಡಿದ ಬೆರಣಿಯಿಂದ ಭೋಗಿ ಉರಿಯನ್ನು ಹಾಕುತ್ತಾರೆ. ಕೆಲವು ಕಡೆ ಒಣ ಹುಲ್ಲಿನ ಬೆಂಕಿಯಿಂದ 'ಭೋಗಿಮಂಟ' ಹತ್ತಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಭೋಗಿ ಉರಿಯ ಸುತ್ತ ಸುಗ್ಗಿಯನ್ನೂ ದೇವರನ್ನೂ ಹೊಗಳಿ ಹಾಡುತ್ತಾ ಕುಣಿಯುತ್ತಾರೆ.

ಹಬ್ಬದ ಎರಡನೇ ದಿನವನ್ನು (ಭೋಗಿಯ ಮರುದಿನ) ಸಂಕ್ರಾಂತಿ ಅಥವಾ 'ಪೆದ್ದ ಪಂಡುಗ' (ದೊಡ್ಡ ಹಬ್ಬ) ಎಂದುಕರೆಯುತ್ತಾರೆ. ಸಂಕ್ರಾಂತಿ ಹೊತ್ತಿಗೆ ಬೆಳೆದ ಪೈರಿನಿಂದ ತುಂಬಿದ ಕಣಜಗಳಿಂದ ರೈತರ ಮನೆಗಳು ಬೆಳಗುತ್ತಿರುತ್ತವೆ. ಬೆಳೆಗಳು ಬೆಳೆಯುವುದಕ್ಕೆ ಕಾರಣವಾದ ಸೂರ್ಯಭಗವಾನನನ್ನು ಆರಾಧಿಸುತ್ತಾರೆ. ಅಂದು ರೈತರು ಬೆರಣಿಯಿಂದ ಹಾಲನ್ನು ಕಾಯಿಸಿ ಹೊಸ ಅಕ್ಕಿಯಿಂದ ಪಾಯಸ ಮಾಡಿ ಸೂರ್ಯನಿಗೆ ಅರ್ಪಿಸುತ್ತಾರೆ. ರೈತರು ತಾವು ಬೆಳೆದ ಧಾನ್ಯವನ್ನು ತನ್ನ ಊರಿನ ಮಡಿವಾಳ, ಕ್ಷೌರಿಕ, ಕಮ್ಮಾರ, ಬಡಿಗ, ಮನೆಯಾಳು, ಬೇಸಾಯಗಾರ ಹಾಗೂ ಗ್ರಾಮ ಸೇವಕ ಮುಂತಾದವರಿಗೆ ಅಲ್ಲದೇ ಹರಿದಾಸರಿಗೂ ಕೋಲೆ ಬಸವನವರಿಗೂ ಹಗಲು ವೇಷಧಾರಿಗೂ ಹಂಚುತ್ತಾರೆ. ಹೀಗೆ ಸಂಕ್ರಾಂತಿ ರೈತರ ಹಬ್ಬ ಎಂದು ಸಹ ಕರೆಯಲ್ಪಡುತ್ತದೆ.

ಸಂಕ್ರಾಂತಿಯ ಮೂರನೆಯ ದಿನವನ್ನು 'ಕನುಮು' ಎನ್ನುತ್ತಾರೆ. ಇದು ದನಗಳ ಹಬ್ಬ. ಅಂದು ದನಗಳನ್ನು, ಕೃಷಿ ಉಪಕರಣಗಳನ್ನು ಶುಭ್ರಪಡಿಸಿ, ಅರಿಸಿನ ಕುಂಕುಮಗಳಿಂದ ಪೂಜಿಸುತ್ತಾರೆ. ಎತ್ತುಗಳ ಕೊಂಬುಗಳಿಗೆ ಬಣ್ಣ ಬಳಿದು, ಕೊಂಬುಗಳಿಗೆ ಕೊಂಬು ಕಳಸಗಳನ್ನು ಕೂಡಿಸಿ, ಕೊರಳಿನಲ್ಲಿ ಹೂವಿನ ಮಾಲೆಯನ್ನು, ಕಾಲುಗಳಿಗೆ ಗೆಜ್ಜೆಗಳನ್ನು ಅಲಂಕರಿಸುತ್ತಾರೆ. ದನದ ಕೊಠಡಿಯಲ್ಲಿ ಅಕ್ಕಿ ಮತ್ತು ಹಾಲಿನಿಂದ ಪೊಂಗಲ್ ತಯಾರಿಸುತ್ತಾರೆ. ಈ ಪೊಂಗಲಿಗೆ ಅರಿಸಿನ ಕುಂಕುಮ ಬೆರೆಸಿ ಹೊಲಗದ್ದೆಗಳಲ್ಲಿ ಚೆಲ್ಲುತ್ತಾರೆ. ಇದನ್ನು 'ಪೊಲ್ಲಿ ಚೆಲ್ಲಡಂ' ಎನ್ನುತ್ತಾರೆ. ತೀರಾಂಧ್ರ ಪ್ರದೇಶಗಳಲ್ಲಿ ಕೋಳಿಪಂದ್ಯ, ಟಗರು ಪಂದ್ಯ, ಎತ್ತಿನ ಪಂದ್ಯ, ಮುಂತಾದುವುಗಳು ನಡೆಯುತ್ತವೆ.

ನಾಡಿನ ಕೆಲವು ಭಾಗಗಳಲ್ಲಿ ನಾಲ್ಕನೇ ದಿನ 'ಮುಕ್ಕನುಮು' ಹಬ್ಬವನ್ನು ಆಚರಿಸುತ್ತಾರೆ. ಈ ದಿನದಂದು ಹಸುಗಳನ್ನು, ಎತ್ತುಗಳನ್ನು ಪೂಜಿಸಿ, ಗ್ರಾಮದೇವತೆಗಳನ್ನು ಆರಾಧಿಸಿ, ಜಾತ್ರೆಯನ್ನು ನಡೆಸುತ್ತಾರೆ. ಐದನೆಯ ದಿನ ಗ್ರಾಮದೇವತೆಗಳಿಗೆ ಬಲಿಕೊಟ್ಟು ಪ್ರಾಣಿ ಮಾಂಸಗಳಿಂದ 'ಬುಡಸಲ' ಅಥವಾ 'ವರಸೆ' ಹಬ್ಬವನ್ನು ಮಾಡಿಕೊಳ್ಳುತ್ತಾರೆ. ಅಂದು ವರಸೆ ಇರುವ ಬಂಧುಗಳು ಸೇರಿ ಹಬ್ಬ ಮಾಡಿಕೊಳ್ಳುವುದರಿಂದ ಇದಕ್ಕೆ 'ವರಸೆ ಹಬ್ಬ' ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಸಂಕ್ರಾಂತಿ ಆಂಧ್ರದ 'ದೊಡ್ಡ ಹಬ್ಬ'.

ಖಮ್ಮಂ ಜಿಲ್ಲೆಯಲ್ಲಿ ಭದ್ರಾಚಲ ಏಜೆನ್ಸಿ ಪ್ರದೇಶದಲ್ಲಿರುವ ಎರುಕಲ, ಕೋಯ, ಕೊಂಡರೆಡ್ಡಿ, ಲಂಬಾಡಿ, ಯಾನಾದಿ ಮೊದಲಾದ ಬುಡಕಟ್ಟು ಸಮುದಾಯದವರು ಸಹ ಪುಷ್ಯಮಾಸದಲ್ಲಿ (ಜನವರಿ 13, 14, 15 ತಾರೀಖುಗಳಲ್ಲಿ) ಸಂಕ್ರಾಂತಿ ಹಬ್ಬವನ್ನು ಸಂಭ್ರಮದಿಂದ ಮಾಡುವರು.

ಅರಕಪೂಜ : ವರ್ಷದಲ್ಲಿ ಮೊದಲನೆಯ ಬಾರಿ ನೊಗ ಕಟ್ಟುವ ಮುನ್ನ 'ಅರಕ' (ಎತ್ತುಗಳನ್ನು ಕಟ್ಟಿದ ನೇಗಿಲು)ಗೆ ತೆಲಂಗಾಣದಲ್ಲಿ ಮಾಡುವ ಪೂಜೆ ಇದು. ಎತ್ತಿನ ಕಾಲುಗಳಿಗೆ ಎಣ್ಣೆ, ಮುಖಕ್ಕೆ ಅರಿಸಿನ ಕುಂಕುಮ, ಗೊರಸುಗಳಿಗೆ, ಕೊಂಬುಗಳಿಗೆ ಸುಣ್ಣ, ಕೆಂಪು ಮಣ್ಣು ಹಚ್ಚಿ ತೆಂಗಿನಕಾಯಿ ಒಡೆಯುತ್ತಾರೆ.

ಆರೆದ್ದುಲಕಾರ್ತೆ : ಆರುದ್ರ ನಕ್ಷತ್ರದಲ್ಲಿ ಮಾಡುವ ಒಂದು ಹಬ್ಬ. ಮಣ್ಣಿನಿಂದ ಎತ್ತಿನ ಗೊಂಬೆಗಳನ್ನು ಮಾಡಿ, ಉಪ್ಪರಿಗೆಯ ಮೇಲಿಟ್ಟು, ಉಸಿಲಿ ಮತ್ತು ಹುರಿಟ್ಟುಗಳನ್ನು ನೈವೇದ್ಯವಾಗಿ ಇಡುತ್ತಾರೆ.

ಊರುಪಂಡುಗ : ಗ್ರಾಮದಲ್ಲಿ ಶೇಖರಿಸಿದ್ದ ಅನ್ನವನ್ನು, ಊರಿನ ಹೊರಗೆ ಪಶುಗಳಿಗೆ ಇಟ್ಟು ಆಚರಿಸುವ ಹಬ್ಬ. ಇದನ್ನು ಕೋಸ್ತಾ ಜಿಲ್ಲೆಗಳಲ್ಲಿ ಆಚರಿಸುತ್ತಾರೆ.

ಈದಂಬರಿ : ತೆಲಂಗಾಣದಲ್ಲಿ ಇದೊಂದು ಆಚರಣೆ. ಹತ್ತಿಯನ್ನು ಆಯುವ ಮುನ್ನ ಹೊಲದಲ್ಲಿ 'ಆರೆ' ಗಿಡಕ್ಕೆ ಪೂಜೆ ಮಾಡಿ, ಊಟ ಮಾಡುತ್ತಾರೆ.

ಕಪ್ಪಡುಗು : ಕೋಸ್ತಾ ಜಿಲ್ಲೆಗಳಲ್ಲಿ ಮಳೆ ಬಾರದಿದ್ದಲ್ಲಿ ಮಾಡುವ ಒಂದು ಹಬ್ಬ.

ಕಪ್ಪತಲ್ಲಿ : ಒಂದು ದೊಡ್ಡ ಕಪ್ಪೆಯನ್ನು ಬಟ್ಟೆಯಲ್ಲಿ ಸುತ್ತಿ ಮೆರವಣಿಗೆ ಮಾಡಿ ಕೆರೆಯಲ್ಲಿ ಬಿಡುತ್ತಾರೆ. ಇಂತಹುದೇ 'ಕಪ್ಪಾಲಮ್ಮ', 'ಕಪ್ಪಲಕಾವಡಿ' ಮತ್ತು 'ಕಪ್ಪಲದೇವರ'. ತೆಲಂಗಾಣ, ಕೋಸ್ತಾ ಪ್ರಾಂತ್ಯಗಳಲ್ಲಿ ರೂಢಿಯಲ್ಲಿದೆ.

ಕಾರುಪುನ್ನಮ : ವೈಶಾಖ ಮಾಸದಲ್ಲಿ ರಾಯಲಸೀಮೆಯಲ್ಲಿ ಮಾಡುವ ಎತ್ತುಗಳ ಪೂಜೆ.

ಕೊತ್ತಲಪಂಡುಗ : ಕೋಸ್ತಾ, ತೆಲಂಗಾಣದಲ್ಲಿ ಹೊಸಧಾನ್ಯಗಳನ್ನು ಮನೆಗೆ ತಂದ ಅನಂತರ ಮಾಡುವ ಹಬ್ಬ.

ಜೋಕುಮಾರುಡು : ತೆಲಂಗಾಣದಲ್ಲಿ ಮಳೆಗಾಗಿ ಆರಾಧಿಸುವ ದೇವತೆ ಜೋಕುಮಾರ. ಬುಟ್ಟಿಯಲ್ಲಿ ದೇವತೆಯನ್ನು ಪ್ರತಿಷ್ಠಿಸಿ, ತಲೆಯ ಮೇಲಿಟ್ಟುಕೊಂಡು ಮನೆ ಮನೆಗೆ ಹೋಗಿ ಮಹಾಲಯ ಅಮಾವಾಸ್ಯೆಯ ದಿನ (ಭಾದ್ರಪದ ಅಮಾವಾಸ್ಯೆ) ನೀರಿಲ್ಲದ ಹಳ್ಳದಲ್ಲಿ ಆ ದೇವತೆಯನ್ನು ಬಿಟ್ಟು ಬರುತ್ತಾರೆ.

ದವಮ್ಮಪೂಜ : ಕೋಸ್ತಾದಲ್ಲಿ ಪೈರು ಮೊಳಕೆಯೇಳುವ ಸಂದರ್ಭದಲ್ಲಿ 'ಏಟಬಲಿ' (ಬೇಟೆ ಬಲಿ)ಯಿಂದ ಮಾಡುವ ಪೂಜೆ ಇದು.

ಪೊಲಿ : ಗ್ರಾಮದ ಆಚಾರಗಳಲ್ಲಿ ದೇವತೆಗಳಿಗೆ ಇಡುವ ನೈವೇದ್ಯ. ಧಾನ್ಯ, ಅನ್ನ, ಪ್ರಾಣಿಬಲಿ ಇತ್ಯಾದಿ. 'ಪೊಲಿದೇವರ' ಫಸಲು ಬಂದ ಹೊಲಕ್ಕೆ ಬೇಟೆಯನ್ನು ಬಲಿಕೊಟ್ಟು, ರಕ್ತವನ್ನು ಚೆಲ್ಲಿ ಕಟಾವು ಮಾಡುವ ಆಚಾರಣೆ.

ಬೊಮ್ಮದೇವರ : ರಾಯಲಸೀಮೆಯಲ್ಲಿ ಕಪಿಲೆ ಹೊಡೆಯುವ ಮುನ್ನ ಗೊಂಬೆಯನ್ನು ಮಾಡಿ ಪೂಜಿಸುವ ದೇವತೆ.

ಬೋಣಂ : ತೆಲಂಗಾಣದಲ್ಲಿ ಧಾನ್ಯ ರಾಶಿಯ ಮೇಲೆ ಒಂದು ಚೆಂಬನ್ನು ಅಲಂಕರಿಸುವ ಆಚಾರವಿದು.

ಮಾಲಪುನ್ನಮ : ಮಹಾಲಯ ಪೂರ್ಣಿಮ. ಮಳೆಗಾಗಿ ಈ ದಿನ ರಾಯಲಸೀಮೆಯಲ್ಲಿ ಜೋಕುಮಾರನನ್ನು ಪೂಜಿಸುತ್ತಾರೆ.

ಹಲವಾರು ಆಚರಣೆಗಳು ಮಳೆಗಾಗಿಯೇ ಮಾಡುತ್ತಿರುವುದು ಹೆಚ್ಚಾಗಿ ಕಂಡುಬರುತ್ತವೆ.

ಆಂಧ್ರಪ್ರದೇಶದಲ್ಲಿ ಬುಡಕಟ್ಟು ಸಮುದಾಯಗಳನ್ನು 'ಆದಿಮಜಾತುಲು' 'ಗಿರಿಜನುಲು', 'ಆದಿವಾಸುಲು' ಎಂದು ಕರೆಯುತ್ತಾರೆ. ಬುಡಕಟ್ಟು ಜನರಲ್ಲಿಯೂ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಹಲವು ಆಚರಣೆಗಳು ರೂಢಿಯಲ್ಲಿವೆ.

ಶ್ರೀಕಾಕುಳಂ, ವಿಶಾಖಪಟ್ನಂ, ಪೂರ್ವಗೋದಾವರಿ, ಪಶ್ಚಿಮ ಗೋದಾವರಿ, ಜಿಲ್ಲೆಗಳಲ್ಲಿರುವ ಕೊಂಡದೊರಗಳಿಗೆ ಮುಖ್ಯವಾದ ಹಬ್ಬ 'ಕಡಕು ಪಂಡೋಯಿ'. ಇದು ಸಾಧಾರಣವಾಗಿ ಏಪ್ರಿಲ್ ತಿಂಗಳಲ್ಲಿ ಮಾಡಿಕೊಳ್ಳುವ ಹಬ್ಬ. ಆ ಹಬ್ಬದ ಮೊದಲನೆಯ ದಿನ ವ್ಯವಸಾಯ ಪರಿಕರಗಳನ್ನು ಶುಚಿ ಮಾಡಿ, ಕೋಳಿಯನ್ನು ಬಲಿ ಕೊಟ್ಟು, ಅದರ ರಕ್ತವನ್ನು ಅವುಗಳ ಮೇಲೆ ಚೆಲ್ಲುತ್ತಾರೆ. ಸಾಯಂಕಾಲ ಗ್ರಾಮದೇವತೆಯ ಗುಡಿ ಸಮೀಪ ಊರಿನವರೆಲ್ಲರೂ ಸೇರುತ್ತಾರೆ. ಅಲ್ಲಿನ ಪೂಜಾರಿ ಕೆಂಪು ಕೋಳಿ ಹುಂಜವನ್ನು ಬಲಿಕೊಟ್ಟು, ಗ್ರಾಮದಲ್ಲಿರುವ ಎಲ್ಲರ ಮನೆಗಳಿಂದಲೂ ತಂದಿರುವ ಎಲ್ಲ ವಿಧವಾದ ಧಾನ್ಯದ ಬೀಜಗಳನ್ನು ಈ ಕೋಳಿಯ ರಕ್ತದೊಂದಿಗೆ ಸೇರಿಸುತ್ತಾನೆ. ಅನಂತರ ಒಂದು ಎತ್ತರವಾದ ಸ್ಥಳದ ಮೇಲೆ ನಿಂತು ಈ ಮಂತ್ರಿಸಲ್ಪಟ್ಟಿರುವ ಧಾನ್ಯದ ಬೀಜಗಳನ್ನು ಅಲ್ಲಿರುವವರ ಮೇಲೆ ಚೆಲ್ಲುತ್ತಾನೆ. ಅಲ್ಲಿ ನಿಂತಿದವರೆಲ್ಲರೂ ತಮ್ಮ ಅಂಗವಸ್ತ್ರಗಳಿಂದ ಆ ಬೀಜಗಳನ್ನು ಹಿಡಿದುಕೊಳ್ಳುತ್ತಾರೆ. ಅವನ್ನು ಅತಿ ಜಾಗರೂಕತೆಯಿಂದ ತೆಗೆದಿಟ್ಟು, ಮಳೆ ಬಂದ ಅನಂತರ ಬಿತ್ತನೆ ಮಾಡಬೇಕಾದ ಬೀಜಗಳೊಂದಿಗೆ ಹಾಕುತ್ತಾರೆ.

ಪಶ್ಚಿಮ ಗೋದಾವರಿ, ಪೂರ್ವ ಗೋದಾವರಿ, ಖಮ್ಮಂ ಜಿಲ್ಲೆಗಳಲ್ಲಿರುವ 'ಕೊಂಡರೆಡ್ಲು' ಬಿತ್ತನೆ ಮಾಡಿ ಪೈರು ಕಟಾವಿಗೆ ಬರುವವರೆಗೂ ನಡೆಯುವ ಎಲ್ಲ ಚಟುವಟಿಕೆಗಳನ್ನು ಆಯಾ ದೇವತೆಗಳಿಗೆ ಉತ್ಸವಗಳನ್ನು ಮಾಡದೆ ಆರಂಭಮಾಡುವುದಿಲ್ಲ. ಅವರ ಮುಖ್ಯವಾದ ಹಬ್ಬಗಳಲ್ಲಿ ಮಾಮಿಡಿ ಕೋತ, ಭೂದೇವಿ ಪಂಡುಗ, ಗಂಗಮ್ಮದೇವತ ಪಂಡುಗ, ವನಾದೇವುಡು ಪಂಡುಗ ಮೊದಲಾದವು ಮುಖ್ಯವಾದವು.

ಖಮ್ಮಂ ಜಿಲ್ಲೆಯ ಭದ್ರಾಚಲಂ, ಏಜೆನ್ಸಿ ಪ್ರದೇಶದಲ್ಲಿಯ ಬುಡಕಟ್ಟಿನವರು (ಎರುಕಲ, ಕೋಯ, ಕೊಂಡರೆಡ್ಡಿ, ಲಂಬಾಡಿ, ಯಾನಾದಿ ಇತ್ಯಾದಿ) ಬೆಳೆ ಸಮೃದ್ಧಿಯಾಗಿ ಬೆಳೆದು ಧಾನ್ಯದ ಇಳುವರಿ ಹೆಚ್ಚಾಗಿ ಬರಬೇಕೆಂದು 'ಪಚ್ಚಿಕ ಪಂಡುಗ' ಮಾಡಿಕೊಳ್ಳುತ್ತಾರೆ.

ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಸುಮಾರು 4 ಲಕ್ಷ ಶ್ರೀಕುಳಂ ಜಿಲ್ಲೆಯಲ್ಲಿ 2.50 ಲಕ್ಷ ಬುಡಕಟ್ಟು ಜನರಿದ್ದಾರೆ. ಇಲ್ಲಿಯವರು ಪೋಡುವ್ಯವಸಾಯವನ್ನು ಮಾಡುತ್ತಿರುವುದರಿಂದ ಅಲ್ಲಿಯ ಸೀಲೇರು, ಮಚ್‌ಖಂಡ್ ಆಣೆಕಟ್ಟೆಗಳಲ್ಲಿಯ ಹೂಳು ಮತ್ತು ಭೂಕಡಿತ ನಡೆಯುತ್ತವೆ. ಈ ಪೋಡುವ್ಯವಸಾಯದ ಆದಾಯವು ಹೆಕ್ಟೇರ್‌ಗೆ ರೂ. 3000 ಇರುತ್ತದೆ. ಇದನ್ನು ಬುಡಕಟ್ಟು ಜನರು ತಮ್ಮ ಜೀವನ ಪದ್ಧತಿಯಂತೆ ಅನುಸರಿಸುವವರೇ ಹೊರತು ವೃತ್ತಿಯಾಗಿ ಅಲ್ಲ. ಇವರುಗಳಲ್ಲಿ ಮುಖ್ಯವಾಗಿ ಗದಬ, ಕೊಂದು, ಪೊರಜ ಮೊದಲಾದವರಿದ್ದಾರೆ. ಸಮಗ್ರ ಗಿರಿಜನಾಭಿವೃದ್ಧಿ ಸಂಸ್ಥೆ (ಪಾಡೇರು) ಈ ಪೋಡು ವ್ಯವಸಾಯವನ್ನು ನಿಲ್ಲಿಸಲು ಐದುವರ್ಷಗಳ ಯೋಜನೆಯನ್ನು 1987-88ರಲ್ಲಿ ಹಮ್ಮಿಕೊಂಡಿತು. ಈ ಸಂಸ್ಥೆಯ ಕಾಫೀ ಬೋರ್ಡ್ ಅವರೊಂದಿಗೆ ಕಾಫೀ ಮೆಣಸಿನ ಬೆಳೆಗಳನ್ನು ಹಾಕಿಸುತ್ತಿದ್ದಾರೆ. ಒಂದು ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಸಹ ಈ ಸಂಸ್ಥೆ ವ್ಯವಸ್ಥೆ ಮಾಡಿದೆ.

ಪೋಡು ವ್ಯವಸಾಯವನ್ನು ನಿಷೇಧಿಸಿ ನೆಮ್ಮದಿಯಾಗಿ ಈ ಬದಲಾವಣೆಯನ್ನು ತರುತ್ತಾ ಅವರಿಗೆ ಆರ್ಥಿಕವಾಗಿಯೂ ತಾಂತ್ರಿಕವಾಗಿಯೂ ಸಹಾಯ ಮಾಡಬೇಕಾದ ಆವಶ್ಯಕತೆಯಿದೆಯೆಂದು ಐ.ಟಿ.ಡಿ.ಎ. ಅಭಿಪ್ರಾಯಪಟ್ಟಿದೆ.

ಎಂ.ಜಿ.ಎಸ್.

ಆಂಧ್ರಪ್ರದೇಶದ ಗೊಬ್ಬರ ಬೇಸಾಯ ಮಾಡುವುದು ಮನುಷ್ಯನು ಕಲಿತ ಅನಂತರ ಅವನ ಸುತ್ತಮುತ್ತ ಸಿಗುವಂತಹ ಅನೇಕ ಪದಾರ್ಥಗಳನ್ನು ಗೊಬ್ಬರವನ್ನಾಗಿ ಬಳಸುತ್ತಾ ಬಂದಿದ್ದಾನೆ. ಕಾಡಿನಲ್ಲಿ ವಾಸಿಸುತ್ತಿದ್ದ ಗಿರಿಜನರು 'ಪೋಡು ಬೇಸಾಯ' ಎಂಬ ಪದ್ಧತಿಯಿಂದ ಬೆಳೆ ತೆಗೆಯುತ್ತಿದ್ದರು. ಈಗಲೂ ಈ ಪದ್ಧತಿ ಆಂಧ್ರಪ್ರದೇಶದ ವಿಶಾಖಪಟ್ನಂ, ಆರಕು ಪ್ರಾಂತ್ಯದ ಅಂಚಿನಲ್ಲಿರುವ ಕಾಡುಗಳಲ್ಲಿ ಕಾಣಿಸುತ್ತದೆ. ಈ ರೀತಿ ಬೇಸಾಯ ಮಾಡುವ ಗಿರಿಜನರು ಬೇಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಆರಿಸಿ ಅದರಲ್ಲಿರುವ ಪೊದೆ ಗಿಡಗಳನ್ನು ಸುಡುತ್ತಾರೆ. ಅನಂತರ ಉಳುಮೆ ಮಾಡಿ ಮೂರು ನಾಲ್ಕು ವರ್ಷ ಬೇಸಾಯ ಮಾಡುತ್ತಾರೆ. ಉದುರಿದ ಎಲೆಗಳು, ಬೂದಿ ಮಿಶ್ರಣವಾಗಿ, ಮಳೆ ಬಂದರೆ ಒಳ್ಳೆಯ ಗೊಬ್ಬರವಾಗಿ ಮಾರ್ಪಡುತ್ತದೆ. ಈಗಲು ರೈತರು ಭೂಮಿಯನ್ನು ಉಳುಮೆ ಮಾಡಿದ ಅನಂತರ ಅದರಲ್ಲಿ ಸಿಗುವ ಕಸಕಡ್ಡಿಗಳನ್ನು ಕೂಳೆಗಳನ್ನು ಅಲ್ಲೇ ಸುಡುತ್ತಾರೆ. ಅದಲ್ಲದೆ ಕಬ್ಬನ್ನು ಕಟಾವು ಮಾಡಿದ ಬಳಿಕ ಉಳಿದಿರುವ ಸೊಪ್ಪನ್ನು (ಕಬ್ಬಿನ ಸೋಗೆ) ಅಲ್ಲೆ ಸುಡುವ ಪದ್ಧತಿ ಈಗಲು ಆಂಧ್ರಪ್ರದೇಶದ ಕಬ್ಬು ಬೆಳೆಯುವ ಜಿಲ್ಲೆಗಳಲ್ಲಿ ನೋಡಬಹುದು. ಈ ರೀತಿ ಕಸಕಡ್ಡಿಯನ್ನು ಸುಡುವುದರಿಂದ ಬಂದ ಬೂದಿ, ಕೀಟಗಳು, ರೋಗಗಳಿಂದ ಪೈರನ್ನು ಸಂರಕ್ಷಣೆ ಮಾಡುತ್ತದೆ ಎಂದು ಹೇಳುತ್ತಾರೆ.

ಮನುಷ್ಯನು ಪ್ರಾಣಿಗಳನ್ನು ಸಾಕುವುದನ್ನು ಕಲಿತ ಅನಂತರ ಅದರ ಸಗಣಿ, ಹಿಕ್ಕೆಯನ್ನು, ಅವನು ತಿನ್ನುವ ಧಾನ್ಯಗಳ ಹೊಟ್ಟು, ಎಲೆ ಹೂವು ಮುಂತಾದವುಗಳನ್ನು, ವಿವಿಧ ರೀತಿಯ ಮಣ್ಣುಗಳನ್ನು (ಸುಡುಮಣ್ಣು, ಜೇಡಿಮಣ್ಣು) ಕೋಳಿ, ಎರೆ, ಮೀನು, ಉಪ್ಪಿನ ಗೊಬ್ಬರಗಳನ್ನು ಕಾಲಾನುಗುಣವಾಗಿ, ಪರಿಸರಕ್ಕೆ ತಕ್ಕಂತೆ ಉಪಯೋಗಿಸಿ ಒಳ್ಳೆಯ ಬೆಳೆಯನ್ನು ತೆಗೆಯುವುದಲ್ಲದೆ, ಗುಣಮಟ್ಟವುಳ್ಳ ಧಾನ್ಯವನ್ನು ಸಹಾ ಬೆಳೆಯುತ್ತಿದ್ದನು. ಈ ರೀತಿಯ ಅನೇಕ ಗೊಬ್ಬರಗಳನ್ನು ಈಗಲು ಆಂಧ್ರಪ್ರದೇಶದ ಅನೇಕ ಜಿಲ್ಲೆಗಳಲ್ಲಿ ಉಪಯೋಗಿಸುತ್ತಾರೆ. ಇಂತಹ ವಿವಿಧ ಗೊಬ್ಬರಗಳ ಕಿರುಪರಿಚಯ ಇಲ್ಲಿದೆ.

ಸಗಣಿ - ಹಿಕ್ಕೆ ಗೊಬ್ಬರ : ಆಂಧ್ರಪ್ರದೇಶದ ಹೆಚ್ಚಿನ ಹಳ್ಳಿಗಾಡಿನ ಪ್ರಾಂತ್ಯಗಳಲ್ಲಿ ಈಗಲೂ ರೈತರು ಸಗಣಿ - ಹಿಕ್ಕೆ ಗೊಬ್ಬರವನ್ನು ಉಪಯೋಗಿಸುತ್ತಾರೆ. ಸಣ್ಣ ರೈತನಾದರೂ ಒಂದು ಎಮ್ಮೆ, ಎರಡು ಎತ್ತು ನಾಲ್ಕು ಕುರಿ ಮೇಕೆ ಕೋಳಿಗಳನ್ನು ಸಾಕುತ್ತಾನೆ. ಬೆಳಗ್ಗೆ ಎಮ್ಮೆ ದನದ ಕೊಟ್ಟಿಗೆ, ಕುರಿ ಮೇಕೆ, ಕೋಳಿಗಳನ್ನು ಕೂಡಿ ಹಾಕಿರುವ ಸ್ಥಳವನ್ನು ಶುಭ್ರಮಾಡಿ ಸಗಣಿ - ಹಿಕ್ಕೆಗಳನ್ನು ತಿಪ್ಪೆಗೆ ಹಾಕಲಾಗುತ್ತದೆ. ಸಗಣಿಯ ಜೊತೆಗೆ ಕಸಕಡ್ಡಿಯನ್ನು ತಿಪ್ಪೆಗೆ ಹಾಕುತ್ತಾರೆ. ಸಗಣಿಗಿಂತಲೂ ಕುರಿಮೇಕೆಯ ಹಿಕ್ಕೆ ಅತ್ಯುತ್ತಮವಾದ ಗೊಬ್ಬರವೆಂದು ಹೇಳುತ್ತಾರೆ. ಕುರಿಮೇಕೆಯ ಹಿಕ್ಕೆಯ ಜೊತೆಗೆ ಅದರ ಉದುರಿದ ಕೂದುಲು, ಗಂಜಲ ಸಹಾ ಬೆರೆತಿರುವುದರಿಂದ ಇದು ಅತ್ಯುತ್ತಮ ಗೊಬ್ಬರವೆಂದು ಹೇಳುತ್ತಾರೆ. ಆಂಧ್ರಪ್ರದೇಶದ ತೆಲಂಗಾಣ ಮತ್ತು ರಾಯಸೀಮ ಜಿಲ್ಲೆಗಳ ಹೆಚ್ಚಿನ ಕಡೆಗಳಲ್ಲಿ ಕುರುಚಲು ಗಿಡ ಇರುವ ಅರಣ್ಯ ಮತ್ತು ಬೆಟ್ಟ ಗುಡ್ಡಗಳು ಇರುವುದರಿಂದ ಕುರಿಯ ಸಾಕಣಿಕೆ ಹೆಚ್ಚಾಗಿದೆ. ಮೇಕೆಯ ಸಾಕಾಣಿಕೆಯು ಇದೆ. ಆದ್ದರಿಂದ ರೈತರು ಕುರಿ ಮೇಕೆ ಗೊಬ್ಬರವನ್ನು ಹೆಚ್ಚಿಗೆ ಉಪಯೋಗಿಸುತ್ತಾರೆ. ಮುಂಗಾರು ಮಳೆ ಬಿದ್ದ ಅನಂತರ ಭೂಮಿಯನ್ನು ಉಳುಮೆ ಮಾಡಿ ಕುರಿಮೇಕೆ ಮಂದೆ ಉಳುಮೆ ಮಾಡಿದ ಭೂಮಿಯಲ್ಲಿ ಬಿಡುತ್ತಾರೆ. ಒಂದೆರಡು ರಾತ್ರಿ ಹೀಗೆ ಮಂದೆ ಇಡುವುದರಿಂದ ಗಂಜಲ, ಹಿಕ್ಕೆ, ಕೂದಲು ಭೂಮಿಯಲ್ಲಿ ಬೆರೆತು ಹೆಚ್ಚಿನ ಫಸಲು ಬರುತ್ತದೆ. ಎಂದು ಅನುಭವಸ್ಥರು ಹೇಳುತ್ತಾರೆ. ಮೇಕೆ ಕಾಡಿನಲ್ಲಿರುವ ಔಷಧಿಯುಕ್ತ ಗಿಡಗಳನ್ನು ತಿನ್ನುವುದರಿಂದ ಇದರ ಹಿಕ್ಕೆ ಅತ್ಯುತ್ತಮ. ಹಾಗೆಯೇ ಕುರಿಯು ಗರಿಕೆ ಹುಲ್ಲನ್ನು ಮಾತ್ರ ತಿನ್ನುವುದರಿಂದ ಇದರ ಹಿಕ್ಕೆ ಬಹಳ ಸಾರವತ್ತಾದ ಗೊಬ್ಬರ.

ಕಾಡಿನ ಅಂಚಿನಲ್ಲಿರುವ ಹಳ್ಳಿಗಳಲ್ಲಿ ಈಗಲು ಕುರಿ ಮೇಕೆ ಹಿಂಡುಗಳು ಇರುತ್ತವೆ. ಇದರ ಜೊತೆಗೆ ಕಾಡಿಗೆ ಹೋಗುವ ದನಗಳ ಸಗಣಿಯನ್ನು ತಿಪ್ಪೆ ಗುಂಡಿಗೆ ಹಾಕುತ್ತಾರೆ. ಉಪಯೋಗಕ್ಕೆ ಬಾರದ ಹುಲ್ಲು, ಕಸ, ದಂಟು, ಹೊಟ್ಟು, ಮೇವು, ಗಿಡದ ಸೊಪ್ಪು, ಕೊಳೆತ ತರಕಾರಿ, ಮನೆಯ ಒಲೆಯ ಬೂದಿ ದನಕರುಗಳು ತಿಂದು ಬಿಟ್ಟ ಮೇವು ಇವೆಲ್ಲವನ್ನು ತಿಪ್ಪೆಗೆ ಹಾಕುತ್ತಾರೆ. ಗುಂಡಿಗೆ ಮಳೆಯ ನೀರು ಸೇರುತ್ತದೆ. ಹಳ್ಳಿಯಲ್ಲಿ ದನಕರುಗಳು ಬೀದಿಗಳಲ್ಲಿ ಹಾಕಿದ ಸಗಣಿ ಮುಂತಾದವು ಮಳೇ ನೀರಿನ ಜೊತೆಗೆ ಬೆರೆತು ಈ ತಿಪ್ಪೆ ಗುಂಡಿಗಳಿಗೆ ಸೇರುವುದರಿಂದ, ಕೊಳೆತು ಒಳ್ಳೆಯ ಗೊಬ್ಬರವು ತಯಾರಾಗುತ್ತದೆ. ಇಂತಹ ಗೊಬ್ಬರ ಅತ್ಯುತ್ತಮ ಫಸಲನ್ನು ಕೊಡುತ್ತದೆ. ಧಾನ್ಯವು ಗುಣಮಟ್ಟದಲ್ಲಿ ಅತ್ಯುತ್ತಮವಾಗಿದ್ದು ರುಚಿಕರವಾಗಿರುತ್ತದೆ. ಅದಲ್ಲದೆ ಧಾನ್ಯವು ಹೆಚ್ಚಿನ ದಿವಸ ಹುಳ ಬೀಳದೆ ಇರುತ್ತದೆ.

ಹಿಂದಿನ ಕಾಲದಲ್ಲಿ ಒಬ್ಬ ರೈತನ ಸಂಪತ್ತನ್ನು ಅವನಿಗಿರುವ ದನಕರುಗಳಿಂದ ಲೆಕ್ಕ ಮಾಡುತ್ತಿದ್ದರು. ದನಕರುಗಳು ಹೆಚ್ಚಿಗೆ ಇದ್ದರೆ ಹಾಲು ಮುಂತಾದವು ಸಹಾ ಹೆಚ್ಚಿಗೆ ಸಿಗುತ್ತಿತ್ತು. ಇದರ ಜೊತೆಗೆ ಉತ್ತಮವಾದ ಸಗಣಿ ಸಿಗುತ್ತಿತ್ತು. ಇದನ್ನು ಗೊಬ್ಬರವಾಗಿ ಉಪಯೋಗಿಸಿ ರೈತ ಅಧಿಕ ಧಾನ್ಯವನ್ನು ಬೆಳೆಯುತ್ತಿದ್ದ. ಈ ಧಾನ್ಯವೆ ಅವನ ಸಂಪತ್ತು. ಈ ಸಂಪತ್ತಿಗೆ ದನಕರುಗಳು ಮೂಲಾಧಾರವಾಗಿ ಇರುತ್ತಿದ್ದವು. ಆದ್ದರಿಂದಲೆ ಜಮೀನ್ದಾರರು, ರಾಜರು ಕಾಡುಗಳಲ್ಲಿ ಹಸುಗಳಿಗೆ ಅನುಕೂಲವಾಗುವಂತೆ ಕುಡಿಯುವ ನೀರಿನ ವ್ಯವಸ್ಥೆಗೆಂದು ಗುಂಡಿಗಳನ್ನು ಕಟ್ಟಿಸುತ್ತಿದ್ದರು. ಮೇಯುವುದಕ್ಕೆ ಸಹಸ್ರಾರು ಎಕರೆ ಭೂಮಿಯನ್ನು ಬಿಡುತ್ತಿದ್ದರು. ದನಕರುಗಳು ತಂಗುವುದಕ್ಕೆ ಗೋಮಾಳ, ದೊಡ್ಡಿಗಳನ್ನು ಕಟ್ಟುತ್ತಿದ್ದರು. ಈ ರೀತಿ ದನಕರುಗಳನ್ನು ಸಂರಕ್ಷಣೆ ಮಾಡಿದ ಗುರುತುಗಳು ಜಮೀನ್ದಾರಿ ವ್ಯವಸ್ಥೆ ಇದ್ದ ಕೆಲವು ಕಾಡಿನಂಚಿರುವ (ಕುಪ್ಪಂ ಆಂಧ್ರಪ್ರದೇಶ ಚಿತ್ತೂರು ಜಿಲ್ಲೆ) ಹಳ್ಳಿಗಳಲ್ಲಿ ಈಗಲು ಕಾಣಿಸುತ್ತವೆ. ಈ ಪ್ರಾಂತದ ಅನೇಕ ಹಳ್ಳಿಗಳಲ್ಲಿ ದನಕರುಗಳಿಗೆಂದು 'ದೊಡ್ಡಿ'ಗಳಿವೆ. ರೈತರು ಸಗಣಿಯನ್ನು ಮೇಕೆ ಕುರಿ ಹಿಕ್ಕೆಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಈ ರೀತಿ ಸಿಗುವ ಗೊಬ್ಬರವನ್ನು ಕೊಟ್ಟಿಗೆ ಗೊಬ್ಬರ, ಹಿತ್ತಲ ಗೊಬ್ಬರ, ದೊಡ್ಡಿ ಗೊಬ್ಬರವೆಂದು ಕರೆಯುತ್ತಾರೆ.

ಹಿಂಡಿ ಗೊಬ್ಬರ : ಎಣ್ಣೆ ಕಾಳುಗಳಿಂದ ಎಣ್ಣೆಯನ್ನು ತೆಗೆದ ಅನಂತರ ಉಳಿಯುವ ಪದಾರ್ಥಗಳನ್ನು ಹಿಂಡಿ ಎನ್ನುತ್ತಾರೆ. ಶೇಂಗಾ, ಎಳ್ಳು, ಕೊಬ್ಬರಿ, ಹೊಂಗೆ, ಬೇವು ಸೂರ್ಯಕಾಂತಿ, ಸಾಸಿವೆ, ಅಗಸೆಯ ಹಿಂಡಿಗಳನ್ನು ಬೇಸಾಯಕ್ಕೆ ಉಪಯೋಗಿಸುತ್ತಾರೆ. ಶೇಂಗಾ, ಎಳ್ಳು, ಕೊಬ್ಬರಿ, ಹಿಂಡಿಗಳನ್ನು ಜನರೂ ತಿನ್ನುವುದಕ್ಕೆ ಉಪಯೋಗಿಸುತ್ತಾರೆ. ಪ್ರಾಣಿಗಳಿಗೆ ಮೇವಾಗಿ ಇವುಗಳನ್ನು ಬಳಸುತ್ತಾರೆ. ಹೊಂಗೆ ಬೇವು ಹಿಂಡಿಗಳನ್ನು ಬಿಟ್ಟು ಉಳಿದ ಹಿಂಡಿಗಳನ್ನು ದನಕರುಗಳ ಆಹಾರವಾಗಿ ಉಪಯೋಗಿಸುತ್ತಾರೆ. ಈ ಹಿಂಡಿಗಳನ್ನು ಪುಡಿ ಮಾಡಿ ಪೈರಿನ ಬುಡಗಳಲ್ಲಿ ಸ್ವಲ್ಪ ಇಟ್ಟು ಮಣ್ಣನ್ನು ಮುಚ್ಚುತ್ತಾರೆ. ಇದರಿಂದ ಪೈರಿಗೆ ಬೇಕಾಗುವ ಸತ್ವ ಹೆಚ್ಚಿನ ಕಾಲ ಸಿಗುತ್ತದೆ. ಹೊಂಗೆ, ಬೇವು ಹಿಂಡಿಗಳನ್ನು ಗೊಬ್ಬರವಾಗಿ ಉಪಯೋಗಿಸುವುದರಿಂದ ಪೈರಿಗೆ ರೋಗಗಳು ಬರುವುದಿಲ್ಲ.

ಎಲೆ, ಹೂಗಳ ಗೊಬ್ಬರ : ಆಂಧ್ರಪ್ರದೇಶದ ಅನೇಕ ಕಡೆಗಳಲ್ಲಿ ಮುಖ್ಯವಾಗಿ ರಾಯಲಸೀಮ, ತೆಲಂಗಾಣ, ಪ್ರಾಂತ್ಯಗಳಲ್ಲಿ ಎಲೆ ಮತ್ತು ಹೂಗಳ ಗೊಬ್ಬರವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಹುಣಿಸೆ, ಹೊಂಗೆ, ಬೇವಿನ ತೋಪುಗಳು ಹಳ್ಳಿಗಳ ಕಡೆ ಕಾಣಿಸುತ್ತವೆ. ಬೇಸಾಯಕ್ಕೆ ಯೋಗ್ಯವಲ್ಲದ ಭೂಮಿಯಲ್ಲಿ ಹುಣಿಸೆ, ಹೊಂಗೆ, ಬೇವಿನ ಮರಗಳನ್ನು ಬೆಳೆಸುತ್ತಾರೆ. ಇವುಗಳನ್ನು ಹೊಂಗೆತೋಪು, ಬೇವಿನ ತೋಪು ಹುಣಿಸೆ ತೋಪು ಎಂದು ಕರೆಯುತ್ತಾರೆ. ಈ ತೋಪುಗಳಲ್ಲಿ ಉದುರಿದ ಎಲೆ ಮತ್ತು ಹೂಗಳನ್ನು ಶೇಖರಣೆ ಮಾಡಿ ಗೊಬ್ಬರವನ್ನಾಗಿ ಪರಿವರ್ತಿಸಿ ಉಪಯೋಗಿಸುತ್ತಾರೆ. ಕೆಲವೊಂದು ಸಲ ಉದುರಿದ ಹೂಗಳನ್ನು ಬತ್ತದ ಪೈರನ್ನು ನೆಡುವುದಕ್ಕೆ ಮುಂಚೆ ಗದ್ದೆಯಲ್ಲಿ ಹಾಕಿ ಉಳುಮೆ ಮಾಡುತ್ತಾರೆ. ಹಸಿ ಹೂಗಳು ಕೊಳೆತು ಹೆಚ್ಚಿನ ಕಾಲ ಪೈರಿಗೆ ಸಾರವನ್ನು ಕೊಡುತ್ತವೆ. ಇಂತಹ ತೋಪುಗಳಲ್ಲಿ ಮುಖ್ಯವಾಗಿ ಹೊಂಗೆ ತೋಪುಗಳಲ್ಲಿ ಉದುರಿದ ಹೂಗಳ ಪ್ರಮಾಣ ಹೆಚ್ಚಿಗೆ ಇರುತ್ತದೆ. ಆದ್ದರಿಂದ ರಾತ್ರೋರಾತ್ರಿ ಕಳ್ಳರು ಇದನ್ನು ಕಳ್ಳತನ ಮಾಡುವಾಗ ಸಿಕ್ಕಿ ಬಿದ್ದ ಪ್ರಸಂಗಗಳು, ಅವರಿಗೆ ಊರಿನ ಪಂಚಾಯಿತಿಯಲ್ಲಿ ದಂಡಹಾಕಿ ಬರೆದ ಹಸ್ತಪ್ರತಿಗಳು ಈಗಲೂ ಲಭ್ಯವಾಗುತ್ತವೆ. ಹೊಂಗೆಯ ಹೂ ಹೆಚ್ಚಿನ ಸಾರವನ್ನು ಕೊಡುವುದರಿಂದಲೇ ಇದನ್ನು ಕಳ್ಳತನ ಮಾಡುವುದಕ್ಕೆ ರೈತರೆ ಮುಂದಾಗುತ್ತಾರೆ.

ಉದುರಿದ ಎಲೆಗಳನ್ನು ಅಲ್ಲದೆ ಕೆಲವು ಜಾತಿಯ ಮರಗಿಡಗಳ ರೆಂಬೆಗಳನ್ನು ಕತ್ತರಿಸಿ ಗದ್ದೆಗೆ ಹಾಕುವ ಪದ್ಧತಿ ಆಂಧ್ರಪ್ರದೇಶದಲ್ಲಿ ಅನೇಕ ಕಡೆಗಳಲ್ಲಿ ಈಗಲು ಕಾಣಿಸುತ್ತದೆ. ಹೊಂಗೆ, ಸೀತಾಫಲ, ಪಗಡಿ

ತಂಗೇಡು ಮುಂತಾದ ಮರಗಿಡಗಳ ರೆಂಬೆಗಳನ್ನು ತಂದು ಸಣ್ಣದಾಗಿ ಕತ್ತರಿಸುತ್ತಾರೆ. ಅನಂತರ ಅದನ್ನು ಗದ್ದೆಯಲ್ಲಿ ಹಾಕುತ್ತಾರೆ. ಒಂದು ಸಲ ಉಳುಮೆ ಮಾಡಿ ಸುಮಾರು 15 ದಿನಗಳ ಕಾಲ ಬಿಡುವುದರಿಂದ ಸೊಪ್ಪು ಚೆನ್ನಾಗಿ ಕೊಳೆತು ದೀರ್ಘಕಾಲ ಪೈರಿಗೆ ಸಾರವನ್ನು ಕೊಡುತ್ತದೆ. ಒಳ್ಳೆಯ ಫಸಲು ಬರುತ್ತದೆ.

ಹಸುರು ಸೊಪ್ಪನ್ನು ಮೇಲೆ ತಿಳಿಸಿರುವ ಪದ್ಧತಿಯಲ್ಲಿ ಅಲ್ಲದೆ ಗುಂಡಿಗಳಲ್ಲಿ ಹಾಕಿ ಗೊಬ್ಬರ ಮಾಡುವ ಪದ್ಧತಿ ಅನೇಕ ಕಡೆಗಳಲ್ಲಿ ಇದೆ. ಬೇಸಾಯದ ಭೂಮಿಗಳಲ್ಲಿ ತೇವ ಇರುವಂತಹ ಪ್ರದೇಶಗಳಲ್ಲಿ ಗುಂಡಿಯನ್ನು ಮಾಡಿ ಹಸುರು ಸೊಪ್ಪು, ಅದರ ಹೂಗಳನ್ನು ಹಾಕಿ ಮಣ್ಣನ್ನು ಮುಚ್ಚುತ್ತಾರೆ. ಕೆಲವು ದಿವಸಗಳ ಬಳಿಕ ಎಲೆ ಹೂಗಳು ಕೊಳೆತು ಮಣ್ಣಿನ ಮಿಶ್ರಣದಿಂದ ಒಳ್ಳೆಯ ಗೊಬ್ಬರವಾಗುತ್ತದೆ. ಹಸುರು ಗೊಬ್ಬರ ಪದ್ಧತಿ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಾ ಇದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಈ ಗೊಬ್ಬರ ಎಲ್ಲಾ ಸೇಂದ್ರಿಯ ಗೊಬ್ಬರಗಳಗಿಂತಲೂ ಅಗ್ಗವಾದುದು. ಬಡರೈತರಿಗೆ ಅನುಕೂಲವಾದದ್ದು. ಹೆಚ್ಚಿನ ವೆಚ್ಚ ತಗುಲುವುದಿಲ್ಲ. ಇದನ್ನು ಉಪಯೋಗಿಸುವುದರಿಂದ ಫಸಲು ಹೆಚ್ಚಿಗೆ ಬರುತ್ತದೆ. ಹೊಂಗೆ, ಬೇವು, ಸೀತಾಫಲ ಮುಂತಾದ ಗಿಡಮರಗಳ ಗೊಬ್ಬರ ಹಾಕುವುದರಿಂದ ಪೈರಿಗೆ ರೋಗವು ಬರುವುದಿಲ್ಲ. ರಾಸಾಯನಿಕ ಗೊಬ್ಬರದೊಂದಿಗೆ ಹಸುರು ಗೊಬ್ಬರವನ್ನು ಹಾಕುವುದರಿಂದ ಮೂರು ನಾಲ್ಕು ಪಾಲು ಹೆಚ್ಚಿನ ಬೆಳೆ ತೆಗೆಯಬಹುದು. ಅದಲ್ಲದೆ ಇದು ಮುಂದಿನ ಬೆಳೆಗೆ ಸತ್ವವನ್ನು ಕೊಡುವುದಲ್ಲದೆ ಭೂಮಿಯ ಸತ್ವವನ್ನು ಕಾಪಾಡುತ್ತದೆ. ಈ ಕಾರಣಗಳಿಂದ ಸೊಪ್ಪಿನ ಗೊಬ್ಬರ ಆಂಧ್ರ ಪ್ರದೇಶದ ಹೆಚ್ಚಿನ ಭಾಗಗಳಲ್ಲಿ ಜನಪ್ರಿಯವಾಗುತ್ತಿದೆ.

ಮಲಮೂತ್ರ ಗೊಬ್ಬರ : ಮಾನವನ ಮಲದಿಂದ ತಯಾರಾಗುತ್ತಿದ್ದ ಗೊಬ್ಬರ. ಮಲಮೂತ್ರಾದಿಗಳನ್ನು, ದೊರೆಯುವ ಕಸಕಡ್ಡಿಗಳನ್ನು ಬೆರಸಿ 'ಕಕ್ಕಸು ದಿಬ್ಬ'ಗಳಲ್ಲಿ ಸುಮಾರು ಹತ್ತು ಅಡಿ ಅಗಲ, ಮೂವತ್ತು ಅಡಿ ಉದ್ದ, ನಾಲ್ಕು ಐದು ಅಡಿ ಆಳವಿರುವ ಗುಂಡಿಗಳನ್ನು ಮಾಡಿ ಅದರಲ್ಲಿ ಮಲ ಕಸಕಡ್ಡಿಗಳನ್ನು ಹಾಕುವ ಸ್ಥಳಗಳನ್ನು ಕಕ್ಕಸು ದಿಬ್ಬಲು ಅನ್ನುತ್ತಿದ್ದರು. ಗಳಲ್ಲಿ ಹಾಕಿ ಮಣ್ಣು ಮುಚ್ಚಿದರೆ. ಆರೇಳು ತಿಂಗಳ ಅನಂತರ ಒಳ್ಳೆಯ ಗೊಬ್ಬರವಾಗಿ ಹದಕ್ಕೆ ಬರುತ್ತಿತ್ತು. ಕೆಲವು ಸಲ ಮಣ್ಣಿನ ಜೊತೆಗೆ ಬೂದಿಯನ್ನು ಸಹಾ ಹಾಕುತ್ತಿದ್ದರು. ಮಲಮೂತ್ರ ಗೊಬ್ಬರ ಶ್ರೇಷ್ಠ ಭೂಸತ್ವ ಹೆಚ್ಚಿಸುವ ವಸ್ತು ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಮಲವನ್ನು ಗೊಬ್ಬರವನ್ನಾಗಿ ಬಳಸಲು ರೈತರು ಅಸಮಾಧಾನವನ್ನು ವ್ಯಕ್ತಮಾಡುತ್ತಿದ್ದರು. ಒಳಚರಂಡಿಯ ವ್ಯವಸ್ಥೆ ಬಂದನಂತರ ಕಕ್ಕಸು ದಿಬ್ಬೆಗಳು, ಕಕ್ಕಸು ಗೊಬ್ಬರ ಬಳಸಲು ಇಲ್ಲದಂತಾಗಿದೆ.

ಮಣ್ಣಿನ ಗೊಬ್ಬರ : ಮಣ್ಣು ಗೊಬ್ಬರಗಳಲ್ಲಿ ಅತಿಮುಖ್ಯವಾದುದು ಕೆರೆ ಮಣ್ಣು / ಜೇಡಿ ಮಣ್ಣಿನ ಗೊಬ್ಬರ. ಮಳೆಗಾಲದಲ್ಲಿ ಕೆರೆಗೆ ಬರುವ ನೀರಿನ ಪ್ರವಾಹದ ಜೊತೆಗೆ ಎಲೆ, ಸಗಣಿ, ಕಸಕಡ್ಡಿ ಮುಂತಾದವು ಸೇರಿಕೊಂಡು ಬರುತ್ತವೆ. ಇವು ಐದಾರು ತಿಂಗಳ ಅವಧಿಯಲ್ಲಿ ನೀರಿನಲ್ಲಿ ಕೊಳೆತು ಕೆರೆ ಮಣ್ಣಿನಲ್ಲಿ ಮಿಶ್ರಣ ವಾಗಿ ಗೋಡು ಮಣ್ಣಾಗಿ ಪರಿವರ್ತನೆಗೊಳ್ಳುತ್ತವೆ. ಬೇಸಗೆಯ ಕಾಲದಲ್ಲಿ ಕೆರೆಗಳು ಬತ್ತಿ ಹೋದ ಅನಂತರ ಈ ರೀತಿಯ ಮಣ್ಣನ್ನು ರೈತರು ಶೇಖರಣೆ ಮಾಡಿ ಹೊಲ ಗದ್ದೆಗಳಲ್ಲಿ ಹಾಕುತ್ತಾರೆ. ಇದರಿಂದ ಒಳ್ಳೆಯ ಫಸಲು ಬರುತ್ತದೆ. ಮುಖ್ಯವಾಗಿ ಮರಳು ಭೂಮಿ ಹೆಚ್ಚಿಗೆ ಇರುವ ಶೇಂಗಾ ಹೊಲಗಳಲ್ಲಿ ಜೇಡಿಮಣ್ಣು, ಸುಟ್ಟು ಮಣ್ಣನ್ನು ಹಾಕುತ್ತಾರೆ. ರಾಗಿ ಹೊಲಗಳಲ್ಲಿ ಸಹಾ ಇದನ್ನು ಹಾಕುತ್ತಾರೆ.

ಸಾಮಾನ್ಯವಾಗಿ ಜನವರಿ ಇಂದ ಮಾರ್ಚ್ ತಿಂಗಳ ತನಕ ಕೆರೆ ಕುಂಟೆಗಳ ದಡಗಳಲ್ಲಿ ಇಟ್ಟಿಗೆಯ ಗೂಡುಗಳಲ್ಲಿ ಇಟ್ಟಿಗೆ ತಯಾರು ಮಾಡುತ್ತಾರೆ. ಇಟ್ಟಿಗೆಗಳು ಸುಟ್ಟ ಅನಂತರ ಬರುವ ಬೂದಿಯನ್ನು ಕೆಂಪು ಮಣ್ಣು ಅಥವಾ ಜೇಡಿ ಮಣ್ಣಿನ ಜೊತೆಗೆ ಮಿಶ್ರಣ ಮಾಡಿ ಗೊಬ್ಬರವಾಗಿ ಉಪಯೋಗಿಸುತ್ತಾರೆ.

ಕೋಳಿಗೊಬ್ಬರ : ಈಗಲೂ ಗ್ರಾಮೀಣ ಪ್ರದೇಶದ ಜನರು ನಾಲ್ಕು ಐದರಿಂದ ಇಪ್ಪತ್ತು ಮೂವತ್ತು ಕೋಳಿಗಳನ್ನು ಸಾಕುತ್ತಾರೆ. ಅದರ ಹಿಕ್ಕೆಯನ್ನು ಸಗಣಿ ಹಾಕುವ ತಿಪ್ಪಿಗೆ ಹಾಕುತ್ತಾರೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಕೋಳಿ ಸಾಕಾಣೆಗೆ ಒಂದು ಉದ್ಯಮವಾಗಿ ಬೆಳೆದ ಅನಂತರ ಕೋಳಿಯ ಮಲವನ್ನು ಗೊಬ್ಬರವನ್ನಾಗಿ ಉಪಯೋಗಿಸುವಂತಹ ಪದ್ಧತಿ ಅನೇಕ ಕಡೆಗಳಲ್ಲಿ ರೂಢಿಯಲ್ಲಿದೆ. ಆದರೆ ಕೋಳಿ ಗೊಬ್ಬರವನ್ನು ನಿಯಮಿತ ಪ್ರಮಾಣದಲ್ಲಿ ಕೆಲವು ಬೆಳೆಗಳಿಗೆ ಮಾತ್ರ ಉಪಯೋಗಿಸ ತಕ್ಕದ್ದು.

ಪಾರಿವಾಳ, ಬಾವಲಿ ಮತ್ತು ವಿವಿಧ ಪಕ್ಷಿಗಳ ಗೊಬ್ಬರ : ಎತ್ತರವಾದ ಭವನಗಳ ಮೇಲೆ ವಾಸಿಸುವ ಪಾರಿವಾಳಗಳ ಹಿಕ್ಕೆಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಹಳ್ಳಿಗಳಲ್ಲಿ ಕೆಲವು ಕಡೆ ಗುಹೆಗಳು ಇರುತ್ತವೆ. ಇಂತಹ ಗುಹೆಗಳಲ್ಲಿರುವ ಬಾವಲಿಗಳ ಹಿಕ್ಕೆಯನ್ನು ರೈತರು ಶೇಖರಣೆ ಮಾಡಿ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಕುಪ್ಪಂ, (ಆಂಧ್ರಪ್ರದೇಶ, ಚಿತ್ತೂರು ಜಿಲ್ಲೆ) ಅತ್ತಿನತ್ತಂ ಗ್ರಾಮದ ಸಮೀಪದಲ್ಲಿರುವ 'ಜಪ್ಪಟಾಯಲಗುಹ' (ಬಾವಲಿ ಗುಹೆ)ಯಲ್ಲಿ ಬಾವಲಿಗಳ ಹಿಕ್ಕೆಯನ್ನು ಶೇಖರಣೆ ಮಾಡಿ ಗೊಬ್ಬರವನ್ನಾಗಿ ಉಪಯೋಗಿಸುತ್ತಾರೆ. ಬಾವಲಿಗಳು ವಿವಿಧ ರೀತಿಯ ಮರದ ಎಲೆಗಳನ್ನು, ಚಿಕ್ಕ ಕೀಟಗಳನ್ನು ತಿನ್ನುವುದರಿಂದ ಇದರ ಹಿಕ್ಕೆ ಅತ್ಯಂತ ಸಾರಯುಕ್ತವಾಗಿರುತ್ತದೆ ಎಂದು ಈ ಪ್ರಾಂತದ ರೈತರು ಹೇಳುತ್ತಾರೆ.

ಆಂಧ್ರಪ್ರದೇಶ ಕೋನಸೀಮ, ಕೋಸ್ತಾ ಪ್ರಾಂತಗಳಲ್ಲಿ ನೀರಿನ ಪ್ರಮಾಣ ಜಾಸ್ತಿ ಇರುವುದರಿಂದ, ಗಿಡಮರಗಳು ಹೆಚ್ಚಾಗಿ ಇರುವುದರಿಂದ, ಬಾತುಕೋಳಿ ಸಾಕುತ್ತಾರೆ. ಇದರ ಹಿಕ್ಕೆ ಗೊಬ್ಬರವಾಗಿ ಉಪಯೋಗಕ್ಕೆ ಬರುತ್ತದೆ. ಮೇಲೆ ಹೇಳಿರುವ ಗೊಬ್ಬರಗಳು ಮಾನವ ಪ್ರಯತ್ನದಿಂದ ಹೊಲಕ್ಕೆ ಸೇರುತ್ತವೆ. ಆದರೆ ಮನುಷ್ಯನ ಪ್ರಯತ್ನವಿಲ್ಲದೆ ಹೊಲಕ್ಕೆ ಗೊಬ್ಬರವನ್ನು ಸೇರಿಸುವ ಕೆಲವು ಹಕ್ಕಿಗಳಿವೆ. ದೇಶೀ ಮತ್ತು ವಿದೇಶೀ ಹಕ್ಕಿಗಳು, ಆ ಪ್ರಾಂತ್ಯದಲ್ಲೇ ಸದಾಕಾಲ ಗದ್ದೆಗಳ ಅಂಚಿನ ಮರಗಳಲ್ಲಿ ವಾಸಿಸುವ ಆ ಪ್ರಾಂತದ ಹಕ್ಕಿಗಳು - ಕೊಕ್ಕರೆ ಕಾಗೆ ಮುಂತಾದವು. ಅಲ್ಲದೆ ವಿದೇಶಗಳಿಂದ ಇತರ ಪ್ರಾಂತ್ಯಗಳಿಂದ ಬರುವ ವಿವಿಧ ಜಾತಿಯ ಪಕ್ಷಿಗಳು ಕೋನಸೀಮ ಪ್ರಾಂತ್ಯದಲ್ಲಿ ಕಾಣಿಸುತ್ತವೆ. ವಿದೇಶಿ ಹಕ್ಕಿಗಳು ಗದ್ದೆಗಳ ಅಂಚಿನ ಮರಗಳಿಗೆ ಪ್ರತಿವರ್ಷ ನಿಯಮಿತ ಕಾಲದಲ್ಲಿ ಬಂದು ಸುಮಾರು ನಾಲ್ಕು ತಿಂಗಳ ಕಾಲದಲ್ಲಿ ಮರಿಗಳನ್ನು ಮಾಡಿ ಮತ್ತೆ ವಾಪಸ್ಸು ಹೋಗುತ್ತವೆ. ಗದ್ದೆಗಳಲ್ಲಿರುವ ಹುಳ, ಕೀಟಕಗಳನ್ನು ತಿಂದು ಹಿಕ್ಕೆಯನ್ನು ಹಾಕಿ ಮನುಷ್ಯನ ಪ್ರಯತ್ನವಿಲ್ಲದೆ ಗದ್ದೆಗಳನ್ನು ಸಾರವತ್ತಾಗಿ ಮಾಡುತ್ತವೆ. ಪೈರನ್ನು ನಾಶ ಮಾಡುವ ಕ್ರಿಮಿ ಕೀಟಗಳನ್ನು ತಿಂದು ಗೊಬ್ಬರವನ್ನಾಗಿ

ಪರಿವರ್ತಿಸುವ ಈ ಹಕ್ಕಿಗಳ ಸೇವೆಯನ್ನು ಗುರುತಿಸಿದ ಹಳ್ಳಿಯ ಜನರು ಹಕ್ಕಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದರೆ ಆ ಊರಿಗೆ ಸಮೃದ್ಧಿಯ ಭಾಗ್ಯ ಬರುತ್ತದೆ ಎಂದು ನಂಬುತ್ತಾರೆ. ಈ ಹಕ್ಕಿಗಳು ಗೂಡು ಕಟ್ಟುವಾಗ, ಮರಿಗಳನ್ನು ಮಾಡುವಾಗ ಜೋಪಾನವಾಗಿ ಕಾಪಾಡುತ್ತಾರೆ. ಕರ್ನಾಟಕದಲ್ಲಿರುವ ಅನೇಕ ಪಕ್ಷಿ ಧಾಮಗಳಲ್ಲಿ, ಹಳ್ಳಿಗಳಲ್ಲಿ ಇಂದಿಗೂ ಇದೇ ರೀತಿ ಮಾಡುತ್ತಾರೆ. ಸಸ್ಯ ಕುಲವನ್ನು ಪ್ರಾಣಿ ಕುಲವನ್ನು ಕಾಪಾಡಿದರೆ ನಮ್ಮನ್ನು ನಾವು ಕಾಪಾಡಿಕೊಂಡ ಹಾಗೆ.

ಕತ್ತೆ-ಕುದುರೆ ಗೊಬ್ಬರ : ತೋಟಗಾರಿಕೆಯಲ್ಲಿ ಕೆಂಪುಮಣ್ಣಿನ ಜೊತೆ ಕತ್ತೆ, ಕುದುರೆ ಲದ್ದಿಗಳನ್ನು ಮಿಶ್ರಣಮಾಡಿ ಉಪಯೋಗಿಸುವುದರಿಂದ ಗಿಡಗಳು ಸೊಗಸಾಗಿ ಬೆಳೆದು ನಾಣ್ಯವಾದ ಹೂಗಳು ಬರುತ್ತವೆ. ಕತ್ತೆ ಕುದುರೆಗಳು ಗರಿಕೆ ಹುಲ್ಲು, ಹುರುಳಿ ಹೆಚ್ಚಿಗೆ ತಿನ್ನುವುದರಿಂದ ಅದರ ಲದ್ದಿ ಒಳ್ಳೆಯ ಗೊಬ್ಬರವೆಂದು ಹೇಳುತ್ತಾರೆ. ಕತ್ತೆ - ಕುದುರೆ ಲದ್ದಿಯ ಗೊಬ್ಬರ ಹೆಚ್ಚಿನ ಪ್ರಮಾಣದಲ್ಲಿ ಸಿಗುವುದಿಲ್ಲ. ಆದ್ದರಿಂದ ಇದರ ಬೆಲೆ ಜಾಸ್ತಿ.

ಮೂಳೆ ಗೊಬ್ಬರ : ಇದನ್ನು ಜನಪ್ರಿಯ ಗೊಬ್ಬರವೆಂದು ಕರೆಯುತ್ತಾರೆ. ಎಲುಬುಗಳಲ್ಲಿ ರಂಜಕಾಮ್ಲ, ಸುಣ್ಣ ಹೆಚ್ಚಾಗಿರುವುದರಿಂದ ಸಸ್ಯಗಳು ಚೆನ್ನಾಗಿ ಬೆಳೆಯುವುದಕ್ಕೆ ಸಹಾಯಕವಾಗುತ್ತವೆ.

ಎರೆಹುಳುವಿನ ಗೊಬ್ಬರ : ಎರೆಹುಳುಗಳು ಜಮೀನಿನಲ್ಲಿ ಕೃಷಿ ತ್ಯಾಜ್ಯವಸ್ತುಗಳಾದ ತರಗೆಲೆ, ಕಸ, ಕೊಳೆ ಮುಂತಾದವುಗಳನ್ನು ತಿಂದು ಮಲಮೂತ್ರದ ರೂಪದಲ್ಲಿ ಉಪಯುಕ್ತವಾದ ಸಾವಯವ ಗೊಬ್ಬರವನ್ನು ಮಣ್ಣಿಗೆ ಸೇರಿಸುತ್ತವೆ. ಈ ಗೊಬ್ಬರವನ್ನು ಮಾಡಬೇಕಾದರೆ ಗುಂಡಿಯಲ್ಲಿ ಒಂದು ಭಾಗ ಸಗಣಿ, ಎರಡು ಭಾಗ ಹಸುರೆಲೆ, ಎರಡುಭಾಗ ಒಣ ಎಲೆ ಮಿಶ್ರಣವನ್ನು ತುಂಬಿ 15 ದಿನಗಳವರೆಗೆ ಕಳಿಸಿ ಅನಂತರ ಎರೆ ಹುಳುಗಳನ್ನು ಈ ಗುಂಡಿಯಲ್ಲಿ ಬಿಟ್ಟರೆ ಭಾಗಶಃ ಕೊಳೆತ ಪದಾರ್ಥಗಳನ್ನು ಹುಳುಗಳು ತಿಂದು ಗೊಬ್ಬರವಾಗಿ ಮಾರ್ಪಾಡು ಮಾಡುತ್ತವೆ. ಆದರೆ ಗುಂಡಿಯಲ್ಲಿ ತೇವಾಂಶ ಇರುವ ಹಾಗೆ ನೋಡಿ ಕೊಳ್ಳುವುದು ಅತೀ ಮುಖ್ಯ.

ಮೇಲೆ ತಿಳಿಸಿರುವ ಗೊಬ್ಬರಗಳಲ್ಲದೆ ಧಾನ್ಯಗಳನ್ನು ಸಂಸ್ಕರಣೆ ಮಾಡುವಾಗ ಬರುವ ಹೊಟ್ಟು, ಅಕ್ಕಿ ತೊಳೆದ ನೀರು, ಮೀನಿನ ತ್ಯಾಜ್ಯಗಳು, ಮನುಷ್ಯನ ಕೂದಲು ಉಪ್ಪು ಮುಂತಾದವುಗಳನ್ನು ಸಹಾ ಗೊಬ್ಬರದಂತೆ ಉಪಯೋಗಿಸುತ್ತಾರೆ. ರಸದಿಂದ ಕಸವನ್ನು ತೆಗೆಯುವ ಕೆಲಸದಲ್ಲಿ ಗೊಬ್ಬರದ ಪ್ರಾತಿನಿಧ್ಯ ಅತಿಮುಖ್ಯವಾದದ್ದು ಎಂದರೆ ತಪ್ಪಾಗಲಾರದು. ಗೊಬ್ಬರ ಇಲ್ಲದೆ ಬೆಳೆಗಳು ಇಲ್ಲ, ಬೆಳೆ ಇಲ್ಲದೆ ಮನುಷ್ಯನೂ ಇಲ್ಲ, ಆದರೆ ಮನುಷ್ಯನು ಹೆಚ್ಚಿನ ಕಾಲ ಬದುಕುವುದಕ್ಕೆ, ಆರೋಗ್ಯವಂತವಾದ ಜೀವನ ನಡೆಸುವುದಕ್ಕೆ ವಿಷಮುಕ್ತವಾದ, ರಾಸಾಯನಿಕ ಮುಕ್ತವಾದ ಆಹಾರ ಬೇಕಾಗಿದೆ. ಇದನ್ನು ನಾವು ಸಾಂಪ್ರದಾಯಿಕ ದೇಶೀ ಗೊಬ್ಬರದಿಂದ ಮಾತ್ರ ಪಡೆಯುವುದಕ್ಕೆ ಸಾಧ್ಯ.

ರಾಸಾಯನಿಕ (ರಸ) ಗೊಬ್ಬರಗಳನ್ನು ಫಸಲಿಗೆ ಹೆಚ್ಚಿನ ಉಪಯೋಗಿಸುವುದರಿಂದ ವಿಷಯುಕ್ತವಾದ ಆಹಾರವನ್ನು ನಾವು ತಿನ್ನುತ್ತಿದ್ದೇವೆ. ಮನುಷ್ಯ ಇದರಿಂದ ರೋಗ ಗ್ರಸ್ತನಾಗುತ್ತಿದ್ದಾನೆ. ಇಳುವರಿ ಅಧಿಕವಾಗಿ ಬಂದರೂ ಸ್ವಲ್ಪ ಕಾಲದಲ್ಲೇ ಕೆಡುವ ಸ್ವಭಾವವನ್ನು ಹೊಂದಿರುತ್ತದೆ. ಧಾನ್ಯಗಳಲ್ಲಿ, ತರಕಾರಿಯಲ್ಲಿ ಸತ್ತ್ವವು ಇರುವುದಿಲ್ಲ. ಭೂಮಿಯಲ್ಲಿರುವ ಸತ್ತ್ವವು ಕ್ರಮೇಣ ನಿರ್ನಾಮವಾಗುತ್ತದೆ. ಈ ಅಂಶಗಳನ್ನು ಗಮನಿಸಿದ ಆಂಧ್ರ ರೈತಾಪಿ ಜನ ಈಗ ದೇಶೀ ಗೊಬ್ಬರಗಳ ಕಡೆ ಆಸಕ್ತಿ ತೋರಿಸುತ್ತಿದ್ದಾರೆ.

ಆಂಧ್ರಪ್ರದೇಶದ ಗೊಬ್ಬರಗಳು

ತೆಲುಗು	ಕನ್ನಡ
ಎರುವು	ಗೊಬ್ಬರ

I. ಕೊಟ್ಟಿಗೆ ಗೊಬ್ಬರಗಳು

ಪೇಡ	ಸಗಣಿ
ಪಿಚಿಕಲು	ಹಿಕ್ಕೆ (ಮೇಕೆ, ಕುರಿ)
ಗಂಜರಂ	ಗಂಜಲ

II. ಕಾಂಪೋಸ್ಟ್ ಕಾಂಪೋಸ್ಟ್

III. ಹಿಂಡಿ ಗೊಬ್ಬರಗಳು

ವೇರಶನಗಪಿಂಡಿ	-	ಶೇಂಗಾಹಿಂಡಿ
ಪತ್ತಿಪಿಂಡಿ	-	ಹತ್ತಿಬೀಜದ ಹಿಂಡಿ
ಕಾನಗ ಪಿಂಡಿ	-	ಹೊಂಗೆಹಿಂಡಿ
ವೇಪಪಿಂಡಿ	-	ಬೇವಿನ ಹಿಂಡಿ
ಕುಸುಮ ಪಿಂಡಿ	-	ಕುಸುಬೆ ಹಿಂಡಿ
ಆಮುದಂ ಪಿಂಡಿ	-	ಹರಳು ಹಿಂಡಿ

IV. ಹಸುರು ಎಲೆ ಗೊಬ್ಬರ

ಕಾನಗ	-	ಹೊಂಗೆ
ವೇಪ	-	ಬೇವು
ಪಗಿಡಿತಂಗೇಡು	-	ಪಗಿಡಿತಂಗೇಡು
ಸೀತಾಫಲ	-	ಸೀತಾಫಲ

V. ಬೆಳೆ ತ್ಯಾಜ್ಯ ವಸ್ತುಗಳು

ಮೊಕ್ಕಜೊನ್ನದಂಟು	-	ಮುಸುಕಿನ ಜೋಳದ ದಂಟು
ವರಿಗಡ್ಡಿ	-	ಬತ್ತದಹುಲ್ಲು
ಸಜ್ಜದಂಟು	-	ಸಜ್ಜೆಯ ದಂಟು
ಶೆನಕ್ಕಾಯ ಪೊಟ್ಟು	-	ಕಡಲೆಕಾಯಿ ಸಿಪ್ಪೆ
ವರಿಪೊಟ್ಟು	-	ಬತ್ತದಹೊಟ್ಟು
ಚೆರಕು ಸೋಗು	-	ಕಬ್ಬಿನ ಸೋಗೆ

VI. ಹೂಗಳ ಗೊಬ್ಬರಗಳು

ಕಾನಗುಪೂಲು	-	ಹೊಂಗೆಹೂವು
ಚಿಂತಪೂಲು	-	ಹುಣಿಸೆಹೂವು
ವೇಪಪೂಲು	-	ಬೇವಿನ ಹೂವು

VII. **ಮಲಮೂತ್ರಂ ಎರುವು / ಕಕ್ಕಸು ಎರುವು - ಮಲಮೂತ್ರ ಗೊಬ್ಬರ**

VIII. **ಪಕ್ಷುಲ ಎರವುಲು - ಹಕ್ಕಿಗಳ ಗೊಬ್ಬರ**

ಕೋಡಿ ಎರುವು	-	ಕೋಳಿಗೊಬ್ಬರ
ಪಾವುರಾಲ ಎರುವು	-	ಪಾರಿವಾಳ ಗೊಬ್ಬರ
ಜಿಪುಟಾಯಿ/ಗಬ್ಬಿಲಂ ಎರುವು	-	ಬಾವಲಿ ಗೊಬ್ಬರ
ರಕರಕಾಲ ಪಕ್ಷುಲ ಎರುವು	-	ವಿವಿಧಹಕ್ಕಿಗಳ ಗೊಬ್ಬರ
ಬಾತು/ಕೊಂಗಲು	-	ಬಾತು, ಕೊಕ್ಕರೆ

IX. **ಇತರ ಜಂತುವುಲ ಎರುವು - ಇತರೆ ಪ್ರಾಣಿಗಳ ಗೊಬ್ಬರ**

ಗಾಡಿದಲದ್ದಿ	-	ಕತ್ತೆಲದ್ದಿ
ಗುರ್ರಂ ಲದ್ದಿ	-	ಕುದುರೆಲದ್ದಿ
ಎಮುಕಲ ಎರುವು	-	ಮೂಳೆಗೊಬ್ಬರ

X. **ವಾನಪಾಮುಲ ಎರುವು - ಎರೆ ಹುಳುಗಳ ಗೊಬ್ಬರ**

XI. **ಮಟ್ಟಿಎರುವಲು - ಮಣ್ಣಿನ ಗೊಬ್ಬರಗಳು**

ಬಂಕಮಟ್ಟಿ	-	ಕೆರೆಮಣ್ಣು (ಜೇಡಿಮಣ್ಣು)
ಇಟುಕ ಗೂಡುಮಟ್ಟಿ/ಬೂಡಿದ	-	ಇಟ್ಟಿಗೆ ಗೂಡಿನ ಮಣ್ಣು / ಬೂದಿ

ಎನ್.ಟಿ.

ಆಂಧ್ರಪ್ರದೇಶದ ಜಮೀನ್ದಾರಿ ಪದ್ಧತಿ ಆಂಧ್ರ ಪ್ರದೇಶದ ಪ್ರಾಚೀನ ಚರಿತ್ರೆಯಲ್ಲಿ ಇತ್ತೀಚಿನ ಜಮೀನ್ದಾರಿ ಪದ್ಧತಿ ಇದ್ದಂತೆ ಕಾಣುವುದಿಲ್ಲ. ಹಿಂದಿನ ಹಿಂದೂ ರಾಜರು ತಮ್ಮ ಸ್ವಾಧೀನದಲ್ಲಿದ್ದ ಪ್ರದೇಶಗಳಲ್ಲಿ ಅಲ್ಲಿಯ ರೈತರಿಂದ ತಮ್ಮ ಕಡೆಯಿಂದ ಕಂದಾಯವನ್ನು ವಸೂಲಿಮಾಡಲು ಕೆಲವರು ನೌಕರರನ್ನು ನೇಮಿಸುತ್ತಿದ್ದರು. ಹದಿನಾರನೆಯ ಶತಮಾನದಲ್ಲಿ ಅಂದಿನ ಮಹಮ್ಮದೀಯ ಆಳ್ವಿಕೆಗಾರರು ಮತ್ತು ಅನಂತರ ಬಂದ ಬ್ರಿಟಿಷ್ ಸರಕಾರವು ಸಹ ಕಂದಾಯವನ್ನು ವಸೂಲಿ ಮಾಡಲು ಈ ಪದ್ಧತಿಯನ್ನೇ ಅವಲಂಬಿಸಿ, ಆ ಅಧಿಕಾರಿಗಳನ್ನು ಬದಲಾಯಿಸದೇ ತಮ್ಮ ಕಡೆಯಿಂದಲೂ ನಿಯೋಜಿಸಿದರು. ಇವರೇ ಜಾಗೀರ್ದಾರರು, ಮೊಖಾಸಾ, ಹವೇಲೀದಾರರು, ಈನಾಂ, ಶ್ರೋತ್ರಿಯರು, ಪಾಳೇಗಾರರು ಇತ್ಯಾದಿ. ಇವರುಗಳನ್ನೇ ಹಿಂದೆ ಚೌದರೀ, ಕ್ರೋರೀ ಎಂದು ಸಹ ಕರೆಯುತ್ತಿದ್ದರು. ಇವರು ತಮ್ಮ ಆಳ್ವಿಕೆಗಾರರಿಗೆ ವಿಧೇಯರಾಗಿ, ಭೂಮಿಯ ಮೇಲೆ ಸ್ವತಂತ್ರವಾದ ಹಕ್ಕಿಲ್ಲದೆ, ಕಂದಾಯ ವಸೂಲಿ ವಿನಃ ,ಇನ್ಯಾವ ವಿಧವಾದ ಅಧಿಕಾರಗಳಿಲ್ಲದೇ ಆಡಳಿತಗಾರರ ಆಗ್ರಹಕ್ಕೆ ಗುರಿಯಾದ ಸಂದರ್ಭದಲ್ಲಿ ಬರ್ತರಫ್ ಮತ್ತು ಶಿಕ್ಷೆಗಳನ್ನು ಸಹ ಅನುಭವಿ ಸುತ್ತಿದ್ದರು. ಹಿಂದೂ ಮಹಮ್ಮದೀಯ ಸರ್ಕಾರದವರು ತಮಗೆ ಸೈನಿಕ ಸಹಾಯ ಮಾಡಿದವರಿಗೆ, ತಾವು ಹೆಚ್ಚು ಸೇವೆಯನ್ನು ಪಡೆದ ಸರ್ಕಾರಿ ಉದ್ಯೋಗಿಗಳಿಗೆ ದೊಡ್ಡ ದೊಡ್ಡ ಭೂಮಿಗಳನ್ನು ಕಂದಾಯವನ್ನು ವಸೂಲಿಮಾಡಿ ತಮ್ಮ ಭಾಗವನ್ನು ಸಲ್ಲಿಸಿ, ಮಿಕ್ಕ ಹಣವನ್ನು ತಾವಿಟ್ಟುಕೊಳ್ಳುವ ಪದ್ಧತಿಯ ಮೇಲೆ 'ಇನಾಂ'ಗಳಾಗಿ ಕೊಟ್ಟರು; ಇವರುಗಳನ್ನೇ ಮಹಮ್ಮದೀಯರು 'ಜಾಗೀರ್‌ದಾರರು' ಎಂದೂ ಹಿಂದೂಗಳು 'ಇನಾಂದಾರರು' ಎಂದೂ ಕರೆದರು. ವಿದ್ಯಾ ವೈಜ್ಞಾನಿಕ ವಿಷಯಗಳಲ್ಲಿ ಹೆಚ್ಚು ಕೃಷಿ ಮಾಡಿದವರಿಗೆ, ದೇವಸ್ಥಾನಗಳು, ಛತ್ರಗಳು, ಇನ್ನೂ ಇತರ ಧಾರ್ಮಿಕ ಕಾರ್ಯನಿರ್ವಹಣೆಗೆ ಕೆಲವು ಭೂಮಿಗಳನ್ನು ಬಹುಮಾನ (ಇನಾಂ)ವಾಗಿ ಕೊಡುತ್ತಿದ್ದರು. ಇವರನ್ನು ಶ್ರೋತ್ರಿಯರು (ಶ್ರೋತ್ರಿಯಂದಾರುಲು), 'ಅಗ್ರಹಾರೀಕುಲು' ಎನ್ನುವರು. ಒಂದೊಂದು ಭೂಮಿಯನ್ನು ಸ್ವಲ್ಪ ಸ್ವಲ್ಪ ಭಾಗಗಳನ್ನಾಗಿ ಮಾಡಿ 'ಹವೇಲಿ' ಅಥವಾ 'ಮೊಖಾಸಾ' ಕಂದಾಯವನ್ನು ವಸೂಲಿಮಾಡಲು ಸರ್ಕಾರದವರು ಕೆಲವರಿಗೆ ಕೊಡುತ್ತಿದ್ದರು. ಇವರನ್ನು ಹವೇಲೀದಾರರು (ಹವೇಲಿದಾರ್ಲು) ಅಥವಾ 'ಹವೇಲೀ ಪ್ರೊಪ್ರೈಟರ್ಲು', 'ಮೊಖಾಸಾದಾರ್ಲು' ಎನ್ನುವರು. ಕೆಲವರು ಮೋಖಾಸಾದಾರರು ನೇರವಾಗಿ ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುತ್ತಿದ್ದರು. ಪಾಳೀಯೆಂದರೆ ಸರ್ಕಾರದ ಪರವಾಗಿ ಕಂದಾಯವನ್ನು ವಸೂಲಿ ಮಾಡಿದ ಫಲವಾಗಿ ತಾವು ಅನುಭವಿಸುವ ಪ್ರತಿಫಲ ; ಇಂತಹವರು 'ಪರ್ಮನೆಂಟ್ ಸೆಟಲ್ಮೆಂಟ್'ಗೆ ಹಿಂದೆ ಅಷ್ಟೇನೂ ಒಳ್ಳೆಯ ಸ್ಥಿತಿಯಲ್ಲಿರದೆ ಸೆಟಿಲ್ಮೆಂಟ್‌ಗೆ ಅನಂತರ, ಮಿಕ್ಕ ಜಮೀಂದಾರರ ಪದ್ಧತಿಯನ್ನೆ ಅವಲಂಬಿಸಿ ಜಮೀಂದಾರರ ವರ್ಗಕ್ಕೆ ಸೇರಿದರು. ಇವರನ್ನು 'ಪಾಳೇಗಾರ'ರೆಂದರು.

ಇವಲ್ಲದೇ ಇತರ ಅಧಿಕಾರಿಗಳೊಂದಿಗೆ ಸಂಬಂಧವಿಲ್ಲದೆ ನೇರವಾಗಿ ಸರ್ಕಾರದಿಂದಲೇ ಹಕ್ಕು ಪತ್ರ (ಹಟ್ಟಾ)ಗಳನ್ನು ಪಡೆದು, ಅವರಿಗೆ ಕಂದಾಯ ಇತ್ಯಾದಿಗಳನ್ನು ಸಂದಾಯ ಮಾಡುತ್ತಾ, ಭೂಮಿಯನ್ನು ಸಾಗುವಳಿ ಮಾಡುವ ಪದ್ಧತಿಯನ್ನು ಸಹ ಬ್ರಿಟಿಷ್ ಸರ್ಕಾರದವರು ಅವಲಂಬಿಸಿದರು. ಇವುಗಳನ್ನೇ 'ರೈತ್ವಾರಿ ಭೂಮಿ'ಗಳೆಂದರು. ಎಂದರೆ ಅನುಭೋಗದಲ್ಲಿದ್ದ ಭೂಮಿಯನ್ನು ನಾಲ್ಕು ಭಾಗಗಳನ್ನಾಗಿ ಮಾಡಬಹುದು. 1. ಜಮೀಂದಾರೀ ಭೂಮಿಗಳು, 2. ರೈತ್ವಾರೀ ಭೂಮಿಗಳು, 3. ಹೋಲ್ ಇನಾಮುಲು, 4. ಮೈನರ್ ಇನಾಮುಲು ಎಂದು ತೆರಿಗೆಗಳಿಲ್ಲದೇ ಕಂದಾಯವನ್ನು ವಸೂಲಿ ಮಾಡಿಕೊಂಡು ಅನುಭವಿಸಲು ಬಹುಮಾನವಾಗಿ ಕೊಟ್ಟಿರುವವುಗಳಲ್ಲಿ, ಒಂದೊಂದು ಪ್ರದೇಶವನ್ನು ಏಕ ಮೊತ್ತವಾಗಿ ಕೊಟ್ಟಿರುವಂಥವನ್ನು ಹೋಲು ಇನಾಮುಗಳೆಂದು, ಬಿಡಿಬಿಡಿಯಾಗಿ ಕೊಟ್ಟಿರುವಂಥವನ್ನು ಮೈನರು ಇನಾಮುಗಳೆಂದು ಕರೆಯುತ್ತಿದ್ದರು.

ಮೈನರು ಇನಾಮುಗಳು 100 ರಿಂದ 120 ಎಕರೆಗಳವರೆಗೂ ಇರುವವು. ಇವು ಗ್ರಾಮಗಳಲ್ಲಿರುವ ವಿವಿಧ ವೃತ್ತಿಗಳವರಿಗೆ ತೆರಿಗೆಗಳಿಲ್ಲದೇ ಕೊಟ್ಟಿರುವ ಪ್ರದೇಶಗಳು. ಇವುಗಳಲ್ಲಿ ಮುಖ್ಯವಾದವು. 'ಗ್ರಾಮನೌಖರೀ ಇನಾಮುಲು'. ಇವುಗಳೆಲ್ಲವು 'ಎಸ್ಟೇಟ್' ಎಂಬ ಪದಕ್ಕೆ ಅನ್ವಯವಾಗುವುದರಿಂದ 'ಎಸ್ಟೇಟ್ ಲ್ಯಾಂಡ್ ಯಾಕ್ಟ್'ನಲ್ಲಿ ಸೇರಿದವು.

'ಎಸ್ಟೇಟ್ ಲ್ಯಾಂಡ್ ಆ್ಯಕ್ಟ್'ನಲ್ಲಿಯ 4ನೆಯ ಸೆಕ್ಷನ್ ಪ್ರಕಾರ ರೈತರ ಭೂಮಿಗಳಲ್ಲಿ ಕಂದಾಯ ವಸೂಲಿ ಮಾಡುವುದು ಮಾತ್ರವೇ ಜಮೀಂದಾರರ ಅಧಿಕಾರವೆಂದು ಹಿಂದೆ ನಿರ್ಣಯಿಸಲ್ಪಟ್ಟಿತು. "...The land holden is only an agent of the Government to collect

rents from them as laid down in section 4 of the Estates land Act. He is not entitled even to the possession of ryoti land, as laid down by the privy council in I.L.R. 45, Madras, 586" (Report. P. 21)

'ಪ್ರಸ್ತುತ ಕಾಲಕ್ಕೆ ಹೊಂದಿಕೆಯಾಗದಿರುವಂತಹುದು, ಹಳೆಯಕಲದ್ದು, ನಿರ್ಬಂಧಕರವಾದದ್ದು ಆದ ಪದ್ಧತಿ' ಜಮೀಂದಾರೀ ಪದ್ಧತಿಯೆಂದು ಅಂದಿನಕಾಲದ ಮದ್ರಾಸ್ ಗವರ್ನರ್ ಆದ ಎರಿಸ್ಕಿನ್ ಪ್ರಭುಗಳು ಲಂಡನ್ ಕಾಕ್ಸ್‌ಟನ್ ಹಾಲ್ ಉಪನ್ಯಾಸದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದರು. ಈ ಎಲ್ಲ ಕಾರಣಗಳಿಂದ ಭೂಮಿಗೆ ಹಕ್ಕುದಾರನು ನಿಸ್ಸಂದೇಹವಾಗಿ ರೈತನೇ ಎಂದು ತಿಳಿಯುತ್ತದೆ. ಈ ಸಮಸ್ಯೆಯ ಪರಿಷ್ಕಾರಕ್ಕಾಗಿ ಪ್ರಕಾಶಂ ಕಮಿಟೀ ಕೆಲವು ಶಿಫಾರಸ್ಸುಗಳನ್ನು ಸಹಾ ಮಾಡಿತು.

ಆಕರ : ಆಂಧ್ರ ಸರ್ವಸ್ವಮು 1942, (ಸಂ.) ಮಾಗಂಟಿ ಬಾಪಿನೀಡು

ಎಂ.ಜಿ.ಎಸ್.

ಆಂಧ್ರ ಪ್ರದೇಶದ ಮತ್ಸ್ಯ ಸಂಪತ್ತು ಮೀನು ಆಂಧ್ರಪ್ರದೇಶದ ಕರಾವಳಿ ಜನರ ಮುಖ್ಯ ಆಹಾರಗಳಲ್ಲಿ ಒಂದು. ಇವುಗಳಲ್ಲಿ ಮುಖ್ಯವಾದುವು ಬೊಚ್ಚೆ, ಕೊರೆಮೀನು, ವಾಲುಗ, ಗಂಡುಮೀನು, ಬೊಮ್ಮಡಾಲು, ಪುಲಸರೊಯ್ಯ, ಮುಟ್ಟಗಿಡಸ, ಚೆತ್ತಡೆಲ್ಲ ಇತ್ಯಾದಿ. ಆಂಧ್ರದಲ್ಲಿರುವ ಅನೇಕ ನದಿಗಳು, ಕೆರೆಗಳು, ಕಾಲುವೆಗಳಲ್ಲಿ, ಹಲವಾರು ಸಿಹಿನೀರಿನ ಹೊಂಡಗಳಲ್ಲಿ ಗೌತಮಿ, ಬೊಚ್ಚೆ, ಮುತ್ತಸಂಗಿ, ವಾಲುಗ, ಪಲುಪಜೆಲ್ಲ ಎನ್ನುವ ಮುಖ್ಯವಾದ ಸಿಹಿನೀರಿನ ಮೀನುಗಳು ಇವೆ. ಉಪ್ಪುನೀರಿನ ಮೀನುಗಳಲ್ಲಿ ಮುಖ್ಯವಾದವು ಮಾಗಂ, ಚಂದುವ ಸೊರ, ಪಂಜರಂ, ಪೀತ, ರೊಯ್ಯ, ಮುವ್ವಾಲು, ಕರ್ರಿಮೀನು ಇತ್ಯಾದಿ.

ಇವುಗಳಲ್ಲಿ ಬೊಚ್ಚೆ ಮೀನು ಕೃಷ್ಣಾನದಿಯ ಉತ್ತರದಲ್ಲಿರುವ ಸರೋವರಗಳಲ್ಲಿಯೂ ಕೃಷ್ಣ ಕಡಪ-ಕರ್ನೂಲು ಕಾಲುವೆಗಳಲ್ಲಿಯೂ ಇರುವುದು. ನೆಲ್ಲೂರು ಜಿಲ್ಲೆಯ ಸರೋವರಗಳಲ್ಲಿಯೂ ಅಧಿಕವಾಗಿರುವವು. ಚೆನ್ನಾಗಿ ಬೆಳೆದ ಬೊಚ್ಚೆ ಮೀನು 5 ಅಡಿ ಉದ್ದವಿದ್ದು 140 ಪೌಂಡು ತೂಕವಿರುವುದು. ಫಿಷರೀಸ್ ಡಿಪಾರ್ಟುಮೆಂಟ್‌ನವರು ಈ ಮೀನನ್ನು ಗೋದಾವರಿ ನದಿಯಲ್ಲಿಯೂ ಮೋಪಾಡು ರಿಜರ್ವಾಯರ್, ಮೆಟ್ಟೂರು ರಿಜರ್ವಾಯರ್‌ನಲ್ಲಿಯೂ ಬೆಳೆಸುತ್ತಿದ್ದಾರೆ. ಇದು ಸ್ವಲ್ಪ ಉಪ್ಪುನೀರಿನಲ್ಲಿಯು ಬೆಳೆಯುವುದು. ಆದರೆ ಇಂತಹ ಪ್ರದೇಶಗಳಲ್ಲಿ ಉದ್ದವಾಗಿ ಬೆಳೆಯದೇ ಗಿಡ್ಡವಾಗಿರುವುದು.

ಕರ್ರಮೀನು ಸಮುದ್ರ ಪ್ರದೇಶಗಳಲ್ಲಿ ಉಪ್ಪು ನೀರಿನಲ್ಲಿಯೇ ವಾಸಿಸಿದರೂ, ಶೀಘ್ರದಲ್ಲಿಯೇ ಸಿಹಿನೀರಿಗೂ ಹೊಂದಿಕೊಳ್ಳುವುದು. ಇದು ಪಾಚಿ ಮತ್ತು ಹುಳಗಳನ್ನು ತಿನ್ನುವುದು. ಇದು ಹೆಚ್ಚು ಉದ್ದವಿಲ್ಲದೆಯಿರುವುದರಿಂದ ವರ್ಷದುದ್ದಕ್ಕೂ ನೀರಿರುವ ಸ್ಥಳದಲ್ಲೇ ಜಾಗರೂಕತೆಯಿಂದ ಬೆಳೆಸಬೇಕು. ಇದು ತುಂಬಾ ರುಚಿಕರವಾದದ್ದು. ಮೀನು ಹುಟ್ಟಿದ ಎರಡು, ಮೂರು ವರ್ಷಗಳಲ್ಲಿ 2-3 ಅಡಿಗಳು ಬೆಳೆದು ಮೂರು ಪೌಂಡು ತೂಕವಿರುವುದು.

ಗೌರಾಮಿ ಮೀನನ್ನು ಮಾರಿಷಸ್, ಜಾವಾ ಮುಂತಾದ ಪ್ರದೇಶಗಳಿಂದ ತರಿಸಿ ಬೆಳೆಸುತ್ತಿದ್ದಾರೆ. ನೀರಿನ ಆಳದಲ್ಲಿರುವ ಪಾಚಿಯಲ್ಲಿ ಮೊಟ್ಟೆಗಳನ್ನು ಇಡುವುದು. ಇದು ಸಿಹಿನೀರಿನಲ್ಲಿ ಸಸ್ಯಾಹಾರದಿಂದಲೇ ಬೆಳೆಯುವುದು. ಒಂದೂವರೆ ಅಡಿಯಿಂದ ಎರಡು ಅಡಿಗಳವರೆಗೆ ಉದ್ದ ಬೆಳೆಯುವುದು. 20 ಪೌಂಡು ತೂಕವಿರುವುದು.

ಫಿಷರೀಸ್ ಡಿಪಾರ್ಟ್‌ಮೆಂಟ್‌ನವರು ಷಾರ್ಕ್‌ಮೀನಿ (ವಾಲುಗ, ಪಲುಪಜೆಲ್ಲ ಜಾತಿ)ನಿಂದ ಎಣ್ಣೆಯನ್ನು ತೆಗೆದು ಕಡಲೆಕಾಯಿ ಎಣ್ಣೆಯೊಂದಿಗೆ ಮಿಶ್ರಮಾಡಿ ಒಳ್ಳೆಯ 'ಎ' ವಿಟಮಿನ್‌ಗಳಿರುವ ಕಾಡ್ಲಿವರ್ ಆಯಿಲ್‌ಗಿಂತ ಎರಡರಷ್ಟು ಶಕ್ತಿಯುಳ್ಳ ಎಣ್ಣೆಯನ್ನು ತಯಾರಿಸುತ್ತಿದ್ದಾರೆ.

ಇದಲ್ಲದೇ ಫಿಷರೀಸ್ ಡಿಪಾರ್ಟ್‌ಮೆಂಟ್‌ನವರು ಹಲವು ಕಡೆ ಅನೇಕ ಫಿಷ್‌ಯಾರ್ಡ್‌ಗಳನ್ನು ಏರ್ಪಡಿಸಿ, ಅವುಗಳಲ್ಲಿ ಆಯಾ ಪ್ರದೇಶಗಳ ಶೀತೋಷ್ಣಸ್ಥಿತಿಗೆ, ನೀರಿಗೆ ಅನುಕೂಲವಾದ ಮೀನುಗಳ ಜಾತಿಗಳನ್ನು ಬೆಳೆಸಲು ಸಂಶೋಧನೆ ನಡೆಸುತ್ತಿದ್ದಾರೆ. ಅಲ್ಲದೇ ಕಡಲು ತೀರಗಳಲ್ಲಿ ಹೆಚ್ಚು ಮೀನುಗಳು ದೊರೆಯುವ ಪ್ರದೇಶಗಳಲ್ಲಿ ಮೀನುಗಳನ್ನು ಹಿಡಿದು, ಉಪ್ಪು ಹಚ್ಚಿ ಒಣಗಿಸಿ, ದಾಸ್ತಾನುಮಾಡಿ, ರಫ್ತುಮಾಡಲು ಅನುಕೂಲ ಮಾಡುತ್ತಿದ್ದಾರೆ. ಮೀನುಗಳ ಹೊಟ್ಟು ದ್ರಾಕ್ಷಿ ತೋಟಗಳಿಗೆ ಹೆಚ್ಚು ಪುಷ್ಟಿಯನ್ನು ನೀಡುವ ಗೊಬ್ಬರವಾಗಿದ್ದು ಇಳುವರಿ ಹೆಚ್ಚಾಗುತ್ತದೆ. *(ಆಕರ : ಆಂಧ್ರಸರ್ವಸ್ವಮು : ಪು. 189-190)*

ಎಂ.ಜಿ.ಎಸ್.

ಆಡು ಆರ್ಥಿಕ ದೃಷ್ಟಿಯಿಂದ ರೈತ ಸಾಕುವ ಮುಖ್ಯ ಪ್ರಾಣಿಗಳಲ್ಲಿ ಆಡು ಒಂದು. ಟೊಳ್ಳು ಕೊಂಬಿನ ಸೀಳುಗೊರಸಿನ ಮೆಲುಕು ಹಾಕುವ ಪ್ರಾಣಿಗಳ ಬಳಗಕ್ಕೆ ಸೇರಿದ್ದಾಗಿದೆ. ಇಂಗ್ಲಿಷಿನಲ್ಲಿ ಇದನ್ನು ಗೋಟ್ ಎಂದು ಕರೆಯುತ್ತಾರೆ. ಜೀವ ವಿಜ್ಞಾನದಲ್ಲಿ ಸಾಮಾನ್ಯ ಆಡಿಗೆ



ಕ್ಯಾಪ್ರಾಹಿರ್ಕಸ್ ಎಂಬ ಹೆಸರಿದೆ. ಆಡಿನ ಜಾತಿಯಲ್ಲಿ ಇಬೆಕ್ಸ್, ಮಾರ್ಕ್‌ಹಾರ್, ಟಾರ್, ಗಾಕಿ ಪರ್ವತದ ಆಡು, ಕಾಡು ಆಡುಗಳು ಸೇರಿವೆ. ಆಡು - ಕುರಿ ತುಂಬ ಹತ್ತಿರದ ಸಂಬಂಧ ಹೊಂದಿವೆ. ಇವೆರಡಕ್ಕೂ ತೀರ ಹತ್ತಿರದ ಹೋಲಿಕೆ ವ್ಯತ್ಯಾಸಗಳೂ ಇವೆ. ಹೆಣ್ಣು ಆಡನ್ನು ಮೇಕೆಯೆಂದೂ ಗಂಡನ್ನು ಹೋತವೆಂದು ಕರೆಯುವುದುಂಟು. ಆಡುಗಳಿಗೆ ಗದ್ದದ ಕೆಳಗಡೆ ಉದ್ದನೆಯ ದಾಡಿ ಇರುತ್ತದೆ, ಹೋತದಲ್ಲಿ ಇದು ಎದ್ದು ಕಾಣುತ್ತದೆ. ಆಡಿನ ಹಣೆ ಉಬ್ಬಿರುತ್ತದೆ. ಮೋಟು ಬಾಲವಿರುತ್ತದೆ. ಮೇಕೆ ಚುರುಕು

ಪ್ರಾಣಿ. ತನ್ನ ಮೇವನ್ನು ಚಟುವಟಿಕೆಯಿಂದ ಹುಡುಕಿ ತಿನ್ನುತ್ತದೆ. ಬಿಸಿಲಿಗೆ ಬಳಲುವುದಿಲ್ಲ. ಕುರಿ ಮಂದೆಯಲ್ಲಿ ಮೇಕೆಗಳನ್ನು ಇಟ್ಟುಕೊಂಡಿರುತ್ತಾರೆ. ಮೇಕೆ ಇಲ್ಲದಿದ್ದರೆ ಕುರಿ ಹಿಂಡುಗಳನ್ನು ನಡೆಸುವುದು ಕಷ್ಟ.

ಆಡುಗಳ ಮೂಲಸ್ಥಾನ ನೈಋತ್ಯ ಏಷ್ಯಾ. ಇವುಗಳ ಮೂಲ ಪರ್ಷಿಯ ಆಗಿದ್ದಿರಬಹುದೆಂದು ಪುರಾತನ ದಾಖಲೆಗಳಿಂದ ತಿಳಿದುಬರುತ್ತದೆ. ಎಂಟು - ಒಂಬತ್ತು ಸಾವಿರ ವರ್ಷಗಳ ಹಿಂದೆ ಮಾನವ ಮೊದಲು ಆಡುಗಳನ್ನು ಪಳಗಿಸಿ ತನ್ನ ನಿತ್ಯ ಜೀವನದಲ್ಲಿ ಬಳಕೆಗೆ ತಂದಿರಬಹುದು. ಕಾಡು ಆಡುಗಳು ಸ್ಪೇನ್ ದೇಶದಿಂದ ಹಿಡಿದು ಪೂರ್ವದಲ್ಲಿ ಭಾರತದವರೆಗೆ, ಉತ್ತರದಲ್ಲಿ ಮಂಗೋಲಿಯಾ ಸೈಬೀರಿಯಾ ದೇಶಗಳವರೆಗೆ ಹರಡಿವೆ. ಮಾರ್ಕ್‌ಹಾರ್ ಕಾಡು ಆಡುಗಳು ಪಾಕಿಸ್ತಾನ, ಅಫ್ಘಾನಿಸ್ತಾನ, ಕಾಶ್ಮೀರ, ಪಶ್ಚಿಮ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ವಾಸಿಸುತ್ತವೆ. ಅರೇಬಿಯಾ, ಗ್ರೀಕ್ ದ್ವೀಪ, ಈಜಿಪ್ಟ್, ಅಬಿಸಿನೀಯ ಪ್ರದೇಶಗಳಲ್ಲಿ ಕಾಡು ಆಡುಗಳು ಕಂಡು ಬರುತ್ತವೆ.

ಆಡುಗಳನ್ನು ಸಾಕಲು ವೆಚ್ಚ ಕಡಿಮೆ, ಆದಾಯ ಅಧಿಕ. 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಆಡುಗಳು ಎಲ್ಲಾ ರೀತಿಯ ಸೊಪ್ಪುಗಳನ್ನು ತಿನ್ನುತ್ತವೆ. ನೈಸರ್ಗಿಕ ಆಹಾರವೇ ಇದರ ಆಹಾರ. ಆಡುಗಳ ಗುಂಪಿನಲ್ಲಿ ಹಿರಿಯದಾದ ಮೇಕೆಯೇ ಹಿಂಡಿನ ಮುಂದಾಳು. 'ಆಡು ಹೋದ ಕಾಡು ಹಾಳು' ಎಂಬ ನಾಣ್ಣುಡಿ ಇದೆ. ಆದ್ದರಿಂದ ಆಡುಗಳನ್ನು ಬೇಸಾಯಗಾರನ, ತೋಟಗಾರನ ಬೆಳೆಗಳನ್ನು ನಾಶ ಪಡಿಸುವ ಶತ್ರುಗಳಿದ್ದಂತೆ ಎಂದು ಹೇಳುವುದು.

ಹುಲ್ಲನ್ನು ತಿನ್ನುವ ಬಳಗಕ್ಕೆ ಸೇರಿದ ಇತರ ಪ್ರಾಣಿಗಳಂತೆ, ಆಡುಗಳಲ್ಲೂ ಮೇಲ್ದವಡೆಯ ಮುಂದುಗಡೆ ಹಲ್ಲುಗಳಿಲ್ಲ. ದಂತ ಜೋಡಣೆ ಮಾತ್ರ ದನಗಳಲ್ಲಿ ಇದ್ದಂತೆ ಇರುವುದು. ಜಠರದಲ್ಲಿ ನಾಲ್ಕು ಚೀಲಗಳಿವೆ. ಮುಂಗಾಲು, ಹಿಂಗಾಲುಗಲು ಒಂದೇ ಸಮವಿಲ್ಲ. ಆಡುಗಳು 1.3 ರಿಂದ 1.4 ಮೀ. ಉದ್ದವಾಗಿಯೂ, 0.75 ರಿಂದ 1.0 ಮೀ. ಎತ್ತರವಾಗಿಯೂ ಬೆಳೆಯಬಹುದು. ಮೇಕೆ 50-55 ಕಿ.ಗ್ರಾಂ. ಹೋತ 75-120 ಕಿ.ಗ್ರಾಂ. ತೂಗುತ್ತವೆ. ಆಡಿನ ಕೊಂಬುಗಳು ಉದ್ದ ಇರುತ್ತವೆ. ಇವು ಚಪ್ಪಟೆಯಾಗಿ ಹಿಂದಕ್ಕೆ ಸುರುಳಿ ಸುತ್ತಿರುವುದು ಸಾಮಾನ್ಯ. ಆಡುಗಳ ಜೀವಿತಾವಧಿ 8-12 ವರ್ಷಗಳು.

ಆಡುಗಳಿಗೆ 15 ಮಾಸಗಳು ಕಳೆದ ಮೇಲೆ ಹೋತ ಕೂಡಿಸಬೇಕು. ಆಡುಗಳು ಮಾಗಿ ಕಾಲದಲ್ಲಿ 3 ದಿನಗಳೂ ವಸಂತದಲ್ಲಿ 2 ದಿನಗಳೂ ಉಳಿದ ದಿನಗಳಲ್ಲಿ ಒಂದು ದಿನವೂ ಬೆದೆಗೆ ಬರಬಹುದು. ಬೆದೆಗೆ ಬಂದಾಗ ವಿಪರೀತ ಚಡ ಪಡಿಸುತ್ತಾ ಜೋರಾಗಿ ಬಾಲ ಅಲುಗಾಡಿಸುತ್ತಾ ಒಂದೇ ಸಮನೆ ಅರಚುತ್ತಿರುತ್ತದೆ. ಗರ್ಭ ಕಟ್ಟಿದ 147-154 ದಿನಗಳಾದ ಮೇಲೆ ಮರಿ ಹಾಕುತ್ತವೆ. ಅವಳಿ ಮರಿಗಳನ್ನು ಹಾಕುವುದು ಸಾಮಾನ್ಯ. ಗಂಡು ಮರಿ 8-12 ತಿಂಗಳುಗಳಲ್ಲಿ ಹರೆಯಕ್ಕೆ ಬರುತ್ತದೆ.

ಆಡುಗಳು ಪ್ರಪಂಚದಾದ್ಯಂತ ಕಂಡುಬರುತ್ತವೆ. ಮುಖ್ಯವಾಗಿ ಹಾಲು, ಮಾಂಸ, ತೊಗಲು ಗೊಬ್ಬರಗಳಿಗಾಗಿ ಇವನ್ನು ಸಾಕುವರು. ಆಡಿನ ಹಾಲಿನಿಂದ ಗಟ್ಟಿ ಗಿಣ್ಣು ತಯಾರಿಸುತ್ತಾರೆ. ಅಲ್ಲದೆ ಮಾಂಸಾಹಾರವಾಗಿ ಬಳಸುತ್ತಾರೆ. ಇದರ ತೊಗಲಿಗೆ ಬೇಡಿಕೆ ಹೆಚ್ಚು.

ಕೂಸಿಗೆ ತಾಯಿಯ ಎದೆ ಹಾಲು ಸಿಗದಿದ್ದಾಗ ಮೇಕೆ ಹಾಲನ್ನು ಕೊಡುತ್ತಾರೆ. ಯುರೋಪಿನಲ್ಲಿ ಆಡನ್ನು ಹಾಲುಣಿಸುವ ದಾದಿ ಎನ್ನುವರು. ಆಕಳ ಹಾಲಿಗಿಂತಲೂ ಶೇ. 3.15 ಆಡಿನ ಹಾಲಿನಲ್ಲಿ (ಶೇ. 3.5-5.14) ಕೊಬ್ಬು ಹೆಚ್ಚು. ಆಕಳ ಹಾಲು ಆಮ್ಲವಾಗಿದ್ದರೆ, ಆಡಿನದು ಕ್ಷಾರವಾಗಿರುತ್ತದೆ. ಭಾರತ, ಚೀನಾ, ಪಾಕಿಸ್ಥಾನ, ಟಿಬೆಟ್, ಯುರೋಪ್, ಬ್ರಿಟಿಷ್ ದ್ವೀಪಗಳು, ಅಮೆರಿಕಾ, ಕೆನಡಾ ದೇಶಗಳಲ್ಲೂ ಕರಾವಿನ ಆಡುಗಳನ್ನು ಸಾಕುತ್ತಾರೆ.

ಆಡುಗಳಲ್ಲಿ ನಾಲ್ಕು ಬಗೆಗಳಿವೆ.

1. ನಿಗುರಿದ ಮೋಟು ಕಿವಿಗಳ ಕೊಂಬಿರದ, ಮಾಂಸದ ತಳಿಯಾದ ಸಾಮಾನ್ಯ ಆಡು.
2. ಉದ್ದವಾಗಿ ಅಗಲಕ್ಕೆ ಜೋತುಬಿದ್ದ ಕಿವಿಗಳ, ಕರಾವಿನ, ನುಬಿಯನ್ ಇಲ್ಲವೆ ಈಜಿಪ್ಟಿನ ಆಡು.
3. ಜೋಲುಕಿವಿಗಳ ಗುಂಗುರು ಕೂದಲು ತುಪ್ಪಳಿನ, ಕುರಿ ಮೊಗದ ಟಿಬೆಟಿನ ಅಂಗೋರ ಆಡು.
4. ಅರೆಬರೆ ಜೋಲುಬಿದ್ದ ಕಿವಿಗಳ ಮೋಟು ತುಪ್ಪಳಗೂದಲು, ಹಿಮಾಲಯ ಪರ್ವತಗಳ ಕಾಶ್ಮೀರಿ ಆಡು.

ಕರಾವಿನ ಆಡುಗಳ ಲಕ್ಷಣಗಳು : ಅಚ್ಚುಕಟ್ಟಾದ ಉದ್ದನೆಯ ತಲೆಯಲ್ಲಿ ಅಗಲವಾದ ಹಣೆಯಿಂದ ಬರಬರುತ್ತಾ ಚೂಪಾಗುವ ಮುಸುಡಿ; ತೆಳುವಾಗಿ ಮೋಟಾದ ಚೂಪು ಕೊಂಬುಗಳು, ಹೊಳೆವ ದೊಡ್ಡ ಕಣ್ಣುಗಳು, ಉದ್ದನೆಯ ದಪ್ಪ ಮೈಕಟ್ಟು, ಚಿಕ್ಕ ಎದೆ ಚಾಚಿದ ರೂಂಡಿ ಮೂಳೆಗಳು ; ಸಡಿಲವಾದ ಮೆದು ಚರ್ಮ, ನುಣುಪಾದ ತೆಳುಗೂದಲು, ಮುಟ್ಟಲು ಮೆದುವಾದ ದೊಡ್ಡ ದುಂಡಾದ ಕೆಚ್ಚಲು ಇದರ ಲಕ್ಷಣಗಳು.

ತಳಿಗಳು : ಇವುಗಳಲ್ಲಿ ಸ್ವಿಸ್, ನುಬಿಯನ್ ಆಡುಗಳು ಮುಖ್ಯವಾದವು. ಸ್ವಿಸ್ ಆಡಿಗೆ ಮೊನಚಾದ, ನೇರವಾದ ಕಿವಿಗಳಿರುತ್ತವೆ. ಇಂಗ್ಲೆಂಡಿನಲ್ಲಿ ಒಂದು ಸಾನಿನ್ ಆಡು ವರ್ಷಕ್ಕೆ 6400 ಪೌಂಡು ಹಾಲು ಕರೆಯಿತು. ಬೆಣ್ಣೆಗಾಗಿ ಕರಾವಿನಲ್ಲಿ ನುಬಿಯನ್ ಆಡು ಉತ್ತಮ ತಳಿ. ಇಸ್ರೇಲ್, ಸಿರಿಯಾಗಳ ಆಡುಗಳಿಗೆ ದೊಡ್ಡ ಜೋಲು ಕಿವಿಗಳೂ ಕೂದಲು ಇರುತ್ತವೆ.

ಭಾರತದಲ್ಲಿ ಕಂಡು ಬರುವ ಆಡಿನ ತಳಿಗಳೆಂದರೆ - ಗದ್ದಿ, ಮಧ್ಯಪ್ರದೇಶ, ಮಲಬಾರ್, ಕಂಚಿ, ಜಮುನ-ಪುಂಗದ್ದಿ, (ಗದ್ದಿ ಅಂಗೋರಗಳ ಅಡ್ಡ ತಳಿ - ಸೂರತ್) ಈ ತಳಿಗಳು ಭಾರತದಲ್ಲಿ ಹೆಸರಾದವು. ಬಂಗಾಳ ಯಮುನ ನದಿಯ ತೀರ ಪ್ರದೇಶಗಳಿಂದ ಬಂದ ಜಮುನ ಪುರಿ ಭಾರತದ ಮೇಕೆ ತಳಿಗಳಲೆಲ್ಲಾ ಹೆಚ್ಚು ತೂಕವಾದುದು. ಒಂದೊಂದು ಸರಾಸರಿ 45-70 ಕಿ.ಗ್ರಾಂ. ತೂಗುತ್ತವೆ. ಎಲ್ಲಾ ಪ್ರದೇಶಗಳಿಗೂ ಒಗ್ಗಿ ಕೊಳ್ಳುತ್ತವೆ.

ಹೆಚ್ಚು ಗಾತ್ರದ ಇದರ ಬೆಲೆ ಅಧಿಕ. ಉದ್ದನೆಯ ಗಿಳಿ ಮೂಗು, ಜೋಲು ಬಿದ್ದ ನೀಳ ಕಿವಿಗಳು ಈ ತಳಿಯ ಲಕ್ಷಣಗಳು. ಬಿಳಿ, ಕರಿಪಟ್ಟಿಗಳಿರುವ ಮೈಬಣ್ಣ. ಒಂದು ಬಾರಿಗೆ ಈಯುವುದು ಒಂದು ಮರಿ, ಕರಾವಿನಲ್ಲಿ ಅಷ್ಟು ಹೆಸರಾಗಿಲ್ಲ. ಗುಜರಾತಿನ ಸೂರತ್ ಜಿಲ್ಲೆಯ ಚಿಕ್ಕ ತಳಿ ಸೂರತ್ ತಳಿ, ಇದನ್ನು ಒಂದಷ್ಟು ಹಾಲು ಕೊಡುವುದಕ್ಕೆ

ಸಾಕುವುದುಂಟು. ದಕ್ಷಿಣಭಾರತದ ವಿಶೇಷ ತಳಿ ಮಲಬಾರ್, ಸುಧಾರಣಾ ಮೇಕೆಗಳಿಗಿಂತ ಹೆಚ್ಚು ಹಾಲು ಕೊಡುತ್ತವೆ. ಕರಾವು, ಮಾಂಸಗಳಿಗಾಗಿ ಸಾಕುವ ಇನ್ನೊಂದು ಮೇಕೆ ತಳಿ ಕಂಚಿ, ಕಾಶ್ಮೀರಿ (ತುರ್ಕಿಯ ಅಂಗೋರಾ ಜಿಲ್ಲೆಯ) ಅಂಗೋರಾ ತಳಿಗಳು ಮುಖ್ಯವಾಗಿ ತುಪ್ಪಟಕ್ಕಾಗಿ ಸಾಕುವ ಆಡುಗಳು.

ಕಾಶ್ಮೀರದ ಶಾಲಿಗೆ ಹೆಸರುವಾಸಿಯಾದ ಕಾಶ್ಮೀರಿ ಆಡು, ಉಣ್ಣೆಯನ್ನು ಒದಗಿಸುವ ಇನ್ನೊಂದು ಬಗೆಯ ಆಡು. ಇದು ಅಂಗೋರಕ್ಕಿಂತ ಸಾಮಾನ್ಯ ಆಡನ್ನು ಹೋಲುತ್ತದೆ. ಕಾಶ್ಮೀರದಲ್ಲಿ ಹಿಮಾಲಯದ ಇಳಿಜಾರು ತಪ್ಪಲುಗಳಲ್ಲಿ ಮಾತ್ರ ಇವನ್ನು ಸಾಕಬಹುದು. ಅಂಗೋರ ಆಡನ್ನು ಹೋಲುವ ಇವುಗಳ ಕೂದಲು ಬಹಳ ಉದ್ದ. ಕೈಕಾಲುಗಳು ಸಣ್ಣ. ಬುಡದಲ್ಲಿ ಬೆಳೆವ ಪಾಷಾಂ ಎಂಬ ಬಲು ನುಣುಪಿನ ತೆಳುವಾದ ತುಪ್ಪಳ ಹೆಚ್ಚು ಬೆಲೆಯದ್ದು. ಈ ಪಾಷಾಂನಿಂದಲೇ ಬೆಲೆಬಾಳುವ ಸುಂದರವಾದ ಕಾಶ್ಮೀರಿ ಶಾಲುಗಳು ತಯಾರಾಗುವುದು. ವರ್ಷಕ್ಕೆ ಒಂದು ಆಡಿನಿಂದ ದೊರೆವ ಉಣ್ಣೆಯ ಸರಾಸರಿ ತೂಕ ಸುಮಾರು 1 ಕಿ.ಗ್ರಾಂ.. ಆಡಿನ ತೊಗಲನ್ನು ಹದ ಮಾಡಿ ಜೋಡು, ಕೈಗವುಸು, ಮುಂತಾದ ವಸ್ತುಗಳನ್ನು ತಯಾರಿಸುತ್ತಾರೆ. ಮೊರಾಕೊ ತೊಗಲು ಹೆಸರುವಾಸಿ.

ಆಡುಗಳ ಸಾಕಣೆ : ಆಡುಗಳು ಎಲ್ಲಾ ಬಗೆಯ ಹಸುರು ಸಸ್ಯಗಳನ್ನು ತಿನ್ನುತ್ತವೆ. ಹೆಣ್ಣು ಆಡು ಒಂದು ವರ್ಷಕ್ಕೆ ಪ್ರಾಯವಾಗುತ್ತಿದ್ದಂತೆ ಪ್ರತಿವರ್ಷ 6 ತಿಂಗಳಿಗೊಮ್ಮೆ ಕನಿಷ್ಟ ಎರಡು ಮರಿಗಳನ್ನು ನೀಡುತ್ತದೆ. ಆಡುಗಳನ್ನು ಸಾಮಾನ್ಯ ನೆಲದ ದೊಡ್ಡಿಯಲ್ಲಿ ಕೂಡಿ ಹಾಕಿದರೆ ಮಲ ಮೂತ್ರಗಳಿಂದ ನೆಲ ಒದ್ದೆಯಾಗಿ ಶೀತರೋಗಕ್ಕೆ ಬಲಿಯಾಗುವ ಕಾರಣ ಸುಮಾರು 9 ಅಡಿ ಎತ್ತರದ ಮರದ ಹಲಗೆ ಮೇಲೆ ವಾಸದ ವ್ಯವಸ್ಥೆ ಕಲ್ಪಿಸುವುದು ಯುಕ್ತ.

ಆಡಿನ ರೋಗಗಳು : ಆಡುಗಳಲ್ಲಿ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡು ಆರ್ಥಿಕ ನಷ್ಟವನ್ನು ಉಂಟು ಮಾಡುತ್ತವೆ. ತಲೆ ಸುತ್ತುವಿಕೆ, ಬಾಯಿವಗ್ರ (ಬಾಯಿ ಬಿರಿ ಬಿಡುವಿಕೆ) ರೋಗ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾರಣ ಅತ್ಯಂತ ಜಾಗೃತಿಯಿಂದ ಚಲನವಲನ ಗಮನಿಸುತ್ತಾ ಇರಬೇಕು. ಕೆಲವೊಮ್ಮೆ ಸಾಂಕ್ರಾಮಿಕ ರೋಗಗಳಿಂದಾಗಿ ಮರಿಗಳು ಸಾವನ್ನಪ್ಪುತ್ತವೆ. ಸಾಂಕ್ರಾಮಿಕ ರೋಗಗಳು ಬ್ಯಾಕ್ಟೀರಿಯಾ, ವೈರಸ್, ಪ್ರೋಟೋಜೋವಾ ಮುಂತಾದ ಸೂಕ್ಷ್ಮಜೀವಿಗಳಿಂದ ಉಂಟಾಗುವುದರಿಂದ ಕಲುಷಿತ ಆಹಾರ, ನೀರು, ರೋಗಗ್ರಸ್ತ ಪ್ರಾಣಿಯ ಸಂಪರ್ಕದಿಂದ ಹಾಗೂ ಕೆಲವೊಮ್ಮೆ ಗಾಳಿಯಿಂದಲೂ ಹರಡಿ ಆಡುಗಳು ಮರಣವನ್ನಪ್ಪುತ್ತವೆ. ಇಂತಹ ರೋಗಗಳಲ್ಲಿ ಬ್ಯಾಕ್ಟೀರಿಯಾದಿಂದ ಉಂಟಾಗುವ ಕರುಳು ಬೇನೆ, ಗಳಲೇಬೇನೆ, ನೆರಡಿ ರೋಗ ಮತ್ತು ವೈರಾಣುಗಳಿಂದ ಉಂಟಾಗುವ ನೀಲಿ ನಾಲಗೆ ಮತ್ತು ಕಾಲುಬಾಯಿ ಜ್ವರ ಪ್ರಮುಖವಾದವು.

ಎಂ.ಕೆ.ಎಸ್.

ಆಡುಸೋಗೆ ಭಾರತದಲ್ಲಿ ಮಾತ್ರ ಕಾಣಸಿಗುವ ಸಸ್ಯ. ಔಷಧೀಯ ಗುಣಹೊಂದಿರುವ ಚಿಕ್ಕ ಗಿಡವಾಗಿದ್ದು, ತಮಿಳುನಾಡಿನ ತಿರುವಾಂಕೂರು ಬೆಟ್ಟ ಪ್ರದೇಶ, ದಕ್ಷಿಣ ಅರ್ಕಾಟ್, ಮಹೇಂದ್ರಗಿರಿ ಬೆಟ್ಟ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇದನ್ನು ಗ್ರಾಮೀಣರು ಬೇಲಿ ಗಿಡವಾಗಿ ಬೆಳೆಸುತ್ತಾರೆ. ಅರಣ್ಯ ಪ್ರದೇಶದಲ್ಲಿ ಮತ್ತು ನದಿಯ ತಟದಲ್ಲಿ ಸೊಂಪಾಗಿ ಬೆಳೆಯುತ್ತದೆ. ಆದರೆ ಹೂ ಬಿಡಲು ಹೆಚ್ಚಿನ ಉಷ್ಣಾಂಶ ಬೇಕು.

ಆಡುಸೋಗೆಯನ್ನು ಪ್ರತ್ಯೇಕವಾಗಿಯೂ ಬೇರೆ ಬೆಳೆಯ ಜೊತೆಯಲ್ಲಿಯೂ ಬೆಳೆಸಬಹುದು. ಕೃಷಿ ಮಾಡಿ ಬೆಳೆಸುವುದು ಕಡಿಮೆ. ಕಾಂಡದ ತುಂಡುಗಳಿಂದ ಮತ್ತು ಬೀಜಗಳಿಂದ ಸಸ್ಯಾಭಿವೃದ್ಧಿ ಮಾಡಬಹುದು. ಮೊದಲಿಗೆ ಪಾಲಿಥಿನ್ ಚೀಲದಲ್ಲಿ ಮಣ್ಣು, ಮರಳು ಮತ್ತು ಸಾವಯವ ಗೊಬ್ಬರವನ್ನು ಮಿಶ್ರ ಮಾಡಿ ತುಂಬಿಸಿ ಇಟ್ಟುಕೊಂಡಿರಬೇಕು. ಅದಕ್ಕೆ 3 - 4 ಗಿಣ್ಣುಗಳಿರುವ 8 ರಿಂದ 10 ಸೆಂ.ಮೀ. ಉದ್ದವಿರುವ ಕಾಂಡದ ತುಂಡನ್ನು ಪಾಲಿಥೀನ್ ಚೀಲದೊಳಗೆ ಊರಬೇಕು. ಅಥವಾ ಏರುಮಡಿಗಳಲ್ಲೂ ಬೆಳೆಸಬಹುದು. ಹೀಗೆ ಬೆಳೆಸಿದ ಕಾಂಡದ ತುಂಡುಗಳಲ್ಲಿ ಸುಮಾರು 15 ದಿನಗಳಲ್ಲಿ ಮೊಳಕೆ ಕಾಣಿಸಿಕೊಂಡು 30 ದಿನಗಳಲ್ಲಿ ಬೇರಿನ ಬೆಳವಣಿಗೆ ಕಂಡುಬರುತ್ತದೆ. ಚೆನ್ನಾಗಿ ಬೆಳೆದ ಸಸಿಗಳನ್ನು ನಾಟಿ ಮಾಡಬಹುದು. ಏಪ್ರಿಲ್‌ನಿಂದ ಜೂನ್ ತಿಂಗಳಿನವರೆಗೆ ನಾಟಿ ಮಾಡಬಹುದು. ಏಪ್ರಿಲ್‌ನಿಂದ ಜೂನ್ ತಿಂಗಳಿನವರೆಗೆ ನಾಟಿ ಮಾಡಲು ಯೋಗ್ಯಕಾಲ. ಎರಡು ತಿಂಗಳ ಸಸಿಯನ್ನು ನಾಟಿ ಮಾಡುವುದು ಯೋಗ್ಯ. ಅಷ್ಟರಲ್ಲಿ ಅದು 3-4 ಗಿಣ್ಣುಗಳನ್ನು ಹೊಂದಿ ಚಿಗುರೊಡೆದಿರುತ್ತದೆ. ನಾಟಿ ಮಾಡಿದ ಸಂದರ್ಭದಲ್ಲಿ ದಿನನಿತ್ಯ ನೀರು ಹಾಯಿಸುತ್ತಿರಬೇಕು. ಬಿಸಿಲಿನ ತಾಪ ಹೆಚ್ಚು ಬೀಳದಂತೆ ಕಾಪಾಡಬೇಕು.

ನಾಟಿ ಮಾಡುವ ಸ್ಥಳವನ್ನು ಚೆನ್ನಾಗಿ ಉಳುಮೆ ಮಾಡಿರಬೇಕು. ಗಿಡದಿಂದ ಗಿಡಕ್ಕೆ 30 ಸೆಂ.ಮೀ. ಸಾಲಿನಿಂದ ಸಾಲಿಗೆ 60 ಸೆಂ.ಮೀ. ಅಂತರವಿರಬೇಕು. ಗಿಡದ ಬುಡದಲ್ಲಿ ನೀರು ನಿಂತುಕೊಳ್ಳದಂತೆ ನಿಗಾ ವಹಿಸಬೇಕು. ಸಾವಯವ ಗೊಬ್ಬರ (ಹಸುರೆಲೆ ಗೊಬ್ಬರ) ಕಾಂಪೋಸ್ಟ್ ಗೊಬ್ಬರವನ್ನು ಹೆಕ್ಟೇರಿಗೆ 10 ಟನ್‌ಗಳಷ್ಟು ಹಾಕಬೇಕು. ಎಲೆಗಳನ್ನೂ ಒಂದು ವರ್ಷದ ಅನಂತರ ಬೇರುಗಳನ್ನೂ ಎರಡು ವರ್ಷದ ಮೇಲೆ ಕಟಾವು ಮಾಡುತ್ತಾರೆ. ಎರಡು ವರ್ಷದ ಮೇಲೆ ಗಿಡವನ್ನು ಕಟಾವು ಮಾಡುವುದರಿಂದ ಯಾವುದೇ ತೊಂದರೆ ಇಲ್ಲ. ಆಡುಸೋಗೆಯ ಬೇರು, ಕಾಂಡ, ಎಲೆ, ಎಲ್ಲವು ಪ್ರಯೋಜನಕಾರಿ. ಎಲ್ಲ ಸೇರಿದಂತೆ ಒಂದು ಹೆಕ್ಟೇರಿಗೆ 12.5 ಟನ್‌ಗಳಷ್ಟು ಇಳುವರಿಯನ್ನು ಪಡೆಯಬಹುದು.

ಇದರ ಎಲೆ ಮತ್ತು ಬೇರುಗಳನ್ನು ಕೀಟನಾಶಕ ಪರಿಕರವಾಗಿ ಬಳಸುತ್ತಾರೆ. ತರಕಾರಿ, ಹಣ್ಣುಗಳನ್ನು ಕೀಟಗಳಿಂದ ರಕ್ಷಿಸಲು ಆಡುಸೋಗೆಯ ಕಷಾಯವನ್ನು ಮತ್ತು ಎಲೆಗಳನ್ನು ಬಳಸುತ್ತಾರೆ. ಚರ್ಮದ ಸಮಸ್ಯೆಗಳಿಗೆ ಮಾನಸಿಕ ಸಮಸ್ಯೆಗಳಿಗೆ, ತಲೆನೋವು, ಕಣ್ಣು ಗಂಟಲು, ಶ್ವಾಸಕೋಶದ ಸಮಸ್ಯೆಗಳಿಗೆ- ಹೀಗೆ ಅನೇಕ ರೀತಿಯ ಮನುಷ್ಯ ಕಾಯಿಲೆಗಳಿಗೆ ಆಡುಸೋಗೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

ಎ.ಬಿ.ಪಿ.

ಆಯಗಾರರು 'ಆಯಗಾರರು' ಎಂಬುದಕ್ಕೆ ಕಿಟ್ಟೆಲ್ ಕೋಶದಲ್ಲಿ "A hereditary village servent... such servents are eg. ಗವುಡ, ಶಾನಭೋಗ, ಜೋಯಿಸ, ಪಕ್ಕಾರಿ, ಕಮ್ಮಾಜಿ, ಕುಮ್ಮಾಜಿ, ಬಡಗಿ ನಾಯಿನ್ದ ಇತ್ಯಾದಿ' ಎಂಬ ಅರ್ಥವನ್ನು ನೀಡಲಾಗಿದೆ.

"ಹಳ್ಳಿಗಳಲ್ಲಿ ವಂಶಪರಂಪರೆಯಿಂದ ಸೇವೆ ಸಲ್ಲಿಸಿಕೊಂಡು ಬಂದಿರುವವರಿಗೆ ಕಣದಲ್ಲಿ ರಾಶಿ ಮಾಡುವಾಗ ಅಳೆದು ಕೊಡುವ ನಿರ್ದಿಷ್ಟ ಪ್ರಮಾಣದ ಧಾನ್ಯ - ವರ್ಷಾಸನ" ಎಂಬುದು ಸಾಹಿತ್ಯ ಪರಿಷತ್ ನಿಘಂಟುವಿನಲ್ಲಿ 'ಆಯ' ಎಂಬುದಕ್ಕೆ ನೀಡಿರುವ ಅರ್ಥ. ಭೂಮಿಯನ್ನು ಉತ್ತು, ಬಿತ್ತಿ ಆಹಾರವನ್ನು ಉತ್ಪಾದಿಸುವವನು ರೈತ. ಇದೊಂದು ಬಗೆಯ ಅನ್ನಯಜ್ಞ. ಈ ಅನ್ನ ಯಜ್ಞಕ್ಕೆ ನೇತಾರ ರೈತ. ಈತನಿಗೆ ಬೇಕಾದ ವಿವಿಧ ಸಲಕರಣೆಗಳನ್ನು, ಪರಿಕರಗಳನ್ನು, ಸೇವೆಗಳನ್ನು ಒದಗಿಸಿಕೊಡುವ ಆಯಗಾರರು ಸಹಾಯಕರು. ಇವರ ಸಾಮೂಹಿಕ ಪ್ರಯತ್ನದ ಫಲ ಬೆಳೆ. ಬೆಳೆಯನ್ನು ಕಟಾವು ಮಾಡಿ ಒಕ್ಕಣೆ ಮಾಡಿ ಮನೆಗೆ ತರುವಾಗ ರೈತ ತನಗೆ ಸಲಕರಣೆ, ಸೇವೆಗಳನ್ನು ಒದಗಿಸಿದ ಕಸುಬುದಾರರಿಗೆ ಅವರವರ ಸಹಾಯ ಹಾಗೂ ಸೇವೆಯನುಸಾರ ಧಾನ್ಯಗಳನ್ನು ನೀಡುತ್ತಾನೆ. ಈ ರೀತಿಯ ಕಾರ್ಯದಲ್ಲಿ ಸದಾ ತೊಡಗಿಸಿಕೊಂಡು ಇಡೀ ಬದುಕನ್ನು ಆಹಾರದ ಉತ್ಪತ್ತಿಗೆ ಮೀಸಲಾಗಿಡುವವನು ರೈತ. ಉಳಿದವರು ಸಂದರ್ಭ ಬಂದಾಗ ಅಂದರೆ ಉಳುಮೆ ಮಾಡುವಾಗ ಬಡಗಿ ನೇಗಿಲು, ಕಮ್ಮಾರ ಕುಳ - ಕೊಂಡಿಗಳನ್ನು ಮಾಡಿಕೊಡುತ್ತಾರೆ. ಹೀಗೆ ಆಯಾ ಸಂದರ್ಭದಲ್ಲಿ ಸಹಕಾರ, ಸೇವೆಗಳನ್ನು ಒದಗಿಸುತ್ತಾರೆ. ಉಳಿದ ಸಮಯದಲ್ಲಿ ಸ್ವಂತ ಕಾಯಕದಲ್ಲಿ ತೊಡಗಿಸಿಕೊಂಡಿರುತ್ತಾರೆ. ಸುಗ್ಗಿ ಕಾಲದಲ್ಲಿ ಕಣಕ್ಕೆ ಬಂದು ತಮ್ಮ ಪಾಲನ್ನು ಪಡೆಯುತ್ತಾರೆ. ಹೀಗೆ ಇವರು ಸಲ್ಲಿಸುವ ಸೇವೆಗೆ ಸಂಪ್ರದಾಯದಂತೆ ರೈತ ಕುಟುಂಬದವರಿಂದ ಪಡೆಯುವ ವರ್ಷಾಸನವೇ ಆಯ. ಇದನ್ನು ಪಡೆಯುವುದರಿಂದ ಇವರನ್ನು 'ಆಯಗಾರರು' ಎಂದು ಕರೆಯಲಾಗುತ್ತದೆ.

ಕೆಲವು ಕಡೆ ಇವರಿಗೆ ಹಿಟ್ಟುಕಾರರು ಎಂದರೆ, ಮತ್ತೆ ಕೆಲವೆಡೆ ಹಡದಿಗಾರರು, ಬಾರಾಬಲೂತೆ, ಮಿರಾಸೆಗಾರರು, ಜಜಮಾನರು ಮೊದಲಾದ ಹೆಸರುಗಳಲ್ಲಿ ಕರೆಯುತ್ತಾರೆ. ಅಲ್ಲದೆ ಆಯಗಾರರ ಸಂಖ್ಯೆಯಲ್ಲಿಯೂ ವ್ಯತ್ಯಾಸವಿದೆ. ಹನ್ನೆರಡು ಜನ ಕೈವಾಡದವರು, ಕುಳವಾಡಿಗಳು, ಆಯಗಾರರು ಇರುವರೆಂಬುದು ಸಾಮಾನ್ಯವಾದ ತಿಳಿವಳಿಕೆ. ಆದರೆ ಕೆಲವು ಕಡೆ ಉದಾಹರಣೆಗೆ "ಉತ್ತರ ಪ್ರದೇಶದ ಕರೀಂಪುರ ಗ್ರಾಮದಲ್ಲಿ 24 ಬಗೆಯ ಆಯಗಾರರಿದ್ದಾರೆ" (ಎಚ್.ವ್ಹಿ. ನಾಗೇಶ್; ಆಯ ಮತ್ತು ಆಯಗಾರರು ಕೃತಿ: ಜಾನಪದ ಸಾಹಿತ್ಯ ದರ್ಶನ - 7 ಕ.ವಿ.ವಿ. ಧಾರವಾಡ) ಸಾಮಾನ್ಯವಾಗಿ ರೈತರಿಂದ ಸಂಭಾವನೆ, ಕಾಣಿಕೆ ಇತ್ಯಾದಿಗಳನ್ನು ಪಡೆಯುವವರನ್ನೆಲ್ಲ ಆಯಗಾರರೆಂದು ತಿಳಿದುದರ ಫಲವಿದು.

ಅಮಾಸಿ ಗೌಡರು ಅಥವಾ ಗೊಂಚಿಕಾರರು ಇವರ ಅಧಿಕಾರ ಅಥವಾ ಉಸ್ತುವಾರಿಯಲ್ಲಿ 12 ಕೈವಾಡ ಅಥವಾ ಮೇರೆ ಮಿರಾಶೆಗೆ ಸೇರಿದವರು : ಕೊಂಡಿಕಾರ, ಶಮೆರಾಯ (ಹನುಮಂತ ದೇವರ ಪೂಜಾರಿ) ಬಡಗಿ, ಕಮ್ಮಾರ, ಕುರುಬ, ಕುಂಬಾರ, ಅಗಸ, ಹಜಾಮ, ಕಂಚುಗಾರ, ಮೇದರ ತಳವಾರ, ಮಣೆಗಾರ ಇವರಿಗೆ ಮೇಲಾಧಿಕಾರಿಗಳಾಗಿ, ಮುಖಂಡರುಗಳಾಗಿ ಇಲ್ಲವೆ ಮಾರ್ಗದರ್ಶಕರುಗಳಾಗಿ ಪಟೇಲ, ಶ್ಯಾನುಭೋಗ, ತೋಟಿ, ತಳವಾರ ಈ ನಾಲ್ಕು ಜನ ಸರ್ಕಾರಿ ಅಧಿಕಾರಿಗಳಾಗಿರುವುದರಿಂದ ಮೇಲ್ಕಂಡ ಕೈವಾಡದವರು ಆಚರಿಸುವ ಕಾರ್ಯಗಳು ಇವರ ಉಸ್ತುವಾರಿಯಲ್ಲೇ ನಡೆಯಬೇಕಾದುವು ಮತ್ತು ಇವರೆಲ್ಲರಿಗೆ ಸಹಕಾರ ನೀಡುವುದಕ್ಕಾಗಿ, ದೈವಾಚಾರಗಳನ್ನು ನೆರವೇರಿಸುವುದಕ್ಕಾಗಿ ದೈವಾಚಾರದವರು ಇರುತ್ತಾರೆ. ಅವರೆಂದರೆ ಮಠದ ಗುರು, ಪೂಜಾರಿ, ಪುರೋಹಿತ, ಮಹಿಮಾಚಾರಿ, ಕೋಲುಕಾರ, ಗಣಾಚಾರಿ, ಪೋತರಾಜ, ಪೊಂಬಲು, ಆಸಾದಿ, ಚಲವಾದಿ ಹಿಟ್ಟಕ್ಕಿ ಗೌಡ- ಈ ದೈವಾಚಾರದವರಿಗೂ ಗ್ರಾಮದ ಜನರು ಸುಗ್ಗಿ ಕಾಲದಲ್ಲಿ ಹೊರೆಹುಲ್ಲು ಮೊರ ಬತ್ತ ಕೊಡಬೇಕು. ಇವರು ಗ್ರಾಮ ದೇವತಾ ಕಾರ್ಯಕ್ರಮದಲ್ಲಿ ತಮ್ಮ ತಮ್ಮ ಕಾರ್ಯಭಾರವನ್ನು ನಿರ್ವಹಿಸಿಕೊಂಡು ಹೋಗಬೇಕೆಂಬುದು ಪರಂಪರಾಗತವಾಗಿ ಬಂದಿದೆ.

ಮೇಲ್ಕಾಣಿಸಿದ ಪಟ್ಟಿಯಲ್ಲಿ ಗ್ರಾಮಾಧಿಕಾರಿಗಳನ್ನು, ದೈವಾಚಾರದವರನ್ನು ಬಿಟ್ಟರೆ ಉಳಿದ ಕೈವಾಡದವರು ಅಥವಾ ಆಯಗಾರರು 12 ಜನ ಮಾತ್ರವಿರುತ್ತಾರೆ. ಆದರೆ ಈ ಆಯಗಾರರು 12 ಜನರ ಪಟ್ಟಿಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಕಾಣಿಸುತ್ತದೆ. 'ಆಯ' ಪದ್ಧತಿ ಬಹು ಪ್ರಾಚೀನವಾದುದು. ಬಹುಶಃ ಬೇಸಾಯ ಆರಂಭವಾದ ಹಂತದಲ್ಲಿಯೇ ಅಥವಾ ಅದರ ಮುಂದಿನ ಹಂತದಲ್ಲಿ ಈ ಪದ್ಧತಿ ಹುಟ್ಟಿಕೊಂಡಂತೆ ಕಾಣುತ್ತದೆ. ಎಲ್ಲಿಯವರೆಗೆ ರೈತ ಅನ್ನಕ್ಕಾಗಿ ಮಾತ್ರ ಕೃಷಿ ಮಾಡುತ್ತಿದ್ದನೋ ಅಲ್ಲಿಯವರೆಗೆ ಗಟ್ಟಿಯಾಗಿ ಉಳಿದು ಬಂದ ಇದು ವಾಣಿಜ್ಯ ಉದ್ದೇಶಕ್ಕಾಗಿ ಅವನು ಬೆಳೆ ಬೆಳೆಯುವ ಹಂತದಲ್ಲಿ ಜೊತೆಗೆ ಯಂತ್ರ ಕೃಷಿಯ ಹಂತದಲ್ಲಿ ಕ್ಷೀಣಿಸುತ್ತಿರುವುದು ವಾಸ್ತವ. ಆಯ ಪದ್ಧತಿ ಜಾತೀಯತೆಯನ್ನು ದೃಢೀಕರಿಸುವುದಾದರೂ ಎಲ್ಲ ಜಾತಿಯವರನ್ನು, ವೃತ್ತಿಯವರನ್ನು ಒಟ್ಟಿಗೆ ಬೆಸೆದು, ಸಹಕಾರ ತತ್ತ್ವವನ್ನು ಸಾರುತ್ತಿತ್ತು. ಎಲ್ಲ ಆಯಗಾರರಿಗೂ ಊರೊಟ್ಟಿಗಿನ ಕೆಲಸ ಕಾರ್ಯಗಳಲ್ಲಿ ಹಕ್ಕು ಮತ್ತು ಬಾಜುಗಳನ್ನು ಒದಗಿಸಿ ಕಾಯಕ ಪ್ರಜ್ಞೆಯನ್ನು ವೃದ್ಧಿಸುತ್ತಿತ್ತು. ಈಗಲೂ ಕೆಲವೆಡೆ ಮುಂದುವರಿದಿರುವುದು ಆಶಾದಾಯಕ.

ಆಯಗಾರರ ಹಾಗೂ ಕೃಷಿಕರ ಸಂಬಂಧ : ಆಯಗಾರರು ಮತ್ತು ಕೃಷಿಕನಿಗೆ ಸಂಬಂಧ ಏರ್ಪಟ್ಟಿರುವುದು ಕೃಷಿಯ ಕಾರಣಕ್ಕಾಗಿ. 'ಬೇಸಾಯ ಮನೆ ಮಂದಿಯೆಲ್ಲಾ ಸಾಯ' ಎಂಬ ಗಾದೆಯಿದೆ. ಊರು ಒಂದು ಮನೆಯಾದರೆ ಅಲ್ಲಿ ನೆಲೆಸಿರುವ ಎಲ್ಲ ವೃತ್ತಿಕಾರರೂ ಮನೆ ಮಂದಿ. ಅವರೆಲ್ಲರ ಸಹಾಯ, ಸಹಕಾರಗಳು ಕೃಷಿ ಕೆಲಸಕ್ಕೆ ಬೇಕು. ಹಾಗಾಗಿ ಇವರೆಲ್ಲರೂ ಸಹಕಾರ ತತ್ತ್ವದಡಿ ಕೂಡಿರುವ ಕುಟುಂಬದವರು. ಇವರೆಲ್ಲರಿಗೂ ಅನ್ನ ಒದಗಿಸುವವ ರೈತ. ತನ್ನ ಬೇಸಾಯದ ಕಾರ್ಯಕ್ಕೆ ಜಾತ್ರೆ - ಉತ್ಸವಾದಿ ಕಾರ್ಯಕ್ಕೆ, ಹಬ್ಬ - ಹರಿದಿನಗಳಿಗೆ, ಮದುವೆ ಮೊದಲಾದ ಕಾರ್ಯಗಳಿಗೆ, ಮಗುವಿನ ಹುಟ್ಟು, ನಾಮಕರಣ ಸಂಸ್ಕಾರಾದಿ ಸಂದರ್ಭಕ್ಕೆ, ಮರಣ ಸಂಸ್ಕಾರಾದಿಗಳಲ್ಲಿಯೂ ಕೂಡ ಆಯಗಾರರ ಸೇವೆ ರೈತನಿಗೆ ಸಿಗುತ್ತದೆ. ಹಾಗೆಯೇ ಆ ಎಲ್ಲ ಸಂದರ್ಭಗಳಲ್ಲಿಯೂ ರೈತ ಆಯಗಾರರಿಗೆ 'ಆಯ'ವನ್ನು ಕೊಡುತ್ತಾನೆ. ಮುಖ್ಯವಾಗಿ ಆಯಗಾರರು ಕೃಷಿಗಾಗಿ ರೈತನೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿಯುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಆಯಗಾರನ ಮತ್ತು ರೈತನ ಸಂಬಂಧವನ್ನು ಪ್ರತ್ಯೇಕವಾಗಿ ಪರಿಶೀಲಿಸುವುದು ಉಚಿತ.

ಬಡಗಿ : ಬಡಗಿಯವರನ್ನು ಜೊತೆಗೆ ಅಕ್ಕಸಾಲಿ, ಕಮ್ಮಾರ, ಕಂಚುಗಾರ ಹಾಗೂ ಶಿಲ್ಪಿಗಳನ್ನು ವಿಶ್ವಕರ್ಮರೆಂದು ಕರೆಯುತ್ತಾರೆ. ಪಾಣಿನಿಯ ಪ್ರಕಾರ "ವಿಶ್ವದ ಸೃಜನೆ, ರಕ್ಷಣೆ, ಆಗು - ಹೋಗುಗಳು ಯಾವನಿಂದ ಆಗುವುವೋ ಅವನೇ ವಿಶ್ವಕರ್ಮ". ಈ ದೃಷ್ಟಿಯಲ್ಲಿ ಬಡಗಿಯ ಸೇವೆ ಸೃಜನಾತ್ಮಕವಾದುದು. ಮರ - ಮಟ್ಟುಗಳಲ್ಲಿ ಬೇಕಾದ

ಉಪಕರಣ, ಸಲಕರಣೆಗಳನ್ನು ಸೃಜಿಸಬಲ್ಲ ಈತನ ಸೇವೆ ರೈತನಿಗೆ ಬಹುಮುಖ್ಯವಾದುದು. ರೈತನ ವ್ಯವಸಾಯದ ಆರಂಭಕ್ಕೇ ನೇಗಿಲು, ಕುಂಟೆ, ಕೂರಿಗೆ, ನೊಗ, ಭಾರಿಣಿ, ಈಸು, ಮೇಣಿ, ಅಂಟುಮರ, ಹಲುಬೆ ಮೊದಲಾದವುಗಳೆಲ್ಲವೂ ಬೇಕು. ಅಲ್ಲದೆ ಬೆಳೆಯ ಕಟಾವಿಗೆ ಕುಡುಗೋಲಿಗೆ ಹಿಡಿ, ಗಾಡಿ, ಒಕ್ಕಣೆಯ ಸಂದರ್ಭದಲ್ಲಿ 'ರೋಣಗಲ್ಲು' ಹೂಡಲು, ಪಟ್ಟೆ, ಈಸು, ಹಲಕು, ಅಟ್ಟಣೆ, ಮೇಟಿಗೂಟ, ಕಾಳುಕಡ್ಡಿ ತೂರಲು ಅಟ್ಟಣಿಗೆ ಮೊದಲಾದವು ಬೇಕು. ಇವೆಲ್ಲವುಗಳನ್ನು ಬಡಗಿ ಕಾಲ ಕಾಲಕ್ಕೆ ರೈತನಿಗೆ ಒದಗಿಸುತ್ತಾನೆ.

ರೈತನಿಂದಲೇ ಜಾಲಿ, ಹೊಂಗೆ, ಬೇವು, ಮತ್ತಿ, ಉಡುವೆ, ಕಾರೆ, ಮರಾಲೆ, ಹಲಸು, ಮಾವು ಮೊದಲಾದ ಮರಗಳನ್ನು ಪಡೆದು ಆತನಿಗೆ ಬೇಕಾದ ಉಪಕರಣಗಳನ್ನು ಮಾಡಿಕೊಡುತ್ತಾನೆ ಬಡಗಿ. ಉಪಕರಣಗಳನ್ನು ಮಾಡುವಾಗ ಅವುಗಳ ಮೇಲೆ ಸೂರ್ಯ, ಚಂದ್ರ, ಗಿಳಿ, ನವಿಲು, ದೈವ, ಎತ್ತು, ಹಸು ಮೊದಲಾದ ಚಿತ್ರಗಳನ್ನು ಬಿಡಿಸುವುದಿದೆ. ಅಲ್ಲದೆ ಆ ಮೂಲಕ ರೈತನ ಕಾಯಕಕ್ಕೆ ಶುಭಕೋರುವ ಆಶಯವೂ ಇದೆ.

ಇವಲ್ಲದೆ ರೈತನ ಮನೆ ಬಳಕೆಗೆ ಬೇಕಾದ ವಸ್ತುಗಳಾದ ಈಳಿಗೆ ಮಣೆ, ಚಪಾತಿ ಮಣೆ, ಮರಗೈ, ಹಸೆಮಣೆ, ದೀಪಾಲೆ ಕಂಬ, ಮುದ್ದೆ ಕೋಲು, ಶಾವಿಗೆ ಕೊಂತ, ಕಡೆಗೋಲು, ಒರಳು ಕಡಿ, ಒನಕೆ, ತೊಟ್ಟಿಲು, ಮಂಚ, ಕುರ್ಚಿ, ಬೆಂಚು, ಮಸೆ ಕೋಲು, ಪೆಟ್ಟಿಗೆ ಮೊದಲಾದವುಗಳನ್ನು ಮಾಡಿಕೊಡುವವನು ಬಡಗಿ.

ಮನೆ ಕಟ್ಟುವ ಸಾಮಗ್ರಿಗಳಲ್ಲಿ ಕಿಟಕಿ, ಬಾಗಿಲು, ಅಡ್ಡೆ, ತೊಲೆ, ಜಂತಿ, ಪಟ್ಟಿಗಳು, ಕಂಬಗಳು, ಬೋದಿಗೆಗಳು ಮೊದಲಾದವುಗಳನ್ನು ತುಂಬ ಕುಸುರಿ ಕೆಲಸದೊಂದಿಗೆ, ಇಲ್ಲವೆ ಸಾದಾ ರೀತಿಯಲ್ಲಿ ಮಾಡಿಕೊಡುತ್ತಾನೆ. ಜಾತ್ರೆ - ಉತ್ಸವಗಳಲ್ಲಿ ರಥ, ಪಲ್ಲಕ್ಕಿ, ದೇವರ ವಿಗ್ರಹ, ದೇವರ ಮಂಟಪ, ಪಾದ ಪೀಠ, ಪಾದುಕೆ, ದೀಪಸ್ತಂಭ, ಕಳಸದ ಮಣೆ, ತೂಗುಯ್ಯಾಲೆ, ಕುದುರೆ, ಕೀಲುಕುದುರೆ, ಸೋಮದ ಮುಖವಾಡಗಳು, ಹರಿಗೆಗಳು ಮೊದಲಾದವನ್ನು ಸಿದ್ಧಪಡಿಸಿಕೊಡುತ್ತಾನೆ. ಅಲ್ಲದೆ ಬಿಡುವಿನ ವೇಳೆಯಲ್ಲಿ ಆಟವಾಡಲು ಬೇಕಾದ ಅಳುಗುಳಿಮಣೆ, ಮಕ್ಕಳ ಆಟಿಕೆಗಳು, ಮಕ್ಕಳು ನಡೆಯುವುದನ್ನು ಕಲಿಯುವಾಗ ಬೀಳದಿರಲೆಂದು ಮೂರು ಗಾಲಿಯ ತಳ್ಳುಗಾಡಿ, ಆಯುಧಗಳ ಹಿಡಿಕೆಗಳು, ಕೊಡಲಿ, ಗುದ್ದಲಿ, ಸಲಿಕೆ ಕಾವುಗಳು ಇತ್ಯಾದಿಯನ್ನು ಬಡಗಿ ಮಾಡಿಕೊಡುತ್ತಾನೆ.

ಇದಕ್ಕಾಗಿ ಆತ ಪಡೆಯುವ ಸಂಭಾವನೆ ಅಥವಾ ಆಯ ಹಳಬರ ಪ್ರಕಾರ 'ಹೊರೆ ಹುಲ್ಲು ಮೊರ ರಾಗಿ' ಇದಿಷ್ಟು ಮಾತ್ರ ನಿಗದಿತವಲ್ಲ. ಇದು ಪ್ರದೇಶ, ಕಾಲ, ಸಮಾಜ ವ್ಯಕ್ತಿಗಳಿಗನುಸಾರ ಭಿನ್ನವಾಗಿರುತ್ತದೆ. ಕೆಲವೊಮ್ಮೆ ಯಾವುದಾದರೂ ಉಪಕರಣವನ್ನು ಮಾಡಿಸಿಕೊಂಡರೆ ಆಗ ಸಂಭಾವನೆಯನ್ನು ಕಾಳು ಕಡಿ ಇಲ್ಲವೆ ಹಣದ ರೂಪದಲ್ಲಿ ಪಡೆಯುತ್ತಾರೆ. ಆದರೆ ಅಲ್ಲಿ ವ್ಯಾಪಾರೀ ಮನೋಭಾವವಿರುವುದಿಲ್ಲ. 'ರೈತ ಕೊಟ್ಟದ್ದು ಆತ ಪಡೆದದ್ದು' ಎಂಬಂತಿತ್ತು. ಜಾತ್ರೆ ಉತ್ಸವಗಳ ಸಂದರ್ಭದಲ್ಲಿ ಅಕ್ಕಿ, ಹಣ, ಹೂವಿನ ಹಾರ, ರುಮಾಲು, ಇಲ್ಲವೆ ವಲ್ಲಿ, ಪಂಚೆ ಇತ್ಯಾದಿಗಳನ್ನು ಪಡೆಯುತ್ತಾರೆ. ಶಿರಾ ತಾಲ್ಲೂಕಿನಲ್ಲಿ (ತುಮಕೂರು ಜಿಲ್ಲೆ) ಇಂತಹ ಸಂದರ್ಭದಲ್ಲಿ 5 ಸೇರು ಅಕ್ಕಿ, 5 ಹಣ, 1 ಹೂ ಹಾರ, 1 ರುಮಾಲು ಕೊಡುವ ಪದ್ಧತಿಯಿತ್ತು. ಇತ್ತೀಚೆಗೆ ಆಯ ಪದ್ಧತಿ ದುರ್ಬಲವಾಗಿ ಬಡಗಿಗಳು ಆಧುನಿಕವಾಗಿ ನಗರಗಳಲ್ಲಿ ಅಂಗಡಿಗಳನ್ನು ತೆರೆದು ಬಗೆಬಗೆಯ ಸಾಮಾನುಗಳನ್ನು ತಯಾರಿಸಿ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿದ್ದಾರೆ.

ಬಡಗಿಯನ್ನು ಕುರಿತ ಗಾದೆಗಳು : ಬಡಗಿ ಬಾಳು ಬಾಚಿ ಮೇಲೆ, ಕೆಲಸವಿಲ್ಲದ ಬಡಗಿ ಮಗಳ ಅಂಡು ಕೆತ್ತಿದ, ಬಡಗಿ ಮಾಡಿದ ಮೂರ್ತಿ ಶೃಂಗಾರ ತನ್ನ ಹೆಂಡ್ತಿ ಮೈಮೇಲೆ ಅಂಗಾರ, ಬಡಗಿ ಬಾಳು ವಡಬಾಳು, ಕೆತ್ತೋನ ಮುಂದೆ, ಬಡಿಯೋನ ಹಿಂದೆ ಇರಬೇಡ.

ಸರ್ವಜ್ಞನ ದೃಷ್ಟಿಯಲ್ಲಿ ಬಡಗಿ :

ಹಡಗು ಕಡಲಿಗೆ ಬೇಕು ಗುಡುಗು ಮಿಂಚಿಗೆ ಬೇಕು
ಕಡಗದಾ ಕೈಯ ಸೊಸೆ ಬೇಕು ಊರಿಂಗೆ
ಬಡಿಗ ತಾ ಬೇಕು ಸರ್ವಜ್ಞ

ಅಡ್ಡ ಬಡ್ಡಿಯು ಹೊಲ್ಲ ಗಿಡ್ಡ ಬಾಗಿಲು ಹೊಲ್ಲ
ಹೆಡ್ಡರೊಡನಾಟ ಕರಹೊಲ್ಲ - ಬಡಿಗ ತಾ
ನೊಡ್ಡನಿರೆ ಹೊಲ್ಲ ಸರ್ವಜ್ಞ

ಜನಪದರ ದೃಷ್ಟಿಯಲ್ಲಿ ಬಡಗಿ :

ಬಾಣಗೆರೆ ಬಡಗೀನ ಬ್ಯಾಗಾನೆ ಬರವೇಳೆ
ಬಂಗಾರದಂಥ ಉಳಿ ಬಾಚಿ - ಹಿಡಕೊಂಡ
ಬಾಣಗೆರೆಯಪ್ಪನ ತೇರ ಕಡೆಯೋಳೆ

ಉಕ್ಕೀನ ಉಳಿ ಚಾಚಿ ಸುತ್ತೆಳೆಯ ಜನಿವಾರ
ಮುತ್ತು ಸುರಿದಂಗೆ ಬೆವರೋನು - ನಿಂಗಣ್ಣ
ನಿತ್ತ ಬಡಿಗೇರ ಮಗನವ್ವ

ಉಳಿಯ ಬಾಚಿ ಹಿಡಿ ತಾನೇನ ಕಡೆದಾನ
ಮುತ್ತುರತ್ನಾದ ಮಡಿಕೇಯ - ನಿಂಗಣ್ಣ
ಮುತ್ತಿನಂಥ ಹೊಲುವ ಉಳುವೋಕೆ

ಕಮ್ಮಾರ : ವ್ಯವಸಾಯ ನಿರತನಾದ ರೈತನಿಗೆ ಬೇಕಾದ ಕಬ್ಬಿಣದ ಉಪಕರಣಗಳನ್ನು ಮಾಡಿಕೊಡುವವನು ಕಮ್ಮಾರ. ಕಮ್ಮಾರ, ಕಂಬಾರ, ಲೋಹಾರ, ಕರ್ಮಕಾರ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿದೆ. ಬಹುಶಃ ಕಬ್ಬಿಣದ ಯುಗದಿಂದಲೇ ಕಮ್ಮಾರಿಕೆಯ ವೃತ್ತಿ ಪ್ರಚಲಿತಕ್ಕೆ ಬೆಳೆದು ಬಂದಿದೆಯೆನ್ನಬಹುದು. ಸಾಮಾನ್ಯವಾಗಿ ಕಮ್ಮಾರರು ಊರ ಹೊರ ಅಂಚಿನಲ್ಲಿ 'ಕುಲುಮೆ'ಗಳನ್ನು ಸ್ಥಾಪಿಸಿಕೊಂಡಿರುತ್ತಾರೆ. ಅದರಲ್ಲಿ 'ತಿದಿ' ಬಹುಮುಖ್ಯ ಸಾಧನ. ಅದರ ಪಕ್ಕದಲ್ಲೆ ಅಡಿಗಲ್ಲು, ನೀರಿನ ಗಲ್ಲೆಗಳಿರುತ್ತವೆ. ರೈತರಿಗೆ ವ್ಯವಸಾಯಕ್ಕೆ ಬೇಕಾದ ನೇಗಿಲು ಕುಳ, ಕೊಂಡಿ, ಕೂರಿಗೆ ತಾಳುಗಳು, ಕುಂಟೆ ತಾಳು, ಕುಡ, ಹಲುಬೆಯ ಹಲ್ಲುಗಳು, ಕುಡುಗೋಲು, ಕುರ್ಜಿಗೆ, ಕುಳುಮಡ, ಚಲಿಕೆ, ಗುದ್ದಲಿ, ಹಾರೆ, ಎಲೆಗುದ್ದಲಿ, ಮೊನೆಗುದ್ದಲಿ, ಕೊಡಲಿ ಎತ್ತಿನ ಲಾಳ, ಸುತ್ತಿಗೆ, ಮೇಕು, ಚಾಣ, ಕಪಿಲೆ ಬಾನಿಯ ಬಳೆ, ಗಾಡಿ ಅಚ್ಚು, ಗುಂಬದಬಳೆ, ಕಡಾಣಿ, ಚಕ್ರದ ಹಳಿ ಮೊದಲಾದವುಗಳನ್ನು ಮಾಡಿಕೊಡುತ್ತಾರೆ. ಹಾಗೆಯೇ ಗೃಹಬಳಕೆಗೆ ಬೇಕಾದ ಚಾಕು, ಚೂರಿ, ಮಚ್ಚು, ಈಳಿಗೆ ಮಣೆ, ಒನಕೆ ಬಳೆ, ಅಣಶು, ಇಕ್ಕಳ, ಒಲೆ, ಜೊತೆಗೆ ಗೃಹ ನಿರ್ಮಾಣಕ್ಕೆ ಬೇಕಾದ ಕಿಟಕಿಯ ಸರಳು, ಬಾಗಿಲ ಚಿಲಕ, ತಿರುಗಣಿ, ಗವಾಕ್ಷದ ಪಟ್ಟಿ ಮುಂತಾದವುಗಳನ್ನು ಕಮ್ಮಾರ ಮಾಡಿಕೊಡುತ್ತಾನೆ.

ಅಲ್ಲದೆ ಬೇಟೆಗೆ ಬೇಕಾದ ಕತ್ತಿ, ಬರ್ಜಿ, ಹೊಡೆಗತ್ತಿ, ಸಿಡಿ, ಬೋನು, ಮುಂತಾದುವುಗಳು ಹಾಗೂ ದೇವರ ಕಾರ್ಯಕ್ಕೆ ಬೇಕಾದ ರಥದ ಅಚ್ಚು, ಗುಂಬದ ಕಟ್ಟು, ಮೊಳೆ, ಕಡೆಗೀಲು, ಕೊಂಡಿ, ಸರಪಳಿ, ಗರುಡ ಗಂಬ ಮೊದಲಾದುವನ್ನು ಕಮ್ಮಾರ ಮಾಡಿಕೊಡುತ್ತಾನೆ.

ಇಂತಹ ಸಲಕರಣೆಗಳನ್ನು ಮಾಡಿಕೊಡುವಾಗ ರೈತನಿಂದ ಅಲ್ಪ ಸ್ವಲ್ಪ ಹಣವನ್ನು ಪಡೆಯುವನಾದರೂ ಇದು ಕಡ್ಡಾಯವಲ್ಲ. ರೈತನಿಗೆ ಮಳೆ ಬಂದು ಭೂಮಿ ಹದವಾದಾಗ ಸಕಾಲಕ್ಕೆ ನೇಗಿಲ ಕುಳ, ಕೊಂಡಿ, ಗುದ್ದಲಿ, ಸಲಿಕೆ ಮುಂತಾದುವು ಬೇಕಾಗುತ್ತವೆ. ಆದ್ದರಿಂದ ಆದ್ಯತೆಯ ಮೇರೆಗೆ ಕಮ್ಮಾರ ಕೆಲಸ ಮಾಡಿಕೊಡುತ್ತಾನೆ. ಮಿಕ್ಕಂತೆ ಸುಗ್ಗಿಯ ಕಣದಲ್ಲಿ ಆಯ ಕೊಡುವುದು ಕಡ್ಡಾಯವಾಗಿರುತ್ತದೆ. 'ಆಯ'ವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. 'ಹೊರೆ ಹುಲ್ಲು ಮೊರರಾಗಿ' ಎಂಬುದು ವಾಡಿಕೆಯಾಗಿದ್ದರೂ ಕೆಲವೊಮ್ಮೆ ಬತ್ತ, ರಾಗಿ ಇತ್ಯಾದಿಗಳನ್ನು ಕಟಾವು ಮಾಡಿ ಸಿವುಡು ಕಟ್ಟುವಾಗ ಆಯಗಾರರು ಕೆಲವರು ಅಲ್ಲಿಯೇ ಬಂದು ತೆನೆ ಸಹಿತವಾದ ಸಿವುಡುಗಳನ್ನು ಹೊರೆ ಕಟ್ಟಿಕೊಂಡು ಒಯ್ಯುತ್ತಾರೆ. ಸಮೃದ್ಧವಾಗಿ ಫಸಲು ಬಂದಾಗ ರೈತ ಕೈ ಕಟ್ಟುವುದಿಲ್ಲ. ಆಯಗಾರ ಖುಷಿಯಾಗುವಷ್ಟು ಅಂದರೆ ತಾನು ಯಾರ ಸಹಾಯವೂ ಇಲ್ಲದೆ ಹೊತ್ತುಕೊಂಡು ಹೋಗುವಷ್ಟು ಕಟ್ಟಿಕೊಳ್ಳಬಹುದು. ಮಳೆ ಬೆಳೆ ಕಡಿಮೆಯಿದ್ದಾಗ ಕಣದಲ್ಲಿ ಮೊರ ತುಂಬ ಕಾಳು ಕೊಡುವುದಿದೆ.

ಅಲ್ಲದೆ ಮನೆಯಲ್ಲಿ ಶುಭಕಾರ್ಯಗಳು ನಡೆದು ಊಟ ಹಾಕಿಸಲು ಒಲೆ ಹೂಡಿದಾಗ (ಗುಂಡಿ ಒಲೆ) ಅದರಲ್ಲಿ ಬೀಳುವ ಇದ್ದಿಲನ್ನು ಕಡ್ಡಾಯವಾಗಿ ಕಮ್ಮಾರನಿಗೆ ಕೊಟ್ಟು, ಊಟ ಹಾಕುತ್ತಾರೆ. ಹಬ್ಬ ಹರಿದಿನಗಳಲ್ಲಿ ಮನೆಗೆ ಬುಟ್ಟಿ ತಂದು ಅನ್ನ ತೆಗೆದುಕೊಂಡು ಹೋಗುವುದಿದೆ. ಕಮ್ಮಾರ ಕುಟುಂಬ ವಿಭಕ್ತಗೊಂಡು ಅಣ್ಣ ತಮ್ಮಂದಿರು ಬೇರೆ ಬೇರೆಯಾಗಿ ವೃತ್ತಿಯನ್ನು ಆರಂಭಿಸಿದಾಗ ಗ್ರಾಮದ ರೈತಾಪಿ ಮನೆಗಳನ್ನು ಹಂಚಿಕೊಂಡು ಆಯ ಪಡೆಯುವುದಿದೆ. ಆದರೆ ಇತ್ತೀಚೆಗೆ ಕಮ್ಮಾರಿಕೆ ವಾಣಿಜ್ಯೀಕರಣಗೊಂಡುದರ ಪರಿಣಾಮವಾಗಿ 'ಆಯ', ಆಯಗಾರ ಹಾಗೂ ರೈತನ ಸಂಬಂಧಗಳು ಶಿಥಿಲಗೊಳ್ಳುತ್ತಿವೆ.

ಕಮ್ಮಾರರ ಕುರಿತ ಗಾದೆಗಳು : ಕಮ್ಮಾರ ತಿದಿ ಒತ್ತಿದಂಗೆ, ಕಮ್ಮಾರ ಹಟ್ಟೀಲಿ ತಕಳ್ರೇ ಪಕಳ್ರೇ ಅಂದಂಗೆ, ಕಮ್ಮಾರನ ಮುಂಚು ಕತ್ತಿ ಅಂಚು, ಆಚಾರಿ ಆಳಲ್ಲ ಅಂಬ್ಲಿ ಬುಕ್ಕ್ಯಲ್ಲ... ಆಚಾರಿ ಬಲ್ದೇನು ಈಚಲಮರ.

ಕಮ್ಮಾರನ ಕುರಿತ ಪದಗಳು :

ಆಚಾರರ ಹಟ್ಯಾಗಿನ ಅಡಿಗಲ್ಲಲ್ಲಿರುವೋಳೆ
ಅಂದಾದ ಕ್ಯಾದಿಗೆಯ ಮುಡಿವೋಳೆ - ಕಾಳಮ್ಮ
ಮರೆತೋದ ಪದವ ಬರಕೊಡೆ

ಆರಾಳು ಅಡಿಗಲ್ಲು ಮೂರಾಳು ಚಮ್ಮಟಿಗೆ
ಊರಾಚೆಗೊಂದು ಒಲೆ ಹೂಡಿ - ಕಮ್ಮಾರಣ್ಣ
ಕತ್ತಿ ಮಾಟಗಲು ಹಸನಾದೊ

ಆದಾವು ಇದ್ದಲೀ ಕಾದವು ಕಬ್ಬಿಣಾ
ಅಂದ ಚಂದಾದ ತಿದಿಯೊತ್ತಿ - ಕಮ್ಮಾರಣ್ಣ
ಕತ್ತಿ ಬಾಕುಗಳು ಹಸನಾದೊ

ಸುತ್ತಿಗೆ ಸೊಬಗೀಗೆ ಕತ್ತಿ ಚಿತ್ತಾರವಾದೊ
ಕಾಳಮ್ಮನ ಗುಡಿಯ ಕಳಸಾದೊ - ಕಮ್ಮಾರಣ್ಣ
ಕಾದ ಕಬ್ಬಿಣವು ವೈನಾದೊ

ತ್ರಿಪದಿ :

ಎಮ್ಮೆ ಹಯನವು ಲೇಸು ಕಮ್ಮ ಗುಂಬುದು ಲೇಸು
ಸುಮ್ಮನೆ ಒಡವೆ ಬರಲೇಸು - ಊರಿಗೊಬ್ಬ
ಕಮ್ಮಾರ ಲೇಸು ಸರ್ವಜ್ಞ

ಸರ್ವಜ್ಞನ ತ್ರಿಪದಿ ಹಾಗೂ ಜನಪದ ತ್ರಿಪದಿಗಳು ಊರೊಟ್ಟಿಗಿನ ಕಮ್ಮಾರನ ಸಂಬಂಧ ಹಾಗೂ ಅದರ ಅನಿವಾರ್ಯತೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿವೆ.

ಕುಂಬಾರ : ರೈತನ ಒಕ್ಕಲು ತನಕ್ಕೆ ಹೊಯ್‌ಕಯ್ ಆಗಿರುವ ಆಯಗಾರರಲ್ಲಿ ಕುಂಬಾರರೂ ಒಬ್ಬರೂ. ಕುಲಾಲ ಬ್ರಹ್ಮ, ಚಕ್ರಸಾರಿ, ಗುನಗ, ಪ್ರಜಾಪತಿ, ಕುಂಬಕಾರ ಎಂದು ಮುಂತಾಗಿ ಕರೆಯಲ್ಪಡುವ ಕುಂಬಾರ ಪಾಂಚಾಳರಲ್ಲಿ ಒಬ್ಬರು. ಕುಂಬಾರ ರೈತನಿಗೆ ಬೇಕಾದ ಮಡಕೆ, ಕುಡಿಕೆ, ಗಡಿಗೆ, ಒಲೆ, ಗುಡಾಣ, ಮುಸುರೆಬಾನಿ, ವಾಡೆ, ಬುಡ್ಡು, ಕರಿಬಾನ ನಾಡ ಹಂಚು, ಮುಚ್ಚಳಗಲು, ಕುಂಡಗಳು, ಹಣತೆಗಳು, ಹೂಜಿಗಳು, ಚಟ್ಟಿಗೆ, ಬಾಣಲೆಗಳು ಮೊದಲಾದವುಗಳನ್ನು ತಯಾರಿಸಿಕೊಡುತ್ತಾನೆ. ವಿವಿಧ ಬಗೆಯ ಲೋಹದ, ಪ್ಲಾಸ್ಟಿಕ್‌ನ ಪಾತ್ರೆ ಪಗಡೆಗಳು ಬರುವ ಮುನ್ನ ಕುಂಬಾರನ ಮಡಕೆಗಳು ಜನರಿಗೆ ತೀರಾ ಅವಶ್ಯವಾಗಿ ಬೇಕಾಗಿದ್ದವು.

ಅಲ್ಲದೆ ಮದುವೆ ಮೊದಲಾದ ಶುಭಕಾರ್ಯಗಳ ಸಂದರ್ಭದಲ್ಲಿ 'ಅರಣೆ' ತಂದುಕೊಡುವುದು ಬಹಳ ಮುಖ್ಯವಾದ ಕಾರ್ಯವಾಗಿತ್ತು. ಕುಂಬಾರನಿಗೆ ಗ್ರಾಮದೇವತಾ ಉತ್ಸವಗಳಲ್ಲಿ ಹಣತೆ, ದೊಡ್ಡ ದೀವಿಗೆ, ಘಟೆ, ತಕುಡಿಕೆ, ಹೂಜಿ, ಕುಂಡ, ಕುಂಡಿಕೆಗಳೇ ಮೊದಲಾದವನ್ನು ಮಾಡಿಕೊಡುತ್ತಿದ್ದನು. ಅಂತ್ಯ ಸಂಸ್ಕಾರದ ಸಂದರ್ಭದಲ್ಲಿ ಬೇಕಾದ ದೀಪ, ಕುಡಿಕೆ, ಮಡಿಕೆಗಳನ್ನು ಪೂರೈಸುತ್ತಿದ್ದನು.

ಆಯಗಾರನಾಗಿ ರೈತಾಪಿ ಜನರಿಗೆ ಹೀಗೆ ಅವಶ್ಯಕವಾದ ಮಡಿಕೆಗಳನ್ನು ಪೂರೈಸುವುದಲ್ಲದೆ. ಮಿಕ್ಕ ಜನರಿಗೆ, ಬೇಕಾದ ಮಡಿಕೆಗಳನ್ನು ಮಾಡಿಕೊಂಡು ಬುಟ್ಟಿಯಲ್ಲಿ, ಗಾಡಿಯಲ್ಲಿ ಇಟ್ಟುಕೊಂಡು ಊರಿಂದೂರಿಗೆ ಹೋಗಿ ಮಾರುವುದು, ಸಂತೆ, ಜಾತ್ರೆ ಮುಂತಾದ ಕಡೆ ಮಡಿಕೆಗಳ ಮಾರಾಟ ಮಾಡತೊಡಗಿದಾಗ ಕುಂಬಾರ ಕುಂಬಾರೆ ಸೆಟ್ಟಿಯಾದ. ಇಂತಹ ಸಂದರ್ಭದಲ್ಲಿ ಆತ ವಿನಿಮಯಗಾರನಾಗಿ, ವ್ಯಾಪಾರಿ ಸೆಟ್ಟಿಯಾಗಿ ಕಾಣುತ್ತಾನೆ.

ಕುಂಬಾರಿಕೆಯಲ್ಲಿ ಬಳಸುವ ಉಪಕರಣಗಳು : ಚಕ್ರ, ಕೋಲು, ಗುಂಡುಕಲ್ಲು, ಮರದ ತುಂಡು, ಕುಯ್ಯುವ ದಾರ, ಆವಿಗೆ ಮೊದಲಾದುವು, ಬಳಸುವ ಮಣ್ಣುಗಲೆಂದರೆ ಜೇಡಿಮಣ್ಣು, ಆವೆಮಣ್ಣು, ಹೊಯಿಗೆ ಮಣ್ಣು ಮುಂತಾದುವು. ಕುಂಬಾರ ತಾನು ತಯಾರಿಸಿದ ಮಡಿಕೆಗಳಲ್ಲಿ ದೇವರ ಗುಡಿಗೆ ಮೊದಲ ಮಡಕೆಯನ್ನು ನೀಡುತ್ತಾನೆ. ಎರಡನೆಯದಾಗಿ ಊರಲ್ಲಿ ಐಯ್ನೋರು, ಶಾನುಬೋಗರು ಇಲ್ಲವೆ ಯಾವುದೇ ಗುರುಮಠಗಳಿದ್ದರೆ ಅಲ್ಲಿಗೆ ಒಂದನ್ನು ಕೊಡುತ್ತಾನೆ. ಉತ್ತರ ಕರ್ನಾಟಕದ ಕೆಲವು ಕಡೆ ಮದುವೆಯ ಸಂದರ್ಭದಲ್ಲಿ ಐರಾಣಿ ತರುವಾಗ ಮುತ್ತೈದೆಯರು ತಮ್ಮ ಜೊತೆ ಮದುಮಗಳನ್ನು ಕರೆದೊಯ್ಯುತ್ತಾರೆ. ಮದುವಣಗಿತ್ತಿಯನ್ನು

ಕುಂಬಾರ 'ತಿಗುರಿ'ಯ ಮೇಲೆ ಕೂರಿಸಿ ಏಳು ಸುತ್ತು ತಿರುಗಿಸುತ್ತಾನೆ. ಆಕೆ ತಿಗುರಿಯಿಂದ ಇಳಿದು ಅದಕ್ಕೆ ನಮಸ್ಕರಿಸಿ ಕುಳಿತುಕೊಳ್ಳುತ್ತಾಳೆ. ಆಗ ಏಳು ಹೊಸ ಬಿಂದಿಗೆ, ಕುಡಿಕೆಗಳನ್ನು ಕುಂಬಾರ ಕೊಡುತ್ತಾನೆ. ಮುತ್ತೈದೆಯರು ಅವುಗಳಿಗೆ ಪೂಜಿಸಿ ಆರಣೆ ಗೂಡೆಗಳಲ್ಲಿ ತುಂಬಿಕೊಂಡು ತರುತ್ತಾರೆ. ಇಂತಹ ಆಚರಣೆಗಳಿಂದಾಗಿ ಕುಂಬಾರ ಹಾಗೂ ರೈತಾಪಿ ಜನರ ಸಂಬಂಧ ಗಟ್ಟಿಯಾಗುತ್ತದೆ. ಅರಣೆ ತರುವಾಗ ಕುಂಬಾರನಿಗೆ ಕಾಳು, ಹಣ, ವಸ್ತ್ರಾದಿಗಳನ್ನು ಕೊಡುವರಾದರೂ ಸುಗ್ಗಿಯ ಕಣದಲ್ಲಿ ಮತ್ತೆ 'ಆಯ' ಕೊಡವಾಗುತ್ತದೆ. ಅಲ್ಲದೆ ಗ್ರಾಮದೇವತಾ ಉತ್ಸವದಲ್ಲಿಯೂ ಅಕ್ಕಿ, ದೇವಿಯ ಭಂಡಾರ, ಹೂವು, ಪ್ರಸಾದ, ಹಣ, ರುಮಾಲು, ಎಲೆ ಅಡಿಕೆ ಮೊದಲಾದ ಬಾಬನ್ನು ಕೊಡುವುದುಂಟು. ಇದಕ್ಕೆ ಮೊದಲು ಕುಂಬಾರ ದೇವಿಯ ಉತ್ಸವಕ್ಕೆ ಬೇಕಾದ ಬಾನದ ಮಡಕೆಗಳು, ಮುಚ್ಚಳಗಳು, ಪ್ರಣ್ಣಾಹಕ್ಕೆ ಬೇಕಾದ ಆರು ಕುಂಭಗಳು, ಸುರೆಘಟ, ಗಡಿಗೆ ಮೊದಲಾದುವನ್ನು ಕೊಡಬೇಕಾಗಿರುತ್ತದೆ.

ಕುಂಬಾರನ ಕುರಿತ ಗಾದೆಗಳು :

1. ಕುಂಬಾರ್‍ರ ಆವ್ಗೇಲಿ ತಾಮ್ರದ ಚೊಂಬ ಹುಡಿಕಿದಂಗೆ.
2. ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ
3. ಕುಂಬಾರನ ಬಲಗಾಲು ಉದ್ದ ಎಡಗಾಲು ಗಿಡ್ಡ
4. ಕುಂಬಾರನ ಮನೇಲಿ ಕುಡಿಕೆ ತೂತು

ಸಾಹಿತಿಗಳ ದೃಷ್ಟಿಯಲ್ಲಿ ಕುಂಬಾರ :

ಹಂಬು ತೋಟಕೆ ಲೇಸು | ತುಂಬು ಕೆರೆಗೆ ಲೇಸು
ಸಂಬಾರ ಲೇಸು ಅಡಿಗೆಗೆ - ಊರಿಗೊಬ್ಬ
ಕುಂಬಾರ ಲೇಸು ಸರ್ವಜ್ಞ

ಕುಂಬಾರ ನಿನಗ್ಯಾಕೊ ಗೊಂಬೆಯಂಥಾ ಹುಡುಗಿ
ತುಂಬಿ ತೋಡಿ ಮಣ್ಣ ತುಳಿಯೆಂಬೊ - ಮನೆಮನೆಗೆ
ತುಂಬಿ ಹೊರುಯೆಂದ ಮಡಕೇಯಾ

ಅಗಸ : ರೈತರಿಗೆ ಅಗಸನ ಸೇವೆ ತೀರಾ ಅನಿವಾರ್ಯವಾದುದು. ಹುಟ್ಟಿನಿಂದ ಸಾವಿನವರೆಗೂ ಅಗಸನ ಪಾತ್ರ ಇದ್ದೇ ಇರುತ್ತದೆ. ಕೃಷಿ ಕಾರ್ಯಕ್ಕೆ ನೇರವಾಗಿ ಬಳಕೆಯಾಗುವ ಯಾವುದೇ ಸಲಕರಣೆ, ಸೇವೆ ಇತ್ಯಾದಿಗಳನ್ನು ಅಗಸ ರೈತನಿಗೆ ನೀಡುವುದಿಲ್ಲ. ಆದರೆ ರೈತನ ಬದುಕಿನ ಉದ್ದಕ್ಕೂ ಪರೋಕ್ಷವಾಗಿ ಕೃಷಿಗೆ, ಪ್ರತ್ಯಕ್ಷವಾಗಿ ರೈತನ ಖಾಸಗಿ ಹಾಗೂ ಸಾಮುದಾಯಿಕ ಜೀವನಕ್ಕೆ ಮಡಿವಾಳನ ಸೇವೆ ಜರೂರಾಗಿ ಒದಗಿದೆ. ರೈತನ ಮನೆಯಲ್ಲಿ ಮಗು ಹುಟ್ಟಿತೆಂದರೆ ; ಹುಟ್ಟಿದ ಸೂತಕ ಕಳೆಯಲು, ಮೈಲಿಗೆ ಬಟ್ಟೆಗಳನ್ನು ಒಗೆದುಕೊಡಲು ಮಡಿವಾಳ ಬರುತ್ತಾನೆ. ಆತನು ಮೈಲಿಗೆಯನ್ನು ಮಡಿ ಮಾಡಿ ಗೋವು - ಬೇವು ಹಾಕಿ ಸೂತಕ ತೆಗೆಯುತ್ತಾನೆ. ಬಾಣಂತಿಯು ಬಟ್ಟೆ ಬದಲಾಯಿಸಬೇಕಾದರೆ ಅಗಸನೇ ಮಡಿ ಬಟ್ಟೆಗಳನ್ನು ಒದಗಿಸುತ್ತಿದ್ದ. ಮಗುವನ್ನು ಮಲಗಿಸಲು ಮೆತ್ತನೆಯ ಹಾಸು ಮಾಡಲು ಅಗಸನೇ ಬಟ್ಟೆಗಳನ್ನು ಒದಗಿಸುತ್ತಿದ್ದ.

ಹುಡುಗಿ ಮೈನೆರೆದಾಗ ಸೂತಕ ಕಳೆಯಲು ಅಸಗಿತ್ತಿ ಅಥವಾ ಅಗಸ ಮಡಿಬಟ್ಟೆಗಳನ್ನು ಒದಗಿಸುತ್ತಿದ್ದನು. ಕೆಲವು ಸಮುದಾಯಗಳಲ್ಲಿ ಮೈನೆರೆದ ಹುಡುಗಿಯನ್ನು ಊರ ಹೊರಗೆ ಗುಡಿಸಲು, ಇಲ್ಲವೆ ಹಸಿರು 'ಸಾಟು' (ಒಬ್ಬರು ಕುಳಿತು ಕೊಳ್ಳಲು ಸ್ಥಳಾವಕಾಶವಿರುವಂತೆ ಹೊಂಗೆ ಮರದ ಕೊಂಬೆ ಇಲ್ಲವೆ ತೆಂಗಿನ ಮರಿಗಳಿಂದ ನಿರ್ಮಿಸಿದ ಹಸಿರು ಗುಡ್ಲು) ಬದಲಾಯಿಸುವುದು. ಗೋವು - ಬೇವು ಹಾಕಿ ಶುದ್ಧಗೊಳಿಸುವುದು ಮೊದಲಾದ ಕಾರ್ಯಗಳನ್ನು ಮಾಡುತ್ತಿದ್ದರು. ಆ ನಂತರ ತಿಂಗಳ ಋತು ಚಕ್ರದ ಸಮಯದ 'ಹೊಲೆ' ಬಟ್ಟೆಗಳನ್ನು ಮಡಿಮಾಡುತ್ತಿದ್ದರು.

ಮದುವೆಯ ಸಂದರ್ಭದಲ್ಲಿ ದೇವತಾ ಕಾರ್ಯಕ್ಕೆ ಬೇಕಾದ ದೀಪಗಳ ಬತ್ತಿ, ಎಣ್ಣೆ ಮುಂತಾದವನ್ನು ಒದಗಿಸುವುದು, ಅದನ್ನು ಅಣಿ ಮಾಡುವುದು. ಎಣ್ಣೆ ಅರಿಶಿನ ಸ್ನಾದ ಬಟ್ಟೆಗಳನ್ನು ತೆಗೆದುಕೊಂಡು ಹೋಗುವುದು. ಧಾರೆಯೆರೆಯುವಾಗ ಬೀಳುವ ಹಾಲನ್ನು ತಟ್ಟೆಯಲ್ಲಿ ಹಿಡಿದುಕೊಳ್ಳುವುದು. ಗಂಗಾ ಪೂಜೆಗೆ ಹೋಗುವಾಗ ಅಲ್ಲಿ ಪೂಜೆಗೆ ಸಿದ್ಧಗೊಳಿಸುವುದು. ಮದು ಮಕ್ಕಳು ಪೂಜೆಗೆ ಬರುವಾಗ ಅವರಿಗೆ 'ತಣಿ' ಹಿಡಿಯಲು ಬೇಕಾದ ಬಿಳಿ ವಸ್ತ್ರಗಳನ್ನು ನೀಡುವುದು ಇವೇ ಮೊದಲಾದ ಕಾರ್ಯಗಳನ್ನು ಅಗಸ ಮಾಡುತ್ತಿದ್ದನು.

ಅಪರ ಕ್ರಿಯಾ ಸಂಸ್ಕಾರಗಳಲ್ಲೂ ಅಗಸನ ಸೇವೆಯ ಅಗತ್ಯವಿದೆ. ಸತ್ತ ಸೂತಕದ ಮನೆಯ ಬಟ್ಟೆಗಳನ್ನೆಲ್ಲಾ ತೊಳೆದು ಗೋವು - ಬೇವು ಮಾಡಿ ಶುದ್ಧಿ ಮಾಡುತ್ತಾನೆ. ಸತ್ತ ವ್ಯಕ್ತಿ ಬಳಸುತ್ತಿದ್ದ ಹಾಸಿಗೆ ದಿಂಬು, ಹೊದಿಕೆ ಮುಂತಾದುವುಗಳನ್ನು ಅಗಸನಿಗೆ ನೀಡಲಾಗುತ್ತದೆ.

ದೇವರ ಉತ್ಸವಾದಿಗಳಲ್ಲಿ, ಮಾರಿ ಹಬ್ಬದಲ್ಲಿ ಅಗಸ ಪಂಜು ಹಿಡಿಯುವುದು, ನಡೆ ಮಡಿ ಹಾಸುವುದು, ದೇವರ ವಸ್ತ್ರಾದಿಗಳನ್ನು ಶುದ್ಧಗೊಳಿಸುವುದು ಇತ್ಯಾದಿ ಕಾರ್ಯಗಳನ್ನು ಮಾಡುತ್ತಾನೆ.

ಒಟ್ಟಾರೆ ಕೃಷಿಕ ತನ್ನನ್ನು ತನ್ನ ಪರಿವಾರವನ್ನು ಸಂಪೂರ್ಣವಾಗಿ ಕೃಷಿ ಕಾಯಕದಲ್ಲಿ ತೊಡಗಿಸಿಕೊಂಡಾಗ ಮನೆಯ ಎಲ್ಲಾ ವಸ್ತ್ರಗಳನ್ನು ಎರಡು ದಿನಕ್ಕೊಮ್ಮೆ ಇಲ್ಲವೆ ವಾರಕ್ಕೊಮ್ಮೆ ತೆಗೆದುಕೊಂಡು ಹೋಗಿ ಮಡಿವಾಳಪ್ಪ ಮಡಿಮಾಡಿಕೊಂಡು ತಂದುಕೊಡುತ್ತಾನೆ. ಇದರಿಂದ ಬಟ್ಟೆ ತೊಳೆಯುವುದಕ್ಕಾಗಿ ರೈತ ಕುಟುಂಬ ವ್ಯಯಿಸಬಹುದಾದ ಸಮಯ ಉಳಿಯುತ್ತದೆ. ಆ ಸಮಯವನ್ನು ಕೃಷಿಗೇ ಮೀಸಲಾಗಿಡಲು ಸಹಾಯವಾಗುತ್ತದೆ.

ಮಡಿವಾಳರು ತಮ್ಮ ಆಯದ ಮನೆಗಳವರ ಬಟ್ಟೆಗಳನ್ನು ಸಂಗ್ರಹಿಸಿಕೊಂಡು ; ಗಂಟು ಕಟ್ಟಿ ಕತ್ತೆ ಮೇಲೆ ಹಾಕಿಕೊಂಡು ಹೊಳೆ, ಕೆರೆ ಕಟ್ಟೆ, ಇಲ್ಲವೆ ಬಾವಿಗಳಲ್ಲಿಗೆ ತೆರಳಿ ಮಡಿ ಮಾಡುತ್ತಾರೆ. ಬಟ್ಟೆ ತೀರಾ ಕೊಳೆಯಾಗಿದ್ದರೆ, ದುಪ್ಪಟ್ಟಿಯಂತಹ ದಪ್ಪವಾದ ಬಟ್ಟೆಗಳಿದ್ದರೆ, ಬಟ್ಟೆಗಳಿಗೆ 'ಕೂರೆ'ಯಂತಹ ಕ್ರಿಮಿ ಹಿಡಿದಿದ್ದರೆ ಅವುಗಲನ್ನು 'ಉಬ್ಬೆ ಬಾನಿಗೆ' ಹಾಕಿ ಬೇಯಿಸುತ್ತಾರೆ. ಆ ನಂತರ 'ಚೌಳು ಗುಂಡಿ'ಗೆ ತುಳಿಯುತ್ತಾರೆ. ಆಮೇಲೆ ಜಾರಿಸಿ ಹಿಂಡಿ ಒಣಹಾಕುತ್ತಾರೆ. ನಯವಾದ ಅಂಗಿ ಮುಂತಾದುವುಗಳನ್ನು ಇಸ್ತ್ರೀ ಮಾಡಿಕೊಡುತ್ತಾರೆ.

ಹಾಗೆಯೇ ಎರಡು ದಿನ ಇಲ್ಲವೆ ವಾರಕ್ಕೊಮ್ಮೆ ಮನೆಗಳಿಗೆ 'ಅನ್ನದ ಆಯ'ಕ್ಕಾಗಿ ಬರುತ್ತಾರೆ. ಆಯದ ಮನೆಗಳಲ್ಲಿ ತಾವು ಮಾಡಿದ ಅಡುಗೆಯಲ್ಲಿ ಸ್ವಲ್ಪ ಪಾಲನ್ನು ಅಗಸರಿಗೆ ನೀಡುತ್ತಾರೆ. ಹೀಗೆ ಮನೆ ಮನೆಯಿಂದ ಸಂಗ್ರಹಿಸಿದ ಅನ್ನ, ಸಾರು, ಮುದ್ದೆಗಳನ್ನು ತಾವು ಊಟ ಮಾಡುತ್ತಾರೆ. ಮಿಕ್ಕದ್ದನ್ನು ತಾವು ಸಾಕಿದ ಹಂದಿಗಳು, ಎಮ್ಮೆಗಳು ಮೊದಲಾದವುಗಳಿಗೆ ಹಾಕುತ್ತಾರೆ.

ಈ ಎಲ್ಲಾ ಕಾರ್ಯಕ್ಕಾಗಿ ಸುಗ್ಗಿ ಕಣದಲ್ಲಿ ಆಯ' ಪಡೆಯುತ್ತಾರೆ. ಆಯ ಎಷ್ಟು ಎಂಬುದು ಆಯದ ಮನೆಯ ಸದಸ್ಯರು, ಹಾಕುವ ಬಟ್ಟೆಗಳು ಇತ್ಯಾದಿಗಳ ಮೇಲೆ ತರಾವರಿ ನಿಗದಿಯಾಗಿರುತ್ತದೆ. ಮಾರಿ ಹಬ್ಬಗಳಲ್ಲಿ ಅಗಸನಿಗೆ ಐದು ಹತ್ತು ಸೇರು ಅಕ್ಕಿ, ಎಲೆ ಅಡಿಕೆ, ಹಣ, ದೇವಿಯ ಭಂಡಾರ, ಪ್ರಸಾದ, ಪಂಚೆ, ಅಂಗಿ, ಶಲ್ಯ, ಹೂವಿನ ಹಾರ, ಬೆಳ್ಳಿಯ ಉಡುದಾರ ಮೊದಲಾದುವುಗಳನ್ನು ಕೊಡುವ ವಾಡಿಕೆಯಿದೆ.

ಅಗಸನ ಕುರಿತ ಗಾದೆಗಳು :

ಊರ ಸೀರೆಗೆ ಅಗಸ ತಡೆಬಡಿ ಹಿಡಿದಂತೆ
ಅಗಸನ ಕತ್ತೆಗೆ ಪ್ರಾಯ ಬಂದಂಗೆ
ಅಗಸನ ಕತ್ತೆ ಮಾದಗಿತ್ತೀ ಹಿಂದೆ ಹೋಯ್ತು
ಅಗಸನಿಗ್ಯಾಕೆ ಆರಂಬ, ದಾಸಯ್ಯನಿಗ್ಯಾಕೆ ದನಕರ
ಅಗಸನ ಸಿಟ್ಟು ಒಗೆಯೋ ಬಟ್ಟೆ ಮ್ಯಾಲೆ
ಅಗಸಗಿತ್ತಿಗೆ ಗೊತ್ತಿಲ್ವ ಊರ ಸೀರೆ ಹಣೆಬರ
ಅರಸಗಿತ್ತಿ ಸೀರೆ ಅಗಸಗಿತ್ತಿ ಅಂಡಿನಮ್ಯಾಲೆ
ಬಿದ್ದ ಕಲ್ಲು ಅಗಸಂದು ಎದ್ದ ಕಲ್ಲು ಪೂಜಾರೀದು
ಹೊಸತರಲ್ಲಿ ಅಗಸ ಗೋಮಿ ತಾಕವನ್ನು ಎತ್ತಿ ಎತ್ತಿ ಒಗೆದ.

ಅಗಸನ ಕುರಿತ ಪದಗಳು :

ಅಗಸೆ ಊರಿಗೆ ಲೇಸು / ಸೊಗಸು ವಿದ್ಯಕೆ ಲೇಸು
ಬಗಸೆ ಉಳ್ಳವನ ಕೆಳೆ ಲೇಸು - ಊರಿಗೊಬ್ಬ
ಅಗಸನೇ ಲೇಸು ಸರ್ವಜ್ಞ

ಹಳ್ಳದ ದಂಡ್ಯಾಗೆ ತೆಳ್ಳನಾ ಕಲ್ಲಾಗೆ
ಹೊಳ್ಳಾದಿ ಎತ್ತಿ ಒಗೆಯೋನೆ - ನಮ್ಮೂರ
ಮಡಿವಾಳ ಮಾಚಯ್ಯ ಇವಕಾಣೆ

ಹರಿಯೋ ನೀರಾಗೆ ಸರಿಯಾದ ಕಲ್ಲಾಗೆ
ಹೊಳೆಹೊಳೆದ ಕಾಯೊ ಬಿಸಿಲೀಗೆ - ನಮ್ಮೂರ
ಬಟ್ಟೆ ವಸ್ತ್ರಗಳೇ ಮಡಿಯೊದೊ

ಕರೆಯ ನೀರಾಗೆ ಕರಿಯಾದ ಕಲ್ಲಾಗೆ
ಭೋರಾಡಿ ಬಟ್ಟೆ ಒಗೆಯೋನು - ನಮ್ಮೂರ
ಮಡಿವಾಳ ಮಡಿಯ ತಂದಾನು

ಬಾವಿಯ ನಿರಾಗೆ ಭಾರೀ ಕಲ್ಲಾಗೆ
ಬೋರಾಡಿ ಬಟ್ಟೆ ಸೆಳೆಯೋನೆ - ಮಡಿವಾಳಣ್ಣ
ಅಂಗಿ ಪಂಚೆಗಳೆ ಹಸನಾದೊ

ಕ್ಷೌರಿಕ : ಕ್ಷೌರಿಕನನ್ನು ಹಡಪದ, ನಾಯಿಂದ, ನಾಪಿತ, ಕೆಲಸಿಗ, ಹಜಾಮ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಕೆಲವೆಡೆ ಕಾಯಕದವರೆಂದೂ ಕರೆಯಲಾಗುತ್ತಿದೆ. ಈತನೂ ಒಬ್ಬ ಆಯಗಾರ, ಆದರೆ ಅಗಸನಂತೆ ಈತನ ಸೇವೆಯೂ ಕೃಷಿ ಕಾರ್ಯಕ್ಕೆ ನೇರ ಸಂಬಂಧಿಸಿದುದಲ್ಲ. ಕೃಷಿಕನ ಜೀವನದ ಕೆಲವು ಸಂಗತಿಗಳಿಗೆ ಸಂಬಂಧಿಸಿದ್ದು. ಆದರೂ ಇವನ ಸೇವೆಯ ಪರೋಕ್ಷ ಪರಿಣಾಮ ಕೃಷಿಯ ಮೇಲೆ ಆಗುತ್ತದೆ. ರೈತ ಆರೋಗ್ಯಕರ ದೇಹ, ಮನಸ್ಸು, ಮನಸ್ಥಿತಿಗಳನ್ನು ಹೊಂದಿರಬೇಕಾದರೆ ಆತನಿಗೆ ಅಗಸ, ಕ್ಷೌರಿಕ, ಕುರುಬ, ಚಮ್ಮಾರ, ಮೊದಲಾದ ಆಯಗಾರರ ಸೇವೆ ಅತ್ಯವಶ್ಯಕ.

ಈ ನೆಲೆಯಲ್ಲಿ 'ಹಡಪದ'ವರ ಸೇವೆ ತುಂಬಾ ಮುಖ್ಯವಾದುದು. ರೈತಾಪಿ ಜನರ ಹುಟ್ಟಿನಿಂದ ಸಾವಿನವರೆಗೂ ಹಲವು ವಿಧಿಗಳಲ್ಲಿ ಈತನ ಪಾತ್ರವು ಗಮನಾರ್ಹವಾಗಿದೆ. ಮಗು ಹುಟ್ಟಿದವರ ಮೊದಲ ಸಲ ಅದರ 'ಮುಡಿ'ಯನ್ನು ದೈವಕ್ಕೆ ಅರ್ಪಿಸುತ್ತಾರೆ. ಭಾರತೀಯರಲ್ಲಿ

ಹೀಗೆ ತನ್ನ 'ಮುಡಿ' (ಮುಡಿ ತನ್ನ ತನದ ಸಂಕೇತ)ಯನ್ನು ತನ್ನ ಮನೆ ದೈವಕ್ಕೋ, ಕುಲದೈವಕ್ಕೋ ಅರ್ಪಿಸುವ ಮುಖೇನ. ತನ್ನನ್ನು ತಾನೇ ದೈವಕ್ಕೆ ಸಮರ್ಪಿಸಿಕೊಂಡು ಮುಂದೆ ತನ್ನ ಬದುಕಿನ ರಕ್ಷಣೆ ದೈವಕ್ಕೆ ಸೇರಿದ್ದು ಎಂಬ ಭಾವನೆ ಕಳೆಯುವ ಪದ್ಧತಿಯಿದೆ. ಈ ಸಂದರ್ಭದಲ್ಲಿ ಮುಡಿಯ ಸಮರ್ಪಣೆಗೆ ಮುಖ್ಯವಾಗಿ ಬೇಕಾದ ಸೇವೆ ಹಡಪದವನದ್ದು. ಆತನೇ ಮುಂದೆ ನಿಂತು ತನ್ನ ಹಡಪದ ಸಾಮಗ್ರಿಗಳನ್ನು ಪೂಜಿಸಿ, ಜನರ ಅಪ್ಪಣೆ ಪಡೆದು ದೈವದ ಅಪ್ಪಣೆ ಪಡೆದು ಕೂದಲನ್ನು ಕತ್ತರಿಸಿ ಇಲ್ಲವೆ ಬೋಳಿಸಿ ತೆಗೆಯುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೂದಲನ್ನು ದೈವಕ್ಕೆ ಕೊಟ್ಟವನು ಪರಮ ಭಕ್ತನಾಗಿ ಜನತೆಯ, ಜನಾರ್ಧನನ ಕೃಪೆಗೆ ಪಾತ್ರನಾಗುತ್ತಾನೆ. ಕೂದಲನ್ನು ಕತ್ತರಿಸಿದವನು ಮುಟ್ಟಬಾರದವನಾಗಿ ಅಶುಭದ, ಅಪಶಕುನದ ವ್ಯಕ್ತಿಯಾಗುತ್ತಾನೆ. ಹಾಗಾಗಿಯೇ ಜನರು ತಾವು ಒಳ್ಳೆಯ ಕೆಲಸಕ್ಕಾಗಿ ಹೊರಟಾಗ 'ನಾಪಿತ' ಎದುರಾದರೆ ಅಪಶಕುನವೆಂದು ತಿಳಿಯುತ್ತಾರೆ. ಕ್ಷೌರ ಮಾಡಿಸಿಕೊಂಡಾಗ ಮೈಲಿಗೆಯಾಯಿತೆಂದು ಮಡಿಯಾಗುತ್ತಾರೆ.

ಹೀಗೆ ಬಾಲ್ಯಾವಸ್ಥೆಯಿಂದಲೇ 'ಕೆಲಸಿಗ'ನ ಸೇವೆ ಒಬ್ಬ ವ್ಯಕ್ತಿಗೆ ಆರಂಭವಾಗಿ ಪ್ರತಿ ದಿನ, ಪ್ರತಿವಾರ, ಇಲ್ಲವೆ ಪ್ರತಿತಿಂಗಳು ತಲೆಕ್ಷೌರ, ಮುಖಕ್ಷೌರ, ಹೊರಗಿನ ಕತ್ತಿಕೊಡುವ ಕಾಯಕ ಮುಂದುವರಿಯುತ್ತದೆ.

ಮದುವೆಯ ಸಂದರ್ಭದಲ್ಲಿಯೂ ಕೆಲವು ಸಮುದಾಯಗಳಲ್ಲಿ 'ನಾಗೋಲೆ ಶಾಸ್ತ್ರ' ಮುಂತಾದುವುಗಳು ನಡೆಯುವಾಗ 'ಹಜಾಮ' ತನ್ನ ಕತ್ತಿ, ಕತ್ತರಿಗಳನ್ನು ತಂದು ಮದು ಮಗನ ಕೈಕಾಲುಗಳ ಉಗುರುಗಳನ್ನು ಕತ್ತರಿಸಿ ತೆಗೆಯುವ ಶಾಸ್ತ್ರ ಮಾಡುತ್ತಾನೆ. ಅಲ್ಲಿಂದ ಮುಂದಕ್ಕೆ ಉಗುರು ಕತ್ತರಿಸುವ ಅವಕಾಶ ಮದುಮಗನಿಗೆ ಸಿಗುತ್ತದೆ. ಅಂದರೆ ಅಲ್ಲಿಯವರೆಗೂ ತನ್ನ ಉಗುರುಗಳನ್ನು ಆತ ಕತ್ತರಿಸಿ ಕೂಡದೆಂಬ ನಿಷೇಧವಿದೆ.

ಹಾಗೆಯೇ 'ಹರಕೆ ಮುಡಿ'ಯನ್ನು ಅರ್ಪಿಸುವಾಗ ಜನರ ಸೇವೆಗೆ ಮುಂದಾಗುವವನು ಕಾಯಕದವನೇ. ಯಾರಾದರೂ ತೀರಿಕೊಂಡಾಗ ಅಂತ್ಯ ಕ್ರಿಯಾ ಕರ್ಮಗಳಲ್ಲಿ ಪಾಲ್ಗೊಂಡು ಘಟ ಒಡೆದವನಿಗೆ ತಲೆ ಬೋಳಿಸುವುದು ಈತನೇ. ಅಲ್ಲದೆ ಗ್ರಾಮಗಳಲ್ಲಿ ಯಾವುದಾದರೂ ಅಪರಾಧ ಮಾಡಿ ಶಿಕ್ಷೆಗೆ ಒಳಗಾದವರಿಗೆ ತಲೆ ಬೋಳಿಸುವ, ಮೀಸೆ ಬೋಳಿಸುವ ಶಿಕ್ಷೆಯಾದಾಗ ನಾಪಿತನ ಅಗತ್ಯವಿದೆ. ಕೇವಲ ತಲೆ ಕೂದಲನ್ನು ತೆಗೆಯುವ ಕಾಯಕವಲ್ಲದೇ ಇವರು ತಲೆಗೆ ಎಣ್ಣೆ ಹಾಕಿ ತಿಕ್ಕುವುದು, ಕುತ್ತಿಗೆ ನರಗಳನ್ನು ಸರಿಪಡಿಸುವುದು, ಕೈಕಾಲು ಮಾಲಿಷ್ ಮಾಡುವುದು, ಕೂದಲಿಗೆ ಬಣ್ಣ ಹಚ್ಚುವುದು, ಶುಭಕಾರ್ಯಗಳಲ್ಲಿ ನಾಗಸ್ವರ ನುಡಿಸುವುದು ಮುಂತಾದ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ.

ಕ್ಷೌರಿಕನ ಈ ಸೇವೆಗಾಗಿ ಆತ ಆಯವ ಮನೆಗಳಿಂದ ಸುಗ್ಗಿ ಕಣದಲ್ಲಿ ಮನೆಯ ಗಂಡಾಳುಗಳ ಲೆಕ್ಕದಲ್ಲಿ ಆಯ ಪಡೆಯುತ್ತಾನೆ. 'ಹೊರೆ ಹುಲ್ಲು ಮೊರ ಬತ್ತ'ವೆಂಬುದು ವಾಡಿಕೆಯ ಆಯವಾದರೂ ಅದು ಕಾಲ ಕಾಲಕ್ಕೆ. ಪ್ರದೇಶವಾರು ಬದಲಾಗುತ್ತಾ ಬಂದಿದೆ. ಅಲ್ಲದೆ ಮುಡಿ ತೆಗೆಸುವಾಗ, ಮದುವೆ ಕಾರ್ಯಗಳಲ್ಲಿ ಅಂತ್ಯಕ್ರಿಯಾ ಕರ್ಮಗಳ ಸಂದರ್ಭದಲ್ಲಿ ಆತನಿಗೆ ಬಟ್ಟೆ ಕೊಡುವ ಹಣ ಕೊಡುವ, ಅಕ್ಕಿ ಬೆಲ್ಲ ಕೊಡುವ ಸಂಪ್ರದಾಯವಿದೆ.

ಇತ್ತೀಚೆಗೆ ಈ ಬಗೆಯ ಆಯ ಕಾಣೆಯಾಗುತ್ತಿದೆ. ನಾಪಿತನ ಮನೆ ಮನೆಯ ಸೇವೆ ಕಡಿಮೆಯಾಗಿ "Hair cutting saloon'ಗಳು ತಲೆಯೆತ್ತಿವೆ. ಹಾಗಾಗಿ 'ಆಯ'ದ ಬದಲು 'ಹಣ' ಸ್ಥಾನ ಪಡೆದಿದೆ. ನಾಪಿತನ ಕುರಿತ ನಂಬಿಕೆಗಳು : ಹಜಾಮ ಎದುರಾದರೆ ಬಿತ್ತನೆ ಕಾರ್ಯಕ್ಕೆ ಹೋಗಬಾರದು. ಶುಭ ಕಾರ್ಯಕ್ಕೆ ಹೋಗುವ ಹಡಪದ ಪೆಟ್ಟಿಗೆ ಸಮೇತ ಹಜಾಮ ಎದುರಾದರೆ ಶುಭ. ಕ್ಷೌರಿಕನ ಮನೆಗೆ ಹೋಗಿ ಸ್ನಾನ ಮಾಡದೆ ಒಳಗೆ ಬರಬಾರದು. ಮನೆಯ ಒಳಗೆ ಹಜಾಮ, ಕ್ಷೌರಿಕ ಇತ್ಯಾದಿ ಪದ ಬಳಸಬಾರದು. ಬದಲಾಗಿ 'ಊರ ಮುಂದಲವನು' ಎನ್ನಬೇಕು. ಇತ್ಯಾದಿ.

ಕ್ಷೌರಿಕನನ್ನು ಕುರಿತ ಗಾದೆಗಳು :

ಹಜಾಮನಿಗೆ ಆಯ ಕೊಟ್ರೆ ಅವನ ಕತ್ತಿಗೇನ್ ಗೊತ್ತು

ಹಜಾಮಿನ ಕೈಯ ಕತ್ತರಿ, ಬಡಗಿ ಕೈಯ ಬಾಳಸಿ ಸುಮ್ಮನಿರಲ್ಲ

ಕ್ಷೌರಿಕನನ್ನು ಕುರಿತ ಪದಗಳು :

ಹಾಲು ಅನ್ನ ಉಂಡು ಶಾಲೂ ದೋತರ ಸುತ್ತಿ
ಹರಳೀನ ತನ್ನ ಅಡಪಾನ ತಕ್ಕಂಡು - ಗೋಪಾಲಣ್ಣ
ಅಲೆದಾನೆ ಬಾಣಗೆರೆ ಬಯಲಾಗೆ

ತುಪ್ಪ ಅನ್ನುಂಡು ಪಟ್ಟೆ ದೋತರ ಸುತ್ತಿ
ಅಪ್ಪಂಥ ಅಡಪಾವು ಹೆಗಲಾಗೆ - ಗೋಪಾಲಣ್ಣ
ಒಪ್ಪುಳ್ಳ ಊರಾಗೆ ಸುತ್ತಾನೆ.

ಕಂಚೀನ ಕತ್ತಿ ಕಟ್ವಾಣಿ ಕತ್ತರೀ
ತುಂಬಿದಂಥ ಹಡಪ ಹೆಗಲೇರಿ - ಗೋಪಾಲಣ್ಣ
ಅಪ್ಪಾನ ನೆನೆದು ಹೊರಟಾನು

ಕುರುಬ : ಆಯಗಾರನಾಗಿ ಕುರುಬನನ್ನು ಕಾಣುವುದು ಕೆಲವು ಪ್ರದೇಶಗಳಲ್ಲಿ ಮಾತ್ರ. ಮುಖ್ಯವಾಗಿ ತುಮಕೂರು, ಚಿತ್ರದುರ್ಗ, ಆಂಧ್ರಪ್ರದೇಶದ ಕೆಲವು ಕಡೆಗಳಲ್ಲಿ ಆಯಗಾರ ಅಥವಾ ಬಾರಾಬಲೂತೆಗಾರರಲ್ಲಿ ಕುರುಬನನ್ನು ಸೇರಿಸಲಾಗಿದೆ. ರೈತರು ಪಶು ಸಂಗೋಪನೆಯಲ್ಲಿ ತೊಡಗಿದ್ದಾಗ (ಅದರಲ್ಲೂ ಕುರಿಸಾಕಣೆ) ಕುರುಬ ಮತ್ತು ರೈತನ ನಡುವೆ ಇನ್ನಷ್ಟು ಪರಸ್ಪರಾವಲಂಬನೆ ಕಂಡುಬರುತ್ತದೆ. ಮುಖ್ಯವಾಗಿ ಕರ್ನಾಟಕದ ತುಮಕೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಕುರಿ ಸಾಕಾಣಿಕೆ ಮಾಡುವ ರೈತರು ಹೆಚ್ಚಾಗಿ ಕಂಡುಬರುತ್ತಾರೆ. ಇಂತಹ ಕಡೆಗಳಲ್ಲಿ ವರ್ಷಕ್ಕೆ ಎರಡು ಬಾರಿ ಕಾರು ಕುಯ್ಲು, ಮೊಗಿ ಕುಯ್ಲು ಅಂತ ಕುರಿಗಳ ತುಪ್ಪಟ ಕತ್ತರಿಸಲು ಕುರುಬರು ಕುರಿಗಾರರ ಹಟ್ಟಿಗೆಹೋಗುತ್ತಾರೆ. ಕತ್ತರಿಸಿದ ತುಪ್ಪಟವನ್ನು ತೆಗೆದುಕೊಂಡು ಹೋಗಿ ಅದರಿಂದ ಕಂಬಳಿತಯಾರಿಸಿ ಕುರಿಗಾರರಿಗೆ ನೀಡುತ್ತಾನೆ. ಇದಕ್ಕೆ ಆತ ಹಣ ಪಡೆಯುವುದಿಲ್ಲ. ಬದಲಾಗಿ ನೂರು ಕುರಿಗಳ ಉಣ್ಣೆಯಿಂದ ಐದು ಕಂಬಳಿ ಸಿದ್ಧವಾದರೆ ಅದರಲ್ಲಿಎರಡನ್ನು ಆತ ಉಳಿಸಿಕೊಂಡು ಮೂರನ್ನು ಕುರಿಗಾರನಿಗೆ ನೀಡುತ್ತಾನೆ. ಅಲ್ಲದೆ ರೈತನ ಎತ್ತು, ಹಸು, ಕರು ಹಾಗೂ ಕುರಿ, ಟಗರುಗಳಿಗೆ ಉಣ್ಣೆಯಿಂದ ಮಾಡಿದ ಕೊರಳ ದಂಡೆಗಳನ್ನು ಮಾಡಿಕೊಡುತ್ತಾನೆ. ಮುದ್ದಿನ ಸಾಕು ಪ್ರಾಣಿಗಳಿಗೆ ದೃಷ್ಟಿಯಾಗದಿರಲೆಂದು ಉಣ್ಣೆ ದಾರದಿಂದ ಕಾಲ ಕಂಕಣವನ್ನು ಮಾಡಿಕೊಡುತ್ತಾನೆ. ನೇಗಿಲು, ನೊಗ ಮುಂತಾದ ವ್ಯವಸಾಯದ ಸಲಕರಣೆಗಳನ್ನು 'ಕಾರಹಬ್ಬ'ದಲ್ಲಿ ಪೂಜೆಗಿಟ್ಟಾಗ ಅವುಗಳಿಗೆ ಎಕ್ಕದ ಕುಡಿಗಳನ್ನು ಪತ್ರೆಯಾಗಿ ಕಟ್ಟಲಿಕ್ಕೆ ಉಣ್ಣೆದಾರವನ್ನು ಕೊಡುತ್ತಾನೆ.

ಅಲ್ಲದೆ ಮದುವೆಯ ಸಂದರ್ಭದಲ್ಲಿ ಕೆಲ ಸಮುದಾಯದ ರೈತರು ವರನ ಕೈಗೆ ಕಟ್ಟುವ ಕಂಕಣಕ್ಕೆ ಉಣ್ಣೆಯ ದಾರವನ್ನು ಕುರುಬನಿಂದ ಪಡೆಯುತ್ತಾರೆ. ಹಾಲೊತ್ತುವ ಶಾಸ್ತ್ರ, ಅರಣೆ ಪೂಜೆ ಮುಂತಾದ ಶಾಸ್ತ್ರಗಳನ್ನು ಮಾಡುವಾಗ ಕರಿ ಕಂಬಳಿ ಗದ್ದುಗೆ ಮಾಡಲಾಗುತ್ತದೆ. ಆ ಗದ್ದುಗೆಗೆ ಬೇಕಾದ ಕಂಬಳಿಯನ್ನು ಕುರುಬ ಗೌಡನೇ ಒದಗಿಸುತ್ತಾನೆ. ದೇವತಾ ಉತ್ಸವಗಳಲ್ಲೂ ಮಣೇವು ಶಾಸ್ತ್ರಕ್ಕೆ, ಗದ್ದುಗೆ ಪೂಜೆಗೆ ಕಂಬಳಿ ಕೊಡುತ್ತಾನೆ. ದೇವಕಂಕಣಕ್ಕೂ ಕುರುಬ ದಾರ ಕೊಡುತ್ತಾನೆ. ಹೀಗೆ ರೈತನ ಜೀವನದ ಹಲವು ಸಂದರ್ಭಗಳಲ್ಲಿ ಕುರುಬಗೌಡನ ನೆರವು ಅಗತ್ಯವಾಗಿ ಬೇಕಾಗುತ್ತದೆ. ಹೀಗಾಗಿ ಕುರುಬಗೌಡನು ಆಯಗಾರನಾಗಿದ್ದಾನೆ.

ಆದರೆ ಇತ್ತೀಚೆಗೆ ಕುರುಬರು ಕಂಬಳಿ ನೇಯ್ಗೆ ಹಾಗೂ ವ್ಯಾಪಾರವನ್ನು ಉದ್ದಿಮೆಯಾಗಿ ಮಾಡಿಕೊಂಡಿದ್ದಾರೆ. ಹಾಗಾಗಿ ಕುರುಬಗೌಡರು ಆಯಗಾರರಾಗಿ ಆಯ ಪಡೆಯುವುದು ಕಣ್ಮರೆಯಾಗುತ್ತಿದೆ. ಅಲ್ಲದೆ ಮದುವೆ ಮುಂತಾದ ಕಾರ್ಯಗಳಲ್ಲಿ ಹಿಂದಿನ ಶಾಸ್ತ್ರಗಳು, ಸಂಪ್ರದಾಯಗಳು ಮರೆಯಾಗುತ್ತಿರುವುದರಿಂದ ಕುರುಬಗೌಡನಷ್ಟೇ ಅಲ್ಲ ಉಳಿದ ಆಯಗಾರರ ಆವಶ್ಯಕತೆಯೂ ಜನರಿಗೆ ಕಂಡುಬರುತ್ತಿಲ್ಲ. ಆಯಪದ್ಧತಿ ಅಸ್ತಿತ್ವದಲ್ಲಿದ್ದಾಗ ಕುರುಬಗೌಡನಿಗೆ ಸುಗ್ಗಿಯ ಕಣದಲ್ಲಿ ಆಯ ಕೊಡಲಾಗುತ್ತಿತ್ತು. ಅಲ್ಲದೆ ಮಾರಿ ಹಬ್ಬದಲ್ಲಿ ಅಕ್ಕಿ, ಹಣ, ರುಮಾಲು, ಹೂ ಹಾರ, ದೇವಿಯ ಪ್ರಸಾದ, ಎಲೆ ಅಡಕೆ, ಅರಿಸಿನ ಕುಂಕುಮಾದಿಗಳನ್ನು ಆತನಿಗೆ ಕೊಟ್ಟು ಮಡಿಲಕ್ಕಿ ಹುಯ್ದು ಗೌರವಿಸಲಾಗುತ್ತಿತ್ತು.

ಕುರುಬನ ಕುರಿತ ಗಾದೆಗಳು ; ಕುರುಬನಿಗೆ ನಾಡೇನು ? ಬೀಡೇನು?, ಕುಂತ್ರೆ ಕುರುಬ ನಿಂತ್ರೆ ಕಿರುಬ, ಕುರುಬನ ಕುತ್ತಕ್ಕೆ ಕುರಿಯ ಪಿತ್ತವೇ ಮದ್ದು, ಕುರುಬನಿಗೆ ಹೂ ಕೊಟ್ರೆ ಮೂಸಿ ನೋಡಿ ಕುಂಡಿಗೆ ಸಿಕ್ಕಿಸಿಕೊಂಡನಂತೆ, ಕುರುಬ ಕುಂಬಾರನೆ ಹೋದ್ರೆ ಬೇಡ ಆಡಿನ ಕಾಲು ಮುರಿದ್ನಂತೆ.

ಮೇದಾರ : ಮೇದಾರ ಆಯಗಾರರಲ್ಲಿ ಒಬ್ಬರಾಗಿ ರೈತನಿಗೆ ಬೇಕಾದ ಮೊರ, ಗೂಡೆ, ಬುಟ್ಟಿ, ತಟ್ಟೆ, ಮಂಕರಿ, ಪಂಜರ, ಜರಡಿ ಮುಂತಾದವುಗಳನ್ನು ತಯಾರಿಸಿ ಕೊಡುವನು. ವ್ಯವಸಾಯಗಾರನಿಗೆ ಬೆಳೆಯನ್ನು ಬಿತ್ತುವ ಹಂತದಿಂದ ಕಟಾವು ಮಾಡಿ, ಕಣ ಮಾಡಿ ಮನೆಯೊಳಕ್ಕೆ ಧಾನ್ಯಗಳನ್ನು ತುಂಬಿಕೊಳ್ಳುವವರೆಗೆ ಎಲ್ಲ ಹಂತಗಳಲ್ಲೂ ಮೇದಾರನ ಕಸುಬಿನ ಉತ್ಪನ್ನಗಳು ಬೇಕೆ ಬೇಕು. ಹೊಲಕ್ಕೆ ಬಿತ್ತನೆ ಬೀಜ ಸಾಗಿಸಲು ಗೂಡೆಗಳು, ಒಟ್ಲು ಪಾತಿಗಳಿಂದ ಒಟ್ಲು ಕಂತೆಗಳನ್ನು ಗದ್ದೆಗೆ ಸಾಗಿಸಲು ಮಂಕರಿಗಳು, ಹೊಲಕ್ಕೆ ಗೊಬ್ಬರ ಹಾಕಲು ಬುಟ್ಟಿಗಳು, ಜಲ್ಲೆಗಳು, ತಟ್ಟೆಗಳು ಬೇಕು. ಕಳೆ ಕೀಳುವಾಗ ಕಳೆಯನ್ನು ಹೊರಸಾಗಿಸಲು ಮಂಕರಿಗಳು ಬೇಕು. ಬೆಳೆಯ ಸಾಲುಗಳ ಮಧ್ಯೆ ಕುಂಟೆ ಹೊಡೆಯುವಾಗ

ಎತ್ತುಗಳ ಬಾಯಿಗೆ ಕುಕ್ಕೆ ಬೇಕು, ಬೆಳೆ ಕಟಾವು ಮಾಡುವಾಗ ಕಟಾವು ಮಾಡಿದ ತೆನೆಗಳು, ಕಾಯಿ ಕಸರನ್ನು ತುಂಬಿಕೊಡು ಸಾಗಿಸಲು ಜಮಾ, ಮಂಕರಿಗಳು ಬೇಕು. ಕಣದಲ್ಲಿ ಒಕ್ಕಣೆ ಮಾಡಿದಾಗ ಕೇರಲು, ತೂರಲು ಮೊರ, ಜರಡಿ (ವಂದರಿ) ಇತ್ಯಾದಿಗಳು ಬೇಕು, ಕಾಳುಗಳನ್ನು ಮನೆಯಲ್ಲಿ ಸಂಗ್ರಹಿಸಲು ಗೆರಸೆ, ತೊಂಬೆ ಇತ್ಯಾದಿಗಳು ಬೇಕು. ಇವೆಲ್ಲವನ್ನು ಮೇದಾರರು ರೈತರಿಗೆ ಕಾಲಕಾಲಕ್ಕೆ ಒದಗಿಸುತ್ತಾರೆ.

ಇಂತಹ ಸಾಮಗ್ರಿಗಳನ್ನು ತಯಾರಿಸಲು ಮೇದಾರನಿಗೆ ಬೇಕಾದ ವಸ್ತುಗಳೆಂದರೆ ಬಿದಿರು, ಈಚಲು, ರೋಜಾ, ಹೂಲಿ ಮುಂತಾದ ಗಿಡ ಮರಗಳು. ಇವುಗಳನ್ನು ಕಾಡಿನಿಂದ, ರೈತರ ಹೊಲ ಗದ್ದೆಗಳಲ್ಲಿ ಬೆಳೆದ ಗಿಡ ಮರಗಳಿಂದ ತರುತ್ತಾರೆ. ಅವುಗಳನ್ನು ಹದವಾಗಿ ಸೀಳಿಕೊಂಡು ರೈತರು ಹೇಳಿದ ಪದಾರ್ಥಗಳನ್ನು ಅವರು ಹೇಳಿದ ಅಳತೆ, ಆಕಾರಕ್ಕೆ ಮಾಡಿಕೊಡುತ್ತಾರೆ.

ಅಲ್ಲದೆ ದೇವತಾ ಉತ್ಸವಗಳು, ಹಬ್ಬ - ಹರಿದಿನಗಳು ಮುಂತಾದ ಶುಭಕಾರ್ಯಗಳಲ್ಲಿ ಬಿದಿರ ಬುಟ್ಟಿ, ಹೂ ಬುಟ್ಟಿ, ಅಳತೆ ಪಡಿಗಳು ಮೊದಲಾದವುಗಳನ್ನು ಮಾಡಿಕೊಡುವುದು ಮೇದಾರನ ಕರ್ತವ್ಯವಾಗಿರುತ್ತದೆ. ಇದಕ್ಕಾಗಿ ಗ್ರಾಮದೇವತಾ ಉತ್ಸವದಲ್ಲಿ ಅಕ್ಕಿ, ಶಲ್ಯ, ಪಂಚೆ, ಹೂಹಾರ, ಹಣ, ಎಲೆ ಅಡಕೆ, ಅರಿಸಿನ - ಕುಂಕುಮ, ದೇವಿಯ ಪ್ರಸಾದಗಳನ್ನು ಕೊಟ್ಟು, ಉಡಿ ತುಂಬುತ್ತಾರೆ. ಅಲ್ಲದೆ ಸುಗ್ಗಿ ಕಣದಲ್ಲಿ 'ಹೊರೆ ಹುಲ್ಲು ಮೊರ ಬತ್ತ'ವೆಂಬ ಮಾತಿದ್ದರೂ ಕಾಲ ಕಾಲಕ್ಕೆ ಆಯದ ಧಾನ್ಯಗಳನ್ನು ಕೊಡುವ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಜೊತೆಗೆ 'ಕಡೆಗಣ'ದ ಕಾಳುಗಳನ್ನು ಇವರಿಗಾಗಿ ಬಿಡುತ್ತಾರೆ.

ಇಂದು ಮೇದಾರ ಒಬ್ಬ ಆಯಗಾರನಾಗಿ ಉಳಿದಿಲ್ಲ. ಬದಲಾದ ಸ್ಥಿತಿಯಲ್ಲಿ ಆತನ ಉದ್ಯಮ ವಾಣಿಜ್ಯೀಕರಣಗೊಂಡಿದೆ. ನಗರದೆಡೆಗೆ ತಾಲ್ಲೂಕು ಕೇಂದ್ರ, ಹೋಬಳಿ ಕೇಂದ್ರದಂತಹ ಪಟ್ಟಣಗಳೆಡೆಗೆ ವಲಸೆ ಹೋಗಿ ; ಅಲ್ಲಿ ತನ್ನ ಉದ್ಯಮವನ್ನು ಆರಂಭಿಸಿದ್ದಾನೆ. ಅಲ್ಲದೆ ನಗರಗಳ ಜನತೆಯ ಬೇಡಿಕೆಯಂತೆ, ಹೂದಾನಿ, ಸೋಫಾಸೆಟ್, ಕುರ್ಚಿ ಮುಂತಾದ ವಸ್ತುಗಳನ್ನು ಕುಶಲತೆಯಿಂದ ನಿರ್ಮಿಸಿ ಲಾಭಗಳಿಕೆಯತ್ತ ಮುನ್ನುಗ್ಗಿದ್ದಾನೆ. ಹಾಗಾಗಿ ಗ್ರಾಮೀಣ ಪ್ರದೇಶದ ಆಯ ಪದ್ಧತಿ ನಿಧಾನವಾಗಿ ಶಿಥಿಲವಾಗುತ್ತಿವೆ.

ಮಣೆಗಾರ : ಮಾದಿಗ, ಮಾದಾರ, ಚಮ್ಮಾರ ಎಂಬ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಇವರು ಸಾಮಾಜಿಕವಾಗಿ ತಳ ಮಟ್ಟದಲ್ಲಿದ್ದರೂ ಆಯವ್ಯವಸ್ಥೆಯಲ್ಲಿ ಇತರ ಆಯಗಾರರಿಗಿಂತ ತೀರಾ ಕೀಳಾಗಿಯೇನೂ ಪರಿಗಣಿತವಾಗಿಲ್ಲ. ಚಮ್ಮಾರನ ಸೇವೆ ಒಕ್ಕಲುತನಕ್ಕೆ ತೀರಾ ಅವಶ್ಯವಾದುದು. ಚಮ್ಮಾರನ ಸೇವೆಯನ್ನು ಎರಡು ನೆಲೆಯಲ್ಲಿ ಗುರುತಿಸಬಹುದು. ಒಂದು ಕೃಷಿಗೆ ನೇರ ಸಂಬಂಧಿಸಿದ ಸೇವೆ. ಇಲ್ಲಿ ರೈತನ ಆಹಾರೋತ್ಪಾದನೆಯ ಕಾರ್ಯಕ್ಕೆ ಸಹಾಯಕ ಸಲಕರಣೆಗಳಾದ ನೊಗದ ಪಟ್ಟಗಣ್ಣೆ, ಹೂಡುಹಗ್ಗ, ಬಾರುಹಗ್ಗ, ಬಾರುಕೋಲು ಸೆಳೆ, ಮೊದಲಾದವುಗಳನ್ನು ಮಣೆಗಾರ ರೈತನಿಗೆ ಮಾಡಿಕೊಡುತ್ತಾನೆ. ಅಲ್ಲದೆ ಏತ ನೀರಾವರಿಯಲ್ಲಿ ಬಳಕೆಯಾಗುತ್ತಿದ್ದ ಕಪಿಲೆ ಬಾನಿ ಅಂದರೆ ಬಾವಿಯಿಂದ ನೀರು ಮೇಲೆತ್ತಲು ದನಗಳು, ಎಮ್ಮೆಗಳ ಚರ್ಮದಿಂದ ದೊಡ್ಡ ಚೀಲದಂತಹ ಬಾನಿಯನ್ನು ತಯಾರಿಸಿ ಅದನ್ನು ಮಿಣೆ, ದಾಬುಗಳಿಗೆ ಬಿಗಿದು ಎತ್ತುಗಳಿಂದ ಎಳೆಯಿಸುವ ಒಂದು ನೀರೆತ್ತುವ ಸಾಧನ. ಇದನ್ನು ಚಮ್ಮಾರ ಮಾಡಿಕೊಡುತ್ತಾನೆ. ಜೊತೆಗೆ ಅದಕ್ಕೆ ಬಿಗಿಯುವ ಮಿಣಿ, ದಾಬು ಎಂಬ ಉದ್ದನೆಯ ದಪ್ಪ ಹಗ್ಗಗಳನ್ನು ಈತನೇ ಮಾಡಿಕೊಡುತ್ತಾನೆ.

ರೈತನ ಕೃಷಿ ಬದುಕಿನಲ್ಲಿ ಆತ ಸವೆಸುವ ಹಾದಿ ಬಹಳ ದುರ್ಗಮವಾದುದು. ಹೊಲಗದ್ದೆ, ಅಡವಿಗಳಲ್ಲಿ ತಿರುಗಾಡುವಾಗ ಕಲ್ಲು, ಮುಳ್ಳುಗಳಿಂದ ರಕ್ಷಣೆ ಪಡೆಯಲು ಆತನಿಗೆ ಪಾದರಕ್ಷೆಗಳು ಆವಶ್ಯಕ. ಎತ್ತುಗಳಿಗೆ ಲಾಳ ಹಾಕದಿದ್ದರೆ ಹೇಗೆ ಕಾಲಿಗೆ ಅಳುಕಿದರೆ ವ್ಯವಸಾಯ ಮಾಡುವ ರೈತನ ಮನೋವೇಗಕ್ಕೆ ಸ್ಪಂದಿಸಲಾರದೆ ಹೋಗುತ್ತವೆಯೋ ಹಾಗೆ ರೈತನ ಕಾಲಿಗೆ ಮೆಟ್ಟುಗಳಿಲ್ಲದಾಗ ಆತನೂ ಕೆಲಸ ಮಾಡಲು ಕಷ್ಟವಾಗುತ್ತದೆ. ಪರಿಹಾರವಾಗಿ ಪಾದರಕ್ಷೆಗಳನ್ನು ಆತ ಕಡ್ಡಾಯವಾಗಿ ಹಾಕಬೇಕಾಗುತ್ತದೆ. ಅದಕ್ಕೆ ನೆರವಾಗುವ ಆಯಗಾರ ಕುಶಲಕರ್ಮಿ ಎಂದರೆ ಚಮ್ಮಾರ. ಆತ ಇದರ ಜೊತೆಗೇ ಮಾಡುವ ಇನ್ನೊಂದು ಸಹಾಯ, ಸಹಕಾರವೆಂದರೆ ರೈತನ ಸತ್ತ ಪ್ರಾಣಿಗಳನ್ನು, ಮುದಿ ಪ್ರಾಣಿಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಹಸಿಗೆ ಮಾಡಿ, ಚರ್ಮ ತೆಗೆದುಕೊಂಡು ಅದನ್ನು ಹದ ಮಾಡುತ್ತಾನೆ. ಅದರಿಂದ ಪಾದರಕ್ಷೆ, ಕಪ್ಪಿಲೆ ಬಾನಿ, ಪಟ್ಟಗಣ್ಣೆ, ಬಾರುಕೋಲು ಸೆಳೆ, ಮೊದಲಾದುವಲ್ಲದೇ, ಕವಣೆ, ಕುಕ್ಕೆ, ಮುಂತಾದುವುಗಳನ್ನು ಮಾಡಿಕೊಡುತ್ತಾನೆ. ಇದರಿಂದ ಗ್ರಾಮದ ನೈರ್ಮಲ್ಯ, ರೈತಾಪಿ ಬದುಕಿಗೆ ನೆರವು ಹಾಗೂ ಆತನ ಜೀವನೋಪಾಯ ಎಲ್ಲವೂ ಒಟ್ಟಿಗೇ ಈಡೇರುತ್ತವೆ. ಇದು ಗ್ರಾಮ ಜೀವನದ ಸಹಕಾರದ, ಆಯವ್ಯವಸ್ಥೆಯ ಮೂಲೋದ್ದೇಶವಾಗಿದೆ. ಹಾಗಾಗಿ "ಆಯ ಪದ್ಧತಿಯು ಆರ್ಥಿಕ, ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಕಾರ್ಯಗಳ ಒಂದು ಸಂಕೀರ್ಣ ವ್ಯವಸ್ಥೆ" (ನೋಡಿ ಜಾನಪದ ಸಾಹಿತ್ಯ ದರ್ಶನ -7, ಲೇಖನ ಡಾ. ಜಿ.ಎಸ್. ಬಿದರಿಕೊಪ್ಪ, ಕ.ವಿ.ವಿ. ಧಾರವಾಡ ಪು. 270)

ಪಾದರಕ್ಷೆಗಳನ್ನು ಮಾಡಿಕೊಟ್ಟಾಗ ಕಾಳು-ಕಡ್ಡಿ ರೂಪದಲ್ಲಿ ಸಂಭಾವನೆ ಪಡೆಯುವುದೂ ಇದೆ. ಹಾಗೆ ಪಡೆಯುವಾಗ ಕೆಲವು ಕಡೆ ವಿಶೇಷ ಪದ್ಧತಿಯನ್ನು ಅನುಸರಿಸಲಾಗುತ್ತದೆ : ಯಾರಿಗೆ ಪಾದರಕ್ಷೆಗಳನ್ನು ಮಾಡಿಕೊಡಲಾಗುತ್ತದೆಯೋ ಅವರನ್ನು ಒಂದು ಹಾಸು ಬಟ್ಟೆಯ ಮೇಲೆ ನಿಲ್ಲಿಸುತ್ತಾರೆ. ಅವರ ಪಾದಗಳು ಮುಚ್ಚುವವರೆಗೆ ಧಾನ್ಯವನ್ನು ಸುರಿಯುತ್ತಾರೆ. ಅನಂತರ ಧಾನ್ಯಕ್ಕೆ ನಮಸ್ಕರಿಸಿ ಚಮ್ಮಾರ ಅದನ್ನು ಗಂಟು ಕಟ್ಟಿಕೊಂಡು ಹೋಗುತ್ತಾನೆ.ರೈತರ ಚಪ್ಪಲಿ ಮಾಡುವಾಗ ಚಮ್ಮಾರ ತಾನೇ ಹದ ಮಾಡಿದ ಚರ್ಮ ಹಾಗೂ ವಾಹನಗಳ ಹಳೆಯ 'ಟಯರ್'ನ್ನು ದಾರ, ಮೊಳೆ, ಕುರಂಬಾಳೆ, ರಿವೋಟ್ ಮೊಳೆ, ಅಂಟು ಮೊದಲಾದವುಗಳನ್ನು ಬಳಸಿ, ಸಾಧಾರಣ ಚಪ್ಪಲಿ, ಮೂತಿ ಮೆಟ್ಟು, ಗಿರಕಿ ಮೆಟ್ಟು, ಮೊಳೆಮೆಟ್ಟು, ಮದ್ದಿಗೆ ಮೆಟ್ಟು ಮೊದಲಾದವುಗಳನ್ನು ಮಾಡಿಕೊಡುತ್ತಾನೆ. ಮದುವೆಯ ಗಂಡು - ಹೆಣ್ಣುಗಳಿಗೂ ತಾನೇ ಮದ್ದಿಗೆ ಮೆಟ್ಟು ಅಥವಾ ಮದುವೆ ಮೆಟ್ಟುಗಳನ್ನು ಮಾಡಿಕೊಟ್ಟು ಪ್ರಥಮ ಶಾಸ್ತ್ರದಂದು ತಾನೇ ತಂದು ಕಾಲಿಗೆ ತೊಡಿಸುತ್ತಾನೆ.

ಇಂತಹ ಎಲ್ಲ ಸೇವೆಗೆ ಆತ ಆಯವಾಗಿ ಕಣದಲ್ಲಿ ಕಾಳು - ಕಡ್ಡಿ ಪಡೆಯುತ್ತಾನೆ. ಸಾಂದರ್ಭಿಕ ಸಂಭಾವನೆಯನ್ನು ಪಡೆಯುತ್ತಾನೆ. ಜೊತೆಗೆ ಮದುವೆ ಒಸಗೆ ಮೊದಲಾದ ಶುಭಕಾರ್ಯಗಳಲ್ಲಿ ಹಬ್ಬ ಹರಿದಿನಗಳಲ್ಲಿ 'ಅನ್ನ ಇಕ್ಕಿಸಿಕೊಂಡು' ಹೋಗುತ್ತಾರೆ.

ಆದರೆ ಇತ್ತೀಚೆಗೆ ಆಧುನಿಕತೆಯ ಪರಿಣಾಮವಾಗಿ ಚಮ್ಮಾರ ತನ್ನ ಸಾಂಪ್ರದಾಯಿಕ ಕಸುಬನ್ನು ಆಧುನಿಕರಣಗೊಳಿಸಿಕೊಂಡು ಹಗುರವಾದ ಆಲಂಕಾರಿಕತೆಯಿಂದ ಕೂಡಿದ ವೈವಿಧ್ಯಮಯ ಪಾದರಕ್ಷೆಗಳನ್ನು ಮಾಡಿ ನಗರಗಳಲ್ಲಿ ಮಾರುತ್ತಿದ್ದಾನೆ. ಇದರಿಂದ ಬರುವ ಹಣ ರೂಪದ ಆದಾಯ ಅವನನ್ನು ಆಕರ್ಷಿಸಿದುದರ ಪರಿಣಾಮವಾಗಿ ನಗರದತ್ತ ವಲಸೆಬಂದು ನೆಲೆಸುತ್ತಿದ್ದಾನೆ. ಇಂದಿನ ಯುವ ಪೀಳಿಗೆ ಶಿಕ್ಷಣ ಪಡೆದು ಆಯದ ವ್ಯವಸ್ಥೆಯನ್ನು ಅಪಮಾನಕರವೆಂದು ತಿಳಿಯುತ್ತದೆ. ಇದರರ್ಥ ಚಮ್ಮಾರ ಚಪ್ಪಲಿ ಹೊಲಿಯುತ್ತಲೇ ಇರಬೇಕೆಂಬುದಲ್ಲ, ಎಲ್ಲ ಆಧುನಿಕ ಪ್ರಗತಿಯೊಂದಿಗೇ ರೈತ ಹಾಗೂ ಉಳಿದ ಆಯಗಾರರು 'ಮರಳಿ ಹಳ್ಳಿಗೆ, ಮರಳಿ ಮಣ್ಣಿಗೆ' ಎಂಬಂತಾದರೆ ಭಾರತ ಮತ್ತೆ ಪ್ರಕಾಶಿಸಬಲ್ಲುದು.

ಶಮೇರಾಯ : ಶಮೇರಾಯ ಎಂದರೆ ಹನುಮಂತದೇವರ ಪೂಜಾರಿ. 'ಊರು ಎಂದ ಮೇಲೆ ಹನುಮಂತರಾಯನ ಗುಡಿ ಇದ್ದೇ ಇರುತ್ತೆ' ಎಂಬುದು ಬಲ್ಲವರ ಮಾತು. ಹಾಗೆಯೇ 'ಊರ ಹೊರಗೆ ಹನುಮಂತನ ಗುಡಿ' ಎಂಬುದೂ ಕೂಡ. ಏಕೆ ಹೀಗೆ ? ಎಂಬುದು ಆಳವಾದ ಅಧ್ಯಯನಕ್ಕೊಳಪಡಿಸಬೇಕಾದ ಪ್ರಶ್ನೆ. ಇಂತಹ ಆಂಜನೇಯನ ಪೂಜೆ ನಿತ್ಯವಲ್ಲದೇ ಹೋದರೂ ವಾರಕ್ಕೊಮ್ಮೆ, ಇಮ್ಮೆಯಾದರೂ ನಡೆಯಲೇಬೇಕಾದುದು. ಅದಕ್ಕಾಗಿ ಗ್ರಾಮಸ್ಥರು ನೇಮಿಸಿದ ವ್ಯಕ್ತಿ ಶಮೇರಾಯ, ಈತ ಬ್ರಾಹ್ಮಣ, ಲಿಂಗಾಯಿತ ಮೊದಲಾದ ಮೇಲು ಜಾತಿಯವನಾಗಿರುತ್ತಾನೆ.

ವಾರದಲ್ಲಿ ಒಮ್ಮೆ ಅಂದರೆ ಶನಿವಾರ, ಇಲ್ಲವೆ ಸೋಮವಾರ ಅಥವಾ ಎರಡೂ ದಿನ ಸರಳ ಪೂಜಾ ಪರಿಕರಗಳೊಂದಿಗೆ ಗುಡಿಗೆ ಬಂದು ದೇವರ ಪೂಜೆ ನಡೆಸುತ್ತಾನೆ. ಆ ದಿನ ಗುಡಿಗೆ ಬಂದ ರೈತರಿಗೆ ಪ್ರಸಾದ ನೀಡುತ್ತಾನೆ. ರೈತರು ತಮ್ಮ ಕಷ್ಟ - ನಷ್ಟಗಳನ್ನು ಆತನಲ್ಲಿ ಹೇಳಿಕೊಳ್ಳುತ್ತಾರೆ. ಭವಿಷ್ಯ ಕೇಳುತ್ತಾರೆ. ವರ್ಷಾರಂಭದಲ್ಲಿ ಆ ವರ್ಷದ ಮಳೆ - ಬೆಳೆ, ಯಾವ ಧಾನ್ಯ ಬಿತ್ತಿದರೆ ಹುಲುಸಾಗಿ ಫಸಲು ಕೈಸೇರುತ್ತದೆ. ಇತ್ಯಾದಿಗಳನ್ನು ಚರ್ಚಿಸುತ್ತಾರೆ. ಬಿತ್ತನೆಯ ಕಾಲ ಬಂದಾಗ ಬಿತ್ತನೆ ಬೀಜಗಳನ್ನು ಗುಡಿಗೆ ನೀಡಿ ಪೂಜಿಸಿಕೊಂಡು ಹೋಗುತ್ತಾರೆ. ಫಸಲು ಕಚ್ಚಿದಾಗ ಮಳೆಬಾರದೆಹೋದರೆ ಆಂಜನೇಯನ ಉತ್ಸವ ಮಾಡುವುದಾಗಿ ಹರಸಿಕೊಳ್ಳುತ್ತಾರೆ. ಹರಕೆಯಂತೆ ಮಳೆ ಬಂದರೆ ಶಮೇರಾಯನ ನೇತೃತ್ವದಲ್ಲಿ ಉತ್ಸವ ಮಾಡುತ್ತಾರೆ. ದೇವರ ತೀರ್ಥ ತಂದು ಬೆಳೆಗೆ, ಮನೆಗೆ, ಕಣಗಳಿಗೆ ಹಾಕಿಕೊಳ್ಳುತ್ತಾರೆ. ಈ ಎಲ್ಲಾ ಕಾರ್ಯಗಳಲ್ಲಿ ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಸಲ್ಲಿಸುವ ಶಮೇರಾಯನಿಗೆ ಆಯ ಕೊಡುತ್ತಾರೆ. ಕಣದ ರಾಶಿ ಅಳೆಯುವಾಗ ಮೊದಲು ಮೂರು ಮೊರ ಧಾನ್ಯಗಳನ್ನು ತೆಗೆದಿರಿಸಿ ಆನಂತರ ಉಳಿದ ಆಯಗಾರರಿಗೆ ಕೊಡುತ್ತಾರೆ. ಅಲ್ಲದೆ ತೆಂಗು, ಬಾಳೆ, ಅಡಕೆ ಹಾಗೂ ಇತರ ಹಣ್ಣು ತರಕಾರಿಗಳು ಫಸಲು ಕಚ್ಚಿದಾಗ ಮೊದಲನೆಯ ಫಸಲನ್ನು ಸ್ವಲ್ಪ ಪ್ರಮಾಣದಲ್ಲಿ ಮೀಸಲಾಗಿ ತಂದು ಶಮೇರಾಯನಿಗೆ ಕೊಡುತ್ತಾರೆ. ಶನಿಮಹಾತ್ಮೆ, ದೇವಿಮಹಾತ್ಮೆ ಮೊದಲಾದ ಪುಣ್ಯ ಕಥಾ ಪ್ರಸಂಗ ವಾಚನಕ್ಕೆ ಶಮೇರಾಯನನ್ನು ಆಹ್ವಾನಿಸಿ ಅಂದು ಪೂಜೆಗಿಟ್ಟ ಅಕ್ಕಿ, ಹಣ್ಣು, ಹಣ ಮುಂತಾದುವನ್ನು ಆತನಿಗೆ ಅರ್ಪಿಸುತ್ತಾರೆ.

ಕೊಂಡಿಕಾರ : ಕೊಂಡಿಕಾರ ದಾಸಪ್ಪ ಕೂಡ ಶಮೇರಾಯನ ಹಾಗೆ, ದೇವತಾ ಆರಾಧನೆಯ ಸಂದರ್ಭದಲ್ಲಿ ತನ್ನ ಸೇವೆಯನ್ನು ಸಲ್ಲಿಸುತ್ತಾನೆ. ಆರಾಧ್ಯ ದೇವವಾದ ತಿರುಪತಿ ತಿಮ್ಮಪ್ಪನ ಹೆಸರಲ್ಲಿ ಗಂಟೆ, ಜಾಗಟೆ, ಭವಾನಾಸಿ, ಶಂಖ, ಬಿಲ್ಲು ಗೂಡು, ಸರಗಂಟೆ ಮೊದಲಾದುವಲ್ಲದೆ ಬಿದಿರ ಬೆತ್ತಾದಿಗಳನ್ನು ತಂದು ರೈತರ ಅಪೇಕ್ಷೆಯಂತೆ ಆರಾಧನೆಯಲ್ಲಿ ತೊಡಗುತ್ತಾನೆ.

ಒಕ್ಕಲುಗಳಲ್ಲಿ ದಾಸಪ್ಪನ ಒಕ್ಕಲು ಅಥವಾ ತಿಮ್ಮಪ್ಪನ ಒಕ್ಕಲುಗಳಿಗೆ ಕೊಂಡಿಕಾರ ಅಗತ್ಯ ಬಹಳವಾಗಿದೆ. ಅವರು ಮಕ್ಕಳ ಮುಡಿ ಕೊಡುವಾಗ ಕೊಂಡಿಕಾರನನ್ನು ಕರೆತಂದು ಅವನ ನಿರ್ದೇಶನದಂತೆ ಪೂಜಿಸಿ, ಮಣೇವು ಹಾಕಿ, ಧೂಪಹಾಕಿ, ಕೆಂಡ ಕೊಂಡ ಮಾಡಿ ಎದಿರೆತ್ತಿ ಮುಡಿ ಕೊಡುತ್ತಾರೆ. ಇಲ್ಲವೆ ತಿರುಪತಿಗೆ ಪ್ರಯಾಣ ಬೆಳೆಸುತ್ತಾರೆ. ಅಲ್ಲಿ ಮುಡಿ ಕೊಡುತ್ತಾರೆ. ತಿರುಪತಿ ಪ್ರಯಾಣದಲ್ಲಿ ಕೊಂಡಿಕಾರನ ಮಾರ್ಗದರ್ಶನ, ಅಲ್ಲಲ್ಲಿ ಪೂಜೆ, ಮರಳಿ ಬರುವಾಗ ಊರ ಹೊರಗೆ 'ದೇವರ ಸಾಗ ಹಾಕುವುದೇ' ಮೊದಲಾದ ಶಾಸ್ತ್ರಗಳನ್ನು ಆತನ ನಿರ್ದೇಶನದಂತೆ ಮಾಡುತ್ತಾರೆ.

ಅದಕ್ಕಾಗಿ ಕೊಂಡಿಕಾರನನ್ನು ಆಯಗಾರರಲ್ಲಿ ಪ್ರಮುಖನೆಂದೂ, ತಮ್ಮ ಧಾರ್ಮಿಕ ಅಗತ್ಯಗಳ ಪೂರೈಕೆಗೆ ನೆರವಾದವನೆಂದೂ ತಿಳಿದು ಆತನಿಗೆ ಶಮೇರಾಯನಂತೆಯೇ ಆಯ ಕೊಡುತ್ತಾರೆ.

ಕಂಚುಗಾರ : ಕುಂಬಾರ ಮಡಿಕೆ ಮಾಡಿಕೊಟ್ಟು ರೈತನ ವ್ಯವಸಾಯಕ್ಕೆ ಸಹಕಾರಿಯಾಗಿ ನಿಂತಂತೆ; ಕಂಚುಕಾರ ಲೋಹದ ಪಾತ್ರೆಗಳನ್ನು ಮಾಡಿಕೊಂಡನು. ರೈತಾಪಿ ಕುಟುಂಬಗಳು ಮನೆಯಲ್ಲಿ ಬಳಸುವ ತಟ್ಟೆ, ಗಂಗಾಳ, ಚೊಂಬು, ಲೋಟ, ಅಡುಗೆ, ಪಾತ್ರೆಗಳು, ಹಂಡೆ, ಕೊಳಗ, ಬಿಂದಿಗೆ, ಚೌಟು ಮೊದಲಾದವನ್ನು ಕಂಚುಕಾರ ಒದಗಿಸುತ್ತಾನೆ. ಇದಕ್ಕೆ ಆತ ಬಳಸುತ್ತಿದ್ದ ಲೋಹ ಸಾಮಾನ್ಯವಾಗಿ ಕಂಚು, ಹಿತ್ತಾಳೆ, ತಾಮ್ರ ಮೊದಲಾದುವುಗಳು. ಒಂದು ಕಾಲದಲ್ಲಿ ಹೆಚ್ಚಾಗಿ ಕಂಚಿನ ಪಾತ್ರೆಗಳನ್ನೇ ಬಳಸುತ್ತಿದ್ದುದರಿಂದ ಇವನ್ನು ತಯಾರಿಸುತ್ತಿದ್ದ ವನಿಗೆ 'ಕಂಚುಗಾರ'ನೆಂದೇ ಹೆಸರಾಗಿದೆ.

ಪಾತ್ರೆ-ಪಗಡಗಳನ್ನು ಮಾಡಿಕೊಡುವುದು ರೈತನ ಲೌಕಿಕ ಪ್ರಧಾನವಾದ ಬದುಕಿಗಾದರೆ ಆತನ ಆಧ್ಯಾತ್ಮಿಕ ಬದುಕಿಗೆ ಅಗತ್ಯವಾದ ದೇವರ ವಿಗ್ರಹಗಳು, ಜಾಗಟೆ, ಗಂಟೆ, ಭವನಾಶಿ, ದೀಪಕಂಬಗಳು, ದೈವದ ಅಲಂಕಾರಿಕ ಸಾಮಗ್ರಿಗಳನ್ನು ತಯಾರಿಸಿ ಕೊಡುವುದೂ ಕಂಚುಗಾರನೇ ಆಗಿದ್ದನು. ಅಲ್ಲದೆ ವ್ಯವಸಾಯ ಹೂಡುವ ಎತ್ತುಗಳಿಗೆ, ಹಸುಗಳಿಗೆ, ಕೋಡು ಕಳಸ, ಗೆಜ್ಜೆಗಳು, ಗಗ್ಗರಗಳು, ಕೊರಳ ಗಂಟೆಗಳು, ಹಣಸುಗಳು, ಬಾರುಕೋಲಿನ ಹಣಸು, ಒನಕೆಯ ಹಣಸು, ಮೊದಲಾದವುಗಳನ್ನು ಕಂಚುಕಾರ ರೈತನಿಗೆ ಒದದಗಿಸುತ್ತಿದ್ದನು.

ಹಾಗಾಗಿ ಅಕ್ಕಸಾಲಿಗಿಂತಲೂ ಕಂಚುಕಾರನ ಸೇವೆ ರೈತರಿಗೆ ಮುಖ್ಯವಾಗಿದ್ದಿತು. ಈ ನೆಲೆಯಲ್ಲಿ ಕಂಚುಗಾರ ಆಯಗಾರರ ಪಟ್ಟಿಯಲ್ಲಿ ಸ್ಥಾನ ಪಡೆದವನೆನ್ನಬಹುದು. ಕಂಚುಕಾರನಿಂದ ಯಾವುದೇ ಪದಾರ್ಥಗಳನ್ನು ಪಡೆದಾಗ ಹಣ ಇಲ್ಲವೆ ಕಾಳು ಕೊಡುವುರಾದರೂ ಆತನಿಗೆ ಸುಗ್ಗಿಯಲ್ಲಿಯೂ 'ಆಯ' ಕೊಡುತ್ತಾರೆ. ಏಕೆಂದರೆ ಇಂತಹ ರೈತಸಹಾಯಕಜನ ಬಡತನದಿಂದ ಬಳಲುವಂತಾದರೆ ಅವರು ಊರು ಬಿಟ್ಟು ಹೋಗುತ್ತಾರೆ. ಆಗ ರೈತರಿಗೆ ಅವರ ಸೇವೆ ಲಭಿಸುವುದಿಲ್ಲ. ಹಾಗಾಗಿ ಆಯಗಾರರ ಬದುಕಿಗೆ ಬಲತುಂಬುವ ಉದ್ದೇಶ ಇಲ್ಲಿ ಕಾಣುತ್ತದೆ.

ಆದರೂ ಇತ್ತೀಚೆಗೆ ಕಂಚುಗಾರರು ಗ್ರಾಮೀಣ ಪ್ರದೇಶ ತೊರೆದು ನಗರಗಳಲ್ಲಿ ಹೆಚ್ಚಾಗಿ ನೆಲೆಸಿದ್ದಾರೆ. ಅಲ್ಲದೆ ವ್ಯವಸ್ಥಿತ ಉದ್ಯೋಗ ಮಾಡುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಕಂಚಿನ ಬೆಲೆ ಹೆಚ್ಚಳ, ಸ್ಟೀಲ್ ಪಾತ್ರೆಗಳು, ಅಲ್ಯುಮಿನಿಯಂ ಪಾತ್ರೆಗಳು ಸ್ವಲ್ಪ ಕಡಿಮೆ ಬೆಲೆಗೆ ಸಿಗುವಂತಾಗಿ ಗ್ರಾಮೀಣ ಜನತೆ ಅವುಗಳತ್ತ ವಾಲಿದ್ದು ಎನ್ನಬಹುದು.

ಗ್ರಾಮದೇವತಾ ಉತ್ಸವಗಳಿಗೆ ಈಗಲೂ ಕಂಚುಕಾರರ ಅವಶ್ಯಕತೆಯಿದೆ. ದೇವರ ವಿಗ್ರಹ, ಪೂಜಾ ಸಾಮಗ್ರಿಗಳಾದಿಯಾಗಿ ಹೊಸದಾಗಿ ಮಾಡಿಸುವುದು; ಇಲ್ಲವೆ ಹಳೆಯದನ್ನು ರಿಪೇರಿ ಮಾಡಿಸುವುದು ಅಗತ್ಯವಾದಾಗ ಕಂಚುಗಾರನಿಗೆ ಕರೆ ಹೋಗುತ್ತದೆ. ಅಲ್ಲದಿದ್ದಾಗಲೂ ಕಸುದಾರನಾಗಿ ಆತನನ್ನು ಗೌರವದಿಂದ ಬರಮಾಡಿಕೊಳ್ಳಲಾಗುತ್ತದೆ. ಉತ್ಸವ ಯಾವಾಗ ಎಲ್ಲ ಆಯಗಾರರಂತೆ ಆತನಿಗೂ ಸಲ್ಲುವ ಬಾಬುಗಳನ್ನು ಸಲ್ಲಿಸುತ್ತದೆ. ಎರಡು ಸೇರು ಅಕ್ಕಿ, ಒಂದು ಹಣ ಅರಿಸಿನ-ಕುಂಕುಮ, ಒಂದು ಶಲ್ಯ, ಒಂದು ಹೂವಿನ ಹಾರ, ದೇವರ ಪ್ರಸಾದ ಮುಂತಾದುವುಗಳನ್ನು ಕೊಡುವುದು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಕಂಡುಬರುತ್ತದೆ. ಈ ಬಾಬು ಊರಿಂದೂರಿಗೆ ಕಾಲದಿಂದ ಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ.

ತಳವಾರ : ಇವನಿಗೆ ಗ್ರಾಮರಕ್ಷಕ, ಕಾವಲು ಉಸ್ತುವಾರಿ ನೋಡಿಕೊಳ್ಳುವವ ಎಂದೂ ಕರೆಯುತ್ತಾರೆ. ಆದಿಕಾಲದಿಂದಲೂ ತಳವಾರನ ಬಗೆಗೆ ಅನೇಕ ಉಲ್ಲೇಖಗಳಿವೆ. ವಡ್ಡಾರಾಧನೆಯ 'ವಿದ್ಯೋಚ್ಚೋರ' ಕಥೆಯಲ್ಲಿ 'ಯಮದಂಡ'ನೆಂಬ ತಳಾರನ ಉಲ್ಲೇಖವಿದೆ. ಆದರೆ ಅಲ್ಲಿ ತಳವಾರ ಒಬ್ಬ ಅಧಿಕಾರಿಯಾಗಿ ಕಾಣಬರುತ್ತಾನೆ. ಬರುಬರುತ್ತಾ ಅಧಿಕಾರಿಯಾಗಿದ್ದವನು ಆ ಸ್ವರೂಪವನ್ನು ಕಳೆದುಕೊಂಡು ಗ್ರಾಮದ ಸೇವಕನಾಗುತ್ತಾನೆ. ರೈತರು ನಡೆಸುವ ಹಬ್ಬ-ಉತ್ಸವಗಳಲ್ಲಿ, ಮದುವೆ-ಮುಂಜಿಗಳಲ್ಲಿ ತೋರಣ ಕಟ್ಟುವುದು, ಊಟದ ಎಲೆ ಮಾಡಿಕೊಡುವುದು, ಜನರ ಗದ್ದಲಗಳನ್ನು ನಿಯಂತ್ರಿಸುವುದು, ಬರಬೇಕಾದವರನ್ನು ಕರೆತರುವುದು ಮುಂತಾದ ಕೆಲಸಗಳನ್ನು ತಳವಾರ ಮಾಡುತ್ತಾನೆ. ಅಲ್ಲದೆ ಊರ ಮಾರಿ ಹಬ್ಬದಲ್ಲಿ ಬಲಿಗೆ ತಂದ ಕುರಿ, ಕೋಳಿ, ಕೋಣ ಇತ್ಯಾದಿಗಳನ್ನು ಕತ್ತರಿಸುವುದೂ ತಳವಾರನ ಕೆಲಸವಾಗಿತ್ತು. ನ್ಯಾಯ ಪಂಚಾಯ್ತಿ ಕರೆಯಬೇಕಾದಾಗ ಎಲ್ಲರಿಗೂ ವಿಷಯ ಮುಟ್ಟಿಸಿ ಕರೆತರುವುದೂ, ದಂಡನೆ ವಿಧಿಸಲ್ಪಟ್ಟವರಿಂದ ದಂಡವಸೂಲಿ, ಶಿಕ್ಷೆಯನ್ನು ಕಾರ್ಯಗತಗೊಳಿಸುವುದು ಮೊದಲಾದವನ್ನು ತಳವಾರನೇ ನೆರವೇರಿಸುವುದು ಕೆಲವು ಕಡೆ ಕಂಡುಬರುತ್ತದೆ. ಮದುವೆ, ಜಾತ್ರೆ ಮೊದಲಾದವುಗಳಲ್ಲಿ ಲೈಟ ಹೊರುವುದು ತಳವಾರನೇ ಅಲ್ಲದೆ ಉಳಿದ ಊಟವನ್ನು ಎಲ್ಲ ಆಯಗಾರರಂತೆ ಆತನೂ ತೆಗೆದುಕೊಂಡು ಹೋಗುತ್ತಾನೆ. ಎಲ್ಲರಿಗೂ ಹಂಚುವವರೆಗೆ ಇದ್ದು ಕೊನೆಗೆ ಉಳಿದುದೆಲ್ಲವನ್ನೂ ಆತ ಕೊಂಡೊಯ್ಯಬಹುದಾಗಿತ್ತು. ಸುಗ್ಗಿ ಕಣದಲ್ಲಿ ಆಯವನ್ನು ತಳವಾರ ಪಡೆಯುತ್ತಾನೆ. ಜೊತೆಗೆ ಮಾರಿಬಬ್ಬದಲ್ಲಿ ಒಂದು ಪಂಚೆ, ಒಂದು ಅಂಗಿ, ಎರಡು ಸೇರು ಅಕ್ಕಿ ಒಂದು ಶಲ್ಯ, ಹಣ, ಎಲೆ ಅಡಿಕೆ, ಶಿಸ್ತು ಪರಿಪಾಲನೆ ಮಾಡಿ, ಎಲ್ಲರಿಗೂ ವಿಷಯ ಮುಟ್ಟಿಸಿ ಕರೆತಂದದ್ದಕ್ಕಾಗಿ ಎಪ್ಪತ್ತೈದು ಸೇರು ದವಸ, ಹೂವಿನ ಹಾರ ದೇವಿಯ ಪ್ರಸಾದಾದಿಗಳನ್ನು ಪಡೆಯುತ್ತಾನೆ.

ಬಹುತೇಕ ಕ್ಷೌರಿಕ, ಅಗಸ, ಕುಂಬಾರ, ಕಮ್ಮಾರ, ತಳವಾರ, ಬಡಗಿ, ಚಮ್ಮಾರರು ಎಲ್ಲ ಕಡೆಗಳಲ್ಲೂ ಆಯಗಾರರಾಗಿ ಕಂಡುಬರುತ್ತದೆ. ಉಳಿದಂತೆ ಶಮೇರಾಯ,ಸ ಹೂಗಾರ, ಕುರುಬ, ಕಂಚುಗಾರ, ಕೊಂಡಿಕಾರ, ಅಕ್ಕಸಾಲಿ ಮೊದಲಾದವರು ಕೆಲವು ಕಡೆ ಆಯಗಾರರಾಗಿಯೂ, ಕೆಲವು ಕಡೆ ಹಡದಿಗಾರರಾಗಿಯೂ, ವಿನಿಮಯಗಾರರಾಗಿಯೂ ಗುರುತಿಸಲ್ಪಡುತ್ತಾರೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಕೆಲವು ಕಡೆ ತಳವಾರ ಆಯಗಾರನಾಗಿಯೂ, ಕೈವಾಡದ ಮೇಲುಸ್ತುವಾರಿ ಅಧಿಕಾರಿ (ಮುಖಂಡ)ಯಾಗಿಯೂ ಕಂಡು ಬರುವುದು ವಿಶೇಷವಾಗಿದೆ.

ಟಿ.ಕೆ.

ಆಲದ ಮರ ಇದರ ಮೂಲ ಸ್ಥಾನ ಭಾರತ. ವೈಜ್ಞಾನಿಕ ಹೆಸರು ಫೈಕಸ್ ಬೆಂಗಾಲಿಸ್. ಇದು ಮೊರೇಸಿ ಕುಟುಂಬಕ್ಕೆ ಸೇರಿದ್ದು, ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಸಂಸ್ಕೃತದಲ್ಲಿ ವಟವೃಕ್ಷವೆಂದೂ ಕನ್ನಡದಲ್ಲಿ ಆಲದ ಮರವೆಂದೂ ತೆಲುಗಿನಲ್ಲಿ ಮರ್ರಿಮ್ರಾನು ಎಂದು ಇಂಗ್ಲಿಷಿನಲ್ಲಿ ಬನ್‌ಯಾನ್‌ಟ್ರೀ ಎಂದೂ ತಮಿಳು ಹಾಗೂ ಮಲಯಾಳಗಳಲ್ಲಿ ಆಲಮರವ್ ಎಂದೂ ಕರೆಯುವುದುಂಟು. ಮರಗಳಲ್ಲೆಲ್ಲ ಬೃಹದಾಕಾರವಾಗಿ ಹೆಚ್ಚು ವಿಸ್ತಾರವಾಗಿ ಬೆಳೆಯುವಂಥದ್ದು. ಇದು ದಟ್ಟವಾಗಿ ಬೆಳೆಯುವುದರಿಂದ ಸಾಲುಮರಗಳಾಗಿ ಊರಿನ ಹೊರವಲಯದಲ್ಲಿ ರಸ್ತೆಬದಿಗಳಲ್ಲಿ ವಿಶಾಲವಾದ ಉದ್ಯಾನವನಗಳಲ್ಲಿ ಬೆಳೆಸುತ್ತಾರೆ. ಭಾರತಾದ್ಯಂತ ಆಲದ ಮರಗಳಿವೆ. ಇದು ಬಹುವಾರ್ಷಿಕ ಮರವಾಗಿದ್ದು ನಿತ್ಯಹರಿದ್ವರ್ಣ ಹೊಂದಿದೆ. ಎಲ್ಲ ಹವಾಗುಣಗಳಲ್ಲಿ ಯಾವ ಬಗೆಯ ಮಣ್ಣಿನಲ್ಲಾದರೂ ಬೆಟ್ಟಗುಡ್ಡ ಕಣಿವೆ ಪಾಳುಬಿದ್ದ ಮನೆಗಳು ಕೋಟೆಕೊತ್ತಲಗಳ ಬಿರುಕುಗಳಲ್ಲೂ ಬೆಳೆಯುವ ಸಾಮರ್ಥ್ಯ ಇದಕ್ಕಿದೆ.

ಎಲೆಗಳು ಕರಣೆ(ನೆ) ಆಕಾರದವಾಗಿದ್ದು ನಯವಾದ ಅಂಚು ಮೊಂಡಾದ ಕುಡಿ ಹೊಂದಿರುತ್ತವೆ. ಎಲೆಯ ಮೇಲೆ ಮತ್ತು ಕೆಳಗೆ ಸಣ್ಣ ರೋಮಗಳಿರುತ್ತವೆ. ದಪ್ಪವಾದ ಕಾಂಡವುಳ್ಳ ನೇರವಾಗಿ ಬೆಳೆದು ಛತ್ರಿಯಂತೆ



ಹರಡುತ್ತದೆ. ಈ ಮರದ ವಿಶೇಷ ತಾಯಿ ಬೇರಿನ ಜೊತೆಗೆ ಅಸಂಖ್ಯಾತ ಬಿಳಲುಗಳು ಅಥವಾ ಊರುಬೇರುಗಳು ಇರುವುದು. ಆರಂಭದಲ್ಲಿ ವೇಗವಾಗಿ ಬೆಳೆಯುತ್ತದೆ. ನದಿ ದಡಗಳಲ್ಲಿ ಕೆರೆಕುಂಟೆ, ಕಾಲುವೆ, ತಟಾಕ ಮೊದಲಾದ ನೀರಿನ ಆಸರೆಯುಳ್ಳ ಸ್ಥಳಗಳಲ್ಲಿ ಬೃಹದಾಕಾರವಾಗಿ ಬೆಳೆದು


ಒಂದು ಎಕರೆಗಿಂತಲೂ ಹೆಚ್ಚು ಭೂಪ್ರದೇಶವನ್ನು ಆಕ್ರಮಿಸಿರುವ ಉದಾಹರಣೆಗಳಿವೆ. ಇದಕ್ಕೆ ಕಾರಣ ಇದರ ಊರುಬೇರುಗಳೇ. ಇವು ಬೆಳೆದಂತೆ ಕಾಂಡಗಳಾಗಿ ಮಾರ್ಪಟ್ಟು ಒಂದೊಂದು ಕಾಂಡವೂ ಪೂರಕ ಮರವಾಗಿ ಬೆಳೆಯುವುದೇ ಆಗಿದೆ. ಹೀಗೆ ಬೆಳೆಯುವುದರಿಂದ ಎಂಥ ಕ್ಷಾಮಡಾಮರಗಳು ತಲೆದೋರಿದರು ಎದುರಿಸುವ ಶಕ್ತಿ ಇದಕ್ಕಿರುತ್ತದೆ. 'ಆಲಕ್ಕೆ ಹೂವಿಲ್ಲ.....' ಎಂಬ ಜನಪದದ ಮಾತಿನಂತೆ ಇದರ ಹೂ ಹೊರಗೆ ಕಾಣಿಸಿಕೊಳ್ಳುವುದಿಲ್ಲ. ಹಸುರು ಬಣ್ಣದ ದುಂಡಗಿನ ಕಾಯಿಯನ್ನು ಬಿಡುವ ಇದು ಬಲಿತಂತೆ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಇದು ಅನೇಕ ಹೂಗಳ ಗುಚ್ಛವನ್ನು ಆವರಿಸಿ ಅಂಡಾಶಯದಂತೆ ಮುಚ್ಚಿಕೊಂಡಿರುವ ಇದನ್ನು ಸೈಕೋನಿಯಮ್ ಎಂದು ಕರೆಯುತ್ತಾರೆ. ಇದರ ಹೂಗಳಲ್ಲಿ ಏಕ ಲಿಂಗ ಬೀಜವಿರುತ್ತದೆ.

ಆಲದ ಮರವನ್ನು ಬೀಜದಿಂದ ಮತ್ತು ಕಾಂಡದಿಂದಲೂ ಬೆಳೆಸಬಹುದು. ಅರಣ್ಯ ಇಲಾಖೆ ಅಥವಾ ವಿಸ್ತಾರ ಭೂಪ್ರದೇಶದಲ್ಲಿ ಬೆಳೆಸುವಂಥವರು ಪಾತಿಗಳಲ್ಲಿ ಸಸಿ ಬೆಳೆಸಿ ನಾಟಿ ಮಾಡುತ್ತಾರಾದರೂ ಇದು ಮಂದಗತಿಯ ಬೆಳೆವಣಿಗೆ. ಆದ್ದರಿಂದ ನಿರ್ದಿಷ್ಟ ವಯಸ್ಸಿನ 5-10 ಅಡಿ ಅಳತೆಯ ರೆಂಬೆ ತುಂಡುಗಳನ್ನು 20 ಅಡಿ ಅಂತರದಲ್ಲಿ ಒಂದೂವರೆ ಅಡಿ ಗುಂಡಿ ತೋಡಿ ನೆಟ್ಟರೆ ಶೀಘ್ರವಾಗಿ ಬೆಳೆಯುತ್ತವೆ. ಸಾಮಾನ್ಯವಾಗಿ ಮಳೆಗಾಲ ಆರಂಭವಾಗುವ ತಿಂಗಳುಗಳಲ್ಲಿ (ಮಾರ್ಚ್-ಏಪ್ರಿಲ್) ನೆಡುವುದು ಉತ್ತಮ. ನೆಟ್ಟ ಕೊಂಬೆಗಳ ಮೇಲೆ ಸುಳಿ ಒಣಗದ ಹಾಗೆ ಸಗಣಿಯ ಉಂಡೆ ಸಿಕ್ಕಿಸಿ ಅಲುಗಾಡದಂತೆ ಭದ್ರಪಡಿಸಿ ಬೇರು ಆಳವಾಗಿ ಬಿಟ್ಟು ಎಲೆ ಚಿಗುರೊಡೆಯುವ ತನಕ ಕಾಲಕಾಲಕ್ಕೆ ನೀರೊದಗಿಸಿ ದನಕರುಗಳಿಗೆ ಸಿಗದಂತೆ ಆರೈಕೆ ಮಾಡಿದರೆ ಅನಂತರದ ದಿನಗಳಲ್ಲಿ ಇದಕ್ಕೆ ಯಾವುದೇ ಕೃತಕ ನೀರಿನ ಪೂರೈಕೆಯಾಗಲಿ, ರಕ್ಷಣೆಯಾಗಲಿ ಬೇಕಿಲ್ಲ.

ಬಹುಪಯೋಗಿ ಮರವಿದು. ಎಲೆಗಳನ್ನು ಬಿಡಿಸಿ ಹೊಲಿದು ಊಟದ ಎಲೆಯಾಗಿ ಉಪಯೋಗಿಸುತ್ತಾರೆ. ಆಲದ ಎಳೆ ಬಿಳಲುಗಳ ತುದಿಯನ್ನು ಕೊಬ್ಬರಿ ಎಣ್ಣೆಯೊಂದಿಗೆ ಬಳಸುವುದರಿಂದ ಕೂದಲು ನೀಳವಾಗಿ ಬೆಳೆಯುವುದೆಂಬ ನಂಬಿಕೆ ಇದೆ. ಈ ಮರದ ಹಾಲನ್ನು ಔಷಧಿಯಾಗಿ ಬಳಸುವುದಿದೆ. ಚೌಬೀನೆಗೆ ಬಳಕೆಯಾಗುತ್ತದೆ. ಬೃಹದಾಕಾರದ ತುಂಡಾದರೆ ಅದನ್ನು ಕೊರೆದು ದೋಣಿಯಂತೆ ಉಪಯೋಗಿಸುತ್ತಾರೆ. ಆಲದ ಮರದ ಎಳಸಾದ ಎಲೆಗಳು ಜಾನುವಾರುಗಳಿಗೆ ಮೇವು ಕೂಡ.

ಎ.ಎಂ.ಡಿ.

ಆಲೂಗೆಡ್ಡೆ (ಪೊಟ್ಯಾಟೊ) ಸೋಲನೇಸೀ ಕುಟುಂಬಕ್ಕೆ ಸೇರಿದ ಆಲೂಗೆಡ್ಡೆಯನ್ನು ಸೋಲನಂ ಟ್ಯುಬೆರೊಸಂ ಎಂದು ಕರೆಯುತ್ತಾರೆ. ತೆಲುಗು ಭಾಷೆಯಲ್ಲಿ 'ಬಂಗಾಳದುಂಪ' ಅಥವಾ 'ಉರ್ಲಗಡ್ಡ' ಎಂದು, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ 'ಉರಳೈಕ್ಕಿಳಂಗು' ಎಂದು, ಹಿಂದಿಯಲ್ಲಿ 'ಆಲೂ' ಎಂದೂ ಕರೆಯುತ್ತಾರೆ. ದಕ್ಷಿಣ ಅಮೆರಿಕದ ಉತ್ತರ ಭಾಗ, ಚಿಲಿ ಮತ್ತು ಪೆರು ಇದರ ಮೂಲ ಸ್ಥಳಗಳು. ಅಲ್ಲಿಯ ಜನರು ಆಲೂಗೆಡ್ಡೆಯನ್ನು ಬೇಯಿಸದೇ ಹಸಿಯಾಗಿಯೇ ತಿನ್ನುತ್ತಾರೆ. ಕ್ಷಾಮದಲ್ಲಿ ಇದನ್ನು ಮುಖ್ಯ ಆಹಾರವಾಗಿ ಉಪಯೋಗಿಸುತ್ತಾರೆ. ಇಂಡಿಯಾ ದೇಶಕ್ಕೆ ಪೋರ್ಚುಗೀಸರು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮೊತ್ತಮೊದಲು ತಂದರೆಂದು ಕೆಲವರ ಅಭಿಪ್ರಾಯ. ಆದರೆ ಅದಕ್ಕೆ ಯಾವುದೇ ದಾಖಲೆಗಳಿಲ್ಲ. ಕ್ರಿ.ಶ. 1800ರಲ್ಲಿ ಇಂಗ್ಲಿಷ್ ಸೈನಾಧಿಕಾರಿ 'ಕರ್ನಲ್ ಕಪ್ಪೇಜ್' ಎಂಬಾತ ಆಲೂಗೆಡ್ಡೆಯನ್ನು ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ನಂದಿ ಬೆಟ್ಟದ ಹರವಿನಲ್ಲಿ ಬೆಳೆಸಿದ್ದರೆಂದು ತಿಳಿದು ಬಂದಿದೆ. 1824ರಲ್ಲಿ ಉದಕ ಮಂಡಲದಲ್ಲಿ, 1838ರಲ್ಲಿ ಮುಂಬಾಯಿ ಗುಜರಾತ್ ಪ್ರಾಂತ್ಯಗಳಲ್ಲಿ ಇದರ ಕೃಷಿ ಕಾಣಿಸಿ ಕೊಂಡಿತು. ಅನಂತರ



ಪ್ರಸ್ಥಭೂಮಿಯಲ್ಲೆಲ್ಲಾ ಹರಡಿಕೊಂಡಿತು.

ವಾತಾವರಣ : ಇದು ಮುಖ್ಯವಾಗಿ ಎತ್ತರದ ಪ್ರದೇಶಗಳಲ್ಲಿನ ತಂಪಾದ ಹವಾಗುಣವುಳ್ಳ ಗುಡ್ಡಗಳ ಬೆಳೆ. ಸಿಮ್ಲಾ, ಡಾರ್ಜಿಲಿಂಗ್, ನೀಲಗಿರಿ ಮುಂತಾದ ಸಮುದ್ರಮಟ್ಟದಿಂದ ಐದಾರು ಸಾವಿರ ಅಡಿಗಳ ಎತ್ತರವಿದ್ದು ತಂಪಾದ ಹವಾಗುಣವನ್ನೊಳಗೊಂಡ ಬೆಟ್ಟಗುಡ್ಡಗಳಲ್ಲಿ ಫಸಲು ಚೆನ್ನಾಗಿ ಬರುತ್ತದೆ. ಬೆಳೆಯುವ ಜಾಗವು ಎತ್ತರವಾದಷ್ಟು ಕ್ರಿಮಿಕೀಟಗಳ ಮತ್ತು ಶಿಲೀಂಧ್ರ ರೋಗಗಳಿಗೆ ಬೆಳೆ ತುತ್ತಾಗುವುದಿಲ್ಲ. ಆದುದರಿಂದ ಈ ಬೆಳೆಯನ್ನು ಸಮುದ್ರಮಟ್ಟದಿಂದ 3000 ಅಡಿಗಳ ಮೇಲೆ 7000 ಅಡಿಗಳವರೆಗೆ, ಬಹುಚೆನ್ನಾಗಿಯೂ ಆರೋಗ್ಯಕರವಾಗಿಯೂ ಮತ್ತು ಹೆಚ್ಚು ಲಾಭದಾಯಕವಾಗಿಯೂ ಬೆಳೆಯಬಹುದು. ಆಲೂಗೆಡ್ಡೆ ಬೆಟ್ಟಗಳ ಶ್ರೇಣಿಗಳಲ್ಲಿ ಮಳೆಯ ಬೆಳೆಯಾಗಿಯೂ ಮೈದಾನಗಳಲ್ಲಿ ನೀರು ಹಾಯಿಸುವುದರಿಂದಲೂ ಬೆಳೆಯುತ್ತದೆ.

ಮಣ್ಣು : ಆಲೂಗೆಡ್ಡೆಯನ್ನು ಬೆಳೆಯಲು ಮರಳು ಮಿಶ್ರವುಳ್ಳ ಗೋಡು ಮತ್ತು ಮೆಕ್ಕಲು ಮಣ್ಣು, ಹಗುರವಾದ ಕಪ್ಪು ನೆಲಗಳು ಮತ್ತು ಕೆಬ್ಬೆಯ ನೆಲಗಳು ಉತ್ತಮವಾದುವು. ಸಾವಯವ ಪದಾರ್ಥ ಹೆಚ್ಚು ಇರುವಂಥ ಮಣ್ಣುಗಳು ಇದಕ್ಕೆ ಉತ್ತಮ. ಮಣ್ಣು ಪೊಳ್ಳಾಗಿದ್ದು ನೀರು ಬಸಿದು ಹೋಗುವಂತಿದ್ದರೆ ಒಳ್ಳೆಯದು. ಚೌಳು ಅಥವಾ ಕ್ಷಾರೀಯ,

ಜೇಡಿಮಣ್ಣುಗಳು ಒಳ್ಳೆಯದಲ್ಲ. ಗೆಡ್ಡೆಯ ಬೆಳವಣಿಗೆಯ ಉಷ್ಣತೆ ಹೆಚ್ಚಿದಂತೆಲ್ಲಾ ಅಧಿಕವಾಗುವುದು. ಮಳೆಗಾಲದ ಬೆಳೆಗೆ ಆಲೂಗೆಡ್ಡೆಯನ್ನು ಮೇ-ಜೂನ್ ತಿಂಗಳಲ್ಲೂ ಚಳಿಗಾಲದ ಬೆಳೆಗೆ ನವೆಂಬರ್-ಡಿಸೆಂಬರ್ ತಿಂಗಳಲ್ಲೂ ಬಿತ್ತನೆ ಮಾಡಬೇಕು.

ಆಲೂಗೆಡ್ಡೆಯನ್ನು ಗೆಡ್ಡೆಯ ಚೂರುಗಳು ಹಾಗೂ ಗೆಡ್ಡೆಯ ಮುಖಾಂತರ ಸಸ್ಯಾಭಿವೃದ್ಧಿ ಮಾಡಲಾಗುವುದು. ಇದಕ್ಕೆ ಮಾರಕ ರೋಗಗಳು ಬೇಗ ಹರಡುವುದರಿಂದ ರೋಗರಹಿತ ಗೆಡ್ಡೆಗಳನ್ನು ಬಿತ್ತನೆಗೆ ಬಳಸಬೇಕು. 2-3 ತಿಂಗಳು ಶೇಖರಿಸಿಟ್ಟಿದ್ದ ಗೆಡ್ಡೆಯನ್ನು ಬಿತ್ತನೆಗೆ ಬಳಸಬೇಕು. ಉತ್ತಮ ಕಣ್ಣುಳ್ಳ ಮೊಳಕೆಯಾಗಲು ಸಿದ್ಧವಿರುವ ದೃಢವಾದ ಗೆಡ್ಡೆಯ ಚೂರುಗಳನ್ನೇ ಉಪಯೋಗಿಸಬೇಕು. ಗೆಡ್ಡೆಯನ್ನು ಕತ್ತರಿಸುವಾಗ ಪ್ರತಿಯೊಂದು ಗೆಡ್ಡೆಯ ಭಾಗದಲ್ಲಿ ಕನಿಷ್ಠ ಎರಡು ಕಣ್ಣುಗಳಿರುವಂತೆ ಎಚ್ಚರಿಕೆ ವಹಿಸಬೇಕು ಗೆಡ್ಡೆ ಕತ್ತರಿಸುವಾಗ ಬಳಸುವ ಚಾಕುವನ್ನು ಪ್ರತಿಯೊಂದು ಬಾರಿ ಮದ್ಯಸಾರ ಅಥವಾ ಆಲ್ಕೋಹಾಲ್ ದ್ರಾವಣದಲ್ಲಿ ಅದ್ದುವುದರಿಂದ ಸೂಕ್ಷ್ಮಜೀವಿಗಳಿಂದುಂಟಾಗುವ ರೋಗಗಳನ್ನು ತಪ್ಪಿಸಬಹುದು.

ಭೂಮಿಯನ್ನು 2-3 ಬಾರಿ ಮೂರು ತಿಂಗಳುಗಳ ಮೊದಲೇ ಕೋಲು ಗುದ್ದಲಿಗಳಿಂದ 15-20 ಅಂಗುಲಗಳಷ್ಟು ಆಳವಾಗಿ ಅಗೆದು ಬಿಸಿಲಿಗೆ ಬಿಡಬೇಕು. ಅನಂತರ ತೂಕವಾದ ಹಲುಬೆಯಿಂದ ಉದ್ದ ಮತ್ತು ಅಡ್ಡಲಾಗಿ ಹಲುಬೆ ಹೊಡೆಯಬೇಕು. ಎಕರೆಯೊಂದಕ್ಕೆ 25 ರಿಂದ 30 ಗಾಡಿಗಳಷ್ಟು ಚೆನ್ನಾಗಿ ಕೊಳೆತು ಹುಡಿಯಾಗಿರುವ ದನದ ಗೊಬ್ಬರ ಸೇರಿಸಬೇಕು. 15 ರಿಂದ 18 ಇಂಚುಗಳ ದೂರಕ್ಕೊಂದರಂತೆ ಸಾಲುಗಳನ್ನು ಮಾಡಿಕೊಂಡು ಕೊಯ್ದು ಸಿದ್ಧಪಡಿಸಿಕೊಂಡಿರುವ ಆಲೂಗೆಡ್ಡೆಯ ಹೋಳನ್ನು ಒಂದರಿಂದ ಒಂದೂವರೆ ಅಂಗುಲ ದೂರಕ್ಕೆ ಕಾಲುವೆಗಳ ಪಕ್ಕದಲ್ಲಿ ಕಣ್ಣು ಮೇಲಕ್ಕೆ ಇರುವಂತೆ ನಾಟಿ ಮಾಡಬೇಕು. ನಾಟಿಗೆ ಮೊದಲು ಕಾಲುವೆಗಳ ತುಂಬ ನೀರು ಕಟ್ಟಬೇಕು. (ಬೆಳಗ್ಗೆ ನೀರು ಕಟ್ಟಿದರೆ ಆಲೂಗೆಡ್ಡೆಯನ್ನು ಸಂಜೆ ನೆಡಬೇಕು. ಸಂಜೆ ಕಟ್ಟಿದರೆ ಗೆಡ್ಡೆಯನ್ನು ಬೆಳಗ್ಗೆ ನೆಡಬೇಕು). ಎಕರೆ ಒಂದಕ್ಕೆ 40 ಮಣಗಳ ಬೀಜದ ಗೆಡ್ಡೆ ಬೇಕಾಗುತ್ತದೆ. ನೆಟ್ಟ ಗೆಡ್ಡೆಯ ಚೂರುಗಳಿಂದ ಆರೇಳು ದಿನಗಳಲ್ಲಿ ಮೊಳಕೆಗಳು ಅಲ್ಲಲ್ಲಿ ಹೊರಬಂದರೆ ಹತ್ತು ದಿನಗಳಲ್ಲಿ ಎಲ್ಲಾ ಸಸಿಗಳು ಹುಟ್ಟುತ್ತವೆ. ಗಿಡ ಕಾಣಿಸಿಕೊಂಡ 8-10 ದಿನಗಳ ಬಳಿಕ ಕೊಕ್ಕೆಗಳಿಂದ ಕೆದಕಿ ಕಳೆ ತೆಗೆದು ಆರು ವಾರಗಳಾದ ಮೇಲೆ ಕೈಗುದ್ದಲಿಯಿಂದ ಮಣ್ಣನ್ನು ಏರು ಹಾಕಬೇಕು. ಆಗ ಹಿಂದಿನ ನೀರು ಕಾಲುವೆಗಳು ದಿಂಡುಗಳಾಗಿಯೂ, ದಿಂಡುಗಳು ನೀರು ಕಾಲುವೆಗಳಾಗಿಯೂ ಮಾರ್ಪಡುತ್ತವೆ. ಏರು ಹಾಕುವಾಗ ಬೆಳೆಯು ಹುಲುಸಾಗಿ ಬೆಳೆಯದೇ ನೊಂದ ಹಾಗೆ ಇದ್ದಲ್ಲಿ ರಾಸಾಯನಿಕ ಗೊಬ್ಬರಗಳು, ನೆಲಗಡಲೆ ಹಿಂಡಿ, ಹೊಂಗೆ ಹಿಂಡಿ, ಬೇವಿನ ಹಿಂಡಿ ಇವನ್ನು ಗೊಬ್ಬರವಾಗಿ ಭೂಮಿಗೆ ಸೇರಿಸಬೇಕು.

ಇಳುವರಿ : ಬಿತ್ತನೆಯ ದಿನದಿಂದ 110-120 ದಿನಗಳಿಗೆ ಗೆಡ್ಡೆಯೆಲ್ಲವೂ ಬಲಿತು ಅಗೆಯಲು ಸಿದ್ಧವಾಗುತ್ತದೆ. ಕೊಯ್ಲಿಗೆ ಸಿದ್ಧವಾದಾಗ ಸಸ್ಯದ ಕಾಂಡ ಮತ್ತು ಎಲೆಗಳು ಹಳದಿ ಬಣ್ಣಕ್ಕೆ ಬಂದು ಕಂದು ಬಣ್ಣಕ್ಕೆ ತಿರುಗಿ ಒಣಗಲಾರಂಭಿಸುತ್ತವೆ. ಆಗ ಕೋಲು ಗುದ್ದಲಿಗಳಿಂದ ಗೆಡ್ಡೆಯ ಮೇಲಿನ ಚರ್ಮಕ್ಕೆ ಹಾನಿಯಾಗದಂತೆ ಎಚ್ಚರಿಕೆಯಿಂದ ಅಗೆದು ಗೆಡ್ಡೆಯನ್ನು ಪ್ರಖರವಾದ ಬಿಸಿಲಿಗೆ ಬಿಡದೇ ಚೆನ್ನಾಗಿ ಗಾಳಿಯಾಡುವ ಪ್ರದೇಶದಲ್ಲಿ ರಾಸಿಕಟ್ಟುತ್ತಾರೆ. ಅದರ ಮೇಲೆ ಆಲೂಗೆಡ್ಡೆಯ ಗಿಡವನ್ನು ಮುಚ್ಚಿಡುತ್ತಾರೆ. ಐದಾರು ದಿನಗಳಾದ ಮೇಲೆ ಗೆಡ್ಡೆಯು ಆರಿ ಮೇಲಿನ ತೊಗಟೆ ಗಟ್ಟಿಯಾಗಿ ಗೆಡ್ಡೆಯಲ್ಲಿನ ಹಸಿರುಬಣ್ಣ ಹೋಗುತ್ತದೆ. ಈ ರೀತಿಯ ಬೇಸಾಯ ಕ್ರಮಗಳನ್ನು ಅನುಸರಿಸುವುದರಿಂದ ಒಂದು ಎಕರೆಗೆ 4 ರಿಂದ 5 ಟನ್ ಗೆಡ್ಡೆ ಇಳುವರಿಗೆ ಸಿಕ್ಕುತ್ತದೆ. ಮಳೆಯಾಶ್ರಯದಲ್ಲಿ ಮತ್ತು ನೀರಾವರಿಯಲ್ಲಿ 6 ರಿಂದ 8 ಟನ್ ಗೆಡ್ಡೆ ಇಳುವರಿ ದೊರೆಯುತ್ತದೆ.

ಭಾರತದಲ್ಲಿ ಬೆಳೆಯುವ ಆಲೂಗೆಡ್ಡೆಯ ಜಾತಿಗಳು ಸಾಧಾರಣವಾಗಿ ಅಲ್ಪಾವಧಿಯವಾದುದರಿಂದ 110 ರಿಂದ 120 ದಿನಗಳಿಗೆಲ್ಲಾ ಬೆಳೆಯು ಮುಗಿಯುವುದರಿಂದ ಅದೇ ಜಮೀನಿನಲ್ಲಿ ವರ್ಷಕ್ಕೆ ಎರಡು ಸಲ ಆಲೂಗೆಡ್ಡೆ ಬೆಳೆಯಬಹುದು. ನೀರಿನ ಅನುಕೂಲವನ್ನು ಅನುಸರಿಸಿಕೊಂಡು ಮಳೆಗಾಲದ ಬೆಳೆ ಮತ್ತು ಬೇಸಿಗೆ ಬೆಳೆ ಬೆಳೆಯುತ್ತಾರೆ. ಈ ಎರಡು ಬೆಳೆಗಳ ಮಧ್ಯೆ ಒಂದು ಉಪಬೆಳೆಯನ್ನು ಬೆಳೆಯಬಹುದು (ಸೊಪ್ಪು, ದನಿಯಾ, ಹುರುಳಿ ಮುಂತಾದುವು). ಆಲೂಗೆಡ್ಡೆ ಬೆಳೆಯಾದೊಡನೆ ರಾಗಿ, ಮುಸುಕಿನ ಜೋಳ, ಮೆಣಸಿನ ಕಾಯಿ ಮುಂತಾದವನ್ನು ಬೆಳೆದು ಬೆಳೆ ಪರಿವರ್ತನೆ ಮಾಡುತ್ತಾರೆ.

ರಾಗಿಯ ಬೇಸಾಯಕ್ಕೆ ಮಾಡುವ ಎಲ್ಲಾ ಕೆಲಸ ಮಾಡಿ ರಾಗಿ ಬಿತ್ತುವಾಗಲೇ ನೇಗಿಲ ಸಾಲುಗಳಲ್ಲಿ ಆಲೂಗೆಡ್ಡೆಯನ್ನು ಊರಿ ಮಳೆಯ ಆಶ್ರಯದಿಂದ ಬೆಳೆ ತೆಗೆಯುವುದೂ ಉಂಟು. ತೋಟದ ಬೆಳೆಯಾದರೆ ಎಕರೆಯೊಂದಕ್ಕೆ 350-500 ಮಣ ಹೊಲದ ಬೆಳೆಯಾದರೆ 250 ಮಣ ಬೆಳೆಯುತ್ತಾರೆ.

ತಳಿಗಳು : ಆಲೂಗೆಡ್ಡೆಯಲ್ಲಿ ಸು. 25-30 ಜಾತಿಗಳ ಗೆಡ್ಡೆಗಳಿವೆ. ಕರ್ನಾಟಕ ರಾಜ್ಯದಲ್ಲಿ ಮೂರು ಜಾತಿಯ ಗೆಡ್ಡೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಮೊದಲನೆಯದು ಧಾರವಾಡ ಜಾತಿಯದು- ಇದನ್ನು ಇಟಲಿ ಗೆಡ್ಡೆ ಎಂದು ಹೇಳುತ್ತಾರೆ. ಎರಡನೆಯದು ಚಪ್ಪಟೆಯಾಗಿದ್ದು ಉದ್ದನೆಯದಾಗಿರುವುದು. ಕಣ್ಣುಗಳು ಕೆಲವೇ ಕೆಲವು ಇರುತ್ತವೆ. ಇದಕ್ಕೆ 'ರಿಕೆಟ್' ಎಂದು ಕರೆಯುತ್ತಾರೆ. ಮೂರನೆಯದು ಸಿಮ್ಲಾಗೆಡ್ಡೆ; ಇದು ದೊಡ್ಡ ಗಾತ್ರವನ್ನು ಹೊಂದಿದ್ದು ಅತಿ ಹೆಚ್ಚು ಬೆಳೆಯುವ ಬೆಳೆಯಾಗಿದೆ. ಒಟ್ಟಿನಲ್ಲಿ ಯಾವ ಜಾತಿಯ ಬೆಳೆ ಮಾಡಿದರೂ ಗೆಡ್ಡೆಯನ್ನು ಬೇಯಿಸಿದರೆ ಒಳಗಿನ ತಿರುಳು ಮರಳು ಮರಳಾಗಿದ್ದರೆ ಅದು ಒಳ್ಳೆಯ ಜಾತಿಯದು ಎಂದರ್ಥ.

ರೋಗಗಳು : ಆಲೂಗೆಡ್ಡೆಗೆ ಅಂಗಮಾರಿ ರೋಗ, ಬೆಂಕಿರೋಗ, ಕಜ್ಜಿರೋಗ, ಉಂಗುರ ಕೊಳೆತ, ಜಿಗಿಹುಳು, ಗುಲಗಂಜಿಹುಳು, ಗೆಡ್ಡೆಹುಳು ಮತ್ತು ಹೇನುಗಳ ಕಾಟ ಮುಂತಾದುವು ತಗಲುತ್ತವೆ. ಈ ರೋಗಗಳು ಎಲೆ ಹಾಗೂ ಕಾಂಡಗಳಿಗೆ ತಗುಲಿ ದಟ್ಟ ಕಂದು ಬಣ್ಣದ ಚುಕ್ಕೆಗಳುಂಟಾಗಿ ರಂಧ್ರವಾಗಿ ಗಿಡ ಅವಸಾನವನ್ನು ಹೊಂದುತ್ತದೆ ಇಲ್ಲವೇ ಗೆಡ್ಡೆ ಬೇಗ ಕೊಳೆತುಹೋಗುತ್ತದೆ.

ಉಪಯೋಗ : ಆಲೂಗೆಡ್ಡೆಯಲ್ಲಿ ಪಿಷ್ಟ, ಸಾರಜನಕ, ಕೊಬ್ಬು, ಸುಣ್ಣ, ರಂಜಕ, ಕಬ್ಬಿಣಾಂಶ ಮುಂತಾದ ಪೋಷಕಾಂಶಗಳಿರುತ್ತವೆ. ಶರೀರಕ್ಕೆ ಬೇಕಾದ ಪಿಷ್ಟ ಮತ್ತು ಶಕ್ತಿಯನ್ನು ಇವು ಒದಗಿಸುತ್ತದೆ. ಬೇಯಿಸಿದ

ತಿರುಳನ್ನು ಹಾಲಿನಲ್ಲಿ ಕಲಸಿ ಸುಟ್ಟಗಾಯಕ್ಕೆ ಹಚ್ಚಿದರೆ ಗುಣವಾಗುತ್ತದೆ. ಸಿಪ್ಪೆ ಸಹಿತ ಆಲೂಗೆಡ್ಡೆಯನ್ನು ಉಪ್ಪು, ತುಪ್ಪ, ಮೆಣಸಿನೊಂದಿಗೆ ಮಕ್ಕಳಿಗೆ ತಿನಿಸುತ್ತಾರೆ. ಆಲ್ಕೋಹಾಲ್ ತಯಾರಿಕೆ ಯಲ್ಲೂ ಮತ್ತು ಹತ್ತಿ ಬಟ್ಟೆಯ ಉಪಯೋಗಕ್ಕೆ ಬೇಕಾಗುವ ಒಂದು ಬಗೆಯ ಗಂಜಿಯನ್ನು ಮಾಡಿ ನೇಯ್ದು ಬಟ್ಟೆಯ ಮೇಲೆ 'ಹಸ್ಪರೋಲ್' ಮಾಡುವುದಕ್ಕೂ ಬಳಸುತ್ತಾರೆ.

ಎನ್. ಆರ್.

ಇಂಗು ವಿಶಿಷ್ಟವಾಸನೆಯುಳ್ಳ ಇದನ್ನು ಇಂಗು, ಕಾಮಡ ಬಾಹ್ಲೀಕ ಎನ್ನುತ್ತಾರೆ. ಪೆರುಲ ಅಸಫೋಟಿಡ ಎಂಬ ಸಸ್ಯದ ಬೇರಿನಿಂದ



ಒಸರುವ ಗೋಂದೇ ಇಂಗು. ಅಂಬೆಲ್ಲಿ ಫೆರಿ ಕುಟುಂಬಕ್ಕೆ ಸೇರಿದ ಇದು ಕೊತ್ತಂಬರಿ, ಬ್ರಾಹ್ಮಿ ಮುಂತಾದ ಸಸ್ಯಗಳ ಗುಂಪಿಗೆ ಸೇರಿದೆ. ಇದರಲ್ಲಿ ಸಾಕಷ್ಟು ಪ್ರಭೇದಗಳಿದ್ದು ಮೂರು ನಾಲ್ಕು ಅಡಿ ಎತ್ತರಕ್ಕೆ ಬೆಳೆಯಬಲ್ಲುದು. ಬಹುವಾರ್ಷಿಕ ಬೆಳೆಯಾದ ಇದು ಬೇಸಗೆಯಲ್ಲಿ ಒಣಗಿದಂತೆ ಕಂಡರೂ ಬೇರು ಹಸಿಯಾಗಿಯೇ ಉಳಿಯುವ ಶಕ್ತಿ ಹೊಂದಿದೆ. ಬೇರನ್ನು ಕೆರೆದಾಗ ಹೊರಬರುವ ದ್ರವವನ್ನೇ ಇಂಗು ಎಂದು ಕರೆಯುತ್ತಾರೆ.

ಹಿಂದೆ ಇಂಗಿನ ಸಸಿಗಳು ಸ್ವಾಭಾವಿಕವಾಗಿ ಎಲ್ಲೆಂದರಲ್ಲಿ ದೊರೆಯುತ್ತಿದ್ದವು. ಹಿಮಾಲಯ, ಕಾಶ್ಮೀರ, ಅಫ್ಘಾನಿಸ್ತಾನ, ಪರ್ಷಿಯ ದೇಶದ ಗುಡ್ಡಗಾಡುಗಳಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ. ಇದಕ್ಕೆ ಹೆಚ್ಚಿನ ನೀರಾಗಲಿ ಫಲವತ್ತಾದ ಭೂಮಿಯಾಗಲಿ ಬೇಕಿಲ್ಲ. ಇಂಗಿನ ವಿಶಿಷ್ಟವಾಸನೆಗೆ ಕಾರಣ ಡೈಸಲ್ಫೈಡ್‌ಗಳಿರುವ ಆವಿಯಾಗುವ ಗುಣವುಳ್ಳ ಎಣ್ಣೆ. ಇದರಲ್ಲಿ ಅನೇಕ ಔಷಧೀಯ ಗುಣಗಳಿರುವುದರಿಂದ ಬೇಡಿಕೆ ಹೆಚ್ಚು. ಪಚನ ಕ್ರಿಯೆಯನ್ನು ವೃದ್ಧಿಗೊಳಿಸುವ ಗುಣವಿದೆ. ಗ್ಯಾಸ್ಟ್ರಿಕ್ ತೊಂದರೆಯನ್ನು ಶಮನಗೊಳಿಸುತ್ತದೆ. ಇದರ ಗೋಂದನ್ನಷ್ಟೇ ಅಲ್ಲದೆ ಬಲಿತ ಬೇರನ್ನು ಕತ್ತರಿಸಿ ಪುಡಿಮಾಡಿ ಬೆರೆಸಿ ಮಾರಾಟ ಮಾಡಲಾಗುತ್ತದೆ. ಆದರೆ ಶುದ್ಧವಾದ ಇಂಗು ಬೇರಿನಿಂದ ಸ್ರವಿಸುವ ಹಾಲನ್ನು ಸಂಗ್ರಹಿಸಿ ಅದು ಘನೀಭವಿಸಿದಾಗ ದೊರೆಯುವ ವಸ್ತು.

ಎ.ಬಿ.ಪಿ.

ಇಂಗುದಿ ಮರ ಎಣ್ಣೆಗಾಗಿ ಮತ್ತು ಬಣ್ಣಕ್ಕಾಗಿ ಬೆಳೆಸುವಂಥದು. ಕೋಂಬ್ರಿಟೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ನಾಮ ಟರ್ಮಿನೇಲಿಯ ಕಟಪ್ಪ. ಇದನ್ನು ಕಾಡುಬಾದಾಮಿ, ಮಲಬಾರ್ ಬಾದಾಮಿ ಎಂದೂ ಕರೆಯುತ್ತಾರೆ. ಇದರ ಮೂಲಸ್ಥಾನ ಅಂಡಮಾನ್ ದ್ವೀಪ. ಭಾರತದಲ್ಲೂ ಇದರ ಕೃಷಿ ಇದೆ. ಇದು ಸಾಮಾನ್ಯವಾಗಿ ಉಷ್ಣವಲಯ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯದ ಸ್ವರೂಪ : 15-20 ಅಡಿ ಎತ್ತರ ಬೆಳೆಯುವ ಮರವಿದು. ಎಲೆಗಳ ಉದ್ದ 5-12 ಅಂಗುಲ, ಉದ್ದವೂ 3-6 ಅಂಗುಲ ಅಗಲವಿದ್ದು ತೊಟ್ಟುಗಳು ಸಣ್ಣವಿರುತ್ತವೆ. ಹಸುರಾಗಿರುವ ಇದರ ಎಲೆಗಳು ಉದುರುವ ಕಾಲಕ್ಕೆ ಕಂದು ಬಣ್ಣಕ್ಕೆ ತಿರುಗುತ್ತವೆ. 6-8 ಅಂಗುಲ ಉದ್ದವಿರುವ ಹೂಗೊಂಚಲುಗಳಲ್ಲಿ ಪುಟ್ಟ ಪುಟ್ಟ ಹೂಗಳು ಬಿಡುತ್ತವೆ. ಹತ್ತು ಕೇಸರಗಳಿದ್ದರೂ ಪುಷ್ಪದಳಗಳಿರುವಿಲ್ಲ. ಚಪ್ಪಟೆ ಆಕಾರವಿರುವ ಇದರ ಕಾಯಿಗಳು ಒಣಗಿದ ಮೇಲೆ ತುಪ್ಪಟ ಉದುರಿ ಹೋಗುತ್ತದೆ. ಒಂದು ಕಾಯಿಯಲ್ಲಿ ಒಂದೇ ಬೀಜ. ಮರ ಬಲುಗಟ್ಟಿಯಾಗಿದ್ದು ಒಳಭಾಗ ಕೆಂಪಗಿರುತ್ತದೆ. ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಇದರ ತೊಗಟೆ ಮತ್ತು ಎಲೆಗಳಿಂದ (ಕಪ್ಪು) ಬಣ್ಣ ತೆಗೆದು ಹಲ್ಲುಗಳಿಗೆ ಬಣ್ಣಕಟ್ಟಿಕೊಳ್ಳುವುದುಂಟು. ಬಾದಾಮಿಯಂತೆ ವಾಸನೆಯುಳ್ಳ ಉತ್ಕೃಷ್ಟ ಎಣ್ಣೆ ಇದರ ಬೀಜಗಳಿಂದ ದೊರೆಯುತ್ತದೆ. ಬಾದಾಮಿ ಎಣ್ಣೆಯ ಅನಂತರದ ಸ್ಥಾನ ಇದಕ್ಕಿದೆ.

ಔಷಧೀಯ ಗುಣಗಳು : ಇದರ ಎಲೆಯಿಂದ ತಯಾರಿಸಿದ ಮುಲಾಮು ಕುಷ್ಠರೋಗ, ಕಜ್ಜಿ ಇನ್ನಿತರ ಚರ್ಮಸಂಬಂಧಿ ಕಾಯಿಲೆಗಳಿಗೆ ಬಳಸುತ್ತಾರೆ. ಎಲೆಯಿಂದ ತಯಾರಿಸಿದ ಕಷಾಯ ಒರತಲೆನೋವಿಗೆ ಒಳ್ಳೆಯ ಮದ್ದು. ಹೃದ್ರೋಗಿ ಸಂಬಂಧಿ ಕಾಯಿಲೆಗಳಿಗೆ ಇದರ ತೊಗಟೆಯ ರಸ ಬಳಸುವುದುಂಟು.

ಕೆ.ಎಂ.

ಇಡಿತ್ತೂಂಬ (ಪೂಂಕೊಟ್ಟು / ಹೊಲಗುದ್ದಲಿ) ರೈತನಿಗೆ ತುಂಬ ಉಪಯುಕ್ತವಾದ ಒಂದು ಉಪಕರಣ. ಬತ್ತದ ಒಂದನೆಯ ಬೆಳೆಯಲ್ಲಿ ಸಸಿಗಳ ಎಡೆಗಳನ್ನು ಅಗೆಯುವುದಕ್ಕೂ ಗದ್ದೆಗಳಲ್ಲಿ ಮೂರನೆಯ ಬೆಳೆಯ ಕಾಲದಲ್ಲಿ ಎಳ್ಳು ಕೃಷಿ ಮಾಡುವಾಗ ಎಳ್ಳಿನ ಎಡೆ ಅಗೆಯಲು ತುಂಬ ಅಗತ್ಯದ ಉಪಕರಣ. ಇದನ್ನು ಒಂದು ಕಿರುಹಾಕಿಯೆಂದು ಕರೆದರೂ ಸಲ್ಲುತ್ತದೆ. ಕೇರಳದ ಓಣಾಟ್ಟುಕರದ ಬತ್ತದ ಬಯಲುಗಳಲ್ಲಿ ಇದರ ಬಳಕೆ ಹೆಚ್ಚು. ಒಂದನೆಯ ಬೆಳೆ (ವಿರಿಪ್ಪ್)ಯಲ್ಲಿ ಸಾಲು ಸಾಲುಗಳಾಗಿ ಬತ್ತದ ಸಸಿಗಳು ಬೆಳೆಯುವಾಗ ಅವುಗಳ ಎಡೆಯನ್ನು ಅಗೆಯಬೇಕಾಗುತ್ತದೆ. ಅಧಿಕವೆನಿಸುವ ಬತ್ತದ ಸಸಿಗಳು ಮತ್ತು ಮುಖ್ಯವಾಗಿ ಬತ್ತದ ಸಸಿಗಳ ನಡುವೆ ಬೆಳೆದ ಕಳೆಗಿಡಗಳನ್ನು ನಿಯಂತ್ರಿಸುವುದು ಈ ಅಗೆತದ ಉದ್ದೇಶ. ನೆಲಕೂಡ ಅಗತೆಗೆ ಒಳಗಾಗಿ ಸಡಿಲಗೊಂಡು ಬತ್ತದ ಸಸಿಗಳ ಬೇರು ಹಾದು ಗಿಡಗಳು ದಷ್ಟಪುಷ್ಟವಾಗಿ ಬೆಳೆಯಲು ಕೂಡ ಅನುಕೂಲವಾಗುತ್ತದೆ. ಬತ್ತಕ್ಕಾಗಲಿ ಎಳ್ಳಿಗಾಗಲಿ ಹೀಗೆ ಎರಡು ಬಾರಿ ಅಗತೆ ಮಾಡಬೇಕಾಗುತ್ತದೆ. ಎರಡನೆಯ ಬೆಳೆಗೆ ಗೊಬ್ಬರ ನೀಡಿದ ಬಳಿಕ ಅಗತೆ ಮಾಡುವುದು ಕ್ರಮ. ಇಡಿತ್ತೂಂಬದ ಹಿಡಿಕೆಯು ಒಂದು ಹಾರೆಯ ಹಿಡಿಯಷ್ಟೆ

ಉದ್ದವಿರುತ್ತದೆ. ಹಿಡಿಕೆಯನ್ನು ಸಾಮಾನ್ಯವಾಗಿ ಕಂಗಿನ ಸಲಿಕೆಯನ್ನು ಉರುಟಾಗಿ ಕೆತ್ತಿ ತಯಾರಿಸಲಾಗುತ್ತದೆ ಅಥವಾ ಅಲಕಾಣ್ ಎಂಬ ಮರದಿಂದಲೂ ತಯಾರಿಸಿಕೊಳ್ಳಬಹುದು. ಹಿಡಿಕೆಯು ಹಗುರವಾಗಿರಲೆಂಬುದು ಇದಕ್ಕೆ ಕಾರಣ.

ಈ ಉಪಕರಣದಿಂದ ನೆಲವನ್ನು ಅಗೆಯಲು ಒಳ್ಳೆಯ ಅಭ್ಯಾಸ ಅಗತ್ಯ. ಇಲ್ಲವಾದರೆ ಕಳೆಗಿಡದ ಬದಲು ಬತ್ತದ / ಎಳ್ಳಿನ ಗಿಡಗಳನ್ನು ಅಗೆದು ಬಿಡಬಹುದು. ಓಣಾಟ್ಟುಕ್ಕರದ ಬತ್ತದ ಬಯಲುಗಳಲ್ಲಿ ಒಂದನೆಯ ಬೆಳೆಯ ಕಾಲದಲ್ಲಿ ಇಡಿತ್ತೂಂಬಗಳನ್ನು ಹಿಡಿದು ಗಂಡಸರು ಸಾಲಾಗಿ ನಿಂತು ಎಡೆಗಳನ್ನು ಅಗೆಯುತ್ತಿದ್ದ ದೃಶ್ಯ ಅಪೂರ್ವವಾದುದು. ದ್ರುತಗತಿಯಲ್ಲಿ ಅಗೆಯುವಾಗ ಇಡಿತ್ತೂಂಬಗಳು ಒಂದೇ ರೀತಿ ಹಿಂದಕ್ಕೂ ಮುಂದಕ್ಕೂ ಚಲಿಸುತ್ತಿರುತ್ತವೆ. ಕಣ್ಣಳತೆಗೆ ನಿಲುಕದ ವಿಸ್ತಾರವಾದ ಬತ್ತದ ಬಯಲುಗಳಲ್ಲಿ ಕೃಷಿ ಕಾರ್ಮಿಕರು ಇಡಿತ್ತೂಂಬಗಳನ್ನು ಬಳಸಿ ನಡೆಸುತ್ತಿದ್ದ ಸಾಮೂಹಿಕ ಅಗತೆಯ ಕೆಲಸ ಇತ್ತೀಚೆಗೆ ಕಡಿಮೆಯಾಗಿದೆ.

ಕೆ.ಕೆ.

ಇನಾಮು ವ್ಯಕ್ತಿ ಅಥವಾ ಸಂಸ್ಥೆಯ ಉಪಯೋಗಕ್ಕಾಗಿ ಕೊಡುವಂಥದು. 'ಇನಾಂ' ಪದ ಪರ್ಷಿಯ ಭಾಷೆಯದು. ಪ್ರತಿಫಲ ನಿರೀಕ್ಷಿಸದ ಅಥವಾ ಉಚಿತವಾಗಿ ಕೊಡುವ ಯಾವುದಾದರೂ ವಸ್ತು ಎಂದು ಇದಕ್ಕೆ ಅರ್ಥ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಈ ಬಗೆಯ ಪದ್ಧತಿ ಇತ್ತು. ಇಂದಿಗೂ ಇದೆ. ಇದನ್ನು ಸ್ಥಳೀಯವಾಗಿ ಸಂಭಾವನೆ, ಉಡುಗೊರೆ ಎಂಬರ್ಥದಲ್ಲಿ ಪ್ರಾಚೀನಕಾಲದಲ್ಲಿ ಕರೆಯುತ್ತಿದ್ದರು. ರಾಜರು ತಮ್ಮ ಆಡಳಿತಾವಧಿಯಲ್ಲಿ ದೇವಸ್ಥಾನಗಳ ನಿರ್ಮಾಣ, ಪೋಷಣೆ, ರಕ್ಷಣೆ, ದೇವರ ಪೂಜಾ ಕಾರ್ಯಗಳು, ಇತ್ಯಾದಿಗಳಿಗೆ ಮಠಗಳು ಹಾಗೂ ಮಠಾಧೀಶರು, ಶಿಕ್ಷಕರು - ಮೊದಲಾದವರಿಗೆ ಭೂಮಿಯನ್ನು ಕಂದಾಯರಹಿತವಾಗಿ ಕೊಡುವ ಪದ್ಧತಿ ಹಿಂದಿನಿಂದಲೂ ರೂಢಿಯಲ್ಲಿತ್ತು. ಅರ್ಚಕರು, ವಾದ್ಯಗಾರರು, ನೃತ್ಯಕಲಾವಿದರು, ಸಂಗೀತಗಾರರು ಮೊದಲಾದ ಎಲ್ಲ ಬಗೆಯ ಸೇವಾ ನಿರತರಿಗೂ ಇನಾಮುಗಳನ್ನು ಕೊಡುವ ರೂಢಿ ಇತ್ತು. ಅರಸರ ಸೇವೆಗಾಗಿ ಸೈನಿಕರಿಗೆ, ಕಂದಾಯ ವಸೂಲಿ ಮಾಡುವವರಿಗೆ, ಲೆಕ್ಕಪತ್ರ ಬರೆಯುವವರಿಗೆ, ತಳವಾರರಿಗೆ ರಾಜರು ಇನಾಮುಗಳನ್ನು ಕೊಡುತ್ತಿದ್ದರು. ರೈತರು ಮತ್ತು ರಾಜರಿಗೆ ಸೇವೆ ಸಲ್ಲಿಸುವ ಅಗಸ, ನಾಯಿಂದ, ಬಡಗಿ, ಕಮ್ಮಾರ ಮೊದಲಾದ ಆಯಗಾರರಿಗೂ ಇನಾಮುಗಳು ದೊರೆಯುತ್ತಿದ್ದುವು.

ದೇಶೀಯ ದೊರೆಗಳ ಈ ರೂಢಿಯನ್ನು ಭಾರತಕ್ಕೆ ಬಂದ ಮುಸ್ಲಿಂ ರಾಜರೂ ಮುಂದುವರಿಸಿದರು. ಇವರು ಕೊಡುತ್ತಿದ್ದ ಇನಾಮುಗಳನ್ನು 'ಜಹಗೀರು' ಎಂದು ಕರೆಯಲಾಗಿದೆ. ದೇಶೀಯ ರಾಜರು ಕೊಡುತ್ತಿದ್ದ ಇನಾಮುಗಳಿಗೂ ಮುಸ್ಲಿಂ ರಾಜರು ಕೊಡುತ್ತಿದ್ದ ಜಹಗೀರುಗಳಿಗೂ ಕೆಲವು ವ್ಯತ್ಯಾಸಗಳಿವೆ. ರಾಜರು ಕೊಟ್ಟ ಇನಾಮುಗಳು ವಂಶಪಾರಂಪರ್ಯ ವಾಗಿರುತ್ತಿದ್ದವು. ಆದರೆ ಮುಸ್ಲಿಮರು ಜಹಗೀರಾಗಿ ಕೊಡುತ್ತಿದ್ದ ಹಿಡುವಳಿಗಳು ಈ ಇನಾಮು ಪಡೆದ ವ್ಯಕ್ತಿಯ ಮರಣಾನಂತರ ಅದು ಪುನಃ ರಾಜನ ವಶಕ್ಕೆ ಹೋಗುತ್ತಿತ್ತು. ಆದರೆ ಧಾರ್ಮಿಕ ಉದ್ದೇಶಗಳಿಗೆ, ಶ್ರೇಷ್ಠ ವ್ಯಕ್ತಿಗಳಿಗೆ, ಸಾಧುಸಂತರಿಗೆ, ಪಂಡಿತರಿಗೆ ಕೊಟ್ಟ ಜಹಗೀರುಗಳು ಮಾತ್ರ ವಂಶಪಾರಂಪರ್ಯವಾಗಿ ಇರುತ್ತಿದ್ದವು.

ಮುಸ್ಲಿಮರ ಅನಂತರ ಭಾರತಕ್ಕೆ ಬಂದ ಬ್ರಿಟಿಷರು ಸಹ ಕೆಲವು ಕಾಲ ಮೇಲೆ ಹೇಳಿದ ಪರಂಪರೆಯನ್ನೇ ಮುಂದುವರಿಸಿದರು. ಈಸ್ಟ್ ಇಂಡಿಯ ಕಂಪನಿಯಲ್ಲಿ ಉತ್ತಮ ಸೇವೆ ಸಲ್ಲಿಸಿದವರಿಗೆ ಜಹಗೀರುಗಳನ್ನು ಕೊಟ್ಟರು. ಕಾಲಕ್ರಮೇಣ ಭೂ ಹಿಡುವಳಗಳಿಗೆ ಬದಲಾಗಿ ಉನ್ನತ ಸೇವೆಗೈದವರಿಗೆ ಹಣವನ್ನು ಕೊಡಲು ಆರಂಭಿಸಿದರಾದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಜಹಗೀರುಗಳನ್ನು ಕೊಡುವ ಪದ್ಧತಿ ಇತ್ತು. ಮುಖ್ಯವಾಗಿ ಯುದ್ಧದ ಸಂದರ್ಭಗಳಲ್ಲಿ ವೀರಾವೇಶದಿಂದ ಹೋರಾಡಿ ಗೆದ್ದವರು ಅಥವಾ ಪ್ರಾಣತೆತ್ತವರ ಕುಟುಂಬಕ್ಕೆ ಜಹಗೀರು ಸಿಗುತ್ತಿತ್ತು. ಇದು ಮುಂದೆ 'ಜಮೀನ್ದಾರಿ ಪದ್ಧತಿ' ಎನಿಸಿಕೊಂಡಿತು.

ಶಾಸನಗಳಲ್ಲಿ ಇನಾಂ : ರಾಜರು ವ್ಯಕ್ತಿ ಅಥವಾ ಸಂಸ್ಥೆಗೆ ದಾನ ಕೊಟ್ಟ ವಿಚಾರ ಸಾರ್ವಕಾಲಿಕವಾಗಿ ಉಳಿಯಲು ಶಾಸನಗಳನ್ನು ಹಾಕಿಸುತ್ತಿದ್ದರು. ದಾನ ಕೊಟ್ಟ ಸಂದರ್ಭವನ್ನು ನೆಪವಾಗಿಟ್ಟುಕೊಂಡು ತಮ್ಮ ವಂಶವೃಕ್ಷವನ್ನು ಮನೆತನದ ಶ್ರೇಷ್ಠತೆಯನ್ನು ಉಲ್ಲೇಖಿಸುವ ಪ್ರಯತ್ನಗಳನ್ನು ಮಾಡುತ್ತಿದ್ದರು. ಕೊಟ್ಟ ಜಮೀನು, ಅದರ ವಿವರ, ದಿಕ್ಕು, ಚೆಕ್ಕುಬಂದಿ ಹಾಗೂ ಕೆಲವು ಷರತ್ತುಗಳನ್ನು ಸ್ಪಷ್ಟವಾಗಿ ದಾಖಲಿಸುತ್ತಿದ್ದರು. ಶಾಸನಗಳಲ್ಲಿ ಸಾಮಾನ್ಯವಾಗಿ 'ಆಚಂದ್ರಾರ್ಕಸ್ಥಾಯಿಯಾಗಿ ಕೊಟ್ಟ ದಾನ ಉಳಿಯಲಿ' ಎಂಬ ಸದಾಶಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ದಾನವನ್ನು ರಕ್ಷಿಸಿಕೊಳ್ಳುವವರಿಗೆ ಲಭಿಸುವ ಪುಣ್ಯವನ್ನೂ ಹಾಳುಮಾಡಿದವರಿಗೆ ಬರುವ ಪಾಪವನ್ನೂ ಶಾಸನದ ಕೊನೆಯಲ್ಲಿ ಶಾಪಾಶಯ ವಾಕ್ಯಗಳೊಂದಿಗೆ ಕಂಡರಿಸುತ್ತಿದ್ದರು. ಶಾಸನಗಳನ್ನು ಸಾಮಾನ್ಯವಾಗಿ ಶಿಲೆಯ ಮೇಲೆ ಅಥವಾ ತಾಮ್ರ ಪಟಗಳ ಮೇಲೆ ಕೆತ್ತಿಸಿ/ ಕೊರೆಸುತ್ತಿದ್ದರು. ಅಧಿಕೃತ ಶಾಸನಗಳು ರಾಜಮುದ್ರೆಯನ್ನು ಹೊಂದಿರುತ್ತವೆ. ರಾಜರ ಆಳ್ವಿಕೆಯ ಅನಂತರವೂ ದಾನದತ್ತಿಗಳನ್ನು ಕೊಡುವ ಪದ್ಧತಿ ಮುಂದುವರಿದಂತೆ ಶಾಸನಗಳನ್ನು ಬರೆಸುವ ಪದ್ಧತಿಯೂ ಇತ್ತು. ಸಾಮಂತರಾಜರು, ಪಾಳೆಯಗಾರರು ಇದನ್ನು ಮುಂದುವರಿಸಿ ಕೊಂಡು ಹೋದರು.

ದಾನಗಳ ಬಗೆಗಳು : ಒಂದೊಂದು ಪ್ರದೇಶದಲ್ಲೂ ಒಂದೊಂದು ಬಗೆಯ ದಾನಗಳು ಇದ್ದು, ಅವುಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗಿದೆ. ದಕ್ಷಿಣ ಭಾರತದಲ್ಲಿ ದಾನ ಇನಾಂಗಳೆಂದೂ ಉಂಬಳಿಗಳೆಂದೂ ದತ್ತಿಗಳೆಂದು ಕರೆಯುವರು. ಆಯಾ ವ್ಯಕ್ತಿ, ವಸ್ತು, ವಿಷಯ, ಸಂದರ್ಭಕ್ಕೆ ಸಂಬಂಧಿಸಿದ ಹಾಗೆ ಹಲವು ಬಗೆಯ ದಾನಗಳನ್ನು ನೋಡುತ್ತೇವೆ. ಕೆಲವು ದಾನಗಳ ವಿವರಗಳು ಇಂತಿವೆ.

ದೇವಾದಾಯ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ್ದು ಸಂಸ್ಥೆ, ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಮತ್ತು ಪೋಷಣೆ ಇತ್ಯಾದಿ ಉದ್ದೇಶಗಳಿಗೆ ಕೊಟ್ಟ ಹಿಡುವಳಿಗಳನ್ನು ದೇವದಾಯಗಳೆನ್ನುವರು.

ಧರ್ಮಾದಾಯ : ಮಠಾಧೀಶರು, ಶ್ರೇಷ್ಠವ್ಯಕ್ತಿಗಳು, ಜಗದ್ಗುರುಗಳು, ಸಾಧುಸಂತರು ಮೊದಲಾದವರಿಗೆ ಕೊಟ್ಟ ಹಿಡುವಳಿಗಳು.

ಬ್ರಹ್ಮಾದಾಯ : ಪಂಡಿತರಿಗೆ, ಅಗ್ರಹಾರಗಳಿಗೆ ತೆರಿಗೆ ರಹಿತವಾಗಿ ಇಲ್ಲವೆ ಅಲ್ಪಪ್ರಮಾಣದ ತೆರಿಗೆ ವಿಧಿಸಿ ವಂಶಪಾರಂಪರ್ಯವಾಗಿ ಅನುಭೋಗಿಸಲು ಕೊಟ್ಟಂತಹ ಭೂಹಿಡುವಳಿಗಳು.

ಸೇವಾ ಉಂಬಳಿಗಳು : ಗ್ರಾಮದಲ್ಲಿ ಸೇವೆಸಲ್ಲಿಸುವ ಶಾನುಭೋಗ, ಪಟೇಲ, ಕುಲಕರ್ಣಿ, ಗೌಡ, ತೋಟಿ, ತಳವಾರ, ನೀರುಗಂಟಿ ಮೊದಲಾದವರು ಮಾಡುವ ಸೇವೆಯ ಪ್ರತಿಫಲವಾಗಿ ಸರ್ಕಾರ ಕೊಡುತ್ತಿದ್ದ ಜಹಗೀರುಗಳು.

ಆಯಗಾರರ ಇನಾಮುಗಳು : ಗ್ರಾಮದಲ್ಲಿ ವಿವಿಧ ರೀತಿಯ ಸೇವೆ ಸಲ್ಲಿಸುತ್ತಿದ್ದ ಕಸಬುದಾರರಾದ ಬಡಗಿ, ಕಂಬಾರ, ನಾಯಿಂದ, ಅಗಸ, ಕುಂಬಾರ ಮೊದಲಾದವರಿಗೆ ಕೊಡುತ್ತಿದ್ದಂಥವು.

ಜಹಗೀರು ಇನಾಮುಗಳು : ರಾಜನಿಗೆ ವಿವಿಧ ಬಗೆಯ ಸೇವೆ ಸಲ್ಲಿಸಿದವರಿಗೆ ಕೊಡುತ್ತಿದ್ದ ಹಿಡುವಳಿಗಳು. ರಾಜನಿಗೆ ಆಪತ್ಕಾಲದಲ್ಲಿ ರಕ್ಷಣೆ ಕೊಟ್ಟವರು, ಯುದ್ಧದ ಸಂದರ್ಭದಲ್ಲಿ ಶತ್ರುಗಳ ಬಗ್ಗೆ ಸುಳಿವು ಕೊಟ್ಟವರು, ಸೈನ್ಯ ಸಹಾಯ ಒದಗಿಸಿದವರು, ಪ್ರಾಣದ ಹಂಗು ತೊರೆದು ಯುದ್ಧದಲ್ಲಿ ಹೋರಾಡಿದವರು - ಇಂಥವರಿಗೆ ರಾಜ ಕೆಲವು ಅಥವಾ ಒಂದು ಹಳ್ಳಿಯನ್ನು ಜಹಗೀರಾಗಿ ಕೊಡುತ್ತಿದ್ದಂಥವು.

ಬ್ರಿಟಿಷರ ಕಾಲದ ಇನಾಮುಗಳು : ರಾಜರ ಆಳ್ವಿಕೆಯ ಅನಂತರ ಬ್ರಿಟಿಷರ ಆಡಳಿತದಲ್ಲಿ ಪಾಳೆಯಗಾರರು ಮತ್ತು ಗ್ರಾಮಲೆಕ್ಕಿಗರು ಮಾಡುತ್ತಿದ್ದ ಸೇವೆಗಾಗಿ ಕೆಲವು ಷರತ್ತುಗಳ ಆಧಾರದ ಮೇಲೆ ಇನಾಮುಗಳನ್ನು ಕೊಡುತ್ತಿದ್ದರು.

ಜೀವನಾಂಶ ಇನಾಮುಗಳು : ಬ್ರಿಟಿಷ್ ಸರ್ಕಾರ ವಶಪಡಿಸಿಕೊಂಡ ಸಂಸ್ಥಾನಗಳಲ್ಲಿಯ ಪಾಳೆಯಗಾರರ, ದೇಸಾಯಿಗಳ, ಸಂಸ್ಥಾನದ ಒಡೆಯರ ವಂಶಸ್ಥರಿಗೆ ಅವರಿಂದ ವಶಪಡಿಸಿಕೊಂಡ ಪ್ರದೇಶಕ್ಕೆ ಬದಲಾಗಿ ಕೆಲವು ಜಾಗೀರುಗಳನ್ನು ಷರತ್ತು ಬದ್ಧವಾಗಿ ಕೊಡುತ್ತಿದ್ದ ಇನಾಮುಗಳಿವು.

ಕಾಲಕ್ರಮೇಣ ಕೆಲವು ಸ್ವಾರ್ಥವ್ಯಕ್ತಿ, ಸಂಘ - ಸಂಸ್ಥೆಗಳು, ಕೃತಕ ದಾಖಲೆಗಳನ್ನು ಸೃಷ್ಟಿಸಿ ಇನಾಮುಗಳನ್ನು ದುರುಪಯೋಗ ಪಡಿಸಿಕೊಳ್ಳಲು ಆರಂಭಿಸಿದರು. ಆದುದರಿಂದ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಸಂದೇಹಾಸ್ಪದವಾದ ಹಾಗೂ ನಿರ್ದಿಷ್ಟದಾಖಲೆಗಳಿಲ್ಲದ ಇನಾಮುಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಜೊತೆಗೆ 18ನೇ ಶತಮಾನದ ರಾಜಕೀಯ ಅರಾಜಕತೆಯ ಪರಿಣಾಮವಾಗಿಯೂ ಇನಾಮು ವಿಚಾರಗಳಲ್ಲಿ ಅನೇಕ ಗೊಂದಲಗಳು ಸೃಷ್ಟಿಯಾದವು. ಹಿಂದೆ ರಾಜರು ನೀಡಿದ್ದ ದಾಖಲೆಗಳು ನಷ್ಟವಾಗಿ ನಿಜವಾದ ಜಾಗೀರುದಾರರುಗಳಿಗೆ ತೊಂದರೆಯಾಯಿತು.

ಸರ್ಕಾರ ಸಹ ಕೆಲವು ನಿಬಂಧನೆಗಳನ್ನು ವಿಧಿಸಿತು. 18 ಕೊನೆಯ ದಶಕದಲ್ಲಿ ಈ ಬಗೆಯ ಸಮಸ್ಯೆಗಳ ನಿವಾರಣೆಗಾಗಿ ಜಿಲ್ಲಾಧಿಕಾರಿಗಳು ನ್ಯಾಯಾಲಯದಲ್ಲಿ ವಾದವನ್ನು ಹೂಡಿದರು. ಕಂದಾಯ ಅಧಿಕಾರಿಗಳ ಅನುಮತಿಯೊಂದಿಗೆ ಭೂಹಿಡುವಳಿಗಳ ಬೆಲೆಯನ್ನು ನಿರ್ಧರಿಸುತ್ತಿದ್ದರು. ಈ ನಿರ್ಣಯಗಳು ನ್ಯಾಯ ಸಮ್ಮತವಲ್ಲವೆನಿಸಿದಾಗ ಹಿಡುವಳಿದಾರರು ನ್ಯಾಯಾಲಯದಲ್ಲಿ ದಾವೆ ಹೂಡಬೇಕಾಯಿತು. ಇಷ್ಟಾದರೂ ಕೂಡಾ ಸರ್ಕಾರ ಇನಾಮುದಾರರ ಹಕ್ಕನ್ನು ದುರುಪಯೋಗಪಡಿಸಿಕೊಂಡಿದುಕ್ಕಾಗಿ ಹಿಡುವಳಿದಾರರು ಅಸಮಾಧಾನಗೊಂಡರು. ಸರ್ಕಾರಕ್ಕೆ 19ನೇ ಶತಮಾನದ ಪೂರ್ವಾರ್ಧದಲ್ಲಿ ಈ ಅಸಮಾಧಾನಕ್ಕೆ ನಿಯಮಗಳು ಕಾರಣವಲ್ಲವೆಂದು ಅಂದಿನ ವ್ಯವಸ್ಥೆಯೇ ನಿಜವಾದ ಕಾರಣವೆಂದು ಹೇಳಿತು. ತಲತಲಾಂತರಗಳಿಂದ ನಿರಾಯಾಸವಾಗಿ ಅನುಭವಿಸಿಕೊಂಡ ಬಂದ ಜಮೀನ್ದಾರಿ ಹಕ್ಕಿನ ಕಾರಣದಿಂದ ಅನೇಕರು ದಂಗೆಯೆದ್ದರು. ನಿರ್ಗತಿಕರಾದ ಜಮೀನ್ದಾರರು, ಹಠಾತ್ತನೆ ಸಂಭವಿಸಿದ ಈ ವ್ಯವಸ್ಥೆಯಿಂದ ಕಂಗಾಲಾಗಿ ವಾಮಮಾರ್ಗಗಳನ್ನು ಹಿಡಿದರು.

ಜಮೀನ್ದಾರಿ ವ್ಯವಸ್ಥೆ ಅಧಿಕಗೊಂಡ ಪರಿಣಾಮವನ್ನು ಅಂದಿನ ಸರಕಾರ ಬಹು ಕಟ್ಟು ನಿಟ್ಟಿನ ನಿಯಮಗಳಿಗೆ ಒಳಪಡಿಸಿತು. ಕೆಲವು ಗವರ್ನರ್ ಜನರಲ್‌ಗಳು ಜಮೀನ್ದಾರರು ಹೊಂದಿದ್ದ ಭೂಮಿಯ ಹಕ್ಕನ್ನು ಕುರಿತು ತನಿಖೆ ನಡೆಸಿದರು. ಪರಿಣಾಮವಾಗಿ ಸಹಸ್ರಾರು ಜಮೀನುದಾರರ ಹಿಡುವಳಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಇದು ಅಂದಿನ ಆರ್ಥಿಕ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರಿತು. ಕೆಲವು ಸಂಸ್ಥಾನಗಳು ಅಸಮಾಧಾನಗಳ ನೆಲೆಯಾದವು. ಕೆಲವು ಅಧಿಕಾರಿಗಳಂತು ಅತ್ಯಂತ ನಿಕೃಷ್ಟವಾಗಿ ನಡೆದುಕೊಂಡರು. ಎಲ್ಲೆಲ್ಲಿಯೂ ಹರತಾಳ ಆರಂಭವಾಯಿತು. ಅಷ್ಟೇ ಅಲ್ಲ ಈ ಇನಾಮು ದಾರಿ ಪದ್ಧತಿಯ ಅಂತಿಮ ಸ್ವರೂಪ ಭಾರತೀಯ ಸ್ವಾತಂತ್ರ್ಯ ಚಳುವಳಿಗೂ ಮೂಲ ಪ್ರೇರಣೆಯಾಯಿತು.

ವಿ.ಕೆ.; ಎನ್.ಆರ್.

ಇಪ್ಪೆಮರ ಎಣ್ಣೆ ಮತ್ತು ಚೌಬೀನೆಗಾಗಿ ಬೆಳೆಸುವ ಮರವಿದು. ಸಪೋಟೇಸೀ ವರ್ಗಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಬ್ಯಾಸ್ಸಿಯಾಸಿನ್ ಮಧೂಕಾ. ಇದರ ಮೂಲಸ್ಥಳ ಭಾರತ. ಬೀಜದಿಂದ ಸಸ್ಯಾಭಿವೃದ್ಧಿ ಮಾಡುವರು. ಸಸಿ ನಿರ್ದಿಷ್ಟ ಎತ್ತರ ಬೆಳೆದ ಮೇಲೆ ಪ್ರತ್ಯೇಕವಾಗಿ ಬೆಳೆಸುವುದುಂಟು. ಸುಮಾರು 2-3 ಅಡಿ ಎತ್ತರ ಬೆಳೆದ ಸಸಿಗಳನ್ನು ಗೊತ್ತು ಪಡಿಸಿದ ಜಾಗದಲ್ಲಿ ಗಿಡದಿಂದ ಗಿಡಕ್ಕೆ 15 ಅಡಿ ಅಂತರವಿರುವಂತೆ ಗುಂಡಿ ತೋಡಿ ಸಸಿ ನೆಡುತ್ತಾರೆ. ಗಿಡ ನಿಲ್ಲಲು ಕಡ್ಡಿಯನ್ನು ಆಧಾರವಾಗಿ ನೆಟ್ಟು ಪ್ರಾಣಿಗಳಿಂದ ರಕ್ಷಿಸಲು ಮುಳ್ಳನ್ನು ಕಟ್ಟುವರು. ಇದು ಉಷ್ಣವಲಯ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ದಕ್ಷಿಣಭಾರತದಲ್ಲಿ ಹೇರಳವಾಗಿ ಬೆಳೆಯುತ್ತಾರೆ.

ಸಸ್ಯಸ್ವರೂಪ : 25-55 ಅಡಿ ಎತ್ತರ ಬೆಳೆಯುತ್ತದೆ. ಇದರ ತೊಗಟೆ ಮಂದವಾಗಿರುತ್ತದೆ. ನೇರವಾಗಿ ಬೆಳೆಯುವ ಇದು ಮೇಲಕ್ಕೆ ಹೋದಂತೆ ಕವಲೊಡೆಯುತ್ತದೆ. ಗುಂಪುಗಳಾಗಿ ಗಿಣ್ಣುಗಳ ಮೇಲೆ ಜೋಡಿಸಿದಂತಿರುವ ಸರಳ ಮಾದರಿಯ ಎಲೆಗಳು ಇದರವು. ಹೂಗೊಂಚಲು ಗುಂಪಾಗಿದ್ದರೂ ಒಂದೊಂದು ಹೂವಿಗೂ ಪ್ರತ್ಯೇಕ ತೊಟ್ಟುಗಳಿರುತ್ತವೆ. ಪುಷ್ಪ ಪತ್ರ 4-5, ದಳಗಳು 8-10, ಕೇಸರಗಳ ಸಂಖ್ಯೆ 15-30, ಅನ್ಯ ಪರಾಗಸ್ಪರ್ಶದಿಂದ ಸಸ್ಯಾಭಿವೃದ್ಧಿಯಾಗುತ್ತದೆ. ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಹೂಬಿಟ್ಟು ಜೂನ್ - ಆಗಸ್ಟ್‌ನಲ್ಲಿ ಹಣ್ಣು ನೀಡುತ್ತದೆ. ಪ್ರತಿ ಹಣ್ಣು ಏಕಬೀಜದಿಂದ ಕೂಡಿರುತ್ತದೆ.

ಉಪಯೋಗಗಳು : ಇದರಲ್ಲಿ ಹುಟ್ಟುವ ಈಸ್ಟ್‌ಗಳು ಹೂವಿನ ಮಧುವನ್ನು ಮಾದಕ ದ್ರವ್ಯವನ್ನಾಗಿ ಪರಿವರ್ತಿಸುತ್ತವೆ. ಇದು ಮೂಲ ವ್ಯಾಧಿಗೆ ಔಷಧಿ. ಸೋಪು, ವನಸ್ಪತಿ, ಗ್ಲಿಸರಿನ್ ತಯಾರಿಕೆಗೆ, ದೀಪಕ್ಕೆ ಇದರ ಬೀಜದಿಂದ ತಯಾರಿಸಿದ ಎಣ್ಣೆ ಉಪಯುಕ್ತ. ಈ ಮರದ ಬಣ್ಣ ಕೆಂಪು ಮಿಶ್ರಿತ ಬೂದು. ಇದರ ತೊಗಟೆಯಲ್ಲೂ ಔಷಧೀಯ ಗುಣಗಳಿವೆ. ಮರ ಬಲಿತಂತೆಲ್ಲ ಬಲು ಗಟ್ಟಿ. ದೀರ್ಘ ಕಾಲ ಬಾಳಿಕೆ ಬರುವ ಇದರ

ಚೌಬೀನೆ, ಪೀಠೋಪಕರಣಗಳ ತಯಾರಿಕೆಗೆ ಬರುತ್ತದೆ. ಎಲೆ, ಹೂ, ಕಾಯಿ, ಸಿಪ್ಪೆ ಸಂಗ್ರಹಿಸಿ ಸಸ್ಯಗಳ ಬುಡದಲ್ಲಿ ಹರಡುವುದರಿಂದ ಮಳೆಗಾಲದಲ್ಲಿ ತೇವಾಂಶವನ್ನು ಹಿಡಿದಿಟ್ಟುಕೊಂಡು ಸಸಿಯ ಪೋಷಣೆಗೆ ಸಹಕಾರಿಯಾಗುತ್ತದೆ.

ವಿ.

ಇಬ್ಬುಡಲು ಹಣ್ಣು ಕರಾವಳಿ ಭಾಗದಲ್ಲಿರುವ ಬಳ್ಳಿಯಲ್ಲಿ ಬೆಳೆಯುವ ಒಂದು ಬಗೆಯ ಹಣ್ಣು. ಹೊನ್ನಾವರದ ಆಸುಪಾಸಿನಲ್ಲಿ ಇದನ್ನು ಬೆಳೆಯುವರು. ಇಬ್ಬಳೆ, ಚಿಬ್ಬಳು, ಮೆಕ್ಕಿ ಹಣ್ಣು ಎಂದು ಸ್ಥಳೀಯವಾಗಿ ಕರೆಯುವುದುಂಟು. ಆರಂಭದಲ್ಲಿ ತಿಳಿ ಹಸುರು ಇದ್ದು ಬಲಿತ ಮೇಲೆ ತಿಳಿ ಹಳದಿ ಬಣ್ಣಕ್ಕೆ ಬಳ್ಳಿಯಲ್ಲಿದ್ದಾಗಲೇ ಬಿರಿಯುತ್ತದೆ. ಸುವಾಸನಾಭರಿತವಾದ ಈ ಹಣ್ಣು ರಸಾಯನ, ಪಾನಕಕ್ಕೆ ಬಳಕೆಯಾಗುತ್ತದೆ. ಇದರ ಬೀಜವನ್ನು ಅರೆದು ಬೇಸಗೆ ಕಾಲದಲ್ಲಿ ಪಾನಕ ಮಾಡಿ ಕುಡಿಯುವುದರಿಂದ ದೇಹ ತಂಪಾಗುತ್ತದೆಂದು ಹೇಳುವರು.

ಕೃಷಿ ಮಾಡುವ ಬಗೆ : 25 ಅಡಿ ಉದ್ದ 2 ಅಡಿ ಅಗಲ, ಅರ್ಧ ಅಡಿ ಎತ್ತರದ ಮಡಿಗಳನ್ನು ಮಾಡುವರು. ಇದನ್ನು ಓಳಿ ಎಂದು ಕರೆಯುತ್ತಾರೆ. ಎರಡು ಅಡಿ ಅಂತರದಲ್ಲಿ ಸಣ್ಣ ಗುಳಿ ಮಾಡಿ ಕೊಟ್ಟಿಗೆ ಗೊಬ್ಬರ ಹಾಕಿ ಬೀಜ ಬಿತ್ತುವರು. ಪ್ರತಿ ಹದಿನೈದು ದಿನಕ್ಕೊಮ್ಮೆ ಎರಡು ಸಲ ಗೊಬ್ಬರ ಹಾಕುವರು. ಗಿಡ ಬಳ್ಳಿಯಾಗಿ ಹಬ್ಬಲು ಪ್ರಾರಂಭಿಸಿದ ಮೇಲೆ ಒಂದು ಸಲ ಮಾತ್ರ ಒಂದೊಂದು ಗಿಡಕ್ಕೂ ಒಂದು ಹಿಡಿ ಗೊಬ್ಬರ ಹಾಕಿ ನಿತ್ಯ ನೀರುಣಿಸುವರು. ಹಣ್ಣು ಬಲಿತ ಮೇಲೆ ಕೊಯ್ಲು ಮಾಡುವರು. ಹಿಂದೆ ಸೆಪ್ಟೆಂಬರ್‌ನಿಂದ ನವೆಂಬರ್ ತನಕ ಮಾತ್ರ ಹಣ್ಣು ದೊರೆಯುತ್ತಿದ್ದವಂತೆ. ಇತ್ತೀಚೆಗೆ ಕೆಲವರು ಸ್ವಂತ ಪರಿಶ್ರಮದಿಂದ ಫೆಬ್ರವರಿಯಿಂದ ಏಪ್ರಿಲ್ ತನಕ ಕೂಡ ಬೆಳೆ ತೆಗೆಯುವರು. ಒಂದು ಎಕರೆಗೆ ಸು. 3000 ಹಣ್ಣುಗಳು ಸಿಗುತ್ತವೆ. ಇದಕ್ಕೆ ಯಾವುದೇ ರೋಗ ಬಾಧೆಗಳು ಇರುವುದಿಲ್ಲ.

ಬಿ.ವಿ.

ಇಬ್ಬನಿ ಹವಾಗುಣದ ವಿಶಿಷ್ಟ ಅಂಶಗಳಲ್ಲಿ ಇಬ್ಬನಿ ಪ್ರಮುಖವಾದದ್ದು. ಇದು ನೀರಿನ ಹನಿಗಳ ರೂಪದಲ್ಲಿರುತ್ತದೆ. ಪ್ರಾತಃ ಕಾಲ ಅಥವಾ ಸಾಯಂಕಾಲದಲ್ಲಿ ಗಿಡ-ಮರಗಳು, ಹುಲ್ಲುಗಾವಲುಗಳ ಮೇಲೆ ಬೀಳುವ ಸೂರ್ಯಕಿರಣಗಳನ್ನು ಪ್ರತಿಫಲಿಸಿ ವಕ್ರೀಭವಿಸಿ ವರ್ಣರಂಜಿತ ದೃಶ್ಯ ಬೀರುವ ಇಬ್ಬನಿಗಳ ಹಾಸು ನೋಡಲು ಬಲು ಸುಂದರ. ಗಾಳಿಯಲ್ಲಿರುವ ನೀರಿನ ಆವಿ ರಾತ್ರಿ ವೇಳೆಯಲ್ಲಿ ಸಾಂದ್ರೀಕರಿಸಿ ಇಬ್ಬನಿಯಾಗುತ್ತದೆ.

ರಚನೆ : ಇಬ್ಬನಿಯು ಭೂಮೇಲ್ಮೈನ ಉಷ್ಣಾಂಶಕ್ಕೆ ಸಂಬಂಧಿಸಿದ್ದು. ಇದು ಬೇಸಗೆಯ ಅಪರಾರ್ಧದಲ್ಲಿ ಭೂಮೇಲ್ಮೈಯಲ್ಲಿ ಬಹುಬೇಗ ರೂಪ ಪಡೆಯುತ್ತದೆ. ವಿಕಿರಣ ಪ್ರಕ್ರಿಯೆಯ ಮೂಲಕ ನಿರಂತಕವಾಗಿ ಆಕಾಶಕ್ಕೆ ಒಡ್ಡಿರುವ ವಸ್ತುಗಳು ಹೊರ ಮೈಯಿಂದ ಉಷ್ಣವನ್ನು ಕಳೆದುಕೊಳ್ಳುವುವು. ಎಲೆ, ಹೂದಳ ಮತ್ತು ಹುಲ್ಲಿನ ಗರಿ ಇವು ಉಷ್ಣವನ್ನು ಕಳೆದುಕೊಂಡು ಸುತ್ತಲಿನ ಗಾಳಿಯನ್ನು ತಂಪುಗೊಳಿಸುತ್ತವೆ. ಇಂತಹ ತಂಪಾದ ಗಾಳಿಯ ಉಷ್ಣತೆ ಇಬ್ಬನಿ ಬಿಂದುವಿಗಿಂತ ಕಡಿಮೆ ಇದ್ದರೆ ನೀರಾವಿ ಸಾಂದ್ರೀಕರಿಸಿ ಎಲೆ ದಳ ಮತ್ತು ಗರಿಗಳ ಮೇಲೆ ಹನಿ - ಹನಿಯಾಗಿ ರೂಪ ಪಡೆಯುತ್ತದೆ. ಶುಭ್ರ ಆಕಾಶ ಮತ್ತು ಸ್ತಬ್ಧ ಇಲ್ಲವೇ ಮಂದ ಚಲನೆಯ ವಾಯುಮಂಡಲ ಇವು ಇಬ್ಬನಿಯ ಬೆಳವಣಿಗೆಗೆ ಸಹಕಾರಿಗಳು. ಆಕಾಶದಲ್ಲಿ ಮೋಡಗಳಿದ್ದರೆ ಅಥವಾ ಗಾಳಿ ಬಲವಾಗಿ ಬೀಸುತ್ತಿದ್ದರೆ ಇಬ್ಬನಿ ಉಂಟಾಗುವುದಿಲ್ಲ. ವಿಕಿರಣ ಅಥವಾ ವಿಸರಣೆಯಿಂದ ಉಂಟಾಗುವ ಉಷ್ಣನಷ್ಟವನ್ನು ಮೋಡಗಳು ತಡೆದು ಭೂಮಿಯ ಮೇಲಿನ ಉಷ್ಣತೆಯನ್ನು ಕಾದಿಡುತ್ತವೆ. ಬೀಸುವ ಗಾಳಿ ಉಷ್ಣತೆಯನ್ನು ಎಲ್ಲೂ ಇಬ್ಬನಿ ಬಿಂದುವಿಗಿಂತ ಕೆಳಗೆ ಇಳಿಯಲು ಬಿಡುವುದಿಲ್ಲ.

ಪ್ರಯೋಗಗಳು : ಪ್ರಾಚೀನ ಕಾಲದ ಜನ ಇಬ್ಬನಿ ಆಕಾಶದಿಂದ ಬೀಳುತ್ತದೆಂದು ತಿಳಿದಿದ್ದರು. ಅರಿಸ್ಟಾಟಲ್ ಕೂಡ ಬೆಳಗಿನ ವೇಳೆಯಲ್ಲಿ ಕಾದು ಆವಿಯಾದ ನೀರು ರಾತ್ರಿ ವೇಳೆಯಲ್ಲಿ ಸಾಂದ್ರೀಕರಿಸಿ ಇಬ್ಬನಿ ಇಲ್ಲವೆ ಮಂಜಾಗಿ ಬೀಳುತ್ತದೆ ಎಂದು ಹೇಳಿದ್ದಾನೆ. ಇಬ್ಬನಿಗೂ ವಸ್ತುಗಳ ತೆರೆದ ಹೊರ ಮೈಗಳ ವಿಸರಣೆಗೂ ಇರುವ ಸಂಬಂಧವನ್ನು ಗುರುತಿಸಿದವರಲ್ಲಿ ಪ್ರಾಯಶಃ ಲೂಯಿಕಾನ್‌ಸ್ಟೆಂಟ್ ಪ್ರಿವಾಸ್ಟ್ (1792) ಎಂಬ ವಿಜ್ಞಾನಿಯೇ ಮೊದಲಿಗ. ಇಬ್ಬನಿ ಸೃಷ್ಟಿಯ ಬಗ್ಗೆ ಆಮೂಲಾಗ್ರವಾಗಿ ಪ್ರಯೋಗಗಳನ್ನು ನಡೆಸಿದವರಲ್ಲಿ ಮೊದಲಿಗ ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಯ ವೈದ್ಯ ಚಾರ್ಲ್ಸ್ ವೇಲ್ಸ್ (1814). ಗಾಳಿ ಮೆಲ್ಲಗೆ ಬೀಸುತ್ತಿದ್ದರೆ ಇಬ್ಬನಿಯ ಬೆಳವಣಿಗೆ ತ್ವರಿತವಾಗಿ ಆಗುತ್ತದೆಂಬುದನ್ನು ಈತ ಚೆನ್ನಾಗಿ ತೋರಿಸಿದನು. ಜಾನ್ ಆಟ್ಕಿನ್ (1885) ಎಂಬ ವಿಜ್ಞಾನಿ ಇಬ್ಬನಿಯಂತೆ ಬೇರಿನ ಒತ್ತಡದಿಂದ ಎಲೆಗಳ ಮೇಲೆ ಒಮ್ಮೊಮ್ಮೆ ನೀರಿನ ಹನಿಗಳು ಮೂಡುವುದನ್ನು ಗುರುತಿಸಿದನು.

ವಿಧಗಳು : ಇಬ್ಬನಿಯನ್ನು ಅದರ ರಚನೆಯ ಹಿನ್ನೆಲೆಯಲ್ಲಿ ಇಬ್ಬನಿ ಪಾತ (ಡ್ಯೂಫಾಲ್), ಬಟ್ಟಿ ಇಬ್ಬನಿ (ಡಿಸ್ಟಿಲ್ಲೇಷನ್) ಎಂದು ಎರಡು ವಿಧಗಳಲ್ಲಿ ಗುರುತಿಸಬಹುದು.

ವಾಯುಮಂಡಲದ ಮೇಲ್ಭಾಗದಲ್ಲಿ ಅದರ ಒತ್ತಡ ಹೆಚ್ಚಾಗಿದ್ದರೆ ನೀರಾವಿ ಅಧೋಮುಖವಾಗಿ ವಿಸರಣವಾಗಿ ಇಬ್ಬನಿಯ ಬೆಳವಣಿಗೆಗೆ ಪೂರಕವಾಗುತ್ತದೆ ಇಲ್ಲವೆ ತೇವವಾಗಿರುವ ನೆಲದ ಉಷ್ಣತೆ ಎಲೆಗಳ ಮೇಲ್ಮೈಯ ಉಷ್ಣತೆಗಿಂತ ಹೆಚ್ಚಾಗಿದ್ದರೆ ನೀರಾವಿ ಊರ್ಧ್ವಮುಖವಾಗಿ ವಿಸರಣವಾಗಿ ಇಬ್ಬನಿಯು ಬೆಳವಣಿಗೆಗೆ ಪೂರಕವಾಗಿರುತ್ತದೆ. ಅಧೋಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಇಬ್ಬನಿಪಾತ ಎಂದೂ ಊರ್ಧ್ವಮುಖವಾಗಿ ವಿಸರಣವಾದ ನೀರಿನ ಆವಿಯಿಂದ ಬೆಳೆದ ಇಬ್ಬನಿಯನ್ನು ಬಟ್ಟಿ ಇಬ್ಬನಿ ಎಂದು ಕರೆಯುವರು.

ಇಬ್ಬನಿ ಬಿಂದು : ನೀರಾವಿ ಉಷ್ಣತೆಗೆ ಅನುಗುಣವಾಗಿ ಹನಿಯಾಗಿ ಘನೀಕರಣ ಹೊಂದುತ್ತದೆ. ರೂಪಪಡೆಯುವ ಹನಿಗಳ ಉಷ್ಣತೆಯನ್ನು ಇಬ್ಬನಿ ಬಿಂದು ಎನ್ನುವರು. ಭೂಮೇಲ್ಮೈ ಉಷ್ಣಾಂಶವನ್ನು ಕಳೆದುಕೊಂಡಾಗ ಇಬ್ಬನಿ ಬಿಂದುವನ್ನು ತಲುಪುತ್ತದೆ. ವಾಯುಮಂಡಲದ ನೀರಾವಿಯು ಸಣ್ಣ - ಸಣ್ಣ ಹನಿಗಳಾಗಿ ಭೂಮೇಲ್ಮೈಯ ಘನೀಕರಣ ಹೊಂದುತ್ತದೆ.

ಅಳತೆ : ಇಬ್ಬನಿಯನ್ನು ಅಳೆಯುವುದು ಪ್ರಯಾಸದ ಕೆಲಸ. ಒಂದು ರಾತ್ರಿಯಲ್ಲಿ ಸುಮಾರು 1/50" ಇಬ್ಬನಿ ಬೀಳುವುದುಂಟು. ಸಮಶೀತೋಷ್ಣ

ಮತ್ತು ಉಷ್ಣವಲಯಗಳ ಹವಾಗುಣ ಇಬ್ಬನಿಯ ಸೃಷ್ಟಿಗೆ ಪ್ರೇರಕವಾಗಿದೆ. ಶೀತವಲಯಗಳ ಇಬ್ಬನಿ ಬಲು ಅಪೂರ್ವ. ಯಾವುದೇ ಪ್ರದೇಶದಲ್ಲಿ ಬೀಳುವ ವಾರ್ಷಿಕ ಇಬ್ಬನಿಯ ಮೊತ್ತ ಆ ಪ್ರದೇಶದ ಸರಾಸರಿ ಉಷ್ಣತೆ ಮತ್ತು ಗಾಳಿಯ ಆರ್ದ್ರತೆಗಳನ್ನವಲಂಬಿಸಿದೆ. ಚಳಿ ಇಲ್ಲವೆ ನಿರಾರ್ದ್ರತೆ ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸುಮಾರು ಅರ್ಧ ಅಂಗುಲ ಮತ್ತು ಸಾಮಾನ್ಯ ಆರ್ದ್ರತೆ ಇದ್ದು ಬಿಸಿ ಹವಾಗುಣವಿರುವ ಪ್ರದೇಶಗಳಲ್ಲಿ ಸುಮಾರು ಮೂರು ಅಂಗುಲ ಇಬ್ಬನಿ ಬೀಳುತ್ತದೆ.

ಮಹತ್ವ : ಜಗತ್ತಿನ ಸಾಕಷ್ಟು ದೇಶಗಳಲ್ಲಿ ವಾರ್ಷಿಕ ಮಳೆ ಪ್ರಮಾಣ ತುಂಬಾ ಕಡಿಮೆ. ಅಂತಹ ಕಡೆಗಳಲ್ಲಿ ಇಬ್ಬನಿಯಿಂದಲೇ ಬೆಳೆಯುತ್ತಾರೆ. ಒಣ ಹವೆ ಇರುವ ಕಡೆ ಲಿಚೆನ್ (ಕಲ್ಲು ಹೂ) ಮತ್ತು ಪೈನ್ ಮೊಳಕೆ ತರಹದ ಸಸ್ಯಗಳನ್ನು ಇಬ್ಬನಿಯಿಂದ ಬೆಳೆಯುತ್ತಾರೆ. ಮರುಭೂಮಿಯ ಮರಗಳು ಬದುಕಿರುವುದು ಇಬ್ಬನಿಯಿಂದಲೇ. ಇಬ್ಬನಿಯಿಂದ ಅನುಕೂಲದಂತೆ ಪ್ರತಿಕೂಲವೂ ಇದೆ. ಗಿಡಗಳ ಮೇಲೆ ಶಿಲೀಂಧ್ರಗಳಿಂದ ರೋಗಕಾರಕಗಳಿಗೆ ಆವಾಸಸ್ಥಾನವನ್ನು ಒದಗಿಸುತ್ತದೆ. ಹಲವು ಕಡೆ ಇದನ್ನುಂಡು ಬೆಳೆಯುವ ಅಣಬೆ ಮತ್ತು ಕಳೆ ಉಪಯುಕ್ತ ಗಿಡಮರಗಳಿಗೆ ಹಾನಿಯನ್ನುಂಟು ಮಾಡುತ್ತವೆ.

ಕೃತಕ ಕೊಯ್ಲು : ಮಾನವ ನಿರ್ಮಿತ ಹಲವಾರು ಪುರಾತನ ಸಾಧನಗಳು, ಉಕ್ರೇನಿನ ದೊಡ್ಡ-ದೊಡ್ಡ ಕಲ್ಲಿನ ಕಟ್ಟಡಗಳು, ದಕ್ಷಿಣ ಇಂಗ್ಲೆಂಡಿನ ಮಧ್ಯಕಾಲೀನ ಇಬ್ಬನಿ ಕೊಳ (ಡ್ಯೂ ಪಾಂಡ್) ಲ್ಯಾಜರೋಟ್ ಪ್ರದೇಶದಲ್ಲಿ ಜ್ವಾಲಾಮುಖಿಯ ಕಲ್ಲುಗಳು ಇಬ್ಬನಿ ಸಂಗ್ರಹಿಸುವ ಸಾಧನಗಳಾಗಿದ್ದವು. ಪ್ರಸ್ತುತದಲ್ಲಿ ಅಂತಾರಾಷ್ಟ್ರೀಯ ಇಬ್ಬನಿ ಸದುಪಯೋಗ ಸಂಘಟನೆಯು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದೆ.

ದೊಡ್ಡ ಪ್ರಮಾಣದಲ್ಲಿ ಇಬ್ಬನಿ ಕೊಯ್ಲಿನ ಪದ್ಧತಿಯನ್ನು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಅಹಮದಾಬಾದ್, ಸಹಭಾಗಿತ್ವದಲ್ಲಿ ಕರಾವಳಿಯ ಅರೆ ಶುಷ್ಕ ಪ್ರದೇಶವಾದ ಕಛ್‌ನಲ್ಲಿ ಆವಿಷ್ಕರಿಸಿದೆ. ಇಬ್ಬನಿಯ ಸಂಗ್ರಾಹಕಗಳು ಅಕ್ಟೋಬರ್-ಮೇ ತಿಂಗಳಲ್ಲಿ 90 ರಾತ್ರಿಗಳಿಗೆ ಪ್ರತಿ ರಾತ್ರಿ 200 ಲೀ ಇಬ್ಬನಿ ನೀರನ್ನು ಕೊಯ್ಲು ಮಾಡಲು ಸಾಧ್ಯವಿದೆ. 'ಐಐಎಂಎ' ಇಂಟರ್ ನ್ಯಾಷನಲ್ ಆರ್ಗನೈಸೇಷನ್ ಫಾರ್ ಡ್ಯೂ ಯುಟಿಲೈಸೇಷನ್ ಸಂಶೋಧನೆಯ ಪ್ರಯೋಗಾಲಯವು ಕರಾವಳಿ ಅರೆಶುಷ್ಕ ಪ್ರದೇಶಗಳಲ್ಲಿ ನೀರಿಗೆ ಪರ್ಯಾಯವಾಗಿ ಇಬ್ಬನಿಯ ಆವಶ್ಯಕತೆಯನ್ನು ತೋರಿಸಿದೆ.

ಮಾಹಿತಿ :

ಕನ್ನಡ ವಿಶ್ವಕೋಶ ಸಂಪುಟ -2

ಅಂತರ್ಜಾಲದ ಮಾಹಿತಿ

ಆರ್.ಪಿ.ಕೆ.

ಇರುವಂತಿಗೆ ಅಧಿಕ ಸುವಾಸನೆಯುಳ್ಳ ಪೊದೆ ರೂಪದ ಸಸ್ಯ. ಇದರ ವೈಜ್ಞಾನಿಕ ಹೆಸರು ಜಾಸ್ಮಿನಮ್ ಸಂಬಕ್. ಇದರ ತವರು ಭಾರತ. ಪ್ರಪಂಚದ ಉಷ್ಣವಲಯ ಪ್ರದೇಶಗಳಲ್ಲೆಲ್ಲ ಇದು ಬೆಳೆಯುತ್ತದೆ. ಈ ಸಸ್ಯದಲ್ಲಿ ಪ್ರಮುಖವಾಗಿ ನಾಲ್ಕು ವಿಧಗಳು. ಇರುವಂತಿಗೆ ಎರಡು ಸುತ್ತಿನದ್ದಾಗಿದ್ದು ಮೊಗ್ಗು ದುಂಡಗಿರುತ್ತದೆ. 2. ಕೋಲುಮಲ್ಲಿಗೆ ಇದರಲ್ಲಿ ದಳಗಳು ಉದ್ದವಾಗಿದ್ದು ಎರಡು ಸುತ್ತಿರುತ್ತದೆ. 3. ಸೂಜಿಮಲ್ಲಿಗೆ- ಇದು ಒಂದು ಸುತ್ತಿನದು 4. ಏಳುಸುತ್ತಿನ ಮಲ್ಲಿಗೆ. ಇದು ದಪ್ಪಗಿರುವ ಹೂ. ಇವುಗಳ ಪೈಕಿ ಹೆಚ್ಚು ಜನಪ್ರಿಯವಾದದ್ದು ಎರಡು ಸುತ್ತಿನ ಮಲ್ಲಿಗೆ. ಇರವಂತಿಗೆ ಯನ್ನು ತಮಿಳುನಾಡು, ಕರ್ನಾಟಕಗಳಲ್ಲಿ ಹೆಚ್ಚಾಗಿ ಬೆಳೆಸುವರು. ಚಪ್ಪರ ಹಾಕಿಯೂ ಇದನ್ನು ಬೆಳೆಸುವುದುಂಟು. ನಿರ್ದಿಷ್ಟ ಭೂಪ್ರದೇಶದಲ್ಲಿ ವಾಣಿಜ್ಯ ಉದ್ದೇಶಕ್ಕಾಗಿಯೂ ಮನೆಯ ಹಿತ್ತಿಲಿನಲ್ಲೂ, ಹೊಲದ ಬದುಗಳಲ್ಲೂ ಬೆಳೆಸುವುದು ರೂಢಿ.



ಇದರ ಎಲೆಗಳು ಅಂಡಾಕಾರವಾಗಿದ್ದು ಎದುರುಬದುರಾಗಿ ಜೋಡಣೆಗೊಂಡಿರುತ್ತ ಹೂಗಳು ಗೊಂಚಲಾಗಿಯೂ ಬಿಡಿ ಬಿಡಿಯಾಗಿಯೂ ಇರುತ್ತವೆ. ಹೂ ಅಚ್ಚಬಿಳಿ ಬಣ್ಣವಾಗಿದ್ದು ಚೂಪಾಗಿಯೂ ಗುಂಡಾಗಿಯೂ ಇರುತ್ತದೆ. ಬಲಿತ ತುಂಡುಗಳನ್ನು ನೆಟ್ಟು ಬೆಳೆಸಲಾಗುವುದು. ಹೂಗಳು ಬೇಸಗೆ ಮತ್ತು ಮಳೆಗಾಲದಲ್ಲಿ ಹೆಚ್ಚು ಸಿಗುತ್ತವೆ. ಇಳುವರಿ ಹೆಚ್ಚಾಗಲು ಹೂ ಬಿಡುವ ಮೊದಲೇ ಎಲೆಗಳನ್ನು ಕೀಳುತ್ತಾರೆ.

ಪೂಜೆಗೆ, ಮದುವೆ ಮತ್ತಿತರ ಎಲ್ಲ ಸಮಾರಂಭಗಳಲ್ಲಿ ಇದರ ಹಾರ ತುರಾಯಿಗಳನ್ನು ಮಾಡಿ ಬಳಸುವರು. ಸುಗಂಧ ದ್ರವ್ಯ, ಅತ್ತರು, ಸಾಬೂನು, ಎಣ್ಣೆ ಮತ್ತು ಇತರ ಸೌಂದರ್ಯ ಸಾಧನಗಳ ತಯಾರಿಕೆಯಲ್ಲಿ ಇದನ್ನು ಬಳಸಲಾಗುವುದು. ಔಷಧೀಯ ಗುಣಗಳೂ ಇದರಲ್ಲಿವೆ. ಚರ್ಮರೋಗಗಳಿಗೂ ಜ್ವರನಿವಾರಕವಾಗಿಯೂ ಇದರ ಎಲೆಗಳ ಉಪಯೋಗವಿದೆ.

ಎನ್.ಆರ್.

ಈಚಲು ಮರ ಈಚಲು ಮರವು ಪಾಮ್ ಕುಟುಂಬಕ್ಕೆ ಸೇರುತ್ತದೆ. ಇದರಲ್ಲಿ ಐದಾರು ಪ್ರಭೇದಗಳಿವೆ. ತೆಂಗು, ಖರ್ಜೂರದಂತಹ ಮರಗಳು ಈ ಗುಂಪಿಗೆ ಸೇರುತ್ತವೆ. ಈ ಮರವು ಸುಮಾರು 10-16 ಮೀ. ಉದ್ದವಾಗಿ ಬೆಳೆಯುತ್ತದೆ. ಸಮುದ್ರದ ತಳದಿಂದ ಸು. 1500 ಮೀ. ಉದ್ದವಾಗಿ ಬೆಳೆಯಬಲ್ಲದು ಸ್ವಾಭಾವಿಕವಾಗಿ ಬೆಳೆಯುವ ಇದನ್ನು ಬೀಜ ಹಾಕಿ ಬೆಳೆಸಬಹುದಾದರೂ ಅನುಸರಿಸಿರುವುದು ತುಂಬಾ ಕಡಿಮೆ.

ಈ ಮರಗಳು ಕವಲೊಡೆಯದೆ ನೇರವಾಗಿ ಬೆಳೆಯುತ್ತವೆ. ಎಲೆಗಳು ಮರದ ತುದಿಯಲ್ಲಿ 3 ರಿಂದ 5 ಮೀ. ಉದ್ದವಾಗಿರುತ್ತದೆ. ತೆಂಗಿನ ಮರದ ಗರಿಯನ್ನೇ ಈಚಲು ಮರದ ಗರಿಯೂ ಹೋಲುತ್ತದೆ. ಒಂದು



ಪ್ರಭೇದದಲ್ಲಿ ಮಾತ್ರ ಕಾಂಡವು ನೆಲದೊಳಗಿದ್ದರೆ ಉಳಿದ ಪ್ರಭೇದಗಳಲ್ಲಿ ಎಲೆಗಳ ತೊಟ್ಟಿನ ತಳಭಾಗದಲ್ಲಿ ಮುಚ್ಚಿರುತ್ತದೆ. ಬೀಜವು ಮೊಳಕೆಯೊಡೆದು ಸಸಿಯಾಗುತ್ತದೆ. ಹೂವುಗಳು ಗಂಡು ಮತ್ತು ಹೆಣ್ಣು ಎಂದು ಎರಡು ರೀತಿಯಲ್ಲಿರುತ್ತವೆ. ಸಾಮಾನ್ಯವಾಗಿ ಗಂಡು ಹೂವು ಬಿಳಿ ಬಣ್ಣದಲ್ಲಿದ್ದು, ಹೆಣ್ಣು ಹೂವು ಹಸುರು ಬಣ್ಣವನ್ನು ಹೊಂದಿರುತ್ತವೆ. ಹೂವುಗಳು ಅರಳಿದ ಬಳಿಕ ಪರಾಗ ಸ್ಪರ್ಶದಿಂದ ಕಾಯಿಗಳಾಗುತ್ತವೆ.

ಈ ಮರಗಳು ಸಾಮಾನ್ಯವಾಗಿ ನೀರು ಜಿನುಗುವ ಪಾಳು ಭೂಮಿಯಲ್ಲಿ ಬೆಳೆಯುತ್ತವೆ. ಭಾರತದ ಎಲ್ಲಾ ರಾಜ್ಯಗಳಲ್ಲೂ ಬೆಳೆದರೂ ರಾಜಸ್ತಾನದ ಮರಳುಗಾಡು ಪ್ರದೇಶ, ಗುಜರಾತ್, ಪಂಜಾಬ್ ಹಾಗೂ ಕರ್ನಾಟಕದ ತುಮಕೂರು, ಚಿತ್ರದುರ್ಗ ಹಾಗೂ ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಕಾಣಬಹುದು. ಬಿಗಿಯಾಗಿ ಇರದ ಸಡಿಲ ಭೂಮಿ ಈ ಬೆಳೆಗೆ ಯೋಗ್ಯ. ಬೀಜ ಬಿದ್ದ ಸ್ಥಳದಲ್ಲಿ ತಾನಾಗೆ ಬೆಳೆದರೂ, ನೆಟ್ಟು ಬೆಳೆಸಬಯಸುವವರು ಮೇ ತಿಂಗಳಲ್ಲಿ ಬೀಜಗಳನ್ನು ಹಾಕಿ ಮೂರು ವರ್ಷಗಳ ತನಕ ನರ್ಸರಿಗಳಲ್ಲಿ ಬೆಳೆಸಿ ಅನಂತರ ಮಳೆಗಾಲದಲ್ಲಿ ಆರಿಸಿದ ಜಾಗದಲ್ಲಿ ನೆಡುವರು.

ಉಪಯೋಗ : ಬಹುಮುಖ್ಯವಾದ ಉಪಯೋಗವೆಂದರೆ ಈಚಲು ಮರದ ಸವಿರಸ (ನೀರಾ). ನೀರಾವನ್ನು ಇಳಿಸುವ ವೃತ್ತಿಯನ್ನೇ ಅವಲಂಬಿಸಿರುವ ಜನರಿದ್ದಾರೆ. ಅವರನ್ನು 'ಈಡಿಗರು' ಎನ್ನುತ್ತಾರೆ. ಇವರು ಮರ ಹತ್ತಿ ಕೆಳಗಿನ ಎಲೆ (ಗರಿ)ಗಳನ್ನು ಕತ್ತರಿಸಿ ಹಾಕುತ್ತಾರೆ. ಕತ್ತರಿಸಿದ ಜಾಗದಲ್ಲಿ 45 ಸೆಂ.ಮೀ. ಜಾಗವನ್ನು ಗಿಡಗಳ ಸುತ್ತಳತೆಯಲ್ಲಿ ತೆಗೆಯುತ್ತಾರೆ. ಅನಂತರ ತ್ರಿಕೋನಾಕಾರದ ಗಾಯವನ್ನು ಮಾಡಿ ಬಿದಿರಿನ ನಳಿಕೆಯನ್ನು ಸಿಕ್ಕಿಸಿ ಮಣ್ಣಿನ ಮಡಕೆಯನ್ನು ಕಟ್ಟುತ್ತಾರೆ. ಬಿದಿರಿನ ನಳಿಕೆಯ ಮೂಲಕ ರಸವು ಹನಿ ಹನಿಯಾಗಿ ಮಡಕೆಯಲ್ಲಿ ಸುರಿಯುತ್ತದೆ. ಪ್ರತಿದಿನ ತ್ರಿಕೋನಾಕಾರದ ಗಾಯವನ್ನು ಕೆರೆಯುತ್ತಿರಬೇಕು. ಇಲ್ಲದಿದ್ದರೆ ರಸ ಒಸರುವುದು ಕಡಿಮೆಯಾಗುತ್ತದೆ. ಮೊದಮೊದಲು ವರ್ಷಾನುಗಟ್ಟಲೆ ಒಂದೇ ಮರದಿಂದ ನೀರಾವನ್ನು ಇಳಿಸಿ ಅನಂತರ 2-3 ವರ್ಷಗಳ ತನಕ ವಿಶ್ರಾಂತಿ ಕೊಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಒಂದು ಮರದಲ್ಲಿ ಒಂದು ಜಾಗದಲ್ಲಿ ಕೆಲವು ದಿನ ನೀರಾ ಇಳಿಸಿ ಅನಂತರ ಅದೇ ಮರದ ಮತ್ತೊಂದು ಜಾಗದಲ್ಲಿ ಇಳಿಸುತ್ತಾರೆ. ಹೀಗಾಗಿ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ 2-3 ದಿನ ವಿಶ್ರಾಂತಿ ಸಿಗುತ್ತದೆ. ಸಾಮಾನ್ಯವಾಗಿ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಅತಿಹೆಚ್ಚು ನೀರಾ ಉತ್ಪತ್ತಿಯಾಗುತ್ತದೆ. ಮರಕ್ಕೆ ಸುಮಾರು 9 ವರ್ಷಗಳಾದ ಮೇಲೆ ನೀರಾವನ್ನು ಇಳಿಸಬಹುದು. ರಾತ್ರಿ ಮಡಕೆಯನ್ನು ಕಟ್ಟಿ ಮಾರನೆಯ ದಿನ (ಸೂರ್ಯೋದಯಕ್ಕೆ ಮುಂಚೆ) ಮಡಕೆಯಲ್ಲಿ ಶೇಖರವಾಗಿರುವ ರಸವನ್ನು ಇಳಿಸಿಕೊಳ್ಳುತ್ತಾರೆ.

ಭೂಮಿಯ ಫಲವತ್ತತೆಯನ್ನು ಆಧರಿಸಿ ಮರದ ಆರೋಗ್ಯದ ಮೇಲೆ ನೀರಾ ಉತ್ಪತ್ತಿಯಾಗುತ್ತದೆ. ಸಾಮಾನ್ಯವಾಗಿ 4-6 ತಿಂಗಳಲ್ಲಿ 70 ರಿಂದ 310 ಕಿ.ಗ್ರಾಂ. ರಸ ಉತ್ಪತ್ತಿಯಾಗುತ್ತದೆ. ಇದರಲ್ಲಿ ಸುಮಾರು 10-13ರಷ್ಟು ಸಕ್ಕರೆಯ ಅಂಶವಿರುತ್ತದೆ. ಇದು ಸಿಹಿಯಾಗಿದ್ದು ಬಹಳ ಪುಷ್ಟಿದಾಯಕವಾದ ಪಾನೀಯವಾಗಿದೆ. ಇದರಲ್ಲಿ B ಮತ್ತು C ಜೀವ ಸತ್ವ ಹೆಚ್ಚು ಪ್ರಮಾಣದಲ್ಲಿದ್ದು ಸಾರಜನಕ, ಕಬ್ಬಿಣ, ರಂಜಕ ಇತ್ಯಾದಿ ಖನಿಜಾಂಶಗಳಿವೆ. ಇದರಲ್ಲಿ C ಜೀವ ಸತ್ವ ಅಂಶ ಬಹುಕಾಲ ನಶಿಸದೇ ಇರುವುದೇ ವೈಶಿಷ್ಟ್ಯ.

ನೀರಾವನ್ನು ಇಳಿಸಿದ 8-10 ತಾಸುಗಳಲ್ಲಿ ಹುಳಿಯಾಗಿ ಹೆಂಡವಾಗುತ್ತದೆ. ಇದರಲ್ಲಿ ಆಲ್ಕೋಹಾಲ್ ಅಂಶವು 3.16 ಪ್ರಮಾಣದಲ್ಲಿರುತ್ತದೆ. ಇದು ಬಹು ಬೇಗ ಕೆಟ್ಟರೂ ಪಾಶ್ಚರೀಕರಣ ಮಾಡಿ ಶೇಖರಿಸಿಡುವುದರಿಂದ ಸ್ವಲ್ಪ ಕಾಲ ಇಟ್ಟುಕೊಳ್ಳಬಹುದು. ಹೀಗೆ ಕೆಡದಂತೆ ಇಡಲು ಸೋಡಿಯಂ ಬೆಂಜೋಯೆಟ್ ಮತ್ತು ಸಿಟ್ರಿಕ್ ಅಥವಾ ಮ್ಯಾಲಿಕ್ ಆಮ್ಲಗಳ ಮಿಶ್ರಣವನ್ನು ಇದರೊಂದಿಗೆ ಸೇರಿಸುತ್ತಾರೆ.

ಕಬ್ಬಿನ ರಸದಿಂದ ಬೆಲ್ಲವನ್ನು ತಯಾರಿಸುವ ಹಾಗೆಯೇ ನೀರಾದಿಂದ ಬೆಲ್ಲವನ್ನು ತಯಾರಿಸಬಹುದು. ನೀರಾ ಹುಳಿಯಾಗುವ ಮುಂಚೆ ಬೆಲ್ಲವನ್ನು ಮಾಡಬೇಕು. ಅಲ್ಲದೇ ಸಕ್ಕರೆಯನ್ನೂ ತಯಾರಿಸಬಹುದು. ನೀರಾ ಬೆಲ್ಲವು ಕಬ್ಬಿನ ರಸದ ಬೆಲ್ಲಕ್ಕಿಂತ ಶ್ರೇಷ್ಠ. ಹೊಸದಾಗಿ ಇಳಿಸಿದ ನೀರಾವನ್ನು ಚೆನ್ನಾಗಿ ಕುದಿಸಿ ಪಾಕವನ್ನು ತೆಗೆದು ಆರಿಸಿ ಮಡಕೆಗಳಲ್ಲೋ, ತಟ್ಟೆಗಳಲ್ಲೋ ಹಾಕಬೇಕು. ಅದು ಗಟ್ಟಿಯಾಗಿ ಬೆಲ್ಲವಾಗುತ್ತದೆ. ವಿಶೇಷವೆಂದರೆ ಬೆಲ್ಲವನ್ನು ತಯಾರಿಸುವುದಾದರೆ ನೀರಾವನ್ನು ಸಂಗ್ರಹಿಸುವ ಮಡಕೆಗೆ ಸುಣ್ಣವನ್ನು ಲೇಪಿಸಬಾರದು.

ಈಚಲು ಹಣ್ಣುಗಳು ಸಿಹಿಯಾಗಿದ್ದು ತಿನ್ನಲು ರುಚಿಯಾಗಿರುತ್ತವೆ. ಜೆಲ್ಲಿ, ಜಾಮ್, ವಿನೆಗರ್ ತಯಾರಿಸಲು ಬಳಸುತ್ತಾರೆ. ಎಲೆ (ಗರಿ)ಗಳನ್ನು ಬೀಸಣಿಕೆ, ಚಾಪೆ, ಬುಟ್ಟಿ, ಕಸಬರಿಕೆಗಳನ್ನು ಮಾಡಲು ಬಳಸಲಾಗುತ್ತದೆ. ಅಲ್ಲದೇ ಗುಡಿಸಲುಗಳನ್ನು ಕಟ್ಟಲು ಮೇಲ್ಹಾವಣಿಯಾಗಿ ಬಳಸಲಾಗುತ್ತದೆ. ಈಚಲು ಬೀಜಗಳನ್ನು ಉತ್ತರಾಣಿ ಗಿಡದ ಬೇರಿನೊಂದಿಗೆ ಅರೆದು ವೀಳ್ಯೆದೆಲೆಯೊಂದಿಗೆ ತಿಂದರೆ ಚಳಿಜ್ವರ ಕಡಿಮೆಯಾಗುವುದು. ಅಲ್ಲದೇ ಹಲ್ಲು ನೋವಿಗೂ ಈಚಲ ಮರದ ಬೇರು ಸಹಾಯಕ.

ಎಂ.ಎಂ.

ಈರುಳ್ಳಿ (ಆನಿಯನ್) ಈರುಳ್ಳಿ ಭೂಮಿಯ ಒಳಗಡೆ ಬೆಳೆಯುವ ಹಲವು ಪದರಗಳುಳ್ಳ ಗೆಡ್ಡೆ. ಕನ್ನಡದಲ್ಲಿ ಈರುಳ್ಳಿ, ನೀರುಳ್ಳಿ, ಉಳ್ಳಾಗಡ್ಡಿ ಎಂದು ಕರೆಯುವರು. ಈ ಗೆಡ್ಡೆ ಸಂಸ್ಕೃತದಲ್ಲಿ ಪಲಾಂಡು, ದುರ್ಗಂಧ, ಮುಖದೂಷಕ, ಹಿಂದಿಯಲ್ಲಿ ಲಾಲ್‌ಪ್ಯಾಜ್, ಪಿಯಾಜ್,

ತಮಿಳಿನಲ್ಲಿ ವೇಜಯಮ್, ವೆಂಗಾಯಂ, ತೆಲುಗಿನಲ್ಲಿ ನೀರುಲ್ಲಿ, ಉಲ್ಲಿಗಡ್ಡ, ಉಲ್ಲಿಪಾಯ, ಎರ್ರಗಡ್ಡ ಇಂಗ್ಲಿಷಿನಲ್ಲಿ ಆನಿಯನ್ ಎಂದೂ ಕರೆಯಲಾಗುತ್ತದೆ.



ಭೂಗುಣ : ಈರುಳ್ಳಿ ಕೊಳವೆ ಆಕಾರದ ಉದ್ದವಾದ ಎಲೆಯನ್ನು ಹೊಂದಿರುತ್ತದೆ. ಮಣ್ಣಿನ ಒಳಭಾಗದಲ್ಲಿಯ ಎಲೆಗಳು ಚಪ್ಪಟೆಯಾಗಿ ಸಣ್ಣ ಕಾಂಡ ಭಾಗದ ಮೇಲ್ಭಾಗದಲ್ಲಿ ಗೆಡ್ಡೆ ಆಕಾರವನ್ನು ಪಡೆದಿದೆ. ಈ ಬೆಳೆಯನ್ನು ಹಲವಾರು ಬಗೆಯ ಮಣ್ಣುಗಳಲ್ಲಿ ಬೆಳೆಯಬಹುದು. ಆದರೆ ನೀರು ಬಸಿದು ಹೋಗುವಂತಹ ಮರಳುಮಿಶ್ರಿತ ಗೋಡು ಮಣ್ಣು ಇದಕ್ಕೆ ಯುಕ್ತ. ಮಣ್ಣಿನ ರಸಸಾರ 5.8 ರಿಂದ 6.5ರವರೆಗೆ ಇರಬೇಕು. ಹೆಚ್ಚು ಕ್ಷಾರ, ಜಾಗು ಪ್ರದೇಶ ಒಳ್ಳೆಯದಲ್ಲ. ಭೂಮಿಯ ಮೇಲ್ಮಣ್ಣು ಮರಳು ಮರಳಾಗಿ ಹುಡಿಯಾಗಿರಬೇಕು. ಮೆಕ್ಕಲು, ಕೆಬ್ಬೆ ಮತ್ತು ಬೂದಿಬಣ್ಣದ ಎಲ್ಲ ನೆಲಗಳಲ್ಲಿಯೂ ಬೆಳೆಯಬಹುದು. ಇದು ತಂಪು ಹವೆಯ ಬೆಳೆಯಾದರೂ ಎಲ್ಲ ಹವಾಗುಣದಲ್ಲಿಯೂ ಬೆಳೆಯುತ್ತದೆ. ಈ ಬೆಳೆಗೆ ಪ್ರಾರಂಭದಲ್ಲಿ ತಂಪು ಅನಂತರ ಉಷ್ಣ ಹವೆ ಇದ್ದರೆ ಉತ್ತಮ. ಸಾಧಾರಣವಾಗಿ ಸೆಪ್ಟೆಂಬರ್ ತಿಂಗಳಿನಿಂದ ಮಾರ್ಚ್ ತಿಂಗಳ ತನಕ ಬೆಳೆ ಮಾಡುವುದು ಹೆಚ್ಚಾಗಿ ವಾಡಿಕೆಯಲ್ಲಿರುವ ಪದ್ಧತಿ. ಚಳಿಗಾಲದಲ್ಲಿ ಬೆಳೆಯುವ ಗೆಡ್ಡೆಗಳು ಉತ್ತಮವಾಗಿರುತ್ತವೆ. ಬೆಳಕು ಮತ್ತು ಉಷ್ಣಾಂಶ ಪರಿಮಿತವಾದಲ್ಲಿ ಬೆಳೆಗೆ ಹಾನಿಯಾಗುತ್ತದೆ. ಬಿತ್ತನೆ ಮಾಡಲು ಬೀಜ ಇಲ್ಲವೆ ಗೆಡ್ಡೆಗಳನ್ನು ಉಪಯೋಗಿಸಬಹುದು.

ಬೇಸಾಯ ಕ್ರಮ : ಬಿತ್ತನೆಗೆ 9-10 ದಿನಗಳಿಗೆ ಮೊದಲು 15 ಗಾಡಿಗಳಷ್ಟು ದನದ ಗೊಬ್ಬರವನ್ನು ಭೂಮಿಗೆ ಕೊಡಬೇಕು. 8 ಮಣಗಳಷ್ಟು ಬೇಯಿಸಿದ ಸುಣ್ಣದ ಹುಡಿಯನ್ನು ಒಂದು ತಿಂಗಳ ಮೊದಲೆ ನೆಲಕ್ಕೆ ಕೊಟ್ಟಿರಬೇಕು. ಅನಂತರ 4½-4½ ಅಡಿಗಳ ಪಾತಿಮಾಡಿ ಪಾತಿಗಳನ್ನು ಕೆದಕಿ ಮಟ್ಟಮಾಡಿ (ಎಕರೆ ಒಂದಕ್ಕೆ 4 ಮಣದಷ್ಟು ಸೂಪರ್ ಫಾಸ್ಫೇಟ್ ಗೊಬ್ಬರ ಕೊಟ್ಟು) ಅನಂತರ ಒಂದು ಬೀಜಕ್ಕೂ ಇನ್ನೊಂದು ಬೀಜಕ್ಕೂ ಎರಡು ಕಡೆಗಳಲ್ಲಿಯೂ 4½-6 ಅಂಗುಲದಷ್ಟು ದೂರವಿರುವ ಹಾಗೆ ನಾಟಿ ಮಾಡಬೇಕು. ನಾಟಿ ಮಾಡಿದ 8-9 ದಿನಗಳಿಗೆ ಮೊಳಕೆ ಬಂದು ಬೆಳೆಯಲಾರಂಭಿಸುತ್ತದೆ. ಸುಮಾರು 30 ದಿನಗಳ ಪೈರಾದ ಮೇಲೆ ಬೇಕಾದರೆ ಅದನ್ನು ತೆಗೆದು, ಮೇಲಿನ ತಾಳನ್ನು ಸ್ವಲ್ಪ ಬಿಟ್ಟು ಕತ್ತರಿಸಿ ಬೇರೆ ಕಡೆ ನೆಡಬಹುದು. ಇಲ್ಲವಾದರೆ ಮೊದಲಿನ ಸ್ಥಳದಲ್ಲಿಯೇ ಬಿಟ್ಟು ಬೆಳೆಸಬಹುದು.

ಆಗಾಗ್ಗೆ ಕಳೆ ತೆಗೆದು ಪಾತಿಗಳನ್ನು ಕೆದಕಿ ನೀರು ಕೊಡುತ್ತಿರಬೇಕು. 2½ ತಿಂಗಳ ಬಳಿಕ ತುದಿಯಿಂದ 4-5 ಅಂಗುಲದ ಕೆಳಗೆ ಕೊಯ್ದುಬಿಟ್ಟರೆ ಗೆಡ್ಡೆಯು ಚೆನ್ನಾಗಿ ದಪ್ಪವಾಗುತ್ತದೆ. ಇದರ ಹೂವನ್ನು ಉಳ್ಳಿಹೂವು ಎನ್ನುವರು. ಇದನ್ನು ಪಲ್ಯ, ಹುಳಿ ಮುಂತಾದವುಗಳ ತಯಾರಿಕೆಗೆ ಉಪಯೋಗಿಸುತ್ತಾರೆ. ಬಿತ್ತಿದಂದಿನಿಂದ 130-140 ದಿನಗಳಲ್ಲಿ ಗೆಡ್ಡೆಯು ಕೀಳಲು ಸಿದ್ಧವಾಗುತ್ತದೆ. ಗೆಡ್ಡೆಯ ತಾಳು ಒಣಗ ಹತ್ತಿದರೆ ಗೆಡ್ಡೆಯು ಅಗೆಯಲು ಸಿದ್ಧವಾಗಿದೆ ಎಂದರ್ಥ. ಗೆಡ್ಡೆಯನ್ನು ಅಗೆದು 4-6 ದಿನ ತೆಳ್ಳಗೆ ಬಿಸಿಲಿಗೆ ಹರಡಿ ಒಣಗಿದ ಮೇಲೆ ತಾಳುಕೊಯ್ದು ಮಾರಾಟಕ್ಕೆ ಸಿದ್ಧಪಡಿಸುತ್ತಾರೆ. ಒಣಗಿಸದೆ ಹಾಗೆಯೇ ಇಟ್ಟುಬಿಟ್ಟರೆ, ಹೆಚ್ಚಿನ ತೇವವಿರುವುದರಿಂದ ಕೊಳೆಯುತ್ತದೆ. ಒಳ್ಳೆಯ ಬೆಳೆಯಾದರೆ ಒಂದು ಎಕರೆಯಲ್ಲಿ ಸು. 400-500 ಮಣಗಳಷ್ಟು ಇಳುವರಿ ಕೊಡುತ್ತದೆ.

ತಳಿಗಳು : ಇದರಲ್ಲಿ ಅನೇಕ ತಳಿಗಳಿವೆ.

ಅ) ಮಧ್ಯಮದಿಂದ ದೊಡ್ಡ ಗಾತ್ರದ ಗೆಡ್ಡೆಯುಳ್ಳ ತಳಿಗಳು

1) ಬಳ್ಳಾರಿ ರೆಡ್ : ಈ ತಳಿಯ ಗೆಡ್ಡೆಗಳು ಸಾಧಾರಣ ಗಾತ್ರದಿಂದ ಕೂಡಿದ್ದು ಅಧಿಕ ಇಳುವರಿ ಕೊಡುತ್ತವೆ. ಇದು ಕರ್ನಾಟಕದಲ್ಲಿ ಮುಖ್ಯವಾಗಿ ಬೆಳೆಯುವ ತಳಿ. ಗೆಡ್ಡೆಗಳನ್ನು ಹೆಚ್ಚು ದಿನ ಕೆಡದಂತೆ ಶೇಖರಿಸಬಹುದು.

2) ಪೂಸಾರೆಡ್ : ಸಾಧಾರಣ ಗಾತ್ರದಿಂದ ಕೂಡಿದ ಕೆಂಪು ಗೆಡ್ಡೆ. ಕಡಿಮೆ ಖಾರದಿಂದ ಕೂಡಿದೆ.

3) ಅರ್ಕಾಕಲ್ಯಾಣ್ : ಈ ತಳಿಯನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಇದರ ಗೆಡ್ಡೆಗಳು ಚಪ್ಪಟೆ-ಗುಂಡಾಗಿದ್ದು, ಮಧ್ಯಮ ಗಾತ್ರವಾಗಿದ್ದು (130-180 ಗ್ರಾಂ) ಕೆಂಪು ಬಣ್ಣವನ್ನು ಹೊಂದಿರುತ್ತವೆ. ಈ ತಳಿಗೆ ನೇರಳೆ ಎಲೆ ಮಚ್ಚೆ ರೋಗವನ್ನು ತಡೆದುಕೊಳ್ಳುವ ಶಕ್ತಿ ಇದೆ. ಇದು ಮಳೆಗಾಲಕ್ಕೆ ಯುಕ್ತವಾದ ತಳಿ. ಬೆಳೆಯ ಅವಧಿ 140 ದಿನಗಳು. ಒಂದು ಹೆಕ್ಟೇರಿಗೆ 45 ಟನ್ ಇಳುವಳಿ ಪಡೆಯಬಹುದು.

4) ಅರ್ಕಾನಿಕೇತನ್ : ಈ ತಳಿಯನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಇದರ ಗೆಡ್ಡೆಗಳು ಗುಂಡಾಗಿದ್ದು, ತೆಳುವಾದ ಕತ್ತನ್ನು ಹೊಂದಿರುತ್ತವೆ. ಗೆಡ್ಡೆಗಳು ಮಧ್ಯಮ ಗಾತ್ರದವಾಗಿದ್ದು (100-180 ಗ್ರಾಂ) ತಿಳಿಗೆಂಪು ಬಣ್ಣವಿದ್ದು ಗಟ್ಟಿಯಾಗಿದ್ದು ಹೆಚ್ಚು ಖಾರವಾಗಿರುತ್ತವೆ. ಒಳ್ಳೆಯ ಶೇಖರಣಾ ಗುಣವನ್ನು ಹೊಂದಿರುತ್ತದೆ. (3-4 ತಿಂಗಳು) ಬೆಳೆಯ ಅವಧಿ 145 ದಿವಸಗಳು. ಒಂದು ಹೆಕ್ಟೇರಿಗೆ 37 ಟನ್ ಇಳುವರಿ ಪಡೆಯಬಹುದು.

5) ಅರ್ಕಾ ಪ್ರಗತಿ : ಈ ತಳಿಯನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಗೆಡ್ಡೆಗಳು ಗುಂಡಾಗಿದ್ದು, ತೆಳುವಾದ ಕತ್ತನ್ನು ಹೊಂದಿರುತ್ತವೆ. ಗೆಡ್ಡೆಗಳು ಮಧ್ಯಮ ಗಾತ್ರವಿದ್ದು (100-160 ಗ್ರಾಂ) ಗುಲಾಬಿಬಣ್ಣವನ್ನು ಹೊಂದಿರುತ್ತವೆ. ಇದು ಅಲ್ಪಾವಧಿ ತಳಿ. ಬೆಳೆ 130 ದಿವಸಗಳಲ್ಲಿ ಕಟಾವಿಗೆ ಬರುತ್ತದೆ. ಒಂದು ಹೆಕ್ಟೇರಿಗೆ 35 ಟನ್ ಇಳುವರಿ ಪಡೆಯಬಹುದು.

6) ಅರ್ಕಾ ಪಿತಾಂಬರ್ : ಈ ತಳಿಯನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿ ಪಡಿಸಿದೆ. ಗೆಡ್ಡೆಗಳು ಹಳದಿ

ಬಣ್ಣವನ್ನು ಹೊಂದಿದ್ದು, ಗುಂಡಾಗಿದ್ದು, ತೆಳುವಾದ ಕತ್ತನ್ನು ಪಡೆದಿರುತ್ತವೆ. ಗೆಡ್ಡೆಗಳು ಮಧ್ಯಮ ಗಾತ್ರವಿದ್ದು (5.2-6.2 ಸೆಂ.ಮೀ.) ಖಾರದ ಅಂಶ ಕಡಿಮೆಯಿರುತ್ತದೆ. ಗೆಡ್ಡೆಗಳನ್ನು ಬಹಳ ದಿನಗಳವರೆಗೆ ಶೇಖರಿಸಿ ಇಡಬಹುದು. (3-4 ತಿಂಗಳು) ಇದು ರಫ್ತುಮಾಡಲು ಸೂಕ್ತವಾದ ತಳಿ. ಒಂದು ಹೆಕ್ಟೇರಿಗೆ 35 ಟನ್ ಇಳುವರಿ ಪಡೆಯಬಹುದು.

ಈರುಳ್ಳಿ ಸಂಕರಣ ತಳಿಗಳು

1. ಅರ್ಕಾ ಕೀರ್ತಿಮಾನ್ : ಈ ಸಂಕರಣ ತಳಿಯನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಮಧ್ಯಮ ಗಾತ್ರದ (120-130 ಗ್ರಾಂ) ಕೆಂಪು ಬಣ್ಣದ ಗುಂಡಾಗಿರುವ ಗೆಡ್ಡೆಗಳನ್ನು ಬಹಳ ದಿನಗಳವರೆಗೆ ಶೇಖರಿಸಿಡಲು ಸಾಧ್ಯ. (4-5 ತಿಂಗಳು) ಈ ತಳಿಯನ್ನು ಮಳೆಗಾಲ ಮತ್ತು ಚಳಿಗಾಲಗಳೆರಡರಲ್ಲೂ ಬೆಳೆಯಲು ಸೂಕ್ತ. ಒಂದು ಹೆಕ್ಟೇರಿಗೆ 47 ಟನ್ ಇಳುವರಿ ಪಡೆಯಬಹುದು.

3. ಅರ್ಕಾಲಾಲಿಮ : ಇದನ್ನು ಬೆಂಗಳೂರಿನ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಮಧ್ಯಮ ಗಾತ್ರದ (120-130) ಗ್ರಾಂ ಕೆಂಪು ಬಣ್ಣದ ಗುಂಡಾಗಿರುವ ಈ ಜಾತಿಯ ಗೆಡ್ಡೆಗಳನ್ನು ಬಹಳ ದಿನಗಳವರೆಗೆ ಶೇಖರಿಸಿಡಲು ಸಾಧ್ಯ (4-5 ತಿಂಗಳು).

ಸಣ್ಣ ಗೆಡ್ಡೆಯ ತಳಿಗಳು

1. ಬೆಂಗಳೂರು ಗುಲಾಬಿ ಈರುಳ್ಳಿ : ಇದನ್ನು ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದ್ದು, ಗೆಡ್ಡೆಗಳು ಸಣ್ಣದಾಗಿದ್ದು ಖಾರವಾಗಿರುತ್ತವೆ.

2. ಅರ್ಕಾಬಿಂದು : ಇದನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಅಭಿವೃದ್ಧಿಪಡಿಸಿದೆ. ಗೆಡ್ಡೆಗಳು ಸಣ್ಣವಾಗಿದ್ದು (2.5 - 3.5 ಸೆಂ.ಮೀ.) ಕಡು ಕೆಂಪು ಬಣ್ಣವನ್ನು ಹೊಂದಿದ್ದು ಗುಂಡಾಗಿರುತ್ತವೆ. ಖಾರದ ಅಂಶ ಜಾಸ್ತಿ. ಈ ತಳಿಯು ರಫ್ತು ಮಾರುಕಟ್ಟೆಗೆ ಉತ್ತಮವಾದದ್ದು. ಗೆಡ್ಡೆಗಳನ್ನು ಬಹಳ ದಿನಗಳವರೆಗೆ (3-4 ತಿಂಗಳು) ಶೇಖರಣೆ ಮಾಡಲು ಸಾಧ್ಯ. ಬೆಳೆಯ ಅವಧಿ 90-100 ದಿವಸಗಳು. ಒಂದು ಹೆಕ್ಟೇರಿಗೆ 25 ಟನ್ ಇಳುವರಿ ಪಡೆಯಬಹುದು.

ಸಂಗ್ರಹಣಾ ವಿಧಾನ : ಈರುಳ್ಳಿಯನ್ನು ಶೇಖರಣೆ ಹಾಗೂ ಸಗಟು ಮಾರುಕಟ್ಟೆಗೆ ಸಾಗಾಟ ಮಾಡುವಾಗ ಸಾಮಾನ್ಯವಾಗಿ ಗೋಣಿ ಚೀಲದಲ್ಲಿ ಶೇಖರಿಸುತ್ತಾರೆ. ಚಿಲ್ಲರೆ ಮಾರಾಟಕ್ಕೆ ಬಿಡಿಯಾಗಿ ಅಥವಾ ಬಳಕೆದಾರರ ಪಾಲಿಬ್ಯಾಗ್‌ನಲ್ಲಿಯೂ ಪ್ಯಾಕ್ ಮಾಡಬಹುದು ಅಥವಾ ಇವುಗಳನ್ನು 40-45 ಕಿ.ಗ್ರಾಂ. ಸಾಮರ್ಥ್ಯದ ತೆಳುವಾದ ಸೆಣಬಿನ ಚೀಲದಲ್ಲಿ ಕಟ್ಟಿ ಸಾಗಿಸಬಹುದು.

ಬೇಸಾಯ ಕ್ರಮ : ಈರುಳ್ಳಿಯನ್ನು ಮೂರು ವಿಧಗಳಲ್ಲಿ ಬಿತ್ತನೆ ಮಾಡಬಹುದು.

1. ಸಸಿನಾಟಿ ಮಾಡುವುದು
2. ಕೂರಿಗೆ ಬಿತ್ತನೆ ಮಾಡುವುದು ಅಥವಾ ಬಿತ್ತರಿಸುವುದು
3. ಗೆಡ್ಡೆ ನಾಟಿ ಮಾಡುವುದು.

1. ಸಸಿ ನಾಟಿ ಮಾಡುವುದು

ಸಸಿಮಡಿ : ಒಂದು ಹೆಕ್ಟೇರಿಗೆ ಬೇಕಾಗುವ ಸಸಿಗಳನ್ನು ಬೆಳೆಯಲು 7.5 ಮೀಟರ್ ಉದ್ದ 1.2 ಮೀಟರ್ ಅಗಲ ಮತ್ತು 10 ಸೆಂ.ಮೀ. ಎತ್ತರದ ಮಡಿಗಳನ್ನು ತಯಾರಿಸಬೇಕು. ಹಿಂದೆ ಮಡಿಗಳಿಗೆ 3-4 ಬುಟ್ಟಿ ಕೊಟ್ಟಿಗೆ ಗೊಬ್ಬರ ಹಾಕುತ್ತಿದ್ದರು. ಈಗ ಇದರ ಜೊತೆಗೆ ಅರ್ಧ ಕಿ.ಗ್ರಾಂ. 15:15:15 ಸಂಯುಕ್ತ ರಾಸಾಯನಿಕ ಗೊಬ್ಬರವನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಬೇಕು. ಅನಂತರ ಬಿತ್ತನೆ ಬೀಜವನ್ನು 7.5 ಸೆಂ.ಮೀ. ಅಂತರದ ಸಾಲುಗಳಲ್ಲಿ ಬಿತ್ತಬೇಕು. ತಕ್ಷಣ ಮಡಿಗಳಿಗೆ ನೀರುಣಿಸಬೇಕು. ಹೀಗೆ ಮಾಡಿದ ಸಸಿಗಳು 6-8 ವಾರಗಳಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ.

ನಾಟಿ ವಿಧಾನ : ನಾಟಿ ಮಾಡುವ ಮುನ್ನ ಪೂರ್ಣ ಪ್ರಮಾಣದ ಕೊಟ್ಟಿಗೆ ಗೊಬ್ಬರ, ಶೇ. 50ರಷ್ಟು ಸಾರಜನಕ, ಪೂರ್ಣ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್ ಕೊಡಬೇಕು. ಸಸಿಗಳನ್ನು 15 ಸೆಂ.ಮೀ. ಅಂತರದ ಸಾಲುಗಳಲ್ಲಿ 10 ಸೆಂ.ಮೀ.ಗೆ ಒಂದರಂತೆ ಹೆಚ್ಚು ಆಳಕ್ಕೆ ಇಳಿಯದಂತೆ ನಾಟಿ ಮಾಡಿ, ಕೂಡಲೆ ನೀರು ಹಾಯಿಸಬೇಕು. ಆರು ವಾರಗಳ ಬಳಿಕ ಉಳಿದ ಶೇ. 50 ರಷ್ಟು ಸಾರಜನಕವನ್ನು ಮೇಲು ಗೊಬ್ಬರವಾಗಿ ಕೊಡಬೇಕು.

ಕೂರಿಗೆ ಬಿತ್ತನೆ ಮಾಡುವುದು ಅಥವಾ ಬಿತ್ತರಿಸುವುದು : ಈ ಪದ್ಧತಿಯು ಮಳೆಯಾಶ್ರಿತ ಬೆಳೆಗೆ ಮಾಡುವ ಬಿತ್ತನೆ ಕ್ರಮವಾಗಿದೆ.

ಈ ಕ್ರಮದಲ್ಲಿ ಭೂಮಿಯನ್ನು ಬಿತ್ತನೆಗೆ ಸಿದ್ಧಪಡಿಸಿ ಪೂರ್ಣಪ್ರಮಾಣದ ಸಾವಯವಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರೆಸಿ ಬೀಜವನ್ನು 30 ಸೆಂ.ಮೀ. ಅಂತರದ ಸಾಲಿನಲ್ಲಿ ಕೂರಿಗೆಯಿಂದ ಬಿತ್ತನೆ ಮಾಡಬೇಕು.

ಬಿತ್ತರಿಸುವುದು : ಬಿತ್ತನೆ ಮಾಡಲು ಜಮೀನನ್ನು ಸಿದ್ಧಪಡಿಸಿದ ಮೇಲೆ ಪೂರ್ಣಪ್ರಮಾಣದ ಸಾವಯುವ ಹಾಗೂ ರಾಸಾಯನಿಕ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಿ, ಅನಂತರ 1.2 x 1.2 ಮೀ. ಅಂತರದ ಮಡಿಗಳನ್ನು ಮಾಡಿ ತೆಳ್ಳಗೆ ಬೀಜವನ್ನು ಕೈಯಿಂದ ಬಿತ್ತಿ 4 ವಾರಗಳ ಬಳಿಕ 5 ಸೆಂ.ಮೀ.ಗೆ ಒಂದು ಸಸಿಯನ್ನುಳಿಸಿ ಉಳಿದವುಗಳನ್ನು ತೆಗೆಯಬೇಕು.

ಗೆಡ್ಡೆ ನಾಟಿ ಮಾಡುವುದು : ಜಮೀನನ್ನು ಬಿತ್ತನೆಗೆ ಸಿದ್ಧಪಡಿಸಿದ ಮೇಲೆ ಪೂರ್ಣ ಪ್ರಮಾಣದ ಸಾವಯವ ಗೊಬ್ಬರ, ರಂಜಕ, ಪೊಟ್ಯಾಷ್, ಅರ್ಧಭಾಗ ಸಾರಜನಕ ರಸಗೊಬ್ಬರಗಳನ್ನು ಮಣ್ಣಿನಲ್ಲಿ ಸೇರಿಸಿ ನಂತರ 15 ಸೆಂ.ಮೀ. ಅಂತರದ ಬದುಗಳನ್ನು ಮಾಡಿ ಬದುವಿನ ಒಂದು ಪಕ್ಕದಲ್ಲಿ ಪ್ರತಿ 10 ಸೆಂ.ಮೀ. ಒಂದರಂತೆ ಗೊಂಚಲು ಈರುಳ್ಳಿಯಲ್ಲಿ ಒಂದು ಗೆಡ್ಡೆ ನಾಟಿ ಮಾಡಿ ನೀರು ಹಾಯಿಸಿ, 6 ವಾರಗಳ ಅನಂತರ ಉಳಿದ ಅರ್ಧಭಾಗ ಸಾರಜನಕವನ್ನು ಮೇಲು ಗೊಬ್ಬರವಾಗಿ ಕೊಡಬೇಕು.

ಉಪಯೋಗಗಳು : ಈರುಳ್ಳಿಯು ಬಡವರ ಕಸ್ತೂರಿಯೆಂದೇ ಪರಿಗಣಿಸಲ್ಪಟ್ಟಿದೆ. ರುಚಿಯಾದ ಹುಳಿ, ಪಲ್ಯ, ಮೊಸರಿನಿಂದ ತಯಾರಿಸುವ ರಾಯಿತದಲ್ಲಿ ಈರುಳ್ಳಿಯದು ಬಹುಮುಖ್ಯ ಪಾತ್ರ. ಕತ್ತರಿಸಿದ ಕೂಡಲೆ ಕಣ್ಣಲ್ಲಿ ನೀರು ಬರುವುದರಿಂದ "ಅಂಗಡಿಯಿಂದ ತರ್ತೀವೆ,

ಮುಂದಿಟ್ಟುಕೊಂಡು ಅಳ್ತೇವೆ" ಎಂಬ ಗಾದೆ ಪ್ರಚಲಿತ. ಷಡ್ರಸಗಳಲ್ಲಿ ಉಪ್ಪನ್ನು ಬಿಟ್ಟು ಈರುಳ್ಳಿಯಲ್ಲಿ ಸಿಹಿ, ಹುಳಿ, ಖಾರ, ಒಗರು, ಕಹಿ ಈ ಐದು ರಸಗಳಿರುತ್ತವೆ.

ಈರುಳ್ಳಿಯು ತ್ರಿದೋಷಹಾರಿ, ವಿರೇಚನಕಾರಿ. ಮಲಬದ್ಧತೆಯನ್ನು ನಿವಾರಿಸುವುದು. ಕೆಮ್ಮು, ಶೀತ, ಫ್ಲೂಗಳನ್ನು ಹೋಗಲಾಡಿಸುವುದು, ಇದು ಸರ್ವರೋಗನಿವಾರಕ. ಬಹಳಷ್ಟು ಜನರು ಈರುಳ್ಳಿಯನ್ನು ಊಟದಲ್ಲಿ ಹಸಿಯಾಗಿಯೇ ಉಪಯೋಗಿಸುತ್ತಾರೆ. ವೀರ್ಯವನ್ನು ವೃದ್ಧಿಸುವ ಈರುಳ್ಳಿ ಬೀಜವು ಕಾಮವರ್ಧಕ ಟಾನಿಕ್ ಇದ್ದಂತೆ. ಅಲ್ಲದೆ ಕರುಳುಬೇನೆ, ಸಾಂಕ್ರಾಮಿಕ ಕ್ರಿಮಿ, ಕಾಲರಾಗಳಲ್ಲಿ ಪರಿಣಾಮಕಾರಿ. ಶ್ಲೇಷ್ಮವನ್ನು ಹೋಗಲಾಡಿಸುವುದು. ಮೂತ್ರದೋಷ, ಮೂಲವ್ಯಾಧಿಗಳನ್ನು ಹೋಗಲಾಡಿಸುವುದು. ಬೆಲ್ಲದೊಂದಿಗೆ ಈರುಳ್ಳಿ ಸೇವಿಸಿದರೆ, ದೇಹದಲ್ಲಿ ಆಯಾಸ ಪರಿಹಾರವಾಗಿ ನವಚೈತನ್ಯ ಮೂಡುವುದು. ಹಲ್ಲುನೋವು, ಕಿವಿನೋವು, ಕಿವಿಸೋರುವುದು, ಕಿವಿಯಲ್ಲಿ ಶಬ್ದಗಳ ನಿವಾರಣೆಗೆ ಈರುಳ್ಳಿ ಬಳಕೆಯಾಗುತ್ತದೆ. ಕಣ್ಣುನೋವು, ಕಣ್ಣುರಿ, ಕಣ್ಣುಚುಚ್ಚುವಿಕೆ ತಲೆನೋವುಗಳ ನಿವಾರಣೆಗೆ ಈರುಳ್ಳಿ ರಾಮಬಾಣ. ಕಬ್ಬಿಣದ ಅಂಶವಿರುವ ಈರುಳ್ಳಿಯ ಸೇವನೆಯಿಂದ ದೇಹದ ತೂಕ ಹೆಚ್ಚಿಸಿಕೊಳ್ಳಬಹುದು. ಈರುಳ್ಳಿ ರಸ ಮೂರ್ಛೆರೋಗ ನಿವಾರಣೆಗೆ ಹಾಗೂ ಚೇಳಿನ ವಿಷದ ವಿರುದ್ಧ ಚಿಕಿತ್ಸೆಗಾಗಿ ಬಳಕೆಯಾಗುತ್ತದೆ. ಈರುಳ್ಳಿ ಹೃದ್ರೋಗಿಗಳಿಗೆ ಸಿದ್ಧೌಷಧವಿದ್ದಂತೆ. ಅಸ್ತಮ-ದಮ್ಮು ಜಠರದೋಷಗಳ ನಿವಾರಕ. ಚರ್ಮರೋಗ, ರಾತ್ರಿ ಕುರುಡು ನಿವಾರಣೆಯಲ್ಲಿ ಇದು ಉಪಯುಕ್ತ. ಇದರ ರಸದ ಜೊತೆಯಲ್ಲಿ ಸಾಸಿವೆ ಎಣ್ಣೆಯನ್ನು ಬೆರೆಸಿ ಸಂಧಿವಾತದಲ್ಲಿ ಬಳಸುತ್ತಾರೆ.

ಈರುಳ್ಳಿಯ ಗೆಡ್ಡೆ ಮತ್ತು ಬೀಜ ಔಷಧಿಗೆ ಉಪಯುಕ್ತ. ದೇಹದ ಯಾವುದೇ ಭಾಗದಲ್ಲಿ ಪೆಟ್ಟು ಬಿದ್ದು ರಕ್ತಸ್ರಾವವಾಗುತ್ತಿದ್ದರೆ, ಈರುಳ್ಳಿ ಜಜ್ಜಿ ಆ ಭಾಗಕ್ಕೆ ಪಟ್ಟು ಹಾಕಿದರೆ ರಕ್ತಸ್ರಾವ ನಿಂತುಹೋಗುತ್ತದೆ. ಒಟ್ಟಿನಲ್ಲಿ ಈರುಳ್ಳಿ ಸೇವನೆ ದೇಹದ ನರನಾಡಿಗಳನ್ನು ಶುದ್ಧಿಗೊಳಿಸಿ ಉತ್ತೇಜನವನ್ನುಂಟು ಮಾಡುವುದು. ಶಕ್ತಿವೃದ್ಧಿಯೂ ಆಯುರ್ವೃದ್ಧಿಯೂ ಆಗಿರುವ ಇದರಿಂದ ಸರ್ವರೋಗಗಳೂ ನಿವಾರಣೆಯಾಗುವುದು.

ವಿ.ಎಂ.

ಉಂಬಳಿ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗಲು, ವಿಶೇಷವಾದ ಸೇವೆ ಸಲ್ಲಿಸಿದವರಿಗೆ ನೀಡುತ್ತಿದ್ದಂಥವು. ಅರಸರು, ಶ್ರೀಮಂತವರ್ಗದವರು ಅಗ್ರಹಾರಗಳಿಗೆ, ದೇವಸ್ಥಾನಗಳಿಗೆ, ಮಠಗಳಿಗೆ, ಧಾರ್ಮಿಕ ಸಂಸ್ಥೆಗಳಿಗೆ, ವಿದ್ವನ್ಮಣಿಗಳಿಗೆ, ಯುದ್ಧ ಮೊದಲಾದ ಕಷ್ಟಕರ ಸನ್ನಿವೇಶಗಳಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದವರಿಗೆ, ಅಧಿಕಾರಿಗಳಿಗೆ ಭೂಮಿಯನ್ನು ದಾನವಾಗಿಯೋ ದತ್ತಿಯಾಗಿಯೋ ಕೊಟ್ಟು ಕಂದಾಯರಹಿತವೆಂದು ಸಾರುತ್ತಿದ್ದರು. ಹೀಗೆ ಕೊಟ್ಟ ಭೂಹಿಡುವಳಿಗಳನ್ನು ಉಂಬಳಿ ಜಮೀನುಗಳೆಂದು ಕರೆಯುತ್ತಿದ್ದರು.

ಉಂಬಳಿ ಎಂಬುದು ಮೂಲತಃ ಪ್ರಾಕೃತ ಭಾಷೆಯ ಪದವಾಗಿದ್ದು, ಮಾನ್ಯವಾಗಿ ಕೊಡುವ ಭೂಮಿ, ಮಾನ್ಯ, ಕಂದಾಯರಹಿತ ಅನುಭವಿಸುವಂತೆ ಕೊಟ್ಟ ಭೂಮಿ, ಕೊಡುಗೆ, ಜಹಗೀರು ಮೊದಲಾದ ಅರ್ಥವನ್ನು ಒಳಗೊಂಡಿದೆ. ಸಂಸ್ಕೃತದಲ್ಲಿ ಉಂಬಳಿಗೆ 'ಉದ್ಬಲಿಕ' ಎಂದು ಕರೆಯುವರು. ಉಂಬಳಿ ಪದಕ್ಕೆ ತಮಿಳಿನಲ್ಲಿ ಉಮ್ಬಳ, ಉಮ್ಬಿಳಿಕ್ಕೈ ಎಂದೂ, ತೆಲುಗಿನಲ್ಲಿ ಉಂಬಳಮು, ಉಂಬಳ, ಉಂಬಳಿ, ಉಂಬಳಿಕ ಎಂದು ಕರೆಯುವರು. ಉಂಬಳಿ ಅಥವಾ ದಾನದತ್ತಿಗಳನ್ನು ಕೊಡುವುದು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಅಶೋಕನ ರುಮ್ಮಿಂದ್ಯೆ ಸ್ತಂಭಶಾಸನದಲ್ಲಿ ಉಬ್ಬಲಿಕೆ ಎಂಬ ಪದ ಇದ್ದು ಅದು ತೆರಿಗೆ ಮುಕ್ತವಾದುದು ಎಂಬರ್ಥ ಕೊಡುತ್ತದೆ. ಬುದ್ಧನ ಜನ್ಮಸ್ಥಳವಾದ ಉಂಬಿಣಿ ಅಥವಾ ರುಮ್ಮಿಂದ್ಯೆ ಗ್ರಾಮದ ಕೆಲವು ತೆರಿಗೆಗಳನ್ನು ಮನ್ನಾ ಮಾಡಿದ್ದನ್ನು ಶಾಸನದಲ್ಲಿ ಹೇಳಿದೆ.

ಕನ್ನಡ ನಾಡಿನ ಅನೇಕ ಶಾಸನಗಳಲ್ಲಿ ಉಂಬಳಿ ಎಂಬ ಪದಕ್ಕೆ ಸಂವಾದಿಯಾದ ಅದೇ ಅರ್ಥವನ್ನು ಸೂಚಿಸುವ ಬೇರೆ ಬೇರೆ ಪದಗಳಿವೆ. ಉದಾ : ಮಾನ್ಯ, ಸರ್ವಮಾನ್ಯ, ಸರ್ವ-ನಮಸ್ಯ, ನಮಸ್ಯ ವೃತ್ತಿ. ಹಲ್ಮಿಡಿ ಶಾಸನದಲ್ಲಿ ಬರುವ ಒಂದು ವಾಕ್ಯ ಹೀಗಿದೆ. ಮೃಗೇಶ ಮತ್ತು ನಾಗ ಎಂಬುವರು ವಿಜಯರಸನಿಗೆ ಪಲ್ಮಿಡಿಯಂ ಮೂಜೆವಳ್ಳಿಯಂ ಕುರುಂಬಿಡಿವಿಟ್ಟಾರ್ ಅ-ಕರ. ಇಲ್ಲಿ ಬರುವ ಅ-ಕರ ಎಂಬ ಪದ ತೆರಿಗೆ ರಹಿತ ಭೂಮಿ ಎಂಬುದನ್ನು ಸೂಚಿಸುತ್ತದೆ. ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಸಂಗಮ ಸಾಹಿತ್ಯದಲ್ಲೂ ಇದರ ಪ್ರಸ್ತಾಪವಿದೆ. ತೆರಿಗೆಯನ್ನು ಮನ್ನಾ ಮಾಡಿದ ಭೂಮಿಯನ್ನು ಪುರವು, ಇಜೈಯಿ ಅ-ನಿಲಂ (ನೆಲ) ಎಂದು ಹೇಳಿದೆ.

ಮೇಲೆ ಸೂಚಿಸಿದಂತೆ ಭೂಹಿಡುವಳಿ ಅಥವಾ ಉಂಬಳಿಗಳನ್ನು ಹೆಚ್ಚಾಗಿ ದೇವಸ್ಥಾನ, ಮಠ, ಛತ್ರ, ಸನ್ಯಾಸಿ, ಬ್ರಾಹ್ಮಣರಿಗೆ ಸರ್ವಮಾನ್ಯವಾಗಿ ನೀಡುತ್ತಿದ್ದರು. ಅಲ್ಲದೆ ಸೈನಿಕರು ರಾಜನ ಪರವಾಗಿ ಅಥವಾ ಊರಿನ ಮೇಲೆ ಕಳ್ಳಕಾಕರು ಬಿದ್ದು ತುರುಗಳನ್ನು, ಸ್ತ್ರೀಯರನ್ನು ಅಪಹರಿಸಿದರೆ, ವೀರಾವೇಶದಿಂದ ಹೋರಾಡಿ ಮಡಿದವರಿಗೆ ಅಥವಾ ಗೆದ್ದು ಬಂದವರಿಗೆ ವಿವಿಧ ಬಗೆಯ ಉಂಬಳಿಗಳನ್ನು ಕೊಡುತ್ತಿದ್ದರು. ರಾಜರ ಪರವಾಗಿ ಇತರ ಗುರುತರ ಸೇವೆಗಳನ್ನು ಮಾಡಿದಂಥ ಅಧಿಕಾರಿಗಳಿಗೆ ಉಂಬಳಿಗಳನ್ನು ಬಿಟ್ಟುಕೊಡುತ್ತಿದ್ದರು. ಅನೇಕ ವೇಳೆ ಇವು ಸರ್ವಮಾನ್ಯವಾಗಿರುತ್ತಿದ್ದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅಲ್ಪ ಪ್ರಮಾಣದ ತೆರಿಗೆ ವಿಧಿಸುತ್ತಿದ್ದುದುಂಟು. ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗಲಿ ಎಂದು ಶಾಸನದಲ್ಲಿ ಕೆತ್ತಿಸುತ್ತಿದ್ದರು. ಇದಕ್ಕೆ ಕೆಲವು ಶಾಸನಗಳನ್ನು ಉದಾಹರಣೆಯಾಗಿ ಹೇಳಬಹುದು.

1. ಸಂತೋಷಮಾಗೆ ದೇವ(ರ್ಗ್ಗೆ)ನ್ದಮತಿ ಬಲ್ಲಹನುಂಬಳಿಯಂ.... ಕೊಟ್ಟ ನನಘ(ಧನಂ) (ಎಸ್‌ಇಇ, XI-i, 45-36; 980).
2. ಪನ್ನಿರ್ವ್ವರ್ಗ್ಗಾವುಣ್ಡುಗಳ್ಗೆ ದಯೆಗೆಯ್ದುಂಬಳಿಯಾಗಿ ಕೊಟ್ಟ ಮತ್ತರ್ ನೂಱಪನ್ನೊಂದು (ಇ ಅ. xviii, 40-39,999).
3. ಮೊದಲುಮೇಕಾಂತರಾಮಾನುಜೀಯರಿಗೆ ಉಂಬಳಿಯು ಕೊಡುವದಕೆ ಮೊದಲು ಸಲುವಂತಾ ದೇವದಾಯ (ಎಕ xiv, ಶ್ರೀರಂಗ, 149-15 ; 1563).
4. ಇಷ್ಟು ಮಾನ್ಯನಂಮ ಸರುಚಿಯಿಂದ ವೊಡಂಬಟ್ಟು ಕಲ್ಲನೆಟ್ಟು ಕೊಟ್ಟೆಉತೂಬು ಹೊಡೆವೊಡೆಯಾದರೆ ಗೂಳಿಯೋಜ ಮಾಡುವ ಉಂಬಳಿಗೆ ಲಸವನಾಉ ಕೊಡುವೆಉ (ಎ.ಕ. ix, ಕಾನಕಾ, 97-38; 1400).

5. ಮಲ್ಲರಸಯ್ಯನವರು ಆ ಮಾದರಸಯ್ಯಗೆ ಉಂಬಳಿತಕ್ಕೆ ಸಲವಾಗಿ ಪಾಲಿಸಿದ ಹಳಿಯ ಚತುಕಿಸೀಮೆಯ ವಿವರ (ಎ.ಕ. xiv ಎಳಂದೂ 187-9-1530).

ಹೀಗೆ ಅರಸರು ಅಥವಾ ಶ್ರೀಮಂತ ವರ್ಗದವರು, ವಣಿಕರು ವಿಶೇಷ ಸಂದರ್ಭಗಳಲ್ಲಿ ಕೊಟ್ಟಂಥ ಭೂಮಿಗಳಿಗೆ ಶಾಸನಗಳನ್ನು ಹಾಕಿಸಿ ಅಂಥ ಭೂಮಿಗಳು ತೆರಿಗೆಯಿಂದ ಮುಕ್ತವಾಗಿವೆಯೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತಿದ್ದರು.

ಕನ್ನಡ ಕಾವ್ಯಗಳಲ್ಲಿ ಉಂಬಳಿಯ ಬಗೆಗೆ ಕೆಲವು ಉಲ್ಲೇಖಗಳು ದೊರೆಯುತ್ತವೆ. 'ಇವರೆಲ್ಲರು ಆಡುವ ಅಂದಣಗಿತ್ತಿಯ ಮನೆಯ ಉಂಬಳಿಕಾರರಾದರು' (ಮೋ. ಮಾರಯ್ಯವ ವಚನ, 159-196), 'ಜಕ್ಕಣಾಚಾರ್ಯರಿಗೆ ರತ್ನಾಭರಣಗಳಂ ತ್ರಿಸರರುದ್ರಕಂಕಣವ ದಿವ್ಯ ವಸನಗಳ ವಾಹನ ವೈದುಗ್ರಾಮಗಳ ವುಮ್ಮಳಿ ಕೊಟ್ಟು' (ಪೌಢರಾಯನ ಕಾವ್ಯ, 21-33) 'ನಡುಗದಿರು ನಿನಗುಂಬಳಿಯ ನಾ ಕೊಡುವೆ' (ಜಿನಭಾರತ, 15-31).

ವಿ.ಕೆ.


ಉಡುಪಿ ಜಿಲ್ಲೆಯ ಕೃಷಿ ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲೊಂದಾದ ಉಡುಪಿ ಜಿಲ್ಲೆ 24-08-1997ರಂದು ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕ ಜಿಲ್ಲೆಯಾಗಿ ನಾಮಕರಣಗೊಂಡಿತು. ಈ ಜಿಲ್ಲೆ ಕರ್ನಾಟಕದ ನೈಋತ್ಯ ಭಾಗದಲ್ಲಿದ್ದು ಉತ್ತರದಲ್ಲಿ ಉತ್ತರ ಕನ್ನಡ, ಶಿವಮೊಗ್ಗ, ಪೂರ್ವದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು, ದಕ್ಷಿಣಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಪಶ್ಚಿಮಕ್ಕೆ ಭೋರ್ಗರೆಯುವ ಸಮುದ್ರವಿದೆ. ಜಿಲ್ಲೆಯಲ್ಲಿ ಕಾರ್ಕಳ, ಉಡುಪಿ, ಕುಂದಾಪುರ ಎಂಬ ಮೂರು ತಾಲ್ಲೂಕುಗಳಿವೆ.

ಮೇಲ್ಮೈ ಲಕ್ಷಣ : ಪ್ರಾಕೃತಿಕವಾಗಿ ಜಿಲ್ಲೆಯನ್ನು ಕರಾವಳಿ ಪ್ರದೇಶ, ಒಳನಾಡು ಅಥವಾ ಮಧ್ಯಬಯಲು ಪ್ರದೇಶ, ಮಲೆನಾಡು / ಪಶ್ಚಿಮ ಘಟ್ಟಗಳ ಪ್ರದೇಶ ಎಂದು ವಿಭಾಗಿಸಲಾಗಿದೆ. ಕುಂದಾಪುರ - ಉಡುಪಿ ತಾಲೂಕುಗಳ ಪಶ್ಚಿಮದಲ್ಲಿ 98 ಕಿ.ಮೀ. ಉದ್ದದ ಕರಾವಳಿ ಪ್ರದೇಶವಿದೆ. ಶೇ. 75 ಮಧ್ಯಬಯಲು ಪ್ರದೇಶವಿದೆ. ಕುಂದಾಪುರ ಕಾರ್ಕಳ ತಾಲೂಕುಗಳ ಈಶಾನ್ಯ ಭಾಗ ಮಲೆನಾಡು ಪ್ರದೇಶವಾಗಿದೆ. ಜಿಲ್ಲೆಯ ಭೂಪ್ರದೇಶ ಏರುಪೇರಿನಿಂದ ಕೂಡಿದ್ದು ಎಲ್ಲೆಡೆ ಹಸುರೇ ತುಂಬಿದೆ. ಪೂರ್ವದ ಗಡಿಯಲ್ಲಿ ದಟ್ಟವಾದ ಕಾಡಿದ್ದು ಪಶ್ಚಿಮ ಘಟ್ಟದ ಶ್ರೇಣಿಗಳಿವೆ. ಮಧ್ಯೆ ಮಧ್ಯೆ ಬೆಟ್ಟ ಗುಡ್ಡಗಳಿದ್ದು ಸಮತಟ್ಟಾದ ನೆಲ ಬಹಳ ಕಡಿಮೆ. ಕರಾವಳಿ ತೀರದಲ್ಲಿಜನಸಾಂಧ್ರತೆ ಹೆಚ್ಚಿದ್ದು ಆರ್ಥಿಕ ಚಟುವಟಿಕೆಗಳಿಂದ ಕೂಡಿದ ಪ್ರದೇಶವಾಗಿದೆ.

ಜಿಲ್ಲೆಯ ವಿಸ್ತೀರ್ಣ : ಜಿಲ್ಲೆ ಒಟ್ಟು ವಿಸ್ತೀರ್ಣ 3880 ಚ.ಕಿ.ಮೀ. ಇದ್ದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ. 2.087 ರಷ್ಟಾಗಿದೆ. 9 ಹೋಬಳಿಗಳಿದ್ದು 248 ಜನವಸತಿ ಇರುವ ಗ್ರಾಮಗಳಲ್ಲಿ 146 ಗ್ರಾಮಪಂಚಾಯಿತಿ ಮತ್ತು 1 ನಗರಸಭೆ ಹಾಗೂ ಎರಡು ಪುರಸಭೆಗಳಿವೆ. ಒಂದು ಪಟ್ಟಣ ಪಂಚಾಯಯಿತಿ ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕ ಸರಕಾರ ರೂಪಿಸಿರುವ 4 ಆಡಳಿತ ವಿಭಾಗದಲ್ಲಿ ಉಡುಪಿ ಜಿಲ್ಲೆ ಮೈಸೂರು ವಿಭಾಗಕ್ಕೆ ಸೇರುತ್ತದೆ.

ಹವಾಗುಣ : ಸಮುದ್ರಮಟ್ಟಕ್ಕಿಂತ ಹೆಚ್ಚು ಎತ್ತರವಲ್ಲದ ಭೂಪ್ರದೇಶ ಇದಾಗಿದ್ದು ವರ್ಷದ ಬಹುಭಾಗ ಮೈಯಲ್ಲಿ ಬೆವರೂರಿಸುವ ಉಷ್ಣಾಂಶ ಮತ್ತು ತೇವಾಂಶದಿಂದ ಕೂಡಿದ ಸೆಕೆ ಇರುತ್ತದೆ. ಕರಾವಳಿ ವಲಯದಲ್ಲಿ ತೇವವುಳ್ಳ ವಾಯುಗುಣ, ಘಟ್ಟ ಪ್ರದೇಶಗಳಲ್ಲಿ ತಂಪಾದ ಹವಾಗುಣವಿದ್ದರೆ ಪಶ್ಚಿಮ ಕರಾವಳಿಯಲ್ಲಿ ಬೆಚ್ಚನೆ ಹವಾಗುಣವಿದೆ. ಸಾಮಾನ್ಯವಾಗಿ ವರ್ಷದಲ್ಲಿ ಹೆಚ್ಚಿನ ಅವಧಿ ಉಷ್ಣಾಂಶ ಶೇ. 78 ವರೆಗಿರುತ್ತದೆ.

ಮಳೆ : ಜಿಲ್ಲೆಯಲ್ಲಿ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈಋತ್ಯ ಮಾರುತ, ಅಕ್ಟೋಬರ್‌ನಿಂದ ಜನವರಿ ತನಕ ಈಶಾನ್ಯ ಮಾರುತದ ಮಳೆಯಾಗುತ್ತದೆ. ಜಿಲ್ಲೆಯಲ್ಲಿ ಸುಮಾರು 28 ಮಳೆ ಕೇಂದ್ರಗಳಿವೆ.



ಜಿಲ್ಲೆಯ ವಾಡಿಕೆ ಮಳೆ 4182 ಮಿ.ಮೀ. ಆಗಿದ್ದು ಕಾರ್ಕಳ ತಾಲೂಕು ಅತೀ ಹೆಚ್ಚು 4827 ಮಿ.ಮೀ. ವಾಡಿಕೆ ಮಳೆ ಇದ್ದು ಕುಂದಾಪುರ 3788 ಮಿ.ಮೀ. ಉಡುಪಿ ತಾಲೂಕು 3939 ಮಿ.ಮೀ. ಆಗಿರುತ್ತದೆ. 2001ರಂದು 4170 ಮಿ.ಮೀ. ಮಳೆ ಇದ್ದರೆ 2010 ರಲ್ಲಿ 4848ಮಿ.ಮೀ. ಆಗಿದೆ. ಜಿಲ್ಲೆಯಲ್ಲಿ ವಾರ್ಷಿಕ ಒಟ್ಟು ಸರಾಸರಿ ಮಳೆ 4993 ಮಿ.ಮೀ. ರಷ್ಟು ಬೀಳುತ್ತಿದೆ.

ಪ್ರಾದೇಶಿಕವಾಗಿ ಜನರು ಮಳೆಯ ಸ್ವರೂಪವನ್ನು ನಕ್ಷತ್ರಕ್ಕನುಗುಣವಾಗಿ ಹೇಳುವ ಪದ್ಧತಿ ಜಿಲ್ಲೆಯಲ್ಲಿ ಕಾಣುತ್ತೇವೆ. "ರೋಹಿಣಿ ಮಳಿ ದೋಣಿ ಹಾಕ್ಸತ್ತ್ ; ಭರಣಿ ಮಳಿ ಬಂದ್ರೆ ಧರಣಿ ಆಳ್‌ಲಕ್ಕ್ ; ಕೃತ್ತಿಕೆ ಬಂದರೆ ಕೂತು (ಕುಳಿತು) ಉಣ್ಲಾಕ್ಕ್ ; ಮೃಗಶಿರದಲ್ಲಿ ನೆಟ್ಟರೆ ಮಿಗ ತಿಂದ್ರೂ ಹಾಳಾತಿಲ್ಲೆ ; ಆದ್ರ ಮಳಿ ಬಂದ್ರೆ ಆದಷ್ಟೂ ಬೆಳೆ ಕೊಡತ್ತ್ ; ಆದ್ರ ಮಳಿ ಅರೆ ಮಡಲಲ್ಲಿ ಹೊಡೆದ್ಹಾಂಗೆ ; ಮಗೆ ಮಳಿ ಮಗ್ಗ್ದ್ ಮಗ್ಗ್ದ್ ಸುರದ್ಹಾಂಗೆ ; ಹುಬ್ಬ ಮಳಿ ಅಬ್ಬೀ ಹಾಲ್ ಕುಡದ್ಹಾಂಗೆ ; ಉತ್ತರೆ ಮಳಿ ಒತ್ತರಿ ಮಾಡತ್ತ್ : ಆಶ್ಲೀ ಮಳಿ ಆಸಿ ಇಲ್ಲದೇ ಬತ್ತತ್ತ್ ; ವಿಷಾಕಾ ಮಳಿ ವಿಷ ಜಂತು ಜಾಸ್ತಿ ಆತ್ತ್ ; ಅನುರಾಧಾ ಮಳಿ ವಿಷ ಜಂತು ಕಡಿಮೆ ಆತ್ತ್" ಹೀಗೆ ಹಳ್ಳಿಯ ಜನರು ಮಳೆ ಲಕ್ಷಣವನ್ನು ಇಂದಿಗೂ ಹೇಳುತ್ತಿರುತ್ತಾರೆ. ವಿಶೇಷವೆಂಬಂತೆ ಜಿಲ್ಲೆಯಲ್ಲಿ ಬಿದ್ದ ಮಳೆ ಕೆರೆ ಹಳ್ಳಗಳನ್ನು ತುಂಬಿ ತೋಡು, ಸಾರ್ (ದೊಡ್ಡ ತೋಪು) ಹೊಳೆ, ನದಿಗಳಲ್ಲಿ ಹರಿದು ಬಹುಪಾಲು ಅರಬ್ಬೀ ಸಮುದ್ರವನ್ನು ಸೇರುತ್ತದೆ.

ಕೃಷಿ ಭೂಮಿ ವಿಸ್ತೀರ್ಣ : ಜಿಲ್ಲೆಯ ಜನರ ಪ್ರಧಾನ ಉದ್ಯೋಗ ವ್ಯವಸಾಯ. ಸುಮಾರು ಶೇ. 82 ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದು ಹೆಚ್ಚಿನವರು ಕೃಷಿಯನ್ನು ಅವಲಂಬಿಸಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 1, 97,401 ಕೃಷಿ ಹಿಡುವಳಿದಾರರಿದ್ದು ಸುಮಾರು 3.56 ಲಕ್ಷ ಹೆಕ್ಟೇರು ಭೌಗೋಳಿಕ ಪ್ರದೇಶವಿದೆ. ಇದರ ಪೈಕಿ 1.00 ಲಕ್ಷ ಹೆ. ಅಂದರೆ ಶೇ. 28 ರಷ್ಟು ನಿವ್ವಳ ಸಾಗುವಳಿಯಾದ ಪ್ರದೇಶವಾಗಿದೆ.

ಭೂ ಹಿಡುವಳಿದಾರರು : ಜಿಲ್ಲೆಯಲ್ಲಿ 197401 ಭೂಹಿಡುವಳಿಗಳಿದ್ದು 154704 ಹೆ. ಭೂಮಿಯನ್ನು ಹಿಡುವಳಿದಾರರು ಹೊಂದಿರುವರು. ಇದರಲ್ಲಿ 5577 ಪರಿಶಿಷ್ಟರು 2580ಹೆ. ವಿಸ್ತೀರ್ಣ, 6264 ಪರಿಶಿಷ್ಟ ಪಂಗಡದವರು 4986 ಹೆ. ವಿಸ್ತೀರ್ಣ ಹೊಂದಿರುವರು. ಜಿಲ್ಲೆಯಲ್ಲಿ ಭೂ ಹಿಡುವಳಿಗಳ ಸರಾಸರಿ ಗಾತ್ರ 0.78 ಹೆ. ಆಗಿದ್ದು ಒಟ್ಟು ಹಿಡುವಳಿಗಳ ಪೈಕಿ ಶೇ. 91 ರಷ್ಟು ಸಣ್ಣ ಮತ್ತು ಅತೀ ಸಣ್ಣ ಹಿಡುವಳಿಗಳಾಗಿವೆ. 153636 ಅತೀಸಣ್ಣ ರೈತರು 49.367 ಹೆ.ವಿ., 25683 ಸಣ್ಣ ರೈತರಿದ್ದು 35869 ಹೆ.ವಿ. 4493 ಮಧ್ಯಮ ರೈತರು 25421 ಹೆ.ವಿ. ಮತ್ತು 447 ದೊಡ್ಡ ರೈತರು 7088 ಹೆ.ವಿ. ಹೊಂದಿರುತ್ತಾರೆ. 1985 - 86 ರಿಂದ 2005 - 06 ರವರೆಗೆ ಕೃಷಿ ಗಣತಿ ಅಂಕಿ ಅಂಶಗಳನ್ನು ಗಮನಿಸಿದಾಗ ಸಾಮಾಜಿಕ ವರ್ಗವಾರು ಹಿಡುವಳಿಗಳ ಸಂಖ್ಯೆಯಲ್ಲಿ ಶೇ. 69 ಏರಿಕೆಯಾಗಿದ್ದು ಇವು ಭೂಹಿಡುವಳಿಗಳ ವಿಭಾಗವಾಗಿ ಇದೆಯೇ ಹೊರತು ಕೃಷಿ ಉದ್ದೇಶಕ್ಕಾಗಿ ಬಳಸಲಾದ ಹೆಚ್ಚುವರಿ ಹಿಡುವಳಿಗಳು ಕಡಿಮೆ.

ಭೂ ಉಪಯೋಗ : ಜಿಲ್ಲೆಯ ಒಟ್ಟು ಭೌಗೋಳಿಕ ವಿ. 3.56 ಲಕ್ಷ ಹೆ.ರಾಗಿದ್ದು 2010 - 11ರ ವಾರ್ಷಿಕ ಋತು ಮತ್ತು ಬೆಳೆಯ ವರದಿಗಳ ಪ್ರಕಾರ ಜಿಲ್ಲೆಯಲ್ಲಿ 1.00 ಲಕ್ಷ ಹೆ. ಅರಣ್ಯ ಪ್ರದೇಶ, 0.51 ಲಕ್ಷ ಹೆ. ಜಮೀನು ಸಾಗುವಳಿಗೆ ಲಭ್ಯವಲ್ಲದ ಕೃಷಿಯೇತರ ಉದ್ದೇಶಗಳಿಗೆ ಬಳಸಿದ ಜಮೀನು, 0.94 ಲಕ್ಷ ಹೆ. ಭೂಮಿ ಸಾಗುವಳಿ ಮಾಡದಿರುವ ಇತರ ಜಮೀನು, 0.11 ಲಕ್ಷ ಹೆ. ಬೀಳು ಭೂಮಿ ಹಾಗೂ 1 ಲಕ್ಷ ಹೆ. ನಿವ್ವಳ ಸಾಗುವಳಿಯಾಗಿರುವ ಪ್ರದೇಶವಾಗಿದೆ.

ಕೃಷಿಗೆ : 2010 - 11 ನೇ ಸಾಲಿನಲ್ಲಿ ಕುಂದಾಪುರ ತಾಲೂಕಿನಲ್ಲಿ ಸುಮಾರು 41787 ಹೆ., ಕಾರ್ಕಳ 24046 ಹೆ., ಉಡುಪಿ 33988 ಹೆ., ಒಟ್ಟು 99821 ಹೆ.ಗಳಲ್ಲಿ ಭೂಮಿಯು ಬಿತ್ತನೆ ಬೆಳೆಗೆ ಲಭ್ಯವಾಗಿತ್ತು. ಐದು ವರ್ಷಗಳಲ್ಲಿ ತಾಲ್ಲೂಕುವಾರು 2006-07 ರಲ್ಲಿ ಬಿತ್ತನೆಗೆ 100018 ಹೆ., 2010-11ರಲ್ಲಿ 99713 ಹೆ. ಕೃಷಿಗೆ ಬಳಕೆಯಾಗಿದೆ.

2006-07 ಅರಣ್ಯಕ್ಕೆ 100102 ಹೆ. 2010-11 ರಲ್ಲಿ 100102 ಹೆ.

2006-07 ವ್ಯವಸಾಯೇತರ 39168 ಹೆ. 2010-12 ರಲ್ಲಿ 39602 ಹೆ.

2006-07 ವೃಕ್ಷ ಮತ್ತು ತೋಪು 10627 ಹೆ. 2010-12 ರಲ್ಲಿ 46966 ಹೆ.

2006-07 ವ್ಯವಸಾಯೇತರ 39168 ಹೆ. 2010-11 ರಲ್ಲಿ 39602 ಹೆ.

2006-07 ಸಾಗುವಳಿಗೆ ಯೋಗ್ಯ ಬಂಜರು 36727 ಹೆ. 2010-12 ರಲ್ಲಿ 36965. ಹೆ. ಹಾಗೆಯೇ ಖಾಲಿ ಇದೆ. 2006-07 ಗೋಮಾಳಕ್ಕೆ ಬಳಸುವ ನೆಲ 10627 ಹೆ. 2010-11ರಲ್ಲಿ 10625 ಹೆ. ಬಳಕೆಯಾಗುತ್ತಿದೆ.

2006-07 ಬೀಳು ಭೂಮಿ 10470 ಹೆ. 2010-11 ರಲ್ಲಿ 9678 ಹೆ. ಇದೆ.

ಒಟ್ಟು ಕೃಷಿಗೆ ಉಪಯೋಗಿಸುವ ಭೂಮಿಯನ್ನು ಗಮನಿಸಿದಾಗ ಕೃಷಿಯೇತರ ಉಪಯೋಗದ ಬಳಕೆ ಜಾಸ್ತಿ. ತೋಟಗಾರಿಕೆ, ಪ್ಲಾಂಟೇಶನ್ ಬೆಳೆಗಳ ವಿಸ್ತೀರ್ಣ ಜಾಸ್ತಿಯಾಗಿದ್ದರೂ ಕೃಷಿ ಬೆಳೆಗಳ ವಿಸ್ತೀರ್ಣ ಕಡಿಮೆಯಾಗಿರುವುದರಿಂದ ಜಿಲ್ಲೆಯ ನಿವ್ವಳ ಬಿತ್ತನೆ ಪ್ರದೇಶದಲ್ಲಿ ಕಡಿಮೆಯಾಗಿದೆ. ಜಿಲ್ಲೆಯಲ್ಲಿ 36965 ಹೆ. ಪ್ರದೇಶ ಸಾಗುವಳಿ ಯೋಗ್ಯ. ಬಂಜರು ಪ್ರದೇಶದಲ್ಲಿಯೂ ತೋಟಗಾರಿಕಾ ಬೆಳೆ, ವಾಣಿಜ್ಯ ಬೆಳೆ ಬೆಳೆಸಲು ವಿಪುಲ ಅವಕಾಶವಿದೆ.

ಭೂಗುಣ :

ವಿವಿಧ ನೆಲಗಳು : ಉಡುಪಿ ಜಿಲ್ಲೆಯ ಭೂಮಿ ಏರು ತಗ್ಗು, ಗುಡ್ಡ - ಬೆಟ್ಟಗಳಿಂದ ಕೂಡಿದ್ದು ನಂಜ, ಪುಂಜ, ಭಾಗಾಯ್ತು ಮತ್ತು ಬೆಟ್ಟ್ ಪ್ರದೇಶಗಳೆಂದು ವಿಭಾಗಿಸಬಹುದು. (ನಂಜ = ಯಾವಾಗಲೂ ನೀರಿರುವ ಭೂಮಿ, ಪುಂಜ = 6 ತಿಂಗಳು ಮಾತ್ರ ನೀರಿರುವುದು

ಇಲ್ಲಿ ಮರಗಳು ಮಾತ್ರ ಬೆಳೆಯುತ್ತವೆ, ಭಾಗಾಯ್ತು = ತೋಟಗಳಿಗೆ ಮಾತ್ರ ಸೀಮಿತ, ಬೆಟ್ಟ್ = ನೀರೇ ಇಲ್ಲದಿರುವ ಎತ್ತರದ ಪ್ರದೇಶ)

ಮಣ್ಣು : ಜಿಲ್ಲೆಯ ಮಣ್ಣು ಮೂರು ವಿಧದ ಲಕ್ಷಣ ಹೊಂದಿದೆ. ಸಮುದ್ರ ತೀರದಲ್ಲಿ ಫಲವತ್ತಾದ ಹೊಯ್ಗೆ ಮಿಶ್ರಿತ ಮಣ್ಣಿದೆ. ಅದರಲ್ಲೂ ಮೆಕ್ಕಲು ಮಣ್ಣಿರುವ ಪ್ರದೇಶಕ್ಕೆ ಮೆಕ್ಕಿ ತಾರ್ ಎನ್ನುವರು. ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣು ಮಕ್ಕಿ ತಾರ್, ಕಬ್ಬಿಣ, ಅಲ್ಯುಮಿನಿಯಂ ಅಂಶವುಳ್ಳ ಲ್ಯಾಟರೈಟ್ ಮಣ್ಣು ಕಂಡುಬರುತ್ತದೆ. ಹೆಚ್ಚು ಮಳೆ ಇಲ್ಲಿ ಬೀಳುವುದರಿಂದಾಗಿ ತೇವವನ್ನು ಹಿಡಿದುಕೊಳ್ಳುವ ಶಕ್ತಿ ಈ ಮಣ್ಣಿಗೆ ಇರುವುದಿಲ್ಲ. ಈ ಮಣ್ಣು ಆಮ್ಲದಿಂದ ಕೂಡಿದ್ದು ಸಾರಜನಕ ಮತ್ತು ರಂಜಕವನ್ನೊಳಗೊಂಡು ಫಲವತ್ತತೆ ಕಂಡುಬರುತ್ತದೆ. ಕೆಲವೆಡೆ ಅಂಟುಮಣ್ಣು ಕೆಂಪ್ ತಾರ್ ಇದ್ದು ಸುಗ್ಗಿ ಬೆಳೆಗೆ ಮಾತ್ರ ಉಪಯೋಗವಾಗುವ ಮಣ್ಣು ಇದಾಗಿದೆ.

ಕಾಡುಗಳು : ಜಿಲ್ಲೆಯ ಉತ್ತರ ಪೂರ್ವಕ್ಕೆ ಪಶ್ಚಿಮ ಘಟ್ಟಗಳ ಪ್ರದೇಶವಾಗಿದ್ದು ದಟ್ಟ ಅರಣ್ಯ ಪ್ರದೇಶ ಮತ್ತು ವೈವಿಧ್ಯ ಸಸ್ಯ ಸಂಪತ್ತು ಹೊಂದಿದೆ. ಇದರಿಂದಾಗಿ ಉತ್ತಮ ಮಳೆಯಾಗಿ ನೀರಿನ ಪೂರೈಕೆ ಚೆನ್ನಾಗಿದೆ. ಕಾಡುಗಳಲ್ಲಿ ಬೆಲೆಬಾಳುವ ಮರಗಳು, ಅರಣ್ಯೋತ್ಪನ್ನಗಳು, ಔಷಧೀಯ ಗಿಡಮೂಲಿಕೆಗಳು ಇವೆ. ಮೋಪಿಗಾಗಿ (ಮನೆ ಕಟ್ಟಲು) ಮುಂಜೋಟಿ, ನಂದಿಮರ, ಸಾಂಚಿ, ತಾರಿಮರ, ಮರ್ವಾ, ನೇತ್ರೋಳಿ, ಹೊನ್ನೆ ಮತ್ತು ಸಿರಿಹೊನ್ನೆ, ಪಾಲೆ, ಮತ್ತಿ, ಹಾಲೆಮರ, ಸಾಗುವಾನಿ, ಗಂಧ, ನೀಲಗಿರಿ ಇತ್ಯಾದಿ ಮರಗಳಿವೆ. ಚಾರದಮರ, ಹೊಂಗಾರ, ಹುಣೆಲ್ ಬ್ಯಾಗೆ ಮರ ಇನ್ನೂ ಹಲವು ಔಷಧೀಯ ಗಿಡಮೂಲಿಕೆಗಳಿವೆ. ಹಣ್ಣುಗಳಲ್ಲಿ ಜಡ್ ಮುಳ್ಳು, ನೇರಳೆ, ಬೆಳ್ ಮಾರ್, ಜಂಬುನೇರಳೆ, ಬನ್ನೇರಳೆ, ಸಾಣೆಲ್, ಗರ್ಚನ್ ಹಣ್ಣು, ಚಾಪೆ ಹಣ್ಣು, ಈಂಚಲು ಹಣ್ಣು, ಸೊಳ್ಳೆ, ಹಣ್ಣು ಇತ್ಯಾದಿ ಹೇರಳವಾಗಿ ಬೇಸಗೆಯಲ್ಲಿ ಸಿಗುತ್ತವೆ.

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 356446 ಹೆ.ಗಳಲ್ಲಿ 100102 ಹೆ. ಅಂದರೆ ಶೇ. 28 ಪ್ರದೇಶ ಅರಣ್ಯದಿಂದ ಕೂಡಿದೆ. ಮೂಕಾಂಬಿಕಾ ಮತ್ತು ಸೋಮೇಶ್ವರ ಅಭಯಾರಣ್ಯ ಪ್ರಾಣಿ ಪಕ್ಷಿಗಳಿಗೆ ಆಶ್ರಯತಾಣವಾಗಿದೆ.

ನೀರಾವರಿ ಸೌಕರ್ಯಗಳು : ಜಿಲ್ಲೆಯಲ್ಲಿ ಸಾಮಾನ್ಯವಾಗಿ ಕೆರೆಗಳಿಂದ, ಬಾವಿಗಳಿಂದ, ಕೊಳವೆ ಬಾವಿಗಳಿಂದ ಏತ ನೀರಾವರಿಯಿಂದ ಹಾಗೂ ಮಳೆಯಾಶ್ರಿತ ಬಿತ್ತನೆ ಕಂಡುಬರುತ್ತದೆ. ಇತ್ತೀಚೆಗೆ ವಿದ್ಯುತ್ ಪಂಪ್ಸೆಟ್ಟುಗಳ ನೀರಾವರಿ ಜಾಸ್ತಿಯಾಗಿದೆ.

2006-07 ರಿಂದ 2010-11ರಲ್ಲಿ ವಿವಿಧ ಮೂಲಗಳಿಂದ ನೀರಾವರಿ ವಿವರ :

ಕೆರೆಗಳಿಂದ - 2006-07 ರಲ್ಲಿ 1467 ಹೆ.ವಿ. 2010-11 ರಲ್ಲಿ 823 ಹೆ.ವಿ.

ಬಾವಿಗಳಿಂದ - 2006-07 ರಲ್ಲಿ 21468 ಹೆ.ವಿ. 2010-11 ರಲ್ಲಿ 24465 ಹೆ.ವಿ.

ಕೊಳವೆ ಬಾವಿಗಳಿಂದ - 2006-07 381 ಹೆ.ವಿ. 2010-11ರಲ್ಲಿ 562 ಹೆ.ವಿ.

ಏತನೀರಾವರಿಯಿಂದ - 2006-07 2896 ಹೆ.ವಿ. 2010-11ರಲ್ಲಿ 3344 ಹೆ.ವಿ.

ಇತರ ಮೂಲಗಳಿಂದ - 2006-07 7367 ಹೆ.ವಿ. 2010-11ರಲ್ಲಿ 6251 ಹೆ.ವಿ.

ನೀರಾವರಿಯಲ್ಲಿ ರೈತರು ಅಂತರ್ಜಲ, ಬಾವಿ, ಕೊಳವೆ ಬಾವಿಗಳಿಗೆ ಅವಲಂಬಿಸಿರುವುದು ಕಂಡುಬರುತ್ತದೆ. ಜೊತೆಗೆ ಕೆರೆಗಳು ತೋಡು, ಝರಿಗಳಿಂದ ನೀರಾವರಿಯಾಗುತ್ತಿರುವ ಪ್ರಮಾಣ ಕಡಿಮೆಯಾಗುತ್ತಿರುವುದು ಗಮನಿಸಬಹುದು.

ದೇಶೀ ನೀರಾವರಿ : ರೈತರು ಕೃಷಿ ಮಾಡುವಾಗ ಸುಗ್ಗಿ ಮತ್ತು ಕೊಳ್ಕೆ ಬೆಳೆಗೆ ನೀರಾವರಿಯ ವಿವಿಧ ವಿಧಾನಗಳಿಂದ ನೀರನ್ನು ಹಾಯಿಸುತ್ತಾರೆ. ನದಿಗೆ / ತೋಡಿಗೆ ಕಟ್ (ಮಣ್ಣಿನ ಕಟ್ಟು) ಹಾಕಿ ಬಳಿಕ ನೀರನ್ನು ಗದ್ದೆಗೆ ಹರಿಯುವಂತೆ ಮಾಡುತ್ತಾರೆ. ಅಲ್ಲದೆ ಇತರ ಕೆಲವು ವಿಧಾನಗಳು ಈ ಕೆಳಗಿನಂತಿವೆ.

ವಾಂದೆ ನೀರ್ : ಮೂರು ಗೂಟ (ಮರದ) ಹುಗಿದು ಅದಕ್ಕೆ ಮರದಿಂದ ಅಥವಾ ಬಯಣೆ ಮರದ ಹಾಳೆಯಿಂದ ಮಾಡಿದ ವಾಂದೆಯನ್ನು ಮಧ್ಯೆ ಇಳಿ ಬಿಟ್ಟು ಒಬ್ಬರೇ ನೀರನ್ನು ಹಾಯಿಸುವರು.

ಸಂಬಳಿಗೆ ನೀರ್ : ತಗಡಿನ ಡಬ್ಬಕ್ಕೆ ಎರಡೂ ಕಡೆಗೆ ಹಗ್ಗ ಕಟ್ಟಿ ಇಬ್ಬರು ಹಿಡಿದುಕೊಂಡು ನೀರನ್ನು ಗದ್ದೆಗೆ ಹಾಯಿಸುವರು.

ದೊಟ್ಟೆ ನೀರ್ : ಮರದ / ತಾಮ್ರದ / ಹೊನ್ನೇ ಮರದ ದೊಟ್ಟೆಯನ್ನು (ಮರೆಯಿ - ತುಳು) ಬಳಸುವರು.

ಒಯ್ ಹಣೆ (ಏತ) ದೊಟ್ಟೆ : ಏತದ ಒಂದು ಭಾಗದಲ್ಲಿ ಒಬ್ಬರು / ಇಬ್ಬರು ಹಗ್ಗದಿಂದ ಎಳೆಯುವ ವ್ಯವಸ್ಥೆ ಇರುತ್ತದೆ. ಇನ್ನೊಂದು ಭಾಗದಲ್ಲಿ ದೊಟ್ಟೆ ಕಟ್ಟಿದ ಗಳವನ್ನು (ಬೋಗಿ ಅಥವಾ ತೆಮೆಯ ಉದ್ದಕೋಲು) ಇನ್ನೊಬ್ಬ ಹಿಡಿದು ನೀರು ಹಾಯಿಸುವರು. ಕೆಲವೊಮ್ಮೆ ಮನೆಯಲ್ಲಿ ಬಾವಿಯಿಂದ ನೀರೆತ್ತಲು, ತೋಟಕ್ಕೆ ಹಾಯಿಸಲು ಇದೇ ಪದ್ಧತಿ ಬಳಸುವರು.

ಮೆಟ್ಟ್ ಹಣೆ (<ಪಣೆ (ತುಳು) = ಏತ) : ಗೋಳಿ / ಬೂರ್ನ ಮರದ ಕವಲಿಗೆ (ಕೊಂಬೆ) ಅಡ್ಡ ತೊಲೆ ಹಾಕಿ ಮಧ್ಯೆ ಕೀಲು ಹೊಡೆಯುವರು. ತೊಲೆಯ ಒಂದು ತುದಿಗೆ ಗಳ ಕಟ್ಟುವರು. ಗಳದ ತುದಿ ನೀರು ತಲುಪುವಂತೆ ದೊಟ್ಟೆ ಸಿಕ್ಕಿಸುವರು. ದೊಟ್ಟೆಯಲ್ಲಿ ಎರಡು ಆಳ್ ದೊಟ್ಟೆ, 3/4 ಆಳ್ ದೊಟ್ಟೆ ಎಂಬ ವಿಧಗಳಿವೆ. ಎಳೆಯುವ ಕ್ರಮ ; ಮರದ ಮೇಲಿನ ತೊಲೆಯ ಮೇಲೆ ಇಬ್ಬರು / ಮೂವರು ಮೆಟ್ಟುವವರಿರುತ್ತಾರೆ. ದೊಟ್ಟೆ ಭಾಗದಲ್ಲಿ ಒಂದು ಆಳ್ ನಿಲ್ಲುವರು. ತೊಲೆಯ ಗಳ ಇರು ಬದಿಗೆ ಮೆಟ್ಟಿದಾಗ ನೀರಿನ ತಳಕ್ಕೆ ಹೋಗುತ್ತದೆ. ಅಲ್ಲಿಂದ ವಿರುದ್ಧ ದಿಕ್ಕಿಗೆ ಮೆಟ್ಟಿದಾಗ ಗಳದಲ್ಲಿ ನೀರು ಮೇಲೆ ಬರುತ್ತದೆ. ದೊಟ್ಟೆಯಿಂದ ಹಾಯಿಸಿದ ನೀರು ಹಣೆಮರದ ಹರ್ಣೆಯ ಮೂಲಕ ತೋಟಿಗೆ ಹರಿದು ಗದ್ದೆಗೆ ಹೋಗುವುದು.

ದೊಟ್ಟೆ ಯಂತ್ರ / ಘಟ ಯಂತ್ರ : ಮಣ್ಣಿನ ಮಡಕೆಯ / ಮರದ / ತಗಡಿನ ದೊಟ್ಟೆಯನ್ನು ಮಾಲೆಯಾಕಾರದಲ್ಲಿ ಚಕ್ರಕ್ಕೆ ಕಟ್ಟಿರುತ್ತಾರೆ. ಒಬ್ಬ ಅದನ್ನು ತಿರುಗಿಸಿದಾಗ ದೊಟ್ಟೆಯಲ್ಲಿ ನೀರು

ತುಂಬಿ ಅದು ಮೇಲಕ್ಕೆ ಬಂದಾಗ ಅಗಲವಾದ ಮರದ / ತಗಡಿನ ಹರ್ಣಿಗೆ ನೀರನ್ನು ಸುರಿದು ಕೆಳಕ್ಕೆ ಹೋಗುತ್ತದೆ. ಹೀಗೆ ನಿರಂತರವಾಗಿ ಸುರಿದ ನೀರನ್ನು ತೋಡಿಗೆ ಹಾಯುವಂತೆ ಮಾಡಿರುತ್ತಾರೆ. ಕೆಲವೆಡೆ ಜೋಡು ಎತ್ತುಗಳನ್ನು ಕಟ್ಟಿ ಯಂತ್ರ ತಿರುಗುವಂತೆ ಮಾಡುವ ಪದ್ಧತಿಯೂ ಹಿಂದೆ ಇತ್ತು.

ಬೆಳೆಗಳು : ಜಿಲ್ಲೆಯಲ್ಲಿ ಬತ್ತ ಮುಖ್ಯ ಕೃಷಿ. ಮುಂಗಾರು, ಹಿಂಗಾರು, ಬೇಸಗೆ ಮೂರು ಋತುಗಳಲ್ಲಿ ಬೆಳೆಯುತ್ತಾರೆ. ದ್ವಿದಳ ಧಾನ್ಯಗಳಾದ ಉದ್ದು, ಹೆಸರು, ಹುರುಳಿ, ಅಲಸಂದೆಗಳನ್ನು ಹಿಂಗಾರು ಮತ್ತು ಬೇಸಗೆ ಋತುವಿನಲ್ಲಿ, ನಲಗಡಲೆಯನ್ನು ಹಿಂಗಾರು ಋತುವಿನಲ್ಲಿ ಬೆಳೆಯುವರು. ಹಿಂದೆ ಕಬ್ಬು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಪ್ರಸ್ತುತ ಕನಿಷ್ಠ ಪ್ರಮಾಣದಲ್ಲಿ ಬೆಲ್ಲ ಮತ್ತು ಕಬ್ಬಿನ ರಸಕ್ಕಾಗಿ ಬೆಳೆಸುವರು.

ಆಹಾರ ಮತ್ತು ಆಹಾರೇತರ ಬೆಳೆಗಳು : ಜಿಲ್ಲೆಯಲ್ಲಿ 2006-07 ರಲ್ಲಿ 62427 ಹೆ. ಬತ್ತದ ಬೆಳೆ ಇದ್ದರೆ 2010-11ರಲ್ಲಿ 56339ರಲ್ಲಿ ಕಡಿಮೆಯಾಗಿದೆ. ಕೃಷಿ ಆಳುಗಳ ಕೊರತೆ ಮತ್ತು ಕೃಷಿಗಾಗಿ ತಗುಲುವ ವೆಚ್ಚ ಜಾಸ್ತಿಯಾಗಿರುವುದರಿಂದ ರೈತರು ಬತ್ತದ ಕೃಷಿ ಬಗ್ಗೆ ಒಲವು ತೋರಿಸುತ್ತಿಲ್ಲವೆಂದು ತಿಳಿಯುತ್ತದೆ. ತೆಂಗು, ಅಡಕೆ, ಗೇರು, ರಬ್ಬರ್, ಬಾಳೆ, ಮಾವು, ಕರಿಮೆಣಸಿನಂತಹ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಜಿಲ್ಲೆಯಲ್ಲಿ ಇದರ ಅಂಕಿಅಂಶಗಳನ್ನು ಪರಿಶೀಲಿಸಿದಾಗ ಏಕದಳ ಧಾನ್ಯ 2006-07 ಹೆ. ಇದ್ದರೆ 2010-11 ರಲ್ಲಿ 56359 ಹೆ. ಕಡಿಮೆಯಾಗಿದೆ. ದ್ವಿದಳ ಧಾನ್ಯಗಳು 2006-07 ರಲ್ಲಿ 8590 ಹೆ. ಇದ್ದರೆ 2010-11 ರಲ್ಲಿ 5319 ಹೆ. ಇದೆ. ಎಣ್ಣೆ ಬೀಜಗಳು 2006-07 ರಲ್ಲಿ 2238 ಹೆ. ಇದ್ದರೆ 2010-11 ರಲ್ಲಿ 2171 ಹೆ. ಇದೆ. ಹಣ್ಣುಗಳು 2006-07 ರಲ್ಲಿ 23704 ಹೆ. ಇದ್ದರೆ 2010-11 ರಲ್ಲಿ 23132 ಹೆ. ಇದೆ. ತರಕಾರಿಗಳು 2006-07 ರಲ್ಲಿ 1941 ಇದ್ದರೆ 2010-11ರಲ್ಲಿ 1756 ರಷ್ಟು ಇಳಿಮುಖವಾಗಿದೆ.

ಒಟ್ಟಿನಲ್ಲಿ ಆಹಾರ ಧಾನ್ಯಗಳು ಋತುಕಾಲೀನ ಬೆಳೆಗಳ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದ್ದು ಕೂಲಿ ಆಳುಗಳ ಕೊರತೆ ಮತ್ತು ನಿರ್ವಹಣಾ ವೆಚ್ಚ ಅಧಿಕವಾಗಿರುವುದೇ ಇದಕ್ಕೆ ಕಾರಣವಾಗಿದೆ. ಉಡುಪಿ ತಾ. ನಲ್ಲಿ ಭೌಗೋಳಿಕವಾಗಿ ನಿವ್ವಳ ಬಿತ್ತನೆ ಶೇ. 36 ಇದ್ದು ಕಾರ್ಕಳದಲ್ಲಿ 22.50 % ಅತೀ ಕನಿಷ್ಠವಾಗಿದೆ. ಕುಂದಾಪುರ ಶೇ. 26.70 ಒಟ್ಟು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ 356446 ರಲ್ಲಿ ಕೇವಲ 27.97 (99713) ಬಿತ್ತನೆಯಾಗಿದೆ. ದೊಡ್ಡ ಪ್ರಮಾಣದ ನೀರಾವರಿ ಯೋಜನೆ ಇಲ್ಲದಿರುವುದು, ಮೂರು ಋತುಗಳಲ್ಲಿ ಬೆಳೆ ಬೆಳೆಯಲು ಅನುಕೂಲವಿರುವುದು ವಿಷಾದದ ಸಂಗತಿ.

ಕೃಷಿ ಉತ್ಪಾದನೆ : 2003-04 ರಲ್ಲಿ 62103 ಹೆ.ವಿಸ್ತೀರ್ಣ. ಭೂಮಿಯಲ್ಲಿ 157653 ಟನ್ ಉತ್ಪಾದನೆಯಾಗಿದ್ದು 2672 ಹೆ. ಸರಾಸರಿ ಇಳುವರಿ ಸಿಗುತ್ತಿದೆ. ಅದೇ 2010-11 ರಲ್ಲಿ 56339 ವಿಸ್ತೀರ್ಣ.ಹೆ. ಭೂಮಿಯಲ್ಲಿ 216406 ಟನ್ ಉತ್ಪಾದನೆ ಸಿಗುತ್ತಿದ್ದು 3763 ಕೆ.ಜಿ.ಹೆ.ಗೆ ಸರಾಸರಿ ಇಳುವರಿ ದೊರೆಯುತ್ತಿದೆ.

ತೋಟಗಾರಿಕಾ ಬೆಳೆಗಳು : ತೋಟದ ಬೆಳೆಗಳು : ಜಿಲ್ಲೆಯಲ್ಲಿ ತೆಂಗು, ಅಡಕೆ, ವೀಳ್ಯದೆಲೆ, ತಾಳೆಬೆಳೆಗಳನ್ನು ಬೆಳೆಯಲಾಗುತ್ತಿದೆ. ಕಾರ್ಕಳ ತಾಲೂಕುಗಳಲ್ಲಿ ಅಡಕೆ, ತೆಂಗು, ವೀಳ್ಯದೆಲೆ ಹೆಚ್ಚು ಬೆಳೆದರೆ, ಕುಂದಾಪುರದಲ್ಲಿ ತೆಂಗು ಬೆಳೆಯುವುದು ವಿಶೇಷ. 2006-07 ರಲ್ಲಿ ಮತ್ತು 2010-11ರ ಅಂಕಿ ಅಂಶದಲ್ಲಿ ವ್ಯತ್ಯಾಸ ಹೀಗಿದೆ.

ತೆಂಗು - 2006-07ರಲ್ಲಿ 14956 ಹೆ.ವಿ. - 2010-11ರಲ್ಲಿ 17044 ಹೆ.ವಿ.

ಅಡಕೆ - 2006-07ರಲ್ಲಿ 5174 ಹೆ.ವಿ. - 2010-11ರಲ್ಲಿ 6987 ಹೆ.ವಿ.

ವೀಳ್ಯದೆಲೆ - 2006-07ರಲ್ಲಿ 114 ಹೆ.ವಿ. - 2010-11ರಲ್ಲಿ 132 ಹೆ.ವಿ.

ತಾಳೆ - 2006-07ರಲ್ಲಿ 29 ಹೆ.ವಿ. -2010-11ರಲ್ಲಿ 24 ಹೆ.ವಿ.

ಹಣ್ಣಿನ ಬೆಳೆಗಳು

ಮಾವು -2006-07ರಲ್ಲಿ 1681 ಹೆ.ವಿ. -2010-11ರಲ್ಲಿ 1314 ಹೆ.ವಿ.

ಬಾಳೆ - 2006-07ರಲ್ಲಿ 1224 ಹೆ.ವಿ. - 2010-11ರಲ್ಲಿ 1337 ಹೆ.ವಿ.

ಚಿಕ್ಕು (ಸಪೋಟ) - 2006-07ರಲ್ಲಿ 456 ಹೆ.ವಿ. - 2010-11ರಲ್ಲಿ 368 ಹೆ.ವಿ.

ಪಪ್ಪಾಯ - 2006-07ರಲ್ಲಿ 56 ಹೆ.ವಿ. - 2010-11ರಲ್ಲಿ 43 ಹೆ.ವಿ.

ಹಲಸು - 2006-07ರಲ್ಲಿ 769 ಹೆ.ವಿ. - 2010-11 ರಲ್ಲಿ 627 ಹೆ.ವಿ.

ಅನಾನಸು - 2006-07ರಲ್ಲಿ 139 ಹೆ.ವಿ. - 2010-11ರಲ್ಲಿ 148 ಹೆ.ವಿ.

ಗೋಡಂಬಿ - 2006-07ರಲ್ಲಿ 19313 ಹೆ.ವಿ. - 2010-11ರಲ್ಲಿ 19227 ಹೆ.ವಿ.

ತರಕಾರಿ ಬೆಳೆಗಳು

ಕುಂಬಳಕಾಯಿ 2006-07ರಲ್ಲಿ 182 ಹೆ.ವಿ. -2010-11ರಲ್ಲಿ 129 ಹೆ.ವಿ.

ಮರಗೆಣಸು - 2006-07ರಲ್ಲಿ 393 ಹೆ.ವಿ. 2010-11ರಲ್ಲಿ 256 ಹೆ.

ಗುಳ್ಳ/ಬದನೆ - 2006-07ರಲ್ಲಿ 143 ಹೆ.ವಿ. - 2010-11ರಲ್ಲಿ 116 ಹೆ.ವಿ.

ಬೆಂಡೆಕಾಯಿ - 2006-07ರಲ್ಲಿ 173 ಹೆ.ವಿ. 2010-11ರಲ್ಲಿ 146 ಹೆ.ವಿ.

ತೊಂಡೆಕಾಯಿ 2006-07ರಲ್ಲಿ 91 ಹೆ.ವಿ. 2010-11ರಲ್ಲಿ 78 ಹೆ.ವಿ.

ಚೌಂತಿ / ಸೌತೆಕಾಯಿ - 2006-07ರಲ್ಲಿ 407 ಹೆ.ವಿ. 2010-11ರಲ್ಲಿ 363 ಹೆ.ವಿ.

ಪಡವಲಕಾಯಿ ಮತ್ತು ಹಾಗಲಕಾಯಿಯನ್ನು ಅಲ್ಲಲ್ಲಿ ಬೆಳೆಯುವರು.

ಹೂವಿನ ಬೆಳೆಗಳು

ಸೇವಂತಿಗೆ - 2006-07ರಲ್ಲಿ 36 ಹೆ. 2010-11ರಲ್ಲಿ 22 ಹೆ. ಮಲ್ಲಿಗೆ - 2006-07ರಲ್ಲಿ 265 ಹೆ. 2010-11ರಲ್ಲಿ 294 ಹೆ. ಗುಲಾಬಿ - 2006-07ರಲ್ಲಿ 23 ಹೆ. 2010-11ರಲ್ಲಿ 19 ಹೆ.

ಸಂಬಾರಬೆಳೆಗಳು

ಹುಣಿಸೆ - 2006-07ರಲ್ಲಿ 134 ಹೆ.ವಿ., 2010-11ರಲ್ಲಿ 85 ಹೆ.ವಿ. ಶುಂಠಿ - 2006-07ರಲ್ಲಿ 97 ಹೆ.ವಿ. 2010-11ರಲ್ಲಿ 87 ಹೆ.ವಿ. ಅರಿಸಿನ - 2006-07ರಲ್ಲಿ 78 ಹೆ.ವಿ. 2010-11ರಲ್ಲಿ 73 ಹೆ.ವಿ. ವೆನಿಲಾ - 2006-07ರಲ್ಲಿ 66 ಹೆ.ವಿ. 2010-11ರಲ್ಲಿ 40 ಹೆ.ವಿ. ಕರಿಮೆಣಸು - 2006-07ರಲ್ಲಿ 287 ಹೆ.ವಿ. 2010-11ರಲ್ಲಿ 343 ಹೆ.ವಿ. ಜಾಯಿಕಾಯಿಯನ್ನು ಜಿಲ್ಲೆಯಲ್ಲಿ ಬೆಳೆಯುವರು.

ರೇಷ್ಮೆ ಕೃಷಿ : ಜಿಲ್ಲೆಯಲ್ಲಿ ಪ್ರಸ್ತುತ 28 ಗ್ರಾಮಗಳಲ್ಲಿ 10 ಕುಟುಂಬಗಳು ರೇಷ್ಮೆ ಕೃಷಿಯಲ್ಲಿ ತೊಡಗಿವೆ. 75 ಎಕರೆಯಲ್ಲಿ ಹಿಪ್ಪು ನೇರಳೆ ತೋಟ ಅಭಿವೃದ್ಧಿ 3.811 ಲಕ್ಷ ಮೌಲ್ಯದ 2.242 ಟನ್ ರೇಷ್ಮೆ ಗೂಡನ್ನು ಉತ್ಪಾದಿಸಲಾಗಿದೆ. ರೈತರ ಆರ್ಥಿಕ ಅಭಿವೃದ್ಧಿ ಉತ್ತಮಪಡಿಸುವಲ್ಲಿ ರೇಷ್ಮೆ ಕೃಷಿ ರೈತರಿಗೆ ಕಾಮಧೇನುವಾಗಿದೆ.

ಸಾಂಪ್ರದಾಯಿಕ ಕೃಷಿ ವಿಧಾನಗಳು

ಪುಡಿ > ಹುಡಿ ನೇಜಿ : ಇದಕ್ಕೆ ಹುಡಿ ನೇಜಿ / ಹೊಡಿ ನೇಜಿ/ ಏರು ಪದ್ಧತಿ ಎಂಬ ಹೆಸರೂ ಇದೆ. ನಿರ್ದಿಷ್ಟ ಸ್ಥಳದಲ್ಲಿ ಗೊಬ್ಬರ ಹಾಕಿದ ಪುಡಿ ಮಣ್ಣನ್ನು ರಾಶಿ ಹಾಕಿ ಸಮತಟ್ಟುಗೊಳಿಸುವರು. ಬಳಿಕ ಬೀಂಜ (>ಬೀಜ) ಬಿತ್ತನೆ ಮಾಡಿ ಮೊಳಕೆ ಬರಿಸಿ 40 ದಿನದ ಬಳಿಕ ಕಿತ್ತು ನಾಟಿ ಮಾಡಿ ಇಳುವರಿ ಪಡೆಯುವ ವಿಧಾನವಾಗಿದೆ.

ಕೆಸರ್ ನೇಜಿ : ಈ ಪದ್ಧತಿಗೆ ನೀರ್ ನೇಜಿ / ನೀರ್ ಅಗೆ / ಅಗೆ ಪದ್ಧತಿ ಎಂದೂ ಕರೆಯುವರು. ಗದ್ದೆಯಲ್ಲಿ ಕೆಸರ್(ಅಂಟುಮಣ್ಣು) ಬರುವಂತೆ ಉಳುಮೆ ಮಾಡಿ ನೀರು ನಿಲ್ಲಿಸುವರು. ಈಗಾಗಲೇ ಮೊಳಕೆ ಬರಿಸಿದ ಬೀಜವನ್ನು ಬಿತ್ತಿನೀರು ನಿಲ್ಲಿಸುವರು. ಅಗೆ (=ನೇಜಿ) ದೊಡ್ಡದಾಗುವವರೆಗೆ ಸುಮಾರು 30/40 ದಿನದ ತನಕ ನೀರು ಹಾಯಿಸುವರು. ಬಳಿಕ ನಾಟಿ ಮಾಡುವ ವಿಧಾನ ಇದಾಗಿದೆ.

ಆಧುನಿಕವಾಗಿ 8/12 ದಿನ ಬೆಳೆದ ಗಿಡವನ್ನು "ಶ್ರೀ" ಪದ್ಧತಿಯಲ್ಲಿ ನಾಟಿ ಮಾಡಿ ಹೆಚ್ಚು ಇಳುವರಿ ತೆಗೆಯುವರು.

ಮೊಳಕೆ ಬರಿಸುವ ರೀತಿ : ಬತ್ತವನ್ನು 36 ಗಂಟೆ ನೀರಲ್ಲಿ ನೆನೆಯಿಸಿ ಬಳಿಕ ಒಂದು ದಿನ ಗೋಣಿ ಚೀಲದಲ್ಲಿ ಕಟ್ಟಿ ಇಡುವರು. ಸೆಕೆಗೆ (ಬಿಸಿಲಿನ ತಾಪ) ಬೀಜ ಮೊಳಕೆ ಬರುತ್ತದೆ. "ಗ್ಲಿರಿಸೀಡಿಯಾ" ಸೊಪ್ಪನ್ನು (ನೆಕ್ಕಿ ಮತ್ತು ಗೊಬ್ಬರ ಸೊಪ್ಪು) ಈ ಬೀಜದೊಂದಿಗೆ ಮಿಶ್ರ ಮಾಡಿ ಇಡುವರು. ಸುಮಾರು 5 ದಿನಗಳ ಬಳಿಕ ಇದು ಮೊಳಕೆ ಬರುತ್ತದೆ.

ಇನ್ನೊಂದು ವಿಧಾನವೆಂದರೆ, ಸೆಗಣಿ ನೀರಲ್ಲಿ ಬೀಜವನ್ನು ನೆನೆಯಿಸಿ, ರಾಶಿ ಹಾಕಿ, ನೆಕ್ಕಿ ಸೊಪ್ಪು ಪುಡಿ ಮಾಡಿ ಮಿಶ್ರ ಮಾಡಿ ಗೋಣಿ ಚೀಲದಲ್ಲಿ ಕಟ್ಟಿ ಕಲ್ಲು ಹೇರಿ ಇಡುವರು. ಆಗ ಅದು ಮೊಳಕೆ ಬರುತ್ತದೆ.

ಸಾಲ್ ನೆಟ್ಟಿ : ನಾಟಿ ಮಾಡುವಾಗ ಕಳೆ ತೆಗೆಯಲು ಅನುಕೂಲವಾಗುವಂತೆ ನಿರ್ದಿಷ್ಟ ಅಂತರ ಬಿಟ್ಟು ನೇಜಿ ನೆಡುವುದಾಗಿದೆ. ಕೈ ನೆಟ್ಟಿಯಲ್ಲಿ ಮನ ಬಂದಂತೆ ನೆಟ್ಟರೆ ಮೆಷಿನ್‌ನಿಂದ ಕಳೆ ತೆಗೆಯಲಾಗದು. ಅದೇ ಸಾಲ್ ನೆಟ್ಟಿಯಲ್ಲಿ ಮೆಷಿನ್ ಮೂಲಕ ಕಳೆ ತೆಗೆಯಬಹುದು.

ಕೈನಾಟಿ : ಕೈಗಳಿಂದ ಬತ್ತದ ಪೈರನ್ನು ಗದ್ದೆಯಲ್ಲಿ ನೆಡುವ ವಿಧಾನವೇ ಕೈನಾಟಿಯಾಗಿದೆ. ನೇಜಿಯನ್ನು ಕಿತ್ತು ಒಂದೊಂದು ಸೂಡಿ ಕಟ್ಟಿ ಬಳಿಕ ನೆಡುವ ಗದ್ದೆಯಲ್ಲಿ ಹರಡಿ ಬಳಿಕ ನೆಡುವವರು. ಒಂದೊಂದೇ ಸೂಡಿಯನ್ನು ತೆಗೆದು, ಅದರಿಂದ ಒಂದೊಂದೇ ಹಿಡ್‌ಪ್ (ಪತ್ತ್- ತುಳು) ಬೇರೆ ಮಾಡಿ ನೆಡುವರು. ಹೊಂಡ ಗದ್ದೆಗೆ ಹಿಡ್‌ಪ್(ನೇಜಿಯ ಮುಷ್ಟಿ) ಹೆಚ್ಚು. ಜೊತೆಗೆ ತೆಳುವಾಗಿ ನೆಡಬೇಕು. ಬೈಲ್ ಗದ್ದೆಯಲ್ಲಿ ಹಿಡ್‌ಪ್ ಕಡಿಮೆ, ಆದರೆ ಅಗೆ (ಸಸಿ) ಒತ್ತಾಗಿ ನೆಡಬೇಕು. ಮೆಕ್ಕಿ ಮತ್ತು ಮಕ್ಕಿ ಗದ್ದೆಯಲ್ಲಿ ಒತ್ತೊತ್ತಾಗಿ ನೆಡಬೇಕು. ಸುಗ್ಗಿ ಮತ್ತು ಕೊಳಕೆ ಬೆಳೆಗೆ ಕೆಲವೆಡೆ ಹಿಂಡಿ (ಮುಷ್ಟಿ) ಬೀಜ ಬಿತ್ತುವರು. ಇದರಲ್ಲಿ ಸುಮಾರು 3/4 ಬೀಜಗಳು ಗೊಬ್ಬರವೂ ಇದರೊಂದಿಗೆ ಇರುತ್ತದೆ. ಪೈರು ಹಿಂಡು ಹಿಂಡಾಗಿ ಹುಟ್ಟಿ ಬೆಳೆಯುತ್ತದೆ.

ಆಧುನಿಕವಾಗಿ ಮೆಷಿನ್ ಮೂಲಕ "ಶ್ರೀ" ಪದ್ಧತಿಗಳು ಬಂದದ್ದರಿಂದಾಗಿ ಸಾಂಪ್ರದಾಯಿಕ ಪದ್ಧತಿಗಿಂತ ಅಧಿಕ ಇಳುವರಿಯನ್ನು ರೈತರು ಪಡೆಯುತ್ತಿದ್ದಾರೆ. 8/12 ದಿನದ ಬತ್ತದ ಗಿಡಗಳಿಗೆ ತೆಳು ನೀರು ನಿಲ್ಲಿಸಿದ ವಾರದಲ್ಲೇ ಕಟಾವಿಗೆ ಬರುವುದು. ಇಂದು ಸಾಂಪ್ರದಾಯಿಕ ಪದ್ಧತಿಗಳು ಒಳ ಪ್ರದೇಶಗಳಲ್ಲಿ ಮಾತ್ರ ಕಂಡು ಬರುತ್ತಿವೆ. ಶೇ. 90 ಜನರು ಆಧುನಿಕ ವಿಧಾನಗಳನ್ನೇ ಬಳಸುತ್ತಿದ್ದಾರೆ.

ಪ್ರಾದೇಶಿಕವಾಗಿ ಗದ್ದೆ ಉಳುವ ವಿಧಾನ : ಕಾತಿ ಮತ್ತು ಸುಗ್ಗಿ ಬೆಳೆಗಳಿಗೆ ಆರಂಭದಲ್ಲಿ ಮೂರು ಹೂಂಟಿ (=ಹೂಡುವಿಕೆ / ಉಳುಮೆ) ಮಾಡಬೇಕು. ಮೊದಲ ಹೂಂಟಿಗೆ 'ಅರ್‌ಕ್ಲ್ ಹೂಂಟಿ' ಎನ್ನುವರು. ಗೊಬ್ಬರದೊಂದಿಗೆ ಇದನ್ನು ಎರಡು ಸಾಲು ಹೂಡಬೇಕು. ಎರಡನೇ ಹಂತವನ್ನು 4 ದಿನ ಬಿಟ್ಟು, ಪುನಃ ಉಳುಮೆ ಮಾಡಿ ಹಲಗೆ ಹಾಕಬೇಕು. ಇದಕ್ಕೆ ಉಕ್ಕೆ ಹೂಂಟಿ ಎನ್ನುವರು. ಬಳಿಕ ಒಂದು ದಿನ ಬಿಟ್ಟು ಎರಡು ಸಾಲು ಉಳುಮೆ ಮಾಡಬೇಕು. ಈ ಸಂದರ್ಭದಲ್ಲಿ ನೀರು ಕಡಿಮೆ ಇದ್ದು ಒಣಗಬಾರದು. ಇದಕ್ಕೆ ನೆಟ್ಟಿ ಹೂಂಟಿ ಎನ್ನುವರು.

ಹಳ್ಳಿಯ ಗಾದೆಯೇ ಹೇಳುವಂತೆ "ಕಾತಿಗೆ ಕಾಲ್ ಮುಂದ್, ಸುಗ್ಗಿಗೆ ನೇಲ್ ಮುಂದ್". ಅಂದರೆ ಕಾತಿ ಬೆಳೆಗೆ ಎಷ್ಟು ಬೇಗ ನೆಟ್ಟಿ ಮಾಡುವೆವೋ ಅಷ್ಟು ಒಳ್ಳೇದು. ಏಕೆಂದರೆ ಮಳೆ ಬಂದು ಬಿಟ್ಟರೆ ಮಣ್ಣು ಸಪ್ಪೆಯಾಗಿ ಸಾರ ಕಡಿಮೆಯಾಗುವುದರಿಂದ ಆದಷ್ಟು ಬೇಗನೆ ನೆಡಬೇಕು. ಸುಗ್ಗಿಗೆ ನೇಗಿಲಿನಿಂದ ಉಳುಮೆ ಮಾಡಿ, ಮಣ್ಣು ಹದವಾದಷ್ಟು ಒಳ್ಳೆಯದು ಎಂದು ಇದರ ಅಭಿಪ್ರಾಯ.

ಧಾನ್ಯ ಬಿತ್ತುವ ವಿಧಾನ : ಗದ್ದೆಯಲ್ಲಿ ಉಳುಮೆ ಮಾಡುವಾಗ ನೇಗಿಲಿನ ಹೀಸ್ (ಕಟ್ಟು ಕೋಲ್) ಬಳಸಲ್ (ಸಡಿಲವಾಗಿ) ಕಟ್ಟಿದರೆ ಅಡಿ ಮಣ್ಣು ಮೇಲೇಳುತ್ತದೆ. ಅದೇ ಹತ್ತ (ಬಿಗಿಯಾಗಿ) ಕಟ್ಟಿದರೆ ಮೇಲ್ಭಾಗದ ಮಣ್ಣು ಏಳುತ್ತದೆ. ಬತ್ತದ ನೆಟ್ಟಿಗೆ "ಬಳಸಲ್" ಕಟ್ಟಿದರೆ ಧಾನ್ಯ ಬಿತ್ತುವಾಗ "ಹತ್ತ"

ಕಟ್ಟುತ್ತಿದ್ದರು. ಜೊತೆಗೆ ಹೊಂಡ ಗದ್ದೆಗೆ ಉದ್ದು ಬಿತ್ತುವಾಗ "ಮೆಟ್ಟುದ್ದು" (ಕಾಲು ಹುಗಿಯುವಷ್ಟು ಮೆತ್ತಗಿನ ಮಣ್ಣು) ಹಾಕಬೇಕು. ನೀರಿನ ಪಸೆ (ತಂಪು) ಇಲ್ಲದಿದ್ದರೆ ಉಳುಮೆ ಮಾಡಿಯೇ ಬಿತ್ತಬೇಕು.

ದೇಶೀ ತಳಿಗಳು - ವೈಶಿಷ್ಟ್ಯ : ಜಿಲ್ಲೆಯ ಪ್ರಾಕೃತಿಕ ಭೌಗೋಳಿಕ, ಭೂಗುಣಕ್ಕನುಗುಣವಾಗಿ ಬೀಜಗಳಲ್ಲಿ, ತರಕಾರಿಗಳಲ್ಲಿ ವೈವಿಧ್ಯತೆ ಈ ಹಿಂದೆ ಇತ್ತು. ಇಂದಿನ ವೈಜ್ಞಾನಿಕ - ತಾಂತ್ರಿಕ ಜಗತ್ತಿನ ನಾಗಾಲೋಟದಲ್ಲಿ ಹಳ್ಳಿಗಳಲ್ಲೂ ಇದರ ಸೋಂಕು ತಗಲಿದೆ. ಸೌಲಭ್ಯಕ್ಕಾಗಿ ಹೆಚ್ಚು ಇಳುವರಿಯ ದೃಷ್ಟಿಯಿಂದಾಗಿ ಆಧುನಿಕ ಪ್ರಭಾವಕ್ಕೆ ರೈತರೂ ಒಳಗಾಗಿರುವುದು ವಿಷಾದನೀಯ.

ಬಾಹ್ಯಾಕಾರಾದಲ್ಲಿ ಚಿಕ್ಕದು ದೊಡ್ಡದು ಬತ್ತದ ಬೀಂಜ (>ಬೀಜ)ಗಳಿವೆ. ಅವುಗಳಲ್ಲಿ :

ಕುಟ್ಟಿಕಾಯ್‌ಮೆ : ಚಿಕ್ಕದಾಗಿದ್ದು ವೃತ್ತಾಕಾರದಲ್ಲಿರುವ ಬತ್ತವಾಗಿದೆ. ಕಾರ್ ತಿಂಗಳ ಬೆಳೆಯಾದ ಇದು ಕೆಸರು ಗದ್ದೆಯಲ್ಲಿ ಬೆಳೆಯುತ್ತದೆ. ಬೀಜ ಬಿತ್ತಿದ 6 ತಿಂಗಳಲ್ಲೇ ಫಸಲು ಬರುತ್ತದೆ. ಇದರಿಂದ ಬೆಳ್ತಿಗೆ ಮತ್ತು ಕೊಚ್ಚಿಗೆ (ಕೊಸಲ್) ಅಕ್ಕಿ ತಯಾರಿಸುವರು.

ಕರ್‌ದಡಿ : ಕರೆದಡಿ/ಕಜೆನೆಲ್ಲ್ (=ಬತ್ತ) ಎಂದೂ ಕರೆಯುವರು. ಬಾಹ್ಯದಲ್ಲಿ ಉದ್ದ, ಕಪ್ಪುಮಿಶ್ರಿತ ಕೆಂಪು ಬಣ್ಣದ ಬತ್ತ. ಕಾರ್ ತಿಂಗಳ ಬೆಳೆ. ಇದರಿಂದ ಬೆಳ್ತಿಗೆ ಮತ್ತು ಕೊಚ್ಚಿಗೆ ತಯಾರಿಸುವರು.

ಕಣಾಲ್ ಕುಟ್ಟಿ : ಇದಕ್ಕೆ ಕಂಡೆಲ್ ಕುಟ್ಟಿ ಎಂಬ ಹೆಸರೂ ಇದೆ. ಕೆಂಪು ಮತ್ತು ಕಪ್ಪು ಬಣ್ಣದ ಬತ್ತ. 6 ತಿಂಗಳಲ್ಲೇ ಫಸಲು ಬರುತ್ತದೆ. ಬತ್ತದಲ್ಲಿ ಚುಂಗ್ ಇರುತ್ತದೆ. ಹಾಗಾಗಿ ಇದಕ್ಕೆ ಹುಳ ಹಿಡಿಯದು. ವರ್ಷದಲ್ಲಿ ಒಂದೇ ಬೆಳೆ. ಇದರ ವೈಶಿಷ್ಟ್ಯವೆಂದರೆ ಯಾವಾಗ ಬಿತ್ತನೆ ಮಾಡಿದರೂ ಮಕರ ಸಂಕ್ರಾಂತಿಯಂದೇ ಫಸಲು ಬರುತ್ತದೆ. 30 ದಿನದ ಅಗೆಯನ್ನು ನಾಟಿ ಮಾಡಿದ ಬಳಿಕ 4 ತಿಂಗಳಲ್ಲಿ ಬರುವ ಬೆಳೆ ಇದಾಗಿದೆ. ಆದ್ದರಿಂದ ಇದರೊಂದಿಗೆ ಬೇರೆ ತಳಿಯ ಬೀಜವನ್ನು ಮಿಶ್ರಣಮಾಡಿ ಬಿತ್ತನೆ ಮಾಡುವರು. ಬೆಳೆ ಬಂದಾಗ ಇಳುವರಿ ಪಡೆದು ಅದರ ಕುಳಿ (ಬುಡಭಾಗದ) ಬಿಟ್ಟು ಬಳಿಕ ಅದರ ಮೇಲೆ ಹಲಗೆ ಹೊಡೆಯುವರು. ಮಕರ ಸಂಕ್ರಾಂತಿಗೆ ಕಣಾಲ್‌ಕುಟ್ಟಿ ಇಳುವರಿ ಕೊಡುತ್ತದೆ. ಇದರ ಬೆಳ್ತಿಗೆ ಅಕ್ಕಿ ಕೆಂಪಾಗಿದ್ದು ಕೊಚ್ಚಿಗೆ ಅಕ್ಕಿ ಹದಾ ಕೆಂಪಾಗಿರುತ್ತದೆ.

ಹೆಗ್ಗೆ : ಇದು ಸುಗ್ಗಿ ಬೆಳೆ. ಆರು ತಿಂಗಳಲ್ಲಿ ಇಳುವರಿ ಕೊಡುತ್ತದೆ.

ಕಟ್ಮುಂಡಾ : ಕಂಡೆಲ್‌ಕುಟ್ಟಿ ತಳಿಯಂತೆ ಮಕರ ಸಂಕ್ರಾಂತಿಗೆ ಇಳುವರಿ ಕೊಡುವ ಬೆಳೆ. ಕೆಸರ್ ಗದ್ದೇಲಿ ಬೆಳೆಯುವ ಇದು 6 ತಿಂಗಳಲ್ಲೇ ಇಳುವರಿ ಕೊಡುತ್ತದೆ. ಇದನ್ನು ಕತ್ತರಿಸಿ ಕುಳಿ (ಬುಡ ಭಾಗ) ಬಿಟ್ಟು ಹಲಗೆ ಹೊಡೆದಾಗ ಕಟ್ಮುಂಡಾ ಚಿಗುರಿ ಮಕರ ತಿಂಗಳಿಗೆ ಫಸಲು ಬರುತ್ತದೆ. ಇದರಿಂದ ಕೊಚ್ಚಿಗೆ ಅಕ್ಕಿ ಮಾಡುರು.

ನೀರಂಬಡೆ : 4 ತಿಂಗಳಲ್ಲೇ ಫಸಲು ಬರುವ ಈ ತಳಿ ನೀರಲ್ಲೇ ಬೆಳೆದು ಇಳುವರಿ ಕೊಡುತ್ತದೆ.

ತಿಂಗಳ್ ನೆಲ್ಲ್ (ಬತ್ತ) : ಕಾರ್ ತಿಂಗಳಲ್ಲಿ ಬೆಳೆಯುವ ಇದು ಆಳೆತ್ತರದ ಅಗೆಯಾಗಿದ್ದು ಅತೀ ಹೆಚ್ಚು ಇಳುವರಿಯೂ ಹೌದು. ಇದಕ್ಕೆ "ದಬ್ಬಣ ಸಾಲೆ" ಎಂದೂ ಕರೆಯುವರು.

ತನ್ನೂರ್ : ಮೂರೇ ತಿಂಗಳಲ್ಲಿ ಫಸಲು ಬರುವ ಈ ಬತ್ತ ಪೈರು ಗಿಡ್ಡಾಗಿರುತ್ತದೆ.

ಕಾಯ್‌ಮೆ / ಕಣ್ವ ಎಂಬ ಹೆಸರಿರುವ ಈ ಬತ್ತದ ಗಾತ್ರ ಉದ್ದವಾಗಿದ್ದು ಬಿತ್ತನೆ ಮಾಡಿದ ಆರು ತಿಂಗಳಲ್ಲಿ ಇಳುವರಿ ಬರುತ್ತದೆ. ಕಾರ್ ತಿಂಗಳಲ್ಲಿ ಬೆಳೆಯುವ ಇದರಿಂದ ಬೆಳ್ತಿಗೆ ಮತ್ತು ಕೊಚ್ಚಿಗೆ ಅಕ್ಕಿ ಮಾಡುವರು.

ಎಮ್ ಟಿ : ಕಾರ್ ತಿಂಗಳ ಬೆಳೆಯಾಗಿರುವ ಈ ಬೀಜ ಬಿತ್ತನೆ ಮಾಡಿದ ಐದೂವರೆ ತಿಂಗಳಲ್ಲೇ ಇಳುವರಿ ಬರುತ್ತದೆ. ಇದರಿಂದ ಬೆಳ್ತಿಗೆ ಮತ್ತು ಕೊಚ್ಚಿಗೆ ಮಾಡುವರು.

ಇದಲ್ಲದೆ ಕುತ್ತುಂಬ್ರಿ ನೆಲ್ಲ್ (ಬತ್ತ), ಕೆಂಪು ನೆಲ್ಸ್‌ಷ ಜಿರಾಸಾಲಿ ನೆಲ್ಲ್ (ಬಿಳಿ), ಗುಲ್ವಾಡಿ ಸಣ್ಣಕ್ಕಿ, ರಾಶಿ ನೆಲ್ಲ್, ಕೊಳ್‌ಕೆ ಗದ್ದೇಲಿ ಬೆಳೆಯುವ ಗುಡ್ಡೆ ನೆಲ್ಲ್, ದೊಡ್ರಾಯ ನೆಲ್ಲ್ (ಎತ್ತರದ ಬೆಳೆ) ಇತ್ಯಾದಿ ತಳಿಗಳಿವೆ.

ಆಧುನಿಕತೆಯ ಪ್ರಭಾವದಿಂದ ಈ ದೇಶೀ ತಳಿಗಳು ಮಾಯವಾಗುತ್ತಿವೆ. ಬದಲಾಗಿ ಹೆಚ್ಚು ಇಳುವರಿ ಕೊಡುವ ಪಲ್ಗುಣ, ಎಮ್ ಫೋರ್, ಎಂ.ಟಿ. ಗಿಡ್ಡ, ಜಯ, ಕಾವೇರಿ, ಜ್ಯೋತಿ, ಮುಕ್ತಿ ಇತ್ಯಾದಿ ತಳಿಗಳು ಇಂದು ಕಂಡು ಬರುತ್ತಿವೆ.

ತರಕಾರಿಗಳು :

ಬಾಳೆ : ಪುಟ್ ಬಾಳೆ (ಏಲಕ್ಕಿ), ರಸಬಾಳೆ, ಚಂದ್ರಬಾಳೆ, ಬೂದ್‌ಬಾಳೆ, ಕರ್‌ಬಾಳ್, ನೇಂದ್ರಬಾಳೆ, ಬೆಟ್‌ಬಾಳೆ, ಕಲ್‌ಬಾಳೆ, ಶಿಲಾಂಟಿ (ಮಂಗ್‌ಬಾಳೆ/ ಶಾನ್‌ಬಾಳೆ), ಮೈಸೂರ್‌ಬಾಳೆ ಇತ್ಯಾದಿಗಳನ್ನು ವಿಶಿಷ್ಟವಾಗಿ ಬೆಳೆಯುವರು. ಈಗ ಕೆವೆಂಡೀಸ್, ಪೆರ್‌ಡಾಲ್ ಇತ್ಯಾದಿ ಕಂಡು ಬರುತ್ತಿವೆ.

ಮಟ್ಟಿ ಗುಳ್ಳ : ಉಡುಪಿ ಸಮೀಪದ "ಮಟ್ಟು" ಎಂಬಲ್ಲಿ ಮಾತ್ರ ಬೆಳೆಯುವ ಈ ಬದನೆಗೆ ಬಹಳ ಬೇಡಿಕೆ ಇದೆ. ಕಪ್ಪು ಮಣ್ಣು / ಗದ್ದೆ ಮಣ್ಣಿನಲ್ಲಿ ಬೆಳೆಯುವ ಊರ್ ಬದನೆಯಲ್ಲಿ ಹಸುರು, ಉದ್ದ ಬದನೆಯಲ್ಲಿ ಕೆಂಪು ಮತ್ತು ಹಸುರು ಕಾಯಿಗಳಿವೆ.

ಅಲ್ಸಂಡೆ ಕೋಡು : ಗದ್ದೆ / ತೋಟದಲ್ಲಿ ಬೆಳೆಯುವ ಇದರಲ್ಲಿ ಕೆಂಪು / ಹಸುರು ಬಣ್ಣದ ಕಾಯಿಗಳಿವೆ.

ಮೆಣಸು : ಜಿಲ್ಲೆಯಲ್ಲಿ ಉದ್ದದ್ದವಾಗಿ ಬೆಳೆಯುವ ಘಾಟಿ ಮೆಣಸು, ಚಿಕ್ಕದಾಗಿ ಮತ್ತು ದಪ್ಪವಾಗಿ ಬೆಳೆಯುವ ಊರ್ ಮೆಣಸು, (ದೀರ್ ಸಾಲೆ) ರೂಢಿಯಲ್ಲಿದೆ. ಅತೀ ಖಾರವಿರುವ ಚಪ್ರ ಮೆಣಸು (ಒಂದು ಅಂಗುಲ) ಚಿಕ್ಕದಾಗಿದ್ದು ಒಳನಾಡಿನಲ್ಲಿ ಬೆಳೆಸುತ್ತಾರೆ.

ಗುಂಬ್ಳಕಾಯಿ : ರಾಮ್‌ಗುಂಬ್ಳ, ಕಾಶೀಗುಂಬ್ಳ, ಬೂದುಗುಂಬ್ಳ ಇತ್ಯಾದಿ ವೈವಿಧ್ಯತೆಗಳಿವೆ.

ಚೌಂತಿ > ಸೌತೆಕಾಯಿ : ಹಕ್ಲಸೌತೆ (ಮಕ್ಕಿ ಸೌತೆ), ಮುಳ್‌ಸೌತೆ ತಳಿಗಳಿವೆ.

ಅಮ್ಮಟೆ (ಅಮ್ಟೆ) ಕಾಯಿ : ಊರ್ ಅಮ್ಟೆ ತೋಟದಲ್ಲಿ ಬೆಳೆದರೆ ಕಾಟ್ ಅಮೆ ಕಾಡಲ್ಲಿ (ಪ್ರಾಣಿಗಳಿಗೆ ಮಾತ್ರ) ಬೆಳೆಯುತ್ತವೆ.

ಹಾಗ್ಲ ಕಾಯಿ (ಹಾಗಲ) : ಬಿಳಿ, ಹಸುರು ಹಾಗಲಕಾಯಿ ಮತ್ತು ಕಾಡು ಬೇಲಿಗಳಲ್ಲಿ ಮಡ್‌ಹಾಗಲ ಜಿಲ್ಲೆಯಲ್ಲಿದೆ.

ಕಬ್ಬು : ಮೆಕ್ಕಲು ಮಣ್ಣಲ್ಲಿ ಬೆಳೆಯುವ ಈ ಬೆಳೆ ಇತ್ತೀಚೆಗೆ ಕಡಿಮೆಯಾಗಿದೆ. ಪೀಜ್ ಕಬ್ಬು, ಸಕ್ಕರೆ ಕಬ್ಬು, ದಾಸ್ ಕಬ್ಬು, ಗೌಲ್ ಕಬ್ಬು, ಕೊಯ್ ಮುತ್ತೂರ್ ಕಬ್ಬು ಜಿಲ್ಲೆಯಲ್ಲಿ ಬೆಳೆಯುತ್ತಿದ್ದರು.

ಕೊಕ್ಕೋ : ನೆರಳು ನೀರು ಅತಿಯಾಗಿರುವ ಕಾರ್ಕಳ ತಾಲೂಕಲ್ಲಿ ಬೆಳೆಯುವ ಇದೊಂದು ವಾಣಿಜ್ಯ ಬೆಳೆಯಾಗಿದೆ.

ಈರುಳ್ಳಿ : ಕುಂದಾಪುರ ತಾಲೂಕಿನಲ್ಲಿ ಕೆಂಪು ಮತ್ತು ಬಿಳಿ ಈರುಳಿಗಳನ್ನು ವಾಣಿಜ್ಯ ಬೆಳೆಯಾಗಿ ಹಿಂದೆ ಬೆಳೆಯುತ್ತಿದ್ದರು.

ಸೊಪ್ಪುಗಳು : ಊರ್‌ಬಸ್ಳಿ (ಬಸಳೆ), ಬಾಂಬೆ ಬಸಳೆ, ಹಸುರು ಹರಿವೆ, ಕೆಂಪು ಹರಿವೆಯನ್ನು 10/15 ದಿನಕ್ಕೆ ಫಸಲು ಬರುವಂತೆ ಬೆಳೆಯುತ್ತಾರೆ.

ತೊಂಡೆಕಾಯಿ : ವರ್ಷ ಪೂರ್ತಿ ಬೆಳೆಯುವ ಮರದ ತೊಂಡೆ, ಬೇಸಗೆಯಲ್ಲಿ ಮಾತ್ರ ಬೆಳೆಯುವ ಊರ್ ತೊಂಡೆ ಕಾಯಿ ಜಿಲ್ಲೆಯಲ್ಲಿದೆ.

ಗೆಂಡಿ (ಗಡ್ಡೆ)ಗಳು : ಒಳ ಪ್ರದೇಶದ ಗದ್ದೆ, ತೋಟಗಳಲ್ಲಿ ಸುವರ್ಣ ಗೆಂಡಿ ಕೆಸುವಿನ ಗೆಂಡಿ ಹೆಡ್‌ಗೆಣಸು (ಕೋಲ್‌ಗೆಣಸು), ಮರಗೆಣಸು, ಊರ್ ಗೆಣ್‌ಗ್ (ಗೆಣಸು)ನಲ್ಲಿ ಬಿಳಿ ಮತ್ತು ಕೆಂಪು ಗಡ್ಡೆಗಳನ್ನು ಇಂದಿಗೂ ಕೆಲವೆಡೆ ಬೆಳೆಯುವರು.

ಗೊಬ್ಬರಗಳು

ಹಟ್ಟಿ ಗೊಬ್ಬರ : ಕೊಟ್ಟಿಗೆಯಲ್ಲಿ ಪ್ರತೀ ದಿನ ತರಗೆಲೆ (ಒಣ ಎಲೆ)ಗಳನ್ನು ಹಾಕುತ್ತಾ ಬರುವರು. 1 ತಿಂಗಳಾದಾಗ ಅದು ಪದರು ಪದರಾಗಿ ಸೆಗಣಿ ಸೇರಿ ಅತೀ ಎತ್ತರವಾಗಿರುತ್ತದೆ. ಅನಂತರ ಇದನ್ನು ಗಿಡ ಮರಗಳಿಗೆ ಹಾಕುತ್ತಾರೆ.

ಸುಡುಮಣ್ಣು : ನೆಲವನ್ನು ಅಗೆದು ಹೊಂಡ ತೆಗೆದು ಇದರಲ್ಲಿ ಲಡ್ಡಾದ (ಒಣಗಿ ಹಾಳಾದ) ಕಟ್ಟಿಗೆ ಮತ್ತು ಸೊಪ್ಪು (ಅಡ್ಡ್)ಗಳನ್ನು ಹಾಕುವರು. ಬಳಿಕ ಅದರ ಮೇಲೆ ಮಣ್ಣು ಹಾಕಿ ಬೆಂಕಿ ಹಚ್ಚುವರು. ಒಳಗಿನಿಂದ ಬೆಂಕಿ ಹಿಡಿದು ನಿಧಾನವಾಗಿ ಹೊಗೆ ಹೋಗುತ್ತಾ ಪ್ರತೀ ದಿನ ಮಣ್ಣು ಸಡಿಲಗೊಂಡು ಕೆಳಕ್ಕೆ ಬೀಳುತ್ತದೆ. ಇದರಿಂದ ಫಲವತ್ತಾದ ಸುಡುಮಣ್ಣು ಸಿಗುತ್ತದೆ. ಇನ್ನು ತ್ಯಾಜ್ಯ ವಸ್ತುಗಳನ್ನು/ಚೆಟ್‌ಬತ್ತ/ ಉಮಿ(ಬತ್ತದ ಸಿಪ್ಪೆ) ಒಂದೆಡೆ ರಾಶಿಹಾಕಿ ಕೆಂಡದ ಮೂಲಕ ಹೊಗೆಯಲ್ಲೇ ಸುಡುವರು. ಹೀಗೆ ನಿಧಾನ ಸುಡುವಿಕೆಯಿಂದಾಗಿ ಮಣ್ಣಲ್ಲಿ ರಂಜಕದ ಅಂಶ ಬಿಡುಗಡೆಯಾಗುತ್ತದೆ. ಇದನ್ನು ತರಕಾರಿ, ಗಿಡಗಳಿಗೆ ಹಾಕಿದಾಗ ಬೆಳೆ ಚೆನ್ನಾಗಿ ಬೆಳೆಯುತ್ತದೆ. ಇದರಿಂದ ಗೆದ್ದಲು, ಇರುವೆ, ಹುಳ - ಹುಪ್ಪಡಿಗಳು, ಒರ್ಲೆ, ಗಿಡಗಳಿಗೆ ಹಿಡಿಯುವುದಿಲ್ಲ. ಮಣ್ಣನ್ನು ಮಾತ್ರ ಗಿಡಗಳಿಗೆ ಹಾಕಿದಾಗ ಹುಳಿ ಅಂಶ ಜಾಸ್ತಿಯಾಗಿ ಉತ್ತಮ ಇಳುವರಿ ದೊರೆಯದೆ ಹುಳ ಹುಪ್ಪಡಿಗಳು ಹಿಡಿಯುವ ಸಾಧ್ಯತೆಯೇ ಹೆಚ್ಚು.

ಗುಂಡಿ ಪದ್ಧತಿ (ಗೊಬ್ರಗುಂಡಿ) : ಎರಡೂವರೆ ಫೀಟ್ ಗುಂಡಿ ತೆಗೆದು ಸೊಪ್ಪು ತರಗೆಲೆಗಳನ್ನು ತುಂಬಿಸಬೇಕು. 7/8 ತಿಂಗಳ ಬಳಿಕ ಒಳ್ಳೇ ಗೊಬ್ಬರ ಇದರಿಂದ ಸಿಗುತ್ತದೆ. 1995ರ ಮೊದಲು ಈ ಪದ್ಧತಿ ಜನರಿಗೆ ತಿಳಿದಿರಲಿಲ್ಲ. ಇದರಲ್ಲಿ ಸೂಕ್ಷ್ಮ ಜೀವಿಗಳು ವಾಸವಾಗಿದ್ದು ಉತ್ತಮ ಗೊಬ್ಬರ ಸಿಗುತ್ತದೆ.

ಸಗಣಿ ಗೊಬ್ಬರ : ಪ್ಲಾಸ್ಟಿಕ್ / ಮ್ಯಾಟ್‌ನ್ನು ನೆಲದಲ್ಲಿ ಹಾಸಿ ಅದರ ಮೇಲೆ ಸೆಗಣಿ ಮತ್ತು ಸೊಪ್ಪನ್ನು ರಾಶಿ ಹಾಕುವರು. ತಿಂಗಳಿಗೊಮ್ಮೆ ಅದನ್ನು ತೆಗೆದು ಗಿಡಗಳಿಗೆ ಹಾಕುವರು.

ದರ್ಲೆ (ಒಣ ಎಲೆ) ಕುತ್ರಿ : ಬೇಸಗೆಯಲ್ಲಿ ಒಣ ಎಲೆಗಳನ್ನು ಒಟ್ಟು ಮಾಡಿ ರಾಶಿ ಹಾಕಿ (ಕುತ್ರಿ) ಬಳಿಕ ಹಟ್ಟಿಗೆ ಹಾಕಿ ಗೊಬ್ಬರ ಮಾಡಲು ಬಳಸುವರು.

ಆಧುನಿಕವಾಗಿ ಈ ಗೊಬ್ಬರಕ್ಕೆ ಕೋಳಿ ಗೊಬ್ಬರ, (ಪೊಟಾಶ್ ಜಾಸ್ತಿಯಾಗಲು) ಮಿಶ್ರ ಮಾಡುವರು. ಜಪಾನ್ ಮಾದರಿಯಲ್ಲಿ 15 ಫೀಟ್ ಉದ್ದ 1 ಮೀ. ಅಗಲ ತೊಟ್ಟಿಯನ್ನು ಕಟ್ಟಿಗೆಯಿಂದ ಕಟ್ಟಿ ಇದಕ್ಕೆ 3 ಅಡಿ ಎತ್ತರದಲ್ಲಿ ಸೆಗಣಿ ಗೊಬ್ಬರ / ಸೊಪ್ಪು ತುಂಬಿಸಿದಾಗ 1 ತಿಂಗಳಲ್ಲೇ ಇದು ಉತ್ತಮ ಗೊಬ್ಬರವಾಗುತ್ತದೆ.

ರಾಶಿ ಪದ್ಧತಿ : ತರಗೆಲೆ (ಒಣ ಎಲೆ), ಸೊಪ್ಪು, ಸೆಗಣಿಯನ್ನು ಒಂದೆಡೆ ರಾಶಿ ಹಾಕಿ ಗೊಬ್ಬರ ಮಾಡುವುದಾಗಿದೆ. ಆಧುನಿಕವಾಗಿ 3 ಅಡಿ ಅಗಲ, 3/4 ಅಡಿ ಎತ್ತರವಾಗಿ ಇವುಗಳನ್ನು ರಾಶಿ ಹಾಕಿ ಜೀವಾಣುಗಳನ್ನು ಲ್ಯಾಬ್‌ನಿಂದ ತಂದು ಇದಕ್ಕೆ ಸೆಗಣಿ ನೀರು, ಬೆಲ್ಲ, ಮಜ್ಜಿಗೆ, ಜೇನು, ದನದ ತುಪ್ಪ, ಹಾಳಾದ ಬೆಲ್ಲ ಮಿಶ್ರ ಮಾಡಿದಾಗ ಸೂಕ್ಷ್ಮ ಜೀವಿಗಳು ಬೆಳೆಯುತ್ತವೆ. ಪದರು ಪದರಿನಂತೆ ಉತ್ತಮ ಗೊಬ್ಬರ ಸಿಗುತ್ತದೆ.

ಸಗಣಿ ನೀರು : ಬೆಲ್ಲ 1 ಕೆ.ಜಿ., ಸೆಗಣಿ ನೀರು 1 ಬಕೆಟ್, ಇದಕ್ಕೆ ನೆಲಗಡ್ಲೆ ಹಿಂಡಿ ಮಿಶ್ರ ಮಾಡಿ 2 ವಾರ ಹಾಗೆಯೇ ಇಡುವರು. ಬಳಿಕ 1 ಲೀ.ನಂತೆ ಮರಕ್ಕೆ ಹಾಕಿದಾಗ ಉತ್ತಮ ಸಾರ ಸಿಗುತ್ತದೆ.

ಹಟ್ಟಿ ತೊಳೆದ ನೀರು : ಸೆಗಣಿ ನೀರು (ಶೇ.1/2 ಸಾರಜನಕ), ದನದ ಮೂತ್ರ (ಶೇ.2/3 ಸಾರಜಾನಕ)ವನ್ನು ಟ್ಯಾಂಕ್‌ನಲ್ಲಿ ಸಂಗ್ರಹಿಸಿ, ಕೆಲವು ಮದ್ದಿನ ಗಿಡಗಳಾದ, ಕಿಸ್ಕಾರ್‌ಗಿಡ, ಬುಕ್ಕಿ ಸೊಪ್ಪು, ನೇರಳೆ ಸೊಪ್ಪು, ಕವಲ್ ಮತ್ತು ಮತ್ತಿ ಸೊಪ್ಪು, ಸೊಳ್ಳೆ ಸೊಪ್ಪು, ಕುಂಟು ನೇರಳೆ ಸೊಪ್ಪು ಇತ್ಯಾದಿಗಳನ್ನು ಇದರಲ್ಲಿ ಕೊಳೆಯುವಂತೆ ಮಾಡುವರು. ಬಳಿಕ ಗಿಡಗಳಿಗೆ ಹಾಯಿಸುವರು.

ಜಿಲ್ಲೆಯಲ್ಲಿ ವಿಪುಲವಾದ ಅರಣ್ಯ ಹಾಗೂ ಖಾಸಗಿ ಕಾಡು ಮತ್ತು ಸೊಪ್ಪಿನ ಗುಡ್ಡೆಗಳಿದ್ದು ರೈತರು ಇದನ್ನು ಬೇಕಾದಂತೆ ಬಳಸುವರು. ಹಟ್ಟಿ ಗೊಬ್ಬರ, ಸೊಪ್ಪಿನ ಗೊಬ್ಬರ ಮತ್ತು ಇತ್ತೀಚೆಗಿನ ದಿನಗಳಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಸಾವಯವ ಗೊಬ್ಬರ, ಎರೆಹುಳ ಗೊಬ್ಬರ, ರಾಸಾಯನಿಕ ಗೊಬ್ಬರಗಳನ್ನು ತಯಾರಿಸಿ ರೈತರು ಅಧಿಕ ಇಳುವರಿಯನ್ನು ಪಡೆಯುತ್ತಿದ್ದಾರೆ.

ಕೀಟನಾಶಕಗಳು : ಧಾನ್ಯಗಳು, ತರಕಾರಿಗಳು, ಸೊಪ್ಪುಗಳು, ಬತ್ತ ಇತ್ಯಾದಿಗಳು ಫಸಲು ಬರುವತನಕ ಸಂರಕ್ಷಣೆಗೆ ರೈತರು ಪ್ರಕೃತಿಯಲ್ಲೇ ದೊರೆಯುವ ಕೀಟನಾಶಕಗಳನ್ನು ಬಳಸುತ್ತಿದ್ದರು.

ಕನ್ಪಂಡೆ ಗೆಲ್ : ಇದೊಂದು ವಿಷದ ಮರ. ಬಂಡೆಗಲ್ಲಿನ ಸಂಧಿಯಲ್ಲಿ ಕಾಡುಗಳಲ್ಲಿ ಬೆಳೆದಿರುತ್ತದೆ. ಗದ್ದೆಯಲ್ಲಿ ಇಳುವರಿ ಮತ್ತು ಗಿಡ ಚೆನ್ನಾಗಿ ಬೆಳೆದಾಗ ಫಸಲು ಹಾಳಾಗದಂತೆ ಈ ಸೊಪ್ಪನ್ನು ಗದ್ದೆಗೆ ನೀರು ಹೋಗುವ ದಾರಿಯಲ್ಲಿ ಅಡ್ಡವಾಗಿ ಇಟ್ಟಿರುತ್ತಾರೆ. ಆಗ ನೀರಿನೊಂದಿಗೆ ಈ ಸೊಪ್ಪಿನ ರಸ ಹರಿದು ಹೋಗಿ ಬತ್ತದ ಸಸಿಗಳು ಹುಳ ಹಿಡಿಯದಂತೆ ಬೆಳೆಯುತ್ತವೆ.

ಐರೋಳಿ ಗಡ್ಡೆ : ಇದೊಂದು ವಿಷದ ಗಡ್ಡೆಯಾಗಿದೆ. ಕಾಡು ಗುಡ್ಡೆಗಳಲ್ಲಿ ಬೆಳೆಯುತ್ತದೆ. ಬೀಳಾಗಿ ಬೆಳೆಯುವ ಈ ಗಿಡದ ಬುಡದಲ್ಲಿ ಅತೀ ದೊಡ್ಡ ಗಡ್ಡೆಯಿರುತ್ತದೆ. ಗಿಡದಲ್ಲಿ ಟೊಮ್ಯಾಟೋ ತರಹದ ಹಣ್ಣಿರುತ್ತದೆ. ಇದನ್ನು ತಿಂದರೆ ಮನುಷ್ಯರೂ ಸಾಯುತ್ತಾರೆ. ಈ ಗಡ್ಡೆಯನ್ನು ಕತ್ತರಿಸಿ ನೀರಿನಲ್ಲಿ ಹಾಕಿ ಕದಡಿದ ಬಳಿಕ ಹುಲ್ಲಿನ ಚೆಂಡಿನ (ಕಟ್ಟು) ಮೂಲಕ ಗಿಡಗಳಿಗೆ ಸಿಂಪಡಿಸುವರು. ಆಗ ಹುಳ ಹುಪ್ಪಡಿಗಳು ಸಸಿಗಳಿಗೆ ತಾಗುವುದಿಲ್ಲ.

ಸುಡ್‌ಮಣ್ಣ್ ಮತ್ತು ಬೂದಿ : ಇದನ್ನು ತರಕಾರಿ, ಧಾನ್ಯ, ಬತ್ತದ ಸಸಿಗಳಿಗೆ ಸಿಂಪಡಿಸಿದಾಗ ಹುಳ ಹಿಡಿಯುವುದಿಲ್ಲ.

ಕಡುಕಾಯಿ : ಕಾಡಿನಲ್ಲಿ ಮರದಲ್ಲಾಗುವ ಈ ಕಾಯಿಯನ್ನು ಗುದ್ದಿ ಪುಡಿ ಮಾಡಿ ಕೆರೆಗೆ ಹಾಕಿದಾಗ ಕೆರೆಯಲ್ಲಿರುವ ಮೀನುಗಳು ಸಾಯುತ್ತವೆ. ಬಳಿಕ ಮೀನು ಹಿಡಿಯುತ್ತಾರೆ.

ಕಾಸಾನ್ ಸೊಪ್ಪು ಮತ್ತು ಕಹಿ ಬೇವಿನ ಸೊಪ್ಪು : ಇದನ್ನು ಮಿಶ್ರ ಮಾಡಿ ಬತ್ತದ ಕಾಳಿನೊಂದಿಗೆ ಇಟ್ಟಾಗ ಬತ್ತ ಹಾಳಾಗುವುದಿಲ್ಲ. ಕಹಿ ಬೇವಿನ ಎಣ್ಣೆಯನ್ನು ನೀರಿಗೆ ಬೆರೆಸಿ ಹುಳ ಹಿಡಿದಲ್ಲಿ ಸಿಂಪಡಿಸುವರು.

ಬೂದಿ : ಒಲೆಯಿಂದ ತೆಗೆದ ಬೂದಿಯನ್ನು ತರಕಾರಿ ಗಿಡಗಳಿಗೆ ಮುಂಜಾನೆ ಹಾಕಿದಾಗ ಎಲೆ, ತರಕಾರಿ, ಗಿಡಗಳಿಗೆ ಹುಳ ಹಿಡಿಯುವುದಿಲ್ಲ. ಇದರಲ್ಲಿ ರಂಜಕದ ಅಂಶ ಇರುವುದರಿಂದ ಇದರ ವಾಸನೆಗೆ ಅವು ಬರುವುದಿಲ್ಲ.

ಮೈಲುತುತ್ತು : ಇದಕ್ಕೆ ಸುಣ್ಣ ಮಿಶ್ರಣ ಮಾಡಿ ಅಡಕೆಗೆ ಸಿಂಪಡಿಸುವರು. ಇದರಿಂದ ಅಡಕೆಗೆ ನುಸಿರೋಗ ಬರುವುದಿಲ್ಲ. 1 ಕೆ.ಜಿ. ಜೇಡಿಮಣ್ಣು, ಕೆಂಪುಮಣ್ಣು, 200 ಗ್ರಾಂ. ಸುಣ್ಣ ಮಿಶ್ರಮಾಡಿ 100 ಲೀ. ನೀರಿಗೆ ಬೆರೆಸಿ ಅಡಕೆ ಮರಕ್ಕೆ ಸಿಂಪಡಿಸಿದಾಗ ಹುಳ ಹಿಡಿಯುವುದಿಲ್ಲ. ಈ ಹಿಂದೆ ಅಡಕೆ ಕೊನೆಗೆ ಹಾಳೆ ಕೊಟ್ಟೆಯನ್ನು ಕಟ್ಟಿ ನೀರು ಬೀಳದಂತೆ ಮರದಲ್ಲಿ ರಕ್ಷಣೆ ಕೊಡುತ್ತಿದ್ದರು.

ಆಧುನಿಕವಾಗಿ ಫಿರೋಡಾನ್, ಕಾರ್ಬೊಫಿರಾನ್, ಡೊಮೆಕ್ಸನ್ ಜಿಲ್ಲೆಯಲ್ಲಿ ಬಳಕೆಯಲ್ಲಿದೆ.

ಬೀಜಗಳ ಸಂರಕ್ಷಣೆ : ತಿರಿ : ಪ್ರಾದೇಶಿಕವಾಗಿ ಬತ್ತದ ಕಾಳುಗಳನ್ನು ಹಾಳಾಗದಂತೆ ಇಡಲು ಬತ್ತದ ಹುಲ್ಲಿನ ತಿರಿ ಬಳಸುವರು. ಅಂಗಳದಲ್ಲಿ ಯುಕ್ತ ಸ್ಥಳವನ್ನು ಆಯ್ಕೆ ಮಾಡಿ ಮಣ್ಣನ್ನು 5 ಅಂಗುಲ ಎತ್ತರದಲ್ಲಿ ಚಿಟ್ಟೆ ಕಟ್ಟಿ. ಅದರ ಮೇಲೆ ಹುಲ್ಲಿನ ಚೆಂಡನ್ನು ಸುತ್ತು ಇಡುವರು. ಅದರ ಮೇಲೆ ಚೆಟ್ (ಜಳ್ಳು) ಬತ್ತವನ್ನು ಹಾಕಿ ಬಳಿಕ ಹೊರ ಭಾಗದಿಂದ ಹುಲ್ಲನ್ನು ಪೋಣಿಸುತ್ತಾ ಸುಂದರ ತಿರಿ ಕಟ್ಟುವರು. ಹೊರಭಾಗದಿಂದ ಮಡೆ ಹಗ್ಗ (ಬೈ ಹುಲ್ಲಿನ ಹಗ್ಗ)ವನ್ನು ಸುತ್ತು ಬಳಸಿ ಕಟ್ಟುತ್ತಾ ಬರುವರು. ತಿರಿಯ ತುದಿಗೆ ಮುರ್‌ಗಿ (ಸೂಡಿಹುಲ್ಲು) ಹುಲ್ಲನ್ನು ಹರಡಿ ತಳು (=ಒಣಗಿದ ಬತ್ತದ ಹುಲ್ಲು)ವನ್ನು ಹೊದಿಸುವರು. ವರ್ಷವಿಡೀ ಬಿಸಿಲು, ಚಳಿ, ಮಳೆ, ಗಾಳಿಗಳಿಂದ ಬತ್ತವು ಹಾಳಾಗುವುದಿಲ್ಲ.

ಅಕ್ಕಿ ಮುಡಿ : ಮುರ್‌ಗಿ (ಸೂಡಿ ಹುಲ್ಲು) ಹುಲ್ಲನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಹರಡಿ ಅದರ ಮೇಲೆ ತಳು ಹುಲ್ಲನ್ನು ಹಾಕಿ, ಮಡೆ ಹಗ್ಗವನ್ನು ಬಳೆಯಾಕಾರದಲ್ಲಿ ಸುತ್ತುತ್ತಾ ಒಳಗಡೆ ಅಕ್ಕಿ ತುಂಬಿಸುವರು. ಉರುಟು (ವೃತ್ತ) ಆಕಾರದಲ್ಲಿರುವ ಅಕ್ಕಿಮುಡಿ ನೋಡಲು ಆಕರ್ಷಕವಾಗಿರುತ್ತದೆ.

ಬೀಜದ ಮುಡಿ : ಬತ್ತದ ಬೀಜವನ್ನು ಚೆನ್ನಾಗಿ ಒಣಗಿಸಿ ಅದಕ್ಕೆ ಕಾಯಿಕಂದದ ಗಿಡ (ಔಷಧೀಯ ಮೂಲಿಕೆ) ಮತ್ತು ನುಕ್ಕಿ ಸೊಪ್ಪನ್ನು ಒಣಗಿಸಿ ಪುಡಿ ಮಾಡಿ ಸೆಗಣಿ ಪುಡಿಯನ್ನೂ ಸ್ವಲ್ಪ ಮಿಶ್ರಣ ಮಾಡುವರು. ಇದನ್ನು ಅಕ್ಕಿ ಮುಡಿಯಂತೆ ಕಟ್ಟಿದ ಮುಡಿಯೊಳಗೆ ತುಂಬಿಸಿ ಹೊರಭಾಗದಿಂದ ಸೆಗಣಿ ಸಾರಿಸಿ ಇಡುವರು.

ಹುಲ್ಲ್ ಕುತ್ರಿ ಮತ್ತು ದರ್ಲೆ ಕುತ್ರಿ : ಬತ್ತದ ಹುಲ್ಲನ್ನು ಜಪ್ಪಿ (ಹೊಡೆದು) ಸೂಡಿ ಮಾಡಿ ಚೆನ್ನಾಗಿ ಒಣಗಿಸಿ ಚೌಕಾಕಾರ ಮತ್ತು ವೃತ್ತಾಕಾರದಲ್ಲಿ ರಾಶಿ ಮಾಡುವರು. ಅದರ ತುದಿಗೆ ಅದೇ ಸೂಡಿಗಳನ್ನು ಇಳಿ ಬಿಟ್ಟು ನೀರು ಒಳಗೆ ಹೋಗದಂತೆ ಹೊದಿಸುವರು. ಇದೇ ರೀತಿ ದರ್ಲೆಯನ್ನು (ಒಣಗಿದ ಎಲೆಗಳು) ಮಳೆಗಾಲದಲ್ಲಿ ಸಂರಕ್ಷಣೆ ಮಾಡುವರು.

ತಳುಬೈ ಕುತ್ರಿ : ಬೈಹುಲ್ಲಿನ ಸೂಡಿ ಮಾಡದ ಬಿಡಿ ಬಿಡಿ ಹುಲ್ಲುಗಳನ್ನು ತಳು ಹುಲ್ಲು ಎನ್ನುವರು. ಮಧ್ಯೆ ಕಂಬ ಹುಗಿದು ಅದರ ಸುತ್ತ ತಳುಹುಲ್ಲನ್ನು ಹರಡಿ ಮಳೆನೀರು ಹಿಂಗದಂತೆ ಹುಲ್ಲು ಹೊದೆಸಿ ಸಂರಕ್ಷಿಸಿ ಇಡುವರು.

ತರಕಾರಿ, ಧಾನ್ಯ, ಹಣ್ಣುಗಳ ಸಂರಕ್ಷಣೆ

ಗಡ್ಡೆ ಗೆಣಸುಗಳಾದ ಸಾಂಬ್ರಾಣಿ ಗೆಣಸು, ಅರಿಸಿನ, ಶುಂಠಿ ಇತ್ಯಾದಿಗಳನ್ನು ಮಣ್ಣಲ್ಲಿ ಹುದುಗಿಸಿ ವಾರಕ್ಕೊಮ್ಮೆ ನೀರು ಚಿಮುಕಿಸುತ್ತಿರುವರು.

ಹಲಸಿನ ದಾನಿ (ಬೀಜ) ಗೆಣಸು, ಪಪ್ಪಾಯ, ತೊಂಡೆ ಕಾಯಿಗಳನ್ನು ಬೇಯಿಸಿ ಕತ್ತರಿಸಿ ಉಪ್ಪು ಬೆರೆಸಿ ಬಿಸಿಲಲ್ಲಿ ಚೆನ್ನಾಗಿ ಒಣಗಿಸಿ ಮಣ್ಣಿನ ಪಾತ್ರೆಗೆ ಹಾಕಿ ಸಂರಕ್ಷಿಸಿ ಇಡುವರು.

ಮಾವಿನಕಾಯಿ, ಹಲಸಿನ ಕಾಯಿಯ ತೊಳೆ, ಕಾಯಿಗಳನ್ನು ಶುಚಿಗೊಳಿಸಿ ಸಮುದ್ರದ ನೀರನ್ನು (ಉಪ್ಪು ನೀರು) ತಂದು ಕುದಿಸಿ ತಣ್ಣಗಾಗಿಸಿ ಮಣ್ಣಿನ ಪಾತ್ರೆಯಲ್ಲಿ ತುಂಬಿಸಿ ಇಡುವರು.

ಗೋಟ್ ಅಡಕೆ (ಸಿಪ್ಪೆ ತೆಗೆದ ಅಡಕೆ)ಯನ್ನು ಒಣಗಿಸಿ ಇಡುವರು. ಜೊತೆಗೆ ಎಳೆ ಅಡಕೆಯನ್ನು ಸಿಪ್ಪೆ ತೆಗೆದು ನೇರಳೆ ಕೆತ್ತೆಯನ್ನು ನೀರಲ್ಲಿ ಬೇಯಿಸಿ ಒಣಗಿಸಿ ಇಡುವರು. ಬಲಿತ ಅಡಕೆಯನ್ನು ಹಿಂದಿನ ದಿನತಂದ ನೀರಿಗೆ ಹಾಕಿ, ಮಣ್ಣಿನ ಗಡಿಗೆಯಲ್ಲಿ ಸಂಗ್ರಹಿಸುವರು. ಅದನ್ನು ನೀರಲ್ಲಿ ಹಾಗೇ ಇಟ್ಟು ನೀರಡಿಕೆಯಾಗಿ ಬಳಸುವ ಪದ್ಧತಿ ಇಂದೂ ಇದೆ.

ಹಲಸಿನ ದಾನಿಯನ್ನು ಹುತ್ತದ ಮಣ್ಣಿನಲ್ಲಿ ಕಲಸಿ ಇಡುವರು.

ಬಾಳೆ ಹಣ್ಣು, ಹಲಸಿನ ಹಣ್ಣು, ಮಾವಿನ ಹಣ್ಣಿನ ರಸ ತೆಗೆದು ಎಲೆ / ತಟ್ಟೆ / ಮೊರ (ಗೆರಸಿ), ಪ್ಲಾಸ್ಟಿಕ್‌ನಲ್ಲಿ ಬಿಸಿಲಿಗೆ ಒಣಗಿಸಿ

ಹಣ್‌ಚೆಟ್ (ರಸವು ಒಣಗಿದ ಬಳಿಕ ಸುತ್ತಿದ ಆಕಾರ) ತಯಾರಿಸಿ ಇಡುವರು.

ತೆಂಗಿನ ಗೋಟ್ (ಸಿಪ್ಪೆ ತೆಗೆದ ಕಾಯಿ) ಕಾಯಿಯನ್ನು ಬಿಸಿಲಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುವರು.

ಚೌಂತಿ ಕಾಯಿ (ಸೌತೆಕಾಯಿ), ಬೂದುಗುಂಬ್ಳ, ಕೆಂಪು ಗುಂಬ್ಳಕಾಯಿಗಳಿಗೆ ಬೂದಿ ಹಚ್ಚಿ ಅಡ್ಡಪಟ್ಟಿಯೆಂಬಂತೆ ಬಾಳೆ ಗಿಡದ ಬಳ್ಳಿಯನ್ನು ಕಟ್ಟಿ ಎತ್ತರದಲ್ಲಿ ಜೋತಾಡಿಸಿ ಇಡುವರು.

ಹುಳಿ ಹಣ್ಣುಗಳಾದ ಹುಣಿಸೆ, ಪುನರ್ಪುಳಿ, ಧಾರ್‌ಹುಳಿ, ವಾಂಟೆ ಹುಳಿ, ಬಿಂಬ್ಳ ಹುಳಿ, ಮಾವಿನ ಕೆತ್ತೆಗಳನ್ನು ಬಿಸಿಲಲ್ಲಿ ಚೆನ್ನಾಗಿ ಒಣಗಿಸಿ ಉಪ್ಪು ಬೆರೆಸಿ ಸಂಗ್ರಹಿಸಿಟ್ಟುಕೊಳ್ಳುವರು. ಇವುಗಳನ್ನು ಧೂಪದ ಎಲೆಯಲ್ಲಿ ಸುತ್ತಿ ಇಡುವ ಪದ್ಧತಿಯೂ ಅಲ್ಲಲ್ಲಿ ಇದೆ.

ಹೊರ್ಲಿ (ಹುರುಳಿ), ಉದ್ದು, ಅವಡೆ, ಹೆಸರು ಬೀಜಗಳನ್ನು ಬಿಸಿಲಿಗೆ ಒಣಗಿಸಿ, ಕಾಯಿಗಹಂಧ ಗಿಡ ಮತ್ತು ನುಕ್ಕಿ ಸೊಪ್ಪನ್ನು ಪುಡಿ ಮಾಡಿ ಬೆರೆಸಿ ಮುಡಿಕಟ್ಟಿ ಹೊರಭಾಗದಲ್ಲಿ ಸೆಗಣಿ ಸಾರಿಸಿ ಇಡುವರು.

ಉಪಕರಣಗಳು : ಜಿಲ್ಲೆಯಲ್ಲಿ ಆರಂಭದಲ್ಲಿ ಕೃಷಿ, ಮಾಡಲು ಮರದ ಬಳಿಕ ಕಬ್ಬಿಣದ ಉಪಕರಣಗಳು ಬಳಕೆಯಲ್ಲಿದ್ದವು.

ನೇಗಿಲು>ನೇಲ್ (ನಾಯೆರ್-ತುಳು) : ಹಲಗೆ ಮತ್ತು ಮರದಿಂದ ಮಾಡಿದ ಉಪಕರಣವಾಗಿದೆ. ಬೀಜ ಬಿತ್ತುವಾಗ ಗದ್ದೆ ಉಳಲು, ರೈತರು ಬಳಸುವ ಪ್ರಮುಖ ಸಾಧನ. ಎತ್ತು / ಕೋಣಗಳ ಹೆಗಲ ಮೇಲೆ ನೊಗ ಇಟ್ಟು, ಇದಕ್ಕೆ ಮತ್ತು ಎತ್ತಿಗೆ ಕಟ್ಟುವ ಹಗ್ಗಕ್ಕೆ "ಜತ್ತಗ" ಎನ್ನುವರು. ಕೆಳಭಾಗದಲ್ಲಿ ಹಲಗೆ ಕಟ್ಟಿ ಮಣ್ಣು ಹದ ಮಾಡಲು ಬಳಸುವರು. ಹಾರೆ, ಕೈಗೋರಿ, ಪಿಕ್ಕಾಸಿ, ಗುದ್ದಲಿ, ಕತ್ತಿ, ಕುಂಟಾಣಿ, ಸೈಂಗೋಲ್ / ಹಾರಂಗೋಲ್, ಇತ್ಯಾದಿ ಉಪಕರಣಗಳನ್ನು ಇಂದಿಗೂ ರೈತರು ಬಳಸುತ್ತಿದ್ದಾರೆ.

ಹೆಡಿಗೆ (ಹೆಡ್ಗಿ)ಗಳು : ಬಿದಿರಿನಿಂದ ಮಾಡಿದ ಗೊಬ್ಬರ ಹೊರುವ ಹೆಡಿಗೆ, ಬೆತ್ತದಿಂದ ಮಾಡಿದ ಮಣ್ಣು ಹೂರುವ ಹೆಡಿಗೆ, ಮಂಕರ್ಕಿ, ಕಣ್ ಹೆಡಿಗೆ, ಚಿಕ್ಕ ಕುಕ್ಕಿ (ಹೆಡಿಗೆ), 4 ಕಳ್‌ಸಿಗೆ ಬತ್ತ ಹಿಡಿಯುವ ಸಲಿಗೆ ಹೆಡಿಗೆಗಳನ್ನು ಬಳಸುತ್ತಿದ್ದರು. ದರ್ಲೆ ತರಲು ಹಗ್ಗದಿಂದ ಮಾಡಿದ ಕಲ್ಲಿ, ಬೀಳಿನಿಂದ ಮಾಡಿದ ದರ್ಲಿ ಗೂಡು ಕೃಷಿಕರಿಗೆ ಉಪಯುಕ್ತವಾಗುತ್ತಿತ್ತು.

ಹರಿ(ಖುಗುಡಾಣ) : ದೊಡ್ಡ ಪ್ರಮಾಣದಲ್ಲಿ ಬತ್ತವನ್ನು ಬೇಯಿಸಲು ಮಣ್ಣಿನ ಹರಿ, ತಾಮ್ರದ ಹರಿಗಳನ್ನು ಉಪಯೋಗಿಸುತ್ತಿದ್ದರು. ಈಗ ಇದರ ಸ್ಥಾನಕ್ಕೆ ಕಬ್ಬಿಣದ ಕೊಪ್ಪರಿಗೆಗಳು ಬಂದಿವೆ.

ಬಾಣಿ : ಎತ್ತು / ಹೋರಿ / ದನಗಳು ಆಹಾರ ತಿನ್ನಲು ಬಳಸುವ ಪಾತ್ರೆಯಾಗಿದೆ. ಅವುಗಳಿಗೆ ಕಲಗಚ್ಚು (ಆಹಾರ) ಬೇಯಿಸಲು ಮಣ್ಣಿನ / ತಾಮ್ರದ ಹರಿಯನ್ನು ಬಳಸುವರು.

ಗೆರ್‌ಸಿ (ಮೊರ) : ಸಾರಣ್ಗೆ (ತೂತು ಇರುವ ಅಕ್ಕಿ ಗೇರಲು ಬಳಸುವ ಸಾಧನ), ಹಿಡಿಕಟ್ಪ್ (=ಹಿಡಿಸೂಡಿ), ಕೈಹಲ್ಗೆ (=ಬತ್ತವನ್ನು ರಾಶಿ ಮಾಡಲು ಬಳಸುವ ಉಪಕರಣ)ವನ್ನು, ಹಲ್ಗ್ ಹಲ್ಗೆ (=ಬತ್ತವನ್ನು ಒಣಗಿಸುವಾಗ ಬಳಸುವ ಸಾಧನ).

ಹಡಿಮಂಚ : ಬತ್ತದ ಕೆಯ್ ಅಂಗಳಕ್ಕೆ ತಂದು, ಬತ್ತವನ್ನು ಬೇರ್ಪಡಿಸಲು ಇರುವ ಸಾಧನ. ಕೆಯ್‌ನ್ನು ಹೊಡೆಯುವ ಮಂಚವಾದದ್ದರಿಂದ ಇದನ್ನು ಹಡಿಮಂಚ ಎನ್ನುವರು. ಇದಕ್ಕೆ 4 ಕಾಲು, 2 ತೊಲೆ, ಮತ್ತು 5 ಬಲ್ಗ (ಮಧ್ಯೆ ತೊಲೆಗಳಿಗೆಜೋಡಿಸಿದ ಮರದ ತುಂಡುಗಳು)

ಒರ್ಲ್, ಒನ್ಕಿ : ಬತ್ತವನ್ನು ಅಕ್ಕಿ ಮಾಡಲು ನೆಲದಲ್ಲಿ ಹೂತಿಡುವ ಕಲ್ಲಿನ ಸಲಕರಣೆಯೇ ಒರ್ಲ್ (ಒರಳು). ಮತ್ತು ಅದನ್ನು ಕುಟ್ಟುವ ಕಬ್ಬಿಣದ ಹಲ್ಲಿರುವ ಮರದ ಒನಕೆ. ಅವಲಕ್ಕಿ ಮಾಡಲು ಕಬ್ಬಿಣದ ಒನಕೆ, ಮರದ ಜಿಡ್ಡೆ ಬಳಕೆಯಾಗುತ್ತಿತ್ತು.

ನಮ್ಮ ಹಳ್ಳಿಯ ರೈತರಿಗೆ ಕೃಷಿಯೇ ದೇವರಿದ್ದಂತೆ. ನಾಟಿ ಮಾಡುವಾಗ, ಗದ್ದೆ ಉಳುವಾಗ, ಬೀಜ ಬಿತ್ತುವಾಗ, ಬತ್ತ ಕುಟ್ಟಿ ಅಕ್ಕಿ ಮಾಡುವಾಗ, ಅವುಗಳನ್ನು ಪೂಜಿಸುವುದರೊಂದಿಗೆ, ಹಾಡು ಹೇಳುತ್ತಾ ಪೂಜ್ಯ ಭಾವದಿಂದ ಕಾಯಕ ಮಾಡುತ್ತಿದ್ದರು. ಅದೇ ಇಂದು ಟಿಲ್ಲರ್, ಟ್ರ್ಯಾಕ್ಟರ್‌ಗಳು ಹೊಸ ಬೀಜದ ತಳಿಗಳು, ನಾಟಿ ವಿಧಾನಗಳು ಒಂದು ಹಳೆಯ ಎಲ್ಲಾ ಕೃಷಿ ವಿಧಾನಗಳು ಮೂಲೆ ಗುಂಪಾಗಿವೆ.

ಸಹಾಯಕ ಗ್ರಂಥಗಳು

ಉಡುಪಿ ಜಿಲ್ಲೆಯ ಆರ್ಥಿಕ - ಸಾಮಾಜಿಕ ಅವಲೋಕನ - 2010-11 - ಕರ್ನಾಟಕ ಸರಕಾರ. (ಅಂಕಿ ಅಂಶಗಳನ್ನು ಇದರಿಂದಲೇ ಕೊಡಲಾಗಿದೆ).

ಉಡುಪಿ ಜಿಲ್ಲೆಯ ಅಂಕಿ ಅಂಶಗಳ ನೋಟ - 2009-2010. - ಕರ್ನಾಟಕ ಸರಕಾರ ಪ್ರಕಟಣೆ - ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ,

ಕರಾವಳಿ ಕರ್ನಾಟಕದ ರಂಗೋಲಿ ಕಲೆ - 2012- ಡಾ. ಭಾರತಿ ಮರವಂತೆ.

ವಕ್ತೃಗಳು :

ಡಾ. ಬಿ. ಧನಂಜಯ್, ಸಹಪ್ರಾಧ್ಯಾಪಕರು, ಕೃಷಿ ವಿಸ್ತರಣಾ ವಿಭಾಗ, ವಲಯ ಕೃಷಿ ಸಂಶೋಧನಾ ಕೇಂದ್ರ, ಬ್ರಹ್ಮಾವರ

ನಿರ್ದೇಶಕರು, ಡಾ. ಹನುಮಂತಪ್ಪ. ಎಂ., ಸಹ ಸಂಶೋಧನಾ ನಿರ್ದೇಶಕರು ವಲಯ ಕೃಷಿ ಸಂಶೋಧನಾ ಕೇಂದ್ರ ಬ್ರಹ್ಮಾನಂದ

ಶ್ರೀ. ಬಿ. ಗೋಪಾಲ ಪೂಜಾರಿ, ಕೋಟೆ ಚೆನ್ನಯ್ಯ ಗರಡಿ, ಮೂಡುಕೇರಿ, ಬನ್ನೂರು, ಕುಂದಾಪುರ ತಾ. (ಹಲವು ವರ್ಷಗಳಿಂದ ಕೃಷಿ ಮಾಡಿದವರು)

ಶ್ರೀ ರಾಮಣ್ಣ ಹೆಬ್ಬಾರ್, ಜಾನ್ಯ ಬೆಚ್ಚು ಕಬ್ಬಿನಾಲೆ - ಹೆಬ್ರಿ, ಕಾರ್ಕಳ ತಾ. (ತಮ್ಮ 10ನೇ ವಯಸ್ಸಿನಿಂದ ಕೃಷಿ ಆರಂಭಿಸಿ ಈಗಲೂ ಮಾಡುತ್ತಿದ್ದಾರೆ.

ಶ್ರೀಮತಿ ಮಾಸ್ತಿ ದೇವಾಡಿಗ, ಕಳುವಿನ ಬಾಗಿಲು, ಬಳ್ಕೂರು, ಕುಂದಾಪುರ ತಾ.

ಶ್ರೀ. ರಾಜಪ್ಪ,ತ ಕನಂಬಾಡಿ, ಮೂಡುಬೆಳ್ಳೆ, ಉಡುಪಿ ತಾ.

ಶ್ರೀ. ಲಕ್ಷ್ಮೀಬಾಯಿ, ನಿವೃತ್ತ ಪ್ರಾಂಶುಪಾಲರು, ಉಡುಪಿ - ಕಟಪಾಡಿ.

ಬಿ.ಎಂ.

ಉತ್ತರ ಕನ್ನಡ ಜಿಲ್ಲೆಯ ಕೃಷಿ ಕರ್ನಾಟಕ ರಾಜ್ಯದ ಮೂವತ್ತು ಜಿಲ್ಲೆಗಳ ಪೈಕಿ ಒಂದು. ಕರಾವಳಿ ಪ್ರದೇಶವಾದ ಇದನ್ನು ಪೋರ್ಚುಗೀಸರು ಮತ್ತ ಡಚ್ಚರು (1583) 'ಕೆನರಾ' ಎಂದು ಕರೆದರು. 1799ರಲ್ಲಿ ಟಿಪ್ಪುವಿನಿಂದ ಈ ಭಾಗವನ್ನು ಆಕ್ರಮಿಸಿಕೊಂಡ ಬ್ರಿಟಿಷರು ನಾರ್ತ್ ಕೆನರಾ, ಸೌತ್‌ಕೆನರಾ ಎಂದು ಎರಡು ಭಾಗಗಳಾಗಿ ವಿಂಗಡಿಸಿದರು. ಭಾರತ ಸ್ವಾತಂತ್ರ್ಯಾನಂತರ ರಾಜ್ಯಗಳ ಪುನರ್ವಿಂಗಡಣೆಯ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯೆಂದು ಕರೆಯಲಾಯಿತು. 1977ರಲ್ಲಿ ಇದು ಪ್ರತ್ಯೇಕ ಜಿಲ್ಲೆಯಾಯಿತು.


ಮೇಲ್ಮೈಲಕ್ಷಣ : ಕರ್ನಾಟಕ ರಾಜ್ಯದ ವಾಯವ್ಯ ಭಾಗದಲ್ಲಿರುವ ಈ ಜಿಲ್ಲೆಯ ಮೇರೆಗಳು ಉತ್ತರದಲ್ಲಿ ಗೋವಾ, ಬೆಳಗಾಂವಿ, ಪೂರ್ವದಲ್ಲಿ ಧಾರವಾಡ ಮತ್ತು ಶಿವಮೊಗ್ಗ, ದಕ್ಷಿಣದಲ್ಲಿ ಉಡುಪಿ ಜಿಲ್ಲೆ, ಪಶ್ಚಿಮದಲ್ಲಿ ಅರಬ್ಬೀಸಮುದ್ರ. ಉತ್ತರ ಅಕ್ಷಾಂಶ 13°55'-15°31' ಮತ್ತು ಪೂರ್ವರೇಖಾಂಶ 74°9'-75°10' ನಡುವೆ ಇರುವ ಪ್ರದೇಶವಿದು. ಜಿಲ್ಲೆಯ ಒಟ್ಟು ವಿಸ್ತೀರ್ಣ 10,245 ಚ.ಕಿ.ಮೀ. ಇದು ಕರ್ನಾಟಕದ ಒಟ್ಟು ವಿಸ್ತೀರ್ಣದ 5.37 ರಷ್ಟಿದ್ದು ಹತ್ತನೆಯ ಸ್ಥಾನಪಡೆದಿದೆ.

ಈ ಜಿಲ್ಲೆ ಅಂಕೋಲ, ಭಟ್ಕಳ, ಹಳಿಯಾಳ, ಹೊನ್ನಾಪುರ, ಜೋಯಿಡ, ಕಾರವಾರ, ಕುಮುಟ, ಮುಂಡಗೋಡು, ಸಿದ್ದಾಪುರ, ಶಿರಸಿ, ಯಲ್ಲಾಪುರ ಹೀಗೆ ಹನ್ನೊಂದು ತಾಲ್ಲೂಕುಗಳನ್ನು ಒಳಗೊಂಡಿದೆ. ಮೂರು ಪುರಸಭೆ ; ಎರಡು ಪಟ್ಟಣ ಪಂಚಾಯಿತಿ, ಆರು ತಾಲ್ಲೂಕು, ಪಂಚಾಯಿತಿ, 35 ಹೋಬಳಿಗಳು, 19 ನಾಡಕಛೇರಿ, 208 ಗ್ರಾಮ ಪಂಚಾಯಿತಿಗಳು, 1289 ಗ್ರಾಮುಗಳನ್ನು ಒಳಗೊಂಡಿದೆ.

ಹವಾಗುಣ : ಜಿಲ್ಲೆಯು ಸಹ್ಯಾದ್ರಿಯ ಚೆಲುವಿನಿಂದ ಕೂಡಿದ್ದು ಬೇಸಗೆಯಲ್ಲಿ ಗರಿಷ್ಠ ಉಷ್ಣಾಂಶ 33° ಸೆ. ಹಾಗೂ ಚಳಿಗಾಲದಲ್ಲಿ ಕನಿಷ್ಠ ಉಷ್ಣಾಂಶ 20° ಸೆ. ಇರುತ್ತದೆ. ಇಲ್ಲಿಯ ನೆಲ ವಿರಳಿತಗಳಿಂದ ಕೂಡಿದ್ದು, ಸಮುದ್ರದ ಗಾಳಿಯಿಂದ ಮಳೆಗಾಲದಲ್ಲಿ ವಾತಾವರಣ ತಂಪಾಗಿದ್ದು, ಗಾಳಿಯ ಒತ್ತಡ ಹೆಚ್ಚಾಗುತ್ತದೆ. ಹಾಗಾಗಿ ಸಮುದ್ರದೆಡೆಯಿಂದ ಬೀಸುವ ಗಾಳಿ ತಟ್ಟುವುದಿಲ್ಲ.

ಮಣ್ಣು : ಜಿಲ್ಲೆಯಲ್ಲಿ ಮರಳು ಮಿಶ್ರಿತ ಮಣ್ಣು ಕಂಡುಬರುತ್ತದೆ. ಈ ಮಣ್ಣು ಹೆಚ್ಚಾಗಿ ಭಟ್ಕಳ, ಕಾರವಾರ ಜಿಲ್ಲೆಯಲ್ಲಿದೆ. ಇನ್ನಿತರ ಪ್ರದೇಶಗಳಲ್ಲಿ ನೀರು ಬೆರೆತ ಉಸುಕಿನ ಮಣ್ಣು ಇದ್ದು ಇಂತಹ ನೆಲವನ್ನು 'ಗಜನಿ ಭೂಮಿ' ಎಂದು ಕರೆಯುವರು. ಇದು ಕರಾವಳಿ ಪ್ರದೇಶವಾದ್ದರಿಂದ ನದಿಗಳ ತೀರದಲ್ಲಿ ಫಲವತ್ತಾದ ಮೆಕ್ಕಲು ಮಣ್ಣು ಶೇಖರವಾಗಿದೆ. ಇಲ್ಲಿ ಕೆಂಪು ಮಣ್ಣಿನಿಂದ ಕೂಡಿದ ನೆಲವನ್ನು ಬೆಟ್ಟ ಎಂದು ಕರೆಯುವರು. ಅಲ್ಲದೆ ಜಿಲ್ಲೆ ಯ ಮಣ್ಣು ಸಸ್ಯಗಳ ಬೆಳೆವಣಿಗೆಗೆ ಉಪಯುಕ್ತವಾಗಿದೆ.

ಮಳೆ : ಜಿಲ್ಲೆಯಲ್ಲಿ ಸುಮಾರು 5 ರಿಂದ 6 ತಿಂಗಳು ಮಳೆಯಾಗುತ್ತದೆ. ಮುಂಗಾರು ಮಳೆಯು ಜೂನ್ ತಿಂಗಳಲ್ಲಿ ಆರಂಭವಾಗುತ್ತದೆ. ಭಟ್ಕಳ ತಾಲ್ಲೂಕು ಸರಾಸರಿ ಮಳೆ ಪ್ರಮಾಣ 2835 ಮಿ.ಮೀ. ಗರಿಷ್ಠ 4015 ಮಿ.ಮೀ. ಮಳೆ ಬೀಳುವ ಪ್ರದೇಶವಾದರೆ ಮುಡಗೋಡು ತಾಲ್ಲೂಕು ಕನಿಷ್ಠ 1296 ಮಿ.ಮೀ. ಮಳೆ ಬೀಳುವ ಪ್ರದೇಶವಾಗಿದೆ.



2009-10ರಲ್ಲಿ ವಾಸ್ತವಿಕ ಮಳೆ 3127 ಮಿ.ಮೀ. ಇದ್ದು 2010-11ರಲ್ಲಿ 3237 ಮಿ.ಮೀ. ಮಳೆಯಾಗಿದೆ. ಮಾಸಿಕವಾರು ವಾಸ್ತವಿಕ ಮಳೆಯನ್ನು ಗಮನಿಸಿದಾಗ 2011 ಜೂನ್ ತಿಂಗಳಲ್ಲಿ ವಾಡಿಕೆ ಮಳೆ 698 ಮಿ.ಮೀ. ಇದ್ದು ವಾಸ್ತವಿಕ 877 ಮಿ.ಮೀ. ಆಗಿದೆ. ಆಗಸ್ಟ್ ಮಾಹೆಯಲ್ಲಿ ಅತಿ ಹೆಚ್ಚು ಮಳೆಯಾಗಿದೆ. 988 ಮಿ.ಮೀ. ವಾಡಿಕೆ ಮಳೆಯಿದ್ದು 943 ವಾಸ್ತವಿಕ ಮಳೆಯಾಗಿದೆ.

ಕೃಷಿ ಭೂಮಿ ವಿಸ್ತೀರ್ಣ : ಜಿಲ್ಲೆಯು ಗ್ರಾಮಗಳಿಂದ ಹೆಚ್ಚು ಆವೃತವಾಗಿರುವುದರಿಂದ ಜನರ ಮುಖ್ಯ ಕಸುಬು ಕೃಷಿಯಾಗಿದೆ. ಹಾಗೂ ಅಲ್ಲಿಯ ಜನರು ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 123535 ಹೆ. ಕೃಷಿ ಹಿಡುವಳಿಯಾಗಿರುವ ಪ್ರದೇಶವಾಗಿದೆ. ಸುಮಾರು ಲ.ಹೆ. ಪ್ರದೇಶ ಕೃಷಿ ಚಟುವಟಿಕೆಗೆ ಯೋಗ್ಯವಾಗಿದ್ದು ಅಂದರೆ ಶೇ. 29 ರಷ್ಟು ನಿವ್ವಳ ಸಾಗುವಳಿ ನಡೆಯುವ ಪ್ರದೇಶವಾಗಿದೆ.

ಭೂ ಉಪಯೋಗ : ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 1,024.679 ಹೊಂದಿದ್ದು, 2011-12ರ ಸಾಲಿನ ಪ್ರಕಾರ ಅರಣ್ಯಕ್ಕೆ 813.595, ಹೆ. ಪ್ರದೇಶ, ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿಯಲ್ಲಿ ವ್ಯವಸಾಯೇತರಕ್ಕೆ 34,547 ಹೆ. ಪ್ರದೇಶ, ಬಂಜರು ಭೂಮಿ 16,234 ಹೆ. ಪ್ರದೇಶ ಹೊಂದಿದ್ದು ಒಟ್ಟು 50.781 ಹೆ. ಇದೆ. ಸಾಗುವಳಿ ಮಾಡದಿರುವ ಇತರ ಭೂಮಿಯಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು 6,450 ಹೆ. ಪ್ರದೇಶ, ಖಾಯಂ ಗೋಮಾಳಕ್ಕೆ 16,625 ಹೆ. ಪ್ರದೇಶ. ವೃಕ್ಷ ಮತ್ತು ತೋಪುಗಳು 4,806 ಹೆ. ಪ್ರದೇಶ ಹೊಂದಿದ್ದು ಒಟ್ಟು 27,881 ಹೆ. ಪ್ರದೇಶ ಹೊಂದಿದೆ. ಬೀಳು ಭೂಮಿಯಲ್ಲಿ ಚಾಲ್ತಿ ಯಲ್ಲಿರುವ ಪ್ರದೇಶ 5906 ಹೆ. ಇತರೆ 14214 ಹೆ. ಒಟ್ಟು 20120 ಹೆ. ಬಿತ್ತನೆಯಾದ ಪ್ರದೇಶ. ನಿವ್ವಳ ಬಿತ್ತನೆಯಾದ ಪ್ರದೇಶ 112302 ಹೆ. ಒಂದಕ್ಕಿಂತ ಹೆಚ್ಚು ಬಿತ್ತನೆಯಾದ ಪ್ರದೇಶ 11231 ಹೆ. ಒಟ್ಟು 123533 ಹೆ. ಪ್ರದೇಶ ಹೊಂದಿದೆ.

ಭೂಹಿಡುವಳಿದಾರರು : ಜಿಲ್ಲೆಯಲ್ಲಿ ಒಟ್ಟು 144965.63 ಭೂ ಹಿಡುವಳಿದಾರರಿದ್ದು ಅದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಅತಿ ಸಣ್ಣ ಹಿಡುವಳಿದಾರರು 152755, ಸಣ್ಣ ಹಿಡುವಳಿದಾರರು 2260.98, ಅರೆ ಮಧ್ಯಮ ಭೂಹಿಡುವಳಿದಾರರು 1132.53 ಮಧ್ಯಮ ಹಿಡುವಳಿದಾರರು 389.01 ಹಾಗೂ ದೊಡ್ಡ ಹಿಡುವಳಿದಾರರು 1239 ಒಟ್ಟು 5322.46.

ಪರಿಶಿಷ್ಟ ಪಂಗಡಕ್ಕೆ ಸೇರಿದ ಅತಿ ಸಣ್ಣ ಭೂಹಿಡುವಳಿದಾರರು 659.90 ಸಣ್ಣ ಹಿಡುವಳಿದಾರರು 922.52, ಅರೆಮಧ್ಯಮ ಭೂಹಿಡುವಳಿದಾರರು 767.25 ಮಧ್ಯಮ ಹಿಡುವಳಿದಾರರು 261.99, ದೊಡ್ಡ ಹಿಡುವಳಿದಾರರು 21.41 ಒಟ್ಟು ಭೂಹಿಡುವಳಿದಾರರು 2633.07 ಇದ್ದಾರೆ.

ಇತರೆ ಸಮುದಾಯಕ್ಕೆ ಸೇರಿದ ಅತಿ ಸಣ್ಣ ಹಿಡುವಳಿದಾರರು 41892.9 ಸಣ್ಣ ಹಿಡುವಳಿದಾರರು 39399.89 ಅರೆಮಧ್ಯಮ ಹಿಡುವಳಿದಾರರು 34616.32 ಮಧ್ಯಮ ಹಿಡುವಳಿದಾರರು 222100.39 ದೊಡ್ಡ ಭೂಮಿಹಿಡುವಳಿದಾರರು 3261.70 ಇದ್ದು ಒಟ್ಟು 1411271 ರಷ್ಟಿದ್ದಾರೆ. ಒಟ್ಟಾರೆ ಹೇಳುವುದಾದರೆ ಅತಿಸಣ್ಣ ಹಿಡುವಳಿದಾರರು 44164.60, ಸಣ್ಣ ಹಿಡುವಳಿದಾರರು 42666.08 ಅರೆ ಮಧ್ಯಮ ಭೂಹಿಡುವಳಿದಾರರು 366190.93 ಮಧ್ಯಮ ಹಿಡುವಳಿದಾರರು 22934.98 ದೊಡ್ಡ ಹಿಡುವಳಿದಾರರು 3580 ರಷ್ಟಿದ್ದಾರೆ.

ಅರಣ್ಯ ಪ್ರದೇಶ : ಜಿಲ್ಲೆಯಲ್ಲಿ ಒಟ್ಟು 813.595 ಹೆ. ಪ್ರದೇಶ ಅರಣ್ಯಕ್ಕೆ ಒಳಪಟ್ಟಿದ್ದು ಇಲ್ಲಿ ಗಂಧದ ಮರ, ನಂದಿ, ಹೊನ್ನೆ, ಸಾಗುವಾಗಿ ತಾಳೆಮರ ಮುಂತಾದ ಮರಗಳು ದಟ್ಟವಾಗಿ ಬೆಳೆದು ನಿಂತಿವೆ. ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ. 8 ರಷ್ಟು ಪ್ರದೇಶದಲ್ಲಿ ಪರ್ಣಪಾತ ವೃಕ್ಷಗಳು ಅಧಿಕವಾಗಿ ಬೆಳೆಯುತ್ತವೆ. ರಾಜ್ಯದ ಒಟ್ಟು ಅರಣ್ಯ ಪ್ರದೇಶದಲ್ಲಿ ಜಿಲ್ಲೆಯು ಶೇ. 55 ರಷ್ಟಿದೆ. ಅಲ್ಲದೆ ಇಲ್ಲಿ ಹಲವಾರು ಔಷಧೀಯ ಗಿಡಗಳು ಕೂಡ ಬೆಳೆಯುತ್ತವೆ.

ನೀರಾವರಿ ಸೌಕರ್ಯ : ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವು ಹಲವಾರು ಮೂಲಗಳಿಂದ ದೊರೆಯುತ್ತದೆ. ಅಲ್ಲದೆ ಹಲವಾರು ಪ್ರದೇಶಗಳು ಮಳೆಯಾಶ್ರಿತವಾಗಿವೆ. ಅತಿ ಹೆಚ್ಚು ನದಿಗಳು ಈ ಜಿಲ್ಲೆಯಲ್ಲಿ ಹರಿಯುವುದರಿಂದ ಅವುಗಳಿಗೂ ನೀರಾವರಿ ಸೌಲಭ್ಯ ದೊರೆಯುತ್ತದೆ. ಜಿಲ್ಲೆಯಲ್ಲಿ ಹರಿಯುವ ನದಿಗಳೆಂದರೆ ಕಾಳಿನದಿ, ಗಂಗಾವಳಿನದಿ, ಅಘನಾಶಿನಿನದಿ, ಶರಾವತಿನದಿ, ವೆಂಕಟಾಪುರನದಿ, ವರದಾನದಿ. ಅಲ್ಲದೇ 3102 ಒಡ್ಡುಗಳು, ಕಾಲುವೆಗಳು, ಕೆರೆಗಳು 9420, ಬಾವಿಗಳಿಂದ, ಕೊಳವೆ ಬಾವಿಗಳಿಂದ, ಏತನೀರಾವರಿಯಿಂದ ಹಾಗೂ ಇನ್ನಿತರ ಮೂಲಗಳಿಂದ ಜಿಲ್ಲೆಯು ನೀರಾವರಿ ಸೌಲಭ್ಯವನ್ನು ಪಡೆಯುತ್ತದೆ.

2010-11 ಹಾಗೂ 2011-12ರ ಸಾಲಿನಲ್ಲಿ ನೀರಾವರಿಯಾದ ನಿವ್ವಳ ಪ್ರದೇಶವನ್ನು ಗಮನಿಸಿದಾಗ – ಕಾಲುವೆಗಳಿಂದ 2010-11, 2011-12ರಲ್ಲಿ ನೀರಾವರಿಯಾದ ಪ್ರದೇಶ ಹಾಗೂ ನಿವ್ವಳ ನೀರಾವರಿ ಪ್ರದೇಶದ ವಿಸ್ತೀರ್ಣ ಶೂನ್ಯವಾಗಿದೆ. ಕೆರೆಗಳಿಂದ - 2010-11ರಲ್ಲಿ 65,90 ಹೆ. 2011-12ರಲ್ಲಿ 5,760 ಹೆ. ಬಾವಿಗಳಿಂದ 2010-11ರಲ್ಲಿ 9806 ಹೆ. ಪ್ರದೇಶ, 2011-12ರಲ್ಲಿ 9,969 ಹೆ. ಪ್ರದೇಶ ಕೊಳವೆ ಬಾವಿಗಳಿಂದ 2010-11ರಲ್ಲಿ 2539 ಹೆ. ಪ್ರದೇಶ 2011-12ರಲ್ಲಿ 3564 ಹೆ. ಪ್ರದೇಶ, ಏತನೀರಾವರಿ 2010-11ರಲ್ಲಿ 678 ಹೆ. ಪ್ರದೇಶ, 2011-12ರಲ್ಲಿ 680 ಹೆ. ಪ್ರದೇಶ. ಇತರೆ ಮೂಲಗಳಿಂದ 2010-11ರಲ್ಲಿ 10.587 ಹೆ. ಪ್ರದೇಶ, 2011-12ರಲ್ಲಿ 10532 ಹೆ. ಪ್ರದೇಶ ನಿವ್ವಳ ನೀರಾವರಿಯಾದ ಪ್ರದೇಶವಾಗಿವೆ. 2010-11ರಲ್ಲಿ ಒಟ್ಟು ನೀರಾವರಿಯಾದ ವಿಸ್ತೀರ್ಣ 30590 ಹೆ. ಪ್ರದೇಶದಲ್ಲಿ 29.439 ಹೆ. ನಿವ್ವಳ ನೀರಾವರಿಯಾದ ಪ್ರದೇಶವಾಗಿದೆ. 2011-12ರಲ್ಲಿ ಒಟ್ಟು ನೀರಾವರಿಯಾದ ವಿಸ್ತೀರ್ಣ 32404 ಹೆ. 31172 ಹೆ. ಪ್ರದೇಶ ನಿವ್ವಳ ನೀರಾವರಿಯಾದ ಪ್ರದೇಶವಾಗಿದೆ.

ಬೆಳೆಗಳು : ಜಿಲ್ಲೆಯಲ್ಲಿ ಬತ್ತ, ತೆಂಗು, ಕಬ್ಬು, ಅಡಕೆ, ಮೆಣಸು ಮುಂತಾದವು ಪ್ರಮುಖ ಬೆಳೆಗಳಾಗಿವೆ. ಇಲ್ಲಿಯ ರೈತರು ಬೆಳೆಗಳನ್ನು ಮುಂಗಾರು ಹಿಂಗಾರು ಹಾಗೂ ಬೇಸಗೆಯಲ್ಲಿ ಬೆಳೆಯುತ್ತಾರೆ. ಇಲ್ಲಿಯ

ಪರಿಸರ, ಹಿತರಕವಾಗಿದ್ದು ಭೂಮಿ ಫಲವತ್ತಾಗಿರುವುದರಿಂದ ಬೆಳೆಯಲ್ಲಿ ಅಧಿಕ ಇಳುವರಿ ದೊರೆಯುತ್ತದೆ. ನದಿಗಳು ಹೆಚ್ಚಾಗಿ ಹರಿಯುವುದರಿಂದ ನೀರಾವರಿ ಸೌಕಾರ್ಯ ಚೆನ್ನಾಗಿದ್ದು ಬೆಳೆಗಳಿಗೆ ಯೋಗ್ಯವಾದ ಸಮಯದಲ್ಲಿ ನೀರಿನ ಪೂರೈಕೆಯಾಗುತ್ತದೆ.

ಇಲ್ಲಿ ಏಕದಳ ಧಾನ್ಯಗಳು 2010-11ನೇ ಸಾಲಿನಲ್ಲಿ 80650 ಹೆ. ವಿಸ್ತೀಣ,2011-12ರಲ್ಲಿ 235586 ಹೆ. ವಿಸ್ತೀರ್ಣ, ದ್ವಿದಳ ಧಾನ್ಯಗಳು 2010-11ನೇ ಸಾಲಿನಲ್ಲಿ 1992 ಹೆ. ವಿಸ್ತೀರ್ಣ ಹೊಂದಿದ್ದು, 2011-12ನೇ ಸಾಲಿನಲ್ಲಿ 2157 ಹೆ. ವಿಸ್ತೀರ್ಣ, ಹೊಂದಿದೆ. ಎಣ್ಣೆಕಾಳುಗಳು 2010-11ನೇ ಸಾಲಿನಲ್ಲಿ 3118 ಹೆ. ವಿಸ್ತೀರ್ಣ, ಇದ್ದು 2011-12ನೇ ಸಾಲಿನಲ್ಲಿ 2727 ಹೆ. ವಿಸ್ತೀರ್ಣ ಹೊಂದಿದೆ. ವಾಣಿಜ್ಯ ಬೆಳೆಗಳು 2010-11ನೇ ಸಾಲಿನಲ್ಲಿ 3300 ಹೆ. ವಿಸ್ತೀರ್ಣ ಹೊಂದಿದ್ದು 2011-12ರಲ್ಲಿ 5314 ಹೆ. ವಿಸ್ತೀರ್ಣ ಹೊಂದಿದೆ.

ಏಕದಳ ಧಾನ್ಯಗಳು :

1. ಬತ್ತ 2010-11ನೆ ಸಾಲಿನಲ್ಲಿ 76604 ಹೆ. ವಿಸ್ತೀರ್ಣ ಇದ್ದು, 2011-12ನೇ ಸಾಲಿನಲ್ಲಿ 73285 ಹೆ. ವಿಸ್ತೀರ್ಣ ಇದೆ.
2. ಜೋಳ 2010-11ನೇ ಸಾಲಿನಲ್ಲಿ 12 ಹೆ. ವಿಸ್ತೀರ್ಣ ಹೊಂದಿದ್ದು, 2011-12ನೇ ಸಾಲಿನಲ್ಲಿ 05 ಇದೆ.
3. ಸಜ್ಜೆ 2010-11 ಹಾಗೂ 2011-12ನೇ ಸಾಲಿನಲ್ಲಿ 'ಶೂನ್ಯ'ವಾಗಿದೆ.
4. ಮುಸುಕಿನ ಜೋಳ 2010-11ನೇ ಸಾಲಿನಲ್ಲಿ 4022 ಹೆ. ವಿಸ್ತೀರ್ಣ ಇದ್ದು, 2011-12ನೇ ಸಾಲಿನಲ್ಲಿ 3,793 ಹೆ. ವಿಸ್ತೀರ್ಣ ಇದೆ.

ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು 2010-11ರಲ್ಲಿ 80650 ಇದ್ದು 2011-12ರಲ್ಲಿ 77093 ರಷ್ಟಿದೆ. ಇದನ್ನು ಗಮನಿಸಿದಾಗ ಬೆಳೆಗಳಲ್ಲಿ ಏರಿಳಿತವು ಕಂಡುಬಂದಿರುವುದನ್ನು ಕಾಣಬಹುದು ಹಾಗೂ ಒಟ್ಟಾರೆ 2010-11ರ ಸಾಲಿಗಿಂತ 2011-12ರಲ್ಲಿ ಕಡಿಮೆಯಾಗಿರುವುದು ಖಚಿತಗೊಂಡಿದೆ.

ದ್ವಿದಳ ಧಾನ್ಯಗಳು :

1. ತೊಗರಿ 2010-11ರಲ್ಲಿ 36 ಹೆ.ವಿ. ಹೊಂದಿದ್ದು, 2011-12ರಲ್ಲಿ 30 ಹೆ. ವಿಸ್ತೀರ್ಣ ಇದೆ.
2. ಹುರುಳಿ 2010-11ರಲ್ಲಿ 19 ಹೆ.ವಿ. ಇದ್ದು, 2011-12ರಲ್ಲಿ 335 ಹೆ. ವಿ. ಇದೆ.
3. ಉದ್ದು 2010-11ರಲ್ಲಿ 566 ಹೆ.ವಿ. ಇದ್ದು, 2011-12ರಲ್ಲಿ 515 ಹೆ.ವಿ. ಆಗಿದೆ.
4. ಹೆಸರು 2010-11ರಲ್ಲಿ 713 ಹೆ.ವಿ. ಇದ್ದು, 2011-12ರಲ್ಲಿ 933 ಹೆ.ವಿ. ಆಗಿದೆ.
5. ಅವರೆ 2010-11ರಲ್ಲಿ 134 ಹೆ.ವಿ. ಹೊಂದಿದ್ದು, 2011-12ರಲ್ಲಿ 119 ಹೆ.ವಿ. ಆಗಿದೆ.
6. ಅಲಸಂದೆ 2010-11ರಲ್ಲಿ 334 ಹೆ.ವಿ. ಇದ್ದು, 2011-12ರಲ್ಲಿ 221 ಹೆ.ವಿ. ಇದೆ.
7. ಕಡಲೆ 2010-11ರಲ್ಲಿ 10 ಹೆ.ವಿ. ಇದ್ದು, 2011-12ರಲ್ಲಿ 04 ಹೆ.ವಿ. ಹೊಂದಿದೆ.

ಒಟ್ಟು ದ್ವಿದಳ ಧಾನ್ಯಗಳು 2010-11ರಲ್ಲಿ 1992 ಹೆ.ವಿ. ಇದ್ದು, 2011-12ರಲ್ಲಿ 2157 ಹೆ.ವಿ. ಇದೆ. ಇವೆಲ್ಲವನ್ನು ಗಮನಿಸಿದಾಗ 2010-11ನೇ ಸಾಲಿನಲ್ಲಿ ಹೆಚ್ಚಳ ಇದ್ದುದ್ದು 2011-12ನೇ ಸಾಲಿನಲ್ಲಿ ಒಟ್ಟಾರೆಯಾಗಿ ಹೆಚ್ಚಳ ಕಂಡುಬಂದರು ಕೂಡಾ ಬೆಳೆಗಳ ಹೆ. ಏರಿಳಿತ ಕಂಡು ಬಂದಿದೆ.

ಎಣ್ಣೆಕಾಳುಗಳು :

1. ಶೇಂಗಾ 2010-11ರಲ್ಲಿ 2,898 ಹೆ.ವಿ. ಇದ್ದು, 2011-12ರಲ್ಲಿ 4,203 ಇದೆ.
2. ಸೂರ್ಯಕಾಂತಿ 2010-11ರಲ್ಲಿ 216 ಹೆ.ವಿ. ಇದ್ದು, 2011-12ರಲ್ಲಿ 108 ಹೆ.ವಿ. ಆಗಿದೆ.
3. ಎಳ್ಳು 2010-11ರಲ್ಲಿ 04 ಹೆ.ವಿ. ಇದ್ದು 2011-12ರಲ್ಲಿ 01 ಹೆ.ವಿ. ಇದೆ.
4. ಅಗಸೆ 2010-12ರಲ್ಲಿ ಮಾತ್ರ 01 ಹೆ.ವಿ. ಇದೆ.

ಒಟ್ಟು ಎಣ್ಣೆಕಾಳುಗಳು 2010-11ರಲ್ಲಿ 3118 ಹೆ.ವಿ. ಇದ್ದು, 2011-12ರಲ್ಲಿ 4313 ಹೆ.ವಿ. ಆಗಿದೆ. ಇದನ್ನು ಗಮನಿಸಿದಾಗ 2010-11 ಗಿಂತ 2011-12ರ ಹೆ.ವಿ. ಇಳಿಮುಖವಾಗಿದೆ. ಆದರೂ ಒಟ್ಟಾರೆ ಕೆಲವು ಎಣ್ಣೆಕಾಳುಗಳಲ್ಲಿ ಹೆಚ್ಚಳ ಕಂಡುಬಂದಿದೆ.

ವಾಣಿಜ್ಯ ಬೆಳೆಗಳು :

1. ಹತ್ತಿ 2010-11ರಲ್ಲಿ 2013 ಹೆ.ವಿ. ಇದ್ದು 2011-12ರಲ್ಲಿ 2588 ಹೆ.ವಿ. ಇದೆ.
2. ಕಬ್ಬು 2010-11ರಲ್ಲಿ 1290 ಹೆ.ವಿ. ಇದ್ದು 2011-12ರಲ್ಲಿ 2726ರ ಹೆ.ವಿ. ಇದೆ.

ಒಟ್ಟು ವಾಣಿಜ್ಯ ಬೆಳೆಗಳು 2010-11ರಲ್ಲಿ 3303 ಹೆ.ವಿ. ಇದ್ದು 2011-12ರಲ್ಲಿ 5314 ಹೆ.ವಿ. ಇದೆ. ಇದನ್ನು ಗಮನಿಸಿದಾಗ 2010-11 ಗಿಂತ 2011-12ರಲ್ಲಿ ಹೆಚ್ಚಳವಾಗಿದೆ.

ತೋಟದ ಬೆಳೆಗಳು : 2011-12ರಲ್ಲಿ ಬಾಳೆ 24252, ಹೆ.ವಿ., ಮಾವು 3724 ಹೆ.ವಿ. ಪೈನಾಪಲ್ 28538 ಹೆ.ವಿ., ಸೀಬೆ 57 ಹೆ.ವಿ., ಸಪೋಟ 213 ಹೆ.ವಿ., ಪರಂಗಿ 700 ಹೆ.ವಿ. ಇದೆ.

ಉತ್ತಮ ನೀರಾವರಿ ಸೌಲಭ್ಯವಿರುವ ಉತ್ತರ ಕನ್ನಡ ಜಿಲ್ಲೆ ಸದಾ ಹಸುರಿನಿಂದ ಕೂಡಿದ್ದು ಆಹಾರ ಬೆಳೆಗಳಷ್ಟೇ ಅಲ್ಲದೆ ವಾಣಿಜ್ಯ ಬೆಳೆಗಳಿಗೂ ಹೆಸರಾಗಿದೆ. ಮತ್ಸ್ಯೋದ್ಯಮ, ಹೈನುಗಾರಿಕೆ ಮೊದಲಾದ ಕೃಷಿಗೆ ಪೂರಕವಾದ ಉದ್ಯಮಗಳು ಪ್ರಗತಿಯಲ್ಲಿದ್ದು ದೇಶವಿದೇಶಗಳ ವ್ಯಾಪಾರ ವಿನಿಮಯಗಳಿಗೂ ಈ ಜಿಲ್ಲೆ ಹೆಸರಾಗಿದೆ.

ಪಿ.ಕೆ.

ಉತ್ತರಾಣಿ ಉತ್ತರಾಣಿಯು 'ಅಮರಾಂತೇಸಿ' ಕುಟುಂಬಕ್ಕೆ ಸೇರಿದ್ದು, ಸಸ್ಯಶಾಸ್ತ್ರದ ಪರಿಭಾಷೆಯಲ್ಲಿ ಇದನ್ನು 'ಅಕಿರಾಂಥೆಸ್ ಆಸ್ಪೆರ' ಎಂದು ಗುರುತಿಸಲಾಗುತ್ತದೆ. ಭಾರತ, ಶ್ರೀಲಂಕಾ, ಬಲುಚಿಸ್ತಾನ, ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಅಮೆರಿಕಾಗಳಲ್ಲಿ ಇದು ಕಾಣಸಿಗುತ್ತದೆ. ದಾರಿ ಹಾಗೂ ಹೊಲದ ಬದುಗಳಲ್ಲಿ ಹಾಗೂ ಪಾಳು ಜಾಗಗಳಲ್ಲಿ ಇದು ಬೆಳೆಯುತ್ತದೆ.

ವಿಧಗಳು : ಉತ್ತರಾಣಿಯಲ್ಲಿ ಎಲೆಯ ಹಾಗೂ ಹೂವಿನ ಬಣ್ಣದ ಆಧಾರದ ಮೇಲೆ ಮೂರು ವಿಧಗಳನ್ನು ಗುರುತಿಸಬಹುದು.



1. ಕೆಂಪು ಉತ್ತರಾಣಿ, 2. ಬಿಳಿ ಉತ್ತರಾಣಿ, 3. ಕರಿ ಉತ್ತರಾಣಿ

1. ಕೆಂಪು ಉತ್ತರಾಣಿ : ಸಂಸ್ಕೃತದಲ್ಲಿ ಕೆಂಪು ಉತ್ತರಾಣಿಗೆ ರಕ್ತಾಪಮಾರ್ಗ. ವಾಶೀರ, ವೃತಫಲ, ಕೇಶವರ್ಣಿ, ರಕ್ತವಿಟ ಮೊದಲಾದ ಹೆಸರುಗಳಿವೆ. ಆಯುರ್ವೇದದ ಪ್ರಕಾರ ಇದು ಕಫ ವಾತಶಾಮಕ, ಶೋತಹರ, ವ್ರಣಶೋಧಕ, ಶಿರೋವಿರೇಚಕ, ರಕ್ತಶೋಧಕ, ರಕ್ತವರ್ಧಕ, ಗುಣಸಾಮರ್ಥ್ಯಗಳನ್ನು ಹೊಂದಿದೆ.

2. ಬಿಳಿ ಉತ್ತರಾಣಿ : ಆಯುರ್ವೇದದಲ್ಲಿ ಇದಕ್ಕೆ 'ಅಪಮಾರ್ಗ' ಎನ್ನುವರು. ಇದು ರಕ್ತಸೋರುವ ಮೂಲವ್ಯಾಧಿ, ರಕ್ತಸ್ರಾವ, ನೋವು, ಬೊಜ್ಜು, ಚರ್ಮದ ಕಾಯಿಲೆಗಳು. ಗ್ರಂಥಿಗಳ ಊತದ ಸಮಸ್ಯೆ ಮೊದಲಾದವುಗಳ ನಿವಾರಣೆಯಲ್ಲಿ ಪ್ರಯೋಜನಕಾರಿ. ಬಿಳಿ ಉತ್ತರಾಣಿ ವಮನಕಾರಕ, ರಕ್ತವಿಕಾರ ನಾಶಕ, ರಕ್ತಾತಿಸಾರ ನಿವಾರಕ ಗುಣಗಳನ್ನು ಹೊಂದಿದೆ.

3. ಕರಿ ಉತ್ತರಾಣಿ : ಇದರ ಎಲೆಯಲ್ಲಿ ಮತ್ತನ್ನು ಉಂಟುಮಾಡುವ ಗುಣವಿರುವುದರಿಂದ ನೆರಳಿನಲ್ಲಿ ಒಣಗಿಸಿರುವ ಎಲೆಯನ್ನು ಸುರುಳಿಯಾಗಿ ಸುತ್ತಿ ಬೀಡಿಯಂತೆ ಬಳಸುತ್ತಾರೆ, ಅಲ್ಲದೆ ಎಲೆಯನ್ನು ಪುಡಿ ಮಾಡಿ ಕಾಫಿ, ಟೀ ಅಂತೆಯೂ ಬಳಸುವರು, ಕರಿ ಉತ್ತರಾಣಿ ಎಲೆಯ ರಸವನ್ನು ಉಳುಕಿರುವ ಕೈಕಾಲಿಗೆ ಹಚ್ಚಿ ಮಸಾಜು ಮಾಡಿದರೆ ನೋವು ನಿವಾರಣೆ ಸಾಧ್ಯ.

ಉತ್ತರಾಣಿಯು ಒಂದು ಗಡುಸಾದ ಮೂಲಿಕೆಯಾಗಿದ್ದು, ಸುಮಾರು 30-90 ಸೆಂ.ಮೀ. ಎತ್ತರಕ್ಕೆ ಬೆಳೆಯುತ್ತದೆ. ಕಡಿಮೆ ಎಲೆಗಳಿದ್ದು, ಕಡ್ಡಿಗಳೇ ಹೆಚ್ಚಾಗಿರುವ ಈ ಗಿಡದಲ್ಲಿ ಎಲೆಗಳು ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಎಲೆಗಳು ಅಂಡಾಕಾರ, ದೀರ್ಘ ವೃತ್ತಾಕಾರ ಇಲ್ಲವೆ ಈಟಿಯ ಆಕಾರದಲ್ಲಿರುತ್ತವೆ. ಹೂ ಕಾಂಡದ ತುದಿಯ ಪುಷ್ಪಮಂಜರಿಯಲ್ಲಿ ತೊಟ್ಟಿಲ್ಲದ ಹೂಗಳಿದ್ದು, ದ್ವಿಲಿಂಗಿಗಳಾಗಿರುತ್ತವೆ. ಹೂಗಳು ಹಸುರು ಇಲ್ಲವೆ ನಸುಗೆಂಪು ಇಲ್ಲವೆ ಗುಲಾಬಿ ಬಣ್ಣದಲ್ಲಿರುತ್ತವೆ. ಹೂಗಳು ಬಲಿತ ಅನಂತರ ಕೆಳಗೆ ಬಾಗುತ್ತವೆ. ಮುಳ್ಳಿನಂತಿರುವ ಬೀಜಗಳಿಂದಲೇ ಇದರ ವಂಶಾಭಿವೃದ್ಧಿ ಸಾಗುತ್ತದೆ.

ಕೃಷಿ : ಉತ್ತರಾಣಿ ಪಾಳು ಭೂಮಿಗಳಲ್ಲಿ, ರಸ್ತೆಯ ಬದಿಗಳಲ್ಲಿ ಕಳೆಗಿಡವಾಗಿ ಬೆಳೆಯುತ್ತದೆಯಾದರೂ ಆಯುರ್ವೇದದಲ್ಲಿ ಇದರ ಪ್ರಾಮುಖ್ಯತೆಯನ್ನು ಗಮನಿಸಿ 2 ವಿಧಾನದಲ್ಲಿ ಕೃಷಿ ಮಾಡಬಹುದು.

1. ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ, ಸಾಕಷ್ಟು ಸಾವಯವ ಗೊಬ್ಬರವನ್ನು ಮಿಶ್ರಣ ಮಾಡಿ ಬೀಜವನ್ನು ಎರಚಿ ಅನಂತರ ನೀರನ್ನು ಹಾಯಿಸಬೇಕು.

2. ಸಾಲಿನಿಂದ ಸಾಲಿಗೆ ಮತ್ತು ಗಿಡದಿಂದ ಗಿಡಕ್ಕೆ 45 ಸೆಂ.ಮೀ. ಅಂತರವಿರುವಂತೆ ಬೀಜ ಬಿತ್ತಬೇಕು. ಸಾಲಿನಲ್ಲಿ ಬೀಜ ಬಿತ್ತುವುದರಿಂದ ನಿರ್ವಹಣೆ ಸುಲಭ ಮತ್ತು ಇಳುವರಿಯೂ ಹೆಚ್ಚುತ್ತದೆ.

ಆದರೆ ಉತ್ತರಾಣಿಗಾಗಿ ಪ್ರತ್ಯೇಕವಾಗಿ ಕೃಷಿ ಮಾಡುವ ಬದಲು ತನ್ನಷ್ಟಕ್ಕೆ ತಾನೇ ಕಳೆಗಿಡವಾಗಿ ಬೆಳೆದಿರುವ ಇದನ್ನು ಕಟಾವು ಮಾಡಿ ಮಾರಾಟ ಮಾಡುವುದೇ ಲಾಭದಾಯಕವಾದುದು.

ಉಪಯೋಗ :

1. ಬೇಸಾಯಕ್ಕೆ ಸಂಬಂಧಪಟ್ಟ ಆಚರಣೆಗಳಲ್ಲಿ ಉತ್ತರಾಣಿಯನ್ನು ಬಳಸುತ್ತಾರೆ. ಬಿತ್ತನೆ ಮಾಡುವಾಗ, ಬೆಳೆ ಕುಯ್ಯುವಾಗ, ಕಣ ಮಾಡುವಾಗ, ಮೇಟಿ ಪೂಜೆ, ರಾಶಿಪೂಜೆಗಳ ವೇಳೆಯಲ್ಲಿ ತುಂಬೆ ಹೂ, ಅಣ್ಣೆ ಹೂಗಳ ಜೊತೆ ಉತ್ತರಾಣಿಯನ್ನು ಬಳಸುವರು.
2. ಹಿಂದೂಗಳಲ್ಲಿ ಉತ್ತರ ಕ್ರಿಯೆಯ ಸಂದರ್ಭದಲ್ಲಿ ಅಸ್ಥಿ ಸಂಗ್ರಹಿಸುವಾಗ ಉತ್ತರಾಣಿ ಗಿಡವನ್ನು ಕೈಯಲ್ಲಿ ಹಿಡಿದು ಕಾರ್ಯ ನಡೆಸುತ್ತಾರೆ.
3. ಶಿವರಾತ್ರಿಯಲ್ಲಿ ಉತ್ತರಾಣಿಯ ಕಡ್ಡಿಗೆ ಹತ್ತಿಯನ್ನುಸುತ್ತಿಸಿ ಬೆಳಗಲಾಗುತ್ತದೆ.
4. ಕಾಮಾಲೆಯಂತಹ ಪಿತ್ತಕೋಶದ ಸಮಸ್ಯೆಗಳಿರುವವರು ಉತ್ತರಾಣಿಯ ಬೀಜಗಳನ್ನು ಸೇವಿಸುವುದು ಒಳ್ಳೆಯದು.
5. ಉತ್ತರಾಣಿ ಬೀಜವನ್ನು ಕೆಲವು ಆದಿವಾಸಿಗಳು ಅಕ್ಕಿಯಂತೆ ಬಳಸುತ್ತಾರೆ.
6. ಉತ್ತರಾಣಿ ಹೂವು ವಿಷನಿವಾರಕ ಗುಣವನ್ನು ಹೊಂದಿದ್ದು, ಚೇಳು ಹಾಗೂ ಇನ್ನಿತರ ವಿಷ ಕೀಟದ ಕಡಿತದ ನೋವು ಮತ್ತು ವಿಷವನ್ನು ತೆಗೆಯಲು ಬಳಸಲಾಗುತ್ತದೆ.

7. ಕುಷ್ಠ ರೋಗಿಗಳ ಹುಣ್ಣುಗಳಿಗೆ ಉತ್ತರಾಣಿಯ ಬೇರನ್ನು ಬಸವನ ಹುಳದ ಚಿಪ್ಪಿನೊಂದಿಗೆ ಅರೆದು ಲೇಪಿಸುವರು.

8. ಮಹಿಳೆಯರಿಗೆ ಸಂಬಂಧಪಟ್ಟ - ಗರ್ಭಪಾತ ಮಾಡಿಸಲು, ಹೆರಿಗೆ ನೋವು ಉಂಟು ಮಾಡಲು, ಗರ್ಭದಲ್ಲೇ ಸತ್ತ ಶಿಶುವನ್ನು ಹೊರತೆಗೆಯಲು, ಪ್ರಸವದ ಅನಂತರ ಅಧಿಕ ರಕ್ತಸ್ರಾವವಾಗುತ್ತಿದ್ದರೆ, ಹೊಟ್ಟೆನೋವು ಇದ್ದರೆ, ಆಗಾಗ ಗರ್ಭಪಾತವಾಗುತ್ತಿದ್ದರೆ ಹೀಗೆ ಹತ್ತು ಹಲವು ಸಮಸ್ಯೆಗಳ ನಿವಾರಣೆಗೆ ಜನಪದ ವೈದ್ಯದಲ್ಲಿ ಉತ್ತರಾಣಿಯನ್ನು ಬಳಸುವ ರೂಢಿಯಿದೆ.

9. ಉತ್ತರಾಣಿಯನ್ನು ನೀರು ಮತ್ತು ಎಣ್ಣೆಯಲ್ಲಿ ಕುದಿಸಿ ಗಾಯಗಳಿಗೆ ಹಚ್ಚಬಹುದು.

ವಿ.ಎನ್.ಕೆ.

ಉದ್ದು (ಬ್ಲಾಕ್‌ಗ್ರಾಮ್) ಭಾರತ ದೇಶದಲ್ಲಿ ಬೇಳೆ ಕಾಳು ಬೆಳೆಗಳು 225.7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಕರ್ನಾಟಕದಲ್ಲಿ 18.5 ಲಕ್ಷ ಹೆಕ್ಟೇರುಗಳಲ್ಲಿ ಬೆಳೆಯಲಾಗುತ್ತಿದೆ. ಇದರ ಉತ್ಪಾದನೆಗೆ ಕ್ರಮವಾಗಿ 6.66 ಲಕ್ಷ ಟನ್‌ಗಳು ಹಾಗೂ 0.55 ಲಕ್ಷ ಟನ್‌ಗಳಷ್ಟು ಬೀಜದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಉದ್ದಿನ ಪೂರೈಕೆ 0.38 ಲಕ್ಷಟನ್‌ಗಳಾಗಿರುತ್ತದೆ.

ದ್ವಿದಳ ಧಾನ್ಯ ಬೆಳೆಗಳ ಪೈಕಿ ಉದ್ದು ಒಂದು ಪ್ರಮುಖ ಬೆಳೆ. ಇದರಲ್ಲಿ ಶೇಕಡಾ 24ರಷ್ಟು ಪ್ರೋಟಿನ್, ಶೇಕಡಾ 1.3 ಕೊಬ್ಬು, ಶೇಕಡಾ 60 ರಷ್ಟು



ಶರ್ಕರಪಿಷ್ಟ ಹಾಗೂ ಉತ್ತಮ ಪ್ರಮಾಣದ ಫಾಸ್ಫೋರಿಕ್ ಆಮ್ಲವನ್ನು ಹೊಂದಿದೆ. ಉದ್ದಿನ ಬೇಳೆಯನ್ನು ಅರೆದಾಗ ಗೋಂದಿನಂತಹ ಪದಾರ್ಥವಾಗಿ ಪರಿವರ್ತಿತವಾಗುವ ವಿಶೇಷ ಗುಣವಿದೆ. ಈ ಕಾರಣಕ್ಕಾಗಿಯೇ ಉದ್ದಿನ ಬೇಳೆಯನ್ನು ಹಪ್ಪಳ ದೋಸೆ, ಇಡ್ಲಿ ತಯಾರಿಕೆಯಲ್ಲಿ ಅಧಿಕವಾಗಿ ಬಳಸಲಾಗುತ್ತದೆ. ಹಸಿರೆಲೆ ಗೊಬ್ಬರಕ್ಕಾಗಿಯೂ ಬೆಳೆಯಲಾಗುತ್ತದೆ. ಇದು ಆಳವಾದ ಬೇರು ಬಿಡುವ ಸಸ್ಯವಾಗಿದ್ದು, ಮಣ್ಣಿನ ಕಣಗಳನ್ನು ಬಂಧಿಸಿಡುವುದರಿಂದ ಮಣ್ಣು ಕೊಚ್ಚಿಹೋಗುವುದನ್ನು ತಡೆಯುತ್ತದೆ.

ಉದ್ದಿನ ಗುಣಲಕ್ಷಣಗಳು : ಉದ್ದು 'ಲೆಗ್ಯುಮಿನೇಸಿಯೆ' ಕುಟುಂಬಕ್ಕೆ ಸೇರಿದ ಬೆಳೆ. ಇದು ಸುಮಾರು 30-60 ಸೆಂ.ಮೀ.ಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. 5 ರಿಂದ 10 ಸೆಂ.ಮೀ. ಉದ್ದವಿರುವ ಇದರ ಎಲೆಗಳು ಅಂಡಾಕಾರದಲ್ಲಿರುತ್ತವೆ. ಕಾಂಡದಲ್ಲಿ ಸೂಕ್ಷ್ಮವಾದ ಏಣುಗಳಿವೆ. ಈ ಸಸ್ಯದಲ್ಲಿ ತಾಯಿ ಬೇರು ಪ್ರಮುಖವಾಗಿ ಇದ್ದು, ಅದರೊಂದಿಗೆ ತಂತು ಬೇರುಗಳು ಸಹ ಇರುತ್ತವೆ. 5 ರಿಂದ 6 ಹೂವುಗಳಿರುವ ಗೊಂಚಲಿರುತ್ತದೆ.

ಇದರ ಕಾಯಿಗಳು ಕೊಳವೆಯಾಕಾರದಲ್ಲಿ 4-5 ಸೆಂ.ಮೀ. ಉದ್ದವಾಗಿರುತ್ತವೆ. ಪ್ರತಿಯೊಂದು ಕಾಯಿಯಲ್ಲಿ 4-10 ಬೀಜಗಳಿರುತ್ತವೆ. ಇದು ಸ್ವಕೀಯ ಪರಾಗಸ್ಪರ್ಶದ ಗುಣವನ್ನು ಹೊಂದಿದೆ.

ಮಣ್ಣು : ಬೇಳೆಕಾಳು ಬೆಳೆಗಳ ಬೀಜೋತ್ಪಾದನೆಯನ್ನು ಎಲ್ಲಾ ತರಹದ ಮಣ್ಣಿನಲ್ಲಿ ಕೈಗೊಳ್ಳಬಹುದಾಗಿದ್ದರೂ ಉತ್ತಮ ಇಳುವರಿಗೆ ಕೆಂಪು ಅಥವಾ ಮರಳು ಮಿಶ್ರಗೊಂಡಿರುವ ಮಣ್ಣು ಉತ್ತಮ. ವಿವಿಧ ರೀತಿಯ ಮಣ್ಣುಗಳಲ್ಲಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಉದ್ದನ್ನು ಸಾಮಾನ್ಯವಾಗಿ ಮಿಶ್ರಬೆಳೆಯಾಗಿ ಬೆಳೆಯಲಾಗುತ್ತದೆ. ಸುಮಾರು 6.8 ರಿಂದ 7.2ರ ಲವಣೀಯ ಅಥವಾ ಕ್ಷಾರೀಯವಲ್ಲದ ಮಣ್ಣುಗಳು ಉದ್ದು ಬೆಳೆಗೆ ಪ್ರಶಸ್ತವಾಗಿರುತ್ತವೆ. ಫಲವತ್ತಲ್ಲದ ಮಣ್ಣುಗಳಲ್ಲಿ ಸಸ್ಯದ ಬೆಳವಣಿಗೆ ಕುಂಠಿತಗೊಂಡರೆ ಹೆಚ್ಚು ಫಲವತ್ತಾದ ಮಣ್ಣುಗಳಲ್ಲಿ ಸಸ್ಯವು ಅಧಿಕ ಬೆಳವಣಿಗೆ ಕಂಡು ಕಾಳುಗಳ ಇಳುವರಿಯು ಕಡಿಮೆಯಾಗುತ್ತದೆ. ಉತ್ತಮ ತೇವಾಂಶ ಹಿಡಿದಿಟ್ಟುಕೊಳ್ಳುವ ಕಪ್ಪು ಅಥವಾ ಭಾರವಾದ ಜೇಡಿ ಮಣ್ಣು ಉದ್ದಿನ ಬೆಳೆಗೆ ಉತ್ತಮ.

ಹವಾಗುಣ : ಶೇಕಡ 50 ರಿಂದ 70 ರಷ್ಟು ತೇವಾಂಶವಿರುವ 20-25^{o} ಉಷ್ಣಾಂಶವಿರುವ ವಾತಾವರಣ ಉದ್ದಿನ ಬೆಳೆಗೆ ಪ್ರಶಸ್ತವಾಗಿರುತ್ತದೆ. ಹೂವು ಬಿಡುವ ಸಮಯದಲ್ಲಿ ಮಳೆ ಬಿದ್ದಲ್ಲಿ ಇಳುವರಿಯು ಗಣನೀಯ ಪ್ರಮಾಣದಲ್ಲಿ ಕುಂಠಿತಗೊಳ್ಳುತ್ತದೆ.

ಭೂಮಿಸಿದ್ಧತೆ : ಬೀಜೋತ್ಪಾದನೆಗಾಗಿ ಆಯ್ಕೆ ಮಾಡಿದ ಭೂಮಿಯನ್ನು ಕೊನೆಯ ಪಕ್ಷ 2 ರಿಂದ 3 ಬಾರಿ ಆಳವಾಗಿ ಉಳುಮೆ ಮಾಡುತ್ತಾರೆ. ಮಳೆಯಾಶ್ರಿತ ಪ್ರದೇಶಗಳಲ್ಲಿ ಉದ್ದನ್ನು ಬೆಳೆಯಬಹುದು. ಬಿತ್ತನೆ ಬೀಜಗಳನ್ನು ನಿಗದಿತ ಸಂಸ್ಥೆಗಳಿಂದ ಪಡೆದು ಉಪಯೋಗಿಸಬೇಕು.

ಪ್ರದೇಶಕ್ಕನುಗುಣವಾಗಿ ತಳಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಒಳ್ಳೆಯದು. ಉದ್ದು ಬೆಳೆಯ ತಳಿಗಳ ವಿವರ ಈ ಕೆಳಗೆ ತಿಳಿಸಿದಂತೆ ಇರುತ್ತದೆ.

ಬಿತ್ತನೆ ಕಾಲ : ಉದ್ದನ್ನು ಮುಂಗಾರು (ಜೂನ್-ಜುಲೈ), ಹಿಂಗಾರು (ಸೆಪ್ಟೆಂಬರ್-ಅಕ್ಟೋಬರ್) ಮತ್ತು ಬೇಸಗೆಯಲ್ಲಿ (ಜನವರಿ-ಫೆಬ್ರವರಿ) ಬಿತ್ತನೆ ಮಾಡಲಾಗುತ್ತದೆ. ಪ್ರತಿ ಹೆಕ್ಟೇರಿಗೆ 70 ಸೇರು ಬಿತ್ತನೆ ಬೀಜಬೇಕು.

ಬಿತ್ತನೆ ವಿಧಾನ : ಬಿತ್ತನೆಗೆ ಹದಗೊಳಿಸಿದ ಭೂಮಿಯಲ್ಲಿ ಈ ಕೆಳಕಾಣಿಸಿದ ಅಂತರದಲ್ಲಿ ಸಾಲುಗಳನ್ನು ತೆಗೆದು ಪ್ರತಿ ಗುಣಿಗೆ ಎರಡು ಬೀಜವನ್ನು ಬಿತ್ತುವುದು. ಉದ್ದು ಬಿತ್ತನೆಯ ಅಂತರ ಒಂದು ಸಾಲಿನಿಂದ ಸಾಲಿಗೆ 45 ಸೆಂ.ಮೀ. ಬೀಜದಿಂದ ಬೀಜಕ್ಕೆ 15 ಸೆಂ.ಮೀ. ಇರುತ್ತದೆ.

ಕಳೆ ನಿರ್ವಹಣೆ : ಬೀಜೋತ್ಪಾದನಾ ಸ್ಥಳದಲ್ಲಿ ಕಳೆಯಿಲ್ಲದಂತೆ ಎಚ್ಚರ ವಹಿಸುವುದು. ಕಳೆ ಹೆಚ್ಚಾಗಿದ್ದಲ್ಲಿ 15-20 ದಿನಗಳಿಗೆ ಒಂದಾವರ್ತಿ

ಕಳೆ ಕೀಳಬೇಕು. ಈ ಬೆಳೆಗೆ ಜೈವಿಕ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಬಳಸುವುದುಂಟು.

ಜೈವಿಕ ಗೊಬ್ಬರಗಳು : ರೈಜೋಬಿಯಂ ಮತ್ತು ಪಿ.ಎಸ್.ಬಿ. (ಪಾಸ್ಪೋಟಿಕ) ಅಣುಜೀವಿ ಗೊಬ್ಬರಗಳನ್ನು ಉಪಯೋಗಿಸುವರು.

ರಾಸಾಯನಿಕ ಗೊಬ್ಬರಗಳು : 7.5 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರವನ್ನು ಬೀಜ ಬಿತ್ತನೆ ಮಾಡುವ 2 ರಿಂದ 3 ವಾರಗಳ ಮುಂಚೆ ಭೂಮಿಯಲ್ಲಿ ಚೆನ್ನಾಗಿ ಬೆರೆಸಿ ಹದಗೊಳಿಸುವುದು.

ರಸಗೊಬ್ಬರ (ಪ್ರತಿ ಹೆಕ್ಟೇರಿಗೆ ಕಿ.ಗ್ರಾಂ.ಗಳಲ್ಲಿ)

ಬೆಳೆ	ಸಾರಜನಕ	ರಂಜಕ	ಪೊಟ್ಯಾಷಿಯಂ	ಯೂರಿಯಾ	ಸೂ.ಪಾಸ್ಫೇಟ್	ಮ್ಯೂ.ಆಫ್. ಪೊಟ್ಯಾಶ್
ಉದ್ದು	25	50	25	54	313	42

ಈ ಎಲ್ಲಾ ಗೊಬ್ಬರಗಳನ್ನು ಉದ್ದು ಬಿತ್ತನೆ ಸಮಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮಣ್ಣಿಗೆ ಸೇರಿಸಿ ಬಿತ್ತನೆ ಮಾಡಬೇಕು.

ಒಕ್ಕಣೆ : ಹದವಾಗಿ ಒಣಗಿಸಿದ ಕಾಯಿಗಳನ್ನು ಸ್ವಚ್ಛಗೊಳಿಸಿದ ಕಣದಲ್ಲಿ ಹರಡಿ ಬೀಜಕ್ಕೆ ಹಾನಿಯಾಗದಂತೆ ಎಚ್ಚರವಹಿಸಿ ಒಕ್ಕಣೆ ಮಾಡಿ ಬೀಜ ತೇವಾಂಶವನ್ನು ಶೇಕಡಾ 9ಕ್ಕೆ ತಂದ ಅನಂತರ ಮುಂದಿನ ಕ್ರಮಕ್ಕಾಗಿ ಸ್ವಚ್ಛಮಾಡಿದ ಚೀಲಗಳಲ್ಲಿ ಬೀಜವನ್ನು ತುಂಬಿ ಸಂಸ್ಕರಣಾ ಕೇಂದ್ರಕ್ಕೆ ಒಯ್ಯುವುದು. ಉದ್ದು ಬೆಳೆಯ ಇಳುವರಿ ಪ್ರತಿ ಹೆಕ್ಟೇರಿಗೆ 10-12 ಕ್ವಿಂಟಾಲ್ ಇರುತ್ತದೆ.

ಸಂಸ್ಕೃತದಲ್ಲಿ 'ಮಾಕ್ಷ', ಹಿಂದಿಯಲ್ಲಿ 'ಉಡದ್', ತೆಲುಗಿನಲ್ಲಿ 'ಮಿನುಮುಲು', 'ಉದ್ದು' ಎಂದು ಕರೆಯಲಾಗುವ ಉದ್ದು ಭಾರತೀಯರ ನಿತ್ಯ ಜೀವನದಲ್ಲಿ ಬಹಳ ಮುಖ್ಯ ಆಹಾರವಾಗಿದೆ. ದಕ್ಷಿಣ ಭಾರತೀಯರ ದೋಸೆ, ರೊಟ್ಟಿ, ವಡೆ ಮುಂತಾದವುಗಳಲ್ಲಿ ಬಳಕೆಯಾಗುತ್ತದೆ. ರುಚಿಕರವಾಗಿದ್ದರೂ ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲ. ಪಿತ್ತಕಾರಿ ಮತ್ತು ವಿರೇಚನಕಾರಿ. ಆದರೆ ಸಸಾರಜನಕಗಳಿಂದ ಕೂಡಿರುವುದರಿಂದ ಬಲವರ್ಧಕ.

ಎಸ್.ಎಚ್.ಎನ್.

ಉದ್ಯಾನವನ ಪ್ರಕೃತಿಯೊಂದಿಗೆ ಮಾನವನ ಸಮಸ್ತ ಬದುಕು ಬೆಸೆದುಕೊಂಡಿದೆ. ಅದರ ಉಳಿವಿನೊಂದಿಗೆ ಮನುಷ್ಯನ ಜೀವನ ತಳಕು ಹಾಕಿಕೊಂಡಿದೆ. ಮನುಷ್ಯನ ಬದುಕಿನಲ್ಲಿ ಇಷ್ಟು ಹಾಸು ಹೊಕ್ಕಾಗಿರುವ ಪ್ರಕೃತಿಯ ಆಂತರ್ಯದ ಜೈವಿಕ ಭೌಗೋಳಿಕ, ಭೂ ವೈಜ್ಞಾನಿಕ ಸಂಪನ್ಮೂಲಗಳನ್ನು ಉಳಿಸುವತ್ತ ಮನುಷ್ಯ ಗಮನಹರಿಸಬೇಕಾಗಿದೆ. ಜೈವಿಕ ಸಂಪನ್ಮೂಲವು ಸಸ್ಯವರ್ಗ, ಕಾಡುಗಳು, ವನ್ಯಜೀವಿಗಳನ್ನು, ಭೌಗೋಳಿಕ ಮತ್ತು ಭೂವೈಜ್ಞಾನಿಕ ಸಂಪನ್ಮೂಲ ಗಳನ್ನು ಕೆರೆ, ನದಿ, ಸಮುದ್ರ, ಬೆಟ್ಟ, ಪರ್ವತಗಳನ್ನು ಒಳಗೊಂಡಿರುತ್ತದೆ. ಅವುಗಳ ಕೊರತೆ ಇರುವ ಕಡೆ ಮುಖ್ಯವಾಗಿ ನಗರ ಪ್ರದೇಶಗಳಲ್ಲಿ ಪ್ರತಿಯೊಂದು ದೇಶವು ಉದ್ಯಾನವನ ರಾಷ್ಟ್ರೀಯ ಉದ್ಯಾನಗಳನ್ನು ನಿರ್ಮಿಸಿದೆ. ನಗರ ಪಟ್ಟಣಗಳ ಜನಸಂದಣಿಯ ನಡುವೆ ಕೃತಕವಾಗಿ ನಿರ್ಮಿಸಿರುವ ನಿಸರ್ಗ ತಾಣವನ್ನು ಹಾಗೆಯೇ ಯೋಜಿತ ಜಾಗದಲ್ಲಿ ಅದರಲ್ಲೂ ಉದ್ಯಾನಕ್ಕಾಗಿಯೇ ಮೀಸಲಾದ ಜನಪ್ರಿಯ ವಲಯದಲ್ಲಿ ನಿರ್ಮಿಸಲ್ಪಟ್ಟ ಪರಿಸರದ ಒಂದು ಭಾಗವನ್ನು ಉದ್ಯಾನವನ ಎಂದು ಕರೆದರೆ, ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಆಯಾ ದೇಶದ ಹಿತ ದೃಷ್ಟಿಯಿಂದ ಪರಿಸರದ ರಕ್ಷಣೆಗೆ ಸಂಬಂಧಿಸಿದಂತೆ ಕಾಯ್ದೆಯ ಅಡಿಯಲ್ಲಿ 'ಸಂರಕ್ಷಿತ ಪ್ರದೇಶ'ಗಳೆಂದು ಘೋಷಿಸಿ ಕಾದಿರಿಸಿರುವ ಪ್ರದೇಶಗಳನ್ನು 'ರಾಷ್ಟ್ರೀಯ ಉದ್ಯಾನವನ' ಎಂದು ಕರೆಯುತ್ತಾರೆ. ಆಯಾ ರಾಷ್ಟ್ರದ ಸರ್ಕಾರಗಳು ರಾಷ್ಟ್ರೀಯ ಉದ್ಯಾನವನಗಳ ರಕ್ಷಣೆಯ ಹೊಣೆ ಹೊಂದಿರುತ್ತವೆ. ಹಲವು ಸಂಶೋಧನೆಗಳಿಗೆ ಮುಕ್ತ ಅವಕಾಶವಿರುವುದರಿಂದ ಪ್ರಪಂಚದ ಬಹುತೇಕ ರಾಷ್ಟ್ರಗಳು ರಾಷ್ಟ್ರೀಯ ಉದ್ಯಾನವನ ನಿರ್ಮಿಸುತ್ತವೆ.

ಉದ್ಯಾನವು ನೈಸರ್ಗಿಕ ಹಾಗೂ ಮಾನವ ನಿರ್ಮಿತ ವಸ್ತುಗಳಿಂದ ಕೂಡಿದೆ. ಹಾಗೆಯೇ ತೋಟಗಾರಿಕೆಯ ಒಂದು ಭಾಗವಾಗಿದೆ. ನಗರ ನಿರ್ಮಾಣ ಯೋಜನೆಗಳಲ್ಲಿ ಉದ್ಯಾನವನಕ್ಕೆಂದೇ ನಿರ್ದಿಷ್ಟ ಸ್ಥಳವನ್ನು ಕಾಯ್ದಿರಿಸುವ ಪರಿಪಾಠ ಹಿಂದಿನಿಂದಲೂ ಇದೆ. ಉದ್ಯಾನವನದ ಕೆಲಸ ಒಂದು ಹವ್ಯಾಸಿ ಮತ್ತು ವೃತ್ತಿ ಪರವಾಗಿಯೂ ಮಾರ್ಪಟ್ಟಿದೆ. ಇಂದು



ಉದ್ಯೋಗಿ ಚಟುವಟಿಕೆಯಾಗಿ ವೃತ್ತಿ ಪರತೆಯಲ್ಲಿ ಸ್ಥಾನಪಡೆದುಕೊಂಡಿದೆ. ಉದ್ಯಾನವನಗಳ ಆಡಳಿತದ ಜವಾಬ್ದಾರಿಯನ್ನು ಸಂಪೂರ್ಣವಾಗಿ ಆಯಾ ರಾಜ್ಯಗಳ ಅರಣ್ಯ ಇಲಾಖೆಗಳು ನೋಡಿಕೊಳ್ಳುತ್ತವೆ. ಜಂಜಡಗಳ ಕೂಪದಲ್ಲಿ ಜೀವಿಸಿ ಉಸಿರಾಡುವ ಮಾನವ ಶಾಂತಿ, ವಿಶ್ರಾಂತಿಗಾಗಿ, ನೆಮ್ಮದಿಯನ್ನು ಬಯಸಿ, ಸಂತೋಷಕ್ಕಾಗಿ ಹಂಬಲಿಸಿ ತನ್ನ ಆಯಾಸ ಪರಿಹರಿಸಿಕೊಳ್ಳಲು ತಾನೇ ನಿರ್ಮಿಸಿದ ವಿಶ್ರಾಂತಿ ತಾಣವೇ ಉದ್ಯಾನವನವೆನಿಸುತ್ತದೆ. ಪ್ರಕೃತಿ ಸೌಂದರ್ಯವನ್ನು ಹೊದ್ದು ಮಲಗಿರುವ ಭೂಮಾತೆಗೆ ಹಸುರೇ ಉಸಿರು. ಆದರೆ ಮಾನವ ತನ್ನ ಸ್ವಾರ್ಥದಿಂದ ನಗರೀಕರಣಕ್ಕೆ ಮುಂದಾಗಿ ಪ್ರಕೃತಿಯಲ್ಲಿಯ ಗಿಡ, ಮರಗಳನ್ನು ಕಡಿದು ಹಾಕಿದ. ಹೀಗೆ ಮುಂದುವರಿದರೆ ತನಗೆ ನಾಳೆ ಒದಗಬಹುದಾದ ಕೆಡಕುಗಳು ಇಂದೇ ಬರುತ್ತವೆ ಎಂದು ತಿಳಿದು ಮರಗಿಡ ಬೆಳೆಸಿ ಪ್ರಾಣಿ ಪಕ್ಷಿಗಳನ್ನು ರಕ್ಷಿಸಲು ಉದ್ಯಾನವನಗಳನ್ನು ನಿರ್ಮಿಸಿಕೊಂಡನು.

ಉದ್ಯಾನವನ ನಿರ್ಮಾಣ ಆಧುನಿಕವಾದ ಆವಿಷ್ಕಾರವಾಗಿರದೇ ಪ್ರಾಚೀನಕಾಲದಿಂದಲೂ ಅಸ್ತಿತ್ವದಲ್ಲಿತ್ತು. ಉದ್ಯಾನವನದಲ್ಲಿ ಅಲಂಕಾರಿಕ ಸಸ್ಯಗಳು ಹಾಗೂ ಇನ್ನಿತರ ಸಸ್ಯಗಳನ್ನು ಬೆಳೆಸಲಾಗುತ್ತದೆ. ಇವು ಮನಸ್ಸಿಗೆ ಮುದನೀಡುತ್ತವೆ.

ಮಾನವ ನಿರ್ಮಿಸಿದ ಉದ್ಯಾನವನವು ಭೌಗೋಳಿಕ ಪರಿಸ್ಥಿತಿ ಹವೆಯ ಸ್ಥಿತಿಗತಿ ಮೊದಲಾದ ಪ್ರಾಕೃತಿಕ ಅಂಶಗಳ ಜೊತೆಗೆ ಜನರ ಸೌಂದರ್ಯ ದೃಷ್ಟಿಯನ್ನು ಅವಲಂಬಿಸಿದೆ. ಉದ್ಯಾನವನ್ನು ನಿರ್ಮಿಸಿ ಪಳಗಿರುವ ವ್ಯಕ್ತಿಯೊಂದಿಗೆ ಚರ್ಚಿಸಿ ಯುಕ್ತ ಸಲಹೆಗಳನ್ನು ಪಡೆದು ನಿರ್ಮಿಸಲು ಯೋಗ್ಯವಾದ ಜಾಗವನ್ನು ಮೊದಲು ಆಯ್ಕೆ ಮಾಡಿಕೊಂಡು ಗುಡ್ಡ, ತಗ್ಗು, ಕೆರೆ, ತೊರೆ ಮೊದಲಾದ ನೈಸರ್ಗಿಕ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸುತ್ತಿದ್ದರು. 'ಪ್ರಕೃತಿಯಾರಾಧನೆ ಪರಮಾರಾಧನೆ' ಎಂದು ಭಾವಿಸಿದ್ದರು. ಭಾರತೀಯರು ಪ್ರಾಚೀನ ಕಾಲದಲ್ಲಿ ಉದ್ಯಾನವನಗಳ ನಿರ್ಮಾಣ ಮಾಡುತ್ತಿದ್ದರೆಂಬ ಕುರುಹಾಗಿ ಗೌತಮ ಬುದ್ಧನ ಕಾಲದಲ್ಲಿ ಲಿಖಿತ ದಾಖಲೆಗಳು ದೊರೆಯುತ್ತವೆ. ಪ್ರಾಚೀನ ಕಾಲದಲ್ಲಿ ಅದರಲ್ಲೂ ಮೊಗಲರ ಕಾಲದಲ್ಲಿ ಉದ್ಯಾನವನಗಳು ರಾಜ, ರಾಣಿಯರ ಭೋಗ ವಿಲಾಸದ ತಾಣವಾಗಿದ್ದವು. ಪುರಾಣಗಳಲ್ಲಿ ಬೃಂದಾವನ, ಇಂದ್ರವನಗಳ ವರ್ಣನೆಗಳಿರುವುದು ತಿಳಿದುಬರುತ್ತದೆ.

ಉದ್ಯಾನವನದ ಭಾಗಗಳು : ಉದ್ಯಾನವನವು ನೋಡುಗರ ಕಣ್ಮನ ಸೆಳೆಯುವಂತಿರಬೇಕು. ನೋಡಲು ಒಂದೇ ರೀತಿ ಇದ್ದರೆ ನೀರಸ ಮತ್ತು ಬೇಸರ ಉಂಟುಮಾಡುತ್ತದೆ. ಆದ್ದರಿಂದ ಅಲ್ಲಿಯ ಏಕತಾನತೆಯನ್ನು ದೂರ ಮಾಡಲು ವೈವಿಧ್ಯಮಯ ಭಾಗಗಳನ್ನು ನಿರ್ಮಿಸುತ್ತಾರೆ. ಕಲಾ ಶಾಸ್ತ್ರದ ಪ್ರಕಾರ ಉದ್ಯಾನವನದಲ್ಲಿ ಒಂದು ಒಳ್ಳೆಯ ರಸ್ತೆ ಬಗೆ ಬಗೆಯ ಹೂ ಗಿಡಗಳು, ಅಂಚು ಸಸ್ಯಗಳು, ಅಲಂಕಾರಿಕ ಬೇಲಿ, ಕೊಳ, ಕಲ್ಲೇರಿ, ಸಾಲು ಮರಗಳು, ರಸ್ತೆ ಇತ್ಯಾದಿಗಳಿಂದ ಕೂಡಿರಬೇಕು. ಇದರ ಜೊತೆಗೆ ಉದ್ಯಾನವನದಲ್ಲಿ ಪ್ರಾಣಿ ಪಕ್ಷಿಗಳ ಗೂಡುಗಳಿದ್ದು ಅಲ್ಲಿ ಅವುಗಳನ್ನು ಸಾಕುತ್ತಾರೆ.

ರಸ್ತೆ : ಉದ್ಯಾನವನದ ರಸ್ತೆಗಳು ನೇರವಾಗಿರಬಾರದು. ಆದರೆ ಹೆಚ್ಚು ರಸ್ತೆಗಳಿಂದ ಕೂಡಿರಬೇಕು. ರಸ್ತೆಯ ಉದ್ದಕ್ಕೂ ಸಾಲು ಮರಗಳನ್ನು ಬೆಳೆಸಿರಬೇಕು. ದೊಡ್ಡ ರಸ್ತೆಯನ್ನು ಹೊರತು ಪಡಿಸಿ ಉಳಿದ ರಸ್ತೆ ಮತ್ತು ಕಾಲುದಾರಿಗಳು ಡೊಂಕು, ಡೊಂಕಾಗಿರಬೇಕು. ರಸ್ತೆ ಮತ್ತು ಕಾಲುದಾರಿಗಳನ್ನು ಸುಂದರವಾದ ಇಟ್ಟಿಗೆ, ಕಲ್ಲು, ಸಸ್ಯಗಳಿಂದ ನಿರ್ಮಿಸಬೇಕು. ವಾಯು ವಿಹಾರಕ್ಕೆ ಬರುವವರಿಗೆ ಈ ರಸ್ತೆಗಳು ಮುದ ನೀಡಿ ಅವರನ್ನು ಬರಮಾಡಿಕೊಂಡು ದಣಿವನ್ನು ತಣಿಸುವಂತಾಗಿರಬೇಕು.

ಹುಲ್ಲು : ಸಮತಟ್ಟಾದ ಉದ್ಯಾನವನದಲ್ಲಿ ನಿರ್ದಿಷ್ಟವಾಗಿ ಒಂದೇ ರೀತಿಯ ಹುಲ್ಲನ್ನು ಬೆಳೆಸುವರು. ಇದು ಉದ್ಯಾನದ ಬಹುಪಾಲು ಭಾಗವನ್ನು ಆಕ್ರಮಿಸಿಕೊಂಡಿರುತ್ತದೆ. ಸಾಮಾನ್ಯವಾಗಿ ಇದು ಆಲಂಕಾರಿಕ ಇಟ್ಟಿಗೆ ನಯವಾದ ಕಲ್ಲುಗಳು ಅಂಚು ಸಸ್ಯಗಳ ಸಾಲುಗಳಿಂದ ಕೂಡಿರುತ್ತದೆ. ಪೊದೆ, ಮರಗಳು, ಹೂಗಳು, ಎಲೆ ಸಸ್ಯದ ಮಡಿ, ಬಗೆ ಬಗೆಯ ಆಕರ್ಷಕ ಸಸ್ಯಗಳು ಇವುಗಳು ಉದ್ಯಾನವನದ ಹುಲ್ಲಿನ ಮೇಲೆ ಇರುತ್ತವೆ.

ಅಲಂಕಾರಿಕ ಬೇಲಿ : ಉದ್ಯಾನವನದ ಸರ್ವಸ್ವವೂ ಅಲಂಕಾರದ ಮೇಲೆ ನಿಂತಿರುತ್ತದೆ. ಆದ್ದರಿಂದ ಉದ್ಯಾನವನಕ್ಕೆ ಹಾಕುವ ಸುತ್ತು ಬೇಲಿಯನ್ನು ಹಾಗೆಯೇ ಬಿಡದೆ ಆಲಂಕಾರಿಕವಾಗಿ ಸುಂದರವಾಗಿ ಕಾಣುವಂತೆ ಹಾಕಿರುತ್ತಾರೆ. ಅದೇ ರೀತಿ ಹುಲ್ಲಿನ ಜಾಗ, ರಸ್ತೆ, ಕಲ್ಲೇರಿ ಮುಂತಾದವನ್ನು ವಿಭಾಗಿಸಲು ಅಂಚುಗಳಿಗಿಂತ ಎತ್ತರವಾಗಿ ಹಬ್ಬಿಸಿರುವ ಸಸ್ಯಗುಚ್ಛಕ್ಕೆ ಅಲಂಕಾರಿಕ ಬೇಲಿ ಎಂದು ಕರೆಯುತ್ತಾರೆ. ಇದು ಉದ್ಯಾನವನಕ್ಕೆ ರಕ್ಷಣೆ ಹಾಗೂ ಸೌಂದರ್ಯವನ್ನು ಒದಗಿಸಿ ಮತ್ತಷ್ಟು ಶೋಭಿಸುವಂತಾಗುತ್ತದೆ.

ಕೊಳ : ಹೂಗುಚ್ಛ, ಹುಲ್ಲು, ಗರಿಕೆ, ಕಾರಂಜಿ ಮುಂತಾದವುಗಳಿಗೆ ಅವಶ್ಯವಾದದ್ದು ನೀರು. ಈ ನೀರನ್ನು ಕೊಳ ನಿರ್ಮಿಸಿದ ಕಡೆಗಳಿಂದ ಎರವಲಾಗಿ ಪಡೆಯಲಾಗುತ್ತದೆ. ಹಾಗೆಯೇ ತಗ್ಗಾದ ಪ್ರದೇಶಗಳಿಗೆ ನೀರು ಏರದಿರುವುದರ ಕಡೆ ಸಸ್ಯಗಳನ್ನು ಬೆಳೆಸಲು ಸಾಧ್ಯವಿಲ್ಲದಿರುವುದರಿಂದ ಇಂತಹ ತಗ್ಗಾದ ಪ್ರದೇಶಗಳನ್ನು ಕೊಳಗಳಾಗಿ ರೂಪಿಸಿ ಕಮಲ, ಹಲವು ಬಗೆಯ ಹೂಗಿಡಗಳು, ಸಸ್ಯಗಳನ್ನು ಬೆಳೆಸಲಾಗುತ್ತದೆ.

ಸಾಲುಮರಗಳ ರಸ್ತೆ : ದಾರಿಗಳಲ್ಲಿ ಕಿರು, ಹೆದ್ದಾರಿ, ಅಡ್ಡದಾರಿಗಳಿರುತ್ತವೆ. ಉದ್ಯಾನವನದಲ್ಲಿರುವ ಎಲ್ಲಾ ರಸ್ತೆಗಳು ದೊಡ್ಡವು ಅಥವಾ ಚಿಕ್ಕದಾಗಿರುತ್ತವೆ. ಕೆಲವು ಚಿಕ್ಕದಾಗಿ ಮತ್ತೆ ಕೆಲವು ದೊಡ್ಡವಾಗಿದ್ದರೆ ಉದ್ಯಾನವನಕ್ಕೊಂದು ಕಳೆ ಬರುತ್ತದೆ.

ಪ್ರಮುಖ ಉದ್ಯಾನವನಗಳು : ಕಾಶ್ಮೀರದ ಶಾಲಿಮಾರ್ ಉದ್ಯಾನ, ತಾಜ್‌ಮಹಲ್ ಉದ್ಯಾನ, ಶ್ರೀರಂಗಪಟ್ಟಣದ ದರಿಯಾ ದೌಲತ್, ಗುಂಬಜ್ ಮತ್ತು ಬೆಂಗಳೂರಿನ ಲಾಲ್‌ಬಾಗ್‌ದಂಥವು. ಬ್ರಿಟಿಷರ ಕಾಲದಲ್ಲಿ ಉದ್ಯಾನಗಳ ವಿನ್ಯಾಸ, ರಚನೆ ರೂಪುರೇಷೆಗಳು ಮತ್ತಷ್ಟು ಬದಲಾವಣೆಗೊಂಡವು. ಇವರ ಕಾಲದಲ್ಲಿ ನಿರ್ಮಿಸಲಾದ ಉದ್ಯಾನವನಗಳಲ್ಲಿ ಮಾನಸಿಕ, ದೈಹಿಕ ಮತ್ತು ಆರ್ಥಿಕ ಇತ್ಯಾದಿ ಅಂಶಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ನವದೆಹಲಿಯಲ್ಲಿರುವ ಉದ್ಯಾನಗಳು ಮುನಿಸಿಪಲ್ ಪಾರ್ಕ್, ಪುರಸಭೆಯ ಉದ್ಯಾನಗಳು ನೂತನವಾಗಿ ನಿರ್ಮಾಣವಾಗಿರುವ ವಿಧಾನ ಸೌಧದ ಉದ್ಯಾನಗಳು ಆಂಗ್ಲರ ಉದ್ಯಾನಕಲೆಯ ಕನ್ನಡಿಯಾಗಿವೆ. ಇತ್ತೀಚೆಗೆ ಮುನಿರಾಬಾದಿನಲ್ಲಿ ಜಪಾನ್ ಶೈಲಿಯಲ್ಲಿ ಉದ್ಯಾನ ನಿರ್ಮಿಸಲಾಗಿದೆ. ಲಂಡನ್ನಿನಲ್ಲಿರುವ ಜಗದ್ವಿಖ್ಯಾತ ಕ್ಯೂ ಸಸ್ಯೋದ್ಯಾನ ಪ್ರಪಂಚದ ಉದ್ಯಾನಗಳ ಮತ್ತು ಎಲ್ಲ ಸಸ್ಯೋದ್ಯಾನಗಳ ತಾಯಿ. ಇದರ ಮಾದರಿಯಲ್ಲೇ ಭಾರತ ಹಾಗೂ ಇನ್ನಿತರ ದೇಶಗಳಲ್ಲಿ ಅನೇಕ ಉದ್ಯಾನಗಳು ನಿರ್ಮಾಣಗೊಂಡಿವೆ.

ಹೀಗೆ ಉದ್ಯಾನವನವು ಒಂದು ದೇಶದ ಪ್ರತಿಷ್ಠೆಯಾಗಿ ಮಾರ್ಪಟ್ಟು ಪ್ರತಿಯೊಂದು ದೇಶವು ತನ್ನ ಆದಾಯದ ಸ್ವಲ್ಪ ಭಾಗವನ್ನು ಉದ್ಯಾನಗಳ ನಿರ್ಮಾಣಕ್ಕೆ ತೊಡಗಿಸುತ್ತಿದೆ. ವೃತ್ತಿ ಪ್ರವೃತ್ತಿ ಎರಡು ಅಂಶಗಳನ್ನು ಒಳಗೊಂಡಿರುವುದರಿಂದ ದೇಶವು ಹಸುರಿನಿಂದ ಕಂಗೊಳಿಸುವಂತಾಗಿದೆ. ಸರ್ಕಾರವು ಇವುಗಳ ಅಭಿವೃದ್ಧಿಗೆ ಇನ್ನಷ್ಟು ಶ್ರಮಿಸಬೇಕಾಗಿದೆ. ಪ್ರಾಣಿ, ಪಕ್ಷಿ, ಸಸ್ಯ ಸಂಪತ್ತು ದೇಶದ ಆಸ್ತಿ ಆಗಿರುವುದರಿಂದ ಅವುಗಳ ಉಳಿಯುವಿಕೆಗೆ ಕಾಯಿದೆ, ಕಾನೂನು, ತರುವುದು, ಅವುಗಳ ಬಗ್ಗೆ ಉಪನ್ಯಾಸ ಶಿಕ್ಷಣ, ಮಾಧ್ಯಮಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ಪ್ರಸ್ತುತ ಭಾರತದಲ್ಲಿ 64 ರಾಷ್ಟ್ರೀಯ ಉದ್ಯಾನಗಳು ಹಾಗೂ ಪಕ್ಷಿಧಾಮಗಳು ಸೇರಿದಂತೆ 331 ಅಭಯಾರಣ್ಯಗಳಿವೆ.

ಹೀಗೆ ಕೃಷಿಗೆ ಸಂಬಂಧಿಸಿದ ಆಚರಣೆಗಳು ಕೃಷಿಕರ ನಂಬಿಕೆಗಳಿಗೆ, ವಿಶ್ವಾಸಗಳಿಗೆ ಸಂಕೇತವಾಗಿದೆ.

ಪಿ.ಕೆ.

ಉಳುಮೆ ಘಟ್ಟದ ಬುಡದಿಂದ ಕರಾವಳಿಯ ತನಕ ಹಬ್ಬಿ ಹರಡಿರುವ ಬತ್ತದ ಕೃಷಿಯ ಉಳುಮೆಗೆ ಬೇಕಾಗುವ ಸಾಮಗ್ರಿಗಳು ಮತ್ತು ಹೊಲ ಉಳುವ ಪದ್ಧತಿಯ ಬಗೆಗಿನ ವಿವರಗಳು.

ಬತ್ತದ ಕೃಷಿಯ ಉಳುಮೆಗಾಗಿ ಗದ್ದೆಕಳಗಳನ್ನು ಕಟ್ಟಿದ ಹಿರಿಯರ ಯೋಜನೆಗಳು ಕಷ್ಟಕರವಾಗಿದ್ದವು. ಕರಾವಳಿಯ ಜನ ಅಕ್ಕಿಯನ್ನೇ ಆಹಾರವನ್ನಾಗಿ ಬಳಕೆ ಮಾಡುವುದರಿಂದ ಅವರು ಬತ್ತ ಬೆಳೆಯಲು ಪಟ್ಟಶ್ರಮ ಇಲ್ಲಿಯ ಗದ್ದೆಕಳಗಳ ರೂಪದಲ್ಲಿ ಕಂಡುಬರುತ್ತದೆ.

ಧಾರಾಳಮಳೆಯಿಂದಾಗಿ ಘಟ್ಟದ ಮೇಲಿನಿಂದ ಹರಿದು ಬರುವ ನದಿ, ತೋಡುಗಳ ಧಾರಾಳ ನೀರಿನ ಹರಿವು ಬಂದು ಇಲ್ಲಿ ಕಡಲು ಸೇರುವುದರಿಂದ ಈ ಪ್ರದೇಶದಲ್ಲಿರುವ ಗುಡ್ಡ ಕಾಡುಗಳ ಇಳಿಜಾರು ಬಯಲುಗಳನ್ನು ಬತ್ತದ ಕೃಷಿಗಾಗಿ ಸಮತಟ್ಟುಗೊಳಿಸುವ ಕೆಲಸ ಅಗತ್ಯವಿತ್ತು.

ಗುಡ್ಡ ಪ್ರದೇಶವನ್ನು ಒಮ್ಮೆಗೆ ಕೃಷಿಗೆ ಬದಲಾವಣೆ ತರಲಾಗದ ಪೂರ್ವಜರು ಇಲ್ಲಿಯ ಗುಡ್ಡದ ಇಳಿಜಾರಿನ ಪದರುಗಳನ್ನು ಅಭ್ಯಾಸಮಾಡಿ ಕೃಷಿಗಾಗಿ ಗದ್ದೆಕಳ ಕಟ್ಟುವ ಕಲೆಯನ್ನು ಕಲಿತಿರ ಬಹುದು. ಇಲ್ಲಿಂದ ದರಖಾಸು (ಕುಮೇರ್) ಕೃಷಿ ಆರಂಭವಾದಂತೆ ಕಂಡುಬರುತ್ತದೆ.

ದರಖಾಸು ಕಳಗಳನ್ನು 'ಕುಮೇರ್' ಎಂದು ಕರೆಯಲಾಯಿತು. ಇಲ್ಲಿ ಬಿತ್ತನೆ ಮಾಡುವ ಬತ್ತದ ಬೀಜವನ್ನು 'ಕುಮೆರಬಿದೆ' ಎಂದು ಹೆಸರಿಸಲಾಯಿತು. ಇಲ್ಲಿಯ ಉಳುಮೆಯ ಕ್ರಮಗಳು ಕೋಲಿನಿಂದ ಒಕ್ಕುವಲ್ಲಿಂದ ಆರಂಭವಾಗಿ ಮುಂದೆ ನೇಗಿಲ ಉಳುಮೆಗೆ ಪರಿವರ್ತನೆ ಆದಂತಿದೆ. ತುಳು ಭಾಷಾ ಕ್ರಮದಲ್ಲಿ ಮತ್ತು ಇಲ್ಲಿಯ ಕೃಷಿ ಪದ್ಧತಿಯಲ್ಲಿ ಒಕ್ಕು = ಒಕ್ಕೆಲೆ ಶಬ್ದದಿಂದ ಒಕ್ಕಲಿಗ, ಕೃಷಿಕ ಎಂಬ ಪದ ಹುಟ್ಟಿಕೊಂಡಿತು ಎಂಬ ಸ್ಥಳೀಯರ ಚರ್ಚೆಯ ಮಾತು ಒಪ್ಪುವಂತಿದೆ.

ದರಖಾಸು ಕಳಗಳು ನೇಗಿಲು ಕಟ್ಟಿ ಉಳುಮೆ ಮಾಡುವಷ್ಟು ದೊಡ್ಡದಾಗಿರುವುದಿಲ್ಲ. ಹಾಗಾಗಿ ಇಲ್ಲಿಯ ಪೂರ್ವಜರು ಒಕ್ಕು ಅಭ್ಯಾಸವನ್ನು ಕೈಬಿಟ್ಟು ಒಂದು ಹೊಸ ಯೋಜನೆಯ ಚಿಂತನೆ ಮಾಡಿದಂತಿದೆ.

ಇಬ್ಬರು ಒಂದಾಗಿ ಮರದ ಉದ್ದನೆಯ ಗಟ್ಟಿ ಕೋಲಿಗೆ ಹರಿತವಾದ ಕಲ್ಲು ಅಥವಾ ಮರದ ಕೊರಡನ್ನು ಕಟ್ಟಿ ನೇಗಿಲು (ನಾಯರ್) ಆಕಾರವನ್ನು ರಚನೆ ಮಾಡಿ, ಅದಕ್ಕೊಂದು ಅಡ್ಡಕೋಲನ್ನು ಕಟ್ಟಿ ಹೆಗಲುಕೊಟ್ಟು ಬಲವಾಗಿ ನೆಲಕ್ಕೆ ಊರಿಕೊಂಡು ಹರಿವಂತೆ ಎಳೆದು ನೋಡಿರಬೇಕು.

ಅವರು ಅದೇ ಪ್ರಯೋಗವನ್ನು ತಮ್ಮ ಸಾಕು ಪ್ರಾಣಿಗಳಾದ ಎತ್ತು, ಕೋಣಗಳ ಹೆಗಲಿಗೆ ಅಡ್ಡಕೋಲಿರಿಸಿ ಬಳ್ಳಿಗಳಿಂದ ಸುತ್ತಿಕಟ್ಟಿ ಅದಕ್ಕೆ ಮರದ ಉದ್ದ ಕೋಲನ್ನು ಜೋಡಿಸಿ ಚೂಪಾದ ಮರದ ಕೊರಡನ್ನು ನೇಗಿಲಂತೆ ರಚನೆ ಮಾಡಿ ಕಟ್ಟಿ ಜಾನುವಾರಗಳಿಂದ ಬಲವಾಗಿ ಎಳೆದಾಡಿಸಿದಾಗ ಅಲ್ಲಿಯ ನೆಲದ ಮೇಲ್ತಳದ ಕಲ್ಲು, ಮಣ್ಣು ಕಿತ್ತು



ಹೋಗಿ ಅಲ್ಲಿ ಫಲವತ್ತಾದ ಮೃದುವಾದ ಮಣ್ಣು ಗೋಚರಿಸಿರಬೇಕು. ಅಲ್ಲಿಂದ ಅದೇ ನೇಗಿಲ ಆಕೃತಿಯನ್ನು ಮುಂದುವರಿಸಿದ ಕೃಷಿಕರು ಮರದ ನೇಗಿಲು, ಅನಂತರ ಕಬ್ಬಿಣದ ನೇಗಿಲು ಮತ್ತು ಟಿಲ್ಲರ್ ಉಳುಮೆಯ ಸಾಧನ ಮಾಡಿರುತ್ತಾರೆ.

ಇಪ್ಪತ್ತೊಂದನೇ ಶತಮಾನದಲ್ಲೂ ಒಕ್ಕು ಪದ್ಧತಿಯ ದರಖಾಸು ಕೃಷಿ ಚಾಲ್ತಿಯಲ್ಲಿರುವುದನ್ನು ಕಾಣಬಹುದು. ಇಲ್ಲಿ ಒಕ್ಕುವ ಬದಲು ಅದೇ ಮಾದರಿಯಾಗಿ ಸಲಿಕೆ, ಪಿಕಾಸಿಗಳಿಂದ ಕೊಚ್ಚಿ ಹದಮಾಡಿ ಬತ್ತ ಬಿತ್ತನೆ ಮಾಡುವರು.

ಕೊಲೆಂಜಿ (ಸಣ್ಣಗದ್ದೆ ಕಳಗಳು): ಗುಡ್ಡದ ಇಳಿಜಾರಿನ ಪ್ರದೇಶದಲ್ಲಿ ಕಂಡು ಹಿಡಿದ ದರಖಾಸು ಬತ್ತದ ಕೃಷಿಯ ಮಾದರಿಯನ್ನು ಉಳಿಸಿಕೊಂಡು ಗುಡ್ಡದ ತಗ್ಗಿನಲ್ಲಿರುವ ಸಮತಟ್ಟು ಜಾಗಗಳನ್ನು (ಕೊಲೆಂಜಿ) ಸಣ್ಣ ಗದ್ದೆಗಳನ್ನಾಗಿ ಕಟ್ಟಿಕೊಂಡು ಕೃಷಿ ವಿಧಾನವನ್ನು ಅಭಿವೃದ್ಧಿಪಡಿಸಿದರು.

ನೇಗಿಲು : ಬತ್ತದ ಕೃಷಿಯನ್ನು ಆಯ್ಕೆ ಮಾಡಿಕೊಂಡ ಪೂರ್ವಜರು ಗುಡ್ಡದ ಇಳಿಜಾರಿನ ಉಳುಮೆಯ ವಿಧಾನಕ್ಕೆ ಮರದ ಕೊರಡಿಗಿಂತಲೂ ಹರಿತವಾದ ಸಾಧನ ಬೇಕು ಎಂಬ ಹುಡುಕಾಟಕ್ಕೆ ಬಿದ್ದರು. ಅಲ್ಲಿಂದ ಅವರು ದೂರದ ಘಟ್ಟದ ಮೇಲಿನ ಬಯಲು ಪ್ರದೇಶದ ಊರುಗಳವರು ಯಾವ ಬೆಳೆಗಳನ್ನು ಬೆಳೆಯುತ್ತಾರೆ ಎಂದು ನೋಡಲು ಹೋದಂತಿದೆ. ಅಲ್ಲಿಯವರ ಕಬ್ಬಿಣ ಬಳಕೆಯ ನೇಗಿಲಿನ ಹರಿತವನ್ನು ಕಂಡು ಅಲ್ಲಿಯ (ಪಣೋರು) ನೇಗಿಲ ಗುಳವನ್ನು ಎರವಲು ತಂದು ಇಲ್ಲಿ ಉಳುಮೆ ಮಾಡಿದ್ದಾರೆ. ನೇಗಿಲಿನ ತುದಿಗೆ ಕಬ್ಬಿಣದ ಅಡ್ಡಪಟ್ಟಿ (ಪಣೋರು) ಬಡಿದು ಉಳುಮೆ ಮಾಡಿದಾಗ ನೇಗಿಲ ಗುಳದ ಹರಿತ ಮಣ್ಣನ್ನು ಸೀಳುವ ರಭಸವನ್ನು ಕಂಡು ಇಲ್ಲಿಯ ರೈತ ಚುರುಕಾಗಿದ್ದಾನೆ.

ಬೆಟ್ಟು (ಬೊಟ್ಟು) ಗದ್ದೆ : ಕಬ್ಬಿಣದ ಬಳಕೆಯನ್ನು ರೂಢಿಮಾಡಿಕೊಂಡು ಉಳುಮೆಯ ಆನಂದವನ್ನು ಅನುಭವಿಸಿದ ರೈತರು ವಿರಮಿಸಲಿಲ್ಲ. ಸಣ್ಣಗದ್ದೆ ಕಳಗಳನ್ನು ಕಟ್ಟುವ ಆಲೋಚನೆಗಳನ್ನು ಕೈಬಿಟ್ಟು ಉಳುಮೆಗೆ ವಿಶಾಲವಾದ ಬೆಟ್ಟುಗದ್ದೆಗಳನ್ನು ಕಟ್ಟಿಕೊಂಡರು. ಇಲ್ಲಿ ನೇಗಿಲ ಉಳುಮೆ ಮತ್ತು ನೇಗಿಲ ರಚನೆಯ ಕ್ರಮ ಪರಿಪೂರ್ಣವಾದಂತಾಯಿತು. ಬತ್ತದ ಕೃಷಿ ಪ್ರಗತಿ ಕಂಡಿತು.

ಕರಾವಳಿಯ ಪೂರ್ವಜರು ತಮ್ಮ ಉಳುಮೆಯ ಸಾಧನಗಳೆಂಬ ನೊಗ, ನೇಗಿಲುಗಳ ರಚನೆಯಲ್ಲಿ ಬಹಳ ಆಸಕ್ತಿ ವಹಿಸಿದಂತಿದೆ. ನೇಗಿಲಿನ ಉಳುಮೆಯಿಂದ ಬತ್ತದ ಕೃಷಿ ಸುಲಭವಾಗುತ್ತದೆ ಎಂದಾಗ ನೇಗಿಲ ರಚನೆಗೆ ಉತ್ತಮ ಜಾತಿಯ ಮರಗಳನ್ನು ಹುಡುಕಿದರು. ನೀರ ಉಳುಮೆಗೆ ಹಾಳಾಗದ, ಪಕ್ಕನೆ ಸವೆದು ಹೋಗದ ಮಾವು, ಚಂದಳಿಕೆ, ಕಾಸರಕನ ಮರಗಳಿಂದ ನೇಗಿಲು ತಯಾರು ಮಾಡಿ ನೇಗಿಲಿಗೆ ಕಬ್ಬಿಣದ ಗುಳ ಹೊಡೆದರು. ಆಗ ಉಳುಮೆ ಸುಲಭವಾಯಿತು.

ನೇಗಿಲಿನ ರಚನೆಯಲ್ಲಿ ಬದಲಾವಣೆ ತಂದುಕೊಂಡ ಕೃಷಿಕರು ಜಾನುವಾರುಗಳ ಹೆಗಲಿಗೆ ಇಡುವ ನೊಗಕ್ಕೂ ಅಂದವಾದ ರೂಪ ಕೊಟ್ಟರು. ಉಳುವವನಿಗೆ ನೊಗ ಕಟ್ಟಲು ಸುಲಭ ಆಗುವಂತೆ ರಚನೆ ಮಾಡಿ ಜಾನುವಾರುಗಳು ನೇಗಿಲು ಎಳೆಯುವಾಗ ಅವುಗಳ ಹೆಗಲನ್ನು ನೊಗ ತರಚಬಾರದು ಎಂಬ ಆಲೋಚನೆಗಳಿಂದ ನೊಗದ ರಚನೆಯನ್ನು ಬಹಳ ನಾಜೂಕಾಗಿ ಮಾಡಿದರು. ಅಲ್ಲಿ ನೊಗಕ್ಕೆ ಜಾನುವಾರುಗಳನ್ನು ಹಗ್ಗದಿಂದ ಜೋಡಿಸಲು ಕಬ್ಬಿಣದ ಕುಂಡಲ (ಗುಂಡಲ)ಗಳನ್ನು ಹೊಡೆದು ಒಂದು ನಯನಾಜುಕಿನ ಸಾಧನವನ್ನಾಗಿ ಮಾಡಿಕೊಂಡರು.

ನೊಗ, ನೇಗಿಲು, ಸಲಿಕೆ, ಪಿಕಾಸಿ ಮುಂತಾದ ಸಲಕರಣೆಗಳು ಉಪಯೋಗಕ್ಕೆ ಬಂದ ಮೇಲೆ ರೈತರು ಇನ್ನಷ್ಟು ಆಧುನಿಕ ಚಿಂತನೆಗಳನ್ನು ಮಾಡಿದ್ದು ಕಂಡು ಬರುತ್ತದೆ. ಕಬ್ಬಿಣದ ಬಳಕೆ ಬಂದ ಬಳಿಕ ಇಲ್ಲಿಯ ಬೆಟ್ಟುಗದ್ದೆಗಳನ್ನು ಕಳ ಕಟ್ಟಿದ ವಿಶಾಲತೆಯ ರೀತಿ ನೋಡಿದಲ್ಲಿ ರೈತನ ಉಳುಮೆಯ ಧೈರ್ಯ ಬೆಳೆಯಿತು. ಎಷ್ಟು ಜತೆ ಜಾನುವಾರುಗಳನ್ನು ಬೇಕಾದರೂ ತಂದು ಎಷ್ಟೇ ವಿಶಾಲವಾದ ಗದ್ದೆಯನ್ನು ಉಳುಮೆಯಿಂದ ನೀರು ಮಾಡಿಯೇವು ಎಂಬ ಆ ದಿನದ ರೈತನ ಕೆಚ್ಚು ಈಗಿನ ರೈತರನ್ನು ಪ್ರಶ್ನೆ ಮಾಡುವಂತಿದೆ.

ಬೆಟ್ಟುಗದ್ದೆಗಳ ಮಣ್ಣು ಜೇಡಿ, ಕೆಂಪು ಮಿಶ್ರಿತ ಮಣ್ಣಾಗಿದ್ದು ಇದರಲ್ಲಿ ಗೆಜ್ಜೆ ಮುರಕಲ್ಲು ಮತ್ತು ಕಬ್ಬಿಣ ಮಿಶ್ರಿತ ಕಲ್ಲುಗಳು ಬೆರೆತಿರುತ್ತವೆ. ಗಟ್ಟಿಮಣ್ಣಿನ ಬೆಟ್ಟು ಗದ್ದೆಯನ್ನು ಕಟ್ಟುವಾಗ ಹತ್ತಿಪ್ಪತ್ತು ಜತೆ ಕೋಣಗಳನ್ನು ಕಟ್ಟಿ ಉಳುವಂತಹ ವಿಶಾಲ ಮನೋಭಾವ ಉಳಿಸಿಕೊಂಡರು. ಅವುಗಳನ್ನು ಜಮೀನ್ದಾರ ಮನೆತನದ ಘನತೆ ಎತ್ತಿ ತೋರಿಸುವ ಊರಿಗೇ ಪ್ರತಿಷ್ಠಿತ (ಬಾಕ್ಯಾರು) ಗದ್ದೆ ಎಂಬಂತೆ ಕಟ್ಟಲಾಯಿತು.

ಬೆಟ್ಟುಗದ್ದೆಯ ಉಳುಮೆಗೂ ಅಲ್ಲಿ ಅಡ್ಡ ಹಲಗೆಯ ಪ್ರಯೋಗಕ್ಕೂ ರೈತರು ರೂಪಿಸಿಕೊಂಡ ಕೃಷಿಪರಿಕರದ ಯೋಜನೆಗಳು ಅವರಿಗೆ ಸಂತಸ ತಂದಿರಬೇಕು. ಅದಕ್ಕಾಗಿ 'ಬಾಕ್ಯಾರು' ಗದ್ದೆಯನ್ನು ಬಿತ್ತುವ ಹೊತ್ತು ಅಲ್ಲಿ 'ಬಾರೆಪಾಡುನು' ಎಂಬ ಹಬ್ಬದ ಆಚರಣೆ ನಡೆಯುವುದಿದೆ.

ಬಾಕ್ಯಾರು ಗದ್ದೆಯ ಸುತ್ತ ಮುತ್ತ ಎಕರೆಗಳಷ್ಟು ವಿಶಾಲವಾದ ಬೆಟ್ಟುಗದ್ದೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಗದ್ದೆಗಳಿಗೆ ಹುಣಿ ಅಂದರೆ ದಂಡೆಗಳನ್ನು ಕಟ್ಟಿ ಮಳೆಗಾಲದ ಕಾಡನೀರ ಹರಿವನ್ನು ಹರಿಸುವ ತೋಡುಗಳಿಂದ ನೀರು ಕಟ್ಟುತ್ತಾರೆ.

ಉಳುಮೆಯ ಕ್ರಮ : ಬೆಟ್ಟುಗದ್ದೆಗಳಲ್ಲಿ ನೀರು ನಿಲ್ಲಬೇಕಾದರೆ-ಎಂಟು, ಒಂಬತ್ತು ಸಾಲಿನ ಉಳುಮೆಯ ಅಗತ್ಯವಿದೆ. ಇಲ್ಲಿ ಉಳುಮೆಯ ಉಪಯೋಗಕ್ಕೆ ತಂದ ಹೊಸ ನೇಗಿಲಿನ ರೆಕ್ಕೆಗಳು ಒಂದೂ ಕಾಲು ಅಡಿಯಷ್ಟು ವಿಶಾಲವಾಗಿರುತ್ತವೆ. ನೇಗಿಲ ಆಕಾರ ಹೇಗಿರುತ್ತದೆಂದರೆ ನೆಲದ ಆಳಕ್ಕಿಳಿವ ಬಾಣದಂಥ ಮೊನೆಯಿಂದ ರೂಪುಗೊಂಡಿರುತ್ತದೆ. ಬೆಟ್ಟು ಗದ್ದೆಯ ಕಲ್ಲು ಮಣ್ಣಿನ ಉಳುಮೆಗೆ ಹೊಸ ನೇಗಿಲು ಸವೆದು ಹುಡಿ (ಪೊಡಿ) ನೇಗಿಲಾಗಿ ಬಿಡುತ್ತದೆ. ಇಲ್ಲಿಯ ಉಳುಮೆಗೆ ಜನರ ಕಾಲು ಮತ್ತು ಜಾನುವಾರುಗಳ ಕಾಲು ಗೊರಸು ಸವೆದು ನಡೆಯಲು ಸಂಕಟಪಡುವುದುಂಟು. ಹಾಗಾಗಿ ಜಾನುವಾರುಗಳ ಕಾಲಿಗೆ 'ಲಾಳ' ಹೊಡೆವ ಕ್ರಮವೂ ಇದೆ.

ಅಡ್ಡ ಹಲಗೆ : ಬೆಟ್ಟುಗದ್ದೆಯ ಎರಡು ಸಾಲಿನ ಉಳುಮೆಗೊಮ್ಮೆ ಅಡ್ಡ ಹಲಿಗೆಯನ್ನು ಉಪಯೋಗಿಸುತ್ತಾರೆ. ಅಡ್ಡಹಲಗೆಯ ಮೇಲೆ ಒಬ್ಬ ವ್ಯಕ್ತಿ ನಿಂತು ಹಲಗೆಯ ತೇಲಿಕೆಗೆ ಅವನು ಜಾರಿ ಬೀಳದಂತೆ ಎತ್ತು ಅಥವಾ ಕೋಣಗಳ ಬಾಲವನ್ನು ಬಿಗಿಯಾಗಿ ಹಿಡಿದಿರುತ್ತಾರೆ. ಬೆಟ್ಟುಗದ್ದೆಯ ಗಟ್ಟಿ (ರೆಂಟೆ) ಮಣ್ಣಿನ ಮೇಲೆ ಹರಿದಾಡುವ ಹಲಿಗೆಯ

ಕರಾಮತ್ತು-ರೆಂಟೆಗಳನ್ನು ನೀರುಗೊಳಿಸುತ್ತದೆ. ಬೆಟ್ಟುಗದ್ದೆಯ ಎಂಟು ಸಾಲಿನ ಉಳುಮೆಗೆ, ಎರಡು ಅಥವಾ ಮೂರು ಸಲ ಅಡ್ಡ ಹಲಗೆಯನ್ನು ಹೂಡುತ್ತಾರೆ.

ಬೆಟ್ಟು ಗದ್ದೆಗೆ ನೇಗಿಲಿನ ಉಳುಮೆ ಎಷ್ಟು ಅಗತ್ಯವೋ ಅಷ್ಟೇ ಅಡ್ಡ ಹಲಗೆಯ ಹರಿವಿನ ಅಗತ್ಯವೂ ಇರುತ್ತದೆ. ಮಳೆ ನೀರಿನ ಆಶ್ರಯದ ಈ ಗದ್ದೆಗಳ ಮೇಲ್‌ಸ್ತರದಲ್ಲಿ ನೀರು ನಿಲ್ಲಲು ಕೃಷಿಕರು ಬಹಳ ಪ್ರಯಾಸಪಡುತ್ತಾರೆ. ಮೂರು ತಿಂಗಳ ಬೆಟ್ಟು ಗದ್ದೆಯ ಬತ್ತದ ಬೆಳೆಗೆ ನೀರಾಶ್ರಯ ಸಿಗದಿದ್ದಲ್ಲಿ ಬೆಳೆ ಸುಟ್ಟು ಹೋಗುತ್ತದೆ. ಬೆಟ್ಟು ಗದ್ದೆಯ ಉಳುಮೆಗೆ ಪಾದ ಮುಳುಗುವಷ್ಟು ಹದ ತಿಳಿದು ನೀರು ಕಟ್ಟುತ್ತಾರೆ. ಬೆಟ್ಟು ಗದ್ದೆಯನ್ನು ನೇಗಿಲು ಉಳುಮೆ ಮಾಡಿದ ಅನಂತರ ಅಡ್ಡಹಲಗೆಯನ್ನು ಹೂಡುವರು ಹಲಗೆಯಡಿ ಶೇಖರಣೆಗೊಂಡ ಮಣ್ಣುಗುಡ್ಡೆಯನ್ನು (ತೆರ್ಪೆಜಾರಾವುನು) ಏರಿನಿಂದ ತಗ್ಗಿನೆಡೆಗೆ ಜಾರಿಸಿಕೊಂಡು ಹೋಗಬೇಕು. ಜಾರಿಸಲು ಅನುಭವ ಬೇಕು.

ಅಡ್ಡಹಲಗೆಯ ರಚನೆ : ಅಡ್ಡಹಲಗೆಯನ್ನು ಹಗುರವಾದ ಮರದಿಂದ ರಚನೆ ಮಾಡಲಾಗುತ್ತದೆ. ಅಡ್ಡಹಲಗೆಯ ಮಧ್ಯಭಾಗವನ್ನು (ಮುನೆ) ಮರದ ಉದ್ದ ಪಟ್ಟಿ, ಮರದ ರೀಪು ಸಿಕ್ಕಿಸಲು ಉಪಯೋಗ ಆಗುವಂತೆ ಕೀಲು ಚೌಕಟ್ಟು ಕಟ್ಟಲಾಗುತ್ತದೆ. ಅಡ್ಡಹಲಗೆಯ ಹರಿವು ನೀರು ಮಣ್ಣಲ್ಲಿ ಅಥವಾ ಒಣಮಣ್ಣಲ್ಲಿ ನಿಧಾನವಾಗಿ ತೇಲುತ್ತಾ ಹರಿಯುತ್ತಾ ಸಾಗುತ್ತದೆ. ಮುಂದೆ ಅಡ್ಡ ಹಲಗೆ ಹೊಡೆಯುವವನ ಚಮತ್ಕಾರಕ್ಕೆ ಜಾನುವಾರುಗಳ ಎಳೆತದ ಬಲಕ್ಕೆ ಗದ್ದೆಯ ಏರಿನ ಮಣ್ಣನ್ನು ತಗ್ಗಿಗೆ ಜಾರಿಸುತ್ತಾ ಹೋಗುತ್ತದೆ. ಗದ್ದೆಯ ಎಲ್ಲಾ ಕಡೆ ಸರಿಸಮ ನೀರು ನಿಲ್ಲಲು ಅಡ್ಡಹಲಗೆಯ ಹೂಡಿಕೆ ಅಗತ್ಯವಿದೆ.

ಬಲಿಷ್ಠ ಎತ್ತುಗಳು ಇಲ್ಲವಾದಲ್ಲಿ ಬಲಿಷ್ಠ ಕೋಣಗಳೇ ಅಡ್ಡಹಲಗೆಯನ್ನು ಹೊಲದ ಉದ್ದಗಲಕ್ಕೂ ಎಳೆದಾಡಿ ತೀಡುವಲ್ಲಿ ಸಹಕಾರಿಯಾಗುತ್ತವೆ. ಅಡ್ಡ ಹಲಗೆಯ ಹೂಟ ಹೂಡುವವರು ಮೆತ್ತಗೆ 'ಒರಲ್' ಗುನುಗುನಿಸುತ್ತ ಅಡ್ಡಹಲಗೆ ಎಳೆವ ಜಾನುವಾರುಗಳಿಗೆ ಭಾರ ತಿಳಿಯದಂತೆ ಏರಿನ ನೀರ ಮಣ್ಣನ್ನು ಜಾರಿಸಿ, ಹಲಗೆಯನ್ನು ಕೆಸರು ರಾಡಿಯಲ್ಲಿ ಹಾರಾಡಿಸುತ್ತಾ ಹೊಲ ಸಮತಟ್ಟುಗೊಳಿಸುತ್ತಾರೆ.

ಅಡ್ಡ ಹಲಗೆಯನ್ನು ಕೋಣಗಳ ಹೆಗಲಿಗೆ ಜೋಡಿಸುವಲ್ಲಿ, ಅಡ್ಡ ಹಲಗೆಯ ಭಾರ ಮತ್ತು ಹಲಗೆಯ ಮೇಲೆ ನಿಂತವನ ಭಾರದ ಸಮತೂಕ ಸಮಗೊಳಿಸುವ ಮೂರು ನಾಲ್ಕು ಅಳತೆಯ ಕಟ್ಟುಗಳು ಉಳುವ-ನೇಗಿಲ ತುದಿಯಲ್ಲಿ ಇರುವಂತೆ ಅಡ್ಡ ಹಲಗೆಯ (ಮುನೆ) ತುದಿಯಲ್ಲೂ ಇರುತ್ತದೆ. ಹೊಲದ ಏರಿಳಿತಕ್ಕನುಸಾರವಾಗಿ ಹಲಗೆಯನ್ನು ಮುನೆಯ ಕಟ್ಟುಗಳ ಪ್ರಕಾರ ಉಳುನೆಲದ ಆಳಕ್ಕಿಳಿಸಿ ಮಣ್ಣನ್ನು ಹದಗೊಳಿಸುವುದಲ್ಲದೆ-ಸಮತಟ್ಟೂ ಮಾಡಲಾಗುತ್ತದೆ.

ಕೋಡಿ ಕೊಚ್ಚುನು : ಗದ್ದೆಯ ಮೂಲೆಯನ್ನು ಕೊಚ್ಚುವುದು. ನೇಗಿಲು ಅಥವಾ ಅಡ್ಡಹಲಗೆ ಓಡದ (ಕೋಂಟು ಮೂಲೆ) ತಿರುವುಗಳ ಮೂಲೆಗಳನ್ನು ಸಲಿಕೆಯಿಂದ ಕೊಚ್ಚಿ ಕಾಲಿನಿಂದ ಸವರಿ ಸಮತಟ್ಟು ಮಾಡಲಾಗುತ್ತದೆ.

ಮಜಲು ಗದ್ದೆ : ಒಂದು ಗುಡ್ಡದ ಇಳಿಜಾರು ಪ್ರದೇಶವನ್ನು ಗದ್ದೆಕಳಗಳನ್ನಾಗಿ ಕಟ್ಟುವ ಸಮಯದ ಅಗತ್ಯಗಳು ಇಲ್ಲಿ ಕಂಡು ಬರುತ್ತವೆ. ದರಖಾಸು, ಸಣ್ಣಗದ್ದೆ, ಬೆಟ್ಟುಗದ್ದೆ ಎಂಬ ಈ ಗದ್ದೆಗಳ ಬುಡಕ್ಕೆ 'ಮಜಲು ಗದ್ದೆ'ಯ ರಚನೆ ಆಗಿರುತ್ತದೆ. ಒಂದು ಗುಡ್ಡದ ಸಮತಟ್ಟು ಪಾದಕ್ಕೆ ಬರುವ ಮಜಲು ಹೊಲ, ಗುಡ್ಡದ ಇಳಿಜಾರಿನ ಹೊಯಿಗೆ ಮಿಶ್ರಿತ ಕರಿಮಣ್ಣು, ಅಂದರೆ ಫಲವತ್ತಾದ ಮಣ್ಣನ್ನು ಕಟ್ಟಿ ಕೊಡುತ್ತದೆ.

ಬೈಲು ಗದ್ದೆ : ಮಜಲು ಗದ್ದೆಯ ಗುಡ್ಡದ ಬುಡದಲ್ಲಿ ನೀರು ಶೇಖರಣೆಯ ಕೆರೆ ಕಟ್ಟೆಗಳು ಇರುತ್ತವೆ. ಇಲ್ಲಿ ಏತ ನೀರಾವರಿಯ ಉಪಯೋಗ ಆಗುತ್ತದೆ. ಎನೆಲ್, ಸುಗ್ಗಿ, ಕೊಳಕೆ ಎಂಬ ಮೂರು ಬೆಳೆಗಳನ್ನು ಬೆಳೆಯುತ್ತಾರೆ ಅಥವಾ ದವಸ ಧಾನ್ಯ, ಕಾಯಿಪಲ್ಯಗೆ ಈ ಮಜಲು ಗದ್ದೆಗಳು ಯೋಗ್ಯವಾಗಿರುತ್ತವೆ. ಇಲ್ಲಿ ಕೃಷಿ ಯೋಜನೆಯನ್ನು ರೂಪಿಸಿದ ಪೂರ್ವಜರು ಕೃಷಿಯ ಪರಿಪೂರ್ಣತೆಯನ್ನು ಅನುಭವಿಸಿದ್ದಾರೆ. ಮಜಲು ಗದ್ದೆ ಕೃಷಿಕರ ಮನೆ ಹತ್ತಿರಕ್ಕಿದ್ದು ಹೊಲ ಉಳುವ ಮನೆತನಕ್ಕೆ ಅಗತ್ಯದ್ದಾಗಿರುತ್ತದೆ.

ಮಜಲು ಗದ್ದೆಗಳ ಸುಲಭ ಉಳುಮೆಯ ಲಾಭ ಪಡೆದ ರೈತರು ಮಜಲಿಗಿಂತಲೂ ಕೆಳಗಿನ ಪದರೆಂಬ ಬೈಲು ಗದ್ದೆಯನ್ನು ಕಟ್ಟಿದ್ದರು. ಇಲ್ಲಿ ಮಳೆಗಾಲಕ್ಕೆ ನೀರಲ್ಲಿ ಮುಳುಗುವ ಬಯಲು ಪ್ರದೇಶವನ್ನು ಗದ್ದೆಕಳಕಟ್ಟಿ ಸಾಗುವಳಿಗೆ ಅನುಕೂಲ ಮಾಡಿಕೊಂಡಂತಿದೆ.

ಮನುಷ್ಯರು ಮತ್ತು ಅವರ ಸಾಕುಪ್ರಾಣಿಗಳು ಒಟ್ಟಾಗಿ ದುಡಿಯುವ ಪದ್ಧತಿಗೆ ಮನೆ, ಹಟ್ಟಿ, ಕೊಟ್ಟಿಗೆಗಳನ್ನು ಒಂದೇ ಕಡೆ ಕಟ್ಟಿಕೊಂಡರು. ಬತ್ತದ ಕೃಷಿ ಒಂದು ಕೂಡು ಕುಟುಂಬವನ್ನೇ ಕಟ್ಟಿಕೊಂಡು ದುಡಿಯಿತು. ಕೃಷಿಕರ ಸಿರಿ ಸಂಪತ್ತು ಅವರಲ್ಲಿರುವ ಮೂರು ಬೆಳೆ, ಎರಡು ಬೆಳೆ ಮತ್ತು ಒಂದು ಬೆಳೆ ಬೆಳೆವ ಗದ್ದೆಗಳ ವಿಸ್ತಾರದ ಮೇಲೆ ಹೊಂದಿಕೊಂಡಿರುತ್ತದೆ.

ಹೊಯ್ಗೆ ಮಣ್ಣಿನ ಗದ್ದೆ (ಸದೆ ಮಣ್ಣು) : ಬೈಲು ಗದ್ದೆಗಳ ಅನಂತರ ಸಮುದ್ರ ದಂಡೆಗೆ ಹತ್ತಿರವೆಂಬ ಹೊಯ್ಗೆ ಗದ್ದೆಕಳಗಳನ್ನು ಕಟ್ಟಿದರು. ಈ ಮಣ್ಣನ್ನು ಸದೆ ಮಣ್ಣು ಎಂದು ಕರೆಯುತ್ತಾರೆ. ಈ ಹೊಲಗಳನ್ನು ಒಂದೆರಡು ಸಾಲು ಉಳುಮೆ ಮಾಡಿ ನಾಟಿ ಮಾಡುತ್ತಾರೆ. ಉಳುತ್ತಿದ್ದಂತೆ ಉಳುವ ಸಾಲಿಗೆ ಬತ್ತದ ಸಸಿಗಳನ್ನು ನಾಟಿ ಮಾಡಿದರೆ ಸಸಿಗಳು ನಿಲ್ಲುತ್ತವೆ. ಉಳುಮೆಯು ಹೊಯ್ಗೆ ಮಣ್ಣು ಗಟ್ಟಿ ಹಾಸಿನಂತಾಗಿ ನಾಟಿಗೆ ಎಡೆಕೊಡುವುದಿಲ್ಲ. ಸಸಿಗಳು ಬಿದ್ದು ಹಾಳಾಗಿ ಹೋಗುತ್ತವೆ. ಸದೆ ಮಣ್ಣಿನ ಸಾಗುವಳಿ- ಅದೂ ಒಕ್ಕು ಪದ್ಧತಿಯಿಂದಲೇ ಆರಂಭವಾದಂತಿದೆ. ರೈತರು ಕಾಡು ಗುಡ್ಡಗಳಿಂದ ಕೃಷಿ ಪದ್ಧತಿಯನ್ನು ಕೆಳಗಿಳಿಸಿ ತಂದಂತೆ- ಕರಾವಳಿಯ ಕೃಷಿಪದ್ಧತಿಯನ್ನು ಗುಡ್ಡದ ಕಡೆಗೆ ಒಯ್ದಿರಲೂಬಹುದು ಎಂಬಂತಿದೆ. ಇಲ್ಲಿ ಕಾಡು ಗುಡ್ಡಗಳಿಂದ ಕೃಷಿ ಗದ್ದೆಗಳು ಇಳಿದು ಬಂದವು ಎಂಬ ವಾದವಿದೆ.

ಬತ್ತವನ್ನು ಧಾರಾಳವಾಗಿ ಬೆಳೆವ ಇಲ್ಲಿಯ ನೀರಾವರಿ ಪ್ರದೇಶದ ಜನ ಗದ್ದೆ ಉಳುಮೆಗೆ ಎತ್ತುಗಳಿಗಿಂತಲೂ ಬಹುಪಾಲು ಕೋಣ ಜಾತಿಯನ್ನೇ ನಂಬಿಕೊಂಡರು. ಎತ್ತುಗಳು ಒಣ ಬೇಸಾಯದ ಉಳುಮೆಗೆ ಒಗ್ಗಿಕೊಂಡಂತೆ, ನೀರ ಗದ್ದೆಗಳ ಉಳುಮೆಗೆ ಕೋಣಗಳು ಸಹಕಾರಿಯಾದವು. ಕರಾವಳಿಯ ಕೃಷಿ ಕುಟುಂಬಗಳು ಉಳುವ ಎತ್ತು, ಕೋಣಗಳನ್ನು ಮೇಯಿಸಲು ಗೋಮಾಳಗಳನ್ನು ಕಟ್ಟಿಕೊಂಡರು. ಇವರು ಜಾನುವಾರಗಳನ್ನೇ ಕೃಷಿ ಸಂಪತ್ತು ಎಂದು ತಿಳಿದವರು.

ಬಿ.ಸಿ.ಎಸ್.

ಉಳುಮೆಯ ಸಾಧನಗಳು ರೈತನ ಕೃಷಿಗೆ ಪೂರಕವಾಗುವ ಸಾಧನಗಳಲ್ಲಿ ಹಲವು ಬಗೆ. ಆರಂಭಿಕ ಹಂತದಲ್ಲಿ ಸ್ವಾಭಾವಿಕವಾಗಿ ಸಿಗುವ ಚೂಪಾದ ಕಲ್ಲುಗಳು, ಮರದ ಕೊಂಬೆಗಳು, ಪ್ರಾಣಿಗಳ ಕೊಂಬು ಅಥವಾ ಮೂಳೆಗಳಿಂದಲೊ ನೆಲ ಅಗೆದು ತನಗೆ ಅಗತ್ಯವಿದ್ದಷ್ಟು, ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಉಪಕರಣಗಳನ್ನು ಹುಡುಕಿಕೊಂಡ. ಮಾನವ ಸಂಘಜೀವಿಯಾದಂತೆ ಒಂದೆಡೆ ನೆಲೆನಿಂತ ಮೇಲೆ, ಕುಟುಂಬ ಬೆಳೆದಂತೆ ಕೃಷಿ ಭೂಮಿ ವಿಸ್ತಾರವಾಗತೊಡಗಿತು. ಇಂಥ ಭೂಮಿಗೆ ಅಗತ್ಯ ಉಪಕರಣಗಳನ್ನು ತನ್ನ ಇತಿಮಿತಿಗಳಲ್ಲಿ ಸಿದ್ಧಮಾಡಿಕೊಂಡು ಭೂಮಿಯನ್ನು ಹದಗೊಳಿಸಿ ಬೆಳೆಯನ್ನು ತೆಗೆಯುತ್ತಿದ್ದ. ಕಾಲಕ್ರಮೇಣ ಬುದ್ಧಿ ಹೆಚ್ಚಾದಂತೆ ಉಪಕರಣಗಳಲ್ಲೂ ನಯಗಾರಿಕೆ ವೈವಿಧ್ಯತೆ ನಾವೀನ್ಯತೆ ಆವಿಷ್ಕಾರವಾಯಿತು. ಇಂದು ಇಂಥ ಉಪಕರಣಗಳು ಅಗಾಧವಾಗಿವೆ. ಕೃಷಿ ನೆಲ ಉಳಲು, ಬಿತ್ತನೆ ಮಾಡಲು ಕಳೆ ಕೀಳಲು ಕುಂಟೆ ಒಡೆಯಲು, ನಾಟಿಮಾಡಲು, ಕುಯಿಲು ಮಾಡಲು, ಒಕ್ಕಣೆ ಮಾಡಲು, ದಾಸ್ತಾನು ಮಾಡಲು, ಸರಬರಾಜು ಮಾಡಲು- ಹೀಗೆ ಹಲವು ಬಗೆ ಕೆಲಸಕ್ಕೂ ಹಲವು ಬಗೆಯ ಉಪ ಉಪಕರಣಗಳು ಇವೆ.

ಉಳುಮೆಯ ಉದ್ದೇಶ ಕೃಷಿಗೆ ಯೋಗ್ಯವಾದ ಮಣ್ಣನ್ನು ಸಡಿಲಗೊಳಿಸಿ ಹದಮಾಡುವುದು. ಹೀಗೆ ಮಾಡುವುದರಿಂದ ಬಿತ್ತಿದ ಬೀಜ ಸಲೀಸಾಗಿ ಬೆಳೆದು ಉತ್ತಮ ಫಲಕೊಡಲು ಅನುಕೂಲ ಸನ್ನಿವೇಶ ನಿರ್ಮಾಣವಾಗುತ್ತದೆ. ಪದೇ ಪದೇ ಒಂದೇ ಭೂಮಿಯಲ್ಲಿ ಉಳುಮೆ ಮಾಡುವುದರಿಂದ ಹೊಲದಲ್ಲಿಯ ಕೂಳೆಗಳು ನೆಲದೊಳಗೆ ಸೇರಿ ಕೊಳೆತು ಗೊಬ್ಬರವಾಗುತ್ತದೆ. ನೀರು ಇಂಗಲು ಅನುಕೂಲ. ಭೂಮಿಗೆ ಸೇರಿದ ಗೊಬ್ಬರ ಮಣ್ಣಿನಲ್ಲಿ ಚೆನ್ನಾಗಿ ಬೆರೆಯುತ್ತದೆ. ಮಣ್ಣಿನಲ್ಲಿ ಗಾಳಿ ಆಡುತ್ತದೆ. ಇದರಿಂದ ಹದವಾದ ಶಾಖ ಉಂಟಾಗಿ ಮೊಳಕೆ ಸರಿಯಾದ ಕಾಲಕ್ಕೆ ಹೊರಬರಲು ಸಾಧ್ಯವಾಗುತ್ತದೆ. ಹೀಗೆ ಹದಗೊಂಡ ಮಣ್ಣನ್ನು ಅನುಭವವುಳ್ಳ ಕೃಷಿಕ ಕೈಯಲ್ಲಿ ಹಿಡಿದು ನೋಡಿದಾಗ ಅದರಲ್ಲಿ ಕಣ ಜೋಡಣೆ ಹದವಾಗಿದೆಯೆಂದು ತಿಳಿದು ಬಿತ್ತನೆ ಆರಂಭಿಸುತ್ತಾನೆ. ಮಣ್ಣಿನ ಕಣಕಣಗಳ ನಡುವೆ ಅಂತರವಿದ್ದರೆ ತುಂಬ ಒಳ್ಳೆಯದು. ಒಂದೊಂದು ಬೆಳೆಗೂ ಒಂದೊಂದು ಬಗೆಯ ಮಣ್ಣಿನ ಹದಬೇಕು. ಮೃದುವಾದ ಭೂಮಿಯಲ್ಲಿ ರಾಗಿ, ಈರುಳ್ಳಿ ಮುಂತಾದ ಸಣ್ಣಬೀಜವುಳ್ಳ ಪೈರುಗಳು ಬೆಳೆಯುತ್ತವೆ. ಒರಟು ಭೂಮಿಯಲ್ಲಿ ಗಡಸು ಬೀಜಗಳಾದ ಜೋಳ, ಹತ್ತಿ, ಕಡಲೆ ಮುಂತಾದವನ್ನು ಬೆಳೆಯುವರು.

ಸಾಗುವಳಿಗೆ ಬಳಸುವ ಉಪಕರಣಗಳಲ್ಲಿ ಪ್ರಧಾನವಾಗಿ ಮೂರು ಬಗೆ : 1. ಪಾಳು ಭೂಮಿಯನ್ನು ಉತ್ತು ಸಡಿಲಗೊಳಿಸುವಂಥವು. 2. ಹೆಂಟೆಯನ್ನು ಒಡೆದು ಪುಡಿ ಮಾಡುವಂಥವು. 3. ಏರುಪೇರಿನ ಭೂಮಿಯನ್ನು ಸಮತಟ್ಟು ಮಾಡುವಂಥವು.

ನೇಗಿಲು : ಸಾಗುವಳಿಯಲ್ಲಿ ಬಳಕೆಯಲ್ಲಿರುವ ಪ್ರಮುಖ ಸಾಧನ ನೇಗಿಲು. ಕೃಷಿಯ ಆರಂಭಿಕ ಹಂತದಲ್ಲಿ ಬಳಸಿರುವ ನೇಗಿಲುಗಳ ಸ್ವರೂಪ ಒಂದೇ ರೀತಿಯಲ್ಲಿರುವಂಥವು. ಭೂಗುಣದ ಆಧಾರದ ಮೇಲೆ ಹಾಗೂ ಎತ್ತುಗಳ ಸಾಮರ್ಥ್ಯಕ್ಕೆ ತಕ್ಕಂತೆ ನೇಗಿಲುಗಳ ಗಾತ್ರ, ಆಕಾರದಲ್ಲಿ ವ್ಯತ್ಯಾಸವಿರುತ್ತವೆ. ಎರೆ ಮಣ್ಣಿನ ಭೂಮಿಯಾಗಿದ್ದಲ್ಲಿ ದೊಡ್ಡ ನೇಗಿಲು, ಮರಳುಭೂಮಿಯಲ್ಲಿ, ಸಾಧಾರಣ ನೇಗಿಲು ಮತ್ತು ಎರಡು ಹಾಗೂ ಮೂರನೆಯ ಬಾರಿ ಉಳುಮೆ ಮಾಡುವ ನೇಗಿಲುಗಳ ಗಾತ್ರದಲ್ಲಿ ವ್ಯತ್ಯಾಸವುಂಟು.

ಪ್ರಪಂಚಾದ್ಯಂತ ಕೃಷಿಯ ಆರಂಭಿಕ ಹಂತದಲ್ಲಿ, ಚೂಪಾದ ಮರದಿಂದ ಉಳುಮೆ ಮಾಡುತ್ತಿದ್ದರು. ಎರಡನೆಯ ಹಂತದಲ್ಲಿ ನೇಗಿಲಿನ ತುದಿಗೆ ಕಬ್ಬಿಣ ಕುಳವನ್ನು ಅಳವಡಿಸಲಾಯಿತು, 18ನೇ ಶತಮಾನದ ಉತ್ತರಾರ್ಧದಲ್ಲಿ ಯುರೋಪಿನ ಕೆಲವು ಭಾಗಗಳಲ್ಲಿ ಕಬ್ಬಿಣದ ನೇಗಿಲು ಬಳಕೆಗೆ ಬಂತು. ಭಾರತದಲ್ಲಿ ಕಬ್ಬಿಣದ ನೇಗಿಲಿನ ಬಳಕೆ 19ನೇ ಶತಮಾನದಲ್ಲಿ ಆರಂಭವಾಯಿತಾದರೂ ಭಾರತೀಯರಿಗೆ ಮರದ ನೇಗಿಲೇ ಪ್ರಿಯವಾಗಿತ್ತು.

ಮರದ ನೇಗಿಲು : ಇದಕ್ಕೆ ಗಟ್ಟಿಯಾದ ಜಾಲಿ ಅಥವಾ ಹೊಂಗೆ ಮುಂತಾದ ಬಲಿತ, ನಿರ್ದಿಷ್ಟ ಆಕಾರದ ಮರದ ತುಂಡನ್ನು ಬಳಸಲಾಗುತ್ತದೆ. ಮರದ ತುಂಡಿಗೆ ಒಂದು ಮೇಟಿಗೋಲನ್ನೂ ಎತ್ತುಗಳನ್ನು ಹೂಡಲು ಚಾಲಕ ಅಥವಾ ಈಸು ದಂಡವನ್ನು ಅಳವಡಿಸಿರುತ್ತಾರೆ. ಬುಡದ ಕೆಳಭಾಗವನ್ನು ಕೆತ್ತಿ ಕಬ್ಬಿಣದ ಗುಳವನ್ನು ಸೇರಿಸುತ್ತಾರೆ. ಗುಳಗಳಲ್ಲೂ ಕೆಲವು ಬಗೆಗಳಿವೆ. ನೇಗಿಲು ಸವೆದಂತೆ ಗುಳ ಚಿಕ್ಕದಾಗುತ್ತದೆ. ಇಂಥ ನೇಗಿಲನ್ನು ಸಾಲು ಒಡೆಯಲು ಬಳಸುತ್ತಾರೆ. ಹೊಸ ನೇಗಿಲಿಗೆ ಉದ್ದನೆಯ ಗುಳವನ್ನು ಹಾಕುತ್ತಾರೆ. ಕೆಸರುಗದ್ದೆಯಲ್ಲಿ ಹಗುರ ನೇಗಿಲನ್ನೂ ಹೊಲ ಮತ್ತು ತೋಟದ ಕೆಲಸಗಳಿಗೆ ಭಾರವಾದ ನೇಗಿಲನ್ನು ಉಪಯೋಗಿಸುತ್ತಾರೆ.

ಭೂಮಿಯನ್ನು ಮರದ ನೇಗಿಲಿನಿಂದ ಮೊದಲನೆಯ ಸಾಲು ಉತ್ತಾಗ ಸೀಳುಬಿಟ್ಟು ಎರಡೂ ಕಡೆ ಮಣ್ಣು ಉರುಳುತ್ತದೆ. ಎರಡು ಸಾಲುಗಳ ಮಧ್ಯಭಾಗ ಮಾತ್ರ ನೇಗಿಲಿಗೆ ಸಿಗದೆ ಗಟ್ಟಿಯಾಗೇ ಉಳಿದಿರುತ್ತದೆ. ಆದ್ದರಿಂದ ಎರಡನೇ ಅಥವಾ ಮೂರನೇ ಸಾರಿ ಅಡ್ಡಸಾಲಾಗಿ ಉಳುಮೆ ಮಾಡುವುದರಿಂದ ಎಲ್ಲ ಕಡೆ ಮಣ್ಣು ಸಡಿಲಗೊಳ್ಳಲು ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಮರದ ನೇಗಿಲಿನಿಂದ ಉಳುಮೆ ಮಾಡುವುದರಿಂದ 4-5 ಅಂಗುಲದಷ್ಟು ಮಣ್ಣು ಮಾತ್ರ ಸಡಿಲಗೊಳ್ಳುತ್ತದೆ. ನೇಗಿಲಿನ ಬುಡವನ್ನು ಸಡಿಲಗೊಳಿಸಿ ಅಥವಾ ಬಿಗಿಗೊಳಿಸಿ, ಉಳುಮೆಯ ಆಳವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ನೊಗ ಮತ್ತು ದಿಂಡುಗಳನ್ನು ಸೇರಿಸಿರುವ ಈಸುಮರದ ಉದ್ದವನ್ನು ಹೆಚ್ಚು ಅಥವಾ ಕಡಿಮೆ ಮಾಡುವುದರಿಂದ ಇದು ಸಾಧ್ಯವಾಗುತ್ತದೆ. ಕೃಷಿಗೆ ನೇಗಿಲೇ ಮೂಲಾಧಾರ. ಭೂಮಿಯನ್ನು ಹಸನು ಮಾಡಲು, ಗೊಬ್ಬರವನ್ನು ಭೂಮಿಯೊಳಕ್ಕೆ ಸೇರಿಸಲು, ಒತ್ತೊತ್ತಾದ ಪೈರನ್ನು ವಿರಳಗೊಳಿಸಲು, ಕಳೆ ತೆಗೆಯಲು ಪ್ರಧಾನ ಬೆಳೆಯ ನಡುವೆ ಅಲ್ಪಾವಧಿಯ ಉಪಬೆಳೆ ಮಾಡುವ ಸಂದರ್ಭದಲ್ಲಿ- ಹೀಗೆ ನಾನಾ ಸಂದರ್ಭಗಳಲ್ಲಿ ನೇಗಿಲು ರೈತ ಮಿತ್ರನಾಗಿದೆ. ನೇಗಿಲನ್ನು ತಯಾರಿಸಿಕೊಡಲು ಅನುಭವಿ ರೈತನೇ ಸಾಕು. ಆದರೆ ಹಳ್ಳಿಗಳಲ್ಲಿ ಈ ಕೆಲಸಕ್ಕೆಂದೇ ನುರಿತ ಬಡಗಿಗಳೂ ಇರುತ್ತಾರೆ.

ವಿದೇಶಿ ನೇಗಿಲು : (ಕಬ್ಬಿಣದ ನೇಗಿಲು) ವಿದೇಶಗಳಲ್ಲಿ 18ನೇ ಶತಮಾನದ ಮಧ್ಯಭಾಗದಲ್ಲಿ ಕಬ್ಬಿಣದ ನೇಗಿಲು ಬಳಕೆಗೆ ಬಂತು. ಇದು ದೇಶಿಯ ಮರದ ನೇಗಿಲಿಗಿಂತ ಅಗಲವಾಗಿರುತ್ತದೆ. ಸಮಕೋನ ತ್ರಿಕೋನಾಕೃತಿಯಾಗಿದ್ದು ಅಡಿಯ ಭಾಗ ಮತ್ತು ಮಧ್ಯಭಾಗದ ನಡುವೆ ಸಮಕೋನಾಂತವಿರುತ್ತದೆ. ಇದರಿಂದ ಉತ್ತಾಗ ಮಣ್ಣು ತ್ರಿಕೋನಾಕಾರದಲ್ಲೇ ಸೀಳುತ್ತಾ ಒಂದೇ ಕಡೆ ಉರುಳಿ ಬೀಳುತ್ತದೆ. ಮಣ್ಣಿನ

ಆಯಾಕಾರದ ಹೆಂಟೆಗಳು ಹೊರಬಿದ್ದು ನೆಲ ಸಂಪೂರ್ಣವಾಗಿ ಸಡಿಲಗೊಳ್ಳುತ್ತದೆ. ಉಳುಮೆಯ ಅಗತ್ಯಕ್ಕನುಗುಣವಾಗಿ ಗುಳ ಮತ್ತು ಮಗಚು ಹಲಗೆಗಳನ್ನು ವ್ಯತ್ಯಾಸ ಮಾಡಿಕೊಳ್ಳಬಹುದು.

ಅಲಗುಕುಂಟೆ : ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ನೇಗಿಲಿಗೆ ಬದಲಾಗಿ ಇದನ್ನು ಬಳಸುತ್ತಾರೆ. ನಾಲ್ಕು ಅಡಿ ಅಗಲ ಅರ್ಧ ಅಡಿ ಉದ್ದ ಮರದ ತುಂಡಿಗೆ ಮಟ್ಟಗೋಲು, ಈಸುಮರ ಮತ್ತು ಅಲಗುಗಳನ್ನು ಜೋಡಿಸಿ ಇದನ್ನು ಅಣಿಗೊಳಿಸುತ್ತಾರೆ. ಅಗತ್ಯಕ್ಕನುಗುಣವಾಗಿ ಈ ಕುಂಟೆಯ ಅಂಗಗಳನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಭೂಮಿಯನ್ನು ಉಳುಮೆ ಮಾಡುವ ಮೊದಲು ಕಳೆತೆಗೆಯಲು ಇದನ್ನು ಬಳಸುತ್ತಾರೆ. ಅಲಗು ಮೂರುನಾಲ್ಕು ಅಂಗುಲದಷ್ಟು ಆಳಕ್ಕೆ ಭೂಮಿಯನ್ನು ಸೀಳಿ ಮಣ್ಣು ಸಡಿಲಗೊಳ್ಳುವಂತೆ ಮಾಡುತ್ತದೆ.

ಜಂತು ಕುಂಟೆ : ಇದರಲ್ಲಿ 7-9 ಹಲ್ಲುಗಳಿದ್ದು, ಇವುಗಳ ಅಲಗು ಕುಂಟೆಯಂತೆ ಇದು ಕೆಲಸ ಮಾಡುವುದಾದರೂ ದೊಡ್ಡ ಹೆಂಟೆಗಳು ಇದ್ದಾಗ ಇದನ್ನು ಬಳಸಿ ಹದ ಮಾಡುತ್ತಾರೆ.

ಹಲುಬೆ : ಇದರಲ್ಲಿ ಅನೇಕ ಬಗೆಗಳಿವೆ. ಕೃಷಿಗೆ ಯೋಗ್ಯ ರೀತಿಯಲ್ಲಿ ಇದರ ಉದ್ದ ಅಗಲ ಹಲ್ಲುಗಳ ಸಂಖ್ಯೆ ಮತ್ತು ಅಳತೆ ವ್ಯತ್ಯಾಸವಾಗುತ್ತದೆ. ಕುಂಟೆ ಒಡೆದ ಮೇಲೆ ಉಳಿಯುವ ಸಣ್ಣ ಪುಟ್ಟ ಹೆಂಟೆಗಳನ್ನು ಪುಡಿಮಾಡಿ ಹದಗೊಳಿಸಲು ಕಳೆಯನ್ನು ಬಾಚಣಿಗೆಯಂತೆ ಬಾಚಿ ಶುಚಿಗೊಳಿಸಲು ಉಪಯೋಗವಾಗುತ್ತದೆ.

ಈ ಎಲ್ಲ ಹಂತಗಳಲ್ಲೂ ರೈತನಿಗೆ ಆಪ್ತಮಿತ್ರನಾಗಿ ಸಹಕರಿಸುವಂಥವು ಜೋಡೆತ್ತುಗಳು. ಕೆಲವೆಡೆಗಳಲ್ಲಿ ಕೋಣ, ಕುದುರೆ ಒಂಟೆಗಳನ್ನೂ ಬಳಸುವುದಿದೆ. ಯಾಂತ್ರೀಕರಣದಿಂದಾಗಿ ಪ್ರಾಣಿಗಳ ಬದಲಿಗೆ ಯಂತ್ರಗಳು ಬಳಕೆಗೊಳ್ಳುತ್ತಿವೆ. ಯಾಂತ್ರಿಕವಾಗಿ ಎಷ್ಟೇ ಬದಲಾವಣೆಗಳಾಗಿದ್ದರೂ ನೇಗಿಲಿನ ಮಹತ್ತ್ವ ಕಡಿಮೆಯಾಗಿಲ್ಲ. ಟ್ರ್ಯಾಕ್ಟರ್ ಬಳಸಲಾಗದ ಜಾಗಗಳಲ್ಲೆಲ್ಲ ಎತ್ತುಗಳು (ನೇಗಿಲು) ಆ ಕೆಲಸವನ್ನು ಸುಸೂತ್ರವಾಗಿ ಮಾಡುತ್ತವೆ.

ಎ.ಎಂ.ಡಿ.

ಊಳಿಗಮಾನ್ಯ ಪದ್ಧತಿ ಈ ಪದ್ಧತಿಯಲ್ಲಿ ರಾಜನೇ ಒಡೆಯ. ಅವನ ಅಧೀನದಲ್ಲಿ ಪ್ರಥಮ ದರ್ಜೆ ಪಾಳೆಯಗಾರರು ಮತ್ತು ಅಧೀನ ಪಾಳೆಯಗಾರರು, ಕೊನೆಯಲ್ಲಿ ಜೀತಗಾರರು ಇರುತ್ತಾರೆ. ಊಳಿಗಮಾನ್ಯ ಎಂದರೆ ಸೇವೆಗೆ ಪ್ರತಿಫಲ ನೀಡುವಂಥದ್ದು ಎಂದರ್ಥ. ಜಮೀನುದಾರರ ಅಧೀನದಲ್ಲಿ ಭೂಮಿಯ ಸ್ವಾಮ್ಯದ ಹಕ್ಕನ್ನು ವಂಶಪಾರಂಪರ್ಯವಾಗಿ ಪಡೆದಿದ್ದ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿಯೂ ಅವರವರ ಭೂಮಾನ್ಯದ ಹಿಡುವಳಿ ಮತ್ತು ಸೇವೆಗೆ ಅನುಗುಣವಾಗಿ ಅವರ ಸ್ಥಾನಮಾನಗಳು. ಈ ಪದ್ಧತಿಯಲ್ಲಿ ಕೇಂದ್ರೀಕೃತ ವ್ಯವಸ್ಥೆ ವಿಕೇಂದ್ರೀಕರಣಗೊಳ್ಳುತ್ತದೆ.

ದಕ್ಷಿಣ ಭಾರತದಲ್ಲಿ ಈ ವ್ಯವಸ್ಥೆ 9-16ನೇ ಶತಮಾನದ ಅವಧಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಜಹಗೀರುದಾರ ಇಲ್ಲಿಯ ಕೇಂದ್ರ ವ್ಯಕ್ತಿ. ಅವನಿಗೆ ನಿರ್ದಿಷ್ಟ ಭೂಮಿ ಮತ್ತು ಹಳ್ಳಿಗಳು ಸೇರಿರುತ್ತವೆ. ಉಳಿದ ಭೂಮಿಯನ್ನು ಜೀತಗಾರರಿಗೆ ಮಾನ್ಯವಾಗಿ ನೀಡಿರುತ್ತಾನೆ. ಆದರೆ ಈ ಭೂಮಿ ಜೀತಗಾರರ ಸ್ವಂತ ಸೊತ್ತಾಗಿರುವುದಿಲ್ಲ. ಅವರದು ಕೇವಲ ದುಡಿಮೆ ಮತ್ತು ರಾಜನಿಗೆ ಅಗತ್ಯಬಿದ್ದಾಗ ಸಹಾಯ ಮಾಡುವುದು. ಪಶು ಮತ್ತು ಬೆಳೆದ ಫಸಲಿನಲ್ಲಿ ಒಂದು ಅಂಶವನ್ನು ಜಾಗೀರುದಾರನಿಗೆ ಸಲ್ಲಿಸಬೇಕು. ಒಡೆಯನ ಸ್ವಂತ ಜಮೀನಿನಲ್ಲಿ ಉಚಿತವಾಗಿ ಕೆಲಸ ಮಾಡಬೇಕು. ಅಗತ್ಯಬಿದ್ದಾಗ ಸೈನ್ಯವನ್ನು ಒದಗಿಸಬೇಕು. ಇವರು ಭೂಮಾಲೀಕರಲ್ಲದಿದ್ದರೂ ಭೂಮಿಯನ್ನು ಬಿಟ್ಟು ಹೊರಹೋಗುವಂತಿಲ್ಲ. ಗೇಣಿದಾರ ಅಕಾಲ ಮರಣ ಹೊಂದಿದಾಗ ಅವನ ವಾರಸುದಾರ ಪ್ರಾಪ್ತವಯಸ್ಕನಾಗುವ ತನಕ ಭೂಮಿ ಪ್ರಭುವಿನ ಒಡೆತನದಲ್ಲಿರುತ್ತಿತ್ತು. ಜಹಗೀರುದಾರನಿಗೂ ನಿರ್ದಿಷ್ಟ ಕರ್ತವ್ಯಗಳಿರುತ್ತವೆ. ಜಹಗೀರಿನ ರಕ್ಷಣೆ, ನ್ಯಾಯ ತೀರ್ಮಾನ, ಜನರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು, ಪರಂಪರೆಯ ಪೋಷಣೆಯೂ ಇವನ ಮತ್ತು ಜೀತಗಾರ ಜವಾಬ್ದಾರಿಯಾಗಿರುವುದರಿಂದ ಇವರು ಸ್ವಇಚ್ಛೆಯಿಂದ ನಡೆದುಕೊಳ್ಳಲಾಗುವುದಿಲ್ಲ.

ಇಲ್ಲಿ ರಾಜನದೇ ಪರಮಾಧಿಕಾರ. ಜಹಗೀರುದಾರರಿಂದ ಇವನಿಗೆ ವರಮಾನ ದೊರೆಯುತ್ತಿತ್ತು. ಊಳಿಗಮಾನ್ಯ ಕರಾರಿನ ಪ್ರಕಾರ ಜಮೀನ್ದಾರಿ ಪ್ರಭುಗಳು ಸುಸಜ್ಜಿತ ಸೈನ್ಯವನ್ನು ಸದಾ ಇಟ್ಟುಕೊಂಡಿರಬೇಕಿತ್ತು. ತುರ್ತು ಸಂದರ್ಭಗಳಲ್ಲಿ ಹಣಕಾಸನ್ನು ಒದಗಿಸಲು ಜೀತದಾಳುಗಳಿಂದ ಸಂಗ್ರಹಿಸಿಟ್ಟುಕೊಳ್ಳಬೇಕಾಗುತ್ತಿತ್ತು.

ಈ ಪದ್ಧತಿಯಲ್ಲಿ ಆಶ್ರಿತವರ್ಗ ಮತ್ತೊಂದು. ಇವರು ಪ್ರಭುಗಳ ಅಧೀನದಲ್ಲಿದ್ದು ತಮಗೆ ದೊರೆತ ಭೂಮಿಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಇದಕ್ಕೆ ಪ್ರತಿಫಲವಾಗಿ ಭೂಮಿಯಿಂದ ಇವರಿಗೆ ಗೇಣಿ ದೊರೆಯುತ್ತಿತ್ತು. ಇದಕ್ಕಾಗಿ ಪ್ರಭುಗಳಿಗೆ ಇವರು ಅಪಾರ ಸೇವೆ ಸಲ್ಲಿಸುತ್ತಿದ್ದರು. ಆಶ್ರಿತವರ್ಗದವರ ಕರ್ತವ್ಯಗಳೆಂದರೆ: ಸೈನಿಕ ಸೇವೆ ಪ್ರವಾಸ ಅಥವಾ ಬೇಟೆಗೆ ಪ್ರಭು ಹೊರಟಾಗ ಅವನಿಗೆ ಸಕಲ ಸೌಲಭ್ಯ ಒದಗಿಸುವುದು. ಒಂದು ವೇಳೆ ಯುದ್ಧಕೈದಿಯಾದರೆ ಹಣತೆತ್ತು ಬಿಡಿಸಿಕೊಳ್ಳಬೇಕಾಗುತ್ತಿತ್ತು. ಪ್ರಭುವಿನ ಮಗಳ ಮದುವೆ, ಮಗ ಸೈನಿಕ ಶಿಕ್ಷಣ ಮುಗಿಸಿ ಮರಳುವಾಗ ಆತನಿಗೆ ಕಾಣಿಕೆ ಕೊಟ್ಟು ಗೌರವಿಸಬೇಕಾಗಿತ್ತು. ಸಮಯೋಚಿತ ಸಲಹೆ ನೀಡುವುದು ಅವನ ಕರ್ತವ್ಯವಾಗಿತ್ತು.

ಗೇಣಿದಾರ : ಈ ಪದ್ಧತಿಯ ಕೊನೆಯ ಕೊಂಡಿಗಳು ಗೇಣಿದಾರ, ಜೀತಗಾರ ಮತ್ತು ಕೃಷಿಕಾರ್ಮಿಕ ವರ್ಗ. ಇಲ್ಲಿ ಅಸಂಖ್ಯಾತ ಜನ ಕೃಷಿ ನಿರತರಾಗಿದ್ದರು. ಗೇಣಿದಾರರ ಬದುಕು ಅನಿಶ್ಚಿತವಾಗಿದ್ದರೂ ಇಂದಿನ ಕೂಲಿಯಾಳುಗಳಿಗಿಂತ ಉನ್ನತವಾಗಿತ್ತೆನ್ನಬಹುದು. ಇವನಿಗಿದ್ದ ಏಕೈಕ ರಕ್ಷಣೆ ಎಂದರೆ ಭೂಮಿಯನ್ನು ವಿನಾಕಾರಣ ಪ್ರಭು ಕಿತ್ತುಕೊಳ್ಳುವಂತಿರಲಿಲ್ಲ. ಆಸ್ತಿಯ ಹಕ್ಕು ವಂಶಪಾರಂಪರ್ಯವಾಗಿತ್ತು. ಗೇಣಿದಾರನಿಗೆ ಎಷ್ಟೇ ಅನುಕೂಲಗಳಿದ್ದರೂ ಪ್ರಭುವಿನ ಮಾತನ್ನು ಮೀರುವಂತಿರಲಿಲ್ಲ. ಸದಾ ತನ್ನ ಒಡೆಯ ಹಸನ್ಮುಖಿಯಾಗಿರುವಂತೆ ನೋಡಿಕೊಳ್ಳುವುದು ಅವನ ಕರ್ತವ್ಯವಾಗಿತ್ತು. ಉಚಿತ ಸೇವೆಗೆ ಮತ್ತು ಇವನ ಮೇಲೆ ವಿಧಿಸುತ್ತಿದ್ದ ತೆರಿಗೆಗೆ ಮಿತಿಯಿರುತ್ತಿರಲಿಲ್ಲ. ಈ ಕಾರಣಗಳಿಂದಾಗಿ ಗೇಣಿದಾರ ಕೆಲವು ಬಾರಿ ಆರ್ಥಿಕ ಸಂಕಷ್ಟಕ್ಕೆ ಈಡಾಗುತ್ತಿದ್ದನು. ಯಾವುದೇ ತಂಟೆತಕರಾರು ಸಂಭವಿಸಿದಾಗ

ನ್ಯಾಯಸ್ಥಾನದಲ್ಲಿ ನಿಲ್ಲಬೇಕಾಗಿದ್ದವನು ಗೇಣಿದಾರನೇ ಆಗಿದ್ದು, ಅವನು ಹಾಕಿದಷ್ಟು ದಂಡವನ್ನೂ ತೆರಬೇಕಿತ್ತು. ಹೀಗೆ ಸದಾ ದೊರೆಯ ಕಷ್ಟಸುಖಗಳಲ್ಲಿ ಭಾಗಿಯಾಗಿ ತನ್ನ ಸ್ವಂತ ಬದುಕನ್ನೇ ಮರೆಯಬೇಕಿತ್ತು.

ಊಳಿಗಮಾನ್ಯ, ವ್ಯವಸ್ಥೆ ಪ್ರಪಂಚದಲ್ಲಿ ಒಂದಲ್ಲ ಒಂದು ಭಾಗದಲ್ಲಿ ಯಾವುದಾದರೂ ಕಾಲದಲ್ಲಿ ಇದ್ದೇ ಇತ್ತು. ವಿಶಾಲವಾದ ಪ್ರದೇಶದ ಆಡಳಿತ ನಡೆಸಲುಬೇಕಾದ ಭೌತಿಕ, ಮಾನಸಿಕ ವ್ಯವಸ್ಥೆ ಇಲ್ಲದಿದ್ದಾಗ ಅಥವಾ ಹದಗೆಟ್ಟ ಪರಿಸ್ಥಿತಿಯಲ್ಲಿ ವಿಶಾಲ ಸಾಮ್ರಾಜ್ಯವನ್ನು ಸುವ್ಯವಸ್ಥಿತವಾಗಿ ಕಾಪಾಡುವುದು ಅಸಾಧ್ಯವೆನಿಸಿದಾಗ ಊಳಿಗಮಾನ್ಯ ವ್ಯವಸ್ಥೆ ಉದಯಿಸಬಹುದು. ಉದಾ: ಅಸಮರ್ಪಕ ಸಾರಿಗೆ ಸಂಪರ್ಕ, ಅರಾಜಕತೆ, ಅನೈತಿಕತೆಯ ಸಂದರ್ಭ.

ಊಳಿಗಮಾನ್ಯ ವ್ಯವಸ್ಥೆಯ ಉಗಮಸ್ಥಾನ ಯುರೋಪ್. ಎಂಟನೆಯ ಶತಮಾನದಲ್ಲಿ ಮೊಳಕೆಯೊಡೆದು 18ನೆಯ ಶತಮಾನದ ವೇಳೆಗೆ ಹೆಮ್ಮರವಾಗಿ ಬೆಳೆದು ಇದರ ಬೀಜಗಳು ಪ್ರಪಂಚವನ್ನೆಲ್ಲ ಆವರಿಸಿದವು. ರೋಮನ್ ಚಕ್ರಾಧಿಪತ್ಯದ ಕಾಲದಲ್ಲೇ ಇದರ ಕುರುಹುಗಳು ಸಿಗುತ್ತವೆ. ಇದಕ್ಕೆ ಮೂಲ ಕಾರಣ ಆ ಸಾಮ್ರಾಜ್ಯದ ಅವನತಿಯ ಕಾಲದಲ್ಲಿ ಉದ್ಭವಿಸಿದ ಅಶಾಂತಿ ಮತ್ತು ಅರಾಜಕತೆ. ಇದರಿಂದ ಕೇಂದ್ರ ಪ್ರಭುತ್ವ ಕ್ಷೀಣಿಸಿ ಸ್ಥಳೀಯ ಪಾಳೆಯಪಟ್ಟುಗಳು ತಲೆಯೆತ್ತಿದುವು. ನಿರಂತರ ಯುದ್ಧಗಳಿಂದಾಗಿ ರಾಜಕೀಯ ವ್ಯವಸ್ಥೆ ಸರ್ವವಿಧದಲ್ಲೂ ದುರ್ಬಲವಾಗಿ ಪ್ರಜೆಗಳಿಗೆ ಪರಕೀಯರಿಂದ ರಕ್ಷಣೆ ಒದಗಿಸಲು ಶಕ್ತಿಹೀನವಾದುವು. ಇಂಥ ಯುದ್ಧ ಭೀತಿಗಳಿಂದಾಗಿ ಜನ ತಮ್ಮದಾದುದೆಲ್ಲವನ್ನೂ ತ್ಯಾಗ ಮಾಡಲು ಸಿದ್ಧರಿದ್ದರು. ಮಧ್ಯಯುಗದ ಸಂದರ್ಭದಲ್ಲಿ ಇವರ ಬಳಿಯಿದ್ದ ಏಕೈಕ ಆಸ್ತಿ ಭೂಮಿ. ಅದನ್ನೇ ತಮಗೆ ರಕ್ಷಣೆ ಒದಗಿಸುವ ಯೋಗ್ಯ ವ್ಯಕ್ತಿಗಳಿಗೆ ನೀಡಿದರು. ಆದ್ದರಿಂದ ಇಲ್ಲಿ ಗಮನಿಸುವ ಅಂಶವೇನೆಂದರೆ ಊಳಿಗಮಾನ್ಯ ವ್ಯವಸ್ಥೆಯ ಮೂಲ ಆಧಾರವೇ ಭೂಮಿಯಾಯಿತು.

16ನೆಯ ಶತಮಾನದ ಅನಂತರದ ಕಾಲಘಟ್ಟದಲ್ಲಿ ಈ ವ್ಯವಸ್ಥೆ ಬೇರೆ ಸ್ವರೂಪ ಪಡೆದು ಬೇರೂರಿ ಒಡೆಯ ಮತ್ತು ಜೀತಗಾರ ರೂಪದಲ್ಲಿ ಇದು ವಿರಾಟ್ ಸ್ವರೂಪ ತಾಳಿತು. ಭಾರತ ಸರ್ಕಾರ ಪಂಚವಾರ್ಷಿಕ ಯೋಜನೆಯಲ್ಲಿ ಜೀತವಿಮುಕ್ತ ವ್ಯವಸ್ಥೆಗಾಗಿ ಹಲವು ಕಠಿಣ ಕಾನೂನುಗಳನ್ನು ರೂಪಿಸಿದ್ದರೂ ಸಂಪೂರ್ಣವಾಗಿ ಇದನ್ನು ತೊಡೆದು ಹಾಕಲಾಗಿಲ್ಲ.

ಇತಿಮಿತಿಗಳು : ರಾಜನಿಂದ ಭೂಮಿಯನ್ನು ಪಡೆದ ಪ್ರಭುವೂ ಒಂದು ವಿಧದಲ್ಲಿ ಜೀತಗಾರನೇ. ಭೂಮಿಯ ಪರಿಪೂರ್ಣ ಅಧಿಕಾರ ಇವನ ಕೈಯಲ್ಲೂ ಇಲ್ಲ. ರಾಜನ ಕೈಕೆಳಗಿರುವ ಬಾಡಿಗೆದಾರನಿದ್ದಂತೆ. ಜೀತಗಾರನದು ಇವನಿಗಿಂತ ಹೀನಸ್ಥಿತಿ. ಇವನಿಗೆ ಪ್ರಭುವಿನಿಂದ ಹಿಡುವಳಿಯ ಅರ್ಧ ಹಕ್ಕು ಮಾತ್ರ ಇತ್ತು. ಗೇಣಿದಾರರು ಸಹ ಸ್ವಇಚ್ಛೆಯಿಂದ ನೆಲವನ್ನು ವಿನಿಯೋಗ ಮಾಡುವಂತಿಲ್ಲ. ಹೀಗೆ ಮಾಡಬೇಕೆಂದಾಗ ಅಧಿಪತಿಯ ಅನುಮೋದನೆಯ ಪಡೆಯಬೇಕಿತ್ತು ಅಥವಾ ರಾಜನಿಗೆ ಕಾಣಿಕೆ ಸಲ್ಲಿಸಿ ಭೂಮಿಯನ್ನು ವರ್ಗಾಯಿಸಬಹುದಿತ್ತು. ಜೀತಗಾರ ಉತ್ತರಾಧಿಕಾರಿಯಾಗಿ ಮುಂದುವರಿಯಲು ಪ್ರಭುವಿಗೆ ಹಣಸಂದಾಯ ಮಾಡಬೇಕಿತ್ತು. ಇಲ್ಲಿಯ ವಿಚಿತ್ರ ವಿಚಾರವೆಂದರೆ ಪ್ರಭುವಿಗೆ ದಂಡ ತೆತ್ತು ಗೇಣಿದಾರ ಮದುವೆಯಾಗಬೇಕಿತ್ತು. ವಿಧವೆ ದಂಡ ತೆತ್ತು ಪುನರ್ವಿವಾಹವಾಗಬೇಕಿತ್ತು. ವಿವಾಹವಾಗದಿದ್ದರೂ ದಂಡ ತೆರಬೇಕಿತ್ತು.

ಈ ವ್ಯವಸ್ಥೆಯಲ್ಲಿ ನ್ಯಾಯಪದ್ಧತಿ ಕಠಿಣವಾಗಿರಲು ಕಾರಣ ಅದು ಅಧಿಕ ಆದಾಯ ತರುವ ಮೂಲವಾಗಿದ್ದುದೇ ಆಗಿತ್ತು. ಇದರಿಂದಾಗಿಯೊ ಏನೊ ಭಾರತ ಸರಳ ನಿಯಮ ಅಳವಡಿಸಿಕೊಂಡಿತ್ತು.

ಎ.ಎಂ.ಡಿ.

ಋತುಗಳು ಹವಾಗುಣ ಮತ್ತು ನಿಸರ್ಗದಲ್ಲಿ ಉಂಟಾಗುವ ಬದಲಾವಣೆಗಳಿಗೆ ಋತುಗಳು ಎಂದು ಕರೆಯುತ್ತಾರೆ. ಋತುಗಳು ನಿರ್ದಿಷ್ಟ ಕಾಲದಲ್ಲಿ ಸರದಿಯ ಪ್ರಕಾರ ಬರುತ್ತವೆ. ಭಾರತೀಯರ ಋತುಗಳಿಗೂ ಆಂಗ್ಲರ ಋತುಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ.

ಭಾರತೀಯರ ಪದ್ಧತಿಯ ಋತುಗಳು : ಭಾರತೀಯ ಪದ್ಧತಿಯ ಪ್ರಕಾರ ಒಂದು ವರ್ಷದಲ್ಲಿ 6 ಋತುಗಳಿವೆ. ಇದರ ಪರಿಮಾಣ 6ನೇ ಒಂದು ಭಾಗ. ಎಂದರೆ ಎರಡು ತಿಂಗಳುಗಳ ಕಾಲ ಅಥವಾ 60 ದಿವಸಗಳು. ಅಧಿಕ ಮಾಸ ಬರುವ ವರ್ಷಗಳಲ್ಲಿ ಈ ಮಾಸ ಬರುವ ಋತುವಿನ ದಿನಗಳ ಸಂಖ್ಯೆ 90 ಆಗುತ್ತದೆ. ಅಂದರೆ 3 ತಿಂಗಳುಗಳ ಕಾಲ ; ಪ್ರಮಾಣ ಎಷ್ಟೇ ಇದ್ದರೂ ಒಂದೇ ಹೆಸರಿನ ಎರಡು ಮಾಸಗಳನ್ನು ಒಂದೇ ತಿಂಗಳೆಂದು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆಗ 60 ದಿವಸಗಳನ್ನು ಒಂದು ತಿಂಗಳೆಂದು ಮೂವತ್ತು ದಿವಸಗಳಿಗೆ ಮತ್ತೊಂದು ತಿಂಗಳೆಂದು ಭಾವಿಸಬೇಕಾಗುತ್ತದೆ. ಈ ದಿವಸ ಸಂಖ್ಯೆ ಮಾಧ್ಯಮ ಮಾಸ ಗಣನೆಯಂತೆ. ಸ್ಫುಟ ಗಣನೆಯಲ್ಲಿ ದಿವಸಗಳು ಹೆಚ್ಚು ಕಡಿಮೆ ಆಗುವುದುಂಟು. ಹಿಂದೂ ವರ್ಷವು ಚಾಂದ್ರಮಾನ ಯುಗದಿಯಿಂದ ಆರಂಭವಾಗುತ್ತದೆ. ಭಾರತೀಯರ ಆರು ಋತುಗಳೆಂದರೆ, ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ.

ವಸಂತ ಋತು : ಚೈತ್ರ ಶುಕ್ಲ ಪ್ರಥಮ ದಿನದಿಂದ ವಸಂತ ಋತುವಿನ ಆರಂಭವಾಗುತ್ತದೆ. ಚೈತ್ರ ಮತ್ತು ವೈಶಾಖ ಮಾಸಗಳ ಅವಧಿ. ಉಲ್ಲಾಸಮಯ ವಾತಾವರಣ, ಮರಗಿಡಗಳ ಚಿಗುರೊಡೆಯುವಿಕೆ, ಹೂ ಬಿರಿಯುವುದು, ಮೋಡವಿಲ್ಲದ ಆಕಾಶ, ಸ್ವಚ್ಛ ನೀಲವರ್ಣ ಇವು ವಸಂತ ಋತುವಿನ ಲಕ್ಷಣಗಳು. ಇದು ವೈಶಾಖಮಾಸ ಅಮಾವಾಸ್ಯೆಯೆಂದು ಮುಕ್ತಾಯಗೊಳ್ಳುತ್ತದೆ.

ಗ್ರೀಷ್ಮ ಋತು : ಜ್ಯೇಷ್ಠ ಶುಕ್ಲ ಪಾಡ್ಯದ ದಿನದಂದು ಗ್ರೀಷ್ಮ ಋತುವಿನ ಪ್ರಾರಂಭವಾಗಿ ಆಷಾಢ ಅಮಾವಾಸ್ಯೆಯಂದು ಮುಕ್ತಾಯಗೊಳ್ಳುತ್ತದೆ. ಜ್ಯೇಷ್ಠ ಹಾಗೂ ಆಷಾಢ ಮಾಸಗಳ ಅವಧಿ. ಈ ಋತುವಿನ ಕಾಲ ಬೇಸಗೆ. ಅವಧಿಯಲ್ಲಿ ಬಿಸಿಲ ಬೇಗೆ ಹೆಚ್ಚಿದ್ದು ಇದರ ಫಲವಾಗಿ ವಾಯುಮಂಡಲದಲ್ಲಿ ಆರ್ದ್ರತೆ ಕಡಿಮೆ. ನೀರಿನ ಅಂಶ ಕಳೆದುಕೊಂಡ ವಾಯುಮಂಡಲದಲ್ಲಿ ಒತ್ತಡ ಕಡಿಮೆ ಇರುತ್ತದೆ. ಅಕ್ಕ-ಪಕ್ಕದ ಸಾಗರ - ಸಮುದ್ರಗಳಲ್ಲಿ ಆರ್ದ್ರತೆ ಮತ್ತು ಒತ್ತಡವು ಹೆಚ್ಚಾಗಿದ್ದು, ತತ್ಪರಿಣಾಮವಾಗಿ ಮಾರುತಗಳು ಕಡಿಮೆ ಒತ್ತಡದ ಪ್ರದೇಶಗಳಿಗೆ ಬೀಸುವುದರಿಂದ ಅಲ್ಲಿ ಮಳೆಯಾಗುತ್ತದೆ. ಸಾಮಾನ್ಯವಾಗಿ ಗ್ರೀಷ್ಮ ಋತುವಿನಲ್ಲಿ ಮೋಡ ಕವಿದ ವಾತಾವರಣವಿರುತ್ತದೆ. ಪ್ರಾರಂಭದಲ್ಲಿ ಮಳೆ ಧಾರಾಕಾರವಾಗಿ ಸುರಿದು, ಮಾರುತಗಳು ನೆಲೆಯೂರಿದ ಮೇಲೆ

ಅಂತರದಲ್ಲಿ ತುಂತುರು ಮಳೆ ಬೀಳುತ್ತದೆ. ಗ್ರೀಷ್ಮ ಋತುವಿನಲ್ಲಿ ಪ್ರಾರಂಭವಾಗುವ ಮಳೆ ಮಿಂಚು, ಗುಡುಗು, ಸಿಡಿಲುಗಳಿಂದ ಕೂಡಿರುತ್ತದೆ. ಭೂಮಿ ಹಗಲೆಲ್ಲಾ ಕಾಯ್ದು, ಸಂಜೆಯಾಗುತ್ತಲೇ ಧಾರಾಕಾರವಾಗಿ ಮಳೆಯಾಗುವುದು ಗ್ರೀಷ್ಮ ಋತುವಿನ ವಿಶಿಷ್ಟ ಗುಣಲಕ್ಷಣ. ಇದನ್ನು 'ಪರಿಸರಣ ಮಳೆ' ಎಂದು ಕರೆಯುತ್ತಾರೆ. ಈ ಕಾಲದಲ್ಲಿ ರೈತರು ವ್ಯವಸಾಯಕ್ಕಾಗಿ ಭೂಮಿಯನ್ನು ಹದ ಮಾಡುತ್ತಾರೆ.

ವರ್ಷ ಋತು : ಶ್ರಾವಣ ಶುಕ್ಲ ಪ್ರಥಮ ದಿನದಿಂದ ವರ್ಷ ಋತು ಆರಂಭವಾಗಿ ಭಾದ್ರಪದ ತಿಂಗಳಿನ ಅಮಾವಾಸ್ಯೆಯಂದು ಮುಗಿಯುತ್ತದೆ. ಶ್ರಾವಣ ಮತ್ತು ಭಾದ್ರಪದ ಮಾಸಗಳ ಅವಧಿ. ವರ್ಷ ಋತು ಮಳೆಗಾಲವಾಗಿರುತ್ತದೆ. ಆಷಾಢ ಮಾಸ ಕೊನೆಗೊಂಡು ಶ್ರಾವಣ ಮಾಸ ಬರುವ ವೇಳೆಗೆ ಭಾರತದಲ್ಲಿ ನೈಋತ್ಯ ಮಾರುತಗಳು ಬೀಸುತ್ತಿರುತ್ತವೆ. ಇವು ನೈರುತ್ಯದಲ್ಲಿಯ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರಗಳಿಂದ ಬೀಸತೊಡಗಿ ಈಶಾನ್ಯ ದಿಕ್ಕಿಗೆ ಚಲಿಸುತ್ತಾ ದಕ್ಷಿಣ ಭಾರತದ ಪರ್ಯಾಯ ದ್ವೀಪಕ್ಕೂ (ಅದರಲ್ಲೂ ವಿಶೇಷವಾಗಿ ಪಶ್ಚಿಮ ಕರಾವಳಿ) ಮಳೆ ತರುತ್ತದೆ. ಈ ಕಾಲದಲ್ಲಿ ರೈತರು ಬಿತ್ತನೆ ಕೆಲಸವನ್ನು ಆರಂಭಿಸುತ್ತಾರೆ.

ಶರತ್ ಋತು (ಶರದೃತು) : ಆಶ್ವಯುಜ ಶುಕ್ಲ ಪ್ರಥಮ ದಿವಸದಿಂದ ಶರತ್ ಋತುವಿನ ಆರಂಭವಾಗಿ ಕಾರ್ತಿಕ ಮಾಸದ ಅಮಾವಾಸ್ಯೆಯಂದು ಮುಗಿಯುತ್ತದೆ. ಅಶ್ವಯುಜ ಹಾಗೂ ಕಾರ್ತಿಕ ಮಾಸಗಳ ಅವಧಿಯಾಗಿದ್ದು, ಮಳೆಗಾಲದ ಮುಂದುವರಿಕೆಯಾಗಿರುತ್ತದೆ. ವರ್ಷ ಋತುವನ್ನು ಅನುಸರಿಸಿ ಬರುವ ಶರದೃತು ಮಿಶ್ರ ಹವಾಗುಣವನ್ನು ತಳೆದಿರುತ್ತದೆ. ಹಗಲು ಬೆಚ್ಚಗಿದ್ದು ಇರುಳು ತಂಪಾಗಿರುತ್ತದೆ.

5. ಹೇಮಂತ ಋತು : ಮಾರ್ಗಶಿರ ಶುಕ್ಲ ಪ್ರಥಮ ದಿವಸದಂದು ಹೇಮಂತ ಋತುವಿನ ಪ್ರಾರಂಭವಾಗಿ ಪುಷ್ಯಮಾಸದ ಅಮಾವಾಸ್ಯೆಯಂದು ಮುಕ್ತಾಯಗೊಳ್ಳುತ್ತದೆ. ಮಾರ್ಗಶಿರ ಮತ್ತು ಪುಷ್ಯ ಮಾಸಗಳ ಅವಧಿಯಾಗಿದ್ದು, ಚಳಿಗಾಲವಾಗಿರುತ್ತದೆ. ದಕ್ಷಿಣ ಭಾರತದಲ್ಲಿ ಮಂಜು ಬೀಳುವ ಕಾಲ, ಉತ್ತರ ಭಾರತದಲ್ಲಿಯ ಚಳಿಯನ್ನು ಹೇಳಲು ಅಸದಳ. ಹಿಮಾಚಲದ ಶೃಂಗಗಳ ಮೇಲೆ ಹಿಮ ಹೆಪ್ಪುಗಟ್ಟಿರುತ್ತದೆ.

ಶಿಶಿರ ಋತು : ಮಾಘಮಾಸದ ಪ್ರಥಮ ದಿನದಂದು ಶಿಶಿರ ಋತುವಿನ ಆರಂಭವಾಗಿ ಫಾಲ್ಗುಣ ಮಾಸದ ಅಮಾವಾಸ್ಯೆಯಂದು ಮುಗಿಯುತ್ತದೆ. ಇದು ಮಾಘ ಹಾಗೂ ಫಾಲ್ಗುಣ ಮಾಸಗಳ ಅವಧಿಯನ್ನು ಹೊಂದಿದ್ದು, ಚಳಿಗಾಲದ ಮುಂದುವರಿಕೆ ಮತ್ತು ಕೊನೆಯಾಗಿರುತ್ತದೆ. ಹೇಮಂತವನ್ನು ಅನುಸರಿಸಿ ಬರುವ ಶಿಶಿರ ಋತುವಿನಲ್ಲಿ ಮರಗಿಡಗಳ ಹಣ್ಣೆಲೆಗಳು ಉದುರಿ ಚಿಗುರೊಡೆಯ ತೊಡಗುತ್ತವೆ. ಈ ಕಾಲವು ರೈತರಿಗೆ ಸುಗ್ಗಿಯನ್ನು ತರುತ್ತದೆ.

ಈ ಆರು ಋತುಗಳಲ್ಲಿ ಸಾಮಾನ್ಯವಾಗಿ ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣಕ್ಕೂ ವರ್ಷ, ಶರತ್ ಹೇಮಂತ ಋತುಗಳು ದಕ್ಷಿಣಾಯನಕ್ಕೂ ಸೇರುತ್ತವೆ. ಹೀಗೆ ಶುಕ್ಲಪಕ್ಷಾದಿಯಿಂದ ಅಮಾವಾಸ್ಯೆಯವರೆಗೆ ಕಾಲಗಣನೆ ಮಾಡುವ ಈ ಋತು ವಿಭಾಗಕ್ಕೆ ಚಾಂದ್ರ ಋತುಗಳೆಂದು ಕರೆಯುತ್ತಾರೆ.

ಸೌರಮಾನದಲ್ಲಿ ಋತುಗಳು : ಮೇಷ ರಾಶಿಗೆ ಸೂರ್ಯನು ಪ್ರವೇಶ ಮಾಡುವ ದಿವಸ ವಸಂತ ಋತುವಿನ ಪ್ರಾರಂಭವಾಗುತ್ತದೆ. ಮಿಥುನ, ಸಿಂಹ, ತುಲಾ, ಧನಸ್ಸು, ಕುಂಭ ಈ ರಾಶಿಗಳಿಗೆ ಸೂರ್ಯ ಪ್ರವೇಶಿಸುವಾಗ ಕ್ರಮವಾಗಿ ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳು ಬರುತ್ತವೆ. ಈ ಗಣನಾಕ್ರಮದಲ್ಲಿ ಋತುವಿನ ಕಾಲ 60 ದಿವಸಗಳು. ಇದರಲ್ಲಿ 90 ದಿವಸಗಳು ಬರುವ ಋತುವಿರುವುದಿಲ್ಲ.

ಋತುಗಳಿಗೆ ಕಾರಣ : ಋತುಗಳು ಉಂಟಾಗಲು ಮುಖ್ಯ ಕಾರಣ ಭೂಮಿಯು ತನ್ನ ಅಕ್ಷದಲ್ಲಿ ತಿರುಗುವಾಗ 23.5^{o} ಗಳಷ್ಟು ವಾಲಿರುವುದು. ಈ ವಾಲಿಕೆಯಿಂದ ಭೂಮಿಯ ಉತ್ತರಾರ್ಧವು ನಿರ್ದಿಷ್ಟ ಅವಧಿಯಲ್ಲಿ ಸೂರ್ಯನಿಗೆ ಸಮೀಪವಾಗಿಯೂ ಕೆಲವೊಮ್ಮೆ ದೂರವಾಗಿಯೂ ಇರುತ್ತದೆ. ಇದೇ ರೀತಿ ದಕ್ಷಿಣಾರ್ಧವೂ ಅವಧಿಯಲ್ಲಿ ಕೆಲವೊಮ್ಮೆ ಸೂರ್ಯನಿಗೆ ಸಮೀಪವಾಗಿಯೂ ಕೆಲವೊಮ್ಮೆ ದೂರವಾಗಿಯೂ ಅಂದರೆ ಉತ್ತರಾರ್ಧಕ್ಕೆ ವಿರುದ್ಧವಾಗಿ ಇರುತ್ತದೆ.

ಉತ್ತರಾರ್ಧದ ಋತುಗಳು : ಭೂಮಿಯ ಉತ್ತರಾರ್ಧವು ಸೂರ್ಯನ ಕಡೆಗೆ ವಾಲಿರುವಾಗ ಉತ್ತರಾರ್ಧದಲ್ಲಿ ಬೇಸಗೆ ಇರುತ್ತದೆ. ಈ ಅವಧಿಯಲ್ಲಿ ಉತ್ತರಾರ್ಧದಲ್ಲಿ ಸೂರ್ಯ ಮಧ್ಯಾಹ್ನದ ವೇಳೆ ನಡು ನೆತ್ತಿಯ ಮೇಲೆ ಬರುತ್ತಾನೆ. ಹಗಲುಗಳ ಅವಧಿಯು ಹೆಚ್ಚಾಗಿರುತ್ತದೆ. ಸೂರ್ಯನ ಕಿರಣಗಳು ಉತ್ತರಾರ್ಧವನ್ನು ಹೆಚ್ಚು ನೇರವಾಗಿ ತಲುಪುತ್ತವೆ. ಉತ್ತರಾರ್ಧವು ಸೂರ್ಯನಿಂದ ದೂರಕ್ಕಿರುವಾಗ ಅಲ್ಲಿ ಚಳಿಗಾಲವಿರುತ್ತದೆ. ಸೂರ್ಯನು ಕ್ಷಿತಿಜದ ಮೇಲೆ ಕಡಿಮೆ ಸಮಯವಿರುತ್ತಾನೆ. ನಡುನೆತ್ತಿಗೆ ಏರುವುದಿಲ್ಲ. ಭಾರತವು ಅದರಲ್ಲೂ ಕರ್ನಾಟಕವು ಉತ್ತರಾರ್ಧದಲ್ಲಿ ಭೂಮಧ್ಯ ರೇಖೆಗೆ ಸಮೀಪ ಇರುವುದರಿಂದ ಇಲ್ಲಿ ಹೆಚ್ಚು ವ್ಯತ್ಯಾಸವು ಕಂಡು ಬರುವುದಿಲ್ಲ. ಹಗಲುಗಳಿಗಿಂತ ರಾತ್ರಿಗಳು ಉದ್ದವಾಗಿರುತ್ತವೆ. ಸೂರ್ಯನ ಕಿರಣಗಳು ಓರೆಯಾಗಿ ಉತ್ತರಾರ್ಧವನ್ನು ತಲುಪುತ್ತವೆ. ಉತ್ತರಾರ್ಧದಲ್ಲಿ ಚಳಿಗಾಲವಿರುವಾಗ ಭೂಮಿಯು ಸೂರ್ಯನಿಗೆ ಹೆಚ್ಚು ಹತ್ತಿರವಿರುವುದು. ಭೂಮಿಯು ಸರಿ ಸುಮಾರು ಜನವರಿ 4 ರಂದು ಸೂರ್ಯನಿಗೆ ಅತಿ ಹತ್ತಿರವಾಗಿರುತ್ತದೆ ಮತ್ತು ಈ ಅವಧಿಯಲ್ಲಿ ಉತ್ತರಾರ್ಧದಲ್ಲಿ ಚಳಿಗಾಲವು ಪರಾಕಾಷ್ಠೆಯಲ್ಲಿರುವ ಸಮಯವಾಗಿರುತ್ತದೆ.

ದಕ್ಷಿಣಾರ್ಧದ ಋತುಗಳು : ಉತ್ತರಾರ್ಧದ ವಿರುದ್ಧವಾಗಿರುತ್ತವೆ. ಉತ್ತರಾರ್ಧದಲ್ಲಿ ಚಳಿಗಾಲವಿರುವಾಗ ಇಲ್ಲಿ ಸೆಕೆಗಾಲವಿರುತ್ತದೆ. ಆಸ್ಟ್ರೇಲಿಯಾದಲ್ಲಿ ಬೇಸಗೆಯಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಆಚರಿಸುತ್ತಾರೆ. ಉತ್ತರಾರ್ಧದಲ್ಲಿ ಸೆಕೆಗಾಲವಿರುವಾಗ ದಕ್ಷಿಣಾರ್ಧದಲ್ಲಿ ಚಳಿಗಾಲವಿರುತ್ತದೆ.

ಜನಜೀವನದಲ್ಲಿ ಋತುಗಳು : ಯುರೋಪಿನ ದೇಶಗಳಲ್ಲಿ ಬೆಳೆಗಳ ವಾರ್ಷಿಕ ಚಕ್ರಕ್ಕೂ ಋತುಗಳಿಗೂ ಸಂಬಂಧ ಕಲ್ಪಿಸಲಾಗಿದೆ. ಚಳಿಯಲ್ಲಿ ಸುಪ್ತಾವಸ್ಥೆ ; ವಸಂತದಲ್ಲಿ ಬೀಜಾರ್ಪಣೆ ; ಬೇಸಗೆಯಲ್ಲಿ ಬೆಳೆವಣಿಗೆ ; ಶರತ್ತಿನಲ್ಲಿ ಸುಗ್ಗಿ, ಇದು ಬೇಸಾಯ ಚಕ್ರ. ಆದರೆ ವಾಸ್ತವವಾಗಿ ಋತುಗಳಿಗೂ ಈ ವ್ಯವಸಾಯ ಚಟುವಟಿಕೆಗಳಿಗೂ ಯಾವ ಸಂಬಂಧವೂ ಇಲ್ಲ ಎನ್ನುತ್ತಾರೆ ತಜ್ಞರು. ಈಜಿಪ್ಟಿನಲ್ಲಿ ನೈಲ್ ನದಿಯ ಪ್ರವಾಹಕ್ಕೆ ತಕ್ಕಂತೆ ವ್ಯವಸಾಯ ಕಾರ್ಯ ನಿಯಂತ್ರಿತವಾಗುವುದರಿಂದ ಅಲ್ಲಿ ನದಿಯ ಆಯಾ ಕಾಲಗಳ ನೀರಿನ ಮಟ್ಟಗಳಿಗೆ ಅನುಸಾರವಾಗಿ ಋತುಗಳು ಹೆಸರು ತಳೆದಿವೆ.

ಆಂಗ್ಲ ಪದ್ಧತಿಯಲ್ಲಿ Spring - ವಸಂತ, Summer - ಬೇಸಗೆಕಾಲ, Autumn - ಶರದೃತು, Winter - ಚಳಿಗಾಲ ಎಂದು 4 ಋತುಗಳಿವೆ.

ಸಹಾಯಕ ಮಾಹಿತಿ :

ಕನ್ನಡ ವಿಶ್ವಕೋಶ ಸಂಪುಟ - 2

ಅಂತರ್ಜಾಲದ ಮಾಹಿತಿ

ಆರ್. ಪಿ. ಕೆ.

ಎಕ್ಕ ಯಜ್ಞ ಹೋಮ ಇತ್ಯಾದಿಗಳಿಗೆ ನವಕಡ್ಡಿಗಳ ಜೊತೆ, ಹಲವಾರು ಔಷಧಿಗಳ ಬಳಕೆಯಲ್ಲಿ, ಪೂಜೆ ವ್ರತಗಳಿಗೆ ಬಳಸುವ ಒಂದು ಸಸ್ಯ. ಕಳೆಯ ರೂಪದಲ್ಲಿ ಕಸ ಇರುವಲ್ಲಿ ಬೆಳೆಯುತ್ತದೆ.

ಪರಿಚಯ : 'ಎಕ್ಕ'ದ ಮೂಲ ಭಾರತ. ಇದು ಏಷ್ಯಾ ಆಫ್ರಿಕಾ ಖಂಡಗಳ ಉಷ್ಣವಲಯಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಭಾರತದ ಎಲ್ಲಾ ಕಡೆಗಳಲ್ಲಿ ಕಂಡು ಬರುವ ಈ ಸಸ್ಯ ಹಿಮಾಲಯ ಪರ್ವತ ಪ್ರದೇಶಗಳಲ್ಲಿಯೂ 2,000 ಅಡಿ ಎತ್ತರದ ಜಾಗಗಳಲ್ಲಿ ಕಾಣಸಿಗುತ್ತದೆ. ಕನ್ನಡದಲ್ಲಿ ಎಕ್ಕ, ತಮಿಳಿನಲ್ಲಿ ಎರಕ್ಕು, ತೆಲುಗಿನಲ್ಲಿ ಜಿಲ್ಲೆಡು, ಮಲಯಾಳಂನಲ್ಲಿ ಎರಿಕ್ಕು ಎಂದು ಕರೆಸಿಕೊಳ್ಳುವ ಈ ಎಕ್ಕ ಇಂಗ್ಲಿಷ್‌ನಲ್ಲಿ ಕ್ಯಾಲೋಟ್ರೋಪಿಸ್ ಮಿಲ್ಕ್ ವೀಡ್ ಎಂದು ಕರೆಸಿಕೊಳ್ಳುತ್ತದೆ. ಆಸ್ಕಲೀಡಿಯಾಡೇಸೀ ಕುಟುಂಬಕ್ಕೆ ಸೇರಿದ ಆರು ಪ್ರಭೇದಗಳನ್ನೊಳಗೊಂಡ ಸಸ್ಯ ಜಾತಿ. ಕರ್ನಾಟಕದಲ್ಲಿ 24 ಜಾತಿಯ 68 ಪ್ರಭೇದಗಳಿವೆ.



ಭಾರತದಲ್ಲಿ 'ಎಕ್ಕ'ದ ನಂಬಿಕೆ : ರಸ್ತೆ ಬದಿಯಲ್ಲೋ, ಬಯಲಲ್ಲೋ ತೆವರಿ ದಿಟ್ಟಣೆಗಳಲ್ಲೋ ಬೆಳೆಯುವ ಸಾಮಾನ್ಯ ಸಸ್ಯವಿದು. ಬರಗಾಲದಲ್ಲೂ ಬೆಳೆಯುವ ಈ ಸಸ್ಯ ಅನೇಕ ನಂಬಿಕೆ ಅಪನಂಬಿಕೆಗಳಿಗೆ ಗುರಿಯಾಗಿದೆ. ಪ್ರಾಚೀನ ಪುರಾಣಗಳಲ್ಲಿ ಇದರ ಉಲ್ಲೇಖವಿದೆ. ಒಮ್ಮೆ ಪಾರ್ವತಿಯ ಮೇಲೆ ಅಂಧಕನೆಂಬ ರಾಕ್ಷಸನ ಕಣ್ಣು ಬೀಳುತ್ತದೆ. 'ಪಾರ್ವತಿಯು ಏಕಾಂಗಿಯಾಗಿದ್ದ ಸಂದರ್ಭನೋಡಿ ಆ ಅಂಧಕನು ಅವಳ ಬೆನ್ನಟ್ಟುತ್ತಾನೆ. ಪಾರ್ವತಿಯು ಅವನಿಂದ ತಪ್ಪಿಸಿಕೊಂಡು ಹೋಗಿ ಒಂದು ಗುಹೆಯೊಳಗೆ ನುಗ್ಗಿ ಅಲ್ಲಿದ್ದ ಎಕ್ಕದ ಗಿಡದ ಹೂವಿನೊಳಗೆ ಸೂಕ್ಷ್ಮ ರೂಪ ತಾಳಿ ಅಡಗಿಕೊಂಡಳು. ಅಷ್ಟರಲ್ಲಿ ಶಿವನು ಅಲ್ಲಿಗೆ ಬಂದು ಅಂಧಕನನ್ನು ಸಂಹರಿಸಿ ಪಾರ್ವತಿಯನ್ನು ಕರೆದುಕೊಂಡು ಹೋಗುತ್ತಾನೆ. ಪಾರ್ವತಿಗೆ ಅಡಗಿಕೊಳ್ಳಲು ಜಾಗ ನೀಡಿದ ಕಾರಣ ಶಿವನಿಗೆ ಎಕ್ಕದ ಗಿಡದ ಮೇಲೆ ಪ್ರೀತಿ ಉಂಟಾಗಿ ಅದರ 'ಹೂ'ವನ್ನು ಇಷ್ಟಪಡುತ್ತಾನೆ. ಹಾಗಾಗಿ ಶಿವನ ಪೂಜೆ ಮತ್ತು ಗಣೇಶನ ಪೂಜೆಗೆ ಶ್ರೇಷ್ಠ ಎಂಬ ನಂಬಿಕೆ ಇದೆ. ಅಲ್ಲದೆ ಹಲವಾರು ಬಗೆಯ ವ್ರತ ಪೂಜೆಗಳಲ್ಲಿ ಎಕ್ಕವನ್ನು ಪೂಜಿಸುತ್ತಾರೆ. ನವಗ್ರಹ ವನದಲ್ಲಿ ಗ್ರಹಗಳನ್ನು ಸಂಕೇತಿಸುವ ಸಸ್ಯಗಳನ್ನು ಬೆಳೆಸುತ್ತಾರೆ. ಇಂತಹ ವನದಲ್ಲಿ ಸೂರ್ಯನನ್ನು ಸಂಕೇತಿಸಲು ಬಿಳಿ ಎಕ್ಕವನ್ನು ಬೆಳೆಸುವುದುಂಟು.

ಭಾರತದಲ್ಲಿ ಬಿಳಿ ಎಕ್ಕ ಕೆಂಪು ಅಥವ ನೀಲಿ ಎಕ್ಕ ಎಂದು ಎರಡು ವಿಧ. ಬಿಳಿ ಎಕ್ಕಕ್ಕೆ ಅತ್ಯಂತ ಪೂಜನೀಯ ಸ್ಥಾನವಿದೆ. ಪೂಜೆ ವ್ರತಗಳಲ್ಲಿ ಬಿಳಿ ಎಕ್ಕವನ್ನು ವಾಮಾಚಾರ, ದೃಷ್ಟಿತೆಗೆಯುವಲ್ಲಿ ಕೆಂಪು / ನೀಲಿಯಕ್ಕವನ್ನು ಬಳಸುವರು. ನೀಲಿ ಎಕ್ಕವನ್ನು ಬೆಳೆಸಬಾರದೆಂಬ ನಂಬಿಕೆಯೂ ಇದೆ. ಹಳ್ಳಿಗಳಲ್ಲಿ ವ್ಯಾಪಾರಸ್ಥರು ಎಕ್ಕದ ಹೂವನಿಟ್ಟು ಪೂಜೆ ಮಾಡಿ ಅನಂತರ ವ್ಯಾಪಾರ ಮಾಡುವ ನಂಬಿಕೆ ಇದೆ.

ಎಕ್ಕದ ಲಕ್ಷಣಗಳು : ಗಿಡ ದೊಡ್ಡ ಪೊದೆಯಾಗಿ ಅಥವಾ ಸಣ್ಣ ಮರವಾಗಿ ಎರಡೂವರೆಯಿಂದ ಮೂರು ಮೀ. ಎತ್ತರಕ್ಕೆ ಬೆಳೆಯುತ್ತದೆ. ನೆಲದ ಮಟ್ಟಕ್ಕೆ ಇರುವ ಕಾಂಡದಿಂದ ಹಲವಾರು ಶಾಖೆಗಳು ಹೊರಟು ಸುಮಾರು ಒಂದೇ ಎತ್ತರಕ್ಕೆ ಬೆಳೆದು ಗಿಡ ಪೊದರಿನಂತೆ ಕಾಣುತ್ತದೆ. ಸಸ್ಯದ ಎಲ್ಲ ಭಾಗಗಳಲ್ಲೂ ಬಿಳಿಯ ಬಣ್ಣದ ಹಾಲು ಇರುವುದು ಈ ಗಿಡದ ಮುಖ್ಯ ಲಕ್ಷಣ.

ತಾಯಿ ಬೇರು ಸಮೂಹದಿಂದ ಕೂಡಿದ್ದು ಆಹಾರ ಸಂಗ್ರಹಿಸುವ ಗೆಡ್ಡೆಗಳು ಹಾಗೂ ಅಡರು ಬೇರುಗಳನ್ನು ಹೊಂದಿರುತ್ತದೆ. ತಳಗಟ್ಟಿಯಾಗಿ ಕಟ್ಟಿಗೆಯಂತಹ ಕಾಂಡಗಳಿರುತ್ತವೆ. ಗಿಡದ ಎಳೆಯ ಭಾಗಗಳು ಮತ್ತು ಎಲೆಗಳ ಬೆನ್ನು ಭಾಗ ಒಂದು ಬಗೆಯ ನವುರಾದ ಬಿಳಿಯ ಬಣ್ಣದ ಅರಳೆಯಂಥ ತುಪ್ಪಳದಿಂದ ಆವೃತವಾಗಿರುತ್ತವೆ. ಎಲೆಗಳು ಅಭಿಮುಖ ಜೋಡಣೆ ಹೊಂದಿದ್ದು ಅಂಡಕಾರವಾಗಿ ಕೊಂಚ ದಪ್ಪವಾಗಿರುತ್ತವೆ. ತೊಟ್ಟುಗಳು ತುಂಬಾ ಪುಟ್ಟದ್ದಾಗಿರುತ್ತವೆ. ಕೆಲವೊಮ್ಮೆ ಎಲೆಗಳ ಬುಡ ಕಾಂಡವನ್ನು ಸುತ್ತುವರಿದಿರುತ್ತದೆ. ಎಲೆಗಳು 10-20 ಸೆಂ.ಮೀ. ಉದ್ದವಿದ್ದು ರಸಭರಿತ. ಇದರ ತೊಗಟೆ ಹಳದಿ ಮಿಶ್ರಿತ ಬಿಳಿ, ಎಕ್ಕದ ಹೂವು 5 ಅಂಚುಳ ಪಕಳೆಗಳಿಂದ ಕೂಡಿದ್ದು, ಮಧ್ಯದಿಂದ ಪುಷ್ಪ ಶಿರವು ಕಂಡುಬರುತ್ತದೆ. ಹೂಗಳು ಸೈಮೋಸ್ ರೀತಿಯ ಗೊಂಚಲುಗಳ ರೂಪದಲ್ಲಿದ್ದು ನಸು ನೀಲಿಯ ಅಥವಾ ಬಿಳಿಯ ಬಣ್ಣಗಳಿಂದ ಕೂಡಿರುತ್ತವೆ. ಹೂಗಳ ತೊಟ್ಟಿನ ಮೇಲೂ ಬಿಳಿಯ ಬಣ್ಣದ ಸಣ್ಣ ಸಣ್ಣ

ಕೂದಲುಗಳಿರುತ್ತವೆ. ಪುಷ್ಪದಳಗಳು ಸಂಯುಕ್ತವಾಗಿದ್ದು ಪೂರ್ಣವಾಗಿ ಅರಳಿದ ಹೂಗಳಲ್ಲಿ ಕೊಂಚ ಹಿಂದಕ್ಕೆ ಬಾಗಿಕೊಂಡಿರುತ್ತವೆ. ಎಕ್ಕದ ಕಾಯಿ ಫ್ಯಾಲಿಕಲ್ ಬಗೆಯದಾಗಿದೆ. ಅವು ಬಲಿತು ಪಕ್ವಗೊಂಡಾಗ ಒಣಗಿ ಬಿರಿಯುತ್ತವೆ. ಅದರೊಳಗೆ ಸಣ್ಣ ಸಣ್ಣ ನೂರಾರು ಕಂದು ಬಣ್ಣದ ಬೀಜಗಳಿರುತ್ತವೆ. ಬೀಜಗಳ ಸುತ್ತ ಹತ್ತಿಯಲ್ಲಿರುವಂತೆ ಬಿಳಿಯ ಕೂದಲುಗಳಿದ್ದು ಪ್ರಸರಣ ಕ್ರಿಯೆಗೆ ನೆರವಾಗುತ್ತದೆ

ಪ್ರಯೋಜನಗಳು : ಭಾರತದಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಎಕ್ಕದ ಔಷಧೀಯ ಗುಣಗಳ ಪರಿಚಯವಿತ್ತು. ಈ ಕಾರಣದಿಂದಲೇ ಎಕ್ಕವನ್ನು ಸೂರ್ಯನಿಗೆ ಪ್ರತಿನಿಧಿಯಾಗಿ ಭಾವಿಸಿದರು. ಸೂರ್ಯನಿಗೆ ಮಿತ್ರ ಎಂಬ ಹೆಸರೂ ಇದೆ. ಇದರ ಅರ್ಥ ಎಲ್ಲ ಬಗೆಯ ಕಷ್ಟ ಕಾಲದಲ್ಲಿ ಕೈ ಹಿಡಿಯುವವನು ಎಂದು. ಇದೇ ಅರ್ಥದ ಹೆಸರು ಎಕ್ಕಕ್ಕೂ ಇದೆ.

ಆಯುರ್ವೇದದಲ್ಲಿ ಅನೇಕ ಔಷಧಗಳ ತಯಾರಿಕೆಯಲ್ಲಿ ಎಕ್ಕವನ್ನು ಬಳಸುತ್ತಾರೆ. ಎಕ್ಕದ ಹಾಲನ್ನು ಸಸ್ಯ ಆಧಾರಿತ ಪಾದರಸವೆಂದು ಕರೆಯುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಪಾದರಸದ ಬದಲು ಎಕ್ಕದ ಹಾಲನ್ನು ಬಳಸುವುದುಂಟು. ಧನ್ವಂತರಿ ನಿಘಂಟು, ಮಂಗರಾಜ ನಿಘಂಟು, ಸುಶ್ರುತ ಸಂಹಿತ, ಚರಕ ಸಂಹಿತೆಗಳು ಎಕ್ಕದ ಪ್ರಯೋಜನಗಳನ್ನು ವಿವರಿಸುತ್ತವೆ. ಕ್ರಿಮಿನಾಶಕ, ಮೂಲವ್ಯಾಧಿ ನಿವಾರಣೆ, ಕಫನಾಶಕ, ಚರ್ಮರೋಗ, ವ್ರಣ ಮೊದಲಾದವುಗಳ ನಿವಾರಣೆಯಲ್ಲಿ ಎಕ್ಕವನ್ನು ಬಳಸಲಾಗುತ್ತದೆ.

ಚರ್ಮದ ಸಮಸ್ಯೆ, ತಲೆನೋವು, ಮಾನಸಿಕ ಸಮಸ್ಯೆಗಳು, ಕಿವಿ, ಹಲ್ಲಿನ ಸಮಸ್ಯೆಗಳು, ಜ್ವರ, ಕೆಮ್ಮು, ದಮ್ಮು, ಶ್ವಾಸಕೋಶದ ಸಮಸ್ಯೆ, ಹೊಟ್ಟೆಯ, ಪಿತ್ತಕೋಶದ, ಮೂತ್ರದ ಸಮಸ್ಯೆ, ನೋವು, ಊತ, ಹುಣ್ಣು, ಮಹಿಳೆಯರ ಮುಟ್ಟಿನ ಸಮಸ್ಯೆಗಳು, ಕೀಟ, ಪ್ರಾಣಿಗಳ ಬಾಧೆ, ಪಶು ವೈದ್ಯಕೀಯದಲ್ಲಿ ಎಕ್ಕವನ್ನು ಮನೆ ಮದ್ದಾಗಿ ಬಳಸುತ್ತಾರೆ.

ಚರ್ಮ ಹದಮಾಡುವಾಗ ವಾಸನೆ ಕೊಡಲು ಮತ್ತು ತೆಗೆದುಹಾಕಲು ಚರ್ಮಕ್ಕೆ ಹಳದಿ ಬಣ್ಣ ಬರುವಂತೆ ಮಾಡಲು ಉಪಯೋಗಿಸುತ್ತಾರೆ. ತೊಗಟೆಯಿಂದ ಒಂದು ಬಗೆಯ ಬಿಳಿಯ ರೇಷ್ಮೆಯಂಥ ಬಹುಕಾಲ ಬಾಳಿಕೆ ಬರುವ ನಾರು ದೊರಕುತ್ತದೆ. ಇದು ಕರ್ಷಕ (ಟೆನ್ಸೈಲ್) ಬಲದಲ್ಲಿ ಹತ್ತಿಗಿಂತ ಉತ್ತಮವಾಗಿದ್ದು ಬಿಲ್ಲಿನ ಹೆದೆ, ಮೀನ ಬಲೆ (ಟ್ವೈನ್‌ದಾರ) ಮಾಡಲು ಬಳಸುತ್ತಾರೆ. ಕಾಯಿಯಿಂದ ಹೊರ ಹೊಮ್ಮುವ ಮೃದುವಾದ ಹತ್ತಿಯನ್ನು ಹಾಸಿಗೆ ದಿಂಬುಗಳಲ್ಲಿ ತುಂಬಿಸಲು, ಈ ನೂಲಿನಿಂದ ವಿಶಿಷ್ಟ ಬಗೆಯ ಶಾಲನ್ನು ತಯಾರಿಸಲು ಬಳಕೆ ಮಾಡಿಕೊಳ್ಳುತ್ತಾರೆ.

ಎಕ್ಕ ಕಲ್ಲಿದ್ದಲನ್ನು ಹೋಲುವುದೆಂದು ತಿಳಿದುಬಂದಿದೆ. ಎಕ್ಕದ ಉಷ್ಣತಾ ಪ್ರಮಾಣವು ಕಚ್ಚಾ ಪೆಟ್ರೋಲಿಯಂ ತೈಲ ಅಥವಾ ಗ್ಯಾಸೋಲಿನ್‌ಗೆ ಸಮಾನವೆಂದು ಗೊತ್ತಾಗಿದೆ. ಎಕ್ಕದ ಗಿಡವನ್ನು ಬಳಸಿ ಜೈವಿಕ ಇಂಧನ ಉತ್ಪನ್ನವನ್ನು ತಯಾರಿಸಿ ಪೆಟ್ರೋಲಿಯಂ ಉತ್ಪನ್ನಗಳ ಸ್ಥಾನದಲ್ಲಿ ಬಳಸಬಹುದೆಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಎಕ್ಕದ ಗಿಡವನ್ನು ಒಣಗಿಸಿ ಸಂಸ್ಕರಿಸಿದಾಗ ಶೇ. 4.35 ಹೆಸೇನ್ ಮತ್ತು 16.14 ನಷ್ಟು ಹೈಡ್ರೋಕಾರ್ಬನ್‌ನಿಂದ ಪಡೆಯಬಹುದಾದ ಮೆಥನಾಲ್ ಸಿಗುತ್ತದೆ. ಇದನ್ನು ಸುಟ್ಟಾಗ ಉತ್ಪನ್ನವಾಗುವ ಶಕ್ತಿಯು ಇತರ ಪೆಟ್ರೋಲಿಯಂ ಉತ್ಪನ್ನಗಳ ಶಕ್ತಿಗೆ ಸಮನಾಗಿದೆ. ಜೈವಿಕ ಇಂಧನಕ್ಕಾಗಿ ಮರಗಿಡಗಳ ಬೆನ್ನಟ್ಟಿರುವ ವಿಜ್ಞಾನಿಗಳಿಗೆ ಹೆಚ್ಚಿನ ಭರವಸೆ ಮೂಡಿಸಿರುವ ಏಳು ಸಸ್ಯಗಳ ಪಟ್ಟಿಯಲ್ಲಿ ಎಕ್ಕದ ಎರಡೂ ವಿಧಗಳು ಸೇರಿವೆ.

ಪಿ. ಆರ್.

ಎಣ್ಣೆ ಉತ್ಪಾದಕ ಸಸ್ಯಗಳು ರೈತನು ಆಹಾರ ಪದಾರ್ಥವಾಗಿ ಬೆಳೆಯುವ ಹಲವು ಕಾಳುಗಳಲ್ಲಿ ಎಣ್ಣೆ ಉತ್ಪಾದಕಗಳು ವಿಶೇಷ ಸ್ಥಾನವನ್ನು ಪಡೆದಿವೆ. ಆರ್ಥಿಕ ದೃಷ್ಟಿಯಿಂದಲೂ ಆರೋಗ್ಯದ ದೃಷ್ಟಿಯಿಂದಲೂ ಇದು ಮುಖ್ಯವಾಗುತ್ತದೆ.

ಎಣ್ಣೆ ಕಾಳುಗಳು - ನೆಲಗಡಲೆ, ಎಳ್ಳು, ಸೂರ್ಯಕಾಂತಿ, ಹರಳು, ಹತ್ತಿಬೀಜ ಮತ್ತು ಎಣ್ಣೆಯ ಇತರೆ ಮೂಲಗಳಾದ ತೆಂಗು. ತಾಳೆಹಣ್ಣು, ಆಲೀವ್‌ಹಣ್ಣು, ಗಂಧದ ಎಣ್ಣೆ, ಬೇವು, ಹೊಂಗೆ, ನೀಲಗಿರಿ ತೈಲ ಮೊದಲಾದವುಗಳು ಸ್ವಾಭಾವಿಕವಾಗಿಯೂ, ಕೃಷಿ ಮಾಡಿಯೂ ಉಪಯೋಗಿಸುವರು.

ನೆಲಗಡಲೆ : ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಬೆಳೆಯುವ ವಾಣಿಜ್ಯ ಬೆಳೆ ಹಿಂಗಾರು ಮತ್ತು ಮುಂಗಾರು ಎರಡೂ ಕಾಲಗಳಲ್ಲೂ ಇದರ ಕೃಷಿ ಉಂಟು. ಹಿಂಗಾರಿನ ಸಾಮಾನ್ಯವಾಗಿ ಕೀಳುಗಡಲೆ (ಗುತ್ತಿಕಡಲೆ)ಯನ್ನೂ, ಮುಂಗಾರಿನಲ್ಲಿ ಹಬ್ಬುಗಡಲೆ (ಹರಡು ಗಡಲೆ) ಬೆಳೆಯುವರಾದರೂ ಕೆಲವು ಪ್ರದೇಶಗಳಲ್ಲಿ ಎರಡನ್ನೂ ಎರಡೂ ಕಾಲಘಟ್ಟಗಳಲ್ಲೂ ಬೆಳೆಯುವುದುಂಟು.

ಆಂಧ್ರಪ್ರದೇಶದಲ್ಲಿ ಯಥೇಚ್ಛವಾಗಿ ನೆಲಗಡಲೆಯನ್ನು ಬೆಳೆಯುತ್ತಾರೆ. ಅನಂತರದ ಸ್ಥಾನ ಕರ್ನಾಟಕಕ್ಕೆ ಸಲ್ಲುತ್ತದೆ. ಕರ್ನಾಟಕ ಉತ್ತರ ಭಾಗದ ಜಿಲ್ಲೆಗಳಾದ ಧಾರವಾಡ, ಗದಗ, ಬೆಳಗಾವಿ, ಬಿಜಾಪುರ, ಗುಲ್ಬರ್ಗಾ, ಮುಂತಾದವುಗಳು, ಆಗ್ನೇಯ ಮತ್ತು ದಕ್ಷಿ ಭಾಗದ ಜಿಲ್ಲೆಗಳಾದ ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವಿಪುಲವಾಗಿ ಬೆಳೆಯುತ್ತಾರೆ.

ಉಷ್ಣವಲಯದ ಬೆಳೆಯಾದ ನೆಲಗಡಲೆಯಲ್ಲಿ ಅನೇಕ ತಳಿಗಳಿವೆ.

ನೆಲಗಡಲೆಯ ಉಪಯೋಗಗಳು : ಬೀಜವನ್ನು ಅನೇಕ ಬಗೆಯಲ್ಲಿ ಉಪಯೋಗಿಸುತ್ತಾರೆ. ಹೆಚ್ಚು ರುಚಿಕರವೂ ಪುಷ್ಟಿಯೂ ಆದ ಇದು 'ಬಡವರ ಬಾದಾಮಿ' ಎಂದೇ ಪ್ರಸಿದ್ಧವಾಗಿದೆ.

ಕಡಲೆ ಬೀಜವನ್ನು ಎಣ್ಣೆ ತಗೆಯಲು ಮಾತ್ರವಲ್ಲದೆ ವಿವಿಧ ಖಾದ್ಯ ತಯಾರಿಸಲು ಬಳಸುತ್ತಾರೆ. ಹಸಿ ಬೀಜವನ್ನು ಚಟ್ನಿ, ತಂಬುಳಿ, ಇತ್ಯಾದಿಗಳಿಗೆ ಬಳಸಿದರೆ ಕಿತ್ತ ಒಂದು ವಾರದ ಶೇಂಗಾ ಕಾಯಿಯನ್ನು ಬೇಯಿಸಿಯೂ; ಸುಟ್ಟು, ಕಾಯಿಸುಲಿದು ಬೀಜಗಳನ್ನು ನೇರವಾಗಿ ಹುರಿದು, ಉಪ್ಪು, ಖಾರ ಬೆರಸಿ ಉಪಯೋಗಿಸುತ್ತಾರೆ. ಕೆಲವು ಭಾಗಗಳಲ್ಲಿ ಶೇಂಗಾಬೀಜದೊಂದಿಗೆ ಕಾಯಿ ಸುಲಿದು ಬೆಲ್ಲ, ಈರುಳ್ಳಿ, ಸುಣ್ಣವನ್ನು ಸೇರಿಸಿ ತಿನ್ನುವರು. ಒಣಗಿದ ಕಾಯಿಯನ್ನು ನೇರವಾಗಿ ಹುರಿದು ಉಪಯೋಗಿಸುವುದು ಒಂದು ಕ್ರಮವಾದರೆ, ಕಾಯಿಯನ್ನು ಸುಲಿದು ಬೀಜಗಳನ್ನು ಹುರಿದು ಉಪಯೋಗಿಸುವುದು ಇನ್ನೊಂದು ಕ್ರಮ. ಹುರಿದ ಕಡಲೆಬೀಜವನ್ನು ಉಪ್ಪು, ಮೆಣಸು, ಅರಿಸಿನ ಬೆರೆಸಿ ಉಪಯೋಗಿಸುವ ಪದ್ಧತಿಯುಂಟು. ಇಷ್ಟೇ ಅಲ್ಲ ಎಲ್ಲ ಶುಭಸಮಾರಂಭದಲ್ಲಿ ಹುರಿದ ನೆಲಗಡಲೆ ಬೇಳೆಯನ್ನು ಬೆಲ್ಲದ ಪಾಕದೊಂದಿಗೆ ಮಿಶ್ರಣಮಾಡಿ ಉಂಡೆ ಮಾಡಿ

ಆಲಂಕರಿಕವಾಗಿ ಬಳಸುತ್ತಾರೆ. ಅಲ್ಲದೆ ಕರ್ನಾಟಕ ಉತ್ತರಭಾಗಗಳಲ್ಲೂ ಪಂಚಮಿ ಹಬ್ಬ ವಿಶೇಷ ಸಿಹಿ ಪದಾರ್ಥವಾಗಿ ಮಾಡುತ್ತಾರೆ.

ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ಬಸವನ ಗುಡಿಯಲ್ಲಿ ವರ್ಷಕ್ಕೊಮ್ಮೆ ಕಾರ್ತಿಕ ಮಾಸದಲ್ಲಿ ಕಡಲೆಕಾಯಿ ಪರಿಷೆ ನಡೆಯುತ್ತದೆ. ಹಸು ಹೆಚ್ಚು ಹಾಲು ಕೊಡಲು ನೆಲಗಡಲೆ ಹಿಂಡಿಯನ್ನು ಬಳಸುತ್ತಾರೆ.

ಎಳ್ಳು : ಪಿಡಾಲೇಸಿ ಕುಟುಂಬಕ್ಕೆ ಸೇರಿದೆ. ಗುರೆಳ್ಳು (ಹುಚ್ಚೆಳ್ಳು), ಒಳ್ಳೆಯ ಎಳ್ಳು ಅಚ್ಚೆಳ್ಳು ಎಂದು ಇದರಲ್ಲಿ ಎರಡು ಬಗೆ. ಎರಡೂ ಎಣ್ಣೆ ತಯಾರಿಸಲು ಉಪಯುಕ್ತ. ಉಷ್ಣವಲಯಗಳಲ್ಲಿ ಬೆಳೆಯ ಬಹುದಾದ ಬೆಳೆ. ಮೈಸೂರು ಪ್ರಾಂತ್ಯಗಳಲ್ಲಿ ಮುಂಗಾರಿನ ಮುಖ್ಯ ಬೆಳೆಗೆ ಮೊದಲು ಎಳ್ಳನ್ನು ಒಣ ಬೇಸಾಯವಾಗಿ ಅಲ್ಪಾವಧಿ ಬೆಳೆಯಾದ ಇದನ್ನು ಕೃಷಿ ಮಾಡುತ್ತಾರೆ. ಹೆಚ್ಚು ಆರ್ದ್ರತೆಯನ್ನು ಬಯಸದ ಇದು ಒಂದೆರಡು ಹದ ಮಳೆ ಕಾಲಕ್ಕೆ ಸರಿಯಾಗಿ ಬಿದ್ದರೆ ಸಾಕು ಫಸಲನ್ನು ಕೊಡುತ್ತದೆ. ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲು ಮುಂಗಾರು ಬೆಳೆಯಾಗಿ ಎಳ್ಳು ಕೃಷಿಯುಂಟು. ಹುಚ್ಚೆಳ್ಳನ್ನು ಅಡುಗೆ ಎಣ್ಣೆಗಾಗಿ ಮಾತ್ರವಲ್ಲದೆ ಇನ್ನೂ ಅನೇಕ ಬಗೆಯಲ್ಲಿ ಉಪಯೋಗಿಸುತ್ತಾರೆ. ಹುಚ್ಚೆಳ್ಳು ಚಟ್ನಿ ಮಾಡುವರು. ಹುಚ್ಚೆಳ್ಳು ರುಬ್ಬಿ ಅದರ ಹಾಲನ್ನು ಸಾಂಬಾರಿಗೆ ಬಳಸುವರು. ಹುಚ್ಚೆಳ್ಳು ಹುರಿದು ಉಪ್ಪು, ಕಾರ ಹದವಾಗಿ ಬೆರೆಸಿ ಪುಡಿಯನ್ನು ಪಲ್ಯಕ್ಕೆ ಬಳಸುವುದಿದೆ. ಅಚ್ಚೆಳ್ಳಿಗೆ ಹುಚ್ಚೆಳ್ಳಿಗಿಂತ ಬೆಲೆ ಅಧಿಕ. ಪೌಷ್ಟಿಕಾಂಶವೂ ಹೆಚ್ಚು. ದಕ್ಷಿಣ ಭಾರತದಲ್ಲಿ ಮಕರ ಸಂಕ್ರಾಂತಿ ಹಬ್ಬದಂದು ಎಳ್ಳು ಬೆಲ್ಲ, ಕಡಲೆ, ಹುರಿಗಡಲೆ, ಕೊಬ್ಬರಿ ಇತ್ಯಾದಿಗಳನ್ನೆಲ್ಲ ಬೆರೆಸಿ ಮನೆ ಮನೆಗೆ ಹಂಚುವುದಿದೆ. ಇದನ್ನು ಎಳ್ಳು ಬೀರುವುದು ಎನ್ನುವರು. 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡಿ' ಎಂದು ಈ ಸಂದರ್ಭದಲ್ಲಿ ಹೇಳುವುದು ವಾಡಿಕೆ. ಎಳ್ಳುಂಡೆ (ಚಿಗಳಿ)ಯನ್ನು ಗಣೇಶ ಹಬ್ಬದಂದು ನೈವೇದ್ಯವಾಗಿ ಇಡುವರು. ಶುಭ ಸಮಾರಂಭಗಳಲ್ಲಿ ಚೌತಿ, ಪಂಚಮಿಗಳಲ್ಲಿ ಇದು ಕಡ್ಡಾಯ. ಪೂಜೆ ಪುರಸ್ಕಾರಗಳಲ್ಲಿ ನವಗ್ರಹಗಳಿಗೆ ಎಳ್ಳು ಬತ್ತಿ ಹಚ್ಚುವರು. ಹೆಣ್ಣುಮಕ್ಕಳು ಮೈನೆರೆದಾಗ ವಿಶೇಷವಾಗಿ ಅಚ್ಚೆಳ್ಳು ಕೊಡುವರು. ಅಡುಗೆಯಲ್ಲಿ ನಾನಾ ಬಗೆಯಲ್ಲಿ ಇದರ ಬಳಕೆ ಇದೆ. ಎಳ್ಳಿನ ಹಿಂಡಿ ಪಶುಗಳಿಗೆ ಒಳ್ಳೆಯ ಮೇವು. ಸಾಬೂನು, ಔಷಧಿ ಮತ್ತು ಸುಗಂಧದ್ರವ್ಯಗಳ ತಯಾರಿಕೆಗೆ ಮತ್ತು ಕೀಲೆಣ್ಣೆಯಾಗಿಯೂ ಇದನ್ನು ಬಳುಸವರು. ಅನಾವೃಷ್ಟಿಯನ್ನು ಸಹಿಸುವುದಾದರೂ ಅತಿವೃಷ್ಟಿ ಸಹಿಸದು. ಮರಳು ಮಿಶ್ರಿತ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಭಾರತ ಮತ್ತು ಚೀನ ಇದರ ಉತ್ಪಾದನೆಯಲ್ಲಿ ಮೊದಲನೆಯ ಸ್ಥಾನದಲ್ಲಿಯೂ ಮೆಕ್ಸಿಕೊ, ಪಾಕಿಸ್ತಾನ, ಥಾಯ್ಲೆಂಡ್‌ಗಳು ಎರಡನೆಯ ಸ್ಥಾನ ಪಡೆದಿದೆ. ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಅಚ್ಚೆಳ್ಳನ್ನು ಬೆಳೆದರೆ ಇನ್ನು ಕೆಲವು ಪ್ರದೇಶಗಳಲ್ಲಿ ಹುಚ್ಚೆಳ್ಳನ್ನು ಬೆಳೆಯುತ್ತಾರೆ. ಸಾಮಾನ್ಯವಾಗಿ ಗುಲ್ಬರ್ಗಾ, ಕೊಪ್ಪಳ, ಬೀದರ್, ಮೈಸೂರು, ಗದಗ, ಮಂಡ್ಯ, ಕೋಲಾರ ಮತ್ತು ರಾಯಚೂರುಗಳಲ್ಲಿ ಬೆಳೆಯುವರು.

ಸೂರ್ಯಕಾಂತಿ : ಇದರ ಮೂಲಸ್ಥಾನ ಮೆಕ್ಸಿಕೋ ಮತ್ತು ಅಮೇರಿಕಾ ದೇಶಗಳಾದರೂ ಕ್ರಮೇಣ ಇದು ಪ್ರಪಂಚದ ಎಲ್ಲಾ ಭಾಗಗಳಲ್ಲಿ ಕೃಷಿಯಲ್ಲಿದೆ. ಇದರ ಬೀಜದಿಂದ ತಗೆದ ಎಣ್ಣೆಯನ್ನು ಅಡುಗೆ, ವನಸ್ಪತಿ, ಸಾಬೂನು, ಬಣ್ಣ ಮತ್ತು ಕೀಲೆಣ್ಣೆಯನ್ನು ತಯಾರಿಸಲು ಉಪಯೋಗಿಸುವರು. ಸೂರ್ಯಕಾಂತಿಯ ಎಣ್ಣೆ ಇಂದು ಅಡುಗೆ ಎಣ್ಣೆಗಳ ಪೈಕಿ ಹೆಚ್ಚು ಬೇಡಿಕೆಯಲ್ಲಿದೆ. ಇದನ್ನು ದಕ್ಷಿಣ ಭಾರತದ ಎಲ್ಲಾ ಭಾಗಗಳಲ್ಲೂ ಮುಂಗಾರು ಬೆಳೆಯಾಗಿ ಬೆಳೆಯುತ್ತಿದ್ದಾರೆ. ಹೆಚ್ಚಾಗಿ ಉಷ್ಣವಲಯಗಳಲ್ಲಿ ಬೆಳೆಯುವ ಇದಕ್ಕೆ ಕಡಿಮೆ ಮಳೆಯಾದರೂ ತಾಳಿಕೊಳ್ಳುವ ಶಕ್ತಿಯಿದೆ.

ಎಲ್ಲ ಮಣ್ಣುಗಳಲ್ಲೂ ಬೆಳೆಯುವ ಗುಣ ಇದಕ್ಕಿದೆ. ಇಂದು ವಾಣಿಜ್ಯ ಬೆಳೆಗಳಲ್ಲಿ ಒಂದಾಗಿ ಇದರ ಕೃಷಿಯನ್ನು ಪರಿಗಣಿಸಲಾಗಿದ್ದು. ರೈತರು ಪರ್ಯಾಯ ಬೆಳೆಯಾಗಿ ಬೆಳೆಸುವುದುಂಟು. ಸೂರ್ಯಕಾಂತಿಯೆಂದು ಇದನ್ನು ಕರೆಯಲು ಮೂಲ ಕಾರಣ ಸೂರ್ಯ ಯಾವ ದಿಕ್ಕಿನಲ್ಲಿರುತ್ತದೆಯೋ ಆ ದಿಕ್ಕಿನಡೆಗೆ ಮುಖ ಮಾಡಿ ಅರಳುವ ಗುಣವಿರುವುದೇ ಆಗಿದೆ.

ಹರಳು : ಹರಳೆಣ್ಣೆಗೆ ತಂಪುಕಾರಕ ಗುಣವಿದೆ. ಇದನ್ನು ಸಾಮಾನ್ಯ ಬೀಡು / ಬೀಳು ಭೂಮಿಗಳಲ್ಲಿ, ಹೊಲದ ಬದುಗಳಲ್ಲಿ ಬೆಳೆಸುವರು. ದೀರ್ಘಕಾಲ, ನೀರಿಲ್ಲದೆ, ಎಲ್ಲೆಂದರಲ್ಲಿ ಬೆಳೆಯುವಂತಹದ್ದು. ಇದರಲ್ಲಿ ಸಾಮಾನ್ಯವಾಗಿ, ಸಣ್ಣ ಹರಳು ಮತ್ತು ದೊಡ್ಡ ಹರಳು ಎಂಬ ಎರಡು ಜಾತಿಗಳಿವೆ. ದೊಡ್ಡ ಹರಳು ಹೆಚ್ಚಿನ (ಇಳುವರಿಯನ್ನು) ಫಸಲನ್ನು ನೀಡುವುದು. ಚಿಕ್ಕ ಹರಳು ಫಸಲು ಕಡಿಮೆಯಾದರೂ ಇದರ ಎಣ್ಣೆಗೆ ಹೆಚ್ಚು ಬೇಡಿಕೆ ಇದೆ. ಮಕ್ಕಳಿಗೆ ಚಿಕ್ಕರಳಿನಿಂದ ತಯಾರಿಸಿದ ಶುದ್ಧ ಎಣ್ಣೆಯನ್ನು ನಿರ್ದಿಷ್ಟ ಕ್ರಮದಲ್ಲಿ ಕುದಿಸಿ, ಶುದ್ಧೀಕರಿಸಿ ಕುಡಿಸುತ್ತಾರೆ.

ಉಷ್ಣ ಹೆಚ್ಚಾದಾಗ ಇದರ ಎಲೆಯನ್ನು ಮತ್ತು ಎಣ್ಣೆಯನ್ನು ತಲೆಯ ಮೇಲೆ ಅಥವಾ ನೆತ್ತಿಯ ಮೇಲೆ ಒತ್ತಿಕೊಳ್ಳುವರು. ದೊಡ್ಡ ಹರಳನ್ನು ಎಣ್ಣೆಯನ್ನು ಔಷಧಿಯಾಗಿಯೂ, ಸಾಬೂನು ಸುಗಂಧ ದ್ರವ್ಯ, ಮೇಣದ ಬತ್ತಿ ತಯಾರಿಕೆ ಬಣ್ಣ, ವಾರ್ನಿಷ್, ಪ್ಲಾಸ್ಟಿಕ್ ಕೀಲೆಣ್ಣೆಗಳ ತಯಾರಿಕೆ ದೀಪ ಉರಿಸಲು, ಬೆಳೆಗಳ ಗೊಬ್ಬರವಾಗಿಯೂ ಮತ್ತು ಪಶು ಆಹಾರ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಇದನ್ನು ಮಿಶ್ರ ಬೆಳೆ ಬೇಸಾಯದಲ್ಲೂ ಇತ್ತೀಚೆಗೆ ಕೈಗೊಳ್ಳುತ್ತಿದ್ದಾರೆ.

ಮರಳು ಮಿಶ್ರಿತ ಮಕ್ಕಳು ಮಣ್ಣು ಇರುವ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದರ ಮೂಲ ಆಫ್ರಿಕಾ ಕ್ರಮೇಣ ಭಾರತ, ಬ್ರೆಜಿಲ್, ಇಂಡೋನೇಷ್ಯಾ, ಅಮೆರಿಕ ಈ ರಾಷ್ಟ್ರಗಳಲ್ಲೂ ಹರಡಿತು.

ಹತ್ತಿ ಬೀಜ : ಈ ಬೆಳೆಯು ಮೂಲ ಉದ್ದೇಶ ಹತ್ತಿ ಉತ್ಪಾದನೆಯಾದರೂ ಇದರಿಂದ ಎಣ್ಣೆಯನ್ನು ತಗೆಯಲಾಗುತ್ತದೆ. ಹತ್ತಿ ಬೀಜ ದನಗಳಿಗೆ ಉತ್ತಮ ಆಹಾರ. ಇದರ ಎಣ್ಣೆಯನ್ನು ಅಡುಗೆ, ವನಸ್ಪತಿ, ಸಾಬೂನು, ಮೇಣದ ಬತ್ತಿ ಹಾಗೂ ವಾಷಿಂಗ್ ಫೌಡರ್ ತಯಾರಿಕೆಗೆ ಮತ್ತು ಮೀನು ಮತ್ತು ಮಾಂಸ ಸಂಸ್ಕರಣೆಗೆ ಬಳಸುವರು. ಪ್ರಪಂಚದ ಎಲ್ಲಾ ಭಾಗಗಳಲ್ಲೂ ವಿರಳವಾಗಿ ಇದರ ಕೃಷಿಯುಂಟು. ಕಪ್ಪು ಮೆಕ್ಕಲು ಮತ್ತು ಜೇಡಿಮಣ್ಣುಗಳಲ್ಲಿ ಇದು ಚೆನ್ನಾಗಿ ಬಳೆಯುತ್ತದೆ. ಹೆಚ್ಚುಮಳೆಯನ್ನು ಸಹಿಸಲಾರದು. ಕಡಿಮೆಯಾದರೂ ಉಳಿಯದು. ಭಾರತ, ಚೀನ, ಪಾಕಿಸ್ತಾನ, ಬ್ರಿಜಿಲ್, ಅಲ್ಜೀರಿಯಾ, ಸೂಡಾನ್, ಉಗಾಂಡಾ, ಅಮೇರಿಕಾ ಮುಂತಾದೆಡೆ ಇದರ ಕೃಷಿಯುಂಟು.

ತೆಂಗು : ಕಲಿಯುಗ ಕಲ್ಪವೃಕ್ಷವೆಂದು ಹೆಸರಾದ ತೆಂಗಿನ ಕಾಯಿ ಮಾನವನ ಬದುಕಿನಲ್ಲಿ ಒಂದು ಆಶಾದಾಯಕ ಬೆಳೆ. ಹೆಚ್ಚು ಕಾಲ ಬಾಳುವ ಹೆಚ್ಚು ಬೇಡಿಕೆ ಇರುವ ಮರದ ಪ್ರತಿಭಾಗವು ಉಪಯೋಗಕ್ಕೆ ಬರುವ ಅತ್ಯಂತ ಉಪಯುಕ್ತವಾದ ಮರವಿದು.

ತೆಂಗಿನ ಕಾಯಿಯನ್ನು ಎಳನೀರಿಗಾಗಿಯೂ, ಬಲಿತ ವಿವಿದೋದ್ದೇಶಗಳಿಗಾಗಿಯೂ ಬಳಸುತ್ತಾರೆ. ಒಣಗಿದ ಕಾಯಿಯನ್ನು ಸುಲಿದು, ಕೊಬ್ಬರಿಯನ್ನು ಅನೇಕ ರೀತಿಯ ಕಾರ್ಯಗಳಲ್ಲಿ ನೇರವಾಗಿ ಬಳಸುತ್ತಾರೆ. ಇದರ ಎಣ್ಣೆಗೆ ಹೆಚ್ಚು ಬೇಡಿಕೆ ಇದೆ. ಅಡುಗೆಗಾಗಿ ಮತ್ತು ತಲೆ ಎಣ್ಣೆಗಾಗಿಯೂ ಹೆಚ್ಚಾಗಿ ಬಳಸುತ್ತಾರೆ. ತೆಂಗಿನ ನಾರನ್ನು ಹಗ್ಗ ಮತ್ತು ಕಾಲ್ವರೆಸಾಗಿಯೂ ಬಳಸುತ್ತಾರೆ. ಈ ಮರದ ರಸದಿಂದ ಸಕ್ಕರೆ ಮತ್ತು ಬೆಲ್ಲವನ್ನು ತಯಾರಿಸುವರು. ಮೊಟ್ಟೆ ಕರಟ ಮತ್ತು ತೆಂಗಿನ ಗರಿಯನ್ನು ಉರುವಲಾಗಿ ಬಳಸುತ್ತಾರೆ. ಎಣ್ಣೆ ತಗೆದ ಮೇಲೆ ಉಳಿಯುವ ಹಿಂಡಿಯನ್ನು ದನಕರುಗಳಿಗೆ ಮೇವಾಗಿ ಬಳಸುವರು. ಹೆಚ್ಚು ನೀರನ್ನು ಬಯಸುವ ತೆಂಗಿನ ಕೃಷಿ, ಉಷ್ಣವಲಯದ ಬೆಳೆ. ತೆಂಗಿನ ಮರಗಳನ್ನು ಪ್ರತ್ಯೇಕ ತೋಟಗಳಂತೆಯೂ, ಮಿಶ್ರ ಬೆಳೆಯಾಗಿಯೂ ಬೆಳೆಸುವರು. ಎಲ್ಲ ಮಣ್ಣುಗಳಲ್ಲಿ ಬೆಳೆಯುವ ಗುಣ ಈ ಮರಕ್ಕಿದೆ. ಆದರೂ ಕೆಂಪು ಮಣ್ಣು, ಕೆಂಪು ಮಿಶ್ರಿತ ಗೋಡುಮಣ್ಣಿನಲ್ಲಿ ಉತ್ಕೃಷ್ಟವಾಗಿ ಬೆಳೆಯುತ್ತದೆ. ಸು. 200 ಅಡಿ ಎತ್ತರದವರೆಗೂ ಬೆಳೆಯುವ ಮರವಿದು.

ರೈತನ ಭಾಗ್ಯ ದೇವತೆಯಂತೆ ಬಹುಕಾಲ ಬಾಳಿಕೆ ಬರುವ ಈ ಮರ ಒಮ್ಮೆ ಫಸಲು ಕೊಡಲು ಆರಂಭಿಸಿದರೆ ಸುಮಾರು 100 ವರ್ಷಗಳವರೆಗೂ ಇಳುವರಿಯನ್ನು ಕೊಡುತ್ತಲೇ ಹೋಗುತ್ತದೆ. ಹೊಲ ಗದ್ದೆಗಳಲ್ಲಿ ಬೆಳೆಸಲು ಅವಕಾಶವಿಲ್ಲದವರು ಹೊಲದ ಬದುಗಳಲ್ಲಿ ಬಾವಿಯ ಸುತ್ತಮುತ್ತಲು ಮನೆಯ ಹಿಂಭಾಗ ಅಥವಾ ಮುಂಭಾಗದಲ್ಲಿ ಒಂದೆರಡು ಮರಗಳನ್ನು ಬೆಳೆಸಿಯೇ ಇರುತ್ತಾರೆ.

ತಾಳೆ : ಇದರ ಹಣ್ಣುಗಳಿಂದ ಎಣ್ಣೆ ತೆಗೆಯುತ್ತಾರೆ. ಇದು ಅಡುಗೆ, ಸಾಬೂನು, ವನಸ್ಪತಿ, ಮೇಣದ ಬತ್ತಿ, ಗ್ಲಿಸರಿನ್ ಮತ್ತು ಶಾಂಪುಗಳ ತಯಾರಿಕೆಯಲ್ಲಿ ಬಳಸುವರು. ಹೆಚ್ಚು ನೀರನ್ನು ಬಯಸುವ ಇದು ಸಮಭಾಜಕ ವೃತ್ತದ ಭಾಗಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ. ಭಾರತಕ್ಕಿಂತ ನೈಜಿರಿಯಾ, ಘಾನಾ, ಕಾಂಗೋ ಮಲೇಷಿಯಾ ಮತ್ತು ಇಂಡೋನೇಷ್ಯಾಗಳಲ್ಲಿ ಹೆಚ್ಚಾಗಿ ಬೆಳೆಯುವರು.

ಆಲೀವ್ ಮರ : ಇದರ ಹಣ್ಣನ್ನು ಎಣ್ಣೆ ತಯಾರಿಕೆಗೆ ಬಳಸುವರು. ಈ ಎಣ್ಣೆ ಅಡುಗೆ, ಸುಗಂಧ ದ್ರವ್ಯ ಸಾಬೂನು, ನೇಯ್ಗೆಯಲ್ಲಿಯೂ ಇದರ ಉಪಯೋಗವುಂಟು. ಈ ಹಣ್ಣನ್ನು ತಿನ್ನಲು ಉಪಯೋಗಿಸುತ್ತಾರೆ. ಎಣ್ಣೆ ತೆಗೆದ ಸಿಪ್ಪೆಯನ್ನು ಪಶು ಆಹಾರ, ಗೊಬ್ಬರ ತಯಾರಿಸಲು ಬಳಸುತ್ತಾರೆ. ಇದು ಹೆಚ್ಚು ಉಷ್ಣವನ್ನು, ಹೆಚ್ಚು ತೇವಾಂಶವನ್ನು ಸಹಿಸದು. ಸಮಶೀತೋಷ್ಣವಲಯಕ್ಕೆ ಹೊಂದಿಕೊಳ್ಳುವ ಗುಣವನ್ನು ಹೊಂದಿದೆ.

ತೀಕ್ಷ್ಣವಾದ ಸೂರ್ಯನ ಕಿರಣಗಳು ತಾಕುವುದರಿಂದ ಬೆಳೆ ನಷ್ಟವಾಗುತ್ತದೆ. ಮಡಿಟೇರಿಯನ್ ಪ್ರದೇಶಗಳಲ್ಲಿ ಇದನ್ನು ಕೃಷಿ ಮಾಡುತ್ತಾರೆ. ಭಾರತದಲ್ಲಿ ಇದರ ಉಪಯೋಗ ಇತ್ತೀಚೆಗೆ ಹೆಚ್ಚಾಗಿ ಕಂಡು ಬರುತ್ತಿದೆ.

ಅಗಸೆ : ಅಗಸೆ ಬೀಜದ ಎಣ್ಣೆಯನ್ನು ಬಣ್ಣ ಹಾಗೂ ವಾರ್ನಿಷ್ ತಯಾರಿಸಲು ಬಳಸುತ್ತಾರೆ. ಹಿಂಡಿ ಪಶುಗಳಿಗೆ ಉತ್ತಮ ಆಹಾರ. ಪ್ರಪಂಚದ ಕೆಲವು ಭಾಗಗಳಲ್ಲಿ ಇದರ ಕೃಷಿಯುಂಟು. ಉದಾ : ಭಾರತ, ಕೆನಡಾ, ಅರ್ಜೇಂಟೈನಾ, ಅಮೆರಿಕಾ. ಇದು ಉಷ್ಣವಲಯದ ಬೆಳೆ. ಸಾಧಾರಣ ಮಳೆಯಲ್ಲಿಯೂ ಬೆಳೆಯಬಲ್ಲದು. ಮರಳು ಮಿಶ್ರಿತ ಯಾವುದೇ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ.

ಎಣ್ಣೆಗಾಗಿ ರೈತ ಕೃಷಿ ಮಾಡುವ ಸಸ್ಯಗಳಲ್ಲಿ ಕೆಲವು ಕಾಳು ನೀಡುವಂಥವು. ಕೆಲವು ಹಣ್ಣುಗಳನ್ನು ಕೊಡುವಂಥವಾದರೆ, ಇನ್ನು ಕೆಲವು ಕಾಯಿ ಕೊಡುವಂಥವು. ಕೆಲವು ಮರಗಳ ಭಾಗಗಳಲ್ಲೂ ಎಣ್ಣೆ ಅಂಶವಿದ್ದು ಔಷಧಿ ಮುಂತಾದ ವಸ್ತುಗಳಿಗಾಗಿ ಅವುಗಳನ್ನು ಸಂಗ್ರಹಿಸಿ ಬಳಸುವುದುಂಟು. ಬೇವಿನ ಬೀಜ, ಹೊಂಗೆಬೀಜಗಳಲ್ಲು ಎಣ್ಣೆ ಇದ್ದು ಇವನ್ನು ಎಣ್ಣೆ ತೆಗೆಯಲು ಬಳಸಲಾಗುವುದು ಶ್ರೀಗಂಧ, ಸಾಸುವೆ, ಬತ್ತಿದ ತೌಡು, ಬಾದಾಮಿ ಎಣ್ಣೆಗಳೂ ಬಳಕೆಯಲ್ಲಿವೆ.

ಆರ್.ಎನ್.

ಎತ್ತು ಈ ಪದಕ್ಕೆ ವೃಷಭ, ಬಸವ, ನಂದಿ ಮುಂತಾದವು ಪರ್ಯಾಯ ಪದಗಳಾಗಿ ಬಳಕೆಯಲ್ಲಿವೆ. ಜನಪದದಲ್ಲಿ ಎತ್ತು ಎಂದರೆ ನಡುವಯಸ್ಸಿನ ಗಂಡುದನ. ಸಾಮಾನ್ಯವಾಗಿ ಹೋರಿಕರು ಬೆಳೆದು, ನಾಲ್ಕು ಹಲ್ಲು ಬಂದ ಬಳಿಕ ಆರು ಹಲ್ಲುಗೆ ಬರುವ ಸಮಯದಲ್ಲಿ ಅದನ್ನು 'ಎತ್ತು' ಎನ್ನುತ್ತಾರೆ. ಕಡೆಹಲ್ಲು ಹಾಕುವಷ್ಟರಲ್ಲಿ ಅದು 'ಮುದಿಯೆತ್ತು' ಆಗುತ್ತದೆ. ಬೀಜ ಒಡೆದದ್ದು ಮಾತ್ರ ಎತ್ತು ಎನಿಸಿಕೊಳ್ಳುತ್ತದೆ.

'ಎತ್ತು' ಈ ಲೋಕದಲ್ಲಿ ಹುಟ್ಟಿದ ಬಗೆಗೆ ಪುರಾಣಗಳೂ ಇವೆ :

1. ಎಳ್ಳಿನ ಋಣಕ್ಕೆ ಎತ್ತಾಯಿತು : ಒಂದಾನೊಂದು ಊರಿನಲ್ಲಿ ಒಬ್ಬ ರೈತ ಪಕ್ಕದ ಊರಿನಿಂದ ತನ್ನ ಊರಿಗೆ ಸುಡು ಬಿಸಿಲಿನಲ್ಲಿ ನಡೆದು ಬರುತ್ತಿದ್ದ. ಬರುವ ದಾರಿಯಲ್ಲಿ ಒಂದು ಎಳ್ಳಿನ ಹೊಲವಿತ್ತು. ಎಳ್ಳುಗಿಡಗಳು ಕಾಯಿಕಚ್ಚಿ ಮಾಗಿ ನಿಂತಿದ್ದವು. ಆ ಹೊಲದ ನಡುವೆ ಕಾಲುದಾರಿಯಲ್ಲಿ ರೈತ ಬರುತ್ತಾ ಸೊಗಸಾಗಿ, ಹುಲುಸಾಗಿ ಬೆಳೆದಿದ್ದ ಎಳ್ಳು ಹೊಲವನ್ನು ಕಂಡು ಹಿಗ್ಗಿದ. ಸಂತೋಷ, ವಿಸ್ಮಯಗಳಿಂದ ಬೆರಗಾಗಿ ಬಾಯ್ತೆರೆದು ಅಬ್ಬಾ..... ! ಎಂದು ಅರಳಿದ ಕಣ್ಣುಗಳಿಂದ ನೋಡುತ್ತಾ ನಿಂತ. ಆ ಸಮಯದಲ್ಲಿ ಎಳ್ಳು ಕಾಯೊಂದು ಮಾಗಿದ್ದು ಬಿಸಿಲಿನ ಬೇಗೆಗೆ ಪಟ್ಟನೆ ಸಿಡಿದು ಎಳ್ಳುಕಾಳೊಂದು ರೈತನ ಬಾಯಿಗೆ ಬಿತ್ತು. ಅವನು ಅದನ್ನು ಜಗಿದು ನುಂಗಿದ. ಆ ಮೇಲೆ ಅರೆ..... ! ನಾನು ಯಾರದೋ ಹೊಲದ ಎಳ್ಳುಕಾಳನ್ನು ಪುಕ್ಕಟೆಯಾಗಿ ಅವರ ಅನುಮತಿಯಿಲ್ಲದೆ ತಿಂದುಬಿಟ್ಟೆನಲ್ಲಾ ನನಗೇ ತಿಳಿಯದಂತೆ ಅವರ ಋಣಕ್ಕೆ ಬಿದ್ದೆನಲ್ಲಾ ಎಂದು ಚಿಂತಿಸತೊಡಗಿದ. ಅದೇ ಚಿಂತೆ ಅತಿಯಾಗಿ ಹಲವಾರು ವರ್ಷ ಕೊರಗಿ ಕೊರಗಿ ಪ್ರಾಣಬಿಟ್ಟ. ಕೊನೆಗೆ ಆತನ ಜೀವ ಎಳ್ಳಿನ ಋಣತೀರಿಸುವ ಬಗೆಯಾವುದು ? ಎಂದು ಪರಮಾತ್ಮನಲ್ಲಿ ಕೇಳಿಕೊಂಡಿತು. ಆತನ ಸೂಚನೆಯಂತೆ ಆ ರೈತನ ಜೀವಾತ್ಮ ಬಂದು ಎಳ್ಳು ಹೊಲದ ರೈತನ ಮನೆಯಲ್ಲಿ ಋಣತೀರಿಸಲು ಎತ್ತಾಗಿ ಹುಟ್ಟಿತು.

ಅದರಂತೆ ಈಗ ಇರುವ ಎತ್ತುಗಳೆಲ್ಲಾ ಯಾವುದೋ ಋಣತೀರಿಸಲು ಹುಟ್ಟಿವೆ ಎಂದು ಜನಪದರಲ್ಲಿ ನಂಬಿಕೆಯಿದೆ.

2) ತಪ್ಪುಲೆಕ್ಕ ಹೇಳಿದ ನಂದೀಶ್ವರ ಎತ್ತಾದ : ಜಗತ್ತಿನ ಹಿರಿಯೊಂಬತ್ತು ಕೋಟಿ ಜೀವರಾಶಿಗೂ ಅನ್ನ ಕೊಡಬೇಕಾದ ಶಿವ ಕೈಲಾಸದಲ್ಲಿ ಕುಳಿತು ಯೋಚನೆ ಮಾಡುತ್ತಿದ್ದ. ಅದೇನಪ್ಪಾ ಅಂದ್ರೆ.... ಆಸೆ ಜಾಸ್ತಿಯಿಲ್ಲದ ಖಗ ಮೃಗಗಳ ಜಾತಿಗೆ ಅನ್ನ ಆರ ಕೊಡೋದು ಸುಲಭ. ಆದ್ರೆ ಆಸೇನೇ ನಮ್ಮ ಆಸ್ತಿ ಅಂತ ಹುಟ್ಟಿರೋ ನರಮಾನುವುನಿಗೆ ಅನ್ನ ಕೋಡೋದು ಎಂಗೇ... ? ಅನ್ನೋದು ತಿಳೀದೆ ಯೋಚ್ನೆ

ಮಾಡ್ತಾಯಿದ್ದ. ಆವಾಗ ಅವುನಿಗೆ ಒಂದು ಯೋಚ್ನೆ ಹೊಳೀತು. ಕೂಡ್ಲೆ ನಂದೀಶ್ವರನ್ನ ಕರ್ದ. 'ನೋಡಪ್ಪಾ.... ನಂದಿ ನೀನು ಕೂಡ್ಲೆ ಭೂಲೋಕುಕ್ಕೆ ಹೋಗಿ ನರಮಾನ್ನುವುರ್ಗೆ ಅನ್ನ ಆರ ಕೋಡೋದು ಎಂಗೆ.... ಯಾವ್ತರ ಅಂತ ತಿಳ್ಕಂಡು ನೋಡ್ಕಂಡು ಬಾ...' ಅಂತ ಹೇಳಿ ಕಳಿಸ್ದ.

ಅದುರ್ ಪರ್ಕಾರ ನಂದಿ ಭೂಲೋಕಕ್ಕೆ ಬಂದು ಸುತ್ತಾಡ್ದ. ನಾಲಕ್ಕು ಜನ ಪುಣಾತುಮುರ್ನ ಇಸಾರಿಸ್ದ. ಅದರ ಜತಿಗೆ ತಾನೂ ನೋಡಿ ಮಾಡಿ ತಿಳ್ಕಂಡು ಸೀದಾ ಶಿವುನ್ತಾಕೆ ಹೋದ. ಹೋಗಿ ಹೇಳ್ತನೇ... ಸ್ವಾಮಿ ನಾನು ಎಲ್ಲ ನೋಡಿ ಮಾಡಿ ತಿಳ್ಕಂಡು ಬಂದಿವ್ನಿ. ಅದುರ ಪರ್ಕಾರ ದೊಡ್ಡೋರಿಗೆ ಅಂದ್ರೆ ಮುದುಕುರ್ಗೆ ಒಂದೊತ್ತು ಊಟ, ನಡುವಯಸ್ನೋರ್ಗೆ ಎರಡೊತ್ತು ಊಟ, ಒಳ್ಳೆ ಪ್ರಾಯದ ಹುಡುಗುರ್ಗೆ ಮೂರೊತ್ತು ಊಟ, ಮಕ್ಕಳ್ಗೆ ಲೆಕ್ಕವಿಲ್ದ ಊಟ' ಅಂತದ.



ಆಗ ಶಿವ ಪರಮಾತ್ಮ ಗಾಬರಿಯಾದ. ಏನಯ್ಯಾ ನಂದಿ ಈ ಥರಾ ಹೇಳ್ತೀಯವಾ.... ಅದ್ರಲ್ಲೂ ಮಕ್ಕಳ್ಗೆ ಲೆಕ್ಕವಿಲ್ಲದಷ್ಟು ಊಟ ಕೊಡೋದು ಎಲ್ಲಿಂದ ? ನನ್ನ ಕೈಲಾಸುದ ಬಂಡಾರ್ವೆಲ್ಲಾ ಮುಗುಸೋ ಮಾತಿದು. ಅದು ನಡೆಯಲ್ಲ. ಅದು ನಡೀಬೇಕಂದ್ರೆ ನೀನು ಭೂಲೋಕ್ದಲ್ಲಿ ಎತ್ತಾಗಿ ಹುಟ್ಟಿ ದುಡೀಬೇಕು' ಅಂದ. ಅದ್ರಂತೆ ನಂದಿ ಎತ್ತಾಗಿ ಹುಟ್ಟಿ ಮಾನ್ನುವ್ರ ಊಟಕ್ಕಾಗಿ ದುಡೀತಾ ಅವ್ನೆ. ಇವು ಎತ್ತಿನ ಉಗಮದ ಬಗೆಗಿರುವ ಪುರಾಣಗಳು.

ಇವು ಜನಪದರ ಜೀವಪರ ಪ್ರಜ್ಞೆಯ ದ್ಯೋತಕಗಳು. ತಮ್ಮ ಪರಿಸರದಲ್ಲಿರುವ ಪ್ರತಿಯೊಂದು ಜೀವಜಂತುವಿನ ಬಗೆಗೂ ಆಪ್ತವಾಗಿ ಆಲೋಚಿಸಿದ ಪರಿಣಾಮ ಹಾಗೂ ಜೀವ ಜಗತ್ತಿನೊಂದಿಗೆ ತಮ್ಮ ಸಂಬಂಧವನ್ನು ಉಳಿಸಿಕೊಂಡು ಅವುಗಳನ್ನು ಉಳಿಸುವ, ಬೆಳೆಸುವ ಚಿಂತನಾಕ್ರಮವಿದು.

ಎತ್ತಿನ ತಳಿಗಳು : ಹಳ್ಳಿಕಾರ್, ಅಮೃತ ಮಹಲ್, ಕೃಷ್ಣಾತೀರದ ದನ, ದೇವಣಿತಳಿ, ಖಿಲಾರಿ, ಜವಾರಿ, ಮಲೆನಾಡು ಗಿಡ್ಡ, ಬಳ್ಳಾರಿ ಗಿಡ್ಡ, ಬರಗೂರು ತಳಿ, ಕಾಸರಗೋಡುತಳಿ, ಪುಂಗನೂರುತಳಿ, ಬಯಲು ಸೀಮೆ ತಳಿ ಮೊದಲಾದ ತಳಿಗಳು ಕರ್ನಾಟಕದಲ್ಲಿ ಪ್ರಮುಖವಾಗಿ ಕಂಡುಬರುತ್ತವೆ. ಆದರೆ ಇತ್ತೀಚೆಗೆ ಹಳ್ಳಿಗಳ ಜೀವನ ಕ್ರಮದ ಬದಲಾವಣೆಯಿಂದಾಗಿ ಜಾನುವಾರುಗಳ ಸಾಕಾಣಿಕೆ, ವ್ಯವಸಾಯ ಮಾಡುವುದು ಕಡಿಮೆಯಾಗುತ್ತಿರುವುದರಿಂದ ದೇಸೀ ದನಗಳ ತಳಿಗಳು ಕಣ್ಮರೆಯಾಗುತ್ತಿವೆ.

ಹಳ್ಳಿಕಾರ್ : ಕರ್ನಾಟಕದ ಹೆಮ್ಮೆಯ ತಳಿ. ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇವು ಬೂದು, ಬಿಳಿ, ಕಪ್ಪುಬಣ್ಣಗಳಿಂದ ಕೂಡಿರುತ್ತವೆ. ಉದ್ದ ಮುಖ, ಬಿಲ್ಲಿನ ಆಕಾರದ ಕೊಂಬುಗಳಿರುತ್ತವೆ.

ಅಮೃತಮಹಲ್ : ಈ ಜಾತಿಯ ಎತ್ತುಗಳಿಗೆ ಬೆಣ್ಣೆ ಚಾವಡಿ ತಳಿ ಎಂದೂ ಹೆಸರಿದೆ. ಇವು ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ತುಮಕೂರು, ಬೆಂಗಳೂರು, ಕೋಲಾರ, ಬಳ್ಳಾರಿ, ರಾಯಚೂರು, ಗದಗ ಮತ್ತು ಧಾರವಾಡಗಳಲ್ಲಿ ಕಾಣಬರುತ್ತವೆ. ಇವು ಬಹು ದೊಡ್ಡ ಎತ್ತುಗಳು. ಮುಖ ಮತ್ತು ಕೊಂಬುಗಳಿಂದಲೇ ಇವುಗಳನ್ನು ಗುರುತಿಸಬಹುದು.

ಕೃಷ್ಣಾತೀರದ ತಳಿ : ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಕಂಡುಬರುತ್ತದೆ.

ಮಲೆನಾಡುಗಿಡ್ಡ : ಹೆಸರೇ ಸೂಚಿಸುವಂತೆ ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣಕನ್ನಡ, ಉಡುಪಿ, ಕೊಡಗು, ಹಾವೇರಿ, ದಾವಣಗೆರೆ, ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ. ಕಪ್ಪು, ಕಂದು, ಕೆಂಪು, ಬಿಳಿ ಮಿಶ್ರಿತ ತಳಿಗಳಿವೆ.

ಜವಾರಿ ತಳಿ : ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಬಾಗಲಕೋಟೆ, ಗದಗ, ಹಾವೇರಿ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕಾಣಬಹುದು. ಚಿಕ್ಕಮುಖ ಹೊಂದಿರುವ ಇವು ಕೆಂಪು, ಕಪ್ಪು, ಬೂದು ಬಣ್ಣಗಳ ಮಿಶ್ರಣವಾಗಿವೆ.

ಎತ್ತುಗಳ ಮಾರಾಟ : ಸಾಮಾನ್ಯವಾಗಿ ಎತ್ತುಗಳ ಮಾರಾಟಕ್ಕಾಗಿಯೇ ಮೀಸಲಾದ ಸಂತೆಗಳು, ಜಾತ್ರೆಗಳು ವ್ಯಾಪಕವಾಗಿ ಕಂಡುಬರುತ್ತವೆ. ರೈತರು ಮಾರಾಟ ಮಾಡಬೇಕಾದ ಎತ್ತುಗಳನ್ನು ಚೆನ್ನಾಗಿ ಸಾಕಿ ಸಂತೆ ಅಥವಾ ಜಾತ್ರೆಗಳಿಗೆ ಹೋಗಿ ಮಾರುತ್ತಾರೆ. ಸಂತೆಗಳು ಒಂದು ಇಲ್ಲವೆ ಎರಡು ದಿನಗಳಿಗೆ ನಿಗದಿಯಾಗಿರುತ್ತವೆ. ಅಷ್ಟರಲ್ಲಿ ಮಾರಾಟ ಮಾಡಬೇಕು. ಇಲ್ಲವೆ ಇನ್ನೊಂದು ಸಂತೆಗೆ ಹೋಗಬೇಕು. ಜಾತ್ರೆಗಳಾದರೆ ಹತ್ತಾರು ದಿನಗಳವರೆಗೆ ಕಾಲಾವಕಾಶವಿರುತ್ತದೆ. ಅಷ್ಟು ದಿನಗಳಿಗೆ ಬೇಕಾದ ಹುಲ್ಲು, ಹಿಂಡಿ ಮೊದಲಾದವುಗಳನ್ನು ರೈತರು ಜೋಡಿಸಿಕೊಂಡು ಬಂಡಿಯಲ್ಲಿ ತುಂಬಿಕೊಂಡು ಹೋಗುತ್ತಾರೆ. ಕೆಲವೊಮ್ಮೆ ಮನೆಯ ಬಳಿಗೆ ಕೊಳ್ಳುವವರು ಬರುವುದುಂಟು.

ಸುಳಿ ಶಾಸ್ತ್ರ : ಎತ್ತುಗಳನ್ನು ನೋಡಿ ಕೊಂಡುಕೊಳ್ಳುವಾಗ ಸಾಮಾನ್ಯವಾಗಿ 'ಜಾತಿ' ಎತ್ತುಗಳನ್ನೇ ಆಯ್ಕೆ ಮಾಡುತ್ತಾರೆ. ಒಳ್ಳೆಯ ಜಾತಿ ಎತ್ತುಗಳೆಂದರೆ ಸುಳಿ ಸರಿಯಿರಬೇಕು ಎನ್ನುತ್ತಾರೆ. ಎತ್ತುಗಳ ಸುಳಿ ಸರಿಯಿಲ್ಲದಿದ್ದರೆ ಐಬು ಎನ್ನುತ್ತಾರೆ. ಇಂತಹ ದನಗಳನ್ನು ಮನೆಗೆ ತಂದರೆ ಆ ಮನೆಗೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆಯಿದೆ.

'ಸುಳಿ' ಎಂದರೆ ಎತ್ತುಗಳ ಮೈಮೇಲೆ ವೃತ್ತಾಕಾರದಲ್ಲಿ ಕೂದಲು ಸುತ್ತಿರುವ ಜಾಗ. ಇಂತಹ ಸುಳಿಗಳು ಎಲ್ಲಿ ಇರಬೇಕು ಎಷ್ಟು ಇರಬೇಕೆಂಬ ಕಲ್ಪನೆ ರೈತರಿಗಿರುತ್ತದೆ. ಸುಳಿಗಳಲ್ಲಿ ಮುಕ್ಕಣ್ಣಸುಳಿ, ಬಾಸಿಂಗಸುಳಿ,

ನಾಮಸುಳಿ, ಜ್ಯೋತಿಸುಳಿ, ನಾಗರಸುಳಿ ಇವು ಒಳ್ಳೆಯವು. ಮುಕ್ಕಣ್ಣಸುಳಿ ಎರಡೂ ಕಣ್ಣುಗಳ ನಡುವೆ ಮೂರನೇ ಕಣ್ಣಿನಂತೆ ಇರುತ್ತದೆ. ಇದು ಇದ್ದರೆ ಎತ್ತು ಯಾವಾಗಲೂ ಮುಸುಗುಡುತ್ತ ರೋಷಭರಿತವಾಗಿದ್ದು ಎಂಥ ಕೆಲಸವನ್ನು ನಿಭಾಯಿಸುತ್ತದೆ. 'ಜ್ಯೋತಿಸುಳಿ' ಇದ್ದರೆ ಮನೆಯನ್ನು ಬೆಳಗುತ್ತದೆ. 'ನಾಗರಸುಳಿ' ಇದ್ದರೆ ಆ ಎತ್ತು ಛಲವನ್ನು ಹೊಂದಿರುತ್ತದೆ ಎಂದು ನಂಬುತ್ತಾರೆ.

ಬೇಡಿಸುಳಿ, ಪೊರಕೆ ಸುಳಿ, ಗೂಟಸುಳಿ, ಸಿದಿಗೆಸುಳಿ, ಕಾಗೆಸುಳಿ, ಛತ್ರಿಸುಳಿ, ನಗಬಡಕ ಸುಳಿ ಮುಂತಾದವು ಹೀನ ಸುಳಿಗಳು. ಇವು ಇರುವ ಎತ್ತುಗಳನ್ನು ತಂದರೆ ತೊಂದರೆಯಾಗುತ್ತದೆನ್ನುತ್ತಾರೆ. ಇವಲ್ಲದೆ, ಸಿಡಿಗಾಲು, ಕೂಡುಗಾಲು, ಲಂಡವಾಲ, ಮೋಟುಬಗ್ಗರಿ ಮೊದಲಾದ ಐಬುಗಳಿರಬಾರದು.

ಸಾಮಾನ್ಯವಾಗಿ ಜನಪದರು ಹೆಣ್ಣುತರುವಾಗ, ಬಾವಿ ತೋಡಿಸುವಾಗ, ಎತ್ತು ತರುವಾಗ ಮುಖ್ಯವಾಗಿ ಶೋಧಿಸುವ ಕಾರ್ಯಕ್ಕೆ ಒತ್ತುಕೊಡುತ್ತಾರೆ. 'ಜಲ ನೋಡಿ ಬಾವಿ ತೋಡು, ಕುಲ ನೋಡಿ ಹೆಣ್ಣು ತಾ, ಸುಳಿ ನೋಡಿ ಎತ್ತು ತಾ' ಎಂಬಂತಹ ಮಾತುಗಳು ಚಾಲ್ತಿಯಲ್ಲಿವೆ. ಇವು ಜನಪದರ ಸಾಮಾಜಿಕ, ಕೌಟುಂಬಿಕ ಮತ್ತು ಕಾಯಕ ಪ್ರಜ್ಞೆಯ ದ್ಯೋತಕಗಳಾಗಿವೆ.

ವ್ಯಾಪಾರ : ಎತ್ತುಗಳನ್ನು ವ್ಯಾಪಾರ ಮಾಡುವಾಗ ಅನುಸರಿಸುವ ಮೂರು ಪದ್ಧತಿಗಳಿವೆ. ಮುಚ್ಚುವ್ಯಾಪಾರ, ನೇರವ್ಯಾಪಾರ, ಸಾಟಿ ವ್ಯಾಪಾರ. ಸಂತೆ, ಜಾತ್ರೆಗಳಲ್ಲಿ ಸಾಮಾನ್ಯವಾಗಿ ಮುಚ್ಚು ವ್ಯಾಪಾರವೇ ಹೆಚ್ಚು. ಏಕೆಂದರೆ ಕಳ್ಳಕಾಕರ ಅಪರಿಚಿತರ ಭಯವಿರುತ್ತದೆ. ಆದ್ದರಿಂದ ಮಾರುವವನು, ಕೊಳ್ಳುವವನು ಎದುರುಬದುರು ಕುಳಿತು ತಮ್ಮ ಬಲಗೈಗಳನ್ನ ಒಂದು ಟವೆಲ್ಲಿನಿಂದ ಮುಚ್ಚುತ್ತಾರೆ. ಅದರ ಒಳಗೆ ಬೆರಳು, ಮುಷ್ಟಿಗಳನ್ನು ಮುಟ್ಟಿ ತೋರಿಸುವ ಮೂಲಕ ದರ ನಿಗದಿ ಮಾಡುತ್ತಾರೆ. ಮುಷ್ಟಿ ಒಂದು ಸಾವಿರ, ಬೆರಳು ಒಂದುನೂರು, ಬೆರಳು ಮಡಚಿದರೆ ಐವತ್ತು ರೂ ಇದರಂತೆ ತಿಳಿಯುತ್ತಾರೆ. ಸಾಟಿ ಪದ್ಧತಿಯಲ್ಲಿ ಎತ್ತುಗಳನ್ನು ಸಮಸಾಟಿಗೆ ಅದಲು ಬದಲು ಮಾಡಿ ಕೊಳ್ಳುವ ಇಲ್ಲವೆ ಮೇಲೊಂದಿಷ್ಟು ಕೊಡುವ ಕೊಳ್ಳುವ ಕ್ರಮವಿದೆ. ನೇರ ವ್ಯಾಪಾರ ನೇರ ಮಾತು ಕತೆಗಳಿಂದ ನಡೆಯುತ್ತದೆ. ಇಲ್ಲಿ ದರ ನಿಗದಿಯಾಗುವಾಗ ಎತ್ತುಗಳ ಹಲ್ಲು ನೋಡುವ ಪದ್ಧತಿಯಿದೆ.

ಎತ್ತುಗಳ ಬಾಯಿ ಕಿಸಿದು ನೋಡುವಾಗ ಎರಡು ಹಲ್ಲು ಹಾಕಿದ್ದರೆ 'ಎಳುಕು' ಎಂದೂ, ನಾಲ್ಕು ಹಲ್ಲು ಹಾಕಿದರೆ ಪ್ರಾಯದ ಹೋರಿ ಎಂದೂ, ಆರು-ಎಂಟು ಹಲ್ಲು ಹಾಕಿದ್ದರೆ ದುಡಿಯಲು ಸರಿಯಾದ ಎತ್ತುಗಳೆಂದೂ, ವಯಸ್ಸಾಗಿದ್ದರೆ ಮುದಿ ಎತ್ತು ಅಥವಾ 'ಹೆಜ್ಜೆ ಕೂಡಿತು' ಎಂದು ತಿಳಿಯುತ್ತಾರೆ. ಇಂತಹವುಗಳನ್ನು ಕೊಳ್ಳುವುದಿಲ್ಲ. ಎತ್ತುಗಳನ್ನು ಬೇಸಾಯಕ್ಕೆ, ಗಾಡಿ ಹೂಡುವುದಕ್ಕೆ ಪ್ರಮುಖವಾಗಿ ಬಳಸುತ್ತಾರೆ. ಕೃಷಿ ಕೆಲಸಕ್ಕೆ ಮುಖ್ಯ ಪ್ರಾಣಿಯಾದ ಎತ್ತನ್ನು ಧಾರ್ಮಿಕ ಕಾರ್ಯಗಳಲ್ಲೂ ಬಳಸುವುದುಂಟು.

ನಂಬಿಕೆಗಳು : ಎತ್ತುಗಳ ಬಗೆಗೆ ಗ್ರಾಮೀಣ ಜನತೆಯಲ್ಲಿ ಹಲವಾರು ನಂಬಿಕೆಗಳಿವೆ ; ಎತ್ತಿಗೆ ಬಲದ ಕೋಡು ಮುಂದಿದ್ದರೆ ಶುಭ, ಕೆಂಗಣ್ಣುಗಳಿದ್ದರೆ ಶೂರ ಎತ್ತು. ಜ್ಯೋತಿ ಸುಳಿಯಿರುವ ಎತ್ತುಗಳನ್ನ ತಂದರೆ ತಂದ ಕೂಡಲೇ ಮನೆಯ ದೇವರ ಮುಂದೆ ದೀಪ ಹಚ್ಚಿಡಬೇಕು. ಆರು ನಿಲ್ಲಿಸಿದಾಗ ಎತ್ತುಗಳು ಮುಂಗಾಲಿಂದ ನೆಲ ಕೆರುದ್ರೆ ಒಳ್ಳೆಯದು. ಹೊಸದಾಗಿ ತಂದ ಎತ್ತುಗಳು ಬಲಗಾಲು ಮುಂದಿಟ್ಟು ಬಂದರೆ ಒಳ್ಳೆಯದು. ಹಣೆ ಚುಕ್ಕಿ, ಹೂಬಾಲ, ಕಾಲು ಕಣಬ ಇರುವ ಎತ್ತುಗಳನ್ನು ಮನೇಲಿ ಕಟ್ಟಬಾರ್ದು. ಎತ್ತು ಎದ್ದ ಕೂಡಲೇ ಗಂಜಳ ಹುಯ್ದು ಸಗಣಿ ಹಾಕಿದರೆ ಮನೆಗೆ ನೆಂಟರು ಬರ್ತಾರೆ. ಗೊಂತಿನಲ್ಲಿ ಕಟ್ಟಿದ ಎತ್ತುಗಳು ಒಂದೇ ಸಮನೆ ತಾಟುಯ್ದರೆ ಏನೊ ಕೆಡಕಾಗುತ್ತದೆಂದು ತಿಳಿಯುತ್ತಾರೆ.

ಗಾದೆಗಳು : ಎತ್ತುಗಳನ್ನು ಕೇಂದ್ರೀಕರಿಸಿದ ಗಾದೆಗಳು ಹಲವಾರಿವೆ: ಎಳೀಲಾರ್ದ ಎತ್ತು ಮೆಳೆ ಮ್ಯಾಲೆ ಬಿತ್ತು. ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ. ಎತ್ತು ಏರಿಗೆಳುದ್ರೆ ಕೋಣ ನೀರಿಗೆಳೀತು. ಎತ್ತಿಗೆ ಜರ ಬಂದ್ರೆ ಎಮ್ಮೆಗೆ ಬರೆಹಾಕಿದ್ರು. ಕಳ್ಳೆತ್ತಿಗೆ ಒಳ್ಳೇ ಮೇವು. ತವರಿನಲ್ಲಿ ಹೆಣ್ಣ ತಡೀಬೇಡ, ದೀವಣಿಗೇಲಿ ಎತ್ತ ತಡೀಬೇಡ.

ಎತ್ತಿಗೆ ಸಂಬಂಧಿಸಿದ ಹಬ್ಬಗಳು ಮತ್ತು ಆಚರಣೆಗಳು : ದನಗಳಿಗೆ ಸಂಬಂಧಿಸಿದಂತೆ ಅವುಗಳಿಗೆ ಮೀಸಲಾದ ಹಲವಾರು ಹಬ್ಬ - ಆಚರಣೆಗಳು ನಾಡಿನಾದ್ಯಂತ ಪ್ರಚಲಿತದಲ್ಲಿವೆ. ಆ ಮೂಲಕ ಎತ್ತನ್ನು ದೇವರೆಂದೋ, ದೇವರ ಪ್ರತಿನಿಧಿ ಎಂದೋ ಇಲ್ಲದೆ ತಮ್ಮ ಏಳ್ಗೆಗಾಗಿ ದುಡಿದ ಪ್ರಾಣಿ ಎಂಬ ಕೃತಜ್ಞತೆಗಾಗಿಯೋ ಗ್ರಾಮೀಣ ಜನತೆ ಅವುಗಳನ್ನು ಪೂಜಿಸುವ ಪರಿಪಾಠವಾಗಿ ಈ ಹಬ್ಬ - ಆಚರಣೆಗಳು ಬೆಳೆದು ಬಂದಿವೆ.

ಟಿ.ಕೆ.

ಎಮ್ಮೆ ಮಾನವನ ಒಡನಾಡಿಯಾಗಿ ಸಾಗುತ್ತಿರುವ ಪ್ರಾಣಿಗಳ ಪೈಕಿ ಎಮ್ಮೆಯೂ ಒಂದು. ಎಮ್ಮೆ ಕಶೇರುಕಗಳ ಜಾತಿಗೆ ಸೇರಿದ ಪ್ರಾಣಿ. ಎಮ್ಮೆಯನ್ನು ಸಾಕುವುದು ಪ್ರಮುಖವಾಗಿ ಹಾಲು ಉತ್ಪಾದನೆಗಾಗಿ. ಜಗತ್ತಿನ ಎಮ್ಮೆಯ ಸಂಖ್ಯೆಯಲ್ಲಿ ಶೇ. 57ರಷ್ಟು ಭಾರತದಲ್ಲಿ ಸಾಕಲ್ಪಟ್ಟಿವೆ. ಭಾರತದಲ್ಲಿ ಎಮ್ಮೆಯ ಸಂಖ್ಯೆ ಆಕಳುಗಳಿಗೆ ಹೋಲಿಸಿದರೆ ಒಂದು ಮೂರಂಶರಷ್ಟು ಇದ್ದರೂ ಒಟ್ಟು ಹಾಲು ಉತ್ಪಾದನೆಯಲ್ಲಿ ಶೇ. 50ರಷ್ಟು ಎಮ್ಮೆಯ ಹಾಲಿನ ಪಾತ್ರವಿರುತ್ತದೆ.



ಎಮ್ಮೆಯ ತಳಿಗಳು : ಕರ್ನಾಟಕದಲ್ಲಿ ಭೌಗೋಳಿಕ ಅಂಶಕ್ಕೆ ತಕ್ಕಂತೆ ಅನೇಕ ಜಾತಿಯ ಎಮ್ಮೆಗಳನ್ನು ಕಾಣಬಹುದು. ಅವುಗಳಲ್ಲಿ ದೇಸಿ, ಜವಾರಿ, ಗೌಳಿ, ಮುರ್ರಾ, ಗೋಳೇರ, ಕಿಲಾರಿ, ಜಾಫರ್, ಗುಜರ್, ಧಾರವಾರಿ, ಸಿಂಗೋಲಿ, ಸ್ಪೂರ್ತ, ಸಾಂಗಲಿ, ನಾಡೆಮ್ಮೆ, ವಿಲಾಯ್ತಿ

ಎಮ್ಮೆ ಎಂದು ಗುರುತಿಸುತ್ತಾರೆ. ಪ್ರದೇಶಗಳಿಗೆ ತಕ್ಕ ಹಾಗೆ ಹೆಸರುಗಳೂ ಬದಲಾಗುತ್ತಾ ತಳಿಗಳೂ ಕೂಡ ಬದಲಾಗುತ್ತವೆ.

ಹಾಲಿಗಾಗಿಯೇ ಸಾಕುವ ಎಮ್ಮೆಗಳು ಅನೇಕ ಜಾತಿಯವು. ಅವುಗಳಲ್ಲಿ ನಾಡೆಮ್ಮೆ ಹಾಗೂ ವಿಲಾಯಿತಿ ಎಂಬ ಎರಡು ಪ್ರಮುಖ ಬಗೆಗಳಿವೆ. ನಾಡೆಮ್ಮೆ ಸ್ವಲ್ಪ ಕುಳ್ಳಗಿರುತ್ತದೆ. ಎಮ್ಮೆಗಳಿಗೆ ರೋಮ ಜಾಸ್ತಿ. ನೀರನ್ನು ಅತಿಯಾಗಿ ಕುಡಿಯುತ್ತವೆ. ಗುಲ್ಬರ್ಗದ ಕಡೆ ಜಾಫರ್ ಎಮ್ಮೆಗಳು ಹೆಚ್ಚು. ಇವುಗಳನ್ನು ಕಿವಿಗಳಿಂದ ಗುರುತಿಸುತ್ತಾರೆ. ಕಿಲಾರಿ ಎಮ್ಮೆ ಎಂದು ಕರೆಯಲ್ಪಡುವ ಎಮ್ಮೆಗಳು ಅತಿ ಕಪ್ಪಾಗಿರುತ್ತವೆ. ಗುಜ್ಜಾರರು ಸಾಕುವ ಗುಜ್ಜಾರ ಎಮ್ಮೆಗಳ ಕೋಡು ಸುರುಳಿಯಾಗಿರುತ್ತದೆ. ದೇಸಿ ತಳಿಗಳ ಹಲ್ಲು ಆನೆ ಹಲ್ಲಿನಂತೆ ಇದ್ದರೆ, ಸಿಂಗೋಲಿ ಎಮ್ಮೆಯ ತಲೆ ಉದ್ದವಾಗಿರುತ್ತದೆ.

ಎಮ್ಮೆಗಳನ್ನು ಸಾಕುವ ರೀತಿ : ಸಾಮಾನ್ಯವಾಗಿ ಎಮ್ಮೆಗಳನ್ನು ಕೊಟ್ಟಿಗೆಗಳಲ್ಲಿ ಕಟ್ಟಿ ಸಾಕುತ್ತಾರೆ. ಅವುಗಳು ಮಲಗುವ ಜಾಗ ನೆಲಹಾಸು ಅಥವಾ ಸಗಣಿ ನೆಲ. ಇದರ ಮೇಲೆ ಸ್ವಲ್ಪ ಎತ್ತರಕ್ಕೆ ಗೋಡೆಕಟ್ಟಿ, ಗಂಜಳ, ಸಗಣಿ ಮೇವಿಗೆ ಬೆರೆಯದಂತೆ ಮೇಯಲು ಸಹಾಯವಾಗಲೆಂದು ಹುಲ್ಲನ್ನು ಹಾಕುತ್ತಾರೆ. ಇವುಗಳಿಗೆ 'ಚರಣಿ' ಎಂದು ಹೆಸರು. ಅದರ ಪಕ್ಕದ ಗೂಟಕ್ಕೆ ಎಮ್ಮೆ ಕಟ್ಟಿ ಹಾಕಿರುತ್ತಾರೆ. ಒಂದೆರಡು ಎಮ್ಮೆ ಇರುವವರು ಮನೆಯ ಪಕ್ಕ, ಹಿಂದೆ, ಮುಂದೆ ಕಟ್ಟಬಹುದು. ಕೊಟ್ಟಿಗೆಯ ಮೇಲ್ಗಡೆ ತೆಂಗಿನ ಗರಿ ಹಾಕಿ ಛಾವಣಿ ಮಾಡುತ್ತಾರೆ. 'ಗಂಜಲಗುಳಿ' ಎಂದು ಕರೆಯುವ ಗುಂಡಿಗಳನ್ನು ಮಾಡಿ, ಎಮ್ಮೆಯ ಗಂಜಲ ಸರಾಗವಾಗಿ ಹರಿದುಹೋಗುವಂತೆ ವ್ಯವಸ್ಥೆ ಮಾಡಿರುತ್ತಾರೆ.

ಸಾಮಾನ್ಯವಾಗಿ ಕೊಟ್ಟಿಗೆಯನ್ನು ಬೆಳಗ್ಗೆ ಸ್ವಚ್ಛಮಾಡುತ್ತಾರೆ. ಸಂಜೆಯ ವೇಳೆಗೆ ಒಣಗಿದ ಕೊಟ್ಟಿಗೆಯಲ್ಲಿ ಆರಾಮವಾಗಿ ಎಮ್ಮೆಗಳು ಇರುತ್ತವೆ. ರಾತ್ರಿ ಹಾಕಿದ ಹುಲ್ಲಲ್ಲಿ ಉಳಿದದ್ದನ್ನು ತೆಗೆದು, ಹೊಸದಾಗಿ ಹುಲ್ಲನ್ನು ಸಂಜೆಯ ವೇಳೆಗೆ ಹಾಕುತ್ತಾರೆ.

ಮೇವು : ಎಮ್ಮೆ ಸಾಕುವವರು ಎರಡು ರೀತಿಯ ಆಹಾರ ನೀಡುವುದನ್ನು ರೂಢಿಸಿಕೊಂಡಿದ್ದಾರೆ. ಮೊದಲನೆಯದು ಹಸುರು ಹುಲ್ಲು ಅಥವಾ ಒಣ ಹುಲ್ಲು ನೀಡುವುದು. ಎರಡನೆಯದು ತಿಂಡಿಯ ರೂಪದಲ್ಲಿ ಆಹಾರವನ್ನು ನೀಡುವುದು. ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಆಹಾರ ನೀಡುವ ಕ್ರಮ ಒಂದೇ ಆಗಿದ್ದರೂ ಆಹಾರದಲ್ಲಿ ಬಳಸುವ ಹುಲ್ಲು, ತಿಂಡಿಗಳು ಸ್ವಲ್ಪ ಅದಲು ಬದಲಾಗುತ್ತವೆ. ಎಮ್ಮೆಗಳನ್ನು ಹೆಚ್ಚಾಗಿ ಸಾಕುವ ಉತ್ತರ ಕರ್ನಾಟಕದಲ್ಲಿ ಕರಕಿ, ಚಜ್ಜಿಹುಲ್ಲು, ಕಣಿಕಿಜೋಳ, ಲವಣ ಮಿಶ್ರಣ ಬತ್ತದ ತೌಡುಗಳನ್ನು ನೀಡಲಾಗುತ್ತದೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ರಾಗಿ, ಬತ್ತ, ಜೋಳದ ಹುಲ್ಲು, ಬೂಸ, ತಿಂಡಿಗಳನ್ನು ನೀಡುತ್ತಾರೆ.

ಹಿಂಡಿಗಳು : ಹುರುಳಿ ಹಿಂಡಿ, ಶೇಂಗಾ ಹಿಂಡಿ, ಜೋಳದಪುಡಿ, ಸೋಯಾಬಿನ್, ಸೂರ್ಯಪಾನದಂತಹ ಪದಾರ್ಥಗಳನ್ನು ನಿಯಮಿತವಾಗಿ ನೀಡುತ್ತಾರೆ. ಅದರೊಂದಿಗೆ ತೌಡು, ಗೋಧಿಹೊಟ್ಟು, ಕಣಕಿ ಹಿಂಡಿ, ಕುಸಬಿ ಹಿಂಡಿ ಕೊಡುತ್ತಾರೆ.

ಬೆಳಗ್ಗೆ ಸಮಯದಲ್ಲಿ ಅಕ್ಕಿ ತೊಳೆದ ನೀರು, ಬಸಿದ ಗಂಜಿ, ಮಜ್ಜಿಗೆ ಸೇರಿಸಿ ಪಾನೀಯ ನೀಡುವರು. ಮಧ್ಯಾಹ್ನ ಸಾಮಾನ್ಯವಾಗಿ ಹೊರಗೆ ಮೇಯಲು ಬಿಟ್ಟು ರಾತ್ರಿ ಹುಲ್ಲು ಹಾಕುತ್ತಾರೆ. ಎಮ್ಮೆಗೆ ಹದಿನೈದು ದಿನಕ್ಕೊಮ್ಮೆ ಅಥವಾ ವಾರಕ್ಕೊಮ್ಮೆ ಸ್ನಾನ ಮಾಡಿಸಿ ಸ್ವಚ್ಛ ಮಾಡುತ್ತಾರೆ. ಊರಿನಲ್ಲಿ ಕೆರೆ, ಕಟ್ಟೆಗಳಿದ್ದರೆ ಎಮ್ಮೆಗಳು ತಾವೇ ಹೋಗಿ ಅಲ್ಲಿ ನಿಲ್ಲುತ್ತವೆ. ಎಮ್ಮೆ ಸೆಗಣಿಯಿಂದ ಬೆರಣಿ ತಟ್ಟುವುದಿದೆ. ಇಲ್ಲವೇ ತಿಪ್ಪೆಗೆ ಹಾಕಿ ಗೊಬ್ಬರ ಮಾಡುವರು. ಎಮ್ಮೆಯ ಹಾಲು ಹಸುವಿನ ಹಾಲಿಗಿಂತ ಬೆಳ್ಳಗೆ ಹಾಗೂ ಗಟ್ಟಿಯಾಗಿರುತ್ತದೆ.

ಸಂತಾನೋತ್ಪತ್ತಿ : ಸಾಮಾನ್ಯವಾಗಿ ಹುಟ್ಟಿದ ಮೂರು ವರ್ಷದ ಬಳಿಕ ಎಮ್ಮೆಗಳು ಬೆದೆಗೆ ಬರುತ್ತವೆ. ಎಮ್ಮೆಗಳಲ್ಲಿ ಬೆದೆಯ ಚಕ್ರವು 21 ದಿನಕೊಮ್ಮೆ ಇರುತ್ತದೆ. ಬೆದೆಯ ಹಂತ ಕೇವಲ 24 ತಾಸು ಇರುತ್ತದೆ. ಎಮ್ಮೆಗಳನ್ನು ವರ್ಷದ ಎಲ್ಲಾ ಕಾಲದಲ್ಲಿಯೂ ಗರ್ಭ ಕಟ್ಟಿಸಬಹುದು. ಬೇಸಗೆ ಕಾಲದಲ್ಲಿ ಹಸುರು ಮೇವು ಹಾಗೂ ತಂಪಾದ ನೀರು



ಕೊಡುವುದರಿಂದ ಗರ್ಭದ ಫಲವತ್ತತೆ ಹೆಚ್ಚಿರುತ್ತದೆ. ಆ ಸಮಯದಲ್ಲಿ ಕೋಣದ ಸಂಪರ್ಕವನ್ನು ಮಾಡಿಸಿ ಗರ್ಭ ನಿಲ್ಲಿಸುತ್ತಾರೆ. ಎಮ್ಮೆಗಳಲ್ಲಿ ಗರ್ಭಧರಿಸುವಿಕೆ ಸೆಪ್ಟೆಂಬರ್ ತಿಂಗಳಿನಿಂದ ಪ್ರಾರಂಭವಾಗುತ್ತದೆ. ತಂಪು ದಿನಗಳಲ್ಲಿ ಗರ್ಭ ಧರಿಸುವ ಶಕ್ತಿ ಹೆಚ್ಚಾಗಿರುತ್ತದೆ. ಉಷ್ಣತೆ ಹೆಚ್ಚಾಗಿರುವಾಗ ದೇಹದಲ್ಲಿರುವ ಥೈರಾಯಿಡ್ ಗ್ರಂಥಿಯ ಕ್ಷೀಣತೆಯಿಂದ ಬೇಸಗೆ ಬಂಜೆತನ ಬರುವುದು ಹೆಚ್ಚು. ಎಮ್ಮೆಗಳ ಪಾಲನೆ ಸರಿಯಾಗಿದ್ದಲ್ಲಿ ಹಾಗೂ ತಂಪು ನೀರಿನಲ್ಲಿ ಈಜುವಿಕೆ ಇದ್ದಲ್ಲಿ ಶೇ. 70ರಷ್ಟು ಎಮ್ಮೆಗಳು ಜುಲೈ ಹಾಗೂ ನವೆಂಬರ್‌ನಲ್ಲಿ ಕರು ಹಾಕುತ್ತವೆ. ಕೇವಲ ಶೇ. 7-8 ಎಮ್ಮೆಗಳು ಏಪ್ರಿಲ್-ಮೇ ತಿಂಗಳಲ್ಲಿ ಕರು ಹಾಕುತ್ತವೆ. ಗರ್ಭ ಧರಿಸಿದ ಎಮ್ಮೆ ಈಯಲು 10 ತಿಂಗಳು 10 ದಿನಗಳು ಬೇಕು. ಎಮ್ಮೆ ಗರ್ಭಧರಿಸಿದಾಗ ತಿಂಡಿ ಕೊಡುವುದರಲ್ಲಿ, ಮೇವು ನೀಡುವುದರಲ್ಲಿ ಬಹಳ ವಿಶೇಷತೆ ಇರುತ್ತದೆ. ತಿಂಗಳ ತುಂಬಿದವುಗಳನ್ನು ಹೊರಗೆ ಮೇಯಲು ಬಿಡುವುದಿಲ್ಲ. ಈಯುವ ಸಮಯದಲ್ಲಿ ಮನೆಯ ಜನವೇ ಸೇರಿ ಸಹಕರಿಸುತ್ತಾರೆ. ಕರು ಹಾಕಲು ಸಲೀಸಾಗಲೆಂದು ತಿಂಡಿಯೊಂದಿಗೆ, ಬೆಣ್ಣೆ, ತುಪ್ಪ ಸೇರಿಸಿ ತಿನ್ನಿಸುವುದೂ ಉಂಟು. ಅದರಿಂದ ಕರುವಿನೊಂದಿಗೆ ಕಸವೂ ಬೇಗ ಬರುತ್ತದೆ. ಎಮ್ಮೆ ಈಯುವಾಗ, ಕೆಳಗೆ ಗೋಣಿ ತಾಟನ್ನು ಹಾಕಿ, ಕರುವನ್ನು ಮಲಗಿಸುತ್ತಾರೆ. ಕಸವೆಲ್ಲಾ ಬಂದ ಮೇಲೆ ಕರುವನ್ನು ತೆಗೆದುಕೊಂಡು ಕೆಚ್ಚಲಿನ ಬಳಿ ಬಂದು ಹಾಲು ಕುಡಿಸಲು ಪ್ರಯತ್ನಿಸುತ್ತಾರೆ. ಎಮ್ಮೆ ಈದ ಮೇಲೆ ಕೆಲವು ಕಡೆ ಒಂಬತ್ತು ದಿನ ಬಿಸಿ ನೀರಿನಿಂದ ಮೈ ತೊಳೆಯುತ್ತಾರೆ. ಈ ಸಂದರ್ಭದಲ್ಲಿ ಜೋಳದ ಹೊಟ್ಟು, ಶೇಂಗಾ ಹೊಟ್ಟು ಹಾಕುತ್ತಾರೆ.

ಬೆಳಗ್ಗೆ ಹಾಗೂ ಸಾಯಂಕಾಲ ನೆಲ್ಲೊಟ್ಟು, ಅಕ್ಕಿನುಚ್ಚು, ಸಜ್ಜೆಯ ನುಚ್ಚು, ಜೋಳ, ರಾಗಿ ಅಂಬಲಿ ಕಲಸಿ ತಿನ್ನಿಸುತ್ತಾರೆ. ಎಮ್ಮೆ 275-305 ದಿನಗಳವರೆಗೆ ಹಾಲು ನೀಡುತ್ತದೆ.

ಗಂಡು ಕರುವನ್ನು ಹೋರಿಗರು ಎಂದೂ ಎಮ್ಮೆ ಕರು ಎಂದೂ ಹಾಗೂ ಎರಡರಿಂದ ಮೂರು ವರ್ಷದವರೆಗಿನ ಹೆಣ್ಣು ಕರುವನ್ನು ಮಣಕ ಎನ್ನುತ್ತಾರೆ. ಹೆಣ್ಣನ್ನು ಎಮ್ಮೆ ಎಂದೂ ಗಂಡನ್ನು ಕೋಣ ಎಂದೂ ಕರೆಯುವರು. ಎಮ್ಮೆಗಳು 20 ವರ್ಷದ ತನಕ ಬದುಕುತ್ತವೆ. ಕೆಲವು ಕಡೆ ಇವುಗಳನ್ನು ಹೊಲ ಉಳುವುದಕ್ಕೆ ಬಳಸುತ್ತಾರೆ.

ಬೇಸಗೆ ದಿನಗಳಲ್ಲಿ ಎಮ್ಮೆಗಳ ಶರೀರದ ಉಷ್ಣತೆಯನ್ನು ಕಾಯ್ದುಕೊಳ್ಳಲು ಮರಗಳ ನೆರಳನ್ನು ಒದಗಿಸಬೇಕು. ಮೇಲ್ಛಾವಣಿಗೆ ತೆಂಗಿನ ಗರಿ, ಹುಲ್ಲಿನ ಹೊದಿಕೆ ಹಾಕಬೇಕು. ಎಮ್ಮೆಗಳ ಕೂದಲು ಕತ್ತರಿಸಿ ಚರ್ಮವನ್ನು ನುಣುಪಾಗಿಡಬೇಕು. ತಣ್ಣೀರನ್ನು ಮೈಗೆ ಸಿಂಪಡಿಸುವುದು ಇಲ್ಲವೇ ಈಜು ಹೊಂಡದ ವ್ಯವಸ್ಥೆ ಮಾಡ ಬೇಕು. ರಾತ್ರಿ ಸಮಯದಲ್ಲಿ ಮೇಯಲು ಬಿಡಬೇಕು. ಹಸುರು ಮೇವು ಒದಗಿಸಿ ತಂಪು ಹೊತ್ತಿನಲ್ಲಿ ತಿಂಡಿ ಮಿಶ್ರಣವನ್ನು ನೀಡಬೇಕು.

ರೋಗಗಳು : ಎಮ್ಮೆಗಳಲ್ಲಿ ಹೆಚ್ಚಾಗಿ ಕಾಣಿಸುವ ರೋಗಗಳೆಂದರೆ ನಾಗೇರು, ಗೊರುಸ್ಲು ,ಕೆಚ್ಚಲು ಬಾವು, ಕುಂದು, ಇಡಕ, ಹೊಟ್ಟೆ ಉಬ್ಬರ, ಓತನಾಲಿಗೆ, ನೆಲಗುಂದು, ಚಪ್ಪೆರೋಗ, ಗುಂಡಿಸೆಲಿ, ಜ್ವರ, ಬಾಲಸುಂಡಿ.

ನಾಗೇರಿನ ಲಕ್ಷಣವೆಂದರೆ : ನಾಲಗೆ ಕಪ್ಪು ಬಂದು, ಬಾಯಿಯಲ್ಲಿ ಹುಣ್ಣುಗಳಾಗುತ್ತವೆ. ಹುಲ್ಲು ಬಿಟ್ಟು ಬಿಡುವುದು. ಈ ನಾಗೇರನ್ನು ಕೀಳಿಸಿ, ಬಾಲಕ್ಕೆ ಬೆನ್ನಿಗೆ ಕೈಯೆಣ್ಣೆ ಕಾಯಿಸಿ ಹಚ್ಚಬೇಕು. ಉತ್ತರದ ಕಡೆ ಎಮ್ಮೆಯ ಕೋಡಿಗೆ ಸುಣ್ಣ ಹಚ್ಚುತ್ತಾರೆ.

ಗೊರಸ್ಲು : ಕಾಲು ಮತ್ತು ಬಾಯಿಗೆ ಬರುವಂಥದ್ದು. ಇಂಥ ಎಮ್ಮೆಗಳನ್ನು ಮಧ್ಯಾಹ್ನದ ಬಿಸಿ ಮರಳಲ್ಲಿ ನಿಲ್ಲಿಸುತ್ತಾರೆ. ಕಾಲಿಗೆ ಕರಿಮೀನು ತೊಳೆದ ನೀರನ್ನು ಎರಚುತ್ತಾರೆ. ಬಾಯಿಯಲ್ಲಿ ಆದಾಗ ಬಾಳೆಹಣ್ಣನ್ನು ಕೊತ್ತಂಬರಿ ಜೊತೆ ತಿನ್ನಿಸುತ್ತಾರೆ.

ಕೆಚ್ಚಲು ಬಾವು : ಕೆಚ್ಚಲಿನಲ್ಲಿ ದಪ್ಪವಾದ ಗಂಟಾಗಿ, ಕೆಚ್ಚಲು ಗಟ್ಟಿಯಾಗುತ್ತದೆ. ಹಾಲು ಕರೆಯಲಾಗುವುದಿಲ್ಲ. ಇದು ಗರ್ಭಧರಿಸಿದ ಸಂದರ್ಭದಲ್ಲಿ ಬರುವ ರೋಗ. ಇದರಿಂದ ಬರುವ ಹಾಲು ರಕ್ತ ಮಿಶ್ರಿತವಾಗಿರುತ್ತದೆ. ಈ ಹಾಲನ್ನು ವಾರಗಳವರೆಗೆ ಪೂರ್ಣವಾಗಿ ತೆಗೆದುಹಾಕುತ್ತಾರೆ. ಈಸ್ಕಿಮುಳ್ಳುಸೊಪ್ಪು ಅರೆದು ಸವರುತ್ತಾರೆ. ಬಾವು ಇರುವ ಕಡೆ ನೀರೆರೆಚುತ್ತಾರೆ.

ಬಾಲಸುಂಡಿ : ಎಮ್ಮೆಗಳ ಬಾಲದ ತುದಿಯಲ್ಲಿ ಸಣ್ಣ ಗಂಟಾಗಿ ಕೂದಲು ಬರುತ್ತದೆ. ಅಂತಹ ಬಾಲವನ್ನು ಕತ್ತರಿಸಿ, ಆ ಭಾಗಕ್ಕೆ ಕಾಯಿಸಿದ ಒಳ್ಳೆಣ್ಣೆ ಸವರುವುದರಿಂದ ಗಾಯ ವಾಸಿಯಾಗುತ್ತದೆ.

ಎಮ್ಮೆಗಳಿಗೆ ಹೊಟ್ಟೆ ಉಬ್ಬರ ಕಾಣಿಸಿಕೊಂಡಾಗ ಹುಣಿಸೆಹಣ್ಣಿನ ಹುಳಿ, ಮಸಿಯನ್ನು ಕಲಸಿ ಕುಡಿಸುವುದರಿಂದ ಹೊಟ್ಟೆ ಉಬ್ಬರ ಕಡಿಮೆಯಾಗುತ್ತದೆ.

ಕೊಂಬುಗಳಿಗೆ ಹುಳು ಬಿದ್ದಾಗ ಕಲ್ಲೆಣ್ಣೆಯನ್ನು ಬಿಸಿ ಮಾಡಿ ಹುಳುಬಿದ್ದ ಕೊಂಬಿಗೆ ಹಾಕಿದರೆ ಹುಳುಗಳು ಸಾಯುತ್ತವೆ. ಇತ್ತೀಚೆಗೆ ಪಶುವೈದ್ಯಕೀಯ ಸೇವಾ ಇಲಾಖೆಯವರು ರೋಗ ಬಂದ ಎಮ್ಮೆಗಳನ್ನು ಪರೀಕ್ಷಿಸಿ ಚುಚ್ಚು ಮದ್ದು ನೀಡುತ್ತಾರೆ.

ಪಿ.ಸಿ.ಎಸ್.

ಎರವರ ಬೇಸಾಯ ಪದ್ಧತಿ ಕೊಡಗು ಪರಿಸರದಲ್ಲಿ ವಾಸಿಸುವ ಎರವರು ಮೂಲತಃ ಕೃಷಿಕಾರ್ಮಿಕರು, ಬೇಸಾಯ ಅವರ ಪಾರಂಪರಿಕ ಕಸುಬು. ಬೇಸಾಯದಿಂದಲೇ ಜೀವನ ಮಾರ್ಗವನ್ನು ಕಂಡುಕೊಂಡ ಜನರಿವರು. ಅವರು ಕೃಷಿ ಚಟುವಟಿಕೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ. ಅನಾದಿಕಾಲದ ಬೇಸಾಯ ಕ್ರಮವಾದ ಕಾಡುಕಡಿದು ನೆಲ ಹಸನುಮಾಡಿ ಉತ್ತು-ಬಿತ್ತುವುದೂ ಸೇರಿದಂತೆ ಬೇಸಾಯದ ಮೂಲವನ್ನು ಕುರಿತಂತೆ ಅವರ ಜನಪದ ಸಾಹಿತ್ಯದಲ್ಲಿ ಹಲವು ಉಲ್ಲೇಖಗಳು ದೊರಕುತ್ತವೆ. ಬಹಳ ಹಿಂದೆ ಎರವರಿಗೆ ಸೇರಿದ್ದ ಭೂಮಿ ಅವರ ಕೈ ತಪ್ಪಿ ಬೆಟ್ಟ ಕುರುಬರ ಪಾಲಾಗಿವೆ ಎಂದು ಹೇಳುವರು. ತರುವಾಯ ವ್ಯವಸಾಯಕ್ಕೆ ಯೋಗ್ಯವಾದ ಕಡೆ ಕಾಡಿನ ಮರ - ಗಿಡಗಳನ್ನು ತರಿ(ಕಡಿ)ದು ಅವುಗಳನ್ನು ಸುಟ್ಟು ಬೇಸಾಯ ಮಾಡುತ್ತಿದ್ದರು ಎಂಬುದರ ಬಗ್ಗೆ ಅವರ ಜನಪದ ಸಾಹಿತ್ಯದಲ್ಲಿ ಅನೇಕ ಪುರಾವೆಗಳು ಕಂಡು ಬರುತ್ತವೆಯಾದರೂ ಈಗ ನಮ್ಮದು ಎಂದು ಹಕ್ಕು ಸ್ಥಾಪಿಸುವ ಪಿತ್ರಾರ್ಜಿತವಾದ ಜಮೀನಿರುವ ಬಗ್ಗೆ ಅವರಲ್ಲಿ ಸಾಕ್ಷ್ಯಾಧಾರಗಳು ಲಭ್ಯವಿಲ್ಲ.

ಬ್ರಿಟಿಷರ ಕಾಲದಿಂದಲೂ ಕೊಡಗಿನ ಬುಡಕಟ್ಟು ಸಮುದಾಯದ ಕುರುಬರು ಮತ್ತು ಎರವರನ್ನು ಅರಣ್ಯ ಶ್ರಮಜೀವಿಗಳೆಂದು ಪರಿಗಣಿಸಲಾಗಿದೆ. ಅನಾದಿಕಾಲದಿಂದಲೂ ಅರಣ್ಯ ಪ್ರದೇಶಗಳಲ್ಲೇ ನೆಲೆಸಿರುವ ಇವರಿಗೆ ತಗ್ಗು ಪ್ರದೇಶದಲ್ಲಿ ಸುಲಭವಾಗಿ ಗದ್ದೆ (ಬತ್ತ) ಬೇಸಾಯ ಮಾಡಬಹುದಾದ ಭೂಮಿಯನ್ನು ನೀಡಿ ವ್ಯವಸಾಯ ಮಾಡಲು ಅವಕಾಶ ನೀಡಲಾಗಿದೆ. (ಆದರೆ ಈಗ ಕೊಡಗಿನ ಅರಣ್ಯ ಪ್ರದೇಶವನ್ನು ರಾಷ್ಟ್ರೀಯ ಉದ್ಯಾನವನ ಎಂದು ಘೋಷಿಸಿದ ಮೇಲೆ ಅರಣ್ಯ ಪ್ರದೇಶಗಳಲ್ಲಿದ್ದ ಎಲ್ಲಾ ಬುಡಕಟ್ಟು ಸಮುದಾಯದವರನ್ನು ಅಲ್ಲಿಂದ ತೆರವುಗೊಳಿಸಲಾಗಿದೆ) ತಾವು ಅಲ್ಲಿ ನೆಲೆಸಲು ಸಾಧ್ಯವಿರುವವರೆಗೆ ಆ ಭೂಮಿಯ ಫಸಲನ್ನು ತಾವೇ ಪಡೆಯಬಹುದು. ಅವರು ಈ ಭೂಮಿಗೆ ಯಾವುದೇ ಭೂಕಂದಾಯ ಕೊಡಬೇಕಾಗಿಲ್ಲ. ಅವರು ಎಷ್ಟೇ ಸುದೀರ್ಘ ಕಾಲ ಅಲ್ಲಿ ಬೇಸಾಯ ಮಾಡಿದರೂ ಅವರು ಈ ಅರಣ್ಯ ಅಥವಾ ಸರ್ಕಾರಿ ಭೂಮಿಯ ಮೇಲೆ ಯಾವುದೇ ಹಕ್ಕು ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಈ ಶ್ರಮಜೀವಿಗಳಿಗೆ ಅಲ್ಲಿ ನೆಲೆಸಲು ಉದ್ದೇಶಪೂರ್ವಕವಾಗಿಯೇ ಅರಣ್ಯ ಇಲಾಖೆಯವರು, ಅರಣ್ಯದ ಅಂಚಿನಲ್ಲಿರುವ ಕಾಫಿತೋಟದ ಮಾಲೀಕರು ಅವರಿಗೆ ನೆಲೆಸಲು ಅವಕಾಶಮಾಡಿಕೊಟ್ಟಿರುತ್ತಾರೆ. ಏಕೆಂದರೆ ಅರಣ್ಯದೊಳಗೆ ನುಗ್ಗಿ ಕೆಲಸ ಮಾಡುವ ಸಾಮರ್ಥ್ಯ ಬೇರೆಯವರಿಗೆ ಸುಲಭವಲ್ಲ. ಅಲ್ಲದೆ ಭೂ ಮಾಲೀಕರ ಕಾಫೀತೋಟ ಮತ್ತು ಗದ್ದೆಗಳಲ್ಲಿ ಕೆಲಸ ಮಾಡಲು ಇವರನ್ನು ಬಿಟ್ಟರೆ ಬೇರೆ ಮಾರ್ಗವೇ ಇರುವುದಿಲ್ಲ. ಈ ಒಂದು ಸದಾವಕಾಶವನ್ನು ಉಪಯೋಗಿಸಿಕೊಂಡು ಅರಣ್ಯಾಧಿಕಾರಿಗಳು ಮತ್ತು ಭೂಮಾಲೀಕರು ಅರಣ್ಯೀಕರಣ ಮತ್ತು ಬೇಸಾಯಕ್ಕೆ ಎರವರನ್ನೇ ಅವಲಂಬಿಸಿಕೊಂಡಿದ್ದಾರೆ.

ಈಗಿನಂತೆ ಹಿಂದೆ ಅರಣ್ಯಕಾಯಿದೆ ಮತ್ತು ಭೂಕಾಯಿದೆಗಳು ಇರಲಿಲ್ಲವಾದ್ದರಿಂದ ತಮಗೆ ಇಚ್ಛೆ ಇದ್ದ ಕಡೆ ತಮ್ಮ ತಮ್ಮವರೊಟ್ಟಿಗೆ ಒಂದೆಡೆ ನೆಲೆಸುತ್ತಿದ್ದರು. ಇವರ ವಾಸಸ್ಥಾನಗಳನ್ನು 'ಕುಂಜು' (ಗ್ರಾಮ) ಎಂದು ಕರೆಯುತ್ತಾರೆ.

ಎಲ್ಲ ಕೃಷಿಕ ವರ್ಗದವರೂ ತಮ್ಮ ತಮ್ಮ ಪ್ರಾದೇಶಿಕ ಸಂಪ್ರದಾಯಗಳಿಗನುಸಾರವಾಗಿ ಕೃಷಿ ಚಟುವಟಿಕೆಗಳನ್ನು ಆರಂಭಿಸುತ್ತಾರೆ. ಅದೇ ರೀತಿ ಮೊದಲು ಆರು (ಏರು) ಕಟ್ಟುವುದನ್ನು 'ಹೊನ್ನಾರು ಕಟ್ಟಂಜೊ' (ಹೊನ್ನಾರು ಕಟ್ಟುವುದು) ಎಂದು ಕರೆಯುತ್ತಾರೆ. ಎರವರು ಬೇಸಾಯದ ಆರಂಭವನ್ನು ಕೇರಳದ ವೈನಾಡು ಪ್ರದೇಶದಲ್ಲಿ ನಡೆಯುವ 'ಬಿಸು' ಎಂಬ (ಸೌರಮಾನ ಯುಗಾದಿ) ಹಬ್ಬದಂದು ಕೈಗೊಳ್ಳುವರು. ಈ ಹಬ್ಬದ ದಿನ ವೈನಾಡಿನ ತಿರುನೆಲ್ಲಿಯಲ್ಲಿರುವ ಪೆಮ್ಮಯ್ಯ (ಪೂರ್ಣವಿಷ್ಣು) ದೇವರ ಉತ್ಸವ ನಡೆಯುತ್ತದೆ. ಅಂದು ಕೊಡಗಿನ ಅನೇಕ ಭಕ್ತರು ಅಲ್ಲಿಗೆ ಹೋಗಿ ದರ್ಶನ ಪಡೆಯುವರು. ಅದಕ್ಕೆ ಮೊದಲು ತಮ್ಮ ತಮ್ಮ ವಾಸಸ್ಥಳಗಳನ್ನು ಶುದ್ಧಗೊಳಿಸಿ ಸುಣ್ಣ-ಬಣ್ಣ ಬಳಿಯುವರು. ಹಬ್ಬದ ದಿನ ಮನೆಯವರೆಲ್ಲ ಸ್ನಾನ ಮಾಡುವರು. ಮನೆಯಲ್ಲಿರುವ ದನಕರುಗಳ ಮೈತೊಳೆದು ಸಿಂಗರಿಸುವರು. ಹಾಗೆಯೆ ಬೇಸಾಯದ ನೇಜಿಂಲು (ನೇಗಿಲು), ನುಗ(ನೊಗ), ಕಣ್ಣಿ (ಏರುಕಟ್ಟುವ ಹಗ್ಗ) ಕೈಕೊಟ್ಟು (ಗುದ್ದಲಿ) ಮುಂತಾದವನ್ನು ತೊಳೆದು ಗಂಧ-ಹೂಗಳನ್ನಿಟ್ಟು ಪೂಜಿಸುವರು. ಮನೆಯ ಅಂಗಳದಲ್ಲಿರುವ ತಮ್ಮ ದೇವರುಗಳನ್ನು ಸಿಂಗರಿಸಿ ಮಡಿಯುಟ್ಟು ಮಾಡಿದ ಅಡುಗೆ (ಅನ್ನ-ಪಾಯಸ)ಯನ್ನು ಎಡೆ (ನೈವೇದ್ಯ) ದೀಪ ಬೆಳಗಿಸಿ ಭಕ್ತಿಯಿಂದ 'ಬಿಸು' ಹಬ್ಬವನ್ನು ಆಚರಿಸುವರು. ಪೂಜೆಯ ಅನಂತರ ಮನೆಯವರೆಲ್ಲ ಒಟ್ಟಿಗೆ ಕುಳಿತು ಊಟಮಾಡುವರು. ಅದೇ ದಿನ ಮುಸ್ಸಂಜೆಗೆ ಮೊದಲು ತಮ್ಮ ನೆರೆಹೊರೆಯವರೆಲ್ಲ ಒಟ್ಟಿಗೆ ಸೇರಿ ಸಿಂಗಾರಗೊಂಡ ಎತ್ತುಗಳಿಗೆ ಏರು ಕಟ್ಟಿಕೊಂಡು ಎಲ್ಲರ ಹೊಲ-ಗದ್ದೆಗಳಲ್ಲಿ ಹೊನ್ನಿನಂತಹ ಬೆಳೆ ಬೆಳೆಯಲಿ ಎಂದು ಹೇಳುತ್ತಾ ಉಳುಮೆ ಮಾಡುವರು. ಇದನ್ನು 'ಹೊನ್ನಾರು' ಎಂಬುದಾಗಿಯೂ ಹೇಳುವರು.

ಮುಂಗಾರು ಮಳೆ ಬಿದ್ದ ಅನಂತರ ಗದ್ದೆಗಳನ್ನು ಉತ್ತು ಹಸನು ಮಾಡಿಕೊಳ್ಳುವರು. ಬತ್ತವನ್ನು ನಾಟಿ ಮಾಡುವ ಪದ್ಧತಿಯನ್ನು ಅನುಸರಿಸುವರು. ನಾಟಿಗೆ ಮೊದಲು ಬೀಜದ ಬತ್ತವನ್ನು ಮೊಳಕೆ ಬರಿಸಿಕೊಳ್ಳುತ್ತಾರೆ. ಹಸನಾದ ಗದ್ದೆಯಲ್ಲಿ ಅನುಕೂಲಕ್ಕೆ ತಕ್ಕಂತೆ ಮಣ್ಣಿಗೆ ಕೊಟ್ಟಿಗೆ ಗೊಬ್ಬರವನ್ನು ಸೇರಿಸಿ ಪಾತಿಮಾಡಿಕೊಳ್ಳುವರು. ಮೊಳಕೆ ಬರಿಸಿರುವ ಬೀಜದ ಬತ್ತವನ್ನು ಪಾತಿಯೊಳಗಿನ ಮಣ್ಣಿನಲ್ಲಿ ತೆಳುವಾಗಿ ಹರಡಿ ಪಾತಿಗಳ ಮೇಲೆ ನೀರನ್ನು ಚಿಮುಕಿಸುತ್ತಾರೆ. ಬೀಜದ ಬತ್ತವನ್ನು ಪಕ್ಷಿಗಳು ಹೆಕ್ಕಿತಿನ್ನದಿರಲೆಂದು ಪಾತಿಯ ಮೇಲೆ ಕಾಡಿನ ಸೊಪ್ಪಿನಿಂದ ಮುಚ್ಚುವರು.

ಪಾತಿಯೊಳಗೆ ಮೊಳೆಯುವ ಬತ್ತದ ಸಸಿಗಳಿಗೆ ಆಗಿಂದಾಗ್ಗೆ ನೀರು ಕೊಟ್ಟು ಬೆಳೆಸುವರು. ಸಸಿಗಳು ನಾಟಿಗೆ ಬರುವಷ್ಟರಲ್ಲಿ ಹಸನಾದ ಗದ್ದೆಗಳಿಗೆ ನೀರು ಕಟ್ಟಿಕೊಂಡು ಉಳುಮೆಮಾಡುವರು. 'ಗದ್ದೆಮರ'ದ ಮೂಲಕ ಕೆಸರುಗದ್ದೆಯನ್ನು ಸಮತಟ್ಟು ಮಾಡಿ ಮೊದಲು ಮನೆಯೊಡತಿ ಒಂದು ಹಿಡಿ ಬತ್ತದ ಸಸಿಯನ್ನು ಕಿತ್ತಿಟ್ಟು ಅದಕ್ಕೆ ಅರಿಸಿನ ಕುಂಕುಮ ಹಾಕಿ ಹಣ್ಣು ಕಾಯಿಗಳಿಂದ ಪೂಜಿಸುವಳು. ಇದಕ್ಕೆ ಅವರು 'ಪೈರಿಗೆ ಕೈ ಇಡುಪ' ಎಂದು ಹೇಳುವರು. ಅನಂತರ ತಮಗೆ ಬೇಕಾಗುವಷ್ಟು ಸಸಿಗಳನ್ನು ಕಿತ್ತು ಗದ್ದೆಗೆ ನಾಟಿಮಾಡುವರು. ನಾಟಿ ಮಾಡಿದ 3-4 ದಿನಗಳವರೆಗೆ ಗದ್ದೆಯಲ್ಲಿ ನೀರು ನಿಲ್ಲುವಂತೆ ನಿಗಾವಹಿಸುವರು. ನಾಟಿಮಾಡಿದ ನಾಲ್ಕೈದು ದಿನಗಳ ಅನಂತರ ಗದ್ದೆಯಲ್ಲಿ ಸುಮಾರು 2-3 ಇಂಚು ನೀರು ಯಾವಾಗಲೂ ಇರುವಂತೆ ನೋಡಿಕೊಳ್ಳುವರು. ಗದ್ದೆಯಲ್ಲಿ ನೀರು ತುಂಬಿದ್ದರೆ ಬೇರೆ ಕಳೆಗಳು ಬೆಳೆಯುವುದಿಲ್ಲ. ಸುಮಾರು 15 ದಿನಗಳ ಬಳಿಕ ನಾಟಿಮಾಡಿರುವ ಸಸಿಗಳ ಸುತ್ತಲಿನ ಮಣ್ಣನ್ನು ಕಲಸುವುದರಿಂದ ಬತ್ತದ ಸಸಿಗಳು ತೆಂಡೆಯಾಗಿ ಬೆಳೆಯುವುದಕ್ಕೆ ನೆರವಾಗುತ್ತದೆ. ಹೀಗೆ ಆಗಿಂದಾಗ್ಗೆ ಬತ್ತ 'ಒಡೆ' ಕಡೆಯುವವರೆಗೂ ಮಾಡುವರು. ನಾಟಿಮಾಡಿದ ಗದ್ದೆಯಲ್ಲಿ ಯಾವಾಗಲೂ ನೀರು ಇರುವಂತೆ ಎಚ್ಚರಿಕೆ ವಹಿಸುವರು.

ಕೊಡಗಿಗೆ ವಿಶಿಷ್ಟವಾದ ಹಬ್ಬ 'ಕೈಪೊಳ್ದು ಅಥವಾ ಕೈಲ್ಮೂರ್ತ. ಈ ಹಬ್ಬದ ಹೊತ್ತಿಗೆ ಗದ್ದೆಯ ಎಲ್ಲಾ ಕೆಲಸವನ್ನು ಮುಗಿಸಿರಬೇಕೆಂದು (ಕೆಲಸಗಳನ್ನೆಲ್ಲ ಮುಗಿಸಿ ಕೈತೊಳೆದುಕೊಂಡಂತೆ) ಇದರ ಅರ್ಥ. ಕೊಡವರಂತೆಯೆ ಎರವರು ಕೂಡ 'ಕೈಪೊಳ್ದು' ಹಬ್ಬವನ್ನು ಮಾಡುವರು. ಆ ದಿನ ಮನೆ ಮಂದಿಯೆಲ್ಲ ಸ್ನಾನಮಾಡಿ ಗದ್ದೆ ಕೆಲಸಕ್ಕೆ ಬಳಸಿದ ಎಲ್ಲಾ ಉಪಕರಣಗಳನ್ನು, ದನಕರುಗಳನ್ನು ತೊಳೆದು ಹೂ-ಗಂಧಗಳಿಂದ ಸಿಂಗರಿಸುವರು. ದೇವರಿಗೆ ಮಾಂಸಾಹಾರದ ಎಡೆ ಇಟ್ಟು ಪೂಜಿಸುತ್ತಾರೆ. ಗದ್ದೆಯ ಕೆಲಸಗಳೆಲ್ಲವೂ ಸುಗಮವಾಗಿ ನೆರವೇರಿದುದರ ನೆನಪಿಗಾಗಿ ಮದ್ಯಪಾನ -ಮಾಂಸದೂಟವಮಾಡಿ ಖುಷಿ ಪಡುವರು. ನೆರೆಹೊರೆಯವರೆಲ್ಲರೂ ಸೇರಿ ತಮ್ಮೂರಿನ 'ದೇವರ ಮಂದು' ಬಳಿ ಸೇರಿ ದುಡಿ-ಚೀಣಿ ವಾದ್ಯದೊಂದಿಗೆ ಹಾಡಿ-ಕುಣಿದು (ನೃತ್ಯ) ಮಾಡುವರು. ಯುವಕರು ತೆಂಗಿನಕಾಯಿಗೆ 'ಗುರಿ'ಯಿಡುವುದು, ಓಡುವುದು ಮುಂತಾದ ವಿವಿಧ ಮನರಂಜನೆಗಳಿಂದ ಆ ದಿನವನ್ನು ಕಳೆಯುತ್ತಾರೆ. ನಾಟಿಮಾಡಿ ಅನಂತರ ಸಸಿಗಳು ಚಿಗುರೊಡೆದು ಗರಿಗಟ್ಟಿದ ಮೇಲೆ ಕಾಡುಮೃಗಗಳ ಹಾವಳಿ ಹೆಚ್ಚಾಗುತ್ತದೆ. ಅವರು ವಾಸಿಸುವ ಅರಣ್ಯ ಪ್ರದೇಶಗಳಲ್ಲಿ ಕಾಡಾನೆ, ಕಾಡೆಮ್ಮೆ, ಜಿಂಕೆಗಳು ಹೆಚ್ಚು ಇರುವುದರಿಂದ ತಮ್ಮ ಬತ್ತದ ಗದ್ದೆಗಳನ್ನು ಅವುಗಳ ಲೂಟಿಯಿಂದ ಕಾಪಾಡುವುದು ಬಹಳ ಕಷ್ಟದ ಕೆಲಸ. ಅದಕ್ಕಾಗಿ ನೆರೆಹೊರೆಯವರೆಲ್ಲರೂ ಒಟ್ಟೊಟ್ಟಿಗೆ ಸೇರಿಕೊಂಡು ಕಾಡುಮೃಗಗಳು ಬರುವ ದಾರಿಯನ್ನು ಗುರುತು ಮಾಡಿಕೊಂಡು ಅಲ್ಲಲ್ಲಿ ಮರಗಳ ಮೇಲೆ 'ಅಟ್ಟಣೆ' ಮಾಡಿಕೊಂಡು ಕುಳಿತು ತಮಟೆ ಶಬ್ದ ಮಾಡಿಕೊಂಡು ಪ್ರಾಣಿಗಳನ್ನು ಬೆದರಿಸುವರು. ಕೆಲವೊಮ್ಮೆ ಕಾಡಾನೆಗಳನ್ನು ಬೆದರಿಸಲು ಹೋಗಿ ಪ್ರಾಣ ಕಳೆದುಕೊಂಡಿದ್ದಾರೆ. ಬತ್ತ ಒಡೆಯಾಗಿ ಕಾಳುಕಟ್ಟುವ ಹೊತ್ತಿಗೆ ಹುತ್ತರಿ ಹಬ್ಬ ಬರುತ್ತದೆ. ಕೊಡವರು ಆಚರಿಸುವ 'ಹುತ್ತರಿ' ಹಬ್ಬದ ದಿನವೇ ಎರವರು ಕೂಡ ಹುತ್ತರಿ ಹಬ್ಬವನ್ನು ಮಾಡುವಂತೆ ತಮ್ಮ ನೆಲೆಯಲ್ಲಿರುವ ದೇವಸ್ಥಾನದಲ್ಲಿ ಕುಂಜುಕಾರ ಗ್ರಾಮದ ಒಡೆಯ ಕನ್ನೆಲಾಡಿ (ಪುರೋಹಿತ), ಕರ್ಮಿ (ಗ್ರಾಮಸೇವಕ) ಇವರ ಮುಂದಾಳತ್ವದಲ್ಲಿ ಗ್ರಾಮದ ಸಭೆ ನಡೆಯುವುದು. ಯಾವ ಗದ್ದೆಯಿಂದ 'ಕದಿರು' (ಬತ್ತದ ತೆನೆ) ತರುವುದು ಎಂಬುದನ್ನು ನಿರ್ಧರಿಸುವರು. ಕದಿರುತರುವ ಗದ್ದೆಗೆ ಹೋಗುವುದಕ್ಕೆ ದಾರಿಮಾಡುವರು. ನಿಶ್ಚಿತವಾದ ಗದ್ದೆಯಲ್ಲಿ ಪೂಜೆಮಾಡುವುದಕ್ಕೆ ತಳವ (ಸ್ಥಳ)ವನ್ನು ಸಿದ್ಧಪಡಿಸಿ ತಳಿರು ತೋರಣಗಳನ್ನು ಕಟ್ಟಿ ಸಿಂಗರಿಸುವರು.

ಅಂದು ಕುಂಜಿನ ಜನರೆಲ್ಲರಿಗೂ ಸಂಭ್ರಮದ ದಿನ. ಮನೆಮಂದಿಯೆಲ್ಲರೂ ಸ್ನಾನಮಾಡಿ ಮಡಿ ಬಟ್ಟೆ ತೊಟ್ಟು ಪೂಜಾ

ಸಾಮಗ್ರಿಗಳೊಡನೆ ವಾದ್ಯದೊಂದಿಗೆ ಗಂಡಸರು, ಹೆಂಗಸರು, ಮಕ್ಕಳು ಎಲ್ಲರು ದುಡಿಯ ತಾಳಕ್ಕೆ ಕುಣಿದು ಕುಪ್ಪಳಿಸುತ್ತಾ ಕದಿರು ತರುವ ಗದ್ದೆಗೆ ಹೋಗುವರು. ಬತ್ತದ ಕದಿರು ಕೊಯ್ಯುವ ಸ್ಥಳಕ್ಕೆ ಸಗಣಿಗಂಜಲಗಳಿಂದ ಶುದ್ಧಿಮಾಡುವರು. ಗೊನೆಬಾಗಿದ ಬತ್ತದ ಕದಿರುಗಳಿಗೆ ಪೂಜೆಮಾಡಲು ಐದು ಅಥವಾ ಏಳು ಜನರನ್ನು ಆಯ್ಕೆಮಾಡುವರು. ಇವರು ಬೆಸ ಸಂಖ್ಯೆಯಲ್ಲಿ ಕದಿರು ಕುಯ್ಯುವುದು ವಾಡಿಕೆ. ಎಲ್ಲರು ಕದಿರಿಗೆ ಬಾಳೆಹಣ್ಣು-ತೆಂಗಿನಕಾಯಿ ಅರ್ಪಿಸಿ, ನೈವೇದ್ಯಕ್ಕೆ ಪುರಿ-ಉರ್ಕಲುಗಳನ್ನಿಟ್ಟು ಪೂಜೆಮಾಡುವರು. ಪೂಜೆಯ ವೇಳೆ ವಾದ್ಯ ಮೇಳ ನಡೆಯುತ್ತದೆ. ಅಲ್ಲಿ ನೆರೆದಿದ್ದವರೆಲ್ಲರೂ 'ಪೊಲಿ ಪೊಲಿ ದೇವ ಪೊಲಿ ಪೊಲಿ' (ಹೆಚ್ಚಲಿ ಹೆಚ್ಚಲಿ ದೇವ ಹೆಚ್ಚಲಿ) ಎಂದು ಕೂಗಿ ದೇವರಲ್ಲಿ ಪ್ರಾರ್ಥಿಸುವರು. ಆಗ ಬಾಣ, ಬಿರಿಸು, ಪಟಾಕಿಗಳನ್ನು ಹೊತ್ತಿಸುವರು. ಕದಿರು ಪೂಜೆಮಾಡಿದವರೆಲ್ಲರೂ ಬತ್ತದ ಬುಡಕ್ಕೆ ಹಾಲು-ಜೇನು ಸುರಿದು ಭೂಮಾತೆಯನ್ನು ನೆನೆದು ಹರಿತವಾದ ಕುಡುಗೋಲಿನಿಂದ ಕದಿರು ಬತ್ತವನ್ನು ಕಟಾವು ಮಾಡುತ್ತಾರೆ. ಕೊಯ್ದುಕದಿರನ್ನು ಹರಿವಾಣದಲ್ಲಿಟ್ಟು ವ್ಯಕ್ತಿಯೊಬ್ಬ ತಲೆಯಮೇಲೆ ಹೊತ್ತುಕೊಂಡು ಮುಂದೆ ಸಾಗುವನು. ಅವನನ್ನು ಉಳಿದವರು ಹಿಂಬಾಲಿಸುತ್ತಾ 'ಪೊಲಿಪೊಲಿದೇವಾ' ಎಂದು ಸಾರುತ್ತಾ ದೇವರ ಗುಡಿಗೆ ಬರುವರು. ದೇವಸ್ಥಾನದ ಬಾಗಿಲಲ್ಲಿ ಮುತ್ತೈದೆಯೊಬ್ಬಳು ಕದಿರು ಹೊತ್ತಿರುವವನ ಕಾಲುತೊಳೆದು ದೇವಾಲಯಕ್ಕೆ ಬರಮಾಡಿಕೊಳ್ಳುವಳು. ದೇವರ ಮುಂದೆ ಕದಿರನ್ನಿಟ್ಟು ಪೂಜಿಸುತ್ತಾರೆ. ತರುವಾಯ ಬಂದವರೆಲ್ಲರಿಗೂ ಪ್ರಸಾದೋಪಾದಿಯಲ್ಲಿ ಬತ್ತದ ಕದಿರ (ತೆನೆ)ನ್ನು ವಿತರಿಸುವರು. ಕದಿರು ಪಡೆದುಕೊಂಡವರು ತಮ್ಮ ಮನೆಯ ಮುಂಬಾಗಿಲಿಗೆ ಸ್ವಲ್ಪ ಭಾಗವನ್ನು ತೋರಣಮಾಡಿ ಕಟ್ಟುವರು. ಉಳಿದ ಕದಿರನ್ನು ಬಿಡಿಸಿ ಅಕ್ಕಿಮಾಡಿ ಬೆಲ್ಲದೊಂದಿಗೆ ಸೇರಿಸಿ ಪಾಯಸಮಾಡಿ ಊಟ ಮಾಡುವರು.

ಸಾಮಾನ್ಯವಾಗಿ ಹುತ್ತರಿ ಹಬ್ಬವು ನವೆಂಬರ್ ಅಥವಾ ಡಿಸೆಂಬರ್ ತಿಂಗಳ ನಡುವೆ ಬರುವ ಪೂರ್ಣಿಮೆಯ ದಿನ ನಡೆಯುತ್ತದೆ. ಕಟಾವಿಗೆ ಸಿದ್ಧವಾದ ಬತ್ತವನ್ನು ಸುಗ್ಗಿಯ ಸಂಕೇತವಾಗಿ ಮನೆಗೆ ತುಂಬಿಕೊಳ್ಳುವುದು ಈ ಹಬ್ಬದ ಹಿಂದಿರುವ ಸಂಕೇತ. 'ಪುದಿಅರಿ' ಹೊಸ ಅಕ್ಕಿ ಎಂಬುದು 'ಹುತ್ತರಿ' ಎಂದು ಹೆಸರಾಗಿದೆ.

ಹುತ್ತರಿ ಹಬ್ಬವಾದ ಮೇಲೆ ಕಟಾವಿಗೆ ಬಂದಿರುವ ಬತ್ತವನ್ನು ಕೊಯ್ಯುವುದಕ್ಕೆ ಮೊದಲು 'ಕಣ'ವನ್ನು ಸಿದ್ಧಮಾಡುವರು. ಕಣದ ಮಧ್ಯಕ್ಕೆ ಒಂದು 'ಮೇಟಿಕಂಬ'ವನ್ನು ನೆಟ್ಟು ಪೂಜಿಸುವರು. ಎರವರಿಗೆ 'ಮೇಟಿಕಂಬ' ಬಹಳ ಮುಖ್ಯವಾದ ಒಂದು ಪವಿತ್ರ ಸಾಧನ. ಅವರಲ್ಲಿ ಪ್ರಚಲಿತವಾಗಿರುವ ಮಾತೊಂದಿದೆ. 'ಮೇಟಿನೆಸೇರಿ ಕೋಟಿ ಬಂದೈ' ಇದರ ಅರ್ಥವೇನೆಂದರೆ ನೆಲಸಲು ಯೋಗ್ಯವಾದ ಒಂದು ಪ್ರದೇಶದಲ್ಲಿ ಮೊದಲು ಯಾವ ವ್ಯಕ್ತಿ ಬಂದು ನೆಲಗುಡಿಸಿ ಅಲ್ಲಿ ಒಂದು ಕಂಬವನ್ನು ನೆಟ್ಟು ಅದರ ಮುಂದೆ ಮನೆ/ಗುಡಿಸಿಲು ಮಾಡಿಕೊಂಡು ನೆಲೆ ನಿಲ್ಲುತ್ತಾನೋ ಅವನು ಕುಂಜುಕಾರ. ಅವನ ಅನಂತರ ಅಲ್ಲಿ ಹಲವು ಕುಟುಂಬಗಳು ನೆಲೆನಿಂತು ಜೀವನ ಆರಂಭಿಸುವರು. ಮೇಟಿಕಂಬ-ಒಕ್ಕಲು ಸಂಕೇತ ಎಂಬುದು ಎರವರ ನಂಬಿಕೆ. ಆದ್ದರಿಂದ ಮೇಟಿಕಂಬ ನೆಟ್ಟ ಮೊದಲಿಗನನ್ನು 'ಕುಂಜುಕಾರ (ಗ್ರಾಮದ ಯಜಮಾನ) ಎಂದು ಗೌರವಭಾವದಿಂದ ಕಾಣುವರು.

ಕಣದಲ್ಲಿ ಮೇಟಿಕಂಬವನ್ನು ನೆಟ್ಟಮೇಲೆ ಅದರ ಸುತ್ತಲೂ ಒಕ್ಕಣೆಗೆ ಅನುಕೂಲವಾಗುವಷ್ಟು ಸುತ್ತಳತೆಯ ಪ್ರದೇಶವನ್ನು ಸಗಣಿಯಿಂದ ಸಾರಿಸುವರು. ಕಣ ಸಿದ್ಧಗೊಂಡ ಅನಂತರ ಎಲ್ಲರೂ ತಮ್ಮ ತಮ್ಮ ಗದ್ದೆಯಲ್ಲಿ ಬೆಳೆದ ಬತ್ತವನ್ನು ಕಟಾವುಮಾಡಿ ಒಂದೆರಡು ದಿನ ಗದ್ದೆಯಲ್ಲೇ ಬಿಡುವರು. ಬತ್ತದ ಅರಿ ಬಾಡಿದ ಮೇಲೆ ಹೊರೆಮಾಡಿ ಕಣದಲ್ಲಿ 'ಮೆದೆ' (ಗುಡ್ಡೆ) ಹಾಕುವರು. ಗದ್ದೆಯಿಂದ ಕಣಕ್ಕೆ ತಂದ ಬತ್ತದ ಗುಡ್ಡೆಯ (ಹುಲ್ಲ)ನ್ನು ಕಾಡುಮೃಗಗಳಿಂದ ರಕ್ಷಿಸಲು ನೆರೆಹೊರೆಯವರೆಲ್ಲರೂ ಸೇರಿ ಹಗಲು-ರಾತ್ರಿ ಸರದಿಯಂತೆ ಕಾವಲು ಕಾಯುವರು.

ಸಾಮಾನ್ಯವಾಗಿ ಬತ್ತದ ಒಕ್ಕಣೆಯನ್ನು ಸಂಕ್ರಾತಿಯ ಹಬ್ಬದ ಅನಂತರ ಕೈಗೊಳ್ಳುವರು. ಕಣದ ಮೇಟಿಕಂಬದ ಸುತ್ತ ಅರಿಯನ್ನು ಹರಡಿ ನಾಲ್ಕೈದು ದನಗಳನ್ನು ತೆಕ್ಕೆ ಕಟ್ಟಿ ಮೇಟಿಕಂಬದ ಸುತ್ತ ವೃತ್ತಾಕಾರವಾಗಿ ತುಳಿಸುವರು. ಹೀಗೆ ಬತ್ತವನ್ನು ತುಳಿಸುವ ಕೆಲಸಕ್ಕೆ 'ಒಕ್ಕಣೆ' ಮಾಡುವುದು ಎನ್ನುವರು. ಒಕ್ಕಿದ ಹುಲ್ಲನ್ನು ಕೊಡವಿ ಬತ್ತವನ್ನು ಗುಡಿಸಿ ಮೇಟಿಕಂಬದ ಸುತ್ತ ರಾಶಿ ಹಾಕುವರು. ಬತ್ತದ ಹುಲ್ಲನ್ನು ಹೊರೆಕಟ್ಟಿ ಬೇರೆಡೆಗೆ ಮೆದೆಹಾಕುವರು. ಬತ್ತವನ್ನು ತೂರಿ ಹಸನಾದ ಬತ್ತವನ್ನು ರಾಶಿಹಾಕಿ ಅದರ ಮೇಲೆ ಸಗಣಿಯಿಂದ ಮಾಡಿದ ಬೆನಕನನ್ನು (ಗಣಪತಿ) ಇಟ್ಟು ರಾಶಿಯ ಸುತ್ತ ಒಕ್ಕಣೆಗೆ ಬಳಸಿದ 'ಮುರಾಮು' (ಮೊರ), 'ಅಲಾತೆ' (ಕಣಗುಡಿಸುವ ಪೊರಕೆ ಅಥವಾ ಹಿಡ್ಲು), 'ಕೊಂಗ' (ಮೂಲೆಮೊರ), ಗೋರ್ಮಣೆ (ಬತ್ತವನ್ನು ಗೋರಿ ಗುಡ್ಡೆಮಾಡುವ ಸಾಧನ) ಮೇರ್ಕೋಲೊ (ಬತ್ತದ ಹುಲ್ಲನ್ನು ಕೊಡುವ ಒಕ್ಕೆಕೋಲು), 'ಪರೆ' (ಬತ್ತ ಅಳೆಯುವ ಬಳ್ಳ), ಹೆಡ್ಗೆ (ಬತ್ತ ತುಂಬುವ ಕುಕ್ಕೆ) ಮುಂತಾದ ಸಾಮಗ್ರಿಗಳನ್ನು ಇಡುವರು. ಹೆಡಿಗೆ ಮತ್ತು ಮೊರದ ತುಂಬ ಬತ್ತ ತುಂಬಿಟ್ಟು ಪೂಜೆಮಾಡುವರು. ಪೂಜೆಯಾದ ಬಳಿಕ ಮೊರ ಮತ್ತು ಹೆಡ್ಗೆಯಲ್ಲಿ ತುಂಬಿಟ್ಟ ಬತ್ತವನ್ನು ದುಡಿದ ಎತ್ತಿಗೆ ತಿನ್ನಿಸಿ ಉಳಿದ ಬತ್ತವನ್ನು ತಮ್ಮ ದೇವರಿಗೆಂದು ಮೀಸಲಿಡುತ್ತಾರೆ. ಅನಂತರ ರಾಶಿ ಬತ್ತವನ್ನು ಮನೆಯ ವಾಡೆ-ಕಣಜದಲ್ಲಿ ತುಂಬುವರು.

ಇತರೆ ಬುಡಕಟ್ಟು ಸಮುದಾಯದವರಂತೆ ಎರವರು ಸಹ ಬೇಸಾಯದ ಬಿಡುವಿನ ಕಾಲದಲ್ಲಿ ಮತ್ತು ವಾರ್ಷಿಕ ಋತುಮಾನಗಳಲ್ಲಿ ಸ್ವಾಭಾವಿಕವಾಗಿ ದೊರೆಯುವ ಗೆಡ್ಡೆ-ಗೆಣಸು, ಹಣ್ಣು-ಕಾಯಿಗಳನ್ನು ಅರಣ್ಯಗಳಿಂದ ಸಂಗ್ರಹಿಸುವರು. ಅವರು ಚೆನ್ನಾಗಿ ಬೇಟೆಯಾಡುವುದನ್ನು ಬಲ್ಲವರಾದರೂ ಅವರ ತಾಣಗಳಲ್ಲಿ ಬೇಟೆಯಾಡುವುದನ್ನು ಅರಣ್ಯ ಇಲಾಖೆ ನಿಷೇಧಿಸಿದೆ. ಇದರಿಂದಾಗಿ ಬೇಟೆ ಹವ್ಯಾಸವನ್ನು ಪೂರ್ಣವಾಗಿ ಕೈ ಬಿಟ್ಟಿದ್ದಾರೆ. ಕಾಡಿನ ಕಿರು ಉತ್ಪನ್ನಗಳನ್ನು ಸಂಗ್ರಹಿಸುವುದಕ್ಕೂ ಮತ್ತು ರಕ್ಷಿತ ಅರಣ್ಯ ಪ್ರದೇಶಗಳನ್ನು ಪ್ರವೇಶಿಸುವುದಕ್ಕೂ ನಿರ್ಬಂಧಗಳಿವೆ. ಕಾನೂನು ಕಟ್ಟಳೆಗಳಿಂದಾಗಿ ಇತ್ತೀಚಿನ ಅರಣ್ಯವಾಸಿಗಳ ಬದುಕು ಕಷ್ಟಕರವಾಗಿದೆ.

ಎಚ್.ಪಿ.ಎಸ್.

ಎರೆಹುಳು ಇದು ರೈತನ ಮಿತ್ರ. ಜಮೀನಿನ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಇದರ ಪಾತ್ರ ಹಿರಿದು. ಇದೊಂದು ಅಕಶೇರುಕ, ಖೀಟೊಪೋಡ ವರ್ಗದ ಅಲಿಗೋ ಖೀಟ ಎಂಬ ಗುಂಪಿಗೆ ಸೇರಿದ ಪ್ರಾಣಿ. ಇದರಲ್ಲಿ ಅನೇಕ ಪ್ರಭೇದಗಳಿವೆ. ಉತ್ತರ ಅಮೇರಿಕದಲ್ಲಿ ಲುಂಬ್ರಿಕಸ್ ಟೆರೆಸ್ಟ್ರಿಸ್ ಪ್ರಭೇದವಿದೆ. ಫೆರಿಟೀಮ ಪಾಸ್ತುಮ ಮತ್ತು ಮೆಗಾಸ್ಕೊಲೆಕ್ಸ್ ಈ ಎರಡು ಪ್ರಭೇದಗಳು ಭಾರತದಲ್ಲಿವೆ.

ತೇವ ಇರುವಲ್ಲಿ ಇದರ ವಾಸ. ತೋಟ, ಗದ್ದೆ, ಬದು, ಏರಿ, ಅಡಕೆ, ತೆಂಗು, ಬಾಳೆ, ಎಲೆತೋಟ, ಸೊಪ್ಪಿನ ತೋಟ ಮುಂತಾದೆಡೆಗಳಲ್ಲಿ ಇವು ಹೆಚ್ಚಾಗಿ ಜೀವಿಸುತ್ತವೆ. ಹಗಲಿನಲ್ಲಿ ಪಕ್ಷಿ ಪ್ರಾಣಿಗಳ ಕಾಟವಿರುವುದರಿಂದ ಹಗಲೆಲ್ಲ ಮಣ್ಣಿನಲ್ಲಿ ಹುದುಗಿದ್ದು ರಾತ್ರಿ ಹೊರಬರುತ್ತದೆ. ಇದರ ಆಹಾರ - ಎಲೆ, ಕಾಂಡ, ಹುಲ್ಲು ಮುಂತಾದ ಕೊಳೆಯುತ್ತಿರುವ ವಸ್ತುಗಳು. ಮಣ್ಣು ಮಿಶ್ರಿತ ಆಹಾರ ಸೇವಿಸುವ ಇದನ್ನು 'ಸ್ವಾಭಾವಿಕ ನೇಗಿಲು' ಎಂದು ಕರೆಯಬಹುದು. ಭೂಮಿಯನ್ನು ಕೊರೆಯುತ್ತಾ ಹೋಗಿ, ಮಣ್ಣನ್ನು ಫಲವತ್ತು



ಗೊಳಿಸುವುದಲ್ಲದೆ ಮಣ್ಣಿಗೆ ಗಾಳಿ ಸೇರಲು ಇದು ಸಹಕಾರಿ. ಇದು ಹೊರಹಾಕುವ ತ್ಯಾಜ್ಯ ಸಸ್ಯಗಳಿಗೆ ಬೇಕಾದ ಎಲ್ಲ ಬಗೆಯ ಪೋಷಕಾಂಶಗಳನ್ನು ಕೊಡುತ್ತದೆ. ಇದರ ಬಣ್ಣ ಕಂದುಮಿಶ್ರಿತ ಕೆಂಪು, ಕೆಲವು ಮಣ್ಣಿನ ಬಣ್ಣವನ್ನೂ ಹೊಂದಿರುತ್ತವೆ.

ಅಸಂಖ್ಯ ವಲಯಗಳುಳ್ಳ ಇದು ಭಾರತದಲ್ಲಿ ಒಂದರಿಂದ ಒಂದೂವರೆ ಅಡಿ ಉದ್ದವಿದ್ದು, ಸಣ್ಣ ಬಳ್ಳಿಯ ಗಾತ್ರವಿರುತ್ತದೆ.

ಎಸ್.ಕೆ.ಎನ್.

ಎಲಚಿ ಇದು ಬಹುವಾರ್ಷಿಕ ಮರ. ಇಂಗ್ಲಿಷಿನಲ್ಲಿ ಬ್ಯೇರ್‌ಫ್ರೂಟ್ ಟ್ರೀ ಎಂದೂ ಕನ್ನಡದಲ್ಲಿ ಬೋರೆ ಎಂದೂ ಕರೆಯುವರು. ಕ್ಯಾಮ್ನೇಸಿ ಕುಟುಂಬಕ್ಕೆ ಸೇರಿದೆ. ಏಷ್ಯ, ಆಸ್ಟ್ರೇಲಿಯ, ಆಫ್ರಿಕಾ ಖಂಡಗಳಲ್ಲಿ ಬೆಳೆಯುತ್ತದೆ. ಇದು ಎಲ್ಲ ವಾತಾವರಣದಲ್ಲಿಯೂ ಬೆಳೆಯಬಲ್ಲುದು. ಹುಲ್ಲುಗಾವಲು, ಒಣಬಂಜರು ನೆಲದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಮುಳ್ಳುಗಳುಳ್ಳ ಈ ಮರ ಸು. 40-50 ಅಡಿ ಎತ್ತರ ಬೆಳೆಯುತ್ತದೆ. ಈ ಮರದ ಕಾಂಡದ ಬಣ್ಣ ಕಪ್ಪು. ತೊಗಟೆಯ ಮೇಲ್ಭಾಗ ಬಿರುಕಿನಂತೆ ಗೋಚರಿಸುತ್ತಿದ್ದು ಒಳಭಾಗ ಕೆಂಪಗೆ ಇರುತ್ತದೆ. ರೆಂಬೆಗಳು ತೂಗುತ್ತಿರುತ್ತವೆ. ಪತ್ರಪುಚ್ಛಗಳು ಬಲಿತ ಮೇಲೆ ಮುಳ್ಳುಗಳಾಗಿ ಮಾರ್ಪಟ್ಟು ಒಂದು ಮೇಲ್ಮುಖವಾಗಿಯೂ ಮತ್ತೊಂದು ಇಳಿಮುಖವಾಗಿಯೂ ಇರುತ್ತದೆ. ಎಲೆಗಳ ಕೆಳಭಾಗದಲ್ಲಿ ಚಕ್ರಾಕಾರವಾಗಿ ಮೂರು ಭಾಗಗಳಿದ್ದು ಅದರ ಮೇಲೆ ರೋಮಗಳಂತಹ ರಚನೆಗಳಿರುತ್ತವೆ. ಎಲೆಯ ಕಂಕುಳಲ್ಲಿ ಸಣ್ಣದಾದ ಹಸುರು-ಹಳದಿ ಬಣ್ಣದಿಂದ ಕೂಡಿದ ಮಧ್ಯಾರಂಭಿ ಗೊಂಚಲುಗಳು ಕಂಡುಬರುತ್ತವೆ. ಕಾಯಿಯಾಗಿದ್ದಾಗ



ಹಸುರು ಬಣ್ಣ ಕ್ರಮೇಣ ಕಿತ್ತಲೆ ಅಥವಾ ಕೆಂಪು ಬಣ್ಣದಿಂದ ಕೂಡಿದ್ದು, ದುಂಡನೆ ಗೋಲಿಯಾಕಾರ ಮತ್ತು ಅಷ್ಟೇ ಗಾತ್ರದ ಹಣ್ಣುಗಳನ್ನು ಕೊಡುತ್ತದೆ. ಹುಳಿರುಚಿಯ ಈ ಹಣ್ಣಿನ ಒಳ ಭಾಗ ಲೋಳೆಯಂತಿದ್ದು ಬೀಜ ದಪ್ಪಗೆ ಗಟ್ಟಿಯಾಗಿರುತ್ತದೆ.

ಪ್ರಭೇದಗಳು : ಪಂಜಾಬಿನ ಎಡ್ವ್ಯರ್ತ್ ವಿಧದ ಹೈಸುಡ್ರಿ



ಎಂಬುದು ಪ್ರಮುಖವಾದುದು. ರಾಯಬೋರೆ ಎಂಬ ಪ್ರಭೇದ ತಿನ್ನಲು ರುಚಿಯಾಗಿರುತ್ತದೆ. ಕಾಯಿಯಾಗಿರುವಾಗ ಚಟ್ನಿ, ಉಪ್ಪಿನಕಾಯಿ, ಗೊಜ್ಜು ಮೊದಲಾದುವನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ಏಪ್ರಿಲ್-ಸೆಪ್ಟಂಬರ್ ಅವಧಿಯಲ್ಲಿ ಹೂಬಿಟ್ಟು ಡಿಸೆಂಬರ್-ಮಾರ್ಚ್ ಅವಧಿಯಲ್ಲಿ ಫಲ ನೀಡುತ್ತದೆ. ಇದರ ಕಾಂಡ ಗಟ್ಟಿಯಾಗಿದ್ದು ಗೃಹೋಪಯೋಗಿ ವಸ್ತುಗಳಿಗೂ ಆಟಿಕೆಗಳಿಗೂ ಮತ್ತಿತರ ಬಡಿಗೆ ಸಲಕರಣೆಗಳಿಗೂ ತುಂಬ ಉಪಯುಕ್ತ. ರೆಂಬೆಗಳನ್ನು ಸವರಿ ತೋಟಗಳಿಗೆ ಬೇಲಿಯಂತೆ ಉಪಯೋಗಿಸುತ್ತಾರೆ.

ಎನ್.

ಎಲೆಕೋಸು ಎಲೆ ಕೋಸು ಸಾಮಾನ್ಯವಾಗಿ ಚಳಿಗಾಲದಲ್ಲಿ ಮತ್ತು ತಂಪಾದ ಹವಾಗುಣವುಳ್ಳ ಎಲ್ಲಾ ಕಡೆಯಲ್ಲೂ ಬೆಳೆಯುವ ತರಕಾರಿ. ಆಗಸ್ಟ್ ತಿಂಗಳಿನಿಂದ ಜನವರಿ ತಿಂಗಳವರೆಗೆ ಹೆಚ್ಚು ಬೆಳೆಯುವುದನ್ನು ಕಾಣಬಹುದು. ನೀರಿನ ಸೌಲಭ್ಯವಿದ್ದರೆ ಎಲ್ಲಾ ಕಾಲದಲ್ಲಿಯೂ ಬೆಳೆಯಬಹುದು. ಆಂಗ್ಲಭಾಷೆಯಲ್ಲಿ Cabbage ಎಂದು ಕರೆಯುವ ಎಲೆಕೋಸು ಕೋಸುಗಳ ಒಂದು ಪ್ರಭೇದವಾಗಿದೆ. ಈ ಎಲೆಯ ಕೋಸಿನ ಬೀಜವನ್ನು ಒಟ್ಲು ಪಾತಿ ಮಾಡಿ ಇಪ್ಪತ್ತು ದಿನ ಕಳೆದ ಮೇಲೆ ನಾಟಿ ಮಾಡುತ್ತಾರೆ.

ಬೇಸಾಯ : ಎಲೆಕೋಸಿನ ಬೀಜಗಳನ್ನು ಒಟ್ಲು ಪಾತಿಗಳಲ್ಲಿ ಬಿತ್ತಿ ಹದವರಿತು ನೀರುಣಿಸುವರು. ಇದಕ್ಕೂ ಮುಂಚಿತವಾಗಿ ಭೂಮಿಯನ್ನು ಹದ ಮಾಡಿಕೊಳ್ಳಬೇಕು. ಕಳೆಯಿದ್ದರೆ ಕಿತ್ತು ಹಾಕಬೇಕು. ಒಂದು ಎಕರೆಗೆ ಹದಿನೈದರಿಂದ ಇಪ್ಪತ್ತು ಗಾಡಿಯಷ್ಟು ಕೊಟ್ಟಿಗೆ ಗೊಬ್ಬರವನ್ನು ಎರಚಿ ಮಣ್ಣಿಗೆ ಮಿಶ್ರವಾಗುವಂತೆ ಉಳುಮೆ ಮಾಡಬೇಕು. ಮಣ್ಣನ್ನು ಚೆನ್ನಾಗಿ

ಒಣಗಿಸಿ ನಾಲ್ಕೈದು ಬಾರಿಯಾದರೂ ಉಳುಮೆ ಮಾಡಬೇಕು. ಒಟ್ಲು ಮಾಡಿದ ಬೀಜಗಳು ಐದಾರು ದಿನಕ್ಕೆ ಮೊಳಕೆಯೊಡೆದು ಇಪ್ಪತ್ತು ದಿನಕ್ಕೆ ಸಸಿಗಳು ನೆಡಲು ಹದವಾಗಿರುತ್ತವೆ. ತಿಂಗಳು ತುಂಬುವುದರೊಳಗಾಗಿ ಸಸಿಗಳನ್ನು ನಾಟಿ ಮಾಡಬೇಕು. ಒಂದೂವರೆ ಅಡಿಗೊಂದರಂತೆ ಸಾಲು ಹೊಡೆದಿರಬೇಕು. ಪ್ರತಿ ಸಾಲಿಗೂ ಸಸಿಯಿಂದ ಸಸಿಗೆ ಒಂಬತ್ತರಿಂದ ಹತ್ತು ಅಂಗುಲದಷ್ಟು ದೂರಕ್ಕೆ ನೆಡಬೇಕು. ಎರಡು ಮೂರು ದಿನಗಳಿಗೊಮ್ಮೆ



ಹದವರಿತು ನೀರು ಹಾಯಿಸಬೇಕು. ಸಸಿಗಳು ಬೆಳೆಯುತ್ತಾ ಹೋದಂತೆ ಸ್ವಲ್ಪ ರಾಸಾಯನಿಕ ಗೊಬ್ಬರ ಹಾಕಬೇಕು. ಎಲ್ಲಿಯೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸಸಿಗಳನ್ನು ನೆಟ್ಟು ಒಂದು ತಿಂಗಳಾದ ಮೇಲೆ ಸಸಿಗಳ ಸುತ್ತ ನೆಲವನ್ನು ಕೆದಕಿ ಕಳೆ ಕಿತ್ತು ಸಸಿಗಳ ಬುಡಗಳಿಗೆ ಪುಡಿ ಮಣ್ಣು ಬೀಳುವಂತೆ ಮಾಡಬೇಕು. ಮೂರರಿಂದ ನಾಲ್ಕು ತಿಂಗಳೊಳಗೆ ಎಲೆಕೋಸು ಕೊಯ್ಲಿಗೆ ಬರುವ ಅವಧಿ ಒಂದು ಎಕರೆಗೆ ಹದಿನೈದರಿಂದ ಇಪ್ಪತ್ತು ಟನ್‌ವರೆಗೂ ಇಳುವರಿ ಬರುತ್ತದೆ. ಸಾಧಾರಣವಾದ ಬೆಲೆ ಸಿಕ್ಕರೂ ಸುಮಾರು ನಲವತ್ತು ಸಾವಿರ ಆದಾಯವಿದೆ. ಹಾಗೆಯೇ ಒಂದು ಎಕರೆ ಭೂಮಿಯಲ್ಲಿ ಎಲೆಕೋಸು ಬೆಳೆಯಲು ಏಳರಿಂದ ಎಂಟು ಸಾವಿರ ಖರ್ಚಾಗುತ್ತದೆ. ಎಲೆಕೋಸಿನಲ್ಲಿ ಮಹಾರಾಣಿ, ಉನ್ನತಿ, ಭೂಮಿಕಾ ಎಂಬ ತಳಿಗಳಿವೆ.

ಭೂಗುಣ : ಎಲೆಕೋಸು ಸಾಧಾರಣವಾಗಿ ನೀರು ಇಂಗುವ ಹುಡಿಯಾದ ಮಣ್ಣಿನಲ್ಲಿ ಒಳ್ಳೆಯ ಫಸಲು ಬರುತ್ತದೆ. ಮರಳು ಮಿಶ್ರಿತ ಕೆಬ್ಬೆಯ ನೆಲ, ಗೋಡು ನೆಲ ಹಾಗೂ ಮರಳು ಮಿಶ್ರಿತ ಮೆಕ್ಕಲು ಮಣ್ಣಿನಲ್ಲಿ ಉತ್ತಮ ಇಳುವರಿ ಕೊಡುತ್ತದೆ.

ರೋಗಗಳು : ಇದಕ್ಕೆ 'ಕಾಲರ್‌ರಾಟ್' ಎಂಬ ರೋಗ ಹರಡುತ್ತದೆ. ಇದರ ರೋಗದ ಪರಿಣಾಮವಾಗಿ ಎಲೆಕೋಸಿನ ಮೇಲ್ಭಾಗದಲ್ಲಿ ಕೊಳೆತಂತೆ ಕಾಣುತ್ತದೆ. ಮುನ್ನೆಚ್ಚರಿಕೆಯಾಗಿ ಫಾಲಿಡಾಲ್ ದ್ರಾವಕವನ್ನು ನೀರಿನೊಂದಿಗೆ ಮಿಶ್ರಣಮಾಡಿ ಮಿತ ಪ್ರಮಾಣದಲ್ಲಿ 15 ದಿನಗಳಿಗೊಮ್ಮೆ ಒಂದೆರಡು ಬಾರಿ ಸಿಂಪಡಿಸಬೇಕು. ಸುಣ್ಣ ಮತ್ತು ಹೊಂಗೆ ಎಣ್ಣೆಯನ್ನು ನೀರಿನಲ್ಲಿ ಬೆರೆಸಿ ಸಿಂಪಡಿಸಬಹುದು. ಕ್ರಮಗಳಿಂದಲೂ ರೋಗ ರುಜಿನಗಳು ಬಾರದಂತೆ ತಡೆಗಟ್ಟಬಹುದು.

ಪಿ.ಸಿ.ಡಿ.

ಎಳ್ಳು ಮಾನವ ಮೊತ್ತ ಮೊದಲು ಬೆಳೆದ ಎಣ್ಣೆ ಬೀಜದ ಬೆಳೆಗಳಲ್ಲಿ ಒಂದಾಗಿದೆ. ಎಳ್ಳು ಇದು ಪಿಡಾಲಿಯೇಸಿ ಕುಟುಂಬಕ್ಕೆ ಸೇರಿದ 'ಸಿಸ್ಸಾಮಮ್ ಇಂಡಿಕಮ್' ಎಂಬ ಸಸ್ಯ ಪ್ರಭೇದ.

ವೇದಗಳಲ್ಲಿಯೇ 'ತಿಲ' ಪದದ ಪ್ರಯೋಗ ಕಂಡುಬರುತ್ತದೆ. ಸಂಸ್ಕೃತ ಮತ್ತು ಹಿಂದಿಗಳಲ್ಲಿ 'ತಿಲ' ಎಂದಿದ್ದು, ಇಂಗ್ಲಿಷ್‌ನಲ್ಲಿ gingelyiol ಎಂದು ಕರೆಯಲಾಗುವ ಈ ಪದ ಕನ್ನಡದಲ್ಲಿ ಎಳ್-ಎಳ್ಳು ಎಂದಾಗಿದೆ. ತಿಲದಿಂದ ತಯಾರಾದದ್ದು ತೈಲ.

ಎಳ್+ನೆಯ್ = ಎಳ್ಳಿನಿಂದ ತೆಗೆದ ಜಿಡ್ಡು ಎಳ್ಳೆಣ್ಣೆ ಮೊದಲು ಎಳ್ಳಿನಿಂದ ತೆಗೆದ ಜಿಡ್ಡಿಗೆ ಮಾತ್ರ ಎಣ್ಣೆ ಎಂದು ಕರೆಯುತ್ತಿದ್ದು, ಇಂದು ಈ ಪದಕ್ಕೆ ವಿಶಾಲಾರ್ಥ ಪ್ರಾಪ್ತವಾಗಿ ಯಾವುದೇ ಜಿಡ್ಡಿಗೂ ಎಣ್ಣೆ ಎಂದು ಕರೆಯುತ್ತಿದ್ದೇವೆ.

ಎಳ್ಳನ್ನು ಒಣ ಭೂಮಿಯಲ್ಲಿ ಮಳೆಯಾಶ್ರಯದಲ್ಲಿ ಅಲ್ಲದೆ ನೀರಾವರಿಯಲ್ಲಿಯೂ ಬೆಳೆಯಬಹುದು. ಎಲ್ಲಾ ಮಣ್ಣಿನಲ್ಲಿಯೂ ಬೆಳೆಯಬಹುದಾದ ಬೆಳೆ. ಫೆಬ್ರುವರಿ - ಮಾರ್ಚ್ ತಿಂಗಳಿನಲ್ಲಿ ನೀರಾವರಿಯಿಂದ ಬಿತ್ತನೆ ಮಾಡುವುದನ್ನು ಕಾರು ಎಳ್ಳು ಎನ್ನುತ್ತಾರೆ. ಆದರೆ ಪ್ರಮುಖ ತಳಿಗಳ ಬೀಜಗಳನ್ನು ಮೇ / ಜೂನ್ ಮುಂಗಾರಿನಲ್ಲಿ ಬಿತ್ತನೆ ಮಾಡುತ್ತಾರೆ. ಒಂದು ಎಕರೆಗೆ 1 ರಿಂದ 1½ ಕೆ.ಜಿ. ಬಿತ್ತನೆ ಎಳ್ಳು ಬೇಕಾಗುತ್ತದೆ. 3 ರಿಂದ 4 ಬಾರಿ ಉಳುಮೆ ಮಾಡಿ ಹದಗೊಳಿಸಿಕೊಂಡಿರುವ ಭೂಮಿಗೆ ಎಕರೆಗೆ 5 ರಿಂದ 6 ಟನ್ ಕೊಟ್ಟಿಗೆ ಗೊಬ್ಬರವನ್ನು ಹಾಕಿ, ಮಿಶ್ರಣವಾಗುವಂತೆ ಮತ್ತೆ ಉಳಬೇಕು. ಅನಂತರ ಬಿತ್ತನೆ ಬೀಜವನ್ನು ಮರಳಿನಲ್ಲಿ ಮಿಶ್ರಣ ಮಾಡಿಕೊಂಡು ಕೂರಿಗೆಯಲ್ಲಿ ಬಿತ್ತಬೇಕು. ಜೊತೆಗೆ ಎಕರೆಗೆ ಬೇಕಾದಷ್ಟು ರಾಸಾಯನಿಕ ಗೊಬ್ಬರವನ್ನು ಮಿಶ್ರಣ ಮಾಡಬೇಕು. ಹೀಗೆ ಬಿತ್ತಿದ ಬೀಜ ಒಂದು ವಾರದಲ್ಲಿ ಮೊಳಕೆಗೆ ಬರುತ್ತದೆ. ಮೊಳಕೆ ಬಂದ 15 ದಿನಗಳ ಅನಂತರ ಗಿಡದಿಂದ ಗಿಡಕ್ಕೆ 5 ಇಂಚು ಅಂತರ ಇರುವಂತೆ ಕುಂಟೆ ಹೊಡೆದು ಕಳೆ ತೆಗೆಯಬೇಕು. ಮತ್ತೆ 15 ದಿನಗಳ ಅನಂತರ ಗೊಬ್ಬರ ಹಾಕಿ, ಕುಂಟೆ ಹೊಡೆಯಬೇಕು.



45 ದಿನಗಳ ಮೇಲೆ ಗಿಡ ಹೂ ಬಿಡಲು ಪ್ರಾರಂಭಿಸುತ್ತದೆ. ಮೊದಲು ಕೆಲವು ಕವಲು / ಇಕ್ಕಲುಗಳು ಹೊಡೆದು, 2 ರಿಂದ 3 ಅಡಿ ಎತ್ತರಕ್ಕೆ ಬೆಳೆಯುತ್ತವೆ. ನೆಲದಿಂದ 5 ಇಂಚು ಬಿಟ್ಟು ಉಳಿದ ಎಲ್ಲಾ ಎಲೆಗಳಿಗೆ ಒಂದರಂತೆ ಕಾಯಿಗಳನ್ನು ಬಿಡುತ್ತದೆ. ಎಲ್ಲಾ ಕಾಯಿಗಳು ಸಂಪೂರ್ಣವಾಗಿ

ಬಲಿಯಲು ಸುಮಾರು 3 ತಿಂಗಳುಗಳು ಬೇಕಾಗುತ್ತದೆ. ಕಾಯಿಗಳನ್ನು ತೆರೆದು ಬೀಜವಾಗಿರುವುದು ಮತ್ತು ಬಲಿತಿರುವುದನ್ನು ನೋಡಿ ಕಟಾವು ಮಾಡಬೇಕಾಗುತ್ತದೆ. ಒಂದು ಎಕರೆಗೆ ಸುಮಾರು ಮೂರ ರಿಂದ ನಾಲ್ಕು ಕ್ವಿಂಟಾಲ್ ಎಳ್ಳು ಬೆಳೆಯಬಹುದು.

ಸಾಮಾನ್ಯವಾಗಿ ಎಳ್ಳನ್ನು ಗಿಡದಿಂದ ಬೇರ್ಪಡಿಸಲು ಬುಡ ಸಹಿತ ಕಿತ್ತು ಸ್ವಚ್ಛಗೊಳಿಸಿರುವ ಕಣಕ್ಕೆ ಸಾಗಿಸಬೇಕು. ಎರಡು ದಿನಗಳ ಅನಂತರ ಕಾಯಿಗಳು ಬಿಸಿಲಿನಲ್ಲಿ ತೆರೆದುಕೊಳ್ಳಲು ಪ್ರಾರಂಭಿಸುತ್ತವೆ. ಆಗ ಕಂತೆಯನ್ನು ಮಾಡಿ ಸಣ್ಣ ಸಣ್ಣ ಗುಡ್ಡೆ (ಮಾಡ್)ಗಳನ್ನು ನಿರ್ಮಿಸಬೇಕು. ಗಿಡಗಳು ಚೆನ್ನಾಗಿ ಒಣಗಿದ ಮೇಲೆ ಕಣದಲ್ಲಿ ಬಡಿಯಬೇಕು. ಒಂದೇ ಸಲಕ್ಕೆ ಎಳ್ಳು ಗಿಡದಿಂದ ಉದುರುವುದಿಲ್ಲ. ಮತ್ತೆ 3-4 ಬಾರಿ ಉದುರಿಸಿ, ಉದುರಿದ ಎಳ್ಳನ್ನು ಪ್ರತ್ಯೇಕವಾಗಿ ಕಣದಲ್ಲಿ ಚೆನ್ನಾಗಿ 2-3 ದಿನ ಒಣಗಿಸಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ.

ಪ್ರಮುಖವಾಗಿ ಬಿಳಿ ಎಳ್ಳು ಮತ್ತು ಕಪ್ಪು ಎಳ್ಳು ಎಂಬ ಎರಡು ಪ್ರಭೇದಗಳಿದ್ದರೂ ಮಾಸಲು ಬಿಳುಪು, ಕಂದು ಕಪ್ಪು ಬಣ್ಣದವೂ ಇದ್ದು, ಇವು ಬೇರೆ ಬೇರೆ ತಳಿಗಳಿಗೆ ಸೇರಿವೆ.

ಎಳ್ಳಿನ ಉಪಯೋಗಗಳು : ಹಸಿಯ ಎಳ್ಳು ಮತ್ತು ಹುರಿದ ಎಳ್ಳನ್ನು ಅನೇಕ ಸಿಹಿ ತಿಂಡಿಗೆ ಉಪಯೋಗಿಸಲಾಗುತ್ತದೆ. ಹಸಿಯ ಎಳ್ಳನ್ನು ಅಕ್ಕಿ ಮತ್ತು ಸಕ್ಕರೆ ಮಿಶ್ರಣ ಮಾಡಿ 'ಎಳ್ಳಕ್ಕಿ' ಮಾಡಲಾಗುತ್ತದೆ. ಎಳ್ಳುಂಡೆ, ಚಿಗಳಿ, ಚಕೀನುಂಡೆ, ಖರ್ಜಿಕಾಯಿ ತಯಾರಿಸಲಾಗುತ್ತದೆ. ಹುರಿದ ಎಳ್ಳಿನಿಂದ ಅಕ್ಕಿ ಹಿಟ್ಟಿನ ಜೊತೆ ಮಾಡುವ ಸೂಸಲು (ಬೆಲ್ಲ ಮತ್ತು ಎಳ್ಳು) ಚಟ್ನಿ ತಯಾರಿಸುತ್ತಾರೆ. ಎಳ್ಳೆಣ್ಣೆ ಅಡುಗೆಗೆ ತುಂಬಾ ಒಳ್ಳೆಯದು. ಸುಗಂಧ, ಆಲಿವ್ ಆಯಿಲ್, ವನಸ್ಪತಿ, ಸಾಬೂನು, ಬಣ್ಣ ತಯಾರಿಕೆ ಮತ್ತು ಅನೇಕ ಔಷಧಿ ತಯಾರಿಕೆಯಲ್ಲೂ ಬಳಸುತ್ತಾರೆ. ಎಳ್ಳು ಹಿಂಡಿ ಜಾನುವಾರುಗಳಿಗೆ ಒಳ್ಳೆಯ ಮೇವು. ನೆಲಕ್ಕೆ ಒಳ್ಳೆಯ ಗೊಬ್ಬರ. ಹೋಮಗಳಲ್ಲಿ ದೇವರ ದೀಪಕ್ಕೆ ಬಳಸಲಾಗುತ್ತದೆ. ಮದುವೆಯ ಸಮಯದಲ್ಲಿ ವಧು - ವರರು ಎಳ್ಳು - ಜೀರಿಗೆ ಬಳಸುತ್ತಾರೆ. ಕೆಲವು ಗ್ರಾಮೀಣ ಭಾಗಗಳಲ್ಲಿ ಯುಗಾದಿ ಹಬ್ಬದ ದಿನ ಹೊನ್ನಾರು ಕಟ್ಟಿದ ಸಂದರ್ಭದಲ್ಲಿ ಮನೆಯಿಂದ - ದೇವಸ್ಥಾನ - ಹೊಲಗಳವರೆವಿಗೂ ಎಳ್ಳು - ಅಕ್ಕಿ - ಸಕ್ಕರೆಯ ಮಿಶ್ರಣವನ್ನು ಸಾಲು ಬಿಡುತ್ತಾರೆ. ತಲೆ ನೋವು ಬಂದಾಗ ವಾಸಿಯಾಗಲು ಹಣೆಯ ಮೇಲೆ ಎಳ್ಳನ್ನು ಅರೆದು ಪಟ್ಟು ಹಾಕಿಕೊಳ್ಳುತ್ತಾರೆ.

ಹುರಿದ ಎಳ್ಳಿನಿಂದ ಸೂಸಲು, (ಬೆಲ್ಲ + ಎಳ್ಳು) ಚಟ್ನಿ, ಬಿಸ್ಕೆಟ್ ತಯಾರಿಸುತ್ತಾರೆ.

ಎಳ್ಳು ಬೆಳೆಗೆ ಕಂಬಳಿ ಹುಳುಗಳು ಹತ್ತಿ ಎಲೆಗಳನ್ನು ತಿಂದು ಕಾಂಡ ಮತ್ತು ಕಾಯಿಗಳನ್ನು ಹಾಳು ಮಾಡುತ್ತವೆ. ಹೂವಿನ ಮೊಗ್ಗನ್ನು ಚಿಟ್ಟೆ ತಿಂದು ಹಾಕುತ್ತದೆ. ಇವುಗಳ ಜೊತೆಗೆ ರಸ ಕುಡಿಯುವ ಬಲ್ಪ್ ಮತ್ತು ಎಫಿಡ್ಸುಗಳೂ ಬೆಳೆ ಹಾಳು ಮಾಡುತ್ತವೆ. ಎಲೆಗಳಿಗೆ ಸರ್ಕೋಸ್ಪೊರ ಎಂಬ ಬೂಸ್ಟು ರೋಗ ಬಂದರೆ ಬೂದು ಬಣ್ಣದ ಅಥವಾ ಕಪ್ಪು ಕಂದು ಬಣ್ಣದ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಈ ರೋಗ ತಗುಲಿದರೆ ಬೆಳೆಗೆ ತೀರ ಹಾನಿಯಾಗುವುದರಿಂದ ಯಾವುದಾದರೂ ಕ್ರಿಮಿನಾಶಕವನ್ನು ಸಿಂಪಡಿಸಿ ಬೆಳೆಯನ್ನು ರಕ್ಷಿಸಬೇಕಾಗುತ್ತದೆ.

ಆಧಾರ ಗ್ರಂಥಗಳು

ಕನ್ನಡ ವಿಶ್ವಕೋಶ - ಸಂಪುಟ -3 (ಪು. 133) ಕು. ಕ. ಅ. ಸಂಸ್ಥೆ - ಮೈಸೂರು - 1971.

ಕನ್ನಡ ಇಂಗ್ಲಿಷ್ ಡಿಕ್ಷನರಿ ರೆವರೆಂಡ್. ಎಫ್. ಕಿಟಲ್ ಏಷಿಯನ್ ಎಜುಕೇಷನಲ್ ಸರ್ವಿಸಸ್ ದೆಹಲಿ.

ಮಾಹಿತಿದಾರರು

ಗೌರಮ್ಮ, ಆಲಂಬಾಡಿಕಾವಲು, ಮಂಡ್ಯ ಜಿಲ್ಲೆ.

ಜಯಮ್ಮ - ಮಾಕನಹಳ್ಳಿ, ಮೈಸೂರು ಜಿಲ್ಲೆ.

ಕೆ.ಎಲ್.

ಏಣಿ ಅನೇಕ ವಿಧದಲ್ಲಿ ರೈತನಿಗೆ ಉಪಯೋಗವಾಗುವ ಏಣಿಯನ್ನು ರೈತನ ಮಿತ್ರ ಎಂದು ಕರೆಯಬಹುದು. ಗ್ರಾಮೀಣ ಪ್ರದೇಶದಲ್ಲಿ ಏಣಿಯ ಉಪಯೋಗದಿಂದಲೇ ಅದನ್ನು ಬೇರೆ ಬೇರೆ ಹೆಸರುಗಳಿಂದ ಗುರುತಿಸುತ್ತಾರೆ. ಬಣವೆ ಏಣಿ, ಗೋಡೆ ಏಣಿ, ಬಾವಿ ಏಣಿ, ಗಿಡದವಣಿ ರಾಶಿ ಏಣಿ ಇತ್ಯಾದಿ. ಏಣಿಯನ್ನು ತೆಲುಗಿನಲ್ಲಿ ಮೆಟ್ಟು ಅಥವಾ ನಿಚ್ಚಣಿಕೆ ಎಂದು ಕರೆಯುತ್ತಾರೆ.

ಏಣಿ ಆಕಾರದಲ್ಲಿ ಒಂದೇ ರೀತಿ ಇದ್ದರೂ ಎತ್ತರ ಅಗಲ ಮತ್ತು ಗಾತ್ರಗಳಲ್ಲಿ ಬೇರೆಯಾಗಿರುತ್ತದೆ. ಬಳಸುವ ಬಿದಿರಿನ ಮೇಲೆ ಅದು ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ಎತ್ತರದ ಏಣಿಗಳಿಗೆ ಬಳಸುವ ಬಿದಿರು ಟೊಳ್ಳಾಗಿದ್ದರೆ ಮನೆಯಲ್ಲಿ ಬಳಸುವ ಚಿಕ್ಕ ಪುಟ್ಟ ಏಣಿಗಳು ಟೊಳ್ಳಿಲ್ಲದ ಗಟ್ಟಿಬಿದಿರಿನಿಂದ ಮಾಡಿದ್ದಾಗಿರುತ್ತವೆ. ಆಯಾ ಕೆಲಸಕ್ಕೆ ತಕ್ಕಂತೆ ಅದರ ವಿನ್ಯಾಸ.



ಗೋಡೆ ಏಣಿ : ಹೊಸದಾಗಿ ಮನೆ ಕಟ್ಟುವವರು ಇಟ್ಟಿಗೆ ಮರಳು, ಸಿಮೆಂಟ್ ಎತ್ತಿಕೊಡಲು ಮನೆಗೆ ಸುಣ್ಣ ಬಣ್ಣ ಬಳಿಯಲು ಇದನ್ನು ಬಳಸುತ್ತಾರೆ. ಹಳ್ಳಿಗಳಲ್ಲಿ ಹೆಂಚಿನ ಛಾವಣಿ ಹೊದಿಸಲು ಸೋರುತ್ತಿರುವ ಮನೆಯನ್ನು ಸರಿಪಡಿಸಲು, ಗೋಡೆ ಏಣಿಯನ್ನು ಉಪಯೋಗಿಸುತ್ತಾರೆ. ಹಂತಗಳಿಲ್ಲದ ಮನೆಗಳಿಗೆ ಏಣಿಯೇ ಹಂತದ ಕೆಲಸವಮಾಡುತ್ತದೆ. ಏಣಿಯನ್ನು ತಯಾರಿಸಲು ಗಟ್ಟಿ ಮುಟ್ಟಾದ ಎರಡು ಉದ್ದನೆಯ ಬೊಂಬುಗಳು ಬೇಕು. ಒಂದೇ ಎತ್ತರವಿರುವ ಗಾತ್ರದಲ್ಲಿ ಸಮವಿರುವಂತೆ ನೋಡಿಕೊಂಡು ಎಷ್ಟು ಎತ್ತರ ಬೇಕೋ ಅಷ್ಟಕ್ಕೇ ತುಂಡರಿಸಿಕೊಳ್ಳುತ್ತಾರೆ. ಒಂದಡಿಗೆ ಒಂದರಂತೆ ರಂಧ್ರಗಳನ್ನು ಮಾಡಿ ಕಡ್ಡಿ ಜಾತಿಯ ಟೊಳ್ಳಿಲ್ಲದ ಸಣ್ಣಗಾತ್ರದ ಬಿದಿರನ್ನು ತುಂಡುಗಳಾಗಿ ಕತ್ತರಿಸಿಕೊಂಡು ರಂಧ್ರಗಳಲ್ಲಿ ಗಟ್ಟಿಯಾಗಿ ಕೂರಿಸುತ್ತಾರೆ. ಅಲುಗಾಡದಂತೆ ಬೆಣೆಯನ್ನು ಹೊಡೆದು

ಹೊರಗೆ ಬಾರದಂತೆ ಸಣ್ಣ ಮೊಳೆಯನ್ನು ಎರಡೂ ಅಂಚುಗಳಲ್ಲಿ ಹೊಡೆಯುತ್ತಾರೆ. ಹೀಗೆ ಎರಡೂ ಬೊಂಬುಗಳಿಗೆ ಜೋಡಿಸಿದ ಕಡ್ಡಿಗಳನ್ನು ಹಲ್ಲುಗಳೆಂದೂ ಮೆಟ್ಟಲುಗಳೆಂದೂ ಕರೆಯುಯುವರು.

ಬಾವಿ ಏಣಿ : ಮೆಟ್ಟಲಿಲ್ಲದ ಬಾವಿಗೆ ಇಳಿಯಲು ಹತ್ತಲು ಮಾಡಿಕೊಂಡಿದ್ದ ಸಾಧನ. ಕಲ್ಯಾಣಿ, ಹೊಂಡಗಳಲ್ಲಿ ಇದನ್ನು ಉಪಯೋಗಿಸುತ್ತಿದ್ದರು. ಮರವೊಂದರ ಸುತ್ತ ಕಡ್ಡಿಗಳನ್ನು ಹೊಂದಿಸಿ ತಯಾರಿಸಿದ ಏಣಿ ಇದು.

ರಾಶಿ ಏಣಿ : ಇದು ಆರು ಅಡಿ ಎತ್ತರವಿದ್ದು ಮೂರು ಕಾಲುಗಳನ್ನು ಹೊಂದಿರುತ್ತದೆ. ಏಣಿಯ ಮೇಲೆ ಅಗಲವಾದ ಹಲಗೆಯನ್ನು ಹೊಂದಿಸಿರುತ್ತಾರೆ. ಬಂಡೆ ಅಥವಾ ಕಣದಲ್ಲಿ ಹೊಟ್ಟು ಮಿಶ್ರಿತ ಕಾಳುಗಳನ್ನು ತೂರಲು ರೈತರು ಇದನ್ನು ಬಳಸುತ್ತಾರೆ. ಇದರ ಮೇಲೆ ನಿಂತು ಗಾಳಿಗೆ ವಿರುದ್ಧ ದಿಕ್ಕಿನಿಂದ ಮೊರದಿಂದ ಕಾಳನ್ನು ನಿಧಾನವಾಗಿ ಕೆಳಕ್ಕೆ ಇಳಿ ಬಿಟ್ಟರೆ ರಾಗಿ ಬತ್ತ ಮುಂತಾದ ಕಾಳುಗಳಲ್ಲಿರುವ ಹೊಟ್ಟು ಹಾರಿ ಹೋಗಿ ಕಾಳುಗಳು ಸ್ವಚ್ಛಗೊಳ್ಳುತ್ತವೆ. ಹೀಗೆ ಸ್ವಚ್ಛವಾದ ಕಾಳುಗಳನ್ನು ರಾಶಿ ಮಾಡಿಕೊಳ್ಳುವರು. ಆದುದರಿಂದ ಇದಕ್ಕೆ ರಾಶಿ ಏಣಿ ಎಂದು ಹೆಸರು. ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

ಗಿಡದ ಏಣಿ : (ಹಗ್ಗದ ಏಣಿ) ದಪ್ಪನಾದ ಮರದ ರೆಂಬೆಯೊಂದಕ್ಕೆ ಎರಡು ಹಗ್ಗಗಳನ್ನು ಸಮಾನಾಂತರದಲ್ಲಿ ಕಟ್ಟಿ ಕೆಳಗೆ ಬಿಡಬೇಕು. ಈ ಹಗ್ಗಗಳು ಮನುಷ್ಯನ ಭಾರವನ್ನು ತಡೆಯುಂತವಾಗಿದ್ದು ಬಹುಕಾಲ ಬಾಳಿಕೆ ಬರುವಂತಿದ್ದರೆ ಒಳ್ಳೆಯದು. ಈ ಎರಡೂ ಹಗ್ಗಳಿಗೆ ಸಮಾನಾಂತರದಲ್ಲಿ ಅಡಿಗೆ ಒಂದರಂತೆ ಗಟ್ಟಿಮುಟ್ಟಾದ ಮರದ ತುಂಡುಗಳನ್ನು ಕಟ್ಟಬೇಕು. ಇದರ ಸಹಾಯದಿಂದ ಮರವನ್ನು ಹತ್ತ ಬಹುದು. ಇದಕ್ಕೆ ಬಿದಿರಿನ ಅವಶ್ಯಕತೆ ಇಲ್ಲ.

ಬಣವೆ ಏಣಿ : ಹುಲ್ಲಿನ ಮೆದೆ ಅಥವಾ ವಾಮೆ ಎಂದು ಕರೆಯುವ ಹುಲ್ಲಿನ ರಾಶಿಯನ್ನು ಸರಿಮಾಡಲು ಎಂದರೆ ಮಳೆ ಗಾಳಿಗಳಿಂದ ತೂರಿ ಹೋಗದಂತೆ ಹಾಗೂ ನೀರು ಒಳಗೆ ಸೇರದಂತೆ ಗುಡಿಸಿಲು ಆಕಾರದಲ್ಲಿ ನಿರ್ಮಿಸಿಕೊಂಡಿರುತ್ತಾರೆ. ಇದನ್ನು ಹತ್ತಲು ಇಳಿಯಲು, ಮೇವನ್ನು ತೆಗೆದುಕೊಳ್ಳಲು, ಹುಲ್ಲನ್ನು ಹೊದಿಸಲು ಈ ಏಣಿಯ ಸಹಾಯ ತುಂಬಾ ಮುಖ್ಯ. ಬಣವೆ ಏಣಿ ಇತರ ಏಣಿಗಳಿಗಿಂತ ದಪ್ಪನಾದ ಮರಗಳಿಂದ ಹಾಗೂ ಗೂಟಗಳಿಂದ ಮಾಡಿರುತ್ತಾರೆ. ಕೆಲವರು ಬಿದಿರಿನ ಬದಲು ಹಗಲವಾದ ಹಲಗೆಗಳನ್ನು ಬಳಸಿ ಈ ಏಣಿಯನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

ಕಾಲೇಣಿ : ಇದನ್ನು ತೋಟಗಳಲ್ಲಿ ಹೆಚ್ಚು ಬಳಸುತ್ತಾರೆ. ಅಡಕೆ, ತೆಂಗು, ಮಾವು, ವೀಳ್ಯದೆಲೆ, ಮೆಣಸು ಮೊದಲಾದ ಬೆಳೆಗಳ ಫಸಲನ್ನು ಶೇಖರಿಸಲು ರೈತರು ಬಳಸುತ್ತಾರೆ. ಇದು ರಾಜ್ಯದ ಎಲ್ಲಾ ಭಾಗಗಳಲ್ಲಿ ಬಳಕೆಯಲ್ಲಿದೆ.

ಎಸ್.ವಿ.

ಏತ ನೀರೆತ್ತುವ ಸಾಧನಗಳ ಪೈಕಿ ಒಂದು. ನದಿ, ಕುಂಟೆ, ಕಾಲುವೆ, ಬಾವಿ, ಮುಂತಾದ ಜಲಮೂಲಗಳಿಂದ ನೀರನ್ನು ಎತ್ತಿ ತೋಟ, ಹೊಲ, ಗದ್ದೆಗಳಿಗೆ ಸುರಿಯುವ ಸಾಧನ. ಜಮೀನಿನ ಬದಿಯಲ್ಲಿ ಹರಿಯುವ ನೀರು ಅಥವಾ ಜಲಾಶಯದ ನೀರು ಜಮೀನಿಗೆ ಸಹಜವಾಗಿ ಹರಿಯದೆ ಇದ್ದಾಗ ; 10 ಅಡಿ ಎತ್ತರದಲ್ಲಿ ಜಮೀನು ಇದ್ದಲ್ಲಿ ಇಂಥ ಸಾಧನದ ಮೂಲಕ ನೀರನ್ನು ಹರಿಸುತ್ತಾರೆ. ಏತಗಳಲ್ಲಿ ಮೂರು ವಿಧ : 1. ಏಕವ್ಯಕ್ತಿ ನೀರೆತ್ತುವಂಥದು, 2. ಇಬ್ಬರು ಅಥವಾ ಮೂರು ಜನರ ಸಹಾಯದಿಂದ ನೀರೆತ್ತುವುದು, 3. ಪಶುಗಳ ಮೂಲಕ ನೀರೆತ್ತುವುದು ಮೊದಲನೆಯದರಲ್ಲಿ ಒಬ್ಬನೇ ವ್ಯಕ್ತಿ ಬಾನೆಯ ಮೂಲಕ ನೀರೆತ್ತುತ್ತಾನೆ.

ಏತದ ಆಕಾರ : ಬಾವಿ ಅಥವಾ ನದಿಯ ದಡದಲ್ಲಿ ಒಂದು ಕವಲು ಮರ ನೆಟ್ಟು ಕವಲಿನ ಮಧ್ಯೆ ಗಟ್ಟಿಯಾದ ಸನ್ನೆ ಕೋಲನ್ನು ಅಳವಡಿಸುತ್ತಾರೆ. ಕೋಲಿನ ಹಿಂಭಾಗ ಬಾನೆಯ ತೂಕದಷ್ಟೇ ಇರುವ ಸಮಪ್ರಮಾಣದ ಕಲ್ಲನ್ನು ಹಗ್ಗದಿಂದ ಕಟ್ಟಿರುತ್ತಾರೆ. ಬಾನೆಗೂ ಸನ್ನೆ ಕೋಲಿಗೂ ಮಧ್ಯೆ ಸಣ್ಣ ಹಾಗೂ ನೇರವಾಗಿರುವ ಕೋಲನ್ನು ಹಗ್ಗದಿಂದ ಮೇಲ್ಭಾಗದಲ್ಲಿ ಕಟ್ಟಿ ಕೆಳಭಾಗದಲ್ಲಿ ಬಾನೆ ಕೂರುವಂತೆ ಒಂದು ಅಡ್ಡ ಕೋಲನ್ನು ಅಳವಡಿಸಲಾಗಿರುತ್ತದೆ. ಇದು ಬೀಳದಂತೆ ಸ್ವಯಂಚಾಲಿತವಾಗುವಂತೆ



ಹಗ್ಗದಿಂದ ಬಿಗಿದಿರುತ್ತಾರೆ. ನೀರೆತ್ತುವ ಜಾಗದಲ್ಲಿ ವ್ಯಕ್ತಿ ಭದ್ರವಾಗಿ ನಿಲ್ಲಲು ಎರಡೂ ಕಡೆ ಕಲ್ಲಿನ ಕಟ್ಟಡ ಕಟ್ಟಿ ಮೆಟ್ಟಿಲಿನಂತೆ ಎರಡೂ ಬದಿಯಲ್ಲಿ ಜೋಡಿಸಿರುತ್ತಾರೆ. ನೀರೆತ್ತುವ ವ್ಯಕ್ತಿ ಬಾನೆಯನ್ನು ನೀರಿನಲ್ಲಿ ಮುಳುಗಿಸಿ ನೇರವಾಗಿ ಅಡ್ಡ ಕಟ್ಟಡಕ್ಕೆ ತಾಕದಂತೆ ಮೇಲೆತ್ತಿದರೆ ಸಾಕು ಸುಲಭವಾಗಿ ಮೇಲೆ ಬರುತ್ತದೆ. ನೀರನ್ನು ಸುರಿದ ಮೇಲೆ ಪುನಃ ನೀರೆತ್ತಲು ಸ್ವಲ್ಪ ಶ್ರಮ ಬೇಕಷ್ಟೆ.

ಎರಡನೆಯ ವ್ಯವಸ್ಥೆಯಲ್ಲಿ ಏತದ ಸ್ವರೂಪ ಮೇಲಿನಂತೆ ಇದ್ದರೂ ಕವಲು ಕಂಬಕ್ಕೆ ಅಳವಡಿಸುವ ಮರ ಹೆಚ್ಚು ದಪ್ಪವಾಗಿ ಹಾಗೂ ಗಟ್ಟಿಯಾಗಿ ಇರುತ್ತದೆ. ಚಪ್ಪಟೆಯಾಕಾರದ ಈ ಮರಕ್ಕೆ ಎರಡು ಅಡಿಗೆ ಒಂದರಂತೆ ಮೆಟ್ಟಿಲು ಕೆತ್ತಿರುತ್ತಾರೆ. ಒಬ್ಬರು ಅಥವಾ ಇಬ್ಬರು ವ್ಯಕ್ತಿಗಳು ಮರದ ಮೇಲೆ ನಿಂತು ಬಾನೆಯನ್ನು ಕೆಳಗಿಳಿಸುವ ವ್ಯಕ್ತಿಗೆ ಸಹಕರಿಸುತ್ತಾ ಆಧಾರದ ಕೋಲು ಹಿಡಿದು ಮುಂದೆ ಬಂದರೆ ನೀರನ್ನು ತುಂಬಿಸಿ ಮೇಲೆ ಎತ್ತಿದಂತೆ

ಹಿಂದಕ್ಕೆ ಹೋಗುತ್ತಾರೆ. ಇದರಿಂದ ನೀರು ಬಲು ಸುಲಭವಾಗಿ ಮೇಲೆ ಬರುತ್ತದೆ. ಇದರ ಬಾನೆ ಗಾತ್ರದಲ್ಲಿ ದೊಡ್ಡದಿದ್ದು ಹೆಚ್ಚು ನೀರೆತ್ತಲು ಸಾಧ್ಯವಾಗುತ್ತದೆ. ಇಬ್ಬರು ಇಲ್ಲದಿದ್ದಾಗ ಒಬ್ಬನೇ ವ್ಯಕ್ತಿ ತುಳಿಯುವ ಸಂದರ್ಭದಲ್ಲಿ ಒಬ್ಬ ಮನುಷ್ಯನ ತೂಕದ ಕಲ್ಲನ್ನು ಮರದ ಹಿಂಭಾಗದಲ್ಲಿ ಕಟ್ಟುತ್ತಾರೆ. ಇಂಥ ಏತದ ನೀರಾವರಿ ವ್ಯವಸ್ಥೆಯಿಂದ ಮೊದಲ ವ್ಯವಸ್ಥೆಗಿಂತ ಹೆಚ್ಚು ವಿಸ್ತಾರದ ಭೂಮಿಯಲ್ಲಿ ಕೃಷಿ ಮಾಡಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಇಂಥ ಏತ ಪದ್ಧತಿಯ ಮೂಲಕ ಹಿಪ್ಪುನೇರಳೆ, ಬದನೆ, ಮೆಣಸು, ಮುಸುಕಿನಜೋಳ, ಮೂಲಂಗಿ, ಕೊತ್ತಂಬರಿ, ತಿಂಗಳ ಹುರುಳಿ ಇತ್ಯಾದಿ ಅಲ್ಪಾವಧಿ ಮತ್ತು ಕಡಿಮೆ ಭೂಮಿಯಲ್ಲಿ ಬೆಳೆಯುವ ಬೆಳೆಗಳನ್ನು ಮಾತ್ರ ಬೆಳೆಯುತ್ತಾರೆ.

ಮೂರನೆಯ ಬಗೆ, ಪಶುಗಳ ಮೂಲಕ ನೀರೆತ್ತುವಂಥದು. ಇದನ್ನು 'ಕಪಿಲೆ' ಎಂದು ಕರೆಯುವರು. ಆಳವಾದ ಜಲಾಶಯ ಮತ್ತು ಬಾವಿಗಳಲ್ಲೂ ನೀರೆತ್ತುವ ಸಾಧನವಿದು. ಇಲ್ಲಿ ನೀರೆತ್ತುವ ಭಾರ ಹೊರುವುದು ಪಶುಗಳೇ ಆಗಿದ್ದರೂ ಅವುಗಳ ನಿಯಂತ್ರಣಕ್ಕಾಗಿ ಮನುಷ್ಯನಿರುತ್ತಾನೆ.

ಕಪಿಲೆಯ ಸ್ವರೂಪ : ದೊಡ್ಡ ಚರ್ಮದ ಚೀಲ ಮತ್ತು ಕಬ್ಬಿಣದ ಬಾನೆ ಇಲ್ಲಿ ಅತ್ಯಗತ್ಯ. ಚರ್ಮದ ಎರಡೂ ತುದಿಗಳಲ್ಲಿ ಒಂದೊಂದು ತೂತಿದ್ದು ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಗಟ್ಟಿಯಾದ ಉದ್ದನೆಯ ಹಗ್ಗವನ್ನು ಚೀಲದ ದೊಡ್ಡ ತೂತಿಗೆ ಹಾಗೂ ಬಾನಿಗೆ ಸೇರಿದಂತೆ ಕಟ್ಟಿ, ಹಗ್ಗವನ್ನು ಬಾವಿಯ ಮೇಲಿರುವ ರಾಟೆಯ ಮೂಲಕ ಎತ್ತುಗಳ ನೊಗಕ್ಕೆ ಕಟ್ಟುತ್ತಾರೆ. ಹಗ್ಗದ ಇನ್ನೊಂದು ತುದಿಯನ್ನು ಚೀಲದ ಚಿಕ್ಕ ತೂತಿನ ಬಳಿ ಕಟ್ಟಿ, ಅದನ್ನು ಬಾವಿಯ ಮೇಲಿರುವ ಎರಡನೆ ರಾಟೆಯ ಮೂಲಕ ಕೊಂಡೊಯ್ದು, ಎತ್ತುಗಳ ನೊಗಕ್ಕೆ ಸೇರಿಸಬೇಕು. ಬಾವಿಯಿಂದ ನೀರು ಮೇಲೆ ಬರಲು ಎತ್ತುಗಳು ಕೆಳಕ್ಕಿಳಿಯಬೇಕು. ಇದಕ್ಕಾಗಿ ಬಾವಿಯ ವಿರುದ್ಧ ದಿಕ್ಕಿನಲ್ಲಿ ಇಳಿಜಾರಾದ ಮಾರ್ಗವನ್ನು ನಿರ್ಮಿಸಿಕೊಳ್ಳಬೇಕು. ಇದನ್ನು 'ಬಾರೇ' (ಬಾರಿ) ಎಂದು ಕರೆಯುತ್ತಾರೆ. ಇದು ಬಾವಿಯ ಆಳದಷ್ಟು ಇಳಿಜಾರಾಗಿರುತ್ತದೆ. ಎತ್ತುಗಳು ಬಾವಿಯ ಬಳಿ ಇದ್ದಾಗ ಕಪಿಲೆ / ಬಾನೆ ನೀರಿನೊಳಗೆ ಮುಳುಗುತ್ತದೆ. ಎತ್ತುಗಳನ್ನು ಬಾರೆಯ ಮೂಲಕ ಕೆಳಗಿಳಿಸುತ್ತಿದ್ದಂತೆ ನೀರು ಮೇಲೆ ಬರುತ್ತದೆ. ಈ ಸಂದರ್ಭದಲ್ಲಿ ಚರ್ಮದ ಚೀಲಗಳ ತುದಿ ಮೇಲ್ಮುಖವಾಗಿದ್ದು ನೀರು, ಚೀಲದಿಂದ ಕೆಳಕ್ಕೆ ಸುರಿಯುವುದಿಲ್ಲ. ಎತ್ತುಗಳು ಸಂಪೂರ್ಣವಾಗಿ ಕೆಳಕ್ಕೆ ಇಳಿದಾಗ ಬಾನೆಯಲ್ಲಿನ ನೀರು, ಜೋಡಿಸಿರುವ ಕಾಲುವೆಗೆ (ಕಾಲುವಿಗೆ) ಬಿದ್ದು ವಾಪಸ್ಸಾಗುತ್ತದೆ. ನೀರನ್ನು ಕಾಲುವೆಗೆ ಸುರಿಯಲು ಚರ್ಮದ ಚೀಲಕ್ಕೆ ಕಟ್ಟಿದ ಹಗ್ಗವನ್ನು ಸ್ವಲ್ಪ ಸಡಿಲಿಸಬೇಕಾಗುತ್ತದೆ. ಈ ನೀರಿನ ಪ್ರಮಾಣ ಏತದ ನೀರಿಗಿಂತ ಅಧಿಕವಾಗಿದ್ದು ಬತ್ತ, ಎಲೆ ತೋಟ, ಮುಂತಾದ ನೀರಾವರಿ ಬೆಳೆಗಳನ್ನು ಮಾಡಲು ಇದು ಹೆಚ್ಚು ಅನುಕೂಲ. ಮೇಲಿನ ಮೂರು ಸಾಧನಗಳಲ್ಲದೆ ನೀರೆತ್ತುವ ಸಾಧನವಾಗಿ ಮತ್ತೊಂದು ದೇಶೀಯ ಪದ್ಧತಿಯು ಹುಟ್ಟಿತು. ಅದೇ ಬಕೀಟ್ ಯಂತ್ರ! ಇದು ಸಹ ಪಶುಚಾಲಿತವಾಗಿದ್ದು ಈ ಮೂರು ಸಾಧನಗಳಿಗಿಂತ ಹೆಚ್ಚು ನೀರನ್ನು ಜಮೀನುಗಳಿಗೆ ಒದಗಿಸುತ್ತದೆ.

ಬಕೆಟ್ ಯಂತ್ರಗಳ ಸ್ವರೂಪ : ಕಬ್ಬಿಣದ ಚಕ್ರ ಮತ್ತು ತಗಡಿನ ಡಬ್ಬಗಳಿಂದ ಇದನ್ನು ತಯಾರಿಸುತ್ತಾರೆ. ವೃತ್ತಾಕಾರದ ಈ ಕಬ್ಬಿಣದ ಚಕ್ರಕ್ಕೆ ಒಂದೇ ಗಾತ್ರದ ಬಕೇಟುಗಳನ್ನು ಸಮಾನ ಅಂತರದಲ್ಲಿ ಜೋಡಿಸುತ್ತಾರೆ. ಬಾವಿಯ ನೀರಿನ ಆಳಕ್ಕನುಗುಣವಾಗಿ ಈ ಬಕೇಟ್‌ಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತದೆ. ನೀರು ಮೇಲ್ಭಾಗದಲ್ಲಿದ್ದಾಗ ಕಡಿಮೆ ಸಂಖ್ಯೆಯ ಬಕೇಟ್‌ಗಳು ನೀರು ಆಳಕ್ಕಿಳಿದಂತೆ ಹೆಚ್ಚು ಬಕೆಟ್‌ಗಳನ್ನು ಅಳವಡಿಸುತ್ತಾರೆ. ಬಾವಿಯ ಒಂದು ಬದಿಯಲ್ಲಿ ಸಮತಟ್ಟಾದ ಸಣ್ಣ ವರ್ತುಲಾಕಾರದ ಭೂಮಿ (ಬಾರಿ)ಯನ್ನು ಸಿದ್ಧಪಡಿಸಿರುತ್ತಾರೆ. ಇದರ ಮಧ್ಯೆ ಒಂದು ಆಧಾರಕವನ್ನು ನೆಟ್ಟು ಬಕೆಟ್ ಯಂತ್ರಕ್ಕೂ ಇದಕ್ಕೂ ಒಂದು ಜೋಡಣೆಯನ್ನು ಅಳವಡಿಸುತ್ತಾರೆ. ಇದಕ್ಕೆ ಎತ್ತುಗಳನ್ನು ಕಟ್ಟಿ ಗಾಣದಲ್ಲಿ ಸುತ್ತುವಂತೆ ಬಾರಿಯಲ್ಲಿ ಒಬ್ಬ ವ್ಯಕ್ತಿಯ ಸಹಾಯದಿಂದ ಸುತ್ತುತ್ತಾ ಹೋದಂತೆ, ಬಕೆಟ್‌ಗಳ ಮೂಲಕ ನಿರಂತರವಾಗಿ ನೀರು ಮೇಲೆ ಬಂದು, ಜೋಡಿಸಿರುವ ತೊಟ್ಟಿ ಅಥವಾ ಕಾಲುವೆಗೆ ಬೀಳುತ್ತದೆ ಇದರ ಮೂಲಕ ಬೇಕಾದ ಜಮೀನುಗಳಿಗೆ ಹರಿಯುತ್ತದೆ.

ವೈಜ್ಞಾನಿಕ ಬೆಳವಣಿಗೆಯ ಸಂದರ್ಭದಲ್ಲಿ ಇವೆಲ್ಲವನ್ನು ಮೀರಿಸುವಂತ ವಿದ್ಯುತ್‌ಚಾಲಿತ ಯಂತ್ರಗಳು ಬಂದಿವೆ. ಇದು ರೈತನಿಗೆ ವರದಾನವಾಗಿದ್ದು ಕಡಿಮೆ ಅವಧಿಯಲ್ಲಿ ಹೆಚ್ಚು ನೀರನ್ನು ವಿಸ್ತಾರವಾದ ಭೂ ಪ್ರದೇಶಕ್ಕೆ ಒದಗಿಸುತ್ತದೆ. ಆ ಮೂಲಕ ರೈತ ಸಮೃದ್ಧವಾದ ಬೆಳೆಗಳನ್ನು ಬೆಳೆಯಲು ಹೆಚ್ಚು ಅನುಕೂಲವಾಗಿದೆಯಾದರೂ ವಿದ್ಯುತ್‌ನ ಕಣ್ಣಾಮುಚ್ಚಾಲೆಯಿಂದಾಗಿ ರೈತನ ಸಂಕಷ್ಟ ಪರಿಹಾರವಾಗಿಲ್ಲ.

ಎನ್. ಆರ್.

ಏರ್ನಾಡಿನ ಪರಂಪರಾಗತ ಬೇಸಾಯ ಏರ್ನಾಡಿನ ಬಯಲುಗಳಲ್ಲಿ ಬತ್ತದೊಂದಿಗೆಯೇ ಇತರ ಎಡೆ ಬೆಳೆಗಳನ್ನೂ ಧಾನ್ಯಗಳನ್ನು, ತರಕಾರಿಯನ್ನೂ ಬೆಳೆಯುವ ವಿಶಿಷ್ಟ ಪದ್ಧತಿ ಜಾರಿಯಲ್ಲಿದೆ. ಅಂತೆಯೇ 'ತೋಪುಕೃಷಿ' ಕೂಡ. ಏರ್ನಾಡಲ್ಲಿ ತೋಪು ಕೃಷಿ ಎಂದರೆ ತೆಂಗಿನ ಮರಗಳ ಎಡೆಯಲ್ಲಿ ಮೋಡನ್ ಎಂಬ ಬತ್ತವನ್ನು ಬೆಳೆಯುವುದು. ಅಡಕೆ ತೋಟಗಳಲ್ಲಿ ಈ ತೆರನ ಕೃಷಿ ಸಾಧ್ಯವಿಲ್ಲ. (ತೆಂಗಿನ ಮಧ್ಯದ ಅಂತರ ಸಾಕಷ್ಟು ಇರುವುದರಿಂದ ಬತ್ತ ಕೃಷಿ ಸಾಧ್ಯ) ಈ ಹಿನ್ನೆಲೆಯಲ್ಲಿ ಏರ್ನಾಡಿನ ಬೇಸಾಯವನ್ನು ಬಯಲು ಕೃಷಿ ಮತ್ತು ತೋಪು ಕೃಷಿ ಎಂದು ಎರಡು ಪ್ರತ್ಯೇಕ ವಿಭಾಗಗಳಲ್ಲಿ ಗುರುತಿಸಬಹುದು.

ಬಯಲುಗಳಲ್ಲಿ ಮಕರಮಾಸದ ಬೆಳೆಗಾಗಿ ಉಳುಮೆ ಮುಗಿದ ಕೂಡಲೇ ತೆಂಗಿನ ತೋಪುಗಳಲ್ಲೂ ನಾಲ್ಕು ಸಾಲು ಉಳುಮೆ ಮಾಡಿಬಿಡುತ್ತಾರೆ. ಮೀನಮಾಸದ ಎಡೆಮಳೆ ಬೀಳುವ ಮೊದಲೇ ಸೊಪ್ಪು, ತರಗೆಲೆ, ಕಸಕಡ್ಡಿಗಳನ್ನು ಸುರುವಿ ನೆಲವನ್ನು ಸುಡುತ್ತಾರೆ. ಎಡೆಮಳೆ ಸಿಕ್ಕ ಕೂಡಲೇ ಮತ್ತೆ ಎರಡು ಸಾಲು ಉಳುಮೆ ಮಾಡುತ್ತಾರೆ. ಗೊಬ್ಬರದ ಹುಡಿ, ಬೂದಿ, ಕೋಳಿ ಹಿಕ್ಕೆ ಮುಂತಾದುವನ್ನು ಮಿಶ್ರ ಮಾಡಿ ಗೊಬ್ಬರ ಕೊಡುತ್ತಾರೆ. ಮಳೆಗೆ ಅನುಗುಣವಾಗಿ ಮೇಷ ಅಥವಾ ವೃಷಭ ಮಾಸದಲ್ಲಿ ಪುನಃ ಎರಡು ಸಾಲು ಉಳುಮೆ ಮಾಡಿ ಮೋಡನ್ ಬತ್ತದ ಬಿತ್ತನೆ ಮಾಡಲಾಗುತ್ತದೆ. ಬಿತ್ತನೆಯ ಬಳಿಕವೂ ಇನ್ನೊಮ್ಮೆ ಉಳುಮೆ. ಬತ್ತ ಬಿತ್ತನೆಯ ಅವಧಿಯಲ್ಲೇ ತೋಪಿನ ಇನ್ನೊಂದು ಕಡೆ ರಾಗಿ ಮತ್ತು ಸಾಮೆಗಳನ್ನೂ ಬಿತ್ತನೆ ಮಾಡುತ್ತಾರೆ. ಸಿಹಿಗೆಣಸು, ಬಾಳೆ ಮುಂತಾದುವನ್ನು ಮಗುದೊಂದೆಡೆ ನೆಡುತ್ತಾರೆ. ತರಕಾರಿಗಳನ್ನು 'ತಡ' (ಸು. ಮುಕ್ಕಾಲು / ಒಂದು ಅಡಿ ಎತ್ತರದಲ್ಲಿ ಉದ್ದಕ್ಕೆ ಮಣ್ಣು ಏರಿಸುವುದು) ನಿರ್ಮಿಸಿ ನೆಡುತ್ತಾರೆ. ಕೆಸು, ಸುವರ್ಣಗೆಡ್ಡೆಗಳನ್ನು ಕುಂಭಮಾಸದಲ್ಲೇ

ನಡೆಲಾಗುತ್ತದೆ. ಮೋಡಸ್ ಬತ್ತ ಮತ್ತು ಇತರ ಧಾನ್ಯಗಳು ಸಿಂಹಮಾಸದಲ್ಲಿ ಕಟಾವಿಗೆ ಬರುತ್ತವೆ. ಮೋಡಸ್‌ನ ಕಟಾವಿನ ಬಳಿಕ ಎರಡು ಬಾರಿ ಉಳುಮೆ ಮಾಡಿ ಎಳ್ಳು ಎರಚುತ್ತಾರೆ. ಹುರುಳಿ ಬಿತ್ತುತ್ತಾರೆ. ಸಿಹಿಗೆಣಸು, ಮರಗೆಣಸು ಮುಂತಾದುವನ್ನೂ ಕೃಷಿ ಮಾಡುತ್ತಾರೆ. ಎಳ್ಳು ಬಿತ್ತನೆ ಮಾಡಿ ಅದರ ಮೇಲೆ ಬೈಹುಲ್ಲು ಹರಡಿ ಎಳ್ಳಿಗೆ (ಮರೆ) ನೀಡುತ್ತಾರೆ.

ಬಯಲುಗಳಲ್ಲೂ ಮಕರ ಕೊಯ್ಲು ಮುಗಿದ ಕೂಡಲೇ ಐದಾರು ಬಾರಿ ಉಳುಮೆ ಮಾಡಿ ಮಣ್ಣನ್ನು ಹುಡಿ ಮಾಡಲಾಗುತ್ತದೆ. ಬಳಿಕ ವಿಪುಲವಾಗಿ ತರಕಾರಿ ಕೃಷಿ ಆಗ ಗದ್ದೆಗಳ ತುಂಬ ಹೆಸರು ಕಾಳುಗಳು, ಅಲಸಂದೆ, ಸೌತೆ, ಪಡುವಲ, ಹಾಗಲ, ಬದನೆ, ಬೆಂಡೆ ಮುಂತಾದ ಗಿಡಗಳು ನಳನಳಿಸಲಾರಂಭಿಸುತ್ತವೆ. ಹೆಸರು ಕಾಳುಗಳು ಮತ್ತು ಇತರ ತರಕಾರಿಗಳ ಕಾಲಾವಧಿಯ ಬಳಿಕ ಮತ್ತೆ ನಾಲ್ಕು ಸಾಲು 'ಹುಡಿ ಉಳುಮೆ' ಮಾಡಲಾಗುತ್ತದೆ. ಹೊಸ ಮಳೆ ಸಿಕ್ಕ ಕೂಡಲೇ ಇನ್ನೆರಡು ಸಾಲು ಉಳುಮೆ ನಡೆಯುತ್ತದೆ. ಬಿತ್ತನೆ ನಡೆಯುತ್ತದೆ. ಬಿತ್ತನೆಯ ಬಳಿಕ ಒಂದು ಬಾರಿ ಉಳುಮೆ, ಬೀಜಗಳು ಮಣ್ಣಿನಲ್ಲಿ ಸರಿಯಾಗಿ ಸೇರಿಕೊಳ್ಳಲು. ತರಕಾರಿ ಬೆಳೆದ ಗದ್ದೆಗಳಲ್ಲಿ ಸಾಮಾನ್ಯವಾಗಿ ಮೊದಲ ಬೆಳೆಗೆ (ವಿರಿಪ್ಪ್) ಬಿತ್ತನೆ ಮಾಡದೆ ನಾಟಿ ಮಾಡುವುದು ರೂಢಿ. ಅಂಥ ಸಂದರ್ಭಗಳಲ್ಲಿ ಉಳುಮೆಯ ಪ್ರಮಾಣ ಕಡಿಮೆ. ಮಳೆ ಚೆನ್ನಾಗಿ ಬಿದ್ದ ಕೂಡಲೇ ಒಂದೆರಡು ಬಾರಿ ನೆಲ ಸಮತಟ್ಟು ಮಾಡಲು ಹಲಗೆ (ಊರ್ಚಮರಂ) ಮೆಟ್ಟಲಾಗುತ್ತದೆ.

ವಿರಿಪ್ಪ್ ಬೆಳೆಯ ಬಳಿಕದ ಸುಗ್ಗಿ ಬೆಳೆಗಾಗಿ (ಮಕರ ವಿಳ) ಸಿದ್ಧತೆಗಳು ನಡೆಯುತ್ತವೆ. ಎರಡು ಸಾಲು ಉತ್ತು ಹುಣಿ (ಏರಿ) ಹಾಕಲಾಗುತ್ತದೆ. ಹಸುರು ಸೊಪ್ಪು ಹಾಕಿ ಮತ್ತೆ ಎರಡು ಸಾಲು ಉಳುಮೆ. ಮೂರು ನಾಲ್ಕು ಬಾರಿ ಹಲಗೆ ಮೆಟ್ಟಲಾಗುತ್ತದೆ. ಬಳಿಕ ನಾಲ್ಕು ದಿನ ಗದ್ದೆ 'ಹುಳಿ ಬರುವುದಕ್ಕೆ' ಬಿಟ್ಟು ಬಿಡಲಾಗುತ್ತದೆ. ಪುನಃ ಎರಡು ಮೂರು ಬಾರಿ ಉಳುಮೆ, ಹಲಗೆ ಮೆಟ್ಟುವಿಕೆ. ನೆಲ ಚೆನ್ನಾಗಿ ಹದಗೊಂಡು ಸಮತಟ್ಟು ಆದ ಮೇಲೆ ನಾಟಿ ಕೆಲಸ.

ಕೆ.ಕೆ.

ಏಲಕ್ಕಿ ಇದು ಸೈಟಾಮಿನೆ ಉಪವರ್ಗದ ಜಿಂಜಿಬರೇಸೀ ಕುಟುಂಬಕ್ಕೆ ಸೇರಿದ ಏಕದಳ ಪಂಗಡದ ಬಹುವಾರ್ಷಿಕ ಸಸ್ಯ. ಎಲೆಟೇರಿಯ ಕಾರ್ಡ್‌ಮೋಮಮ್ ಎಂಬುದು ಇದರ ವೈಜ್ಞಾನಿಕ ಹೆಸರು. ಏಲಕ್ಕಿಯನ್ನು ಸಾಂಬಾರು ಬೆಳೆಗಳ ರಾಣಿ ಎನ್ನುವರು. ಆಹಾರದಿಂದ ಔಷಧಿವರೆಗೂ ಏಲಕ್ಕಿ ಬೇಕೇ ಬೇಕು.

ಕಾಯಿಯ ಗಾತ್ರದ ಮೇಲೆ ಏಲಕ್ಕಿಯನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ. ಮಲಬಾರ್‌ಏಲಕ್ಕಿ ಅತ್ಯಂತ ಚಿಕ್ಕ ಗಾತ್ರದ್ದಾದರೆ ಮೈಸೂರು ಏಲಕ್ಕಿ ಕೊಂಚ ಉದ್ದ. ಸಿಲೋನ್ ಏಲಕ್ಕಿ ಎಲ್ಲದಕ್ಕಿಂತ ಉದ್ದ.

ಕೊಡಗಿನ ಮಡಿಕೇರಿ ತಾಲೂಕಿನ ಮದೆನಾಡು ಗ್ರಾಮದ ಕಾಡಿನಲ್ಲಿ 'ಕಾಡು ಏಲಕ್ಕಿ' ಇದೆ. ಅದರ ಗಾತ್ರ ಮತ್ತು ಉದ್ದವೂ ಕೈ ಹೆಬ್ಬೆರಳಿನಷ್ಟು. ಗಿಡದ ಎತ್ತರ ಅಂದಾಜು ಆರು ಅಡಿ. ಗಿಡದ ಸುತ್ತಲೂ ಬುಡಕ್ಕೆ ಕಾಯಿ ಅಂಟಿಕೊಂಡಂತಿರುತ್ತವೆ. ಉಳಿದ ಏಲಕ್ಕಿಯಂತೆ ಗೊಂಚಲಿರುವುದಿಲ್ಲ. ಅದು ತೀರಾ ಕಡಿಮೆ ಸುವಾಸನೆಯದು. ಹಾಗಾಗಿ ಅದರ ಬಳಕೆಯನ್ನು ಯಾರೂ ಮಾಡುತ್ತಿಲ್ಲ.



ಇದು ಮಲೆನಾಡಿನ ಪ್ರಮುಖ ತೋಟದ ಬೆಳೆ. ಈ ಕೃಷಿಗೆ ಶ್ರಮ ಕಡಿಮೆ, ಲಾಭ ಹೆಚ್ಚು. ಪರಿಸರಕ್ಕೆ ಹಾನಿಯಾಗದೆ ಬೆಳೆಸಬಹುದಾದ 'ಪರಿಸರ ಸ್ನೇಹಿ' ಬೆಳೆ ಏಲಕ್ಕಿ. ಕಾಡು ಪ್ರದೇಶದ ಫಲವತ್ತಾದ ಭೂಮಿಯಲ್ಲಿ ಹುಲುಸಾಗಿ ಬೆಳೆಯುತ್ತದೆ. ನೆಲದ ಮೇಲ್ಮೈ ಒಣಗದಂತೆ ಇದ್ದರೆ ತುಂಬಾ ಒಳ್ಳೆಯದು. ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ಮಳೆ ಬಂದಲ್ಲಿ ತುಂಬಾ ಒಳ್ಳೆಯದು. ಆಗಸ್ಟ್ ತಿಂಗಳಿಂದ ಡಿಸೆಂಬರ್ ತನಕ ಫಸಲಿನ ಕಾಲ.

ಕೊಡಗು ಜಿಲ್ಲೆ ಏಲಕ್ಕಿ ಬೆಳೆಗೆ ಹೆಸರುವಾಸಿ. ಅದರಲ್ಲೂ ಮಡಿಕೇರಿ ತಾಲೂಕು ಅಗ್ರಸ್ಥಾನದಲ್ಲಿದೆ. ಇದು ನಿತ್ಯಹರಿದ್ವರ್ಣದ ಕಾಡಿನ ಪ್ರದೇಶ. ಇಲ್ಲಿ 100 ರಿಂದ 150 ಇಂಚು ಮಳೆಯಾಗುತ್ತದೆ. ಸಾಮಾನ್ಯ ಉಷ್ಣತೆ 25^{o}C. ಇಲ್ಲಿ ಹಿಂದಿನ ಕಾಲದಲ್ಲಿ ಕಣ್ಣ ಳತೆಯಲ್ಲ, ಕೂಗಳತೆಯ ಜಮೀನು ಒಬ್ಬೊಬ್ಬನ ಪಾಲಿಗಿತ್ತು. ಲಾರಿಯಲ್ಲಿ ತುಂಬಿ ಏಲಕ್ಕಿ ಮಾರಿದವರೂ ಇದ್ದರು. ಅಂದು ಜನಕ್ಕೆ ಬಗೆಬಗೆಯ ಏಲಕ್ಕಿ ಬಗ್ಗೆ ಗೊತ್ತಿರಲಿಲ್ಲ. ಏನಿದ್ದರೂ ಅದನ್ನು ಮಲೆಏಲಕ್ಕಿಯೆಂದೇ ಕರೆಯುತ್ತಿದ್ದರು.

ಕೆಲವರು ಅರಣ್ಯ ಜಮೀನಿನಲ್ಲಿ 'ಗೇಣಿ' ಮಾಡುತ್ತಿದ್ದರು. ಇಂತಿಷ್ಟು ವರ್ಷಕ್ಕೆಂದು ಕರಾರಿನ ಮೇಲೆ ಏಲಕ್ಕಿ ಕೃಷಿ ಮಾಡುತ್ತಿದ್ದರು. ಕಾಡಿನಲ್ಲಿ ದೊಡ್ಡ ದೊಡ್ಡ ಮರಗಳು ಬಿದ್ದಲ್ಲಿ ಏಲಕ್ಕಿ ಸಸಿಗಳು ಸ್ವಾಭಾವಿಕವಾಗಿ ಮೊಳಕೆಯೊಡೆಯುತ್ತಿದ್ದವು. ಅದನ್ನು ಕಿತ್ತು ತಂದು ಪಾತಿ ಮಾಡಿ ನೆಟ್ಟುಕೊಳ್ಳುತ್ತಿದ್ದರು. ಗಿಡ ದೊಡ್ಡದಾದ ಬಳಿಕ ಕಿತ್ತು ಸಣ್ಣ ಸಣ್ಣ ಗುಳಿ ಮಾಡಿ ನೆಡಲಾಗುತ್ತಿತ್ತು. ಗಿಡ ನೆಡಲು ಇಂತಿಷ್ಟೇ ಅಗಲದ, ಇಂತಿಷ್ಟೇ ಆಳದ ಗುಂಡಿ ಇರಬೇಕೆಂಬ ನಿಯಮವಿರಲಿಲ್ಲ. ಹಾಗೆ ನೆಟ್ಟ ಗಿಡಗಳಿಗೆ ಯಾವುದೇ ಪೋಷಣೆಯಾಗಲಿ, ಯಾವುದೇ ಕೀಟನಾಶಕಗಳನ್ನಾಗಲಿ ಬಳಸುತ್ತಿರಲಿಲ್ಲ. ಹಾಗೆ ನೆಟ್ಟು ಬಂದ ಬಳಿಕ ಮುಂದೆ ಏಲಕ್ಕಿ ಫಸಲು ಕೊಯ್ಯಲು ಮಾತ್ರ ಹೋಗುತ್ತಿದ್ದರು.

ಮಲೆಏಲಕ್ಕಿ ಬೆಳೆಯುತ್ತಿದ್ದಾಗ ಗೇಣಿ ಮಲೆಗೆ ವರ್ಷದಲ್ಲಿ ಮೂರು ಬಾರಿ ಹೋಗಿ ಬರುತ್ತಿದ್ದರು. ಒಮ್ಮೆ ಹೋದರೆ ತಿಂಗಳಾನುಗಟ್ಟಲೆ ಅಲ್ಲೇ ಇರುತ್ತಿದ್ದರು. ತಾತ್ಕಾಲಿಕ ಶೆಡ್ ನಿರ್ಮಿಸಿಕೊಳ್ಳುತ್ತಿದ್ದರು. ಹೋಗುವಾಗ ತಿಂಗಳಿಗೆ ಬೇಕಾಗುವಷ್ಟು ಆಹಾರ ಪದಾರ್ಥಗಳನ್ನು ಕೊಂಡು ಹೋಗುತ್ತಿದ್ದರು. ಏಲಕ್ಕಿಯನ್ನು ಕೊಯ್ದು ಬಿಸಿಲಿನಲ್ಲಿ ಒಣಗಿಸುತ್ತಿದ್ದರು. ಏಲಕ್ಕಿ ಮಲೆ ಜಿಗಣೆಗಳ ತವರೂರು. ಹಾಗಾಗಿ ಕೆಲಸಗಾರರು ಹೊಗೆಸೊಪ್ಪನ್ನು ಬಾಯಲ್ಲಿಟ್ಟುಕೊಂಡು ಕಾಲಿಗೆ ಜಿಗಣೆ ಹತ್ತುವಾಗ

ಹೊಗೆಸೊಪ್ಪಿನ ರಸವನ್ನು ಅದರ ಮೇಲೆ ಉಗುಳುತ್ತಿದ್ದರು. ಜಿಗಣೆಗಳು ಬಿದ್ದು ಹೋಗುತ್ತಿದ್ದವು. ಅವುಗಳ ಉಪದ್ರವವನ್ನು ತಡೆಯಲು ಹೊಗೆಸೊಪ್ಪನ್ನು ಬಾಯಿಗೆ ಹಾಕಿಕೊಂಡದ್ದು ಕೊನೆಗೆ ಹೊಗೆಸೊಪ್ಪು ತಿನ್ನುವುದು ಅವರಿಗೆ ಚಟವೇ ಆಗಿಬಿಡುತ್ತಿತ್ತು.

ಕಾಲ ಕಳೆದಂತೆ ಏಲಕ್ಕಿ ಮೇಲೆ ಗೇಣಿ ಪದ್ಧತಿ ಕೈಬಿಟ್ಟರು. ತಮ್ಮ ತಮ್ಮ ಜಮೀನಿನಲ್ಲಿ ಕೃಷಿ ಮಾಡತೊಡಗಿದರು. ಮೊದಲಿಗೆ ಆಯ್ದ ಗಿಡದಿಂದ ಹಣ್ಣನ್ನು ಕೊಯ್ದು ಸಿಪ್ಪೆ ಬಿಡಿಸಿ ಸಿಹಿ ರಸವನ್ನು ತೆಗೆಯಲು ಚೆನ್ನಾಗಿ ತೊಳೆಯುತ್ತಿದ್ದರು. ಅನಂತರ ಒಂದು ಬಟ್ಟೆಯಲಿ ಕಟ್ಟಿ ನೇತು ಹಾಕುತ್ತಿದ್ದರು. ನೀರೆಲ್ಲಾ ಸೋರಿದ ಬಳಿಕ ಬಟ್ಟೆಯ ಕಟ್ಟನ್ನು ಬಿಚ್ಚಿ ಕಾಳನ್ನು ಬೂದಿಯೊಡನೆ ಕಲೆಸಿ ಅನಂತರ ನೆರಳಿನಲ್ಲಿ ಒಣಗಿಸಲಾಗುತ್ತದೆ. ಕಾಳು ಒಂದಕ್ಕೊಂದು ಅಂಟಿಕೊಳ್ಳದಷ್ಟು ಒಣಗಿದ ಮೇಲೆ ಬಿತ್ತನೆ ಮಾಡಲಾಗುತ್ತದೆ. ಕಾಳನ್ನು ಬೂದಿಯೊಡನೆ ಮಿಶ್ರ ಮಾಡುವುದಷ್ಟೇ



ಅದಕ್ಕಿರುವ ಬೀಜೋಪಚಾರ. ಬೀಜವನ್ನು ಬಿತ್ತಲು ಅಗತೆ ಮಾಡಿ ಹದಮಾಡಿದ ಮಣ್ಣಿನ ಪಾತಿ ಮಾಡಿಕೊಳ್ಳಬೇಕು. ಅದನ್ನು ಒಟ್ಟಲುಪಾತಿ ಅಥವಾ ಸಸಿಮಡಿ ಎನ್ನುತ್ತಾರೆ. ಪಾತಿಯನ್ನು ಮಾಡುವಾಗ ಫಲವತ್ತಾದ ಸ್ಥಳವನ್ನೇ ಆಯ್ದುಕೊಳ್ಳಬೇಕು. ಹೀಗೆ ಆಯ್ದುಕೊಂಡರೆ ಬೇರೆ ಯಾವುದೇ ಮೇಲುಗೊಬ್ಬರದ ಆವಶ್ಯಕತೆ ಇರುವುದಿಲ್ಲ. ಪಾತಿಯಲ್ಲಿ ಕಲ್ಲು, ಕಸಕಡ್ಡಿ ಇರಬಾರದು. ಹದಗೊಂಡ ಪಾತಿಯ ಮೇಲೆ ಏಲಕ್ಕಿ ಬೀಜಗಳನ್ನು ಹರಡಬೇಕು. ಹೀಗೆ ಹರಡಿದ ಮೇಲೆ ಪುಡಿ ಮಾಡಿದ ಕಾಡುಮಣ್ಣನ್ನು ತೆಳುವಾಗಿ ಹರಡಬೇಕು. ಅನಂತರ ಕೈಯಿಂದ ಪಾತಿಯನ್ನು ಅದುಮಬೇಕು. ಬೂದಿ ಹರಡಿ ಇರುವೆಗಳಿಂದ ರಕ್ಷಿಸಬೇಕು. ನೇರ ಬಿಸಿಲಿನ ಹೊಡೆತವನ್ನು ತಡೆಯಲು ಮತ್ತು ಪಾತಿಯು ಒಣಗದಂತೆ ಕಾಪಾಡಲು ಹುಲ್ಲು, ತರಗೆಲೆ ಅಥವಾ ಚರ್ಮ (ಒಂದು ಬಗೆಯ ಚಿಕ್ಕ ಗಿಡ) ಸೊಪ್ಪನ್ನು ಹರಡಬೇಕು. ಅನಂತರ ಪಾತಿ ಮೇಲೆ ಭಾರವನ್ನು ಇಡಬೇಕು. ದಿನಕ್ಕೆ ಒಂದೆರಡು ಬಾರಿ ಬೆಳಗ್ಗೆ ಮತ್ತು ಸಂಜೆ ತೆಳುವಾಗಿ ನೀರು ಚಿಮುಕಿಸಬೇಕು. ಮೂವತ್ತರಿಂದ ನಲವತ್ತು ದಿನಗಳಿಗೆಲ್ಲಾ ಮೊಳಕೆಯೊಡೆಯುತ್ತದೆ. ಒಂದು ವೇಳೆ ಮೊಳಕೆಯೊಡೆಯುವುದು ನಿಧಾನವೆಂದು ಕಂಡು ಬಂದರೆ ಪಾತಿಯ ಬಳಿ ಪಟಾಕಿ ಸಿಡಿಸಬೇಕು. ನೆಲ ಅದುರಿದಾಗ ಬೇಗ ಮೊಳಕೆ ಬರುತ್ತದೆಂಬುದು ಅನುಭವಿಗಳ ಮಾತು. ಮೊಳಕೆಯೊಡೆಯುತ್ತಿದ್ದಂತೆ ಪಾತಿ ಮೇಲಿನ ಹೊದಿಕೆಯನ್ನು ನಿಧಾನವಾಗಿ ತೆಗೆಯಬೇಕು. ನಿಧಾನವಾಗಿ ತೆಗೆಯದಿದ್ದರೆ ಸಸಿಗಳೂ ಕಿತ್ತು ಬರುವುದುಂಟು. ಹೊದಿಕೆಯನ್ನು ತೆಗೆದು ನಂತರ ಚಿಕ್ಕ ಚಪ್ಪರ ಹಾಕಬೇಕು. ಸಸಿಯು 2-4 ಎಲೆ ಬಂದ ಮೇಲೆ ಬೇರೊಂದು ಸಸಿ ಮಡಿಗೆ ಸಸಿಯನ್ನು ವರ್ಗಾಯಿಸಬೇಕು. ಆಮೇಲೆ ದೊಡ್ಡ ಚಪ್ಪರ ಹಾಕಿ ಗಿಡವನ್ನು ರಕ್ಷಿಸಬೇಕು. ಆ ಸಸಿಗಳಲ್ಲಿ ಎರಡು ಮೂರು ಕಂದು ಹಾಕಿ ಗಿಡವನ್ನು ರಕ್ಷಿಸಬೇಕು. ಆ ಸಸಿಗಳಲ್ಲಿ ಎರಡು ಮೂರು ಕಂದುಗಳು ಬಂದ ಕೂಡಲೆ ಕಿತ್ತು ತೋಟದಲ್ಲಿ ನೆಡಬೇಕು. ಗಿಡದ ಬುಡವನ್ನು ತರಗೆಲೆಯಿಂದ ಮುಚ್ಚಬೇಕು. ಇದರಿಂದ ತೇವಾಂಶ ಉಳಿಯುತ್ತದೆ. ಹೀಗೆ ನೆಟ್ಟ ಮೂರನೇ ವರ್ಷಕ್ಕೆ ಫಸಲು ಆರಂಭವಾಗುತ್ತದೆ. ಐದು-ಆರನೇ ವರ್ಷಕ್ಕೆ ಬಂಪರ್ ಬೆಳೆ ಸಿಗುತ್ತದೆ. ಕೊಯ್ಲಿಗಿಂತ ಮೊದಲು ಏಲಕ್ಕಿ ತೋಟದ ಕಚ್ಚಡ ಕೆಲಸ ಮಾಡಬೇಕು. ಕಳೆಗಿಡಗಳನ್ನು, ಒಣಸೋಗೆಗಳನ್ನು ಕತ್ತರಿಸುವ ಕೆಲಸವನ್ನು ಕಚ್ಚಡ ಕೆಲಸ ಎನ್ನುವರು. ಹೀಗೆ ಮಾಡದಿದ್ದರೆ ಸರಾಗವಾಗಿ ಕೆಲಸ ಮಾಡಲು ಆಗುವುದಿಲ್ಲ. ಹಣ್ಣನ್ನು ಕೊಯ್ದು ವಿಶೇಷವಾದ ಏಲಕ್ಕಿ ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ಒಂದು ಗೊಂಚಲಿನಲ್ಲಿ ಪ್ರಾರಂಭದಲ್ಲಿ ಮೂರು ಕಾಯಿಗಳನ್ನು ಕೊಯ್ಯುತ್ತಾರೆ. ಅದನ್ನು ಒಂದು ಹಣ್ಣು, ಇನ್ನೊಂದು ಪೇರಲ, ಮತ್ತೊಂದು ಕರಿಕಾಯಿ ಎನ್ನುವರು. ಅಂದರೆ ಒಂದು ಚೆನ್ನಾಗಿ ಹಣ್ಣಾದುದು, ಮತ್ತೊಂದು ಹಣ್ಣಾಗ ತೊಡಗಿದ್ದು, ಇನ್ನೊಂದು ಬಲಿತದ್ದು. ಹೀಗೆ ಕೊಯ್ದ ಬಳಿಕ ತೊಳೆದು ಬಿಸಿಲಿನಲ್ಲಿ ನಾಲ್ಕು ದಿನ ಚೆನ್ನಾಗಿ ಒಣಗಿಸಬೇಕು. ಇಲ್ಲದಿದ್ದರೆ ಅದಕ್ಕಾಗಿಯೇ ನಿರ್ಮಿಸಿದ ಏಲಕ್ಕಿ ಗೂಡು (ಮಣ್ಣಿನ ಒಲೆ ಅಂದರೆ ಕೆಳಗಡೆ ಬೆಂಕಿ ಹಾಕುವ ವ್ಯವಸ್ಥೆಯಿದ್ದು, ಮೇಲ್ಭಾಗದಲ್ಲಿ 2-3 ಅಡಿಗಳಷ್ಟು ಉದ್ದದ ಸಮತಟ್ಟಾದ ಮಣ್ಣಿನ ಅಟ್ಟ)ನಲ್ಲಿ ಒಣಗಿದ ಅನಂತರ ಏಲಕ್ಕಿ ತುದಿಯಲ್ಲಿರುವ ಹೂವನ್ನು ತೆಗೆಯಬೇಕು. ಹಳ್ಳಿಯ ಸಾಂಪ್ರದಾಯಿಕ ವಿಧಾನವೆಂದರೆ ಒಂದು ಚೀಲಕ್ಕೆ ಒಣ ಏಲಕ್ಕಿಯನ್ನು ಹಾಕಿ ಆಚೆ ಈಚೆ ಇಬ್ಬರು ಹಿಡಿದುಕೊಂಡು ಚೆನ್ನಾಗಿ 50-60 ಬಾರಿ ಅಲುಗಿಸಬೇಕು ಅಥವಾ ಬೆತ್ತದಿಂದ ಮಾಡಿದ ವಿಶೇಷ ಆಕಾರದ ಬುಟ್ಟಿಗೆ ಹಾಕಿ ಒಂದು ತುದಿಯನ್ನು ಹಗ್ಗದಿಂದ ಕಂಬಕ್ಕೆ ಕಟ್ಟಿ ಇನ್ನೊಂದು ತುದಿಯನ್ನು ಒಬ್ಬ ಮಾತ್ರ ಹಿಡಿದು ಆಚೆ ಈಚೆ ಅಲುಗಿಸಬೇಕು. ಇದೆಲ್ಲಾ ಆದ ಬಳಿಕ ಕಜ್ಜಿ ಕಾಯಿ, ನೀರು ಕಾಯಿ, ಒಳ್ಳೆಯ ಕಾಯಿ ಎಂದೆಲ್ಲಾ ಬೇರ್ಪಡಿಸಿ ಚೀಲದಲ್ಲಿ ಕಟ್ಟಿ ಬೆಚ್ಚಗೆ ರಕ್ಷಿಸಿಟ್ಟು ಕಾಪಾಡಬೇಕು.

ಕಾವ್ಯ ಸಂಪ್ರದಾಯದಲ್ಲಿ ಇದನ್ನು ಬಳ್ಳಿ ಎಂದು ಹೇಳುತ್ತಾರಾದರೂ ಇದೊಂದು ಗಿಡ (ಹರ್ಬ್). ಇದನ್ನು ಸಂಸ್ಕೃತದಲ್ಲಿ ಏಲಾ, ಹಿಮಾ, ಗಾಂಧಾಲೀಗರ್ಭಾ ಎಂದೂ ಹಿಂದಿಯಲ್ಲಿ ಇಲಾಚಿ ಎಂದೂ ಕರೆಯುತ್ತಾರೆ.

ಏಲಕ್ಕಿ ವೈದ್ಯಕೀಯ ಉಪಯೋಗ ಇರುವ ಗಿಡ. ಅರುಚಿ, ಬಿಕ್ಕಳಿಕೆ, ದಾಹ, ಕಫ ಮುಂತಾದವುಗಳಿಗೆ ಪರಿಹಾರವಾಗಿ ಉಪಯೋಗಿಸುತ್ತಾರೆ.

ಜೆ.ಬಿ.ಆರ್.

ಒಂದೆಲಗ ಮನುಷ್ಯ ಎಷ್ಟೇ ವೈಜ್ಞಾನಿಕ ಯುಗದತ್ತ ಮುಂದುವರೆದರು ದೇಶೀಯತೆಗೆ ಮುಖಮಾಡುವುದು ಸಹಜ. ಆರೋಗ್ಯ ಎಂಬ ಮೂರಕ್ಷರ ಅವನನ್ನು ಅತ್ತ ತಿರುಗುವಂತೆ ಮಾಡುವಲ್ಲಿ ಸಫಲವಾಗುವುದು. ಈ ಆರೋಗ್ಯದ ವೃದ್ಧಿಗಾಗಿಯೆ ಇಂಗ್ಲಿಷ್ ಮೆಡಿಷನ್ ನಡುವೆಯೂ ದೇಶೀಯ ವೈದ್ಯ ಪದ್ಧತಿ ಹೆಸರುವಾಸಿಯಾಗಿದ್ದು, ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ಇರುವುದರಿಂದ ಇಂದಿಗೂ ಬಳಸಲ್ಪಡುತ್ತಿರುವುದು, ಮನುಷ್ಯನ ಆರೋಗ್ಯದ ಮೇಲೆ ಅದರ

ಪರಿಣಾಮವನ್ನು ತೋರುತ್ತದೆ. ಇಂತಹ ವೈದ್ಯಕೀಯ ಗುಣವುಳ್ಳ ಸಸ್ಯಗಳಲ್ಲಿ 'ಒಂದೆಲಗ' ಕೂಡ ಒಂದು. ಕನ್ನಡದಲ್ಲಿ ಉರಗ, ಒಂದೆಲಗ ಎಂದು ಕರೆಯುವ ಇದನ್ನು ಇಂಗ್ಲಿಷ್‌ನಲ್ಲಿ ಇಂಡಿಯನ್ ಪೆನ್ನಿ ವರ್ಟ್ ಮತ್ತು ಗೊಟುಕೋ ಎಂದು ಕರೆಯುವರು. ಇದರ ವೈಜ್ಞಾನಿಕ ಹೆಸರು ಸೆಂಟೆಲ್ಲ ಏಸಿಯಾಟಿಕ. ಇದು ಏಪಿಯೇಸಿ ಕುಟುಂಬಕ್ಕೆ ಸೇರಿದ ಒಂದು ಸಸ್ಯವಿಧ.

ಒಂದೆಲಗವು ಹಬ್ಬುತ್ತಾ ಬೆಳೆಯುವ ಗಿಡಮೂಲಿಕೆ. ಇದರ ವಿಶೇಷವೆಂದರೆ ಪ್ರತಿ ಗಿಣ್ಣಿನಲ್ಲೂ ಬೇರು ಮೂಡುವುದು. ಎಲೆಯ ಕಾಂಡ ಸರಳ ರೇಖೆಯಂತೆ ನೇರವಾಗಿದ್ದು, ಎಲೆ ಉಪ್ಪು ಮಿಶ್ರಿತ ರುಚಿ



ಹೊಂದಿರುತ್ತದೆ. ದುಂಡನೆ ಆಕಾರದ ಎಲೆಯ ಅಂಚುಗಳ ಹಲ್ಲುಗಳಂತೆ ಕಾಣುವುವು. ತಂಪಾದ ಹಾಗೂ ತೇವಯುತ ಪ್ರದೇಶದಲ್ಲಿ ಬೆಳೆಯುವುದು ಇದರ ಸ್ವಭಾವ. ಗಿಡದ ದಂಟು ಸಪೂರವಿದ್ದು, ಜಾಲದಂತೆ ಹರಡಿ, ಎಲೆಗಳನ್ನು ಮುಚ್ಚಿಸುತ್ತಾ ಹೋಗುತ್ತದೆ. ದಟ್ಟ ಹಸುರಿನಂತೆ ಹಾಸಿದ ಇದು ಸುಂದರ ಸಸ್ಯವಾಗಿ, ಬತ್ತದ ಗದ್ದೆ, ಕೆರೆ, ಹೊಂಡಗಳ ಸನಿಹ ಮತ್ತು ತೋಟಗಳಲ್ಲಿ ಕಂಡುಬರುತ್ತದೆ.

ಒಂದೆಲಗದ ಕೃಷಿ : ಇದೊಂದು ಇತ್ತೀಚಿನ ದಿನಗಳಲ್ಲಿ ಕಂಡುಬರುವ ಉಪಕೃಷಿ. ಸಾಮಾನ್ಯವಾಗಿ ಹಳ್ಳಿಯ ಜನರು ತಮ್ಮ ಗದ್ದೆ ತೋಟಗಳಲ್ಲಿ ಬೆಳೆಯುತ್ತಿದ್ದ ಒಂದೆಲಗವನ್ನು ಇತರ ಸೊಪ್ಪಿನ ಜೊತೆ, ಸೊಪ್ಪಿನ ಪಲ್ಯ ಮಾಡಲು ಮತ್ತು ಕಷಾಯ ಮಾಡಲು ಬಳಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಇದರ ಮಹತ್ವ ಅರಿತು ಔಷಧಿ ತಯಾರಿಕೆಗೆ ತೊಡಗಿರುವುದರಿಂದ ಉಪಕೃಷಿಯಾಗಿ ಕೃಷಿ ಕಾರ್ಯ ಮಾಡುತ್ತಿರುವುದು ಅಲ್ಲಲ್ಲಿ ಕಂಡುಬರುವುದು. ತೇವಯುತ ಪ್ರದೇಶಗಳಲ್ಲಿ ಏರುಮಡಿಗಳಲ್ಲಿ, ಕಾಲುದಾರಿಯ ಬದಿಗಳಲ್ಲಿ ಮತ್ತು ತೋಟಗಳಲ್ಲಿ ಪಾತಿ ಮಾಡಿ ಬೆಳೆಯಲಾಗುವುದು. ಹರಡುತ್ತಾ ಬೆಳೆಯುವ ಒಂದೆಲಗ ಕಠಿಣ ಪರಿಸರಕ್ಕೂ ಹೊಂದಿಕೊಳ್ಳುವ ಗುಣಹೊಂದಿದೆ. ಇದನ್ನು ತುಂಡು ಮಾಡಿ ಮಡಿಗಳಲ್ಲಿ ನೆಟ್ಟು ಬೆಳೆಸಬಹುದು. ಅಲ್ಲದೆ ತೂಗುಕುಂಡಗಳಲ್ಲಿ ಬಳ್ಳಿಯ ತುಂಡುಗಳನ್ನು ನೆಟ್ಟು ಬೆಳೆಸಲಾಗುತ್ತದೆ. ನೆರಳು ಮತ್ತು ತಂಪು ಆರ್ದ್ರತೆ ಇದಕ್ಕೆ ಉತ್ತಮವಾದುದು. ಮೂರುತಿಂಗಳಲ್ಲಿ ಗಿಡವು ಕಟಾವಿಗೆ ಬರುತ್ತದೆ. ಇದರ ವೈಶಿಷ್ಟ್ಯವೆಂದರೆ ಮಾಲಿನ್ಯವನ್ನು ಹೀರಿಕೊಳ್ಳುವುದು. ಒಂದೆಲಗವನ್ನು ಬೇರು ಸಹಿತ ಕಿತ್ತು, ನೆರಳಿನಲ್ಲಿ ಒಣಗಿಸಿ ಸಂರಕ್ಷಿಸಬಹುದು, ಕರ್ನಾಟಕದಲ್ಲಿ ಮೂಡುಬಿದರೆ, ದಕ್ಷಿಣ ಕನ್ನಡಗಳಲ್ಲಿ ಇದರ ಕೃಷಿ ಹೆಚ್ಚು ಕಂಡುಬರುವುದು, ಇತರೆಡೆ ಅಲ್ಪಪ್ರಮಾಣದಲ್ಲಿದೆ.

ಸಂಶೋಧನೆಯಲ್ಲಿ ಬಳಕೆ : ಔಷಧೀಯ ಗುಣ ಹೊಂದಿರುವ ಒಂದೆಲಗವನ್ನು ಆಯುರ್ವೇದ ಮತ್ತು ನಾಟಿ ವೈದ್ಯಪದ್ಧತಿಯಲ್ಲಿ ಬಳಸಬಹುದು. ಇದರಲ್ಲಿ ಎ.ಬಿ.ಸಿ. ಜೀವಸತ್ವಗಳಿದ್ದು, ಮೆಗ್ನೇಷಿಯಂನಂತಹ ಪೋಷಕಾಂಶಗಳು ಇರುವುದು. ಏಷ್ಯಾಟಿಕೋಸೈಡ್ ಆಮ್ಲ ಮತ್ತು ಮಡಸಿಕ್ ಆಮ್ಲ ಕೂಡ ಒಂದೆಲಗದಲ್ಲಿದೆ. ಇದೊಂದು ಪ್ರಬಲ ರಕ್ತಶೋಧಕವಾಗಿದ್ದು, ಕುಷ್ಟ, ಸಿಡಿಲಿಸ್, ಎಕ್ಸಿಮಾ ಮತ್ತು ಸೋರಿಯಾಸಿಸ್ ಮುಂತಾದ ಚರ್ಮರೋಗಗಳನ್ನು ಗುಣಪಡಿಸಲು ನೆರವಾಗುವುದು. ಏಷ್ಯಾಟಿಕೋಸೈಡ್‌ನಿಂದ ಹಳೆಯ ರಕ್ತಕೋಶಗಳು ನಾಶವಾಗಿ ಹೊಸರಕ್ತಕೋಶಗಳು ರೂಪುಗೊಳ್ಳುವುವು. ದೇಹದಲ್ಲಿ ಕೆಂಪು ರಕ್ತ ಕಣಗಳನ್ನು ಹೆಚ್ಚಿಸಲು ಇದು ನೆರವಾಗುವುದು. 'ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿ'ನ ಪ್ರಯೋಗದಂತೆ "ವಾಕರ್ಸ ಕಾಸೀನೋ ಸಾರ್ಕೋಮಾ" ಎಂಬ ಕ್ಯಾನ್ಸರ್‌ನ್ನು ಇದು ತಡೆಗಟ್ಟುವುದು. ಆದ್ದರಿಂದಲೇ ದಕ್ಷಿಣ ಆಫ್ರಿಕಾ, ಮಡಗಾಸ್ಕರ್, ನೇಪಾಳ, ಭಾರತ, ಶ್ರೀಲಂಕಾ, ಚೀನಾ, ಜಪಾನ್ ಮತ್ತು ಟಿಬೆಟ್ ಮುಂತಾದ ರಾಷ್ಟ್ರಗಳಲ್ಲಿ ವೈದ್ಯಕೀಯ ಕ್ಷೇತ್ರದ ಆಶಾಕಿರಣವಾಗಿ ಒಂದೆಲಗವನ್ನು ಬೆಳೆಯುವುದರೊಂದಿಗೆ ಸಂಶೋಧನೆಗೆ ಒಳಪಡಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ.

ಒಂದೆಲಗದ ಉಪಯೋಗ : ಒಂದೆಲಗವನ್ನು ನಿತ್ಯ ಸೇವನೆಯ ವಸ್ತುವಾಗಿ ಮನೆಯಲ್ಲಿ ಬಳಸಬಹುದು. ಇದರ ಪಲ್ಯ, ಕಷಾಯ, ಆರೋಗ್ಯ ವೃದ್ಧಿಯ ಮೇಲೆ ಪರಿಣಾಮ ಬೀರುವುದು. ಇದೊಂದು ರೋಗ ನಿರೋಧ ಗುಣವುಳ್ಳ ಸೊಪ್ಪಾಗಿದ್ದು, ಬೆನ್ನು ಹುರಿ, ಸೊಂಟನೋವು, ಕುತ್ತಿಗೆನೋವು ಮುಂತಾದ ಮನುಷ್ಯ ಸಂಬಂಧಿ ಖಾಯಿಲೆಗಳನ್ನು ನಿವಾರಣೆ ಮಾಡುವಲ್ಲಿ ಇದರ ಪಾತ್ರ ಹಿರಿದು. ಭಾರತೀಯ ಆಯುರ್ವೇದ ಪದ್ಧತಿಯಲ್ಲಿ ಮತ್ತು ನಾಟಿ ವೈದ್ಯ ಪದ್ಧತಿಯಲ್ಲಿ ಬಹು ಹಿಂದಿನಿಂದಲೂ ಬಳಸುತ್ತಾ ಬಂದಿರುವುದು ಒಂದೆಲಗದ ಮಹತ್ವವನ್ನು ಸಾರುತ್ತದೆ. ಇದರಿಂದ ಬೌದ್ಧಿಕ ವಿಕಾಸ ಮತ್ತು ಮಾನಸಿಕ ಆರೋಗ್ಯ ಉಂಟಾಗುವುದು ವೈಜ್ಞಾನಿವಾಗಿ ದೃಢಪಟ್ಟಿದೆ. ಮಾನಸಿಕ ಉದ್ವಿಗ್ನತೆಯನ್ನು ಕಡಿಮೆ ಮಾಡಿ ಮೆದುಳಿನ ಶಕ್ತಿಯನ್ನು ವೃದ್ಧಿಸುವುದರೊಂದಿಗೆ, ರಕ್ತಹೀನತೆ, ಕೆಮ್ಮು, ಜ್ವರ, ಕ್ಷಯ, ಹುಚ್ಚು ಮೊದಲಾದವು ಗುಣಮುಖವಾಗುವುದು. ಒಂದೆಲಗವನ್ನು ಬಳಸಿ ಮಾಡಿದ 'ಬ್ರಹ್ಮರಸಾಯನ' ಅದ್ಭುತ ಆಯುರ್ವೇದದ ಪ್ರಯೋಗ. ತೆಂಗಿನೆಣ್ಣೆಗೆ ಒಂದೆಲಗದ ರಸವನ್ನು ಮಿಶ್ರಮಾಡಿ ತಲೆಗೆ ಹಚ್ಚಿಕೊಂಡರೆ ತಲೆಕೂದಲ ಆರೋಗ್ಯ ವೃದ್ಧಿಯಾಗುವುದು. ಇದರ ರಸವನ್ನು ಹಾಲಿಗೆ ಬೆರಸಿ ಸೇವಿಸುವುದರಿಂದ ಮಹಿಳೆಯರ ಬಿಳಿ ಸೆರಗಿನ ಸಮಸ್ಯೆ ದೂರವಾಗುವುದು. ಉರಿ ಮೂತ್ರದ ಸಮಸ್ಯೆ, ಹೃದಯ ಸಂಬಂಧಿ ಸಮಸ್ಯೆಗಳು ಒಂದೆಲಗದಿಂದ ಕಡಿಮೆಯಾಗುವುದು. ಈ ಸೊಪ್ಪಿನಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುವುದರಿಂದ ಬಿ ಮತ್ತು ಸಿ ಜೀವಸತ್ವಗಳೊಂದಿಗೆ ಕ್ಯಾರೋಟಿನೈಡ್‌ಗಳು ಹೆಚ್ಚಾಗುತ್ತವೆ. ಇದರಿಂದ ಆರೋಗ್ಯ ಸುಧಾರಣೆಯಾಗುತ್ತದೆ. ಜೇನುತುಪ್ಪದ ಜೊತೆ ಒಂದೆಲಗವನ್ನು ಬಳಸುವುದರಿಂದ ರಕ್ತಹೀನತೆ ನಿವಾರಣೆಯಾಗಿ ಕೆಂಪು ರಕ್ತ ಕಣಗಳು ವೃದ್ಧಿಯಾಗುತ್ತವೆ. ಮಕ್ಕಳಿಗೆ ಸಂಬಂಧಿಸಿದ ನೆಗಡಿ, ಆಮಶಂಕೆ, ಅತಿಸಾರ ಮತ್ತು ದಡಾರದಂತಹ ಖಾಯಿಲೆಗಳು, ಪಿತ್ತಕೋಶದ ಸಮಸ್ಯೆಗಳು, ಶ್ವಾಸಕೋಶದ ಸಮಸ್ಯೆಗಳು, ಗಂಟಲಿನ ಸಮಸ್ಯೆ, ಚರ್ಮರೋಗ, ಪುರುಷ

ಸಂಬಂಧಿ ಖಾಯಿಲೆ, ಸೋಂಕು ರೋಗಗಳು, ಕಣ್ಣಿನ ಸಮಸ್ಯೆಗಳು, ತಲೆನೋವು ಮತ್ತು ಪಶುವೈದ್ಯ ಮೊದಲಾದವುಗಳ ಬಳಕೆಯಲ್ಲಿ ಇಂದಿಗೂ ಹೆಸರುವಾಸಿಯಾಗಿರುವ ಇದರ ಪಾನೀಯ ಮನಸ್ಸಿಗೆ ಹುರುಪು ನೀಡುವ ಮತ್ತು ಮಿದುಳಿಗೆ ಉತ್ತೇಜನ ಕೊಡುವಂಥದ್ದು. ಎಲ್ಲರ ಮನೆಯಂಗಳದಲ್ಲೂ ಬೆಳೆಸಬಹುದಾದ ಬಹುಪಯೋಗಿ ಸಸ್ಯ ಇದು.

ಎಲ್. ಆರ್.

ಒಕ್ಕಲುತನ ಭೂಸ್ವಾಮ್ಯ ಕೇವಲ ಕೆಲವರ ಸೊತ್ತಾಗಿದ್ದು ಉಳಿದ ಭೂರಹಿತರು ಕರಾರಿನ ಮೇರೆಗೆ ಭೂಸಾಗುವಳಿ ಮಾಡುವ ಪದ್ಧತಿಗೆ ಒಕ್ಕಲುತನ ಎಂದು ಹೆಸರು. ಇದಕ್ಕೆ ಪರ್ಯಾಯವಾಗಿ ಭೂಹಿಡುವಳಿ, ಕೃಷಿ ಎಂಬ ಅರ್ಥಗಳೂ ಇವೆ. ಪ್ರಪಂಚದ ಎಲ್ಲಾ ಭಾಗಗಳಲ್ಲೂ ಈ ವ್ಯವಸ್ಥೆ ಬೇರೆ ಬೇರೆ ಪ್ರಮಾಣದಲ್ಲಿರುವುದನ್ನು ಕಾಣುತ್ತೇವೆ. ಉದಾ : ಇಂಗ್ಲೆಂಡಿನಲ್ಲಿ ಶೇ. 65 ಸ್ಕಾಟ್ಲೆಂಡಿನಲ್ಲಿ ಶೇ. 77, ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಶೇ. 20 ರಷ್ಟಿದೆ. ಭಾರತದಲ್ಲಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಕಾಲಕ್ಕೆ ಸಾಗುವಳಿ ಜಮೀನಿನ ಪ್ರಮಾಣ ಶೇ. 40 ರಷ್ಟಿತ್ತು. ಬಹುಸಂಖ್ಯಾತ ರೈತರು ಜಮೀನು ರಹಿತರಾಗಿದ್ದು ಭೂಮಾಲೀಕರಿಂದ ಸಾಗುವಳಿ ಹಕ್ಕು ಪಡೆದು ಈ ಪದ್ಧತಿಯಲ್ಲಿ ಕೆಲಸ ಮಾಡುತ್ತಾರೆ. ಇದನ್ನು ಇಂಗ್ಲಿಷಿನಲ್ಲಿ ಟೆನೆನ್ಸಿ, ಗುತ್ತಿಗೆ ಎಂದೂ ಗುತ್ತಿಗೆ ಪಡೆದವನನ್ನು ಗೇಣಿದಾರ ಎಂದೂ ಕರೆಯುತ್ತಾರೆ. ಭೂ ಒಡೆಯ ಭೂರಹಿತ ಕೃಷಿಕನಿಗೆ ಜಮೀನನ್ನು ವಹಿಸಿದಾಗ ಮಾಡಿಕೊಳ್ಳುವ ಕರಾರುಗಳಲ್ಲಿ ವ್ಯತ್ಯಾಸವಿರುತ್ತದೆ. ಒಂದು ವೇಳೆ ಭೂ ಒಡೆಯ ಸಾಗುವಳಿಗೆ ಬೇಕಾದ ಗೊಬ್ಬರ ಬೀಜ, ನೀರು ಮೊದಲಾದವನ್ನು ಒದಗಿಸಿದರೆ ಸಾಗುವಳಿದಾನ ಭೂಮಾಲೀಕನಿಗೆ ಕೊಡುವ ಆಯದ ಪ್ರಮಾಣ ಹೆಚ್ಚಾಗಿರುತ್ತದೆ. ಭೂಮಿಯನ್ನು ಸಾಗುವಳಿಗೆ ಬಿಟ್ಟುಕೊಟ್ಟರೆ ಆಯ ಕೊಡುವ ಪ್ರಮಾಣ ಕಡಿಮೆಯಾಗುತ್ತದೆ. ಕೆಲವು ವೇಳೆ ಈ ಪದ್ಧತಿಯಿಂದ ಮಾಲೀಕನಿಗೂ ಸಾಗುವಳಿದಾರನಿಗೂ ಆರ್ಥಿಕ ದೃಷ್ಟಿಯಿಂದ ಲಾಭವಾಗುತ್ತದೆ. ಅನೇಕ ವೇಳೆ ಇದರಿಂದ ದುರುಪಯೋಗವಾಗುವ ಸಂಭವವೂ ಉಂಟು. ಭೂಮಾಲೀಕನ ಅಸಡ್ಡೆಯಿಂದ, ಸಾಗುವಳಿದಾರ ಅದರ ನಿಜವಾದ ಒಡೆಯನಾಗದೆ ಇರುವುದರಿಂದ ನಿರ್ಲಕ್ಷ್ಯದಿಂದ ಕೂರುವುದೂ ಉಂಟು. ಕೆಲವು ಸಾಗುವಳಿದಾರರು ಉತ್ತಮವಾಗಿ ಇಳುವರಿ ಪಡೆದರೂ ಭೂಮಾಲೀಕ ಅವನಿಗೆ ಸರಿಯಾದ ಪ್ರಮಾಣದಲ್ಲಿ ಆಯವನ್ನು ಹಂಚಿಕೆ ಮಾಡುವುದಿಲ್ಲ. ಆದ್ದರಿಂದ ಒಕ್ಕಲುತನ ಪದ್ಧತಿಯಿಂದ ಅನುಕೂಲಕ್ಕಿಂತ ಅನಾನುಕೂಲಗಳೇ ಅಧಿಕ. ಸಾಗುವಳಿದಾರನಿಗೆ ಒಕ್ಕಲುತನದಲ್ಲಿ ಬದ್ಧತೆ ಇರುವುದಿಲ್ಲ. ಭೂಮಾಲೀಕ ಯಾವಾಗ ಬೇಕಾದರೂ ಭೂಮಿಯನ್ನು ಹಿಂಪಡೆಯಬಹುದು. ಆದ್ದರಿಂದ ಸಾಗುವಳಿದಾರ ಹೆಚ್ಚು ಆಸ್ಥೆ ವಹಿಸಿ ಬಂಡವಾಳ ಹೂಡಿ ದುಡಿಯಲು ಇಚ್ಛಿಸುವುದಿಲ್ಲ. ಬಂಡವಾಳ ಹೂಡಿದರೂ ಅದಕ್ಕೆ ನೆಲದೊಡೆಯ ಸರಿಯಾದ ಪರಿಹಾರ ನೀಡುವುದಿಲ್ಲ.

ಭೂರಹಿತ ಸಾಗುವಳಿದಾರ ಸಾಮಾನ್ಯವಾಗಿ ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ಹಾಗೂ ಹೆಚ್ಚು ಬಂಡವಾಳ ಹೂಡಲು ಅಶಕ್ತನಾದುದರಿಂದ ಜಮೀನುದಾರನಿಗೂ ನ್ಯಾಯ ಒದಗಿಸಲಾರ. ತನ್ನ ಬದುಕನ್ನೂ ಸುಧಾರಿಸಿಕೊಳ್ಳಲಾರ. ಆದ್ದರಿಂದ ಭೂ ಒಡೆಯ ಮತ್ತು ಸಾಗುವಳಿದಾರ ಯಥಾಸ್ಥಿತಿಯಲ್ಲಿಯೇ ಉಳಿಯುತ್ತಾರೆ.

ಭಾರತ ಸ್ವತಂತ್ರವಾದ ಬಳಿಕ ಭೂಮಾಲೀಕತ್ವದ ಕಾನೂನುಗಳನ್ನು ಸಡಿಲಿಸಿ ಭೂಮಿ ಹಂಚಿಕೆಯ ವಿಚಾರದಲ್ಲಿ ಸುಧಾರಣೆ ತಂದಿತು. ಅದರ ಧ್ಯೇಯಗಳು ಎರಡು.

1. ಈ ವ್ಯವಸ್ಥೆಯಲ್ಲಿರುವ ಅಡ್ಡಿ ಆತಂಕಗಳನ್ನು ನಿರ್ಮೂಲನ ಮಾಡುವುದು.

2. ಇದರಲ್ಲಿರುವ ಆರ್ಥಿಕ ತಾರತಮ್ಯವನ್ನು ಸುಧಾರಿಸುವುದು.

ಈ ತಾರತಮ್ಯಗಳನ್ನು ಹೋಗಲಾಡಿಸಲು ಗೇಣಿದಾರ ಮಧ್ಯವರ್ತಿಗಳನ್ನು ನಿವಾರಿಸಿ ಒಕ್ಕಲುತನದಲ್ಲಿ ಸುಧಾರಣೆ ತರುವ ವ್ಯವಸ್ಥೆಯನ್ನು ರೂಪಿಸಲಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜಮೀನುದಾರ, ಜಹಗೀರುದಾರ, ಮತ್ತು ಇನಾಮುದಾರ ಮಧ್ಯವರ್ತಿಗಳ ನಿವಾರಣೆಗಾಗಿ ಕಾನೂನು ತಂದಿತು. ಸರ್ಕಾರದಿಂದ ನಿರ್ದಿಷ್ಟ ಪ್ರಮಾಣದಲ್ಲಿ ಹಣ ನೀಡಿ ಭೂ ಒಡೆತನವನ್ನು ಪಡೆದ ಇವರು ಹೆಚ್ಚು ಗೇಣಿಯನ್ನು ಸಾಗುವಳಿದಾರನಿಂದ ಪಡೆಯುವ ಹಕ್ಕುಳ್ಳವರಾಗಿದ್ದರು. ಕಾನೂನು ಸಾಗುವಳಿದಾರರ ಪರವಾಗಿ ಬಂದುದರಿಂದ ನ್ಯಾಯಸಮ್ಮತವಾದ ಗೇಣಿಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿ ಸಾಗುವಳಿ ಮಾಡುತ್ತಿದ್ದಾರೆ.

ಅನಂತರ ರೂಪುಗೊಂಡ ಇನ್ನೊಂದು ಪದ್ಧತಿಯೇ ರೈತವಾರಿ. ಸಣ್ಣ ಹಿಡುವಳಿದಾರರು ರೈತರಿಗೆ ಭೂಮಿಯನ್ನು ಸಾಗುವಳಿ ಮಾಡಲು ಬಿಟ್ಟು ಅದರಿಂದ ಗೇಣಿ ವಸೂಲಿ ಮಾಡುವುದು ಮುಂದುವರಿಯಿತು. ಹೀಗೆ ಒಕ್ಕಲುತನ ಭದ್ರತೆ ಹಾಗೂ ಒಡೆತನದ ಹಕ್ಕುಗಳಿಗೆ ಸಂಬಂಧಿಸಿ ಸಮಸ್ಯೆಗಳನ್ನು ಗೇಣಿದಾರ ಎದುರಿಸಲೇಬೇಕಾಯಿತು. ಇದರ ನಿವಾರಣೆಗಾಗಿ ರಾಜ್ಯಸರ್ಕಾರ ಒಕ್ಕಲು ಪದ್ಧತಿಯನ್ನು ಮತ್ತಷ್ಟು ಸುಧಾರಿಸಲು ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾನೂನುಗಳು ರೂಪುಗೊಳ್ಳುವ ಮೊದಲು ಗೇಣಿದಾರ ಉತ್ಪನ್ನದ ಅರ್ಧಭಾಗಕ್ಕಿಂತ ಹೆಚ್ಚು ಭಾಗವನ್ನು ಭೂಮಾಲೀಕನಿಗೆ ಕೊಡಬೇಕಿತ್ತು. ಇದು ನ್ಯಾಯಸಮ್ಮತವಲ್ಲವೆಂದು ಅರಿತ ಸರ್ಕಾರ ಉತ್ಪನ್ನದ ಪ್ರಮಾಣವನ್ನು 1/4-1/5 ಭಾಗದಷ್ಟು ಇರಬೇಕೆಂದು ತೀರ್ಮಾನಿಸಿತು. ಮುಂದೆ ರಾಜ್ಯಸರ್ಕಾರದ ಕಾಯಿದೆಗಳು ಒಂದೊಂದು ರಾಜ್ಯದಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಜಾರಿಗೆ ಬಂದುವು. ಗೇಣಿಯ 1/6 ಭಾಗದಷ್ಟು ಉತ್ಪನ್ನವನ್ನು ಮಹಾರಾಷ್ಟ್ರ ಮತ್ತು ರಾಜಸ್ಥಾನಗಳಲ್ಲಿಯೂ 1/4 ಭಾಗದಷ್ಟು ಅಸ್ಸಾಂ, ಕೇರಳ, ಒರಿಸ್ಸಾ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಇರಬೇಕೆಂದು ಹೇಳಿ, ಉಳಿದ ರಾಜ್ಯಗಳಲ್ಲಿ 1/3 ಭಾಗದಷ್ಟು ಗೇಣಿಯ ಪ್ರಮಾಣವನ್ನು ನಿಗದಿಪಡಿಸಿತು. ಗೇಣಿದಾರರ ಸಂರಕ್ಷಣೆಯ ದೃಷ್ಟಿಯಿಂದ ಜಾರಿಗೆ ಬಂದ ಕೆಲವು ಕಾಯಿದೆಗಳು ಇಂತಿವೆ. 1. ಗೇಣಿದಾರರ ಒಕ್ಕಲೆಬ್ಬಿಸುವಿಕೆ ನಿಯಮಬದ್ಧವಾಗಿರಬೇಕು. 2. ಭೂಮಾಲೀಕ ಸ್ವತಃ ಸಾಗುವಳಿ ಮಾಡುವುದಿದ್ದರೆ ಮಾತ್ರ ಗೇಣಿದಾರನಿಂದ ಭೂಮಿಯನ್ನು ಹಿಂದಕ್ಕೆ ಪಡೆಯಬಹುದು. 3. ಮಾಲೀಕ ಗೇಣಿದಾರನಿಂದ ಭೂಮಿಯನ್ನು ಹಿಂಪಡೆಯುವಾಗ ಕನಿಷ್ಠ ಪ್ರಮಾಣದ ಭೂಮಿಯನ್ನು ಗೇಣಿದಾರನಿಗೆ ಬಿಟ್ಟುಕೊಡಬೇಕು. ಕೆಲವು ರಾಜ್ಯಗಳಲ್ಲಿ ಒಮ್ಮೆ ಸಾಗುವಳಿಗೆ ಬಿಟ್ಟುಕೊಟ್ಟ

ಭೂಮಿಯನ್ನು ಹಿಂದಕ್ಕೆ ಪಡೆಯುವಂತೆಯೇ ಇಲ್ಲ. ಅನೇಕ ರಾಜ್ಯಗಳಲ್ಲಿ ಸ್ವಲ್ಪ ಸಾಗುವಳಿ ಭೂಮಿಯನ್ನು ಗೇಣಿದಾರನಿಗೆ ಬಿಟ್ಟುಕೊಟ್ಟು ಉಳಿದದ್ದನ್ನು ವಾಪಸ್ ಪಡೆಯುವ ಅನುಕೂಲವಿದೆ.

ಗೇಣಿದಾರರಿಂದ ಎಲ್ಲ ಭೂಮಾಲೀಕರು ಭೂಮಿಯನ್ನು ಹಿಂದಕ್ಕೆ ಪಡೆದು ಸಾಗುವಳಿ ಮಾಡುವುದು ಕಷ್ಟ. ಇಂಥ ಸಂದರ್ಭದಲ್ಲಿ ಗೇಣಿದಾರ ಹಣಕೊಟ್ಟು ಜಮೀನನ್ನು ಕೊಂಡುಕೊಳ್ಳುವ ಅವಕಾಶವಿದ್ದರೂ ಅದು ಎಲ್ಲರಿಗೂ ಸಾಧ್ಯವಾಗಲಿಲ್ಲ.

ಹಾಗಾಗಿ ನೇರ ಸಂಬಂಧವನ್ನು ಕಲ್ಪಿಸುವ ಯೋಜನೆ ರೂಪುಗೊಂಡಿತು. ಸಾಗುವಳಿದಾರನಿಗೆ ಇಂಥ ಮುಕ್ತ ಅವಕಾಶವನ್ನು ಸರ್ಕಾರ ಒದಗಿಸಿದುದರ ಪರಿಣಾಮ ಗೇಣಿದಾರನ ಬದುಕು ಹಸನಾಗುವ ಸಾಧ್ಯತೆ ಹೆಚ್ಚಾಯಿತು. ಕೆಲವು ರಾಜ್ಯಗಳಲ್ಲಿ ಭೂಮಾಲೀಕರಿಂದ ಗೇಣಿದಾರರು ಭೂಮಿಯನ್ನು ಹಣ ಕೊಟ್ಟು, ಖರೀದಿಸಿ ನೇರವಾಗಿ ಭೂ ಒಡೆಯನಾದ ಕೆಲವು ರಾಜ್ಯಗಳಲ್ಲಿ ಸರ್ಕಾರ ಭೂಮಾಲೀಕನಿಂದ ಭೂಮಿಯನ್ನು ಕೊಂಡು ಗೇಣಿದಾರರಿಗೆ ಹಂಚಿ ಕಂತುಗಳ ರೂಪದಲ್ಲಿ ಹಣವಸೂಲಿ ಮಾಡಿ ಭೂಮಾಲೀಕತ್ವವನ್ನು ಗೇಣಿದಾರನಿಗೆ ಬಿಟ್ಟುಕೊಟ್ಟಿತು.

ಅನಕ್ಷರಸ್ಥರೇ ಅಧಿಕವಾಗಿರುವ ಭಾರತದಂತಹ ದೇಶದಲ್ಲಿ ಇಂಥ ಕಾಯಿದೆಗಳ ಪರಿಣಾಮ ಮಂದಗತಿಯಲ್ಲಿರುತ್ತದೆ. ಇದಕ್ಕೆ ಅನೇಕ ಕಾರಣಗಳಿವೆ. ಬಡತನ, ಕಾನೂನಿನ ಅರಿವಿಲ್ಲದಿರುವಿಕೆ, ಇಂಥ ವಿಚಾರಗಳನ್ನು ಬಗೆಹರಿಸಿಕೊಳ್ಳಲು ನ್ಯಾಯಾಲಯಗಳಿಗೆ ಓಡಾಡಲು, ಸಮಯ ಮತ್ತು ಹಣದ ಕೊರತೆ, ಜಮೀನಿನ ಬೇಡಿಕೆ ಇರುವ ತನಕ ಯಾವುದೇ ಕಾಯಿದೆ ಸಂಪೂರ್ಣವಾಗಿ ಜಾರಿಗೆ ಬರುವುದು ಅಸಾಧ್ಯ. ಹೀಗಾಗಿ ಭೂಮಾಲೀಕ ಮತ್ತು ಸಾಗುವಳಿದಾರರಿಬ್ಬರಿಗೂ ಭೂಮಿ ಅನಿವಾರ್ಯವಾಗಿರುವುದರಿಂದ ಇವರೀರ್ವರಲ್ಲಿ ಕೆಲವು ಒಳೊಪ್ಪಂದಗಳಾಗಿ ಕಾನೂನು ಸಡಿಲಗೊಳ್ಳುತ್ತದೆ. ಭೂಮಾಲೀಕ ಸಾಗುವಳಿದಾರನಿಗೆ ಭೂಮಿಯನ್ನು ಒಪ್ಪಂದದ ಮೇರೆಗೆ ನೀಡಿದ್ದರೂ ಕಾನೂನಿನ ಕಣ್ಣಿಗೆ ಮಣ್ಣೆರಚುವ ದೃಷ್ಟಿಯಿಂದ ಗೇಣಿದಾರರನ್ನು ಕೂಲಿಯಾಳುಗಳೆಂದು ಬರೆಸಿಕೊಂಡಿರುತ್ತಾನೆ. ಇದರಿಂದಾಗುವ ಅನಾನುಕೂಲವೆಂದರೆ ಸಾಗುವಳಿದಾರ ಸ್ವಇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಟ್ಟಂತೆ ಬರೆಸಿಕೊಂಡು ಅವನನ್ನು ಭೂಮಾಲೀಕ ಹೊರಹಾಕುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಇದರ ಸುಧಾರಣೆಗೂ ಸರ್ಕಾರ ಕೆಲವು ಕಾನೂನುಗಳನ್ನು ರೂಪಿಸಿದೆ. 1. ಸ್ವಇಚ್ಛೆಯಿಂದ ಗೇಣಿದಾರ ಜಮೀನನ್ನು ಬಿಟ್ಟುಕೊಡುವುದಾದರೆ ಅದು ಕಂದಾಯಾಧಿಕಾರಿ ಮುಂದೆ ಇಬ್ಬರು ಖುದ್ದಾಗಿ ಒಪ್ಪಿಗೆ ಪತ್ರಕ್ಕೆ ಸಹಿಮಾಡಿ ನೋಂದಾಯಿಸಿಕೊಳ್ಳತಕ್ಕದ್ದು. 2. ಇಂಥ ಜಮೀನಿನ ಮಾಲೀಕ ಎಷ್ಟಕ್ಕೆ ಪತ್ರ ಬರೆಸಿಕೊಂಡಿರುತ್ತಾನೊ ಅಷ್ಟೇ ಜಮೀನನ್ನು ಹಿಂದಕ್ಕೆ ಪಡೆಯಬೇಕೆಂದು ಕಾನೂನು ಇದೆ.

ಸರ್ಕಾರ ಒಟ್ಟು ಭೂಮಿಯನ್ನು ತನ್ನ ವಶಕ್ಕೆ ಪಡೆದು ನಿಜವಾದ ಸಾಗುವಳಿದಾರರಿಗೆ ಸರಿಯಾದ ಪ್ರಮಾಣದಲ್ಲಿ ಹಂಚಿ ಮೂಲಸೌಲಭ್ಯವನ್ನು ಒದಗಿಸಿದ್ದಲ್ಲಿ ಕೃಷಿಕನಷ್ಟೇ ಅಲ್ಲ, ದೇಶದ ಸಮೃದ್ಧಿಯೂ ಆಗುತ್ತದೆ.

ಎ.ಎಂ.ಡಿ.

ಒಕ್ಕುವ ಯಂತ್ರ ತೆನೆಯಿಂದ ಧಾನ್ಯವನ್ನು ಬೇರ್ಪಡಿಸಲು ಬಳಸುವ ಸಾಧನ. ಪೈರನ್ನು ಕಟಾವು ಮಾಡಿದ ಮೇಲೆ ಕಣಕ್ಕೆ ಸಾಗಿಸಿ ಎರಡು ಮೂರು ದಿವಸ ಚೆನ್ನಾಗಿ ಒಣಗಿಸಿ, ಮಳೆಯಿಲ್ಲದ ದಿನಗಳಲ್ಲಿ ಒಕ್ಕಣೆ ಕೆಲಸ ಆರಂಭಿಸುತ್ತಾರೆ. ಕೊಯ್ದ ತೆನೆಯ ದೊಣ್ಣೆಯಿಂದ ಬಡಿದೊ, ಗುಂಡು ಕಲ್ಲು ಅಥವಾ ರೋಣುಕಲ್ಲು ಹಾಯಿಸಿಯೊ, ದನಗಳಿಂದ ತುಳಿಸಿಯೊ ದವಸಧಾನ್ಯಗಳನ್ನು ಬೇರ್ಪಡಿಸುತ್ತಾರೆ. ಅನಂತರ ಗಾಳಿಯ ವಿರುದ್ಧ ದಿಕ್ಕಿನಲ್ಲಿ ನಿಂತು ತೂರಿ ಒಕ್ಕಣೆ ಮಾಡುತ್ತಾರೆ. ಈ ಎಲ್ಲ ಕೆಲಸಗಳನ್ನೂ ಮನುಷ್ಯ ದೈಹಿಕ ಶ್ರಮ ಬಳಸಿ ಮಾಡಬೇಕಾಗುತ್ತಿತ್ತು. ಕೃಷಿ ಕ್ಷೇತ್ರ ವಿಸ್ತಾರಗೊಂಡಂತೆ ಆಧುನಿಕ ವ್ಯವಸಾಯ ಪದ್ಧತಿ ರೂಢಿಗೆ ಬಂತು. ಇದರಿಂದ ಒಕ್ಕಣೆಯು ಹೊರತಾಗಲಿಲ್ಲ. ಯಾಂತ್ರೀಕರಣದ ಪ್ರಭಾವದಿಂದಾಗಿ ಕೃಷಿ ಕ್ಷೇತ್ರದಲ್ಲೂ ಅನೇಕ ಆವಿಷ್ಕಾರಗಳಾದುವು. ಉದಾ: 1. ಹುಲ್ಲು ಕೊಯ್ಯುವ ಯಂತ್ರ 2. ಮೇವು ಕಟಾವು ಯಂತ್ರ 3. ಧಾನ್ಯ ಕೊಯ್ಯುವ ಒಕ್ಕಣೆ ಯಂತ್ರ 4. ಅರಳೆ ಒಕ್ಕುವ ಸಾಧನೆ 5. ಆಲೂಗೆಡ್ಡೆ ಅಗೆಯುವ ಯಂತ್ರ 6. ಗದ್ದೆ ಪೈರು ಕೊಯ್ಯುವ ಯಂತ್ರ 7. ಹಣ್ಣು ತರಕಾರಿ ಕೊಯ್ಯುವ ಯಂತ್ರ ಮುಂತಾದ ಹಲವು ಬಗೆಯ ಯಂತ್ರ. ಇವುಗಳನ್ನು ಅನುಕ್ರಮವಾಗಿ ಹೀಗೆ ವಿವರಿಸಬಹುದು.

1. ಉದ್ಯಾನಗಳಲ್ಲಿ ಬೆಳೆದ ಹುಲ್ಲು ಮುಂತಾದವನ್ನು ಕತ್ತರಿಸಲು ಬಳಸುವಂಥದು. ಕಟಾವು ಮಾಡಿದ ಹುಲ್ಲನ್ನು ಪಿಂಡಿ ಕಟ್ಟಿ ದಾಸ್ತಾನು ಮಾಡಿ ಮಾರಬಹುದು.

2. ಹುಲ್ಲು, ಜೋಳದ ದಂಟು ಮುಂತಾದವನ್ನು ಒಣಗಿಸದೆ ಹಸಿಯಾಗಿ ರಕ್ಷಿಸಿ ದನಗಳಿಗೆ ತಿನ್ನಿಸುವ ಪದ್ಧತಿ ಇದೆ. ಇದನ್ನು ತುಂಡರಿಸಿ ಹಗೇವಿನಲ್ಲಿ ತುಂಬಿಟ್ಟು ಬೇಕಾದಾಗ ಬಳಸಲಾಗುವುದು.

3. ಧಾನ್ಯಕೊಯ್ಲು ಒಕ್ಕಣೆಯಂತ್ರ : ಇಳುವರಿ ತೆಗೆದ ಪೈರನ್ನು ಈ ಯಂತ್ರದಿಂದ ತೆಗೆಯುತ್ತಾರೆ. ಇದರಲ್ಲಿ ಎರಡು ಬಗೆ. ಕೇವಲ ಕೊಯ್ಲು ಮಾಡುವ ಯಂತ್ರ. ಕೊಯ್ಲು ಮತ್ತು ಒಕ್ಕಣೆ ಮಾಡಿ ಕಾಳು ಬೇರ್ಪಡಿಸುವ ಯಂತ್ರಗಳೂ ಇವೆ. ಕಂತೆ ಕಟ್ಟುವ, ಕಾಳನ್ನು ಬೇರ್ಪಡಿಸಿ ತೂರಿ ಶುದ್ಧ ಮಾಡಿ ರಾಶಿ ಹಾಕುವ ಯಂತ್ರಗಳೂ ಬಂದಿವೆ.

4. ಅರಳೆ ಒಕ್ಕುವ ಸಾಧನ : ಹತ್ತಿಯ ಗಿಡದಲ್ಲಿ ಹೂ ಬಲಿತ ಮೇಲೆ ಕೈಯಿಂದ ಕೊಯ್ಯುವ ಬದಲು ಯಂತ್ರದಿಂದಲೇ ಬಿಡಿಸುವ ತಿರುಗಚ್ಚು ಸಾಧನವಿದು.

5. ಆಲೂಗೆಡ್ಡೆ ಅಗೆಯುವ ಸಾಧನ : ಇದು ನೇಗಿಲಿನಂತೆ ಇದ್ದು ಮಣ್ಣನ್ನು ಸಡಿಲಗೊಳಿಸಿ ಜೊತೆಗೆ ಸೇರಿಸಿರುವ ಕುಲಕುವ ಕಂಬಿ ಆಲೂಗೆಡ್ಡೆಯನ್ನು ಜೋಪಾನವಾಗಿ ಮಣ್ಣಿನಿಂದ ಮೇಲಕ್ಕೆ ತರುತ್ತದೆ.

6. ಗೆಡ್ಡೆಪೈರು ಯಂತ್ರ : ಮೂಲಂಗಿ, ಬೀಟ್‌ರೂಟ್, ಕ್ಯಾರೆಟ್ ಮುಂತಾದವನ್ನು ಅಗೆದು, ಕಿತ್ತು, ಟ್ರಕ್ಕುಗಳಿಗೆ ತುಂಬುವ ಕೆಲಸವನ್ನೆಲ್ಲ ಮಾಡುವಂಥದು. ಸರಳವಾಗಿ ತುಂಬುವ ಕೆಲಸ ಮಾಡುವ ವಿಶೇಷ ಯಂತ್ರವಿದು.

7. ಹಣ್ಣು, ತರಕಾರಿ ಕೊಯ್ಯುವ ಸಾಧನ ಸಾಧನಗಳು : ಕಿತ್ತಳೆ, ಮಾವು ಮತ್ತಿತರ ಹಣ್ಣುಗಳು ನೆಲಕ್ಕೆ ಬಿದ್ದು ಗಾಯವಾಗದಂತೆ, ಸುರಕ್ಷಿತವಾಗಿ ಬಿಡಿಸುವ ಸಾಧನವಿದು.

ತಿಂಗಳ ಹುರುಳಿ ಎಲೆಕೋಸು, ಸೌತೇಕಾಯಿ ಮುಂತಾದವನ್ನು ಕೀಳುವ ಯಂತ್ರಗಳೂ ಇವೆ. ಇವಲ್ಲದೆ ಕಬ್ಬು ಕತ್ತರಿಸುವಂಥವು ಜೋಳ ಒಕ್ಕಣೆ ಮಾಡುವಂಥ ಯಂತ್ರ ಮುಂತಾದವು ಬಳಕೆಗೆ ಬಂದು ರೈತನ ಒಡನಾಡಿಗಳಾಗಿವೆ. ಇದರಿಂದ ಇಂದು ಕೃಷಿ ವಲಯ ಅಭಿವೃದ್ಧಿಗೊಂಡು ರೈತನ ಶ್ರಮವನ್ನು ಸುಲಭಗೊಳಿಸಿವೆ.

ಎನ್.

ಒಡ್ಡು ಮಳೆಯ ಆಶ್ರಯದಲ್ಲಿ ಯಾವುದೇ ಬೆಳೆಯನ್ನು ಮಾಡಬೇಕಾದರೂ ರೈತ ಆ ಜಮೀನಿನಲ್ಲಿ ನೀರು ನಿಲ್ಲುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಅದಕ್ಕಾಗಿ ಜಮೀನಿನ ಆಕಾರ ಮತ್ತು ಹಳ್ಳ ದಿನ್ನೆಗಳನ್ನು ನೋಡಿ ಸುತ್ತಲೂ ಒಡ್ಡು ಅಥವಾ ಬದುವನ್ನು ಕಟ್ಟಿಕೊಳ್ಳಬೇಕು. ಹೀಗೆ ಒಡ್ಡುಗಳನ್ನು ನಿರ್ಮಾಣ ಮಾಡುವುದರಿಂದ ಹೊಲದ (ಜಮೀನಿನ) ಗಡಿಯನ್ನು ಗುರುತಿಸಲು ಮಾತ್ರ ಸಹಕಾರಿಯಾಗದೆ ಇದರಿಂದ ಇತರ ಹಲವು ಉಪಯೋಗಗಳನ್ನು ಪಡೆಯಬಹುದು.

ಜಮೀನನ್ನು ಉಳುಮೆ ಮಾಡಿದ ಮೇಲೆ ಸಡಿಲವಾದ ಮಣ್ಣು, ಹೊಲಕ್ಕೆ ಬೆರೆಸಿದ ಗೊಬ್ಬರ, ಮಳೆ ನೀರಿನಿಂದ ಕೊಚ್ಚಿ ಹೋಗದೆ ಹೊಲದಲ್ಲಿಯೇ ಉಳಿಯಲು ಸಾಧ್ಯವಾಗುತ್ತದೆ. ಹೊಸದಾಗಿ ಜಮೀನನ್ನು ಮಾಡುವಾಗ ಬೆಳೆಮಾಡುವ ಮೊದಲೇ ಒಡ್ಡನ್ನು ಕಟ್ಟಿಕೊಳ್ಳಬೇಕು. ಅಲ್ಲದೆ ಪ್ರತೀ ವರ್ಷ ಯಾವ ಭಾಗದಲ್ಲಿ ಒಡ್ಡು ನೀರಿನ ರಭಸಕ್ಕೆ ಕಿತ್ತು ಹೋಗಿರುತ್ತದೋ ಆ ಜಾಗವನ್ನು ಕಲ್ಲು ಮಣ್ಣುಗಳಿಂದ ತುಂಬಿ ಒಡ್ಡನ್ನು ಬದ್ರಪಡಿಸಬೇಕು. ಹೊಲದಲ್ಲಿ ಹೆಚ್ಚು ನೀರು ನಿಂತರೆ ಪೈರು ಕೊಳೆತು ಹೋಗುತ್ತದೆ. ಆದ್ದರಿಂದ ವೋರಿಯಂತೆ ಇಳಿಜಾರಾಗಿ ಚಪ್ಪಡಿಕಲ್ಲನ್ನು ಹಾಸಿ ಹೆಚ್ಚಾದ ನೀರು ಜಾರಿ ಹೋಗುವಂತೆ ಜೋಪಾನ ಮಾಡಬೇಕು. ಇದರಿಂದ ಮಣ್ಣು ಗೊಬ್ಬರ ಹೊಲದಲ್ಲೇ ಉಳಿದು ಹೆಚ್ಚಾದ ನೀರು ಮಾತ್ರ ಹೊರಗೆ ಹೋಗಲು ಅನುಕೂಲವಾಗುತ್ತದೆ.

ಒಡ್ಡುಗಳ ಎತ್ತರ ಮತ್ತು ಅಗಲ, ದಪ್ಪ, ಹೊಲದಿಂದ ಹೊಲಕ್ಕೆ ವ್ಯತ್ಯಾಸವಾಗುತ್ತದೆ. ಸಾಮಾನ್ಯವಾಗಿ ಎರಡು ಅಡಿಯಿಂದ ನಾಲ್ಕು ಅಡಿಯವರೆಗೂ ಅನುಕ್ರಮವಾಗಿ ಮೇಲಿನಂತೆ ಒಡ್ಡುಗಳ ನಿರ್ಮಾಣ ಮಾಡುತ್ತಾರೆ. 'ಅಂಗೈಯಂತೆ ಹೊಲಮಾಡಿ ಮುಂಗೈ ತುಂಬ ತುಪ್ಪ ಕುಡಿ' ಎಂಬ ಗಾದೆ ಹೊಲದ ಆಕಾರ ಮತ್ತು ಜಮೀನಿನ ಬಗ್ಗೆ ವಹಿಸಬೇಕಾದ ಮುತುವರ್ಜಿಯನ್ನು ತಿಳಿಸುತ್ತದೆ.

ಒಡ್ಡನ್ನು ಕಟ್ಟಲು ಮಣ್ಣನ್ನು ಎಲ್ಲಿಂದ ತರುವುದು ಎಂಬುದು ರೈತನ ಮುಖ್ಯ ಸಮಸ್ಯೆ. ಹೊಲ ದಿನ್ನೆಯಂತೆ ಎತ್ತರವಾಗಿದ್ದರೆ ಅದೇ ಜಮೀನಿನಲ್ಲಿರುವ ಎತ್ತರದ ಭಾಗವನ್ನು ಹಗೆದು ಒಡ್ಡಿಗೆ ಬೇಕಾದ ಮಣ್ಣನ್ನು ಬಳಸಿಕೊಳ್ಳಬಹುದು. ಹೊಲ ಹಳ್ಳದಿಂದ ಕೂಡಿದ್ದರೆ ಹತ್ತಿರದಲ್ಲಿ ದೊರೆಯುವ ಗಟ್ಟಿ ಮಣ್ಣನ್ನು ಗೊರಜು ಕಲ್ಲಿನಿಂದ ಕೂಡಿರುವ ಮಣ್ಣನ್ನು ತಂದು ಒಡ್ಡಿಗೆ ಬಳಸಿಕೊಳ್ಳಬೇಕು. ಹೊಲ ಒಂದು ಕಡೆ ಎತ್ತರವಾಗಿದ್ದು ಇನ್ನೊಂದು ಕಡೆ ಇಳಿಜಾರಾಗಿದ್ದರೆ ನೀರು ಹೊಲದಿಂದ ಹರಿದು ಹೋಗುವ ಜಾಗದಲ್ಲಿ ಸ್ವಲ್ಪ ಎತ್ತರವಾದ ಒಡ್ಡನ್ನು ಕಟ್ಟಬೇಕು. ಈ ಭಾಗವನ್ನು ಮಳೆ ಹೊಡೆತಕ್ಕೆ ಕೊಚ್ಚಿ ಹೋಗದ ಹಾಗೆ ಬದ್ರ ಪಡಿಸಿದರೆ ಉಳಿದ ಭಾಗದ ಕಟ್ಟೆಯ ಕೆಲಸ ಸುಲಭ. ಹೊಲದ ಗಡಿಯನ್ನು ಗುರುತಿಸಲು ಸುತ್ತಲೂ ಬದುವಿನಂತೆ ಮಣ್ಣು ಹಾಕಿದರೆ ಸಾಕು. ತುಂಬಾ ಇಳಿಜಾರು ಜಮೀನುಗಳಾದ ಬೆಟ್ಟದ ತಪ್ಪಲು ಘಟ್ಟ ಪ್ರದೇಶ ಇಂಥ ಕಡೆ ಕಲ್ಲು ಮಣ್ಣು ಬೆರೆಸಿ ಗೋಡೆಯಂತೆ ಒಡ್ಡನ್ನು ಕಟ್ಟಬೇಕಾಗುತ್ತದೆ. ಚಪ್ಪಡಿ ಕಲ್ಲನ್ನು ನೆಟ್ಟು ಮಣ್ಣು ತುಂಬಿದರೆ ಹೆಚ್ಚು ಕಾಲ ಒಡ್ಡು ಗಟ್ಟಿಯಾಗಿ ನಿಲ್ಲಬಲ್ಲದು. ಈ ಭಾಗವನ್ನೇ ಎದೆತೆವರು ಎಂದು ಕರೆಯುವುದು. ಇದು ಹೊಲದ ಮಣ್ಣು ಕೊಚ್ಚಿ ಹೋಗದ ಹಾಗೆ ಎದೆ ಕೊಟ್ಟು ನಿಂತು ಬಿದ್ದ ಮಳೆ ನೀರು ಹೊರಗೆ ಹೋಗದಂತೆ ತಡೆದು ಹೆಚ್ಚು ಕಾಲ ಹೊಲದಲ್ಲಿ ತೇವಾಂಶವಿರುವಂತೆ ಕಾಪಾಡುತ್ತದೆ.

ಹೆಚ್ಚಾದ ನೀರು ಹೊರ ಹೋಗಲು ಕೋಡಿಯನ್ನು ಮಾಡಬೇಕು. ಇದು ಹೊಲದ ಎತ್ತರದಲ್ಲಿ ಇರುವಂತೆ ನಿರ್ಮಿಸಬೇಕು. ಇದರಿಂದ ಹೊಲದಲ್ಲಿ ಎಷ್ಟುಬೇಕೋ ಅಷ್ಟು ಮಾತ್ರ ನೀರು ಉಳಿದು ಎತ್ತರಕ್ಕೆ ಬಂದ ನೀರು ಮಾತ್ರ ಕೋಡಿಯ ಮೂಲಕ ಹೊರಗೆ ಹೋಗಲು ಅನುಕೂಲವಾಗುತ್ತದೆ. ಹೊಲ ವಿಶಾಲವಾಗಿದ್ದರೆ ಒಂದು ಮೂಲೆಯಲ್ಲಿ 'ಕುಂಟೆ' (ಹೊಂಡ) ಮಾಡಿ ಮಳೆಗಾಲ ಮುಗಿದ ಮೇಲು ಮಳೆ ಕೈ ಕೊಟ್ಟಾಗಲೂ ಕುಂಟೆಯಲ್ಲಿ ನಿಂತಿರುವ ನೀರನ್ನು ಬಳಸಿಕೊಳ್ಳಬಹುದು. ಬೇಸಗೆ ಕಾಲದಲ್ಲಿ ಕುಂಟೆ ಪಕ್ಕದ ಸ್ವಲ್ಪ ಭಾಗದಲ್ಲಿ ತರಕಾರಿ ಬೆಳೆಯಲು ಏತದ ಮೂಲಕ ಈ ನೀರನ್ನು ಬಳಸಬಹುದು.

ಒಡ್ಡು ಬಹುಕಾಲ ಉಳಿಯಲು ಅಂಚಿನಲ್ಲಿ ಹೊಂಗೆ, ಬೇವು, ಹರಳಿ, ಪೊಪ್ಪಾಯಿ, ಮಾವು, ನಿಂಬೆ ಚಕೋತ ಮುಂತಾದ ಮರಗಳನ್ನು ಬೆಳೆಸಿಕೊಳ್ಳಬಹುದು. ಮರಗಳ ಸಂದುಗಳಲ್ಲಿ ಕಳ್ಳಿ ಅಥವಾ ಮುಳ್ಳಿನ ಜಾತಿಯ ಸಸಿಗಳನ್ನು ಬೆಳೆಸಿ ಬೇಲಿಯನ್ನು ಮಾಡಿಕೊಳ್ಳಬಹುದು. ಬೇಲಿಯ ಬದಿಯಲ್ಲಿ ಸೋರೆ, ಕುಂಬಳ, ತೊಂಡೆ, ಚಪ್ಪರದವರೆ, ಸಮುದ್ರದವರೆ, ತಂಬಕಾಯಿ (ತಪಸಿಕಾಯಿ) ಮುಂತಾದ ಬಳ್ಳಿ ಜಾತಿಯ ಗಿಡಗಳನ್ನು ಬೇಲಿಗೆ ಹಬ್ಬಿಸಿ ತರಕಾರಿಗಳನ್ನು ಬೆಳೆಯಬಹುದು. ಫಲವತ್ತಾದ ಭೂಪ್ರದೇಶವಾದರೆ ಒಡ್ಡಿನ ಒಳಭಾಗದಲ್ಲಿ ಬಿದಿರು, ಹೆಬ್ಬೇವು ಮುಂತಾದ ಮರಗಳನ್ನು ಬೆಳೆಸುವುದರಿಂದ ಲಾಭವನ್ನು ಪಡೆಯಬಹುದು. ಮರದ ಬೇರು ಒಡ್ಡಿನ ಮಣ್ಣನ್ನು ಕೊಚ್ಚಿ ಹೋಗದ ಹಾಗೆ ಮಣ್ಣಿನ ಸವಕಳಿಯನ್ನು ತಡೆಯುತ್ತದೆ. ಮರದ ಸೊಪ್ಪನ್ನು ವರ್ಷಕ್ಕೊಮ್ಮೆ ಸವರಿ ಹಸುರು ಗೊಬ್ಬರಕ್ಕೆ ಬಳಸಿಕೊಳ್ಳಬಹುದು. ಹೊಂಗೆ ಮರದ ಸೊಪ್ಪು ಬತ್ತದ ಗದ್ದೆ ಬಳಸಿದರೆ ಹೆಚ್ಚು ಇಳುವರಿಯನ್ನು ಕೊಡಬಲ್ಲದು. ಬೇವಿನ ಮತ್ತು ಹರಳಿನ ಬೀಜಗಳನ್ನು ಸಂಗ್ರಹಿಸಿ ಎಣ್ಣೆಯನ್ನು ಮಾಡಿಕೊಳ್ಳಬಹುದು. ಹೊಸದಾಗಿ ಒಡ್ಡನ್ನು ಕಟ್ಟುವಾಗಿ ಬೀಜ ನೆಟ್ಟು ಸಸಿಗಳನ್ನು ಬೆಳೆಸಿಕೊಂಡರೆ ಮುಂದೆ ಮರ ಬಲಿತಂತೆ ಕೊಯ್ದು, ಮನೆಕಟ್ಟಲು ಬೇಕಾದ ಬಾಗಿಲು, ಚೌಕಟ್ಟು, ಕಿಟಕಿ ಮೊದಲಾದ ಮರದ ಸಾಮಗ್ರಿಯನ್ನು ಮಾಡಿಸಿಕೊಳ್ಳಲು ಉಪಯೋಗಕ್ಕೆ ಬರುತ್ತವೆ.

ಮಾಹಿತಿ ಸಂಗ್ರಹ

ಚಿಕ್ಕ ವೆಂಕಟೇಶಪ್ಪ, ಬಂಡಾರಹಳ್ಳಿ, ಕೋಲಾರಜಿಲ್ಲೆ

ರಾಮಕೃಷ್ಣಪ್ಪ, ಸೂಲಿಕುಂಟೆ ಬಂಗಾರಪೇಟೆ ತಾ.

ವಿ.ಆರ್.ಬಿ.

ಒಣಗಿಸಿದ ಹುಲ್ಲು ಪಶುಗಳಿಗೆ ಆಹಾರವಾಗಿ ನೀಡುವ ಹುಲ್ಲುಗಳಲ್ಲಿ ಎರಡು ವಿಧ. 1. ಒಣಗಿಸಿದ ಹುಲ್ಲು 2. ಒಣಹುಲ್ಲು. ಪೈರನ್ನು ಕೊಯ್ದು ಧಾನ್ಯವನ್ನು ವಿಂಗಡಿಸಿದ ಮೇಲೆ ಉಳಿಯುವ ಎಲ್ಲ ತರಹದ ಹುಲ್ಲು ಒಣಹುಲ್ಲೇ. ಇದರಲ್ಲಿ ಪೌಷ್ಟಿಕಾಂಶ ಕಡಿಮೆಯಿದ್ದು ಪಶುಗಳಿಗೆ ಇದರಿಂದ ಸಾಕಷ್ಟು ಪೋಷಕಾಂಶ ದೊರೆಯುವುದಿಲ್ಲ.

ಒಣಗಿಸಿದ ಹುಲ್ಲು ರೈತ ಪಶುಸಂಗೋಪನೆಗಾಗಿ ಕಂಡುಕೊಂಡ ಪರ್ಯಾಯ ವ್ಯವಸ್ಥೆ. ಮೇವಿಗಾಗಿಯೇ ಇರುವ ಕೆಲವು ಕಾಳುಗಳನ್ನು ಮುಖ್ಯ ಬೆಳೆಯ ಮೊದಲು ಅಥವಾ ಅನಂತರ ನಿರ್ದಿಷ್ಟ ಜಮೀನಿನಲ್ಲಿ ಬಿತ್ತಿ ಹೂ ಮೂಡುವ ಸಮಯದಲ್ಲಿ ಕೊಯ್ದು ಒಣಗಿಸಿ ಜೋಪಾನವಾಗಿ ರಾಶಿ ಹಾಕಿ ಬೇಸಗೆ ಕಾಲದಲ್ಲಿ ಆಹಾರವಾಗಿ ಉಪಯೋಗಿಸುವುದುಂಟು. ಒಣಗಿಸಿದ ಹುಲ್ಲಿನಲ್ಲಿ ಆಹಾರಾಂಶಗಳು ನಷ್ಟವಾಗದಂತೆ ಕಾಪಾಡಲು ಕೆಲವು ವಿಧಾನಗಳುಂಟು. ನೇರ ಬಿಸಿಲಿಗೆ, ಮಳೆಗೆ ಸಿಗದ ಹಾಗೆ ನೆರಳಿನಲ್ಲಿ ಒಣಗಿಸುವುದು, ಹಿಂದಿನಿಂದಲೂ ಬಂದಿರುವ ಸಾಂಪ್ರದಾಯಿಕ ವಿಧಾನ. ಅನಂತರದ ದಿನಗಳಲ್ಲಿ ಹಸುರು ಬಣ್ಣ ಕೆಡದಂತೆ ತೇವಾಂಶ ಅಲ್ಪ ಪ್ರಮಾಣದಲ್ಲಿ ಉಳಿಯುವಂತೆ, ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಹಾಳಾಗದಂತೆ ಜತನದಿಂದ ಒಣಗಿಸುವುದು ರೈತ ಕಂಡುಕೊಂಡ ಸುಧಾರಿತ ಕ್ರಮ. ಇಂಥ ಹುಲ್ಲನ್ನು ಪಡೆಯಲು ಕೆಲವು ಬೀಜಗಳಿವೆ. ವಿವಿಧ ಬಗೆಯ ಜೋಳ ಸೋಯಬೀನ್ಸ್, ಅಲಸಂದೆ, ನೆಲಗಡಲೆ, ಹೆಸರು, ಉದ್ದು ಮುಂತಾದವು. ಹಸಿ ಹುಲ್ಲನ್ನು ಕತ್ತರಿಸುವ ಸಮಯ ಕೂಡ ಮುಖ್ಯವಾಗುತ್ತದೆ. ಸಾಮಾನ್ಯವಾಗಿ ಮಳೆಯ ವಾತಾವರಣ ಇಲ್ಲದೆ ವಾರಗಟ್ಟಲೆ ಬಿಸಿಲು ಇದ್ದಾಗ ನಿರ್ದಿಷ್ಟ ಕ್ರಮದಲ್ಲಿ ಹುಲ್ಲು ಕೊಳೆಯದ ಹಾಗೆ ಬೂಸ್ಟು ಹಿಡಿಯದ ಹಾಗೆ ತೇವಾಂಶ ಕ್ರಮೇಣ ಕಡಿಮೆಯಾಗಿ ಹಸುರು ಉಳಿಯುವ ಹಾಗೆ ಹುಲ್ಲನ್ನು ಒಣಗಿಸಿ ಹೊರೆ ಕಟ್ಟಿ ಮೆದೆಯಂತೆ ರಾಶಿ ಹಾಕುತ್ತಾರೆ. ಮೆದೆ ಹಾಕಲು ಪರಿಣಿತ ವ್ಯಕ್ತಿ ಬೇಕು. ಕಟ್ಟು ಜಾರದಂತೆ, ನೀರು ಇಳಿಯದಂತೆ, ಬಿಸಿಲಿಗೆ ಸಿಗದಂತೆ ಮೆದೆಯನ್ನು ಸಿದ್ಧಪಡಿಸುತ್ತಾರೆ.

ಜಿ.ಎನ್.ಎಸ್.

ಓಲೆ ಕೊಡೆಗಳು ಕೃಷಿ ಬದುಕಿನ ಅವಿಭಾಜ್ಯ ಅಂಗವೇ ಆಗಿದ್ದ ಓಲೆ ಕೊಡೆಗಳನ್ನು ಕೇರಳದ ಪಾಣ, ಪರಯ ಪಂಗಡದ ಜನ ನಿರ್ಮಾಣ ಮಾಡಿ ಕೊಡುತ್ತಿದ್ದರು. ಮಳೆ, ಬಿಸಿಲುಗಳು ತಾಗದಂತೆ ಇವು ಕೃಷಿ ಕಾರ್ಮಿಕರನ್ನು ಕಾಪಾಡುತ್ತಿದ್ದುವು. ತಿರುವಾಂಕೂರು ಪ್ರದೇಶದಲ್ಲಿ 'ತೊಪ್ಪಿಪ್ಪಾಳ' ಎಂದು ಕರೆಯುವ ಇವುಗಳನ್ನು ಕಂಗಿನ ಹಾಳೆಯಿಂದ ತಯಾರಿಸುತ್ತಾರೆ. ಮುಂಡೋವು / ಈಚಲು / ಹವೆ ಮರದ ಗರಿಗಳಿಂದ ನಿರ್ಮಿಸಲಾಗುವ 'ಪೂಟ್ಟಲ್' ಎಂಬ ಹೆಸರಿನ ಓಲೆ ಕೊಡೆಗಳನ್ನು ಸ್ತ್ರೀಯರು ಬಳಸುತ್ತಾರೆ. ಐದಾರು ಬಗೆಗಳಲ್ಲಿ ಈ ಶಿರಸ್ತ್ರಾಣವು ರಚನೆಯಾಗುತ್ತದೆ. ಸ್ತ್ರೀಯರು ಬಳಸುವ 'ಕುಂಡ ಕೊಡೆ'ಗಳಲ್ಲದೆ ಟೊಪ್ಪಿ ಕೊಡೆ, ಉದ್ದ ಹಿಡಿಯಿರುವ ಕಾಲ್ ಕೊಡ (ಕಾಲುಕೊಡೆ), ಗಿಡ್ಡ ಹಿಡಿಯ 'ಮರಕ್ಕುಡ' (ನಂಬೂದಿಂ ಹೆಂಗಸರು ದಾರಿನಡೆಯುವಾಗ ತಮ್ಮನ್ನು ಮರೆಮಾಡಿಕೊಳ್ಳಲು ಬಳಸುತ್ತಿದ್ದ ಕೊಡೆ) ಇತ್ಯಾದಿ.

ಎಲ್ಲ ತೆರನ ಹನೆ ಮರದ ಗರಿಗಳನ್ನು ಈ ಕೊಡೆಗಳ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತದೆ. ಹಿಡಿಯ ತಯಾರಿಗಾಗಿ ಸಾಮಾನ್ಯವಾಗಿ ಬಳಕೆಯಾಗುವುದು ಬಿದಿರು, ಅದರಲ್ಲೂ ಓಟೆ ಬಿದಿರು. ಓಟೆ ಬಿದಿರಿನ ತುದಿಭಾಗವು ಓಲೆ ಕೊಡೆಗಳ ಹಿಡಿಗೂ ಬುಡವು ಕೊಡೆಗಳ ಅಂಚು ಕಟ್ಟುವುದಕ್ಕೂ ಬಳಕೆಯಾಗುತ್ತವೆ. ಕೊಡೆಯ ಅಸ್ಥಿಪಂಜರ ನಿರ್ಮಾಣಕ್ಕೂ ಬಿದಿರ ಬುಡವೇ ಬಳಕೆಯಾಗುತ್ತದೆ. ಹನೆಮರದ ಗರಿಗಳನ್ನು ಕತ್ತರಿಸಿ ತಂದು ನೆರಳಲ್ಲಿ ಒಣಗಿಸಿ ಅದರ ಹಸುರು ಬಣ್ಣ ಮಾಸಿದ ಬಳಿಕ ಕೊಡೆ ನಿರ್ಮಾಣಕ್ಕೆ ಉಪಯೋಗ ಮಾಡುತ್ತಾರೆ. ಒಬ್ಬ ಗಂಡಾಳು ಮತ್ತು ಒಂದು ಹೆಣ್ಣಾಳು ದಿನವೊಂದರಲ್ಲಿ ಸಾಮಾನ್ಯ ಇಂಥ ಐದು ಕೊಡೆಗಳಿಗೆ ಅಗತ್ಯವಾದ ಓಟೆ ಬಿದಿರು ಮತ್ತು ಹನೆಯೋಲೆಗಳನ್ನು ಸಿದ್ಧಪಡಿಸಿಕೊಳ್ಳಬಹುದು.

ಟೊಪ್ಪಿಕೊಡೆಗಳ ಸಾಮಾನ್ಯ ತ್ರಿಜ್ಯವು ಒಂದು ಮೊಳ. ತಲೆಯನ್ನು ನುಗ್ಗಿಸಿಕೊಳ್ಳುವ ಭಾಗ 'ಟೊಪ್ಪಿ' ಅದರ ಸುತ್ತ ಹರಡಿದ ಭಾಗ 'ವಟ್ಟಂ' (ವೃತ್ತ). ಈ ಎರಡು ಭಾಗಗಳನ್ನೂ ಹನೆಯೋಲೆಗಳಿಂದ ಆವರಿಸಲಾಗುತ್ತದೆ. ಉಳಿದ ಕೊಡೆಗಳ ನಿರ್ಮಾಣದಲ್ಲಿ ದೊಡ್ಡ ಬದಲಾವಣೆಗಳೇನೂ ಇಲ್ಲ. ಟೊಪ್ಪಿಯ ಭಾಗಕ್ಕೆ ಬದಲಾಗಿ ಓಟೆ ಬಿದಿರಿನ ಹಿಡಿ ನುಗ್ಗಿ ಕೊಳ್ಳಲು ಬೇಕಾಗುವ ಹಾಗೆ ರಚಿಸಬೇಕು. ಆಗ ಅದು ಕಾಲು ಕೊಡೆಯಾಗುತ್ತದೆ. ಉತ್ಸವ ಕಾಲಗಳಲ್ಲಿ ಚೆರುಮ ಹೆಂಗಸರು ಕುಣಿಯುವಾಗ ಧರಿಸಿಕೊಳ್ಳುವ ಎರಡಾಳೆತ್ತರದ, ಅರ್ಧಮೊಳ ತ್ರಿಜ್ಯದ ಇನ್ನೊಂದು ತೆರನ ಕೊಡೆಗಳೂ ಇವೆ. ಇವಕ್ಕೆ 'ವೇಲಕ್ಕುಡ' ಎಂದು ಹೆಸರು. ಈ ಕೊಡೆಗಳನ್ನು ತೆಂಗಿನ ಎಳೆಯಗರಿಗಳು, ಮಾವಿನ ಎಲೆಗಳು ಮುಂತಾದುವುಗಳಿಂದ ಅಲಂಕರಿಸಿಕೊಳ್ಳಲಾಗುತ್ತದೆ. ಕೊಯ್ಲು ಮುಗಿಸಿದ ಗದ್ದೆಗಳಲ್ಲಿ ಈ ವರ್ಣರಂಜಿತ ಕೊಡೆಗಳನ್ನು ಧರಿಸಿ ಕುಣಿತ ನಡೆಯುತ್ತದೆ.

ಶ್ರೀಮಂತ ರೈತರು, ಜಮೀನ್ದಾರರು, ಅವರ ಕಾರ್ಯಸ್ಥ ಮುಂತಾದವರು ಕುಳಿತು ಕೊಳ್ಳುವಲ್ಲಿ (ಬಯಲು/ಗದ್ದೆಗಳಲ್ಲಿ) ನಾಟಲಾಗುವ ದೊಡ್ಡ ಕಾಲುಕೊಡೆಗಳ ತ್ರಿಜ್ಯ ಎರಡು ಮೊಳಗಳಿರುತ್ತದೆ. ಅರ್ಧ ಮೊಳ ತ್ರಿಜ್ಯದ ಕಾಲುಕೊಡೆಗಳನ್ನು ಹಿಡಿದುಕೊಂಡು ಹಿಂದಿನಕಾಲದಲ್ಲಿ ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಏಳೂವರೆ ಗಂಟುಗಳ ಕೊಡೆ ಮತ್ತು ಅಷ್ಟೇ ಸಂಖ್ಯೆಯ ಗಂಟುಗಳುಳ್ಳ ಹಿಡಿಬೆತ್ತಗಳು ಹಿಂದಿನ ಕಾಲದ ಕೇರಳೀಯ ಜಮೀನ್ದಾರರಿಗೆ ಪ್ರತಿಷ್ಠೆಯ ಸಂಕೇತವೂ ಆಗಿದ್ದುವು. ಓಲೆಕೊಡೆಗಳ ಬಾಳಿಕೆ ಸುಮಾರಾಗಿ ನಾಲ್ಕೈದು ವರ್ಷಗಳು. ಮಳೆಗಾಲದಲ್ಲಿ ತೇವ ಹೆಚ್ಚು ಉಳಿಯದಂತೆ ಅದನ್ನು ಚೆನ್ನಾಗಿ ಒಣಗಿಸಿ ಕೊಳ್ಳಬೇಕು ಅಷ್ಟೆ.

ಕೆ.ಕೆ.

ಓಲೆಮರ ಕಾರಿಫ ಜಾತಿಯ ವೃಕ್ಷವಾದ ಓಲೆಮರವು ಪಾಮೇಸಿ ಅಥವಾ ಅರಿಕೇಸೀ ಕುಟುಂಬಕ್ಕೆ ಸೇರಿದ್ದು, ಹಲವಾರು ಪ್ರಭೇದಗಳನ್ನು ಒಳಗೊಂಡಿದೆ. ಪ್ರಮುಖವಾಗಿ ಕಾರಿಫ ಟಾಲಿಯೇರ ಮತ್ತು ಕಾ. ಅಂಬ್ರ್ಯಾಕ್ಯುಲಿಫೆರ ಪ್ರಭೇದಗಳನ್ನು ಕಾಣಬಹುದು. ಇದಕ್ಕೆ ತೆಂಗಿನಮರದ ಹೋಲಿಕೆಯಿದೆ. ಬೆಳವಣಿಗೆ ನಿಧಾನಗತಿಯದು. ಕೆಲವು ಪ್ರದೇಶಗಳಲ್ಲಿ ಸ್ವಾಭಾವಿಕವಾಗಿ ಬೆಳೆದರೆ, ದಕ್ಷಿಣ ಭಾರತ, ಅಂಡಮನ್ ದ್ವೀಪಗಳು, ಮಲಯ ಪ್ರದೇಶ ಮುಂತಾದೆಡೆಗಳಲ್ಲಿ ಉದ್ಯಾನಗಳಲ್ಲಿ ಅಲಂಕಾರ ಸಸ್ಯವಾಗಿ ಬೆಳೆಸಲಾಗುತ್ತದೆ.

ಓಲೆಮರದ ಕಾಂಡ ಕವಲೊಡೆಯದೇ ನೇರವಾಗಿರುತ್ತದೆ. ಎಲೆಗಳು ಅಗಲವಾಗಿ ಹರಡಿಕೊಂಡಿರುತ್ತವೆ. ತೆಂಗಿನ ಮರದ ರೀತಿಯಲ್ಲಿ ಹಸುರು ಎಲೆಗಳ ಕೆಳಗೆ ಎಲೆಗಳು ಒಣಗುತ್ತಾ, ತೂಗು ಬೀಳುತ್ತಾ ನೆಲಕ್ಕೆ ಉದುರುತ್ತವೆ. ಈ ಮರದ ವಿಶೇಷವೆಂದರೆ ತನ್ನ ಜೀವಿತದಲ್ಲಿ ಒಮ್ಮೆ ಮಾತ್ರ ಹೂ ಬಿಡುವುದು. ಕಾಂಡದ ತುತ್ತ ತುದಿಯಲ್ಲಿ ಹೂ ಬಿಡುವ ಸಂದರ್ಭದಲ್ಲಿ ಎಲ್ಲ ಎಲೆಗಳು ಉದುರಿ ಹೋಗುತ್ತವೆ. ಹೂ ಹರಡಿಕೊಂಡಾಗ ಅಶೋಕ ಮರದ ರೆಂಬೆಗಳಂತೆ ಛತ್ರಿಯಾಕಾರದಲ್ಲಿ ಒಂದರ ಮೇಲೊಂದು ಗೊಂಚಲು ಗೊಂಚಲಾಗಿ ಹೂಗಳು ಹರಡಿಕೊಂಡಿರುತ್ತವೆ. ಹೀಗೆ ಹೂ ಕಾಯಿಯಾಗಿ ಅನಂತರ ಹಣ್ಣಾಗಿ ಬೀಜಗಳು ಬಲಿತ ಸಂದರ್ಭದಲ್ಲಿ ಮರಗಳು ಸತ್ತು ಹೋಗುತ್ತದೆ.

ಉಪಯೋಗ : ಓಲೆಮರ ತೆಂಗಿನ ಮರದಂತೆ ಬಹು ಉಪಯುಕ್ತವಾದದ್ದು. ಓಲೆಗರಿಗಳ ಉಲ್ಲೇಖವನ್ನು ಹಲವಾರು ಪಾಶ್ಚಾತ್ಯ ಹಾಗೂ ದೇಶೀಯ ವಿದ್ವಾಂಸರು ಹೆಸರಿಸಿದ್ದಾರೆ. ಹೂಯನ್‌ತ್ಸಾಂಗ್ (ಕ್ರಿ.ಶ. 679-645) ತಾಳೆ ಮರದ ಎಲೆಗಳನ್ನು ಬರೆವಣಿಗೆಗಾಗಿ ಉಪಯೋಗಿಸಿರುವುದನ್ನು ತಿಳಿಸಿದ್ದಾನೆ. ಡಿ.ಎಲ್. ನರಸಿಂಹಾಚಾರ್‌ರವರು ಹಸಿಯಾಗಿರುವ ತಾಳೆಗರಿಗಳನ್ನು ನೀರಿನಲ್ಲಿ ಕುದಿಸಿ ನೆರಳಲ್ಲಿ ಒಣಗಿಸಿ ನುಣುಪಾದ ಗಾರೆಯ ಕಲ್ಲಿನಿಂದ ಉಜ್ಜಿದಾಗ ಗರಿಯ ಎರಡು ಭಾಗವು ಮೃದುವಾಗುತ್ತದೆ ಅಲ್ಲದೇ ಸಮತಲವಾಗುವುದರಿಂದ ಬರೆಯುವುದಕ್ಕೆ ಅನುಕೂಲವಾಗುತ್ತವೆ ಎಂದಿದ್ದಾರೆ. ಚಾಪೆ, ಹಾಯಿಪಟಗಳನ್ನು ತಯಾರಿಸಲು ಗಟ್ಟಿಯಾದ ಓಲೆಮರದ ಗರಿಗಳನ್ನು ಬಳಸಿದರೆ, ಮೃದು (ನಯ)ವಾದ ಗರಿಗಳಿಂದ ಹ್ಯಾಟುಗಳನ್ನು, ಬುಟ್ಟಿಗಳನ್ನು ಮಾಡುತ್ತಾರೆ. ಈ ಮರದ ಬೀಜಗಳು ಬಿಳಿಯ ಬಣ್ಣಗಳಿಂದ ಕೂಡಿದ್ದು ಮಣಿಗಳನ್ನು ಗುಂಡಿಗಳನ್ನು ಮಾಡಲು ಬಳಸಲಾಗುತ್ತದೆ. ಅಲ್ಲದೇ ಇದರ ಎಲೆಗಳನ್ನು ಛಾವಣಿಗಳನ್ನು ಮುಚ್ಚಲೂ ಬಳಸುತ್ತಾರೆ. ಕಾಂಡದಲ್ಲಿನ ಪಿಷ್ಟವನ್ನು ತೆಗೆದು ಒಂದು ವಿಧದ ಅಕ್ಕಿಯನ್ನು ತಯಾರಿಸಲಾಗುತ್ತದೆ. ಎಳೆಯ ಕಾಯಿಗಳನ್ನು ಕೆಲವರು ತಿನ್ನುವುದಕ್ಕೂ ಬಳಸುತ್ತಾರೆ.

ಎಂ.ಎಂ.

ಔಷಧೀಯ ಸಸ್ಯಗಳು ಎಲ್ಲಾ ಜೀವಿಗಳು ತಮ್ಮ ಜೀವಿತದ ಅವಧಿಯಲ್ಲಿ ಒಂದಲ್ಲ ಒಂದು ರೋಗಕ್ಕೆ ತುತ್ತಾಗುತ್ತವೆ. ಇಂತಹ ರೋಗಗಳಿಗೆ ಪ್ರಕೃತಿಯೇ ಪರಿಹಾರ ಮಾರ್ಗವಾಗಿ ತನ್ನ ಗರ್ಭದಲ್ಲಿ ಹಲವು ರೋಗ ನಿರೋಧಕ ಗುಣದ ಔಷಧಿ ಗಿಡಗಳನ್ನು ಬೆಳೆಸಿದ್ದು ಅವು ಈ ಜೀವಿಗಳಿಗೆ ಬಂದೆರಗುವ ರೋಗಗಳನ್ನು ವಾಸಿಮಾಡುತ್ತವೆ. ಒಂದು ಮಾತಿದೆ, 'ಕಷ್ಟ ಅನ್ನದು ಮನುಷ್ಯರಿಗೆ ಬರ್ದೆ ಮರಕ್ಕ ಬತ್ತದ' ಈ ಮಾತಿನ ಆಂತರ್ಯ ಪ್ರತಿಯೊಂದು ಜೀವಿಯು ರೋಗಕ್ಕೆ ತುತ್ತಾಗುತ್ತದೆ ಎಂಬುದಾಗಿದೆ. ಅಂತಹ ಸಂದರ್ಭದಲ್ಲಿ ಮಾನವ ತನಗೆ ಬಂದ ರೋಗಗಳಿಗೆ ನಿಸರ್ಗದಲ್ಲಿ ಸಹಜವಾಗಿ ದೊರೆಯುವ ಸಸ್ಯಗಳಿಂದ ಔಷಧಿ ಮಾಡಿಕೊಳ್ಳುವುದನ್ನು ಕಾಲ ಸನ್ನಿಹಿತವಾದಂತೆ ಅನುಭವ ವೇದ್ಯಯಿಂದ ತಿಳಿದುಕೊಂಡನು. 'ಮನುಷ್ಯ, ಪ್ರಾಣಿ, ಪಕ್ಷಿ ಹಾಗೂ ಸಸ್ಯಗಳಿಗೆ ಒದಗುವ ಕಾಯಿಲೆಗಳನ್ನು ಗುಣಪಡಿಸುವ ಸಸ್ಯಗಳನ್ನು ಔಷಧಿ ಗಿಡ ಇಲ್ಲವೇ ಸಸ್ಯಗಳು ಎಂದು ಕರೆಯುತ್ತಾರೆ. ಮತ್ತೊಂದು ಬಗೆಯಲ್ಲಿ ದೇಹಕ್ಕೆ ಬರುವ ರೋಗ ರುಜಿನಗಳನ್ನು ವಾಸಿ ಮಾಡಿಕೊಳ್ಳಲು ಮಾನವ ಕಂಡುಕೊಂಡ ಗಿಡಮೂಲಿಕೆಗಳೇ ಔಷಧಿ ಸಸ್ಯಗಳು.

ಮಾನವನು ನಾಗರಿಕನಾಗುತ್ತ ಬೆಳೆದಂತೆ ನಿಸರ್ಗದತ್ತವಾಗಿ ಲಭ್ಯವಾಗುವ ಸಸ್ಯಗಳನ್ನು ತನಗೆ ಯೋಗ್ಯವಾದ ರೀತಿಯಲ್ಲಿ ಔಷಧಿ ತಯಾರಿಕೆಯಲ್ಲಿ ಬಳಸಿಕೊಂಡನು. ಔಷಧಿ ಗುಣಯುಕ್ತ ಸಸ್ಯಗಳನ್ನು ಮತ್ತು ಅವುಗಳ ಕೆಲವೊಂದು ಭಾಗಗಳನ್ನು ಆಯುರ್ವೇದ ಮತ್ತು ಯುನಾನಿ ಪದ್ಧತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಅಷ್ಟೇ ಅಲ್ಲದೆ ಅಲೋಪತಿಕ್ ಹೋಮಿಯೋಪತಿ ಔಷಧಗಳಲ್ಲೂ ಈ ಸಸ್ಯಗಳನ್ನು ಬಳಸಿಕೊಳ್ಳಲಾಗುತ್ತದೆ. ಕೆಲವೊಂದು ಔಷಧಿ ಸಸ್ಯಗಳು ನಿಸರ್ಗದತ್ತವಾಗಿ ದೊರೆತರೆ ಕೆಲವೊಂದನ್ನು ಕೃಷಿಮಾಡಿ ಬೆಳೆಸಲಾಗುತ್ತದೆ. ಔಷಧಿ ಸಸ್ಯಗಳ ವಿವಿಧ ಭಾಗಗಳಾದ ಬೇರು, ಕಾಂಡ, ಎಲೆ, ಹೂ, ಕಾಯಿ, ಹಣ್ಣು, ಬೀಜ ಮತ್ತು ತೊಗಟೆ ಇತ್ಯಾದಿಗಳನ್ನು ಔಷಧಿ ತಯಾರಿಕೆಯ ಘಟಕಕ್ಕೆ ರವಾನಿಸಿ ಅಲ್ಲಿ ಅವನ್ನು ಪರಿಷ್ಕರಿಸಿ ಔಷಧ ತಯಾರಿಸಲಾಗುವುದು. ಸಸ್ಯಗಳ ಭಾಗಗಳಲ್ಲಿರುವ ರಾಸಾಯನಿಕ ಘಟಕಗಳೇ ರೋಗನಿರೋಧಕ ಶಕ್ತಿಯನ್ನು ಒದಗಿಸಿವೆ. ಈ ರಾಸಾಯನಿಕ ಘಟಕಗಳು ಜೀವಿಗಳ ದೇಹದಲ್ಲಿ ಜೈವಿಕ ಕ್ರಿಯೆ ನಡೆಸಿ ರೋಗವನ್ನು ವಾಸಿಮಾಡುತ್ತವೆ.

ತುಳಸಿ : ಭಾರತೀಯರು ತುಳಸಿಯನ್ನು ಪವಿತ್ರವೆಂದು ಭಾವಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಪೂಜಿಸುತ್ತಿದ್ದಾರೆ. ಔಷಧ ಸಸ್ಯವಾಗಿ ಬಳಸಿದ್ದಾರೆ. ಜಗತ್ತಿನ ಹಲವು ದೇಶಗಳಲ್ಲಿ ಕಂಡು ಬರುವ ತುಳಸಿಯು ವೇದಗಳ ಕಾಲದಿಂದಲೂ ಭಾರತೀಯರಿಗೆ ಸುಪರಿಚಿತವಾಗಿದೆ. ಇಂಗ್ಲಿಷಿನಲ್ಲಿ ಹೋಲಿ ಬೇಸಿಲ್ ಎಂದು ಕರೆಯುವ ತುಳಸಿಯ ವೈಜ್ಞಾನಿಕ ಹೆಸರು ಒಸಿಮಂ ಸ್ಯಾಂಕ್ಟಮ್. ಇದರಲ್ಲಿ ಹಲವು ಪ್ರಭೇದಗಳಿದ್ದರೂ, ತುಸು ನೀಲಿ ಕಪ್ಪು ಬಣ್ಣದ ಕೃಷ್ಣ ತುಳಸಿ ಹೆಚ್ಚು ಔಷಧೀಯ ಗುಣ ಹೊಂದಿದೆ. ಪ್ರತಿಯೊಬ್ಬ ಭಾರತೀಯ ಅದರಲ್ಲೂ ಮಹಿಳೆಯರು ಮನೆಯ ಮುಂದೆ ತುಳಸಿ ಬೆಳೆಸುತ್ತಾರೆ. ಅದನ್ನು ಪೂಜಿಸುತ್ತಾರೆ. ಇಷ್ಟು ಪವಿತ್ರವೆಂದು ಭಾವಿಸಿರುವ ತುಳಸಿ ಸಸ್ಯವನ್ನು ಹಲವು ರೋಗಗಳಿಗೆ ನಿರೋಧಕವಾಗಿ ಬಳಸುತ್ತಾರೆ.

ನೆಗಡಿ, ಕೆಮ್ಮು, ಅಸ್ತಮಾ ನಿವಾರಣೆಗೆ ತುಳಸಿ ಎಲೆ ಮತ್ತು ಶುಂಠಿಯ ಕಷಾಯಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ ಕುಡಿಯಬಹುದು.

ಜ್ವರ ಬಂದರೆ ತುಳಸಿ ರಸವನ್ನು ಪ್ರತಿ ಮೂರುಗಂಟೆಗೊಮ್ಮೆ ಸೇವಿಸಬೇಕು. ಮಲೇರಿಯಾದಂತಹ ಕಾಯಿಲೆಗೂ ತುಳಸಿ ಮದ್ದಾಗುತ್ತದೆ.

ಗಂಟಲು ನೋವಾದರೆ ತುಳಸಿ ಕಷಾಯವನ್ನು ಕುಡಿಯಬೇಕು.

ಹಲ್ಲುನೋವು, ಬಾಯಿ ಹುಣ್ಣು, ದುರ್ಗಂಧ ಇವುಗಳ ನಿವಾರಣೆಗೆ ತುಳಸಿ ಎಲೆ ತಿನ್ನಬೇಕು.

ಚರ್ಮ ರೋಗಗಳಿಗೆ ತುಳಸಿ ರಸವನ್ನು ಬಳಸುತ್ತಾರೆ.

ಹೃದಯ ಸಂಬಂಧಿ ತೊಂದರೆಗಳು, ತಲೆನೋವು, ಚೇಳು, ಕಡಜಗಳ ಕಡಿತದ ಬಾಧೆಯನ್ನು ನಿವಾರಿಸಲು ತುಳಸಿ ಬಳಸುತ್ತಾರೆ.

ಕೊತ್ತಂಬರಿ : (Coriander) ವೈಜ್ಞಾನಿಕವಾಗಿ ಕೊರಿಯಂಡ್ರಮ್ ಸಟಿವಮ್ ಎಂದು ಕರೆಯುತ್ತಾರೆ. ಪ್ರತಿನಿತ್ಯ ಅಡುಗೆಗೆ ಉಪಯೋಗಿಸುವಂಥದ್ದು ಕೊತ್ತಂಬರಿ ಸೊಪ್ಪು. ಕೊತ್ತಂಬರಿ ಬೀಜ ಮತ್ತು ಎಲೆ ಹಲವು ಬಗೆಯಲ್ಲಿ ಉಪಯೋಗವಾಗುತ್ತವೆ. ಸಾಮಾನ್ಯವಾಗಿ ಕೊತ್ತಂಬರಿಯನ್ನು ಸಾಂಬಾರ ಪದಾರ್ಥವಾಗಿ

ಉಪಯೋಗಿಸಿದರೂ ಔಷಧ ಸಸ್ಯವಾಗಿ ಹಲವು ಕಾಯಿಲೆಗಳ ನಿವಾರಣೆಗೆ ಬಳಸುತ್ತಾರೆ.

ಅತಿಸಾರ, ಅಜೀರ್ಣವಾದರೆ ಕೊತ್ತಂಬರಿ ಕಾಳು ಮತ್ತು ಒಣಶುಂಠಿ ಕಷಾಯ ಕುಡಿಯಬೇಕು.

ಜ್ವರ ಬಂದರೆ ಕೊತ್ತಂಬರಿ ಕಾಳಿನ ಪಾಯಸ ಕುಡಿಯುವುದರಿಂದ ವಾಸಿಯಾಗುತ್ತದೆ.

ರಕ್ತದ ಅಧಿಕ ಒತ್ತಡ ಉಂಟಾದರೆ ಕೊತ್ತಂಬರಿ ಬೀಜ ಪುಡಿ ಮಾಡಿ, ಗಂಧದ ಬೇರಿನ ತೊಗಟೆಯ ಒಣ ಚೂರ್ಣ ಸೇರಿಸಿ ಕಲ್ಲು ಸಕ್ಕರೆಯೊಂದಿಗೆ ಸೇವಿಸಿದರೆ ವಾಸಿಯಾಗುತ್ತದೆ.

ಕೆಮ್ಮು, ಕಫ, ವಾಕರಿಕೆ, ಅತಿಸ್ರಾವ, ಬೆನ್ನುನೋವು, ತುರಿಕೆ, ಕಜ್ಜಿ, ರಕ್ತದಲ್ಲಿ ಕೊಲೆಸ್ಟ್ರಾಲ್ ಹಾಗೂ ಕಣ್ಣಿನ ಸೊಂಕುಗಳ ನಿವಾರಣೆಗೆ ಕೊತ್ತಂಬರಿ ಬೀಜ ಮತ್ತು ಕೊತ್ತಂಬರಿಸೊಪ್ಪು ರಸವನ್ನು ಬಳಸಬಹುದಾಗಿದೆ.

ಬೆಳ್ಳುಳ್ಳಿ : ಔಷಧಿ ಸಸ್ಯವಾಗಿ ಪ್ರಪಂಚದಲ್ಲಿ ಸರ್ವವ್ಯಾಪಿಯಾಗಿರುವ ಬೆಳ್ಳುಳ್ಳಿಯನ್ನು ಇತಿಹಾಸ ಪೂರ್ವಕಾಲದಿಂದಲೂ ರೋಗ ನಿರೋಧಕವಾಗಿ ಬಳಸಲಾಗುತ್ತಿದೆ. ದುಷ್ಟ ಶಕ್ತಿಗಳ ನಿವಾರಣೆಗೆ ಬಳಸಲಾಗುವ ಬೆಳ್ಳುಳ್ಳಿಯನ್ನು ಇಂಗ್ಲಿಷ್‌ನಲ್ಲಿ 'ಗಾರ್ಲಿಕ್' ಎಂದೂ ವೈಜ್ಞಾನಿಕವಾಗಿ ಅಲ್ಲ್ಯೂಮ್ ಸಟಿವಮ್ ಎಂದು ಕರೆಯುತ್ತಾರೆ. ಇದು ಲಿಲಿಯೇಸಿ ಎಂಬ ಕುಟುಂಬಕ್ಕೆ ಸೇರಿದ ಸಸ್ಯ. ತೀವ್ರ ವಾಸನೆ ಮತ್ತು ವಿಶಿಷ್ಟ ಆಕಾರದಿಂದ ಕೂಡಿದ್ದು ಹಲವು ಪಕಳೆಗಳನ್ನು ಹೊಂದಿದೆ. ಕ್ಯಾನ್ಸರ್, ನೆಗಡಿ, ರಕ್ತದ ಸಮಸ್ಯೆ, ಗಾಯಗಳು, ಜಂತು, ಅಸ್ತಮಗಳ ನಿವಾರಣೆಗೆ ಬಳಸಲಾಗುತ್ತದೆ. ಹಾಗೆಯೇ ಅಜೀರ್ಣ ಸಂಬಂಧಿ ದೋಷಗಳು, ಜಠರ ಶೂಲೆ, ಕೆಮ್ಮುಗಳ ಶಮನಕ್ಕೆ ಹಸಿವಿನ ಉದ್ದೀಪನಕ್ಕೆ ಸಿದ್ಧೌಷಧವಾಗಿ ಉಪಯೋಗಿಸಲಾಗುತ್ತದೆ.

ಲೋಳೆಸರ : ಲೋಳೆಸರ ಪ್ರಮುಖ ಔಷಧಿ ಗಿಡವಾಗಿದ್ದು, ಬೇಲಿಗಳಲ್ಲಿ ಬೆಳೆಯುತ್ತದೆ. ಹಳ್ಳಿಗಳಲ್ಲಿ ಪ್ರತಿ ಮನೆಯ ಸೂರಿಗೆ ಲೋಳೆ ಸರವನ್ನು ನೇತು ಹಾಕಲಾಗುತ್ತದೆ. ಎಲ್ಲಾ ಮಣ್ಣುಗಳಲ್ಲೂ ಬೆಳೆಯುವ ಗುಣ ಹೊಂದಿರುವ ಸಸ್ಯವಾದ ಇದನ್ನು ಇಂಗ್ಲಿಷ್‌ನಲ್ಲಿ ಅಲೋ ಎಂದು ಕರೆದರೆ ವೈಜ್ಞಾನಿಕವಾಗಿ ಅಲೋಬಾರ್‌ಬಡೆನ್‌ಸಿಸ್ ಎಂದು ಕರೆಯುತ್ತಾರೆ. ಪಾರಂಪರಿಕ ವೈದ್ಯ ಪದ್ಧತಿ ಮತ್ತು ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಲೋಳೆ ಸರವನ್ನು ಬಳಸಲಾಗುತ್ತದೆ.

ಚರ್ಮರೋಗಗಳಿಗೆ, ಗಾಯಗಳಿಗೆ, ಜೀರ್ಣಾಂಗವ್ಯೂಹದ ತೊಂದರೆ, ಕಣ್ಣಿನ ತೊಂದರೆ, ಹೊಟ್ಟೆಯ ತೊಂದರೆ, ಎಚ್.ಐ.ವಿ. ಮತ್ತು ಏಡ್ಸ್ ಸಮಸ್ಯೆಗಳು ಪಾದದ ಚರ್ಮ ಬಿರುಕು ನಿವಾರಣೆಗೆ, ನಿರೋಧಕ ಶಕ್ತಿ ಹೊಂದಿರುವ ಲೋಳೆಸರವನ್ನು ಬಳಸುತ್ತಾರೆ.

ಕರಿಬೇವು : ಪ್ರತಿನಿತ್ಯ ಅಡುಗೆಗೆ ಒಗ್ಗರಣೆ ಕೊಡಲು ಬಳಸುವ ಕರಿಬೇವು ಕ್ರಿಮಿನಾಶಕ ಗುಣವನ್ನು ಹೊಂದಿದೆ. ಇಂಗ್ಲೀಷ್‌ನಲ್ಲಿ ಕರ್‍ರಿಲೀಫ್ ಎಂದು ಕರೆಯಲಾಗುವ ಇದರ ವೈಜ್ಞಾನಿಕ ಹೆಸರು ಮರ್‍ರಿಯ ಕೋನಿಗಿ ಎಂದು. ಕರಿಬೇವಿನ ಸೊಪ್ಪು ಮತ್ತು ಹಣ್ಣು ವಿಶೇಷ ವಾಸನೆಯನ್ನು ಹೊಂದಿದ್ದು, ಗಾಯ, ಹುಣ್ಣುಗಳು, ಕಜ್ಜಿ, ತುರಿಕೆ, ಹೊಟ್ಟೆನೋವು, ಮಧುಮೇಹ, ಚರ್ಮರೋಗಗಳು ಮುಂತಾದ ಸಮಸ್ಯೆಗಳಿಗೆ ಉಪಯೋಗಿಸಲಾಗುತ್ತದೆ.

ದಾಸವಾಳ : ದಾಸವಾಳ ರೋಗ ನಿರೋಧಕ ಶಕ್ತಿ ಹೊಂದಿರುವ ಹೂವಿನ ಗಿಡ. ಒಂದು ಕಾಂಡದ ತುಂಡನ್ನು ನೆಟ್ಟರೆ ಸಾಕು ಬೆಳೆದು ಹೂ ಬಿಡುವ ಈ ಗಿಡದ ಇಂಗ್ಲಿಷ್‌ನ ಹೆಸರು ಚೈನರೋಸ್ ವೈಜ್ಞಾನಿಕವಾಗಿ ಹೈಬಿಸ್ಕಸ್ ರೋಸ - ಸಿನೆನ್ಸಿಸ್ ಎಂದು ಕರೆಯುತ್ತಾರೆ. ಈ ಗಿಡದ ಎಲೆಗಳನ್ನು ದೃಷ್ಟಿದೋಷ, ತಲೆ ಕೂದಲಿನ ಸಮಸ್ಯೆಗಳು, ದೇಹದ ದೌರ್ಬಲ್ಯ, ಮೂತ್ರದೋಷದ ನಿವಾರಣೆಗೆ ಬಳಸಲಾಗುತ್ತದೆ. ಹಾಗೆಯೇ ದಾಸವಾಳ ಹೂವಿನ ಗುಲ್ಕನ್‌ನಿಂದ ಉದರದ ಮತ್ತು ಶ್ವಾಸಕೋಶದ ತೊಂದರೆಗಳು ನಿವಾರಣೆಯಾಗುತ್ತವೆ.

ಗೋಧಿ ಹುಲ್ಲು : ಗೋಧಿ ಹುಲ್ಲು ಕೂಡ ಹಲವು ರೋಗಗಳಿಗೆ ನಿವಾರಕ ಶಕ್ತಿಯಾಗಿ ಬಳಕೆಯಾಗುವ ಸಸ್ಯವಾಗಿದೆ. ತಾಜಾ ಗೋಧಿ ಹುಲ್ಲಿನ ರಸ ತುಂಬಾ ಔಷಧಿ ಗುಣ ಹೊಂದಿದೆ. ಇಂಗ್ಲಿಷ್‌ನಲ್ಲಿ ವೀಟ್ ಎಂದು ಕರೆಯುವ ಇದರ ವೈಜ್ಞಾನಿಕ ಹೆಸರು ಟ್ರಿಟಿಸಮ್ ಎಸ್ಟಿವಮ್ ಎಂದು. ಅಧಿಕ ರಕ್ತದೊತ್ತಡ, ಗಾಯವು ಬೇಗ ಶಮನ, ಕ್ಯಾನ್ಸರ್ ಕಾರಕಗಳು, ನಂಜಿನ ವಸ್ತುಗಳು, ಯಕೃತ್ತಿನ ಸಮಸ್ಯೆ, ತಲೆಕೂದಲಿನ ಸಮಸ್ಯೆಗಳಿಗೆ ಗೋಧಿ ಹುಲ್ಲನ್ನು ಬಳಸಲಾಗುತ್ತದೆ. ಹಾಗೆಯೇ ಜೀರ್ಣಶಕ್ತಿ ವೃದ್ಧಿಸಲು ಗೋಧಿ ಹುಲ್ಲಿನ ರಸವನ್ನು ಉಪಯೋಗಿಸುತ್ತಾರೆ. ಗೋಧಿಹುಲ್ಲಿನ ಜ್ಯೂಸ್ ತುಂಬಾ ಆರೋಗ್ಯದಾಯಕ ಔಷಧೀಯಾಗಿದೆ.

ಅಣಬೆ : ಸಾಮಾನ್ಯವಾಗಿ ಹೊಲ, ಗದ್ದೆಗಳಲ್ಲಿ ಅಣಬೆ ಬೆಳೆಯುತ್ತದೆ. ಇದರ ಇಂಗ್ಲಿಷ್‌ನ ಹೆಸರು ಒಯಿಸ್ಟರ್ ಮಷರೂಂ. ವೈಜ್ಞಾನಿಕವಾಗಿ ಪ್ಲುರೋಟಸ್ ಸಜೊರ್ ಕಜು ಎಂದು ಕರೆಯುತ್ತಾರೆ. ಪೋಷಾಕಾಂಶ ಯುಕ್ತವಾಗಿರುವ ಅಣಬೆ ಮಕ್ಕಳ ಬೆಳವಣಿಗೆ ಸಹಕಾರಿ. ಜೀವಸತ್ವಗಳು, ಖನಿಜಗಳು ಸಾಕಷ್ಟು ಪ್ರಮಾಣದಲ್ಲಿರುವುದರಿಂದ ವೃದ್ಧರಿಗೆ, ಮಹಿಳೆಯರಿಗೆ, ಗರ್ಭಿಣಿಯರಿಗೆ ಉತ್ತಮ ಆರೋಗ್ಯಕಾರಿ ಔಷಧಿ ಸಸ್ಯವಾಗಿದೆ. ಅಣಬೆಯಿಂದ ಹಲವು ವಿಧದ ಅಡುಗೆ ತಯಾರಿಸಲಾಗುತ್ತದೆ. ಅಣಬೆಯನ್ನು ಕೃಷಿ ಮಾಡಿ ಬೆಳೆಯುತ್ತಿರುವುದು ಇದರ ಔಷಧೀಯ ಮಹತ್ವ ತಿಳಿಸುತ್ತದೆ.

ಬೆಟ್ಟದ ನೆಲ್ಲಿ : ಹಿಂದೂಗಳಲ್ಲಿ ಪೂಜನೀಯವಾದ ಗಿಡಗಳಲ್ಲಿ ತುಳಸಿಯನ್ನು ಬಿಟ್ಟರೆ ಬೆಟ್ಟದ ನಲ್ಲಿಗೆ ಎರಡನೆಯ ಸ್ಥಾನ ದೊರೆಯುತ್ತದೆ. ಬೆಟ್ಟದ ನೆಲ್ಲಿಯ ರೂಪದಲ್ಲಿ ವಿಷ್ಣುವನ್ನು ಕಾಣಲಾಗುತ್ತದೆ. ಇದರಲ್ಲಿ 'ಸಿ' ಜೀವಸತ್ವ ಅಧಿಕಾವಾಗಿರುತ್ತದೆ. ಇದರ ಇಂಗ್ಲಿಷ್‌ನ ಹೆಸರು ಇಂಡಿಯನ್ ಗೂಸ್‌ಬೆರ್‍ರಿ, ವೈಜ್ಞಾನಿಕವಾಗಿ ಫೈಲೆಂಥಸ್ ಎಂಬ್ಲಿಕ ಎಂದು ಕರೆಯುತ್ತಾರೆ. ಹಲವು ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಇದು ಶ್ವಾಸಕೋಶದ ತೊಂದರೆ, ಚರ್ಮದ ಸಮಸ್ಯೆ, ದೈಹಿಕ ದುರ್ಬಲತೆ ನೆಗಡಿ, ಕೆಮ್ಮು, ಹೊಟ್ಟೆಯ ಉಬ್ಬರ, ಮಧುಮೇಹ ಮುಂತಾದ ಸಮಸ್ಯೆಗಳಿಗೆ ಸಿದ್ಧೌಷಧವಾಗಿದೆ.

ಮೆಂತ್ಯ : ಔಷಧಿ ಗುಣ ಹೊಂದಿರುವ ಮೆಂತ್ಯವನ್ನು ಸಾಂಬಾರಿನ ಪುಡಿಗೆ ಬಳಸುತ್ತಾರೆ. ಮೆಂತ್ಯ ಬೀಜದೊಂದಿಗೆ ಅದರ ಸೊಪ್ಪು ರುಚಿಕರ ಹಾಗೂ ಆರೋಗ್ಯಕರವಾಗಿರುತ್ತದೆ. ನಾಲಗೆಗೆ ಕಹಿಯನ್ನು ಉಂಟು ಮಾಡುವ ಇದರ ಇಂಗ್ಲಿಷ್‌ನ ಹೆಸರು ಫೆನುಗ್ರೀಕ್, ವೈಜ್ಞಾನಿಕವಾಗಿ ಟ್ರಿಗೊನೆಲ್ಲ ಫ್ಯೂನಮ್ ಎಂದುಕರೆಯುತ್ತಾರೆ. ಇದನ್ನು ಮಧುಮೇಹಿಗಳಿಗೆ, ದೈಹಿಕ ಸಮಸ್ಯೆಗಳಿಗೆ, ಅಜೀರ್ಣ, ಹಸಿವಿಲ್ಲ

ದಿರುವಿಕೆ, ಹೊಟ್ಟೆ ಉಬ್ಬರ, ಮಲಬದ್ಧತೆ, ನೆಗಡಿ, ಕೆಮ್ಮು ಮುಂತಾದ ಸಮಸ್ಯೆಗಳ ನಿವಾರಣೆಗೆ ಉಪಯೋಗಿಸುತ್ತಾರೆ.

ಪರಂಗಿ : ಹಲವು ರೋಗ ನಿರೋಧಕ ಶಕ್ತಿಯನ್ನು ಹೊಂದಿರುವ ಪರಂಗಿಯು ಕ್ಯಾರಿಕೇಸೀ ಕುಟುಂಬಕ್ಕೆ ಸೇರಿದೆ. ಕ್ಯಾರಿಕ ಪಪಾಯ ಎಂಬ ಮರದ ಹಣ್ಣು ಮತ್ತು ಬೀಜಗಳು ಹೆಚ್ಚು ಔಷಧಿಗುಣ ಹೊಂದಿವೆ. ಕಾಯಿ ಪಪಾಯಿ ಜಂತು ಹುಳು ಶಮನ, ಕರುಳು ಬೇನೆ, ಹುಳುಕಡ್ಡಿ, ಚರ್ಮಕಾಯಿಲೆಗಳಿಗೆ ಔಷಧವಾಗಿ ಬಳಕೆಯಾಗುತ್ತದೆ.

ಈ ಮೇಲೆ ತಿಳಿಸಿದ ಔಷಧಿ ಸಸ್ಯಗಳು ಮಾತ್ರವಲ್ಲದೆ ಬೇವು, ಅರಿಸಿನ, ನಿಂಬೆ ಗಿಡ, ಕಳ್ಳಿಗಿಡ, ಎಕ್ಕದಗಿಡ, ಸೊಪ್ಪು, ಮೂಲಂಗಿ, ಗೊಂಡಳಸೊಪ್ಪು, ನರಗುಂಜಿ ಎಲೆ, ಶುಂಠಿ, ಬಿಲ್ವಪತ್ರೆ, ಕಕ್ಕೆಗಿಡ, ಬಿದಿರು, ಎಲಚಿ, ಆಲದಮರದ ಚಕ್ಕೆ ಇನ್ನೂ ಹತ್ತು ಹಲವು ಸಸ್ಯಗಳು ಹಲವು ಕಾಯಿಲೆಗಳ ನಿವಾರಣೆಯಲ್ಲಿ ಸಕ್ರಿಯವಾಗಿ ಕೆಲಸವನ್ನು ಮಾಡುತ್ತವೆ.

ಆಧುನಿಕತೆಯ ವೈದ್ಯಕೀಯ ಕ್ಷೇತ್ರದಲ್ಲಿ ಮೇಲಿನ ಔಷಧಿ ಸಸ್ಯಗಳು ಸಾಮಾನ್ಯವಾಗಿ ಗ್ರಾಮೀಣರ ಅನುಭವದಿಂದ ಹಲವು ಪ್ರಯೋಗಗಳಿಗೆ ಒಳಪಟ್ಟು, ಹೊಸ ಆವಿಷ್ಕಾರಗಳಿಗೆ ಆಕರಗಳಾಗಿವೆ.

ಜನಪದ ವೈದ್ಯ ಪದ್ಧತಿಯಲ್ಲಿ ಸಸ್ಯಗಳ ಔಷಧಿಗುಣದ ಸ್ಥಾನವನ್ನು ಗುರುತಿಸಿಕೊಂಡ ಮಾನವನು ಔಷಧಿ ಗಿಡಗಳನ್ನು ಪ್ರತಿಯೊಂದು ಕಾಯಿಲೆಗೆ ಬಳಸಿಕೊಂಡು ಯಶಸ್ವಿಯಾದನು. ಇಂತಹ ಔಷಧಿ ಸಸ್ಯಗಳಿಂದ ರೋಗಗಳಿಗೆ ಔಷಧಿ ಮಾಡಿ ಕೊಳ್ಳುವುದನ್ನು ಕೈ ಔಷಧಿ, ನಾಟಿಔಷಧಿ ಎಂದು ಕರೆಯುತ್ತಾರೆ. ಪ್ರಕೃತಿ ಸಹಜವಾಗಿ ತಮ್ಮ ನೆಲೆಯನ್ನು ಕಂಡುಕೊಂಡ ಇಂತಹ ಹಲವಾರು ಔಷಧಸಸ್ಯಗಳು ಸೊಂಪಾಗಿ ಬೆಳೆದು ನಿಂತಿದರೂ ಅವುಗಳ ರೋಗ ನಿರೋಧಕ ಶಕ್ತಿ ಸಾಮರ್ಥ್ಯವನ್ನು ಅರಿಯದ ಇಂದಿನ ಜನರಿಗೆ ಅವುಗಳ ಮಹತ್ತ್ವವನ್ನು ತಿಳಿಸುವ ಅವಶ್ಯಕತೆ ಇದೆ.

ಪಿ. ಕೆ.

ಕಂಗುಲು ಕುಣಿತದಲ್ಲಿಯ ಕೃಷಿ ಬದುಕು ತುಳುನಾಡಿನ ಪ್ರಧಾನ ಕಸುಬು ಕೃಷಿ. ಬತ್ತ, ತೆಂಗು, ಬಾಳೆಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಅಡಕೆ, ಏಲಕ್ಕಿ, ಕರಿಮೆಣಸು, ಕೋಕೊ ಬೆಳೆಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ರಬ್ಬರ್ ಕೂಡಾ ಜನಪ್ರಿಯವಾಗತೊಡಗಿದೆ. ಕೃಷಿ ಸಂಸ್ಕೃತಿಯನ್ನು ಹೊಂದಿಕೊಂಡು ಇಲ್ಲಿಯ ಅನೇಕ ಜನಪದ ಆರಾಧನೆ, ಆಚರಣೆ, ಕುಣಿತ, ಹಾಡುಗಳು ಹುಟ್ಟಿಕೊಂಡಿವೆ. ಅಲ್ಲದೆ ಜಿಲ್ಲೆಯ ಪ್ರಮುಖ ಕ್ರೀಡೆಗಳಾದ ಕಂಬಳ, ಕೋಳಿಅಂಕಗಳೂ ಕೃಷಿ ಹಿನ್ನೆಲೆಯಲ್ಲಿಯೇ ಬೆಳೆದುಬಂದಿವೆ.

ಒಂದು ಕಾಲದಲ್ಲಿ ತುಳುನಾಡಿನಾದ್ಯಂತ ಪ್ರಚಲಿತವಿದ್ದು ನಾನಾ ಕಾರಣಗಳಿಂದ ಕಣ್ಮರೆಯಾಗುತ್ತಾ ಬಂದು ಇದೀಗ ಉಡುಪಿ ಜಿಲ್ಲೆಯ ಪಡುಬಿದಿರೆ, ಹೆಜಮಾಡಿ, ಮಟ್ಟು ಪ್ರದೇಶಗಳಲ್ಲಿ ಉಳಿದುಕೊಂಡಿರುವ ಅಪೂರ್ವ ಜನಪದ ಕುಣಿತ ಕಂಗುಲು. ಕಾಲಾನುಸಾರಿಯಾಗಿ ಬರುವ ಈ ಕುಣಿತ ಮಾಯಿ ಹುಣ್ಣಿಮೆಯಿಂದಾರಂಭಿಸಿ (ಫೆಬ್ರವರಿ) ಮೂರು ದಿನ ಹಗಲು-ರಾತ್ರಿ (ಮೂರು ದಿನದ ಬಿಸಿಲು, ಮೂರು ದಿನದ ಇಬ್ಬನಿಯಲ್ಲಿ) ನಡೆಯುತ್ತದೆ. ಪ್ರಧಾನವಾಗಿ ಈ ಕುಣಿತವನ್ನು ಪರಿಶಿಷ್ಟ ಜಾತಿಗೆ ಸೇರಿದ ಗೊಡ್ಡ ಜನಸಮೂಹದವರು ನಡೆಸುತ್ತಾರೆ. ಈ ಕುಣಿತದ ಮೂಲ ಆಶಯ ಊರಿಗೆ ಬರುವ ಮಾರಿರೋಗವನ್ನು ಹೊರಗಟ್ಟುವುದಾಗಿದೆ. ಸಕಲ ಮನುಷ್ಯ ವರ್ಗ, ಪ್ರಾಣಿವರ್ಗ ಮತ್ತು ಸಸ್ಯಸಂಪತ್ತುಗಳಿಗೆ ಬರುವ ವಿಪತ್ತುಗಳನ್ನು ಕಳೆದು ಊರಿಗೆ ಸುಭಿಕ್ಷೆ ಉಂಟಾಗುವಂತೆ ಮಾಡುವುದೇ ಈ ಕುಣಿತದ ಉದ್ದೇಶ.

ಕಂಗುಲು ಕುಣಿತದಲ್ಲಿ ಜನರನ್ನು ಹೊಂದಿಕೊಂಡು ನಾಲ್ಕು, ಆರು, ಎಂಟು ಹೀಗೆ ಪುರುಷರು ಮಾತ್ರ ಕುಣಿತಗಾರರಿರುತ್ತಾರೆ. ಇವರಿಗೆ ಯಾವುದೇ ಬಣ್ಣಗಾರಿಕೆ ಇರುವುದಿಲ್ಲ. ತಲೆಗೆ ಬಿಳಿಯ ಮುಂಡಾಸು (ತರೆತ್ರ) ಸುತ್ತಿ, ತಲೆ, ಭುಜ ಹಾಗೂ ಸೊಂಟಕ್ಕೆ ತೆಂಗಿನ ಎಳೆಗರಿಗಳನ್ನು ಕಟ್ಟಿಕೊಂಡು, ಕೈಯಲ್ಲಿ ಘಂಟಾ ಮಣಿಯೊಂದನ್ನು ಹಿಡಿದುಕೊಂಡ ಇವರನ್ನು ಒಟ್ಟಾಗಿ ಕಂಗುಲುದ ಸಿರಿಕುಲು (ಕಂಗುಲಿನ ಸ್ತ್ರೀಯರು) ಎಂದು ಕರೆಯುತ್ತಾರೆ. ಇವರ ಜೊತೆಗೆ ಮೈ ಪೂರ್ತಿ ಕಪ್ಪುಬಣ್ಣವನ್ನು ಹಚ್ಚಿಕೊಂಡು ತಲೆಗೆ ಅಡಕೆಯ ಹಾಳೆಯಿಂದ ತಯಾರಿಸಿದ ಟೊಪ್ಪಿ (ಗೋಂಪರ್) ಇಟ್ಟುಕೊಂಡು, ಒಂದು ಕೈಯಲ್ಲಿ ಕೊಳಲು ಇನ್ನೊಂದು ಕೈಯಲ್ಲಿ ಅಜಕುರುವೆ(ಬುಟ್ಟಿ) ಹಿಡಿದುಕೊಂಡ ವ್ಯಕ್ತಿ ಇರುತ್ತಾನೆ. ಈತನನ್ನು ಕಂಗುಲಿನ ಕೊರಗಹುಡುಗ ಎಂದು ಕರೆಯುತ್ತಾರೆ. ಇವರೆಲ್ಲಾ ವೇಷಭೂಷಣದೊಂದಿಗೆ ಸಿದ್ಧವಾದ ಅನಂತರ ಈ ಕುಣಿತದವರ ಮುಖ್ಯಸ್ಥನೊಂದಿಗೆ ಊರ ದೇವಸ್ಥಾನದೆದುರು ನಿಂತು ಪ್ರಾರ್ಥನೆಯನ್ನು ಸಲ್ಲಿಸಿ ಸೇವೆರೂಪದ ಕುಣಿತವನ್ನು ಮಾಡಿ ಆ ಬಳಿಕ ಮನೆಮನೆಗೆ ತೆರಳುತ್ತಾರೆ.

ಈ ಕುಣಿತಕ್ಕೆ ಸಂಬಂಧಿಸಿದಂತೆ ಹಾಡು ಇದೆ. ಇದನ್ನು ಕಂಗುಲು ಸಂಧಿ ಎಂದು ಕರೆಯುತ್ತಾರೆ. ತಾಸೆ, ಡೋಲು, ಕೊಳಲು, ತಾಳದ ಹಿಮ್ಮೇಳದೊಂದಿಗೆ ಇಬ್ಬರು ಹಾಡುಗಾರರು ಸಂಧಿಯನ್ನು ಹಾಡುತ್ತಾರೆ. ಹಾಡು ಮತ್ತು ತಾಳದ ಲಯಕ್ಕನುಗುಣವಾಗಿ ಕುಣಿತಗಾರರು ವೃತ್ತಾಕಾರವಾಗಿ ನಿಂತು ನಿಯತವಾದ ಗತಿಯಲ್ಲಿ ಹಿಂದೆಮುಂದೆ ಸಾಗಿ ಬಾಗಿ ಬಳುಕಿ ಹೋ..... ಹೊಯ್ ಎನ್ನುತ್ತಾ ಕುಣಿಯುತ್ತಾರೆ. ಇವರ ಮಧ್ಯೆ ಕೊರಗ ಹುಡುಗ ಕುಣಿಯುತ್ತಾನೆ. ಕುಣಿತ ಮುಕ್ತಾಯದ ಹಂತಕ್ಕೆ ಬರುತ್ತಿದ್ದಂತೆ ಕೊರಗ ವೇಷಧಾರಿ ಮನೆಯ ಮುಂಭಾಗಕ್ಕೆ ಹೋಗಿ ಮನೆಯೊಡತಿಯನ್ನು ಕುರಿತಾಗಿ ತನಗೆ ನೀಡಬೇಕಾದ ವಸ್ತುಗಳ ಪಟ್ಟಿಯನ್ನು ಹಾಸ್ಯಮಿಶ್ರಿತ ಶೈಲಿಯಲ್ಲಿ ತಿಳಿಸುತ್ತಾನೆ. ಮನೆಯೊಡತಿ ಕಂಗುಲು ಮಕ್ಕಳಿಗೆ 'ಕಳಸೆ ಪಡಿ' (ಒಂದು ಕಳಸೆ ಬತ್ತದ ಸಂಭಾವನೆ) ನೀಡಿದರೆ ಕೊರಗ ವೇಷಧಾರಿಗೆ ಪ್ರತ್ಯೇಕ ಐದು ಸೇರು ಬತ್ತ, ಸ್ವಲ್ಪ ಹಣ ಹಾಗು ಹಳೆಯ ಬಟ್ಟೆಗಳನ್ನು ಕೊಟ್ಟು 'ಮರಯಿಡ್ ಗಂಜಿ' (ಮಣ್ಣಿನ ಪಾತ್ರೆಯಲ್ಲಿ ಗಂಜಿ) ನೀಡುತ್ತಾರೆ.

ಈ ಸಂದರ್ಭ ಮನೆಯಲ್ಲಿ ಮಕ್ಕಳಿಗೆ ಏನಾದರೂ ದೈಹಿಕ ಅಸೌಖ್ಯತೆ, ನಿರಂತರ ಕಾಯಿಲೆ ಇದ್ದರೆ ಕೊರಗ ವೇಷಧಾರಿಯ ಕೈಗೆ ನೀಡುತ್ತಾರೆ. ಆತ ತನ್ನ ಹಣೆಯ ಕಪ್ಪು ನಾಮದಿಂದ ಬಣ್ಣ ತೆಗೆದು ಕಾಯಿಲೆಯಿರುವ ಮಗುವಿನ ಹಣೆಗೆ ಇಡುತ್ತಾನೆ. ಆ ಮೂಲಕ ಮಗುವಿನ ಕಾಯಿಲೆ ವಾಸಿಯಾಗುತ್ತದೆ ಎಂದು ತಿಳಿಯಲಾಗುತ್ತದೆ. ಅಲ್ಲದೆ ಮನೆಯವರಿಗೆ ಒದಗಿ ಬಂದಿರುವ ಕಷ್ಟಗಳಿಗೆ ಕೊರಗನಿಗೆ (ಈತನನ್ನು ನೀಚ ದೈವದ ಪ್ರತಿನಿಧಿ ಎಂದೂ ತಿಳಿಯುತ್ತಾರೆ) ಮಾಂಸಾಹಾರದ ಎಡೆ ಹರಕೆಯನ್ನೂ ಈ ಸಂದರ್ಭದಲ್ಲಿ ಒಪ್ಪಿಸುತ್ತಾರೆ. ಈ ಎಡೆಯನ್ನು ಪ್ರೀತಿಯಿಂದ ಸ್ವೀಕರಿಸಿ ನಿಮಗೆದುರಾಗಿರುವ ಕಷ್ಟವನ್ನು ಪರಿಹರಿಸಿ ಕೊಟ್ಟೇನೆಂಬ ಅಭಯವನ್ನು ನೀಡುತ್ತಾನೆ. ಕಾಡಿನ ಮಕ್ಕಳಾದ ಕೊರಗರಿಗೆ

ಮತ್ತು ಅವರು ಆರಾಧಿಸುವ ಕೊರಗ ದೈವಕ್ಕೆ ಅನಿಷ್ಟ ನಿವಾರಣೆಯ ಶಕ್ತಿ ಇದೆ ಎಂದು ನಂಬಲಾಗಿದೆ. ತುಳು ಸಂಸ್ಕೃತಿಯಲ್ಲಿ ಕೊರಗರಿಗೆ ಸಂಬಂಧಿಸಿದಂತೆ ಅನೇಕ ವಿಶಿಷ್ಟ ಆಚರಣೆಗಳು, ಆರಾಧನೆಗಳು ಇರುವುದನ್ನೂ ಗಮನಿಸಬಹುದು.

ರಾತ್ರಿ ಹಗಲು ಪೂರ್ತಿ ಕುಣಿತ ನಡೆಸಿ ಸಾಯಂಕಾಲವಾಗುತ್ತಿದ್ದಂತೆ ಇವರು ಊರ ಗಡಿಭಾಗಕ್ಕೆ ಬಂದು ವಿಧಿ ಪ್ರಕಾರವಾಗಿ ತಮ್ಮ ವೇಷಭೂಷಣಗಳನ್ನು ತೆಗೆದು ನೆಲದ ಮೇಲೆ ಹಾಕುತ್ತಾರೆ. ಈ ಸಂದರ್ಭ ಕುಣಿತಗಾರರು ಹಾಗೂ ಕೊರಗ ವೇಷಧಾರಿಯ ಮೇಲೆ ದೈವಾವೇಶವಾಗುವುದೂ ಇದೆ. ಅನಂತರ ಆ ದಿನದ ಮಟ್ಟಿಗೆ ಅಲ್ಲಿಗೆ ಯಾರೂ ಹೋಗಬಾರದೆಂಬ ನಿಷೇಧವಿದೆ. ಊರಮಾರಿಯನ್ನು ತಂದು ಊರಗಡಿ ದಾಟಿಸಿದಲ್ಲಿಗೆ ಯಾರಾದರೂ ಹೋದರೆ ತೊಂದರೆಯಾಗುತ್ತದೆ ಎಂಬ ನಂಬಿಕೆಯೇ ಈ ನಿಷೇಧಕ್ಕೆ ಕಾರಣ. ಒಂದು ತೆಂಗಿನ ಎಳಗರಿ ಹಾಗೂ ಒಂದು ಕೋಳಿಯ ತಲೆ (ಒಂಜಿ ತಾರೆದ ತಿರಿಟ್ಟ್ ಬುಕೊ ಒಂಟಿ ಕೋರಿದ ತರೆಟ್ಟ್)ಯಲ್ಲಿ ಊರಮಾರಿಯನ್ನು ಓಡಿಸಬೇಕೆಂಬುದು ಈ ಕುಣಿತದ ಮುಖ್ಯ ಉದ್ದೇಶ. ಹೀಗೆ ಮೂರು ದಿನಗಳ ಕುಣಿತ ನಡೆದು ಕೊನೆಯ ದಿನ ಕೋಳಿ ಮೀನಿನ ಆಹಾರ ಹಾಗೂ ರೊಟ್ಟಿಯ ನೂರಾರು ಎಡೆ ಬಡಿಸಿ ಊರನ್ನು ಸರ್ವರೀತಿಯ ಕ್ಷೋಭೆಗಳಿಂದ ಪಾರು ಮಾಡಬೇಕೆಂದು ಪ್ರಾರ್ಥಿಸುತ್ತಾರೆ.

ಕಂಗುಲುಕುಣಿತ ಮಾರಿ ಓಡಿಸುವ ಒಂದು ಕ್ರಿಯೆ ಎಂದು ಮೇಲ್ನೋಟಕ್ಕೆ ಕಂಡುಬಂದರೂ ಕೃಷಿಯೊಂದಿಗೂ ಇದು ಸಂಬಂಧವನ್ನು ಪಡೆದುಕೊಂಡಿದೆ. ಕಂಗುಲು ಕುಣಿತದ ಹಾಡಿನಿಂದ ಇದು ಸ್ಪಷ್ಟವಾಗುತ್ತದೆ. ಮನೆಯ ಯಜಮಾನ ಎಲ್ಲಿ ಹೋಗಿದ್ದಾರೆ ಎಂದು ಆರಂಭವಾಗುವ ಹಾಡು ಅವರು ಎಲ್ಲಿದ್ದಾರೆ, ಏನನ್ನು ಹೊಂದಿದ್ದಾರೆ, ಏನು ಮಾಡಿದ್ದಾರೆ ಇತ್ಯಾದಿ ಪ್ರಶ್ನೆಗಳ ಮೂಲಕ ಮುಂದುವರಿಯುತ್ತದೆ. ಇದಕ್ಕುತ್ತರವಾಗಿ ಮನೆಯ ಯಜಮಾನ ಚಾವಡಿಯಲ್ಲಿದ್ದಾರೆ. ಚಾವಡಿಯಲ್ಲಿರುವ ಯಜಮಾನ ಅವರು ತಲೆಗೆ ತರೆತ್ರ (ಮುಂಡಾಸು) ಹೊಂದಿದ್ದಾರೆ, ದುಡಿಯಲು ಭೂಮಿಯನ್ನು ಹೊಂದಿದ್ದಾರೆ ಹಾಗೂ ಕೃಷಿಗೆ ಬೇಕಾದ ಬೀಜಗಳನ್ನು ಹೊಂದಿದ್ದಾರೆ. ಭೂಮಿಯನ್ನು ಉಳಲು ಏಡಮೋಡಗಳೆಂಬ ಒಂದು ಜೊತೆ ಕೋಣಗಳನ್ನು ಹೊಂದಿದ್ದಾರೆ. ಕೃಷಿಯ ಸಲಕರಣೆಗಳಾದ ನೊಗ, ನೇಗಿಲು ಹಾಗೂ ಹಲಗೆಗಳನ್ನು ಹೊಂದಿದ್ದಾರೆ. ಇಷ್ಟೆಲ್ಲ ಸಿದ್ಧತೆಗಳಿರುವ ಯಜಮಾನ ಭೂಮಿಯನ್ನು ಉತ್ತುಬಿತ್ತಿದ್ದಾರೆ ಹಾಗೂ ಒಳ್ಳೆಯ ಬೆಳೆಯನ್ನು ಪಡೆದಿದ್ದಾರೆ. ಜಾನುವಾರುಗಳಿಗೆ ಬರುವ ರೋಗವಿದ್ದರೆ ಅವು ನಡೆಯುವ ಓಣಿಯಲ್ಲಿ ಹೋಗಲಿ, ಮನುಷ್ಯರ ರೋಗ ಅವರು ಮಲಗುವ ಚಾಪೆಯಲ್ಲಿ ಹೋಗಲಿ, ಬೆಕ್ಕಿನ ರೋಗ ಅದು ಕುಡಿಯುವ ಹಾಲಲ್ಲಿ ಹೋಗಲಿ, ನಾಯಿಯ ರೋಗ ಅದು ಮಲಗುವ ಬೂದಿಯಲ್ಲಿ ಹೋಗಲಿ. ಮಾರಿಮಗ್ಗಿನ ರೋಗರುಜಿನಗಳಿದ್ದರೆ ಅದು ಪಡುವಣ ದಾಟಲಿ, ಲೇಸಾದಪಟ್ಟ (ಒಳಿತು) ಇದ್ದರೆ ಅದು ಮೂಡಣಕ್ಕೆ ಎಂಬ ಆಶಯದೊಂದಿಗೆ ಹಾಡು ಮುಕ್ತಾಯವಾಗುತ್ತದೆ.

ಬತ್ತದ ಕೃಷಿಯಿರುವ ಮನೆಗಳಲ್ಲಿ ಈ ರೀತಿಯ ಹಾಡುಗಳನ್ನು ಹಾಡಿದರೆ ಮೀನುಗಾರರ ಮನೆಗಳಲ್ಲಿ ಮೀನು ಕೃಷಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ಇಲ್ಲಿಯೂ ಮನೆಯ ಯಜಮಾನ ಎಲ್ಲಿ ಹೋಗಿದ್ದಾರೆ. ಏನನ್ನು ಹೊಂದಿದ್ದಾರೆ, ಏನು ಮಾಡಿದ್ದಾರೆ ಇತ್ಯಾದಿ ಪ್ರಶ್ನೆಗಳ ಮೂಲಕ ಆರಂಭವಾಗುವ ಹಾಡು ಇದಕ್ಕೆ ಉತ್ತರ ರೂಪವಾಗಿ ಮನೆಯ ಯಜಮಾನ ಅವರು ಚಾವಡಿಯಲ್ಲಿದ್ದಾರೆ. ಮೀನು ಕೃಷಿಗಾಗಿ ಅವರು ರಾಮಲಕ್ಷ್ಮಣ ಹೆಸರಿನ ದೋಣಿಗಳನ್ನು ಹೊಂದಿದ್ದಾರೆ. ಕಂತಲೆ ಗುದ್ದಲೆ ಪಟ್ಟಲೆ ಮಾರಿಬಲೆ ಎಂಬ ಬಲೆಗಳನ್ನು ಹೊಂದಿದ್ದಾರೆ; ಮಾತ್ರವಲ್ಲ ಬಲೆಗಳನ್ನು ಹೊಂದಿರುವ ಯಜಮಾನ ದಂಡನ್ನೂ ಹೊಂದಿದ್ದಾರೆ. ಬೆಳ್ಳುಳ್ಳಿ ವ್ಯಾಪಾರಕ್ಕಾಗಿ ಮೂಡಣಕ್ಕೆ ಹೋಗಿದ್ದಾರೆ. ಮಾಯಿಯಲ್ಲಿ ಬಂದದ್ದು ಮಾಯವಾಗಿ ಹೋಗಲಿ. ಅರಿಬೀರಿ ಮಾರಿಮಗ್ಗಿನ (ಕೆಡುಕು) ಮೂಡಣಕ್ಕೆ ಹೋಗಲಿ. ಒಳಿತೆಲ್ಲವೂ ಪಡುವಣಕ್ಕೆ ಬರಲಿ ಎಂಬ ಆಶಯದೊಂದಿಗೆ ಹಾಡು ಮುಕ್ತಾಯವಾಗುತ್ತದೆ.

ಕಂಗುಲು ಮಕ್ಕಳು ತಮ್ಮ ತಿರುಗಾಟದ ಸಂದರ್ಭ ಯಾರದೇ ಮನೆಯಲ್ಲಿ ಯಾವುದೇ ವಸ್ತುವನ್ನು ಇಷ್ಟಪಟ್ಟು ಕೈಹಾಕಿ ತೆಗೆದರೂ ಯಾರೂ ಆಕ್ಷೇಪಿಸಬಾರದು. ಆ ದಿನದ ಮಟ್ಟಿಗೆ ಅವರಿಗೆ ಆ ಸ್ವಾತಂತ್ರ್ಯ ಇದೆ. ಕಂಗುಲು ಮಕ್ಕಳ ಅಪೇಕ್ಷೆಗೆ ವಿರೋಧವಾಗಿ ನಡೆದರೆ ತೊಂದರೆಯಾಗುತ್ತದೆಂಬ ನಂಬಿಕೆ ಇದೆ. ಆದುದರಿಂದ ಇವರನ್ನು ಪ್ರತಿ ಮನೆಯಲ್ಲಿ ಬಹಳ ಗೌರವದಿಂದ ಕಂಡು ತಮ್ಮ ಶಕ್ತ್ಯಾನುಸಾರ ವಸ್ತು ಹಾಗೂ ಹಣವನ್ನು ನೀಡಿ ಕಳುಹಿಸಿ ಕೊಡುತ್ತಾರೆ. ಇವರು ಪ್ರತಿ ಮನೆಗೆ ಬರುವುದರಿಂದ ಮನೆಯ ಸಮೃದ್ಧಿ ಹೆಚ್ಚಾಗುತ್ತದೆ ಎಂದು ತಿಳಿಯುತ್ತಾರೆ. ಮಾಯಿಹುಣ್ಣಿಮೆ ಅಥವಾ ಹೋಳಿ ಹುಣ್ಣಿಮೆಯಿಂದಾರಂಭಿಸಿ ಮೂರು ದಿನ ನಡೆಯುವ ಆ ಕುಣಿತ ಕಾಮನ ಹಬ್ಬದ ಆಚರಣೆಯೂ ಹೌದು. ಈ ಹಾಡಿನಲ್ಲಿ ಕಂಗುಲು ಹಾಕಿದವರು ಕಾಮದೇವರು, ಕಂಗುಲು ಹುಟ್ಟಿದ್ದು ಬಡಗು ಕಾಮನಾಡಲ್ಲಿ ಎಂಬ ವಿವರಗಳಿವೆ. ಹಾಗಾಗಿ ಕಂಗುಲು ಎಂಬುದು ಕಾಮಗ್ ಕೋಲೊ-ಕಾಂಗೋಲೊ ಆಗಿ ಕಂಗುಲು ಆಗಿರಬೇಕು. ತುಳುವಿನಲ್ಲಿ ಕೋಲೊ ಎಂದರೆ ಬಣ್ಣ ಹಾಕಿ ವೇಷಭೂಷಣಗಳನ್ನು ಧರಿಸಿ ಕುಣಿತದ ಮೂಲಕ ಒಪ್ಪಿಸುವ ಆಚರಣಾತ್ಮಕ ಸೇವೆ ಎಂಬರ್ಥವಿದೆ. ಹೀಗೆ ಕಂಗುಲು ಕುಣಿತದ ಆಶಯ ಊರ ಮಾರಿ ಓಡಿಸಿ ಊರನ್ನು ಎಲ್ಲ ವಿಪತ್ತುಗಳಿಂದ ಪಾರುಮಾಡಿ ಊರಿಗೆ ಸುಖ ಶಾಂತಿ ಸಮೃದ್ಧಿ ತರುವುದಾಗಿದೆ.

ಎ.ಎ.ಕೆ.

ಕಂದಾಯ ವಿನಾಯಿತಿ ಬ್ರಿಟಿಷರು ಭೂಕಂದಾಯ ವ್ಯವಸ್ಥೆಯನ್ನು ಆರಂಭಿಸಿದ ಬಳಿಕ ಬೆಳೆಗಳು ನಷ್ಟವಾದಾಗ ಅಥವಾ ಇಳುವರಿ ಕಡಿಮೆಯಾದಾಗ ಪರಿಹಾರವನ್ನು ಒದಗಿಸುವುದು ಅನಗತ್ಯವೆಂದು ಭಾವಿಸಲಾಗಿತ್ತು. ರೈತರ ಮನವಿಯ ಮೇರೆಗೆ ಅಸಾಧಾರಣ ಪರಿಸ್ಥಿತಿಗಳಲ್ಲಿ ಕಂದಾಯ ಮಾಫಿ ಮಾಡಲಾಗುತ್ತಿತ್ತಾದರೂ, ಕಂದಾಯವನ್ನು ಸ್ಥಗಿತ ಅಥವಾ ಮಾಫಿ ಮಾಡಲು ಖಚಿತವಾದ ನಿಯಮಗಳೇನೂ ಇರಲಿಲ್ಲ. 1907ರಲ್ಲಿ ಮುಂಬಯಿ ಸರ್ಕಾರ ಭೂಕಂದಾಯ ಸ್ಥಗಿತ ಹಾಗೂ ಮಾಫಿಯನ್ನು ಕುರಿತು ಆದೇಶಗಳನ್ನು ಹೊರಡಿಸಿತು. ಕಂದಾಯವನ್ನು ಸ್ಥಗಿತಗೊಳಿಸಿದ ವರ್ಷದಿಂದ ಮುಂದಿನ ಮೂರು ವರ್ಷಗಳ ಸುಗ್ಗಿಯನ್ನು ಅವಲಂಬಿಸಿ ಕಂದಾಯ ಮಾಫಿಯನ್ನು ಕೊಡಲಾಯಿತು. ಭೂಕಂದಾಯ ನಿಯಮಗಳಲ್ಲಿ ಗೊತ್ತು ಮಾಡಿದ ಪ್ರಮಾಣದಲ್ಲಿ ಜಿಲ್ಲಾಧಿಕಾರಿ ಎರಡು ವರ್ಷಗಳಿಗಿಂತ ಹೆಚ್ಚು ಅವಧಿಗೆ ಸ್ಥಗಿತಗೊಂಡ ಕಂದಾಯದಲ್ಲಿ ಮಾಫಿ ಆದೇಶ ನೀಡುತ್ತಿದ್ದರು. ಪ್ರಥಮ ಬಾರಿಗೆ 1939ರಲ್ಲಿ ಖುಷ್ಕಿ ಜಮೀನುಗಳ ಕಂದಾಯವನ್ನು ಸಹ ಮಾಫಿ ಮಾಡುವ ನಿಯಮವನ್ನು ಮಾಫಿ ನಿಯಮಗಳಲ್ಲಿ ಸೇರಿಸಲಾಯಿತು.

ಮಾಫಿ ನಿಯಮಗಳನ್ನು ಅನಂತರ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿತ್ತು. ಇತ್ತೀಚಿನ ಪರಿಷ್ಕರಣವನ್ನು ಕರ್ನಾಟಕ ಭೂಕಂದಾಯ ನಿಯಮಗಳು (1966) ಇದರ ಪ್ರಕಾರ ಮಾಡಲಾಗಿದೆ.

ಮಳೆಯ ಪರಿಸ್ಥಿತಿ ಅನುಕೂಲ ಇಲ್ಲದಾಗ ಅಥವಾ ಇನ್ನಾವುದೇ ಅನಿರೀಕ್ಷಿತ ವಿಕೋಪ ಕಾಣಿಸಿಕೊಂಡಾಗ, ಬೆಳೆಗೆ ಹಾನಿಯಾದಲ್ಲಿ ಸರ್ಕಾರವು ಈ ಬಗ್ಗೆ ಗಮನಹರಿಸಿ ಕಂದಾಯದ ಭಾರವನ್ನು ಕಡಿಮೆ ಮಾಡುವ ದತ್ತವನ್ನು (ಅಧಿಕಾರ) ಹೊಂದಿದೆ. ಮಳೆಯ ಅಭಾವ ತಲೆದೋರಿದಾಗ ಜಿಲ್ಲಾಧಿಕಾರಿಯು ಎಲ್ಲಾ ಅಂತಹ ಪರಿಸ್ಥಿತಿ ಹೊಂದಿರುವ ಹೋಬಳಿಗಳಲ್ಲಿ ಪರಿಸ್ಥಿತಿಯನ್ನು ತಿಳಿಸಲು ಹಾಗೂ ಪ್ರಯೋಗಾತ್ಮಕ ಕ್ರಮಗಳನ್ನು ಕೈಗೊಳ್ಳಲು ಆದೇಶ ನೀಡುವರು. ಯಾವುದೇ ಕಾರಣದಿಂದ ಬೆಳೆಗೆ ಹಾನಿಯಾದಾಗ ತಹಶೀಲ್ದಾರರು ಇಂತಹ ಪರಿಸ್ಥಿತಿ ಇರುವ ಕನಿಷ್ಠ ಶೇಕಡಾ ಐದು ಗ್ರಾಮಗಳಲ್ಲಿ ಕಟಾವಿನ ಪ್ರಯೋಗ ನಡೆಸಿ ಬೆಳೆಯು ಎಕರೆಗೆ ಎಷ್ಟು ಎಂದು ಅಣೆವಾರಿ ಅಂದಾಜು ಮಾಡಬೇಕು. ಕರ್ನಾಟಕ ಕಂದಾಯ ನಿಯಮದ ಉಪನಿಯಮ (1)ರಂತೆ ಬಾವಿಯಿಂದ, ಕೆರೆಯಿಂದ ಹಾಗೂ ಅನ್ಯ ಮೂಲಗಳಿಂದ ನೀರಾವರಿ ಸವಲತ್ತು ಹೊಂದಿರುವ ಭೂಮಿಗಳನ್ನು ವರ್ಗೀಕರಿಸಿ ಬೆಳೆಯ ಪ್ರಮಾಣವು ಶೇ. 25ಕ್ಕಿಂತ ಕಡಿಮೆ ಇಲ್ಲವೆ ಹಾಗೂ ಶೇ. 37ಕ್ಕೆ ಹೆಚ್ಚಿಲ್ಲದಿದ್ದರೆ ವಸೂಲಾತಿಯನ್ನು ಪೂರ್ಣ ವಿನಾಯಿತಿ ಮಾಡಲಾಗುವುದು. ಬೆಳೆಯ ಪ್ರಮಾಣ ಶೇ. 37ಕ್ಕಿಂತ ಹೆಚ್ಚು ಶೇ. 50ಕ್ಕಿಂತ ಕಡಿಮೆ ಇದ್ದರೆ ಅರ್ಧ ವಸೂಲಾತಿಯನ್ನು ವಿನಾಯಿತಿ ಮಾಡಲಾಗುವುದು. ಬೆಳೆಯ ಪ್ರಮಾಣ ಶೇಕಡಾ 62ಕ್ಕಿಂತ ಕಡಿಮೆ ಬಂದಾಗ ಕಂದಾಯವನ್ನು ವಸೂಲಿ ಮಾಡಲಾಗುವುದಿಲ್ಲ. ಒಂದು ಖಚಿತ ಅವಧಿಯಲ್ಲಿ ಸಂಗ್ರಹವಾಗಬೇಕಾದ ಕಂದಾಯವನ್ನು ಬಾಕಿಯ ಶೇಕಡಾ 37ಕ್ಕಿಂತ ಕಡಿಮೆ ಬೆಳೆ ಬಂದ ಪರಿಸ್ಥಿತಿಯಲ್ಲಿ ವಸೂಲಾತಿ ಆಗದಿರಲಾಗಿ, ಮೂರನೆಯ ವರ್ಷದಲ್ಲಿ ಬಾಕಿಯನ್ನು ಮನ್ನಾ ಮಾಡಲಾಗುವುದು.

ವಿ.ಕೆ.

ಕಂಬಳಂ ಇದು ಕೇರಳದ ವಯನಾಡು, ಅಟ್ಟಪ್ಪಾಡಿ ಪ್ರದೇಶಗಳಲ್ಲಿಯ ಪಣಿಯರರೆಂಬ ಸಮುದಾಯದವರ ಕೃಷಿ ಆಚರಣೆ. ವಿಶಾಲವಾದ ಪ್ರದೇಶದಲ್ಲಿ ಏಕಕಾಲಕ್ಕೆ ಮತ್ತು ಕ್ಷಿಪ್ರವಾಗಿ ಕೃಷಿ ಕೆಲಸವನ್ನು ಮಾಡಿ ಮುಗಿಸುವುದಕ್ಕಾಗಿ ರೂಪಿತವಾದ ಕ್ರಮ. ವಯನಾಡು ಮತ್ತು ಅಟ್ಟಪ್ಪಾಡಿ ಪ್ರದೇಶಗಳ ಕಂಬಳಗಳಿಗೆ ಒಂದಿಷ್ಟು ವ್ಯತ್ಯಾಸಗಳಿದ್ದರೂ ಅವುಗಳ ಮೂಲಸ್ವರೂಪ ಮತ್ತು ಉದ್ದೇಶಗಳು ಒಂದೇ ಆಗಿವೆ. ಮುಖ್ಯ ವ್ಯತ್ಯಾಸವೆಂದರೆ ವಯನಾಡಲ್ಲಿ ಅದು ಬಯಲುಗಳಲ್ಲಿ ನಡೆಯುತ್ತದೆ, ಅಟ್ಟಪ್ಪಾಡಿಯಲ್ಲಿ ಕುಮರಿಗಳಲ್ಲಿ ನಡೆಯುತ್ತದೆ.

ಕಂಬಳ ಆಚರಣೆಯ ಉದ್ದೇಶ ಭೂದೇವಿಯ ಅನುಗ್ರಹ ಸಂಪಾದಿಸಿ ಆ ಮೂಲಕ ಒಳ್ಳೆಯ ಫಸಲು ಪಡೆಯುವುದು. ಅದರ ಪ್ರಾಯೋಗಿಕ ಪ್ರಯೋಜನವೇನೆಂದರೆ ಕಡಿಮೆ ವೆಚ್ಚ ಹೆಚ್ಚು ಕೆಲಸ ಎಂಬುದು. ಜಮೀನ್ದಾರರಿಗೆ ಎರಡನೆಯ ಉದ್ದೇಶವೇ ಮುಖ್ಯವಾಗಿತ್ತು. ಜಮೀನುದಾರನು ಪಣಿಯರರ ಮೂಪ (ಮುಖಂಡ/ಹಿರಿಯ)ನನ್ನು ಕರೆಸಿ ತಾನು ಕಂಬಳವನ್ನು ಮಾಡಬಯಸುವ ದಿನವನ್ನು ಸೂಚಿಸಿ ಅದಕ್ಕಾಗಿ 'ಮೂಪ'ನಿಗೆ 'ವೀಳ್ಯ' ಕೊಡುತ್ತಾನೆ. (ವೀಳ್ಯ= ದಕ್ಷಿಣೆ ಸಹಿತ ತಾಂಬೂಲ). ಇದು ಅದರ ವಿದ್ಯುಕ್ತ ಆರಂಭ. ಕಂಬಳದ ಆಯೋಜನೆ ನಾಟಿಯ/ಬಿತ್ತನೆಯ ಕಾಲ ಅಥವಾ ಕಳೆ ತೆಗೆಯುವ ಕಾಲಗಳಲ್ಲಿ.

ಕಂಬಳ ನಿಶ್ಚಯವಾದ ದಿನ ಪಣಿಯರು ದುಡಿ ಬಡಿಯುತ್ತ, ಕೇಕೆ ಹಾಕುತ್ತ, ಕೊಂಬು ಊದುತ್ತಾ ತಮ್ಮ ಗುಡಿಸಿಲುಗಳಿಂದ ಹೊರಟು ಮೂಪನ ಮುಂದಾಳ್ತನದಲ್ಲಿ ಒಂದೆಡೆ ಸೇರುತ್ತಾರೆ. ಮೂಪನ ಕರೆಗೆ ಅನುಸಾರವಾಗಿ ಸುಮಾರು ಐವತ್ತರಿಂದ ನೂರರಷ್ಟು ಗಂಡು ಹೆಣ್ಣು ಆಳುಗಳು ಕಲೆಯುತ್ತಾರೆ. ಕಂಬಳ ನಿಶ್ಚಯವಾದ ದಿನಗಳಲ್ಲಿ ಮೂಪನನ್ನು ಧಿಕ್ಕರಿಸಿ ಹೊರಗಿನ ಕೆಲಸಗಳಿಗಾಗಲಿ ತಮ್ಮ ಕೆಲಸಗಳಿಗಾಗಲಿ ಯಾರೂ ಹೋಗುವಂತಿಲ್ಲ. ಕಂಬಳ ನಿಶ್ಚಯವಾದ ಕೂಡಲೇ ಮೂಪನು ಎಲ್ಲರಿಗೂ ವಿಷಯ ತಿಳಿಸುತ್ತಾರೆ. ಕೆಲಸದ ಜಾಗ, ಬಂದು ಸೇರಬೇಕಾದ ಜಾಗ, ದಿವಸ, ಸಮಯ- ಎಲ್ಲ ವಿವರಗಳೂ ಅದರಲ್ಲಿರುತ್ತವೆ. ಸೇರಿಸುವ ಜನರ ಅಂದಾಜು ಪ್ರಮಾಣಕ್ಕನುಸಾರವಾಗಿ ಮೂಪನು ಯಜಮಾನನಿಂದ ಧಾನ್ಯವನ್ನು ಕೆಲಸದಲ್ಲಿ ಪಾಲ್ಗೊಂಡ ಎಲ್ಲರಿಗೂ ಹಂಚಿಕೊಡುತ್ತಾನೆ. ಇದರಲ್ಲಿ ಕೆಲಸಗಾರರ ಜತೆ ಕಂಬಳದ 'ಮನರಂಜನಾ ತಂಡ'ಕ್ಕೂ ಪಾಲಿದೆ. ಧಾನ್ಯಗಳ ಪಾಲಿನ ಜತೆಗೆ ಎಲೆಅಡಿಕೆ, ಮದ್ಯ, ಊಟ ತಿಂಡಿಗಳೂ ಸಿಗುತ್ತವೆ. ಸಿಗುವ ಪಾಲಿನ ಧಾನ್ಯಕ್ಕೆ 'ಕುಳಕಂ' ಎಂದು ಹೆಸರು.

ಮೂಪನ ಕರೆಯಂತೆ ಎಲ್ಲರೂ ಬಂದು ಸೇರಿದ ಬಳಿಕ ತಾಳಮೇಳಗಳಿಂದೊಡಗೂಡಿ ಹಾಡು ನೃತ್ಯಗಳ ಹಿನ್ನೆಲೆಯಲ್ಲಿ ಕಂಬಳ ಪ್ರಾರಂಭವಾಗುತ್ತದೆ. ಒಂದಷ್ಟು ಹೆಣ್ಣಾಳುಗಳು ನೇಜಿ ಕಿತ್ತುಕೊಟ್ಟದ್ದನ್ನು ಇನ್ನಷ್ಟು ಜನ ನಾಟಿ ಮಾಡುತ್ತಾರೆ. ಗಂಡಾಳುಗಳು ನೆಲವನ್ನು ಹಾರೆ ಗುದ್ದಲಿಗಳಿಂದ ಅಗೆದು ಹಸನುಮಾಡುವ, ಸಮತಟ್ಟು ಮಾಡುವ ಇತ್ಯಾದಿ ಕೆಲಸಗಳಲ್ಲಿ ನಿರತರಾಗುತ್ತಾರೆ. ನೇಜಿ ಕೀಳುವ ನೆಡುವ ಕೆಲಸಗಳೂ ಬೇಗ ಬೇಗನೆ ಸಾಗುವಂತೆ ಕೆಲವರು ದುಡಿ ಬಾರಿಸುತ್ತ ಕೊಂಬು ಊದುತ್ತ ಹಿನ್ನೆಲೆಯಲ್ಲಿ ಪ್ರೋತ್ಸಾಹ ಕೊಡುವರು. ದುಡಿ ಕೊಂಬುಗಳ ಲಯಕ್ಕೆ ಅನುಸಾರವಾಗಿ ಹಾಡುತ್ತ ಕೇಕೆ ಹಾಕುತ್ತ ಗಂಡಸರೂ ಹೆಂಗಸರೂ ಉಲ್ಲಾಸದಿಂದ ಕೆಲಸಮಾಡುತ್ತಾರೆ. ಕೆಲವು ಹೆಣ್ಣಾಳುಗಳು ಮಧ್ಯೆ ಮಧ್ಯೆ ಬಾಗುತ್ತ ಬಳುಕುತ್ತ ಕೇಕೆ ಹಾಕುತ್ತ ವಿಶಿಷ್ಟರೀತಿಯಲ್ಲಿ ಬಾಯಿಂದ ಸದ್ದು ಹೊರಡಿಸುತ್ತ ಕುಣಿಯುತ್ತಾರೆ. ಇದಕ್ಕೆ 'ಪಣಿಚ್ಚಿಕಳಿ' (ಪಣಿಯತಿ ಕುಣಿತ)ಯೆಂದು ಹೆಸರು. ಸರ್ವತ್ರ ಉಲ್ಲಾಸದ ವಾತಾವರಣ.

ಇವರ ಜತೆ ಐದು ಜನರ ಒಂದು ಮನರಂಜನಾ ತಂಡವೂ ಇರುತ್ತದೆ. ಪೆರೆದವಿಲು, ಕೊಳಲು, ಜಾಲಕ/ಚಕ್ರತಾಳ-ಬಳಕೆಯ ವಾದ್ಯೋಪಕರಣಗಳು. ಮೈಗೆ ಮಸಿ ಬಳಿದು ಮುಖವಾಡ ಹಾಕಿದ ಕೋಡಂಗಿ ಕೂಡ, ಕೆಲಸಗಾರರಿಗೆ ಉಲ್ಲಾಸ ಕೊಡಲು ಈ ಏರ್ಪಾಡು. ಕೆಲಸಕ್ಕೆ ನಾದಮಯ ಹಿನ್ನೆಲೆ, ದುಡಿಯ ಸದ್ದು ಉತ್ಸಾಹ ತುಂಬುತ್ತದೆ. ಒಂದು ದಿನದಲ್ಲಿ ಮೂರರಿಂದ ಐದು ಎಕರೆ ಜಾಗದ ಕೆಲಸ ಮುಗಿಯುತ್ತದೆ. ಜಾಗ ಹೆಚ್ಚಿದ್ದರೆ ಹಗಲು ರಾತ್ರಿ ಕೆಲಸ. ಐವತ್ತರಿಂದ ನೂರು ಎಕರೆ ಜಾಗದ ಕೆಲಸ ಕೂಡ ಕಂಬಳಂನಿಂದ ಸಾಗಿಬಿಡುತ್ತದೆ. ಕೆಲಸ ಮುಗಿದ ಬಳಿಕ ಪಣಿಯರಿಂದ ತಮ್ಮ ದೇವತೆ 'ಕೂಳಿ'ಗೆ ಕಾಣಿಕೆ ಅರ್ಪಣೆ ನಡೆಯುತ್ತದೆ.

ಕಂಬಳಂ ಕೆಲಸಕ್ಕೆ ಕೂಲಿ ಎಂದೇನೂ ಇಲ್ಲ. ಆದರೆ ಮೂಪನು ಜಮೀನುದಾರನಿಂದ ಸಂಗ್ರಹಿಸಿದ ಧಾನ್ಯಗಳನ್ನು ಹಂಚಿಕೊಡುತ್ತಾನೆ ಅಷ್ಟೆ.

ಮೂಪ, ಕೋಡಂಗಿ, ಮನರಂಜನ ತಂಡಕ್ಕೆ ಒಂದಿಷ್ಟು ಹೆಚ್ಚಿನ ಪಾಲು ಸಂದಾಯವಾಗುತ್ತದೆ. ಒಟ್ಟಿನಲ್ಲಿ ಉತ್ಸಾಹಮಯ ವಾತಾವರಣದಲ್ಲಿ ಒಗ್ಗಟಿನ-ವಿಧೇಯತೆಯ ತತ್ವದಲ್ಲಿ ಕಂಬಳಂ ನಡೆಯುತ್ತದೆ. ಇದರಲ್ಲಿ ಶೋಷಣೆಯ ಒಂದು ಎಳೆಯೂ ಇಲ್ಲ. ವಯನಾಡು ಅಟ್ಟಪ್ಪಾಡಿ ಪ್ರಾದೇಶಗಳಲ್ಲಿ ಜನಪದರು ರೂಢಿಸಿಕೊಂಡ ಒಂದು ದೇಸೀ ಕೃಷಿ ಕೆಲಸ - ಕಂಬಳಂ.

ಕೆ.ಕೆ.

ಕಂಬಳ ಕರ್ನಾಟಕದ ದಕ್ಷಿಣಭಾಗದಲ್ಲಿ ಕಂಬಳವನ್ನು 'ದಿನಗೂಲಿ' ಎಂದು ಕರೆದರೆ, ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಕರ್ನಾಟಕದ ಭಾಗದಲ್ಲಿ ಜಾನಪದ ಕ್ರೀಡೆಗೆ ಅನ್ವಯಿಸಿ ಕೆಸರು ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸ್ಪರ್ಧೆ ಎಂದು ಕರೆಯುತ್ತಾರೆ. ದಷ್ಟಪುಷ್ಟವಾದ ಎರಡು ಕೋಣಗಳನ್ನು ಅಲಂಕರಿಸಿ ಕೆಸರು ಗದ್ದೆಯಲ್ಲಿ ಏರ್ಪಡಿಸುವ ಓಟದ ಸ್ಪರ್ಧೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಇಂದಿಗೂ ಅಸ್ತಿತ್ವದಲ್ಲಿರುವ ಜನಪದ ಕ್ರೀಡೆ. ಹೊಲಗಳನ್ನು ಉತ್ತ ಬಳಿಕ ವಿನೋದಕ್ಕಾಗಿ ಕೋಣಗಳನ್ನು ಗದ್ದೆಯಲ್ಲಿ ಓಡಿಸುತ್ತಿದ್ದ ಸಾಮಾನ್ಯ ವಿಷಯವೇ ಗ್ರಾಮೀಣ ಅಭಿರುಚಿಯ ಒಂದು ವಿನೋದವಾಗಿ ಪರಿಣಮಿಸಿ



ದೊಡ್ಡ ಉತ್ಸವದ ರೂಪ ತಾಳಿದೆ. ಹಿಂದೆ ವರ್ಷವಿಡೀ ಕೆಲಸ ಕಾರ್ಯಗಳಲ್ಲಿ ತೊಡಗಿದ ರೈತರು ತಮ್ಮ ಬೇಸರಿಕೆ ಮತ್ತು ಕೆಲಸದ ಒತ್ತಡವನ್ನು ನಿವಾರಿಸಿಕೊಳ್ಳಲು ಕ್ರೀಡಾಸಕ್ತಿ ಬೆಳೆಸಿಕೊಂಡರು. ಅವುಗಳು ಈ ಜನರ ಜೀವನದ ಒಂದು ಭಾಗವಾಗಿಯೆ ಇವೆ. ಮೈ ಮನವನ್ನು ಬೆಚ್ಚಿ ಬೀಳಿಸುವ ಕ್ರೀಡೆಯಾದ ಕಂಬಳದಲ್ಲಿ ಭಾಗವಹಿಸುವ ವ್ಯಕ್ತಿ ಸಾಹಸಪ್ರಿಯನೂ ಬಲಾಢ್ಯನೂ ಆಗಿರಬೇಕು. ಈ ಕ್ರೀಡೆಯಲ್ಲಿ ಭಾಗವಹಿಸುವುದೇ ಒಂದು ಬಗೆಯ ವ್ಯಕ್ತಿ ಪ್ರತಿಷ್ಠೆಯ ಪ್ರತೀಕವಾಗಿ ಗೋಚರಿಸುತ್ತದೆ. ಹಿರಿಯರು ಮನೆತನದ ಇತರ ಮುಖ್ಯಸ್ಥರು ಸುಗ್ಗಿಯ ಎಲ್ಲಾ ಕೆಲಸಗಳು ಮುಗಿದ ಸಂದರ್ಭವನ್ನು ನೋಡಿಕೊಂಡು ಕಂಬಳಗಳನ್ನು ಏರ್ಪಡಿಸುತ್ತಿದ್ದರು. ಅರಸರು ಆಯೋಜಿಸುತ್ತಿದ್ದ ಕಂಬಳಕ್ಕೆ ಅದರಲ್ಲೂ ದೊಡ್ಡ ಕಂಬಳಕ್ಕೆ 'ಅರಸರ ಕಂಬಳ' ಎಂದು ಕರೆಯಲಾಗುತ್ತದೆ. ಮುಲ್ಕಿ ಸಾಮಂತ ಅರಸರ ಕಾಲದಲ್ಲಿ ಅರಸರ ಕಂಬಳ ಪರಂಪರೆ ಮೇಲ್ಪಂಕ್ತಿಯ ಸ್ಥಾನ ಪಡೆದುಕೊಂಡಿತು. ಕಂಬಳ ವಂಡಾರು ಎಂಬಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿತ್ತು.

ಕಂಬಳದ ಹಿನ್ನೆಲೆ : ಎರಡು ಕೋಣಗಳ ಕುತ್ತಿಗೆಗೆ ನೊಗ ಕಟ್ಟಿ ಓಡಿಸಲಾಗುವ ಕಂಬಳದ ಹಿನ್ನೆಲೆಯಲ್ಲಿ ನೂರಾರು ವರ್ಷಗಳ ಚರಿತ್ರೆ ಇದೆ. ಹಿಂದೆ ರಾಜರ ಬೆಂಬಲ ಪ್ರೋತ್ಸಾಹದಿಂದ ನಡೆಯುತ್ತಾ ಬಂದ ಕಂಬಳ ನವೆಂಬರ್ - ಡಿಸೆಂಬರ್ ತಿಂಗಳ ಅನಂತರ ಪ್ರಾರಂಭವಾಗಿ ಫೆಬ್ರುವರಿ - ಮಾರ್ಚಿನಲ್ಲಿ ಕೊನೆಗೊಳ್ಳುತ್ತಿತ್ತು. ಕಂಬಳದಲ್ಲಿ ಭಾಗವಹಿಸುವ ಕೋಣವನ್ನು ಕೇವಲ ಕಂಬಳಕ್ಕೆ ಮಾತ್ರ ಬಳಸದೇ ಉಳುಮೆಗೂ ಬಳಸುತ್ತಾರೆ. ಎಷ್ಟು ಜೊತೆ ಕಂಬಳದ ಕೋಣಗಳು ಹಟ್ಟಿಯಲ್ಲಿರುತ್ತಿದ್ದುವೊ ಅಷ್ಟಷ್ಟು ವ್ಯಕ್ತಿಯ ಪ್ರತಿಷ್ಠೆ ಹೆಚ್ಚಾಗುತ್ತದೆ.

ಕಂಬಳದ ಕೋಣ : ಸಾಮಾನ್ಯ ಕೋಣಗಳಿಗಿಂತಲು ಭಿನ್ನವಾಗಿರುತ್ತದೆ. ಪ್ರತ್ಯೇಕವಾಗಿ ಒಳ್ಳೆಯ ಜಾತಿಯ, ತಳಿಯ ಕೋಣಗಳನ್ನು ಆರಿಸಿ ತಂದು ಚೆನ್ನಾಗಿ ಆರೈಕೆ ಮಾಡಲು ವಿಶೇಷ ಪೌಷ್ಟಿಕ ಆಹಾರ ಕೊಟ್ಟು ಸಾಕುತ್ತಾರೆ. ಕೋಣಗಳನ್ನು ಮುತುವರ್ಜಿಯಿಂದ ನೋಡಿಕೊಂಡಂತೆ ಅವುಗಳನ್ನು ಓಡಿಸುವ ಜನರನ್ನು ಅದೇ ರೀತಿ ತಯಾರು ಮಾಡುತ್ತಾರೆ. ಪ್ರತಿದಿನವೂ ಕೋಣಗಳಿಗೆ ಒಳ್ಳೆಯ ಹುಲ್ಲು, ಬೇಯಿಸಿದ ಹುರುಳಿ ತಿನ್ನಿಸಲಾಗುತ್ತದೆ. ಹಾಗೆಯೇ ಎಣ್ಣೆ ಹಚ್ಚಿ ಆರೈಕೆ ಮಾಡಲಾಗುತ್ತದೆ. ಕಂಬಳದ ಓಟಕ್ಕೆ ತಯಾರಿಯೊಂದಿಗೆ ಜೊತೆಯ ಕೋಣದೊಂದಿಗೆ ಸಮನಾಗಿ ಕೆಸರು ಗದ್ದೆಯಲ್ಲಿ ಗಲಾಟೆ, ಗೌಜುಗಳು, ಗದ್ದಲಗಳ ಮಧ್ಯೆ ಓಡುವ ತರಬೇತಿಯನ್ನು ನೀಡಲಾಗುತ್ತದೆ. ಈ ಕೋಣಗಳ ಕೊಳ್ಳುವಿಕೆ, ಮಾರುವಿಕೆ ಲಕ್ಷ ಗಟ್ಟಲೆ ರೂಪಾಯಿಗಳಲ್ಲಿ ನಡೆಯುತ್ತದೆ.

ಕಂಬಳ ಓಟದ ವಿಧಗಳು : ಸಾಮಾನ್ಯವಾಗಿ ಕಂಬಳದಲ್ಲಿ ಸ್ಪರ್ಧೆ ಏರ್ಪಡುವುದು ಕೋಣಗಳ ಜೋಡಿಯ ಮಧ್ಯೆ. ಎರಡು ಕೋಣಗಳ ಕುತ್ತಿಗೆಗೆ ನೊಗ ಕಟ್ಟಿ ಅವುಗಳ ಜೊತೆಗೆ ಸವಾರ ಸೇರಿದರೆ ಒಂದು ಜೋಡಿ ಸ್ಪರ್ಧೆ ಸಿದ್ಧವಾಗುತ್ತದೆ. ಇಂತಹ ನೂರಾರು ಜೋಡಿಗಳ ಮಧ್ಯೆ ಸ್ಪರ್ಧೆ ನಡೆಯುತ್ತದೆ.

ಕೆನೆ ಹಲಗೆ ಓಟ : ನೊಗದ ಮಧ್ಯೆ ಉದ್ದ ಮತ್ತು ದಪ್ಪನೆಯ ಮರದ ತುಂಡಿನಿಂದ ಮಾಡಿದ ಕೆನೆ ಹಲಗೆಯನ್ನು ಕಟ್ಟಿ ಅದರ ಮೇಲೆ ಒಂದು ಕಾಲನ್ನಿಟ್ಟು ಕೋಣಗಳನ್ನು ಓಡಿಸುವುದು. ಇದರಲ್ಲಿ ಕೆನೆ ಹಲಗೆಯಿಂದ ಮೇಲಕ್ಕೆ ಕೆಸರು ನೀರು ಚಿಮ್ಮಿಸುವುದು ಮುಖ್ಯವಾಗುತ್ತದೆ.

ನೇಗಿಲು ಓಟ : ಕೋಣಗಳ ಕುತ್ತಿಗೆಗೆ ಕಟ್ಟಿದ ನೊಗವೊಂದರ ಮಧ್ಯೆ ಮರದ ದಂಡವನ್ನು ಕಟ್ಟಿ ಅದರ ಕೊನೆಗೆ ಸಣ್ಣ ನೇಗಿಲನಾಕಾರದ ಮರದ ತುಂಡೊಂದನ್ನು ಜೋಡಿಸಿ ನೇಗಿಲನ್ನು ಹಿಡಿದು ಕೋಣಗಳನ್ನು ಓಡಿಸುವುದು.

ಹಗ್ಗದ ಓಟ : ಕೋಣಗಳ ಕುತ್ತಿಗೆಗೆ ಕಟ್ಟಿದ ನೊಗದ ಮಧ್ಯೆ ಹಗ್ಗ ಕಟ್ಟಿ ಆ ಹಗ್ಗವನ್ನು ಹಿಡಿದು ಕೋಣಗಳನ್ನು ಓಡಿಸುವುದು.

ಅಡ್ಡ ಹಲಗೆ ಓಟ : ನೊಗದ ಮಧ್ಯೆ ಉದ್ದನೆಯ ದಂಡ ಇರುವ ಅಡ್ಡ ಹಲಗೆಯನ್ನು ಕಟ್ಟಿ ಮೇಲೆ ನಿಂತು ಕೋಣಗಳನ್ನು ಓಡಿಸುವುದು. ಈ ತರಹದ ಹಲಗೆಯನ್ನು ಉತ್ತ ಗದ್ದೆಯ ಮಣ್ಣನ್ನು ಸಮನಾಗಿ ಹರಡಲು ಉಪಯೋಗಿಸುತ್ತಾರೆ.

ಹೀಗೆ ಹಲಗೆ, ನೇಗಿಲು, ಹಗ್ಗ ಓಟಗಳಲ್ಲಿ ವೇಗ ಮುಖ್ಯ. ಯಾವ ಸ್ಪರ್ಧಿ ಇತರೆಲ್ಲವುಗಳಿಗಿಂತ ವೇಗವಾಗಿ ಓಟ ಮುಗಿಸುತ್ತಾನೆಯೋ ಅವನು ವಿಜಯಶಾಲಿ. ಆದರೆ ಕೆನೆ ಹಲಗೆ ಓಟ ಸ್ವಲ್ಪ ಭಿನ್ನ. ಓಟದ ಗದ್ದೆಯ ಮಧ್ಯೆ ಅಡ್ಡ ಹಾಯುವಂತೆ ನಿಗದಿತ ಎತ್ತರದಲ್ಲಿ ಮೇಲೆ ಕಟ್ಟಲಾದ ಬಟ್ಟೆಗೆ ತಾಗುವಂತೆ ಕೆನೆ ಹಲಗೆಯ ಮೂಲಕ ಕೆಸರು ನೀರು ಚಿಮ್ಮಿಸಬೇಕು.

ಯಾವ ಸ್ಪರ್ಧಿ ಅತೀ ಎತ್ತರಕ್ಕೆ ಕೆಸರು ನೀರನ್ನು ಚಿಮ್ಮಿಸುತ್ತಾನೆಯೋ ಅವನು ವಿಜಯಶಾಲಿಯಾಗುತ್ತಾನೆ. ಮೇಲಿನ ಪ್ರತಿಯೊಂದು ವಿಧದಲ್ಲೂ ಕಿರಿಯ ಮತ್ತು ಹಿರಿಯ ವಿಭಾಗಗಳಿರುತ್ತವೆ. ಕೋಣಗಳ ವಯಸ್ಸನ್ನು ಆಧರಿಸಿ ಅವುಗಳನ್ನು ವರ್ಗೀಕರಿಸಲಾಗುತ್ತದೆ. ಕೋಣಗಳ ಬಾಯಿಯಲ್ಲಿ ಉದುರಿದ ಹಲ್ಲುಗಳನ್ನು ಎಣಿಸುವ ಮೂಲಕ ವಯಸ್ಸನ್ನು ನಿರ್ಧರಿಸುತ್ತಾರೆ.

ಕೋಣಗಳು ಓಡಿ ಗುರಿ ತಲುಪುವಲ್ಲಿಗೆ ಮಂಜೊಟ್ಟಿ ಎನ್ನುವರು. ಕಂಬಳದ ಕೋಣಗಳನ್ನು 'ಮಂಜೊಟ್ಟಿ ಕೋಣ' ಎಂದು ಕರೆಯುತ್ತಾರೆ. ಕಂಬಳದ ಕೆರೆಯ ಸುಮಾರು ಮಧ್ಯದಲ್ಲಿ ಅಥವಾ ಮಂಜೊಟ್ಟಿಗೆ ಸಮೀಪವಾಗಿ ಒಂದೋ ಎರಡೋ ನಿಶಾನೆಗಳನ್ನು ನೆಟ್ಟಿರುತ್ತಾರೆ. ನಿಶಾನೆಗೆ ನೀರು ಮುಟ್ಟಿಸಿದ ಕೋಣಗಳು ಓಟದಲ್ಲಿ ಬಹುಮಾನಕ್ಕೆ ಆಯ್ಕೆ ಆಗುತ್ತವೆ. ನಿಶಾನೆ ಎಷ್ಟು ಎತ್ತರಕ್ಕೆ ಒದ್ದೆಯಾಯಿತು ಎಂಬುದರ ಮೇಲಿಂದ ಪ್ರಥಮ ದ್ವಿತೀಯ ಎಂದು ಬಹುಮಾನ ನೀಡುತ್ತಾರೆ. ಚಿನ್ನದ ಪದಕಗಳು, ಬಾಳೆಯ ಗೊನೆ ಇತ್ಯಾದಿ ಬಹುಮಾನಗಳುಂಟು.

ಕಂಬಳದ ಗದ್ದೆ : ಇದರಲ್ಲಿ ಒಂಟಿಗದ್ದೆ ಮತ್ತು ಜೋಡಿಗದ್ದೆ ಕಂಬಳ ಎಂದು ಎರಡು ವಿಧ.

ವಿಶಾಲವಾದ ಹೊಲದ ಒಂದು ಮಗ್ಗುಲಿನ ಉದ್ದಕ್ಕೆ ಸುಮಾರು 15 ಅಡಿಗಳಷ್ಟು ಅಗಲಕ್ಕೆ ಕೆರೆ ಶುದ್ಧಮಾಡಿ ಓಟದ ಜಾಗವನ್ನು ಪ್ರತ್ಯೇಕಿಸಿ ಪ್ರಶಸ್ತಗೊಳಿಸುತ್ತಾರೆ. ಇದರ ಎರಡರಷ್ಟು ಸ್ಥಳ ಕಡಿದಿದ್ದರೆ ಅದಕ್ಕೆ ಜೋಡು ಕೆರೆ ಎನ್ನುತ್ತಾರೆ. ಹೀಗೆ ಮಾಡಿದರೆ ಓಟದ ಕೋಣಗಳು ಹಿಂತಿರುಗಿ ಬರಲು ಸಾಧ್ಯವಾಗುತ್ತದೆ. ಹೆಚ್ಚಾಗಿ ಜೋಡು ಕೆರೆ ಕಂಬಳಗಳಿಗೆ ಪುರಾಣ ಜಾನಪದದಲ್ಲಿ ಸಿಗುವ ಅವಳಿ-ಜವಳಿಗಳ ಅಥವಾ ಜೋಡಿಗಳ ಹೆಸರಿಡುವುದು ಸಾಮಾನ್ಯ. ಕೆಲವು ಜೋಡುಕೆರೆ ಕಂಬಳಗಳ ಹೆಸರು ಇಂತಿವೆ.

ಸೂರ್ಯ-ಚಂದ್ರ (ವೇಣೂರು, ಶಿರ್ವ, ಬಾರಾಡಿ, ಬಂಗುಡಿ, ತಲಪಾಡಿ)

ಮೂಡು-ಪಡು (ಮುಲ್ಕಿ, ಕಟಪಾಡಿ)

ಲವ-ಕುಶ (ಮಿಯಾರು)

ಜಯ-ವಿಜಯ (ಈಡು, ಜಪ್ಪಿನ ಮೊಗರು)

ವಿಜಯ-ವಿಕ್ರಮ (ಉಪ್ಪಿನಂಗಡಿ)

ವೀರ-ವಿಕ್ರಮ (ಹೊಕ್ಕಾಡಿಗೋಳಿ)

ಕೋಟಿ-ಚೆನ್ನಯ (ಮೂಡುಬಿದಿರೆ, ಪುತ್ತೂರು)

ಕಾಂತಬಾರೆ-ಬೂದಬಾರೆ (ಐಕಳ)

ನೇತ್ರಾವತಿ-ಫಲ್ಗುಣಿ (ಪಿಲಿಕುಳ)

ಮಚ್ಚೇಂದ್ರನಾಥ-ಗೋರಕನಾಥ (ಕದ್ರಿ)

ಕ್ಷೇತ್ರಪಾಲ-ನಾಗರಾಜ (ಅಲ್ತಾರು)

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲವಾರು ಕಂಬಳದ ಗದ್ದೆಗಳಿವೆ. ಕದ್ರಿ, ಮಿಯಾರು, ಮೂಡುಬಿದಿರೆ ಅವುಗಳಲ್ಲಿ ಪ್ರಮುಖವಾದವು.

ಕಂಬಳ ಓಟದ ಸ್ಪರ್ಧೆ : ಕಂಬಳ ಗದ್ದೆಯ ಆರಂಭದ ಕೊನೆಯಲ್ಲಿ ಕೋಣದ ಜೋಡಿಯನ್ನು ಕೆರೆಗಿಳಿಸಿ ಅವುಗಳನ್ನು ತೋರಣದ ಕೆಳಗೆ ನಿಲ್ಲಿಸಲಾಗುತ್ತದೆ. ಅವುಗಳನ್ನು ನಿಲ್ಲಿಸುವುದೇ ಒಂದು ಸಾಹಸವಾಗುತ್ತದೆ. ಕೋಣಗಳನ್ನು ಓಡಿಸುವಾತನೂ ಆತನ ಸಹಾಯಕನೂ ಸೇರಿ ಅವುಗಳನ್ನು ಗದ್ದೆಗಿಳಿಸಿ, ಕೋಣಗಳು ಹಠಮಾರಿಯಾಗಿದ್ದಲ್ಲಿ ಅವುಗಳನ್ನು ಮಣಿಸಿ ಅವುಗಳೊಂದಿಗೆ ಕೆಲವು ಸುತ್ತು ಕೆಸರಿನಲ್ಲಿ ತಿರುಗಿ ಏಗಾಡಿ ನಿಂತವು ಎನ್ನುವಾಗ ಪಕ್ಕದ ಕೋಣವೋ ಅಥವಾ ಜೋಡು ಕೆರೆಯಾಗಿದ್ದಲ್ಲಿ ಆ ಕಡೆಯ ಜೋಡಿಯೋ ಮುಖ ಸಿಂಡರಿಸಿ ಕೊಸರಾಡಿ ಎಲ್ಲೋ ತಿರುಗಿರುತ್ತದೆ. ಎಲ್ಲವು ಸಿದ್ಧವಾದರೆ ದಡದ ಮೇಲೆ ನಿಂತಾತ ಕೆಂಪು ಬಾವುಟ ಎತ್ತಿ ತೋರಿಸಿದ ಕೂಡಲೇ ಏಟು ಬಿದ್ದ ಕೋಣಗಳು ಓಡಲಾರಂಭಿಸುತ್ತವೆ. ನೋಡುಗರ ಹರ್ಷಕ್ಕೆ ಪಾರವೇ ಇರುವುದಿಲ್ಲ. ಕೇಕೆ, ಹೊಯ್‌ಕಾರ ಓಡಿಸುವಾತನ ಬೊಬ್ಬೆಯೂ ವಿಲೀನಗೊಂಡು ಕೆಲವೇ ಕ್ಷಣಗಳಲ್ಲಿ ಕೋಣಗಳೂ ಓಡಿಸುವಾತನೂ ಮಂಜೊಟ್ಟಿಯನ್ನೇರುತ್ತಿದ್ದಂತೆಯೇ ಮೊದಲೇ ತುದಿಯಲ್ಲಿ ತಯಾರಾಗಿ ನಿಂತಿದ್ದ ಕೆಲವು ಸಹಾಯಕರು ಓಟ ಮುಗಿಸಿದ ಕೋಣಗಳನ್ನು ಹಿಡಿದು ನಿಲ್ಲಿಸುತ್ತಾರೆ. ಅದೇ ಸಮಯಕ್ಕೆ ನಿರ್ಣಾಯಕರಿಂದ ಓಟದ ಫಲಿತಾಂಶ ಪ್ರಕಟವಾಗುತ್ತದೆ. ಇನ್ನೊಬ್ಬರಿಂದ ದಾಖಲೂ ಆಗುತ್ತದೆ. ಈಗಿನ ದಿನಗಳಲ್ಲಿ ಮುಕ್ತಾಯದ ಗೆರೆಯಲ್ಲಿ ಕ್ಯಾಮೆರಾಗಳನ್ನು ಅಳವಡಿಸಿದ ಗಣಕ ಯಂತ್ರಗಳನ್ನು ಇರಿಸಿ ಫಲಿತಾಂಶ ಹಾಗೂ ಸಮಯವನ್ನು ನಿಖರವಾಗಿ ಅಳೆಯಲಾಗುತ್ತದೆ. ಈ ರೀತಿ ಎಲ್ಲಾ ಜೋಡಿಗಳ ಪಂದ್ಯಗಳೂ ಮುಗಿದು ವಿವಿಧ ವಿಭಾಗಗಳಲ್ಲಿಯ ಅಂತಿಮ ಫಲಿತಾಂಶ ಪ್ರಕಟವಾಗುವುದು, ಎರಡನೆಯ ದಿನ ಮಧ್ಯಾಹ್ನವೋ ಸಂಜೆಯೋ ಆದ ಮೇಲೆಯೇ. ಹಾಗಾಗಿ ಕಂಬಳಗಳು ಆರಂಭದ ದಿನ ಬೆಳಗ್ಗಿನಿಂದ ರಾತ್ರಿ ಮುಗಿದು ಮಾರನೆಯ ದಿನದವರೆಗೂ ಎಡೆ ಬಿಡದೆ ನಡೆಯುತ್ತವೆ. ರಾತ್ರಿ ಪ್ರಖರ ದೀಪಗಳ ಬೆಳಕಿನಲ್ಲಿ ನಡೆಯುವ ಕಂಬಳವನ್ನು ನೋಡುವುದೇ ವಿಶೇಷ ಅನುಭವ.

ಕಂಬಳದ ಕೋಣಗಳನ್ನು ಲಾರಿಯಿಂದ ಇಳಿಸಿ ಕಣದ ಬಳಿ ತರುವಾಗ ಅಥವಾ ಸ್ಪರ್ಧೆಯಲ್ಲಿ ಓಡಿಸುವ ಮೊದಲು ಭರ್ಜರಿ ವಾಲಗ, ಕಹಳೆ, ಡೋಲುಗಳ ಗೌಜು ನಡೆಯುವುದೂ ಇದೆ. ಕಂಬಳದ ಗದ್ದೆಯ ಇಕ್ಕೆಲಗಳಲ್ಲೂ ಕೈಯಲ್ಲಿ ನಾಗರ ಬೆತ್ತವನ್ನು ಹಿಡಿದು ತಿರುಗಾಡುತ್ತಿರುವ ಕೋಣಗಳ ಯಜಮಾನರುಗಳು, ಕೋಣಗಳನ್ನು ಓಡಿಸುವ ಕಟ್ಟುಮಸ್ತಾದ ಕಟ್ಟಾಳುಗಳು ಅವರೊಡನೆ ಕೋಣಗಳ ಆರೈಕೆ ಮಾಡುವ ಹಾಗೂ ನೋಡಿಕೊಳ್ಳುವ ಸಹಾಯಕರು, ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಪ್ರೇಕ್ಷಕರು, ಧ್ವನಿವರ್ಧಕಗಳ ಮೂಲಕ ವಿವರಣೆ ಕೊಡುವ ಉದ್ಘೋಷಕರು ಇವರೆಲ್ಲರಿಂದ ಒಂದು ಸಂಭ್ರಮದ ವಾತಾವರಣ ನಿರ್ಮಾಣವಾಗಿರುತ್ತದೆ.

ಕಂಬಳದ ಅಂತಿಮ ಸುತ್ತಿನ ಓಟ ಮುಗಿದು ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ವೇದಿಕೆಯ ಮೇಲೆ ಬಹುಮಾನ ವಿತರಣೆಯ ಸಮಾರಂಭ ಆರಂಭವಾಗುತ್ತದೆ. ಮುಖ್ಯ ಅತಿಥಿಗಳಿಂದ ವಿಜೇತ ಕೋಣಗಳ ಒಡೆಯನಿಗೆ ಶಾಲು ಹೊದಿಸಿ ಚಿನ್ನದ ಪದಕ ನೀಡಲಾಗುತ್ತದೆ. ಮೊದಲನೆಯ ಮತ್ತು ಎರಡನೆಯ ಸ್ಥಾನ ಪಡೆದ ಜೋಡಿಯ ಯಜಮಾನರಿಗೆ ಬಹುಮಾನಗಳಲ್ಲದೆ ಕೋಣಗಳ ಜೋಡಿಗಳನ್ನು ಓಡಿಸಿದವರಿಗೂ ಬಹುಮಾನ ನೀಡಲಾಗುತ್ತದೆ.

ಈ ಕ್ರೀಡೆಯಲ್ಲಿ ಕೋಣಗಳೇ ಕೇಂದ್ರ ಪಾತ್ರವಹಿಸಿದರೂ ಅವುಗಳ ಹಿಂದೆ ಓಡುವ ಓಟಗಾರನು ಅಷ್ಟೇ ಮುಖ್ಯವಾಗಿ ನಮ್ಮ ಕಣ್ಣೆದುರಿಗೆ

ಬಂದು ನಿಲ್ಲುತ್ತಾನೆ. ಈ ಕಂಬಳ ಕಣ್ಣನ್ನು ತಣಿಸಿದರೂ ಒದಗುವ ಅಪಾಯ ಅಷ್ಟೆ ಪರಿಣಾಮಕಾರಿಯಾಗಿರುತ್ತದೆ. ಓಡುವ ಮೊದಲು ಮತ್ತು ಓಟದಲ್ಲಿ ಬೆತ್ತದಿಂದ ಹೊಡೆಯುವುದು, ಕೋಣಗಳಿಗೆ ನೋವು ತರಿಸುತ್ತದೆ. ಈ ಹೊಡೆತ ಪ್ರಾಣಿ ಹಿಂಸೆಗೆ ದಾರಿಯಾಗುತ್ತದೆ. ಕೋಣಗಳು ಓಡುವ ಸಮಕ್ಕೆ ಓಡಿಸುವವನು ಓಡಬೇಕಾಗಿರುವುದರಿಂದ ಮುಗ್ಗರಿಸಿ ಬೀಳುವ ಅಪಾಯವಿರುತ್ತದೆ.

ಗ್ರಂಥ ಋಣ

ವಿಶ್ವಕೋಶ ಸಂಪುಟ 2 ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, (ಪ್ರಸಾರಂಗ)

ಜಾನಪದ ಆಂತರ್ಯ, ಡಾ. ವೈ.ಸಿ. ಭಾನುಮತಿ

ಅಂತರ್ಜಾಲ

ಪಿ.ಕೆ.

ಕಡೆಗಣ ಯಾವುದೇ ಕೃಷಿಕ ತನ್ನ ಬೆಳೆಯನ್ನು ಒಕ್ಕಣೆ ಮಾಡಿದ ಕೊನೆಯ ದಿನವನ್ನು ಕಡೆಗಣ ಎಂದು ಕರೆಯುತ್ತಾರೆ. ಕೃಷಿಕರಲ್ಲಿ ಕಡೆಗಣ ಒಂದು ಮಹತ್ತ್ವದ ದಿನ; ಒಂದು ರೀತಿಯ ಹಬ್ಬ ಎಂದು ಕರೆದರೂ ತಪ್ಪಾಗಲಾರದು. ಕಾರಣ ಈ ಕಡೆಗಣದ ದಿನ ರೈತರು ವಿಶೇಷ ಅಡುಗೆಯ ಜೊತೆ ತಾವು ಬೆಳೆದ ಅನ್ನದ ರಾಶಿಯ ಪೂಜೆ ನಡೆಯುತ್ತದೆ. ಬೆಳೆದ ಪೈರು ರಾಗಿ, ಬತ್ತ, ಜೋಳ ಯಾವುದೇ ಇರಬಹುದು, ಪೂಜೆಯ ಸಂದರ್ಭದಲ್ಲಿ ಒಕ್ಕಣೆಗೆ ಬಳಸಿಕೊಂಡ ಎಲ್ಲಾ ವಸ್ತುಗಳನ್ನು ಇಟ್ಟು ಪೂಜೆಮಾಡುವುದು ವಾಡಿಕೆ. ಅಂದರೆ ಒಡ್ಡಿನ ಕೋಲು, ರೋಣುಗಲ್ಲು, ಮೇಟಿಕಂಬ, ತುಂಡುಗೋಲು, ಮ್ಯಾರ್‌ಗೋಲು, ನೊಗ, ಅಟ್ಟು, ಕುಡುಗೋಲು ಹೀಗೆ ಅನೇಕ ಉಪಕರಣವನ್ನು ಪೂಜಿಸುತ್ತಾರೆ. ರಾಶಿಪೂಜೆಯಲ್ಲಿ ಕೆಲವರು ದಾಸಯ್ಯನನ್ನು ಕರೆಯಿಸುವ ವಾಡಿಕೆ ಇದೆ. ರಾಶಿಯಲ್ಲಿ ಒಂದು ಬುವನಾಯಷ್ಟು ಧಾನ್ಯವನ್ನು ದಾಸಯ್ಯನಿಗೆ ಕೊಡುತ್ತಿದ್ದರು. ಆಗ ದಾಸಯ್ಯ ಮೂಡಣದ ಮೂಲೆಗೆ ಮುವ್ವತ್ತು ಖಂಡುಗ, ಪಡುವಣ ಮೂಲೆಗೆ ಸಾವಿರ ಖಂಡುಗ, ಗಂಗೆ ಗೌರಿಯಂತಹ ಎರಡು ಕಣಜ ತುಂಬಲಿ ಎಂದು ಹರಸಿ ಶಂಖ ಊದುತ್ತಾನೆ.

ಕಡೆಗಣದ ಸಂಜೆ ವಿಶೇಷ ಭೋಜನದ ತಯಾರಿ ನಡೆಯುತ್ತಿತ್ತು. ಮಾಂಸ ತಿನ್ನುವವರ ಮನೆಯಲ್ಲಿ ಮಾಂಸ, ಇಲ್ಲದವರ ಮನೆಯಲ್ಲಿ ಪಾಯಸ, ವಡೆ ವಿಶೇಷವಾಗಿ ಇರುತ್ತದೆ. ಒಕ್ಕಣೆಯ ಸಂದರ್ಭದಲ್ಲಿ ಕೆಲಸ ಮಾಡಿದ ಎಲ್ಲಾ ಜನರು ಮಾತ್ರವಲ್ಲದೆ ಅಣ್ಣ-ತಮ್ಮಂದಿರು ಹಾಗೂ ಹಿರಿಯರನ್ನು ಕರೆದು ಊಟಕ್ಕೆ ಹಾಕುವುದು ಸಾಮಾನ್ಯವಾಗಿ ಗ್ರಾಮೀಣರಲ್ಲಿ ರೂಢಿಯಲ್ಲಿ ಇದೆ.

ಕೆ.ಜಿ.ಸಿ.

ಕಣ ಧಾನ್ಯವನ್ನು ಒಕ್ಕಣೆ ಮಾಡಲು ಸಿದ್ಧಪಡಿಸುವ ಅಂಗಳವೇ ಕಣ. ಇದನ್ನು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ರಚಿಸಿಕೊಂಡಿರುತ್ತಾರೆ. ಕೆಲವು ಕಡೆ ಹೊಲ, ಗದ್ದೆಗಳಲ್ಲಿಯೇ ನಿರ್ದಿಷ್ಟ ಪ್ರದೇಶದಲ್ಲಿ ಕೊಯ್ಲಿನ ಅನಂತರ ಕೂಳೆಯನ್ನೆಲ್ಲ ಕಿತ್ತು ನೆಲವನ್ನು ಮಟ್ಟ ಮಾಡಬೇಕು. ಕಸಕಡ್ಡಿಗಳನ್ನೆಲ್ಲ ತೆಗೆದು ಶುದ್ಧಗೊಳಿಸಿ ಹೆಂಟೆ ಒಡೆದು ಪುಡಿಮಾಡಿ ನೀರನ್ನು ಎರಚಿ ಒಂದೆರಡು ದಿನ ಬಿಡಬೇಕು. ಅನಂತರ ಕಣದ ಒಂದು ಬದಿಯಲ್ಲಿ ಗುಂಡಿತೋಡಿ ಸಗಣಿಯನ್ನು ನೀರಿನಲ್ಲಿ ಕಲಸಿಟ್ಟುಕೊಂಡು ಕಣ ಮಾಡುವ ಬಯಲಿಗೆ ಸಿಂಪಡಿಸಬೇಕು. ಅನಂತರ ಪೊರಕೆಯಿಂದ ಸಾರಿಸಬೇಕು. ಹೀಗೆ ಎರಡು ಮೂರು ಬಾರಿ ಸಾರಿಸಿದ ಮೇಲೆ ಕಣ ಒಣಗಿ ಧಾನ್ಯ ಒಕ್ಕಣೆ ಮಾಡಲು ಸಿದ್ಧಗೊಳ್ಳುತ್ತದೆ. ಇನ್ನು ಕೆಲವೆಡೆ ಊರಿನ ಸನಿಹದಲ್ಲೇ ಸಮತಟ್ಟಾದ ಬಯಲು ಜಾಗವನ್ನು ಆಯ್ಕೆ ಮಾಡಿ (ಸಾರ್ವಜನಿಕ ಅಥವಾ ಖಾಸಗಿ) ಮೇಲೆ ತಿಳಿಸಿದಂತೆ ಹದಗೊಳಿಸಿ ಶುದ್ಧ ಮಾಡಿ ಕಣವನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ದೊಡ್ಡ ಹಿಡುವಳಿದಾರರು ತಮ್ಮೊಬ್ಬರಿಗೆ ಕಣ ನಿರ್ಮಿಸಿಕೊಂಡರೆ ಸಣ್ಣ ಹಿಡುವಳಿದಾರರು ಒಟ್ಟಿಗೆ ಕೂಡಿ ನಿರ್ಮಿಸಿಕೊಳ್ಳುವುದು ರೂಢಿ. ಕೆಲವು ಪ್ರದೇಶಗಳಲ್ಲಿ ಕಣದ ಮಧ್ಯಭಾಗದಲ್ಲಿ ಒಂದಡಿ ದಪ್ಪ ನಾಲ್ಕಡಿ ಎತ್ತರದ ಮರದ ತುಂಡೊಂದನ್ನು ಮೇಟಿಯಂತೆ ನೆಡುತ್ತಾರೆ. ಇದು ಕೃಷಿಕರಿಗೆ ದೇವರಿದ್ದಂತೆ. ಇದನ್ನು ಪೂಜಿಸುವ ಮೊದಲು ಎಳನೀರಿಂದ ತೊಳೆದು ಕಂಬದ ಮೇಲ್ಭಾಗದಲ್ಲಿ ಸಗಣಿಯ ಉಂಡೆಯನ್ನಿಟ್ಟು ಗರಿಕೆ ಸಿಕ್ಕಿಸಿ ಅರಿಸಿನ ಕುಂಕುಮ ಹಚ್ಚಿ ಪಿಳ್ಳಾರಿ (ವಿಘ್ನೇಶ್ವರ) ಎಂದು ಬಗೆದು ಪೂಜಿಸುವರು. ಇಲ್ಲಿಗೆ ಕಣ ಸಿದ್ಧವಾದಂತೆಯೇ. ಅನಂತರ ಇದು ದೇವರ ಆವರಣವೆಂದು ಭಾವಿಸಿ ಮೈಲಿಗೆ ಆಗದಂತೆ ನೋಡಿಕೊಳ್ಳುತ್ತಾರೆ.

ಕಣ ಊರಿನಿಂದ ದೂರದಲ್ಲಿದ್ದರೆ ರಾತ್ರಿ ಕಾವಲು ಕಾಯಲು ಒಂದು ಬದಿಯಲ್ಲಿ ತಾತ್ಕಾಲಿಕ ಗುಡಿಸಿಲನ್ನು ನಿರ್ಮಿಸಿಕೊಳ್ಳುವರು. ಕಣಕ್ಕೆ ಬಳಸುವ ಎಲ್ಲ ಪರಿಕರಗಳನ್ನು ಇಲ್ಲಿ ಜೋಪಾನವಾಗಿ ಇಟ್ಟು ಕಾವಲಿನವರು ಅಲ್ಲೇ ಮಲಗುವರು. ಕಣದ ಪರಿಕರಗಳಲ್ಲಿ ಮೊದಲನೆಯದು ಸಾರಿಸುವ ಸಾಣೆ ಅಥವಾ ಪೊರಕೆ. ಇದನ್ನು ಪರಿಸರದಲ್ಲೇ ಸಿಗುವ ಲಕ್ಕಿಸೊಪ್ಪು, ಬೇಲಿಸೊಪ್ಪುಗಳಿಂದ ತಯಾರಿಸುತ್ತಾರೆ. ಇದು ಕೇವಲ ಸಾರಿಸಲಷ್ಟೇ ಯೋಗ್ಯವಾಗಿದ್ದು ಇತರ ಕೆಲಸಗಳಿಗೆ ತೆಂಗು, ಈಚಲು, ಹಂಚಿಕಡ್ಡಿ ಹುಣಿಸೆ ಕಡ್ಡಿ, ತೊಗರಿಕಡ್ಡಿ, ಬರಲನ್ನು ಸಿದ್ಧಪಡಿಸಿಕೊಳ್ಳುವರು.

ಕಣದಲ್ಲಿಯ ಹುಲ್ಲನ್ನು ತೆಗೆಯಲು ಟಿಸಿಲೊಡೆದ ಏಳೆಂಟು ಅಡಿ ಬಿದಿರಿನ ಕೋಲನ್ನು ಬಳಸುತ್ತಾರೆ. ಬತ್ತದ ಹುಲ್ಲಿನಿಂದಲೇ ಸಿದ್ಧಪಡಿಸಿಕೊಂಡ ಹುರಿಯನ್ನು ಒಂದು ಕ್ರಮದಲ್ಲಿ ಅವರವರ ಶಕ್ತ್ಯಾನುಸಾರ ಸುತ್ತಿ ರೋಣುಗಲ್ಲು ಅಥವಾ ಹಲಗೆಯ ಮೇಲೆ ಬಡಿಯುತ್ತಾರೆ. ಒಮ್ಮೆ ಸಿದ್ಧಪಡಿಸಿದ ಈ ಹುರಿ ಬತ್ತ ಬಡಿಯುವ ಕೆಲಸ ಮುಗಿಯುವ ತನಕ ಉಪಯೋಗಕ್ಕೆ ಬರುತ್ತದೆ.

ಹುಲ್ಲಿನಿಂದ ಬೇರ್ಪಟ್ಟ ಕಾಳುಗಳನ್ನು ತೂರಲು 4-5 ಅಡಿ ಎತ್ತರದ ಮೂರು ಅಥವಾ ನಾಲ್ಕು ಕಾಲಿನ ಮಣೆಯನ್ನು ತಯಾರಿಸಿಕೊಳ್ಳುತ್ತಾರೆ. ಇದಕ್ಕೆ ತೂರುವ ಅಟ್ಟಣಿಗೆ ಎನ್ನುವರು. ಈ ಮಣೆಯ ಉದ್ದ ಒಂದೂವರೆಯಿಂದ ಎರಡು ಅಡಿ ಇರುತ್ತದೆ. ಮೊರದಿಂದ ಧಾನ್ಯವನ್ನು ಎಷ್ಟು ಸಾವಧಾನವಾಗಿ ತೂರುತ್ತಾರೋ ಅಷ್ಟು ಜೊಳ್ಳು ಮತ್ತು ಕಸ ದೂರ ಹೋಗಿ ಗಟ್ಟಿಕಾಳುಗಳು ಒಂದೆಡೆ ನಿಲ್ಲುತ್ತವೆ. ಕೆಲವು ಅಟ್ಟಣೆ ಇಲ್ಲದಿರುವ ಸಂದರ್ಭಗಳಲ್ಲಿ ಎರಡು ಅಥವಾ ಮೂರು ಬಾರಿ ಧಾನ್ಯವನ್ನು ತೂರಿ ಕಾಳುಗಳನ್ನು ಬೇರ್ಪಡಿಸುತ್ತಾರೆ.

ತೂರಲು ಬಳಸುವ ಮೊರ ಚೌಕಾಕಾರವಾಗಿದ್ದು ಬಿದಿರಿನಿಂದ ಮಾಡಿರುವ ಸಾಧನ. ಇದನ್ನು ತೂರಲಷ್ಟೇ ಅಲ್ಲ ಕೇರಲು, ಬನೆಯಲು

ಕೂಡ ಉಪಯೋಗವಾಗುತ್ತದೆ. ಆದರೆ ಅನುಭವಸ್ಥರಿಂದ ಮಾತ್ರ ಈ ಕೆಲಸಗಳನ್ನು ಮಾಡಲು ಸಾಧ್ಯ.

ವಂದರಿ ಅಥವಾ ಜರಡಿ ದೂಳು ಕಸಕಡ್ಡಿ ಕಲ್ಲನ್ನು ಧಾನ್ಯದಿಂದ ಬೇರ್ಪಡಿಸುವ ಸಾಧನ. ಇದರಲ್ಲಿ ಎರಡು ವಿಧ. ಕಣದಲ್ಲೇ ಕೆಲಸ ಮಾಡಲು ಉಪಯೋಗಿಸುವ ಬಿದಿರಿನಿಂದ ತಯಾರಿಸಿದ 2 ಅಡಿ ಆಳ 3 ಅಡಿ ಉದ್ದ ಇರುವ ಕಬ್ಬಿಣದ ಜರಡಿ ಸಾಧನ. ಇದರಲ್ಲಿ ಸಣ್ಣ ಅಥವಾ ದೊಡ್ಡ ರಂಧ್ರದಗಳಿರುತ್ತವೆ.

ಎತ್ತುಗಳಿಂದ ಅರಿಯನ್ನು (ಪೈರು) ತುಳಿಸುವ ಮೊದಲು ಒಂದು ಉದ್ದನೆಯ ಹಗ್ಗವನ್ನು ಕಣದ ಕೇಂದ್ರದಲ್ಲಿರುವ ಮೇಟಿಗೆ ಕಟ್ಟಿರುತ್ತಾರೆ. ಈ ಹಗ್ಗದಲ್ಲಿ ಮೂರು ಅಡಿಗಳಿಗೆ ಒಂದೊಂದರಂತೆ ಗಂಟುಗಳಿರುವ ಕುಣಿಕೆಗಳಿರುತ್ತವೆ. ಒಂದೊಂದು ಕುಣಿಕೆಗೆ ಒಂದರಂತೆ ಎತ್ತನ್ನು ಕಟ್ಟಿ ಕಣದಲ್ಲಿ ಹರಡಿರುವ ಅರಿಯ ಮೇಲೆ ವೃತ್ತಾಕಾರವಾಗಿ ಸುತ್ತುವಂತೆ ಮಾಡುತ್ತಾರೆ. ಹೀಗೆ ಸತತವಾಗಿ ಸುತ್ತುವುದರಿಂದ ಹುಲ್ಲಿನಲ್ಲಿ ಉಳಿದಿರುವ ಧಾನ್ಯಗಳು ಉದುರುತ್ತವೆ. ಹುಲ್ಲನ್ನು ಒಂದು ಹಂತದವರೆಗೆ ಎತ್ತುಗಳಿಂದ ತುಳಿಸಿದ ಮೇಲೆ ಅರಿಯನ್ನು ಒದರಿ ಮೊಗಚಿ ಹಾಕಿ ಮತ್ತೆ ಕಾಳುಗಳು ಸಂಪೂರ್ಣ ಉದುರುವವರೆಗೆ ತುಳಿಸಲಾಗುತ್ತದೆ. ಇದನ್ನು ಹಂತಿ ಹೊಡೆಯುವುದು ಅಥವಾ ಹುಲ್ಲೊಕ್ಕಲು, ಹುಲ್ಲು ತುಳಿಸುವುದು ಎಂದು ಕರೆಯುತ್ತಾರೆ. ಕೆಲವು ಊರುಗಳಲ್ಲಿ ಕಣದ ಆವಶ್ಯಕತೆ ಇರುವುದಿಲ್ಲ. ಕಾರಣ ವಿಸ್ತಾರವಾದ ಬಂಡೆಗಳಿದ್ದು ಅದನ್ನೇ ಕಣದಂತೆ ಬಳಸುತ್ತಾರೆ.

ಎತ್ತುಗಳಿಗೆ ಬದಲು ರೋಣುಗಲ್ಲು ಅಥವಾ ಗುಂಡುಗಲ್ಲು ಬಳಸಿ ಹುಲ್ಲಿನಿಂದ ಕಾಳುಗಳನ್ನು ಬೇರ್ಪಡಿಸುವುದು ಒಂದು ಕ್ರಮ. ಹೀಗೆ ಕಾಳುಗಳನ್ನು ಶುದ್ಧಗೊಳಿಸಿದ ಮೇಲೆ ಒಂದೆಡೆ ರಾಶಿ ಹಾಕಿ ಪೂಜೆ ಮಾಡಿ ಅನಂತರ ಆಯಗಾರರಿಗೆ ಕೂಲಿಯಾಳುಗಳಿಗೆ ಭಿಕ್ಷುಕರಿಗೆ ವಿತರಿಸಿ ಮನೆಗೆ ಕೊಂಡೊಯ್ದು ಕಣಜಗಳಲ್ಲಿ ತುಂಬಿಡುತ್ತಾರೆ.

ಎ.ಎಂ.ಡಿ.

ಕಣಗಿಲೆ ಆಕರ್ಷಣೀಯವಾಗಿ ಹೂಬಿಡುವ ಸಸ್ಯಗಳ ಪೈಕಿ ಇದೂ ಒಂದು; ಅಪೊಸೈನೇಸೀ ಕುಟುಂಬಕ್ಕೆ ಸೇರಿದೆ. ಕರವೀರ, ಕಣಿಗಿಲು, ಗನ್ನೇರುಚೆಟ್ಟು (ತೆಲುಗು) ಎಂದೂ ಕರೆಯುವರು. ಇದರ ವೈಜ್ಞಾನಿಕ ಹೆಸರು ನೀರಿಯಮ್ ಓಲಿಯಂಡರ್. ಇದನ್ನು ಮನೆಯ ಅಂಗಳ, ದೇವಾಲಯದ ಆವರಣ, ಉದ್ಯಾನವನ ಮುಂತಾದೆಡೆ ಅಲಂಕಾರಿಕ ಸಸ್ಯವಾಗಿ ಬೆಳೆಸಲಾಗುತ್ತದೆ. ಈ ಹೂವನ್ನು ವ್ಯಾಪಾರಕ್ಕಾಗಿ ಬೆಳೆಯುವುದಿಲ್ಲ. ಗಿಡ ಎತ್ತರವಾಗಿ ಪೊದೆಯಂತೆ ದಷ್ಟಪುಷ್ಟವಾಗಿ ಬೆಳೆದು ಸರ್ವಋತುಗಳಲ್ಲೂ ಹೂ ಕೊಡುತ್ತದೆ. ಪೂಜೆಗೆ, ಕಳಸಕ್ಕೆ ಉಪಯೋಗಿಸುವುದುಂಟು. ಸಸ್ಯದ ಪ್ರತಿಯೊಂದು ಭಾಗವೂ ಉಪಯೋಗಕ್ಕೆ ಬರುತ್ತದೆ. ಬೇರು, ಕಾಂಡ, ಎಲೆಗಳನ್ನು ಆಯುರ್ವೇದ ಔಷಧಿಗಳಲ್ಲಿ ಉಪಯೋಗಿಸುತ್ತಾರೆ.

ಪ್ರಪಂಚದ ಬಹುತೇಕ ಕಡೆಗಳಲ್ಲಿ ಈ ಸಸ್ಯವಿದೆ. ಇದರಲ್ಲಿ ಕೆಲವು ಪ್ರಭೇದಗಳಿವೆ. ಕಾಂಡದ ತುದಿಯಲ್ಲಿ ಚಿಕ್ಕ ತೊಟ್ಟಿರುವ ಎಲೆಗಳು ವೃತ್ತಾಕಾರವಾಗಿ ಜೋಡಣೆಗೊಂಡಿರುತ್ತವೆ. ವಿಶೇಷವೆಂದರೆ ಹಳೆಯ ಎಲೆಗಳು ಉದುರಿದಂತೆ ಕೆಳಭಾಗದಲ್ಲಿ ಹೊಸ ಎಲೆ ಚಿಗುರುತ್ತವೆ. ಎಲೆಗಳ ತೊಟ್ಟು ಗಟ್ಟಿಯಾಗಿದ್ದು ಎಲೆ ಉದುರಿದ ಜಾಗದಲ್ಲಿ ಕಲೆಗಳು ಕಾಣುತ್ತವೆ. ಒರಟು ಚರ್ಮದ ಭರ್ಜಿ ಆಕಾರದ ಎಲೆಯ ಮೇಲ್ಭಾಗ ಕಡು ಹಸುರು. ತಳಭಾಗ ತಿಳಿ ಹಸುರು. ಅಂಚು ನಯವಾಗಿದ್ದು ತುದಿ ಮೊನಚಾಗಿರುತ್ತದೆ. ಎಲೆಯ ನಾಳಗಳು ಉಬ್ಬಿದ್ದು ನಡುದಿಂಡನ್ನು ಹೊಂದಿರುತ್ತವೆ. ಇದರ ಹೂಗೊಂಚಲು ಮಧ್ಯಾರಂಭಿಯಾಗಿದ್ದು ಸುಂದರವಾಗಿ ಕಾಣುತ್ತದೆ. ಐದು



ಪುಷ್ಪಪತ್ರಗಳಿದ್ದು ಬುಡದಲ್ಲಿ ಗ್ರಂಥಿಗಳಿರುತ್ತವೆ. ಐದು ಭಾಗಗಳುಳ್ಳ ಸಂಯುಕ್ತ ಮಾದರಿಯ ಆಲಿಕೆಯಂಥ ಆಕಾರದ ಹೂದಳಗಳಿವೆ. ಐದು ಕೇಸರುಗಳಿರುತ್ತವೆ. ವಿವಿಧ ಬಣ್ಣಗಳ ಪರಾಗಕೋಶಗಳಿದ್ದು ಉಚ್ಚಸ್ಥಾನೀಯ ಅಂಡಾಶಯ ಹೊಂದಿದೆ.

ಕೆಲವು ಪ್ರಭೇದಗಳಲ್ಲಿ ಒಂದು ಸುತ್ತಿನ ಬಿಳಿ ಬಣ್ಣದ ಹೂ ಎರಡು ಸುತ್ತಿನ ಕಡುಗೆಂಪು ಬಣ್ಣ ಹೂ, ಎರಡು ಸುತ್ತಿನ ತಿಳಿಗೆಂಪು ಬಣ್ಣ ಹೂ, ಒಂದು ಸುತ್ತಿನ ಗುಲಾಬಿ ಬಣ್ಣದ ಹೂ ಬಿಡುವ ತಳಿಗಳಿವೆ.

ಕಣಗಿಲೆ ಸಸ್ಯ ಬೀಜ ಬಿಡುವುದಾದರೂ ಸಸ್ಯಾಭಿವೃದ್ಧಿಯ ದೃಷ್ಟಿಯಿಂದ ಕಾಂಡವನ್ನು ಕತ್ತರಿಸಿ ಬೆಳೆಸುವುದೇ ಹೆಚ್ಚು. ಮಳೆಗಾಲದಲ್ಲಿ ಎರಡು ಮೂರು ಕಣ್ಣುಗಳಿರುವಂಥ ಬಲಿತ ಕಡ್ಡಿಗಳನ್ನು ಸುಮಾರು ಮೂರು ಅಡಿ ಎತ್ತರದ ಬಲಿತ ಕಾಂಡಗಳನ್ನು ತುಂಡರಿಸಿ ಸಾಮಾನ್ಯವಾಗಿ ಮಳೆಗಾಲದಲ್ಲಿ ನೆಟ್ಟು ಬೆಳೆಸುತ್ತಾರೆ. ಇದು ಸುಮಾರು ಮೂರು ತಿಂಗಳ ಒಳಗೆ ಬೇರು ಬಿಟ್ಟು ಚಿಗುರೊಡೆದು ಸ್ವತಂತ್ರ ಸಸಿಯಾಗಿ ಬೆಳೆಯಬಲ್ಲದು. ಅಲ್ಲಿಯ ತನಕ ಅಗತ್ಯವಾದಷ್ಟು ನೀರು ಮತ್ತು ಸುರಕ್ಷಿತ ಬೇಲಿಯ ಅಗತ್ಯವಿದೆ.

ಕಣಗಿಲೆ ಗಿಡದ ಪ್ರತಿಯೊಂದು ಭಾಗವು ವಿಷಯುಕ್ತವಾಗಿದ್ದು ಹೃದಯ ಮತ್ತು ಬೆನ್ನು ನರಗಳ ಮೇಲೆ ನಿಶ್ಚೇತನಗೊಳಿಸುವ ಹಾಲಿನಂಥ ದ್ರವರೂಪದ ಗ್ಲೈಕೊಸೈಡ್ ಎಂಬ ವಸ್ತುವಿದೆ.

ಕಣಗಿಲೆ ಕುಟುಂಬದಲ್ಲಿ ಅಪೊಸೈನೇಸೀ ಪ್ರಧಾನವಾಗಿದ್ದು ಇದರಲ್ಲಿ 1400 ಪ್ರಭೇದಗಳು, 180 ಜಾತಿಗಳು ಇವೆಯೆಂದು ತಿಳಿದುಬಂದಿದೆ. ಹೆಚ್ಚು ಪಾಲು ಸಸ್ಯಗಳು ಉಷ್ಣವಲಯದಲ್ಲೂ ಕೆಲವು ಪ್ರಭೇದಗಳು ಸಮಶೀತೋಷ್ಣ ವಲಯದಲ್ಲೂ ಬೆಳೆಯುತ್ತದೆ.

ಕೆ.ಎನ್.

ಕಣಜ ಕಣದಲ್ಲಿ ತೂರಿ ಕೇರಿ ಶುದ್ಧಗೊಂಡ ದವಸ ಧಾನ್ಯಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿ ವರ್ಷಪೂರ್ತಿ ಬಳಸಲು ನಿರ್ದಿಷ್ಟ ಸ್ಥಳದಲ್ಲಿ ನಿರ್ಮಿಸಿಕೊಂಡ ಸಾಧನವೇ ಕಣಜ. ಇದರಲ್ಲಿ ಗುಂಡು ಕಣಜ, ಕುಂಬಾರ ಕಣಜ, ಅಡ್ಡ ಕಣಜ, ಹಗೇವು. ಪಣತ, ತೊಂಬೆ ಎಂದು ಹಲವು

ಬಗೆ. ಎಲ್ಲ ಪ್ರದೇಶಗಳಲ್ಲೂ ಒಂದಿಲ್ಲೊಂದು ಬಗೆಯ ಕಣಜವಂತೂ ಇದ್ದೇ ಇರುತ್ತದೆ. ನೆಲದ ಒಳಗೆ ಭೂಮಿಯನ್ನು ಕೊರೆದು ನಿರ್ಮಾಣ ಮಾಡುವುದನ್ನು ಹಗೆವು ಎಂದು ಕರೆಯುವರು. ರೈತ ಬೆಳೆದ ದವಸಧಾನ್ಯಗಳಿಗೆ ಅಗತ್ಯವಾದ ಪ್ರಮಾಣದಲ್ಲಿ ತಯಾರಿ ಮಾಡಿಕೊಳ್ಳುವ ಕಣಜಗಳು ಗಾತ್ರ, ಆಕಾರ, ಎತ್ತರ, ಆಳ, ಅಗಲಗಳಲ್ಲಿ ವ್ಯತ್ಯಾಸವಿರುತ್ತದೆ. ಧಾನ್ಯಕ್ಕೆ ತೇವ ಹತ್ತದಂತೆ, ಹೆಗ್ಗಣ, ಇಲಿ, ಹುಳು ಉಪ್ಪಟೆ ಮೊದಲಾದವುಗಳಿಂದ ಸಂರಕ್ಷಿಸಲು ಕಣಜ ಬಲು ಉಪಯೋಗ.

ಗುಂಡು ಕಣಜ : ಮಧ್ಯಮ ಗಾತ್ರದ ಈ ಕಣಜದಲ್ಲಿ ಸುಮಾರು ಹತ್ತು-ಹನ್ನೆರಡು ಪಲ್ಲ (100 ಸೇರು) ಧಾನ್ಯಗಳನ್ನು ಸಂಗ್ರಹಿಸಿಡಬಹುದು. ಇಂಥ ಕಣಜವನ್ನು ತಯಾರಿಸಲು ಪರಿಣಿತ ವರ್ಗವೊಂದು ಪ್ರತಿಯೊಂದು ಊರಿನಲ್ಲೂ ಇರುತ್ತಿತ್ತು. ಅನುಭವಿ ರೈತರು ಸ್ವತಃ ಕಣಜಗಳನ್ನು ಫಸಲಿಗನುಗುಣವಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದರು. ಜೇಡಿಮಣ್ಣು ಮತ್ತು ಬತ್ತದ ಹುಲ್ಲನ್ನು ಸಮಪ್ರಮಾಣದಲ್ಲಿ ಬೆರೆಸಿ ಹದವಾಗಿ ನೀರು ಹಾಕಿ ತುಳಿದು ವೃತ್ತಾಕಾರದ ಬಳೆಗಳನ್ನು ಮಾಡಿಕೊಳ್ಳುವರು. ಸಾಮಾನ್ಯವಾಗಿ ಬಳೆಗಳ ಗಾತ್ರ ಮೂರು ಇಂಚು ಎತ್ತರ ಮೂರು ಅಡಿ ಸುತ್ತಳತೆಯಿಂದ 3 - 4 ಅಡಿ ವ್ಯಾಸವಿರುತ್ತದೆ. ತಳಭಾಗ ಮತ್ತು ಮೇಲ್ಭಾಗದ ಬಳೆಗಳು ಕಂಠವನ್ನು ಹೊಂದಿರುತ್ತವೆ.ಇವನ್ನು ಎರಡರಿಂದ ಮೂರು ದಿವಸಗಳ ಕಾಲ ನೆರಳಿನಲ್ಲಿ ಒಣಗಿಸಬೇಕು. ಬಿರುಕು ಬಿಡದಂತೆ ಜೋಪಾನವಾಗಿ ತಂದು ಅಡುಗೆಮನೆ ಮತ್ತು ಹಜಾರವನ್ನು ಇಬ್ಭಾಗಿಸುವ ಗೋಡೆಯಂತೆ ಜೋಡಿಸುತ್ತಾರೆ. ಮೇಲ್ಭಾಗ ಮತ್ತು ಕೆಳಭಾಗದಲ್ಲಿ ವೃತ್ತಾಕಾರದ ಚಪ್ಪಡಿ ಕಲ್ಲುಗಳಿಂದ ಮುಚ್ಚುತ್ತಾರೆ. ಬಳೆಗಳನ್ನು ತಯಾರುಮಾಡುವಾಗಲೇ ಕೆಳಗಿನಿಂದ ಎರಡನೆಯ ಬಳೆಯಲ್ಲಿ 3 x 3 ಅಂಗುಲ ರಂಧ್ರ ಕೊರೆದಿರುತ್ತಾರೆ. ಬಳೆಗಳನ್ನು ಕ್ರಮಬದ್ಧವಾಗಿ ಜೋಡಿಸಿದ ಪ್ರತಿಯೊಂದು ಬಳೆಗೂ ಸುತ್ತಲೂ ಜೇಡಿಮಣ್ಣನ್ನು ಮೆತ್ತಿ ಕ್ರಿಮಿಕೀಟಗಳು ಸೇರದಂತೆ ಜೋಪಾನ ಮಾಡುವುದುಂಟು. ಅನಂತರ ಸುಣ್ಣ ಅಥವಾ ಕೆಮ್ಮಣ್ಣಿನಿಂದ ಸಾರಿಸುತ್ತಾರೆ. ಇಂಥ ಕಣಜಗಳಲ್ಲಿ ಅವರವರ ಅನುಕೂಲಕ್ಕೆ ತಕ್ಕಂತೆ ನಾಲ್ಕರಿಂದ ಐದು ಬಳೆಗಳು ಸಾಮಾನ್ಯವಾಗಿ ಇರುತ್ತವೆ.

ದವಸ ತುಂಬುವ ಮೊದಲು ತೆಂಗಿನ ಚಿಪ್ಪಿನಿಂದ ರಂಧ್ರವನ್ನು ಮುಚ್ಚಿದ್ದು ಅಗತ್ಯವಿದ್ದಾಗ ಅದನ್ನು ತೆಗೆದು ಬೇಕಾದಷ್ಟು ತೆಗೆದುಕೊಂಡು ಮತ್ತೆ ಮುಚ್ಚುತ್ತಾರೆ. ಇಂಥ ಕಣಜಗಳಲ್ಲಿ ಸಾಮಾನ್ಯವಾಗಿ ರಾಗಿ, ಬತ್ತ, ಕಡಲೆಕಾಯಿ. ಸಾವೆ, ಸಜ್ಜೆ, ಹುರುಳಿ ಇತ್ಯಾದಿಗಳನ್ನು ತುಂಬಿಡುತ್ತಾರೆ.

ಕೆಲವು ಪ್ರದೇಶಗಳಲ್ಲಿ ಬಿದಿರಿನ ತಡಕೆ ಸಿದ್ದ ಮಾಡಿಕೊಂಡು, ಅನಂತರ ವೃತ್ತಾಕಾರವಾಗಿ 6 - 8 ಅಡಿ ಅಗಲ 9 ಅಡಿ ಎತ್ತರದ 'ತೊಂಬೆ' ಎಂದು ಕರೆಯುವ ಕಣಜ ಮಾಡಿಕೊಳ್ಳುವುದುಂಟು.

ಕುಂಬಾರ ಕಣಜ : ಹೆಸರೇ ಸೂಚಿಸುವಂತೆ, ಇದು ಕುಂಬಾರರು ತಯಾರಿಸಿಕೊಡುವ ಕಣಜ. ಇದಕ್ಕೆ ಅಳಗೆ, ಒಡೇವು, ವಾಡೆ, ಕಣಜ ಮುಂತಾದ ಹೆಸರುಗಳಿವೆ. 1-2 ಖಂಡುಗ ಧಾನ್ಯ ಹಿಡಿಸುವಷ್ಟು ಸಾಮರ್ಥ್ಯವುಳ್ಳ ಗುಡಾಣವನ್ನು ಕುಂಬಾರ ಮಣ್ಣಿನಿಂದ ಮಾಡಿಕೊಳ್ಳುತ್ತಾನೆ. ಅನಂತರ ಹದವರಿತು ಆವಿಗೆಯಲ್ಲಿಟ್ಟು ಸುಟ್ಟು ಗಟ್ಟಿಮಾಡಿಕೊಳ್ಳುತ್ತಾನೆ. ಕುಂಬಾರ ಸುಗ್ಗಿಯ ಕಾಲಕ್ಕೆ ಮೊದಲು ರೈತರಿಂದ ಮುಂಗಡವಾಗಿ ಹಣ ಪಡೆದು ಮಾರಾಟಮಾಡುವುದುಂಟು. ಬೇಡಿಕೆ ಹೆಚ್ಚಾಗಿದ್ದರೆ ಸ್ವತಃ ತಾನೇ ತಯಾರಿಸಿ ವಾರದ ಸಂತೆಯಲ್ಲಿ ಮಾರಾಟಮಾಡುವನು. ಬಿತ್ತನೆಗೆ ಬೇಕಾದ ಕಾಳುಕಡ್ಡಿಗಳನ್ನು, ಬೆಲೆಬಾಳುವ ಒಡವೆಗಳನ್ನು ಇನ್ನಿತರ ಅಮೂಲ್ಯ ವಸ್ತುಗಳನ್ನು ಇದರಲ್ಲಿ ಯಾರಿಗೂ ತಿಳಿಯದಂತೆ ಬಚ್ಚಿಡುತ್ತಿದ್ದರು. ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಇಂಥ ಕಣಜಗಳು ಹಿಂದೆ ಹೆಚ್ಚಾಗಿದ್ದುವು.

ಅಡ್ಡ ಕಣಜ : ಜಮೀನ್ದಾರ ಮತ್ತು ಇತರ ಭೂಹಿಡುವಳಿದಾರರು ಮನೆಯ ಒಳಗೇ ಬಂದು ಅಂಕಣದಷ್ಟು (10 x 10 ಅಡಿ) ಜಾಗದಲ್ಲಿ ಇಟ್ಟಿಗೆ ಮತ್ತು ಸಿಮೆಂಟ್ ಬಳಸಿ ದೃಢವಾದ ಗೋಡೆಕಟ್ಟಿ (5 - 6 ಅಡಿ) ಕಣಜ ಮಾಡಿಕೊಳ್ಳುತ್ತಾರೆ. ಗೋಡೆ ಕಟ್ಟುವಾಗಲೇ 2 ಅಡಿಗೆ ಒಂದರಂತೆ ಹತ್ತಲು ಅನುಕೂಲವಾಗುವಂತೆ ಮೆಟ್ಟಲುಗಳನ್ನು ಮಾಡಿಕೊಂಡಿರುತ್ತಾರೆ. ಕೆಲವರು ಕಣಜವನ್ನು ಮುಚ್ಚುವಂತೆ ನಿರ್ಮಾಣ ಮಾಡಿಕೊಂಡಿರುತ್ತಾರೆ. ಕೆಲವು ಕಣಜಗಳು ಮೇಲ್ಭಾಗ ಪೂರ್ತಿ ತೆರೆದಿದ್ದು ಧಾನ್ಯ ತುಂಬಲು ತೆಗೆಯಲು ಹೆಚ್ಚು ಅನುಕೂಲಕರ. ಸಾಮಾನ್ಯವಾಗಿ 40-50 ಖಂಡುಗದಷ್ಟು ಧಾನ್ಯ ತುಂಬುವ ಸಾಮರ್ಥ್ಯ ಇವಕ್ಕಿರುತ್ತದೆ. ಕಡಿಮೆ ಧಾನ್ಯ ಬೆಳೆಯುವವರು ಕಣಜದ ಮಧ್ಯಭಾಗದಲ್ಲಿ ಗೋಡೆ ಕಟ್ಟಿ ಒಂದರಲ್ಲಿರಾಗಿ, ಮತ್ತೊಂದರಲ್ಲಿ ಬತ್ತ ತುಂಬುವುದುಂಟು.

ಹಗೆವು : ಭೂಮಿ ಸಾಕಷ್ಟಿದ್ದುದರಿಂದ ಭೂಮಾಲೀಕರು ಯಥೇಚ್ಛವಾಗಿ ದವಸಧಾನ್ಯಗಳನ್ನು ಬೆಳೆಯುತ್ತಿದ್ದುದರಿಂದ ಅವನ್ನು ಮನೆಯಲ್ಲಿಟ್ಟುಕೊಳ್ಳಲು ಜಾಗ ಸಾಕಾಗುತ್ತಿರಲಿಲ್ಲ. ಅಂಥವರು ಊರಾಚೆ ಎತ್ತರವಾದ ಭಾಗದಲ್ಲಿ ಬೆಣಚು ಕಲ್ಲಿನಿಂದ ಕೂಡಿರುವ ಸ್ಥಳದಲ್ಲಿ ಹಗೆವು ಮಾಡಿಕೊಳ್ಳುತ್ತಿದ್ದರು. ಇದನ್ನು ನಿರ್ಮಿಸುವುದೂ ಒಂದು ಕಲೆ. ಮೇಲ್ಭಾಗ ಒಂದಾಳು ಇಳಿಯುವಷ್ಟು ಕಿರಿದಾಗಿಯೂ ಕೆಳಗೆ ಹೋದಂತೆಲ್ಲ ವಿಸ್ತಾರಗೊಳ್ಳುತ್ತಾ ಗುಡಾಣದಂತೆ ಕೆಳಭಾಗದಲ್ಲಿ ಕೇವಲ ಎರಡು ಅಡಿಯಷ್ಟು ಇರುವಂತೆ ವಿನ್ಯಾಸಗೊಳಿಸುತ್ತಿದ್ದರು. ಮಳೆನೀರು ಮತ್ತು ಮಣ್ಣು ಒಳಗೆ ಸೇರದಂತೆ ಕಂಠದ ಮೇಲ್ಭಾಗದಲ್ಲಿ ಸ್ವಾಭಾವಿಕವಾಗಿ ಕಾಣುವಂತೆ ಕಲ್ಲನ್ನು ಮುಚ್ಚಿಡುವುದು ಇಲ್ಲಿಯ ವೈಶಿಷ್ಟ್ಯ. ಹೀಗೆ ಹಗೆವು ಸಿದ್ಧಗೊಂಡ ಮೇಲೆ ದೀರ್ಘ ಬಾಳಿಕೆ ಬರುವ ಧಾನ್ಯಗಳನ್ನು ತುಂಬಿ ಮುಚ್ಚುತ್ತಿದ್ದರು.

ಧಾನ್ಯ ತೆಗೆಯಬೇಕಾದಾಗ ಎರಡು ದಿನ ಮೊದಲೇ ಕಲ್ಲು ತೆಗೆದು ವಿಷಗಾಳಿ ಹೊರ ಹೋದ ಮೇಲೆ ಹಗೆವಿಗೆ ಇಳಿಯುವ ಮೊದಲು ಕಂದೀಲನ್ನು ಒಳಕ್ಕೆ ಬಿಟ್ಟು ಪರೀಕ್ಷಿಸುತ್ತಿದ್ದರು. ಕಂದೀಲು ಆರಿಹೋಗದಿದ್ದರೆ ಮಾತ್ರ ಒಳಗೆ ಇಳಿದು ಧಾನ್ಯ ತೆಗೆದುಕೊಳ್ಳುತ್ತಿದ್ದರು. ಇಂದು ಇಂಥ ವ್ಯವಸ್ಥೆ ಅಪರೂಪ. ಆಧುನಿಕ ಕಾಲದಲ್ಲಿ ಈ ಜಾಗವನ್ನು ಹವಾನಿಯಂತ್ರಣ ಕೊಠಡಿಗಳು ಆಕ್ರಮಿಸಿಕೊಂಡಿವೆ.

ಸಾಂಪ್ರದಾಯಿಕ ಕಣಜಗಳಿಗಿಂತ ಭಿನ್ನವಾದಂಥವು ಇಂದು ಅಸ್ತಿತ್ವದಲ್ಲಿವೆ. ಅವುಗಳೆಂದರೆ 1. ತಾತ್ಕಾಲಿಕ ಕಣಜ 2. ಸಂಚಾರಿ ಕಣಜ, 3. ಶಾಶ್ವತ ಕಣಜ.

1. ತಾತ್ಕಾಲಿಕ ಕಣಜ : ತೇವವಿಲ್ಲದ ಜಾಗದಲ್ಲಿ ಪಾಲಿಥೀನ್ ಕಾಗದ ಹರಡುವುದು, ನಾಲ್ಕು ಮೂಲೆಗಳಲ್ಲಿ ಕಂಬಗಳನ್ನು ನಿಲ್ಲಿಸಿ ಸುತ್ತಲೂ

ಹಲಗೆ ಅಥವಾ ತಗಡನ್ನು ತೆರಪಿಲ್ಲದಂತೆ ಜೋಡಿಸಿ ಸಂಗ್ರಹಿಸುವುದು ಇವು ತುರ್ತು ಸಂದರ್ಭಗಳಲ್ಲಿ ಮಾತ್ರ ಉಪಯೋಗಕ್ಕೆ ಬರುವಂಥವು.

2. ಸಂಚಾರಿ ಕಣಜ : ಧಾನ್ಯವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯಲು ಮಾಡಿಕೊಳ್ಳುವ ವ್ಯವಸ್ಥೆ. ಇದನ್ನು ಮರದ ಹಲಗೆ, ತಗಡುಗಳಿಂದ ತಯಾರಿಸಿಕೊಳ್ಳುತ್ತಿದ್ದರು. ಇಂಥ ಕಣಜದಲ್ಲಿ ಎತ್ತಿನ ಗಾಡಿಯಲ್ಲಿ ಸಾಗಿಸಬಹುದಾದಷ್ಟು ಧಾನ್ಯವನ್ನು ತುಂಬಬಹುದಾಗಿತ್ತು.

3. ಶಾಶ್ವತ ಕಣಜ : ಇಂಥ ಕಣಜಗಳು ಸಾಮಾನ್ಯವಾಗಿ ಸರ್ಕಾರದ ನೇತೃತ್ವದಲ್ಲಿ ನಿರ್ಮಾಣಗೊಳ್ಳುತ್ತವೆ. ಬೃಹತ್ ಪ್ರಮಾಣದಲ್ಲಿ ಧಾನ್ಯವನ್ನು ಸಂಗ್ರಹಿಸಬೇಕಾದ ಸಂದರ್ಭದಲ್ಲಿ ಇವು ಉಪಯುಕ್ತ. ಮುನ್ನೆಚ್ಚರಿಕೆಯ ದೃಷ್ಟಿಯಿಂದ ಎಂದರೆ ಯುದ್ಧದ ಮುನ್ಸೂಚನೆ, ಪ್ರಾಕೃತಿಕ ವಿಕೋಪ ಇತ್ಯಾದಿ ಅನಿರೀಕ್ಷಿತ ಅವಘಡಗಳ ಪರಿಹಾರ ನಿಮಿತ್ತವಾಗಿ ಈ ಬಗೆಯ ಕಣಜಗಳನ್ನು ರೂಪಿಸಲಾಗುತ್ತದೆ. ಸರ್ಕಾರಿ ಸ್ವಾಮ್ಯದಲ್ಲಿ ಮಾತ್ರವಲ್ಲದೆ ಖಾಸಗಿ ವಲಯದಲ್ಲೂ ದೊಡ್ಡ ದೊಡ್ಡ ವ್ಯಾಪಾರಸ್ಥರೂ ಗೋದಾಮುಗಳನ್ನು ನಿರ್ಮಿಸಿಕೊಳ್ಳುತ್ತಾರೆ.

ವಿ.ಆರ್.ಬಿ.

ಕತ್ತಿಕಾಯಿ ಮರ ಸುಂದರ ಹಾಗೂ ಆಕರ್ಷಕ ಛತ್ರಿಯಾಕಾರದ ಮರವಿದು. ಇದರ ಮೂಲ ಸ್ಥಾನ ಮಡಗಾಸ್ಕರ. ಇದಕ್ಕೆ ಕನ್ನಡದಲ್ಲಿ ಸೀಮೆಸಂಕೇಶ್ವರ, ಕೆಂಪುತುರಾಯಿ, ಸೊಕ್ಕತ್ತಿಮರ ಎಂದೂ ಹಿಂದಿಯಲ್ಲಿ ಗುಲ್ಮೊಹರ್ ಎಂದೂ ಕರೆಯುವರು. ಲೆಗ್ಯುಮಿನೋಸೀ ಕುಟುಂಬಕ್ಕೆ ಸೇರಿದ ಸಿಸಾಲ್‌ಟೀನಿ ಉಪಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಡೆಲೊನಿಕ್ಸ್ ರೀಜಿಯ ಅಥವಾ ಪಾಯಿನ್ ಸಿಯಾನ ರೀಜಿಯ. ಜನಪ್ರಿಯ ಆಲಂಕಾರಿಕ ಮರಗಳ ಪೈಕಿ ಒಂದಾದ ಇದು ರಸ್ತೆ ಬದಿಯಲ್ಲಿ, ಉದ್ಯಾನವನಗಳಲ್ಲಿ, ಕಛೇರಿಗಳ ಆವರಣದಲ್ಲಿ ಬೆಳೆಸಲಾಗುವುದು.

ಇದು 50-60 ಅಡಿ ಎತ್ತರ 25-30 ಅಡಿ ಅಗಲ ಬೆಳೆಯಬಲ್ಲದು. ಗಂಟುಗಳಿಂದ ಕೂಡಿದ ಮಾಸಲು ಕಂದು ಬಣ್ಣದ ಒರಟಾದ ತೊಗಟೆ ಹೊಂದಿದೆ. ಸಂಯುಕ್ತ ಮಾದರಿಯ ಪರ್ಯಾಯ ಜೋಡಣೆಯ ಎಲೆಗಳಿವೆ. ಕೊಂಬೆಯೊಂದರಲ್ಲಿ ಒಂದು ಪ್ರಧಾನ ಶಾಖೆ ಹಲವು ಉಪಶಾಖೆಗಳು ಇರುತ್ತವೆ. ವಸಂತ ಋತುವಿನಲ್ಲಿ ಮರದ ತುಂಬ ಹೂಬಿಟ್ಟು ರಾರಾಜಿಸುತ್ತವೆ. ಇವು ಕಿತ್ತಳೆ ಮಿಶ್ರಿತ ಕೆಂಪುಬಣ್ಣದಿಂದ ಕೂಡಿದೆ. ಐದು ಪುಷ್ಪಪುತ್ರಗಳಿದ್ದು ಹೊರಭಾಗ ಹಸುರು ಒಳಭಾಗ ಕೆಂಪಾಗಿದ್ದು ಐದು ದಳಗಳನ್ನು ಹೊಂದಿದೆ. ಹೂವಿನ ನಾಲ್ಕು ದಳಗಳು ಕೆಂಪು ಬಣ್ಣದ್ದಾಗಿದ್ದು ಒಂದು ದಳ ದೊಡ್ಡದಾಗಿ ಬಿಳುಪು ಅಥವಾ ಹಳದಿ ಬಣ್ಣದಿಂದ ಕೂಡಿದ್ದು ಮೇಲ್ಭಾಗದಲ್ಲಿ ಚುಕ್ಕಿಗಳಿರುತ್ತವೆ. ದಳಗಳ ತುದಿ ಸ್ವಲ್ಪ ಮುರುಟಿಕೊಂಡಂತೆ ಇರುತ್ತವೆ. ಕೆಂಪು ಬಣ್ಣದ ಹತ್ತು ಬಿಡಿ ಬಿಡಿ ಕೇಸರಗಳಿದ್ದು ಅಂಡಾಶಯ ಉಚ್ಚಸ್ಥಾನದಲ್ಲಿದೆ. ಒಂದು ಕಾರ್ಪೆಲ್ಲಿರುತ್ತದೆ. ಉದ್ದನೆಯ ಕತ್ತಿ ಆಕಾರದ ಕಾಯಿಗಳನ್ನು ಯಥೇಚ್ಛವಾಗಿಬಿಡುತ್ತದೆ. ಒಣಗಿದ ಕಾಯಿಗಳನ್ನು ಉರುವಲಾಗಿ ಉಪಯೋಗಿಸುತ್ತಾರೆ. ಇದನ್ನು ಬೀಜ ಅಥವಾ ಕಾಂಡದ ತುಂಡಿನ ಮೂಲಕ ವೃದ್ಧಿಪಡಿಸಬಹುದು.

ಜಿ.ಎನ್.ಎಸ್.

ಕನಕಾಂಬರ 'ಅಕೆಂಥೇಸೆ' ಕುಟುಂಬಕ್ಕೆ ಸೇರಿದ 'ಕೊಸ್ಸಂಡ್ರಾ' ಎಂಬ ಸಸ್ಯನಾಮದಿಂದ ಗುರುತಿಸಿಕೊಂಡಿದೆ. ಇದರ ಮತ್ತೊಂದು ಹೆಸರು ಅಬ್ಬೋಲಿಗೆ. ಇದು ಭಾರತ ಈಸ್ಟ್‌ಇಂಡೀಸ್ ಮಡಗಾಸ್ಕರ ದ್ವೀಪಗಳಲ್ಲಿಯೂ ಆಫ್ರಿಕದಲ್ಲೂ ಕಂಡುಬರುತ್ತದೆ. ಕನಕಾಂಬರ ಆಕರ್ಷಕವಾಗಿದ್ದು, ಬಹು ಹಗುರ ಹಾಗೂ ಕೊಯ್ದು ಬಳಿಕ



ಎರಡು ದಿನಗಳ ಕಾಲ ಹಾಳಾಗದಂತೆ ಉಳಿಯುವ ಹೂವಿಗೆ ಪರಿಮಳವಿಲ್ಲ. ಬಣ್ಣ ಆಕರ್ಷಕ. ಮಲ್ಲಿಗೆ, ಮರಲೆ, ಜಾಜಿ, ಕಾಕಡಗಳೊಂದಿಗೆ ಮಿಶ್ರಮಾಲೆಯಾಗಿ ಬಳಸುವರು. ಪ್ರತ್ಯೇಕವಾಗಿ ಕನಕಾಂಬರವನ್ನು ಮಾಲೆ ಕಟ್ಟಿ ಮುಡಿಯುತ್ತಾರೆ. ಇದನ್ನು ಕೇಸರಿ ಬಣ್ಣದೊಂದಿಗೆ ಮಿಶ್ರಮಾಡುತ್ತಾರೆ.

ಈ ಬೆಳೆಗೆ ಮರಳು ಮಿಶ್ರಿತ ಗೋಡು ಮಣ್ಣು ಯುಕ್ತ. ಸಮಶೀತೋಷ್ಣ ಮತ್ತು ಉಷ್ಣವಲಯ ಎರಡರಲ್ಲೂ ಸಮೃದ್ಧಿಯಾಗಿ ಬೆಳೆಯುತ್ತದೆ. ಬೀಜದಿಂದ ಸಸ್ಯಾಭಿವೃದ್ಧಿ ಮಾಡುತ್ತಾರೆ. ಎರಡರಿಂದ ನಾಲ್ಕೈದು ಎಲೆಗಳಿರುವ ಸಸಿಯನ್ನು ನೆಡಬಹುದು. ಭೂಮಿಯನ್ನು ಉಳುಮೆ ಮಾಡಿ ಹೆಕ್ಟೇರಿಗೆ 25 ಟನ್ ತಿಪ್ಪೆಗೊಬ್ಬರವನ್ನು ಮಿಶ್ರ ಮಾಡಿ ದಿಂಡು ಮತ್ತು ಕಾಲುವೆಗಳನ್ನು ನಿರ್ಮಾಣ ಮಾಡಬೇಕು. ನಾಟಿ ಮಾಡುವ ಮುನ್ನ ನೀರಾಯಿಸಿ, ಸಾಲುಗಳ ನಡುವೆ 60 ಸೆಂ.ಮೀ. ಮತ್ತು ಗಿಡಗಳ ನಡುವೆ 45 ಸೆಂ.ಮೀ. ಅಂತರ ಇರುವಂತೆ ಮಣ್ಣಿನ ಹೆಪ್ಪು ಸಮೇತ ನಾಟಿ ಮಾಡಬೇಕು. ಸಾಯಂಕಾಲ ಅಥವಾ ಬೆಳಗಿನ ಸಮಯ ನಾಟಿ ಮಾಡಬೇಕು. ಜೂನ್ ತಿಂಗಳಿನಲ್ಲಿ ನಾಟಿ ಮಾಡುವುದು ಉತ್ತಮ. ಮಳೆಗಾಲದಲ್ಲಿ ನೀರಿನ ಆವಶ್ಯಕತೆ ಇರುವುದಿಲ್ಲ. ವಾರಕ್ಕೆ ಒಮ್ಮೆ ನೀರು ಹಾಯಿಸಬೇಕು. ನೀರು ಹೆಚ್ಚು ಕಾಲ ನಿಲ್ಲುವಂತಿರಬಾರದು. ಬೇರಿಗೆ ಹಾನಿ ಆಗದಂತೆ ಮಣ್ಣನ್ನು ಸಡಿಲಿಸಿ ಗಿಡಗಳ ಬುಡಕ್ಕೆ ಹಾಕಬೇಕು. ವರುಷಕ್ಕೆ ಎರಡು ಬಾರಿ ಅಂತರ ಬೇಸಾಯ ಮಾಡಬೇಕು. ಗಿಡಗಳಿಗೆ ಬಿಸಿಲು ಬೀಳುವಂತೆ ನೋಡಿಕೊಳ್ಳಬೇಕು. ನಾಟಿ ಮಾಡಿದ 2-3 ತಿಂಗಳಲ್ಲಿ ಹೂವುಗಳು ಸಿಗುತ್ತವೆ. ಜೂನ್‌ನಿಂದ ಜನವರಿಯವರೆಗೆ ಹೂವುಗಳು ಹೆಚ್ಚಾಗಿ ಸಿಗುತ್ತವೆ. ಮಳೆಗಾಲದಲ್ಲಿ ಕಡಿಮೆ. ಹೂವು ಅರಳುವುದಕ್ಕೆ ಎರಡು ದಿನಬೇಕು. ಹೂವು ಕಿತ್ತ ಬಳಿಕ ತೆನೆಯನ್ನು ತೆಗೆಯಬೇಕು.

ಕೊಯ್ದ 36-48 ಗಂಟೆಗಳಲ್ಲಿ ಹೂವು ಬಾಡುತ್ತವೆ. ಕೊಯ್ದ ಹೂವನ್ನು ಬಿದಿರುಬುಟ್ಟಿಗಳಲ್ಲಿ ತುಂಬಿ ಮುಚ್ಚಳ ಮುಚ್ಚಿ ನೆರಳಿನಲ್ಲಿ ಇಡುತ್ತಾರೆ. ಅರ್ಧ

ಕೆ.ಜಿ. 1 ಕೆ.ಜಿ. ಹೂವನ್ನು ಅಡಕೆ ಪಟ್ಟೆ, ಬಾಳೆ ಎಲೆ, ತಾವರೆ ಎಲೆ, ಊಟದ ಎಲೆ ಇಲ್ಲವೇ ಕಾಗದದಲ್ಲಿ ಕಟ್ಟಿ ಕೊಡುತ್ತಾರೆ. ಎರಡು ಮೂರು ವರ್ಷಗಳ ಅನಂತರ ಗಿಡವನ್ನು ತೆಗೆಯಬೇಕು.

ಎಸ್.ಕೆ.ಎನ್.

ಕನ್ನಡ ಜನಪದ ಗೀತೆಗಳಲ್ಲಿ ಕೃಷಿ ಆದಿ ಮಾನವ ತನ್ನ ಮೊತ್ತಮೊದಲ ಬದುಕನ್ನು ಕೃಷಿ ಮಾಡುವುದರೊಂದಿಗೆ ಆರಂಭಿಸಿದ. ಕಾಡಿನಲ್ಲಿ ಬೇಟೆಯಾಡಿ ಪೊಟರೆಗಳಲ್ಲಿ ವಾಸಿಸುತ್ತಿದ್ದವನು ಗೆಡ್ಡೆ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದು, ತರುವಾಯ ತಿನ್ನಲು ಕೊರತೆಯಾದ ಗೆಡ್ಡೆ ಗೆಣಸ ಮುಂತಾದ ಆಹಾರ ಪದಾರ್ಥಗಳನ್ನು ತಾನೆ ಬೆಳೆಸುವಲ್ಲಿ ತೊಡಗಿದ.

ಹೀಗೆ ಗುಂಪು ಗುಂಪಾಗಿ ವಾಸಿಸುತ್ತಿದ್ದ ಆದಿಮಾನವರ ಸಂಖ್ಯೆ ದಿನೇ ದಿನೇ ಹೆಚ್ಚತೊಡಗಿತು. ಆಹಾರದ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಸ್ತ್ರೀಯರೊಂದಿಗೆ ಪುರುಷನು ಕೃಷಿ ಮಾಡಲು ತೊಡಗಿದ. ಅಂದಿನಿಂದ ಹೊಸ ಸಂಸ್ಕೃತಿಯೊಂದು ಆರಂಭಗೊಂಡಿತು. ಪ್ರಾಣಿಗಳನ್ನು ಬಳಸಿ ಕೃಷಿ ಮಾಡಲು ತೊಡಗಿದ.

ಆರಂಭ ಎನ್ನುವುದು 'ಆರ್' ಎಂಬ ಧಾತುವಿನಿಂದ ಬಂದಿದ್ದು. ಆರ್>ಆರ್>ಏರು ನೇಗಲಿಗೆ ಕಟ್ಟಿದ ಜೋಡೆತ್ತುಗಳು ಎಂಬುದಾಗಿ ಕಿಟ್ಟೆಲ್ ಅರ್ಥೈಸಿದ್ದಾರೆ. ಕೇಶಿರಾಜನು ಧಾತು ಪ್ರಕರಣದಲ್ಲಿ ಆರ್-ಹಲಾನ್ವಿತ ವೃಷಭಯುಗ್ಮದಾರು ಭೇದೇ ಎಂದರೆ ನೇಗಿಲು ಹೂಡಿದ ಜೋಡೆತ್ತುಗಳಿಂದ ನೆಲವನ್ನು ಭೇದಿಸುವುದು ಎಂದು ಹೇಳಿದ್ದಾನೆ. ಹೆಚ್ಚು ಬಳಕೆಯಲ್ಲಿರುವ ಒಕ್ಕಲು, ಒಕ್ಕಲಿಗ, ಒಕ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಕೇಶಿರಾಜನು 'ಒಕ್‌ಖಲಕರಣೇಶ ನೇಚ' ಎಂದು ಹೇಳಿದ್ದಾರೆ. ಖಲಕರಣೇ ಎಂದರೆ ಧಾನ್ಯಗಳನ್ನು ಬಡಿಯುವ ನೆಲ. ತೆನೆಗಳಲ್ಲಿಯ ಕಾಳುಗಳನ್ನು ಬೇರ್ಪಡಿಸುವುದು ಎಂದು ಅರ್ಥವನ್ನು ಹೊಂದಿದ್ದು, ಒಕ್ ಎಂಬುದರಿಂದ ಒಕ್ಕು, ಒಕ್ಕಲು, ಒಕ್ಕಲಿಗ, ಒಕ್ಕಲತಿ, ಒಕ್ಕಲುತನ ಮುಂತಾದ ಪದಗಳು ನಿಷ್ಪನ್ನವಾಗಿವೆ.

ಕೃಷಿಕ ಎಂದರೆ ಹೊಲಗಳಲ್ಲಿ ವಾಸ ಮಾಡುವವರು ಎಂದು ಗುರುತಿಸುತ್ತಾರೆ. Agriculture ಎಂಬುದು The art of cultivating the land ಎಂಬುದಾಗಿ Agriculturist - one in agriculture - a farmer ಎಂಬುದಾಗಿದೆ. ಹಾಗಾಗಿ ಕೃಷಿಗೆ ಪರ್ಯಾಯವಾಗಿ ಒರಟುತನ, ಆರಂಭ, ಕೃಷಿ ಎಂಬುದಾಗಿ ಕರೆಯುವುದು ರೂಢಿಯಾಯಿತು. ಕೃಷಿ ಕೆಲಸದಲ್ಲಿ ಸ್ತ್ರೀಯರೇ ಹೆಚ್ಚಾಗಿ ತೊಡಗಿರುವುದನ್ನು ಕಾಣಬಹುದು. ಮಾನವ ಶಾಸ್ತ್ರಜ್ಞರಾದ ರಾಲ್ಫ್, ಎಲ್. ಬೀಲ್ಸ್ ಪ್ರಕಾರ "The first cultivators were women" "ವ್ಯವಸಾಯದ ಪ್ರಾಚೀನ ಶಿಲ್ಪಿಗಳು ಸ್ತ್ರೀಯರೇ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈಗಲೂ ಹಲವೆಡೆ ಕೃಷಿಯ ಬಹುತೇಕ ಕೆಲಸಗಳೆಲ್ಲವನ್ನು ಸ್ತ್ರೀಯರೇ ನಿರ್ವಹಿಸುತ್ತಿರುವುದನ್ನು ಕಾಣಬಹುದು. ಪುರುಷರು ಕಠಿಣ ಕೆಲಸಗಳಾದ ಉಳುವುದು, ಕಡಿಯುವುದು, ಕತ್ತರಿಸುವುದು, ತೋಡುವುದು, ಸವರುವುದು, ಎತ್ತುವುದು, ಇಳಕುವಂತಹ ಕೆಲಸಗಳಲ್ಲಿ ತೊಡಗಿರುತ್ತಾರೆ. ಸ್ತ್ರೀಯರು ನಾಟಿ ಮಾಡುವುದು, ಕಳೆ ಕೀಳುವುದು, ಬೀಸುವುದು, ಕುಟ್ಟುವುದು ಇತರೆ ಸೂಕ್ಷ್ಮ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಕೃಷಿಗೆ ಸಂಬಂಧಿಸಿದ ದವಸ ಧಾನ್ಯಗಳನ್ನು ಒಕ್ಕಣೆ ಮಾಡುವುದು, ಕೇರುವುದು, ಸೋಸುವುದು, ಒನೆಯುವುದು ಇವೆ ಮೊದಲಾದ ಕೆಲಸಗಳಲ್ಲಿ ನಿರತಳಾದ ಸ್ತ್ರೀಯೊಬ್ಬಳು ತನ್ನ ದುಡಿಮೆಯ ಆಯಾಸ, ಬೇಸರವನ್ನು ಮರೆಯಲು ಪದಗಳನ್ನು ಕಟ್ಟಿ ಹಾಡಲು ತೊಡಗಿದಳು. ತನ್ನ ಅನುಭವವೇ ಹಾಡಾಗಿ ಹೊರ ಹೊಮ್ಮಿತು. ತನ್ನ ದುಃಖ ದುಮ್ಮಾನಗಳನ್ನು ಪದ ಕಟ್ಟಿ ಹಾಡಿ ಆ ಮೂಲಕ ತನ್ನ ಕೆಲಸಕ್ಕೆ ಮತ್ತಷ್ಟು ಹುರುಪು ಹುಮ್ಮಸ್ಸುಗಳು ಮೂಡಲು ಸಹಾಯಕವಾದವು. ಈ ಹಿನ್ನೆಲೆಯಲ್ಲಿ ಬೀಸುವ ಪದಗಳು, ಕುಟ್ಟೋಪದ, ನಾಡಿಪದಗಳು, ಖಂಡ ಕಾವ್ಯಗಳು ಹುಟ್ಟಿಕೊಂಡವು.

ಜನಪದರು ಕೃಷಿಯೊಂದಿಗೆ ಪಶುಪಾಲನೆ ಕೆಲಸಗಳಲ್ಲಿ ತೊಡಗಿರುತ್ತಿದ್ದರು. ಇವೆಲ್ಲವೂ ಕೃಷಿಗೆ ಸಹಾಯಕವಾಗಿದ್ದವು. ಹಾಗೆಯೇ ಆಹಾರ ಜನ್ಯವಾಗಿದ್ದರಿಂದ ಅವು ಜನಪದರ ಬದುಕಿನಲ್ಲಿ ಸೇರಿಕೊಂಡವು. ಈ ಎಲ್ಲಾ ಕೆಲಸಗಳನ್ನು ಬಿಡುವಿಲ್ಲದೆ ನಿಭಾಯಿಸುವಾಗ ಬೇಸರ, ಆಯಾಸವಾಗುವುದು ಸಹಜ. ಆ ಕಾರಣಕ್ಕೆ ಕತೆ, ಹಾಡುಗಳನ್ನು ಕಟ್ಟಿ ಹಾಡ ತೊಡಗಿದರು. ಇಂದು ಇವೆಲ್ಲಾ ಜನಪದ ಸಾಹಿತ್ಯದಲ್ಲಿ ಮರೆಯಲಾರದ ಮಜಲುಗಳಾಗಿ ಸ್ಥಾನಪಡೆದಿದೆ.

ಅವುಗಳನ್ನೆಲ್ಲಾ ಬಿಡಿ ಬಿಡಿಯಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಜನಪದರ ಅನುಭವ, ವೈಜ್ಞಾನಿಕ ದೃಷ್ಟಿಕೋನ ತಿಳಿಯುತ್ತದೆ. ಕಾಲಕ್ಕೆ ತಕ್ಕ ಹಾಗೆ ಬದಲಾವಣೆಗಳನ್ನು ಮಾಡಿಕೊಂಡು ಬದುಕುವ ಜಾಣ್ಮೆ, ಅಂದಿನ ಕೃಷಿ ಪದ್ಧತಿ ಹೇಗೆಲ್ಲ ಇದ್ದಿರಬಹುದು ಎಂಬ ಚಿತ್ರಣವನ್ನು ಜನಪದ ಗೀತೆಗಳು ನಮಗೆ ತಿಳಿಸಿಕೊಡುತ್ತವೆ.

ಏಳುತ್ತಲೇ ಎದ್ದು ಯಾರ್‍ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿ
ಎದ್ದೊಂದು ಗಳಿಗೆ ನೆನೆದೇನು

ಎಂದು ಭಕ್ತಿ ಪೂರ್ವಕವಾಗಿ ರೈತ ಮೊದಲು ಭೂಮಿತಾಯಿಗೆ ನಮಿಸುತ್ತಾನೆ. ಎಳ್ಳು - ಜೀರಿಗೆ ಬೆಳೆಯುವವಳು ಎಂಬಲ್ಲಿ ಜೀರಿಗೆ ಹುಟ್ಟನ್ನು, ಎಳ್ಳು ಸಾವನ್ನು ಸೂಚಿಸುತ್ತದೆ. ಜನಪದ ಬದುಕಿನಲ್ಲಿ ಎಳ್ಳು - ಜೀರಿಗೆಗೆ ಮಹತ್ವದ ಸ್ಥಾನ. ಭೂಮಿತಾಯಿ ಒಡಲಲ್ಲಿ ಹುಟ್ಟು-ಸಾವು ಎರಡೂ ನಿರಂತರವಾಗಿ ನಡೆಯುವ ಪ್ರಕ್ರಿಯೆಗಳಾಗಿವೆ. ಇಂತಹ ದವಸ ಧಾನ್ಯಗಳನ್ನು ಕೊಡುಗೆಯಾಗಿ ಕೊಟ್ಟ ಭೂಮಿತಾಯಿಗೆ ಬೆಳಗೆದ್ದು ನಮಿಸುತ್ತಾರೆ. ಜನಪದರು ಸರಳವಾದ ಪದಗಳಲ್ಲಿ ಎಂಥ ಗಂಭೀರ ಅರ್ಥವನ್ನು ಅಡಗಿಸಿಕೊಳ್ಳಬಲ್ಲರೆಂಬುದಕ್ಕೆ ಈ ತ್ರಿಪದಿ ಸಾಕ್ಷಿಯಾಗಿದೆ. ಬಿತ್ತಿದ ಬೆಳೆ ಕೈ ಸೇರುವವರೆಗೂ ಕೃಷಿಕ ಸತತ ದುಡಿಮೆಯಲ್ಲಿ ತೊಡಗಿರುತ್ತಾನೆ. ಅತಿವೃಷ್ಟಿ, ಅನಾವೃಷ್ಟಿಯಿಂದ ನಮ್ಮನ್ನು ರಕ್ಷಿಸುವವಳು ಭೂಮಿತಾಯಿ ಎಂಬ ಕಾರಣಕ್ಕೆ ವಿಶೇಷವಾದ ಭಕ್ತಿಭಾವ ಹೊರಹೊಮ್ಮುತ್ತವೆ.

ಭೂಮಿಯ ಜೊತೆಗೆ ಕೃಷಿಗೆ ಸಹಾಯಕವಾಗುವ ಕಲ್ಲು, ಕಾವೇರಿ, ಕಬಿನಿಗಳನ್ನು ಭಕ್ತಿ ಭಾವದಿಂದ ಸ್ಮರಿಸುತ್ತಾರೆ.

ಹೊತ್ತಂತೆ ಎದ್ದು ಯಾರ್‍ಯಾರ ನೆನೆದೇನು
ಕಲ್ಲು ಕಾವೇರಿ ಕಪಿನಿಯ ನೆನೆದಾರ
ಮೈಲಿದ್ದ ಪಾಪ ಪರಿಹಾರ

ಎಂಬುದಾಗಿ ಹಾಡಿದ್ದಾರೆ.

ಕೃಷಿಗೆ ಸಹಾಯಕವಾಗುವ ನದಿ, ಹೊಳೆ, ಕೆರೆಗಳು ಜನಪದರ ದೈವಿಕ ಜೀವನದಲ್ಲೂ ಅಗತ್ಯ ಎಂಬುದನ್ನು ತಮ್ಮ ಆಚರಣೆಗಳಲ್ಲಿ ತಂದಿರಿಸಿದ್ದಾರೆ. ತಾನು ಮಾಡಿದ ಪಾಪಗಳೆಲ್ಲ ಬೆಳಗಾಗಿ ನೆನೆಯುವುದರಿಂದ ಕಳೆಯುತ್ತವೆ ಎಂಬ ತಾತ್ವಿಕ ಚಿಂತನೆಯುಳ್ಳವ ಜನಪದರು.

ಕೃಷಿಗೆ ಸಹಾಯಕವಾಗಿ ನಿಲ್ಲುವ ಬಸವಣ್ಣನನ್ನು ಪೂಜಿಸದ ಕೃಷಿಕನೇ ಇಲ್ಲ. ತಮಗೆ ಬೇಕಾದ ದವಸ ಧಾನ್ಯಗಳನ್ನು ಉತ್ಪಾದಿಸುವಲ್ಲಿ ಬಹುಪಾಲು ಬಸವನದೇ. ಹಾಗೆಯೇ ಅವನ ಅಂಗಾಂಗಗಳಲ್ಲೇ ಮುಕ್ಕೋಟಿ ದೇವತೆಗಳು ವಾಸವಾಗಿದ್ದಾರೆ ಎಂಬುದಕ್ಕೆ ಸಾಕಷ್ಟು ಕಥೆ, ಪುರಾಣಗಳಿವೆ.

ಕಸವ ಹೊಡೆದ ಕೈ ಕಸ್ತೂರಿ ನಾತಾವು
ಬಸವಣ್ಣ ನಿನ್ನ ಸೆಗನಿಯ ಬಳಿದ ಕೈ
ಎಸಳ ಯಾಲಕ್ಕಿ ಗೊನೆನಾತಾ

ರೈತ ಕಣವನ್ನು ತನ್ನ ವಾಸ ಸ್ಥಳದ ಒಳಗೂ ಹೊರಗೂ ಸೆಗಣಿಯಿಂದಲೇ ಶುಚಿಗೊಳಿಸಿಕೊಳ್ಳುವುದು ಸಾಮಾನ್ಯ. ಸೆಗಣಿ ಕ್ರಿಮಿ ನಾಶಕ ಗುಣವನ್ನು ಹೊಂದಿರುವುದೇ ಈ ಎಲ್ಲಾ ಬಳಕೆಗೆ ಕಾರಣವಾಗಿದೆ. ಸೆಗಣಿಯ ಬಳಿದ ಕೈ ಏಲಕ್ಕಿ ಘಮವನ್ನು ನೀಡುತ್ತದೆ ಎಂಬಲ್ಲಿ ತನ್ನ ಬದುಕಿನಲ್ಲಿ ಸಮಸಮನಾಗಿ ದುಡಿಯುತ್ತಿರುವ ಯಾರೇ ಆದರೂ ಪ್ರೀತಿಗೆ ಪಾತ್ರರು ಎಂಬುದು ಇಲ್ಲಿ ಸತ್ಯವಾಗಿದೆ.

ಜನಪದರು ತಾವು ಬೆಳೆದ ಬೆಳೆಯ ಬಳಿ ಬೆನಕನನ್ನು ಮಾಡಿ ಪೂಜಿಸುವುದು ರೂಢಿ. ಮೊದಲ ಪೂಜೆ ಬೆನಕನಿಗೆ, ತಮ್ಮ ಮುಂದಿನ ಕೆಲಸಗಳೆಲ್ಲ ನಿರ್ವಿಘ್ನವಾಗಲಿ ಎಂದು ಸ್ಮರಿಸಿ ಪೂಜಿಸುತ್ತಾರೆ.

ಎಳ್ಳು ಹೊಲದಾಗಿರುವ ದೊಳಹೊಟ್ಟೆಬೆನವಣ್ಣ
ಎಳ್ಳೆಲೆ ತುಪ್ಪ ತಿಳಿದುಪ್ಪ ಸಲ್ಲಿಸುವೆ
ದೊಳಹೊಟ್ಟೆ ಬೆನವ ಕೊಡುಮತಿಯ

ಎಂಬುದಾಗಿ ಭಕ್ತಿಪೂರ್ವಕವಾಗಿ ಪೂಜಿಸುತ್ತಾರೆ.

ಬೆಳೆದ ದವಸ ಧಾನ್ಯಗಳನ್ನು ಹಾಗೆಯೇ ಬಳಸಲಿಕ್ಕೆ ಆಗದು ಹಾಗಾಗಿ ಶುದ್ಧಿಗೊಳಿಸಿ ಬೀಸೋಕಲ್ಲಿನಿಂದ ರಾಗಿಯನ್ನು ಉಣ್ಣಲು ಯೋಗ್ಯವಾದ ರೀತಿಯಲ್ಲಿ ಸಿದ್ಧಗೊಳಿಸಲು ರಾಗಿಕಲ್ಲು ಸಹಕಾರಿ. ಕೃಷಿಕನ ಮೊದಲ ಸೃಷ್ಟಿ ರಾಗಿ ಕಲ್ಲು. ಸಮತಟ್ಟಾದ ಎರಡು ಕಲ್ಲನ್ನು ಇಟ್ಟು ಅದರ ಮಧ್ಯೆ ದವಸಗಳನ್ನು ಹಾಕಿ ಎರಡು ಕೈಗಳಿಂದ ಬೀಸುವುದರಿಂದ ಜಲ್ಲ ಜಲ್ಲನೆ ಹಿಟ್ಟು ಉದುರುವುದು. ಅದನ್ನು ಜರಡಿಯಾಡಿ ಮುದ್ದೆಯಾಗಿಯೇ, ಅನ್ನವಾಗಿಯೋ ರೊಟ್ಟಿ ಗಂಜಿ, ಅಂಬಲಿಯಾಗಿಯೋ ಮಾಡಿ ಸೇವಿಸುವರು. ತಮ್ಮ ಕಲ್ಪನೆಯ ರಾಗಿಕಲ್ಲನ್ನು ತಾಯಿ ಎಂದು ಸಂಬೋಧಿಸಿ ವಿವಿಧ ಬಗೆಯಾಗಿ ವರ್ಣಿಸುತ್ತಾರೆ.

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲ ಜಲ್ಲನೆ ಉದುರಮ್ಮ ನಾ ನಿನಗೆ
ಸಣ್ಣಕ್ಕಿ ಪಡಿಯ ನಡಿಸೇನು -ಹಾಗೆಯೇ

ಕಲ್ಲಮ್ಮ ತಾಯಿ ಸುರಿಸವ್ವ ಜೋಳವನ್ನು
ಜಲ್ಲ ಜಲ್ಲನೆ ಉದುರವ್ವ ನಾ ನಿನಗೆ
ಬೆಲ್ಲದಾರತಿಯ ಬೆಳಗೇನು

ರಾಗಿಕಲ್ಲನ್ನು ದೇವರೆಂದು ಪೂಜ್ಯ ಭಾವನೆಯಿಂದ ನಮಸ್ಕರಿಸಿ ಬೀಸಲು ಕುಳಿತ ಸ್ತ್ರೀಯೊಬ್ಬಳು ಬೇಗ ಬೇಗನೇ ಬೀಸೋ ಕೆಲಸ ಮುಗಿದರೆ ನಾ ನಿನಗೆ ಬೆಲ್ಲದಾರತಿಯ ಬೆಳಗುವೆ ಎಂದು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುವಳು.

ರಾಗಿಬೀಸೋ ಕಲ್ಲೆ ರನ್ನ ಮುತ್ತಿನ ಕಲ್ಲೆ
ಅಣ್ಣನಾ ಮನೆಯ ಸಿರಿಗಲ್ಲೆ ಸಾಮ್ರಾಜ್ಯ
ಶೋಬನದ ಕಲ್ಲೆ ಕೊಡುದನಿಯ -ಹಾಗೆಯೇ

ಕಲ್ಲು ಕೊಟ್ಟವ್ಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ

ಎಂಬುದಾಗಿ ಕಲ್ಲು ಕೊಟ್ಟಂತಹವರಿಗೆ ಎಲ್ಲ ಭಾಗ್ಯವು ಬರಲಿ ಎಂದು ಒಟ್ಟಾಗಿ ಆಶಿಸುತ್ತಾರೆ. ತನ್ನ ಬಳಿ ಇಲ್ಲದ ಕಲ್ಲನ್ನು ಮತ್ತೊಬ್ಬರ ಬಳಿ ಪಡೆದು ತನ್ನ ಕೆಲಸವನ್ನು ಮುಗಿಸಿಕೊಂಡು ಕೃತಜ್ಞತೆಯಾಗಿ ಆ ಮನೆಯವರಿಗೆ ಹಿತನುಡಿಯುವ ಪರಿ ನಿಜಕ್ಕೂ ಅಭಿನಂದನರ್ಹವಾದುದು.

ತೋಟಕ್ಕೆ ಹೋದ ಅಣ್ಣ ಎಷ್ಟು ಹೊತ್ತಾದರೂ ಊಟಕ್ಕೆ ಬಾರದಿದ್ದಾಗ ತಂಗಿಯೊಬ್ಬಳು, ಅಣ್ಣ ತೋಟದಲ್ಲಿ ಏನು ಮಾಡುತ್ತಿರಬಹುದೆಂದು ಊಹಿಸಿಕೊಳ್ಳುವ ದೃಶ್ಯ ಬಹು ಸದೃಶ್ಯವಾಗಿದೆ.

ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ
ತೋಟದ ಹೂವ ತಲಿತುಂಬ ಇಟಗೊಂಡು
ಊಟದ್ದ ಂಬಲವ ಮರೆತಾನ

ಅರಳಿ ನಿಂತ ಹೂವನ್ನು ಮುಡಿದು ತನ್ನನ್ನೆ ತಾನು ಮರೆತ ದೃಶ್ಯವನ್ನು ಈ ಹಾಡು ನಮಗೆ ಕಟ್ಟಿಕೊಡುತ್ತದೆ. ಕಾಡು ಹೂಗಳು ಅಷ್ಟರಮಟ್ಟಿಗೆ ಶೃಂಗಾರಮಯವಾಗಿವೆ.

ವಿವಾಹಿತಳಾದ ಹೆಣ್ಣುಮಗಳೊಬ್ಬಳು ಮಲ್ಲಿಗೆ ಬಳ್ಳಿಯೊಂದಿಗೆ ಮಾತನಾಡುವ ದೃಶ್ಯವನ್ನು ಹಾಡಿನಲ್ಲಿ ಕಟ್ಟಿಟ್ಟಿದ್ದಾಳೆ.

ಒಬ್ಬರಿರುವ ಮನೆಗೆ ಹಬ್ಬದಿರು ಮಲ್ಲಿಗೆ
ಒಬ್ಬಳೇ ಕೂದು ಮುಡಿಲಾರೆ ಮಲ್ಲಿಗೆ
ಹಬ್ಬೋಗು ನನ್ನ ತವರಿಗೆ

ಆಗ ತಾನೆ ವಿವಾಹಿತಳಾದ ಹೆಣ್ಣು ತನ್ನ ಗಂಡನ ಮನೆಯಲ್ಲಿ ಬೆಳೆದ ಮಲ್ಲಿಗೆಯನ್ನು ಬೇಕಷ್ಟು ಬಿಡಿಸಿ ಕಟ್ಟಿ, ಮತ್ತೆ ಹಬ್ಬಿ ಹೆಚ್ಚು ಹೂವು ಸಿಗುವುದನ್ನು ನೋಡಿ ತನ್ನ ತವರಿನಲ್ಲಾದರೂ ಹಬ್ಬಿ ಬೆಳೆ ಅಲ್ಲಿ ಮುಡಿಯುವವರಿದ್ದಾರೆ ಎಂಬುದಾಗಿ ತಾಯಿಯ ಮನೆಯ ಶ್ರೇಯಸ್ಸನ್ನು ಕೋರುವ ಹೆಣ್ಣೊಬ್ಬಳ ಸಸ್ಯ ಪ್ರೇಮ ಅಗಾಧ ಹಾಗೂ ಅನನ್ಯವಾದುದು.

ಜನಪದರು ಕೃಷಿ ಬದುಕಿನಲ್ಲಿ ಮಿಂದು ಬಂದವರು. ಹಾಲು-ತುಪ್ಪವನ್ನು ಉಂಡು ಹಾಡಿ ಬೆಳೆದ ತವರನ್ನು ಹೆಣ್ಣೊಬ್ಬಳು;

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ ಕುಡಿಯಾಂಗ
ಹಬ್ಬಲೆ ಅವರ ರಸಬಳ್ಳಿ -ಹಾಗೆಯೇ

ಬಳಗವು ಹೆಚ್ಚಾಲಿ ಬಂಧಾನ ತಗ್ಗಲೀ
ಕೊಳಗದಲ್ಲಿ ಹೊನ್ನ ಅಳೆಯಲಿ ತವರ್ಮನೆಯ
ನಡುಮನೇ ಜ್ಯೋತಿ ಉರಿಯಲಿ

ತಾನುಂಡು, ಬೆಳೆದ ಮನೆಗೆ ಯಶಸ್ಸು ಸಿಗಲಿ ಎಂದು ಹಾರೈಸುವ ಪರಿ ನಿಜಕ್ಕೂ ಅಪ್ಯಾಯಮಾನವಾದುದು. ತವರು ಮನೆಯಲ್ಲಿ ಧವಸಧಾನ್ಯಗಳನ್ನು ಅಳೆಯುವ ಕೊಳಗದಲ್ಲಿ ಹೊನ್ನನ್ನು ಅಳೆಯುವಂತಾಗಲಿ ಎಂದು ಹಾರೈಸುವ ಹೃದಯವಂತಿಕೆ ತೌರ ಮೇಲೆ ಅಭಿಮಾನವಿರುವ ಹೆಣ್ಣೊಬ್ಬಳಿಗೆ ಮಾತ್ರ ಸಾಧ್ಯ.

ಖಂಡಕಾವ್ಯವೊಂದರಲ್ಲಿ ಉತ್ತರದೇವಿ ಕಳಂಕಿಣಿ ಎಂಬ ಪಟ್ಟಿ ಕಟ್ಟಿಕೊಂಡು ಮನೆಯಿಂದ ಹೊರ ಬರುವ ಸಂದರ್ಭದಲ್ಲಿ ತಾನು ಬೆಳೆದ ಕೈ ತೋಟವನ್ನು ನೋಡುತ್ತಾ ;-

ನಾನು ಬರುವಾಗ ತೆಂಗೆಲ್ಲ ಕಿರುಸೊಸಿ
ನೀರೂದು ನಾನು ಸಲವಿದ್ದೆ ಸೊಸಿಗಳಿರ
ನಾನು ಹೊಯ್ತಿನಿ ವನದೇಶ ಸೊಸಿಗಳಿರ
ನೀವು ಉದುರದೋಗಿ ಸೊಸಿಗಳಿರಾ

ಎಂಬುದಾಗಿ ತನ್ನ ನೋವನ್ನೂ ವ್ಯಕ್ತ ಪಡಿಸುವ ನಿಜಕ್ಕೂ ಮನಕಲಕುವಂತಿದೆ. ತಾನು ನೀರುಣಿಸಿ ಬೆಳೆಸಿದ ಹಣ್ಣಿನಗಿಡಗಳು, ಹೂವಿನಗಿಡಗಳು, ತೆಂಗು, ಅಡಕೆ, ನಾನಿಲ್ಲದೆ ಅನಾಥವಾಗುವುದು ಬೇಡ, ನಾ ಹೇಗೆ ಎಲ್ಲವನ್ನು ತೊರೆದು ಹೋಗುತ್ತಿರುವೆನೋ ಹಾಗೆಯೇ ಅವುಗಳು ಭಸ್ಮವಾಗಲಿ ಎಂಬುದಾಗಿ ಶಪಿಸುತ್ತಾಳೆ. ನಾನೇ ಇಲ್ಲದ ಮೇಲೆ ನಾ ಬೆಳೆಸಿದ ಗಿಡಮರಗಳು ನನ್ನ ನೆನಪನ್ನು ತರಬಾರದು ಎಂಬ ನೋವಿನ ಎಳೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಯಾರಿಗೂ ಬೇಡನಾದ ಉತ್ತರದೇವಿ ಕಡೆಯಲ್ಲಿ ಉತ್ತರೆ ಮಳೆಯಾಗಿ ಹರಿದು ಬರುವಂತಹ ದೃಶ್ಯವನ್ನು ಕಾಣಬಹುದು. ಹೆಣ್ಣಿನ ನೋವು ಆಕ್ರಂಧನ ನೀರಧಾರೆಯಾಗಿ ಬೇಸಾಯದ ಹಂತದಲ್ಲಿ ಉತ್ತರೆ ಮಳೆಯಾಗಿ ಹರಿದುಬರುವಲ್ಲಿ ತನ್ನ ಬದುಕನ್ನು ಸಾರ್ಥಕ ಪಡಿಸಿಕೊಂಡಿದ್ದಾಳೆ. ಹಾಗೆಯೇ ದುಃಖದುಮ್ಮಾನಗಳ ಸರಳೀಕೃತ ವ್ಯಕ್ತಿತ್ವವುಳ್ಳ ಹೆಣ್ಣೊಬ್ಬಳ ಮರು ಹುಟ್ಟನ್ನು ಇದು ಧ್ವನಿಸುತ್ತದೆ.

ಕೃಷಿಕರಿಗೆ ಸಮೃದ್ಧಿಯಾಗಿ ಮಳೆ ಬೆಳೆಯಾದಾಗ ಆಗುವ ಸಂಭ್ರಮ ಸಡಗರವನ್ನು ಈ ತ್ರಿಪದಿ ಸುಂದರವಾಗಿ ವರ್ಣಿಸಿದೆ.

ಬಡಗಲ ಮಳೆ ಹುಯ್ದು ಬಾಗಿತು ಆರಂಭ
ತೆನೆ ಹೋಗಿ ತೆಂಕ ಅಡಗಿದೊ ದೇವೇಂದ್ರನ
ಮೆದೆ ಹೋಗಿ ದಗುನ ತಗುಲಿದೊ

ಮಳೆ ಹುಯ್ದು ಅದ್ದೂರಿಯಾಗಿ ಆಗುವ ಆರಂಭದ ಚಿತ್ರಣವನ್ನು ಈ ಹಾಡು ಧ್ವನಿಸುತ್ತದೆ. ಒಬ್ಬ ಬೆಳೆದು ಸಿರಿವಂತನಾದರೆ ಸಾಲದು ಊರೆಲ್ಲಾ, ನಾಡೆಲ್ಲ ಮಳೆ ಬೆಳೆಗಳಿಂದ ತುಂಬಿರಬೇಕೆಂಬುದು ಜನಪದರ ಹಾರೈಕೆ. ಅದು ಫಲಿಸಿದಾಗ ಅವರ ಆನಂದಕ್ಕೆ ಕೊನೆಯೇ ಇಲ್ಲ. ದೇವೇಂದ್ರನಂತ ಶ್ರೀಮಂತಗೌಡನ ಮೆದೆಗಳು ಗಗನದೆತ್ತರಕ್ಕೆ ನಿಂತಿರುವ ದೃಶ್ಯವನ್ನು ಹೇಳುವಲ್ಲಿ ರೈತರ ಸಂಕಷ್ಟಗಳೆಲ್ಲ ಕಳೆದು ಸುಖ ಸಮೃದ್ಧಿ ನೆಲೆಸುತ್ತದೆ. ಅಷ್ಟರಮಟ್ಟಿಗೆ ಮಳೆ ಕೃಷಿಕನ ಬದುಕಿನಲ್ಲಿ ಅವಿನಾಭಾವಸಂಬಂಧಿಯಾಗಿದೆ.

ಮಳೆರಾಯನ ಬರುವಿಕೆಯನ್ನು ಅದೆಷ್ಟು ಸೂಚ್ಯವಾಗಿ ಜನಪದರು ಹೇಳುತ್ತಾರೆಂದರೆ

ಆಕಾಶದಡವ್ಯಾಗ ಧೂಪದ ಹೊಗೆಯೆದ್ದು
ಆಯ್ತು ಮಲ್ಲಯ್ಯ್ನ ಶಿವಪೂಜೆ ಆಗ್ಯಾಗ
ಆಕಾಶದ ಗಂಟೆ ಢಣರೆಂದೊ

ಆಕಾಶದ ನಿಭಿಡಾರಣ್ಯದಲ್ಲಿ ದೂಪದ ಹೊಗೆಯಂತಹ ಕಪ್ಪು ಮಿಶ್ರಿತ ಮಳೆ ಮೋಡಗಳೆದ್ದು, ಸಂಚರಿಸಿ ಒಂದಕ್ಕೊಂದು ಡಿಕ್ಕಿ ಹೊಡೆದಾಗ ಆಯ್ತು ಮಲ್ಲಯ್ಯ್ನ ಶಿವಪೂಜೆ! ಎಂಬಂತೆ ಮಳೆರಾಯ ಧರೆಗೆ ಇಳಿದು ಬರುವ ಪರಿಯನ್ನು ವರ್ಣಿಸುತ್ತಾರೆ.

ಕೃಷಿಕ ಮನಸ್ಸಿನಲ್ಲಿ ಅಂದುಕೊಂಡಂತೆ ಮಳೆಹುಯ್ದು ಮೂಡಲ ಮುತ್ತಿನ ಕೆರೆಯಾದ ಕುಣಿಗಲು ಕೆರೆ ತುಂಬಿ ಹರಿಯುವ ಚಿತ್ರವನ್ನು ಅದ್ಭುತವಾಗಿ ವರ್ಣಿಸಿದ್ದಾರೆ.

ಸ್ವಾತಿಯ ಮಳೆಹುಯ್ದು ಸೀತೆಯ ಕೆರೆ ತುಂಬಿ
ಜೋತಾಡುತೈತೆ ಕುಣಿಗಲು ಕುಚ್ಚೀನಮೀನು
ಮುಂಗೈಯ ನೋಡಿ ನಗುತೈತೆ

ಹೀಗೆ ಕೆರೆ, ಕುಂಟೆಗಳು ತುಂಬಿ ಹರಿಯುವಂತೆ ಬರುತ್ತಿದ್ದ ಮಳೆ ಸಕಾಲಕ್ಕೆ ಬಾರದಿದ್ದಾರೆ ಕೃಷಿಕನಿಗಾಗುವ ಹಿಂಸೆ ಹೇಳತೀರದು. ತಡವಾದಾಗ ಆಗುವ ದುಸ್ಥಿತಿಯನ್ನು ಚಿತ್ರಿಸಿರುವ ಜನಪದರ ಬವಣೆ ಹೃದಯ ಸ್ಪರ್ಶಿಯಾದುದು.

ಆಕಾಶದಲ್ಲಿ ಯಾಕೆ ನಿಂತೊ ಮಳೆರಾಯ ?
ಗೊಂಬೆ ಹಚ್ಚಿಡಿದ ದೊರೆಮಗನ ಹೊಲದಲ್ಲಿ
ದುಂಡ್ಹುಕ್ಕಿ ಬಾಯಿ ಬಿಡುತವೆ -ಹಾಗೆಯೇ

ಅಂಬಾರದಲ್ಲಿ ಯಾಕೆ ನಿಂತೊ ಮಳೆರಾಯ
ತೋಪಿನ ಹಚ್ಚಿಡಿದ ದೊರೆಮಗನ ಹೊಲದಲ್ಲಿ
ಕಾಚಕ್ಕಿ ಬಾಯಿ ಬಿಡುತಾವೆ

ಆಕಾಶದಲ್ಲೆ ಬೀಡುಬಿಟ್ಟಂತೆ ಎಷ್ಟು ಕಾಲವಾದರೂ ಮಳೆ ಬಾರದಿದ್ದಾದಾಗ ಬೆಳೆದ ಬೆಳೆ ಕೈ ಸೇರದೆ, ಮಳೆಗಾಗಿ ನಿರಂತರ ಹಾರೈಸುತ್ತಿರುವ ರೈತರ ಬವಣೆ, ಹೊಲದಲ್ಲಿರುವ ಸಮೃದ್ಧ ಬೆಳೆ ಮಳೆಯಿಲ್ಲದೆ ಆಕಾಶಕ್ಕೆ ಬಾಯಿ ಬಿಡುತ್ತಿರುವ ಸ್ಥಿತಿಯನ್ನು ಈ ಮೇಲಿನ ತ್ರಿಪದಿಗಳು ಸೂಕ್ಷ್ಮವಾಗಿ ತಿಳಿಸಿಕೊಡುತ್ತವೆ.

ತೋಟದ ಸಾಲು ಮಳೆಯಿಲ್ಲದೆ ಕಂಗಾಲಾಗಿರುವ ದೃಶ್ಯವನ್ನು

ಅಂಬಾರದಲ್ಲಿ ತುಂಬಿದಂಗಿರುವೋನೆ
ಗೊಂಬೆ ಹಚ್ಚಿಡಿದ ಮಳೆರಾಯ ನೀನಿಲ್ಲದೆ
ಸಾಲು ಹೊಂಬಾಳೆ ಬಳಲ್ಯಾವೊ ದೇವೇಂದ್ರ
ಕಂಚಿನ ಹಣವಾಗಿ ಸುರಿಬಾರೊ

ಎಂದು ಹಾಡುವಲ್ಲಿ ಮುಂಗಾರು ಮಳೆಯ ಬಿರು ಹೊಯ್ಲು ಕಂಚಿನ ಹಣ ಕಲ್ಲಿನ ಮೇಲೆ ಸುರಿದ ಶಬ್ಧವನ್ನು, ಬಾರದ ಮಳೆಗಾಗಿ ಕೃಷಿಕರು ಪರಿತಪಿಸುತ್ತಾ ಬೇಡುವ ಪರಿಯನ್ನು ತಮ್ಮದೇ ಕಲ್ಪನೆಯಲ್ಲಿ ಸಹಜ ಸುಂದರವಾಗಿ ವರ್ಣಿಸಿದ್ದಾರೆ.

ಅಪ್ಪ ! ನೀನಿಲ್ಲದೆ ಬೆಪ್ಪಾದೊ ಈ ಭೂಮಿ
ಬಿಟ್ಟನೂಲಾದೊ ದನಕರ ಮಳೆರಾಯ
ಅಂಬರದ ಕರುಣೆ ದಯಮಾಡೊ

ಮಳೆರಾಯನನ್ನು 'ಅಪ್ಪ'ನೆಂದು ಕರೆದು ತಂದೆಯಂತೆ ನಿರಂತರ ಕಾಪಾಡುವವನು ಎಂಬುದಾಗಿ ಅರ್ಥೈಸಿದ್ದಾರೆ. ಮಳೆಯಿಲ್ಲದೆ ರೈತರು ತಬ್ಬಲಿಗಳಾಗಿದ್ದಾರೆ. ದನಕರುಗಳಿಗೆ ಮೇವಿಲ್ಲದೆ ದಿಕ್ಕು ತಪ್ಪಿ ಓಡುವಂತಾಗಿದೆ ಎಂಬ ಚಿತ್ರಣವನ್ನು ಕಣ್ಮುಂದೆ ಕಟ್ಟಿಕೊಡುವ ಈ ತ್ರಿಪದಿಗಳು ನಿತ್ಯನೂತನವಾದವು.

ಕೃಷಿಕ ಮಳೆಯಿಲ್ಲದೆ ದವಸ ಧಾನ್ಯಗಳನ್ನು ಬೆಳೆಯಲಾಗುತ್ತಿಲ್ಲ. ಕೂಡಿಟ್ಟ ದವಸಗಳೆಲ್ಲ ಮುಗಿದು ತಿನ್ನಲಿಕ್ಕೆ ಏನೂ ಸಿಗದೆ ಮಕ್ಕಳನ್ನೇ ಮಾರುವ ಸ್ಥಿತಿಗೆ ಬಂದಿದ್ದಾರೆ.

ಒಕ್ಕಲಗೇರಿಯಲ್ಲಿ ನಡೆಯುತ್ತಿರುವ ದುರಂತವನ್ನು ಚಿತ್ರಿಸುವ,

ಒಕ್ಕಲ ಗೇರ್‍ಯಾಗಿ ಮಳಿರಾಜಾ ಅವರು
ಮಕ್ಕಳ ಮಾರ್‍ಯಾರ ಮಳಿರಾಜಾ
ಮಕ್ಕಳಮಾರಿ ರೊಕ್ಕ ಹಿಡಕೊಂಡು
ಬತ್ತ್ಂತ ತಿರುಗ್ಯಾರ ಮಳಿರಾಜಾ

ಸ್ವಂತ ಮಕ್ಕಳನ್ನು ಮಾರಿ ಹಣವನ್ನು ಪಡೆದರೂ ಆ ಹಣಕ್ಕೆ ಬತ್ತಕೊಡುವವರಿಲ್ಲದೆ ಮನೆಯಿಂದ ಮನೆಗೆ ಅಲೆಯುವ ಧಾರುಣ ದುಸ್ಥಿತಿಯನ್ನು ಈ ಹಾಡು ಧ್ವನಿಸುತ್ತದೆ.

ರೈತ ತನ್ನ ಬದುಕಿನ ಬವಣೆಯನ್ನು ಎಷ್ಟೇ ಬಗೆಬಗೆಯಾಗಿ ಹೇಳಿಕೊಂಡರೂ ಮಳೆ ಬಾರದಿದ್ದಾಗ, ಕೊನೆಯದಾಗಿ ಎಂಬಂತೆ ಮಳೆರಾಯನನ್ನು ಕೇಳುವ ಪ್ರಶ್ನೆ ಅತ್ಯಂತ ಬೆಲೆಯುಳ್ಳದ್ದಾಗಿದ್ದು ವ್ಯಂಗ್ಯದಿಂದ ತುಂಬಿದೆ.

ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದಾವು
ಯಾವಾಗ ಬಂದೆಪ್ಪಾ ಮಳಿರಾಜಾ

ಎಂಬುದಾಗಿ ಮಳೆಯಿಲ್ಲದೆ ಬೆಂದು ಬಸವಳಿದ ರೈತ ಮಳೆರಾಯನನ್ನು ವ್ಯಂಗ್ಯವಾಗಿ ಎಲ್ಲರೂ ಸತ್ತು ಹಳ್ಳ ಕೊಳ್ಳದಲ್ಲಿ ಹೆಣವಾಗಿ ಬಿದ್ದಿದ್ದಾರೆ. ನೀ ನ್ಯಾವಾಗ ಬರುವೆ ? ಎಂಬ ವ್ಯಂಗ್ಯಭರಿತ ಅನುಭವಜನ್ಯ ನುಡಿ ಬಹುತೂಕವುಳ್ಳದಾಗಿದೆ.

ಮಳೆಬಾರದೆ ಎಷ್ಟೊಂದು ಕಷ್ಟ - ಕಾರ್ಪಣ್ಯಗಳು ಎದುರಾದರೂ ಧೃತಿಗೆಡದೆ ಮಳೆರಾಯನನ್ನು ಕ್ಷಮಿಸಿ ನಡೆಯುವ ಜನಪದರ ತಾಳ್ಮೆ ಮೆಚ್ಚತಕ್ಕದ್ದು.

ಮಳೆ ಹೊಯ್ತೆಂದು ಮಳೆರಾಯ್ನ ಬಯ್ಯದಿರಿ
ಸಾವಿರ ಹೊನ್ನಿನ ಸರಗಂಟ ತಕ್ಕೊಂಡು
ಸಾಲಕ್ಕೆ ಹೋಗ್ಯವನೆ ಮಳೆರಾಯ
ಹತ್ತು ಸಾವಿರದ ಹಡಗಿನ ಏರಿಮ್ಯಾಲೆ
ಸಾಲಕ್ಕೆ ಹೋಗ್ಯವನೆ ಮಳೆರಾಯ

ಎಂಬ ಮಾತುಗಳು ಜನಪದರ ಮುಗ್ಧ ಭಾವವನ್ನು ಎತ್ತಿ ಹಿಡಿದಿವೆ. ಮಳೆರಾಯ ಸಾವಿರ ಹೊನ್ನಿನ ಸರಗಂಟನ್ನು ತೆಗೆದುಕೊಂಡು ಶಿವನ ಬಳಿ ಮಳೆಯನ್ನು ತರಲು ಹೋಗಿದ್ದಾನೆಂಬ ಅದ್ಭುತ ಕಲ್ಪನೆಯುಳ್ಳವರು. ತಡವಾಗಿಯಾದರೂ ಮಳೆರಾಯ ಬರುತ್ತಾನೆಂಬ ನಂಬಿಕೆ ಅವರದು.

ತಿನ್ನಲು ಆಹಾರವಿಲ್ಲದೆ ಪರಿತಪಿಸುವಾಗ, ಬಾರದ ಮಳೆ ಬಂದು ಮತ್ತೆ ಕೃಷಿಯ ಚಟುವಟಿಕೆಯನ್ನು ಆರಂಭಿಸುವ ಪರಿಯನ್ನು ಈ ಹಾಡಿನಲ್ಲಿ ನೋಡಬಹುದು.

ಹತ್ತೈರು ಕಟ್ಟಿ ಮತ್ತೆ ಮಳೆರಾಯ ಬಂದ
ಮುತ್ತು ಚೆಲ್ಲಯ್ಯ ಹೊಲಕೆಲ್ಲ ಅಣ್ಣಯ್ಯ
ಮತ್ತೆ ಧಾನ್ಯವು ಬೆಳೆಯಾಲಿ

ಎಂಬುದಾಗಿ ತಂಗಿ, ಅಣ್ಣನಿಗೆ ಸಾಂತ್ವಾನವನ್ನು ಹೇಳುತ್ತಾಳೆ.

ಮಳೆರಾಯನನ್ನು ಕುರಿತ ಹಾಡುಗಳು ಇವಾದರೆ ಮಳೆಬರಲೆಂದು ಬೇಡಿ ಕೆಲವೊಂದು ಆಚರಣೆಗಳನ್ನು ಮಾಡುವುದು ರೂಢಿ. ಕೃಷಿ ಎಲ್ಲೆಡೆಯಂತೆ ಒಂದೇ ಆದರೂ ಭೌಗೋಳಿಕವಾಗಿ ಮಲೆನಾಡು ಬಯಲುನಾಡುಗಳಲ್ಲಿ ಬೇಸಾಯದ ಕ್ರಮಗಳು ಬೇರೆಯಾಗಿವೆ. ಮಲೆನಾಡಿನಲ್ಲಿ ಮಳೆ ಹೆಚ್ಚು ಆದರೆ ಕೃಷಿ ಭೂಮಿ ಕಡಿಮೆ, ಬಯಲುನಾಡಿನಲ್ಲಿ ಕೃಷಿ ಭೂಮಿ ಯಥೇಚ್ಛವಾಗಿದ್ದರೂ ಸಕಾಲಕ್ಕೆ ಮಳೆ ಬಾರದೆ ಹಲವಾರು ತೊಂದರೆಗಳು ಉಂಟಾಗುತ್ತವೆ. ಆಗ ಸಾಕಷ್ಟು ಜನಪದ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ಆ ಹಿನ್ನೆಲೆಯಲ್ಲಿ ಮಳೆರಾಯನ ಕುರಿತ ಪೂಜೆ, ಆಚರಣೆಗಳು, ಜರುಗುತ್ತವೆ. ತಿಂಗಳು ಮಾವನ ಪೂಜೆ, ಕುಂತೆಮ್ಮನ ಪೂಜೆ, ಬಿದ್ದ ಹನುಮಪ್ಪನ ಪೂಜೆ, ಮಳೆ ಮಲ್ಲಪ್ಪನ ಪೂಜೆ, ಗುಳ್ಳವ್ವನ ಪೂಜೆ, ಅರಲೆಬಸವನ ಪೂಜೆ ತಾರ್ಲೆ, ಭೂಮಿ ಹುಣ್ಣಿಮೆ, ಮಳೆರಾಯನ ಪೂಜೆ, ಭೂಮಿಪೂಜೆ ಹೀಗೆ ಮಳೆರಾಯನನ್ನು ಕುರಿತು ಪೂಜೆ ಪುನಸ್ಕಾರಗಳು ಜರುಗುತ್ತವೆ. ತಿಂಗಳುಮಾವನ ಪೂಜೆಯಲ್ಲಿ ಮಕ್ಕಳು

ಬಾರೊ ಬಾರೊ ಮಳೆರಾಯ
ಬಾಳೆ ತೋಟಕೆ ನೀರಿಲ್ಲ
ಉಯ್ಯೋ ಉಯ್ಯೋ ಮಳೆರಾಯ
ಹೂವಿನ ತೋಟಕ್ಕೆ ನೀರಿಲ್ಲ

ಎಂಬುದಾಗಿ ಹಾಡುತ್ತಾರೆ. ಬಾರದ ಮಳೆಯನ್ನು ಕುರಿತು ಹಾಡುವ ಹಾಡುಗಳು ನೀರಿಲ್ಲದೆ ಒಣಗಿ ನಿಂತ ಬಾಳೆಯ ತೋಟ, ಹೂವಿನ ತೋಟಗಳನ್ನು ನೆನಪಿಸುತ್ತವೆ. ಹಾಗೆಯೇ ಕೊಂತಿ ಪೂಜೆಯಲ್ಲಿ ಪಾಂಡವರು ವನವಾಸದ ಸಂದರ್ಭದಲ್ಲಿ ಕೃಷಿಕರಾಗಿ ಪಟ್ಟ ಪಾಡನ್ನು ಕುರಿತು ಜನಪದರು ವರ್ಣಿಸುವ ಪರಿ;

ಸತ್ಯವುಳ್ಳ ಧರಮಾರು ಸತ್ತರು ಎನ್ನದೀರಿ
ಸತ್ತರೀ ಭೂಮಿ ಬೆಳೆಯದು ಪಾಂಡವರು
ಬಿತ್ತಿ ಹೋಗ್ಯವರೆ ಅವರೆಯ

ಎಂಬುದಾಗಿ ಪಾಂಡವರ ನೆನಪುಮಾಡಿಕೊಳ್ಳುತ್ತಾ ಅವರ ಆದರ್ಶ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರಚಲಿತವಿರುವ ಅವರೆಯ ಧಾನ್ಯವು ಪಾಂಡವರ ನೆನಪಿನಲ್ಲಿ ಅಚ್ಚ ಹಸುರಾಗಿ ಉಳಿದಿದೆ ಎಂಬ ಸತ್ಯವನ್ನು ಹಾಡಿನಲ್ಲಿ ಕಟ್ಟಿಟ್ಟಿದ್ದಾರೆ. ಆ ಮೂಲಕ ಬದುಕನ್ನು ನಿರ್ಮಿಸಿಕೊಳ್ಳಲು ತೊಡಗುವ ಜನಪದರ ಅರ್ಥವಂತಿಕೆ ಹಿರಿದಾದುದು.

ಕೃಷಿಗೆ ಸಂಬಂಧಿಸಿದಂತೆ ಬಿತ್ತಿದ ಬೆಳೆಯನ್ನು ಹಸನು ಮಾಡುವ ಸಂದರ್ಭದಲ್ಲಿ ಹಾಡುವ ಹಾಡುಗಳು ಹಂತಿಯಹಾಡುಗಳು. ಇವನ್ನು ಹಂತಿ

ಹೊಡೆಯುವಾಗ ಗಂಡಸರು ಹಾಡುತ್ತಾರೆ. ಸುಗ್ಗಿಯ ಸಂಭ್ರಮವನ್ನು ಕೃಷಿಯ ಆರಂಭದಿಂದಿಡಿದು ಅಂತ್ಯದವರೆಗೂ ವಿವಿಧ ಸ್ತರಗಳಲ್ಲಿ ತಮ್ಮ ಬದುಕಿನ ನೋವು - ನಲಿವುಗಳನ್ನು ಕೃಷಿಯಲ್ಲಿ ಕಂಡುಂಡ ಅನುಭವಗಳಲ್ಲಿ ಹಾಡಾಗಿಸಿದ್ದಾರೆ. ಆ ಮೂಲಕ ಹಂತಿ ಹೊಡೆಯುವ ಶ್ರಮವನ್ನು ಬೇಸರವನ್ನು ಮರೆಯಲು ಶೃಂಗಾರ, ಹಾಸ್ಯಗಳ ಜೊತೆ ಜೊತೆಗೆ ಸಮಸ್ತ ಬದುಕಿನ ಚಿತ್ರವನ್ನು ವ್ಯಕ್ತಪಡಿಸುತ್ತಾರೆ. ಆರಂಭದಲ್ಲಿ ಭೂಮಿತಾಯಿ, ಮಳೆ, ಬಸವಣ್ಣ ಹೀಗೆ ವಿವಿಧ ಬಗೆಯ ವಸ್ತು ವಿಷಯಗಳು ಹಂತಿಯ ಹಾಡುಗಳಾಗಿ ಹೊರ ಹೊಮ್ಮುತ್ತವೆ.

ಒಟ್ಟಾರೆ ಕೃಷಿ ಸಂಸ್ಕೃತಿಯ ಇಡೀ ಚಿತ್ರಣವನ್ನು ಕಣ್ಮುಂದೆ ತಂದು ನಿಲ್ಲಿಸುತ್ತವೆ.

ಮೊದಲು ಹಂತಿಗೆ ಶರಣು ಶಂಕರ ಗಂಡಂಗೆ ಶರಣು
ಭೂಮಿತಾಯಿಗೆ ನಮ ಶರಣು ನಮ ಬಸವನ
ನಾಕು ಪಾದಕೆ ಶಿವಶರಣು

ಕೃಷಿಕನಿಗೆ ಭೂಮಿತಾಯಿ ಕೇವಲ ಭೂಮಿಯಲ್ಲ ಜನ್ಮ ನೀಡಿದ ತಾಯಿಗಿಂತಲೂ ಮಿಗಿಲು ಹಾಗಾಗಿಯೆ ಭೂಮಿತಾಯಿ ಎಂದು ಸಂಬೋಧಿಸಿ ಅದಕ್ಕೊಂದು ಮಹತ್ತರವಾದ ಅರ್ಥವನ್ನು ನೀಡಿರುವುದು. ಅವಳನ್ನು ಸರಿಸಮನಾಗಿ ವರ್ಣಿಸಲು ಪದಗಳಿಲ್ಲ. ಬೆಳಗಾಗಿ ಎದ್ದು ನಮಿಸುವ ಮೂಲಕ ಕೃತಜ್ಞರಾಗುವ ಮನಸ್ಸು ಜನಪದರದು. ಬಿತ್ತಿದ ಬೆಳೆ ಕೈ ಸೇರಿದ ಸಂತಸವನ್ನು ಹೊಸ ಹುರುಪಿನಿಂದ ಹಾಡು ಹೇಳುತ್ತಾ ಆಯಾಸವನ್ನು ಮರೆಯುತ್ತಾನೆ.

ಕೃಷಿಯ ವೈವಿಧ್ಯಮಯವಾದ ಪ್ರತಿ ಹಂತದಲ್ಲಿಯೂ ಬಸವ ರೈತನಿಗೆ ಸಂಗಾತಿಯಾಗಿರುತ್ತಾನೆ. ಅವನ ಬಗ್ಗೆ ಎಲ್ಲಿಲ್ಲದ ಗೌರವ ತುಂಬಿದ ಪೂಜ್ಯಭಾವನೆವಿದೆ.

ಎತ್ತು ಎಂದೆನಬೇಡ ಎಡಚೋರಿ ಬಸವಾನ
ಹತ್ತು ದಿಕ್ಕಿಗೆ ಸಲವೋನ ನಮ್ಮ ಬಸವ
ಹೆಜ್ಜೆಗೆ ಹುರಿಗೆಜ್ಜೆ ಬಿಗಿಸೇನೂ

ಎಂಬುದಾಗಿ ಹಾಡಿ ಹೊಗಳುತ್ತಾರೆ. ಬೇಸಾಯವನ್ನು ನೋಡಿದ ಯಾರಿಗೇ ಆದರೂ ಸಂತಸವಾಗುವಂತೆ ರೈತನೊಂದಿಗೆ ದುಡಿದ ಬಸವನನ್ನು ಎತ್ತು ಎಂದು ಕರೆಯಬೇಡಿ ಎಂಬುದಾಗಿ ಎಚ್ಚರಿಸುತ್ತಾನೆ.

ಕೃಷಿಕನೊಂದಿಗೆ ದುಡಿದು ಸಾಕಾದ ಬಸವಣ್ಣನನ್ನು ವಿಶ್ರಮಿಸಲು ಬಿಟ್ಟಾಗ ಆತನ ಹಾವ - ಭಾವಗಳನ್ನು ವರ್ಣಿಸುವ ಪರಿ.

ತುಂಬೇದ ಹೊಳೆಯಾಗ ಕೊಂಬ ಕಾಣುಸುತಾವ
ಬಂಗಾರದಿಣೆಯ ಬಸವಣ್ಣ ಕಡಪಟ್ಟಿ
ಇಂಬ ಬಯಲಾಗ ನೆಗದಾಗ

ಹಾಗೆಯೇ ಬಸವನನ್ನು ಮೈ ತೊಳೆದು ಮೇಯಲು ಬಿಟ್ಟಾಗ ಅದು ಎಲ್ಲೆಲ್ಲಿ ಮೇವನ್ನು ತಿನ್ನುತ್ತದೆ, ನೀರನ್ನು ಕುಡಿಯುತ್ತಿದೆ ಎಂಬುದನ್ನು

ಅಜವಾರ ಭೂಮ್ಯಾಗ ಅಡ್ಡಾಡಿ ಮೇದಾನ
ಆಗರಾಣು ನೀರ ಕುಡದಾನ ಕಿಳಿಗಾಳಿ ಬಸವ
ಆರಂಬ ನೋಡಿ ನೆನದಾನ

ಬಸವಣ್ಣನನ್ನು ಅಭಿಮಾನದಿಂದ ಹೊಗಳುವ ಪರಿ;

ಕರಿ ಎತ್ತು ಕಾಳಿಂಗ ಬಿಳಿ ಎತ್ತು ಮಾಲಿಂಗ
ಸರದಾರ ನನ್ನೆತ್ತು ಸಾರಂಗ ಬರುವಾಗ
ಸರಕಾರವೆಲ್ಲ ನಡಿಗೋತೊ

ಎಂಬುದಾಗಿ ಬಸವನ ಸರಿಸಾಟಿ ಯಾರು ಇಲ್ಲ ಎಂಬುದಾಗಿ ಹಾಡಿ ಹೊಗಳುತ್ತಾರೆ.

ಬಸವಣ್ಣನ ಸಾಹಸವನ್ನು ವರ್ಣಿಸುವ ಪರಿ;

ಜೋಳದಣಿತಿ ಕಟ್ಟಿ ನಾಳಿಗೆ ತಿಂಗಳಾತು
ಆನಿ ತುಳಿದರ ಸವದಿಲ್ಲ ಬಸವಣ್ಣ
ಪಾದ ಇಟ್ಟಲ್ಲಿ ನುಗ್ಗೆದ್ದೊ

ಎಂಬಲ್ಲಿ ಬಸವಣ್ಣನಿಗಿಂತ ಗಾತ್ರದಲ್ಲಿ ಬಲಿಷ್ಠವಾದ ಆನೆ ತುಳಿದರು ಸವೆಯದ ಧಾನ್ಯಗಳು ಬಸವ ತುಳಿದರೆ ಸಾಕು ! ಎಂಬ ಉದ್ಗಾರ. ಬಸವನ ಕಾಯಕಕ್ಕೆ ರೈತ ಕೊಡುವ ಹೋಲಿಕೆ ಅಗಾಧ ಹಾಗೂ ಅಮೋಘವಾದುದು.

ಬೆಳೆದ ಬೆಳೆಯನ್ನು ಕಣದಲ್ಲಿ ಕಂಡ ರೈತನ ಸಂತಸವನ್ನು ವ್ಯಕ್ತಪಡಿಸುವ ದೃಶ್ಯ.

ಸುಗ್ಗಿಯ ಕಣಕೇಳೋ ಸಗ್ಗವರು ರೈತನಿಗೆ
ಹಿಗ್ಗು ಹಾಡುವದಕೆ ಬೆಳುವಲವು ಮಲಯ್ಯ
ಬುಗ್ಗೆ ಕುಣಿಯುವಕೆ ಶಿವರೂಪ

ಎಂಬುದಾಗಿ ವರ್ಣಿಸುತ್ತಾರೆ.

ಕಣದೊಳಗೆ ದುಡಿದ ಒಕ್ಕಲಿಗ ತನ್ನ ದುಡಿಮೆಯ ಫಲವನ್ನು ಜಂಗಮನಿಗೆ ಮೀಸಲಿಡುವ ಪರಿ.

ಕಣದೊಳಕ ಒಕ್ಕಲಿಗ ಧನಿಯೆತ್ತಿ ಬೆಳತನಕ
ಧನಿಯೆಂದು ಹಾಡಿ ಬೆಳಕೊಂಡು | ಒಕ್ಕವನು
ಕಣರಾಶಿ ಉಳಿಸಿ ಜಂಗಮಕ |

ಎಂಬಲ್ಲಿ ಬೆಳೆದ ದವಸ ಧಾನ್ಯಗಳನ್ನು ಮೊದಲು ಜಂಗಮರಿಗೆ ದಾನಮಾಡಿ ಅನಂತರ ವರುಷವಿಡೀ ಸೇವೆಯನ್ನು ಸಲ್ಲಿಸಿದ ಅರ್ಚಕರಿಗೆ, ಅಗಸರಿಗೆ, ಕ್ಷೌರಿಕರಿಗೆ ಇಂತಿಷ್ಟು ಎಂದು ಮೀಸಲಿಡುತ್ತಾನೆ. ಮನತುಂಬಿ ಸಂತಸದಿಂದ ದಾನಮಾಡುತ್ತಾನೆ.

ಕೃಷಿಕನ ರಸಿಕ ಜೀವನ ಸಾರವನ್ನು ಬಿಂಬಿಸುವ ಈ ಹಾಡು;

ಊರ ಮುಂದಲ ಹೊಲ ನೀ ಮಾಡೊ
ನಿನ್ನ ನೋಡಿ ನೀರಾ ತರವೇನಿ ನನಗೆಣೆಯ
ನೀ ಬಾ ಅಂದಾಗ ನಾ ಬರತೀನಿ

ಎಂಬುದಾಗಿ ಊರ ಮುಂದಿನ ಹೊಲದಲ್ಲಿ ಕೆಲಸ ಮಾಡುವಾಗ ನಾನು ನೀರು ತರುವ ನೆಪದಲ್ಲಿ ನಿನ್ನನ್ನು ನೋಡಬಹುದೆಂದು ಸರಸ - ಸಲ್ಲಾಪದ ನುಡಿಗಳನ್ನು ಈ ತ್ರಿಪದಿಗಳು ಸೊಗಸಾಗಿ ವರ್ಣಿಸುತ್ತವೆ. ತನ್ನ ಸಂಗಾತಿಯೊಂದಿಗೆ ಪ್ರತಿದಿನದ ನೋವು ನಲಿವುಗಳನ್ನು ಮರೆತು ಮೈಮರೆಯುವ ಕೃಷಿಕ ತನ್ನ ಬಯಕೆಗಳೆಲ್ಲವನ್ನು ಹಾಡಾಗಿಸಿದ್ದಾನೆ.

ಹೀಗೆ ಕೃಷಿಯನ್ನು ಕುರಿತಾಗಿ ಜನಪದರು ತಮ್ಮ ಅನುಭವಗಳನ್ನೆಲ್ಲ ಹಾಡಾಗಿಸಿದ್ದಾರೆ. ಆ ಹಾಡು ಇಂದು ನಮಗೆ ಕೃಷಿಯ ನೆಲೆ - ಬೆಲೆಗಳನ್ನು

ಅರಿಯಲು ಸಹಕಾರಿಯಾಗಿದೆ. ಆದರೆ ಇಂದು ಕೃಷಿಯ ಪಾರಂಪರಿಕ ನಡಾವಳಿ ನಿಂತು ಆಧುನಿಕತೆಯ ಜೀವನ ಮಾದರಿಗೆ ಸರಿಹೊಂದುವ ಐಸರಾಮಿ ಯಂತ್ರೋಪಕರಣಗಳು ಕೃಷಿ ಕ್ಷೇತ್ರದಲ್ಲಿ ಕಾಲಿರಿಸಿವೆ. ಕೃಷಿಕನನ್ನು ದೇಶದ ಬೆನ್ನೆಲುಬು ಎಂದಿರುವುದು ಔಚಿತ್ಯ ಪೂರ್ಣವಾಗಿದೆ. ಆತ ಪ್ರಪಂಚದ ಜನರೆಲ್ಲರಿಗೂ ಅನ್ನ ನೀಡುವ ಅನ್ನದಾತ ಎಂಬ ಬಗ್ಗೆ ಹೆಮ್ಮೆ ಇದೆ. ಆದರೆ ಇಂದು ಕೃಷಿಕ ನಷ್ಟದಲ್ಲಿ ಸಿಲುಕಿದ್ದಾನೆ. ಮಧ್ಯವರ್ತಿಗಳ ಹಾವಳಿ, ಸಕಾಲಕ್ಕೆ ಬಾರದ ಮಳೆ, ಕಾಡುಗಳ ನಾಶ, ಆಧುನಿಕ ಯಂತ್ರೋಪಕರಣಗಳ ದುಬಾರಿ ಬೆಲೆ, ರಸಗೊಬ್ಬರಗಳ ಹಾವಳಿಯಿಂದಾಗಿ ಕೃಷಿ ಶ್ರಮದಾಯಕ ಹಾಗೂ ನಷ್ಟದಲ್ಲಿ ಸಿಲುಕಿದೆ. ಬೆಳೆ ನಿರೀಕ್ಷಿಸಿದ ಮಟ್ಟವನ್ನು ತಲುಪಿದರೂ, ಕೃಷಿ ಯೋಗ್ಯ ಭೂಮಿಯನ್ನೂ ಮಾರಾಟ ಮಾಡಿ ಆಧುನಿಕತೆ, ತಂತ್ರಜ್ಞಾನ, ಜನಸಂಖ್ಯಾ ಹೆಚ್ಚಳದ ಕಾರಣ ವಾಸ ಯೋಗ್ಯ ಮನೆ ತಲೆ ಎತ್ತುತ್ತಿವೆ. ಈ ಕಾರಣದಿಂದ ದೇಶದ ಜನರಿಗೆ ಆಹಾರವನ್ನೊದಗಿಸಲು ಸಾಲದಾಗಿದೆ. ಹಣದ ವ್ಯಾಮೋಹಕ್ಕೆ ಇಲ್ಲವೇ ರೈತನ ಯಾವುದೋ ಸಂಕಷ್ಟಕ್ಕೆ ಭೂಮಿ ಇಂದು ಮಾರಾಟವಾಗುತ್ತಿದೆ. ಉತ್ಪಾದನೆ ಕಡಿಮೆ, ಕೊಂಡುಕೊಳ್ಳುವಿಕೆ ಹೆಚ್ಚಿದ್ದರಿಂದ ಬೆಲೆ ಹೆಚ್ಚಾಗಿದೆ. ಈ ಎಲ್ಲಾ ಕಾರಣಕ್ಕಾಗಿ ಆಹಾರ ಉತ್ಪಾದನೆಗಾಗಿ ನಿರ್ದಿಷ್ಟ ಭೂಮಿಯನ್ನು ಕಾಯ್ದಿರಿಸಬೇಕಾಗಿದೆ. ಕೃಷಿ ಯೋಗ್ಯ ಭೂಮಿಯನ್ನು ಕಾಪಾಡಿಕೊಳ್ಳುವ ಪ್ರಯತ್ನವಾಗಬೇಕು. ಇಲ್ಲದಿದ್ದರೆ ಬೃಹತ್ತಾದ ಆಹಾರದ ಸಮಸ್ಯೆ ತಲೆ ಎತ್ತುವ ಸಾಧ್ಯತೆಗಳಿವೆ. ಪಿತ್ರಾರ್ಜಿತ ಆಸ್ತಿಯನ್ನು ಮಾರದಂತೆ ಕಾನೂನು ಮಾಡಬೇಕಾಗಿದೆ. ಕೃಷಿ ಯೋಗ್ಯ ಭೂಮಿಯನ್ನು ಮಾರುವವನಿಗೂ, ಕೊಳ್ಳುವವನಿಗೂ ದಂಡವಿಧಿಸುವಂತೆ ಕಾನೂನು ರಚನೆಯಾಗಬೇಕು.

ದೇಶದಲ್ಲಿ ಶೇ. 75 ಕೃಷಿಕರಿರುವ ಭಾರತ ಇಂದು ಏನಾಗಿದೆ; ಏನಾಗಬಹುದು ಎಂಬ ಪ್ರಶ್ನೆ ಬೃಹದಾಕರವಾಗಿ ನಮ್ಮ ಮುಂದೆ ನಿಂತಿದೆ. ಹಿಂದಿನ ಕೃಷಿ ಭೂಮಿಯಲ್ಲಿದ್ದ ಎರೆಹುಳು, ಹಕ್ಕಿಗಳ ಕಲರವ, ನವಿಲುಗಳು, ನರಿ, ಕಾಡುಹಂದಿ ಇತರೆ ಪ್ರಾಣಿ ಪಕ್ಷಿಗಳು ಇಂದು ಕಾಣದಾಗಿವೆ. ಆಹಾರ ಇಂದು ನಮಗೆ ರುಚಿಸದಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಅಲ್ಲೊಂದು ಇಲ್ಲೊಂದು ಸಾವಯುವ ಕೃಷಿ ನಡೆಯುತ್ತಿರುವುದು ಸಂತಸದ ವಿಚಾರ. ಆದರೆ ಜೊತೆ ಜೊತೆಗೆ ಸಾವಯುವ ಕೃಷಿಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರಕಾರ, ಸಂಘಸಂಸ್ಥೆಗಳು ಮುಖ್ಯವಾಗಿ ರೈತನಿಗೆ ಬೆನ್ನೆಲುಬಾಗಿ ನಿಲ್ಲಬೇಕಾಗಿದೆ. ಆತ ಶ್ರಮಪಟ್ಟು ದುಡಿದ ಫಲವನ್ನು ಗೌರವಿಸಿ ನೇರವಾಗಿ ಖರೀದಿಮಾಡುವ ಮೂಲಕ ಪ್ರೋತ್ಸಾಹಿಸಿದರೆ ಆತನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ. ಯುವ ಕೃಷಿಕರನ್ನು ಪ್ರೋತ್ಸಾಹಿಸಿ ಆ ಮೂಲಕ ಉಳಿದಿರುವ ಕೃಷಿ ಯೋಗ್ಯ ಭೂಮಿಯನ್ನು ಉಳಿಸುವತ್ತ ಉತ್ತಮ ಚಿಂತನೆಗಳು ಮೂಡಲಿ ಮತ್ತೆ ಹಿಂದಿನ ಕೃಷಿ ಜೀವನವನ್ನು ಕೇವಲ ನೆನಪು ಮಾಡಿಕೊಳ್ಳುವ ಹಾಗಾಗದಿರಲಿ. 'ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಬಗು" ಎಂಬಂತೆ ಕಾಲ ತಕ್ಕಂತೆ ಹಳೆಯದರ ಜೊತೆ ಜೊತೆಗೆ ಹೊಸ ಹೊಸ ಚಿಂತನೆಗಳು ಮೂಡಿ ಬರಲಿ ಕೃಷಿ ನಮ್ಮೆಲ್ಲರ ಆಸ್ತಿಯಾಗಲಿ ಅಳಿದುಳಿದ ಭೂಮಿಯನ್ನು ಜೋಪಾನವಾಗಿ ಕಾಯ್ದಿರಿಸುವ ಮುಂದಿನ ಪೀಳಿಗೆಗಾಗಿ.

ಎಸ್.ಕೆ.ಎನ್.

ಕಪಿಲಿ (ಕಪಿಲೆ) ಆಂಧ್ರಪ್ರದೇಶದ ರಾಯಲಸೀಮೆ ಪ್ರಾಂತ್ಯದಲ್ಲಿ ಸುಮಾರು ಮೂವತ್ತು ನಲ್ವತ್ತು ವರ್ಷಗಳ ಹಿಂದೆ ವ್ಯಾಪಕವಾಗಿದ್ದು, ರೈತನ ಬೆನ್ನೆಲುಬಾಗಿದ್ದ, ಒಣ ಬೇಸಾಯದಲ್ಲಿ ಹೆಚ್ಚಿನ ಪಾಲು ನೀರು ಪೂರೈಸುತ್ತಿದ್ದ ಕಪಿಲೆ ಈಗ ಕಣ್ಮರೆಯಾಗಿದೆ.

ಕಪಿಲಿ ಸಂಬಂಧಿ ವಿಚಾರಗಳು : ಬಾವಿ ಅಗೆಯುವುದು; ಪಿಲ್ಲಬಾವಿ; ಬುರುಜು ನಿರ್ಮಾಣ; ದೋಣಿ ಮತ್ತು ಬಾರಿಯ ನಿರ್ಮಾಣ; ಕಪಿಲೆ ಬಾನಿ ಹೊಲಿಯುವುದು; ಕಪಿಲೆ ಹೊಡೆಯುವುದಕ್ಕೆ ಬೇಕಾಗುವ ಎತ್ತುಗಳು; ಮೋಕುತಾಡು (ಹತ್ತು ಅಥವಾ ಹನ್ನೆರಡು ಹುರಿ ಹಗ್ಗ) ತೊಂಡ್ಲಂತಾಡು (ಐದು ಅಥವಾ ಆರು ಹುರಿ ಹಗ್ಗ) ನೊಗ, ಎತ್ತಿನ ಕತ್ತಿನ ಪಟ್ಟಿಗಳು, (ನೊಗೆ ಕಡ್ಡಿ) ಮುಂತಾದವು. ಇವನ್ನು ನಿಭಾಯಿಸುವಂತಹ ಗಟ್ಟಿಮುಟ್ಟಾದ ಆಳು. ಇವೆಲ್ಲ ಇದ್ದರೂ ಒಂದು ದಿನಕ್ಕೆ ಸುಮಾರು ಒಂದು ಎಕರೆಗೆ ಮಾತ್ರ ನೀರು ಹಾಯಿಸಬಹುದಾಗಿತ್ತು.

ಬೇಸಾಯದ ಭೂಮಿಗೆ ತಕ್ಕ ಹಾಗೆ ಬಾವಿಗಳು. ಚೌಕಟ್ಟಿನ ಬಾವಿ, ಗುಂಡನೆಯ ಬಾವಿ, ಬಾವಿಗಳ ಆಳ, ಉದ್ದ, ಅಗಲ ಮುಂತಾದವನ್ನು ಸಾಗುವಳಿ ಭೂಮಿಗೆ ತಕ್ಕ ಹಾಗೆ ಅಗೆಯುತ್ತಿದ್ದರು. ಒಂದು ಕಾಲದಲ್ಲಿ ಬಾವಿಗಳೇ ರೈತನ ಬದುಕಿನ ಬಂಡಿಯನ್ನು ಮುನ್ನಡೆಸುವ ಮೂಲಗಳಾಗಿದ್ದವು. ಅದರಲ್ಲೂ ಬಯಲು ಸೀಮೆಯಲ್ಲಿ ಬಾವಿ ನೀರಾವರಿಯೇ ಕೃಷಿಗೆ ಆಧಾರವಾಗಿದ್ದುದರಿಂದ ನಿರ್ದಿಷ್ಟ ಸಮುದಾಯದವರೇ ಆ ಕೆಲಸವನ್ನು ಪರಂಪರಾಗತವಾಗಿ ಮಾಡಿಕೊಂಡು ಬರುತ್ತಿದ್ದರು. ಬಾವಿ ಅಗೆಯುವುದರಲ್ಲಿ ಇವರಿಗೆ ವಿಶೇಷವಾದ ಅನುಭವ ಇರುವುದರಿಂದ ಬಾವಿಯ 'ದರಿ'ಯನ್ನು ಅಚ್ಚುಕಟ್ಟಾಗಿ ಕೆತ್ತುತ್ತಾರೆ. ಈ ರೀತಿ ಬಾವಿಯನ್ನು ಅಗೆಯುವಾಗ ಕಪಿಲೆ ಹೊಡೆಯುವುದಕ್ಕೆ ಅನುಕೂಲವಾಗುವಂತೆ 4 ಅಡಿ ಅಗಲ ಮತ್ತು 4 ಅಡಿ ಉದ್ದ ಇರುವ ಹಾಗೆ ಬಾವಿಯ ಒಂದು ಕಡೆಗೆ ಬಾರಿ ಅಗೆಯುತ್ತಾ ಹೋಗುತ್ತಾರೆ. ಇದರ ಆಳ ಬಾವಿ ಆಳಕ್ಕಿಂತಲೂ ಹೆಚ್ಚಿಗೆ ಇರುತ್ತದೆ. ಬಾವಿಯಲ್ಲಿ ನೀರು ಖಾಲಿ ಆದರೂ ಕಪಿಲೆ ಬಾನಿ ಮುಳುಗಿ ನೀರು ತುಂಬಿಸಿಕೊಳ್ಳಲು ತೋಡಿದ ಬಾವಿಗೆ 'ಪಿಲ್ಲಬಾವಿ' ಎನ್ನುತ್ತಾರೆ. ಇದರ ಮೇಲೆ ಬುರುಜನ್ನು ನಿರ್ಮಿಸುತ್ತಾರೆ. ಸುಮಾರು ಆರು ಇಂಚಿನಷ್ಟು ದಪ್ಪ, ಒಂದು ಅಡಿ ಅಗಲ, ಹತ್ತರಿಂದ ಹನ್ನೆರಡು ಅಡಿ ಉದ್ದ ಇರುವ ಎರಡು ಕಲ್ಲುಗಳನ್ನು ಮೂರು ಅಡಿ ಅಂತರ ಇರುವ ಹಾಗೆ ಸಮಾನಾಂತರವಾಗಿ ಪಿಲ್ಲಬಾವಿಯ ದಡದಲ್ಲಿ ಬಾರಿಯ ಕಡೆ ಚಾಚಿ ಇರುವ ಹಾಗೆ ಇಡುತ್ತಾರೆ. ಹೀಗೆ ಬಾವಿಯ ಕಡೆ ಇರುವ ಈ ಕಂಬಿಗಳ ಮಧ್ಯದಲ್ಲಿ ರಂಧ್ರಗಳನ್ನು ಕೊರೆದು ಸುಮಾರು ಐದು ಅಡಿ 'Y' ಆಕಾರದಲ್ಲಿರುವ ಎರಡು ಗಟ್ಟಿಮುಟ್ಟಾದ ಮರಗಳನ್ನು (ಬಂಡೆ) ಜೋಡಿಸುತ್ತಾರೆ. ಇವೆರಡರ ಮೇಲೆ ಮತ್ತೊಂದು ತೊಲೆಯನ್ನಿಟ್ಟು ಅದರ ಮಧ್ಯದಲ್ಲಿ ರಾಟೆ ಜೋಡಿಸುತ್ತಾರೆ. ಇದನ್ನೇ 'ಬುರುಜು' ಎನ್ನುವರು. ಕಲ್ಲಿನ ಬಂಡೆಗಳ ಮಧ್ಯದಲ್ಲಿ ನೀರು ಬರುವ ಹಾಗೆ ಕಾಲುವೆಯನ್ನು ಬಂಡೆಗಳಿಂದ (ಚಪ್ಪಡಿಕಲ್ಲು) ನಿರ್ಮಿಸುತ್ತಾರೆ. ಅನಂತರ ಕಲ್ಲಿನ ಕಂಬಗಳ ಮೇಲೆ ಭಾರವಾದ ಕಲ್ಲುಗಳನ್ನು, ಗಟ್ಟಿಮಣ್ಣನ್ನು ಹಾಕಿ ಬಾನಿಯ ನೀರಿನ ಭಾಗಕ್ಕೆ ಯಾವ ಪ್ರಮಾದವೂ ಆಗದಂತೆ ಗಟ್ಟಿಮಾಡುತ್ತಾರೆ. ಅನಂತರ ಬಾವಿಯ ಆಳಕ್ಕೆ ತಕ್ಕಹಾಗೆ ಕಪಿಲೆ ಹೊಡೆಯುವುದಕ್ಕೆ ಬಾರಿ (ಎತ್ತುಗಳು ಕಪಿಲೆಯನ್ನು ಎಳೆಯುವ ಇಳಿಜಾರು ಪ್ರದೇಶ; ಇದು ಎರಡು ಬಂಡೆಗಳ ನೇರಕ್ಕೆ ಇರುತ್ತದೆ. ಸುಮಾರು ಎಂಟು

ಅಡಿ ಅಗಲ ಬಾವಿ ಆಳಕ್ಕೆ ತಕ್ಕ ಹಾಗೆ ಇರುತ್ತದೆ)ಯನ್ನು ನಿರ್ಮಿಸುತ್ತದೆ. ಈ ಬಾರಿಯ ಎರಡು ಕಡೆ ನೆರಳು ಇರುವ ಹಾಗೆ ಮರಗಳನ್ನು ಬೆಳೆಸುತ್ತಾರೆ.

ಕಪಿಲೆ ಬಾನಿ ನಿರ್ಮಾಣ ಎರಡು ಹಂತದಲ್ಲಿ ಆಗುತ್ತದೆ. ಸುಮಾರು ಒಂದು ಇಂಚಿನಷ್ಟು ದಪ್ಪ ಮೂವತ್ತು ಇಂಚಿನಷ್ಟು ಅಗಲ, ವರ್ತುಲಾಕಾರದ ಕಬ್ಬಿಣದ ಬಳೆಯ ಮೇಲ್ಭಾಗಕ್ಕೆ ಒಂದು ಇಂಚಿನಷ್ಟು ಅಗಲ ಕಾಲು ಇಂಚಿನಷ್ಟು ದಪ್ಪ, ಇಪ್ಪತ್ತು ಇಂಚಿನಷ್ಟು ಉದ್ದ ಇರುವ ಕಬ್ಬಿಣದ ತಗಡುಗಳನ್ನು ಬಳೆಯ ನಾಲ್ಕು ಭಾಗಗಳಲ್ಲಿ ಸಮಾನಾಂತರವಾಗಿ ಮೇಲಕ್ಕೆ ಇರುವ ಹಾಗೆ ಇವುಗಳ ತುದಿಗಳು ಒಂದು ಕಡೆ ಸೇರುವ ಹಾಗೆ ಬಿಗಿಸುತ್ತಾರೆ. ಆನಂತರ ತಗಡುಗಳ ತುದಿಯಲ್ಲಿ ಐದು ಇಂಚಿನಷ್ಟು ಅಗಲ ಇರುವ ಚಿಕ್ಕ ಕಬ್ಬಿಣದ ಬಳೆಯನ್ನು ಜೋಡಿಸುತ್ತಾರೆ. ಇಲ್ಲಿಗೆ ಬಾನಿಯ ಒಂದು ಹಂತದ ಕೆಲಸ ಮುಗಿಯುತ್ತದೆ. ಅನಂತರ ಈ ಕಬ್ಬಿಣ ಬಳೆಯ ಕೆಳಗಿನ ಭಾಗಕ್ಕೆ ಎಮ್ಮೆ ಅಥವಾ ಕೋಣದ ಹದಮಾಡಿದ ಚರ್ಮವನ್ನು ಹೊಲಿಯುತ್ತಾರೆ. ಹೀಗೆ ಹೊಲಿದಾಗ ದುಂಡಿಗೆ ದೊಡ್ಡ ಮಡಕೆ ರೀತಿಯಲ್ಲಿ ಪಾತ್ರೆ ತಯಾರಾಗುತ್ತದೆ. ಈ ಪಾತ್ರೆಯ ತಳಭಾಗದಲ್ಲಿ ಸುಮಾರು ಒಂಬತ್ತು ಇಂಚಿನಷ್ಟು ರಂಧ್ರ ಕೊರೆದು ಅದಕ್ಕೆ ಅಷ್ಟೆ ಸುತ್ತಳತೆಯ ಚರ್ಮದ ತೊಂಡಿನ ಸುಮಾರು ನಾಲ್ಕು ಅಡಿ ಇರುವ ನಳಿಕೆಯನ್ನು ಜೋಡಿಸುತ್ತಾರೆ. ಇದನ್ನೆ 'ತೊಂಡ್ಲಮು' (ಸೊಂಡಿಲು ಆನೆಯ ಸೊಂಡಿಲಿನಂತೆ ಇರುವುದರಿಂದ ಇದಕ್ಕೆ ಈ ಹೆಸರು ಬಂದಿದೆ.) ಎನ್ನುತ್ತಾರೆ. ಇಲ್ಲಿಗೆ 'ಕಪಿಲಿ ಬಾನಿಯ' ಪೂರ್ತಿ ಸ್ವರೂಪ ಬಂತು.

ಕಪಿಲೆ ಹೊಡೆಯುವುದಕ್ಕೆ ಗಟ್ಟಿಮುಟ್ಟಾದ ಎತ್ತುಗಳು ಬೇಕು. ನೇಗಿಲು ಹೊಡೆಯುವ ಎತ್ತುಗಳು ಹಾಗೂ ಹೀಗೂ ಇದ್ದರೂ ಪರವಾಗಿಲ್ಲ. ಕೆಲವು ಸಂದರ್ಭಗಳಲ್ಲಿ ನೇಗಿಲು ಹೊಡೆಯುವುದಕ್ಕೆ ಹಸುಗಳನ್ನು ಸಹಾ ಬಳಸುತ್ತಾರೆ. ಆದರೆ ಕಪಿಲಿ ಹೊಡೆಯಲು ಗಟ್ಟಿಮುಟ್ಟಾದವನ್ನೇ ಆಯ್ಕೆ ಮಾಡುತ್ತಾರೆ. ಈ ಎತ್ತುಗಳಿಗೆ ಪ್ರತಿರಾತ್ರಿ ಹಸುರುಹುಲ್ಲನ್ನು, ಸಂಜೆ ಹಿಟ್ಟನ್ನೂ ಆಹಾರವಾಗಿ ಕೊಡುತ್ತಾರೆ. ಬೆಳಿಗ್ಗೆ ಹನ್ನೊಂದರಿಂದ ಸಂಜೆ ನಾಲ್ಕು ಗಂಟೆಯ ತನಕ ವಿಶ್ರಾಂತಿಯನ್ನು ಕೊಡುತ್ತಾರೆ. ಬೆಳಗ್ಗೆ ಕಪಿಲ ಹೊಡೆಯುವುದಕ್ಕೆ ಮುಂಚಿತವಾಗಿ ಹಸಿಹುಲ್ಲನ್ನು ಆಹಾರವಾಗಿ ಕೊಡುತ್ತಾರೆ.

ಬಾವಿಯಲ್ಲಿ ನೀರನ್ನು ತುಂಬಿಸಿಕೊಂಡ ಬಾನಿಯನ್ನು ಎಳೆಯುವ ಮೋಕುತಾಡು (ಮೋಪುಹಗ್ಗ) (ಹನ್ನೆರಡು ಪುರಿಹಗ್ಗ) ತೊಂಡ್ಲುತಾಡು (ಆರು ಪುರಿ ಹಗ್ಗ)ಗಳನ್ನು ತೆಂಗಿನ ನಾರು ಅಥವಾ ಗೋಗುನಾರು ಅಥವಾ ಕತ್ತಾಳೆ ನಾರಿನಿಂದ ಮಾಡುತ್ತಾರೆ. ಇವೆರಡನ್ನು ಹೆಣೆಯುವುದಕ್ಕೆ ಸುಮಾರು ಮೂರ್ನಾಲ್ಕು ದಿವಸ ಬೇಕಾಗುತ್ತದೆ.

ಮೋಕುತಾಡು (ಮೋಪು ಹಗ್ಗ) ಮತ್ತು ತೊಂಡ್ಲಮುತಾಡು (ತೊಂಡ್ಲು ಹಗ್ಗ) ಈ ಎರಡು ತುದಿಗಳನ್ನು ನೊಗದ ಮಧ್ಯದಲ್ಲಿ ಕಟ್ಟಿರುತ್ತಾರೆ. ಕಪಿಲೆಯ ನೊಗವನ್ನು ಕಪಿಲೆಗೆ ಮಾತ್ರ ಬಳಸುತ್ತಾರೆ. ಗಟ್ಟಿಮುಟ್ಟಾದ ಆಯ್ದ ಮರಗಳಿಂದ ಮಾತ್ರ ಇದನ್ನು ಕೆತ್ತುತ್ತಾರೆ. ಇದರ ಉದ್ದ ಸುಮಾರು ಆರು ಅಡಿ ಇರುತ್ತದೆ. ಮಧ್ಯದಲ್ಲಿ ಸುಮಾರು $1^1/_2$ ಅಡಿ ಏಳು ಇಂಚಿನಷ್ಟು ಚೌಕಾಕಾರವಾಗಿದ್ದು ಎರಡು ತುದಿಗಳು ದುಂಡಗೆ ಆರು ಇಂಚಿನಷ್ಟು ದಪ್ಪಗೆ ಇರುತ್ತವೆ. ಈ ಎರಡು ತುದಿಗಳ ಒಂಬತ್ತು ಇಂಚಿನ ಒಳಗಡೆ $1^1/_2$ ಇಂಚಿನಷ್ಟು ಅಗಲ ಇರುವ ರಂಧ್ರಗಳನ್ನು ಕೊರೆದಿರುತ್ತಾರೆ. ಇವುಗಳಲ್ಲಿ 'ನೊಗೆ' (ನೊಗೆ ಕಡ್ಡಿ ಸುಮಾರು ಹನ್ನೆರಡು ಇಂಚಿನಷ್ಟು ಉದ್ದ ಇದ್ದು ತುದಿಯಲ್ಲಿ ಕವಲು ಒಡೆದಿರುತ್ತದೆ)ಗಳಿರುತ್ತವೆ. ಟೈರು ಅಥವಾ ಚರ್ಮದಿಂದ ಮಾಡಿರುವ ಕತ್ತಿನ ಪಟ್ಟಿಗಳನ್ನು ಎತ್ತುಗಳ ಕತ್ತಿಗೆ ಸುತ್ತಿ ನೊಗ ಕಳಚದ ಹಾಗೆ ಕಟ್ಟುತ್ತಾರೆ.

ಮೋಕುತಾಡು (ಹಗ್ಗ), ತೊಂಡ್ಲಮುತಾಡು (ಹಗ್ಗ), ಕತ್ತಿನಪಟ್ಟಿ, ನೊಗವನ್ನು ಭುಜದ ಮೇಲೆ ಇಟ್ಟುಕೊಂಡು ಎತ್ತುಗಳನ್ನು ಹೊಡ್ಕೊಂಡು ಒಬ್ಬನು ಹೋಗುತ್ತಿದ್ದರೆ, ಇನ್ನೊಬ್ಬರು ಬಾನಿಯನ್ನು ಎತ್ತುಕೊಂಡು ಬಾವಿಯ ಕಡೆ ಹೋಗುತ್ತಾರೆ. ಇವೆಲ್ಲವನ್ನು ಬಾವಿಯ ಹತ್ತಿರ ಇಳಿಸಿ ರಾಟೆಯನ್ನು ಬುರುಜಿನ ತೊಲೆಯ ಮೇಲೆ ಜೋಡಿಸಿ ಅದು ಸರಾಗವಾಗಿ ತಿರುಗುವಂತೆ ಕೀಲೆಣ್ಣೆಯನ್ನು ಹಾಕುತ್ತಾರೆ. ಅನಂತರ ಮೋಕುತಾಡಿನ ಇನ್ನೊಂದು ತುದಿಯನ್ನು ರಾಟೆಯಮೇಲಿಂದ ಎಳೆದು ಬಾನಿನ ಚಿಕ್ಕ ಕಬ್ಬಿಣದ ಬಳೆಯಲ್ಲಿ ತೂರಿಸಿ, ಮೋಕುತಾಡು ಹಗ್ಗವನ್ನು ಮಧ್ಯದಲ್ಲಿ ಬಳೆಗಿಂತ ಉದ್ದಕ್ಕಿರುವ ಮರದ ತುಂಡನ್ನು ಜೋಡಿಸುತ್ತಾರೆ. ಈ ಚಿಕ್ಕದಾದ ಮರದ ತುಂಡು ಚಿಕ್ಕ ಬಳೆಯಲ್ಲಿ ಸೇರಿರುತ್ತದೆ. ಅನಂತರ ಗುಂಡಿಗೆ ಸುಮಾರು ಎರಡು ಅಡಿ ಉದ್ದ ಇರುವ ರಾಟೆಗಳನ್ನು (ಪುಲ್ಲುರುಸು) ಬಾವಿಕಡೆ ಚಾಚಿಕೊಂಡಿರುವ ಬಂಡೆಕಲ್ಲುಗಳ ಮಧ್ಯದಲ್ಲಿಟ್ಟು ಕೀಲೆಣ್ಣೆ ಹಾಕುತ್ತಾರೆ. ಅದೇ ರೀತಿ ಇನ್ನೊಂದು ರಾಟೆಯನ್ನು ನೀರು ಬೀಳುವ ದೋಣಿಯ ಮೇಲೆ ಎರಡು ಬಂಡೆ ಕಲ್ಲುಗಳ ಮಧ್ಯದಲ್ಲಿ ಇಟ್ಟು ಕೀಲೆಣ್ಣೆ ಹಾಕುತ್ತಾರೆ. ಅನಂತರ ನೊಗಕ್ಕೆ ಕಟ್ಟಿರುವ ತೊಂಡ್ಲ ಹಗ್ಗ ಒಂದು ತುದಿಯನ್ನು ಬಾನಿನ 'ತೊಂಡ್ಲಮು' ತುದಿಗೆ ಕಟ್ಟುತ್ತಾರೆ. ಬಾವಿಯಲ್ಲಿ ನೀರು ಎಷ್ಟು ಆಳದಲ್ಲಿರುವುದೋ ಅದಕ್ಕೆ ತಕ್ಕ ಹಾಗೆ ಮೋಕುತಾಡು ಸೊಂಡಿನ ಹಗ್ಗ ಸರಿಮಾಡಿ ನೊಗಕ್ಕೆ ಬಿಗಿಯಾಗಿ ಕಟ್ಟುತ್ತಾರೆ. ನೊಗವನ್ನು (ಕಾಡಿಮಾನು) ಎತ್ತುಗಳ ಕತ್ತುಗಳ ಮೇಲಿಟ್ಟು ಪಟ್ಟಿಗಳಿಂದ ಕಟ್ಟುತ್ತಾರೆ. ಮೋಪುಹಗ್ಗದಿಂದ ಬಿಗಿಸಲ್ಪಟ್ಟಿರುವ ಬಾನೆಯನ್ನು ಬಾವಿಯ ಒಳಗೆ ಬಿಡುತ್ತಾರೆ. ಬಾನಿ ನೀರಿಗೆ ಬಿದ್ದ ಅನಂತರ ತೊಂಡ್ಲು ಹಗ್ಗವನ್ನು ಮೇಲಕ್ಕೆ ಎತ್ತುವುದರಿಂದ ಬಾನಿ ನೀರಿನೊಳಗೆ ಮುಳುಗಿ ನೀರು ತುಂಬಿಸಿಕೊಂಡಿರುವುದು ಖಾತ್ರಿಯಾದ ಬಳಿಕ ಎತ್ತುಗಳ ಹಗ್ಗವನ್ನು ಹಿಡಿದು ಮುಂದೆ ಸಾಗುತ್ತಾನೆ. ಎತ್ತುಗಳು ನೀರು ತುಂಬಿದ ಬಾನಿಯನ್ನು ಎಳೆಯುತ್ತವೆ. ಬಾನಿ ಬುರುಜಿನ ದೋನಿಗೆ ಸಮಾಂತರವಾಗಿ ಬಂದ ಅನಂತರ ತೊಂಡ್ಲು ಹಗ್ಗವನ್ನು ತುಳಿದು ಎತ್ತುಗಳಿಗೆ ನಿಲ್ಲುವಂತೆ ಸನ್ನೆ ಮಾಡುತ್ತಾ ಹಗ್ಗವನ್ನು ಎಳೆಯುತ್ತಾನೆ. ಬಾನಿನಲ್ಲಿರುವ ನೀರು ದೋಣಿಯಲ್ಲಿ ಬಿದ್ದು ಹೊಲಕ್ಕೆ ಸೇರುತ್ತದೆ. ಹೀಗೆ ಸುಮಾರು ಬೆಳಿಗ್ಗೆ ಐದು ಗಂಟೆಯಿಂದ ಹತ್ತುಗಂಟೆಯತನಕ ಕಪಿಲೆ ಹೊಡೆದರೆ ಒಂದು ಎಕರೆ ಪೈರಿಗೆ ನೀರು ಹರಿಯುತ್ತದೆ.

ಕಪಿಲೆ ಹೊಡೆಯುವುದು ದೇಸಿ ಬೇಸಾಯದ ಕಲೆ. ಅನುಭವದಿಂದ ಮಾತ್ರ ಕಪಿಲೆ ಹೊಡೆಯುವುದು ಸಾಧ್ಯ. ಕಪಿಲೆ ಹೊಡೆಯುವ ಆಳು ಗಟ್ಟಿಮುಟ್ಟಾಗಿರುವುದಲ್ಲದೆ ನಿಷ್ಣಾತನಾಗಿರಬೇಕು. ರಾಟೆ ಬುರುಜಿನ ಮೇಲೆ ಇರುವಾಗ ಆಯತಪ್ಪಿ ಬಿದ್ದವರಿದ್ದಾರೆ. ಇಲಿಗಳು ಬುರುಜಿನ ಕೆಳಗಡೆ ಮಣ್ಣನ್ನು ತೋಡಿರುವುದು ಗಮನಿಸದೆ ಹೋದಲ್ಲಿ ಬುರುಜಿನ ಸಮೇತ ಮನುಷ್ಯರು ಬಾವಿಯೊಳಗೆ ಕುಸಿದು ಬೀಳುವುದು ಖಂಡಿತ. ಎತ್ತುಗಳ ಕತ್ತಿನಪಟ್ಟಿ ತುಂಡಾದರೆ, ಸರಿಯಾಗಿ ಕಟ್ಟದಿದ್ದರೆ ನೀರಿನ ಬಾನಿಯನ್ನು ಎಳೆಯುವಾಗ ನೊಗ ಸಡಿಲಗೊಂಡು ಮುಖಕ್ಕೆ ಹೊಡೆದು ಬಾವಿಯೊಳಗೆ

ಕಪಿಲೆ



ಬಿದ್ದವರಿದ್ದಾರೆ. ಎತ್ತುಗಳು ಭಾರವಾದ ನೀರಿನ ಬಾನಿಯನ್ನು ಎಳೆಯುವುದಕ್ಕೆ ಸಾಧ್ಯವಾಗದ ಸಂದರ್ಭದಲ್ಲಿ ಕಪಿಲೆ ಹೊಡೆಯುವವನಿಗೂ ಎತ್ತುಗಳಿಗೂ ಅಪಾಯ ಸಂಭವಿಸುತ್ತದೆ.

ಇಂತಹ ಸಂದರ್ಭಗಳಲ್ಲಿ ಅಪಾಯದಿಂದ ಪಾರಾಗುವುದಕ್ಕೆ ತೊಂಡ್ಲು ಹಗ್ಗವನ್ನು ತುಂಡರಿಸುತ್ತಿದ್ದರು. ತೊಂಡ್ಲುದಿಂದ ನೀರೆಲ್ಲಾ ಬಾವಿಗೆ ಬಿದ್ದು ಬಾರ ಕಡಿಮೆಯಾಗುವುದರಿಂದ ಅಪಾಯದಿಂದ ಪಾರಾಗುತ್ತಿದ್ದರು. ಅದಲ್ಲದೆ ಬಾನಿಯನ್ನು ಹೊಲಿದ ಎರಡು ಮೂರು ತಿಂಗಳು ಬಾನಿಗೆ ಏನೂ ಆಗುವುದಿಲ್ಲ. ಅನಂತರ ಹೊಲಿಗೆಗಳು ಬಿಚ್ಚುಕೊಂಡು ಬಾನಿಗೆ ತೂತುಗಳು ಬಿದ್ದು ನೀರು ದೋನಿಯೊಳಗೆ ಬೀಳುವುದಕ್ಕೆ ಮೊದಲೆ ಬಾವಿಗೆ ಬೀಳುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಮತ್ತೆ ಹೊಲಿಯುವವರಲ್ಲಿಗೆ ಹೋಗಿ ಅದಕ್ಕೆ 'ತೇಪೆ ಅಥವಾ ಮಾಸಿಕೆ' (ಚರ್ಮದ ತುಂಡನ್ನು ತೂತುಬಿದ್ದ ಬಾನಿಗೆ ಸೇರಿಸಿ ಹೊಲಿಯುವುದು) ಹಾಕಿಸಿಕೊಳ್ಳುತ್ತಿದ್ದರು.

ಕಪಿಲೆ ಒಂದು ರೀತಿಯ ಕಲೆ. ಇದು ಕಷ್ಟಕರವಾದ ಕೆಲಸದಂತೆ ತೋರಿದರೂ ದೇಸಿ ಬೇಸಾಯದ ಉಪಕರಣಗಳಲ್ಲಿ ಇವುಗಳನ್ನು ತಯಾರುಮಾಡುವ ವಿಧಾನದಲ್ಲಿ ಸಹಕಾರ, ಸಹಬಾಳ್ವೆ ಅಡಕವಾಗಿದೆ. ಕಪಿಲೆಗೆ ಬೇಕಾಗುವ ಬಾವಿ ಕೊರೆಯುವ ವಡ್ಡರು, ಬುರುಜು ಕಟ್ಟುವ ಕಲ್ಲುಕುಟುಕರು, ನೊಗ ಮಾಡುವ ಬಡಗಿ, ದಾರ ಹೆಣೆಯುವ ಉಪ್ಪಾರರು, ಬಾನಿ ಹೊಲೆಯುವ ಮಾದಿಗರು, ಕಪಿಲೆ ಹೊಡೆಯುವ ರೈತ ಇವರೆಲ್ಲರ ಶ್ರಮದ ಫಲದಿಂದ ಬೆಳೆ ಬೆಳೆಯುತ್ತಿತ್ತು. ಇದರಲ್ಲಿ ಎಲ್ಲರಿಗೂ ಪಾಲು. ಕೆಲಸಕ್ಕೆ ತಕ್ಕ ಹಾಗೆ ಧಾನ್ಯವನ್ನು ಕೊಡುತ್ತಿದ್ದರು. ಇದೆ ಸಹಬಾಳ್ವೆಯ ಮಂತ್ರ.

ಎನ್. ಟಿ.

ಕಪಿಲಿ ಪಾಟಲು(ಕಪಿಲೆ ಹಾಡುಗಳು) ಈ ಹಾಡುಗಳನ್ನು ಒಬ್ಬನೆ ಹಾಡಬಹುದು ಅಥವಾ ಇಬ್ಬರು ಮೂವರು ಸೇರಿ ಹಾಡಬಹುದು. ಬಾವಿ, ನದಿ, ಕೆರೆಗಳಲ್ಲಿ ನೀರು ಮೇಲ್ಭಾಗದಲ್ಲೇ ಇದ್ದಾಗ ಒಬ್ಬನೇ ವ್ಯಕ್ತಿ ಏತ ಅಥವಾ ಕಪಿಲೆಯನ್ನು ನಿಯಂತ್ರಿಸುತ್ತಾನೆ. ನೀರು ಆಳದಲ್ಲಿದ್ದಾಗ ಇಬ್ಬರು ಬೇಕಾಗುತ್ತದೆ. ಇಲ್ಲವೇ ಎತ್ತುಗಳ ಸಹಾಯ ಪಡೆಯುತ್ತಾರೆ. ಏತವನ್ನು ಕಬ್ಬಿಣದಂತಹ ಲೋಹಗಳಿಂದ ಅಕ್ಕಸಾಲಿಗ ತಯಾರಿಸಿದರೆ ಕಪಿಲೆಯನ್ನು ಮಣೆಗಾರರು ಎಮ್ಮೆ ಅಥವಾ ಹಸುವಿನ ಚರ್ಮದಿಂದ ತಯಾರಿಸುತ್ತಾರೆ. ಏತಕ್ಕಿಂತ ಕಪಿಲೆ ಹೆಚ್ಚು ನೀರನ್ನು ಎತ್ತಬಲ್ಲದು. ಮುಂಜಾನೆ ಅಥವಾ ಸಂಜೆಯ ವೇಳೆ ರೈತರು ಬೆಳೆಗಳಿಗೆ ನೀರನ್ನು ಹಾಯಿಸಲು ಏತ (ಕಪಿಲಿ) ಎತ್ತುವುದರಿಂದ ಆಗ ಹಾಡುವ ಪದಗಳನ್ನು ಏತದ (ಕಪಿಲೆ) ಪದಗಳೆಂದು ಕರೆಯುತ್ತಾರೆ. ಕಪಿಲೆ ನೀರು ತೊಡಲು ಉಪಯೋಗಿಸುವ ದೊಡ್ಡ ಗಾತ್ರದ ಪಾತ್ರೆ. 'ಕಪಿಲೆ' ಎಂಬ ಶಬ್ದಕ್ಕೆ 'ಕಪಿಲಿ' ಎನ್ನುವುದು ಆಡುನುಡಿ. ರಾಯಲಸೀಮೆಯಲ್ಲಿ ಕಪಿಲೆ ಬಾವಿಗಳು ಅಧಿಕ. ಜೊತೆಗೆ ಹಿಂದೆ ಕಪಿಲಿ ಮತ್ತು ಏತ ಎತ್ತುವ ಬಾವಿಗಳು ದಕ್ಷಿಣ ಭಾರತಾದ್ಯಂತ ಕಂಡು ಬರುತ್ತಿದ್ದವು.

ನೀರೆತ್ತುವ ಜನರಲ್ಲಿ ಒಬ್ಬ ಹಗ್ಗವನ್ನು ಬಾವಿಗೆ ಬಿಡುತ್ತಾನೆ. ಕಪಿಲೆ ರಾಟೆಯ ಶಬ್ದಕ್ಕೆ ತಕ್ಕಂತೆ ಹಾಡು ಕಟ್ಟುತ್ತಾನೆ. ಬಾವಿಯೊಳಗೆ ಬಿಟ್ಟ ಕಪಿಲಿಗೆ ನೀರು ತುಂಬುವ ತನಕ ಹಾಡುತ್ತಲೇ ಇರುತ್ತಾನೆ. ಎತ್ತುಗಳನ್ನು ಓಡಿಸುತ್ತಾ ಹಗ್ಗವನ್ನು ಎಳೆಯುತ್ತಾ ದನಿಯನ್ನು ಕೂಡಿಸಿ ಸರಾಗವಾಗಿ ಹಾಡುತ್ತಾನೆ.

ಕಪಿಲೆ ಹಾಡು ಎರಡು ಸಾಲುಗಳಿಂದ ಕೂಡಿರುತ್ತದೆ. ಈ ಸಾಲುಗಳು ವಿಷಯ ಸಂಬಂಧಿಯಾಗಿದ್ದು ಹಾಡಾಗಿ ಸ್ವಯಂ ವ್ಯಕ್ತವಾಗುವಂತಹವು. ಎರಡನೆಯ ಚರಣ ಪೂರ್ತಿಯಾಗುತ್ತಿದ್ದಂತೆ. 'ಹೋ ಭಗಣ' ಎಂದೂ 'ಭಕ್ ಭಗಣ' ಎಂದೂ ಇಲ್ಲವೆ 'ಹೋ ಹೊಪ್ಪನ್ನ ರಾಮುಡು' ಎಂದಾದರು ಪಲ್ಲವಿಯನ್ನು ಉಪಯೋಗಿಸುತ್ತಾರೆ.

ಪ್ರತಿಯೊಂದು ಸಾಲಿನಲ್ಲಿ ಇಪ್ಪತ್ತೆಂಟು ಮಾತ್ರೆಗಳಿರುವ ಈ ಹಾಡುಗಳು ಏಳು ಮಾತ್ರೆಗಳಿಗೆ ಒಂದು ಸಾರಿ ನಿಲುಗಡೆ ಹೊಂದಿ, ಮಿಶ್ರಗತಿಯಲ್ಲಿ ತೆಲುಗಿನ 'ವೃಷಭಗತಿ' ರಗಳೆಗೆ ಸರಿ ಹೊಂದುತ್ತವೆ. ಕಾವ್ಯ ರೂಪ ಹೊಂದಿರುವುದು ಈ ಹಾಡುಗಳ ವೈಶಿಷ್ಟ್ಯ.

ಕಪಿಲೆ ಹಾಡುಗಳಲ್ಲಿ ಹೆಚ್ಚಾಗಿ ಶೃಂಗಾರ ಎದ್ದು ಕಾಣುತ್ತದೆ. ಹಾಡುಗಳು ಯಾವ ಮಹಾಕವಿಯ ಅನುಭವಕ್ಕೂ ಸಿಗದ ಶೃಂಗಾರ ರಸ ಪ್ರಧಾನವಾದ ಹಾಡುಗಳಿವು. ಕೇಳಿದಷ್ಟು ಮಧುರ ಭಾವಗಳನ್ನು ಉಂಟುಮಾಡುವ ಮುಕ್ತಕಗಳು.

ಎನ್. ಸಿ.

ಕಪ್ಪಲ ಪೆಳ್ಳಿ (ಕಪ್ಪೆಗಳ ಮದುವೆ) ಭೂಮಿ ಮೇಲೆ ಜೀವಿಸುವ ಎಲ್ಲಾ ಪ್ರಾಣಿ ಪಕ್ಷಿಗಳಿಗೂ ನೀರಿನ ಅವಶ್ಯಕತೆ ಇದೆ. ಎಲ್ಲಾ ಜೀವಿಗಳು ನೀರಿನ ಜೊತೆಗೆ ಅವಿನಾಭಾವ ಸಂಬಂಧವಿದೆ. ಈ ದೃಷ್ಟಿಯಿಂದ ಗ್ರಾಮೀಣ ಭಾಗದಲ್ಲಿ ವಾಸವಾಗಿರುವ ರೈತ ತನ್ನ ಜೀವನೋಪಾಯಕ್ಕಾಗಿ, ಕೃಷಿಗಾಗಿ, ಬೇಸಾಯಕ್ಕಾಗಿ ಮಳೆಯನ್ನೇ ಅವಲಂಬಿಸಿರುತ್ತಾನೆ. ಆದರೆ ಆಗಾಗ ಸಂಭವಿಸುವ ಪ್ರಕೃತಿ ವೈಪರಿತ್ಯಕ್ಕೆ ತುತ್ತಾಗುವ ರಾಯಲಸೀಮೆ ಜಿಲ್ಲೆಗಳಲ್ಲಿ ಗ್ರಾಮೀಣ ಕೃಷಿಕನು ಹಸಿವನ್ನು ಅನುಭವಿಸುತ್ತಿದ್ದಾನೆ. ರೈತ ಸದಾ ಮಳೆಯರನ್ನು ಆಶ್ರಯಿಸುತ್ತಾನೆ. ಸಾಲಮಾಡಿ, ತೀರಿಸಲಾಗದೇ ಸಾವಿಗೀಡಾಗುತ್ತಾನೆ. ಈ ಕಾರಣದಿಂದ ರೈತನು ಅನೇಕ ದೇವರುಗಳಿಗೆ ಹರಿಕೆ ಮಾಡಿಕೊಳ್ಳುತ್ತಾನೆ. ಕುರಿ, ಮೇಕೆ, ಬಲಿಕೊಡುತ್ತಾನೆ. ವರುಣನ ಬರುವಿಕೆಯ ಮಾರ್ಗಗಳನ್ನು ಹುಡುಕುತ್ತಾ 'ಪೋಲಿ' ಹೆಸರಿನಲ್ಲಿ ಬರ ಪೀಡಿತ ಪ್ರಾಂತ್ಯಗಳಲ್ಲಿ ಕಪ್ಪೆಗಳ ಮದುವೆ ಮಾಡುವುದು ಸರ್ವೇ ಸಾಮಾನ್ಯ.

ಬರಪೀಡಿತ ಪ್ರದೇಶಗಳಲ್ಲಿ ಮಳೆ ಬರಿಸುವ ಉತ್ಸಾಹದಲ್ಲಿ ಪಡ್ಡೆ ಹುಡುಗರು ಬಾವಿಗಳಲ್ಲಿ ಕೆಲವು ಹೆಣ್ಣು, ಗಂಡು ಕಪ್ಪೆಗಳನ್ನು ಹಿಡಿದು ಅವುಗಳಿಗೆ ಅರಿಸಿನ, ಕುಂಕುಮ, ಹೂವನ್ನು ಮುಡಿಸಿ ಕತ್ತಿಗೆ ಅರಿಸಿನದ ದಾರ ಹಾಕಿ, ಒಂದು ಉದ್ದನೆಯ ಕೋಲಿಗೆ ಕಟ್ಟಿ ನೇತಾಡಿಸಿ ಮೆರೆವಣಿಗೆ ಮಾಡುವರು. ಅಷ್ಟೇ ಅಲ್ಲದೆ ಊರ ಹೊರಗಿನ ಕೆರೆಯಲ್ಲಿ ನಡೆಯುವ ಈ ಮದುವೆಗೆ ಹಲವು ಜನ ಸೇರಿದ್ದು ಅಲ್ಲಿಯೇ ಒಂದೆರಡು ಬಾರಿ 'ಎಲ್ಲರೂ ಲಬೋ - ದಿಬೊ' ಎಂದು ಕೂಗಿಕೊಳ್ಳುತ್ತಾರೆ. ಅನಂತರ ಊರೊಳಗೆ ಬಂದು ಮನೆ - ಮನೆ ಹತ್ತಿರ ಮೆರೆವಣಿಗೆ ಬಂದಾಗ ಮನೆ ಒಡತಿ ಬಿಂದಿಗೆಯಲ್ಲಿ ನೀರು ತಂದು ಕಪ್ಪೆಗಳ ಮೇಲೆ ಮತ್ತು ಯುವಕರ ಮೇಲೆ ಸುರಿಯುತ್ತಾಳೆ. ಆಗ ಸ್ವಲ್ಪ ಬತ್ತ, ದುಡ್ಡು ಕೊಡುವ ರೂಢಿಯು ಉಂಟು. ಆ ರೀತಿ ಬಂದ ಹಣದಿಂದ ಅಥವಾ ಧಾನ್ಯ ಮಾರಿ ಹುಡುಗರು ಕಡಲೆಪುರಿ - ಬೆಲ್ಲ ಎಲ್ಲರಿಗೂ ಹಂಚುವರು. ಈ ಮದುವೆಯನ್ನು ಮಕ್ಕಳ ವಿನೋದದಿಂದ ಮಾಡುವರು. ಇದರ ಗೂಢಾರ್ಥ ರೈತ ತನ್ನ ಬೇಸಾಯಕ್ಕೆ ಜೀವನಕ್ಕೆ ಬೇಕಾದ ಕೃಷಿ ಕಸುಬು

ಮಾಡಲು ಮಳೆರಾಯನನ್ನು ಪ್ರಾರ್ಥಿಸುವ ಪರಿ. ಕಪ್ಪೆ ಮತ್ತು ಮಕ್ಕಳ ಮೇಲೆ ನೀರು ಸುರಿಯುವುದು ಮಳೆ ಬರುವ ಸಂಕೇತ. ಗ್ರಾಮೀಣರು ಮಳೆಬರುವಿಕೆಗಾಗಿ ಇಟ್ಟಿರುವ ವಿಶ್ವಾಸವಿದೆ.

ಎನ್.ಸಿ.

ಕಬ್ಬು ಕಬ್ಬು ಬಹುವಾರ್ಷಿಕ ಬೆಳೆ. ಹುಲ್ಲು ಜಾತಿಗೆ ಸೇರಿದ ಈ ಸಸ್ಯ ಉಷ್ಣವಲಯಕ್ಕೆ ಸೇರಿದ ಬೆಳೆ. ಸಮಭಾಜಕದ ವೃತ್ತದ ಕಡೆಗಳಲ್ಲಿ ಸುಮಾರು 35^{o} ವರೆಗಿನ ಸುತ್ತಮುತ್ತಲ ಪ್ರದೇಶದಲ್ಲಿ ಅತಿ ಹೆಚ್ಚಾಗಿ ಕಬ್ಬನ್ನು ಬೆಳೆಯುತ್ತಾರೆ. ಇದು ಅಧಿಕ ಪ್ರಮಾಣದಲ್ಲಿ ಸಿಹಿ ಅಂಶವನ್ನು ಹೊಂದಿರುತ್ತದೆ. ಇದರಿಂದ ಬೆಲ್ಲ, ಸಕ್ಕರೆಯನ್ನು ಅತಿ ಹೆಚ್ಚಾಗಿ ತಯಾರಿಸುತ್ತಾರೆ.

ಕಬ್ಬು ಸ್ಯಾಕರಮ್ ಪಂಗಡಕ್ಕೆ (ಪೋಯೇಸೀ ಕುಟುಂಬದ ಆಂಡ್ರೋಪೋಗಾನೀ ಉಪ ಕುಟುಂಬಕ್ಕೆ) ಸೇರಿದೆ. ಇದು ಎರಡರಿಂದ ಆರು ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ ಹಾಗೂ ಇದು ಪ್ರಮುಖ ವಾಣಿಜ್ಯ ಬೆಳೆ. ಪ್ರಪಂಚದಲ್ಲಿ ಸಕ್ಕರೆ ಉತ್ಪತ್ತಿ ಶೇ. 60ಕ್ಕಿಂತ ಹೆಚ್ಚು ಭಾಗ ಕಬ್ಬಿನಿಂದಲೇ ಆಗುತ್ತದೆ.



ಭಾರತ ದೇಶವು ಕಬ್ಬಿನ ಬೆಳೆವಣಿಗೆಯಲ್ಲಿ ತನ್ನದೇ ಸ್ಥಾನವನ್ನು ಹೊಂದಿದೆ. ಅದರ ವಿಸ್ತರಣೆಯು ಭಾರತದಿಂದಲೇ ಅನೇಕ ರಾಷ್ಟ್ರಗಳಿಗೆ ಹರಡಿತು. ಇದರಿಂದ ಕಬ್ಬಿನ ತವರು ಭಾರತ ಎಂಬುದು ವಿದಿತವಾಗುತ್ತದೆ.

ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ಇದು ಪ್ರಮುಖವಾದ ಬೆಳೆಯಾಗಿದೆ. ಭಾರತ, ಪಾಕಿಸ್ತಾನ, ಇಂಡೋಚೀನ, ಜಪಾನ್, ಫಿಲಿಪ್ಪೀನ್ಸ್ ಮತ್ತು ಜಾವ, ಮೆಡಿಟರೇನಿಯನ್ ಸಮುದ್ರ ತೀರ ಪ್ರದೇಶಗಳು, ಲೂಸಿಯಾನ, ಫ್ಲಾರಿಡ, ಜಾರ್ಜಿಯ, ಕ್ಯೂಬಾ, ಮೆಕ್ಸಿಕೋ ಮೊದಲಾದ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಆಸ್ಟ್ರೇಲಿಯಾ ಖಂಡದ ಪೂರ್ವ ತೀರ ಪ್ರದೇಶಗಳಲ್ಲಿ ವಾಣಿಜ್ಯ ಉದ್ದೇಶದಿಂದ ಹೆಚ್ಚಾಗಿ ಬೆಳೆಯುವುದುಂಟು.

ಕಬ್ಬಿನ ಇತಿಹಾಸ : ಕಬ್ಬಿನ ಬಗ್ಗೆ ಅಥರ್ವಣ ವೇದದಲ್ಲಿ ಉಲ್ಲೇಖವಿರುವುದರಿಂದ ಪ್ರಾಚೀನ ಕಾಲದಿಂದಲೂ ಅದು ಭಾರತದಲ್ಲಿ ಪ್ರಮುಖ ಬೆಳೆಯಾಗಿತ್ತೆಂದು ತಿಳಿಯುತ್ತದೆ.

ಕ್ರಿ.ಶ. ಪ್ರಾರಂಭದ ಕಾಲದಲ್ಲಿ ಚೀನಾದ ಚಕ್ರವರ್ತಿಗಳು ಭಾರತದಿಂದ ಚೀನಾದೇಶಕ್ಕೆ ಕಬ್ಬನ್ನು ಪರಿಚಯಿಸಿದರು. ಇದರಿಂದ ಮುಂದಿನ ದಿನಗಳಲ್ಲಿ ಚೀನಾದಲ್ಲಿ ಬೆಳೆಯಲು ಉಪಯುಕ್ತವಾದ ಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತೆಂದು, ಕ್ರಮೇಣ ಜಾವ, ಫಿಲಿಪ್ಪೀನ್, ಶಾಂತಿಸಾಗರದ ದ್ವೀಪಗಳು ಮತ್ತು ಹವಾಯ್ ಪ್ರದೇಶಗಳಿಗೆ ಅದು ಹರಡಿತೆಂದು ತಿಳಿದುಬಂದಿದೆ.

ಕ್ರಿ.ಪೂ. 325ರಲ್ಲಿ ಅಲೆಕ್ಸಾಂಡರ್‌ನೊಡನೆ ದಂಡಯಾತ್ರೆಯಲ್ಲಿದ್ದ ಅಧಿಕಾರಿ ಒಬ್ಬ ಭಾರತದ ಜನರು ಕಬ್ಬನ್ನು ಬೆಳೆಯುವ ಎಲ್ಲಾ ರೀತಿಯ ಕ್ರಮವನ್ನು ಚೆನ್ನಾಗಿ ತಿಳಿದಿದ್ದಾರೆ ಎಂದು ವಿವರಿಸಿದ್ದಾನೆ.

ಮುಂದೆ 6ನೇ ಶತಮಾನದಲ್ಲಿ ಭಾರತದಿಂದ ಪರ್ಷಿಯಾಕ್ಕೂ ಈಜಿಪ್ಟ್ ರಾಷ್ಟ್ರಗಳಿಗೂ 12ನೇ ಶತಮಾನದಲ್ಲಿ ಜಾಂಜಿಬಾರ್ ದೇಶಕ್ಕೂ 15ನೇ ಶತಮಾನದಲ್ಲಿ ಕೇಪ್‌ವರ್ಡ್ ದ್ವೀಪಗಳಿಗೂ ಅಮೆರಿಕಾ ದೇಶಕ್ಕೂ ಬಹುತೇಕವಾಗಿ ಹರಡಿತು.

ಬೆಳೆವಣಿಗೆ : ಕಬ್ಬನ್ನು ತುಂಡು ತುಂಡಾಗಿ ಕತ್ತರಿಸಿ ನಾಟಿ ಮಾಡಿ ವೃದ್ಧಿಮಾಡಲಾಗುತ್ತದೆ. 19ನೆಯ ಶತಮಾನದ ಮಧ್ಯಾವಧಿಯಲ್ಲಿ ಕಬ್ಬಿಗೆ ಬೀಜವಿದೆ ಎಂದೂ ಇತರ ಬೆಳೆಗಳು ಬೀಜದಿಂದ ಬೆಳೆಯುವಂತೆ ಇದು ಕೂಡಾ ಬೀಜದಿಂದ ಮೊಳಕೆಯೊಡೆದೆ ಬೆಳೆವಣಿಗೆಯಾಗುತ್ತದೆ ಎಂದು ಯಾರಿಗೂ ತಿಳಿದಿರಲಿಲ್ಲ. ಬಾರ್‌ಬಡಾಸಿನ ಪಾರಿಸ್ ಮತ್ತು ಆತಸ್ ಎಂಬುವರು ಕಬ್ಬಿಗೆ ಬೀಜವಿದೆ ಎಂದೂ ಮೊದಲು ವಿವರಿಸಿದರು. ಇವರುಗಳು ಬೀಜವನ್ನು ಶೇಖರಿಸಿ ಕಬ್ಬನ್ನು ಬೆಳೆದು ತೋರಿಸಿದರು. ಸಾಮಾನ್ಯವಾಗಿ ವರ್ಷದ ಕೊನೆಯ ತಿಂಗಳುಗಳ ಅಂತರದಲ್ಲಿ ಕಬ್ಬಿನ ತುದಿಯಲ್ಲಿ ಸುಂದರವಾದ ನೀಳವಾದ ಗರಿಯಂತೆ ಸೂಲಂಗಿಯು ಕಂಡು ಬರುತ್ತದೆ. ಇದನ್ನು ಕಬ್ಬಿನ ಪುಷ್ಪಗುಚ್ಛ ಎಂದು ಕರೆಯುವರು.

ಬೆಳೆವಣಿಗೆಯ ಹಂತಗಳು :

ಮೊಳಕೆ ಹಂತ : ಕಬ್ಬನ್ನು ನಾಟಿಮಾಡುವಾಗ ಅಥವಾ ಬಿತ್ತನೆ ಮಾಡುವಾಗ ಅದರ ಜಲ್ಲೆಯಲ್ಲಿ ಮೂರು ಕಣ್ಣುಗಳು ಇರುತ್ತವೆ. ಬಿತ್ತನೆಯು ಸರಿಯಾದ ಕ್ರಮದಲ್ಲಿ ನಡೆದಾಗ ಆ ಮೂರು ಕಣ್ಣುಗಳು ಮೊಳಕೆ ಒಡೆದು ಬೆಳೆಯುತ್ತವೆ. ಮೊಳೆತ ಕಣ್ಣುಗಳಲ್ಲಿ ಕಬ್ಬಿನ ಅಂಕುರಾಂಶವಿರುವುದರಿಂದ ಅದು ಬೆಳೆಯಲು ಸುಲಭವಾಗುತ್ತದೆ. ಕಬ್ಬು ಹಳೆಯದಾಗಿ ಬಹುಭಾಗ ಬೆಂಡಾಗಿದ್ದರೆ ದೃಢವಾಗಿ, ಆರೋಗ್ಯವಾಗಿ ಬೆಳೆಯುವುದಿಲ್ಲ. ಜಲ್ಲೆಯ ಮೇಲ್ಭಾಗ ಬಿತ್ತನೆಗೆ ಸಮಂಜಸವಾಗಿದ್ದು ಮೊಳಕೆಯು ಉತ್ತಮವಾಗಿರಬೇಕು. ಬಿತ್ತನೆ ಮಾಡುವಾಗ ಕಣ್ಣುಗಳು ಪಕ್ಕಕ್ಕಿರುವಂತೆ ಸರಿಯಾದ ರೀತಿಯಲ್ಲಿ ಮಾಡಬೇಕು ಹಾಗೂ ಈ ಹಂತದಲ್ಲಿ ವಾತಾವರಣ ವ್ಯತ್ಯಾಸವು ಬೆಳೆಯ ಮೇಲೆ ಪರಿಣಾಮ ಉಂಟುಮಾಡುತ್ತದೆ.

ತೆಂಡೆ ಹಂತ : ಉತ್ತಮವಾದ ಇಳುವರಿ / ಫಸಲು ಬರಬೇಕಾದರೆ ಮರಿಕಬ್ಬು ಉತ್ಪನ್ನವಾಗಬೇಕು. ಈ ಮರಿ ಕಬ್ಬಿನ ಉತ್ಪನ್ನವನ್ನು ತೆಂಡೆ ತೆಗೆಯುವುದು ಎನ್ನುವರು. ಕಬ್ಬು ಮೊಳಕೆಯಿಂದ ಅದು ಪೂರ್ಣವಾಗಿ ಬೆಳೆದು ಕೊನೆಯ ಹಂತವನ್ನು ತಲುಪುವವರೆಗೆ ಮರಿಕಬ್ಬುಗಳು ಉತ್ಪನ್ನವಾಗುತ್ತಲೇ ಇರುತ್ತವೆ. ಇವು ಭೂಮಿಯ ಒಳಗಿನ ಕಾಂಡದಿಂದ ಹೊರಗಾಣುತ್ತವೆ. ಪ್ರಾರಂಭದಲ್ಲಿ ಪಕ್ಕಕ್ಕೆ ಹರಡಿದಂತೆ ಕಂಡು ಬಂದರೂ ಅನಂತರದ ದಿನಗಳಲ್ಲಿ ನೇರವಾಗಿ ಬೆಳೆಯುತ್ತವೆ. ಗಿಡಗಳು ಎಳೆಯ ವಯಸ್ಸಿನಲ್ಲಿ ಇರುವಾಗ ಹೊಸ ಕಾಂಡಗಳಿಗೆ ಬೆಳೆಯಲು ಯಾವ ತೊಡಕು ಇರುವುದಿಲ್ಲ. ಕಬ್ಬು ಮುಕ್ಕಾಲು ಭಾಗ ಬೆಳೆದ ಅನಂತರ ಹುಟ್ಟುವ ಮರಿಕಬ್ಬುಗಳು ಬಹುದಪ್ಪವಾಗಿ ಆಕರ್ಷಕವಾಗಿ ಕಂಡರೂ ಅದರಲ್ಲಿ ಹೆಚ್ಚಿನ ಸಕ್ಕರೆಯ ಅಂಶ ಇರುವುದಿಲ್ಲ. ಇದನ್ನು 'ನೀರು ಕಬ್ಬು' ಎನ್ನುವರು. ಇವು ಬಿತ್ತನೆಗೆ ಮಾತ್ರ ಉಪಯುಕ್ತವಾಗುತ್ತವೆ. ಬಿಸಿಲಿನ ಬೇಗೆ ಹೆಚ್ಚಾದಲ್ಲಿ ಮರಿಕಬ್ಬುಗಳು ಕೂಡಾ ಹೆಚ್ಚಾಗುತ್ತವೆ. ಈ ಹಂತದ ಸಮಯದಲ್ಲಿ ಹೆಚ್ಚಾಗಿ ಉತ್ತಮ ಗೊಬ್ಬರಗಳ ಪೂರೈಕೆ ಮಾಡಬೇಕು.

ರಸತುಂಬುವ ಹಂತ : ಆರಂಭದ ದಿನಗಳಲ್ಲಿ ಕಬ್ಬಿನ ಆಹಾರ ಉತ್ಪಾದನೆ ಅದರ ಬೆಳವಣಿಗೆಗಾಗಿಯೇ ವೆಚ್ಚವಾಗುತ್ತದೆ. ಆಗ ಸಾರಜನಕಾಂಶ ಮಾತ್ರ ಹೆಚ್ಚಾಗಿದಲ್ಲಿ ಕಾಂಡಗಳಿಗೆ ದೃಢತೆ ಬಂದು ಗಿಣ್ಣುಗಳು ದಪ್ಪವಾಗುತ್ತವೆ. ಕಬ್ಬು ಬಲಿತು ರಸಗೊಡುತ್ತದೆ. ಕಬ್ಬಿನ ಎಲೆಗಳಿಂದ ಉತ್ಪನ್ನವಾದ ಆಹಾರಾಂಶಗಳಲ್ಲಿ ಸ್ವಲ್ಪ ಭಾಗ ಹೊಸ ಅಂಗಾಂಗಗಳ ರಚನೆಗೂ ಕೂಡಾ ಉಪಯುಕ್ತವಾಗುತ್ತದೆ.

ಈ ಹಂತದಲ್ಲಿ ಕಬ್ಬಿಗೆ ಹೆಚ್ಚಾಗಿ ಗೊಬ್ಬರವನ್ನು ಹಾಕಬೇಕು. ಸಕ್ಕರೆ ಅಂಶ ಹೆಚ್ಚಾಗಿ ಉತ್ಪಾದನೆಯಾಗುವುದು ಕೂಡಾ ಇದೆ ಹಂತದಲ್ಲಿ. ಇದರಿಂದ ಕಬ್ಬಿನ ಪಕ್ವತೆಯು ಗಿಣ್ಣೆಗೆ ಹೊಂದಿಕೊಂಡು ರಸಭರಿತವಾದ ಕಬ್ಬಿನ ಜಲ್ಲೆಯು ಪಕ್ವವಾಗಿ ಬೆಳೆಯುತ್ತದೆ.

ಸೂಲಂಗಿ ಹಂತ : ಕಬ್ಬಿನ ಬೆಳೆಸು ಕಾಂಡದ ತುಂಡುಗಳಿಂದಾಗುವುದರಿಂದ ಸೂಲಂಗಿ ಮುಖ್ಯವಲ್ಲ. ಅಲ್ಲದೆ ಎಲ್ಲಾದರಲ್ಲೂ ಸೂಲಂಗಿ ಬರುವುದಿಲ್ಲ. ಸೂಲಂಗಿ ಕಬ್ಬಿನ ಬೆಳವಣಿಗೆಯ ಕೊನೆಯ ಹಂತ. ಸೂಲಂಗಿ ಮೂಡುವ ಮೊದಲೇ ಕಬ್ಬನ್ನು ಕಟಾವು ಮಾಡಬೇಕು.

ಕಬ್ಬಿನ ಪ್ರಭೇದಗಳು

1. ಸಾಕರಂ ಅಫಿಸಿನೇರಂ : ಇದು ಮೃದುವಾಗಿದ್ದು ಆಕಾರದಲ್ಲಿ ದಪ್ಪವಾಗಿ ಇರುತ್ತದೆ. ಸಕ್ಕರೆ ಅಂಶ ಕಡಿಮೆ ಇದ್ದು, ಹೆಚ್ಚಾಗಿ ಪಾಲಿನೇಷಿಯ ದ್ವೀಪಗಳಲ್ಲಿ ಕಂಡುಬರುತ್ತದೆ. ಅಲ್ಲಿಯ ಮೂಲ ನಿವಾಸಿಗಳು ಹೆಚ್ಚಾಗಿ ಬೆಳೆಯುತ್ತಾರೆ.

2. ಸಾಕರಂ ಬರ್ಬೆರಿ : ಇದನ್ನು ಪುರಾತನ ಕಾಲದಿಂದಲೂ ಗಂಗಾನದಿಯ ಬಯಲಿನಲ್ಲಿ ಬೆಳೆಯಲಾಗುತ್ತಿತ್ತು. ಇದು ಸಣ್ಣಗಾತ್ರದ್ದು. ಇದಕ್ಕೆ ವಾತಾವರಣ ವ್ಯತ್ಯಾಸವು ಕಂಡು ಬಂದರೂ ಬೆಳವಣಿಗೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ವಾತಾವರಣದ ವೈವಿಧ್ಯವನ್ನು ತಡೆಯಬಲ್ಲ ಶಕ್ತಿಯುನ್ನು ಹೊಂದಿರುತ್ತದೆ. ಕ್ರಿಮಿ ಕೀಟಗಳ ಉಪದ್ರವವನ್ನು ತಡೆಯಬಲ್ಲದು. ಜೌಗು ಪ್ರದೇಶಗಳಲ್ಲಿ ಬೆಳೆಯುವುದರಿಂದ ಇಳುವರಿ ಕಡಿಮೆ.

3. ಸಾಕರಂ ಸೈನೆನ್ಸಿ : ಇದು ಸಾಮಾನ್ಯವಾಗಿ ಬರ್ಬೆರಿಯಂತೆ ಕಂಡು ಬಂದರು ಹೆಚ್ಚು ಮಂದವಾದ ಹಾಗೂ ವಾತಾವರಣಕ್ಕೆ ಹೊಂದಿಕೊಳ್ಳುವ ಜಾತಿ.

4. ಸಾಕರಂ ಸ್ಪಾಂಟೇನಿಯಂ : ಇದು ಕಾಡು ಜಾತಿಯದ್ದು. ಹೆಚ್ಚಾಗಿ ಪಶ್ಚಿಮ ವಲಯದಲ್ಲಿ ಕಂಡುಬರುತ್ತದೆ. ಇದರ ಬೆಳವಣಿಗೆಗೆ ಸಮ ಶೀತೋಷ್ಣವಲಯಗಳ ವಾತಾವರಣ ಪ್ರಶಸ್ತವಾಗಿದೆ. ಇದೊಂದು ಜನಪ್ರಿಯ ವಾಣಿಜ್ಯ ಬೆಳೆ.

5. ಸಾಕರಂ ರೋಬ : ಇದು ಸ್ಪಾಂಟೇನಿಯಂ ಬಗೆ. ಉತ್ತಮವಾಗಿ ಇಳುವರಿ ಕೊಡುವ ತಳಿ ಇದು.

ಈ ತಳಿಗಳಲ್ಲದೆ ಕಬ್ಬಿನಲ್ಲಿ ಹಲವಾರರು ಬಗೆಗಳಿವೆ. ಬಹುಪಾಲು ಅಡ್ಡ ತಳಿಗಳ ಮೂಲಕ ಪಡೆಯಲಾದಂತಹವು. ಇವು ಬಹು ಸಂಖ್ಯೆ ಕ್ರೋಮೋಜೋಮುಗಳನ್ನು ಹೊಂದಿವೆ.

ಕಬ್ಬಿನ ವಿವಿಧ ತಳಿಗಳು ಬೆಳವಣಿಗೆಯಲ್ಲಿ ಎತ್ತರ, ಕಾಂಡದ ದಪ್ಪ, ಬಣ್ಣ, ಸಿಪ್ಪೆಯ ಕಾಠಿಣ್ಯ ರಸದ ಮಾಧುರ್ಯ, ಪಕ್ವಗೊಳ್ಳುವ ಕಾಲ, ರೋಗ ನಿರೋಧಕ ಗುಣಗಳು ಮುಂತಾದ ಲಕ್ಷಣಗಳಲ್ಲಿ ವೈವಿಧ್ಯವನ್ನು ತೋರುತ್ತವೆ. ಉದಾ : ರಸದಾಳಿ ಮತ್ತು ಪಟ್ಟಾಪಟ್ಟಿ, ರೆಡ್‌ಮಾರಿಷಸ್ ತಳಿ, ಬಬ್ರೂರ ಪಟ್ಟಿ, ಎಚ್.ಎಂ. 544, ಎಚ್.ಎಂ. 320, ಎಚ್.ಎಂ. 661, ಕೊ. 213, ಕೊ. 290, ಕೊ. 312, ಕೊ. 347, ಕೊ. 331 ಕೊ. 419, ಕೊ. 421. ಇತ್ಯಾದಿ. ಇವು ರೋಗನಿರೋಧಕ ಶಕ್ತಿಗೂ ಹೆಚ್ಚಿನ ಪ್ರಮಾಣದ ಇಳುವರಿಗೂ ವಿವಿಧ ಭೂಗುಣಗಳಿಗೂ ಹೊಂದಿಕೊಳ್ಳುತ್ತವೆ. ಅಲ್ಲದೆ ಎಲ್ಲಾ ರೀತಿಯ ಗೊಬ್ಬರಗಳಿಗೂ ಹೊಂದಿಕೊಳ್ಳುತ್ತವೆ.

ಸಸ್ಯ ವಿವರಣೆ : ಕಬ್ಬಿನ ಗಿಡವನ್ನು ಕಾಂಡ, ಬೇರು ಮತ್ತು ಎಲೆಗಳು ಎಂದು ಮೂರು ಭಾಗಗಳಾಗಿ ವಿಭಾಗಿಸಬಹುದು. ಕಾಂಡವನ್ನು ಕಬ್ಬಿನ ಜಲ್ಲೆ ಎಂದು ಸಹ ಕರೆಯುವರು. ಭೂಮಿಯ ಒಳಗೆ ನೆಟ್ಟಿರುವ ಭಾಗ (ಕೂಳೆ) ನೆಲದ ಮೇಲೆ ನೇರವಾಗಿ ಬೆಳೆಯುವ ಭಾಗ ಎಂದೂ ಸಹ ಕಾಂಡವನ್ನು ಗುರುತಿಸಬಹುದು. ಎರಡು ಭಾಗಗಳಲ್ಲೂ ಅನೇಕ ರೀತಿಯ ಗಿಣ್ಣುಗಳು ಕಂಡುಬರುತ್ತವೆ.

ಅದರ ಬೇರುಗಳು ತೊಡಕು ಬೇರಿನ ಸಮೂಹಕ್ಕೆ ಸೇರಿದ್ದು, ಒಂದೇ ರೀತಿಯಾಗಿದ್ದರು ಮೂರು ಬಗೆಯುಳ್ಳದ್ದಾಗಿದೆ. ಆಳಕ್ಕೆ ಬೆಳೆಯುವ ಬೇರುಗಳು ಬಿಳಿಯ ಬಣ್ಣದ ಆನಿಕೆ ಬೇರುಗಳು, ಭೂಮಿಯ ಆಳಕ್ಕೆ 8-14 ಅಂಗುಲ ಇಳಿದು ಬೆಳೆಯುವ ಬೇರುಗಳು.

ಕಾಂಡದ ಎರಡು ಪಾರ್ಶ್ವಗಳಲ್ಲಿ ನೀಳವಾದ ಕತ್ತಿಯಂತಿರುವ ಎಲೆಗಳು ಜೋಡಣೆಗೊಂಡಿರುತ್ತವೆ. 10 ಎಲೆಗಳು ಸಾಮಾನ್ಯವಾಗಿ ಇರಲೇಬೇಕು. ಇವು 3-4 ಮೀ. ಉದ್ದ ಮತ್ತು 2-3 ಇಂಚು ಅಗಲ ಇರುತ್ತವೆ. ಎಲೆಯ ಅಂಚು ಸಮಾನಾಂತರ ಮಾದರಿಯದ್ದಾಗಿರುತ್ತದೆ.

ವ್ಯವಸಾಯ : ಕಬ್ಬನ್ನು ವರ್ಷದ ಯಾವ ಕಾಲದಲ್ಲಾದರೂ ಬೆಳೆಯಬಹುದು. ಚಳಿಗಾಲದಲ್ಲಿ ಮೊಳಕೆಯೊಡೆಯುವುದು ನಿಧಾನವಾಗುತ್ತದೆ. ಉಳಿದ ಸಮಯದಲ್ಲಿ ಬೇಗ ಬೆಳವಣಿಗೆ ಹೊಂದುತ್ತದೆ. ಭೂಮಿಯು ಫಲವತ್ತಾಗಿರಬೇಕು ಹಾಗೂ ಗೊಬ್ಬರ ಹಾಕಿ ಭೂಮಿಯನ್ನು

ಹದಮಾಡಿಕೊಂಡಿರಬೇಕು. ಭೂಮಿಯನ್ನು ಆಳವಾಗಿ 12-15 ಆಳಕ್ಕೆ ಉಳುಮೆ ಮಾಡುವುದು. ಉತ್ತಮವಾಗಿರುತ್ತದೆ. ಸಾಮಾನ್ಯವಾಗಿ ಭೂಮಿ ಸಾಕಷ್ಟು ಮಣ್ಣನ್ನು ವಾರಿ ಹಾಕಿ ನೀರು ಬಸಿಯಲು ಕಡುಗುಗಳನ್ನು ನೀರು ಕಾಲುವೆಗಳನ್ನು ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡಿರಬೇಕು. ಅನಂತರ ಸಾಲುಗಳಲ್ಲಿ ನೀರು ನಿಂತಿರುವಾಗಲೆ ಒಂದರ ಪಕ್ಕ ಒಂದರಂತೆ ಕಬ್ಬನ್ನು ಜೋಡಿಸಿ ತುಳಿದು ಬಿಡಬೇಕು. ಇದೇ ಸಾಮಾನ್ಯ ಬಳಕೆಯ ಪದ್ಧತಿ. ಇತರೆಡೆ ಸಾಲಿನಲ್ಲಿ ಐದರಿಂದ ಆರು ಅಂಗುಲ ಅಂತರಕ್ಕೆ ಅಳತೆ ಮಾಡಿದಂತೆ, 3-4 ಆಳದ ಗುಂಡಿ ಮಾಡಿ ಅದರಲ್ಲಿ 3-4 ಬಿತ್ತನೆ ನೆಡುವುದೂ ಹಾಗೂ ಇದರಂತೆ ಹಲವು ಪ್ರದೇಶಗಳಲ್ಲಿ ಗುಳಿ ಬಿತ್ತನೆ ಮಾಡುವುದೂ ಇದೆ.



ಕಬ್ಬು ಗದ್ದೆಗಳನ್ನು ಉತ್ತು ಹಸನುಗೊಳಿಸಿದ ಮೇಲೆ 3-4 ಅಡಿ ಅಗಲ ಮತ್ತು ಆಳಕ್ಕೆ ತಕ್ಕಂತೆ ನೀಳದ ಮಡಿಗಳನ್ನು ಮಾಡಿ ಅದರಲ್ಲಿ ಅಡಿಗೆ ಒಂದರಂತೆ ಬಿತ್ತನೆ ಮಾಡಬೇಕು. ಬಿತ್ತನೆಯೂ ಸರಿಯಾದ ಕ್ರಮದಲ್ಲಿ ಆಗಬೇಕು. ಇಲ್ಲವಾದಲ್ಲಿ ಬೆಳೆಯಲ್ಲಿ ವ್ಯತ್ಯಾಸ ಕಂಡುಬರುತ್ತವೆ. ಬಿತ್ತನೆ ಮಾಡಿದ ಎರಡು ವಾರಗಳಲ್ಲಿ ಮೊಳಕೆ ಬರುತ್ತದೆ. ಅನಂತರದ ದಿನಗಳಲ್ಲಿ ಕಳೆಯಿಲ್ಲದಂತೆ ಎಚ್ಚರ ವಹಿಸಬೇಕು. ಪ್ರತಿ ವಾರ ನೀರು ಹಾಯಿಸಿ ಹದ ಮಾಡಿ ಕಳೆಯನ್ನು ತೆಗೆದು, ಗೊಬ್ಬರವನ್ನು ಆಗಾಗ್ಗೆ ಹಾಕುತ್ತಿರಬೇಕು, ಪ್ರತಿವಾರ ಕಬ್ಬಿನ ಎಲೆಯನ್ನು ಬಿಡಿಸಿ ಶುದ್ಧಗೊಳಿಸಿಕೊಳ್ಳುತ್ತಿರಬೇಕು.

ರೋಗಗಳು :

1. ಕಾಂಡ ಕೊರೆಯುವ ಹುಳು : ಈ ಹುಳುಗಳಲ್ಲಿ ಹಲವಾರು ಜಾತಿಗಳಿವೆ. ಸಾಮಾನ್ಯವಾಗಿ ಇವು ಕಬ್ಬಿನ ಜಲ್ಲೆಯನ್ನು ಕೊರೆದು ಸಕ್ಕರೆ ಅಂಶ ಇಲ್ಲದಂತೆ ಹಾಳು ಮಾಡುತ್ತವೆ.

i) ಆರ್ಗ್ಯೆರಿಯ ಸ್ಟಿಕ್ಟಿಕ್ರಾಸಿಸ್, ii) ಡೈಯಾಟ್ರಿಯ ಮತ್ತು ಸ್ಕಿರ್ಪೋಫೇಗ ನಿವೆಲ್ಲ. ಇವುಗಳು ಕಬ್ಬಿನ ಕಾಂಡವನ್ನು ಕೊರೆದು ಹಾಳು ಮಾಡುವುದರಿಂದ ಸುಳಿ ಒಣಗಿ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

2. ಸುಳಿಕೊರೆಯುವ ಹುಳು : ಇವುಗಳು ಸಾಮಾನ್ಯವಾಗಿ ಕಬ್ಬಿನ ಎಳೆಯ ತುದಿಗಳನ್ನು ಕೊರೆಯುತ್ತವೆ. ಎಲೆಯ ಮಧ್ಯ ಮಧ್ಯ ತೂತುಗಳು ಉಂಟಾಗಿ, ಉಳಿದೆಲ್ಲ ಎಲೆಗಳ ಅಂಚುಗಳಲ್ಲೂ ಕಚ್ಚುಗಳು ಕಾಣಬರುತ್ತವೆ. ಇದರಿಂದ ಸುಳಿ ಹಾಳಾಗುತ್ತದೆ.

3. ಪೈರಿಲ್ಲ ಹುಳು : ಇವು ಸಾಮಾನ್ಯವಾಗಿ ಎಲೆಗಳ ತಳಭಾಗದಲ್ಲಿದ್ದು, ಸಸಿಗಳ ರಸ ಹೀರಿ ಜೀವಿಸುತ್ತವೆ. ಇದರಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಸುಕ್ಕುಗಟ್ಟಿ ಒಣಗಿ ಉದುರುತ್ತವೆ. ಕಬ್ಬಿನ ರಸವನ್ನು ಹೀರುವುದರಿಂದ ಕಬ್ಬಿನಲ್ಲಿ ಬೂಷ್ಟು ಕಟ್ಟುತ್ತದೆ. ಇದರಿಂದ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತದೆ. ಇವುಗಳಲ್ಲದೆ ಮಿಡತೆ ಹುಳು, ಬಿಳಿ ನೊಣ, ಗೆದ್ದಲು, ನುಸಿ ಮುಂತಾದ ಕೀಟಗಳೂ ಗಣನೀಯವಾಗಿ ಕಬ್ಬಿನ ಬೆಳೆಯನ್ನು ನಷ್ಟಗೊಳಿಸುತ್ತವೆ.

ಬೂಷ್ಟು ರೋಗಗಳು :

ತುಕ್ಕು ರೋಗ : ಎಲೆಗಳ ಮೇಲೆ ಕಿತ್ತಳೆ ವರ್ಣದ ಚುಕ್ಕೆಗಳು ಮೂಡುತ್ತವೆ. ಇದರಿಂದ ಎಲೆಯು ಒಣಗಿರುವಂತೆ ಕಾಣುತ್ತದೆ. ಅನಂತರ ಈ ಎಲೆಗಳು ನಿರುಪಯುಕ್ತವಾಗುತ್ತವೆ.

ಕಾಡಿಗೆ ರೋಗ : ಈ ರೋಗ ತಗುಲಿದಾಗ ಕಬ್ಬಿನ ತುದಿಯಿಂದ ನೀಳವಾಗಿ ಕೆಳಬಾಗಿರುವ ಚಾಟಿಯಂಥ ಅಚ್ಚಕಪ್ಪಾದ ಬೆಳವಣಿಗೆ ಕಂಡುಬರುತ್ತದೆ. ಎಲೆಯ ಸುತ್ತ ಮತ್ತು ಕಬ್ಬಿನ ತುದಿಯ ಸುತ್ತ ಬಿಳಿಯ ಬಣ್ಣದ ಪೊರೆಯೊಂದಿದ್ದು ಅದು ಬೆಳೆದಂತೆಲ್ಲ ಸೀಳಿ ಕಪ್ಪು ಪುಡಿಯಂತೆ ಬೀಜಾಣುಗಳು ಹೊರಬರುತ್ತವೆ.

ಕೆಂಪು ಕೊಳೆ ರೋಗ : ಇದರಿಂದ ಕಬ್ಬಿನ ತುದಿಯಲ್ಲಿಯ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಈ ರೋಗ ಪೀಡಿತ ಕಬ್ಬನ್ನು ಸೀಳಿ ನೋಡಿದಾಗ ತಳದ ಗಿಣ್ಣುಗಳಲ್ಲಿ ಬಿಳಿ ಕೆಂಪು ಮಿಶ್ರಿತ ಬಣ್ಣವಿರುವುದು ಕಂಡುಬರುತ್ತದೆ. ಇದರಿಂದ ಕೊಳೆತ ಹುಳಿವಾಸನೆ ಬರುತ್ತದೆ ಹಾಗೂ ಕಬ್ಬು ಪೂರ್ಣವಾಗಿ ಟೊಳ್ಳಾಗುತ್ತದೆ.

ಕಂದು ಚುಕ್ಕೆ ರೋಗ : ಇದು ಎಲೆಗಳಿಗೆ ಹರಡುವಂಥದ್ದು. ಎಲೆಯ ಇಕ್ಕಡೆಗಳಲ್ಲಿ ಕೆಂಪಾದ ಬಣ್ಣ ಕಾಣುತ್ತದೆ. ಇದರಿಂದ ಅಗಲವಾಗಿದ್ದ ಎಲೆಗಳ ಮಧ್ಯ ಭಾಗ ಕಂದು ಬಣ್ಣಕ್ಕೆ ತಿರುಗಿ ಅದರ ಸುತ್ತಲೂ ಹಳದಿ ಬಣ್ಣವಾಗುತ್ತದೆ. ಅದರ ಕಂದುಭಾಗ ಪೂರ್ಣವಾಗಿ ಒಣಗುತ್ತದೆ.

ಕಪ್ಪುಕೊಳೆ ರೋಗ : ಕಬ್ಬುಗಳಿಗೆ ಕಪ್ಪು ಬೂಸ್ಟು ಬಂದು ಬೆಳೆದ ಭಾಗವನ್ನು ಕೊಳೆಯುವಂತೆ ಮಾಡುತ್ತದೆ. ಕಬ್ಬನ್ನು ಕಡಿದು ತೆಗೆಯುವಾಗ ಅದಕ್ಕೆ ಗಾಯವಾದರೆ ಅದರ ಅಡಿಯಲ್ಲಿ ಬೆಳೆಯುವ ಕಪ್ಪು ಬೂಷ್ಟವೇ ಈ ರೋಗ.

ಗೋಂದು ರೋಗ : ಇದು ಕಬ್ಬಿನ ಜಲ್ಲೆಗೆ ಹರಡಿ ಪೂರ್ಣವಾಗಿ ಎಲೆಗಳನ್ನು ಹಳದಿ ಬಣ್ಣಕ್ಕೆ ತಿರುಗುವಂತೆ ಮಾಡುತ್ತದೆ. ಇದರಿಂದ ಕಬ್ಬು ಒಣಗಿ ಹೋಗುತ್ತದೆ.

ಕೆಂಪು ಪಟ್ಟಿ ರೋಗ : ಇದು ಕಾಂಡಕ್ಕೆ ಹರಡುವ ರೋಗ. ಇದು ಹರಡಿದಾಗ ಕಬ್ಬಿನ ತುದಿ ಸುಲಭವಾಗಿ ಕೊಳೆತು ನಾರುತ್ತದೆ. ಎಲೆಗಳ ತಳಭಾಗದಲ್ಲಿ ನರಗಳ ಮಧ್ಯೆ ಕೆಂಪು ಪಟ್ಟಿಯುಂಟಾಗಿ ಅದು ಎದ್ದು ಕಾಣುತ್ತದೆ.

ಮೊಸಾಯಿಕ್ ರೋಗ : ಎಲೆಗಳ ಮಧ್ಯ ತಿಳಿ ಹಸುರು ಹಾಗೂ ಹಳದಿ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಇದರಿಂದ ಕಬ್ಬು ಗಿಡ್ಡವಾಗಿ ಬೆಳೆದು ಸಣ್ಣಗೆ ನುಲಿದಂತಾಗಿ ಜಡೆಕಟ್ಟಿದಂತಿರುತ್ತದೆ. ತುದಿಯ ಬೆಳವಣಿಗೆ ಪೂರ್ಣವಾಗಿ ನಿಂತು ಹೋಗುತ್ತದೆ. ಕೀಟ ಹಾಗೂ ಬೂಷ್ಟು ರೋಗ

ನಿವಾರಣೆಗೆ ಅನುಕೂಲವಾಗುವ ಔಷಧಗಳ ಬಳಕೆಯಿಂದಲೂ ರೋಗರಹಿತ ಹಾಗೂ ರೋಗನಿರೋಧಕ ಶಕ್ತಿಯುತ ತಳಿಗಳ ಬಳಕೆಯಿಂದಲೂ ಇದನ್ನು ನಿವಾರಿಸಬಹುದು.

ರೋಗ ನಿಯಂತ್ರಣ ಕ್ರಮಗಳು / ಹತೋಟಿ

ಬಿತ್ತನೆ ಸಮಯದಲ್ಲಿ ಬಲಿತ ತೊಂಡೆಗಳನ್ನು ಪೌಷ್ಟಿಕಾಂಶದಿಂದ ಕೂಡಿದ ಕಬ್ಬಿನಿಂದ ಪಡೆದು ನೆಡಬೇಕು.

ನೀರಿನ ಅಂಶ ಹೆಚ್ಚಾಗಿದ್ದಲ್ಲಿ ಸೊಂಕುಗಳು ತಗಲುವುದಿಲ್ಲ.

ಬೆಳವಣಿಗೆಯ ಹಂತಕ್ಕನುಗುಣವಾಗಿ ಸರಿಯಾದ ಗೊಬ್ಬರವನ್ನು ಹಾಕಬೇಕು.

ಸರಿಯಾದ ಕ್ರಮದಲ್ಲಿ ಗದ್ದೆಯಲ್ಲಿ ಕಳೆಯನ್ನು ತೆಗೆಯಬೇಕು ಹಾಗೂ ಎಲೆಯನ್ನು ಬಿಡಿಸಬೇಕು.

ಕಾಲಕ್ಕೆ ತಕ್ಕಂತೆ ನೀರನ್ನು ಹಾಯಿಸಬೇಕು ಹಾಗೂ ಕಬ್ಬಿನ ಸಾಲುಗಳಲ್ಲಿ ಅಂತರವನ್ನು ಕಾಪಾಡಿಕೊಂಡು ಬರಬೇಕು.

ಸಾಮಾನ್ಯವಾಗಿ ಎಕರೆಗೆ 200 ಪೌಂಡು ಸಾರಜನಕ, 100 ಪೌಂಡ್ ರಂಜಕ ಹಾಗೂ 100 ಪೌಂಡ್ ಪೊಟ್ಯಾಷ್‌ನ್ನು ವಿವಿಧ ಭೂ ಗುಣಗಳಿಗೆ ಅನುಸಾರವಾಗಿ ಬಳಸಬೇಕು.

ರಾಸಾಯನಿಕ ಗೊಬ್ಬರಗಳಾದ ಯೂರಿಯಾ, ಪೊಟಾಸಿಯಂ, ಬೆಳವಣಿಗೆಗೆ ತಕ್ಕಂತೆ ಸಮರ್ಪಕವಾಗಿ ಸಿಂಪಡಿಸಬೇಕು.

ಸೂಲಂಗಿ ಬಂದ ತಕ್ಷಣ ಕಬ್ಬಿಗೆ ನೀರು ಹಾಯಿಸುವುದನ್ನು ನಿಲ್ಲಿಸಬೇಕು.

ಕಟಾವು : ಸಾಮಾನ್ಯವಾಗಿ ಕಬ್ಬು ಕಟಾವಿಗೆ ಬರಲು 13-14 ತಿಂಗಳುಗಳ ಅವಧಿ ಬೇಕಾಗುತ್ತದೆ. ನೀರು ಶೇ. 77.9 ಭಾಗ, ಸುಕ್ರೋಸ್ ಶೇ. 20.2 ಭಾಗ, ಗ್ಲೂಕೋಸ್ ಶೇ. 0.57 ಭಾಗ, ಇತರೆ ಸಾವಯವ ಮತ್ತು ನಿರವಯವ ವಸ್ತುಗಳು ಶೇ. 1.29 ಭಾಗ ಇರುತ್ತವೆ.

ಕಬ್ಬು ಕಟಾವಿಗೆ ಸಿದ್ಧವಾಗಿದೆಯೆಂದು ನಿರ್ಧರಿಸಿದ ಅನಂತರದ 10-15 ದಿನ ನೀರು ಒದಗಿಸಬಾರದು, ಕಟಾವು ಮಾಡುವಾಗ ಹರಿತವಾದ ಮಚ್ಚುಗಳಿಂದ ನೆರಿ ಮಟ್ಟಕ್ಕೆ ಕಡಿದು ತೆಗೆಯಬೇಕು. ಅನಂತರ ಕಬ್ಬನ್ನು ಮಚ್ಚಿನಿಂದ ಸವರಿ, ಎಲೆಗಳನ್ನು ತೆಗೆಯಬೇಕು. ತುದಿಯ ಪಕ್ವ ಭಾಗವನ್ನು ಕತ್ತರಿಸಿ ಬೇರ್ಪಡಿಸಬೇಕು ಹಾಗೂ ಬೇರುಗಳನ್ನು ಪೂರ್ಣವಾಗಿ ಸವರಿ ತೆಗೆದು ಕಬ್ಬಿನ ಜಲ್ಲೆಯನ್ನು ಸಾಗಿಸಲು ಅನುಕೂಲವಾಗುವಂತೆ ತುಂಡರಿಸಿ ಹೊರೆ ಕಟ್ಟಬೇಕು. ಕಟಾವಾದ ಕಬ್ಬನ್ನು ದೀರ್ಘಕಾಲದವರೆಗೆ ಶೇಖರಿಸಿಡದೆ ಬೇಗ ಸಕ್ಕರೆ ಅಥವಾ ಬೆಲ್ಲವನ್ನು ತಯಾರಿಸಬೇಕು. ಇಲ್ಲವಾದಲ್ಲಿ ಕಬ್ಬಿನಲ್ಲಿಯ ಸಕ್ಕರೆ ಅಂಶ ಕಡಿಮೆಯಾಗುತ್ತದೆ.

ಕರ್ನಾಟಕದಲ್ಲಿ ಕಬ್ಬು ಬೆಳೆಯ ಉತ್ಪಾದನೆ (ಲಕ್ಷಟನ್‌ಗಳಲ್ಲಿ)

1980-81	-	121.27
1990-91	-	207.5
2000-01	-	429.24
2005-06	-	196.48
2009-10	-	322.87
2010-11	-	396.57

ಕರ್ನಾಟಕದಲ್ಲಿ ಕಬ್ಬು ಬೆಳೆಯ ಸರಾಸರಿ ಇಳುವರಿ (ಲಕ್ಷಟನ್‌ಗಳಲ್ಲಿ)

2000-01	-	108
2005-06	-	93
2007-08	-	89
2008-09	-	87
2009-10	-	95

ಕರ್ನಾಟಕದಲ್ಲಿ ಕಬ್ಬು ಬೆಳೆಯುವ ಭೂಮಿಯ ವಿಸ್ತೀರ್ಣ (ಲಕ್ಷ ಹೆಕ್ಟೇರುಗಳಲ್ಲಿ)

1960-61	-	0.72
1970-71	-	1.04
1980-81	-	1.54
1990-91	-	2.72
2000-01	-	4.17
2010-11	-	4.23

ಪರಾಮರ್ಶನ ಗ್ರಂಥಗಳು :

ಕನ್ನಡ ವಿಶ್ವಕೋಶ ಸಂ. 4 - ಮೈಸೂರು. ವಿ.ವಿ.

ಕರ್ನಾಟಕ ಕೈಪಿಡಿ - 2012

ಕರ್ನಾಟಕ ಆರ್ಥಿಕ ಸಮೀಕ್ಷೆ - 2010

ಆರ್. ಡಿ.

ಕಮಲ ಜಲ ಸಸ್ಯಗಳಲ್ಲಿ ಕಮಲ ಅತ್ಯಂತ ಆಕರ್ಷಕ. ಕೆರೆ, ಕೊಳ, ಸರೋವರಗಳಲ್ಲಿ ಇದು ಬೆಳೆಯುತ್ತದೆ. ಇದರಿಂದ ಪರಿಸರಕ್ಕೊಂದು ಕಳೆ, ಸೊಬಗು. ಕಮಲದ ಇತಿಹಾಸ ಮಾನವ ಸೃಷ್ಟಿಯಷ್ಟೆ ಹಳೆಯದು. ಇದರ ತವರೂರು ಭಾರತ. ಚೀನಾ, ಜಪಾನ್, ಯೂರೋಪ್, ಆಫ್ರಿಕಾ, ಹವಾಯಿ ಇತರೆ ಕಡೆಗಳಲ್ಲಿಯೂ ಕಾಣಬಹುದು. 'ನಿಂಫೇಸಿ' ಕುಟುಂಬಕ್ಕೆ ಸೇರಿದ ಬಹು ವಾರ್ಷಿಕ ಸಸ್ಯ. 'ನಿಲಂಬೋಸ್ಪಿಸಿವೋಸಂ ವೈಲ್ಡ' ಇದರ ಸಸ್ಯಶಾಸ್ತ್ರೀಯ ಹೆಸರು. ಕಮಲವನ್ನು ಪದ್ಮ, ತಾವರೆ, ಕುಮುದ ಎಂದು ನಾನಾ ಹೆಸರುಗಳಿಂದ ಕರೆಯುತ್ತಾರೆ. ಸಂಸ್ಕೃತದಲ್ಲಿ ಶ್ವೇತ ಕಮಲ, ಪಂಕಜ, ಶತಪತ್ರ, ಪದ್ಮ, ಕಮಲ, ಇಂದೀವರ ಎಂದು ಮುಂತಾಗಿ ಕರೆಯುವರು. ಆಂಗ್ಲಭಾಷೆಯಲ್ಲಿ ಈಸ್ಟ್ ಇಂಡಿಯನ್ ಲೋಟಸ್, ಸೇಕ್ರೆಡ್ ಲೋಟಸ್, ಈಜಿಪ್ಷಿಯನ್ ಲೋಟಸ್ ಮುಂತಾಗಿ ಕರೆಯುವರು.

ಕಮಲದ ಹೂ ಮೊಗ್ಗು, ಚಿಗುರೆಲೆ, ದಂಟು, ಕೇಸರ, ಬೇರು ಗೆಡ್ಡೆಗಳು ಆಹಾರವಾಗಿ ಬಳಸಲ್ಪಡುತ್ತವೆ. ಇವುಗಳಲ್ಲಿರುವ ಪ್ರಮುಖ ಅಂಶ ಪಿಷ್ಟ. ಗೆಡ್ಡೆಗಳಲ್ಲಿ ಗ್ಯಾಲ್ಲಿಕ್ ಮತ್ತು ಟ್ಯಾನ್ನಿಕ್ ಆಮ್ಲಗಳು, ಅಂಟು ಇರುವುದರಿಂದ ಬೇಯಿಸಿ ತಿನ್ನುವರು.

ಬೇಯಿಸಿದ ಗೆಡ್ಡೆಗಳು ತಿನ್ನಲು ರುಚಿಯಾಗಿರುತ್ತವೆ. ಜೊತೆಗೆ ಮೇದಸ್ಸು, ರಾಳ, ನೀಲಂಬೈನ್ ಎಂಬ ರಾಸಾಯನಿಕ ಪದಾರ್ಥಗಳೂ ಇವೆ.

ಜ್ವರದಿಂದ ನರಳುವವರನ್ನು ಕಮಲದ ಎಲೆಯ ಮೇಲೆ ಮಲಗಿಸುವುದರಿಂದ ಜ್ವರದ ತಾಪ ಕಡಿಮೆಯಾಗುವುದು. ಸುಟ್ಟ



ಗಾಯಗಳಿಗೆ ಎಲೆಗಳನ್ನು ಹೊದಿಸಿ ಕಟ್ಟುವುದರಿಂದ ನೋವು ಉಪಶಮನವಾಗುವುದು. ಹೂವುಗಳನ್ನು ಒಣಗಿಸಿ ಪಾಕ ಮಾಡಿ ತಿನ್ನುವುದರಿಂದ ಹೃದಯಕ್ಕೆ ಬಲ ಬರುವುದು.

ಬೇಸಾಯ ಕ್ರಮ : ಇದರ ಬೇಸಾಯಕ್ಕೆ ಬೆಚ್ಚಗಿನ ಹವಾಗುಣವಿರಬೇಕು. ಹೆಚ್ಚು ಉಷ್ಣವಲಯದ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಫಲವತ್ತಾದ ಮಣ್ಣು ಮತ್ತು ನೀರಿರುವ ಕೊಪ್ಪರಿಗೆ, ಪೀಪಾಯಿ, ಸೀಮೆಂಟಿನ ತೊಟ್ಟಿ, ಇಲ್ಲವೇ ಇಚ್ಛಿಸಿದ ಆಕಾರಗಳಲ್ಲಿ ತೊಟ್ಟಿಗಳನ್ನು ನಿರ್ಮಿಸಿ ಬಿರುಕುಗಳಿಲ್ಲದಂತೆ ಮಾಡಿ ಹೆಚ್ಚಾದ ನೀರು ಹೊರ ಹೋಗುವಂತೆ ನೋಡಿಕೊಳ್ಳಬೇಕು. ಆಗಾಗ ತೊಟ್ಟಿಯನ್ನು ಸ್ವಚ್ಛಗೊಳಿಸಬೇಕು.

ಇದನ್ನು ಬೀಜ ಮತ್ತು ಬೇರು ಗಡ್ಡೆಗಳ ಮೂಲಕ ಅಭಿವೃದ್ಧಿ ಪಡಿಸುವರು. ಗಡ್ಡೆಗಳನ್ನು ಮಾರ್ಚ್ - ಏಪ್ರಿಲ್‌ನಲ್ಲಿ ಬಿತ್ತನೆ ಮಾಡಿದರೆ ವರ್ಷದ ಕಡೆಯಲ್ಲಿ ಹೂವನ್ನು ಪಡೆಯಬಹುದು. ಬೀಜ ಬಿತ್ತಲು ಗೋಡು ಮಣ್ಣು ಮತ್ತು ಮರಳು ಮಣ್ಣು ಉತ್ತಮ. ಇದರೊಂದಿಗೆ ಇದ್ದಿಲು ಚೂರುಗಳನ್ನು, ದನದ ಗೊಬ್ಬರ, ಮೂಳೆ ಗೊಬ್ಬರಗಳನ್ನು ಹಾಕಿದರೆ ಕಮಲದ ಬೆಳವಣಿಗೆ ಚೆನ್ನಾಗಿರುತ್ತದೆ. ಮೊಳಕೆಯೊಡೆದ ಅನಂತರ ತೊಟ್ಟಿಯೊಳಕ್ಕೆ ಸ್ಥಳಾಂತರಿಸಬಹುದು. ಹೂವುಗಳು ಬೇಕು ಎಂದಾದರೆ ಆರೇಳು ತಿಂಗಳುಗಳು ಸಾಕು. ಗಡ್ಡೆಗಳಿಗಾಗಿ ಒಂದು ವರ್ಷ ಬೇಕಾಗುವುದು ಈ ಅವಧಿಯಲ್ಲಿಹೂಗಳು ಕಾಣಿಸಿಕೊಳ್ಳುತ್ತವೆ. ಗಡ್ಡೆಗಳು ಮಣ್ಣಿನ ಪದರಗಳಲ್ಲಿ ಉಳಿದಿರುತ್ತವೆ. ನೀರು ಮುಗಿದಾಗ ಗೆಡ್ಡೆಗಳು ಕಾಣಿಸಿಕೊಳ್ಳುತ್ತವೆ. ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಕಮಲದ ಹೂವು ಮೊಗ್ಗುಗಳು ಮಾರಾಟಕ್ಕೆ ಸಿಗುತ್ತವೆ.

ರೋಗಗಳು : ಕೀಟಗಳಲ್ಲಿ ಸಸ್ಯ ಹೇನು ಮತ್ತು ಎಲೆ ತಿನ್ನುವ ದುಂಬಿ ಮುಖ್ಯವಾದವು. ಇವು ಎಲೆ ಮತ್ತು ಹೂವುಗಳನ್ನು ತಿಂದು ಹಾಳು ಮಾಡುತ್ತವೆ. ಇದಕ್ಕೆ ಶೇ. 0.1 ರ ಲೆಡ್ ಆರ್ಸಿನೇಟ್ ಔಷಧಿ ಸಿಂಪಡಿಸುವುದರಿಂದ ಹತೋಟಿ ಮಾಡಬಹುದು.

ಬಸವನಹುಳುಗಳು ಎಲೆತೊಟ್ಟುಗಳಿಗೆ ಅಂಟಿಕೊಂಡು ಹಾನಿ ಉಂಟುಮಾಡುತ್ತವೆ. ಶೇ. 50 ಮೆಟಾಲ್ಡಿಹೈಡ್ ಕೀಟನಾಶಕ ಬಳಸುವುದರಿಂದ ಇವುಗಳನ್ನು ನಾಶ ಪಡಿಸಬಹುದು.

ರೋಗಗಳಲ್ಲಿ ಆಲ್ಟರ್ನೇರಿಯ ಎಲೆ ಚುಕ್ಕೆ ಬಹುಮುಖ್ಯವಾದುದು. ಶೇ. 0.1ರ ಮೈಲುತುತ್ತ ಇಲ್ಲವೇ ಕ್ಯಾಪ್ಟಾನ್ ಸಿಂಪಡಿಸುವುದರಿಂದ ಈ ರೋಗವನ್ನು ಹತೋಟಿಗೆ ತರಬಹುದು. ಇಲಿ, ಹೆಗ್ಗಣಗಳ ಹಾನಿಯಿಂದ ರಕ್ಷಿಸಲು ಬೋನನ್ನು ಉಪಯೋಗಿಸಬಹುದು.

ಎಸ್.ಎನ್.ಕೆ.

ಕರಬೂಜ ಇದು ಕುಕುರ್ಬಿಟೇಸಿ ಕುಟುಂಬಕ್ಕೆ ಸೇರಿದ ಹಣ್ಣು. ಇದರ ಸಸ್ಯ ವೈಜ್ಞಾನಿಕ ನಾಮ ಕುಕಮಿಸ್ ಮೆಲೊ ಮಸ್ಕ್ ಮೆಲನ್.

ನೀರು ಇಂಗಿ ಹೋಗಬಲ್ಲ ಮರಳು ಗೋಡು ಮಣ್ಣು ಮತ್ತು ರೇವೆ ಮಣ್ಣಿನ ಭೂಮಿಯನ್ನು 2-3 ಬಾರಿ ಚೆನ್ನಾಗಿ ಉತ್ತು, ಹದಕ್ಕೆ ಬಂದ ಬಳಿಕ 8 ರಿಂದ 10 ಅಡಿ ಸಾಲುಗಳಲ್ಲಿ 3 ಅಡಿ ಅಂತರದಲ್ಲಿ ಪಾತಿಗಳನ್ನು ಮಾಡಬೇಕು. ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರ, 40 ಕೆ.ಜಿ. ಸಾರಜನಕ,



20 ಕೆ.ಜಿ. ಪೊಟ್ಯಾಷನ್ನು ಮಿಶ್ರಣ ಮಾಡಿಕೊಂಡು ಇದರಲ್ಲಿ ಅರ್ಧದಷ್ಟು ಭಾಗ ಗೊಬ್ಬರವನ್ನು ಮಣ್ಣಿನಲ್ಲಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಪ್ರತಿ ಪಾತಿಗೆ 3 ರಿಂದ 5 ಬೀಜವನ್ನು ಬಿತ್ತಬೇಕು. ಒಟ್ಟು ಒಂದು ಎಕರೆಗೆ 500 ಗ್ರಾಂ ಬಿತ್ತನೆ ಬೀಜ ಬೇಕಾಗುತ್ತದೆ. 15 ದಿನಗಳ ಅನಂತರ ಪ್ರತಿ ಪಾತಿಗೆ ಎರಡು ಸಸಿಗಳನ್ನುಳಿಸಿಕೊಂಡು ಉಳಿದವನ್ನು ಕಿತ್ತುಹಾಕಬೇಕು. ಮೂರು ವಾರ ಕಳೆದ ಮೇಲೆ ಮೇಲು ಗೊಬ್ಬರ ಹಾಕಬೇಕು.

ಸಾಮಾನ್ಯವಾಗಿ ಜನವರಿ ಫೆಬ್ರವರಿ ತಿಂಗಳಿನಲ್ಲಿ ಬಿತ್ತನೆ ಕಾರ್ಯ ಪ್ರಾರಂಭಿಸುತ್ತಾರೆ. ಮಣ್ಣು ಮತ್ತು ಹವಾಗುಣದ ಸ್ಥಿತಿಗತಿಗಳ ಮೇರೆಗೆ 3 ರಿಂದ 5 ದಿನಗಳಲ್ಲಿ ನೀರು ಹರಿಸಬಹುದು. ಈ ಸಮಯದಲ್ಲಿ ಕಳೆ ಬರದಂತೆ ನೋಡಿಕೊಳ್ಳಬೇಕು.

ಗಿಡಗಳಿಗೆ ಹೇನು, ನೊಣ, ಕೀಟಗಳು ಹತ್ತದಂತೆ ಬೂಜು ರೋಗ, ತುಪ್ಪಳರೋಗ ಮತ್ತು ನಂಜುರೋಗಗಳಿಂದ ರಕ್ಷಿಸಲು ಕ್ರಿಮಿನಾಶಕಗಳನ್ನು ಸಿಂಪಡಿಸಬೇಕಾಗುತ್ತದೆ. ಬಿಸಿ ವಾತಾವರಣವಿರುವ ಮತ್ತು ಹೆಚ್ಚು ಬೆಳಕಿರುವ ವಾತಾವರಣದಲ್ಲಿ ಗುಣಮಟ್ಟ ಹಾಗೂ ಇಳುವರಿ ಹೆಚ್ಚು. ಕರಬೂಜದ ಹಣ್ಣುಗಳು ಚೆನ್ನಾಗಿ ಬಲಿತು ತೊಟ್ಟು ಕಳಚಿಕೊಳ್ಳುವ ಸಮಯದಲ್ಲಿ ತೊಟ್ಟಿನ ಮೇಲೆ ಸ್ವಲ್ಪ ಒತ್ತಡ ಹಾಕಿ ಬೇರ್ಪಡಿಸಬೇಕು. ತೊಟ್ಟುಗಳನ್ನು ಆಮೇಲೆ ಬಿಡಿಸಿಕೊಳ್ಳಬಹುದು. ಕರಬೂಜದ ಗುಣಮಟ್ಟ ಹೆಚ್ಚಿಸಬೇಕಾದರೆ ಮುಂಗಾರು ಮಳೆ ಪ್ರಾರಭವಾಗುವುದಕ್ಕೆ ಮುಂಚೆ ಕೊಯ್ಲು ಮಾಡಬೇಕು. ಪ್ರತಿ ಎಕರೆಗೆ ಸುಮಾರು 6 ರಿಂದ 8 ಟನ್ ಇಳುವರಿಯನ್ನು ನಿರೀಕ್ಷಿಸಬಹುದು. 70 ರಿಂದ 90 ದಿನಗಳವರೆಗೆ ಕೊಯ್ಲಿಗೆ ಬರುವ ವಿವಿಧ ತಳಿಗಳಿವೆ.

ತಳಿಗಳು : 1) ಅರ್ಕಾ ರಾಜಹಂಸ್, 2) ಅರ್ಕಾ ಜೀತ್, 3) ಪೂಸಾ ಶರಬತಿ, 4) ಹರಮಧು

ಅ) ಅರ್ಕಾ ರಾಜಹಂಸ್ : ಹೆಸರುಘಟ್ಟದ ತೋಟಗಾರಿಕಾ ಸಂಸ್ಥೆ ವೃದ್ಧಿಪಡಿಸಿರುವ ಈ ತಳಿಯ ಹಣ್ಣು 1.25 - 20 ಕಿ.ಗ್ರಾಂ. ಭಾರವಿದ್ದು, ಸ್ವಲ್ಪಮಟ್ಟಿಗೆ ಉದ್ದವಾಗಿದ್ದು ಮೇಲ್ಭಾಗದಲ್ಲಿ ಬಲೆಯಂತೆ ಇರುತ್ತದೆ. ಹಣ್ಣು ಶೇ. 11 ರಿಂದ 14 ರಷ್ಟು ಸಿಹಿ ಅಂಶ ಹೊಂದಿರುತ್ತದೆ. ಇದು ತುಪ್ಪಳ ರೋಗ ನಿರೋಧಕವನ್ನು ಹೊಂದಿದೆ.

ಆ) ಅರ್ಕಾಜೀತ್ : ಇದನ್ನು 'ಲಕ್ನೋ ಸಫೇದಾ'ದಂತಹ ವಿಧದಿಂದ ಆಯ್ಕೆ ಮಾಡಲಾಗಿದೆ. ಹಣ್ಣುಗಳು ಕಿತ್ತಳೆ ಬಣ್ಣ ಹೊಂದಿದ್ದು 300-500 ಗ್ರಾಂ ತೂಕವಿರುತ್ತವೆ. ತಿರುಳು ಶೇ. 16-17ರಷ್ಟು ಸಿಹಿ ಅಂಶವಿದ್ದು 'ಎ' ಮತ್ತು 'ಸಿ' ಜೀವ ಸತ್ತ್ವವನ್ನೊಳಗೊಂಡಿರುತ್ತದೆ. ಇದು ಹೆಚ್ಚು ಇಳುವರಿ ಕೊಡುತ್ತದೆ.

ಇ) ಪೂಸಾ ಶರಬತಿ : ಇದನ್ನು 'ಕುಟಾನ್' ಮತ್ತು 'ಕ್ಯಾಂಟಲೋಪ್ ರೆಸಿಸ್ಟಂಟ್' ತಳಿಗಳ ಸಂಕರಣದಿಂದ ಪಡೆಯಲಾಗಿದೆ. ಇದರಲ್ಲಿ ತಿರುಳು ಮಂದವಾಗಿದ್ದು, ಕಾಯಿ ಟೊಳ್ಳು ಕಡಿಮೆ ಇರುತ್ತದೆ. ಹಣ್ಣುಗಳು ದುಂಡು ಅಥವಾ ಸ್ವಲ್ಪ ಉದ್ದ ಇರುತ್ತವೆ.

ಈ) ಹರಮಧು : ಪಂಜಾಬ್ ಕೃಷಿ ವಿಶ್ವವಿದ್ಯಾಲಯದಿಂದ ಶಿಫಾರಸ್ಸಾಗಿರುವ ತಳಿಯಿದು. ದುಂಡಾದ ಹಣ್ಣುಗಳು ಬಿಳಿ ಸಿಪ್ಪೆ ಹೊಂದಿದ್ದು, ತಿರುಳು ತಿಳಿ ಹಸುರಾಗಿದ್ದು, ಸಿಹಿಯಾಗಿರುತ್ತದೆ. ಕಾಯಿ ಪಕ್ವವಾಗಿ ಹಣ್ಣಾದರೂ ಬಳ್ಳಿಯಿಂದ ಕಳಚಿಕೊಳ್ಳುವುದಿಲ್ಲ.

ಉಪಯೋಗಗಳು : ದಾಹ ಕಡಿಮೆ ಮಾಡುವ ಅತ್ಯುತ್ತಮ ಹಣ್ಣು, ಪಾನಕ ಮಾಡಿ ಕುಡಿಯಬಹುದಾಗಿದ್ದು, ಇದರಲ್ಲಿ 'ಎ' ಮತ್ತು 'ಸಿ' ಜೀವ ಸತ್ವಗಳಲ್ಲದೆ ರಂಜಕ ಮತ್ತು ಪೊಟ್ಯಾಷ್‌ಗಳೂ ಇವೆ. ಭಾರತದೆಲ್ಲೆಡೆ ಬೆಳೆಯುತ್ತಿದ್ದು, ಮೈಸೂರು ಕಡೆ ಮಿಣಿಕೆ, ಕರಬೂಜ ಎಂದೂ, ಬೆಂಗಳೂರು ಕಡೆ ಕೆಕ್ಕರಿಕೆ, ಬನಸ್ಪತ್ರೆ, ಪುಟ್ಟಿಹಣ್ಣು ಎಂದೂ ಕರೆಯಲಾಗುತ್ತದೆ.

ಕೆ.ಎಲ್.

ಕರಾಬು 'ಕರಾಬು' ಎಂದರೆ 'ಕೃಷಿಗೆ ಉಪಯೋಗವಲ್ಲದ, ಕೃಷಿ ಭೂಮಿಗೆ ಹೊಂದಿಕೊಂಡಿರುವ ನಿರುಪಯುಕ್ತವಾದ ಭೂಮಿ ಎಂದು ಅರ್ಥ. ಆದರೆ ಅದರ ಅರ್ಥ ವ್ಯಾಪ್ತಿಯು ವಿಶಾಲವಾದದ್ದಾಗಿದ್ದು, ಎರಡು ಭಾಗಗಳಾಗಿ ವಿಂಗಡಿಸಬಹುದು.

1. 'ಎ' ಕರಾಬು : ಮನೆ, ಜಮೀನು, ಸಣ್ಣ ಸಣ್ಣ ಗುಡ್ಡ, ಜೇಡಿಮಣ್ಣಿನ ಗುಡ್ಡಗಳು ಇತ್ಯಾದಿಯಾಗಿ ಕೃಷಿ ಮತ್ತು ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳಬಹುದಾದವು.

2. 'ಬಿ' ಕರಾಬು : ಕಾಲುದಾರಿ, ಬಂಡಿದಾರಿ, ರಸ್ತೆ, ಹೆದ್ದಾರಿ, ಹಳ್ಳಗಳು, ಗೋಮಾಳ ಇತ್ಯಾದಿಯಾಗಿ ಸಾರ್ವಜನಿಕ ಉಪಯೋಗಕ್ಕೆ ಮೀಸಲಾದವುಗಳು. ಸರ್ಕಾರ ಗ್ರಾಮೀಣ ಜನರಿಗೆ ಕೃಷಿ ಭೂಮಿಯನ್ನು ಹಂಚಿಕೆ ಮಾಡಿಕೊಡುವಾಗ ಮತ್ತು ಸಾಗುವಳಿ ಮಾಡಲು ಹಕ್ಕು ಪತ್ರವನ್ನು ಕೊಡುವಾಗ ಕೆಲವು ನಿಯಮಗಳನ್ನು ಮಾಡಿಕೊಂಡು ಬಂದಿರುತ್ತದೆ.

ಮನೆ : ಇದು 'ಎ' ಕರಾಬಿನ ವ್ಯಾಪ್ತಿಗೆ ಬರುತ್ತದೆ. ಎಂದರೆ ಒಬ್ಬ ವ್ಯಕ್ತಿಯ ಹೆಸರಿಗೆ ಸ್ವಂತದ ಅನುಭೋಗಕ್ಕೆ ಬರುವ ಆಸ್ತಿಯಾಗಿದೆ. ಸರ್ಕಾರದ ನಿಯಮಗಳ ಮೂಲಕ ಖಾತೆ ಮಾಡಿಕೊಡಲಾಗುತ್ತದೆ. ಅದಕ್ಕಾಗಿ ಅವನು/ಳು ಸರ್ಕಾರಕ್ಕೆ ಪ್ರತಿವರ್ಷವೂ ಹಣದ ರೂಪದಲ್ಲಿ ನಿಗದಿ ಪಡಿಸಿದ ಕಂದಾಯವನ್ನು ಕಟ್ಟಬೇಕಾದ ನಿಯಮ/ ನಿಬಂಧನೆಯಿರುತ್ತದೆ. ಇದನ್ನು ಬೇರೆಯವರಿಗೆ ವರ್ಗಾಯಿಸುವ ಮಾರುವ ಹಕ್ಕುಳ್ಳವನೂ ಆಗಿರುತ್ತಾನೆ. ಅದು ಕಾನೂನಿನ ನಿಯಮಗಳಡಿಯಲ್ಲಿಯೇ ನಡೆಯಬೇಕು. ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾವಣೆಯಾಗುವ, ಅನುಭವಿಸುವ ಹಕ್ಕನ್ನು ಹೊಂದಬಹುದಾಗಿದೆ.

ಜಮೀನು : ಗ್ರಾಮೀಣರು ಮತ್ತು ಕೃಷಿಕರು ವ್ಯವಸಾಯಕ್ಕೆ ಹೊಂದಬಹುದಾದ ಭೂಮಿ. ಸರ್ಕಾರವು ಭೂ ಹೀನರಿಗೆ ಮತ್ತು ಕೃಷಿಕರಿಗೆ ವ್ಯವಸಾಯಕ್ಕೆ ಬಳಸಿಕೊಂಡು ಉತ್ಪಾದನೆ ಮಾಡಿಕೊಂಡು ಬದುಕಲು ಸಾಗುವಳಿ ಎಂಬ ಹೆಸರಿನಲ್ಲಿ ಉಚಿತವಾಗಿ ಹಂಚಿಕೆ ಮಾಡಿಕೊಟ್ಟಿರುತ್ತದೆ. ಆ ವ್ಯಕ್ತಿಗೆ ಸರ್ಕಾರದ ನಿಯಮಾವಳಿಗನುಸಾರ ಖಾತೆ ಮಾಡಿಕೊಟ್ಟು ಪ್ರತಿ ವರ್ಷವೂ ಕಂದಾಯ ಕಟ್ಟುವ ನಿಬಂಧನೆಗೊಳಪಡಿಸಿರುತ್ತದೆ. ಹತ್ತು ವರ್ಷಗಳ ಕಾಲ ಯಾರಿಗೂ ಪರಬಾರೆ ಮಾಡುವಂತಿರುವುದಿಲ್ಲ. ಆದರೆ ಕೌಟುಂಬಿಕ ಪಾಲು, ವಿಭಜನೆಗೆ ಈ ಆಸ್ತಿ ಒಳಪಡುತ್ತದೆ.

ಸಣ್ಣ ಸಣ್ಣ ಗುಡ್ಡಗಳು : ಕೃಷಿ ಭೂಮಿಗೆ ಹೊಂದಿಕೊಂಡಂತಿರುವ ಕಲ್ಲು ಮಂಟಿಗಳು. ಗುಡ್ಡಗಳು, ಜೇಡಿಮಣ್ಣಿನ ಗುಡ್ಡಗಳು ಯಾವುದೇ ಖನಿಜ ಪದಾರ್ಥಗಳನ್ನು ಹೊಂದಿರದೆ ಇದ್ದರೆ ಅದನ್ನು ಆ ಜಮೀನಿನ ಪಕ್ಕದ ರೈತನು ವ್ಯವಸಾಯಕ್ಕೆ ಉಪಯೋಗವಾಗುವಂತೆ ಬಳಸಿಕೊಳ್ಳುತ್ತಾನೆ. ಅನಂತರ ತಾಲೂಕು ಕಂದಾಯಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿ ತನ್ನ ಹೆಸರಿಗೆ ಖಾತೆ ಹೊಂದುವ, ಕಂದಾಯ ಪಾವತಿಸುವ, ಹಾಗೂ ಅನುಭೋಗಿಸುವ ಹಕ್ಕನ್ನು ಪಡೆಯುತ್ತಾನೆ.

ಕೊರಕಲುಗಳು : ಜಮೀನಿನ ಕೆಲದಲ್ಲಿ ಸಣ್ಣ ಸಣ್ಣ ಕೊರಕಲುಗಳು, ಜೌಗು, ಕಲ್ಲು ಬಂಡೆ, ಅರೆಯಿರುವ ಪ್ರದೇಶ, ಹಳ್ಳಗಳು ಇದ್ದು, ವ್ಯವಸಾಯಕ್ಕೆ ಉಪಯೋಗವಿಲ್ಲದಿದ್ದಾಗ ಅದನ್ನು ಮೋಜಿಣಿ ಅಳತೆಯಲ್ಲಿ

ಒಂದು ಸರಪಳಿ, ಎರಡು ಸರಪಳಿ ಕರಾಬು ಎಂದು ಬಿಡಲಾಗುತ್ತದೆ. ಪಕ್ಕದ ಜಮೀನಿನ ರೈತನು ಇಂತಹ ಭೂಮಿಗಳನ್ನು ವ್ಯವಸಾಯಕ್ಕೆ ಉಪಯೋಗವಾಗುವಂತೆ ಮಾರ್ಪಡಿಸಿಕೊಳ್ಳಬಹುದು. ಇದಕ್ಕೆ ಸರ್ಕಾರವು ಯಾವುದೇ ರೀತಿಯ ಕಂದಾಯವನ್ನು ವಿಧಿಸುವುದಿಲ್ಲ.

'ಬಿ' ಕರಾಬು : ಸರ್ಕಾರವು ಕೆಲವು ಜಾಗಗಳನ್ನು ಸಾರ್ವಜನಿಕರ ಉಪಯೋಗಕ್ಕೆಂದೇ ಮೀಸಲಾಗಿರಿಸುತ್ತದೆ. ಅವುಗಳನ್ನು ಯಾವೊಬ್ಬನೂ ಸ್ವಂತಕ್ಕೆ ಪಡೆಯಲಾಗದು ಮತ್ತು ತನ್ನದೆಂದು ಹಕ್ಕನ್ನು ಚಲಾಯಿಸಲಾಗದು ಹಾಗೂ ಆಕ್ರಮಿಸಿಕೊಳ್ಳಲಾಗದು. ಉದಾಹರಣೆಗೆ

ಕಾಲುದಾರಿ : ಕೃಷಿಕರು ತಮ್ಮ ಹೊಲ, ಗದ್ದೆ ಜಮೀನುಗಳಿಗೆ ಹೋಗಲು ಸರಿಯಾದ ರಸ್ತೆಗಳಿಲ್ಲದ ಕಾರಣ ಬಹುಜನರು ಮಾಡಿಕೊಂಡ ಕಿರು ಕಾಲುದಾರಿಗಳಾಗಿರುತ್ತವೆ. ಅದನ್ನು ಕಾಲುದಾರಿಯಂದೇ ಸಾರ್ವಜನಿಕರಿಗೆ ಮೀಸಲಾಗಿಡುತ್ತದೆ. ಕೆಲವೊಮ್ಮೆ ಅದು ಹಿಗ್ಗಿಸಲ್ಪಡುತ್ತದೆ. ಯಾರೂ ಅದಕ್ಕೆ ಅಡ್ಡಪಡಿಸಲಾಗದು.

ಬಂಡಿದಾರಿ : ಗ್ರಾಮದ ಸುತ್ತಲೂ ಸಾವಿರಾರು ಎಕರೆ ಕೃಷಿ ಭೂಮಿಯಿರುವುದರಿಂದ ರೈತಾಬಿ ವರ್ಗದವರು ತಂತಮ್ಮ ಜಮೀನುಗಳಿಗೆ ದನಗಳು, ಎಮ್ಮೆ, ಕುರಿ, ಮೇಕೆ, ಎತ್ತಿನ ಬಂಡಿ, ಟ್ರ್ಯಾಕ್ಟರು ಹೀಗೆ ಹೋಗಿ ಬರಲು ಅನುಕೂಲವಾಗುವಂತೆ ಇಪ್ಪತ್ತು ಅಡಿ ಅಗಲದ ಬಂಡಿದಾರಿಯನ್ನು ಬಿಟ್ಟುಕೊಡುತ್ತದೆ. ರೈತರಿಗೆ ಸಾಗುವಳಿ ನೀಡುವ ಮೊದಲೇ ಇದನ್ನು 'ಬಂಡಿದಾರಿ ಕರಾಬು' ಎಂದು ಕಳೆದು ಜಮೀನು ಹಂಚಲಾಗುತ್ತದೆ. ಕೆಲವೊಮ್ಮೆ ಸ್ವಂತ ಜಮೀನಿನ ಮೇಲೆಯೂ ಬಂಡಿದಾರಿ ಸಾರ್ವಜನಿಕರ ಅನುಕೂಲದ ದೃಷ್ಟಿಯಿಂದ ನಿರ್ಮಾಣಗೊಳ್ಳಬಹುದು. ಇದು ಅನುಕೂಲದ ದೃಷ್ಟಿಯಿಂದ 'ಮೀಸಲು ಜಾಡು' ಆಗಿರುತ್ತದೆ. ನೆರೆಯ ಜಮೀನಿನವರು ಒತ್ತುವರಿ ಮಾಡಿಕೊಂಡು ಅನುಭವಿಸುವುದೂ, ಜಾಡನ್ನು ಕಿರಿದಾಗಿಸುವುದೂ ನಡೆಯುತ್ತದೆ.

ರಸ್ತೆಗಳು : ಒಂದೂರಿನಿಂದ ಮತ್ತೊಂದು ಊರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಹಾದು ಹೋಗುವ ಹೆದ್ದಾರಿಗಳು, ರೈಲುದಾರಿಯ ಭೂಮಿ ಮತ್ತು ಇಕ್ಕೆಲಗಳಲ್ಲಿ ಮುಂದಾಲೋಚನೆಯಿಂದ ಬಿಟ್ಟ ಜಾಗಗಳು 'ಕರಾಬು' ಎನಿಸಿಕೊಳ್ಳುತ್ತವೆ. ಇವು ಎಂದಿಗೂ ಯಾರ ಸ್ವಂತಕ್ಕೂ ಖಾತೆಯಾಗಲು ಬರುವುದಿಲ್ಲ ಮತ್ತು ಆಕ್ರಮಿಸಿಕೊಳ್ಳುವಂತಿಲ್ಲ. ಸಾರ್ವಜನಿಕರ ಉಪಯೋಗಕ್ಕೆ ಕೆಲದ ಜಮೀನಿನವರು ಅಡ್ಡಿಪಡಿಸುವಂತಿರುವುದಿಲ್ಲ.

ಹಳ್ಳಗಳು : ದೊಡ್ಡ ದೊಡ್ಡ ಹಳ್ಳ, ತೊರೆ, ನದಿಗಳು ಹರಿಯುತ್ತಿದ್ದರೆ ಅದರ ಇಕ್ಕೆಲಗಳಲ್ಲಿ ಹಳ್ಳದ ಕರಾಬು ಎಂದು ಅಂದಾಜಿನ ಮೂಲಕ ಎರಡು - ಮೂರು ಸರಪಳಿ ಜಮೀನನ್ನು ಮೀಸಲು ಕರಾಬು, ಹಳ್ಳದ ಕರಾಬು ಎಂದು ಬಿಡಲಾಗುತ್ತದೆ. ಗ್ರಾಮದ ಜನರು, ದನಕರುಗಳು, ಆ ಕರಾಬಿನ ಜಾಗದಲ್ಲಿ ನದಿ, ಹಳ್ಳದ ನೀರನ್ನು ಉಪಯೋಗಿಸಲು ಹಾಗೂ ಓಡಾಡಲು ಬಿಟ್ಟಿರುವುದಾಗಿರುತ್ತದೆ. ಪಕ್ಕದ ಜಮೀನಿನವರು ಅದನ್ನು ವ್ಯವಸಾಯಕ್ಕಾಗಿ ಮಾರ್ಪಡಿಸಿಕೊಳ್ಳುವುದು ಕಂಡುಬರುತ್ತದೆ.

ಗೋಮಾಳ : ವ್ಯವಸಾಯಕ್ಕೆ ಯೋಗ್ಯವಲ್ಲದ ನೂರು ಎಕರೆ ತಿಟ್ಟು ಭೂಮಿಯನ್ನು ಗ್ರಾಮದ ದನ - ಕರುಗಳ ಮೇವಿಗಾಗಿ ಎಲ್ಲಾ ಊರುಗಳಲ್ಲಿಯೂ ಮೀಸಲಾಗಿರಿಸಿರುತ್ತಾರೆ. ಕೆಲವು ಕಡೆಗಳಲ್ಲಿ ಕುರುಚಲು ಅರಣ್ಯಗಳಿಂದ ಕೂಡಿದ ಸಾವಿರಾರು ಎಕರೆ ಭೂಮಿಯಿರುತ್ತದೆ. ಇದನ್ನು ಸರ್ಕಾರದ ನಿಯಮಗಳನ್ನು ಮೀರಿ ಯಾರೂ ಆಕ್ರಮಿಸುವುದಾಗಲೀ, ಹಕ್ಕನ್ನು ಹೊಂದುವುದಾಗಲೀ ನಿಷಿದ್ಧವಾಗಿರುತ್ತದೆ.ಏನಾದರೂ ಸ್ವಂತಕ್ಕೆ ಸಾಗುವಳಿ ನೀಡುವುದಾದಲ್ಲಿ ಅದು 'ಸಾರ್ವಜನಿಕರ ಉಪಯೋಗವಲ್ಲದ ಭೂಮಿ' ಎಂದು ತೀರ್ಮಾನವಾಗಿ ಸಾರ್ವಜನಿಕರ, ಗ್ರಾಮಸ್ಥರ ಆಕ್ಷೇಪಣೆ ಇಲ್ಲವಾದಲ್ಲಿ ಮಾತ್ರ 'ಬಿ' ಕರಾಬು ಭೂಮಿಯನ್ನು 'ಎ' ಕರಾಬು ಎಂದು ಪರಿವರ್ತಿಸಿದರೆ ರೈತರ ಹೆಸರಿಗೆ ಖಾತೆ ತಯಾರಾಗುತ್ತದೆ. 'ಬಿ' ಕರಾಬಿನಿಂದ 'ಎ' ಕರಾಬಿಗೆ ಬದಲಾವಣೆ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಮಾತ್ರವಿರುತ್ತದೆ. ಸರ್ಕಾರದ ನಿರ್ದೇಶನಗಳ ಮೂಲಕ ಸಾರ್ವಜನಿಕರ ಅಡ್ಡಿ, ಆಕ್ಷೇಪಣೆಗಳು ಇಲ್ಲವೆಂದು ಸಹಿಸಂಗ್ರಹಿಸಿ ಅಥವಾ ಪ್ರಮಾಣ ಮಾಡಿ ಅನಂತರ 'ಎ' ಕರಾಬಿಗೆ ವರ್ಗಾಯಿಸಬಹುದು. ಅಂತಹ ಭೂಮಿಯನ್ನು ಸಾಗುವಳಿಗೆ ಹಂಚಿಕೆ ಮಾಡಲಾಗುವುದು. ಖಾತೆ, ಕಂದಾಯಗಳು ಸರಕಾರದ ನಿಯಮಾನುಸಾರ ಅನ್ವಯವಾಗುತ್ತದೆ.

ಮಾಹಿತಿ

ಶಂಕರ್, ಮೋಜಣಿದಾರರು, ಮೈಸೂರು

ಜಯಪ್ಪ, ಮೋಜಣಿದಾರರು, ಬೆಂಗಳೂರು

ಮರಿಸ್ವಾಮಿ ಗೌಡ ಎಂ.ಎಸ್. ADLR, ರಾಮನಗರ

ಗ್ರಂಥಋಣ

Survey Manual of India.

ಆರ್.ಎ.

ಕರಾವಳಿಯ ಕೃಷಿ–ಪಲ್ಲಟ ಮತ್ತು ಪರಿಣಾಮ ಭೂಮಿಯನ್ನು ನೇಗಿಲ ಮೊನೆಯಲ್ಲಿ ಬಗೆದು ಅಲ್ಲಿ ಬೀಜ ಇಟ್ಟು ಕೃಷಿಗೆ ತೊಡಗಿದ ಮಾನವ ಕೃಷಿ ಆವಿಷ್ಕಾರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ವಲಸೆ, ಬೇಟೆ, ಅಲೆಮಾರಿತನದಿಂದ ಕಳಚಿಕೊಂಡು ಆದಿಮಾನವ ಸುಸ್ಥಿತ-ವ್ಯವಸ್ಥಿತ ಕೃಷಿ ಕಂಡುಕೊಂಡದ್ದು ನದಿ, ಹೊಳೆದಂಡೆಗಳಲ್ಲಿ. ಸಾರಯುಕ್ತ ಮಣ್ಣು ನೀರಾಶ್ರಯದಲ್ಲಿ ಸ್ಥಿರಗೊಂಡು ಸ್ವಾವಲಂಬಿಯಾದ ಮಾನವನಿಗೆ ಕೃಷಿಯೊಂದಿಗೆ ಅಂಟಿಕೊಂಡ ಎರಡನೆಯ ಕಸುಬು ಹೈನುಗಾರಿಕೆ.

ಕಾಡು ಮತ್ತು ಕಡಲ ನಡುವಿನ ಕರಾವಳಿಯ ಕೃಷಿ ತೀರ ಸವಾಲಿನದು. ಗುಡ್ಡ ಬೆಟ್ಟ ಕಣಿವೆ ಹೊಳೆ ತೋಡುಗಳಿದ್ದು ಸಂಕೀರ್ಣ ಭೂವಿನ್ಯಾಸವನ್ನು ಹೊಂದಿದೆ. ಇಂಥ ಭೂವಿನ್ಯಾಸವನ್ನು ಮಾನವಶ್ರಮದಿಂದಲೇ ಬದಲಾಯಿಸಿ ಹೆಕ್ಕೇರುಗಟ್ಟಲೆ ವಿಸ್ತಾರದ ಗದ್ದೆಗಳ ನಿರ್ಮಿತಿ ಇಲ್ಲಿಯ ಪೂರ್ವಜರ ಶ್ರಮ, ಕೃಷಿ ಪ್ರೀತಿ-ಆಹಾರ ಸ್ವಾವಲಂಬನ, ಅನಿವಾರ್ಯತೆಗೆ ಸಾಕ್ಷಿಯಾಗಿದೆ. ಯಾವುದೇ ಯಂತ್ರಮಂತ್ರಗಳ ಸಹಾಯವಿಲ್ಲದೆಯೇ ಬರೀ ಮಾನವಶ್ರಮವನ್ನೇ ಅವಲಂಬಿಸಿ ಬೆಟ್ಟಗುಡ್ಡಗಳನ್ನು ಅಗೆದು ಬಗೆದು ಜಾರಿಸಿ ಮಣ್ಣೆಳೆದು ಗುಂಡಿಗೆ ತುಂಬಿಸಿ, ತೋಡುಕಣಿಯನ್ನು ಬದಲಾಯಿಸಿ ಪಕ್ಕಕ್ಕೆ ಸರಿಸಿ ವಿಶಾಲವ್ಯಾಪ್ತಿಯ ಕೃಷಿ ನೆಲೆಗಳನ್ನು ನಿರ್ಮಿಸಿದ, ಇಲ್ಲಿಯ ರೈತಾಪಿ ಶ್ರಮ ಅದ್ಭುತ. ಹತ್ತಾರು ಮುಡಿ ಬತ್ತ ಹೊರಬೀಳುವ ದೇವರಮಾರು, ಬಾಕಿಮಾರು ಮುಂತಾದ ಗದ್ದೆಗಳು ನಮ್ಮ ಹಿರಿಯರ ಶ್ರಮ, ಸಂಘಟನೆ, ನಾಯಕತ್ವ, ಛಲ, ಪಾರುಪತ್ಯ ಶ್ರೀಮಂತಿಕೆಗೆ ಸಾಕ್ಷಿಯಾಗಿವೆ.

ಕರಾವಳಿಯ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ವಿಶಾಲವಾಗಿ ಹಬ್ಬಿದ್ದ ಸಾವಿರಾರು ಎಕರೆ ಬತ್ತದ ಗದ್ದೆಗಳು ಇಂದು ಕಾಂಕ್ರೀಟ್ ಸಂಕೀರ್ಣಗಳಾಗಿ, ಕಾರ್ಖಾನೆಗಳಾಗಿ, ವಾಣಿಜ್ಯ ಮಳಿಗೆಗಳಾಗಿ, ಎಣ್ಣೆ ತುಂಬಿಡುವ ಟ್ಯಾಂಕುಗಳಾಗಿ, ಶಿಕ್ಷಣರಂಗಗಳಾಗಿ ಅರ್ಥಾತ್ ಕಾಂಕ್ರೀಟ್ ಕಾಡುಗಳೇ ಆಗಿವೆ. ಇವುಗಳಡಿಯಲ್ಲಿ ಬೀಜ, ತಳಿ, ತಬರು, ಕಣ, ಹಾಡು, ಪಾಡ್ದನ, ಸಂಧಿ, ಪಳಮೆ, ಎತ್ತಿನಗಾಡಿ, ರಾಶಿಪೂಜೆ- ಹೀಗೆ ನೂರಾರು ಜನಪದ ನಂಬಿಕೆಗಳಿದ್ದವು, ಆಚರಣೆಗಳಿದ್ದವು. ಉಡುಪಿಯೂ ಸೇರಿ ದಕ್ಷಿಣಕನ್ನಡ ಜಿಲ್ಲೆಯ ವ್ಯಾಪ್ತಿಯೊಳಗಡೆ ಇಂಥ ಆಧುನಿಕ ಅತಿರೇಕಗಳು ಸೃಷ್ಟಿಸುವ ಸಮಸ್ಯೆಗಳು, ಅವುಗಳಿಂದ ರೈತಾಪಿವರ್ಗದ ಮೇಲಾಗುವ ನೇರ ಪರಿಣಾಮ, ಏಕಕಾಲದಲ್ಲಿ ನೆಲ ಮತ್ತು ಮನಸ್ಸುಗಳಲ್ಲಾಗುವ ಪಲ್ಲಟಗಳು ಇಲ್ಲಿ ವಿಶ್ಲೇಷಣೆಗೆ ಒಳಪಟ್ಟಿವೆ.

ಕರಾವಳಿಯ ಒಟ್ಟು ಜನರ ಹೊಟ್ಟೆ ತುಂಬಿಸಲು ಬರೀ ಮೂರು ತಿಂಗಳಿಗೂ ಇಲ್ಲಿಯ ಅಕ್ಕಿ ಉತ್ಪಾದನೆ ಸಾಲದು. ಧಾನ್ಯಗಳ ಮಿತಿಯೂ ಅಷ್ಟೇ. ಉಳಿದ ಒಂಬತ್ತು ತಿಂಗಳು ಬೇರೆ ಕಡೆಯಿಂದ ಆಹಾರಮೂಲಗಳು ಆಮದಾಗಬೇಕಾದ ಅನಿವಾರ್ಯತೆ ಇದೆ. ಶೇ. 90ಕ್ಕಿಂತಲೂ ಹೆಚ್ಚು ಕೃಷಿಕರು ಅಕ್ಕಿ-ಬೇಳೆಯನ್ನು ಹೊರಗಡೆಯಿಂದ ಖರೀದಿ ಮಾಡುವಂತಹ ಅನಿವಾರ್ಯತೆ ಇದೆ. ಈ ಹಿಂದೆ ಇಲ್ಲಿ ಆಳಿದ ಕದಂಬ, ಬಾದಾಮಿ, ಚಾಲುಕ್ಯ, ಹೊಯ್ಸಳರ ಸಾಮಂತರಾಗಿ ಆಳಿದ ಆಳುಪರು ಭೌಗೋಳಿಕವಾಗಿ ಕನಿಷ್ಠ ವ್ಯಾಪ್ತಿಯಲ್ಲಿದ್ದ ಈ ಪ್ರದೇಶವನ್ನು ಸ್ವತಂತ್ರ ರೂಪದಲ್ಲಿಯೇ ಆಳಿದರು. ವ್ಯವಸಾಯ ಅವರ ಕಾಲದಲ್ಲಿ ಇಲ್ಲಿಯ ಪ್ರಮುಖ ಅರ್ಥಮೂಲವಾಗಿತ್ತು. ಕ್ರಮೇಣ ವಾಣಿಜ್ಯ ಕ್ಷೇತ್ರವೂ ಬೆಳೆಯತೊಡಗಿತು. ವಾಣಿಜ್ಯ ಕ್ಷೇತ್ರದಲ್ಲೂ ಇಲ್ಲಿಯ ನೆಲಮೂಲ ಉತ್ಪನ್ನಗಳೇ ವಿನಿಮಯ ಸರಕುಗಳಾಗುತ್ತಿದ್ದವು. ನಾಣ್ಯಗಳು ವಿನಿಮಯಕ್ಕೆ ಬರುವವರೆಗೆ ಕೃಷಿ ಹುಟ್ಟುವಳಿಗಳನ್ನೇ ಜನ ತಮ್ಮ ಅನಿವಾರ್ಯತೆಗೆ ತಕ್ಕಂತೆ ಅದಲು-ಬದಲುಗೊಳಿಸುತ್ತಿದ್ದರು. ತೆರಿಗೆ ರೂಪಕ್ಕೂ ಇವುಗಳೇ ಬಳಕೆಯಾಗುತ್ತಿದ್ದವು. ಪ್ರಭುತ್ವವು ಕೃಷಿತೋಪಯೋಗಿಯಾಗಿ ನೀರಾವರಿ ಸೌಲಭ್ಯವನ್ನು ಮಾಡುತ್ತಿತ್ತು. ಹೊಲ ಗದ್ದೆಗಳಿಗೆ ಅನುಕೂಲವಾಗುವಂತೆ ತೋಡುಗಳನ್ನು ಅಲ್ಲಲ್ಲಿ ಕಟ್ಟೆಗಳ ಮೂಲಕ ನಿರ್ಬಂಧಿಸಿ ನೀರು ನಿಲ್ಲಿಸುವುದು, ಮದಕಗಳನ್ನು ನಿರ್ಮಿಸುವುದು, ಹೊಳೆ ನೀರು ಗದ್ದೆಗಳಿಗೆ ಹರಿದು ಬರುವಂತೆ ಕಣ ನಿರ್ಮಿಸುವ ಕೆಲಸವನ್ನು ಮಾಡುತ್ತಿತ್ತು. ಭೂಮಿಯ ಸಾರ, ನೀರಾವರಿ ಅನುಕೂಲತೆ ಇತ್ಯಾದಿಗನುಗುಣವಾಗಿ ಗದ್ದೆಗಳನ್ನು ವಿಂಗಡಿಸಿ ಅವುಗಳಿಗೆ ತಕ್ಕಂತೆ ವ್ಯವಸಾಯ ಕ್ರಮಗಳನ್ನು ರೂಪಿಸಲಾಗುತ್ತಿತ್ತು. ಬತ್ತದೊಂದಿಗೆ ತೆಂಗು, ಅಡಿಕೆಯೂ ಯಥೇಚ್ಛವಾಗಿ ಬೆಳೆಯುತ್ತಿತ್ತು. ಇವುಗಳಲ್ಲಿ ತೆಂಗು-ಅಡಿಕೆಯನ್ನು ಮುಖ್ಯ ವಾಣಿಜ್ಯ ಬೆಳೆಯೆಂದು ಪರಿಗಣಿಸಲಾಗಿತ್ತು. ಕಬ್ಬು, ಕಾಳುಮೆಣಸು, ದ್ವಿದಳ ಧಾನ್ಯ, ಹೊಗೆಸೊಪ್ಪು, ತರಕಾರಿ ಮುಂತಾದ ಬೆಳೆಗಳು ಇದ್ದುವು. ಗದ್ದೆಗಳನ್ನು ಅವುಗಳ ವಿಸ್ತಾರದಲ್ಲಿ ಹರ ಬೀಳುವ ಬೀಜದ ಪ್ರಮಾಣವನ್ನು ಅವಲಂಬಿಸಿ 'ಮುಡಿ' ಎಂಬ ಮಾನದಿಂದಲೂ; ಅಡಿಕೆಯನ್ನು 'ಖಂಡಿ' ಎಂಬ ಮಾನದಿಂದಲೂ ಗ್ರಹಿಸುವ, ಮೌಲ್ಯಮಾಪನ ಮಾಡುವ ಕ್ರಮ ಚಾಲ್ತಿಯಲ್ಲಿತ್ತು.

ಸ್ವಂತ ಭೂಮಿಯಲ್ಲಿ ಕೃಷಿಮಾಡಲು ಸಾಧ್ಯವಾಗದೆ ಇದ್ದಾಗ ಸಾಗುವಳಿಗಾಗಿ ಬೇರೆಯವರಿಗೆ ಬಾಡಿಗೆ ರೂಪದಲ್ಲಿ ಕೊಡುವ 'ಗೇಣಿ' ಪದ್ಧತಿಯೂ ಜಾರಿಯಲ್ಲಿತ್ತು. ನಿರಂತರ ಗದ್ದೆಯನ್ನು ಒಬ್ಬನಿಗೇ ಕೊಡುವ ಗೇಣಿ ಪದ್ಧತಿಗೆ 'ಮುಗೇಣಿ' ಎಂದೂ; ಬಾಡಿಗೆ ಪಡೆಯುವವನಿಗೆ 'ಮೂಲಿಗ'ನೆಂದೂ ಕರೆಯಲಾಗುತ್ತಿತ್ತು. ಭೂಮಿಯನ್ನು ಒಂದು ನಿರ್ದಿಷ್ಟ ಅವಧಿಯವರೆಗೆ ಅನುಭವಿಸುವ ಕರಾರುಕ್ರಮಕ್ಕೆ 'ಚಾಲಗೇಣಿ' ಎಂದು ಹೆಸರು. ಹಾಗೆಯೇ ಭೂಮಿಯನ್ನು ಒಕ್ಕಲಿಗೆ ಕೊಡುವ ಕ್ರಮವೂ ಚಾಲ್ತಿಯಲ್ಲಿತ್ತು.

ಗದ್ದೆಯ ಕೃಷಿಯಲ್ಲಿ ಏಣೆ, ಸುಗ್ಗಿ, ಕೊಳಕೆ ಎಂಬ ಮೂರು ಬೆಳೆ ತೆಗೆಯುವ ವ್ಯವಸ್ಥಿತ ಸಾಗುವಳಿ ಕ್ರಮಗಳು ರೂಢಿಯಲ್ಲಿದ್ದವು. ಕೊಯ್ಲು ಮುಗಿದ ಮೇಲೆ ದ್ವಿದಳ ಧಾನ್ಯ ಬೆಳೆಸುವ, ಗದ್ದೆಯ ಬದುವಿನ ಮೇಲೆ ತೆಂಗು, ಕಂಗು ನೆಡುವ ಕ್ರಮ ಜಾರಿಯಲ್ಲಿತ್ತು. ರೈತರ ಕೃಷಿ ಉತ್ಪನ್ನಗಳ ಮೇಲಿನ ಸುಂಕದೊಂದಿಗೆ ಸ್ವತಃ ಅರಮನೆ ರಾಜರಿಗೆ, ದೇವಾಲಯಗಳಿಗೆ, ದೈವಸ್ಥಾನಗಳಿಗೆ ಇದ್ದ ಭೂಮಿಯಿಂದಲೂ ಬೊಕ್ಕಸಕ್ಕೆ ಆದಾಯ ಹರಿದು ಬರುತ್ತಿತ್ತು.

ಕರಾವಳಿ ಜಿಲ್ಲೆಯ ಕೃಷಿ ಕಾರ್ಯಗಳಿಗಾಗಿ ಮತ್ತು ಗಾಡಿಗಳನ್ನು ಎಳೆಯುವುದಕ್ಕಾಗಿ ಘಟ್ಟದ ಮೇಲಿಂದ ಎತ್ತುಗಳನ್ನು ತರಲಾಗುತ್ತಿತ್ತು. 'ಏಳುಘಟ್ಟದಲ್ಲಿಳಿಯುವ ಗೋವುಗಳು', 'ಎಂಟು ಘಟ್ಟದಲ್ಲಿ ಇಳಿಯುವ ಎತ್ತುಗಳು' ಎಂಬ ಉಲ್ಲೇಖ ಶಾಸನಗಳಲ್ಲೇ ಇದೆ. ಗದ್ದೆಗಳನ್ನು ಲಭ್ಯ ನೀರಾಶ್ರಯವನ್ನು ಅವಲಂಭಿಸಿ 'ಬೆಟ್ಟು', ಬಯಲು, ಮಜಲುಗಳೆಂದು ಗುರುತಿಸಲಾಗುತ್ತಿತ್ತು. ಮಳೆಯ ನೀರನ್ನಷ್ಟೇ ಆಧರಿಸಿ ಬೇಸಾಯ ಮಾಡುವ ಗದ್ದೆ ಬೆಟ್ಟು, ಹೊಳೆ-ನದಿ ಮಟ್ಟದ ಒಳ್ಳೆಯ ನೀರಾಶ್ರಯದ ಗದ್ದೆ ಬಯಲು ಇವೆರಡರ ಸಂಧಿಯ ಗದ್ದೆಯೇ ಮಜಲು.

ಕರಾವಳಿಯ ಪಾಲಿಗೆ ಕಡಲು, ಇಲ್ಲಿಯ ಬಂದರು ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅಥವಾ ಕೃಷಿಯ ವಾಣಿಜ್ಯೀಕರಣಕ್ಕೆ ನಿರಂತರ ಪ್ರೋತ್ಸಾಹ ನೀಡುತ್ತಲೇ ಬಂದಿದೆ. ಸಾಂಬಾರು ವಸ್ತುಗಳು ಬಹುಮುಖ್ಯವಾಗಿ ಕಾಳುಮೆಣಸು, ಅಕ್ಕಿ ವಿದೇಶಗಳಿಗೆ ರಫ್ತು ಆಗಲು ಇಲ್ಲಿಯ ಬಂದರು ಮುಖ್ಯ ಕಾರಣ. ಹಾಗೆಯೇ ಬಯಲುಸೀಮೆ, ಅರೆಮಲೆನಾಡುಗಳಿಂದ ಉತ್ಪನ್ನಗಳು ಬಂದರು ಪ್ರದೇಶಕ್ಕೆ ಹರಿದು ಬರಲು ಇಲ್ಲಿರುವ ಘಾಟಿ ರಸ್ತೆಗಳು ಮತ್ತೊಂದು ಕಾರಣ. ಚಾರ್ಮಾಡಿ, ಶಿರಾಡಿ, ಆಗುಂಬೆ, ದೇವಿಮನೆ ಮುಂತಾದ ಘಾಟಿರಸ್ತೆಗಳು ಈ ಹಿನ್ನೆಲೆಯಲ್ಲಿ ಅದ್ಭುತ ಕೊಡುಗೆಯನ್ನು ನೀಡಿದೆ. ಇದೇ ರಸ್ತೆಗಳಲ್ಲಿ ಘಟ್ಟದ ಮೇಲಿಂದ ರೈತಾಪಿಜನ ಅಕ್ಕಿ, ಗೋಧಿ, ಕಡಲೆ, ಉದ್ದು, ಹೆಸರು, ಎಳ್ಳು, ಶುಂಠಿ, ತುಪ್ಪ, ಬೆಲ್ಲ ಸಾಂಬಾರು ಪದಾರ್ಥಗಳನ್ನು ತಲೆಹೊರೆಯಾಗಿ ಮತ್ತು ಎತ್ತಿನಗಾಡಿಯ ಮೂಲಕ ತಂದು ವ್ಯಾಪಾರ ಮಾಡುತ್ತಿದ್ದರು ಎಂಬುದನ್ನು ಬಾರಕೂರಿನ ದಾಖಲೆ ಹೇಳುತ್ತದೆ. ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಆ ಕಾಲದಲ್ಲಿ ಉಪ್ಪು ಮಾರಾಟ ಮಾಡುವ ಪ್ರಮುಖ ಕೇಂದ್ರವಾಗಿತ್ತು. ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿ ಇಡುವುದಕ್ಕಾಗಿಯೇ ಕೆಲವೆಡೆ ಆದ ಗೋದಾಮುರೂಪದ ಭಂಡಸಾಲೆಗಳು ಇದ್ದು ಅವು ಕ್ರಮೇಣ ಖರೀದಿ ಮತ್ತು ಮಾರಾಟ ಕೇಂದ್ರಗಳಾಗಿಯೂ ಬಳಕೆಯಾದುವು.

ಗದ್ದೆಗೆ ಸಮಾನಾಂತರವಾಗಿ ಬರೀ ತರಕಾರಿ ಬೆಳೆಗಷ್ಟೇ ಸೀಮಿತವಾದ ಕೃಷಿತಾಣವನ್ನು 'ಹಕ್ಕಲು' ಎಂದೂ, ದನಕರುಗಳಿಗೆ ಹುಲ್ಲು ಮೇಯುವ ಜಾಗವನ್ನು 'ಜಿಡ್ಡು' ಎಂದು ಕರೆಯುತ್ತಿದ್ದರು. ಪ್ರಮುಖ ಕೃಷಿ ಬೆಳೆಗಳಿಗೆ ಪೂರಕವಾಗಿ ಸೊಪ್ಪು-ಕಟ್ಟಿಗೆಗೆ ಸೀಮಿತವಾದ ಕೆಲವೊಂದು ಭಾಗಗಳಿಗೆ ಕುದುಮ, ಪಟ್ಲ, ಒಳಚ್ಚಿಲ್, ಹಡಿಲು, ಹಾಡಿ- ಹೀಗೆ ಬೇರೆ ಬೇರೆ ಹೆಸರುಗಳಿವೆ.

ಗದ್ದೆಗಳಿಗೆ ಅವು ಇರುವ ಸ್ಥಳ, ಊರು, ಅವುಗಳ ಒಡೆತನ, ದಿಕ್ಕು, ಯಜಮಾನನ ಜಾತಿ, ಅವುಗಳ ವಿಸ್ತಾರ-ಆಹಾರ, ಅವುಗಳ ಮೇಲೆ ನಡೆಯುವ ಅಂಕ ಆಯನಗಳನ್ನು ಆಧರಿಸಿ ಹೆಸರಿಡುವ ಕ್ರಮ ಜಾರಿಯಲ್ಲಿತ್ತು. ಕಟ್ಟಿದ ಗದ್ದೆ, ಅರಯವಗದ್ದೆ, ತಿಮಾರು, ದೇವರಮಾರು, ಭಂಡಾರಿಗದ್ದೆ, ಜೋಗಿಗದ್ದೆ, ಬಾಗಿಲಗದ್ದೆ, ಕೋಡಿಗದ್ದೆ, ಮಲ್ಲಗದ್ದೆ, ಕೊಡಗದ್ದೆ, ಅಂಕಗದ್ದೆ, ಕಂಬಳಗದ್ದೆ, ಮಾವಿನಗದ್ದೆ, ಹಲಸಿನ ಗದ್ದೆ, ಇಮಬೈಲು, ಮೇಲಿನ ಬೈಲು ಹೀಗೆ ರೂಢಿಯಲ್ಲಿತ್ತು. ಅಕ್ಕಿಯನ್ನು ಜೀರತಿಗೆಅಕ್ಕಿ, ಬೆಳ್ತಿಗೆಅಕ್ಕಿ, ಕುಚ್ಚಲಕ್ಕಿ, ಶುದ್ದಅಕ್ಕಿ, ಮುಗುಅಕ್ಕಿ ಹೀಗೆ ಬೇರ ಬೇರೆ ವಿಭಾಗ ಮಾಡಿ ಬಳಸುತ್ತಿದ್ದರು. ಕರಾವಳಿಯಲ್ಲಿ ಯಥೇಚ್ಛವಾಗಿ ಕಬ್ಬು ಕೂಡಾ ಬೆಳೆಯುತ್ತಿತ್ತು. ಬೆಲ್ಲ ಹೊರತಾಗಿ ಅದರಿಂದ ಸಕ್ಕರೆ ಮಾಡುವ ತಾಂತ್ರಿಕತೆ ಇರಲಿಲ್ಲ. ಸಕ್ಕರೆಯನ್ನು ಘಟ್ಟದ ಮೇಲಿಂದ ತರಿಸುತ್ತಿದ್ದರು. ಶ್ರೀಮಂತರಷ್ಟೇ ಸಕ್ಕರೆಯನ್ನು ಬಳಸುತ್ತಿದ್ದರು. ಹಾಗೆಯೇ ಎಳ್ಳು, ಗೋಧಿಯನ್ನು ಬೇರೆ ಕಡೆಯಿಂದಲೇ ಆಮದು ಮಾಡಿಕೊಳ್ಳುತ್ತಿದ್ದರು. ಜೋಳವನ್ನು ಬೆಳೆಸುವ ಪ್ರಯತ್ನ ಕೂಡಾ ಇಲ್ಲಿ ನಡೆದಿದೆ ಎಂಬುದಕ್ಕೆ 'ಜೋಳುಮಾಡು' ಎಂಬ ಗದ್ದೆಯೊಂದರ ಉಲ್ಲೇಖ ಶಾಸನದಲ್ಲಿರುವುದೇ ಸಾಕ್ಷಿ. ಹಾಗೆಯೇ ಹುರುಳಿಯನ್ನು ಹೇರಳವಾಗಿ ಇಲ್ಲಿಯ ಮಜಲುಗದ್ದೆಯಲ್ಲಿ ಬೆಳೆಸಲಾಗುತ್ತಿತ್ತು. ಹಲಸು, ಮಾವು, ಕದಳಿಬಾಳೆ, ಸಪೋಟ ಕೃಷಿಯ ಕುರಿತು ಶಾಸನಗಳಲ್ಲಿ ಉಲ್ಲೇಖವಿದೆ. ಐದನೆಯ ಶತಮಾನದ ಮಂಗರಸನ ಸೂಪಶಾಸ್ತ್ರದಲ್ಲಿ ಅಡಿಕೆ ಹಾಳೆಯ ಉಲ್ಲೇಖವಿದ್ದು ಅದರಲ್ಲಿ ಮಾವಿನರಸವನ್ನು ಅಂಟಿಸಿ ಬಿಸಿಲಿಗೆ ಒಣಗಿಸಿ ಮಾಡುವ ಮಾಂಬಲದ ವಿವರವಿದೆ.

ಅರಮನೆಗೆ ಸೇರಿದ ಕೃಷಿಭೂಮಿಯನ್ನು 'ಭಂಡಾರಸ್ಥಳ' ಎನ್ನುತ್ತಿದ್ದು, ಅಲ್ಲಿಯ ಉತ್ಪತ್ತಿ, ಆದಾಯ ಪರಿಪೂರ್ಣವಾಗಿ ಸಲ್ಲುತ್ತಿತ್ತು. 'ತೆರು' ಎಂಬ ಹೆಸರಿನ ಭೂಕಂದಾಯವೊಂದು ಜಾರಿಯಲ್ಲಿತ್ತು. ಈ ತೆರಿಗೆಯ ಮೊತ್ತ ಕಾಲಕ್ರಮೇಣ ಏರುತ್ತಾ ಹೋಗುತ್ತಿತ್ತು. ಮಣ್ಣಿನ ಸಾರ ನೀರಿನ ಆಶ್ರಯ, ಹವಾಮಾನಗಳಿಗೆ ಹೊಂದಿಕೊಂಡು 'ತೆರು' ನಿರ್ಧಾರಗೊಳ್ಳುತ್ತಿತ್ತು. ಬರೀ ಗದ್ದೆ-ಹೊಲಗಳಲ್ಲದೆ ತೆಂಗು, ಕಂಗು, ಬಾಳೆಯ ತೋಟಗಳೂ ತೆರುವಿನ ವ್ಯಾಪ್ತಿಗೆ ಬರುತ್ತಿದ್ದವು.

ಬತ್ತ, ತೆಂಗು, ಅಡಿಕೆಯಂಥ ಸಾಂಪ್ರದಾಯಿಕ ಕೃಷಿಯೊಂದಿಗೆ ಇಂದು ಕರಾವಳಿಯಲ್ಲಿ ಹೊಸದಾಗಿ ಅನೇಕ ತೋಟಗಾರಿಕೆ ಬೆಳೆಗಳು ಸೇರಿಕೊಂಡಿವೆ. ಗೇರು, ರಬ್ಬರ್, ಕೊಕೋ, ವೆನಿಲ್ಲಾ ಮುಂತಾದ ಬೆಳೆಗಳನ್ನು ಸಾವಿರಾರು ಹೆಕ್ಟೇರು ಭೂಮಿಯಲ್ಲಿ ಬೆಳೆಸಲಾಗುತ್ತದೆ. 2006--07ರ ಅಂಕಿ ಸಂಖ್ಯೆಯ ಪ್ರಕಾರ ಉಡುಪಿಯ ಹೊರತಾಗಿ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 27532 ಹೆಕ್ಟೇರು ಪ್ರದೇಶದಲ್ಲಿ ಅಡಿಕೆ, 10122 ಹೆಕ್ಟೇರು ಪ್ರದೇಶದಲ್ಲಿ ತೆಂಗು, 30591 ಹೆಕ್ಟೇರು ಪ್ರದೇಶದಲ್ಲಿ ಗೇರು, 10302 ಹೆಕ್ಟೇರು ಪ್ರದೇಶದಲ್ಲಿ ರಬ್ಬರ್, 1901 ಹೆಕ್ಟೇರು ಪ್ರದೇಶದಲ್ಲಿ ಕೋಕೋ, 55945 ಹೆಕ್ಟೇರು ಪ್ರದೇಶದಲ್ಲಿ ಬತ್ತ ಬೆಳೆಯಲಾಗುತ್ತಿದೆ. ಐದು ಹತ್ತು ಸೆಂಟ್ಸ್ ಜಾಗದಿಂದ ತೊಡಗಿ ಹತ್ತು ಹೆಕ್ಟೇರುಗಳಿಗಿಂತ ಹೆಚ್ಚು ಕೃಷಿಭೂಮಿಯನ್ನು ಹೊಂದಿರುವ ಲಕ್ಷಾಂತರ ಕೃಷಿಕರು ಇಲ್ಲಿದ್ದು; ಮಲೆನಾಡು-ಬಯಲುಸೀಮೆಯಂಥ ನೂರಾರು ಹೆಕ್ಟೇರು ಕೃಷಿಭೂಮಿ ಹೊಂದಿರುವ ಎಸ್ಟೇಟು ಕೃಷಿಕರು ಇಲ್ಲಿ ಕಡಿಮೆ. ಒಟ್ಟು ರೈತರ ಸಂಖ್ಯೆ ಎರಡು ಲಕ್ಷಕ್ಕಿಂತ ಹೆಚ್ಚಿದ್ದು ಇವರಲ್ಲಿ ಒಂದು ಎಕರೆಗಿಂತ ಕಡಿಮೆ ಕೃಷಿ ಭೂಮಿ ಹೊಂದಿದವರ ಸಂಖ್ಯೆ ಒಟ್ಟು ಕೃಷಿಕರ ಅರ್ಧದಷ್ಟಿದೆ. ಬತ್ತದ ಕೃಷಿಗೆ ಪೂರಕವಾದ ಮಣ್ಣು, ಮಳೆಹಂಚಿಕೆ, ಹವಾಗುಣವಿದ್ದರೂ ಅನೇಕ ಕಾರಣಗಳಿಗೆ ಬತ್ತವನ್ನು ತೊರೆದು ಬೇರೆ ವಾಣಿಜ್ಯ ಕೃಷಿಗೆ ತೊಡಗುವ, ಬೇರೆ ಬೇರೆ ಉದ್ದೇಶಗಳಿಗೆ ಭೂಮಿ ಮಾರಾಟ ಮಾಡುವ, ಯಾವುದನ್ನು ಮಾಡದೆ ಹಾಗೆಯೇ ಗದ್ದೆಯನ್ನು ಹಡಿಲು-ಪಡಿಲು ಬಿಡುವ ಪ್ರವೃತ್ತಿಯೂ ಭತ್ತಕೃಷಿಯ ಹಿನ್ನಡೆಗೆ ಕಾರಣವಾಗಿದೆ.

ಕರಾವಳಿಯ ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಗಳಲ್ಲಿ ಬತ್ತದ ನೆಲೆಗಳು ಮಾಯವಾಗುತ್ತಿರಲು ಬಲವಾದ ಕಾರಣ ಕಾಂಕ್ರೀಟ್ ಕಾಡಿನ ಹಾವಳಿ. ರಾಷ್ಟ್ರೀಯ ಹೆದ್ದಾರಿಯ ಇಕ್ಕೆಡೆಗಳಲ್ಲಿ ರಭಸವಾಗಿ ಹಬ್ಬುತ್ತಿರುವ ಕಾಂಕ್ರೇಟ್ ಕಟ್ಟಡಗಳು ಸಮೃದ್ಧ ಬತ್ತದ ನೆಲೆಗಳನ್ನು ಕಬಳಿಸುತ್ತಿವೆ. ಗದ್ದೆಗಳ ಮೇಲೆ ಮಣ್ಣು ಸುರಿದು ಸಮತಟ್ಟು ಮಾಡಿ ಅಲ್ಲಿ ಕಟ್ಟಡಗಳನ್ನು ಕಟ್ಟಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಮತ್ತು ಕೊಂಕಣ ರೈಲ್ವೆಯ ಹಾದಿಬದಿಯಲ್ಲಿ ಇಂಥ ಆಧುನೀಕರಣ ನಿರಂತರ ಮುಂದುವರಿದಿದೆ.

ಕೃಷಿಗೆ ಪೂರಕವಾಗಿದ್ದ, ರೈತನ ಕೃಷಿನೆಲೆಯ ಪಕ್ಕದಲ್ಲೇ ಇರುತ್ತಿದ್ದ ನೂರಾರು ನಾಗಬನ-ದೇವರಕಾಡುಗಳು ಇಂದು ಅಳಿವಿನಂಚಿನಲ್ಲಿವೆ. ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಜೈವಿಕ ಬದಲಾವಣೆಗಳ ಪರಿಣಾಮವಾಗಿ ಇಂದು ದೇವರಕಾಡುಗಳು ತಮ್ಮ ಮೂಲಸ್ವರೂಪವನ್ನು ಕಳೆದುಕೊಳ್ಳುತ್ತಿವೆ.

ಯಾವುದೇ ಕೃಷಿಯಲ್ಲಿ ಮುಖ್ಯವಾಗಿ ಎರಡು ಧೋರಣೆಗಳಿವೆ. ಮೊದಲನೆಯದು ಕೃಷಿಯನ್ನು ಒಂದು ಜೀವನವಿಧಾನವೆಂದು ಪರಿಗಣಿಸುವುದು, ಎರಡನೆಯದು ಕೃಷಿಯನ್ನು ಒಂದು ಉತ್ಪಾದನಾ ವಿಧಾನವೆಂದು ಪರಿಗಣಿಸುವುದು.

ಇಂದು ಕರಾವಳಿಯಲ್ಲಿ ಅಲ್ಲಲ್ಲಿ ಅಳಿದುಳಿದ ಗದ್ದೆಗಳಲ್ಲಿ ಯಂತ್ರಗಳು ಓಡಾಡುತ್ತಿವೆ. ಅವುಗಳ ಶಬ್ದಗಳ ನಡುವೆ ಇರುವ ರೈತನಿಗೆ ಸಂಧಿ-ಪಾಡ್ದನಗಳು ಕೇಳಲು ಸಾಧ್ಯವೇ ಇಲ್ಲ. ಗದ್ದೆಯ ಬದುವಿನ ಮೇಲೆ ಕೂರುವ ಪಾರಿವಾಳ, ಕೊಕ್ಕರೆಗಳು ತೆಂಗಿನ ಮರದ ಮೇಲೆ ಗೂಡುಕಟ್ಟುವ ಗೀಜಗಗಳೂ ಯಂತ್ರದ ರಣಸದ್ದಿಗೆ ಬಹುದೂರ ಹಾರಿವೆ.

ಕೃಷಿ ಬದುಕಿನ ಹೊರಗಡೆಯ ಆವರಣವನ್ನು ಭೌತಿಕವಾಗಿ ಬದಲಾಯಿಸುವುದು ಸುಲಭ. ಆದಷ್ಟು ಭೌತಿಕವಾಗಿ ಒಪ್ಪಿಕೊಳ್ಳುವುದು ಇನ್ನೊಂದು ಸ್ಥಿತಿ. ಕರಾವಳಿಯಲ್ಲಿ ಬತ್ತದಿಂದ ಜನ ಅಡಿಕೆಗೆ ಸ್ಥಾನಾಂತರ ಹೊಂದುವ ಕಾಲದಲ್ಲಿ ಕೃಷಿ ಕಾರ್ಮಿಕರ ಸಮಸ್ಯೆ ಗಂಭೀರವಾಗಿರಲಿಲ್ಲ. ಗದ್ದೆನಾಟಿಗೆ ನುರಿತ ಹೆಣ್ಣಾಳುಗಳು, ಉಳುಮೆಗೆ ಹತ್ತಾರು ಜೋಡಿ ಎತ್ತುಗಳು ಸಿಗುತ್ತಿದ್ದ ಕಾಲವದು. 'ಜನವಿಲ್ಲ' ಎಂದು ಇವರೆಲ್ಲಾ ಬಾಕಿಮಾಡು, ದೇವರಮಾಡು ಗದ್ದೆಗಳಿಗೆ ಅಡಿಕೆ ನೆಟ್ಟವರಲ್ಲ. ತಿನ್ನುವ ಅನ್ನ ಎಲ್ಲಿಂದಾದರೂ ಬಂದೀತು. ತುರ್ತಾಗಿ ಕೈತುಂಬಾ ದುಡ್ಡು ಬರಲಿ, ದುಡ್ಡು ಇದ್ದರೆ ಆಹಾರ ಖರೀದಿಸಬಹುದೆಂದು ಭಾವಿಸಿದರು. ಸ್ಥಳೀಯ ಕೃಷಿ ಸಂಶೋಧನಾ ಕೇಂದ್ರಗಳು ಹೊಸ ಹೊಸ ಅಡಿಕೆ ತಳಿಗಳನ್ನು ರೈತರ ಕೈಗೆ ನೀಡಲಾರಂಭಿಸಿದವು. ಮಂಗಳ, ಸುಮಂಗಳ, ಇಂಟರ್ ಮಂಗಳ ಹೀಗೆ ಒಂದರ ಹಿಂದೆ ಒಂದರಂತೆ ತಳಿಗಳು ಬರಲಾರಂಭಿಸಿದವು.

ಗದ್ದೆಯಲ್ಲಿ ಚಿಗುರಿದ ಅಡಿಕೆ, ಗುಡ್ಡದಲ್ಲಿ ಬೆಳೆದ ರಬ್ಬರ್ ರೈತರೊಳಗೆ ಹಣ ಸೇರಿಸಿತು. ಯಂತ್ರಗಳಿಂದ ಕೃಷಿ ಗೆಲ್ಲುವ, ಹಣದಿಂದ ಬದುಕು ಗೆಲ್ಲುವ ಅಹಂ ಸಾಮಾಜಿಕ ಅಸ್ಥಿರತೆಗೆ ಅವಕಾಶ ಒದಗಿಸಿತು. ಕೃಷಿಕನ ಮನೆಯಂಗಳದ ಆರಾಧನೆ, ದೈವಕೋಲಗಳಿಗೆ ಬಳಕೆಯಾಗುವ ಪ್ರತಿಪರಿಕರವೂ ನೆಲಮೂಲದ್ದೇ ಆಗಿರುತ್ತಿತ್ತು. ಈಗ ಗದ್ದೆಗಳೇ ಇಲ್ಲದ ಮನೆಯಂಗಳದಲ್ಲಿ ಭೂತ ಕುಣಿಯುತ್ತದೆ.

ಕರಾವಳಿಯಲ್ಲಿ ಬೇಸಾಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಅನೇಕ ಆಚರಣೆಗಳು ಇವೆ. ಬೀಜ ಬಿತ್ತುವುದರಿಂದ ತೊಡಗಿ, ಕೊಯಿಲಾಗುವ ತನಕ ವಿವಿಧ ರೀತಿಯ ಕೃಷಿ ಆಚರಣೆಗಳಿವೆ. ಕೆಡ್ಡಸ, ಬಿಸು, ಪತ್ತವಾಚ, ಆಟಿ, ಅಮಾವಾಸ್ಯೆ, ಪರ್ಬ, ಕಾವೇರಿ ಸಂಕ್ರಮಣ, ಪುದ್ವಾರ್, ಸುಗ್ಗಿ, ಪೂಕರೆ ಇವೆಲ್ಲವೂ ಭೂಮಿ ಮತ್ತು ರೈತರ ಸಂಬಂಧವನ್ನು ಗಟ್ಟಿಗೊಳಿಸುವ ಆಚರಣೆ, ಆರಾಧನೆಗಳಾಗಿವೆ. ಇವುಗಳಲ್ಲಿ ಕೆಲವು ಇನ್ನೂ ಮೂಲರೂಪದಲ್ಲೇ ಉಳಿದಿವೆ. ಕೆಲವು ಅಗತ್ಯಕ್ಕೆ ತಕ್ಕಂತೆ ರೂಪಾಂತರ ಹೊಂದಿವೆ. ಇವೆಲ್ಲವೂ ನಮ್ಮ ನೆಲದವರ ವೈವಿಧ್ಯಪೂರ್ಣ ಬದುಕಿನ ದರ್ಶನ ಮಾಡಿಸುತ್ತವೆ. ಕರಾವಳಿಯಲ್ಲೇ ಊರಿಂದೂರಿಗೆ ಇವುಗಳ ಆಚರಣೆಯಲ್ಲಿ ವ್ಯತ್ಯಾಸವಿರಬಹುದು. ಆದರೆ ಉದ್ದೇಶ ಮಾತ್ರ ಒಂದೇ.

ಈ ಲೇಖನದ ಆರಂಭದಲ್ಲಿ ಉಲ್ಲೇಖಿಸಿದ ಅನೇಕ ಕಾರ್ಖಾನೆಗಳು, ಇದೀಗ ದಾಂಗುಡಿ ಇಡುತ್ತಿರುವ ವಿಶೇಷ ಆರ್ಥಿಕ ವಲಯ ಇಲ್ಲಿಯ ಕೃಷಿರಂಗವನ್ನು ಸಂಪೂರ್ಣವಾಗಿ ನಲುಗಿಸಿದೆ. ಕರಾವಳಿಯ ಧಾರಣಾಶಕ್ತಿಗೆ ಒಪ್ಪುವಂತೆ ಕೃಷಿಗೆ ಅನುಕೂಲವಾಗುವಂತೆ ಪರಿಸರ ಮಾಲಿನ್ಯವಾಗದಂತೆ ಅನೇಕ ಸಣ್ಣ ಉದ್ದಿಮೆಗಳಿಗೆ ಇಲ್ಲಿ ಅವಕಾಶವಿದೆ. ನೈಸರ್ಗಿಕ ಆಹಾರ ಬಣ್ಣಗಳು, ಶೀತಲೀಕರಣ, ಐಸ್‌ಪ್ಲಾಂಟು, ಮೀನೆಣ್ಣೆ, ಗೊಬ್ಬರ ಸ್ಥಾವರ, ತೆಂಗು-ಹುರಿಹಗ್ಗ ಆಧಾರಿತ ಉದ್ಯಮ, ಪುಷ್ಪಕೃಷಿ, ಕಾಗದ-ಬ್ಯಾಗುಗಳು, ಅಗರಬತ್ತಿ, ಹಣ್ಣು ಆಧಾರಿತ ಸಂಸ್ಕರಣೆ, ಬಾಳೆ, ಗೇರು, ಮಾವಿನ ಉಪ್ಪಿನಕಾಯಿ, ಹಲಸು ಉತ್ಪನ್ನಗಳು ಬತ್ತದ ಉದ್ಯಮ, ಗಿಡಮೂಲಿಕೆ, ಔಷಧ, ಪ್ರಸಾದನ, ಜೇನು, ರಬ್ಬರ್ ಹೀಗೆ ಅನೇಕ ಅವಕಾಶಗಳಿವೆ.

ಕರಾವಳಿ ಕೃಷಿ ಪಲ್ಲಟದ ಪರಿಣಾಮಗಳು

ನಷ್ಟವಾದ ಆಹಾರ ಸ್ವಾವಲಂಬನೆ, ಕೃಷಿಮೂಲ ಸಂಸ್ಕೃತಿ, ಜನಪದೀಯ ನಂಬಿಕೆ-ಆಚರಣೆಗಳ ಮೇಲೆ ಪ್ರಭಾವ, ಅತಿಯಾದ ವಲಸೆ, ಪರಿಸರ ನಾಶ, ಜಾತಿಯಾಧರಿತ ಕುಲಕಸುಬುಗಳ ನಾಶ, ತುಳು-ಜಾನಪದೀಯ ಆರ್ಥಿಕತೆಯ ಪಲ್ಲಟ, ಕೃಷಿಭೂಮಿಯ ಮೇಲೆ ನಗರದ ಒತ್ತುವರಿ, ಹಣ ಮತ್ತು ನಗರವೇ ಸುಖದ ದಾರಿ ಎಂಬ ಭ್ರಮೆ, ಸೇವಾ ಮತ್ತು ಕೈಗಾರಿಕೆಗಳಲ್ಲಿ ವೃತ್ತಿ ಐಡೆಂಟಿಟಿ ಅಹಂ, ದುಬಾರಿ ಹೈನೋದ್ಯಮ, ಪಾರಂಪರಿಕ ಕಾಡು ಮತ್ತು ಕೃಷಿಯಾಧಾರಿತ ಉದ್ಯಮಗಳ ನಾಶ, ಅಸ್ಥಿರಗೊಳ್ಳುತ್ತಿರುವ ಧಾರಣಾಶಕ್ತಿ, ಕೃಷಿತ್ಯಾಗಕ್ಕೆ ಕಾರಣವಾಗುತ್ತಿರುವ ಪರವಿಪತ್ತುಗಳು, ಶಿಕ್ಷಣ, ಪದವಿಯು ಉದ್ಯೋಗ ಜೀವನಕ್ಕೆ ಮಾನದಂಡ ವಾಗುತ್ತಿರುವುದು, ಕೃಷಿಕುಟುಂಬದ ಹಿರಿಯರಿಗೆ ಗೌರವ ಕಡಿಮೆಯಾಗುತ್ತಿರುವುದು, ಕೃಷಿ ಪ್ರೀತಿಯ ಜವಾಬ್ದಾರಿಯ ಮನೆ ಹುಡುಗ-ಹುಡುಗಿಗೆ ಮದುವೆ ಅಸಾಧ್ಯತೆ, ಕೃಷಿ ಭೂಮಿಯ ಪರಭಾರೆ, ನಾಗಬನ, ದೇವಾಲಯಗಳ ಕಾಂಕ್ರೀಟೀಕರಣ, ಕೃಷಿ ಕೂಲಿಕಾರ್ಮಿಕರ ಸ್ಥಾನಾಂತರ.

ಎನ್.ಆರ್.ಡಿ.

ಕರಿಬೇವು (ಕರ‍್ರಿಲೀಫ್) 'ಮುರ‍್ರಯ ಕೊನಿಗಿ' ಸಸ್ಯನಾಮದ 'ರುಟೇಸಿ' ಸಸ್ಯ ಕುಟುಂಬಕ್ಕೆ ಸೇರಿದ ಸಂಬಾರ ಗಿಡ. ಕರಿಬೇವಿನ ತವರು ದಕ್ಷಿಣ ಭಾರತ ಮತ್ತು ಶ್ರೀಲಂಕಾ ಎಂದು ಕೆಲವರು ಭಾವಿಸಿದರೆ ಮತ್ತೆ ಕೆಲವರು ಭಾರತದ ಹಿಮಾಲಯ ಪ್ರದೇಶವೆಂದು ಹೇಳುತ್ತಾರೆ. ಇದನ್ನು ಹಿಮಾಲಯದ ತಪ್ಪಲು, ಬಂಗಾಳ, ಮಧ್ಯಪ್ರದೇಶ,



ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರ ಮತ್ತು ಕರ್ನಾಟಕಗಳಲ್ಲಿ ಬೇಸಾಯ ಮಾಡಲಾಗುತ್ತಿದೆ.

ಕರಿಬೇವು ಮಧುರವಾದ ಪರಿಮಳ ಬೀರುವ ನವುರಾದ ಬಿಳಿಯ ಬಣ್ಣದ ಹೂಗಳನ್ನು ಬಿಡುತ್ತದೆ. ಕಾಯಿ ಹಣ್ಣಾದಾಗ ನೇರಳೆಬಣ್ಣ ಹೊಂದುತ್ತದೆ. ಕರಿಬೇವಿನ ಎಲೆಯ ರಸಗ್ರಂಥಿಗಳಲ್ಲಿ ಒಂದು ಬಗೆಯ ತೈಲವಿದ್ದು ಸುವಾಸನೆಯನ್ನು ಬೀರುತ್ತದೆ. ಸೊಪ್ಪು ಅಧಿಕ ಪ್ರಮಾಣದ ಪೋಷಕಾಂಶಗಳು ಮತ್ತು ಔಷಧೀಯ ಗುಣಗಳನ್ನು ಹೊಂದಿವೆ. ಅಡುಗೆಗೆ ಬಳಸಿದಾಗ ವಿಶೇಷವಾದ ರುಚಿ ಮತ್ತು ಸುವಾಸನೆಯನ್ನು ಕೊಡುತ್ತದೆ. ಇಂಥ ರುಚಿಗೆ ಅದರಲ್ಲಿಯ ಪೋಷಕಾಂಶಗಳು ಮತ್ತು ಜೀವಸತ್ವಗಳೇ ಕಾರಣ.

ಮಣ್ಣು ಮತ್ತು ಹವಾಗುಣ : ಕರಿಬೇವನ್ನು ಎಲ್ಲಾ ರೀತಿಯ ಮಣ್ಣುಗಳಲ್ಲಿ ಬೆಳೆಸುವ ಸಾಧ್ಯತೆ ಇದ್ದರೂ ನೀರು ಬಸಿದು ಹೋಗುವಂತಹ ಕೆಂಪುಮಣ್ಣು ಒಳ್ಳೆಯದು. ಬೇಸಾಯಕ್ಕೆ ಒಣಹವೆ ಉತ್ತಮ. ಸಸಿಗಳ ನಾಟಿಗೆ ಮುಂಗಾರು ಯೋಗ್ಯ.

ಬಿತ್ತನೆ : ಬೀಜದಿಂದ ಸಸ್ಯಾಭಿವೃದ್ಧಿ ಮಾಡಲಾಗುವುದು. ಚೆನ್ನಾಗಿ ಮಾಗಿದ ಹಣ್ಣುಗಳ ಬೀಜವನ್ನು ಬಿತ್ತಿದರೆ ಒಳ್ಳೆಯದು. ಹಣ್ಣುಗಳನ್ನು ಕಿತ್ತು ಬೀಜವನ್ನು ನೀರಿನಲ್ಲಿ ಕಿವುಚಿ ಬೇರ್ಪಡಿಸಿ ನೆರಳಿನಲ್ಲಿ ಒಣಗಿಸಿ ಬಿತ್ತಬೇಕು. ಬಿತ್ತಿದ 12 ರಿಂದ 15 ದಿನಗಳಲ್ಲಿ ಮೊಳಕೆಯೊಡೆಯುತ್ತದೆ. ಚೀಲಗಳಿಗೆ ತುಂಬಿದ ಮಣ್ಣಿನಲ್ಲಿ ಬೀಜವನ್ನು ಹೂತು ಅನಂತರ ಸಸಿಗಳನ್ನು ನಾಟಿ ಮಾಡಿದರೆ ಅವು ಸುಲಭವಾಗಿ ನೆಲೆಗೊಳ್ಳುತ್ತವೆ. ನಾಟಿ ಮಾಡಲು ಒಂದು ಘನ ಮೀಟರ್ ಗುಂಡಿಗಳನ್ನು ತೋಡಿ ಒಂದು ತಿಂಗಳ ಕಾಲ ಬಿಸಿಲಿಗೆ ಬಿಟ್ಟು, ಅನಂತರ ಸಮ ಪ್ರಮಾಣದ ಮೇಲ್ಮಣ್ಣು ಮತ್ತು ಕೊಳೆತ ತಿಪ್ಪೆ ಗೊಬ್ಬರವನ್ನು ತುಂಬಿ ನೀರು ಹಾಯಿಸಬೇಕು. ನಾಟಿಗೆ ಜೂನ್-ಜುಲೈ ಸಕಾಲ. ಸಾಲಿನಿಂದ ಸಾಲಿಗೆ 5-6 ಮೀ ಮತ್ತು

ಪ್ರತಿ ಸಾಲಿನಲ್ಲಿ 5-6 ಮೀ. ಗೆ ಒಂದರಂತೆ ಸಸಿಗಳನ್ನು ನಾಟಿಮಾಡಬೇಕು. ಸಸಿಯನ್ನು ನೆಟ್ಟ ಮೇಲೆ ನೀರು ಹಾಯಿಸಬೇಕು. ಅಲುಗಾಡದಂತೆ ಆಧಾರ ಕಟ್ಟಬೇಕು ಮತ್ತು ಹೊಂಗೆ, ಹಾಡಿ ಬೇವು ಹಿಂಡಿ, ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು ಮಳೆಗಾಲ ಆರಂಭವಾಗುವುದಕ್ಕೂ ಮೊದಲು ಒದಗಿಸಬೇಕು.

ನೀರಾವರಿ : ಸಸ್ಯಗಳಿಗೆ ಆರಂಭದಲ್ಲಿ ಸ್ವಲ್ಪ ನೀರು ಸಾಕು. ಗಿಡಬೆಳೆದಂತೆ ನೀರಿನ ಅಗತ್ಯ ಹೆಚ್ಚಾಗುತ್ತದೆ. ಆಗ ದೊಡ್ಡ ಪಾತಿ ಮಾಡಿ ಬೇಸಗೆಯಲ್ಲಿ ವಾರಕ್ಕೊಮ್ಮೆ ಇತರೆ ದಿನಗಳಲ್ಲಿ 15 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಆಗಿಂದಾಗ್ಗೆ ಮರಗಳ ಬುಡದ ಮಣ್ಣನ್ನು ಕೆದಕಿ, ಸಡಿಲಿಸಿದರೆ ಕಳೆಗಳ ಬಾಧೆ ತಪ್ಪಿ ಹುಳ ಹುಪ್ಪಟೆ ನಾಶವಾಗುತ್ತವೆ. ಗಿಡದ ಪ್ರಧಾನ ಕಾಂಡ ನೇರವಾಗಿರುವಂತೆ ಮಾಡಲು ನೆಲ ಮಟ್ಟದಿಂದ 1 ರಿಂದ 1.5 ಮೀಟರ್ ಎತ್ತರದವರೆಗೆ ಚಿಗುರನ್ನು ಸವರಬೇಕು.

ನಾಟಿ ಮಾಡಿದ 4-5 ತಿಂಗಳಲ್ಲಿ ಸೊಪ್ಪನ್ನು ಪಡೆಯಬಹುದು. ಬಲಿತ ಸೊಪ್ಪನ್ನು ಕೊಯ್ಲು ಮಾಡಿದರೆ ಪರಿಮಳ ಮತ್ತು ಗುಣಮಟ್ಟ ಚೆನ್ನಾಗಿರುತ್ತದೆ. ಸೊಪ್ಪನ್ನು ಒಣಗಿಸಿ ಜೋಪಾನ ಮಾಡಿದರೆ ಅನುಕೂಲ. ಗಿಡದ ಜೀವಿತಾವಧಿ 25-30 ವರ್ಷಗಳು. ಅಷ್ಟೂ ವರ್ಷ ಸತತವಾಗಿ ಸೊಪ್ಪು ಸಿಗುತ್ತದೆ.

ಈ ಗಿಡಕ್ಕೆ ಹೆಚ್ಚು ಉಪದ್ರವಕಾರಿ ರೋಗಗಳು ಇಲ್ಲ. ಕಾಂಡ ಕೊರೆಯುವ ಹುಳು ಇದರ ಕಾಂಡದಲ್ಲಿ ನೆಲೆಸಿ ಮರವನ್ನು ಕೊರೆಯುತ್ತದೆ. ಹತೋಟಿಗೆ ಸೀಮೆ ಎಣ್ಣೆ ಅಥವಾ ಪೆಟ್ರೋಲ್ ರಂಧ್ರದೊಳಕ್ಕೆ ಪಿಚಕಾರಿಯಿಂದ ಸೇರಿಸಿ ರಂಧ್ರವನ್ನು ಕೆಸರಿನಿಂದ ಮುಚ್ಚಬೇಕು.

ಔಷಧೀಯ ಗುಣಗಳು : ಕರಿಬೇವು ಆಯುರ್ವೇದ ಔಷಧಿಯಂತೆ ಉಪಯೋಗಕ್ಕೆ ಬರುವಂಥದ್ದು. ಸೊಪ್ಪು ತಿನ್ನುವುದರಿಂದ ಚೈತನ್ಯದಾಯಕ. ಇದರ ತೊಗಟೆಯ ಕಷಾಯ ಅಥವಾ ಎಲೆಯ ರಸ ಅಜೀರ್ಣದಿಂದಾಗುವ ವಾಕರಿಕೆಯನ್ನು ನಿಯಂತ್ರಿಸುತ್ತದೆ. ಎಲೆ ರಸದೊಂದಿಗೆ ನಿಂಬೆ ರಸವನ್ನು ಸೇವಿಸಿದರೆ ಗರ್ಭಿಣಿಯರ ವಾಕರಿಕೆ ಹಾಗೂ ಪಿತ್ತದಿಂದ ಉಂಟಾಗುವ ವಾಕರಿಕೆ ನಿವಾರಣೆಯಾಗುತ್ತದೆ. ಮೂಲವ್ಯಾಧಿಯಿಂದ ಬಳಲುವವರು ಚಿಗುರುಸೊಪ್ಪನ್ನು ಜೇನು ತುಪ್ಪದಲ್ಲಿ ಸೇವಿಸಬಹುದು. ಭೇದಿ ನಿಲ್ಲಲೂ ಇದೇ ಔಷಧಿ. ಸ್ಥೂಲ ಕಾಯದವರು ನಿತ್ಯ ಕರಿಬೇವಿನ ಚಟ್ನಿ ಉಪಯೋಗಿಸಿದರೆ ಕೊಬ್ಬು ಕ್ರಮೇಣ ಕರಗುತ್ತದೆ. ಔಷಧಿ ಸಿಂಪಡಿಸದ ತಾಜಾ ಪತ್ರದ ರಸವನ್ನು ಕಣ್ಣಿಗೆ ಹಾಕುವುದರಿಂದ ಕಣ್ಣಿನ ಪೊರೆ ಬರುವುದಿಲ್ಲ ಮತ್ತು ಕಣ್ಣು ಕಾಂತಿಯಿಂದ ಕಂಗೊಳಿಸುತ್ತದೆ. ವಿಷ ಜಂತುಗಳು ಕಡಿದ ಭಾಗಕ್ಕೆ ಕರಿಬೇವು ಎಲೆಯನ್ನು ಹಾಲಿನಲ್ಲಿ ಬೇಯಿಸಿ ಅರೆದು ಹಚ್ಚಿದರೆ ವಿಷ ನಿವಾರಣೆಯಾಗಿ ಉರಿ ತಗ್ಗುತ್ತದೆ. ಕರಿಬೇವಿನ ಎಲೆಗಳನ್ನು ಎಲ್ಲಾ ಖಾರದ ತಿಂಡಿಗಳಿಗೂ ಬಳಸುತ್ತಾರೆ. ಇದರಿಂದ ರುಚಿಕರ ಚಟ್ನಿಯನ್ನು ತಯಾರಿಸುತ್ತಾರೆ.

'ಕರಿಬೇವಿಲ್ಲದ ಒಗ್ಗರಣೆ, ಸುವಾಸನೆ ಇಲ್ಲದ ಪುಷ್ಪದಂತೆ'. ಕೊಬ್ಬರಿ ಎಣ್ಣೆಗೆ ಕರಿಬೇವು ಸೊಪ್ಪಿನ ಪುಡಿ ಬೆರೆಸಿ ಇಟ್ಟುಕೊಂಡು ಅದನ್ನು ತಲೆಗೆ ಹಚ್ಚುವುದುಂಟು. ಕರಿಬೇವು ಸೊಪ್ಪಿನ ರಸವನ್ನು ಸದಾ ಸೇವಿಸಿದರೆ ಬೇಗ ಕೂದಲು ನೆರೆಯುವುದಿಲ್ಲ. ಕೂದಲು ಕಾಂತಿಯುಕ್ತವಾಗಿರುತ್ತದೆ.

ಆಧಾರಗ್ರಂಥ

ಬಹುವಾರ್ಷಿಕ ತರಕಾರಿಗಳು. ಪಿ. ನಾರಾಯಣಸ್ವಾಮಿ, ಎಲ್. ವಸಂತ, 1992

ಕೃಷಿ ಬೆಳೆಗಳ ಪರಿಚಯ, ಮೃತ್ಯುಂಜಯ. ಎಸ್. 2010

ಎನ್. ಆರ್.

ಕರಿಮೆಣಸು ಕೊಡಗಿನ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಕರಿ ಮೆಣಸು (ಕಾಳು ಮೆಣಸು) ಒಂದು. ಇದನ್ನು ಮಿಶ್ರ ಬೆಳೆಯಾಗಿ ಕಾಫಿಯ ಜೊತೆಯಲ್ಲಿ ಬೆಳೆಯುತ್ತಾರೆ, ಇಲ್ಲಿಯ ಹವಾಗುಣ ಮತ್ತು ಮಣ್ಣು ಈ ಬೆಳೆಗೆ ಯುಕ್ತವಾಗಿರುತ್ತದೆ.



ಕರಿಮೆಣಸು (ಪೈಪರ್ ನೀಗ್ರಮ್) ಪೈಪರೇಶಿ ಕುಟುಂಬಕ್ಕೆ ಸೇರಿದ ಬಹುವಾರ್ಷಿಕ ಹಬ್ಬುವ ಬಳ್ಳಿಗಳಲ್ಲೊಂದು. ಈ ಬೆಳೆಯನ್ನು ಕಾಳಿಗೋಸ್ಕರ ಕೃಷಿ ಮಾಡುತ್ತಿದ್ದು, ಮೆಣಸಿನ ಕಾಳುಗಳನ್ನು ಪ್ರಮುಖವಾಗಿ ಸಾಂಬಾರು ಪದಾರ್ಥವಾಗಿ ಬಳಸುವುದಲ್ಲದೆ, ಔಷಧಿಗಳ ತಯಾರಿಕೆಯಲ್ಲೂ ಹೆಚ್ಚಿನ ಮಹತ್ವವನ್ನು ಪಡೆದಿದೆ. ಭಾರತ ಕರಿಮೆಣಸು ಉತ್ಪಾದನೆ, ಬಳಕೆ ಹಾಗೂ ರಫ್ತು ಮಾಡುವಲ್ಲಿ ಪ್ರಪಂಚದಲ್ಲೇ ಮೊದಲ ಸ್ಥಾನ ಪಡೆದಿದೆ. ಕರಿಮೆಣಸನ್ನು ಹೆಚ್ಚಿನ ಕ್ಷೇತ್ರದಲ್ಲಿ ಕರ್ನಾಟಕ, ಕೇರಳ ತಮಿಳುನಾಡು ಮತ್ತು ಇತರ ರಾಜ್ಯಗಳಲ್ಲಿ ಬೆಳೆಯುತ್ತಾರೆ.

ಹವಾಗುಣ ಮತ್ತು ಮಣ್ಣು : ಕರಿಮೆಣಸು ತಂಪು ಉಷ್ಣತೆ ಬಯಸುವ ಬೆಳೆಯಾಗಿದ್ದು, ಸಾಕಷ್ಟು ಮಳೆ ಮತ್ತು ತಂಪು ಇರುವ ಹವಾಗುಣ ಅಗತ್ಯ. ಪಶ್ಚಿಮ ಘಟ್ಟ ಪರ್ವತ ಶ್ರೇಣಿಯ ತಂಪು ಮತ್ತು ಉಷ್ಣ ಹವೆಯನ್ನು ಹೊಂದಿರುವ ಹವಾಗುಣ ಕರಿಮೆಣಸು ಕೃಷಿಗೆ ಅತ್ಯುತ್ತಮ. ಇದನ್ನು ವಿವಿಧ ಮಣ್ಣುಗಳಲ್ಲಿ ಬೆಳೆಸಬಹುದಾದರೂ 4.5 ರಿಂದ 6.5 ರಸಸಾರ ಹೊಂದಿರುವ ಮರಳು ಮಿಶ್ರಿತ ಕೆಂಪು ಮಣ್ಣು ತುಂಬಾ ಉಪಯುಕ್ತ.

ತಳಿಗಳು : ಪ್ರಮುಖವಾಗಿ ಕೃಷಿಯಲ್ಲಿರುವ ಕರಿಮೆಣಸಿನ ಬಹುತೇಕ ತಳಿಗಳಲ್ಲಿ ಗಂಡು ಮತ್ತು ಹೆಣ್ಣು ಲಿಂಗಗಳು ಒಂದೆ

ಹೂಗುಚ್ಛದಲ್ಲಿರುವುವು. ಕೆಲವು ಹೂಗುಚ್ಛಗಳಲ್ಲಿ ಪೂರ್ಣ ಗಂಡು ಹಾಗೂ ಪೂರ್ಣ ಹೆಣ್ಣು ಲಿಂಗಗಳನ್ನು ಸಹ ಕಾಣಬಹುದು. ಹಾಲಿ ಸುಮಾರು 75ಕ್ಕೂ ಹೆಚ್ಚು ತಳಿಗಳು ಭಾರತದಲ್ಲಿವೆ. ಕರಿ ಮುಂಡ ಕೇರಳದಲ್ಲಿ ಬಹು ಪ್ರಸಿದ್ಧವಾದ ತಳಿ, ಇತರೆ ತಳಿಗಳೆಂದರೆ, ಕೊಟ್ಟನಾಡನ್, ನಾರೈಕೋಡಿ, ಐಮ್‌ಪೇರಿಯನ್, ನೀಲಮುಂಡಿ, ಕುತೀರು ಬಳ್ಳಿ, ಬಾಲನ್‌ಕೊಟ್ಟ, ಕಲ್ಲು ಬಳ್ಳಿ, ಮಲ್ಲಿಗೆ ಸರ, ಉದ್ಯಗೆರೆ ಅಲ್ಲದೆ ಸುಮಾರು 16 ಸುಧಾರಿತ ತಳಿಗಳಿವೆ. ಅವುಗಳಲ್ಲಿ ಪಣಿಯೂರ್-1 ಮತ್ತು 3, ಗಿರಿ ಮುಂಡ, ಮಲಬಾರ್ ಎಕ್ಸೆಟ್ ಪ್ರಮುಖವಾದವು.

ಸಸ್ಯಾಭಿವೃದ್ಧಿ : ಬಳ್ಳಿಯ ತುಂಡುಗಳಿಂದ ಸಸ್ಯಾಭಿವೃದ್ಧಿ ಮಾಡುವರು. ಇದು ಮೂರು ವಿಧದ ಕಾಂಡದ ಬಳ್ಳಿಗಳನ್ನು ಹೊಂದಿರುತ್ತದೆ.



ಪ್ರಾಥಮಿಕ ಕಾಂಡದ ಬಳ್ಳಿ : ಇದರಲ್ಲಿ ಅಂತರ ಗಿಣ್ಣುಗಳು ಬಹಳ ದೂರವಿದ್ದು ಗಿಣ್ಣಿನಿಂದ ಹೊರಹೊಮ್ಮುವ ಬೇರುಗಳು ಆಧಾರಮರಗಳಿಗೆ ಅಂಟಿಕೊಂಡು ಬಳ್ಳಿ ಮೇಲೆ ಬೆಳೆಯಲು ಸಹಕಾರಿಯಾಗಿರುತ್ತದೆ. ಇದರ ತುದಿ ಬಳ್ಳಿಯನ್ನು ಸಸ್ಯಾಭಿವೃದ್ಧಿಗೆ ಅಲ್ಪ ಮೆಟ್ಟಿಗೆ ಬಳಸಲಾಗುವುದು.

ಹಬ್ಬು ಬಳ್ಳಿಗಳು : ಇವು ಪ್ರಧಾನ ಕಾಂಡದ ಬಳ್ಳಿಯ ಬುಡಭಾಗದಿಂದ ಚಿಗುರಿ ನೆಲದ ಮೇಲೆ ಹಬ್ಬಿರುತ್ತವೆ, ಬಳ್ಳಿಯನ್ನು ಸಸ್ಯಾಭಿವೃದ್ಧಿಗೆ ಪ್ರಮುಖವಾಗಿ ಬಳಸುತ್ತಾರೆ.

ಫಸಲು ಬಿಡುವ ರೆಕ್ಕೆಗಳು : ಇವು ಕಾಂಡದಿಂದ ಚಿಗುರೊಡೆದು ಅಪ್ಪುವಾಗಿ ಬೆಳೆದಿರುತ್ತದೆ. ಇವು ಹೂಗೊಂಚಲುಗಳನ್ನ ಬಿಟ್ಟು (ಫಸಲು) ಮೆಣಸನ್ನು ಕೊಡುವವು, ಈ ರೆಕ್ಕೆಗಳನ್ನು ಪೊದೆ ಕರಿಮೆಣಸಿನ ಗಿಡಗಳನ್ನು ವೃದ್ಧಿ ಮಾಡಲು ಬಳಸಲಾಗುವುದು.

ನಾಟಿ :

ಸಾಂಪ್ರದಾಯಿಕ ಪದ್ಧತಿ : ಅಧಿಕ ಇಳುವರಿ ಕೊಡುವ ಆರೋಗ್ಯವಂತ ಬಳ್ಳಿಗಳನ್ನು ಗುರ್ತಿಸಿ ಅದರ ಬುಡಭಾಗದಲ್ಲಿ ಚಿಗುರಿ ನೆಲದ ಮೇಲೆ ಹಬ್ಬಿರುವ ಬಳ್ಳಿಗಳನ್ನು 2-3 ಗಿಣ್ಣಿರುವಂತೆ ಕತ್ತರಿಸಿ, ಬುಡ ಭಾಗ (ಕತ್ತರಿಸಿದ)ವನ್ನು 500 ಪಿ.ಪಿ.ಎಂ. ಸಾಮರ್ಥ್ಯದ ಇಂಡೋಲ್ ಭ್ಯೂಟ್ರಿಕ್ ಆಮ್ಲದಿಂದ ಉಪಚರಿಸಿ ಎರಡು ಭಾಗ ಕಾಡು ಮಣ್ಣು, ಒಂದು ಭಾಗ ಮರಳು, ಒಂದು ಭಾಗ ಕೊಟ್ಟಿಗೆ ಗೊಬ್ಬರ ತುಂಬಿಸಿರುವ ಪಾಲಿಥಿನ್ ಚೀಲದಲ್ಲಿ ತುಂಬಿ, ಹಸುರು ಮನೆ ತಳಭಾಗದಲ್ಲಿ ನೀರು ನಿಲ್ಲದಂತೆ ಜೋಡಿಸಿ ಮಿತವಾಗಿ ನೀರನ್ನು ಪ್ರತಿದಿನ ಒದಗಿಸಬೇಕು. ಈ ರೀತಿ ಫೆಬ್ರವರಿ - ಮಾರ್ಚ್ ತಿಂಗಳಿನಲ್ಲಿ ಮಾಡಿದರೆ, ಮೇ-ಜೂನ್ ತಿಂಗಳಲ್ಲಿ ನಾಟಿ ಮಾಡಲು ಸಿದ್ಧವಾಗಿರುತ್ತವೆ.

ಸರಪಂಟೈನ್ ವಿಧಾನದಿಂದ ಸಸ್ಯಾಭಿವೃದ್ಧಿ : ಮಳೆಯ ನೀರು ಒಳಗೆ ಬಾರದಂತೆ ಚಾವಣಿಯನ್ನು ಹೊಂದಿರುವ ನರ್ಸರಿ ಕೊಠಡಿಯನ್ನು ಸಿದ್ಧಪಡಿಸಿ ಕರಿಮೆಣಸಿನ ಗಿಡಗಳನ್ನು 500 ಗ್ರಾಂ ಮಣ್ಣಿನ ಮಿಶ್ರಣವನ್ನು ಹಿಡಿಯುವಂಥ ಚೀಲದಲ್ಲಿ ನಾಟಿ ಮಾಡಿ ತಾಯಿ ಗಿಡಗಳನ್ನ ಬೆಳೆಸಿಕೊಳ್ಳಬೇಕು. ತಾಯಿ ಗಿಡದ ಬಳ್ಳಿ ಬೆಳೆದಂತೆಲ್ಲ 20 x 20 ಸೆ.ಮೀ. ಅಳತೆಯ ಚೀಲದಲ್ಲಿ ಮಣ್ಣಿನ ಮಿಶ್ರಣವನ್ನು ತುಂಬಿ ತಾಯಿ ಗಿಡದ ಪ್ರತಿ ಗಿಣ್ಣುವಿಗೆ ಇಡಬೇಕು. ಬಳ್ಳಿಯು ಮಣ್ಣಿನ ಮಿಶ್ರಣವನ್ನು ತಾಗುವಂತೆ ತೆಂಗಿನ ಗರಿಯ ದಿಂಡನ್ನು ಬಳ್ಳಿ ಮೇಲೆ ಏಳದಂತೆ ಅದುಮಿ ಇಡಬೇಕು ಹೀಗೆ ಮಾಡಿದಾಗ ಪ್ರತಿ ಗಿಣ್ಣುವಿನಿಂದ ಬೇರು ಬರಲು ಪ್ರಾರಂಭಿಸುವುದು. ಬಳ್ಳಿಯು ಬೆಳೆದಂತೆ ಮುಂದಿನ ಗಿಣ್ಣಿಗೆ ಮಿಶ್ರಣ ತುಂಬಿದ ಚೀಲವನ್ನು ಇಡುತ್ತಾ ಪುನಾರಾವರ್ತಿಸಬೇಕು. ನಾಟಿ ಮಾಡಿದ 3 ತಿಂಗಳಲ್ಲಿ 10-12 ಗಿಣ್ಣುಗಳು ಪ್ರತಿ ಚೀಲದಲ್ಲಿ ಬೇರುಗಳನ್ನು ಬಿಡುವುದು. ಬೇರು ಬಿಟ್ಟ ಅನಂತರ 2 ಗಿಣ್ಣುಗಳ ಮಧ್ಯ ಕತ್ತರಿಸಿ ಚೀಲಗಳನ್ನು ಬೇರೆ ಜೋಡಿಸಬೇಕು. ಕತ್ತರಿಸಿದ ಬಳಿಕ ಬೇರು ಬಂದ (ಬುಡ) ಭಾಗವನ್ನು ಒಂದು ಇಂಚು ಕೆಳಗೆ ಒತ್ತಿ ಗಿಡವನ್ನು ನೆಟ್ಟಗೆ ನಿಲ್ಲುವಂತೆ ಮಾಡಿದರೆ ಗಿಣ್ಣುವಿನಿಂದ ಚಿಗುರು ಬಂದು ಗಿಡ (ನೆಡಲು) ನಾಟಿ ಮಾಡಲು ಯೋಗ್ಯವಾಗುತ್ತದೆ. ಈ ರೀತಿ ಒಂದು ತಾಯಿ ಗಿಡದಿಂದ 10-12 ಸಸಿಗಳನ್ನು ಪಡೆಯಬಹುದು.

ಕಂದಕ ವಿಧಾನ : ಅಧಿಕ ಇಳುವರಿ ಕೊಡುವ ಆರೋಗ್ಯವಂತ ತಾಯಿ ಗಿಡದ ಬುಡದ ಭಾಗದಲ್ಲಿ ನೆಲದ ಮೇಲೆ ಹಬ್ಬಿರುವ ಬಳ್ಳಿಗಳನ್ನು 5-6 ಗಿಣ್ಣುಗಳಿರುವಂತೆ ಕತ್ತರಿಸಿ, ನಾಟಿ ಮಾಡುವಂತಹ ಮರದ ಬುಡದಲ್ಲಿ ಉತ್ತರಾಭಿಮುಖವಾಗಿ ನೆಡಬೇಕು. ನೆಡುವ ಮೊದಲು ಗುಂಡಿಗೆ ಕೊಟ್ಟಿಗೆ ಗೊಬ್ಬರ, ಬೇವಿನ ಹಿಂಡಿ ಮತ್ತು ಕಾಡು ಮಣ್ಣನ್ನು ತುಂಬಿ, ಕತ್ತರಿಸಿದ ಗಿಡವನ್ನು ತ್ವರಿತವಾಗಿ ಬೇರನ್ನು ಬಿಡಲು ಕಾಂಡದ ಬುಡ ಭಾಗವನ್ನು ಇಂಡೂಲ್ ಭ್ಯೂಟ್ರಿಕ್ ಆಮ್ಲದಿಂದ ಉಪಚರಿಸಿ ಮೇ-ಜೂನ್ ತಿಂಗಳಲ್ಲಿ ನೆಡಬೇಕು.

ನರ್ಸರಿಯಲ್ಲಿ ಬಾಧಿಸುವ ರೋಗಗಳು :

ಫೈಟಾಪ್ತರಾ ಶಿಲೀಂಧ್ರ ರೋಗಗಳು : ಈ ರೋಗಗಳು ನರ್ಸರಿಯಲ್ಲಿಯ ಕರಿಮೆಣಸಿನ ಗಿಡಗಳ ಎಲೆ, ಕಾಂಡ ಮತ್ತು ಬೇರುಗಳ ಮೇಲೆ ಕಾಣಿಸಿಕೊಳ್ಳುವುದು. ಪ್ರಾರಂಭದಲ್ಲಿ ಎಲೆಗಳ ಮೇಲೆ ಕಪ್ಪು ಚುಕ್ಕೆಯಂತೆ ಕಾಣಿಸಿಕೊಂಡು ಹಳದಿ ವರ್ಣದ ಅಂಚಿನಿಂದ ಕೂಡಿರುತ್ತದೆ. ರೋಗ ಜಾಸ್ತಿಯಾದಂತೆ ಚುಕ್ಕೆಗಳು ದೊಡ್ಡದಾಗಿ ಎಲೆ ಉದುರುವುವು. ನೀರು ತುಂಬಿದ ಕಪ್ಪು ಚುಕ್ಕೆಗಳು ಕಾಂಡದ ಮೇಲೆ ಕಾಣಿಸಿಕೊಂಡು ಸುಟ್ಟಂತೆ ಮಚ್ಚೆಗಳಾವುದು. ಬೇರಿಗೆ ತಗುಲಿದ ಶಿಲೀಂಧ್ರಗಳಿಂದ ಪೂರ್ಣ ಕೊಳೆಯಲು ಪ್ರಾರಂಭವಾಗುವುದೇ ಪ್ರಮುಖ ಲಕ್ಷಣ. ಇದರ ಹತೋಟಿಗೆ ಶೇ. ಒಂದರ ಬೋರ್ಡೊ ದ್ರಾವಣದಿಂದ ಅಥವಾ ಶೇ. 0.2ರ ತಾಮ್ರದ ಆಕ್ಸಿಕ್ಲೋರೈಡ್‌ನಿಂದ ಬುಡದ ಮಣ್ಣನ್ನು ನೆನೆಸುವುದು.

ಚಿಬ್ಬುರೋಗ : ಈ ರೋಗವು ಕೂಲ್ಯೆಟೋಟ್ರೇಕಂ ಗ್ಲಿಯೋಸ್ಪೋರೈಡಿಸ್ ಎಂಬ ಶಿಲೀಂಧ್ರ ರೋಗಾಣುವಿನಿಂದ ಬರುತ್ತದೆ.

ಈ ಶಿಲೀಂಧ್ರವು ಎಲೆಗೆ ತಾಕುವುದರಿಂದ ಹಳದಿ ಕಂದು ಬಣ್ಣದ ಚುಕ್ಕೆ ಉಂಟಾಗಿ ಕ್ರಮೇಣ ಸುಟ್ಟಂತಾಗಿ ರಂಧ್ರವಾಗುವುದು. ಇದನ್ನು ನಿಯಂತ್ರಿಸಲು ಶೇ. 1 ರ ಬೋರ್ಡಾ ಮಿಶ್ರಣ ಅಥವಾ ಶೇ. 0.1 ಕಾರ್ಬೂಡೈಜಿಮ್ ಸಿಂಪಡಣೆಯಿಂದ ಹತೋಟಿಗೆ ಬರುತ್ತದೆ.

ಎಲೆ ಕೊಳೆರೋಗ : ಈ ರೋಗವು ರೈಜೋಕ್ಟಾನೀಯ ಸೋಲೋನಿ ಎಂಬ ಶಿಲೀಂಧ್ರದಿಂದ ಬರುವುದು. ಈ ಶಿಲೀಂಧ್ರವು ಪ್ರಮುಖವಾಗಿ ಎಲೆ ಮತ್ತು ಕಾಂಡವನ್ನು ಬಾಧಿಸುವುದು. ಗುಂಡಿಯಂತಿರುವ ಬೂದು ವರ್ಣದ ಚುಕ್ಕೆಗಳು ಹಾಗೂ ದಾರದಂತಿರುವ ಮೈಸಿಲೀಯಗಳು ಎಲೆಯ ಮೇಲೆ ಕಾಣಿಸಿಕೊಳ್ಳುವುದು. ಎಲೆಗಳು ಒಂದಕ್ಕೊಂದು ಅಂಟಿಕೊಳ್ಳುವುದು. ಶೇ.1ರ ಬೊರ್ಡೂ ಮಿಶ್ರದ ಸಿಂಪಡಣೆಯಿಂದ ಈ ರೋಗವು ಹತೋಟಿಯಾಗುವುದು.

ಜಂತು ಹುಳುಗಳ ಬಾಧೆ : ಬೇರು ಗಂಟು ಮತ್ತು ಬೇರು ಕೊರೆಯುವ ಜಂತು ಹುಳಗಳು, ಬೇರುಗಳಲ್ಲಿ ಗಂಟು ಮತ್ತು ಗಾಯ ಮಾಡುವುದರಿಂದ ಗಿಡದ ಬೆಳವಣಿಗೆ ತೊಂದರೆಯಾಗುವುದು. ಇದರ ಹತೋಟಿಗೆ ಮುನ್ಸೂಚನೆಯಾಗಿ 1 ಗ್ರಾಂ ಫೊರೆಟ್ (Phorate) 10 ಗ್ರಾಂ ಅಥವಾ 3 ಗ್ರಾಂ ಕಾರ್ಬೋಫ್ಯೂರಾನ್ ಮತ್ತು ಮಣ್ಣಿನ ಮಿಶ್ರಣದೊಂದಿಗೆ ಪಾಲಿಥೀನ್ ಚೀಲದಲ್ಲಿ ಸೇರಿಸುವುದು.

ತೋಟಗಳ ನಿರ್ಮಾಣ ಮತ್ತು ಬೇಸಾಯ ಕ್ರಮ

ಸ್ಥಳದ ಆಯ್ಕೆ : ಕರಿಮೆಣಸು ತೋಟ ಮಾಡಲು ಸ್ವಲ್ಪ ಇಳಿಜಾರು ಇರುವ ಪ್ರದೇಶವನ್ನು ಆಯ್ಕೆ ಮಾಡುವುದು ಯುಕ್ತ. ಇಳಿಜಾರು ದಿಕ್ಕು ದಕ್ಷಿಣಾಭಿಮುಖವಾಗಿದ್ದಲ್ಲಿ ಆ ಸ್ಥಳ ಯೋಗ್ಯವಲ್ಲ, ಇಳಿಜಾರಿನ ಕೆಳಗಿನ ಅರ್ಧ ಭಾಗ ಉತ್ತರಾಭಿಮುಖವಾಗಿದ್ದು ಇಲ್ಲವೆ ಉತ್ತರ ಪೂರ್ವಾಭಿಮುಖವಾಗಿದ್ದಲ್ಲಿ ಅಂಥ ಪ್ರದೇಶಗಳನ್ನು ನಾಟಿ ಮಾಡಲು ಆಯ್ಕೆ ಮಾಡಬೇಕು. 3 x 3 ಮೀಟರ್ ಅಂತರದಲ್ಲಿ ಆಧಾರ ಮರಗಳಾಗಿ ಹಾಲವಾಣ ಅಥವಾ ಗ್ರೀವಿಲ್ಲಿಯ ರೋಬಸ್ಟಾ ಗಿಡಗಳನ್ನು ಬೆಳೆಸಬೇಕು. 3 ವರ್ಷದ ಅನಂತರ ಬಳ್ಳಿ (ಗಿಡ)ಗಳನ್ನು ಆಧಾರ ಮರಗಳಿಂದ 1 ಅಡಿ ಅಂತರದಲ್ಲಿ ನಾಟಿ ಮಾಡಬೇಕು. ಗಿಡಗಳನ್ನು ನಾಟಿ ಮಾಡಲು ಮೇ - ಜೂನ್ ತಿಂಗಳು ಉತ್ತಮ. ನಾಟಿ ಮಾಡುವ ಗುಂಡಿಗೆ 150 ಗ್ರಾಂ ಶಿಲಾರಂಜಕ, 1ಕೆ.ಜಿ. ಬೇವಿನ ಹಿಂಡಿ ಜೈವಿಕ ಸೂಕ್ಷ್ಮಾಣುಗಳನ್ನು ಗೊಬ್ಬರವನ್ನು ಕೊಡಬೇಕು.

ನಾಟಿ ಮಾಡಿದ ಬಳ್ಳಿಗಳು ಬೆಳೆದಂತೆಲ್ಲಾ ಅವುಗಳನ್ನು ಆಧಾರ ಮರಗಳಿಗೆ ಬಾಳೆ ನಾರಿನಿಂದ ಇಲ್ಲವೆ ಸೆಣಬಿನ ದಾರದಿಂದ 1-2 ವರ್ಷದ ತನಕ ಕಟ್ಟುತ್ತಿರಬೇಕು. ಪ್ರಾರಂಭದ 1-2 ವರ್ಷಗಳ ಕಾಲ ಬೇಸಗೆಯಲ್ಲಿ ಬಿಸಿಲಿನ ತಾಪ ಬೀಳದಂತೆ ನೆರಳನ್ನು ಒದಗಿಸಬೇಕು. ಆಧಾರ ಮರದ ರೆಂಬೆಗಳನ್ನು ನಿಯಮಿತವಾಗಿ ಕತ್ತರಿಸಿ ತೆಗೆಯಬೇಕು. ಇದರಿಂದ ಬಳ್ಳಿಗಳಿಗೆ ಹಿತಕರನಾದ ನೆರಳನ್ನು ಒದಗಿಸುವುದರ ಜೊತೆಗೆ ಬಳ್ಳಿ ನೇರವಾಗಿ ಬೆಳೆಯಲು ಸಹಕಾರಿಯಾಗುವುದು.

ಗೊಬ್ಬರ : ಕರಿಮೆಣಸಿನ ಬಳ್ಳಿ ಉತ್ತಮವಾಗಿ ಬೆಳೆಯಲು ಕೊಟ್ಟಿಗೆ ಗೊಬ್ಬರ ತುಂಬ ಸಹಕಾರಿ. ಪ್ರತಿ ಗಿಡಕ್ಕೆ ಮೇ ತಿಂಗಳಲ್ಲಿ 10ಕೆ.ಜಿ.ಯಷ್ಟು ಕೊಟ್ಟಿಗೆ ಅಥವಾ ಕಾಂಪೋಸ್ಟ್ ಗೊಬ್ಬರ ಹಾಕುವುದು ತುಂಬ ಪರಿಣಾಮಕಾರಿ. ಅಲ್ಲದೆ 50 : 50 : 100 (NPK) ಗ್ರಾಂ ಸಾರಜನಕ ರಂಜಕ ಮತ್ತು ಪೊಟಾಷಿಯಂ ಮಿಶ್ರಿತ ರಾಸಾಯನಿಕ ಗೊಬ್ಬರವನ್ನು 3 ವರ್ಷ ಅನಂತರ ಬಳ್ಳಿಗಳಿಗೆ (ಮೇ - ಜೂನ್ ಮತ್ತು ಆಗಸ್ಟ್ - ಸೆಪ್ಟೆಂಬರ್) ಎರಡು ಕಂತುಗಳಲ್ಲಿ ಒದಗಿಸುವುದು ಉತ್ತಮ.

ಸಸ್ಯಸಂರಕ್ಷಣೆ : ರೋಗಗಳು :

1) ಬುಡಕೊಳೆ ರೋಗ : ಇದು ಹೆಚ್ಚು ಬೆಳೆ ನಷ್ಟ ಮಾಡುವಂತಹ ರೋಗವಾಗಿದ್ದು, ಮುಂಗಾರು ಮಳೆಗಾಲದಲ್ಲಿ ಹೆಚ್ಚಾಗಿ ಬಾಧಿಸುವುದು. ಈ ರೋಗ ತಗುಲಿದ ಬಳ್ಳಿಯ ಎಲೆಗಳ ಮೇಲೆ ಒಂದು ಅಥವಾ ಹೆಚ್ಚಿನ ಕಪ್ಪು ಚುಕ್ಕೆಗಳು ಕಾಣಿಸಿಕೊಳ್ಳುವುದು. ರೋಗ ಬಾಧೆ ಜಾಸ್ತಿಯಾದಂತೆ ಎಲೆಯ ಅಂಚಿನಲ್ಲಿ ಹಬ್ಬಿ ಎಲೆಗಳು ಉದುರುವುದು. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಮಗ್ರ ರೋಗ ನಿರ್ವಹಣ ಕ್ರಮಗಳನ್ನು ಅನುಸರಿಸುವುದು ಒಳಿತು. ರೋಗಾಣು ಹೆಚ್ಚಾದಂತೆ ಬೇಗ ಹರಡುವುದನ್ನು ತಡೆಗಟ್ಟಲು ಈ ರೋಗಕ್ಕೆ ತುತ್ತಾದ ಕೊಂಬೆ, ರೆಂಬೆ, ಎಲೆ, ಬೇರು, ಬಳ್ಳಿಗಳನ್ನು ಕತ್ತರಿಸಿ ನಾಶಪಡಿಸಬೇಕು ; ತೋಟದಲ್ಲಿ ನೀರು ಚೆನ್ನಾಗಿ ಬಸಿದು ಹೋಗುವಂತೆ ಸಾಕಷ್ಟು ಬಸಿಕಾಲುವೆ ಮಾಡಬೇಕು. ಆಧಾರ ಮರಗಳಲ್ಲಿ ಬೆಳೆದಿರುವ ಹೆಚ್ಚುವರಿ ಕೊಂಬೆಗಳನ್ನು ಮುಂಗಾರು ಮಳೆ ಪ್ರಾರಂಭವಾಗುದಕ್ಕೆ ಮೊದಲು ಕತ್ತರಿಸಿ ವಾತಾವರಣದ ತೇವಾಂಶ ಕಡಿಮೆ ಮಾಡಬೇಕು. ಅನಂತರ ಮೇ - ಜೂನ್ ತಿಂಗಳಲ್ಲಿ ಪ್ರತಿಬಳ್ಳಿಯ ಬುಡ 45 ರಿಂದ 50 ಸೆಂ.ಮೀ. ಸುತ್ತಳತೆಯನ್ನು ಶೇ. 0.2ರ ತಾಮ್ರದ ಆಕ್ಸಿಕ್ಲೋರೈಡ್ ದ್ರಾವಣದಿಂದ (ನೆನೆಸಬೇಕು) ತೋಯಿಸಬೇಕು ; ಬಳ್ಳಿಯ ಮೇಲ್ಮೈಯನ್ನು ಶೇ. 1ರ ಬೋರ್ಡೋ ದ್ರಾವಣವನ್ನು ಮೇ-ಜೂನ್ ಮತ್ತು ಆಗಸ್ಟ್ - ಸೆಪ್ಟೆಂಬರ್‌ನಲ್ಲಿ ಸಿಂಪರಣೆ ಮಾಡಬೇಕು.

ನಿಧಾನ ಸೊರಗು ರೋಗ : ಕರಿಮೆಣಸಿನ ಬಳ್ಳಿಗೆ ಅಧಿಕವಾಗಿ ಹಾನಿಮಾಡುವಂತಹ ರೋಗ. ಎಲೆ ಹಳದಿಯಾಗುವುದು, ಉದುರುವುದು ಹಾಗೂ ತುದಿಯಿಂದ ಬುಡದ ಕಡೆಗೆ ಒಣಗುವಿಕೆ ಈ ರೋಗದ ಪ್ರಮುಖ ಲಕ್ಷಣ. ಪರಾವಲಂಬಿ ಜಂತು ಹುಳದ ಬಾಧೆಯಿಂದ ಬೇರುಗಳು ಕೊಳೆತು, ಮಣ್ಣಿನಲ್ಲಿ ತೇವಾಂಶ ಕಡಿಮೆಯಾದಂತೆ ಅಕ್ಟೋಬರ್ ತಿಂಗಳಿನ ಅನಂತರ ಎಲೆಗಳು ಹಳದಿಯಾಗುವುದು. ಇದನ್ನು ತಡೆಗಟ್ಟಲು ರೋಗಕ್ಕೆ ತುತ್ತಾದ ಬಳ್ಳಿಯನ್ನು ತೆಗೆದು ನಾಶಪಡಿಸುವುದು.

ಹೂಗೊಂಚಲು ಉದುರುವಿಕೆ : ಹೂಗೊಂಚಲು ಉದುರುವ ಶಾರೀರಿಕ ಪ್ರವೃತ್ತಿಯನ್ನು ಹೆಚ್ಚಾಗಿ ಪಣಿಯೂರ್ - 1ರ ತಳಿಯಲ್ಲಿ ಎತ್ತರದ ಪ್ರದೇಶಗಳಾದ ಕೊಡಗು ಮತ್ತು ಕೇರಳದ ಇಡುಕ್ಕಿ ಜಿಲ್ಲೆಗಳಲ್ಲಿ ಕಾಣಬಹುದು. ಈ ಪ್ರವೃತ್ತಿಯು ಪ್ರಮುಖವಾಗಿ ಮುಂಗಾರು ಮಳೆ ಜೂನ್ - ಜುಲೈಯಲ್ಲಿ ತಡವಾಗಿ ಬೀಳುವುದರಿಂದ ತೇವಾಂಶ ಕಡಿಮೆಯಾಗಿ ಹೂಗೊಂಚಲು ಹಳದಿಯಾಗಿ ಉದುರುವುದು. ಅಲ್ಲದೆ ಹೂಗೊಂಚಲುಗಳಲ್ಲಿ ಹೆಚ್ಚಾಗಿ ಹೆಣ್ಣು ಹೂಗಳಿದ್ದು ದ್ವಿಲಿಂಗ ಪುಷ್ಪಗಳಿರುವುದು ಕಡಿಮೆ. ಪರಾಗಸ್ಪರ್ಶ ಸರಿಯಾಗಿ ನಡೆಯದೆ ಹೂಗೊಂಚಲು ಉದುರುವುದು. ಮಾರ್ಚ್ 2ನೇ ವಾರದಲ್ಲಿ ಉತ್ತಮ ನೀರಾವರಿ ಮಾಡಿ, ಮುನ್ಸೂಚನೆಯಾಗಿ ಶೇ. 1ರ ಬೋರ್ಡೋ ಮಿಶ್ರಣ ಅಥವಾ ಶೇ. 0.2ರ ಕಾರ್ಬೂನ್‌ಡೈಜಿಮ್ ಸಿಂಪರಣೆ ಮಾಡುವುದಿಂದ ಹೂಗೊಂಚಲು ಹೆಚ್ಚಾಗಿ ಉದುರುವ ಸಮಸ್ಯೆಯನ್ನು ಹೋಗಲಾಡಿಸಬಹುದು.

ಪೊಳ್ಳು ರೋಗ : ಈ ರೋಗವು ಕೊಲ್ಲೆಟೋಜಟ್ರೈಕಮ್ ಗ್ಲಿಯೋಸ್ಪೊರಾಯಿಡ್ಸ್ ಎಂಬ ಶಿಲೀಂಧ್ರ ರೋಗಾಣುವಿನಿಂದ ಬರುವುದು. ಈ ರೋಗ ತಗುಲಿದ ಕಾಳಿನ ಮೇಲ್ಮೈಯ ಕವಚದ ಮೇಲೆ ಸೀಳು ಬಿರುಕುಗಳು ಬಿಟ್ಟಿರುತ್ತವೆ. ಈ ರೋಗವು ಪ್ರಮುಖವಾಗಿ ಮುಂಗಾರು ಮಳೆಯ ಅಂತ್ಯ ಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಈ ರೋಗದ ಬಾಧೆಯಿಂದ ಕಾಳಿನ ಬೆಳೆವಣಿಗೆ ಕುಂಠಿತವಾಗುತ್ತದೆ. ಇದರ ಹತೋಟಿಗೆ ಶೇಕಡ 1ರ ಬೋರ್ಡೋ ಮಿಶ್ರಣವನ್ನು ಸಿಂಪರಣೆ ಮಾಡುವುದು ಉತ್ತಮ.

ಫಿಲ್ಲೋಡಿ ರೋಗ : ಈ ರೋಗವು ಪೈಟೋ ಪ್ಲಾಸ್ಮಾ ಸೂಕ್ಷ್ಮಾಣುವಿನಿಂದ ಬರುವಂತಹದು. ಈ ರೋಗಕ್ಕೆ ತುತ್ತಾದ ಬಳ್ಳಿಯ ಹೂಗಳು ವಿಕೃತಾಕಾರಕ್ಕೆ ತಿರುಗುವುದು. ಮೊಗ್ಗುಗಳು ಹೂಗಳಾಗಿ ಅರಳುವ ಬದಲು ಕಿರಿದಾಗಿ ಪರಿವರ್ತನೆಯಾಗುವುದು. ರೋಗದ ಬಾಧೆ ಜಾಸ್ತಿಯಾದಂತೆ ಎಲೆಗಳ ಗಾತ್ರ ಚಿಕ್ಕದಾಗಿ, ಅಂತರ ಗಿಣ್ಣುಗಳು ಚಿಕ್ಕದಾಗಿ ಎಲೆಗಳು ವರ್ಣರಹಿತವಾಗಿ, 2-3 ವರ್ಷದಲ್ಲಿ ಬಳ್ಳಿಯು ನಾಶವಾಗುವುದು. ಈ ರೋಗವು ಹರಡದಂತೆ ನಿಯಂತ್ರಿಸಲು ರೋಗಕ್ಕೆ ತುತ್ತಾದ ಬಳ್ಳಿಯನ್ನು ತೆಗೆದು ಹಾಕಬೇಕು.

ಜಿ.ಜೆ.ಟಿ.

ಕರುಗಳ ಪೋಷಣೆ ಹಸು ಅಥವಾ ಎಮ್ಮೆಯ ಕರುವನ್ನು, ಅದು ತಾಯಿಯ ಗರ್ಭದಲ್ಲಿರುವಾಗಲೇ ಎಚ್ಚರಿಕೆಯಿಂದ ಪಾಲಿಸಬೇಕಾಗುತ್ತದೆ. ಗರ್ಭಧಾರಣೆಯ ಆರಂಭದಲ್ಲಿ ಹಸುವಿಗೆ ಕೆಮ್ಮಣ್ಣಿನ ನೀರು ಕುಡಿಸುವುದು, ಕೆರೆ ಕುಂಟೆಗಳಲ್ಲಿ ಒಳಗಿಳಿಸಿ ಪೂರ್ಣ ಮುಳುಗುವ ತನಕ ಓಡಾಡಿಸಿ ಶರೀರ ತಂಪಾಗುವಂತೆ ಮಾಡಬೇಕು. ತಾಯಿ ಹಸುವಿಗೆ ವಿಶೇಷವಾದ ಆಹಾರವನ್ನು ಸಮ ಪ್ರಮಾಣದಲ್ಲಿ ಒದಗಿಸಬೇಕು. ರೋಗ - ರುಜಿನಗಳು ಸೋಕದಂತೆ ಎಚ್ಚರಿಕೆ ವಹಿಸಬೇಕು. ಸ್ವಲ್ಪ ದಿವಸಗಳ ಕಾಲ ಕೆಲಸ ಕಾರ್ಯಗಳಿಗೆ ಈ ಹಸುವನ್ನು ಬಳಸುವಂತಿಲ್ಲ. ಹೀಗೆ ಕರು ಹಾಕುವವರೆಗೂ ಹಸುವನ್ನು ಪೋಷಣೆ ಮಾಡಿದರೆ ಹುಟ್ಟುವ ಕರು ದಷ್ಟ ಪುಷ್ಟವಾಗಿ ಇರುತ್ತದೆ. ಗರ್ಭಧರಿಸಿದ 9 ತಿಂಗಳ ಅನಂತರ ಕರುವನ್ನು ಹಾಕುತ್ತದೆ. ಕರು ಹುಟ್ಟಿದ ಕೂಡಲೇ ಬಾಯಲ್ಲಿ, ಮೂಗಿನಲ್ಲಿ ಇರುವ ಲೋಳೆ, ಕಫ, ಶ್ಲೇಷ್ಮ ಎಲ್ಲವನ್ನು ಒರೆಸಿ, ಕರುವಿಗೆ ಸರಾಗವಾಗಿ ಉಸಿರಾಡುವಂತೆ ಮಾಡಬೇಕು.

ಕೆಲವೊಮ್ಮೆ ಕರು ಉಸಿರಾಡದೇ ಇದ್ದಾಗ ತಲೆಕೆಳಗಾಗುವಂತೆ ಹಿಂಗಾಲು ಹಿಡಿದು ಕರುವನ್ನು ಮೇಲೆತ್ತಿ ಹಿಡಿಯುತ್ತಾರೆ. ಇಲ್ಲವೇ ಪಕ್ಕೆಯನ್ನು ಉಜ್ಜಿ ಕೃತಕ ಉಸಿರಾಟ ಮಾಡಿಸಬೇಕು. ಇದರಿಂದ ಕರು ಕೂಡಲೆ ಉಸಿರಾಡುತ್ತದೆ. ಕರು ಸರಾಗವಾಗಿ ಉಸಿರಾಡುತ್ತದೆ ಎಂದು ತಿಳಿದ ಮೇಲೆ, ಹೊಕ್ಕಳು ಬಳ್ಳಿಯ ಎರಡು ಅಂಗುಲ ಬಿಟ್ಟು ಸ್ವಲ್ಪ ಭಾಗವನ್ನು ಕತ್ತರಿಸಿ, ರಕ್ತ ಹೊರಬರದಂತೆ, ಗಂಟು ಹಾಕುತ್ತಾರೆ. ಅನಂತರ ಕರುವನ್ನು ತಾಯಿಯ ಬಳಿ ಬಿಟ್ಟರೆ, ಅದು ಮೈಯೆಲ್ಲಾ ನೆಕ್ಕಿ ಕರುವನ್ನು ಶುದ್ಧಗೊಳಿಸುತ್ತದೆ. ಕೆಲವು ಹಸುಗಳು ಮೈಯನ್ನು ನೆಕ್ಕದಿದ್ದರೆ, ಕರುವಿನ ಮೈಮೇಲೆ ಸ್ವಲ್ಪ ಉಪ್ಪನ್ನು ಉದುರಿಸುತ್ತಾರೆ ಅಥವಾ ಪೋಷಕರೇ ಒರೆಸುತ್ತಾರೆ. ಹಸುವಿನ ಕೆಚ್ಚಲನ್ನು ತೊಳೆದು ಕರುವಿಗೆ ಹಾಲುಕುಡಿಯಲು ಬಿಡುತ್ತಾರೆ. ಕರು ತಾನಾಗೇ ಹಾಲು ಕುಡಿಯದಿದ್ದರೆ ಹಾಲು ಕುಡಿಯುವುದನ್ನು ಕಲಿಸುತ್ತಾರೆ. ಎರಡು ಗಂಟೆಯ ಅನಂತರವು ಕರು ಮಲವಿಸರ್ಜನೆ ಮಾಡದಿದ್ದರೆ ಕೃತಕ ವಿಧಾನದಿಂದ ಭೇದಿ ಮಾಡಿಸಬೇಕು. ಅದರ ಕಾಲುಗಳ ಕೊಳಗದ (ಖುರಾ)ಮುಂತುದಿಯನ್ನು ಸಮನಾಗಿ ಕತ್ತರಿಸಬೇಕು ಹಾಗೂ ನಿಲ್ಲಲ್ಲು ಆಧರಿಸಿ ಸಹಾಯ ಮಾಡಬೇಕು.

ವಿಶೇಷ ಆರೈಕೆ : ಕರು ಹುಟ್ಟಿದ ಹದಿನೈದರಿಂದ ಮೂವತ್ತು ನಿಮಿಷದೊಳಗಾಗಿ ಹಸುವಿನ ಹಾಲನ್ನು ಕುಡಿಸಬೇಕು. ಮೂರು ದಿನ ಹಸುವಿನ ಜೊತೆಯಲ್ಲಿಯೇ ಬಿಡಬೇಕು. ಮೊದಲ ಗಿಣ್ಣು ಹಾಲಿನಲ್ಲಿ ಹೆಚ್ಚು ಪೋಷಕಾಂಶಗಳಿದ್ದು ಅದು ಹಳದಿ ಬಣ್ಣದಿಂದ ಕೂಡಿರುತ್ತದೆ. ಸಸಾರಜನಕಾಂಶಗಳು, ಅನ್ನಾಂಗಗಳು, ದೇಹಪೋಷಕ ಖನಿಜಾಂಶಗಳು, ಜೊತೆಗೆ ಪ್ರತಿ ವಿಷವಸ್ತುಗಳಿರುತ್ತವೆ. (ರೋಗನಿರೋಧಕ). ಇಂತಹ ಹಾಲನ್ನು ಹೆಚ್ಚು ಕೊಟ್ಟಷ್ಟು ಕರು ದೃಢಕಾಯವಾಗಿ ರೋಗಮುಕ್ತವಾಗಿ ಬೆಳೆಯುತ್ತದೆ.

ಕರು ಸಾಕುವ ಕೋಣೆ : ಇದು ಹೆಚ್ಚು ಗಾಳಿ, ಬೆಳಕುಗಳಿಂದ ಕೂಡಿರಬೇಕು. ರೋಗ, ರುಜಿನಗಳು ಬಾರದಂತೆ ಗಂಜಳವು ನಿಲ್ಲದಂತೆ ತುಸು ಇಳಿಜಾರಾಗಿ ಕಲ್ಲನ್ನು ಹಾಕಬೇಕು. ಗಾರೆ ನೆಲವಾದರೂ ಹೀಗೆ ಇರಬೇಕು.

ಕರುಗಳಿಗೆ ನೆಕ್ಕುವ ಚಟವಿರುವುದರಿಂದ ಬಾಯಿಕುಕ್ಕೆಯನ್ನು ಅಳವಡಿಸಬೇಕು. ಇಲ್ಲವೆ ಶುದ್ಧವಾದ ಜಾಗದಲ್ಲಿ ಕಟ್ಟಬೇಕು. ಕರುವಿಗೆ ಅಗತ್ಯವಾದ ಆಹಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಸಮಯಕ್ಕೆ ಸರಿಯಾಗಿ ಅದಕ್ಕಾಗಿ ನಿರ್ಮಿಸಿದ ತೊಟ್ಟಿಯಲ್ಲಿಯೇ ಕೊಡಬೇಕು. ಒಣಹುಲ್ಲಿನ ಮೇಲೆ ಮಲಗಿಸಬೇಕು.

ಕರುವಿನ ಬೆಳೆವಣಿಗೆಗನುಗುಣವಾಗಿ ಪೋಷಣೆಯೂ ಇರುತ್ತದೆ. ಕರು ಬೆಳೆದಂತೆ ಕೋಡುಗಳು ಮೂಡುತ್ತವೆ. ಇವು ದನಗಳ ಅಲಂಕಾರಕ್ಕಲ್ಲದೆ ಸ್ವರಕ್ಷಣೆಗೂ ಪ್ರಕೃತಿದತ್ತವಾದಂಥದು. ಹೆಣ್ಣು ಕರುವಾಗಿದ್ದರೆ ಕೋಡುಗಳ ಬಗ್ಗೆ ಹೆಚ್ಚು ನಿಗಾವಹಿಸುವುದಿಲ್ಲ. ಗಂಡು ಕರುವಾಗಿದ್ದಲ್ಲಿ ಕೋಡುಗಳನ್ನು ನಿರ್ದಿಷ್ಟ ಆಕಾರದಲ್ಲಿ ಬೆಳೆಯುವಂತೆ ಮಾಡಲು ಉಜ್ಜಿ ಆಕಾರವನ್ನು ಕೊಡುವರು ಅಥವಾ ಕೊಂಬುಗಳು ಬೇಡವೆನಿಸಿದಲ್ಲಿ ಸುಡುವುದು.

ಹೆಣ್ಣು ಕರು ಬೆಳೆದು ಬೆದೆಗೆ ಬರುವ ಸಂದರ್ಭಕ್ಕೆ ಒಳ್ಳೆಯ ಹೋರಿಯೊಂದಿಗೆ ಕೂಡಿಸುವುದರಿಂದ ಸಂತಾನವನ್ನು ನಿರೀಕ್ಷಿಸಬಹುದು.

ರೋಗರುಜಿನಗಳು : ಕರು ಮಂಕಾದಾಗ ರೋಗ ತಾಕಿದೆ ಎಂದರ್ಥ. ಕಣ್ಣು ಕಳೆಗುಂದುವುದು, ಕಿವಿ ಜೋತು ಬೀಳುವುದು, ನಾಲಗೆ ಒಣಗುವುದು, ಚರ್ಮವು ಸುಕ್ಕುವುದು, ನಾಡಿಬಡಿತ ಹೆಚ್ಚಾಗಿ ಉಸಿರಾಟ ಏರುಪೇರಾಗುವುದು. ಹೀಗೆ ಎಳಗರುವಿಗೆ ರೋಗಗಳು ಅಧಿಕ, ಉಣ್ಣೆ, ಕೀಟ, ಸೊಳ್ಳೆ, ಸೂಕ್ಷ್ಮ ಜೀವಿಗಳಿಂದ ಬರುವ ರೋಗಗಳಿಂದ ಕರು ಒಮ್ಮೊಮ್ಮೆ ಅಸುನೀಗುವುದುಂಟು. ಇದಲ್ಲದೆ ದೊಡ್ಡ ರೋಗ, ಗಳಲೆ, ಕ್ಷಯ, ನೆರಜಿ ಮೊದಲಾದ ಪಿಡುಗುಗಳು ಕರುವನ್ನು ಬಾಧಿಸುತ್ತದೆ.

ಕರು ಸಾಕುವುದರಲ್ಲಿ ಮೂರು ವಿಧಾನಗಳಿವೆ.

1. ಸಾಂಪ್ರದಾಯಿಕ ವಿಧಾನ : ಕರುವನ್ನು ಹಸುವಿನ ಜೊತೆಯಲ್ಲಿ ಇಟ್ಟು ಅದರ ಕೆಚ್ಚಲಿನಿಂದ ಹಾಲುಣಿಸುವುದು.

2. ಆಧುನಿಕ ವಿಧಾನ : ಈ ವಿಧಾನದಲ್ಲಿ ಕರುವನ್ನು ಹುಟ್ಟಿದ ಕೂಡಲೇ ತಾಯಿಯಿಂದ ಬೇರ್ಪಡಿಸುವುದು.

3. ಕರುವಿಗೆ ಹಾಲು ಕುಡಿಸುವ ವಿಧಾನ : ಒಂದು ಸ್ವಚ್ಛವಾದ ಅಗಲ ಬಾಯಿಯ ಬುಟ್ಟಿಯಲ್ಲಿ ನಿರ್ದಿಷ್ಟ ಪ್ರಮಾಣದ ಹಾಲನ್ನು ಹಾಕಿ, ತೊಳೆದ ತೋರ ಬೆರಳು ಮತ್ತು ನಡುವಿನ ಬೆರಳನ್ನು ಹಾಲಿನಲ್ಲಿ ಅದ್ದಿ ಕರುವಿಗೆ ಚೀಪಿಸಬೇಕು. ಮೆಲ್ಲಗೆ ಅದರ ಬಾಯಿಯನ್ನು ಹಾಲಿದ್ದ ಬುಟ್ಟಿಯ ಹತ್ತಿರ ಚೀಪಿಸುತ್ತಾ ತಂದು ಹಾಲಿನ ಬುಟ್ಟಿಯಲ್ಲಿ ಮುಳುಗಿಸಬೇಕು. ಹೀಗೆ ಚೀಪಿಸುತ್ತಿರುವಾಗ ಹಾಲು ಬೆರಳುಗಳ ಸಂಧಿಯ ಮುಖಾಂತರ ಕರುವಿನ ಬಾಯಿಯನ್ನು ಪ್ರವೇಶಿಸುತ್ತದೆ. ಒಂದು ವಾರದಲ್ಲಿ ಕರು ಕ್ರಮೇಣವಾಗಿ ತಾನೆ ಹಾಲು ಕುಡಿಯಲು ಪ್ರಾರಂಭಿಸುತ್ತದೆ.

ಈ ವಿಧಾನದಿಂದ ಕೆಲವು ಪ್ರಯೋಜನಗಳುಂಟು ಕರುವಿನ ದೇಹದ ಬೆಳವಣಿಗೆ ಅನುಗುಣವಾಗಿ ಹಾಲನ್ನು ನೀಡಬಹುದು, ತಾಯಿಯ ಹಾಲಿನ ಉತ್ಪತ್ತಿಯ ನಿರ್ದಿಷ್ಟ ಪ್ರಮಾಣವನ್ನು ತಿಳಿಯಬಹುದು. ಬೇಡವಾದ ಕರುಗಳನ್ನು ಯಾವುದೇ ಸಮಯದಲ್ಲಿ ಮಾರಬಹುದು.

ರೋಗ ನಿವಾರಣೋಪಾಯಗಳು : ಕರು ಕಟ್ಟುವ ಜಾಗವನ್ನು ಸ್ವಚ್ಛವಾಗಿ ಕಾಪಾಡುವುದು, ಸುತ್ತಲೂ ಗಾಳಿ ಬೆಳಕು ಇರುವಂತೆ ನೋಡಿಕೊಳ್ಳುವುದು. ನೀರು ಮತ್ತು ಆಹಾರವನ್ನು ಸಮಪ್ರಮಾಣದಲ್ಲಿ ಕೊಡುವುದು. ತಾಯಿ, ಹಸುಗಳನ್ನು ಶುದ್ಧವಾಗಿರುವಂತೆ ನೋಡಿಕೊಳ್ಳಬೇಕು. ಇವರ ಕರುಗಳಿಂದ ಹಯ ರೋಗ ತಗೆಯದ ಹಾಗೆ ಎಚ್ಚರವಹಿಸಬೇಕು. ಒಂದೆ ಕಡೆ ಸದಾ ಕಟ್ಟದೆ ಸ್ಥಾನಪಲ್ಲಟ ಮಾಡುತ್ತಿರಬೇಕು. ಕರು ಹುಟ್ಟಿದ 10ನೇ ದಿನಕ್ಕೆ 30ನೇ ದಿನಕ್ಕೆ, 60ನೇ ದಿನಕ್ಕೆ ಜಂತು ಹುಳುವಿನ ಔಷಧಿ ಕುಡಿಸಬೇಕು. ಅನಂತರ 6 ತಿಂಗಳಿಗೆ ಹಾಗೂ ಪ್ರತಿ ವರ್ಷಕ್ಕೊಮ್ಮೆ ಜಂತು ನಾಶಕ ಔಷಧ ಕುಡಿಸಬೇಕು.

ಎಸ್.ಕೆ.ಎನ್.

ಕರ್ಣಕುಂಡಲ ಆಲಂಕಾರಿಕ ಸಸ್ಯಗಳ ಪೈಕಿ ಒಂದು. ಇದು ಬಾಲ್ಸಾಮಿನೇಸೀ ಕುಟುಂಬಕ್ಕೆ ಸೇರಿದೆ. ಇಂಪೇಷಿಯನ್ಸ್ ಬಾಲ್ಸಾಮಿನ



ಎಂಬುದು.ಅ ಇದರ ವೈಜ್ಞಾನಿಕ ನಾಮ. ಸಾಮಾನ್ಯವಾಗಿ ಉದ್ಯಾನವನದಲ್ಲಿ ಕೈತೋಟಗಳಲ್ಲಿ, ಮನೆಯ ಅಂಗಳದಲ್ಲಿ ಬೆಳೆಸುತ್ತಾರೆ. ಇದನ್ನು ಗೌರಿಗಿಡ, ಬಸವನಪಾದ ಎಂದೂ ಕರೆಯುತ್ತಾರೆ. ದೇವರ ಪೂಜೆಗೆ ಇದು ಶ್ರೇಷ್ಠ ಎನ್ನುವರು. ಬಿಳಿ, ಕೆಂಪು, ಕಿತ್ತಳೆ, ಗುಲಾಬಿ, ನೇರಳೆ ಮುಂತಾದ ಬಣ್ಣಗಳಲ್ಲಿ ಹೂ ಕೊಡುತ್ತದೆ. ಕೆಲವು ಹೂವಿನ ಮೇಲೆ ಚುಕ್ಕೆಗಳಿರುತ್ತವೆ. ಕೆಲವು ಏಕ ಸುತ್ತು, ಬಹುಸುತ್ತಿನ ಹೂಗಳಿರುತ್ತವೆ. ಹೂವಿನ ಸುತ್ತು ಹೆಚ್ಚಾಗಿದ್ದಷ್ಟು ಸುಂದರವಾಗಿ ಕಾಣುತ್ತದೆ.

ಸಸ್ಯಾಭಿವೃದ್ಧಿ : ಹೆಚ್ಚಾಗಿ ಬೆಳೆಸುವವರು ಬೀಜಗಳನ್ನು ಮಡಿಗಳಲ್ಲಿ ಬಿತ್ತಿ 8-10 ಇಂಚು ಎತ್ತರ ಬೆಳೆಯುವ ತನಕ ಸಸಿ ಬೆಳೆಸುತ್ತಾರೆ. ಅನಂತರ ಒಂದು ಅಡಿ ಅಂತರದಲ್ಲಿ ನೆಡಬೇಕು. ಹೆಚ್ಚು ಆರೈಕೆಯಿಲ್ಲದಿದ್ದರೂ, ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಯಬಲ್ಲುದು. ಗೊಬ್ಬರ ಮತ್ತು ನೀರು ಹೆಚ್ಚಾದಷ್ಟೂ ಹೂಬಿಡುವುದು ಕಡಿಮೆ. ನಾಟಿ ಮಾಡಿದ ಒಂದೂವರೆ



ತಿಂಗಳಿಂದ ಎರಡು ತಿಂಗಳ ಒಳಗೆ ಹೂ ಬಿಡುತ್ತದೆ. ಹೂಗಳು ಅರಳುತ್ತಿರುವಂತೆ ಕೊಯ್ಲು ಮಾಡುತ್ತಾ ಹೋದರೆ ಹೆಚ್ಚು ಕಾಲ ಫಸಲನ್ನು ಕೊಡುತ್ತದೆ. ಒತ್ತಾಗಿರುವ ಎಲೆಗಳನ್ನು ಕಿತ್ತು ತೆಳು ಮಾಡಿದರೆ ಹೂ ಬಿಡುವ ಪ್ರಮಾಣವೂ ಹೆಚ್ಚು. ಗಿಡವೂ ಆಕರ್ಷಣೀಯವಾಗಿ ಕಾಣುತ್ತದೆ. ಇದು 1-2 ಅಡಿ ಎತ್ತರ ಬೆಳೆಯಬಲ್ಲುದು. ಪಾರದರ್ಶಕವಾದ ಇದರ ಕಾಂಡ ನಯವಾಗಿರುತ್ತದೆ. ಎಲೆಗಳು ಸರಳವಾಗಿದ್ದು ವಿವಿಧ ರೀತಿಯಲ್ಲಿ ಜೋಡಣೆಗೊಂಡಿರುತ್ತವೆ. ಒಂಟೊಂಟಿಯಾಗಿ ಎಲೆಯ ಕಂಕುಳಲ್ಲಿ ಹೂ ಬಿಡುತ್ತದೆ. ಅಪವಾದವೆಂಬಂತೆ ಗೊಂಚಲು ಗೊಂಚಲಾಗಿ ಇರುವುದುಂಟು. 3-5 ಪುಷ್ಪದಳಗಳಿರುತ್ತವೆ. ಪಾರ್ಶ್ವದಳಗಳು ರೆಕ್ಕೆಯಂತೆ ಎರಡು ಭಾಗಗಳಾಗಿರುತ್ತವೆ. ಕೇಸರಗಳು ಐದು ಇದ್ದು, ಕೇಸರ ದಂಡ ಅಗಲವಾಗಿರುತ್ತದೆ. ಪ್ರಭೇದಕ್ಕೆ ತಕ್ಕಂತೆ ಬೀಜಗಳು ನುಣುಪಾಗಿ ಇಲ್ಲವೆ ಒರಟಾಗಿದ್ದು ಹೊಳಪಿನಿಂದ ಅಥವಾ ರೋಮಗಳಿಂದ ಕೂಡಿರುತ್ತವೆ.

ಎಸ್.ಕೆ.ಎನ್.


ಕರ್ನಾಟಕದ ಕೃಷಿ - ಪಕ್ಷಿನೋಟ 1956ರಲ್ಲಿ ಭಾಷಾವಾರು ರಾಜ್ಯಗಳು ಅಸ್ತಿತ್ವಕ್ಕೆ ಬಂದಾಗ ನಿರ್ಮಿತವಾದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಅಂದು 'ಮೈಸೂರು ರಾಜ್ಯ'ವೆಂದು ಕರೆಯಲಾಗುತ್ತಿತ್ತು. 1973 ನವೆಂಬರ್ 01ರಂದು 'ಕರ್ನಾಟಕ' ಎಂದು ಮರು ನಾಮಕರಣ ಮಾಡಲಾಯಿತು. ದಕ್ಷಿಣದ ಮುಖ್ಯ ರಾಜ್ಯಗಳಲ್ಲಿ ಒಂದಾದ ಕರ್ನಾಟಕ ದಖ್ಖನ್ ಪ್ರಸ್ಥಭೂಮಿಯ ಭೂ ಮತ್ತು ಜಲಮೇರೆಗಳೆರಡನ್ನೂ ಒಳಗೊಂಡಿದ್ದು, ಉತ್ತರದಲ್ಲಿ ಮಹಾರಾಷ್ಟ್ರ, ವಾಯುವ್ಯದಲ್ಲಿ ಗೋವಾ, ಪೂರ್ವದಲ್ಲಿ ಆಂಧ್ರಪ್ರದೇಶ, ದಕ್ಷಿಣ ಮತ್ತು ಆಗ್ನೇಯದಲ್ಲಿ ತಮಿಳುನಾಡು, ನೈಋತ್ಯದಲ್ಲಿ ಕೇರಳ ರಾಜ್ಯಗಳೊಂದಿಗೆ ಹೆಣೆದುಕೊಂಡಿದೆ. ರಾಜ್ಯವು $11^{o}31'$ ಉತ್ತರ ಅಕ್ಷಾಂಶದಿಂದ $18^{o}45'$

ವರೆಗೂ ಹರಡಿದೆ. ಪೂರ್ವ ರೇಖಾಂಶಗಳ ವ್ಯಾಪ್ತಿಯಲ್ಲಿ 74°12' ಪೂರ್ವದಿಂದ 78°40' ಪೂ. ರೇಖಾಂಶದವರೆಗೆ ಇದೆ. 3287263 ಚ.ಕಿ.ಮೀ. ಭಾರತದ ಭೌಗೋಳಿಕ ವಿಸ್ತೀರ್ಣದಲ್ಲಿ ರಾಜ್ಯದ ಪಾಲು 191791 ಚ.ಕಿ.ಮೀ. ಇದು ಭಾರತದ ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 5.85 ರಷ್ಟಿದ್ದು, ವಿಸ್ತೀರ್ಣದಲ್ಲಿ ಎಂಟನೆಯ ಸ್ಥಾನದಲ್ಲಿ ಇರುವುದು. ಪಶ್ಚಿಮದಲ್ಲಿ ಅರಬ್ಬಿ ಸಮುದ್ರವಿದೆ. ರಾಜ್ಯದಲ್ಲಿ ಪ್ರಸ್ತುತ ಒಟ್ಟು 30 ಜಿಲ್ಲೆಗಳಿವೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು ಕರ್ನಾಟಕದ ಉತ್ತರ ಗಡಿಯಾಗಿದ್ದು ಚಾಮರಾಜನಗರದ (ತಮಿಳುನಾಡು) ಮೋಯರ್ ನದಿ ದಕ್ಷಿಣದ ಗಡಿಯಾಗಿದೆ. ಹಾಗೆಯೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಪಶ್ಚಿಮದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ಪೂರ್ವದಲ್ಲಿ ಗಡಿಯಾಗಿವೆ. ರಾಜ್ಯದಲ್ಲಿ ಕೃಷ್ಣಾ, ಗೋದಾವರಿ, ಕಾವೇರಿ, ಪೆನ್ನಾರ್, ಪಾಲಾರ್ ನದಿಗಳು ಹರಿಯುತ್ತಿದ್ದು, ಉತ್ತಮ ಜಲಸಂಪತ್ತು ಕೂಡ ಇರುವುದು. ಕರ್ನಾಟಕದಲ್ಲಿ ಒಟ್ಟು 176 ತಾಲ್ಲೂಕುಗಳಿದ್ದು, 745 ಹೋಬಳಿಗಳು, 218 ಮುನ್ಸಿಪಾಲಿಟಿಗಳು, 5692 ಗ್ರಾಮ ಪಂಚಾಯಿತಿಗಳಿವೆ. ರಾಜ್ಯದಲ್ಲಿರುವ ಒಟ್ಟು ರೆವಿನ್ಯೂ ಗ್ರಾಮಗಳ ಸಂಖ್ಯೆ 27066. ರಾಜ್ಯವನ್ನು ಆಡಳಿತ ದೃಷ್ಟಿಯಿಂದ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

ಜಿಲ್ಲೆಗಳು	ಭೌಗೋಳಿಕ ವಿಸ್ತೀರ್ಣ ಚ.ಕಿ.ಮೀ.	ರಾಜ್ಯದ ವಿಸ್ತೀರ್ಣದ ಶೇ.	ಜನಸಂಖ್ಯೆ 2011ರ ಜನಗಣತಿ	ಶೇ.
1. ಬೆಂಗಳೂರು	2190	1.14	95,88,910	15.69
2. ಬೆಂಗಳೂರು ಗ್ರಾಮಾಂತರ	2285	1.19	9,87,257	1.61
3. ಚಿತ್ರದುರ್ಗ	8388	4.37	16,60,378	2.72
4. ಚಿಕ್ಕಬಳ್ಳಾಪುರ	4210	2.19	12,54,377	2.05
5. ದಾವಣಗೆರೆ	6,018	3.14	19,46,905	3.18
6. ಕೋಲಾರ	3,984	2.08	15,40,231	2.52
7. ರಾಮನಗರ	3,576	1.86	10,82,739	1.77
8. ಶಿವಮೊಗ್ಗ	8,464	4.41	17,55,512	2.87
9. ತುಮಕೂರು	10,598	5.53	26,81,449	4.39
ಬೆಂಗಳೂರು ವಿಭಾಗ	**49,697**	**25.91**	**2,24,97,758**	**36.80**
10. ಬೆಳಗಾಂವಿ	13,415	6.99	47,78,439	7.82
11. ಬಿಜಾಪುರ	10,475	5.46	21,75,102	3.56
12. ಬಾಗಲಕೋಟೆ	6,594	3.44	18,90,826	3.09
13. ಧಾರವಾಡ	4,230	2.21	18,46,993	3.02
14. ಗದಗ	4,657	2.43	10,65,235	1.74
15. ಹಾವೇರಿ	4,851	2.53	15,98,506	2.61
16. ಉತ್ತರಕನ್ನಡ	10,291	5.37	14,36,847	2.35
ಬೆಳಗಾಂವಿ ವಿಭಾಗ	**54,513**	**28.42**	**1,47,91,948**	**24.21**
17. ಬಳ್ಳಾರಿ	8,419	4.38	25,32,383	4.14
18. ಬೀದರ್	5,448	2.84	17,00,018	2.78
19. ಗುಲ್ಬರ್ಗಾ	11,001	5.7	25,64,892	4.20
20. ಯಾದಗೀರ್	5,223	2.7	11,72,985	1.92
21. ರಾಯಚೂರು	5,559	2.9	19,24,773	3.15
22. ಕೊಪ್ಪಳ	8.458	4.41	13,91,292	2.28
ಗುಲ್ಬರ್ಗಾ ವಿಭಾಗ	**44,108**	**23.00**	**1,12,86,343**	**18.46**
23. ಚಿಕ್ಕಮಗಳೂರು	7,201	3.75	11,37,753	1.86
24. ದಕ್ಷಿಣಕನ್ನಡ	4,843	2.53	20,83,625	3.41
25. ಉಡುಪಿ	3,598	1.88	11,77,908	1.93
26. ಹಾಸನ	6,814	3.55	17,76,221	2.91
27. ಕೊಡಗು	4,102	2.14	5,54,762	0.91
28. ಮಂಡ್ಯ	4,961	2.59	18,08,680	2.96
29. ಮೈಸೂರು	6,269	3.27	29,94,744	4.90
30. ಚಾಮರಾಜನಗರ	5,685	2.96	10,20,962	1.67
ಮೈಸೂರು ವಿಭಾಗ	**43,473**	**22.67**	**3,95,04,655**	**20.55**
ಕರ್ನಾಟಕ	**1,91,791**	**100.00**	**6,11,30,704**	**100.00**

ಬೆಂಗಳೂರು ವಿಭಾಗದಲ್ಲಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದಾವಣಗೆರೆ, ಕೋಲಾರ, ರಾಮನಗರ, ಶಿವಮೊಗ್ಗ ಮತ್ತು ತುಮಕೂರು; ಬೆಳಗಾಂವಿ ವಿಭಾಗದಲ್ಲಿ ಬೆಳಗಾಂವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರಕನ್ನಡ; ಗುಲ್ಬರ್ಗಾ ವಿಭಾಗದಲ್ಲಿ ಬಳ್ಳಾರಿ, ಬೀದರ್, ಗುಲ್ಬರ್ಗಾ, ಯಾದಗೀರ್, ರಾಯಚೂರು ಮತ್ತು ಕೊಪ್ಪಳ ಹಾಗೂ ಮೈಸೂರು, ವಿಭಾಗದಲ್ಲಿ ಮೈಸೂರು ಚಿಕ್ಕಮಗಳೂರು, ದಕ್ಷಿಣಕನ್ನಡ, ಉಡುಪಿ, ಹಾಸನ, ಕೊಡಗು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಿವೆ. ಇವುಗಳಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಬೆಳಗಾಂವಿ, ದಾವಣಗೆರೆ ಮತ್ತು ತುಮಕೂರುಗಳು ಮಹಾನಗರ ಪಾಲಿಕೆಗಳಾಗಿವೆ. 2011ರ ಜನಗಣತಿಯಂತೆ ರಾಜ್ಯದ ಜನಸಂಖ್ಯೆಯು 6,11,30,704 ರಷ್ಟಿದ್ದು, ಭಾರತದ ಜನಸಂಖ್ಯೆಯಲ್ಲಿ ಶೇ. 5.05 ರಷ್ಟನ್ನು ಒಳಗೊಂಡು ಗಾತ್ರದಲ್ಲಿ ಒಂಬತ್ತನೇ ಸ್ಥಾನದಲ್ಲಿದೆ.

ಮೇಲ್ಮೈಲಕ್ಷಣ : ದಖ್ಖಿನ್ ಪ್ರಸ್ಥಭೂಮಿಯ ಮೂರು ಮುಖ್ಯ ವಿಭಾಗಗಳಲ್ಲಿ ಮೈಸೂರು ಪ್ರಸ್ಥಭೂಮಿಯೂ ಒಂದಾಗಿದ್ದು, ಅತಿ ತಗ್ಗಾದ ಕರಾವಳಿ ಭೂಸ್ವರೂಪದಿಂದ ಸಾಕಷ್ಟು ಎತ್ತರವಾದ ಮಲೆನಾಡಿನ ಸ್ವರೂಪದವರೆಗೆ ಹಲವಾರು ಬಗೆಯ


ಕರ್ನಾಟಕ
(ರಾಜಕೀಯ)
ಬೀದರ
ಗುಲ್ಬರ್ಗ
ಬಿಜಾಪುರ
ರಾಯಚೂರು
ಬಾಗಲಕೋಟೆ
ಬೆಳಗಾವಿ
ಧಾರವಾಡ
ಗದಗ
ಕೊಪ್ಪಳ
ಬಳ್ಳಾರಿ
ಕಾರವಾರ
ಹಾವೇರಿ
ದಾವಣಗೆರೆ
ಚಿತ್ರದುರ್ಗ
ಭಾ ರ ತ
ಶಿವಮೊಗ್ಗ
ಚಿಕ್ಕಮಗಳೂರು
ತುಮಕೂರು
ಉಡುಪಿ
ಮಂಗಳೂರು
ಹಾಸನ
ಬೆಂಗಳೂರು
ಕೋಲಾರ
ಮಂಡ್ಯ
ಮಡಿಕೇರಿ
ಮೈಸೂರು
ಚಾಮರಾಜನಗರ

ಭೂಸ್ವರೂಪವನ್ನು ಒಳಗೊಂಡಿದೆ. ದಖ್ಖನ್ನಿನ ಇಕ್ಕೆಲಗಳಲ್ಲಿ ಪೂರ್ವ ಪಶ್ಚಿಮಾಭಿಮುಖವಾಗಿರುವ ಬೆಟ್ಟ ಶ್ರೇಣಿ, ದಕ್ಷಿಣದಲ್ಲಿ ನೀಲಗಿರಿಯವರೆಗೂ ಪಸರಿಸಿದೆ. ಪೂರ್ವಘಟ್ಟಗಳಿಗಿಂತ, ಪಶ್ಚಿಮಘಟ್ಟಗಳು ತುಂಬ ಎತ್ತರವಾಗಿವೆ. ಪಶ್ಚಿಮದ ಕಡಲತೀರ ಸುಮಾರು 400 ಕಿ.ಮೀ. ಉದ್ದವಾಗಿದ್ದು, ನೇರವಾಗಿದೆ. ರಾಜ್ಯದ ವಿಸ್ತಾರವಾದ ಭೂ ಪ್ರದೇಶವು 300-1350 ಮೀ.ಗಳಷ್ಟು ಎತ್ತರವಾಗಿದೆ. ಈ ಭೂ ಸ್ವರೂಪನ್ನು ಆಧರಿಸಿ ರಾಜ್ಯವನ್ನು ಪ್ರಾಕೃತಿಕವಾಗಿ ಮಲೆನಾಡು, ಮೈದಾನ ಪ್ರದೇಶ ಮತ್ತು ಕರಾವಳಿ ಪ್ರದೇಶವೆಂದು ವಿಭಾಗಿಸಬಹುದು.

ಮಲೆನಾಡು : ಮಲೆನಾಡು ಎಂದರೆ ಬೆಟ್ಟಗುಡ್ಡಗಳಿಂದ ಕೂಡಿದ ಪ್ರದೇಶ ಎಂದರ್ಥ. ಕರ್ನಾಟಕದಲ್ಲಿ ಅತಿ ಹೆಚ್ಚು ಎತ್ತರದ ಭೂ ಭಾಗವಾದ ಇದು 650 ಕಿ.ಮೀ. ಉದ್ದವಾಗಿದ್ದು 50-75 ಕಿ.ಮೀ.ಗಳಷ್ಟು ಅಗಲವಾಗಿದೆ. ಇಲ್ಲಿಯ ಪಶ್ಚಿಮ ಘಟ್ಟಗಳು ಪರ್ವತಗಳಾಗಿರದೆ ಕೇವಲ ಕಡಿದಾದ ಇಳಿಜಾರಿನಿಂದ ಕೂಡಿದ ಉನ್ನತ ಭೂವಲಯವಾಗಿದೆ. ನೈಸರ್ಗಿಕವಾಗಿ ಸಂಪದ್ಭರಿತವಾದ ಸಹ್ಯಾದ್ರಿ ಪರ್ವತ ಶ್ರೇಣಿ ದಕ್ಷಿಣಕ್ಕೆ ಸಾಗಿದಂತೆ ನೀಲಗಿರಿಯನ್ನು ತಲುಪುತ್ತದೆ.

ಏರುತಗ್ಗಿನಿಂದ ಕೂಡಿದ ಮಲೆನಾಡು ಹಲವಾರು ನದಿಗಳ ಉಗಮಸ್ಥಾನವಾಗಿದೆ. ಇಲ್ಲಿಯ ಮುಖ್ಯ ನದಿಗಳೆಂದರೆ ಅಘನಾಶಿನಿ, ಶರಾವತಿ, ತುಂಗಾ ಮುಂತಾದವು. ಇಲ್ಲಿ ಹಲವಾರು ಜಲಪಾತಗಳಿದ್ದು ರಮಣೀಯವಾಗಿವೆ. ಉದಾ : ಜೋಗ್‌ಜಲಪಾತ, ದೂದ್‌ಸಾಗರ ಜಲಪಾತ, ಉಂಚಳ್ಳಿ ಜಲಪಾತ, ಗೋಕಾಕ್ ಜಲಪಾತ, ದಬ್ಬೆ ಜಲಪಾತ, ಅಬ್ಬಿಜಲಪಾತ ಮುಂತಾದವು.

ಸಹ್ಯಾದ್ರಿಶ್ರೇಣಿಯ ಉನ್ನತ ಶಿಖರಗಳಲ್ಲಿ ಒಂದಾದ ಮುಳ್ಳಯ್ಯನ ಗಿರಿ (ಎತ್ತರ ಸುಮಾರು 1927 ಮೀ.) ರಾಜ್ಯದಲ್ಲೇ ಅತ್ಯಂತ ಎತ್ತರವಾದುದು. ಕುದುರೆಮುಖ 1892 ಮೀ., ಕೊಡಚಾದ್ರಿ 1344 ಮೀ., ಪುಷ್ಪಗಿರಿ 1731 ಮೀ., ದತ್ತಗಿರಿ 1895 ಮಿ. ಮತ್ತು ಕಲ್ಹತ್ತಗಿರಿ 1877 ಮೀ. ಮುಂತಾದ ಶಿಖರಗಳು ಈ ಭಾಗದಲ್ಲಿವೆ. ಪ್ರಮುಖ ಘಾಟ್‌ಗಳಾದ ಉತ್ತರ ಕರ್ನಾಟಕದ ಕೊಲ್ಲೂರು ಘಾಟಿ, ಶಿವಮೊಗ್ಗ - ಉಡುಪಿ ನಡುವೆ ಇರುವ ಆಗುಂಬೆಘಾಟಿ, ಚಿಕ್ಕಮಗಳೂರು - ಮಂಗಳೂರುಗಳ ನಡುವೆ ಇರುವ ಚಾರ್ಮುಡಿ ಘಾಟಿ ಇವು ಕರ್ನಾಟಕದ ಘಾಟಿಗಳಲ್ಲಿ ಪ್ರಮುಖವಾದವು.

ಮೈದಾನ : ಪೂರ್ವ ಪಶ್ಚಿಮ ಘಟ್ಟಗಳ ನಡುವಿನ ಎತ್ತರದ ಭೂಮಿಯೇ ಮೈದಾನ. ಪ್ರಸ್ಥಭೂಮಿಯು ಮೇಲೆತ್ತಲ್ಪಟ್ಟಿರುವ ಆಳವಾಗಿ ಕೊರೆಯಲ್ಪಟ್ಟಿರುವ ಮೂಲತಃ ಮಟ್ಟಸವಾದ ಅಂತ್ಯ ಸ್ವರೂಪದ ಮೈದಾನವಾಗಿದೆ. ಈ ಮೈದಾನವನ್ನು ಉತ್ತರದ ಮೈದಾನ ಪ್ರದೇಶ, ದಕ್ಷಿಣದ ಮೈದಾನ ಪ್ರದೇಶವೆಂದು ವಿಭಾಗಿಸಬಹುದು. ಕಪ್ಪು ಮಣ್ಣಿನಿಂದ ಕೂಡಿದ ಭಾಗವು ತುಂಗಭದ್ರೆಯ ಉತ್ತರ ಭಾಗದಲ್ಲಿದ್ದು ಅಲ್ಲಲ್ಲಿ ಎತ್ತರವಾಗಿ ಹಬ್ಬಿರುವ ಸಮಪ್ರಮಾಣದ ಮರಗಳಿಂದ ಕೂಡಿದೆ. ಉಳಿದ ಭಾಗಗಳು ಹೆಚ್ಚು ಮರಗಿಡಗಳಿಂದ ಆವೃತವಾಗಿರದೆ ತಗ್ಗು ದಿಣ್ಣೆಗಳಿಂದ ಕೂಡಿದ್ದು ಅನೇಕ ರೀತಿಯ ಶಿಲಾಪದರಗಳನ್ನು, ಮರಳುಕಲ್ಲು, ಸುಣ್ಣದಕಲ್ಲು, ಬುರದೆ ಕಲ್ಲುಗಳಿಂಲೂ ಕೂಡಿದೆ. ಕರ್ನಾಟಕದ ಉತ್ತರ ದಿಕ್ಕಿನ ಅಂಚು ಕಪ್ಪುಶಿಲೆ ಮತ್ತು ಘನೀಕೃತ ಶಿಲಾ ಘಟ್ಟಗಳಿಂದಾವೃತವಾಗಿದೆ. ದಕ್ಷಿಣ ಮೈದಾನ ಪ್ರದೇಶ ಗ್ರಾನೈಟ್ ಮತ್ತು ಧಾರವಾಡ ಶಿಲಾಶ್ರೇಣಿಗಳಿಂದ ಕೂಡಿದ್ದು ವೈವಿಧ್ಯಮಯವಾಗಿದೆ. ಹಾವು ಸರಿಯುವಂತೆ ಉಬ್ಬು ತಗ್ಗು ನೆಲದಿಂದ ಕೂಡಿರುವುದು ಇದರ ವೈಲಕ್ಷಣ್ಯ. ದಕ್ಷಿಣದ ಮೈದಾನ ಪ್ರದೇಶದ ಪ್ರಮುಖ ಬೆಟ್ಟಗಳು ನಂದಿದುರ್ಗ, ದೇವರಾಯನ ದುರ್ಗ, ಚಾಮುಂಡಿಬೆಟ್ಟ, ಸಾವನದುರ್ಗ, ಶಿವಗಂಗ, ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನ ಬೆಟ್ಟ. ಕೆಂಪುಮಣ್ಣಿನಿಂದ ಕೂಡಿದ ನೆಲ ದಕ್ಷಿಣ ಮೈದಾನದಲ್ಲಿ ಪ್ರಧಾನವಾಗಿ ಕಂಡುಬರುತ್ತದೆ. ಕೆಲವು ಕಡೆ ಭೂಸವೆತದಿಂದ ಬರಡು ನೆಲ ರೂಪುಗೊಂಡಿದೆ. ಈ ಭಾಗದಲ್ಲಿ ಅರಣ್ಯ ಮತ್ತು ಸಸ್ಯಸಂಪತ್ತು ವಿರಳವಾಗಿದ್ದು ಕೆಲವು ಭಾಗಗಳ ಬರಡು ನೆಲ ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ಕೆಲವು ಕಣಿವೆ ಪ್ರದೇಶಗಳಲ್ಲಿ ಮಣ್ಣು ಸಾರವತ್ತಾಗಿರುವುದುಂಟು. ಕರಾವಳಿ ಮೈದಾನವು ರಾಜ್ಯದಲ್ಲಿ 11°14' ಉತ್ತರದಿಂದ 14°.20' ಉತ್ತರ ಅಕ್ಷಾಂಶಗಳವರೆಗೆ ವಿಸ್ತರಿಸಿದ್ದು, ದಕ್ಷಿಣದಲ್ಲಿ ಮಲಬಾರ್ ಹಾಗೂ ಉತ್ತರದಲ್ಲಿ ಕೊಂಕಣ ಕರಾವಳಿಗಳ ನಡುವೆ ಇದೆ.

ಕರಾವಳಿ ಪ್ರದೇಶ : ಸಹ್ಯಾದ್ರಿಯ ಅಂಚಿನಿಂದ ಸಮುದ್ರತೀರದವರೆಗೆ ವ್ಯಾಪಿಸಿರುವ ಭಾಗವೇ ಕರಾವಳಿ ಪ್ರದೇಶ. ಮರಳು ಗುಡ್ಡೆಗಳಿಂದ ಕೂಡಿದ ಕಡಲಂಚು, ಹಲವು ರೀತಿಯ ಮರಗಳು ಮತ್ತು ವಿವಿಧ ಬೆಳೆಗಳ ಹಿನ್ನೆಲೆಯಿಂದ ಕೂಡಿರುವ ಈ ಭಾಗ ಹಾಗೂ ಘಟ್ಟ ಸೋಪಾನ - ಇದಿಷ್ಟು ಕರಾವಳಿ ಎನಿಸುತ್ತದೆ. ರಾಜ್ಯದ ಒಟ್ಟು ಕರಾವಳಿ ಸು. 400 ಕಿ.ಮೀ. ಉದ್ದವಾಗಿದೆ.

ಬೈಂದೂರಿನಿಂದ ಉತ್ತರದ ಕಡೆಗೆ ಇರುವ ಮೈದಾನ ಸ್ವಲ್ಪ ಕಿರಿದಾಗಿದ್ದು ಅಲ್ಲಿಂದ ಮುಂದೆ 13-16 ಕಿ.ಮೀ.ಗಳಷ್ಟು ವಿಸ್ತರಿಸುತ್ತಾ ಅಲ್ಲಲ್ಲಿ ಕೆಲವು ಮರಳುಗುಡ್ಡಗಳು ಕಾಣಿಸುತ್ತವೆ. ಸಮುದ್ರದ ಪೂರ್ವಕ್ಕೆ ಕುಂದಾಪುರದಿಂದ ಮಂಗಳೂರಿನವರೆಗೆ ಪ್ರಸ್ಥಭೂಮಿಯಿದೆ. ಒಟ್ಟಾರೆ ಈ ಭಾಗ ಅನೇಕ ಸಣ್ಣ ಪುಟ್ಟ ನದಿಗಳಿಂದಲೂ, ಝರಿಗಳಿಂದಲೂ ಕೂಡಿದ್ದು ಕೆಲವು ಕಡೆ ಕಡಿದಾದ ಬಂಡೆಗಳು ಕಂಡುಬರುತ್ತವೆ. ದಕ್ಷಿಣ ಭಾಗಕ್ಕಿಂತ ಈ ಭಾಗ ಹೆಚ್ಚಿನ ಸಸ್ಯ ಸಂಪತ್ತನ್ನು ಹೊಂದಿದ್ದು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದೆ. ಕರ್ನಾಟಕದ ಕರಾವಳಿಯ ಮುಖ್ಯ ಲಕ್ಷಣವೆಂದರೆ ಬೀಚುಗಳು ಮತ್ತು ದ್ವೀಪಗಳು. ಇಲ್ಲಿ ಓಂಬೀಚು, ತೆಕ್ಕಕಟ್ಟೆ, ಮಲ್ಪೆ, ಸೋಮೇಶ್ವರ, ಸುರತ್ಕಲ್ ಹಾಗೂ ಬೈಂದೂರು ಬೀಚುಗಳಿವೆ. ಹಾಗೆಯೆ ಕಾರವಾರದ ಕಾಂಜಿಗುಡ್ಡ, ದೇವಗಢ, ಮೊಗೇರಗುಡ್ಡ, ಅಂಜುದ್ವೀಪ, ಭಟ್ಕಳದ ಪಿಜಿಯನ್, ಕೆರೆಕುಂಡ, ಹಾಗ್‌ದ್ವೀಪ, ಮಲ್ಪೆ ಸಮೀಪವಿರುವ ಕೋಕೋನೆಟ್‌ದ್ವೀಪ, ಸೆಂಟ್ ಮೇರಿಸ್, ನಾರ್ತ್ ಐಲ್ಯಾಂಡ್ ಮತ್ತು ದರಿಯಾ ಬಹದೂರ್‌ಗಾರ್ ಮುಖ್ಯ ದ್ವೀಪಗಳು.

ವಾಯುಗುಣ : ಕರ್ನಾಟಕ ರಾಜ್ಯ ಉಷ್ಣವಲಯದಲ್ಲಿ ಮಾನ್‌ಸೂನ್ ವಾಯುಗುಣವನ್ನೊಳಗೊಂಡಿದ್ದು ಒಂದೆಡೆ ತೇವಾಂಶದಿಂದಲೂ ಮತ್ತೊಂದೆಡೆ ಶಾಖದಿಂದಲೂ ಕೂಡಿದ ಗುಣಲಕ್ಷಣ ಹೊಂದಿದೆ. ಇಲ್ಲಿಯ ವಾಯುಗುಣ ವೈವಿಧ್ಯಮಯ ಸ್ವಾಭಾವಿಕವಾದ ಭೂಸ್ವರೂಪ ಮತ್ತು ಸಸ್ಯವರ್ಗ, ಸಮುದ್ರಮಟ್ಟದ ಎತ್ತರ ಮುಂತಾದವು ಇದಕ್ಕೆ ಕಾರಣ. ಪಶ್ಚಿಮಭಾಗ ತಂಪಾದ ಮತ್ತು ತೇವಾಂಶದಿಂದ ಕೂಡಿದ ವಾಯುಗುಣವನ್ನು ಹೊಂದಿದೆ. ಹೆಚ್ಚು ಮಳೆಬೀಳುವ ಪ್ರದೇಶಗಳಾದ ಕರಾವಳಿ, ಮಲೆನಾಡು ಮತ್ತು ಸಹ್ಯಾದ್ರಿ ಘಟ್ಟಗಳನ್ನೂ ಕಾಣುತ್ತೇವೆ.

ಆದರೆ ಒಳನಾಡು ಹಾಗೂ ಉತ್ತರ ಭಾಗದ ಜಿಲ್ಲೆಗಳಲ್ಲಿ ಶುಷ್ಕ ವಾತಾವರಣವಿದ್ದರೂ ಬಳ್ಳಾರಿ, ಬಿಜಾಪುರಗಳಿಗೆ ಹೋಲಿಸಿದಲ್ಲಿ ಒಣ ವಾತಾವರಣ ಕಡಿಮೆಯೇ.

ಪಶ್ಚಿಮಭಾಗ, ಧಾರವಾಡ ಮತ್ತು ಮೈಸೂರು ಜಿಲ್ಲೆಗಳ ಕೆಲವು ಭಾಗಗಳಲ್ಲಿ ಅಧಿಕಮಳೆ ಬೀಳುತ್ತದೆ. ಅದರಲ್ಲೂ ಆಗುಂಬೆ ಅತ್ಯಧಿಕ ಮಳೆ ಬೀಳುವ ಪ್ರದೇಶ. ಸಾಮಾನ್ಯವಾಗಿ ಈ ಭಾಗಗಳಲ್ಲಿಯ ಮಳೆಯ ಹಂಚಿಕೆ ಪ್ರಮಾಣ

ಕರ್ನಾಟಕ : ಭೂ ಬಳಕೆಯ ಪಕ್ಷಿನೋಟ (ಲಕ್ಷ ಹೆ.ಗಳಲ್ಲಿ)

ಭೂಬಳಕೆಯ ವಿಧಗಳು	1960–61	ಶೇ	1970–71	ಶೇ	1980–81	ಶೇ	1990–91	ಶೇ	2000–01	ಶೇ	2007–08	ಶೇ
ವರದಿಯಾದ ಕ್ಷೇತ್ರ	187.8		189.43		190.5		190.5		190.5		190.5	
1. ಅರಣ್ಯ	27.09	14.42	28.9	15.25	30.33	15.92	30.74	16.13	30.68	16.1	**30.72**	16.12
ಸಾಗುವಳಿಗೆ ದೊರೆಯದ ಭೂ ಪ್ರದೇಶ :												
2. ವ್ಯವಸಾಯೇತರ ಭೂಮಿ	8.12	4.32	9.37	4.94	10.66	5.59	11.89	6.24	13.13	6.88	13.69	7.18
3. ಬಂಜರು ಹಾಗೂ ವ್ಯವಸಾಯ ಯೋಗ್ಯವಲ್ಲದ ಭೂಮಿ	9.22	4.9	8.39	4.42	8.44	4.43	7.99	4.19	7.94	4.16	7.8	4.13
4. ಬಳಕೆಯಾಗದ ವ್ಯವಸಾಯ ಯೋಗ್ಯ	6.56	3.49	6.15	3.24	5.02	2.64	4.46	2.34	4.27	2.24	4.15	2.17
ಸಾಗುವಳಿಯಾಗದ ಬೀಳು ಭೂಮಿಯನ್ನು ಹೊರತುಪಡಿಸಿ:												
5. ಶಾಶ್ವತ ಹುಲ್ಲುಗಾವಲು ಮತ್ತು ಇತರೆ ಗೋಮಾಳ	17.39	9.25	16.19	8.54	13.46	7.06	10.98	5.76	9.59	5.03	9.3	4.88
6. ವೃಕ್ಷ ಬೆಳೆ ಹಾಗೂ ಇತರೆ	3.66	1.99	3.11	1.7	3.42	1.79	3.16	1.69	3.03	1.59	2.9	1.54
ಬೀಳು ಭೂಮಿ :												
7. ಪ್ರಸ್ತುತ ಬೀಳು ಭೂಮಿ	8.35	4.44	8.11	4.28	14.59	6.69	12.9	6.77	13.67	7.22	12.62	6.62
8. ಇತರೆ ಬೀಳು ಭೂಮಿ	5.13	2.73	6.72	3.54	5.58	2.92	4.57	2.39	4.08	2.14	5.05	2.69
9. ನಿವ್ವಳ ಸಾಗುವಳಿ ಕ್ಷೇತ್ರ	102.28	54.46	102.48	54.09	98.99	51.96	103.81	54.49	104.1	54.64	104.19	54.69
ಬೇಸಾಯ ಸಾಂಧ್ರತೆ ಶೇ.	**103.52**		**106.24**		**107.69**		**113.27**		**118**		**123.74**	

ಸಮುದ್ರದ ಪ್ರಭಾವ ಹೆಚ್ಚಾಗಿರುವ ತೀರ ಪ್ರದೇಶಗಳಲ್ಲಿ ಚಳಿಗಾಲ ಮತ್ತು ಬೇಸಗೆಯಲ್ಲಿ ಉಷ್ಣಾಂಶ ಸಮವಾಗಿರುತ್ತದೆ. ಹೆಚ್ಚು ಮಳೆ ಬೀಳುವ ರಾಜ್ಯದ ಪೂರ್ವ ಭಾಗ ಹಾಗೂ ಕಡಿಮೆ ಮಳೆ ಬೀಳುವ ಭಾಗಗಳ ನಡುವೆ ಸಹ್ಯಾದ್ರಿ ಬೆಟ್ಟ ಶ್ರೇಣಿ ಇರುವುದರಿಂದ ಕರ್ನಾಟಕದ ವಾಯುಗುಣದ ಮೇಲೆ ಇದರ ಪ್ರಭಾವ ಹೆಚ್ಚು. ಮಳೆಯ ಹಂಚಿಕೆಯ ವ್ಯತ್ಯಾಸಕ್ಕೆ ಪ್ರಮುಖ ಕಾರಣ ಸಮುದ್ರದೆಡೆಯಿಂದ ಭೂ ಭಾಗದೆಡೆಗೆ ಬೀಸುವ ನೈಋತ್ಯ ಮಾನ್ಸೂನ್ ಮಾರುತಗಳು. ಮೇಲ್ಕಂಡ ಅಂಶಗಳ ಆಧಾರದಿಂದ ಕರ್ನಾಟಕದ ವಾಯುಗುಣವನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಬಹುದು. 1. ಬೇಸಗೆಕಾಲ : ಮಾರ್ಚ್‌ನಿಂದ-ಮೇ, 2. ನೈಋತ್ಯ ಮಾನ್‌ಸೂನ್ ಮಾರುತಗಳ ಕಾಲ : ಜೂನ್-ಸೆಪ್ಟೆಂಬರ್, 3. ಮಾನ್‌ಸೂನ್ ಮಾರುತಗಳ ನಿರ್ಗಮನ ಕಾಲ : ಅಕ್ಟೋಬರ್-ನವೆಂಬರ್, 4. ಚಳಿಗಾಲ : ಡಿಸೆಂಬರ್-ಫೆಬ್ರವರಿ. ಈ ಋತುಮಾನಗಳಿಗೆ ಅನುಸಾರವಾಗಿ ವಾರ್ಷಿಕವಾಗಿ 113.9 ಸೆಂ.ಮೀ. ಮಳೆಯನ್ನು ರಾಜ್ಯವು ಪಡೆಯುವುದು. ಆಗುಂಬೆ 827.6 ಸೆಂ.ಮೀ.ಗಿಂತಲೂ ಹೆಚ್ಚು ಮಳೆ ಪಡೆಯುವುದರೊಂದಿಗೆ ಕರ್ನಾಟಕದ ಚಿರಾಪುಂಜಿ ಎಂದು ಹೆಸರುಗಳಿಸಿದೆ.

ಕರ್ನಾಟಕ ಜಿಲ್ಲಾವಾರು ಮಳೆ ಹಂಚಿಕೆ ಪಟ್ಟಿ ಹೀಗಿದೆ :

ಮಳೆಯ ಹಂಚಿಕೆಯಲ್ಲಿ ಅಧಿಕಮಳೆ ಬೀಳುವ ಪ್ರವೇಶ, ಸಾಧಾರಣ ಮಳೆ ಬೀಳುವ ಪ್ರದೇಶ, ಕಡಿಮೆ ಮಳೆ ಬೀಳುವ ಪ್ರದೇಶ ಎಂದು ವಿಂಗಡಿಸಬಹುದು.

ಅಧಿಕ ಮಳೆ : ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಭಾಗ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಬೆಳಗಾಂವಿಯ ನಿಖರವಾಗಿರುತ್ತದೆ. ಸಾಧಾರಣ ಮಳೆ ಚಿಕ್ಕಮಗಳೂರು ಜಿಲ್ಲೆಯ ಪೂರ್ವಭಾಗ, ಮೈಸೂರು ಜಿಲ್ಲೆ, ಧಾರವಾಡ, ಹಾವೇರಿ ಮತ್ತು ಬೆಳಗಾಂವಿ ಜಿಲ್ಲೆಯ ಕೇಂದ್ರ ಭಾಗಗಳು, ಹಾಸನ, ಮಂಡ್ಯ, ಬೆಂಗಳೂರು ಮತ್ತು ಬೀದರ್ ಜಿಲ್ಲೆಗಳು, ತುಮಕೂರು ಜಿಲ್ಲೆಯ ಉತ್ತರಭಾಗ - ಇವು ಸಾಧಾರಣ ಮಳೆ ಬೀಳುವ ಪ್ರದೇಶಗಳು. ಕಡಿಮೆ ಮಳೆ ಬೀಳುವ ಪ್ರದೇಶಗಳು ರಾಯಚೂರು, ಬಳ್ಳಾರಿ, ಬಿಜಾಪುರ ಮತ್ತು ಚಿತ್ರದುರ್ಗ, ಗುಲ್ಬರ್ಗಾದ ದಕ್ಷಿಣ ಭಾಗ, ಬೆಳಗಾಂವಿ ಜಿಲ್ಲೆಯ ಪೂರ್ವಭಾಗ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಯ ಉತ್ತರ ಭಾಗ, ಮೈಸೂರು ಜಿಲ್ಲೆಯ ದಕ್ಷಿಣ ಭಾಗಗಳು, ಚಿತ್ರದುರ್ಗ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಗಳಲ್ಲಿ ಕನಿಷ್ಠ ಪ್ರಮಾಣದ ಮಳೆಯಾಗುತ್ತದೆ. ಇವು ಕೂಡ ಅನಿಶ್ಚಿತವೇ. ವರ್ಷದಿಂದ ವರ್ಷಕ್ಕೆ ಬೀಳುವ ಮಳೆಯ ಪ್ರಮಾಣ ಹಾಗೂ ಮಳೆಯ ಹಂಚಿಕೆ ಕಡಿಮೆಯಾಗುತ್ತಲೇ ಇರುವುದು ಹಾಗೂ ಅನಿಶ್ಚಿತವಾಗಿ ಮಳೆ ಬೀಳುವುದರಿಂದ ಕರ್ನಾಟಕವನ್ನು ಅತಿವೃಷ್ಟಿಗಿಂತ ಅನಾವೃಷ್ಟಿಯೇ ಹೆಚ್ಚು ಕಾಡುತ್ತಿದೆ. ಅನಾವೃಷ್ಟಿ ಅಧಿಕಗೊಳ್ಳುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಸಸ್ಯ ಸಂಪತ್ತು, ಅರಣ್ಯಗಳು ದಿನೇ ದಿನೇ ಕ್ಷೀಣಿಸುತ್ತಿದ್ದು ಕೃಷಿ ವಲಯದ ಮೇಲೆ ತೀವ್ರತರ ಪರಿಣಾಮವನ್ನು ಬೀರಿವೆ.

ಮಣ್ಣು : ಮಣ್ಣು ಸಸ್ಯಗಳಿಗೆ ನೀರು ಮತ್ತು ಪೋಷಕಾಂಶಗಳನ್ನು ಒದಗಿಸುವ ಪ್ರಮುಖ ಸಂಪನ್ಮೂಲ. ಸಸ್ಯದ ಬೇರುಗಳು ವರ್ಧಿಸಲು ಉತ್ತಮ ವಾತಾವರಣ ಕಲ್ಪಿಸುವುದು ಮಣ್ಣೇ. ಮಣ್ಣಿನ ರಚನೆ, ನೀರು ಇಂಗುವಿಕೆ, ಮೇಲ್ಮೈಲಕ್ಷಣ ಇವು ಸಕಲ ಜೀವರಾಶಿಗಳ ಜೀವಾಳ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯ ಮಣ್ಣಿನ ವಿವರಗಳನ್ನು

ಕರ್ನಾಟಕ : ಜಿಲ್ಲಾವಾರು ಮಾಹೆಯಾನ ವಾಡಿಕೆ ಹಾಗೂ ವಾಸ್ತವ ಮಳೆ, 2008
(ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ)

ಜಿಲ್ಲೆಗಳು	ಜನವರಿ		ಫೆಬ್ರವರಿ		ಮಾರ್ಚ್		ಏಪ್ರಿಲ್		ಮೇ		ಮಾನ್ಸೂನ್ ಪೂರ್ವ		ಜೂನ್		ಜುಲೈ		ಆಗಸ್ಟ್		ಸೆಪ್ಟಂಬರ್		ನೈಋತ್ಯ ಮಾನ್ಸೂನ್		ಅಕ್ಟೋಬರ್		ನವೆಂಬರ್		ಈಶಾನ್ಯ ಮಾನ್ಸೂನ್		ವಾರ್ಷಿಕ		ಸರಾಸರಿ
	N	A	N	A	N	A	N	A	N	A	N	A	N	A	N	A	N	A	N	A	N	A	N	A	N	A	N	A	N	A	
ಬೆಂಗಳೂರು	3	0	8	19	10	138	37	43	111	86	169	286	69	51	101	161	116	271	174	112	460	595	159	169	62	52	221	221	850	1102	51
ಬೆಂಗಳೂರು(ಗ್ರಾ.)	2	0	5	13	8	138	34	25	94	100	143	276	62	14	93	208	112	224	160	125	427	571	154	182	54	39	208	221	778	1068	42
ಚಿತ್ರದುರ್ಗ	2	0	3	25	6	94	30	13	79	93	120	225	49	52	62	64	64	141	108	152	283	409	117	108	40	21	159	129	562	763	31
ದಾವಣಗೆರೆ	2	0	1	4	4	103	39	32	84	80	130	219	66	79	98	61	79	110	114	84	359	334	119	82	41	70	160	152	649	705	43
ಕೋಲಾರ	4	0	5	24	11	75	29	8	84	10	133	117	54	23	76	146	87	151	145	128	362	448	144	151	60	80	204	231	699	796	34
ಶಿವಮೊಗ್ಗ	1	0	1	13	7	148	45	37	94	49	148	247	334	377	648	379	366	550	138	196	1483	1502	135	64	45	13	180	77	1811	1826	89
ತುಮಕೂರು	2	0	3	34	9	88	33	21	98	94	145	237	61	62	75	155	81	213	145	129	362	559	119	150	52	40	201	190	708	986	32
ರಾಮನಗರ	2	0	5	6	12	109	45	10	128	136	193	261	61	14	83	100	102	233	178	126	424	473	168	138	54	47	222	185	839	919	42
ಚಿಕ್ಕಬಳ್ಳಾಪುರ	2	0	4	19	8	85	26	2	74	61	114	167	61	55	92	151	107	125	154	236	414	567	147	140	54	55	201	195	729	929	34
ಚಾಮರಾಜನಗರ	3	0	7	21	16	94	68	62	146	103	240	280	52	51	59	64	70	137	134	31	315	278	168	520	64	48	232	298	787	856	43
ಚಿಕ್ಕಮಗಳೂರು	2	0	3	57	12	172	57	36	105	49	179	310	314	317	620	454	405	917	167	78	1506	1466	182	109	54	17	205	126	1890	1902	87
ದ.ಕನ್ನಡ	4	0	2	7	10	265	48	53	171	87	235	412	942	962	1217	706	856	684	323	321	3338	2673	233	205	94	44	317	246	3890	3334	117
ಹಾಸನ	3	0	4	46	11	140	58	37	107	103	183	326	118	131	219	201	134	289	112	109	583	730	154	163	55	35	209	198	975	1254	58
ಕೊಡಗು	4	0	4	15	18	185	71	42	151	53	248	295	585	454	742	599	600	608	202	224	2129	1885	183	200	65	8	248	208	2625	2388	-
ಮಂಡ್ಯ	2	0	6	5	10	144	50	26	124	49	192	224	48	83	52	65	61	109	133	42	294	299	164	115	54	17	218	132	704	655	37
ಮೈಸೂರು	3	0	5	8	13	135	65	36	135	86	221	265	67	69	97	99	70	115	102	46	336	329	144	149	52	14	197	163	754	757	47
ಉಡುಪಿ	3	0	1	14	3	255	29	38	169	5	209	362	1064	920	1278	662	904	672	423	511	3669	2765	212	152	79	15	291	167	4165	3294	121
ಬಳ್ಳಾರಿ	2	0	2	10	3	114	29	8	71	47	105	179	73	31	84	35	93	104	137	151	387	321	104	72	31	69	135	141	627	641	40
ಬೀದರ್	5	0	8	20	11	85	20	8	31	18	75	131	132	107	191	126	195	225	187	305	705	764	81	50	19	3	100	53	880	948	49
ಗುಲ್ಬರ್ಗಾ	3	0	4	5	7	133	19	11	37	26	70	175	120	64	158	113	165	153	197	166	640	496	103	73	21	23	124	96	834	767	45
ಕೊಪ್ಪಳ	1	0	1	6	2	152	22	14	50	31	75	203	69	36	79	31	87	41	160	206	384	314	94	81	24	49	118	130	578	647	36
ರಾಯಚೂರು	1	0	2	8	5	134	19	3	39	19	66	164	84	16	114	63	117	106	164	124	479	309	107	68	23	23	130	91	675	564	37
ಬಾಗಲಕೋಟೆ	1	0	2	22	5	125	24	20	57	36	89	206	72	33	75	27	70	59	144	149	361	268	102	63	28	35	130	96	580	572	40
ಬೆಳಗಾಂವಿ	2	0	1	3	7	107	30	34	76	37	116	181	117	134	206	93	124	205	114	168	561	600	108	51	34	44	142	95	819	876	53
ಬಿಜಾಪುರ	2	0	3	7	5	79	18	16	44	24	73	126	89	19	87	38	86	103	167	194	429	354	100	51	24	18	124	69	626	549	40
ಧಾರವಾಡ	3	0	4	0	8	119	46	39	88	31	149	189	108	76	149	89	101	178	121	107	479	450	112	50	41	81	153	131	781	770	58
ಗದಗ	2	0	1	0	4	191	33	53	76	46	116	293	79	41	72	41	74	60	140	88	365	225	111	80	32	88	143	168	624	686	43
ಹಾವೇರಿ	1	0	1	1	5	110	43	33	34	72	134	116	105	118	173	85	108	181	98	74	484	458	112	85	41	41	153	126	771	800	61
ಉ.ಕನ್ನಡ	1	0	1	7	3	109	25	130	119	52	148	293	698	671	688	528	598	786	253	318	2537	2313	140	41	50	11	190	52	2876	2063	103
ಕರ್ನಾಟಕ	2	0	3	15	8	129	37	33	91	61	141	238	189	172	272	186	199	262	160	162	820	782	104	106	37	37	179	143	1140	1163	57

ನೋಡಬಹುದು. ಭೂಮಿ, ವಾಯುಗುಣ, ಸಸ್ಯ ಸಂಪತ್ತು ಇವುಗಳಿಗನುಗುಣವಾಗಿ ಮಣ್ಣುಗಳಲ್ಲೂ ವೈವಿಧ್ಯತೆ ಇರುತ್ತದೆ.


ಕರ್ನಾಟಕ ರಾಜ್ಯದ ಮಣ್ಣುಗಳನ್ನು ಸ್ಥೂಲವಾಗಿ ನಾಲ್ಕು ರೀತಿಯಲ್ಲಿ ವಿಭಾಗಿಸಬಹುದು : ಕರಾವಳಿ ಮೆಕ್ಕಲುಮಣ್ಣು, ಜಂಬಿಟ್ಟಿಗೆ ಮಣ್ಣು, ಕೆಂಪು ಮಣ್ಣು, ಕಪ್ಪುಮಣ್ಣು. ಕೆಲವು ಸ್ಥಿರವಾಗಿ ನೂರಾರು ವರ್ಷಗಳ ಕಾಲ ಒಂದೇ ಕಡೆ ನಿಂತುಬಿಟ್ಟರೆ, ಇನ್ನು ಕೆಲವು ಪ್ರಕೃತಿಯ ವೈಪರೀತ್ಯದಿಂದಾಗಿ ಸ್ಥಿತ್ಯಂತರಗೊಳ್ಳುತ್ತವೆ. ಇದಕ್ಕೆ ಬೀಸುವಗಾಳಿ, ಬೀಳುವ ಮಳೆ, ಹರಿಯುವ ನೀರು ಮುಖ್ಯವಾಗುತ್ತವೆ. ಈ ಕಾರಣದಿಂದಾಗಿಯೇ ಮಣ್ಣುಗಳಲ್ಲಿ ವಿವಿಧ ಬಗೆಗಳು ಉಂಟಾಗುವುದು ಮತ್ತು ಅವುಗಳ ಫಲವತ್ತತೆಯಲ್ಲೂ ಬಣ್ಣ ಮತ್ತು ಗುಣಗಳಲ್ಲೂ ಭಿನ್ನತೆ ತೋರುವುದು. ಇಂಥ ವ್ಯತ್ಯಾಸಗಳೇ ವೈವಿಧ್ಯಮಯವಾದ ಬೆಳೆಗಳಿಗೆ ಕಾರಣ.

ಕರಾವಳಿಯ ಮೆಕ್ಕಲು ಮಣ್ಣು : ಕರ್ನಾಟಕದ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಮಣ್ಣು ಹಂಚಿಕೆಯಾಗಿದೆ. ಪಶ್ಚಿಮಘಟ್ಟಗಳಿಂದ ಹರಿಯುವ ನದಿ, ಝರಿ, ತೊರೆ ಇವು ಹೊತ್ತು ತರುವಂಥದೇ ಮೆಕ್ಕಲು ಮಣ್ಣು. ಮರಳು ಮತ್ತು ಕೊಳೆತ ಜೈವಿಕಾಂಶಗಳು ಇದರಲ್ಲಿ ಹೆಚ್ಚಾಗಿದ್ದು ಸತ್ವಭರಿತವಾಗಿರುತ್ತದೆ. ಈ ಭಾಗದಲ್ಲಿ ಮಳೆ ಅಧಿಕವಾಗಿರುವುದರಿಂದ ಬತ್ತ, ಬಾಳೆ, ಅಡಕೆ, ತೆಂಗು, ಗೋಡಂಬಿ ಬೆಳೆಗಳು ಸದಾ ಇರುತ್ತವೆ.

ಜಂಬಿಟ್ಟಿಗೆ ಮಣ್ಣು : ಇದು ಹೆಚ್ಚು ಉಷ್ಣಾಂಶ ಹಾಗೂ ಅಧಿಕ ಮಳೆ ಬೀಳುವ ಪ್ರದೇಶಗಳಲ್ಲಿ ರೂಪುಗೊಳ್ಳುತ್ತದೆ. ಶಿಲೆಗಳು ಆಳವಾಗಿ ಶೈಥಿಲ್ಯ ಹೊಂದಿ ನೀರಿನಲ್ಲಿ ಕರಗದ ಕಬ್ಬಿಣ ಮತ್ತು ಅಲ್ಯೂಮಿನಿಯಂಗಳು ಮಣ್ಣಿನ ಮೇಲ್ಭಾಗದಲ್ಲಿ ಉಳಿಯುವುದರಿಂದ ಮಣ್ಣು ಗಟ್ಟಿಗೊಳ್ಳುತ್ತದೆ. ಉತ್ತರಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವಭಾಗ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾಂವಿ ಜಿಲ್ಲೆಯ ಸ್ವಲ್ಪ ಭಾಗಗಳಲ್ಲಿ ಈ ಮಣ್ಣು ಕಂಡು ಬರುತ್ತದೆ. ಬೀದರ್, ಗುಲ್ಬರ್ಗಾ, ಕೋಲಾರ, ಬೆಂಗಳೂರು ಈ ಭಾಗಗಳಲ್ಲೂ ಜಂಬಿಟ್ಟಿಗೆ ಮಣ್ಣು ಅಲ್ಪ ಪ್ರಮಾಣದಲ್ಲಿ ಕಂಡುಬರುತ್ತದೆ. ಹಳದಿ, ಕೆಂಪು, ಕಂದು ಬಣ್ಣದಿಂದ ಇದು ಕೂಡಿದ್ದು ಬತ್ತ, ಬಾಳೆ, ಕಬ್ಬು, ತೆಂಗು, ಅಡಕೆ, ಏಲಕ್ಕಿ, ಗೋಡಂಬಿ, ಮೆಣಸು, ಕಾಫಿ, ಚಹ, ಕಿತ್ತಲೆ ಮುಂತಾದವು ಬೆಳೆಯಲು ಸಹಕಾರಿಯಾಗಿದೆ. ಎಣ್ಣೆಕಾಳು, ಜೋಳ, ಕಡಲೆ, ರಾಗಿ ಇತ್ಯಾದಿಗಳನ್ನೂ ಬೆಳೆಯುತ್ತಾರೆ. ನೀರಿನ ವ್ಯವಸ್ಥೆ ಇದ್ದಲ್ಲಿ ಎಲ್ಲ ರೀತಿಯ ವಾಣಿಜ್ಯ ಬೆಳೆಗಳನ್ನು ತೆಗೆಯಬಹುದು.

ಕೆಂಪು ಮಣ್ಣು : ಕರ್ನಾಟಕದ ಬಹುತೇಕ ಭಾಗಗಳಲ್ಲಿರುವಂಥದ್ದು. ಹೆಚ್ಚು ಆಳವಿಲ್ಲದ ಇದು ಕೆಲವೆಡೆ ನುರುಜಿನಿಂದ ಕೂಡಿರುತ್ತದೆ. ನೀರನ್ನು ಹಿಡಿದಿಡುವ ಗುಣ ಕಡಿಮೆ. ಭೂ ವಿಜ್ಞಾನಿಗಳ ಪ್ರಕಾರ ಸುಣ್ಣ, ಸಾರಜನಕ ಹಾಗೂ ಜೈವಿಕಾಂಶಗಳು ಅತ್ಯಂತ ಕಡಿಮೆಯಿದ್ದು ಫಲವತ್ತತೆಯೂ ಕಡಿಮೆ. ಆದರೆ ಕರ್ನಾಟಕದ ಕೃಷಿ ವಲಯವನ್ನು ಅವಲೋಕಿಸಿದರೆ ಇತರ ಮಣ್ಣುಗಳಿಗಿಂತ ಹೆಚ್ಚು ವ್ಯಾಪ್ತಿಯಲ್ಲಿ ಕೃಷಿಗೆ ಯೋಗ್ಯವಾಗಿದ್ದು ಫಲವತ್ತತೆಯಿಂದ ಕೂಡಿರುವ ಭೂಮಿ ಇದು. ಮರಳು ಮಿಶ್ರಿತವಾಗಿರುವ ಕೆಂಪು ಮಣ್ಣಿನಲ್ಲಿ ರಾಗಿ, ಜೋಳ, ನೆಲಗಡಲೆ, ಹರಳು, ಹತ್ತಿ, ದ್ವಿದಳ ಧಾನ್ಯಗಳು ಮೊದಲಾದವನ್ನು ಮಳೆಯಾಶ್ರಯದಲ್ಲಿಯೂ ಇತರ ವಾಣಿಜ್ಯ ಬೆಳೆಗಳನ್ನು ನೀರಾವರಿಯಿಂದಲೂ ಬೆಳೆಯುವರು. ಕೆಂಪು ಮಣ್ಣಿನಲ್ಲಿ ಕಪ್ಪು ಮಣ್ಣು ಮಿಶ್ರಗೊಂಡಿದ್ದರೆ ಜೋಳ, ಹತ್ತಿ, ಮೆಣಸಿನಕಾಯಿ, ಗೋದಿ, ದ್ವಿದಳ ಧಾನ್ಯಗಳು; ನೀರಾವರಿಯಿದ್ದರೆ ಬತ್ತ, ಕಬ್ಬು, ಹತ್ತಿ, ಬಾಳೆ, ತೆಂಗು ಮುಂತಾದುವನ್ನು ಬೆಳೆಯಬಹುದು. ಕೆಂಪುಮಣ್ಣಿಗೆ ಜೇಡಿಮಣ್ಣು ಮಿಶ್ರವಾಗಿರುವ ಭೂಪ್ರದೇಶಗಳು ಕರ್ನಾಟಕದ ಹೆಚ್ಚು ಭಾಗಗಳಲ್ಲಿ ಕಂಡುಬರುತ್ತದೆ.

ಕಪ್ಪುಮಣ್ಣು : ರಾಜ್ಯವು ಉಷ್ಣವಲಯದಲ್ಲಿದ್ದು, ಇಲ್ಲಿ ಕಂಡುಬರುವ ಕಪ್ಪು ಮಣ್ಣನ್ನು 'ರೇಗಾರ್' ಎಂದು ಕರೆಯುವರು. ಹತ್ತಿ ಬೆಳೆಯಲು ಯುಕ್ತವಾಗಿರುವುದರಿಂದ ಇದನ್ನು 'ಹತ್ತಿ ಬೆಳೆಯ ಕಪ್ಪು ಮಣ್ಣು' ಎಂದೇ ಕರೆಯುವುದು ವಾಡಿಕೆ. ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದ ನಿರ್ಮಿತವಾಗಿರುವ ಇದು ದೀರ್ಘಕಾಲದವರೆಗೆ ತೇವವನ್ನು ಹಿಡಿದಿಡುತ್ತದೆ. ಸುಣ್ಣ ಮತ್ತು ಮೆಗ್ನೀಷಿಯಂಗಳು ಈ ಮಣ್ಣಿನಲ್ಲಿ ಹೆಚ್ಚು. ಆದ್ದರಿಂದಲೇ ಶುಷ್ಕ ಬೇಸಾಯಕ್ಕೆ ಇದು ಪ್ರಸಿದ್ಧಿ. ಕಪ್ಪು ಮಣ್ಣು ಹೆಚ್ಚಾಗಿ ಬೆಳಗಾಂವಿ, ಬಿಜಾಪುರ, ಗುಲ್ಬರ್ಗಾ, ಬೀದರ್, ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ರಾಯಚೂರು, ಧಾರವಾಡ, ಗದಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಮಣ್ಣಿನಲ್ಲಿ ಜೋಳ, ಗೋದಿ, ಹತ್ತಿ, ಎಣ್ಣೆಕಾಳುಗಳು, ಮೆಣಸಿನಕಾಯಿ, ತೊಗರಿ, ಕಡಲೆ, ಈರುಳ್ಳಿ ಮುಂತಾದವನ್ನು ಬೆಳೆಯಲಾಗುವುದು.



ನದಿಗಳು : ಯಾವುದೇ ದೇಶ ಅಥವಾ ರಾಜ್ಯದ ನದಿಗಳು ಅಲ್ಲಿಯ ಮೇಲ್ಮೈ ಲಕ್ಷಣವನ್ನು ಅವಲಂಬಿಸಿರುತ್ತವೆ. ದೇಶದ ಒಟ್ಟು ಜಲಸಂಪತ್ತಿನಲ್ಲಿ ಶೇ. 6 ರಷ್ಟನ್ನು ಹೊಂದಿರುವ ರಾಜ್ಯ ಮೂರು ಮುಖ್ಯ 'ಜಲವಿಭಾಜಕ'ಗಳನ್ನು ಹೊಂದಿದೆ. ಅವುಗಳೆಂದರೆ 1. ಪಶ್ಚಿಮ ಘಟ್ಟಗಳು

- ರಾಜ್ಯದಲ್ಲಿ ಪೂರ್ವಕ್ಕೆ ಹರಿಯುವ ಹಾಗೂ ಪಶ್ಚಿಮಕ್ಕೆ ಹರಿಯುವ ನದಿಗಳ ಜಲಾನಯನ ಪ್ರದೇಶಗಳನ್ನು ಬೇರ್ಪಡಿಸುವ ಮುಖ್ಯ ಜಲವಿಭಾಜಕ, 2. ರಾಜ್ಯದಲ್ಲಿ ಹರಿಶ್ಚಂದಗರ್ - ಬಾಲಘಾಟ್ ಶ್ರೇಣಿಯು ಕೃಷ್ಣಾ ಮತ್ತು ಗೋದಾವರಿನದಿಗಳ ಜಲಾನಯನ ಪ್ರದೇಶವನ್ನು ಬೇರ್ಪಡಿಸುವುದು, 3. ಇದು ನಂದಿದುರ್ಗ ಶ್ರೇಣಿ, ಕಾವೇರಿ ಹಾಗೂ ನಂದಿದುರ್ಗಗಳ ಜಲಾನಯನ ಕ್ಷೇತ್ರಗಳನ್ನು ಬೇರ್ಪಡಿಸುವುದು.

ಕರ್ನಾಟಕದ ನೀರಿನ ಹರಿವು ಹೆಚ್ಚಾಗಿ ಪಶ್ಚಿಮದಿಂದ ಪೂರ್ವದ ಕಡೆಗಿದೆ. ರಾಜ್ಯದ ಜಲವಿಭಾಜಕ ರೇಖೆಯನ್ನು ಬಲ್ಲಾಳರಾಯನ ದುರ್ಗದಿಂದ ನಂದಿದುರ್ಗಕ್ಕೆ ಅಲ್ಲಿಂದ ದಕ್ಷಿಣಾಭಿಮುಖವಾಗಿ ಆನೇಕಲ್ಲಿನವರೆಗೆ ಹಾಗೂ ದೇವರಾಯನ ದುರ್ಗದಿಂದ ಪಾವಗಡಕ್ಕೆ ಎಂದು ಮೂರು ರೀತಿಯಲ್ಲಿ ಗುರುತಿಸಲಾಗಿದೆ. ಮೊದಲನೆಯ ವರ್ಗದಲ್ಲಿ ಮುಖ್ಯವಾಗಿ ಹರಿಯುವ ನದಿಗಳು ತುಂಗ ಮತ್ತು ಭದ್ರ, ಇವು ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಹರಿಯುತ್ತವೆ. ತುಂಗಭದ್ರಾ ನದಿಗೆ ವೇದವತಿ, ವರದ ಉಪನದಿಗಳು ಸೇರುತ್ತವೆ. ತುಂಗಭದ್ರ ನದಿ ಕೃಷ್ಣಾ ನದಿಯ ಉಪನದಿಯಾಗಿದ್ದು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಕೃಷ್ಣಾನದಿಯನ್ನು ಸಂಧಿಸುತ್ತದೆ. ಭೀಮ, ಕೃಷ್ಣಾ ನದಿಯ ಒಂದು ಉಪನದಿ. ಘಟಪ್ರಭ, ಮಲಪ್ರಭ ಮತ್ತು ಡೋಣಿಗಳೂ ಅದರ ಉಪನದಿಗಳೇ. ಕಾವೇರಿ ನದಿ ಬಲ್ಲಾಳ ರಾಯನದುರ್ಗ ಮತ್ತು ನಂದಿದುರ್ಗಗಳ ಮಧ್ಯೆ ಹಬ್ಬಿರುವ ಬೆಟ್ಟ ಸಾಲುಗಳಲ್ಲಿ ಹರಿಯುತ್ತದೆ. ಇದರ ಉಗಮಸ್ಥಾನ ಕೊಡಗು ಜಿಲ್ಲೆಯ ಬ್ರಹ್ಮಗಿರಿ ಬೆಟ್ಟ ಶ್ರೇಣಿಯಲ್ಲಿರುವ ಭಾಗಮಂಡಲದ ತಲಕಾವೇರಿ. ಇದು ಪೂರ್ವಾಭಿಮುಖವಾಗಿ ಹರಿಯುತ್ತದೆ. ಮೈಸೂರು, ಹಾಸನ, ಮಂಡ್ಯ, ಜಿಲ್ಲೆಗಳ ಮೂಲಕ ಹರಿದು ಬೆಂಗಳೂರು ಜಿಲ್ಲೆಯ ದಕ್ಷಿಣದ ತುದಿ ತಲಪಿ ತಮಿಳುನಾಡನೆಡೆಗೆ ಅನೇಕ ಉಪನದಿಗಳಾಗಿ ಸಾಗುತ್ತದೆ. ಹಾರಂಗಿ, ಹೇಮಾವತಿ, ಲಕ್ಷ್ಮಣ ತೀರ್ಥ, ಕಪಿಲ, ಸುವರ್ಣಾವತಿ, ಶಿಂಷಾ ಲೋಕಪಾವನಿ ಮತ್ತು ಅರ್ಕಾವತಿ - ಇವು ಕಾವೇರಿಯ ಉಪನದಿಗಳು. ನುಗು ಮತ್ತು ಗುಂಡ್ಲುಗಳು ಕಪಿಲ ನದಿಯನ್ನು, ಕಣ್ವನದಿ ಶಿಂಷಾವನ್ನು ಸೇರುವ ಉಪನದಿಗಳು. ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದರಿಂದ ವಿದ್ಯುತ್ ಉತ್ಪಾದನೆಗೆ ಅನುಕೂಲವಾಗಿವೆ. ಸಮುದ್ರವನ್ನು ಸೇರುವ ಭಾಗಗಳಲ್ಲಿ ದೊಡ್ಡ ನದಿಗಳು ಅಳಿವೆ ಉಂಟು ಮಾಡಿ ದೋಣಿ ಸಂಚಾರಕ್ಕೆ ಅನುಕೂಲ ಕಲ್ಪಿಸಿವೆ. ಈ ನದಿಗಳು ಘಟ್ಟ ಪ್ರದೇಶವನ್ನು ಸವೆಸಿ ತರುವ ಮಣ್ಣು ಕೃಷಿಗೆ ಯೋಗ್ಯವಾಗಿದೆ. ಕಾಳಿ, ಗಂಗಾವಳಿ, ತದಡಿ, ಅಘನಾಶಿನಿ, ನೇತ್ರಾವತಿ, ವಾರಾಹಿ ಮತ್ತು ಶರಾವತಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಹರಿಯುವ ಮುಖ್ಯ ನದಿಗಳು. ಗೇರುಸೊಪ್ಪೆಯ ಜಲಪಾತ ಶಿವಮೊಗ್ಗ ಜಿಲ್ಲೆಯ ಅಂಬುತೀರ್ಥದ ಬಳಿ ಹುಟ್ಟುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಯುವ ಪಯಸ್ವಿನಿ ನದಿ ಕೊಡಗಿನಲ್ಲಿ ಹುಟ್ಟಿ ಪಶ್ಚಿಮದಲ್ಲಿ ಸಮುದ್ರ ಸೇರುತ್ತದೆ. ನೇತ್ರಾವತಿ ನದಿ ಸುಬ್ರಹ್ಮಣ್ಯದ ಕಡೆಯಿಂದ ಹರಿದು ಕುಮಾರಧಾರದೊಂದಿಗೆ ಕೂಡಿಕೊಂಡು

ಕರ್ನಾಟಕದ ಪ್ರಮುಖ ನದಿಗಳ ವಿವರ
ಆಧಾರ – ಕರ್ನಾಟಕ ಸ್ಟೇಟ್ ಗೆಜೆಟಿಯರ್

ನದಿಗಳು	ಉಗಮ ಸ್ಥಳ	ಸಂಗಮ ಸ್ಥಳ	ರಾಜ್ಯದಲ್ಲಿಯ ಉದ್ದ (ಕಿ.ಮೀ.ಗಳಲ್ಲಿ)	ರಾಜ್ಯದಲ್ಲಿಯ ಜಲಾನಯನ ಪ್ರದೇಶ (ಚ.ಕೀ.ಮೀ.ಗಳಲ್ಲಿ)
1. ಕೃಷ್ಣಾ	ಪ.ಘಟ್ಟ (ಮಹಾಬಲೇಶ್ವರ ಘಾಟಿ)	ಬಂಗಾಳಕೊಲ್ಲಿ (ದಿವಿಬಳಿ)	483	113030
2. ತುಂಗಭದ್ರಾ	ಪ.ಘಟ್ಟ (ಗಂಗಾಮೂಲ)	ಕೃಷ್ಣಾ (ಕರ್ನೂಲು ಬಳಿ)	381	57671
3. ಘಟಪ್ರಭಾ	ಪ.ಘಟ್ಟ (ಅಂಗೋಲಿ ಬಳಿ)	ಕೃಷ್ಣಾ (ಹೆಡಲೂರು ಬಳಿ)	216	8830
4. ಭೀಮಾ	ಪ.ಘಟ್ಟ (ಭೀಮಾ ಶಂಕರ)	ಕೃಷ್ಣಾ (ಮಲಕಾಪುರ)	298	18315
5. ಮಲಪ್ರಭಾ	ಪ.ಘಟ್ಟ (ಕುಣತುಂಬಿ ಬಳಿ)	ಕೃಷ್ಣಾ (ಕೂಡಲಸಂಗಮ ಬಳಿ)	304	11540
6. ಕಾವೇರಿ	ಪ.ಘಟ್ಟ (ತಲಕಾವೇರಿ)	ಬಂಗಾಳಕೊಲ್ಲಿ (ಕಾವೇರಿ ಪಟ್ಟಿನಮ್)	320	36130
7. ಅರ್ಕಾವತಿ	ನಂದಿಬೆಟ್ಟ	ಕಾವೇರಿ (ಬೆಂಗಳೂರು ಜಿಲ್ಲೆ)	161	4351
8. ಕಬಿನಿ	ಉತ್ತರ ವೈನಾಡು (ಕೇರಳ)	ಕಾವೇರಿ (ಟಿ. ನರಸೀಪುರ ಬಳಿ)	230	7040
9. ಶಿಂಷಾ	ತಿಪಟೂರು (ತುಮಕೂರು ಜಿಲ್ಲೆ)	ಕಾವೇರಿ (ಮಂಡ್ಯ ಜಿಲ್ಲೆ ಮಳವಳ್ಳಿ ಬಳಿ	215	8470
10. ಹೇಮಾವತಿ	ಪ.ಘಟ್ಟ (ಚಿಕ್ಕಮಗಳೂರು ಜಿಲ್ಲೆ)	ಕಾವೇರಿ (ಮಾವಿನ ಕೆರೆ ಬಳಿ, ಮಂಡ್ಯ)	245	5419
11. ಉತ್ತರ ಪಿನಾಕಿನಿ	ನಂದಿದುರ್ಗ (ಚೆನ್ನಕೇಶವ ಬೆಟ್ಟ)	ಬಂಗಾಳಕೊಲ್ಲಿ (ನೆಲ್ಲೂರು ಬಳಿ)	61	6940
12. ಕಾರಂಜ	ಮೇಡಕ್ ಜಿಲ್ಲೆ (ಆಂಧ್ರಪ್ರದೇಶ ಬೀರಹಳ್ಳಿ ಪಕ್ಕ)	ಮಾಂಜರ (ನಾರದ ಸಂಗಮ)	74	2839
13. ದಕ್ಷಿಣ ಪಿನಾಕಿನಿ	ನಂದಿದುರ್ಗ ಬೆಟ್ಟ (ಹಾರ್ವಶೆಟ್ಟಿ ಗ್ರಾಮದ ಬಳಿ)	ಬಂಗಾಳಕೊಲ್ಲಿ (ಕಡ್ಲೂರು ಬಳಿ)	79	360
14. ಪಾಲಾರ್	ನಂದಿದುರ್ಗ ಬೆಟ್ಟ (ತಳಗವಾರ ಗ್ರಾಮದ ಬಳಿ, ಕೋಲಾರ)	ಬಂಗಾಳಕೊಲ್ಲಿ (ಚೆನ್ನೈ ಬಳಿ)	93	2790
15. ವೇದಾವತಿ(ಹಗರಿ)	ಪ.ಘಟ್ಟ (ಬಾಬಾಬುಡನ್‌ಗಿರಿ)	ತುಂಗಭದ್ರ (ಶಿರಗುಪ್ಪಾ ಬಳಿ)	293	23498
16. ಕಾಳಿ	ಪ.ಘಟ್ಟ (ಡಿಗ್ಗಿಘಾಟ್, ಸೂಪ ಬಳಿ)	ಅರಬ್ಬೀ ಸಮುದ್ರ (ಕಾರವಾರ ಬಳಿ)	184	4297
17. ಆಘನಾಶಿನಿ	ಪ.ಘಟ್ಟ(ಶಿರ್ಸಿಯ ಬಳಿ)	ಅರಬ್ಬೀ ಸಮುದ್ರ (ತದಡಿ ಬಳಿ)	121	1470
18. ನೇತ್ರಾವತಿ	ಪ.ಘಟ್ಟ (ಬಲ್ಲಾಳರಾಯನ ದುರ್ಗ ಬಳಿ)	ಅರಬ್ಬೀ ಸಮುದ್ರ (ಕೊಡಿಯಾಲ ಬೈಲ ಬಳಿ)	96	3355
19. ಬೇಡ್ತಿ (ಗಂಗಾವಳಿ)	ಸೋಮೇಶ್ವರ ಕುಂಡ (ಧಾರವಾಡಬಳಿ)	ಅರಬ್ಬೀ ಸಮುದ್ರ (ಗಂಗಾವಳಿ ಗ್ರಾಮದ ಬಳಿ)	161	4446
20. ಮಹದಾಯಿ	ದೇವಾಂಗ (ಬೆಳಗಾವಿ ಜಿಲ್ಲೆ)	ಅರಬ್ಬೀ ಸಮುದ್ರ (ಪಣಜಿ ಬಳಿ)	35	4045
21. ಶರಾವತಿ	ಪ.ಘಟ್ಟ (ಅಂಬುತೀರ್ಥದ ಬಳಿ)	ಅರಬ್ಬೀ ಸಮುದ್ರ (ಹೊನ್ನಾವರದ ಬಳಿ)	128	2771
22. ಮಾಂಜಾರ	ಬಾಲಘಾಟ (ಮಹಾರಾಷ್ಟ್ರ)	ಗೋದಾವರಿ (ನಿಜಾಮಾಬಾದ್ ಬಳಿ)	116	4430

ಮಂಗಳೂರಿನ ಬಳಿ ಸಮುದ್ರವನ್ನು ಸೇರುತ್ತದೆ. ಅಂಗಾರಕಟ್ಟೆ ಬಳಿ ಸಮುದ್ರ ಸೇರುವ ಸ್ವರ್ಣ ಮತ್ತು ಸೀತಾ ನದಿಗಳು ಉಡುಪಿ ತಾಲ್ಲೂಕಿನ ಮೂಲಕ ಹರಿಯುತ್ತವೆ. ಕೆಲವು ಸಣ್ಣ ನದಿಗಳು ಕುಂದಾಪುರ ತಾಲ್ಲೂಕಿನಲ್ಲಿ ಹರಿದು ಅಲ್ಲಿಯ ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಉತ್ತರ ಮತ್ತು ದಕ್ಷಿಣ ಪಿನಾಕಿನಿ ಮತ್ತು ಪಾಲಾರ್ ನದಿಗಳು ನಂದಿದುರ್ಗದ ಪೂರ್ವಕ್ಕೆ ಹರಿಯುತ್ತವೆ. ಪಿನಾಕಿನಿ ನದಿಗೆ ಚಿತ್ರಾವತಿ ಮತ್ತು ಪಾಪಾಘ್ನಿ ಉಪನದಿಗಳು ಸೇರುತ್ತವೆ.

ಸಸ್ಯ ಸಂಪತ್ತು : ಕರ್ನಾಟಕದ ಎಲ್ಲ ಭಾಗಗಳಲ್ಲೂ ಒಂದೇ ರೀತಿಯ ವಾಯುಗುಣ ಮತ್ತು ಭೌಗೋಳಿಕ ಲಕ್ಷಣ ಇಲ್ಲದಿರುವುದರಿಂದ ಸಸ್ಯ ಸಂಪತ್ತು ವೈವಿಧ್ಯಮಯವಾಗಿರುವುದನ್ನು ಕಾಣಬಹುದು. ಒಂದು ಕಡೆ ಅತಿ ಹೆಚ್ಚು ಆರ್ದ್ರತೆ ಇರುವ ಹವಾಗುಣವಿದ್ದರೆ ಮತ್ತೊಂದು ಭಾಗದಲ್ಲಿ ಅಷ್ಟೇ ಪ್ರಮಾಣದ ಒಣಹವೆ ಇರುವುದೇ ಈ ವೈಪರೀತ್ಯಕ್ಕೆ ಮೂಲ ಕಾರಣವಾಗಿದೆ. ಕರ್ನಾಟಕದ ಸಸ್ಯಸಂಪತ್ತನ್ನು ಮುಖ್ಯವಾಗಿ ಐದು ವಿಧವಾಗಿ ವಿಭಾಗಿಸಬಹುದು. 1. ಕರಾವಳಿಯ ಸಸ್ಯವರ್ಗ, 2. ನಿತ್ಯ ಹರಿದ್ವರ್ಣದ ಸಸ್ಯವರ್ಗ, 3. ಪರ್ವತ ವಲಯದ ಸಸ್ಯವರ್ಗ, 4. ಎಲೆಯುದುರುವ ಸಸ್ಯವರ್ಗ, 5. ಕುರುಚಲು ಮತ್ತು ಮುಳ್ಳುಕಂಟಿ ಸಸ್ಯವರ್ಗ.

ಕರಾವಳಿಯ ಸಸ್ಯವರ್ಗವು ಸಮುದ್ರದ ಅಂಚಿನಲ್ಲಿ ದಕ್ಷಿಣದ ಮಂಗಳೂರಿನಿಂದ - ಉತ್ತರದ ಕಾರವಾರದವರೆಗೆ ಸುಮಾರು 400ಕಿ.ಮೀ. ದೂರದವರೆಗೆ ಹಬ್ಬಿದೆ. ಕರಾವಳಿಯಂಚಿನಲ್ಲಿರುವ ಅಳಿವೆಗಳು ಹಾಗೂ ಮರಳು ದಂಡೆಗಳಲ್ಲಿ ಇರುವ 'ಉಬ್ಬರವಿಳಿತ'ದಿಂದಾದ ಕಾಡುಗಳಿಗೆ 'ಮ್ಯಾಂಗ್ರೂವ್ ಸಸ್ಯವರ್ಗ' ಎನ್ನುವರು. ಇವು ಕುಂದಾಪುರದ ಗಂಗೊಳ್ಳಿ ಹಾಗೂ ಗೋಕರ್ಣದ ಗಂಗಾವಳಿ - ಬೇಡ್ತಿ ಅಳಿವೆ ಪ್ರದೇಶದಲ್ಲಿ ಸಾಕಷ್ಟು ವಿಸ್ತಾರವಾಗಿ ಹರಡಿವೆ. ನಿತ್ಯಹರಿದ್ವರ್ಣ ಕಾಡುಗಳನ್ನು ವಾರ್ಷಿಕವಾಗಿ ಸರಾಸರಿ 100 ಸೆ.ಮೀ. ಅಧಿಕ ಮಳೆಬೀಳುವ ಭಾಗಗಳಲ್ಲಿ ಕಾಣುತ್ತೇವೆ. ಉದಾ : ಮಲೆನಾಡಿನ ಪ್ರದೇಶವನ್ನು ನೋಡಬಹುದು. ಈ ಭಾಗಗಳಲ್ಲಿ ವರ್ಷಪೂರ್ತಿ ತೇವಾಂಶವಿರುವುದರಿಂದ ಸ್ವಾಭಾವಿಕ ಸಸ್ಯ ಸಂಪತ್ತು ಮಾತ್ರವಲ್ಲದೆ ನೆಡು ತೋಪುಗಳು, ತೇಗ ಮುಂತಾದ ಬೆಲೆ ಬಾಳುವ ಇತರ ಸಸ್ಯಗಳನ್ನು ಬೆಳೆಸಲಾಗುವುದು.

ಈ ಭಾಗಗಳಲ್ಲಿ ವಾರ್ಷಿಕ 150-300 ಸೆಂ.ಮೀ. ಮಳೆಯಾಗುವ ಘಟ್ಟಗಳ ಇಳಿಜಾರುಗಳಲ್ಲಿಯೂ ಎತ್ತರವಾದ ಸದಾ ಹಸುರೆಲೆಯಿಂದ ಕೂಡಿರುವ ಬೆಲೆಬಾಳುವ ಮರಗಳು ಬೆಳೆಯುತ್ತವೆ. ತೇಗ, ಹೊನ್ನೆ, ಮತ್ತಿ, ನಂದಿ ಮುಂತಾದವು. ಕರ್ನಾಟಕದ ಪೂರ್ವಭಾಗಕ್ಕೆ ಬಂದಂತೆ ಕಡಿಮೆ ಆರ್ದ್ರತೆ ಇರುವಲ್ಲಿ ಅನೇಕ ರೀತಿಯ ಎಲೆ ಉದುರುವ ಮರಗಳಿದ್ದು ಅವುಗಳಲ್ಲಿ ಶ್ರೀಗಂಧ ಮುಖ್ಯವಾದುದು. ಇಂತಹ ಭಾಗಗಳ ನೆರೆಹೊರೆಯಲ್ಲಿ ವಾಸಿಸುವ ಜನಸಮುದಾಯಗಳು ಫಲವತ್ತಾದ ಈ ನೆಲದಲ್ಲಿ ಬಿದಿರು ಮುಂತಾದ ಮರಗಳು ಎಲೆಗಳು ಉದುರುವಿಕೆಯನ್ನು ಮತ್ತು ಸಣ್ಣ ಪುಟ್ಟ ಗಿಡಗಳನ್ನು ಸುಟ್ಟು ಕೃಷಿ ಮಾಡುವವರೆಲ್ಲ ಬುಡಕಟ್ಟು ಸಮುದಾಯದವರಾಗಿದ್ದು ಫಲವತ್ತಾಗಿರುವವರೆಗೆ ಸಾಗುವಳಿ ಮಾಡಿ ನಿಸ್ಸಾರವೆನಿಸಿದಾಗ ಬೇರೆಡೆ ಸಾಗುವಳಿಯನ್ನು ಆರಂಭಿಸುತ್ತಾರೆ. ಸ್ಥಳಾಂತರ ಬೇಸಾಯ ಮಾಡುವ ಇವರು ವಾಸಿಸುವ ಸ್ಥಳಗಳಿಗೆ ಪೋಡುಗಳು ಎಂದು ಕರೆಯುವರು.

ಕರ್ನಾಟಕದ ಉತ್ತರಭಾಗಕ್ಕೆ ಹೋದಂತೆಲ್ಲ ಕಾಣುವುದು ಎಲೆ ಉದುರುವ ಉಷ್ಣವಲಯದ ಸಸ್ಯಗಳಾಗಿವೆ. ಸ್ವಾಭಾವಿಕ ಸಸ್ಯಗಳು ಈ ಭಾಗದಲ್ಲಿ ಕಾಣುವುದು ಶೇ. 10 ಮಾತ್ರ. ದಕ್ಷಿಣದ ಮೈದಾನ ಪ್ರದೇಶದಲ್ಲೂ ಮಧ್ಯ ಮತ್ತು ಪೂರ್ವಭಾಗಗಳಲ್ಲೂ ಶುಷ್ಕ ಹವೆ ಇದ್ದು ಎಲೆ ಉದುರುವ ಸಸ್ಯಗಳೇ ಹೆಚ್ಚು. ಬೆಟ್ಟದ ಇಳಿಜಾರುಗಳಲ್ಲಿ ಮಾತ್ರ ಸಣ್ಣ ಕಾಡುಗಳು ಕಂಡುಬರುತ್ತವೆ. ಕರ್ನಾಟಕದ ಕೆಲವು ಭಾಗಗಳಾದ ಕನಕಪುರ, ತುಮಕೂರು ನಡುವಿನ ಭಾಗ ಹಾಗೂ ಬಾಗೇಪಲ್ಲಿಯಿಂದ ಬಂಗಾರಪೇಟೆವರೆಗಿನ ಬೆಟ್ಟದ ಶ್ರೇಣಿಗಳಲ್ಲಿ ಕಾಣುವುದು ಇದೇ ಪರಿಸ್ಥಿತಿ.

ನೀರಾವರಿ : ಭಾರತದಲ್ಲಿ ಆಗಿಂದಾಗ್ಗೆ ಬರಪೀಡತವಾಗುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು, ಮಳೆಯನ್ನು ಆಶ್ರಯಿಸಿದೆ. ದೇಶದ ಒಟ್ಟು ಜಲಸಂಪತ್ತಿನಲ್ಲಿ ಶೇ. 6 ರಷ್ಟನ್ನು ಹೊಂದಿರುವ ರಾಜ್ಯ ಶೇ. 40 ರಷ್ಟನ್ನು ಪೂರ್ವಕ್ಕೆ ಹರಿಯುವ ನದಿಗಳಿಂದಲೂ ಶೇ. 60 ರಷ್ಟನ್ನು ಪಶ್ಚಿಮಕ್ಕೆ ಹರಿಯುವ ನದಿಗಳಿಂದಲೂ ಪಡೆಯುವುದು. ರಾಜ್ಯದ ನದಿಗಳಲ್ಲಿ ಹರಿಯುವ ಒಟ್ಟು ಜನಸಂಪತ್ತು ಸುಮಾರು 3438 ಟಿ.ಎಂ.ಸಿ.ಗಳೆಂದು ಅಂದಾಜು ಮಾಡಲಾಗಿದೆ. ಭಾರತದ ಒಟ್ಟು ಜಲಸಂಪತ್ತಿನಲ್ಲಿ ರಾಜ್ಯದ ಸ್ಥಾನ 12ನೇಯದಾಗಿದೆ. ಈ ಜಲಸಂಪತ್ತಿನ ಮೂಲಗಳು ವಿವಿಧ ತೆರನಾಗಿದ್ದು ರಾಜ್ಯದಲ್ಲಿಯ ನೀರಾವರಿಯ ಮೂಲಗಳನ್ನು ಕಾಲುವೆ, ಕೆರೆ ಮತ್ತು ಬಾವಿ ಎಂದು ಮೂರು ವಿಧವಾಗಿ ವಿಂಗಡಿಸಬಹುದು.

ಕಾಲುವೆ ನೀರಾವರಿ : ರಾಜ್ಯದ ನೀರಾವರಿ ಮೂಲಗಳಲ್ಲಿ ಕಾಲುವೆ ನೀರಾವರಿ ಎರಡನೆಯಾದಿಗ್ದು. ಇದರಿಂದ 1030438 ಹೆಕ್ಟೇರ್ ಪ್ರದೇಶವು ನೀರಾವರಿಗೆ ಒಳಪಟ್ಟಿದೆ. ಕಾಲುವೆ ನೀರಾವರಿ ರಾಜ್ಯಾದ್ಯಂತ ಹರಡಿದೆ. ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಉತ್ತರಕನ್ನಡ, ಕೊಡಗು, ಹಾವೇರಿ, ಉಡುಪಿ, ದಕ್ಷಿಣಕನ್ನಡ, ಹಾಸನ, ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ಕಂಡು ಬರುವುದು. ಕಾಲುವೆ ನೀರಾವರಿಯಲ್ಲಿ ಶೇ. 12.8 ರಷ್ಟನ್ನು ಹೊಂದಿರುವ ಗುಲ್ಬರ್ಗಾವು ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ರಾಜ್ಯದ ಒಟ್ಟು ಕಾಲುವೆ ನೀರಾವರಿ ಶೇ. 31.2 ರಷ್ಟಿದೆ.

ಕೆರೆ ನೀರಾವರಿ : ಕರ್ನಾಟಕವು ಕೆರೆ ನೀರಾವರಿಗೆ ಪ್ರಸಿದ್ಧವಾದುದು. ರಾಜ್ಯದಲ್ಲಿ 191691 ಹೆಕ್ಟೇರ್ ಪ್ರದೇಶವು ಕೆರೆನೀರಾವರಿಗೆ ಒಳಪಟ್ಟಿದ್ದು ಒಟ್ಟು ನೀರಾವರಿಯಲ್ಲಿ ಇದರ ಪಾಲು ಶೇ. 6.2 ರಷ್ಟಿದೆ. ರಾಜ್ಯದಲ್ಲಿ ಅತಿಹೆಚ್ಚು ಕೆರೆನೀರಾವರಿ ಹೊಂದಿರುವ ಜಿಲ್ಲೆ ಶಿವಮೊಗ್ಗ - ಶೇ. 27.6ವಾಗಿದೆ. ಇದಲ್ಲದೆ ಹಾಸನ, ತುಮಕೂರು, ಕೋಲಾರ, ಮಂಡ್ಯ, ಮೈಸೂರು ಜಿಲ್ಲೆಗಳು ಕೆರೆನೀರಾವರಿಗೆ ಪ್ರಸಿದ್ಧಿಯಾಗಿದೆ.

ಬಾವಿ ನೀರಾವರಿ : 1975ರ ಅನಂತರ ರಾಜ್ಯದಲ್ಲಿ ಕೊಳವೆ ಬಾವಿಯುಗ ಪ್ರಾರಂಭವಾಯಿತು. ಬಾವಿನೀರಾವರಿ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದ್ದು ಶೇ. 48.8 ರಷ್ಟು ಈ ಮೂಲದಿಂದಲೆ ನೀರಾವರಿ ದೊರಕುತ್ತಿದೆ. ಬಾವಿ ಹಾಗೂ ಕೊಳವೆ ಬಾವಿಗಳಿಂದ 1327452 ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದ್ದು ವಿವಿಧ ಜಿಲ್ಲೆಗಳಲ್ಲಿ ಇದು ಹೆಚ್ಚು ಕಡಿಮೆಯಾಗಿದೆ. ಬೆಳಗಾಂವಿ (ಶೇ. 16.5) ರಾಜ್ಯದ ಒಟ್ಟು ಬಾವಿ ನೀರಾವರಿಯಲ್ಲಿ ಮೊದಲ ಸ್ಥಾನದಲ್ಲಿದೆ. ಬಿಜಾಪುರ, ದಕ್ಷಿಣ ಕನ್ನಡ, ಉಡುಪಿ, ಬೀದರ್, ಮೈಸೂರು, ರಾಯಚೂರು, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ ಮುಂತಾದವು ಪ್ರಮುಖವಾದವು.

ಕರ್ನಾಟಕದ ಮುಖ್ಯ ನೀರಾವರಿ ಯೋಜನೆಗಳು
ಆಧಾರ – ಕರ್ನಾಟಕ ಸ್ಟೇಟ್ ಗೆಜೆಟಿಯರ್

ಜಲಾಶಯ	ನದಿ	ಸಮೀಪದ ನಗರ	ಅಣೆಕಟ್ಟೆಯ ಎತ್ತರ (ಮೀ.)	ಉದ್ದ	ಸಂಗ್ರಹಣಾ ಸಾಮರ್ಥ್ಯ ಟಿ.ಎಂ.ಸಿ.
1. ವಾಣಿ ವಿಲಾಸ ಸಾಗರ	ವೇದಾವತಿ	ಹಿರಿಯೂರು	50	405	31.9
2. ಕೃಷ್ಣರಾಜಸಾಗರ	ಕಾವೇರಿ	ಮೈಸೂರು	43	2621	49.4
3. ಮಾರ್ಕೋನಹಳ್ಳಿ	ಶಿಂಷಾ	ಕುಣಿಗಲ್	27	1612	2.4
4. ತುಂಗಭದ್ರಾ	ತುಂಗಭದ್ರಾ	ಹೊಸಪೇಟೆ	49	2440	133.0
5. ನುಗು	ನುಗು (ಕಬಿನಿಯ ಉಪನದಿ)	ಹೆಚ್.ಡಿ. ಕೋಟೆ	44	637	5.4
6. ಭದ್ರಾ	ಭದ್ರಾ	ಭದ್ರಾವತಿ	72	440	71.5
7. ಹಗರಿಬೊಮ್ಮನಹಳ್ಳಿ	ಚಿಕ್ಕಹಗರಿ	ಕೂಡ್ಲಿಗಿ	15	1490	2.0
8. ಆಲಮಟ್ಟಿ	ಕೃಷ್ಣಾ	ಬಾಗಲಕೋಟೆ	48	1573	123.0
9. ನಾರಾಯಣಪುರ	ಕೃಷ್ಣಾ	ಲಿಂಗಸುಗೂರ್	30	5121	37.8
10. ಹಿಡಕಲ್	ಘಟಪ್ರಭ	ಹುಕ್ಕೇರಿ	59	4267	51.2
11. ಮಲಪ್ರಭ	ಮಲಪ್ರಭ	ಸವದತ್ತಿ	43	154	37.7
12. ಹಿಪ್ಪರಗಿ	ಕೃಷ್ಣಾ	ಜಮಖಂಡಿ	23	5460	5.98
13. ಬೆಣ್ಣೆತೊರ	ಬೆಣ್ಣೆತೊರ	ಗುಲ್ಬರ್ಗಾ	31	1818	3.2
14. ಹೇಮಾವತಿ	ಹೇಮಾವತಿ	ಗೊರೂರು/ಅರಕಲಗೂಡು	58	4692	37.1
15. ಹಾರಂಗಿ	ಹಾರಂಗಿ	ಕುಶಾಲನಗರ	53	846	8.5
16. ಕಬಿನಿ	ಕಬಿನಿ	ಹೆಚ್.ಡಿ. ಕೋಟೆ	57	2733	19.5
17. ತಾರಕ ತಾರಕ	"	32	1273	3.9	
18. ಕಾರಂಜ	ಕಾರಂಜ	ಭಾಲ್ಕಿ	19	3042	7.7

ಕೃಷಿ : ಭಾರತ ಕೃಷಿ ಪ್ರಧಾನ ದೇಶವಾಗಿರುವಂತೆ ಕರ್ನಾಟಕವೂ ಕೃಷಿ ಪ್ರಧಾನವೇ ಆಗಿದೆ. ಇಲ್ಲಿಯ ಕೃಷಿ ಹವಾಗುಣ, ಭೂಗುಣ, ನೀರಾವರಿ ಸೌಲಭ್ಯ, ಮಣ್ಣಿನ ಬಗೆಗಳನ್ನೇ ಅವಲಂಬಿಸಿದೆ. ಇವಕ್ಕನುಗುಣವಾಗಿ ವ್ಯವಸಾಯದ ಸ್ವರೂಪ ಮತ್ತು ಬೆಳೆಗಳು ಇರುತ್ತವೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ವಾಯುಗುಣ ಮತ್ತು ಭೂಗುಣ ವೈಪರೀತ್ಯದಿಂದ ಕೂಡಿದೆ.


ರಾಜ್ಯವು ಅತಿಸಾಂಪ್ರದಾಯಿಕ, ಜೀವನಾಧಾರ ಬೇಸಾಯದಿಂದ ಮೊದಲುಗೊಂಡು ಅತ್ಯಾಧುನಿಕ, ಅತೀವ ವಾಣಿಜ್ಯ ಪ್ರಕಾರದ ಬೇಸಾಯವನ್ನು ಸಹ ಹೊಂದಿರುವುದು. ಕರ್ನಾಟಕ ವ್ಯವಸಾಯ ಇಲಾಖೆಯು ರಾಜ್ಯವನ್ನು 10 ವ್ಯವಸಾಯದ ಪ್ರದೇಶಗಳಾಗಿ ವಿಂಗಡಿಸಿದೆ. ಅವುಗಳೆಂದರೆ ಈಶಾನ್ಯವಲಯ, ಈಶಾನ್ಯ ಒಣವಲಯ, ಉತ್ತರ ಒಣವಲಯ, ಕೇಂದ್ರ ಒಣವಲಯ, ಪೂರ್ವಒಣವಲಯ, ದಕ್ಷಿಣ ಒಣವಲಯ, ದಕ್ಷಿಣ ಸ್ಥಿತ್ಯಂತರ ವಲಯ, ಉತ್ತರ ಸ್ಥಿತ್ಯಂತರ ವಲಯ, ಗುಡ್ಡಗಾಡು ಮಲೆನಾಡು ವಲಯ ಮತ್ತು ಕರಾವಳಿವಲಯ. ಈ ಹತ್ತು ವಲಯಗಳು ತಮ್ಮದೇ ಆದ ವ್ಯವಸಾಯದ ಕ್ಷೇತ್ರವನ್ನು ಹೊಂದಿದ್ದು. ವಿವಿಧ ಬೆಳೆಗಳನ್ನು ಖಾರಿಫ್ ಹಾಗೂ ರಬಿ ಎರಡು ಕಾಲದಲ್ಲಿ ಬೆಳೆಯುವುದು ಕಂಡುಬರುವುದು.

ಕರಾವಳಿ ಕೃಷಿ : ಸಮುದ್ರ ಪಾತಳಿಯ ಭಾಗಗಳು ಫಲವತ್ತಾದ ಮಣ್ಣಿನಿಂದ ಕೂಡಿದ್ದು ಕಾಲಕ್ಕೆ ಸರಿಯಾಗಿ ಯಥೇಚ್ಛ ಮಳೆ ಬೀಳುವುದರಿಂದ ಬತ್ತವನ್ನು ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಬತ್ತದ ಅನಂತರ ಅಲ್ಪಾವಧಿಯ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಸಾಮಾನ್ಯ. ನೀರು ಶೇಖರಣೆಗೊಂಡ ಜಾಗಗಳಲ್ಲಿ ಮತ್ತು ನೀರನ್ನು ಶೇಖರಿಸಬಹುದಾದ ಜಾಗಗಳಲ್ಲಿ ಕೃತಕ ವಿಧಾನಗಳಿಂದ ನೀರು ಹಾಯಿಸಿ ವರ್ಷಕ್ಕೆ ಎರಡುಮೂರು ಬತ್ತದ ಬೆಳೆ ತೆಗೆಯುವುದುಂಟು. ವಾಣಿಜ್ಯ ಬೆಳೆಗಳಾದ ಮೆಣಸು, ತರಕಾರಿ, ತೆಂಗು ಈ ಭಾಗದಲ್ಲಿ ಹೆಚ್ಚು ಕೃಷಿಯಲ್ಲುಂಟು. ಈ ವಲಯದ ಕೆಲವು ಭಾಗಗಳಲ್ಲಿ ಮರಳು ರಾಶಿಗಳು ಅಲ್ಲಲ್ಲಿದ್ದು ಅದನ್ನು ಸಮತಟ್ಟು ಮಾಡಿಯೊ ಅಥವಾ ತೆಗೆದೊ ಬತ್ತ, ತೆಂಗು ಇತ್ಯಾದಿಗಳನ್ನು ಕೃಷಿ ಮಾಡುವರು.

ಮಲೆನಾಡಿನ ಕೃಷಿ : ಈ ಪ್ರದೇಶದಲ್ಲಿ ಬತ್ತದ ಬೆಳೆಗೆ ವಿಶೇಷ ಆದ್ಯತೆ ಕೊಟ್ಟಂತಿಲ್ಲ. ವರ್ಷಕ್ಕೆ ಒಂದೊ ಎರಡೊ ಬತ್ತದ ಬೆಳೆಯನ್ನು ಮಾತ್ರ ನಿತ್ಯ ಬಳಕೆಯ ದೃಷ್ಟಿಯಿಂದ ಬೆಳೆಸುವರು. ಅಡಕೆ, ವೀಳ್ಯದೆಲೆ, ಮೆಣಸು, ಲವಂಗ, ಕಿತ್ತಳೆ, ಕಾಫಿ, ಹಲಸು ಬೆಳೆಗಳನ್ನು ವಾಣಿಜ್ಯ ದೃಷ್ಟಿಯಿಂದ ಮಾಡುವುದುಂಟು. ಚಹ ತೋಟ ಅತಿ ವಿರಳ. ಕಾಫಿ ಬೆಳೆ ಈ ಭಾಗದಲ್ಲಿ ಸಮೃದ್ಧ. ಇತರ ಭಾಗಗಳಿಗಿಂತ ಮಲೆನಾಡಿನಲ್ಲಿ ವಾಣಿಜ್ಯ ಕೃಷಿ ಚಟುವಟಿಕೆ ಹೆಚ್ಚು. ಕಾಫಿ ಮುಂತಾದ ಬೃಹತ್ ತೋಟಗಳಲ್ಲಿ ಸಾಗುವಳಿ ಮಾಡಲು ಇತರ ರಾಜ್ಯಗಳಿಂದಲೂ ಇಲ್ಲಿಗೆ ವಲಸೆ ಬರುವುದುಂಟು. ದಕ್ಷಿಣದ ಎತ್ತರದ ಭಾಗಗಳಲ್ಲಿ ಶೇಕಡಾ ಸುಮಾರು ಅರ್ಧದಷ್ಟು ಜಮೀನು ಕಾಫಿ ಬೆಳೆಗೆ ಮೀಸಲು. ಉತ್ತರದಲ್ಲಿ ದಕ್ಷಿಣ ಭಾಗಕ್ಕಿಂತ ಮಳೆ ಪ್ರಮಾಣ ಕಡಿಮೆ. ಆದ್ದರಿಂದ ಈ ಭಾಗದಲ್ಲಿ ಬತ್ತದ ಬೆಳೆ ತುಸು ಹೆಚ್ಚು. ಯಲ್ಲಾಪುರದಿಂದ ಮಡಿಕೇರಿವರೆಗಿನ ಭಾಗಗಳಲ್ಲಿ ಶೇ. 10-25 ರಷ್ಟು ಪ್ರದೇಶದಲ್ಲಿ ಮೆಣಸನ್ನು ಬೆಳೆಯುತ್ತಾರೆ. ಕರ್ನಾಟಕದ ಪೂರ್ವಕ್ಕಿರುವ ನರಸಿಂಹರಾಜಪುರ, ಶಿವಮೊಗ್ಗ ಮತ್ತು

ಪಿರಿಯಪಟ್ಟಣಗಳಲ್ಲಿ ಮೆಣಸು ಕೃಷಿ ಕಡಿಮೆ. ಇಲ್ಲಿ ಹಣ್ಣು, ತರಕಾರಿಗಳನ್ನು ಬೆಳೆಯುವರು. ಕಡಿಮೆ ಮಳೆ ಬೀಳುವ ಈ ಭಾಗಗಳಲ್ಲಿ ಎಣ್ಣೆ ಕಾಳುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಶಿಕಾರಿಪುರ, ಹಾಸನಗಳಲ್ಲಿ ಬತ್ತದ ಬೆಳೆಗಿಂತ ರಾಗಿ ಮತ್ತು ಜೋಳದ ಬೆಳೆ ಹೆಚ್ಚು. ಹಾಸನದ ದಕ್ಷಿಣ ಭಾಗದಲ್ಲಿ ಸ್ವಲ್ಪ ಕಾಫಿ ಬೆಳೆಯುವರು. ಹಿರೇಕೆರೂರಿನ ಭಾಗದಲ್ಲಿ ಕಪ್ಪು ನೆಲ ಹೆಚ್ಚಾಗಿದ್ದು ಜೋಳ, ಹತ್ತಿ, ತೊಗರಿ, ಎಣ್ಣೆಕಾಳುಗಳನ್ನು ಬೆಳೆದರೆ, ಹಾಸನದ ದಕ್ಷಿಣ ಭಾಗದಲ್ಲಿ ಆಲೂಗಡ್ಡೆ, ಈರುಳ್ಳಿ, ಮಾವು, ಬಾಳೆ, ಕಿತ್ತಳೆ, ತೊಗರಿ, ಎಣ್ಣೆಕಾಳುಗಳು, ತೆಂಗು, ನೆಲಗಡಲೆಗಳನ್ನು ಹೆಚ್ಚಾಗಿ ಬೆಳೆಯುವರು.

ಉತ್ತರ ಮೈದಾನ ಪ್ರದೇಶದ ಕೃಷಿ : ಈ ಪ್ರದೇಶದ ಮುಖ್ಯ ಭಾಗಗಳು - ಹರಿಹರ, ಹೊನ್ನಾಳಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಸಂಪಗಾಂವ್, ಕುಂದಗೋಳ, ಶಿರಹಟ್ಟಿ. ಇಲ್ಲಿ ಖುಷ್ಕಿ ನೆಲವೇ ಹೆಚ್ಚಾಗಿದೆ. ಮಳೆಯ ವಾರ್ಷಿಕ ಸರಾಸರಿ ಪ್ರಮಾಣ ಕಡಿಮೆಯಾದರೂ ನೀರು ಹಿಡಿದಿಡುವ ಗುಣ ಈ ನೆಲಕ್ಕಿದೆ. ಪಶ್ಚಿಮದ ಎತ್ತರ ಪ್ರಸ್ಥಭೂಮಿ ತಂಪು ಹವೆಯಿಂದ ಕೂಡಿದ್ದು ಗೋದಿ ಬೆಳೆಗೆ ಪ್ರಶಸ್ತವಾಗಿದೆ. ಮುಖ್ಯವಾಗಿ ಜೋಳ, ಹತ್ತಿ, ಬಾಜ್ರ, ಶೇಂಗಾ, ರಾಗಿ ಬೆಳೆಗಳು ಕಂಡುಬರುತ್ತವೆ. ಮಲೆನಾಡಿನ ಅಂಚಿನಲ್ಲಿ ಬರುವ ಹರಿಹರದಿಂದ ಹೊನ್ನಾಳಿವರೆಗೆ - ಜೋಳ, ರಾಗಿ, ಎಣ್ಣೆಬೀಜ, ತೊಗರಿ, ಹತ್ತಿ, ಸಂಬಾರ ಪದಾರ್ಥ ಮತ್ತು ಬತ್ತ ಬೆಳೆಯುವರು. ಧಾರವಾಡ, ಸಂಪಗಾಂವ್, ಹುಬ್ಬಳ್ಳಿ, ಕುಂದಗೋಳ, ಶಿರಹಟ್ಟಿ ಪ್ರದೇಶಗಳಲ್ಲಿ ಜೋಳ, ಗೋದಿ, ಬತ್ತ, ಹತ್ತಿ, ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮೊದಲಾದವುಗಳ ಕೃಷಿ ಇದೆ. ಬೆಳಗಾಂವಿಯ ಒಟ್ಟು ನೆಲದಲ್ಲಿ ಶೇ. 20 ರಷ್ಟು ಭಾಗದಲ್ಲಿ ಬತ್ತ ಬೆಳೆಯುವರು. ಗೋದಿ, ಹತ್ತಿ, ಜೋಳ, ಮೆಣಸು, ಮುಂತಾದ ಬೆಳೆಗಳು ಸಾಮಾನ್ಯ. ಚಿಕ್ಕೋಡಿ, ಹುಕ್ಕೇರಿ ಪ್ರದೇಶಗಳಲ್ಲಿ ಶೇ. 28 ರಷ್ಟು ಭಾಗದಲ್ಲಿ ಜೋಳವನ್ನು, ಶೇ. 16.9 ಹೊಗೆಸೊಪ್ಪನ್ನು ಕೃಷಿ



ಮಾಡುತ್ತಾರೆ. ಹುಕ್ಕೇರಿ ಭಾಗದಲ್ಲಿ ಶೇ. 23.9 ರಷ್ಟು ಎಣ್ಣೆಬೀಜಗಳನ್ನು ಬೆಳೆಯುತ್ತಾರೆ.

ಸಜ್ಜೆ, ತೊಗರಿ, ಹಣ್ಣು, ತರಕಾರಿ ಇವು ಇತರ ಬೆಳೆಗಳು. ಉತ್ತರ ಮೈದಾನದ ಮಧ್ಯಭಾಗದ ನೆಲದಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಗಳಿವೆಯಾದರೂ ಬೆಳೆಯುವ ಪ್ರದೇಶ ತೀರ ಕಡಿಮೆ. ಗೋಕಾಕ್, ಮುಧೋಳದ ಉತ್ತರ ಭಾಗ, ಜಮಖಂಡಿ, ರಾಯಬಾಗ್, ಬಿಜಾಪುರ, ಬಾಗೇವಾಡಿ, ಮುದ್ದೇಬಿಹಾಳ, ಸಿಂಧಗಿ, ಇಂಡಿ - ಈ ಪ್ರದೇಶಗಳಲ್ಲಿ ಮಳೆಯ ಜೊತೆಗೆ ಬಾವಿ ನೀರಾವರಿ ವ್ಯವಸ್ಥೆಯೂ ಕೃಷಿಗೆ ಪೂರಕವಾಗಿದೆ. ಜೋಳ ಈ ಭಾಗದ ಜನರ ಮುಖ್ಯ ಆಹಾರ. ಸಜ್ಜೆ, ಗೋದಿ, ಹತ್ತಿ, ಎಣ್ಣೆಬೀಜ, ತೊಗರಿ, ಮೆಣಸಿನಕಾಯಿ, ಬಾಳೆ, ಗೆಣಸು ಮತ್ತು ಈರುಳ್ಳಿ ಬೆಳೆಗಳ ಕೃಷಿ ಇಲ್ಲೆಲ್ಲ ಇದೆ. ಹುನಗುಂದದ ಹೆಚ್ಚು ಭಾಗದಲ್ಲಿ ಜೋಳವೇ ಪ್ರಧಾನವಾಗಿದೆ. ದಾವಣಗೆರೆ ಮತ್ತು ಹರಪನಹಳ್ಳಿಗಳಲ್ಲೂ ಇದೇ ಪ್ರಮುಖ ಬೆಳೆ. ಹಡಗಲಿ, ಕೂಡ್ಲಿಗಿಗಳಲ್ಲಿ ಎಣ್ಣೆ ಬೀಜಗಳ ಕೃಷಿ ಹೆಚ್ಚಾಗಿದೆ. ಗದಗ, ನರಗುಂದ, ನವಲುಗುಂದಗಳಲ್ಲಿ ಹತ್ತಿ, ಜೋಳ, ಗೋದಿ ದ್ವಿದಳಧಾನ್ಯ, ಎಣ್ಣೆಬೀಜ, ಹಣ್ಣು, ತರಕಾರಿಗಳ ಕೃಷಿ ಇದೆ. ಈಶಾನ್ಯಭಾಗದ ಚಿಂಚೋಳಿ, ಯಾದಗೀರ್‌ಗಳಲ್ಲಿ ಜೋಳ, ಸಜ್ಜೆ, ಬತ್ತ, ಗೋದಿ, ಹತ್ತಿ, ಎಣ್ಣೆಬೀಜ, ದ್ವಿದಳ ಧಾನ್ಯ, ಸಂಬಾರ ಬೆಳೆಗಳು ಸಾಮಾನ್ಯ. ಶಾಂತಪುರ, ಭಾಲ್ಕಿ, ಹುಮ್ನಾಬಾದ್, ಆಳಂದ್, ಗುಲ್ಬರ್ಗಾ, ಚಿತ್ತಾಪುರ, ಪ್ರದೇಶಗಳಲ್ಲಿ ಜೋಳ ಪ್ರಮುಖ ಬೆಳೆ. ಇತರ ಬೆಳೆಗಳೆಂದರೆ ದ್ವಿದಳ ಧಾನ್ಯಗಳು, ಎಣ್ಣೆ ಬೀಜಗಳು ಮತ್ತು ತರಕಾರಿಗಳು. ಹತ್ತಿ ಬೆಳೆಗೆ ಪ್ರಧಾನವಾದ ಪ್ರದೇಶಗಳಲ್ಲಿ ತುಂಗಭದ್ರಾ ವಲಯದ ಹೊಸಪೇಟೆ, ಬಳ್ಳಾರಿ, ಸಿಂಧನೂರು, ಸಿರಗುಪ್ಪ, ಮಾನ್ವಿ, ರಾಯಚೂರು, ಇಲ್ಲಿಯ ಮುಖ್ಯವಾದವು. ಅರ್ಧಕ್ಕಿಂತ ಹೆಚ್ಚು ಭೂಭಾಗದಲ್ಲಿ ಈ ಬೆಳೆಯುಂಟು.

ದಕ್ಷಿಣ ಮೈದಾನ ಪ್ರದೇಶದ ಕೃಷಿ : ಪಾವಗಡ, ಗುಬ್ಬಿ, ಮೈಸೂರು ಸುತ್ತಮುತ್ತಲಿನ ಭಾಗಗಳು, ಕೊಳ್ಳೇಗಾಲ, ಕನಕಪುರ, ಬಂಗಾರಪೇಟೆ, ಚಿಂತಾಮಣಿ, ಗೌರಿಬಿದನೂರು, ಚಿಕ್ಕನಾಯಕನ ಹಳ್ಳಿ, ಕಾವೇರಿನದಿ ಕಣಿವೆ ಭಾಗಗಳಾದ ಚನ್ನರಾಯಪಟ್ಟಣ, ನಾಗಮಂಗಲ, ಬೆಂಗಳೂರು ಸುತ್ತಮುತ್ತಲಿನ ಪ್ರದೇಶಗಳು - ಇವು ದಕ್ಷಿಣ ಮೈದಾನ ಪ್ರದೇಶಕ್ಕೆ ಸೇರಿದಂಥವಾಗಿದ್ದು ಸ್ವಾಭಾವಿಕ ನೀರಾವರಿ ವ್ಯವಸ್ಥೆಗಿಂತ ಅಧಿಕವಾಗಿ ಕೃತಕ ನೀರಾವರಿ ಕೃಷಿಯನ್ನೇ ಅವಲಂಬಿಸಿವೆ. ಈ ಪ್ರದೇಶದ ಸಾಗುವಳಿ ಭೂಮಿ ಶೇ. 50 ರಷ್ಟಿದೆಯಾದರೂ ಕೆಲವು ಭಾಗಗಳಲ್ಲಿ ವ್ಯತ್ಯಾಸವಿದೆ. ಪಾವಗಡ, ಕೊಳ್ಳೇಗಾಲ ಮತ್ತು ಗುಬ್ಬಿಗಳಲ್ಲಿ ಶೇ. 90ರಷ್ಟು ಪ್ರದೇಶ ಕೃಷಿಗೆ ಒಳಪಟ್ಟಿದೆ. ಹಾಗೆಯೇ ಕಾವೇರಿ ಜಲಾಶಯವನ್ನವಲಂಬಿಸಿರುವ ಮೈಸೂರು, ಮಂಡ್ಯ ಭಾಗಗಳಲ್ಲೂ ಶೇ. 70ರಷ್ಟು ಭೂಪ್ರದೇಶ ಕೃಷಿಯೋಗ್ಯವಾಗಿದೆ. ಉಳಿದ ದಕ್ಷಿಣಾರ್ಧ ಭಾಗದಲ್ಲಿ ಕೆರೆಗಳೇ ಕೃಷಿಗೆ ಜೀವಾಳ. ತೋಟ ಮತ್ತು ಗದ್ದೆ ಬೆಳೆಗಳಿಗಿಂತ ಒಣಭೂಮಿ ಅಥವಾ ಹೊಲಗಳ ಕೃಷಿ ಹೆಚ್ಚು. ಕರ್ನಾಟಕದ ಉತ್ತರ ಭಾಗದಲ್ಲಿ ಜೋಳ ಪ್ರಧಾನವಾಗಿರುವಂತೆ ಈ ಭಾಗದಲ್ಲಿ ರಾಗಿಯೇ ಪ್ರಧಾನ ಬೆಳೆ. ಇದರ ಜೊತೆಗೆ ಮಿಶ್ರಬೆಳೆಯಾಗಿ ಜೋಳ, ಅವರೆ, ತೊಗರಿ, ಎಳ್ಳು, ಹುಚ್ಚೆಳ್ಳು, ಹೆಸರು ಮತ್ತು ಹುರಳು ಬೆಳೆಯುತ್ತಾರೆ. ಮಳೆಯಾಶ್ರಿತ ಬೆಳೆಯಾದ್ದರಿಂದ ರಾಗಿ ಬಿತ್ತನೆ ಸಾಮಾನ್ಯವಾಗಿ ಜುಲೈ ತಿಂಗಳಲ್ಲಿ ನಡೆಯುತ್ತದೆ. ಡಿಸೆಂಬರ್ ವೇಳೆಗೆ ಇದು ಕಟಾವಾದರೂ ಇದರೊಂದಿಗಿರುವ

ಕರ್ನಾಟಕ : ನಿವ್ವಳ ನೀರಾವರಿ ಪ್ರದೇಶ ಹೆಕ್ಟೇರ್‌ಗಳಲ್ಲಿ (2010)

ಕ್ರ. ಸಂ.	ಜಿಲ್ಲೆಗಳು	ಕಾಲುವೆಗಳಿಂದ		ಕೆರೆಗಳಿಂದ		ಬಾವಿಗಳಿಂದ		ಕೊಳವೆ ಬಾವಿಗಳು		ಒಟ್ಟು ಬಾವಿ ನೀರಾವರಿ	ಶೇ.	ಏತ ನೀರಾವರಿ	ಇತರೆ ಮೂಲಗಳಿಂದ	ಒಟ್ಟು	ರಾಜ್ಯದ ಒಟ್ಟು ನೀರಾವರಿ ಕ್ಷೇತ್ರದ ಶೇ.
1.	ಬೆಂಗಳೂರು	–		1156	0.5	352	0.1	9311	1.0	9663	0.7	–	–	10819	0.4
2. 3.	ಬೆಂಗಳೂರು(ಗ್ರಾ) ರಾಮನಗರ	2774	0.3	186	0.1	–	–	60650	6.3	60650	4.6	236	–	63846	2.2
4.	ಚಿತ್ರದುರ್ಗ	6090	06	382	0.2	–	–	76971	8.0	76971	5.8	–	–	83443	2.8
5.	ದಾವಣಗೆರೆ	60384	5.8	1526	0.8	950	0.2	66258	6.9	67208	5.1	6574	10776	146468	5.0
6. 7.	ಕೋಲಾರ ಚಿಕ್ಕಬಳ್ಳಾಪುರ	–		–	–	–		71880	7.5	71880	5.4	–	–	71880	2.4
8.	ಶಿವಮೊಗ್ಗ	45540	4.4	52639	27.6	6416	1.7	18061	1.9	24477	1.8	4690	6436	133782	4.5
9.	ತುಮಕೂರು	3387	0.3	25914	13.5	1755	0.5	118098	12.3	119853	9.0	–	–	149154	5.0
10.	ಚಿಕ್ಕಮಗಳೂರು	5342	0.5	10939	5.7	572	0.2	10122	1.1	10694	1.0	231	8160	35366	1.2
11.	ದಕ್ಷಿಣ ಕನ್ನಡ	–		–		40691	10.9	9271	1.0	49962	3.7	2257	19677	71896	2.4
12.	ಉಡುಪಿ	–		1467	0.8	21165	5.7	381		21546	1.6	2660	7367	33040	1.1
13.	ಹಾಸನ	31043	3.0	27471	14.3	968	0.3	34010	3.6	34978	2.6	236	671	94399	3.2
14.	ಕೊಡಗು	2479	0.2	131	0.1	84		246	0.1	510	–	11	1360	4491	0.2
15.	ಮಂಡ್ಯ	92916	9.0	18840	9.8	7057	1.9	4512	0.5	11569	1.0	470	2409	126204	4.3
16.	ಮೈಸೂರು	105346	10.2	17200	9.0	17400	4.7	9455	1.0	26855	2.0	353	–	149754	5.2
17.	ಚಾಮರಾಜನಗರ	7196	0.7	6689	3.5	5404	1.5	300056	3.1	35460	2.7	500	–	49845	1.7
18.	ಬೆಳಗಾಂವಿ	86520	8.4	2200	1.2	115771	31.1	103797	10.8	219568	16.5	52178	70724	431196	14.6
19.	ಬಿಜಾಪುರ	99953	9.7	3640	1.9	56062	15.0	53720	5.6	109782	8.2	–	24018	237393	8.0
20.	ಬಾಗಲಕೋಟೆ	46517	4.5	255	0.1	11651	3.1	69827	7.3	81478	6.1	2590	83600	214440	7.4
21.	ಧಾರವಾಡ	35393	3.4	–	–	–	–	15623	1.6	15623	1.2	–	259	51275	1.7
22.	ಗದಗ	22434	2.2	364	0.1	747	0.2	26675	2.8	27422	2.1	6324	12964	69508	2.3
23.	ಹಾವೇರಿ	260	0.02	7128	3.8	–	–	40638	4.4	40638	3.0	3965	10631	62622	2.1
24.	ಉತ್ತರಕನ್ನಡ	–	–	4752	2.5	7720	2.0	1935	0.2	9655	00.8	713	10827	25947	0.9
25.	ಬಳ್ಳಾರಿ	77836	7.6	2253	1.2	8330	2.2	54245	5.8	62575	4.7	20261	4961	16886	5.7
26.	ಬೀದರ್	981	0.1	1284	0.6	26790	7.2	17154	1.8	43944	3.3	124	862	47195	1.6
27.	ಗುಲ್ಬರ್ಗಾ	130688	12.8	2728	1.4	28991	7.8	12634	1.3	41625	3.1	5223	2329	182593	6.2
28.	ರಾಯಚೂರು	118666	1.6	2497	1.2	13360	3.7	13509	1.4	26869	2.0	6837	–	154869	5.3
29.	ಕೊಪ್ಪಳ	48693	4.7	44	–	–	–	25997	2.7	25997	2.0	2265	–	76999	2.6
	ಕರ್ನಾಟಕ	1030438		191691		372236		955216		1327452		118698	278031	2946310	100.0

ಮಿಶ್ರ ಬೆಳೆಗಳು ಸ್ವಲ್ಪ ತಡವಾಗಿ ಇಳುವರಿ ನೀಡುತ್ತವೆ. ಜೋಳ ಮತ್ತು ಸಜ್ಜೆ ಅನಂತರ ಸ್ಥಾನ ಪಡೆಯುತ್ತವೆ. ಕೆಲವು ತಾಲ್ಲೂಕುಗಳಲ್ಲಿ ನೆಲಗಡಲೆ ಹೆಚ್ಚಾಗಿ ಬೆಳೆದರೆ ಮತ್ತೆ ಕೆಲವೆಡೆ ಹೊಗೆಸೊಪ್ಪನ್ನು ಬೆಳೆಯುವರು.

ಖುಷ್ಕಿ ಬೇಸಾಯವೇ ಮುಖ್ಯವಾದರೂ ಅಲ್ಲಲ್ಲಿ ತರಿ (ನೀರಾವರಿ) ಬೇಸಾಯ ಉಂಟು. ಇದರ ಮುಖ್ಯ ಬೆಳೆ ಬತ್ತ. ಜುಲೈ-ಆಗಸ್ಟ್ ತಿಂಗಳಲ್ಲಿ ಬಿತ್ತಿದರೆ ಡಿಸೆಂಬರ್-ಜನವರಿ ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಕಬ್ಬು ಹಿಪ್ಪುನೇರಳೆಯೂ ಈ ಗುಂಪಿಗೆ ಸೇರುತ್ತವೆ. ಬತ್ತದ ಅನಂತರ ಚಳಿಗಾಲದ ಬೆಳೆಯಾಗಿ ಕಡಲೆ, ಹುರುಳಿ, ಮೆಣಸಿನಕಾಯಿ, ಬದನೆ, ಟೊಮ್ಯಾಟೋಗಳನ್ನು ಕೆಲವು ಭಾಗಗಳಲ್ಲಿ ಕೃಷಿ ಮಾಡುತ್ತಾರೆ. ಬಾವಿ ಮತ್ತು ಕೆರೆಯಾಶ್ರಿತ ವ್ಯವಸ್ಥೆಯಲ್ಲಿ ರಾಗಿಯನ್ನು ಬೇಸಗೆಯಲ್ಲೂ ಬೆಳೆಯುತ್ತಾರೆ. ತೆಂಗು, ಅಡಕೆ, ವೀಳ್ಯದೆಲೆ, ನಿಂಬೆ ಮತ್ತು ಮೆಣಸನ್ನು ಕೂಡಾ ಹೆಚ್ಚು ನೀರು ಸಿಗುವ ತಂಪಾದ ಹವೆಯಿರುವ ಜಾಗದಲ್ಲಿ ಕೃಷಿ ಮಾಡುವುದುಂಟು. ನದೀಪಾತ್ರಗಳಲ್ಲೂ ಕೆರೆಯ ಅಂಚಿನಲ್ಲೂ ಕಲ್ಲಂಗಡಿ, ಕರಬೂಜ, ಸೌತೆ, ಕುಂಬಳ, ಸೋರೆ, ಬೆಂಡೆ, ದನಿಯ, ಕಡಲೆ ಇತ್ಯಾದಿಗಳನ್ನು ಬೆಳೆಯುವರು.

ಕರ್ನಾಟಕ ರಾಜ್ಯದ ಕೃಷಿ ವಿವರಗಳನ್ನು ಕುರಿತಂತೆ ಕೆಲವು ವರ್ಷಗಳನ್ನು ದೃಷ್ಟಿಯಲ್ಲಿದ್ದುಕೊಂಡು ಆಹಾರ ಮತ್ತು ಇನ್ನಿತರ ಬೆಳೆಗಳ ಪಟ್ಟಿಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯದ ಕೃಷಿ ಬೆಳೆಗಳ ಭೂವಿಸ್ತೀರ್ಣ ಮತ್ತು ಉತ್ಪಾದನೆ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮಾಹಿತಿ

(ವಿಸ್ತೀರ್ಣ ಲಕ್ಷ ಹೆ. ಉತ್ಪಾದನೆ ಲಕ್ಷ ಟನ್‌ಗಳಲ್ಲಿ)

ಬೆಳೆಗುಂಪು	2010-11		2009-10		ಸರಾಸರಿ ವಾರ್ಷಿಕ ಹೆಚ್ಚಳ ದರ	
	ವಿಸ್ತೀರ್ಣ	ಉತ್ಪಾದನೆ	ವಿಸ್ತೀರ್ಣ	ಉತ್ಪಾದನೆ	ವಿಸ್ತೀರ್ಣ	ಉತ್ಪಾದನೆ
ಏಕದಳ ಧಾನ್ಯಗಳು	53.62	111.09	54.75	98.39	2.21	12.91
ದ್ವಿದಳ ಧಾನ್ಯಗಳು	25.75	14.69	24.79	11.16	14.20	31.63
ಒಟ್ಟು ಆಹಾರ ಧಾನ್ಯಗಳು	82.37	125.78	79.54	109.55	2.90	14.84
ಎಣ್ಣೆಕಾಳುಗಳು	16.92	13.24	20.01	10.02	16.39	32.14
ಹತ್ತಿ	5.33	10.36	4.57	7.54	16.41	37.40
ಕಬ್ಬು	5.14	324.61	4.97	304.43	1.81	6.63
ತಂಬಾಕು	1.22	1.00	1.18	0.91	4.24	9.89

ಕರ್ನಾಟಕದಲ್ಲಿಯ ಮುಖ್ಯ ಬೆಳೆಗಳ ಉತ್ಪಾದನೆ - (ಲಕ್ಷ ಟನ್ನುಗಳಲ್ಲಿ)

ಬೆಳೆ	1980-81	1990-91	2000-01	2005-06	2009-10	2010-11(ತಾ)
ಬತ್ತ	22.58	24.28	38.47	39.9	38.76	42.97
ರಾಗಿ	10.64	9.76	18.35	16.56	11.96	15.88
ಜೋಳ	15.06	12.82	15.47	14.79	12.96	14.67
ಸಜ್ಜೆ	1.92	2.03	3.42	3.91	1.31	3.34
ಮೆಕ್ಕೆಜೋಳ	3.81	6.3	21.36	28.07	29.25	44.44
ಗೋದಿ	1.74	1.23	2.5	2.26	2.64	2.79
ತೃಣಧಾನ್ಯಗಳು	1.39	0.63	0.47	0.27	0.13	0.12
ಒಟ್ಟು ಏಕದಳ ಧಾನ್ಯಗಳು	57.14	57.05	100.04	105.85	97.01	124.21

ತೊಗರಿ	125	1.75	2.64	4.08	2.8	5.29
ಒಟ್ಟು ದ್ವಿದಳ ಧಾನ್ಯಗಳು	4.88	5.39	9.56	9.51	11.03	15.65
ಒಟ್ಟು ಆಹಾರ ಧಾನ್ಯಗಳು	62.02	62.44	109.6	115.36	108.04	139.86
ಕಡಲೆಕಾಯಿ	4.75	8.16	10.81	5.96	4.57	7.42
ಒಟ್ಟು ಎಣ್ಣೆಕಾಳುಗಳು	6.5	13.39	15.45	15.27	9	12.7
ಕಬ್ಬು	121.27	207.5	429.24	196.48	322.87	396.57

ವಾಣಿಜ್ಯ ಬೆಳೆಗಳು (ಲಕ್ಷ ಟನ್ನುಗಳಲ್ಲಿ)

ಹತ್ತಿ(1)	5.97	6.4	8.55	5.85	7.05	12.18
ಅಡಕೆ	0.78	0.93	1.63	2.15	2.59	8
ತೆಂಗು(2)	887	1199.26	1762.4	1606.89	3056.35	8
ಒಣಮೆಣಸಿನಕಾಯಿ	0.48	0.37	1.51	1.07	1.38	8
ತಂಬಾಕು	0.34	0.33	0.52	0.64	0.91	1.34
ಮೆಣಸು(3)	0.08	0.07	0.18	0.32	0.73	8
ಏಲಕ್ಕಿ	0.02	0.02	0.01	0.01	0.01	8

(2010-11ನೇ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ)

ವಾಣಿಜ್ಯ ಬೆಳೆಗಳು

ಹತ್ತಿ	9.84	11.42	10.12	5.96	5.52	5.48
ಕಬ್ಬು	0.72	1.04	1.54	2.72	4.17	4.23
ತಂಬಾಕು	0.39	0.38	0.52	0.46	0.71	1.25
ಒಟ್ಟು	99.23	100.96	95.74	105.02	107.38	109.55

(2010-11ನೇ ಸಾಲಿನ ವರದಿ)

ಎಣ್ಣೆ ಕಾಳುಗಳು (ಲಕ್ಷ ಟನ್ನುಗಳಲ್ಲಿ)

ಏಲಕ್ಕಿ	0.02	0.02	0.01	0.01	0.01	8
ಕಡಲೆಕಾಯಿ	9.15	10.27	7.9	12.12	10.63	8.48
ಎಳ್ಳು	0.64	0.87	1.18	1.43	0.98	0.87
ಸೂರ್ಯಕಾಂತಿ	-	-	0.38	8.96	4.78	4.09
ಹರಳು	0.42	0.38	0.26	0.22	0.3	0.19
ಹುಚ್ಚೆಳ್ಳು	0.25	0.21	0.55	0.53	0.44	0.23
ಸಾಸಿವೆ	0.09	0.04	0.03	0.05	0.08	0.04
ಸೋಯಾ	-	-	-	0.24	0.63	1.68
ಕುಸುಬೆ	1.44	1.59	1.58	1.68	0.93	0.55
ಅಗಸೆ	0.48	0.63	0.63	0.28	0.17	0.11
ಒಟ್ಟು ಎಣ್ಣೆಕಾಳುಗಳು	12.47	13.99	12.51	25.51	18.94	16.24

ಆಯ್ದ ಕೃಷಿ ಬೆಳೆಗಳ ಸರಾಸರಿ ಇಳುವರಿ - ಭಾರತ ಮತ್ತು ಕರ್ನಾಟಕ

ಬೆಳೆ	2೦೦೦-2೦೦1		2೦೦5-2೦೦6		2೦೦7-2೦೦8		2೦೦8-2೦೦9		2೦೦9-2೦1೦	
	ಭಾರತ	ಕರ್ನಾಟಕ	ಭಾರತ	ಕರ್ನಾಟಕ	ಭಾರತ	ಕರ್ನಾಟಕ	ಭಾರತ	ಕರ್ನಾಟಕ	ಭಾರತ	ಕರ್ನಾಟಕ
ಬತ್ತ	1901	2730	2102	2834	2203	2875	2186	2644	2130	2614
ರಾಗಿ	ಲ	1889	ಲ	1858	ಲ	1729	ಲ	1744	ಲ	1807
ಜೋಳ	764	914	880	1024	1021	1272	952	1241	911	1081
ಗೋದಿ	2708	988	2619	943	2802	1071	2891	963	2830	933
ಮೆಕ್ಕೆಜೋಳ	1822	3361	1938	3157	2335	3099	2355	2985	2002	2557
ಸಜ್ಜೆ	688	778	802	954	1042	816	1011	739	728	528
ತೊಗರಿ	618	476	765	716	826	697	678	556	723	491
ಕಡಲೆಕಾಯಿ	977	1070	1187	603	1459	802	1180	621	ಲ	658
ಹತ್ತಿ (ಅರಳೆ)	190	277	362	253	467	313	419	379	ಲ	295
ಕಬ್ಬು	69	108	67	93	69	89	62	87	ಲ	95

(ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಕರ್ನಾಟಕ ಸರ್ಕಾರ)

ರಾಜ್ಯ ಮಣ್ಣು ಸಮೀಕ್ಷೆ : ಮಣ್ಣು ಪ್ರಕೃತಿದತ್ತವಾದ ಕೊಡುಗೆಯಾಗಿದ್ದು, ಸಸ್ಯಗಳಿಗೆ ನೀರು ಮತ್ತು ಪೋಷಕಾಂಶಗಳನ್ನು ಒದಗಿಸುವ ಆಧಾರ ಸಂಪನ್ಮೂಲವಾಗಿದೆ. ಅಲ್ಲದೆ ಸಸ್ಯದ ಬೇರುಗಳು ಅಭಿವೃದ್ಧಿಯಾಗಲು ಉತ್ತಮ ವಾತಾವರಣವನ್ನು ಕಲ್ಪಿಸುತ್ತದೆ. ಆದುದರಿಂದ ಯುಕ್ತ ರೀತಿಯಲ್ಲಿ ಮಣ್ಣನ್ನು ಬಳಕೆ ಮಾಡಲು ಅದರ ಬಗ್ಗೆ ಜ್ಞಾನವನ್ನು ಪಡೆಯುವುದು ಆವಶ್ಯಕವಾಗಿದೆ. ಯುಕ್ತ ರೀತಿಯಲ್ಲಿ ಯೋಜಿಸಿ ಮಣ್ಣು ಸಮೀಕ್ಷೆಯನ್ನು ಕೈಗೊಳ್ಳುವುದರಿಂದ ಮಣ್ಣಿನ ಗುಣಧರ್ಮಗಳಾದ ಕಣಗಾತ್ರ, ರಚನೆ, ಮಣ್ಣಿನ ರಚನೆ, ನೀರು ಇಂಗುವಿಕೆ, ಆಳ, ಮೇಲ್ಮೈ ಲಕ್ಷಣ, ಸಮಸ್ಯಾತ್ಮಕ ಸವಳು ಮತ್ತು ಕ್ಷಾರ ಮುಂತಾದವುಗಳ ಬಗ್ಗೆ ಮಾಹಿತಿ ಪಡೆದು ಅದನ್ನು ನಿರ್ವಹಿಸಲು ಅನುಕೂಲವಾಗುವುದು. ಮಣ್ಣಿನ ಪಾರ್ಶ್ವದೃಶ್ಯಗಳ ಗುಣಧರ್ಮಗಳನ್ನು ಆಧರಿಸಿ ಮಣ್ಣುಗಳ ಶ್ರೇಣಿ, ವಿಧ ಹಾಗೂ ಹಂತಗಳನ್ನಾಗಿ ವರ್ಗೀಕರಿಸಿ ನಿರ್ದಿಷ್ಟ.

ಆಹಾರ ಬೆಳೆಗಳ ಹಂಚಿಕೆ :

ಬತ್ತ : ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಬತ್ತವನ್ನು ಬೆಳೆಯಲಾಗುವುದು. ಇದು ಪ್ರಮುಖ ಆಹಾರಧಾನ್ಯ. ಕೃಷ್ಣ-ತುಂಗಭದ್ರಾ

ಕಣಿವೆ, ಕಾವೇರಿ ಜಲಾನಯನ ಪ್ರದೇಶ ಹಾಗೂ ತೀರ ಪ್ರದೇಶದ ಜಿಲ್ಲೆಗಳು ಬತ್ತದ ಉತ್ಪಾದನೆಗೆ ಹೆಸರಾಗಿದೆ.

ರಾಯಚೂರು, ಬಳ್ಳಾರಿ ಜಿಲ್ಲೆಗಳು ಬತ್ತದ ಉತ್ಪಾದನೆಯಲ್ಲಿ ಮೊದಲ ಹಾಗೂ ಎರಡನೆಯ ಸ್ಥಾನವನ್ನು ಹೊಂದಿವೆ. ಈ ಎರಡು ಜಿಲ್ಲೆಗಳು ತುಂಗಭದ್ರ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆಯುತ್ತಿವೆ. ಕಾವೇರಿ ನದಿ ಕಣಿವೆಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳು ಬತ್ತದ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿವೆ.

ಇತ್ತೀಚಿನ ದಶಕಗಳಲ್ಲಿ ಪೂರ್ಣಗೊಂಡ ಆಲಮಟ್ಟಿ ಮತ್ತು ನಾರಾಯಣಪುರ ಯೋಜನೆಗಳು ಕೃಷ್ಣಾ ನದಿಯ ಜಲಾನಯನ ಪ್ರದೇಶದ ಬೆಳೆಗಳ ಮಾದರಿಯನ್ನು ಬಹುತೇಕ ಬದಲಾಯಿಸಿವೆ. ಗುಲ್ಬರ್ಗಾ ಮತ್ತು ಯಾದಗೀರ್ ಜಿಲ್ಲೆಗಳಲ್ಲಿ ಸಾಂಪ್ರದಾಯಿಕ ಬೆಳೆಗಳ ಬದಲಾಯಿಸಲ್ಪಟ್ಟ ಬತ್ತ ಇಲ್ಲಿಯ ಮುಖ್ಯ ಬೆಳೆಯಾಗಿದೆ. ಹಾಸನ ಜಿಲ್ಲೆಯಲ್ಲಿ ಹೇಮಾವತಿ ಹಾಗೂ ಯಗಚಿ ಯೋಜನೆಗಳಿಂದ ಬತ್ತ ಬೆಳೆಯುವ ಕ್ಷೇತ್ರವು ಅಧಿಕಗೊಂಡಿದೆ.

ಹೀಗೆ ರಾಜ್ಯದ ಮೈದಾನ ವಲಯದಲ್ಲಿ ಕಾಲುವೆ ನೀರಾವರಿಯ ಹಂಚಿಕೆ ಬಹುತೇಕ ಬತ್ತದ ಹಂಚಿಕೆಯನ್ನು ನಿರ್ಧರಿಸಿದೆ. ಇದರಿಂದ ರಾಜ್ಯದಲ್ಲಿ ಕಾಲುವೆ ನೀರಾವರಿಯ ಹೆಚ್ಚಳ ಬತ್ತ ಬೆಳೆಯುವ ಭೂಮಿಯ ವಿಸ್ತೀರ್ಣ ಹೆಚ್ಚಳಕ್ಕೂ ಕಾರಣವಾಗುವುದು.

ರಾಗಿ : ಇದು ರಾಜ್ಯದ 3ನೇ ಮುಖ್ಯ ಆಹಾರ ಧಾನ್ಯ. ರಾಗಿ ಹಳೆ ಮೈಸೂರು ಪ್ರಾಂತ್ಯದ ಸಾಂಪ್ರದಾಯಿಕ ಬೆಳೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ರಾಗಿಯ ಬೆಳೆ ಕಡಿಮೆಯಾಗುತ್ತಿದೆ. ಕಾರಣ ಬೆಳೆಯುವ ಭೂಮಿಯನ್ನು ವಾಣಿಜ್ಯ ಬೆಳೆಗಳಿಗೆ ಬಳಸಲಾಗುತ್ತಿದೆ. ಇದು ಮಳೆಯಾಶ್ರಿತ ಬೆಳೆಯಾಗಿದ್ದು, ಇಳುವರಿಯೂ ಕಡಮೆ.

ರಾಜ್ಯದಲ್ಲಿ ರಾಗಿಯನ್ನು 8-10 ಲಕ್ಷ ಹೆಕ್ಟೇರುಗಳಲ್ಲಿ ಬೆಳೆಯಲಾಗುವುದು. ಉತ್ತರ ಕರ್ನಾಟಕದಲ್ಲಿ ಜೋಳದ ಕೃಷಿ ಪ್ರಧಾನವಾದರೆ ದಕ್ಷಿಣ ಕರ್ನಾಟಕದಲ್ಲಿ ರಾಗಿಯೇ ಪ್ರಧಾನ. ಇವುಗಳಲ್ಲಿ ತುಮಕೂರು ಜಿಲ್ಲೆಯು ಅತಿಹೆಚ್ಚು ರಾಗಿ ಬೆಳೆಯುವ ಪ್ರದೇಶ. ಶೇ. 24ರಲ್ಲಿ 23 ರಷ್ಟು ರಾಗಿಯನ್ನು ಉತ್ಪಾದಿಸುವುದು. ಅನಂತರದ ಸ್ಥಾನದಲ್ಲಿ ರಾಮನಗರ, ಮೈಸೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಮಂಡ್ಯ, ಚಿತ್ರದುರ್ಗ ಹಾಗೂ ಚಾಮರಾಜನಗರ ಜಿಲ್ಲೆಗಳಿವೆ. ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ದಾವಣಗೆರೆ ಜಿಲ್ಲೆಗಳ ಮೈದಾನದ ತಾಲ್ಲೂಕುಗಳು ಸಹ ರಾಗಿಯ ಉತ್ಪಾದನೆಗೆ ಹೆಸರುವಾಸಿಯಾಗಿವೆ.

ಜೋಳ : ಉತ್ಪಾದನೆ ಮತ್ತು ಕ್ಷೇತ್ರಗಳೆರಡರಲ್ಲಿಯೂ ಬತ್ತದ ಅನಂತರ ಎರಡನೆಯ ಸ್ಥಾನದಲ್ಲಿದೆ. ಇದು ಮಳೆಯಾಶ್ರಿತ ಬೆಳೆ. ಕರಾವಳಿ ಮತ್ತು ಮಲೆನಾಡಿನ ವಲಯವನ್ನು ಹೊರತುಪಡಿಸಿ ಉಳಿದೆಲ್ಲಾ ಭಾಗಗಳಲ್ಲಿಯೂ ಬೆಳೆಯಲಾಗುವುದು. ಜೋಳದ ಹಂಚಿಕೆಯನ್ನು ಪರಿಶೀಲಿಸಿದಾಗ ಇದರ ಬಹುಪಾಲು ಉತ್ತರ ಕರ್ನಾಟಕದ ಕಪ್ಪುಮಣ್ಣಿನ ಪ್ರದೇಶಗಳಾದ ಗುಲ್ಬರ್ಗಾ, ಬಿಜಾಪುರ, ಬೆಳಗಾಂವಿ, ಬಾಗಲಕೋಟೆ, ರಾಯಚೂರು, ದಾವಣಗೆರೆ, ಬಳ್ಳಾರಿ, ಬೀದರ್, ಹಾವೇರಿ, ಗದಗ್ ಹಾಗೂ ಯಾದಗೀರ್ ಜಿಲ್ಲೆಗಳಲ್ಲಿ ಕೇಂದ್ರೀಕೃತವಾಗಿದೆ. ಈ ಜಿಲ್ಲೆಗಳು ರಾಜ್ಯದ ಒಟ್ಟು ಜೋಳದ ಉತ್ಪಾದನೆಯ ಶೇ. 85 ರಷ್ಟನ್ನು ಒಳಗೊಂಡಿವೆ. ಗುಲ್ಬರ್ಗಾ ಜಿಲ್ಲೆಯ ಆಳಂದ, ಜೇವರ್ಗಿ ಹಾಗೂ ಚಿತ್ತಾಪುರ ತಾಲ್ಲೂಕುಗಳು ಜೋಳದ ಬೇಸಾಯಕ್ಕೆ ಅತ್ಯಂತ ಹೆಸರುವಾಸಿ. ಹೀಗಾಗಿ ಬಿಜಾಪುರ ರಾಜ್ಯದ ಜೋಳದ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಈ ಜಿಲ್ಲೆಯಲ್ಲಿ ಬೆಳೆಯುವ ಬಿಳಿ ಜೋಳ ವ್ಯಾಪಕವಾದ ಮಾರುಕಟ್ಟೆಯನ್ನು ಹೊಂದಿದೆ. ರಾಜ್ಯದ ದಕ್ಷಿಣದ ಜಿಲ್ಲೆಗಳಲ್ಲಿ ಚಿತ್ರದುರ್ಗ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜೋಳವನ್ನು ಬೆಳೆಯಲಾಗುವುದು.

ಗೋಧಿ : ಬೇಸಾಯ ಮತ್ತು ಉತ್ಪಾದನೆ : ಇದು ಸಮಶೀತೋಷ್ಣವಲಯದ ಬೆಳೆಯಾಗಿದ್ದು ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ಮಾತ್ರ ಕಂಡುಬರುವುದು. ಬೆಳಗಾಂವಿ, ಬಿಜಾಪುರ, ಗದಗ, ಧಾರವಾಡ, ಬಾಗಲಕೋಟೆ, ಬೀದರ್, ಗುಲ್ಬರ್ಗಾ ಮತ್ತು ಯಾದಗೀರ್ - ಗೋದಿ ಬೆಳೆಯುವ ಮುಖ್ಯ ಜಿಲ್ಲೆಗಳು. ಇದನ್ನು ಅಕ್ಟೋಬರ್ - ನವೆಂಬರ್‌ನಲ್ಲಿ ಬಿತ್ತನೆ ಮಾಡಿ, ಜನವರಿ - ಫೆಬ್ರುವರಿಯಲ್ಲಿ ಕಟಾವು ಮಾಡಲಾಗುವುದು.

ಇದನ್ನು ಮಳೆಯಾಶ್ರಿತ ಹಾಗೂ ನೀರಾವರಿ ವಲಯಗಳೆರಡರಲ್ಲಿಯೂ ಬೆಳೆಸುವರು. ರಾಜ್ಯದಲ್ಲಿ 1.1. ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗೋದಿಯನ್ನು ಬೆಳೆಯುತ್ತಿದ್ದು ವಾರ್ಷಿಕ ಉತ್ಪಾದನೆ 2 ರಿಂದ 2.5 ಲಕ್ಷ ಟನ್ನುಗಳಷ್ಟಿದೆ.

ಮೆಕ್ಕೆಜೋಳ : ಇದು ಮೂಲತಃ ದಕ್ಷಿಣ ಅಮೆರಿಕದ ಬೆಳೆ. ಇದನ್ನು ಪಶು ಹಾಗೂ ಕೋಳಿ ಆಹಾರವಾಗಿಯೂ ವ್ಯಾಪಕವಾಗಿ ಬಳಸಲಾಗುವುದು. ಇದನ್ನು ಕಪ್ಪು, ಕೆಂಪು ಮಣ್ಣು ಹಾಗೂ ಜೇಡಿಮಣ್ಣುಗಳಲ್ಲಿ ಹೆಚ್ಚಾಗಿ ಬೆಳೆಯುವರು. ಮೆಕ್ಕೆಜೋಳವನ್ನು ರಾಜ್ಯದಲ್ಲಿ ಸುಮಾರು 10-12 ಲಕ್ಷ ಹೆ.ನಲ್ಲಿ ಬೆಳೆಯುವರು. ಇದು ವರ್ಷದಿಂದ ವರ್ಷಕ್ಕೆ ವ್ಯತ್ಯಾಸ ಹೊಂದುವುದು. ಇದರ ಉತ್ಪಾದನೆ ದಾವಣಗೆರೆ, ಬೆಳಗಾಂವಿ, ಹಾವೇರಿ, ಬಳ್ಳಾರಿ, ಬಾಗಲಕೋಟೆ, ಶಿವಮೊಗ್ಗ, ಚಿತ್ರದುರ್ಗ, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿದೆ. ರಾಜ್ಯದಲ್ಲಿ ದಾವಣಗೆರೆಯಲ್ಲಿ ಹೆಚ್ಚು ಮೆಕ್ಕೆಜೋಳ ಉತ್ಪಾದಿಸಲಾಗುವುದು.

ಸಜ್ಜೆ : ಬಿಜಾಪುರ, ಬೀದರ್, ಬಾಗಲಕೋಟೆ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ - ರಾಜ್ಯದಲ್ಲಿ ಸಜ್ಜೆಯನ್ನು ಬೆಳೆಯುವ ಮುಖ್ಯ ಜಿಲ್ಲೆಗಳು.

ದ್ವಿದಳ ಧಾನ್ಯಗಳು : ರಾಜ್ಯವು ಹಲವಾರು ಬಗೆಯ ದ್ವಿದಳ ಧಾನ್ಯಗಳನ್ನು ಉತ್ಪಾದಿಸುವುದು. ಇವುಗಳ ಉತ್ಪಾದನೆಗೆ ರಾಜ್ಯವು ದೇಶದಲ್ಲಿಯೇ ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದೆ. ದ್ವಿದಳ ಧಾನ್ಯಗಳು ವಾಯುಮಂಡಲದ ಸಾರಜನಕವನ್ನು ಹೀರಿ ಭೂಮಿಗೆ ಸೇರ್ಪಡೆ ಮಾಡುವುದರಿಂದ ಭೂಮಿಯ ಫಲವತ್ತತೆ ಹೆಚ್ಚುವುದು. ರಾಜ್ಯದಲ್ಲಿ ಸು. 19.8 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ವಾರ್ಷಿಕ ಉತ್ಪಾದನೆ 9.5 ಲಕ್ಷ ಟನ್.

ತೊಗರಿ : ತೊಗರಿಯ ಉತ್ಪಾದನೆಯಲ್ಲಿ ಕರ್ನಾಟಕ ದೇಶದಲ್ಲೇ, ಮೊದಲ ಸ್ಥಾನ ಪಡೆದಿದೆ. ರಾಜ್ಯದ ಉತ್ತರದ ಜಿಲ್ಲೆಗಳಾದ ಗುಲ್ಬರ್ಗಾ, ಬೀದರ್ ಹಾಗೂ ಬಿಜಾಪುರಗಳಲ್ಲಿ ಇದು ವಾಣಿಜ್ಯ ಬೆಳೆಯಾಗಿದೆ. ಬಹುತೇಕ ಎಲ್ಲ ಮೈದಾನ ಪ್ರದೇಶದಲ್ಲಿಯೂ ತೊಗರಿ ಬೆಳೆಯಬಹುದು. ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶದಲ್ಲಿಯೂ ಬೆಳೆಯಲು ಸಾಧ್ಯ.

ಇದಕ್ಕೆ ಬದಲಾಗಿ ದಕ್ಷಿಣದ ಮೈದಾನದಲ್ಲಿ ಇದನ್ನು ಗೃಹ ಬಳಕೆಗಾಗಿ ಬೆಳೆಯಲಾಗುವುದು. ಗುಲ್ಬರ್ಗಾದಲ್ಲಿ ದೇಶದಲ್ಲಿಯೇ ಅತಿ ಹೆಚ್ಚು ತೊಗರಿ ಉತ್ಪಾದಿಸುವ ಜಿಲ್ಲೆಯಾಗಿದೆ. ತೊಗರಿ ಉತ್ಪಾದಿಸುವ ರಾಜ್ಯದ ಪ್ರಮುಖ ಜಿಲ್ಲೆಗಳೆಂದರೆ - ಬಳ್ಳಾರಿ, ಕೊಪ್ಪಳ, ರಾಯಚೂರು, ತುಮಕೂರು, ಕೋಲಾರ, ಹಾವೇರಿ ಮತ್ತು ದಾವಣಗೆರೆ.

ಕಡಲೆ : ರಾಜ್ಯದಲ್ಲಿ ಉತ್ಪಾದಿಸುವ ಎರಡನೆಯ ಮುಖ್ಯ ದ್ವಿದಳ ಧಾನ್ಯ. ಇದನ್ನು ಪ್ರಧಾನವಾಗಿ ಚಳಿಗಾಲದ ರಬಿ ಬೆಳೆಯಾಗಿ ಬೆಳೆಯುವರು. ಇದು ಉತ್ತರ ಮೈದಾನದ ಜಿಲ್ಲೆಗಳಲ್ಲಿ ಕೇಂದ್ರೀಕೃತಗೊಂಡಿರುವುದನ್ನು ಕಾಣಬಹುದು. ಗುಲ್ಬರ್ಗಾ, ಯಾದಗೀರ್, ಬಿಜಾಪುರ, ಬೀದರ್, ಬೆಳಗಾಂವಿ, ಧಾರವಾಡ, ಗದಗ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೆಸರುವಾಸಿ. ಗುಲ್ಬರ್ಗಾ ಮೊದಲ ಸ್ಥಾನದಲ್ಲಿದೆ.

ಹುರುಳಿ : ಬಡಜನರ ಆಹಾರವೆಂದೇ ಕರೆಯಲ್ಪಡುವ ಹುರುಳಿ ಇತರ ಧಾನ್ಯಗಳಿಗಿಂತ ಬೆಲೆ ಕಡಿಮೆ. ಇದನ್ನು ದಕ್ಷಿಣ ಕರ್ನಾಟಕದಲ್ಲಿ ರಾಗಿಯೊಡನೆ ಮಿಶ್ರಬೆಳೆಯಾಗಿ ಬೆಳೆಯುವುದು ಸಾಮಾನ್ಯ. ಇದನ್ನು ಬರಡು ಭೂಮಿಗಳಲ್ಲಿಯೂ ಬಿತ್ತನೆ ಮಾಡಿ ಸಿಕ್ಕಷ್ಟು ಉತ್ಪಾದನೆಯಿಂದ ಆದಾಯ ಪಡೆಯುವುದು ಸಾಮಾನ್ಯ. ಮೈಸೂರು ಜಿಲ್ಲೆ ಹುರುಳಿ ಬೇಸಾಯಕ್ಕೆ ಪ್ರಸಿದ್ಧಿಯಾಗಿದ್ದು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ತುಮಕೂರು, ಮಂಡ್ಯ, ಚಾಮರಾಜನಗರ ಜಿಲ್ಲೆ ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಹೆಸರು : ಇದನ್ನು ಸಾಮಾನ್ಯವಾಗಿ ಖರೀಫ್ ಅಂದರೆ ಮುಂಗಾರಿನ ಅವಧಿಯಲ್ಲಿಯೇ ಬಿತ್ತನೆ ಮಾಡುವರು. ರಾಜ್ಯದ ಪೂರ್ವದ ಮೈದಾನದಾದ್ಯಂತ ಇದನ್ನು ಬೆಳೆಯಲಾಗುವುದು. ಇದರ ಉತ್ಪಾದನೆ ಉತ್ತರದ ಜಿಲ್ಲೆಗಳಲ್ಲಿ ಹೆಚ್ಚು. ಗದಗ ಜಿಲ್ಲೆಯು ಹೆಸರು ಕಾಳಿನ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದ್ದು, ಗುಲ್ಬರ್ಗಾ ಬೀದರ್, ಬಾಗಲಕೋಟೆ ಮತ್ತು ಬೆಳಗಾಂವಿ ಅನಂತರದ ಸ್ಥಾನದಲ್ಲಿವೆ.

ಉದ್ದು : ಖರೀಫ್ ಅವಧಿಯಲ್ಲಿ ಹೆಚ್ಚಾಗಿ ಬೆಳೆಯುವ ಮುಖ್ಯ ದ್ವಿದಳ ಧಾನ್ಯ. ಹೆಚ್ಚು ಮಳೆ ಬೀಳುವ ಕರಾವಳಿಯ ದಕ್ಷಿಣ ಕನ್ನಡ, ಜಿಲ್ಲೆಗಳಲ್ಲಿ ಇದನ್ನು ಚಳಿಗಾಲದಲ್ಲಿ ಬೆಳೆಯುವರು. ಗುಲ್ಬರ್ಗಾ ಜಿಲ್ಲೆಯು ಉದ್ದಿನ ಕಾಳಿನ ಉತ್ಪಾದನೆಗೆ ಹೆಸರಾಗಿದ್ದು ಮೊದಲ ಸ್ಥಾನದಲ್ಲಿದೆ.

ಅವರೆ : ಇದನ್ನು ಖರೀಫ್ ಹಾಗೂ ರಬಿ ಎರಡೂ ಅವಧಿಯಲ್ಲಿ ಬೆಳೆಯುವರು. ಅವರೆ ಚಳಿಗಾಲದ ಒಂದು ಮುಖ್ಯ ಬೆಳೆ. ಇದರ ಉತ್ಪಾದನೆ ದಕ್ಷಿಣದ ಜಿಲ್ಲೆಗಳಲ್ಲಿ ಸಾಮಾನ್ಯವಾಗಿದ್ದು, ಮೈಸೂರು ಜಿಲ್ಲೆ ಅವರೆಯ ಉತ್ಪಾದನೆಯಲ್ಲಿ ರಾಜ್ಯದಲ್ಲಿ ಅತ್ಯಂತ ಪ್ರಮುಖವಾದುದು. ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಚಾಮರಾಜನಗರ ಅವರೆ ಉತ್ಪಾದಿಸುವ ಇನ್ನಿತರ ಜಿಲ್ಲೆಗಳೆಂದು ಕರೆಯಬಹುದು.

ವಾಣಿಜ್ಯ ಬೆಳೆಗಳು : ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಮುಖ್ಯ ಬೆಳೆಯಾಗಿ ವಾಣಿಜ್ಯ ಮತ್ತು ಆಹಾರ ಬೆಳೆಗಳನ್ನು ಕೃಷಿ ಮಾಡುವರು. ಹತ್ತಿ, ಕಬ್ಬು, ಹೊಗೆಸೊಪ್ಪು, ಹಿಪ್ಪುನೇರಳೆ, ಎಣ್ಣೆಕಾಳುಗಳು ಹಾಗೂ ಸಾಂಬಾರ ಪದಾರ್ಥಗಳು ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳಾಗಿವೆ.

ಹತ್ತಿ : ಭಾರತದಲ್ಲಿ ಹತ್ತಿ ಬೆಳೆಯುವ ರಾಜ್ಯಗಳಲ್ಲಿ ಕರ್ನಾಟಕದ ಎಂಟನೆಯ ಸ್ಥಾನದಲ್ಲಿದೆ. ಇದು ಉಷ್ಣವಲಯದ ಬೆಳೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುವ ಕಪ್ಪು ಮಣ್ಣು ಹತ್ತಿ ಬೇಸಾಯಕ್ಕೆ ಯುಕ್ತವಾದುದು.

ಭಾರತದಲ್ಲಿ ಕರ್ನಾಟಕದ ಒಟ್ಟು ಹತ್ತಿ ಉತ್ಪಾದನೆ ಶೇ. 3. ಇದರ ವಾರ್ಷಿಕ ಉತ್ಪಾದನೆ ಸುಮಾರು 5.5 ರಿಂದ 8 ಲಕ್ಷ ಬೇಲ್. ಹತ್ತಿಯ ಬೇಸಾಯವು ರಾಜ್ಯದಲ್ಲಿ ಉತ್ತಮ ಭೌಗೋಳಿಕ ಹಿನ್ನೆಲೆಯನ್ನು ಹೊಂದಿರುವ ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕೃತಗೊಂಡಿದೆ. ಗುಲ್ಬರ್ಗಾ, ಹಾವೇರಿ, ಮೈಸೂರು, ದಾವಣಗೆರೆ, ಗದಗ ಜಿಲ್ಲೆಗಳು ಹತ್ತಿಯ ಉತ್ಪಾದನೆಯಲ್ಲಿ ಮುಂದಿವೆ.

ಕಬ್ಬು : ಕಬ್ಬಿನ ಉತ್ಪಾದನೆಯಲ್ಲಿ ರಾಜ್ಯ 4ನೇ ಸ್ಥಾನದಲ್ಲಿದೆ. ಇದು ರಾಜ್ಯದ ಅತ್ಯಂತ ಮುಖ್ಯವಾದ ವಾಣಿಜ್ಯ ಬೆಳೆ. ಸು. 3.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುವುದು. ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿ ಕಬ್ಬು ಕಡಿಮೆ.

ಸ್ವಾತಂತ್ರ್ಯಾನಂತರ ಆರಂಭದ ದಶಕದಲ್ಲಿ ಕಬ್ಬಿನ ಉತ್ಪಾದನೆ ಕಾವೇರಿ ಕಣಿವೆಯಲ್ಲಿ ಕೇಂದ್ರೀಕೃತವಾಗಿದ್ದಿತು. ಈ ಭಾಗದಲ್ಲಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ಕಬ್ಬಿನ ಉತ್ಪಾದನೆ ಹಾಗೂ ಸಕ್ಕರೆ ಕೈಗಾರಿಕೆಗಳಿಗೆ ಹೆಸರಾಗಿದ್ದವು. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಇಂದು ಕಬ್ಬಿನ ಬೇಸಾಯವು ವ್ಯಾಪಕವಾಗಿ ಹಂಚಿಕೆಯಾಗಿದೆ. ಕಾರಣವೆಂದರೆ

ಕೃಷ್ಣಾನದಿ ಕಣಿವೆ ಯೋಜನೆಯಿಂದ ದೊರೆಯುವ ನೀರಾವರಿ ಅನುಕೂಲತೆ, ಕಪ್ಪು ಮಣ್ಣು ಬತ್ತಕ್ಕೆ ಯೋಗ್ಯವಲ್ಲವಾದ್ದರಿಂದ, ಉತ್ತರ ಕರ್ನಾಟಕದಲ್ಲಿ ಭೂಹಿಡುವಳಿಗಳ ಗಾತ್ರವೂ ಹೆಚ್ಚಾಗಿರುವುದರಿಂದ ಬತ್ತದ ಉತ್ಪಾದನೆಗಿಂತ ಕಬ್ಬಿನ ಬೇಸಾಯಕ್ಕೆ ಹೆಚ್ಚು ಆದ್ಯತೆ.

ಕರ್ನಾಟಕ ಕಬ್ಬಿನ ಉತ್ಪಾದನೆಯ ಕ್ಷೇತ್ರದ ಶೇ. 6.13 ರಷ್ಟನ್ನು ಒಳಗೊಂಡಿದ್ದು. ಶೇ. 7.54 ರಷ್ಟು ಕಬ್ಬನ್ನು ಉತ್ಪಾದಿಸುವುದು. ರಾಜ್ಯವು ಉಷ್ಣವಲಯದಲ್ಲಿರುವುದರಿಂದ ಇಳುವರಿಯೂ ಅಧಿಕ. ಬೆಳಗಾವಿ ರಾಜ್ಯದಲ್ಲಿ ಅತೀ ಹೆಚ್ಚಿನ ಕಬ್ಬನ್ನು ಉತ್ಪಾದಿಸುವ ಜಿಲ್ಲೆ. ಎರಡನೇ ಸ್ಥಾನದಲ್ಲಿ ಬಾಗಲಕೋಟೆ ಇದೆ. ಇದು ಆಲಮಟ್ಟಿ ಯೋಜನೆಯಿಂದ ನೀರಾವರಿ ಸೌಲಭ್ಯವನ್ನು ಪಡೆಯುತ್ತದೆ.

ಹೊಗೆಸೊಪ್ಪು : ಕರ್ನಾಟಕದ ಮುಖ್ಯ ವಾಣಿಜ್ಯ ಬೆಳೆಗಳಲ್ಲಿ ಒಂದು. ಪೋರ್ಚುಗೀಸರು 17ನೆಯ ಶತಮಾನದಲ್ಲಿ ಭಾರತಕ್ಕೆ ಹೊಗೆಸೊಪ್ಪನ್ನು ಪರಿಚಯಿಸಿದರು. ಇದು ನಿಕೋಷಿಯಾನ ವರ್ಗಕ್ಕೆ ಸೇರಿದ ಸಸ್ಯ. ಹೊಗೆಸೊಪ್ಪಿನ ಕ್ಷೇತ್ರದಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನ ಪಡೆದರೆ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು, ಇಲ್ಲಿ ಬೆಳೆಯುವ ವರ್ಜೀನಿಯಾ ಹೊಗೆಸೊಪ್ಪು ದೇಶದಲ್ಲಿಯೇ ಅತ್ಯುತ್ತಮವಾದುದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ರಾಜ್ಯದಲ್ಲಿ ಹೊಗೆಸೊಪ್ಪಿನ ಉತ್ಪಾದನೆ ಪಶ್ಚಿಮ ಘಟ್ಟಗಳ ಪೂರ್ವದ ಅಂಚಿನಲ್ಲಿರುವ ಅರೆಮಲೆನಾಡು ವಲಯದಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ವರ್ಜೀನಿಯಾ ಹೊಗೆಸೊಪ್ಪನ್ನು 1965-66ರಲ್ಲಿ ಈ ವಲಯದಲ್ಲಿ ಪರಿಚಯಿಸಲಾಯಿತು. ಮೈಸೂರು, ಚಾಮರಾಜನಗರ, ಹಾಸನ, ಶಿವಮೊಗ್ಗ

ಮತ್ತು ಕೊಡಗು ವರ್ಜೀನಿಯಾ ಹೊಗೆಸೊಪ್ಪನ್ನು ಉತ್ಪಾದಿಸುತ್ತಿದ್ದು, ಮೈಸೂರು ಜಿಲ್ಲೆ ಇವುಗಳಲ್ಲಿ ಅತ್ಯಂತ ಪ್ರಮುಖವಾದುದು. ಇದು ರಾಜ್ಯದ ಹೊಗೆಸೊಪ್ಪಿನ ಕ್ಷೇತ್ರದ ಶೇ. 68.5 ರಷ್ಟನ್ನು ಒಳಗೊಂಡಿದೆ.

ರೇಷ್ಮೆಕೃಷಿ : ರೇಷ್ಮೆ ಕೃಷಿ ಕರ್ನಾಟಕದ ಅತಿ ಪ್ರತಿಷ್ಠಿತ ಬೇಸಾಯದಲ್ಲಿ ಒಂದು. ಭಾರತದಲ್ಲಿ ರೇಷ್ಮೆಯನ್ನು ನಾಲ್ಕುಮೂಲಗಳಿಂದ ಪಡೆಯಲಾಗುವುದು, ಅವು - ಹಿಪ್ಪುನೇರಳೆ, ಈರಿ, ಮುಗ ಮತ್ತು ಟಸ್ಸಾರ್, ಕರ್ನಾಟಕದಲ್ಲಿ ಹಿಪ್ಪುನೇರಳೆ ಮೂಲದಿಂದ ರೇಷ್ಮೆಯನ್ನು ಉತ್ಪಾದಿಸಲಾಗುವುದು.

ಭಾರತಕ್ಕೆ ರೇಷ್ಮೆ ಕೃಷಿಯು ಚೀನಾ ದೇಶದಿಂದ ಪರಿಚಯಸಲ್ಪಟ್ಟಿತು. ಇದು ಬರ ನಿರೋಧಕ ಗುಣವನ್ನು ಹೊಂದಿದೆ. ರಾಜ್ಯದಲ್ಲಿ ಹಿಪ್ಪುನೇರಳೆ ಕೃಷಿಯ ಕ್ಷೇತ್ರ ಸುಮಾರು 91.000 ಹೆಕ್ಟೇರ್‌ಗಳಾಗಿದ್ದು ಇದು ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಹಾಸನ ಜಿಲ್ಲೆಗಳಲ್ಲಿ ವಿಸ್ತರಿಸಿದೆ.

ಎಣ್ಣೆಕಾಳುಗಳು : ದೇಶದ ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಕರ್ನಾಟಕ ಆರನೇ ಸ್ಥಾನ ಪಡೆದಿದೆ. ರಾಜ್ಯದಲ್ಲಿ ಶೇ. 5.21 ರಷ್ಟು ಎಣ್ಣೆಕಾಳುಗಳನ್ನು ಉತ್ಪಾದಿಸಲಾಗುವುದು. ಭಾರತದ 9 ಪ್ರಮುಖ ಎಣ್ಣೆಕಾಳುಗಳ ಪೈಕಿ ರಾಜ್ಯ 8 ಬಗೆಯ ಎಣ್ಣೆಕಾಳುಗಳನ್ನು ಉತ್ಪಾದಿಸುತ್ತಿದೆ.

ನೆಲಗಡಲೆ : ದಕ್ಷಿಣ ಕರ್ನಾಟಕದಲ್ಲಿ ನೆಲಗಡಲೆ ಎಂದೂ ಉತ್ತರ ಕರ್ನಾಟಕದಲ್ಲಿ 'ಶೇಂಗಾ' ಎಂದು ಕರೆಯುತ್ತಾರೆ. ಇದನ್ನು ಸೋಪು ತಯಾರಿಕೆಯಲ್ಲಿ ಬಳಸುತ್ತಾರೆ. ಇದರ ಹಿಂಡಿ ಪಶುಗಳಿಗೆ ಉತ್ತಮ ಆಹಾರ, ಇದನ್ನು ಮೇ-ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಲಾಗುವುದು.

ರಾಜ್ಯದಲ್ಲಿ ಸುಮಾರು 9.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ಇದರ ಉತ್ಪಾದನೆ ಹೆಚ್ಚು ಕೇಂದ್ರೀಕೃತವಾಗಿರುವುದು - ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ. ಚಿತ್ರದುರ್ಗ, ಬಳ್ಳಾರಿ, ಬಿಜಾಪುರ, ರಾಯಚೂರು, ಗದಗ, ಗುಲ್ಬರ್ಗಾ, ಯಾದಗೀರ್ ಮತ್ತು ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಲ್ಲಿಯೂ ಬೆಳೆಯುತ್ತಾರೆ.

ಸೂರ್ಯಕಾಂತಿ (ಸೂರ್ಯಪಾನ) : ರಾಜ್ಯದಲ್ಲಿ ಉತ್ಪಾದಿಸುವ ಎರಡನೆಯ ಮುಖ್ಯ ಎಣ್ಣೆಕಾಳು ಬೆಳೆ. ಇದು ನೆಲಗಡಲೆಯ ಅನಂತರದ ಸ್ಥಾನ ಪಡೆದಿದೆ. ಇದರಿಂದ ಉತ್ಪಾದಿಸುವ ಎಣ್ಣೆ ಕಡಿಮೆ ಪ್ರಮಾಣದಲ್ಲಿ ಕೊಲೆಸ್ಟ್ರಾಲ್‌ನ್ನು ಒಳಗೊಂಡಿದ್ದು ಆರೋಗ್ಯಕ್ಕೆ ಉತ್ತಮವಾಗಿದೆ. ಇದರಿಂದ ದೊರೆಯುವ ಹಿಂಡಿಯೂ ಉತ್ತಮ ಪಶು ಆಹಾರವಾಗಿದೆ. ಇದನ್ನು ಮುಂಗಾರು ಮತ್ತು ಹಿಂಗಾರು ಎರಡೂ ಅವಧಿಗಳಲ್ಲಿ ಬೆಳೆಯುವರು. ರಾಯಚೂರು ಜಿಲ್ಲೆ ಸೂರ್ಯಕಾಂತಿ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದೆ. ಅನಂತರದಲ್ಲಿ ಬಿಜಾಪುರ, ಕೊಪ್ಪಳ, ಬಳ್ಳಾರಿ, ಗುಲ್ಬರ್ಗಾ, ಯಾದಗೀರ್ ಮತ್ತು ಬೆಳಗಾವಿ ಜಿಲ್ಲೆಗಳಿವೆ.

ಕುಸುಬೆ : ನೆಲಗಡಲೆ ಹಾಗೂ ಸೂರ್ಯಕಾಂತಿಯ ಅನಂತರ ರಾಜ್ಯದ ಮೂರನೆಯ ಮುಖ್ಯ ಎಣ್ಣೆಕಾಳು ಬೆಳೆ. ಇದರ ಎಣ್ಣೆಯನ್ನು ಹಲವು ಉದ್ದೇಶಗಳಿಂದ ಬಳಸುತ್ತಾರೆ. ಬೀದರ್ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚು ಕುಸುಬೆಯನ್ನು ಉತ್ಪಾದಿಸುತ್ತಿದ್ದು ಗುಲ್ಬರ್ಗಾ, ಯಾದಗೀರ್ ಮತ್ತು ಧಾರವಾಡ ಅನಂತರದ ಸ್ಥಾನದಲ್ಲಿವೆ.

ಎಳ್ಳು : ಇದು ಬರ ನಿರೋಧಕ ಗುಣವನ್ನು ಹೊಂದಿರುವ ಎಣ್ಣೆಕಾಳು ಬೆಳೆ. ಇದನ್ನು ಉತ್ತರ ಹಾಗೂ ದಕ್ಷಿಣ ಮೈದಾನದ ಎಲ್ಲ ಕಡೆಗಳಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುವರು. ಇದನ್ನು ಗುಲ್ಬರ್ಗಾ, ಯಾದಗೀರ್, ಮೈಸೂರು, ಚಿತ್ರದುರ್ಗ, ಕೊಪ್ಪಳ, ಮಂಡ್ಯ ಜಿಲ್ಲೆಗಳಲ್ಲಿ ಬೆಳೆಯುವರು.

ಹರಳು (ಔಡಲ) : ಇದರ ಎಣ್ಣೆಯನ್ನು ಕೈಗಾರಿಕೆಗಳಲ್ಲಿ ಕೀಲೆಣ್ಣೆಯಾಗಿ ಹೆಚ್ಚಾಗಿ ಬಳಸುವರು. ಇದನ್ನು ಮುಂಗಾರು ಬೆಳೆಯಾಗಿ ಬಿತ್ತನೆ ಮಾಡಲಾಗುವುದು. ಬರನಿರೋಧಕ ಗುಣ ಹೊಂದಿದೆ. ಹೆಚ್ಚಾಗಿ ರಾಮನಗರ, ತುಮಕೂರು, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಬೆಳೆಯುತ್ತಾರೆ.

ಅಗಸೆ ಬೀಜ : ಇದನ್ನು ಕೈಗಾರಿಕೆಗಳಲ್ಲಿ ಬಳಸುವ ಎಣ್ಣೆ ತಯಾರಿಸಲು ಬಳಸುತ್ತಾರೆ. ಚಳಿಗಾಲದಲ್ಲಿ ಇದನ್ನು ಬೆಳೆಯುವರು. ಇದನ್ನು ಮಿಶ್ರ ಬೆಳೆಯಾಗಿಯೂ ಕೃಷಿ ಮಾಡಬಹುದು. ಬಾಗಲಕೋಟೆ, ಬಿಜಾಪುರ, ಕೊಪ್ಪಳ, ಬೆಳಗಾಂವಿ, ಗದಗ, ಗುಲ್ಬರ್ಗಾ, ಯಾದಗೀರ್, ರಾಯಚೂರು, ಬೀದರ್‌ಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ.

ಸಂಬಾರ ಬೆಳೆಗಳು : ಇವು ಅಡುಗೆ ಹಾಗೂ ತಿನಿಸುಗಳ ತಯಾರಿಕೆಯಲ್ಲಿ ರುಚಿ ಹಾಗೂ ಸುವಾಸನೆ ಹೆಚ್ಚಿಸುವುದರಲ್ಲಿ ಅತ್ಯಂತ ಪ್ರಮುಖವಾದವು. ಕೆಲವು ಸಂಬಾರ ವಸ್ತುಗಳನ್ನು ಔಷಧಿ ಹಾಗೂ ವಿವಿಧ ಉಪಯೋಗದ ತೈಲದ ಉತ್ಪಾದನೆಯಲ್ಲಿ ಬಳಸುತ್ತಾರೆ. ಅವು ಏಲಕ್ಕಿ, ಅರಿಸಿನ, ಕರಿಬೇವು, ಮೆಣಸಿನಕಾಯಿ, ಬೆಳ್ಳುಳ್ಳಿ, ಲವಂಗ ಮೊದಲಾದವು.

ಮೆಣಸು : ಇದು ರಾಜ್ಯದ ಮುಖ್ಯ ಬೆಳೆ. ತೆಂಗು, ಅಡಕೆ ಅಥವಾ ಇನ್ನಿತರ ಮರಗಳಿಗೆ ಹಬ್ಬಿಸಿ ಫಸಲನ್ನು ಪಡೆಯಲಾಗುವುದು. ಇದಕ್ಕೆ ತೇವಾಂಶ ಅಗತ್ಯ. ರಾಜ್ಯದಲ್ಲಿ ಮೆಣಸನ್ನು ಕಾಫಿ ತೋಟಗಳು, ಅಡಕೆ ಹಾಗೂ ತೆಂಗಿನ ತೋಟಗಳಲ್ಲಿ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಬೆಳೆಯುತ್ತಾರೆ.

ಏಲಕ್ಕಿ : ಇದನ್ನು ಕಾಫಿ ತೋಟಗಳಲ್ಲಿ ತಗ್ಗಿನ ಭಾಗಗಳಲ್ಲಿ ಬೆಳೆಯುವರು. ರಾಜ್ಯದ ಮಲೆನಾಡು ವಲಯ ಏಲಕ್ಕಿ ಬೆಳೆಗೆ ಪ್ರಸಿದ್ಧಿ ಪಡೆದಿದೆ. ಕೊಡಗು, ಹಾಸನ, ಚಿಕ್ಕಮಗಳೂರು, ಉತ್ತರಕನ್ನಡ, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೆಳೆಯಲಾಗುವುದು.

ಅರಿಸಿನ : ಸಾಂಬಾರ ಬೆಳೆಯ ಜೊತೆಗೆ ಉತ್ತಮ ಔಷಧೀಯ ಗುಣವು ಹೊಂದಿದೆ. ಕರಾವಳಿ ಮತ್ತು ಮಲೆನಾಡು ವಲಯಗಳಲ್ಲಿ ಮಳೆಯ ಸಹಾಯದಿಂದಲೇ ಬೆಳೆಯಲಾಗುತ್ತದೆ. ರಾಜ್ಯದ ದಕ್ಷಿಣ ಭಾಗದಲ್ಲಿರುವ ಚಾಮರಾಜನಗರ ಜಿಲ್ಲೆ ಅರಿಸಿನ ಉತ್ಪಾದನೆಯಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಬೆಳಗಾಂವಿ, ಬಾಗಲಕೋಟೆ, ಮೈಸೂರು, ಗುಲ್ಬರ್ಗಾ ಮತ್ತು ಹಾಸನ ಜಿಲ್ಲೆಗಳು ಅನಂತರದ ಸ್ಥಾನದಲ್ಲಿವೆ.

ಶುಂಠಿ : ಇದನ್ನು ಮಲೆನಾಡು ಮತ್ತು ತೀರ ಪ್ರದೇಶಗಳಲ್ಲಿ ಮಳೆಯ ಸಹಾಯದಿಂದಲೇ ಬೆಳೆಯುತ್ತಾರೆ. ಶುಂಠಿಯ ಉತ್ಪಾದನೆಯಲ್ಲಿ ಹಾಸನ ಜಿಲ್ಲೆ ಮೊದಲ ಸ್ಥಾನದಲ್ಲಿದೆ. ಅನಂತರದಲ್ಲಿ ಕೊಡಗು, ಚಿಕ್ಕಮಗಳೂರು, ಬೀದರ್, ಶಿವಮೊಗ್ಗ, ದಕ್ಷಿಣ ಕನ್ನಡ ಹಾಗೂ ಮೈಸೂರು ಜಿಲ್ಲೆಗಳಲ್ಲೂ ಬೆಳೆಯುವರು.

ಮೆಣಸಿನ ಕಾಯಿ : ಎಲ್ಲ ಜಿಲ್ಲೆಗಳಲ್ಲೂ ಅಲ್ಪಪ್ರಮಾಣದಲ್ಲಿ ಬೆಳೆಯುತ್ತಾರೆ. ಭಾರತದಲ್ಲಿ ಆಂಧ್ರಪ್ರದೇಶದ ಅನಂತರ ಕರ್ನಾಟಕ

ಎರಡನೇಯ ಸ್ಥಾನ ಪಡೆದಿದೆ. ರಾಜ್ಯದಲ್ಲಿ ಮೆಣಸಿನಕಾಯಿಯನ್ನು ಮಳೆಯ ಆಶ್ರಯದಲ್ಲಿ ಮಾತ್ರವಲ್ಲದೆ ನಿಯಮಿತವಾಗಿ ನೀರು ಒದಗಿಸುವುದರಿಂದಲೂ ಬೆಳೆಯಲಾಗುವುದು. ವಾಣಿಜ್ಯ ಪ್ರಮಾಣದ ಮೆಣಸಿನಕಾಯಿಯ ಉತ್ಪಾದನೆಯನ್ನು ಹಾವೇರಿ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ಬೆಳ್ಳುಳ್ಳಿ : ಇದು ಔಷಧೀಯ ಗುಣವುಳ್ಳದ್ದು. ರಾಜ್ಯದ ವಿವಿಧ ಭಾಗಗಳಲ್ಲಿ ಮಿಶ್ರ ಬೆಳೆಯಾಗಿಯೂ ಬೆಳೆಯುತ್ತಾರೆ. ಧಾರವಾಡ, ಬಾಗಲಕೋಟೆ, ಬಿಜಾಪುರ, ಗದಗ, ಬೆಳಗಾಂವಿ, ಬೀದರ್, ಗುಲ್ಬರ್ಗಾ ಮತ್ತು ಯಾದಗೀರ್ ಈ ಬೆಳೆಗೆ ಪ್ರಸಿದ್ಧಿ.

ಹುಣಸೆ : ಇದು ವರ್ಷದಲ್ಲಿ ಒಂದು ಭಾರಿ ಮಾತ್ರ ಫಲ ನೀಡುವುದು. ಇದು ವಿಶೇಷವಾಗಿ ಉಷ್ಣವಲಯದ ಸಸ್ಯವರ್ಗ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹುಣಿಸೆಯನ್ನು ವ್ಯಾಪಕವಾಗಿ ಬೆಳೆಯುವರು.

ಕಾಫಿ : ಕರ್ನಾಟಕದ ಅತ್ಯಂತ ಪ್ರತಿಷ್ಠಿತ ತೋಟಗಾರಿಕೆ ಬೆಳೆ. ರಾಜ್ಯದ ಮುಖ್ಯ ಪಾನೀಯ ಬೆಳೆ. ಕರ್ನಾಟಕ ಅರೇಬಿಕಾ ಹಾಗೂ ರೋಬಸ್ಟಾ ಎರಡೂ ಪ್ರಭೇದದ ಕಾಫಿಯನ್ನು ಉತ್ಪಾದಿಸುತ್ತಿದೆ. ಕೊಡಗು, ಚಿಕ್ಕಮಗಳೂರು, ಹಾಸನ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕಾಫಿ ತೋಟಗಳನ್ನು ಅಭಿವೃದ್ಧಿಪಡಿಸಲಾಗಿದೆ. ರಾಜ್ಯದಲ್ಲಿ ಸು. 40,000 ಕಾಫಿ ತೋಟಗಳಿವೆ. ಕೊಡಗು ಮೊದಲ ಸ್ಥಾನದಲ್ಲಿದೆ. ಈ ತೋಟಗಳಲ್ಲಿ ಕಿತ್ತಳೆ, ಏಲಕ್ಕಿ, ಮೆಣಸು, ಲವಂಗ ಹಾಗೂ ಇತರ ಬೆಳೆಗಳನ್ನು ಬೆಳೆಯುವರು.

ತೆಂಗು : ಕರಾವಳಿ ಮೈದಾನ ಹಾಗೂ ದಕ್ಷಿಣದ ಮೈದಾನಗಳಲ್ಲಿ ಈ ಬೆಳೆ ಅತ್ಯಂತ ಪ್ರಸಿದ್ಧ. ತೆಂಗಿನ ಎಣ್ಣೆಯನ್ನು ಅಡುಗೆ, ಸೋಪ್ ತಯಾರಿಕೆಯಲ್ಲಿ ಬಳಕೆ ಮಾಡುವರು. ಎಳೆನೀರು ಅತ್ಯಂತ ಆರೋಗ್ಯಕರ ಹಾಗೂ ಜನಪ್ರಿಯ ಪಾನೀಯ. ತೆಂಗು ಬೆಳೆಯಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ತೆಂಗಿನ ವಾಣಿಜ್ಯ ಮಾದರಿಯ ಉತ್ಪಾದನೆಯೂ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಕಂಡುಬರುವುದು. ತುಮಕೂರು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಉಡುಪಿ, ಮಂಡ್ಯ, ಮೈಸೂರು, ಚಾಮರಾಜನಗರ, ದಾವಣಗೆರೆ, ಉತ್ತರಕನ್ನಡ ಜಿಲ್ಲೆಗಳು ಮುಖ್ಯವಾದವು. ತೆಂಗಿನ ಬೆಳೆಯಲ್ಲಿ ತುಮಕೂರು ಮೊದಲ ಸ್ಥಾನ ಪಡೆದಿದೆ.

ಅಡಕೆ : ಇದು ಔಷಧೀಯ ಗುಣವನ್ನು ಹೊಂದಿದೆ. ಧಾರ್ಮಿಕ ಕಾಯಿಗಳಲ್ಲಿ ಶುಭ ಅಶುಭ ಕಾರ್ಯಗಳಲ್ಲಿ ತಪ್ಪದೆ ಬಳಸುತ್ತಾರೆ. ಕರ್ನಾಟಕ ಭಾರತದ ಅಡಕೆಯ ಉತ್ಪಾದನೆಯಲ್ಲಿ ಮೊದಲ ಸ್ಥಾನ ಹೊಂದಿದ್ದು ಶೇ. 41 ರಷ್ಟು ಉತ್ಪಾದಿಸುತ್ತದೆ. ಇದನ್ನು ಕರಾವಳಿ ಹಾಗೂ ಒಳನಾಡಿನ ಆರ್ದ್ರಪ್ರದೇಶದಲ್ಲಿ ಬೆಳೆಯುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಅಡಕೆ ಬೆಳೆಯುವುದಿದೆ.

ಗೋಡಂಬಿ : ಗೋಡಂಬಿಯನ್ನು ಅಡುಗೆ ಹಾಗೂ ಆಲ್ಕೋಹಾಲಿಕ್ ಪಾನೀಯಗಳ ತಯಾರಿಕೆಯಲ್ಲಿ ಬಳಸುವರು. ಗೋಡಂಬಿ ಉಷ್ಣವಲಯದ ಬೆಳೆ. ಇದು ಬಹುವಾರ್ಷಿಕ ಬೆಳೆಯಾಗಿದ್ದು ಒಂದು ಬಾರಿ ನೆಟ್ಟ ಅನಂತರ ನಿರಂತರವಾಗಿ ಫಸಲನ್ನು ನೀಡುವುದು. ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚು ಗೋಡಂಬಿಯನ್ನು ಉತ್ಪಾದಿಸುತ್ತಿದ್ದು, ಉಡುಪಿ ಜಿಲ್ಲೆ 2ನೇ ಸ್ಥಾನದಲ್ಲಿದೆ.

ತೋಟಗಾರಿಕೆ : ಕರ್ನಾಟಕವು ಭಾರತದಲ್ಲಿ ತೋಟಗಾರಿಕೆ ಬೆಳೆಗಳಿಗೆ ಅತ್ಯಂತ ಪ್ರಸಿದ್ಧಿ ಪಡೆದಿರುವ ರಾಜ್ಯಗಳಲ್ಲಿ ಒಂದು. ರಾಜ್ಯದ ಒಟ್ಟು ಸಾಗುವಳಿ ಪ್ರದೇಶದ ಶೇ. 14.4 ರಷ್ಟು ಮಾತ್ರ ಈ ಬೆಳೆಗಳ ಉತ್ಪಾದನೆಗೆ ಒಳಪಟ್ಟಿದೆ.

ಕರ್ನಾಟಕದಲ್ಲಿ ತೋಟಗಾರಿಕೆ ಬೆಳೆಗಳ ಒಟ್ಟು ಕ್ಷೇತ್ರ 17.64 ಲಕ್ಷ ಹೆಕ್ಟೇರುಗಳು ಮತ್ತು ವಾರ್ಷಿಕ ಉತ್ಪಾದನೆ ಸುಮಾರು 136.64 ಲಕ್ಷ ಟನ್. ರಾಜ್ಯ ಉತ್ಪಾದಿಸುವ ತೋಟಗಾರಿಕೆ ಬೆಳೆಗಳಲ್ಲಿ ಹಣ್ಣುಗಳು ಮುಖ್ಯವಾದುವು. ಒಟ್ಟು ತೋಟಗಾರಿಕೆ ಬೆಳೆಗಳ ಕ್ಷೇತ್ರದ ಶೇ. 56.7 ರಷ್ಟನ್ನು ತರಕಾರಿಗಳ ಉತ್ಪಾದನೆಗೆ ಬಳಸಲಾಗುವುದು.

ಹಣ್ಣುಗಳು : ಬಹುತೇಕ ಉಷ್ಣವಲಯದ ಹಣ್ಣುಗಳನ್ನು ರಾಜ್ಯದಲ್ಲಿ ಬೆಳೆಯುವರು. ರಾಜ್ಯ ಹಣ್ಣಿನ ಬೇಸಾಯದಲ್ಲಿ ಶೇ. 8.3 ರಷ್ಟು ಕ್ಷೇತ್ರವನ್ನು ಒಳಗೊಂಡಿದ್ದು ಶೇ. 12 ರಷ್ಟು ಹಣ್ಣುಗಳನ್ನು ಉತ್ಪಾದಿಸುವುದು. ಕರ್ನಾಟಕದಲ್ಲಿ ಹಲವಾರು ಬಗೆಯ ಹಣ್ಣುಗಳನ್ನು ಬೆಳೆಸಲಾಗುತ್ತದೆ. ಕಾರಣ ಇದು ಹೊಂದಿರುವ ವೈವಿಧ್ಯಮಯವಾದ ವ್ಯವಸಾಯ ವಾಯುಗುಣದ ಲಕ್ಷಣಗಳು. ರಾಜ್ಯದಲ್ಲಿ ಹಣ್ಣಿನ ಬೇಸಾಯದ ಕ್ಷೇತ್ರ 1991ರಲ್ಲಿ 2.1 ಲಕ್ಷ ಹೆಕ್ಟೇರುಗಳು, 2001ರಲ್ಲಿ 2.6, 2009 ರಲ್ಲಿ 2.9, ಹಾಗೂ 2010ರಲ್ಲಿ 3.3 ಲಕ್ಷ ಹೆಕ್ಟೇರುಗಳಿಗೆ ಅಧಿಕಗೊಂಡಿದೆ.

ಮಾವು, ಬಾಳೆ, ಕಿತ್ತಳೆ, ಸೀಬೆ, ಸಪೋಟ, ದ್ರಾಕ್ಷಿ, ಪೈನಾಪಲ್, ದಾಳಿಂಬೆ, ಹಲಸು, ಪಪ್ಪಾಯ ಮುಖ್ಯವಾದವು. ಬಾಳೆ ರಾಜ್ಯವು ಉತ್ಪಾದಿಸುವ ಹಣ್ಣುಗಳಲ್ಲಿ ಅತಿಮುಖ್ಯವಾದುದು.

ಮಾವು ರಾಜ್ಯದಲ್ಲಿ ಬೆಳೆಯುವ ಎರಡನೇ ಬಹುಮುಖ್ಯ ಹಣ್ಣಿನ ಬೆಳೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ.

ತರಕಾರಿಗಳು : ಹಲವಾರು ಬಗೆಯ ತರಕಾರಿಗಳನ್ನು ಕೃಷಿ ಮಾಡಲಾಗುವುದು. ಬಹುತೇಕ ತರಕಾರಿಗಳು ಅಲ್ಪಾವಧಿಯವು. ಇವುಗಳಿಂದ ದೊರೆಯುವ ಆದಾಯವೂ ಹೆಚ್ಚು. ಮುಖ್ಯ ತರಕಾರಿಗಳೆಂದರೆ ಬದನೆಕಾಯಿ, ಬೆಂಡೆಕಾಯಿ, ಮೆಣಸಿನಕಾಯಿ, ಆಲೂಗಡ್ಡೆ, ಟೊಮ್ಯಾಟೋ, ಮೂಲಂಗಿ, ಸುವರ್ಣಗಡ್ಡೆ, ಕ್ಯಾರೆಟ್, ಹೀರೇಕಾಯಿ, ಹಾಗಲಕಾಯಿ, ಹೂಕೋಸು, ನುಗ್ಗೆಕಾಯಿ ಹಲವಾರು ಬಗೆಯ ಸೊಪ್ಪುಗಳು.

ಪುಷ್ಪಬೆಳೆ : ಹೂಗಳ ಬೇಸಾಯವನ್ನು 'ಪುಷ್ಪಕೃಷಿ' ಎಂದು ಕರೆಯುವರು. ಕರ್ನಾಟಕವು ಪುಷ್ಪಕೃಷಿಯಲ್ಲಿ ದೇಶದಲ್ಲಿ ಮುಂಚೂಣಿಯಲ್ಲಿದೆ. ದೇಶದ ಒಟ್ಟು ಹೂವಿನ ಶೇ. 75 ರಷ್ಟನ್ನು ಇಲ್ಲಿಯೇ ಬೆಳೆಯಲಾಗುವುದು. ದೇಶದ ಮೊದಲ ಪುಷ್ಪ ಮಾರುಕಟ್ಟೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಇತ್ತೀಚೆಗೆ ಸರ್ಕಾರವು ತುಮಕೂರು, ದಾವಣಗೆರೆ, ಉಡುಪಿ, ಉತ್ತರಕನ್ನಡ, ಕೊಡಗು ಹಾಗೂ ಬೆಳಗಾಂವಿ ಜಿಲ್ಲೆಗಳಲ್ಲಿ ಹೂ ಮಾರುಕಟ್ಟೆ ಸ್ಥಾಪಿಸಲು ಉದ್ದೇಶಿಸಿದೆ. ರಾಜ್ಯದಲ್ಲಿ ಸುಮಾರು 18,000 ಹೆ. ಪ್ರದೇಶವು ಪುಷ್ಪ ಕೃಷಿಗೆ ಒಳಪಟ್ಟಿರುವುದು.

ಕರ್ನಾಟಕದ ವಾಯುಗುಣ, ಭೌಗೋಳಿಕ ಲಕ್ಷಣ, ನೀರಾವರಿ ವ್ಯವಸ್ಥೆ ವೈವಿಧ್ಯಮಯವಾಗಿದ್ದು ಕೃಷಿಯ ಮೇಲೆ ಇದರ ಪ್ರಭಾವ ಇದೆ. ಎಲ್ಲ ಬಗೆಯ ಏಕದಳ, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ತೋಟಗಾರಿಕಾ ಬೆಳೆಗಳು, ವಾಣಿಜ್ಯ ಬೆಳೆಗಳನ್ನು ಬೆಳೆಸಲಾಗುತ್ತಿದೆ. ಪಶುಸಂಗೋಪನೆ, ಮತ್ಸ್ಯೋದ್ಯಮ ಕೋಳಿ, ಹಂದಿ ಸಾಕಾಣಿಕೆ ಮುಂತಾದ ಹಲವು ಉದ್ಯಮಗಳು ಭೌಗೋಳಿಕ ಹಿನ್ನೆಲೆಯಲ್ಲಿ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರಗತಿಯಲ್ಲಿರುವುದನ್ನು ಗುರುತಿಸಬಹುದು. ಇಂದು ರಾಜ್ಯದ ಕೃಷಿಕರು ಹೊಸ ತಾಂತ್ರಿಕತೆಯನ್ನು ಅಳವಡಿಸುವಲ್ಲಿ ಅದರ ಸಾಧಕ ಬಾಧಕಗಳನ್ನು ಬಹಳ ಬೇಗ ಅರಿತುಕೊಂಡಿದ್ದಾರೆ. ಆರೋಗ್ಯದ ಮೇಲೆ ಅವು ಬೀರುತ್ತಿರುವ ದುಷ್ಪರಿಣಾಮ, ಪ್ರಾಕೃತಿಕ ಮಾಲಿನ್ಯ, ಜಲಮಾಲಿನ್ಯ, ಭೂಮಿಯ ಸತ್ತ್ವಹೀನತೆ ಇವುಗಳಿಂದ ಬೇಸತ್ತ ರೈತ ಸಾವಯವ ಗೊಬ್ಬರ ಬಳಸುವ ಅಂತರ್ಜಲ ವೃದ್ಧಿ, ಮಳೆಕೊಯ್ಲು, ಅರಣ್ಯ ಸಂರಕ್ಷಣೆ ಮುಂತಾದ ಸ್ವಾಭಾವಿಕ ಕೃಷಿಯೆಡೆಗೆ ವಾಲುತ್ತಿದ್ದಾರೆ.

ಕರ್ನಾಟಕದಲ್ಲಿ ಬಳಕೆಗೊಳ್ಳುತ್ತಿರುವ ಕೃಷಿ ಉಪಕರಣ ಬಗೆಗೆ ಆಯಾ ಜಿಲ್ಲೆಗಳಡಿ ವಿವರಗಳಿರುವುದರಿಂದ ಇಲ್ಲಿ ಅವುಗಳ ವಿವರಗಳಿಲ್ಲ.

ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಿ, ಯೋಜಿಸಿ ಹಲವು ಬಗೆಯ ಸಹಕಾರ ನೀಡುತ್ತಿದೆ. ದೇಶಾದ್ಯಂತ ಕೃಷಿ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿದ್ದು ಕೃಷಿ ವಿಜ್ಞಾನಿಗಳು ಸತತ ಸಂಶೋಧನೆಗಳಲ್ಲಿ ತೊಡಗಿಸಿಕೊಂಡು ಸತ್ತ್ವಯುತ ಆಹಾರಕ್ಕೆ ಸ್ವಾಭಾವಿಕ ದೇಶೀ ಬೆಳೆಪದ್ಧತಿಯೇ ಸರ್ವಕಾಲಕ್ಕೂ ಸಲ್ಲುವುದೆಂದು ಸಾಬೀತು ಪಡಿಸುವಲ್ಲಿ ಸಫಲರಾಗಿದ್ದಾರೆ.

ಎ.ಎಂ.ಡಿ.

ಕರ್ನಾಟಕದ ಬುಡಕಟ್ಟುಗಳಲ್ಲಿ ಕೃಷಿ ಬುಡಕಟ್ಟು ಜನ ಬೆಟ್ಟ, ಗುಡ್ಡ, ಅರಣ್ಯಗಳ ನಿವಾಸಿಗಳು. ಕೆಲವರು ಅಲೆಮಾರಿಗಳಾಗಿದ್ದು ಸ್ಥಳದಿಂದ ಸ್ಥಳಕ್ಕೆ ವಲಸೆ ಹೋಗುವವರು. ಅಲೆಮಾರಿ ಜೀವನವನ್ನು ನಡೆಸುತ್ತಿದ್ದ ಮಾನವ ಕಾಲಕ್ರಮೇಣ ಒಂದೆಡೆ ನೆಲೆನಿಂತು ರಕ್ತಸಂಬಂಧ, ಭಾಷೆ, ಸಂಸ್ಕೃತಿ, ಕಾಯ್ದೆ ಕಟ್ಟಲೆಗಳನ್ನು ರೂಢಿಸಿಕೊಂಡು, ಅವುಗಳನ್ನು ಒಪ್ಪಿಕೊಂಡು ಅನ್ಯೋನ್ಯವಾಗಿ ಒಂದುಗೂಡಿಕೊಂಡು ಸಾಮಾಜಿಕ ಜೀವನ ನಡೆಸುವ ಗುಂಪನ್ನು ಬುಡಕಟ್ಟು ಎಂದ ಕರೆಯಬಹುದು. ಇಂಥ ಬುಡಕಟ್ಟುಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಕಂಡುಬರುತ್ತವೆ. ಆರಂಭದ ಹಂತದಲ್ಲಿ ಕಾಡಿನ ಅಂಚಿನಲ್ಲಿ, ಅರಣ್ಯದೊಳಗೆ ತಮ್ಮದೇ ಆದ ವಿಶಿಷ್ಟ ರೀತಿಯ ಬದುಕನ್ನು ಕಟ್ಟಿಕೊಂಡವು. ನಾಗರೀಕ ಪ್ರಪಂಚದ ಹೊರಗೆಯೇ ಉಳಿದ ಇಂಥ ಬುಡಕಟ್ಟುಗಳ ಭಾಷೆ, ಸಂಸ್ಕೃತಿ, ಸಂಪ್ರದಾಯಗಳು ಹೇಗೆ ಭಿನ್ನವಾಗಿರುತ್ತವೆಯೋ ಹಾಗೆಯೇ ಅವರ ಕೃಷಿ ಚಟುವಟಿಕೆಗಳು ಭಿನ್ನವಾಗಿರುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ, ದೇಶದಿಂದ ದೇಶಕ್ಕೆ ಭಿನ್ನವಾಗಿರುವ ಇವರ ಜೀವನ ಶೈಲಿ ಆಯಾ ಪ್ರದೇಶದಲ್ಲಿ ದೊರೆಯುವ ಸ್ವಾಭಾವಿಕ (ಹವಾಗುಣ, ಮಣ್ಣು, ಮಳೆ, ನೀರು) ಸಂಪತ್ತನ್ನು ಅನುಸರಿಸಿ ಅಲ್ಲಿಯ ಕೃಷಿ ರೂಪುಗೊಂಡಿರುತ್ತದೆ. ಇಂಥ ಬುಡಕಟ್ಟುಗಳು ಭಾರತದ ವಿವಿಧ ಭಾಗಗಳಲ್ಲಿ ಬೆಟ್ಟ, ಗುಡ್ಡಗಳಲ್ಲಿ, ಬಯಲು ಪ್ರದೇಶಗಳಲ್ಲಿ ಗುಂಪುಗುಂಪಾಗಿ ಹೋಗಿ ನೆಲೆಸಿವೆ. ದಕ್ಷಿಣ ಭಾರತದಲ್ಲಿ ಚೆಂಚು, ಕೋತ, ತೋಡ ಕದರ್, ಕುರುಂಬ, ಇರುಳ, ಮಾತುವನ್, ಗೊಂಡರು, ಕುಟಿ, ಕುಯಿ ಮೊದಲಾದವರು ವಾಸಿಸುತ್ತಿದ್ದಾರೆ.

ಕರ್ನಾಟಕದಲ್ಲೂ ಹಲವಾರು ಬುಡಕಟ್ಟುಗಳಿದ್ದು ಅವುಗಳಲ್ಲಿ ಕೆಲವು ಇಂತಿವೆ. ಹಸಲರು, ಗೊಂಡರು, ಕುಡುಬಿಯರು, ಕೊರಗರು, ಸೋಲಿಗರು, ಗಾಟೊಕ್ಕಲು, ಮ್ಯಾಸಬೇಡರು, ಕುಣುಬಿ, ಮುಕ್ರಿ, ಗೌಳಿಗ, ಹಾಲಕ್ಕಿ, ಸಿದ್ದಿ, ಮೇರ, ಮಲೆಕುಡಿಯ, ಕೊರಗ, ಲಂಬಾಣಿ, ಮುಂತಾದವರು. ಇವರುಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಹರಡಿಕೊಂಡಿದ್ದಾರೆ. ಚಾಮರಾಜನಗರ, ರಾಮನಗರ, ಮೈಸೂರು, ದಕ್ಷಿಣಕನ್ನಡ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಮೊದಲಾದ ಜಿಲ್ಲೆಗಳಲ್ಲಿ ಕಂಡುಬರುವರು.

ಭೋಗೋಳಿಕ ಪರಿಸರ : ಈ ಬುಡಕಟ್ಟುಗಳು ಬೃಹತ್ ಬೆಟ್ಟಗುಡ್ಡಗಳ ಅರಣ್ಯಗಳ ಮಧ್ಯ ಹಾಗೂ ಸುತ್ತಮುತ್ತ ಉತ್ತಮ ವಾತಾವರಣವಿರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಹುಲ್ಲು ಮನೆಗಳು, ಕುಟೀರ, ಮಣ್ಣಿನ ಗೋಡೆಯುಳ್ಳ ಹಂಚಿನ ಮನೆಗಳಲ್ಲಿ ಇವರ ವಾಸ. ಸ್ವಚ್ಛಂದ ಗಾಳಿ ಹವಾಗುಣ ಆವರಿಸಿದ ಅರಣ್ಯ ಪ್ರದೇಶಗಳು ಇವರ ಪರಿಸರದ ಅವಿಭಾಜ್ಯ ಅಂಗಗಳು. ಕರ್ನಾಟಕದಲ್ಲಿ ಕಂಡುಬರುವ ಬುಡಕಟ್ಟುಗಳ ಭೌಗೋಳಿಕ ಪರಿಸರವನ್ನು ನೋಡುವುದಾದರೆ ವೈವಿಧ್ಯತೆ ಕಾಣಬಹುದು. ಪ್ರತಿಯೊಂದು ಬುಡಕಟ್ಟು ಕೂಡ ತಮ್ಮದೇ ಆದ ಬದುಕು, ಜೀವನವಿಧಾನ, ಸಂಪ್ರದಾಯ, ಆಚರಣೆ, ವೇಷ, ಭಾಷೆ, ಸಂಸ್ಕೃತಿಯನ್ನು ಪ್ರತಿನಿಧಿಸುವವರೊಂದಿಗೆ ವಿಶಿಷ್ಟತೆಯನ್ನು ಕಾಯ್ದುಕೊಂಡಿದೆ.

ಬುಡಕಟ್ಟು ಜನರ ಕೃಷಿ : ಮೂಲತಃ ಬುಡಕಟ್ಟು ಸಮುದಾಯಗಳು ಕೃಷಿಕರಲ್ಲದಿದ್ದರು ಕೆಲವೊಂದು ಬುಡಕಟ್ಟುಗಳು ತಮ್ಮ ಮೂಲ ಕಸುಬಿನ ಜೊತೆಗೆ ಬೇಸಾಯದಲ್ಲಿಯೂ ತೊಡಗಿರುವುದು ತಿಳಿದ ಸಂಗತಿ. ಕೆಲವರು ಮುಖ್ಯ ಉದ್ಯೋಗವಾಗಿಯೂ ಮತ್ತೆ ಕೆಲವರು ಉಪ ಕಸುಬನ್ನಾಗಿಯೂ ಕೃಷಿಯನ್ನು ಮೈಗೂಡಿಸಿಕೊಂಡಿದ್ದಾರೆ. ಇವರ ಕೃಷಿ ವಿಸ್ತೀರ್ಣ ಬಹು ಚಿಕ್ಕದಾಗಿದ್ದು, ಒಂದೆರಡು ಎಕ್ಕರೆಗಳಷ್ಟು ಭೂ ಪ್ರದೇಶದಲ್ಲಿ ಮಾತ್ರ ಕಂಡುಬರುವುದು. ಬುಡಕಟ್ಟುಗಳು ಮಳೆಯನ್ನು ಆಶ್ರಯಿಸಿಯೇ ಕೃಷಿ ಕಾರ್ಯ ಮಾಡುವರು. ಮುಂಗಾರು ಮತ್ತು ಹಿಂಗಾರು ಎರಡೂ ವಿಧದ ಬೇಸಾಯದಲ್ಲಿ ನಿರತರಾದ ಇವರು ನೀರಾವರಿಯುಳ್ಳ ಕೆಲವೊಂದು ಪ್ರದೇಶಗಳಲ್ಲಿ ಗದ್ದೆಗಳನ್ನು ಮಾಡಿ ಬತ್ತವನ್ನು ಬೆಳೆಯುವರು. ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣಕನ್ನಡ ಮೊದಲಾದ ಕಡೆ ಗೊಂಡರು, ಹಸಲರು, ಗಾಮೊಕ್ಕಲು, ಬುಡಕಟ್ಟುಗಳು ತಗ್ಗು ಪ್ರದೇಶಗಳಲ್ಲಿ ನೀರು ಹರಿಯುವ ಸ್ಥಳಗಳನ್ನು ಬಳಸಿಕೊಂಡು ಗದ್ದೆ ಮಾಡಿ ಬತ್ತ, ಅಡಕೆ ಮೊದಲಾದವುಗಳನ್ನು ಬೆಳೆಯುವರು. ಉಳಿದಂತೆ ಸಿದ್ಧಿಯರು, ಗೊಂಡರು, ಹಾಲಕ್ಕಿಯವರು, ಕೊರಗರು ಮತ್ತು ಸೋಲಿಗರ ಮಳೆಯಾಶ್ರಿತ ಬೇಸಾಯವನ್ನು ರೂಢಿಸಿಕೊಂಡಿದ್ದಾರೆ. ಸೋಲಿಗರು ತಾವು ವಾಸಿಸುವ ಸ್ಥಳಕ್ಕೆ 'ಪೋಡು'ಗಳ ಎನ್ನುವರು. ಚಾಮರಾಜನಗರ, ಬಿಳಿಗಿರಿರಂಗನಬೆಟ್ಟ, ಯಳಂದೂರು, ಚಿಕ್ಕಮಗಳೂರು, ಮೈಸೂರು, ಹಾಸನ, ಮಂಡ್ಯ, ಇವರ ಪ್ರಮುಖ ನೆಲೆಗಳಾಗಿವೆ.

ಬೇಸಾಯ : ವಿವಿಧ ಬುಡಕಟ್ಟುಗಳು ತಮ್ಮದೇ ಆದ ಬೇಸಾಯ ಕ್ರಮವನ್ನು ರೂಢಿಸಿಕೊಂಡಿರುವುದು ಎಲ್ಲೆಡೆ ಕಂಡುಬರುವ ಅಂಶವಾಗಿದೆ. ಇವರ ಬೇಸಾಯ ಪದ್ಧತಿಯನ್ನು ಈ ಕೆಳಗಿನಂತೆ ನೋಡಬಹುದು.

1. ಬಿತ್ತುವ ವಿಧಾನ : ಗೊಂಡರು ತಾವು ಮಾಡುವ ಕಾರಗದ್ದೆಯಲ್ಲಿ ಪೈರನ್ನು ನೆಡುವ ಪದ್ಧತಿಯನ್ನು ರೂಢಿಸಿಕೊಳ್ಳದೆ, ಬೀಜವನ್ನು ಬಿತ್ತುವ ಮೂಲಕ ಬತ್ತವನ್ನು ಬೆಳೆಯುವರು. ಇವರು ಗದ್ದೆಯಲ್ಲಿ ಎತ್ತುಗಳಿಗೆ ಹೊಸ ಸೀಣು ತೊಡಿಸಿ ಭೂಮಿಗೆ ಮತ್ತು ಎತ್ತುಗಳಿಗೆ ಪೂಜೆ ಮಾಡಿ ಉಳುಮೆ ಮಾಡುವರು.

2. ಸ್ಥಳಾಂತರ ಬೇಸಾಯ : ಬಿಳಿಗಿರಿರಂಗನ ಬೆಟ್ಟದಲ್ಲಿ ವಾಸಿಸುವ ಸೋಲಿಗರ ನೆಲೆ ದಟ್ಟವಾದ ಅರಣ್ಯ ಪ್ರದೇಶ. ಆ ಕಾಡಿನ ಮಧ್ಯದಲ್ಲಿಯೇ ಯೋಗ್ಯವಾದ ಭೂಮಿಯನ್ನು ಆಯ್ಕೆ ಮಾಡಿ ಬೇಸಾಯ ಮಾಡುವರು. ಪರಂಪರಾನುಗತವಾಗಿ ಬಂದಿರುವ ಕೃಷಿ ಪದ್ಧತಿ ಕೂಡ. ಇಲ್ಲಿಯ ಭೂಮಿಯ ಫಲವತ್ತತೆ ಕಡಿಮೆಯಾದಾಗ ಆ ಭೂಮಿ ಬಂಜೆಯಾಯಿತು ಎಂದು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಗುರುತು ಮಾಡಿ, ಅದನ್ನು ಕೆತ್ಲು ಮಾಡಿ ಕೃಷಿ ಮಾಡುವರು. ಇದನ್ನೆ 'ಕೆತ್ಲು ಬೇಸಾಯ' ಎಂದು ಕರೆಯುವರು, ವಿದ್ವಾಂಸರು ಇದನ್ನು ' ಕೊಚ್ಚು ಮತ್ತು ಸುಡುವ ವ್ಯವಸಾಯ' ಎಂದು ಕರೆಯುವರು. ಇವರು ಇಂದಿಗೂ ನೇಗಿಲು ಮತ್ತು ನೊಗಗಳನ್ನು ಬಳಸಿ ಎತ್ತುಗಳಿಗೆ ಏರುಕಟ್ಟಿ ಬೇಸಾಯ ಮಾಡುವುದು ಕಡಿಮೆ.

3. ಕುಂಬ್ರಿ ಬೇಸಾಯ : ಉತ್ತರಕನ್ನಡದಲ್ಲಿ ಕಂಡುಬರುವ ಗಾಮೊಕ್ಕಲು ಬುಡಕಟ್ಟುಗಳು ತಾವು ಓಡಾಡುವ ಕಾಡಿನಲ್ಲಿಯೇ ಮೊದಲು ಆರಂಭಿಸಿದ ಬೇಸಾಯ. ಕಾಡನ್ನು ಕಡಿದು ಬೆಂಕಿ ಹಾಕಿ, ಸುಟ್ಟ ನೆಲವನ್ನು ಅಗೆದು ರಾಗಿ ಮೊದಲಾದ ಬೆಳೆಯನ್ನು ಬೆಳೆಯುವರು. ಇದಕ್ಕೆ ಕುಂಬ್ರಿ ಬೇಸಾಯ ಎನ್ನುವರು.

4. ಗಜನಿ ಬೇಸಾಯ : ಇದೊಂದು ಸಾಮೂಹಿಕ ಬೇಸಾಯ ಪದ್ಧತಿ. ಉತ್ತರಕನ್ನಡ ಜಿಲ್ಲೆಯ ಗಾಮೊಕ್ಕಲು ಜನರು ಹೊಳೆ ದಂಡೆಯ ಉಪ್ಪು ನೀರು ಒಳ ನುಗ್ಗುವ ಭೂಮಿಯನ್ನು ವ್ಯವಸಾಯಕ್ಕೆ ಬಳಸುವರು. ಈ ರೀತಿಯ ನೀರನ್ನು ಬಳಸಿಕೊಂಡು ಮಾಡುವ ಬೇಸಾಯಕ್ಕೆ 'ಗಜನಿ ಬೇಸಾಯ'ಎನ್ನುವರು. ಇಲ್ಲಿ ಕಗ್ಗ ಎನ್ನುವ ದೊಡ್ಡ ಸುಂಗಿನ ಬತ್ತ ಬೆಳೆಯುವರು.

5. ಗದ್ದೆ ಬೇಸಾಯ : ಸಹ್ಯಾದ್ರಿ ಇಳುಕಲಿನ 'ಹೊಂಡ'ದ ಗದ್ದೆ ಎತ್ತರದ ಮಕ್ಕೆ ಗದ್ದೆಗಳಲ್ಲಿ ಬತ್ತವನ್ನು ಬೆಳೆಯುವ ಗಾಮೊಕ್ಕಲು ಇದನ್ನು ಗದ್ದೆ ಬೇಸಾಯ ಎಂದು ಕರೆಯುವರು.

6. ಹೊಡಿ ಬಿತ್ತುವುದು : ಗದ್ದೆಯನ್ನು ಚೆನ್ನಾಗಿ ಧೂಳು ಮಾಡಿ ಬೀಜ ಬಿತ್ತಿ, ಬೀಜ ನೆಲದಡಿ ಆಳವಾಗಿ ಹೋಗದ ಹಾಗೆ ಹೂಡುತ್ತಾರೆ, ಈ ಬಗೆಯ ಬಿತ್ತನೆಗೆ 'ಹೊಡಿ ಬಿತ್ತನೆ' ಎನ್ನುವರು. ಇದು ಗಾಮೊಕ್ಕಲಿಗರ ಒಂದು ಮುಖ್ಯ ವಿಧಾನ.

7. ಕುಮರಿ ಬೇಸಾಯ : ರಾಮನಗರ, ಮಾಗಡಿ, ಕನಕ ಪುರಗಳಲ್ಲಿಯ ಇರುಳರು ತಾವೆ ಅಗೆದು ಬೆಳೆ ಬೆಳೆಯುವರು. ಇದಕ್ಕೆ ಕುಮರಿ ಬೇಸಾಯ ಎನ್ನುವರು.

8. ಕೂಳಿ ಮುರಿಯುವುದು : ಗಾಮೊಕ್ಕಲು ಬುಡಕಟ್ಟಿನವರು ಗದ್ದೆಯನ್ನು ಆರಂಭದಲ್ಲಿ ಉಳುವುದಕ್ಕೆ ಕೂಳಿ ಮುರಿಯುವುದು ಎನ್ನುತ್ತಾರೆ.

9. ಅಗೆ ಹಾಕುವುದು : ಸೋಲಿಗರು, ಗಾಮೊಕ್ಕಲು ಮತ್ತು ಗೊಂಡರು ಮಲೆಕುಡಿಯ ಮುಂತಾದವರು ರಾಗಿ ಮತ್ತು ಬತ್ತವನ್ನು ಅಗೆ ಹಾಕುವ ಮೂಲಕ ಸಸಿ ಹುಟ್ಟಿ ಸ್ವಲ್ಪ ಬೆಳೆದ ಅನಂತರ ನಾಟಿ ಮಾಡುವುದು ಕಂಡು ಬರುತ್ತದೆ.

10. ನೀರಪೋರೆ : ಗಾಮೊಕ್ಕಲಿಗರ ಒಂದು ವಿಧಾನ. ಬತ್ತ ತೆನೆಗೂಡಿ ಬಂದ ಮೇಲೆ ಗದ್ದೆಯಲ್ಲಿಯ ನೀರನ್ನು ಕುಟಾರಿಯಿಂದ ತೋಡಿ ತೆಗೆದು ಗದ್ದೆಯ ಹಾಳಿ ಕಂಠಕ್ಕೆ ನೀರುಗಂಡಿ ಕಡಿದು ನೀರನ್ನು ಹರಿಸುವುದಕ್ಕೆ ನೀರ್‌ಪೋರೆ ಎನ್ನುವರು.

ಮುಖ್ಯ ಬೆಳೆಗಳು : ಕರ್ನಾಟಕದಲ್ಲಿ ಕಂಡುಬರುವ ವಿವಿಧ ಬುಡಕಟ್ಟುಗಳು ಪರಿಸರವನ್ನು ಆಶ್ರಯಿಸಿ ಆಹಾರ ಮತ್ತು ಆಹಾರೇತರ ಎರಡೂ ಬೆಳೆಗಳನ್ನು ಬೆಳೆಯುವರು. ಆಹಾರ ಬೆಳೆಗಳು ದಿನನಿತ್ಯಕ್ಕೆ ಬಳಕೆಯಾದರೆ, ಆಹಾರೇತರ ವಾಣಿಜ್ಯ ಬೆಳೆಗಳನ್ನು ಕೆಲವು ಕಡೆ ಬೆಳೆದು, ಹತ್ತಿರದ ಪಟ್ಟಣಗಳಲ್ಲಿ ಮಾರಾಟ ಮಾಡಿ ಹಣಗಳಿಸುವುದು ಕಂಡುಬರುತ್ತದೆ. ಇವರ ಮುಖ್ಯ ಬೆಳೆಗಳು ಇಂತಿವೆ.

ಆಹಾರ ಬೆಳೆಗಳು :

1. ಬತ್ತ : ಗೊಂಡರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿದ್ದು ಗುಡ್ಡಗಳ ತಗ್ಗಿನಲ್ಲಿರುವ ಸಂಪದ್ಭರಿತವಾದ ನೆಲ ಮತ್ತು ನೀರಿನ ಸಮೃದ್ಧಿಯಿರುವ ಪ್ರದೇಶಗಳಲ್ಲಿ ಬತ್ತವನ್ನು ಬೆಳೆಯುವರು. ಗೌಳಿಗರು, ಚಿಕ್ಕಮಗಳೂರು, ಬೆಳಗಾಂವಿ, ಧಾರವಾಡ, ಮುಂಡುಗೋಡುಗಳಲ್ಲಿ ಕುಮ್ರಿ ಬೆಳೆಯನ್ನು ಅನುಸರಿಸಿ ಬತ್ತವನ್ನು ಬೆಳೆಯುವರು. ಶಿಕಾರಿಪುರ, ಸೊರಬಗಳಲ್ಲಿ ಹಸಲರು ಸ್ವಂತ ಜಮೀನು ಹೊಂದಿದ್ದು ಬತ್ತವನ್ನು ಬೆಳೆಯುವರು.

2. ರಾಗಿ : ಸಾಮಾನ್ಯವಾಗಿ ಮಳೆಯನ್ನೇ ಆಶ್ರಯಿಸಿ ಬೆಳೆಯುವ ಮುಖ್ಯ ಬೆಳೆ ರಾಗಿ. ಇದನ್ನು ಸೋಲಿಗರು ಬೆಳೆಯುವುದು ಕಾಣಬಹುದು. ರಾಗಿಯನ್ನು ಭೂಮಿಗೆ ಚೆಲ್ಲುತ್ತಾರೆ. ಅದು ಹಸನಾಗಿ ಹುಟ್ಟಿದ ಮೇಲೆ ಕಳೆಯನ್ನು ತೆಗೆಯುವರು. ಗೌಳಿಗರು ಇತ್ತೀಚೆಗೆ ರಾಗಿಯನ್ನು ಬೆಳೆಯುವುದು ಕಂಡುಬರುತ್ತದೆ. ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗಾಗಳಲ್ಲಿಯ ಮ್ಯಾಸ ಬೇಡರು ರಾಗಿಯನ್ನು ಬೆಳೆಯುವರು. ಚಿಕ್ಕಮಗಳೂರು, ಸಾಗರ, ಶಿವಮೊಗ್ಗ, ಮಡಿಕೇರಿಯಲ್ಲಿ ಕಂಡುಬರುವ ಮೇದರು ಕೂಡ ರಾಗಿ ಬೆಳೆಯುತ್ತಾರೆ.

3. ಜೋಳ : ಇದನ್ನು ಸೋಲಿಗರು ಮ್ಯಾಸಬೇಡರು ಮತ್ತು ಮೇದರು ಬೆಳೆಯುವುದು ಕಂಡುಬರುತ್ತದೆ. ಚಿಕ್ಕಮಗಳೂರು, ಸಾಗರ, ಶಿವಮೊಗ್ಗ, ರಾಯಚೂರು, ಚಿತ್ರದುರ್ಗ, ಬಳ್ಳಾರಿ, ಚಾಮರಾಜನಗರ, ಯಳಂದೂರು, ಹುಣಸೂರು, ಮೊದಲಾದಕಡೆ ಜೋಳ ಬೆಳೆಯುವರು. ಜೋಳವನ್ನು ಹುರಿದು ತಿನ್ನುವುದರ ಜೊತೆಗೆ ರೊಟ್ಟಿ ಮಾಡಿ ಆಹಾರವಾಗಿ ಬಳಸುವುದು ಇವರಲ್ಲಿದೆ.

ದ್ವಿದಳ ಧಾನ್ಯಗಳು : ಮುಖ್ಯ ಆಹಾರ ಧಾನ್ಯಗಳ ಜೊತೆಯಲ್ಲಿಯೇ ಇತರ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಕಾಣಬಹುದು. ಇವರ ಮುಖ್ಯ ದ್ವಿದಳ ಧಾನ್ಯಗಳು ಇಂತಿವೆ.

1. **ಹುರುಳಿ :** ಇದನ್ನು ಸೋಲಿಗರು, ಗೌಳಿಗರು, ಗೊಂಡರು ಮತ್ತು ಮ್ಯಾಸಬೇಡರು ಬೆಳೆಯುವರು. ಈ ಬೆಳೆಯು ಆಹಾರಕ್ಕಷ್ಟೇ ಮಾತ್ರವಾಗಿರುವಷ್ಟು ಬೆಳೆಯುವುದು ಕಂಡುಬರುವ ಸಂಗತಿ.

2. **ಉದ್ದು :** ಗೊಂಡರು, ಗಾಮೊಕ್ಕಲಿಗರು, ಮೇದರು ಬೆಳೆಯುವರು.

3. ಹೆಸರು, ಪಚ್ಚೆಸರು, ಅಲಸಂದೆ, ಕುಸುಬೆ, ಮುಂತಾದವುಗಳನ್ನು ಮ್ಯಾಸಬೇಡರು, ಮೇದರು, ಗಾಮೊಕ್ಕಲಿಗರು ಬೆಳೆಯುವರು.

ವಾಣಿಜ್ಯ ಬೆಳೆಗಳು :

1. **ಕಬ್ಬು :** ಹಸಲರು ಮಾತ್ರ ಅಲ್ಪ ಪ್ರಮಾಣದಲ್ಲಿ ಕಬ್ಬು ಬೆಳೆಯುವರು.

2. **ಶೇಂಗಾ :** ಹಸಲರು, ಗಾಮೊಕ್ಕಲ ಮತ್ತು ಗೊಂಡರು ಶೇಂಗಾ ಬೆಳೆಯುವರು.

ಇದಲ್ಲದೆ ಹಸಲರು ಕಾಫಿ ಮತ್ತು ಶುಂಠಿಯನ್ನು, ಗಾಮೊಕ್ಕಲಿಗರು ಅಡಕೆ, ಬಾಳೆಯನ್ನು ಮಲೆಕುಡಿಯರು - ತೆಂಗು, ಅಡಕೆ, ಎಲೆ, ಏಲಕ್ಕಿಯನ್ನು, ಬೆಳೆಯುವುದು ಕಂಡುಬರುವುದು. ಮ್ಯಾಸಬೇಡರು ಹತ್ತಿ - ಶೇಂಗಾ, ಕುಸುಬೆಯನ್ನು ಬೆಳೆಯುವರು.

ತರಕಾರಿಗಳು : ಹಸಲರು ಮೆಣಸಿನಕಾಯಿ, ಬದನೆ, ತೊಂಡೆ, ಮತ್ತು ಹೀರೆ ಕುಂಬಳವನ್ನು, ಗೊಂಡರು, ಬದನೆ, ಬೆಂಡೆ, ತೊಂಡೆ, ಕುಂಬಳ, ಸೌತೆ, ಹೀರೆ, ಹಾಗಲ, ಚೂರಣ, ನುಗ್ಗೆ, ಟೊಮ್ಯಾಟೋ ಬೆಳೆಯನ್ನು ಸೋಲಿಗರು ತಿಂಗಳ ಹುರುಳಿ (ಬೀನ್ಸ್) ಕೋಸು, ಬದನೆ, ಟೋಮ್ಯಾಟೋ ತರಕಾರಿಯನ್ನು, ಗಾಮೊಕ್ಕಲಿಗರು - ಬದನೆ, ಬೆಂಡೆ, ಹಾಗಲ, ಸೋರೆ, ಮೂಲಂಗಿ, ಪಂಜರಗಡ್ಡೆ, ಈರುಳ್ಳಿ ಬೆಳೆಯುವರು. ಮ್ಯಾಸಬೇಡರು - ಮೆಣಸಿನಕಾಯಿ, ಈರೇಕಾಯಿ, ಹಾಗಲಗಳನ್ನು ಬೆಳೆಯುವರು.

ಹಣ್ಣುಗಳು : ಮಲೆಕುಡಿಯರು ಅನಾನಸ್ ಹಣ್ಣನ್ನು ಬೆಳೆಯುವರು. ಕಾಡುಕುರುಬರು ಮಾವಿನಹಣ್ಣು, ರಾಮಫಲ, ಸೀತಾಫಲ, ಸೀಬೆ ಮತ್ತು ಕಾಡಿನಲ್ಲಿ ದೊರೆಯುವ ಜಮ್ಮು ನೇರಳೆ ಹಣ್ಣನ್ನು ಮಾರಾಟ ಮಾಡುವರು. ಗೊಂಡರು ಕಲ್ಲಂಗಡಿ, ಮಾವು ಹಣ್ಣುಗಳನ್ನು ಬೆಳೆಯುವರು.

ಸೊಪ್ಪು : ಗೊಂಡರು - ಕುಂಬಳದ ಸೊಪ್ಪು, ಹರಿವೆ, ನುಗ್ಗೆ ಮತ್ತು ಸಬ್ಬಸೀಗೆ ಸೊಪ್ಪನ್ನೂ ಕುಡುಬಿಯರಲ್ಲಿ ಕಂಡುಬರುವ ಗೋವಾ ಕುಡುಬಿಯರು, ಪ್ರಧಾನ ವೃತ್ತಿಯಾದ ಕೃಷಿಯ ಜೊತೆಗೆ 'ಬಸಳೆ'ಯನ್ನು ಬೆಳೆಯುವರು. ಬಸಳೆಯನ್ನು ಮಾತ್ರ ಎಲ್ಲಾ ಮನೆಗಳವರು ನೆಡುವ ಆಗಿಲ್ಲ. ಇಡೀ ಕುಟುಂಬದ ಯಜಮಾನ ಮಾತ್ರ ಅದನ್ನು ನೆಡಬೇಕು. ಆದರೆ ಎಲ್ಲರು ಬಳಸಬಹುದು ಎಂಬ ನಿಯಮವಿದೆ. ಸೋಲಿಗರು ಸೀಗೆ, ಗಣಕೆ, ಮಾರಡೆಸೊಪ್ಪನ್ನು, ಗಾಮೊಕ್ಕಲರು - ಹರಗಿ, ಬಸಳೆ ಸೊಪ್ಪನ್ನು ಕಾಡುಕುರುಬರು ಅನ್ನೆಸೊಪ್ಪು, ಒನಗೊನೆಸೊಪ್ಪು, ಕುಂಬಳ ಸೊಪ್ಪು, ಕೀರೆಸೊಪ್ಪು, ಕಾಡುಸಾಸಿವೆ, ಮುಳ್ಳುಗೀರೆ, ಸೀಗೆ, ಕಾಡು ನುಗ್ಗೆ, ಗಣಕೆ ಸೊಪ್ಪನ್ನು ಬೆಳೆದು ಉಪಯೋಗಿಸುವರು.

ರೇಷ್ಮೆ ಕೃಷಿ : ಕರ್ನಾಟಕದಲ್ಲಿ ರೇಷ್ಮೆ ಕೃಷಿ ಮುಖ್ಯ ಕೃಷಿಗಳಲ್ಲಿ ಒಂದಾಗಿದ್ದು, ಬುಡಕಟ್ಟು ಸಮುದಾಯದಿಂದ ದೂರ ಉಳಿದಿದ್ದರೂ ಕೂಡ ರಾಮನಗರ, ಮಾಗಡಿ, ಕನಕಪುರಗಳಲ್ಲಿ ಕಂಡುಬರುವ ಇರುಳರು ಕೆಲವು ಕಡೆ ರೈತರ ಹೊಲದಲ್ಲಿ ರೇಷ್ಮೆ ಕಡ್ಡಿ ನೆಟ್ಟು ಬೆಳೆ ಬೆಳೆಯುವುದು ಇವರ ಕೆಲಸ. ಬಂದ ರೇಷ್ಮೆ ಸೊಪ್ಪನ್ನು ಮಾರಿ ಹೊಲದ ರೈತ ಮತ್ತು ಇವರು ಸಮನಾಗಿ ಹಂಚಿಕೊಳ್ಳುವುದು ಕಂಡುಬರುತ್ತದೆ.

ದೇಶೀಯ ತಳಿಗಳು : ಸಣ್ಣರಾಗಿ, ಹುರುಳಿ, ಉದ್ದು, ಅಲಸಂದೆ, ಸೀಮೆತೊಗರಿ (ಸಣ್ಣತೊಗರಿ) ಪಚ್ಚೆಸರು, ಬಸಳೆ, ಪಂಜರಗಡ್ಡೆ, ಮೂಲಂಗಿ, ಹೀರೆಕಾಯಿ, ಹಾಗಲ, ಗುಂಬಳ, ಹಂಟೆ, ಕೆಸುವು ಚೂರಣ, ಕುಂಬಳಸೌತೆ, ಬೆಂಡೆ, ತೊಂಡೆ, ಬದನೆ ಮತ್ತು ಕಂಬ್ರಿ, ಸಣ್ಣಬತ್ತ, ಕಗ್ಗ, ಕಣಗ, ಕಬ್ಬ ಹಳ್ಳೆ, ಬರಕ, ಸಿರಿಬಳ್ಳ, ಗೌರಿಸಣ್ಣ, ಬಾಂಟ್ವಾಳ, ಇಕ್ರಮ, ಸಗತಿ ಮೊದಲಾದ ಬತ್ತದ ತಳಿಗಳನ್ನು ಬೆಳೆಸುವರು.

ಆಹಾರ ಸಂಗ್ರಹಣೆ ಸಂಸ್ಕರಣೆ : ಮೇದರು ರಾಗಿ, ಬತ್ತ, ಜೋಳ, ತೊಗರಿ, ಅವರೆಗಳನ್ನು ವರ್ಷಗಟ್ಟಲೆ ರಕ್ಷಿಸಿಡುತ್ತಾರೆ. ರಾಗಿ ಮತ್ತು ಬತ್ತವನ್ನು ಪಣತ ಅಥವಾ ಬಿದುರಿನ ಪೆಟ್ಟಿಗೆಗಳಲ್ಲಿ ತುಂಬಿಡುತ್ತಾರೆ. ಜೋಳ ಉಳಿಯುವ ಸಾಧ್ಯತೆ ಇರುವುದರಿಂದ ಮೂಟೆಗಳಲ್ಲಿ ಅಥವಾ ಮಂಕರಿಗಳಲ್ಲಿ ಗಾಳಿಗೆ ಅವಕಾಶವಿಲ್ಲದಂತೆ ಇಡುವರು. ಅವರೆ ಮತ್ತು ತೊಗರಿಯನ್ನು ಕೆಮ್ಮಣ್ಣು ಬೆರಸಿ ಕಲಸಿ ಒಣಗಿಸಿ ಇಡುವರು. ಗೊಂಡರ ಮುಖ್ಯಬೆಳೆ ಬತ್ತ. ಇವರು ಉದ್ದು, ಹೆಸರು ಧಾನ್ಯಗಳನ್ನು ಬತ್ತದ ಹುಲ್ಲು ಬಳಸಿ ತಯಾರಿಸಿದ ಹೆಮ್ಮುಡೆ, ಕುಟ್ಟಿಗಿಗಳಲ್ಲಿ ಸಂಗ್ರಹಿಸಿಡುವರು. ಬತ್ತದ ಹುಲ್ಲನ್ನು ಅಂಗಳದಲ್ಲಿ ವರ್ತುಳಾಕಾರವಾಗಿ ಹರಡಿ, ಅದರ ಮೇಲೆ ಒಂದು ಹೊಳ್ಳು ಬತ್ತ ಹಾಕುತ್ತಾರೆ. ಹರಡಿದ ನೇರ ಹುಲ್ಲನ್ನು ಮೇಲಕ್ಕೆ ಎತ್ತಿ ಸುತ್ತಾ ಬೆತ್ತ ಅಥವಾ ಹುಲ್ಲಿನ ಹುರಿಯಿಂದ ಬಿಗಿದು ಮುಡೆಯನ್ನು ಎತ್ತರಿಸಿ, ಮುಡೆ ಎತ್ತರಕ್ಕೆ ಹೋದಂತೆ ಬತ್ತ ತುಂಬುವರು. ಹಾಗೆಯೆ ಬಿದಿರು ಮತ್ತು ಬೆತ್ತದಿಂದ ಮಾಡಿದ ಕಣಜ ಅಥವಾ ಕಡಿಕೆಯನ್ನು ಮನೆಯ ಅಂಗಳದಲ್ಲಿ ಸುತ್ತಿ ಕಟ್ಟಿ ಬತ್ತ ಸುರಿದು ಸಂಗ್ರಹಿಸುತ್ತಾರೆ. ಊಟಕ್ಕಾಗಿ ಅಕ್ಕಿಯನ್ನು ಮುಡಿಯಲ್ಲಿ ಕಟ್ಟಿಡುವರು. ಇದು ಆಹಾರ ರಕ್ಷಣೆಯ ಒಂದು ವಿಧಾನ. ಮಡಕೆಗಳಲ್ಲಿ ಉದ್ದು, ಹೆಸರು ಮುಂತಾದ ಧಾನ್ಯಗಳನ್ನು ಸಂರಕ್ಷಣೆ ಮಾಡುವರು. ಹಾಗೆಯೆ ಸೋರೆ, ಹೀರೆ, ಸೌತೆ, ಕುಂಬಳ, ಪಡುವಲ, ಬೆಂಡೆ ಬೀಜಗಳನ್ನು ಚೆನ್ನಾಗಿ ಒಣಗಿಸಿ ಬೂದಿ ಕಲಸಿ ಬಟ್ಟೆಯಲ್ಲಿ ಕಟ್ಟಿ ಮಡಕೆಯಲ್ಲಿ ಇಡುವರು. ಸಬ್ಬಸೀಗೆ, ದಂಟಿನ ಬೀಜಗಳನ್ನು ಒಣಗಿಸಿ ಇರುವೆಗಳಿಗೆ ಸಿಗದಂತೆ ಬಟ್ಟೆಯಲ್ಲಿ ಕಟ್ಟಿ ಅಡುಗೆ ಮನೆಯ ಗೋಡೆ ಮೇಲೆ ತೂಗಿಡುತ್ತಾರೆ.

ಸೋಲಿಗರು - ತಾವು ಬೆಳೆದ ರಾಗಿ, ಜೋಳ, ಕಡಲೆ, ಅಲಸಂದೆ, ಹೆಸರು, ಉದ್ದು, ಹುರುಳಿ, ತೊಗರಿ ಮೊದಲಾದ ಧಾನ್ಯಗಳನ್ನು ಬಿದುರಿನ ತಡಿಕೆ ಕಟ್ಟಿ ಮತ್ತು ಮಡಕೆಗಳಲ್ಲಿ ಸಂಗ್ರಹಿಸಿಟ್ಟು ಸಂರಕ್ಷಿಸುವುದು ಕಂಡುಬರುವುದು. ಇದಲ್ಲದೆ - ಬದನೆ, ಟೊಮ್ಯಾಟೋ, ಬೀಜಗಳಿಗೆ ಬೂದಿ ಬೆರಸಿ ಮನೆಯ ನೆರಕೆ ಅಥವಾ ಸೂರಿನಲ್ಲಿ ನೇತು ಹಾಕುವರು. ಬತ್ತವನ್ನು ಹೆಡಿಗೆ ಬುಟ್ಟಿಯಲ್ಲಿ ಮನೆಗೆ ಹೊತ್ತೊಯ್ದು, ಬೆತ್ತದಿಂದ ಹೆಣೆದ ಕಣಜದಲ್ಲಿ ತುಂಬುತ್ತಾರೆ. ಕಣಜವಿಲ್ಲದವರು ಹುಲ್ಲು ಹಾಕಿ, ಕ್ರಮವಾಗಿ ಎತ್ತರಕ್ಕೆ ನಿಲ್ಲಿಸಿ ಬತ್ತ ಸೋರದ ಹಾಗೆ ಹುಲ್ಲನ್ನು ಹೊದಿಸಿ ಬತ್ತವನ್ನು ಸುರಿದು ಪೂರ್ತಿ ತುಂಬಿ 'ಹೆಮ್ಮುಡಿ'ಯನ್ನು ಕಟ್ಟುತ್ತಾರೆ. ಇದು 25-30 ಖಂಡುಗದವರೆಗೆ ಬತ್ತ ಸಂಗ್ರಹಿಸುವಷ್ಟು ದೊಡ್ಡದಾಗಿರುತ್ತದೆ. ಗದ್ದೆಗೆ ಬಿತ್ತುವ ಬೀಜಗಳನ್ನು ಬಿಸಿಲಿನಲ್ಲಿ ಒಣಗಿಸಿ ನುಕ್ಕಿ ಸೊಪ್ಪು ಸೇರಿಸಿ ಗೋಣಿ ಚೀಲದಲ್ಲಿ ಕಟ್ಟಿ ಶೀತವಿಲ್ಲದ ಸ್ಥಳದಲ್ಲಿ ಶೇಕರಿಸಿಡುವರು. ಈ ರೀತಿಯಾಗಿ ಕರ್ನಾಟಕದಲ್ಲಿ ಕಂಡುಬರುವ ವಿವಿಧ ಬುಡಕಟ್ಟುಗಳು ಕೂಡ ಬೀಜಗಳನ್ನು ಮತ್ತು ಧಾನ್ಯಗಳನ್ನು ಮಡಕೆ, ಕಣಜ, ತಡಿಕೆಗಳನ್ನು ಮತ್ತು ಗೋಣಿ ಚೀಲಗಳಲ್ಲಿ ಶೇಕರಿಸಿಡುವುದು ಎಲ್ಲೆಡೆ ಕಾಣಬರುವ ಸಂಗತಿಯಾಗಿದೆ.

ಗೊಬ್ಬರದ ಬಳಕೆ : ಬುಡಕಟ್ಟು ಜನ ರಾಸಾಯನಿಕ ಗೊಬ್ಬರದ ಬಳಕೆ ಮಾಡುವುದು ತೀರ ಕಡಿಮೆ. ನಗರಗಳ ಆಸುಪಾಸುಗಳಲ್ಲಿ ಇರುವ ಗೊಂಡರು, ಹಲಸರು, ಗಾಮೊಕ್ಕಲರು ಮಾತ್ರ ರಾಸಾಯನಿಕಗೊಬ್ಬರವನ್ನು ಅಲ್ಪ ಪ್ರಮಾಣದಲ್ಲಿ ಬಳಕೆ ಮಾಡುವರು. ಸೋಲಿಗರು ತಮ್ಮ ವ್ಯವಸಾಯದ ಭೂಮಿಗೆ ಗೊಬ್ಬರ ಬಳಸುವುದಿಲ್ಲ. ಭೂಮಿಯಲ್ಲಿ ಫಸಲು ಕಡಿಮೆಯಾದಾಗ ಭೂಮಿ ಬಂಜೆಯಾಯಿತು ಎಂದು ಬೇರೆಡೆ ಕೃಷಿ ಮಾಡುವರು. ಆದರೆ ವ್ಯವಸಾಯ ಆರಂಭವಾಗುವ ಮೊದಲು ಜಮೀನಿಗೆ ತರಗೆಲೆ, ಮರದರೆಂಬೆಗಳನ್ನು ಕಡಿದು ಹಾಕಿ ಸುಟ್ಟು ಬೂದಿ ಮಾಡಿ ಅನಂತರ ಬೆಳೆ ಮಾಡುವರು. ಉಳಿದಂತೆ ಫಲವತ್ತಾದ ಭೂಮಿಗೆ ಕಸ ಹಾಗೂ ಮರದ ಎಲೆಗಳಿಂದ ಕೊಳೆತ ಗೊಬ್ಬರವನ್ನು ಬಳಸುವುದು ಎಲ್ಲೆಡೆ ಕಂಡುಬರುವುದು.

ಕೃಷಿ ಉಪಕರಣಗಳು :

1. **ಜೊತ್ತಗೆ :** ಎತ್ತುಗಳನ್ನು ನೊಗಕ್ಕೆ ಕಟ್ಟುವ ಬಳ್ಳಿಗೆ ಜೊತ್ತಗೆ ಎಂದು ಕರೆಯುವರು.
2. **ಕಟ್ ನೇಣು :** ನೊಗಕ್ಕೆ ನೇಗಿಲು ಕಟ್ಟುವ ಹಗ್ಗಕ್ಕೆ ಕಟ್‌ನೇಣು ಎನ್ನುವರು. (ಗಾಮಾಕ್ಕಲ)
3. **ಹಲಕಿ :** ಕಸವನ್ನು ತೆಗೆಯುವ ಒಂದು ಉಪಕರಣ. (ಗಾಮಾಕ್ಕಲ)
4. **ಮೇಟಿಕಂಬ :** 5-6 ಇಂಚು ವ್ಯಾಸ ಮತ್ತು ನಾಲ್ಕು ಅಡಿ ಎತ್ತರದ ದುಂಡಿನ ಮೇಯುಳ್ಳಿ ವ್ಯವಸಾಯಕ್ಕೆ ಬಳಸುವ ಸಲಕರಣೆ. (ಗೊಂಡರು)
5. **ಹಡಿಮಂಚ :** ಹುಲ್ಲಿನಿಂದ ಬತ್ತವನ್ನು ಬೇರ್ಪಡಿಸಲು ಬಳಸುವ ಮಂಚ. (ಗೊಂಡರು)
6. **ನೇಗಿಲು :** ಗದ್ದೆ-ಹೊಲ ಉಳುಮೆ ಮಾಡಲು ಬಳಸುವ ಉಪಕರಣ
7. **ಗೆರಸಿ - ಮೊರ :** ಧಾನ್ಯಗಳನ್ನು ಗೇರಿ ಸ್ವಚ್ಛ ಮಾಡಲು ಬಳಸುವ ಸಾಧನ. (ಗೊಂಡರು)
8. **ಗೊಬ್ಬರ ಕೊಕ್ಕೆ :** ಕೊಟ್ಟಿಗೆ ಸಗಣಿಯನ್ನು ತಿಪ್ಪೆಗೆ ಎಳೆಯಲು ರಚಿಸಿದ ಹಲ್ಲುಗಳಿರುವ ಕೋಲು. (ಗೊಂಡರು)
9. **ಮುಡಿ :** ಊಟಕ್ಕಾಗಿ ಅಕ್ಕಿಯನ್ನು ಮುಡಿಯಲ್ಲಿ ಕಟ್ಟಿಡಲು ಹೆಣೆದ ವಸ್ತು.
10. **ಹುಲ್ಬಿಡಿ :** ಮನೆಯ ಕಸ ತೆಗೆಯಲು ಬಳಸುವ ಹುಲ್ಲಿನ ಕಡ್ಡಿಗಳಿಂದ ಮಾಡಿದ ಹಿಡಿಯಿದು. (ಗೊಂಡರು)
11. **ಮಡಕೆ :** ಮಣ್ಣಿನಿಂದ ಮಾಡಿದ ವಸ್ತು.
12. **ಹೆಡಗೆ :** ಬಿದುರಿನಿಂದ ಹೆಣೆದು ಒಂದು ಬುಟ್ಟಿ. ಧಾನ್ಯಗಳನ್ನು ಹೊರಲು ಮತ್ತು ಶೇಖರಿಸಿಡಲು ಬಳಸುವರು.
13. **ಕೊಟ್ಟೆ :** ಕೊಳೆರೋಗವನ್ನು ತಡೆಗಟ್ಟಲು ಅಡಕೆ ಹಾಳೆಗಳನ್ನು ಸೇರಿಸಿ ಮಾಡುವ ಸಾಧನ. (ಹಸಲರು)
14. **ಒಳ್ಳು :** ಬತ್ತ ಕುಟ್ಟಲು ಮಾಡಿರುವ ಅರ್ಧ ಅಡಿ ಆಳದ ಕಲ್ಲಿನ ಗುಂಡಿ. (ಹಸಲರು)
15. **ಕೆಂಬ್ರಿ :** ಒಂದು ಬುಟ್ಟಿ. (ಗೊಂಡರು)
16. **ಅಂಡೆ :** ಬಿದಿರುಗಳನ್ನು ಒಂದೊಂದು ಗಣ್ಣಿಗೆ ಕತ್ತರಿಸಿ ಮಾಡಿದ ಕೊಳವೆಯಾಕಾರದ ತುಂಡು - ಪಾತ್ರೆಯಂತೆ ಬಳಸುವರು. (ಕರೆ ಒಕ್ಕಲರು)
17. **ದಾಬು :** ಹಸುಗಳನ್ನು ಕಟ್ಟಲು ನಾರಿನಿಂದ ತಯಾರಿಸಿದ ಹಗ್ಗ. (ಕರೆ ಒಕ್ಕಲಿಗರು)
18. **ನೇಂಜಿ :** ನೇಗಿಲು ಮಲೆಕುಡಿಯ ಬಳಸುವ ವಸ್ತು.
19. **ದುಡಿಮೆ :** ಹಸುವಿಗೆ ಹಾಕುವ ಮೂಗು ರಾಣಿ (ಮಲೆಕುಡಿಯ)

ಗ್ರಂಥ ಋಣ :

ಕರ್ನಾಟಕ ಬುಡಕಟ್ಟುಗಳು ಸಂ.1 - ಪ್ರಧಾನ ಸಂಪಾದಕರು ಪ್ರೊ. ಎಚ್.ಜೆ. ಲಕ್ಕಪ್ಪಗೌಡ.

ಕರ್ನಾಟಕ ಬುಡಕಟ್ಟುಗಳು - ಸಂಪುಟ - 02 ಪ್ರಧಾನ ಸಂಪಾದಕರು ಪ್ರೊ. ಎಚ್.ಜೆ. ಲಕ್ಕಪ್ಪಗೌಡ.

ಗಿರಿಜನ ಪ್ರಪಂಚ - ಹೆಚ್.ಎಲ್. ನಾಗೇಗೌಡ.

ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ (ಪರಿಷ್ಕೃತ) ಸಂಪುಟ - 2 ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿ.ವಿ.

ಎಲ್. ಆರ್.

ಕಲ್ಲಂಗಡಿ (ಸಿಟ್ರಿಲ್ಲಸ್ ಲ್ಯಾನೇಟಸ್) ಕುಕರ್ಬಿಟೇಸಿ ಕುಟುಂಬಕ್ಕೆ ಸೇರಿದುದಾಗಿದೆ. ಜನಪ್ರಿಯ ಹಣ್ಣಾಗಿರುವ ಕಲ್ಲಂಗಡಿಯನ್ನು ಭಾರತದಾದ್ಯಂತ ಬೆಳೆಯುತ್ತಾರೆ. ಇದನ್ನು ಹಿಂದೆ ಸಾಮಾನ್ಯವಾಗಿ ನದೀ ತೀರಗಳ ಮರಳಿನಲ್ಲಿ ಬೆಳೆಯುತ್ತಿದ್ದರು. ಇಂದು ಎಲ್ಲಾ ಕಡೆಯಲ್ಲಿಯೂ ಬೆಳೆಯಲಾಗುತ್ತಿದೆ. ಇದರ ತವರು 'ದಕ್ಷಿಣ ಆಫ್ರಿಕಾ' ಎಂದು ತಿಳಿದುಬಂದಿದೆ.

ಬೀಜ ಬಿತ್ತುವ ಮುನ್ನ ಭೂಮಿಯನ್ನು 2-3 ಬಾರಿ ಉತ್ತು, ಹೆಂಟೆ ಒಡೆದು, ಕಸಕಡ್ಡಿಗಳನ್ನು ತೆಗೆದು ಸಿದ್ಧಪಡಿಸಿಕೊಳ್ಳಬೇಕು. ಅನಂತರ ಇಳಿಜಾರಿಗೆ ಅಡ್ಡಲಾಗಿ 8-10 ಅಡಿ ಸಾಲುಗಳಲ್ಲಿ 3 ಅಡಿ ಅಂತರದಲ್ಲಿ ಪಾತಿಗಳನ್ನು ಸಿದ್ಧಪಡಿಸಿ ಚೆನ್ನಾಗಿ ಕಳಿತ 10 ಗಾಡಿ ಕೊಟ್ಟಿಗೆ ಗೊಬ್ಬರ, 40 ಕೆ.ಜಿ. ಸಾರಜನಕ, 35 ಕೆ.ಜಿ. ರಂಜಕ ಮತ್ತು 40 ಕೆ.ಜಿ. ಪೊಟ್ಯಾಷ್‌ಗಳನ್ನು ಮಣ್ಣಿಗೆ ಮಿಶ್ರಣ ಮಾಡಬೇಕು. ಈ ಗೊಬ್ಬರಗಳ ಜೊತೆ 4 ಕೆ.ಜಿ. ಫ್ಯುರಡಾನ್ ಹರಳುಗಳನ್ನೂ ಮಣ್ಣಿನಲ್ಲಿ ಮಿಶ್ರಣ ಮಾಡಿದರೆ ಗಿಡಕ್ಕೆ ಸುಮಾರು 45 ದಿನಗಳವರೆಗೆ ಹೇನು, ತಿಗಣೆ ಮತ್ತು ರಸ ಹೀರುವ ಹುಳುಗಳ ತೊಂದರೆ ಇರುವುದಿಲ್ಲ. ಹೀಗೆ ಸಿದ್ಧಪಡಿಸಿಕೊಂಡ ಪ್ರತಿಯೊಂದು ಪಾತಿಗೆ 3 ಬೀಜ ಬಿತ್ತಬೇಕು. ಒಂದು ಎಕರೆಗೆ 400 ರಿಂದ 450ಗ್ರಾಂ ಬಿತ್ತನೆ ಬೀಜ ಬೇಕಾಗುತ್ತದೆ.

ಈ ಬೆಳೆಗೆ ನೀರು ಬಸಿದು ಹೋಗುವಂತಹ ಮರಳುಗೋಡು ಮಣ್ಣು ಯುಕ್ತ. ಆಮ್ಲೀಯ ಮತ್ತು ಕ್ಷಾರ ಮಣ್ಣುಗಳು ಯೋಗ್ಯವಲ್ಲ. ಉಷ್ಣವಾತಾವರಣ ಅಗತ್ಯ. ಮಣ್ಣಿನ ಪರಿಸ್ಥಿತಿ ಮತ್ತು ಹವಾಗುಣಕ್ಕನುಸಾರವಾಗಿ 4-5 ದಿನಗಳಿಗೊಮ್ಮೆ ನೀರು ಹಾಯಿಸಿ, ಬಿತ್ತನೆ ಮಾಡಿದ ಒಂದು ತಿಂಗಳಿನ ಅನಂತರ ದೃಢವಾದ ಸಸ್ಯಗಳನ್ನು ಉಳಿಸಿಕೊಂಡು,

ಉಳಿದವನ್ನು ಕಿತ್ತು ಹಾಕಬೇಕು. ಒಂದು ಎಕರೆಗೆ 4 ಸಾವಿರ ಗಿಡಗಳಿದ್ದರೆ ಸಾಕು. ಆಗಿಂದಾಗ್ಗೆ ಕಳೆ ತೆಗೆದು ಮಣ್ಣಿನ ಮೇಲ್ಪದರವನ್ನು ಸಡಿಲಗೊಳಿಸಿ ಬಿತ್ತಿದ 35 ರಿಂದ 40 ದಿನಗಳಲ್ಲಿ ಸಸಿಗಳ ಬುಡದಿಂದ 3-4 ಅಂಗುಲದ ದೂರದಲ್ಲಿ ಗೆರೆಯನ್ನು ಮಾಡಿ ಮೇಲು ಗೊಬ್ಬರವನ್ನು ಹಾಕಿ ಮಣ್ಣಿನಿಂದ ಮುಚ್ಚಿ ನೀರು ಹಾಯಿಸಬೇಕು. ಈ ದಿನಗಳಲ್ಲಿ ಗಿಡ ಹಬ್ಬಲು ಪ್ರಾರಂಭಿಸುತ್ತವೆ. ಆಗ ಎರಡು ಪಟಗಳ ನಡುವೆ ಇರುವ ಜಾಗದಲ್ಲಿ, ಪಟಗಳಲ್ಲಿ ಅಥವಾ ನೀರಿನ ಕಾಲುವೆಗಳಲ್ಲಿ ಬೆಳೆಯುವ ಅಂಬುಗಳನ್ನು ಕೈಯಿಂದ ತೆಗೆದು ಸರಿಯಾಗಿ ಬಿಡಬೇಕು. ಇದರಿಂದ ರೋಗದ ಹಾವಳಿ ಕಡಿಮೆಯಾಗಿ ಕಾಯಿ ಕೊಳೆಯುವುದು ತಪ್ಪುತ್ತದೆ.



ಹೂ ಬಿಡುವ ಕಾಲದಲ್ಲಿ 2-3 ವಾರಗಳ ಕಾಲ ಎಕರೆಗೆ ಒಂದೆರಡು ಜೇನುಗೂಡುಗಳನ್ನಿಡುವುದರಿಂದ ಪರಾಗಸ್ಪರ್ಶ ಸಮರ್ಪಕವಾಗಿ ನಡೆದು ಕಾಯಿ ಹೆಚ್ಚು ಬಿಡುತ್ತವೆ. ಒಂದೇ ಬಾರಿಗೆ ಕೊಯ್ಲಿಗೆ ಬರಲೂ ಸಾಧ್ಯವಾಗುತ್ತದೆ. ಕಾಯಿ ಬಿಡುವ ಸಮಯದಲ್ಲಿ ಒಣಹವೆ ಇದ್ದಲ್ಲಿ ಉತ್ತಮ ದರ್ಜೆಯ ಹಣ್ಣನ್ನು ಪಡೆಯಬಹುದು. ಈ ಬೆಳೆಯ ಉತ್ತಮ ಇಳುವರಿ ಹಾಗೂ ಗುಣಮಟ್ಟಕ್ಕೆ ದೀರ್ಘ ಶುಷ್ಕ ವಾತಾವರಣ, ತೀಕ್ಷ್ಣವಾದ ಬಿಸಿಲಿನಿಂದ ಕೂಡಿದ ಹಗಲು ಹಾಗೂ ಬೆಚ್ಚನೆಯ ರಾತ್ರಿಗಳು ಆವಶ್ಯಕ. ಬಿತ್ತನೆ ಮಾಡಲು ಡಿಸೆಂಬರ್ - ಜನವರಿ ತಿಂಗಳು ಸರಿಯಾದ ಕಾಲ. ಮಾರುಕಟ್ಟೆ ಲಾಭ ಪಡೆಯಲು ಅಕ್ಟೋಬರ್ - ನವೆಂಬರ್‌ನಲ್ಲಿಯೂ ಬಿತ್ತುವುದುಂಟು.

ಹಣ್ಣಿನ ತೊಟ್ಟಿನ ಹತ್ತಿರವಿರುವ ಲತಾಕಂತು ಒಣಗಿದಾಗ ಅಥವಾ ಹಣ್ಣಿನ ಸಿಪ್ಪೆ ಹಳದಿ ವರ್ಣಕ್ಕೆ ತಿರುಗಿದಾಗ ಕೊಯ್ಲು ಮಾಡಬಹುದು. ಪ್ರತಿ ಎಕರೆಗೆ ಸುಮಾರು 15 ರಿಂದ 20 ಟನ್ ಇಳುವರಿ ಪಡೆಯಬಹುದು.

ತಳಿಗಳು : ಅರ್ಕಾಮಾಣಿಕ್, ಅರ್ಕಾ ಜ್ಯೋತಿ, ಅಸಾಯಿ ಯಮಟೋ, ಸುಗರ್ ಬೇಬಿ, ಪೂಸಾ ಬೇದಾನ.

ಅರ್ಕಾಮಾಣಿಕ್ : ಇದನ್ನು ಐ.ಎಚ್.ಆರ್. 21 x ಕ್ರಿಮ್ಸನ್ ಸ್ವೀಟ್ ಎಂಬ ತಳಿಗಳಿಂದ ಪಡೆಯಲಾಗಿದೆ. ಕರ್ನಾಟಕದಲ್ಲಿ ಚಳಿ ಮತ್ತು ಬೇಸಗೆ ಎರಡೂ ಕಾಲಗಳಲ್ಲಿ ಬೆಳೆಯಬಹುದು. ಇದು ಚಿಬ್ಬುರೋಗ, ಬೂದು ರೋಗ ಮತ್ತು ತುಪ್ಪಳ ರೋಗಗಳಿಗೆ ನಿರೋಧ ಗುಣವನ್ನು ಹೊಂದಿದೆ. ಹಣ್ಣುಗಳು ಅಂಡಾಕಾರವಾಗಿದ್ದು, ಕಡು ಹಸುರು ಬಣ್ಣದ ಪಟ್ಟಿಗಳನ್ನು ಹೊಂದಿರುತ್ತವೆ. 6 ಕೆ.ಜಿ.ಯವರೆಗೆ ತೂಕ ಬರುವ ಈ ಹಣ್ಣು ಬಿತ್ತನೆ ಮಾಡಿದ 100-110 ದಿನಗಳಲ್ಲಿ ಕೊಯ್ಲಿಗೆ ಬರುತ್ತವೆ.

ಅರ್ಕಾಜ್ಯೋತಿ : ಇದನ್ನು ಐ.ಎಚ್.ಆರ್. 20 x ಕ್ರಿಮ್ಸನ್ ಸ್ವೀಟ್ ತಳಿಗಳಿಂದ ಪಡೆಯಲಾಗುತ್ತದೆ. ಸಿಪ್ಪೆ ತಿಳಿಹಸುರಾಗಿದ್ದು ದಟ್ಟ ಹಸುರಿನ ಪಟ್ಟಿ ಹೊಂದಿರುತ್ತದೆ. 5-6 ಕೆ.ಜಿ. ಇದ್ದು, ಪ್ರತಿ ಬಳ್ಳಿ 2-3 ಹಣ್ಣುಗಳನ್ನು ಬಿಟ್ಟು, ಬೇಗ ಇಳುವರಿಗೆ ಬರುತ್ತದೆ.

ಅಸಾಯಿ ಯಮಟೋ : ಜಪಾನಿನಿಂದ ಭಾರತಕ್ಕೆ ಬಂದಿರುವ ಮಧ್ಯಮಾವಧಿ ತಳಿ. 95 ದಿನಗಳಲ್ಲಿ ಕೊಯ್ಲಿಗೆ ಬರುವ ಇದು 6 ರಿಂದ 7 ಕೆ.ಜಿ. ತೂಕವಿರುತ್ತದೆ.

ಸುಗರ್‌ಬೇಬಿ : 75 ದಿನಗಳಲ್ಲಿ ಇಳುವರಿಗೆ ಬರುವ ಜಪಾನಿ ತಳಿ. 4-6 ಕೆ.ಜಿ. ತೂಕವಿರುತ್ತದೆ.

ಪೂಸಾ ಬೇದಾನ : ಟೆಟ್ರಾ 2 x ಪೂಸಾರಸಲ್ ಎಂಬ ತಳಿಗಳಿಂದ ಸಿದ್ಧಪಡಿಸಿದ ಬೀಜ ರಹಿತ ತಳಿ.

ಉಪಯೋಗಗಳು : ಹಣ್ಣನ್ನು ತಿನ್ನಲು ಹಾಗೂ ಹಣ್ಣಿನಿಂದ ತಯಾರಿಸಿದ ಪಾನಕ ಕುಡಿಯಲು ಬಹು ರುಚಿಕರ ಮತ್ತು ದಾಹ ಪರಿಹಾರಿಯಾಗಿದೆ. ಹಾಗಾಗಿ ಬೇಸಗೆಯಲ್ಲಿ ಇದರ ಬೇಡಿಕೆ ಹೆಚ್ಚು. ಕೆಲವು ಕಡೆ ಕಾಯಿಯಾಗಿದ್ದಾಗ ತರಕಾರಿಯಾಗಿಯೂ ಅಪರೂಪವಾಗಿ ಬಳಸುತ್ತಾರೆ.

ಕೆ.ಎಲ್.

ಕವಣೆ 'ಕವಣೆ' ಕಲ್ಲಿನಿಂದ ಬೀಸಿ ಹೊಡೆಯುವುದಕ್ಕಾಗಿ ಮಾಡಿದ ಜಾಳಿಗೆಯ ಸಾಧನ. ಸಾಮಾನ್ಯವಾಗಿ ಹೊಲ ಗದ್ದೆಗಳಲ್ಲಿ ಕಾವಲಿರುವ ಸಂದರ್ಭದಲ್ಲಿ ಖಗ ಮೃಗಗಳನ್ನು ಓಡಿಸುವ ಸಲುವಾಗಿ ಕಲ್ಲನ್ನು ಎಸೆಯಬೇಕಾಗುತ್ತದೆ. ಆದರೆ ವಿಶಾಲವಾದ ಹೊಲದಲ್ಲಿ ಯಾವುದೋ ಒಂದು ಮೂಲೆಯಲ್ಲಿ ಇಲ್ಲವೆ ನಡುಭಾಗದಲ್ಲಿ ನಿಂತು ಹೊಲದ ಅಂಚಿನವರೆಗೂ ಕಲ್ಲನ್ನು ಕೈಯಿಂದ ಬೀಸಿ ಎಸೆಯುವುದು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಕವಣೆಯನ್ನು ಬಳಸುತ್ತಾರೆ.

ವಿಧಗಳು : ಕವಣೆಯಲ್ಲಿ ಪ್ರಧಾನವಾಗಿ ಎರಡು ವಿಧಗಳಿವೆ : 1. ಕೈ ಕವಣೆ, 2. ಯಂತ್ರ ಕವಣೆ. ಕೈ ಕವಣೆಯ ನಿರ್ಮಾಣ ಬಹಳ ಸರಳ. ಸಾಮಾನ್ಯವಾಗಿ ಈ ಕವಣೆಯನ್ನು ಮಾಡಲು ದನ ಇಲ್ಲವೆ ಎಮ್ಮೆಗಳ ಚರ್ಮವನ್ನು ಬಳಸುತ್ತಾರೆ. ಹದ ಮಾಡಿದ ಚರ್ಮವನ್ನು ನಿರ್ದಿಷ್ಟ ಆಕಾರಕ್ಕೆ ಕತ್ತರಿಸಿ, ಮಧ್ಯದಲ್ಲಿ ಕಲ್ಲನ್ನು ಇಡಲಿಕ್ಕೆ ಅನುಕೂಲವಾಗುವಂತೆ ಚೌಕಾಕಾರವಿರುವಂತೆ ಮಾಡುವರು. ಅದರೆರಡೂ ಮಗ್ಗುಲುಗಳಲ್ಲಿ ದಾರದಂತೆ ಎರಡೆರಡು ಎಳೆಗಳು ಇದ್ದು ಸುಮಾರು ಎರಡು ಮೂರು

ಅಡಿಗಳ ಉದ್ದವಿರುತ್ತದೆ. ತುದಿಯಲ್ಲಿ ಕೈ ಬೆರಳಿಗೆ ಸಿಕ್ಕಿಸಿ ಹಿಡಿಯಲು ಅನುಕೂಲವಾಗುವಂತೆ ಮಾಡಿರುತ್ತಾರೆ.

ಕವಣೆಯ ಮಧ್ಯದ ಪಟ್ಟಿಯೊಳಕ್ಕೆ ದುಂಡಾಕಾರದ ಸಣ್ಣ ಕಲ್ಲನ್ನು ಸರಿಯಾಗಿ ಇಟ್ಟು ಕವಣೆಯ ತುದಿಯನ್ನು ಬಲಗೈಲಿ ಹಿಡಿದು ವೇಗವಾಗಿ ತಿರುಗಿಸಿ ಗುರಿಯೆಡೆಗೆ ಬಿಟ್ಟರೆ ಬಂದೂಕಿನ ಗುಂಡಿನಂತೆ ರೊಯ್.... ಎಂದು ಸದ್ದುಮಾಡುತ್ತಾ ಕಲ್ಲು ಚಿಮ್ಮಿ ಹೋಗುತ್ತದೆ. ಅದರ ಏಟು ಬಿದ್ದರೆ ಹಕ್ಕಿಗಳಿರಲಿ, ಪ್ರಾಣಿಗಳಿರಲಿ ಒಂದೇ ಸಲಕ್ಕೆ ನೆಲಕ್ಕುರುಳುತ್ತವೆ, ಇಲ್ಲವೆ ಓಡಿಹೋಗುತ್ತವೆ. ಅಕ್ಕ ಪಕ್ಕ ಬಿದ್ದರೆ ಬಿದ್ದ ರಭಸಕ್ಕೆ ಬೆದರಿ ಓಡುತ್ತವೆ. ಕಳ್ಳಕಾಕರು ಬಂದಾಗಲೂ ಗ್ರಾಮೀಣ ಭಾಗದಲ್ಲಿ ಹಿಂದೆ ಕವಣೆ ಬೀಸಿ ಓಡಿಸುವ ಪದ್ಧತಿಯಿತ್ತು. ಕವಣೆ ಕಲ್ಲಿನ ಏಟು ತಿಂದರೆ ಕಳ್ಳ ಇನ್ನೊಮ್ಮೆ ಆ ಕಡೆಗೆ ತಲೆ ಹಾಕಿಯೂ ಮಲಗಲಾರ. ಅಷ್ಟು ವೇಗ ಕವಣೆ ಕಲ್ಲಿಗೆ ಇರುತ್ತದೆ. ಹಿಂದೆ ಒಬ್ಬೊಬ್ಬರೇ ದೂರದ ಪ್ರಯಾಣ ಮಾಡುವಾಗ, ಹೊಲಗದ್ದೆಗಳ ಕಾವಲಿಗೆ ಹೋಗುವಾಗ, ಕುರಿಕಾಯಲು ಹೋಗುವಾಗ, ದನ ಮೇಯಿಸುವಾಗ ಕವಣೆಯನ್ನು ಸೊಂಟಕ್ಕೆ ಸುತ್ತಿಕೊಂಡು ಹೋಗುತ್ತಿದ್ದುದುಂಟು. ಎಂತಹ ಕ್ರೂರ ಮೃಗವೇ ಬಂದರೂ ದೂರದಿಂದಲೇ ಕವಣೆ ಬೀಸುತ್ತಿದ್ದರು. ಕವಣೆ ಬೀಸುವಾಗ ಆಯವಾಗಿ, ಸರಿಯಾದ ಕ್ರಮದಲ್ಲಿ ಬೀಸಬೇಕು ; ಇಲ್ಲದಿದ್ದರೆ ಕಲ್ಲು ಬೀಸುವವನ ಮುಖಕ್ಕೇ ತಿರುಗಿ ಬೀಳುತ್ತದೆ. ಆದ್ದರಿಂದ ಹಿರಿಯರು ಕಿರಿಯರಿಗೆ ಕವಣೆ ಬೀಸುವ ಸಂದರ್ಭ, ಬೀಸುವ ರೀತಿ, ಕಲ್ಲಿನ ಆಯ್ಕೆ ಮುಂತಾದ ಸಂಗತಿಗಳನ್ನು ಕಲಿಸುತ್ತಿದ್ದರು.

ಯಂತ್ರ ಕವಣೆ : ಕಲ್ಲುಗಳು ಮಾತ್ರವಲ್ಲದೆ ಹರಿತವಾದ ಬಾಣಗಳನ್ನು, ವಿಷಪೂರಿತ ದಬ್ಬಣಗಳನ್ನು ಗುರಿಯೆಡೆಗೆ ಬಲವಾಗಿ ಹೊಡೆಯಲು ಉಪಯೋಗಿಸುವಲ್ಲಿ ಯಂತ್ರ ಕವಣೆಯನ್ನು (ಕ್ಯಾಟ್ ಪುಲ್ಟ್) ಬಳಸುತ್ತಾರೆ. ಇಂತಹ ಯಂತ್ರ ಕವಣೆಗಳನ್ನು ನಿರ್ಮಿಸುವ ವಿಧಾನ ಸರಳ. ತೂಕವಾದ ಒಂದು ಮರದ ಚೌಕಟ್ಟು, ಅದರೊಳಗೆ ಸುಲಭವಾಗಿ ಹೊಕ್ಕಾಡುವಂತಹ ಹಲಗೆ, ಹಲಗೆಯ ನಡುವೆ ಕಲ್ಲು, ಕೂರಂಬುಗಳನ್ನು ಚಿಮ್ಮಿಸುವಂತಹ ಚಲನೆಯುಳ್ಳ ಯಂತ್ರ ಸಜ್ಜಿಕೆ, ಅದರ ನಡುವೆ ಬಿಲ್ಲಿನ ಹೆದೆಯಂತಿರುವ ದಾರ. ಹೀಗೆ ಸರಳ ರಚನೆಯಿರುವ ಯಂತ್ರ ಕವಣೆಗಳನ್ನು ಹೊಲ ಗದ್ದೆಗಳ ಆಯಕಟ್ಟಿನ ಜಾಗದಲ್ಲಿಟ್ಟು ಅದಕ್ಕೆ ಆಯುಧಗಳನ್ನು ಹೂಡಿ ಸಜ್ಜುಗೊಳಿಸಿ ಬೆಳೆ ತಿನ್ನಲು ಬರುವ ಪ್ರಾಣಿಗಳು ಓಡಾಡುವಾಗ ಅವುಗಳ ಕಾಲಿಗೆ ತಗುಲುವಂತೆ ದಾರ ಇಲ್ಲವೇ ತಂತಿಯನ್ನು ಕಟ್ಟುತ್ತಾರೆ. ಪ್ರಾಣಿಗಳು ಬಂದು ಕಟ್ಟಿದ ತಂತಿಯನ್ನು ಎಡುವುತ್ತಿದ್ದಂತೆಯೇ ಗುರಿಮಾಡಿದ ಬಾಣ ಯಂತ್ರ ಕವಣೆಯಿಂದ ಸಿಡಿದು ದೇಹವನ್ನು ಹೊಗುತ್ತದೆ. ಆದರೆ ಕೈ ಕವಣೆಗಳಂತೆ ಸುಲಭವಾಗಿ ಎಲ್ಲೆಂದರಲ್ಲಿ ಕೊಂಡೊಯ್ಯಲು, ಬಳಸಲು ಸಾಧ್ಯವಾಗುವುದಿಲ್ಲ.

ಊದು ಕವಣೆ : ಊದುಗವಣೆಗಳನ್ನು ಬುಡಕಟ್ಟು ಸಮುದಾಯದವರು ಹೆಚ್ಚಾಗಿ ಬಳಸುತ್ತಾರೆ. ಬೇಟೆಯ ಸಲುವಾಗಿ ಇವುಗಳನ್ನು ಬಳಸುವುದು ಹೆಚ್ಚು. ಊದು ಗವಣೆಯ ರಚನೆ ತೀರಾ ಸರಳ. ನೇರವಾದ ಮಾರುದ್ದದ ಬಿದಿರು ಕೊಳವೆಯನ್ನು ಒಳಗೆ ಯಾವ ತಡೆಯೂ ಇಲ್ಲದಂತೆ ಕೂರಂಬುಗಳು ಚಲಿಸುವಂತೆ ಸರಾಗಗೊಳಿಸುತ್ತಾರೆ. ಅಂತಹ ಕೊಳವೆಗಳಿಗೆ ದೊಡ್ಡಗಾತ್ರದ ಸೂಜಿ ದಬ್ಬಣದಂತಹ ಲೋಹದ ಇಲ್ಲವೆ ಬಿದಿರ ಕಡ್ಡಿಗಳನ್ನು ಸಿದ್ಧಮಾಡಿಕೊಂಡಿರುತ್ತಾರೆ. ಅವುಗಳ ತುದಿ ಮೊನಚಾಗಿರುತ್ತದೆ. ಮೇಲ್ಮೈ ನುಣಪಾಗಿರುತ್ತದೆ. ಹಿಂಭಾಗದಲ್ಲಿ ಪುಚ್ಛವನ್ನು ಮಾಡಿರುತ್ತಾರೆ. ಅಲ್ಲದೆ ಈ ಬಗೆಯ ಅಂಬುಗಳಿಗೆ ವಿಷ ಲೇಪನ ಮಾಡಿರುವುದುಂಟು. ಆದರೆ ಈ ವಿಷ ಮಾನವರಿಗೆ ಮಾರಣಾಂತಿಕವಾಗಿರುವುದು ವಿರಳ. ಹೆಚ್ಚೆಂದರೆ ಪ್ರಜ್ಞೆ ತಪ್ಪಿಸಬಹುದು. ಇಂತಹ ಅಂಬುಗಳನ್ನು ಬಿದಿರು ಕೊಳವೆಯ ಹಿಂಭಾಗಕ್ಕೆ ತೂರಿಸಿರುತ್ತಾರೆ. ಮರ ಹಕ್ಕಿ, ಕೋತಿ, ಅಳಿಲು, ಮರಿಬೆಕ್ಕು, ಕಾಡುಬೆಕ್ಕು ಮೊದಲಾದವುಗಳಿಗೆ ಗುರಿಯಿಟ್ಟು ಬಾಯಿಂದ ಬಲವಾಗಿ ಊದುತ್ತಾರೆ. ಉಸಿರು ಕಟ್ಟಿ ಬಲವಾಗಿ ಊದಿದಾಗ ಆ ಅಂಬು ವೇಗವಾಗಿ ಚಿಮ್ಮಿ ಗುರಿ ತಲುಪುತ್ತದೆ.

ಒಟ್ಟಾರೆ ಕವಣೆಯ ರಚನೆ, ಬಳಕೆ, ಕೃಷಿಯ ಉದ್ದೇಶಕ್ಕೆ ಮಾತ್ರವಲ್ಲದೆ ಬೇಟೆ, ಶತ್ರುದಮನ ಮೊದಲಾದ ಕಾರ್ಯಗಳಿಗೂ ಅನಿವಾರ್ಯವಾಗಿದ್ದ ಕಾಲವೊಂದಿತ್ತು. ಆದರೆ ಇತ್ತೀಚೆಗೆ ಇಂತಹ ಉಪಕರಣಗಳ ಬಳಕೆ ನಿಂತು ಹೋಗಿರುವುದಲ್ಲದೆ, ಅವುಗಳ ಪರಿಚಯವೂ ಇಲ್ಲದ ಸ್ಥಿತಿಗೆ ಹಳ್ಳಿಗಳು ತಲುಪಿರುವುದು ವಾಸ್ತವ.

ಟಿ.ಕೆ.

ಕವಳೆ ಹಣ್ಣು ಇದರ ವೈಜ್ಞಾನಿಕ ಹೆಸರು ಕೆರಿಸ್ಸಾ ಕೆರಂಡಸ್. ಇದು ಅಪೊಸೈನೆಸ್ ಕುಟುಂಬಕ್ಕೆ ಸೇರಿದೆ. ಇದನ್ನು ಪ್ರತ್ಯೇಕವಾಗಿ ತೋಟದಂತೆ ಬೆಳೆಯದೆ ತೋಟದ ಸುತ್ತ ಬೇಲಿಯಂತೆ ಬೆಳೆಸುತ್ತಾರೆ. ಕಾಡುಗಳಲ್ಲಿ ಪೊದೆಯಂತೆ ಬೆಳೆಯುತ್ತದೆ. ದೊಡ್ಡವಾದಂತೆ ಚಿಕ್ಕ ಮರಗಳ ಹಾಗೆ ಕಾಣುತ್ತವೆ. ಸಸ್ಯಾಭಿವೃದ್ಧಿ ಬೀಜದಿಂದಲೇ ನಡೆಯುತ್ತದೆ. ಎರಡು ವರ್ಷಕ್ಕೆ ಫಸಲನ್ನು ಕೊಡಲು ಪ್ರಾರಂಭಿಸುತ್ತದೆ. ಪಕ್ಕದ ರೆಂಬೆಗಳನ್ನು ಸವರಿದರೆ ಬೆಳೆ ಚೆನ್ನಾಗಿ ಬರುತ್ತದೆ. ಕಟಿಂಗ್ ವಿಧಾನದಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು. ಗಿಡ ಒಮ್ಮೆ ಬೆಳೆದು ಬೇರೂರಿದರೆ ಮುಂದೆ ನೀರನ್ನು ಕೊಡುವ ಆವಶ್ಯಕತೆ ಇರುವುದಿಲ್ಲ.

ಉಪಯೋಗಗಳು : ಉಪ್ಪಿನಕಾಯಿ ತಯಾರಿಕೆಯಲ್ಲಿ ಇದರ ಉಪಯೋಗವಿದೆ. ವಸಂತಕಾಲದಲ್ಲಿ ಹೂಬಿಟ್ಟು ಮಳೆಗಾಲದ ಪ್ರಾರಂಭದಲ್ಲಿ ಹಣ್ಣು ಪಕ್ವವಾಗುತ್ತದೆ. ಎರಡು ರೀತಿಯ ಹಣ್ಣುಗಳನ್ನು ಬಿಡುತ್ತದೆ. ಒಂದು ಕಡುನೇರಳೆ, ಇನ್ನೊಂದು ಬಿಳಿಯ ಬಣ್ಣದ್ದು. ಇವುಗಳ ಪ್ರಭೇದಗಳಲ್ಲಿ ಬೆಳೆಸುತ್ತಿರುವ ಸಾಮಾನ್ಯವಾದ ಪ್ರಭೇದ



ಕೆರಿಸಾದ್ರಾಂಡಿ ಫ್ಲೋರಾ - ಇದು ಪೊದೆಯಂತಿದ್ದು ಕಡು ಹಸುರು ಎಲೆಗಳಿಂದ ಕೂಡಿರುತ್ತದೆ. ಇದರ ಮೂಲಸ್ಥಾನ ದಕ್ಷಿಣ ಆಫ್ರಿಕ. ಇನ್ನೊಂದು ಕೆರಿಸ್ಸಾರಂತಹ ಇದರ ಮೂಲಸ್ಥಾನ ಭಾರತ. ವರ್ಷದಲ್ಲಿ ಹೆಚ್ಚಿನ ಕಾಲ ಬಿಳಿ ಹೂಗಳನ್ನು ಕೆಂಪು ಹಣ್ಣುಗಳನ್ನು ಹಸುರೆಲೆಗಳ ಮಧ್ಯೆ ಬಿಡುವುದರಿಂದ ಆಕರ್ಷಕವಾಗಿ ಕಾಣುತ್ತದೆ. ವರ್ಷ ಪೂರ್ತಿ ಫಲವನ್ನು ಕೊಡುತ್ತವೆ. ಆದರೆ ಇಳುವರಿ ಕಡಿಮೆಯಾದುದರಿಂದ ಹೆಚ್ಚು ಮರಗಳನ್ನು ಬೆಳೆಸಿದರೆ ಹೆಚ್ಚು ಫಲವನ್ನು ಪಡೆಯಬಹುದು.

ಮಾಹಿತಿಸಂಗ್ರಹ

ಕೃಷ್ಣಮ್ಮ ಬಂಡಾರಹಳ್ಳಿ, ಕೋಲಾರಜಿಲ್ಲೆ
ಕೊಂತೆಮ್ಮ ಸೂಲಿಕುಂಟೆ, ಕೋಲಾರಜಿಲ್ಲೆ


ವಿ.ಆರ್.ಬಿ.

ಕಳೆ ತೆಗೆಯುವ ಸಲಕರಣೆಗಳು ರೈತ ಚಿಕ್ಕ ಚಿಕ್ಕ ಕಳೆಗಳನ್ನು ಕೈಗಳಿಂದಲೇ ತೆಗೆಯುತ್ತಾನೆ. ಆದರೆ ಕಡಿಮೆ ಸಮಯದಲ್ಲಿ ವೇಗವಾಗಿ ಕಳೆ ತೆಗೆಯಲು ಅನೇಕ ಉಪಕರಣಗಳನ್ನು ಬಳಸುತ್ತಿದ್ದಾನೆ. ಅವುಗಳೆಂದರೆ ನೇಗಿಲು, ಕುಂಟೆ, ಕಲ್ಟಿವೇಟರು, ಗುದ್ದಲಿ, ಕುಡಲಿ, ಮಚ್ಚು ಮುಂತಾದವು.

ನೇಗಿಲುಗಳು : ಸಾಮಾನ್ಯವಾಗಿ ನೇಗಿಲನ್ನು ಭೂಮಿಯನ್ನು ಹದಗೊಳಿಸುವಾಗ ಮತ್ತು ಬೆಳೆ ಚಿಕ್ಕದಾಗಿದ್ದು ಹೆಚ್ಚು ಕಳೆ ಬೆಳೆದಿದ್ದ ಸಂದರ್ಭದಲ್ಲಿ ಉಕ್ಕೆ ಮಾಡಲು ಬಳಸಲಾಗುತ್ತದೆ.


ನೇಗಿಲಿನ ವಿಧಗಳು : ಮೂರು ರೀತಿಯ ನೇಗಿಲುಗಳನ್ನು ಕಾಣಬಹುದು. 1. ಮರದ ನೇಗಿಲು, 2. ಕಬ್ಬಿಣದ ನೇಗಿಲು, 3. ತಟ್ಟೆ ನೇಗಿಲು.

1. ಮರದ ನೇಗಿಲು : ಇದರ ಗುಳ V ಆಕಾರದ ತೆರೆಗಳನ್ನು ತೆರೆದುಕೊಂಡು ಹೋಗುತ್ತದೆ. ಎರಡು ನೇಗಿಲಿನ ತೆರೆಗಳ ಮಧ್ಯೆ ದಿಂಡು ಹಾಗೆಯೇ ಗಟ್ಟಿಯಾಗಿ ಉಳಿಯುತ್ತದೆ.



ದಿಂಡುಗಳನ್ನು ಒಡೆಯಲು ನೆಲವನ್ನು 5-6 ಬಾರಿ ಉಕ್ಕೆ ಮಾಡಬೇಕಾಗುತ್ತದೆ. ಇದರಿಂದ ಉಳುಮೆ ಖರ್ಚು, ಶ್ರಮ, ಮತ್ತು ಕಾಲ ಹೆಚ್ಚು. ನಾಡುನೇಗಿಲು ಮಣ್ಣನ್ನು ತಿರುವುದೆ ಇರುವುದರಿಂದ ತಳಪದರಗಳು ಮೇಲೆ ಬರಲು, ರೋಗಾಣು, ಹುಳುಹುಪ್ಪಟಗಳನ್ನು ಹೊರಗೆಡವಲು ಸಾಧ್ಯವಿಲ್ಲ. ಕೂಳೆ ಮತ್ತು ಕಳೆ ಸಡಿಲಗೊಳ್ಳುತ್ತವೆಯೇ ವಿನಾ ಬುಡಸಹಿತ ಮೇಲೆದ್ದು ಮಣ್ಣಿನಿಂದ ಮುಚ್ಚಿಹೋಗುವುದು ಕಡಿಮೆ. ಈ ಕಾರಣದಿಂದ ಮೊದಲನೆಯ ಉಕ್ಕೆಗೆ ಮರದ ನೇಗಿಲು ತೃಪ್ತಿಕರವಾದ ಉಪಕರಣವಲ್ಲ.

2. ಕಬ್ಬಿಣದ ನೇಗಿಲು : ಇದರಲ್ಲಿ ಗುಳವಲ್ಲದೆ ಮಣ್ಣು ತಿರುವುದಕ್ಕೆ (ರೆಕ್ಕೆ) ಮಣ್ಣನ್ನು L ಆಕಾರದ ತೆರೆಗಳಾಗಿ ಕತ್ತರಿಸಲು ಮತ್ತು ಉಳದೆ ಇರುವ ಮಣ್ಣು ನೇಗಿಲಿನ ತೆರೆಯೊಳಕ್ಕೆ ಬೀಳದಿರಲು ಲ್ಯಾಂಡ್‌ಸೈಡ್ ಎಂಬ ಕಬ್ಬಿಣದ ಪಟ್ಟಿ ಇರುತ್ತವೆ. ನೇಗಿಲು ಆಳವಾಗಿ ಓಲಾಡದೆ ಹರಿಯಲು ಕೆಲವು ವಿಶೇಷ ಏರ್ಪಾಡುಗಳಿರುತ್ತವೆ.



1) ಷೇರು : ಹರಿತವಾದ ಈ ಭಾಗ ಮಣ್ಣಿನಲ್ಲಿ ಇಳಿದು ನೆಲವನ್ನು ಕತ್ತರಿಸುತ್ತದೆ. ಆದುದರಿಂದ ಈ ಭಾಗವೇ ನೇಗಿಲಿನಲ್ಲಿ ಹೆಚ್ಚು ಸವೆಯುವ ಭಾಗ. ಇದರ ತುದಿ ನಾಡುನೇಗಿಲಿನ ಗುಳದಂತೆ ನೆಲದ ಕಡೆ ಇಳಿದಿರುತ್ತದೆ. ಆದರೆ ಮಣ್ಣನ್ನು ಕೆರೆಯುವುದರ ಬದಲು ನೆಲವನ್ನೂ ಅಡ್ಡಕ್ಕೆ ಕುಯ್ದು ನೇಗಿಲು ತೆರೆಯ ಮಣ್ಣನ್ನು ತಳಮಣ್ಣಿನಿಂದ ಪ್ರತ್ಯೇಕಮಾಡಿ ಮೇಲಕ್ಕೆ ತಳ್ಳುತ್ತದೆ.

2) ರೆಕ್ಕೆ (ಮೌಲ್ಡ್ ಬೋರ್ಡ್) : ಇದು ತಿರುವಿನಂತಿರುವ ಭಾಗ. ಷೇರು ಕತ್ತರಿಸಿದ ಮಣ್ಣಿನ ಹೋಳನ್ನು ತಿರುವಿ, ಎತ್ತಿ ಬಲಕ್ಕಿರುವ ನೇಗಿಲು ತೆರೆಯ ಮೇಲೆ ಕೆಡವುತ್ತದೆ. ಹೀಗೆ ಕೊಡುವಿದಾಗ ಮಣ್ಣಿನ ಹೋಳು ಪುಡಿಬೀಳುತ್ತದೆ. ಅಂದರೆ ರೆಕ್ಕೆಯಿಂದ ಮೂರು ಕೆಲಸಗಳು ಏಕಕಾಲದಲ್ಲಿ ಜರುಗುತ್ತವೆ. ಮಣ್ಣಿನ ತಳಪದರ ಮೇಲಕ್ಕೆ ಬರುತ್ತದೆ. ತಿರುಗುಮುರುಗಾಗುತ್ತದೆ. ಪುಡಿ ಬೀಳುತ್ತದೆ. ಪಕ್ಕದ ಸಾಲಿನಲ್ಲಿ ಬುಡ ಸಹಿತ ಎದ್ದ ಕಳೆ ಕೂಳೆ ಮುಚ್ಚಿಹೋಗುತ್ತದೆ.

3) ಎರಡು ಹಿಡಿಗಳು : ಇದು ಕಬ್ಬಿಣದ್ದು ಅಥವಾ ಮರದ್ದಾಗಿರುತ್ತದೆ.

4) ಈಸು, ಬೀಮು : ಇದು ಮೈಸೂರು ಮತ್ತು ಕೋಲಾರ ಮಿಷನ್ ನೇಗಿಲು ಮುಂತಾದ ಹಗುರ ನೇಗಿಲುಗಳಲ್ಲಿ ಮರದ್ದಾಗಿರುತ್ತದೆ.

5) ಕೂಲ್ಟರು : ದಟ್ಟವಾಗಿ ಹೆಣೆದುಕೊಂಡಿರುವ ಗಿಡ ಬುಡಗಳನ್ನು ಕುಯ್ದು ಷೇರು ಹರಿಯಲು ಅನುಕೂಲ ಮಾಡಿಕೊಡುತ್ತದೆ.

6) ಗಾಲಿ : ದೊಡ್ಡ ನೇಗಿಲುಗಳಲ್ಲಿರುತ್ತದೆ. ನೇಗಿಲು ಅಲ್ಲಾಡದೆ ಹಾಯಲು ಗಾಲಿ ಬೇಕು.

6a) ಕೊಂಡಿಯಾಕಾರ : ಇದು ಗಾಲಿಯನ್ನು ಎತ್ತರಿಸುವುದಕ್ಕೆ, ಇಳಿಸುವುದಕ್ಕೆ ಸಾಧನ.


7. ಬ್ರೈಡಲ್ ಅಥವಾ ಕ್ಲೆವಿಸ್ : ಇದರಿಂದ ನೇಗಿಲನ್ನು ದನಗಳ ಎತ್ತರಕ್ಕೆ ಸರಿಹೊಂದಿಸಬಹುದು. ಇದು ಕೆಲವು ಕಬ್ಬಿಣದ ನೇಗಿಲಿನ ಈಸಿನ ತುದಿಯಲ್ಲಿ ಜೋಡಿಸಿರುವ ಭಾಗ. ಇದರಿಂದ ನೇಗಿಲಿನ ತೆರೆಯ ಆಳವನ್ನು, ಅಗಲವನ್ನೂ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು.

ಇದಲ್ಲದೆ ಕೆಲವು ಬಾರಿ ಕಬ್ಬಿಣದ ನೇಗಿಲುಗಳಲ್ಲಿ, ನೇಗಿಲು ನೆಟ್ಟಗೆ ಹಾಯುವಂತೆ, ತೆರೆಯಲ್ಲಿ ಹರಿಯುವಂತೆ ಗಾಲಿಯನ್ನೂ, ನೆಲವನ್ನು ಕತ್ತರಿಸಿ


ಷೇರು ಸುಲಭವಾಗಿ ಕೆಲಸ ಮಾಡುವಂತೆ ಕೂಲ್ಟರ್ ಎಂಬ ಹರಿತವಾದ ದಪ್ಪ ಕತ್ತಿಯನ್ನೂ ಅಳವಡಿಸಿರುತ್ತಾರೆ.

ಈ ಮೇಲಿನ ಭಾಗಗಳಿರುವುದರಿಂದ ಕಬ್ಬಿಣದ ನೇಗಿಲನ್ನು ಹೂಡಿದರೆ ನೆಲವನ್ನು ಆಳಕ್ಕೆ ಉಳಬಹುದು. ಮಣ್ಣನ್ನು ತಿರುವಬಹುದು, ಕಳೆ ಕೂಳೆಗಳನ್ನು ಬುಡ ಸಹಿತ ಕಿತ್ತು ಮುಚ್ಚಬಹುದು. ಹುಳಹುಪ್ಪಟೆ, ಅವುಗಳ ತತ್ತಿ, ರೋಗಾಣುಗಳು ಮುಂತಾದವನ್ನು ಬಿಸಿಲಿಗೆ ಒಡ್ಡಬಹುದು.


ಕೋಲಾರ್ ಮಿಷನ್




ಕೊಂಕಣದ ಮಾದರಿ




ಮಲೆನಾಡು ನೇಗಿಲು



ಮೆಸ್ಟನ್ ನೇಗಿಲು




ಮೈಸೂರು ನೇಗಿಲು




ಸಾಬೂಲ್ ನೇಗಿಲು




3) ತಟ್ಟೆನೇಗಿಲು : ಇದರಲ್ಲಿ ಗುಳ, ರೆಕ್ಕೆ ಮುಂತಾದವುಗಳ ಬದಲಾಗಿ ಹರಿತವಾದ ಗಟ್ಟಿಯಾದ ಉಕ್ಕಿನ ತಟ್ಟೆಗಳಿರುತ್ತವೆ. ಸಾಮಾನ್ಯವಾಗಿ ಎತ್ತಿಗೆ ಹೂಡುವ ಮಟ್ಟುದಲ್ಲಿ 4 ತಟ್ಟೆಗಳಿರುತ್ತವೆ. ಈ ತಟ್ಟೆಗಳ ದಿಕ್ಕನ್ನು ಸ್ವಲ್ಪ ಬದಲಾಯಿಸಲು ಲಿವರ್ ಅಥವಾ ಸನ್ನೆಕೋಲು (ಮೀಟುಗೋಲು) ಇರುತ್ತದೆ. ತಟ್ಟೆಗಳು ಹರಿದಾಗ ಮಣ್ಣನ್ನು ಕತ್ತರಿಸುವುದಲ್ಲದೆ, ತಿರುವಿ ಪುಡಿ ಮಾಡುತ್ತದೆ. ಆದರೆ ಈ ನೇಗಿಲಿನಿಂದ ಆಳಕ್ಕೆ ಉಳುವುದಕ್ಕೆ ಆಗುವುದಿಲ್ಲ. ಇದು ಗಟ್ಟಿಕೂಳೆಗಳಾದ ಜೋಳ, ಕಬ್ಬು ಮುಂತಾದವುಗಳಿರುವ ಜಮೀನನ್ನು ಉಕ್ಕೆ ಮಾಡಲು ಉಪಯುಕ್ತ ಸಾಧನ. ಹಸುರು ಸೊಪ್ಪನ್ನು ಕತ್ತರಿಸಿ ಮಣ್ಣಿನಲ್ಲಿ ಸೇರಿಸಲು ಇದರಿಂದ ಅನುಕೂಲವಾಗುತ್ತದೆ. ಇದು ಭಾರವಾಗಿರುವುದರಿಂದ ದೊಡ್ಡ ಎತ್ತುಗಳಿಗೆ ಹೂಡಬೇಕು.





ಕುಂಟೆ ಮತ್ತು ಕಲ್ಟಿವೇಟರು : ಕೊಯದೆ ಇರುವ ಕೂಳೆ, ಕಳೆ, ಹುಲ್ಲು, ಕಡ್ಡಿಗಳನ್ನು ಈ ಮಟ್ಟುಗಳ ಹಲ್ಲುಗಳು ಬಾಚಿ ಜಮೀನನನ್ನು ಶೋಧಿಸುತ್ತವೆ. ಉಕ್ಕೆ ಮಾಡಿದ ಮೇಲೆ ಜಮೀನನ್ನು ಬಿತ್ತನೆಗೆ ಅಥವಾ ನಾಟಿಗೆ ಸಿದ್ಧಗೊಳಿಸುವಾಗ ಕೂಳೆ, ಕಳೆ, ಕಸ - ಕಡ್ಡಿಗಳನ್ನು ಕಡಿಮೆ ಸಮಯದಲ್ಲಿ ಹೆಚ್ಚು ಶ್ರಮವಿಲ್ಲದೆ ತೆಗೆಯಲು ಕುಂಟೆ - ಕಲ್ಟಿವೇಟರುಗಳನ್ನು ಬಳಸುತ್ತಾರೆ.

ಕಲ್ಟಿವೇಟರು : ಎಲ್ಲಾ ಕಲ್ಟಿವೇಟರುಗಳಲ್ಲೂ ಸಾಮಾನ್ಯವಾಗಿ ಹಲ್ಲುಗಳಿರುತ್ತವೆ. (ತಾಳುಗಳು) ಕೆಲವು ತಾಳುಗಳು ಅರ್ಧಚಂದ್ರಾಕೃತಿಯಲ್ಲಿ ಬಾಗಿರುತ್ತವೆ. ಕೆಲವಕ್ಕೆ ತುದಿಯಲ್ಲಿ ವಿವಿಧ ಬಗೆಯ ಬಿಡಿಭಾಗಗಳನ್ನು ಜೋಡಿಸಬಹುದು. ಸವೆದ ಭಾಗಗಳ ಬದಲಾಗಿ ಹೊಸಭಾಗಗಳನ್ನು ನಟ್ಟು - ಬೋಲ್ಟುಗಳಿಂದ ಕೂಡಿಸಬಹುದು. ಕೆಲವಲ್ಲಿ ತಾಳುಗಳ ಅಂತರವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಈ ತಾಳುಗಳನ್ನು ಮರದ್ದೊ, ಕಬ್ಬಿಣದ್ದೊ ದಿಂಡಿಗೆ ಲಗತ್ತು ಮಾಡಿರುತ್ತಾರೆ. ದಿಂಡಿಗೆ ಸೇರಿದ ಹಾಗೆ ಈಸು ಹಿಡಿ ಮುಂತಾದವುಗಳು ಇರುತ್ತವೆ.




ಕಲ್ಟಿವೇಟರಿನಲ್ಲೂ ಅನೇಕ ಬಗೆಗಳಿವೆ. ಅವುಗಳೆಂದರೆ ಕೋಲಾರಮಿಷನ್ ಕಲ್ಟಿವೇಟರ್, ಪ್ಲಾನೆಟ್ ಜೂನಿಯರ್ ಹೊ. ದಕ್ಷಿಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಬಳಸುವುದು ಕೋಲಾರ ಮಿಷನ್ ಕಲ್ಟಿವೇಟರ್. ಇದರಲ್ಲಿ 6 ಅರ್ಧಚಂದ್ರಾಕೃತಿಯ ಸ್ಥಿರ ತಾಳುಗಳನ್ನು ಮರದದಿಂಡಿಗೆ ಜೋಡಿಸಿರುತ್ತಾರೆ. ಇದು ಸುಮಾರು 90 ಸೆಂ.ಮೀ. ಅಗಲಕ್ಕೆ ಕೆಲಸ ಮಾಡುತ್ತದೆ.


ಪ್ಲಾನೆಟ್ ಜೂನಿಯರ್ : ತೋಟದ ಕೆಲಸಗಳಿಗೆ ಬಹಳ ಒಪ್ಪಾದ, ಹಾಗೂ ಅಂತರಕೃಷಿ ಕೆಲಸಗಳಿಗೆ ಒದಗುವ ಒಂದು ಉಪಕರಣ. ಈ ಉಪಕರಣವನ್ನು ಮಣ್ಣು ಏರು ಹಾಕುವುದು, ನಾಟಿ ಅಥವಾ ಬಿತ್ತನೆ ಸಾಲುದೋಣಿಗಳನ್ನು ಎಳೆಯುವುದು ಮತ್ತು ಮಣ್ಣು ತಿರುವುದಕ್ಕೆ ಬಳಸುತ್ತಾರೆ.

ಕುಂಟೆ : ಕಳೆ ತೆಗೆಯಲು ತೋಟಗಳಿಗೆ ಮತ್ತು ರಾಗಿ ಹೊಲಗಳಿಗೆ, ಗದ್ದೆಗೆ ಬಳಸುತ್ತಾರೆ. ಕುಂಟೆಯಲ್ಲಿ ಹಲವು ವಿಧಗಳಿವೆ.


ಅವುಗಳೆಂದರೆ ದೊಡ್ಡಕುಂಟೆ, ಚಿಕ್ಕಕುಂಟೆ, ಎಡೆಕುಂಟೆ, ಚಿಪ್ಪುಕುಂಟೆ ಮುಂತಾದವು.




ದೊಡ್ಡಕುಂಟೆ : ಇದು 7 ರಿಂದ 10 ಸೆಂ.ಮೀ. ಅಗಲವಾದ ಸುಮಾರು 90 ಸೆಂ.ಮೀ. ಉದ್ದದ ಉಕ್ಕಿನ ಅಗಲನ್ನು ಮರದ ದಿಂಡಿಗೆ ಜೋಡಿಸಿರುತ್ತದೆ. ಇದನ್ನು ಉತ್ತರ ಕರ್ನಾಟಕದ ಎರೆನೆಲಗಳಲ್ಲಿ ನೇಗಿಲು ಬದಲಾಗಿಯೇ ಉಪಯೋಗಿಸುತ್ತಾರೆ.




ಚಿಕ್ಕಕುಂಟೆ : ಇದು ದೊಡ್ಡ ಕುಂಟೆಯಂತೆಯೇ. ಆದರೆ ಅಲಗು ಚಿಕ್ಕದು. ಬೆಳೆಸಾಲುಗಳ ಮಧ್ಯೆ ಮಣ್ಣನ್ನು ಕೆದಕಲು, ಕಳೆ ಎತ್ತಲು ಅನುಕೂಲ. ಸಾಲುಗಳ ಮಧ್ಯೆ ಬೆಳೆದಿರುವ ಕಳೆಗಳನ್ನು ಸುಲಭವಾಗಿ ತೆಗೆಯಬಹುದು.



ಎಡೆಕುಂಟೆ : ಇದರಲ್ಲಿ ಅಲಗು ಸೀಳಿರುತ್ತದೆ. ಅಂದರೆ L ಆಕಾರದ ಎರಡು ಅಲಗುಗಳು ಜೋಡಣೆಯಾಗಿವೆ. ಇದನ್ನು ಎಳೆಯ ಪೈರಿನಲ್ಲಿ ಕಳೆ ತೆಗೆಯಲು ಬಳಸುತ್ತಾರೆ. ಸೀಳಿದ ಭಾಗ ಪೈರಿನ ಸಾಲಿನ ಮೇಲೆ ಹಾಯುವಂತೆ ಈ ಮಟ್ಟನ್ನು ಹೂಡುತ್ತಾರೆ.



ಚಿಪ್ಪುಕುಂಟೆ : ಇದರಲ್ಲಿ ಅಲಗಿನ ಬದಲು ಕಬ್ಬಿಣದ ಚಿಪ್ಪುಗಳನ್ನು ಜೋಡಿಸಿರುತ್ತಾರೆ. ಇದು ಮಣ್ಣು ಕೆದಕಲು, ಕಳೆ ತೆಗೆಯಲು ಅನುಕೂಲ ಸಾಧನ.



ಮೇಲೆ ತಿಳಿಸಿದ ಮಟ್ಟುಗಳೆಲ್ಲವೂ ಎತ್ತಿಗೆ ಹೂಡುವಂಥವು. ಇವು ದೊಡ್ಡ ತೋಟಗಳಿಗೆ, ಗದ್ದೆ, ಹೊಲಗಳಿಗೆ ಬೇಕಾಗುವ ಸಾಧನಗಳು. ಆದರೆ ಸಣ್ಣ ಬೆಳೆ ತೋಟಗಳಿಗೆ, ಕೈ ತೋಟಗಳಿಗೆ ಸಣ್ಣ ಉಪಕರಣಗಳು, ಕೈ ಉಪಕರಣಗಳು ಇವೆ. ದೊಡ್ಡ ಕೆಲಸಗಳಲ್ಲಿ ನೇಗಿಲನ್ನು ಸಣ್ಣ ಕೆಲಸಗಳಿಗೆ ಗುದ್ದಲಿ ಮುಂತಾದ ಸಣ್ಣ ಉಪಕರಣಗಳಿಂದ ಮಾಡಿಕೊಳ್ಳಬೇಕು. ಸಣ್ಣ ಉಪಕರಣಗಳಿಂದ ಮಾಡುವ ಕೆಲಸವನ್ನು ಅಗತೆ ಎಂದು ಹೇಳುತ್ತಾರೆ. ಗುದ್ದಲಿ, ಸನಿಕೆ ಅಥವಾ ಮಮ್ಮಟಿ ಅಥವಾ ಎಲೆಗುದ್ದಲಿ, ಪಿಕಾಸಿ ಫ್ಲೋರ್ಕ್ಯು ಸ್ಪೇಡ್ (Spade) ಮುಂತಾದವನ್ನು ಕೂಳೆ ಕಳೆಗಳನ್ನು ಎಬ್ಬಿಸಲು, ಮುಚ್ಚಲು ಬಳಸುತ್ತಾರೆ. ಇವು ಕೀಟ ಮತ್ತು ರೋಗಾಣುಗಳನ್ನು ಬಿಸಿಲಿಗೆ ಹೊರಗೆಡುವುವು.

ಈ ಉಪಕರಣಗಳಲ್ಲಿ ಮನುಷ್ಯ ಕೆಲವೊಂದನ್ನು ನಿಂತು ಕಳೆತೆಗೆಯಲು ಮತ್ತು ಕೂತು / ಬಗ್ಗಿ ಕಳೆ ತೆಗೆಯಲು ಬಳಸುತ್ತಾನೆ.


ಕೂತು ಅಥವಾ ಬಗ್ಗಿ ಕಳೆ ತೆಗೆಯುವ ಕೈ ಉಪಕರಣಗಳು :

ಗುದ್ದಲಿ : ವ್ಯವಸಾಯದಲ್ಲಿ ಗುದ್ದಲಿಯ ಉಪಯೋಗ ಹೆಚ್ಚು. ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯಲ್ಲಿ ಬಳಕೆಯಲ್ಲಿರುತ್ತದೆ. ಬೆಂಗಳೂರಿನ ಸುತ್ತಮುತ್ತ ದೊಡ್ಡಗುದ್ದಲಿ ಅಥವಾ ಕೋಲು ಗುದ್ದಲಿ ಉಪಯೋಗಿಸುತ್ತಾರೆ. ಮೈಸೂರು, ಮಂಡ್ಯಜಿಲ್ಲೆಗಳಲ್ಲಿ ಸನಿಕೆ ಅಥ್‌ವಾ ಮಮ್ಮಟಿಯಿಂದ ಕೆಲಸ ಮಾಡುತ್ತಾರೆ. ಇವುಗಳನ್ನು ಆ ಸ್ಥಳಗಳಲ್ಲಿ ಗುದ್ದಲಿಯೆಂದೇ ಕರೆಯುತ್ತಾರೆ.

ಗುದ್ದಲಿಯಿಂದ ಕಳೆಯನ್ನು ಕೆತ್ತಿ ತೆಗೆಯಬಹುದು. ದೈಹಿಕವಾಗಿ ಶ್ರಮವಾದರೂ ಇದನ್ನು ಹೆಚ್ಚಾಗಿ ಗದ್ದೆ, ತೋಟ ಅಲ್ಲದೆ ಮನೆಯ ಅಕ್ಕಪಕ್ಕ ಹಾಕಿದ ಗಿಡಗಳ ಕಳೆಗಳನ್ನು ತೆಗೆಯಲು ಬಳಸುತ್ತಾರೆ.

ಕಳೆಯನ್ನು ಬುಡ ಸಹಿತ ತೆಗೆಯಲು ಗುದ್ದಲಿಯನ್ನು ಆಳವಾಗಿ ಹಾಕಬೇಕು. ಗುದ್ದಲಿ ಇಳಿಯುವ ಆಳ ಅದರ ತೂಕವನ್ನು ಅವಲಂಬಿಸಿರುತ್ತದೆ. ಹೆಚ್ಚು ಭಾರವೂ ಹೆಚ್ಚುಹಗುರವೂ ಇಲ್ಲದ್ದಾಗಿರಬೇಕು. ಹೆಚ್ಚು ಭಾರವಿದ್ದರೆ ಆಯಾಸ, ಹಗುರವಿದ್ದರೆ ಕೆಲಸ ಸಾಗುವುದಿಲ್ಲ.

ವಿವಿಧ ಬಗೆಯ ಗುದ್ದಲಿಗಳನ್ನು ಈ ಕೆಳಗಿನ ಚಿತ್ರದ ಮೂಲಕ ಕಾಣಬಹುದು.



ಗುದ್ದಲಿ ಮಾತ್ರವಲ್ಲದೆ ಸಣ್ಣಪಾತಿಗಳಲ್ಲಿ ಕೆಲಸ ಮಾಡಲು ಅಥವಾ ಹೆಂಗಸರು ಕೂಡ ಕೆಲಸ ಮಾಡಲು ಪಿಕಾಸಿ, ಕೋಲುಗುದ್ದಲಿ, ಕುಡುಲು ಮುಂತಾದವುಗಳಿಂದ ಕೂತುಕೊಂಡೇ ಕಳೆತೆಗೆಯಬಹುದು.


ಪಿಕಾಶಿ




ಕೋಲುಗುದ್ದಲಿ




ಕೈಟ್ರೊವೆಲ್ಲು, ಕೈ–ತ್ರಿಶೂಲ, ಹುರಿ,ಗೂಟ




ವಿವಿಧ ಬಗೆಯ ದಸಿಗಳು



ಕುಡುಲುಗಳು






ಮಚ್ಚು




ಇವುಗಳಲ್ಲದೆ ಮೇಲಿನ ಉಪಕರಣಗಳಿಂದ ಕೆತ್ತಿದ, ಕೊಚ್ಚಿದ, ಕತ್ತರಿಸಿದ ಕಳೆ, ಕೂಳೆಗಳನ್ನು ಬಾಚಲು ಕೈ ಹಲುಬೆ, ಕಳೆಗುದ್ದಲಿ, ಮುಳ್ಳು ಸನಿಕೆಗಳು, ತ್ರಿಶೂಲಗಳು, ಕಲ್ಟಿವೇಟರುಗಳನ್ನು ಬಳಸಲಾಗುವುದು.


ಹಲ್ಲು ಸನಿಕೆ




ಮೂರು ಹಲ್ಲಿನ ಗುದ್ದಲಿ




ಮುಳ್ಳು ಸನಿಕೆಗಳು, ತ್ರಿಶೂಲಗಳು





ಹಲ್ಲಿನ ರೇತುಗಳು






ಕಲ್ಟಿವೇಟರುಗಳು







ವರವಾರಿ ಮತ್ತು ಕುರ್ಪಿಗಳು



ವಿವಿಧ ಬಗೆಯ ಕೈ ಕಲ್ಟಿವೇಟರುಗಳು



ನಿಂತು ಕಳೆ ತೆಗೆಯುವ ಕೈ ಉಪಕರಣಗಳು : ಮನುಷ್ಯ ಅನುಕೂಲಕ್ಕೆ ತಕ್ಕಂತೆ ಉಪಕರಣಗಳನ್ನು ಸಿದ್ಧಗೊಳಿಸಿಕೊಳ್ಳುತ್ತಿದ್ದಾನೆ. ಅದರಂತೆ ಸುಲಭವಾಗಿ ಕಳೆ ತೆಗೆಯಲು ಅನೇಕ ಉಪಕರಣಗಳನ್ನು ಕಂಡುಕೊಂಡಿದ್ದಾನೆ. ಎಲ್ಲಾ ಬೆಳೆಗಳ ಕಳೆ ಅಥವಾ ಕೂಳೆ ತೆಗೆಯಲು ಸಾಧ್ಯವಿಲ್ಲದಿದ್ದರೂ, ಕೆಲವೊಂದನ್ನು ಕಳೆ ತೆಗೆಯಲು ಬಳಸಲಾಗುತ್ತವೆ. ಅವುಗಳೆಂದರೆ : 1) ಸ್ಪೇಡ್, 2) ಫೋರ್ಕ್, 3) ಡ್ರಾಹೊ, 4) ಡಚ್ ಹೊ, 5) ರೇಕು, 6)ಷೊವೆಲ್ಲು.



ಕೈಯಿಂದ ಮಾತ್ರವಲ್ಲದೆ ಕಾಲಿನ ಸಹಾಯ ಪಡೆದು ಕಾಲಿನ ಬಲದಿಂದ ಉಪಕರಣಗಳ ಮೇಲೆ ಹತ್ತಿ ಇವುಗಳನ್ನು ಆಳಕ್ಕೆ ಇಳಿಸಿ ಬುಡ ಸಮೇತ ಕಳೆಗಳನ್ನು ಕೀಳಬಹುದು.

ಸ್ಪೇಡ್, ಫೋರ್ಕಿನ ಹಿಡಿಗಳು ಆಕಾರದಲ್ಲಿ 'U' ಇರಬೇಕು. ಆಗ ಕೈ ಹಿಡಿತಕ್ಕೆ, ಕೈ ಆಡಿಸುವುದಕ್ಕೆ ಅನುಕೂಲ. ಮೇಲಿನವೆಲ್ಲವೂ ಕಳೆ ಕೀಳುವುದಕ್ಕೆ, ಕಳೆ ಕೆತ್ತುವುದಕ್ಕೆ, ಬಾಚುವುದಕ್ಕೆ ಬಳಸಲಾಗುತ್ತದೆ.

ಕೆಲಸವಾದ ಮೇಲೆ ಮಣ್ಣು ಅಂಟಿಕೊಂಡಿರುವ ಉಪಕರಣವನ್ನು ಹಾಗೆಯೇ ಬಿಟ್ಟರೆ ಮಣ್ಣು ಒಣಗಿ ಚೊಕ್ಕಟ ಮಾಡಲು ಕಷ್ಟವಾಗುವುದಲ್ಲದೆ ಸಲಕರಣೆಗೆ ತುಕ್ಕು ಹಿಡಿಯುತ್ತದೆ. ಮೊಂಡು ಬೀಳುತ್ತದೆ. ಆದುದರಿಂದ ಪ್ರತಿಯೊಂದು ಸಲಕರಣಕ್ಕೂ ಒಂದು ಗೊತ್ತಾದ ಜಾಗ ಮಾಡಿ, ನೇತುಹಾಕುವುದಾದರೆ ಮೊಳೆಗಳನ್ನೋ ಕೊಂಡಿಗಳನ್ನೋ ಹೊಡೆದು ಇಡಬೇಕು. ಮತ್ತೆ ಆಯಾ ಜಾಗಗಳಲ್ಲಿ ಇಡುವುದಕ್ಕೆ ಮುಂಚೆ ಸಲಕರಣೆಗಳನ್ನು ಚೊಕ್ಕಟಮಾಡಿ, ಒರೆಸಿ, ಎಣ್ಣೆ ಸವರಿ ಇಡಬೇಕು.

ಹೀಗೆ ಮಾಡಿದರೆ ಸಲಕರಣೆಗಳನ್ನು ಚೊಕ್ಕಟವಾಗಿ, ಅಣಿಯಾಗಿ ಹರಿತವಾಗಿಟ್ಟುಕೊಳ್ಳಬಹುದು. ಇದರಿಂದ ಹೆಚ್ಚು ಬಾಳಿಕೆ ಕೂಡ ಬರುತ್ತವೆ.

ವಿ.ಎಲ್.ಎಂ.

ಕಳೆ ಹತೋಟಿ ಸಾಮಾನ್ಯವಾಗಿ ಬೆಳೆ ಇದ್ದಲ್ಲಿ ಕಳೆ ಇರುತ್ತದೆ. ಇಂತಹ ಕಳೆಯನ್ನು ತೆಗೆದು ಸಮೃದ್ಧ ಬೆಳೆಯನ್ನು ಬೆಳೆಯಲು ರೈತ ಕಳೆ ಹತೋಟಿ ಕ್ರಮವನ್ನು ಅನುಸರಿಸುತ್ತಾನೆ. ಬೇಸಾಯ ಕ್ರಮವು ಆಧುನಿಕಗೊಂಡಂತೆ ಕಳೆ ಹತೋಟಿ ಕ್ರಮವೂ ಕೂಡ ಆಧುನಿಕಗೊಂಡಿದೆ. ಇತ್ತೀಚೆಗೆ ಬೆಳೆಗಳನ್ನು ಹಾಕುವ ಸಂದರ್ಭದಲ್ಲಿಯೇ ಕಳೆ ನಾಶಕಗಳನ್ನು ಹಾಕುವರು. ಅನಂತರ ಬೆಳೆ ಬೆಳೆಯುವ ಸಂದರ್ಭದಲ್ಲಿಯೂ ಕೂಡ ಕಳೆನಾಶಕ ಹಾಕುತ್ತಾರೆ. ಕಳೆಯನ್ನು ತಡೆಯಲು ಆಯಾ ಬೆಳೆಗಳಿಗೆ ಸಂಬಂಧಪಟ್ಟಂತೆ ಕಳೆ ಹತೋಟಿ ಕ್ರಮವನ್ನು ಕಾಣಬಹುದು.

ಬೆಳೆಗಳಲ್ಲಿ ಅತೀ ಹೆಚ್ಚಾಗಿ ಕಂಡು ಬರುವ ಕಳೆಗಳಲ್ಲಿ ಪಾರ್ಥೇನಿಯಂ ಮುಖ್ಯವಾದುದು. ಬೆಳೆಗಳೊಂದಿಗೆ ಪಾರ್ಥೇನಿಯಂ ಕಳೆ ವಿಜೃಂಭಿಸಿ ಬಹಳಷ್ಟು ಹಾನಿಯುಂಟು ಮಾಡುತ್ತದೆ. ಈ ಕಳೆಯನ್ನು ನಿಯಂತ್ರಣಕ್ಕೆ ತರಲು ಅಡುಗೆ ಉಪ್ಪನ್ನು ನೀರಿನಲ್ಲಿ ಕರಗಿಸಿ ಪಾರ್ಥೇನಿಯಂ ಮೇಲೆ ಸಿಂಪಡಿಸಿದಾಗ ಅದು ಸಸ್ಯಗಳಲ್ಲಿಯ ನೀರಿನ ಅಂಶವನ್ನು ಹೀರಿ ಒಣಗುವಂತೆ ಮಾಡುತ್ತದೆ. ಇದು ತೀರಾ ಕಡಿಮೆ ಖರ್ಚಿನಿಂದ ಕೂಡಿದ ವಿಧಾನ ಮತ್ತು ಹೆಚ್ಚು ದೈಹಿಕ ಶ್ರಮ ಬೇಕಾಗಿಲ್ಲ ಜೊತೆಗೆ ಪರಿಸರಕ್ಕೆ ಹಾನಿಯು ಆಗದು. ಆದರೆ ಈ ಕೆಲಸವನ್ನು ಪಾರ್ಥೇನಿಯಂ ಗಿಡ ಹೂ ಬಿಡುವ ಮುಂಚೆ ಮಾಡಬೇಕು. ಇತ್ತೀಚೆಗೆ ಪಾರ್ಥೇನಿಯಂ ಗಿಡ ಯಥೇಚ್ಛವಾಗಿ ಇದ್ದಲ್ಲಿ ತಂಗಡಿ ಬೀಜವನ್ನು ಬಿತ್ತುತ್ತಾರೆ. ವೈಜ್ಞಾನಿಕವಾಗಿ ತಂಗಡಿ ಬೀಜ ದಟ್ಟವಾಗಿ ಮೊಳೆತು ಬೆಳೆಯುವಂತಹದು. ಕಳೆ ಸಸ್ಯದೊಂದಿಗೆ ತೇವಾಂಶ, ಬಿಸಿಲು, ಬೆಳಕು, ಪೋಷಕಾಂಶಗಳಿಗೆ ತೀವ್ರವಾದ ಪೈಪೋಟಿ ಕೊಟ್ಟು ಪಾರ್ಥೇನಿಯಂ ಕಳೆ ಸಸ್ಯಗಳನ್ನು ಬೆಳೆಯಲು ಬಿಡುವುದಿಲ್ಲ. ಕಡೆಗೆ ಅವುಗಳ ಬೆಳವಣಿಗೆ ಕುಂಠಿತಗೊಂಡು ಇಲ್ಲವಾಗುತ್ತದೆ. ಅರಿಸಿನ ಮತ್ತು ಶುಂಠಿ ಬೆಳೆಯಲ್ಲಿ ಕಳೆಯನ್ನು ಹತೋಟಿ ಮಾಡಲು ಇವನ್ನು ಬಿತ್ತಿದ ಅನಂತರ ಹಸುರು ಸೊಪ್ಪನ್ನು ಮಂದವಾಗಿ ಹಾಸುತ್ತಾರೆ. ಇದರಿಂದ ಕಳೆಗಳ ಬೀಜ

ಮೊಳೆತರು ಅವುಗಳಿಗೆ ಬೆಳಕು - ಬಿಸಿಲು ತಾಗದೆ ಸತ್ತು ಹೋಗುತ್ತವೆ. ಟೊಮ್ಯಾಟೋ, ಎಲೆಕೋಸು, ಹೂಕೋಸು ತೋಟಗಳಲ್ಲಿ ಬದುಗಳ ಮೇಲೆ ಕಪ್ಪು ಪ್ಲಾಸ್ಟಿಕ್ ಹಾಳೆಯನ್ನು ಹೊದಿಸಲಾಗುತ್ತದೆ. ಈ ಕಪ್ಪು ಪ್ಲಾಸ್ಟಿಕ್ ಹಾಳೆ ಬೆಳಕು ಬೀಳುವುದನ್ನು ತಡೆಯುವುದಲ್ಲದೆ ಹೆಚ್ಚು ಸೂರ್ಯನ ಶಾಖವನ್ನು ಹೀರಿಕೊಳ್ಳುವುದರಿಂದ ಉಷ್ಣತೆ ಹೆಚ್ಚಾಗುತ್ತದೆ. ಆದ್ದರಿಂದ ಮಣ್ಣಿನಲ್ಲಿ ಕಳೆ ಬೀಜ ಮೊಳೆತರು ಹೆಚ್ಚಿನ ಶಾಖ ಮತ್ತು ಬೆಳಕಿನ ಕೊರತೆಯಿಂದ ಸತ್ತುಹೋಗುತ್ತದೆ.

ಕಬ್ಬನ್ನು ಕಟಾವು ಮಾಡಿದ ಅನಂತರ ಉದುರಿ ಬಿದ್ದಿರುವ ಸೋಗು ಮತ್ತು ಕಳೆಗೆ ಬೆಂಕಿ ಹಚ್ಚುತ್ತಾರೆ. ಬೆಂಕಿಯ ಜ್ವಾಲೆಗೆ ಸಿಕ್ಕ ಕಳೆಗಿಡಗಳು ಕೂಡ ಸುಟ್ಟು ಹೋಗುತ್ತವೆ. ಕೀಟ ಮತ್ತು ರೋಗಾಣುಗಳ ಬಾಧೆ ಇರುವುದಿಲ್ಲ. ಜೊತೆಗೆ ಕಬ್ಬಿನ ಸೋಗು ಮತ್ತು ಕಳೆಗಳಿಂದ ಕೂಡಿದ ಬೂದಿ ಕಬ್ಬಿನ ಬೆಳೆಗೆ ಫಲವತ್ತಾದ ಗೊಬ್ಬರವಾಗಿದ್ದು ಕಳೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಯುವ ಉದ್ದೇಶದಿಂದಲೇ ಕಬ್ಬನ್ನು ನಾಟಿ ಮಾಡುವ ಸಂದರ್ಭದಲ್ಲಿ ಕೊಟ್ಟಿಗೆ ಗೊಬ್ಬರ ಹಾಕುವುದಿಲ್ಲ. ಯಾಕೆಂದರೆ ಕೊಟ್ಟಿಗೆ ಗೊಬ್ಬರದಲ್ಲಿ ಅತೀ ಹೆಚ್ಚು ಕಳೆ ಬೀಜಗಳಿದ್ದು ಅವುಗಳು ಗೊಬ್ಬರದಲ್ಲಿರುವ ಪೋಷಕಾಂಶ ಮತ್ತು ತೇವಾಂಶವನ್ನು ತಮ್ಮದಾಗಿಸಿಕೊಂಡು ಮೊಳಕೆಯೊಡೆಯುತ್ತವೆ. ಇತ್ತೀಚೆಗೆ ಕಬ್ಬಿನ ಗದ್ದೆಗಳಲ್ಲಿ ಕಳೆ ಹತೋಟಿಗಾಗಿ ಕಬ್ಬಿನ ಸಾಲುಗಳ ಮಧ್ಯೆ ಟೊಮ್ಯಾಟೋ, ಹಲಸಂದೇ ಬೆಂಡೆ ಇತ್ಯಾದಿ ಬೆಳೆಗಳನ್ನು ಹಾಕಿ ಕಳೆಯನ್ನು ಹತೋಟಿಗೆ ತರುತ್ತಿದ್ದಾರೆ.

ಮಾವು, ಸಪೋಟ, ಬಾದಾಮಿ ಇತ್ಯಾದಿ ಹಣ್ಣಿನ ತೋಟಗಳಲ್ಲಿ ಅವುಗಳ ಸಾಲುಗಳ ನಡುವೆ ಕಳೆ ಹತೋಟಿಗಾಗಿ ಹೆಚ್ಚಾಗಿ ಸಾಸುವೆ, ತೊಗರಿ ಇನ್ನಿತರ ಎತ್ತರದ ಬೆಳೆಗಳನ್ನು ಹಾಕುತ್ತಾರೆ. ಇವುಗಳು ಎತ್ತರವಾಗಿ ಬೆಳೆಯುವ ಕಾರಣ ಬೆಳಕು ನೆಲಕ್ಕೆ ತಾಗದಂತೆ ಅಡ್ಡಿಯನ್ನುಂಟು ಮಾಡುತ್ತವೆ. ಜೊತೆಗೆ ಮಣ್ಣಿನಲ್ಲಿರುವ ತೇವಾಂಶ ಮತ್ತು ಪೋಷಕಾಂಶಗಳನ್ನು ಹೀರಿಕೊಂಡು ಕಳೆಯ ಗಿಡಗಳು ಮೇಲೇಳದಂತೆ ಮಾಡುತ್ತವೆ.

ಏಲಕ್ಕಿ ಗಿಡದ ಬುಡದ ಪಾತಿಗಳ ಮೇಲೆ ಒಣಗಿದ ಎಲೆ, ತರಗು, ಹುಲ್ಲು ಸಿಪ್ಪೆ, ಮುಂತಾದವುಗಳನ್ನು ಮಂದವಾಗಿ ಹರಡುತ್ತಾರೆ. ಸಾವಯವ ಹೊದಿಕೆ ಮಣ್ಣಿನ ತೇವಾಂಶವನ್ನು ತಡೆಹಿಡಿದು, ಕಳೆ ಬೀಜಗಳು ಮೊಳೆತರು ಅವು ಅತಿಯಾದ ಶೀತದಿಂದ ಮತ್ತು ಬೆಳಕು ಸಿಗದ ಕಾರಣ ಬೆಳವಣಿಗೆ ಕುಂಠಿತಗೊಳ್ಳುತ್ತವೆ. ಸವತೆಕಾಯಿ, ಕಲ್ಲಂಗಡಿ, ಮೆಣಸಿನಕಾಯಿ, ಬೆಂಡೆಕಾಯಿ, ಬದನೆಕಾಯಿ, ಬೀನ್ಸ್, ಇನ್ನಿತರ ಬೆಳೆಗಳಲ್ಲಿ ಅವುಗಳ ಪಾತಿಗಳ ನಡುವೆ ಸಲಿಕೆಯಿಂದ (ಗುದ್ದಲಿ) ಮಣ್ಣನ್ನು ಮಗುಚುತ್ತಾರೆ. ಇದರಿಂದ ತಳಪದರಗಳಲ್ಲಿಯ ಮಣ್ಣು ಮೇಲಕ್ಕೆ ಬಂದು ಮೇಲ್ಪದರಗಳ ಮಣ್ಣು ತಳಕ್ಕೆ ಸೇರುತ್ತದೆ. ಆದ್ದರಿಂದ ಕಳೆಗಳ ಬೀಜ ಅಥವಾ ಸಸ್ಯಗಳ ಭಾಗಗಳು ಕೊಳೆಯುತ್ತವೆ. ಇದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗಿ ಕಳೆಯ ಹಾವಳಿ ನಿಯಂತ್ರಣಗೊಳ್ಳುತ್ತದೆ.

ಸಾಮಾನ್ಯವಾಗಿ ಖುಷ್ಕಿ ಜಮೀನಿನಲ್ಲಿ ಹೆಚ್ಚಾಗಿ ಕಂಡು ಬರುವ ಕಳೆ ಸಸ್ಯವೆಂದರೆ ಕೊನ್ನಾರಿ ಅಥವಾ ತುಂಗೆ. ಕೊನ್ನಾರಿ ಎಂಬ ಕಳೆ ಹತೋಟಿಗೆ ಹೆಚ್ಚಾಗಿ ಮೇಕೆ ಗೊಬ್ಬರವನ್ನು ಬಳಸುತ್ತಾರೆ. ಮೇಕೆ ಗೊಬ್ಬರದಲ್ಲಿ ಕೊನ್ನಾರಿ ಗೆಡ್ಡೆಗಳು ಹೆಚ್ಚು ಬೆಳವಣಿಗೆಯಾಗದಂತೆ ತಡೆಯುವ ಅಂಶಗಳಿದ್ದು ಜೊತೆಗೆ ಮೇಕೆ ಎಲ್ಲಾ ಜಾತೀಯ ಸಸ್ಯಗಳನ್ನು ತಿನ್ನುವ ಕಾರಣದಿಂದ ಇದರ ಗೊಬ್ಬರ ಭೂಮಿಗೆ ಫಲವತ್ತತೆಯನ್ನು ಹೆಚ್ಚಿಸುತ್ತದೆ. ಪಾರ್ಥೇನಿಯಂ ಕಳೆಯನ್ನು ಸುಲಭವಾಗಿ ನಿಯಂತ್ರಣಕ್ಕೆ ತರಲು ಅಡುಗೆ ಉಪ್ಪನ್ನು ನೀರಿನಲ್ಲಿ ಕರಗಿಸಿ ಕಳೆಯ ಮೇಲೆ ಸಿಂಪಡಿಸಿದಾಗ ಸಸ್ಯಗಳಲ್ಲಿಯ ನೀರಿನ ಅಂಶವನ್ನು ಹೀರಿ ಒಣಗುವಂತೆ ಮಾಡುತ್ತದೆ. ಇದು ತೀರಾ ಕಡಿಮೆ ಖರ್ಚಿನಿಂದ ಕೂಡಿದ ವಿಧಾನ ಮತ್ತು ಹೆಚ್ಚು ದೈಹಿಕ ಶ್ರಮವಿಲ್ಲದೆ ಜೊತೆಗೆ ಪರಿಸರಕ್ಕೆ ಹಾನಿಯು ಆಗದು ಒಟ್ಟಿನಲ್ಲಿ ಈ ಕೆಲಸವನ್ನು ಪಾರ್ಥೇನಿಯಂ ಗಿಡ ಹೂ ಬಿಡುವ ಮುಂಚೆಮಾಡಬೇಕು. ವೈಜ್ಞಾನಿಕವಾಗಿ ತಂಗಡಿ ಬೀಜ ದಟ್ಟವಾಗಿ ಮೊಳೆತು ಬೆಳೆಯುವಂತಹದು. ಆದ್ದರಿಂದ ಇದು ಪಾರ್ಥೇನಿಯಂ ಕಳೆ ಸಸ್ಯದೊಂದಿಗೆ ತೇವಾಂಶ, ಬಿಸಿಲು, ಬೆಳಕು, ಪೋಷಕಾಂಶಗಳಿಗೆ ತೀವ್ರವಾದ ಪೈಪೋಟಿ ಕೊಟ್ಟು ಕಳೆ ಸಸ್ಯಗಳನ್ನು ಬೆಳೆಯಲು ಬಿಡುವುದಿಲ್ಲ. ಕಡೆಗೆ ಅವುಗಳ ಬೆಳವಣಿಗೆ ಕುಂಠಿತಗೊಂಡು ಇಲ್ಲವಾಗುತ್ತದೆ.

ವಾರ್ಷಿಕ ಹಾಗೂ ಅರ್ಧವಾರ್ಷಿಕ ಬೆಳೆಯನ್ನು ಹಾಕುವ ಮೊದಲು ಭೂಮಿಯನ್ನು ಮೂರು ನಾಲ್ಕು ಬಾರಿ ಉಳುಮೆ ಮಾಡಿ ಕಳೆಯ ಗಿಡಗಳನ್ನು ಬೇರ್ಪಡಿಸಬೇಕು. ಬಹುವಾರ್ಷಿಕ ತೋಟದ ಬೆಳೆಗಳ ಜಮೀನುಗಳಲ್ಲಿ ಕಣದ ಹೊಟ್ಟನ್ನು ಮಂದವಾಗಿ ಹೊದಿಸುತ್ತಾರೆ. ಇದರಿಂದ ಮಳೆಯಾದಾಗ ನೀರು ಮುಂದಕ್ಕೆ ಹರಿಯದೆ ಅಲ್ಲೇ ಹಿಂಗಿ ಅಷ್ಟಾಗಿ ಇರುವುದಿಲ್ಲ. ರೈತ ಕಳೆ ಹತೋಟಿಗೆ ಎಷ್ಟೇ ಮುಂಜಾಗ್ರತೆ ವಹಿಸಿದರೂ ಕೂಡ ಶೇ. ಭಾಗ ಸಂಪೂರ್ಣ ನಿಯಂತ್ರಣ ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ವೈಜ್ಞಾನಿಕ ಕಳೆ ನಿಷೇಧಕಗಳನ್ನು ಸಿಂಪಡಿಸಿ ಬೆಳೆಯನ್ನು ಉಳಿಸಿಕೊಳ್ಳುತ್ತಾರೆ.

ಕೆ.ಪಿ.ಎಂ.

ಕಾಕಡ ಹೂವಿಗಾಗಿಯೇ ಬೆಳೆಸುವ ಸಸ್ಯಗಳ ಪೈಕಿ ಒಂದು. ಇದು ಸರ್ವಋತುಗಳಲ್ಲೂ ಹೂ ನೀಡುವಂಥದು. ಓಲಿಯೇಸೀ ಕುಟುಂಬದ ಜಾಸ್ಮಿನಮ್ ಪ್ಯೂಬಿಸೆನ್ಸ್ ಪ್ರಭೇದವಿದು. ವಾಸನಾರಹಿತ



ಶ್ವೇತವರ್ಣದ ಹೆಚ್ಚು ಇಳುವರಿ ನೀಡುವ ಸಸ್ಯ, ಮಲ್ಲಿಗೆ ಜಾತಿಗೆ ಸೇರಿದ್ದು. ಹೆಚ್ಚು ಆರೈಕೆಯಿಲ್ಲದೆ ಬೆಳೆಯುತ್ತದೆ. ಹಾರ ತುರಾಯಿಗಳಿಗೆ ಹೆಸರಾಗಿರುವ ಇದು ವಾಣಿಜ್ಯ ಬೆಳೆಯಾಗಿ ಉತ್ತಮ ಆರ್ಥಿಕ ಸಂಪನ್ಮೂಲ ಒದಗಿಸುವಂಥದ್ದು. ಮೊಗ್ಗು ಅರಳುವ ಮೊದಲೇ ಕೊಯ್ದು ಮಾರುಕಟ್ಟೆಗೆ

ತಲುಪಿಸಬೇಕು. ಮನೆಯ ಅಂಗಳದಲ್ಲೂ ಉದ್ಯಾನವನಗಳಲ್ಲೂ ಶಾಲಾ ಕಾಲೇಜುಗಳ ಆವರಣದಲ್ಲೂ ಬೆಳೆಸುತ್ತಾರೆ.

ಸಸ್ಯಾಭಿವೃದ್ಧಿ : ಸಾಕಷ್ಟು ಕವಲೊಡೆದು ಬೆಳೆಯುವ ಇದರ ಬಳ್ಳಿಗಳು ನೆಲ ಸ್ಪರ್ಶಿಸಿದಲ್ಲೆಲ್ಲ ಬೇರು ಬಿಡುತ್ತವೆ. ಇಂಥ ಸಸಿಗಳನ್ನು ನೆಟ್ಟು ಬೆಳೆಸಬಹುದಾದರೂ ಸಸಿಗೆ 60-70 ದಿನಗಳಾದರೂ ಆಗಿರಬೇಕು. ಸಸಿಗಳನ್ನು ಜೋಪಾನವಾಗಿ ತಾಯಿ ಬೇರು ತುಂಡರಿಸದ ಹಾಗೆ ಬೇರ್ಪಡಿಸಬೇಕು. ಮರುಳು ಮಿಶ್ರಿತ ಕೆಂಪು ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದಾದರೂ ಎಲ್ಲ ಮಣ್ಣಿನಲ್ಲೂ ಬೆಳೆಸಬಹುದು. ಮಣ್ಣು ಸಡಿಲವಾಗಿದ್ದು ಜೌಗಿನಿಂದ ಕೂಡಿರಬಾರದಷ್ಟೆ. ವ್ಯಾಪಾರ ದೃಷ್ಟಿಯಿಂದ ತೋಟಗಳಲ್ಲಿ ಬೆಳೆಯುವರು. ಮಳೆಗಾಲಕ್ಕೆ ಮೊದಲು ಉತ್ತು ಅಥವಾ ಅಗೆದು ಭೂಮಿ ಹದಮಾಡಬೇಕು. ಎರಡು ಸಾಲುಗಳ ಮಧ್ಯೆ ಆರು ಅಡಿ ಅಂತರವಿರಬೇಕು. ಪ್ರತಿ ಗುಂಡಿಯೂ ಎರಡು ಅಡಿ ಅಗಲ ಎರಡು ಅಡಿ ಉದ್ದ ಮತ್ತು ಒಂದೂವರೆ ಅಡಿ ಆಳವಿರಬೇಕು. ಗುಂಡಿಯಿಂದ ಗುಂಡಿಗೆ 5 ಅಡಿ ಅಂತರ ಇರಬೇಕು. ಕೊಳೆತ ಗೊಬ್ಬರ, ಮರಳು, ಕೆಂಪು ಮಣ್ಣು, ಮಿಶ್ರ ಮಾಡಿ ಗುಂಡಿಯ ಸ್ವಲ್ಪ ಭಾಗ ಬಿಟ್ಟು ತುಂಬಬೇಕು. ಸಸಿಗಳನ್ನು ನಾಟಿ ಮಾಡಿದ ಮೇಲೆ ಸ್ವತಂತ್ರವಾಗಿ ಚಿಗುರೊಡೆದು ಬೇರು ಬಿಡುವ ತನಕ ಆಗಾಗ ನೀರು ಕೊಟ್ಟು ಕಳೆಕಿತ್ತು ಪೋಷಿಸಿದರೆ ಸುಮಾರು 12-13 ತಿಂಗಳ ಒಳಗೆ ಹೂ ಬಿಡುತ್ತದೆ. ವರ್ಷಕ್ಕೆ ಎರಡು ಬಾರಿ ಗೊಬ್ಬರ ಕೊಡಬೇಕು. ಪ್ರತಿವರ್ಷ ತೋಟವನ್ನು ಅಗೆದು ಕಳೆಕಿತ್ತ ಬಳಿಕವೇ ಗುಂಡಿಗಳನ್ನು ಕೆದಕಿ ಗೊಬ್ಬರ ನೀಡಿದರೆ ಒಳ್ಳೆಯದು.

ಸಸ್ಯ ಸ್ವರೂಪ : ಮೂರ್‍ನಾಲ್ಕು ಅಡಿ ಎತ್ತರ ಬೆಳೆಯುವ ಇದು ಪೊದೆಯಂತಹ ಸಸ್ಯ. ಬಹುವಾರ್ಷಿಕ ಸಸ್ಯವಾದ ಇದರ ಕಾಂಡ ಮತ್ತು ಎಲೆಗಳ ಮೇಲೆ ಕಂದುಬಣ್ಣದ ನವುರಾದ ರೋಮಗಳಿರುತ್ತವೆ. ಎಲೆಗಳು ಚಿಕ್ಕದಾಗಿದ್ದು. ನಯವಾದ ಅಂಚಿನ ಕರಣೆಯಾಕಾರದ ಮೊನಚಾದ ತುದಿಯುಳ್ಳಂಥವು. ಗಾಢ ಹಸಿರು ಬಣ್ಣದ ಎಲೆಗಳು, ಮಧ್ಯಾರಂಭಿ ಮಾದರಿಯ ಹೂಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಬಿಳಿ ಬಣ್ಣದ ಹೂಗಳು ಏಳು ಪುಷ್ಪ ಪತ್ರಗಳನ್ನೂ ಎರಡು ಕೇಸರಗಳನ್ನೂ ಹೊಂದಿವೆ.

ಉಪಯೋಗ : ಕಾಕಡ ಹೂ ಮಲ್ಲಿಗೆಗಿಂತ ಅಗ್ಗವಾಗಿದ್ದು ಪ್ರತಿದಿನದ ಪೂಜೆಗಾಗಿ ಹೆಚ್ಚು ಜನ ಬಳಸುವರು. ಹಾರ ತುರಾಯಿಗಳಿಗೆ, ಒಳಾಂಗಣ ಅಲಂಕಾರಕ್ಕೆ, ಸಭೆ ಸಮಾರಂಭಗಳಲ್ಲಿ ಜನನದಿಂದ ಮರಣದ ತನಕ ಎಲ್ಲ ಶುಭಾಶುಭ ಕಾರ್ಯಗಳಲ್ಲೂ ಕಾಕಡ ಬಳಕೆಯಲ್ಲಿದೆ. ಇದನ್ನು ಬಿಡಿಯಾಗಿಯೂ, ಮರುಗ, ಪನ್ನೀರೆಲೆ ಇತ್ಯಾದಿಗಳನ್ನು ಸೇರಿಸಿ ಕಟ್ಟಿ ಮಾರುತ್ತಾರೆ. ಅನೇಕರ ಉದರಂಬರಣಕ್ಕೆ ಕಾರಣವಾಗಿರುವ ಇದು ಆರ್ಥಿಕವಾಗಿಯೂ, ಲಾಭದಾಯಕವಾಗಿದೆ.

ಎಂ.ಎಲ್.

ಕಾಡುಗೋದಿ ನಾಡುಗೋದಿಗಿಂತ ಭಿನ್ನವಾದುದು. ಹೆಚ್ಚು ತೇವಾಂಶವಿರುವ ಪ್ರದೇಶಗಳಲ್ಲಿ ಮಾತ್ರ ಬೆಳೆಯುವಂಥದು. ಭಾರತದಲ್ಲಿ ಹಿಮಾಲಯ ಪ್ರದೇಶ, ಖಾಸಿ ಬೆಟ್ಟ ಪ್ರದೇಶಗಳಲ್ಲಿ ಅತಿ ಹೆಚ್ಚಾಗಿಯೂ ನೀಲಗಿರಿ ಬೆಟ್ಟ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿಯೂ ಕಾಡುಗೋದಿ ಬೆಳೆಸುತ್ತಾರೆ. ಇದರ ವೈಜ್ಞಾನಿಕ ಹೆಸರು ಫ್ಯಾಗೋಪೈರಮ್ ಎಸ್ಕುಲೆಂಟಮ್. ಇದು ಏಕವಾರ್ಷಿಕ ಸಸ್ಯ. ಮಣ್ಣು ಸಡಿಲವಾಗಿದ್ದಷ್ಟೂ ದಷ್ಟಪುಷ್ಟವಾಗಿ ಬೆಳೆದು ಹೆಚ್ಚು ಇಳುವರಿ ಕೊಡುತ್ತದೆ.

ಬಿತ್ತನೆಯ ಕಾಲ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುತ್ತದೆ. ಉತ್ತರ ಭಾರತದಲ್ಲಿ ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿದರೆ ಅಕ್ಟೋಬರ್ ತಿಂಗಳಿನಲ್ಲಿ ಕೊಯ್ಲಿಗೆ ಬರುತ್ತದೆ. ನೀಲಗಿರಿ ತಪ್ಪಲಿನಲ್ಲಿ ಏಪ್ರಿಲ್ ತಿಂಗಳಿನಲ್ಲಿ ಬಿತ್ತಿ ಆಗಸ್ಟ್‌ನಲ್ಲಿ ಕೊಯ್ಲು ಮಾಡುತ್ತಾರೆ. ಒಂದು ಎಕರೆಗೆ 40-60 ಸೇರುಬಿತ್ತನೆ ಬೀಜ ಬೇಕಾಗುತ್ತದೆ. ಐದು ಮೂಟೆಯಿಂದ ಹತ್ತು ಮೂಟೆವರೆಗೆ ಇಳುವರಿ ಪಡೆಯಬಹುದು.

ಬಹಳ ಹಿಂದಿನ ಕಾಲದಿಂದಲೂ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಕಾಡುಗೋದಿಯನ್ನು ಉಪಯೋಗಿಸುತ್ತ ಬಂದ ಮಾನವ ಅನಂತರ ಇದರ ಕೃಷಿಗೆ ತೊಡಗಿದ. ಕೊಟ್ಟಿಗೆ ಗೊಬ್ಬರವನ್ನು ಕೊಡುವುದರ ಮೂಲಕ ಹೆಚ್ಚು ಇಳುವರಿ ಪಡೆಯಲಾರಂಭಿಸಿದ. ಇದು ಸು. 3-5 ಅಡಿ ಎತ್ತರ ಬೆಳೆಯುತ್ತದೆ. ಹೂಗಳು ಗೊಂಚಲು ಗೊಂಚಲಾಗಿ ಎಲೆಗಳ ಕಂಕುಳಲ್ಲಿ ಅಥವಾ ಕಾಂಡದ ತುದಿಯಲ್ಲಿ ಹುಟ್ಟುತ್ತವೆ. ಬಿಳಿ, ನೇರಳೆ ಬಣ್ಣ ಹೊಂದಿದ್ದು ಸುವಾಸನಾಯುಕ್ತವಾಗಿರುತ್ತದೆ. ಇದರ ಕಾಯಿ ಶಂಕುವಿನಂತಿದ್ದು ಬೂದು ಅಥವಾ ಕಂದು ಬಣ್ಣವಿರುತ್ತದೆ. ನಾಡುಗೋದಿಗಿಂತ ಹೆಚ್ಚು ಪೋಷಕಾಂಶವಿರುವ ಕಾಡುಗೋದಿಯು ರೊಟ್ಟಿ, ಅಂಬಲಿ, ಮುದ್ದೆಗೆ, ಕೋಳಿಗಳಿಗೆ, ದನಗಳಿಗೆ ಆಹಾರವಾಗಿಯೂ ಬ್ರೆಡ್ ಮತ್ತು ಮದ್ಯಸಾರ ತಯಾರಿಕೆಯಲ್ಲೂ ಉಪಯೋಗ. ಹೂ ಸುವಾಸನಭರಿತವಾಗಿರುವುದರಿಂದ ಜೇನುಸಾಕಾಣೆಗೆ ಬಹಳ ಸಹಕಾರಿ. ಕಾಡುಗೋದಿಯಲ್ಲಿರುವ ರೂಬಿನ್ ಎಂಬ ಹಳದಿ ಬಣ್ಣದ ರಾಸಾಯನಿಕ ವಸ್ತು ರಕ್ತನಾಳಗಳ ಸಿಡಿತ, ಮೂತ್ರಪಿಂಡ ಗಳಲ್ಲಿಯ ರಕ್ತಸ್ರಾವ ಮುಂತಾದ ರೋಗಿಗಳಿಗೆ ಔಷಧಿಯಾಗಿಯೂ ಬಳಕೆಯಾಗುತ್ತದೆ.

ಪಿ.ಸಿ.ಎಸ್.

ಕಾಫಿ ಇದು ಪ್ರಪಂಚದ ಎಲ್ಲ ಉಷ್ಣವಲಯ ಪ್ರದೇಶಗಳಲ್ಲಿ ಬೆಳೆಯುವಂಥದು. ಸದಾ ಹಸುರಾಗಿರುವ ಪೊದೆ ಸಸ್ಯ. ರೂಬಿಯೇಸೀ ಕುಟುಂಬಕ್ಕೆ ಸೇರಿದ ಇದರಲ್ಲಿ 45 ಪ್ರಭೇದಗಳಿವೆ. ಕಾಫಿ ಗಿಡ ಸು. 7 ರಿಂದ 25 ಅಡಿ ಎತ್ತರ ಬೆಳೆಯಬಲ್ಲದು. ಫಸಲನ್ನು ಕೊಯ್ಯಲು ಅನುಕೂಲವಾಗುವಂತೆ ಆಳೆತ್ತರಕ್ಕಿಂತ ಹೆಚ್ಚು ಬೆಳೆಯದಂತೆ ಆಗಾಗ ಕಪಾತ (ಕಟಾವು) ಮಾಡುತ್ತಾರೆ. ಆರಿಂಚು ಉದ್ದ ಮೂರಿಂಚು ಅಗಲದ ಇದರ ಎಲೆಗಳು ಮೊಟ್ಟೆಯಾಕಾರದಲ್ಲಿದ್ದು ಅಭಿಮುಖವಾಗಿ ಜೋಡಣೆಗೊಂಡಿರುತ್ತವೆ. ಸುವಾಸನಾಯುಕ್ತವಾದ ಬಿಳಿಯ ಬಣ್ಣ ಹೂಗಳು ನೋಡಲು ಆಕರ್ಷಣೀಯವಾಗಿರುತ್ತವೆ. ಇದರ ಮೂಲ ನೈಋತ್ಯ ಇಥಿಯೋಪಿಯದ ಅಬಿಸೀನಿಯ ಎಂದು ತಿಳಿದು ಬಂದಿದೆ. ಇದರ ಬೀಜದಲ್ಲಿ ಎರಡು ದಳಗಳಿರುತ್ತವೆ. ಕಾಯಿಯಾಗಿದ್ದಾಗ ಹಸುರಾಗಿದ್ದು ಮಾಗಿದಾಗ ದಟ್ಟಕೆಂಪು ಬಣ್ಣದಿಂದ ಕೂಡಿರುತ್ತದೆ.

ಭೂಮಿ : ಹಿಂದೆಲ್ಲಾ ಕಾಡನ್ನು ಕಡಿದು, ನೆರಳಿಗೆ ಬೇಕಾದಷ್ಟು ಗಿಡಗಳನ್ನು ಇರಿಸಿಕೊಂಡು ಕಾಫಿ ತೋಟ ಸಿದ್ಧಗೊಳಿಸಿಕೊಳ್ಳುತ್ತಿದ್ದರು. ಏರು ತಗ್ಗಿರುವ ಜಾಗಗಳಲ್ಲೂ ಕಾಫಿ ತೋಟವನ್ನು ಮಾಡುತ್ತಾರೆ. ಬಾಣೆ

(ವಿಸ್ತಾರವಾದ ಪ್ರದೇಶ) ಕಾಫಿ ತೋಟಗಳಿಗೆ ಹೆಚ್ಚು ಯುಕ್ತವಾದ ಭೂಮಿಯಾಗಿದೆ. ಒಂದು ಎಕರೆಗೆ ಅರೇಬಿಕಾ ತಳಿಗಳನ್ನು 7 ಅಡಿಗೆ ಒಂದು ಗಿಡದಂತೆ (ನೆಡಲಾಗುತ್ತದೆ) ಸಾಲು ಹಿಡಿದು ಸುಮಾರು 750 ರಿಂದ 850 ಗಿಡಗಳನ್ನು ಹಾಕಬಹುದು. ರೋಬಾಸ್ಟ ತಳಿ ಆದರೆ ಹತ್ತು ಅಡಿಗೆ ಸುಮಾರು 450 ಗಿಡಗಳನ್ನು ನೆಡಬಹುದು.

ತಳಿಗಳು : ಅರೇಬಿಕಾ : ಈ ತಳಿಯಲ್ಲಿ ಅನೇಕ ಉಪ ತಳಿಗಳಿವೆ. ಸಾಧಾರಣವಾಗಿ ಕೊಡಗಿನಲ್ಲಿ ಈ ಕೆಳಕಂಡ ತಳಿಗಳನ್ನು ಹಾಕುತ್ತಾರೆ.

1. ಅರೇಬಿಕಾ ಕೆಂಟ್, 2. ಅರೇಬಿಕಾ 795, 3. ಅರೇಬಿಕಾ ಕಟವಾಯಿ, 4. ಅರೇಬಿಕಾ ನಂ-6, 5. ಅರೇಬಿಕಾ ನಂ-0, 6. ಅರೇಬಿಕಾ ಚಂದ್ರಗಿರಿ, 7. ಅರೇಬಿಕಾ ಸ್ಯಾಂಡ್ರೋಮ್ (ಕುಳ್ಳತಳಿ)

ಈ ತಳಿಗಳನ್ನು ಒಂದೂವರೆ ಅಡಿ ಆಳ ಹಾಗೂ ಒಂದು ಅಡಿ ಅಗಲದಷ್ಟು ಗುಂಡಿ ತೆಗೆದು ನೆಡಲಾಗುತ್ತದೆ. ಈ ಗಿಡಗಳು ಸುಮಾರು 150 ವರ್ಷಗಳಷ್ಟು ಕಾಲ ಬದುಕುತ್ತವೆ.

ರೋಬಾಸ್ಟ : ಈ ತಳಿಯಲ್ಲೂ ಕೆಲವು ಉಪ ಪ್ರಭೇದಗಳನ್ನು ಗುರುತಿಸುತ್ತಾರೆ.

1. ಪೆರಿಡೀನಿಯಾ, 2. ರೋಬಾಸ್ಟ-274, 3. ರೋಬಾಸ್ಟ ಕಾಂಜೇನ್ಸಿಯಂ, 4. ರೋಬಾಸ್ಟ



ಈ ತಳಿಯನ್ನು ಎರಡು ಅಡಿ ಆಳ ಹಾಗೂ ಒಂದೂವರೆ ಅಡಿ ಅಗಲ ಗುಂಡಿ ತೆಗೆದು ಗಿಡವನ್ನು ನೆಡುತ್ತಾರೆ. ಇದು ಸುಮಾರು 100 ವರ್ಷ ಬಾಳುತ್ತದೆ. ಆದರೆ ಯಾವ ತಳಿಗಳಾದರೂ 30 ರಿಂದ 40 ವರ್ಷಗಳವರೆಗೆ ಉತ್ತಮ ಫಸಲನ್ನು ನೀಡುತ್ತವೆ. ಅನಂತರದ ವರ್ಷಗಳಲ್ಲಿ ಫಸಲು ಕಡಿಮೆಯಾಗುತ್ತಾ ಹೋಗುತ್ತದೆ.

ಬೀಜದ ಆಯ್ಕೆ : ರೋಗ ಬಾಧಿಸದೇ ಇರುವ ಹಾಗೂ ಉತ್ತಮ ಫಸಲು ನೀಡುವ ಗಿಡದ ಕಳಿತ ಕೆಂಪು ಹಣ್ಣನ್ನು ಆಯ್ದುಕೊಂಡು, ಒಂದು ರಾತ್ರಿ ಹಣ್ಣುಗಳನ್ನು ನೀರಲ್ಲಿ ನೆನೆ ಹಾಕಬೇಕು. ಬೆಳಗ್ಗೆ ಆ ಹಣ್ಣುಗಳನ್ನು ನೀರಿನಿಂದ ಹೊರತೆಗೆದು ಕೈಯಲ್ಲಿ ಹಿಸುಕಿ ಸಿಪ್ಪೆ ತೆಗೆಯಬೇಕು. ಹಿಸುಕಿದ ಅನಂತರ ಚಿಲುಕಿಸಿದ ಬೇಳೆಯನ್ನು ಬೂದಿಯಲ್ಲಿ ಮಿಶ್ರ ಮಾಡಿ ತಂಪು ಜಾಗದಲ್ಲಿ ಒಣಗಿಸಬೇಕು. ಈ ಬೀಜಗಳು ಉತ್ತಮ ಫಸಲು ನೀಡುವ ಸಸಿಗಳನ್ನು ಬೆಳೆಸಲು ಯೋಗ್ಯವಾಗಿರುತ್ತವೆ.

ಸಾಧಾರಣವಾಗಿ ಫೆಬ್ರವರಿ 10ರ ಅನಂತರ ವಾತಾವರಣದಲ್ಲಿ ತೇವಾಂಶ ಕಡಿಮೆ ಇದ್ದಾಗ ಒಗ್ಗಿನ ಮಡಿ ಸಿದ್ಧಗೊಳಿಸುತ್ತಾರೆ. ಕಾಡು ಮಣ್ಣು ಹಾಗೂ ದನದ ಗೊಬ್ಬರ ಮಿಶ್ರ ಮಾಡಿ ಮಡಿಯಲ್ಲಿ ಅರ್ಧ ಇಂಚು ದೂರಕ್ಕೆ ಬಿತ್ತುತ್ತಾರೆ. ಬಿತ್ತಿದ ಆ ಬೀಜ ಕಾಣದಂತೆ ತೆಳುವಾಗಿ ಕಾಡು ಮಣ್ಣನ್ನು ಹರಡಬೇಕು. ತೇವಾಂಶ ಕಾಪಾಡಲು ಕಾಡು ಮಣ್ಣಿನ ಮೇಲೆ ತೆಳುವಾಗಿ ಒಣ ಹುಲ್ಲನ್ನು ಹರಡಬೇಕು. ಅನಂತರ ಹಸುರು ಚಪ್ಪರ ಹಾಕಿ ಅಥವಾ ಪ್ಲಾಸ್ಟಿಕ್ ಚೀಲಗಳನ್ನು ಮರೆ ಮಾಡಿ ಬಿಸಿಲು ಬೀಳದಂತೆ ಗಿಡಗಳನ್ನು ಕಾಪಾಡಬೇಕು. ದಿವಸಕ್ಕೆ ಒಂದು ಸರತಿ ನೀರು ಸಿಂಪಡಿಸಬೇಕು. ಸುಮಾರು 40 ರಿಂದ 43 ದಿನಕ್ಕೆ ಬೀಜ ಮೊಳಕೆ ಒಡೆಯುತ್ತವೆ. ಅದನ್ನು ಗಮನಿಸಿ ಒಣ ಹುಲ್ಲನ್ನು ತೆಗೆಯಬೇಕು. ಮೊಳಕೆ ಒಡೆದ ಹದಿನೈದು ದಿವಸಕ್ಕೆ ಎಲೆ ಒಡೆಯುತ್ತದೆ. ಎಲೆ ಒಡೆದ ಅನಂತರ ಒಗ್ಗಿನ ಮಡಿಯಿಂದ ಕಿತ್ತು 5 ಇಂಚು ಅಗಲ 9 ಇಂಚು ಎತ್ತರದ ಪಾಲಿಥಿನ್ ಚೀಲಗಳಲ್ಲಿ ಗೊಬ್ಬರ ಹಾಗೂ ಕಾಡುಮಣ್ಣಿನ ಸಮ ಪ್ರಮಾಣದ ಮಿಶ್ರಣ (ಕಾಡು ಮಣ್ಣಿಗೆ ಎಲೆ ಹಾಗೂ ಸೊಪ್ಪುಗಳನ್ನು ಕೊಳೆ ಹಾಕಿರುತ್ತಾರೆ.) ಹಾಕಲಾಗುತ್ತದೆ. ಅವಶ್ಯವಿರುವಷ್ಟು ಪಾಲಿಥಿನ್ ಕವರ್‌ಗಳನ್ನು ಸಿದ್ಧಪಡಿಸಿಕೊಂಡು ಸಸಿಗಳನ್ನು ಅದರೊಳಗೆ ನೆಟ್ಟು ಸಾಲಾಗಿ ಜೋಡಿಸಿ ಪಾತಿ ಕಟ್ಟುತ್ತಾರೆ. ಈ ಕಾಫಿ ನರ್ಸರಿಯನ್ನು ತಮಗೆ ಆವಶ್ಯಕತೆ ಇರುವಷ್ಟು ಅಥವಾ ಕೆಲವೊಮ್ಮೆ ಸಸಿಗಳನ್ನು ಮಾರಾಟ ಮಾಡಲು ಸಿದ್ಧಗೊಳಿಸುವುದಿದೆ. ಈ ಕಾಫಿ ನರ್ಸರಿಯನ್ನು ಕೂಡ ಬಿಸಿಲಿನಿಂದ ರಕ್ಷಿಸಲು ಹಸುರು ಚಪ್ಪರವನ್ನು ಹಾಕುತ್ತಾರೆ. ಮಳೆ ಬರುವವರೆಗೆ ಸಣ್ಣ ತೂತುಗಳಿರುವ ಮಣ್ಣಿನ ಮಡಕೆ (Water Pot)ನ್ನು ಬಳಸಿ ತೆಳುವಾಗಿ ನೀರನ್ನು ಹನಿಸುತ್ತಾರೆ.

ಸೆಪ್ಟೆಂಬರ್ ತಿಂಗಳ ಹೊತ್ತಿಗೆ ಗಿಡಗಳು ತೋಟಕ್ಕೆ ನೆಡುವಷ್ಟು ಬೆಳೆದಿರುತ್ತವೆ. ಅರೇಬಿಕಾ ಅಥವಾ ರೋಬಾಸ್ಟಾ ಯಾವುದೇ ತಳಿಯ ಸಸಿಗಳಾದರೂ ಸಾಮಾನ್ಯವಾಗಿ ಒಂದೇ ರೀತಿಯ ಆರೈಕೆ ಪಡೆಯುತ್ತವೆ. (ಗಿಡ ನೆಡುವ ಅಂತರವನ್ನು ಹೊರತುಪಡಿಸಿ) ಗಿಡ ನೆಡುವ ಸ್ಥಳವನ್ನು ಗುರುತಿಸಿ ಹಿಂದೆಲ್ಲಾ ದಟ್ಟವಾದ ಕಾಡನ್ನು ತೆಳುಗೊಳಿಸಿ (ಕಡಿದು) ಕಾಫಿ ತೋಟವನ್ನು ಸಿದ್ಧಗೊಳಿಸುತ್ತಿದ್ದರು. ಈಗ ದಟ್ಟವಾದ ಕಾಡು ಮರಗಳಿಲ್ಲವಾದರೂ ಸಣ್ಣ - ಪುಟ್ಟ ಪೊದೆ - ಕುರುಚಲು ಗಿಡಗಳನ್ನೇ ಬೆಳೆಸುವುದು ವಾಡಿಕೆಯಲ್ಲಿದೆ. ಕಾಡು ಎಂದೇ (ಗುರುತಿಸುತ್ತಾರೆ) ಬಳಸುತ್ತಾರೆ. ಕಡಿದು, ನೆಲ ಹೆರೆದು, ಗುಂಡಿ ತೋಡಿ ಸಾವಯವ ಗೊಬ್ಬರ (ಹಟ್ಟಿ ಹಾಗೂ ಎಲೆ ಕೊಳೆತ ಕಾಡುಮಣ್ಣು)ವನ್ನು ಮಿಶ್ರ ಮಾಡಿ ಹಾಕುತ್ತಾರೆ. ಅನಂತರ ನೆಲದಿಂದ ಅರ್ಧ ಅಡಿ ಎತ್ತರಕ್ಕೆ ಮಣ್ಣನ್ನು ಎತ್ತರಿಸಿ ಗುಂಡಿಯನ್ನು ಮುಚ್ಚುತ್ತಾರೆ. ಎತ್ತರಿಸದೇ ಹೋದರೆ ನೀರು ಗುಂಡಿಯೊಳಗೆ ಹೋಗುವ ಸಾಧ್ಯತೆಗಳಿರುತ್ತವೆ. ಆಗಸ್ಟ್‌ನಿಂದ ಸೆಪ್ಟೆಂಬರ್ ತಿಂಗಳ ಮಧ್ಯದಲ್ಲಿ ಪಾಲಿಥಿನ್ ಕವರನ್ನು ಒಡೆದು ಗಿಡವನ್ನು ನೆಲದ ಗುಂಡಿಗೆ ವರ್ಗಾಯಿಸಲಾಗುತ್ತದೆ. ಸಿದ್ಧಗೊಳಿಸಿದ ಗುಂಡಿಗಳಲ್ಲಿ ನೆಟ್ಟ ಅನಂತರ ಪುಟ್ಟ ಕಾಫಿ ಸಸಿಗಳನ್ನು ಬಿಸಿಲಿನಿಂದ ರಕ್ಷಿಸಲು ಸಿಲ್ವರ್ ಓಕ್ ಗಿಡಗಳನ್ನು 20 ಅಡಿಗಳ ಅಂತರದಲ್ಲಿ ನೆಡಲಾಗುತ್ತದೆ. ಈಗಾಗಲೇ ಹಳೆಯ ಮರಗಳಿದ್ದರೆ ಅವುಗಳೊಂದಿಗೆ ನಂದಿ, ಗೊಬ್ಬರದ ನೇರಳೆ, ಹತ್ತಿ, ಹಲಸು ಹಾಗೂ ನೇರಳೆ ಇತ್ಯಾದಿ ಮರಗಳು ನೆರಳಿಗಾಗಿ ತೋಟದಲ್ಲಿ ಇರುತ್ತವೆ.

ಪ್ರತಿ 20 ದಿವಸಕ್ಕೆ ಒಮ್ಮೆ 10 ಗ್ರಾಂ ರಸಗೊಬ್ಬರವನ್ನು ಗಿಡದ ಬುಡದಿಂದ ಮುಕ್ಕಾಲು ಅಡಿ ದೂರಕ್ಕೆ ಗಿಡದ ಸುತ್ತ ಹಾಕಬೇಕು. ಮಳೆ ಕಡಿಮೆ ಇದ್ದರೆ ಮರದ ದೊಡ್ಡ ದೊಡ್ಡ ಹಸುರು ಕೊಂಬೆಗಳನ್ನು ಕಡಿದು ತಂದು ಗಿಡದ ಸುತ್ತ ಮುಚ್ಚಬೇಕು. ಇದರಿಂದ ಬಿಸಿಲಿನ ಝಳ ಕಡಿಮೆಯಾಗುತ್ತದೆ. ಮಳೆ ಬಾರದೆ ಹೋದಲ್ಲಿ ನವೆಂಬರ್‌ನಿಂದ ಏಪ್ರಿಲ್ ತಿಂಗಳವರೆಗೆ ತುಂತುರು ನೀರಾವರಿ ಸೌಲಭ್ಯವನ್ನು ಕಲ್ಪಿಸಿ ನೀರನ್ನು ಸಿಂಪಡಿಸಬೇಕು. ಎರಡು ಗಂಟೆಯಂತೆ ವಾರಕ್ಕೊಮ್ಮೆ ನೀರನ್ನು ಹಾಕಬೇಕು. ಹೀಗೆ ಮೂರು ವರ್ಷದ ಸತತ ಪೋಷಣೆಯೊಂದಿಗೆ ಗಿಡ ಫಸಲು ನೀಡಲು ಸಿದ್ಧವಾಗುತ್ತದೆ. ಇಂತಹ ಗಿಡಗಳ ರೆಕ್ಕೆಗಳು (ರೆಂಬೆ) ಎರಡು ಅಡಿ ಅಗಲಕ್ಕೆ ಹರಡಿಕೊಂಡಿರುತ್ತವೆ.

ಗಿಡದ ಬುಡದ ಭಾಗದಿಂದ ಎರಡು ಅಡಿ ಅಗಲ ತೆಳುವಾಗಿ ರಸಗೊಬ್ಬರವನ್ನು ಕಾಫಿ ಗಿಡಗಳಿಗೆ ಮಾನ್ಸೂನ್ ಪೂರ್ವ ಮತ್ತು ಮಧ್ಯೆ ಹಾಕಬೇಕು. ಮಳೆ ಬರುವ ಅಂದಾಜು 8 ರಿಂದ 10 ದಿವಸದ ಹಿಂದೆ ಗೊಬ್ಬರ ಹಾಕಬೇಕು. ಗೊಬ್ಬರ ಹಾಕಿದ 8 ರಿಂದ 10 ದಿವಸದ ಒಳಗೆ ಮಳೆ ಬಂದರೆ ಹಾಕಿದ ಗೊಬ್ಬರ ಮಣ್ಣಿನೊಂದಿಗೆ ಮಿಶ್ರವಾಗಿ ಹರಿದು ಹೋಗುವುದರಿಂದ ಗಿಡಕ್ಕೆ ಪ್ರಯೋಜನವಾಗುವುದಿಲ್ಲ. ಫಸಲಿಗೆ ಸಿದ್ಧವಾಗುವ ಗಿಡವನ್ನು ಮೂರು ಅಡಿಗಿಂತಲೂ ಎತ್ತರ ಬೆಳೆಯಲು ಬಿಡಬಾರದು. ಪ್ರತಿ ಗಿಡದ ಮುಖ್ಯ ಕಾಂಡದಿಂದ ಹೊರ ಬರುವ ಸುಳಿಯನ್ನು ಎತ್ತರಕ್ಕೆ ಹೋಗುವುದಕ್ಕೆ ಬಿಡದೆ ಚಿವುಟಿ ಹಾಕಬೇಕು. ರೆಂಬೆಗಳು ಎತ್ತರ ಹೋದರೆ ಕಾಫಿ ಹಣ್ಣನ್ನು ಕೊಯ್ಯಲು ಕಷ್ಟವಾಗುತ್ತದೆ. ಇದನ್ನೇ ಕಾಫಿ ಕಪಾತು ಎನ್ನುತ್ತಾರೆ. ಒಳ ಭಾಗದಲ್ಲಿ ಇರುವ ಚಿಗುರುಗಳನ್ನು ಕಿತ್ತು ಹಾಕಬೇಕು. ಹೊರ ಭಾಗಕ್ಕೆ ಬಂದಿರುವ ಅಡ್ಡ ಚಿಗುರುಗಳನ್ನು ಮಾತ್ರ ಬೆಳೆಯಲು ಬಿಡಬೇಕು. ಹೀಗಾದಾಗ ಕಾಫಿ ಗಿಡಗಳು ಮಟ್ಟಸವಾಗಿ ಅಗಲವಾಗಿ ಹರಡಿ ನಿಲ್ಲುತ್ತವೆ.

ಹಿಂದೆಲ್ಲಾ ಮಳೆಯನ್ನೇ ಆಶ್ರಯಿಸಿ ಬೆಳೆ ಬೆಳೆಯುತ್ತಿದ್ದರು. ಮಳೆ ಬೀಳುವಿಕೆ ಕಡಿಮೆ ಆಗಿರುವುದರಿಂದ ತೋಡು, ಕೆರೆ, ಹೊಳೆಗಳಿಂದ ತುಂತುರು ನೀರಾವರಿಯನ್ನು ಪೂರೈಸಿಕೊಳ್ಳುತ್ತಾರೆ ಅಥವಾ ತಮ್ಮದೇ ಜಮೀನಿನಲ್ಲಿ ಕೆರೆಯನ್ನು ತೋಡಿ ಉತ್ತಮ ಫಸಲಿಗಾಗಿ ಫೆಬ್ರವರಿ ತಿಂಗಳಲ್ಲಿ ನೀರು ಹಾಯಿಸಲು ಪ್ರಾರಂಭಿಸಬೇಕು. ತುಂತುರು ಕೊಳವೆಯನ್ನು (8ಅಶ್ವಶಕ್ತಿ, 10 ಅಶ್ವಶಕ್ತಿ, 60 ಅಶ್ವಶಕ್ತಿ) ಹೀಗೆ ಬೇರೆ ಬೇರೆ ಅಶ್ವಶಕ್ತಿಯನ್ನು ಬಳಸುತ್ತಾರೆ) ಬಳಸಿ ಒಂದೇ ಸ್ಥಳದಲ್ಲಿ ಸತತವಾಗಿ 4 ಗಂಟೆಗಳ ಕಾಲ ಬಿಡದೆ ನೀರು ಹಾಯಿಸಬೇಕು. ಹೀಗೆ ಹಂತ ಹಂತವಾಗಿ ಇಡೀ ತೋಟಕ್ಕೆ ನೀರಿನ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ನೀರನ್ನು ಹಾಯಿಸಿದ ಒಂಬತ್ತೇ ದಿನಗಳಲ್ಲಿ ಹೂವು ಅರಳಲು ಪ್ರಾರಂಭವಾಗುತ್ತದೆ. ಮೈ ಸುತ್ತ ಹಸುರು ರೆಕ್ಕೆ ಬಿಚ್ಚಿ ನಿಂತ ಗಿಡಗಳ ರೆಂಬೆ ಕೊಂಬೆಗಳನ್ನು, ಗಿಣ್ಣು-ಗಿಣ್ಣುಗಳನ್ನು ಕಚ್ಚಿಕೊಂಡ ಅಚ್ಚ ಬಿಳಿಪಿನ ಕಾಫಿ ಹೂವುಗಳು ಅತ್ಯಂತ ಆಕರ್ಷಕವಾಗಿ ಅರಳಿ ನಿಲ್ಲುತ್ತವೆ. ಕಾಫಿ ಗಿಡದ ಹೂವುಗಳು ಬೀರುವ ಸುಗಂಧ ಮಿಶ್ರಿತ ಸುವಾಸನೆ ಅಮಲೇರಿಸುವಂತಿರುತ್ತದೆ. ಕಟುವಾದ ಸುವಾಸನೆ ಬೀರುವ ಕಾಫಿ ಗಿಡಗಳು ಹೂಗಳು ಅದ್ಭುತ ರಮ್ಯವೆನಿಸುತ್ತದೆ. ಕಾಫಿ ತೋಟಗಳ ಮಾಲೀಕರಲ್ಲಿ ಜೇನು ಕಟ್ಟುವ ಹವ್ಯಾಸವಿದ್ದರೆ ಜೇನು-ಪೆಟ್ಟಿಗೆಗಳನ್ನು ಅಲ್ಲಲ್ಲಿ ಇಟ್ಟು ಜೇನು ಸಂಗ್ರಹಿಸುತ್ತಾರೆ. ಹೂ ಅರಳಿದ ಅನಂತರ ಕಾಯಿ ಕಚ್ಚಬೇಕಾದರೆ 24 ಗಂಟೆ ಮಳೆ ಬೀಳಬಾರದು. ಮಳೆ ಬಿದ್ದರೆ ಫಸಲು ನಾಶವಾಗುತ್ತದೆ. ಸರಿಯಾದ ಫಸಲು ದೊರೆಯಬೇಕಾದರೆ ಮಿಡಿ ಕಚ್ಚಿದ ಅನಂತರವೂ 20 ದಿವಸದವರೆಗೆ ಮಳೆಯಾಗಬಾರದು. ಮಳೆಯಿಂದಾಗಿ ಎಳೆಯ ಮಿಡಿಗಳು ಗಟ್ಟಿಯಾಗದೆ ಕೊಳೆತು ಹೋಗುತ್ತವೆ. 20 ದಿವಸಗಳ ಅನಂತರ ಮಳೆ ಬಂದರೆ ಒಳ್ಳೆಯದು. ಮಳೆ ಬಾರದೆ ಹೋದರೆ ತುಂತುರು ನೀರಾವರಿಯಿಂದ ಬ್ಯಾಕಿಂಗ್ ನೀಡುತ್ತಾರೆ. ಕಾಯಿ ಬೆಳವಣಿಗೆಗೆ ಈ ರೀತಿಯ ನೀರಿನ ಪುನರ್ ನೀಡಿಕೆ ಅತ್ಯವಶ್ಯಕವಾಗಿರುತ್ತದೆ. ಹೀಗೆ ಮಳೆ ಕಾಲ - ಕಾಲಕ್ಕೆ ಸರಿಯಾಗಿ ಬಂದು ಕಾಯಿ ಕಚ್ಚಲು ಅವಕಾಶವಾದರೆ 100ಕ್ಕೆ 100ರಷ್ಟು ಫಸಲು ನಿಲ್ಲುತ್ತದೆ.

ಗಿಡದ ಜೊತೆಗೆ ನೆಟ್ಟ, ನೆರಳು ಗಿಡಗಳು ಸಾಕಷ್ಟು ದೊಡ್ಡವಾಗಿರುತ್ತವೆ. ಸುಮಾರು 40 ಅಡಿಗಳಷ್ಟು ಎತ್ತರವಾಗಿರುತ್ತವೆ. ಸಿಲ್ವರ್, ನಂದಿ, ಗೊಬ್ಬರದ ನೇರಳೆ, ಹತ್ತಿ, ಹಲಸು, ನೇರಳೆ ಇತ್ಯಾದಿ ಮರಗಳ ಕೊಂಬೆ ಅತಿ ಹೆಚ್ಚು ಬೆಳೆದಿರುವುದರಿಂದ ನೆರಳು ಹೆಚ್ಚಾಗಿರುತ್ತದೆ. ಆದ್ದರಿಂದ ಮೇ ತಿಂಗಳಲ್ಲಿ ಮರ ಕಪಾತು ಮಾಡಬೇಕು. ಹೆಚ್ಚುವರಿ ಕೊಂಬೆಗಳನ್ನು ಕತ್ತರಿಸಿ ಕಾಫಿ ಗಿಡಗಳಿಗೆ ಬಿಸಿಲು ಹಾಗೂ ನೆರಳು ಸಮ ಪ್ರಮಾಣವಾಗಿ ಬೀಳುವಂತೆ ಮಾಡಬೇಕು. ಇನ್ನು ಪೂರ್ವ ಮುಂಗಾರಿನ ಗೊಬ್ಬರ ನೀಡುವಿಕೆಯತ್ತ ಮನಸ್ಸು ಹರಿಸುತ್ತಾರೆ. ಜೂನ್ ತಿಂಗಳ ಮೊದಲ ವಾರದಲ್ಲಿ ಮಳೆ ಆದ ಅನಂತರ, ಸರಿಪಡಿಸಿ ಗಿಡಕ್ಕೆ ಗೊಬ್ಬರ ಹಾಕಬೇಕು. ಗಿಡದ ಸುತ್ತ ಸುಮಾರು (10 ರಿಂದ 15 ಇಂಚು) ಎರಡು ಅಡಿ ಸುತ್ತಳತೆಯಲ್ಲಿ ಬುಡವನ್ನ ಬಿಡಿಸಿ, ಕಸ-ಕಡ್ಡಿ-ಹುಲ್ಲು ತರಗುಗಳನ್ನೆಲ್ಲಾ ತೆಗೆದು ಅನಂತರ ಗೊಬ್ಬರ ಹಾಕಬೇಕು. M.O.P., ಸಾರಜನಕ, ಪೊಟ್ಯಾಷ್, ರಂಜಕಗಳನ್ನು 15 : 15 : 15 : 15 ಅಥವಾ 17 : 17 : 17 : 17ರ ಸಮ ಪ್ರಮಾಣದಲ್ಲಿ ಹಾಕಲಾಗುತ್ತದೆ. ಗೊಬ್ಬರ ಹಾಕಿದ ಕೆಲವೇ ದಿವಸಗಳಲ್ಲಿ ಮಳೆ ಆಗದೇ ಹೋದರೆ ತೇವಾಂಶ ಕಾಪಾಡುವುದಕ್ಕೆ ತರಗೆಲೆಗಳನ್ನು ಮುಚ್ಚುತ್ತಾರೆ.

ಸೆಪ್ಟೆಂಬರ್ ತಿಂಗಳಿಗಾಗಲೇ ಕಾಫಿ ಗಿಡದಡಿಯಲ್ಲಿ ಕಳೆ-ಗಿಡ ಬೆಳೆದಿರುತ್ತದೆ. ಕಳೆಯನ್ನು ದಬ್ಬೆ ಕತ್ತಿಯಿಂದ ಶುಚಿಗೊಳಿಸುವ 'ಕಚಡಾ' ಕೆಲಸ ಆರಂಭವಾಗುತ್ತದೆ. ಅನಂತರ ಮತ್ತೊಮ್ಮೆ ರಸಗೊಬ್ಬರದ ಪೂರೈಕೆ ಆಗಬೇಕು. ಕೊಳೆ ರೋಗ ಬಂದು ಕಾಯಿ ಉದುರುವ ಸಾಧ್ಯತೆ ಇರುವುದರಿಂದ ಶಿಲೀಂಧ್ರ ನಾಶಕ ಶೇ. ಒಂದರಷ್ಟು ಬೋರ್ಡೋ ಮಿಶ್ರಣವನ್ನು ಹಾಕಬೇಕು.

ಅಕ್ಟೋಬರ್ ತಿಂಗಳ ಕೊನೆ ಅಥವಾ ನವೆಂಬರ್ ತಿಂಗಳ ಮೊದಲ ವಾರದಲ್ಲಿ ಹೆರತೆ ಮಾಡಬೇಕು. ಗಿಡದ ಕೆಳಭಾಗವನ್ನು ತರಗು (ಒಣಗಿದ ಎಲೆ) ಕಡ್ಡಿ ಕಸ ಯಾವುದೂ ಇಲ್ಲದಂತೆ ಸ್ವಚ್ಛಗೊಳಿಸಬೇಕು. ಫಸಲಿಗೆ ಬಂದ ಅನಂತರ ಅಕಸ್ಮಾತ್ ಹಣ್ಣು ಕೆಳಕ್ಕೆ ಬಿದ್ದರೆ ಹೆಕ್ಕುವುದಕ್ಕೆ ಸುಲಭವಾಗಲಿ ಎನ್ನುವುದು ಈ 'ಹೆರತೆ'ಯ ಉದ್ದೇಶವಾಗಿದೆ. ನವೆಂಬರ್ ಮೊದಲ ವಾರದಲ್ಲಿ ಹೆರತ ಮುಗಿಸುವ ಹೊತ್ತಿಗಾಗಲೇ ಕಾಫಿ ಫಸಲು ಕೊಯ್ಲಿಗೆ ಸಿದ್ಧವಾಗುತ್ತದೆ. ಗಿಡದ ಕೆಳಗೆ ಪ್ಲಾಸ್ಟಿಕ್ ಚೀಲಗಳನ್ನು ಅಥವಾ ಗೋಣಿ ತಾಟುಗಳನ್ನು ಹರಡಿ ಗಿಡದಿಂದ ಕೆಂಪಗಿನ ಕಾಫಿ ಹಣ್ಣನ್ನು ಬಿಡಿಸುವ ಕೆಲಸ ಆರಂಭವಾಗುತ್ತದೆ. ರೆಂಬೆಗೆ ಹಾನಿಯಾಗದ ಹಾಗೆ ಹಣ್ಣನ್ನು ಬಿಡಿಸಲಾಗುತ್ತದೆ.

ಸೌಲಭ್ಯವಿರುವವರು ಯಂತ್ರಗಳ ಸಹಾಯದಿಂದ ಹಣ್ಣಿನ ಸಿಪ್ಪೆ ಸುಲಿದು ಒಣಗಿಸಿ ಮಾರುಕಟ್ಟೆಗೆ ಸಿದ್ಧಪಡಿಸುತ್ತಾರೆ. ಇದನ್ನು

ಪಾರ್ಚ್‌ಮೆಂಟ್ ಎನ್ನುತ್ತಾರೆ. ಒಂದು ಚೀಲ ಪಾರ್ಚ್‌ಮೆಂಟ್ ಕಾಫಿಗೆ (ಬೆರ್ರಿಗೆ) 11ಸಾವಿರದಿಂದ 12 ಸಾವಿರ ರೂ.ಗಳಿವೆ. ಉಳಿದಂತೆ ದೊಡ್ಡ ಸಿಮೆಂಟ್ ಕಣದಲ್ಲಿ ಕಾಫಿಯನ್ನು 7 ರಿಂದ 8 ದಿವಸ ಬಿಸಿಲಿನಲ್ಲಿ ಒಣಗಿಸಬೇಕು. ಒಣ ಹಾಕಿದ ಪ್ರಾರಂಭದ ದಿನದಿಂದಲೇ ಮಧ್ಯಾಹ್ನದ ಒಳಗೆ ಹಾಗೂ ಮಧ್ಯಾಹ್ನದ ಅನಂತರ ಎರಡೆರಡು ಸಲ ಕಾಲಾಡಿಸಬೇಕು. ಕಾಲಾಡಿಸುವುದರಿಂದ ಬಿಸಿಲಿನಲ್ಲಿ ಒಣಗಿದ ಮೇಲ್ಭಾಗದ ಕಾಫಿ ಹಣ್ಣಗಳು



ಕೆಳಭಾಗಕ್ಕೆ ಕೆಳಗಿನ ಹಣ್ಣುಗಳು ಮೇಲ್ಭಾಗಕ್ಕೆ ಬರುತ್ತವೆ. ಹೀಗೆ ಸಿಪ್ಪೆ ಸಹಿತವಾದ ಕಾಫಿ ಮಾರುಕಟ್ಟೆಗೆ ಸಿದ್ಧವಾಗುತ್ತದೆ. ಇದು ಚೆರ್ರಿ ಎಂದು ಕರೆಸಿಕೊಳ್ಳುತ್ತದೆ. ಇಂತಹ ಕಾಫಿಗೆ ಚೀಲಕ್ಕೆ 4 ರಿಂದ 5 ಸಾವಿರ ರೂ. ಸಿಗುತ್ತದೆ.

ಹಿಂದೆ ಕಾಫಿಯನ್ನು ಮಾರಾಟ ಮಾಡಲು ಕಾಫಿ ಬೋರ್ಡುಗಳಿದ್ದವು. ಪ್ರತಿಯೊಬ್ಬ ಕಾಫಿ ಬೆಳೆಗಾರನೂ ಪರವಾನಗಿ ಪಡೆದು ಕಾಫಿ ಬೋರ್ಡಿಗೆ ಮಾರಾಟ ಮಾಡಬೇಕಾಗಿತ್ತು. ಸುಮಾರು ರೂಪಾಯಿ 300 ನ್ನು ಒಂದು ಮೂಟೆ ಕಾಫಿಗೆ ಪಡೆಯುವ ದುರ್ದೆಸೆ ಇತ್ತು. ಮುಂದೆ ಕಾಫಿ ಬೋರ್ಡ್‌ನ ಕಪಿ ಮುಷ್ಟಿಯಿಂದ ಬಿಡಿಸಿಕೊಂಡ ಕಾಫಿ ಬೆಳೆಗಾರರು ಇದೀಗ ಉತ್ತಮ ಹಣವನ್ನು ಪಡೆಯುತ್ತಿದ್ದಾರೆ.

ಕಾಫಿಯನ್ನು 'ಬೂಷಲ್'ನಿಂದ ಲೆಕ್ಕ ಹಾಕುತ್ತಾರೆ. ಒಂದು ಬೂಷಲ್ ಎಂದರೆ 2 ಟನ್ ಕಾಫಿ (ಬಿಸ್ಕಟ್ ಟಿನ್) ಒಂದು ಬೇಲ ಕಾಫಿ ಎಂದರೆ ಮೂರು ಬೂಷಲ್ ಇರುತ್ತದೆ.

ಪರಿಕರಗಳು

ದಬ್ಬೆಕತ್ತಿ - ಎರಡು ಅಡಿ ಉದ್ದ ಇರುತ್ತದೆ. ಕಚಡಾ ಕಡಿಯುವುದಕ್ಕೆ ಬಳಸಲಾಗುತ್ತದೆ.

ಮೊಂಡು ಕತ್ತಿ - ಕೊಕ್ಕೆಯಾಕಾರದಲ್ಲಿರುತ್ತದೆ. ಮರ ಕಪಾತಿಗೆ ಅಥವಾ ದೊಡ್ಡ ಕೊಂಬೆ ಕತ್ತರಿಸಲು ಬಳಸುತ್ತಾರೆ.

ಕೊಕ್ಕೆ ಕತ್ತಿ - ಒಂದೂವರೆ ಅಡಿ ಉದ್ದ ಇರುತ್ತದೆ. ಸಣ್ಣಗಿಡ ಕಪಾತಿಗೆ ಬಳಸುತ್ತಾರೆ.

ಕೋಲು ಕತ್ತಿ - ಎರಡೂವರೆ ಅಡಿ ಉದ್ದದ ಕತ್ತಿ - ಕಚಡಾ ಕಳೆಯಲು ಬಳಸುತ್ತಾರೆ.

ಹಾರೆ - ಎರಡು ಅಡಿ ಆಳಕ್ಕೆ ಹಾಕಿ ಗುಂಡಿ ತೆಗೆಯಲು ಬಳಸುತ್ತಾರೆ.

ಗುದ್ದಲಿ - ಹರತೆಗೂ ಗುಂಡಿ ತೆಗೆಯಲೂ ಬಳಸುತ್ತಾರೆ.

ಕೆ.ಕೆ.ಜಿ.

ಕಾಳು ಸಂಸ್ಕರಣೆಯ ಸಲಕರಣೆಗಳು ಗುಂಡುಕಲ್ಲು, ಮೇಟಿ, ಮೇಟಿಕೋಲು, ಜಂತು ಕುಂಟೆ, ಮಂಚಿಗೆ ಮೊರ, ತೂರುವತಟ್ಟಿ, ಜರಡಿ, ಒನಕೆ, ಬೀಸುಕಲ್ಲು ಮುಂತಾದವು ಕಾಳು ಸಂಸ್ಕರಣೆಗೆ ಬಳಸುವ ಸಾಧನಗಳು.

ಗುಂಡು / ಗುಂಡು ಕಲ್ಲು / ರೋಣು ಕಲ್ಲು : ಇದು ತೆನೆಯಿಂದ ಕಾಳನ್ನು ಬೇರ್ಪಡಿಸಲು ಬಳಸುವ ಮುಖ್ಯ ಸಾಧನ. ಬಯಲು ಸೀಮೆಯಲ್ಲಿ ಇದನ್ನು ಗುಂಡು ಎಂದೂ ಮೈಸೂರು ಪ್ರಾಂತ್ಯದಲ್ಲಿ ರೋಣಕಲ್ಲು ಎಂದು ಗದಗ ಭಾಗದಲ್ಲಿ ಕಪ್ಪು ರೋಣಗಲ್ಲು ಎಂದೂ ಕರೆಯುತ್ತಾರೆ.

ತುಂಬ ಭಾರದ ರೋಣುಗಲ್ಲನ್ನು ಜೋಡಿ ಎತ್ತುಗಳ ಮೂಲಕ ತುಳಿಸುತ್ತಾರೆ. ಕಣದಲ್ಲಿ ತೆನೆಯನ್ನು ಹರಡಿ, ಗುಂಡು ಹೊಡೆಯುವವನು ಪ್ರತಿ ತೆನೆಯು ಗುಂಡಿಗೆ ಸಿಗುವಂತೆ ಮಾಡಲು ವೃತ್ತಾಕಾರವಾಗಿ ಹೊರ ಭಾಗದಿಂದ ಒಳಗೆ ಬರುವಂತೆ ಸುರಳಿಯಾಕಾರದಲ್ಲಿ ಗುಂಡನ್ನು ಕಟ್ಟಿದ ಎತ್ತುಗಳನ್ನು ಓಡಿಸುತ್ತಾನೆ.

ರೋಣುಕಲ್ಲಿನ ಸ್ವರೂಪ : ಆಯತಾಕಾರದ ಸುಮಾರು ಎರಡು ಅಡಿ ಎತ್ತರ ನಾಲ್ಕು ಅಡಿ ಉದ್ದದ ಕಲ್ಲನ್ನು ಕಲ್ಲು ಕುಟಿಕರಿಂದ ತಮಗೆ ಅನುಕೂಲವಾಗುವ ರೀತಿಯಲ್ಲಿ ಕಂಡರಿಸಿಕೊಳ್ಳುತ್ತಾರೆ. ಒಮ್ಮೆ ಹೀಗೆ ಸಿದ್ಧಮಾಡಿಸಿಕೊಂಡ ಗುಂಡು ಅನೇಕ ತಲೆಮಾರುಗಳವರೆಗೂ ಇರುತ್ತದೆ. ರೋಣುಕಲ್ಲಿನ ಎರಡು ಬದಿಗಳಲ್ಲಿ ಒಂದೇ ಅಳತೆಯ ಎರಡು ರಂಧ್ರಗಳಿರುತ್ತವೆ. ರಂಧ್ರಗಳಿಗೆ ದಪ್ಪ ಮೊಳೆಗಳನ್ನು (ಕಬ್ಬಿಣದ ಅಚ್ಚು) ಗಟ್ಟಿಯಾಗಿ ಕೂರಿಸುತ್ತಾರೆ. ಮೊಳೆಗಳಿಗೆ ಗುಂಡು ತಿರುಗಲು ಅನುಕೂಲವಾಗುವಂತೆ ಸ್ವಲ್ಪ ಜಾಗವನ್ನು ಬಿಟ್ಟು ಮರ ಅಥವಾ ಕಬ್ಬಿಣದ ಪಟ್ಟಿಯನ್ನು ಕೂರಿಸುತ್ತಾರೆ. ಗುಂಡಿನ ಮುಂಭಾಗದ ಪಟ್ಟಿಗೆ ಇರುವ ರಂಧ್ರಕ್ಕೆ 'ಮೂಕು' ಮರ ಜೋಡಿಸಿ ನೊಗವನ್ನು ಹೂಡಿ ಎತ್ತನ್ನು ಕಟ್ಟುತ್ತಾರೆ. ರೋಣುಕಲ್ಲು ಒಂದು ಕ್ರಮದಲ್ಲಿ ಸುತ್ತಲು ವ್ಯಕ್ತಿ ಎತ್ತುಗಳನ್ನು ಹಗ್ಗದ ಸಹಾಯದಿಂದ ನಿಯಂತ್ರಣದಲ್ಲಿ ಓಡಿಸುತ್ತಾನೆ. ಕೆಲವು ರೈತರು ಗುಂಡಿನ ಮೇಲೆ ಇರುವ ಪಟ್ಟಿಯ ಮೇಲೆ ಕುಳಿತು ಕೊಂಡು ಚಾಲಕನಂತೆ ಕೆಲಸ ಮಾಡುತ್ತಾರೆ. ರೋಣುಕಲ್ಲು ಬಳಸಿದಂತೆ ಸವಿದು ಹೋಗುವುದರಿಂದ ತೆನೆಯ ಮೇಲೆ ಜಾರಿದಂತಾಗುತ್ತದೆ. ಆದ್ದರಿಂದ ಗುಂಡನ್ನು ಕಲ್ಲು ಕುಟಿಕರಿಂದ ಆಗಾಗ ಕೊತ್ತನೆ ಮಾಡಿಸಬೇಕು. ಪ್ರತಿವರ್ಷ ಕಲ್ಲು ಕುಟಿಕರು ಸುಗ್ಗಿಯ ಕಾಲದಲ್ಲಿ ಈ ಕೆಲಸಕ್ಕೆಂದೇ ಊರು ಊರು ಸುತ್ತುತ್ತಿರುತ್ತಾರೆ.

ಗುಂಡು ಕಲ್ಲಿನಲ್ಲಿಯೂ ಸಣ್ಣದು ದಪ್ಪದು ಇದ್ದು ತೆನೆಯ ಪ್ರಮಾಣ, ಮತ್ತು ಕಣದ ಸುತ್ತಳತೆಗೆ ತಕ್ಕಂತೆ ಗುಂಡನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಊರಿನ ವಿಸ್ತಾರಕ್ಕೆ ಅನುಗುಣವಾಗಿ ಹತ್ತರಿಂದ ಇಪ್ಪತ್ತರವರೆಗೂ ಗುಂಡುಗಳಿದ್ದು, ಪರಸ್ಪರ ರೈತರು ಹೊಂದಾಣಿಕೆ ಮಾಡಿಕೊಂಡು ಉಪಯೋಗಿಸುತ್ತಾರೆ.

ಗುಂಡುಕಲ್ಲು / ರೋಣುಕಲ್ಲಿನ ಉಪಯೋಗ ತುಂಬಾ ಹಳೆಯದಾದರೂ ರೋಣುಕಲ್ಲಿನ ಸಹಾಯವಿಲ್ಲದೆ ಕೇವಲ ದನಗಳ ಸಹಾಯದಿಂದಲೇ ತೆನೆಯನ್ನು ತುಳಸಿ ಕಾಳನ್ನು ಬೇರ್ಪಡಿಸುವ ವಿಧಾನವೂ ಬಹಳ ಕಾಲದಿಂದ ಬಳಕೆಯಲ್ಲಿದೆ. ಗುಂಡು ಕಲ್ಲಿನ ಬದಲು ಮೂರು ನಾಲ್ಕು ಜೊತೆ ದನಗಳನ್ನು ಸಾಲಾಗಿನಿಲ್ಲಿಸಿ ಕೊರಳಿನ ಹಗ್ಗಕ್ಕೆ

ಒಂದಕ್ಕೊಂದು ಪೋಣಿಸಿದಂತೆ ಹಗ್ಗ ಬಿಗಿದು ಮುಂಜಾನೆ ಕೋಳಿ ಕೂಗುವ ಸಮಯಕ್ಕೆಲ್ಲಾ ಅಥವಾ ಸಂಜೆ ತಂಪು ಹೊತ್ತಿನಲ್ಲಿ ತೆನೆ ತುಳಿಸುತ್ತಾರೆ. ಹೀಗೆ ದನಗಳನ್ನು ಕಣದಲ್ಲಿ ತೆನೆಯ ಮೇಲೆ ಓಡಿಸುವುದಕ್ಕೆ 'ಹಂತಿ' ಹೊಡೆಯುವುದು ಅಥವಾ 'ಬಂತಿ' ಹೊಡೆಯುವುದು ಎಂದು ಕರೆಯುವರು.

ರಾಗಿ, ಬತ್ತ, ಸಾಮೆ 'ಸಾವೆ', ಸಜ್ಜೆ, ಆರ್ಕ ಜೋಳ ಮೊದಲದವನ್ನು ತುಳಿಸಲು ಗುಂಡು ಅಥವಾ 'ಹಂತಿ' ತುಂಬಾ ಉಪಯೋಗವಾಗುತ್ತದೆ. ಆದರೆ ಇತ್ತೀಚೆಗೆ ಒಂದು ಕೆಟ್ಟ ಸಂಪ್ರದಾಯವನ್ನು ಸೋಮಾರಿ ರೈತರು ಕಂಡು ಕೊಂಡಿದ್ದಾರೆ. ಊರಿನ ಮುಂದೆ ಬಸ್ ರೋಡ್‌ನಲ್ಲಿ ರಸ್ತೆ ಉದ್ದಕ್ಕೂ ಹರಡಿ, ವಾಹನಗಳ ಚಕ್ರದಿಂದ ಕಾಳನ್ನು ಬೇರ್ಪಡಿಸುವಂತೆ ಮಾಡುವುದು. ಇದರಿಂದ ಶುದ್ಧವಾದ ಕಾಳನ್ನು ಪಡೆಯಲು ಸಾಧ್ಯವಿಲ್ಲ. ಮಣ್ಣು ಧೂಳು ಹೆಚ್ಚಾಗಿ ಬೆರೆಯುತ್ತದೆ. ವಾಹನ ಚಕ್ರ ಕೆಲವೊಮ್ಮೆ ಜಾರಿದಂತಾಗಿ ಅಪಘಾತಗಳು ಸಂಭವಿಸುವುದುಂಟು. ಇದು ಉತ್ತಮ ಪದ್ಧತಿಯಲ್ಲ. ಕಾಳನ್ನು ತೂರಲು ರಾಶಿ ಹಾಕಲು ಮಣ್ಣು ಇಲ್ಲದಂತೆ ನೋಡಿಕೊಳ್ಳಲು ಕಣ ನಿರ್ಮಾಣವೇ ಉತ್ತಮ ವಿಧಾನ. ಕೆಲವು ಊರುಗಳಲ್ಲಿ ಹಗಲವಾದ ಸಮತಟ್ಟಾದ ಬಂಡೆಗಳಿದ್ದು ಕಣದ ಕೆಲಸಕ್ಕೆ ತುಂಬಾ ಉಪಯುಕ್ತವಾಗಿರುವುದನ್ನು ಗಮನಿಸಬಹುದು.

ಮೇಟಿ : ಕಣದ ಮಧ್ಯೆ ಗಟ್ಟಿ ಮುಟ್ಟಾದ ಮರದ ತುಂಡೊಂದನ್ನು ನೆಟ್ಟು ಎತ್ತುಗಳು ಗುಂಡು ಕಲ್ಲನ್ನು ಇಷ್ಟ ಬಂದಂತೆ ಎಳೆದುಕೊಂಡು ಹೋಗಲು ಸಾಧ್ಯವಾಗದಂತೆ ನಿಯಂತ್ರಣ ಮಾಡಲು ಬಳಸಿರುವ ಕಂಬವೇ ಮೇಟಿ. ಇದನ್ನು ಒಳ್ಳೆಯ ಜಾತಿ ಮರದಿಂದ ಮಾಡಿರುತ್ತಾರೆ. ರೈತನ ಮಿತ್ರನಂತೆ ಕೆಲಸ ಮಾಡುವ ನಿಯಂತ್ರಣ ಕಂಬವನ್ನು ಪವಿತ್ರವೆಂದು ಭಾವಿಸಿ ಪೂಜಿಸುತ್ತಾರೆ.

ಮೇಟಿಕೋಲು ಅಥವಾ ಮುಳ್ಳು ಕೋಲು : ಎತ್ತುಗಳು ತೆನೆಯನ್ನು ತಿಳಿಯುತ್ತಿರುವಾಗ ಮೇಲೆ ಬಂದ ಹುಲ್ಲನ್ನು ಈ ಕೋಲಿನ ಸಾಹಯಿಂದ ತೆಗೆಯಲು ಮತ್ತು ತೆನೆಯನ್ನು ಕೆದಕಿ ಮೇಲೆ ಬರುವಂತೆ ಮಾಡಿ ಗುಂಡಿಗೆ ಸಿಕ್ಕುವಂತೆ ನೋಡಿಕೊಳ್ಳಲು ಈ ಕೋಲಿನ ಸಹಾಯಬೇಕು. ದನಗಳು ಅಥವಾ ರೋಣು ಕಲ್ಲು ಒಂದೇ ಸಮನೆ ಸುತ್ತುತ್ತಿರುವಾಗ ತೆನೆಗಳು ಗುಂಡಿಗೆ ಸಿಗದೆ ಮೇಲೆ ಬಂದ ಹುಲ್ಲಿನ ಮೇಲೆ ಗುಂಡ ಓಡಿದರೆ



ಪ್ರಯೋಜನವಾಗದು; ಆದ್ದರಿಂದ ರೈತ ಪ್ರತಿ ಅರ್ಧಗಂಟೆಗೊಮ್ಮೆ ಗುಂಡಿನ ಹಿಂದೆ ಓಡಾಡುತ್ತ ತೆನೆಯನ್ನು ತಲೆಕೆಳಗು ಮಾಡಲು ಮುಳ್ಳು ಕೋಲನ್ನು ಉಪಯೋಗಿಸುತ್ತಾನೆ.

ಜಂತು ಕುಂಟೆ : ಇದು ಎಲ್ಲಾ ಪ್ರದೇಶಗಳಲ್ಲಿ ಬಳಕೆಯಲ್ಲಿಲ್ಲ. ಕೇವಲ ಕೈಗಳಿಂದಲೇ ರೈತ ಕಣದಲ್ಲಿ ತೆನೆ ತುಳಿಸಿದ ಮೇಲೆ ಹುಲ್ಲನ್ನು ಬೇರ್ಪಡಿಸಿ, ಉಳಿದ ಕಂಕನ್ನು ಮತ್ತೆ ಗುಂಡಿಗೆ ಸಿಗುವಂತೆ ಮಾಡುವುದೇ ಅನೇಕ ಕಡೆ ಚಾಲ್ತಿಯಲ್ಲಿರುವ ಪದ್ಧತಿ. ಜಂತು ಕುಂಟೆಗೆ ಬದಲಾಗಿ ಬಳಸುವ ಪರ್ಯಾಯ ಸಾಧನ. ಇದಕ್ಕೆ ನಾಲ್ಕು ಹಲ್ಲುಗಳಿದ್ದು ಚಿಕ್ಕದಾಗಿರುತ್ತದೆ. ತೆನೆ ಹಾಸಿ ತುಳಸಿಯಾದ ಮೇಲೆ ಕಾಳುಗಳನ್ನು ಉದುರಿಸಿ ತೆನೆಯನ್ನು ಒಟ್ಟು ಮಾಡಲು ಜಂತಿಯನ್ನು ಬಳಸುತ್ತಾರೆ. ತೆನೆಯಲ್ಲಿ ಉಳದಿರಬಹುದಾದ ಕಾಳುಗಳನ್ನು ಮತ್ತೆ ತುಳಿಸಲು ಇದರಿಂದ ಪ್ರಯೋಜನವಾಗುತ್ತದೆ. ತೆನೆಯನ್ನು ತುಳಿಸಿದ ಮೇಲೆ ಹುಲ್ಲನ್ನು ತೆಗೆದು ಕಾಳುಗಳನ್ನು ರಾಶಿ ಮಾಡಲು ಕೆಲವು ಪ್ರದೇಶಗಳಲ್ಲಿ ಪೊರಕೆ ಬಂದು ರಾಶಿ ಕುಂಟೆಯನ್ನು ಬಳಸುತ್ತಾರೆ. ಇದು ಜಂತುಕುಂಟೆಯಂತೆಯೇ ಇರುತ್ತದೆ. ಇದರ ಉಪಯೋಗ ಎಲ್ಲ ಕಡೆ ಇಲ್ಲ. ಪೊರಕೆಯುಷ್ಟು ಉತ್ತಮವಾಗಿ ಇದು ಕೆಲಸ ಮಾಡಲಾರದು.

ಮಂಚಿಕೆ ಅಥವಾ ಮೂರು ಕಾಲಿನ ಮೆಟ್ಟು : ಕಾಳುಗಳನ್ನು ಗಾಬಿನಿಂದ ಶುದ್ಧ ಮಾಡಲು ತೂರಬೇಕು. ಗಾಳಿಯಿಲ್ಲದ ಜಾಗದಲ್ಲಿ



ಕಾಳನ್ನು ತೂರಲು ಈ ಮಂಚಿಗೆಯನ್ನು ಉಪಯೋಗಿಸುತ್ತಾರೆ. ಇದು ಸಹ ಎಲ್ಲ ಕಡೆ ಬಳಕೆಯಲ್ಲಿಲ್ಲ. ಐದರಿಂದ ಆರು ಅಡಿ ಎತ್ತರದ ಮರದಿಂದ ಮಾಡಿಕೊಂಡ ಮಂಚಿಗೆ ಇದು. ಇದರ ಮೇಲೆ ನಿಂತು ಗಾಳಿ ಬೀಸುವ ದಿಕ್ಕಿಗೆ ವಿರುದ್ಧವಾಗಿ ಮರದ ಸಹಾಯದಿಂದ ತೂರಿದರೆ (ಗಾಬು) ಸುಂಕು ಗಾಳಿಗೆ ಹಾರಿ ಹೋಗಿ ಶುದ್ಧ ಕಾಳು ಮಾತ್ರ ಉಳಿಯುತ್ತದೆ.

ಮೊರ: ಕೃಷಿಕರಿಗೂ ಗೃಹೋಪಯೋಗಕ್ಕೂ ಮೊರ ಅಗತ್ಯವಾದ ಒಂದು ಸಾಮಗ್ರಿಯಾಗಿದೆ. ದವಸ ಧಾನ್ಯಗಳನ್ನು ಸ್ವಚ್ಛ ಮಾಡಲು ಇದನ್ನು ಬಳಸುತ್ತಾರೆ. ಕೇರಲು, ತೂರಲು, ಸುರಿಯಲು, ಒನೆಯಲು (ಸ್ವಚ್ಛ) ಮಾಡಲು, ತುಂಬಲು ಮೊರದ ಅಗತ್ಯವಿದೆ. ನೆಲ್ಲುಲ್ಲಿನ ಮೊರ, (ಒಣಗಿದ ಬತ್ತದ ಹುಲ್ಲು), ತೆಂಗಿನ ಗರಿ ಮೊರ (ಮಟ್ಟೆ ಗರಿ), ನೀರಿನಿಂದ ನೆನೆಸಿದ ಬಿದಿರಿನಿಂದ ಹೆಣೆಯುವ ಮೊರ, ತಗಡಿನ ಮೊರ, ಪ್ಲಾಸ್ಟಿಕ್ ಮೊರಗಳು ಕಾಣಬರುತ್ತವೆ. ಈ ಮೊರಗಳಲ್ಲಿ ಚಿಕ್ಕ ಮೊರ, ದೊಡ್ಡ ಮೊರಗಳಿವೆ. ಆದರೆ, ಆಕೃತಿ ಮಾತ್ರ ಒಂದೇ ತೆರನಾಗಿರುತ್ತದೆ.

ಚಚ್ಚೌಕಾರದ ರೂಪದಲ್ಲಿ ಈ ಮೊರದ ಆಕೃತಿ ಕಂಡು ಬಂದರೂ, ಇದು ಸಮತಟ್ಟಾಗಿರುವುದಿಲ್ಲ. ಮೊರದ ಹಿಂಬದಿಯ ಭಾಗ ಎರಡು ಇಂಚು ಉದ್ದ ಹಾಗೂ ಎತ್ತರದಿಂದ ಕೂಡಿದ್ದು ಎಡ ಮತ್ತು ಬಲ ಭಾಗದ ಮೂಲೆಯ

ಭಾಗವು ಕುಪ್ಪೆಯಂತೆ ಕಾಣುತ್ತದೆ. ಆ ಎರಡು ಬದಿಯ ಮುಂಬದಿಯ ಭಾಗವು ಗಟ್ಟಿಯಾದ ಕಡ್ಡಿಯ ತಡಿಕೆಯಿಂದ ಅಗಲವಾಗಿ ಇಳಿಜಾರಂತೆ ಚೂಪಾಗಿರುತ್ತದೆ. ಈ ಆಕೃತಿ ದವಸ ಧಾನ್ಯಗಳಲ್ಲಿನ ಕಸ ಕಡ್ಡಿ ತೆಗೆಯಲು ಹಾಗೂ ವಸ್ತುಗಳನ್ನು ಮುಚ್ಚಿಡಲು ಸಹಾಯಕ.



ಬಿದಿರಿನ ಮೊರ ಜನಪದರ ಆಚರಣೆಗಳಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿದೆ. ಹೊಸ ಮೊರದಲ್ಲಿ ಕುಪ್ಪಸ, ಫಲ ತಾಂಬೂಲ, ಬಳೆ, ಅರಿಸಿನ ಕುಂಕುಮ, ಕರಿಮಣಿ ಬಿಚ್ಚೋಲೆ ಇಟ್ಟು ಮೈ ನೆರೆಯದ ಮಕ್ಕಳು, ಮದುವೆಯಾಗದ ಕನ್ಯೆಯರಿಗೆ ಕೊಟ್ಟರೆ ದೇವಿಯನ್ನು ಸಂತೃಪ್ತಿ ಪಡಿಸಿದಂತೆಯೂ ಹಾಗೂ ಇವುಗಳನ್ನೆಲ್ಲಾ ಮೊರದಲ್ಲಿಟ್ಟು ದಾನ ಮಾಡಿದರೆ ಆಯಸ್ಸು, ಸಂಪತ್ತು ಮಾಂಗಲ್ಯ ಭಾಗ್ಯ ಗಟ್ಟಿಯಾಗುತ್ತದೆಂಬ ನಂಬಿಕೆ ಹೆಣ್ಣು ಮಕ್ಕಳಿನ ಶಾಸ್ತ್ರೋಕ್ತ ಪದ್ಧತಿಗಳಲ್ಲಿವೆ.

ಮದುವೆ ಸಂಪ್ರದಾಯಗಳಲ್ಲೂ ಮೊರಕ್ಕೆ ವಿಶೇಷ ಸ್ಥಾನವಿದೆ. ಧಾರಾಮುಹೂರ್ತ ದಿನದಂದು ಹೆಣ್ಣನ್ನು ಧಾರೆಗೆ ಕರೆಯುವ ಸಂದರ್ಭದಲ್ಲಿ ಹೆಣ್ಣಿಗೆ ಗಂಡಿನ ಮನೆಯವರು ಕೊಡುವ ತಾಳಿ (ಮಾಂಗಲ್ಯ), ಕಾಲುಂಗುರ, ಜರಿಸೀರೆ, ಗಂಧ ಹಾಗೂ ಇತರ ಹೆಣ್ಣಿನ ಅಲಂಕಾರದ ವಸ್ತುಗಳನ್ನೆಲ್ಲಾ ಹೊಸ ಮೊರದಲ್ಲಿಟ್ಟು ಶಾಸ್ತ್ರ ಮಾಡಿ ಹೆಣ್ಣಿನ ಕಡೆಯವರಿಗೆ ನೀಡಿ ಹೆಣ್ಣು ಕರೆಯೋ ಶಾಸ್ತ್ರ ಮಾಡುವುದುಂಟು.

ಗುಡ್ಡರು, ಜೋಗಿಗಳು, ದಾಸರು, ನೀಲಗಾರರು ಕ್ವಾರಣ್ಯಕ್ಕೆ ಹೊರಟಾಗ, ಜೋಳಿಗೆ ಒಡ್ಡಿದರೆ, ಮೊರದಲ್ಲಿ ಅಕ್ಕಿ, ರಾಗಿ, ಕಾಳು ಕಡ್ಡಿ ಹಾಕುವುದುಂಟು.

ಗೌರಿಗಣೇಶ, ವರಮಹಾಲಕ್ಷ್ಮಿ ಹಾಗೂ ದುರ್ಗಾ ಪೂಜೆ ಸಂದರ್ಭಗಳಲ್ಲಿ ಮೊರದ ಬಳಕೆಯಿದೆ. ಪೂಜಾ ಸಾಮಗ್ರಿಗಳು, ಉಡುಗೊರೆಗಳು, ತಿಂಡಿ ತಿನಿಸುಗಳನ್ನು ಮೊರದಲ್ಲಿಟ್ಟು ಮನೆ ಮನೆಗೆ ಬಾಗಿನ ಕೊಡುವುದುಂಟು. ತುಂಬಿ ಹರಿಯುವ ನದಿಗಳಿಗೆ ಗಂಗಾಪೂಜೆ ಮಾಡಿ ಮೊರದಲ್ಲಿ ಬಾಗಿನ ತುಂಬಿ ನದಿಗೆ ಬಿಡುತ್ತಾರೆ. ಕಟ್ಟಡಗಳ ಶಂಕು ಸ್ಥಾಪನೆಗೂ ಮೊರದ ಬಳಕೆಯಿದೆ. ಮನೆಯಲ್ಲಿ ಮೊರ ಬೋರಲು ಮಾಡಬಾರದು, ಕಾಲಿಂದ ಜಾಡಿಸಬಾರದು, ಪೊರಕೆ, ಪಾದರಕ್ಷೆಗಳಿಂದ ಮೊರಕ್ಕೆ ಸೋಕಿಸಬಾರದೆಂಬ ನಂಬಿಕೆಗಳಿವೆ.

ತೂರುವ ತಟ್ಟಿ : ಮಂಚಿಕೆ ಮೇಲೆ ನಿಂತಿರುವ ವ್ಯಕ್ತಿಗೆ ಈ ತಟ್ಟಿಯಿಂದ ಕಾಳು ಮಿಶ್ರಿತ ಕಂಕನ್ನು ತುಂಬಿಕೊಡುತ್ತಾರೆ. ಇದು ಮಕ್ಕರಿಯಂತೆ ಇರುತ್ತದೆ. ಈಚಲು ಬರಲಿನಿಂದ ಅಥವಾ ಬಿದುರು ದಬ್ಬೆಗಳಿಂದ ತಯಾರಿಸಿದ ತಟ್ಟಿ ಇದು. ಮಣ್ಣು ಮತ್ತು ಸಗಣಿಯನ್ನು ಬೆರೆಸಿ ಸಾರಿಸಿ ಕಾಳುಗಳು ಬೀಳದಂತೆ ಮಾಡುತ್ತಾರೆ. ಕಾಳನ್ನು ತೂರಲು ಮೊರದ ಬದಲು ಇದನ್ನು ಬಳಸುವುದುಂಟು. ಗದಗಿನ ಕಡೆ, ಉತ್ತರ



ಕರ್ನಾಟಕದ ಭಾಗಗಳಲ್ಲಿ ಇದರ ಬಳಕೆ ಹೆಚ್ಚು. ಬಯಲು ಸೀಮೆಯಲ್ಲಿ 'ಮಂಚಿಕೆ' ಮತ್ತು ತಟ್ಟಿಯ ಬಳಕೆ ಇಲ್ಲವೆಂದೇ ಹೇಳಬೇಕು. ಬಯಲು ಸೀಮೆಯಲ್ಲಿ ಗಾಳಿ ಬೀಸುವ ಸಮಯ ನೋಡಿಕೊಂಡು ಎತ್ತರ ಭಾಗದಲ್ಲಿ ನಿಂತು ಅಥವಾ ಗುಂಡು ಕಲ್ಲಿನ ಮೇಲೆ ನಿಂತು ಮೊರದ ಸಹಾಯದಿಂದ ಕಾಳನ್ನು ತೂರಿ ರಾಶಿ ಮಾಡುತ್ತಾರೆ.



ಜರಡಿ : ಕಣದಲ್ಲಿ ಒಕ್ಕಣೆಯಾದ ಕಾಳು ಕಡ್ಡಿ ಮಣ್ಣನ್ನು ಬೇರ್ಪಡಿಸಲು ರೈತ ಕಂಡು ಕೊಂಡಿರುವ ಸಾಧನಗಳಲ್ಲಿ ಜರಡಿಯೂ ಒಂದು. ಜರಡಿಗಳಲ್ಲಿ ಹಲವು ಬಗೆ - ದೊಡ್ಡ ಕಣ್ಣಿನ ಜರಡಿ ಸಣ್ಣ ಕಲ್ಲಿನ ಜರಡಿ ಸೂಕ್ಷ್ಮ ಕಣ್ಣಿನ ಜರಡಿ, ಜೋಡಿ ಆಳುಗಳು ಬಳಸಬಹುದಾದ ಅತ್ಯಂತ ದೊಡ್ಡ ಗಾತ್ರದ ಜರಡಿ ಮೊದಲಾದವು ಕಣದಲ್ಲಿ ಉಪಯೋಗಿಸುವ ಜರಡಿಗಳು. ಮನೆಯಲ್ಲಿ ಉಪಯೋಗಿಸುವ ಅತೀ ಸಣ್ಣ ಕಣ್ಣಿನ ಜರಡಿ ಗಾತ್ರದಲ್ಲಿ ಚಿಕ್ಕದಾಗಿದ್ದು ಮನೆ ಅಳತೆಗೆ ಸಾಕಾಗುವಷ್ಟು ಕಾಳು ಗಳನ್ನು ಮಾತ್ರ ಶುದ್ಧ ಗೊಳಿಸಿಕೊಳ್ಳವಂಥವು ಇವೆ.

ಜರಡಿಗಳನ್ನು ತಯಾರಿಸಲು ಕೆಲವು ಕಡೆ ಬಿದಿರನ್ನು ಬಳಸುತ್ತಾರೆ. ಬಿದಿರಿನಿಂದ ಮಾಡಿದ ಜರಡಿ ಮೈಸೂರಿನ ಭಾಗದಲ್ಲಿ ಈಗಲೂ ಕಂಡು


ಬರುತ್ತದೆ. ಇದನ್ನು ಧಾನ್ಯಗಳಲ್ಲಿಯ ದೊಡ್ಡಗಾತ್ರದ ಕಲ್ಲು ಮಣ್ಣಿನ ಹೆಂಟೆಗಳನ್ನು ಕಸ ಕಡ್ಡಿಗಳನ್ನು ಆರಿಸಲು, ಧಾನ್ಯಗಳ ಉಬ್ಬಲು ತೆಗೆಯಲು ಬಳಸುತ್ತಾರೆ. ಕಣದಲ್ಲಿಯ ಬತ್ತ ಮತ್ತು ರಾಗಿ ರಾಶಿಯನ್ನು ಕಡಿಮೆ ಅವಧಿಯಲ್ಲಿ ಶುದ್ಧ ಮಾಡಲು ಬಳಸುವ ಸುಲಭ ಸಾಧನವಿದು.



ದೊಡ್ಡ ಕಣ್ಣಿನ ಜರಡಿಯಲ್ಲಿ ಸಣ್ಣ ಸಣ್ಣ ಕಲ್ಲು ಮಣ್ಣು ಕಸ ಕಡ್ಡಿ ನಿಲ್ಲುವುದಿಲ್ಲ. ಅವು ಕಾಳಿನೊಂದಿಗೆ ಇದ್ದು ಬಿಡುತ್ತವೆ. ಇದನ್ನು ಸಣ್ಣ ಕಣ್ಣಿನ ಜರಡಿಯಿಂದ ಮಾತ್ರ ಆರಿಸಲು ಸಾಧ್ಯ. ಇದನ್ನು ತಗಡಿನ ಡಬ್ಬವನ್ನು ಕತ್ತರಿಸಿ ತಯಾರಿಸುತ್ತಾರೆ. ಇದೂ ಸಹ ಕಣದಲ್ಲಿ ಉಳಿದಿರುವ ಅಶುದ್ಧ ಧಾನ್ಯಗಳನ್ನು ಶುದ್ಧ ಮಾಡಲು ಉಪಯೋಗವಾಗುತ್ತದೆ. ಇದಕ್ಕಿಂತ ಸಣ್ಣ ಕಣ್ಣಿನ ಜರಡಿಯನ್ನು ಒರಳಲ್ಲಿ ಬತ್ತವನ್ನು ಕುಟ್ಟಿದಾಗ ಅಕ್ಕಿಯಲ್ಲಿರುವ ನುಚ್ಚನ್ನು, ಸಣ್ಣ ಗಾತ್ರದ ಮಣ್ಣು ಕಲ್ಲನ್ನು ವಂದರಿಯಾಡಲು ಬಳಸುತ್ತಾರೆ.

ರಾಗಿಯನ್ನು ಶುದ್ಧ ಮಾಡಲು ಬಳಸುವ ಜರಡಿ ಸೂಕ್ಷ್ಮ ಕಣ್ಣಿನದಾಗಿರಬೇಕು. ರಾಗಿಯು ವಂದರಿಯಲ್ಲಿ ಉಳಿದು, ಧೂಳಿನಂಥ ಕಸಕಡ್ಡಿ, ಮಣ್ಣು ಮತ್ತು ಉಬ್ಬನ್ನು ಇದರಿಂದ ಆರಿಸಲು ಸಾಧ್ಯವಾಗುತ್ತದೆ. ರಾಗಿಯನ್ನು ಬೀಸಿದ ಮೇಲೆ ಹಿಟ್ಟನ್ನು ವಂದರಿ ಮಾಡುವ ಜರಡಿಯು ಗಾತ್ರದಲ್ಲಿ ತೀರ ಚಿಕ್ಕದಾಗಿದ್ದು ಇದರ ರಂಧ್ರಗಳು ಸೂಜಿ ಮೊನೆಯಷ್ಟು ಸೂಕ್ಷ್ಮವಾಗಿರುತ್ತದೆ.

ಒನಕೆ : ಕಣದಲ್ಲಿ ಒಕ್ಕಣೆ ಮಾಡಿ ಕಾಳನ್ನೂ ಉದುರಿಸಿದ ಮೇಲೆ



ಅಲ್ಪಸ್ವಲ್ಪ ಭಾಗ ಶುದ್ಧವಾಗಿದ್ದೂ ಸಿಪ್ಪೆ ಸಮೇತವಿರುತ್ತದೆ. ಇಂತಹದನ್ನು ಒಂದು ಕಡೆ ಗುಡ್ಡೆ ಮಾಡಿ ಬಿಸಿಲಿನಲ್ಲಿ ಒಣಗಿಸಿ ದೊಣ್ಣೆಯಿಂದ ಬಡಿದು ದೊಡ್ಡ ವಂದರಿಯಲ್ಲಿ ಆಡಿಸಿಕೊಂಡು ಉಳಿದ ಧಾನ್ಯದ ಮೇಲಿನ ಸಿಪ್ಪೆಯನ್ನು ಸುಲಿಯಲು ಒನಕೆಯನ್ನು ಬಳಸುತ್ತಾರೆ. ಒನಕೆ ಸಾಮಾನ್ಯವಾಗಿ ಐದರಿಂದ ಆರು ಅಡಿ ಎತ್ತರವಿರುತ್ತದೆ. ಜಾಲಿ ಮರ ಅಥವಾ ನೇರವಾದ ಬಲಿತ ಮರದ ತುಂಡನ್ನು ಕತ್ತರಿಸಿ ತಂದು ಕೈ ಬಾಚಿಯಿಂದ ನಯಗೊಳಿಸಿ ಅದರ ಎರಡೂ ತುದಿಗಳಿಗೆ ಕಬ್ಬಿಣದ ಬಳೆಯನ್ನು ಪೋಣಿಸಿರುತ್ತಾರೆ. ಕೆಲವು ಒನಕೆಗಳಿಗೆ ಒಂದೇ ಕಡೆ ಕಬ್ಬಿಣದ ಬಳೆ ಬಳಸುವುದುಂಟು. ಇದರಿಂದ ಒನಕೆ ಭಾರವಾಗಿ ಬತ್ತವನ್ನು ಕುಟ್ಟಿದಾಗ ಸಿಪ್ಪೆ ಸುಲಿಯಲು ಅನುಕೂಲವಾಗುತ್ತದೆ. ಇದು ಬಹು ಉಪಯೋಗದ ವಸ್ತು. ಎರಡರಿಂದ ಮೂರು ಅಡಿ ಎತ್ತರವಾಗಿರುವುದನ್ನು ಕಾರದ ಪುಡಿ ತಯಾರಿಸಲು ಬಳಸಿದರೆ ದಪ್ಪಕ್ಕೆ ಉದ್ದಕ್ಕೆ ತೂಕವಾಗಿರುವುದನ್ನು ಅಕ್ಕಿ ಹಿಟ್ಟು ಮಾಡಲು ಮತ್ತಿತರ ರೈತೋಪಯೋಗಿ ಕೆಲಸಗಳಿಗೆ ಬಳಸುತ್ತಾರೆ. ಬತ್ತವನ್ನು ಕುಟ್ಟುವಾಗ ಹಾರಿ ಹೋಗದಂತೆ ಕುದುರು ಅಥವಾ ಕಡುವಂಚ್ಚು ಎಂದು ಕರೆಯುವ ಟೋಪಿಯಾಕಾರದ ಬಿದಿರಿನ ಸಾಧನವನ್ನು ಒರಳಿನ ಸುತ್ತು ನಿಲ್ಲುವಂತೆ ಜೋಡಿಸಿಕೊಳ್ಳುತ್ತಾರೆ. ತೇಗದ ಮರದಿಂದ ಮಾಡಿದ ಒನಕೆ ತುಂಬಾದಿನ ಬಳಕೆಗೆ ಬರುತ್ತದೆ.

ಮಾಹಿತಿದಾರರು :

ಚಿಕ್ಕವೆಂಕಟೇಶಪ್ಪ, ಬಂಡಾರಹಳ್ಳಿ, ಕೋಲಾರ

ಹೊನ್ನೂರಪ್ಪ, ಬಂಡಾರಹಳ್ಳಿ, ಕೋಲಾರ

ವಿ.ಆರ್.ಬಿ.; ಕೆ.ಎಂ.

ಕುಂದಾಪುರ ಕೃಷಿ ಪರಂಪರೆ ಕರ್ನಾಟಕದಲ್ಲಿ ಕುಂದಾಪುರಕ್ಕೆ ಒಂದು ವಿಶೇಷ ಸ್ಥಾನವಿದೆ. ಮುಖ್ಯವಾಗಿ ಇದೊಂದು ಸಾಂಸ್ಕೃತಿಕ ಸೀಮೆಯ ಜೀವನ ಸಂದರ್ಭದ ವಿವರಗಳ ಅನನ್ಯತೆಯ ಹಿನ್ನೆಲೆಯಲ್ಲಿ ಲಭ್ಯವಾದ ವಿಶೇಷವಾದ ಗುರುತಿಸುವಿಕೆ. ಭೌಗೋಳಿಕ ಮೂರ್ತ ಸ್ಥಿತಿಯಲ್ಲಿ ಕಾಣಲು ಸಾಧ್ಯವಾದ ವೃತ್ತಿ ಸಂಬಂಧವಾದ ಅನನ್ಯತೆಯ ಹಿನ್ನೆಲೆಯಲ್ಲಿ ದತ್ತವಾದ ಗುರುತು. ಕಡಲು - ಕಾಡುಗಳೆರಡನ್ನೂ ಹೊಂದಿದೆ. ಕೃಷಿ ಸಂಸ್ಕೃತಿ ಜೊತೆಗೆ ಇದು ಪಾರಂಪರಿಕವಾಗಿ ಕಾಯ್ದಿಟ್ಟುಕೊಂಡುಬಂದ ಸಂಬಂಧವನ್ನು ಅಲ್ಲಗಳೆಯಲಾಗದು.

ಕೃಷಿಪರಂಪರೆ ಎಂದಾಗ ಗ್ರಾಮ ಜೀವನದಲ್ಲಿ ಅದರ ವ್ಯಾಪ್ತಿಗೆ ಹೊರತಾದುದು ಯಾವುದೂ ಇಲ್ಲ ಎನ್ನಬಹುದು. ಯಾಕೆಂದರೆ ಎಲ್ಲವನ್ನೂ ಒಳಗೊಳ್ಳುವ ಬದುಕಿನ ಜೀವನಾಧಾರ ವೃತ್ತಿಯಾದ ಕೃಷಿಯ ತೆಕ್ಕೆಗೆ ಒಳಪಡದ ಭಾಷಿಕ ಸಂಜ್ಞೆಗಳು ಪ್ರಾಯಶಃ ಗ್ರಾಮಜೀವನದಲ್ಲಿ ಕಾಣಲು ಸಿಗಲಾರವು. ಯಾವುದೇ ಪರಿಸರದ ಕೃಷಿಪರಂಪರೆಯ ಪರಿಚಯ ಆ ಲೋಕದ ಪರಿಚಯವೂ ಆಗಿರುತ್ತದೆ. ಹಾಗಾಗಿ ಕುಂದಾಪುರ ಪರಿಸರದ ಕೃಷಿಪರಂಪರೆ ಎಂಬ ಗುರುತನ್ನು ಇರಿಸಿಕೊಂಡು ಈ ಭಾಗದ ಜೀವಸಂಸ್ಕೃತಿಯಲ್ಲಿ ವಿಲೀನವಾಗಿ ಹೋಗಿರುವ ಕೃಷಿ ಸಂಬಂಧಿ ಅನುಭವ ಕೋಶವನ್ನು ವಿವರಿಸಿಕೊಳ್ಳುವ ಪ್ರಯತ್ನವು ಭಾಷಿಕ ಸಂಜ್ಞೆಗಳನ್ನೊಳಗೊಂಡಂತೆ ಬೇಸಾಯದ ಸುತ್ತಣ ಜೀವನ ಸಂದರ್ಭವೊಂದನ್ನು ಪರಿಚಯಿಸುವ ಯತ್ನವೂ ಆಗುತ್ತದೆ. ಈ ಕಾರಣಕ್ಕಾಗಿ ಒಟ್ಟು ಸಂದರ್ಭವನ್ನು (ಒಂದರೊಳಗೊಂದು ಬೆಸುಗೆಪಡೆದಿದ್ದಾಗ್ಯೂ) ಕೆಲವು ಉಪಘಟಕಗಳಲ್ಲಿ ವಿಂಗಡಿಸಿಕೊಂಡು ಪರಿಚಯಿಸಲಾಗಿದೆ.

1. ಬೆಳೆ ಪರಿಚಯ

ಬತ್ತ : ಕುಂದಾಪುರ ಪರಿಸರದಲ್ಲಿ ಕೃಷಿಯನ್ನು ಸಾಗುವಳಿ / ಸಾಗೊಳ್ಳಿ / ಸಾಗೋಳಿ ಮುಂತಾಗಿ ಗುರುತಿಸುತ್ತಾರೆ. ಆದರೆ ಹಾಗೆ ಗುರುತಿಸುವುದು ಪ್ರಧಾನವಾಗಿ ಬತ್ತದ ಕೃಷಿಯನ್ನು ಕೇಂದ್ರವಾಗಿರಿಸಿಕೊಂಡು. ಎರಡುಕಾಳ್ ಬತ್ತ ಬೆಳೆಯದವನನ್ನು ಈ ಭಾಗದಲ್ಲಿ ಸಾಗುವಳಿದಾರ ಎಂದು ಹಿಂದೆ ಕರೆಯುತ್ತಿದ್ದಂತಿಲ್ಲ. ಮನೆಯೆದುರು ಮೇಟಿಕಂಬವಿರದ, ಹುಲ್ಲುಗೊಡ್ಮಿ / ಹುಲ್ಲುಗುಡ್ಮಿ ಇರದ ಮನೆಯನ್ನು ಸಾಗುವಳಿದಾರನ ಮನೆ ಎಂದು

ಗುರುತಿಸುತ್ತಿರಲಿಲ್ಲ. ಹಾಗಾಗಿ ಈ ಭಾಗದಲ್ಲಿ ಕೃಷಿ ಎಂದರೆ ಪ್ರಧಾನವಾಗಿ ಅದು ಶಂಕರತಂದೆ / ಶಂಕರಗಂಡ / ಸಂಕರನಗಂಡನ ಜೊತೆಗಿನ ಒಡನಾಟ. ಈ ಸಂಕರಗಂಡನ ಪರಿಕಲ್ಪನೆಯಿರುವುದು ಎಲ್ಲಾ ಬತ್ತದ ಕಾಳುಗಳ ಜೊತೆಗೆ ಅಲ್ಲ. ಬದಲಾಗಿ ಮುಂಗಾರಿನಲ್ಲಿ ಬೆಳೆಯುವ ಮಳೆಗಾಲದ ಸಾಗುವಳಿಯ ಫಸಲಿಗೆ ಸಂಬಂಧಿಸಿದಂತೆ. ಇದನ್ನೇ ಕುಂದಾಪುರದ ಜನ 'ಕಾತಿಸಾಗುವಳಿ' ಎನ್ನುತ್ತಾರೆ. ಈ ಭಾಗದ ಬಹುಮಟ್ಟಿನ ಕೃಷಿಸಂಬಂಧಿ ಆಚರಣೆಗಳೆಲ್ಲವೂ ಕಾತಿಬೆಳೆ ಮತ್ತು ಆ ಬೆಳೆಯ ಫಲವಾದ ಸಂಕರತಂದೆಯನ್ನು ಸುತ್ತುವರೆದಿವೆ. ಈ ಬೇಸಾಯದ ಕಾಯಕದೊಂದಿಗೆ ಸುತ್ತಿಕೊಂಡಿರುವ 'ಆರ್ದ್ರೂಡು'ವ ಆಚರಣೆಯಿಂದ ಆರಂಭಗೊಂಡು, ಬೀಜ ನೆಡುವ 'ಬೀಜಮುಹೂರ್ತ', ಗಣಪತಿನೆಟ್ಟಿ, ಹದನ / ಹದ್ನ / ಎರ್ತ, ಮೇಟಿಗೆ ಹೊರಿಹಾಕುವ ಹೊರಿಹುಣ್ಮೆ, ಕದ್ರ್‍ಹಬ್ಬವಾದ ಹೊಸ್ತು, ಕೇಲಿಗೆ ಅಕ್ಕಿ ಹಾಕುವ 'ಕಾವೇರ್ರ್ಹಿಡುವ ಸಂಕ್ರಾಂತಿ' ಇವೆಲ್ಲವೂ ಕಾತಿಬೆಳೆಗೆ ಸಂಬಂಧಿಸಿದಂತೆಯೇ ನಡೆಯತಕ್ಕ ಆಚರಣೆಗಳು. ನಾಗಾರಾಧನೆಯ ವಿಧವಾದ 'ಕಣನ್‌ಸ್ವಾಮಿ' ಎನ್ನುವ ಮನೆಯಂಗಣದ ದೇವರಿಗೆ ಮಾಡುವ ಹುಗ್ಗಿಯ ಸೇವೆಯೂ ಸುಗ್ಗಿಬೆಳೆ ಒಳಬರುವ ಮೊದಲು ಕಾತಿ ಅಕ್ಕಿಯಿಂದಲೇ ನಡೆಯಬೇಕಿದೆ. ಆರ್ದ್ರೂಡಿ ಹೊಟ್ಟು ಸುಡುವ ಹೊಟ್ಟು, ಹುಲ್ಲುಸೂಟೆಗಳೂ ಕಾತಿಬೆಳೆಯಿಂದಲೇ ಆಗುಬೇಕೆಂಬ ಕಡ್ಡಾಯವಿದೆ. ಈ ಭಾಗದ ಪ್ರಧಾನ ಆಚರಣೆಯಾದ ಕದಿರುಹಬ್ಬ / ಹೊಸ್ತಿನಲ್ಲಿ ಆದರದಿಂದ ಹೊತ್ತು ತರುವ ಕದಿರು, ಕಾತಿಬೆಳೆಯ ಕದಿರೇ. ಬತ್ತವನ್ನು ದೇವರಂತೆ ಪೂಜಿಸುವ ಎಲ್ಲಾ ಆಚರಣೆಗಳಲ್ಲದೆ, "ಹೊಲೆಚ್ಚ್ ಹೊಲೆಚ್ಚ್ ಬಾ ಹೊಲಿಯೇ ಹೊಲಿ ಹೆಚ್ಚೆಚಿ ಬಾ" ಎನ್ನುವ ಸಮೃದ್ಧಿಯ ಫಸಲುನಿರೀಕ್ಷೆಯ ಸೊಲ್ಲುಗಳ ಜೊತೆಗೆ ಬತ್ತದತೆನೆ ಬಡಿಯುವ / ಹೊಲಕರೆದು ಹೊಲಿಜಪ್ಪುವ ಪದ್ಧತಿ'ಗಳೆಲ್ಲವೂ ಬೆರೆತಿರುವುದು ಕಾತಿಬೆಳೆಯ ಜೊತೆಗೆ. ಅಷ್ಟು ಪ್ರಮಾಣದಲ್ಲಿ ಕಾತಿಬೇಸಾಯ ಮೂಲಕೃಷಿ, ಸಹಜಕೃಷಿ ಎನಿಸಿದೆ. ಈ ಸಾಗುವಳಿಯಲ್ಲಿ ಕಾತಿಬೆಳೆ ಬೈಲು, ಮೆಕ್ಕಿ, ಮಕ್ಕಿ, ತಲ್ನೀರ್‌ಗದ್ದೆ (ಹಾಡಿ / ಹಕ್ಕಲ ಮೂಲದಿಂದ ಹರಿದುಬರುವ ನೀರುಳ್ಳಗದ್ದೆ), ಬಾನ್ನೀರ್‌ಮಕ್ಕಿ ಎನ್ನುವ ಭೇದವಿಲ್ಲದೆ ಎಲ್ಲಾ ಬಗೆಯ ಗದ್ದೆಗಳನ್ನೂ ಭಾಗಿಯಾಗಿಸಲಾಗುತ್ತದೆ. ಮುಖ್ಯವಾಗಿ ಇದು ಮಳೇದೇವರು ಕೊಡುವ ಬೆಳೆ. ಮಳೆಯ ಜೊತೆಗೆ ಓಡೋಡುತ್ತಾ ಚುರುಕಾಗಿ ಮುಗಿಸಬೇಕಾದ ಬೆಳೆ. ಈ ಬೆಳೆಯಲ್ಲಿ ಬೆಳೆಸುತ್ತಿದ್ದ ಹಳೆಯ ನೆಲ್ಲುಗಳಾದ ಜೀರ್‌ಸಾಲಿ, ದಬ್ಬಣ್‌ಸಾಲಿ, ಕಣ್ವ, ಹುಂಡಬಟ್ಟು, ಕುತ್ತುಂಬ್ರಿ, ಹಳ್ಗ, ಎಮ್ಜೆಲ್ ಮುಂತಾದ ನೆಲ್ಲುಗಳು ಆಧುನಿಕ ಕೃಷಿಯ ಭರಾಟೆಯಲ್ಲಿ ನಿಂತು ಹೋಗಿವೆ. ಆಹಾರದ ಬೇಡಿಕೆಯ ಜೊತೆಗೆ ಹಳೆಗಾಲದ ಮುಳಿಹುಲ್ಲಿನ ಮನೆಗಳನ್ನು ಹೊದೆಸಲು ಅವಶ್ಯಕವಾದ ಉದ್ದನೆಯ ಸೂಡಿಹುಲ್ಲಿನ ಅಗತ್ಯವನ್ನು ಪೂರೈಸುತ್ತಿದ್ದ ಇವುಗಳು 'ಕುಂಟ್‌ಕೆಯ್'ಗಳಲ್ಲ. ಇವುಗಳನ್ನು 'ದೊಡ್ಡನೆಲ್'ಗಳೆಂದೇ ಕರೆಯುತ್ತಿದ್ದರು.

ಕಾತಿಯಲ್ಲಿ ನೆಟ್ಟಮೇಲೆ ಕಳೆಯ ನೆವದಿಂದ ಒಮ್ಮೆಯಾದರೂ ಗದ್ದೆಯನ್ನು ಮೆಟ್ಟಲೇಬೇಕೆಂಬ ರೂಢಿಯಿದೆ. ಹೀಗಾಗಿಯೇ 'ಕಾತಿಗ್ ಕಾಲಾಡ್ಕ್ ಸುಗ್ಗಿಗ್ ನೇಲಾಡ್ಕ್' ಎಂಬ ಮಾತೇ ಇದೆ. ಈ ಕಳೆತೆಗೆಯುವುದನ್ನು 'ಕಾಲಾಡುವುದು' ಎಂದೇ ಸಂಕೇತಿಸಲಾಗುತ್ತದೆ. ಕಳೆಗಳ ಹೆಸರೋ ವೈವಿಧ್ಯಮಯ ! ಕುರ್ಬ್ಲ, ಅತಿರಾಯನಗೊಡ್ಡು, ಕ್ಯಾಂಕ, ನಳಿಯ, ನೆಗ್ರಿ, ಹರ್‍ಲಿ, ವಾಂಟ್ಕೇಲ್ ಇತ್ಯಾದಿ ಹಲವು ಹೆಸರುಗಳಲ್ಲಿ ಅವುಗಳ ವಿಧ ಮತ್ತು ಬೆಳೆ ಮೇಲಿನ ಅವುಗಳ ಪರಿಣಾಮವನ್ನು ವಿಶ್ಲೇಷಿಸಲಾಗುತ್ತದೆ. ಇವುಗಳಲ್ಲಿ ನಳಿಯ ಎನ್ನುವ ಕಳೆಯ ಕುರಿತಂತೆ "ಅಳಿಯ ಹುಟ್ಟಿ ಮಾವಂಗ್ ಕೇಡ್ ನಳಿಯಹುಟ್ಟಿ ಕೆಯ್ಗ್ ಕೇಡ್" ಎನ್ನುವ ಗಾದೆ ಮಾತೇ ಇದೆ. ನಳಿಯ ಒಮ್ಮೆ ಆಯಿತೆಂದರೆ ಮತ್ತೆ ಗದ್ದೆಯಲ್ಲಿ ಖಾಯಂ ಕಳೆ ಆಗಿ ಉಳಿದುಬಿಡುತ್ತದೆ. ಹಾಗಾಗಿ ಕಾತಿಯ ಬೆಳೆಯಲ್ಲಿ ಕಳೆಯ ಕುರಿತಂತೆ ವಿಶೇಷ ಎಚ್ಚರವಹಿಸುತ್ತಾರೆ.

ಇದಲ್ಲದೆ ಸುಗ್ಗಿ ಎನ್ನುವ ಇನ್ನೊಂದು ಬೆಳೆಕ್ರಮ ಬತ್ತಕ್ಕೆ ಸಂಬಂಧಿಸಿದಂತೆ ಇದೆ. ಇದು ಮಳೆಗಾಲದ ಬೆನ್ನಿಗೆ ಆಗುಗೊಳ್ಳುವ ಸಾಗುವಳಿ. ಇದರಲ್ಲಿ ಸಾಮಾನ್ಯವಾಗಿ 'ಬೈಲ್‌ತಾರ್' ಗದ್ದೆಗಳು ಮಾತ್ರವೇ ಬಳಕೆಗೊಳ್ಳುತ್ತವೆ. ಕೆಲವೊಂದು ಕಡೆ ಸುಗ್ಗಿಗೆಂದೇ ಮತ್ತು ಕಾತಿಯಲ್ಲಿ ನೀರುತುಂಬಿಕೊಳ್ಳುತ್ತದೆ ಎಂಬ ಕಾರಣಕ್ಕೆ ಮಳೆಗಾಲದ ಸಾಗುವಳಿ ಮಾಡದೇ ಕೆಲವೊಂದು ಬೈಲ್‌ತಾರ್ ಗದ್ದೆಗಳನ್ನು ಮೀಸಲಿಟ್ಟಿರುತ್ತಾರೆ. ಇವುಗಳನ್ನು 'ಹಡುವಾಲ್'ಗಳೆನ್ನುತ್ತಾರೆ. ಸುಗ್ಗಿಯ ಅಗೇಡಿಯಾಗಿ ಈ ಹಡುವಾಲ್‌ಗಳನ್ನೇ ಬಳಸಬೇಕಾದುದರಿಂದ ಹೀಗೆ ಇರಿಸಿಕೊಳ್ಳುವುದು ಅನಿವಾರ್ಯವೂ ಹೌದು. ಸುಗ್ಗಿಯ ನೆಲ್ಲುಗಳಾಗಿ 'ಕನ್ನಟ್ಟುಕಟ್ಟಿ', 'ಕರಿಸೊಡ್ಡ್' ಮುಂತಾದ ಕೆಲವನ್ನು ಬಳಸುತ್ತಿದ್ದ ರೂಢಿಯೂ ಈಗ ತಪ್ಪಿದೆ. ಕಾತಿಯ ಬೆಳೆಯಂತೆ ಸುಗ್ಗಿಯ ಬೆಳೆಯನ್ನು ಹೊತ್ತು ತಂದ ತರುವಾಯ ಹಡಿಮಂಚಕ್ಕೆಬಡಿದು ನೆಲ್ಲು ಉದುರಿಸಬೇಕೆಂಬ ಕಡ್ಡಾಯವಿಲ್ಲ. ಬಹುಸಂದರ್ಭಗಳಲ್ಲಿ ಸುಗ್ಗಿಯ ಕುಂಟುಕೆಯ್‌ಗಳನ್ನು 'ಗುಡ್ಮಿ'ಮಾಡಿ ಕೂಡಿಡುತ್ತಾರೆ. ಇದನ್ನು ತರುವಾಯದಲ್ಲಿ ಉಂಡಿಗೆಹುಲ್ಲಿನ ಬದಲಾಗಿ ತಳುಹುಲ್ಲಾಗಿಯೇ ಬಳಸುವುದರಿಂದ 'ಹಡ್ಲ್‌ಒಕ್ಕು'ತ್ತಾರೆ. ಸುಗ್ಗಿಯ ನೆಟ್ಟಿ ಮತ್ತು ಕೊಯ್ಲುಮಾಡುವ ಕೂಲಿಯಾಳುಗಳಿಗೆ ಈ ಸುಗ್ಗಿ 'ಹಡ್ಲ್‌ಒಕ್ಕಿ'ದ ಅನಂತರವಷ್ಟೇ 'ಕೊಚ್ಚು / ಕೂಲಿ' ಕೊಡಲಾಗುತ್ತಿತ್ತು.

ಇದಲ್ಲದೆ 'ಕೊಳ್ಕಿ' ಎನ್ನುವುದು ಬೇಸಗೆಯ ಇನ್ನೊಂದು ಬೆಳೆಮಾದರಿ. ಸಾಮಾನ್ಯವಾಗಿ ಕೊಳ್ಕಿಗೆ ಬಳಕೆಯಾಗುತ್ತಿದ್ದುದು 'ಮೆಕ್ಕಿತಾರಿನ' ಗದ್ದೆಗಳು. ಇದು ಹೆಚ್ಚುಕಡಿಮೆ ಕೃತಕನೀರಾವರಿಯನ್ನೇ ಅವಲಂಭಿಸಿದೆ. ಇದು ನೀರುಹಾಯಿಸಲು ತೋಳು / ರಟ್ಟೆಗಟ್ಟಿಯಿದ್ದರಷ್ಟೇ ಹಮ್ಮಿಕೊಳ್ಳಬಹುದಾದ ಬೆಳೆ. ಇದನ್ನೇ ಪರೋಕ್ಷವಾಗಿ ಹೇಳುವಂತೆ 'ಕುಪ್ಪನ್ ನಂಬಿ ಕೊಳ್ಕಿ ನೆಟ್ಟಂಗಾಯ್ತ್, ಕೊಳ್ಕಿ ಉರ್ದ್‌ಹೋಯ್ತ್ ಕುಪ್ಪ್ ಹಾರಿಹೋಯ್ತ್' ಎನ್ನುವ 'ಆದ್ಗೆತಿ (ನಾಣ್ನುಡಿ ಅಥವಾ ಸಂಸ್ಕೃತದ 'ನ್ಯಾಯ' ದೋಪಾದಿಯ ಮಾತು)ಯ ಮಾತೊಂದಿದೆ. ಕುಪ್ಪ್ / ಕೆಂಬೂತವು 'ಉಪ್ಪುಪ್' ಎಂದು ಕೂಗುವುದಾಗಿಯೂ, ಹಾಗೆ ಕೂಗಿದರೆ ಮಳೆಬರುವುದಾಗಿಯೂ ಈ ಭಾಗದಲ್ಲಿ ನಂಬಿಕೆಯಿದೆ. ಆದರೆ ಹಾಗೆಂದು ಕುಪ್ಪನನ್ನು ನಂಬಿ ಕೊಳ್ಕಿ ಸಾಗುವಳಿ ಮಾಡುವಂತಿಲ್ಲ ಎಂಬ ಎಚ್ಚರವೂ ಈ ಆದ್ಗೆತಿಯಲ್ಲಿದೆ. ಯಾಕೆಂದರೆ ಕೊಳ್ಕಿಗೆ ನೀರೇ ಆಧಾರ. ಕೊಳ್ಕಿಗದ್ದೆಯಲ್ಲಿನ ನೀರು ಆರುವಂತಿಲ್ಲ. ಒಂದು ವೇಳೆ ಆರಿದರೆ ಗದ್ದೆ ಒಡೆದುಕೊಳ್ಳುತ್ತದೆ ಅಥವಾ 'ಸೇಡುಬಿಟ್ಟು' ಬಾಯ್‌ಕಳೆದುಕೊಳ್ಳುತ್ತದೆ. ಹಾಗಾಗಿ ನೀರಿನ ಅನುಕೂಲವಿಲ್ಲದವರು ಮಾಡಲಾರದ ಬೇಸಾಯ ಎಂಬಂತೆಯೂ, ಬಾನಿನ ನೀರನ್ನು ನಂಬಿ ಮಾಡಬಾರದ ಬೇಸಾಯ ಎಂಬುದೇ ಈ ಆದ್ಗೆತಿಯ ತಾತ್ಪರ್ಯ. ಕೊಳ್ಕಿಬೇಸಾಯದಲ್ಲಿ ಗದ್ದೆಯನ್ನು ಉತ್ತು, ನೀರುಣಿಸಿ ಕರಗಿಸುವುದಕ್ಕೆ ಆದ್ಯತೆಯಾದ ಕಾರಣ 'ಕೊಳ್ಕಿಗ್ ಕೈಡುದ್' ಎಂಬುದು

ಈ ಸಾಗುವಳಿಯು ಕೊಡಮಾಡಿದ ಪರಿಭಾಷೆಗಳಲ್ಲೊಂದಾಗಿ ಆಡುನುಡಿಯಲ್ಲಿ ಬೆರೆತುಹೋಗಿದೆ.

ಕಾಲದ ವಾರ್ಷಿಕಾವರ್ತನ ಬೆಳೆವಿಧಾನಗಳನ್ನು ಪರಿಚಯಿಸಲು ಉದ್ದೇಶಿಸಲಾದ ಈ ಭಾಗದಲ್ಲಿ ಬತ್ತದ ಕೃಷಿಯ ಕುರಿತಾದ ವಿವರಗಳು ಪುನರಪಿ ಸೇರಿಕೊಳ್ಳುವಂತಾಗುವುದು ತಪ್ಪಲಿ ಎಂದು ಇರುವ ಮೂರು ವಿಧದ ಬೆಳೆ ಕ್ರಮವನ್ನು ಆಂಶಿಕವಾಗಿ ಪರಿಚಯಿಸಿ ಉಳಿದಂತೆ ಕೃತ ಹಾಗೂ ಧಾನ್ಯದ ಕೃಷಿಯ ಕುರಿತಾದ ಹೆಚ್ಚು ವಿವರಗಳನ್ನು ಒದಗಿಸಲು ಪ್ರಯತ್ನಿಸಲಾಗಿದೆ.

ಕೃತಬೇಸಾಯ : ಮೆಣಸು, ಬದನೆ, ಕುಂಬಳ, ಸೌತೆ, ಗೆಣಸು. ಇವು ಕೃತಬೇಸಾಯಕ್ಕೆ ಒಳಪಡುವಂಥವು. ಕಬ್ಬು 365 ದಿನಗಳ ಬೆಳೆಯಾದುದರಿಂದ ಅದನ್ನು ಈ ಯಾವ ವಿಭಾಗದಲ್ಲೂ ಸೇರಿಸಲು ಸಾಧ್ಯವಿಲ್ಲ. ಈ ಎಲ್ಲಾ ಬೆಳೆಗಳಿಗೆ ವರ್ಷ ವರ್ಷದ ಹೊಸ ನೇಜಿ / ಬೀಜ ಪ್ರಯೋಗ ಬೇಕಾಗುತ್ತದೆ. ಆದರೆ ಕಬ್ಬಿಗೆ ಪ್ರತಿ ವರ್ಷ ಹೊಸಬೀಜವನ್ನು ಬಳಸುವುದಿಲ್ಲ. ಒಂದು ಬಾರಿ ನೆಟ್ಟ ಕಬ್ಬು 2-3 ವರ್ಷದತನಕ ಹೊಸನೇಜಿ ಇಲ್ಲದೆ ಬೆಳೆಕೊಡುತ್ತಿರುತ್ತದೆ. ಹೊಸತಾಗಿ ಕುಡಿನೆಟ್ಟು ಆದ ಕಬ್ಬನ್ನು ಹೊಸಕಬ್ಬು ಎಂದೂ ಒಂದು ವರ್ಷದ ನಂತರದ ಕಬ್ಬನ್ನು ಕೂಳಿಕಬ್ಬು ಎಂದೂ ಗುರುತಿಸುತ್ತಾರೆ. ಹೆಚ್ಚೆಂದರೆ ಮೂರುಕೂಳಿಯ ತನಕ ಒಮ್ಮೆ ನೆಟ್ಟ ಕಬ್ಬನ್ನು ಉಳಿಸಿಕೊಳ್ಳುತ್ತಾರೆ.

ಮೆಣಸು ಮತ್ತು ಬದನೆ : ಬೀಜ ಹಾಕಿ, ಗಿಡಮಾಡುವುದರಿಂದ ಹಿಡಿದು ನಾಟಿ ಹಾಗೂ ಆರೈಕೆ ಕ್ರಮಗಳಲ್ಲಿ ಈ ಎರಡೂ ಬೆಳೆಗಳ ನಡುವೆ ಸಾಕಷ್ಟು ಸಮಾನಾಂಶಗಳಿವೆ. ಎರಡೂ ಬೆಳೆಗಳನ್ನೂ ಒಟ್ಟೊಟ್ಟಿಗೆ ಒಂದೇ ಹಿತ್ತಿಲು / ಕದ್ದೆಯಲ್ಲಿ ಬೆಳೆಯುವುದಿದೆ. ಮೊದಲಿಗೆ ಬೀಜದ ಮೊಳಕೆಯನ್ನು ಸಿದ್ಧಮಾಡಿಕೊಳ್ಳುತ್ತಾರೆ. ಇದನ್ನು 'ಬೆದಿಬರ್ಸುದ್' ಎಂದೇ ಕರೆಯಲಾಗುತ್ತದೆ. ಮೆಣಸು, ಬದನೆ ಮುಂತಾದ ಹಸರಾಣಿಗೆ ಸಂಬಂಧಿಸಿದ ಬೆಳೆಗಳಿಗೆ ಮೊಳಕೆ ಬರಿಸುವ ಬೀಜಗಳನ್ನು ನೆನೆಹಾಕಿ, 'ಸಿಬ್ಬಲುಚಟ್ಟಿ'ಯಲ್ಲಿ ಸೋಸಿ ಕಂಬಳಿಯಂತಹ ಪರಿಕರದ ಒಳಗಿಟ್ಟು ಭದ್ರವಾಗಿ / ಬಿಗಿಯಾಗಿ ಬಾಯಿಕಟ್ಟಿಡುತ್ತಾರೆ. ತದನಂತರದಲ್ಲಿ ಒಣಗದಂತೆ ಅದರ ಮೇಲೆ ಪ್ರತಿದಿನ ನೀರುಸುರಿದು ಒದ್ದೆ ಸ್ಥಿತಿಯಲ್ಲಿಡುತ್ತಾರೆ. ಈ ತೇವ ಮತ್ತು ಕಂಬಳಿಯೊಳಗಿನ ಗಾವು / ಶಾಖದಿಂದಾಗಿ ಬೀಜಗಳು ಉಬ್ಬಿ ಮೊಳಕೆಯೊಡೆಯುತ್ತವೆ. ಹೀಗೆ ನಾಲ್ಕಾರುದಿನಗಳಲ್ಲಿ ಕಂಬಳಿಯಲ್ಲಿನ ಗಾಳಿಹೋಗುವ ಅಲ್ಪ ಅವಕಾಶವನ್ನೇ ಬಳಸಿಕೊಂಡು ಅದರ ಹೊರಭಾಗದ ಸುತ್ತಲೂ ಮೊಳಕೆಗಳು ಹರಡಿಕೊಳ್ಳುತ್ತಿದ್ದಂತೆಯೇ ಕಂಬಳಿಗಂಟನ್ನು ಬಿಚ್ಚುತ್ತಾರೆ. ಕಂಬಳಿಯ ಗಂಟುಬಿಚ್ಚಿ ಮೊಳಕೆಬೀಜಗಳನ್ನು ಅಗಲವಾದ ಮೊರ / ಗೆರಸಿ ಇಲ್ಲವೇ ಬೆತ್ತದ ಸಲಕರಣೆಯಲ್ಲಿ ಸುರಿದು, ಕಂಬಳಿಗೆ ಅಂಟಿಕೊಂಡ ಉಳಿದ ಮೊಳಕೆಗಳನ್ನು ಜೋಪಾನವಾಗಿ ಬಿಡಿಸಿ ಎಲ್ಲವನ್ನೂ ಒಟ್ಟುಗೂಡಿಸಿಕೊಂಡು, ಬೀಜ ಚೆಲ್ಲಲು ಸಿದ್ಧಗೊಳಿಸಲಾದ ಗರ / ಮಡಿಯಲ್ಲಿ ಜಾಗರೂಕವಾಗಿ ಹರವಿಬಿಡುತ್ತಾರೆ. ಈ ಬೆದೆ / ಮೊಳಕೆಗಳು ಸಾಕಷ್ಟು ಉದ್ದುದ್ದವಾದರೆ ಅದನ್ನು 'ಗಾಳ್‌ಬೆದೆ' ಎಂದೂ, ಸ್ವಲ್ಪ ಸ್ವಲ್ಪವೇ ಕಿರುಮೊಳಕೆಯ ಸ್ಥಿತಿಯಲ್ಲಿದ್ದರೆ 'ಮೂಕ್‌ಬೆದೆ' ಎಂತಲೂ ಕರೆಯುತ್ತಾರೆ. ಹೀಗೆ ಗಾಳ್‌ಬೆದೆಯಾದರೆ ಅದು ಅಷ್ಟು ಸರಿಯಲ್ಲ. ಹಾಗಾಗಿ ಬೆದೆ ಗಾಳಾಗದ / ಜಾಳಾಗದ ಹಾಗೆ, ಉದ್ದವಾಗುವ ಮುಂಚಿತವಾಗಿಯೇ ಸಸಿಗೆಂದು ನಿಗದಿಯಾದ ಮಡಿ / ಗರದಲ್ಲಿ ಬಿತ್ತನೆ ಮಾಡುತ್ತಾರೆ. ಇನ್ನೊಂದು ನೆಲೆಯಲ್ಲಿ ಗರವೆನ್ನುವುದು ಒಂದು ಚೌಕಟ್ಟಿಗೊಳಪಟ್ಟ ರಚನೆ. ಈ ನೆಲೆಯಲ್ಲಿಯೂ ಸಸಿಮಾಡುವ ಮಡಿ ಮತ್ತು ಆಚರಣಾತ್ಮಕ ಪ್ರದರ್ಶಕ ತಾಣಗಳೆರಡರಲ್ಲೂ ಗರವೆನ್ನುವ ಪದ ಚಾಲ್ತಿಯಲ್ಲಿರಬಹುದು. ಆದರೆ ಸಸಿಯನ್ನು ಆಗುಗೊಳಿಸುವ ಮಿತಚೌಕಟ್ಟಿನ ರಚನೆಯನ್ನು ಗರ ಎನ್ನುತ್ತಾರಲ್ಲದೆ ವಿಶಾಲವಾದ ಬಯಲನ್ನೋ, ಗದ್ದೆಯನ್ನೋ ಗರವೆನ್ನುವುದಿಲ್ಲ. ಅದನ್ನು ಅಗೇಡಿ / ಅಗೆಹಾಕುವ ಅಡಿ (ಜಾಗ) ಎಂದೇ ಗುರುತಿಸಲಾಗುತ್ತದೆ.

ಗರದಲ್ಲಿ ಚೆಲ್ಲಿದ ಬೀಜ 20-21 ದಿನ ಕಳೆಯುತ್ತಿದ್ದಂತೆಯೇ ನಾಟಿಗೆ ಸಿದ್ಧವಾಗುತ್ತದೆ. ಹೀಗೆ ಸಿದ್ಧವಾದ ಗಿಡಗಳನ್ನು ಅದಕ್ಕೆಂದು ಸಿದ್ಧಗೊಳಿಸಿಕೊಂಡ 'ಅಪ್ಪಿ'ಗಳೆಂದು ಗುರುತಿಸಲಾಗುವ ಉದ್ದನೆಯ ಮಡಿಯಲ್ಲಿ ಒಂದೊಂದಾಗಿ ನೆಡುತ್ತಾರೆ. ಗಿಡನೆಟ್ಟು ನೀರು ಹಾಕಿ ಉಪಚಾರಮಾಡಿ 15-20 ದಿನಗಳಲ್ಲಿ ಈ ಅಪ್ಪಿಗಳ ಅಕ್ಕಪಕ್ಕದ ದಂಡೆ / ಏರಿಗಳನ್ನು ಸ್ವಲ್ಪಸ್ವಲ್ಪವೇ ಒಡೆದು ಗಿಡದ ಬುಡಕ್ಕೆ ಮಣ್ಣುಸೇರಿಸುವ 'ಅರ್ಮಣ್' ಮಾಡುತ್ತಾರೆ. ಗಿಡನೆಟ್ಟು ಬೆಳವಣಿಗೆಯ ಹಂತದಲ್ಲಿ 'ನ್ಯಾಳಿ (ಕೀಟ) ಹೊಡ್ದು' ಸಾಯುವಂತಾದರೆ ಆ ಗಿಡದ ಬದಲಿಗೆ ಬೇರೊಂದು ಗಿಡಹಾಕುತ್ತಾರೆ. ಹೀಗೆ ಮಧ್ಯದಲ್ಲಿ ಸಸಿಹಾಕುವುದನ್ನು 'ಎಡ್ಸಸಿ' ಹಾಕುವುದೆನ್ನುತ್ತಾರೆ. ಇದಾದಮೇಲೆ ಗಿಡಗಳು ಇನ್ನಷ್ಟು ಭದ್ರಗೊಳ್ಳುತ್ತಿದ್ದಂತೆಯೇ ದಂಡಿಯೊಡ್ಡು / ಏರಿ ಒಡೆದು ಕೀಸಿಹಾಕಿ ಗಿಡಗಳ ಬುಡವನ್ನು ಏರಿಯಾಗಿಯೂ, ಹಿಂದಿನ ದಂಡೆಗಳನ್ನು ನೀರುಹಾಯಿಸುವ ಅಪ್ಪಿಗಳಾಗಿಯೂ ಬದಲಾಯಿಸಿಕೊಳ್ಳುತ್ತಾರೆ. ಪ್ರತೀಬಾರಿ ನೀರುಬಿಟ್ಟಾಗಲೂ ಏರಿಯ ಮಣ್ಣು ಜೊಲಿದು / ಜಾರಿ ಅಪ್ಪಿಗೆ ಬಿದ್ದು ಅಪ್ಪಿ ತುಂಬಿಕೊಳ್ಳುವುದರಿಂದ ಆಗಾಗ ಏರಿ ಕೀಸುತ್ತಿರಬೇಕು. ಈ ಮೂಲಕ ಗಿಡದ ಬುಡಕ್ಕೆ ಮತ್ತೆ ಮತ್ತೆ ಹೊಸಮಣ್ಣು ಬೀಳುತ್ತದೆ.

ಮೆಣಸು ಬದನೆಗಳು ಫಲಕೊಡುವ ಹಂತಕ್ಕೆ ಬರುತ್ತಲೇ ಹೂಬಿಡುತ್ತವೆ. ಹೂವಿನ ಜೊತೆಗೇ ಕಾಯಿಗಟ್ಟುತ್ತವೆ. ಹೀಗೆ ಕಾಯಿಗಟ್ಟುವುದನ್ನು ಮೆಣಸಿಗಾದರೆ 'ಮಿಜ್ಯಕೂರುವುದು' ಎಂದೂ, ಬದನೆಗಾದರೆ 'ಮಿಡಿಕೂಕಂಬುದ್' ಎಂದೂ ಕರೆಯುತ್ತಾರೆ. ಮೆಣಸು ಹಾಗೂ ಬದನೆಗಳೆರಡರಲ್ಲೂ ಗೆಣಸಿನಲ್ಲಿರುವ ಹಾಗೆಯೇ 4-6 ಏರಿ ಸೇರಿದ ಗುಚ್ಚವಾದ 'ಕಣ್ಣು', ಹತ್ತಾರು ಕಣ್ಣುಗಳ ಸಾಲಿನ 'ಪಟ್ಟಿ' ಎನ್ನುವ ಬೆಳೆಜಾಗವನ್ನು ವಿವರಿಸಿಕೊಳ್ಳುವ ಪ್ರಮಾಣವಾಚಕ ಪದಪ್ರಯೋಗಗಳಿವೆ. ಈ ಬೆಳೆಗಳಿಗೆ ವಾರಕ್ಕೊಂದಾವರ್ತಿಯಾದರೂ ನೀರು ಹಾಯಿಸುತ್ತಾರೆ. ವಿಶೇಷವಾಗಿ ಮೆಣಸಿನ ಬೆಳೆಯಲ್ಲಿ ಕೋಡು / ಕಾಯಿಬಿಡುವ ಸರದಿಯನ್ನು 'ಇಜ್ಜರ್ಗಿ' ಎನ್ನುವ ಪರಿಭಾಷೆಯಲ್ಲಿ ಗುರುತಿಸುತ್ತಾರೆ. (ಒಂದನೇ ಇಜ್ಜರಿಗಿ, ಎರಡನೇ ಇಜ್ಜರಿಗಿ) ಅಚ್ಚರಿ ಎನ್ನುವಂತೆ ಕೋಳಿಸಾಕಣೆಯಲ್ಲಿ ಕೋಳಿಹೆಂಟೆಯ ಮರಿಸರಣಿಯನ್ನೂ ಇದೇ ಪದ ಬಳಸಿ ಗುರುತಿಸಿಕೊಳ್ಳಲಾಗುತ್ತದೆ. ಮೊದಲ ಇಜ್ಜರಿಗಿಯಲ್ಲಿನ ಕಾಯಿಗಳು 'ನೀಕ್' / ಉದ್ದವಿದ್ದು, ಕೊನೆಕೊನೆಯ ಇಜ್ಜರಿಗೆಯಲ್ಲಿನ ಕಾಯಿಗಳು 'ಚೀಂಕ್' ಆಗ್ತಾ ಹೋಗ್ತವೆ. ಈ ಇಜ್ಜರಿಗೆ ಎನ್ನುವ ಪದ ಕಾಯಿ / ಕೋಡು ಬಿಡುವ ಅಪ್ಪಿಯಂತಹ ಕಾಳಿನ ಬೆಳೆಯಲ್ಲಿಯೂ ಬಳಕೆಗೊಳ್ಳುತ್ತದೆ.

ಗೆಣಸು ಬೆಳೆಯುವ ಕ್ರಮ : ಗೆಣಸಿನ ಬೇಸಾಯಕ್ಕೆ ಬೀಜವಾಗಿ ಬೀಳನ್ನೇ ಬಳಸಲಾಗುತ್ತದೆ. ಪೂರ್ವಭಾವಿಯಾಗಿ ಬೀಜವಾಗಿ ಬಳಸುವ ಬೀಳನ್ನು ಉಳಿಸಿಕೊಳ್ಳುವ ಕ್ರಮವನ್ನು 'ಒಗ್ಗ್‌ಹಾಕುವುದು' ಎನ್ನುತ್ತಾರೆ. ಈ ವರ್ಷದ ಗೆಣಸಿನ ಬೀಳನ್ನು ಮುಂದಿನ ವರ್ಷವೂ ಬೀಜವಾಗಿ

ಉಳಿಸಿಕೊಳ್ಳುವ ಸಲುವಾಗಿ ಒಂದಿಷ್ಟು ಗೆಣಸಿನ ಬೀಳನ್ನು ನೀರಿನ ಹೊಡೆತ ಕಡಿಮೆಯಿರುವ ಜಾಗದಲ್ಲಿ ನೆಲಕ್ಕೆ ಊರಿ ಮಳೆಬರುವ ತನಕ ನೀರುಣಿಸಿ ಉಳಿಸಿಕೊಳ್ಳುತ್ತಾರೆ. ಮಳೆ ಕಡಿಮೆಯಾಗುತ್ತಿದ್ದಂತೆಯೇ ವೈಶಾಖದ ಗೆಣಸಿನ ಬೆಳೆಗೆ ಬೇಕಾಗುವ ಹೆಚ್ಚುವರಿ ಬೀಳು ಬೆಳೆಯಲು ಅನುಕೂಲವಾಗುವಂತೆ ಏರಿಮಾಡಿ ನೆಡುತ್ತಾರೆ. ಈ ಬೀಳು ಹುಲುಸಾಗಿ ಬೆಳೆದು ಗಡ್ಡೆ ಕಟ್ಟುವ ಮೊದಲೇ ಬುಡಸಮೇತವಾಗಿ 'ಕಿತ್ತು / ಹರಿದು' ಮೂರು ಮೂರು ಗಂಟಿಗೊಂದು ತುಂಡು ಮಾಡಿಕೊಳ್ಳುತ್ತಾರೆ. ಈ ಗೆಣಸಿನ ಬೀಳಿನ ತುಂಡುಗಳನ್ನು ಅದಕ್ಕೆಂದು ಅಣಿಗೊಳಿಸಿಕೊಂಡ ಏರಿಯಲ್ಲಿ ಮಿಕ್ಕೆರಡು ಗಂಟುಗಳನ್ನು ಹೊರಕ್ಕುಳಿಸಿ, ಒಂದು ಗಂಟು ನೆಲದೊಳಕ್ಕುಳಿಯುವಂತೆ ನೆಡುತ್ತಾರೆ.

ಸಾಮಾನ್ಯವಾಗಿ ಕಾತಿ/ಏಣೆಲ್ ಬೆಳೆ ಬೆಳೆದ ಗದ್ದೆಯ ಬತ್ತದ ಕೊಯ್ಲು ಮುಗಿದ ತರುವಾಯ 'ಅರೆಬೈಲು/ಮೆಕ್ಕಿತಾರು' (ಬೆಟ್ಟುಗದ್ದೆಯೂ ಅಲ್ಲದ, ಬಯಲು ಎಂದು ಕರೆಸಿಕೊಳ್ಳುವ ತಂಡಿ/ ನೀರಿನಾಂಶ ಅಧಿಕವಿರುವ ಭೂಮಿಯೂ ಅಲ್ಲದ) ಗದ್ದೆಯನ್ನು ಕೂಳಿ (ಬತ್ತದ ಕಟಾವಿನ ತರುವಾಯ ಉಳಿಯುವ ಬುಡ) ಕಿತ್ತು ಅಥವಾ ಹಾಗೆಯೇ 4-8 ಬಾರಿ ಉಳುಮೆಮಾಡಿ ಮಣ್ಣನ್ನು ಹುಡಿಯಾಗುವಂತೆ ಹದಗೊಳಿಸಿಕೊಂಡ ತರುವಾಯ ಮಡಿ/ಏರಿಗಳನ್ನು ಮಾಡುತ್ತಾರೆ. ಹೀಗೆ ಮಾಡಲಾಗುವ ಏರಿಗಳ ಅಪ್ಪಿ / ಓಣಿಗಳಿಗೆ ಕೂಳಿಗೊಬ್ಬರ, ಹುಲ್ಲಿನಗೊಬ್ಬರ ಅಥವಾ ಕೈಡದ(ಕೆದ್ಲ್/ಮೆದೆ) ಗೊಬ್ಬರವನ್ನು ಬಳಸಿ ಅವುಗಳ ಒಡಲುತುಂಬಿ ಅದರ ಮೇಲೆ ಅವುಗಳ ಪಕ್ಕದ ದಂಡೆಗಳನ್ನು ಒಡೆದು ಮಣ್ಣೇರಿಸುತ್ತಾರೆ. ಈಗ ಹಿಂದಿನ ಅಪ್ಪಿಗಳು ಏರಿಗಳಾಗಿ, ಏರಿಗಳು ಅಪ್ಪಿಗಳಾಗಿ ಬದಲುಗೊಳ್ಳುತ್ತವೆ. ಹೀಗೆ ಗೊಬ್ಬರತುಂಬಿಕೊಂಡು ಏರಿಗಳಾಗಿ ಬದಲುಗೊಂಡವುಗಳ ಮೇಲೆ ಈಗಾಗಲೇ ಮೇಲೆ ತಿಳಿಸಿದಂತೆ ಸಿದ್ಧಗೊಳಿಸಿಕೊಂಡ 3-3 ಗಂಟುಳ್ಳ ಗೆಣಸಿನ ಬೀಳುಗಳನ್ನು ಒಂದೊಂದಾಗಿ ಸಾಲುಗಳಲ್ಲಿ ನೆಟ್ಟು, ಅವುಗಳ ಮೇಲೆಕೊಡದಿಂದ ಇಲ್ಲವೇ ಅಪ್ಪಿಗೆ ಹಾಯಿಸಲಾದ ನೀರನ್ನು ಬಳಸಿ ಲಘುವಾಗಿ ನೀರು ಚಿಮುಕಿಸುತ್ತಾರೆ. ನೀರಿನ ಉಪಚಾರ ಮತ್ತು ಮಣ್ಣಿನ ತೇವವನ್ನು ಬಳಸಿ ಒಂದೆರಡು ದಿನಗಳಲ್ಲಿ ಆ ಬೀಳು ನಿಧಾನವಾಗಿ ಜೀವಕಂಡು ಕೊಂಡು ನೆಟ್ಟಗಾಗುತ್ತದೆ. ಹೀಗೆ ತಲೆಯೆತ್ತಿದ ಬಳ್ಳಿಯನ್ನು ನೀರಿನ ಆರೈಕೆಯಲ್ಲಿ ಒಂದಿಷ್ಟು ದಿನ ಉಪಚಾರ ಮಾಡುತ್ತಿದ್ದಂತೆಯೇ ಅದು ಚಿಗುರೊಡೆದು ಹೊಸಜೀವಕಳೆ ತುಂಬುತ್ತದೆ. ಈ ಹಂತದಲ್ಲಿ ಅದರ ಏರಿಯ ಮಣ್ಣನ್ನು ಸಣ್ಣಗೆ ಕೆರೆದು, ಅಪ್ಪಿಯನ್ನು ಒಂದಿನಿತು ಘಾತಮಾಡಿ ಬೀಳಿನಬುಡಕ್ಕೆ ಮಣ್ಣು ಸೇರಿಸುವ, 'ಅರ್‌ಮಣ್ಣು' ಎಂದು ಕರೆಯಲಾಗುವ ಉಪಚಾರದ ಒಂದು ಹಂತವಿರುತ್ತದೆ. ಈ ಹಂತದಲ್ಲಿ ನೀರನ್ನು ನೇರವಾಗಿ ಅಪ್ಪಿಗೆ ಹಾಯಿಸಿ ಇಡಿಯ ಏರಿಯನ್ನು ಒದ್ದೆಯಾಗಿಡಲಾಗುತ್ತದೆ. ನೀರುಗೊಬ್ಬರ ಉಂಡು ಏರಿಯಲ್ಲಿರುವ ಗೊಬ್ಬರವನ್ನು ಹೀರಿಕೊಂಡು ಹುಲುಸಾಗಿ ಬೆಳೆಯ ತೊಡಗುವ ಬೀಳಿಗೆ ಅರಮಣ್ಣಿನ ತರುವಾಯ 15-20 ದಿನಗಳಲ್ಲಿ (ತೆಂಗಿನಕಾಯಿ ತುರಿತೆಗೆದಂತೆ) 'ಹೆರ್ಡ್‌ಹಾಕಿ', ತರುವಾಯದಲ್ಲಿ ಕೀಸಿಹಾಕುವ ಉಪಚಾರದ ಹಂತಗಳಿವೆ. 'ಕೀಸಿಹಾಕುವ' ಇದು ಏರಿಯನ್ನು ಮತ್ತಷ್ಟು ವೈನಗೊಳಿಸಿ ನೀರುಹಾಯಿಸುವ ವೇಳೆ ಏರಿಯ ಅಪ್ಪಿಯಲ್ಲಿ ಸಾಕಷ್ಟು ನೀರು ತುಂಬಿಕೊಳ್ಳಲು ಅನುಕೂಲವಾಗುವಂತೆ ಮಾಡುವ ಉಪಚಾರದ ವಿಧಾನ. ಈ ಹಂತ ಮುಗಿಯುತ್ತಿದ್ದಂತೆ ಗೆಣಸಿನಬೀಳು ಬೆಳವಣಿಗೆಯಾಗುತ್ತಿರುವ ಸೂಚನೆ ಕೊಡುವಂತೆ ಹೂಬಿಟ್ಟುಕೊಳ್ಳುತ್ತದೆ.

ಹೂಬಿಟ್ಟುಕೊಳ್ಳುತ್ತಾ ಬೆಳೆವಣಿಗೆಯ ಲವಲವಿಕೆ ತೋರುವ ಗೆಣಸಿನ ಬೀಳು ಗಡ್ಡೆಗಟ್ಟುತ್ತಿರುವ ಸೂಚನೆಯಾಗಿ ಅಥವಾ ಗೆಣಸು ಬೆಳೆಯುವಲ್ಲಿ ಅದು ಫಲ ನೀಡುವ ಸನ್ನಿಹಿತ ಸ್ಥಿತಿಯಲ್ಲಿರುವುದನ್ನು ಸಂಕೇತಿಸುವಂತೆ ಏರಿಯ ಹೊರಮೈಯಲ್ಲಿ ಅಲ್ಲಲ್ಲಿ 'ಒಡ್ಕ್' ಕಾಣಿಸಿಕೊಳ್ಳುತ್ತದೆ. ಇದನ್ನು 'ಒಡ್ತಿ' ಎಂದೂ ಕರೆಯುವುದುಂಟು. (ಅಚ್ಚರಿ ಎನ್ನುವ ಹಾಗೆ ಹೆಣ್ಣು ಋತುಮತಿಯಾಗುವುದನ್ನೂ 'ಒಡ್ತಿ' ಬೀಳುವುದೆಂದು ಸೂಚಿಸುವುದುಂಟಂತೆ !?). ಬೀಳು ಗಡ್ಡೆಬಿಡುವ ಹಂತ ತಲುಪಿದ್ದರ ಸೂಚನೆಯಾಗಿ ಅದರ ಏರಿ/ಮಡಿಯಲ್ಲಿ ಗಡ್ಡೆಯು ಹೊರಸೂಸಿ ಬಂದು ಕಾಣಿಸಿಕೊಳ್ಳುವ ಬೆಳವಣಿಗೆಯಿದು. ಈ ಹಂತ ಯಾಕೆ ಮುಖ್ಯವೆಂದರೆ ಈ ಸೂಚನೆ ಸಿಕ್ಕನಂತರ ಗೆಣಸಿನ ಏರಿಯನ್ನು ಕೀಸಿ ಹಾಕುವಂತಿಲ್ಲ. ಅಂದರೆ ಅದರ ಏರಿಯ ಮಣ್ಣನ್ನು ಗುದ್ದಲಿ ಬಳಸಿ ಒಪ್ಪಗೊಳಿಸುವಂತಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಏರಿಯೊಳಗಿರುವ ಗೆಣಸುಗಳಿಗೆ ಹಾನಿಯಾಗಿ ಗೆಣಸಿನ ಕಾಯಿಲೆಯಾದ 'ಚುಣ್ಣರೋಗ/ಚುಣ್ಣವು' ಕಾಣಿಸಿಕೊಂಡು ಉಳಿದ ಬೆಳೆಗಳಿಗೂ ವಿಸ್ತರಿಸಿ ಹಾನಿಯೊದಗುವ ಸಂಭವವಿರುತ್ತದೆ. ಹೀಗಾಗಿ ಬೆಳೆಗೆ ಮಣ್ಣಿನ ಮೂಲಕ ಮಾಡುವ ಉಪಚಾರಗಳಿಗೆ ಈ ಹಂತದಲ್ಲಿ ನಿಲುಗಡೆ ಸಿಕ್ಕಬೇಕು ಎಂಬ ಸೂಚನೆಯಾಗಿಯೇ ಇದನ್ನು ಪರಿಭಾವಿಸುತ್ತಾರೆ. ಆದರೆ ಈ ಒಡ್ತಿಗಳನ್ನು ನಾಜೂಕಾಗಿ ಕಿತ್ತು ಮೊದಲ ಬೆಳೆಯ ರುಚಿ ಅನುಭವಿಸುವುದು ಇದೆ. ಇದನ್ನು 'ಒಡ್ಕ್‌ಹೈಡುದ್/ಒಡ್ತಿಹುಡ್ಕುದ್' (ಒಡಕು ಅಗೆಯುವುದು/ ಒಡಕು ಹುಡುಕುವುದು) ಎನ್ನುತ್ತಾರೆ.

ಗೆಣಸು ಬೆಳೆಯುವಲ್ಲಿ ಬೀಳುಊರಲು ಮಾಡುವ ಅವಕಾಶವನ್ನು ಏರಿ ಎಂದೂ ಎರಡೂ ಏರಿಗಳ ನಡುವಿನ ಸವಳು/ಓಣಿಯನ್ನು 'ಅಪ್ಪಿ' ಎಂದೂ ಕರೆಯುತ್ತಾರೆ. ನೀರುಬಿಡಲು ಅನುಕೂಲವಾಗುವಂತೆ 4-5 ಅಪ್ಪಿಗಳನ್ನು ಒಂದೊಂದು ಗುಂಪಾಗಿ ಪರಿಭಾವಿಸಿ ಅವೆಲ್ಲಕ್ಕೂ ಸೇರಿ ಒಂದಡೆ ನೀರಗಡುವನ್ನು ಇರಿಸುತ್ತಾರೆ. ಹೀಗೆ ಒಂದೇ ನೀರಗಡುವುಳ್ಳ 4-5 ಏರಿಗಳ ವ್ಯಾಪ್ತಿಯನ್ನು 'ಕಣ್ಣ್/ಕಣ್ಣು' ಎಂದು ಹೆಸರಿಸುತ್ತಾರೆ. ಇಂತಹ 4-6 ಕಣ್ಣುಗಳ ಒಂದು ಮಡಿಯನ್ನು 'ಪಟ್ಟಿ' ಎಂದು ಹೆಸರಿಸಿ, ಗೆಣಸುಬೆಳೆದ ವ್ಯಾಪ್ತಿಯನ್ನು ಹೇಳುವಲ್ಲಿ ಒಂದ್‌ಪಟ್ಟಿ/ಎರ್‌ಪಟ್ಟಿ ಎಂಬಂತೆಯೇ ಕರೆಯುವುದು ರೂಢಿಯಿದೆ. ಕಟಾವಿಗೆ ಬಂದ ಗೆಣಸನ್ನು ಸಂಗ್ರಹಮಾಡುವ ವೇಳೆ ಗದ್ದೆಯ ಬೀಳನ್ನು ಮೊದಲು ಕುಯ್ದು/ಹರಿದು ತೆಗೆದು, ತದನಂತರದಲ್ಲಿ ಏರಿಯ ಎಡ-ಬಲಕೋನಗಳಿಗೆ ಅಂದರೆ ಕ್ವಾರಿಮೇಲೆ (ಅಡ್ಡಲಾಗಿ) ಗುದ್ದಲಿಯನ್ನು ಬಳಸಿ ಏರಿಯನ್ನು 'ಹೈಡುತ್ತಾ/ಅಳಿಯುತ್ತಾ' ಗೆಣಸಿನ ಗಡ್ಡೆಗಳ ಗೊಂಚನ್ನು ಹೊರಗೆ ಹಾಕಿಕೊಳ್ಳುತ್ತಾ ಹೋಗುತ್ತಾರೆ. ಏರಿಯಿಂದ ಹೊರತೆಗೆದ ಗೆಣಸನ್ನು ಆಯ್ದು ಅವುಗಳ ಗಾತ್ರಾನುಸಾರಿಯಾಗಿ ವಿಭಜಿಸುತ್ತಾರೆ. ಚಿಕ್ಕಗಾತ್ರದವುಗಳನ್ನು 'ಮಿಳಿ/ಮಿಳ್ಳಿ' ಎಂದೂ, ಮಧ್ಯಮಗಾತ್ರದವುಗಳನ್ನು 'ಎಡಗೆಣಗ್' ಎಂದೂ ಮತ್ತು ದೊಡ್ಡವುಗಳನ್ನು 'ಗೆಣಗಿನಗೆಂಡೆ' ಎಂದೂ ಬೇರೆ ಬೇರೆಯಾಗಿಯೇ ಗುರುತಿಸಿಕೊಳ್ಳುತ್ತಾರೆ. ಅತ್ಯಂತ ಚಿಕ್ಕದಾದ ಬರಿಯ ಬೇರಿನಂತಿರುವವುಗಳನ್ನು 'ಬೇರು', 'ಜಿಬ್ರ್', 'ಜಿಬ್ರ್‌ಬೇರ್' ಎಂದೂ ಕರೆಯುತ್ತಾರೆ. ಅತಿಹೆಚ್ಚು ಜಿಬ್ರೇ ಆದರೆ ಅದು ಉತ್ತಮಬೆಳೆ ಅಲ್ಲ.

ಈ ಬೆಳೆಯಲ್ಲಿ ಹಪ್ಪಳಮಾಡಲು ಅನುಕೂಲಕರವೆನ್ನಲಾದ ಕಸಿಬುಕ್ಕ, ಕೆಂಪಣ್ಣ, ಹೊಡ್‌ಗೆಣ್ಗ್, ಬುಕ್ಕನ್‌ಚೋಟ್, ಮಂಗನ್

ಚೋಟ್ ಎನ್ನುವ ವಿಧಗಳಲ್ಲದೆ, ತಿನ್ನಲೆಂದು ಬಳಸುವ ಮೆದುಜಾತಿಯ ಹೇಸ್‌ಗೆಣ್ಸು, ಬೆಳಿಗೆಣ್ಸು ಮುಂತಾದ ಅನೇಕ ಬಗೆಗಳಿವೆ. ಗೆಣಸನ್ನು ಬೇಸಿ ಮತ್ತು ಸುಟ್ಟು ತಿನ್ನುವ ಸಾಮಾನ್ಯ ಕ್ರಮವಲ್ಲದೆ ಕೊಡದೊಳಗಿಟ್ಟು ವಿಶೇಷಕ್ರಮದಲ್ಲಿ ಸುಡುವ 'ಕೊಡ್ಗೆಣ್ಗ್/ಕೊಡ್ಗೆಣ್ಸ್' ಎನ್ನುವ ಅಪರೂಪದ ವಿಧಾನವೂ ಇದೆ. ಸುಡುಮಣ್ಣು ಸುಡುವಬೆಂಕಿ ಈ ರೀತಿ ಬೇಯಿಸಲು ಹೆಚ್ಚು ಅನುಕೂಲಕರ. ಮಣ್ಣನ್ನು ಗೊಬ್ಬರವಾಗಿಸುವ ಈ ಮಣ್ಣು ಸುಡುವ ಬೆಂಕಿ ಆವಿ ಒಲೆಯಂತೆ ಈ ಮಾದರಿಯಲ್ಲಿ ಗೆಣಸು ಬೇಯಿಸಲು ಹಾಳತವಾಗಿ ಒದಗಿಬರುತ್ತದೆ.

ಸೌತೆ, ಕರ್ಗುಂಜಿ, ಗುಂಬಾಳ್ : ಬೀಳು / ಬಳ್ಳಿಗಳ ರೂಪದ ಈ ಬೆಳೆಗಳನ್ನು ವೃತ್ತಾಕಾರದ ಗುಪ್ಪಿಗಳಲ್ಲಿಯೂ ದಪ್ಪನೆಯ ಏರಿಗಳ ರೂಪದಲ್ಲಿಯೂ ಬೆಳೆಯುವುದಿದೆ. ವೃತ್ತಾಕಾರದ ಗುಪ್ಪಿಗಳನ್ನು ಮಾಡುವುದು ಹೆಚ್ಚಾಗಿ 'ಹೊಯ್ನೀರ' (ನೀರನ್ನು ಕೊಡದಲ್ಲಿ ಹೊತ್ತುಸಾಗಿಸಿ ಸುರಿಯುವುದನ್ನು ಸಂಕೇತಿಸುವ ಪದ) ತಾವುಗಳಿಗೆ. 'ಬಿಡ್ನೀರ್' ಆದಲ್ಲಿ ಗುಪ್ಪಿಯವರೆಗೆ ತೋಡುಗಳಿರುತ್ತವೆ. ಹೆಚ್ಚಿನ ಸಂದರ್ಭದಲ್ಲಿ ಇಡಿಯ ಗದ್ದೆಯನ್ನೇ ನೆನೆಸಿಬಿಡುತ್ತಾರೆ. ಗುಪ್ಪಿಯಲ್ಲಿ ನೆಟ್ಟ ಗುಂಬಳ, ಕರ್ಗುಂಜಿ/ ಕಲ್ಲಂಗಡಿಗಳ ಸಣ್ಣ ಸಣ್ಣ ಗಿಡವು 'ಉಂಗಿಲ್‌ಕೊಡಿ'ಯೊಡೆದು ಬೀಳಾಗುತ್ತಿದ್ದಂತೆಯೇ ಆಧಾರಕ್ಕೆ 'ಅಡ್ರ್'/ಮರದಕಿರುಟೊಂಗೆ ನಿಲ್ಲಿಸಿ, ಅದರ ಮೇಲೆ ಬೀಳು ಹಂಬು/ಹರಡುವಂತೆ ಮಾಡುತ್ತಾರೆ. ಕೆಲವೊಮ್ಮೆ ಬೀಳಿನಲ್ಲಿ ಉಂಗಿಲ್‌ಕೊಡಿಗಳ ಹಿಡಿತಕ್ಕಾಗಿ ಮತ್ತು ಬೀಳು 'ಬರುನೆಲ'ದ ಮೇಲೆ ಬಿಸಿ ಅನುಭವಿಸಬಾರದೆಂಬ ಕಾರಣಕ್ಕಾಗಿ ನೆಲದಮೇಲೆಯೇ ಅಡ್ರ್ ಹಾಸಿ ಅದರ ಮೇಲೂ ಬೀಳು ಹಂಬುವಂತೆ ಮಾಡುತ್ತಾರೆ. ಏರಿಮಾಡಿ ನಡುವುದಾದಲ್ಲಿ ವಿಶೇಷವಾಗಿ ಸೌತೆಯ ಏರಿಗಳನ್ನು ಚೆನ್ನಾಗಿ ಸುಟ್ಟುಕೊಂಡು ತರುವಾಯದಲ್ಲಿ ಬೀಜನೆಡುವುದು ಹಳೆಗಾಲದ ರೂಢಿ. ಗುಪ್ಪಿಯಿರಲಿ , ಏರಿಯಿರಲಿ ಗಿಡಕ್ಕೆ ಮಣ್ಣಿನ ಉಪಚಾರಗಳಾದ ಅರ್ಮಣ್ಣ, ಹೆರ್ಡ್‌ಹಾಕುದ್, ಕೀಸ್‌ಹಾಕುದ್-ಇವೆಲ್ಲವೂ ಹೆಚ್ಚು ಕಡಿಮೆ ಇರುತ್ತವೆ. ಗುಪ್ಪಿಯಾದಲ್ಲಿ ಗುಪ್ಪಿಯನ್ನು ಮಣ್ಣುಹಾಕಿ ಏರಿಸುತ್ತಾರೆ. ಸೌತೆಯ ಏರಿಯಲ್ಲಿಯೂ ಬೀಳುಬಲಗೊಂಡು ಹಬ್ಬಲು ತೊಡಗುವ ಪೂರ್ವದಲ್ಲಿಯೇ ಅಡ್ರ್ ಹುಗಿದು ಬೀಳಿಗೆ ಬೇಕಾದ ಆಧಾರವನ್ನೊದಗಿಸುತ್ತಾರೆ. ಈ ಏರಿಗಳಿಗೆ ಸಾಮಾನ್ಯವಾಗಿ ಬಿಡ್ನೀರಿನ ವ್ಯವಸ್ಥೆಯನ್ನೇ ಮಾಡಿಕೊಳ್ಳುತ್ತಾರೆ. ಇನ್ನು ಬೀಜಹಾಕುವುದಕ್ಕೆ ಸಂಬಂಧಿಸಿದಂತೆ ಅಗತ್ಯಕ್ಕಿಂತ ಹೆಚ್ಚು ಬೀಜಗಳನ್ನು ನೆಟ್ಟು ದೊಡ್ಡವಾಗುತ್ತಿದ್ದಂತೆಯೇ ದಪ್ಪ/ದಟ್ಟವಾಗಿದ್ದಲ್ಲಿ ಗನಾವ್/ ಗಟ್ಟಿಯಾದವುಗಳನ್ನು ಉಳಿಸಿ ಹಡ್ಕಿ/ಸಸಾರ/ಕಳಪೆ ಆದವುಗಳನ್ನು ನಿವಾರಿಸಿ ಸಸಿ ದಟ್ಟವಾಗದಂತೆ ಜಾಗರೂಕತೆ ವಹಿಸುತ್ತಾರೆ. ಈ ಬೀಜಗಳಿಗೆ ನಲು/ ಗೊಬ್ಬರವಾಗಿ 'ಸಗಣಿಬೆಯ್ಪು'/ಒಣಗಿದ ಸಗಣಿಯನ್ನು ಹೆಚ್ಚಾಗಿ ಸಂಗ್ರಹಿಸುವುದುಂಟು. ಇನ್ನು ಈ ಬೆಳೆಗಳ ಬೀಜಕ್ಕಾಗಿ ಬೆಳೆದ ಕಾಯಿಗಳನ್ನು ಬೀಜದ ಕಾಯಿಗಳೆಂದು ಸರಿಯಾಗಿ ಬಲಿಯಲು ಬಿಟ್ಟು ಉಪಯೋಗಿಸುವ ವೇಳೆ ಇವುಗಳಿಂದ ಬೀಜ ಸಂಗ್ರಹಿಸಿ, ನೀರಿನಲ್ಲಿ ತೊಳೆದು ಒಣಹಾಕಿ ತದನಂತರದಲ್ಲಿ 'ಗಾರ್‌ಬೂದಿ'/ತಂಡಿಯಲ್ಲದ ಬೂದಿಯಲ್ಲಿ ಊಡಿ, 'ಗೆಯ್ಪಿಗುಜ್ಜಿಗಿ/ತೆಂಗಿನ್‌ಬುಯ್ಡಿ'ಯಲ್ಲಿ ಹಾಕಿಟ್ಟು, ಗಾಳಿಹೋಗದಂತೆ 'ಬೆಣಿ'/ಮುಚ್ಚಳಹಾಕಿ ಇಟ್ಟಿರುತ್ತಾರೆ. ಈ ಬೆಳೆಗಳಲ್ಲಿ ಕುಂಬಳವನ್ನು ಮನೆಯೊಳಗೆ ಕೊಂಡುಹೋಗುವುದಿಲ್ಲ. ಅದನ್ನು ಹಟ್ಟಿಯಣೆ/ದನಕಟ್ಟುವ ಜಾಗದಲ್ಲಿಯೇ ಹಟ್ಟಿಯ ಜಂತಿಗೆ ಮಡಿಬಳ್ಳಿಯ ಆಧಾರದಲ್ಲಿ ತೂಗುಹಾಕುತ್ತಾರೆ. ಸೌತೆಕಾಯಿಯನ್ನು ಮನೆಯೊಳಗಡೆಯೇ ಲಭ್ಯವಿರುವ ಜೋತಾಡುವಂತಿರುವ ಕೋಲು ಇಲ್ಲವೇ ಮರದ ಅಡ್ಡಗೆ ವೃತ್ತಾಕಾರವಾಗಿ ಮಾಡಿದ ಓಲಿಪಿಣಿ/ತೆಂಗಿನೋಲೆಯನ್ನು ಬಳಸಿ ತೂಗುಹಾಕುತ್ತಾರೆ. ಹಣ್ಣುಗಳಾದ ಇಬ್ಬುಳ್, ಕರ್ಗುಂಜಿ/ಕಲ್ಲಂಗಡಿಗಳನ್ನು ಹೀಗೆ ಕಾಯ್ದಿಟ್ಟು ಬಳಸುವ ಕ್ರಮವಿಲ್ಲ.

ಧಾನ್ಯದಬೆಳೆ : ಮುಖ್ಯವಾಗಿ ಧಾನ್ಯದ ಬೆಳೆಗಳನ್ನು ಕಾತಿಸಾಗುವಳಿಯು ಮುಗಿಯುತ್ತಿದ್ದಂತೆ ಮತ್ತು ಸುಗ್ಗಿಯನ್ನು ಹಿಂಬಾಲಿಸಿಕೊಂಡು ಮಾಡುತ್ತಾರೆ. ಕಾತಿಯ ಬೆನ್ನಿಗೆ ಧಾನ್ಯಹಾಕುವ ಗದ್ದೆಗಳು ವರ್ಷದಲ್ಲಿ ಒಂದೇ ಸಾಗುವಳಿಗೆ ಒಳಗಾಗುವಂಥವು ಮತ್ತು ಮಳೆಗಾಲದ ಅನಂತರ ಎರಡು ತಿಂಗಳ ತನಕ ತಂಪು ಉಳಿಯುವಂಥವುಗಳಾಗಿರುತ್ತವೆ. ಇಂತಹ ಗದ್ದೆಗಳಿಗೆ ಉದ್ದು, ಹುರುಳಿ, ಪಚ್ಚೆಸರು/ಹಸುರು ಹೆಸರು - ಇಂತಹ ಧಾನ್ಯಗಳನ್ನು ಹಾಕುತ್ತಾರೆ. ಸುಗ್ಗಿಯ ಬೆನ್ನಿಗೆ ಹಾಕುವ ಧಾನ್ಯಗಳಿಗಿಂತ ಈ ಮೊದಲ ಹಂತದಲ್ಲಿ ಉಳುಮೆ ಕಡಿಮೆ. ಬೇಸಗೆಯಲ್ಲಿ, ಎರಡನೇ ಅವಧಿಯಲ್ಲಿ ಉಳುಮೆ ಹೆಚ್ಚು. ಈ ಹಂತದ ಧಾನ್ಯಗಳಲ್ಲಿ ಅವಡೆ, ಕಬ್ಬೆಸರುಗಳಂತಹ ಧಾನ್ಯಗಳನ್ನು ನೀರಿನ ವ್ಯವಸ್ಥೆಯ ಮೂಲಕವೂ ಬೆಳೆಯುವುದಿದೆ. ಈ ಹಂತದಲ್ಲಷ್ಟೇ ಬೆಳೆಯುವ ಮುಖ್ಯ ಧಾನ್ಯವೆಂದರೆ ಎಳ್ಳು. ಎಳ್ಳಿನ ಬೀಜವನ್ನು ಬಿತ್ತುವ ಮುನ್ನ ಉಳಿದ ಧಾನ್ಯಗಳಿಗಿಂತ ಭಿನ್ನವಾಗಿ ನೀರಿನಲ್ಲಿ ನೆನೆಹಾಕಿ ಒಂದಿಷ್ಟು ಉಬ್ಬಿಸಿಕೊಳ್ಳುತ್ತಾರೆ. ಈ ಧಾನ್ಯಗಳಲ್ಲಿ ಎರಡೂ ಅವಧಿಯಲ್ಲಿ ಬೆಳೆಯಬಲ್ಲ ಉದ್ದು, ಹೆಸರಿನಂತಹ ಕಾಳುಗಳ ಬೆಳೆಗೆ ಬುಡಕ್ಕಿಂತ ಹೆಚ್ಚಾಗಿ ಎಲೆಗೇ ಆದ್ಯತೆ. ಈ ಗದ್ದೆಗಳಿಗೆ ಮತ್ತೆ ಮತ್ತೆ ಬೂದಿಚಲ್ಲುತ್ತಾರೆ. ಮುಖ್ಯವಾಗಿ ಇದು ಎಲೆಗೆ ರೋಗಬೀಳದಂತೆ ವಹಿಸುವ ಜಾಗರೂಕತೆ.

ಧಾನ್ಯಗಳನ್ನು ಕಿತ್ತು ತಂದು ಕಾಳು ಬಿಡಿಸುವುದರಲ್ಲಿಯೂ ಅವುಗಳದ್ದೇ ಆದ ಅನನ್ಯ ಕ್ರಮಗಳಿವೆ. ಉದ್ದು, ಹುರುಳಿಗಳನ್ನು ಮೂರೆಲೆ ಹಣ್ಣಾಗುತ್ತಿದ್ದಂತೆಯೇ ಕೀಳುತ್ತಾರೆ. ಸಾಮಾನ್ಯವಾಗಿ ಏರುಬಿಸಿಲಿನಲ್ಲಿ ಧಾನ್ಯಕೀಳುವುದಿಲ್ಲ. ಕಾಳುಗಳು ಸಿಡಿದು ಹೋಗದಂತೆ ತಂಪುಹೊತ್ತಿನಲ್ಲಿಯೇ ಕೀಳುತ್ತಾರೆ. ಉದ್ದು, ಹುರುಳಿಗಿಂತ ಭಿನ್ನವಾಗಿ ಎಳ್ಳನ್ನು ಕಿತ್ತು ತಂದು ನೇರವಾಗಿ ಬಿಸಿಲಿಗೆ ಹರಡುವುದಿಲ್ಲ. ಕಿತ್ತುತಂದ ಹಸಿಎಳ್ಳಿನ ಗಿಡಗಳನ್ನು ಒಂದೆರಡು ದಿನಗಳು ಚನ್ನಾಗಿ ಮುಗ್ಗುವಂತೆ ಬುಡವನ್ನು ಹೊರಮುಖವಾಗಿಟ್ಟು 'ಗುಡ್ಮಿ' ಮಾಡಿ ಗಾಳಿ ಬೆಳಕುಗಳು ಸೋಂಕದಂತೆ ಮುಚ್ಚುತ್ತಾರೆ. ಚೆನ್ನಾಗಿ ಮುಗ್ಗಿದ ಹಂತದಲ್ಲಿ ಈ ಗುಡ್ಮಿಯಿಂದ ಬಿಸಿಯಾದ ಶಾಖ ಬರುತ್ತಿರುತ್ತದೆ. ಇದನ್ನು ನೋಡಿಕೊಂಡು ಎಳ್ಳನ್ನು ಬಿಸಿಲಿಗೆ ಒಣಹಾಕಿ 'ಹಡ್ಲ್‌ಒಕ್ಕುವ' ವೇಳೆ ತಳುಹುಲ್ಲು ಕೊಡ್ಕಲು/ ಕೊಡವಲು ಬಳಸುವ 'ತೊಡಾಲ್'ನ್ನು ಬಳಸಿ ಅಲ್ಲಾಡಿಸಿ ಎಳ್ಳುಕಾಳುಗಳು ಚನ್ನಾಗಿ ಉದುರುವಂತೆ ನೋಡಿಕೊಳ್ಳುತ್ತಾರೆ. ಒಂದೆರಡು ಬಿಸಿಲಿಗೆ ಹಾಕುತ್ತಿದ್ದಂತೆಯೇ ಎಳ್ಳುಗಿಡದ ಎಲೆ ಮತ್ತು ಕಾಳುಗಳೆಲ್ಲವೂ ಉದುರಿ ಉರುವಲಿಗೆ ಯೋಗ್ಯವಾದ ಬರಿಯ 'ಎಳ್ಳ್‌ಕಣ್ಕ್'ಗಳು ಮಾತ್ರ ಉಳಿಯುವಂತಾಗುತ್ತದೆ. ಉದುರಿದ ಎಲೆ ಮತ್ತು ಕಾಳುಗಳನ್ನು ಗಾಳಿಗೆ ಹಿಡಿಯುವ ಮೂಲಕ ಬೇರ್ಪಡಿಸಿಕೊಳ್ಳುತ್ತಾರೆ. ಉದ್ದು, ಹುರುಳಿಯ ಕಾಳುಗಳು ಬಿಸಿಲಿಗೆ ಉದುರದೇ ಉಳಿದಲ್ಲಿ ಕೋಲು ಅಥವಾ ತೆಂಗಿನ ಮರದ ಗರಿಯ ಬುಡವನ್ನು ಬಳಸಿ ಬಡಿದು ಉದುರಿಸುತ್ತಾರೆ. ಈ ಉದ್ದು, ಹುರುಳಿ, ಹೆಸರುಕಾಳುಗಳ ಧಾನ್ಯದ ಸಸ್ಯಗಳು ಕಾಳು ಉದುರಿದ

ಮೇಲೆಯೂ ಹಸುಗಳ ಆಹಾರವಾಗಿ ಬಳಸಬಲ್ಲವಾದ್ದರಿಂದ ಇವುಗಳ ಎಲ್ಗೊಣ್ಣೆ ಮತ್ತು ಕೊಣ್ಣೆಗಳನ್ನು ಗುಡ್ಮಿಮಾಡಿಯೋ, ಮುಡ್ಲ್‌ಕೊಟ್ಟೆಯಲ್ಲಿಯೋ ರಕ್ಷಣೆ ಮಾಡಿಡುತ್ತಾರೆ. ಅವಡೆಯ ಬೀಳಿನಲ್ಲಿರುವ ಎಲೆಗಳು ಉದುರಿ ಉಳಿಯುವ ದಕ್ಕಿನಂತಹ ಭಾಗವನ್ನು 'ಅವ್ವಿದಂಕ್' ಎಂದು ಗುರುತಿಸಿ ಅದನ್ನೂ ಕತ್ತರಿಸಿ ಪಶು ಆಹಾರವಾಗಿ ರಕ್ಷಿಸಿಕೊಳ್ಳುತ್ತಾರೆ.

ಕೃಷಿ ಪರಿಕರಗಳ ಪರಿಚಯ :

ನೇಗಿಲು - ಸ್ವರೂಪ ಮತ್ತು ವಿಧಗಳು : ಇಂದಿಗೆ ನೇಗಿಲುಗಳೆಲ್ಲವೂ ಕಬ್ಬಿಣಮಯವಾಗಿ ನೇಗಿಲಿಗೆ ಆತು ಕೂರುವ ಹೀಸು ಅಥವಾ ನೊಗ ಮತ್ತು ನೇಗಿಲಿಗೆ ಸಂಪರ್ಕಬೆಸೆಯುವ ಮರದ ಕಾವು ಮಾತ್ರವೇ ಮರದ್ದಾಗಿ ಉಳಿದುಕೊಂಡಿದೆ. ಆದರೆ ಹಿಂದೆ ನೇಗಿಲಕುಳವೊಂದನ್ನುಳಿದು ಮಿಕ್ಕೆಲ್ಲವೂ ಮರದಿಂದಲೇ ಆಗುಗೊಳ್ಳುತ್ತಿದ್ದುದರಿಂದ, ಕೃಷಿಯ ಈ ಉಪಕರಣಕ್ಕಾಗಿ ಪೂರ್ತಿಯಾಗಿ ಮರವನ್ನೇ ಆಶ್ರಯಿಸಬೇಕಾಗುತ್ತಿತ್ತು. ಸಾಮಾನ್ಯವಾಗಿ ಕಾಸಾನು/ಕಾಸರಕ/ಕಾಯೆರ್, ಮಾವು ಮತ್ತು ಇವು ಲಭ್ಯವಾಗದೇ ಹೋದರೆ ದೂಪ ಮತ್ತಿತರ ಮರವನ್ನು ಅವಲಂಬಿಸುವುದುಂಟು. ನೇಗಿಲು ಉಪಭಾಗಗಳಿಂದ ಕೂಡಿದ ಒಂದು ಪೂರ್ಣಸರಕು. ಅದರ ಬಿಡಿಭಾಗಗಳಾಗಿ ಮೇಳಿ/ಮ್ಯಾಳಿ, ಕುದ್ರಿ, ಹೀಸ್, ಹತ್ತಿಗಳನ್ನು ಕಾಣುತ್ತೇವೆ. ಮೇಳಿ ಎನ್ನುವುದು ಉಳುಮೆಗಾರ ನೇಗಿಲನ್ನು ನಿಯಂತ್ರಿಸಲು, ನಿರ್ದೇಶಿಸಲು ಮತ್ತು ನೇಗಿಲಿಗೆ ಭಾರವಾಗುವ ಮಣ್ಣು-ಜಬಲುಗಳ ಹೊರೆ (ಚಂಡಿ/ಚಂಡೆ) ಜಾರಿಸಲು ನೇಗಿಲನ್ನು ನೆಲದಿಂದ ಮೇಲೆತ್ತುವ ಸಲುವಾಗಿ ಉಪಯೋಗಿಸಲೆಂದು ನೇಗಿಲಿಗೆ ಅಳವಡಿಸಲಾದ ಸಾಧನ. ಇದು ಸ್ವಲ್ಪ ನೇರ್ಪಡಿಸಲಾದ ಇಂಗ್ಲಿಷಿನ'S' ಸ್ವರೂಪದಲ್ಲಿರುತ್ತದೆ. ಇದನ್ನು ನೇಗಿಲ ಬುಡಭಾಗಕ್ಕೆ ಆತುಕೂರುವಂತೆ ಕೀಲುಹೊಡೆದು ಕೂರಿಸಿರುತ್ತಾರೆ. ಈ ಮೇಳಿಯನ್ನು ಭದ್ರಗೊಳಿಸಲು ಹಾಗೂ ನೇಗಿಲಿಗೆ ಜೋಡಿಸಲಾಗುವ ಹೀಸು-ಕಾವನ್ನು ಗಟ್ಟಿಯಾಗಿ ಅಲ್ಲಾಡದಂತೆ ಅಳವಟ್ಟು ಕೂರುವಂತೆ ಮಾಡಲು ಅರ್ಧಚಂದ್ರಾಕಾರವನ್ನು ಹೋಲುವ ಅಟ್ಟೆಯಂತಹ ಡೊಂಕಾದ ಮರದ ರಚನೆಯೊಂದನ್ನು ಬಳಸುತ್ತಾರೆ. ಇದನ್ನು ನೇಗಿಲಕುದ್ರಿ/ಕುದುರೆ ಎಂದೇ ಗುರುತಿಸುತ್ತಾರೆ. ಇದರ ಒಂದು ತುದಿಯನ್ನು ಮೇಳಿಗೆ ಹೊಡೆಯಲಾಗುವ ಕೀಲಿಗೆ ಹೊಂದಿಕೊಂಡಂತೆ ಮೇಳಿಯ ಮೇಲ್ಭಾಗಕ್ಕೂ, ಇನ್ನೊಂದು ತುದಿಯನ್ನು ಹೀಸಿನ ಬುಡಕ್ಕಿಂತ ಕಿಂಚಿತ್ ಮೇಲ್ಭಾಗದಲ್ಲಿ ಮಾಡಲಾಗುವ ಗುಳಿಗೂ ಅಳವಡಿಸಲಾಗುತ್ತದೆ. ಸಾಮಾನ್ಯವಾಗಿ ಈ ಸಾಧನವನ್ನು ಸ್ಥಳೀಯವಾಗಿ ನ್ಯಾಮಾರ್ ಎಂದು ಕರೆಯಲಾಗುವ ಮರದ ಡೊಂಕುಟೊಂಗೆಯನ್ನೇ ಬಳಸಿ ಸಿದ್ಧಪಡಿಸಿಕೊಳ್ಳುತ್ತಾರೆ. ಇನ್ನೊಂದು ಮುಖ್ಯಾಂಗವೆಂದರೆ 'ಹೀಸು'. ಈ ಹೀಸಿಗಾಗಿ ಕಿರುಬೋಗಿ ಮರವನ್ನೇ ಬಳಸುವುದು ಹೆಚ್ಚು ವಾಡಿಕೆ. ಹೀಸಿನ ಒಂದು ತುದಿಯನ್ನು ಆಯತ ಸ್ವರೂಪಕ್ಕೆ ಅಣಿಗೊಳಿಸಿ ನೇಗಿಲಿಗೆ ಅಳವಡಿಸುತ್ತಾರೆ. ಇದಕ್ಕೆಂದು ನೇಗಿಲಿನ ನಡುಮಧ್ಯೆ ಕುಳ / ಹತ್ತಿ ಕೂರಿಸುವುದಕ್ಕೆ ಕಿಂಚಿತ್‌ಹಿಂದೆ ಒಟ್ಟೆ/ಗುಳಿ/ರಂಧ್ರವೊಂದನ್ನು ಮಾಡಿ ಅದರಲ್ಲಿ ಹೀಸಿನ ಬುಡವನ್ನು ಭದ್ರವಾಗಿ ಅಳವಡುವಂತೆ ಮಾಡಿ, ಅದರಲ್ಲಿ ಹೀಸನ್ನು ತೂರಿಸುತ್ತಾರೆ. ಆ ಹೀಸು ಜಾರಿಹೋಗದಂತೆ ಹೀಸಿನ ಬುಡಭಾಗದಲ್ಲಿ ರಂಧ್ರವೊಂದನ್ನು ಮಾಡಿ ಅದಕ್ಕೆ ಕೀಲೊಂದನ್ನು ಹೊಡೆಯುತ್ತಾರೆ. ಹೀಗೆ ಹೀಸು ನೇಗಿಲಿನಿಂದ ಕಳಚಿಹೋಗದಂತೆ ಅಳವಡಿಸುವ ಕೀಲನ್ನು 'ಕುರ್ನಿಕೀಲ್' ಎನ್ನುತ್ತಾರೆ. (ಗೋರಿ ಎಂದು ಕರೆಯಲಾಗುವ ಮಣ್ಣುಹುಡಿಮಾಡುವ/ಕೆರೆಯುವ/ಒಪ್ಪವಮಾಡುವ ಸಾಧನಕ್ಕೆ ಅಳವಡಿಸಲಾಗುವ ಹೀಸಿಗೂ 'ಕುರ್ನಿಕೀಲು'ಗಳನ್ನು ಬಳಸುತ್ತಾರೆ.) ಉಳುಮೆಗೆ ನೇಗಿಲನ್ನು ಸನ್ನದ್ಧಸ್ಥಿತಿಯಲ್ಲಿ ಇಡಲು ಆ ಹೀಸನ್ನು ಅಳವಡಿಸಲಾದ ನೇಗಿಲ ಮೇಲ್ಭಾಗದ ಒಟ್ಟೆಗೆ/ಗುಳಿಗೆ ಹೀಸಿನ ಅಡಿ ಮತ್ತು ಮೇಲ್ಭಾಗದ ಕೀಲುಗಳನ್ನು ಹೊಡೆಯಬೇಕಾಗುತ್ತದೆ. ಈ ಕೀಲುಸರಿಯಿದ್ದಾಗ ಮಾತ್ರವೇ ನೇಗಿಲು 'ಹಡು'ವಿದ್ದು (ಉಳುಮೆಗೆ ಯೋಗ್ಯವಿದ್ದು) ಉಳಲು ಸಾಧ್ಯವಾಗುವುದು. ಇದಕ್ಕಾಗಿ ಹೀಸು ನೇಗಿಲಿಗೆ ಆತು ಕೂರಲು ಅನುಕೂಲ ಆಗುವಂತೆ ನೇಗಿಲಿನ ಮೇಲ್ಭಾಗದಿಂದ ಹೀಸಿಗೆ ಜೋಡಿಕೊಂಡೇ ಒಂದೆರಡು ಕೀಲುಗಳನ್ನು ಹೊಡೆದು ಅಲ್ಲಾಡದಂತೆ ಗಟ್ಟಿಮಾಡುತ್ತಾರೆ. ಇವುಗಳನ್ನು 'ಅಡೆ'ಗಳೆಂದೇ ಕರೆಯುತ್ತಾರೆ. ಹೀಸಿನ ಅಡಿಭಾಗಕ್ಕೆ ಹೊಡೆಯುವುದನ್ನು 'ಅಡಿಅಡೆ' ಎಂದೂ, ಮೇಲ್ಭಾಗಕ್ಕೆ ಹೊಡೆಯುವುದನ್ನು 'ಮೇಲಡೆ' ಎಂದೂ ಕರೆಯುತ್ತಾರೆ. ನೇಗಿಲನ್ನು ಹೀಗೆ ಉಳುಮೆಗೆ ಅನುವಾಗುವಂತೆ ಕೀಲು-ಪಾಲುಹಾಕಿ ಎಲ್ಲವನ್ನೂ ಅಳವಡಿಸಿ ಕೆತ್ತಿಸರಿಪಡಿಸುವ ಬಡಗಿ/ಆಚಾರಿ ಕೆಲಸವನ್ನು 'ನೇಗಿಲುಬಲಿಯುವುದು/ನೇಲ್‌ಬಲುದ್' ಎಂದೇ ಕರೆಯುತ್ತಾರೆ.

ಹೀಸಿನ ಮೂರನೇ ಎರಡು ಭಾಗವನ್ನು ಬಿಟ್ಟು ಮುಂದಿನಭಾಗದ ತುಂಬಾ ನೊಗಕ್ಕೆ ಬಿಗಿಯಲು ಅನುಕೂಲವಾಗುವಂತೆ ಕಡ್ಕ್/ಕಡಿಗಳನ್ನು ಮಾಡಿರುತ್ತಾರೆ. ಇದನ್ನು ನೇಗಿಲಿಗೆ 'ಮಣಿಕಡಿಯುವುದು' ಎನ್ನುತ್ತಾರೆ. ಅರೆವಾಸಿ ಹೀಸಿನ ಮೇಲೆ ಕಡಿಮಾಡಿದಂತಿರುವ ಈ ಮಣಿಕಡಿತಗಳು ನೆಲಮುಖವಾಗಿರುತ್ತವೆ. ನೇಗಿಲನ್ನು ನೊಗಕ್ಕೆ ಬಂಧಿಸುವ ಸಲುವಾಗಿ 'ಹೂಡುಕಟ್ಟು'ವಲ್ಲಿ ಈ ನೇಗಿಲಮಣಿಗಳ ಅಗತ್ಯತೆಯಿದೆ. ಉಳುವ ಜಾನುವಾರುಗಳ ಉದ್ದ - ಎತ್ತರ - ತಾಕತ್ತುಗಳನ್ನು ಗಣಿಸಿ, ಉಳುಮೆಯ ವೇಳೆಯಲ್ಲಿ ಕೀಳಬೇಕಾದ ಮಣ್ಣಿನ ಪ್ರಮಾಣ ಹಾಗೂ ನೇಗಿಲು ಕ್ರಮಿಸಬೇಕಾದ ವ್ಯಾಪ್ತಿಯನ್ನನುಸರಿಸಿ ಈ ನೇಗಿಲಮಣಿಗಳನ್ನು ಹಿಂದಕ್ಕೂ - ಮುಂದಕ್ಕೂ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ನೊಗದ ಹಿಂಬದಿಗೆ ನೇಗಿಲ ಮಣಿಗಳ ಅಧಿಕಭಾಗವನ್ನು ಉಳಿಸಿಕಟ್ಟುವುದನ್ನು 'ಬಳ್ಸ್‌ಕಟ್ಟು'ವುದೆಂದೂ, ನೊಗವನ್ನು ಗಳಿದುಹೋಗುವಂತೆ ನೇಗಿಲು ಉಳುವ ಜಾನುವಾರುಗಳ ಕಾಲೊಳಗೇ ಬರುವಂತೆ ಮುಂದುಮಾಡಿ ಕಟ್ಟುವುದನ್ನು 'ಹತ್ಕ್‌ಕಟ್ಟುದ್/ಹತ್ತಕಟ್ಟು' (ಬಿಗಿಯಾಗಿ)ವುದೆಂದೂ ಕರೆಯುತ್ತಾರೆ. ಜಾನುವಾರುಗಳ ಗಾತ್ರ ದೊಡ್ಡದಿದ್ದಾಗ ಮತ್ತು ಗದ್ದೆಯ ಅಂಚಿನಭಾಗದ ತನಕ ನೇಗಿಲು ಹರಿಯಬೇಕಾದಾಗ ಹೀಸಿನ ತಲೆತಲೇಗೆ ಕಟ್ಟಿ 'ಬಳಸಲು/ಆಡಾಗು'ವಂತೆ ಅಥವಾ ಉಳುವ ಜಾನುವಾರುಗಳ ಕಾಲಿಗಿಂತ ಸಾಕಷ್ಟು ಹೊರಗೆ ಬರುವಂತೆ ಕಟ್ಟುತ್ತಾರೆ. ಜಾನುವಾರು ಚಿಕ್ಕವಿದ್ದಾಗ, ಅಧಿಕಮಣ್ಣು ಕೀಳುವ ಅವಶ್ಯಕತೆಯಿಲ್ಲದಿದ್ದಾಗ ನೇಗಿಲನ್ನು ಬಳಸಲಾಗದಂತೆ/ಬೀಡುಬೀಸಾಗದಂತೆ ಹತ್ತಾಗಿ (ಬಳಸಲಾಗದಂತೆ)ಯೇ ಕಟ್ಟುತ್ತಾರೆ. ಹೀಗೆ ನೇಗಿಲಿಗೆ ಆತುಕೂರುವ ಹೀಸಿಗಾಗಿ ಮಧ್ಯಮಗಾತ್ರದ ಕಿರುಬೋಗಿ ಸಸಿಯನ್ನು ಬೆಳದಿಂಗಳಲ್ಲದ ಕಾಲದಲ್ಲಿ ಕಡಿದು, ಮರದ ಚಗರು/ಸಿಪ್ಪೆಅಂಶ ಕಳೆಯಲು ಅನುಕೂಲವಾಗುವಂತೆ ಅದರ 'ತೆಂಪ್ಪ್/ಸಿಪ್ಪೆ'ಗಳೆದು 15 ದಿನಗಳತನಕ ನೀರಿನಲ್ಲಿ ಮುಳುಗಿಸಿಟ್ಟು, ಆಮೇಲೆ ಬಡಗಿಯಲ್ಲಿಗೆ ಒಯ್ದು ನೇಗಿಲಿಗೆ ಅಳವಡಿಸಿಕೊಳ್ಳುತ್ತಾರೆ. ಒಂದು ವೇಳೆ ಈ ಮರದ ಸಸಿಯನ್ನು ಬೆಳದಿಂಗಳ

ಕಾಲದಲ್ಲಿ ಕಡಿದದ್ದೇ ಆದರೆ ಅದು ಸೊರಬುಕೊಯ್ದು/ಹುಡಿಸುರಿದು ಬಹುಬೇಗ ಲಡ್ಡಾಗು/ಹಾಳಾಗುತ್ತದೆ.

ಉಳುಮೆಮಾಡುವ ನೇಗಿಲಿಗೆ ನಡುಭಾಗದಲ್ಲಿ 'ಹತ್ತಿ' ಎಂದು ಕರೆಯಲಾಗುವ ಕಬ್ಬಿಣದ ಕುಳವೊಂದನ್ನು ಅಳವಡಿಸುತ್ತಾರೆ. ಕುಳವು ನೇಗಿಲಿನ ಗೆಂಡೆಗೆ ಆತುಕೂರಲು ಕೀಲೊಂದನ್ನು ಹೊಡೆಯುತ್ತಾರೆ. ಈ ಕಬ್ಬಿಣದ ಕೀಲಿನ ತಲೆಭಾಗವು ಕುಳದ ತೂತಿನಲ್ಲಿ(ರಂಧ್ರ) ಜಾರಿಹೋಗದಂತೆ ದಪ್ಪವಾಗಿರುವುದರಿಂದ,ಮಂಡೆಯಿರುವ ಕೀಲೆಂಬ ಅರ್ಥದಲ್ಲಿ ಇದನ್ನು 'ಮಂಡ್‌ಕೀಲ್' ಎನ್ನುತ್ತಾರೆ. ನೇಗಿಲಿನ ಮೊನಚುಭಾಗವನ್ನು ಆತುಕೂರುವ ಈ ಹತ್ತಿಯ ಎಡಬಲಗಳಲ್ಲಿ ಉಳುಮೆಯ ವೇಳೆಯಲ್ಲಿ ಸೀಳಿದ ಮಣ್ಣನ್ನು ಒಡೆದು ಅಗಲವಾಗಿ ಬೀಳುವಂತೆ ಮಾಡುವ ಮತ್ತು ಕಿತ್ತ ಮಣ್ಣನ್ನು ಹುಡಿಗೊಳಿಸುತ್ತಾ ಹೋಗುವ ತುಸು ಅಗಲವಾದ ಭಾಗಗಳಿರುತ್ತವೆ. ಇವನ್ನು 'ನೇಗಿಲಹೆಡೆ/ಹೊಡೆ'ಗಳೆನ್ನುತ್ತಾರೆ. ತೆಳುವಾದ ಮತ್ತು ಅಗಲವಾದ ಈ ಭಾಗಗಳು ನಾಗನಹೆಡೆಯಂತಿರುವ ಕಾರಣಕ್ಕಾಗಿ ಅಥವಾ ಸ್ಥಳೀಯ ಆರಾಧನಾ ಪರಂಪರೆಯಲ್ಲಿ ಬೆರೆತು ಹೋದ, ಕೃಷಿ ಪರಂಪರೆಯ ಒಡನಾಡಿಯೇ ಆದ ನಾಗಪರಂಪರೆಯ ಒಡನಾಟದ ಕಾರಣಕ್ಕಾಗಿ ನೇಗಿಲಿನ ಜೊತೆಗೂ ಈ ಪರಿಕಲ್ಪನೆಯನ್ನು ಬಳಸಿಕೊಂಡಿರಬಹುದು. ಕಬ್ಬಿಣದ ನೇಗಿಲುಗಳು ಸ್ಥಾಪಿತವಾಗುವ ಮೊದಲ ಹಂತವಾಗಿ ಈ ಎಡಬಲದ ಹೆಡೆಗಳಿಗಳಿಗೆ ತಗಡುಬಡಿದು ನೇಗಿಲನ್ನು ಮೊನಚುಮಾಡಿಕೊಳ್ಳುತ್ತಿದ್ದರು. ಈಗೀಗ ಕಬ್ಬಿಣದ ನೇಗಿಲು ಸ್ಥಾಪಿತವಾಗಿರುವುದರಿಂದ ಹೀಗೆ ಹೊಡೆ/ಹೆಡೆ ಕಟ್ಟುವ ಅವಕಾಶವೇ ಇಲ್ಲವಾಗಿದೆ. ಈ ಹೆಡೆಗಳನ್ನು ಹೊರತುಪಡಿಸಿ ನೇಗಿಲಿನ ಮಧ್ಯದಲ್ಲಿರುವ ಗಟ್ಟಿಯಾದ ಮರದಭಾಗವನ್ನು ನೇಗಿಲಿನ 'ಗೆಂಡೆ' ಎನ್ನುತ್ತಾರೆ. ನೇಗಿಲಿನ ಹೆಡೆ ಸವೆದಾಗ ಈ ಗಡ್ಡೆಯಂತಹ ನಡುಭಾಗವು ನೇಗಿಲಿನ ಅನುಪಾತಕ್ಕೆ ಒಗ್ಗದಂತಾಗಿ, ಉಳುಮೆಯ ವೇಳೆಯಲ್ಲಿ ಅದು ನೆಲಕ್ಕೆ ಊದುಗೊರಡಿನಂತೆ ಉಜ್ಜಿ ಉಳುಮೆಗೆ ತೊಡಕಾಗುತ್ತದೆ. ಈ ಗೆಂಡೆದಪ್ಪವನ್ನು ಕೆತ್ತಿ ನೇಗಿಲಗೆಂಡೆಯನ್ನು ಸಪೂರ/ತೆಳುಮಾಡುವುದನ್ನು 'ಕಡ್ಮಣ್ಣ್ ತೆಗುದ್' ಎನ್ನುತ್ತಾರೆ.

ಇಂತಹ ನೇಗಿಲುಗಳೆಲ್ಲವೂ ಒಂದೇ ವರ್ಗಕ್ಕೆ ಸೇರಿದವುಗಳಲ್ಲ. ಅವುಗಳ ಗಾತ್ರ, ಬಳಕೆಗೊಳ್ಳುವ ಸ್ವರೂಪಗಳನ್ನಾಧರಿಸಿ ಅವುಗಳನ್ನು ಬೇರೆ ಬೇರೆಯಾಗಿಯೇ ಗುರುತಿಸಿಕೊಳ್ಳುವ ಕ್ರಮವಿದೆ. ನೀರ್‌ಹೂಂಟೆನೇಲ್, ಹೊಡಿಹೂಂಟೆನೇಲ್ ಎಂಬವುಗಳು ವಿಶಾಲಾರ್ಥದಲ್ಲಿ ಪ್ರತ್ಯೇಕ ಸಂದರ್ಭಸೂಚಿಯಾದ ನೇಗಿಲನ್ನು ಕುರಿತ ಎರಡು ಪರಿಭಾಷೆಗಳು. ಅದಲ್ಲದೆ ಅರ್ನೇಲ್, ಅರ್ಕ್ಲ್‌ನೇಲ್ ಎಂಬ ನೇಗಿಲ ಪರಿಭಾಷೆಯು ನೇಗಿಲು ಬಳಕೆಗೊಳ್ಳುವ ಉದ್ದೇಶದ ಜೊತೆಗೆ ಅದರ ಗಾತ್ರಸೂಚಿಯೂ ಹೌದು. ಈ ನೇಗಿಲುಗಳ ಹೊಡೆ/ಹೆಡೆ/ರೆಕ್ಕೆಗಳು ಒಂದಿಷ್ಟು ಅಗಲವಾಗಿರುತ್ತವೆ. ಅರ್ಕ್ಲ್‌ನೇಲನ್ನು ಆರಂಭದ ಉಳುಮೆಯಲ್ಲಿ ಅಂದರೆ ಗದ್ದೆಯ ಹುಲ್ಲು-ಜೆಡ್ಡುಗಳನ್ನು ಕಳೆಯಲು ಬಳಸುತ್ತಾರೆ. ಈ ಮೊದಲ ಉಳುಮೆಯನ್ನು ಅರ್ಕ್ಲ್‌ಕೀಳುವುದು ಎಂದೇ ಕರೆಯುತ್ತಾರೆ. ಇದು ನಾಜೂಕಾದ ಉಳುಮೆಯಲ್ಲ. ಒಂದರ್ಥದಲ್ಲಿ ಅರೆಉಳುಮೆ. ಅರ್ಕ್ಲ್ ಉಳುಮೆಗೆ ಬಳಸುವ ನೇಗಿಲು ಸಾಮಾನ್ಯವಾಗಿ ದೊಡ್ಡದಾಗಿರುತ್ತದೆ. ಹೊಡಿಹೂಂಟೆಗೆ ಬಳಸುವ ನೇಗಿಲೂ ಕೂಡಾ ಅಂತೆಯೇ ದೊಡ್ಡದಾಗಿರುತ್ತದೆ. ನೀರಹೂಂಟೆಗೆ ಬಳಸುವ ನೇಗಿಲು ಚಿಕ್ಕದಾಗಿರುತ್ತದೆ. ಅತ್ಯಂತ ನಾಜೂಕಾಗಿ ಮಣ್ಣನ್ನು ಹದಮಾಡಲು ಬಳಸುವ ಇದರ ಗಾತ್ರ ಚಿಕ್ಕದಾಗಿರುವುದರಿಂದ 'ಕಿರ್ನೇಲ್' ಎಂದೇ ಕರೆಯುತ್ತಾರೆ. ಆದರೆ ಉಪಯೋಗದ ಸ್ವರೂಪಕ್ಕಿಂತಲೂ ಅಧಿಕವಾಗಿ ಗಾತ್ರಾನುಸಾರವಾಗಿಯೇ ಇವುಗಳನ್ನು ಕರೆಯುವ ರೂಢಿಯನ್ನನುಸರಿಸಿ ದೊಡ್ಡ್‌ನೇಲ್, ಎಡ್‌ನೇಲ್, ಅರ್ನೇಲ್, ಕಿರ್ನೇಲ್ ಮತ್ತು ಕುರೋಳಿ ಎಂಬ ವಿಧಗಳಲ್ಲಿ ಹೆಸರಿಸುವುದೇ ಹೆಚ್ಚು ಕಾಣಿಸುತ್ತದೆ. ಯಾಕೆಂದರೆ ಆಯಾ ಕೆಲಸಕ್ಕೆ ಅವೇ ನೇಗಿಲು ಎಂಬ ನಿಯಮವೇನೂ ಕಡ್ಡಾಯವಲ್ಲ. ಹಾಗಾಗಿ ಅವುಗಳ ಗಾತ್ರಾನುಸಾರಿಯಾದ ಹೆಸರಿಸುವಿಕೆ ಹೆಚ್ಚು ಸಮಂಜಸವೆನಿಸುವಂತಿದೆ. ದೊಡ್ಡನೇಲೇ ಸವೆದು ಎಡ್‌ನೇಲ್ ಆಗಿ, ಮುಂದೆ ಅದೇ ಅರ್ನೇಲ್ ಆಗುತ್ತದೆ. ಅರ್ನೇಲ್ ಸವೆದು ಕಿರ್ನೇಲ್ ಸಿದ್ಧಗೊಳ್ಳುತ್ತದೆ. ಈ ಕಿರ್ನೇಲಿಗಿಂತಲೂ ಚಿಕ್ಕದಾದುದು ಮತ್ತು ಕಿರುಗಾತ್ರದ ಎಳೆಯ ಜಾನುವಾರುಗಳಿಗೆ ಶ್ರಮ ಆಗದಂತೆ ತೊಡಿಸಲು ಅನುಕೂಲವಿರುವುದು 'ಕುರೋಳಿ'' ಎನಿಸುತ್ತದೆ. ಬಹುಶಃ ಇದರಾಚೆಗೆ ನೇಗಿಲಿನ ವಿಧವಿಲ್ಲ.

ಇತರ ಸಲಕರಣೆಗಳು

ಗೋರಿ : ಮರದ ಮೂಲದಿಂದಲೇ ಆಗುವ ನೇಗಿಲಿನ ಉಳುಮೆಯನ್ನು ನುರಿದು ಮಣ್ಣನ್ನು ಹದಮಾಡುವ ಮತ್ತು ಏರು-ತಗ್ಗುಗಳನ್ನು ಸಮತಟ್ಟುಗೊಳಿಸುವ 'ಗೋರಿ' ನೇಗಿಲಿನ ಸಹವರ್ತಿ. ನೇಗಿಲಿನಂತೆಯೇ ಇದನ್ನು ಎತ್ತು/ಕೋಣಗಳ ಕೊರಳಿನ ನೊಗಕ್ಕೇ ಕಟ್ಟುತ್ತಾರೆ. ಒಂದು ಅಡಿಗೂ ಮಿಕ್ಕಿ ಅಗಲವಿರುವ 2-3 ಇಂಚು ದಪ್ಪದ ಹಲಗೆಯಂತಹ ಸಾಧನವಿದು. ಇದನ್ನು ಕಾಸಾನು ಇಲ್ಲವೇ ಹೈಗನಂತಹ ಗಟ್ಟಿಮರದಿಂದ ಸಿದ್ಧಪಡಿಸಿಕೊಳ್ಳುತ್ತಾರೆ. ಆದರೆ ಇಡಿಯಾಗಿ ಹಲಗೆಯ ವರ್ಗಕ್ಕೆ ಸೇರಿಸದ ಹಾಗೆ ಇದರ ನಡುಭಾಗದಲ್ಲಿ ನಿಲ್ಲಲು / ಕೂರಲು ಅನುಕೂಲವಾದ ಎತ್ತರದ ಮಣೆಯಂತಹ ಒಂದು ರಚನೆಯಿರುತ್ತದೆ. ದಪ್ಪನೆಯ ಮರವನ್ನೇ ಕೆತ್ತಿ ನಡುಭಾಗದಲ್ಲಿ ಒಂದಿಷ್ಟು ದಪ್ಪ ಉಳಿಸುವುದಲ್ಲದೆ, ಈ ಭಾಗದಲ್ಲಿಯೇ ಹೀಸು ಸಿಕ್ಕಿಸಲು ಅನುಕೂಲವಾಗುವಂತೆ ತೋಂಟಿ/ಗುಳಿ/ರಂಧ್ರವೊಂದನ್ನು ಮಾಡಿರುತ್ತಾರೆ. ನೇಗಿಲಿನಂತೆಯೇ ಇಲ್ಲಿಯೂ ಕುರ್ನಿಕೀಲನ್ನು ಬಳಸಿ ಗೋರಿಗೆ ಹೀಸು ಆತುಕೂರುವಂತೆ ಮಾಡುತ್ತಾರೆ. ಉಳುಮೆಗಾರ ಇದನ್ನು ಜಾನುವಾರುಗಳಿಗೆ ಕಟ್ಟಿ, ನಡುಭಾಗದ ಮಣೆಯ/ಕಟ್ಟೆಯ ಮೇಲೆ ಹತ್ತಿ ನಿಂತುಕೊಂಡು ಉಳುವ ಜಾನುವಾರುಗಳ ಬಾಲವನ್ನು ಎಡಗೈಯಲ್ಲಿ ಹಿಡಿದು ನಡೆಸುತ್ತಾನೆ. ಗದ್ದೆಯ ತೇವಾಂಶ ಜಾಸ್ತಿಯಿದ್ದರೆ ಗೋರಿಮೇಲೆ ಹತ್ತಿನಿಲ್ಲುವುದಿಲ್ಲ. ಇದನ್ನು 'ಬರ್ಗೋರಿ/ಹೊಡ್ಗೋರಿ' ಎಳದ್ ಎನ್ನುತ್ತಾರೆ. ಗೋರಿಯ ಕಿರುಆವೃತ್ತಿಯಂತೆ ಅರ್ಧಚಂದ್ರಾಕಾರದ ಹಲಗೆಯೊಂದಕ್ಕೆ ಹಿಡಿಯೊಂದನ್ನು ತೂರಿಸಿದ 'ಕೈಗೋರಿ/ಹೊಲ್ಗೋರಿ' ಎಂಬ ಸಾಧನವೂ ಒಂದಿದೆ. ಇದು ಬೇಸಾಯದ ಫಸಲು / ಹೊಲಿ ಗೋರಲು/ಒಟ್ಟು ಮಾಡಲು ಬಳಕೆಯಾಗುವುದು.

ಕಬ್ಬಿಣದ ಈ ಉಪಕರಣ ಮುಡಿಸಿಕೊಳ್ಳಲು ಅನುಕೂಲವಾಗುವಂತೆ ಅದಕ್ಕೆ ಮರದ ಹಿಡಿಯೊಂದನ್ನು ಅಳವಡಿಸಿರುತ್ತಾರೆ. ಇದನ್ನು 'ಕಾವು' ಎನ್ನುತ್ತಾರೆ. ಈ ಕಾವನ್ನು ಅಳವಡಿಸಲಾಗುವ ಗುದ್ದಲಿಯ ಬುಡಭಾಗವನ್ನು 'ತುಮ್ರ್' ಎನ್ನುತ್ತಾರೆ. ಅಗೆತ ಮಾಡುವ ಭಾಗವನ್ನು ಹಾರಿಯ 'ಬಾಯಿ' ಎನ್ನುತ್ತಾರೆ. ಸವೆದು ಕಿರಿದುಗೊಂಡ ಗುದ್ದಲಿಗಳನ್ನು 'ಮೋಟ್‌ಹಾರಿ'

ಎನ್ನುತ್ತಾರೆ. ಇವುಗಳಲ್ಲದೆ ಕೃಷಿಕರ ಅಂಗಣದ ಖಾಯಂಪರಿಕರವಾಗಿ ಅವರ ವೃತ್ತಿಸಂಕೇತವಾಗಿರುವುದು 'ಮೇಟಿಕಂಬ' ಮತ್ತು ಬತ್ತಬಡಿಯುವ ವೇಳೆಯಲ್ಲಿ ಈ ಮೇಟಿಕಂಬಕ್ಕೆ ಕಟ್ಟಿಕೊಂಡು ಬತ್ತಬಡಿಯಲು ಸಹಕಾರಿಯಾಗುವುದು 'ಹಡಿಮಂಚ/ಅನಿ'. ಹಡಿಮಂಚವು ಕನಿಷ್ಟ 5 ಕಿರುಹಲಗೆಗಳನ್ನು ಹೊಂದಿರುತ್ತದೆ. ಈ ಹಲಗೆಗಳನ್ನು 'ಬಲ್ಗ' ಎನ್ನುತ್ತಾರೆ. ಬತ್ತಬಡಿಯುವ ವೇಳೆ ಇದರ ಕಾಲುಗಳಡಿಗೆ ಹಾಕುವ ಹುಲ್ಲಿನ ಚಂಡೆ 'ಗಗ್ಗರ/ಗಗ್ರ' ಎನಿಸುತ್ತದೆ.

ಕೊಟ್ಟಿಗೆ ಮತ್ತು ಗೊಬ್ಬರದ ಗುಂಡಿಯಲ್ಲಿರುವ ಗೊಬ್ಬರವನ್ನು ತೆಗೆದು ತುಂಬುವ 'ತೊಡ್ಕ್' ಕೃಷಿಕರ ಒಡನಾಡಿ ಸಲಕರಣೆಗಳಲ್ಲೊಂದು. 'ಮೂರ್ಕಾಲ್' ಎನ್ನುವುದು ಬೇಸಾಯದ ಇನ್ನೊಂದು ಪೂರಕಪರಿಕರ. ಇದರ ಹೆಸರೇ ಅದರ ಸ್ವರೂಪವನ್ನು ವಿವರಿಸುವಂತಿದೆ. ಇದು ಗೊಬ್ಬರ, ಅಗೆ ಮುಂತಾದವುಗಳನ್ನು ಯಾರ ನೆರವಿಲ್ಲದೆ ಹೊತ್ತು ಸಾಗಿಸಲು ಮಾಡಿಕೊಳ್ಳುವ ಮೂರುಕಾಲಿರುವ ಅಟ್ಟಣಿಗೆಯಂತಹ ವ್ಯವಸ್ಥೆ. ಅದೇ ರೀತಿ ಕತ್ತಿ/ಕುಡುಗೋಲು ರೈತನ ಇನ್ನೊಂದು ಬಹುಮುಖ್ಯವಾದ ಒಡನಾಡಿ. ಈ ಕತ್ತಿಯ ಅಂಗಭಾಗಗಳನ್ನು ಹಿಡಿ, ಹೀಲಿ(ಹಿಂಬದಿ), ಅಣ್‌ಬಾಯ್, ಕತ್ತಿಮೂಜ್, ಬೆನ್ಗತ್ತಿ ಎಂದು ಗುರುತಿಸಬಹುದು. ಇನ್ನು ಭಾಗವೈವಿಧ್ಯದ ಜೊತೆಗೆ ಕುಡುಗೋಲಿನಲ್ಲಿ ಸ್ವರೂಪವೈವಿಧ್ಯವೂ ಇದೆ. ಉದಾಹರಣೆಗೆ ಬಾಯ್ಗತ್ತಿ, ಹಲ್ಕತ್ತಿ, ಗುಡ್ಡಕತ್ತಿ, ಹುಲ್ಕತ್ತಿ ಎನ್ನುವ ವಿಧಗಳಿವೆ. ಮರ ಏರುವಾಗ ಹಾಗೂ ಕೆಲಸದ ಹೊತ್ತಿನಲ್ಲಿ ಕತ್ತಿಯನ್ನು ಸಿಕ್ಕಿಸಿಕೊಳ್ಳುವ ಕೊಕ್ಕೆಯಿರುವ 'ಕತ್‌ಕೊಕ್ಕೆ'ಯೂ ಈ ಕತ್ತಿಯ ಜೊತೆಗೆ ಸೇರಿಕೊಳ್ಳುತ್ತದೆ. ಹಡ್ಲ್ಒಕ್ಕುವ ವೇಳೆಯಲ್ಲಿ ಹುಲ್ಲನ್ನು ಕೊಡ್ಕುವ 'ತೊಡಾಲ್', ಮರ ಏರುವ ಏಣಿ, ಬಿದಿರನಹರೆ, ಬೇಲಿಹಾಕುವ ಸಲುವಾಗಿ ಮುಳ್ಳಿನ ಹೊರೆ ಎತ್ತುವ 'ಕಬ್ಕೋಲ್/ಮುಳ್ಳ್‌ಗೋಲ್', ಹಸುವಿನ ಆಹಾರವಾದ 'ಅಕ್ಕಚ್ಚಿ'ಗೆ 'ಕೊಣ್ಣೆ'ಕೊಚ್ಚುವ 'ಅಕ್ಕಚ್ಚಿನಕೊಳ್ಳಿ' ಎನ್ನುವ ಮರದಕೊರಡು, ಅಕ್ಕಚ್ಚನ್ನು ಬೇಯುವಂತೆ 'ಅಡ್ಗೊತ್ತುವ/' ಅಡಿಮೇಲೊತ್ತುವ 'ಕೊಕ್ಕೋಲ್', ಜಾನುವಾರುಗಳಿಗೆ ಔಷಧಿಕುಡಿಸುವ ಸಾಧನವಾದ 'ನಳ', ಕೋಳಿಮರಿಗಳನ್ನು ಕಂಪ್ಹ್‌ಹಾಕಿಡುವ 'ಕಂಬ್ಲೂಡ್', ಮೀನು ಹಿಡಿಯುವ 'ಗೂಳಿ/ಕೂಳಿ', ಏಡಿ ಹಿಡಿಯುವ 'ಕೆಂಜಿಗೂಳಿ', ಚಟ್ಲೆ/ಎಟ್ಟಿ/ಸಿಗಡಿ ಹಿಡಿಯುವ 'ಗ್ಯಾರಿ', ತೌಡುಗಾಳಿಸುವ 'ಸಾರಣ್ಗೆ', ಬತ್ತ/ಅಕ್ಕಿ ಗೇರುವ/ಕೇರುವ 'ಗೆರ್ಸಿ'/ಮೊರ ಇವೆಲ್ಲವೂ ಕೃಷಿಯ ಜಗತ್ತಿನ ಸಹಸದಸ್ಯರುಗಳೇ ಆಗಿವೆ.

ಹಲವು ವಿಧದ ಹಗ್ಗಗಳು ಬೇಸಾಯದ ಬಳಕೆಯಲ್ಲಿವೆ. ಮುಖ್ಯವಾಗಿ ಹೊರೆಕಟ್ಟಲು ಬಳಸುವುದು ಜೋಡುಹಗ್ಗಗಳಾಗಿರುವುದರಿಂದ ಅದನ್ನು 'ಬಳ್ಳಿಜೋಡ್' ಎನ್ನುತ್ತಾರೆ. ಕೈಯಾಳ್‌ಹಗ್ಗವೆಂದೂ ಕರೆಯಲಾಗುವ ಇದು ಎಲ್ಲಾ ಮಾದರಿಯ ಹೊರೆಕಟ್ಟುವಲ್ಲಿ ಜೋಡಾಗಿಯೇ ಬಳಕೆಯಾಗುತ್ತವೆ. ಹೂಡ್‌ಕಟ್ಟುವಲ್ಲಿ ಈ ಜೋಡನ್ನು ಒಡೆದು ಒಂದನ್ನು 'ತಳ್ಕಿಹಗ್ಗ/ತಳ್ಕಿಬಳ್ಳಿ' (ಎತ್ತು/ಕೋಣಗಳ ಕೊರಳಿಗೆ ಹಾಕುವ ಹಗ್ಗ)ಯಾಗಿ, ಇನ್ನೊಂದನ್ನು ಹೂಡ್ಕಟ್ಟುವ ಹಗ್ಗ/ಬಳ್ಳಿಯಾಗಿ ಬಳಸುತ್ತಾರೆ. ಇವೇ ಹಗ್ಗವು ಗಾತ್ರದಲ್ಲಿ ದಪ್ಪವಾಗಿ ಬಾವಿನೀರೆಳೆಯಲು ಬಳಕೆಯಾದರೆ 'ಬಾವಿಬಳ್ಳಿ'ಯಾಗುತ್ತದೆ. ದನಗಳನ್ನು ಮೇವಿಗೆ ಕಟ್ಟಲು ಬಳಕೆಯಾದಲ್ಲಿ 'ಆಡ್ಬಳ್ಳಿ/ ಮೇವಿನಬಳ್ಳಿ'ಯಾಗುತ್ತದೆ. ಹಟ್ಟಿಯಲ್ಲಿ ದನಕಟ್ಟಲು ಬಳಕೆಯಾಗುವ ಚಂಡುಳ್ಳ ಕೊರಳಹಗ್ಗವಾಗಿ ಚಿಕ್ಕದಾದಲ್ಲಿ 'ಕೊಳ್ಕಿಚಂಡ್', ದೊಡ್ಡದಾದಲ್ಲಿ 'ದಾಂಬ್', ಇನ್ನೂ ದಪ್ಪವಾಗಿದ್ದಲ್ಲಿ 'ಮರ್ಚ್' ಆಗುತ್ತದೆ. ಇದೇ ಹುರಿಹಗ್ಗವು ಎತ್ತು/ಕೋಣಗಳ ಹೆಗಲಮೇಲಿಡುವ ನೊಗದ ಪಟ್ಟಿಯಾಗಿ ಬಳಕೆಯಾಗುವಲ್ಲಿ 'ಜೊತ್ಕ' ಎಂದಾಗುತ್ತದೆ. ಹಗ್ಗವನ್ನೇ ಬಳಸಿ ತರಗೆಲೆ ತುಂಬಲು ಮಾಡುವ ಬಲೆಯಂತಹ ರಚನೆ 'ಕಲ್ಲಿ'ಯಾಗುತ್ತದೆ. ಅದೇ ಹಗ್ಗವು ಮಜ್ಜಿಗೆ ತೂಗಿಡಲು ಬಳಕೆಯಾಗುವ ರಚನೆಯಾದರೆ 'ಸಿಕ್ಕ'ವಾಗುತ್ತದೆ.

ಉಳುಮೆ/ಹೂಂಟಿ ಮತ್ತು ಬತ್ತದ ಬೀಜ ಬಿತ್ತನೆ

ನೇಗಿಲನ್ನು ಬಳಸಿಮಾಡುವ ಕಾಯಕವೇ ಉಳುಮೆ. ಅದನ್ನು ಕುಂದಗನ್ನಡದಲ್ಲಿ 'ಹೂಡ್/ಹೂಂಟಿ' ಎನ್ನುತ್ತಾರೆ. ಈ ಹೂಡ್ ಎನ್ನುವ ಪದ 'ಹಡು' ಎನ್ನುವುದರಿಂದಲೇ ಬಂದುದಾಗಿದೆ. ಇನ್ನು ಹೂಡು/ ಉಳುಮೆಯ ಚಲನೆಯನ್ನು ಗಮನಿಸಿ ಹೇಳುವುದಿದ್ದರೆ ಅದರ ಸ್ವರೂಪವು ಅಪ್ರದಕ್ಷಿಣೆಯ ರೂಪದಲ್ಲಿರುತ್ತದೆ. ಹೀಗಿರುವುದರಿಂದ ಬಲಭಾಗದ ಉಳುಮೆಯ ಜಾನುವಾರು ಅಂಚಿಗೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಮತ್ತು ಅಧಿಕ ಹೊರೆಯನ್ನು ಹೊರಬೇಕಾಗುತ್ತದೆ. ಹಾಗಾಗಿ 'ಬಲದಿನ್ನೆಣೆ' ಎಂಬುದು ಜವಾಬ್ದಾರಿಯ ಒಡನಾಟವನ್ನು ಹೇಳುವಲ್ಲಿಯೂ ಬಳಕೆಯಾಗುವ ಪದವಾಗಿದೆ. ಹೀಗೆ ಉಳುವ ಜಾನುವಾರಿನಲ್ಲಿ ಬಲಭಾಗದಲ್ಲಿ ಇರುವುದಕ್ಕೆ ಹೊಣೆ ಮತ್ತು ಪ್ರಾಶಸ್ತ್ಯವಿರುವಂತೆ, ಗದ್ದೆಯ ಬಲತುದಿಗೆ ಸರಿಯಾಗಿ ನೇಗಿಲು ಹರಿಯುವಂತೆ ಉಳುಮೆ ಮಾಡುವುದೂ ಜಾಣ್ಮೆಯ ಕೆಲಸವೇ. ಈ ಕಾರಣಕ್ಕಾಗಿಯೇ ಸರಿಯಾಯ್ ಬಲ್ದೆಬ್ಬಿ ಮುಂದ್ಹೂಡವನಿಗ ಕಂಡ್ ಹೆಣ್ಣಿನ್ ಕೊಡ್ಕ್" (ಜೈಮಿನಿಭಾರತ ಓದುವವನಿಗೆ ಅಲ್ಲಾ!?) ಎಂಬ ರೂಢಿಯ ಮಾತೊಂದಿದೆ.

ಗದ್ದೆಯ ಉಳುಮೆಗಾರನಲ್ಲಿ ತನ್ನ ಕಾಯಕದ ಹಂತ ಮತ್ತು ಸ್ವರೂಪವನ್ನು ವಿವರಿಸಲು ಕೆಲವು ಪಾರಿಭಾಷಿಕ ಪದಗಳಿವೆ. ಮೊದಲನೆಯದಾಗಿ ಉಳುಮೆಯ ಸ್ವರೂಪ ಯಾವುದೇ ಇದ್ದಾಗಲೂ ಅದರ ಹಂತವನ್ನು ಸೂಚಿಸಲು ಇರುವ ಕೆಲವು ಪದಗಳನ್ನು ಗಮನಿಸುವಲ್ಲಿ ಎದುರಾಗುವ ಮೊದಲಪದವೇ 'ಹೋಳಿ'. ಹೋಳಿ ಎನ್ನುವ ಪದ ನೇಗಿಲು ಸಾಗುವ ಪ್ರತೀ ಓಳಿ/ಸಾಲು/ಗೀರನ್ನೂ ಸೂಚಿಸುತ್ತದೆ. ಹೀಗೆ ಸೂಚಿಸುವುದರಿಂದಲೇ ಉಳುಮೆಯ ಗೀರುಗಳ ನಡುವೆ 'ಎಡ್‌ದಂಡೆ' (ಮಣ್ಣುಕೀಳದೆ ಉಳಿಯುವ ಕಿರುದಂಡೆ) ಉಳಿಯುವಂತೆ ಉಳುಮೆಮಾಡುವ ಅನನುಭವಿ ಉಳುಮೆಗಾರನ ಹೂಂಟಿಯನ್ನು 'ಒಟ್ಹೋಳಿ ಹೂಂಟಿ' ಎಂದು ಗುರುತಿಸಲಾಗುತ್ತದೆ. ಆದರೆ ಹೋಳಿ ಎನ್ನುವ ಪದ ಉಳುಮೆಯ ಒಂದು ನಿಶ್ಚಿತ ವಲಯವನ್ನೂ ಸೂಚಿಸುತ್ತದೆ. ನಿಶ್ಚಿತವಲಯವಾಗಿ ಪರಿಗಣಿಸುವಲ್ಲಿ ಅದೊಂದು ಮೊಟ್ಟೆಯಾಕಾರದ ರಚನೆಯಾಗುತ್ತದೆ. ಮೊಟ್ಟೆಯಾಕಾರದ ಸೊನ್ನೆಬರೆದಂತೆ ಒಂದು ವೃತ್ತವನ್ನು ಕಟ್ಟಿ ಅದರ ಒಳಭಾಗವನ್ನು ಉಳುಮೆ ಮಾಡಿ 'ಬೆಳೆದುಕೊಳ್ಳುತ್ತಾ' (ಹೋಳಿನೆರೆಯುತ್ತಾ) ಬರುತ್ತಿದ್ದಂತೆಯೇ, ಮೊದಲ ಸೊನ್ನೆಗೆ ಹೊಂದಿಕೊಂಡಂತೆ 'ವೆನ್‌ನ ನಕ್ಷೆ' ಬರೆದಂತೆ ಇನ್ನೊಂದು ಸೊನ್ನೆ ಹಾಕಿಕೊಳ್ಳುತ್ತಾರೆ. ಮೊದಲ ಸೊನ್ನೆಯ ಉಳಿಕೆ ಮುಗಿಯುತ್ತಿದ್ದಂತೆ ಇನ್ನೊಂದು ಸೊನ್ನೆಯನ್ನು ಹಾಕಿಕೊಳ್ಳುತ್ತಾರೆ. ಅನುಭವಿ ಉಳುಮೆಗಾರ ಗದ್ದೆಯೊಂದರಲ್ಲಿ ಕಟ್ಟಿಕೊಳ್ಳಬೇಕಾದ ಹೋಳಿಗಳ ನಿಖರಸ್ವರೂಪವನ್ನು ಬಲ್ಲವನಾಗಿರುತ್ತಾನೆ. ಗದ್ದೆಯ ಕೊನೆಯ ಭಾಗವನ್ನು ಉಳುಮೆ

ಮಾಡುವಲ್ಲಿಯವರೆಗೆ ಆತನ ಲೆಕ್ಕಾಚಾರ ಪಕ್ಕಾ ಆಗಿರುತ್ತದೆ. ಈ ಹೋಳಿಗಳು ಬೆಳೆದು ಇಡಿಯ ಗದ್ದೆಯನ್ನು ಒಂದು ಸಾರಿ ಪೂರ್ತಿ ಉಳುಮೆ ಮಾಡಿದರೆ ಅದನ್ನು 'ಸಾಲು' ಎನ್ನುತ್ತಾರೆ. ಪ್ರತೀಸಾಲು ಮುಗಿದ ತರುವಾಯದ ಹೂಂಟಿಯು, ಮೊದಲಿನ ಸಾಲಿಗಿಂತ ವಿರುದ್ಧ ದಿಕ್ಕಿಗಿರುತ್ತದೆ. ಅಂದರೆ ಒಂದು 'ಅಡ್ಡಹೂಂಟಿ'ಯ ಸಾಲಾದರೆ ಅದರ ಮುಂದಿನ ಹೂಂಟಿ 'ಸರ್ತ್‌ಹೂಂಟಿ' ಆಗಿರುತ್ತದೆ. ಬತ್ತದ ಸಸಿಯನ್ನು ನೆಡುವ ಕಾಲದಲ್ಲಿ ಗದ್ದೆಯನ್ನು ಒಂದು ಉಳುಮೆಯಲ್ಲಿಯೇ ಎರಡೆರಡು ಬಾರಿ ಉತ್ತಂತೆ, ಉಳುಮೆ ಮಾಡಿದ್ದರ ಮೇಲೆಯೇ ಇನ್ನೊಮ್ಮೆ ನೇಗಿಲು ಬರುವಂತೆ ಉಳುವಕ್ರಮವೊಂದಿದೆ. ಅದನ್ನು 'ಕತ್ರಿಸಾಲು/ತೌಡ್‌ಸಾಲ್' ಎನ್ನುತ್ತಾರೆ. ಇದು ಅಡ್ಡವೂ ಸರ್ತವೂ ಆಗಿದ್ದೂ, ಪುನಃ ಉಳುಮೆಯ ಗತಿಯಲ್ಲಿಯೇ ಮೊದಲಿನ ಉಳುಮೆಯ ಓಳಿಗಳನ್ನು ಕತ್ತರಿಸುತ್ತಾ ಮಣ್ಣನ್ನು ಸೊಗಸಾಗಿ ನುರಿಮಾಡುವಂತಿರುತ್ತದೆ. ಆದರೆ ನೀರಹೂಂಟಿಯಲ್ಲಷ್ಟೇ ಕಾಣುವ ಈ ಸಾಲು ಕತ್ತರಿಸುವುದರಿಂದ 'ಕತ್ರಿಸಾಲು', ತೌಡಿನಂತೆ ನುಣ್ಣಗೆ ಮಾಡುವುದರಿಂದ 'ತೌಡ್ಸಾಲು'. ನೇಜಿಯ ಈ ಸಾಲಿನ ಪೂರ್ವದಲ್ಲಿ ಮಣ್ಣು ಹದವಾದುದನ್ನು/ ಉಳುಮೆಯ ಹದವನ್ನು ಹೂಂಟಿಯಾದ ಸಾಲುಗಳ ಸಂಖ್ಯೆಯ ಮೇಲಿಂದಲೇ ನಿರ್ಣಯಿಸಲಾಗುತ್ತದೆ. 'ಕತ್ರಿಸಾಲ್/ತೌಡ್ಸಾಲ್' ಎನ್ನುವುದು ನೇಜಿಯ ಅಗತ್ಯದ ಸಾಲುಗಳು ಮುಗಿದ ಅನಂತರದ ಉಳುಮೆ. ಇಲ್ಲಿ ಉಳುಮೆಗಾರ ಕಾಲನ್ನು ಅಡ್ಡಹಾಕಿಕೊಂಡು ಮಣ್ಣಿನಚಂಡೆಯನ್ನು ಜಾರಿಸುತ್ತಾ ನಡೆಯಬೇಕಾದ ಹೊಣೆಗಾರಿಕೆಯನ್ನೂ ಹೊಂದಿರುತ್ತಾನೆ. ಇದು ಮುಖ್ಯವಾಗಿ ನೇಜಿಗೆ ತೊಡಕಾಗುವ ದಿನ್ನೆಗಳು ರಚಿತವಾಗದಂತೆ ವಹಿಸುವ ಎಚ್ಚರವೂ ಹೌದು.

ಹೂಂಟಿಯ ಹಂತ, ಸ್ವರೂಪಗಳನ್ನಾಧರಿಸಿ ಕೆಲವು ಪಾರಿಭಾಷಿಕ ಪದಗಳಿವೆ. ಇವುಗಳನ್ನು ಅನುಕ್ರಮವಾಗಿ ಪರಿಗಣಿಸುವುದಿದ್ದರೆ ಮಳೆಗಾಲವಿರಲಿ, ಅರೆಗಾಲವಿರಲಿ ಗದ್ದೆಯಲ್ಲಿ ಮಾಡುವ ಮೊದಲ ಉಳುಮೆಯಾದ 'ಅಕ್ಲ್‌ಹೂಂಟಿ'ಯನ್ನು ಗಮನಿಸಬೇಕಾಗುತ್ತದೆ. ಇದು ಗದ್ದೆಯನ್ನು ಬಿಸಿಲಿಗೋ ಮಳೆಗೋ ತೆರೆದಿಡುವ ಪರಿಪೂರ್ಣವಲ್ಲದ ಉಳುಮೆ. ಗದ್ದೆಯನ್ನು ಅರೆಬರೆ ಹರಿದುಬಿಟ್ಟಂತಿರುವ ಈ ಉಳುಮೆಯನ್ನು ಅನ್ವರ್ಥಕವಾಗಿಯೇ ಈ ಹೆಸರಿನಿಂದ ಕರೆದಿರಬೇಕು. ಅಕ್ಲ್ ಮಾಡಿಯಾದ ಮೇಲೆ ಮಳೆಗಾಲದಲ್ಲಿ ಅಥವಾ ಬತ್ತದ ಬೆಳೆತೆಗೆಯುವ ಸುಗ್ಗಿ, ಕೊಳ್ಕಿಗಳಲ್ಲಿ 'ನೀರ್ಹೂಟಿ' ಎಂದೆನ್ನುವ ಮುಂದಿನ ಹಂತವಿರುತ್ತದೆ. ಧಾನ್ಯಾದಿಗಳನ್ನು ಬೆಳೆಯುವಲ್ಲಿ ಮತ್ತು ಬತ್ತದ ಸಸಿಗಾಗಿ 'ಹೊಡಿಬೀಜ/ತಂಪಿನಗೇಡಿ'ಗೆ ಬೀಜ ಹಾಕುವುದಾದಲ್ಲಿ 'ಹೊಡಿಹೂಂಟಿ'ಇರುತ್ತದೆ. ಇದು ಅಕ್ಲ್‌ಮಾಡಿದ 3-4 ದಿನ ಬಿಟ್ಟು ಮಾಡುವ ಉಳುಮೆ. ವಿಶೇಷವಾಗಿ ಈ ಉಳುಮೆಯ ವಿಧಾನಗಳಿಗೂ ಬೆಳೆ ಅಥವಾ ಗದ್ದೆಯನ್ನು ಯಾವುದಕ್ಕಾಗಿ ಸಿದ್ಧಗೊಳಿಸಲಾಗುತ್ತದೆ ಎಂಬುದಕ್ಕೂ ಸಂಬಂಧವಿರುತ್ತದೆ. ಒಂದು ವೇಳೆ ಗದ್ದೆಯನ್ನು ಕಾತಿ/ಸುಗ್ಗಿ/ಕೊಳ್ಕಿಯ ಬೀಜ(ಕಾತಿಯಾದರೆ ಅದು ನೀರಿರುವ/ನೀರಿರದ ಯಾವುದೇ ಅಗೇಡಿಯಾಗಿರಬಹುದು) ಹಾಕುವ 'ಅಗೇಡಿ'ಯಾಗಿ ಸಿದ್ಧಗೊಳಿಸುವುದಾದಲ್ಲಿ ಈ ನೀರ್ಹೂಂಟಿ/ಹೊಡಿಹೂಂಟಿಯ ಹಂತದಲ್ಲಿಯೇ ಗದ್ದೆಯ ಸುತ್ತಲೂ ಹೊದ್ದು/ಬದುಕಡಿಯುವ ಕೆಲಸವನ್ನೂ ಮುಗಿಸಿಕೊಳ್ಳುತ್ತಾರೆ. ಒಂದು ವೇಳೆ ಇದು ಸುಗ್ಗಿ/ಕೊಳ್ಕಿ ನಾಟಿಗಾಗಿ ಮಾಡುವ ಉಳುಮೆಯಾದರೆ ಈ ಹೊದ್ದಿನ ಜೊತೆಗೆ 'ಕಂಟ/ಹುಣಿ/ಅಂಚಿ'ನ ಒಳ ಬದಿಯ ಹುಲ್ಲನ್ನು ಗುದ್ದಲಿ ಬಳಸಿ 'ಸವರಿ/ಕೆತ್ತಿ' ತೆಗೆದು, ಅಂಚಿಗೆ 'ಮಣ್ಣುಬೆಚ್ಚುವ/ಮಣ್ಣುಕೂರಿಸು'ವ ಕೆಲಸವನ್ನೂ ಮುಗಿಸಿಕೊಳ್ಳುತ್ತಾರೆ. ಕಾತಿಯ ನಟ್ಟಿಯೊಂದನ್ನು ಹೊರತುಪಡಿಸಿ ಹೂಂಟಿಯಾದ ಮೇಲೆ 'ಗೋರಿ' ಎನ್ನುವ ಮರದ ಸಾಧನವನ್ನು ಬಳಸಿ 'ಕೆರೆದು' ಮಣ್ಣಿನ 'ಹೆಂಟೆ/ಶಟ್ಟಿ/ಉಂಡೆ'ಯನ್ನೊಡೆದು, ಏರು-ತಗ್ಗುಗಳು ಇಲ್ಲವಾಗುವಂತೆ ನೆಲಸಮತಟ್ಟು ಮಾಡಿಕೊಳ್ಳುತ್ತಾರೆ. ಬತ್ತದಬೆಳೆಯಲ್ಲಿ ನೀರ್ಹೂಂಟಿಯ ಅನಂತರ ಗೊಬ್ಬರವನ್ನು 'ಬಿಕ್ಕಿ/ಚಲ್ಲಿ'(ಹರವಿ) ಅದನ್ನು ಮಣ್ಣಿನಲ್ಲಿ ಮುಳುಗಿಸುವ 'ಗೊಬ್ರಕನ್ನುಹೂಂಟಿ'ಯಿರುತ್ತದೆ. ಆದಾದಮೇಲೆ 4-6 ದಿನಗಳವರೆಗೆ ಗೊಬ್ಬರವನ್ನು ಕೊಳೆಯಲು ಬಿಟ್ಟು ಅದನ್ನು ಮತ್ತೆ ತೆರೆಯುವ 'ಕಿತ್ತುಹೂಡುವಹೂಂಟಿ' ಇದೆ. ಕೆಲವೆಡೆ ಇದನ್ನು 'ಉಳ್ಪಾಉಕ್ಕಿ' ಎನ್ನುತ್ತಾರೆ. ಕಾತಿಯ ನೇಜಿಗದ್ದೆ ಬಿಟ್ಟು ಮಿಕ್ಕ ಸಂದರ್ಭಗಳಲ್ಲಿ ಈ ಉಳುಮೆಯ ನಂತರ ಗೋರಿ ಬಳಸಿ ಕೆರೆಯುವುದು ಸರ್ವೇಸಾಮಾನ್ಯ.

ಈ ಕಿತ್ತು ಹೂಡುವ ಹೂಂಟಿಯಾದ ಮೇಲೆ ಕಾತಿ/ಏಣೆಲ್ ಸಾಗುವಳಿಗೆ ಬೀಜ ಬಿತ್ತುವಲ್ಲಿ ತೇವಾಂಶವಿರುವ 'ತಂಪಿನಗೇಡಿ', ಅರೆತೇವಾಂಶವಿರುವ 'ಅರ್ತಂಪಿನಗೇಡಿ' ಅಥವಾ ತೇವಾಂಶವೇ ಇರದ 'ಗಾರೊಡಿ ಅಗೇಡಿ' (ಈ ಅಗೇಡಿಗಳಿಗೆ ಮಳೆಯ ಮುನ್ಸೂಚನೆ ನೋಡಿ ಬಿತ್ತುವಲ್ಲು ಮಳೆ ಬಂದ ಮೇಲೆಯೇ ಮೊಳಕೆಯೊಡೆಯುತ್ತವೆ.) ಗಳಿಗೆ ಬೀಜವಾಗಿ ಇಟ್ಟ ನೆಲ್ಲನ್ನೇ ಬಿತ್ತುತ್ತಾರೆ. ಇದನ್ನು 'ಹೊಡ್‌ಬೀಜಬಿತ್ತು'ವುದೆಂಬಂತೆಯೂ ಗುರುತಿಸುವುದಿದೆ. ಹದಮಾಡಿಕೊಂಡ ಈ ಅಗೇಡಿಗಳಿಗೆ ಬೀಜವನ್ನು ಬಿತ್ತುವಾಗಲೂ ಒಂದು ವಿಶಿಷ್ಟಕ್ರಮವನ್ನು ಪಾಲಿಸಬೇಕು. ಬೀಜದ ಕುಕ್ಕೆಯನ್ನು ಎಡಗೈಯಲ್ಲಿ ಹಿಡಿದು ಹೆಬ್ಬೆರಳು ಮತ್ತು ತೋರುಬೆರಳನ್ನು ಹೊರಗುಳಿಯುವಂತೆ ಮಾಡಿಕೊಂಡ ಬಲಗೈಮುಷ್ಠಿಯಲ್ಲಿರುವ ಬೀಜವು ಗದ್ದೆಗೆ ಸಮನಾಗಿ ಚದುರಿಬೀಳುವುದಕ್ಕೆ ಅನುಕೂಲವಾಗುವಂತೆ, ಕ್ವಾರಿಮೇಲೆ/ವಕ್ರವಾಗಿ ಕೈಯಲ್ಲಾಡಿಸುತ್ತಾ ಮೇಲ್ಮುಖವಾಗಿ ಗಾಳಿಯಲ್ಲಿ ತೇಲಿ ಬೀಳುವಂತೆ ಚಲ್ಲಬೇಕು. ಅನುಭವಿಯೊಬ್ಬ ಈ ಕ್ರಮದಲ್ಲಿ ಎರಡೆರಡು ಬಾರಿ ಇಡಿಯ ಗದ್ದೆಯನ್ನು ಸುತ್ತಿಬರುವಲ್ಲಿ ಗದ್ದೆಯಲ್ಲಿ ಬೀಜವು ಸಮಪ್ರಮಾಣಧಲ್ಲಿ ಹಂಚಿಕೆಯಾಗಿ ಬೀಳುವಂತಾಗುತ್ತದೆ. ಈ ಮಾದರಿಯಲ್ಲಿ ಬೀಜಬಿತ್ತನೆ ಮಾಡುವ ಕ್ರಮದಲ್ಲಿ ಬೀಜಬಿತ್ತಿದ ಮೇಲೆ ಮತ್ತೆ ಉಳುಮೆ ಮಾಡಿ, ಸುತ್ತಲೂ 'ಹೊದ್ದು/ಬದು' ಕಡಿದು ಬೀಸಿ, ಅಗೇಡಿಯ ಸುತ್ತಲೂ ನೀರು ಜಾರಿಹೋಗಲು ಅನುಕೂಲವಾಗುವಂತೆ ಒಂದು ಓಣಿ/ಹೋಳಿ/ಓಳಿ ಏರ್ಪಡುವಂತೆ ಮಾಡಬೇಕು. ಹೊಡ್‌ಬೀಜಬಿತ್ತಿದ ಉಳುಮೆ ಮುಗಿದ ಮೇಲೆ ಮತ್ತೊಮ್ಮೆ ಗೋರಿಕಟ್ಟಿ ಕೆರೆಯಲಾಗುತ್ತದೆ. ಆಮೇಲೆ ಅಗೇಡಿಯಲ್ಲಿ ಮಳೆನೀರು ನಿಂತು ಬೀಜಕ್ಕೆ ಹಾನಿಯಾಗದ ಹಾಗೆ ಬೀಳುವ ಮಳೆನೀರು ಗದ್ದೆಯ ಸುತ್ತಲೂ ನಿರ್ಮಾಣಗೊಂಡ ಬದುವಿನ ಓಣಿಗೆ ಹರಿದು ಹೋಗಲು ಅನುಕೂಲವಾಗುವಂತೆ ಸೊನ್ನೆಯ ನಡುವೆ ಹಾದುಹೋದ ಗೆರೆಯಂತಿರುವ ಆಕಾರದ ಹೋಳಿಯೊಂದನ್ನು ಮಾಡಲಾಗುತ್ತದೆ.

ಇನ್ನು ಗದ್ದೆಯಲ್ಲಿ ನೀರು ನಿಲ್ಲಿಸಿ ಮಾಡುವ ಏಣೆಲ್/ಕಾತಿಬೆಳೆಯ 'ನೀರಗೆ'ಯಲ್ಲಿ ಮತ್ತು ಸುಗ್ಗಿ, ಕೊಳ್ಕಿಬೆಳೆಯ ಬೀಜ ಬಿತ್ತನೆಯಲ್ಲಿ ಅನುಸರಿಸುವ ಕ್ರಮದಲ್ಲಿ ಸಾಮ್ಯತೆಯಿದೆ. ಇಲ್ಲಿ ಉಳುಮೆ ಮಾಡಿ ಗೋರಿಯಲ್ಲಿ ಕೆರೆದು ಅಥವಾ 'ಕಂಪ' ಇಲ್ಲವೇ ತುಸು ಹೆಚ್ಚು ಮೆದುಗದ್ದೆಯಾದರೆ 'ಕೈಗೋರಿ/ಹೊಲ್ಗೋರಿ' (ಬತ್ತರಾಶಿ ಮಾಡಲು

ಬಳಸುವ ಗುದ್ದಲಿಯನ್ನು ಹೋಲುವ ಮರದ ಸಾಧನ)ಯಲ್ಲಿ ಗದ್ದೆಯನ್ನು ಬಲಿದು ಏರು-ತಗ್ಗಗಳನ್ನು ಸರಿಪಡಿಸಿಕೊಂಡ ಮೇಲೆಯೇ ಬೀಜಬಿತ್ತನೆ ಮಾಡಲಾಗುತ್ತದೆ. ಕೆಲವೊಮ್ಮೆ ಗದ್ದೆ ದೊಡ್ಡದಾದರೆ ಮಧ್ಯ ಹೋಗಲು ಅನುಕೂಲವಾಗುವಂತೆ ಮಡಿಗಳನ್ನು ಮಾಡಿಕೊಳ್ಳುತ್ತಾರೆ. ಈ ಕ್ರಮದಲ್ಲಿ ಬಿತ್ತನೆಗೆ ಪೂರ್ವದಲ್ಲಿ ಮೊಳಕೆಬೀಜವನ್ನೇ ತಯಾರು ಮಾಡಿಕೊಳ್ಳಲಾಗುತ್ತದೆ. ಬೀಜಬಿತ್ತುವುದಕ್ಕೆಂದು ಸಿದ್ಧಪಡಿಸಿಕೊಳ್ಳುವ ಮೊಳಕೆಯಲ್ಲಿ 'ಗಾಳ್‌ಬೆದಿ' ಮತ್ತು 'ಮೂಕ್‌ಬೆದಿ' ಎನ್ನುವ 2 ಬಗೆಗಳಿವೆ. ಆಯಾಗದ್ದೆಯ ಮಣ್ಣಿನ ಗುಣವನ್ನಾಧರಿಸಿ ಈ ಮೊಳಕೆ/ಬೆದೆಗಳ ಸ್ವರೂಪವನ್ನು ನಿರ್ಧರಿಸಿಕೊಳ್ಳುತ್ತಾರೆ.

ಇದಕ್ಕೆಂದು ಮೊದಲೇ ನೆಲ್ಲನ್ನು ಚೀಲದಲ್ಲಿ ನೆನೆಹಾಕಿ 24 ಗಂಟೆ ನೀರಿನಲ್ಲುಳಿಸಿ, ಅನಂತರ ಬೆಟ್ಟಿಗೆ ಹಾಕಿ ಮೊಳಕೆಬರಲು ಅನುಕೂಲವಾಗುವಂತೆ ಕೆಲವು ಏರ್ಪಾಡುಗಳನ್ನು ಮಾಡಿಕೊಳ್ಳುತ್ತಾರೆ. ನೇರವಾಗಿ ಮೇಲಕ್ಕೆ ಹಾಕಿದ ನೆನೆದ ಬೀಜದಚೀಲವನ್ನೇ ನೆಲಕ್ಕೆ ತಾಗದಂತೆ ಇರಿಸಿ, ಅದರ ಮೇಲೆ ಕಲ್ಲನ್ನು ಹೇರಿ ಒತ್ತಡ ನಿರ್ಮಿಸಿ ಬೀಜವನ್ನು ಮೊಳಕೆ ಬರಿಸುವುದು ಒಂದು ಕ್ರಮ. ಇದಲ್ಲದೆ ಅಡಿಗಡೆ ಹಾಕಲಾಗುವ ಒಣ/ಹಸಿಹುಲ್ಲು ಅಥವಾ ಎಣ್ಣ್‌ಕೈಡ(ಕೆದ್ಲ್/ಕರಡ)ದ ಮೇಲೆ ನೆನೆಸಿದ ಬೀಜವನ್ನು ಹರವಿ ಅದರ ಮೇಲೆ 'ನುಕ್ಕಿಸಪ್ಪ'ನ್ನು (ಇದು ಬೀಜದ ಮೊಳಕೆಗೆ ಬೇಕಾದ ಶಾಖ/ಗಾವನ್ನು ಕೊಡುತ್ತದೆ ಎನ್ನಲಾಗಿದೆ) ಹಾಕಿ ಮುಚ್ಚಿ ಅದರ ಮೇಲೆ ಭಾರವಾಗುವ ಹಾಗೆ ಗೋಧಿಕಲ್ಲನ್ನು ಹೇರುವ ಇನ್ನೊಂದು ಕ್ರಮವೂ ಇದೆ. ಹೆಚ್ಚಾಗಿ ಚೀಲದಲ್ಲಿಯೆ ಇರಿಸಿ ಬೆದೆಬರಿಸುವ ಸುಲಭದ ಕ್ರಮವನ್ನೇ ಅನುಸರಿಸುತ್ತಾರೆ. ಈಗಾಗಲೇ ಮೇಲೆ ತಿಳಿಸಿದಂತೆ ಹೀಗೆ ಸಿದ್ಧಪಡಿಸಿಕೊಳ್ಳಲಾಗುವ ಮೊಳಕೆಯು ಬಿತ್ತಲ್ಪಡುವ ಅಗೇಡಿಯ ಮಣ್ಣಿನಸ್ವರೂಪವನ್ನು ಅವಲಂಭಿಸಿರುತ್ತದೆ. ಕಂಪದಗದ್ದೆಯಾದರೆ ಉದ್ದನೆಯ 'ಗಾಳ್‌ಬೆದೆ'ಯನ್ನೂ, ನೀರೊಣಗಿಸುವ ಗದ್ದೆಯಾದರೆ 'ಮೂಕ್‌ಬೆದೆ'ಯನ್ನೂ ಸಿದ್ಧಪಡಿಸಿಕೊಳ್ಳುತ್ತಾರೆ. ಒಣ್ಸು/ಒಣಗಿಸುವ ಗೆದ್ದೆಯಲ್ಲಿ ನೀರು ಇಳಿದು ಹೋಗಲು ಅನುಕೂಲಕರವಾಗಿ 'ಬಗಿಲ್' (ನವೀರಿರುವ ಗದ್ದೆಯನಡುವೆ ನೀರು ಇಳಿಸಲು ತೆಗೆಯುವ ಸೀಳು) ತೆಗೆದಿರುತ್ತಾರೆ. ಈ 'ಬಗಿಲ'ನ್ನು ಕಡಿಯುವ ಮೂಲಕ ನೀರನ್ನು ಇಳಿಸಿ ಒಣಗಿಸುವ ಮತ್ತು ಬಗಿಲುಕಟ್ಟಿ ನೀರು ತುಂಬಿಸುವ ಅನುಕೂಲತೆಗಳನ್ನು ಸಹಜವಾಗಿಯೇ ಮಾಡಿಕೊಂಡಿರುತ್ತಾರೆ. ಇಂತಹ ಗದ್ದೆಯನ್ನು ನೀರಿಳಿಸಿ 'ಬಾಡ್'ಮಾಡಿ/ಬಿಸಿಲಗೆ ಒಣಗುವಂತೆ ಮಾಡಿ ಬೀಜ ಬಿತ್ತುವುದರಿಂದ ಇದಕ್ಕೆ 'ಮೂಕ್ಬೆದೆ'ಗಳನ್ನು ಬಳಸುವುದಲ್ಲದೆ, ಬೀಜಬಿತ್ತುವ ಕ್ರಮದಲ್ಲಿಯೂ ಭಿನ್ನತೆಯನ್ನು ಅನುಸರಿಸಲಾಗುತ್ತದೆ. ಈ ಕಿರುಮೊಳಕೆಯ ಬೀಜವನ್ನು ನೆಲಕ್ಕೆ 'ಕಚ್ಚು/ಅಂಟು'ವಂತೆ ಹಾಕಬೇಕಾದ ಕಾರಣದಿಂದ ಬೀಜಬಿತ್ತುವ ಕೈ ಅಡಿಮುಖ/ಕಂಪ್ಚಿ ಇರುತ್ತದೆ. ನೆಲಕ್ಕೆ ಅಂಟುವಂತೆ ಹೀಗೆ ಬಿತ್ತಲಾದ ಬೀಜವು ಬಳಿಯದ/ತೇಲದ ಹಾಗೆ ಬಗಿಲಿನ ಸಹಾಯದಿಂದ ನೀರು ಹೊರಹೋಗುವಂತೆ ಮಾಡಿ ಗದ್ದೆಯನ್ನು ಒಣಗಿಸು/ಬಾಡ್ ಮಾಡುತ್ತಾರೆ. ಇದಕ್ಕೆಂದು ಬೀಜಹಾಕಿದ ಮೇಲೆ ಒಂದು ದಿನ ನೀರು ಕಟ್ಟುವ ಹಾಗೂ ಇನ್ನೊಂದು ದಿನ ನೀರು ಒಣಗಿಸುವ ಕ್ರಮವನ್ನು 2-3 ಬಾರಿ ಪುನರಾವರ್ತಿಸಿದ ಮೇಲೆ ಬೀಜ ನೆಲಕ್ಕೆ ಅಂಟಿಕೂತ ಕುರುಹು ಲಭ್ಯವಾಗುತ್ತಿದ್ದಂತೆಯೇ 'ಹಜಹಜಾನೀರ್'/ಹದಹದಾನೀರ್ ನಿಲ್ಲುವಂತೆ ಮಾಡುತ್ತಾರೆ. ಮುಂದೆ 20-21 ದಿನಗಳ ತನಕ ಕಾದು ಅನಂತರ ಅಗೆಬೆದೆ ಕಿತ್ತು ನೇಜಿ/ನೆಟ್ಟಿ ಮಾಡುತ್ತಾರೆ. ಮಳೆಗಾಲದ ಸಂದರ್ಭವಾದರೆ ಬೀಜವು ನೆಲದಿಂದ ಬಿಟ್ಟು ಏಳದಂತೆ ಕೆಸರಿಗೆ ಹೊಡೆದು ಬಿಡುತ್ತಾರೆ, ವೈಶಾಖದಲ್ಲಿ ಗದ್ದೆಯನ್ನು ಒಣಗಿಸುತ್ತಾರೆ. ಕಂಪದ ಗದ್ದೆಗೆ ಬಿತ್ತುವ 'ಗಾಳ್ಬೆದಿ'ಯಾದರೆ ಬೀಜಬಿತ್ತನೆಯ ಕೈ ಮೇಲ್ಮುಖವಾಗಿರುತ್ತದೆ. ದೇವರಕಟ್ಟೆಯ ಮೇಲೆ ಸ್ಯಾಸಿಹಾಕುವ ವೇಳೆಯಲ್ಲಿ ಹೇಗೆ ಮೇಲ್ಮುಖವಾಗಿ ಎಸೆಯಲಾಗುತ್ತದೆಯೋ ಹಾಗೆ ಬೀಸಿ ಹೊಡೆದಲ್ಲಿ ಅದು ಕೆಸರಿನಲ್ಲಿ ಕಂತಿ/ಮುಳುಗಿ ಹೋಗುವುದರಿಂದಾಗಿ ಮುಂಜಾಗರೂಕತೆ ವಹಿಸುತ್ತಾರೆ.

ಇನ್ನು ಅಗೆ ಕೀಳುವ ಉದ್ದೇಶವಿರದೆ, ನೇರವಾಗಿ ಮೊಳಕೆ ಬರಿಸಿದ ಮೂಕ್ಬೆದೆಯನ್ನೇ ಬಿತ್ತಿ ಬೆಳೆ ಬೆಳೆಯುವ ಇನ್ನೊಂದು ಕ್ರಮವಿದೆ. ವೈಶಾಖದ ಸುಗ್ಗಿಬೆಳೆಯ ಕ್ರಮಗಳಲ್ಲೊಂದಾದ ಇದನ್ನು 'ಹಿಂಡಿಹಾಕುದ್' ಎಂದೇ ಗುರುತಿಸುತ್ತಾರೆ. ಗೊಬ್ಬರ ಸೇರಿಸಿ, ಉಳುಮೆ ಮಾಡಿ ಹದಗೊಂಡ ಗದ್ದೆಗೆ ಬಿತ್ತುವ ಈ ಬೀಜವನ್ನು ಫಲವತ್ತಾದ ಗೊಬ್ಬರದ ಜೊತೆಗೆ ಮಿಶ್ರಣಮಾಡಿಕೊಂಡು ನೊಣ ಇಪ್ಪಿಹಾಕಿದಂತೆ 'ಗುಪ್ಪಿ' ಹಾಕುತ್ತಾ ಹೋಗುತ್ತಾರೆ. ಈ ಸಂದರ್ಭದಲ್ಲಿ ನೊಗಕ್ಕೆ ಕಟ್ಟುವ 'ಜೊತ್ಕ' (ಕೋಣ/ಎತ್ತುಗಳ ಕೊರಳಪಟ್ಟಿ)ವನ್ನು ಹಿಂಡಿಕುಕ್ಕೆಗೆ ಕಟ್ಟಿ ಆ ಕುಕ್ಕೆಯನ್ನು ಸೊಂಟಕ್ಕೆ ಬಿಗಿದುಕೊಂಡು ಮುಂದಿನಿಂದ ಹಿಂದಕ್ಕೆ ಎರಡೂ ಕೈಗಳಿಂದ ಒಂದು ವಿಶೇಷ ಕ್ರಮದಲ್ಲಿ ಹಿಂಡಿ ಹಾಕುತ್ತಾ ಬರುತ್ತಾರೆ. ಇದರಲ್ಲಿ ಬೀಳುವ ಹಿಂಡಿಯ ಪ್ರಮಾಣ ಒಂದೇ ಸಮನಾಗಿರುವುದಿಲ್ಲ. ಅದರ ಬದಲಾಗಿ ಹೆಬ್ಬೆರಳು/ಮಂಡ್ಬೆರ್ಳ್ ಮತ್ತು ತೋರುಬೆರಳುಗಳನ್ನು ಬಳಸಿ ಒಂದು ವೃತ್ತಾಕಾರವನ್ನು ಬಲಿದು ಅದರ ಒಳಗಿಂದ ತೂರಿಬೀಳುವಂತೆ ಹಿಂಡಿಯನ್ನು ಬೀಳಿಸುವುದರಿಂದ ಒಂದೇ ಸಮಪ್ರಮಾಣದಲ್ಲಿ ಬೀಳಿಸಲು ಸಾಧ್ಯವಾಗುತ್ತದೆ.

ಇವೆಲ್ಲವೂ ಮುಖ್ಯವಾಗಿ ಬತ್ತದ ಬೆಳೆಕ್ರಮಗಳಾದ ಕಾತಿ, ಸುಗ್ಗಿ ಮತ್ತು ಕೊಳ್ಕಿಗಳೆಂಬ ಭಿನ್ನಮಾದರಿಯ ಬೀಜಬಿತ್ತನೆಯ ಹಾಗೂ ಅಗೆ ಬೆದೆ ಕಿತ್ತು ನೇಜಿ ಮಾಡುವ ಕ್ರಮದಲ್ಲಿನ ಉಳುಮೆ ಸಂಬಂಧಿ ಸಂಗತಿಗಳು. 'ಕಾತಿಗ್ ಕಾಲ್ ಮುಂದೆ ಸುಗ್ಗಿಗ್ ನೇಲ್ ಮುಂದೆ' ಎಂಬ ಮಾತಿನಂತೆ ಉಳುಮೆಯ ಪ್ರಮಾಣ, ಕೆಲಸದ ಚುರುಕುತನಗಳಲ್ಲಿ ಇವುಗಳ ನಡುವೆ ಸಾಕಷ್ಟು ಅಂತರವಿದೆಯಾದರೂ ಬಹುಮಟ್ಟಿಗೆ ಉಳುಮೆಗೆ ಸಂಬಂಧಿಸಿದ ವಿವರಗಳಲ್ಲಿ ಅವು ಸಾಮ್ಯತೆಯನ್ನೇ ತೋರುತ್ತವೆ ಎಂಬುದನ್ನು ಮರೆಯಬಾರದು. ಕಾತಿನೆಟ್ಟಿಗೂ ಸುಗ್ಗಿಗೂ ಇರುವ ಬಹುಮುಖ್ಯ ವ್ಯತ್ಯಾಸ ಎಂದರೆ ಕಾತಿಯ ಬೀಜಹಾಕುವ ಸಂದರ್ಭ ಬಿಟ್ಟು ಉಳಿದ ಸಂದರ್ಭಗಳಲ್ಲಿ ಗೋರಿ ಇಲ್ಲವೇ ಹೊಲ್ಗೋರಿಯ ಬಳಕೆಯೇ ಇಲ್ಲ. ಆದರೆ ಸುಗ್ಗಿ ಮತ್ತು ಕೊಳ್ಕಿಯ ನೇಜಿಯಲ್ಲಿಯೂ ಗೋರಿಯ ಬಳಕೆ ಇದೆ. ಕಾತಿ ನೆಟ್ಟಿಯಲ್ಲಿ ಅಂಚಿಗೆ ಮಣ್ಣಿಡುವ, ಅಂಚು ಸವರುವ ಅಗತ್ಯವಿರುವುದಿಲ್ಲ. ಆದರೆ ಸುಗ್ಗಿಯಲ್ಲಿ ಇವೆಲ್ಲವೂ ಅತ್ಯವಶ್ಯಕ.

ಧಾನ್ಯದಗದ್ದೆಯ ಉಳುಮೆ : ಉಳುಮೆಯ ಅನಿವಾರ್ಯತೆಯಿರುವುದು ಬರಿಯ ಬತ್ತದ ಕೃಷಿಗಷ್ಟೇ ಅಲ್ಲ. ರೈತರ ಬೆಳೆಪದ್ಧತಿಯಲ್ಲಿ ಬಹುಮುಖ್ಯ ಭಾಗವೇ ಆಗಿರುವ ಧಾನ್ಯ ಕಾಳುಗಳ ಬೆಳೆಯಲ್ಲಿಯೂ ನೇಗಿಲು ಮತ್ತು ಗೋರಿಗಳಿಗೆ ವಿಶೇಷ ಆದ್ಯತೆಯಿದೆ. ಮುಖ್ಯವಾಗಿ ಧಾನ್ಯಕಾಳುಗಳಾದ ಉದ್ದು, ಹುರುಳಿ, ಎಳ್ಳು, ಅವರೆ, ಹೆಸರು, ಕಬ್ಬೆಸರು ಇತ್ಯಾದಿ ಕಾಳುಗಳೂ ಮೆಣಸು, ಸೌತೆ, ಬದನೆ, ಕಬ್ಬು, ನೆಲಗಡಲೆ ಮುಂತಾದ ಬೆಳೆಗಳಲ್ಲಿಯೂ

ಅವರ ಬಹುದೊಡ್ಡ ಸಂಗಾತಿ ನೇಗಿಲೇ ಆಗಿದೆ. ಕಾತಿಯ ಕಟಾವು ಆಗುತ್ತಿದ್ದಂತೆಯೇ ಸಾಮಾನ್ಯವಾಗಿ ಉದ್ದು ಮತ್ತು ಹುರುಳಿ ಎಂಬೆರಡು ಧಾನ್ಯಗಳನ್ನು ಗದ್ದೆಯ ತಂಪಿನಲ್ಲಿಯೇ ಬೆಳೆದುಕೊಳ್ಳಲು ಯತ್ನಿಸುತ್ತಾರೆ. ಇದಕ್ಕೆಂದು ಕಟಾವಿಗೆ ತಗುಲಿಕೊಂಡೇ ಈ ಧಾನ್ಯಕಾಳುಗಳ ಬಿತ್ತನೆಮಾಡುತ್ತಾರೆ. ಇವುಗಳಲ್ಲಿ ಉದ್ದಿನಂತಹ ಧಾನ್ಯಕಾಳುಗಳನ್ನು ಸಾಕಷ್ಟು ತಂಪಿರುವ ಮೆದುಗದ್ದೆಗಳಲ್ಲಿ ಉಳುಮೆಯೇ ಇರದೆ ಬೆಳೆಯುವುದಿದೆ. ಇದನ್ನು 'ಮೆಟ್ಟುದ್ದು' ಎನ್ನುತ್ತಾರೆ. ಇದು ಕೊಯ್ಲಿಗೆ ಮೊದಲೇ ಬಿತ್ತನೆ ಮಾಡಿ ಕಟಾವಿನ ವೇಳೆಯಲ್ಲಿ ಕೊಯ್ಲುಮಾಡುವವರ ಕಾಲಡಿಗೆ ಸಿಕ್ಕಿ ನೆಲದಡಿ ಹುಗಿಯುವಂತಾಗುವ ಕ್ರಮ. ಮೆಟ್ಟಿದ ಉದ್ದು ಎಂಬರ್ಥದಲ್ಲಿ ಇದನ್ನು 'ಮೆಟ್ಟ್‌ಉದ್ದ್' ಎನ್ನುತ್ತಾರೆ. ಇನ್ನು ಕಾತಿಯ ಕಟಾವು ಮುಗಿಯುತ್ತಿದ್ದಂತೆಯೇ ಮಾಡುವ ಧಾನ್ಯಾದಿಗಳ ಬಿತ್ತನೆಯಲ್ಲಿ ಅರ್ಕ್ಲ್‌ಹೂಂಟಿಗಿಂತಲೂ ಲಘುವಾಗಿ ನೆಲಕ್ಕೆ ಹಗುರವಾಗಿ ಗಾಯವಷ್ಟನ್ನೇ ಮಾಡಿದಂತೆ ಉಳುಮೆಮಾಡಿ ಬಿತ್ತುವುದೇ ಹೆಚ್ಚು. ಯಾಕೆಂದರೆ ಇಲ್ಲಿ ಧಾನ್ಯದ ಬೆಳೆಗೆ ಬೇಕಾದ ತಂಪಿನ ಕೊರತೆಯಿರುವುದಿಲ್ಲ. ಹಾಗಾಗಿ ಒಂದೆರಡು ಸಾಲು ನೆಲವನ್ನು ಕಿರಕಿರನೆ ಮಾಡಿ ಬೀಜಬಿತ್ತನೆ ಮಾಡುತ್ತಾರೆ. ಇಲ್ಲಿ ಗದ್ದೆಯ ಬದುಕಡಿಯುವ ಕ್ರಮವಿಲ್ಲ, ಗೋರಿಯನ್ನು ಬಳಸಿ ಲಘುವಾಗಿ ಕೆರೆದುಬಿಡುವುದಿದೆ. ಆದರೆ ವೈಶಾಖದಲ್ಲಿ ಬಿತ್ತುವ ಉದ್ದು, ಹುರುಳಿ, ನೆಲಗಡಲೆ, ಎಳ್ಳು ಇತ್ಯಾದಿಗಳಿಗೆ ನೆಲದ ತಂಪನ್ನು ಕಾದುಕೊಡುವ ಅಗತ್ಯತೆ ಇರುವುದರಿಂದಾಗಿ ಅತಿ ಹೆಚ್ಚು ಉಳುಮೆ ಮಾಡಿ ಮಣ್ಣನ್ನು ನುಣುಪಾದ ಹುಡಿಯ ರೂಪಕ್ಕೆ ತಂದಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ಮಣ್ಣಿಗೆ ಗೊಬ್ಬರ ಸೇರಿಸುವ, ನಲುಗೂಡಿಸಿ ಫಲವಂತಿಕೆಯನ್ನು ಹೆಚ್ಚಿಸುವ ಎಲ್ಲಾ ಕಸರತ್ತುಗಳಿರುತ್ತವೆ. ಕಡುವೈಶಾಖದಲ್ಲಿ ಬೆಳೆಯಲಾಗುವ ಎಳ್ಳು, ಉದ್ದು ಮುಂತಾದ ಧಾನ್ಯಗಳನ್ನು ಚನ್ನಾಗಿ ಉಳುಮೆಮಾಡಿದ ಗದ್ದೆಗೇ ಹಾಕುವುದರಿಂದ ಬತ್ತದ ಕೃಷಿಯಂತೆಯೇಇಲ್ಲಿಯೂ ಉಳುಮೆ ಹಂತಗಳಿರುತ್ತವೆ. ಆದರೆ ನೇಜಿಯ ಬದಲಿಗೆ ನೇರವಾಗಿ ಬತ್ತದ ಹೊಡ್ಬೀಜ ಹಾಕಿದಂತೆ ಬೀಜಚಲ್ಲುವುದಷ್ಟೇ ಇರುವುದರಿಂದ ಹೊದ್ದು/ಬದುಕಡಿಯುವ, ಗೋರಿಬಳಸಿ ಕೆರೆದು ಒಪ್ಪವಮಾಡುವ ಕ್ರಮವಿರುವುದಾಗಿಯೂ, ನೇಜಿಯಲ್ಲಿರುವಂತೆ ಕತ್ರಿಸಾಲು/ತೌಡ್ಸಾಲ್‌ಗಳಿಲ್ಲ. ಈ ಮಾದರಿಯಲ್ಲಿ ಹೆಚ್ಚು ಉಳುಮೆ ಮಾಡಿ ಗೋರಿಯಿಂದ ಒತ್ತಿ ಕೆರೆಯುವುದರಿಂದ ಭೂಮಿಯ ತಂಪನ್ನು ಹೆಚ್ಚು ಕಾಲ ಉಳಿಸಿಕೊಳ್ಳಬಹುದೆನ್ನಲಾಗಿದೆ.

ಎಲ್ಲ ಉಳುಮೆಯ ವೇಳೆಯಲ್ಲಿಯೂ ಉಳುಮೆಗಾರ ಜೋಡುನಡೆಸುವ ಶ್ರಮ ಪರಿಹಾರಕ್ಕಾಗಿ, ಎತ್ತು/ಕೋಣಗಳನ್ನು ಉದ್ದೇಶಿಸಿ ಹಾಡುವ ಹಾಡಿನಂತಹ ರಚನೆಗಳನ್ನು 'ಒಳಾಲ್‌ಹಾಕುವುದು' ಎನ್ನುತ್ತಾರೆ. ಬಲಬಲಬಲ/ಬಾಲ್‌ಬಾಲ್‌ಬಾಲ್, ಆಡ್‌ಆಡ್‌ಆಡ್ ಎನ್ನುವ ಪ್ರಯೋಗಗಳು ಬಲ/ಎಡದಿಕ್ಕನ್ನು ಮತ್ತೆ ಮತ್ತೆ ನೆನಪಿಸಿ ಎಚ್ಚರಿಸುವಂಥವು. ಉಳುವ ಜಾನುವಾರುಗಳನ್ನು ನಿಯಂತ್ರಿಸಲು, ಚೋದಿಸಲು ಉಳುಮೆಗಾರ ಹೊಂದಿರುವ ಬಡಿಗೆಯನ್ನು 'ಹೂಂಟಿಕೋಲ್' ಎನ್ನುತ್ತಾರೆ. ಈ ಹೂಂಟಿಕೋಲನ್ನು ಕಾಸಾನು ಇಲ್ಲವೇ ಹೈಗನಮರದ ಟೊಂಗೆಯನ್ನು ಬಳಸಿ ಮಾಡಿಕೊಳ್ಳುತ್ತಾರೆ. ಇದರ ಬುಡ ಸಪೂರವಾಗಿದ್ದು, ತಲೆಯಲ್ಲಿ ಹೆಡೆಯಂತಹ ರಚನೆಯಿರುತ್ತದೆ. ಜೋಡನ್ನು ಬೆದರಿಸುವಷ್ಟೇ ಮುಖ್ಯವಾಗಿ ನೇಗಿಲಿಗೆ ಅಂಟಿಕೊಳ್ಳುವ ಮಣ್ಣನ್ನು ಕೀಸಿತೆಗೆಯಲು ಹಾಗೂ ನೇಗಿಲಿನೊಂದಿಗೆ ಆತುಕೊಂಡುಬರುವ ಗೊಬ್ಬರ ಚಪ್ಪ/ಕುರ್ಬ್ಲ(ಕಳೆ) ಚಂಡೆಗಳಿಂದಾಗಿ ನೇಗಿಲು ಎಳೆಯುವುದು ದುಸ್ತರವಾಗುವುದನ್ನು ತಪ್ಪಿಸಲು, ನೇಗಿಲನ್ನು ಎತ್ತಿ ಇದನ್ನು ಜಾರಿಸುತ್ತಲೇ ಇರಬೇಕಾಗುತ್ತದೆ. ಇದನ್ನು 'ಜಲ್ಲಿ/ಜಲ್ಲೆ' ತೆಗೆಯುವುದೆನ್ನುತ್ತಾರೆ. ಈ ಕೆಲಸಕ್ಕೆ ಮತ್ತೆ ಪುನಃ ಹೂಂಟಿಕೋಲೇ ಬೇಕು. ಹೀಗೆ ನೇಗಿಲನ್ನು ಸಾಫ್/ಶುದ್ಧಮಾಡಿಕೊಳ್ಳದೇ ಹೋದರೆ ಅದು ನೆಲಕ್ಕೆ 'ಹರಿ'ಯದೆ ಸುಮ್ಮನೇ 'ಜವ್ಡ್‌ಕಂಡ್'/ಉಜ್ಜಿಕೊಂಡು/ತೆವಳಿಕೊಂಡು/ಜಾರಿಕೊಂಡು ಹೋಗುವುದರಿಂದ ಮಣ್ಣುಕೀಳಲು ಸಾಧ್ಯವಾಗದಾಗುತ್ತದೆ. ಜಲ್ಲೆತೆಗೆಯುವಾಗ ಎಡಗೈಯಿಂದ 'ನೇಲ್‌ಮ್ಯಾಳಿ/ಮೇಳಿ/ಯನ್ನು ಎತ್ತಿ ಬಲಗೈಯ ಹೂಂಟಿಕೋಲಿನಿಂದ ಜಾರಿಸಿಬಿಡುತ್ತಾರೆ.

ನಾಟಿ ಮತ್ತು ಕಟಾವು

ನಾಟಿಕ್ರಮುಗಳು : ಕಾತಿಯಿರಲಿ, ಸುಗ್ಗಿ, ಕೊಳ್ಕಿಗಳೆಂಬ ಕೃಷಿಮಾದರಿಯಿರಲಿ ಅವೆಲ್ಲವೂ ಬತ್ತದ ಬೆಳೆಮಾದರಿಗಳು. ಇಲ್ಲಿ ನೇಜಿಮಾಡದೇ ಬೆಳೆಬೆಳೆಯುವ ಬಿತ್ತಣೆ, ಹಿಂಡಿಹಾಕುವುದೆಂಬ ಕ್ರಮಗಳಿವೆ. ಈ ನಡುವೆಯೂ ನಾಟಿಮಾಡಿಯೇ ಬೆಳೆಯುವ ಕ್ರಮ ಹೆಚ್ಚು ಪ್ರಚಲಿತ. ನಾಟಿಗೆ ಸಂಬಂಧಿಸಿದಂತೆ ಸಾಲ್ನಟ್ಟಿ, ದಪ್ಪನಟ್ಟಿ, ತೆಳುನೆಟ್ಟಿ ಎಂಬ ಅನೇಕ ಕ್ರಮಗಳಿವೆ. ಮಣ್ಣಿನಲ್ಲಿ ಅಧಿಕ ಫಲವತ್ತತೆ ಇರದೆ ನೆಟ್ಟಬುಡ 'ಹಿಳ್ಳ್' (ಟಿಸಿಲು) ಒಡೆಯುವುದಿಲ್ಲ ಎಂದಾದರೆ ಆ ಗದ್ದೆಯಲ್ಲಿ ದಪ್ಪನೆಟ್ಟಿ ಮಾಡುತ್ತಾರೆ. ಹೀಗೆ ದಪ್ಪನೆಟ್ಟಿ ಮಾಡುವಲ್ಲಿ 'ಹಿಡ್ಪ್' (ಅಗೆಯ ಪ್ರಮಾಣ) ಕಡಿಮೆಯಿರುತ್ತದೆ. ಇದನ್ನು 'ಹಿಡ್ಪ್‌ಚೀಂಟುದ್' ಎನ್ನುತ್ತಾರೆ. ನೆಟ್ಟ ನೇಜಿ ಒತ್ತೊತ್ತಾಗಿ ಇರುವುದರಿಂದ ಇಲ್ಲಿ ಒಂದೆರಡು ಅಗೆಸಸಿಯನ್ನಷ್ಟೇ ಬಳಸುತ್ತಾರೆ. ಕಡಿಮೆಹಿಡ್ಪಿನಿಂದ ಸೂಜಿಕುತ್ತಿದಂತೆ ಒತ್ತೊತ್ತಾಗಿ ತೋರುವುದರಿಂದ ಈ ಮಾದರಿಯ ನೆಟ್ಟಿಯನ್ನು 'ಅಗಿಕುತ್ತದ್' ಎಂದು ಲೇವಡಿಮಾಡುವುದಿದೆ. ಇದಕ್ಕೆವಿರುದ್ಧವಾಗಿ ಗದ್ದೆಯಲ್ಲಿ ನಲುಚನ್ನಾಗಿದ್ದು (ಫಲವಂತಿಕೆ) ಹುಲುಸಾಗಿ ಹಿಳ್ಳೊಡೆಯುವುದಾದರೆ ತೆಳುನೆಟ್ಟಿಮಾಡುತ್ತಾರೆ. ಇಲ್ಲಿ ದೂರದೂರಕ್ಕೆ ಅಗೆಸಸಿಗಳನ್ನು ಇಡುವುದರಿಂದ ಸಹಜವಾಗಿಯೇ ಒಂದಿಷ್ಟು ಅಧಿಕಪ್ರಮಾಣದ ಅಗೆಸಸಿಗಳನ್ನು ಬಳಸಿಕೊಳ್ಳುತ್ತಾರೆ. ಇದನ್ನು 'ಹಿಡ್ಪ್‌ಒತ್ತ್ ಹಾಕುದ್' ಎನ್ನುತ್ತಾರೆ. ತೆಳುವಾಗಿದ್ದು ಗದ್ದೆಯ ಖಾಲಿಜಾಗಗಳು ಕಾಣುವಂತೆ ಇರುವ ನೇಜಿಯನ್ನು 'ನೆಲಬರದ್' ಎಂದು ಲೇವಡಿ ಮಾಡುವುದಿದೆ. ಇನ್ನೊಂದು ನೇಜಿಯ ಕ್ರಮವೆಂದರೆ'ಸಾಲ್‌ನೆಟ್ಟಿ'. ಇವತ್ತು ಶ್ರೀಪದ್ಧತಿಯೇ ಮುಂತಾದ ಹೆಸರಿನಿಂದ ಪರಿಚಿತವಾಗುತ್ತಿರುವ ಆಧುನಿಕ ಮಾದರಿಯ ವ್ಯವಸಾಯ ಕ್ರಮದಲ್ಲಿರುವಂತೆ ಇಲ್ಲಿ ಸಾಲುನೇಜಿಯಿರುತ್ತದೆ. ಈ ಮಾದರಿಯ ನೆಟ್ಟಿಯಲ್ಲಿ ಕಳೆ ತೆಗೆಯುವ ವೇಳೆ ಒಂದು ಅನುಕೂಲತೆಯಿದೆ. ಅದೇನೆಂದರೆ ಗುದ್ದಲಿಯಂತಹ ಕಿರುಸಾಧನ (ಕುಂಟಣೆ)ವನ್ನು ಸಾಲುಗಳ ಮಧ್ಯೆಯೇ ಬಳಸಿ ಕಳೆ ತೆಗೆಯಬಹುದು. ಹೀಗೆ ಕುಂಟಣಿ ಓಡ್ಸಿ ತೆಗೆದ ಕಳೆಯನ್ನು 'ಹಲ್ಕಿ' ಎಂದು ಕರೆಯಲಾಗುವ 'ಬೆದ್ರ್‌ಕೊಕ್ಕೋಲ್' ಬಳಸಿ ಕಂಟಕ್/ಅಂಚಿಗ್/ಅಂಚಿಗೆ ಹಾಕಿಕೊಳ್ಳುತ್ತಾರೆ.

ನೇಜಿ ಸಂದರ್ಭದಲ್ಲಿ ನೆಟ್ಟಿಯಾಳುಗಳು ತಮ್ಮೊಳಗಿನ ಕೆಲಸವನ್ನು ತಾವೇ ಹಂಚಿಕೊಳ್ಳುತ್ತಾರೆ. ಒಟ್ಟು ವಿಸ್ತೀರ್ಣವನ್ನು ಅಡ್ಡವಾಗಿ ಅಥವಾ ಉದ್ದವಾಗಿ ಯಾವುದಾದರೂ ಒಂದು ನೆಲೆಯಲ್ಲಿ ಉದ್ದನೆಯ

ಕೋಲೊಂದರಿಂದ ಅಳತೆ ಮಾಡಿಕೊಂಡು ಸಮಾನವಾಗಿ ಹಂಚಿಕೆ ಮಾಡಿಕೊಳ್ಳುತ್ತಾರೆ. ಹೀಗೆ ಹಂಚಿಕೆ ಮಾಡಿಕೊಳ್ಳಲು ಅವರು ಬಳಸುವ (ನಿರ್ದಿಷ್ಟ ಅಳತೆಯಿಲ್ಲದ) ಸಾಧನವನ್ನು 'ಓಜಿನಕೋಲ್' ಎಂದೂ, ಹಾಗೆ ಒಬ್ಬೊಬ್ಬರು ಎಷ್ಟು ನೆಡಬೇಕೆಂದು ನಿರ್ಧರಿಸುವುದನ್ನು 'ಓಜ್‌ಹಾಕುದ್' ಎಂದೂ ಕರೆಯುತ್ತಾರೆ. ಪ್ರತೀ ಓಜಿನ ಗಡಿಯನ್ನೂ ಅಗೆಸಸಿ ನೆಟ್ಟು ಗುರುತಿಸುತ್ತಾರೆ. ನೆಟ್ಟಿಯ ಪ್ರಗತಿಯನ್ನು 'ನೆರ್‍ಗಿ' ತೆಗೆದುಕೊಂಡು ಬರುವುದು, 'ಸೆರ್‍ಗ್‌ಚಾಚುದ್' ಮುಂತಾಗಿ ಸೀರೆಯನ್ನು ಉಡುವುದನ್ನು ಸೂಚಿಸುವ ಪದಗಳ ಮೂಲಕವೇ ಸೂಚಿಸಲಾಗುತ್ತದೆ.

ಬತ್ತದ ಸಸಿಯನ್ನುಳಿದು ಸಸಿನೆಟ್ಟು ಬೆಳೆಸುವ ಕ್ರಮ ಮೆಣಸು, ಬದನೆಗಳಲ್ಲಿದೆ. ಗೊಬ್ಬರ ತುಂಬಿದ ಮಡುಗಳಲ್ಲಿ ಒಂದು ಕೈಯಿಂದ ತೆಗೆದ ಗುಳಿ / ಸಣ್ಣ ಹೊಂಡಕ್ಕೆ ಇನ್ನೊಂದು ಕೈಯಲ್ಲಿನ (ಇದಕ್ಕೆಂದು ಸಿದ್ಧಗೊಳಿಸಿಕೊಂಡ) ಸಸಿನೆಟ್ಟು ಮಣ್ಣು ಮುಚ್ಚಿ ಬುಡಗಟ್ಟಿಮಾಡುತ್ತಾರೆ. ಈ ಸಸಿಗಳು ಒಂದೊಂದಾಗಿದ್ದು ನಿಗದಿತ ಅಂತರದಲ್ಲಿರುತ್ತವೆ. ಕಬ್ಬಿನ ಬೆಳೆಯಲ್ಲಿ ಕಬ್ಬಿನ ಕುಡಿಗಳಲ್ಲಿನ ಮೊಳಕೆ ಕಣ್ಣನ್ನು ನೋಡಿಕೊಂಡು ನೆಡುತ್ತಾರೆ. ಹೀಗೆ ನೆಡಲಾಗುವ ಕಬ್ಬಿನಕುಡಿಗಳು ಸಾಮಾನ್ಯವಾಗಿ 3-4 'ಮುಕ್ಕ್/ಕಣ್ಣು/ ಮೊಳಕೆಗಣ್ಣ'ನ್ನು ಹೊಂದಿದವುಗಳಾಗಿರುತ್ತವೆ. ಕುಂಬಳ, ಸೌತೆ, ಕರ್‍ಗುಂಜಿ/ಕಲ್ಲಂಗಡಿ, ಹರಳುಗಳಲ್ಲಿ ಸಸಿನೆಡುವ ಬದಲಿಗೆ ಬೀಜನೆಡುವ ಕ್ರಮವಿದೆ. ನೆಲಗಡಲೆ, ಅವಡೆಯಂತಹ ಬೆಳೆಗಳಿಗೆ ಉಳುಮೆಯ ವೇಳೆಯಲ್ಲಿಯೇ ಸಾಲಾಗಿ 'ನೇಲ್ಬೋಳಿ'ಯಲ್ಲಿಯೇ ಬೀಜಗಳನ್ನು ಒಂದೊಂದಾಗಿ ಬಿಟ್ಟುಕೊಳ್ಳುತ್ತಾ ಹೋಗಲಾಗುತ್ತದೆ.

ಕಟಾವು ಮತ್ತು ಫಸಲು ಸಂಗ್ರಹ : ಪ್ರಸ್ತುತ ಉಳಿದ ಧಾನ್ಯಾದಿಗಳ ಬೆಳೆ ವಿವರಗಳಲ್ಲಿಯೇ ಅವುಗಳ ಸಂಗ್ರಹ ವಿಧಾನಗಳನ್ನೂ ಜೊತೆಯಲ್ಲಿಯೇ ವಿವರಿಸಿಕೊಂಡಿರುವುದರಿಂದ, ಬತ್ತದ ಕಟಾವನ್ನಷ್ಟೇ ಇಲ್ಲಿ ಪರಿಚಯಿಸಿಕೊಳ್ಳಬಹುದಾಗಿದೆ. ಬತ್ತದ ಕೃಷಿ ಎಂದಾಗ ನೆನಪಾಗುವುದೇ ಮುಂಗಾರಿನ ಕೃಷಿ, ಏನೆಲ್ ಬೇಸಾಯ ಅಥವಾ ಕಾತಿಬೆಳೆ. ವ್ಯಾಪಕವಾಗಿ ಭೂಮಿಯ ಬಹುಪಾಲು ಕೃಷಿಗೊಳಪಡುವ ಸಂದರ್ಭವಿದು. ನೇಜಿಯಾದ ಬತ್ತದ ಸಸಿ ಸುಳಿತೆಗೆದು, ಹೊಡೆಗಟ್ಟಿ, ಕದಿರುಬೀಸಿ, ಹಾಲುನುಂಗಿ, ಕಾಯ್ಗಟ್ಟಿ, ಕಡಬತ್ತ (ತೆನೆಯಕಡೆಯಬತ್ತ) ಹಣ್ಣಾಗುವ ಅವಸ್ಥೆಯನ್ನು ದಾಟುವಲ್ಲಿಯವರೆಗೆ ಕೊಯ್ಲಿನ ಪ್ರಶ್ನೆ ಬರುವುದಿಲ್ಲ. ಈಗಿಗಿಂತ ಭಿನ್ನವಾಗಿ ಹಿಂದೆ ದೊಡ್ಡಕೆಯ್‌ಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಇವು ಫಸಲು ಹಣ್ಣಾಗುವ ಮೊದಲೇ ನೆಲಕ್ಕೊರಗಿ (ನೆಲಕ್ಕ್‌ಅಪ್ಪಾಯ್) 'ಹಾಸಿಬೀಳು'ತ್ತಿದ್ದುವು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಹಾಗಿದ್ದೂ ಬೆಳೆಯ ಬೆಳವಣಿಗೆಯ ಹಂತಗಳು ಬದಲಾದಂತಿಲ್ಲ. ಕಟಾವಿಗೆ ಸಿದ್ಧವಾದುದನ್ನು ಕೊಯ್ದು ಒಣಗಿಸುತ್ತಾರೆ. ಪೈರಿನ ಒಣಗುವ ಪ್ರಮಾಣವನ್ನು 'ಒಂದ್ ಬಿಸ್ಲು, ಎರ್‍ಡ್ ಬಿಸ್ಲು' ಎಂಬ ಲೆಕ್ಕದಲ್ಲಿ ಗಣಿಸುತ್ತಾರೆ. ಅದರ 'ದಡಿ'/ದಂಟೆಲ್ಲವೂ ಚೆನ್ನಾಗಿ ಒಣಗಿ 'ಗರ್‍ಕಗ್ ಆಪ್ಕೆ'/ಗರಿಗರಿಯಾಗಲು ಕನಿಷ್ಟ 2-3 ಬಿಸಿಲುಗಳು ಬೇಕಾಗುತ್ತವೆ. ಸರಿಯಾಗಿ ಒಣಗಿದುದನ್ನು ಹೊರೆಕಟ್ಟಿ ಮನೆಗೆ ತರುತ್ತಾರೆ. ಕೆಯ್‌ಹೊರುವ ವೇಳೆ ಗದ್ದೆಯಲ್ಲಿ ಉದುರಿದ ಕದಿರನ್ನು ಮಕ್ಕಳು ಸಂಗ್ರಹಿಸುತ್ತವೆ. ಹೀಗೆ ತುಂಡಾಗಿ ಬಿದ್ದ ಕದಿರು ಕಿರುವಳೆಗಳಂತಿದ್ದರೆ ಅದನ್ನು ಕದಿರೆನ್ನದೆ 'ಕುಸ್ಪ' ಎನ್ನುತ್ತಾರೆ.

ಹೊರೆಕಟ್ಟುವಲ್ಲಿ ಚಿಕ್ಕ ಚಿಕ್ಕ ಪಿಂಡಿಗಳನ್ನು ಒಟ್ಟು ಸೇರಿಸಿ 'ಅರಿ'ಯಾಗಿ ಪರಿವರ್ತಿಸಿಕೊಳ್ಳುತ್ತಾರೆ. ಕೆಯ್‌ಹೊರೆಯ ತಲೆಯ ಮೇಲೆ ಸರಿಯಾಗಿ ನಿಲ್ಲಲು ಅನುಕೂಲವಾಗುವಂತೆ ಹೊರೆಯ ಬುಡಕ್ಕೆ ಒಂದನ್ನೊಂದು ಕೊಕ್ಕೆಯಾಕಾರದಲ್ಲಿ ಆತುಕೂರುವಂತಿರಿಸಿದ ಎರಡು ಅರೆಮುರಿದ ಅರಿಗಳನ್ನು ಇಡುತ್ತಾರೆ. ಈ ಅರಿಗಳನ್ನು 'ಅಜ್ಜ-ಅಜ್ಜಿಅರಿ' ಎಂತಲೂ, 'ಮದ್ಮೆಳ್‌ಅರಿ' ಎಂತಲೂ ಕರೆಯುತ್ತಾರೆ. ಈ ಅರಿಗಳ ಮೇಲೆ ನೇರವಾಗಿಯೇ ಇರುವ ಅರಿಗಳನ್ನು ಇರಿಸಿ ಹೊರುವ ತಾಕತ್ತಿಗನುಸಾರವಾದ ಹೊರೆಯನ್ನು ಕಟ್ಟಿ ಕಣ/ಅಂಗಣಕ್ಕೆ ಹೊತ್ತು ತಂದು ಸಾಲಾಗಿ ಒತ್ತೊತ್ತಾಗಿ ಹೊರೆಹಾಕುವುದನ್ನು 'ಬಳೆಹಾಕುವುದು' ಎನ್ನುತ್ತಾರೆ. ಕೆಯ್‌ಹೊರೆಯನ್ನು ಅಂಗಣಕ್ಕೆ ಹೊತ್ತು ತರುವ ಮೊದಲೇ ಅಂಗಣದ ಪ್ರವೇಶವಾಗುವ ಸಂದಿನಲ್ಲಿ ಬೂದಿಯ ಗೆರೆಗಳನ್ನು ಹಾಕಿರುತ್ತಾರೆ. 'ಹೊಲ್ಗೀಟು' ಎನ್ನಲಾಗುವ ಈ ಗೆರೆಗಳನ್ನು ಕೆಯ್ ಎಲ್ಲವೂ ಅಂಗಣಕ್ಕೆ ಬರುತ್ತಿದ್ದಂತೆಯೇ ಅಳಿಸಿಹಾಕಿ, ಒಳಮುಖವಾಗಿ ಮಾಡಿಬಿಡುತ್ತಾರೆ. ತದನಂತರದಲ್ಲಿ ಮೊದಲ ಅರಿಗಳನ್ನು ಬಡಿಯುವ ವೇಳೆ 'ಹೊಲೆಚ್ಚ್ ಬಾ ಹೊಲೆಚ್ಚ್ ಬಾ ಹೊಲಿಯೇ ಹೊಲಿ ಹೆಚ್ಚೆಚ್ಚಿ ಬಾ' ಎಂಬ ಸೊಲ್ಲುಗಳನ್ನು ಕೂಗಿ ಕೆಯ್ ಬಡಿಯುತ್ತಾರೆ. (ಈ ಸಂಗತಿಗಳು ಹೆಚ್ಚಿನವು ಕಾತಿಬೆಳೆಗೆ ಸಂಬಂಧಿಸಿದುವು). ಈ ಹೊಲೆಕೆರೆಯುವ ವೇಳೆ ಹೆಂಗಸರು ಪೊರಕೆ ಹಿಡಿದು ಗುಡಿಸುವುದಾಗಲೀ ಏನನ್ನೂ ಮಾಡುವಂತಿಲ್ಲ. ಸುಮ್ಮನೆ ನಿಂತಿರಬೇಕು. ಕೆಯ್ ಬಡಿಯುವ ವೇಳೆ ಬತ್ತದ ರಾಶಿ ಹಡಿಮಂಚದ ಹಲಗೆಗಳಿಗೆ ತಾಕಿದರೆ ಅದನ್ನು 'ಆನಿಹೊತ್ತಿ'ರುವುದಾಗಿ ಸಂಭ್ರಮಿಸಿ, ತೆಂಗಾಯಿ ಒಡೆದು ದೂಪಹಾಕಿ ಪೂಜೆ ಮಾಡುತ್ತಾರೆ. ಕೆಯ್ ಎಲ್ಲವೂ ಬಡಿದು ಮುಗಿಯುವ ವೇಳೆಗೂ ಮತ್ತೆ ಆರಂಭದಲ್ಲಿ ಹೊಲಿಕರೆದಂತೆಯೇ ಹೊಲಿಕೆರೆಯುತ್ತಾರೆ. ಹೀಗೆ ಗಂಡಸರು ಹೊಲಿಕರೆಯುವ ವೇಳೆ ಹೆಂಗಸರು ಆ ಸೊಲ್ಲು ಪೂರ್ತಿಯಾಗುವದರೊಳಗೆ ಹಡಿಮಂಚದ ಒಳಮುಖವಾಗಿ ಗುಡಿಸಿದಂತೆ ಮಾಡಿಕೊಳ್ಳುತ್ತಾ ಸುತ್ತುಕಟ್ಟುವ ರೂಢಿಯೊಂದಿದೆ. ಇದನ್ನು 'ಕರಿಕಟ್ಟುವುದು/ಕರೆಕಟ್ಟು'ವುದೆಂದೂ ಗುರುತಿಸುತ್ತಾರೆ.

ಒಂದು ವೇಳೆ ಬೀಜ ತೆಗೆಯುವ ಕೆಯ್ ಇರುವ ಗದ್ದೆಯಾದರೆ ಬೀಜದ ಕೆಯ್ ಅರಿಗಳಲ್ಲಿರುವ ಬೆರಕಿಕೊನೆ ತೆನೆಗಳನ್ನು ಕತ್ತರಿಸಿ ತೆಗೆದು, ಯಾವುದೇ ಹೊಲಿಕರೆಯುವ ಸೊಲ್ಲುಗಳಿರದೆ ಕೆಯ್ ಬಡಿದು ಬಿದ್ದ ಬತ್ತವನ್ನು ಮೊದಲು ಸಂಗ್ರಹಿಸಿಕೊಂಡಾದ ಮೇಲೆ ಮತ್ತೆ ಹೊಲಿಕರೆದು ಮುಂದಿನ ಕೆಯ್ ಬಡಿಯುವ ರೂಢಿ ಇದೆ.

ಬತ್ತಬಡಿದಾದ ಮೇಲೆ ಹಡಿಮಂಚದ ಮೇಲಿರುವ ಬತ್ತವನ್ನು ಹುಲ್ಲಿನಿಂದ ಜಾರಿಸಿತೆಗೆದು ಮೇಟಿಕಂಬಕ್ಕೆ ಬಿಗಿದ ಆನಿಯನ್ನು ಬಿಚ್ಚಿ, ಮೇಟಿಯ ಕಾಲಡಿಯಿಂದ ಹೊಲಿಯನ್ನು ತಳತಪ್ಪಿಸಿ/ಕದಲಿಸಿ ಅಲ್ಲಿಯೇ ಒಂದು ರಾಶಿಮಾಡುತ್ತಾರೆ. ಹೀಗೆ ರಾಶಿಮಾಡುವಾಗ ಬದಿಬದಿಯಲ್ಲಿರುವ ಬತ್ತವನ್ನು ಮುಖ್ಯವಾದ ಹೊಲಿರಾಶಿಗೆ ಬಾರದಂತೆ ಪ್ರತ್ಯೇಕವಾಗಿಯೇ ರಾಶಿಮಾಡುತ್ತಾರೆ. ಇದನ್ನು 'ಅಜ್ಜ್‌ಹೊಲಿ' ಎನ್ನುತ್ತಾರೆ. ಇದನ್ನು ಅಂಗಣದಲ್ಲಿಯೇ ಶುದ್ಧೀಕರಿಸಿ ಪ್ರತ್ಯೇಕವಾಗಿಡುತ್ತಾರೆ. ಆದರೆ ಹಡಿಮಂಚದಡಿಯ ಹೊಲಿಯನ್ನು ಮನೆಯೊಳಗಿನ ಹೊಲಿರಾಶಿಗೆಹಾಕಿ ಅದರ ಮೇಲೆ ಬೂದಿಯ ಗೀರುಗಳ 'ಹೊಲ್ಗೀಟು/ಹೊಲೇಟು'ಗಳನ್ನು ಹಾಕುತ್ತಾರೆ. ಇದು ಹೊಲಿರಾಶಿಯನ್ನು ಗುರುತು ಮಾಡಿಡುವ ಕ್ರಮವೂ ಹೌದು.

ಗೊಬ್ಬರ : ಗೊಬ್ಬರವು ದನಗಳ ಹಟ್ಟಿಯ ಮೂಲವನ್ನಾಧರಿಸಿದ್ದಾಗಿ ತಾಜಾಗೊಬ್ಬರವಾಗಿದ್ದರೆ 'ಹಟ್ಟಿಗೊಬ್ಬರ'ವಾಗಿಯೂ, ಶೇಖರಿಸಿಟ್ಟ ಗೊಬ್ಬರವು 'ಗುಂಡಿ/ಗುಡಿಗೊಬ್ಬರ'ವಾಗಿಯೂ ಸಂಬೋಧಿಸಲ್ಪಡುತ್ತದೆ. ಈ ಗುಡಿಗೊಬ್ಬರವು ಬಹುಕಾಲದವರೆಗೆ ಗೊಬ್ಬರದಗುಂಡಿಯಲ್ಲಿದ್ದರೆ ಅದು ಹುಡಿಯಾಗಿರುವುದರಿಂದ, ಅದನ್ನು 'ಹೊಡಿಗೊಬ್ಬರ' ಎಂದೂ ಕರೆಯುವುದಿದೆ. ಇದಲ್ಲದೆ ಗೊಬ್ಬರದಲ್ಲಿ ಬಳಕೆಗೊಳ್ಳುವ ಪರಿಕರವನ್ನು ಆಧರಿಸಿ ಸಪ್ಪಿನಗೊಬ್ರ, ದರ್ಲಿ(ತರಗೆಲೆ)ಗೊಬ್ರ, ಕೂಳಿ (ಬತ್ತದ ಸಸಿಯಬುಡ) ಗೊಬ್ರ, ಉಮಿಗೊಬ್ರ, ಕೈಡದ್‌ಗೊಬ್ರ ಎಂಬ ಒಳಭೇದಗಳಿವೆ. ಸಪ್ಪು, ದರ್ಲಿ, ಕೂಳಿ ಮತ್ತು ಕೈಡ/ಕೆದ್ಲ್ ಗೊಬ್ಬರಗಳನ್ನು ಪಡೆಯುವ ಮೊದಲು ಅವುಗಳನ್ನು ಗಂಟಿ/ಜಾನುವಾರುಗಳ ಕಾಲಡಿಗೆ ಹಾಕಿ, ಒಂದು ವಾರ/ಹದಿನೈದು ದಿನಗಳವರೆಗೆ ಅಲ್ಲಿಯೇ ಹುಡಿಯಾಗಲು ಬಿಟ್ಟು, 10-15 ದಿನಗಳಿಗೊಮ್ಮೆ ಖಾಲಿಮಾಡಿ ಗೊಬ್ಬರದ ಗುಂಡಿಗೆ ಹಾಕುತ್ತಾರೆ. ಗುಂಡಿಗೆ ಗೊಬ್ಬರವನ್ನು ಹಾಕುವಾಗಲೂ ಒಂದು ಪಿರಾಮಿಡ್ ರಚನೆಯಂತಿರಿಸಿಯೇ ರಾಶಿ ಹಾಕುತ್ತಾರೆ. ಗೊಬ್ಬರದ ಶಾಖ ಹೊರಹೋಗಿ ಅದು ಕೊಳೆಯುವ ಅವಕಾಶ ತಪ್ಪದಿರಲಿ ಎಂದು ಜಾಗರೂಕತೆ ವಹಿಸುವ ಕ್ರಮವಿದು.

ಸೊಪ್ಪಿನ ಗೊಬ್ಬರಕ್ಕೆಂದು ಸಂಗ್ರಹಿಸುವ ಸೊಪ್ಪುಗಳಲ್ಲಿಯೂ ವೈವಿಧ್ಯದ ಜೊತೆಗೆ, ಫಲವಂತಿಕೆಗೆ ಸಂಬಂಧಿಸಿದಂತೆಯೂ ಭಿನ್ನತೆ ಇದೆ. ಸೊಪ್ಪುಗಳಲ್ಲು ನೇರ್ಲ್ (ಕಾಡುನೇರಳೆ), ಕೇಸ್ಕರ್(ಕೇಪಳ), ಬುಕ್ಕಿ, ಶೆಳ್ಳಿ, ದುರ್ಕ್ಲ್‌ಸಪ್ಪು ಮತ್ತು ದಂಟುಗಳನ್ನು ಅತ್ಯಂತ ಫಲದಾಯಕ ಸೊಪ್ಪುಗಳೆನ್ನಲಾಗಿದೆ. ಇನ್ನೂ ಒಂದು ಹೇಳಿಕೆ ಮೇರೆಗೆ ಮಣ್ಣಿಗೆ ಸೇರಿದ 7 ವರ್ಷಗಳ ತನಕ ಅದರ ಫಲವತ್ತತೆಗೆ ಕಾರಣವಾಗುವ ಈ ಸೊಪ್ಪುಗಳನ್ನು ಗೇಣಿಪದ್ಧತಿಯನ್ವಯ ವರ್ಷದ ಒಕ್ಕಲುಪದ್ಧತಿಯಡಿಗೆ ಬರುವ 'ಚಾಲ್‌ಗೇಣಿ' ಒಕ್ಕಲು ಉಪಯೋಗಿಸುವುದಿಲ್ಲ. ಅವರುಗಳು ಆರು ತಿಂಗಳಿಗೆ ಮಣ್ಣಿನಲ್ಲಿ ಕರಗಿ ವರ್ಷದ ಬೆಳೆಯಾದ ಮೇಲೆ ಭೂಮಿಯನ್ನು ಪಾರುಗೆಡಹುವ ಗುರ್ಗಿ ಎನ್ನುವ ಲಾಂಟಾನಜಾತಿಗೆ ಸೇರಿದ ಮೆದುಜಾತಿಯ ಸಪ್ಪು ಬಳಸುತ್ತಿದ್ದರು. 'ಮೂಲ್ಗೇಣಿ' ಮತ್ತು ಪಟ್ಟಾದಾರರು ಈ ಗುರ್ಗಿಸಪ್ಪನ್ನು ಬಳಸುತ್ತಿದ್ದುದಿಲ್ಲ (ಉಳುಮೆಗಾರನಿಗೆ ಭೂಮಿಯ ಮೇಲಿನ ಒಡೆತನ ಸೀಮಿತವಾಗುವುದಕ್ಕೂ ಆತ ಭೂಮಿಗೆ ಸೇರಿಸುತ್ತಿದ್ದ ಗೊಬ್ಬರ/ನಲುವಿಗೂ ಇರುವ ಸಂಬಂಧವನ್ನು ಜನಪದರು ಎಷ್ಟು ಚನ್ನಾಗಿ ಗ್ರಹಿಸಿದ್ದಾರೆಂಬುದಕ್ಕೆ ಇಲ್ಲಿ ಸಾಕ್ಷಿ ಲಭ್ಯವಾಗುತ್ತದೆ.). ಬೆಳೆ ಉಪಯೋಗಕ್ಕೆ ಸಂಬಂಧಿಸಿದಂತೆ ಸಪ್ಪಿನಗೊಬ್ಬರವು ಎಲ್ಲ ಮಾದರಿಗೂ ಪೂರಕವೇ ಆದುದಾಗಿದೆ. ಅದರಲ್ಲಿಯೂ ಮಳೆಗಾಲದ ನೆಟ್ಟಿಗೆ ಇದು ಹೆಚ್ಚುಸೂಕ್ತ.

ದರ್ಲಿ/ತರಗೆಲೆ ಗೊಬ್ಬರಕ್ಕೆ ಸಂಬಂಧಿಸಿದ ನೇರ್ಲ್, ಮತ್ತಿ, ಹುಣಾಲ್ ಇತ್ಯಾದಿಗಳ ತರಗೆಲೆಗಳನ್ನು ಬಳಸಬೇಕೆಂಬುದು ಕೃಷಿಕರ ನಡುವೆ ಚಾಲ್ತಿಯಲ್ಲಿರುವ ನಂಬಿಕೆ. ದೂಪ, ಸಾಗುವಾನಿ, ಬೋಗಿ ಮುಂತಾದ ಮರಗಳಿಂದ ಉದುರಿದ ಎಲೆಗಳಿಂದಾದ ಗೊಬ್ಬರಗಳು ಗದ್ದೆಯ ಫಲವತ್ತತೆಯನ್ನು ಹೆಚ್ಚಿಸದ ಕಾರಣಕ್ಕಾಗಿ 'ಪಾರ್' ಗೊಬ್ಬರಗಳೆನಿಸಿವೆ. ದರ್ಲಿಯನ್ನೂ ಗಂಟಿಕಾಲಡಿಗೆಹಾಕಿ, ಉಚ್ಚೆ-ಸಗಣೆಗಳ ಸಮೇತ ಅವುಗಳ ಕಾಲ್ತುಳಿತದಲ್ಲಿ 10-15 ದಿನಗಳ ತನಕ ಹುಡಿಗೊಳ್ಳಲು ಅವಕಾಶಮಾಡಿಕೊಂಡ ಮೇಲೆಯೇ ಹಟ್ಟಿಯಿಂದ ಖಾಲಿಮಾಡುತ್ತಾರೆ. ಕೂಳಿಗೊಬ್ಬರವನ್ನೂ ತಯಾರಿಸುವ ಕ್ರಮವೂ ಈ ತೆರನಾಗಿಯೇ ಇದೆ. ಕಟಾವಿನ ತರುವಾಯ ಗದ್ದೆಯಲ್ಲಿರುವ ಬತ್ತದ ಸಸಿಗಳ ಬುಡಗಳನ್ನು ಕಿತ್ತು 'ಕಣ್ಣ್‌ಹೆಡಿಗೆ/ಮಂಕರಿಕೆ'ಯಲ್ಲಿ ತುಂಬಿ ಹಟ್ಟಿಗೆ ತಂದು ಹಾಕುತ್ತಾರೆ. ತದನಂತರದಲ್ಲಿ ಇದನ್ನು ಗೊಬ್ಬರದಗುಂಡಿಗೆ ಹಾಕುವ ಬದಲಾಗಿ ನೇರವಾಗಿ ಗದ್ದೆಗೆ ಹಾಕುವುದೇ ಹೆಚ್ಚು. ಅದರಲ್ಲಿಯೂ ಗೆಣಸಿನ ಬೆಳೆಗೆ ಬೇಕಾದ 'ಜಳ್ಳು/ಸಡಿಲತೆ'ಯನ್ನೊದಗಿಸುವ ಈ ಗೊಬ್ಬರವು ಅದಕ್ಕೆ ಅತ್ಯಂತ ಲಾಯಕ್ಕಾದುದೆಂದೂ ಹೇಳಲಾಗಿದೆ. ಗುಂಡಿಯಲ್ಲಿ ಹಾಕಲಾದ ಗೊಬ್ಬರವನ್ನು ತಿಂಗಳುಗಟ್ಟಲೆ ಅಲ್ಲಿಯೇ ಹುಡಿಯಾಗುವಲ್ಲಿಯವರೆಗೆ ಉಳಿಸದೆಯೇ ಅರೆಬರೆಹುಡಿಯಾದುದನ್ನು ತೆಗೆದು ಗದ್ದೆಗೆ ಹಾಕುವಂತಾದರೆ ಅದು ಗುಂಡಿಗೊಬ್ಬರವಾಗುತ್ತದೆ. ಅದು ಗೊಬ್ಬರದ ಹುಳುತಿಂದು ಕಣ್ಣ್‌ಹೆಡಿಗೆ/ಮಂಕರಿಕೆಗೆ ಹಾಕಲು ಆಗದಷ್ಟು ಹುಡಿಯಾಗಿ 'ಮಣ್ಣ್‌ಹೆಡಿಗೆ'ಗೆ ಹಾಕಿ ಸಾಗಿಸುವಂತಾದರೆ ಹೊಡಿ/ಹುಡಿ ಗೊಬ್ಬರವಾಗುತ್ತದೆ. ಈ ಹುಡಿಗೊಬ್ಬರವು ಸುಗ್ಗಿಯ ಹಿಂಡಿಹಾಕಲು ಹಾಳತವಾಗಿ ಒದಗಿಬರುತ್ತದೆ. ಅದಲ್ಲದೆ ಮೆಣಸು, ಬದನೆ, ಸೌತೆ ಮುಂತಾದ ಬೆಳೆಯಲ್ಲಿ ಅವುಗಳ 'ಅರ್ಮಣ್ಣು' (ಸಸ್ಯೋಪಚಾರದ ಹಂತ) ಮಾಡುವಲ್ಲಿಯೂ ಇದು ಒದಗಿಬರುತ್ತದೆ. ಹಿಂಡಿಹಾಕಲು ಕೆದ್ಲ್‌ಗೊಬ್ಬರವನ್ನು ಹದಗೊಳಿಸುವ ಇನ್ನೊಂದು ಕ್ರಮವಿದೆ. ಅದರಂತೆ ಹೊಂಡ ತೆಗೆದು ಅದರಲ್ಲಿ ಕೆದ್ಲ್‌ತುಂಬಿ 'ದಪ್ಪದ್‌ಗುಡಿ' ಅಂತಮಾಡಿ, ಮಳೆಗಾಲದಲ್ಲಿ ಅದರ ಮೇಲೆ ಗುಂಬಳಬೀಳ್ ಬೆಳೆಸುತ್ತಾರೆ. ಕುಂಬಳಬೆಳೆ ಮುಗಿಯುವಷ್ಟರಲ್ಲಿ ದೀಪಾವಳಿ ತಿಂಗಳು ಮುಗಿದು, ಸುಗ್ಗಿಯ ಹಿಂಡಿಹಾಕುವ ಕಾಲ ಸರಿಹೊಂದುವಂತಾಗುತ್ತದೆ. ಈ ಸಂದರ್ಭದಲ್ಲಿ ಆ ದಪ್ಪದ್‌ಗುಡಿಯನ್ನು ತೆರೆದು ಹುಡಿಯಾದ ಆ ಗೊಬ್ಬರವನ್ನು ಹಿಂಡಿಹಾಕಲು ಬಳಸುತ್ತಾರೆ. ಈ ಹುಲ್ಲಿನ ಹುಡಿಗೊಬ್ಬರವು ಹಿಂಡಿಯ ಹುಡಿಯನ್ನು ಕೈಗಂಟದಂತೆ ಬುರುಗಾಗಿಸಿಡುವ ಜೊತೆಗೆ ಬೀಜಕ್ಕೆ ಬೇಕಾದ ಪೂರಕ ನಲುವೂ ಆಗುತ್ತದೆ. ಅವಡೆ, ಗೆಣಸಿಗೂ ಇದು ಒಳ್ಳೆಯ ನಲುವೆನ್ನಲಾಗಿದೆ. ಇದಲ್ಲದೆ ಮಣ್ಣನ್ನು ಸುಟ್ಟು ಗೊಬ್ಬರ ಮಾಡಿಕೊಳ್ಳುವ ವಿಶೇಷ ಕ್ರಮವೊಂದು ಈ ಭಾಗದಲ್ಲಿ ಚಾಲ್ತಿಯಲ್ಲಿದೆ. ಇದನ್ನು 'ಸುಡ್ಮಣ್ಣುಸುಡುವುದು' ಎನ್ನುತ್ತಾರೆ. ವೃತ್ತಾಕಾರದಲ್ಲಿ ನೆಲವನ್ನು ಕೊಚ್ಚಿ/ಅಗೆದು ಅದರ ಮೇಲೆ 'ಅಡ್ರ್'/ಸಪ್ಪಿರುವ ಮರ ಅಥವಾ ಗಿಡದ ಟೊಂಗೆಯನ್ನು 'ಒಟ್ಟಿ/ಕೂಡಿ ಅದರ ಮೇಲೆ ಮಣ್ಣುಹೇರಿ ಬೆಂಕಿಕೊಡುತ್ತಾರೆ. ಈ ಬೆಂಕಿ 3-4 ದಿನದ ವರೆಗೆ ಉರಿಯುವುದರಿಂದ ಮಣ್ಣು ಚೆನ್ನಾಗಿ ಬೆಂದು ಕಪ್ಪಾದ ಗೊಬ್ಬರವಾಗುತ್ತದೆ. ಒಂದು ವೇಳೆ ಸುಡ್ಮಣ್ಣು ಸರಿಯಾಗದಿದ್ದರೆ ಮಡಕೆಯಂತೆ ಕೆಂಪುಮಣ್ಣಿನ ಉಂಡೆ/ಹೆಂಟೆಗಳು ಕಾಣಿಸಿಕೊಳ್ಳುತ್ತವೆ. ಹೀಗಾದರೆ ಅದನ್ನು ನಿರುಪಯುಕ್ತ ಎಂಬ ಅರ್ಥದಲ್ಲಿ 'ಕುಂಬಾರ್ಮಣ್ಣು' ಎನ್ನುತ್ತಾರೆ. ವೈಶಾಖದಲ್ಲಿ ಸುಟ್ಟ ಸುಡ್ಮಣ್ಣು ಕಾದಿರಿಸಲ್ಪಟ್ಟು, ಹಿಂಡಿಹಾಕಲೂ ಬಳಕೆಗೊಳ್ಳುವುದಿದೆ. ಮುಖ್ಯವಾಗಿ ಈ ಸುಡ್ಮಣ್ಣು ಬಳಕೆಯಾಗುವುದು ಕಾತಿಸಾಗುವಳಿಗೆ. ಸೌತೆಯಂತಹ ಬೆಳೆಗೆ ತೆಗೆಯಲಾದ ಏರಿಗಳನ್ನೇ ಸಪ್ಪು, ಹೊಟ್ಟುಗಳನ್ನು ಬಳಸಿ ಸುಟ್ಟು ಅದರಲ್ಲಿಯೇ ಬೀಜನೆಟ್ಟು ಸೌತೆ ಬೆಳೆಸುತ್ತಾರೆ. ದಂಟು/ಹರಿವೆ ಗರವನ್ನೂ ಹೀಗೆಯೇ ಹುಲ್ಲುಬಳಸಿ ಸುಟ್ಟು ಸಿದ್ಧಪಡಿಸಿಕೊಳ್ಳುತ್ತಾರೆ.

ಸೊಪ್ಪು, ದರ್ಲಿ, ಕೆದ್ಲ್, ಕೂಳಿ ಮುಂತಾದ ಗೊಬ್ಬರ ತಯಾರಿಕೆಗೂ ಕಾಲಕ್ಕೂ ನೇರವಾದ ಸಂಬಂಧವಿದೆ. ಲಭ್ಯತೆ ಆಧರಿಸಿ ಅವುಗಳನ್ನು ರೈತರು

ಬಳಸಿಕೊಳ್ಳುವುದರಿಂದ ಬಹುಮಟ್ಟಿಗೆ ಇವು ಸೀಜನಲ್ ಆದ ಗೊಬ್ಬರಗಳು. ಹಟ್ಟಿಯ ಮಾಧ್ಯಮವನ್ನು ಬಳಸಿ ತಯಾರಾಗುವ ಈ ಗೊಬ್ಬರಗಳಲ್ಲದೆ ಗದ್ದೆಗೆ ನೇರವಾಗಿ ಬಳಸಲ್ಪಡುವ ಅನೇಕ ಸೊಪ್ಪುಗಳೂ ಇವೆ. ನಾಯಿಸಂಪಿಗೆ ಎಂದು ಸ್ಥಳೀಯವಾಗಿ ಕರೆಯಲಾಗುವ ದೇವಕಣಗಿಲೆ, ಕೇದಗೆಯ ಜಾತಿಗೆ ಸೇರಿದ ಮುಂಡ್ಕ ಮುಂತಾದವುಗಳನ್ನು ನೇರವಾಗಿ ಗದ್ದೆಗೆ ಸೇರಿಸುತ್ತಾರೆ. ಮುಖ್ಯವಾಗಿ ಈ ಸೊಪ್ಪಿನ ಬಳಕೆಯಿರುವುದು ಸುಗ್ಗಿನೆಟ್ಟಿಯಲ್ಲಿ. ಕಾತಿ ಬಿತ್ತಣೆಗದ್ದೆಯ ನೀರಗಡುವಿನ ಜಾಗದಲ್ಲಿ ಸೆಗಣಿರಾಶಿ ಹಾಕಿ ಆ ಮೂಲಕ ಬೆಳೆಗೆ ಪೂರಕ ಗೊಬ್ಬರವನ್ನು ನೇರವಾಗಿಯೇ ಒದಗಿಸುವ ಕ್ರಮವಿದೆ. ಸುಗ್ಗಿಯಿರಲಿ, ಕಾತಿಯಿರಲಿ ಅಗೇಡಿಗೆ ಹುಳುಬಿತ್ತೆಂದಾಗ ಗೊಬ್ಬರವಾಗಿಯೂ, ಔಷದೋಪಚಾರವಾಗಿಯೂ ಬಿಸಿಬೂದಿಯನ್ನು ಎರಚುವ ರೂಢಿಯಿದೆ. ಅಗೇಡಿ ಅಥವಾ ಅಗೆಅಡಿಯನ್ನು ನೇಜಿಗೆ ಒಳಪಡಿಸುವಾಗ ಅಗೇಡಿಯ ಚಡಿ/ಮಣ್ಣಹೆಂಟೆ ಕರಗಿಸಲು ಹಟ್ಟಿಗೊಬ್ಬರ ಹಾಕಿಕೊಳ್ಳುವ ಜೊತೆಗೆ ಕನಿಷ್ಟ ಒಂದು ಹೆಡಿಗೆ ಬೂದಿಯನ್ನಾದರೂ ಹಾಕಿಕೊಳ್ಳುತ್ತಾರೆ. ಪ್ರಾಯಶಃ ಇದು ಅಗೇಡಿಗೆ ಸಾರ/ನಲು/ಫಲವತ್ತತೆಯ ನಷ್ಟವನ್ನು ತುಂಬಿಕೊಡುವ ಕ್ರಮವಿರಬಹುದು.

ಸಾಗಣೆ, ಸಂಗ್ರಹಣೆಯ ಸಾಧನಗಳು : ಈ ಭಾಗದ ಕೃಷಿಬದುಕಿನ ಜೊತೆಗೆ ಅನೇಕ ಮಾದರಿಯ ಹೆಡಿಗೆ/ಬುಟ್ಟಿಗಳು ಬಳಕೆಯಾಗುತ್ತವೆ. ಸ್ಥಳೀಯಾಗತ್ಯತೆಯನ್ನು ತುಂಬಿಕೊಳ್ಳುವ ಹಾಗೂ ಪರಿಕರಗಳ ಸ್ಥಳೀಯ ಲಭ್ಯತೆಯ ಹಿನ್ನೆಲೆಯಲ್ಲಿ ಸಿಗುವ ಈ ಸಾಧನಗಳಿಗೆ ಸ್ಥಳಿಯ ಹೆಸರುಗಳೂ ಲಭ್ಯವಿವೆ. 'ಕಣ್ಣ್‌ಹೆಡಿಗೆ' ಇದು ಕಬ್ಬೀಳನ್ನು ಬಳಸಿ, ಅಂಗೈಗಾತ್ರದ ಕಣ್ಣ್/ತೂತು/ರಂಧ್ರ ಉಳಿಸಿ ನೆಯ್ಯಲಾಗುವ ಹೆಡಿಗೆ. ತರಗೆಲೆ, ಗೊಬ್ಬರ, ಕೂಳಿ ಇಂತಹ ಸ್ಥೂಲಗಾತ್ರದ ವಸ್ತುಗಳನ್ನು ತುಂಬಿ ಸಾಗಿಸಲೆಂದೇ ಇದನ್ನು ಬಳಸಲಾಗುತ್ತದೆ. ಮುಖ್ಯವಾಗಿ ಇದು ಗೊಬ್ಬರ ಮತ್ತು ಅಗೆ/ಬತ್ತದ ಸಸಿ ಹೊರುವುದಕ್ಕಾಗಿ ಹೊಂದಿರುವ ಹೆಡಿಗೆಯಾದುದರಿಂದ ಇದನ್ನು ಗೊಬ್ರ್‌ಹೆಡ್ಗಿ/ಅಗಿಹೆಡ್ಗಿ ಎಂದೇ ಕರೆಯುತ್ತಾರೆ. 'ಮಣ್ಣ್‌ಹೆಡಿಗೆ' -ಇದು ಬೆತ್ತದಿಂದ ಇಲ್ಲವೇ ಕುಸುಬನ ಬೀಳನ್ನು ಬಳಸಿ ನೆಯ್ಯಲಾಗುವ 'ಚಡಿ'/ರಂಧ್ರವಿರದ ಹೆಡಿಗೆ. ಇದನ್ನು ಕೊಂಡುಕೊಂಡ ಮೇಲೆ ನೀರಿನಲ್ಲಿ ನೆನೆಹಾಕಿ ಚಗರ್‌ತೆಗೆದು, ನಂತರದಲ್ಲಿ ಸೆಗಣಿಯಿಂದ ಸಾರಣೆಮಾಡಿಡುತ್ತಾರೆ. ಮಣ ತೂಗುವ ಹೆಡಿಗೆ ಎಂಬ ಅರ್ಥದಲ್ಲಿಯೇ ಈ ಪದ ಬಳಕೆಗೊಂಡಿರಬಹುದು ಎನ್ನಬಹುದಾದರೂ ಇದರ ಗಾತ್ರ ಮಣತೂಕಕ್ಕಿಂತ ಹೆಚ್ಚಾದುದೇ ಆಗಿರುತ್ತದೆ. ಸಾಮಾನ್ಯವಾಗಿ 2 ಕಳಸಿಗೆಯಷ್ಟು ಪ್ರಮಾಣದ ಬತ್ತ/ಅಕ್ಕಿ ತುಂಬುವಷ್ಟು ಇರುತ್ತದೆ. 'ಬೀಳ್‌ಚಟ್ಟಿ' ಎನ್ನುವುದು ಇನ್ನೊಂದು ಮಾದರಿ. ಇದನ್ನು ಬೀಳುಬುಟ್ಟಿ ಎಂದೇ ಕರೆಯುವುದಿದೆ. ಬೆತ್ತದಿಂದ ಹೆಣೆಯಲಾಗುವ ಇದನ್ನು ಕುಂದಾಪುರದ ಹೊರಭಾಗದಿಂದ ಆಮದು ಮಾಡಿಕೊಳ್ಳುತ್ತಿದ್ದುದೇ ಅಧಿಕ. ಬಾಳಿಕೆಗಾಗಿ ಇವುಗಳನ್ನು ನೀರಿನಲ್ಲಿ ನೆನೆಸಿ, ನಂತರದಲ್ಲಿ ತೆಂಗಿನಹುರಿ ಬಳಸಿ ಮೇಲುನೆಯ್ಗೆ ಮಾಡಿಕೊಂಡು ಮತ್ತಷ್ಟು ಗಟ್ಟಿಮಾಡಿಕೊಳ್ಳುತ್ತಾರೆ. 'ಕುಕ್ಕಿ' ಎನ್ನುವುದು ಹೆಡಿಗೆಯಾಕಾರದಲ್ಲಿಯೇ ಇರುವ ಹೆಡಿಗೆಗಿಂತ ಚಿಕ್ಕದಾದಬುಟ್ಟಿ. ಇದರೊಳಗೆ ಅನೇಕ ವಿಧಗಳಿವೆ. ಗಾತ್ರಾನುಸಾರವಾಗಿ ಚಣ್ಣ್‌ಕುಕ್ಕಿ, ದೊಡ್ಡ್‌ಕುಕ್ಕಿ ಎನ್ನುವ ವಿಧಗಳ ಜೊತೆಗೆ ಹೆಡಿಗೆಗಿಂತ ತುಸುಚಿಕ್ಕದಾದ 'ಚೊಟ್ಟ್‌ಕುಕ್ಕಿ' ಎನ್ನುವ ಬಗೆಯೊಂದಿದೆ. ಅಲ್ಲದೆ 'ಅಕ್ತಳ್‌ಕುಕ್ಕಿ'ಎನ್ನುವ ಮೊಣಕಾಲಿನೆತ್ತರಕ್ಕೆ ಬರುವ ಅರೆಚೌಕಾಕಾರದ ಬುಟ್ಟಿಯೊಂದಿದೆ. ಇದು ಹೆಡಿಗೆಯಂತಿರುವುದಿಲ್ಲ ಮತ್ತು ಹೆಡಿಗೆಯಂತೆ ಎರಡು ಕಡೆ ಚೊಟ್ಟುಗಳನ್ನೂ ಇದು ಹೊಂದಿರುವುದಿಲ್ಲ. ಇದನ್ನು ಅಕ್ಕಿಹಾಕಿಡಲು ಬಳಸುವ ಕಾರಣದಿಂದ ಈ ಹೆಸರು ಬಂದಿರಬಹುದು. ಆದರೆ ಇದನ್ನು ಹೆಚ್ಚಾಗಿ ಬಳಸುವುದು ಹುಣಸೆಯೊಂದನ್ನು ಬಿಟ್ಟು ಮಿಕ್ಕ ವಾಟೆ/ಗರ್‍ಚ/ಮುರಿಯ (ಪುಣಾರ್ ಪುಳಿ) ಮುಂತಾದ ಹುಳಿಗಳನ್ನು ಸಂಗ್ರಹಿಸುವುದಕ್ಕಾಗಿ, ಈ ಸಲಕರಣೆಗಳಲ್ಲದೆ ಕಬ್ಬೀಳನ್ನು ಬಳಸಿ ಕಣ್ಣ್‌ಹೆಡಿಗೆಯನ್ನೇ ವಿಸ್ತರಿಸಿದಂತೆ ತರಗೆಲೆ ತುಂಬಲು ಗೂಡಿನಂತಹ ರಚನೆಯೊಂದನ್ನು ಮಾಡಿಕೊಳ್ಳುವುದಿದೆ. ಇದನ್ನು 'ದರ್‍ಲಿಗೂಡ್' ಎಂತಲೂ ಕೆಲವು ಕಡೆ'ಮಂಕರ್‍ಲಿ' ಎಂತಲೂ ಕರೆಯುವುದಿದೆ. ಆದರೆ ದರ್‍ಲಿ/ತರಗೆಲೆ ತುಂಬಲೆಂದು ಹುರಿಹಗ್ಗದಿಂದ ಮಾಡಿದ 'ಕಲ್ಲಿ', ಈ ಗೂಡಿಗಿಂತ ಹೆಚ್ಚು ಜನಪ್ರಿಯವಾದುದು. ಎರಡು ಕೈವ್ಯಾಪ್ತಿಯನ್ನು ತುಂಬಿಕೊಳ್ಳುವಂತೆ ಮಡಿಕೆಮಾಡಿ ಈ ಕಲ್ಲಿಗೆ ತುಂಬುವ ತರಗೆಲೆಯ ಪ್ರಮಾಣವನ್ನು 'ಒಂದ್‌ತೆಕ್ಲ್‌ದರ್‍ಲಿ' ಎಂದೇ ಸೂಚಿಸುತ್ತಾರೆ. ಹೀಗೆ ತೆಕ್ಕಲುಗಳ ಮೂಲಕ ಕಲ್ಲಿಯ ಒಳಭಾಗ ತುಂಬುವುದನ್ನು 'ಒಡ್ಲ್‌ತುಂಬು'ವುದೆಂದೇ ಕರೆಯುತ್ತಾರೆ. ಈ ಕಲ್ಲಿಯನ್ನು ಕೇವಲ ತರಗೆಲೆ ತುಂಬುವುದಕ್ಕಷ್ಟೇ ಬಳಸದೆ 'ಅಂತರಾಟ'ದಲ್ಲಿ/ಅಂತರಾಳದಲ್ಲಿ 'ಕೋಳಿಹಿಲಿಬೆಚ್ಚಲು' ತೂಗುಸಿಕ್ಕವಾಗಿ ಬಳಸುವುದಿದೆ. (ಕೋಳಿಹೇಂಟೆ ಮರಿಮಾಡಲು ಕೂರುವುದನ್ನು ಹಿಲಿಗೆ/ಕಾವಿಗೆ ಕೂರಿಸುವುದು ಎಂದೇ ಕರೆಯುತ್ತಾರೆ. 21 ದಿನಗಳ ತನಕ ಮೊಟ್ಟೆಯ ಮೇಲೆ ಕೂರಲು ಮಾಡಿಕೊಡಲಾಗುವ ಈ ಅವಕಾಶವನ್ನು ಬೆಕ್ಕು, ಹಾವುಗಳ ಕಾಟದಿಂದ ದೂರವಿಡಲು, ಕೋಳಿಹೆಂಟೆಯನ್ನಿಟ್ಟ ಬುಟ್ಟಿಸಮೇತ ಈ ಕಲ್ಲಿಯೊಳಗಿಟ್ಟು ತೂಗುಬಿಟ್ಟಿರುತ್ತಾರೆ.)

ಹುಲ್ಲನ್ನು ಬಳಸಿ ಕಟ್ಟಿಕೊಳ್ಳುವ ಅಕ್ಕಿಮುಡಿ, ಬೀಜದಮುಡಿ ಮತ್ತು ತಿರಿಗಳೆಂಬ ದಾಸ್ತಾನು ರಕ್ಷಣೆಯ ಕ್ರಮಗಳು ಈ ಭಾಗದ ಕೃಷಿಪರಂಪರೆಯ ಜೊತೆಗೆ ಬರುತ್ತವೆ. ತಿರಿ, ಅಕ್ಕಿ/ಬೀಜದ ಮುಡಿಗಳೆಲ್ಲವೂ ಹುಲ್ಲಿನಿಂದ ಕಟ್ಟಲ್ಪಡುವ ಜೊತೆಗೆ ಅವುಗಳ ಸುತ್ತ ಬಿಗಿಯುವ ಹಗ್ಗವಾಗಿ ಬಳಕೆಗೊಳ್ಳುವುದೂ ಹುಲ್ಲಿನ ಹಗ್ಗವೇ ಆದ 'ಮಡಿಬಳ್ಳಿ'. ಕಟಾವು ಆದ ತರುವಾಯ ಬತ್ತ ಮತ್ತು ಬೀಜಗಳನ್ನು ರಕ್ಷಿಸಿಡಲು 'ದೀವಾಳಿ' (ಅಕ್ಟೋಬರ್-ನವೆಂಬರ್) ಅಥವಾ 'ಕೊಡಿತಿಂಗಳ'(ನವೆಂಬರ್-ಡಿಸೆಂಬರ್) ಹೊತ್ತಿಗೆ ತಿರಿಕಟ್ಟುತ್ತಾರೆ. ಇದನ್ನು ಕಟ್ಟುವ ಪ್ರಕ್ರಿಯೆಯನ್ನೇಅವಲಂಬಿಸಿ ಅಂದರೆ ತಿರಿದು ಕಟ್ಟುವುದರಿಂದ ತಿರಿ ಎಂಬ ಹೆಸರು ಬಂದಿರಲೂಬಹುದು. ತಿರಿಕಟ್ಟುವ ಸಲಕರಣೆಗಳಲ್ಲಿ ಬಹುಪಾಲನ್ನು ಉಂಡಿಗಿ/ಬೈಹುಲ್ಲಿನಿಂದಲೇ ಮಾಡಿಕೊಳ್ಳುತ್ತಾರೆ. ಅದರಲ್ಲಿ ಮುಖ್ಯವಾದುದು 'ತಿರಿಚಂಡಿ/ಚಂಡೆ'. ಹುಲ್ಲನ್ನೇ ಕಟ್ಟಿ ಹೆಬ್ಬಾವಿನಂತೆ ಬೆಳೆಸುತ್ತಾ ಮಾಡಿಕೊಳ್ಳುವ ಚಕ್ರದಂತಹ ರಚನೆಯಿದು. ತಿರಿಗೆ ಎಷ್ಟು ಬತ್ತತುಂಬಬೇಕಾಗಿದೆ ಎನ್ನುವ ಆಧಾರದಲ್ಲಿ ಇದರ ಉದ್ದವನ್ನು ನಿರ್ಧರಿಸಿಕೊಳ್ಳುತ್ತಾರೆ. ಚಂಡಿಯ ಜೊತೆಯಲ್ಲಿಯೇ ಕೊನೆಯಿಲ್ಲದ ಮಡಿಬಳ್ಳಿಯನ್ನು ತಯಾರುಮಾಡಿಟ್ಟು ಕೊಂಡಿರುತ್ತಾರೆ. ತಿರಿಕಟ್ಟುವ ಜಾಗ/ಅಡಿಗೆ ಮೊದಲು ಬತ್ತದ ಹೊಟ್ಟನ್ನು ಹಾಕಿ, ಅದರ ಮೇಲೆಒಂದು ಹಾಸು ಉಂಡಿಗಿಹುಲ್ಲನ್ನು ಬುಡಹೊರಗಿಟ್ಟು ಹಾಸಿ, ಅದರ ಮೇಲೆ ತಿರಿಚಂಡೆಯನ್ನಿಡುತ್ತಾರೆ. ಆ ತಿರಿಚಂಡಿಯ ಬುಡಕ್ಕೆಒಂದು ಸುತ್ತು ಬರುವಂತೆ 'ಹೋರ್ಮಡಿ'ಯೊಂದನ್ನು ಕಟ್ಟುತ್ತಾರೆ. ಅನಂತರದಲ್ಲಿ ಚಂಡಿಯ ಒಳವ್ಯಾಪ್ತಿಯಲ್ಲಿ ಮತ್ತೆ ತಲೆಹೊರಗಿಟ್ಟು ದಪ್ಪವಾಗಿ ಹಾಸಿದ ಹುಲ್ಲಿನ ಮೇಲೆ ಬತ್ತಹಾಕಿ ಚಂಡೆಯ ಬದಿಗೆ ಹೋಗುವಂತೆ ಕೀಲಿಸುತ್ತಿದ್ದಂತೆಯೇ

ಆ ತಿರಿಚಂಡೆಯ ಒಳಾಯ/ಒಳಭಾಗಕ್ಕೆ ಒಂದು ನಿರ್ದಿಷ್ಟ ಅಳತೆಯ ಗಟ್ಟಿಯಾದ ಕೋಲನ್ನು ನೆಟ್ಟುಕೊಳ್ಳುತ್ತಾರೆ. ಇದನ್ನು 'ಕಾವಿನಕೋಲ್'ಎನ್ನುತ್ತಾರೆ. ಈ ತಿರಿಚಂಡಿಗೆಅಂಟಿಸಿದಂತೆ ಕೀಲಿಸಿಟ್ಟ ಕಾವಿನ್‌ಕೋಲಿಗೆ ಒಂದು ಹುರಿಹಗ್ಗವನ್ನು/ಕೈಯೊಳ್‌ಬಳ್ಳಿಯನ್ನು ಕಟ್ಟಿಕೊಳ್ಳುತ್ತಾರೆ. ಅದರ ಆಧಾರದಲ್ಲಿ ಮಿಗ್ಗಿಸಂಖ್ಯೆಯಲ್ಲಿ 'ಉಂಡಿಗೆಹುಲ್ಲ್'/ಹುಲ್ಲುಕಟ್ಟುಗಳನ್ನು ಅದರ ಒಳಾಯದಲ್ಲಿ ನಿಲ್ಲಿಸಿಕೊಳ್ಳುತ್ತಾ ಹೋಗಿ, ಒಂದು ವೃತ್ತ ಪೂರ್ತಿಯಾದ ಮೇಲೆ ಆ ಹಗ್ಗದ ಇನ್ನೊಂದು ತುದಿಯನ್ನೂ ತಿರಿಚಂಡಿಯ ಕಾವಿನಕೋಲಿಗೆ ಕಟ್ಟಿಕೊಳ್ಳುತ್ತಾರೆ. ಇದನ್ನು 'ಬಾಯ್ಬಳ್ಳಿ' ಅಥವಾ 'ಕಾವಿನ್‌ಹಗ್ಗ' ಎನ್ನುತ್ತಾರೆ. ಬತ್ತವನ್ನು ಒಳಗೆ ಸುರಿದುಕೊಳ್ಳುತ್ತಿದ್ದಂತೆಯೇ ಈ ಕಾವಿನಹಗ್ಗಕ್ಕೆ ಆತುನಿಲ್ಲಿಸಿದ ಉಂಡಿಗೆಹುಲ್ಲಿನ ಕಟ್ಟುಗಳನ್ನು ಬುಡದ ಕಟ್ಟುಬಿಡಿಸಿ ಒಳಗಡೆಗೆ ಗಾಳಿ ಕೂಡಾ ಪ್ರವೇಶಿಸದಂತೆ ಸಂದಣಿಸಿ ಸೇರಿಸುತ್ತಾರೆ. ನಂತರದಲ್ಲಿ ಕಾವಿನಕೋಲನ್ನು ಒಳಗುಮಾಡಿಕೊಂಡು ಬುಡದಿಂದ ಮಡಿಬಳ್ಳಿಯನ್ನು ಸುತ್ತಿಕೊಳ್ಳುತ್ತಾ ಬರುತ್ತಿದ್ದಂತೆಯೇ ಒಳಗಿನಿಂದ ಬತ್ತಹಾಕಿ ಕೀಲಿಸಿಕೊಳ್ಳುತ್ತಾ ಬರುತ್ತಾರೆ. ಬತ್ತದ ಪ್ರಮಾಣ ಏರಿದಂತೆಯೇ ಕಾವಿನಹಗ್ಗ/ಬಾಯ್ಬಳ್ಳಿಯನ್ನು ಮೇಲಕ್ಕೆತ್ತುತ್ತಾ, ಕೆಳಗಿನಿಂದ ಮಡೆಬಳ್ಳಿಯನ್ನು ಬಿಗಿಯಾಗಿ ಸುತ್ತಿಕೊಳ್ಳುತ್ತಾ ಹೋಗುವುದು ಮುಂದುವರೆಯುತ್ತದೆ. ತಿರಿಮುಗಿಯುವ ಹೊತ್ತಿಗೆ ನಿಲ್ಲಿಸಲಾದ ಹುಲ್ಲಿನ ತಲೆಯನ್ನು ಮಡಿದು/ಮುರಿದು ಒಂದು ಕೋಟೆಕಟ್ಟಿದಂತೆ ಕಟ್ಟಿ ಅದಕ್ಕೆ ಬತ್ತವನ್ನು ಸರಿಸಿ, ಬತ್ತವು ಪಿರಾಮಿಡ್‌ಆಕಾರದಲ್ಲಿ ನಿಲ್ಲುವಂತೆಮಾಡುತ್ತಾರೆ. ಅದರ ಮೇಲೆ ಒಂದಿಷ್ಟು 'ತಳುಹುಲ್ಲು' (ಬಿಡಿಹುಲ್ಲು) ಹಾಕಿ, ಆ ಮೇಲೆ ಹುಲ್ಲಿನಿಂದಲೇ ಮಾಡಿದ ಕೊಡೆಯಾಕಾರದ 'ಕಂಸ/ಕಂಸಾಣಿ' ಎನ್ನುವ ರಚನೆಯನ್ನು ಮುಚ್ಚುತ್ತಾರೆ. ತಿರಿಕಟ್ಟಿ ಮುಗಿದ ಮೇಲೆ ತಿರಿಚಂಡೆಗೂ ನೆಲಕ್ಕೂ ಇರುವ 'ಜಾಪ್/ಚಡಿ'ಯನ್ನು ಮುಚ್ಚಲು ಮಣ್ಣಿನಕಟ್ಟೆಯಂತಹ ರಚನೆಯೊಂದನ್ನು ಮಾಡುತ್ತಾರೆ. ಈ ರಚನೆಯ ಮಧ್ಯದಲ್ಲಿ ತಿರಿಗೆ ಪಾದ ಹಾಗೆ ತುಳಸಿಕಟ್ಟೆಯ ಬುಡದಲ್ಲಿರುವಂತೆ ಗದ್ದುಗೆಯಂತಹ ರಚನೆಯೊಂದಿರುತ್ತದೆ. ಇದನ್ನು ತಿರಿಕಾಲ್ ಎನ್ನುತ್ತಾರೆ. ನಂಬುಗೆಯ ಮೇರೆಗೆ ತಿರಿಯೂ ಒಂದು ಮನುಷ್ಯನ ಪೂರ್ಣಾಂಗದ ಸ್ವರೂಪದಲ್ಲಿಯೇ ಆಗುಗೊಳ್ಳುವಂತಹದ್ದು. ಹೀಗಾಗಿಯೇ ಅನೇಕ ಕಡೆ ತಿರಿಯ ಒಳಗಡೆ ಎಲೆಅಡಿಕೆ ಮತ್ತು ಹಲ್ಕತ್ತಿಗಳನ್ನೂ ಇಡುವ ಕ್ರಮವಿದೆ.

ಅಕ್ಕಿಮುಡಿ, ಬೀಜದ ಮುಡಿಗಳೆರಡೂ ಮುಡಿಗಳೇ ಆಗಿದ್ದರೂ ಬೀಜದ ಮುಡಿಯನ್ನು ಅಕ್ಕಿಮುಡಿಯಂತೆ ಕೋಲುತುರುಕಿ ಕೀಲಿಸುವುದಿಲ್ಲ. ಹೆಚ್ಚಿನ ಬಲಪ್ರಯೋಗಮಾಡಿ ಬಡಿಗೋಲಿನಿಂದ ಬಡಿಯುವುದೂ ಇಲ್ಲ. ಬೀಜಕ್ಕೆಹಾನಿಯಾಗದ ಹಾಗೆ ಈ ಬೀಜದ ಮುಡಿಗಳನ್ನು ಕಟ್ಟುವಾಗ ಜಾಗ್ರತೆವಹಿಸುತ್ತಾರೆ. ಈ ಬೀಜದ ಮುಡಿಕಟ್ಟುವುದೂ, ಅಕ್ಕಿಮುಡಿಕಟ್ಟುವುದೂ 'ಬಾರಾತ್‌ತಿಂಗಳ' ಅನಂತರವೇ. ಅದು ಬೀಜದ/ಬತ್ತದ ತಿರಿಗಳನ್ನು ಅಳಿದಮೇಲೆಯೇ. ಬತ್ತದ ತಿರಿಯನ್ನು ಅಳಿದು ಬೇಯಿಸಿ ಅಕ್ಕಿ ಕುಟ್ಟುವ ವೇಳೆಯಲ್ಲಿಯೇ, 'ಶಿವರಾತ್ರಿ ತಿಂಗಳ' (ಫೆಬ್ರವರಿ-ಮಾರ್ಚ್‌ತಿಂಗಳ ಅವಧಿ) ಮೂರುಹನಿ-ಮೂರುಬಿಸಿಲುಗಳಿಗೆ ಬೀಜವನ್ನು ಒಣಗಿಸಿ, 'ಆರ್‌ಹಾಕಿ' ಅದಕ್ಕೆ ಹುಳ್‌ಕುಟ್ಟೆ/ಹುಳುಕುಟ್ಟೆ ಮುಟ್ಟದಂತೆ ಹಿಟ್ಟುಂಡಿ/ಇನೆಲಗಣ್ಣೆಕಾಯಿ, ಸಗಣೆಬೆಯ್ಚಿ(ಒಣಗಿದಸಗಣಿ)ಗಳನ್ನು ಕುಟ್ಟಿ ಪುಡಿಮಾಡಿ ಸೇರಿಸಿ ಅನಂತರ ಮುಡಿಕಟ್ಟುತ್ತಾರೆ. ಹೀಗೆ ಕಟ್ಟಲಾದ ಮುಡಿಗಳನ್ನು ಮನೆಯಿಂದ ಹೊರಗಡೆಯೇ ಇಡಬೇಕಾದಾಗ 'ಮೂರ್‌ಗುಟ್ಟ ಹುಗ್ದ್'/ಮೂರುಗುಟ ಹುಗಿದು ಒಂದು ಕಿರುಗಾತ್ರದ ಅಟ್ಟಣಿಗೆ ಮಾಡಿ ಅದರ ಮೇಲೆ ಬೀಜದ ಮುಡಿಗಳನ್ನು ಹೇರಿ ಇರಿಸುತ್ತಾರೆ. ಅಟ್ಟಣಿಗೆಯ ಗೂಟಗಳಿಗೆ 'ಚೂರಿಮುಳ್ಳನ್ನು' ಸುತ್ತಿ ಇಡುವ ಮೂಲಕ ಅದನ್ನು ಬಳಸಿ ಇಲಿ ಬಂದು ಬೀಜವನ್ನು ತಿಂದು ಮುಗಿಸದಂತೆ ಜಾಗ್ರತೆವಹಿಸುತ್ತಾರೆ. ಮುಡಿಕಟ್ಟದೆ ಚೀಲಕ್ಕೆತುಂಬಿ ಇಡುವಾಗಲೂ ಚೀಲವನ್ನು ನೆಲದಿಂದ ತಪ್ಪಿಸಿ ಏರುಜಾಗದಲ್ಲಿಯೇ ಇರಿಸುತ್ತಾರೆ. ಬೀಜಕ್ಕೆ ನೆಲದ ತಂಗ್ಸ್(ತೇವ/ತಂಪು)ತಾಂಗಿ/ತಗುಲಿ ಅದು ಗರಂಕಳೆದುಕೊಂಡು 'ನೆಯ್ಕ್' ಅಥವಾ 'ನೆಂಡ್' ಆಗಬಾರದೆಂದು ಈ ಎಚ್ಚರ ವಹಿಸುತ್ತಾರೆ.

ಅಕ್ಕಿಯನ್ನು ಕೆಡದಂತೆ ಉಳಿಸಿಕೊಳ್ಳುವ ಸಲುವಾಗಿ ಮುಡಿಕಟ್ಟಿ ಇಡುವುದು ಒಂದು ಕ್ರಮ. ಮುಡಿಕಟ್ಟದೇ ತಿರಿಯಂತಹದ್ದೇ ಆದ ರಕ್ಷಣಾಕ್ರಮವೊಂದನ್ನು ಬೆತ್ತದಿಂದ ಮಾಡಿದ ಚಾಪೆಯಂತಹ ರಚನೆಯ ಮೂಲಕ ಮಾಡುತ್ತಿದ್ದಂತೆ ಮಾಹಿತಿ ಸಿಗುತ್ತದೆ. ಇದನ್ನು 'ಅಕ್ಕಿಕುತ್ತಾಟೊ' ಎನ್ನುತ್ತಾರೆ. ಇದಕ್ಕೆ ತಂಗ್ಸ್/ತಂಪು ಎಳೆಯದಂತೆ ಅಡಿಗಡೆ ಉಮ್ಮಿ/ಬತ್ತ ಹಾಕುತ್ತಾರೆ. ಮಾಮೂಲಿಯಾಗಿ ಸಿಗುವ ಇನ್ನೊಂದು ರಕ್ಷಣಾಕ್ರಮವೆಂದರೆ 'ಪತ್ತಾಸು' ಎನ್ನಲಾಗುವ ಹಲಸು ಇಲ್ಲವೇ ಹೆಬ್ಬಲಸಿನ ಮರದಿಂದ ಮಾಡಿದ ದೊಡ್ಡಪೆಟ್ಟಿಗೆಯ ಬಳಕೆ. ರಂಜಣಿಗೆ ಎನ್ನುವ ಬಹುಗಾತ್ರದ ಮಣ್ಣಿನ ಕೇಲುಗಳನ್ನು ಹೋಲುವ ರಚನೆಗಳು ಕೆಲವು ಕಡೆ ಕಾಣಲು ಸಿಗುತ್ತವೆ. ಇನ್ನು ಧಾನ್ಯಾದಿಗಳ ಬೀಜಗಳನ್ನು ಉಳಿಸಿಕೊಳ್ಳಲು ಆರ್‌ಹಾಕಿದ ಬೀಜವನ್ನು ಮಣ್ಣಿನ ಕಿರುಮಡಿಕೆಗಳಿಗೆ ಹಾಕಿ ಆ ಮಡಕೆಗಳನ್ನು ಸಗಣೆಬಳಸಿ 'ಮೆತ್ತುಹಾಕಿ' ಆಗಿಯೇ ಇಡುವ ಕ್ರಮವಿದೆ. ಈ ಕ್ರಮದಲ್ಲಿ ಬೀಜಕ್ಕೆ ಗಾಳಿ ಬೆಳಕುಗಳ ಸಂಪರ್ಕವೇ ಇರುವುದಿಲ್ಲ. ಹೀಗೆ ಗಾಳಿ-ಬೆಳಕು ಆಡದಂತೆ ಇರಿಸದೇ ಹೋದರೆ ಆ ಬೀಜಗಳೆಲ್ಲವೂ ಬೊಂಬುತಿಂದು ಒಟ್ಟೆ/ಹುಳುಕುಬಿದ್ದು ಹೋಗುತ್ತವೆ. ಬೀಜಹಾಕಲು ಈ ಮೆತ್ತುಕಿತ್ತು ತೆಗೆಯುವ ತನಕ ಇದನ್ನು ಹಾಗೆಯೇ ಇಡುತ್ತಾರೆ. ಸೌತೆ, ಗುಂಬಳ್, ಕರ್‍ಗುಂಜಿ/ಕಲ್ಲಂಗಡಿ'ಇಬ್ಬುಳ್‌ಹಣ್ಣಿನ ಹಸಿ ಬೀಜಗಳನ್ನು ತೊಳೆದು ಒಣಗಿಸಿ, 'ನೀರಚಟ'/ತೇವಾಂಶ ಇಲ್ಲವಾದ ಮೇಲೆ ಬೂದಿಉಡಿ, ತೆಂಗಿನ ಎಳೆಗಾಯಿಯನ್ನು ಕೆಸರಿನಲ್ಲಿ ಹೂತುಹಾಕಿ ಕೊಳೆತುಹೋಗುವಂತೆ ಮಾಡಿ, ಸಣ್ಣಗೆ ಅದರ ಬಾಯಿಕೊಯ್ದು ತಯಾರಿಸಿಕೊಂಡ 'ಗೆಯ್ಬಿಗುಜ್ಜಿಗಿ/ತೆಂಗಿನಬುಯ್ಡಿ'ಯಲ್ಲಿರಿಸಿ ಮರದಬುರುಡೆ/ಬೆಣೆಹಾಕಿ ಜೋಪಾನ ಮಾಡುತ್ತಾರೆ.

ಕಾಳುಗಳನ್ನು ಇಡುವಂತೆಯೇ ಹಸುಕರುಗಳಿಗೆ ಬೇಕಾದ ಹುಲ್ಲು, ತರಗೆಲೆಗಳನ್ನು ಸಂಗ್ರಹಿಸಿ ಇಡುವ ಅನೇಕ ಕ್ರಮಗಳಿವೆ. ಅವುಗಳಲ್ಲಿ 'ಕುತ್ರಿ' ಎನ್ನುವುದು ಒಂದು ಪ್ರಮುಖವಾದ ಸಂಗ್ರಹಮಾದರಿ. ಇದು ಮಳೆ ಬಿಸಿಲುಗಳಿಗೆ ತೆರೆದೇ ಇರಿಸಲಾಗುವ ಸಂಗ್ರಹಣಾಕ್ರಮ. ವಿರಳವಾಗಿ ಚೌಕಾಕಾರದಲ್ಲಿ ಮತ್ತು ಸಾಮಾನ್ಯವಾಗಿ ವೃತ್ತಾಕಾರದಲ್ಲಿ ಇರುವ ಈ ಕುತ್ರಿಗಳನ್ನು ಹುಲ್ಲುಕುತ್ರಿ, ದರ್ಲಿಕುತ್ರಿಗಳೆಂದು ಪರಿಕರಗಳನ್ನು ಆಧರಿಸಿ ಗುರುತಿಸುತ್ತಾರೆ. ಈ ಕುತ್ರಿಗಳನ್ನು ವರ್ಷಪೂರ್ತಿ ತೆಗೆಯದೆ ಮುಂದಿನ ವರ್ಷಕ್ಕೆ ತೆಗೆಯುವಂತಾದರೆ ಅಂತಹ ಕುತ್ರಿಗಳನ್ನು 'ಬಾಳ್ಕುತ್ರಿ' ಎನ್ನುತ್ತಾರೆ. ಕಟವ್ ಮಾಡಿ ಬತ್ತ ತೆಗೆದು ಕೊಡಿಟ್ಟ ಹುಲ್ಲ್‌ಕುತ್ರಿಯನ್ನು ಹುಲ್ಲುಕುತ್ರಿ ಎನ್ನುತ್ತಾರೆ. ಇದರ ಒಳಗೆ ಒಂದಾದರೂ ಅಜ್ಜಿಅರಿ-ಅಜ್ಜನಅರಿ (ಬತ್ತದ ತೆನೆಯನ್ನು ಮುದುರಿ ಕೂರುವಂತೆ ಮಾಡಿ

ಕೆಯ್‌ಹೊರೆಯ ಬುಡದಲ್ಲಿ ಹಾಕುವ ಅರಿ) ಇಲ್ಲದ ಕುತ್ರಿಯನ್ನು 'ಬಂಜೆಗುತ್ರಿ' ಎನ್ನುತ್ತಾರೆ. ಕುತ್ರಿ ಹುಲ್ಲನ್ನು ಜಪ್ಪುವಾಗ/ಬಡಿಯುವಾಗ ಕಿಂಚಿತ್ತಾದರೂ ಬತ್ತ ಸಿಕ್ಕಬೇಕು ಅನ್ನುವ ಕಾರಣಕ್ಕಾಗಿ ತೆನೆ ಸಮೇತವಾದ ಕನಿಷ್ಟ ಒಂದೆರಡಾದರೂ ಅರಿಗಳನ್ನು ಕುತ್ರಿಗೆ ಹಾಗೆಯೇ ಹಾಕುತ್ತಾರೆ. ಈ ಕುತ್ರಿಯನ್ನು ಒಂದೆರಡು ತಿಂಗಳಲ್ಲಿ ಮತ್ತೆ ಬಡಿದು, ಉಳಿಕೆ ಬತ್ತ ತೆಗೆದು ಕಟ್ಟು (ಉಂಡಿಗೆ) ಹುಲ್ಲು ಮತ್ತು ತುಳುಹುಲ್ಲು ಎಂಬ ವಿಂಗಡಣೆ ಮಾಡುತ್ತಾರೆ. ಸುಗ್ಗಿ ಹುಲ್ಲಾದರೆ ಅದು ಗಿಡ್ಡವಾಗಿದ್ದಲ್ಲಿ ಮೇಟಿಕಂಬಕ್ಕೆ ಸಾಲಾಗಿ ಹಸುಗಳನ್ನು 'ತಳ್ಳಿಹಾಕಿ' ಕಟ್ಟಿ ತಿರುಗಿಸಿ 'ಹಡ್ಲ್‌ಒಕ್ಕು'ವ ಮೂಲಕ ತಳುಹುಲ್ಲನ್ನೇ ಪಡೆದು ಬತ್ತ ಬೇರ್ಪಡಿಸುತ್ತಾರೆ. ಹೀಗೆ ಸಂಸ್ಕರಣೆ ಮಾಡಿದ ಮೇಲೆ 'ತಳಹುಲ್ಲ್‌ಕುತ್ರಿ' ಮತ್ತು 'ಉಂಡಿಗಿಹುಲ್ಲ್‌ಕುತ್ರಿ' ಎನ್ನುವ 2 ವಿಧಗಳಲ್ಲಿ ಮತ್ತೆ ಬೇರೆ ಕುತ್ರಿ ಮಾಡಿ ಕಾದುಕೊಳ್ಳುತ್ತಾರೆ. ತಳುಹುಲ್ಲು ಕುತ್ರಿಯ ನಡುಭಾಗದಲ್ಲಿ ಉದ್ದನೆಯ ಕಂಬವೊಂದನ್ನು ನೆಟ್ಟು ಅದರ ಸುತ್ತಲೂ ಹುಲ್ಲುಹಾಕಿ ಬೆಳೆಸುವ ಕುತ್ರಿಯು ಸಪೂರವಾಗಿ ಎತ್ತರವಾಗಿರುತ್ತದೆ. ಸಂಭಾವ್ಯವಾದ ಮಳೆನೀರು ಕುತ್ರಿಯೊಳಗಿಳಿದು ಹುಲ್ಲುನೆನೆದು ಕೊಳೆಯದಂತೆ ಕಂಬದ ತುದಿಗೆ ಸಣ್ಣ ಮಡಕೆಯೊಂದನ್ನು ಕವುಚಿ ಇರಿಸುತ್ತಾರೆ. ಆದರೆ ಉಂಡಿಗೆಕುತ್ರಿಯು ಯಾವುದೇ ಆಧಾರದ ಪರಿಕರಗಳಿರದೆ ಕ್ರಮಬದ್ಧವಾದ ಚೌಕಟ್ಟಿನಲ್ಲಿ 'ಒಡ್ಲ್‌ತುಂಬಿ' (ಒಳಗೆ ಜೊಳ್ಳಾಗದಂತೆ) ಕಟ್ಟಲ್ಪಟ್ಟಿರುತ್ತದೆ. ನೀರು ಸೋಂಕದಂತೆ ಹಂತ ಹಂತವಾಗಿ ಹೊದಿಕೆಯನ್ನು ಹೊಂದಿ, ಕೊನೆಯಲ್ಲಿ ಸುಂದರವಾದ ತಲೆ ಹೊದಿಕೆಯನ್ನೂ ಒಳಗೊಂಡು ಇದು ತೇರುಕಟ್ಟಿದಂತೆ ಕಟ್ಟಲ್ಪಡುತ್ತದೆ.

ಹಸುಕರುಗಳಿಗೆ ಹುಲ್ಲುಗಳಲ್ಲದೆ ಧಾನ್ಯದ ಗಿಡ ಹಾಗೂ ಗೆಣಸಿನ ಬೀಳುಗಳ ಕೊಣ್ಣೆ/ಒಣಕಲನ್ನೂ ಮಳೆಗಾಲಕ್ಕಾಗಿ ಕಾದುಕೊಳ್ಳುವ ಕೆಲವು ಕ್ರಮಗಳಿವೆ. ಹುಲ್ಲಿನ ಕುತ್ರಿಯಂತೆ ಈ ಕೊಣ್ಣೆಯು ಆವಕ ಇರುವುದಿಲ್ಲವಾದುದರಿಂದ, ಇವುಗಳನ್ನು ಕುತ್ರಿಯಾಕಾರದ ಚಿಕ್ಕ ಚಿಕ್ಕ ರಚನೆಗಳಾದ 'ಗೊಡ್ಮಿ/ಗುಡ್ಮಿ/ಗುಣ್ಮಿ/ಗಳಲ್ಲಿ ಕಾಯ್ದಿರಿಸುತ್ತಾರೆ. ಇನ್ನು ಕೆಲವೊಮ್ಮೆ ನೆಯ್ಗೆಮಾಡಿದ 2 ಮಡ್ಲುಗಳನ್ನು ಸೇರಿಸಿ ಲಕೋಟೆಯಂತೆ ಮಾಡಿ ಅದರಲ್ಲಿ ಕೊಣ್ಣೆಯನ್ನು ತುಂಬಿಡುತ್ತಾರೆ. ಹೀಗೆ ತುಂಬಿಡುವ ಸಾಧನಗಳನ್ನು 'ಮಡ್ಲ್‌ಕೊಟ್ಟೆ' ಎನ್ನುತ್ತಾರೆ.

ಸೌದೆಯನ್ನು ಕಾಪಿಡುವ ಸೌದೆಬಳೆ, ಹುಳಿಯಿಡುವ ಅಕ್ಕಾಳ್ಕಕ್ಕಿ, ಅಡಿಕೆಯನ್ನು ನೀರಿಗೆ ಹಾಕಿ ನೀರಡಕೆಯಾಗಿ ಕಾಯ್ದುಕೊಳ್ಳುವ ಅಡಿಕೆಜಾಲ್‌ಗಳು, ಉಪ್ಪಿನಕಾಯಿ, ತುಪ್ಪ ಇತ್ಯಾದಿಗಳನ್ನು ರಕ್ಷಿಸುವ ಬೈಣೆ / ಭರಣಿಗಳು ಕೃಷಿಕರ ಪಾಲಿನ ಸಂಗ್ರಹ ಸಾಧನಗಳ ಬಹುರೂಪದ ವ್ಯಾಪ್ತಿಯಲ್ಲಿಯೇ ಬರುತ್ತವೆ.

ಮಾಪಕಗಳ ಪರಿಚಯ : ಜಾನಪದ ಲೋಕಕ್ಕೆ ಅದರದ್ದೇ ಆದ ಲೆಕ್ಕಾಚಾರದ ಕ್ರಮವಿದೆ. ಆ ಲೆಕ್ಕಾಚಾರಗಳು ಆಯಾ ವಸ್ತುಸಂಗತಿಗಳಿಗೆ ಲಗತ್ತುಗೊಂಡಂತೆ ಅನನ್ಯವೂ ಆದುದಾಗಿದೆ. ಪ್ರಾಣಿಗಳ ಪ್ರಾಯ ಲೆಕ್ಕಹಾಕುವುದಾದರೆ, ಎತ್ತು ಕೋಣಗಳನ್ನು ಹಲ್ಲಿನ ಲೆಕ್ಕಾಚಾರದ ಮೇಲಿಂದ ಮತ್ತು ಹಸು, ಎಮ್ಮೆಗಳನ್ನು ಎಷ್ಟು ಕರು ಹಾಕಿ ಕರಾವು ನಡೆಸಿದೆ ಅಥವಾ ಎಷ್ಟನೇ ಕರಾಣಿ/ಕರಾವು ಎಂಬ ಕರಾವಿನ ಲೆಕ್ಕದ ಮೇಲಿಂದ ಪ್ರಾಯದ ಲೆಕ್ಕಾಚಾರದ ಕ್ರಮವಿದೆ. ಕೋಳಿಯ ಗಾತ್ರ ಅಥವಾ ವಯೋಮಾನವನ್ನು 'ಪಾವುಕೋಳಿ', 'ತೆಳ', ಹೈಡೆ / ಹೂಂಜ ಎಂಬ ಹಂತಾನುಸಾರಿ ವಿವರಗಳಲ್ಲಿ ಕೊಡುವ ಜೊತೆಗೆ ಹೆಣ್ಣುಕೋಳಿಯ ವಯಸ್ಸು /ಸಾಧನೆಯನ್ನು ಎಷ್ಟು 'ಇಜ್ಜರಿಗೆ' ಮರಿಮಾಡಿದೆ ಎಂಬ ಲೆಕ್ಕದ ಮೇಲಿಂದಲೂ, ಗಂಡುಕೋಳಿಯ ಪರಾಕ್ರಮವನ್ನು ಎಷ್ಟು 'ಅಂಕ' ಮಾಡಿದೆ ಎಂಬ ನೆಲೆಯಿಂದಲೂ ವಿವರಿಸಿಕೊಳ್ಳುತ್ತಾರೆ. ಮೊದಲಬಾರಿಗೆ ಹಿಲಿಕೂರುವುದನ್ನು/ಮರಿಮಾಡಲು ಕೂರುವ ಹೆಂಟೆಯನ್ನು 'ತೊಡಾಂತಿ/ತೊಡ್ಡಾನ್ತಿ' ಎಂದೂ ಗುರುತಿಸುತ್ತಾರೆ. ಒಂದೇ ಪ್ರಾಯದವುಗಳೆಂದು ಗುರುತಿಸಲು 'ಓರಗೆ' ಎಂದಿರುವುದಕ್ಕೆ ಸಮನಾಗಿ ಕೋಳಿಯಲ್ಲಿ 'ಒಗ್ಗೋಳಿ', ಮನುಷ್ಯರಲ್ಲಿ 'ಸರಾಣಿ' ಎಂಬ ಪದರೂಪಗಳಿವೆ. ಈ ಗುರುತಿಸುವಿಕೆ ವಯೋಪ್ರಮಾಣವನ್ನು ಅಳೆಯುವ ಕ್ರಮವೂ ಹೌದು. ಬಾವಿಯ ಆಳವನ್ನು 'ಆಳ್' ಅಥವಾ 'ಮುಂಡ್' ಎನ್ನುವ ಲೆಕ್ಕಾಚಾರದ ಮೇಲಿಂದ, ಕೂಲಿಯನ್ನು ನಿರ್ಧರಿಸುವಲ್ಲಿ ನಟ್ಟಿಯಲ್ಲಿ 'ಆಳ್‌ಅಗೆ'ಯನ್ನು ಸೂಡಿಯ ಲೆಕ್ಕದ ಮೇಲಿಂದ ನಿರ್ಧರಿಸುವ ಕ್ರಮವಿತ್ತು. ಅಗೆಯ ಲೆಕ್ಕಾಚಾರಕ್ಕೆ ಕೆಲವು ಹಂತಗಳೂ ಇವೆ. ಅವುಗಳೆಂದರೆ ಅಂಗೈತಳ ತುಂಬುವಷ್ಟು ಬತ್ತದ ಸಸಿ 'ಒಂದುತಳ' ಎನಿಸುತ್ತದೆ. ಅಂತಹ ಎರಡು ಕೈಗಳ ಎರಡು ತಳಗಳು ಸೇರಿ ಒಂದು 'ಸೂಡಿ'ಯಾಗುತ್ತದೆ. ಇಂತಹ ಎರಡು 'ಸೂಡಿ'ಗಳು ಸೇರಿ 'ಒಂದು ಹಿಡಿ'ಯಾಗುತ್ತದೆ. ಕೆಲವು ಕಡೆ 35, ಇನ್ನು ಕೆಲವು ಕಡೆ ಇಂತಹ 30 ಹಿಡಿಗಳು ಸೇರಿ 'ಒಂದು ಆಳ್' ಎನಿಸುತ್ತದೆ. ನೇಜಿಯ ವೇಳೆಯಲ್ಲಿ ಈ ಅಗೆಸೂಡಿಯನ್ನು ಒಡೆದು ನಾಟಿಗಾಗಿ ಮಾಡಿಕೊಳ್ಳುವ ಅತ್ಯಂತ ಕಿರುಘಟಕಗಳು 'ಹಿಡ್ಪ್'ಗಳೆನಿಸುತ್ತವೆ. ಗದ್ದೆಯೊಂದಕ್ಕೆ ಬೇಕಾಗುವ ಅಗೆಸೂಡಿಗಳ ಆಧಾರದ ಮೇಲಿಂದ ಅದು 'ಎಷ್ಟುಆಳ್‌ನೆಟ್ಟಿಯ ಗದ್ದೆ' ಎನ್ನುವುದನ್ನು ನಿರ್ಧರಿಸಿಕೊಳ್ಳುತ್ತಾರೆ. ಕೊಯ್ಲಿನ ವೇಳೆ ಎರಡಾಳುನೆಟ್ಟಿ ನೆಟ್ಟ ಗದ್ದೆಯನ್ನು ಒಂದು 'ಆಳ್‌ಕೊಯ್ಲ್' ಎಂದು ಲೆಕ್ಕ ಹಾಕುತ್ತಾರೆ. ಈ ನೆಟ್ಟಿ ಅಥವಾ ಕೊಯ್ಲಿನ ಕೆಲಸವನ್ನು ಒಂದಕ್ಕಿಂತ ಹೆಚ್ಚಿನ ಆಳುಗಳು ನಿರ್ವಹಿಸಬೇಕಾಗಿದ್ದಲ್ಲಿ, ಆ ಆಳುಗಳು ತಮ್ಮೊಳಗೆ ಕೆಲಸವನ್ನು ಹಂಚಿಕೊಳ್ಳಲು ನಿರ್ದಿಷ್ಟ ಅಳತೆಯದಲ್ಲದ ಯಾವುದಾದರೂ ಒಂದು ಉದ್ದನೆಯ ಕೋಲನ್ನು ಬಳಸುತ್ತಾರೆ. ಇದನ್ನು 'ಓಜಿನ ಕೋಲ್' ಎಂತಲೂ, ಈ ಕೆಲಸದ ವಿಂಗಡಣೆಯನ್ನು 'ಓಜ್‌ಹಾಕುದ್' ಎನ್ನುವಂತೆಯೂ ಕರೆಯುತ್ತಾರೆ.

ತರಗೆಲೆಯನ್ನು ಮಡಿಕೆ ಮಾಡಿ ತುಂಬುವಾಗ 'ಮಡ್ಕಿ/ತೆಕ್ಲ್'ಗಳ ಲೆಕ್ಕದಲ್ಲಿಯೂ, ಸಪ್ಪುಕೊಯ್ದು ಹೊರೆಕಟ್ಟುವ ವೇಳೆ ಒಂದೊಂದು ಬಾರಿಕುಯ್ದಿಡುವುದನ್ನು 'ಪಿಂಡಿ'ಯ ಲೆಕ್ಕದಲ್ಲಿಯೂ ಗಣಿಸುತ್ತಾರೆ. ಈ ಪಿಂಡಿಗಳು 8ನ್ನು ಅಡ್ಡ ಬಿಡ್ಡ ಇರಿಸಿದರೆ ಒಂದು 'ಅರಿ'ಯಾಗುತ್ತದೆ. ಕನಿಷ್ಟ ಮೂರು ಅರಿಯಾದರೂ ಸೇರಿ ಒಂದು 'ಹೊರೆ'ಯಾಗುತ್ತದೆ. ಬತ್ತದ ಕೊಯ್ಲಿನಲ್ಲಿ ಒಂದೊಂದು ಬಾರಿಕೊಯ್ದಿಡುವ ಕೆಯ್ ಪಿಂಡಿಯಾಗಿ, 3-4 ಪಿಂಡಿ ಒಟ್ಟುಗೂಡಿದುದು ಅರಿ ಆಗಿ, ಹೊರೆಗೇರುತ್ತವೆ. ಬತ್ತದ ಹುಲ್ಲನ್ನು ಬಡಿದು ಉಂಡಿಗೆ ಹುಲ್ಲುಮಾಡುವಾಗ ಆಳು ಕೆಲಸವನ್ನು ಸೂರು ಸೂಡಿ ಒಣಹುಲ್ಲಿನ ಕಟ್ಟಿಗೆ 'ಒಂದ್‌ಸಲಗಿ'ಎಂಬಂತೆ ಆಳುಕೆಲಸದ ಪ್ರಮಾಣವನ್ನು ಗಣಿಸುತ್ತಾರೆ. ತಿರಿಗೆ ಬಳಸುವ ಚಂಡೆಯನ್ನು ಹೆಜ್ಜೆಯ ಆಧಾರದ ಮೇಲೆ 'ಮೆಟ್ಟ್' ಲೆಕ್ಕದಲ್ಲಿ ಅಳೆಯುತ್ತಾರೆ. ಚಂಡೆಯ ಮೆಟ್ಟಿನ ಲೆಕ್ಕದ ಆಧಾರದ ಮೇಲೆ ತಿರಿಗೆ ತುಂಬಬಹುದಾದ ಬತ್ತದ ಪ್ರಮಾಣವನ್ನು

ಇಂತಿಷ್ಟು 'ಮುಡಿ/ಮಾನ್ಗಿ' ಎಂದು ನಿರ್ಧರಿಸುತ್ತಿದ್ದರು. ಈ ಮಾನ್ಗಿ/ಮುಡಿ ಎನ್ನುವುದು 3 ಪಾವಿನ ಲೆಕ್ಕವನ್ನೂ ಅವಲಂಬಿಸಿದೆ. ಹಾಲು/ಎಣ್ಣೆ/ತುಪ್ಪದ ಲೆಕ್ಕವನ್ನು ಸೊಲಗೆ, ಸಿದ್ದೆಯಲ್ಲಿ ಅಳೆಯುತ್ತಾರೆ. ಸಿದ್ದೆಯೊಂದರಲ್ಲಿ 4 ಸೊಲಗೆಗಳಿರುತ್ತವೆ. ಬೆಲ್ಲವನ್ನು ಪಂಚೇರು, ದಡೆಗಳ ಲೆಕ್ಕದಲ್ಲೂ, ಗೆಣಸನ್ನು ದಡಿ, ಮಣಗಳ ಲೆಕ್ಕದಲ್ಲೂ ನಿರ್ವಹಿಸುತ್ತಿದ್ದರು. ಮನೆಯ ವ್ಯಾಪ್ತಿಯನ್ನು 'ಅಂಕಣ'ಗಳ (ಒಂದ್‌ಅಂಕ್ಣ, ಎರ್ಡ್ಅಂಕ್ಣ ಇತ್ಯಾದಿ) ಲೆಕ್ಕದಲ್ಲೂ ಗದ್ದೆಯನ್ನು ಹಾನಿ/ಆನಿಯ ಲೆಕ್ಕದಲ್ಲೂ ಮಕ್ಕಿಗದ್ದೆಯನ್ನು 'ಹಾಳಿ' ಎಂಬಂತೆಯೂ ಮಾಪಕಗಳ ಪರಿಭಾಷೆ ಬಳಸಿ ಗುರುತಿಸುತ್ತಿದ್ದರು. ಇನ್ನು ಹೆಡಿಗೆ, ಕುಕ್ಕಿ, ಕೊಚ್ನೇಣಿಗಳೆಲ್ಲವೂ ಒಂದೊಂದು ಮಾದರಿಯಲ್ಲಿ ಸಾಂದರ್ಭಿಕ ಮಾಪಕಗಳೇ ಆಗಿವೆ. ನೀರು ಬಿಸಿಯಾದುದನ್ನು ಹೇಳುವ ಪ್ರಮಾಣವಾಚಕಗಳೂ ಇಲ್ಲಿ ಹಲವಾರಿವೆ. ಅರೆಬೆಚ್ಚಗಾದುದನ್ನು ಸೂಚಿಸುವ ಚೌಳ್‌ಚಿಪ್ಪಿ, ಉಗ್ರ್‌ಬೆಪ್ಪ್ ; ಬಿಸಯಾದುದರ ಹಂತ ಮತ್ತು ಗರಿಷ್ಠತೆಯನ್ನು ಏರಿಕೆಯ ಕ್ರಮದಲ್ಲಿ ಸೂಚಿಸುವ ಬಿಸಿ, ಕೊದಿ, ಕೊದಿಗೆಂಡ ಇತ್ಯಾದಿ ಮಾಪಕ ವಾಚಕಗಳಿವೆ. ಮಳೆಯ ಪ್ರಮಾಣವನ್ನು ಸೂಚಿಸುವ 'ಒಂದ್‌ಕಂಬ್ಳಿಮಳೆ', ಹನ್ಕ್ಲ್/ಹನಕ್ಲ್‌ಕೆರ್ದ್ ನೀರ್ ಹೋಪಷ್ಟ್, ಜಿರಾಪತಿನೆರೆ/ಜಮ್ನೆರೆ ಇತ್ಯಾದಿ ಪ್ರಮಾಣವಾಚಕಗಳಿವೆ. ಇನ್ನು ಗೇಣು, ಅಂಗುಳ, ಮೊಳ, ಮಾರು ಎನ್ನುವ ಮಾಪಕಗಳು ಇಲ್ಲೂ ಇದ್ದುವು.

ಬೆಳೆಯ ಹಂತಗಳನ್ನು ಸೂಚಿಸುವ ಅನೇಕ ಪ್ರಮಾಣವಾಚಕಗಳಿವೆ. ಗೆಣಸಿನ ಬೆಳೆಗಾದರೆ ಜಿಬ್ರ್, ಮಿಳಿ, ಎಡ್ಗೆಣ್ಗ್, ಗೆಣ್ಗ್ ಎನ್ನುವ ಗಾತ್ರ ಮತ್ತು ಬೆಳೆ ಹಂತವನ್ನು ಸೂಚಿಸುವ ಪದಗಳಿವೆ. ಮೆಣಸಿಗಾದರೆ ಮಿಜ್ರ್, ಹಸಿಮೆಣ್ಸ್, ಒಣದ್ದ್ ಎಂಬ ಹಂತವಾಚಿಗಳಿವೆ. ತೆಂಗಿನಕಾಯಿಯ ಬೆಳವಣಿಗೆ ಸೂಚಿಸುವ ಚಂಡ್ಪೊಳಿ, ಸಿವಾಳೊ, ಕತ್ತಗಾಯ್, ಮೂರ್ಸಪ್ಪಿ ಹಣ್ಣಾದ್, ಒಣಕಾಯ್, ಗೋಂಟ್ ಎಂಬ ಹಂತಸೂಚಿಯಾದ ಪ್ರಮಾಣವಾಚಿಗಳಿವೆ. ಗೇರುಬೇಳೆಯಲ್ಲಿ ಮಿಜ್ರ್, ಹಸ್ಕಿ, ಬೋಂಡಿ, ದ್ವಾರಿ, ಹಣ್ಣ್ ಎಂಬ ಪ್ರಮಾಣವಾಚಕಗಳಿವೆ. ಹಲಸಿನ ಬೆಳೆಯಾದರೆ ಗೂಂಕ್, ಕಡ್ಗಿ, ಕತ್ಕಡ್ಗಿ, ಹಣ್ಣ್ ಎಂಬ ಹಂತಸೂಚಿಗಳಿವೆ. ಹೂವಿಗೆ ಸಂಬಂಧಿಸಿದಂತೆ ಮೊಕ್ಕಿಟ್ಟಿ, ಮಿಟ್ಟಿ, ಹೂಗ್ ಎಂಬ ಹಂತ ಸೂಚಕಗಳಿವೆ. ಬತ್ತದ ಬೆಳೆ ಹಂತವನ್ನು ಸೂಚಿಸುವ ಹೊಡೆ, ಅರ್ಹೊಡೆ, ತುಂಬ್‌ಹೊಡೆ, ಕದ್ರ್‌ಜುಗದ್ದ್, ಕದ್ರ್‌ಬೀಸದ್ದ್, ಹಾಲ್‌ನುಂಗದ್ದ್, ಕಾಯ್ಗಟ್ಟದ್ದ್, ಕೊಪ್ಪತ್ತ್‌ಹಣ್ಣಾದ್ದ್, ಕಡ್‌ಬತ್‌ಹಣ್ಣಾದ್, ಮುರಿಹಣ್ಣಾದ್ದ್, ತಾಳ್‌ಸತ್ತದ್ದ್ ಎಂಬ ಪ್ರಮಾಣವಾಚಕಗಳಿವೆ. ಜನಪದರ ಅನುಭವವ್ಯಾಪ್ತಿಗೆ ದಕ್ಕಿದ ಎಲ್ಲವೂ ಅವರ ಕಣ್ಣಳತೆಯಲ್ಲಿ ಅಳೆಯಲ್ಪಟ್ಟು, ಅವರದೇ ಅನುಭವಲೋಕದ ಭಾಷಿಕಸಂಜ್ಞೆಗಳಲ್ಲಿ ವಿವರಿಸಲ್ಪಡುವುದರಿಂದ ಅವರ ಪ್ರಮಾಣವಾಚಕದ ಜಗತ್ತು ಕೂಡಾ ಏಕರೂಪಿಯಲ್ಲ, ಬಹುರೂಪಿಯಾದುದು.

ಪಶುಸಂಗೋಪನೆ : ಹಸುಗಳನ್ನು ಬಿಟ್ಟು ಕೃಷಿಯನ್ನು ಗಣಿಸಲಸಾಧ್ಯ. ಈ ಹಸುಗಳನ್ನು ಕಟ್ಟಿಕೊಳ್ಳುತ್ತಿದ್ದ ತಾಣಗಳನ್ನು ಹಟ್ಟಿಗಳೆನ್ನುತ್ತಾರೆ. ಹಟ್ಟಿಗಳು ಕೇವಲ ಹಸುಕಟ್ಟುವುದಕ್ಕೆ ಮಾತ್ರ ಸೀಮಿತವಾಗದೆ ಅಲ್ಲಿಯೇ ಬತ್ತ ಕುಟ್ಟೋ ಒರಳುಗಳೂ ಅನೇಕಬಾರಿ ಮೀಯುವ ಬಚ್ಚಲುಮನೆಗಳೂ ಸೌದೆಕೂಡುವ ಅವಕಾಶಗಳೂ, ಹೆರಿಗೆ ಮುಂತಾದುವುದಕ್ಕೆ ಅವಕಾಶವಾಗುವ 'ಓರಿ'ಗಳೂ ದನದ ಅಕ್ಕಚ್ಚು ಬ್ಯಾರ್/ಬಾಯ್ರ್ ಕುದಿಸುವ 'ಅಕ್ಕಚ್ಚಿನೊಲೆ/ಬಾಯ್ರೊಲೆ'ಗಳೂ ಕೋಳಿಗೂಡುಗಳೂ ಇರುವ ಮೂಲಕ ಅದೊಂದು ಸಂಕೀರ್ಣನೆಲೆಯೇ ಸರಿ. ಇದನ್ನು 'ಕೊಟ್ಕಿ/ಕೊಟ್ಟಿಗೆ' ಎಂದು ಕರೆಯುವುದೇ ರೂಢಿ. ಕೊಟ್ಟಿಗೆಯಲ್ಲಿಯೇ ಹಟ್ಟಿಯೂ ಇರುತ್ತದೆ ಅಷ್ಟೇ. ನಾವು ಹಟ್ಟಿ ಎಂದು ಕರೆಯುವ ದನಕಟ್ಟುವ ಆವರಣವು ಅನೇಕ ವಿಭಾಗಗಳನ್ನು ಹೊಂದಿರುವುದಾಗಿದೆ. ಮುಖ್ಯವಾಗಿ ದನ/ಕೋಣ/ಎತ್ತು/ಎಮ್ಮೆಗಳು ಸೇರಿ 'ಗಂಟಿ' ಎಂದೆನಿಸುವ ಜಾನುವಾರುಗಳನ್ನು ಕಟ್ಟುವ ಜಾಗಗಳನ್ನು 'ಹಟ್ಟಿಯಣೆ/ಹಟ್ಟಿಯಣಿ' ಎನ್ನುತ್ತಾರೆ. ಯಾವುದೇ ಹಟ್ಟಿಗೆ ಎರಡು ಅಣೆ/ಣಿಗಳಿರುತ್ತವೆ. ಒಂದು 'ಮುಂದಣೆ' ಇನ್ನೊಂದು 'ಹಿಂದಣೆ'. ಮುಂದಣೆಯಲ್ಲಿ ದನಕಟ್ಟುವ ಜಾಗದಲ್ಲಿ ಮರದ ಚೌಕಟ್ಟಿನಂತಹ ರಚನೆಗಳಿರುತ್ತವೆ. ಇವುಗಳನ್ನು 'ದಳ್ಕಟ್' ಎನ್ನುತ್ತಾರೆ. ಇಲ್ಲಿ ನೀರು - ಮೇವು ತಿನ್ನಲು ಒಂದಿಷ್ಟು ಎತ್ತರದ ವಿಶಾಲಜಾಗವೂ, ಅದರಲ್ಲಿ 'ಬಾಣಿ ಅಥವಾ ಮರ್ಗಿ'ಯಂತಹ ರಚನೆಗಳೂ ಇರುತ್ತವೆ. ಹಟ್ಟಿಯಲ್ಲಿ ಇದು ಸ್ವಲ್ಪ ಅನುಕೂಲಕರ ಜಾಗ. ಇಲ್ಲಿ ಒಂದಿಷ್ಟು ಪ್ರಮುಖ ಜಾನುವಾರು ಗಳನ್ನು ಕಟ್ಟಿ ಈ ಅವಕಾಶಗಳಿರದ 'ಹಿಂದಣೆ'ಯಲ್ಲಿ ಅಮುಖ್ಯ ಎನಿಸುವ ಜಾನುವಾರುಗಳನ್ನು ಕಟ್ಟುತ್ತಾರೆ.

ಉಳುವ ಜಾನುವಾರುಗಳು ಬೀಜ ಒಡೆಯುವಲ್ಲಿಯ ತನಕ ಕೋಣ/ಗುಡ್ಡ, ಬೀಜ ಒಡೆದ ಮೇಲೆ ಹೋರಿ/ಎತ್ತು ಎಂಬಂತೆ ಕ್ರಮವಾಗಿ ಎಮ್ಮೆ, ಕೋಣ ಮತ್ತು ಹಸುವಿನ ವಿಭಾಗಗಳಿಗೆ ಸೇರಿದ ಜಾನುವಾರುಗಳನ್ನು ಗುರುತಿಸುತ್ತಾರೆ. ಹಸು/ಎಮ್ಮೆಗಳು ಕರುಹಾಕುವ ಪೂರ್ವಾವಸ್ಥೆಯಲ್ಲಿ 'ಕಡ್ಸ'ಗಳಾದರೆ, ಕರುಹಾಕಿದ ಮೇಲೆ ದನ/ಎಮ್ಮೆಗಳೆಂದು ಕರೆಯಲ್ಪಡುತ್ತವೆ. ಬೆದೆಗೆ ಬರುವ ಹಸುಗಳು ಬೆದೆಗೆ ಕೂಗುವುದನ್ನು 'ತೆಕ್ಲಿಗ್‌ಕೂಗುವುದು/ಹಲ್ಬಾಲಿಗ್‌ಕೂಗುದ್' ಎಂದೇ ಗುರುತಿಸುತ್ತಾರೆ. ಹೀಗೆ ಬೆದೆಗೆ ಕೂಗಿ ಗಂಡಿನ ಸಂಪರ್ಕ ಸಾಧ್ಯವಾಗದೆ ಅಥವಾ ಬೇರೆ ಕಾರಣದಿಂದ ಗಬ್ಬಕಟ್ಟದೇ ಹೋದರೆ ಅದನ್ನು 'ಸುಳಿತಪ್ಪುವುದು' ಎನ್ನುತ್ತಾರೆ. ಕರು ಹಾಕಿದ ಹಸುಗಳನ್ನು ಬಾಣಂತಿ ಸಾಕಿದಂತೆಯೇ ಉಪಚಾರ ಮಾಡುವ ಸಲುವಾಗಿ (ಎಮ್ಮೆಗಳಿಗಾದರೆ) ಶುಂಠಿ ಹುಡಿಮಾಡಿಟ್ಟು ಅದನ್ನು ಬೆಲ್ಲದಲ್ಲಿ ಸೇರಿಸಿ ಕೊಡುವ ಕ್ರಮವೂ ಶುಂಠಿಗಂಜಿಮಾಡಿ ಕೊಡುವ ಕ್ರಮವೂ ಇದೆ. ಈ ಹಂತದಲ್ಲಿ ಎಮ್ಮೆಯ ಮೈಗೆ ಚನ್ನಾಗಿ ಬಿಸಿನೀರ ಸ್ನಾನಮಾಡಿಸಿ ಎಳ್ಳೆಣ್ಣೆಯನ್ನು ಪೂಸಿ ಉಪಚಾರ ಮಾಡುವ ಕ್ರಮಗಳು 'ಹೆತ್ತ್ಮಂತಿ' (ಹೆತ್ತ ಮನಸ್ತಿ/ಮನುಷ್ಯತಿ) ಸಾಕಿದಂತೆಯೇ ಇರುತ್ತದೆ. ಎಳೆಗರುಗಳಿಗೆ ಬೆಳಿಗ್ಗೆ ಹಾಲುಕುಡಿಯಲು ಬಿಡುವ ಮುನ್ನ ನಾಚಿಕೆಮುಳ್ಳಿನ (ಮುಟ್ಟಿದರೆ ಮುನಿಯ)ಗಿಡದ ಕುಡಿಯನ್ನು ಚೀಟಿ/ಚಿವುಟಿ ತಿನ್ನಿಸುತ್ತಾರೆ. ಇದಲ್ಲದೆ ಕಹಿಬೇವಿನೆಣ್ಣೆಯನ್ನು ಕುಡಿಸುವುದೇ ಮೊದಲಾದ ಇನ್ನೂ ಕೆಲವು ಔಷದೋಪಚಾರದ ಮುನ್ನೆಚ್ಚರಿಕೆ ವಹಿಸುತ್ತಾರೆ.

ಹರಾಮಿ ಹಸುಗಳನ್ನು ತಪ್ಪಿಸಿಕೊಳ್ಳದಂತೆ ಗುರುತಿಸಲು ಅವುಗಳ ಕೊರಳಿಗೆ ಕಟ್ಟುವ ಸದ್ದು ಮಾಡುವ ಬಿದಿರಿನ ಸಾಧನವನ್ನು 'ಮರಾಣಿ' ಎನ್ನುತ್ತಾರೆ. ಅವುಗಳ ಹಾರಾಟವನ್ನೇ ನಿಯಂತ್ರಿಸಲು ಕೊರಳಿಗೆ ಕಟ್ಟುವ ಮರದ ತುಂಡು 'ಕುಂಟೆ' ಎನಿಸುತ್ತದೆ. ಎಳೆಗರುಗಳು ಅವುಗಳ ತಾಯಿ ಹಸುವಿನ ಹಾಲನ್ನು ಕದ್ದು ಕುಡಿಯದಂತೆ ಹಸುವಿನ ಕೆಚ್ಚಲು ಚುಚ್ಚುವಂತೆ ಕರುವಿನ ಮೂತಿಗೆ ಕಟ್ಟುವ ಸಾಧನವನ್ನು 'ಮೂಗ್‌ಚುಳ್ಳಿ' ಎನ್ನುತ್ತಾರೆ.

ಬೀಜದ ಕೋಣ/ಗೂಳಿಗಳ ಬೀಜ ಒಡೆಯುವುದನ್ನು 'ಶೀಲಮಾಡುವುದು' ಎಂದೂ ಈ ಸಂದರ್ಭದಲ್ಲಿ ಆ ಹಸುವಿನ 'ಬೂಲಿಗೆ/ಹಿಂಭಾಗ'ಕ್ಕೆ ಹಾಕುವ ಬರೆಯನ್ನು 'ಚಾಟ್' ಎನ್ನುತ್ತಾರೆ. ಹಸುಗಳಿಗೆ ಹಾಕುವ ಆಹಾರಗಳನ್ನು ಬಾಯ್ರು, ಮಡ್ಡಿ, ಅಕ್ಕಚ್ಚು ಎಂಬಂತೆ ಬೇರೆ ಬೇರೆ ಬಗೆಗಳಲ್ಲಿ ಗುರುತಿಸುತ್ತಾರೆ. ಎತ್ತು/ಕೋಣಗಳನ್ನು ಮೈಯುಜ್ಜಿ ಕೊಳೆತೆಗೆಯುವುದನ್ನು 'ಕೋಡ್ಸೆಳಿಹಾಕುವುದು' ಎನ್ನುತ್ತಾರೆ. ಹಸುಗಳಲ್ಲಿ ಕಾಣುವ ಊನತೆಯನ್ನು 'ಐಬುಗಳು' ಎನ್ನುತ್ತಾರೆ.

ಜೆ.ಪಿ.ಎಚ್.

ಕುಂಬಳಕಾಯಿ ಬಹುದಿನಗಳವರೆಗೆ ಅಂದರೆ ಮೂರು-ನಾಲ್ಕು ತಿಂಗಳವರೆಗೆ ಕೆಡದಂತೆ ಇಡಬಹುದಾದ ತರಕಾರಿ. ಹೇರಳ ಪ್ರಮಾಣದ 'ಎ' ವಿಟಮಿನ್ ಹೊಂದಿರುವ ಕುಂಬಳವು ಆರೋಗ್ಯದಾಯಕ. ಇದೊಂದು ವಾರ್ಷಿಕ ಬಳ್ಳಿ. ಇದರ ಕಾಂಡ ಹತ್ತು ಮೀಟರ್‌ವರೆಗೂ ಬೆಳೆಯುವುದು.

ಇದರ ವೈಜ್ಞಾನಿಕ ಹೆಸರು 'ಕುಕರ್ಬಿಟಾ ಮಸ್ಕ್ಯಾಟ'. ಇದನ್ನು ಧಾರವಾಡದ ಕಡೆ ಕುಂಬಳ ಎಂದೂ, ದಕ್ಷಿಣ ಕನ್ನಡ ಮತ್ತು ಕೊಡಗಿನಲ್ಲಿ ಕೆಂಬಡೆಕಾಯಿ, ಚೀನಿಕಾಯಿ ಎಂದೂ ಮೈಸೂರು ಪ್ರಾಂತ್ಯಗಳಲ್ಲಿ ಸೀಗುಂಬಳ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಸ್ವಲ್ಪಮಟ್ಟಿಗೆ ಆಳದ ತಾಯಿಬೇರನ್ನು ಹೊಂದಿರುವ ಈ ತರಕಾರಿಗೆ ಸುಲಭವಾಗಿ ನೀರು ಬಸಿಯುವ ಗೋಡುಮಣ್ಣು ಆವಶ್ಯಕ. ಆಳದ ಕಪ್ಪುಭೂಮಿಗಿಂತ ಮರಳುಮಿಶ್ರಿತ ನೆಲವೇ ಇದರ ಕೃಷಿಗೆ ಅನುಕೂಲ. ಇಂತಹ ಭೂಮಿಗಳಲ್ಲಿ ಕೃಷಿ ಮಾಡಿದರೆ ಫಸಲು ಬೇಗ ಬರುವುದಲ್ಲದೆ ಹೆಚ್ಚು ಇಳುವರಿಯನ್ನು ಪಡೆಯಬಹುದು. ಬೇಸಗೆ ಕಾಲವಾದರೆ ಬಿರುಕು ಬಿಡದ ಭೂಮಿಯಲ್ಲಿ, ಮಳೆಗಾಲವಾದರೆ ಜೌಗು ಆಗದಿರುವ ಜಮೀನಿನಲ್ಲಿ ಕುಂಬಳ ಬೆಳೆಯನ್ನು ಪಡೆಯಬಹುದು.

ಹಿಂದಿನ ದಿನಗಳಲ್ಲಿ ಈ ತರಕಾರಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ತಿಪ್ಪೆಗುಂಡಿ, ಮನೆಯ ಮುಂದೆ ಇಲ್ಲವೇ ಹಿತ್ತಲುಗಳಲ್ಲಿ ಸಾಂಪ್ರದಾಯಿಕ ಪದ್ಧತಿಯನ್ನನುಸರಿಸಿ ಬೆಳೆಯಲಾಗುತ್ತಿತ್ತು. ಆದರೆ ಇಂದು ಕುಂಬಳ ವಾಣಿಜ್ಯ ಬೆಳೆಯಾಗಿರುವುದರಿಂದ ವೈಜ್ಞಾನಿಕ ಪದ್ಧತಿಯನ್ನನುಸರಿಸಿ ಬೆಳೆಯಲಾಗುತ್ತದೆ. ದಕ್ಷಿಣ ಒಣಪ್ರದೇಶಗಳಲ್ಲಿ ಜನವರಿ-ಫೆಬ್ರವರಿ ಮತ್ತು



ಜೂನ್-ಜುಲೈ ತಿಂಗಳುಗಳು ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಬೆಳೆಯುತ್ತಾರೆ.

ಕೃಷಿ : ಭೂಮಿಯನ್ನು ಆಳವಾಗಿ ಉಳುಮೆ ಮಾಡಿ ಸಿದ್ಧಪಡಿಸಬೇಕು. ಎರಡರಿಂದ ಮೂರು ಮೀಟರ್ ಅಂತರದ ಸಾಲುಗಳಲ್ಲಿ ತೊಂಬತ್ತು ಸೆಂಟಿಮೀಟರ್ ಅಂತರದಲ್ಲಿ ಗುಣಿಗಳನ್ನು ನಿರ್ಮಿಸಬೇಕು. ಆಳದ ಗುಣಿಗಳಿಗೆ ಕೊಟ್ಟಿಗೆ ಗೊಬ್ಬರ, ಶಿಫಾರಸ್ಸು ಮಾಡಿದ ಸಾರಜನಕ, ರಂಜಕ, ಪೊಟ್ಯಾಷ್ ಒದಗಿಸುವ ರಾಸಾನಿಯಕ ಗೊಬ್ಬರಗಳನ್ನು ಕೊಟ್ಟು ಮಣ್ಣಿನಲ್ಲಿ ಚೆನ್ನಾಗಿ ಬೆರಸಬೇಕು. ಅನಂತರ ಪ್ರತಿ ಮಡಿಯಲ್ಲಿ ಮೂರರಿಂದ ಐದು ಬೀಜಗಳನ್ನು ಬಿತ್ತಿ ತೆಳುವಾಗಿ ನೀರು ಹಾಯಿಸುವುದು ಒಂದು ವಿಧಾನವಾದರೆ, ನಾಟಿಮಾಡುವುದಕ್ಕಿಂತ ಒಂದೆರಡು ದಿನ ಮುಂಚೆ ನೀರುಣಿಸಿ ಅನಂತರ ಬೀಜವನ್ನು ಬಿತ್ತುವುದು ಮತ್ತೊಂದು ವಿಧಾನ. ಬಿತ್ತಿದ ಇಪ್ಪತ್ತೈದು ದಿವಸಗಳ ಬಳಿಕ ಆರಂಭದಲ್ಲಿ ಕೊಟ್ಟಷ್ಟೇ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡಬೇಕು.

ಕುಂಬಳದ ಬೀಜಗಳನ್ನು ನಾಟಿಮಾಡಿದ ಸಾಲುಗಳಲ್ಲೇ ನೀರುಣಿಸುವಂಥ ವ್ಯವಸ್ಥೆ ಇರಬೇಕು. ಇಲ್ಲದಿದ್ದಲ್ಲಿ ಬೆಳೆಯ ಉತ್ಪನ್ನದ ಗುಣಮಟ್ಟ ಚೆನ್ನಾಗಿರುವುದಿಲ್ಲ. ಅಲ್ಲದೆ ನೀರಿನ ಪ್ರಮಾಣ ಹೆಚ್ಚಾಗಿ ಬೇಕಾಗುತ್ತದೆ. ಬಿತ್ತಿದ ಬಳಿಕ ಮಣ್ಣನ್ನು ಪೂರ್ಣ ಸಮಮಟ್ಟಕ್ಕೆ ತಂದು, ಲಭಿಸುವ ಕಸ, ಕಡ್ಡಿ, ಎಲೆ ಹಣ್ಣಿನ, ತರಕಾರಿಗಳ ಸಿಪ್ಪೆ ಮತ್ತಿತರ ಸಾವಯವ ವಸ್ತುಗಳನ್ನು ನಾಟಿ ಮಾಡಿದ ಗುಣಿಗಳಿಗೆ ಹೊದಿಕೆಯಾಗಿ ಉಪಯೋಗಿಸಬೇಕು. ಇದರಿಂದ ಬೇಗ ನೀರು ಆವಿಯಾಗಲಾರದು. ಅಲ್ಲದೆ, ಬೀಜ ಬೇಗ ಮೊಳಕೆಯೊಡೆಯಲು ಸಹಕಾರಿಯಾಗುತ್ತದೆ. ನಾಟಿ ಮಾಡಿದ ಕನಿಷ್ಠ ಎರಡು ತಿಂಗಳವರೆಗೆ ಜಮೀನಿನಲ್ಲಿ ಕಳೆಗಳಿರದಂತೆ ನೋಡಿಕೊಳ್ಳಬೇಕು. ಬಳ್ಳಿ ಚಿಗುರಿದ ಬಳಿಕ ಕಳೆಯ ಪ್ರಭಾವ ತಾನಾಗಿಯೇ ಕಡಿಮೆಯಾಗುವುದು. ಕಳೆ ನಿಯಂತ್ರಣಕ್ಕೆ ಅನಾವಶ್ಯಕವಾಗಿ ರಾಸಾಯನಿಕಗಳನ್ನು ಬಳಸಬಾರದು. ಹಣ್ಣಾಗುವವರೆಗೆ ಬಳ್ಳಿಯಲ್ಲಿಯೇ ಬಿಡುವ ತರಕಾರಿ ಇದಾದ್ದರಿಂದ ಕಟಾವಿನ ಸಂದರ್ಭದಲ್ಲಿ ಹೆಚ್ಚಿನ ನೀರನ್ನು ಉಣಿಸಬಾರದು. ಸಿಹಿರುಚಿಯ ದೃಷ್ಟಿಯಿಂದಲೂ ಮಿತವಾಗಿ ನೀರನ್ನು ಕೊಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಮನೆಯ ಅಟ್ಟಗಳಲ್ಲಿ ಮಾಗಿದ ಕುಂಬಳ ಕಾಯಿಗಳನ್ನು ಶೇಖರಿಸಿಡುತ್ತಾರೆ.

ಪ್ರಸ್ತುತ ಆವಿಷ್ಕಾರಗೊಂಡ ಹಲವಾರು ಕುಂಬಳಕಾಯಿಯ ತಳಿಗಳು ಕೃಷಿಕ್ಷೇತ್ರದಲ್ಲಿ ಕಂಡುಬರುತ್ತಿವೆ. ಅರ್ಕಾಸೂರ್ಯಮುಖಿ, ಅರ್ಕಾಚಂದನ್, ಸಿ.ಓ. 1, ಹೈಬ್ರಿಡ್ ಕುಂಬಳ, ಪಟ್ಟಿಫ್ಯಾನ್ ಮುಂತಾದ ತಳಿಗಳು ಇಂದು ಎಲ್ಲೆಡೆ ಕಂಡುಬರುತ್ತಿವೆ. ಕುಂಬಳ ದುಂಬಿ, ಹೇನು, ಹಣ್ಣುನೊಣ ಮತ್ತು ರಂಗೋಲಿ ಹುಳುಗಳ ಕಾಟದ ಜೊತೆಗೆ ಬೂಜುತುಪ್ಪಟ ರೋಗ, ಬೂದಿರೋಗ ಮತ್ತು ನಂಜುರೋಗಗಳು ಈ ಗಿಡವನ್ನು ಕಾಡುತ್ತವೆ.

ಎಸ್.ಎಂ.ಬಿ.

ಕುಟ್ಟನಾಡಿನ ಬತ್ತಬೇಸಾಯ ಕೇರಳದ ಬತ್ತದ ಕಣಜವೆಂಬ ಖ್ಯಾತಿಗೆ ಪಾತ್ರವಾಗಿರುವ ಕುಟ್ಟನಾಡಿನ ಪರಂಪರಾಗತ ಬತ್ತ ಬೇಸಾಯವು ಅನನ್ಯ ಕ್ರಮದ್ದಾಗಿದೆ. ಕುಟ್ಟನಾಡು ತರಿ ಜಮೀನಿನಿಂದ

ವೆಟ್‌ಲ್ಯಾಂಡ್ ಕೂಡಿದ ಪ್ರದೇಶ. ಸಮುದ್ರಮಟ್ಟಕ್ಕಿಂತ ತಗ್ಗಿನಲ್ಲಿರುವ ಈ ಜವುಗು ನೆಲದಲ್ಲಿ ಪ್ರತಿಕೂಲವಾದ ಪ್ರಕೃತಿಯನ್ನು ಒಗ್ಗಿಸಿಕೊಂಡು ಇಲ್ಲಿಯ ಪರಂಪರಾಗತ ಬತ್ತ ಬೇಸಾಯ ನಡೆಯುತ್ತದೆ. ಕುಟ್ಟನಾಡು ಆಲಪ್ಪುಳ, ಕೊಟ್ಟಾಯಂ, ಪತ್ತನಂ ತಿಟ್ಟ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಪ್ರದೇಶ. ಇದು ಮುನ್ನೂರ ನಲುವತ್ತು ಚದರ ಮೈಲಿಗಳ ವಿಸ್ತಾರವನ್ನೂ ಹೊಂದಿದೆ. ಚೇರ್ತಲ, ಅಂಬಲಪ್ಪುಳ, ಕುಟ್ಟನಾಡ್, ಕಾರ್ತಿಕಪಳ್ಳಿ, ಮಾವೇಲಿಕ್ಕರ, ತಿರುವಲ್ಲ, ಚಂಗನಾಶ್ಶೇರಿ, ಕೊಟ್ಟಾಯಂ, ವೈಕ್ಕಂ ಎಂಬ ತಾಲೂಕುಗಳನ್ನು ಒಳಗೊಂಡ ಪ್ರದೇಶ. ವರ್ಷದ ಅರ್ಧಕ್ಕಿಂತಲೂ ಹೆಚ್ಚುಕಾಲ ನೀರಿನಿಂದ ಮುಚ್ಚಿಹೋಗುವ ಕುಟ್ಟನಾಡಲ್ಲಿ ಪ್ರತಿವರ್ಷ ನೀರನ್ನು ಸಾಹಸದಿಂದ ಬತ್ತಿಸಿ ಮತ್ತೆ ಮತ್ತೆ ಕೃಷಿ ಭೂಮಿಯನ್ನು ಸಿದ್ಧಪಡಿಸಿಕೊಳ್ಳಬೇಕು. ಪಂಪಾ, ಅಚ್ಚನ್, ಕೋವಿಲ್, ಮಣಿಮಲ, ಮೀನಚ್ಚಿಲ್ ಎಂಬ ನಾಲ್ಕು ಹೊಳೆಗಳು ಇಲ್ಲಿ ಹರಿಯುತ್ತವೆ. ಇವು ಕುಟ್ಟನಾಡನ್ನು ಜಲಸಮೃದ್ಧವನ್ನಾಗಿಯೂ ಫಲವತ್ತಾದ ನೆಲವನ್ನಾಗಿಯೂ ಮಾಡಿವೆ. ಅಲ್ಲಿಯ ಬಯಲುಗಳಲ್ಲಿ ಜೇಡಿಮಿಶ್ರಿತ ಕಪ್ಪುಮಣ್ಣು ಆಮ್ಲಗುಣವುಳ್ಳದಾಗಿದ್ದು ಸದಾ ಕೆಸರಾಗಿರುತ್ತದೆ. ಹಿಂದೆಂದೋ ಈ ಮಣ್ಣು ಸುಟ್ಟು ಕರಕಲಾಗಿತ್ತು ಎನ್ನುವುದಕ್ಕೆ ಆ ಮಣ್ಣಲ್ಲೆ ಪುರಾವೆಗಳಿವೆ. ಮಣ್ಣಿನ ಮೇಲ್ಪದರದ ಅಡಿಯಲ್ಲಿ ಸುಡದೆ ಬಾಕಿಯಾದ ಮರದ ತುಣುಕುಗಳು ಸಿಗುತ್ತವೆ. ಇವನ್ನು 'ಕಾಂಡಾಮರಗಳು' ಎಂದು ಕರೆಯುತ್ತಾರೆ. ಕುಟ್ಟನಾಡೆಂಬ ಹೆಸರೇ ಅದು ಸುಟ್ಟನೆಲವೆಂಬುದನ್ನು ಸೂಚಿಸುವಂಥದು. ಇಲ್ಲಿಯ ಜವುಗು ಭೂಮಿಯು 'ಕುಟ್ಟನಾಡನ್ ಪೂಜ' (ಕುಟ್ಟನಾಡಿನ ಸುಗ್ಗಿ ಬಯಲು) ಆಗಿ ಮಾರ್ಪಟ್ಟ ಬಳಿಕ ಅಲ್ಲಿ ಬತ್ತ ಬೆಳೆಯುವ ಕೃಷಿ ಪದ್ಧತಿಗೆ ಒಂದು ಪರಂಪರೆ ನಿರ್ಮಾಣವಾಯಿತು.

ಸಹ್ಯಾದ್ರಿಯಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುವ ತೊರೆ ತೋಡು ಹೊಳೆಗಳಲ್ಲಿ ಸಾಗಿಬರುವ ಎಕ್ಕಲು ಮಣ್ಣು ಕುಟ್ಟನಾಡಿನ ಜವುಗು ನೆಲವನ್ನು ಸೃಷ್ಟಿಸಿತು. ಬಳಿಕ ಅಲ್ಲಿಗೆ ಸಹ್ಯಾದ್ರಿಯ ತಪ್ಪಲುಗಳ ಆದಿವಾಸಿಗಳು ಬಂದು ನೆಲಸಿದರು. ಇವರು ಇಂದಿನ ಕುಟ್ಟನಾಡಿನ ಶ್ರಮಿಕ ವರ್ಗದವರ ಪೂರ್ವಜರು. ಭೂಮಿಯೊಂದಿಗೆ ಸಂಬಂಧ ಉಳ್ಳವರು ಎಂಬ ಅರ್ಥದಲ್ಲಿ ಇವರನ್ನು ಪುಲಯರು ಎಂದು ಕರೆದರು. ಕುಟ್ಟನಾಡಿನ ಜವುಗು ನೆಲದಲ್ಲಿ ಹಾವಸೆ, ನಾನಾ ತೆರನ ಹುಲ್ಲುಗಳು, ಕಂಡಲ್ ಕಾಡುಗಳು ಬೆಳೆದಿದ್ದುವು. ಹೊಳೆಗಳು ತಂದು ಹಾಕಿದ್ದ ಮಣ್ಣು ರಾಶಿಬಿದ್ದು ಸಣ್ಣ ಸಣ್ಣ ಕುದುರುಗಳು ನಿರ್ಮಾಣವಾಗಿದ್ದುವು. ಈ ಜನ ಪ್ರತಿಕೂಲ ಪರಿಸ್ಥಿತಿ ಮತ್ತು ಪರಿಸರದೊಂದಿಗೆ ಗುದ್ದಾಡಿ, ಸಾಹಸದಿಂದ ಬದುಕನ್ನು ಇಲ್ಲಿ ರೂಪಿಸಿಕೊಂಡರು. ಅಲ್ಪಪ್ರಮಾಣದಲ್ಲಿ ಬತ್ತ ಕೃಷಿಯ ಬದುಕಿಗೆ ಹೊರಳಿಕೊಂಡರು. ಮುಂದೆ ಸವರ್ಣೀಯರು ಆ ಪ್ರದೇಶದ ಭೂಮಾಲೀಕರಾದಾಗ ಅವರಿಗೆ ದೊಡ್ಡ ಪ್ರಮಾಣದ ಬತ್ತ ಕೃಷಿಮಾಡಲು ಕಾರ್ಮಿಕರಾಗಿ ಒದಗಿದರು. ಕ್ರಮೇಣ ಕುಟ್ಟನಾಡಿನ ಚಹರೆಯೇ ಬದಲಾಯಿಸಿತು. ಸವರ್ಣೀಯರು ಬರಬರುತ್ತ ಭೂಮಿಯ ಒಡೆಯರಾದರು. ಜಮೀನ್ದಾರರಾದರು; ಕುಟ್ಟನಾಡಿನ ಪುಲಯ 'ಪೂಜ ಪುಲಯ'ನಾದ, ಜೀತದ ಆಳಾದ.

ಕೃಷಿ ಮತ್ತು ಪರಿಸರ ಘಟಕಗಳ ತಳಹದಿಯಲ್ಲಿ ಆರ್ಕ್ಯಾಲಾಜಿಕಲ್ ಕನ್ಸಿಡಿರೇಶನ್ ಕುಟ್ಟನಾಡನ್ನು ಆರು ವಿಭಾಗಗಳಾಗಿ ವಿಂಗಡಿಸುವ ಕ್ರಮವಿದೆ. ಕೃಷಿ ವೈಶಿಷ್ಟ್ಯಗಳಷ್ಟನ್ನೆ ಗಣನೆಗೆ ತಂದು ಕುಟ್ಟನಾಡನ್ನು ಕರೆಪ್ರದೇಶದ ಬಯಲುಗಳು, ಹಿನ್ನೀರ ಬಯಲುಗಳು (ನಿಂತ ನೀರನ್ನು ಬತ್ತಿಸಿ ನಿರ್ಮಿಸಿಕೊಂಡವು) ಮತ್ತು ಜವುಗು/ ಕೊಳಂಬೆ ಬಯಲುಗಳೆಂದು ಮೂರಾಗಿ ವಿಭಾಗಿಸಬಹುದು. ಕರೆಪ್ರದೇಶದ ಬಯಲುಗಳು ಮಳೆಗಾಲದಲ್ಲಿ ನೆರೆಗೆ ತುತ್ತಾಗುವಂಥವು. ನೆರೆಯೊಂದಿಗೆ ಸಾಗಿಬರುವ ಎಕ್ಕಲು/ಮೆಕ್ಕಲು ಮಣ್ಣಿನಿಂದಾಗಿ ಇವು ಫಲವತ್ತಾಗಿರುತ್ತವೆ. ಹಿನ್ನೀರ ಬಯಲುಗಳು ಮುಖ್ಯವಾಗಿ ವೆಂಬನಾಡು ಸರೋವರವನ್ನು ಮಣ್ಣಿನಿಂದ ತುಂಬಿ ನಿರ್ಮಿಸಿಕೊಂಡವು. ಇವು ಸಮುದ್ರಮಟ್ಟದಿಂದ ಸು. ಒಂದೂವರೆಯಿಂದ ಎರಡೂವರೆ ಮೀಟರ್‌ಗಳಷ್ಟು ತಗ್ಗಿನಲ್ಲಿರುತ್ತವೆ. ಆಮ್ಲಾಂಶವು ಅಲ್ಪಪ್ರಮಾಣದಲ್ಲಿ ಬೆರೆತಿರುವ ಕಪ್ಪು ಕೆಸರು ಮಣ್ಣು ಈ ಹಿನ್ನೀರ ಬಯಲುಗಳಲ್ಲಿರುತ್ತದೆ. ತೇವಾಂಶವು ಪ್ರಮಾಣಕ್ಕಿಂತಲೂ ಹೆಚ್ಚಾಗಿದ್ದು ಜವುಗು ನೆಲದಲ್ಲಿ ವ್ಯಾಪಿಸಿರುವುವೇ ಜುವುಗು ಅಥವಾ ಕೊಳಂಬೆ ಬಯಲುಗಳು. ಅಧಿಕ ಪ್ರಮಾಣದ ಆಮ್ಲತೆಯು ಕೊಳಂಬೆ ಬಯಲುಗಳ ವೈಶಿಷ್ಟ್ಯ.

ಕುಟ್ಟನಾಡಲ್ಲಿ ಹಿಂದೆ ಒಂದೇ ಬೆಳೆ ಬೆಳೆಯುವುದು ರೂಢಿ. ಅದು ಸುಗ್ಗಿಯ ಬೆಳೆ. ಈಶಾನ್ಯ ಮಾರುತದ ಅವಧಿ ಕಳೆದ ಬಳಿಕ ಕೃಷಿಗೆ ತೊಡಗಿ ನೈಋತ್ಯ ಮಾರುತವು ಆರಂಭವಾಗುವ ಮುನ್ನ ಬೆಳೆ ತೆಗೆಯುವ ಹಾಗೆ ಸುಗ್ಗಿ ಕೃಷಿಯ ವಿನ್ಯಾಸ. ಮಕರ ಮಾಸದಲ್ಲಿ ಪ್ರಾರಂಭವಾಗಿ ಮೇಷಮಾಸ ಅರ್ಧಮುಗಿಯುವ ಹೊತ್ತಿಗೆ ಈ ಬೆಳೆ ಕಟಾವಿಗೆ ಬರುತ್ತದೆ. ಕುಟ್ಟನಾಡಿನಲ್ಲಿ ಹಿಂದೆ ಒಂದೇ ಕಡೆ ನಿರಂತರವಾಗಿ ಕೃಷಿಮಾಡುವ ರೂಢಿ ಇರಲಿಲ್ಲ. ಎರಡು ವರ್ಷಗಳಿಗೆ ಒಂದು ಬೆಳೆ. ಕೆಲವೊಮ್ಮೆ ಎರಡು ಬೆಳೆಗಳ ಅಂತರ ಎರಡೋ ಮೂರೋ ವರ್ಷಗಳು. ಕೃಷಿ ಮಾಡದೆ ಹಡಿಲು ಬಿಟ್ಟ ಭೂಮಿಯನ್ನು ಹಳೆಯನೆಲಗಳೆಂದು ಕರೆಯುತ್ತಿದ್ದರು. ಹಾಗೆ ಹಡಿಲು ಬಿಡುವುದರಿಂದ ಪುನಃ ಕೃಷಿ ಮಾಡುವಾಗ ಮಣ್ಣಿಗೆ ಫಲವತ್ತತೆಯು ಪುನಃ ಸಿಗುತ್ತಿತ್ತು. ಹೊರಗಿನಿಂದ ಬೇರೆ ಗೊಬ್ಬರ ಒದಗಿಸದೆಯೂ ಒಳ್ಳೆಯ ಫಸಲು ಕೈಸೇರುತ್ತಿತ್ತು. ಈ ತತ್ತ್ವವು ಮಲೆ ಪ್ರದೇಶಗಳ ಕುಮರಿ ಬೇಸಾಯದಲ್ಲೂ ಕಂಡುಬರುವಂಥದು. ಆಗಿನ ಕಾಲದಲ್ಲಿ ಕಾರ್ಮಿಕರು ಕಡಿಮೆ ಮತ್ತು ಕೃಷಿ ನೆಲಗಳು ಹೆಚ್ಚು ಇದ್ದುದರಿಂದ ಈ ಹಳೆನೆಲಕೃಷಿಯು ಪ್ರಾಯೋಗಿಕವೂ ಆಗಿತ್ತು.

1940ರ ಸುಮಾರಿಗೆ ಕುಟ್ಟನಾಡಲ್ಲಿ ಹಳೆನೆಲಕೃಷಿಯು ಕೊನೆಗೊಂಡಿತು. 1939ರಲ್ಲಿ ಎರಡನೆಯ ಮಹಾಯುದ್ಧವು ಆರಂಭವಾದಾಗ ಬರ್ಮಾದಿಂದ ಆಮದಾಗುತ್ತಿದ್ದ ಅಕ್ಕಿಯ ಸಾಗಾಟಕ್ಕೆ ಅಡ್ಡಿಯುಂಟಾಯಿತು. ಆಹಾರದ ಕೊರತೆಯನ್ನು ಪರಿಹರಿಸುವುದಕ್ಕಾಗಿ ಪ್ರತಿವರ್ಷವೂ ಕೃಷಿಮಾಡಬೇಕೆಂಬ ನಿಯಮವನ್ನು ಬ್ರಿಟಿಷರು ಜಾರಿಗೆ ತಂದರು. ಹೀಗೆ ಇಂದಿನ ಕುಟ್ಟನಾಡದಲ್ಲಿ ಕ್ರಮವು ಚಾಲ್ತಿಗೆ ಬಂತು.

ಕುಟ್ಟನಾಡಲ್ಲಿ ಸುಗ್ಗಿಗೆ ಮಕರ ಮಾಸದಲ್ಲಿ ಬೀಜಹಾಕುತ್ತಾರೆ. ಆದರೆ ಇದರ ಸಿದ್ಧತೆಗಳು ಸಾಕಷ್ಟು ಮುಂಚೆಯೇ ಆರಂಭವಾಗುತ್ತವೆ. ಹಿಂದಿನ ಸುಗ್ಗಿಯ ಕಟಾವು ಮುಗಿದ ಕೂಡಲೇ ಅದಕ್ಕಾಗಿ ನಿರ್ಮಿಸಿದ್ದ ಕಟ್ಟವನ್ನು ಕಡಿದು ನೀರನ್ನು ಒಳನುಗ್ಗಿಸುತ್ತಾರೆ. ಇದಕ್ಕೆ 'ಮಡಮುರಿಕ್ಕಲ್' ಎಂದು ಹೆಸರು (ಮಡ = ಏರಿ). ಇದನ್ನು ಎರಡು ಉದ್ದೇಶಗಳಿಗಾಗಿ ಮಾಡುತ್ತಾರೆ. ಕುಟ್ಟನಾಡಿನ ಮಣ್ಣು ಸ್ವಾಭಾವಿಕವಾಗಿಯೇ ಆಮ್ಲಗುಣ (ಹುಳಿರಸ)ವುಳ್ಳದ್ದು. ಮಡಮುರಿಕ್ಕಲ್‌ನಿಂದಾಗಿ ಗದ್ದೆಗಳಿಗೆ ಸಮುದ್ರದ

ಉಪ್ಪುನೀರು ಹತ್ತಿ ಇಳಿಯುವುದರಿಂದ ಹುಳಿಯ ಹೆಚ್ಚಿನ ಅಂಶವು ತೊಳೆದು ಹೋಗುತ್ತದೆ. ಉಪ್ಪುನೀರು ಹಾವಸೆ ಮತ್ತು ಕಳೆಗಿಡಗಳ ಬೆಳವಣಿಗೆಯನ್ನು ತಡೆಯುತ್ತದೆ. ಮಳೆಗಾಲದಲ್ಲಿ ಮೂಡಣ ಮೂಲೆಗಳಿಂದ ನೀರು ಹೊಳೆತೋಡುಗಳ ಮೂಲಕ ಹರಿದು ಬಂದು ಇಲ್ಲಿ ಸೇರಿಕೊಂಡಾಗ ಮೆಕ್ಕಲು ಮಣ್ಣುಕೂಡ ಸೇರಿಕೊಂಡು ನೆಲವು ಫಲವತ್ತಾಗುತ್ತದೆ.

ಮಡಮುರಿಕ್ಕಲ್‌ಗಿಂತಲೂ ಮೊದಲು ಕೆಲವರು ಗದ್ದೆಗಳನ್ನು ಎರಡು ಮೂರು ಸಲ ಉಳುತ್ತಾರೆ. ಮುಂದೆ ಕರ್ಕಾಟಕ ತಿಂಗಳಲ್ಲಿ ಉಳುಮೆ ಮಾಡುವಾಗ ನೀರು ನಿಲ್ಲಿಸಿ ಎರಡು ಸಲ ಉತ್ತುಬಿಡುತ್ತಾರೆ. ಈ ಉಳುಮೆಯು ಚೆಲ್ಲಿ ಎಂಬ ಕಳೆಗಿಡಗಳನ್ನು ಕಿತ್ತೆಸೆಯಲು ಸಹಾಯ ಮಾಡುತ್ತದೆ. ಉಳುಮೆಯಿಂದ ಸಡಿಲವಾದ ಚೆಲ್ಲಿಯನ್ನು ಹೆಂಗಸರು ನೀರಿಗಿಳಿದು ಹುಡುಕಾಡಿ, ತಡಕಾಡಿ ಬಾಚಿ ತೆಗೆಯುತ್ತಾರೆ. ಆ ಕಾಲದಲ್ಲಿ ಉಳುವಾತನ ಸೊಂಟದವರೆಗೆ ನೀರು ಇರುತ್ತದೆ. ಎತ್ತುಗಳ/ಕೋಣಗಳ ಮುಸುಡು ಮತ್ತು ಹೆಗಲಷ್ಟೇ ನೀರಿನ ಮೇಲೆ ಇರುತ್ತದೆ. ದಟ್ಟವಾದ ಕೆಸರು ಇರುವುದರಿಂದ ಕೋಣಗಳಿಗೆ ಶ್ರಮ ಕಡಿಮೆಯಾಗಲು ಈ ನೀರು ಸಹಾಯಕವಾಗಿ ನೀರಿನ ಉಳುಮೆಯು ಅವಕ್ಕೂ ಇಷ್ಟವಾಗುತ್ತದೆ. ಇಷ್ಟು ನೀರು ಇಲ್ಲದಿದ್ದರೆ ಕೋಣಗಳ ಕಾಲುಗಳು ನೆಲದಲ್ಲಿ ಕುಸಿದು ನೇಗಿಲು ಎಳೆಯಲು ಸಾಧ್ಯವಿಲ್ಲದಂತಾಗುತ್ತದೆ. ನೀರಲ್ಲಿ ಕೋಣಗಳು ಅರ್ಧ ಈಜುತ್ತ ಅರ್ಧ ನಡೆಯುತ್ತ ನೇಗಿಲನ್ನು ಎಳೆಯುತ್ತವೆ.

ಮುಂದಿನದು ಮಡನಿರ್ಮಾಣದ ಕೆಲಸ. ಸಿಂಹ, ಕನ್ಯಾ, ತುಲಾ ತಿಂಗಳುಗಳಲ್ಲಿ ಮಡನಿರ್ಮಾಣದ ಕೆಲಸ ಮುಗಿದಿರುತ್ತದೆ. ಒಡೆದು ಹೋಗಿದ್ದ ಭಾಗಗಳನ್ನು ಆಗ ಸರಿಪಡಿಸಬೇಕು. ಇತರ ಸಣ್ಣ ಪುಟ್ಟ ದುರಸ್ತಿಗಳನ್ನು ಮಾಡಬೇಕು. ಹೊಸ ಮಡಗಳು ಅಗತ್ಯವಾಗಿದ್ದರೆ ಅವನ್ನೂ ಮಾಡಬೇಕು. ಉಪ್ಪುನೀರು ಒಳಹೋಗದಂತೆ ಮಡನಿರ್ಮಾಣದ ಕೆಲಸ ಬಲು ಎಚ್ಚರದಿಂದ ನಡೆಯುತ್ತದೆ. ಹಿಂದಿನ ಕಾಲದಲ್ಲಿ ಸ್ಥಿರಕಟ್ಟಗಳನ್ನು ಕಟ್ಟುವ ಪದ್ಧತಿ ಇರಲಿಲ್ಲ. ಪ್ರಸಿದ್ಧವಾಗಿರುವ ತಣ್ಣೀರ್ ಮುಕ್ಕಂ ಕಟ್ಟಕೂಡ ಆ ಕಾಲದಲ್ಲಿ ನಿರ್ಮಾಣವಾಗಲಿಲ್ಲ. ಕಟ್ಟಗಳು ತಾತ್ಕಾಲಿಕ ನೆಲೆಯಲ್ಲಿ ನಿರ್ಮಾಣವಾಗುತ್ತಿದ್ದುವು. ಮಣ್ಣನ್ನು ಪ್ರತಿವರ್ಷವೂ ಹದಬರಿಸಿ ಕಟ್ಟಗಳನ್ನು ನಿರ್ಮಿಸುತ್ತಿದ್ದರು. ಸಮುದ್ರದ ಭರತಕ್ಕೆ ನೀರು ಒಳಹೋಗದಂತೆ ತಡೆಯಲು ಅಗತ್ಯವಿದ್ದಷ್ಟು ಎತ್ತರಕ್ಕೆ ಕಟ್ಟೆ ಕಟ್ಟಲಾಗುತ್ತಿತ್ತು. ಮಡನಿರ್ಮಾಣ ಆರಂಭಗೊಂಡರೆ ಒಂದಷ್ಟು ಜನ ತೋಟಪ್ಪಿಳ್ಳಿ ಎಂಬ ಪ್ರದೇಶಕ್ಕೆ ಕಾಡು ಕಡಿದು ತರುವುದಕ್ಕಾಗಿ ತೆರಳುತ್ತಾರೆ. ದೋಣಿಗಳಲ್ಲಿ ಅಲ್ಲಿಗೆ ಸಾಗಿ ಅಲ್ಲಿಂದ ಮರದ ರೆಂಬೆಕೊಂಬೆ ಸೊಪ್ಪು ಸೆದೆಗಳನ್ನು ಕಡಿದು ದೋಣಿಯಲ್ಲೇ ಹಾಕಿ ಅವನ್ನು ತರುತ್ತಾರೆ. ಇದೇ ಹೊತ್ತಿಗೆ ಇನ್ನೊಂದಷ್ಟು ಜನ ಮಣ್ಣು ಹದಮಾಡುವ ಕೆಲಸದಲ್ಲಿ ನಿರತರಾಗುತ್ತಾರೆ.

ಮಡವನ್ನು ಮೊದಲು ಬಾರಿ ಕಟ್ಟುವುದು ತುಂಬ ಶ್ರಮದ ಕೆಲಸ. ಸು. ಇಪ್ಪತ್ತು ಅಡಿ ಉದ್ದದ ಮರದ ದಿಂಡುಗಳನ್ನು ಎರಡು ಸಾಲುಗಳಲ್ಲಿ ಕೆಸರಲ್ಲಿ ಹುಗಿಯಲಾಗುತ್ತದೆ. ಅವುಗಳ ತುದಿಗಳು ಒಳಕ್ಕೆ ಬಾಗಿರುವಂತೆ ಸ್ವಲ್ಪ ಓರೆಯಾಗಿ ನಾಟಲಾಗುತ್ತದೆ. ಇವುಗಳ ನಡುವೆ ಕಾಡಿನಿಂದ ಕಡಿದು ತಂದ ರೆಂಬೆ ಕೊಂಬೆ ಸೊಪ್ಪು ಸೆದೆಗಳನ್ನು ಮಣ್ಣಿನೊಂದಿಗೆ ಮಿಶ್ರಮಾಡಿ ಗರಿಕೆ ಹುಲ್ಲಿನಿಂದ ಮೇಲ್ಪದರವನ್ನು ಬಲಪಡಿಸಿ (ಇದು ತೆರೆಗಳ ಹೊಡೆತವನ್ನು ತಡೆದು ಮಣ್ಣನ್ನು ಕಚ್ಚಿಹಿಡಿಯುತ್ತದೆ) ಮಡನಿರ್ಮಾಣ ನಡೆಯುತ್ತದೆ. ಕುಟ್ಟನಾಡಿನ ಕೆಸರು ಮಣ್ಣು ಕೂಡ ವಿಶಿಷ್ಟವಾದುದು. ಇದು ಸುಲಭವಾಗಿ ಕರಗಿ ಹರಡಿಬಿಡುವುದಿಲ್ಲ. ಜೇಡಿಮಿಶ್ರಿತವಾದ ಈ ಮಣ್ಣಲ್ಲಿ ಮರಳಿನ ಕಣಗಳು ಇಲ್ಲದುದರಿಂದ ಅದು ತುಂಬ ಗಟ್ಟಿಯಾಗಿ ನಿಲ್ಲುತ್ತದೆ. (ಸುಟ್ಟ ಈ ಮಣ್ಣಿಗೆ ಔಷಧೀಯ ಗುಣಗಳೂ ಇವೆಯೆನ್ನಲಾಗಿದೆ. ಈ ಮಣ್ಣಿನಲ್ಲಿ ಎಗ್ಗಿಲ್ಲದೆ ಬೆರೆತು ಕೆಲಸಮಾಡುವ ಜನರಿಗೆ ಚರ್ಮವ್ಯಾಧಿ ಕೂಡ ಬಾಧಿಸುವುದಿಲ್ಲವಂತೆ. ಕೆಲಸದ ವೇಳೆ ಏನಾದರೂ ಸಣ್ಣಪುಟ್ಟ ಗಾಯಗಳಾದರೂ ಇದು ಅದಕ್ಕೆ ಔಷಧದ ಪರಿಣಾಮವನ್ನು ನೀಡಬಲ್ಲ ಸತ್ತ್ವವುಳ್ಳದ್ದು).

ಇನ್ನಷ್ಟು ತಗ್ಗಿನ ಜಾಗದಲ್ಲಿ ಮಡನಿರ್ಮಿಸಬೇಕಾದರೆ ಕೆಲಸವು ಮತ್ತೂ ಶ್ರಮದಾಯಕ. ಇಂಥ ಜಾಗಗಳಲ್ಲಿ ಹಾರೆಯಿಂದ ಕೆಸರನ್ನು ಕಡಿದು ತೆಗೆಯುವುದು ಸುಲಭದ ಕೆಲಸವಲ್ಲ. ಆದುದರಿಂದ ತಳದಿಂದ ಕೆಸರನ್ನು ಕೈಗಳಲ್ಲೇ ಬಾಚಿ ತರಬೇಕು. ಕೆಲಸದ ಆಳುಗಳು ನೀರಲ್ಲಿ ಮುಳುಗಿ ಎರಡು ಕೈಗಳಿಂದಲೂ ಗದ್ದೆಗಳ ಕೆಸರನ್ನು ಎತ್ತಿಕೊಂಡು ಮೇಲೆ ತರಬೇಕಾಗುತ್ತದೆ. ಮಡನಿರ್ಮಾಣದ ಕೆಲಸ ಮುಗಿದರೆ ವೃಶ್ಚಿಕ ಮಾಸದಲ್ಲಿ ಗದ್ದೆಗಳ ನೀರನ್ನು ಬತ್ತಿಸಲು ದೊಡ್ಡ ಜಲಚಕ್ರಗಳನ್ನು ಬಳಸುತ್ತಾರೆ. ನೀರಿನ ಆಳಕ್ಕೆ ಅನುಗುಣವಾಗಿ ಹದಿನಾರು, ಇಪ್ಪತ್ತನಾಲ್ಕು, ಮೂವತ್ತೆರಡು 'ಎಲೆ'ಗಳುಳ್ಳ ಮತ್ತು ವಿಭಿನ್ನ ಗಾತ್ರದ ಜಲಚಕ್ರಗಳು ಬಳಕೆಯಾಗುತ್ತವೆ. ತುಂಬ ಆಳ ನೀರಿರುವ ಗದ್ದೆಗಳಲ್ಲಿ ಮೂವತ್ತೆರಡು ಎಲೆಗಳ ಚಕ್ರಗಳನ್ನು ಸ್ಥಾಪಿಸುತ್ತಾರೆ. ಚಕ್ರಗಳನ್ನು ಗದ್ದೆಯ ಅತ್ಯಂತ ತಗ್ಗಿನ ಜಾಗದಲ್ಲಿ ಸ್ಥಾಪಿಸಲಾಗುತ್ತದೆ. ಈ ಚಕ್ರಗಳನ್ನು ಕಾಲಿನಿಂದ ತುಳಿದು ಗದ್ದೆಗಳಲ್ಲಿನ ನೀರನ್ನು ತೋಡಿಗೋ ಹೊಳೆಗೋ ಹರಿಸುತ್ತಾರೆ.

ನೆಲದಿಂದ ನೀರನ್ನು ಹೀಗೆ ಬತ್ತಿಸುವಾಗ ಸಮುದ್ರದ ಭರತ, ಹವಾಗುಣ, ಬಯಲುಗಳಲ್ಲಿನ ನೀರಿನ ಮಟ್ಟ, ಬಿಸಿಲಿನ ಪ್ರಮಾಣ-ಮುಂತಾದ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಇಳಿತದ ಸಮಯ ನೋಡಿಕೊಂಡು ನೀರನ್ನು ಬತ್ತಿಸಲು ಆರಂಭಿಸಬೇಕು. ಆಗ ಗದ್ದೆಗಳಲ್ಲೂ ನೀರು ತುಂಬ ಕಡಿಮೆಯಿರುತ್ತದೆ.

ಮೂಡಣಗಾಳಿ (ಇದು ನಿಜವಾಗಿ ಪಡುವಣ ಗಾಳಿ ಕೂಡ) ಬೀಸುವ ಹೊತ್ತಿಗೆ ಬಿತ್ತನೆ ಪ್ರಾರಂಭ. ಅದಕ್ಕನುಸಾರವಾಗಿ ಬೀಜ ನೆನೆಹಾಕಿ, ಕಟ್ಟಿ, ಮೊಳಕೆ ಬರಲು ಬಿಡಲಾಗುತ್ತದೆ. ಮೂಡಣಗಾಳಿ ನಾಲ್ಕೈದು ದಿವಸಗಳ ಕಾಲ ಇರುತ್ತದೆ. ಗದ್ದೆಗಳ ನೀರು ಬತ್ತಿದ ಕೂಡಲೇ ಕೆಲಸಗಳಿಗೆ ಚುರುಕು ತಟ್ಟುತ್ತದೆ. ಹಾವಸೆ ಬಾಚುವುದು, ಸಣ್ಣ ಏರಿಗಳನ್ನು ನಿರ್ಮಿಸುವುದು ಕ್ಷಿಪ್ರವಾಗಿ ನಡೆಯಬೇಕು. ಮಣ್ಣಿನ ಆಮ್ಲಗುಣವನ್ನು ಕಡಿಮೆಗೊಳಿಸಲು ಸುಣ್ಣದ ಕಲ್ಲುಗಳನ್ನು ಹಾಕಲಾಗುತ್ತದೆ. ಆಗ ಹೆಚ್ಚು ಉಳುಮೆ ಮಾಡುವ ಅಗತ್ಯವಿಲ್ಲ ನೆಲವನ್ನು ಅಗೆಯಲು 'ಪಲ್ಲಿ'ಯನ್ನು ಕೆಲವೊಮ್ಮೆ ಬಳಸಲಾಗುತ್ತದೆ. ನೆಲ ಸಮತಟ್ಟಾಗಿಲ್ಲದಿದ್ದರೆ ಹಲಗೆ ಕಟ್ಟಿ ಎಳೆಯುತ್ತಾರೆ. ಹುಳಿರಸದ ಮಣ್ಣು ಬಿರುಕು ಬಿಡುವುದಕ್ಕೂ ಇದು ಸಹಕಾರಿ. ನೇಗಿಲು ಬಳಸಿ ಉಳಲು ಸಾಧ್ಯವಿಲ್ಲದ ಆಳವಾದ ಜಾಗಗಳಲ್ಲಿ ಪಲ್ಲಿಗಳ ಬಳಕೆ. ಸಾಮಾನ್ಯವಾಗಿ ಎತ್ತುಗಳನ್ನು ಇಳಿಸಲು ಸಾಧ್ಯವಾಗದ ಗದ್ದೆಗಳೇ ಇದ್ದರೆ ಪಲ್ಲಿಯನ್ನು ಹಲಗೆಯನ್ನೂ ಮನುಷ್ಯರೇ ಎಳೆಯಬೇಕಾಗುತ್ತದೆ. ಕೆಲವೊಮ್ಮೆ ಪುಟ್ಟದೋಣಿಗಳಿಗೆ ಇವನ್ನು ಕಟ್ಟಿ ಹುಟ್ಟುಹಾಕುತ್ತಾ ಈ

ಕೆಲಸಗಳನ್ನು ನಡೆಸುವುದೂ ಇದೆ. ಆಮ್ಲಗುಣವುಳ್ಳ ಮಣ್ಣಲ್ಲಿ ಕಬ್ಬಿಣವು ರಾಸಾಯನಿಕ ಪ್ರಕ್ರಿಯೆಗಳಿಗೊಳಗಾಗಿ ತುಕ್ಕುಹಿಡಿದು ಬೇಗನೆ ನಾಶವಾಗುತ್ತದೆ ಎಂಬ ಕಾರಣಕ್ಕೆ ಕುಟ್ಟನಾಡಲ್ಲಿ ಹಿಂದಿನ ಕಾಲದಲ್ಲಿ ನೇಗಿಲಿನ ಗುಳವನ್ನು ಕಬ್ಬಿಣದಿಂದ ತಯಾರಿಸದೆ ಪನೆಮರ (ಈಚಲು)ವನ್ನು ಕೆತ್ತಿ ಈ ಗುಳವನ್ನು ಜೋಡಿಸುತ್ತಿದ್ದರು. ಪಳ್ಳತ್ತಿ ಎಂಬ ಹೆಸರಿನ ಮೀನುಗಳೂ ಹಿಂದಿನ ಕಾಲದಲ್ಲಿ ಇಲ್ಲಿಯ ಗದ್ದೆಗಳಲ್ಲಿ ಧಾರಾಳವಾಗಿದ್ದು ನೆಲವನ್ನು ಅಗೆಯಲು ನೆರವಾಗುತ್ತಿದ್ದುವು. ಏರಿ ಹಾಕಿದ ಗದ್ದೆಗಳಲ್ಲಿ ಎಷ್ಟು ದೊಡ್ಡ ಹೆಂಟೆಗಳಿದ್ದರೂ ಈ ಮೀನುಗಳು ಅವನ್ನು ಒಡೆದು ಬಿಡುತ್ತಿದ್ದುವು.

ಇಷ್ಟು ಪೂರ್ವ ಸಿದ್ಧತೆಗಳ ಬಳಿಕ ಮೊಳಕೆ ಬರಿಸಿದ ಬೀಜವನ್ನು ಮೊಣಕಾಲು ನೀರಲ್ಲಿ ಬಿತ್ತನೆ ಮಾಡಲಾಗುತ್ತದೆ. ನೀರು ತುಂಬಿಸಿ ಬಿತ್ತನೆ ಮಾಡುವುದರಿಂದ ಬೀಜವು ಕೆಸರಲ್ಲಿ ಹೂತುಹೋಗುವುದಿಲ್ಲ. ಬೀಜವು ಮೂರು ದಿವಸ ನೀರಲ್ಲಿ ಇದ್ದ ಬಳಿಕ ಗದ್ದೆಯ ನೀರನ್ನು ಬತ್ತಿಸಲಾಗುತ್ತದೆ. ಐದಾರು ದಿನಗಳು ಕಳೆದಾಗ ಗದ್ದೆಯಲ್ಲಿ ಬತ್ತದ ಬೀಜಗಳ ಜತೆ ಇನ್ನೂ ಕೆಲವು ಮೊಳಕೆಗಳು ಕಾಣಿಸುತ್ತವೆ. ಇವು ಕೋರ, ಕವಡ ಮುಂತಾದ ಕಳೆಗಿಡಗಳು. ಈ ಕಳೆಗಳನ್ನು ನಾಶಮಾಡುವುದಕ್ಕಾಗಿ ಬತ್ತದ ಬೀಜವು ನೆಲಕ್ಕೆ ಬೇರು ಕೊಟ್ಟಿದೆಯೆಂದು ಖಾತ್ರಿಯಾದ ಕೂಡಲೇ ನೀರು ಕಟ್ಟಿ ನಿಲ್ಲಿಸುತ್ತಾರೆ. ಕಳೆಗಿಡಗಳ ಜತೆ ಬತ್ತದ ಗಿಡಗಳೂ ಮುಳುಗುತ್ತವೆ. ಎರಡು ಮೂರು ದಿನ ಹೀಗೆಯೇ ಇದ್ದ ಬಳಿಕ ನೀರನ್ನು ಹೊರಹರಿಸಲಾಗುತ್ತದೆ. ಕಳೆಗಳೆಲ್ಲ ಈ ವೇಳೆಗೆ ಕೊಳೆತು ಸತ್ತು ಹೋಗುತ್ತವೆ. (ತುಂಬ ತಗ್ಗಿನ ಜಾಗದಲ್ಲಿ ಕಳೆಗಿಡಗಳ ಜತೆ ಕೆಲವು ಬತ್ತದ ಗಿಡಗಳೂ ಸಾಯುತ್ತವೆ.) ಬಳಿಕ ಬತ್ತದ ಗಿಡಗಳು ಬಳಲಿಕೆ ನೀಗಿಕೊಂಡು ಬೆಳೆಯಲಾರಂಭಿಸುತ್ತದೆ. ಒಂದು ತಿಂಗಳು ಕಳೆದಾಗ ಉಳಿದ ಕಳೆಗಳನ್ನು ಕೀಳುತ್ತಾರೆ. ಬತ್ತದ ಸಸಿಗಳು ತೆಳ್ಳಗಾದಲ್ಲಿಗೆ ಎಡೆ ನಾಟಿ ಕೆಲಸವೂ ನಡೆಯುತ್ತದೆ. ಮಕರ ಮಾಸದಲ್ಲಿ ಬಿತ್ತನೆಯ ಕೆಲಸ ಮುಗಿಯುತ್ತದೆ.

ಮೇಷ ಮಾಸದಲ್ಲಿ ಹೊಳೆಗಳ ನೀರ ಹರಿವು ಬಲಗೊಳ್ಳುವ ಮುನ್ನ ಕೊಯ್ಲು ನಡೆಯುತ್ತದೆ. ಕೊಯ್ಲಿನ ಕೆಲಸಗಳಿಗೆ ನೆರೆಯ ಊರುಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸೆ ಬರುವ ಜನರನ್ನು ನೇಮಿಸಿಕೊಳ್ಳುತ್ತಾರೆ. ಗುಂಪು ಗುಂಪುಗಳಾಗಿ ವಲಸೆ ಬರುವ ಈ ಜನ ತಾತ್ಕಾಲಿಕ ಬಿಡದಿಗಳನ್ನು ಕಟ್ಟಿಕೊಂಡು ಕೊಯ್ಲು ಕೆಲಸ ಮಾಡುತ್ತಾರೆ.

ಕುಟ್ಟನಾಡಲ್ಲಿ ಬೆಳೆಸುವ (ವಿರಳವಾಗಿ) ಎರಡನೆಯ ಬೆಳೆಗೆ ಕನ್ನಿಕುಳಪ್ಪಾಲ, ಚೆನ್ನೆಲ್ಲ್ ಮುಂತಾದ ತಳಿಗಳನ್ನು ಉಪಯೋಗಿಸುತ್ತಾರೆ. ನೀರು ಅಧಿಕವಾದಾಗಲೂ ಆ ತೊಂದರೆಯನ್ನು ಮೀರಿ ಕನ್ನಿಕುಳಪ್ಪಾಲವು ಬೆಳೆಯುತ್ತದೆ. ಆದುದರಿಂದ ಸುಗ್ಗಿ ಬೆಳೆಯ ಕಟಾವು ಆದ ಕೂಡಲೇ (ಮೇಷ ಮಾಸ) ಗದ್ದೆಗಳನ್ನು ಉತ್ತು ಬಿತ್ತನೆ ಮಾಡುತ್ತಾರೆ. ಕನ್ನಿಮಾಸದಲ್ಲಿ ಕಟಾವು. ಅಷ್ಟರ ತನಕವೂ ಇದು ನೀರಲ್ಲೇ ಬೆಳೆಯುತ್ತದೆ. ನೀರಲ್ಲೆ ತುಂಬ ಎತ್ತರಕ್ಕೆ ಬೆಳೆಯುವ ಇದನ್ನು ದೊಡ್ಡ ದೋಣಿಗಳಲ್ಲಿ ಹೋಗಿ ತೆನೆಗಳನ್ನಷ್ಟೆ ಕೊಯ್ದು ತರುತ್ತಾರೆ. ಕಟಾವು ಮುಗಿದ ಬಳಿಕ, ನೆರೆ ಬರುವ ಕಾಲಕ್ಕೆ ನದಿಯಲ್ಲಿ ಹರಿದು ಬಂದಿದ್ದ ಮೆಕ್ಕಲು ಮಣ್ಣನ್ನು ತಡೆದು ಹಿಡಿದಿದ್ದ ಇದರ ಬುಡವನ್ನು ಕತ್ತರಿಸಿ ದೊಡ್ಡ ದೊಡ್ಡ ಬಣವೆಗಳನ್ನು ಮಾಡಿ, ಕಟ್ಟಿ ನೀರಲ್ಲಿ ತೇಲಿಬಿಡುತ್ತಾರೆ. ನದಿಯ ಕೆಳಭಾಗದ ಜನ ಈ ಬಣವೆ ರಾಶಿಗಳ ಬಳಿ ಈಜುತ್ತ ಸಾಗಿ ಅವುಗಳ ಮೇಲೆ ಏರಿ ಬಿದಿರ ದೊಡ್ಡ ಗಳುಗಳ ಸಹಾಯದಿಂದ ಹುಟ್ಟು ಹಾಕುತ್ತ ದಡಕ್ಕೆ ಒಯ್ಯುತ್ತಾರೆ. ಮೆಕ್ಕಲು ಮಣ್ಣು ಮೆತ್ತಿಕೊಂಡಿರುವ ವೆನ್ನಿಕುಳಪ್ಪಾಲದ/ ಕುನ್ನಿಕುಳಪ್ಪಾಲದ ಉದ್ದನೆಯ ಹುಲ್ಲು ತೆಂಗಿನ ಗಿಡಗಳಿಗೆ ಒಳ್ಳೆಯ ಗೊಬ್ಬರ. ತೆಂಗಿನ ಬುಡಗಳಿಗೆ ಹಾಕಿರುವ ಇವು ಮಳೆ ಪ್ರಾರಂಭವಾದಾಗ ಪುಡಿಪುಡಿಯಾಗಿ ಗೊಬ್ಬರವಾಗಿ ಒಳ್ಳೆಯ ಫಸಲಿಗೆ ಕಾರಣವಾಗುತ್ತವೆ. ಕುಟ್ಟನಾಡಿನ ತೆಂಗುಬೆಳೆಯು ಹಿಂದೆ ಕನ್ನಿಕುಳಪ್ಪಾಲದ ಕೃಷಿಯನ್ನು ಅವಲಂಬಿಸಿ ದುದಾಗಿತ್ತು. ತೆಂಗುಕೃಷಿಕನಿಗೆ ಹೆಚ್ಚಿನ ವೆಚ್ಚವಿಲ್ಲದೆ ಒಳ್ಳೆಯ ಗೊಬ್ಬರ ಸಿಗುತ್ತಿತ್ತು. ಮೆಕ್ಕಲು ಮಣ್ಣು ಮೆತ್ತಿಕೊಂಡಿದ್ದ ಕನ್ನಿಕುಳಪ್ಪಾಲದ ಉದ್ದನೆಯ ಹುಲ್ಲು ಒಳ್ಳೆಯ ಗೊಬ್ಬರವಾಗಿ ಮಾರ್ಪಡುತ್ತದೆಂಬುದನ್ನು ಈಗಾಗಲೇ ಸೂಚಿಸಿದೆ. ಆದರೆ ಈಚಿನ ವರ್ಷಗಳಲ್ಲಿ ವೆನ್ನಿಕುಳಪ್ಪಾಲ ಬೆಳೆಯುವುದನ್ನು ಕೃಷಿಕರು ಕೈಬಿಟ್ಟಿರುವುದರಿಂದ ಅದನ್ನು ನೆಚ್ಚಿದ್ದ ತೆಂಗಿನ ತೋಪುಗಳೂ ಬಡಕಲಾಗಿವೆ. ಅದರ ಬೆಳೆ ಮಾಡಲು ಮತ್ತು ಕೊಯ್ಲು ಹಾಗೂ ಆ ಬಳಿಕಿನ ಹುಲ್ಲು ಕತ್ತರಿಸಿ ಬಿಡಲು ತಗಲುವ ವೆಚ್ಚವು ರೈತರನ್ನು ಆ ಸಾಹಸಕ್ಕೆ ಕೈಹಾಕದಂತೆ ತಡೆದಿದೆ.

ತನ್ನದೇ ಪಾರಂಪರಿಕ ಅರಿವಿನಿಂದ ಪ್ರಕೃತಿ-ಪರಿಸರಗಳೊಂದಿಗೆ ಎರಕವಿದ್ದ ಕುಟ್ಟನಾಡಿನ ಬತ್ತ ಬೇಸಾಯವು ನೆನಪು ಮಾತ್ರವಾಗಿ ಉಳಿಯುವ ದಿನಗಳು ದೂರವಿಲ್ಲ.

ಕೆ.ಕೆ.

ಕುರಿ ಮಾಂಸಹಾರಕ್ಕಾಗಿಯೇ ಹೆಚ್ಚಾಗಿ ಸಾಕುವ ಪ್ರಾಣಿ. ಕರ್ನಾಟಕದ ಎಲ್ಲ ಪ್ರದೇಶಗಳಲ್ಲೂ ಇದನ್ನು ಸಾಕುತ್ತಾರೆ. ಭೌಗೋಳಿಕ ಸನ್ನಿವೇಶಕ್ಕೆ ಅನುಗುಣವಾಗಿ ಕುರಿಯ ತಳಿಗಳಲ್ಲಿ ವಿಭಿನ್ನತೆ ಇರುತ್ತದೆ. ಬೆಳೆವಣಿಗೆ, ಆಕಾರ, ಬಣ್ಣಗಳಲ್ಲೂ ವ್ಯತ್ಯಾಸವನ್ನು ಕಾಣಬಹುದು.

ತಳಿಗಳು : ಡೆಕ್ಕನ್ ತಳಿ ಅಥವಾ ಕುದುರೆ ಕುರಿ, ಕರಿ ಕುರಿ, ಕರೇಕೆಂಚಗ್, ಬನ್ನೂರು ಕುರಿ, ನೆರೆಮಸ್ಕಕುರಿ, ಹೆಳಗಿನ ಮರಿ, ಬಂಡೂರು ಕುರಿ ಮುಂತಾದವು.

ಕುದುರೆ ಕುರಿ : ಬೆಳಗಾವಿ, ಬಿಜಾಪುರ, ಬೀದರ್ ಗುಲ್ಬರ್ಗಾ ಕಡೆಗಳಲ್ಲಿ ಕಾಣಬಹುದು. ಇವು ಗಿಡ್ಡದಾಗಿ, ದಪ್ಪನಾಗಿರುತ್ತವೆ. ಇವುಗಳ ಕಿವಿ ದೊಡ್ಡದಾಗಿರುವುದಿಲ್ಲ.

ಕರಿ ಕುರಿ : ಬಳ್ಳಾರಿ, ಚಿತ್ರದುರ್ಗದ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ಇದರ ತೂಕ ಹೆಚ್ಚು, ತುಪ್ಪಟ ಒರಟು.

ಕರೇಕೆಂಚಗ್ : ಚಳ್ಳಕೆರೆ, ಶಿರಾಣ್ ಕಡೆ ಕಂಡುಬರುತ್ತವೆ. ಇವುಗಳಲ್ಲಿ ತುಪ್ಪಟ ಹೆಚ್ಚಾಗಿರುವುದಿಲ್ಲ.

ನೆರೆ ಮಸ್ಕ ಕುರಿ : ಚಳ್ಳಕೆರೆ ಸುತ್ತಮುತ್ತ ಕಂಡುಬರುತ್ತದೆ. ಹೆಚ್ಚು ತುಪ್ಪಟ ಲಭಿಸುತ್ತದೆ.

ಹೆಳಗಿನ ಮರಿ : ಹಾಸನ ಜಿಲ್ಲೆಯ ಸುತ್ತಮುತ್ತ ಕಾಣಬರುವ ಈ ಕುರಿಯನ್ನು ರಾಯಚೂರಿನಿಂದ ತಂದು ಸಾಕುತ್ತಾರೆ.

ಬಂಡೂರುಕುರಿ : ಮಳವಳ್ಳಿ ತಾಲೂಕಿನ ಬಂಡೂರಿನ ಕುರಿ ಮಾಂಸಕ್ಕೆ ಬಹುಪ್ರಸಿದ್ಧ. ಪ್ರಾಯಶಃ ಇದನ್ನು ತಪ್ಪಾಗಿ ಬನ್ನೂರು ಕುರಿ ಎನ್ನುತ್ತಾರೆ. ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಕಂಡುಬರುತ್ತವೆ.



ಮೇವು : ಕುರಿಗಳನ್ನು ಹೊರಗೆ ಅಟ್ಟಿಕೊಂಡು ಹೋಗಿ ಹೊಲಗಳಲ್ಲಿ ಅಥವಾ ಕಾಡು - ಮೇಡುಗಳಲ್ಲಿ, ಮೇಯಿಸಿಕೊಂಡು ಬರುತ್ತಾರೆ. ಅವು ಹೆಚ್ಚಾಗಿ ಸೊಪ್ಪು, ಹುಲ್ಲನ್ನು ತಿನ್ನುತ್ತವೆ. ಇತ್ತೀಚೆಗೆ ಅವುಗಳಿಗೂ ಹಿಂಡಿ, ತರಕಾರಿ ಸಿಪ್ಪೆ ಇವುಗಳನ್ನು ನೀಡುತ್ತಾರೆ. ಕೊಟ್ಟಿಗೆಯಲ್ಲಿ ಕಟ್ಟಿದಾಗ ಕಡಿದು ತಂದ ಮರದ ಎಲೆಗಳನ್ನು, ಚಿಕ್ಕ ಗಿಡಗಳನ್ನು ನೇತುಹಾಕಿ, ಹರಡಿ ಮೇಯಲು ಬಿಡುತ್ತಾರೆ. ದೀಪಾವಳಿ ಕಾಲದಲ್ಲಿ ಅವರೆ, ತಡಗುಣಿ ಸೊಪ್ಪು, ರಾಗಿ ತೆನೆ, ಹುಚ್ಚೆಳ್ಳುಸೊಪ್ಪು, ಹುರುಳಿ ಇವೇ ಮುಂತಾದವನ್ನು ತಂದು ಹಾಕುತ್ತಾರೆ. ರಾಜ್ಯದಲ್ಲಿ ಕುರಿಯನ್ನು ವಲಸೆ ಪದ್ಧತಿ, ಅರೆವಲಸೆಪದ್ಧತಿ, ಸ್ಥಳೀಯವಾಗಿ ಮೇಯಿಸುವುದು ಕೊಟ್ಟಿಗೆಗಳಲ್ಲಿ ಕಟ್ಟಿ ಸಾಕಾಣಿಕೆ ಮಾಡುವುದು.

ವಲಸೆ ಪದ್ಧತಿ : ಉತ್ತರ ಭಾಗದ ಕುರಿಗಾರರು ಹೆಚ್ಚಾಗಿ ಈ ಪದ್ಧತಿಯಲ್ಲಿ ಕುರಿ, ಮೇಕೆಗಳನ್ನು ಸಾಕುತ್ತಾರೆ. ಇದು ತುಂಬಾ ಹಿಂದಿನಿಂದಲೂ ಇರುವ ಪದ್ಧತಿಯಾಗಿದ್ದು ಕುರಿಗಾರರು ಮೇವನ್ನರಸಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಾರೆ.

ಅರೆವಲಸೆ ಪದ್ಧತಿ : ಬೇಸಗೆ ಕಾಲದಲ್ಲಿ ಮಾತ್ರ ಮೇವನ್ನರಸಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಾರೆ. ಸ್ಥಳೀಯ ಪದ್ಧತಿಯಲ್ಲಿ ಜಮೀನಿನ ಬಳಿಯೇ ಮೇಯಿಸುವುದು ಇದು ಹೆಚ್ಚಾಗಿ ದಕ್ಷಿಣ ಕರ್ನಾಟಕದ ಭಾಗಗಳಲ್ಲಿದೆ. ಕೊಟ್ಟಿಗೆಯಲ್ಲಿ ಕಟ್ಟಿ ಸಾಕುವ ಪದ್ಧತಿಯಲ್ಲಿ ಟಗರುಗಳನ್ನು ಆದಷ್ಟೂ ಮನೆಯ ಬಳಿಯೇ ಸಾಕುತ್ತಾರೆ.

ನೀರು ತೋರಿಸುವುದು : ಕುರಿಯನ್ನು ಮೇಯಿಸಿಕೊಂಡು ಹೋದವರು ಬೆಳಿಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ಒಂದೂವರೆವರೆಗೆ ಮೇಯಿಸುತ್ತಾ, ಅನಂತರ ಹತ್ತಿರದಲ್ಲಿರುವ ಯಾವುದಾದರೂ ಕೆರೆ, ಹಳ್ಳ - ಕೊಳ್ಳ, ಗುಂಡಿಯ ಹತ್ತಿರ ಹೊಡೆದುಕೊಂಡು ಹೋಗಿ ನೀರು ಕುಡಿಸಿಕೊಂಡು ಬರುತ್ತಾರೆ.

ಕುರಿ ಮೈತೊಳೆಯುವುದು : ತಿಂಗಳಿಗೆ ಅಥವಾ ಎರಡು ತಿಂಗಳಿಗೊಮ್ಮೆ ಕುರಿ ಮೈಯನ್ನು ತೊಳೆದು ಸ್ವಚ್ಛಗೊಳಿಸುವರು.

ಕೊಟ್ಟಿಗೆ : ಕುರಿಗಳ ಸಂಖ್ಯೆ ಕಡಿಮೆ ಇದ್ದವರು ದನದ ಕೊಟ್ಟಿಗೆಯಲ್ಲೇ ಪಕ್ಕದಲ್ಲಿ ಕುರಿಗಳನ್ನು ಕಟ್ಟುತ್ತಾರೆ. ಹಿಂಡು - ಹಿಂಡಾಗಿ ಕುರಿಗಳಿದ್ದರೆ, ಸುತ್ತಲೂ ಕಡ್ಡಿಗಳಿಂದ, ಮುಳ್ಳುಗಿಡಗಳಿಂದ ಬೇಲಿ ಕಟ್ಟಿ, ಬಾಗಿಲು ಮಾಡಿ ಅದರೊಳಗೆ ಸುಮಾರು 20-30 ಅಡಿಯ ದೊಡ್ಡದಾದ ಜಾಗದಲ್ಲಿ ಕುರಿಯನ್ನು ಬಿಡುತ್ತಾರೆ. ಅವುಗಳನ್ನು ಕಾಯಲು ನಾಯಿಯನ್ನು ಸಾಕುತ್ತಾರೆ.

ಸಂತಾನಾಭಿವೃದ್ಧಿ : ಕುರಿಗಳು ವರ್ಷಕ್ಕೆ ಒಂದೇ ಬಾರಿ ಈಯುತ್ತವೆ. ಆದರೆ ಕರಿಕುರಿ ಮಾತ್ರ ವರ್ಷಕ್ಕೆ ಎರಡು ಬಾರಿ ಈಯುತ್ತವೆ. ಮರಿ ಹಾಕಿದ ಒಂದೆರಡು ತಿಂಗಳಿಗೆ ಬೆದೆಗೆ ಬಂದು ಟಗರನ್ನು ಸೇರಿದ ಅನಂತರ ಗರ್ಭ ಧರಿಸುತ್ತವೆ.

ಮರಿಗಳ ಆರೈಕೆ : ಮರಿಗಳು ಹಾಲು ಕುಡಿಯಲು ಹಾಲು ಹೆಚ್ಚಾಗಲೆಂಬ ಕಾರಣಕ್ಕೆ ತಾಯಿ ಕುರಿಗೆ ಮುಸುಕು ಹಾಕುತ್ತಾರೆ. ಕೊಕ್ಕರಿ ಬಳ್ಳಿ, ಮೇಟುಳ್ಳಿ, ಬಿಳಿ ಕೆಂಜೋಳ, ಕೆಂಪು ಕೆಂಜೋಳ, ಕೆಂಪು, ಬಿಳಿ ಕಣಗಿಲ, ಬೆಳ್ಳ ಉಗನೆ, ಬಿಳಿ ಗುಲಗಂಜಿ - ಸೊಪ್ಪುಗಳನ್ನೆಲ್ಲಾ ಅರೆದು ಮಳೆಗಾಲದಲ್ಲಿ ಸಜ್ಜೆ ಜೊತೆ, ಬೇಸಗೆಯಲ್ಲಿ ಕೆಂಬತ್ತಿ ಅನ್ನದೊಂದಿಗೆ ಆಕಳ ಹಾಗೂ ಮೇಕೆ ಹಾಲು ಬೆರೆಸಿ ಕುರಿಗಳ ಮೇಲೆ ಎರಚುತ್ತಾರೆ. ಅದರಿಂದ ದೇಹ ತಂಪಾಗಿ ಹಾಲು ಹೆಚ್ಚಾಗುತ್ತದೆ.

ಟಗರು : ಗಂಡು ಕುರಿಗೆ ಟಗರು ಎಂದು ಹೆಸರು. ಇವು ಕುರಿ ಹಿಂಡುಗಳಲ್ಲೇ ಇರುತ್ತವೆ. ಎತ್ತರವಾಗಿದ್ದು, ಒಳ್ಳೆ ತಲೆಯನ್ನು ಹೊಂದಿರಬೇಕು. ಟಗರು ಹಿಡಿತವಾಗಿರಬೇಕು. ನಡು ಅಗಲವಾಗಿರಬೇಕು. ಬೀಜ ಜಾಸ್ತಿ ದಪ್ಪಗಿರಬಾರದು. ಟಗರಿಗೆ ಸಿಟ್ಟು ಇರಬೇಕು. ಅಂತಹ ಟಗರಿನಿಂದಲೇ ಉತ್ತಮ ತಳಿಯಮರಿ ಹುಟ್ಟುತ್ತವೆಂದು ಕುರಿ ಕಟ್ಟುವಾಗ ಇವುಗಳನ್ನು ಜೊತೆಯಲ್ಲಿಯೇ ಇರಿಸುತ್ತಾರೆ. ಕುರಿ ತುಪ್ಪಟವನ್ನು ವರ್ಷಕ್ಕೊಂದು ಬಾರಿ ಅಥವಾ ಎರಡು ಬಾರಿ ಕತ್ತರಿಸುತ್ತಾರೆ. ಈ ತುಪ್ಪಟದಿಂದ ಕಂಬಳಿ ಮಾಡುತ್ತಾರೆ.

ಕುರಿ ಮೇಕೆಗಳಿಂದ ಮಾಂಸ, ಉಣ್ಣೆ, ಗೊಬ್ಬರ ಮತ್ತು ಚರ್ಮ ದೊರಕುತ್ತವೆ. ಮಾಂಸವು ಮಾಂಸಾಹಾರಿಗಳ ಆಹಾರದ ಪ್ರಮುಖ ಅಂಗವಾಗಿದ್ದು ದೇಶದಲ್ಲಿ ಮಾಂಸಕ್ಕಿರುವ ಬೇಡಿಕೆಯು ಉತ್ಪಾದನೆಗಿಂತ ಹೆಚ್ಚಾಗಿದೆ. ಜವಳಿ ಕ್ಷೇತ್ರದಲ್ಲಿ ಉಣ್ಣೆಯ ಬೆಚ್ಚನೆಯ ವಸ್ತುಗಳನ್ನು ತಯಾರಿಸಲು ಯೋಗ್ಯವಾಗಿದ್ದು ಚರ್ಮೋದ್ಯಮದಲ್ಲಿ ಇದರ ಚರ್ಮವನ್ನು ಉಪಯೋಗಿಸಲಾಗುತ್ತದೆ. ಗೊಬ್ಬರವು ಜಮೀನಿನ ಫಲವತ್ತತೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಕುರಿಗಳನ್ನು ನಿರ್ವಹಿಸಲು ಬೇಕಾಗುವ ಕೆಲಸಗಾರರ ಸಂಖ್ಯೆ ಕಡಿಮೆ. ಕಡಿಮೆ ಸ್ಥಳದಲ್ಲಿ ಹೆಚ್ಚು ಕುರಿಗಳನ್ನು ಸಾಕಿ ಹೆಚ್ಚಿನ ಲಾಭ ಪಡೆಯಬಹುದು.

ಕಾಯಿಲೆಗಳು : ಕುರಿಗಳಿಗೂ ಕಾಯಿಲೆ ಬರುವುದುಂಟು. ಕರುಳು ಬೇನೆ, ಜರಸಲು, ಅಮ್ಮ, ಕೆಮ್ಮು, ದಮ್ಮು, ಜಂತು ಬೀಳುವುದು ಮುಂತಾದವು.

ಪರಿಹಾರ : ಕುರಿಗಳಿಗೆ ರೋಗ ಬರದಂತೆ - ಕತ್ತಾಳೆ ಪಟ್ಟೆಯನ್ನು ಬೆಂಕಿಗೆ ಹಿಡಿದು ಹಿಂಡಿ, ಮೆಣಸು, ಬೆಳ್ಳುಳ್ಳಿ, ಏಲಕ್ಕಿ, ಲವಂಗ ಹಾಗೂ ಕಾಳು ಮೆಣಸಿನ ಸೊಪ್ಪನ್ನು ಹಾಕಿ ಕುರಿಗಳಿಗೆ ಕುಡಿಸುವರು.

ಈಟಿ ಕಾಯಿಲೆ : ಇದು ಮುಂಗಾರಿನ ಮಳೆಯಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಮರದ ಎಲೆ ತಿನ್ನಿಸುತ್ತಾರೆ.

ಜರಸಲು : (ಕಾಲು ಬಾಯಿ ಜ್ವರ), ಇದು ಬಂದಾಗ ಕುರಿ ಹಟ್ಟಿಯ ನೆಲಕ್ಕೆ ಕಳ್ಳಿ ಸೊಪ್ಪು ಹಾಕುತ್ತಾರೆ. ಅದನ್ನು ತುಳಿದುಕೊಂಡು ಓಡಾಡುವುದು, ಮರಳಿನ ಮೇಲೆ ನಿಲ್ಲಿಸುವುದು, ಬಿಸಿ ನೀರಿನಿಂದ ಕಾಲನ್ನು ತೊಳೆಯುವುದು ಹಾಗೂ ನಾಲಗೆಗೆ ರಸಬಾಳೆ, ಕರ್ಪೂರ, ಹಂದಿ ತುಪ್ಪವನ್ನು ಕಲೆಸಿ ತಿನ್ನಿಸುವುದೂ ಉಂಟು.

ಅಮ್ಮನನ್ನು ಕಳಿಸಿಬರುವುದು : ಸಿಡುಬು (ಅಮ್ಮ) ಬಂದಾಗ, ಕುರಿಗೆ ಬೇವಿನ ಸೊಪ್ಪು ಕಟ್ಟಿಸಿಕೊಂಡು, ಕುಡಿಕೆ ಬೆಲ್ಲ, ಮೂರು ತರದ ಧಾನ್ಯ ತೆಗೆದುಕೊಂಡು ಹೋಗಿ, ಕುರಿಯನ್ನು ಮೂರು ಬಾರಿ ಅಮ್ಮನ ಗುಡಿಗೆ ಸುತ್ತಿಸಿ ಬರುತ್ತಾರೆ.

ಕೆಮ್ಮು - ದಮ್ಮು ಬಂದಾಗ ಮಂಗರಬಳ್ಳಿ ಮತ್ತು ಎರಡು ಮೆಣಸು ಅರೆದು ಹುಯ್ಯುತ್ತಾರೆ. ದಮ್ಮಿದ್ದರೆ ಜಂಬುನೇರಳೆಚಕ್ಕೆ, ಬಾರೆ ಚಕ್ಕೆ, ಮರ ಮೇಡಿ ಚಕ್ಕೆ, ನೆಲ ತಂಟೆಗೆ, ಮೂರು ಕಾಯಿ ಕೆಂಪು ಬೂತಾಳೆ, ಎದುರು ಮುಳ್ಳು, ಬೆಟ್ಟದ ನಿಂಬೆ, ದೊಡ್ಡೆಕಾಯಿ ಎಲ್ಲವನ್ನು ತುಪ್ಪದಲ್ಲಿ ನೆನೆಹಾಕಿ, ತಂಗಡಿ ಕಟ್ಟಿಗೆಯ ಹೊಗೆ ಹಾಕಿದರೆ ದಮ್ಮು ಕಡಿಮೆಯಾಗುತ್ತದೆ.

ಜಂತು ಬೀಳುವುದಕ್ಕೆ : ಮರಳೆ ಚಕ್ಕೆ, ಎರಡುತೊಡೆಚಕ್ಕೆ, ಬೇವಿನ ಚಕ್ಕೆ, ಹುಣಿಸೆ ಚಕ್ಕೆ, ಹೊಂಗೆ ಚಕ್ಕೆ, ಬ್ಯಾಲ (ಜಾಲಿ)ದ ಚಕ್ಕೆ ಇವುಗಳನ್ನು ಕುಟ್ಟಿ ತೊಗರಿಕಾಳು ಬೇಯಿಸಿತೆಗೆದು ಸಾಂಬಾರ ಪದಾರ್ಥಗಳು, ಸಮುದ್ರದ ನೊರೆ ಹಾಕಿ ರಾತ್ರಿಯೆಲ್ಲ ಕುದಿಸಿ, ಒಂದು ಗ್ಲಾಸ್ ಬೆಳಗ್ಗೆ ಹಾಕಿದರೆ ಜಂತು ಬೀಳುತ್ತದೆ.

ನೆಗಡಿ : ಶೀತದಿಂದ ನೆಗಡಿಯಾದರೆ ತುಂಬೆ ಸೊಪ್ಪನ್ನು ಅರೆದು, ರಸವನ್ನು ಮೂಗಿಗೆ ಬಿಡುವುದರಿಂದ, ಕುರಿಗಳು ಸೀನಿ, ಮೂಗು ಕಟ್ಟಿರುವುದು ಬಿಡುತ್ತದೆ.

ಹೀಗೆ ಅನೇಕ ಔಷಧಿಗಳನ್ನು ಮಾಡುತ್ತಿದ್ದರು. ಈಗ ಊರಿಂದೂರಿಗೆ ಹೊಡೆದು ಕೊಂಡು ಮೇಯಿಸಲು ಹೋಗುವುದರಿಂದ ರೋಗಕ್ಕೆ ತುತ್ತಾಗದಿರಲೆಂದು, ಹುಲ್ಲಿನ ಮೇಲೆ ಉಪ್ಪು ಚಿಮುಕಿಸಿ ಮೇಯಿಸುತ್ತಾರೆ.

ಪಿ.ಸಿ.ಎಸ್.

ಕುಲುಮೆ (ಫರ್ನೇಸ್) ಕಬ್ಬಿಣದಿಂದ ವ್ಯವಸಾಯ, ಗೃಹ ನಿರ್ಮಾಣ, ಗೃಹಬಳಕೆ, ಬೇಟೆ ಮುಂತಾದ ಕಾರ್ಯನಿರ್ವಹಿಸಲು ಅಗತ್ಯವಾದ ವಸ್ತುಗಳನ್ನು ತಯಾರು ಮಾಡಿಕೊಡುವವರು ಕಮ್ಮಾರರು. ಇಂಥ ವಸ್ತುಗಳನ್ನು ತಯಾರಿಸುವ ಸ್ಥಳವನ್ನು 'ಕುಲುಮೆ, ಕುಲುಮೆ ಮನೆ' ಎಂದು ಕರೆಯುತ್ತಾರೆ.

ಹಿಂದಿನ ಕಾಲದಿಂದಲೂ ಕಮ್ಮಾರರು ಗ್ರಾಮಗಳಲ್ಲಿ ವಾಸಿಸುತ್ತಾ ತಮ್ಮ ವೃತ್ತಿ ನಿರ್ವಹಿಸುತ್ತಿದ್ದರು. ಅನಂತರ ಆರ್ಥಿಕ ತೊಂದರೆಯಿಂದಾಗಿ ಜೀವನ ನಿರ್ವಹಿಸುವುದು ಕಷ್ಟವೆನಿಸಿದಾಗ ನಗರ, ಪಟ್ಟಣಗಳತ್ತ ಮುಖ ಮಾಡಿದರೂ ಅಲ್ಲಲ್ಲಿ ಈಗಲೂ ಈ ವೃತ್ತಿಯವರು ನೆಲೆಸಿರುವುದು ಕಂಡು ಬರುತ್ತದೆ.

ಕರ್ನಾಟಕದಲ್ಲಿ ಕೃಷಿಯನ್ನೇ ನಂಬಿ ಜೀವಿಸುವಂತಹ ಜನಸಮುದಾಯಗಳು ಹೆಚ್ಚಾಗಿರುವುದರಿಂದ ಅವರಿಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ಕಮ್ಮಾರರು ಮಾಡಿಕೊಡುತ್ತಾರೆ.

ಸಾಮಾನ್ಯವಾಗಿ ಕುಲುಮೆ ಮನೆಗಳು ಗ್ರಾಮದಿಂದ ಸ್ವಲ್ಪ ದೂರದಲ್ಲಿರುತ್ತವೆ. ಅಗ್ನಿ ಆಕಸ್ಮಿಕಗಳುಂಟಾಗುವ ಸಾಧ್ಯತೆಗಳಿರುವುದರಿಂದ ಮುನ್ನೆಚ್ಚರಿಕೆ ವಹಿಸಿ ಗ್ರಾಮದಿಂದ ಹೊರಗೆ ನಿರ್ಮಿಸುತ್ತಾರೆ. ಕುಲುಮೆ ಮನೆಯನ್ನು ವಿಶಾಲವಾದ ಸ್ಥಳದಲ್ಲಿ ಮೂರು ಅಥವಾ ಎರಡು ಕಡೆ ಇಟ್ಟಿಗೆಗಳಿಂದ ಗೋಡೆ ಕಟ್ಟಿ, ಅದರ ಮೇಲ್ಚಾವಣಿಗೆ ಹೆಂಚು, ಜೆಂಕ್‌ಸೀಟ್‌ಗಳಿಂದ ನಿರ್ಮಿಸಿರುತ್ತಾರೆ. ತೆಂಗಿನ ಗರಿಗಳಿಂದಲೂ ಮಾಡಿಕೊಂಡಿರುತ್ತಾರೆ. ಇತ್ತೀಚೆಗೆ ತೆಂಗಿನ ಗರಿಗಳಲ್ಲಿ ಕುಲುಮೆ ಮನೆಯನ್ನು ನಿರ್ಮಿಸುವುದು ವಿರಳ. ಕಾರಣ ಕಿಡಿಕಾರಿ ಅಗ್ನಿ ಅನಾಹುತಗಳು ಸಂಭವಿಸುತ್ತವೆ.



ಕುಲುಮೆಯಲ್ಲಿ ಹಲವು ರೀತಿಯ ಕೃಷಿ ಉಪಕರಣಗಳು ಸಿದ್ಧವಾಗುತ್ತವೆ. ಅವುಗಳಲ್ಲಿ ಕಡಗತ್ತಿ, ಕಡಾಣಿ, ಗಾಲಿ, ಅಚ್ಚು ಗುಂಬದ ಬಳೆ, ಗಾಲಿಪಟ್ಟಿ, ಸುತ್ತಿಗೆ, ಬಾಚಿ, ಸೆರೆಮಣೆಗೆ, ಕಬ್ಬಿಣದ ನೇಗಿಲು, ಕತ್ತಿ, ಉಜ್ಜಾರಿ, (ಉಜ್ಜುಗ) ಗುರಾಣಿ, ಭರ್ಜಿ, ಕೈಗತ್ತಿ, ಎತ್ತಿನ ಕಾಲಿಗೆ ಕಟ್ಟುವ ಲಾಳ, ಅರ, ಉಳಿ, ಚಾಕು, ಮುಂತಾದ ಕೃಷಿ ಉಪಕರಣಗಳು ಹಾಗೂ ಆಹಾರ ತಯಾರಿಕೆಗೆ ಬೇಕಾದ ಉಪಕರಣಗಳು ಕುಲುಮೆಯಲ್ಲಿ ಸೊಗಸಾಗಿ ರೈತರಿಗೆ ಬೇಕಾದ ಆಕಾರದಲ್ಲಿ ತಟ್ಟಿ ಕುಟ್ಟಿ ಯೋಗ್ಯವಾದ ರೀತಿಯಲ್ಲಿ ಸಿದ್ಧಪಡಿಸುವಲ್ಲಿ ಕಂಬಾರರದು ಎತ್ತಿದ ಕೈ.

ಕುಲುಮೆಯಲ್ಲಿ ಸಿದ್ಧವಾದ ವಸ್ತುಗಳು ಸವೆದು ಮೊಂಡಾದಾಗ ಮತ್ತೆ ಮೊದಲಿನ ಸ್ಥಿತಿಗೆ ತರುವುದರಲ್ಲಿಯೂ ಕುಲುಮೆ ಉಪಯೋಗವಾಗುತ್ತದೆ. ಸಿದ್ಧವಾದ ಕಬ್ಬಿಣದ ಉಪಕರಣಗಳು ಕೆಲಸ ಕಾರ್ಯಗಳಿಂದ ಮುರಿದಾಗ, ಮುಕ್ಕಾದಾಗ, ಹರಿತತೆಯನ್ನು ಕಳೆದುಕೊಂಡಾಗ ಮತ್ತೆ ಕಾಯಿಸಿ ಮುಂಭಾಗವನ್ನು ತೆಳ್ಳಗೆ ಸುತ್ತಿಗೆಯಿಂದ ತಟ್ಟಿ, ಅರದಿಂದ ಉಜ್ಜಿ, ಹರಿತವಾಗಿ ಮಾಡಿಕೊಡುತ್ತಾರೆ.

ಕೃಷಿ ಸಂಬಂಧಿ ಹಾಗೂ ಆಹಾರ ಸಂಬಂಧಿ ಉಪಕರಣಗಳನ್ನು ಸಿದ್ಧಗೊಳಿಸಲು ಬಳಸುವಂತಹ ವಸ್ತುಗಳ ಪಟ್ಟಿ ದೊಡ್ಡದು. ದೊಡ್ಡ ಸುತ್ತಿಗೆ, ಸಣ್ಣ ಸುತ್ತಿಗೆ, ಚಾಣಗಳು, ಅಡಿಗಲ್ಲು ಚಿಮ್ಮಟ್ಟಿಗೆ, ಪಾಗರಿ - ರಂಧ್ರ ಮಾಡಲು ಬಳಸುವುದು, ಸರಗೋಲು - ಇದ್ದಿಲನ್ನು ಒಳ

ನೂಕುವುದು ಮತ್ತು ಹೊರ ಹಾಕುವುದು, ಸುತ್ತು - ರಂಧ್ರ ಮಾಡುವರಿಗೆ ವಸ್ತುವಿನ ಕೆಳ ಭಾಗದಲ್ಲಿಡುವುದು, ಇದ್ದಿಲು, ಹೊಟ್ಟು, ತೆಂಗಿನ ಮಟ್ಟೆಗಳು ಇತ್ಯಾದಿ.

ರೈತ ಸಮುದಾಯಗಳು ದಿನ ನಿತ್ಯದಲ್ಲಿ ಹೊಲ, ಗದ್ದೆಗಳಲ್ಲಿ, ಕಾಡು ಮೇಡುಗಳಲ್ಲಿ ಮರಗಳನ್ನು ತುಂಡರಿಸಲು, ಕುರಿ - ದನ - ಪಶುಗಳಿಗೆ ಮೇವು ಪೂರೈಸಲು ಸೌದೆ ಸೊಪ್ಪುಗಳನ್ನು ಕಡಿಯಲು ಮಚ್ಚು, ಕುಡುಗೋಲು, ಕೊಡಲಿ ಮುಂತಾದ ಉಪಕರಣಗಳನ್ನು ಬಳಸುತ್ತಾರೆ. ವ್ಯವಸಾಯಕ್ಕೆ ಬೇಕಾದ ನೇಗಿಲು, ಕುಂಟೆ, ಗುಳ, ಎತ್ತುಗಳಿಗೆ ಲಾಳ, ಎತ್ತಿನಗಾಡಿ ಮುಂತಾದ ಎಲ್ಲ ರೀತಿಯ ಸಿದ್ಧತೆಗಳನ್ನು ಭರದಿಂದ ಸಿದ್ಧಪಡಿಸಿಕೊಳ್ಳಬೇಕು.

ರೈತ ತಾನು ಉಪಕರಣಗಳನ್ನು ಕುಲುಮೆಯಲ್ಲಿ ಮಾಡಿಸಿಕೊಂಡು ದವಸ ಧಾನ್ಯ ಹುಲ್ಲು ಕಾಳು ಕಡ್ಡಿ ವರ್ಷಕ್ಕೊಮ್ಮೆ ವರ್ತನೆಯಂತೆ ಮೇರೆ ರೂಪದಲ್ಲಿ ನೀಡುವರು. ಮೊದಲಿಂದ ಬಂದಿರುವ ರೂಢಿ. ಇಂದು ಇದ್ದಿಲನ್ನು ಕೊಟ್ಟು ಹಣವನ್ನು ನೀಡಿ ಉಪಕರಣಗಳನ್ನು ಮಾಡಿಸಿಕೊಳ್ಳುತ್ತಾರೆ.

ಕುಲುಮೆಗಳು ಮಳೆಗಾಲ, ಬೇಸಗೆ ಕಾಲ ಎನ್ನದೇ ರೈತನ ಅವಶ್ಯಕತೆಗಳಿಗೆ ಅನುಗುಣವಾಗಿ ಕೃಷಿ ಉಪಕರಣಗಳನ್ನು ರೈತನಿಗೆ ಸಿದ್ಧಗೊಳಿಸಿ ಕೊಡುವುದು ಇಂದಿಗೂ ಹಳ್ಳಿಗಳಲ್ಲಿ ಅಲ್ಪಸ್ವಲ್ಪ ಉಳಿದುಕೊಂಡಿದೆ.

ಕಮ್ಮಾರರು ಕೂಡ ಹಲವಾರು ಸಂಪ್ರದಾಯ ಮತ್ತು ಆಚರಣೆಗಳನ್ನು ಮುಂದುವರೆಸಿಕೊಂಡು ಸಾಗುತ್ತಿದ್ದಾರೆ. ಹಿಂದಿನ ಕಾಲದಿಂದಲೂ ಮಾನವ ಒಂದಲ್ಲಾ ಒಂದು ರೀತಿಯಲ್ಲಿ ದೇವರು - ದಿಂಡಿರು, ಮನೆ - ಮಂದಿರ, ಪ್ರಕೃತಿ - ಪರಿಸರ ಪಶು - ಪಕ್ಷಿ, ಭೂಮಿ ಆಕಾಶ, ಬೆಟ್ಟ ಗುಡ್ಡಗಳನ್ನು ಜೊತೆಗೆ ತಾನು ಬೇಸಾಯದಲ್ಲಿ ಬಳಸುತ್ತಿದ್ದ ಉಪಕರಣಗಳನ್ನೂ ಪೂಜಿಸುತ್ತಲೇ ಬಂದಿದ್ದಾನೆ.

ಕುಲುಮೆ ಕೆಲಸವನ್ನು ಅವಲಂಬಿಸಿದ ವಿವಿಧ ಸಮುದಾಯಗಳು ತಮ್ಮ ತಮ್ಮ ಧರ್ಮದ ಹಬ್ಬಗಳನ್ನು ಆಚರಿಸುತ್ತಾರೆ. ಹಿಂದೂ ಧರ್ಮದನುಸಾರ ಹಿಂದೂ ಕಮ್ಮಾರರು ಹಬ್ಬಗಳನ್ನು ಆಚರಿಸಿದರೆ ಇಸ್ಲಾಂ ಧರ್ಮಕ್ಕನುಸಾರವಾಗಿ ಮುಸ್ಲಿಮರು, ಕ್ರೈಸ್ತ ಧರ್ಮಕ್ಕನು ಸಾರವಾಗಿ ಕ್ರಿಶ್ಚಿಯನ್ನರು ಹಬ್ಬಗಳನ್ನು ಆಚರಿಸುವುದು ಕಂಡುಬರುತ್ತದೆ. ಕಮ್ಮಾರರೂ ತಮಗೆ ಅನ್ನ ನೀಡುವಂತಹ ಕುಲುಮೆಯನ್ನು ಕೂಡ ಮನೆಯಂತೆಯೇ ಚೊಕ್ಕಟಗೊಳಿಸಿ ಮಾವಿನೆಲೆಗಳ ತೋರಣಗಳಿಂದ ಹೂವಿನ ಹಾರಗಳಿಂದ ಸುತ್ತಲು ಅಲಂಕರಿಸುತ್ತಾರೆ. ಕುಲುಮೆಯಲ್ಲಿ ಬಳಕೆಯಾಗುವ ಪ್ರತಿಯೊಂದು ಉಪಕರಣಗಳನ್ನು ಇಂತಹ ಸಂದರ್ಭದಲ್ಲಿ ಸ್ವಚ್ಛಗೊಳಿಸಿ ಒಂದು ಕಡೆ ಇಟ್ಟು ಅವುಗಳಿಗೆ ಕುಂಕುಮ, ಅರಿಸಿನ, ಗಂಧದಕಡ್ಡಿ ಹಚ್ಚಿ ಪೂಜಿಸುತ್ತಾರೆ. ಇಂತಹ ದಿನದಂದು ಅವರು ಕೆಲಸವನ್ನು ಮಾಡದೆ ಉಪಕರಣಗಳಿಗೆ ಮತ್ತು ಕುಲುಮೆ ಮನೆಗೆ ವಿಶ್ರಾಂತಿಯನ್ನು ನೀಡುತ್ತಾರೆ. ಹಾಗೆಯೇ ಕೆಲಸದ ಸಮಯದಲ್ಲಿ ಯಾವುದೇ ಎಡರು - ತೊಡರುಗಳು, ಗಾಯ - ನೋವುಗಳು ಆಗದಂತೆ ಸಂಪ್ರದಾಯದಂತೆ ಪ್ರಾಣಿಬಲಿ ನೀಡುವಂತಹದ್ದು ಕೂಡ ಇವರಲ್ಲಿ ರೂಢಿಯಲ್ಲಿದೆ. ಅನಂತರ ಪಟಾಕಿ, ಸಿಡಿಸಿ ಅಕ್ಕ ಪಕ್ಕದವರಿಗೆ ಸಿಹಿ ಹಂಚಿ ಸಂತೋಷ ಪಡುವಂತಹದ್ದು ಸಾಮಾನ್ಯ.

ಆಧಾರಗ್ರಂಥಗಳು

ಪ್ರಶಾಂತ್ ಮಾಡ್ತ (ಸಂ) ಕನ್ನಡ ಪದವಿಧಿ

ಕೃಷಿ ಬೆಳೆವಣಿಗೆ, ವಿ. ವೆಂಕಟರಾವ್

ಸಂಕ್ಷಿಪ್ತ ಕನ್ನಡ ನಿಘಂಡು (ಪರಿಷ್ಕೃತ) - ಕ.ಸಾ.ಪ. ಚಾಮರಾಜಪೇಟೆ. ಬೆಂಗಳೂರು

ಎಂ.ಆರ್.ಕೆ.

ಕುಸುಬೆ ಕುಸುಬೆ ಎಣ್ಣೆಕಾಳು ಬೆಳೆಗಳಲ್ಲಿ ಒಂದು. ಇದು ಮುಖ್ಯವಾಗಿ ಹಿಂಗಾರು ಬೆಳೆಯಾಗಿದ್ದರೂ, ಖುಷ್ಕಿ ಮತ್ತು ನೀರಾವರಿಯಲ್ಲಿಯೂ ಬೆಳೆಯಬಹುದು. ಕುಸುಬೆ ಉದ್ದವಾದ ತಾಯಿಬೇರನ್ನು ಹೊಂದಿರುವುದರಿಂದ ತೇವಾಂಶದ ಕೊರತೆಯನ್ನು ನೀಗಿಕೊಳ್ಳುವ ಸಾಮರ್ಥ್ಯ ಬೇರೆ ಬೆಳೆಗಳಿಗಿಂತ ಹೆಚ್ಚು. ಕುಸುಬೆಗೆ ಒಣಬೇಸಾಯ ಪ್ರದೇಶಕ್ಕೆ ಹೊಂದಿಕೊಳ್ಳುವ ಲಕ್ಷಣಗಳಿವೆ. ಕುಸುಬೆ ಹಿನ್ನೆಲೆಯನ್ನು ಗಮನಿಸಿದಾಗ ಕುಸುಬೆ ಎಣ್ಣೆಯನ್ನು ಈಜಿಪ್ಟ್‌ನ ಟೊಲೆಮಿ-2 ಎಂಬ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತಿತ್ತು. ಈಜಿಪ್ಟ್‌ನಲ್ಲಿ ಕುಸುಬೆಯಿಂದ ಉತ್ಪನ್ನವಾಗುವ ಬಣ್ಣವನ್ನು ಬಟ್ಟೆಗಳಿಗೆ ಹಾಕುತ್ತಿದ್ದರು. ಶವಗಳನ್ನು ಕೆಡದಂತೆ ಇಡಲು ಇದರ ಉತ್ಪನ್ನಗಳನ್ನು ಬಳಸುತ್ತಿದ್ದರು. ಫ್ರಾನ್ಸ್, ಇಟಲಿ, ಇರಾನ್, ದೇಶಗಳಲ್ಲಿ ಕೃತಕ ಗಿಣ್ಣು ಮತ್ತು ಮೊಸರಿನ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಭಾರತ ಮತ್ತು ಆಫ್ರಿಕಾದಲ್ಲಿ ಆಹಾರ ಪದಾರ್ಥಗಳ ರುಚಿ ಹೆಚ್ಚಿಸಲು ಮತ್ತು ಗಿಡಮೂಲಿಕೆ ಮತ್ತು ಭೇದಿ ನಿವಾರಣೆಗಾಗಿ ಇದರ ಬಳಕೆ ಸಾಮಾನ್ಯವಾಗಿದೆ.

ಬಿತ್ತನೆ : ಕುಸುಬೆ ಬಿತ್ತನೆಗೆ ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15ರ ವರೆಗೆ ಯೋಗ್ಯವಾದುದು. ಕುಸುಬೆ ಬೆಳೆಗೆ ಮಧ್ಯಮ ಮತ್ತು ಆಳವಾದ ಕಪ್ಪು ಮಣ್ಣು ಉತ್ತಮ. ನೀರು ಬಸಿದು ಹೋಗುವಂತಹ ಕಪ್ಪು ಭೂಮಿ ಇದಕ್ಕೆ ಬಹಳ ಯುಕ್ತ. ಈ ಬೆಳೆ ಸ್ವಲ್ಪ ಮಟ್ಟಿಗೆ ಮಣ್ಣಿನಲ್ಲಿ ಸವಳು ಮತ್ತು ಉಪ್ಪಿನ ಅಂಶ ಜಾಸ್ತಿ ಇದ್ದರೂ ಅದನ್ನು ಸಹಿಸಿಕೊಂಡು ಬೆಳೆಯಬಲ್ಲದು. ಇದು ನೀರಾವರಿಯಲ್ಲಿ ಪ್ರತಿ ಹೆಕ್ಟೇರಿಗೆ 15 ರಿಂದ 20 ಕ್ವಿಂಟಾಲ್ ಖುಷ್ಕಿ ಬೆಳೆಯಲ್ಲಿ ಪ್ರತಿ ಹೆಕ್ಟೇರಿಗೆ 8 ರಿಂದ 10 ಕ್ವಿಂಟಾಲ್ ಬೆಳೆಯುತ್ತದೆ. ಕುಸುಬೆ ಹೂಗಳ ಇಳುವರಿ ನೀರಾವರಿ ಪ್ರತಿ ಹೆಕ್ಟೇರ್‌ಗೆ 180 ರಿಂದ 250 ಕಿ.ಗ್ರಾಂ. ಖುಷ್ಕಿಗೆ ಪ್ರತಿ ಹೆಕ್ಟೇರ್‌ಗೆ 10 ರಿಂದ 120 ಕಿ.ಗ್ರಾಂ.

ಕುಸುಬೆ ಪರಕೀಯ ಪರಾಗಸ್ಪರ್ಶ ಬೆಳೆ. ಕುಸುಬೆ ಹೊಲದ ಸುತ್ತಮುತ್ತ ಜೇನು ಸಾಕಣೆ ಮಾಡುವುದರಿಂದ ಜೇನು ಹುಳುಗಳು ಕುಸುಬೆ ಬೆಳೆಯಲ್ಲಿ ಪರಾಗಸ್ಪರ್ಶ ಕ್ರಿಯೆಗೆ ಅನುಕೂಲ ಮಾಡುತ್ತವೆ. ಕುಸುಬೆ ಬೆಳೆಗೆ ಬರುವ ಮುಖ್ಯ ಕೀಟಗಳೆಂದರೆ ಹೇನು, ಕಾಯಿ ಕೊರೆಯುವ ಹುಳು, ಎಲೆ ತಿನ್ನುವ ಕೀಟ ಹಾಗೂ ರೋಗಗಳೆಂದರೆ ಕುತ್ತಿಗೆ ಕೊಳೆ, ಸಸಿ ಸುಡುವ ರೋಗ ಇತ್ಯಾದಿ.

ಕುಸುಬೆ ಎಲೆಗಳು ಎ ಅನ್ನಾಂಗ, ಕಬ್ಬಿಣ, ರಂಜಕ, ಕ್ಯಾಲ್ಸಿಯಂ ಯುಕ್ತವಾಗಿದೆ. ಕಾಂಡದಲ್ಲಿರುವ ಅಧಿಕ ಸೆಲ್ಯುಲೋಸ್‌ನಿಂದಾಗಿ ಕುಸುರಿ,

ರಟ್ಟು ಮತ್ತು ಕ್ರಾಫ್ಟ್ ಹಾಳೆ ತಯಾರು ಮಾಡಲು ಬಳಸುತ್ತಾರೆ. ಪುಣೆ ಮತ್ತು ಘಾಲಘಾಟಗಳಲ್ಲಿ ಕುಸುಬೆ ಹೂವಿನ ದಳಗಳನ್ನು ಚಹಾದ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ. ಚೀನಾದಲ್ಲೂ ಕುಸುಬೆ ಹೂದಳಗಳಿಂದ ಚಹಾ ತಯಾರಿಸುತ್ತಾರೆ. ಹೂವಿನ ದಳದಲ್ಲಿ ಕೆಂಪು ಮತ್ತು ಹಳದಿ ಬಣ್ಣದ ಕಣವಿದ್ದು, ಬೆಂಜೈಲ್ ಗ್ಲೈಕೊಸೈಡ್ ಎಂಬ ರಾಸಾಯನಿಕ ಇರುತ್ತದೆ. ಕುಸುಬೆ ಬೀಜವನ್ನು ಕೆನಡ, ಅಮೆರಿಕಾ, ಫ್ರಾನ್ಸ್, ಜಪಾನ್ ಮತ್ತು ಈಜಿಪ್ಟ್ ದೇಶಗಳಲ್ಲಿ ಪಕ್ಷಿಗಳ ಆಹಾರವಾಗಿ ಉಪಯೋಗಿಸುತ್ತಾರೆ. ಕುಸುಬೆಯನ್ನು ಎಣ್ಣೆ, ಹಿಂಡಿ, ಮತ್ತು ನಾರಿಗಾಗಿ ಬೆಳೆಯಲಾಗುತ್ತದೆ. ಇದರ ಎಣ್ಣೆಯನ್ನು ಖಾದ್ಯ ತೈಲವಾಗಿ ಉಪಯೋಗಿಸುತ್ತಾರೆ. ಕೃತಕ ಬೆಣ್ಣೆ ತಯಾರಿಕೆ, ಲಿನೋಲಿಯಾ, ಮುದ್ರಣ, ಲಿಥೋಗ್ರಾಫಿ ಶಾಯಿ, ಸಾಬೂನು, ಪಾಲೀಶ್, ಚರ್ಮ ಹದಗೊಳಿಸುವಿಕೆ, ದ್ರಾಕ್ಷಿ ಒಣಗಿಸಲು ಬಳಕೆ ಮಾಡುತ್ತಾರೆ. ಭಾರತದಲ್ಲಿ ಜಲಾಭೇದ್ಯ (water proof) ಬಕೆಟ್ ಗ್ರೀಸ್, ಸಿಮೆಂಟ್‌ಗ್ಲಾಸ್ ಹಾಗೂ ಅಂಟಿನ ತಯಾರಿಕೆಗೆ ಉಪಯೋಗಿಸಲಾಗುತ್ತದೆ.

ಕುಸುಬೆಗೆ ಔಷಧೀಯ ಗುಣವೂ ಇದೆ. ಇದರ ಎಣ್ಣೆಯನ್ನು ಉಪಯೋಗಿಸುವುದರಿಂದ ಅಲರ್ಜಿ ತೊಂದರೆ ಕಡಿಮೆ ಆಗುತ್ತದೆ.



ಇರಾನ್ ದೇಶದಲ್ಲಿ ಯಕೃತ್ ಮತ್ತು ಹೃದಯ ರೋಗ ತೊಂದರೆ ನಿವಾರಣೆಗೆ ಇದರ ಎಣ್ಣೆ ಉಪಯೋಗಿಸುತ್ತಾರೆ. ಧಾರವಾಡದ ಅಣ್ಣಿಗೇರಿ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕಳೆದ 35 ವರ್ಷಗಳಿಂದ ಕುಸುಬೆ ಬೆಳೆಯ ಸಂಶೋಧನೆ ಮಾಡಿ ಅಣ್ಣಿಗೇರಿ - 300, ಅಣ್ಣಿಗೇರಿ-1, ಎಸ್-144 ಮತ್ತು ಅಣ್ಣಿಗೇರಿ - 2 ಕುಸುಬೆ ತಳಿಗಳನ್ನು ಶೋಧಿಸಿ ಬಿಡುಗಡೆಗೊಳಿಸಲಾಗಿದೆ.

ವಿ.ಕೆ.

ಕೂಟ್ಟ್‌ಮುಂಡಕನ್ ಬೇಸಾಯ ಬೆಳೆಯ ಕಾಲಾವಧಿಯಲ್ಲಿ ಸ್ಪಷ್ಟ ವ್ಯತ್ಯಾಸವುಳ್ಳ ಎರಡೋ ಮೂರೋ ಬತ್ತದ ತಳಿಗಳನ್ನು ಏಕಕಾಲದಲ್ಲಿ ಒಂದೇ ಗದ್ದೆಯಲ್ಲಿ ಬಿತ್ತನೆ ಮಾಡಿ ಎರಡೋ ಮೂರೋ ಬಾರಿ ಫಸಲು ತೆಗೆಯುವುದನ್ನು ಕೂಟ್ಟ್ ಮುಂಡಕನ್ ಎಂದು ಕರೆಯುತ್ತಾರೆ. ಮೊದಲು ಬರುವ ಬೆಳೆಯನ್ನು ಮಾತ್ರ ಕಟಾವು ಮಾಡಿ ಮುಂದಿನದನ್ನು ಕಟಾವು ಮಾಡದೆ ಉಳಿಸಿಕೊಳ್ಳಲಾಗುತ್ತದೆ. ಅದು ಚೆನ್ನಾಗಿ ಬೆಳೆದಾಗ ಇನ್ನೊಮ್ಮೆ ಕಟಾವು. ಈ ಕ್ರಮವನ್ನು ಅನುಸರಿಸುವುದರಿಂದ ಖರ್ಚು ಕಡಿಮೆ, ಫಸಲು ಹೆಚ್ಚು, ಬೈಹುಲ್ಲು ಕೂಡ.

ಕೂಟ್ಟ್ ಮುಂಡಕನ್ ಪದ್ಧತಿಯಲ್ಲಿ ಒಂದು ತಳಿ ಏಣಿಲಿಸದು, ಇನ್ನೊಂದು ಮುಂಡಕನದು. ಮೀನ -ಮೇಷ ತಿಂಗಳಲ್ಲಿ ಬಿತ್ತನೆ (ಜತೆ ಜತೆಗೇ). ಏಣಿಲಿನದು ಸಿಂಹ-ಕನ್ಯಾ ತಿಂಗಳಲ್ಲೂ ಮುಂಡಕನದು ಮಕರ - ಧನು ತಿಂಗಳಲ್ಲೂ ಕೊಯ್ಲಿಗೆ ಸಿದ್ಧ. (ಮುಂಡಕನ ಬಿತ್ತನೆ ಮೊದಲೇ ಮಾಡಿದರೂ ಕೊಯ್ಲಿಗೆ ಸಿದ್ಧವಾಗುವುದರಲ್ಲಿ ವ್ಯತ್ಯಾಸವಿಲ್ಲ. ಏಣಿಲು ಕೊಯ್ಲು ಮಾಡುವಾಗ ಮುಂಡಕನನ್ನೂ ಕತ್ತರಿಸಲಾಗುವುದಾದರೂ ಅದರಿಂದ ಮುಂಡಕನಿಗೆ ಬಾಧಕವಿಲ್ಲ. ಅದು ಬೆಳೆಯುವುದಕ್ಕೆ ತುಂಬ ಸಮಯ ಬೇಕಾಗುವುದರಿಂದ ಮೂರು ನಾಲ್ಕು ಬಾರಿ ಅದರ ತುದಿ ಕತ್ತರಿಸಬೇಕಾಗುತ್ತದೆ. ಆದುದರಿಂದ ಕೂಟ್ಟ್ ಮುಂಡಕನ್ ಪದ್ಧತಿಯಲ್ಲಿ ಕತ್ತರಿಸಲ್ಪಟ್ಟರೂ ಅದಕ್ಕೆ ಬಾಧಕವಿಲ್ಲ. ದನಕರುಗಳಿಗೆ ಒಂದಿಷ್ಟು ಹೆಚ್ಚು ತಿನಿಸು ಸಿಗುವುದು ಲಾಭವೇ.

ಮೂವಾಟ್ಟ್‌ಪುವಿ ಎಂಬಲ್ಲಿಗೆ ಸಮೀಪದ 'ಎರುವಕುನ್ನತ್ತ್' ಮುಂತಾದೆಡೆ ಕೂಟ್ಟ್‌ಮುಂಡಕನ್ ಪದ್ಧತಿಯ ಏಣಿಲು ಬೆಳೆಯ ಕಟಾವು ಮಾಡಿದ ಮೇಲೆ ಗದ್ದೆಗಳಿಗೆ ದನಕರುಗಳನ್ನು ಬಿಟ್ಟು ತುಳಿಸುತ್ತಾರೆ. ಮುಂಡಕನ್ ಪೈರು ಎತ್ತರಕ್ಕೆ ಬೆಳೆಯುವುದಕ್ಕೆ ತಡೆಯುವುದು, ಅದರಲ್ಲಿ ಹೆಚ್ಚು ಅಗೆಗಳು ಹುಟ್ಟಿಕೊಳ್ಳುವ ಹಾಗೆ ಮಾಡುವುದು, ತನ್ಮೂಲಕ ಬತ್ತದ ಪೈರಿನ ಮಧ್ಯೆ ಕಾಣಿಸಿಕೊಳ್ಳುವ ಖಾಲಿ ಎಡೆಗಳಲ್ಲಿ ಬತ್ತದ ಟಿಸಿಲು ಬೆಳೆಯುವಂತೆ ಪ್ರೇರೇಪಿಸುವುದು, ಈಗಾಲೇ ಕೊಯ್ಲು ಮಾಡಿರುವ ಏಣಿಲು ಬೆಳೆಯ ಪೈರಿನ ಬಾಕಿಯಾದ ಬುಡಗಳು ಮಣ್ಣಿನಲ್ಲಿ ಕೊಳೆಯುವಂತೆ ಮಾಡುವುದು - ಮುಂತಾದುವು ಇದರ ಹಿಂದೆ ಇರುವ ಉದ್ದೇಶಗಳು.

ತಿರುವನಂತಪುರಂ ಜಿಲ್ಲೆಯ ನೆಯ್ಯಾಟಿಂಕದ ತಾಲೂಕಿನಲ್ಲಿ 'ಪವಿಮೂಡ್ ಕೃಷಿ' ಕೂಟ್ಟ್‌ಮುಂಡಕನ್ ಪದ್ಧತಿಯ ಇನ್ನೊಂದು ರೂಪ. ವ್ಯತ್ಯಾಸವೆಂದರೆ ಏಣಿಲು ಬತ್ತದ ತಳಿಯನ್ನು ಬಳಸದೆ ಮುಂಡಕನದೇ ಎರಡು ಭಿನ್ನ ತಳಿಗಳನ್ನು ಬಳಸಲಾಗುತ್ತದೆ. ಒಂದನ್ನು ಏಣಿಲು ಬೆಳೆಯ ಕಾಲದಲ್ಲಿ ಬಿತ್ತನೆ ಮಾಡಲಾಗುತ್ತದೆ. ಮುಂಡಕನ್ ಬೇಸಾಯದ ಸರಿಯಾದ ಕಾಲ ಬಂದಾಗ ಹೊಸ ಬಿತ್ತನೆ ಮಾಡುತ್ತಾರೆ. ಹಳೆಯ ಮುಂಡಕನ್ ಗಿಡಗಳ ತಲೆ ಕತ್ತರಿಸಿ ಹೊಸ ಗಿಡಗಳ (ಮೆಂಬಿನಾರ್=ಹೊಸ ನೇಜಿ) ಜತೆಗೆ ನಾಟಿ ಮಾಡಲಾಗುತ್ತದೆ. ಹಳೆಯ ನೇಜಿ ಗಟ್ಟಿ ದಂಟಿನಂತೆ ಆಗಿ ಬಿಟ್ಟಿರುತ್ತದೆ.

ಇದನ್ನು ಕೀಳಲು ಸ್ವಲ್ಪ ಪ್ರಯಾಸ ಪಡಬೇಕಾಗುತ್ತದೆ. ಹೊಸ ನೇಜಿ ಐದನ್ನು ನೆಡುವಾಗ ಹಳೆಯದು ಎರಡು ಎಂಬ ಲೆಕ್ಕದಲ್ಲಿ ಹೆಚ್ಚು ಎಡೆಬಿಟ್ಟು ನೆಡಲಾಗುತ್ತದೆ. ಎರಡರ ಕಟಾವು ಒಮ್ಮೆಗೆ ನಡೆಯುತ್ತದೆ. ಹಳೆಯ ನೇಜಿಯ ಪೈರು ಹೆಚ್ಚು ಎತ್ತರಕ್ಕೆ ಬೆಳೆದಿರುತ್ತದೆ ಮತ್ತು ತೆನೆಯಲ್ಲಿ ಜೊಳ್ಳು ಇರುವುದಿಲ್ಲ ಎನ್ನುವುದು 'ಪವಿ ಮೂಡ್' ಬೇಸಾಯ ಪದ್ಧತಿಯ ವೈಶಿಷ್ಟ್ಯ.

ಎರಡು ಬೆಳೆ ತೆಗೆಯುವ ಗದ್ದೆಗಳಲ್ಲಿ ಏಣಿಲು ಬೆಳೆ ಮಾಡದೆ ಸಾಮಾನ್ಯವಾಗಿ ಬೇಸಾಯ ಮಾಡುವ ಕಾಲಕ್ಕಿಂತ ಮುಂಚಿತವಾಗಿ ಮುಂಡಕನನ್ನು ಬೆಳೆಯುವ ಕ್ರಮಕ್ಕೆ 'ಕರಿಂಕೊರ' ಎನ್ನುತ್ತಾರೆ. ಎರಡನೆಯ

ಬೆಳೆಗೆ ಕೊನೆ ಕೊನೆಗೆ ಸಾಕಷ್ಟು ನೀರು ಸಿಗಲಾರದೆಂಬ ಸಂದೇಹವಿದ್ದ ಸ್ಥಳಗಳಲ್ಲಿ ಮುಂಡಕನನ್ನು ಕರಿಂಕೊರ ರೀತಿಯಲ್ಲಿ ಬೆಳೆಯಲಾಗುತ್ತದೆ. ಕರಿಂಕೊರ ಬೆಳೆಗೆ ಮುಂಡಕನ ನಾಟಿಯು ಮಹಾನಕ್ಷತ್ರ ಆಶ್ಲೇಷಕ್ಕೆ ಮುಂಚಿತವಾಗಿ ಮುಗಿದಿರಬೇಕು. ಕರಿಂಕೊರ ಪದ್ಧತಿಯಲ್ಲಿ ಮುಂಡಕನ ಪೈರು ಹೆಚ್ಚು ಎತ್ತರವಿರುತ್ತದೆ ಎನ್ನುವುದು ಕೂಡ ಅದರ ವೈಶಿಷ್ಟ್ಯಗಳಲ್ಲೊಂದು.

ಕೆ.ಕೆ.

ಕೂರಿಗೆ ರೈತರ ಕೃಷಿ ಉಪಕರಣಗಳಲ್ಲಿ ಕೂರಿಗೆಯೂ ಒಂದು. ಕೂರಿಗೆ ಎಂಬುದನ್ನು ವಿವರಿಸುತ್ತಾ ಕಿಟ್ಟೆಲ್ (ನಿಘಂಟುಕಾರ) ಅವರು "The seed drill or sowing machine drawn by oxen". ಅಂದರೆ ಬಿತ್ತನೆ ಮಾಡುವ ಉಪಕರಣ ಹಾಗೂ ಇದನ್ನು ದನಗಳಿಗೆ ಹೂಡಿ ಎಳೆಸುತ್ತಾರೆ ಎನ್ನುತ್ತಾರೆ. ಕೂರಿಗೆಯಲ್ಲಿ ಮೂರು ಹಲ್ಲಿನ ಮುಂಗೂರಿಗೆ, ನಾಲ್ಕು ಹಲ್ಲಿನ ಕೂರಿಗೆ, ಎರಡು ಹಲ್ಲಿನ, ಕೂರಿಗೆ, ಏಳು ಹಲ್ಲಿನ ಕೂರಿಗೆಗಳಿವೆ. ಒಂದು ಮರದ ದಿಂಡಿಗೆ ಕೊಳೆವೆಯಂತಹ ಹಲ್ಲುಗಳನ್ನು ಚೂಪು ಮಾಡಿ ಅಳವಡಿಸುತ್ತಾರೆ. ಎಲ್ಲಾ ಹಲ್ಲುಗಳಿಗೂ ಸಮಾನವಾಗಿ ಬಿತ್ತನೆ ಬೀಜ ಹಂಚಿಕೆಯಾಗಿ ಬೀಳುವಂತೆ ಮೇಲೊಂದು ಸೆಡ್ಡೆ ಅಥವಾ ವೃತ್ತಾಕಾರದ ಗುಳಿಯನ್ನು ಮಾಡಿರುತ್ತಾರೆ. ಅದನ್ನು ದನಗಳಿಗೆ ಹೂಡಲು ಅನುಕೂಲವಾಗುವಂತೆ ಎರಡು 'ಈಚು'ಗಳನ್ನು ಜೋಡಿಸುತ್ತಾರೆ. ನೊಗಕ್ಕೆ ಮತ್ತು ಈಚಿಗೆ ಸೇರಿ 'ಹೂಡು ಹಗ್ಗ' ಹಾಗೂ 'ಬಾರಿಣ್ಣೆ' ಅಥವಾ 'ಮುಟ್ಟು'ನಿಂದ ಬಿಗಿಯುತ್ತಾರೆ. ರೈತ ಕೂರಿಗೆ ಹೊಡೆದು ಎತ್ತುಗಳನ್ನು ಓಡಿಸುತ್ತಾರೆ. ಮಡಿಲಲ್ಲಿ ಬೀಜ ಕಟ್ಟಿಕೊಂಡು ಕೂರಿಗೆಯ ಒರಳಿಗೆ ಹಾಕುವರು. ಅವು ಕೊಳವೆಗಳ ಮೂಲಕ ಕೂರಿಗೆಯ ಎಲ್ಲಾ ಹಲ್ಲುಗಳಿಗೆ ಸಮನಾಗಿ ಹಂಚಿಕೆಯಾಗಿ ಬೀಳುತ್ತಿರುತ್ತವೆ. ಈ ವಿಧಾನದಲ್ಲಿ ಸಾಮಾನ್ಯವಾಗಿ ಕಿರುಧಾನ್ಯಗಳಾದ ಕೊರಲು, (ಕಂಬು) ಆರಕ, ನವಣೆ, ಸಾಮೆ, ಸಜ್ಜೆ, ಜೋಳ, ರಾಗಿ ಮೊದಲಾದವುಗಳನ್ನು ಬಿತ್ತುತ್ತಾರೆ. ಕೆಲವು ಪ್ರದೇಶಗಳಲ್ಲಿ ದ್ವಿದಳ ಧಾನ್ಯಗಳನ್ನು ಕೂರಿಗೆಯಿಂದ ಬಿತ್ತುವರು.

ಕೂರಿಗೆಗೆ ಪೌರಾಣಿಕ ಹಿನ್ನೆಲೆ ಇದೆ. ಮೊದಲ ಬಾರಿಗೆ ಕೂರಿಗೆಯನ್ನು ಬಳಸಿದವರು ಪಾಂಡವರು ಎಂಬ ನಂಬಿಕೆ ರೈತರಲ್ಲಿದೆ. ಸ್ವರ್ಗಕ್ಕೆ ಹೊರಟ ಪಾಂಡವರನ್ನು ರೈತರು 'ಇನ್ನು ಮುಂದೆ ನಮ್ಮ ನಾಡಲ್ಲಿ ಧರ್ಮ - ಕರ್ಮ, ಮಳೆ - ಬೆಳೆ ಹೇಗೆ ಸ್ವಾಮಿ' ಎಂದು ಬೇಡುತ್ತಾರೆ. ಆಗ ಧರ್ಮರಾಯ ಅವರಿಗೆ ಅಭಯವಿತ್ತು. ಹೋಗುತ್ತಾನೆ. ಸ್ವರ್ಗದಲ್ಲಿ ಕುಳಿತು ಭೂಮಿಯ ಜನರ ಬಗ್ಗೆ ಯೋಚಿಸಿದ ಪಾಂಡವರು ಭೂಮಿಯ ಜನರಿಗೆ ಸಮಾನವಾಗಿ ಮಳೆಯನ್ನು ಕೊಡುವುದಕ್ಕಾಗಿ ಕೂರಿಗೆಯನ್ನು ಸೃಷ್ಟಿಸಿದರು. ಭೀಮಾರ್ಜುನರು ಕೂರಿಗೆ ಓಡಿಸುವರು. ದ್ರೌಪದಿ ಮಳೆ ಬೀಜವನ್ನು ಬಿತ್ತುವಳು. ಅವರು ಬಿತ್ತನೆ ಕಾರ್ಯ ಬೇಗ ಮುಗಿಯಲಿ ಎಂದು ವಜ್ರದ ಬಾರುಕೋಲಿನಿಂದ ಎತ್ತುಗಳಿಗೆ ಹೊಡೆಯುವರು. ಆಗ ಉಂಟಾಗುವ ಸದ್ದೆ ಗುಡುಗು. ಇನ್ನು ಜೋರಾಗಿ ಹೊಡೆದಾಗ ಬಾರು ಕೋಲಿನ ಎಳೆಯೊಂದು ಮುರಿದು ಭೂಮಿಗೆ ಬೀಳುತ್ತದೆ. ಅದೇ ಸಿಡಿಲು, ದ್ರೌಪದಿ ಬಿತ್ತಿದ ಮಳೆ ಬೀಜಗಳು ಧರ್ಮಮಾರ್ಗದಲ್ಲಿ ನಡೆಯುವ ಜನರಿರುವ ಕಡೆಗೆ ಹೆಚ್ಚು ಬೀಳುತ್ತವೆ. ದುರ್ಮಾರ್ಗದ ಜನರಿರುವ ಕಡೆಗೆ ಕಡಿಮೆ ಬೀಳುತ್ತವೆ. ಕುಳಿತ ಕಡೆಯೇ ಶಾಂತಿ ಶಾಂತಿ ಎನ್ನುತ್ತಾಳಂತೆ. ಆಗ ಗುಡುಗು ಸಿಡಿಲಿನ ಆರ್ಭಟ ಕಡಿಮೆಯಾಗುತ್ತದೆ. ಮಳೆಯೂ ಶಾಂತವಾಗುತ್ತದೆ. ಎಂಬುದು ಜನರ ನಂಬಿಕೆ. ಇದನ್ನು ಅರಿತ ಜನರೂ ಕೂರಿಗೆ ಸೃಷ್ಟಿಸಿಕೊಂಡರು. ಎಲ್ಲಿ ಭೂಮಿ ಹದವಾಗಿರುವುದೋ ಮಣ್ಣು ಸುಲಭವಾಗಿ



ಬಗೆದುಕೊಳ್ಳುತ್ತದೆಯೋ ಅಂತಹ ಕಡೆ ಬೀಜಗಳು ಸರಿಯಾಗಿ ಬೀಳುತ್ತವೆ. ಮಣ್ಣು ಒದ್ದೆಯಾಗಿದ್ದರೆ ಹಲ್ಲಿನ ಕೊಳವೆ ಕಟ್ಟಿಕೊಂಡು ಬೀಜ ಸರಿಯಾಗಿ ಬೀಳುವುದಿಲ್ಲ. ಕೂರಿಗೆ ವಿಧಾನದಲ್ಲಿ ಬಿತ್ತುವುದರಿಂದ ಸಮಯ, ಖರ್ಚು ಉಳಿತಾಯವಾಗುತ್ತದೆ.

ಟಿ.ಕೆ.

ಕೃಷಿ ಇದು ವ್ಯಾಪಕಾರ್ಥವುಳ್ಳಂಥದ್ದು. ಮಾನವ ತನ್ನ ಜೀವನ ನಿರ್ವಹಣೆಗಾಗಿ ಮಾಡುವ ಪ್ರತಿಯೊಂದು ಕೆಲಸವೂ ಕೃಷಿಯೇ. ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಸಮುದ್ರೋತ್ಪನ್ನಗಳು, ಅರಣ್ಯೋತ್ಪನ್ನಗಳು, ಭೂಉತ್ಪನ್ನಗಳು ಇದರಲ್ಲಿ ಸೇರಿವೆ. ಸಾಂಪ್ರದಾಯಿಕವಾಗಿ ಹೇಳುವುದಾದರೆ ಭೂಮಿಯನ್ನು ಸಾಗುವಳಿ ಮಾಡಿ ಪಡೆಯುವ ಫಲವನ್ನು ಕೃಷಿ ಎನ್ನಬಹುದು. ಇದಕ್ಕೆ ಬೇಸಾಯ, ವ್ಯವಸಾಯ, ಆರಂಭ, ಸಾಗುವಳಿ ಮುಂತಾದವು ಸಮಾನಾರ್ಥಕ ಪದಗಳು.

ಫುಡ್ ಅಂಡ್ ಅಗ್ರಿಕಲ್ಚರಲ್ ಆರ್ಗನೈಸೇಷನ್ (ಎಫ್.ಎ.ಒ.) ಪ್ರದೇಶಕ್ಕನುಗುಣವಾಗಿ ಕೃಷಿಯನ್ನು ಕುರಿತು ಆರು ಬಗೆಯಲ್ಲಿ ವಿವರಿಸಿದೆ:

1. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೈಗಾರಿಕೀಕರಣದ ಪರಿಣಾಮವಾಗಿ ಕಡಿಮೆ ಭೂಮಿಯಲ್ಲಿ ಹೆಚ್ಚು ಬೆಳೆ ಪಡೆಯುವುದು.

2. ಭಾರತದಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಕೃಷಿಯಿಂದಲೇ ಜೀವನನಿರ್ವಹಣೆ ಮಾಡುವ ಗ್ರಾಮೀಣ ಬಡರೈತ.

3. ನಿರ್ದಿಷ್ಟ ಭೂಪ್ರದೇಶದಲ್ಲಿ ಪ್ರಮುಖ ಹಾಗೂ ಮಿಶ್ರ ಬೆಳೆ ತೆಗೆದು, ಜಾನುವಾರುಗಳ ಅಭಿವೃದ್ಧಿ ಮಾಡುವುದೇ ಕೃಷಿ. ಇದರಿಂದ ಶ್ರೀಮಂತ ಬದುಕು ರೂಪಿಸಿಕೊಳ್ಳುವವರು ಕೃಷಿಕರು.

4. ವಿಸ್ತಾರವಾದ ಭೂಭಾಗದಲ್ಲಿ ತೋಟಗಾರಿಕೆ ಮಾಡುವ ಸ್ಥಳೀಯ ರೈತ ಕುಟುಂಬಗಳು ಮತ್ತು ಅದರ ಪ್ರಮುಖ ಆಡಳಿತ ವ್ಯವಸ್ಥೆಯೇ ಕೃಷಿ.

5. ದ್ವಿದಳ ಧಾನ್ಯಗಳ ಹಾಗೂ ಎಣ್ಣೆ ಬೀಜಗಳ ಕೃಷಿ ಮಾಡುವ ಬೃಹತ್ತಾದ ಪ್ರದೇಶಗಳು, ಪಶುಸಂಗೋಪನೆಗೆ ಬೇಕಾದ ಹುಲ್ಲುಗಾವಲುಗಳು.

6. ಕೃಷಿಯನ್ನು ಪ್ರಧಾನವಾಗಿ ಅವಲಂಬಿಸದೆ ಬಿಡುವಿನ ವೇಳೆಯಲ್ಲಿ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಮಾಡುವ ಉಪ ಕಸುಬು.

ಪ್ರಾಚೀನತೆ : ಆದಿ ಮಾನವ ಅಲೆಮಾರಿ ಹಂತದಲ್ಲಿ ಸ್ವಾಭಾವಿಕವಾಗಿ ದೊರೆಯುತ್ತಿದ್ದ ಸಸ್ಯ, ಸಸ್ಯೋತ್ಪನ್ನ, ಪ್ರಾಣಿ, ಪಕ್ಷಿಗಳನ್ನು ತಿಂದು ಜೀವಿಸುತ್ತಿದ್ದ. ಕ್ರಮೇಣ ಪ್ರಕೃತಿಯನ್ನು ಸೂಕ್ಷ್ಮವಾಗಿ ಗಮನಿಸಿ ತನಗೆ ಬೇಕಾದ ಆಹಾರ ಪದಾರ್ಥಗಳನ್ನು ಬೆಳೆಯಲು ಪ್ರಯತ್ನಿಸಿದಾಗಲೇ ಕೃಷಿ ಆರಂಭವಾಗಿರಬಹುದು.

ಭಾರತದಲ್ಲಿ ವೇದಗಳ ಕಾಲದಿಂದ ಆರಂಭಿಸಿ ಕೌಟಿಲ್ಯ, ಮನು ಮೊದಲಾದವರ ಕೃತಿಗಳು ಬೇಸಾಯದ ಬಗೆಗಳನ್ನು ವೈಜ್ಞಾನಿಕವಾಗಿ ನಿರೂಪಿಸಿವೆ. ಅವುಗಳ ಪ್ರಕಾರ ಕೃಷಿ ಜೀವಪೋಷಕ ಕಲೆ. ಮಳೆ, ನದಿ, ಕಾಲುವೆ, ಬಾವಿ, ಕೆರೆ ಕುಂಟೆಗಳನ್ನಾಧರಿಸಿ ವ್ಯವಸ್ಥಿತವಾಗಿ ಕೃಷಿ ಮಾಡುವ ಬಗೆ ಭಾರತೀಯರಿಗೆ ತಿಳಿದಿತ್ತು. ಆವರ್ತನ ಬೆಳೆ ಪದ್ಧತಿ, ಗೊಬ್ಬರದ ಉಪಯೋಗ, ಮಣ್ಣು ಮತ್ತು ಹವಾಗುಣದ ಅರಿವು, ಬೀಜಗಳ ಆಯ್ಕೆ, ಬೆಳೆಗಳಿಗೆ ಬರುವ ರೋಗ ನಿವಾರಣೆ, ಹಿಡುವಳಿಯ ಗಾತ್ರ, ಜಮೀನ್ದಾರ - ಗೇಣಿದಾರ ಸಂಬಂಧ, ಕಂದಾಯ ನಿಗದಿ ಮುಂತಾದವನ್ನು ಕುರಿತು ಕೃಷಿ ವಿಚಾರಗಳನ್ನು ಉಲ್ಲೇಖಿಸಿರುವ ಗ್ರಂಥಗಳು ತಿಳಿಸುತ್ತವೆ.

ಬೈಬಲಿನಲ್ಲಿ ಸಂಚಾರಿ ಭೂ ಸಾಗುವಳಿ ಮತ್ತು ಸಾಕುಪ್ರಾಣಿಗಳ ಅಭಿವೃದ್ಧಿ (ಕುರಿ ಸಾಕಾಣಿಕೆ) ಕುರಿತ ಮಾಹಿತಿಯುಂಟು. ಅನಂತರ ಜನಸಂಖ್ಯಾವೃದ್ಧಿಗೆ ಅನುಗುಣವಾಗಿ ಭೂಸಾಗುವಳಿ ಹೆಚ್ಚಾಯಿತು. ಸಹಜವಾಗಿ ಮೊದಲ ಹಂತದಲ್ಲಿ ಕೃಷಿಕರು ನದೀ ತೀರದ ಫಲವತ್ತಾದ ಭೂ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಸ್ಥಿರವಾಗಿ ನೆಲೆನಿಂತರು.

ಭಾರತ, ಚೀನ, ಮೆಸಪೊಟೇಮಿಯ, ಈಜಿಪ್ಟ್ ಮುಂತಾದ ಪ್ರಾಚೀನ ನಾಗರಿಕತೆಗಳು ಕೃಷಿಯನ್ನು ಆಧರಿಸಿದ್ದಂಥವು. ವ್ಯವಸಾಯಾಧಾರಿತವಾಗಿದ್ದ ಮಾನವನ ಬದುಕು ಕಾಲಕ್ರಮೇಣ ಯಂತ್ರಗಳ ಆವಿಷ್ಕಾರದಿಂದಾಗಿ ಸಂಕೀರ್ಣವಾಗತೊಡಗಿತು. ಕೈಗಾರೀಕರಣದ ಪರಿಣಾಮವಾಗಿ ಹೊಸ ರೀತಿಯ ಬದುಕಿಗೆ ಮಾನವ ಹೊರಳಿದ. ಅರಸರ ಸಾಮ್ರಾಜ್ಯಶಾಹಿ ವ್ಯವಸ್ಥೆ, ಸಾರಿಗೆ ಸಂಪರ್ಕ ಮುಂತಾದವುಗಳಿಂದಾಗಿ ಕೃಷಿಗೆ ಪ್ರಾಧಾನ್ಯ ಕಡಿಮೆಯಾಯಿತು. ಯಂತ್ರೋಪಕರಣಗಳ ಬಳಕೆಯಿಂದಾಗಿ ಕೃಷಿಯಲ್ಲಿ ಅನೇಕ ಬಗೆಯ ಸ್ಥಿತ್ಯಂತರಗಳುಂಟಾಗಿ ಅಧಿಕ ಇಳುವರಿ ಪಡೆಯುವ ಪ್ರವೃತ್ತಿ ಬೆಳೆಯಿತು.

ಕೃಷಿಯ ಸ್ಥಿತ್ಯಂತರ : ವೈಜ್ಞಾನಿಕ ಸಂಶೋಧನೆಯ ಫಲವಾಗಿ ಮಾನವನ ಜೀವಿತಾವಧಿ ಹೆಚ್ಚಾಯಿತು. ಅದಕ್ಕನುಗುಣವಾಗಿ ಕೃಷಿ ಅಭಿವೃದ್ಧಿ ಅನಿವಾರ್ಯವಾಯಿತು. ಒಂದೆಡೆ ಜನಸಂಖ್ಯಾ ಸ್ಫೋಟ, ಮತ್ತೊಂದೆಡೆ ಕೃಷಿ ಭೂಮಿಯ ಕೊರತೆ- ಇವುಗಳನ್ನು ಸರಿದೂಗಿಸಲು ಮಾನವ ನವೀನ ಮಾರ್ಗಗಳನ್ನು ಕಂಡುಕೊಂಡನು. ವಿಸ್ತಾರ ಕೃಷಿ., ತೀವ್ರ ಕೃಷಿ, ಬೆಳೆಗಳ ಆವರ್ತನೆ, ಬಿತ್ತನೆ ಬೀಜಗಳ ತಳಿ ಅಭಿವೃದ್ಧಿ, ಸಂಕರ ತಳಿಗಳ ಬಳಕೆ, ನೀರಿನ ಮಿತ ಬಳಕೆ, ಮಣ್ಣು ಪರೀಕ್ಷೆ, ರಾಸಾಯನಿಕ ಗೊಬ್ಬರಗಳ ಹಾಗೂ ಯಂತ್ರಗಳ ಬಳಕೆ, ಕೀಟ ನಾಶಕಗಳ ಉಪಯೋಗ, ಹವಾಗುಣ ನಿಯಂತ್ರಣ ಮುಂತಾದವು ಕ್ರಮೇಣ ಮಾನವ ಕಂಡುಕೊಂಡಿರುವ ಕೃಷಿ ಅಭಿವೃದ್ಧಿಯ ಮಾರ್ಗಗಳು. ಪರಿಣಾಮ ಕಡಿಮೆ ಖರ್ಚಿನಲ್ಲಿ ಅಧಿಕ ಉತ್ಪನ್ನ ದೊರೆಯುವಂತಾಯಿತು.

ಪೂರಕ ಪರಿಕರಗಳು : ಹಸು, ಎತ್ತು, ಎಮ್ಮೆ, ಕೋಣ, ಕುರಿ, ಮೇಕೆ, ಕತ್ತೆ, ಕುದುರೆ ಮುಂತಾದವು ರೈತನ ಒಡನಾಡಿಗಳಾಗಿ ಬಂದವು. ಇತರ ಸಾಕು ಪ್ರಾಣಿಗಳಾದ ಕೋಳಿ, ಕುರಿ, ಮೇಕೆ, ನಾಯಿ, ಹಂದಿ ಮುಂತಾದವು ಕೃಷಿ ವ್ಯವಸ್ಥೆಯಲ್ಲಿ ಅನೇಕ ಬಗೆಯಲ್ಲಿ ಅಸ್ತಿತ್ವವನ್ನು ಪಡೆದಿವೆ.

ಉಪಕರಣಗಳು : ನೇಗಿಲು, ಕಪಿಲೆ, ಏತ, ಚಕ್ರ, ಬಂಡಿ, ಬಡಿಗೆ, ಕುಕ್ಕೆ, ತಟ್ಟೆ ಮೊದಲ್ಗೊಂಡು ಆಧುನಿಕ ಯಂತ್ರಗಳವರೆಗೆ ಸಕಲ ಸಲಕರಣೆಗಳು ಕೃಷಿಕನ ಅಮೂಲ್ಯ ಒಡನಾಡಿಗಳಾದವು.

ಕೃಷಿ ಪದ್ಧತಿ : ಆರಂಭದಲ್ಲಿ ರೈತನಿಗೆ ಭೂಮಿ ಸಮೃದ್ಧವಾಗಿ ಲಭ್ಯವಾಗುತ್ತಿದ್ದುದರಿಂದ ಹಳೆಯ ನೆಲವನ್ನು ಪಾಳು ಬಿಟ್ಟು ಫಲವತ್ತಾದ ಹೊಸ ಭೂಮಿಯನ್ನು ಅರಸುತ್ತ ಹೋದ. ಈ ಪದ್ಧತಿ ಅಲೆಮಾರಿಯಾಗಿದ್ದ



ಸಂದರ್ಭದಲ್ಲಿ ಸರಿಯೆನಿಸಿದರೂ ಒಂದೆಡೆ ನೆಲೆ ನಿಂತ ಮೇಲೆ ಸುತ್ತಲಿನ ಪ್ರದೇಶದಲ್ಲಿಯೇ ಸಾಗುವಳಿ ಮಾಡುವುದು ಅನಿವಾರ್ಯವಾಯಿತು. ಇರುವ ಭೂಮಿಯನ್ನೇ ಸತ್ತ್ವಯುತವಾಗಿ ಮಾಡಲು ಕೊಟ್ಟಿಗೆ ಗೊಬ್ಬರ ಹಸುರೆಲೆಗೊಬ್ಬರ ಮುಂತಾದವನ್ನು ಕಾಲಕಾಲಕ್ಕೆ ಕೊಡಲಾರಂಭಿಸಿದ.

10ನೇ ಶತಮಾನದ ಸುಮಾರಿಗೆ ಇಂಗ್ಲೆಂಡಿನಲ್ಲಿ ಎರಡು ಬೆಳೆ ತೆಗೆಯುವ ಪದ್ಧತಿಯನ್ನು ಕಾಣಬಹುದು. ಸಾಗುವಳಿ ಭೂಮಿಯನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿದ್ದರು. 1. ತೋಟ, 2. ಸಾಗುವಳಿ ಭೂಮಿ,

3. ಹುಲ್ಲುಗಾವಲು 4. ಬಂಜರು ನೆಲ. ಭೂಮಿಯನ್ನು ಬಿಡಿಬಿಡಿಯಾಗಿ ವಿಭಾಗಿಸಿ ಏಕಕಾಲದಲ್ಲಿ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಿದ್ದುದು ಒಂದು ಕ್ರಮವಾದರೆ ಇನ್ನೊಂದು ರೀತಿಯಲ್ಲಿ ಭೂಮಿಯನ್ನು ಪಟಕಗಳಾಗಿ ವಿಭಾಗಿಸಿ ಎರಡು ಪಟಕಗಳಲ್ಲಿ ಬೆಳೆದು ಒಂದು ಪಟಕವನ್ನು ಬೀಳು ಬಿಟ್ಟು ಅದನ್ನು ಎರಡನೆಯ ಅವಧಿಯಲ್ಲಿ ಬಳಸುತ್ತಿದ್ದರು. ಋತುಗನುಗುಣವಾಗಿ ಆವರ್ತನ ಪದ್ಧತಿಯಲ್ಲಿ ಸಾಗುವಳಿ ಮಾಡುತ್ತಿದ್ದರು. ಒಮ್ಮೆ ಏಕದಳ ಧಾನ್ಯ ಬೆಳೆದರೆ ಮತ್ತೊಮ್ಮೆ ದ್ವಿದಳ ಧಾನ್ಯಗಳನ್ನು ಬೆಳೆಯುವುದರಿಂದ ಭೂಮಿಯ ಫಲವತ್ತತೆ ಸಮಸ್ಥಿತಿಯಲ್ಲಿರಲು ಸಹಾಯಕವಾಗುತ್ತಿತ್ತು.

ಭಾರತದಲ್ಲಿ ಕೃಷಿ : ಭಾರತದಲ್ಲಿ ವೇದಕಾಲಕ್ಕಿಂತಲೂ ಬಹಳ ಹಿಂದೆಯೇ ಕೃಷಿ ಇದ್ದಂತೆ ತಿಳಿದುಬರುತ್ತದೆ. ವೇದ, ಉಪನಿಷತ್ತು, ಚರಕ, ಸುಶ್ರುತಸಂಹಿತ, ವಿಷ್ಣುಪುರಾಣ, ವರಾಹಮಿಹಿರನ ಬೃಹತ್ ಸಂಹಿತೆ, ಈತನ ಪತ್ನಿ ಕನ್ಯಾ ಎಂಬಾಕೆ ರಚಿಸಿರುವ ಕೃಷಿ ಸೂತ್ರಗಳು, ಅಗ್ನಿ ಪುರಾಣ, ಅಮರಕೋಶ, ಪರಾಶರನ ಕೃಷಿ ಸಂಗ್ರಹ ಅಥವಾ ಕೃಷಿ ತಂತ್ರ, ಸಾರಂಗಧರನ ಉಪವನವಿನೋದ ಅಥವಾ ವೃಕ್ಷಾಯುರ್ವೇದ ಮುಂತಾದವು ಕೃಷಿ ಕುರಿತಾದ ಮಾಹಿತಿಗಳಿರುವ ಕೃತಿಗಳು. ಮರಗಿಡಗಳನ್ನು ಬೆಳೆಸುವ ವಿಧಾನ ಕುರಿತಾದ ಮಾಹಿತಿಗಳು ಅಗ್ನಿಪುರಾಣ ಮತ್ತು ಬೃಹತ್ ಸಂಹಿತೆಗಳಲ್ಲಿ ದೊರೆಯುತ್ತವೆ. ಬೀಜ ಮೊಳೆಯುವಿಕೆಯಿಂದ ಹಿಡಿದು ಅದರ ಪೋಷಣೆ, ಗೊಬ್ಬರ ಇತ್ಯಾದಿ ಎಲ್ಲ ವಿಚಾರಗಳನ್ನು ವರಾಹಮಿಹಿರ ಸ್ಪಷ್ಟವಾಗಿ ಹೇಳಿದ್ದಾನೆ. ವಿಷ್ಣುಪುರಾಣದಲ್ಲಿ ಬತ್ತದ ವಿವಿಧ ಭಾಗಗಳಾದ ಬತ್ತದ ಭ್ರೂಣಾವಸ್ಥೆಯಿಂದ ಅದು ಫಲ ನೀಡುವ ತನಕದ ಎಲ್ಲ ಹಂತಗಳನ್ನು ಕುರಿತು ಸವಿವರವಾಗಿ ದಾಖಲಿಸಲಾಗಿದೆ. ಯಾವ ಮಣ್ಣಿಗೆ ಯಾವ ಬೆಳೆ ಹೊಂದುತ್ತದೆಂಬ ಅರಿವು ಪ್ರಾಚೀನ ಭಾರತೀಯರಿಗಿತ್ತು. ವರಾಹಮಿಹಿರ, ಚರಕ, ಸುಶ್ರುತ ಮೊದಲಾದವರು ಭೂಮಿಯನ್ನು ಹೀಗೆ ವಿಭಾಗಿಸಿದ್ದಾರೆ: ಜಂಗಲ (ಬಯಲು ಸೀಮೆ), ಅನುಪಮ (ಗಿರಿ ಶಿಖರಗಳಿಲ್ಲದ ನದಿ ಹಳ್ಳಗಳಿರುವ ಕಾಡುಪ್ರದೇಶ), ಸಾಧಾರಣ (ವನಸ್ಪತಿ ಗಿಡಮರಗಳು ಯಥೇಚ್ಛವಾಗಿ ಬೆಳೆಯುವ ಪ್ರದೇಶ), ಗುಡ್ಡಗಾಡು (ಮರಗಿಡ ಮತ್ತು ವಿವಿಧ ಬೆಳೆಗಳನ್ನು ಬೆಳೆಸುವಂಥ ಪ್ರದೇಶ) ನದಿ ಹಳ್ಳ ಪ್ರದೇಶ, ಅರಣ್ಯ, ಹುಲ್ಲುಗಾವಲು ಎಂದು ಕಾಶ್ಯಪ ಸಂಹಿತೆಯಲ್ಲಿ ಹೇಳಲಾಗಿದೆ. ಇದರಲ್ಲಿ ವಿವರಿಸಿರುವಂತೆ ಉತ್ತಮ ಭೂಮಿಯಲ್ಲಿ ಕಲ್ಲು, ಹುಲ್ಲು, ಹೊಟ್ಟು ಇರಬಾರದು. ಮೃದುವಾದ, ಹಸಿಯಾದ ನಸುಗೆಂಪು ಅಥವಾ ಕಪ್ಪು ಬಣ್ಣದ ಮಣ್ಣು ಉತ್ತಮ. ಮಣ್ಣಿನಲ್ಲಿ ಅತಿ ಹೆಚ್ಚು ನೀರು ನಿಲ್ಲದೆ, ಬೀಜಗಳು ಬೇಗ ಮೊಳೆಯುವಂತೆ ಇರಬೇಕು. ತಗ್ಗು ದಿಣ್ಣೆಗಳಿಲ್ಲದೆ ಭೂಮಿ ಮಟ್ಟಸವಾಗಿದ್ದು, ಉಪದ್ರವಕಾರಿ ಕ್ರಿಮಿಕೀಟಗಳು ಇರಬಾರದು. ಈ ಗ್ರಂಥಗಳಲ್ಲಿ ಅಡಕವಾಗಿರುವ ಕೃಷಿ ಕುರಿತ ವಿಷಯ ಆಧುನಿಕ ಕೃಷಿ ಪದ್ಧತಿಗೆ ಪ್ರೇರಕವೂ ಪೂರಕವೂ ಆಗಿವೆ.

ಕೃಷಿಗೆ ಉತ್ತಮ ಬೀಜ ಆವಶ್ಯಕ. ಹಿಂದೆ ರಾಜರು ಉತ್ತಮ ಬಿತ್ತನೆ ಬೀಜಗಳನ್ನು ರೈತರಿಂದ ಪಡೆದು ಸಕಾಲಕ್ಕೆ ಕೃಷಿಕರಿಗೆ ಒದಗಿಸುತ್ತಿದ್ದರೆಂದು ಕಶ್ಯಪ ವಿವರಿಸಿದ್ದಾನೆ. ಅರ್ಥಶಾಸ್ತ್ರ, ವೃಕ್ಷಾಯುರ್ವೇದ ಕೃತಿಗಳಲ್ಲಿ ಬೀಜ ಸಂರಕ್ಷಣೆ ಕುರಿತ ದೇಶೀಯ ಪದ್ಧತಿಯ ವಿವರಗಳಿವೆ. ಬೆಲ್ಲ, ಹಾಲು, ಎಳ್ಳಿನ ಬೂದಿ, ತುಪ್ಪ, ಸಗಣಿ ಮುಂತಾದವನ್ನು ಬಳಸಿ ಬೀಜ ಸಂರಕ್ಷಿಸಬಹುದೆಂಬುದನ್ನು ತಿಳಿಸಿದ್ದಾರೆ. ಕೀಟನಾಶಕ್ಕೆ ಧೂಪ, ಗೋಮೂತ್ರ, ಜೇನುತುಪ್ಪಗಳನ್ನು ಬಳಸುತ್ತಿದ್ದರು. ಸುರಫಲನು ವೃಕ್ಷಾಯುರ್ವೇದದಲ್ಲಿ ಯಾವ ಬೀಜವನ್ನು ಯಾವ ಅಂತರದಲ್ಲಿ ಮತ್ತು



ಯಾವ ಪ್ರಮಾಣದಲ್ಲಿ ಬಳಸಬೇಕೆಂಬುದನ್ನು ದಾಖಲಿಸಿದ್ದಾನೆ. ಅಂತರ ಹೆಚ್ಚಾಗಿದ್ದರೆ ಗಾಳಿಯಿಂದ ಅಪಾಯವಾಗುವುದೆಂದೂ ಅಂತರ ತೀರ ಕಡಿಮೆಯಿದ್ದರೆ ಇಳುವರಿ ಕಡಿಮೆಯಾಗುವುದೆಂದೂ ತಿಳಿಸಿದ್ದಾನೆ. ಮರಗಳನ್ನು ನೆಡುವಾಗ ಸು. 20 x 20 ಅಡಿ ಅಂತರವಿರಬೇಕು. ಹಣ್ಣಿನ ಮರಗಳನ್ನು ನೆಡುವಾಗ ಬೇರುಗಳಿಗೆ ಮಾಡುವ ಲೇಪನ, ಕಸಿ ಕಟ್ಟುವ ವಿಧಾನ, ಗೂಟಿ ಮಾಡುವ ವಿಧಾನವನ್ನೂ ಹೇಳಲಾಗಿದೆ. ಬೆಳೆಗಳು ಹುಲುಸಾಗಿ ಬೆಳೆದು ಇಳುವರಿ ಹೆಚ್ಚಾಗಲು ಅವುಗಳಿಗೆ ಗೊಬ್ಬರ ಅಗತ್ಯವೆಂಬುದು ಭಾರತೀಯರಿಗೆ ಋಗ್ವೇದದ ಕಾಲದಲ್ಲೇ ತಿಳಿದಿತ್ತು. ಪತ್ರಪ್ರೋಕ್ಷಣೆ, ಧೂಪಕ್ರಿಯೆ, ಸಸ್ಯ ಪ್ರಚೋದಕಗಳ ಬಳಕೆ, ಕಿಣ್ವಗಳ ಉಪಯುಕ್ತತೆ ಮುಂತಾದವುಗಳ ಅರಿವಿತ್ತು. ಪೈರುಗಳನ್ನು, ಗಿಡಮರಗಳನ್ನು ಅನೇಕ ಉಪದ್ರವಗಳಿಂದ ರಕ್ಷಿಸುವ ಅಗತ್ಯವನ್ನು ಅವರು ಮನಗಂಡಿದ್ದರು. ಅನಗತ್ಯವಾಗಿ ಗಿಡಮರಗಳನ್ನು ನಾಶಪಡಿಸುವವರಿಗೆ ದಂಡ ವಿಧಿಸಲಾಗುತ್ತಿತ್ತು. ಬಿಳಿ ಸಾಸಿವೆ, ಸಫಾರಿಮೀನು, ಹಂದಿ ಮತ್ತು ಬೆಕ್ಕಿನ ಮಲಗಳನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಅವುಗಳನ್ನು ಒಳ್ಳೆಯ ಬೆಣ್ಣೆಯಲ್ಲಿ ಕಲಸಿ ಸಸ್ಯದ ಬೇರುಗಳಿಗೆ ಹಾಗೂ ಕಾಂಡಗಳಿಗೆ ಸವರಿ ಧೂಪ ಹಾಕಿದರೆ ಎಲ್ಲ ರೋಗಗಳಿಂದ ಅವು ಮುಕ್ತವಾಗುತ್ತವೆಂದೂ ಉಪವನ ವಿನೋದದಲ್ಲಿ ವಿವರಿಸಲಾಗಿದೆ.

ಬತ್ತವನ್ನು ಪ್ರಾಚೀನ ಕಾಲದಿಂದಲೂ ಮುಖ್ಯ ಆಹಾರ ಬೆಳೆಯಾಗಿ ಬೆಳೆಯುತ್ತಿದ್ದರು. ಅದನ್ನು ಬೆಳೆಯುವ ವಿಧಾನ, ಭೂಮಿ ಸಿದ್ಧಪಡಿಸುವ ಕ್ರಮ, ನೀರು ಹಾಯಿಸುವ ವಿಧಾನ ಇತ್ಯಾದಿ ವಿಷಯಗಳನ್ನು ಕುರಿತ ವಿಚಾರಗಳು ಮೇಲ್ಕಂಡ ಕೃತಿಗಳಲ್ಲಿ ಲಭ್ಯವಿವೆ. ಸಾಮಾನ್ಯವಾಗಿ ಬತ್ತವನ್ನು ಚಿಕ್ಕ ಚಿಕ್ಕ ಪಾತಿಗಳಲ್ಲಿ ಬೆಳೆಸುತ್ತಿದ್ದರು. ಕಾರಣ ನೀರು ಒಂದು ಪಾತಿಯಿಂದ ಇನ್ನೊಂದು ಪಾತಿಗೆ ಹರಿದು ಹೋಗಬೇಕು. ಕಾಲುವೆ ಮೊದಲಾದವುಗಳ ಮೂಲಕ ನೀರು ಹಾಯಿಸಲು ಅನುಕೂಲವಿರುವಂತೆ ಮಾಡಿಕೊಂಡು ಬೆಳೆ ಬೆಳೆಯಬೇಕು. ಅಂದು ಬೆಳೆಯುತ್ತಿದ್ದ ಬತ್ತದ ತಳಿಗಳನ್ನು ರುಚಿ ಮತ್ತು ಬಣ್ಣದ ಆಧಾರದ ಮೇಲೆ ಮೂರು ವಿಧವಾಗಿ ವಿಂಗಡಿಸಲಾಗಿದೆ. 1. ಪರಿಮಳಯುಕ್ತ ಹಾಗೂ ಗಡಸುಅಕ್ಕಿ, 2. ವಾಸನೆಯಿಲ್ಲದ ಪೌಷ್ಟಿಕ ಅಕ್ಕಿ, 3. ಸುಮಾರು 26 ವಿಧಗಳುಳ್ಳ ಅಕ್ಕಿ. ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಚರಕ, ಸುಶ್ರುತ ಸಂಹಿತಗಳಲ್ಲಿ ಈ ಬಗ್ಗೆ ವಿವರಗಳಿವೆ. ಅಷ್ಟೇ ಅಲ್ಲದೆ

ಹೆಸರು, ಉದ್ದು, ತೊಗರಿ, ಮೆಣಸು, ಹರಳು, ಜೀರಿಗೆ, ಸಾಸಿವೆ, ಎಳ್ಳು, ಗೋಧಿ, ಕಬ್ಬು, ಬಾಳೆ, ಅಕ್ಕಿ, ಮುತಾದವುಗಳನ್ನು ಬೆಳೆಯುವ ವಿವರಗಳು ಈ ಗ್ರಂಥಗಳಲ್ಲಿ ದೊರೆಯುತ್ತವೆ. ಪ್ರಾಚೀನ ಭಾರತೀಯ ರೈತರು ಕಬ್ಬನ್ನು ಸಹಕಾರ ಪದ್ಧತಿಯನ್ನು ಅನುಸರಿಸಿ ಬೆಳೆಯುತ್ತಿದ್ದರೆಂದು ಸುಶ್ರುತ ಹೇಳಿದ್ದಾನೆ. ಜನರಿಗೆ ಬೇಕಾಗುವ ಹಣ್ಣು ಮತ್ತಿತರ ತೋಪುಗಳನ್ನು ರಾಜನೇ ಬೆಳೆಸಿ ಜನರಿಗೆ ಅನುಕೂಲ ಮಾಡಬೇಕೆಂದು ಕಶ್ಯಪ ಹೇಳಿದ್ದಾನೆ. ರಾಜ ಬೆಳೆಸಬೇಕಾದ ಉಪಯುಕ್ತ ಮರಗಳನ್ನು ಕುರಿತ ವಿವರಗಳನ್ನು ಅವನು ಕೊಡುತ್ತಾನೆ.



ಮೆಗಾಸ್ತನೀಸನು 'ಇಂಡಿಕಾ' ಗ್ರಂಥದಲ್ಲಿ ಭಾರತದಲ್ಲಿ ಬೆಳೆಯುತ್ತಿದ್ದ ಋತು ಅನುಸಾರ ಬೆಳೆಗಳ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾನೆ. ಚಳಿಗಾಲದಲ್ಲಿ ಗೋದಿ, ಬೇಸಗೆಯಲ್ಲಿ ಕಿರುಧಾನ್ಯಗಳು, ಮಳೆಗಾಲದಲ್ಲಿ ಬತ್ತ ಬೆಳೆಯುತ್ತಿದ್ದ ವಿಚಾರವನ್ನು ತಿಳಿಸಿದ್ದಾನೆ.

ಋಗ್ವೇದದಲ್ಲಿ ಆಸ್ಮ ಚಕ್ರ ಎಂಬ ನೀರೆತ್ತುವ ಸಾಧನದ ಉಲ್ಲೇಖವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ನೀರಾವರಿ ಬಾವಿಗಳು ಮತ್ತು ನೀರೆತ್ತುವ ಯಂತ್ರಗಳ ಬಗ್ಗೆ ಸಾಕಷ್ಟು ಮಾಹಿತಿಗಳಿವೆ. ಮಹಾಭಾರತದಲ್ಲಿ ನೇಗಿಲು ಪ್ರಸ್ತಾಪವಿದ್ದು ಅದನ್ನು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ ಬಳಸುತ್ತಿದ್ದರು. ನೇಗಿಲನ್ನು ದಾನ ಮಾಡುವುದು ಅತ್ಯಂತ ಗೌರವದ ಕೆಲಸವಾಗಿತ್ತು. ಕುಡುಗೋಲು, ಕುಂಟೆ, ಜರಡಿ, ಕಣಜ ಮುಂತಾದ ಉಪಕರಣಗಳು ಅಂದೂ ಬಳಕೆಯಲ್ಲಿದ್ದವು. ಕೃಷಿ ಅಭಿವೃದ್ಧಿಯಲ್ಲಿ ಸರ್ಕಾರದ ಪಾತ್ರವೇನು ? ರೈತರ ಕಾರ್ಯವೇನು ? ಮತ್ತು ಕೃಷಿಯ ಆಡಳಿತ ನಿರ್ವಹಿಸಲು ಇದ್ದಂತಹ ಅಧಿಕಾರಿಗಳ ಪ್ರಸ್ತಾಪವೂ ಬರುತ್ತದೆ. ಆಡಳಿತ ವರ್ಗದಲ್ಲಿ ಸೀತಾಧ್ಯಕ್ಷ (ಕೃಷಿ ಮುಖ್ಯಾಧಿಕಾರಿ), ಗೋಅಧ್ಯಕ್ಷ (ಪಶುಪಾಲನಾಧಿಕಾರಿ), ತುಸಮಾನಪಟಸ (ತೂಕ ಮತ್ತು ಅಳತೆ ಅಧಿಕಾರಿ), ಕುಪ್ಯಾಧ್ಯಕ್ಷ (ಅರಣ್ಯಾಧಿಕಾರಿ) ನಿವೀತಾಧ್ಯಕ್ಷ (ಹುಲ್ಲುಗಾವಲು ಅಧಿಕಾರಿ), ಮತ್ತು ಸೂತ್ರಾಧಿಕಾರಿ (ವಸ್ತು ತಯಾರಿಕಾಧಿಕಾರಿ) ಮುಖ್ಯರಾಗಿದ್ದರು. ಕಾಲಕ್ರಮೇಣ ವಸಾಹತುಶಾಹಿ ವ್ಯವಸ್ಥೆ ಮತ್ತು ಆಧುನಿಕ ಜೀವನ ಶೈಲಿಗಳಿಂದಾಗಿ ಕೃಷಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಭಾರತ ಸ್ವತಂತ್ರವಾದ ಅನಂತರ ಕೃಷಿಯ ಪ್ರಾಮುಖ್ಯತೆಯನ್ನು ಅರಿತ ನಾಯಕರು ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿಗೆ ಪ್ರಥಮ ಆದ್ಯತೆಯನ್ನು ನೀಡಿ ಅನೇಕ ಯೋಜನೆಗಳನ್ನು ರೂಪಿಸಿ ಸುಧಾರಿತ ಕೃಷಿ ಪದ್ಧತಿಗಳನ್ನು ಜಾರಿಗೆ ತಂದರು. ಇದರ ಫಲವಾಗಿಯೇ ರೂಪುಗೊಂಡಿದ್ದು ಹಸುರು ಕ್ರಾಂತಿ.

ಎ.ಎಂ.ಡಿ.

ಕೃಷಿ ಆಚರಣೆಗಳು ಕೃಷಿಗೆ ಸಂಬಂಧಿಸಿದಂತ ಭಾರತಾದ್ಯಂತ ಪ್ರಾಚೀನ ಕಾಲದಿಂದಲೂ ಅನೇಕ ಬಗೆಯ ಆಚರಣೆಗಳು ರೂಢಿಯಲ್ಲಿವೆ. ಇವು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಹೊಂದಿದರೂ ಅನನ್ಯತೆಯನ್ನು ಉಳಿಸಿಕೊಂಡೇ ಇರುತ್ತವೆ. ದಕ್ಷಿಣ ಕರ್ನಾಟಕದಲ್ಲಿ ಕೃಷಿಗೆ ಸಂಬಂಧಿಸಿದ ಮೊದಲ ಆಚರಣೆ ಹೊನ್ನಾರು ಅಥವಾ ಹೊನ್ನೇರು. ಇದನ್ನು ರೈತ ಮೊದಲ ಮಳೆ ಬಿದ್ದಾಗ ಗದ್ದೆ ಅಥವಾ ಹೊಲವನ್ನು ಉಳಲು ಏರು ಕಟ್ಟುವ ಮೂಲಕ ಆಚರಿಸುತ್ತಾನೆ. ಅಂದರೆ ಭೂಮಿತಾಯಿಯನ್ನು ಪೂಜಿಸಿ, ಎತ್ತುಗಳಿಗೆ ಮತ್ತು ಉಳುಮೆ ಮಾಡುವ ಪರಿಕರಗಳಿಗೆ ಅರಿಸಿಣ-ಕುಂಕುಮ ಹಚ್ಚಿಟ್ಟು ಅಲಂಕಾರ ಮಾಡಿ ಪೂಜಿಸುತ್ತಾರೆ. ಅನಂತರ ಸಾಂಕೇತಿಕವಾಗಿ ಉಳುಮೆ ಮಾಡುತ್ತಾರೆ. ಈ ರೀತಿಯ ಆಚರಣೆಯನ್ನು ಎಲ್ಲೆಡೆಯೂ ಕಾಣಬಹುದು. ಆದರೆ ಕರ್ನಾಟಕ ಮತ್ತು ತಮಿಳುನಾಡಿನ ಗಡಿಯಲ್ಲಿರುವ ಕನಕಪುರದ ಹತ್ತಿರವಿರುವ ಜೀನ್‌ಮಲ್ಲತ್ತದಲ್ಲಿ ಸಾಮೂಹಿಕವಾಗಿ ಹೊನ್ನಾರು ಪೂಜೆಯನ್ನು ಆಚರಿಸುತ್ತಾರೆ. ಭೌಗೋಳಿಕವಾಗಿ ತಮಿಳುನಾಡಿಗೆ ಸೇರಿದರೂ ಇಲ್ಲಿನ ಜನರ ಆಚಾರ-ವಿಚಾರವೆಲ್ಲವೂ ಕರ್ನಾಟಕದ್ದೇ.

ಕರ್ನಾಟಕದ ಬೇರೆ ಪ್ರದೇಶಗಳಲ್ಲಿ ಹೊನ್ನಾರು ಆಚರಣೆಯನ್ನು ಮಳೆ ಬಿದ್ದಾಕ್ಷಣ ಆಚರಿಸಿದರೆ, ಜೀನ್‌ಮಲ್ಲತ್ತದಲ್ಲಿ ಮಾತ್ರ ಯುಗಾದಿ ಆದ ಮೇಲೆಯೇ. ಸುಮಾರು ಹದಿನೈದು ದಿನದ ಅನಂತರದಲ್ಲಿ ಒಂದು ವಾರಗಳ ಕಾಲ ನಡೆಯುವ ಮಾರಮ್ಮನ ಹಬ್ಬದಲ್ಲಿ ಮೊದಲ ದಿನ ರಾತ್ರಿ ಈ ಆಚರಣೆ ನಡೆಯುತ್ತದೆ. ಇದನ್ನು ಸುತ್ತಮುತ್ತಲಿನ ಎಲ್ಲ ಹಳ್ಳಿಯವರು ಪಾಲ್ಗೊಂಡು ಸಂಭ್ರಮದಿಂದ ಆಚರಿಸುತ್ತಾರೆ. ಅಲ್ಲಿಯವರೆಗೆ ಯಾರು ಕೂಡ ಏರು ಕಟ್ಟುವಂತಿಲ್ಲ. ಇಲ್ಲಿ ಇನ್ನೊಂದು ವಿಶೇಷತೆಯೆಂದರೆ ಎತ್ತುಗಳ ಬದಲಾಗಿ ಮನುಷ್ಯನನ್ನು ಎತ್ತುಗಳನ್ನಾಗಿ ಮಾಡಿಕೊಂಡಿರುತ್ತಾರೆ. ಎತ್ತುಗಳಿಗಿದ್ದಂತೆ ಮನುಷ್ಯರ ತಲೆಗೆ ಪೇಟ ಕಟ್ಟಿ, ಕೊಂಬುಗಳಂತೆ ಎರಡು ಕಡ್ಡಿಗಳನ್ನು ಸಿಕ್ಕಿಸಿರುತ್ತಾರೆ. ಎತ್ತುಗಳಿಗೆ ನೊಗ-ನೇಗಿಲು ಕಟ್ಟುವಂತೆ ಮನುಷ್ಯರಿಗೂ ಕಟ್ಟಿ, ಒಬ್ಬ ವ್ಯಕ್ತಿ ಉಳುಮೆಗೆ ತೊಡಗುತ್ತಾನೆ. ಆಗ ಮತ್ತೊಬ್ಬ ವ್ಯಕ್ತಿ ಹುಲ್ಲನ್ನು ಎತ್ತುಗಳಂತೆ ಗ್ರಹಿಸಿಕೊಂಡ ಮನುಷ್ಯರ ಮುಂದೆ ಚೆಲ್ಲುತ್ತಾ ಸಾಗುತ್ತಾನೆ. ಇದು ದೇವಾಲಯದ ಹತ್ತಿರ ನಡೆಯುತ್ತದೆ. ಈ ರೀತಿಯಾಗಿ ನಡೆಯುತ್ತಿರಬೇಕಾದರೆ ಈ ಸಂದರ್ಭದಲ್ಲಿ ಹಾಸ್ಯಭರಿತವಾದ ಸಂಭಾಷಣೆಗಳು ನಡೆಯುತ್ತಿರುತ್ತದೆ. ರಾತ್ರಿ ಎರಡು ಗಂಟೆಗೆ ಪ್ರಾರಂಭವಾದ ಆಚರಣೆ ಬೆಳಗಿನ ಜಾವದವರೆಗೆ ನಡೆದರೂ ಜನರು ಅಲ್ಲಿಂದ ಕದಲದೇ ಉತ್ಸಾಹದಿಂದ ಪಾಲ್ಗೊಂಡಿರುತ್ತಾರೆ. ಕೊನೆಗೆ ಮೆರವಣಿಗೆಯೂ ಇರುತ್ತದೆ.

ಪ್ರಸಾದವಾಗಿ ರಾತ್ರಿ ನೆನೆಸಿಟ್ಟ ಅಕ್ಕಿ ಮತ್ತು ಎಳ್ಳಿಗೆ, ಕಾಯಿ ಬೆಲ್ಲವನ್ನು ಸೇರಿಸಿ ಹಂಚುತ್ತಾರೆ. ಮೊದಲು ಎತ್ತುಗಳಿಗೆ ನೀಡಲಾಗುತ್ತದೆ. ಒಟ್ಟಿನಲ್ಲಿ ರೈತನ ಬೇಸಾಯದಲ್ಲಿ ಯಾವುದೇ ಅಡ್ಡಿ-ಆತಂಕಗಳು ಅಶುಭಗಳಾಗಬಾರದೆಂದು, ಒಂದು ಶುಭ ದಿನದಲ್ಲಿ ಹೊನ್ನೇರು ಆಚರಿಸುತ್ತಾರೆ.

ಬಿಶು ಸಂಕ್ರಮಣ : ಕೊಡಗಿನಲ್ಲಿ ಮೊದಲ ಸಲ ಉಳುಮೆ ಪ್ರಾರಂಭ ಮಾಡುವಾಗ ಆಚರಿಸುವಂಥದ್ದು ಖಣಿಪೂಜೆ. ಬಿಶು ಸಂಕ್ರಮಣದಂದು ಬೆಳಗಿನ ಜಾವ ಮನೆಯನ್ನೆಲ್ಲಾ ಸ್ವಚ್ಛಗೊಳಿಸಿ ನೆಲ್ಲಕ್ಕಿ (ದೇವರನ್ನು ಪೂಜಿಸುವ ಸ್ಥಳ)ಯಲ್ಲಿ ಬಿಳಿ ಮಡಿ ಬಟ್ಟೆ, ಹಾಸಿ ನಂದಾದೀಪವನ್ನು ಹೊತ್ತಿಸಲಾಗುತ್ತದೆ. ಒಂದು ಬಾಳೆ ಎಲೆಯಲ್ಲಿ ಅಕ್ಕಿ, ಬಾಳೆಹಣ್ಣು, ತೆಂಗಿನಕಾಯಿ, ಎಲೆ ಅಡಿಕೆ, ಒಂದು ನಾಣ್ಯವನ್ನು ಗಣಪತಿ

ಮುಂದೆ ಇಡುತ್ತಾರೆ. ಅನಂತರ ದೇವರ ಪೂಜೆ ಮಾಡಿ ನೊಗ ನೇಗಿಲನ್ನು ತೆಗೆದುಕೊಂಡು ಗದ್ದೆಗೆ ಹೋಗುತ್ತಾರೆ. ಅಲ್ಲಿಯೂ ಕೂಡ ಗಣಪತಿಗೆ ಎಡೆ ಇಡಲಾಗುವುದು. ಗಂಧದಕಡ್ಡಿ ಹಚ್ಚಿ ದೇವರನ್ನು ಪ್ರಾರ್ಥಿಸಿಕೊಳ್ಳಲಾಗುವುದು. ಅಕ್ಷತೆಯನ್ನು ನೊಗನೇಗಿಲು ಮತ್ತು ಎತ್ತುಗಳ ಮೇಲೆ ಎರಚಲಾಗುವುದು. ಎಲ್ಲದಕ್ಕೂ ಅರಿಶಿನ ಕುಂಕುಮ ಹಚ್ಚಲಾಗುವುದು. ಆ ದಿನ ಶಾಸ್ತ್ರಕ್ಕಾದರೂ ಗದ್ದೆಯನ್ನು ಉಳುತ್ತಾರೆ. ಶುಭದಿನ ಉಳುಮೆ ಪ್ರಾರಂಭ ಮಾಡಿದರೆ ಯಾವುದೇ ತೊದರೆ ಇಲ್ಲದೇ ಬೇಸಾಯ ಕೆಲಸ ಸುಗಮವಾಗಿ ಸಾಗುತ್ತದೆಂಬ ನಂಬಿಕೆ ಇದೆ.

ಭೂಮಿ ಹುಣ್ಣಿಮೆ : ಇದನ್ನು ಉತ್ತರ ಕರ್ನಾಟಕದವರು 'ಶೀಗೆ ಹುಣ್ಣಿಮೆ' ಎಂದು, ಮಲೆನಾಡಿನವರು 'ಭೂಮ್ಮಣಿ ಹಬ್ಬ'ವೆಂದು ಕರೆಯುತ್ತಾರೆ. ಇದರ ಮೂಲ ನಂಬಿಕೆ ಬತ್ತದ ಕದಿರು ಹೊರಬರುವ ಸಂದರ್ಭದಲ್ಲಿ ಭೂತಾಯಿ ಗರ್ಭಿಣಿಯಾದಳೆಂದು ತಿಳಿದು, ಸೀಮಂತ ಮಾಡುವ ಆಚರಣೆ. ವಿಶೇಷವಾಗಿ ಬಿದಿರಿನಿಂದ ತಯಾರಿಸಿದ ಭೂಮ್ಮಣಿ ಬುಟ್ಟಿಯಲ್ಲಿಯೇ ಆಹಾರ ಪದಾರ್ಥಗಳನ್ನು ಮತ್ತು ಪೂಜೆಯ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಗದ್ದೆಯಲ್ಲಿ ಪೂಜಾಕಾರ್ಯವನ್ನು ನೆರವೇರಿಸಿ, ಭೂತಾಯಿಗೆ ಬಾಗಿನವನ್ನು ನೀಡುತ್ತಾರೆ.

ಹುಣ್ಣಿಮೆಯ ದಿವಸ ತಯಾರು ಮಾಡಿದ ಸುಮಾರು ಇಪ್ಪತ್ತೈದು ತರಹದ ಭಕ್ಷ್ಯ-ಭೋಜನವನ್ನು ತೆಗೆದುಕೊಂಡು ಗದ್ದೆಗೆ ಅಥವಾ ಹೊಲಕ್ಕೆ ಹೋಗುತ್ತಾರೆ. ಅಲ್ಲಿ ನಿಗದಿತ ಸ್ಥಳದಲ್ಲಿ ಚಪ್ಪರ ಹಾಕಿ ಬಾಳೆಕಂದು, ಕಬ್ಬಿನ ಜಲ್ಲೆಗಳನ್ನು ಮತ್ತು ಮಾವಿನ ತೋರಣವನ್ನು ಕಟ್ಟಿ ಅಲಂಕಾರ ಮಾಡಲಾಗುತ್ತದೆ. ಅದರ ಒಳಗೆ ಒಂದು ಹಿಡಿ ಬತ್ತದ ಪೈರನ್ನು ಒಟ್ಟುಗೂಡಿಸಿ, ನಿಲ್ಲಿಸಿರುತ್ತಾರೆ. ಅದಕ್ಕೆ ಕರಿಮಣಿ-ಬಳೆ-ಬಿಚ್ಚೋಲೆ ಮತ್ತು ತಾಳಿಯನ್ನು ತೊಡಿಸಿ ಶೃಂಗರಿಸಿ ಅನಂತರ ಕಳಸವಿಟ್ಟು ಅದರ ಮುಂದೆ ತಯಾರಿಸಿ ತಂದ ಅಡುಗೆಯನ್ನೆಲ್ಲಾ ಎಡೆ ಹಾಕಿ ಪೂಜೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಶಂಖ-ಜಾಗಟೆಯ ಸದ್ದು ಜೋರಾಗಿರುತ್ತದೆ. ಅನಂತರ ಮೊದಲೆ ತಂದ ಚರಗವನ್ನು ಭೂಮಿಗೆ ಚೆಲ್ಲುತ್ತಾರೆ. ಕೆಂಪುದಾರವನ್ನು ಎಲ್ಲರೂ ಕೈಗೆ ಕಟ್ಟಿಸಿಕೊಳ್ಳುತ್ತಾರೆ. ಭೂಮಿ ಹುಣ್ಣಿಮೆ ದಿವಸ ಕೈಗೆ ಕಟ್ಟಿಸಿಕೊಂಡ ದಾರವನ್ನು ಬತ್ತದ ಒಕ್ಕಣೆ ಸಂದರ್ಭದಲ್ಲಿ ರೋಣುಗಲ್ಲಿಗೆ ಕೈಯಿಂದ ಬಿಚ್ಚಿ ಕಟ್ಟಬೇಕು. ಅಲ್ಲಿಯವರೆಗೆ ಕೈಯಲ್ಲಿ ಹಾಗೆ ಇರಬೇಕು.

ಭೂಮಿ ತಾಯಿಗೆ ಎಡೆ ಹಾಕುವಾಗ ವಿಶೇಷವಾಗಿ ಮಾಡುವ ಪದಾರ್ಥವೆಂದರೆ ಸಾವಿರ ಸೊಪ್ಪಿನ ಪಲ್ಯ. ಕಣ್ಣಿಗೆ ಕಾಣುವ ಎಲ್ಲ ತರಹದ ಸೊಪ್ಪು (ಕುಂಬಳ ಮತ್ತು ಬದನೆ ಎಲೆಗಳನ್ನು ಬಿಟ್ಟು) ತಂದು ಉಪ್ಪು ಹಾಕದೇ ಬೇಯಿಸಿ ಮಾಡುವ ಪಲ್ಯವನ್ನು ಎಡೆ ಇಡುತ್ತಾರೆ. ಸೊಪ್ಪಿನ ಪಲ್ಯ ಮಾಡಲು ಬಳಸಿದ ಪಾತ್ರೆಯನ್ನು ಕೂಡಲೇ ತೊಳೆಯುವಂತಿಲ್ಲ. ಅದನ್ನು ದೀಪಾವಳಿ ಹಬ್ಬದ ಮರುದಿವಸವೇ ತೊಳೆಯಬೇಕು.

ಧಾನ್ಯದ ರಕ್ಷಣೆಯ ದೃಷ್ಟಿಯಿಂದಲೂ ಈ ಹಬ್ಬದಲ್ಲಿ ವಿಶೇಷತೆ ಇದೆ. ಭೂತಾಯಿಗೆ ಮಾತ್ರ ಎಡೆ ಇಕ್ಕುವುದಿಲ್ಲ. ಜೊತೆಗೆ ಕಾಗೆಗಳಿಗೂ ಇಲಿಗಳಿಗೂ ಎಡೆ ಇಡುತ್ತಾರೆ. ಅಂದರೆ ಅವುಗಳಿಂದ ಯಾವುದೇ ರೀತಿಯ ತೊಂದರೆ ಬಾರದಿರಲಿ ಎಂದು. ಭೂತಾಯಿಗೆ ಇಟ್ಟ ಎಡೆಯನ್ನು ಗದ್ದೆಯ ಯಾವುದಾದರೊಂದು ನಿರ್ದಿಷ್ಟ ಮೂಲೆಯಲ್ಲಿ ಹೂತು ಹಾಕುತ್ತಾರೆ. ಬೆಳೆ ಕೊಯ್ಲಿನ ಸಂದರ್ಭದಲ್ಲಿ ಅದನ್ನು ತೆಗೆದು ಸುಟ್ಟು ಭಸ್ಮಮಾಡಿ, ಧಾನ್ಯ ತುಂಬುವ ಕಣಜದಲ್ಲಿ ಇಡುತ್ತಾರೆ. ಇದರಿಂದಾಗಿ ಧಾನ್ಯಗಳಿಗೆ ಹುಳು ಬರುವುದಿಲ್ಲವೆಂಬ ನಂಬಿಕೆ ಜನರಲ್ಲಿದೆ.

ಮಕ್ಕಳ ಗುಡ್ಡೆ ಹುಣ್ಣಿಮೆ : ಈ ಆಚರಣೆ ಭೂಮಿ ಹುಣ್ಣಿಮೆಯ ಅನುಕರಣೆ. ಇದನ್ನು ಆಚರಿಸುವವರು ಮಕ್ಕಳೇ. ಆದರೆ ಗದ್ದೆಗಳಿಗೆ ಬದಲಾಗಿ ಊರ ಹೊರಗಿನ ಬೇಣದಹುಲ್ಲಿಗೆ ಎಡೆ ಹಾಕಿ ಪೂಜೆ ಮಾಡುತ್ತಾರೆ. ಹಬ್ಬದ ದಿನ ಪ್ರತಿ ಮನೆಯಿಂದ ಒಬ್ಬೊಬ್ಬರಂತೆ ಮಕ್ಕಳು ಒಂದೆಡೆ ಸೇರಿ ಪೂಜೆಗೆ ಬೇಕಾದ ಸಾಮಾನುಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ಬೇಣದತ್ತ ಸಾಗುತ್ತಾರೆ. ಅಲ್ಲಿ ಎಡೆಯನ್ನು ಹಾಕಿ ಪೂಜೆಗೈದು ಬಾಗಿನ ಅರ್ಪಿಸಿ ಊರಿಗೆ ಮರಳುತ್ತಾರೆ. ಜಾನುವಾರುಗಳಿಗೆ ಮೇವು ಹೆಚ್ಚು ಸಿಗಲಿ ಎಂದು ಇದನ್ನು ಆಚರಿಸುತ್ತಾರೆ.

ಕೆಡ್ಡಸ (ಖೆಡ್ಡಾಸ) : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಪೂಜೆ ಮಾಡುವುದರ ಮೂಲಕ ಈ ಹಬ್ಬವನ್ನು ಆಚರಿಸುತ್ತಾರೆ. ಇದು ಫಲವಂತಿಕೆಯ ಸಂಕೇತವಾಗಿದೆ. ಭೂತಾಯಿ ರಜಸ್ವಲೆಯಾಗುವ ಮೂರು ದಿನ ಆಚರಿಸಲ್ಪಡುವ ಹಬ್ಬ. ಅಂದರೆ ಮಕರ ಮಾಸದ ಇಪ್ಪತ್ತೇಳನೆಯ ದಿನದಿಂದ ಪ್ರಾರಂಭವಾಗಿ ಕುಂಭ ಸಂಕ್ರಮಣದವರೆಗಿನ ಮೂರು ದಿನ. ಖೆಡ್ಡಾಸದಲ್ಲಿ ಹೆಣ್ಣು ಮಕ್ಕಳದೇ ಪ್ರಧಾನ ಪಾತ್ರ. ಭೂತಾಯಿ ಮುಟ್ಟಾಗುವ ಈ ಮೂರು ದಿನಗಳಲ್ಲಿ ಭೂಮಿಯನ್ನು ಅಗೆಯುವಂತಿಲ್ಲ, ಉಳುಮೆ ಮಾಡುವಂತಿಲ್ಲ, ಒಟ್ಟಿನಲ್ಲಿ ಭೂಮಿಗೆ ನೋವಾಗುವ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಆಕಸ್ಮಾತ್ ಇದಕ್ಕೆ ವಿರುದ್ಧವಾಗಿ ನಡೆದರೆ ಮನೆಯ ಹೆಣ್ಣುಮಕ್ಕಳು ಬಂಜೆಯಾಗುತ್ತಾರೆಂಬ ನಂಬಿಕೆ ಇದೆ.

ಮನೆಯ ಮುಂದಿನ ಅಂಗಳವನ್ನು ಸ್ವಚ್ಛಗೊಳಿಸಿ, ಸಗಣಿಯಿಂದ ಸಾರಿಸಿ, ಒಂದು ಮೊಳದಷ್ಟು ಅಗಲದ ವೃತ್ತವೊಂದನ್ನು ಬರೆಯುತ್ತಾರೆ. ಅದರೊಳಗೆ ಬಿಳಿಯ ಮಡಿಬಟ್ಟೆ, ಕಿರುಗೆಜ್ಜೆ, ಕಿರುಗತ್ತಿ, ತೆಂಗಿನ ಸೋಗೆಯ ಕಡ್ಡಿಗಳನ್ನು ಇಡುತ್ತಾರೆ, ಮೂರು ದಿನಗಳ ಕಾಲ ಬೇಸಾಯದಲ್ಲಿ ಗಂಡಸರು ತಮ್ಮನ್ನು ತೊಡಗಿಸಿಕೊಳ್ಳದೇ ಇರುವುದರಿಂದ ಬೇಟೆಯಾಡಲು ಹೋಗುತ್ತಾರೆ. ಇಲ್ಲದಿದ್ದರೆ ಕೋಳಿ ಅಂಕವನ್ನು ಆಡುತ್ತಾರೆ. ಕೆಲವೆಡೆಯಲ್ಲಿ ಗಂಡಸರೆ ಅಡುಗೆ ಕೆಲಸವನ್ನು ಮಾಡಬೇಕಾಗುತ್ತದೆ. ಆ ದಿನಗಳಲ್ಲಿ ಮಾಂಸವನ್ನು ತಿನ್ನದಿದ್ದರೆ ಮೂಳೆಗಳು ಸವಕಲು ಆಗುತ್ತದೆಂಬ ನಂಬಿಕೆಯಿಂದಲೆ ಬೇಟೆಯಾಡುತ್ತಾರೆ.

ಮೂರನೆಯ ದಿವಸ ಬೆಳಗಿನ ಜಾವದಲ್ಲಿ ಮನೆಯ ಮುತ್ತೈದೆಯರು ಈ ಮೊದಲೇ ಸಗಣಿ ಹಾಕಿ ಸಾರಿಸಿದ ಜಾಗದಲ್ಲಿ ಏಳು ಸರೊಳಸೊಪ್ಪುಗಳನ್ನು ಸಾಲಾಗಿರಿಸಿ, ಹಣತೆಯನ್ನು ಹಚ್ಚುತ್ತಾರೆ. ಅರಿಶಿನ, ಕುಂಕುಮ, ಮಸಿ, ಎಣ್ಣೆ, ಸೀಗೆ, ಬಾಗೆ ತೊಗಟೆಗಳು, ಹೆಸರುಧಾನ್ಯದ ಪುಡಿ, ವೀಳೆಯದೆಲೆ, ಗಂಧದ ಕಡ್ಡಿಗಳನ್ನು ಇರಿಸುತ್ತಾರೆ. ಅಂದರೆ ಭೂಮಿತಾಯಿಯ ಮೈಲಿಗೆಯನ್ನು ತೊಳೆದು ಸ್ವಚ್ಛತೆಯಿಂದ ಬರಮಾಡಿಕೊಳ್ಳುವುದರ ಸಂಕೇತವಾಗಿದೆ. ಹಾಗಾಗಿ ಭೂತಾಯಿಯ ಅಲಂಕಾರಕ್ಕಾಗಿ ಕನ್ನಡಿ, ಬಾಚಣಿಗೆ, ಕರಿಮಣಿಯನ್ನು ಇರಿಸಿರುತ್ತಾರೆ.

ನಾಲ್ಕನೆಯ ದಿನ ಮನೆಯನ್ನೆಲ್ಲ ಶುದ್ಧೀಕರಿಸಿ, ಮುತ್ತೈದೆಯರು ತಾವು ಸ್ನಾನ ಮಾಡಿ ಮಡಿಯುಟ್ಟು ಭೂತಾಯಿಯನ್ನು ಬರಮಾಡಿಕೊಳ್ಳುತ್ತಾರೆ. ಆ ದಿವಸ ಭೂತಾಯಿಗೆ ಎಣ್ಣೆಯನ್ನು

ಹೊಯ್ಯುತ್ತಾರೆ. ಒಟ್ಟಿನಲ್ಲಿ ಹೆಣ್ಣು ಮಗಳೊಬ್ಬಳು ರಜಸ್ವಲೆಯಾದಾಗ ಮಾಡುವ ಕ್ರಿಯೆಯಂತೆ, ಭೂದೇವಿಗೂ ಮಾಡುತ್ತಾರೆ. ಪುಷ್ಪವತಿಯೊಬ್ಬಳು ಫಲವತಿಯಾಗುವುದರ ಸಂಕೇತವಾಗಿ ಇದನ್ನು ಆಚರಿಸಲಾಗುತ್ತದೆ.

ಕಾರಬ್ಬ : ದಕ್ಷಿಣ ಕರ್ನಾಟಕದಲ್ಲಿ ಆಚರಿಸುವ ಹಬ್ಬ. ಇದನ್ನು ಹೆಚ್ಚಾಗಿ ಗೊಲ್ಲಸಮುದಾಯದವರು ಆಚರಿಸುತ್ತಾರೆ. ಮೃಗಶಿರ, ಆರಿದ್ರಾ ಮಳೆಗಳ ಸಂದರ್ಭದಲ್ಲಿ, ಬೇಸಾಯ ಪ್ರಾರಂಭಿಸುವ ಮೊದಲು ಆಚರಿಸುತ್ತಾರೆ. ಮಾವು-ಬೇವು ಮತ್ತು ಲಕ್ಕಿ ಎಲೆಗಳಿಂದ ತೋರಣ ಕಟ್ಟುತ್ತಾರೆ. ಬೇಸಾಯಕ್ಕೆ ಬಳಸುವ ಸಲಕರಣೆಗಳನ್ನೆಲ್ಲಾ ಒಂದೆಡೆ ಕಲೆಹಾಕಿ ಅವುಗಳನ್ನೆಲ್ಲಾ ತೊಳೆದು ಸ್ವಚ್ಛಗೊಳಿಸಿ, ಸುಣ್ಣ-ಕೆಮ್ಮಣ್ಣು ಹಚ್ಚಿ ಅವುಗಳಿಗೆ ಅರಿಶಿಣ ದಾರವನ್ನು ಕಟ್ಟಲಾಗುತ್ತದೆ. ಹಾಗೆಯೇ ದನ-ಕರುಗಳಿಗೂ ಅರಿಶಿಣ ದಾರವನ್ನು ಕಟ್ಟಲಾಗುತ್ತದೆ. ಅನಂತರ ಅಕ್ಷತೆ ಹಾಕಿ ಎಡೆ ಹಾಕುತ್ತಾರೆ. ಈ ಹಬ್ಬವನ್ನು ಸಸಿಮಡಿ (ಒಟ್ಲು) ಮಾಡುವಾಗ ಆಚರಿಸುತ್ತಾರೆ. ಬಿದಿರಿನಿಂದ ಮಾಡಿದ ಬುಟ್ಟಿಯಲ್ಲಿ ಬಿತ್ತನೆಗೆ ಬೇಕಾದ ಧಾನ್ಯವನ್ನು ತುಂಬಿಸಿ, ನೆಲ ಸಾರಿಸಿ ರಂಗೋಲಿ ಬಿಡಿಸಿದ ಸ್ಥಳದಲ್ಲಿ ಅಂದರೆ ಮನೆಯ ಮಧ್ಯಭಾಗದಲ್ಲಿ ಇಟ್ಟು ಅದಕ್ಕೂ ಪೂಜೆಯನ್ನು ಸಲ್ಲಿಸುತ್ತಾರೆ.

ತುಮಕೂರು ಜಿಲ್ಲೆಯ ಶೆಟ್ಟಿಕೆರೆಯಲ್ಲಿ ಮಾತ್ರ ಈ ಹಬ್ಬವನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಹಾಗೆಯೇ ಹಿಂಗಾರಿನಲ್ಲಿ ಮತ್ತು ಮುಂಗಾರಿನಲ್ಲಿ ಯಾವ ಬೆಳೆ ಬಿತ್ತಬೇಕೆಂಬುದನ್ನು ನಿಗದಿಪಡಿಸುತ್ತಾರೆ.

ಕಾರಹುಣ್ಣಿಮೆ : ವಿಶೇಷವಾಗಿ ಎತ್ತುಗಳನ್ನು ಪೂಜಿಸುವ ಹಬ್ಬ. ಕರ್ನಾಟಕದ ಬಯಲು ಸೀಮೆ ಮತ್ತು ಮಹಾರಾಷ್ಟ್ರದ ಗಡಿ ಭಾಗದಲ್ಲಿ ಎರಡು ದಿನಗಳ ಕಾಲ ಆಚರಿಸುತ್ತಾರೆ. ಇದು ಮಳೆಗಾಲದ ಮೊದಲಲ್ಲಿ ಬರುವ ಹುಣ್ಣಿಮೆಯ ಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮ. ಸಂಕ್ರಾಂತಿ ಹಬ್ಬದಲ್ಲಿ ಮಾಡುವಂತೆ ಎತ್ತುಗಳನ್ನು ತೊಳೆದು, ಅವುಗಳನ್ನು ಅಲಂಕರಿಸಿ ಪೂಜಿಸುತ್ತಾರೆ. ಹೀಗೆ ಅಲಂಕರಿಸಿದ ಎತ್ತುಗಳನ್ನು ಮೆರೆವಣಿಗೆಗೆ ಕೊಂಡೊಯ್ಯುತ್ತಾರೆ. ಅಗಸೆಯ ಬಾಗಿಲಿಗೆ ಬಂದಾಗ ಮುತ್ತೈದೆಯರು ಎತ್ತುಗಳಿಗೆ ಆರತಿ ಬೆಳಗುತ್ತಾರೆ. ಅನಂತರ ಬಣ್ಣ ಬಳಿದ ಎತ್ತುಗಳನ್ನು ಓಡಿಸಲಾಗುತ್ತದೆ. ಅವುಗಳಲ್ಲಿ ಕರಿ ಅಥವಾ ಕೆಂಪು ಬಣ್ಣದ ಎತ್ತು ಮುಂದಾದರೆ ಮುಂಗಾರಿನ ಧಾನ್ಯ ಹೆಚ್ಚು. ಬಿಳಿಯ ಎತ್ತು ಮುಂದಾದರೆ ಆ ವರ್ಷ ಹಿಂಗಾರಿನ ಧಾನ್ಯ ಹೆಚ್ಚಾಗುತ್ತದೆ ಎಂದು ನಂಬುತ್ತಾರೆ.

ಕೂರಿಗೆ ಪೂಜೆ : ಬೀಜ ಬಿತ್ತನೆಗೆ ಬಳಸುವ ಉಪಕರಣವೇ ಕೂರಿಗೆ. ಐದು ಅಥವಾ ಏಳು ಸಾಲುಗಳಲ್ಲಿ ಬಿತ್ತನೆ ಮಾಡಲು ಐದು ಅಥವಾ ಏಳು ತಾಳುಗಳುಳ್ಳ ಕೂರಿಗೆಗಳಿರುತ್ತವೆ. ಸಾಲು ಬಿತ್ತನೆ ಮಾಡಲು ತುಂಬ ಅನುಕೂಲಕರವಾದ ಕೂರಿಗೆಯನ್ನು ಗಟ್ಟಿಯಾದ ಮರದಿಂದ, ದಿಂಡನ್ನು ಮತ್ತು ಕೊಳವೆಗಳನ್ನು ಬಿದಿರಿನಲ್ಲಿ ಮಾಡಿರುತ್ತಾರೆ. ರಾಗಿ, ಜೋಳ ಮತ್ತು ಅಕ್ಕಡಿ ಕಾಳುಗಳನ್ನು ಬಿತ್ತಲು ಸಹಾಯಕವಾಗುತ್ತದೆ. ಕೆಲವರು ಮನೆಯಲ್ಲಿಯೇ ಕೂರಿಗೆಗೆ ಪೂಜೆ ಸಲ್ಲಿಸುತ್ತಾರೆ. ಕೆಲವರು ಬಿತ್ತನೆ ಮಾಡುವ ಸ್ಥಳದಲ್ಲಿ ಪೂಜೆ ಸಲ್ಲಿಸುತ್ತಾರೆ. ಕೂರಿಗೆಗೆ ಅರಿಸಿನ ಕುಂಕುಮ ಹಚ್ಚಿ, ಹೂವಿನ ಮಾಲೆಯನ್ನು ಹಾಕಿ ಅಲಂಕರಿಸುತ್ತಾರೆ. ಇದಕ್ಕಿಂತ ಮೊದಲು ಕೂರಿಗೆಯನ್ನು ಸ್ವಚ್ಛಗೊಳಿಸಿ, ಅದು ಸರಿಯಾಗಿದೆಯಾ ಎಂದು ಪರೀಕ್ಷಿಸಲಾಗುತ್ತದೆ. ಮುತ್ತೈದೆಯರು ಸೇರಿ ಕೂರಿಗೆಗೆ ಪೂಜೆ ಸಲ್ಲಿಸಿ, ಬಿತ್ತನೆ ಮಾಡಲು ನಿಂತ ವ್ಯಕ್ತಿಯ ಜೋಳಿಗೆಗೆ ವಿವಿಧ ರೀತಿಯ ಧಾನ್ಯವನ್ನು ಕೊಡುತ್ತಾರೆ. ಒಟ್ಟಿನಲ್ಲಿ ಹದವಾಗಿ ಎಲ್ಲ ಕಡೆಗೂ ಬೀಜ ಬಿತ್ತಬೇಕೆಂಬ ಉದ್ದೇಶದಿಂದ ಕೂರಿಗೆ ಪೂಜೆಯನ್ನು ಮಾಡಲಾಗುತ್ತದೆ.

ಹುತ್ತರಿ ಹಬ್ಬ : ಬತ್ತದ ಬೆಳೆ ಬಂದ ಸಂದರ್ಭದಲ್ಲಿ ಕೊಡಗಿನಲ್ಲಿ ಆಚರಿಸುವ ಹಬ್ಬ. ನವೆಂಬರ್ ಅಥವಾ ಡಿಸಂಬರ್ ತಿಂಗಳಿನಲ್ಲಿ ಬರುವ ಹುಣ್ಣಿಮೆ ದಿನದಂದು ರೋಹಿಣಿ ನಕ್ಷತ್ರದಲ್ಲಿ ಕದಿರನ್ನು ಮನೆಗೆ ತರುವ



ಕಾರ್ಯಕ್ರಮವೇ ಹುತ್ತರಿ. ಇದನ್ನು ಸುಗ್ಗಿಯ ಹಬ್ಬವೆಂದು ಕರೆಯಬಹುದು. ಹುತ್ತರಿ ಹಬ್ಬಕ್ಕೆಂದೇ ಮನೆಗಳಿಗೆ ಸುಣ್ಣ ಬಣ್ಣ ಬಳಿದು ಶೃಂಗರಿಸಲಾಗುತ್ತದೆ. ಹಬ್ಬದ ದಿನದಂದು ತಳಿರು ತೋರಣಗಳಿಂದ ಅಲಂಕರಿಸಿ, ವಿವಿಧ ರೀತಿಯ ಭಕ್ಷ್ಯ ಭೋಜನಗಳನ್ನು ಸಿದ್ಧಪಡಿಸಲಾಗುತ್ತದೆ. ಮಾಂಸಾಹಾರ ನಿಷಿದ್ಧ. ಅಡಿಕೆ ಹಿಟ್ಟು, ತಂಬಿಟ್ಟು ಮತ್ತು ಹುತ್ತರಿಗೆಣಸು ಆ ದಿನ ಮಾಡಲೇಬೇಕಾದ ತಿನಿಸುಗಳು. ದೂರದ ಊರಿನಲ್ಲಿರುವವರು ಕೂಡ ಹಬ್ಬಕ್ಕೆಂದು ತಮ್ಮ ತವರಿಗೆ ಬಂದೇ ಬರುತ್ತಾರೆ.

ಕಣ(ಕಳ)ವನ್ನು ಸಗಣಿಯಿಂದ ಸಾರಿಸಿ, ರಂಗೋಲಿಯನ್ನು ಬಿಡಿಸಿರುತ್ತಾರೆ. 5 ತರಹದ ಎಲೆ ಅಂದರೆ (ಮಾವು, ಹಲಸು, ಗೇರು, ಕುಂಬಳ, ಅರಳಿ ಮರದ ಎಲೆಗಳು) ಅವುಗಳನ್ನು ಒಂದರ ಹಿಂದೆ ಒಂದನ್ನು ಜೋಡಿಸಿ ಅಚ್ಚಿ ನಾರಿನಿಂದ ಕಟ್ಟಿರುತ್ತಾರೆ. ಈ ಮೊದಲೇ ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಪ್ರತಿಯೊಂದು ಕಾರ್ಯವನ್ನು ಮಾಡಬೇಕಾಗುತ್ತದೆ. ಎಲೆಗಳನ್ನು ಜೋಡಿಸಿ ಕಟ್ಟುವುದು (ನೆರೆ ಕಟ್ಟುವುದು), ಗದ್ದೆಗೆ ಹೋಗಿ ಕದಿರನ್ನು ಕೊಯ್ಯುವುದು, ಅನಂತರ ಅದನ್ನು ತಂದು ಮನೆಯ ಒಳಗಡೆ ಬರಮಾಡಿಕೊಂಡು, ಎಲ್ಲ ವಸ್ತುಗಳಿಗೂ ಕಟ್ಟುವುದು. ಹೀಗೆ ಪ್ರತಿಯೊಂದು ನಿಗದಿತ ಮುಹೂರ್ತದಲ್ಲಿಯೇ ನಡೆಯಬೇಕಾಗುತ್ತದೆ. ಅಂದರೆ ಧಾನ್ಯಲಕ್ಷ್ಮಿಯನ್ನು ಮನೆತುಂಬಿಸಿಕೊಳ್ಳುವ ರೀತಿ ಇದು. ಅನಂತರ ಊಟೋಪಚಾರ ನಡೆಯುತ್ತದೆ.

ಮನೆಯ ಯಜಮಾನ ಮುಂದೆ ನಿಂತು ಈ ಎಲ್ಲ ಕಾರ್ಯವನ್ನು ಮಾಡುತ್ತಾನೆ. ಇದೆಲ್ಲವೂ ರಾತ್ರಿ 7 ಗಂಟೆಯ ಅನಂತರವೇ ನಡೆಯುವುದು. ಗದ್ದೆಗೆ ಕದಿರನ್ನು ತರಲು ಹೋಗುವ ಸಂದರ್ಭದಲ್ಲಿ ಮನೆಯ ಹೆಣ್ಣು ಮಗಳು ತಟ್ಟೆಯಲ್ಲಿ ನಂದಾದೀಪ, ಎಲೆ ಅಡಿಕೆ, ಅಕ್ಕಿ ಇಟ್ಟುಕೊಂಡು ಹೋಗಬೇಕು. ಮನೆಯ ಯಜಮಾನ ಮಡಿಬಟ್ಟೆಯುಟ್ಟು ಕದಿರನ್ನು ಕೊಯ್ಯಲು ಕತ್ತಿ ತೆಗೆದುಕೊಂಡು ಹೋಗಬೇಕು. ಉಳಿದವರೆಲ್ಲ ಪಟಾಕಿ ಸಿಡಿಸುತ್ತಾ ಪೋಲಿ ಪೋಲಿಯೇ ಬಾ ಎಂದು ದೇವರ ನಾಮಸ್ಮರಣೆಯನ್ನು ಘಂಟಾಘೋಷವಾಗಿ ಮಾಡುತ್ತಾ ಸಾಗುತ್ತಾರೆ. ಅವರಲ್ಲಿ ಒಬ್ಬನ ಕೈಯಲ್ಲಿ ಕೋವಿ ಇರುತ್ತದೆ. ಕದಿರನ್ನು ಕೊಯ್ಯುವ ಸಂದರ್ಭದಲ್ಲಿ ಎಲ್ಲರ ಒಪ್ಪಿಗೆಯನ್ನು ಪಡೆದು ಕೊಯ್ಯುತ್ತಾನೆ. ಆಗ ಆಕಾಶದೆಡೆಗೆ ಗುಂಡನ್ನು ಹಾರಿಸಲಾಗುತ್ತದೆ. ಹೀಗೆ ಗದ್ದೆಯಿಂದ ಕದಿರನ್ನು ನೇರವಾಗಿ ಕಣಕ್ಕೆ ತೆಗೆದುಕೊಂಡು ಹೋಗಿ ಅನಂತರ

ಮನೆಗೆ ತರುತ್ತಾರೆ. ಮನೆಯಲ್ಲಿದ್ದವರು ಆರತಿ ಬೆಳಗಿ, ಹಾಲು-ತುಪ್ಪ ಕೊಟ್ಟು ಬರಮಾಡಿಕೊಳ್ಳುತ್ತಾರೆ. ತಂದಂತಹ ಕದಿರನ್ನು ದೇವರ ಕೋಣೆಯಲ್ಲಿಟ್ಟು ಪೂಜೆ ಮಾಡಿ ಅಟ್ಟಕ್ಕೆ ತೆಗೆದುಕೊಂಡು ಹೋಗಿ ನಮಸ್ಕಾರ ಮಾಡಿ ಬರುತ್ತಾರೆ. ಅನಂತರ ಕಿರಿಯರೆಲ್ಲ ಹಿರಿಯರ ಪಾದಮುಟ್ಟಿ ನಮಸ್ಕಾರ ಮಾಡುತ್ತಾರೆ. ಮನೆಯ ಒಳಗಡೆ ಇರುವ ಮುಖ್ಯವಾದ ವಸ್ತುಗಳಿಗೆ ಆಗಲೇ ಕದಿರನ್ನು ಕಟ್ಟುತ್ತಾರೆ. ಉಳಿದಂತೆ ಮಾರನೆ ದಿನ ಬೆಳಗ್ಗೆ ಕಟ್ಟಲಾಗುತ್ತದೆ. ಹೀಗೆ ಶುಭದಿನದಂದು ಧಾನ್ಯವನ್ನು ತರುವ ಸಂಪ್ರದಾಯ ಕೊಡಗಿನಲ್ಲಿ ಹೆಚ್ಚಾಗಿರುತ್ತದೆ. ಸಾಂಕೇತಿಕವಾಗಿ ಬತ್ತವನ್ನು ತಂದ ಮೇಲೆ ಮತ್ತೇ ಯಾವಾಗ ಬೇಕಾದರೂ ಅದನ್ನು ಕಟಾವು ಮಾಡಿ ಮನೆಗೆ ತರಬಹುದು.

ಕಾಸರಕದ ಕೊಂಬೆ ನೆಡುವಿಕೆ : ದಕ್ಷಿಣ ಕನ್ನಡದಲ್ಲಿ ಆಟ (ಜುಲೈ-ಆಗಸ್ಟ್) ತಿಂಗಳಿನಲ್ಲಿ ಬೆಳೆಯನ್ನು ರಕ್ಷಿಸುವುದಕ್ಕಾಗಿ ಕಾಸರಕದ ಕೊಂಬೆ ನೆಡುವ ಆಚರಣೆಯನ್ನು ಮಾಡುತ್ತಾರೆ. ಆ ತಿಂಗಳಿನಲ್ಲಿ ಬತ್ತದ ಸಸಿಗಳನ್ನು ನೆಟ್ಟಿರುತ್ತಾರೆ. ಅದಕ್ಕೆ ರೋಗರುಜಿನಗಳು ತಟ್ಟದ ಹಾಗೆ ರಕ್ಷಣೆ ಪಡೆಯಲು ಕಾಸರಕ ಗಿಡದ ರೆಂಬೆಗಳನ್ನು ಗದ್ದೆಯಲ್ಲಿ ನೆಡುತ್ತಾರೆ. ಆಟ ತಿಂಗಳಿನಲ್ಲಿ ಬರುವ ಅಮವಾಸ್ಯೆಯ ದಿನ ಈ ಕಾರ್ಯಕ್ರಮವಿರುತ್ತದೆ.

ಕೊಂತಿ ಪೂಜೆ : ಕರ್ನಾಟಕದ ಮೈಸೂರು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಕೊಂತಿ ಪೂಜೆಯ ಆಚರಣೆ ಕಂಡುಬರುತ್ತದೆ. ಇದಕ್ಕೆ ಮಹಾಭಾರತದ ಕಥೆಯ ಹಿನ್ನೆಲೆ ಇದೆ. ಕಾರ್ತಿಕಮಾಸದಲ್ಲಿ ಮಾಡುವ ಕೊಂತಿ ಪೂಜೆಗೆ ಖಾರ ಅರೆಯಲು ಬಳಸುವ ಕೊಂತದಾಕಾರದ ಕಲ್ಲೇ ಮೂರ್ತಿ. ಬೆಸ ಸಂಖ್ಯೆಯ ಎಕ್ಕದೆಲೆಯ ಮೇಲೆ ಕೊಂತಮ್ಮ ಕಲ್ಲಿನ ಮೂರ್ತಿಯನ್ನು ಕೂರಿಸಿ ಪೂಜಿಸಲಾಗುತ್ತದೆ. ಅದನ್ನು ಮೊದಲೆ ಶೃಂಗಾರ ಮಾಡಲಾಗಿರುತ್ತದೆ. ಪೂಜೆ ಐದು ಅಥವಾ ಒಂಬತ್ತು ದಿನ ಆಚರಣೆ ಇದು ಮುಗಿದ ಬಳಿಕ ಕೊಂಬು ಕಹಳೆ ತಮಟೆ ಡೋಲು ವಾದ್ಯಗಳೊಂದಿಗೆ ಮೆರವಣಿಗೆ ಕೊಂಡೊಯ್ಯಲಾಗುತ್ತದೆ. ಅನಂತರ ಬೆಳೆ ಇರುವ ಹೊಲದಲ್ಲಿ ವಿಸರ್ಜಿಸಲಾಗುತ್ತದೆ. ಕೊಂತಿ ಪದಗಳಲ್ಲಿ 'ಅವರೇಯ ಹೊಲದಲ್ಲಿ, ಅವರೆ ಪಾಂಡವರು' ಅಂದರೆ ಅವರೆ ಹೊಲದಲ್ಲಿ ಪಾಂಡವರು ಇದ್ದಾರೆ ಎಂಬ ನಂಬಿಕೆ. ಹಾಗಾಗಿ ತಾಯಿ ಕುಂತಿಯನ್ನು ಮಕ್ಕಳ ಜೊತೆ ಸೇರಿಸಲಾಯಿತು ಎನ್ನುವ ಹಿನ್ನೆಲೆಯೊಂದಿಗೆ ಹೊಲದಲ್ಲಿ ಕೊಂತಮ್ಮನನ್ನು ವಿಸರ್ಜಿಸುತ್ತಾರೆ.

ಚರಗ ಚೆಲ್ಲುವುದು : ಚರಗ ಚೆಲ್ಲುವುದು ಕೃಷಿಕರಲ್ಲಿ ಕಂಡು ಬರುವ ಒಂದು ಆಚರಣೆ. ಬೆಳೆಗಳಲ್ಲಿ ಕಂಡು ಬರುವ ರೋಗಗಳನ್ನು ನಿವಾರಿಸುವ ಒಂದು ಮಾರ್ಗ. ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ಬೆಳೆಗಳಿಗೆ ಚರಗ ಚೆಲ್ಲುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಮುದ್ದೆ, ಅನ್ನ ಅಥವಾ ಮನೆಯಲ್ಲಿ ತಯಾರಿಸಿದ ಯಾವುದಾದರೂ ಪದಾರ್ಥವನ್ನು ನೀರಿನಲ್ಲಿ ತೆಳ್ಳಗೆ ಕಲಸಿಕೊಂಡು ಕುಡಿಕೆಯಲ್ಲಿ ತುಂಬಿಸಿಕೊಂಡು ಗದ್ದೆ ಅಥವಾ ಹೊಲದ ಸುತ್ತ ಚೆಲ್ಲುತ್ತಾರೆ. ಚರಗ ಚೆಲ್ಲಲು ಇಬ್ಬರು ಬೇಕು. ಒಬ್ಬ ಬೆಂಡುಗೊಳ್ಳಿಯನ್ನು ಒಂದು ಕೈಯಲ್ಲಿ ಮತ್ತು ಕುಡುಗೋಲನ್ನು ಇನ್ನೊಂದು ಕೈಯಲ್ಲಿ ಹಿಡಿದು ಮುಂದೆ ಮುಂದೆ ಸಾಗುತ್ತಿದ್ದರೆ, ಹಿಂದಿನಿಂದ ಇನ್ನೊಬ್ಬ ಕುಡಿಕೆಯಲ್ಲಿ ತಯಾರಿಸಿ ತಂದ ಚರಗವನ್ನು ಚೆಲ್ಲುತ್ತಾ 'ಹೋಲಿಗ್ಯ ಹೋಲಿಗ್ಯ' ಎಂದು ಹೇಳುತ್ತಾ ಸಾಗುತ್ತಾನೆ. ಇದರರ್ಥ ಚರಗ ಚೆಲ್ಲುತ್ತಾ 'ಹೋಲಿಗ್ಯ' ಎಂದು ಹೇಳಿದ ಪದ ಎಷ್ಟು ದೂರದವರೆಗೆ ಕೇಳಿಸುತ್ತದೆಯೋ ಅಲ್ಲಿಯವರೆಗಿನ ಬೆಳೆ ಸಮೃದ್ಧವಾಗಿ ಬೆಳೆಯುತ್ತದೆ ಎಂಬ ನಂಬಿಕೆ ಇದೆ. ಹೀಗೆ ಚರಗ ಚೆಲ್ಲುವುದರಿಂದ ಹುಳು-ಹುಪ್ಪಟೆಗಳ ನಿವಾರಣೆಯಾಗುತ್ತದೆ ಮತ್ತು ಪೀಡೆ ಪರಿಹಾರವಾಗುತ್ತದೆ ಎಂಬ ಭಾವನೆಯೂ ಇದೆ. ಇದರಿಂದ ಇನ್ನೊಂದು ಪ್ರಯೋಜನವೂ ಇದೆ. ಚರಗದಲ್ಲಿ ಅನ್ನ ಮುದ್ದೆ ಇನ್ನಿತರ ಪದಾರ್ಥಗಳ ಚೂರುಗಳು ಇದ್ದೇ ಇರುತ್ತದೆ. ಇದನ್ನು ತಿನ್ನಲು ಹಕ್ಕಿಗಳು ಅಲ್ಲಿಗೆ ಧಾವಿಸುತ್ತವೆ. ಹಕ್ಕಿಗಳು ಈ ಪದಾರ್ಥಗಳನ್ನು ತಿಂದು ಮುಗಿಸಿದ ಮೇಲೆ, ಅಲ್ಲಿ ಇರತಕ್ಕಂತಹ ಹುಳು-ಹುಪ್ಪಟೆಯನ್ನು ತಿಂದು ಹಾಕುತ್ತವೆ.

ಎಳ್ಳಮವಾಸ್ಯೆ : ಉತ್ತರ ಕರ್ನಾಟಕದಲ್ಲಿ ಜನವರಿ ಅಥವಾ ಡಿಸಂಬರ್ ತಿಂಗಳಿನಲ್ಲಿ ಎಳ್ಳಮವಾಸ್ಯೆ ಆಚರಣೆ ಇದೆ. ಮುಂಗಾರಿನ ಬೆಳೆಯ ಕಟಾವಿನ ಮತ್ತು ಹಿಂಗಾರಿನ ಬೆಳೆಯ ಬಿತ್ತನೆಯ ಸಂದರ್ಭ ಎಳ್ಳಮವಾಸೆಯನ್ನು ಆಚರಿಸುತ್ತಾರೆ. ಇದು ಒಂದು ರೀತಿಯಲ್ಲಿ ಭೂಮಿ ತಾಯಿಗೆ ಮಾಡುವ ಸೀಮಂತ. ಗಂಡಸರು ಎತ್ತು-ಗಾಡಿಗಳನ್ನೆಲ್ಲಾ ಶೃಂಗರಿಸಿ ಹೊಲದತ್ತ ಕೊಂಡೊಯ್ಯುತ್ತಾರೆ. ಹೆಂಗಸರು ನಾನಾ ರೀತಿಯ ಭಕ್ಷ್ಯಗಳನ್ನು ತಯಾರಿಸಿ ಬಿದಿರು ಬುಟ್ಟಿಯಲ್ಲಿ ತುಂಬಿಸಿ ಹೊಲಕ್ಕೆ ತೆಗೆದುಕೊಂಡು ಹೋಗುತ್ತಾರೆ. ಎಲ್ಲ ರೀತಿಯ ಕಾಳು, ಕಾಯಿಪಲ್ಲೆ ಮತ್ತು ತರಕಾರಿಗಳನ್ನು ಸೇರಿಸಿ ತಯಾರಿಸಿದ 'ಕಡಬು ಬಜಿ' ಆ ದಿನದ ವಿಶೇಷ ತಿಂಡಿ. ಜೋಳದ ಕಬ್ಬು ತಿನ್ನುವುದು ಕೂಡ ವಿಶೇಷವೆ.

ಹೊಲದ ಹತ್ತಿರ ಬನ್ನಿ ಗಿಡದ ಕೆಳಗೆ ಐದು ಕಲ್ಲು (ಭರಮ ದೇವರು)ಗಳನ್ನು ಇಟ್ಟು ಪೂಜಿಸುತ್ತಾರೆ. ಹೊಲದಲ್ಲಿ ಬೆಳೆದು ನಿಂತಿರುವ ಬೆಳೆಗಳಿಗೆ, ಬಾವಿ ಕೆರೆಕಟ್ಟೆಗಳಿಗೆ ಅರಿಶಿನ-ಕುಂಕುಮ ಹಚ್ಚಿ ಪೂಜೆ ಸಲ್ಲಿಸುತ್ತಾರೆ. ಅನಂತರ ನೈವೇದ್ಯವನ್ನು ಹೊಲದ ನಾಲ್ಕು ದಿಕ್ಕಿಗೂ ಹಾಕುತ್ತಾರೆ. ಭೂಮಿ ತಾಯಿಗೆ ಉಡಿ ತುಂಬಿ 'ಹುಲುಸಾಗಿ ಬೆಳೆ ಬರಲಿ' ಎಂದು ಹಾರೈಸುತ್ತಾ, ಭೋಜನವನ್ನು ಸವಿದು ಎಲ್ಲರೂ ಮನೆಗಳಿಗೆ ಹಿಂದಿರುಗುತ್ತಾರೆ.

ಮಗೆ ಮುಂಡುಗ ಹಾಕುವುದು : ಮಲೆನಾಡಿನ ಕಡೆ 'ಎರಕಲು ಗೂಟ' ಹಾಕುವ ಆಚರಣೆ ಇದೆ. ನಾಟಿಯಾದ ಸಸಿಗಳು ಚಿಗುರತೊಡಗಿದ ಸಂದರ್ಭದಲ್ಲಿ ಮಗೆ ಮಳೆ ಪ್ರಾರಂಭವಾಗುತ್ತದೆ. ಮಗೆ ಮಳೆಯ ಆರಂಭದ ಹಿಂದಿನ ಸಂಜೆಯೇ ಹಳ್ಳಗಳ ದಂಡೆಯಲ್ಲಿ ಬೆಳೆಯುವ ಮುಂಡುಗದ ತುಂಡುಗಳನ್ನು ಕಡಿದು ತಂದು ಗದ್ದೆಯ ಬಳಿ ಇಟ್ಟುಕೊಂಡಿರುತ್ತಾರೆ. ಅದನ್ನು ರಾತ್ರಿಯ ಹೊತ್ತು ಪ್ರತಿಗದ್ದೆಯಲ್ಲೂ ನೆಡುತ್ತಾರೆ. ಇದನ್ನು ಎರಕಲು ಗೂಟ ನೆಡುವುದು ಎನ್ನುತ್ತಾರೆ. ಗೂಟ ನೆಡಲು ಹೋಗುವ ವ್ಯಕ್ತಿ ಬೆತ್ತಲೆಯಾಗಿ ಹೋಗಬೇಕೆಂಬ ನಿಯಮವಿದ್ದರೂ ಇತ್ತೀಚೆಗೆ ಕರಿಕಂಬಳಿಯನ್ನು ಹೊದ್ದುಕೊಂಡು ಹೋಗುತ್ತಾರೆ. ಗೂಟ ನೆಡುವುದರಿಂದ ಬೆಳೆಗೆ ಯಾವ ರೋಗ ರುಜಿನಗಳೂ ತಟ್ಟುವುದಿಲ್ಲ ಮತ್ತು ಹುಳು ಉಪ್ಪಟೆಯ ಕಾಟವಿರುವುದಿಲ್ಲ ಎಂಬ ನಂಬಿಕೆ. ಇದರ ಜೊತೆಗೆ ಭೂಮಿ ತನ್ನ ಫಲವಂತಿಕೆಯನ್ನು ಕಳೆದುಕೊಳ್ಳುವುದಿಲ್ಲ ಮತ್ತು ಪ್ರಾಣಿಗಳಿಂದ ಬೆಳೆಯನ್ನು ರಕ್ಷಿಸಿಕೊಳ್ಳಬಹುದೆಂಬ ಭಾವನೆ ಇದೆ. ಕೆಲವೆಡೆ ಕವೆಕೋಲುಗಳನ್ನು ನೆಟ್ಟು ಅದರ ಮೇಲೆ ಬಿಳಿಕಲ್ಲಿಟ್ಟು 'ಕಣ್ಣಾಸರು' ಮಾಡುತ್ತಾರೆ.

ಕರಿಕೊಳ್ಳಿ ಹಾಕುವುದು, ಬೆಳೆ ಮುಂಬು ಮತ್ತು ಬೆತ್ತ್ ನೆಡುವುದು: ಮಲೆನಾಡಿನದಲ್ಲಿ ಗದ್ದೆಯಲ್ಲಿ ಬೆಳೆಯನ್ನು ಕೊಯ್ಯುವಾಗ ಸಂಪೂರ್ಣವಾಗಿ

ಕಟಾವು ಮಾಡುವುದಿಲ್ಲ. ಶಾಸ್ತ್ರಕ್ಕಾಗಿ ಐದು ಸಸಿಗಳನ್ನು ಉಳಿಸಿರುತ್ತಾರೆ. ಕಟಾವು ಮಾಡಿದ ಎಲ್ಲ ಬೆಳೆಗಳನ್ನು ಕಣಕ್ಕೆ ತಂದು ಹಾಕುತ್ತಾರೆ. ಆಮೇಲೆ, ಗದ್ದೆಯಲ್ಲಿ ಉಳಿಸಿದ ಆ ಬೆಳೆಯನ್ನು ತರುವ ವ್ಯಕ್ತಿ ಮನೆಯಿಂದ ಸೌದೆಕೊಳ್ಳಿಯೊಂದನ್ನು ತೆಗೆದುಕೊಂಡು, ಯಾರ ಜೊತೆಯು ಮಾತನಾಡದೆ ಹೋಗಿ ಅದನ್ನು ಗದ್ದೆಯಲ್ಲಿ ಹಾಕಿ ಬೆಳೆಯನ್ನು ತೆಗೆದುಕೊಂಡು ಬರುತ್ತಾನೆ. ಬೋಳಾಗಿರುವ ಗದ್ದೆಯನ್ನು ನೋಡಿ ಯಾರು ದೃಷ್ಟಿಹಾಕಬಾರದೆಂದು ಈ ರೀತಿ ಮಾಡುತ್ತಾರೆ.

ಬಯಲುಸೀಮೆ ಕಡೆ ಕೊನೆಗೆ ಉಳಿಸಿದ ಸಸಿಯನ್ನು ಪೂಜಿಸುತ್ತಾರೆ. ಇದನ್ನು 'ಬೆಳೆಮುಂಬು' ಎನ್ನುತ್ತಾರೆ. ಇದಕ್ಕೆ ದಾಸಯ್ಯ, ಪೂಜಾರಿಗಳನ್ನು ಕರೆಸುತ್ತಾರೆ. ಅವರು ಸಸಿಗಳಿಗೆ ತುದಿಗಂಟು ಹಾಕುತ್ತಾರೆ. ಅನಂತರ ಕುಡುಗೋಲು, ಮಸಗಲ್ಲುಗಳನ್ನಿಟ್ಟು, ಎಡೆ ಹಾಕಿ, ಮಂತ್ರ ಹೇಳಿ, ಜಾಗಟೆ ಬಾರಿಸಿ, ಶಂಖ ಊದಿ ಪೂಜೆ ಸಲ್ಲಿಸುತ್ತಾರೆ. ಈ ರೀತಿ ಸಸಿಗಳಿಗೆ ಗಂಟು ಹಾಕುವ ಪದ್ಧತಿ ಕೊಡಗಿನ ಕಡೆಯೂ ಇದೆ. ಆದರೆ ಅದನ್ನು ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ಮಾಡುತ್ತಾರೆ. ಪೈರು ಕದಿರು ಬಿಡಲು ಪ್ರಾರಂಭಿಸಿದನ್ನು ಕಂಡ ತಕ್ಷಣ ಯಾರೇ ಆದರೂ ಸಸಿಯ ತುದಿ ಭಾಗದಲ್ಲಿ ಗಂಟು ಹಾಕುತ್ತಾರೆ. ಅಂದರೆ ಯಾರ ಕಣ್ಣು ತಾಗದಿರಲಿ ಎಂಬ ನಂಬಿಕೆಯಿಂದ ಹೀಗೆ ಮಾಡುತ್ತಾರೆ.

ಅಕ್ಟೋಬರ್ ತಿಂಗಳಿನ 17ನೇ ಅಥವಾ 18ನೇ ತಾರೀಖಿನಂದು ನಡೆಯುವ ಕಾವೇರಿ ಸಂಕ್ರಮಣ ಹಬ್ಬದ ಸಂದರ್ಭದಲ್ಲಿ ಬೆತ್ತ್ ನೆಡುವುದು ಎಂಬ ಆಚರಣೆಯಿದೆ. ಬೆತ್ತು ಎಂಬ ಮರದ ಕೋಲನ್ನು ಎಲ್ಲ ಗದ್ದೆ, ತೋಟಗಳಲ್ಲಿ ಒಂದೊಂದು ನೆಡಲಾಗುವುದು. ಯಾವುದಾದರೂ ಒಂದು ಪ್ರಮುಖ ಗದ್ದೆಯಲ್ಲಿ ಮೂರು ಬೆತ್ತ್‌ನು ಗುಂಪಾಗಿ ನೆಟ್ಟು ಅದಕ್ಕೆ ಬೆತ್ತ್ ಬಳ್ಳಿಯನ್ನು ಸುತ್ತಿ ಅಲಂಕರಿಸಲಾಗುತ್ತದೆ. ಕಾವೇರಿ ತೀರ್ಥ ಉದ್ಭವವಾದ ಮಾರನೇ ದಿವಸ ಅದರಲ್ಲಿ ದೋಸೆ ತುಪ್ಪ ಸಕ್ಕರೆ, ತೆಂಗಿನ ತುರಿಯನ್ನು ಬಾಳೆ ಎಲೆಯಲ್ಲಿ ಎಡೆ ಇಡುತ್ತಾರೆ. ಗದ್ದೆಯಿಂದ ಬೆಳೆಯನ್ನು ಕಣಕ್ಕೆ ತರುವಾಗಲೂ ಕೊನೆಯ ಹೊರೆಯನ್ನು ತರುವಾಗ ಒಂದು ಕುಕ್ಕೆ (ಬುಟ್ಟಿ) ಸಗಣಿಗೊಬ್ಬರವನ್ನು ಗದ್ದೆಗೆ ಹಾಕಿ ಅನಂತರವೇ ತರಬೇಕು. ಅಂದರೆ ಇಲ್ಲಿ ತನಕ ಗದ್ದೆಯಲ್ಲಿ ಬೆಳೆ ಇತ್ತು. ಈಗ ಗದ್ದೆಯನ್ನು ರಕ್ಷಿಸಲು ಗೊಬ್ಬರ ಇರುತ್ತದೆಂಬ ನಂಬಿಕೆ.

ವೀಳ್ಯದೆಲೆ ತೋಟದಲ್ಲಿ ಗೌರಿಪೂಜೆ ಮತ್ತು ಬೊಮ್ಮಪ್ಪನ ಪೂಜೆ: ವೀಳ್ಯದೆಲೆಯನ್ನು ಬಹಳ ಪೂಜನೀಯವಾಗಿ ಕಾಣುವುದು ಹಿಂದೂಗಳ ಸಂಸ್ಕೃತಿ. ಹಾಗಾಗಿ ಗೌರಿ ಹಬ್ಬದ ದಿನ ಅಥವಾ ಹಬ್ಬ ಮುಗಿದ ಒಂಬತ್ತನೆಯ ದಿವಸಕ್ಕೆ ವೀಳ್ಯದೆಲೆ ತೋಟದಲ್ಲಿ ಗೌರಿಪೂಜೆ ಮತ್ತು ಬೊಮ್ಮಪ್ಪನ ಪೂಜೆಯನ್ನು ಮಾಡಲಾಗುತ್ತದೆ. ವೀಳ್ಯದೆಲೆ ತೋಟದಲ್ಲಿ ಮೂಡಣ ದಿಕ್ಕಿಗೆ ಚಿಕ್ಕದಾಗಿ ಒಂದು ಚಪ್ಪರ ಹಾಕಿ ಅದಕ್ಕೆ ಬಾಳೆಕಂದು, ತಳಿರುತೋರಣ ಕಟ್ಟಿ ಶೃಂಗರಿಸಲಾಗುತ್ತದೆ. ಅನಂತರ ಗೌರಿಯ ಮುಖವನ್ನು ಬರೆದ ತೆಂಗಿನ ಕಾಯಿಯನ್ನು ಕಳಸದಲ್ಲಿಟ್ಟು ಅದಕ್ಕೆ ಚಿನ್ನಾಭರಣವನ್ನು ತೊಡಿಸಿ ಅಲಂಕರಿಸಲಾಗುತ್ತದೆ. ಹೊಸ ಸೀರೆ ಮತ್ತು ರವಿಕೆಕಣ ತೊಡಿಸಿ ಗೌರಿ ಹಬ್ಬದಲ್ಲಿ ಮಾಡುವ ರೀತಿಯಲ್ಲಿಯೇ ಪೂಜೆ ಮಾಡುತ್ತಾರೆ. ವೀಳೆದೆಲೆಯ ಬೇಸಾಯಕ್ಕೆ ಉಪಯೋಗಿಸುವ ಕುಡುಗೋಲು, ಏಣಿ, ನೀರು ಹುಯ್ಯುವ ಗುಂಬ, ಎಲೆ ಕೊಯ್ಯುವ ಉಗುರು- ಹೀಗೆ ಬೇರೆ ಬೇರೆ ಸಲಕರಣೆಗಳನ್ನು ತೊಳೆದು ಸ್ವಚ್ಛಗೊಳಿಸಿ ಹೂವಿನಿಂದ ಅಲಂಕರಿಸಲಾಗುತ್ತದೆ. ಅನಂತರ ವಿವಿಧ ರೀತಿಯ ತಿಂಡಿ ತಿನ್ನಿಸು ಅದರಲ್ಲಿ ಎಳ್ಳಿನ ಚಿಗಳಿ ಮತ್ತು ಅಕ್ಕಿಯ ತಂಬಿಟ್ಟು ಇರಲೇಬೇಕು. ಅದನ್ನು ಎಡೆ ಹಾಕುತ್ತಾರೆ. ಮೊದಲು ಗಂಗೆ ಪೂಜೆ ಮಾಡಿ, ಅನಂತರ ಗೌರಿಯನ್ನು ಪೂಜಿಸುತ್ತಾರೆ. ಗೌರಿಯ ಪೂಜೆಯನ್ನು ಮುತ್ತೈದೆಯರು ಮಾಡುತ್ತಾರೆ. ಬೊಮ್ಮಪ್ಪನ ಪೂಜೆಯನ್ನು ಗಂಡಸರು ಮಾಡುತ್ತಾರೆ. ಬೊಮ್ಮಪ್ಪನಿಗೆ ಎಡೆ ಹಾಕಲು ಜೀರಿಗೆ ಮೆಣಸು ಹಾಕಿ ಮಾಡಿದ ಕಿಚಡಿ ಅನ್ನವೇ ಮುಖ್ಯ. ನೀರನ್ನು ತೋಟದ ಸುತ್ತ ಎರಚಿ ಗಂಧದ ಕಡ್ಡಿ ಹಚ್ಚಿ ಪೂಜೆ ಸಲ್ಲಿಸುತ್ತಾರೆ. ಇದನ್ನು ಸಂಜೆ ಹೊತ್ತಿನಲ್ಲಿ ಮಾಡುತ್ತಾರೆ.

ನೇಗಿಲು ಪೂಜೆ : ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಮತ್ತು ತಮಿಳುನಾಡಿನ ಕಡೆ ನೇಗಿಲು ಪೂಜೆ ಆಚರಣೆ ಇದೆ. ಹಸಿ ಸಗಣಿಯಲ್ಲಿ ಬಟ್ಟಲಾಕಾರ ಮಾಡಿ ಒಣಗಿಸಿ ಅನಂತರ ಅದಕ್ಕೆ ಮಣ್ಣು ತುಂಬಿಸಿರುತ್ತಾರೆ. ಮುಂದಿನ ಸಾಲಿನಲ್ಲಿ ತಾವು ಬೇಸಾಯ ಮಾಡಬೇಕೆಂದು ತೀರ್ಮಾನಿಸಿರುವ ಬೇರೆ ಬೇರೆ ಬೆಳೆಗಳ ಬೀಜವನ್ನು ಅದರಲ್ಲಿ ಹಾಕುತ್ತಾರೆ. ಬೀಜ ಹಾಕಿದ ಸಗಣಿ ಬಟ್ಟಲನ್ನು ಎರಡು ಹೊಸ ನೇಗಿಲಿಗೆ ಕಟ್ಟುತ್ತಾರೆ. ಅದಕ್ಕೆ ಒಂಬತ್ತು ದಿನಗಳವರೆಗೆ ನೀರನ್ನು ಚಿಮ್ಮುಕಿಸುತ್ತಾ ಇದ್ದು, ಒಂಬತ್ತನೆಯ ದಿವಸ ಎಲ್ಲರೂ ಒಂದೆಡೆ ಸೇರಿ ಆ ಬೀಜಗಳನ್ನು ಪರೀಕ್ಷಿಸುತ್ತಾರೆ. ಅಂದರೆ ಯಾವ ಬೆಳೆಯ ಬೀಜ ಚೆನ್ನಾಗಿ ಮೊಳಕೆ ಒಡೆದಿರುತ್ತದೆಯೋ ಆ ಬೆಳೆಯ ಫಸಲು ಹೆಚ್ಚಾಗಿರುತ್ತದೆಯೆಂದು ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಬಿತ್ತುತ್ತಾರೆ. ಇದೊಂದು ಬೇಸಾಯಗಾರರ ಆಚರಣೆಯೆಂದು ಮೇಲ್ನೋಟಕ್ಕೆ ತೋರಿಬಂದರೂ ಅವರಲ್ಲಿರುವ ಮುನ್ನೆಚ್ಚರಿಕೆಯ ಕ್ರಮವಾಗಿಯೂ ಕಂಡುಬರುತ್ತದೆ. ಯುಗಾದಿಯ ಆಸುಪಾಸಿನಲ್ಲಿ ಆ ಆಚರಣೆಯು ನಡೆಯುವ ಕಾರಣ ಬೀಜಕ್ಕೆ ಏನಾದರೂ ತೊಂದರೆಯಾಗಿದೆಯಾ ಎಂದು ಸಕಾಲಕ್ಕೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಬೇಸಾಯಗಾರ ಬೀಜ ಸರಿಯಾಗಿ ಮೊಳಕೆಯೊಡೆಯದಿದ್ದರೆ ತಕ್ಷಣ ಹೊಸ ಬೀಜವನ್ನು ಸಂಗ್ರಹಿಸಬಹುದು. ಅಥವಾ ಹುಳು-ಹುಪ್ಪಟೆ ಸೇರಿ ಹಾಳಾಗಿದ್ದರೂ ಬೇರೆ ಬೀಜವನ್ನು ಶೇಖರಿಸಬಹುದು. ಹಾಗಾಗಿ ನೇಗಿಲ ಪೂಜೆ ಬೀಜದ ಸತ್ವವನ್ನು ತಿಳಿಯುವ ಒಂದು ಕ್ರಮವಾಗಿದೆ.

ಬೆಳೆಗಳನ್ನು ರಕ್ಷಿಸಲು ಮಾಡುವ ಆಚರಣೆಗಳು : ಬೆಳೆಗಳಿಗೆ ಯಾವುದೇ ರೋಗ ತಾಗದಿರಲೆಂದು ದೇವರ ಹೆಸರನ್ನು ಹೇಳಿ ಹರಕೆ ಮಾಡುವುದು ಸರ್ವೇಸಾಮಾನ್ಯ. ದೇವರಿಗೆ ತುಪ್ಪದ ದೀಪ ಹಚ್ಚುವುದು, ಹರಳೆಣ್ಣೆ ತಂದೊಪ್ಪಿಸುವುದು, ದೇವಸ್ಥಾನಗಳಲ್ಲಿ ವಿವಿಧ ರೀತಿಯ ಪೂಜೆ ಮಾಡಿಸುವುದು ಮಾಡುತ್ತಾರೆ. ದೇವಸ್ಥಾನದಿಂದ ತೀರ್ಥ ಪ್ರಸಾದವನ್ನು ತಂದು ಹೊಲ-ತೋಟಗಳಿಗೆ ಎರಚುತ್ತಾರೆ.

ಬೆಳೆಗಳಿಗೆ ಯಾವುದೇ ವಿಘ್ನ ಬರಬಾರದೆಂದು ವಿಘ್ನೇಶ್ವರನನ್ನು ಪೂಜಿಸುವ ಕ್ರಮ ಕೃಷಿಕರಲ್ಲಿದೆ. ಮಣ್ಣಿನಿಂದ ತಯಾರಿಸಿದ ಗಣಪನನ್ನು ಪೂಜಿಸುತ್ತಾರೆ. ಒಂದು ಕೈಯಲ್ಲಿ ಧಾನ್ಯದ ತೆನೆಯನ್ನು ಮತ್ತೊಂದು ಕೈಯಲ್ಲಿ ಧಾನ್ಯದಿಂದ ತಯಾರಿಸಿದ ಕಡಬನ್ನು ಇಟ್ಟಿರುತ್ತಾರೆ. ಬೆಳೆಗಳಿಗೆ ಕಾಟಕೊಡುವ ಇಲಿಯನ್ನು ಪಾದದ ಹತ್ತಿರ ಇಡುತ್ತಾರೆ. ಹೀಗೆ ಎಲ್ಲ ಜೋಡಿಸಿ ಆದ ಮೇಲೆ ಪೂಜೆಯನ್ನು ಮಾಡಲಾಗುತ್ತದೆ. ಹಿಂದೆ ಧಾನ್ಯ ದೇವರು ಗಣಪ, ಜಲದೇವತೆ ಗೌರಿ ಎಂಬ ಹಿನ್ನೆಲೆಯೊಳಗೆ ಗೌರಿ-ಗಣೇಶ ಹಬ್ಬ ಆಚರಿಸುತ್ತಿದ್ದರು.

ಕರಿಭಂಟನ ಪೂಜೆ : ಬೆಳೆಗಳಿಗೆ ರೋಗಗಳು ಬಾರದಿರಲೆಂದು ಮತ್ತು ಜನರ ದೃಷ್ಟಿ ಬೀಳದಿರಲೆಂದು ಮಾಡುವ ಆಚರಣೆ. ಕುಟುಂಬದವರು ಆಚರಿಸುತ್ತಾರೆ. ಕೆಲವೆಡೆ ಇಡೀ ಊರಿನವರೆ ಸೇರಿ ಆಚರಿಸುತ್ತಾರೆ. ಮೂರು ದಾರಿ ಸೇರುವ ಜಾಗದಲ್ಲಿ ಬೂದಿಯಿಂದ ರಾಕ್ಷಸಿಯ ಚಿತ್ರ ಬರೆಯುತ್ತಾರೆ. ರಾಕ್ಷಸಿ ಚಿತ್ರದ ಹೊಟ್ಟೆಯ ಭಾಗಕ್ಕೆ ಹಾರೆಯಿಂದ ತಿವಿಯುತ್ತಾರೆ. ಎಲ್ಲ ಗದ್ದೆಗಳಿಗೂ ಪಚ್ಚಾಡಿ ಮರದ ರೆಂಬೆಯನ್ನು ನೆಡಲಾಗುತ್ತದೆ. ಅರಿಶಿಣ ಹಚ್ಚಿದ ಬಟ್ಟೆಯಲ್ಲಿ ನವಧಾನ್ಯಗಳನ್ನು ಗಂಟು ಕಟ್ಟಿ ಪೂಜೆ ಮಾಡಲಾಗುತ್ತದೆ. ಇಲ್ಲಿ ಒಂದು ವಿಶೇಷತೆಯೆಂದರೆ ಕುಂಬಾರರ ಮನೆಯ ಬೂದಿ, ಕಮ್ಮಾರರ ಮನೆಯ ಬೂದಿ ಮತ್ತು ಮಡಿವಾಳರ ಮನೆಯ ಬೂದಿ ತಂದು ಮಿಶ್ರಣ ಮಾಡುವುದು. ಪ್ರಾಣಿ ಬಲಿಕೊಟ್ಟ ಮೇಲೆ ಅದರ ರಕ್ತದ ಜೊತೆಗೆ, ಅಡುಗೆಯೊಂದಿಗೆ ಆ ಬೂದಿಯನ್ನೂ ಬೆರೆಸಿ, ಪಚ್ಚಾಡಿ ಮರದ ರೆಂಬೆಯನ್ನು ಗದ್ದೆಯಲ್ಲಿ ನೆಡುತ್ತಾ, ಈ ಚರಗವನ್ನು ಎರಚುತ್ತಾ ಬಲಿಯೋ ಬಲಿ ಎಂದು ಅರಚುತ್ತಾರೆ. ಬಲಿಕೊಟ್ಟ ಪ್ರಾಣಿಯ ಮಾಂಸವನ್ನು ಪಾಲು ಮಾಡಿಕೊಂಡು, ವಿಶೇಷ ಭಕ್ಷ್ಯಭೋಜನವನ್ನು ತಯಾರಿಸಿ ಊಟ ಮಾಡುತ್ತಾರೆ.

ಗೊಡ್ಡೀಚಲು ಗರಿ ನೆಡುವುದು : ಬತ್ತದ ಬೆಳೆಗೆ ರೋಗ ಬಾರದಂತೆ ಗೊಡ್ಡೀಚಲು ಗರಿ ನೆಡುವ ಕ್ರಮ ಕನಕಪುರ ಮತ್ತು ಆನೇಕಲ್ ಪ್ರದೇಶದಲ್ಲಿ ಕಂಡುಬರುತ್ತದೆ. ನಾಟಿಯಾದ ಒಂದು ತಿಂಗಳೊಳಗೆ ಈ ಆಚರಣೆ ನೆರವೇರುತ್ತದೆ. ಊರಿನವರೆಲ್ಲ ಸೇರಿ ನಿಗದಿಪಡಿಸಿದ ದಿನದಂದು ಗೊಡ್ಡೀಚಲು ಗರಿಯನ್ನು ತಂದು ಎಕರೆಗೆ ನಾಲ್ಕೈದರಂತೆ ಗದ್ದೆಯ ಮಧ್ಯಭಾಗದಲ್ಲಿ ನೆಡುತ್ತಾರೆ. ಹೆಚ್ಚು ದಿನಗಳವರೆಗೆ ಹಸಿರಾಗಿಯೇ ಇರುವ ಗೊಡ್ಡೀಚಲು ಗರಿಗಳಲ್ಲಿ ಔಷಧಿಗುಣ ಇರುತ್ತದೆ. ಗರಿಗಳು ಒಣಗುತ್ತಾ ಬಂದಂತೆ ಬೆಳೆಗಳಿಗೆ ತಗುಲಿದ ರೋಗವು ಕಡಿಮೆಯಾಗುತ್ತಾ ಬರುತ್ತದೆ. ಅನೇಕ ಭಾಗಗಳಲ್ಲಿ ಕೋಳಿಯನ್ನು ಸುಟ್ಟು ಗದ್ದೆಯ ಸುತ್ತ ಬರುತ್ತಾರೆ. ಇದರ ಹೊಗೆಯಿಂದಲೂ ರೋಗವುಂಟು ಮಾಡುವ ಕ್ರಿಮಿ-ಕೀಟಗಳು ನಾಶವಾಗುತ್ತವೆಂದು, ಹಾಗೆಯೇ ಹಂದಿಯನ್ನು ಸುಟ್ಟು ಹೊಗೆ ಉಂಟುಮಾಡುವುದರಿಂದಲೂ ಬೆಳೆಗಳಿಗೆ ತಗುಲಿದ ರೋಗ ವಾಸಿಯಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಗೊಡ್ಡೀಚಲು ಮರವು ಈಚಲು ಮರವನ್ನೇ ಹೋಲುತ್ತದೆ. ಗರಿಯಲ್ಲಿ ಸ್ವಲ್ಪ ವ್ಯತ್ಯಾಸವಿರುತ್ತದೆ ಅಷ್ಟೇ.

ಕರಡಿ ಬೂತಪ್ಪ ಮಾಡುವುದು : ಕಡ್ಲೆಕಾಯಿ ಬೆಳೆಯನ್ನು ಸಂರಕ್ಷಿಸಲು ಮಾಡುವ ಆಚರಣೆ. ಹೊಲಕ್ಕೆ ಕಡ್ಲೇಕಾಯಿ ಬೀಜವನ್ನು ಬಿತ್ತಿದ ತಕ್ಷಣ ಮತ್ತು ಕಡ್ಲೇಕಾಯಿ ಬಲಿತ ಸಂದರ್ಭದಲ್ಲಿ ಕರಡಿಗಳು ಅದನ್ನು ತಿನ್ನದಂತೆ ತಡೆಗಟ್ಟಲು ಕರಡಿ ಬೂತಪ್ಪ ಆಚರಣೆ ಮಾಡುತ್ತಾರೆ. ಕಡ್ಲೆಬೀಜಗಳಿಂದಲೇ ತಂಬಿಟ್ಟು ಮಾಡುತ್ತಾರೆ. ಹೊಲಕ್ಕೆ ಹೋಗಿ ಕರಡಿಗಳು ಹೆಚ್ಚಾಗಿ ಬರುವ ದಿಕ್ಕಿನೆಡೆಗೆ ಆರತಿಯನ್ನು ಬೆಳಗಿ, ಬೆಳೆಯನ್ನು ಹಾಳುಮಾಡಬೇಡ ಎಂದು ಪ್ರಾರ್ಥಿಸಿಕೊಳ್ಳುತ್ತಾರೆ. ಅನಂತರ ತಂಬಿಟ್ಟನ್ನು ಪ್ರಸಾದವಾಗಿ ಎಲ್ಲರೂ ಸ್ವೀಕಾರ ಮಾಡುತ್ತಾರೆ. ಇದರಿಂದ ಕರಡಿಗಳ ಉಪದ್ರವ ಕಡಿಮೆಯಾಗುತ್ತದೆಂದು ಇದರ ನಂಬಿಕೆ.

ಅಡಕೆ ಕೊನೆ ಮುಹೂರ್ತ : ಮಲೆನಾಡಿನ ಅಡಿಕೆ ತೋಟದಲ್ಲಿ ಕೊನೆ ತೆಗೆಸಿ ಅಡಿಕೆ ಕೊಯಿಲು ಪ್ರಾರಂಭಮಾಡುವುದು ವಿಜಯದಶಮಿಯ ದಿವಸ. ಅಂದು ಸ್ನಾನ ಮಾಡಿ, ಪೂಜಾ ಸಾಮಗ್ರಿಗಳನ್ನು ಸಿದ್ಧತೆ ಮಾಡಿಕೊಳ್ಳುತ್ತಾರೆ. ಅಡಿಕೆ ಮರ ಹತ್ತಿ ಕೊನೆ ತೆಗೆಯುವ ಕೊನೆಗಾರ ಮತ್ತು ಕೊನೆಹಿಡಿಯುವವನೊಬ್ಬ ಬಂದ ಅನಂತರ ಅಡಿಕೆ ತೋಟಕ್ಕೆ ಹೋಗುತ್ತಾರೆ. ಅಲ್ಲಿ ಒಂದು ಅಡಿಕೆ ಮರದ ಬುಡವನ್ನು ಹಾಲಿನಿಂದ ತೊಳೆದು ಅರಿಶಿಣ, ಕುಂಕುಮ ಹಚ್ಚಿ, ಹೂವು ಹಣ್ಣು ಎಲ್ಲಾ ಇಟ್ಟು ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ. ಪೂಜೆ ಆದನಂತರ ಕೊನೆಗಾರ ಪೂಜಿಸಿದ ಮರಹತ್ತಿ ಮೂರು ಅಡಿಕೆ ಕೊನೆಗಳನ್ನು ತೆಗೆದು ಒಂದೊಂದಾಗಿ ಕೆಳಗೆ ಬಿಡುತ್ತಾನೆ. ಅಡಿಕೆ ಕೊನೆ ಹಿಡಿಯುವವನು ಕೆಳಗಡೆ ದೊಡ್ಡ ಗೋಣಿಚೀಲದಲ್ಲಿ ಹಿಡಿಯುತ್ತಾನೆ. ಆ ಕೊನೆಗಳನ್ನು ಹೊತ್ತು ತಂದು ತುಳಸಿ ಮುಂದೆ ಇಟ್ಟು ಪೂಜೆ ಮಾಡಿ ಮನೆಯೊಳಗೆ ತರುತ್ತಾರೆ. ಇಂತಹ ಸಂದರ್ಭಕ್ಕೆ ಮಲೆನಾಡಿನಲ್ಲಿ 'ಕೊನೆ ಮುಹೂರ್ತ' ಎನ್ನುತ್ತಾರೆ.

ಎ.ಬಿ.ಪಿ.

ಕೃಷಿ ಕಾಯಿದೆಗಳು ಮಾನವ ಕೃಷಿಗೆ ಭೂಮಿಯನ್ನು ಬಳಸಿಕೊಂಡಂದಿನಿಂದ ಅನೇಕ ಅಲಿಖಿತ ಭೂಸಂಬಂಧಿ ಕಾಯಿದೆಗಳು ಚಾಲ್ತಿಯಲ್ಲಿದ್ದವು. ಸಕಲವೂ ಮಣ್ಣಿನಿಂದಲೇ ಉತ್ಪಾದನೆಯಾಗುವುದರಿಂದ ಮಣ್ಣಿಗೆ ಮೌಲ್ಯ ಹೆಚ್ಚು. ಹಿಂದೆ ಭೂಮಿ ಯಥೇಚ್ಛವಾಗಿ ದೊರೆಯುತ್ತಿದ್ದುದರಿಂದ ಕಟ್ಟುನಿಟ್ಟಿನ ಕಾನೂನು ಕಟ್ಟಳೆಗಳು ಇಲ್ಲದಿರಬಹುದು. ಭೂಮಿಗೆ ಬೇಡಿಕೆ ಹೆಚ್ಚಿದಂತೆಲ್ಲ ಅದನ್ನು ಕಬಳಿಸುವವರ ಸಂಖ್ಯೆ ಹೆಚ್ಚಾಯಿತು. ಹಾಗಾಗಿ ಹಂತಹಂತವಾಗಿ ಭೂಸಂಬಂಧಿ ಕಾನೂನುಗಳು ರೂಪಿತವಾದವು.

ಭೂಸಂರಕ್ಷಣೆ, ಸಂಪನ್ಮೂಲಗಳ ಯುಕ್ತ ಬಳಕೆ, ಬೇಸಾಯ ಸುಧಾರಣೆ, ರೈತರ ಹಿತ ಸಾಧನೆ ಇಂತಹ ಹಲವಾರು ಉದ್ದೇಶಗಳಿಗಾಗಿ ಪ್ರಪಂಚಾದ್ಯಂತ ಕಾಯಿದೆಗಳು ಜಾರಿಗೆ ಬಂದುವು. ಕೃಷಿ ಪ್ರಧಾನ ದೇಶವಾದ ಭಾರತದಲ್ಲಿ ಬಹುತೇಕ ಕಾಯಿದೆಗಳು ಕೃಷಿಗೆ ಸಂಬಂಧಿಸಿದಂಥವೇ ಆಗಿರುತ್ತವೆ. ಭೂಸಂಬಂಧಿ ಕಾಯಿದೆಗಳನ್ನು ಮುಖ್ಯವಾಗಿ ಹೀಗೆ ಪಟ್ಟಿಮಾಡಬಹುದು: ಭೂಹಿಡುವಳಿ, ಗೇಣಿ, ಭೂ ಕಂದಾಯ, ಜಮೀನು ಒತ್ತೆ ಮತ್ತು ಸಾಲ, ಕೃಷಿ ಕೆಲಸಗಾರರ ಕೂಲಿ, ನೀರಾವರಿ, ಪಶುಪಾಲನೆ, ಕೋಳಿ, ಕುರಿ, ಹಂದಿ ಸಾಕಣೆ, ಭೂಮಿಯ ಚೆಕ್ಕುಬಂದಿ, ಬೇಲಿ ನಿರ್ಮಾಣ, ಬೇರೆಯವರ ಜಮೀನಿಗೆ ಪ್ರವೇಶಿಸುವ ಅವಕಾಶ, ಕೃಷಿ ವಿಮೆ ಇತ್ಯಾದಿ.

ಭೂ ಹಿಡುವಳಿ ಮತ್ತು ಕಂದಾಯ : ನಿರ್ದಿಷ್ಟ ವ್ಯಕ್ತಿಗೆ ಸಂಬಂಧಿಸಿದ ಭೂಮಿಯನ್ನು ಕುರಿತಂತೆ ಸರ್ಕಾರ ಹಲವು ಕಾನೂನುಗಳನ್ನು ರೂಪಿಸಿದೆ : ಭೂಮಾಲೀಕತ್ವ, ಭೂಮಿಯ ವಿನಿಯೋಗ ಭೂಮಿಯನ್ನು ಮಾರುವಲ್ಲಿ, ಕೊಳ್ಳುವಲ್ಲಿ, ರೈತನಿಗಿರುವ ಹಕ್ಕು, ಉತ್ತರಾಧಿಕಾರತ್ವ, ಭೂಮಿ ವಂಶಪಾರಂಪರ್ಯವೇ ಸಾಮೂಹಿಕ ಸ್ವಾಮ್ಯವೇ, ಏಕಸ್ವಾಮ್ಯವೇ ಇತ್ಯಾದಿ.

ರೈತ ಸಾಗುವಳಿ ಮಾಡುವ ಭೂಮಿ ಸ್ವಯಾರ್ಜಿತವಾಗಿದ್ದರೂ ಅದಕ್ಕೆ ಸಂಬಂಧಿಸಿದ ಕಾಯಿದೆ ಭೂಮಾಲೀಕತ್ವ ಮೂವರಿಗೆ ಸೇರಿದ್ದಾಗಿರುತ್ತದೆ ಎಂದಿದೆ. 1. ಭೂಮಾಲೀಕ, 2. ಸರ್ಕಾರ, 3. ಸಾಗುವಳಿದಾರ. ಭೂಮಿಯ ಅನುಭೋಗಕ್ಕಾಗಿ ರೈತ ಸರ್ಕಾರಕ್ಕೆ ನಿಗದಿತ ಪ್ರಮಾಣದಲ್ಲಿ ಕಂದಾಯ ಪಾವತಿಸಬೇಕು. ನೀರಾವರಿ (ಗದ್ದೆ), ಬಂಜರು, ಹೊಲ (ಬೆದ್ದಲು), ತೋಟ (ಭಾಗಾಯಿತು), ಫಲವತ್ತಾದ ಭೂಮಿ, ಕನಿಷ್ಠಭೂಮಿ - ಹೀಗೆ ಭೂಮಿ ಮತ್ತು ಬೆಳೆಗನುಗುಣವಾಗಿ ಸರ್ಕಾರ ಕಂದಾಯ ನಿಗದಪಡಿಸುತ್ತದೆ. ಕಂದಾಯ ಪ್ರಮಾಣ ಕಾಲದಿಂದ ಕಾಲಕ್ಕೆ

ಪರಿಷ್ಕಾರಗೊಳ್ಳುತ್ತದೆ. ಇದು ಬೆಳೆಗಳ ಬೆಲೆಗಳನ್ನು ಆಧರಿಸಿರುತ್ತದೆ. ರೈತನ ಹಕ್ಕನ್ನು ಗುರುತಿಸುವ ಪಟ್ಟ ಪುಸ್ತಕವೊಂದು ಅವನ ಬಳಿ ಇರುತ್ತದೆ. ಇದರಲ್ಲಿ ಜಮೀನಿನ ವಿಸ್ತಾರ, ಚೆಕ್ಕುಬಂದಿ, ಸರ್ವೆನಂಬರ್ ಮುಂತಾದವನ್ನು ನಿಖರವಾಗಿ ದಾಖಲಿಸಿರುತ್ತಾರೆ. ಇದೇ ಪುಸ್ತಕದಲ್ಲೇ ಕಂದಾಯದ ವಿವರಗಳೂ ದಾಖಲಾಗುತ್ತವೆ. ನೀರಾವರಿ ಸೌಲಭ್ಯ ಪಡೆದವನು ಹೆಚ್ಚಿನ ಕಂದಾಯ ನೀಡಬೇಕು.

ಪ್ರಕೃತಿ ವಿಕೋಪಗಳಿಂದಾಗಿ ಬೆಳೆ ನಷ್ಟವಾದಾಗ ಸರ್ಕಾರ ಆ ಅವಧಿಯ ತೆರಿಗೆಯನ್ನು ಭಾಗಶಃ ಅಥವಾ ಪೂರ್ಣ ಮನ್ನಾ ಮಾಡುತ್ತದೆ. ದೀರ್ಘಕಾಲ ಕಂದಾಯ ಪಾವತಿ ಮಾಡದಿದ್ದವನ ಜಮೀನನ್ನು ಅಥವಾ ಇತರ ಚರಾಚರ ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಸಲ್ಲಬೇಕಾದ ತೆರಿಗೆಯನ್ನು ಜಮಾ ಮಾಡಿಕೊಳ್ಳುತ್ತದೆ. ಒಂದು ವೇಳೆ ಅವನು ಕಂದಾಯ ನೀಡಲು ದುಂಡಾವರ್ತ ಮಾಡಿದಲ್ಲಿ ಅವನನ್ನು ಸರ್ಕಾರ ಬಂಧಿಸಬಹುದು. ಸರ್ಕಾರ ವಿಕ್ರಯ ಮಾಡಿದ್ದು ಕ್ರಮಬದ್ಧ ಎನಿಸದಿದ್ದರೆ ರೈತ ಸರ್ಕಾರದ ವಿರುದ್ಧ ಮೊಕದ್ದಮೆ ಹೂಡಬಹುದು.

ಭೂಗರ್ಭದಲ್ಲಿ ದೊರೆಯುವ ಖನಿಜಗಳ ಮೇಲೆ ರೈತನಿಗೆ ಹಕ್ಕಿರುತ್ತದೆ. ಆದರೆ ಅದಕ್ಕೆ ಪ್ರತ್ಯೇಕ ತೆರಿಗೆಯನ್ನು ಪಾವತಿಸಬೇಕು.

ಕೃಷಿಗಾಗಿ ಅನೇಕ ರೀತಿಯ ಸಾಲಗಳನ್ನು ಸರ್ಕಾರ ನೀಡುತ್ತದೆ. ನಿಗದಿತ ಅವಧಿಯೊಳಗೆ ಸಾಲವನ್ನು ಕಂತುಗಳ ರೂಪದಲ್ಲಿ ಹಿಂದಿರುಗಿಸಬೇಕು. ಯಾವುದೇ ಕಾರಣಕ್ಕೂ ಅಸಲಿಗಿಂತ ಬಡ್ಡಿ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆಯಬೇಕಾದರೆ ಸರ್ಕಾರದಿಂದ ಅವರು ಲೇವಾದೇವಿಗಾಗಿ ಪರವಾನಗಿ ಪತ್ರ ಪಡೆದಿರಬೇಕು. ಲೇವಾದೇವಿಗಾರ ತನಗೆ ಇಷ್ಟ ಬಂದಷ್ಟು ಬಡ್ಡಿ ಹಾಕುವ ಹಾಗಿಲ್ಲ.

ಭೂಮಾಲೀಕ - ಗೇಣಿದಾರ ಸಂಬಂಧ : ಭೂಮಾಲೀಕ ತನ್ನ ಜಮೀನನ್ನು ಸಾಗುವಳಿ ಮಾಡಲು ಸಾಧ್ಯವಾಗದಿದ್ದಲ್ಲಿ ಗೇಣಿದಾರರಿಗೆ ವಹಿಸುತ್ತಾನೆ. ಗೇಣಿದಾರ ಮತ್ತು ಭೂಮಾಲೀಕರಿಗೆ ಪಾಲುದಾರಿಕೆಯ ಬಗೆಗೆ ಅರಿವಿಲ್ಲದಿದ್ದಾಗ ಇಬ್ಬರಿಗೂ ಅನ್ಯಾಯವಾಗುತ್ತದೆ. ಇದನ್ನು ತಪ್ಪಿಸಲೆಂದೇ ಸರ್ಕಾರ ಕೆಲವು ಕಾನೂನುಗಳನ್ನು ಜಾರಿಗೆ ತಂದಿದೆ. ಉದಾ: ಗೇಣಿದಾರರಿಗೆ ವಹಿಸಿದ್ದ ಭೂಮಿಯನ್ನು ಭೂಮಾಲೀಕ ಕಾನೂನು ಬಾಹಿರವಾಗಿ ಕಿತ್ತುಕೊಂಡರೆ ಶಿಕ್ಷಾರ್ಹನಾಗುತ್ತಾನೆ. ಅತಿಯಾದ ಗೇಣಿ ನಿಗದಿ ಪಡಿಸಬಾರದು.

ಬೇಲಿ ನಿರ್ಮಾಣ : ನೆರೆಹೊರೆಯ ರೈತರ ಜಮೀನಿನ ಮಧ್ಯೆ ಅಥವಾ ಸುತ್ತ ಬೇಲಿ ನಿರ್ಮಾಣ ಮಾಡುವಾಗ ಅದರ ವೆಚ್ಚದ ಹಂಚಿಕೆ ಎಲ್ಲರಿಗೂ ಸಮವಾಗಿರಬೇಕೆಂದು ಕಾನೂನು ಹೇಳುತ್ತದೆ. ಬೇಲಿಯ ನಿರ್ಮಾಣದಿಂದ ಹಲವು ರೀತಿಯ ಅನುಕೂಲಗಳುಂಟು. ಒಬ್ಬರ ಜಮೀನಿನಲ್ಲಿ ಇನ್ನೊಬ್ಬರು ಪ್ರವೇಶಿಸಲಾಗುವುದಿಲ್ಲ. ಕಳ್ಳಕಾಕರು, ದನಕರುಗಳು ಹಾಗೂ ಇತರ ಪ್ರಾಣಿಗಳಿಂದ ರಕ್ಷಣೆ ದೊರೆಯುತ್ತದೆ. ಒಬ್ಬರ ಜಮೀನಿಗೆ ಇನ್ನೊಬ್ಬರು ಕಸದ ರಾಶಿ ಎಸೆಯುವುದಾಗಲಿ, ಮೊಳೆ ಹೊಡೆಯುವುದಾಗಲಿ ಮಾಡಿದರೆ ಅಪರಾಧವಾಗುತ್ತದೆ. ರೋಗಗ್ರಸ್ತ ಪ್ರಾಣಿಗಳು ಇತರರ ಜಮೀನಿಗೆ ಪ್ರವೇಶ ಮಾಡಿ ಆ ಜಮೀನಿನವನ ಪ್ರಾಣಿಗಳಿಗೂ ರೋಗ ಅಂಟಿದರೆ, ನಷ್ಟ ಕಟ್ಟಿಕೊಡಬೇಕು. ಅನ್ಯಮಾರ್ಗವಿಲ್ಲದೆ ಅದೇ ಜಮೀನಿನಲ್ಲಿ ಪ್ರವೇಶ ಮಾಡುವ ಅನಿವಾರ್ಯತೆ ಬಂದರೆ ಅದಕ್ಕೆ ಅವಕಾಶ ನೀಡಲೇಬೇಕು. ಇದು ದುರುಪಯೋಗವಾಗಬಾರದು ಎಂದು ಕಾನೂನು ಹೇಳುತ್ತದೆ.

ರೈತರಿಗೆ ಒದಗಿಸುವ ಬಿತ್ತನೆ ಬೀಜ, ಔಷಧಿ, ಗೊಬ್ಬರ ಮುಂತಾದವುಗಳನ್ನು ಪರೀಕ್ಷಿಸಿ ಗುಣಮಟ್ಟ ನಿಷ್ಕರ್ಷೆ ಮಾಡಬೇಕೆಂದು ಕಾನೂನಿದೆ. ಮಣ್ಣು ಪರೀಕ್ಷೆ, ಹುಲ್ಲುಗಾವಲಿನ ರಕ್ಷಣೆ ಖಾಸಗಿ ಅರಣ್ಯಗಳ ಮೇಲ್ವಿಚಾರಣೆ, ನಿರುಪಯುಕ್ತ ಭೂಮಿಯ ಸುಧಾರಣೆಗಳನ್ನು ಕುರಿತಂತೆಯೂ ಕಾನೂನುಗಳಿವೆ.

ಜಿ.ಎಸ್.ಎಸ್.

ಕೃಷಿ ಕೂಲಿ ಕೃಷಿ ದುಡಿಮೆಗೆ ಅಥವಾ ಶ್ರಮಕ್ಕೆ ಪ್ರತಿಫಲವಾಗಿ ನೀಡುವ ಪದಾರ್ಥ ಅಥವಾ ಹಣ. ಇದು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆವ್ಯತ್ಯಾಸವಾಗುತ್ತದೆ.ಕೆಲಸ ಕಾರ್ಯಗಳು ವ್ಯವಸಾಯದ ಸಂದರ್ಭಗಳಿಗನುಗುಣವಾಗಿ ಕಡಿಮೆ ಅವಧಿಯಲ್ಲಿ ಹೆಚ್ಚಿನ ಕೆಲಸವನ್ನು ಮಾಡಬೇಕಾದಂಥವು, ಹೆಚ್ಚು ಶ್ರಮ ಮತ್ತು ಹೆಚ್ಚು ಅತಿ ಸೂಕ್ಷ್ಮವಾದ ಕೆಲಸಗಳು ಮತ್ತು ಅನುಭವಸ್ಥರೇ ಮಾಡಬೇಕಾದಂಥ ಕೆಲಸಗಳು, ಗಂಡಸರು ಮಾತ್ರ ಮಾಡಬೇಕಾದಂಥ ಕೆಲಸಗಳು, ಹೆಂಗಸರೇ ನಿರ್ವಹಿಸಬೇಕಾದ ಕೆಲಸಗಳು, ವೃದ್ಧರು ಕುಳಿತು ಮಾಡುವ ಕೆಲಸಗಳು,ಕೇವಲ ಯುವಕರಷ್ಟೇ ಮಾಡಬೇಕಾದಂಥ ಕೆಲಸಗಳು, ಮಕ್ಕಳನ್ನು ತೊಡಗಿಸಿ ಮಾಡುವ ಕೆಲಸಗಳು - ಹೀಗೆ ಕೃಷಿ ಕ್ಷೇತ್ರದಲ್ಲಿ ಭಿನ್ನ ರೂಪದ ಕೆಲಸಗಳು ಇರುತ್ತವೆ.

ತ್ವರಿತಗತಿಯಲ್ಲಿ ಮಾಡಿ ಮುಗಿಸಬೇಕಾದ ಕೆಲಸಗಳಾದ ಉಳುಮೆ, ಬಿತ್ತನೆ, ಕಳೆ ಕೀಳುವುದು, ಕಟಾವು ಮಾಡುವುದು, ಒಕ್ಕಣೆ ಮಾಡುವುದು ಇತ್ಯಾದಿ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಬೇಡಿಕೆ ಹೆಚ್ಚಾಗುವುದರಿಂದ ಕೂಲಿ ದರಗಳು ಹೆಚ್ಚಾಗುತ್ತವೆ.

ಮೇಲೆ ವಿವರಿಸಿರುವಂತೆ ಕೂಲಿ ದರಗಳು ಸಹ ವ್ಯಕ್ತಿಗೆ, ಕಾಲಕ್ಕೆ, ಕೆಲಸಕ್ಕೆ ಹೀಗೆ ಸಂದರ್ಭಕ್ಕನುಗುಣವಾಗಿ ವ್ಯತ್ಯಾಸಗೊಳ್ಳುತ್ತವೆ. ಕೆಲವೊಮ್ಮೆ ಕೂಲಿಕಾರ್ಮಿಕರಲ್ಲಿ ಭೂಮಾಲೀಕರು ಪೈಪೋಟಿ ಸೃಷ್ಟಿಸುವುದರಿಂದಲೂ ಕೂಲಿ ದರಗಳು ಏರುಮುಖ ಅಥವಾ ಇಳಿಮುಖವನ್ನು ಕಾಣುತ್ತವೆ. ಮಕ್ಕಳು ಮತ್ತು ಹೆಂಗಸರು ಗಂಡಸರಿಗಿಂತ ಹೆಚ್ಚು ಶ್ರಮವಹಿಸಿ ದುಡಿದರೂ ಸಾಮಾನ್ಯವಾಗಿ ಕೊಡುವ ಕೂಲಿ ಕಡಿಮೆಯೇ. ಕೆಲವು ರೈತರು ತುರ್ತು ಕೆಲಸಗಳಿಗಾಗಿ ಕಾಲಮಿತಿಯಿಲ್ಲದೆ ಒಟ್ಟು ಒಪ್ಪಂದದ ಹಾಗೆ ಗುತ್ತಿಗೆ ರೂಪದಲ್ಲಿ ಕೆಲಸಗಳನ್ನು ಮಾಡಿಸುತ್ತಾರೆ. ಕೂಲಿಗಳಲ್ಲಿ ದಿನಗೂಲಿ, ವಾರದ ಕೂಲಿ ಇತ್ಯಾದಿಗಳಿರುತ್ತವೆ. ಹೆಚ್ಚಿನ ವಿವರಗಳಿಗೆ ನೋಡಿ- ಕೃಷಿ ಕೆಲಸಗಾರರು. ಪರಂಪರೆಯಿಂದ ಬಂದ ಕೂಲಿ ದರದ ಪರಿಷ್ಕರಣೆ ಆಗಬೇಕೆಂದು ಬಯಸಿದ ಕೂಲಿ ಕಾರ್ಮಿಕರ ಸಂಘಟನೆಗೆ ಓಗೊಟ್ಟು ಸರ್ಕಾರ ಕನಿಷ್ಠ ಕೂಲಿ ನಿಯಮಗಳನ್ನು ರೂಪಿಸಿತು. ಪರಿಣಾಮವಾಗಿ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಗೆ ಬಂದು ಸ್ತ್ರೀಯರ ಕೂಲಿಯಲ್ಲೂ ಸಮಾನತೆ ಕಂಡುಬಂದಿದೆ.

ಎ.ಬಿ.ಪಿ.

ಕೃಷಿ ಕೆಲಸಗಾರರು ಪ್ರಪಂಚದ ಜನಸಂಖ್ಯೆಯಲ್ಲಿ ಅಧಿಕ ಜನರು ಕೃಷಿ ಸಂಬಂಧಿ ದುಡಿಮೆಯಲ್ಲಿ ತೊಡಗಿಕೊಂಡಿದ್ದಾರೆ. ಪ್ರಪಂಚಾದ್ಯಂತ ಕೈಗಾರಿಕೋದ್ಯಮಿಗಳಿಗೆ ಹೆಚ್ಚು ಕೃಷಿ ಉಪಕರಣಗಳ ಬೇಡಿಕೆ ಉಂಟು ಮಾಡುವವರು ಕೃಷಿಕರೇ. ಪ್ರಾಚೀನ ಕಾಲದಿಂದಲೂ ಗುಲಾಮರನ್ನು ಕೃಷಿ ದುಡಿಮೆಗಾರರಾಗಿ ಬಳಸಿಕೊಳ್ಳುತ್ತಿದ್ದುದರ ಬಗೆಗೆ ಉಲ್ಲೇಖಗಳಿವೆ. ಇದು ಕ್ರಮೇಣ ಊಳಿಗಮಾನ್ಯ ಪದ್ಧತಿಯಾಗಿ ಮಾರ್ಪಟ್ಟು ಜಮೀನ್ದಾರರಿಂದ ಭೂಮಿಯನ್ನು ಪಡೆದು ಕೃಷಿಕರು ಕೆಲವು ನಿಯಮಗಳಿಗೆ ಬದ್ಧರಾಗಿ ಕೆಲಸ ಮಾಡುವ ಸ್ಥಿತಿ ಒದಗಿಬಂತು. ಇವರು ಸ್ವತಂತ್ರ ಕೃಷಿ ದುಡಿಮೆಗಾರರಲ್ಲ. ಇದು ಒಂದು ರೀತಿಯ ಜೀತಪದ್ಧತಿಯೇ. ಊಳಿಗಮಾನ್ಯ ಪದ್ಧತಿ ಕ್ಷೀಣಿಸತೊಡಗಿದಂತೆ ಕೃಷಿ ಕೆಲಸಗಾರರು ಕಾರ್ಮಿಕರಂತೆ ಗೊತ್ತಾದ ಅವಧಿಗೆ ನಿರ್ದಿಷ್ಟ ಕೂಲಿಗಾಗಿ ದುಡಿಯುವಂತಾಯಿತು.

ವ್ಯವಸಾಯದ ಕೆಲಸಗಾರರನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. 1. ಭೂಮಾಲೀಕರು ಅಥವಾ ಗೇಣಿದಾರರು. ಇವರು ಸಾಗುವಳಿ ಭೂಮಿಯಲ್ಲಿ ಕಾರ್ಯನಿರತರಾದವರು. 2. ಭೂಮಿಯನ್ನು ಗುತ್ತಿಗೆಗೆ ಪಡೆದು ಸಾಗುವಳಿ ಮಾಡಿ ಉತ್ಪನ್ನದ ನಿರ್ದಿಷ್ಟ ಪಾಲನ್ನು ಭೂಮಾಲೀಕರೊಡನೆ ಹಂಚಿಕೊಳ್ಳುವವರು, 3. ನಿಗದಿತ ಕೂಲಿಗಾಗಿ ಬೇರೆಯವರ ಜಮೀನಿನಲ್ಲಿ ದುಡಿಯುವವರು.

ಪ್ರಪಂಚದಲ್ಲಿ ಭೂಮಾಲೀಕರಿಗಿಂತ ಕೃಷಿ ಕಾರ್ಮಿಕರ ಸಂಖ್ಯೆಯೇ ಅಧಿಕ. ಅದರಲ್ಲೂ ಭೂರಹಿತ ಶ್ರಮಜೀವಿಗಳೇ ಶೇ. 50 ರಷ್ಟು ಇದ್ದಾರೆ. ಪುರುಷ, ಮಹಿಳೆ ಮತ್ತು ಮಕ್ಕಳೆನ್ನದೆ ಎಲ್ಲರೂ ಕೃಷಿ ಕೆಲಸಗಾರರಾಗಿರುವುದನ್ನು ಕಾಣುತ್ತೇವೆ. ಕೆಲವು ಸಣ್ಣ ಹಿಡುವಳಿದಾರರು ತಮ್ಮ ಕೃಷಿ ಭೂಮಿಯಲ್ಲಿ ತೊಡಗಿಸಿಕೊಂಡರೂ ಆದಾಯದ ಕೊರತೆಯಿಂದಾಗಿ ಇತರರ ಜಮೀನಿನಲ್ಲಿ ವರ್ಷದ ಕೆಲವು ತಿಂಗಳು ದುಡಿಯುವರು. ಬೇರೆ ಕ್ಷೇತ್ರಗಳಲ್ಲಿ ದುಡಿಯುವವರು - ಗಾರೆಕೆಲಸಗಾರರು, ಕಂಬಾರರು, ಕುಂಬಾರರು, ಚಮ್ಮಾರರು, ಅಕ್ಕಸಾಲಿಗರು ಮುಂತಾದವರು - ಕೃಷಿ ಚಟುವಟಿಕೆಗಳು ತೀವ್ರಗತಿಯಲ್ಲಿದ್ದಾಗ ತಾತ್ಕಾಲಿಕವಾಗಿ ದಿನಗೂಲಿಗಾಗಿ ದುಡಿಯುವುದುಂಟು.

ಪ್ರಾಕೃತಿಕ ವಿಕೋಪಗಳಿಂದಾಗಿ ಕ್ಷಾಮ ಡಾಮರ, ಅತಿವೃಷ್ಟಿ ಅನಾವೃಷ್ಟಿ ತಲೆದೋರಿದಾಗ ಗ್ರಾಮೀಣರು ನಗರಗಳತ್ತ ದಾಪುಗಾಲು ಹಾಕುವುದರಿಂದ ಕೃಷಿ ಕಾರ್ಮಿಕರ ಸಂಖ್ಯೆ ಕ್ಷೀಣಿಸುತ್ತಿದೆ. ಜೀವನ ನಿರ್ವಹಣೆಗೆ ಕೃಷಿವಲಯದಲ್ಲಿ ಸಿಗುವ ಕೂಲಿ ಸಾಕಾಗದೆ ಹೋದಾಗ ಕೃಷಿ ದುಡಿಮೆಯಿಂದ ವಿಮುಖರಾಗುತ್ತಿರುವುದು ಸಹಜ. ರೈತರಿಗೆ ಉತ್ಪನ್ನದ ವೆಚ್ಚ ಹೆಚ್ಚಾಗಿ ಇಳುವರಿ ಕಡಿಮೆಯಾಗುತ್ತಿರುವುದರಿಂದ ಕೂಲಿ ಕೂಡ ಕಡಿಮೆ ಕೊಡುವುದುಂಟು. ಇತರ ಉದ್ಯೋಗ ಕ್ಷೇತ್ರಗಳಲ್ಲಿ ದೊರೆಯುವ ಮೂಲಸೌಲಭ್ಯಗಳು ಗ್ರಾಮೀಣ ಕೃಷಿ ಕಾರ್ಮಿಕರಿಗೆ ದೊರೆಯುವುದಿಲ್ಲ. ಈ ಕಾರ್ಮಿಕರಿಗೆ ನಿರ್ದಿಷ್ಟ ಸ್ಥಳ, ನಿರಂತರ ದುಡಿಮೆ ಒಂದೆಡೆ ದೊರೆಯುವುದು ಕಷ್ಟವಾಗಿರುವುದರಿಂದ ಕೆಲಸ ದೊರೆಯುವ ತಾಣಗಳಿಗೆ ಚದರಿ ಹೋಗುವರು. ಹೆಚ್ಚಿನವರು ಅನಕ್ಷರಸ್ಥರಾದುದರಿಂದ ಇವರು ಸಂಘಟಿತರಾಗುವುದು ಕಷ್ಟಸಾಧ್ಯ.

ಪ್ರಾಚೀನ ಕಾಲದಲ್ಲಿ ವಸ್ತುವಿನಿಮಯ ಪದ್ಧತಿ ಎಲ್ಲೆಡೆಯೂ ಇತ್ತು. ಇದು ಕ್ರಮೇಣ ಬದಲಾದರೂ ಗ್ರಾಮೀಣ ಪರಿಸರದ ಕೃಷಿ ಕಾರ್ಮಿಕರಿಗೆ ಇಂದಿಗೂ ಹಣಕ್ಕೆ ಬದಲಾಗಿ ತಾವು ಬೆಳೆಯುವ ವಸ್ತುಗಳನ್ನು ನೀಡುವುದುಂಟು. ಭೂಮಾಲೀಕರ ಬಳಿ ಕೃಷಿ ಕಾರ್ಮಿಕರು ಮುಂಗಡವಾಗಿ ದವಸ ಧಾನ್ಯಗಳನ್ನು ಪಡೆದು ಹಬ್ಬ ಹರಿದಿನಗಳನ್ನು ಆಚರಿಸಿಕೊಳ್ಳುತ್ತಿದ್ದರು. ವ್ಯವಸಾಯ ಚಟುವಟಿಕೆಗಳು ಆರಂಭವಾದ ಕೂಡಲೆ ಬೇರೆಡೆ ಕೂಲಿಗೆ ಹೋಗದೆ ಮುಂಗಡವಾಗಿ ದವಸ ಪಡೆದಿದ್ದ ಜಮೀನ್ದಾರರ ಬಳಿಯೇ ಕೆಲಸ ಮಾಡಬೇಕಾಗಿತ್ತು. ಇವರು ಹೆಚ್ಚಿನ ಕೂಲಿಗಾಗಿ ಬೇಡಿಕೆ ಇಡುವಂತಿಲ್ಲ. ಇವೆಲ್ಲಕ್ಕಿಂತ ಮಿಗಿಲಾದ ಜೀತಪದ್ಧತಿ ಎಂಬ ಕರಾಳ ವ್ಯವಸ್ಥೆ ವ್ಯವಸಾಯ ಕ್ಷೇತ್ರದಲ್ಲಿ ಇರುವುದರಿಂದ ವಂಶಪಾರಂಪರ್ಯವಾಗಿ (ಜಮೀನುರಹಿತ) ಜಮೀನ್ದಾರರ ಬಳಿಯೇ ದುಡಿಯಬೇಕಾಗಿತ್ತು. ಇಂಥ ಜೀತದಾಳುಗಳು ಗುಲಾಮರಿಗಿಂತ ಭಿನ್ನವೇನಲ್ಲ.

ಇಂದು ಕೈಗಾರಿಕೀಕರಣ, ಜಾಗತೀಕರಣ, ಉದಾರೀಕರಣಗಳು ಬೆಳೆದಿದ್ದರೂ ಜೀತಪದ್ಧತಿ ಸಂಪೂರ್ಣವಾಗಿ ನಶಿಸಿಲ್ಲ. ಆದಾಗ್ಯೂ ಪ್ರಸ್ತುತದಲ್ಲಿ ಕೂಲಿಕಾರ್ಮಿಕರ ಸಂಖ್ಯೆ ಕ್ಷೀಣಿಸುತ್ತಿದೆ. ಭಾರತದ ದೊಡ್ಡ ನಗರಗಳಲ್ಲಿ ಬೇಸಾಯ ಕೆಲಸಗಾರರ ಪ್ರಮಾಣ ಇತರ ಕಾರ್ಮಿಕರಿಗಿಂತ ಕಡಿಮೆಯಾಗುತ್ತಿದೆ. ಆದರೆ ಇತರೆಡೆಗಳಲ್ಲಿ ವ್ಯವಸಾಯ ಕಾರ್ಮಿಕರ ಸಂಖ್ಯೆ ಹೆಚ್ಚು. ಕೃಷಿ ಕಾರ್ಮಿಕರನ್ನು ಉತ್ತೇಜಿಸಲು ಸ್ವಾತಂತ್ರ್ಯಾನಂತರ ಭಾರತದಲ್ಲಿ ಅನೇಕ ರೀತಿಯ ಯೋಜನೆಗಳು ರೂಪುಗೊಂಡವು. 1948 ರಲ್ಲಿ ಕನಿಷ್ಠ ಕೂಲಿಕಾಯಿದೆ ಜಾರಿಗೆ ಬಂತು. 1950-51ರಲ್ಲಿ ಕೃಷಿ ಕೆಲಸಗಾರರ ಸ್ಥಿತಿಗತಿ ಕುರಿತು ವಿಚಾರಣಾ ಆಯೋಗವನ್ನು ಭಾರತ ಸರ್ಕಾರ ರೂಪಿಸಿತು. ಐದು ವರ್ಷಗಳ ಅನಂತರ ಮತ್ತೊಮ್ಮೆ ವಿಚಾರಣೆ ನಡೆಯಿತು. ಈ ಆಯೋಗದ ವರದಿ ಪ್ರಕಾರ ಅಂದು ದೇಶದಲ್ಲಿ ಅರ್ಧ ಜನರಿಗೆ ಭೂಮಿ ಇರಲಿಲ್ಲ. ಸ್ವಲ್ಪ ಭೂಮಿ ಇರುವ ಬಹುತೇಕ ಜನ ದಿನಗೂಲಿಗೆ ಹೋಗುವರು. ಭೂರಹಿತ ಕೃಷಿ ಕಾರ್ಮಿಕರಲ್ಲಿ ಹೆಚ್ಚಿನ ಪಾಲು ಹಿಂದುಳಿದ ಪಂಗಡಕ್ಕೆ ಸೇರಿದವರು. ಇವರ ಸುಧಾರಣೆಗಾಗಿ 1950 ರಲ್ಲೇ ಭಾರತದ ಭೂವ್ಯವಸಾಯ ಸುಧಾರಣಾ ಸಮಿತಿ ಕೆಲವು ಶಿಫಾರಸ್ಸುಗಳನ್ನು ಮಾಡಿತು. ಉದಾ : ತಲತಲಾಂತರದಿಂದ ಅವರು ಅನುಸರಿಸುತ್ತಾ ಬಂದಿರುವ ಕಸುಬು, ಭೂಹಿಡುವಳಿ, ಗೇಣಿ ಸೌಲಭ್ಯ ಮುಂತಾದವುಗಳಿಗನುಗುಣವಾಗಿ ಇವರ ಸ್ಥಾನಮಾನಗಳು ನಿರ್ಧರಿತವಾಗಿವೆ. ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿ ಕೆಲಸಗಾರರ ಕುಂದುಕೊರತೆಗಳನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳಲಾಯಿತು. 1. ವ್ಯವಸಾಯೋತ್ಪನ್ನಗಳ ಅಭಿವೃದ್ಧಿ ಮತ್ತು ಪಶುಸಂಗೋಪನೆ, 2. ಗುಡಿಕೈಗಾರಿಕೆಗಳ ಮೂಲಕ ಕೃಷಿ ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು, 3. ಕೃಷಿಕರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಅವರಿಗೆ ಶಿಕ್ಷಣಾವಕಾಶ ನೀಡುವುದು. ಸಮಪ್ರಮಾಣದಲ್ಲಿ ಭೂಮಿಯನ್ನು ಹಂಚುವುದು. 4. ಇವರ ಜೀವನಮಟ್ಟ ಸುಧಾರಿಸಲು ಗ್ರಾಮಾಭಿವೃದ್ಧಿಗಾಗಿ ಮೀಸಲಿಟ್ಟ ಹಣವನ್ನು ಸರಿಯಾಗಿ ವ್ಯಯಿಸುವುದು.

ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿ ದುಡಿಮೆಗಾರರ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಮುಖ್ಯಾಂಶಗಳು ಹೀಗಿವೆ : ನಿರುಪಯುಕ್ತ ಭೂಮಿ ವಶಪಡಿಸಿಕೊಂಡು ಭೂರಹಿತರಿಗೆ ಹಂಚುವುದು, ಸಾಲಸೌಲಭ್ಯಗಳನ್ನು ನೀಡುವುದು, ಗೇಣಿ ಸುಧಾರಿಸುವುದು, ಮಿಶ್ರ ಬೇಸಾಯ ಪದ್ಧತಿಗೆ ಪ್ರೇರಣೆ ನೀಡುವುದು, ಇವರಿಗೆ ಬೇರೆ ಉದ್ಯೋಗ ಒದಗಿಸುವುದರ ಮೂಲಕ ಗೇಣಿದಾರ ಹಾಗೂ ಗುತ್ತಿಗೆದಾರರ ನಡುವೆ

ಪರಸ್ಪರ ವಿಶ್ವಾಸ ಮೂಡಿಸುವುದು. ಕೃಷಿಗೆ ಪೂರಕವಾಗಿ ಹೆಚ್ಚು ಉದ್ಯೋಗ ಸೃಷ್ಟಿಸಲು ಜಿಲ್ಲಾವಾರು ಕಾರ್ಯಕ್ರಮ ರೂಪಿಸಲಾಗಿದೆ. ಇದಕ್ಕಾಗಿ ಸರ್ಕಾರ ಆರ್ಥಿಕ ನೆರವು ನೀಡಿದೆ.

ಕೃಷಿ ಕೂಲಿ ಪಾವತಿಯಲ್ಲಿ ಎರಡು ವಿಧ : 1. ದಿನಗೂಲಿ, ಎಂದರೆ ನಿರ್ದಿಷ್ಟ ಅವಧಿಗೆ ನಿರ್ದಿಷ್ಟ ಕೂಲಿ, 2. ಒಪ್ಪಂದದ ಮೇರೆಗೆ ಕೆಲಸ ವಹಿಸಿಕೊಂಡು ಕೂಲಿ ನೀಡುವುದು. ದಿನಗೂಲಿಯಲ್ಲಿ ಕೆಲಸಗಾರನಿಗೆ ಸ್ವಾತಂತ್ರ್ಯ ಇಲ್ಲ. ಕೊಟ್ಟ ಕೆಲಸ ನಿರ್ವಹಿಸಬೇಕು. ಒಬ್ಬ ಮೇಲುಸ್ತುವಾರ ಅಥವಾ ಯಜಮಾನ ಆಳುಗಳ ಜೊತೆ ದುಡಿಯುತ್ತಾನೆ. ಎರಡನೆಯದರಲ್ಲಿ ಕೆಲವು ನಿರ್ದಿಷ್ಟ ಕೆಲಸಗಳಿಗೆ ಕೆಲಸಗಾರನ ಸಾಮರ್ಥ್ಯಕ್ಕನುಗುಣವಾಗಿ ಕೂಲಿ ನಿರ್ಧರಿಸಲಾಗುತ್ತದೆ. ಹೆಚ್ಚು ಕೆಲಸ ಮಾಡಿದರೆ ಹೆಚ್ಚು ಕೂಲಿ ಸಿಗುತ್ತದೆ. ಉದಾ : ಹತ್ತಿ ಬಿಡಿಸುವುದು, ನೆಲಗಡಲೆ ತೆಗೆಯುವುದು, ಆಲೂಗಡ್ಡೆ ಅಗೆತ, ಕಾಫಿಬೀಜ ಬಿಡಿಸುವುದು, ದ್ರಾಕ್ಷಿ ಕೊಯ್ಯುವುದು ಇತ್ಯಾದಿ. ಕೂಲಿಯ ದರ ಪ್ರದೇಶದಿಂದ ಪ್ರದೇಶಕ್ಕೆ ಋತುಗಳಿಗನುಗುಣವಾಗಿ ವ್ಯತ್ಯಾಸ ಹೊಂದುತ್ತದೆ. ಉದಾ : ಮುಂಗಾರಿನಲ್ಲಿ (ಬಿತ್ತನೆ), ಸುಗ್ಗಿ (ಕಟಾವು ಮತ್ತು ಒಕ್ಕಣೆ) ಸಂದರ್ಭಗಳಲ್ಲಿ ಕೂಲಿ ಹೆಚ್ಚು. ಕೆಲವು ವಿಶೇಷ ಸಂದರ್ಭಗಳಲ್ಲಿ ಕೆರೆ ಕಟ್ಟೆ, ಕಾಲುವೆಗಳ ನಿರ್ಮಾಣ, ರಸ್ತೆ ನಿರ್ಮಾಣ ಇತ್ಯಾದಿ. ಕಾರ್ಮಿಕರ ಬೇಡಿಕೆ ಹೆಚ್ಚಾಗಿ ಕೃಷಿ ಕೆಲಸಗಾರರ ಕೊರತೆ ಉಂಟಾಗುವುದರಿಂದ, ಸಹಜವಾಗಿ ಕೂಲಿದರ ಹೆಚ್ಚಾಗುವುದು. ಕೃಷಿ ಉತ್ಪನ್ನಗಳ ಬೇಡಿಕೆ ಹೆಚ್ಚಾದಾಗಲೂ ತಾತ್ಕಾಲಿಕವಾಗಿ ಕೂಲಿದರ ಹೆಚ್ಚಾಗುವ ಸಂಭವ ಉಂಟು. ಗಂಡಾಳು, ಹೆಣ್ಣಾಳು, ಮಕ್ಕಳುಗಳಿಗೆ ಕೂಲಿಯಲ್ಲಿ ವ್ಯತ್ಯಾಸವಿದೆ.

ಋತುಗನುಸಾರವಾಗಿ ವ್ಯವಸಾಯದ ಕೆಲಸ ಆಗಬೇಕಾದುದರಿಂದ ಆಯಾ ಅವಧಿಯಲ್ಲೇ ಕೃಷಿ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಇಂಥ ಸಮಯದಲ್ಲಿ ಸ್ಥಳೀಯ ಕೃಷಿ ಕೆಲಸಗಾರರು ಸಿಗುವುದು ಕಷ್ಟ. ಹೀಗಾದಾಗ ಬೇರೆ ಪ್ರದೇಶಗಳಿಂದ ಭೂರಹಿತ ಬಡ ಕೂಲಿಗಾರರು ಬಂದು ನೆಲಸಿ ಕೆಲಸಮುಗಿಸಿ ಸ್ವಸ್ಥಳಗಳಿಗೆ ಹೋಗುವುದುಂಟು. ಉದಾ : ಕಾಫಿ, ಮೆಣಸಿನಕೊಯ್ಲು, ಆಲೂಗೆಡ್ಡೆ ಕೊಯ್ಲು ಸಂದರ್ಭಗಳಲ್ಲಿ ಊರಿಂದ ಊರಿಗೆ ತಂಡೋಪತಂಡವಾಗಿ ಕೆಲಸಗಾರರು ವಲಸೆ ಬಂದು ವಾಪಸಾಗುವುದುಂಟು. ಮನುಕುಲದ ಬದುಕಿನ ಬವಣೆ ನೀಗಲು ಕೃಷಿಕರೇ ಮೂಲ. ಕೃಷಿ ಸರ್ವ ಉದ್ಯೋಗಗಳ ತಾಯಿ. ಹಾಗಾಗಿ ಕೃಷಿ ಮತ್ತು ಕೃಷಿ ಕೆಲಸಗಾರರು ಜೀವನ ನಿರ್ವಹಣೆಗೆ ಮೂಲ ಕಾರಣಕರ್ತರು.

ಎ.ಎಂ.ಡಿ.

ಕೃಷಿ ಮತ್ತು ಮಹಿಳೆ ಕೃಷಿಗೂ ಮಹಿಳೆಗೂ ಅವಿನಾಭಾವ ಸಂಬಂಧವಿದೆ. ನೇರವಾಗಿ ಇಲ್ಲವೆ ಪರೋಕ್ಷವಾಗಿ ಮಹಿಳೆ ಕೃಷಿಯೊಂದಿಗೆ ಒಡನಾಟವನ್ನು ಹೊಂದಿದವಳಾಗಿದ್ದಾಳೆ. ಏಕೆಂದರೆ ನಮ್ಮಲ್ಲಿ 'ಬೇಸಾಯ ನಾ ಸಾಯ ನೀ ಸಾಯ ಮನೆಮಂದಿ ಎಲ್ಲ ಸಾಯ' ಎಂಬ ಗಾದೆ ಮಾತೊಂದಿದೆ. ಇದು ಕೃಷಿಕರ ಶ್ರಮದ ಬಗೆಗೆ ಹೇಳುವಂತಹ ಮಾತಾದರೂ ಕೃಷಿ ಎನ್ನುವುದು ಮನೆಗೆ ಸಂಬಂಧಿಸಿದ ಪ್ರಕ್ರಿಯೆಯಾಗಿದೆ ಎಂಬುದನ್ನು ಧ್ವನಿಸುತ್ತದೆ. ಒಂದು ಮನೆ ಎಂದರೆ ಅದು ಆ ಮನೆಯ ಗಂಡು, ಹೆಣ್ಣು ಮತ್ತು ಮಕ್ಕಳನ್ನು ಒಳಗೊಂಡಿರುವಂತಹದ್ದು. ಹಾಗಾಗಿ ಕೃಷಿ ಎನ್ನುವುದು ಮನೆಗೆ ಸಂಬಂಧಿಸಿದ ಪ್ರಕ್ರಿಯೆ ಎನ್ನುವುದಾದರೆ ಅದು ಆ ಮನೆಯ ಸದಸ್ಯರೆಲ್ಲರಿಗೂ ಸಂಬಂಧಿಸಿದ ಪ್ರಕ್ರಿಯೆಯೇ ಆಗಿದೆ. ಅಂದರೆ ಇಲ್ಲಿ ಕುಟುಂಬದೊಳಗಿನ ಪುರುಷ, ಮಹಿಳೆ, ಮಕ್ಕಳೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಸಹಕರಿಸಿ ಕೃಷಿಯಲ್ಲಿ ಭಾಗಿಯಾಗುತ್ತಾರೆ ಎಂಬುದನ್ನು ಹೇಳಲಾಗಿದೆ. ಕೃಷಿಯಲ್ಲಿ ಮಹಿಳೆಯೂ ಭಾಗಿಯಾಗಿದ್ದಾಳೆ ಎಂಬುದಕ್ಕೆ ಈ ಮಾತೊಂದೆ ಸಾಕೆನಿಸುತ್ತದೆ.

ಬೇಟೆಯ ಕಲೆಯನ್ನು ಕಲಿಯುವುದಕ್ಕೆ ಮುಂಚೆ ಮನುಷ್ಯರು ಗುಂಪು ಜೀವನ ನಡೆಸುತ್ತಿದ್ದರು. ಆಗ ಸ್ತ್ರೀಪುರುಷರ ನಡುವೆ ಕೆಲಸದ ವಿಭಜನೆಯೇನು ಆಗಿರಲಿಲ್ಲ. ಎಲ್ಲರೂ ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ಸಂಗ್ರಹಿಸುವ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ಮನುಷ್ಯ ಬೇಟೆಯ ಕಲೆಯನ್ನು ಕಲಿತ ಮೇಲೆ ಕಾಡಿನಲ್ಲಿ ಬೇಟೆಗಾಗಿ ಅಲೆಯುವ ಕೆಲಸ ಪುರುಷನದ್ದಾಯಿತು. ಸ್ತ್ರೀ ಮಕ್ಕಳ ಲಾಲನೆ ಪಾಲನೆಯ ಜವಾಬ್ದಾರಿಯನ್ನು ಹೊತ್ತಿದ್ದರಿಂದ ತಮ್ಮ ವಸತಿಯ ಸುತ್ತಮುತ್ತಲೇ ಆಹಾರ ಸಂಗ್ರಹಣೆಯ ಪ್ರಯತ್ನ ನಡೆಸುತ್ತಿದ್ದಳೆನಿಸುತ್ತದೆ.

ಕೃಷಿಯ ಆರಂಭದ ದಿನಗಳಲ್ಲಿ ಮಹಿಳೆಯ ಪಾತ್ರ ಬಹಳ ಮಹತ್ವವಾದದ್ದು. ಏಕೆಂದರೆ ವ್ಯವಸಾಯಕ್ಕೆ ನಾಂದಿ ಹಾಡಿದವಳೇ ಹೆಣ್ಣು. 'ಗೆಡ್ಡೆ-ಗೆಣಸು ಸಂಗ್ರಹಣೆಯ ಸಂದರ್ಭದಲ್ಲಿಯೇ ಸ್ತ್ರೀಯರು ಕೃಷಿ ಕೆಲಸದ ಆವಿಷ್ಕಾರ ಮಾಡಿದರು. ಕಾಡಿನಲ್ಲಿ ಹಣ್ಣುಹಂಪಲು ಇತ್ಯಾದಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಸ್ತ್ರೀಯರು ಕಾಲಾನುಕ್ರಮದಲ್ಲಿ ಅಲ್ಲಲ್ಲಿ ಎಸೆದಿದ್ದ ಬೀಜಗಳು ಮೊಳಕೆಯೊಡೆದು ಸಸಿ ಬೆಳೆದುದನ್ನು ಕಂಡರು. ಈ ಜ್ಞಾನವೇ ಕೃಷಿಯ ಆವಿಷ್ಕಾರಕ್ಕೆ ಮೊದಲ ಹೆಜ್ಜೆಯಾಗಿರಬಹುದು' (ದೇವಿಪ್ರಸಾದ ಚಟ್ಟೋಪಾಧ್ಯಾಯ, 1997, ಪು. 23). ಕೃಷಿ ಆವಿಷ್ಕಾರ ಹೀಗಾಗಿರಬಹುದು. ಎಂದು ಊಹಿಸಿದಂತೆ ಸ್ತ್ರೀ ಕೃಷಿಯನ್ನು ಆವಿಷ್ಕರಿಸಿದ ಕಾಲ ಘಟ್ಟವನ್ನು ಗುರುತಿಸಿಕೊಳ್ಳಬಹುದು. 'ಆಹಾರ ಸಂಗ್ರಹಣೆಯ ಹಂತ ಹೊಸ ಶಿಲಾಯುಗದ ಆರಂಭದೊಂದಿಗೆ ಕೊನೆಗೊಳ್ಳುತ್ತದೆ' (ಬಾಲಗೋಪಾಲ್, ಕೆ. 1998, ಪು. 27). ಅಂದರೆ ಹೊಸ ಶಿಲಾಯುಗದ ಆರಂಭದೊಂದಿಗೆ ಆಹಾರ ಉತ್ಪಾದನೆಯ ಕ್ರಮ ಬೆಳೆದು ಬಂದಿತು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಮಹಿಳೆಯೇ ಕೃಷಿ ಆವಿಷ್ಕಾರ ಮಾಡಿದ್ದು ಎನ್ನುವುದಾದರೆ, ನವಶಿಲಾಯುಗದ ಕಾಲಕ್ಕೆ ಸ್ತ್ರೀಯಿಂದ ಕೃಷಿ ಆವಿಷ್ಕಾರವಾಯಿತೆಂದು ಹೇಳಬಹುದು.

ಅಂತೆಯೇ ಸ್ತ್ರೀಯೇ ಕೃಷಿಯ ಆವಿಷ್ಕರ್ತೃ ಎನ್ನುವುದಕ್ಕೆ ರಾಬರ್ಟ್ ಬ್ರಿಫಾಲ್ಟ್ ಎನ್ನುವ ವಿದ್ವಾಂಸ ದಂತಕಥೆಗಳ ಉದಾಹರಣೆಯನ್ನು ಕೊಟ್ಟಿದ್ದಾರೆ. 'ಅಮೆರಿಕಾದಲ್ಲಿಯ ಒಂದು ಆದಿವಾಸಿ ಗುಂಪಿನ ಹೆಸರು ಚೆರೊಕಿ. ಅವರ ಒಂದು ದಂತಕಥೆಯ ಪ್ರಕಾರ ಸ್ತ್ರೀಯೊಬ್ಬಳು ಅರಣ್ಯದಲ್ಲಿ ಮೊದಲು ಸಸ್ಯವನ್ನು ಹುಡುಕಿದಳು. ಸಾಯುವಾಗ ಆ ಸ್ತ್ರೀ ತಾನು ಸತ್ತ ಮೇಲೆ ತನ್ನ ದೇಹವನ್ನು ನೆಲದ ಮೇಲಿದ ಎಳೆದುಕೊಂಡು ಹೋಗಬೇಕೆಂದು ಹೇಳಿದ್ದಳು. ಅವಳ ದೇಹ ಎಲ್ಲೆಲ್ಲಿ ನೆಲವನ್ನು ಸ್ಪರ್ಶಿಸಿದ್ದಿತೋ ಅಲ್ಲೆಲ್ಲಾ ಬೆಳೆ ಸಮೃದ್ಧಿಯಾಗಿ ಬೆಳೆದಿದ್ದಿತು' (ಅದೇ, ಪು. 25-26). ಅಂದರೆ ಕೃಷಿಯ ಹುಟ್ಟಿಗೆ ಸ್ತ್ರೀಯೇ ಕಾರಣಕರ್ತಳು ಎನ್ನುವುದನ್ನು ಈ ದಂತಕಥೆಯು ಧ್ವನಿಸುತ್ತದೆ.

ಅದೇ ರೀತಿಯಾಗಿ 'ಹರಪ್ಪ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆ ದೊರೆತಿದ್ದು, ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು, ಆಕೆಯ ಗರ್ಭದಿಂದ ಒಂದು ಸಸ್ಯ ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀ ಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯ ಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯೆಂದು ಹೇಳಲಾಗಿದೆ. ಈಕೆಯನ್ನು ಶಾಕಾಂಬರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯಸಂಬಂಧಿಯಾದ ದೇವತೆಯ ಇನ್ನೊಂದು ಮುದ್ರಿಕೆಯ ಹರಪ್ಪಾ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದ್ದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಭಾಗಿ ನಿಂತಿದ್ದಾನೆ. ಒಂದು ಮೇಕೆ ಭಕ್ತನ ಹಿಂದೆ ನಿಂತಿದೆ. ಇದರ ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ.

ಮೇಲಿನ ವಿವರಗಳು ಕೃಷಿಗೂ ಮಹಿಳೆಗೂ ಇದ್ದ ಸಂಬಂಧವನ್ನು ಸೂಚ್ಯವಾಗಿ ತಿಳಿಸುತ್ತವೆ. ಅಲ್ಲದೆ ಸಸ್ಯಗಳ ಹುಟ್ಟಿಗೆ ಮಹಿಳೆಯೇ ಕಾರಣ ಎನ್ನುವುದನ್ನು, ಸ್ತ್ರೀಯ ಗರ್ಭದಿಂದ ಸಸ್ಯ ಹುಟ್ಟಿದಂತೆ ಚಿತ್ರಿಸಲಾದ ಈ ಮುದ್ರಿಕೆಯು ಸ್ಪಷ್ಟಪಡಿಸುತ್ತದೆ. ಅಂತೆಯೇ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ಒಂದು ಹೆಣ್ಣು ನಿಂತಿರುವಂತೆ ಮುದ್ರಿಕೆಯೊಳಗೆ ಚಿತ್ರಿಸಿದ ಚಿತ್ರ ಕೂಡಾ ಸಸ್ಯಗಳ ಬೆಳವಣಿಗೆಗೂ ಮಹಿಳೆಗೂ ಯಾವುದೋ ಬಗೆಯ ಸಂಬಂಧವಿದೆ ಎನ್ನುವುದನ್ನು ತಿಳಿಸುತ್ತದೆ. ಏಕೆಂದರೆ ಆದಿಮ ಮನುಷ್ಯ ರಚಿಸುತ್ತಿದ್ದ ಚಿತ್ರಕಲೆ, ಭಿತ್ತಿಚಿತ್ರಗಳಲ್ಲಿ ಅವರ ಬದುಕನ್ನು ಹೊರತುಪಡಿಸಿದ ಸಂಗತಿಗಳೇನಾಗಿರಲಿಲ್ಲ. ಅವರ ಸುತ್ತಮುತ್ತಲಿನ ಪರಿಸರದಲ್ಲಿ ಏನನ್ನು ಕಾಣುತ್ತಿದ್ದರೋ ಅದನ್ನೇ ಅವರು ತಮ್ಮ ಕಲೆಯಲ್ಲಿ ಅಭಿವ್ಯಕ್ತಿಸುತ್ತಿದ್ದರು. ಹಾಗಾಗಿ ಈ ಮುದ್ರಿಕೆಯೊಳಗಿನ ಚಿತ್ರಗಳು ಕೃಷಿಯೊಟ್ಟಿಗೆ ಮಹಿಳೆಗಿದ್ದ ಸಂಬಂಧದ ಬಗೆಗಿನ ಪರಿಕಲ್ಪನೆಯ ಹಿನ್ನೆಲೆಯಲ್ಲಿಯೇ ರೂಪುಗೊಂಡಿರುವ ಸಾಧ್ಯತೆ ಇದೆ.

ಹಾಗೆಯೇ ಕೃಷಿಯಲ್ಲಿ ಮಹಿಳೆ ಬಹಳಕಾಲದಿಂದಲೂ ಕಾರ್ಯನಿರ್ವಹಿಸುತ್ತಿದ್ದಳು ಎನ್ನುವುದಕ್ಕೆ ಪ್ರಾಚೀನ ಗ್ರಂಥಗಳಾದ ರಾಮಾಯಣ, ಮಹಾಭಾರತಗಳಲ್ಲಿ ಕೆಲವು ಉಲ್ಲೇಖಗಳು ಸಿಗುತ್ತವೆ ಎಂದು ಕೆಲವು ವಿದ್ವಾಂಸರು ಹೇಳಿದ್ದಾರೆ. "ಭಾರತದಲ್ಲಿ ಮಹಿಳೆ ಕೃಷಿಗೆ ಅಂಟಿಕೊಂಡೇ ಬೆಳೆದು ಬಂದಿದ್ದಾಳೆ. ಮಹಿಳೆಗೂ ಮಣ್ಣಿಗೂ ಬಿಗಿಯಾದ ನಂಟಿರುವುದು ರಾಮಾಯಣ, ಮಹಾಭಾರತ ಗ್ರಂಥಗಳಲ್ಲಿ ಕಾಣಬಹುದು. ಜನಕ ಮಹಾರಾಜ ತನ್ನ ಪತ್ನಿಯೊಂದಿಗೆ ಚಿನ್ನದ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದಾನೆಂದು ರಾಮಾಯಣದಲ್ಲಿ ತಿಳಿಸಲಾಗಿದೆ'. (ಡಿ. ವೆಂಕಟರಾವ್, 1986, ಪು. 190). ಅಂತೆಯೇ ಪ್ರಾಚೀನ ಗ್ರಂಥಗಳಲ್ಲೂ ಮಹಿಳೆ ಪುರುಷನಿಗೆ ಸರಿಸಮನಾಗಿ ದುಡಿಯುತ್ತಿದ್ದಳು ಎಂಬ ಉಲ್ಲೇಖಗಳಿವೆ." 'ಕಾಳಿದಾಸ ತನ್ನ ರಘುವಂಶ ಕಾವ್ಯದಲ್ಲಿ ಮಹಿಳೆ ಕಬ್ಬು, ಬತ್ತದ ಗದ್ದೆಗಳಲ್ಲಿ ಇಂಪಾಗಿ ಹಾಡುತ್ತಿದ್ದ ಬಗ್ಗೆ ಹೇಳಿದ್ದಾನೆ. ಮೇಘದೂತದಲ್ಲಿ ಹೆಣ್ಣಿನ ಹಿರಿಮೆಯನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. ಕಾಲಕ್ಕೆ ಸರಿಯಾಗಿ ಕೃಷಿ ಕಾರ್ಯಗಳನ್ನು ಕೈಗೊಳ್ಳುವುದು, ಉತ್ತಮ ಬೆಳೆ ಪಡೆಯುವುದು ಇತ್ಯಾದಿಗಳಲ್ಲಿ ಮಹಿಳೆಯೂ ಪುರುಷನಷ್ಟೇ ಆಸ್ಥೆವಹಿಸಬಲ್ಲಳು ಎಂದು ಕಾಳಿದಾಸ ಹೇಳಿದ್ದಾನೆ' (ಅದೇ, ಪು. 191) ಎಂಬ ಮಾಹಿತಿಗಳು ದೊರೆಯುತ್ತವೆ. ಡಿ. ವೆಂಕಟರಾವ್ ಅವರೇ ಭಾರತದಲ್ಲಿ ಮಹಿಳೆ ಕೃಷಿಯಲ್ಲಿ ಪುರುಷನೊಂದಿಗೆ ಬಹುವಾಗಿ ಸಹಕರಿಸಿದಳು ಎಂಬ ಬಗ್ಗೆ ಮತ್ತೊಂದೆಡೆ ಹೀಗೆ ಹೇಳಿದ್ದಾರೆ: "ಪುರಾತನ ಕಲೆಗಳಲ್ಲಿ ಅನೇಕ ಕಲಾ ಕುಸುರಿಗಳು ಇದಕ್ಕೊಂದು ಉದಾಹರಣೆಯಾಗಿವೆ. ಜೈನರ ಕೃತಿಗಳಲ್ಲೂ ಮಹಿಳೆಯರು ಹೊಲದಲ್ಲಿ ಹಾಡು ಹೇಳುತ್ತಾ ಗಲಾಟೆ ಮಾಡುತ್ತಾ ಮೃಗ ಪಕ್ಷಿಗಳನ್ನು ಓಡಿಸುತ್ತಿದ್ದಳು ಎಂದು ಹೇಳಲಾಗಿದೆ' (ಅದೇ, ಪು. 191) ಎಂದಿರುವರು. ಹಾಗಾಗಿ ಶತಮಾನಗಳಿಂದ ಕೃಷಿಯಲ್ಲಿ ದುಡಿಯುತ್ತಲೇ ಬಂದ ಮಹಿಳೆ ಕೃಷಿಗೆ ನೀಡಿದ ಕೊಡುಗೆ ಅಪಾರವಾದದ್ದೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಅಂತೆಯೇ ಸಮಕಾಲೀನ ಸಂದರ್ಭದಲ್ಲಿ ಕೃಷಿಯ ಬಹುಪಾಲು ಚಟುವಟಿಕೆಗಳಲ್ಲಿ ಮಹಿಳೆಯು ಭಾಗಿಯಾಗಿರುವುದನ್ನು ನೋಡುತ್ತೇವೆ. ಅಲ್ಲದೆ ಇಂದಿಗೂ ಕೆಲವು ಬುಡಕಟ್ಟುಗಳಲ್ಲಿ ಕೃಷಿಯನ್ನು ಮಹಿಳೆಯರೇ ನಿರ್ವಹಿಸುತ್ತಿರುವುದು ಸುಸ್ಪಷ್ಟ. ಒಟ್ಟಿನಲ್ಲಿ ಕೃಷಿಯ ಆವಿಷ್ಕಾರ ಮನುಷ್ಯ ಇತಿಹಾಸದ ಒಂದು ಮಹತ್ವದ ಮೈಲುಗಲ್ಲು. ಕೃಷಿಯ ಆವಿಷ್ಕಾರವೇ ನಾಗರಿಕತೆಯ ಬುನಾದಿ ಎಂದು ಒಪ್ಪುವುದಾದರೆ, ಕೃಷಿಯ ಆವಿಷ್ಕಾರಕಳು ಮಹಿಳೆಯೇ ಆಗಿದ್ದಾಳೆ ಎಂಬುದು ನಿಸ್ಸಂಶಯ. ಅಲ್ಲದೆ ಇವತ್ತಿನ ವಿಸ್ತೃತವಾದ, ವ್ಯವಸ್ಥಿತವಾದ ಬೇಸಾಯ ಪದ್ಧತಿಗೆ ಮಹಿಳೆ ಅಂದು ಕೃಷಿಯನ್ನು ಶೋಧಿಸಿದ್ದೇ ಮಹತ್ವದ ವಿಷಯವಾಗಿದೆ.

ಕೃಷಿಯ ಆರಂಭಿಕ ಹಂತದಲ್ಲಿ ಮಹಿಳೆ : ಮಾರ್ಗನ್, ಟೇಲರ್ ಹಾಗೂ ಸ್ಪೆನ್ಸರ್‌ರಂತಹ ಮಾನವಶಾಸ್ತ್ರಜ್ಞರು ಸಮಾಜದ ವಿಕಾಸದ ಪ್ರಾಚೀನ ಕಾಲದಲ್ಲಿ ಮಾತೃಪ್ರಧಾನ ಕುಟುಂಬ ಅಸ್ತಿತ್ವದಲ್ಲಿತ್ತೆಂದು ಮತ್ತು ಮಾತೃ ಪ್ರಧಾನ ಕುಟುಂಬವೇ ಕುಟುಂಬದ ಮೂಲರೂಪವೆಂದು ಅಭಿಪ್ರಾಯಪಡುತ್ತಾರೆ. ಹಾಗಾಗಿ ಕೃಷಿಯ ಆರಂಭಿಕ ಹಂತದಲ್ಲಿ ಮಾತೃಪ್ರಧಾನ ವ್ಯವಸ್ಥೆ ಇತ್ತೆಂಬುದು ತಿಳಿದು ಬರುತ್ತದೆ. ಆದಿವಾಸಿಗಳಿಗೆ ಪಿತೃತ್ವದ ಬಗೆಗೆ ಸರಿಯಾದ ತಿಳಿವಳಿಕೆ ಇರಲಿಲ್ಲ. ಸಂತಾನದ ವಿಷಯದಲ್ಲಿ ಪುರುಷನ ಪಾತ್ರವಿದೆ ಎಂಬ ಅರಿವು ಅವರಿಗಿರಲಿಲ್ಲ. ಸ್ತ್ರೀಯರ ತಾಯ್ತನಕ್ಕೆ ದೇವರ ಅನುಗ್ರಹವೇ ಕಾರಣವೆಂದೋ ಇಲ್ಲವೆ ಗರ್ಭಧರಿಸಿ ಮಗುವಿಗೆ ಜನ್ಮ ನೀಡುವುದು ಸ್ತ್ರೀಯಲ್ಲಿರುವ ಅದ್ಭುತ ಶಕ್ತಿಯೆಂದೋ ಭಾವಿಸಿದ್ದರು. ಹಾಗಾಗಿ ಪುರುಷರಿಗೆ ಆ ಕಾಲದಲ್ಲಿ ಸ್ತ್ರೀಯ ಬಗೆಗೆ ಅಪಾರ ಗೌರವ ಭಾವನೆಗಳು ಇದ್ದವು. ಅಲ್ಲದೆ ತಾವು ಆರಾಧಿಸುತ್ತಿದ್ದ ದೈವಗಳನ್ನು ಸಹ ಸ್ತ್ರೀಯ ರೂಪದಲ್ಲಿಯೇ ಆರಾಧಿಸುತ್ತಿದ್ದರು.

ಈ ರೀತಿ ಕೃಷಿಯಲ್ಲಾದ ಬದಲಾವಣೆ ಮತ್ತು ಕೃಷಿ ಬೆಳವಣಿಗೆಯಿಂದಾಗಿ ಗಂಡು-ಹೆಣ್ಣಿನ ಉತ್ಪಾದನೆಯಲ್ಲಿ (ಗಳಿಕೆ) ಉಳಿತಾಯವಾಗತೊಡಗಿತು. 'ಭೂಮಿ, ಶ್ರಮ, ಪಶು, ಸಲಕರಣೆ ಮುಂತಾದ ಉತ್ಪಾದನಾ ಸಾಧನಗಳು ಮತ್ತು ಅದರಿಂದ ಬಂದ ಉತ್ಪಾದನೆ ಹಾಗೂ ಹೆಚ್ಚುವರಿ ಈ ಎಲ್ಲದರ ಮೇಲಿನ ಒಡೆತನ ಮತ್ತು ನಿಯಂತ್ರಣ ಪ್ರಮಾಣ ಹೆಚ್ಚಾಗಿರುವುದರಿಂದ ಮಹಿಳೆಯನ್ನು ಅತ್ಯಂತ ಕಡಿಮೆ ಕೂಲಿಗೆ ದುಡಿಸಿಕೊಳ್ಳಲಾಗುವುದು. ಅದು ಕೂಡಾ ಮಹಿಳಾ ದುಡಿಮೆಗಾರರ ಶೋಷಣೆಯೇ ಆಗಿದೆ.

ಕೃಷಿಯಲ್ಲಿ ಮಹಿಳೆ ಬೀಜ ಬಿತ್ತನೆಯಿಂದ ಹಿಡಿದು ಬೆಳೆಯ ಕೊಯ್ಲಿನವರೆಗಿನ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡಿದ್ದಾಗಲೂ ಕೊನೆಗೆ ಹೊಲ ಮಾಡಿದ ಹೆಗ್ಗಳಿಕೆ ಪುರುಷನಿಗೆ ಸಲ್ಲುತ್ತದೆ. ಮಹಿಳೆ ಹಿನ್ನೆಲೆಗೆ ಸರಿಯಲ್ಪಟ್ಟಿದ್ದಾಳೆ. ಕೇವಲ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಅಂದರೆ ಪುರುಷನ ಅನುಪಸ್ಥಿತಿಯಲ್ಲಿ ಮಾತ್ರ ಕೃಷಿಯಲ್ಲಿ ಮಹಿಳೆ ಮುಖ್ಯವಾಹಿನಿಗೆ ಬರುವಳು. ಭೂಮಿಯ ಮೇಲಾಗಲಿ, ಬೆಳೆದ ಬೆಳೆಯ ಮೇಲಾಗಲಿ ಅವಳಿಗೆ ಯಾವುದೇ ರೀತಿಯ ಅಧಿಕಾರವಿರುವುದಿಲ್ಲ. ತಾನು ದಿನವೂ 'ನಮ್ಮ ಹೊಲ' ಅಥವಾ 'ಮನಿ ಹೊಲ' ಎಂದು ಮೈಮುರಿದು ದುಡಿಯುವ ಹೊಲ ಅಥವಾ ಹೊಲದ ರೂಪದ ಆಸ್ತಿ ವಾಸ್ತವವಾಗಿ ಅವಳದಾಗಿರುವುದಿಲ್ಲ. ಹೊಲದ ಮತ್ತು ಹೊಲದ ಉತ್ಪನ್ನಗಳ ಮೇಲೆ ಅವಳಿಗೆ ಅಧಿಕಾರಯುತವಾದ ಹಕ್ಕಿರುವುದಿಲ್ಲ. ಅಂದರೆ ಮಹಿಳೆ ಹೊಲದಲ್ಲಿ ಕೆಲಸ ಮಾಡುವ ಕೆಲಸಗಾರಳು ಮಾತ್ರವೇ ಆಗಿದ್ದಾಳೆ. ಆ ಭೂಮಿಯ ಒಡೆತನ ಅಥವಾ ಆ ಹೊಲ (ಆಸ್ತಿ) ಅವಳ ಗಂಡನ ಹೆಸರಿನಲ್ಲೋ ಇಲ್ಲವೆ ಗಂಡನ ತಂದೆಯ ಹೆಸರಿನಲ್ಲಿಯೋ ಇರುತ್ತದೆ. ಅವರ ಅನಂತರ ಆ ಭೂಮಿ ಅವಳ ಮಗನ ಹೆಸರಿಗೆ ವರ್ಗಾಯಿಸಲ್ಪಡುತ್ತದೆ. ಹೀಗೆ ಹೊಲದ ಮೇಲಿನ ಒಡೆತನವೆಲ್ಲವೂ ಬಹುಪಾಲು ಪುರುಷನಿಗೇ ಸಂಬಂಧಿಸಿರುತ್ತದೆ. ಹಾಗಾಗಿ ಭೂ ಒಡೆತನಕ್ಕೆ ಸಂಬಂಧಿಸಿದ ವಿಚಾರಗಳ ಹಿಂದೆ ಪುರುಷ ರಾಜಕಾರಣವಿದೆ. ಮಹಿಳೆಗೆ ಆಸ್ತಿಯಲ್ಲಿ ಪಾಲನ್ನು ಕೊಡುವುದರಿಂದ ಅವಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ತನಗಿಂತ ಉತ್ತಮವಾಗಿ ತನ್ನ ಸ್ಥಾನಮಾನಗಳು ಎಲ್ಲಿ ಕಡಿಮೆಯಾಗುತ್ತವೊ ಎನ್ನುವ ಆತಂಕ ಈ ಪುರುಷ ವ್ಯವಸ್ಥೆಯದು. ಮಹಿಳೆ ಆರ್ಥಿಕವಾಗಿ ಪ್ರಬಲವಾದರೆ ಎಲ್ಲಿ ಅವಳ ಮೇಲಿನ ನಿಯಂತ್ರಣ ಕೈತಪ್ಪಿ ಹೋಗುತ್ತದೋ ಎನ್ನುವ ಹಿನ್ನೆಲೆಯಿಂದಲೇ ಹಿಂದೆ ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ನಿರಾಕರಿಸಲಾಗಿತ್ತು. ಇಂದು ಮಹಿಳೆಯರಿಗೆ ಆಸ್ತಿ ಹಕ್ಕು ನೀಡಿದ್ದರೂ ಅದು ಕೂಡ ಸಂಪೂರ್ಣವಾಗಿ ಪುರುಷ ನಿಯಂತ್ರಣದಿಂದ ಮುಕ್ತಗೊಂಡಿರುವಂತಹದ್ದೇನಲ್ಲ. ಇದನ್ನೆಲ್ಲ ಗಮನಿಸಿದರೆ ಕೃಷಿಕ್ಷೇತ್ರದಲ್ಲಿ ಮಹಿಳೆಯ ಪಾತ್ರ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವ ರೀತಿಯದು.

ಆಧುನಿಕತೆ : ಕೃಷಿ ಮತ್ತು ಮಹಿಳೆ ಬಹುದೀರ್ಘ ಪರಂಪರೆಯನ್ನು ಹೊಂದಿರುವಂತಹದ್ದು ಅಲ್ಲದೆ ದೇಶದ ಎಲ್ಲಾ ವರ್ಗದ ಜನರಿಗೆ ಅನ್ನವನ್ನು ಒದಗಿಸುತ್ತ ಬಂದಿರುವ ಖ್ಯಾತಿ ಕೃಷಿ ವಲಯಕ್ಕಿದೆ. ಆದರೆ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಆಹಾರದ ಅಭಾವದಿಂದಾಗಿ ಆಹಾರ ಪೂರೈಸುವುದೊಂದು ಬಹುದೊಡ್ಡ ಸಮಸ್ಯೆಯಾಗಿತ್ತು. ಕಾರಣ ಕೃಷಿ ಮುನ್ನಡೆಗಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಕೃಷಿಯ ಕಡೆಗೆ ಹೆಚ್ಚು ಗಮನಕೊಡಲಾಯಿತು. ಈ ಪ್ರಯತ್ನಗಳ ಫಲವಾಗಿ 19ನೇ ಶತಮಾನದಲ್ಲಿ ಕೃಷಿಯಲ್ಲಿ ಹಲವು ಹೊಸ ಆವಿಷ್ಕಾರಗಳಾದವು. ಅಧಿಕ ಇಳುವರಿ ಕೊಡುವ ಹೊಸ ಹೊಸ ತಳಿಗಳನ್ನು ಶೋಧಿಸಲಾಯಿತು. ಅಧಿಕ ಉತ್ಪಾದನೆಯ ಹಂಬಲದಿಂದ ಬೆಳೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಬಳಸುವುದು ಮತ್ತು ಕ್ರಿಮಿನಾಶಕಗಳನ್ನು ಬಳಸುವುದು ಹೆಚ್ಚಾಯಿತು. ಇದರಿಂದಾಗಿ ಕೃಷಿಯಲ್ಲಿ 1960ರ ದಶಕದಲ್ಲಿ ಹಸುರುಕ್ರಾಂತಿಯನ್ನು ಸಾಧಿಸಲಾಯಿತು. ವೈಜ್ಞಾನಿಕ ಕೃಷಿಯಿಂದ ಆಹಾರೋತ್ಪಾದನೆಯ ಮಟ್ಟವನ್ನು ಹೆಚ್ಚಿಸಲಾಯಿತೆನ್ನು ವುದೇನೋ ನಿಜ. ಆದರೆ ಅನಂತರದಲ್ಲಿ ಅದರಿಂದ ಅನೇಕ ಅನಾನುಕೂಲಗಳನ್ನು ಎದುರಿಸಬೇಕಾಯಿತು. ಅಲ್ಲದೆ ಇಂದಿಗೂ ಆಧುನಿಕ ಕೃಷಿ ಪದ್ಧತಿಯನ್ನು ಹೆಚ್ಚಾಗಿ ಅನುಸರಿಸುತ್ತಿರುವುದರಿಂದ ಅನೇಕ ರೀತಿಯ ತೊಂದರೆಗಳನ್ನು ಎದುರಿಸಬೇಕಾಗಿದೆ.

ಹೀಗೆ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿ ವಿಧಾನಗಳಿಂದ ಕೃಷಿ ಮತ್ತು ಕೃಷಿ ಅವಲಂಬಿತ ಮಹಿಳಾ ದುಡಿಮೆಗಾರರ ಮೇಲೆ ಹಾಗೂ ಪಾರಂಪರಿಕ ಕೃಷಿ ಜ್ಞಾನ ಮತ್ತು ಕೃಷಿಯ ಸಾಂಸ್ಕೃತಿಕ ಪರಿಸರದ ಮೇಲಾದ ಪರಿಣಾಮಗಳ ಬಗೆಗೆ ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಆಧುನಿಕತೆಯಿಂದ ಕೃಷಿ ಮತ್ತು ಕೃಷಿ ಅವಲಂಬಿತ ಮಹಿಳಾ ದುಡಿಮೆಗಾರರ ಮೇಲಾದ ಪರಿಣಾಮ :

ಉದ್ಯೋಗಾವಕಾಶಗಳ ಕಡಿತ : ವ್ಯವಸಾಯೋತ್ಪನ್ನಗಳನ್ನು ಹೆಚ್ಚಿಸುವ ಮತ್ತು ಅವುಗಳ ಉತ್ಪಾದನಾ ವೆಚ್ಚ ತಗ್ಗಿಸುವ ಉದ್ದೇಶದಿಂದ ಭೂಮಿಯನ್ನು ಉಳುಮೆ ಮಾಡುವುದರಿಂದ ವ್ಯವಸಾಯೋತ್ಪನ್ನಗಳ ಸಾಗಾಣಿಕೆಯವರೆಗಿನ ಎಲ್ಲ ಹಂತಗಳಲ್ಲೂ ಯಂತ್ರಗಳ ಬಳಕೆಯನ್ನು ವ್ಯವಸಾಯದಲ್ಲಿ ಕ್ರಮೇಣವಾಗಿ ಅಳವಡಿಸಿಕೊಳ್ಳುತ್ತಾ ಬರಲಾಗಿದೆ. ಯಂತ್ರೋಪಕರಣಗಳ ಬಳಕೆ ಮೇಲ್ವರ್ಗದವರಿಗೆ ಮತ್ತು ದೊಡ್ಡ ಭೂ ಹಿಡುವಳಿದಾರರಿಗೆ ವರದಾನವಾಗಿವೆಯೇ ಹೊರತು ದುಡಿಯುವ ವರ್ಗದವರಿಗಲ್ಲ. ಏಕೆಂದರೆ ಕೃಷಿಯಲ್ಲಿ ಹೆಚ್ಚು ಹೆಚ್ಚು ಯಂತ್ರೋಪಕರಣಗಳನ್ನು ಬಳಸತೊಡಗಿದಂತೆಲ್ಲಾ ಅವು ಮನುಷ್ಯನ ಕೆಲಸವನ್ನು ಕಬಳಿಸುತ್ತಿವೆ. ಹಾಗಾಗಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತಿವೆ. ಹತ್ತಾರು ಜನ ದೀರ್ಘಾವಧಿಯಲ್ಲಿ ಮಾಡುವ ಕೆಲಸವನ್ನು ಯಂತ್ರ ಒಂದೇ ದಿನದಲ್ಲಿ ಅಥವಾ ಕೆಲವೇ ಗಂಟೆಗಳಲ್ಲಿ ಮಾಡಿ ಮುಗಿಸುವುದರಿಂದ ಕೆಲಸ ವೇಗವಾಗಿ ಆಗುತ್ತದೆ ಎಂಬುದೇನೋ ನಿಜ. ಆದರೆ ಕೆಲಸವನ್ನು ಅವಲಂಬಿಸಿದ ಜನರಿಗೆ ಕೆಲಸ ಇಲ್ಲದಂತಾಗುತ್ತದೆ. ಇದರಿಂದ ಹೆಚ್ಚು ಹೆಚ್ಚು ನಿರುದ್ಯೋಗ ಸೃಷ್ಟಿಯಾಗುತ್ತಿದೆ.

ಅದರಲ್ಲೂ ಕೃಷಿ ದುಡಿಮೆಯ ಮೇಲೆ ಹೆಚ್ಚು ಅವಲಂಬಿತರಾಗಿದ್ದವರಲ್ಲಿ ಮಹಿಳೆಯರೇ ಅಧಿಕವಾಗಿದ್ದರಿಂದ ಯಂತ್ರೋಪಕರಣಗಳ ಬಳಕೆಯಿಂದಾಗಿ ಹೆಚ್ಚಾಗಿ ಮಹಿಳೆಯರ ಕೆಲಸಗಳಿಗೆ ಹೊಡೆತ ಬೀಳುತ್ತಿದೆ. ಮತ್ತೊಂದೆಡೆ ಇದ್ದ ಕಿಡಮೆ ಕೆಲಸಗಳಿಗೆ ಹೆಚ್ಚು ಜನ ಅವಲಂಬಿತರಾಗುತ್ತಿರುವುದರಿಂದ ಅವರನ್ನು ಭೂಮಾಲೀಕರು ಕಡಿಮೆ ಕೂಲಿಗೆ ಹೆಚ್ಚು ಹೆಚ್ಚು ದುಡಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಹೆಚ್ಚಾಗಿ ಮಹಿಳಾ ಕೃಷಿ ಕೂಲಿಕಾರ್ಮಿಕರೇ ಈ ರೀತಿಯ ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುತ್ತೇವೆ.

ಅಲ್ಲದೆ ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದಾಗಿ ಕೃಷಿ ಅವಲಂಬಿತ ಇತರ ಪಾರಂಪರಿಕ ಕುಲಕಸುಬುಗಳಾದ ಬಡಿಗ, ಕಮ್ಮಾರ, ಚಮ್ಮಾರ ಮುಂತಾದ ವೃತ್ತಿಗಳು ಮೂಲೆಗುಂಪಾಗುತ್ತಿವೆ. ಈ ವೃತ್ತಿ ಅವಲಂಬಿತ ಜನರಿಗೆ ಉದ್ಯೋಗವಿಲ್ಲದಂತಾಗುತ್ತಿದೆ.

ಬಿತ್ತನೆಯ ಬೀಜಗಳ ಮೇಲೆ ಹತೋಟಿ ಇಲ್ಲ : ಆಧುನೀಕರಣಗೊಳ್ಳುತ್ತಿರುವ ಕೃಷಿಯಲ್ಲಿ ರೈತರಿಗೆ ತಾವು ಯಾವ ಬೀಜ ಬಿತ್ತಿ ಬೆಳೆಯಬೇಕೆಂಬ ನಿರ್ಧಾರ ಕೂಡ ಅವರದಾಗಿರುವುದಿಲ್ಲ.

ಏಕೆಂದರೆ ಇಂದು ಬಹುಪಾಲು ರೈತರು ಅಧಿಕ ಇಳುವರಿ ಪಡೆಯುವ ಮತ್ತು ಹೆಚ್ಚು ಲಾಭ ಪಡೆಯಬೇಕೆಂಬ ಉದ್ದೇಶದಿಂದ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವುದರಿಂದಾಗಿ ಮಾರುಕಟ್ಟೆಯಲ್ಲಿ ಸಿದ್ಧರೂಪದಲ್ಲಿ ದೊರೆಯುವ ಬಹುರಾಷ್ಟ್ರೀಯ ಕಂಪನಿಗಳಿಂದ ತಂದು ಬೀಜಗಳನ್ನು ಉಪಯೋಗಿಸುತ್ತಿರುವುದರಿಂದ ಬೀಜಕ್ಕಾಗಿ ಕೃಷಿಕರು ಇಂದು ಪರಾವಲಂಬಿಯಾಗಿದ್ದಾರೆ. ಹಾಗಾಗಿ ಮಾರುಕಟ್ಟೆಯಲ್ಲಿ ಯಾವ ಬೀಜ ಲಭ್ಯವಿದೆ ಮತ್ತು ಯಾವಾಗ ಬೀಜಗಳು ಲಭ್ಯವಾಗುತ್ತವೆ ಎನ್ನುವುದರ ಮೇಲೆ ಅವರ ಬಿತ್ತನೆಯ ಕಾರ್ಯ ನಡೆಯುತ್ತದೆ. ಅಂದರೆ ಬೀಜಗಳ ಬಿತ್ತನೆಯ ಮೇಲೆ ಕೃಷಿಕರಿಗಿದ್ದ ಹತೋಟಿ ಇಂದು ಕೈತಪ್ಪಿ ಹೋಗುತ್ತಿದೆ.

ಹಿಂದೆ ಬಿತ್ತನೆಯ ಬೀಜಗಳನ್ನು ಸ್ವತಃ ರೈತರೇ ಸಂರಕ್ಷಿಸಿಕೊಳ್ಳುತ್ತಿದ್ದರು. ಸಂರಕ್ಷಿಸುವ ಕೆಲಸ ಮನೆಯಲ್ಲಿಯ ಮಹಿಳೆಯರದೇ ಆಗಿರುತ್ತಿತ್ತು. ತಾವು ಬೆಳೆದ ಬೆಳೆಯಲ್ಲಿಯೇ ಉತ್ತಮವಾದ ಬೀಜಗಳನ್ನು ಬಿತ್ತನೆಗೆಂದು ಪ್ರತ್ಯೇಕಿಸಿ ಅವುಗಳನ್ನು ಹಸನು ಮಾಡಿ ಹದಗೊಳಿಸಿ ಸಂಸ್ಕರಿಸುವ ಕೆಲಸ ಬಹುಪಾಲು ಮಹಿಳೆಯರಿಂದಲೇ ನಡೆಯುತ್ತಿತ್ತು. ಒಂದೊಂದು ರೀತಿಯ ಬೀಜವನ್ನು ಒಂದೊಂದು ಬಗೆಯಲ್ಲಿ ಸಂಸ್ಕರಿಸುವ ಜ್ಞಾನ ಮತ್ತು ಕೌಶಲ್ಯ ಅವರಲ್ಲಿತ್ತು. ಅವರ ಈ ಕೆಲಸಕ್ಕೆ ಸಂಭಾವನೆಯ ರೂಪದ ಪ್ರತಿಫಲ ಸಿಗದಿದ್ದರೂ ಆ ಕೆಲಸ ಮಾಡುತ್ತಿದ್ದ ಕಾರಣಕ್ಕಾಗಿ ಮನೆಯಲ್ಲಿ ಅವರು ಒಂದು ಬಗೆಯ ಗೌರವಕ್ಕೆ ಪಾತ್ರರಾಗುತ್ತಿದ್ದರು. ಆದರೆ ಇಂದು ಮಾರುಕಟ್ಟೆಯಲ್ಲಿ ಸಿದ್ಧ ಬೀಜಗಳನ್ನು ತರುವುದರಿಂದ ಮಹಿಳೆಯರು ಆ ಕೆಲಸ ಮಾಡಬೇಕಾದ ಅನಿವಾರ್ಯತೆ ಉಳಿದುಕೊಂಡಿಲ್ಲ. ಅಲ್ಲದೆ ಆ ಕೆಲಸದಿಂದ ಮಹಿಳೆಗೆ ಮೊದಲು ಮನೆಯ ಮಂದಿಯಿಂದ ಸಿಗುತ್ತಿದ್ದ ಮೆಚ್ಚುಗೆ - ಪ್ರಶಂಸೆಗಳು ಇಂದು ಇಲ್ಲದಂತಾಗುತ್ತವೆ. ಕೃಷಿ ವಾಣಿಜ್ಯೀಕರಣಗೊಳ್ಳುತ್ತಿರುವುದರಿಂದ ಆಹಾರ ಬೆಳೆಗಳಿಗಿಂತ ವಾಣಿಜ್ಯ ಬೆಳೆಗಳಿಗೆ ಪ್ರಾಮುಖ್ಯತೆ ಹೆಚ್ಚಾಗುತ್ತದೆ. ಹಿಂದೆ ರೈತರ ಮನೆಯಲ್ಲಿ ಎಲ್ಲಿ ನೋಡಿದರೂ ಅವರು ಬೆಳೆದ ಬೆಳೆಗಳ ಚೀಲದ ನಿಟ್ಟುಗಳು ಕಾಣುತ್ತಿದ್ದವು. ಆದರೆ ಇಂದು ಸಾಮಾನ್ಯವಾಗಿ ಆಹಾರ ಬೆಳೆಗಳ ಸಂಗ್ರಹ ರೈತರಲ್ಲಿ ಅಷ್ಟಾಗಿ ಇರುವುದಿಲ್ಲ. ಏಕೆಂದರೆ ಕೃಷಿಯು ಇಂದು ಲಾಭದ ದೃಷ್ಟಿಯಿಂದ ವಾಣಿಜ್ಯೀಕರಣದತ್ತ ಮುಖ ಮಾಡುತ್ತಿದೆ ಆಹಾರ ಧಾನ್ಯಗಳ ಬದಲಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ಬೇಕಾಗುವಂತಹ ಕಚ್ಚಾವಸ್ತುಗಳನ್ನು ಪೂರೈಸುವ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ಆಹಾರ ಬೆಳೆ ಬೆಳೆಯುತ್ತಿದ್ದ ಸಂದರ್ಭದಲ್ಲಿ ಪ್ರಧಾನವಾಗಿ ತೊಡಗಿಕೊಳ್ಳುತ್ತಿದ್ದ ಮಹಿಳೆಯ ಭಾಗವಹಿಸುವಿಕೆಯನ್ನು ವಾಣಿಜ್ಯ ಬೆಳೆಗಳು ದೂರ ಮಾಡಿವೆ.

ಅಲ್ಲದೆ ಇಂದು ಬೆಳೆಯುತ್ತಿರುವ ವಾಣಿಜ್ಯ ಬೆಳೆಗಳನ್ನು ಕಟಾವು ಮಾಡಿದ ಕೆಲವೇ ದಿನಗಳಲ್ಲಿ ಮಾರುಕಟ್ಟೆಗೆ ಒಯ್ದು ಮಾರಿಬಿಡಲಾಗುತ್ತದೆ. ಆದರೆ ಆಹಾರ ಬೆಳೆಗಳನ್ನೇ ಪ್ರಧಾನವಾಗಿ ಬೆಳೆಯುತ್ತಿದ್ದ ದಿನಗಳಲ್ಲಿ ಬಂದ ಬೆಳೆಗಳಲ್ಲಿ ಮನೆಗೆ ತಿನ್ನುವುದಕ್ಕೆಂದು ಒಂದು ವರ್ಷವಿಡೀ ಸಾಕಾಗುವಷ್ಟು ದವಸಧಾನ್ಯಗಳನ್ನು ಮನೆಯಲ್ಲೇ ಇರಿಸಿಕೊಳ್ಳುತ್ತಿದ್ದರು. ಇದರಿಂದ ಮಹಿಳೆಯರಿಗೂ ಒಂದು ಬಗೆಯ ಧೈರ್ಯವಿರುತ್ತಿತ್ತು. ಗಂಡಸರಿಲ್ಲದೆ ಇದ್ದಾಗ ಅನಿವಾರ್ಯವಾಗಿ ಬರುವ ಮನೆಯ ಸಣ್ಣಪುಟ್ಟ ಖರ್ಚುಗಳನ್ನು ತೂಗಿಸಿಕೊಂಡು ಹೋಗುವಲ್ಲಿ ಮಹಿಳೆಗೆ ಆಗ ಧೈರ್ಯವಿರುತ್ತಿತ್ತು. ಏಕೆಂದರೆ ಮನೆಯಲ್ಲಿ ಕಾಳು ಕಡ್ಡಿಗಳಿರುತ್ತಿದ್ದರಿಂದ ಅನಿವಾರ್ಯವಾದಾಗ ಅಂಗಡಿಗೆ ಸ್ವಲ್ಪ ಕಾಳು ಹಾಕಿ ಮನೆಯ ಆವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಮಹಿಳೆಗೆ ಕುಟುಂಬದಲ್ಲಿ ಸಂಪೂರ್ಣ ಆರ್ಥಿಕ ಸ್ವಾಯತ್ತತೆ ಇರದಿದ್ದರೂ ಈ ರೀತಿ ತಾವು ಬೆಳೆದ ಕಾಳುಕಡ್ಡಿಗಳ ಮೇಲೆ ಸ್ವಲ್ಪ ಮಟ್ಟಿನ ಸ್ವಾಯತ್ತತೆ ಇರುತ್ತಿತ್ತು. ಆದರೆ ಕೃಷಿ ಮಹಿಳೆಗೆ ಕುಟುಂಬದೊಳಗಿದ್ದ ಈ ಅಲ್ಪ ಪುಡಿಕಾಸಿನ ಸ್ವಾಯತ್ತತೆಯೂ ಇಂದು ಇಲ್ಲದಂತಾಗುತ್ತಿದೆ. ಹೀಗೆ ಆಧುನಿಕ ಕೃಷಿಯಿಂದಾಗಿ ಮಹಿಳೆಯ ಬದುಕಿನಲ್ಲಿ ಪುರುಷರಿಗೆ ಅಧೀನವಾಗಿರಬೇಕಾಗಿದ್ದ ಅನಿವಾರ್ಯತೆಗಳು ಮತ್ತಷ್ಟು ಹೆಚ್ಚಾಗುತ್ತಿವೆ.

ದುಬಾರಿ ಆಧುನಿಕ ಕೃಷಿ ವಿಧಾನದ ದೆಸೆಯಿಂದ ರೈತರು ಆತ್ಮಹತ್ಯೆಗೀಡಾಗುತ್ತಿದ್ದಾರೆ :

ಕೃಷಿ ಉತ್ಪಾದನೆಯಲ್ಲಿ ದೇಶ ಸ್ವಾವಲಂಬಿಯಾಗಿದ್ದರೂ ಆಧುನಿಕ ಕೃಷಿಯ ದೆಸೆಯಿಂದ ಹಲವು ಹತ್ತು ಸಾಲ ಸೋಲಗಳಲ್ಲಿ ಮುಳುಗಿದ ರೈತರ ಪಾಡು ಚಿಂತಾಜನಕವಾಗಿದೆ. ಸಾಮಾನ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದವರು ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿದವರಾಗಿದ್ದು, ಆರ್ಥಿಕವಾಗಿ ಇವರು ಅಷ್ಟೊಂದು ಸ್ಥಿತಿವಂತರಾಗಿರುವುದಿಲ್ಲ. ಹಾಗಾಗಿ ಇವರಿಗೆ ಬಿತ್ತನೆಯ ಸಂದರ್ಭದಲ್ಲಿ ದುಬಾರಿ ಬೀಜ ಗೊಬ್ಬರಗಳನ್ನು ಕೊಳ್ಳಲಿಕ್ಕಾಗದೆ ಸಾಲದ ಮೊರೆ ಹೋಗುತ್ತಾರೆ.

ಅಲ್ಲದೆ ಹೀಗೆ ರೈತರು ತಾವು ಬಿತ್ತಬೇಕೆಂದಿರುವ ಬೀಜಗಳನ್ನು ಖಾಸಗಿ ಅಂಗಡಿಗಳಿಂದ ಕೊಂಡು ತರುವಾಗ ಬೀಜವು ಬಿತ್ತನೆಗೆ ಯೋಗ್ಯವೇ ? ಅದು ರೋಗ ಮುಕ್ತವೇ ? ಎಂಬುದನ್ನು ಪರೀಕ್ಷಿಸುವುದಿಲ್ಲ. ಬಿತ್ತನೆಯ ಹಿಂದಿನ ದಿನ ಅಥವಾ ಬಿತ್ತನೆಯ ದಿನವೇ ಬಿತ್ತುವ ಬೀಜಕ್ಕಾಗಿ ಹುಡುಕಾಡುತ್ತಾರೆ. ಹಾಗೆ ತಂದ ಬಿತ್ತನೆಯ ಬೀಜ ಕೆಲವೊಮ್ಮೆ ದೋಷಪೂರ್ಣವಾಗಿದ್ದೊ, ಇಲ್ಲವೆ ಮಳೆಯ ಅಸಮರ್ಪಕತೆ ಯಿಂದಾಗಿಯೋ ಬೆಳೆಯು ಕೈಕೊಟ್ಟರೆ ತನ್ನ ಬೆಳೆಯನ್ನೇ ನಂಬಿ ಸಾಲ ಮಾಡಿದ ರೈತರಿಗೆ ಸಾಲದ ತೀರಿಸಲಾಗದೆ ಎಷ್ಟೋ ರೈತರು ಸಾವಿಗೆ ಶರಣಾಗುತ್ತಾರೆ. ಇದರಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಹೆಂಡತಿ ಮಕ್ಕಳು ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಸತ್ತ ವ್ಯಕ್ತಿ ಮಾಡಿದ ಸಾಲ ತೀರಿಸುವುದಕ್ಕಾಗಿ ತಮ್ಮಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನು ಮಾರುವುದರಿಂದ ಜೀವನಾಧಾರಕ್ಕಿದ್ದ ಭೂಮಿ ಕಳೆದುಕೊಂಡು ಎಷ್ಟೋ ಸಣ್ಣ ಹಿಡುವಳಿದಾರರ ಬದುಕು ಬೀದಿಗೆ ಬರುತ್ತದೆ.

ಆಧುನಿಕ ಕೃಷಿ ವಿಧಾನದಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ : "ಆಧುನಿಕ ತಂತ್ರಜ್ಞಾನದಿಂದಾಗಿ ಕೃಷಿಯಲ್ಲಿ ಇಂದು ವಿವಿಧ ನಮೂನೆಯ ಹೊಸ ತಳಿಗಳು ಬಂದಿವೆಯಾದರೂ ಹೊಸ ಹೊಸ ತಳಿಗಳು ಬಂದಂತೆಲ್ಲಾ ಹೊಸ ಬಗೆಯ ರೋಗಗಳು ಹುಟ್ಟಿಕೊಂಡಿವೆ. ಜೊತೆಗೆ ಹೊಸ ಕೀಟನಾಶಕಗಳು ಬಂದಂತೆಲ್ಲ ಮತ್ತೆ ಹೊಸ ರೀತಿಯ ಕೀಟಗಳು ಹುಟ್ಟಿಕೊಳ್ಳುತ್ತಿರುವುದು ಕಂಡುಬರುತ್ತದೆ. ಹೀಗೆ ನಾವಿಂದು ಕೃಷಿಯಿಂದ ವಾರ್ಷಿಕ ಎಷ್ಟು ವಿಷ ಸೇವಿಸುತ್ತಿದ್ದೇವೆ ಎಂಬುದನ್ನು ಗಮನಿಸಿದರೆ ಭಾರತದಲ್ಲಿ ವಾರ್ಷಿಕ ಉತ್ಪಾದನೆಯ ಶೇ. 70ರಷ್ಟು ವಿಷವಸ್ತುಗಳು ಬರೀ ಕೃಷಿಗಾಗಿಯೇ ಬಳಕೆಯಾಗುತ್ತಿವೆ" (ನರೇಂದ್ರರೈ ದೇರ್ಲ, 1997, ಪು. 14). ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಲಾಭದ ಉದ್ದೇಶದಿಂದ ವಿವಿಧ ನಮೂನೆಯ ಹೆಸರುಗಳಿಂದ ಮಾರುಕಟ್ಟೆಗೆ

ಬಿಡುತ್ತಿರುವುದರಿಂದ ರಾಸಾಯನಿಕ ಗೊಬ್ಬರಗಳನ್ನು ಮತ್ತು ಕೀಟನಾಶಕಗಳನ್ನು ಕೃಷಿಕರು ಅಧಿಕ ಇಳುವರಿ ಪಡೆಯಬೇಕೆಂಬ ಉದ್ದೇಶದಿಂದ ಹೆಚ್ಚು ಬಳಸುವುದರಿಂದ ಅವುಗಳಲ್ಲಿಯ ರಾಸಾಯನಿಕಗಳಿಂದ ಮಣ್ಣಿನಲ್ಲಿರುವ ಸೂಕ್ಷ್ಮ ಜೀವಿಗಳು ನಾಶಹೊಂದಿ ಮಣ್ಣು ಬರಡಾಗಿ ಕ್ರಮೇಣ ಭೂಮಿ ಫಲವತ್ತತೆಯನ್ನು ಕಳೆದುಕೊಂಡು ಬಂಜರಾಗುತ್ತಿದೆ.

ಮಹಿಳೆಯರ ಕೆಲಸದ ಹೊರೆ ಹೆಚ್ಚುತ್ತದೆ : ಹೆಚ್ಚು ಹೆಚ್ಚು ಉತ್ಪಾದಿಸಬೇಕೆನ್ನುವ ಆಲೋಚನೆಯಿಂದಾಗಿ ಕೃಷಿ ಭೂಮಿಯನ್ನು ವಿಸ್ತರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅರಣ್ಯಗಳ ನಾಶವೂ ನಡೆಯುತ್ತಿದೆ. ಈ ರೀತಿಯ ಅರಣ್ಯಗಳ ನಾಶದಿಂದ ಜಲಮೂಲಗಳು ನಾಶವಾಗುತ್ತವೆ. ಇದರಿಂದ ಗದ್ದೆಗಳಲ್ಲಿ ಕಷ್ಟಪಟ್ಟು ದುಡಿಯುವ ಮಹಿಳೆಗೆ ಉರುವಲಿನ ಕಟ್ಟಿಗೆಗಾಗಿ, ಕುಡಿಯುವ ನೀರಿಗಾಗಿ ಬಹುದೂರ ಅಲೆಯಬೇಕಾದ ಕೆಲಸದ ಹೊರೆ ಬೀಳುತ್ತದೆ.

ಅಭಿವೃದ್ಧಿಯ ಹೆಸರಿನಲ್ಲಿ ಕೃಷಿಕರನ್ನು ಭೂ ಹೀನರನ್ನಾಗಿ ಮಾಡಲಾಗುತ್ತಿದೆ : ಸರ್ಕಾರ ಇಂದು ಕಾರ್ಖಾನೆಗಳನ್ನು ಸ್ಥಾಪಿಸುವ ಮತ್ತು ರಸ್ತೆಗಳ ವಿಸ್ತರಣೆ ಮಾಡುವ ಉದ್ದೇಶದಿಂದ ರೈತರ ಭೂಮಿಯನ್ನು ಕಬಳಿಸಿಕೊಳ್ಳುತ್ತಿವೆ. ಇದರಿಂದ ಸರಕಾರ, ಭೂಮಿಗೆ ಮೌಲ್ಯ ಮಾಡಿದ ಹಣ ರೈತರಿಗೆ ದೊರೆಯುತ್ತದಾದರೂ ರೈತರಿಗೆ ಇದ್ದ ಭೂಮಿಯನ್ನು ಕಳೆದುಕೊಳ್ಳುವುದರಿಂದ ಆ ಭೂಮಿಯನ್ನು ಅವಲಂಬಿಸಿ ದುಡಿಯುತ್ತಿದ್ದ ಜನರ ಕೆಲಸವನ್ನೆಲ್ಲ ಅದು ಇಲ್ಲವಾಗಿಸುತ್ತಿದೆ. ಇದು ಕೂಡಾ ಹೆಚ್ಚಾಗಿ ಮಹಿಳಾ ದುಡಿಮೆಗಾರರ ಮೇಲೆಯೇ ಪರಿಣಾಮ ಬೀರುವಂತಹದ್ದಾಗಿದೆ. ಏಕೆಂದರೆ ಕೃಷಿಯಲ್ಲಿ ಪುರುಷರಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಮಹಿಳಾ ದುಡಿಮೆಗಾರರೇ ತೊಡಗಿಕೊಂಡಿದ್ದಾರೆ.

ಈ ರೀತಿಯಲ್ಲಿ ಕೃಷಿವಲಯದಲ್ಲಿ ದಿನೇ ದಿನೇ ವಿವಿಧ ಕಾರಣಕ್ಕಾಗಿ ಉದ್ಯೋಗದ ಪ್ರಮಾಣ ಕಡಿಮೆಗೊಂಡಂತೆ ಮತ್ತು ಇಲ್ಲವಾದಂತೆ ಆ ದುಡಿಮೆ ಅವಲಂಬಿತ ಜನ ಬೀದಿಪಾಲಾಗುತ್ತಾರೆ. ಅಲ್ಲದೆ ಕೃಷಿಯನ್ನೇ ಅವಲಂಬಿಸಿ ದುಡಿಯುತ್ತಿದ್ದ ಮಹಿಳೆಯರಿಗೆ ಕೃಷಿ ಕೆಲಸದಲ್ಲಿ ನೈಪುಣ್ಯತೆ ಇದ್ದಂತೆ ಬೇರೆ ಕೆಲಸಗಳನ್ನು ಮಾಡಿ ಅಭ್ಯಾಸ ಇಲ್ಲದ ಕಾರಣ ಇದ್ದಕ್ಕಿದ್ದಂತೆ ಬೇರೆ ಕೆಲಸಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಅಲ್ಲದೆ ಇವರು ಬೇರೆ ಬೇರೆ ಉದ್ಯೋಗವನ್ನು ಅರಸಿಕೊಂಡು ಹೋದರೂ ಕೃಷಿವಲಯದಲ್ಲಿ ದುಡಿಯುತ್ತಿದ್ದ ಬಹುಪಾಲು ಮಹಿಳೆಯರು ಅಶಿಕ್ಷಿತರಾದ್ದರಿಂದ ಮತ್ತೆ ಇವರಿಗೆ ಲಭ್ಯವಾಗುವ ಕೆಲಸಗಳು ಅಧಿಕ ದೈಹಿಕ ಶ್ರಮ ಹಾಕಬೇಕಾದಂತಹ ಕೆಲಸವೇ ಆಗಿರುತ್ತವೆ. ಅಲ್ಲದೆ ಮಹಿಳೆ ಎನ್ನುವ ಕಾರಣಕ್ಕೆ ಅವಳು ಮಾಡುವ ದುಡಿಮೆಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುವುದನ್ನು ಕಾಣುತ್ತೇವೆ.

ಹೀಗೆ ಗ್ರಾಮೀಣ ಜನರ ಹಿತಾಸಕ್ತಿಯನ್ನು ಕಾಪಾಡುವುದಕ್ಕಿಂತ ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ತಮ್ಮ ದೇಶಕ್ಕೆ ಆಹ್ವಾನಿಸುತ್ತಿರುವುದು ಮತ್ತವುಗಳಿಗೆ ಬೇಕಾದ ಸೌಲಭ್ಯಗಳನ್ನು ಮುಕ್ತವಾಗಿ ದೊರಕಿಸಿಕೊಡುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಅಭಿವೃದ್ಧಿ ಹೆಸರಿನಲ್ಲಿ ಕೃಷಿಕರಿಗೆ ಸಂಕಷ್ಟವನ್ನು ತಂದೊಡ್ಡಲಾಗುತ್ತಿದೆ.

ಒಟ್ಟಾರೆ ಕೃಷಿ ದುಡಿಮೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರೇ ತೊಡಗಿಕೊಂಡಿರುವುದರಿಂದ ಇಂದು ಆಧುನೀಕರಣದಿಂದ ಕೃಷಿಯಲ್ಲಿ ಉಂಟಾಗುವ ಯಾವುದೇ ಪರಿಣಾಮ ಬಹುಪಾಲು ಮಹಿಳೆಯರ ಮೇಲೆ ಉಂಟಾಗುತ್ತಿದೆ ಎಂದರೆ ತಪ್ಪಾಗಲಾರದು.

ಎಸ್.ಎ.

ಕೃಷಿ ಮತ್ತು ಹವಾಗುಣ ಕೃಷಿ ಹವಾಗುಣವನ್ನು ಅವಲಂಬಿಸಿರುತ್ತದೆ. ಹವಾಗುಣದಲ್ಲಿ ಏರುಪೇರು ಇದ್ದೇ ಇರುತ್ತದೆ. ಭಾರತದಲ್ಲಿ ಮಾನ್‌ಸೂನ್ ಮಳೆಯೇ ಕೃಷಿಗೆ ಮೂಲಾಧಾರ. ಪ್ರದೇಶವೊಂದರ ಭೌತಿಕ ಲಕ್ಷಣದ ಆಧಾರದ ಮೇಲೆ ಅಲ್ಲಿಯ ಮಳೆಯ ಪ್ರಮಾಣ ನಿರ್ಧಾರವಾಗುತ್ತದೆ. ದಕ್ಷಿಣ ಭಾರತದ ಕರಾವಳಿ ಪ್ರದೇಶ ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಹೆಚ್ಚಿನ ಮಳೆ ಬೀಳುತ್ತದೆ. ದಕ್ಷಿಣ ಭಾರತದಲ್ಲಿ ಮಳೆಯ ಹಂಚಿಕೆ ಹೀಗಿದೆ. ತಿರುವಾಂಕೂರು, ಕೊಚ್ಚಿ, ಮಲಬಾರ್ ಹಾಗೂ ಕರಾವಳಿ ತೀರದುದ್ದಕ್ಕೂ ದಕ್ಕನ್ ಪ್ರಸ್ಥಭೂಮಿ ಮತ್ತು ತಮಿಳುನಾಡಿನ ಆಗ್ನೇಯ ಭಾಗಗಳಲ್ಲೂ ಮಳೆ ನಿರಂತರವಾಗಿ ಸುರಿಯುವುದರಿಂದ ದೀರ್ಘಕಾಲದ ಶೀತಪ್ರಕೃತಿಯಿರುತ್ತದೆ. ಅನಂತರ ಶುಷ್ಕ ವಾತಾವರಣ ಬರುತ್ತದೆ.

ಅತಿವೃಷ್ಟಿಯಿಂದುಂಟಾಗುವ ಜಲಪ್ರವಾಹಗಳಿಂದ ಆಗುವ ಅನಾಹುತಗಳನ್ನು ತಡೆಯುವಲ್ಲಿ ಅರಣ್ಯಗಳ ಪಾತ್ರ ಹಿರಿದು. ಇವು ಮಣ್ಣಿನ ಸವಕಳಿ, ನೀರಿನ ವೇಗವನ್ನು ತಡೆಯಬಲ್ಲವು. ನೀರು ಸರಾಗವಾಗಿ ಹರಿದು ನದಿಗಳ ಮೂಲಕ ಸಮುದ್ರವನ್ನು ಸೇರುತ್ತದೆ. ಬಯಲು ಪ್ರದೇಶಗಳಲ್ಲಿ ಸುರಿಯುವ ಅಧಿಕ ಮಳೆಯನ್ನು ತಡೆಯಲು ರೈತರು ಕಾಲುವೆಗಳನ್ನು ತೋಡಿ, ಜಮೀನುಗಳ ಮೂಲೆಗಳಲ್ಲಿ ನಿರ್ಮಿಸಿಕೊಂಡಿರುವ ಕುಂಟೆಗಳಲ್ಲಿ ನೀರು ನಿಲ್ಲುವಂತೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಇದರಿಂದ ಮಳೆಗಾಲ ಮುಗಿದ ಅನಂತರವೂ ಸಣ್ಣ ಪುಟ್ಟ ಅಲ್ಪಾವಧಿ ಬೆಳೆಗಳನ್ನು ಬೆಳೆಯುತ್ತಾರೆ.

ಅನಾವೃಷ್ಟಿಯಿಂದ ಬೆಳೆ ತೆಗೆಯುವುದು ಕಷ್ಟ. ನೀರಿನ ಅಭಾವ ಉಂಟಾಗುವುದರಿಂದ ಮಳೆಗಾಲದ ನೀರನ್ನು ಕೆರೆ ಕುಂಟೆ ಜಲಾಶಯಗಳಲ್ಲಿ ಸಂಗ್ರಹಿಸಿಟ್ಟುಕೊಂಡು ಮಿತವಾಗಿ ಬಳಸಿ ಅನಾವೃಷ್ಟಿಯಿಂದಾಗುವ ದುಷ್ಪರಿಣಾಮವನ್ನು ತಪ್ಪಿಸಬಹುದು. ಇಂಗುಗುಂಡಿಗಳನ್ನು ನಿರ್ಮಾಣ ಮಾಡಿ ಅಂತರ್ಜಲ ವೃದ್ಧಿಸಿ ಭೂಮಿಯ ತೇವಾಂಶ ಹೆಚ್ಚು ಕಾಲ ಉಳಿಯುವಂತೆ ಮಾಡಬಹುದು. ವಾತಾವರಣದಲ್ಲುಂಟಾಗುವ ಒತ್ತಡದಿಂದ ಬಿರುಗಾಳಿಯೆದ್ದು ಅಕಾಲಿಕ ಮಳೆ ಸುರಿಯುತ್ತದೆ. ಸಾಮಾನ್ಯವಾಗಿ ಸಮುದ್ರದ ಮೇಲೆ ಬೀಸುವ ಗಾಳಿಯ ವೇಗ, ದಿಕ್ಕು ಪ್ರದೇಶ ಮತ್ತು ಮಳೆಯ ಪ್ರಮಾಣವನ್ನು ನಿರ್ಧರಿಸುತ್ತದೆ. ಆಕಸ್ಮಿಕವಾಗಿ ಸುರಿಯುವ ಇಂಥ ಮಳೆಗಳು ಕೆಲವು ಸಲ ರೈತನಿಗೆ ವರವಾದರೆ ಹಲವು ವೇಳೆ ಶಾಪವಾಗಿ ಪರಿಣಮಿಸುತ್ತವೆ.

ಬಿರುಗಾಳಿಗಳಲ್ಲಿ ಮಿಂಚು ಗುಡುಗಿನ ಬಿರುಗಾಳಿ, ಆಲಿಕಲ್ಲಿನ ಬಿರುಗಾಳಿ ಹಾಗೂ ಧೂಳುಮಯ ಬಿರುಗಾಳಿಗಳು ಎಂದುಂಟು. ಇವು ಮುಂಗಾರು ಮತ್ತು ಹಿಂಗಾರು ಮಳೆಯ ಸಂದರ್ಭದಲ್ಲಿ ಸಂಭವಿಸುತ್ತವೆ. ವಾತಾವರಣದಲ್ಲಿ ಗಾಳಿಯ ಏರುಪೇರುಗಳಿಂದಾಗಿ ಬಿರುಗಾಳಿಗಳುಂಟಾಗುತ್ತವೆ. ಅತಿ ಶೀತ ಗಾಳಿ ಹಾಗೂ ಹಿಮಪಾತ

ಯಾವುದೇ ಬೆಳೆಗೂ ಯೋಗ್ಯವಲ್ಲ. ಅತಿವೇಗದ ಗಾಳಿಗಳಿಂದ ಹಣ್ಣಿನ ತೋಟ, ಗಿಡದ ಸಾಲು, ಬೆಳೆದ ಪೈರು ಎಲ್ಲವೂ ಹಾಳಾಗಿ ರೈತನಿಗೆ ಅಪಾರನಷ್ಟ ಉಂಟುಮಾಡುತ್ತವೆ.

ಸ್ವಾತಂತ್ರ್ಯಾನಂತರ ಭಾರತದಲ್ಲಿ ಹವಾಗುಣದ ಮುನ್ಸೂಚನೆ ತಿಳಿಸುವ ಬೆಳೆ ಹವೆ ಸೂಚಿಯನ್ನು ಪ್ರಕಟಿಸುವ ಪ್ರತ್ಯೇಕ ಇಲಾಖೆ ಇದೆ. ಈ ನಿಟ್ಟಿನಲ್ಲಿ ಆಕಾಶವಾಣಿ ಹಾಗೂ ಇನ್ನಿತರ ಸುದ್ದಿ ಮಾಧ್ಯಮಗಳು ರೈತನಿಗೆ ಈ ಬಗೆಯ ಮುನ್ಸೂಚನೆ ನೀಡುವಲ್ಲಿ ಸಹಕಾರಿಯಾಗಿವೆ. ರೈತೋಪಯೋಗಿ ಸಂಶೋಧನೆಗಳು ಸಾಕಷ್ಟು ನಡೆದಿವೆ ; ನಡೆಯುತ್ತಿವೆ.

ಎ.ಎಂ.ಡಿ

ಕೃಷಿ ಸಂಘಟನೆ ಕೃಷಿಗೆ ಸಂಘಟನೆಯೆ ಮೂಲ. ಕುಟುಂದಿಂದಲೇ ಕೃಷಿಯ ಆರಂಭ. ಉತ್ಪಾದನೆ ಮತ್ತು ಉಪಯೋಗ ಎರಡೂ ಮೇಳೈಸಿರುವ ಘಟಕವಿದು. ಜಮೀಂದಾರನಿಂದ ಹಿಡಿದು ಸಾಗುವಳಿದಾರ, ಕಂಬಾರ, ಕುಂಬಾರ, ಬಡಿಗ, ಪಶುಪಾಲಕ ಮುಂತಾದ ಎಲ್ಲರ ಸಹಕಾರ ಕ್ಷೇತ್ರವಿದು. ಇಲ್ಲಿ ವಿವಿಧ ಪ್ರಕಾರದ ಕೆಲಸಗಾರರ ತಂಡ ಇರುತ್ತದೆ. ನೀರಾವರಿ, ಬೆಳೆಯ ಪೋಷಣೆ, ಉಳುಮೆ, ಕೊಯ್ಲು, ಮಾರುವುದು ಮತ್ತು ಕೊಳ್ಳುವುದು ಇತ್ಯಾದಿ ಉದ್ದೇಶಕ್ಕಾಗಿ ಉಗಮಗೊಂಡ ಸಂಘಟನೆಗಳು ಇಲ್ಲಿ ಸೇರಿಕೊಂಡಿವೆ.

ಸಾಮಾಜಿಕ ಸಂಘಟನೆ ಕೃಷಿ ವಲಯದಲ್ಲಿ ಬಹು ಮುಖ್ಯ. ಕೌಟುಂಬಿಕ ವಲಯವಷ್ಟೇ ಅಲ್ಲದೇ ರಕ್ತ ಸಂಬಂಧ ಹಾಗೂ ವೈವಾಹಿಕ ಸಂಬಂಧಕ್ಕೆ ಹೊರತಾದ ನೆರೆಹೊರೆಯವರು, ಸ್ನೇಹ ಮುಂತಾದವು ಈ ಬಗೆಯ ಸಂಘಟನೆಗೆ ಆಧಾರ. ಇಲ್ಲಿ ವಯಸ್ಸು, ಲಿಂಗ, ಜಾತಿ, ಅಧಿಕಾರ, ಅಂತಸ್ತು ಯಾವುವೂ ಅನ್ವಯಿಸುವುದಿಲ್ಲ. ಎಲ್ಲರೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುತ್ತಾರೆ. ಸಾಮಾಜಿಕ ಸಂಘಟನೆಯಿಂದಾಗುವ ಲಾಭವೆಂದರೆ ಭೂಮಿಯ ಮೇಲಿರುವ ಪೂಜ್ಯ ಭಾವನೆ. ಕ್ರಯ, ವಿಕ್ರಯ, ಹಸ್ತಾಂತರ, ವಿನಿಮಯ ಮುಂತಾದ ಸಂದರ್ಭಗಳಲ್ಲಿ ಅನೇಕ ಕಟ್ಟುಪಾಡುಗಳು, ವಿಧಿ ನಿಷೇಧಗಳಿರುವುದರಿಂದ ಭೂಮಿ ವಂಶಪಾರಂಪರ್ಯವಾಗಿ ಉಳಿಯುತ್ತದೆ. ಅಂಥ ಭೂಮಿಯ ಫಸಲು ಅವನಿಗೆ ದೇವರ ಸಮಾನ. ದಾನ ಮಾಡುವಾಗಿರುವಷ್ಟು ಸಂಭ್ರಮ ಮಾರುವಾಗ ಇರುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಾನವನ ಕೃಷಿಯ ಆರಂಭಿಕ ಹಂತದಲ್ಲಿ ಮಾರುವುದು ಎಂದರೆ ಪಾಪ ಎಂಬ ಪ್ರಜ್ಞೆ ಇತ್ತು. ಇಂದು ಬೆಳೆಯುವುದೆಲ್ಲ ವ್ಯಾಪಾರ ವಾಣಿಜ್ಯಕ್ಕಾಗಿಯೇ. ಆದ್ದರಿಂದ ಆಹಾರ ಧಾನ್ಯಗಳ ಬೆಲೆ ಗಗನಕ್ಕೇರಿ ಜನಸಾಮಾನ್ಯರ ಸ್ಥಿತಿ ಚಿಂತಾಜನಕವಾಗಿದೆ. ಅಧಿಕ ಪ್ರಮಾಣದ ಜಮೀನು ಉಳ್ಳವನಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನವಿರುತ್ತಿತ್ತು.

ಉತ್ಪಾದನೆಯ ದೃಷ್ಟಿಯಿಂದ ಆರ್ಥಿಕ ಸಂಘಟನೆಯನ್ನು ಮುಂದಿನಂತೆ ಗುರುತಿಸಬಹುದು. ಜೀವನ ನಿರ್ವಾಹಕ ಬೇಸಾಯ, ತೋಟಗಾರಿಕೆ, ದೊಡ್ಡ ಗಾತ್ರದ ಬೇಸಾಯ, ಸಣ್ಣ ಬೇಸಾಯ, ಮಧ್ಯಮಗಾತ್ರದ ಬೇಸಾಯ, ಸಾಮೂಹಿಕ ಬೇಸಾಯ ಮುಂತಾದವು. ಜೀವನ ನಿರ್ವಾಹಕ ಬೇಸಾಯದಲ್ಲಿ ಭೂಮಿ ಕಡಿಮೆಯಿದ್ದು, ರೈತನ ಉದ್ದೇಶ ಬಳಕೆಗೆ ಮಾತ್ರವೇ ಹೊರತು ಮಾರಾಟಕ್ಕಾಗಿ ಅಲ್ಲ. ಇವನಿಗೆ ದೊರೆಯುವ ಸೌಲಭ್ಯವೂ ಹೆಚ್ಚಾಗಿರುವುದಿಲ್ಲ. ತೋಟಗಾರಿಕೆ ವಾಣಿಜ್ಯ ಉದ್ದೇಶವನ್ನೊಳಗೊಂಡಿದ್ದು ಉತ್ಪನ್ನಗಳ ಮಾರಾಟವೇ ಇಲ್ಲಿಯ ಪ್ರಮುಖ ಗುರಿ. ದೊಡ್ಡಗಾತ್ರದ ಬೇಸಾಯದಲ್ಲಿ ಖಾಸಗಿ ಮತ್ತು ಸಾಮೂಹಿಕ ಎಂದು ಎರಡು ವಿಧ. ಸಾಮೂಹಿಕ ಒಡೆತನದ ಬೇಸಾಯದಲ್ಲಿ ಸಾರ್ವಜನಿಕ ಬಂಡವಾಳ ಹೂಡಲಾಗುವುದು. ಈ ಪದ್ಧತಿ ವಿಶಿಷ್ಟ ಪದಾರ್ಥಗಳ ಉತ್ಪಾದನೆಗೆ ಮೀಸಲಾಗಿರುತ್ತದೆ. ಇಲ್ಲಿಯ ಕೆಲಸಗಾರರೆಲ್ಲ ಭೂರಹಿತ ಕೂಲಿ ಕಾರ್ಮಿಕರು. ಸಣ್ಣಗಾತ್ರದ ಬೇಸಾಯದಲ್ಲಿ ಭೂಮಿಯ ಪ್ರಮಾಣ ಗರಿಷ್ಠ ಹತ್ತು ಎಕರೆಯಷ್ಟಿರುತ್ತದೆ. ಇಲ್ಲಿಯ ಬೆಳೆ ಜೀವನ ನಿರ್ವಹಣೆಗಿಂತ ತುಸು ಹೆಚ್ಚಾಗಿರುತ್ತದೆ. ಮಧ್ಯಮಗಾತ್ರದ ಬೇಸಾಯದಲ್ಲಿ ಭೂಮಿಯ ಒಡೆತನ ಖಾಸಗಿಯವರದ್ದು. ಇದರ ನಿರ್ವಹಣೆ ಕುಟುಂಬದವರದ್ದು. ಇವರ ಜೀವನಮಟ್ಟ ಸಣ್ಣಗಾತ್ರದ ಹಿಡುವಳಿದಾರರಿಗಿಂತ ಉತ್ತಮವಾಗಿದ್ದು ಅಧಿಕ ಉತ್ಪನ್ನವನ್ನು ಮಾರಾಟ ಮಾಡುವುದರಿಂದ ಆರ್ಥಿಕವಾಗಿ ಸ್ವಲ್ಪ ಸುಧಾರಣೆ ಇವರಲ್ಲಿದೆ.

ಒಟ್ಟಾರೆ ಭಾರತದಲ್ಲಿ ಹೆಚ್ಚಾಗಿ ಕಾಣುವುದು ಸಣ್ಣ ಮತ್ತು ಮಧ್ಯಮಗಾತ್ರದ ಭೂ ಹಿಡುವಳಿಗಳೇ ಆಗಿದ್ದು ಇದು ಅನಾರ್ಥಿಕವೆಂದು ಪರಿಗಣಿತವಾಗಿದೆ. ವಂಶಪಾರಂಪರ್ಯವಾಗಿ ಜಮೀನುಗಳನ್ನು ಮಕ್ಕಳು ಮೊಮ್ಮಕ್ಕಳಿಗೆ ಹಂಚುವುದರಿಂದ ತುಂಡು ತುಂಡುಗಳಾಗಿ ಕೃಷಿಗೆ ಅನಾನುಕೂಲವಾಗಿದೆ.

ಕೃಷಿ ವಿಮೆ : ಮಾನವ ಕೃಷಿ ಮಾಡಲು ಆರಂಭಿಸಿದಾಗಲೇ ವಿಮಾ ವ್ಯವಸ್ಥೆಯೂ ಉದಯಿಸಿತು. ಹಿಂದೆ ಕೃಷಿಕನಿಗೆ ನಷ್ಟ ಸಂಭವಿಸುತ್ತಿದ್ದುದೇ ಹೆಚ್ಚು. ಅಂಥ ಸಂದರ್ಭದಲ್ಲಿ ಒಬ್ಬನಿಗೆ ನಷ್ಟ ಸಂಭವಿಸಿದಾಗ ಸಾಮೂಹಿಕವಾಗಿ ಉಚಿತ ಪರಿಹಾರ ಒದಗಿಸಿಕೊಡುತ್ತಿದ್ದುದೇ ವಿಮೆ ಎನಿಸಿಕೊಳ್ಳುತ್ತಿತ್ತು. ಇದು ಆಹಾರ ಬೆಳೆಗಳು, ದನಕರುಗಳು ಮುಂತಾದ ಸಕಲ ಸಂಪತ್ತುಗಳನ್ನು ಒಳಗೊಂಡಿತ್ತು. ಕಾಲ ಕ್ರಮೇಣ ಹಣದ ಮೂಲಕ ವಿನಿಮಯ ನಡೆಯಲಾರಂಭಿಸಿದ ಮೇಲೆ ಇದರ ಸ್ವರೂಪ ಬದಲಾಯಿತು. ಇದೇ ಇಂದಿನ ವಿಮಾಪದ್ಧತಿಗೆ ಮೂಲ. ಅಧಿಕ ಉತ್ಪನ್ನಗಳಿಂದಾಗಿ ಮಾರುಕಟ್ಟೆ ವ್ಯವಸ್ಥೆ ರೂಪುಗೊಂಡ ಮೇಲೆ ವಿಮಾ ಪದ್ಧತಿಯಲ್ಲಿ ಬದಲಾವಣೆ ಕಾಣಿಸಿಕೊಂಡಿತು. ಪ್ರತಿಯೊಬ್ಬ ಸದಸ್ಯನಿಂದಲೂ ನಿರ್ದಿಷ್ಟ ಪ್ರಮಾಣದಲ್ಲಿ ಹಣವನ್ನು ಸಂಗ್ರಹಿಸಿ ನಷ್ಟ ಅನುಭವಿಸುವವನಿಗೆ ಅದಕ್ಕೆ ಸಮನಾದ ಪರಿಹಾರ ಒದಗಿಸುವ ನ್ಯಾಯ ಬದ್ಧ ಇಲಾಖೆ ಸ್ಥಾಪನೆಗೊಂಡಿತು. ಇದರಿಂದ ರೈತನ ಬದುಕು ಸುಧಾರಿಸಿತು. ಆದರೆ ಮಧ್ಯವರ್ತಿಗಳಿಂದ ವಿಮೆಯ ಮೊತ್ತ ಫಲಾನುಭವಿಗಳಿಗೆ ಸರಿಯಾಗಿ ತಲುಪುತ್ತಿಲ್ಲ. ಕೆಲವೊಮ್ಮೆ ದುರುಪಯೋಗವಾಗುವುದೂ ಉಂಟು. ಕೇವಲ ಬೆಳೆಗಳಿಗಷ್ಟೇ ಅಲ್ಲದೆ ರೈತ ಸಾಕುವ ಜಾನುವಾರುಗಳಿಗೂ ವಿಮಾ ಸೌಲಭ್ಯವಿದೆ.

ಎ.ಎಂ.ಡಿ.

ಕೃಷಿ ಸಂಬಂಧಿ ಕನ್ನಡ ಒಗಟುಗಳು ಸಾವಿರಾರು ವರ್ಷಗಳ ಪರಂಪರೆಯಿಂದ ಸ್ಥಳೀಯ ನೆಲ, ಜಲ, ಹವಾಗುಣದ ಅಗತ್ಯಗಳಿಗೆ ಅನುಗುಣವಾಗಿ ಬೆಳೆದು ಬಂದಿರುವಂತಹ ಕೃಷಿಯು ಯಾವ ನೆಲಕ್ಕೆ ಯಾವ ಬೀಜ, ಅದರ ಆರೈಕೆ ಹೇಗೆ, ರೋಗ ನಿವಾರಣೆ ಮಾಡಬೇಕಾದ ಬಗೆ ಏನು ? ಒಕ್ಕುವ ರೀತಿ, ದಾಸ್ತಾನು ವಿಧಾನ

ಮುಂತಾದುವನ್ನು ಸಾಂಪ್ರದಾಯಿಕವಾಗಿ ಅನುಸರಿಸಿಕೊಂಡು ಬಂದಿರುವಂತಹ ಜಾನಪದರು ತಮಗೆ ಅನ್ನ ಹೊನ್ನುಗಳೆಲ್ಲವನ್ನೂ ಕೊಡುವ ಭೂದೇವಿಯನ್ನು ಭೂಮಿತಾಯಿ ಎಂಬ ಪೂಜ್ಯಭಾವನೆಯಿಂದ ಕರೆದು ಆರಾಧಿಸುವುದನ್ನು ಪ್ರಪಂಚಾದ್ಯಂತ ಕಾಣುತ್ತೇವೆ. ಇದಕ್ಕೆ ಅವರವರ ಸಾಂಸ್ಕೃತಿಕ ಹಿನ್ನೆಲೆ ಮುಖ್ಯ ಕಾರಣವಾಗಿರುತ್ತದೆ.

ಇಲ್ಲಿ ಕೆಲವು ಒಗಟುಗಳನ್ನು ತಿಳಿಯುತ್ತ ಪ್ರಕೃತಿಯೊಡನೆ ಜಾನಪದೀಯ ಸಂಬಂಧವನ್ನು ನೋಡಬಹುದು.

ಹಕ್ಕಿಯ ಹಾಗೆ ಹಾರುವೆನಲ್ಲ
ಮೀನಿನ ಹಾಗೆ ಈಜುವೆನಲ್ಲ
ಸೂರ್ಯ ಚಂದ್ರನ ಮರೆ ಮಾಡುವೆನಲ್ಲ
ಶಾಖಕ್ಕೆ ಕರಗಿ ಹರಿಯುವೆನಲ್ಲ
ಭೂಮಿಯ ತಂಪ ಮಾಡುವೆನಲ್ಲ
ಅಂತರದಲ್ಲೇ ಜೀವನವೆಲ್ಲ — *ಉತ್ತರ - ಮೋಡ*

ಭಾರತ ದೇಶದಲ್ಲಿ ರೈತರು ಮಳೆಯನ್ನೇ ಆಶ್ರಯಿಸಿ ವ್ಯವಸಾಯವನ್ನು ಮಾಡುತ್ತಾರೆ. ರೈತರಿಗೆ ಮೋಡವನ್ನು ನೋಡುತ್ತಿದ್ದಂತೆ ಮಳೆ ಬರುವುದು, ಬಾರದಿರುವುದು ತಿಳಿಯುತ್ತದೆ.

ಕೆಂಪು ಬಣ್ಣ, ಹಳದಿ ಬಣ್ಣ, ಕಂದು ಬಣ್ಣ, ಬಿಳಿ ಬಣ್ಣ ಹೊಂದೈಲೆ, ಹೊಡದಿಲ್ಲ, ಬಡದಿಲ್ಲ ಯಾರೂ ನೋಡಿಲ್ಲ ಅಳುತ್ತಾ ಹೋಗುತ್ತಾನ, ಅವನ ಕಣ್ಣೀರ ಹನಿಗಳು ಲಕ್ಷ ಕೋಟಿ, ಲೆಕ್ಕವೇ ಇಲ್ಲ.

ಉತ್ತರ : ಮಳೆಯಾಗುವುದು

ಕಣ್ಣಿಗೆ ಕಾಣೋದಿಲ್ಲ
ಕೈಯಿಗೆ ಸಿಗೋದಿಲ್ಲ
ಮೈಯಿಗೆ ಮಾತ್ರ ಸೋಕುತ್ತೆ — *ಉತ್ತರ : ಗಾಳಿ*

ಮಳೆ, ಗಾಳಿ ಕುರಿತಾದ ನಂಬಿಕೆ ಆಚರಣೆಗಳಿಗೂ ಕೃಷಿಗೂ ನೇರ ಸಂಬಂಧವಿದೆ. ಅಲೆಮಾರಿಯಾಗಿದ್ದ ಮನುಷ್ಯ ಒಂದೆಡೆ ನೆಲೆ ನಿಂತು ಕೃಷಿಗೆ ಮೊರೆ ಹೋದಾಗ ಅವನಿಗೆ ಮಳೆಯ ಅಗತ್ಯವೆನಿಸಿತು, ಹಾಗಾಗಿ ಅದರ ಬಗೆಗೆ ಹತ್ತಾರು ನಂಬಿಕೆ ಆಚರಣೆಗಳು ಒಗಟುಗಳು ಹುಟ್ಟಿಕೊಂಡಿವೆ. ವ್ಯವಸಾಯಗಾರನು ತನ್ನ ಕಾಯಕವನ್ನು ಗೌರವ ಭಕ್ತಿಯಿಂದ ಸಂಪ್ರದಾಯಕ್ಕೆ ಅನುಗುಣವಾಗಿ ಅನೂಚಾನವಾಗಿ ನಡೆಸಿಕೊಂಡು ಹೋಗುವಂತವನು ಆದುದರಿಂದಲೇ ಕುವೆಂಪು ಅವರಂತಹ ಮಹಾಕವಿಗಳು ವ್ಯವಸಾಯಗಾರನನ್ನು 'ನೇಗಿಲಯೋಗಿ' ಎಂದು ಕರೆದು ಹಾಡಿದ್ದಾರೆ.

ನನ್ನ ಹಾಸಲಾಗಲಿಲ್ಲ
ಹಾಸಿಗೆಯಷ್ಟಿಲ್ಲವಲ್ಲ !
ನನ್ನ ಸುತ್ತಲಾಗಲಿಲ್ಲ
ಕೊನೆಯೆಂಬುದಿಲ್ಲವಲ್ಲ !
ನನ್ನ ಮಡಿಸಲಾಗಲಿಲ್ಲ
ಚಾಪೆಯಷ್ಟಿಲ್ಲವಲ್ಲ
ಮಡಿಲಲ್ಲಿರುವ ಎಲ್ಲರನು
ರಕ್ಷಿಸಿ ಉಳಿಸುವೆನಲ್ಲ — *ಉತ್ತರ : ಆಕಾಶ*

ಆಕಾಶದ ಅಗಲ ವಿಸ್ತಾರವನ್ನು ಜನಪದರು ಹಾಸಿಗೆ ಚಾಪೆಗಳನ್ನು ಉದಾಹರಣೆಯಾಗಿ ಬಳಸಿಕೊಂಡು ಹೇಳಿದ್ದಾರೆ. ಆಕಾಶವನ್ನು ಹಾಸಿಗೆಯ ಹಾಗೆ ಹಾಸಲು ಮತ್ತು ಚಾಪೆಯ ಹಾಗೆ ಸುತ್ತಲು ಸಾಧ್ಯವಿಲ್ಲ. ಅದು ತನ್ನ ಮಡಿಲಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರ, ಗ್ರಹಗಳನ್ನು ಸುರಕ್ಷಿತವಾಗಿ ತನ್ನಲ್ಲೇ ಉಳಿಸಿಕೊಂಡು ಕಾಪಾಡುತ್ತಿದೆ ಎಂದು ಹೇಳಿದ್ದಾರೆ.

ನೀರಿಗೆ ಬಣ್ಣವಿಲ್ಲ, ರುಚಿಯಿಲ್ಲ, ವಾಸನೆಯಿಲ್ಲ ಎಂಬುದನ್ನು ಈ ಒಗಟಿನ ಮೂಲಕ ಜನಪದರು ವ್ಯಕ್ತಪಡಿಸಿರುವ ರೀತಿ ಹೀಗಿದೆ:

ತಿನ್ನುವ ವಸ್ತುವೆ ನಾನು
ಕೈಗೆ ಸಿಗುವವನಲ್ಲ
ನನ್ನ ತಿಂದವರಾರಿಗೂ
ರುಚಿ ಬರುವುದಿಲ್ಲ
ಎತ್ತಿ ಹಿಡಿದುಕೊಂಡರು
ಕೈಲಿ ನಿಲ್ಲುವುದಿಲ್ಲ
ಒಂದೇ ಕ್ಷಣಕ್ಕೆ ಕರುಗತಲಿ
ಹರಿದೋಡುವೆನಲ್ಲ — *ಉತ್ತರ : ಆಲಿಕಲ್ಲು*

ಗುಡುಗು ಸಿಡಿಲಿನಿಂದ ಕೂಡಿದ ಜೋರಾದ ಮಳೆ ಬೀಳುವ ಸಂದರ್ಭದಲ್ಲಿ ಆಲಿಕಲ್ಲುಗಳು ಬಾನಿಂದ ಭೂಮಿಗೆ ರಪರಪನೆ ಉದುರುತ್ತದೆ. ಈ ರೀತಿ ಆಲಿಕಲ್ಲಿನ ಮಳೆಯು ಬಂದರೆ ರೈತರ ಫಸಲುಗಳು ಹಾಳಾಗುತ್ತದೆ. ಅಂದರೆ ಮಾವು ಹುಣಸೆಯಂತಹ ಬೆಳೆಯು ನಾಶವಾಗುತ್ತದೆ. ಕೆಲ ಕಾಯಿಗಳು ಮಳೆ ಗಾಳಿಗೆ ಸಿಲುಕಿ ಉದುರಿ ಹೋದರೆ, ಉಳಿದ ಮಾವಿಗೆ ಹುಳ ಹೊಡೆಯುತ್ತದೆ ಎಂಬುದು ರೈತರ ಆತಂಕವಾಗಿರುತ್ತದೆ.

ಆಲಿಕಲ್ಲನ್ನು ಜನಪದರು ಅದರ ಗುಣಾವಗುಣಗಳನ್ನು ಗಮನಿಸಿಯೇ ಒಗಟು ಕಟ್ಟಿದ್ದಾರೆ. ಆಲಿಕಲ್ಲು ತಿನ್ನುವ ವಸ್ತುವೆ, ಆದರೆ ಅದನ್ನು ತೆಗೆದುಕೊಳ್ಳಲಾಗುವುದಿಲ್ಲ ಭೂಮಿಗೆ ಬಿದ್ದೊಡನೆ ಕರಗಿ ನೀರಾಗಿ ಹೋಗುತ್ತದೆ. ಸಿಕ್ಕಿ ತಿಂದರು ಸಹ ರುಚಿಯಂತು ಸಿಗುವುದಿಲ್ಲ.

'ಬಾಯಿ ಇಲ್ಲ, ಬಡಕೊಳ್ಳೈತಿ, ರೆಕ್ಕೆ ಇಲ್ಲ ಹಾರಲೈತಿ'.
ಉತ್ತರ : ಗುಡುಗು

ನಾರಿಯೊಬ್ಬಳು ಅತಿ ಭಯಂಕರ
ಬೆಂಕಿಯಿಂದ ಅದರ ಆಹಾರ
ಗೊತ್ತಾಗೊಲ್ಲ ಮಾನವರಿಗೂ
ಅವಳ ಹೆಸರೇನಿರಬಹುದು — *ಉತ್ತರ : ಸಿಡಿಲು*

ಇಲ್ಲಿ ಗುಡುಗು ಸಿಡಿಲುಗಳ ಬಗ್ಗೆ ಹೇಳಲಾಗಿದೆ. ಗುಡುಗು ಒಂದು ಕಡೆ ನಿಲ್ಲುವುದಿಲ್ಲ ಶಬ್ದವನ್ನು ಮಾಡುತ್ತ ಒಮ್ಮೆ ಇತ್ತ ಶಬ್ದ ಮಾಡಿದರೆ ಮತ್ತೊಮ್ಮೆ ಎತ್ತಲೋ ಶಬ್ದವಾಗುತ್ತದೆ. ಆದ್ದರಿಂದಲೇ ಇಲ್ಲಿ ಗುಡುಗಿಗೆ ಬಾಯಿ ಇಲ್ಲ ಹಕ್ಕಿಯ ಹಾಗೆ ರೆಕ್ಕೆಯೂ ಇಲ್ಲ ಎಂದು ಹೇಳುತ್ತಾ ಒಗಟು ಕಟ್ಟಿದ್ದಾರೆ.

ಅದೇ ರೀತಿಯಲ್ಲಿ ಸಿಡಿಲಿನ ಬಗ್ಗೆ ಹೇಳುವಾಗ ಸಿಡಿಲನ್ನು ನಾರಿಗೆ ಹೋಲಿಸಿದ್ದಾರೆ. ನಾರಿ ಮುನಿದರೆ ಮಾರಿಯಾಗುತ್ತಾಳೆ ಎಂಬುದಕ್ಕೆ

ಉದಾಹರಣೆಯಾಗಿ ಸಿಡಿಲನ್ನು ಕೊಡುತ್ತಾರೆ. ಬೆಂಕಿ ಹಿಂಡುಗಳನ್ನು ತಿನ್ನುವ ನಾರಿ ಭಯಂಕರ ಅವಳ ಮನಸ್ಸನ್ನು ಯಾರು ತಿಳಿಯಲು ಸಾಧ್ಯವಿಲ್ಲ. ಹಾಗೆ ಸಿಡಿಲು ಕೂಡ ಎಲ್ಲಿ ತನ್ನ ಬೆಂಕಿಯನ್ನು ಉಗುಳುತ್ತದೆ ಎಂದು ಅರಿಯುವುದು ಕಷ್ಟವಾಗುತ್ತದೆ. ಬಹಳ ಸಹನೆ, ತಾಳ್ಮೆಯಿಂದ ಇರುವ ನಾರಿಯು ಕೂಡ ಯಾವಾಗ ಮುನಿಯುತ್ತಾಳೆ ಎಂಬುದನ್ನು ತಿಳಿಯುವುದು ಕಷ್ಟ ಎಂದು ನಾರಿಯನ್ನು ಸಿಡಿಲಿಗೆ ಹೊಂದಿಸಿ ಒಗಟು ಹೇಳಿದ್ದಾರೆ.

ರೈತರು ಕೃಷಿಗೆ ಸಂಬಂಧಿಸಿದಂತೆ ವ್ಯವಸಾಯದ ಪ್ರತಿಯೊಂದು ಹಂತಕ್ಕೂ ಸಂದರ್ಭೋಚಿತವಾಗಿ ಒಗಟನ್ನು ಕಟ್ಟುತ್ತಾರೆ. ಬೆಳೆದ ಬೆಳೆ ಕೊಯ್ಯುವ ಕುಡುಗೋಲು ಕೊಯ್ಲು ಜಾಗದಲ್ಲಿ ಉಳಿದ ಕೂಳೆಯನ್ನು ಕುರಿತಂತೆಯೂ ಒಕ್ಕಣೆ ಮಾಡಿದ ಧವಸ ಧಾನ್ಯಗಳನ್ನು ಕುಟ್ಟುವ ಒನಕೆಯನ್ನು ಕುರಿತು ಅರ್ಥಗರ್ಭಿತವಾಗಿ ಆಲೋಚನೆಗೆ ಸಾಣೆಯಿಡುವ ರೀತಿಯಲ್ಲಿ ಅನುಭವವೇದ್ಯ ವಿಚಾರಗಳಿಗೆ ಅಭಿವ್ಯಕ್ತಿ ಮಾಧ್ಯಮವಾಗಿ ಒಗಟುಗಳನ್ನು ಕಟ್ಟಿಕೊಟ್ಟಿದ್ದಾರೆ.

ಹೊಲದಾಗೆಲ್ಲ ಸುತ್ತಾಡುತ್ತ
ಮೇಯಿಲಿಕ್ಕ ಹೋಗುತ್ತೆ
ಆದ್ರೆ ಸಗಣಿ ಹಾಕೋದಿಲ್ಲ — ***ಉತ್ತರ : ಕುಡುಗೋಲು***

ಮೂಗು ಕೋಯಿಸಿಕೊಂಡು
ಮುಗಲು ನೋಡಕತ್ತಾಳ — ***ಉತ್ತರ : ಕೊಯ್ಲು***

ಕರಿಸೀರೆ ಉಟ್ಟಾಳ
ಕಾಲುಂಗರ ತೊಟ್ಟಾಳ
ಮ್ಯಾಕ ಹೋಗ್ತಾಳ
ಕೆಳಗ ಬರ್ತಾಳ — ***ಉತ್ತರ : ಒನಕೆ***

ಇಲ್ಲಿ ಬಳಕೆಯಾಗುವ ಎಲ್ಲಾ ವಸ್ತುಗಳನ್ನು ದೇವರಿಗೆ ಅರ್ಪಿಸಿ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ.

ಹಂತಿ ಹೊಡೆಯುತ್ತ - ಬೀಸುವ ಕಲ್ಲು ಎಳೆಯುತ್ತ ತೆನೆ ಕೊಯುತ್ತಾ ರಾತ್ರಿ ಮಧ್ಯರಾತ್ರಿ ಕಾವಲು ಕಾಯುತ್ತಾ ನಸಕುಗಳಲ್ಲಿ ತೆನೆಯಿಂದ ಕಾಳು ತೆಗೆಯುತ್ತ ಶ್ರಮದ ಕೆಲಸ ಮಾಡುತ್ತಲೇ ಒಗಟುಗಳನ್ನು ಕಟ್ಟಿಕೊಳ್ಳುತ್ತಾ ನುಡಿ ಚಿತ್ರಗಳನ್ನು ಕಲ್ಪಿಸಿಕೊಂಡು ಕೆಲಸದಲ್ಲಿ ಮೈ ಮರೆಯುತ್ತಾರೆ.

ಕೂಸು ಕುಡಿಕೆ ಗಾತ್ರ
ಮಾಸು ಮನೆ ಗಾತ್ರ
ಕೂಸಿನೊರಪ್ಪ ಸಾಸಿವೆ ಗಾತ್ರ — ***ಉತ್ತರ : ರಾಗಿ ತೆನೆ***

ಬೆಳ್ಳಿಯ ಬಾರಕೋಲ, ಬಂಗಾರ ಸೆಡ್ಡಿ, ಬಲಗೈ, ಹೊನ್ನ ಬಿತ್ಯಾರ ಮಾದೇವ ರಥವ ನಡೆಸ್ಯಾನ ಎಂದು ಹಾಡುತ್ತಾರೆ.

ಅಕ್ಕ ಅಕ್ಕ ನನ್ನ ನೋಡೆ
ಏನು ಘುಮ ಘುಮ ಎಲ್ಲ ಕಡೆ
ನಾನೊಂದು ಪುಟ್ಟ ಗಿಡ
ಪುಟ್ಟ ಗಿಡದಿ ಬಿಡುವೆ ಕಾಯಿ
ಕಾಯಿ ಕಾಯಿ ಗೊಂಚಲು ಕಾಯಿ
ಕಾಯಿ ತಿನ್ನುವ ಬಾಯಿ ನೋಡಿ — ***ಉತ್ತರ : ಏಲಕ್ಕಿ ಗಿಡ***

'ಮೂರ್ತಿಚಿಕ್ಕದಾದರು ಕೀರ್ತಿ ದೊಡ್ಡದು' ಎಂಬ ಗಾದೆಯಂತೆ ಈ ಏಲಕ್ಕಿಗಿಡ ಮಹತ್ವಯುತವಾದದ್ದು. ಪುಟ್ಟ ಗಿಡದಲ್ಲಿ ಬಿಡುವ ಈ ಏಲಕ್ಕಿಯು ಒಳ್ಳೆಯ ಪರಿಮಳವನ್ನು ಬೀರುತ್ತದೆ. ಅನೇಕ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಬಳಕೆಯಾಗುವ ಏಲಕ್ಕಿ ವಿಶೇಷವಾದ ರುಚಿ ಮತ್ತು ವಾಸನೆ ನೀಡುತ್ತದೆ.

ಒಗಟನ್ನು ಕೇಳುವಾಗಲೇ ಒಗಟಿನಲ್ಲಿರುವ ವಸ್ತುವಿನ ವಿಶೇಷ ಗುಣ ಲಕ್ಷಣಗಳನ್ನು ಸೇರಿಸಿ ಹೇಳುವುದು ಮತ್ತು ಸೂಚನೆಯನ್ನು ನೀಡುವುದು ಒಗಟಿನ ಒಂದು ವಿಶೇಷತೆಯಾಗಿದೆ.

ಹೋಗುವಾಗ ಹೂವಿನ ತೋಟ
ಬರುವಾಗ ಬರೀ ತೋಟ — ***ಉತ್ತರ : ಹತ್ತಿಯ ಹೊಲ***

ಈ ಒಗಟು ಹತ್ತಿಯ ಬೆಳೆಯನ್ನುಳ್ಳ ಹೊಲವನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದೆ. ಹತ್ತಿಯ ಕಾಯಿ ಮಾಗಿ ಒಡೆದು, ಬೆಳ್ಳಗೆ ಅರಳಿ ಗಿಡಗಿಡದಲ್ಲಿಯೂ ಮಂಜಿನ ಮೊಟ್ಟೆಗಳಂತೆ, ಬೆಣ್ಣೆಯ ಸುಣ್ಣ ಉಂಡೆಗಳಂತೆ ಕಾಣುವ ದೃಶ್ಯವನ್ನು ಆಕರ್ಷಕವಾಗಿ ಹೇಳಿದ್ದಾರೆ.

ತಲೆಯನೆತ್ತಿ ಬೆಳೆಯಬಲ್ಲೆ
ಗರಿಯ ಕೆದರಿ ಹರಡಬಲ್ಲೆ
ಮಡಿಲ ತುಂಬಿ ಕೊಡಬಲ್ಲೆ
ಸಿಹಿಯ ನೀರು ಕುಡಿಸಬಲ್ಲೆ
ಬೆಳ್ಳಿ ಬಟ್ಟಲು ನೀಡಬಲ್ಲೆ
ಕಾಮಧೇನು ಎನಿಸಬಲ್ಲೆ
ಕಲ್ಪವೃಕ್ಷ ಆಗಬಲ್ಲೆ — ***ಉತ್ತರ : ತೆಂಗಿನ ಮರ***

ಹಚ್ಚನ್ನ ಹಕ್ಕಿ ಪುಚ್ಚ ತೆಗೆದು
ಕಲ್ಲ ಮೇಲಿಟ್ಟು ಕಾರ ಅರೆದರು — ***ಉತ್ತರ : ಕೊತ್ತಂಬರಿ ಸೊಪ್ಪು***

ತೆಂಗಿನ ಮರದ ರೂಪ, ಆಕಾರ ಮತ್ತು ಅದರ ಗುಣವನ್ನು ಹೇಳುತ್ತ, ದಾಹವನ್ನು ನೀಗಿಸಿ ತಂಪನ್ನು ನೀಡುವ ತೆಂಗಿನ ಮರವನ್ನು ಇಲ್ಲಿ ಗುರುತಿಸಿದ್ದಾರೆ.

ಜೊತೆಗೆ ಕೊತ್ತಂಬರಿ ಸೊಪ್ಪಿನ ಮಹತ್ವ ಕುರಿತು, ಕಂತೆಯನ್ನು ಕಟ್ಟಿರುವ ಸೊಪ್ಪನ್ನು ಬಿಚ್ಚಿ ಅದರ ಎಲೆಗಳನ್ನು ಬಿಡಿಸಿ ಅದನ್ನು ಕಾರದೊಂದಿಗೆ ಹಾಕಿ ರುಬ್ಬುವಾಗ ಕೊತ್ತಂಬರಿ ಸೊಪ್ಪಿನ ಮಹತ್ವ ತಿಳಿಯುತ್ತದೆ. ಈ ಒಗಟಿನಲ್ಲಿ ಬರುವ 'ಕಲ್ಲ ಮೇಲಿಟ್ಟು ಖಾರ ಅರೆದರು' ಎಂಬ ಪ್ರಯೋಗ ಒಗಟಿನ ಪ್ರಾಚೀನತೆಗೂ ಉತ್ತಮ ಉದಾಹರಣೆಯಾಗಿದೆ.

ಥಳಿಸದ ಅಕ್ಕಿ ; ಕಾಸದ ತುಪ್ಪ
ಹಳಸದ ಹಣ್ಣು,
ನಿದ್ರೆಯಿಲ್ಲದ ನೀರೆ — ***ಉತ್ತರ : ಏಲಕ್ಕಿ, ಜೇನುತುಪ್ಪ, ಹುಣಸೆಹಣ್ಣು, ನೀರು (ಹೊಳೆ)***

ಇಲ್ಲಿರುವ ಎಲ್ಲವೂ ಪ್ರಾಕೃತಿಕ ವಸ್ತುಗಳೇ. ಥಳಿಸದೆ ಅಟ್ಟುಣ್ಣ ಬಹುದಾದ ಏಲಕ್ಕಿ, ಕಾಯಿಸದೆ ಉಪಯೋಗಿಸಬಹುದಾದ ಜೇನುತುಪ್ಪ, ಹಳಸದಿರುವ ಹುಣಸೆಹಣ್ಣು, ಸದಾ ಕಾಲ ಹರಿಯುವ ಹೊಳೆ, ನಾಲ್ಕನ್ನು ಪುಟ್ಟ ಪುಟ್ಟ ಚಿತ್ರಣಗಳಲ್ಲಿ ಜೋಡಿಸಿ ಒಗಟು ಕಟ್ಟಿದ್ದಾರೆ.

ಅವ್ವ ನೆರೆದು ಹಿತ್ತಲಿಗೆ ಹೋಗ್ತಾಳೆ
ಮಗಳು ನೆರೆದು ಮನೆಗೆ ಬರ್ತಾಳೆ *ಉತ್ತರ : ಬತ್ತ*

ಈ ಒಗಟಿನಲ್ಲಿ ಬತ್ತವನ್ನು ಸೂಚಿಸುವಾಗ ಅದರ ಉಪಯೋಗವನ್ನು ಸಹ ಸೂಚಿಸಲಾಗಿದೆ. ಇಲ್ಲಿ ಬತ್ತ ಮತ್ತು ಬತ್ತದ ಗಿಡವನ್ನು ತಾಯಿ ಮಗಳಿಗೆ ಹೋಲಿಸಿದ್ದಾರೆ. ಬತ್ತ ಬೆಳೆದು ಕಟಾವು ಆದ ಅನಂತರದಲ್ಲಿ ಬತ್ತದ ಹುಲ್ಲು ಹಿತ್ತಲಿಗೆ ಹಾಕುತ್ತಾರೆ. ಬತ್ತವನ್ನು ಚೆನ್ನಾಗಿ ಬಡಿದು ಮನೆಗೆ ಹಾಕಿದರೆ ಅದರ ಹುಲ್ಲನ್ನು ಹಸು, ದನ, ಕರುಗಳಿಗೆ ಮೇವಾಗಿ ಬಳಸಲು ಹಿತ್ತಲಲ್ಲಿ ಶೇಖರಿಸುತ್ತಾರೆ. ಆದ್ದರಿಂದ ಇಲ್ಲಿ ಬತ್ತವನ್ನು ಅವ್ವ ನೆರೆದು ಹಿತ್ತಲಿಗೆ ಹೋದರೆ ಮಗಳು ನೆರೆದು ಮನೆಗೆ ಬರುತ್ತಾಳೆಂದು ಹೇಳಿದ್ದಾರೆ. ಬತ್ತವನ್ನು ಮನೆಗೆ ತರುವ ಮೊದಲು ಹೊಲದಲ್ಲೆ ಒಂದು ಕಡೆ ಶೇಖರಣೆ ಮಾಡಿ ಪೂಜೆ ಪುರಸ್ಕಾರಗಳನ್ನು ಮಾಡುತ್ತ ಆ ಬೆಳೆ ಬೆಳೆಯಲು ಪಟ್ಟ ಶ್ರಮವನ್ನೆಲ್ಲಾ ಮರೆತು ತಮ್ಮ ಶ್ರಮಕ್ಕೆ ಸಿಕ್ಕ ಪ್ರತಿಫಲದಲ್ಲಿ ದೈವತ್ವವನ್ನು ಕಾಣುತ್ತ ಸಂತೋಷದಿಂದ ಮನೆಗೆ ಸಾಗಿಸುತ್ತಾರೆ.

ಅಜ್ಜಿಗೊಂದು ಅಂಗಿ
ಅಂಗಿಯೊಳಗೆ ಮೀಸೆ
ಮೀಸೆ ಬಿಡಿಸೆ ಹಲ್ಲು
ಹಲ್ಲು ಕಡಿಯೆ ಹಿಟ್ಟು
ಹಿಟ್ಟು ತಟ್ಟೆ ರೊಟ್ಟಿ *ಉತ್ತರ : ಮುಸುಕಿನ ಜೋಳ*

ಮುಸುಕಿನ ಜೋಳದ ಸ್ವರೂಪವನ್ನು ಹೇಳಲಾಗಿದೆ. ಪದವೇ ಸೂಚಿಸುವಂತೆ ಮುಸುಕನ್ನು ಹೊದ್ದಿರುವ ಜೋಳ ಇದು. ಈ ಜೋಳದಲ್ಲಿ ಸ್ತ್ರೀ, ಪುರುಷ ಎರಡು ರೂಪಗಳನ್ನು ಕಾಣುತ್ತಾರೆ. ಮೇಲಿನ ಹೊದಿಕೆಯನ್ನು ಅಜ್ಜಿಗೊಂದು ಅಂಗಿ ಎಂದು ಅದರೊಳಗಿನ ಚಿನ್ನದ ಬಣ್ಣದ ನಾರನ್ನು ಪುರುಷನ ಮೀಸೆ ಎಂದು ಆ ಮೀಸೆಯನ್ನು ಬಿಡಿಸಿದರೆ ಅದರೊಳಗೆ ಜೋಳದ ಹಲ್ಲುಗಳು ಕಾಣುತ್ತವೆ. ಕಾಳುಗಳು ಹಲ್ಲಿನ ಆಕಾರದಲ್ಲಿರುವುದರಿಂದ ಅದನ್ನು ಹಲ್ಲಿಗೆ ಹೋಲಿಸಿದ್ದಾರೆ. ಜೋಳವನ್ನು ಮುದ್ದೆ, ರೊಟ್ಟಿ, ಪುರಿ ಮಾಡಿಯು ಬಳಸುತ್ತಾರೆ.

ಕರಿನ ಕಟ್ಟಿದೆ
ಕರ ಮಲ್ಕಂಡಿದೆ
ಬಳ್ಳಿ ಬೆಳಿತಾ ಹೋಗುತ್ತೆ *ಉತ್ತರ : ಬೂದು ಕುಂಬಳ*

ನಾವು ಎರಡು ರೀತಿಯ ಕುಂಬಳ ಕಾಯಿಗಳನ್ನು ಕಾಣುತ್ತೇವೆ. ಒಂದು ಸೀಗುಂಬಳವಾದರೆ ಮತ್ತೊಂದು ಬೂದುಕುಂಬಳ ಈ ಬೂದುಕುಂಬಳ ಗಾತ್ರದಲ್ಲಿ ದೊಡ್ಡದಾಗಿರುತ್ತದೆ. ಆದ್ದರಿಂದಲೇ ಇದನ್ನು ಹಸು, ಕರುವಿಗೆ ಹೋಲಿಸಿದ್ದಾರೆ. ದೊಡ್ಡ ಗಾತ್ರದ ಕುಂಬಳಕಾಯಿ ಬೆಳೆಯುವುದು ಬಳ್ಳಿಯಲ್ಲಿ ಎಂಬುದನ್ನು ಇಲ್ಲಿ ಸೂಚಿಸುತ್ತಾರೆ.

ಬೂದು ಕುಂಬಳವನ್ನು ಪೂಜೆಗಾಗಿ ಮತ್ತು ಆಹಾರ ಪದಾರ್ಥವಾಗಿಯೂ ಸಹ ಬಳಸುತ್ತಾರೆ.

ಅಂಬಾರ್ದಾಗಾಡೋ ಗಿಣಿಯೆ
ಚೆಂಬು ತಗೊಂಡು ತೂಗೋ ಗಿಣಿಯೆ
ಇಟ್ಟೊತ್ತಿಗೆ ಬಾರೋ ಪುಟ್‌ನನ್ ಗಿಣಿಯೆ

ಉತ್ತರ : ಮಾವಿನ ಹಣ್ಣು

ಮಾವಿನ ಮರದಲ್ಲಿ ನೇತಾಡುತ್ತ, ಗಾಳಿ ಬೀಸಿದಾಗ ತೂಗಾಡುವ ದಪ್ಪನಾದ, ಗಿಣಿಯನ್ನು ಹೋಲುವ ಇದು ಸಣ್ಣ ಚೆಂಬಿನಾಕಾರವಾಗಿ ಕಾಣುತ್ತದೆ. ಜನಪದರಿಗೆ ಮಾವಿನ ಕಾಯಿಯ ಉಪಯುಕ್ತತೆಯನ್ನು ಸೂಚಿಸಲಾಗಿದೆ. ಜನಪದರು ಹುಳಿ ಸ್ವಲ್ಪ ಕಡಿಮೆ ಇರುವ ಜಾತಿಯ ಮಾವಿನ ಕಾಯಿಯ ಹೋಳುಗಳನ್ನು ಸಾರಿಗೆ ಅದ್ದಿಕೊಳ್ಳುತ್ತ ಊಟ ಮಾಡುತ್ತಾರೆ. ಊಟದ ಹೊತ್ತನ್ನು 'ಹಿಟ್ಹೊತ್ತು' ಎನ್ನುತ್ತಾರೆ. ಮಾವಿನ ಕಾಯಿ ಎಂಬ ಗಿಣಿಯನ್ನು ಹಿಟ್ಟಿನ ಹೊತ್ತಿಗೆ ತಂದು ಆನಂದಿಸುತ್ತಾರೆ.

ಜನಪದರು ಕೇವಲ ಕಾಳು ಕಡ್ಡಿಗಳನ್ನಷ್ಟೇ ಬೆಳೆಯದೆ ಹಣ್ಣು, ತರಕಾರಿ, ಸೊಪ್ಪುಗಳನ್ನು ಸಹ ಬೆಳೆಯುತ್ತಾರೆ. ಅವುಗಳನ್ನು ಕುರಿತಂತೆಯು ಅನೇಕ ಒಗಟುಗಳನ್ನು ಕಟ್ಟಿದ್ದಾರೆ.

ಒಂದೆ ಗಿಡಕೆ ಒಂದೇ ಬೆಳೆ
ಇದೇ ನನ್ನ ಜೀವಕಳೆ
ಮಡಿಲಲ್ಲಿವೆ ನೂರಾರು ಗಿಳಿ
ಕೊಕ್ಕು ಮಾತ್ರ ಒಂದೇ ತಿಳಿ
ನನ್ನ ಹುಟ್ಟು ಒಂದೇ ಸಲ
ಒಮ್ಮೆ ಮಾತ್ರ ಬಿಡುವೆ ಫಲ
ಉಂಡ ಕೂಡಲೇ ತಿನ್ನುವರು
ಉಂಡುದಾ ಜೀರ್ಣಿಸಿಕೊಳ್ಳುವರು

ಉತ್ತರ : ಬಾಳೆಗಿಡ (ಹಣ್ಣು)

ಅಂಗಣ್ಣ ಮಂಗಣ್ಣ
ಅಂಗಿ ಬಿಚ್ಚಿ ನುಂಗಣ್ಣ *ಉತ್ತರ : ಬಾಳೆಹಣ್ಣು*

ಬಾಳೆಯ ಗಿಡ ಮತ್ತು ಬಾಳೆಯ ಹಣ್ಣನ್ನು ಈ ಒಗಟು ಸೂಚಿಸುತ್ತದೆ. ಬೇರೆ ಹಣ್ಣುಗಳ ರೀತಿಯಲ್ಲಿ ಮರದ ತುಂಬಾ ಹಣ್ಣುಗಳನ್ನು ಬಿಡುವುದಿಲ್ಲ. ಉದಾ : ಮಾವಿನ ಹಣ್ಣು, ಸೀಬೆಕಾಯಿ, ದಾಳಿಂಬೆ ಮುಂತಾದ ಹಣ್ಣುಗಳು ವರ್ಷಕ್ಕೆ ಒಂದೇ ಫಲವಾದರು ಒಂದು ಮರದಲ್ಲಿ ನೂರಾರು ರೆಂಬೆಕೊಂಬೆಗಳಲ್ಲಿ ಹಣ್ಣು ಬಿಡುತ್ತದೆ. ಆದರೆ ಬಾಳೆಗಿಡದ ವಿಶೇಷತೆ ಎಂದರೆ ಒಂದು ಗಿಡಕ್ಕೆ ಒಂದೇ ಗೊನೆ. ಆದರೆ ಆ ಒಂದು ಗೊನೆಯಲ್ಲಿ ನೂರಾರು ಹಣ್ಣುಗಳು ಇದನ್ನು ಗಿಳಿಗೆ ಹೋಲಿಸಿದ್ದಾರೆ. ಆದರೆ ಕೊಕ್ಕುಗಳು ಮಾತ್ರ ಒಂದೇ ಆಗಿರುತ್ತದೆ. ಒಂದು ಬಾಳೆಯ ಗಿಡ ಒಂದು ಬಾರಿ ಮಾತ್ರ ಹಣ್ಣು ಬಿಡುವುದು ಅನಂತರ ಆ ಗಿಡವನ್ನು ಎಷ್ಟು ದಿನ ಹಾಗೆ ಬಿಟ್ಟರ ಸಹ ಹಣ್ಣು ಬಿಡುವುದಿಲ್ಲ. ಆದ್ದರಿಂದ ಹಣ್ಣು ಬಿಟ್ಟ ಮೇಲೆ ಗಿಡವನ್ನು ಕತ್ತರಿಸಿ ಹಾಕುತ್ತಾರೆ. ಹಲ್ಲಿಲ್ಲದ ವಯಸ್ಸಾದವರು ಸಹ ಸುಲಭವಾಗಿ ತಿನ್ನುವಂತಹ ಹಣ್ಣು ಉಂಡ ಕೂಡಲೇ ತಿನ್ನುವರು ಈ ಹಣ್ಣನ್ನು ಏಕೆಂದರೆ ಜೀರ್ಣಕ್ರಿಯೆ ಸುಲಭವಾಗಿರುತ್ತದೆ.

ಮೈಯೆಲ್ಲ ಮುಳ್ಳಿನ ಹಾಗೆ
ನೂರಾರಿವೆ ತೊಳೆಯು ಒಳಗೆ
ಬೀಜವುಂಟು ತೊಳೆಯೊಳಗೆ

ಮೇಲೆ ಹಸುರು ಒಳಗೆ ಹಳದಿ
ಹಸಿದು ತಿನ್ನಲು ಒಳ್ಳೆಯದಂತೆ *ಉತ್ತರ : ಹಲಸಿನ ಹಣ್ಣು*

ಪ್ರತಿಯೊಂದು ಹಣ್ಣು, ತರಕಾರಿ, ಸೊಪ್ಪು, ಕಾಳು ಕಡ್ಡಿಗಳು ತನ್ನದೇ ಆದ ಸ್ವರೂಪವನ್ನು ಹೊಂದಿರುವ ಒಂದೊಂದು ಪದಾರ್ಥ ತನ್ನ ವಿಶೇಷತೆಯೊಂದಿಗೆ, ಗುಣ ಮಹತ್ವವನ್ನು ಪಡೆದುಕೊಂಡಿರುತ್ತದೆ. ಜನಪದರು ಅದನ್ನು ಗುರುತಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಒಗಟುಗಳನ್ನು ಕಟ್ಟಿಕೊಂಡಿರುತ್ತಾರೆ.

ಹಲಸಿನ ಹಣ್ಣಿನ ಸ್ವರೂಪ ಮುಳ್ಳಿನಿಂದ ಕೂಡಿರುತ್ತದೆ. ಜನಪದರು ಹೇಳುವ ಪರಿ ನೋಡಿ ಮೈಯೆಲ್ಲ ಮುಳ್ಳಿನ ಹಾಗೆ ಅದರೊಳಗೆ ನೂರಾರು ತೊಳೆಗಳು ಆ ತೊಳೆಗಳೊಳಗೆ ಬೀಜಗಳುಂಟು. ಮೇಲೆ ಹಸುರು ಮುಳ್ಳಿನ ಹೊದಿಕೆ ಇರುವ ಹಣ್ಣು ಒಳಗೆ ಹಳದಿಯ ಬಣ್ಣದಲ್ಲಿ ಇರುತ್ತದೆ. ಹಸಿದ ಹೊಟ್ಟೆಗೆ ತಿನ್ನಲು ಒಳ್ಳೆಯದಂತೆ. ಮಾವಿನ ಹಣ್ಣನ್ನು ಊಟದ ಅನಂತರ ತಿನ್ನುವುದರಿಂದ ಜೀರ್ಣಕ್ರಿಯೆ ಚೆನ್ನಾಗಿ ಆಗುತ್ತದೆ ಎಂಬುದು ಅವರ ಈ ಗಾದೆಯ ಉದ್ದೇಶವಾಗಿರುತ್ತದೆ. ಜನಪದರು ಇದಕ್ಕೆ ಪೂರಕವಾಗುವಂತೆ ಇನ್ನೊಂದು ಗಾದೆಯನ್ನು ಹೇಳುತ್ತಾರೆ. 'ಹಸಿದು ಹಲಸಿನ ಹಣ್ಣು ತಿನ್ನು, ಉಂಡು ಮಾವಿನ ಹಣ್ಣು ತಿನ್ನು' ಎಂದು ಏಕೆಂದು ಹಸಿದು ಹಲಸಿನ ಹಣ್ಣು ತಿಂದರೆ ಊಟವೇ ಬೇಡವಾಗಿ ಹೊಟ್ಟೆ ತುಂಬುತ್ತದೆ. **ಅವ್ವಮುಳ್ಳಿ, ಮಗಳು ತಂಟ್ರಿ, ಮೊಮ್ಮಗಳು ಬೋಳಿ - (ಹಲಸಿನಹಣ್ಣು).**

ಸೊಪ್ಪು, ತರಕಾರಿಗಳನ್ನು ಕುರಿತಂತೆಯು ಸಹ ಜನಪದರು ಸೊಗಸಾದ ಒಗಟುಗಳು ಹೇಳುತ್ತಾರೆ.

ಅಯ್ಯಯ್ಯ ಭಾವ
ಮೆಯ್ಯೆಲ್ಲ ಬೂದಿ
ತಲೆಯ ಮೇಲೆ ಚಪ್ಪರ
ಕೆಯ್ಯಲ್ಲಿ ಖರ್ಪರ *ಉತ್ತರ : ಪಡವಲ ಕಾಯಿ*

ಉದ್ದವಾಗಿ ಹಾವಿನಂತೆ ಇರುವ ಪಡವಲಕಾಯಿಯನ್ನು ಭಾವನೆಂದು ಕರೆದು, ಅದರ ಮೈ ಮೇಲಿಡುವ ಬೂದು ಬಣ್ಣದ ಗೆರೆಗಳನ್ನು ಕುರಿತು ಲೇವಡಿ ಮಾಡಿರುವ ಪರಿ ಸೊಗಸಾಗಿದೆ. ಅದರ ತಲೆಯ ಮೇಲೆ ಚಪ್ಪರವಿರುವುದೂ ಚಪ್ಪರದ ಅಥವಾ ಕೊಂಬೆಗಳ ತುದಿಗೆ ನೋಡುವ ಜನರ ಕಣ್ಣೆಸರು ಆಗದೆ ಇರಲೆಂದು ಇಡಲಾಗುವ ಹಳೆಯ ಮಡಕೆಗೆ ಸುಣ್ಣವನ್ನು ಬಳಿದು ಬೆದರು ಗೊಂಬೆ ಮಾಡಿ ಇಡುವುದೂ ವಾಡಿಕೆ. ಖರ್ಪರ ಎಂದರೆ ಮನುಷ್ಯನ ತಲೆ ಬುರುಡೆ ಪಡವಲ ಭಾವ ತಲೆಯೋಡನ್ನು ಕೈಯಲ್ಲಿ ಹಿಡಿದಿರುವುದಾದರೆ ಎಂದು ಹೇಳುವುದು ಹಾಸ್ಯಾಸ್ಪದ ದೃಶ್ಯ. ಅದು ನಮ್ಮ ಜನಪದ ಹಾಸ್ಯ ಪ್ರವೃತ್ತಿಗೆ ಹಾಗೂ ಬೇಸಾಯದ ವೃತ್ತಿಗೆ ಸುಂದರ ಸಾಕ್ಷಿ.

ಕಾಸಿನಷ್ಟು ಎಲೆ
ಮೊಳದುದ್ದ ಕಾಯಿ *ಉತ್ತರ : ನುಗ್ಗೆಕಾಯಿ*

ಇಲ್ಲಿ ನುಗ್ಗೆಕಾಯಿಯ ಎಲೆ ಮತ್ತು ಕಾಯಿ ಎರಡನ್ನು ಕುರಿತು ಹೇಳುತ್ತಾರೆ. ನುಗ್ಗೆ ಎಲೆ ಸಣ್ಣ ಆಕಾರವಾಗಿರುತ್ತದೆ. ಆದ್ದರಿಂದ ಅದನ್ನು ಕಾಸಿನಷ್ಟು ಎಲೆ ಎನ್ನುತ್ತಾರೆ. ಅಷ್ಟು ಸಣ್ಣ ಎಲೆಗಳಿಂದ ಕೂಡಿದ ನುಗ್ಗೆ ಮರದಲ್ಲಿ ಮೊಳದುದ್ದ ಕಾಯಿ. ಇದನ್ನು ಸೊಪ್ಪನ್ನು ಸಹ ಆಹಾರ ಪದಾರ್ಥವಾಗಿ ಉಪಯೋಗಿಸುತ್ತಾರೆ.

ಎಲಿ ಚಚ್ಚೆ ಪಚ್ಚೆ, ಕಾಯಿ ಮುಕ್ಕು ಮುರುಟು ಹೂವು ಹೊಚ್ಚ ಹೊನ್ನ
ಉತ್ತರ : ಹಾಗಲಕಾಯಿ

ನಾಲಗೆಗೆ ಕಹಿ ಹೊಟ್ಟೆಗೆ ಸಿಹಿಯಾದ ಹಾಗಲ ಕಾಯಿಯು ನೋಡಲು ಮುಕ್ಕೂ ಮುರುಟಾಗಿರುತ್ತದೆ. ಎಲೆಗಳು ಸಹ ಸಾಮಾನ್ಯವಾಗಿ ಎಲ್ಲಾ ಸಸಿಗಳ ಎಲೆಗಳು ಇರುವ ರೀತಿ ಇರದೆ ಚಚ್ಚೆ ಪಚ್ಚೆಯಾಗಿರುತ್ತದೆ. ಹೂ ಮಾತ್ರ ಚಿನ್ನದ ಬಣ್ಣದಿಂದ ಕೂಡಿರುತ್ತವೆ.

ಆಚೆ ಮಾರಕ್ಕೂ ಈಚೆ ಮರಕ್ಕೂ ಹಬ್ಬದೆ, ಪೇಟೆಗೆ ಹೋಗಿ ಸಾರ್‍ತದೆ
ಉತ್ತರ : ವೀಳ್ಯೆದೆಲೆ

ಬಳ್ಳಿಯಲ್ಲಿ ಬಿಡುವ ಈ ಎಲೆಯನ್ನು ಯಾವುದಾದರೂ ಮರದ ಆಶ್ರಯದಿಂದೊಂದಿಗೆ ಹಬ್ಬಿಸುತ್ತಾರೆ. ವೀಳ್ಯೆದೆಲೆಯು ಎಲ್ಲಾ ರೀತಿಯ ಸಮಾರಂಭಗಳಲ್ಲಿಯೂ ಮಹತ್ವದ ಪಾತ್ರವನ್ನು ಹೊಂದಿದೆ. ವೀಳ್ಯೆದೆಲೆ ಇಲ್ಲದೆ ಕೆಲವು ಸಮಾರಂಭಗಳು ನಡೆಯುವುದೇ ಇಲ್ಲ. ಸಂಪ್ರದಾಯ ಆಚರಣೆ ಒಳಗೆ ಈ ಎಲೆಯೂ ಸೇರಿ ಹೋಗಿದೆ. ಬೇಡಿಕೆಯುಳ್ಳ ಎಲೆಯು ಪೇಟೆಯಲ್ಲಿ ಮಾರಟಕ್ಕೆ ಹೋಗುತ್ತದೆ.

ಮನೆಗೆ ಬಂದ ಮುತ್ತೈದೆಯರಿಗೆ ಅಡಕೆಯೊಂದಿಗೆ ಸೇರಿಸಿ ಸೌಭಾಗ್ಯದ ಪ್ರತೀಕವಾಗಿ ನೀಡಿದರೆ, ಊಟದ ಅನಂತರದಲ್ಲಿ ಸಾಮಾನ್ಯವಾಗಿ ಎಲ್ಲರೂ ಎಲೆ, ಅಡಕೆ, ಸುಣ್ಣ, ಬೆರೆಸಿ ತಾಂಬೂಲವನ್ನು ಸೇವಿಸುತ್ತಾರೆ. ಒಟ್ಟಿನಲ್ಲಿ ವೀಳ್ಯೆದೆಲೆಯುವ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ.

ಎಲೆ ಎಲೇ ಬಣ್ಣ
ಏಲಕ್ಕಿ ಬಣ್ಣ
ಬೀಜಿಲ್ಲದ ಹಣ್ಣ
ತಂದು ಕೊಡಿ ಅಣ್ಣ *ಉತ್ತರ : ಗೆಣಸು*

ಗೆಣಸಿನ ಎಲೆಗಳು ಬಿಚ್ಚಿದ ಕೈಬೆರಳಿನ ಮಾಟದಲ್ಲಿ ಗಿಳಿಹಸುರು ಬಣ್ಣಕ್ಕೆ ಇರುತ್ತದೆ. ಅದರ ಕಾಯಿಯು ಆದ ಗೆಣಸಿನ ಗೆಡ್ಡೆಯ ಬಣ್ಣ ಏಲಕ್ಕಿ ಕಾಯಿಯಂಥ ನಸುಕಂದು ಬಿಳುಪು. ಗೆಣಸು ಗೆಣ್ಣುಗಳಿಂದ ಚಿಗುರೊಡೆದು ಬೆಳೆಯುವ ಒಳ್ಳೆ ಜಾತಿಯ ಗಿಡ. ಮರಗೆಣಸಿನ ಗಿಡ ಪುಟ್ಟ ಮರದಂತೆಯೂ ಬೆಳೆಯುತ್ತದೆ. ಮರಗೆಣಸಿನ ಮೈ ಬಣ್ಣ ನಸುಗೆಂಪು ಬಣ್ಣ. ಈ ಯಾವ ಬಗೆಯ ಗೆಣಸಿಗೂ ಅದರ ಒಳಗೆ ಬೀಜವಿರುವುದಿಲ್ಲ. ಗೆಣಸಿನ ಗೆಡ್ಡೆಯನ್ನು ಹಾಕಿದರೆ ಗಿಡ ಬರುವುದುಂಟು. ಆಲೂಗೆಡ್ಡೆಯಂತೆ ಗೆಣಸನ್ನು ಬೇಯಿಸಿ ಬೆಲ್ಲ ಅಥವಾ ಸಕ್ಕರೆ, ತುಪ್ಪ, ಏಲಕ್ಕಿ ಇತ್ಯಾದಿ ಪರಿಕರಗಳನ್ನು ಹಾಕಿ ತಿಂದರೆ ಚೆಂದ. ಇಂಥ ಅಪರೂಪದ ವಸ್ತುವನ್ನು ತಂದು ಕೊಡೆಂದು ಬಹುಶಃ ಜನಪದ ಕವಯಿತ್ರಿ ಒಗಟು ಒಡ್ಡಿರುವಂತಿದೆ.

ಹೀಗೆ ಕೃಷಿಯನ್ನು ಕುರಿತಾಗಿ ಜನಪದರು ತಮ್ಮ ಅನುಭವಗಳನ್ನೆಲ್ಲ ಹಾಡು, ಒಗಟು, ಗಾದೆ, ಕಥೆಗಳ ರೂಪದಲ್ಲಿ ಹೇಳುತ್ತಿದ್ದರು. ಈ ಒಗಟುಗಳು ಇಂದು ನಮಗೆ ಕೃಷಿಯ ನೆಲ - ಬೆಳೆಗಳನ್ನು ಅರಿಯಲು ಸಹಾಯ ಮಾಡುತ್ತವೆ. ಒಗಟುಗಳು ಕೇವಲ ಕೃಷಿಗೆ ಮಾತ್ರ ಸೀಮಿತವಾಗಿರದೆ ಬದುಕಿನ ನೋವು ನಲಿವು ಆಸರೆ ಬೇಸರಗಳಲ್ಲಿ ಅಷ್ಟೇ ಅಲ್ಲ. ತಾತ್ವಿಕ ಜಿಜ್ಞಾಸೆಯ ಪರಮ ಸಾಧನವಾಗಿಯೂ ಪ್ರಾಣಾಂತಿಕವಾದ ಸಂದರ್ಭಗಳಲ್ಲಿ ಬೌದ್ಧಿಕ ಪರೀಕ್ಷೆಗೆ ಒರೆಗಲ್ಲಾಗಿಯೂ ಬಳಸಲ್ಪಡುತ್ತಿದ್ದ ಸಂಗತಿ ಸರ್ವವಿದಿತವಾದದ್ದು.

ವಿ.ಎಲ್.ಕೆ.

ಕೃಷಿ ಸಂಬಂಧಿ ಕನ್ನಡ ಗಾದೆಗಳು ಕನ್ನಡ ಭಾಷೆಯ ಹಿರಿಮೆ ಗರಿಮೆಗಳನ್ನು ಎತ್ತಿ ಹಿಡಿಯುವಲ್ಲಿ, ಕನ್ನಡಿಗರ ಬದುಕಿನ ಅನುಭವವನ್ನು ಕಡಿಮೆ ಸಾರವತ್ತಾಗಿ ಸರಳವಾಗಿ ಹೇಳುವಲ್ಲಿ ಗಾದೆಗಳು ಪ್ರಮುಖ ಪಾತ್ರವಹಿಸುತ್ತವೆ. ಜನಪದ ಸಾಹಿತ್ಯ ಪ್ರಕಾರಗಳಲ್ಲೆಲ್ಲ ಗಾದೆಯೇ ಹೆಚ್ಚು ಪ್ರಚಲಿತದಲ್ಲಿರುವಂತಹದು. ಎಲ್ಲರ ಬಾಳಿನಲ್ಲೂ ಗಾದೆಗಳು ಬಂದು ಹೋಗುತ್ತವೆ. ಇತರೆ ಜನಪದ ಸಾಹಿತ್ಯ ಪ್ರಕಾರದ ಪರಿಚಯವಿಲ್ಲದವರು ಇರಬಹುದು. ಆದರೆ ಗಾದೆಗಳ ಪರಿಚಯ ಇಲ್ಲದವರು ಯಾರೂ ಇಲ್ಲ ಎಂದೇ ಹೇಳಬೇಕು. ಅಷ್ಟರಮಟ್ಟಿಗೆ ಗಾದೆ ತನ್ನ ಪ್ರಭುತ್ವವನ್ನು ಸಾಧಿಸಿಕೊಂಡಿದೆ. ಕಾಲಮಾನಕ್ಕೆ ತಕ್ಕ ಹಾಗೆ ಹೊಸ ಹೊಸ ಗಾದೆಗಳು ಸೃಷ್ಟಿಗೊಳ್ಳುತ್ತಿವೆ. ಒಟ್ಟಾರೆ ಅನುಭವದ ಅಭಿವ್ಯಕ್ತಿಯೇ ಗಾದೆ.

ಕೃಷಿ ಬಗೆಗಿನ ಆಗು ಹೋಗುಗಳನ್ನು, ರೀತಿನೀತಿಗಳು, ನಂಬಿಕೆಗಳು, ಆಚರಣೆಗಳು ಕಷ್ಟ - ಕೋಟಲೆಗಳು, ಆಸೆ - ಆದರ್ಶಗಳು ಒಟ್ಟಾರೆ ಕೃಷಿ ಬದುಕಿನ ಇತಿಹಾಸವೇ ಗಾದೆಗಳಲ್ಲಿ ಅಡಗಿದೆ ಎಂದರೆ ತಪ್ಪಾಗಲಾರದು. ಒಕ್ಕಲಿಗನ ಬವಣೆ, ಬೆಳೆಗಳ ನಾಶ, ಹಳ್ಳಿಯ ಸೊಗಡು, ಜಾನುವಾರುಗಳೊಂದಿಗಿನ ಸಹಚರ್ಯ, ಕೃಷಿ ಉಪಕರಣಗಳ ಬಗೆಗಿನ ನೈಪುಣ್ಯ ಕೃಷಿಕನ ಇಡೀ ಬದುಕಿನ ಅನುಭವಗಳನ್ನು ಕೃಷಿ ಗಾದೆಗಳು ನೀಡುತ್ತವೆ.

ಮಳೆಗೆ ಸಂಬಂಧಿಸಿದ ಗಾದೆಗಳಲ್ಲಿ ಯಾವ ಕಾಲದಲ್ಲಿ ಯಾವ ಬೆಳೆಗಳನ್ನು ಬೆಳೆಯಬೇಕು. ಆ ಬೆಳೆಯ ವಿಶೇಷತೆ, ಬೆಳೆಗೆ ಅನುಗುಣವಾಗಿ ಬೀಳುವ ಮಳೆಯ ಗುಣಾವಗುಣಗಳು ಅಭಿವ್ಯಕ್ತಗೊಂಡಿವೆ. ಮುಂಗಾರು ಹಾಗೂ ಹಿಂಗಾರು ಮಳೆಗಳು ಕಾಲಕ್ರಮದಲ್ಲಿ ಬೀಳುವಂಥವು. ಕೃಷಿ ಪ್ರಧಾನವಾದ ನಮ್ಮ ನಾಡು ಹಳ್ಳಿಗಳಿಂದ ನಿರ್ಮಿತವಾದುದು. ಹಳ್ಳಿಯ ಜನರು ಮಳೆಯಿಂದಲೆ ಜೀವನ ನಡೆಸುವರು. ಮಳೆ - ಬೆಳೆ ಇವೆರಡಕ್ಕೂ ನಿಕಟ ಸಂಬಂಧವಿರುವುದರಿಂದ ಮಳೆಯಿಲ್ಲದೆ ಬೆಳೆಯಿಲ್ಲ. ಹಾಗಾಗಿ ಮಳೆಯನ್ನೇ ನಂಬಿ ಕೃಷಿಕನ ಬದುಕು ಸಾಗುವಂತಹದು. ಅಂತಹ ಗಾದೆಗಳಲ್ಲಿ ಕೆಲವು ಹೀಗಿವೆ.

ಭರಣಿ ಮಳೆ ಬಿದ್ದರೆ ಧರಣಿ ತುಂಬೀತು
ರೋಣಿ (ರೋಹಿಣಿ) ಮಳೆಯಲ್ಲಿ ಬಿತ್ತಿದರೆ ಓಣೆಲ್ಲ ಜ್ವಾಳ
ಆದ್ರಿ ಮಳೆಯಲ್ಲಿ ಹಚ್ಚಿದರೆ ಆರು ಕಾಯಿ ಹೆಚ್ಚು
ಆಶ್ಲೇಷಾ ಮಳೆ ನಿಶ್ಲೇಷ ಕೊಳೆ
ಅಸ್ಲೆ ಮಳೆ ಬಂದರೆ ಭೂಮೆಲ್ಲ ಹಚ್ಚಗೆ
ಬಂದರೆ ಮಗೆ, ಹೋದರೆ ಹೊಗೆ
ಹುಬ್ಬೆ ಮಳೆಗೆ ಗುಬ್ಬಿ ತಲೆಯೂ ನೆನೆಯದು.
ಹುಬ್ಬೆ ಮಳಲಿ ಬಿತ್ತಿದರೆ ಹುಲ್ಲು ಇಲ್ಲ ಕಾಳೂ ಇಲ್ಲ
ಹುಬ್ಬೆ ಮಳೆ ಉಬ್ಬುಬ್ಬಿ ಬಂದ್ರೆ ಗುಬ್ಬಿ ಪುಕ್ಕಾನು ನೆನೆಯೆಲ್ಲ
ಹುಬ್ಬೆ ಮಳೆ ಅಬ್ಬೆ ಹಾಲು
ಹುಬ್ಬೆ ಮಳೆ ಹುಯ್ದರೆ ಉಬ್ಬುಬ್ಕೊಂಡು ಹರೀತದೆ
ಹುಬ್ಬೆ ಮಳೆ ಹೂದ್ರೆ ಉಬ್ಬುಬ್ಬಲಾಗಿ ಹೋಗ್ತದೆ
ಹುಬ್ಬೆ ಮಳೆ ಹೂದು ಒಬ್ಬೇಲಿರೊ ಮುಳ್ಳೆಲ್ಲಾ ಹೊತ್ಕೊಂಡೊಯ್ತು
ಉತ್ತರೆ ಮಳೆಯಾದರೆ ಹಿರೇ ಸೊಸಿ ನಡೆದ್ಹಂತೆ
ಉತ್ತರೆ ಮಳೆ ಉತ್ತರಿಸ್ನಿಲ್ಲ
ಉತ್ತರೆ ಗಮ್ಮಕ್ಕ ಎತ್ತು ಮಡಬಿತ್ತು
ಉತ್ತರೆ ಮಳೆ ಬಂದರೆ ಬಿತ್ತಿದ್ದೆಲ್ಲ ಫಲ
ಉತ್ತರೆ ಮಳೆ ಹೂದ್ರೆ ಕೈ ತುಂಬ ಬೆಳೆ
ಉತ್ರ ಮಳೆ ಬಂದ್ರೆ ಉತ್ತೆತ್ತು ಎಕ್ಕೆ ದೋಣೇಲಿ ನೀರು ಕುಡೀತದೆ
ಉತ್ತರೆ ಮಳೆ ಬಿಸಿಲಿಗೆ ಎತ್ತೆತ್ತು ನೀರಿಗೆ ಬೀಳ್ತದೆ
ಉತ್ತರೆ ಬರದಿದ್ರೆ ಹೆತ್ತಮ್ಮ ತೊರೆದ್ಹಂಗೆ
ಉತ್ತರೆ ಮಳೇಲಿ ಎತ್ತೆತ್ತು ನೀರಿಗ್ಬಿತ್ತು
ಉತ್ತರೆ ಮಳೆ ಬಂದ್ರೆ ಹತ್ರಂತೆ ನಾವು
ಉತ್ತರಿ ನೋಡ್ಕಂಡ್ ಬಿತ್ತಿ ಇಲ್ಲಾಂದ್ರೆ ನೀವ್ ಸತ್ರಿ
ಹಸ್ತಿದ ಮಳೇಲಿ ಆರಂಭ ಬೇಡ ಚಿತ್ತೆ ಮಳೇಲಿ ಹೋರಾಟಬೇಡ
ಹಸ್ತದ ಮಳೆ ಬೀಳದಿದ್ದರೆ ಹೆತ್ತ ತಾಯಿ ಹಿಟ್ಟುಕೊಡಲ್ಲ
ಚಿತ್ತೆ ಮಳೆ ಹೇತನೆಂದರೂ ಬಿಡದು
ಸ್ವಾತಿ ಮಳೆಯಾಯಿತೆಂದರೆ ಯಾತರ ಮಳೆ
ಸ್ವಾತಿ ಮಳೆ ಮುತ್ತಿನ ಬೆಳೆ

ಕೃಷಿ ಜೀವನದಲ್ಲಿ ಮಳೆಯೊಂದಿಗಿನ ಸ್ಪಂದನೆಯನ್ನು ಜನಪದರು (ಗಾದೆಗಳು) ಬಹುವಿಸ್ತಾರವಾಗಿ ತಮ್ಮದೇ ಅನುಭವದಲ್ಲಿ ಅಭಿವ್ಯಕ್ತಿಸಿದ್ದಾರೆ. ಆ ಅಭಿವ್ಯಕ್ತಿಯ ಹಿಂದಿರುವ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಸತ್ಯಗಳು ತೆರೆದುಕೊಳ್ಳುತ್ತವೆ. ಸಕಾಲಕ್ಕೆ ಬಿತ್ತನೆ ಮಾಡಿ ಬೆಳೆ ತೆಗೆಯುವ ಕೃಷಿಕನಿಗೆ ಮಳೆ ಸಕಾಲಕ್ಕೆ ಬಾರದಿದ್ದಾಗ ಆಗುವ ತಳಮಳ, ಮುಂದಿನ ದಿನಗಳ ಚಿಂತನೆಗಳನ್ನು ಈ ಗಾದೆಗಳು ನಮಗೆ ತೆರೆದಿಡುತ್ತವೆ. ಕೃಷಿ ಜೀವನ ಎಷ್ಟು ತ್ರಾಸದಾಯಕ ಎಂಬ ನೈಜ ಸತ್ಯಗಳು ಈ ಗಾದೆಗಳ ಮೂಲಕ ಮನದಟ್ಟಾಗುತ್ತವೆ.

ಮಳೆ ಕೃಷಿ ಬದುಕಿಗೆ ಎಷ್ಟರಮಟ್ಟಿಗೆ ಉಪಯುಕ್ತವಾದುದು ಎಂಬ ಬಗ್ಗೆ ಜನಪದರು ಕಟ್ಟಿಕೊಡುವ ಗಾದೆಗಳು ಸಾರಿ ಹೇಳುತ್ತವೆ.

ಮಳೆ ನೀರು ತಾಯಿಹಾಲು, ಕಟ್ಟು ನೀರು ಹುಯ್ ಹಾಲು
ಮಳೆಯಾದರೆ ಕೇಡಲ್ಲ, ಮಗನುಂಡರೆ ಕೇಡಲ್ಲ
ಮಳೆ ಇಲ್ಲದ ಪೈರು, ಮಾತೆ ಇಲ್ಲದ ಕೂಸು
ಉತ್ತು ಬಿತ್ತಿದ ಬತ್ತನಾದ್ರೂ ಮಳೇಲೆ ಬೆಳೆಯೋದು

ಎಂಬುದಾಗಿ ಮಳೆಯ ಅನಿವಾರ್ಯತೆಯನ್ನು ಬಿಂಬಿಸುವ ಗಾದೆಗಳು, ಮಳೆ ಹೆತ್ತ ತಾಯಿಯಷ್ಟೇ ಮೌಲ್ಯಳು ಎಂಬ ವಿಚಾರವನ್ನು ಮನದಟ್ಟು ಮಾಡುತ್ತವೆ.

ಸುರಿ ಮಳೆ ಅರಗಳಿಗೆ, ಸೋನೆ ಮಳೆ ದಿನವೆಲ್ಲಾ
ಸಂಜೆಗೆ ಬಂದ ಮಳೆ, ಸಂಜೆಗೆ ಬಂದ ನೆಂಟ
ಸೋನೆ ಮಳೆ ಆನೆ ಬಲ
ಮಳೆಗಾಲದ ಬಿಸಿಲನ್ನು ನಗೆಗಾರನ ಮಾತನ್ನು ನಂಬಬಾರ್ದು
ಜಿಟಿ ಜಿಟಿ ಮಳೆ, ಲೊಟಗುಟ್ಬೊ ಹೆಂಡ್ತಿ
ಗುಡುಗು ಮಳೇನ ಕೆಡುವ್ಪು ಸಿಡಿಲು ಮರನ ಕೆಡುವ್ಪು
ಗುಡುಗುಡು ಅಂತ ಬಂದ ಮಳೆ ಗುಟುಕಾಯಿಸ್ತಾ ಹೊಯ್ತು

ಅಂಬಾರೀಲಿ ಕೂತ್ರೂ ಮುಂಗಾರು ಬಿಡದು

ಆಶ್ವೀಜದಲ್ಲಿ ಹೊನ್ನು ಕರಗೊ ಬಿಸಿಲು ಮಣ್ಣುಕರಗೋ ಮಳೆ

ಮಳೆಗೆ ತಡೆಯದ ಕೊಡೆ ಸಿಡಿಲಿಗೆ ತಡೆದೀತೆ

ಎಂಬಂಥ ಗಾದೆಗಳು ಮಳೆ ಹೇಗೆಲ್ಲ ಬೀಳುತ್ತದೆ, ಯಾವ ಗಳಿಗೆಯಲ್ಲಿ ಮಳೆ ಬಂದರೆ ಚೆನ್ನ, ಎಂಬೆಲ್ಲ ಚಿತ್ರಣವನ್ನು ಧ್ವನಿಸುತವೆ. ಮಳೆಯ ಆಗು-ಹೋಗುಗಳನ್ನು ಮಳೆ ಬೀಳುವ ಪರಿಯನ್ನು ಸಚಿತ್ರವಾಗಿ ಕೊಟ್ಟಿಕೊಡುತ್ತವೆ.

ಮಳೆ ಬಂದರೆ ಬೆಳೆ ಎಂಬ ಸತ್ಯ ನಿಜವಾಗಿರುವುದರಿಂದ ಈ ಎರಡನ್ನೂ ಆಶ್ರಯಿಸಿ ಬೆಳೆ ಮಾಡುವ ಒಕ್ಕಲಿಗ ಹಾಗೂ ಬೇಸಾಯದ ಬಗೆಗೆ ಇರುವ ಗಾದೆಗಳು ಏನನ್ನು ಹೇಳುತ್ತವೆ ನೋಡೋಣ.

ಒಕ್ಕಲಿದ್ರೆ ಊರು, ಮಕ್ಕಳಿದ್ರೆ ಮನೆ, ಅಕ್ಕರಿದ್ರೆ ತವರು

ಒಕ್ಕಲು ಪೇತಲಾದ್ರೆ ಹೊಲ ಪೇತಲಾಗ್ತದೆ

ಒಕ್ಕಲು ಮಗನಿಗೆ ಬಡತನ ಉಂಟೆ ಕರ್ಕಿ ಪತ್ರೆ ಒಣಗೋದುಂಟೆ

ಒಕ್ಕಲಗಿತ್ತಿಗೆ ಮಡಿ ಇಲ್ಲ ಹುಳ್ಳಿ ಹೊಲಕ್ಕೆ ಗೊಬ್ಬರವಿಲ್ಲ

ಒಕ್ಕಲ್ಗ ಸದಾ ಚಿಂತ್ಗ

ಒಕ್ಕಲ್ಗ ಕೂತು ಕೆಟ್ಟ, ದೊಂಬ್ರ ಅಗ್ದು ಕೆಟ್ಟ

ಉತ್ತು ಬಂದ ಒಕ್ಕಲಿಗನ ಕೆಣಕಬೇಡ

ಉಪ್ಪೆಸ್ರು ಉಂಡ ರೈತ ಅಪ್ಪೆಸ್ರು ಉಳಿಸ್ದ

ಕಂಬಳಿ ಹೊದ್ದ ರೈತ ಅಂಬಲೀನಾ ಕುಡೀಲಾರಾ

ಒಕ್ಕಲಿಗನ ಓದು ಹಾರುವವ ಆರಂಭ

ಒಕ್ಕಲ ಮನೆ ಸುಟ್ಹೋದ್ಮೆಲೆ ಕಕ್ಕುಲತೆ ಪಟ್ಟು ಪ್ರಯೋಜನ ಏನು?

ಒಕ್ಕಲಿಗನ ನಂಟು ಒಲೆ ಮೇಲಿನ ಕಂಟು

ಹೋದವ್ರಿಗೆಲ್ಲಾ ಹೊಟ್ಟೆ ತುಂಬ ಉಂಟು

ಒಕ್ಕಲಿಗ ಉಬ್ಬಿದರೆ ಇಬ್ಬರು ತಬ್ಬಕ್ಕಾಗೊಲ್ಲ

ಒಕ್ಕಲಿಗ ದುಡಿಯೋದು ದಂಡ್ಕೆ ಹೊಲೆಯ ದುಡಿಯೋದು ಹೆಂಡ್ಕೆ

ಒಕ್ಕಲಿಗ ಮಡ್ಡೊ ಮರ ಮಡ್ಡೊ

ಒಕ್ಕಲಿಗನ ಓಡಾಟ ನಾಯಿ ಓಡಾಟ

ಒಕ್ಕಲಿಗನ ನಂಟು ಬಡವ ನೀ ಏಟು

ಒಕ್ಕಲಿಗನ ಸಂಗ ಉಪ್ಪಿನಕಾಯಿ ಭಂಗ

ಒಕ್ಕಲಿಗನ ಸಂಪತ್ತು ಹಾರುವನ ಇಕ್ಮತ್ತು

ಒಕ್ಕಲಿಗನಿಗೆ ಕಣ ಇಂಬು ಹಾರುವವನಿಗೆ ಹಾಳೆ ಇಂಬು

ಆಳುದ್ದದ ರೈತನ್ಗೆ ಕಾಳ್ಮುದ್ದೆ ಊಟ

ಅಂಗ ಮಂಗಿ ಕೈಲಿ ಬಿತ್ತಕ್ಕೆ ಬೀಜ ಕೊಟ್ರೆ ಬೆಳೆ ಹಾಳಾಯ್ತಂತೆ

ಬೇಸಾಯ ನೀ ಸಾಯ

ಅಂಗೈ ಅಗ್ಲ ಹೊಲ ಮಾಡುದ್ರೆ ಮುಂಗೈ ತುಂಬಾ ಬೆಳೆ

ಅಗಲವಾಗಿ ಬಿತ್ತಿದ್ರೆ ಅಗಲವಾಗಿ ಬೆಳೆ

ಮೇಗಲ ಮೋಡ ನೋಡಿ ಸೇದೊ ಬಾವಿಗೆ ಉಚ್ಚೆ ಉಯ್ದಂಗೆ

ಅತ್ತೆ ಮನೇಗ ಅಳಿಯ ಬಂದು ಉತ್ತು ಉತ್ತು ಸುಸ್ತಾದ

ಒತ್ತಿನಾರಂಭ ಹೊಲದಲ್ಲಿ ನೋಡು ತೆಳ್ಳಿನಾರಂಭ ಕಣದಲ್ಲಿ ನೋಡು

ಉಂಡ್ಹೋಗು ಮೂಳ ಅಂದ್ರೆ

ಯಾವ ಹೊಲ್ದ ಜ್ವಾಳ ಅಂದ್ನಂತೆ

ಇದೊಂದು ವಿಶಿಷ್ಟ ಅರ್ಥವನ್ನೊಳಗೊಂಡಿರುವ ಗಾದೆ.

ಉಂಡ್ಹೋಗೊ ಮೂಳ ಅಂದ್ರೆ ಯಾವ ಹೊಲ್ದ ಜೋಳ ಅದ್ನಂತೆ ಈ ಗಾದೆ ನಿರ್ದಿಷ್ಟ ಪ್ರದೇಶದಲ್ಲಿ ಜನಪ್ರಿಯವಾದ ಮುಖ್ಯ ಆಹಾರವನ್ನು ಪ್ರತಿನಿಧಿಸುತ್ತದೆ. ಅವನು ಯಾವ ಗದ್ದೆಯ ಬತ್ತ ಎಂದಾಗಲಿ, ಯಾವ ಹೊಲದ ರಾಗಿ ಎಂದಾಗಲಿ ಕೇಳದೆ ಯಾವ ಹೊಲ್ದ ಜೋಳ ಎಂದು ಕೇಳುತ್ತಿರುವುದು ಅಲ್ಲಿಯ ಪ್ರಮುಖ ಆಹಾರವೇ ಅದು ಎಂಬುದನ್ನು ನಿರ್ದೇಶಿಸುತ್ತದೆ. ಇದು ಗಾದೆ ಹುಟ್ಟಿರುವ ಪ್ರದೇಶ, ಅಲ್ಲಿಯ ಮುಖ್ಯ ಬೆಳೆ ಮತ್ತು ಅಲ್ಲಿಯ ನೀರಾವರಿಯ ಕೊರತೆ ಇತ್ಯಾದಿ ವಿಷಯಗಳನ್ನು ಮೇಲೆ ಬೆಳಕನ್ನು ಚೆಲ್ಲುತ್ತದೆ. ಒಂದೇ ಪ್ರದೇಶದಲ್ಲಿ ಕೂಡ ಬೇರೆ ಬೇರೆ ಹೊಲದಲ್ಲಿ ಬೆಳೆಯುವ ಜೋಳದ ರುಚಿ ವ್ಯತ್ಯಾಸವಾಗುವುದರಿಂದ ಯಾವ ಹೊಲದ ಜೋಳ ಎಂದು ಕೇಳಿರಬೇಕೆನಿಸುತ್ತದೆ.

ರೈತ ದುಡಿದು ಸೋತರೆ ಹೊಲ ಬೆಳೆದು ಸೋತಿತು

ಉತ್ತು ಬಿತ್ತೋನೊಬ್ಬ ಹೊರೆ ಹೊತ್ಕಂಡ್ಹೋಗೋನು ಇನ್ನೊಬ್ಬ

ಉತ್ತ ಹೊಲದಲ್ಲಿ ಗರಿಕೆ ಇದ್ದಂಗೆ

ಉತ್ತ ಮ್ಯಾಲಲ್ವ ಬಿತ್ತೊಯೋಚ್ನೆ

ಉತ್ತ ಹೊಲ ತುಳೀತಿಯೋ ಕೊಟ್ಟ ಮನೇಲಿ ಬಾಳ್ತೀಯೋ

ಉತ್ತಮ ಬೇಸಾಯ ಮಧ್ಯಮ ವ್ಯಾಪಾರ ಕನಿಷ್ಠ ಚಾಕರಿ

ಉತ್ತಲ್ಲದ ಮಣ್ಣಲ್ಲ ಹೆತ್ತಲ್ಲದ ತಾಯಲ್ಲ

ಉತ್ತವರ ಗೋಳು ಬಿತ್ತವರ ಹುಯ್ಕೊಂಡಂಗೆ

ಉತ್ತಿ ಬಾಳೋನ ಬದ್ಕು ಎತ್ಲೂ ಲೇಸು

ಉತ್ತಿರೋದು ಎರೆ ಹೊಲ ಬಿತ್ತಿರೋದು ಕಾಗ್ಮಾರಿ ಜೋಳ

ಬಿದ್ದು ಬಂದ ಮಗ ತೆವಳಿಕೊಂಡು ಬಂದ್ರೆ ಹೆತ್ತಾಯಿ ಹೊಟ್ಟೆ ಪುಣ್ಯ

ಗದ್ದೆ ಉತ್ರೆ ಮುದ್ದೆ

ಉತ್ತುತ್ತಿ ದಣಿದ್ರೆ ಉತ್ತುತ್ತೆ ಕಾಣ್ತದೆ

ನಾಟಿ ಹಾಕೂವಾಗ ಇಲ್ದಮಂದಿ

ಕುಯಿಲಡಾಲ್ಕೆ ಮನೇಲಿ ತುಂಬ್ಕಂಡ್ರು

ಆಳು ಉತ್ರೆ ಹಾಳಾಗೋಗಂಟ

ಕೆಸರಗದ್ದೆ ಮೊಸರು ಬಾಯಿ

ಗದ್ದೇಲಿ ಗುದ್ಯಾಡಿ ಮುದ್ದೆ ಉಣ್ಣು

ಒಪ್ಪಾಗ್ ದುಡಿದು ತುಪ್ಪಾನ್ನ ತಿನ್ನು

ಆದ್ರೆ ಹೋದ್ರೆ ಹತ್ತಿ ಬೆಳೆದ್ರೆ ಅಪ್ಪಾ ನಂಗೊಂದ್ ಸಾಲೆ ಅಂದುದ್ಕೆ ಮಂಡೀಗ್ ಹಾಕ್ಕೊಂಡ ಹರಿದೀಯಾ ಚಡ್ಡಿ ಅಂದ್ನಂತೆ

ನಾಲೆ ಹೊತ್ಗೆ ಅಮರ್ಕೊತು ರಣಕಾಟಿತಿ

ಬೆಟ್ಟದ ಗಾತ್ರದ ಕಷ್ಟ, ಬೆಟ್ಟು ಗಾತ್ರದ ಬೆಳೆ

ನಾಟಿ ಹೊತ್ಗೆ ಬಿಸ್ಲು ಮೊಟ್ಮಾಗ್ ಹೊಡೀತು
ಸೋನೆ ಹಂಗೆ ಹಿಮ ಸೊನೆ ಅವರೆಕಾಯಿ
ಕೈ ಕೆಸರಾದರೆ ಬಾಯಿ ಮೊಸರು
ತೋಟ ಮಾಡ್ದೋನ್ಗೆ ಕೋಟಲೆ ಇಲ್ಲ
ತೋಟ ಕಾಯೋನ್ಗೆ ಬಾಳೆಕಾಯಿ ತಿಂದದ್ದೆ ಲಾಭ
ತೋಟ ಮೂರು ಮೊಳ ಕಾಯಿ ಆರು ಮೊಳ
ತೋಟ ಸಿಂಗಾರ ಒಳಗೆ ಗೋಣಿಸೊಪ್ಪು
ತೋಟಕ್ಹೋಗಿ ಬೊಕ್ಕೆಂದ ಮನೇಗ್ಬಂದು ಇಕ್ಕೆಂದ
ಬೇಸಾಯ ಬಲ್ಲೋನು ಬೇಗ ತಾಸಾಯ
ಬೇಸಾಯ ಮಾಡೋವ್ನ ಆಯಸ್ಸು ಹೆಚ್ಚು
ಬೇಸಾಯನವ್ನಾದ್ರು ಜನ ಸಾಯಬೇಕು
ಯಾತ ತಲೆದೂಗಿ ಪಾತಳದ ನೀರು ಬಂತು
ಯಾತ ನೇತಾಡಿದ್ರೆ ಪಾತಾಳದ ನೀರ ಎತ್ತ ಬಲ್ದೆ ?
ಹತ್ತಿ ಬಿತ್ತಿ ಬಟ್ಟೆ ಕಾಣಲಿಲ್ಲ ಜೋಳ ಬಿತ್ತಿ ಬೋನ ಕಾಣಲಿಲ್ಲ
ಹತ್ತಿ ಬಿತ್ತಿದ ಒಕ್ಕಲಿಗರಿಲ್ಲ
ಹತ್ತಿಗೂ ಮುತ್ತಿಗೂ ಹಾಕಿದ ಹಣ ಯಾತಕ್ಕೂ ಬರ್ದು
ಹತ್ತಿಯಿಟ್ಟರೆ ಹೊನ್ನು ಎಳ್ಳಿಟ್ಟರೆ ಮಣ್ಣು
ಹತ್ತಿಯಲ್ಲಿ ಎತ್ತು ತಾ, ದೂರದಲ್ಲಿ ನಾರಿ ತಾ
ಗೇಯದೆ ತಿನ್ನಬಾರದು, ಉಣ್ಣದೇ ಮಲಗಬಾರದು
ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಮರಕ್ಕೆ ಗುಣ
ಹೊಂಗೆ ನೆಳಲು ತಾಯಿ ಮಡಿಲು

ಮೇಲಿನ ಗಾದೆಗಳಲ್ಲಿ ಬೇಸಾಯಗಾರನ ಸ್ಥಿತಿಗತಿ, ಬೆಳೆಗಳ ಬಗೆಗಿನ ಕಾಳಜಿ, ಉತ್ತಿದ ಭೂಮಿಯ ಬಗೆಗೆ ಇರುವ ಆಳವಾದ ಅನುಭವ, ಬಿಸಿಲಿನ ಛಳಪು, ಎಷ್ಟೇ ದುಡಿದರೂ ಸಾಲದ ಮೇಲೆ ಸಾಲ ಮಾಡಿ ಬೇಸಾಯ ಮಾಡುವ ಕೃಷಿಕ. ಆದಾಯದ ಪರಿವೇ ಇಲ್ಲದೆ ದುಡಿದು ಅನ್ನ ಹಾಕುವ ಅನ್ನದಾತನ ಬದುಕು ತೀರ ಕಷ್ಟದಾಯಕ ಎಂಬ ವಾಸ್ತವ ಸತ್ಯಗಳನ್ನು ಇವು ಬಿಂಬಿಸುತ್ತವೆ. ಹತ್ತಿ ಬೆಳೆಯಿಂದಾಗುವ ಅನಾಹುತ, ರೈತನಾದವನು ಸುಮ್ಮನೆ ಕೂತು ಉಣ್ಣಬಾರದು ಎಂಬ ಎಚ್ಚರಿಕೆ, ಮಣ್ಣು ಹಾಕುವುದರಿಂದ ಮರ ಫಲವತ್ತತೆಯನ್ನು ಪಡೆಯುತ್ತದೆ ಎಂಬ ತಿಳಿವು, ಬೆಟ್ಟಗಾತ್ರದ ಕಷ್ಟವನ್ನು ಬೆಳೆ ಹೇಗೆ ನೀಗಿಸುತ್ತದೆ, ಗದ್ದೆ ಉಳುವುದರಿಂದ ಮಾತ್ರ ಹೊಟ್ಟೆ ತುಂಬುವುದು ಎಂಬ ಪ್ರಜ್ಞೆ. ಕಾಲ ಕಾಲಕ್ಕೆ ಉತ್ತು ಬಿತ್ತು ಬೆಳೆ, ತೆಗೆಯಬೇಕೆಂಬ ಕಾಳಜಿಯನ್ನು ನೂರಾರು ಗಾದೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಒಕ್ಕಲಿಗನ ಸಹವಾಸ, ಒಕ್ಕಲಿಗನ ಪರಿಸ್ಥಿತಿಯ ಆಳವಾದ ಅನುಭವವನ್ನು ಹತ್ತಾರು ಗಾದೆಗಳು ಬೇರೆ ಬೇರೆ ಆಯಾಮಗಳಲ್ಲಿ ತಟ್ಟುತ್ತದೆ. ಈ ಎಲ್ಲಾ ಗಾದೆಗಳ ಆಂತರ್ಯದ ಮರ್ಮವನ್ನು ಅರಿತಾದರೂ ಒಕ್ಕಲಿಗರಿಗೆ ಉತ್ತಮ ಮಟ್ಟದ ಸಹಕಾರ, ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಕ್ಕಿ ಉತ್ಸಾಹದಿಂದ ಬೆಳೆ ಬೆಳೆಯಲು ಪ್ರೋತ್ಸಾಹಿಸಬೇಕಾಗಿದೆ. ಆತನ ಲೆಕ್ಕಾಚಾರವನ್ನು ಸರಿದೂಗಿಸಿ ತನ್ನ ಸಂಸಾರದ ಹೊಣೆಯನ್ನು ನೀಗಿಸುವ ಧೈರ್ಯವನ್ನು ಆ ಭೂಮಿ ದೇವಿ ತನ್ನ ಮಗನಿಗೆ ಕರುಣಿಸುವಂತಾಗಲಿ.

ಕೃಷಿಕನ ಪರಿಸ್ಥಿತಿ ಹೇಗಿದೆ ಎಂಬುದನ್ನು ಹೇಳುವಂತಹ ಗಾದೆಗಳಲ್ಲಿ ಶ್ರಮಪಟ್ಟು ಬೆಳೆ ಬೆಳೆದರೂ ಆ ಬೆಳೆ ನಿರೀಕ್ಷಿಸಿದ ಆದಾಯವನ್ನು ತರದೆ ಸಾಲಕ್ಕೆ ಕೈಯೊಡ್ಡುವ ಪರಿಸ್ಥಿತಿ, ಸಕಾಲಕ್ಕೆ ಬಾರದ ಮಳೆ, ತನ್ನ ಕುಟುಂಬದ ಆಗು - ಹೋಗುಗಳಲ್ಲಿ ನಿರತನಾದವನು ಬೇಸತ್ತು ಪಡುವ ಪಾಡನ್ನು ಈ ಗಾದೆಗಳು ಚಿತ್ರಿಸುತ್ತವೆ.

ಬೇಸಾಯಗಾರರ ಬವಣೆ ಆಣೆಕಲ್ಲೇಟಿನ ಮಳೆ
ಈಸ್ಕೊಂಡ ಸಾಲ ತೀರ್ಸೋ ನನ್ನಪ್ಪಾಂದ್ರೆ
ನಿಮ್ಮೂರ ಮಳೆ ನಮ್ಮಕಡ್ಗೆ ಹರೀನಿಲ್ಲ ಅಂದಂಗೆ
ಕಳೆ ಕುಯ್ನಿಲ್ಲ ಕುಂತು ಉಣ್ತೀನಿ ಅಂದ್ನಂತೆ.
ಕೊಟ್ಟ ಸಾಲ ಕೇಳದೆ ಹೋಯಿತು, ಮಾಡಿದ ಆರಂಭ ನೋಡದೆ ಹೋಯಿತು
ಒಕ್ಕಲಿಗನ ಸಾಲ ಮಕ್ಕಳ ಮಕ್ಕಳ ತಲೇ ಮೇಲೆ
ಆಕಾಶರಾಯ ಕಣ್ಣಿಟ್ಟರೆ ಭೂತಾಯಿ ನಗ್ತಾಳೆ
ಆಕಾಸ್ತಗೆ ಮೋಡಿಲ್ಲ ಭೂಮ್ಯಾಗೆ ಪಸೆ ಇಲ್ಲ

ಧವಸ ಧಾನ್ಯಗಳ ಬಗ್ಗೆ ಹುಟ್ಟಿಕೊಂಡಿರುವ ಗಾದೆಗಳಲ್ಲಿ ಅವುಗಳ ಗುಣಗಳು, ಮಳೆ ಬಾರದಿದ್ದಾಗ ತಿನ್ನಲು ಆಹಾರವಿಲ್ಲದೆ ಪರಿತಪಿಸುವ ಬವಣೆ, ಬಿತ್ತಿದ ಬೆಳೆ ಮಳೆಯಿಲ್ಲದೆ ಒಣಗಿನಿಂತ ಪರಿಸ್ಥಿತಿಯನ್ನು ಏಕಕಾಲದಲ್ಲಿ ಬಯಸುವ ಮನಸ್ಸು ಒಂದನ್ನು ಪಡೆದರೆ ಮತ್ತೊಂದನ್ನು ತ್ಯಾಗ ಮಾಡಲು ಸಿದ್ಧರಿಲ್ಲದ ಜನರ ಮನಸ್ಸನ್ನು ಗಾದೆಗಳು ಹೇಳುತ್ತವೆ.

ಅಕ್ಕಿ ತಿಂದವನು ಹಕ್ಕಿ ಅಂಗೆ ರಾಗಿ ತಿಂದವ ನಿಯೋಗಿ ಅಂಗೆ
ಅಕ್ಕಿ ತಿನ್ನೋನು ಹೋದ್ರೆ ಬತ್ತ ತಿನ್ನೋವ ಬಂದ
ಅಕ್ಕೀನೇ ಮುಕ್ಕಿದೋಳು ಅವಲಕ್ಕೀನ ಬಿಟ್ಟಾಳೇ
ಅಕ್ಕಿ ಇದ್ರೆ ಊಟ ದಿಕ್ಕಿದ್ರೆ ಕೂಟ
ಕಾಳೇ ಜಳ್ಳಾದ್ರೆ ಬೆಳೆ ಹುಟ್ಟದ್ಯೇ
ಬತ್ತ ಕುಟ್ನಿಲ್ಲ, ಅಂಬಲಿ ಇಳುಕಲಿಲ್ಲ
ಅಕ್ಕಿ ಮೇಲಾಸೆ, ನೆಂಟರ ಮೇಲೆ ಪ್ರೀತಿ
ಇದ್ದಕ್ಕಿ ಇದ್ದಾಗಿರ್ಬೇಕು. ಮಲ್ಗೆಹೂನಂಗೆ ಅನ್ನ ಆಗಿರ್ಬೇಕು
ಬತ್ತ ಬಿತ್ತಿ ಗುಬ್ಬಚ್ಚಿ ಕಾವಲು ಹಾಕ್ದಂಗೆ
ಬತ್ತ ಕಣ್ಜಾದ್ಯೋ, ಬಳಗ ಕಣ್ಜಾದ್ಯೋ
ಬತ್ತ ಬೆಳೆಯೋ ಗದ್ದೇಲಿ ಮುತ್ತು ಬೆಳೆಯೊ ಮರ ಇದ್ರು ಕಡಿದಾಕು
ಬತ್ತ ಬಿತ್ತೋತ್ಗೆ ಬಿಸಿ ಅನ್ನ

ಬೇಸಾಯದಲ್ಲಿ ರೈತನೊಂದಿಗೆ ಭಾಗಿಯಾಗುವ ಜಾನುವಾರುಗಳ ಬಗ್ಗೆ ಹುಟ್ಟಿಕೊಂಡಿರುವ ಗಾದೆಗಳಲ್ಲಿ ದನಗಳ ಸ್ವಭಾವ, ಗುಣ ನಡತೆಯನ್ನು, ಅವುಗಳ ಉಪಯೋಗವನ್ನು ಕಾಣಬಹುದು. ಪ್ರಾಣಿಗಳಾದ್ರು ರೈತನ ಕೈಚಳಕಕ್ಕೆ ಎಚ್ಚರಗೊಳ್ಳುವ ದಾತಿ, ಎಳೆಯ ಎತ್ತಿಗೂ ವಯಸ್ಸಾದ ಎತ್ತಿಗೂ ಇರುವ ಹೋಲಿಕೆಯನ್ನು ಅದ್ಭುತವಾಗಿ ಗಾದೆಗಳಲ್ಲಿ ಕಾಣಬಹುದು.

ಅಂಬಾ ಅಂದ್ರೆ ಆಕಳಲ್ಲ, ಗೊಂಬಿ ತನ್ನ ಮಕ್ಳಲ್ಲ
ಅಂಬೆಗಾಲಿಕ್ಕೊ ಕಂದ ಚೆಂದ
ಅಂಬಾ ಅನ್ನೋ ಕರುಚೆಂದ
ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕಿದ್ರಂತೆ
ಎಮ್ಮೆನ ನೀರಾಗ ಮುಳುಗಿಸಿ ಯಾಪಾರ ಮಾಡ್ದಂಗೆ
ಎಮ್ಮೆ ಉಚ್ಚೆ ಇರುವೆಗೆ ಜಲ ಪ್ರಳಯ
ಎಮ್ಮೆಗೆ ಸುಮಾನ ಬಂದು ಬೇಲಿಗೆ ಉಜ್ತಂತೆ
ಎಮ್ಮೆ ಬೆಣ್ಣೆ ಎಮ್ಮೆ ಕಣ್ಗೆಟುಕ್ದು
ಎಮ್ಮೆ ಮೇಲೆ ಮಳೆ ಹುಯ್ದು ಹಾಗೆ
ಉತ್ಪಂದ ಹೋರಿನ ಕೆಣಕಬೇಡ
ಗಿಡ್ಡೆತ್ತಿನ ಜೋಡಿ ದೊಡ್ಡೆತ್ತಿ
ಬತ್ತ ತುಂಬಿದ ಗದ್ದೆನ ಕತ್ತೆ ಕಾಯಂತೆ
ಎಡಕ್ಕೆ ಎತ್ತಿಲ್ಲ. ಬಲಕ್ಕೆ ಬಾರ್ಕೊಲಿಲ್ಲ
ಎಡದೆತ್ತಿಗೆ ಹೊಡುದ್ರೆ ಬಲದೆತ್ತು ಎಚ್ಚರಾಗ್ತದೆ
ಎತ್ತು ಈತು ಅಂದ್ರೆ ಕೊಟ್ಗೆ ನಾಗಕಟ್ಟಿ ಅಂದ್ರಂತೆ
ಎತ್ತು ಹುಚ್ಚೆ ಹೊದಂಗೆ
ಎತ್ತು ಏರಿಗಳೆದರೆ ಕೋಣ ನೀರಿಗಳೀತಂತೆ
ಎತ್ತು ಒಳ್ಳೇದಾದ್ರೆ ಊರೆಲ್ಲಾ ಗಿರಾಕಿ
ಎತ್ತು ಎತ್ತ ಮೇಲೆ ತಿಳೀತು ಹೆಣ್ಣು ಹೆತ್ತ ಮೇಲೆ ತಿಳೀತು
ಎತ್ತು ಎಳಸಾದ್ರೆ ಮುದುಕ ಹೊಡೀಬೇಕು
ಎತ್ತು ಮುದಿಯಾದ್ರೆ ಹುಡುಗ ಹೊಡೀಬೇಕು
ಎತ್ತು ಎಳೆಯೊಕೆ ಮುಂಡೆ ನೊಗ ಎದ್ದೆದ್ದು ಕುಣೀತಂತೆ
ಎತ್ತು ಬಲ್ದೆ ಎಳನೀರಿನ ಸ್ವಾದವ
ಎತ್ತು ಒಳ್ಳೆದು ಪರಕುಸುಳಿ
ಎತ್ತು ನಡೀದಿದ್ರೆ ದಾರಿ ಉದ್ದ ಅಂದ್ನಂತೆ
ಎತ್ತು ನೆಗೆಯೋ ಮೊದಲು ಗೌಸು ನೆಗಿತಂತೆ
ಎತ್ತು ಬಲ್ದೆ ಎಣ್ಣೆ ನೀರು ಮಜ್ಜನ
ದನಕ್ಕೆ ಬೆದರಿ ಹುಲಿ ಬಾಯ್ಗೆ ಬಿದ್ರು
ದನದ ಮನಸ್ನೊ ದಾಯಾದಿ ಮನಸ್ನೊ
ದನದ ಮುಂದೆ ಹೋಗ್ಬೇಡ ಕತ್ತೆ ಹಿಂದೆ ಹೋಗ್ಬೇಡ
ದನವಿಲ್ಲದವನಿಗೆ ಹೊಸ ಹಂದಿಯಾಕೆ ?
ದನ ಮೇಯಿಸೋವ್ನಿಗಿ ಘನಯಾಕೆ ?
ದನ ತಿನ್ನೊನ್ಗೆ ಗೊಬ್ಬರದಾಣೆ

ಜನಪದ ಹೆಣ್ಣು ಮಗಳು ಹಾಲುಂಡ ತವರನ್ನು ಎಂದಿಗೂ ಮರೆಯಳು. ಬಾಲ್ಯದಿಂದಲೂ ಹಾಲು-ತುಪ್ಪವನ್ನು ಉಂಡು ಬೆಳೆದ ಮನೆಗೆ ಯಶಸ್ಸು ಸಿಗಲೆಂದು ಹಾರೈಸುವ ಜಾತಿ ಜನಪದರದು. ಆಕಳು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆಯ ಬಗೆಗೆ ಪವಿತ್ರಭಾವನೆ. ಹಾಲಿಗಿರುವ ಮಾನ್ಯತೆ, ಪೌಷ್ಟಿಕಾಂಶವನ್ನು ಎತ್ತಿಹಿಡಿಯುವ ಈ ಗಾದೆಗಳು ಸಹಕಾರಿಯಾಗಿದೆ. ಹೊಸದಾಗಿ ಗೃಹಪ್ರವೇಶಿಸುವಾಗ ಹಾಲು ಹುಕ್ಕಿಸಿ ಬರುವ ಜನರ ಮನೋ ಪ್ರವೃತ್ತಿಯ ಹಿಂದಿರುವ ಚಿತ್ರಣವನ್ನು ಗಾದೆಗಳು ಹೇಳುತ್ತವೆ.

ಹಾಲುಂಡ ಮನೆ ಹಾಲುಕ್ಕಿದಂಗೆ ಬಾಳಲಿ
ಹಾಲು ಕುಡಿದಷ್ಟು ರುಚಿ, ಮಾವು ಮಾಗಿದಷ್ಟು ರುಚಿ
ಹಾಲುಂಡ ಮನೆಗೆ ಹಗೆವ್ರಾದಂತೆ
ಹಾಲು ಕುಡಿದ ಮಕ್ಕಳೇ ದಕ್ಕೋಲ್ಲ, ವಿಷ ಕುಡಿದ ಮಕ್ಳು ದಕ್ಕುತ್ತವಾ?
ಹಾಲು ಮಾರಿದ್ದು ಹಾರಿಗೆ ನೀರು ಮಾರಿದ್ದು ನೀರಿಗೆ
ಬಾಯಲ್ಲಿ ಬೆಣ್ಣೆ ಕೈಯಲ್ಲಿ ದೊಣ್ಣೆ
ಹಾಲು ಕರೆಯಲು ಹೋದಾಗ ಎತ್ತು, ಉಳಲು ಹೋದಾಗ ದನ
ಅಂಕೆಯಲ್ಲಿರುವ ಹೆಣ್ಣು ಮಜ್ಜಿಗೆಯಲ್ಲಿರುವ ಬೆಣ್ಣೆ ಹಾಳಾಗುವುದಿಲ್ಲ
ಉಕ್ಕಿದ ಹಾಲು ಒಲೆ ಪಾಲು

ಹಾಲು ಅಮೃತಕ್ಕೆ ಸಮ. ಹಾಲಿನ ಮೇಲೆ ಪ್ರಮಾಣ ಮಾಡುವಷ್ಟು ಹಾಲ ಪವಿತ್ರವಾದುದು ಎಂಬ ಭಾವನೆ ಜನಪದರದು. ಹಾಲಿಗೆ ನೀರು ಹಾಕಿ ಬಾಳುವವರನ್ನು ಎಚ್ಚರಿಸುತ್ತಾ, ಮಜ್ಜಿಗೆಯಲ್ಲಿರುವ ಬೆಣ್ಣೆಯಂತೆ ಹೆಣ್ಣುಮಕ್ಕಳನ್ನು ಜೋಪಾನಗೊಳಿಸಿ ಎಂದು ಎಚ್ಚರಿಸಿದ್ದಾರೆ.

ಕೃಷಿಗೆ, ರೈತ ಬಳಸುವ ಕೃಷಿ ಉಪಕರಣಗಳು ಮುಖ್ಯ. ತಮಗೆ ಬೇಕಾದ ಆಕಾರದಲ್ಲಿ ಕೃಷಿ ಉಪಕರಣಗಳನ್ನು ತಯಾರಿಸಿ ಬಳಸಿಕೊಳ್ಳುವಲ್ಲಿ ತನ್ನದೇ ಆದ ಜಾಣ್ಮೆಯನ್ನು ಮೆರೆದಿದ್ದಾನೆ. ಆದಿವಾಸಿಗಳ ಹಂತ ಹಂತದ ಆವಿಷ್ಕಾರಗಳಾಗಿ ಕೃಷಿ ಉಪಕರಣಗಳು ಬಳಕೆಬಂದವು. ಅವುಗಳ ಉಪಯುಕ್ತತೆ, ಪಾವಿತ್ರ್ಯತೆಯನ್ನು ಈ ಗಾದೆಗಳು ಅಭಿವ್ಯಕ್ತಿಸುತ್ತವೆ. ವ್ಯವಸಾಯದ ಪ್ರತಿ ಹಂತದಲ್ಲೂ ಈ ಉಪಕರಣಗಳು ರೈತನ ನೆರವಿಗೆ ಬರುತ್ತವೆ. ನೇಗಿಲು, ನೊಗ, ಗುದ್ದಲಿ, ಕುಡುಗೋಲು, ಹಾರೆ, ಪಿಕಾಸಿ ಹೀಗೆ ಹಲವು ನಾಮಗಳಲ್ಲಿ ಗುರುತಿಸುತ್ತಾರೆ. ಭೂಮಿಯನ್ನು ಉತ್ತು ಬಿತ್ತಿ ಫಸಲು ತೆಗೆಯಲು ಶ್ರಮವಹಿಸಿ ದುಡಿಯುವ ರೈತ ಕೃಷಿ ಉಪಕರಣಗಳಲ್ಲಿ ಮಕ್ಕಳಂತೆಯೇ ಜೋಪಾನ ಮಾಡುತ್ತಾನೆ. ಮೊಂಡು ಹಿಡಿದ ಗುದ್ದಲಿ, ಹಾರೆ, ಕುಡುಗೋಲುಗಳನ್ನು ಹರಿತಗೊಳಿಸಿ ಬಳಸಿಕೊಳ್ಳುವ ಪರಿಯನ್ನು ವ್ಯವಸಾಯದ ಪ್ರತಿ ಹಂತದಲ್ಲೂ ನೋಡಬಹುದು. ಬೆಳಗೆದ್ದು ನೇಗಿಲಿಗೆ ನಮಸ್ಕರಿಸುವ ಪರಿಪಾಠ ಕೃಷಿಕರದು.

ಗುದ್ದಲಿ ಹಿಡ್ಯೊಕ್ಕಿಂತ ಮದ್ದಳೆ ಬಾರ್ಸೋನು ಮೇಲು
ಗುದ್ದಲಿ ಹಿಡುದ್ರೆ ಮಣ್ಣು ಹಗುರ
ಮದ್ದಳೆ ಬಾರ್ಸೋನ ಮೈಹಗುರ
ಗುಳ ಒಳ್ಳೇದಾದ್ರೆ
ಮಾಳದಾಳ ಉಳಬಹ್ದು
ಗುಳ ಹಿಡಿದ್ಯೊ ಗಾಳ ಹಿಡಿದ್ಯೊ

ಗುದ್ದಾಟದ ಬದುಕಿಗಿಂತ
ಗುದ್ದಲಿ ಹಿಡಿದ ಬದುಕಲೇಸು
ನೊಗ ಹೊತ್ತೋನು ಜಗ ಆಳ್ತಾನೆ
ನೊಗ ಮುಟ್ಟಿದ ಮಗ ಬೇಗ್ನೆ ಬೆಳೀತಾನೆ
ಪಿಕಾಸಿ ಹಿಡ್ದೋನ್ಗೆ ಪಿಶಾಚೀನೂ ಹೆದರ್ತದೆ
ಪಿಕಾಸಿ ಹಿಡ್ದೋನ ಚೌಕಾಸಿ ಮಾಡ್ಬೇಡ
ಆರ್ ಕಟ್ದೋನ್ನ ಊರ ಮೆಚ್ತು

ಕನ್ನಡ ನಾಡು ಕೃಷಿ ಪ್ರಧಾನವಾದುದು. ರೈತ ದೇಶದ ಬೆನ್ನೆಲುಬು. ಆ ಕಾರಣಕ್ಕೆ ಸಾಕಷ್ಟು ಗಾದೆಗಳೆಲ್ಲಾ ಕೃಷಿಗೆ ಸಂಬಂಧಿಸಿದ ಅಂಶಗಳನ್ನು ಹೇಳುತ್ತವೆ. ಜನಪದ ವ್ಯವಸಾಯ ವಿಜ್ಞಾನವಾಗಿ ಗಾದೆಗಳು ಜೀವಂತ ದಾಖಲೆಗಳಾಗಿ ಉಳಿದುಕೊಂಡಿವೆ. ಇದನ್ನು ಅನುಸರಿಸಿ ಮುಂದೆ ಯುವ ಪೀಳಿಗೆ ವ್ಯವಸಾಯ ಮಾಡಲು ಎಷ್ಟರಮಟ್ಟಿಗೆ ಸಾಧ್ಯ ಎಂದು ಯೋಚಿಸಬೇಕಾಗಿದೆ. ಕಾರಣ ನೊಗ, ಕೂರಿಗೆ, ನಾಟಿ, ಕಳೆ ಕೀಳಲು ಬಳಕೆಯಾಗುತ್ತಿದ್ದ ಸ್ತ್ರೀಯರ ಸ್ಥಾನವನ್ನು ಆಧುನಿಕ ಯಂತ್ರೋಪಕರಣಗಳು ಅಲಂಕರಿಸಿವೆ. ಜಾನುವಾರುಗಳ ಗೊಬ್ಬರವನ್ನು ಸಾವಯವಗೊಬ್ಬರವಾಗಿ ಬಳಸುತ್ತಿದ್ದ ರೈತ ಇಂದು ರಾಸಾಯನಿಕ ಗೊಬ್ಬರಗಳತ್ತ ಆಕರ್ಷಿತನಾಗಿದ್ದಾನೆ. ಕ್ರಿಮಿನಾಶಕಗಳಿಂದ ಎರೆಹುಳು, ಏಡಿ, ಪಕ್ಷಿ ಸಂಕುಲಗಳ ನಾಶ, ಭೂಮಿ ಫಲವತ್ತತೆಯನ್ನು ಕಳೆದುಕೊಂಡು ನಿಸ್ತೇಜಳಾಗುತ್ತಿದ್ದಾಳೆ. ಕಾಡುಗಳ ನಾಶದಿಂದಾಗಿ, ಮಳೆಯಿಲ್ಲದೆ ಬೆಳೆ ಎಲ್ಲಿಂದ ಎಂಬ ಪ್ರಶ್ನೆ ಬೃಹದಾಕಾರವಾಗಿದೆ. ಇಂದು ಅಣೆಕಟ್ಟೆಗಳಿಂದ ಸಂಗ್ರಹಿಸಿದ ನೀರಿನಿಂದ ವ್ಯವಸಾಯ ಮಾಡಲು ತೊಡಗಿದರು. ಅದಕ್ಕೂ ಮಳೆಯೇ ಬೇಕು, ಹಾಗಾಗಿ ಮಳೆ, ಕಾಡು, ಪಶುಪಕ್ಷಿ ಸಂಕುಲ, ನೊಗ ನೇಗಿಲುಗಳ ಪರಿಕಲ್ಪನೆ ಮತ್ತೆ ಜೀವ ತಳೆದಾವೊ! ಅಂದು ಮತ್ತೊಮ್ಮೆ ಭೂಮಿತಾಯಿ ಹಸಿರುಟ್ಟು ಬಂದಾಳು...

ಎಸ್.ಕೆ.ಎನ್.

ಕೃಷಿ ಸಂಬಂಧಿ ತೆಲುಗು ಗಾದೆಗಳು 'ನೇಗಿಲು ಇದ್ದ ಊರಿನಲ್ಲಿ ಹಸಿವು ಸೇರುವುದಿಲ್ಲ', 'ಓದಿದವನಿಗೂ ಬೇಸಾಯಗಾರನೇ ಅನ್ನ ಕೊಡಬೇಕು', 'ರೈತ ಉಳುಮೆ ಮಾಡಿದರೇನೇ ರಾಜರಿಗೆ ಅನ್ನ' ಈ ಗಾದೆಗಳು ರೈತ ದೇಶಕ್ಕೆ ಬೆನ್ನೆಲುಬು ಎಂಬ ಮಾತನ್ನು ತಿಳಿಸುತ್ತವೆ.

ಭಾರತದೇಶ ಸಾಗುವಳಿ ದೇಶ. ನೂರಕ್ಕೆ ಎಂಬತ್ತು ಜನ ಬೇಸಾಯದ ಮೇಲೆ ಆಧಾರಪಟ್ಟು ಜೀವನ ನಡೆಸುತ್ತಿದ್ದಾರೆ. ಆಂಧ್ರಪ್ರದೇಶವು ಸಸ್ಯ ಸಮೃದ್ಧಿಯುಳ್ಳ ರಾಜ್ಯ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಎಂಬ ಮಾತು ಕೃಷಿಕರಿಗೆ ಅಕ್ಷರಶಃ ಅನ್ವಯಿಸುತ್ತದೆ. 'ಕೋಟಿ ವಿದ್ಯೆಗಳು ಕೂಳಿಗೋಸ್ಕರ' ಎಂಬಂತೆ, ಈ 'ಕೋಟಿವಿದ್ಯೆಗಳು ಹೊಲಕ್ಕೆ ಕಡಿಮೆ'ಯಲ್ಲವೆ. 'ಕೋಟಿ, ವಿದ್ಯೆಗಳಿಗಿಂತ ಬಯಸಿ ಹೊಲ ಉಳುವುದೇ ಒಳ್ಳೆಯದು' ಎನ್ನುತ್ತಾರೆ. ಅತ್ಯಂತ ಪ್ರಾಚೀನಕಾಲದಿಂದಲೂ ಭಾರತದೇಶದ ಜೀವನಾಧಾರ ವ್ಯವಸಾಯವೇ. ವೃತ್ತಿಗಳಲ್ಲಿ ವ್ಯವಸಾಯ ತುಂಬಾ ಪ್ರಾಚೀನವಾದದ್ದು. ಕ್ರಿ.ಪೂ. 3500 ವರ್ಷಗಳ ಹಿಂದೆ ಈಜಿಪ್ಟ್ ದೇಶದ ಸಮಾಧಿಗಳಲ್ಲಿ ಗೋಧಿ ಕಾಣಿಸಿದಂತೆ ಪ್ರಪಂಚದಾದ್ಯಂತ ವ್ಯವಸಾಯವೇ ಮನುಷ್ಯನ ಜೀವನದ ಅತಿ ಮುಖ್ಯ ಭಾಗವಾಗಿದೆ. ಆದುದರಿಂದಲೇ ಭೂಮಿಗೆ, ಬೆಳೆಗಳಿಗೆ, ಕೃಷಿಗೆ, ರೈತ ಜೀವನಕ್ಕೆ, ಬೇಸಾಯದಲ್ಲಿರುವ ಕಷ್ಟ ಸುಖಗಳಿಗೆ ಸಂಬಂಧಿಸಿದ ಹಲವಾರು ಗಾದೆಗಳು ಹುಟ್ಟಿಕೊಂಡಿವೆ. ಬೇಸಾಯವು ಸಂಪೂರ್ಣವಾಗಿ ಮಳೆಯ ಮೇಲೆ ಆಧಾರ ಓದು ಬರಹ ಬಾರದ ರೈತನು ಒಳ್ಳೆಯ ಬೆಳೆಗೆ ಒಳ್ಳೆಯ ಮಣ್ಣಿನ ಆವಶ್ಯಕತೆಯನ್ನು, ಯಾವ ಯಾವ ಕಾಲದಲ್ಲಿ ಬಿತ್ತಿದರೆ ಒಳ್ಳೆಯ ಪಸಲನ್ನು ಪಡೆಯಬಹುದು ಎಂಬುದನ್ನು ಅನುಭವ ಪೂರ್ವಕವಾಗಿ ತಿಳಿದುಕೊಂಡು ಗಾದೆಗಳ ಮೂಲಕ ತಿಳಿಸುವುದರಿಂದಲೇ ದೇಶೀ ಕೃಷಿ ಇಂದಿಗೂ ಜೀವಂತವಾಗಿದೆ.

ಮಾನವನು ಪಶುಪಾಲನೆಯೊಂದಿಗೆ ಹೊಸ ಶಿಲಾಯುಗದಲ್ಲಿ ಕೃಷಿಯನ್ನು ಆರಂಭಿಸಿದ. ಬೇಸಾಯವನ್ನು ಪ್ರಾರಂಭಿಸಿದ್ದು ಸ್ತ್ರೀಯರೆಂಬ ಊಹೆ ಇದೆ. ಇದಕ್ಕೆ ಸಂಬಂಧ ಪಟ್ಟಂತೆ ಒಂದು ಹೇಳಿಕೆಯಿದೆ. ಬೇಟೆಯಾಡುವುದನ್ನು ಗಂಡಸರು ವೃತ್ತಿಯಾಗಿ ಸ್ವೀಕರಿಸಿದಂತೆ ಒಬ್ಬ ಹೆಂಗಸು ಕಾಡುಗಳಲ್ಲಿ ಸುತ್ತಾಡಿ ಗಡ್ಡೆ ಗೆಣಸುಗಳೊಂದಿಗೆ ಕೆಲವು ಬೀಜಗಳನ್ನು ಸಹ ತಿನ್ನಬಹುದಂತಹವು ಎಂದು ತಿಳಿದು ಅವುಗಳನ್ನು ಆರಿಸಿಕೊಂಡು ತರುತ್ತಿದ್ದಳಂತೆ. ಹೀಗೆ ಆರಿಸಿಕೊಂಡು ಬರುವಾಗ ಯಾವಾಗಲೋ ಕೆಲವು ಬೀಜಗಳು ನೆಲದ ಮೇಲೆ ಬಿದ್ದವಂತೆ. ಆ ಬೀಜಗಳು ಬಿದ್ದಕಡೆ ಕೆಲವು ದಿನಗಳಲ್ಲಿ ಮೊಳಕೆ ಬಂದವಂತೆ. ಆ ಮೊಳಕೆಗಳು ಕೆಲವು ದಿವಸಗಳಲ್ಲಿ ಬೆಳೆದು ದೊಡ್ಡವಾಗಿ ತೆನೆ ಬಿಟ್ಟು. ಅಂತಹವೇ ಬೀಜಗಳ ಫಲವನ್ನು ಕೊಡಲಾರಂಭಿಸಿದವಂತೆ. ಅದೇ ಪ್ರದೇಶದಲ್ಲಿ ತಿರುಗಾಡುತ್ತಿದ್ದ ಆ ಸ್ತ್ರೀ ಇದನ್ನು ಗಮನಿಸಿ ಆನಂದಪಟ್ಟಳಂತೆ. ಒಂದು ಬೀಜದಿಂದ ಬಂದ ಮೊಳಕೆಯಿಂದ ಇಷ್ಟು ಬೀಜಗಳು ಫಸಲಾಗುವುದು. ಬಂದ ಬೀಜಗಳಿಂದ ಇನ್ನಷ್ಟು ಬೀಜ ಸಿಗುವುದು - ಇವೆಲ್ಲವೂ ಕೃಷಿ ಆರಂಭಿಸಲು ಕಾರಣವಾಯಿತೆಂದು ತಿಳಿಯುತ್ತದೆ. ಆರಂಭದಲ್ಲಿ ಈ ಬೇಸಾಯವು 'ಪೋಡು ವ್ಯವಸಾಯ'ವಾಗಿಯೇ ಇತ್ತೆಂಬ ಅಭಿಪ್ರಾಯವಿದೆ. ಆಳ್ವಿಕೆ ಮಾಡುತ್ತಿದ್ದ ರಾಜರು ಬೇಸಾಯದ ಏಳಿಗೆಗಾಗಿ ಶ್ರಮಿಸಿದ್ದರಿಂದ ಬೇಸಾಯ ಸ್ಥಿರವಾಗಿ ಉಳಿದುಕೊಂಡಿತು.

ರೈತನ ವೃತ್ತಿ ಬೇಸಾಯ. ಅವನ ಜೀವನಾಧಾರವೇ ಅದು. 'ಉಳುಮೆ ಮಾಡಬೇಕೆಂದು ಕೊಂಡರೇನೆ ಮಣ್ಣನ್ನು ಮುಟ್ಟಬೇಕೆಂಬ' ಗಾದೆ ರೈತನಿಗೆ ಅನ್ವಯಿಸುತ್ತದೆ, 'ಶಾಲೆಯಿಲ್ಲದ ಓದು ಹಿಂಬಾಲಿಸುವರಿಲ್ಲದ ಬೇಸಾಯ ಒಂದೇ', ಆದುದರಿಂದಲೆ ಕೆಲಸಗಾರರ ಆವಶ್ಯಕತೆ ಹೆಚ್ಚಾಗಿರುತ್ತದೆ. 'ರೈತನಿಲ್ಲದ ಬೇಸಾಯ ವಿಗ್ರಹವಿಲ್ಲದ ನೈವೇದ್ಯ' ಎರಡೂ ಒಂದೇ.

'ಎಲ್ಲರಿಗೂ ಅನ್ನ ಕೊಡುವವನು ರೈತನೇ'. ಆದುದರಿಂದ 'ರೈತನು ಸುತ್ತಿ ಸುತ್ತಿ ಕೆಡುತ್ತಾನೆ, ಸನ್ಯಾಸಿ ತಿರುಗಾಡದೆ ಕೆಡುತ್ತಾನೆ', 'ಬಂಡವಾಳವಿಲ್ಲದ ಬೇಸಾಯ, ತಂಗಳಿಲ್ಲದ ಪ್ರಯಾಣ' ಒಂದೇ. ಏಕೆಂದರೆ, ಭೂಮಿಯಿದ್ದೂ ಬಂಡಿ, ಎತ್ತುಗಳು ವ್ಯವಸಾಯದ ಉಪಕರಣಗಳೂ ಗೊಬ್ಬರವಿಲ್ಲದೇ ಬೇಸಾಯ ಮಾಡಲಾಗುವುದಿಲ್ಲ. ಇವೆಲ್ಲಕ್ಕೂ 'ದುಡ್ಡೇ ದೊಡ್ಡಪ್ಪ' ಅಂತೆಯೇ ಊರಿಂದ ಊರಿಗೆ ಹೋಗುವ ಗ್ರಾಮೀಣರಿಗೆ ಮಧ್ಯದಾರಿಯಲ್ಲಿ ತಿನ್ನಲು ತಿಂಡಿ ದೊರೆಯದಿದ್ದಲ್ಲಿ ಪ್ರಯಾಣ ಸುಖಕರವಾಗುವುದಿಲ್ಲ. ತಂಗಳಿದ್ದಲ್ಲಿ ನಿಶ್ಚಿಂತೆಯಿಂದ ಪ್ರಯಾಣ ಮಾಡಬಹುದು. 'ಬತ್ತ, ದನವಿರುವವನದ್ದೇ ಬೇಸಾಯ'.

'ತಾಯಿಯನ್ನು ಭೂಮಿಯನ್ನು ನಂಬಿದವನು ಕೆಡುವುದಿಲ್ಲ'. ಬೇಸಾಯಕ್ಕೆ ಸತ್ತ್ವಯುತವಾದ ಭೂಮಿ ಬೇಕು. ಕಲ್ಲು, ಮುಳ್ಳುಯಿರುವ ಭೂಮಿಯಾಗಲೀ, ಮರಳು ಜೇಡಿಮಣ್ಣುಯಿರುವ ಭೂಮಿಯಾಗಲೀ

ನಿರುಪಯೋಗ. ಆದುದರಿಂದಲೇ 'ಮರಳು ಭೂಮಿಯನ್ನು ಉಳುಮೆ ಮಾಡಿ ಒಳ್ಳೆದಾಗಿದ್ದವನಾಗಲೀ, ಜೇಡಿಮಣ್ಣನ್ನು ಉಳುಮೆ ಮಾಡಿ ಕೆಡದೇಯಿರುವಂತಹವನಾಗಲೀ ಇಲ್ಲ', 'ಕೆಂಪುಮಣ್ಣಿನ ಫಸಲು, ಒಂದು ದಿನದ ಊಟ'. ಕೆಂಪುಮಣ್ಣಿನ ನೆಲಗಳೆಲ್ಲವೂ ಮಳೆಯ ಮೇಲೆ ಆಧಾರ ಕಟ್ಟಿರುವುದರಿಂದ ಈ ಗಾದೆ ಹುಟ್ಟಿರಬಹುದು. 'The earth every inch is a hidden treasure' ಎಂಬಂತೆ ಹೆಜ್ಜೆ ಹೆಜ್ಜೆಗೂ ಭೂಮಿಯಲ್ಲಿ ನಿಕ್ಷೇಪ ಅವಿತುಕೊಂಡಿದೆ. 'ಲಾಭಪ್ರದವಾದ ಫಸಲು, ರೈತನ ಘನತೆಗೆ ದಾರಿ' ಲಾಭದಿಂದ ಕೂಡಿದ ಬೆಳೆಯನ್ನು ಬೆಳೆದರೆ ರೈತನ ಘನತೆಗೆ ರಾಜಮಾರ್ಗವಾಗುತ್ತದೆ. ಈ ಗಾದೆ ರೈತರನ್ನು ಲಾಭವನ್ನು ಕೊಡುವ ಫಸಲನ್ನೇ ಬೆಳೆಸಬೇಕೆಂದು ಎಚ್ಚರಿಸುತ್ತದೆ.

ಆಂಧ್ರಪ್ರದೇಶದ ಭೂಮಿಯನ್ನು ತರೀ, ಖುಷ್ಕೀ ಅಥವಾ 'ಮಾಗಾಣಿ' (ಗದ್ದೆ), 'ಮೆಟ್ಟ' (ದಿಣ್ಣೆ)' ಎಂದು ಎರಡು ವಿಭಾಗಗಳನ್ನಾಗಿ ಮಾಡಬಹುದು. 'ತೋಟ' ಎಂದು ಇನ್ನೊಂದು ಚಿಕ್ಕ ವಿಭಾಗ. ಬಾವಿಗಳ ಕೆಳಗಿರುವ ಹೊಲವನ್ನು ತೋಟ ಎಂದು ಕರೆಯಬಹುದು. 'ಚೇನು (ಮೆಟ್ಟ) ಎನ್ನುವ ಪದಕ್ಕೆ ಕೋಸ್ತಾದಲ್ಲಿ ನೀರಾವರಿಯಿಂದ ಬೆಳೆಸುವ ನೆಲ, 'ಮೆಟ್ಟ ಪೊಲಂ' ಎಂದು ಎರಡರ್ಥಗಳಿವೆ. 'ಗದ್ದೆ' (ಮಡಿ) ಉಳುಮೆ ಮಾಡಿ ಬಾಳಿದವನು, ಹೊಲ 'ಮೆಟ್ಟ') ಉಳುಮೆ ಮಾಡಿ ಕೆಟ್ಟವನಿಲ್ಲ ಗದ್ದೆ (ಪಲ್ಲಂ) ಉಳುಮೆ ಮಾಡಿದವನು ಪಲ್ಲಿಕ್ಕಿ ಏರುತ್ತಾನೆ' ಬೇಸಾಯ ಮಾಡಿದವನು ಅನಾವೃಷ್ಟಿ ಮುಂತಾದ ತೊಂದರೆಗಳಿಲ್ಲದೇ ಸುಖವಾಗಿ ಬಾಳುತ್ತಾನೆ. ನೀರಾವರಿ ಇದ್ದರೆ ಸಾಕು; ಸರಿಯಾದ ಕಾಲದಲ್ಲಿ ಕಳೆ ತೆಗೆಸಬೇಕಷ್ಟೇ. ಹೆದರಿಕೆಯಿಲ್ಲದವನೇ ಪಲ್ಲಕ್ಕಿ ಏರಿ ನೆಮ್ಮದಿಯಿಂದ ಇರುತ್ತಾನೆ. ಹೀಗಾಗಿ ಇವರಿಬ್ಬರೂ ಸಮಾನವೆಂದು ಈ ಗಾದೆ ತಿಳಿಸುತ್ತದೆ.

ಮಳೆ ನಕ್ಷತ್ರ (ಕರ್ತಿ)ಗಳ ಬಗ್ಗೆ, ಮಳೆ ಬಗ್ಗೆ ಹಲವಾರು ಗಾದೆಗಳು ಹುಟ್ಟಿಕೊಂಡಿವೆ. ಮಳೆಯ ಮೇಲೆ ಕೃಷಿಗೆ ಸಂಬಂಧಪಟ್ಟ ಎಲ್ಲ ಕಾರ್ಯಕಲಾಪಗಳನ್ನು ಆರಂಭಿಸುತ್ತಾರೆ. 'ಮಳೆ ಬರುವುದು, ಪ್ರಾಣ ಹೋಗುವುದು ತಿಳಿಯುವುದಿಲ್ಲ' ಆದುದರಿಂದಲೆ, ಮಳೆ ನಕ್ಷತ್ರಗಳ ಆಧಾರದ ಮೇಲೆ ದೈವಾಧೀನವೆಂದು ಬೇಸಾಯ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾರೆ. ಚೈತ್ರ ವೈಶಾಖಗಳು ವರ್ಷ ಋತುವಿಗೆ ಸಂಬಂಧಪಟ್ಟ ಋತುಗಳು. ಈ ಕಾಲದಲ್ಲಿ ಬರುವ ಮಳೆಯನ್ನು ಮುಂಗಾರು ಮಳೆ (ತೊಲಕರಿ ವಾನಲು) ಎನ್ನುತ್ತಾರೆ. 'ಮುಂಗಾರುಮಳೆ ಮೊಳಕೆಗಳಿಗೆ ತಾಯಿ' ಎಂದೂ, 'ಮುಂಗಾರಿನಲ್ಲಿ ಕೆರೆ ತುಂಬಿದರೂ, ಚೊಚ್ಚಲ ಮಗ ಹುಟ್ಟಿದರೂ ಲಾಭ' ಎಂದೂ ಜನಪದರ ಭಾವನೆ. ಈ ಮುಂಗಾರು ಮಳೆಗೆ ಆರಿದ್ರಾ ನಕ್ಷತ್ರವನ್ನು ವಿಶೇಷವಾಗಿ ಗಮನಿಸುತ್ತಾರೆ. 'ಆರಿದ್ರಾ ಮಳೆ ಸುರಿದರೆ ದಾರಿದ್ರ್ಯವಿಲ್ಲ' ಎನ್ನುತ್ತಾರೆ. 'ಆರಿದ್ರಾ ಮಳೆ ಹದನು ಮಳೆ', 'ಆರಿದ್ರಾ ಸಕಾಲದ ಮಳೆ', 'ಆರಿದ್ರಾ ಗುಡುಗಿದರೆ ಆರುಮಳೆ ಬರುವುದಿಲ್ಲ'.

'ಅನುರಾಧ ನಕ್ಷತ್ರದಲ್ಲಿ ಕೇಳಿದಷ್ಟು ಬೆಳೆ'. 'ಆಶ್ಲೇಷ ಮಳೆಗೆ, ಮುದಿ ಎತ್ತು ಗುಟುರು ಹಾಕುತ್ತದೆ'. 'ಆಶ್ಲೇಷ ಮಳೆ ಎಲ್ಲರಿಗೂ ಲಾಭ', ಆಶ್ಲೇಷದ ಮಳೆ ಬತ್ತದ ಫಸಲಿಗೆ ಅನುಕೂಲವೆಂದು, ಆರೋಗ್ಯವನ್ನೂ ಉತ್ಸಾಹವನ್ನೂ ತರುತ್ತದೆಯೆಂದೂ ಈ ಗಾದೆಗಳು ತಿಳಿಸುತ್ತವೆ.

ಕೆಲವು ನಕ್ಷತ್ರಗಳು ಬೆಳೆಗಳಿಗೆ ಒಳಿತಾದರೆ, ಇನ್ನು ಕೆಲವು ನಕ್ಷತ್ರಗಳು ಕೆಡುಕನ್ನು ಉಂಟುಮಾಡುತ್ತವೆ. 'ಹಾರಕೆ' (ಒಂದು ಬಗೆಯ ಕಾಳು) ಬೆಳೆಗೆ ಚಿತ್ತಾನಕ್ಷತ್ರ ಆಪತ್ತು, ಹೆಂಗಸಿಗೆ ಮಗುವಿನ ಪ್ರಸವ ಗಂಡಾಂತರ'ವೆಂದೂ, 'ಚಿತ್ತಾನಕ್ಷತ್ರದಲ್ಲಿ ಚಿಂತೆಗಳು ಉಂಟಾಗುತ್ತವೆ' ಎಂದು ಗಾದೆಗಳು ತಿಳಿಸುತ್ತವೆ.

ಇನ್ನೂ ಕೆಲವು ನಕ್ಷತ್ರಗಳಿಗೆ, ಮಳೆಗೆ ಸಂಬಂಧಪಟ್ಟ ಗಾದೆಗಳು.

'ಅನುರಾಧೆಯಲ್ಲಿ ನೆನೆದರೆ, ಇದ್ದ ರೋಗ ಹೋಗುತ್ತದೆ', 'ಅಶ್ವಿನಿ ಸಸ್ಯನಾಶಿನಿ', 'ಆಶ್ಲೇಷ ಸುರಿದರೆ ಆರೋಗ್ಯ', 'ವಿಶಾಖ ಮಳೆ ವ್ಯಾಧಿಗಳಿಗೆ ಹರ್ಷ', 'ಸ್ವಾತಿ ಮಳೆ ಮುತ್ತಿನ ಮಳೆ', 'ಹಸ್ತೆಗೆ ಆರುಪಾಲು, ಚಿತ್ತೆಗೆ ಮೂರು ಪಾಲು', 'ಭರಣಿ ಸುರಿದರೆ, ಧರಣಿ ಫಸಲಾಗುವುದು', 'ಮೂಲ ಸುರಿದರೆ ಮುಂಗಾರು ಹಾಳು', 'ಪುನರ್ವಸು ಹೂ ಮಳೆ', 'ರೇವತಿ ಮಳೆ ಎಲ್ಲ ಸಸ್ಯಗಳಿಗೆ ರಮಣೀಯ', 'ರೋಹಿಣಿ ಮಳೆಗೆ ಒರಳುಗಳು ಒಡೆಯುತ್ತವೆ', 'ಶನಿವಾರದ ಮಳೆ ಶನಿವಾರವೇ ಬಿಡುತ್ತದೆ', 'ಚಂದ್ರ ಪರಿವೇಷ ಮಳೆಯೋಗ', 'ಪೂರ್ವದಲ್ಲಿನ ಕಾಮನಬಿಲ್ಲು ದೂರದಲ್ಲಿ ಮಳೆ'.

'ಬೆಳೆಯ ಫಸಲು ಪೈರುನಲ್ಲಿ ತಿಳಿಯುತ್ತದೆ'. ಬತ್ತದ ಗದ್ದೆಯಲ್ಲಾಗಲೀ, ಹೊಲದಲ್ಲಾಗಲೀ ಕೆಲಸಕ್ಕೆ ಬಾರದ ಹುಲ್ಲು, ಕಸ ಕಡ್ಡಿಗಳು ಬೆಳೆಯನ್ನು ಹಾಳುಮಾಡುತ್ತವೆ. ಆದುದರಿಂದ ಅವುಗಳನ್ನು ಸಕಾಲದಲ್ಲಿ ಕೀಳಬೇಕಾಗುತ್ತದೆ. 'ಕಳೆ ತೆಗೆಯದವನಿಗೆ ಕಸಮಾತ್ರ, ಉಳಿಯುತ್ತದೆ', 'ಕಳೆ ತೆಗೆಯದ ಗದ್ದೆ, ದೇವರಿಲ್ಲದ ಗುಡಿ'ಯಂತೆ. ವಿಗ್ರಹವಿಲ್ಲದ ದೇವಸ್ಥಾನ ನಿಷ್ಪ್ರಯೋಜಕವಾದಂತೆ, ಕಳೆ ಕೀಳದ ಗದ್ದೆಯು ಉಪಯೋಗವಾಗುವುದಿಲ್ಲ.

ಕೃಷಿಗೆ ಮೂಲಾಧಾರ ಪಶುಗಳು. ಇವುಗಳಲ್ಲಿ ಎತ್ತಿನ ಸ್ಥಾನ ಮಹತ್ತ್ವವಾದದ್ದು. ಪಶುಗಳು ಭೂಮಿಯನ್ನು ಉಳುಮೆ ಮಾಡುವುದಕ್ಕೇ ಅಲ್ಲದೆ ಅವುಗಳ ಸಗಣಿ ಮೂತ್ರ ಗೊಬ್ಬರವಾಗಿ ಉಪಯೋಗಿಸಲ್ಪಡುತ್ತದೆ. 'ಕಸಯಿಲ್ಲದೆ ಪಶುವಿಲ್ಲ, ಪಶುವಿಲ್ಲದೆ ಗೊಬ್ಬರವಿಲ್ಲ, ಗೊಬ್ಬರವಿಲದೆ ಫಸಲಿಲ್ಲ' ಎಂಬ ನಾಣ್ಣುಡಿ ಪಶುಗಳ ಆವಶ್ಯಕತೆಯನ್ನು ತಿಳಿಸುತ್ತದೆ. 'ಮನುಷ್ಯನಿಗೆ ಇರುವುದು ಪುಷ್ಟಿ; ಪಶುವಿಗೆ ತಿನ್ನುವುದೇ ಪುಷ್ಟಿ'. 'ಎತ್ತಿನ ಹುಣ್ಣು ಕಾಗೆಬಲ್ಲುದೆ ?' 'ಎತ್ತು ಛಲೋದಾದರೆ ಇದ್ದ ಊರಲ್ಲೆ ಗಿರಾಕಿ', 'ಎತ್ತಿನಂತೆ ಕಷ್ಟಪಟ್ಟರೂ ಎಂಜಲು ಗಂಜಿಯೇ ಗತಿ' ಇತ್ಯಾದಿ ಗಾದೆಗಳು ರೂಢಿಯಲ್ಲಿವೆ. 'ಹೈನುಗಾರಿಕೆ ಇಲ್ಲದ ಮನೆ ಸಗಣಿ ಇಲ್ಲದ ಹೊಲ'ಕ್ಕೆ ಸಮಾನ. ಇದು ಹೈನುಗಾರಿಕೆಗೆ ರೈತನು ಕೊಡುವ ಪ್ರಾಮುಖ್ಯವನ್ನು ತಿಳಿಸುತ್ತದೆ.

ಆಂಧ್ರಪ್ರದೇಶದಲ್ಲಿ ನೀರಿಗೆ ಆಧಾರ ನದಿಗಳು, ಕೆರೆಗಳು, ಬಾವಿಗಳು, ಸರೋವರಗಳು. ನೀರಿನ ಆವಶ್ಯಕತೆಯನ್ನು ಕುರಿತು 'ನೀರಿಲ್ಲದ ಊರು ನೀರೆಯಿಲ್ಲದ ಮನೆಗೆ ಸಮಾನ'ವೆಂದು ತಿಳಿಸುತ್ತದೆ. ಅಂತೆಯೇ 'ನೀರಿಲ್ಲದ ಬೆಳೆ, ಎಣ್ಣೆಯಿಲ್ಲದ ನೆತ್ತಿ'.

ಬೀಜ ಬಿತ್ತಲು ಗದ್ದೆ ಅಥವಾ ಹೊಲವನ್ನು ಉಳುಮೆ ಮಾಡಬೇಕು. ಈ ಉಳುಮೆಯನ್ನು 'ದುಕ್ಕಿ' ಎನ್ನುತ್ತಾರೆ. ಒಂದು ಬಾರಿ ಹೊಲವನ್ನು ಉಳುಮೆ ಮಾಡಿದರೆ 'ಒಕಚಾಲು' ಆಗಿದೆಯೆಂದು, ಎರಡು ಸಲ ಉಳುಮೆ ಮಾಡಿದರೆ 'ಇರಸಾಲು' ಆಗಿದೆಯೆಂದು, ಮೂರು ಸುತ್ತು ಉಲುಮೆ ಮಾಡಿದರೆ 'ಮೂಡು ಚಾಳ್ಳು' ಆಗಿದೆಯೆಂದು ಹೇಳುತ್ತಾರೆ.

ಯಾವ ಯಾವ ಬೆಳೆಗೆ ಎಷ್ಟೆಷ್ಟು ಬಾರಿ ಉಳುಮೆ ಮಾಡಬೇಕು ಎಂಬುದನ್ನು ಗಾದೆಗಳು ತಿಳಿಸುತ್ತವೆ: 'ಹತ್ತಿಗೆ ಹತ್ತು ಸುತ್ತು (ಉಳುಮೆ) ಜೋಳಕ್ಕೆ ಏಳು', 'ಎಳ್ಳಿಗೆ ಏಳು ಸುತ್ತು ಉಳುಮೆ, ಹುರುಳಿಗೆ ಒಂದು ಸುತ್ತು', 'ಗದ್ದೆಗೆ ಏಳು ಸುತ್ತು ಉಳುಮೆ, ದಿಣ್ಣೆಗೆ ನಾಲ್ಕು ಸುತ್ತು',

ಬರಕ್ಕೆ ಸಂಬಂಧಪಟ್ಟ ಹಲವಾರು ಗಾದೆಗಳು ವ್ಯವಹಾರದಲ್ಲಿದೆ. ಆಂಧ್ರಪ್ರದೇಶದ ತೆಲಂಗಾಣ ಪ್ರಾಂತ್ಯದಲ್ಲಿ 1769-73ರ ಅವಧಿಯಲ್ಲಿ ಭೀಕರವಾದ ಬರ ಉಂಟಾಗಿ ಹೈದರಾಬಾದ್ ನಗರದಲ್ಲಿ ತೊಂಬತ್ತು ಸಾವಿರ ಜನ ಮೃತರಾದರಂತೆ. ರಾಜ್ಯವೆಲ್ಲಾ ಮೃತರಾದವರ ಬುರುಡೆಗಳಿಂದ ತುಂಬಿತಂತೆ. ಆದುದರಿಂದ ಆ ದುರ್ಭಿಕ್ಷವನ್ನು 'ಬುರುಡೆಗಳ ಬರ' ಎಂದು ಕರೆದರು. 1833ರಲ್ಲಿ ಗುಂಟೂರಿನಲ್ಲಿ ಆದ ದುರ್ಭಿಕ್ಷವನ್ನು 'ನಂದನ ಬರ'ವೆಂದು 1876-78ರಲ್ಲಿ ಬಂದ 'ಧಾತ ದುರ್ಭಿಕ್ಷ' ಭೀಕರವಾದ ಬರಗಳು. ರಾಯಲಸೀಮೆ ಬರಗಳಿಗೆ ತವರೂರು. 19ನೇಯ ಶತಮಾನದಲ್ಲಿ ಆರು ಸಲ ಬರಗಳು ಸಂಭವಿಸಿದವು. ಬರಕ್ಕೆ ಸಂಬಂಧಿಸಿದಂತೆ ಅನೇಕ ಗಾದೆಗಳಿವೆ: 'ಬರದಲ್ಲಿ ಮಗಳನ್ನು ಮಾರಾಟ ಮಾಡಿದಂತೆ', 'ಓಲೆ ಕೂಗಿದರೆ ಬಂಧುಗಳು ಬರುವಿಕೆ, ನಾಯಿ ಕೂಗಿ ಬರದ ಆಗಮನ', 'ಬರಕ್ಕೆ ಗ್ರಹಣಗಳು ಹೆಚ್ಚು', 'ಬರಕ್ಕೆ 'ದಾಸರ್ಲು' (ದಾಸಯ್ಯ) ಆದರೇ ನುಡಿಗಳು ಎಲ್ಲಿ ಬರುತ್ತವೆ', 'ಮಳೆ ಇದ್ದರೆ ಬರವಿಲ್ಲ, ಗಂಡುಯಿದ್ದರೆ ಬಡತನ ಇರುವುದಿಲ್ಲ', 'ತೊಗರಿ ಇಳುವರಿಯಾದರೆ ಬರ ಮುಗಿಯುವುದು' ಹೀಗೆ ಬರದ ಬಗ್ಗೆ ಹಲವಾರು ಗಾದೆಗಳು ವ್ಯಾಪ್ತಿಯಲ್ಲಿವೆ.

ಕೈಕೆಸರಾದರೆ ಬಾಯಿ ಮೊಸರೆಂದೂ ಕಷ್ಟ ಪಟ್ಟರೆ ಫಲವುಂಟು ಎಂದೂ ರೈತ ಚೆನ್ನಾಗಿ ಬಲ್ಲನು. ಕೈಕೆಸರಾಗುವುದೆಂದರೆ ಕಷ್ಟಪಟ್ಟು ದುಡಿಯುವುದು; ಶ್ರಮಿಸುವುದು. ಶಾರೀರಿಕ ಶ್ರಮದ ದುಡಿಮೆಯನ್ನು ಬಸವಣ್ಣನವರು ಹಲವಾರು ಶತಮಾನಗಳ ಹಿಂದೆಯೇ ಕಾಯಕವೇ ಕೈಲಾಸವೆಂದು ತಿಳಿಸಿದ್ದಾರೆ. ಭಾರತ ಕೃಷಿ ಪ್ರಧಾನ ದೇಶವಾದದ್ದುರಿಂದ ರೈತ ದೇಶದ ಆಧಾರ. ರೈತನು ಪ್ರಾಮಾಣಿಕವಾಗಿ ದುಡಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ. ರೈತನ, ಶ್ರಮವೇ ಬಾಳಿಗೆ ಆಧಾರ. ಆದರೆ ಇಂದು 'ಎಲ್ಲವನ್ನೂ ಬೆಳೆಸಿದ ಕೃಷಿಕನಿಗೆ ಅನ್ನದ ಬರ' ಅನುಭವವಾಗುತ್ತಿದೆ.

ಜನಪದಗೀತೆ ಹೇಳುವಂತೆ

'ನದಿಗೆ ಏತವನ್ನು ಹೊಡೆದು
ಸಾವಿರ 'ಪುಟ್ಟಿ'ಗಳು ಇಳುವರಿ ಮಾಡಿದರೂ
ಗಂಜಿಯಲ್ಲಿ ಒಂದು ಅಗಳನ್ನಾದರೂ ನೋಡಲಿಲ್ಲ'

ಎಂದು ವ್ಯಥೆ ಪಡುತ್ತಿರುವುದು ಒಂದು ವಿಪರ್ಯಾಸ.

ಎಂ.ಜಿ.ಎಸ್.

ಕೃಷಿ ಹಾಡುಗಳು ಕೃಷಿಯ ಆರಂಭಿಕ ಹಂತದಿಂದ ಅಂತ್ಯದ ತನಕ ರೈತ ಲವಲವಿಕೆಯಿಂದ ಕೆಲಸ ಮಾಡಲು ಸ್ಫೂರ್ತಿ ನೀಡುವ ಎಷ್ಟೋ ಹಾಡುಗಳು ಜನಪದರಲ್ಲಿ ದೊರೆಯುತ್ತವೆ. ಸಂದರ್ಭೋಚಿತವಾಗಿ ಪದ ಕಟ್ಟಿ ಹಾಡುವವರು ಇದ್ದರು. ಇವು ಲಯಬದ್ಧವೂ ಸ್ವಾರಸ್ಯಕರವಾಗಿಯೂ ಇದ್ದು ಮನ ಸೆಳೆಯುವಂತಿದ್ದರೆ ಸಾರ್ವತ್ರೀಕರಣಗೊಂಡು ಸರ್ವಕಾಲಕ್ಕೂ ನಿಲ್ಲುತ್ತವೆ. ಬಿತ್ತುವಾಗ, ನಾಟಿ ಮಾಡುವಾಗ, ಕಳೆ ಕೀಳುವಾಗ, ಒಕ್ಕಣೆ ಮಾಡುವಾಗ, ರಾಶಿ ಹಾಕುವಾಗ, ಫಸಲನ್ನು ಸಾಗಿಸುವಾಗ, ಏತ ತುಳಿಯುವಾಗ, ಬಂಡಿ ಹೊಡೆಯುವಾಗ ಹಾಡು ಹಾಡುತ್ತಾರೆ. ಅಷ್ಟೇ ಅಲ್ಲದೆ ಕೃಷಿ ಸಂಬಂಧಿ ಬೇರೆ ಬೇರೆ ಸಂದರ್ಭಕ್ಕನುಗುಣವಾಗಿ ಹಾಡುವುದೂ ಉಂಟು. ಇವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿ ರಚನೆಗೊಂಡಿರುತ್ತವೆ. ಕೆಲವು ಸ್ವಾರಸ್ಯಕರವಾದ ಹಾಡುಗಳು ಆಯಾಯ ನೆಲದ ಭಾಷೆ ಮತ್ತು ಭಾವನೆಗಳಿಗೆ ಅನುಗುಣವಾಗಿ ಮಾರ್ಪಾಡುಗೊಳ್ಳುತ್ತವೆ. ಶ್ರಮದ ಅರಿವು ಆಗದಂತೆ ಮೈಮರೆತು ಮನಬಿಚ್ಚಿ ಹಾಡಿಕೊಳ್ಳುವರು. ಈ ಹಾಡುಗಳಲ್ಲಿ ಹಾಸ್ಯ, ನೀತಿ, ಪ್ರೀತಿ ಇತ್ಯಾದಿ ರಾಗದ್ವೇಷಗಳೆಲ್ಲವೂ ಇವೆ. ಇವು ವ್ಯಕ್ತಿಯ ಅನುಭವದ ಅಭಿವ್ಯಕ್ತಿಗಳಾಗಿ ಜನಪದರಲ್ಲಿ ಜನಪ್ರಿಯವಾಗಿವೆ.

ಇವುಗಳಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಗೀತೆಗಳೆಂದು ಎರಡು ವಿಧ. ರಾಗಿ ಬೀಸುವಾಗ, ಬತ್ತ ಕುಟ್ಟುವಾಗ, ಗಾಡಿ ಓಡಿಸುವಾಗ, ಮೀನು ಹಿಡಿಯುವಾಗ, ದನಕಾಯುವಾಗ, ಹುಟ್ಟು ಹಾಕುವಾಗ ಹಾಡುವಂಥವು ವೈಯಕ್ತಿಕವಾದಂಥವು. ಹೊಲಗದ್ದೆಗಳಲ್ಲಿ ನಾಟಿಮಾಡುವಾಗ, ಕಳೆ ತೆಗೆಯುವಾಗ, ಒಕ್ಕಣೆ ಮಾಡುವಾಗ, ನೆಲಗಡಲೆ ಕೀಳುವಾಗ ಮತ್ತು ಸುಲಿಯುವಾಗ, ಕಾಫಿ ಹಣ್ಣು ಬಿಡಿಸುವಾಗ ಹಾಡುವಂಥವು ಸಾಮೂಹಿಕ ಗೀತೆಗಳು. ಗುಂಪಾಗಿ ಹಾಡುವಾಗ ಹಿಮ್ಮೇಳ ಮತ್ತು ಮುಮ್ಮೇಳದವರಿರುತ್ತಾರೆ. ಇವುಗಳಲ್ಲಿ ಮಿಶ್ರ ಗೀತೆ, ಕಥನ ಗೀತೆಗಳು ಸೇರಿರುತ್ತವೆ. 'ಕಲ್ಲವ್ವ ತಾಯಿ ಮೆಲ್ಲವ್ವ ರಾಜುನವ, ಜಲ್ಲಜಲ್ಲನೆ ಉದುರವ್ವ...' ಗೃಹಿಣಿಯರು ಮುಂಜಾನೆ ಹಾಡಿದರೆ ಬಂಡಿ ಹೊಡೆಯುವ ರೈತ 'ಬಂಡಿ ಹೊಡೆಯುವನ ಬಂಡಾಟ ನೋಡಿರೋ, ಬಾರುಕೋಲು, ಬಲಗೈಲಿ, ಹಿಡಕೊಂಡು, ಬೋರ್‍ಯಾಡಿ ಘಟ್ಟ ಇಳಿಸ್ಯಾನು' ಎಂದೂ ಕಬ್ಬು ಕಡಿಯುವಾಗ 'ಕಬ್ಬು ಕಡಿಯೋನೆ, ಹುಬ್ಬು ನೇರುಳ್ಳೋನೆ, ಗೊಬ್ಬರದ ಗಾಡಿ ಹೊಡೆಯೋನೆ, ತಮ್ಮಯ್ಯನ ಹುಬ್ಬು ತಿದ್ದ್ಯಾಳೆ ಶ್ರೀಗೌರಿ'. ಇತ್ಯಾದಿ ಸಾವಿರಾರು ಹಾಡುಗಳು ಪರಂಪರಾಗತ ಕೃಷಿಯನ್ನು ಕುರಿತು ಒಂದು ಕಾಲದಲ್ಲಿ ಪ್ರಚಲಿತವಾಗಿದ್ದು ಇಂದು ಅಪರೂಪವಾಗುತ್ತಿವೆ.

ಜಿ.ಎನ್.ಎಸ್.

ಹಂತಿ ಹಾಡುಗಳು : ಹಂತಿ ಎಂದರೆ ಪಂಕ್ತಿ ಸಾಲು ಎಂಬರ್ಥ. ಪಂಕ್ತಿ ಪದವೆ ರೂಢಿಯಲ್ಲಿ ಪಂಕ್ತಿ ಹೋಗಿ ಹಂತಿ ಎಂದಾಗಿದ್ದು ಇದು ಹಂತಿಯಾಗಿಯೇ ರೂಢಿಯಲ್ಲಿದೆ.

ಕಣದ ಮಧ್ಯ ನೆಟ್ಟ ಮೇಟಿಗೆ ದಪ್ಪವಾದ ಹಿಡಿ ಹಗ್ಗ ಇಲ್ಲವೆ ಚರ್ಮದ ಮಿಣಿಗೆ ಹತ್ತಿಪ್ಪತ್ತು ಎತ್ತು, ದನ ಕರುಗಳನ್ನು ಸಾಲಾಗಿ ಕಟ್ಟಿ ಒಂದೇ ರೀತಿ ತಿರುಗುವಂತೆ ಮಾಡುವುದು. ಈ ರೀತಿ ಕಟ್ಟಿದ ಎತ್ತುಗಳ ಸಾಲಿಗೆ 'ಪಂಕ್ತಿ' ಇಲ್ಲವೆ 'ಹಂತಿ' ಎಂದು ಕರೆಯುತ್ತಾರೆ. ಹಂತಿಯನ್ನು ಹೆಚ್ಚಾಗಿ ತಂಪೊತ್ತಿನಲ್ಲೇ ಕಟ್ಟುತ್ತಾರೆ. ಸೂರ್ಯಾಸ್ತವಾದ ಬಳಿಕ ಹಂತಿ ಕಟ್ಟಿದರೆಂದರೆ ಬೆಳಗಾಗುವುದರೊಳಗಾಗಿ ಹಂತಿಯ ತುಳಿತಕ್ಕೆ ಜೋಳದ ತೆನೆಗಳಲ್ಲಿರುವ ಕಾಳುಗಳು ಕಡಿಗಾಗಿ ಸುಂಕರಾಶಿಯಾಗುತ್ತದೆ. ಹಂತಿ ಬೆಳ್ಳಬೆಳತನಕ ಹೊಡೆಯಬೇಕಾದರೆ ರೈತರಿಗೆ ಆಸರಿಕೆ ಬೇಸರಿಕೆ ಬರುವುದರ ಜೊತೆಗೆ ನಿದ್ದೆಯು ಬರುತ್ತದೆ. ಉತ್ಸಾಹಭರಿತನಾಗಿ ಕೆಲಸಕ್ಕೆ ಅಣಿಯಾಗಬೇಕಾದರೆ ಹಾಡು ಹೇಳುವುದರ ಜೊತೆಗೆ ವಾದ ಸಂವಾದ ಮಾಡುತ್ತ ಬೆಲ್ಲ ನೀರನ್ನು ಸವಿಯುತ್ತಾನೆ. ಹಂತಿ ಹೊಡೆಯುತ್ತಾ ಹಾಡಿದ

ಹಾಡುಗಳಿಗೆ 'ಹಂತಿ' ಹಾಡುಗಳು 'ಹಂತಿ' ಪದಗಳು ಎಂದು ಕರೆಯುತ್ತಾರೆ. ಹಂತಿ ಪದಗಳು ದೇವರ ನಾಮಸ್ಮರಣೆಯೊಂದಿಗೆ ಆರಂಭವಾಗಿ ಪ್ರಾದೇಶಿಕ ದೇವರು ದೈವಗಳನ್ನು ಸ್ಮರಿಸಿ ಶೃಂಗಾರ, ಹಾಸ್ಯ, ಸಂವಾದದ ಹಾಡುಗಳನ್ನು ಹಾಡುವವರೆಗೆ ಮುಂದುವರೆಯುತ್ತದೆ.

ದೇವರ ಸ್ಮರಣೆ :

ಹಂತಿಯಹೊಡೆಯುದಕ ಎಂತವನ ನೆನಿಬೆಕ
ಕಂತುಹರ ನಿನ ಭಕ್ತರನು ನೆನೆಸಿದರ
ಸಂತೋಷ ನೀಡೋ ಪರಶಿವನೆ

ಕಣದಾಗ ಬಂದೇವ ಕೈಮುಗದ ನಿಂತೇವ
ಸಣ್ಣ ಬಾಲಕರು ಹಾಡುದಕ ಗಣರಾಯ
ಕರಣೆಟ್ಟು ವರವ ಕೊಡು ನಮಗ

ಶಿವ ಶಿವ ಎನಬೇಕೊ ಶಿವಧ್ಯಾನ ಮಾಡಬೇಕೊ
ಶಿವನಿಗೆ ಮೊದಲು ನೆನಿಬೆಕೊ ಹಂತಿಕಟ್ಟಿ
ಪಾರ್ವತಿ ಪಾದಾ ಹಿಡಿಬೇಕೋ

ಹೀಗೆ ದೇವರು, ದೈವವನ್ನು ತಮ್ಮ ಹಂತಿ ಹಾಡುಗಳಲ್ಲೇ ಸ್ಮರಿಸುತ್ತ ಹಾಡಲು ಆರಂಭಿಸುತ್ತಾರೆ.

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹಾಲು ಹುಲು ಸಂಕಣ ಕಣಕೆ ಒಕ್ಕಲಿಗ
ಬಸವ ಹೊಲಗೆಲಸ ಕಡೆವಾದಕ

ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯಶಿವ ಮಂತ್ರ ನಿನ್ಹೆಸರು ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ

ಹಂತಿಯ ಹೊಡಿವಾಗ ಯಾವಾನ್ನ ನೆನಿಬೇಕೊ
ನಾಕ ಕಾಲಿನ ಬಸವನೋ ನೆನೆದರೆ
ನಾಗಂಡಗ ರಾಶಿ ನಡಮನಿಗೋ

ಸತ್ತರು ಮಡಿದಿನಲ್ಲೋ ಜತ್ತೀಗಿ ಮಿಣಿಯಾಗಿ
ಕಾಲೀನ ಮೆಟ್ಟ್ಯಾಗಿ ಸಲುವಿನೋ ನಾ
ಯಾರಿಗೆ ದುಸ್ಮಾನ ಹೇಳೋ ಒಕ್ಕಲಿಗ

ಇದ್ದರೂ ಸತ್ತರೂ ಬಸವ ಉಪಯೋಗ, ಜೊತೆಗೆ ಬಸವಣ್ಣನಿಗೆ ಯಾರೂ ಶತ್ರುಗಳಿಲ್ಲ ಎಂಬ ವಿಚಾರ ಇಲ್ಲಿದೆ.

ಕಾಳು ಕಡಿಗಿ ಮಾಡೊ ಹಂತಿ : ಯಾವುದೇ ಸಂದರ್ಭದಲ್ಲೂ ಗಣಪನನ್ನು ನೆನೆಯುವುದು ವಾಡಿಕೆ.

ಹಂತಿಯ ಕಟ್ಟೂತ ಎಂಥವನ ನೆನಿಬೇಕ
ಉದ್ದ ಸೊಂಡಿಯ ಗಣಪನ್ನ ನೆನೆದರ
ಬರಲಾರದ ಹಾಡ ಬರುತಾವ

ಕಾಳುಕಡಿಗಿ ಮಾಡುವ ಹಂತಿ ಪದ
ಗಣಪನನ್ನು ನೆನೆಯುತ್ತಲೇ
ಆರಂಭಗೊಂಡಿದೆ

ಹಳ್ಳದ ಹೊಲದಾಗ ಹಂತಿಯ ಕಟ್ಟೀನಿ
ಬೆಳ್ಳ ಬೆಳತನಕ ನಿದ್ದಿಲ್ಲೋ ಬಸವಣ್ಣ
ಕಣದಾನ ಕಾಳು ಹುಲುಸ್ಯಾಗೊ

ಹಂತಿಯ ಎತಗೋಳು ಪಂತಿಲೆನಿಂತಾವ
ಹಾದಿಲಿ ಸುಂಕಜಾಡಸ್ತಾವೋ ಬಸವಣ್ಣ
ಸುಂಕಿಗಿ ಸಾವಿರ ಬೆಳೆಯುವೆ

ಬನ್ನಿ ಮೇಟಿಯ ಹುಗದ ಮುನ್ನೂರ ಬಸವನ ಕಟ್ಟಿ
ಹಾರ್ಯಾಡಿ ಹಂತಿ ಹೊಡಿದೇವ್ರೋ ಬಸವಣ್ಣ
ಕಣದಾನ ಕಂಕಿ ಎಳದಾನೋ

ಇಂಥ ಸ್ತುತಿ, ಶೃಂಗಾರ, ಹಾಸ್ಯಭರಿತವಾದ ಹಂತಿ ಪದಗಳನ್ನು ಹಾಡುತ್ತ ಸುಂಕರಾಶಿಯನ್ನು ತೂರುವ ಬುಟ್ಟಿಯಲ್ಲಿ ತುಂಬಿ ಕೊಟ್ಟದ್ದನ್ನು, ತೂರಿದ್ದನ್ನು, ರಾಶಿ ಮಾಡಿ ಪೂಜೆ ಮಾಡಿ ಜ್ವಾಳಾ ಹಗೆಗೆ ಹಾಕಿದ ವಿಚಾರಗಳು ಸೊಗಸಾಗಿ ಮೂಡಿಬಂದಿವೆ.

'ಒಕ್ಕಲಿಗ ಒಕ್ಕದಿರೆ ಬಿಕ್ಕುವುದು ಜಗವೆಲ್ಲ' ಎಂಬ ಮಾತುಗಳನ್ನು ನಾವು ಮರೆಯುವ ಹಾಗಿಲ್ಲ. ನಮ್ಮ ರೈತರು ಯುಗಾದಿ ಹಬ್ಬದ ದಿನದಂದು ಅಂದರೆ ಹೊಸ ವರ್ಷದ ದಿನ ಹೊಲ ಗದ್ದೆಗಳಲ್ಲಿ ಕುಂಟಿ ಹೊಡೆ ಐದುಸುತ್ತು ಹರಗಿ ಭೂಮಿ ಪೂಜೆ ಮಾಡಿ ಹೊಸ ವರ್ಷದ ಕೃಷಿಯನ್ನು ಆರಂಭಿಸುತ್ತಾರೆ. ಇಲ್ಲಿಂದ ಭೂಮಿಯನ್ನು ಉತ್ತುವ ಮೂಲಕ ಹೊಲದ ಗದ್ದೆಯ ಮಣ್ಣು ಬುಡುಮೇಲಾಗಿ ಮಣ್ಣಿನ ಫಲವತ್ತತೆ ಹೆಚ್ಚಲು ರಂಟಿ ಕುಂಟಿ ಹೊಡೆದು ಹೊಲಗದ್ದೆಗಳನ್ನು ಬದುಕು ಮಾಡುತ್ತಾರೆ. ಮಳೆರಾಯನಿಗಾಗಿ ಹಾದಿ ಕಾಯುತ್ತಿರುತ್ತಾರೆ. ಮಳೆಗಾಲ ಆರಂಭವಾಯಿತೆಂದರೆ ಸಾಕು ಹೊಲಗದ್ದೆಯ ಮಣ್ಣು ತೊಯ್ದು ಹದವಾಗಿರುವಾಗ ಬೆದಿನೋಡಿ ಬೀಜ ಬಿತ್ತುತ್ತಾರೆ. ಬೀಜ ಮೊಳಕೆಯೊಡೆದು ಪೈರಾಗಿ ಬೆಳೆ ಬೆಳೆದು ಕಟಾವಿಗೆ ಬಂದು ನಿಂತಿರುವಾಗ ರೈತರಿಗೆ ಎಲ್ಲಿಲ್ಲದ ಆನಂದ. ಈ ಆನಂದವನ್ನು ಹೇಳತೀರದು, ಫಲಭರಿತಳಾದ ಭೂದೇವಿಯನ್ನು ನೋಡಿ ರೈತರು ಸಂತಸದಿಂದ ನಕ್ಕುನಲಿದಾಡುತ್ತಾರೆ ಹಾಡು ಹೇಳಿ ಕುಣಿದಾಡುತ್ತಾರೆ.

ಬನ್ನೀಯ ಮರದವ್ವ ಹೊನ್ನಿನ ಕಳಸವ್ವ
ಚೆನ್ನದ ಸೀರಿ ತಂದೀನಿ ಉಡಬಾರ
ಭೂದೇವಿ ಚೆನ್ನದ ಫಸಲ ನೀಡವ್ವ

ಬನ್ನೀಯ ಮರದವ್ವ ಮನ್ನಿಸು ಎನಮಾತ
ಹೊನ್ನ ಖ್ಯಾದಿಗಿ ಹಡದವ್ವ ಭೂಮ್ತಾಯಿ
ಹಿಂಗಿಸು ನಮ್ಮ ಬಡತನ

ಹತ್ತಿ ಹೂವಿನ ಸೀರಿ ತೆಕ್ಕಿತುಂಬ ನೀರಿಗಿ
ಬಿಚ್ಚಿಹರಿವ್ಯಾಳೋ ಭೂಮ್ಯಾಗ ಆ ತಾಯಿ
ಒಕ್ಕಲೆರ್ಯಾಳೋ ಮೇಟ್ಯಾಗೋ

ಭೂತಾಯಿ ಬಲದಿಂದ ಹುಟ್ಟ್ಯಾನೋ ಬಸವಣ್ಣ
ರೈತಗ ವರವ ತರತಾನೋ ಬಸವಣ್ಣ
ಮುತ್ತಿನ ತೆನಿಯ ತಂದಾನೋ

ಇಂಥ ಹಾಡುಗಳನ್ನು ಹೇಳಿ ಭೂದೇವಿಯನ್ನು ಕೊಂಡಾಡಿ ಅವಳಿಗೆ ಧನ್ಯತಾ ಭಾವದಿಂದ ಭಕ್ತಿ ಸಮರ್ಪಿಸಲೊಸುಗ ಬಯಕೆ ತೀರಿಸಲೆಂದು ರೈತರು ಶೀಗಿಹುಣ್ಣಿಮೆ ಎಳ್ಳ ಅಮಾವಾಸ್ಯೆಯಂದು ತರತರಹದ ಅಡುಗೆ ಮಾಡಿ ಭೂದೇವಿಗೆ ಎಡೆ ಹಿಡಿದು ತನ್ನ ಬಂಧು ಬಳಗದೊಂದಿಗೆ ಭೂತಾಯಿ ಮಡಿಲಲ್ಲಿ ಉಂಡುಟ್ಟು ಸಂತಸ ಪಡುತ್ತಾರೆ. ಫಸಲನ್ನು ಕಟಾವು ಮಾಡಿಕೊಂಡು ಊರ ಹೊರಗೆ ಮಾಡಿದ ಕಣದಲ್ಲಿ ತೆನೆಗಳನ್ನು ಗೂಡು ಹಾಕುತ್ತಾರೆ.

ಕಣ ಮಾಡುವುದು : ಕಣ ಎಂದರೆ ಕಾಳು ಕಡಿ, ಕಡಿಗಿ ಮಾಡುವ ಸ್ಥಳ. ಹಸನು ಮಾಡುವ ಜಾಗ ಎಂಬರ್ಥ ಹೊಂದಿದ್ದು ಇದು ದುಂಡಾಗಿರುವುದರಿಂದ ಸೂರ್ಯ ಚಂದ್ರರಿಗೆ ಹೋಲಿಕೆ ನೀಡುವುದುಂಟು.

ರೈತರು ಕಣವನ್ನು ಸಿಕ್ಕ ಸಿಕ್ಕಲ್ಲಿ ಮಾಡುವುದಿಲ್ಲ. ಕೆರೆದಂಡೆ ಹೊಳೆ ಅಕ್ಕಪಕ್ಕ ಹೊಂಡದ ಸಮೀಪ ಉಸುಕು, ಹಳ್ಳು ಇರದಂತಹ ಸ್ಥಳ ನೋಡಿ ಅಲ್ಲಿರುವ ಗಿಡಗಂಟಿ ಕಿತ್ತು ಹರಗಿ ನೀರು ಉಣಿಸಿ ಮಣ್ಣನ್ನು ತೋಯಿಸುತ್ತಾರೆ. ಒಂದು ರಾತ್ರಿ ಬಿಟ್ಟು ಮಾರನೆಯ ದಿನ ಹತ್ತಿಪ್ಪತ್ತು ದನ ಕರು ಎತ್ತುಗಳನ್ನು ಡಾವಣಿಕಟ್ಟಿ ತುಳಿಸುತ್ತಾರೆ. ಕೆಲವೊಮ್ಮೆ ಕಲ್ಲಿನ ರೂಲನ್ನು ಎತ್ತುಗಳೊಂದಿಗೆ ಹೂಡಿ ಹೊಡಿಯುತ್ತಾರೆ. ಇನ್ನು ಕೆಲವು ಸಲ ಬಡಿಮುಣಿಗೆಯಿಂದ ಬಡಿಯುುವುದರಿಂದ, ದಮ್ಮಸಿನಿಂದ ಬಡಿಯುವುದರೊಂದಿಗೆ ತೊಯ್ದ ಮಣ್ಣು ಗಟ್ಟಿಯಾಗಿ ಕುಳಿತು ಒಂದು ಕಾಳು ಬಿದ್ದರು ಸಹಿತ ಹಾಳಾಗದಂತೆ ಕಾಪಾಡುತ್ತದೆ. ಮುಂದೆ ಎತ್ತಿನ, ಆಕಳ ಸಗಣಿಯನ್ನು ನೀರಿನಿಂದ ಕಲೆಸಿ ಕಣತುಂಬ ಹಾಕಿ ತೊಗರಿ ಕಟ್ಟಿಗೆಯಿಂದ ಸಾರಿಸಿ ಕಣವನ್ನು ಸಿದ್ಧಗೊಳಿಸುತ್ತಾರೆ. ಕಾಳು ಒಕ್ಕಲು ಮಾಡಲು ಕಣ ಸಿದ್ಧವಾಗುತ್ತದೆ.

ಹಾದಿಗೆ ಮಣ್ಣು ಹಾಕುವುದು : ಕಣಮಾಡುವಾಗ ಹೊಲದ ಮಧ್ಯದಲ್ಲಿದ್ದ ಮಣ್ಣನ್ನು ತೆಗೆದು ಕಣದ ಸುತ್ತ ಹಾಕಿರುತ್ತಾರೆ. ಇಲ್ಲಿಯ ಎರಡು ಬುಟ್ಟಿ ಮಣ್ಣನ್ನು ಕಣ ಮಾಡಿದ ಸ್ಥಳಕ್ಕೆ ಸಮೀಪವಿರುವ ದಾರಿಗೆ ಅಡ್ಡವಾಗಿ ಎರಡು ಬುಟ್ಟಿ ಮಣ್ಣನ್ನು ಹಾಕಿ ಬರುತ್ತಾರೆ. ಅನಂತರ ತನ್ನ ಒಕ್ಕಲುತನಕ್ಕೆ ನೆರವಾದ ಆಯಗಾರರು ಭಿಕ್ಷುಕರು ಈ ಕಣದ ಕಾಳುಗಳಿಂದ ದಾನ ಧರ್ಮಗಳಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಈ ರೀತಿ ಹಾದಿಗೆ ಮಣ್ಣು ಹಾಕುತ್ತಾರೆ.

ಎಲ್ಲರೂ (ಸ್ವಾಮಿಗಳು, ಮಠಪತಿಯರು, ಹೂಗಾರರು, ಬಡಿಗೇರ, ಕುಂಬಾರ, ಕಮ್ಮಾರ, ಚಮ್ಮಾರ, ಮಡಿವಾಳರು, ಉಪ್ಪಾರ, ಮುಂತಾದವರು) ಪಾಲ್ಗೊಳ್ಳಬೇಕೆಂಬ ಇಳೆ (ಆಮಂತ್ರಣ) ನೀಡಿದಂತಾಗುತ್ತದೆ. ಈ ರೀತಿ ಮಣ್ಣು ಹಾಕುವುದರಿಂದ ಆಯಗಾರರು, ಭಿಕ್ಷುಕರು ದಾರಿಯಲ್ಲಿ ಹೋಗುವಾಗ ಈ ಮಣ್ಣಿನ ಗುಂಪು ನೋಡಿ ಅಲ್ಲಿಂದ ಕಣ ಹುಡುಕಿಕೊಂಡು ಬಂದು ಕಣದಲ್ಲಿರುವ ಜೋಳ, ಇತರ ಕಾಳು ಕಡಿಗಳನ್ನು ಪಡೆದುಕೊಂಡು ಬರುತ್ತಾರೆ. ಕಣದ ಗುರುತು ಸಿಗಲೆಂದೇ ಈ ರೀತಿ ದಾರಿಗೆ ಮಣ್ಣು ಹಾಕುವುದು ಅದರ ಹಿಂದಿನ ಮುಖ್ಯ ಉದ್ದೇಶವಾಗಿದೆ.

ಮೇಟಿ ನೆಡುವುದು : 'ಕಣ' ಸಜ್ಜಾದ ಬಳಿಕ ಮಧ್ಯದಲ್ಲಿ ಬನ್ನಿಯ ಮರದ ಉದ್ದನೆಯ ಬಡ್ಡಿಯನ್ನು ತಂದು ತಗ್ಗು ತೆಗೆದು ಅದರಲ್ಲಿ ಹಾಲು ತುಪ್ಪ ಒಂದು ಪಾವಲಿಯನ್ನು ಹಾಕಿ ಶುಭಮುಹೂರ್ತದಲ್ಲಿ ಈ ಮೇಟಿಯನ್ನು ನೆಡುತ್ತಾರೆ. ಕಣದ ಮಧ್ಯೆ ನೆಟ್ಟ ಮೇಟಿಗೆ ಸುಣ್ಣ ಕೆಮ್ಮಣ್ಣು ಹಚ್ಚಿ ಮೇಟಿಯ ತುದಿಗೆ ಕರಿ ಕಂಬಳಿ ತುಂಡನ್ನು ಜೋಳದ ತೆನೆಗಳನ್ನು ಕಟ್ಟಿ ಸಂಭ್ರಮದಿಂದ ಪೂಜೆ ಮಾಡಿ ಕಣದಲ್ಲಿ ಕಾಳಿನ ರಾಶಿ ಹುಲಸು ಆಗಲಿಯೆಂದು ಬೇಡಿಕೊಂಡು ಮೇಟಿಯ ಸುತ್ತ ತೆನೆಗಳನ್ನು ಹರವುತ್ತಾರೆ. ಬಳಿಕ ಹಂತಿ ಕಟ್ಟುತ್ತಾರೆ.

ಅಕ್ಕಪಕ್ಕದಲ್ಲಿ ಕಣ ಮಾಡಿದವರು ಪರಸ್ಪರ ವಾದವಿವಾದಗಳ ಮೂಲಕ ಒಗಟುಗಳನ್ನು ಬಿಡಿಸುವ ಮೂಲಕ ಪ್ರಶ್ನೋತ್ತರ ಮಾದರಿಯ ಸಂವಾದ ಮಾಡುವ ಉದಾಹರಣೆ ಹೀಗಿದೆ :

ಒಂದನೆಯ ಕಣದವರ ಪ್ರಶ್ನೆ :

ಕೈಯುಂಟು ಕಾಲಿಲ್ಲ ಸಿರಿವರದ ಮುಂಡ
ಮೈಯೆಲ್ಲ ನವಗಾಯ ಒಂಬತ್ತು ತುಂಡ
ಓಡಿ ಬಂದವನೇ ಹೆಗಲೇರಿಕೊಂಡ
ಇದು ಬಿಡಿಸಿ ಹೇಳೋ..... ಬಿಡಿಸಿ ಹೇಳೋ.....

ಎರಡನೆಯ ಕಣದವರ ಉತ್ತರ :

ನೀನು ಹೇಳಿದ ಬೆಡಗು ಅಂಗಿಕಾಣಣ್ಣ
ಒಂಬತ್ತ ಗಾಯಂದ್ರ ತುಂಡುಕಾಣಣ್ಣ ಸಿಂಪಿಗ
ಹೊಲೆದಂತ ಅಂಗಿ ಕಾಣಣ್ಣ

ಒಂದನೆಯ ಕಣದವರ ಪ್ರಶ್ನೆ :

ಸಣ್ಣಾಂವ್ಗ ಸಣ್ಣ ಕುಂಡಿ ದೊಡ್ಡಾಂವಗ ದೊಡ್ಡ ಕುಂಡಿ
ಒಬ್ಬಾವಗ ಕುಂಡಿ ಮೊದಲಿಲ್ಲೋ..... ಕೇಳೋಗೆಳೆಯಾ
ನನ್ನ ಒಗಟಿನರ್ಥ ಬಿಡಿಸ್ಹೇಳೋ.....

ಎರಡನೆಯ ಕಣದವರ ಉತ್ತರ :

ಸೂಜಿಗಿ ಸಣ್ಣ ಕುಂಡಿ ಡಬ್ಬಣಕ ದೊಡ್ಡ ಕುಂಡಿ
ತಕಲೀಗಿ ಮೊದಲ ಕುಂಡಿಲ್ಲೊ ಏ ಗೆಳೆಯಾ
ನಿನ ಒಗಟಿನರ್ಥ ಬಿಡಿಸೇನೋ.....

ಇಂಥ ವಾದ ಸಂವಾದದ ಅನುಭವ ಒಗಟಿನ ಗೂಢಾರ್ಥಗಳ ಹಂತಿ ಹಾಡುಗಳನ್ನು ಹೇಳುತ್ತ ನಿದ್ದೆಯನ್ನು ದೂರಮಾಡಿ ತೆನೆಯ ಕಾಳು ಮತ್ತು ಕಂಕಿ ಬೇರೆ ಮಾಡಿ ಸುಂಕ ರಾಶಿ ಮಾಡುತ್ತಾರೆ.

ಸುಂಕರಾಶಿ ಪೂಜೆ : ಬೆಳ್ಳ ಬೆಳತನಕ ಕಟ್ಟಿದ ಹಂತಿಗೆ ತೆನೆಯಲ್ಲಿರುವ ಎಲ್ಲ ಕಾಳು ಕಡಿಗಾಗಿ ಕಂಕಿ ಬೇರೆ ಕಾಳು ಬೇರೆಯಾಗುತ್ತವೆ. ಜಂತ ಗುಂಟಿಯಿಂದ ಈ ಕಂಕಿ ಬೇರ್ಪಡಿಸಿ ಸುಂಕಭರಿತ ಈ ಕಾಳುಗಳನ್ನು ಕಣದಲ್ಲಿ ಉದ್ದಗೆ ರಾಶಿ ಮಾಡುತ್ತಾರೆ ಇದೇ ಸುಂಕರಾಶಿ. ರಾಶಿಗೆ ಗ್ವಾರಿಯಿಂದ ಸುತ್ತಲು ಗೆರೆಹೊಡೆದು ತುದಿಯಲ್ಲಿ ಜೋಳದ ತೆನೆಗಳನ್ನು ಮಾವಿನ ಟೊಂಗಿಗಳನ್ನು ಚುಚ್ಚಿ ಪೂರ್ವಾಭಿಮುಖವಾಗಿ ಸುಂಕ ರಾಶಿಯ ಮುಂದೆ ಐದು ಬೆಣಚು ಕಲ್ಲುಗಳನ್ನು ಅಥವಾ ಮಣ್ಣಿನ ಹೆಂಟೆಗಳನ್ನು ಜೋಡಿಸಿ ಸುಣ್ಣ, ಕೆಮ್ಮಣ್ಣು ಹಚ್ಚಿ (ಇವುಗಳನ್ನು ಪಾಂಡವರೆಂದು ಭಾವಿಸಿ ಪೂಜಿಸುತ್ತಾರೆ) ಹತ್ತಿರದಲ್ಲಿ ಜೋಳದ ತೆನೆಗಳನ್ನು ಹಾಗೂ ಕಡೆಯ ಹಂತಿಯ ಬಿಡುವಾಗ ಎತ್ತು ಹಾಕಿದ ಸಗಣಿ ಹಾಗೂ ಎತ್ತಿನ ಬಾಲದ ಝುವಿಯಿಂದ ಮಾಡಿದ ಬೂದಪ್ಪನನ್ನು

ಇಟ್ಟು ಪೂಜೆಗೆ ಸಜ್ಜು ಮಾಡುತ್ತಾರೆ. ಅಲ್ಲದೆ ಸುಂಕ ರಾಶಿ ಮಾಡಲು ನೆರವಾದ ಗ್ಯಾರಿ, ಜಂತಗುಂಟಿ, ಕಟಿಗಿ ಹಿಡಿಯನ್ನು ಸುಂಕ ರಾಶಿಯಲ್ಲಿ ಚುಚ್ಚಿ ಮನೆ ಮಂದಿ ಕೂಡಿಕೊಂಡು ಸಂಭ್ರಮ, ಸಡಗರದಿಂದ ಪೂಜಿಸುತ್ತಾರೆ. ಸುಂಕ ಬುತ್ತಿ ಯಡೆ ಹಿಡುತ್ತಾರೆ. ಈ ದಿನ ಸುಂಕ ಬುತ್ತಿ ಊಟ ಮಾಡುವುದೆ ಶ್ರೇಷ್ಠ. ಇದನ್ನು ಅಕ್ಕ ಪಕ್ಕದ ಮನೆಯವರಿಗೆ, ಕಣದಲ್ಲಿ ರಾಶಿ ಮಾಡಲು ಆಸರಾದವರಿಗೆ ಕೊಟ್ಟು ಪರಸ್ಪರ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತಾರೆ.

ಸುಂಕರಾಶಿ ತೂರುವುದು : ರೈತರು ಬೆಳತನಕ ಹಂತಿಹೊಡೆದು ಸುಂಕರಾಸಿ ಪೂಜೆಮಾಡಿ ಸುಂಕಬುತ್ತಿ ಉಂಡು ತುಸು ಹೊತ್ತು ನಿದ್ದೆ ಮಾಡಿ ತೂರಲು ಸಜ್ಜಾಗುತ್ತಾರೆ. ಈ ರಾಶಿ ಸುಂಕದಿಂದ ಕೂಡಿರುವುದರಿಂದ ಸುಂಕ ಮೈಕೈಗೆ ಹತ್ತಿದರೆ ತಿಂಡಿ (ಕೆರೆತ) ಬಿಟ್ಟು ಕೆಲಸ ಮಾಡದಂತಾಗುತ್ತದೆ. ಬಿಸಿಲಲ್ಲಿ ಇದನ್ನು ಮಾಡುವ ಹಾಗಿಲ್ಲ. ಸಂಜೆ ಏಳು ಗಂಟೆ ಅನಂತರ ಕಣದಲ್ಲಿ ಹಚ್ಚಿದ ಮೂರು ಕಾಲಿನ ಮ್ಯಾಟದ ಮೇಲೆ ಹತ್ತಿ ನಿಂತು ತೂರಲು ಪ್ರಾರಂಭಿಸುತ್ತಾರೆ. ಇಲ್ಲೂ ಬ್ಯಾಸರಿಕೆ ಆಸರಿಕೆ ನಿವಾರಿಸಿಕೊಳ್ಳಲು ತೂರುವಾಗ ಪದಗಳನ್ನು ಹಾಡುತ್ತಾರೆ. ಇಲ್ಲಿಯ ಹಾಡುಗಳು ಭಿನ್ನವಾಗಿರುತ್ತವೆ. ಮಳೆ, ಗಾಳಿ, ಕಣ, ರಾಶಿ. ಇತರ ಅಂಶಗಳ ಬಗ್ಗೆ ಹಾಡು ಹೇಳಿ ಬೆಳತನಕ ಸುಂಕರಾಶಿ ತೂರುತ್ತಾರೆ.

ಗಾಳಿಪೂಜೆ : ಮೂಡಗಾಳಿ, ಮೇಗಾಳಿ, ಹಿಗ್ಗಾಳಿ, ಮುಗ್ಗಾಳಿಗಳು ಬೀಸಿದರೂ ತಮಗೆ ಐಸಿರಿ ಉಂಟಾಗಲೆಂದು ಪ್ರಾರ್ಥಿಸುವ ಪರಿ ಇಂತಿದೆ : ಗಾಳಿ ಜೋರಾಗಿ ಬೀಸಿ ದವಸ ಧಾನ್ಯಗಳನ್ನು ಹಾಳು ಮಾಡದಿರಲೆಂದು

ಮೂಡಗಳಿ ಬೀಸಿದರೆ ಮೆದಿಹುಲ್ಲು ಹುಲುಸಾತೊ
ಮುಗ್ದ ಪಾರಮ್ಮನ ನೆನೆದರ ಮಲ್ಲೇಶಪ್ಪನ
ಹಂತೀಯ ರಾಶಿ ಇಮ್ಮಡ್ಯಾತೋ.....

ಹಿಗ್ಗಾಳಿ ಮುಗ್ಗಾಳಿ ಬಂದಿರೋ ಕಣದಾಗೊ
ಕುಗ್ಗಿದ ಗುಣವ ಕೊಡದಿರೋ ಈ ಮನಕೆ
ಮೇಲಾದ ಐಸಿರಿ ಕೊಡಬೇಕೋ.....
ಎತ್ತಿನ ಪಾದದಿ ಮುತ್ತಿನ ಜ್ಯಾಳ
ಸುತ್ತ ಕುಡಿಸೇನೋ ಹವಳದ ಕಾಳ ಅಣ್ಣಯ್ಯ
ಹೊತ್ತುತ್ತ ತರಬಾರ ನೂರಾರು ಕಾಳು ಆಳ.....

ಮಾಯದ ಗಾಳಿ ಬಂತು ಬರ‍್ರಾನೆ ಬೀಸೂತ
ಶ್ರೀಶೈಲ ಶಿಖರಕ್ಕೆ ಸಮನಾದ ರಾಶಿ ಅಣ್ಣಯ್ಯ
ಮಲ್ಲಿಗಿ ದಂಡಿಲಿ ಪೂಜೆ
ಹಂತಿಯ ಹೊಡಿವಾಗ ಏನೇನೋ ಊಟ
ಹಿಟ್ಟು, ಹರವಿ ಪಲ್ಲೆ ಕೈ ತುಂಬಾ ಸುಚ್ಚ
ಸುಂಕ ಬುತ್ತಿ ಊಟಾ ಹೊಡಿಯಣ್ಣ.....

ಇಂಥ ಅನೇಕ ಪದಗಳನ್ನು ಹಾಡುತ್ತ ಸುಂಕರಾಶಿಯನ್ನು ತೂರಿ ಸುಂಕ ಬೇರೆ, ಪಕ್ಕಾ ಕಾಳು ಬೇರೆ, ಕಡ್ಡಿ ಕಸರು, ಗೊಂಡಾಳಿ, ಕಾಳು ಬೇರೆ ಮಾಡಿ ಹಸನು ಮಾಡಿ ರಾಶಿ ಮಾಡುತ್ತಾರೆ. ಮೇಟಿಗೆ ಮಧ್ಯಮಾಡಿಕೊಂಡು ಬುಟ್ಟಿಯಿಂದ ತೂರಿದ ಕಾಳುಗಳನ್ನು ತುಂಬಿ ತುಂಬಿ ಹಾಕುತ್ತ ಶಂಕುವಿನಾಕಾರದ ಜೋಳದ ರಾಶಿ ತಯಾರು ಮಾಡುತ್ತಾರೆ. ಈ ರಾಶಿಗೆ ಹಸನಾದ ರಾಶಿ, ತೂರಿದ ರಾಶಿ, ಪಕ್ಕಾ ರಾಶಿ, ಚೊಕ್ಕ ರಾಶಿ ಎಂಬ ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಈ ರೀತಿ ರಾಶಿ ಮಾಡಿ ಗ್ಯಾರಿಯಿಂದ ಸುತ್ತಲೂ ಗೆರೆ ಹೊಡೆದು ರಾಶಿಗೆ ನೆದರಾಗಬಾರದೆಂದು ಕರಿಬಂಟನಿಂದ ವಿವಿಧ ಚಿತ್ರ ಬಿಡಿಸುತ್ತಾರೆ.

ಕರಿಬಂಟನನ್ನು ತಯಾರಿಸಿ ಹಾಕುವುದು : ಕಡೆಸುತ್ತಿನ ಹಂತಿಯ ಕಂಕಿಗಳನ್ನು ತೆಗೆದುಕೊಂಡು ಸುಟ್ಟು ಆದರಿಂದ ತಯಾರಿಸಿದ ಕರಿಬಂಟನಿಂದ ಬಳಿ ಮುತ್ತಿನಂತ ಕಾಳಿನ ರಾಶಿಗೆ ನೆದರಾಗಬಾರದೆಂದು ಈ ಕರಿಬಂಟನಿಂದ ಸೂರ್ಯ, ಚಂದ್ರ, ಎತ್ತು, ಸರಸ್ವತಿ ಇತರ ದೇವರ ಚಿತ್ರಗಳನ್ನು ಬರೆದು ಅಲಂಕಾರಕ್ಕಾಗಿ ರಂಗೋಲಿಯಂತೆ ಜೋಳದ ರಾಶಿಗೆ ಗೆರೆಗುಂಟ ಸುತ್ತಲೂ ಕರಿಬಂಟನ ಕಾಡಿಗೆಯಿಂದ ರಂಗೋಲಿ ಹಾಕುತ್ತಾರೆ. ಹೀಗೆ ಮಾಡಿದಾಗ ಜೋಳದ ರಾಶಿ ಪೂಜೆಗೆ ಸಜ್ಜಾದಂತೆ. ಈ ಕರಿಬಂಟನ ಬಗ್ಗೆ ಹಂತಿಯಲ್ಲಿ ಹಾಡುತ್ತಾರೆ.

ಕರಿಬಂಟ :

ಕರಿಯ ಬಂಟನ ಬೂದಿ ರಾಶಿ ಸುತ್ತಲೂ ಹಾಕಿ
ಮಿಗಿಲಾದ ಭೂಮಿತಾಯಿ ಬೇಡಿದರ
ಹಂತಿಯ ರಾಶಿ ಹುಲುಸಾತೋ

ಬೂದಪ್ಪನಿನ ಪೂಜೆ ಆದರದಿ ಮಾಡುವೆನು
ಕಣದಾಗ ನಿನ ನಿಜ ತೋರೊ ರೈತರಿಗೆ
ಕಣ ತುಂಬ ಕಾಳು ಕೊಡಬಾರೋ

ಬೂದಪ್ಪನ ಬಗ್ಗೆ ಅನೇಕ ಹಂತಿ ಹಾಡು ಹಾಡುತ್ತ ತೂರಿದ ರಾಶಿಯನ್ನು ಪೂಜೆಗೆ ಅಣಿಗೊಳಿಸುತ್ತಾರೆ.

ರಾಶಿ ಪೂಜೆ / ಹಗೇಕ ಜ್ಯಾಳಹಾಕುವುದು : ಕಣದ ಮಧ್ಯ ರಾಶಿ ಮಾಡಿ ಕರಿಬಂಟನನ್ನು ಹಾಕಿದ ಬಳಿಕ ಈ ರಾಶಿಯಲ್ಲಿ ಗ್ಯಾರಿ, ಜಂತಗುಂಟಿ, ತೊಗರಿ ಕಟಿಗಿ ಹಿಡಿಗಳಂತಹ ಸಾಮಗ್ರಿಗಳನ್ನು ಚುಚ್ಚಿ ಐದು ಹೆಂಟೆಗಳನ್ನು ಮತ್ತು ಬೂದಪ್ಪನನ್ನು ರಾಶಿಯ ಮುಂದೆ ಇಟ್ಟು ಜೋಳದ ತೆನೆಗಳನ್ನು ಜೋಡಿಸಿಟ್ಟು ಪೂಜೆಗೆ ಸಜ್ಜುಗೊಳಿಸುತ್ತಾರೆ. ಈ ರಾಶಿ ಪೂಜೆಗೆ ಮನೆಯ ಅಕ್ಕ ತಂಗೇರು ಬರಲೇಬೇಕು. ಅವರಿಂದಲೇ ಈ ರಾಶಿ ಪೂಜೆ ಆಗಬೇಕೆಂಬ ಸಂಪ್ರದಾಯವಿತ್ತು. ಆದ್ದರಿಂದ ಅವರು ಗಂಡನ ಮನೆಯಲ್ಲಿದ್ದರೂ ಕೊಲ್ಲಾರಿಬಂಡಿಯೊಂದಿಗೆ ಅವರನ್ನು ಕರೆದುಕೊಂಡು ಪೂಜೆಗೆ ಬರುತ್ತಿದ್ದರು. ಮೊದಲು ಇವರಿಂದ ರಾಶಿ ಪೂಜೆ ಮಾಡಿಸಿ ಅವರಿಗೆ ಅವರವರ ಶಕ್ತ್ಯಾನುಸಾರವಾಗಿ ಜೋಳವನ್ನು ಮೊದಲು ಕೊಟ್ಟು, ಅನಂತರ ಆಯಗಾರರಿಗೆ, ಹಿರೇಮಠ ಸ್ವಾಮಿಗಳಿಗೆ, ಭಿಕ್ಷುಕರಿಗೆ ದಾನ ಮಾಡುತ್ತಿದ್ದರು. ದಾನಮಾಡಿದ ಬಳಿಕ ಗುಡಾರಕಟ್ಟಿದ ಡಂಬರಗಿ ಚಕ್ಕಡಿಗೆ ಜ್ಯಾಳವನ್ನು ಹೇರುತ್ತಾರೆ. ಈ ಮೊದಲೇ ರೈತರು ಹಗೆ ತೆಗೆದು ಹಗೆಗೆ ಹೊಸ ಮೇವಿನ ಪೆಂಡಿ ಹಾಕಿ ಹೊಸ ಸುಂಕ ಹಾಕುವುದರೊಂದಿಗೆ ಹಗೆಯನ್ನು ಸ್ವಚ್ಛಗೊಳಿಸುತ್ತಾರೆ. ಈ ರೀತಿ ಸ್ವಚ್ಛಗೊಳಿಸಿದ ಈ ಹಗೆಗೆ ರಾಶಿಯ ಕಾಳುಗಳನ್ನು ತಂದು ತುಂಬುತ್ತಾರೆ. ಹೆಚ್ಚಾದ ಕಾಳುಗಳನ್ನು ಚೀಲಗಳಲ್ಲಿ ತುಂಬಿ ಮನೆಯಲ್ಲಿ ಒಂದರ ಮೇಲೊಂದು ಇಡುತ್ತಾರೆ. ಹೀಗೆ ಇಟ್ಟ ಜೋಳದ ಚೀಲಗಳ ಸಾಲಿಗೆ ಜೋಳದ ನಿಟ್ಟು ಎಂದು ಕರೆಯುತ್ತಾರೆ.

ಇಲ್ಲಿ ರಾಶಿ ಪೂಜೆ, ದಾನ ಧರ್ಮ ಮಾಡುವಾಗ, ಜ್ವಾಳಾ ಅಳೆಯುವಾಗ, ಕೊಡುವಾಗ ಸಹಿತ ವಿವಿಧ ಅನುಭವದ ಹಂತಿ ಹಾಡುಗಳನ್ನು ಹಾಡುತ್ತಾರೆ. ಅವು ಹೀಗಿವೆ :

ತಂಗಿ ಕರಿಯಾಕಹೋಗಿ ತಿಂಗಳ ತಡದಾನ
ತಂಗಿಪಾರಮ್ಮ ನಕರಿಹೋಗಿ ಮಲ್ಲೇಶಿ
ಬೀಗರ ಮನಿಮುಂದ ನಿಂತಾನೋ

ಮೇಟಿಯಹೊತ್ತಣ್ಣ ಪಾರಮ್ಮ ಉಟ್ಟಾಳ
ಲಿಂಬಿ ಪತ್ತಲ ಜರತಾರೋ ಉಟಕೊಂಡು
ರಾಶಿಗಾರುತಿ ಬೆಳಗ್ಯಾಳೋ

ಮುತ್ತಿನ ಉಡಿಯಕ್ಕಿ ಎತ್ತಿ ಉಡಿಯನು ತುಂಬಿ
ರಾಶಿಗಾರುತಿ ಬೆಳಗ್ಯಾಳೋ ಪಾರಮ್ಮನ ಅನುಗಾಲ
ತವರೂರ ಸಡಗರ ಹೇಳ್ಯಾಳೋ

ಹನ್ನೆರಡೆತ್ತಿನ ಹಂತಿ ಹೊನ್ನ ಮೇಟಿ ಕಂಬ
ಬಾಸಿಂಗ್ದ ಕೊಳಗ ಬಲಗೈಯ್ಯೋ ಕಂದಯ್ಯ
ರಾಶಿ ಅಳಿಯೋದ್ಕ ಬೆಳಗಾಯ್ತೋ

ಹಿಂದೆ ಬೆಳೆಯದ ಬೆಳೆಯು ಮುಂದು ಬಾರದ ಬೆಳೆಯು
ಇಂದು ಘನರಾಶಿ ಕಣ ತುಂಬಿ ಹೇರ ಚೀಲ ಕಲ್ಲಪ್ಪ
ಆಯಗಾರರಿಗೆ ಆಯ ಕೊಟ್ಟಾನೋ

ಇಂಥ ಅನೇಕ ಹಂತಿ ಹಾಡುಗಳನ್ನು ಹಂತಿ ಕಟ್ಟಿ ಬೆಳ್ಳ ಬೆಳತನಕ ಹಾಡಿ ತಮ್ಮ ಕಾಳುಗಳನ್ನು ಕಡಿಗೆ ಮಾಡಿಕೊಂಡು ತಮ್ಮ ಆಸರಿಕೆ ಬೇಸರಿಕೆಗಳನ್ನು ಈ ಹಂತಿ ಹಾಡುಗಳಲ್ಲೆ ಕಳೆದುಕೊಂಡಿದ್ದಾರೆ. ಆದರೆ ಇವೆಲ್ಲ ಇಂದು ಮಾಯವಾಗಿವೆ, ಕಣಗಳು ಕಾಣದಾಗಿವೆ, ನಮ್ಮ ಕಣಗಳು ಡಾಂಬರ ರಸ್ತೆಗೆ ಬಂದದ್ದರಿಂದ ಕಣದ ಹಿಂದಿನ ಎಲ್ಲ ಸಂಪ್ರದಾಯ ಆಚರಣೆಗಳು ಕಾಣದಾಗಿವೆ. ಆದರೂ ಇಲ್ಲಿ ನೋಡಿದ ಹಂತಿಯ ಹಾಡುಗಳು, ಹಳೆಯ ತಲೆಮಾರಿನ ಅಜ್ಜಂದಿರ ಬಾಯಲ್ಲಿ ಗಟ್ಟಿಯಾಗಿದ್ದು ಕೇಳ ಸಿಗುತ್ತವೆ. ನಾವಿಂದು ಕಣ ಮಾಡಿ ಹಂತಿ ಕಟ್ಟದೆ ಹೋದರೂ ಚಿಂತೆಯಿಲ್ಲ. ಆದರೆ ನಮ್ಮ ಹಿರಿಯರ ಅನುಭವಾಮೃತದ ಈ ಹಂತಿ ಹಾಡುಗಳನ್ನಾದರು ಉಳಿಸಿ ಬೆಳೆಸಿಕೊಂಡು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕಾರ್ಯ ಮಾಡಬೇಕಾಗಿದೆ.

ಆರ್.ಎಂಯು.

ಕೆಂದಾಳೆ ಇದರ ವೈಜ್ಞಾನಿಕ ಹೆಸರು. 'ಸ್ಲೀಶೆರ ಟ್ರೈಜುಗ'. ಇದು ಸ್ಯಾಪಿಂಡೇಸೀ ಕುಟುಂಬಕ್ಕೆ ಸೇರಿದೆ. ಭಾರತದಲ್ಲಿ ದೊರೆಯುವ ಅರಗು ಮರಗಳ ಪೈಕಿ ಇದು ಅತ್ಯುತ್ತಮವಾದುದು. ಇದನ್ನು ಸಿಲೋನ್ ಓಕ್ ಎಂದೂ ಕರೆಯುವುದಿದೆ. ಕನ್ನಡದಲ್ಲಿ ಸಗಡೆ ಕೆಂದಾಳ, ಚೆಂಡಾಲ ಎಂಬ ಹೆಸರುಗಳಿವೆ. ಮಿಶ್ರಪರ್ಣಪಾತಿ ಕಾಡುಗಳಿರುವ ಕರ್ನಾಟಕ, ಪಂಜಾಬ್, ಬಿಹಾರ, ಮಧ್ಯಪ್ರದೇಶ, ಹಿಮಾಲಯದ ತಪ್ಪಲು ಮತ್ತು ಶ್ರೀಲಂಕಾದ ಕಾಡುಗಳಲ್ಲಿ ಬೆಳೆಯುತ್ತದೆ. ಇದು ಪರ್ಯಾಯವಾಗಿ ಜೋಡಣೆಗೊಂಡ ಸಂಯುಕ್ತ ಮಾದರಿಯ ಎಲೆಗಳನ್ನು ಹೊಂದಿದೆ. ಹೂಗಳು ಏಕಲಿಂಗಿ ಅಥವಾ ದ್ವಿಲಿಂಗಿಗಳಾಗಿದ್ದು ಒಂದೇ ಮರದಲ್ಲೂ ಇರಬಹುದು. ಹಸರು ಮಿಶ್ರಿತ ಹಳದಿ ಬಣ್ಣದ ಹೂಗಳಿದ್ದು ಐದಾರು ಕೇಸರಗಳನ್ನು ಹೊಂದಿರುತ್ತದೆ. ಮೂರು ಕಾರ್ಪೆಲುಗಳ ಉಚ್ಚಸ್ಥಾನದ ಅಂಡಾಶಯವಿದೆ, ದಳಗಳಿಲ್ಲ.

ಅರಗು ಕೀಟಗಳನ್ನು ಸಾಕಿ ಇದರ ರೆಂಬೆಗಳ ಮೇಲೆ ಬಿಟ್ಟು ಬೆಲೆ ಬಾಳುವ ಅತ್ಯುತ್ತಮ ಅರಗನ್ನು ಉತ್ಪಾದಿಸುವರು. ಹದ ಮಾಡಲು ಕಷ್ಟವಾಗುವಂಥ ಚೌಬೀನೇ ಇದರದು. ಬಿಸಿಲಿನಲ್ಲಿ ಸೀಳಿಹೋಗುವುದರಿಂದ ಹಸಿಯಾಗಿರುವಾಗ ಕೊಯ್ದು ನೆರಳಿನಲ್ಲಿ ಒಣಗಿಸಬೇಕು. ಗಾಡಿ ಚಕ್ರ, ಯಂತ್ರದ ಕೆಲವು ಭಾಗಗಳಿಗೆ, ಗಿರಣಿಗಳಲ್ಲಿ ಭಾರವಾದ ಈ ಚೌಬೀನೆ ಬಳಸುತ್ತಾರೆ. ಆಯುಧಗಳ ಹಿಡಿಕೆ, ಗಣಿಗಳಲ್ಲಿ ಆಸರೆ ಕಂಬವಾಗಿಯೂ ಬಳಕೆಯಾಗುತ್ತದೆ. ಬೀಜದಲ್ಲಿ ಎಣ್ಣೆ ಅಂಶವಿದ್ದು ಸಾಬೂನು ಮತ್ತು ಸುಗಂಧ ತೈಲ ತಯಾರಿಕೆ, ದೀಪ ಉರಿಸಲು ಬಳಸುವುದುಂಟು.

ಜಿ.ಎನ್.ಎಸ್.

ಕೆಸುವು ಇದರ ವೈಜ್ಞಾನಿಕ ಹೆಸರು 'ಕಾಲೋಕೇಸಿಯ ಅಂಟಿಕೋರಮ್', 'ಏರೇಸೀ' ಕುಟುಂಬಕ್ಕೆ ಸೇರಿದೆ. ಕನ್ನಡದಲ್ಲಿ ಕೆಸ, ಕೆಸುವು, ಶಾಮಗೆಡ್ಡೆ, ಸಾವೆಗೆಡ್ಡೆ, ಕಚ್ಚಾಚಿ ಎಂದೂ ಇಂಗ್ಲಿಷಿನಲ್ಲಿ ಟ್ಯಾರೊ ಎಂದೂ ಕರೆಯುವರು. ಆಗ್ನೇಯ ಏಷ್ಯಾ ಇದರ ಮೂಲಸ್ಥಾನವಾದರೂ



ಭಾರತದೆಲ್ಲೆಡೆ ಬೆಳೆಸುವರು. ಮೂಲತಃ ಇದು ಸ್ವಾಭಾವಿಕವಾಗಿ ಬೆಳೆಯುವ ಗೆಡ್ಡೆ. ನದಿ, ಕೊಳಗಳ ದಡ, ಜೌಗು ಭೂಮಿ ಸದಾ ತೇವದಿಂದ ಕೂಡಿದ ಹಾಗೂ ನೆರಳು ಹೆಚ್ಚಾಗಿರುವ ನೀರು ನಿಲ್ಲುವ ಸ್ಥಳಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಕೆಸುವಿನ ಗೆಡ್ಡೆ ಮತ್ತು ದಂಟುಗಳು ತರಕಾರಿಯಾಗಿ ಉಪಯೋಗಿಸಲು ಯೋಗ್ಯವೆಂದು ಅರಿತ ರೈತ ಅವನ್ನು ಬಹಳ ಹಿಂದೆಯೇ ಬೆಳೆಯಲು ಆರಂಭಿಸಿದ. ಭಾರತೀಯರಿಗೆ ಇದರ ಉಪಯೋಗ ಬಹಳ ಹಿಂದೆಯೇ ತಿಳಿದಿತ್ತು. ಇದರ ಆಕಾರ, ಬಣ್ಣ ರುಚಿಗಳ ಮೇಲೆ ಇದನ್ನು ಹಲವು ಬಗೆಗಳಾಗಿ ವಿಂಗಡಿಸಬಹುದು. ಎಸ್ಕ್ಯುಲೆಂಟ ಎಂಬುದು ಮುಖ್ಯ ಬಗೆ.

ಲಕ್ಷಣಗಳು : ಬಹುವಾರ್ಷಿಕ ಬೆಳೆಯಾದ್ದರಿಂದ ಭೂಮಿಯೊಳಗೆ ಸದಾ ಇರುತ್ತದೆ. ನಿಧಾನಗತಿಯಲ್ಲಿ ಬೆಳೆದು ಹಲವು ಕವಲುಗಳೊಡೆದು

ಕಾಂಡ ಮತ್ತು ಎಲೆಗಳು ಉದ್ದವಾಗಿ ಅಗಲವಾಗಿ ಬೆಳೆಯುವುದು ಇದರ ಮುಖ್ಯ ಲಕ್ಷಣ. ಗೆಡ್ಡೆಯಿಂದ ಹೊರಟ ಕವಲುಗಳು ಬೆಳೆದಂತೆ ಬೇರ್ಪಟ್ಟು ಸ್ವತಂತ್ರ ಗಿಡವಾಗಿ ಬೆಳೆಯಬಲ್ಲವು. ಇದು ನಿರ್ಲಿಂಗ ರೀತಿಯ ವಂಶಾಭಿವೃದ್ಧಿಯನ್ನು ಹೊಂದಿದೆ. ಇದರಲ್ಲಿ ಎರಡು ಬಗೆಯ ಹೂಗಳಿದ್ದು ಏಕಲಿಂಗಿಯಾಗಿವೆ. ಚುರುಗುಟ್ಟುವ ತೀಕ್ಷ್ಣವಾದ ವಸ್ತುವುಳ್ಳ ಇದರ ಗೆಡ್ಡೆ, ಎಲೆ ಮತ್ತು ದಂಟುಗಳು ರಸಭರಿತವಾಗಿರುತ್ತವೆ. ಕ್ಯಾಲ್ಸಿಯಂ ಆಕ್ಸಲೇಟ್ ಎಂಬ ರಾಸಾಯನಿಕ ವಸ್ತು ಇರುವುದರಿಂದ ಈ ತರಕಾರಿ ಬೇಯಿಸಿದ ನೀರನ್ನು ಹೊರಚೆಲ್ಲಿ ಅನಂತರ ಉಪಯೋಗಿಸಬೇಕು. ಹುಣಿಸೆ ನೀರಿನಿಂದ ತೊಳೆದು, ಅಡುಗೆ ಸೋಡ ಸೇರಿಸಿದರೆ ಅದರ ತೀಕ್ಷ್ಣತೆ ಕಡಿಮೆಯಾಗುತ್ತದೆ. ಕೆಸುವು ಉತ್ಕೃಷ್ಟವಾಗಿ ಬೆಳೆಯಲು ಸಾವಯವ ವಸ್ತುಗಳು ಮಣ್ಣಿನಲ್ಲಿ ಹೇರಳವಾಗಿದ್ದು, ಯಥೇಚ್ಛ ನೀರಿರಬೇಕು.

ಬಿತ್ತನೆಗೆ ಗೆಡ್ಡೆಯನ್ನು ತುಂಡರಿಸಿ ನಾಟಿಮಾಡಬೇಕು. ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೆಳೆಸಬಹುದಾದರೂ ಭಾರತದಲ್ಲಿ ಫೆಬ್ರವರಿ - ಜುಲೈ ನಡುವಣ ಅವಧಿಯಲ್ಲಿ ನಾಟಿಮಾಡುವರು. ಎಲೆಗಳು ಹಳದಿ ಬಣ್ಣಕ್ಕೆ ತಿರುಗಿದಾಗ ಫಸಲು ಕೊಯ್ಲಿಗೆ ಬಂದಿದೆ ಎಂದು ತಿಳಿಯುತ್ತದೆ. ಇದರ ಅವಧಿ ಸಾಮಾನ್ಯವಾಗಿ ಎಂಟು ತಿಂಗಳು. ಅತಿ ಹೆಚ್ಚು ಇಳುವರಿ ಕೊಡುವ ಇದು ಭೂಮಿಗನುಗುಣವಾಗಿ ಒಂದು ಎಕರೆಗೆ 3000 ಕೆ.ಜಿ.ಯಿಂದ 12,000 ಕೆ.ಜಿ.ವರೆಗೂ ಇಳುವರಿ ಕೊಡಬಹುದು.



ಉಪಯೋಗ : ಕೆಸುವಿನ ಎಲ್ಲ ಭಾಗಗಳೂ ತಿನ್ನಲು ಯೋಗ್ಯ. ಅಧಿಕ ಪಿಷ್ಟವನ್ನುಳ್ಳ ಇದು ಹೆಚ್ಚು ಸಿಹಿಯಾಗಿದ್ದು ಬೇಗ ಬೇಯುತ್ತದೆ. ಇದರಲ್ಲಿ ಕಾರ್ಬೋಹೈಡ್ರೇಟ್ ಶೇ. 22, ಪ್ರೋಟೀನ್ ಶೇ. 3.0, ಲೋಹಾಂಶಗಳು ಶೇ 1.7, ಕೊಬ್ಬು ಶೇ. 0.1, ತೇವಾಂಶ ಶೇ. 73.1 ಜತೆಗೆ ಕ್ಯಾಲ್ಸಿಯಂ ರಂಜಕಗಳು ಸಾಕಷ್ಟಿವೆ. ಇದು ಸುಲಭವಾಗಿ ಜೀರ್ಣವಾಗುವಂಥದು. ಕಡಿಮೆ ಪ್ರಮಾಣದ ಪಿಷ್ಟಕಣಗಳಿಂದ ಕೂಡಿದ್ದು ಆಲೂಗೆಡ್ಡೆಗಿಂತ ಹೆಚ್ಚು ಸತ್ತ್ವಯುತವಾಗಿದೆ. ಇದರಿಂದ ತಯಾರಿಸಿದ ಪತ್ರೊಡೆ ಕರ್ನಾಟಕದ ಉತ್ತರಕನ್ನಡ, ಕರಾವಳಿ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. ಇದರಲ್ಲಿಯ ಪಿಷ್ಟವನ್ನು ಗಂಜಿ, ಬ್ರೆಡ್ ಬಿಸ್ಕತ್ ತಯಾರಿಸಲು ಬಳಸುವರು. ಎಲೆಗಳ ತೊಟ್ಟಿನ ರಸ ರೋಗನಿರೋಧಕ ಶಕ್ತಿ ಇರುವಂಥದ್ದು.

ಜಿ.ಎನ್.ಎಸ್.

ಕೇದಗೆ ಇದನ್ನು ತಾಳೆಗಿಡ ಎಂದೂ ಕರೆಯುವುದುಂಟು. ತಮಿಳಿನಲ್ಲಿ ತಾಳಂ, ತಾಳಂಚೆಡಿ, ಕೇದಗೈ, ಮುಂಡಗಂ ಎಂದೂ ತೆಲುಗಿನಲ್ಲಿ ಗಾಜಂಗಿ, ಕೇತಕಿ, ಮೊಗಲಿ ಎಂದೂ ಮಲಯಾಳದಲ್ಲಿ ಕೈತ, ಕೇತಕಿ, ಪಳ್ಳಿಯಂಬು ಎಂದೂ ತುಳುವಿನಲ್ಲಿ ಕೇದಯಿ, ಮುಂಡೇಯಿ ಎಂದೂ



ಕರೆಯುವರು. ಇಂಗ್ಲಿಷಿನಲ್ಲಿ ಸ್ಕ್ರೂಫೈನ್ ಎನ್ನುವರು. ಪ್ಯಾಂಡನೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ನಾಮ ಪ್ಯಾಂಡೇನಸ್ ಓಡರೇಟಿಸಿಮಸ್. ಪ್ರಪಂಚದ ಎಲ್ಲ ಉಷ್ಣವಲಯ ಪ್ರದೇಶಗಳಲ್ಲೂ ಬೆಳೆಯುತ್ತದೆ. ಭಾರತದಲ್ಲಿ ಇದರ 35 ಪ್ರಭೇದಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ಕೇದಗೆ ನೀರಿನ ಆಶ್ರಯದಲ್ಲಿ ಬೆಳೆಯುವಂಥದು. ನದಿ, ಹಳ್ಳ, ಸಮುದ್ರದ ದಂಡೆ, ಹೊಲಗದ್ದೆಗಳ ಬದುಗಳಲ್ಲಿ ಬೆಳೆಯುತ್ತದೆ. ಕೆಲವು ಪ್ರಭೇದಗಳು ಹೆಚ್ಚು ಸುವಾಸನೆಯಿಂದ ಕೂಡಿದ್ದು ಅಲಂಕಾರಕ್ಕಾಗಿ ಹಾಗೂ ಸುಗಂಧದ್ರವ್ಯ ತಯಾರಿಕೆಗೆ ಬಳಸುವುದಿದೆ. ಪೊದೆಯಂತೆ ಬೆಳೆಯುವ ಸದಾ ಹಸುರಾಗಿರುವ ಸಸ್ಯವಿದು. ಕೆಲವು ಪ್ರಭೇದಗಳಲ್ಲಿ ಎಲೆಗಳ ಅಂಚಿನಲ್ಲಿ ಮುಳ್ಳುಗಳಿದ್ದು ಕಬ್ಬಿನ ಎಲೆಯನ್ನು ಹೋಲುವುವಾದರೂ ಅದಕ್ಕಿಂತ ಹೆಚ್ಚು ಮಂದವಾಗಿರುತ್ತವೆ. ದೃಢವಿಲ್ಲದ ಇದರ ಕಾಂಡದ ಉದ್ದಕ್ಕೂ ಬೇರುಗಳಿದ್ದು ಅವು ಭೂಮಿಯ ಆಳಕ್ಕೆ ಇಳಿದು ಮಣ್ಣನ್ನು ಕೊಚ್ಚಿ ಹೋಗದಂತೆಯೂ ಕಾಂಡ ದೃಢವಾಗಿ ನಿಲ್ಲಲು ಆಸರೆಯಾಗಿಯೂ ಗಿಡಕ್ಕೆ ಆಹಾರವನ್ನು ಒದಗಿಸಲೂ ನೆರವಾಗುತ್ತವೆ. ಹೂಗಳು ಏಕಲಿಂಗಿಯಾಗಿದ್ದು ಗಂಡು-ಹೆಣ್ಣು ಹೂಗಳು ಪ್ರತ್ಯೇಕ ಗೊಂಚಲುಗಳಲ್ಲಿ ಸಮಾವೇಶಗೊಂಡಿರುತ್ತವೆ. ಗಂಡು ಹೂಗಳು ಗಾತ್ರದಲ್ಲಿ

ಚಿಕ್ಕವು. ಹೆಣ್ಣು ಹೂಗಳು ದೊಡ್ಡವು. ಇದರ ಫಲ ಸಂಯುಕ್ತ ಮಾದರಿಯದು. ಎಳೆಯ ಫಲ ಹಸುರು ಬಣ್ಣವಿದ್ದು ಮಾಗಿದಂತೆ ಹಳದಿ ಅಥವಾ ಕೆಂಪು ಬಣ್ಣಕ್ಕೆ ಹೊಂದುತ್ತದೆ.

ಕಾಂಡದಿಂದಲೇ ಸಸ್ಯಾಭಿವೃದ್ಧಿ ರೆಂಬೆಗಳು ಬಲಿತಂತೆಲ್ಲ ಬೇರು ಬಿಟ್ಟು ಸ್ವತಂತ್ರವಾಗಿ ಬೆಳೆಯಬಲ್ಲ ಶಕ್ತಿ ಹೊಂದಿರುತ್ತವೆ. ಕೆಲವು ಕಣ್ಣುಗಳಿರುವಂತೆ ಕಾಂಡವನ್ನು ಕತ್ತರಿಸಿ ಸದಾ ನೀರಿರುವೆಡೆಯ ಫಲವತ್ತಾದ ನೆಲದಲ್ಲಿ ನೆಟ್ಟರೆ ಸಾಕು ಯಾವುದೇ ಪೋಷಣೆಯಿಲ್ಲದೆ ಸಮೃದ್ಧವಾಗಿ ಬೆಳೆದು ಮೂರ್‍ನಾಲ್ಕು ವರ್ಷಗಳಲ್ಲಿ ಫಸಲು ಕೊಡಲಾರಂಭಿಸುತ್ತದೆ. ಜುಲೈ-ಅಕ್ಟೋಬರ್ ಅವಧಿಯಲ್ಲಿ ಇದನ್ನು ನೆಡುತ್ತಾರೆ. ಕೇದಗೆಗೆ ರೋಗಗಳು ಕಡಿಮೆಯೆಂದೇ ಹೇಳಬೇಕು. ನೀರು ಹೆಚ್ಚಾದರೆ ಒಂದು ಬಗೆಯ ಬೂಸ್ಟುರೋಗ ತಗಲುತ್ತದೆ. ಎಲೊಳ ಮೇಲೆ ಕಪ್ಪು ಚುಕ್ಕಿಗಳು ಕಾಣಿಸಿಕೊಂಡು ರೋಗ ಹೆಚ್ಚಾದಂತೆಲ್ಲ ಎಲೆ ತೂತಾಗಿ ಫಲ ಕುಂಠಿತವಾಗುತ್ತದೆ.

ಉಪಯೋಗಗಳು : ಹೆಣ್ಣು ಮಕ್ಕಳು ಸುವಾಸನಾಭರಿತವಾದ ಇದರ ಹೂವನ್ನು ವಿವಿಧ ವಿನ್ಯಾಸಗಳಲ್ಲಿ ಕತ್ತರಿಸಿ ಮುಡಿಯುವರು. ಕೆಲವೆಡೆ ದೇವಾಲಯಗಳಲ್ಲಿ ಪ್ರತಿನಿತ್ಯ ಆಂಜನೇಯನಿಗೆ ಈ ಹೂವನ್ನು ಸಮರ್ಪಿಸುವರು. ಸುಗಂಧದ್ರವ್ಯ ತಯಾರಿಕೆಯಲ್ಲಿ ಇದರ ಬಳಕೆಯುಂಟು ಈ ಹೂವಿನಿಂದ ತೆಗೆದ ತೈಲಕ್ಕೆ ಬೆಲೆ ಹೆಚ್ಚು. ಇದರ ಎಣ್ಣೆಯನ್ನು ಅಗರಬತ್ತಿ ತಯಾರಿಕೆಯಲ್ಲಿ, ಸಿಹಿತಿಂಡಿ ಆಗೂ ಪಾನೀಯಗಳಲ್ಲಿ ಪರಿಮಳ ಹೆಚ್ಚಿಸಲು ಉಪಯೋಗಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ಎಲೆ ಮತ್ತು ಮೊಗ್ಗುಗಳನ್ನು ತರಕಾರಿಯಂತೆ ಬಳಸುವರು. ಬಲಿತ ಎಲೆಗಳನ್ನು ಚಾಪೆ, ಹಗ್ಗ, ಬುಟ್ಟಿ ಮತ್ತು ಕಾಗದ ತಯಾರಿಕೆಯಲ್ಲಿ ಬಳಸುವುದಿದೆ. ವಿವಿಧ ರೀತಿಯ ಚರ್ಮರೋಗಗಳಿಗೆ ಇದರ ಎಲೆಗಳು ಔಷಧಿಯಾಗಿ ಬಳಕೆಯಾಗುತ್ತವೆ. ಕಿವಿನೋವು, ತಲೆನೋವು ಮತ್ತು ಇತರ ರಕ್ತಸಂಬಂಧಿಕಾಯಿಲೆಗಳಲ್ಲಿ ಇದರ ಕೇಸರಗಳಿಂದ ಔಷಧಿ ತಯಾರಿಸಿ ಬಳಸುವರು.

ಯು.ಜೆ.ಎಸ್.

ಕೇರಳದ ಅಲಂಕಾರ ಸಸ್ಯಗಳು ಕೇರಳದಲ್ಲಿ ಅನೇಕ ಅಲಂಕಾರ ವೃಕ್ಷಗಳೂ ಗಿಡ ಬಳ್ಳಿಗಳೂ ಇವೆ. ಅವು ಕೇವಲ ನಮ್ಮ ಕಣ್ಣಿಗೆ ಮಾತ್ರ ಆನಂದ ನೀಡುವುದಲ್ಲ, ನಮ್ಮ ಆರೋಗ್ಯವನ್ನು ಕಾಪಾಡುತ್ತವೆ. ಅವುಗಳಲ್ಲಿ ಬಹಳಷ್ಟನ್ನು ಪ್ರಯತ್ನಪೂರ್ವಕವಾಗಿ ವ್ಯವಸ್ಥಿತವಾಗಿ ಬೆಳೆಸಲೂ ಸಾಧ್ಯ. ಕೇರಳದ ಮುಖ್ಯ ಅಲಂಕಾರ ಸಸ್ಯಗಳನ್ನು ಸ್ಥೂಲವಾಗಿ ಪರಿಚಯಿಸಲು ಇಲ್ಲಿ ಯತ್ನಿಸಿದೆ.

ಕಣಿಕೊನ್ನ : ಇದು ಕೇರಳದ ರಾಜ್ಯಪುಷ್ಪ. ಚಿನ್ನದ ಬಣ್ಣದ ಹೂಗೊಂಚಲು ಗೆಲ್ಲು ಗೆಲ್ಲುಗಳಲ್ಲಿ, ಗಂಟು ಗಂಟುಗಳಲ್ಲಿ. ಮರತುಂಬ ಹೂಗೊಂಚಲುಗಳು ತೂಗುತ್ತಿರುತ್ತವೆ. ವಿಷು ಸಂಕ್ರಮಣದ ಆಸುಪಾಸಲ್ಲಿ, ಇದು 'ವಿಷುಕಣಿ'ಯಲ್ಲಿ ಪ್ರಧಾನವಾಗಿರುವ ಪೂಕೂಡ. ಹಿಂದಿನ ಕಾಲದಲ್ಲಿ ಗುಡ್ಡಗಳಲ್ಲೂ ಕಾಡುಗಳಲ್ಲೂ ಹೂಬಿಡುತ್ತಿದ್ದ ಈ ಮರವನ್ನು ಇಂದು ಮನೆಮುಂದೆಯೂ ದಾರಿಬದಿಗಳಲ್ಲಿಯೂ ಬೆಳೆಯತೊಡಗಿದ್ದಾರೆ. ಮಾರ್ಚ್‌ನ ಕೊನೆಗೆ ಎಲೆಗಳನ್ನುದುರಿಸಿ ಸೂರ್ಯತಾಪಕ್ಕೆ ಹೂಬಿಡುವ ಇದು ನೆಟ್ಟು ಬೆಳೆಸುವುದರಿಂದ ಒಂದಿಷ್ಟು ಮೊದಲೇ ಹೂಬಿಡುತ್ತದೆ., ಹೊಂಗರಕನ ಬೀಜದಂಥ ಕೋಡುಗಳೊಳಗಿನ ಬೀಜವೂ ಎಲೆಗಳೂ ಔಷಧೀಯ ಗುಣವುಳ್ಳವು.

ರೆಂಜೆ : ಹಿತಕರವಾದ ಪರಿಮಳವಿರುವ ಸಣ್ಣಸಣ್ಣ ಹೂಗಳಿಂದ ಕೂಡಿದ ಒಂದು ಮರವಿದು. ಮನೆಯ ಮೂಡು ಭಾಗದಲ್ಲಿ ಇದನ್ನು ನೆಡಬೇಕೆಂಬುದು ರೂಢಿ. ಸು. ಹದಿನೈದು ಮೀಟರ್‌ಗಳಷ್ಟು ಎತ್ತರ ಬೆಳೆಯುವ ನಿತ್ಯಹರಿತ ವೃಕ್ಷ. ಬಿಸಿಲು ತಾಗಿದಾಗ ಎಲೆಗಳಲ್ಲೂ ಒಂದು ಕಾಂತಿ ಮೂಡುತ್ತದೆ. ಮಾರ್ಚ್‌ನಿಂದ ಜುಲೈವರೆಗಿನ ಕಾಲಾವಧಿಯಲ್ಲಿ ಹೂಬಿಡುತ್ತದೆ. ಹೂಬಿಟ್ಟಾಗ ಪರಿಸರವೆಲ್ಲ ಪರಿಮಳಿಸುತ್ತದೆ. ಹೂಗಳು ಬೇಗನೆ ಬಾಡುವುದೂ ಇಲ್ಲ. ಇದನ್ನು ಮಾಲೆಯಾಗಿ ಪೋಣಿಸಿ ಒಂದು ವರ್ಷದ ತನಕ ಕೂಡ ಇಡಬಹುದು. ದೇವರ ಅರ್ಚನೆಗೆ ಕೂಡ ಈ ಹೂಗಳು ಬಳಕೆಯಾಗುತ್ತವೆ. ಹೂಗಳಿಂದ ಎಣ್ಣೆತೆಗೆದು ಔಷಧಗಳಿಗೂ ಬಳಸಲಾಗುತ್ತದೆ.

ಸಂಪಿಗೆ : ಸುಗಂಧ ಪುಷ್ಪಗಳರಳುವ ನಿತ್ಯಹರಿತ ವೃಕ್ಷ. ಸುಮಾರು ಹನ್ನೆರಡು ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಹಳದಿ ಮಿಶ್ರಿತ ಕಿತ್ತಳೆ ಬಣ್ಣದಲ್ಲೂ ಕೆನೆಬಣ್ಣದಲ್ಲೂ ಹೂಬಿಡುತ್ತದೆ. ನೀಳವಾದ ಎಲೆಗಳಿರುವುದರಿಂದ ಮರ ಕೂಡ ಆಕರ್ಷಕವಾಗಿದೆ. ಹೂಗಳು ದೇವರಪೂಜೆಗೂ ಬಳಕೆಯಾಗುತ್ತವೆ. ಹೂಗಳು ಮತ್ತು ತೊಗಟೆ ಔಷಧಗಳಿಗೆ ಬಳಸಲ್ಪಡುತ್ತವೆ.

ಪಾರಿಜಾತ : ಶ್ರೀ ಕೃಷ್ಣನು ಸ್ವರ್ಗದಿಂದ ಭೂಮಿಗೆ ತಂದ ಹೂವೆಂದು ಇದರ ಪೌರಾಣಿಕ ಖ್ಯಾತಿ. ಸುಮಾರು ಹತ್ತು ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಹಿಂದಿನ ಕಾಲದಲ್ಲಿ ಉದ್ಯಾನಗಳಲ್ಲೂ ಮನೆಯ ಅಂಗಳದಲ್ಲೂ ನೆಟ್ಟು ಬೆಳೆಸುತ್ತಿದ್ದರು. ಮರವು ಅಂಥ ಆಕರ್ಷಕ ವಾದುದೇನೂ ಅಲ್ಲವಾದರೂ ಹೂಗಳು ಅತಿಮನೋಹರ. ಹೂಗಳ ತೊಟ್ಟು ಕಿತ್ತಳೆ ಬಣ್ಣದ್ದೂ ಎಸಳುಗಳು ಬಿಳಿ ಬಣ್ಣದವುಗಳೂ ಆಗಿವೆ. ಸಂಜೆಗೆ ಅರಳುವ ಹೂಗಳಿಗೆ ಅಪಾರ ಪರಿಮಳ. ಬೆಳಗ್ಗಿನ ಹೊತ್ತಿಗೆ ಹೂಗಳು ಉದುರಿಬಿಡುತ್ತವೆ. ಮರದ ತೊಗಟೆಗೆ ಔಷಧೀಯ ಗುಣವಿದೆ.

ಮಂದಾರ : ಮನೆಯ ಪರಿಸರದಲ್ಲಿ ನೆಟ್ಟು ಬೆಳೆಸುವ ಈ ಮರ ಸುಮಾರು ಏಳು ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರಲ್ಲಿ ಎರಡು ವಿಧಗಳಿವೆ. ಇವು ನಸುಹಳದಿ ಹಾಗೂ ನಸುಕೆಂಪು ಬಣ್ಣದ ಹೂಗಳನ್ನು ಬಿಡುತ್ತವೆ. ಹೂಗಳು ಸಣ್ಣವಾದರೂ ಒಳ್ಳೆಯ ಪರಿಮಳ ಭರಿತವಾದವು. ಎಲೆಗಳಲ್ಲಿ ಎರಡು ಅಂಚುಗಳಿರುತ್ತವೆ ಮತ್ತು ಬೇಸಿಗೆಯಲ್ಲಿ ಸಮೃದ್ಧವಾಗಿ ಹೂ ಬಿಡುತ್ತವೆ. ದೇವಾರ್ಚನೆಗೂ ಈ ಹೂಗಳು ಬಳಕೆಯಾಗುತ್ತವೆ. ಗುರುವಾಯೂರಪ್ಪನನ್ನು ಅಲಂಕರಿಸುವ ವನಮಾಲೆಯಲ್ಲಿ ಮಂದಾರ ಪುಷ್ಪಗಳಿರುತ್ತವೆ. ಕಾಯಿಗಳು ಬೀನ್ಸ್‌ನ ಆಕಾರ ಹೊಂದಿವೆ. ಬೀಜವನ್ನು ಮೊಳಕೆ ಬರಿಸಿ ಗಿಡಗಳನ್ನು ನೆಡಬಹುದು. ಗಿಡದ ತೊಗಟೆಗೆ ಔಷಧೀಯ ಗುಣವಿದೆ.

ಶ್ರೀಗಂಧ : ತುಂಬ ಸುಂದರವಾದ ಅಲಂಕಾರವೃಕ್ಷ. ಇದರ ತಿರುಳಿನಿಂದ ತೆಗೆಯುವ ಎಣ್ಣೆ ತುಂಬ ಬೆಲೆಬಾಳುವಂಥದು. ವರ್ಷದಲ್ಲಿ ಎರಡು ಬಾರಿ ಬೈಹುಲ್ಲಿನ ಬಣ್ಣದ ಹೂಗಳನ್ನು ಬಿಡುತ್ತದೆ, ಗೊಂಚಲು ಗೊಂಚಲಾದ ಹೂಗಳು ದೇವತಾ ಮೂರ್ತಿಗಳನ್ನು ಅಲಂಕರಿಸಲು

ಬಳಕೆಯಾಗುತ್ತವೆ. ಮನುಷ್ಯರ ಅಲಂಕಾರದಲ್ಲೂ ಶ್ರೀಗಂಧವನ್ನು ಅರೆದು ಬಳಕೆ ಮಾಡುತ್ತಾರೆ. ಇದರ ತೈಲ ಸುಗಂಧ ಯುಕ್ತ. ತುಂಬ ಔಷಧೀಯ ಗುಣವುಳ್ಳ ಮರ. ಇದರಲ್ಲಿ ಬಿಳಿ ಮತ್ತು ಕೆಂಪು ಎಂಬ ಎರಡು ವಿಧ. ಕೆಂಪಿನದನ್ನು ಚಂದನ/ರಕ್ತಚಂದನ ಎಂದೂ ಕರೆಯುತ್ತಾರೆ.

ಬಾಳೆ : ಗೊನೆ ಹಾಕಿದ ಬಾಳೆ ಸಂಪತ್ಸಮೃದ್ಧಿಯ ಪ್ರತೀಕ. ನಮ್ಮ ದೇವಾಲಯಗಳಲ್ಲಿ ಉತ್ಸವಗಳ ಸಂದರ್ಭದಲ್ಲೂ ಗೊನೆಹಾಕಿದ ಬಾಳೆ ಬಳಕೆಯಾಗುತ್ತದೆ. ಅಂತೆಯೇ ಸಾಂಸ್ಕೃತಿಕ ವೇದಿಕೆಗಳಲ್ಲೂ, ಪ್ರವೇಶ ದ್ವಾರಗಳಲ್ಲೂ ಗೊನೆಹಾಕಿದ ಬಾಳೆಯನ್ನು ಬಾಗಿಸಿ ಕಟ್ಟುತ್ತಾರೆ.

ರಾಜಮಲ್ಲಿ : ತುಂಬ ಸುಂದರವಾದ ಗೊಂಚಲು ಹೂಗಳನ್ನು ಬಿಡುವ ಮಧ್ಯಮಗಾತ್ರದ ಸಸ್ಯ. ಇದನ್ನು ಉದ್ಯಾನಗಳಲ್ಲಿ ನೆಟ್ಟು ಬೆಳಸುತ್ತಾರೆ. ಹಳದಿ, ಕೆಂಪು, ಕಡುಗುಲಾಬಿ ಬಣ್ಣದ ಹೂಗಳ ಪ್ರಭೇದಗಳಿವೆ. ಈ ಹೂಗಳನ್ನು ದೇವತಾರ್ಚನೆಗೂ ಬಳಸುತ್ತಾರೆ. ಉದ್ಯಾನಗಳಿಗೂ ಅಲಂಕಾರವಾಗುವ ಈ ಹೂಗಳಿಗೆ ನಸುಪರಿಮಳವಿದೆ. ಇದರ ಬೀಜ, ಎಲೆ, ಹೂಗಳು ಬೇರೆ ಬೇರೆ ಚಿಕಿತ್ಸೆಗಳಿಗೆ ಬಳಕೆಯಾಗುತ್ತವೆ.

ತುಳಸಿ : ತುಂಬ ಪರಿಚಿತವೂ ಪವಿತ್ರವೂ ಆದ ಒಂದು ಪೊದರು ಗಿಡ. ಮನೆಯ ಅಂಗಳದಲ್ಲಿ ನೆಟ್ಟು ಬೆಳೆಸಿ ಪೂಜಿಸಲಾಗುತ್ತದೆ. ರಾಮ ತುಳಸಿ ಕೃಷ್ಣ ತುಳಸಿ ಮತ್ತು ವೀಳ್ಯತುಳಸಿ ಎಂಬ ಪ್ರಭೇದಗಳಿವೆ. ತುಳಸಿಯು ದೇವಪೂಜೆಗೆ ಅತಿಮುಖ್ಯವಾದ ಒಂದು ವಸ್ತು. ಬಿಂಬಾಲಂಕಾರಕ್ಕೆ ಮಾಲೆಯಾಗಿಯೂ ಬಿಡಿಯಾಗಿಯೂ ಬಳಕೆಯಾಗುತ್ತದೆ. ತುಂಬ ಔಷಧೀಯ ಗುಣವುಳ್ಳ ಗಿಡ.

ದಾಸವಾಳ : ಸುಮಾರು ನಲವತ್ತು ತೆರನ ದಾಸವಾಳಗಳಿವೆ. ನಾನಾ ಬಣ್ಣ ಮತ್ತು ಆಕೃತಿಗಳಲ್ಲಿ ಅರಳುವ ಹೂಗಳಿವೆ. ಎಲ್ಲ ಹವಾಗುಣದಲ್ಲೂ ಇದು ಹೂಗಳನ್ನು ತಳೆಯುತ್ತದೆ. ಪೂಜೆಗೂ ಅರ್ಚನೆಗೂ ಮಾಲೆಯಾಗಿ ಕಟ್ಟಿಯೂ, ಬಿಡಿಯಾಗಿಯೂ ಬಳಕೆಯಾಗುತ್ತದೆ. ಔಷಧೀಯ ಗುಣವುಳ್ಳ ಉಳ್ಳ ದಾಸವಾಳವು ಮನೆಗೆ ಅಲಂಕಾರ ಕೂಡ. ಹೊಸತೆರದ ಅಲಂಕಾರ ಸಸ್ಯಗಳು, ದಾಸವಾಳದ ಗಿಡಗಳನ್ನು ಅಂಗಳದಿಂದಲೂ ಹಿತ್ತಲಿನಿಂದಲೂ ಮಾಯವಾಗಿಸಿಬಿಟ್ಟಿವೆ.

ನಂದಿಬಟ್ಟಲು : ಬಿಳಿಯ ಬಣ್ಣದ ಸ್ವಲ್ಪದೊಡ್ಡಗಾತ್ರದ ಹೂಬಿಡುವ ಸಸ್ಯ. ಇದರ ಹೂಗಳಿಗೆ ಒಳ್ಳೆಯ ಪರಿಮಳವಿದೆ. ಎಲ್ಲ ಕಾಲದಲ್ಲೂ ಹೂಬಿಡುವುದಾದರೂ ಮೇ ಜೂನ್ ತಿಂಗಳುಗಳಲ್ಲಿ ತುಂಬ ಹೂಗಳನ್ನರಳಿಸಿ ನಿಲ್ಲುವ ನಂದಿಬಟ್ಟಲು ಮನೆಗೆ ವಿಶೇಷ ಕಳೆಯನ್ನು ನೀಡಬಲ್ಲುದು.

ಜಾಜಿ : ಮಲ್ಲಿಗೆಯ ಹಾಗೆ ಪರಿಮಳಭರಿತವಾದ ಬಿಳಿಯ ಹೂಗಳು ಸಂಜೆಗೆ ಅರಳತೊಡಗುತ್ತವೆ. ಚಪ್ಪರದಲ್ಲೂ ಗೋಡೆಗಳಲ್ಲೂ ಹರಡಿಕೊಳ್ಳುವ ಒಂದು ತೆರನ ಬಳ್ಳಿಗಿಡ. ಸಣ್ಣ ಎಲೆಗಳು ಹೊಂದಿದ್ದು ಅವು ಔಷಧೀಯ ಗುಣವುಳ್ಳವು ಆಗಿವೆ.

ಮಲ್ಲಿಗೆ : ತುಂಬ ಪರಿಮಳಭರಿತವಾದ ಅಚ್ಚಬಿಳಿಬಣ್ಣದಿಂದೊಡಗೂಡಿದ ಮಲ್ಲಿಗೆ ತುಂಬ ಆಕರ್ಷಕ. ಹಬ್ಬಿ ಹರಡುವ ಬಳ್ಳಿಯಾಗಿಯೂ ಪೊದರು ಗಿಡವಾಗಿಯೂ ಬೆಳೆಯುತ್ತದೆ. ಇದರಲ್ಲಿ ಅನೇಕ ಪ್ರಭೇದಗಳಿವೆ. ಸಪುರ ಎಸಳುಗಳ ಹೂಗಳಿರುವಂತೆ ಅಗಲ/ಉರುಟು ಎಸಳಿನ ಹೂಗಳೂ ಇವೆ. ಕೆಲವು ಸಂಜೆ ಅರಳಿದರೆ ಇನ್ನು ಕೆಲವು ಮುಂಜಾನೆ ಅರಳುತ್ತವೆ. ದೇವ ಪೂಜೆಗೂ ಬಿಂಬಗಳ ಅಲಂಕಾರಕ್ಕೂ ಬಳಕೆಯಾಗುವುದಲ್ಲದೆ ನವವಧುವಿನ ಅಲಂಕಾರಕ್ಕೂ ನಿತ್ಯಮುಡಿಯುವುದಕ್ಕೂ ಬಳಕೆಯಾಗುತ್ತದೆ. ಮಲ್ಲಿಗೆ ಕೃಷಿಯಿಂದಲೇ ಅನೇಕ ಬಡಕುಟುಂಬಗಳು ಉದರಪೋಷಣೆ ಮಾಡುತ್ತವೆ. ಮನೆಗಳಿಗೂ ಉದ್ಯಾನವನಗಳಿಗೂ ಮಲ್ಲಿಗೆ ಅತೀವ ಶೋಭೆ ತರುವಂಥದು.

ಚಿಕ್ಕಿ ಹೂ / ಕಿಸ್ಕಾರ : ಪೊದರುಗಿಡವಾಗಿ ಗುಡ್ಡಗಾಡುಗಳಲ್ಲೂ ಹಿತ್ತಲುಗಳಲ್ಲೂ ಹೊಲ, ಗದ್ದೆಗಳ ಬದಿಯಲ್ಲೂ ಬೆಳೆಯುವ ಗಿಡ. ಉದ್ಯಾನಗಳಲ್ಲೂ ಮನೆಯ ಅಂಗಳದಲ್ಲೂ ಬೆಳೆಯಬಹುದು. ಕೆಂಪುಹೂಗಳು ಗೊಂಚಲು ಗೊಂಚಲಾಗಿ ಅರಳುತ್ತವೆ. ಎಲ್ಲ ಕಾಲದಲ್ಲೂ ಹೂ ಬಿಡುವುದಾದರೂ ಬೇಸಿಗೆಯಲ್ಲಿ ಧಾರಾಳವಾಗಿ ಅರಳುತ್ತದೆ. ದೇವೀ ಕ್ಷೇತ್ರಗಳಲ್ಲಿನ ಪೂಜೆಗೆ ತುಂಬ ಮುಖ್ಯವಾದ ಹೂ. ಪೂಜೆಯ ವೇಳೆ ಅರ್ಚನೆಗೆ ಹೊರತಾಗಿ ಸೊಗಸಾದ ಮಾಲೆ ಮಾಡಿ ಬಿಂಬವನ್ನು ಅಲಂಕರಿಸುವುದಕ್ಕೂ ಬಳಕೆಯಾಗುತ್ತದೆ. ತೆಯ್ಯಂಗಳ ಮುಡಿಗಳಲ್ಲೂ ಕಡಗಗಳಲ್ಲಿಯೂ ಮಾಲೆಗಳಾಗಿ ಮಾಡಿ ಅಲಂಕರಿಸುವುದಕ್ಕೂ ಬಳಕೆಯಾಗುತ್ತದೆ. ಇದರ ಕಾಡುಗಿಡಗಳಿಗೆ ಸಾಕಷ್ಟು ಔಷಧೀಯ ಗುಣವಿದೆ. ಹಲವು ಬಣ್ಣಗಳಲ್ಲಿ ಲಭ್ಯವಾಗುವ ಈ ಗಿಡಗಳನ್ನು ಗೃಹಾಲಂಕಾರ ಸಸ್ಯವಾಗಿಯೂ ನೆಟ್ಟು ಬೆಳೆಸುತ್ತಾರೆ.


ಸುಗಂಧಿ : ಏಲಕ್ಕಿ ಗಿಡಗಳಷ್ಟು ಎತ್ತರಕ್ಕೆ ಬೆಳೆಯುವ ಅದೇ ರೀತಿಯ ಗಿಡಗಳು. ಬಿಳಿ ಹೂಗಳು ಗೊಂಚಲು ಗೊಂಚಲಾಗಿ ಅರಳುತ್ತವೆ. ಮುಂಜಾನೆ ಅರಳುವ (ನಾಲ್ಕು ಗಂಟೆಯ ಹೊತ್ತಿಗೆ) ಈ ಹೂಗಿಡ ಹಿತ್ತಿಲಿಗೆ ಅಲಂಕಾರ. ಈ ಗಿಡಗಳಿಗೆ ಧಾರಾಳ ನೀರುಬೇಕು.

ಬಾಳೆ ಹೂಗಳು : ಅರಿಸಿನ, ಶುಂಠಿಗಳ ವರ್ಗಕ್ಕೆ ಸೇರುವ ಒಂದು ಗಿಡ. ಹಳದಿ, ಕಡುಗೆಂಪು, ಕ್ರೀಂ ಬಣ್ಣಗಳಲ್ಲಿ ಹೂ ಬಿಡುತ್ತದೆ. ಇದರ ಎಸಳುಗಳು ತುಂಬ ಮೃದು, ಒಂಟಿಯಾಗಿಯೂ ಗೊಂಚಲಾಗಿಯೂ ಹೂ ಬಿಡುತ್ತವೆ. ತುಂಬ ಆಕರ್ಷಕವಾದ ಉದ್ದ ಹೂಗಳು ಇವು.

ನಿಶಾಗಂಧಿ : ಎಲೆಗಳನ್ನು ನೆಟ್ಟು ಗಿಡಮಾಡಿ ಬೆಳೆಸುತ್ತಾರೆ. ಇದರ ಎಲೆಗಳ ಬುಡದಿಂದ ಮೊಗ್ಗುಗಳು ಮೊಳೆತು ಹೂಗಳು ಅರಳುತ್ತವೆ. ಹೊಸ ಎಲೆಗಳು ಮೊಳೆಯುವುದೂ ಎಲೆಗಳಿಂದಲೇ. ಅರ್ಧರಾತ್ರಿಯ ಹೊತ್ತಿಗೆ ಅರಳಿ ಸುಗಂಧವನ್ನು ಹರಡಿ ಮುಂಜಾನೆಯ ಹೊತ್ತಿಗೆ ಮುದುಡಿ ಬಿಡುವ ಮನೋಹರ ಪುಷ್ಪಗಳು. ಬಿಳಿಯ ದೊಡ್ಡ ಹೂಗಳೂ ಎಲೆಗಳೂ ಒಂದೇ ತೆರನಾದ ಅಲಂಕಾರ ಸಾಧನಗಳು.

ಗುಲಾಬಿ : ಉದ್ಯಾನಕ್ಕಾಗಲಿ ಮನೆಗಾಗಲಿ ವೇದಿಕೆಗಾಗಲಿ ಮುಡಿಗಾಗಲಿ ಅಲಂಕಾರವಾಗುವ ಒಂದು ವಿಶೇಷ ಹೂವು ಗುಲಾಬಿ. ಹಲವು ವರ್ಣಗಳಲ್ಲಿ ಹಲವು ಗಾತ್ರಗಳಲ್ಲಿ ಅರಳುವ ಹೂ. ಹೂವಿಗೆ ಸೌಂದರ್ಯವಿದ್ದರೂ ತೊಟ್ಟಲ್ಲಿಯೂ ದಂಟಲ್ಲಿಯೂ ತುಂಬ ಮುಳ್ಳು. ಗೊಂಚಲಾಗಿಯೂ ಒಂಟಿಯಾಗಿಯೂ ಅರಳಿ ನಿಲ್ಲುವ ಇದನ್ನು ನೋಡುವುದೇ ಉಲ್ಲಾಸಕರ.

ಕನಕಾಂಬರ : ಉದ್ಯಾನಕ್ಕೆ ತುಂಬ ಶೋಭೆ ನೀಡುವ ಕನಕಾಂಬರವು ಕಿತ್ತಳೆ, ಹಳದಿ, ಕೆಂಪು ಮುಂತಾದ ಬಣ್ಣಗಳಲ್ಲಿ ಗೊಂಚಲು ಗೊಂಚಲಾಗಿ ಹೂಬಿಡುವ ಸಸ್ಯ. ಥಕ್ಕನೆ ಬಾಡುವುದಿಲ್ಲ, ಉದುರುವುದಿಲ್ಲ, ಮಾಲೆ ಕಟ್ಟಿ ಮುಡಿಯುವುದಕ್ಕೂ ಅಲಂಕರಿಸುವುದಕ್ಕೂ ಬಳಸಲಾಗುತ್ತದೆ.



ಕೇರಳ ರಾಜ್ಯ
ಕರ್ನಾಟಕ
ಕಣ್ಣನೂರ್
ವೈನಾಡ್
ಕೋಳಿಕ್ಕೋಡು
ಮಲಪ್ಪುರಂ
ಪಾಲಕ್ಕಾಡು
ತ್ರಿಚೂರ್
ಎರ್ನಾಕುಲಂ
ಇಡುಕ್ಕಿ
ಕೋಟ್ಟಯಂ
ಆಲಪ್ಪೆ
ಕೊಲ್ಲಂ
ಅ ರ ಬ್ಬಿ ಸ ಮು ದ್ರ
ತ ಮಿ ಳು ನಾ ಡು

ಅರಳಿ ಹೂ : ಬಿಳಿ ಮತ್ತು ಗುಲಾಬಿ ಬಣ್ಣದ ಹೂಗಳನ್ನು ಗೊಂಚಲು ಗೊಂಚಲಾಗಿ ಅರಳಿಸುತ್ತದೆ. ಸ್ವಲ್ಪ ದೊಡ್ಡಗಾತ್ರದ ಹೂಗಳು. ಉದ್ಯಾನವನಕ್ಕೆ ಶೋಭೆ ನೀಡುವ ಈ ಹೂವಿಗೆ ಔಷಧೀಯ ಗುಣವೂ ಇದೆ.

ಕೃಷ್ಣಕಿರೀಟ : ರಥಪುಷ್ಪ : ಹೆಚ್ಚಿನ ಉಪಚಾರವಿಲ್ಲದೆ ಮನೆಯ ಹಿತ್ತಲಲ್ಲಿ ಬೆಳೆಯುವ ಗಿಡ. ಇದರ ಬೇರುಗಳನ್ನು ಕತ್ತರಿಸಿ ಬೇರೆ ಗಿಡಗಳನ್ನು ಮಾಡಬಹುದು. ದೊಡ್ಡ ಹೂಗೊಂಚಲಲ್ಲಿ ಅಂತರ ಅಂತರವಾಗಿ ಕಿರೀಟದ ಆಕೃತಿಯಲ್ಲಿ ಬಿರಿಯುತ್ತವೆ, ಸಣ್ಣ ಸಣ್ಣ ಹೂಗಳು. ಅರಳಿದ ಬಳಿಕ ಒಂದು ತಿಂಗಳವರೆಗೂ ಗಿಡದಲ್ಲೆ ನಿಲ್ಲುತ್ತದೆ. ಹೆಚ್ಚು ಹೂಬಿಡುವುದು ಮಳೆಗಾಲದಲ್ಲಿ. ಸುಮಾರು ಒಂದೂವರೆ ಮೀಟರ್ ಎತ್ತರಕ್ಕೆ ಬೆಳೆಯುವ ಗಿಡದ ತುದಿಯಲ್ಲಿ ಕಿರೀಟಾಕೃತಿಯ ಗೊಂಚಲು ಅರಳಿ ನಿಲ್ಲುತ್ತದೆ. ಒಂದು ಗಿಡದಲ್ಲಿ ಒಂದೇ ಕಿರೀಟ.

ನಿತ್ಯಪುಷ್ಪ : ಬಿಳಿ ಮತ್ತು ಗುಲಾಬಿ ಬಣ್ಣದ ಹೂಗಳನ್ನು ಬಿಡುತ್ತದೆ. ಗಿಡದಲ್ಲಿ ಹೂ ಬಿಡಲು ಆರಂಭವಾದರೆ ಸದಾ ಹೂಬಿಡುತ್ತಲೇ ಇರುವುದು ಇದರ ವಿಶೇಷ. ಐದೆಸಳಿನ ಸಣ್ಣಹೂಗಳು. ಒಂದು ಗೊಂಚಲಲ್ಲಿ ಮೂರು ನಾಲ್ಕು ಹೂಗಳು ಬಿರಿಯುವುದೂ ಇದೆ. ಪೂಜಾಪುಷ್ಪವಾಗಿಯೂ ಬಳಕೆಯಾಗುತ್ತವೆ. ಈ ಗಿಡಕ್ಕೆ ಔಷಧೀಯ ಗುಣವಿದ್ದು ಉದ್ಯಾನಕ್ಕೆ ಅಂದವನ್ನು ಕೊಡಬಲ್ಲುದು.

ನೆಲಗುಲಾಬಿ : ಹತ್ತೂವರೆ ಗಂಟೆ ಹೂ. ನಾನಾ ವರ್ಣಗಳಲ್ಲಿ ಅರಳುವ ಹೂಗಿಡ. ನೆಲದಲ್ಲಿ ಹರಡಿಕೊಂಡು ಬೆಳೆಯುತ್ತದೆ. ಬೆಳಗ್ಗೆ ಹತ್ತು ಹತ್ತೂವರೆ ಗಂಟೆಯ ಹೊತ್ತಿಗೆ ಅರಳಿ ನಿಂತುಬಿಡುತ್ತದೆ. ಸಣ್ಣ ಸಣ್ಣ ಹೂಗಳು, ತುಂಬ ಕೋಮಲ. ಹೂದಾನಿಯಲ್ಲೂ ನೆಲದಲ್ಲೂ ನೆಟ್ಟು ಬೆಳೆಸಬೇಕು.

ನಾಲ್ಕು ಗಂಟೆ ಹೂ : ಸಂಜೆ ನಾಲ್ಕರ ಹೊತ್ತಿಗೆ ಅರಳುವ ಈ ಹೂಗಳು ಬಿಳಿ, ಕಂದು, ಹಳದಿ ಬಣ್ಣಗಳಲ್ಲಿರುತ್ತವೆ. ಲಘುಪರಿಮಳದ ಹೂವು. ಸಣ್ಣಗಿಡಗಳು, ಅರಳಿ ನಿಂತಾಗ ಉದ್ಯಾನಕ್ಕೆ ಶೋಭೆ ತರುವ ಹೂಗಿಡ.

ಬಾಡದ ಮಲ್ಲಿಗೆ : ನಸುಗೆಂಪು ಮತ್ತು ಬಿಳಿಬಣ್ಣದ ಹೂಗಳು, ಲೋಲಾಕ್ / ಜುಂಮ್ಕಿಯ ಆಕಾರ ಮತ್ತು ಗಾತ್ರದ ಹೂಗಳು ಅರಳಿದ ಬಳಿಕ ತಿಂಗಳುಗಟ್ಟಲೆ ಗಿಡದಲ್ಲೆ ಉಳಿಯಬಲ್ಲುವು. ಮಾಲೆ ಕಟ್ಟಿ ಜಾಗರೂಕತೆ ವಹಿಸಿದರೆ ಒಂದು ವರ್ಷದ ತನಕವೂ ಉಳಿಯಬಲ್ಲುದು. ಗಿಡಗಳು ಸಣ್ಣವು. ಅವಕ್ಕೂ ನಸುಗೆಂಪು ಬಣ್ಣ.

ಸೇವಂತಿಗೆ : ಕಡುಹಳದಿ, ನಸುಹಳದಿ, ಗುಲಾಬಿ ಬಣ್ಣಗಳ ಹೂಗಳು ಪರಿಮಳಭರಿತವಾಗಿವೆ. ಸಣ್ಣ ಹಾಗೂ ದೊಡ್ಡ ಹೂಗಳ ಪ್ರಭೇದಗಳಿವೆ. ಪೊದರು ಗಿಡಗಳಾಗಿ ಬೆಳೆಯುತ್ತವೆ. ಪೂಜೆ, ಬಿಂಬಾಲಂಕಾರ, ತಲೆಯಲ್ಲಿ ಮುಡಿಯುವುದಕ್ಕೆ ಈ ಹೂಗಳು ಉಪಯೋಗವಾಗುತ್ತವೆ.

ಚೆಂಡುಹೂ : ಹಳದಿ ಮತ್ತು ಕಿತ್ತಳೆ ಬಣ್ಣಗಳಲ್ಲಿ ಹಲವು ಗಾತ್ರಗಳಲ್ಲಿರುವ ಎಸಳುಗಳಿಂದ ಕೂಡಿದ ಹೂಗಳು. ಗಿಡಗಳು ಸು. ಒಂದು ಮೀಟರ್‌ನಷ್ಟು ಎತ್ತರಕ್ಕೆ ಬೆಳೆಯುತ್ತವೆ. ಒಂದೊಂದಾಗಿ ತುಂಬ ಹೂ ಬಿಡುವ ಸಸ್ಯ. ಇದನ್ನು ಒಂದು ಉದ್ಯಮವಾಗಿಯೂ ಹೊಲಗದ್ದೆಗಳಲ್ಲಿ ಬೆಳಸಲಾಗುತ್ತದೆ. ಮನೆಯ ಅಂಗಲದ ಬದಿಯಲ್ಲೂ ಬೆಳೆಸಬಹುದು., ಹೂಗಳು ಒಣಗಿದ ಬಳಿಕ ಅವನ್ನು ಹುಡಿಮಾಡಿದರೆ ಅವೇ ಬೀಜಗಳಾಗುತ್ತದೆ.

ಆರ್.ಎಂ. ಅನುವಾದ ಕೆ.ಕೆ.

ಕೇರಳದ ಆದಿವಾಸಿಗಳ ಬಿತ್ತನೆ ಬೀಜ ಸಂರಕ್ಷಣೆಯ ವಿಧಾನಗಳು ಬುಡಕಟ್ಟು ಪಂಗಡದವರು ತಮ್ಮದೇ ಆದ ರೀತಿಯಲ್ಲಿ ಕೃಷಿಯನ್ನು ಮಾಡುತ್ತಾರೆ. ಆದುದರಿಂದಲೇ ಅವರು ಬಿತ್ತನೆ ಬೀಜಗಳ ಸಂರಕ್ಷಣೆಗೆ ವಿಶೇಷ ಮಹತ್ವವನ್ನು ನೀಡುತ್ತಾರೆ. ಬಿತ್ತನೆ ಬೀಜವನ್ನು ಅತ್ಯಂತ ಪವಿತ್ರ ಭಾವನೆಯಿಂದ ನೋಡುವ ಅವರು, ಬಡತನದಿಂದ ಉಪವಾಸ ಬಿದ್ದರೂ ಅದನ್ನು ಆಹಾರಕ್ಕಾಗಿ ಬಳಸುವವರಲ್ಲ. ಅನೇಕ ಆದಿವಾಸಿ ಬುಡಕಟ್ಟು ಪಂಗಡದವರು ತಮ್ಮ ಬಿತ್ತನೆ ಬೀಜಗಳನ್ನು ಸಂರಕ್ಷಿಸಿಡುವುದಕ್ಕಾಗಿ ಧಾರ್ಮಿಕವಾದ ಅನೇಕ ವಿಧಿನಿಷೇಧಗಳನ್ನು ಹೇರಿಕೊಂಡಿದ್ದರು. ಉದಾಹರಣೆಗೆ ಅಟ್ಟಪಾಡಿಯ ಇರುಳ ಪಂಗಡದವರು ಬಿತ್ತನೆ ಬೀಜವನ್ನು ಇರಿಸಿದ್ದ ಪಾತ್ರೆಯಲ್ಲಿ ತಮ್ಮ ಕುಲದೇವತೆಯಾದ 'ಕರ್‌ದೈವ' ಆವರಿಸಿಕೊಂಡು ಯಾರಾದರೂ ಆ ಬೀಜವನ್ನು ಕದ್ದರೆ, ದೈವವು ಅವರಿಗೆ ಕಠಿಣ ಶಿಕ್ಷೆಯನ್ನು ನೀಡುವುದೆಂದು ಅವರು ನಂಬಿದ್ದರು.

ವಿವಿಧ ಬಿತ್ತನೆ ಬೀಜಗಳನ್ನು ಸಂಗ್ರಹಿಸಿ, ಸಂರಕ್ಷಿಸಲು ಕೇರಳದ ಆದಿವಾಸಿ ಪಂಗಡದವರು ಹಲವು ವಿಧಾನಗಳನ್ನು ಅನುಸರಿಸುತ್ತಿದ್ದರು. ದೊಡ್ಡ ಬುಟ್ಟಿಗಳನ್ನು ಬಿದಿರಿನ ಸಿಪ್ಪೆಯಿಂದ ನಿರ್ಮಿಸಿ, ಅವುಗಳಿಗೆ ಸೆಗಣಿ ಮೆತ್ತಿ ತೂತುಗಳನ್ನು ಮುಚ್ಚಿ ಒಣಗಿಸಿ ಧಾನ್ಯಗಳನ್ನು ಅವುಗಳಲ್ಲಿ ಹಾಕುತ್ತಿದ್ದರು. ಈ ಒರುಟು ಬುಟ್ಟಿಗಳನ್ನು 'ದೊಂಬೆ' ಎಂದು ಕರೆಯುತ್ತಿದ್ದರು. ಸುಮಾರು ಒಂದು ಕ್ವಿಂಟಾಲಿನಿಂದ ಹಿಡಿದು 25 ಕ್ವಿಂಟಾಲ್‌ವರೆಗಿನ ಧಾನ್ಯಗಳನ್ನು ಸಂಗ್ರಹಿಸುವ ದೊಂಬೆಗಳನ್ನು ಅವರು ನಿರ್ಮಿಸುತ್ತಿದ್ದರು. ಬೃಹತ್ ದೊಂಬೆಗಳನ್ನು ಆಹಾರ ಧಾನ್ಯಗಳನ್ನು ಕಾಪಾಡಲೂ, ಚಿಕ್ಕ ದೊಂಬೆಗಳನ್ನು ಬಿತ್ತನೆ ಬೀಜಗಳನ್ನು ಸಂರಕ್ಷಿಸಲೂ ಬಳಸುತ್ತಿದ್ದರು. ಇಂತಹ ದೊಂಬೆಗಳಲ್ಲಿ ಧಾನ್ಯಗಳು ಅನೇಕ ವರ್ಷಗಳ ಕಾಲ ಸುರಕ್ಷಿತವಾಗಿರುತ್ತಿದ್ದುವು.

ಇಡುಕ್ಕಿ ಜಿಲ್ಲೆಯ ಮುದುವ ಪಂಗಡದವರು ಆ ಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆಯುವ ಓಟೆ ಬಿದಿರಿನಿಂದ ಮಾಡಿದ ಬುಟ್ಟಿಗಳನ್ನು ನಿರ್ಮಿಸುತ್ತಾರೆ. ಇದಕ್ಕೆ 'ವಲ್ಲ' ಎಂದು ಹೆಸರು. ಇಂತಹ 'ವಲ್ಲ'ಗಳಲ್ಲಿ ಧಾನ್ಯ ಬೀಜಗಳನ್ನು ತುಂಬಿಸಿ ನಿರ್ದಿಷ್ಟವಾದ ಎಲೆಗಳಿಂದ ಮುಚ್ಚುತ್ತಾರೆ. ಅನಂತರ ಕಾಡುಗಳ ಒಳಗೆ ದೊಡ್ಡ ಮರಗಳಲ್ಲಿ ಅಟ್ಟಣಿಗೆಗಳನ್ನು ನಿರ್ಮಿಸಿ ಬೀಜಗಳನ್ನು ಸಂರಕ್ಷಿಸುತ್ತಿದ್ದರು. ಎತ್ತರದ ಬಂಡೆಗಳ ತುದಿಯಲ್ಲಿ ವಲ್ಲಗಳನ್ನು ಸುರಕ್ಷಿತವಾಗಿಡುವ ಪದ್ಧತಿಯೂ ಇತ್ತು.

ವಯನಾಡು ಜಿಲ್ಲೆಯ ಅಟ್ಟಪಾಡಿಯಲ್ಲಿ ಬೀಜ ಸಂರಕ್ಷಣೆಯ ಇನ್ನೊಂದು ವಿಧಾನ ಚಾಲ್ತಿಯಲ್ಲಿತ್ತು. ತಮ್ಮ ಗುಡಿಸಲಿಗೆ ಸಮೀಪದಲ್ಲಿಯೇ ಸುಮಾರು ಹತ್ತು ಅಡಿಯಷ್ಟು ಆಳವಾಗಿ ಹೊಂಡವನ್ನು ನಿರ್ಮಿಸಿ, ಅದರ ನಾಲ್ಕು ಬದಿಗಳನ್ನು ಮಣ್ಣು ಹಾಗೂ ಸೆಗಣಿ ಸಾರಿಸಿ,

ಬಡಿದು ಗಟ್ಟಿಗೊಳಿಸುತ್ತಿದ್ದರು. ಈ ಗುಂಡಿಯ ಅಡಿಭಾಗದಲ್ಲಿ ಹಾಗೂ ಬದಿಗಳಲ್ಲಿ ಕೂವೆಯ ಎಲೆಗಳನ್ನು ಹರಡಿ, ಧಾನ್ಯ ತುಂಬಿದ ಗೋಣಿಚೀಲಗಳನ್ನು ತುಂಬಿಸುತ್ತಿದ್ದರು. ಸುಮಾರು ಹತ್ತರಿಂದ ಐವತ್ತು ಗೋಣಿಚೀಲಗಳು ತುಂಬುವಂತಹ ಗುಂಡಿಗಳನ್ನು ನಿರ್ಮಿಸುತ್ತಿದ್ದರು. ಧಾನ್ಯ ತುಂಬಿದ ಚೀಲಗಳನ್ನು ಗುಂಡಿಯಲ್ಲಿರಿಸಿ, ಅದರ ಮೇಲ್ಭಾಗದಲ್ಲಿಯೂ ಕೂವೆಯ ಎಲೆಗಳನ್ನು ಹರಡುತ್ತಿದ್ದರು. ಅನಂತರ ಹೊಂಡ ಮುಚ್ಚಿಕೊಳ್ಳುವ ಹಾಗೆ ಮರದ ದಿಮ್ಮಿಗಳನ್ನು ಹಾಸಿ, ಅದರ ಮೇಲೆ ಮಣ್ಣು ಹಾಕಿ ಗಟ್ಟಿಗೊಳಿಸುತ್ತಿದ್ದರು. ಮಳೆಯಿಂದ ಬೀಜಗಳನ್ನು ಸಂರಕ್ಷಿಸಲು ಮಣ್ಣು ಹದಗೊಳಿಸಿ, ಬಡಿದು, ಹೊಳೆಯ ಕಲ್ಲುಗಳಿಂದ ಉಜ್ಜಿ ನಯಗೊಳಿಸುತ್ತಿದ್ದರು.

ಮನೆಯೊಳಗೆ ಚಿಕ್ಕ ಹೊಂಡಗಳನ್ನು ತೋಡಿ, ಬೀಜ ಸಂರಕ್ಷಿಸುವ ವಿಧಾನ ವಯನಾಡಿನ ಕೆಲವು ಆದಿವಾಸಿ ಪಂಗಡಗಳಲ್ಲಿ ಚಾಲ್ತಿಯಲ್ಲಿದ್ದವು. ಹೊಂಡಗಳಲ್ಲಿ ಸೆಗಣಿ ಸಾರಿಸಿ, ಅವುಗಳಲ್ಲಿ ಬೀಜವನ್ನು ತುಂಬಿಸಿ, ಬಾಳೆ ಎಲೆಗಳಿಂದ ಮುಚ್ಚಿ, 'ಇಲ್ಲಿ' ಮುಳ್ಳುಗಳನ್ನು ಹರಡಿ, ಮಣ್ಣು ಹಾಕಿ ಕಾಪಾಡುವ ವಿಧಾನ ವಿಶಿಷ್ಟವಾದುದು.

ವಯನಾಡಿನಲ್ಲಿ ಬತ್ತ ಮೊದಲಾದ ಧಾನ್ಯಗಳನ್ನು 'ಮುಡಿ' ಕಟ್ಟಿ ಸಂರಕ್ಷಿಸುವ ವಿಧಾನವೂ ಚಾಲ್ತಿಯಲ್ಲಿತ್ತು. ಇದಕ್ಕೆ 'ಮೂಡ' ಎಂದು ಹೆಸರು. ಬಾಳೆಯ 'ಪೋಳೆ' (ದಿಂಡಿನ ಹೊರಪದರುಗಳು) ಗಳನ್ನು ಅಡ್ಡಕ್ಕೂ ನೀಟಕ್ಕೂ ಹಾಸಿ, ಅದರ ಮೇಲೆ ಬೈಹುಲ್ಲನ್ನು ಹರಡಿ ಧಾನ್ಯವನ್ನು ತುಂಬಿಸಿ ಚೆಂಡಿನಾಕಾರದಲ್ಲಿ ಮೂಡಗಳನ್ನು ಕಟ್ಟುತ್ತಿದ್ದರು. ಇಂತಹ ಮೂಡಗಳನ್ನು ಗುಡಿಸಲಿನ ಛಾವಣಿಗೆ ಕಟ್ಟುತ್ತಿದ್ದರು. ಬಿತ್ತನೆ ಬೀಜದ ಮೂಡೆಗಳನ್ನು ಅಡುಗೆ ಕೋಣೆಯಲ್ಲಿ ಒಲೆಯ ಪಕ್ಕದಲ್ಲಿ ತೂಗಿಸುತ್ತಿದ್ದರು.

ವಯನಾಡಿನ ಆದಿವಾಸಿಗಳು ಮಣ್ಣಿನ ಪಾತ್ರೆಗಳಲ್ಲಿ ಬೀಜ ಸಂರಕ್ಷಿಸುವ ವಿಧಾನವೂ ಚಾಲ್ತಿಯಲ್ಲಿತ್ತು. ಬಾಯಿ ಕಿರಿದಾಗಿರುವ ಬೃಹತ್ ಮಣ್ಣಿನ ಮಡಕೆಗಳಲ್ಲಿ ಗೆಡ್ಡೆ ಗೆಣಸುಗಳನ್ನು ಒಣಗಿಸಿ ತುಂಬಿಸಿ, ಗುಡಿಸಲಿನ ಮೂಲೆಯಲ್ಲಿ ಹುಗಿಯುತ್ತಿದ್ದರು. ಈ ಮಡಕೆಗಳಿಗೆ ಮಣ್ಣಿನಿಂದ ತಯಾರಿಸಿದ ಮುಚ್ಚಳಕೆಗಳಿರುತ್ತಿದ್ದುವು. ಅಟ್ಟಪಾಡಿ ಪ್ರದೇಶದಲ್ಲಿ ಕೆಲವು ಧಾನ್ಯಗಳನ್ನು ಬೀಜಗಳನ್ನು ಮಣ್ಣಿನಲ್ಲಿ ಬೆರೆಸಿ ಅಥವಾ ಹುಗಿದು ಸಂರಕ್ಷಿಸುವ ವಿಧಾನಗಳಿದ್ದುವು. ಅಗತ್ಯವಿರುವಾಗ ನೀರಿನಲ್ಲಿ ತೊಳೆದು ಆಹಾರಕ್ಕಾಗಿ ಬಳಸುತ್ತಿದ್ದರು. ಸೌತೆ, ಕುಂಬಳ, ಚೀನಿಕಾಯಿ ಮೊದಲಾದ ಬಿತ್ತನೆ ಬೀಜಗಳನ್ನು ಸೆಗಣಿಯಲ್ಲಿ ಬೆರೆಸಿ, ಗೋಡೆಗೆ ಎಸೆದು ಒಣಗಿಸಿ ಸಂರಕ್ಷಿಸುತ್ತಿದ್ದರು. ತರಕಾರಿ ಕೃಷಿ ಮಾಡುವ ಸಂದರ್ಭದಲ್ಲಿ ಸೆಗಣಿಯಿಂದ ಬೀಜಗಳನ್ನು ಬೇರ್ಪಡಿಸಿ ಉಪಯೋಗಿಸುತ್ತಿದ್ದರು.

ದೊಡ್ಡ ಬಿದಿರುಗಳನ್ನು ಆರಿಸಿ, ಅವುಗಳ ಗಂಟುಗಳನ್ನು ಬಿಡಿಸಿ, ಅವುಗಳಲ್ಲಿ ಬತ್ತ, ರಾಗಿ, ಸಾಮೆ ಮೊದಲಾದ ಬಿತ್ತನೆ ಬೀಜಗಳನ್ನು ಸಂರಕ್ಷಿಸುವ ವಿಧಾನ ವಯನಾಡಿನ ಅಟ್ಟಪಾಡಿ ಪ್ರದೇಶದಲ್ಲಿ ಚಾಲ್ತಿಯಲ್ಲಿತ್ತು. ಕಾಣಿಕ್ಕಾರ್ ಸಮುದಾಯದವರು ಬತ್ತದ ಬೀಜಗಳನ್ನು ಸಂರಕ್ಷಿಸಲು ಕೂವೆ ಎಲೆಗಳ ಆವರಣವನ್ನು ರಚಿಸುತ್ತಿದ್ದರು. ಈ ಕಟ್ಟುಗಳನ್ನು ಗುಡಿಸಲಿನ ಅಟ್ಟದಲ್ಲಿ ಜೋಪಾನವಾಗಿಸುತ್ತಿದ್ದರು.

ಎಸ್.ಎನ್.

ಕೇರಳದ ಔಷಧೀಯ ಸಸ್ಯಗಳು ಆಯುರ್ವೇದ, ಸಿದ್ಧವೈದ್ಯ, ಯುನಾನಿ ಮುಂತಾದ ಎಲ್ಲ ಚಿಕಿತ್ಸಾ ಪದ್ಧತಿಗಳಲ್ಲೂ ಔಷಧಗಳ ಪ್ರಧಾನ ಮೂಲವು ಸಸ್ಯಗಳೇ. ಹೋಮಿಯೋ ಔಷಧಗಳು ಬಹುಪಾಲು ಸಸ್ಯಜನ್ಯಗಳಾಗಿವೆ. ಪ್ರಕೃತಿದತ್ತ ಔಷಧ ಸಂಪ್ರದಾಯವು ಜನಪ್ರಿಯವಾಗುತ್ತ ಬಂದ ಹಾಗೆ ಸಸ್ಯಗಳ ಪ್ರಾಮುಖ್ಯವೂ ಹೆಚ್ಚಿದೆ. ಅಂತೆಯೇ ಅವು ಹೆಚ್ಚು ಹೆಚ್ಚು ಬಳಕೆಗೆ ಒಳಗಾಗುತ್ತ, ಅವುಗಳ ಲಭ್ಯತೆ ಕಡಿಮೆಯಾಗುತ್ತಿದೆ. 1993ರಲ್ಲಿ ಅಸ್ತಿತ್ವಕ್ಕೆ ಬಂದು ಈಗ ಸುಮಾರು ನೂರ ಎಂಬತ್ತಕ್ಕಿಂತಲೂ ಹೆಚ್ಚು ರಾಜ್ಯಗಳು ಸ್ವೀಕರಿಸಿದ 'ಕನ್ವೆನ್ಶನ್ ಆಫ್ ಬಯೋಲಜಿಕಲ್ ಡೈವರ್ಸಿಟಿ' (CBD)ಯಲ್ಲಿ ಔಷಧೀಯ ಸಸ್ಯ ತಳಿಗಳ ಸಂರಕ್ಷಣೆಗೆ ವಿಶೇಷ ಪ್ರಾಧಾನ್ಯವಿದೆ. ಆರೋಗ್ಯ ಪಾಲನಾ ಕ್ಷೇತ್ರದಲ್ಲಿ ಔಷಧ ಸಸ್ಯಗಳ ಮೂಲಕ ಈ ತನಕ ಪಡೆದ ಸಿದ್ಧಿಯನ್ನು ಪರಿಗಣಿಸಿದರೆ ಈ ಸಸ್ಯಗಳ ಕೃಷಿಗೆ ಮತ್ತು ಅವುಗಳ ಸಂರಕ್ಷಣೆಗೆ ಅತ್ಯಂತ ಹೆಚ್ಚು ಗಮನಹರಿಸಬೇಕಾಗಿದೆ ಎಂಬ ಸತ್ಯ ಅರಿವಾಗುತ್ತದೆ.

ಪರಂಪರಾಗತ ಚಿಕಿತ್ಸಾಕ್ರಮ ಮತ್ತು ಔಷಧ ಸಸ್ಯಗಳು : WHO ನಂಥ ಸಂಸ್ಥೆ ಮತ್ತು ಆಲೋಪತಿ ಚಿಕಿತ್ಸಾ ಪದ್ಧತಿಗಳು ಇತ್ತೀಚಿನವರೆಗೂ ಪರಂಪರಾಗತ ಚಿಕಿತ್ಸಾ ರೀತಿಗಳನ್ನು ಕಡೆಗಣಿಸಿದ್ದವು. ಆದರೆ ಪ್ರಪಂಚಾದ್ಯಂತ ಪರಂಪರಾಗತ ವೈದ್ಯ ಪದ್ಧತಿ ಜನರ ಆರೋಗ್ಯ ಸಂರಕ್ಷಣೆಯನ್ನು ಮಾಡುತ್ತಿರುವ ಸತ್ಯವನ್ನು ಮನಗಂಡ WHO ಸಂಸ್ಥೆ ಪರಂಪರಾಗತ ಚಿಕಿತ್ಸಾ ಪದ್ಧತಿಯ ರಕ್ಷಣೆ ಮತ್ತು ಬೆಳವಣಿಗೆಗೆ ಅಗತ್ಯವಾದ ಕೆಲವು ಯೋಜನೆಗಳನ್ನು ಹಮ್ಮಿಕೊಂಡು ಅದನ್ನು ಪ್ರೋತ್ಸಾಹಿಸುತ್ತಿದೆ.

ಪ್ರಪಂಚಾದಾದ್ಯಂತ ಔಷಧ ಮಾರುಕಟ್ಟೆಗಳಲ್ಲಿ ಔಷಧೀಯ ಸಸ್ಯಗಳ ವ್ಯಾಪಾರವು ಕೆಲವು ಕುತೂಹಲಕರ ಸಂಗತಿಗಳನ್ನು ಹೊರಗೆಡಹಿದೆ. ಪ್ರತಿವರ್ಷ ಈ ಮಾರುಕಟ್ಟೆಗಳಲ್ಲಿ ಐನೂರು ದಶಲಕ್ಷ ಅಮೆರಿಕನ್ ಡಾಲರ್ ಬೆಲೆಯ ಔಷಧ ಸಸ್ಯ ಮಾರಾಟ ನಡೆಯುತ್ತಿದೆ. WHO ಸಂಸ್ಥೆ ನಡೆಸಿದ ಸಮೀಕ್ಷೆ / ಅಧ್ಯಯನಗಳಿಂದ ಈ ವಿಚಾರ ತಿಳಿದುಬಂದಿದೆ. ಅಂತೆಯೇ ಆರೋಗ್ಯ ಸಂರಕ್ಷಣೆಗಾಗಿ ಸುಮಾರು ಇಪ್ಪತ್ತು ಸಾವಿರ ಸಸ್ಯಗಳನ್ನು ಉಪಯೋಗಿಸಲಾಗುತ್ತದೆ ಎಂದು ವಿಶ್ವಬ್ಯಾಂಕ್‌ನ ಸಮೀಕ್ಷೆಯು ತಿಳಿಸುತ್ತದೆ. ಇದಕ್ಕಿಂತ ಭಿನ್ನವಾಗಿ ಪ್ರಪಂಚಾದ್ಯಂತ ಅಸ್ತಿತ್ವದಲ್ಲಿರುವ ಎರಡೂವರೆ ಲಕ್ಷ ಸಪುಷ್ಪೀ ಸಸ್ಯಗಳಲ್ಲಿ ಸುಮಾರು ಎಪ್ಪತ್ತು ಸಾವಿರದಷ್ಟು ಸಸ್ಯಗಳು ಔಷಧಗಳಿಗಾಗಿ ಬಳಕೆಯಾಗುತ್ತವೆಂದು ವರ್ಲ್ಡ್ ವೈಡ್‌ಫಂಡ್ (WWF) ಪ್ರಕಟನೆ ತಿಳಿಸುತ್ತದೆ. ಭಾರತದಲ್ಲಿ ಸುಮಾರು ಏಳುಸಾವಿರದ ಐನೂರು ಸಸ್ಯಗಳು ಔಷಧೋಪಯೋಗಗಳಿಗೆ ಬಳಕೆಯಾಗುತ್ತದೆ.

ಕೇರಳಕ್ಕೆ ಸಂಬಂಧಿಸಿದಂತೆ ವಿಚಾರಮಾಡುವುದಾದರೆ ಸುಮಾರು ನಲುವತ್ತು ಐವತ್ತು ವರ್ಷಗಳ ಹಿಂದೆ ಔಷಧಗಳಿಗೆ ಅಗತ್ಯವಾಗಿದ್ದ ಗಿಡ ಮರಬಳ್ಳಿಗಳು ಮನೆಯ ಸುತ್ತಮುತ್ತ- ಗದ್ದೆ ಹಿತ್ತಲು ಗುಡ್ಡಗಳಲ್ಲಿ ಲಭ್ಯವಿದ್ದುವು. ಇಂದು ಆ ಪರಿಸ್ಥಿತಿ ಇಲ್ಲ. ಔಷಧಗಳು ವಾಣಿಜ್ಯ ಸ್ವರೂಪ ತಳೆದಿವೆ. ಸಾಕಷ್ಟು ಔಷಧ ಸಸ್ಯಗಳು ರಫ್ತಾಗುತ್ತಿವೆ. ರಬ್ಬರ್, ಗೇರು ಬೀಜ (ಗೋಡಂಬಿ) ಮುಂತಾದ ವಾಣಿಜ್ಯ ಬೆಳೆಗಳಿಗಾಗಿ ನೆಲವನ್ನು ಸಿದ್ಧಪಡಿಸಿ ಔಷಧ ಸಸ್ಯಗಳನ್ನು ನಿರ್ಮೂಲನ ಮಾಡಲಾಗಿದೆ. ಔಷಧ ಸಸ್ಯಗಳ ಉಗ್ರಾಣವಾದ ಕಾಡುಗಳು (ದೇವರ ವನ/ನಾಡುಗಳು) ನಾಶಗೊಂಡಿವೆ.

ಆಲೋಪತಿ ಪದ್ಧತಿಯಲ್ಲಿ ಬಳಕೆಯಾಗುವ ಸಸ್ಯಗಳ ಕುರಿತು ವಿಭಿನ್ನ ಖಾಸಗಿ ಸಂಸ್ಥೆಗಳು ಅಧ್ಯಯನ ನಡೆಸಿ ಅವುಗಳ ಅಭಿವೃದ್ಧಿಗೆ ಮಾರ್ಗೋಪಾಯಗಳನ್ನು ಮಾಡುತ್ತಿವೆ. ಆದರೆ ಪರಂಪರಾಗತ ಚಿಕಿತ್ಸಾ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಇಂಥಸಸ್ಯಗಳ ಅಭಿವೃದ್ಧಿ / ಕೃಷಿಯ ಕುರಿತು ಅಧ್ಯಯನಗಳಾಗಲಿ ಕಾರ್ಯಕ್ರಮಗಳಾಗಲಿ ತೀರಕಡಿಮೆ.

ಪ್ರೊ. ವಿ.ಪಿ.ಕೆ. ನಂಬ್ಯಾರರು 1970ರ ದಶಕದ ಕೊನೆಯ ವರ್ಷಗಳಲ್ಲಿ ತಮ್ಮ ನೇತೃತ್ವದಲ್ಲಿ ಕೇರಳ ಫಾರೆಸ್ಟ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ನಡೆಸಿದ ಅಧ್ಯಯನದ ಫಲವಾಗಿ ಕೇರಳದ ಕಾಡುಗಳಲ್ಲಿ ಮುಖ್ಯವಾದ ಔಷಧ ಸಸ್ಯಗಳು ಆರುನೂರರಷ್ಟು ಇವೆ ಎಂಬುದನ್ನು ಮೊದಲ ಬಾರಿಗೆ ಕಂಡುಕೊಳ್ಳಲಾಯಿತು, ಈ ಅಧ್ಯಯನದಿಂದ ದೊಡ್ಡ ಪ್ರಮಾಣದಲ್ಲಿ ವನ/ಕಾಡುಗಳಿಂದ ಶೇಖರಿಸುವ ಸುಮಾರು ನೂರ ಇಪ್ಪತ್ತು ನಾನ್-ವುಡ್ ಫಾರೆಸ್ಟ್ ಪ್ರೊಡ್ಯೂಸ್ (NWFP)ಗಳಲ್ಲಿ ಎಂಬತ್ತರಷ್ಟು ಔಷಧಿಯ ಸಸ್ಯಗಳ ಸಂಪತ್ತು ಇರುವುದನ್ನು ಕಂಡುಕೊಳ್ಳಲಾಯಿತು.

ಕೃಷಿ : ಕೇರಳದಲ್ಲಿ ಆಯುರ್ವೇದಿಯ ಔಷಧಗಳ ತಯಾರಿಗೆ ಅಗತ್ಯವಾದ ಸಸ್ಯಸಂಪತ್ತಿನ ಭೂರಿಭಾಗವೂ ಇಂದುಕೂಡ ಕಾಡುಗಳಿಂದ / ವನ್ಯಾವಸ್ಥೆಯಲ್ಲೇ ಶೇಖರಿಸಲ್ಪಡುತ್ತದೆ. ಕೃಷಿ ಮಾಡಿ ಉತ್ಪಾದಿಸುವುದು ಬಹಳ ಕಡಿಮೆ ಪ್ರಮಾಣದಲ್ಲಿ. ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಬಳಕೆಯಾಗುವ ಹೆಚ್ಚಿನ ಸಸ್ಯಗಳ ಕೃಷಿ ರೀತಿಯ ಬಗೆಗೆ ಸಮಗ್ರವಾದ ಅರಿವು ಇದುವರೆಗೂ ನಮಗೆ ಲಭ್ಯವಾಗಿಲ್ಲ. ಆದರೆ ಆಯುರ್ವೇದ - ಆಲೋಪತಿ ಚಿಕಿತ್ಸಾ ಪದ್ಧತಿಗಳಲ್ಲಿ ಬಳಸುವ ಸರ್ಪಗಂಧಿ, ಅಮುಕ್ಕೂರಂ, ಚಣ್ಣಕ್ಕೂವ, ಗುಗ್ಗುಲು ಮುಂತಾದ ಔಷಧೀಯ ಸಸ್ಯಗಳ ಕೃಷಿ ರೀತಿಯ ಕುರಿತು ವಿವರವಾದ ಮಾಹಿತಿಗಳು ಲಭ್ಯವಾಗಿವೆ. ಅಂತೆಯೇ ಕೃಷಿಮಾಡಬಹುದಾದ ಸಸ್ಯಗಳು ಇಂತಿವೆ.

ಅಡಪ್ಪದಿಯನ್	- Holostemma Annulare
ಓರಿಲ	- Desmodium Gangeticum
ಓರಿಲತ್ತಾಮರ	- Nervilla Aragoana
ಕಚ್ಚೋಲಂ	- Kaempferia Galanga
ಕರೀಂಕುರಿಂಞಿ	- Nilgirianthus
ಕುಡಕಪ್ಪಾಲ	- Holarrhena antidysenteriea
ಕುರುಂದೋಟಿ	- Sida Rhombifolia SSP. refusa
ಕೂವಳಂ	- Aegle marmelos
ಚಿಟ್ಟಾಡಲೋಡಕಂ	- Adhatoda beddomei
ಚಿಟ್ಟಮೃತ್	- Tinospora Cordifolia
ಚಿಟ್ಟರತ್ತ್	- Alpimia Calearata
ಚುವನ್ನ ಕೊಡುವೇಲಿ	- Plumbago rosea
ಚೆಂಗಟುನೀರ್‌ಕಿಟಂಜ್	- Kaempferra rotunda
ತಿಪ್ಪಲಿ	-
ದಂತಿ	- Baliospermum montanum
ನೀಲಯಮರಿ	- Indigofera tinetoria
ಪಯ್ಯಾಯಾಂತ /ಪಲಕಪ್ಪಯ್ಯಾನಿ	- Croxylum indicum
ಬ್ರಾಹ್ಮಿ, ಮರಮುಂಞಳ್ (ಮರಅರಿಸಿನ), ಮೂವಿಲ	- Pseudarthria Visieida
ವಿಟಾಲ್	- Embelia ribes, ವ್ಯಾರ್‌ಮರಂ - ಶತಾವರಿ.

ಈವರೆಗೆ ಹೇಳಿದ ಸಸ್ಯಗಳ ಪ್ರಾಥಮಿಕ ಕೃಷಿ ರೀತಿಗಳನ್ನು ರೂಪಿಸುವುದಕ್ಕೆ ಮುಂದೆ ಬಂದಿರುವುದು ಕೇರಳ ಕೃಷಿ ವಿಶ್ವವಿದ್ಯಾಲಯ, ಟ್ರೋಪಿಕಲ್ ಬೊಟೇನಿಕಲ್ ಗಾರ್ಡನ್ ಏಂಡ್ ರಿಸರ್ಚ್ ಇನ್ಸ್ಟಿಟ್ಯೂಟ್, ಕೋಟಕ್ಕಲ್ ಆರ್ಯವೈದ್ಯಶಾಲ, ಪೆನ್ಸಂ ಫಾರ್ಮಸ್ಯೂಟಿಕಲ್ಸ್ ಮುಂತಾದ ಸಂಸ್ಥೆಗಳಾಗಿವೆ. ಬಹಳ ಹಿಂದಿನಿಂದಲೇ ಅಲ್ಲಲ್ಲಿ ಕೃಷಿ ಮಾಡುತ್ತಿದ್ದ ಔಷಧೀಯ ಸಸ್ಯಗಳೆಂದರೆ ಕಚ್ಚೋಲಂ, ಕೊಡು ವೇಲಿ, ಶುಂಠಿ, ಅರಿಸಿನ ಮುಂತಾದವು. ಇವುಗಳಲ್ಲಿ ಕಚ್ಚೋಲಂ, ಶುಂಠಿ ಮುಂತಾದವುಗಳ ಕೃಷಿಯು ತ್ರಿಚ್ಚೂರು, ಎರ್ನಾಕುಳಂ, ಇಡುಕ್ಕಿ ಜಿಲ್ಲೆಗಳಲ್ಲಿ ಮುಖ್ಯವಾಗಿ ನಡೆಯುತ್ತಿದೆ. ಕೋಟಕ್ಕಲ್ ಆರ್ಯವೈದ್ಯ ಶಾಲೆಯು 1988-1993ರ ಕಾಲಾವಧಿಯಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಔಷಧ ಸಸ್ಯ ಕೃಷಿಗಾಗಿ ವಿನಿಯೋಗಿಸಿದೆ. ಅವರದೇ ಇನ್ನೂರು ಎಕ್ರೆ ಜಾಗದಲ್ಲಿ ಕೃಷಿ ಮಾಡಿದ ಸಸ್ಯಗಳು - ಚಿಟ್ಟಾಡಲೋಡಕಂ, ಕಚ್ಚೋಲಂ, ಕರಿಂಕುರಿಂಞಿ, ಶತಾವರಿ, ಕೊಡುವೇಲಿ - ಇರುವೇಲಿ - Coleus zeylamicus, ಅಡಪ್ಪದಿಯನ್, ಕಂಞಿಕ್ಕೂರ್ಕ-, ಅಮೂಕ್ಕೂರಂ-, ಪುತ್ತರಿಚ್ಚುಂಡ - (ಹಿಂಡ್ಲೆಕಾಯಿ?) Solanum indicum, ನನ್ನಾರಿ-, ಚೆರುವಟುದಿನ - ಕುದನೆ(ಕ.) Solanum melongena, ವಯಂಬ್ - Acorus Calamus, ಓರಿಲ, ಬ್ರಾಹ್ಮಿ, ಮೂವಿಲ, ನಾಗದಂತಿ-, ತಿಪ್ಪಲಿ-, ನೀಲಯ ಮರಿ, ರಾಮಚ್ಚಂ (ಲಾವಂಚ), ಕಟ್ಟಾರ್ ವಾಟ - Aloe vera, ನವರ - ಕೂವಳಂ, ಪಲಕಪಯ್ಯಾನಿ, ಕುಮಿಟ್ (ಅಣಬೆ), ಅಶೋಕ, ಆರ್ಯವೇಪ್ಪ್, ಕುಡಕಪ್ಪಾಲ, ವೇಂಙ-Pteroearpus marsupium, ಉಂಙ-Pongamia pinnata, ನಾಗಮರಂ-, ಇತ್ತಿ-Ficus retusa, ಪೂಪ್ಪಾದಿರಿ-, ನೀರ್‌ಮರುದ್-Terminalia arjuna, ಪಪ್ಪಂಙಂ-, ಕಣಿಕೊನ್ನ- Cassia fistila, ಕರುವ-Cinnamomum Zeylaneium ಜಾತಿ (ದಿ)-, ನೆಲ್ಲಿ, ಇಲೆಟ್ಟಾವಲ್-, ನೀಲಬಾಲ-, ತಾತಿ(ದಿ)ರಿ-Woodfordia fruitieosa ಮುಂತಾದವುಗಳು. ಅಲ್ಲದೆ ಈ ಯೋಜನೆಯ ಅಂಗವಾಗಿ ಈ ಸಸ್ಯಗಳ ಬಿತ್ತನೆ ಬೀಜಗಳನ್ನು ಆಸಕ್ತರಿಗೆ ಮತ್ತು ಆಸಕ್ತ ಸಂಸ್ಥೆಗಳಿಗೆ ವಿತರಣೆಯನ್ನು ಮಾಡಲಾಯಿತು.

1980-85ರ ಕಾಲಾವಧಿಯಲ್ಲಿ ಕೇರಳದ ಅರಣ್ಯ ಇಲಾಖೆಯ ಮೇಲ್ವಿಚಾರಕೆಯಲ್ಲಿ ವಯನಾಡಿನಲ್ಲಿ ಔಷಧೀಯ ಸಸ್ಯಗಳನ್ನು ಕೃಷಿ ಮಾಡಲಾಯಿತು. ನಾಗಾರ್ಜುನ ಔಷಧಶಾಲೆ, ಕೇರಳ ಫಾರ್ಮಸಿ, ಕೊಯಂಬತ್ತೂರ್ ಆರ್ಯವೈದ್ಯ ಫಾರ್ಮೆಸಿ ಮುಂತಾದ ಸಂಸ್ಥೆಗಳು ಕೂಡ ಈ ಸಸ್ಯಗಳನ್ನು ಕೃಷಿ ಮಾಡಲು ಪ್ರೋತ್ಸಾಹ ನೀಡಿವೆ. 1995ರ ಬಳಿಕ ಕೇಂದ್ರ ಕೃಷಿಖಾತೆಯ ಆರ್ಥಿಕ ನೆರವಿನಿಂದ ಕೇರಳ ಸರಕಾರದ ಕೃಷಿ ಇಲಾಖೆಯು ಔಷಧ ಸಸ್ಯ ಕೃಷಿಯನ್ನು ಉತ್ತೇಜಿಸುವುದಕ್ಕಾಗಿ ಪ್ರತಿವರ್ಷವೂ ಒಂದೊಂದು ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರ ಅಂಗವಾಗಿ 1999-2000ದಲ್ಲಿ 9.5 ಲಕ್ಷ ರೂಪಾಯಿಗಳ ಒಂದು

ಯೋಜನೆಯನ್ನು ಕೇರಳಕ್ಕೆ ನೀಡಲಾಯಿತು. ತಿರುವನಂತಪುರ, ಇಡುಕ್ಕಿ, ಮಲಪ್ಪುರಂ ಜಿಲ್ಲೆಗಳಲ್ಲಿ ಆರ್ರೂರು ಔಷಧಸಸ್ಯ ಬೀಜೋತ್ಪಾದನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೂ ಔಷಧ ಸಸ್ಯ ಬೆಳೆಯನ್ನು ವ್ಯಾಪಿಸುವುದಕ್ಕೂ ಈ ಯೋಜನೆಯು ಉದ್ದೇಶಿಸಿದೆ. ಔಷಧ ಸಸ್ಯ ಕೃಷಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ನ್ಯಾಷನಲ್ ಬ್ಯಾಂಕ್ ಆಫ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್ (ನಬಾರ್ಡ್) ಒಂದು ಸಾಲ ಪದ್ಧತಿಗೆ ರೂಪುರೇಷೆ ಹಾಕಿಕೊಂಡಿದೆ. ಸಾರ್ವಜನಿಕ ವಲಯದಲ್ಲೂ ಸಹಕಾರಿ ವಲಯದಲ್ಲೂ ಕಾರ್ಯವೆಸಗುತ್ತಿರುವ ಬ್ಯಾಂಕುಗಳ ಮುಖಾಂತರ ಕಡಿಮೆ ಬಡ್ಡಿದರದಲ್ಲಿ ಕೃಷಿಕರಿಗೆ ಔಷಧ ಸಸ್ಯ ಕೃಷಿಗಾಗಿ ಆರ್ಥಿಕ ಸಹಾಯ ನೀಡುವುದು ಇದರ ಉದ್ದೇಶ. ಕೇರಳ ಸರಕಾರದ ಕೈಕೆಳಗಿನ Kerala State Industrial Developmet Corporation ಒಂದು ಯೋಜನೆ ಸಿದ್ಧಪಡಿಸಿ ಇಡುಕ್ಕಿ, ವಯನಾಡು ಜಿಲ್ಲೆಗಳಲ್ಲಿ ಸಾವಿರ ಎಕ್ರೆ ಜಾಗದಲ್ಲಿ ಹರ್ಬಲ್ ವಿಲೇಜ್‌ಗಳನ್ನು ಸ್ಥಾಪಿಸಲು ಬಯಸಿತ್ತು. ಆಸಕ್ತ ಕೃಷಿಕರಿಗೆ ಅಗತ್ಯವಾದ ಭೂಮಿ, ಮಾರುಕಟ್ಟೆಗಳನ್ನು ಒದಗಿಸುವುದು ಇದರ ಮೂಲ ಲಕ್ಷ್ಯ. ICAR (Indian Council for Agricultural Research) ನಡೆಸುತ್ತಿರುವ ಅಖಿಲಭಾರತ ಸಂಯುಕ್ತ ಔಷಧ-ಸುಗಂಧ ತೈಲಸಸ್ಯ ಸಂಶೋಧನ ಪದ್ಧತಿ (All India Co-ordinated Research Project on Medicinal & Aromatic Plants - AICRPM (&) AP)ಯ ಅಂಗವಾಗಿ ಕೇರಳ ಕೃಷಿ ವಿಶ್ವವಿದ್ಯಾನಿಲಯದ ವೆಳ್ಳಾನಿಕ್ಕರ ಹೋರ್ಟಿಕಲ್ಚರ್ ಕಾಲೇಜಿನ ಉಸ್ತುವಾರಿಯಲ್ಲಿ 1990-95ರ ಕಾಲಾವಧಿಯಲ್ಲಿ ಕಚ್ಚೋಲಂ, ತಿಪ್ಪಲಿ, ಕೊಡುವೇಲಿ, ನೀಲಯಮರಿ ಮುಂತಾದವುಗಳ ಕೃಷಿ ರೀತಿಯನ್ನು ಅಭಿವೃದ್ಧಿಪಡಿಸಲಾಯಿತು. Tropical Botanical Garden& Research Instituteನಿಂದಲೂ ಹತ್ತು ಔಷಧ ಸಸ್ಯಗಳ ಪ್ರಾಥಮಿಕ ಕೃಷಿ ರೀತಿಗಳನ್ನು ವಿವರಿಸುವ ಒಂದು ಪುಸ್ತಿಕೆಯು 1991ರಲ್ಲಿ ಪ್ರಕಟವಾಗಿದೆ. 1990ರಲ್ಲಿ ಇಲ್ಲಿ ನಾನಾ ತೆರದ ಔಷಧ ಸಸ್ಯಗಳ ಬೀಜೋತ್ಪಾದನೆಯ ಬಗೆಗೆ ಒಂದು ಕಮ್ಮಟವನ್ನು ಸಂಯೋಜಿಸಿ ಕೇರಳದ ನೂರಾರು ಔಷಧ ಸಸ್ಯಗಳ ಬೀಜೋತ್ಪಾದನೆಯ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಅಲ್ಲದೆ ಅಡಪದಿಯನ್, ಕೂವಳಂ, ಚಿಟ್ಟಾಡಲೋಡಕಂ, ಪಡಯಾರ - Morinda Ambellata, ಅಮೃತಪಾಲ-Deealepis arayalpathra, ಕರಿಂಕುಡಂಜಲ್ -, ಚೆರುಪುನ್ನ-Calophyllum apetulam, ಆರೋಗ್ಯಪಚ್ಚ-, ಮುಂತಾದ ಔಷಧ ಸಸ್ಯಗಳ ಗಿಡಗಳನ್ನು ಟಿಶ್ಯೂಕಲ್ಚರ್ ಮುಖಾಂತರ ಉತ್ಪಾದಿಸುವ ತಾಂತ್ರಿಕ ವಿದ್ಯೆಯನ್ನೂ ರೂಪಿಸಲಾಯಿತು. ಔಷಧ ಸಸ್ಯ ಕೃಷಿಯ ಕುರಿತು ಜನಜಾಗೃತಿಗಾಗಿ FRLHT (Foundation for Revitalization of Local Health Traditions), PDS (Permade Development Society), WSSS (Wayanad Social Service society) ಮುಂತಾದ ಸರಕಾರೇತರ ಸಂಸ್ಥೆಗಳೂ Tropical Botanical Garden & Research Instituteಗಳೂ ಆಸಕ್ತಿ ತೋರಿ ಮುಂದೆ ಬಂದಿವೆ. ಔಷಧ-ಸುಗಂಧತೈಲ ಸಸ್ಯಗಳ ಅಭಿವೃದ್ಧಿಗಾಗಿ ಕೇರಳ ಕೃಷಿ ವಿಶ್ವವಿದ್ಯಾನಿಲಯದ ಕೈಕೆಳಗೆ ಓಡಕ್ಕಾಲಿ ಎಂಬಲ್ಲಿ ಆರೋಮೇಟಿಕ್ ಏಂಡ್ ಮೆಡಿಸಿನಲ್ ಪ್ಲಾಂಟ್ ರಿಸರ್ಚ್ ಸ್ಟೇಷನ್ ಸಂಸ್ಥೆಯು ಕಾರ್ಯವೆಸಗುತ್ತಿದೆ. ಇಲ್ಲಿ ಇಂಜಿಪುಲ್ಲ್ (ಮಜ್ಜಿಗೆ ಸೊಪ್ಪು?) - Lemon grass, ರಾಮಚ್ಚಂ (ಲಾವಂಚ)- Uetiuar ಮುಂತಾದ ಸುಗಂಧತೈಲ ಗಿಡಗಳನ್ನೂ ಔಷಧ ಸಸ್ಯಗಳನ್ನೂ ಸಂಗ್ರಹಿಸಿ ಅವುಗಳ ಕೃಷಿಕ್ರಮ, ಬೆಳೆತೆಗೆಯುವುದು, ಅವುಗಳಿಂದ ಸುಗಂಧತೈಲಾದಿಗಳನ್ನು ಸಂಗ್ರಹಿಸುವುದು, ಹೊಸತಳಿಗಳನ್ನು/ವಸ್ತುಗಳನ್ನು ತಯಾರಿಸುವುದು ಮುಂತಾದವುಗಳ ಬಗೆಗೆ ಸಂಶೋಧನಾ ಕೆಲಸಗಳೂ ನಡೆಯುತ್ತಿವೆ. ಮಜ್ಜಿಗೆ ಸೊಪ್ಪಿನಿಂದ ಇಲ್ಲಿ ಸಂಗ್ರಹಿಸುವ/ಉತ್ಪಾದಿಸುವ OD 19ಎಂಬ ವಸ್ತುವು ಉಲ್ಲೇಖಾರ್ಹವಾಗಿದೆ.

ಕೇರಳದಲ್ಲಿ ಔಷಧ ಸಸ್ಯಗಳು ಅಭಿವೃದ್ಧಿಗೊಳ್ಳಬೇಕಾದರೆ ಕಳೆದ ಕೆಲವೇ ವರ್ಷಗಳಲ್ಲಿ ಈ ರಂಗದಲ್ಲಿ ಚೀನಾವು ಗಳಿಸಿದ ಅಪಾರ ಯಶಸ್ಸು ಮತ್ತು ಅದರ ಹಿಂದಿನ ಕಾರ್ಯಕ್ರಮಗಳು ಮಾದರಿಯಾಗಬೇಕಾಗಿದೆ. ಔಷಧ ಸಸ್ಯಕೃಷಿಯನ್ನು ಸುಮಾರು ನಾಲ್ಕು ಲಕ್ಷ ಅರುವತ್ತು ಸಾವಿರ ಹೆಕ್ಟೇರುಗಳಷ್ಟು ವ್ಯಾಪಕ ವಿಸ್ತೀರ್ಣಕ್ಕೆ ವ್ಯಾಪಿಸಲು ಚೀನಾಕ್ಕೆ ಸಾಧ್ಯವಾಗಿದೆ. ವಿಶ್ವದಲ್ಲಿ, ಅದರಲ್ಲೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಿಕರಿಯಾಗುವ ಸಸ್ಯಜನ್ಯ ಔಷಧಗಳ ವಿಚಾರದಲ್ಲಿ ಅಗ್ರ ಪಂಕ್ತಿಯಲ್ಲಿ ನಿಲ್ಲಲು ಆ ರಾಷ್ಟ್ರಕ್ಕೆ ಸಾಧ್ಯವಾಗಿದೆ. ಅದರ ಮುಖ್ಯಕಾರಣವೂ ಇದೇ ಆಗಿದೆ. ಈ ಎಲ್ಲಸಾಧನೆಗಳ ಹಿಂದೆ ಚೀನಾವು ಹದಿನಾರು ವರ್ಷಗಳ ಹಿಂದೆ ಅಲ್ಲಿ ಸ್ಥಾಪಿಸಿದ ಔಷಧ ಸಸ್ಯ ಅಭಿವೃದ್ಧಿ ಮಂಡಲಿ (Institute of Medicinal Plant Development -IMPAD)ಯ ಪ್ರಯತ್ನವಿದೆ. ಔಷಧ ಸಸ್ಯಕೃಷಿ, ಅದಕ್ಕೆ ಸಂಬಂಧಿಸಿದ ಇತರ ಕೆಲಸಗಳಲ್ಲಿ ಇಂತಹ ಪ್ರಗತಿಯನ್ನು ಸಾಧಿಸಲು ಚೀನಾದಲ್ಲಿ ಸಾಧ್ಯವಾಗಿದ್ದರೆ ಕೇರಳದ ಅಭಿವೃದ್ಧಿಗೆ ಮಾರ್ಗದಶಕವಾಗುವ, ಪ್ರೇರಕವಾಗುವ ಶಕ್ತಿ ಸಾಮರ್ಥ್ಯಗಳು ನಮ್ಮ ಔಷಧ ಸಸ್ಯ ಸಂಪತ್ತಿಗೂ ಆಯುರ್ವೇದ ವಿಜ್ಞಾನ ಭಂಡಾರಕ್ಕೂ ಇವೆಯೆನ್ನುವುದರಲ್ಲಿ ಸಂಶಯ ಪಡಬೇಕಾಗಿಲ್ಲ.

ಆಯುರ್ವೇದ ಔಷಧ ನಿರ್ಮಾಣಕ್ಕೆ ಅನಿವಾರ್ಯವಾಗಿದ್ದು, ಆದರೆ ವನ್ಯಾವಸ್ಥೆಯಿಂದಷ್ಟೆ ಸಂಗ್ರಹಿಸಲಾಗುತ್ತಿರುವ ಹಲವು ಔಷಧಸಸ್ಯಗಳ ಕೃಷಿ ಮಾಡುವುದು ಇಂದು ಅತ್ಯಗತ್ಯವಾಗಿದೆ. ಕೇರಳ ಕೃಷಿ ವಿಶ್ವವಿದ್ಯಾಲಯದ ಕೈಕೆಳಗೆ ಹಲವಾರು ಔಷಧ ಸಸ್ಯಗಳ ಕೃಷಿ ವಿಧಾನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮುಂದಾಳ್ತನ ವಹಿಸಿದ ದಿ. ಡಾ. ಟಿ.ವಿ. ವಿಶ್ವನಾಥನ್ ಅವರ ಪ್ರಸ್ತಾವನೆಯನ್ನು ಗಮನಿಸಬೇಕಾಗಿದೆ : "ನಿಜವಾದ ಮದ್ದಿನ ಗಿಡ ಒಂದು. ಅದರ ಬದಲಾಗಿ ಇನ್ನೊಂದನ್ನು ಸೇರಿಸಿ ಔಷಧ ತಯಾರಿಸುವುದು. ಇಂಥ ಬದಲು, ಬದಲಿನ ಬದಲನ್ನು ಸೇರಿಸುವ ಮೂಲಕ ಆಯುರ್ವೇದ ಮದ್ದುಗಳ ಗುಣಮಟ್ಟದಲ್ಲಿ ಇಂದು ತೀವ್ರ ಕುಸಿತವುಂಟಾಗಿದೆ." ಔಷಧ ಸಸ್ಯಗಳ ಮತ್ತು ಸಸ್ಯ ಜನ್ಯ ಔಷಧಗಳ ರಫ್ತಿನ ಪ್ರಮಾಣವನ್ನು ಹೆಚ್ಚಿಸಲು ಅವುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಶಿಸ್ತುಬದ್ಧವಾಗಿ ರೂಪಿಸಿದ ಕೃಷಿರೀತಿಗಳನ್ನು ಅವಲಂಬಿಸಿ ಔಷಧ ಸಸ್ಯಗಳನ್ನು ಬೆಳೆಯುವುದೇ ಇದರ ಮೊದಲ ಹೆಜ್ಜೆ. ವನ್ಯಾವಸ್ಥೆಯಿಂದ ಶೇಖರಿಸುವ ಔಷಧ ಸಸ್ಯಸಂಪತ್ತಿನೊಂದಿಗೆ ಹೋಲಿಸಿ ನೋಡಿದಾಗ ಕೃಷಿ ಮಾಡಿ ಬೆಳೆಸುವ ಸಸ್ಯಗಳ ಮೇಲ್ಮೆಯನ್ನು ಈ ಕೋಷ್ಟಕದಿಂದ ಕಂಡುಕೊಳ್ಳಬಹುದು.

ಔಷಧ ಸಸ್ಯಗಳು - ವನ್ಯಾವಸ್ಥೆಯಲ್ಲಿಯವು ಮತ್ತು ಕೃಷಿ ಮಾಡುವಂಥವು- ತುಲನಾ-ಕೋಷ್ಟಕ

ಕ್ರ.ಸಂ.	ತುಲನಾಂಶಗಳು	ವನ್ಯಾವಸ್ಥೆಯಲ್ಲಿ	ಕೃಷಿ ಮಾಡಿದ್ದರಲ್ಲಿ
1.	ಕಚ್ಚಾ ಸಾಮಗ್ರಿ ಲಭ್ಯತೆ	ಗಣನೆಯಿಲ್ಲದೆ ಕುಸಿದಿದೆ	ಹೆಚ್ಚುತ್ತಿದೆ
2.	ಕಚ್ಚಾಸಾಮಗ್ರಿ ಲಭ್ಯತೆಯ ಏರುಪೇರುಗಳು	ಸಾಧ್ಯತೆ ಕಡಿಮೆ	ಸಾಧ್ಯತೆ ಹೆಚ್ಚು
3.	ಗುಣಮಟ್ಟದ ಸ್ಥಿರತೆ	ಕಡಿಮೆ	ಹೆಚ್ಚು
4.	ಕಚ್ಚಾಸಾಮಗ್ರಿಯ ವಿಶ್ವಾಸಾರ್ಹತೆ	ವಿಶ್ವಾಸಾರ್ಹತೆ ಕಡಿಮೆ	ವಿಶ್ವಾಸಾರ್ಹತೆ ಸಂಪೂರ್ಣ
5.	ಕಚ್ಚಾಸಾಮಗ್ರಿಯ ಗುಣಮಟ್ಟ ಹೆಚ್ಚಿಸುವುದು	ಸಾಧ್ಯವಿಲ್ಲ	ಸಾಧ್ಯವಿದೆ
6.	ಬೆಳೆ ತೆಗೆದ ಬಳಿಕದ ಕಚ್ಚಾಸಾಮಗ್ರಿ ಗುಣಮಟ್ಟವನ್ನು ಹೆಚ್ಚಿಸುವುದು	ಸಾಧ್ಯತೆ ಕಡಿಮೆ	ಸಾಧ್ಯತೆ ಹೆಚ್ಚು

ಆಯುರ್ವೇದ ಔಷಧ ನಿಘಂಟುಗಳಲ್ಲಿ ಅನೇಕ ಸಸ್ಯಜನ್ಯ ಔಷಧ ದ್ರವ್ಯಗಳನ್ನು ಹೇಳಲಾಗಿದ್ದರೂ ಸಾಧಾರಣ ಬಳಕೆಯಲ್ಲಿರುವ ಆಯುರ್ವೇದ ಔಷಧಗಳ ನಿರ್ಮಾಣಕ್ಕಾಗಿ ಬಳಸಿಕೊಳ್ಳಲಾಗುವುದು ಸುಮಾರು ನಾನ್ನೂರು ಔಷಧಗಳನ್ನು. ಇವುಗಳಲ್ಲಿ ಕೆಲವು ಸಸ್ಯಗಳನ್ನಾದರೂ ಕೃಷಿ ಮಾಡಲೇಬೇಕಾಗಿದೆ. ಅಂಥ ಸಸ್ಯಗಳ ವಿವರಗಳನ್ನು ಈ ಎರಡು ಕೋಷ್ಟಕಗಳಲ್ಲಿ ನೋಡಬಹುದಾಗಿದೆ.

ಕೃಷಿ ಮಾಡಬೇಕಾದ ಹ್ರಸ್ವಕಾಲೀನ ಔಷಧ ಸಸ್ಯಗಳ ಕೋಷ್ಟಕ

ಮಲಯಾಳಂ ಹೆಸರು	ಸಸ್ಯವೈಜ್ಞಾನಿಕ ಹೆಸರು
ಅಡಪತಿ(ದಿ)ಯನ್	Holostemma Annulare
ಅಡಯ್ಯಾ ಮಣಿಯನ್	Sphaeranthus indicus
ಅಮೃತ ಪಾಲ	Decalepis arayalpathra
ಆಡುತೀಂಡಾಪ್ಪಾಲ	Aristolochiya bracteolata
ಆವಣಕ್ಕ್(ಹರಳು)	Ricinus Communis
ಇರುವೇಲಿ	Coleus Zeylanicus
ಉಮ್ಮಂ (ಉಮ್ಮತ್ತ)	Datura metel
ಉಟಿಂಞಿ	Cardiospermum halicacabum
ಎರುಕ್ಕ್	Calotropis gigantea
ಓರಿಲ	Desmodium gangeticum
ಓರಿಲತ್ತಾಮರ	Nervilia aragoana
ಕಚ್ಚೋಲಂ	Kaempferia galanga
ಕಡಲಾಡಿ	Achyranthes aspera
ಕಂಡನ್ ಕತ್ತಿರಿ	Solanum surattense
ಕಯ್ಪುನ್ ಪಡವಲಂ (ಕಹಿಪಡುವಲ)	Trichosanthes cucumerina
ಕರಿಂಕುಡಂಜನ್	Geophila reniformis
ಕರಿಂತುಂಬ (ಕರಿತುಂಬೆ)	Anisomeles malabarica
ಕಲ್ಲುವಾಟಿ (ಕಲ್ಲುಬಾಳೆ/ನೆಲಬಾಳೆ)	Ensete superba
ಕಲ್ಲೂರ್‌ವಂಜಿ	Rotula aquatica
ಕಟ್ಟಾರ್‌ವಾಟ	Aloe vera
ಕಾಟ್ಟುಜೀರಗಂ (ಕಾಡುಜೀರಿಗೆ)	Centratherum anthelmintieum
ಕಾಟ್ಟುತೃತ್ತಾವ್	Oeimum gratissimum
ಕಾಟ್ಟುಪಾವಲ್	Momordica dioica
ಕರಿಂಕುರಿಂಞಿ	Nilgirianthus Ciliatus
ಕಿರಿಯಾತ್ (ನಿಲವೇಪ್ಪ್)	Andrographis paniculata
ಕೀಟಾನೆಲ್ಲಿ	Phyllanthus amarus
ಕುಡಂಜಲ್	Centella asiatica
ಕುಪ್ಪಮೇನಿ	Acalypha indica
ಕುನ್ನಿ	Abrus precatorius
ಕುರುಪರುತ್ತಿ	Gossypium arboreum
ಕುರುಂದೋಟ್ಟಿ	Sida rhombifolia ssp. retusa
ಕೃಷ್ಣತುಳಸಿ	Ocimum sanctum
ಕೈಯ್ಯೋನ್ನಿ	Eclipta alba
ಕೊಡಿತ್ತೂವ	Tragiaa involucrata
ಕೋಲಿಂಜಿ	Alpinia galanga
ಗರುಡಕ್ಕೊಡಿ	Artistolochia indica
ಚಂಜಲಂ ಪರಂಡ	Cissus quadrangularis
ಚಿನ್ನಿ	Premna serratifolia
ಚಿಟ್ಟಮುತ್	Tinospora cordifolia
ಚಿಟ್ಟರತ್ತ	Alpiniac alcarata
ಚಿಟ್ಟಾಡಲೋಡಗಂ	Adhatoda beddomei
ಚಿಟ್ಟೇಲಂ	Heracleum cndolleanum
ಚುವನ್ನ ಕೊಡುವೇಲಿ	Plumbagorosea
ಚೆಂಜಟಿ ನೀರ್ಕ್ಕಿಟಂಜ್	Kaempferia rotunda
ಚೆರುತೇಕ್ಕ್	Clerodendrum serratum
ಚೆರುವಟುದನ	Solanum melongena
ಜೀವಕಂ	Malaxis rheedii
ಞವರ ನೆಲ್ಲ್	Oryza sativa 'njavara'
ತವಿಟಾಮ	Boerhaavia diffusa
ತಾಮರ	Nelumbium speciousm
ತೂತಳಂ	Solanum trilobatum

ತ್ರೈಕ್ಕೋಲ್‌ಪಕ್ಕೊನ್ನ	Ipcmoea turpethum
ತ್ರೈವಾಳ	Cleome gynandra
ದಂತಿ (ದಿ)	Baliospermum montanum
ನರುನೀಂಡಿ	Hemidesmus indicus
ನಾಯ್ಕ್ಕೂರಣ	Mucuna Pruriens
ನೀಲಪ್ಪನ	Curculigoorchioides
ನೀಲಯಮರಿ	Indigofera tinctoria
ನೀರ್‌ತಿಪ್ಪಲಿ	Lippia nodifflora
ನೆಯ್ಕುಂಬಳಂ	Benincasa hispida
ನೆಯ್ಯಾಂಬಲ್	Nymphoides indica
ಪಚ್ಚಿಲ	Pogostemon heyneanus
ಪಡಯಾರ	Morinda umbellata
ಪನಿಕ್ಕೂರ್ಕ	Coleus amboinicus
ಪಡತ್ತಾಳಿ	Cyclea peltala
ಪಾಲ್‌ಮುದುಕ್ಕ್	Ipomoea mauritiana
ಪುತ್ತರಿಚ್ಚುಂಡ	Solanum indicum
ಪೇಕ್ಕುಮ್ಮಟ್ಟಿ	Citrullus colocynthis
ಪೊನ್ನಾಂಗಣ್ಣಿಕೀರ	Alternanthera sessilis
ಪೊನ್ನಾರಿವೀರಂ	Cassia occidentalis
ಪ್ರಸಾರಿಣಿ	Merremia tridentata
ಬ್ರಹ್ಮಿ	Bacopa monneri
ಮಂಞಕ್ಕೈತೋನ್ನಿ	Wedelia chinensis
ಮಂಜಟ್ಟಿ	Rubia cordifolia
ಮಲತಾಂಜ	Cissampelos pariera
ಮಾಂಜಾ ಇಂಜಿ	Curcuma amada
ಮಹಾಣಿ ಕಿಟಂಜ್	Decalepis hamiltoni
ಮುಕ್ಕಾಲ್ ಪೀರಂ	Mukia scabrella
ಮುಕ್ಕುಟ್ಟಿ	Biophytum sensitivum
ಮುಂಞ	Acalypha fruticosa
ಮುಳ್ಳನ್ ಪೀರ	Amaranthus spinosus
ಮೂವಿಲ	Pseudarthria viscida
ಯಶಂಕ್	Azima tetracantha
ರಾಮಚ್ಚಂ	Veteveria zizanioides
ವನ್ ತಿಪ್ಪಲಿ	Piper chaba
ವಯಲ್‌ಚುಳ್ಳಿ	Asteracantha longifolia
ವಯಂಬ್	Acorus calamus
ವಾತಂ(ದಂ) ಕೊಲ್ಲಿ	Justicia gendarussa
ವಾಟುಪುಲ್ಲ್	Cymbopogon flexuosus
ವಿಷ್ಣುಕ್ರಾಂತಿ	Evolvulus alsinoides
ವೆಳುತ್ತಚುಂಡ	Solanum melongena
ವೆಳ್ಳಕ್ಕೊಡುವೇಲಿ	Plumbago zeylancia
ವೇಲಿಪ್ಪರುತ್ತಿ	Pergularia extensa
ಶತಾಪ್ಪ್	Ruta graveolens
ಶತಾವರಿ	Asparagus racemosus
ಶಂಖುಪುಷ್ಪಂ	Clitoria ternatea
ಸರ್ಪಗಂಧಿ	Rauvolfia serpentina
ಸಮುದ್ರಪ್ಪಚ್ಚ	Argyria nervosa

ಕೃಷಿಮಾಡಬೇಕಾದ ದೀರ್ಘಕಾಲೀನ ಔಷಧ ಸಸ್ಯಗಳು

ಅಂಕೋಲಂ	Alangium salvifolium
ಅತ್ತಿ	Ficus racemosa
ಅಶೋಕಂ	Saraca asoca
ಆಡಲೋಡಗಂ	Adhatoda zeylancia
ಆವಲ್	Holoptelia integrifolia
ಆಟ್ಟುವಂಜಿ	Homonoia riparia
ಇತ್ತಿ	Ficus retusa
ಇಲಂಞಿ	Mimusops elengi
ಉಂಜ	Pongamia pinnata
ಏಟಿಲಂಪಾಲ	Alstonia scholaris
ಓಡಲ್	SarcostigmaKlenii
ಓಡವಳ್ಳಿ	Gnetum ula
ಕಡಂಬ್	Anthocephalus cadamba
ಕಡುಕ್ಕ	Terminalia chebula
ಕಣಿಕ್ಕೊನ್ನ	Cassia fistula
ಕಟಂಜಿ	Caesalpinia bonduc
ಕರುವ	Cinnamomum zeylanicum
ಕರುತ್ತ ಕುಂದಿರಿಕ್ಕಂ	Canarium strictum
ಕರಿಂಜಾಲೆ	Acacia catechu
ಕರಿಂಜೊಟ್ಟ	Quassia amara
ಕಾಕ್ಕಕೊಡಿ	Wattakakka volubilis
ಕಾಂಞಿರಂ	Strychnos nux-vomica
ಕಾರ	Elaeocarpusserratus
ಕಾರಕೀಲ್	Dysoxylum malabaricum
ಕುಡಗಪ್ಪಾಲ	Holarrhena antidysenterica
ಕುಡಂಪುಳಿ	Garcinia gummigutta

ಕೂವಳಂ	Aegle marmelos
ಕೋಪ್ಪಾಲ	Wrightia tinctoria
ಚಕ್ಕರಕ್ಕೊಲ್ಲಿ	Gymnema sylvestre
ಚತು(ದು)ರಮುಲ್ಲ	Myxopyrumserratum
ಚಪ್ಪಂಙಂ	Caesalpinia sappan
ಚಂದನಂ	Santalum album
ಚಂದನ ವೇಪ್ಪ್	Toona ciliata
ಚಮತ (ದ)	Butea monosperma
ಚೆರುಕುಮಿಟ್	Gmelina asiatica
ಚೆರುಪುನ್ನ	Calophyllum apetalum
ಚೇರ್	Semicarpus anacardium
ಚಿಟ್ಟಿಂದಲ್	Phoenix pusilla
ಞಾವಲ್	Syzigium cuminii
ತಾತಿ(ದಿ)ರಿ	Woodfordia fruticosa
ತಾನ್ನಿ	Terminalia bellerica
ತಾಟಿಂಪೂ	Pandanus fascicularis
ತೇಟ್ಟಾಂಬರಲ್	Strychnos potatorum
ದಂತಿ	Baliospermum montanum
ದೀರ್‌ಮರುದ್ ನಾಂಕ್	Mesua fere
ನಾಂಕ್	Mesua ferea
ನೀರ್‌ಮರುದ್	Terminalia arjuna
ನೀರ್‌ಮಾತ(ದ)ಳಂ	Crataeva magna
ನೀರ್‌ವಾಳಂ	Croton tiglium
ನೆಲ್ಲಿ	Emblica officinails
ಪನಿನೀರ್‌ಚೆಂಬಕಂ	Michelia champaca
ಪಯ್ಯಾಟಾಂತ	Oroxylum indicum
ಪರುವ	Strebulus asper
ಪಾದಿರಿ	Stereospermum suaveolens
ಪಾಚ್ಚೋಟ್ಟಿ	Symplocos cochinchinensis
ಪಾವಟ್ಟ	Pavetta indica
ಪುಷ್ಕರ ಮುಲ್ಲ	Coffea travancorensis
ಪೂವರಶ್	Thespesia populnea
ಪೂವ್ವಂ	Schleichera oleosea
ಪೆರುಂಕುರುಂಬ	Chonemorpha fragrans
ಪೊನ್‌ಕೊರಂಡಿ	Salacia oblonga
ಮರಮಂಞಳ್	Coscinium fenestratum
ಮರೋಟ್ಟಿ	Hydnocarpus pentandra
ಮಲಂಕಾರ	Randia dumetorum
ಮಲವೇಪ್ಪ್	Melia dubia
ಮುಕ್ಕಣ್ಣನ್ ಪೇಟ್	Allophylus serratus
ಮುಳ್ಳಿಲವ್	Bombax ceiba
ಮೈಲಾಂಜಿ	Lawsonia inermis
ವನ್‌ತುಡಲಿ	Zizyphus rugosa
ವಾಳನ್ ಪುಟಿ	Tamarindus indicus
ವಿಟಾಲ್	Embelia ribes
ವೆಳ್ಳಪೈನ್	Vateria indica
ವೇಪ್ಪ್	Azadirachta indica
ವೇಂಙ	Pterocarpus marsupium
ಸಿಂಧೂರಿ	Mallottus philippensis

ಇಂದು ಕೇರಳದಲ್ಲಿ ಔಷಧ ಸಸ್ಯಕೃಷಿ ಮಾಡುವಲ್ಲಿ ಎದುರಾಗುವ ಸಮಸ್ಯೆಗಳು ಮುಖ್ಯವಾಗಿ ಇಂತಿವೆ-

1. **ಶಾಸ್ತ್ರೀಯ ಕೃಷಿ ಪದ್ಧತಿಗಳ ಅಭಾವ :** ಉತ್ಪಾದನೆಯಲ್ಲಿ ಹೆಚ್ಚಳ, ಸಸ್ಯ ಸಂರಕ್ಷಣೆ, ಗುಣಮಟ್ಟ ಹೆಚ್ಚಿಸುವುದು ಮುಂತಾದವುಗಳ ಕುರಿತು ಸಾಕಷ್ಟು ಅಧ್ಯಯನಗಳು ಇನ್ನೂ ಆಗಿಲ್ಲ. ಕೃಷಿಕರಿಗೆ ತಿಳುವಳಿಕೆ ನೀಡಲಾಗುತ್ತಿಲ್ಲ.

2. **ಆರ್ಥಿಕ ವಿಚಾರಗಳು ತಿಳಿದಿಲ್ಲದಿರುವುದು :** ಯಾವುದೇ ಒಂದು ಔಷಧ ಸಸ್ಯವನ್ನು ಬೆಳೆದು ಅದರ ಪ್ರಯೋಜನವನ್ನು ಪಡೆಯುವ ತನಕ ಒದಗುವ ಖರ್ಚಿನ ಬಗೆಗೆ ಸರಿಯಾದ ಮಾಹಿತಿ ಲಭ್ಯವಿಲ್ಲ.

3. **ಬಿಕರಿ ವ್ಯವಸ್ಥೆ :** ಔಷಧ ಸಸ್ಯಗಳು ಫಾರ್ಮಸಿಗಳಿಗೆ ತಲುಪುವುದು ಮೂರು ರೀತಿಯಲ್ಲಿ. 1. ಶೇಖರಿಸುವಾತನ ಮೂಲಕ (ನೇರವಾಗಿ); 2. ಶೇಖರಿಸುವಾಗ > ವ್ಯಾಪಾರಿ > ಫಾರ್ಮಸಿ; 3. ಶೇಖರಿಸುವಾತ > ಮಧ್ಯವರ್ತಿ > ವ್ಯಾಪಾರಿ > ಫಾರ್ಮಸಿ. ಯಾವುದೇ ರೀತಿಯಲ್ಲೂ ಕೃಷಿ ಮಾಡುವಾತನಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಬೆಲೆಯಲ್ಲಿನ ಏರಿಳಿತವು ಇನ್ನೊಂದು ಸಮಸ್ಯೆ. ಆಯಾಕಾಲದ ಫಸಲು ಬಂದ ಬಳಿಕ ಅದನ್ನು ಕೆಡದೆ ಜೋಪಾನಮಾಡುವುದು ಕಷ್ಟ. ಅವು ಕೊಳೆಯದೆ ಒಣಗದೆ-ಒಟ್ಟಿನಲ್ಲಿ ಕೆಡದೆ ಇರಬೇಕು.

4. **ಹೆಚ್ಚಿದ ಕೃಷಿ ವೆಚ್ಚ :** ವೆಚ್ಚದ ಬಹುಭಾಗವೂ ಕೂಲಿಕೊಡುವುದಕ್ಕೆ ಬೇಕು. ಕೇರಳದಲ್ಲಿ ಕೂಲಿಯಂತೂ ಅತ್ಯಧಿಕ (ದಿನಕ್ಕೆ ಸಾಧಾರಣ 500/- ರೂ.) ವನ/ಕಾಡುಗಳಿಂದ ಸಂಗ್ರಹಿಸುವುದರ ನಾಲ್ಕು/ಐದು ಪಟ್ಟು ಕೂಲಿ ಕೊಟ್ಟು ಕೃಷಿಮಾಡುವ ಸಾಹಸಕ್ಕೆ ಯಾರೂ ಮುಂದಾಗುವುದಿಲ್ಲ. ಚೆತ್ತಿಕೊಡುವೇಲಿ, ಕಚ್ಚೋಲಂ ಮುಂತಾದುವು ವನ್ಯಾವಸ್ಥೆಯಲ್ಲಿ ಲಭ್ಯವಿಲ್ಲದಿರುವುದರಿಂದಷ್ಟೆ ಅನಿವಾರ್ಯವಾಗಿ ಅವನ್ನು ಕೃಷಿ ಮಾಡಲ್ಪಡುತ್ತವೆ.

5. **ಬಿತ್ತನೆ ಬೀಜಗಳ ಅಭಾವ :** ಔಷಧ ಸಸ್ಯಗಳನ್ನು ಈ ಉದ್ದೇಶಕ್ಕಾಗಿ ಯಾರೂ ಬೀಜಗಳ ತಯಾರಿ ಮಾಡಿ ಮಾರಾಟಕ್ಕೆ ಇಡುವುದಿಲ್ಲ. ಬೀಜಗಳ ಅಲಭ್ಯತೆಯಿಂದ ಕೃಷಿ ನಡೆಯುತ್ತಿಲ್ಲ.

6. **ಕೃಷಿ ಜಾಗದ ಅಭಾವ :** ತೆಂಗು ಕಂಗು ರಬ್ಬರ್ ಗೋಡಂಬಿಯಂಥ ವಾಣಿಜ್ಯ ಬೆಳೆಗಳನ್ನಲ್ಲದೆ ಔಷಧ ಸಸ್ಯಗಳನ್ನು ಬೆಳೆಸಲು ಎಲ್ಲಾ ಕಡೆಗೂ ಜಾಗದ ಅಭಾವವು ಸಮಸ್ಯೆಯಾಗಿ ಕಾಡುತ್ತದೆ. ಈ ಕಾರಣಗಳಲ್ಲದೆ ಗುಣಮಟ್ಟದ ಕುರಿತಾದ ಅಪನಂಬಿಗೆ, ಕೊಂಡುಕೊಳ್ಳುವ ಸಂಸ್ಥೆಗಳ ಅಭಾವ ಮುಂತಾದುವು ಕೂಡ ಔಷಧ ಸಸ್ಯಕೃಷಿಗೆ ಬಾಧಕವಾಗುವ ವಿಷಯಗಳಾಗಿವೆ.

ಜನರ ಆರೋಗ್ಯ ಸಂರಕ್ಷಣೆಯನ್ನು ಸಸ್ಯಜನ್ಯ ಔಷಧಗಳು ಮಾಡಬಲ್ಲವೆಂಬ ನಂಬುಗೆ ಇಂದು ವಿಶ್ವಾದ್ಯಂತ ಹೆಚ್ಚಾಗುತ್ತಿರುವುದು ಆಶಾದಾಯಕ ಸೂಚನೆಯಾಗಿದೆ. ಶಾಸ್ತ್ರೀಯ ರೀತಿಯನ್ನು ಅವಲಂಬಿಸಿ ಕೃಷಿ ಮಾಡಿದರೆ ಮಾತ್ರ ಔಷಧ ಸಸ್ಯಗಳ, ಸಸ್ಯಜನ್ಯ ಔಷಧಗಳ ಗುಣಮಟ್ಟವನ್ನು ದೃಢಪಡಿಸಬಹುದು ಮತ್ತು ರಫ್ತನ್ನು ಹೆಚ್ಚಿಸಬಹುದು. ಹೆಚ್ಚು ಲಾಭತರುವ ಔಷಧ ಸಸ್ಯಗಳನ್ನು ಗುರುತಿಸಿಕೊಂಡು ಕೃಷಿಕರಿಗೆ ಅದನ್ನು ತಿಳಿಸಿದರೆ ಕೃಷಿ ವಲಯದಲ್ಲಿ ಖಂಡಿತವಾಗಿಯೂ ಈ ವಿಚಾರದಲ್ಲಿ ಪ್ರಗತಿಯಾಗುವುದರಲ್ಲಿ ಸಂದೇಹವಿಲ್ಲ. ಔಷಧ ಸಸ್ಯಗಳ ಕೃಷಿಯ ಹೆಚ್ಚಳದಿಂದ ವನ್ಯ/ಕಾಡಿನ ಔಷಧ ಮೂಲಗಳು ಬರಿದಾಗುವ ಅಪಾಯವನ್ನೂ ತಡೆದಂತಾಗುತ್ತದೆ.

ಔಷಧ ಸಸ್ಯ ಕೃಷಿ - ಇತರ ರಾಜ್ಯಗಳಲ್ಲಿ :

ಔಷಧ ಸಸ್ಯ ಕೃಷಿಯ ವಿಚಾರದಲ್ಲಿ ಕರ್ನಾಟಕ, ತಮಿಳುನಾಡುಗಳು ಕೇರಳಕ್ಕಿಂತ ಮುಂದಿವೆ. ಅಲ್ಲಿಯ ಔಷಧ ಸಸ್ಯ ಸಂಪತ್ತನ್ನು ಭಾರತದ ಹೊರಗಿರುವ ಇಂಗ್ಲಿಷ್ ಔಷಧ/ಎಸೆನ್ಶಿಯಲ್ ಆಯಿಲ್ ಕಂಪನಿಗಳು ಖರೀದಿಸುತ್ತವೆ. ತಮಿಳ್ನಾಡಿನ ತೂತ್ತುಕುಡಿ ಬಂದರ್‌ನಿಂದ ಕೋಟ್ಯಾಂತರ ರೂಪಾಯಿಗಳ ಔಷಧ ಸಸ್ಯಗಳ ರಫ್ತು ವಹಿವಾಟು ಪ್ರತಿವರ್ಷ ನಡೆಯುತ್ತದೆ. ಚಿನ್ನುಮುಕ್ಕಿ (ಕಾಷ್ಯಾಸೆನ್ನ)ಯು ಬಹಳ ವರ್ಷಗಳಿಂದ ತಮಿಳುನಾಡಲ್ಲಿ ಕೃಷಿಮಾಡುತ್ತಿರುವ ಔಷಧ ಸಸ್ಯವಾಗಿದೆ. ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಮೇಂತೋನ್ನಿ (ಗ್ಲೋರಿಯೋಸಾ ಸಪ್ಪೇರ್ಬ್), ಪಾಸ್ಸಿಫ್ಲೇರಾ ಇನ್‌ಕಾರ್ನೇಟ ಮುಂತಾದ ಔಷಧ ಸಸ್ಯಗಳು ಇಲ್ಲಿ ಕೃಷಿ ಮಾಡಲ್ಪಡುತ್ತಿವೆ. CIMAPಯ ಎರಡು ಪ್ರಾದೇಶಿಕ ಕೇಂದ್ರಗಳು ಕೊಡೈಕನಾಲ್ ಮತ್ತು ಬೆಂಗಳೂರುಗಳಲ್ಲಿ ಕಾರ್ಯ ಪ್ರವೃತ್ತವಾಗಿವೆ. ICAR, CSIR ಮುಂತಾದ ಸಂಸ್ಥೆಗಳೂ ಕೃಷಿಗೆ ಪ್ರೋತ್ಸಾಹ ನೀಡುತ್ತಿವೆ. ಪಶ್ಚಿಮಬಂಗಾಳ, ದೆಹಲಿ, ಲಕ್ನೋ, ಜಮ್ಮು, ಭುವನೇಶ್ವರ ಮುಂತಾದೆಡೆಗಳಲ್ಲಿ ಔಷಧ ಸಸ್ಯಕೃಷಿಗೆ ವಿಶೇಷ ಪ್ರೋತ್ಸಾಹ ನೀಡುವ ಕೇಂದ್ರಗಳಿವೆ. ಆಲ್ ಇಂಡಿಯಾ ಕೋ-ಆರ್ಡಿನೇಟೆಡ್ ರಿಸರ್ಚ್ ಪ್ರಾಜೆಕ್ಟ್ ಆನ್ ಮೆಡಿಸಿನಲ್ ಅಂಡ್ ಅರೋಮೇಟಿಕ್ ಪ್ಲಾಂಟ್ಸ್- ಎಂಬ ಯೋಜನೆಯು ನಾಲ್ಕನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಾರಂಭವಾಗಿದೆ. ಈ ಯೋಜನಾನುಸಾರ ಕೃಷಿ ರೀತಿಗಳನ್ನು ಅಭಿವೃದ್ಧಿಪಡಿಸಿ ತಯಾರಿಸಿದ ಔಷಧ ಸಸ್ಯಗಳ ವಿವರ ಇಂತಿದೆ:

ಅಖಿಲ ಭಾರತ ಸಂಯೋಜಿತ ಔಷಧ-ಸುಗಂಧ ತೈಲ ಸಸ್ಯ ಸಂಶೋಧನ ಪದ್ಧತಿಯಲ್ಲಿ ಕೃಷಿ ವಿಧಾನಗಳು ವಿಕಸನಗೊಳಿಸಿದ ಔಷಧ ಸಸ್ಯಗಳು

ವಾಣಿಜ್ಯನಾಮ	ವೈಜ್ಞಾನಿಕ ಹೆಸರು
ಆಫ್ರಿಕನ್ ಮೇರಿಗೋಲ್ಡ್	Tagetes minuta
ಅಲೋ	Aloe vera
ಅಂಬ್ರಟ್ಟೆ ಸೀಡ್	Abelmoschus moschatus
ಅಮ್ಮಿ ಮೇಜಸ್	Ammi majus
ಅನೀಸ್	Pimpinella anisum
ಅಶ್ವಗಂಧ	Withania somnifera
ಬಲ್ಲಡೋಣ	Atropa belladonna
ಬೇಸಿಲ್	Ocimumspp.
ಸಿಲೇರಿ	Apium graveolens
ಕಾಮೋಮಿಲ್	Matricaria Chamomilla
ದತ್ತು	Dattura spp.
ದವನ	Artemisia spp.
ದಿಲ್	Anethum graveolens
ಎರ್‌ಗೋಟ್ಟ್	Calviceps purpurea
ಫೋಕ್ಸ್ ಗ್ಲೋವ್	Digitalis purpurea
ಫ್ರೆಂಚ್ ಜಾಸ್ಮಿನ್	Jasminum grandiflourm
ಜೆರಾನಿಯಂ	Pelargonium graveolens
ಗುಗ್ಗುಲ್	Commiphora wightii
ಹೆನ್‌ಬೇನ್	Hyoscyamus niger
ಹೋಪ್ಸ್	Humulus lupulus
ಇಪ್ಪೇಕ್ಕ್	Cephaelis ipecacuanha
ಕೆವ್ವ	Pandanus odoratissimus
ಲೆಮನ್ ಗ್ರಾಸ್	Cymbopogon flexuosus
ಲಿಕ್ಕೋರಿಸ್	Glycyrrhiza glabra
ಲೋಂಗ್ ಪೆಪ್ಪರ್	Piper longum
ಪಾಂ ರೋಸ್	Cymbopogon martini
ಪಾಚ್ಚೋಳಿ	Pogostemon batchouli
ಪೆರಿವಿಂಕಿಳ್	Catharanthus roseus
ಸೊರಾಲಿಯ	Psoralea corylifolia
ಸಿಲ್ಲಿಯಂ (ಇಸ್ಬ್‌ಗೋಲ್)	Plantago ovata
ಸಫೇದ್ ಮುಸ್ಲಿ	Chlorophytumspp.
ಸರ್ಪಗಂಧಿ	Rauvolfia serpentina
ಸೆನ್ನ	Cassia angustifolia
ಸೋಳಾನಂ	Solanum virum
ಟ್ಯೂಬ್ ರೋಸ್	Polianthes tuberosa
ವೆಟ್ಟಿವರ್	Veteveria zizanoides

ಔಷಧ ಸಸ್ಯಕೃಷಿಯ ಖರ್ಚುವೆಚ್ಚವನ್ನೂ ಅದರಿಂದ ಬರುವ ಆದಾಯವನ್ನೂ ಕುರಿತು ಕೃಷಿ ಮಾಡುವವರಿಗೆ ಕನಿಷ್ಠ ಒಂದು ಸ್ಥೂಲ ಲೆಕ್ಕಾಚಾರವಾದರೂ ಅಗತ್ಯ. ಇಂಥ ಲೆಕ್ಕಾಚಾರದ ಕುರಿತು ಸಮಗ್ರ ವಿವರಗಳು ಇನ್ನೂ ಲಭ್ಯವಿಲ್ಲವಾದರೂ ಮಾದರಿಗಾಗಿ ಕೆಲವು ಔಷಧ ಸಸ್ಯಗಳ ಆರ್ಥಿಕ ಮಗ್ಗುಲನ್ನು ಗಮನಿಸಬಹುದಾಗಿದೆ.

ಹೆಚ್ಚು ಉತ್ಪಾದಿಸುವ ಕೃಷಿ ರೀತಿ ಅಳವಡಬೇಕು. ಸಸ್ಯದ ಬೆಳೆವಣಿಗೆಯ ನಾನಾ ಹಂತಗಳಲ್ಲಿ ಔಷಧೀಯ ಘಟಕಗಳಲ್ಲಿ 'ಓಂಟೋಜೆನೆಟಿಕ್ ವೇರಿಯೇಬಿಲಿಟಿ'ಯಿಂದಾಗಿ ಬೆಳೆವಣಿಗೆಯ ಪ್ರಮಾಣದಲ್ಲಿ ಏರುಪೇರುಂಟಾಗುತ್ತದೆ. ಉದಾ: ಪೆಪ್ಪರ್‌ಮಿಂಟ್ ಎಂಬ ಸಸ್ಯದ ಮೆಂಥೋಲ್ ಔಷಧ ಘಟಕದ ಪ್ರಮಾಣವು ಗರಿಷ್ಠ ಪ್ರಮಾಣ

ಕೆಲವು ಔಷಧ ಸಸ್ಯಗಳ ಕೃಷಿಯ ಆರ್ಥಿಕ ನೋಟ

ಪ್ರಾದೇಶಿಕ ಹೆಸರು	ಉಪಯೋಗ ಭಾಗ	ಬೀಜ ಬಿತ್ತನೆ ರೀತಿ	ಬೆಳೆಯ ಕಾಲಾವಧಿ	ಹೆಕ್ಟೇರಿಗೆ ಖರ್ಚು	ಹೆಕ್ಟೇರಿಗೆ ಇಳುವರಿ (ಮೆ. ಟನ್ನಿಗೆ)	ಮಾರ್ಕೆಟ್ ಬೆಲೆ (ಮೆ. ಟನ್ನಿಗೆ)	ಒಟ್ಟು ಆದಾಯ ಮೆ. ಟನ್ ರೂಪಾಯಿ	ಹೆಕ್ಟೇರಿಗೆ ಲಾಭ	ವಾರ್ಷಿಕ ಲಾಭ ಹೆಕ್ಟೇರಿಗೆ
ನೀಲಯಮರಿ	ಎಲೆ, ಬೀಜ	ಬೀಜ	6 ತಿಂಗಳು	12,500	ಎಲೆ-2 ಬೀಜ -0.25	25,000 1,00,000	50,000 25,000	62,500	1,25,000
ಶತಾವರಿ	ಗೆಣಸು	ಬೀಜ	3 ವರ್ಷ	15,000	7	50,000	3,50,000	3,35,000	1,11,700
ಸರ್ಪಗಂಧಿ	ಬೇರು	ಬೀಜ	3 ವರ್ಷ	15,000	6	60,000	3,60,000	3,45,000	1,15,000
ಕಟ್ಟಾರ್‌ವಾವಿ	ಎಲೆ	ಸಣ್ಣ ಗಿಡಗಳು	1 ವರ್ಷ	1,32,000	52	3,500	1,82,000	50,000	50,000
ತಿಪ್ಪಲಿ	ಕಾಯಿ	ದಂಟು	5 ವರ್ಷ	42,500	2.2	1,00,000	2,20,000	1,77,500	35,500
ಕಸ್ತೂರಿ ವೇಂಜ	ಬೀಜ	ಬೀಜ	1 ವರ್ಷ	15,000	1.25	40,000	50,000	35,000	35,000

ಈ ಕೋಷ್ಟಕದಿಂದ ಕಂಡುಕೊಳ್ಳಬಹುದಾದ ಔಷಧ ಸಸ್ಯ ಕೃಷಿಯ ಸಾಧಕ ಬಾಧಕ, ಲಾಭ-ನಷ್ಟಗಳ ಜತೆಗೆ ಇನ್ನೂ ಕೆಲವು ವಿಚಾರಗಳನ್ನು ಗಮನಿಸಬಹುದಾಗಿದೆ. ದೀರ್ಘಕಾಲದ ವೀಕ್ಷಣೆ ಮತ್ತು ಸಂಶೋಧನೆಯ ಆಧಾರದಲ್ಲಿ ಈ ವಿಷಯಗಳನ್ನು ಪ್ರಸ್ತುತಪಡಿಸಲಾಗಿದೆ.

ವಿಭಿನ್ನ ಔಷಧ ಸಸ್ಯಗಳಲ್ಲಿ ಅವುಗಳ ಆನುವಂಶಿಕ ಘಟಕಗಳ ವ್ಯತ್ಯಾನುಸಾರವಾಗಿ ಔಷಧ ವಸ್ತುಗಳ ಉತ್ಪಾದನೆ ಮತ್ತು ಗುಣಗಳಲ್ಲಿ ಹೆಚ್ಚುಕಡಿಮೆಯಾಗುತ್ತದೆ. ಪ್ರತಿಯೊಂದು ಔಷಧ ಸಸ್ಯಗಳು ಸ್ವಾಭಾವಿಕ/ಸಹಜ ತಳಿಗಳನ್ನು ಕಂಡುಕೊಂಡು ಅವನ್ನು ಅಭಿವೃದ್ಧಿಪಡಿಸುವುದು ಅಗತ್ಯ. ಇದು ಸಂಶೋಧನೆಯಲ್ಲಿ ಗಮನಿಸಬೇಕಾದ ಮುಖ್ಯಸಂಗತಿ. ಉದಾಹರಣೆಗೆ- ಸಿಂಕೋನ ಎಂಬ ಔಷಧ ಸಸ್ಯದ ಆನುವಂಶೀಯ ವೈವಿಧ್ಯದ ಕುರಿತು ಅಧ್ಯಯನ ನಡೆಸಿದಾಗ ಇದರ ಔಷಧೀಯ ಗುಣಕ್ಕೆ ಆಧಾರವಾದ ಕ್ವಿನೈನ್ ಎಂಬ ಘಟಕವು ಹೆಚ್ಚಿನ ಪ್ರಮಾಣದಲ್ಲಿ ಅಡಗಿರುವ ತಳಿಗಳನ್ನೂ ಕ್ವಿನೈನ್ ತೀರ ಕಡಿಮೆ ಪ್ರಮಾಣದಲ್ಲಿದ್ದ ತಳಿಗಳನ್ನೂ ಪ್ರತ್ಯೇಕಿಸಿ ತಿಳಿಯಲು ಸಾಧ್ಯವಾಯಿತು. ಔಷಧಿ ಸಸ್ಯ ಜನುಸ್ಸುಗಳು (Genre?)ನ್ನು ಗಮನಕ್ಕೆ ತೆಗೆದುಕೊಂಡಾಗ ಇವೆರಡು ತಳಿಗಳನ್ನು ಸಂರಕ್ಷಿಸಬೇಕಾದೀತು. ಏಕೆಂದರೆ ಕೆಲವೊಮ್ಮೆ ಕ್ವಿನೈನ್ ಪ್ರಮಾಣ ತೀರ ಕಡಿಮೆಯಿರುವ ಸಿಂಕೋನ ತಳಿಯಲ್ಲಿ ಅವನ್ನು ಉಂಟುಮಾಡುವ ಸಾಧ್ಯತೆಯುಳ್ಳ ಕೆಲವು ರೋಗಗಳನ್ನು ಪ್ರತಿರೋಧಿಸಲು ಬೇಕಾಗುವ ಆನುವಂಶಿಕ ಘಟಕಗಳು ಹೆಚ್ಚು ಅಡಗಿರಬಹುದು.

ಸಸ್ಯವೊಂದರಲ್ಲಿ ಔಷಧ ಘಟಕಗಳು ಎಲೆ, ತೊಗಟೆ, ಹೂವು, ಕಾಯಿ, ಬೇರು ಮುಂತಾದೆಡೆಗಳಲ್ಲಿ ಎಲ್ಲೋ ಒಂದೆಡೆ ಕೇಂದ್ರೀಕೃತವಾಗುತ್ತದೆ. ಆ ಭಾಗಕ್ಕಷ್ಟೆ ಗಮನಹರಿದು ಆ ಭಾಗಗಳನ್ನು ತಲುಪುವುದು ಅದು ಹೂಬಿಡಲು ಆರಂಭಿಸುವಾಗ, ಸೋಲಾನಂ ವೈರಂ (Solanum viram) ಎಂಬ ಹಿಂಡ್ಲೆವರ್ಗಕ್ಕೆ ಸೇರಿದ ಸಸ್ಯದ ಕಾಯಿಗಳಲ್ಲಿ ಅಡಗಿದ Solarodine ಎಂಬ ಘಟಕವು ಅತ್ಯಂತ ಚೆನ್ನಾಗಿ ಕಾಣಿಸಿಕೊಳ್ಳುವುದು ಕಾಯಿಗಳು ಹಸುರುಬಣ್ಣದಿಂದ ಹಳದಿ ಬಣ್ಣಕ್ಕೆ ತಿರುಗುವಾಗ ಇಂಥ ವಾಸ್ತವಗಳು ಔಷಧ ಸಸ್ಯಗಳನ್ನು ಬೆಳೆಯುವವರಿಗೆ ತಿಳಿದಿರಬೇಕಾದುದು ಅಗತ್ಯ.

ಹವಾಗುಣ, ಮಣ್ಣಿನ ಸತ್ತ್ವ, ನೀರಿನ ಲಭ್ಯತೆಯಪ್ರಮಾಣ ಮುಂತಾದುವು ಕೂಡ ಸಸ್ಯಗಳ ರಾಸಾಯನಿಕ ಘಟಕಗಳ ಪ್ರಮಾಣವನ್ನು ಪ್ರಭಾವಿಸುತ್ತವೆ. ಸಮುದ್ರ ಮಟ್ಟಕ್ಕಿಂತ ಇರುವ ಎತ್ತರ, ಹಗಲಿನ ದೈರ್ಘ್ಯ ಮತ್ತು ತಾಪ ಪ್ರಮಾಣ ಮುಂತಾದುವು ಕೂಡ ರಾಸಾಯನಿಕ ಘಟಕಗಳ ರೂಪೀಕರಣಕ್ಕೆ ಬಾಧಕವಾಗುವ ಸಂಗತಿಗಳಾಗಿವೆ.

ಔಷಧ ಸಸ್ಯಗಳಿಂದ ಇಳುವರಿ ಪಡೆದ ಮೇಲೆ, ಮಾರುಕಟ್ಟೆಗೆ ತಲುಪಿಸುವ ಮೊದಲು, ಹಾಗೂ ಮಾರುಕಟ್ಟೆಯಿಂದ ಔಷಧ ನಿರ್ಮಾಣಕ್ಕೆ ಒದಗುವ ಮಧ್ಯೆ ಯೋಗ್ಯರೀತಿಯಲ್ಲಿ ಹದಗೊಳ್ಳಬೇಕು/ಸಿದ್ಧವಾಗಬೇಕು. ಹಾಗೆ ಸಿದ್ಧಗೊಂಡ ಭಾಗಗಳು ಪ್ರಸ್ತುತ ಗಿಡದ ಇತರ ಭಾಗಗಳು, ಇತರ ಸಸ್ಯಭಾಗಗಳು, ಕಳೆಗಳು, ಬೂಸ್ಟು ಹಿಡಿಯುವುದು, ಪ್ರಾಣಿ/ಕೀಟಗಳು, ಮಳೆ-ಬಿಸಿಲು-ಇವುಗಳಿಂದ ಬಾಧೆಯಾಗದಂತೆ ಕಾಪಾಡಲ್ಪಡಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕ ಮುಂತಾದವುಗಳಿಂದ ಉಂಟಾಗುವ Chemical redsidue (ರಾಸಾಯನಿಕ ಅಂಶಗಳು) ಒಂದಿಷ್ಟು ಔಷಧ ಭಾಗಗಳಿಗೆ ತಟ್ಟಬಾರದು. ಔಷಧ ಸಸ್ಯಗಳನ್ನು'ಪಾರ್ ಮಾಡುವುದ'ರಲ್ಲಿ ಪ್ರತಿಯೊಂದಕ್ಕೂ ಅವುಗಳದೇ ಆದ ವಿಧಾನಗಳಿವೆ. ಉದಾ: ಕೋಲಿಯಸ್

ಫೋರ್ಸ್ಕೋಲಿ ಎಂಬ ಔಷಧ ಸಸ್ಯದ ಗೆಣಸಿನಂಥ ಬೇರುಗಳಲ್ಲಿ ಅದರ ಔಷಧ ಘಟಕವಿದೆ. ಇವನ್ನು ಚೆನ್ನಾಗಿ ತೊಳೆದ ಬಳಿಕ ನೀಳಕ್ಕೆ ಸೀಳಿ 'ಪಾಕ' ಮಾಡಬೇಕು. ಅಡ್ಡಕೊಯ್ತಕ್ಕೆ ಒಳಗಾದರೆ ಅದರ ಔಷಧೀಯ ಗುಣ ನಷ್ಟವಾಗುತ್ತದೆ. ಬೆಳೆ ಬಂದ ಬಳಿಕ ಔಷಧ ಸಸ್ಯ ಭಾಗಗಳನ್ನು ರಾಶಿ ಹಾಕಿದಾಗ ಬೂಸ್ಟು (Fungus), ಬ್ಯಾಕ್ಟೀರಿಯಾಗಳು ಬಾಧಿಸುತ್ತವೆ. ಹಾಗಾಗಿ 'ಪಾಕ'ಗೊಳಿಸುವಾಗಲೂ ತಲುಪಿಸುವಲ್ಲಿಗೆ, ತಲಪುವ ತನಕವೂ ತುಂಬ ಶ್ರದ್ಧೆ, ಎಚ್ಚರಗಳು ಅಗತ್ಯ.

ಔಷಧ ಸಸ್ಯಗಳಿಗ ಜೈವಿಕ ಗೊಬ್ಬರ ಮತ್ತು ಜೈವಿಕ ಕೀಟನಾಶಕಗಳ ಬಳಕೆ ಅತ್ಯುತ್ತಮ. ರಾಸಾಯನಿಕಗಳ ಬಳಕೆಯು ಸಸ್ಯದ ರಾಸಾಯನಿಕ ಘಟಕದ ಪ್ರಮಾಣದಲ್ಲಿ ಏರುಪೇರುಂಟು ಮಾಡಬಹುದು.

ಅರಣ್ಯವಲಯಗಳಲ್ಲಿ ನೀಲಗಿರಿ, ತೇಗ ಮುಂತಾದುವನ್ನು ದೊಡ್ಡಪ್ರಮಾಣದಲ್ಲಿ ಬೆಳೆಯುವಂತೆ ಹಲವಾರು ಔಷಧ ಸಸ್ಯಗಳನ್ನೂ ಕೃಷಿ ಮಾಡಬೇಕು. ಈ ತೆರನ Agro Forestryಯನ್ನು ಸಾಧಾರಣ ಸಂದರ್ಭಗಳಲ್ಲಿ ಕೃಷಿ ಮಾಡಿ ಬೆಳೆಯಲು, ದುಸ್ಸಾಧ್ಯವಾದಾಗ ಔಷಧೀಯ ಸಸ್ಯಗಳನ್ನು ಬೆಳೆಯುವುದಕ್ಕೆ ಯೋಜನೆಗಳನ್ನು ಹಾಕಿ ಕೊಳ್ಳಬೇಕು. ಉದಾ: ಕಲ್ಲೂರ್‌ವಂಜಿ ಎಂಬ ಔಷಧ ಸಸ್ಯದ ಸ್ಥಾನಗಳು ಕಾಡುಗಳಲ್ಲಿ ಹರಿಯುವ ತೊರೆಗಳ ಮರಳುದಡಗಳಾಗಿವೆ. ಇಂಥವನ್ನು ಸಾಮಾನ್ಯ ಕೃಷಿಕರು ಬೆಳೆಯಲಾರರು. Agro Forestry ಕೃಷಿ ಪದ್ಧತಿಯನ್ನು ಅರಣ್ಯ ಇಲಾಖೆಯು ತುಂಬ ವೈಜ್ಞಾನಿಕವಾಗಿ ಅಳವಡಿಸಿಕೊಳ್ಳುವುದು ಅಗತ್ಯ.

ಕೇರಳಕ್ಕೆ ಸಂಬಂಧಿಸಿದಂತೆ ದೀರ್ಘಸ್ಥಾಯೀ ಔಷಧ ಸಸ್ಯಗಳ ಕೃಷಿಗೆ ಯೋಗ್ಯವಾದ ಸ್ಥಳಗಳನ್ನು ಕಂಡುಹಿಡಿಯುವುದೇ ತ್ರಾಸದಾಯಕವಾಗಿದೆ. ಆದುದರಿಂದ'ಇಂಥ' ಸಸ್ಯಗಳನ್ನುಸಾಮೂಹಿಕ ಅರಣ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಬೆಳೆಯುವುದು ಯುಕ್ತ. ಇವುಗಳ ಬೀಜಗಳನ್ನು ಸಾಮಾಜಿಕರಿಗೆ ಲಭ್ಯವಾಗಿಸುವುದು ಮತ್ತು ಔಷಧೋಪಯೋಗಕ್ಕಾಗಿ ಇದನ್ನು ಹೇಗೆ ಉಪಯೋಗಿಸಬಹುದೆಂಬುದನ್ನು ಕೂಡ ಅವರಿಗೆ ತಿಳಿಸಬೇಕು. ಇದು ಫಲಪ್ರದವಾದ ಮತ್ತು ಜನೋಪಯೋಗಿಯಾದ ಮಾರ್ಗ ಕೂಡ. ಔಷಧಸಸ್ಯ ಕೃಷಿಯಲ್ಲಿ ತೊಡಗಿಕೊಳ್ಳುವ ಕೃಷಿಕರಿಗೆ ನ್ಯಾಯವಾದ ಬೆಲೆಗೆ ಮಾರಾಟ ಮಾಡಲು ಅಗತ್ಯವಾದ ಔಷಧಸಸ್ಯ ಮಾರುಕಟ್ಟೆಯ ಅಗತ್ಯವಿದೆ. ಒಳ್ಳೆಯ ಬೆಲೆ ಸಿಗುವುದಾದರೆ ಮಾತ್ರ ಕೃಷಿಕನು ಒಂದು ಬೆಳೆಯನ್ನು ಬೆಳೆಯಲು ಆಸಕ್ತಿ ವಹಿಸುತ್ತಾನೆ. ಔಷಧ ಸಸ್ಯಗಳ ಮಾರುಕಟ್ಟೆಗಳು ಸುವ್ಯವಸ್ಥಿತವಾಗಿ ಅಲ್ಲಲ್ಲಿ ನಡೆದರೆ ಮಾತ್ರ ಔಷಧ ಸಸ್ಯ ಕೃಷಿಯು ಭದ್ರವಾಗಿ ನೆಲೆಯೂರಲು ಸಾಧ್ಯ. ಔಷಧ ಸಸ್ಯಗಳನ್ನು ನಟ್ಟು ಬೆಳೆಸುವ (Domestication) ಪ್ರವೃತ್ತಿಯನ್ನು ಜನರಲ್ಲಿ ಹೆಚ್ಚಿಸಬೇಕಾಗಿದೆ. ಪ್ರಕೃತಿಯಲ್ಲಿ ಸಹಜವಾಗಿ ಬೆಳೆಯುವ ಸಸ್ಯಸಂಪತ್ತನ್ನು ಸೂರೆಗೊಂಡು ಮುಗಿಸದೆ ಸಾಕಷ್ಟು ಸಸ್ಯಗಳನ್ನು ನೆಟ್ಟು ಬೆಳೆಸುವುದರ ಮಹತ್ತ್ವವನ್ನು ಜನರಿಗೆ ತಿಳಿಸಿಕೊಡಬೇಕು. ಅದಕ್ಕೆ ಬೇಕಾದ ಎಲ್ಲ ಪ್ರೋತ್ಸಾಹ, ಸಹಾಯಗಳನ್ನೂ ನೀಡಬೇಕು.

ತಮ್ಮ ಸುತ್ತಮುತ್ತ ಇಲ್ಲದ, ಆದರೆ ಆ ಹವಾಗುಣ, ಭೂಪ್ರಕೃತಿಗೆ ಅನುಯೋಜ್ಯವಾದ ಔಷಧ ಸಸ್ಯಗಳನ್ನು ಬೆಳೆಸುವ, ಅಂದರೆ ಹೊಸ ಹೊಸ ಔಷಧ ಸಸ್ಯಗಳ ಕೃಷಿಯ ಸಾಹಸವನ್ನು ಜನರಲ್ಲಿ ಬಿತ್ತಬೇಕು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನಿಸುವುದಾದರೆ- ಔಷಧ ಸಸ್ಯ ಕೃಷಿ ಕ್ಷೇತ್ರದಲ್ಲಿ ಚೀನಾದೇಶವು ಮುಂದಿದೆ. ರಷ್ಯಾ, ಜಪಾನ್, ಜರ್ಮನಿ ಮುಂತಾದ ಹಲವು ರಾಷ್ಟ್ರಗಳಲ್ಲಿ ಔಷಧ ಸಸ್ಯಗಳ ಕೃಷಿ ದೊಡ್ಡಮಟ್ಟದಲ್ಲಿ ನಡೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಥಾಯ್ಲೆಂಡ್, ದ.ಕೊರಿಯಾ, ಬ್ರೆಜಿಲ್, ಮೆಕ್ಸಿಕೋ, ಈಜಿಪ್ಟ್, ಇಂಡೋನೇಶ್ಯಾ, ನೇಪಾಳ, ಕೆನ್ಯಾ, ರುಮೇನಿಯಾ, ಫಿಲಿಪ್ಪೈನ್ಸ್, ಬಲ್ಗೇರಿಯಾ, ಹಂಗರಿ, ಅಮೆರಿಕಾ ಮುಂತಾದ ರಾಷ್ಟ್ರಗಳು ದೊಡ್ಡಪ್ರಮಾಣದಲ್ಲಿ ಔಷಧ ಸಸ್ಯ ಕೃಷಿಯಲ್ಲಿ ತೊಡಗಿಕೊಂಡಿವೆ.

ಕಳೆದ ಸುಮಾರು ಐವತ್ತು ವರ್ಷಗಳಲ್ಲಿ ನಾವು ಬಳಸಿಕೊಂಡ ಔಷಧ ಸಸ್ಯಗಳ ಪ್ರಮಾಣ ಮತ್ತು ನಿರಂತರ ವನನಾಶವು ಪ್ರತಿಕೂಲ ಪರಿಣಾಮಗಳನ್ನುಂಟು ಮಾಡಿವೆ. ಸರಿಯಾದ ಔಷಧ ಸಸ್ಯಗಳಿಂದ ಮಾತ್ರ ಪಾರಂಪರಿಕ ವೈದ್ಯಶಾಸ್ತ್ರದ ಕುರಿತಾದ ನಂಬುಗೆ, ಅದರ ಅಸ್ತಿತ್ವಗಳನ್ನು ಖಾತ್ರಿಪಡಿಸಬಹುದಾಗಿದೆ. ಇದಕ್ಕೆ ಔಷಧ ಸಸ್ಯ ಕೃಷಿಯೇ ಪರಿಹಾರ. ಅದಕ್ಕೆ ಯೋಗ್ಯವಾದ ಒಂದು ಸಮಗ್ರ ಕ್ರಿಯಾಯೋಜನೆ ಇನ್ನೂ ಸಿದ್ಧವಾಗಿಲ್ಲ. ಅದರತ್ತ ಸಾಕಷ್ಟು ಗಮನವೂ ಹರಿದಿಲ್ಲ. ಔಷಧ ಸಸ್ಯ ಕೃಷಿ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನವು ಸರಕಾರ ಮತ್ತು ಸಾರ್ವಜನಿಕರವತಿಯಿಂದ ನಡೆದಾಗಲಷ್ಟೆ ಅದು ಸಾಕಾರಗೊಳ್ಳಲು ಸಾಧ್ಯ.

ಅನುವಂಶೀಯವಾಗಿ ಸಾಗಿ ಬಂದ ಕೇರಳದ್ದೇ ಆದ ವಿಶಿಷ್ಟ ನಾಡ ಚಿಕಿತ್ಸಾ ಪರಂಪರೆಯಲ್ಲಿ ಉಪಯೋಗಿಸುವ ಗಿಡಗಳಲ್ಲಿ ಹೆಚ್ಚಿನವು ಶಾಸ್ತ್ರೀಯ ಆಯುರ್ವೇದವು ಉಪಯೋಗಿಸುವವೇ ಆಗಿವೆ. ಆದರೆ ಇವು ನಾಡ ಹೆಸರಲ್ಲಿ ಇದರ ಮಧ್ಯೆ ಕರೆಯಲ್ಪಡುತ್ತವೆಯೇ ಹೊರತು ಸಂಸ್ಕೃತದ ಹೆಸರಿನಿಂದಿಲ್ಲ. ಇದರ ಜತೆಗೆ ಆಯುರ್ವೇದಕ್ಕೆ ಪೂರ್ತಿ ಅಜ್ಞಾತವಾದ ತಮ್ಮದೇ ಔಷಧಗಳನ್ನು ಇವರು ಉಪಯೋಗಿಸುತ್ತಲೂ ಇದ್ದಾರೆ. ಇದನ್ನೆಲ್ಲ ಗಮನದಲ್ಲಿಟ್ಟರೆ ಕೇರಳೀಯ ಔಷಧಗಳನ್ನು ವರ್ಗೀಕರಿಸಿಕೊಂಡು ಪರಿಶೋಧನೆಗೊಳಪಡಿಸುವುದು ಸುಲಭದ ಕೆಲಸವೇನೂ ಅಲ್ಲ.

ವಿವಿಧ ವ್ಯವಸ್ಥೆಗಳಲ್ಲಿ ಬೆಳೆಯುವಂಥವು, ಪ್ರತ್ಯೇಕ ರೋಗಕ್ಕೆ ಉಪಯೋಗಿಸುವಂಥವು, ಪ್ರತ್ಯೇಕ ಚಿಕಿತ್ಸಾ ಸಂಪ್ರದಾಯಗಳಲ್ಲಿ ಉಪಯೋಗಿಸುವಂಥವು, ಪ್ರತ್ಯೇಕ ಔಷಧಗಣಗಳಲ್ಲಿ ಸೇರುವಂಥವು - ಹೀಗೆ ಹಲವು ರೀತಿಯಲ್ಲಿ ಔಷಧ ಸಸ್ಯಗಳನ್ನು ವಿಭಜಿಸಬಹುದು. ಅಂಗಡಿ ಮದ್ದುಗಳು, ಹಸಿ ಮದ್ದುಗಳು - ಎಂದು ಲಭ್ಯತೆಯನ್ನು ಆಧಾರವಾಗಿಟ್ಟುಕೊಂಡು ಆಯುರ್ವೇದವೂ ನಾಡಚಿಕಿತ್ಸೆಯೂ ವಿಭಾಗಿಸಿಕೊಂಡಿವೆ. ಕೇರಳೀಯ ಪ್ರಕೃತಿಯನ್ನು ಪ್ರಾಚೀನ ಪಳಂದಮಿಳು ಕೃತಿಗಳು 'ಐಂದಿಣ' (ಐದು ತೆರನಾಗಿ)ಗಳಾಗಿ ವಿಭಾಗಿಸಿವೆ. ಕುರುಂಜಿ, ಮುಲ್ಲ (ಮಲ್ಲಿಗೆ), ಪಾಲ (ಹಾಲೆ / Alstonia scholaris), ಮರುತಂ, ನೈದಿಲ್ (ನೈದಿಲೆ) ಎಂದು ಸ್ಥಳ ಸಸ್ಯಗಳನ್ನು ಆಧಾರವಾಗಿಟ್ಟುಕೊಂಡು ಅವರು ಭೂಮಿಯ ನಿರ್ಣಯವನ್ನು ಮಾಡುತ್ತಿದ್ದರು.

'ತಿಣ'ದ ಹೆಸರು, ತಿಣದ ಹೆಸರಿಗೆ ಅನುಸಾರವಾಗಿ ಸ್ಥಳ ಸಸ್ಯಗಳಿಂದ ಪಾಟ್ಟ್ (ಹಾಡು) ವಿಭಾಗಗಳ ಹೆಸರು - ಮುಲ್ಲೆತ್ತಲಿ, ಪಾಲೈತ್ತಲಿ - ಹೀಗೆ ಒಂದೊಂದು ವಿಭಾಗದ ಪಾಟ್ಟ್‌ಗಳಿಗೂ ಒಂದು ಹೂ ಮತ್ತು ಒಂದು ರಾಗಗಳಿವೆ. ಅವುಗಳ ಹೆಸರುಗಳು ಕೂಡ ಬಹುಪಾಲು ತಿಣ ಸಸ್ಯವೇ ಆಗಿರುತ್ತದೆ. ಕುರುಂಜಿಕ್ಕಲಿಯಲ್ಲಿನ ಸಸ್ಯವೂ, ಪರಾಗವೂ, ಹೂವೂ ಕುರುಂಜಿಯೇ ಆಗಿದೆ. ಪಾಲೈ ಪಾಟ್ಟಿನಲ್ಲಿ ಪಾಲೆ ವೃಕ್ಷವೂ, ಪಾಲೆ

ಪರಾಗವೂ ಆಗಿ ಬರುತ್ತದೆ. ದೇಸೀ ಅರಿವಿನ ಜೈವಿಕ ದರ್ಶನವನ್ನು ಎರಡು ಸಾವಿರ ವರ್ಷ ಹಿಂದಿನ ಈ ಸಂಸ್ಕೃತಿಯಲ್ಲಿ ನಮಗೆ ಕಂಡುಕೊಳ್ಳಲು ಸಾಧ್ಯ.

ವಿವಿಧ ಆವಾಸಸ್ಥಾನಗಳನ್ನು ಒಂದು ಜೈವಿಕ ಪರಿಸರ ಎನ್ನುವುದಕ್ಕಿಂತಲೂ ಹೆಚ್ಚಾಗಿ ಒಂದು ಸಾಂಸ್ಕೃತಿಕ ಪರಿಸರವಾಗಿ ಕಂಡುಕೊಂಡವರಾಗಿದ್ದರು ಹಿರಿಯರು. ಅವರು ಪ್ರಕೃತಿ ಲಕ್ಷಣಕ್ಕನುಸಾರವಾಗಿ ಭೂಮಿಯ ಪರಿಸರಾವಸ್ಥೆಯನ್ನು ತಿಳಿದುಕೊಂಡು ಬದುಕಿಗೆ ಬೇಕಾದ ಅದರ ಸಾರಸಂಗತಿಗಳನ್ನು ಸಂಸ್ಕರಿಸಿಕೊಂಡರು. ಇವರು ರೂಪಿಸಿಕೊಂಡ ಸಾಂಸ್ಕೃತಿಕ ಪರಿಸರದ ಉತ್ಪನ್ನಗಳಾಗಿ ನಮ್ಮ ಚಿಕಿತ್ಸಾ ಪರಂಪರೆಯನ್ನು ಪರಿಗಣಿಸಬಹುದು. ಅಂತೆಯೇ ಚಿಕಿತ್ಸೆಗೆ ಬಳಕೆಯಾಗುವ ಅಸಂಖ್ಯಾತ ಔಷಧ ದ್ರವ್ಯಗಳು ಕೂಡ. ವನ್ಯವೂ ಮನುಷ್ಯ ನಿರ್ಮಿತವೂ ಆದ ಆವಾಸಸ್ಥಾನಗಳಿಂದ ಔಷಧ ದ್ರವ್ಯಗಳು ಲಭ್ಯವಾಗುತ್ತವೆ. ಕೇರಳೀಯ ಔಷಧಗಳ ಪ್ರಧಾನ ಬೆಳೆಯನೆಲವೆಂದರೆ ಸಹ್ಯಾದ್ರಿಯ ವನಗಳು. ಕೇರಳದ ಔಷಧ ನಿರ್ಮಾಣಕ್ಕೆ ಅಗತ್ಯವಾದ ಅಸಂಸ್ಕೃತ ವಸ್ತುಗಳು 44.94 ಶೇಕಡಾ ಕೂಡಾ ಕಾಡಿನಿಂದ ಶೇಖರಿಸಲ್ಪಡುತ್ತವೆಯೆಂದು ಕೇರಳ ಅರಣ್ಯ ಸಂಶೋಧನಾ ಕೇಂದ್ರದ ಒಂದು ಅಧ್ಯಯನವು ವರದಿ ಮಾಡಿದೆ. ನಿತ್ಯ ಹಸುರಿನ ಕಾಡುಗಳು, ಎಲೆ ಉದುರಿಸುವ ಕಾಡುಗಳು, ಕಂಡಲ್ ಕಾಡುಗಳು ಮುಂತಾದ ಸ್ವರೂಪದಲ್ಲೂ ಸ್ವಭಾವದಲ್ಲೂ ಭಿನ್ನವಾದ ಆವಾಸಸ್ಥಾನಗಳಲ್ಲಿ ನಾನಾ ಸಸ್ಯಗಳು ಬೆಳೆಯುತ್ತವೆ. ಸದಾ ಹಸುರು ಕಾಡುಗಳ ಹಾಗೆ ಜೀವ ವೈವಿಧ್ಯ ಸಮೃದ್ಧವಲ್ಲವಾದರೂ ಎಲೆ ಉದುರಿಸುವ ಕಾಡುಗಳಿಂದಲೂ ಮುಳ್ಳುಗಂಟಿ ಕಾಡುಗಳಿಂದಲೂ ಔಷಧೀಯ ಗಿಡಗಳು ಹೇರಳವಾಗಿ ಲಭ್ಯವಾಗುತ್ತವೆ. ಚಂಬಲ್ಯಂ (ಲೋಬಾನ) ಎಂಬ ಔಷಧ ಗಿಡಗಳು ದೊರೆಯುವುದು ನಿತ್ಯ ಹಸುರು ವನದ ಕುಂದಿರಿಕ್ಕ (ಕವಡಿ ಲೋಬಾನ / Boswellia serrata) ಮರದಿಂದ. ಮಣಿಕುಂದಿರಿಕ್ಕಂ (ಸಣ್ಣ ಲೋಬಾನ) ಎಂಬ ಔಷಧ ಲಭಿಸುವುದು ವೆಳ್ಳಪ್ಪೈನ್ (ಬಿಳಿಪೈನ್) ಮರದಿಂದ. ಮರ ಅರಸಿನವು ನಿತ್ಯ ಹಸುರು ಕಾಡುಗಳಲ್ಲಿ ಮಾತ್ರ ಲಭ್ಯ. ಚೀವಕ್ಕ (ಜೀವಕ) ಇಂಜ (ನೊರೆಕಾಯಿ) ಮುಂತಾದವು ಅರೆ ಹಸುರು ವನಗಳ ಉತ್ಪನ್ನಗಳು. ಚಂಜುಲಂ ಪಂಜು (ನೆಲಪರಂಡೆ/Desmodium triflourm) ವೆಲ್ಲಂತರ ಸೋಮಲತೆಯೂ ಇಟ್ಟಂದಿ ಮರ್ಯೈಕರ್ ನ ಮಳೆ ನೆರಳು ಪ್ರದೇಶಗಳ ಮುಳ್ಳುಕಾಡುಗಳಲ್ಲಿ ಬೆಳೆಯುವಂಥವು. ಸಹ್ಯ ಪರ್ವತದಲ್ಲಿಯೇ ಪಾಲಕ್ಕಾಡು ಕಣಿವೆಯ ತೆಂಕು ಬಡಗುಗಳಲ್ಲಿನ ಸಸ್ಯ ಘಟನೆಗೆ ಗಣನೀಯ ವ್ಯತ್ಯಾಸವಿದೆ. ಸಹ್ಯ ಪರ್ವತ ಪಂಕ್ತಿಯ ತೆಂಕು ತುದಿಯಲ್ಲಿರುವ ಅಗಸ್ತ್ಯವನ, ಮರುತ್ವಾಮಲೆ, ಮುಂತಾದ ಕಡೆಗಳಲ್ಲಿ ಬೆಳೆಯುವ ಅಮೃತಪಾಲ ಅಯುಟುಕಣ್ಣಿ ಪೊನ್‌ಕಯ್ಯಣ್ಣಿ (ಹೊನಗನ್ನೆ/Alternanthera sessilis), ಪೆರಿಯಾರ್‌ನಂಗ ಕೀರಿ ಕಿಳಂಜ್, ಚಾತ್ತನ್ ಕಿಳಂಜ್ ಮುಂತಾದ ಅಸಂಖ್ಯಾತ ವಿಶೇಷ ಔಷಧಗಳು ಪ್ರಾದೇಶಿಕ ವೈದ್ಯ 'ಮೃತಸಂಜೀವಿನಿ'ಗಳೇ ಆಗಿವೆ. ಕಾಸರಗೋಡಿನಿಂದ ತ್ರಿಶೂರು ಜಿಲ್ಲೆಯ ತನಕ ಇರುವ ಕೇರಳ ಪ್ರಕೃತಿಯ ಚೆಂಬಿಟ್ಟೆಗೆ ಗುಡ್ಡಗಳಿಂದ ತುಂಬಿರುವುದಾಗಿದೆ. ಈ ಎಡೆನಾಡಿನ ಚೆಂಬಿಟ್ಟೆಗೆ ಗುಡ್ಡಗಳು ಚೆತ್ತಿ (ಕಿಸ್ಕಾರ/Ixora cocccinea) ಏಕನಾಯಕ (ಏಕನಾಯ್ಕ/Casearia esculenta) ಪಾರಮುಳ್ಳ್ (ಪಾರೆಮುಳ್ಳು), ಶತಾವರಿ, ಕಾಟ್ಟುಟುನ್ನು (ಕಾಡು ಉದ್ದು) ಕಾಟ್ಟ್ ಪಯರ್ (ಕಾಡುಹೆಸರು), ಸರ್ಪಗಂಧಿ, ಇಡಂಪಿರಿ ವಲಬಿರಿ (ಎಡಮುರಿ ಬಲಮುರಿ) ಮುಂತಾದವುಗಳಿಗೆ ಪ್ರಧಾನ ಆಶ್ರಯತಾಣಗಳಾಗಿವೆ.

ಕಾವು / ಬನಗಳು ಔಷಧ ಸಸ್ಯಗಳ ಒಂದು ಜೈವಿಕ ಭಂಡಾರವೇ ಸರಿ. ನಂಬಿಗೆಯ ಹೆಸರಲ್ಲಿ ಸಂರಕ್ಷಿಸಲ್ಪಡುವ ವಿಶುದ್ಧ ವನಗಳು ಇವು. ಈಟಾಲ್, ಕುಡಲು ಚುರುಕ್ಕಿ, ವಾತಂಕೊಲ್ಲಿ, ಇಾವಲ್, ಕರಿಮುತ್ತಿಳ್ಳ್, (ಭದ್ರಮುಷ್ಟಿ / Cyperus pseudokyllingoides), ಓರಿಲತಾಮರ (ನೆಲಸಂಪಿಗೆ/ ಉತ್ಪಲ/Kaempferia galanga), ಪಶುಪಾಶಿ ಮುಂತಾದುವುಗಳು ಕಾವುಗಳಲ್ಲೆ ಮುಖ್ಯವಾಗಿ ಬೆಳೆಯುತ್ತವೆ. ಕಾವುಗಳಲ್ಲಿ ವಿಶುದ್ಧವಾಗಿ ಪರಿಪಾಲಿಸಲ್ಪಡುವ ಅಶ್ವತ್ಥ ಮತ್ತು ಆಲಗಳ 'ಔಷಧ' ಪ್ರಶಸ್ತಿ ಸುವಿದಿತವಾದುದು. ಆನೆ ಚಿಕಿತ್ಸೆಗೆ ಬಳಕೆಯಾಗುವ ಉಪ್ಪಟ್ಟಿ ಕಂಡಲ್ ಕಾಡುಗಳಲ್ಲಿ ಕಂಡು ಬರುವುದು. ಒದಳಂ, ಸಮುದ್ರಪ್ಪಳಂ (ಸಮುದ್ರಹಾಗಲ/ Barringtoniaracemosa) ಪುಳಿಮುಂಞಿ, ಬ್ರಹ್ಮಿ (ಒಂದೆಲಗ/ Centella asiatica), ನೀರ್‌ತಿಪ್ಪಲಿ, ಅಡಕ್ಕಾಮಣಿಯನ್ ಮುಂತಾದವುಗಳೂ ಕಂಡಲ್ ಕಾಡುಗಳಿಗೆ ಸೇರಿಕೊಂಡಿರುವ ಉಪ್ಪು ಮಿಶ್ರಿತ ಮಣ್ಣುಗಳಲ್ಲಿ ಬೆಳೆಯುವಂಥವು.

ನಿರಂತರ ಪರಿವರ್ತನೆಗೆ ಒಳಗಾಗುವ ಆವಾಸವ್ಯವಸ್ಥೆಯಾಗಿರುವ ಬಯಲುಗಳಲ್ಲಿ ಮೂರು ಬೆಳೆಗಳನ್ನಾದರೂ ತೆಗೆಯಬಹುದು. ಈ ಬಯಲುಗಳಿಗೆ ಋತುಗಳಿಗೆ ಅನುಸಾರವಾಗಿ ವಿಭಿನ್ನ ಸ್ವರೂಪ ಪ್ರಾಪ್ತವಾಗುತ್ತದೆ. ನವರ, ಕೋಳಾರ್ಯನ್, ಕೆಂಬತ್ತ, ಚೆನ್ನೆಲ್ಲ್, ವರಿನೆಲ್ಲ್ ಮುಂತಾದ ಔಷಧೀಯ ಬತ್ತಗಳನ್ನು ಗದ್ದೆಗಳಲ್ಲಿ ಬೆಳೆಯಲಾಗುತ್ತದೆ. ಗದ್ದೆಗಳಲ್ಲೆ ಎಡೆಬೆಳೆಗಳಾಗಿ ಕೃಷಿ ಮಾಡಲ್ಪಡುವ ಹುರುಳಿ, ಉದ್ದು, ಎಳ್ಳು ಮುಂತಾದುವೂ, ಗದ್ದೆ ಏರಿಗಳಲ್ಲಿ ಕಳೆಗಿಡಗಳಾಗಿ ಬೆಳೆಯುವ ಕಯ್ಯಣ್ಣಿ (ಗರ್ಗ/Eclipta prostrata) ಮುಂಜಾನಾರಿ (ಮಾವಿನಕಾಯಿ ಶುಂಠಿ/Curcuma amada) ಒಂದೆಲಗ ಮುಂತಾದವು ಅಮೂಲ್ಯವಾದ ಔಷಧ ಗಿಡಗಳು ಕೂಡ.

ಕೇರಳದ ಮನೆಗಳಲ್ಲಿನ ಹಿತ್ತಿಲುಗಳು ಕೂಡ ಹಲವಾರು ವಿಧದ ಗಿಡಗಳು ಜತೆ ಜತೆಯಾಗಿ ಬೆಳೆಯುವ ಜಾಗಗಳು. ಕಾಡುಗಳಲ್ಲಿ ತೀರ ಲಭ್ಯವಲ್ಲದ ಮುಂಞ (ನೆರುಗಲ) ನಂದ್ಯಾರ್ ವಟ್ಟಂ (ನಂದಿಬಟ್ಟಲು) ಚೆತ್ತಿಕ್ಕೊಡುವೇಲಿ (ಚಿತ್ರಮೂಲ), ಶಂಕುಪುಷ್ಪ (Clitoria ternatea), ಅರುದ (ನಾಗದಾಳಿ) ಮುಂತಾದ ದ್ರವ್ಯಗಳನ್ನು ಮನೆಯ ಹಿತ್ತಿಲುಗಳಲ್ಲಿ ನೆಟ್ಟು ಬೆಳೆಸಿ ವೈದ್ಯರು ಔಷಧಕ್ಕಾಗಿ ಅವನ್ನು ಉಪಯೋಗಿಸಿಕೊಳ್ಳುತ್ತಾರೆ. ಅಂತೆಯೇ ಮನೆಗಳಲ್ಲೇ ಬೆಳೆಸಿಕೊಳ್ಳುವ ಕಂಜೋಲಂ (ಕಚ್ಚೂರಗಡ್ಡೆ), ಚೆಂಜಟಿ, ನೀರ್ ಕಿಟಂಜ್ (ನೀರುಕೂವೆ) ಮುಂತಾದ ದ್ರವ್ಯಗಳು ವನ್ಯಾವಸ್ಥೆಯಲ್ಲಿ ಸಂಪೂರ್ಣವಾಗಿ ಅಳಿದುಹೋಗಿರುವಂಥವು. (Extinct in the wild) ಕಾಳು ಮೆಣಸು, ಶುಂಠಿ, ಏಲಕ್ಕಿ, ಅರಸಿನ ಮುಂತಾದುವೆಲ್ಲ ಸಹ್ಯಾದ್ರಿ ಪರ್ವತದಲ್ಲಿ ರೂಪು ಪಡೆದವುಗಳಾದರೂ ಸುಗಂಧ ಬೆಳೆಗಳು ಎಂಬ ನೆಲೆಯಲ್ಲಿ ಕೇರಳದ ಮನೆಹಿತ್ತಿಲುಗಳಲ್ಲಿ ಮಾತ್ರ ಅವು ಉಳಿದುಕೊಂಡಿವೆ. ಹಳೆಯ ಮನೆಗಳ ಅಡಿಪಾಯವನ್ನು ಅಗೆಯುವಾಗ ಸಿಗುವ ನಿಲಮಾಂಜ (ನೆಲಮಾವು) ಎಂಬ ಕುಮಿಳ್ (ಅಣಬೆ) ಹೊಟ್ಟೆನೋವಿಗೂ, ಭೇದಿಗೂ ಗೃಹಚಿಕಿತ್ಸೆಯಲ್ಲಿ ಬಳಕೆಯಾಗುವ ಏಕಮೂಲಿಕೆಯಾಗಿದೆ. ಕಳ್ಳಾವಣಕ್ಕ್ (ಕಾಡುಹರಳು, ಕಾಟಾರುಂಬುಡೋ), ಕರಿಂಜೋಟ್ಟ, ಚೆಂಬರತ್ತಿ (ದಾಸವಾಳ) ಮುಂತಾದವುಗಳನ್ನು ಬೇಲಿಗಿಡಗಳಾಗಿ ಬೆಳೆಸುತ್ತಾರೆ. ಮುಕುಟ್ಟಿ (ನೆಲತೆಂಗು/Curculigo orchioides), ಶೀವೋದಿಪಚ್ಚಿಲ,

ಪುತ್ರನ್‌ಚಾರಿ, ಮುಂತಾದುವು ಗೋಡೆಗಳಲ್ಲೂ, ಮಣ್ಣಿನ ಅಗರು / ಅಗಳುಗಳಲ್ಲೂ ಬೆಳೆಯುತ್ತವೆ. ರೂಢಿ, ಸ್ವರೂಪ, ಪ್ರಭಾವ, ಆವಯವ, ಗುಣ, ಗುರುತು, ಕರ್ಮ, ಉಪಮೆ, ಉದ್ಭವ, ವೀರ್ಯ, ಉಪಯೋಗ, ಇ(ಜ)ತರಾಹ್ವ, ಮುಂತಾದ ನಾನಾ ಘಟಕಗಳನ್ನು ಹದಿಯಾಗಿಟ್ಟುಕೊಂಡು ಆಯುರ್ವೇದವು ದ್ರವ್ಯಗಳನ್ನು ಹೆಸರಿಸುತ್ತದೆ. ದ್ರವ್ಯಗಳ ಪ್ರಾದೇಶಿಕ ಭಾಷಾ ನಾಮಗಳಲ್ಲೂ ಈ ಘಟಕಗಳೇ ಇರುತ್ತವೆ. ಪ್ರತಿಯೊಂದು ಔಷಧ ಸಸ್ಯಕ್ಕೂ ಪರ್ಯಾಯ ಭೇದಗಳೂ, ನಾನಾ ಅರ್ಥಗಳೂ ನಾಡವೈದ್ಯದಲ್ಲಿ ಪ್ರಚಲಿತವಾಗಿವೆ. 'ಆರು ಊರಲ್ಲಿ ನೂರು ಹೆಸರು' ಎಂಬ ಮಾತು ಅನ್ವರ್ಥವಾಗುವ ಹಾಗೆ ಈ ನಾಮಬಾಹುಳ್ಯವಿದೆ. ಕೇರಳದ ಆಯುರ್ವೇದ ಚಿಕಿತ್ಸಕರೂ ನಾಡವೈದ್ಯರೂ ಬಳಸುವ ದ್ರವ್ಯಗಳಿಗೆ ಸಾಮಾನ್ಯವಾಗಿ ಸಂಸ್ಕೃತ ಹೆಸರುಗಳ ತತ್ಭವವೋ ತತ್ಸಮವೋ ಆದ ಹೆಸರುಗಳಿರುತ್ತವೆ. ಶತಾವರಿ, ನಾಗದಂತಿ, ವತ್ಸನಾಭಿ, ಏಕನಾಯಕ, ಚಂದನ, ರಕ್ತಚಂದನ ಹೆಸರುಗಳು ಸಂಸ್ಕೃತದ ತತ್ಸಮಗಳೇ ಆಗಿವೆ. ಶತಕ್ಕೂಪ್ಪ್, ವಿಷ್ಣುಗ್ರಾಂದಿ, ನಾಳಿಕೇರಂ, ಕಿರಿಯಾತ್ತ್, ನಾಗಪ್ಪೂವ್, ಜಡಾಮಾಂದಿ, ಅಮ್ಮೋಲಂ, ಕೋಟ್ಟಂ ಮುಂತಾದ ಔಷಧ ಸಸ್ಯಗಳ ಹೆಸರುಗಳು ಅನುಕ್ರಮವಾಗಿ ಶತಪುಷ್ಪ, ವಿಷ್ಣುಕಾಂತ, ನಾರಿಕೇಲ, ಚಿರಾಯತ, ನಾಗಕೇಸರ, ಜಟಾಮಾಂಸಿ, ಅಂಕೋ/ಜೋಲ, ಕುಷ್ಟ - ಮುಂತಾದ ಸಂಸ್ಕೃತ ನಾಮಗಳ ತದ್ಭವಗಳು. ಆಯುರ್ವೇದದ ಹಲವು ಪ್ರಸಿದ್ಧ ಔಷಧಗಳು ನಾಡವೈದ್ಯದಲ್ಲಿರುವುದಕ್ಕಿಂತ ಬೇರೆಯೇ ಆದ ಗೂಢನಾಮಗಳಿಂದ ಆದಿವಾಸಿ ಸಮೂಹಗಳಲ್ಲಿ ಬಳಕೆಯಲ್ಲಿವೆ. ಉದಾಹರಣೆಗೆ ಅಟ್ಟಪ್ಪಾಡಿಯ ಮುದುಗ ಸಮುದಾಯವು ನೀರ್‌ವೇಂದ, ಕೋರಿಕಾಯ, ಚೆರಂಡ, ಪೊಟ್ಟಾರಿ ಮುಂತಾದ ದ್ರವ್ಯಗಳನ್ನು ಬಳಸಿಕೊಳ್ಳುತ್ತದೆ. ಇವು ಶತಾವರಿ, ಉಮ್ಮತ್ತ, ತಟ್ಟುತಾಮ, ಉಟುಂಞ ಎಂಬ ನಾಡ ಹೆಸರುಗಳಲ್ಲಿ ಪ್ರಚಲಿತವಾಗಿರುವ ಗಿಡಗಳೇ ಆಗಿವೆ. ಇವು ಶತಾವರಿ, ದತ್ತೂರ, ಪುನರ್ನವ, ಇಂದ್ರವಲ್ಲರಿ ಮುಂತಾಗಿ ಪ್ರಸಿದ್ಧವಾಗಿರುವ ಆಯುರ್ವೇದದ ದ್ರವ್ಯಗಳೇ ಮುಂತಾದವು.

ಕೇರಳೀಯ ಔಷಧ ಸಸ್ಯಗಳ ನಾಮ ನಿಷ್ಪತ್ತಿಯಲ್ಲಿ ಉಪಮೆಯು ಒಂದು ಪ್ರಧಾನ ಘಟಕವಾಗಿರುವುದಕ್ಕೆ ಉದಾಹರಣೆಯಾಗಿ ಆನಚ್ಚುವಡಿ (ಆನೆಹೆಜ್ಜೆ), ಪಟುದಾರಕ್ಕಾಲಿ (ಕರಿಮಣಿಚೇಳು ಕಾಲು) ಮುಯಲ್‌ಚೆವಿ (ಮೊಲದ ಕಿವಿ) ಎರುಮನಾಕ್ಕ್ (ಎಮ್ಮೆಯ ನಾಲಗೆ) ಮುಂತಾದ ಹೆಸರುಗಳನ್ನು ನೋಡಬಹುದು. ಆನೆಯ ಹೆಜ್ಜೆಯ ಸಾಮ್ಯವುಳ್ಳ ಬೆಳವಣಿಗೆಯೂ, ಮೊಲದ ಕಿವಿಯಂತಿರುವುದು ಮತ್ತು ಎಮ್ಮೆಯ ನಾಲಗೆಯ ಹಾಗಿರುವ ಎಲೆಗಳ ಹೋಲುವ ಮುಂತಾದವು ಇವಕ್ಕೆ ಈ ಹೆಸರುಗಳನ್ನು ಇಡಲು ಮುಖ್ಯ ಕಾರಣ. ಅಣಲಿವೇಗಂ, ನರಿಚ್ಚೇಂಬ್ (ನರಿಕಬ್ಬು/Costus speciosus) ಚಿಲಂದಿ ಕಿಟಂಜ್ (ಜೇಡ ಗೆಣಸು) ಮುಂತಾಗಿ ಆದಿವಾಸಿಗಳಿಂದ ಕರೆಯಲ್ಪಡುವ ಹೆಸರುಗಳಲ್ಲಿ ಜಂತುನಾಮಗಳು ಉಪಮೆಗಳಲ್ಲ. ಆಯಾ ಜಂತುಗಳ ಕಡಿತಕ್ಕೆ ಬೇಕಾದ ಔಷಧಗಳ ಹೆಸರುಗಳೆಂಬ ಸೂಚನೆಯನ್ನು ಇವು ನೀಡುತ್ತವೆ ಅಷ್ಟೆ.

ವಯನಾಡಿನ ಕುರುಚ್ಯರು ಆಡಲೋಡಕ (ಆಡುಸೋಗೆ)ವನ್ನು ಕುರವುಡಂದಿ ಎಂದು ಕರೆಯುತ್ತಾರೆ. ಕುರ (ಕೆಮ್ಮು)ವನ್ನು ಇಲ್ಲದಾಗಿಸುವುದರಿಂದ ಈ ಹೆಸರು. ಪಣಿಯಲ್ಲಿ 'ಪಾಣನ್' ಎಂದರೆ ಜ್ವರದ ಅಂಗಡಿ ಮಪಣಿ (ಶೋಪ್ಪಾಣ್). ಜ್ವರಕ್ಕೆ ಇವರಿಗೆ ಪಾಣನ್ ಎಲೆಯೇ ಔಷಧ.

ಔಷಧ ಸಸ್ಯಗಳನ್ನು ವರ್ಗೀಕರಿಸಲು ಚರಕ ಸಂಹಿತೆಯು ಕರ್ಮ ಮತ್ತು ಗುಣಗಳನ್ನು ಆಧಾರವಾಗಿ ಇಟ್ಟುಕೊಂಡಿದೆ. ಜೀವನೀಯ, ಬೃಂಹಣೀಯ, ಲೇಪನೀಯ ಮುಂತಾಗಿ ಐವತ್ತರಷ್ಟು ಗಣಗಳಾಗಿ ಚರಕನು ಔಷಧಗಳನ್ನು ವಿಭಜಿಸಿದ್ದಾನೆ. ಸಮಾನವಾದ ಗುಣವುಳ್ಳ ದ್ರವ್ಯಗಳನ್ನು ಒಂದು ಗಣವಾಗಿ ಮೊದಲು ಪರಾಮರ್ಶಿಸುವ ದ್ರವ್ಯದ ಹೆಸರಲ್ಲಿ ಆ ಗುಂಪನ್ನೆಲ್ಲ ಪರಾಮರ್ಶಿಸುವ ರೀತಿಯೂ ಆಯುರ್ವೇದದಲ್ಲಿದೆ. ಉದಾ : ಏಲಾದಿ, ಅಸನವಿಲ್ವಾದಿ... ಮುಂತಾಗಿ.

ತ್ರಿಕಟು, ದಶಮೂಲಂ, ತ್ರಿಫಲ, ಚತುರ್ಬೀಜಂ, ಚತುರ್ಜಾತಂ, ತೃಣಪಂಚಮೂಲಂ ಮುಂತಾದ ಗಣಸಂಖ್ಯೆ - ಒಂದು ಗಣದ ಅಂಗಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಕೆಲವು ಔಷಧ ಗುಂಪುಗಳನ್ನು ವಿಭಾಗಿಸಲಾಗಿದೆ. ಕಟ್ಟಕ್ಕಂ (ಮ.) ನೆಲ್ಲಿಕಾಯಿ, ಶಾಂತಿಕಾಯಿಗಳೇ ತ್ರಿಫಲಗಳು ಇವೆಲ್ಲ ಶಾಸ್ತ್ರೀಯ ಆಯುರ್ವೇದದಲ್ಲಿರುವವುಗಳೇ. ನಾಡವೈದ್ಯವೂ ಈ ಗಣಗಳನ್ನು ಬಳಸಿಕೊಂಡಿದೆ. ಆದರೆ ಪೂರ್ತಿ ಕೇರಳೀಯವೂ, ಆಯುರ್ವೇದದ ಕೇರಳೀಯ ಪದ್ಧತಿಯಲ್ಲಿಯೂ ನಾಡವೈದ್ಯದಲ್ಲಿಯೂ ಮಾತ್ರವೇ ಪ್ರಚಲಿತವೂ ಆದ ಕೆಲವು ಯೋಗಗಳಿವೆ. 'ದಶಪುಷ್ಪಂ' ಅಂತಹ ಒಂದು ಯೋಗ. ಮಲೆಯಾಳಿಗಳ ಔಷಧ ಸಂಸ್ಕೃತಿಯೊಂದಿಗೆ ಮಾತ್ರವಲ್ಲ, ಅವರ ಆಚಾರಾನುಷ್ಠಾನಗಳ ಜತೆಗೂ ಅಭೇದ್ಯವಾದ ಸಂಬಂಧವು ಈ ದಶಪುಷ್ಪಗಳಿಗಿವೆ. ಗರಿಕೆ, ವಿಷ್ಣುಕ್ರಾಂತಿ, ತಿರುತಾಳಿ (ಕಿರುತಾಳಿ), ಪೂವಾಂಕುರುಂದಿಲ (ಸಹದೇವಿ), ಕಯ್ಯಣ್ಣಿ (ಗರುಗ/Eclipta prostrata), ಮುಕ್ಕುಟ್ಟಿ (ನೆಲತೆಂಗು/Cuminum cyminum) ನಿಲಪ್ಪನ (ನೆಲಹನೆ), ಉಟಿಂಞ, ಚೆರೂಳ (ಪಾಷಾಣಭೇದಿ/Aerva lanata), ಮುಯಲ್‌ಚೆವಿ, ಎಂಬ ಹತ್ತು ಗಿಡಗಳನ್ನು ಸೂಡುವ ಪಾದಿರಾಪ್ಪೂಂಜೂಡಲ್ (ಮಧ್ಯರಾತ್ರಿಯ ಹೂ ಮುಡಿಯುವಿಕೆ) ಎಂಬ ಕಾರ್ಯಕ್ರಮವು ಧನುರ್ಮಾಸದ ತಿರುವಾದಿರ ಉತ್ಸವದ ಮುಖ್ಯ ಕಾರ್ಯಕ್ರಮವಾಗಿದೆ. ದಶಪುಷ್ಪಗಳಲ್ಲಿ ಒಂದೊಂದಕ್ಕೂ ಯಥಾಕ್ರಮವಾಗಿ ಆದಿತ್ಯ, ವಿಷ್ಣು, ಇಂದಿರಾದೇವಿ, ನಾಲ್ಮೊಗ, ಶಿವ, ಪಾರ್ವತಿ, ಭೂಮಿದೇವಿ, ಇಂದ್ರ, ಯಮ, ಕಾಮ ಸೇರಿಕೊಂಡಿದ್ದಾರೆ ಎಂದು ನಂಬಿಕೆ.

ಕೇರಳೀಯ ನಾಡವೈದ್ಯ ಪರಂಪರೆಯ ಜನಕೀಯ ಪದ್ಧತಿಯೇ ಗೃಹವೈದ್ಯ. ಹಲ್ಲು ತಿಕ್ಕುವ ದೇಶೀಯ ಹಲ್ಲು ಪುಡಿಗಳು, ತಲೆಗೆ ಲೇಪಿಸಲು ಬಳಸುವ ಅನೇಕ ರೀತಿಯ ಎಣ್ಣೆಗಳು, ಕಾಲಿನ ಮುಳ್ಳು ತೆಗೆಯುವುದಕ್ಕೆ ಅನುಸರಿಸುವ ಉಪಾಯಗಳು, ಕಾಡಿಗೆ ನಿರ್ಮಾಣ ಮುಂತಾದುವು ; ಸಾಧಾರಣ ಕಾಯಿಲೆಗೆ ಬಳಸುವ ಏಕಮೂಲಿಕಾ ಪ್ರಯೋಗಗಳು ಇವೆಲ್ಲ ಗೃಹವೈದ್ಯದ ಅಂಗವೇ. ಕರ್ಕಾಟಕ ತಿಂಗಳಲ್ಲಿ ಹಲತೆರನ ಅಂಗಡಿ ಮದ್ದುಗಳನ್ನು, ಹಸಿಮದ್ದುಗಳನ್ನು ಸೇರಿಸಿ 'ಮದ್ದುಗಂಜಿ ಉಣ್ಣುವುದು' ರೋಗ ಪ್ರತಿರೋಧಕ್ಕಾಗಿ ಕೇರಳೀಯರು ಹಿಂಬಾಲಿಸಿಕೊಂಡು ಬರುವ ಒಂದು ಪ್ರತಿರೋಧ ಚಿಕಿತ್ಸಾ ಸಂಪ್ರದಾಯವಾಗಿದೆ. ಈ ಗಂಜಿಗೆ ಉಪಯೋಗಿಸುವುದು ಔಷಧೀಯ ಗುಣವುಳ್ಳ, ಬೇಯಿಸದೆ ಕುಟ್ಟಿದ 'ನವರ' ಎಂಬ ತಳಿಯ ಅಕ್ಕಿಯನ್ನು, ಪ್ರಸವವಾದ ಸ್ತ್ರೀಯರಿಗೂ, ಪ್ರಸವ ನಿಂತ ಸ್ತ್ರೀಯರಿಗೂ ಸೊಂಟಕ್ಕೆ ಬಲ ಬರುವುದಕ್ಕಾಗಿ ಶತಕುಪ್ಪ (ತತಾಪೆ), ಆಶಾಳಿ (ಆಶಾಡಿ/Asparagus racemosus) ಅಯಮೋದಕ, (ಓಮ) ತೇಟ್ಟಾಂಬರಲ್, (ಚೇತಂಪರಳು) ಮುಂತಾದ ಅಂಗಡಿ ಮದ್ದುಗಳನ್ನು ಸೇರಿಸಿ ತೆಂಗಿನ ಹಿಂಗಾರದ

ಕಷಾಯದಲ್ಲಿ ಪಾಕ ಮಾಡಿದ 'ವೇವುಮರುನ್ನ್' (ಬೇಯಿಸುವ ಮದ್ದು)ಗಳನ್ನು ಉಪಯೋಗಿಸುತ್ತಾರೆ. ಗೃಹವೈದ್ಯ ಪ್ರಯೋಗಗಳಲ್ಲಿ ಕೆಲವು ಮಾಂತ್ರಿಕ ಪ್ರಯೋಗಗಳೂ ಇವೆ. ದೇಹವು ಕೆಂಪಾಗುವ ಪೊಯ್ಯಪಾರಲ್ (ಮರಳು ಎರಚು) ಹೊನ್ನೆ ಎಲೆ, ಕಾಸರಕನ ಎಲೆ - ಇವುಗಳಿಂದ ರೋಗ ಕಾರಣವಾದ ಮರಳನ್ನು ನಿವಾಳಿಸಿ, ಅರಸಿನ ಮತ್ತು ಸುಣ್ಣವನ್ನು ಮಿಶ್ರಮಾಡಿ ತಯಾರಿಸುವ 'ಕುರುದಿ ನೀರಿ'ಗೆ ಆವಾಹನ ಮಾಡಿ ನೀಗಿಸುವುದನ್ನು ಮಾಡಲಾಗುತ್ತದೆ.

ಆದಿವಾಸಿಗಳ ಔಷಧಜ್ಞಾನದಲ್ಲಿ ಅಡಗಿರುವ ಪ್ರಭಾವ ಸಿದ್ಧಾಂತ (Doctrine of signature)ದ ಪ್ರಭಾವವಿದೆ. ಹದಿನೈದನೆಯ ಶತಮಾನದಲ್ಲಿ ಯೂರೋಪಲ್ಲಿ ಕಾಣಿಸಿಕೊಂಡು ಹದಿನೆಂಟನೆಯ ಶತಮಾನದ ವರೆಗೆ ಅಲ್ಲಿನ ಚಿಕಿತ್ಸಾರಂಗದಲ್ಲಿ ಅಪಾರ ಪ್ರಾಮುಖ್ಯವನ್ನು ಹೊಂದಿದ್ದುದಾಗಿತ್ತು. ಆಕೃತಿ ಮತ್ತು ಔಷಧ ಪ್ರಭಾವವು ಪರಸ್ಪರ ಹೊಂದಿರುವ ಸಂಬಂಧವನ್ನು ಕಂಡು ಕೊಳ್ಳುವ ಅಡಯಾಳ (ಗುರುತುಚಿಹ್ನೆ) ಪ್ರಭಾವ ಸಿದ್ಧಾಂತ. ನಿಲಂಬೂರಿನ ಚೋಲ ನಾಯಕರು ಕನ್ನಡಿ ಹಾವಿನ ವಿಷಕ್ಕೆ ಉಪಯೋಗಿಸುವ 'ಅರಿಸೆಮ ಲೆಸ್ಕನೋರ್ತಿ' ಎಂಬ ಕಾಡು ಸುವರ್ಣಗೆಡ್ಡೆಯ ದಂಟಿಗೆ ಕನ್ನಡಿ ಹಾವಿನದೇ ಆಕೃತಿ. ಕಾಣಿಕ್ಕಾರಕ ಕೀರಿಕೆಳಂಜ್ (ಮುಂಗುಸಿ ಗೆಣಸು)ನ ಹೂವಿಗೆ ಹಾವಿನ ಹೆಡೆಯ ಜತೆಗೆ ಆಕೃತಿ ಸಾಮ್ಯವಿದೆ. ಮಲಪ್ಪುರಂನ ಕಲ್‌ಕುಳದ ಚೋಲ ನಾಯಕರು ಚೇಳಿನ ವಿಷಕ್ಕೆ ಪ್ರತಿರೋಧವಾಗಿ ಬಳಸುವ ಪಳುದಾರಕ್ಕಾಲಿ (ಚೇಳುಕಾಲು) ಚೇಳಿನ ಆಕೃತಿ ವಿಶೇಷವುಳ್ಳದ್ದಾಗಿದೆ.

ಮಧ್ಯಕಾಲ ಕೇರಳದ ಗ್ರಾಮ ವ್ಯವಸ್ಥೆಯ ಅವಿಭಾಜ್ಯ ಘಟಕವಾಗಿದ್ದುದೆಂದರೆ - ಅಂಕ ಕಳರಿಗಳು, ಬ್ರಿಟಿಷರ ಆಡಳಿತ ಕಾಲದಲ್ಲಿ ಆಯುಧ ನಿಯಂತ್ರಣ ನಿಯಮಗಳು ಜಾರಿಗೆ ಬಂದಾಗ ಕಳರಿಯ ದೈಹಿಕ ಪದ್ಧತಿಗಳು ಕೇವಲ ಒಂದು ಪ್ರದರ್ಶನದ ಸಂಗತಿಗಳಾದವು. ಕಳರಿಯ ಜತೆಗೆ ಗಾಢ ಸಂಬಂಧವಿದ್ದ ಚಿಕಿತ್ಸಾ ಸಂಪ್ರದಾಯಗಳು ಸ್ವತಂತ್ರವಾಗಿ ಅಸ್ತಿತ್ವದಲ್ಲಿದ್ದವು. ಅಸ್ಥಿಭಂಗ, ಉಳುಕು ಮುಂತಾದವುಗಳಿಗೆ ಹಲವಾರು ಮಂದಿ ಈ ಕಳರಿ ಅರಿವನ್ನು ಬಳಸಿಕೊಳ್ಳುವುದಿದೆ. ಉಳಿಚ್ಚಿಲ್ (ಉಜ್ಜುವಿಕೆ) ಯಂಥ ಮರ್ಮ ಚಿಕಿತ್ಸಾ ಪ್ರಯೋಗಗಳಿಗೆ ಬಳಸುವ ಲೇಪನ ತೈಲಗಳನ್ನು ತಯಾರಿಸುವಲ್ಲಿ ಎಳ್ಳೆಣ್ಣೆ, ಮರೋಟ್ಟಿ ಎಣ್ಣೆ, ಹೊನ್ನೆಣ್ಣೆ ಮುಂತಾದ ಎಣ್ಣೆಗಳೂ, ಗಾಯ ಜಜ್ಜುವಿಕೆ ಮುಂತಾದವುಗಳಿಗೆ ವೀಳ್ಯದೆಲೆ, ಆನಚ್ಚುವಡಿ (ಆನೆಹೆಜ್ಜೆ), ಮುಕ್ಕಣ್ಣನ್ ಪೆರುಕ್ಕ್, ಉಪ್ಪುತೆಳಿ ಮುಂತಾದ ವಿಶೇಷ ಔಷಧಿಗಳನ್ನು ಬಳಸಲಾಗುತ್ತಿದೆ. ಮರ್ಮಗುಳಿಗ (ಮರ್ಮಾಣಿ ಮಾತ್ರೆ) ಮಾತ್ರೆಗಳ ನಿರ್ಮಾಣದಲ್ಲಿ ಹಸಿ ಮದ್ದುಗಳ ಜತೆಗೆ ಮುರು (ಒಂದು ರೀತಿಯ ಮರದ ಅಂಟು), ಸನ್ನಿನಾಯಕಂ (ರಕ್ತವಾಳ), ಕಾತ್ತ್, ಟಿಕ್ಕಾಮಲ್ಲಿ (ದಿಕ್ಕಾಮಲ್ಲಿ / Gardenia gummifera) ಮುಂತಾದ ಅಂಗಡಿಮದ್ದುಗಳನ್ನೂ ಉಪಯೋಗಿಸುತ್ತಾರೆ.

ಕೇರಳದ ವಿಷ ಚಿಕಿತ್ಸಾ ಪದ್ಧತಿಯಲ್ಲಿ ವಿಷವೈದ್ಯ ಎಂಬ ಮುಖ್ಯ ವಿಭಾಗವಿದೆ. ವಿಷವಿದ್ಯೆ ಎಂಬ ಮಂತ್ರ ಭಾಗವು ಇಂದು ಅಳಿದುಹೋಗಿದೆ. ಔಷಧ ದ್ರವ್ಯಗಳನ್ನು ಉಪಯೋಗಿಸುವ 'ವಿಷವೈದ್ಯ' ಮರಣ ಶಯ್ಯೆಯಲ್ಲಿದೆಯಾದರೂ ಈಗ ಉಸಿರಾಡುತ್ತಿದೆ. ಕರಳಯಂ (ಈಶ್ವರ ಮಲ್ಲಿಗೆ) ಉರಿತ್ತೂಕ್ಕೆ, ಅಮುಕ್ಕುರು (ಅಶ್ವಗಂಧಿ), ಇಲಂಜಿಕುರು, ಕುರಿಚ್ಚೂಲಿ, ಮುಂತಾದ ಔಷಧ ಸಸ್ಯಗಳನ್ನು ವಿಷ ಚಿಕಿತ್ಸೆಗಾಗಿ ನಾಡ ವೈದ್ಯವು ಬಳಸಿಕೊಳ್ಳುತ್ತಿದೆ. ಪಾಲಕನ್, ಕೋಡಾಗಾರಿ, ಅಣಲಿವೇಗಂ, ಮುಂತಾದ ಅಪೂರ್ವವಾದ ಔಷಧಗಳನ್ನು ಆದಿವಾಸಿ ಜನತೆ ವಿಷಶಮನಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

ಹಳದಿಕಾಮಾಲೆ, ಕುರ, ಕರಪ್ಪನ್, ಮುಂತಾದ ಒಂದು ರೋಗಕ್ಕೆ ಮಾತ್ರ ಹೆಚ್ಚಿನಂಶ ಯಾವುದಾದರೂ ಒಂದು ಏಕಮೂಲಿಕೆಯನ್ನಷ್ಟೇ ಬಳಸಿಕೊಂಡು ಚಿಕಿತ್ಸೆ ಮಾಡಿ ನಾಡಜನರ ಅಂಗೀಕಾರ ಗಳಿಸಿದ್ದ ಜನ ಪ್ರತಿಯೊಂದು ಕೇರಳೀಯ ಗ್ರಾಮದಲ್ಲೂ ಇದ್ದಾರೆ. ಕೀಳಾರ್ ನೆಲ್ಲಿ (ನೆಲನೆಲ್ಲಿ / Phyllanthus amarus), ಕಯ್ಯಣ್ಣಿ (ಗರುಗ) - ಇವು ಹಳದಿ ಕಾಮಾಲೆಗೆ ಮುಖ್ಯವಾದ ಔಷಧಗಳು. ಕಿಣಟ್ಟಿಲ್ ಆವಣಕ್ಕ್ (ಆರಂಬುಡ/ಹರಳು) ಕೈದಮೂಲ (ಕೈದ ಗಿಡದ ತಾಯಿಬೇರು) ಇವನ್ನು ಕೆಲವು ಚಿಕಿತ್ಸೆಗಳಲ್ಲಿ ಏಕಮೂಲಿಕೆಯಾಗಿ ಬಳಸುತ್ತಾರೆ. ಪಾಡಕಿಟಂಜ್, ಒರುವೇರನ್, ಮುಂತಾದವು ಕುರುವನ್ನು ಒಡೆಯಲು ಬಳಸುವ ಹಸಿಮದ್ದುಗಳು.

ಕೇರಳೀಯ ಚಿಕಿತ್ಸೆಗೆ ಉಪಯೋಗಿಸುವ ಹಲವಾರು ಔಷಧೀಯ ಸಸ್ಯಗಳು ಇಂದು ಪರಿಸರ ನಾಶದ ಕಾರಣವಾಗಿ ವಂಶನಾಶದ ಅಂಚಿನಲ್ಲಿವೆ. ಪ್ರಕೃತಿ ಸಂರಕ್ಷಣೆಯ ಮೂಲಕ ಮಾತ್ರ ಅಪೂರ್ವವೂ, ಉಳಿಯುವುದೇ ಕಷ್ಟ ಸಾಧ್ಯವೂ ಆಗಿರುವ ಔಷಧ ಸಸ್ಯಗಳನ್ನು - ತನ್ಮೂಲಕ ಚಿಕಿತ್ಸಾ ವಿಧಾನವೊಂದನ್ನು ಕಾಪಾಡಿಕೊಳ್ಳಲು ಸಾಧ್ಯ.

ಕೆ.ಕೆ.

ಕೇರಳದ ಕುಮರಿ ಬೇಸಾಯ ದಟ್ಟವಾದ ಕಾಡನ್ನು ಕಡಿದು ಅದು ಒಣಗಿದ ಕೂಡಲೇ ಅದನ್ನು ಸುಟ್ಟು ಅಲ್ಲಿ ಕೃಷಿಮಾಡುವ ವಿಧಾನಕ್ಕೆ ಕುಮರಿ ಬೇಸಾಯ ಎಂದು ಹೆಸರು. ಅದರ ಮುಖ್ಯ ವೈಶಿಷ್ಟ್ಯವೆಂದರೆ ಮಣ್ಣನ್ನು ಸುಟ್ಟು ಒಂದೇ ಬಾರಿ ಕೃಷಿ ಮಾಡಿ ಆ ಜಾಗವನ್ನು ಉಪೇಕ್ಷಿಸಿ ಬೇರೆಡೆಗೆ ಹೊರಟು ಹೋಗುವುದು. ಇದು ಒಂದು ರೀತಿಯ ಸಂಚಾರಿ ಬೇಸಾಯ ಪದ್ಧತಿ. ಕುಮರಿ ಬೇಸಾಯವನ್ನು ರೂಢಿ ಮಾಡಿಕೊಂಡ ಆದಿವಾಸಿ ಕೃಷಿಕರು ತಾವು ಉಪೇಕ್ಷಿಸಿದ ಪ್ರದೇಶದಲ್ಲಿ ಮತ್ತೆ ಕಾಡು ಬೆಳೆದು ಮತ್ತೆ ಬೆಳೆ ಮಾಡಲು ಬೇಕಾದ ಯೋಗ್ಯತೆಯನ್ನು ಗಳಿಸದೆ ಅಲ್ಲಿಗೆ ಮರಳುವುದಿಲ್ಲ. ಉದಾ : ಕಣ್ಣವಂ ಕಾಡಿನ ಕುರಿಚ್ಯರು ಒಮ್ಮೆ ಕೃಷಿಮಾಡಿದ ಜಾಗಕ್ಕೆ ಮರಳಿ ಬರಬೇಕಾದರೆ ಕನಿಷ್ಠ ಏಳುವರ್ಷಗಳು ಕಳೆಯಬೇಕು. ಕಾಣಿಕ್ಕಾರರೆಂಬ ಇನ್ನೊಂದು ಆದಿವಾಸಿ ಜನವರ್ಗ ಹತ್ತಿಪ್ಪತ್ತು ವರ್ಷಗಳು ಕಳೆದ ಮೇಲಷ್ಟೇ ಅಂಥ ಜಾಗಕ್ಕೆ ಮರಳಿ ಹೋಗುತ್ತಾರೆ. ಒಂದು ನೆಲದಲ್ಲಿ ಎರಡು ಬೆಳೆಗಳ ನಡುವೆ ಗರಿಷ್ಠ ಅಂತರವು ಮಣ್ಣಿನಿಂದ ನಷ್ಟವಾದ ಸತ್ತ್ವವನ್ನು ಮರಳಿ ಪಡೆದುಕೊಳ್ಳಲು ಸಹಾಯಕ. ಹತ್ತು ವರ್ಷಗಳ ಅಂತರವಿದ್ದರೆ ಭರ್ಜರಿ ಫಸಲು ಸಿಗುವುದು ಖಚಿತವಾಗಿರುವುದರಿಂದ ಆರ್ಥಿಕ ದೃಷ್ಟಿಯಿಂದಲೂ ಇದು ಲಾಭದಾಯಕವಾದ ಸಂಗತಿಯಾಗಿದೆ.

ಕುಮರಿ ಕೃಷಿಯಲ್ಲಿ ಮುಖ್ಯ ಬೆಳೆ ಬತ್ತ. ಬತ್ತದ ಜತೆಗೆ ಸಾಸಿವೆ, ತೊಗರಿ, ಅವರೆ, ಕೆಸು, ಗೆಣಸುಗಳು, ರಾಗಿ, ಹರಿವೆ, ಅರಿಸಿನ, ಹೆಸರು ವರ್ಗದ ಧಾನ್ಯಗಳು ಮುಂತಾದುವುಗಳನ್ನೂ ಬೆಳೆಸುತ್ತಿದ್ದರು. ಹುತ್ತಗಳು ಬೆಳೆದು ನಿಂತ, 'ಕರಡಿಹುತ್ತ'ವೆಂದು ಕರೆಯಲಾಗುವ ಫಲವತ್ತಾದ ಮಣ್ಣಲ್ಲಿ ನವಣೆಯು ತುಂಬ ಹುಲುಸಾಗಿ ಬೆಳೆಯುತ್ತದೆ. ಕುಮರಿ ಕೃಷಿಯ ಇನ್ನೊಂದು ವೈಶಿಷ್ಟ್ಯವೆಂದರೆ ಅದರ ಬೀಜ ವೈವಿಧ್ಯ. ಈ ನೆಲವು

ವಾಸ್ತವದಲ್ಲಿ ಜೀವ ವೈವಿಧ್ಯದ ತೊಟ್ಟಿಲೂ ಹೌದು. ಎರಡು ಹೆಕ್ಟೇರ್ ವಿಸ್ತಾರದ ಒಂದು ಚಿಕ್ಕ ಜಮೀನಿನಲ್ಲಿ ಎಂಟರಿಂದ ಮೂವತ್ತು– ಮೂವತ್ತೈದರಷ್ಟು ತೆರನ ವಿಭಿನ್ನ ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ. ಭೂಮಿಯನ್ನು ಹಸನು ಮಾಡುವುದಕ್ಕೆ ಉಳುಮೆಯ ಬಳಕೆ ಇಲ್ಲ; ಭೂಗುಣ ಮತ್ತು ಹವಾಗುಣದ ಜತೆ ಹೊಂದಾಣಿಕೆ ಇದೆ. ತುಂಬ ಎತ್ತರದ ಜಾಗವಾದರೆ ಅಲ್ಲಿಯ ಕಾಡನ್ನು ಪೂರ್ತಿ ಕಡಿದು ಒಣಗಿಸುವ ಪರಿಪಾಠವಿಲ್ಲ, ಸ್ವಲ್ಪ ಮಟ್ಟಿಗೆ ನೆಲವನ್ನು ಹಸನುಗೊಳಿಸಲಾಗುತ್ತದೆ.

ಕುರುಚ್ಯರ ಕುಮರಿ ಬೇಸಾಯ : ಕೇರಳದ ಕಣ್ಣೂರು, ವಯನಾಡು ಜಿಲ್ಲೆಗಳಲ್ಲಿ ಹರಡಿರುವ ಕಣ್ಣವಂ ವನಗಳಲ್ಲಿ (ನರಿಕ್ಕೋಟ್ಟ, ಮಲೆ, ವಾಳಮಲ ಮುಂತಾದೆಡೆ) ಕುರುಚ್ಯರು ತಮ್ಮದೇ ಆದ ಕೃಷಿಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಮೊದಲಿಗೆ ಅವರು ಉತ್ತಮವಾಗಿ ಬೆಳೆದಿರುವ ವನಪ್ರದೇಶವನ್ನು ಗುರುತಿಸುತ್ತಾರೆ. ಕುಂಭಮಾಸದಲ್ಲಿ ಈ ಕಾಡುಗಳನ್ನು ಕಡಿಯುತ್ತಾರೆ. ಮುಂದಿನ ಒಂದು ತಿಂಗಳು ಕಾಡು ಒಣಗಲು ಬಿಡುತ್ತಾರೆ. ಚೆನ್ನಾಗಿ ಒಣಗಿದ ಬಳಿಕ ಅದರ ಅಂಚನ್ನು ಸವರಿ ಒಪ್ಪಮಾಡಿ ಹತ್ತಿರದ ಕಾಡಿಗೆ ಬೆಂಕಿ ತಗಲದಿರುವಂತೆ ಬೆಂಕಿ ಹಚ್ಚುತ್ತಾರೆ. ಕಾಡು ಉರಿದ ಬಳಿಕ ಅವಶೇಷಗಳನ್ನೂ, ಬೂದಿಯನ್ನೂ ಹದಮಾಡಿ ಗೊಬ್ಬರವಾಗಿ ಬಳಸುತ್ತಾರೆ. ಬೇರು, ನಾರು, ಕುತ್ತಿಗಳನ್ನು ಹಾರೆ, ಪಿಕ್ಕಾಸುಗಳಿಂದ ಅಗೆದು ತೆಗೆದು ಮಣ್ಣನ್ನು ಹಸನು ಮಾಡಿ ಬಿತ್ತನೆ ಮಾಡುತ್ತಾರೆ. ವಿಷುವಿಗೆ (ಏಪ್ರಿಲ್ ಮಧ್ಯಭಾಗ) ಮುಂಚಿತವಾಗಿ ಬಿತ್ತನೆ ಮುಗಿಯುತ್ತದೆ. ಬಿತ್ತನೆಯ ಬಳಿಕ ಕನಿಷ್ಠ ಹದಿನೈದು ದಿನಗಳ ಕಾಲ ಬೀಜಗಳು ಮಣ್ಣಲ್ಲೇ ಬಿಸಿಲಿಗೆ ಒಣಗಬೇಕು. ಅಂಥವು ಒಳ್ಳೆಯ ಫಸಲು ಕೊಡುತ್ತವೆ ಎನ್ನುವುದು ಕುರುಚ್ಯರ ಅನುಭವ. ಉಳುಮೆಯ ರೂಢಿ ಇಲ್ಲ. ಮಣ್ಣನ್ನು ಅಗೆಯುವುದೂ ಇಲ್ಲ. ಅಂತೆಯೇ ಬಿಡುಬಿತ್ತನೆ ಅಷ್ಟೆ. ಬಿತ್ತನೆಯ ಬಳಿಕ ಬೀಜವು ಮಣ್ಣಿನಿಂದ ಸರಿದು ಹೋಗದಂತೆ ಬೀಜಗಳ ಮೇಲೆ ಒಂದಿಷ್ಟು ಮಣ್ಣು ಕಡಿದು ಹಾಕುತ್ತಾರೆ. ಇದಕ್ಕೆ ಪೇರಕೊಕ್ಕ (ಹಾರೆಯಂಥ ಒಂದು ಉಪಕರಣ)ವನ್ನು ಬಳಸುತ್ತಾರೆ. ಬಿತ್ತನೆ ಆರಂಭವಾದರೆ ನಿರಂತರ ಮೂರುದಿನ ಅದೇ ಕೆಲಸ. ನಾಲ್ಕನೆಯ ದಿನ ವಿರಾಮ. ಬಳಿಕ ಐದನೆಯ ದಿನದಿಂದ ಬಿತ್ತನೆಯ ಮುಂದುವರಿಕೆ. ನಾಲ್ಕನೆಯ ದಿನದ ವಿರಾಮಕ್ಕೆ 'ಮುಮ್ಮಾಟ್ಟ್' ಎಂದು ಹೆಸರು.

ಕುಮರಿ ಬೇಸಾಯದಲ್ಲಿ ಭೂಮಿಯನ್ನು ತಟ್ಟುತಟ್ಟುಗಳಾಗಿ ಮಾಡುವ ಕ್ರಮವಿಲ್ಲ. ಕಡಿದು ಹಾಕಿದ ಮಣ್ಣು ಮಳೆ ಬಿದ್ದಾಗ ಕರಗಿ ಹರಿಯದೆ ಅಲ್ಲೇ ಅಂಟಿಕೊಳ್ಳುವ ಸ್ವಭಾವದ್ದು. ಇಳಿಜಾರಿದ್ದು ಮಣ್ಣು ಕರಗಿ ಹರಿಯಬಹುದೆಂಬ ಸಂದೇಹವಿರುವೆಡೆ ಮರದ ದಿಮ್ಮಿಗಳನ್ನು ಹಾಕಿ ತಡೆಯನ್ನು ಮಾಡುತ್ತಾರೆ. ಕಳೆ ಕೀಳುವುದು ಸಾಮಾನ್ಯವಾಗಿ ಎರಡು ಬಾರಿ. ಮೊದಲನೆಯದು ಮಳೆ ಬಿದ್ದು ಕೆಲವು ದಿನಗಳಲ್ಲಿ ಕಳೆ ಮತ್ತು ಕಡಿದ ಕಾಡು ಚಿಗುರಿ ಮೇಲೆ ಬಂದಾಗ, ಮುಂದಿನದು ಪೈರು ತೆನೆ ಕಟ್ಟುವಾಗ. ಬೆಳೆ ತೆಗೆಯುವ ಕೆಲಸ ಕನ್ಯಾ-ತುಲಾ ತಿಂಗಳುಗಳಲ್ಲಿ ಮುಕ್ತಾಯವಾಗುತ್ತದೆ. ಕುಮರಿ ಬೇಸಾಯದಲ್ಲಿ ಅಸಾಮಾನ್ಯ ಬೆಳೆ ಕೃಷಿಕರ ಕೈಸೇರುತ್ತಿತ್ತು.

ಮುದುವರ ಕುಮರಿ ಬೇಸಾಯ : ಮುದುವರು ಇಡುಕ್ಕಿ ಜಿಲ್ಲೆಯ ಪ್ರಮುಖ ಆದಿವಾಸಿ ಜನ. ಅಲ್ಲಿ ಪತ್ತಡಿಪ್ಪಾಲ, ಅಡಿಚ್ಚಿಲಿ ತೊಟ್ಟಿ, ಮುದುವಾಕ್ಕುಡಿ ಮುಂತಾದೆಡೆ ಅವರು ಕುಮರಿ ಬೇಸಾಯ ಮಾಡುವ ವಿಧಾನವು ಇಂತಿದೆ-

ಇವರು ಕಾಡುಕಡಿಯುವ ಕೆಲಸವನ್ನು ಧನುಮಾಸದ ಕೊನೆ ಅಥವಾ ಮಕರ ಮಾಸಗಳಲ್ಲಿ ಮಾಡಿ ಮುಗಿಸುತ್ತಾರೆ. ಬೆಂಕಿ ಕೊಡುವುದು ಕುಂಭಮಾಸದಲ್ಲಿ. ಮೀನಮಾಸದಲ್ಲಿ ಹೊಸ ಮಳೆ ಬಿದ್ದ ಬಳಿಕ ಬಿತ್ತನೆ ಮಾಡುತ್ತಾರೆ. ಇವರು ಉಪಯೋಗಿಸುವ ತಳಿಗಳೂ ಕುರುಚ್ಯರಿಗಿಂತ ಭಿನ್ನವಾದುದು. ಮೊದಲು ಬಿತ್ತುವುದು ನವಣೆಯನ್ನು, ಆ ಬಳಿಕ ಅರಿಮೋಡನ್, ಅನಂತರ ಆಡಿಮೋಡನ್ ಎಂಬ ಬತ್ತದ ತಳಿಗಳು. ಬಳಿಕ ಕುರುಂಬಿಲ್ ಎಂಬ ರಾಗಿಯ ತಳಿ, ಜೋಳ, ಸಾಮೆ ಮುಂತಾದುವನ್ನು ಮಧ್ಯೆ ಮಧ್ಯೆ ಬಿತ್ತನೆ ಮಾಡುತ್ತಾರೆ. ಏನಿದ್ದರೂ ಬಿತ್ತನೆ ಕೆಲಸಗಳೆಲ್ಲ ವಿಷುವಿಗೆ ಮೊದಲೇ ಮುಗಿಯುತ್ತದೆ. ವಿಷು ಕಳೆದ ಬಳಿಕ ಪೆರುವಾಳ ಎಂಬ ಇನ್ನೊಂದು ಬತ್ತದ ತಳಿಯನ್ನು ಬಿತ್ತನೆ ಮಾಡುತ್ತಾರೆ. ಕಳೆಗಿಡಗಳು ಮತ್ತು ಕಡಿದ ಕಾಡು ಬೆಳೆದು ಬರುವುದಕ್ಕೆ ಅನುಸಾರವಾಗಿ ಕಳೆ ತೆಗೆಯುವ ಕೆಲಸ ಎರಡೋ ಮೂರೋ ಬಾರಿ ನೆರವೇರುತ್ತದೆ.

ಕಾಣಿಕ್ಕಾರರ ಕುಮರಿ ಬೇಸಾಯ : ತಿರುವನಂತಪುರಂ, ಕೊಲ್ಲಂ ಜಿಲ್ಲೆಗಳ ಪ್ರಧಾನ ಆದಿವಾಸಿ ಪಂಗಡದವರಾದ ಕಾಣಿಕ್ಕಾರರು ತುಂಬ ಮೊದಲೇ ಕಾಡುಕಡಿಯುವುದಕ್ಕೆ ತೊಡಗುತ್ತಾರೆ. ವೃಶ್ಚಿಕ ಮಾಸದ ಕಾಡುಗಾಳಿ ಆರಂಭವಾದ ಕೂಡಲೇ ಇವರು ಕಾಡು ಕಡಿಯಲು ಆರಂಭಿಸುತ್ತಾರೆ. ಯೋಗ್ಯ ಕಾಡನ್ನು ಈ ಮೊದಲೇ ಕಾಣಿಗಳ ಹಿರಿಯ-ಮುಟ್ಟುಕ್ಕಾಣಿ-ಆಯ್ಕೆ ಮಾಡಿರುತ್ತಾನೆ. ಅಲ್ಲಿ ಏಳು ಬೆತ್ತಗಳನ್ನು ಕತ್ತರಿಸಿ ಆ ಜಾಗವು ಕೃಷಿಯೋಗ್ಯವಾದುದೋ ಅಲ್ಲವೋ ಎಂದು ಪರೀಕ್ಷಿಸಿ ತಿಳಿದಿರುತ್ತಾನೆ. ಬೆತ್ತದ ಒಳಗೆ ನೀರು ಅಥವಾ ಕೆಸರಿನ ಅಂಶವು ಕಂಡುಬಂದರೆ ಆ ಜಾಗವು ಕೃಷಿಯೋಗ್ಯ. ಏಕೆಂದರೆ ನೀರು ಮತ್ತು ಕೆಸರು ಕೃಷಿಯ ಅನಿವಾರ್ಯ ಘಟಕಗಳು. ಇವು ಕಾಣಸಿಗದಿದ್ದರೆ ಬೇರೆ ಸ್ಥಳದ ಆಯ್ಕೆ.

ಕಾಡು ಕಡಿಯಲು ಆರಂಭಿಸುವುದಕ್ಕೆ ಶುಕ್ರವಾರವು ಶುಭಪ್ರದ. ಸೂರ್ಯೋದಯಕ್ಕೆ ಮುನ್ನ ಕಡಿಯುವ ಕೆಲಸ ಆರಂಭವಾಗಬೇಕು. ಮುಟ್ಟುಕಾಣಿ ಕಾಡುಕಡಿದು ಮುಹೂರ್ತ ಮಾಡಿದ ಮೇಲೆ ಕಾಣಿಕ್ಕಾರರ ಪ್ಲಾತ್ತಿ (ಮಂತ್ರವಾದಿ ಮತ್ತು ಇತರ ರೋಗಚಿಕಿತ್ಸೆ ಮಾಡುವಾತ) ಕಡಿಯುತ್ತಾನೆ. ಅನಂತರ ಉಳಿದವರು ದೊಡ್ಡ ದೊಡ್ಡ ಮರಗಳನ್ನು ಉಳಿಸಿ ಮಿಕ್ಕವನ್ನು ಕಡಿಯುತ್ತಾರೆ. ಕಾಡು ಕಡಿಯುವ ಕೆಲಸವು ಧನುಮಾಸಾಂತ್ಯಕ್ಕೆ ಮುಕ್ತಾಯ. ಕುಂಭ ಮಾಸ ಹತ್ತಿರದಂದು ಬೆಂಕಿ ಕೊಡುವುದು. ಕಡಿದು ಹಾಕಿದ್ದ ಮರಗಿಡಗಳೆಲ್ಲ ಇಷ್ಟರಲ್ಲಿ ಚೆನ್ನಾಗಿ ಒಣಗಿರುತ್ತವೆ. ಹಿಂದಿನ ಕಾಲದಲ್ಲಿ ಹೀಗೆ ಮೊದಲಬಾರಿಗೆ ಕಡಿದ ಕಾಡನ್ನು ಉರಿಸಿದ ಏಳುದಿನಗಳ ಒಳಗೆ ಮಳೆ ಬರುತ್ತಿತ್ತು, ಅದು ಹೊಸ ಕಾಡು ಕಡಿದು ಉರಿಸುವ ಕಾಣಿಮಕ್ಕಳ ಕೆಲಸವನ್ನೂ ಅವರ ಉತ್ಸಾಹವನ್ನೂ ಕಂಡು ತೃಪ್ತಿಹೊಂದಿದ ಕಾಣಿಯಮ್ಮ ಕಾಡಿನ ಕೆಂಡವನ್ನೂ ಬೂದಿಯನ್ನೂ ಅಣಗಿಸಿ ತನ್ನ ಮಕ್ಕಳು ಮರಿಗಳಿಗೆ ಒಳ್ಳೆಯ ಬೆಳೆಯ ಅಭಯ ನೀಡುವುದಕ್ಕಾಗಿ ಸ್ನಾನಮಾಡಿ ಬಂದು ಈ ಮಳೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆಂದು ಅವರು ನಂಬುತ್ತಾರೆ. ಸುಟ್ಟ ಕಾಡನ್ನು ಮನೆಯಲ್ಲಿನ ಸದಸ್ಯರ ಸಂಖ್ಯೆಯನ್ನು ಆಧರಿಸಿ ಪ್ರತಿಯೊಬ್ಬರಿಗೂ ಅಳೆದು ಕೊಡುತ್ತಾರೆ. ಬಳಿಕ ಉರಿಯದೆ ಉಳಿದ ಮರದ ಅವಶೇಷ ಕಸ-ಕಡ್ಡಿಗಳನ್ನು ಇನ್ನೊಮ್ಮೆ ಒಟ್ಟಿ ಸುಡಲಾಗುತ್ತದೆ.

ಮೀನ ಮಾಸದ ಹೊಸಮಳೆಗೆ ಸಿದ್ಧನೆಲದಲ್ಲಿ ಬಿತ್ತನೆ ಪ್ರಾರಂಭ. ಬಿತ್ತನೆಯ ಬಳಿಕ ಪೇರಕೊಕ್ಕದ ಹಾಗಿರುವ ತೋಟ್ಟಕಂಬ ಎಂಬ ಉಪಕರಣದಿಂದ ಅದರ ಮೇಲೆ ಮಣ್ಣು ಹರಡಲಾಗುತ್ತದೆ. ಬತ್ತದ ತಳಿಗಳನ್ನು

ಮೊದಲು ಬಿತ್ತನೆ ಮಾಡಿ ಬಳಿಕ ಕೋರವ್ ಎಂಬ ರಾಗಿ, ಸಾಮೆ, ನವಣೆ ಮುಂತಾದುವುಗಳನ್ನು ಬಿತ್ತುತ್ತಾರೆ. ನವಣೆ ಮತ್ತು ಸಾಮೆಗಳನ್ನು ಇವರು ಹಾವು ಕಡಿದಾಗ ಪಥ್ಯಾಹಾರವಾಗಿಯೂ ಬಳಸುತ್ತಾರೆ. ಇವುಗಳಲ್ಲದೆ ತೊಗರಿ ಅರಿಸಿನ, ಸಾಸಿವೆ, ಗಾಂಧಾರಿ ಮೆಣಸು, ಬಾಳೆ ಮುಂತಾದುವುಗಳನ್ನೂ ಇವರು ಕೃಷಿ ಮಾಡುತ್ತಾರೆ. ಅಲಸಂದೆ ಬಳ್ಳಿಯನ್ನು ತೊಗರಿಗಿಡಗಳ ಮೇಲೆ ಹಬ್ಬಿಸುತ್ತಾರೆ. ವೃಷಭ-ಮಿಥುನ ಮಾಸಗಳಲ್ಲಿ ಕಳೆ ತೆಗೆಯುವ ಕೆಲಸ. ಕಳೆ ತೆಗೆಯಲು ಗಂಡು ಹೆಣ್ಣುಗಳೆಂಬ ತಾರತಮ್ಯವಿಲ್ಲ. ಸಿಂಹಮಾಸದಲ್ಲಿ ಕೊಯ್ಲು.

ಕುಂಭ, ಮೀನ, ಮೇಷಗಳಲ್ಲಿ ಇವರು ಮರಗೆಣಸಿನ ಕೃಷಿಯನ್ನೂ ಮಾಡುತ್ತಾರೆ. ಮರಗೆಣಸಿನ ಕೋಲುಗಳನ್ನು ಇವರು ನೆಟ್ಟಗೆ ನೆಡುತ್ತಾರೆ. ಇತರ ತಳಿಗಳ ಜತೆ ಇವರು 'ಪರಂಗಿ ಮಾಂಜ ಕಪ್ಪ' (ಗೋಡಂಬಿ ಮರಗೆಣಸು) ಎಂಬ ವಿಶಿಷ್ಟ ತಳಿಯನ್ನೂ ಕೃಷಿಮಾಡುತ್ತಾರೆ. ಬೆರಳಷ್ಟು ದಪ್ಪ ಗೆಡ್ಡೆಯಾಗುವ ಇವಕ್ಕೆ ಗೇರುಹಣ್ಣಿನ ಪರಿಮಳ ಮತ್ತು ರುಚಿ ಇರುತ್ತವೆ.

ಕುಮರಿ ಬೇಸಾಯ ಮತ್ತು ಆದಿವಾಸಿ : ಕುಮರಿ ಬೇಸಾಯವು ಆದಿವಾಸಿಗಳ ವೈಶಿಷ್ಟ್ಯಪೂರ್ಣ ಬದುಕಿನ ಅಂಗ. ಅವರ ಹಾಡು-ಕುಣಿತಗಳಲ್ಲಿ ಕೃಷಿ ಬದುಕಿನ ಸೊಗಡು ತುಂಬಿದೆ. ಬೆಂಕಿ, ಮಳೆ, ಸೂರ್ಯ ಮುಂತಾದ ಪ್ರಕೃತಿ ಶಕ್ತಿಗಳನ್ನು ಆರಾಧಿಸಿ ಒಲಿಸಿಕೊಳ್ಳಲೆಂದೇ ಅವರ ಉತ್ಸವಗಳು ಮತ್ತು ಆಚರಣೆಗಳು. ಒಳ್ಳೆಯ ದಿನ ನೋಡಿ ಮಣ್ಣಿನ/ನೆಲದ ಪೂಜೆಮಾಡಿದ ಬಳಿಕ ಬಿತ್ತನೆ. ಮಳೆಯ ದೈವಗಳು ಮತ್ತು ಭೂಮಿದೇವಿಯೊಡನೆಯೂ ತಮಗೆ ಕಷ್ಟನಷ್ಟಗಳು ಬರದಂತೆ, ಒಳ್ಳೆಯ ಫಸಲು ನೀಡುವಂತೆ ಅವರ ಪ್ರಾರ್ಥನೆ. ಪ್ರಾರ್ಥನೆಯ ವಿಧಿವಿಧಾನಗಳ ಬಳಿಕ ಬಿತ್ತನೆ. ಈ ಸಂದರ್ಭದ ಹಾಗೆಯೇ ಕೊಯ್ಲಿನ ಬಳಿಕವೂ ಮಲೆ ದೈವಗಳಿಗೆ ಕೃತಜ್ಞತೆಯ ಸಮರ್ಪಣೆ. ಕಾಡುಕಡಿಯುವಾಗ, ಮಣ್ಣು ಕೊಚ್ಚುವಾಗ, ಬೆಳೆ ತೆಗೆಯುವಾಗ ಕಾಣಿಕ್ಕಾರರಿಗೆ ಅನೇಕ ಆಚಾರಾನುಷ್ಠಾನಗಳಿವೆ. ಅವುಗಳಲ್ಲಿ ಕೂವೆ ಎಲೆಗಳು ಮತ್ತು ಬತ್ತ ಪ್ರಧಾನ ದ್ರವ್ಯಗಳಾಗಿರುತ್ತವೆ. ಸೂರ್ಯ, ಶಾಸ್ತಾವು, ಮಲೆದೈವಗಳು, ಒಡಲಮ್ಮ ಕಾಳಿ-ಅಯ್ಯಂಕಾಳಿ ದೇವಿಯರು, ಪೂರ್ವಜರು- ಇವರ ಪ್ರಧಾನ ಆರಾಧ್ಯ ಶಕ್ತಿಗಳು. ಮುತ್ತಿಯಮ್ಮ, ಉದಯ ಮುತ್ತನ್ ದೇವತೆಗಳಿಗೆ ಬಿತ್ತನೆ ಮತ್ತು ಕೊಯ್ಲಿನ ಕಾಲಗಳಲ್ಲಿ ಆರಾಧನೆ ನಡೆಯುತ್ತದೆ. ಆರಾಧನೆಯ ಸಿಂಹಪಾಲು ಸೂರ್ಯದೇವನಿಗೆ. ಮುದುವರಲ್ಲೂ ಈ ತೆರನಾದ ದೇವರುಗಳೂ ಆರಾಧನಾ ಸಂಪ್ರದಾಯವೂ ರೂಢಿಯಲ್ಲಿದೆ.

ಕಾಸರಗೋಡು ಪ್ರದೇಶದ ಕುಮರಿ ಬೇಸಾಯ : ಇಲ್ಲಿನ ಮೂಡುಭಾಗದ ಮಲೆಗಳಲ್ಲೂ ಎಡೆನಾಡಿನ ಗುಡ್ಡಗಳಲ್ಲಿಯೂ ಜಮೀನ್ದಾರರು ಅಥವಾ ಅವರಿಂದ ಕೃಷಿಪ್ರದೇಶವನ್ನು ಗೇಣಿಗೆ ಪಡೆದ ವ್ಯಕ್ತಿಗಳು ಕುಮರಿ ಬೇಸಾಯ ಮಾಡಿಸುತ್ತಿದ್ದರು. ಸುಮಾರು ನಲವತ್ತು ಐವತ್ತರಷ್ಟು ಮಂದಿ ಕೆಲಸಗಾರರು ಆ ಮಲೆಗಳಿಗೆ ಹೋಗಿ ವಾಸ್ತವ್ಯ ಹೂಡಿ ಒಳ್ಳೆಯ ದಿನದಂದು ಕಾಡು ಕಡಿಯಲು ಆರಂಭಿಸುತ್ತಿದ್ದರು. ಸಾಮಾನ್ಯವಾಗಿ ಧನುರ್ಮಾಸದ ಹತ್ತರಂದು ಕಾಡು ಕಡಿಯಲು ಆರಂಭ. ಅದನ್ನು ಸುಡುವುದು ಕುಂಭಮಾಸದ ಪೂರ್ವಾರ್ಧದಲ್ಲಿ. ಇದರ ಜತೆಗೆ ನೆರೆಯ ಕಾಡಿಗೆ ಬೆಂಕಿ ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಮೀನ ಮಾಸದ ಒಳ್ಳೆಯ ಮುಹೂರ್ತದಲ್ಲಿ ಬಿತ್ತನೆ. ಮೀನ ಹತ್ತರಂದು ಬಿತ್ತನೆಗೆ ಶುಭದಿನ.

ಬತ್ತ, ಸಾಮೆ, ರಾಗಿ, ಎಳ್ಳು, ಹರಳು, ತೊಗರಿ, ತರಕಾರಿ ಇತ್ಯಾದಿಗಳ ಸಮ್ಮಿಶ್ರ ಇವರದು. ಬತ್ತ ಮತ್ತು ಇತರ ಧಾನ್ಯಗಳನ್ನು ಬಿತ್ತಿ ಒಂದು ಸಾಲು ಉಳುಮೆ. ಬಳಿಕ ಪರುವಾಯಿಯಿಂದ ಅಗೆತ. ಮೊದಲು ಬತ್ತದ ಬಿತ್ತನೆ. ತಚ್ಚ, ಚೆಮ್ಮೋಳ್, ತಡಿಚ್ಚಿಲ್ ಮುಂತಾದ ಬತ್ತದ ತಳಿಗಳನ್ನು ತೊಗರಿಬೀಜಗಳೊಂದಿಗೆ ಮಿಶ್ರಮಾಡಿ ಕುಮರಿಯ ಮಧ್ಯಭಾಗದಲ್ಲಿ ಬಿತ್ತನೆ ಮಾಡಲಾಗುತ್ತಿತ್ತು. ಚೆನ್ನೆಲ್ಲ್ (ಕೆಂಬತ್ತ) ಎಂಬ ತಳಿಯ ಬಿತ್ತನೆ ಮೇಷದಲ್ಲಿ. ಸಾಮೆ, ನವಣೆಗಳ ಬಿತ್ತನೆ ಕುಮರಿಯ ಅಂಚಲ್ಲಿ. ಗಡಿ ನಿರ್ಣಯಕ್ಕೂ ಇವೇ ಆಧಾರ. ಕಡಿದ ಕಾಡನ್ನು ರಾಶಿ ಮಾಡಿ ಸುಟ್ಟ ಜಾಗ- ಮೆದಿಯಲ್ಲಿ ಎಳ್ಳು ಸಾಸಿವೆಗಳ ಬಿತ್ತನೆ. ಪುಟ್ಟ ರೆಂಬೆಗಳು ಉರಿದಲ್ಲಿ ಎಳ್ಳಿಗೆ ಅನುಕೂಲ. ನವಣೆಗೂ ಹಾಗೆಯೇ. ಮೆದಿಗಳು ಬತ್ತಕ್ಕೆ ಹಿತಕಾರಿಯಲ್ಲ.

ಮೀನಮಾಸದ ಕಡುಬಿಸಿಲಲ್ಲಿ ಕುಮರಿಯ ಮಣ್ಣು ಸೇರಿ ಒಣಗುವ ಬತ್ತದ ಬೀಜಗಳು ವಿಷುವಿನ ಮಳೆಗೆ ಮೊಳೆತು ಸತ್ತೇ ಹೋದುವೇನೋ ಎಂಬತ್ತಿದ್ದರೂ ಮೇಷದ ಮಳೆಗೆ ನಳನಳಿಸಿ ಬೆಳೆಯಲಾರಂಭಿಸುತ್ತವೆ. ಕಳೆಕಿತ್ತು ಅದನ್ನು ಬೆಳೆಯ ಜಾಗದಲ್ಲೇ ಹೂತುಬಿಡಲಾಗುತ್ತದೆ. ತಡಿಚ್ಚಿಲ್ ಚಿಮ್ಮೋಳ್‌ಗಳು ಕನ್ನಿಮಾಸದಲ್ಲಿ ಕೊಯ್ಲಿಗೆ ಬರುತ್ತವೆ. ಸಾಸಿವೆಯೂ ಆಗಲೇ ಕೊಯ್ಲಿಗೆ ಬರುತ್ತದೆ. ಚೆನ್ನೆಲ್ಲ್‌ಗೆ ಬೆಳವಣಿಗೆ ಹೆಚ್ಚು ಇರುವುದರಿಂದ ಅದು ತುಲಾದಲ್ಲಷ್ಟೆ ಕಟಾವಿಗೆ ಬರುತ್ತದೆ. ಈ ಬೆಳೆಗಳ ಮಧ್ಯೆ ಸಾಮೆ, ರಾಗಿಗಳು ಬೆಳೆಯುತ್ತಾರೆ. ಜೋಳದ ಬೆಳೆ ವೃಶ್ಚಿಕದಲ್ಲೂ ತುಲಾ ಹತ್ತಕ್ಕೆ ಹೂ ಬಿಡುವ ತೊಗರಿ ಧನುಮಾಸದಲ್ಲೂ ಮಾಗುತ್ತದೆ.

ಕುಮರಿ ಬೆಳೆಗಳ ಮೊದಲ ಕೊಯ್ಲಿಗೆ 'ನಾತ್ತಂಡರಕ್ಕಲ್' (ನಾಲ್ಕು ದಂಡು ಕತ್ತರಿಸುವುದು) ಎಂದು ಹೆಸರು. ಚೆರಾಕತ್ತಿ ಎಂಬ ವಿಶಿಷ್ಟ ಕತ್ತಿಯನ್ನು ಆಗ ಬಳಸುತ್ತಾರೆ. ನಾತ್ತಂಡರಕ್ಕಲ್‌ನ ಬಳಿಕ ಯಾವುದೇ ಸಂದರ್ಭದಲ್ಲಿ ಕೊಯ್ಲು ಮಾಡಬಹುದು. ಭೂಮಾಲಿಕರ ಮನೆ ದೂರದಲ್ಲಿದ್ದರೆ ಕುಮರಿಯ ಬಳಿಯಲ್ಲೇ ಅಂಗಣ ನಿರ್ಮಿಸಿ ಅಲ್ಲಿ 'ಒಕ್ಕಲು' ಹಾಕುತ್ತಾರೆ. ಬಳಿಕ ಬತ್ತವನ್ನೆಲ್ಲ ನಂಬಿಗಸ್ಥನೊಬ್ಬನ ಮನೆಯಲ್ಲಿ ಇರಿಸಿ ಅವಕಾಶ ಒದಗಿದಾಗ ಸಾಗಿಸಲಾಗುತ್ತದೆ.

ಒಂದು ಕಾಲಘಟ್ಟದಲ್ಲಿ ರೈತ ಕಾರ್ಮಿಕರ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಕುಮರಿ ಬೇಸಾಯವು ಇಂದು ಕೆಲವೇ ಮಂದಿಯ ಸ್ಮೃತಿ ಕೋಶದಲ್ಲಿ ಮಾತ್ರ ಉಳಿದುಕೊಂಡಿದೆ.

ಕುಮರಿ ಬೇಸಾಯಕ್ಕೆ ಬಳಸುತ್ತಿದ್ದ ಬತ್ತದ ತಳಿಗಳು

(i) ಕುರುಚ್ಯರು ಬಳಸುತ್ತಿದ್ದವು - ಕೋಳಟಿಯೊಳ ತಳಿ : ಇದರ ತೆನೆಗಳು ಹುಂಜದ ಬಾಲದಂತೆ ಬಾಗಿಕೊಂಡಿರುವಂಥವು. ಇದರಲ್ಲಿ ಮುಳ್ಳನ್ ಕೋಟಿಯಾಳ, ಕಲ್ಲೂರ ಕೋಟಿಯಾ ಮುಂತಾದ ಪ್ರಭೇದಗಳು. ಇವು ಸಮೃದ್ಧ ಫಸಲು ನೀಡುವ ತಳಿಗಳು. ಅಡುಕ್ಕನ್- ಇದು ಸ್ವಲ್ಪ ಬೇಗ ಕಟಾವಿಗೆ ಬರುವ ತಳಿ. ಕರಿಯಡುಕ್ಕನ್, ಪೊಂದಿಯಡುಕ್ಕನ್ ಮುಂತಾದ ಪ್ರಭೇದಗಳೂ ಇವೆ.

ಅರಿಕ್ಕಟಮ - ಚೋಲಪ್ಪೆರುವಿತ್ - ಚೀರ್ಪಾಲ ತಳಿ (ಹಿಂದಿನ ಕಾಲದಿಂದಲೇ ಬಳಕೆಯಲ್ಲಿದ್ದುದು. ಬತ್ತ ಸಣ್ಣದು. ಒಳ್ಳೆಯ ಫಸಲು

ನೀಡುವಂಥದು) - ಎಳುವಿತ್ತ್ - ಪಾಲ್‌ಕಟಮ (ಸ್ವಲ್ಪ ಕಾಲಾವಧಿ, ಫಸಲು ಕಡಿಮೆ)- ಪುನಕ್ಕುರುವ (ನಾಲ್ಕು ತಿಂಗಳ ಕಾಲಾವಧಿ. ಸಣ್ಣ ಕಾಳುಗಳು. ಭತ್ತಕ್ಕೆ ನಸುಗೆಂಪು ಬಣ್ಣ. ಚೆನ್ನಾಗಿ ಮಳೆಬಿದ್ದರೆ ಒಳ್ಳೆಯ ಫಸಲು. ಚೆನ್ನಾಗಿ ಬೆಳೆದಾಗ ಹೊಟ್ಟು ತನ್ನಿಂದ ತಾನೆ ಸಡಿಲವಾಗುತ್ತದೆ) ಈ ತಳಿಗಳನ್ನೆಲ್ಲ ವಿಷುವಿಗೆ ಮೊದಲೇ ಬಿತ್ತನೆ ಮಾಡಿ ಕನ್ಯಾ ತುಲಾ ತಿಂಗಳುಗಳೊಳಗೆ ಕೊಯ್ಲು ಮುಗಿಸಿಬಿಡುತ್ತಿದ್ದರು.

(ii) ಮುದುವರು ಬಳಸುತ್ತಿದ್ದವು- ಅಲ್ಪಕಾಲಾವಧಿಯವು : ಅರಿಮೋಡನ್ - ಆಡಿಮೋಡನ್ - ಚೋರಮೋಡನ್ - ಮಂಞಮಾಲಿ- ಕುಂಜಿನೆಲ್ಲ್- ಕುಂಜಿ ಮುಳ್ಳನ್ (ತೂವನ್ ಎಂದೂ ಹೆಸರು. ಬತ್ತಕ್ಕೆ ಮಾಸಲು ಕೆಂಪುಬಣ್ಣ)- ತಲಪಿರಿಚ್ಚಾನ್ (ಇದರಲ್ಲಿ ಕಪ್ಪು ಮತ್ತು ಬಿಳಿ ಪ್ರಭೇದಗಳು. ಹೂವಿನಂತೆ ಅರಳುವ ತೆನೆ)- ಕಲ್ಲುಣ್ಣಿ.... ಇತ್ಯಾದಿ. ದೀರ್ಘಕಾಲಾವಧಿಯವು : ಪೆರುವಾಟಿ (ಇದರಲ್ಲಿ ಕಪ್ಪು, ಬಿಳಿ, ಮಾಲಿ, ಹಳದಿ, ಮುಂಡನ್ ಎಂಬ ಐದು ಪ್ರಭೇದಗಳು) ಮುಂಡನ್ ಹೊರತು ಉಳಿದವುಗಳಿಗೆ ಎತ್ತರದ ಪೈರು, ದೊಡ್ಡ ಕಾಳುಗಳು)- ಪುದಕಾಳಿ - ಕುರಿಕಣ್ಣಿ - ಪುಲಿಶಿ - ಪುಶಕನ್ - ವಯಿಲ ನೆಲ್ಲ್-ಚೆರಕ್ಕ್ ನೆಲ್ಲ್ (ಇದರ ತಳಿ ಪೂರ್ತಿನಾಶವಾಗಿದೆ. ಬತ್ತದ ಇಬ್ಬದಿಗಳಲ್ಲಿ ರೆಕ್ಕೆಯಂಥ ರಚನೆ. ಬಿಳಿ ಕಪ್ಪು ಪ್ರಭೇದಗಳು)- ತೋಕ್ಕಾನ್- ಊರಾಳಿಚ್ಚಿ (ದೊಡ್ಡ ಬತ್ತ. ಕದಿರು ಆರಂಭದಲ್ಲಿ ಕೆಂಬಣ್ಣ, ಬೆಳೆದಂತೆ ಕಪ್ಪು ಏರುತ್ತ ಹೋಗುವಂಥದು) - ಪಟ್ಟತ್ತಿನೆಲ್ಲ್ (ಹಳದಿ ಬಣ್ಣದ ಅಗಲ ಬತ್ತ)

ದೀರ್ಘ ಕಾಲಾವಧಿಯ ತಳಿಗಳನ್ನು ಮೀನ ತಿಂಗಳ ಕೊನೆಗೆ ಬಿತ್ತನೆ ಮಾಡಿ ಕನ್ಯಾತುಲಾಗಳಲ್ಲಿ ಕಟಾವು ಮಾಡುತ್ತಿದ್ದರು. ಅಲ್ಪ ಕಾಲಾವಧಿಯವುಗಳ ಬಿತ್ತನೆ ಮೀನ ಕೊನೆಗೆ, ಆದರೆ ಕಟಾವು ಕರ್ಕಟಕ ಅಂತ್ಯ ಅಥವಾ ಸಿಂಹ ಮಾಸದ ಆರಂಭದಲ್ಲಿ.

(iii) ಕಾಣಿಕ್ಕಾರರು ಬಳಸುತ್ತಿದ್ದವು- ಅಲ್ಪಕಾಲಾವಧಿಯವು : ಕಂಬಿಕ್ಕಾದಲ್ (ಕಪ್ಪು ಬಣ್ಣ) - ಪೋಕುರುವ (ಬಿಳಿ) - ಕುಚ್ಚರಿ ಕುರುವ (ಬಿಳಿ) ಅಟಿಕಪ್ಪೆರುಮಾಳ್ (ಸಣ್ಣಕಾಳು)- ಕೋಡಾಲಿ ಕಣಯನ್ (ಉದ್ದಬತ್ತ)- ಚೇರುವೆಳ್ಳ.

ದೀರ್ಘಕಾಲಾವಧಿಯವು : ಕೂರನ್ (ಕೆಂಪು ಬಣ್ಣ, ಸಿಂಹದಲ್ಲಿ ಕಟಾವು) - ಪೊನ್ನರಪ್ಪಾಲನ್ - ಕಾಮದೇವನ್ (ಕೆಂಬಣ್ಣ, ಉದ್ದನೆಯ ದೊಡ್ಡಬತ್ತ)- ಪನ್ನಿಮುಂಡನ್ (ಬಾಗದ ಕದಿರು, ಕಪ್ಪು, ಗಿಡ್ಡಬತ್ತ)- ಚೆಂದಂಗನ್ (ಕೆಂಬಣ್ಣ)- ಮಂಞಕುರುವ-ಆಟ್ಟಕ್ಕಾಲಿ-ಮುತ್ತಿಚ್ಚೇರಿ (ಬಿಳಿಬಣ್ಣ, ದೊಡ್ಡ ಕದಿರು, ಸಮೃದ್ಧ ಫಸಲು) ಅನ್ನೂರಿನೆಲ್ಲ್ (ಇದನ್ನು ಕೃಷಿ ಮಾಡುವುದಿಲ್ಲ. ತನ್ನಿಂದ ತಾನೆ ಬೆಳೆ, ಆಹಾರಕ್ಕೆ ಉಪಯೋಗವಿಲ್ಲ. ಮಸೂರಿ/ಸಿಡುಬಿಗೆ ಔಷಧ. ಕಾಡುಕೋಳಿಗಳ ಆಹಾರ ಕೂಡ).

ಕೆ.ಕೆ.

ಕೇರಳದ ಕೃಷಿ ಆಚರಣೆಗಳು ಕೃಷಿಗೆ ಸಂಬಂಧಪಟ್ಟಂತೆ ಅನೇಕ ಆಚರಣೆಗಳು ಕೇರಳದಲ್ಲಿ ಪ್ರಚಲಿತವಾಗಿವೆ. ಕೃಷಿ ಸಮೃದ್ಧಿಗಾಗಿ ಮತ್ತು ರಕ್ಷಣೆಗಾಗಿ ಇವುಗಳ ಆಚರಣೆ. ಮೇಲ್ನೋಟಕ್ಕೆ ಇವುಗಳಲ್ಲಿ ಹಲವು ಆಚರಣೆಗಳು ಮೂಢನಂಬಿಕೆಗಳಂತೆಯೋ ವೈಜ್ಞಾನಿಕ ಹಿನ್ನೆಲೆ ಇಲ್ಲದವುಗಳಂತೆಯೋ ಕಂಡುಬಂದರೂ ಅಲ್ಲೆಲ್ಲ ಪ್ರಕೃತಿ, ಭೂಮಿ, ಮಣ್ಣು ಹಾಗೂ ಜೀವಜಾಲಗಳೊಂದಿಗೆ ಕೃಷಿಕನಿಗಿರುವ ಆರಾಧನಾ ಭಾವ, ಗೌರವಗಳನ್ನು ಕಾಣಬಹುದು.

ಕೃಷಿ ಆರಂಭಿಸುವುದು ಉಳುವ ಎತ್ತುಗಳನ್ನು ಹಾಗೂ ಕೃಷಿಗೆ ಉಪಯೋಗಿಸುವ ವಿವಿಧ ಉಪಕರಣಗಳನ್ನು ಪೂಜಿಸುವುದರೊಂದಿಗೆ. ಕೈಕೊಟ್ಟು ಚಾಲ್ (ಹಾರೆ ಪೂಜೆ), ಕರಿಚಾಲ್ (ನೇಗಿಲ ಪೂಜೆ) ಇರುವತ್ತೆಟ್ಟುಚಾಲ್ (ಭೂಮಿ ಪೂಜೆ) ಮುಂತಾದ ಹೆಸರುಗಳಿಂದ ಕರೆಯುವ ಈ ಆಚರಣೆಗಳು ಬೇರೆ ಬೇರೆ ಸ್ಥಳಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಆಚರಿಸಲಾಗುತ್ತದೆ.

ಕೈಕೊಟ್ಟು ಚಾಲ್ (ಹಾರೆ ಪೂಜೆ) : ಇದೊಂದು ಆಯುಧ ಪೂಜೆ. ಬತ್ತದ ಕೃಷಿ ಇಲ್ಲದ ಇತರ ಕೃಷಿಕರು ಇದನ್ನು ನಡೆಸುತ್ತಾರೆ. ವಿಷು ಹಬ್ಬದ ದಿನ ಅಪರಾಹ್ನ ಇದನ್ನು ಆಚರಿಸಲಾಗುವುದು. ಮನೆಯ ಅಂಗಳದಲ್ಲಿ ಆಚರಿಸುವ ಈ ಹಬ್ಬದ ಆರಂಭದಲ್ಲಿ ಗಣಪತಿ ಪೂಜೆ ಮಾಡುತ್ತಾರೆ. ವಿಷು ಹಬ್ಬಕ್ಕೆ ಮಾಡಿದ 'ಅಡ' (ಅಕ್ಕಿಹಿಟ್ಟು, ಬೆಲ್ಲ, ತೆಂಗಿನ ತುರಿ ಸೇರಿಸಿ ಮಾಡುವ 'ಹಬೆ ರೊಟ್ಟಿ' ರೂಪದ ಖಾದ್ಯ) ನೀರಿನಲ್ಲಿ ಕಲಸಿದ ಅಕ್ಕಿಹಿಟ್ಟು ಹಾಗೂ ಕೊನ್ನಪೂ (ಕೊಂದೆ ಹೂ- ಹಳದಿ ಬಣ್ಣದ ಸಣ್ಣಗಾತ್ರದ ಗೊಂಚಲು ಹೂವಿದು. ಮಲೆಯಾಳಿ ಹಬ್ಬಗಳಲ್ಲಿ ಈ ಹೂವಿಗೆ ವಿಶೇಷ ಪ್ರಾಧಾನ್ಯ. ವರ್ಷಾರಂಭದ ವಿಷು ಹಬ್ಬದ 'ವಿಷುಕಣಿ'ಯಲ್ಲಿ ಈ ಹೂ ಇರಲೇಬೇಕು) ಇವುಗಳು ಈ ಆಯುಧ ಪೂಜೆಗೆ ಅಗತ್ಯವಾದ ಪರಿಕರಗಳು. ಮೊದಲಿಗೆ ಹಾರೆಯ ಮೇಲ್ಭಾಗದಲ್ಲಿ ನೀರಿನಲ್ಲಿ ಕದಡಿದ ಅಕ್ಕಿ ಹಿಟ್ಟನ್ನು ಹಚ್ಚಿ ಕೊನ್ನಪೂವಿನ ಮಾಲೆಯನ್ನು ಕಟ್ಟುತ್ತಾರೆ.

ಪೂಜೆಯಾದ ಬಳಿಕ 'ಅಡ'ವನ್ನು ನೆಲದಲ್ಲಿ ಹೂತಿಟ್ಟು ಅದರ ಮೇಲೆ ಹಾರೆಯನ್ನು ಇಡುತ್ತಾರೆ. ಈ ಹಾರೆಯನ್ನು ಮರುದಿನ ಬೆಳಗ್ಗೆಯಷ್ಟೇ ಅಲ್ಲಿಂದ ತೆಗೆಯುವುದು. ವಿಶೇಷವಾಗಿ ವರ್ಷಪೂರ್ತಿ ಮಾಡುವ ತರಕಾರಿ ಕೃಷಿಗೆ ಇದು ಒಂದು ಆರಂಭ. ಈ ಹಬ್ಬ ಮುಗಿದ ಕೂಡಲೇ ಯಾವುದಾದರೊಂದು ತರಕಾರಿ ಬೀಜವನ್ನು (ಸಾಧಾರಣವಾಗಿ ಚೀನಿಕಾಯಿ ಬೀಜ) ಬಿತ್ತುವುದು ಹಿಂದಿನಿಂದಲೂ ನಡೆದು ಬಂದ ರೂಢಿ.

ಕರಿಚ್ಚಾಲ್ (ನೇಗಿಲು ಪೂಜೆ) : ಎತ್ತುಗಳು ಮತ್ತು ನೊಗ-ನೇಗಿಲುಗಳನ್ನಿಟ್ಟು ಈ ಹಬ್ಬವನ್ನು ಆಚರಿಸುತ್ತಾರೆ. ಯಾವಾಗ ಆಚರಿಸಬೇಕೆಂಬುದನ್ನು 'ಪಣಿಕ್ಕರ್' (ಜೋಯಿಸರು) ಲೆಕ್ಕ ಹಾಕಿ ಹೇಳುತ್ತಾರೆ. ಇಲ್ಲವೇ ಪಂಚಾಂಗ ನೋಡಿ ತೀರ್ಮಾನಿಸುತ್ತಾರೆ. ಹೆಚ್ಚಾಗಿ ವಿಷು ಹಬ್ಬ ಮುಗಿದ ಮೇಲೆ ಈ ಹಬ್ಬ ಬರುತ್ತದೆ. ಮೇಷ ಮಾಸ ಒಂದರಿಂದ ಐದರ ನಡುವೆ ಒಳ್ಳೆಯ ಮುಹೂರ್ತ ಕೊಡುತ್ತಾರೆ. ಯಾವುದೇ ಮುಹೂರ್ತವಾದರೂ ಮುಂಜಾವಿನಲ್ಲೇ ಈ ಹಬ್ಬವನ್ನು ಆಚರಿಸುವುದು ರೂಢಿ. ಹನ್ನೊಂದು ಗಂಟೆ ಅನಂತರ ಪೂಜೆ ಕಾರ್ಯ ಮಾಡುವುದಿಲ್ಲ. ಇದಕ್ಕೆ ನೊಗ ಹಳೆಯದಾದರೂ ಹೊಸ ನೇಗಿಲು ಇರಲೇಬೇಕೆಂಬ ನಿಯಮವಿದೆ.

ಆರಂಭದಲ್ಲಿ ಮನೆಯ ಅಂಗಳವನ್ನು ಸೆಗಣಿಯಿಂದ ಸಾರಿಸಿ ಶುಚಿಗೊಳಿಸುತ್ತಾರೆ. ಅಲ್ಲಿ ಅಕ್ಕಿ ಹಿಟ್ಟಿನಿಂದ ನೊಗ ನೇಗಿಲುಗಳ ಚಿತ್ರವನ್ನು ಬಿಡಿಸಿ ಪೂಜಿಸುತ್ತಾರೆ. ಈ ಪೂಜೆ ಮಾಡುವುದು 'ತರವಾಡು ಕಾರ್ಣವರ್' (ಕುಟುಂಬ ಹಿರಿಯರು). 'ಅಡ' ಮತ್ತು 'ಕೊನ್ನ ಪೂ'ವನ್ನು ಇದಕ್ಕೆ

ಉಪಯೋಗಿಸುತ್ತಾರೆ. ಅಕ್ಕಿ ಹಿಟ್ಟನ್ನು ನೀರಿನಲ್ಲಿ ಕಲಸಿ ನೊಗ ನೇಗಿಲುಗಳಿಗೆಲ್ಲಾ ಹಚ್ಚುತ್ತಾರೆ. ಎತ್ತುಗಳಿಗೆ ಸ್ನಾನ ಮಾಡಿಸಿ ಅವುಗಳ ಕೊಂಬು, ಮೈಗೂ ಅಕ್ಕಿಹಿಟ್ಟನ್ನು ಹಚ್ಚಿ ಅಲಂಕರಿಸುತ್ತಾರೆ. ಕೊನೆ ಪೂವಿನ ಮಾಲೆ ಮಾಡಿ ಕೊಂಬಿಗೆ ಕಟ್ಟುತ್ತಾರೆ. ಕೃಷಿ ಕಾರ್ಮಿಕರ ಪೂಜೆ ನೈವೇದ್ಯಗಳು ಹೊಲಗಳಲ್ಲಿ ಪ್ರತ್ಯೇಕವಾಗಿಯೇ ನಡೆಯುತ್ತವೆ.

ಪೂಜೆ ಮುಗಿದ ಮೇಲೆ ಎತ್ತುಗಳನ್ನು ಹೊಲಕ್ಕೆ ಕೊಂಡು ಹೋಗಿ ಉಳುತ್ತಾರೆ. ಕಡಿಮೆ ಸ್ಥಳವನ್ನಷ್ಟೇ ಈ ದಿನ ಉಳುವುದು. ಇದನ್ನು 'ಚಾಲ್' (ಸಾಲು) ಎಂದು ಕರೆಯುತ್ತಾರೆ. 'ಚಾಲ್' ಮುಗಿದ ಬಳಿಕ ಸ್ವಲ್ಪ ಬತ್ತದ ಬೀಜವನ್ನು ಬಿತ್ತುತ್ತಾರೆ. ಈ ಆಚರಣೆ ಮುಗಿದ ಬಳಿಕ ಯಾವಾಗಬೇಕಾದರೂ ಬಿತ್ತನೆ ಮಾಡಬಹುದು.

ವಳ್ಳುವನಾಡಿನ ತಿರುವಾರಿಯೋಡಿನ ನೇಗಿಲ ಪೂಜೆಯಲ್ಲಿ ಕೆಲವು ವ್ಯತ್ಯಾಸಗಳಿವೆ. 'ಚಾಲ್' ನಡೆಸುವ ದಿನ ನೊಗ-ನೇಗಿಲುಗಳನ್ನು ತೊಳೆದು ಎತ್ತುಗಳಿಗೆ ಸ್ನಾನ ಮಾಡಿಸಿ ಬೊಟ್ಟು ಹಚ್ಚಿ ಅಲಂಕರಿಸುತ್ತಾರೆ. ಹಲಸಿನ ಕಾಯಿ, ಅಡ, ತೆಂಗಿನ ಕಾಯಿ- ಇವು ಪೂಜೆಗೆ ಅಗತ್ಯವಾದ ವಸ್ತುಗಳು. ಅದರ ಚೂರುಗಳು ಬಿದ್ದ ರೀತಿಯನ್ನು ನೋಡಿ ಭವಿಷ್ಯ (ಲಕ್ಷಣ) ಹೇಳುತ್ತಾರೆ. ಅನಂತರ ಹಲಸಿನ ಕಾಯಿಯನ್ನು ಕತ್ತರಿಸಿ ಎತ್ತುಗಳಿಗೆ ತಿನ್ನಿಸುತ್ತಾರೆ. ನೈವೇದ್ಯವಾಗಿರಿಸಿದ 'ಅಡ'ವನ್ನು ಎತ್ತುಗಳಿಗೂ ಅಲ್ಲಿ ನೆರೆದವರಿಗೂ ಪ್ರಸಾದವಾಗಿ ನೀಡುತ್ತಾರೆ. ಅನಂತರ ಉಳುಮೆ, ಬಳಿಕ ಸಾಲು ಮಾಡಿ ಅನನಾಸಿನ ಗಿಡಗಳನ್ನು ನೆಡುತ್ತಾರೆ. ಅದರ ತುದಿಗಳನ್ನು ಅರ್ಧಕ್ಕೆ ಕತ್ತರಿಸಿ, ಸೊಪ್ಪು ಮತ್ತು ಸೆಗಣಿಯನ್ನು ಅದರ ಸುತ್ತಲೂ ಹಾಕಿ ಮಣ್ಣು ಮುಚ್ಚುತ್ತಾರೆ. ಈಗ ಅದು ಬಾಳೆಯ ಗಿಡದಂತೆ ಕಾಣುತ್ತದೆ. ಇದೇ ರೀತಿ ಬತ್ತವೂ ಸಮೃದ್ಧವಾಗಿ ಬೆಳೆಯಲಿ ಎಂಬುದು ಇಲ್ಲಿಯ ಆಶಯ.

ಇರುವತ್ತೆಟ್ಟು ಚಾಲ್ (ಭೂಮಿ ಪೂಜೆ) : ಮಲಯಾಳಿಗಳು ಭೂಮಿಪೂಜೆಯನ್ನು 'ಇರುವತ್ತೆಟ್ಟು ಚಾಲ್' ಎಂದು ಕರೆಯುತ್ತಾರೆ. ಕನ್ಯಾ ಮಾಸದ ಮಘುವು ಬೀಜ ಬಿತ್ತಲು ಶ್ರೇಷ್ಠ ನಕ್ಷತ್ರವಾದರೆ ಮಕರ ಮಾಸದ ಇಪ್ಪತ್ತೆಂಟನೇ ದಿನ ಭೂಮಿಪೂಜೆಗೆ ವಿಶೇಷ. ಅಂದು ಭೂಮಿದೇವಿ 'ಪುಷ್ಪವತಿ'ಯಾಗುವ ದಿನ. ಆ ದಿನ ಭೂಮಿಯನ್ನು ಅಗೆಯುವುದು, ಹೊಂಡತೋಡುವುದು, ಉಳುವುದು ಮುಂತಾದ ಯಾವುದೇ ಕೆಲಸಗಳನ್ನು ಮಾಡುವುದಿಲ್ಲ. ಮಣ್ಣಿನ ಮಕ್ಕಳಾದ ಹೊಲೆಯರಿಗೆ ಈ ದಿನ ವಿಶೇಷವಾದದ್ದು. ಭೂಮಿಯನ್ನು ನೋಯಿಸುವ ಯಾವುದೇ ಕೆಲಸವನ್ನೂ ಅಂದು ಅವರು ಮಾಡುವುದಿಲ್ಲ. ಎತ್ತುಗಳ ಪ್ರತಿರೂಪವನ್ನು ಮಾಡಿ ಅದನ್ನು ಹೆಗಲ ಮೇಲೆ ಹೊತ್ತುಕೊಂಡು ಉತ್ಸವ ಆಚರಿಸುತ್ತಾರೆ.

ಮಾಟ್ಟು ಪೊಂಗಲ್ : ದಕ್ಷಿಣ ತಿರುವಾಂಕೂರಿನಲ್ಲಿ ಮಕರ ಪೊಂಗಲ್ ಮುಗಿದ ಮರುದಿನ ಮಾಟ್ಟು ಪೊಂಗಲನ್ನು ಆಚರಿಸುತ್ತಾರೆ. ಅಂದು ಉಳುಮೆ ಮಾಡುವ ಎತ್ತುಗಳನ್ನು ಸ್ನಾನ ಮಾಡಿಸಿ ಗಂಧ ಮತ್ತು ವಿಭೂತಿಯನ್ನು ಅವುಗಳ ಕೊಂಬಿಗೂ ಹಣೆಗೂ ಹಚ್ಚುತ್ತಾರೆ. ಅನಂತರ ಅವುಗಳಿಗೆ ಹೊಟ್ಟೆ ತುಂಬಾ ಆಹಾರವನ್ನಿತ್ತು ವಿಶ್ರಾಂತಿಯನ್ನೀಯುತ್ತಾರೆ.

ತಿರುವನಂತಪುರ ಜಿಲ್ಲೆಯಲ್ಲಿ ಇದು 'ಪೊಂಗಾಲ್' ಹಬ್ಬವಾಗಿದೆ. ಇದು ಆದಿತ್ಯನ (ಸೂರ್ಯದೇವ) ಪೂಜೆ. ಬೆಳೆಯ ಅಧಿದೇವತೆಯಾದ ಸೂರ್ಯನಿಗೆ ನೈವೇದ್ಯ ಅರ್ಪಿಸುವ ದಿನವಿದು. ಬತ್ತದ ಬೆಳೆಯ ಕೊಯ್ಲು ಮಾಡಿ ಬತ್ತವನ್ನು ಬೇರ್ಪಡಿಸಿದ ಬಳಿಕ ಮೂರು 'ಹಾನೆ' (ಬಳ್ಳ) (ಒಂದು ಹಾನೆ = ಎಂಟು ಕುಡ್ತೆ) ಬತ್ತವನ್ನು ಪ್ರತ್ಯೇಕವಾಗಿಟ್ಟು ಪೊಂಗಲ್ ದಿನ ಅದರ ಅಕ್ಕಿಯಿಂದ ಪಾಯಸ ಮಾಡಿ ಪೊಂಗಾಲ ನೈವೇದ್ಯವನ್ನು ಸಮರ್ಪಿಸುತ್ತಾರೆ. ಆದಿತ್ಯವಾರದಂದು ಮನೆಯ ಮುಂಭಾಗದಲ್ಲಿ 'ಪೊಂಗಾಲ'ವನ್ನಿಡುತ್ತಾರೆ. ಅದೇ ರೀತಿ ಬೀಜದ ಬತ್ತವನ್ನು ಬಿತ್ತಲು ತೆಗೆಯುವಾಗಲೂ ಮೂರು ಹಾನೆ ಬತ್ತವನ್ನು ತೆಗೆದಿರಿಸುತ್ತಾರೆ. ಇದನ್ನು ಬಿತ್ತನೆಯ ಬಳಿಕ ಪೊಂಗಾಲವಿಡುತ್ತಾರೆ.

ನೆಡುಮಂಙಾಡು ಮತ್ತು ಸುತ್ತಲ ಪ್ರದೇಶಗಳಲ್ಲಿ ಹನ್ನೆರಡು ಮಡಕೆಗಳಲ್ಲಿ ಪೊಂಗಾಲವಿಡುತ್ತಾರೆ. ಇಲ್ಲಿ ಮೊದಲ ಕೊಯ್ಲಿನ ದಿನವೂ ಕೆಲವು ಆಚರಣೆಗಳಿವೆ. ಪೈರುಗಳನ್ನು ಕತ್ತರಿಸಿ ರಾಶಿ ಹಾಕಿದ ಬಳಿಕ ಶುಭ್ರ ವಸ್ತ್ರಧಾರಿಗಳಾದ ಮನೆಯ ಯಜಮಾನಿ ಮತ್ತು ಯಜಮಾನರು ಉರಿಯುತ್ತಿರುವ ಕಾಲುದೀಪವನ್ನು ಎತ್ತಿಕೊಂಡು ಆ ರಾಶಿಗೆ ಮೂರು ಬಾರಿ ಪ್ರದಕ್ಷಿಣೆ ಬಂದು ಅದನ್ನು ಪೂಜಿಸುತ್ತಾರೆ. ಪೂಜೆಯ ಬಳಿಕ ಪೈರಿನ ರಾಶಿಗೆ ನಮಸ್ಕರಿಸುತ್ತಾರೆ. ಮರುದಿನವಷ್ಟೇ ಆ ಪೈರನ್ನು ಬಡಿಯುತ್ತಾರೆ.

ಪಾಲಕ್ಕಾಡಿನಲ್ಲಿ ಮಕರ ಕೊಯ್ಲು ಮುಗಿದ ಬಳಿಕ ಕೆಲವು ವಿಶಿಷ್ಟ ಆಚರಣೆಗಳಿವೆ. ಪ್ರತಿಯೊಂದರಲ್ಲೂ ಒಂದು 'ಪರೆ' (ಹತ್ತೂವರೆ ಸೇರು) ಬತ್ತ ಸಿಗುವಷ್ಟು ದೊಡ್ಡ ಗಾತ್ರದ ಮೂರು ಪೈರಿನ ಕಟ್ಟುಗಳನ್ನು ಮಾಡುತ್ತಾರೆ. ಆ ಮೂರು ಕಟ್ಟುಗಳನ್ನು ಗದ್ದೆಯ ಬಲ ಮೂಲೆಯಲ್ಲಿ ಮೇಲ್ಮುಖವಾಗಿರಿಸಿ 'ಆರ್ಪುವಿಳಿ' (ಕೇರಳೀಯ ಜನಪದರು ಮಂಗಳಕಾರ್ಯಗಳಲ್ಲಿ ಬಾಯಿಯಿಂದ ಹೊರಡಿಸುವ ಸದ್ದು) ಮಾಡುತ್ತಾರೆ. ಇದು ಆ ವರ್ಷದ ಕೊಯ್ಲು ಮುಗಿದುದರ ಘೋಷಣೆಯಾಗಿರುತ್ತದೆ. ಆ ಪೈರಿನ ಕಟ್ಟುಗಳನ್ನು ಆಳುಗಳೇ ತಮ್ಮ ಮನೆಗಳಿಗೆ ಕೊಂಡೊಯ್ಯುತ್ತಾರೆ.

ಎಸ್.ಪಿ.ಕೆ.

ಕೇರಳದ ಕೃಷಿ - ಪಕ್ಷಿನೋಟ ಭಾರತದ ನೈಋತ್ಯ ಅಂಚಿನಲ್ಲಿರುವ ಕೇರಳ ಹಚ್ಚಹಸುರಿನಿಂದ ಕಂಗೊಳಿಸುವ ಪ್ರಕೃತಿ ರಮಣೀಯವಾದ ರಾಜ್ಯ. ಹಸುರಿನಿಂದ ಕೂಡಿದ ಗದ್ದೆ ಬಯಲುಗಳು, ದಟ್ಟವಾದ ಅರಣ್ಯ ಪ್ರದೇಶ, ತುಂಬಿ ಹರಿಯುವ ನದಿಗಳು, ಶುದ್ಧನೀರಿನ ತಟಾಕಗಳು ಹಾಗೂ ಸುದೀರ್ಘವಾದ ಕಡಲಕಿನಾರೆಯಿಂದ ಕೂಡಿ ಪ್ರವಾಸಿಗರನ್ನು ಕೈಬೀಸಿ ಕರೆಯುವ ರಾಜ್ಯ ಕೇರಳ. ಹಲವಾರು ಮತಧರ್ಮಗಳು ವಿಭಿನ್ನ ಆಚಾರ ವಿಚಾರಗಳು ಕಲೆ ಮತ್ತು ಸಂಸ್ಕೃತಿಗಳು ಕೇರಳದ ಅನನ್ಯತೆ.

ಪಶ್ಚಿಮದಲ್ಲಿ ಅರಬೀ ಸಮುದ್ರ, ಪೂರ್ವದಲ್ಲಿ ತಮಿಳುನಾಡು, ಉತ್ತರದಲ್ಲಿ ಕರ್ನಾಟಕ ರಾಜ್ಯ ಮತ್ತು ದಕ್ಷಿಣದಲ್ಲಿ ಹಿಂದೂಮಹಾಸಾಗರಗಳು ಕೇರಳದ ಗಡಿಗಳಾಗಿವೆ. ಪಶ್ಚಿಮದಲ್ಲಿ ಅರಬೀಸಮುದ್ರ ಮತ್ತು ಪೂರ್ವದಲ್ಲಿ ಪಶ್ಚಿಮಘಟ್ಟಗಳ ಮಧ್ಯೆ ನೆಲೆಗೊಂಡಿರುವ ಈ ರಾಜ್ಯವು ಗಾತ್ರದಲ್ಲಿ ಚಿಕ್ಕದಾಗಿದ್ದರೂ, ಭಾರತದಲ್ಲಿ ತನ್ನದೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಭಾರತದ ರಾಜ್ಯಗಳಲ್ಲಿ ವಿಸ್ತೀರ್ಣದಲ್ಲಿ ಕೇರಳಕ್ಕೆ 21ನೇ ಸ್ಥಾನ. ಕೇರಳವು 8363 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು, ಜನಸಂಖ್ಯೆಯು 3.50 ಕೋಟಿ ಆಗಿದೆ.

ಭಾರತದ ಒಟ್ಟು ವಿಸ್ತೀರ್ಣದ ಶೇ. 1.18 ಭಾಗವನ್ನು ಹೊಂದಿರುವ ಕೇರಳವು ಭಾರತದ ಜನಸಂಖ್ಯೆಯ ಶೇ 3ಷ್ಟನ್ನು ಹೊಂದಿದೆ. ಕೇರಳದ ಜನಸಂಖ್ಯಾ ಸಾಂದ್ರತೆಯು 819 ಚ.ಕಿ.ಮೀ ಆಗಿದೆ. ಜನಸಂಖ್ಯೆಯಲ್ಲಿ ದೇಶದಲ್ಲಿ ಹನ್ನೆರಡನೇ ಸ್ಥಾನದಲ್ಲಿದೆ. ಭಾರತದಲ್ಲಿ ಸಂಪೂರ್ಣ ಸಾಕ್ಷರತೆಯನ್ನು ಪಡೆದ ಮೊದಲ ರಾಜ್ಯ ಕೇರಳವಾಗಿದ್ದು, ಸಾಕ್ಷರತೆಯಲ್ಲಿ ಇಂದಿಗೂ ಮೊದಲ ಸ್ಥಾನದಲ್ಲಿದೆ.

ಕೇರಳದಲ್ಲಿ ಹದಿನಾಲ್ಕು ಜಿಲ್ಲೆ. 63 ತಾಲೂಕುಗಳಿವೆ. ಕಾಸರಗೋಡು, ಕಣ್ಣೂರು, ಕಲ್ಲಿಕೋಟೆ, ವಯನಾಡು, ಮಲಪ್ಪುರಂ, ಪಾಲಕ್ಕಾಡು, ತ್ರಿಶ್ಶೂರು, ಎರ್ನಾಕುಳಂ, ಇಡುಕ್ಕಿ, ಕೊಟ್ಟಾಯಂ, ಆಲಪ್ಪುಳ, ಪತ್ತನಂತಿಟ್ಟ, ಕೊಲ್ಲಂ ಮತ್ತು ತಿರುವನಂತಪುರ ಜಿಲ್ಲೆಗಳಿವೆ. ಕಾಸರಗೋಡು ಜಿಲ್ಲೆ ಉತ್ತರದ ಗಡಿಯಾಗಿದ್ದು, ಕರ್ನಾಟಕದೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಕೇರಳದ ರಾಜಧಾನಿಯೂ, ದಕ್ಷಿಣದ ತುದಿಯ ಜಿಲ್ಲೆಯೂ ತಿರುವನಂತಪುರವಾಗಿದೆ. ಕಾಸರಗೋಡಿನ ತಲಪ್ಪಾಡಿಯಿಂದ ತಿರುವನಂತಪುರದ ಪಾರಶ್ಶಾಲದವರೆಗೆ ಕೇರಳವು ವಿಸ್ತರಿಸಿದೆ.

ಭೌಗೋಳಿಕ ವಿವರ : ಭೌಗೋಳಿಕವಾಗಿ ಕೇರಳವು ಉತ್ತರ ಅಕ್ಷಾಂಶ ರೇಖೆ 8.02^0ಯಿಂದ 12.08^0ವರೆಗೆ, ಪೂರ್ವ ರೇಖಾಂಶ 74.08^0ಯಿಂದ 77.05^0ವರೆಗೆ ವಿಸ್ತರಿಸಿಕೊಂಡಿದೆ. ಕೇರಳವು 580 ಕಿ.ಮೀ. ವ್ಯಾಪ್ತಿಯ ದೀರ್ಘವಾದ ಕಡಲಕಿನಾರೆಯನ್ನು ಹೊಂದಿದೆ. ಭೌಗೋಳಿಕವಾಗಿ ಕೇರಳವನ್ನು ಮಲೆನಾಡು, ಎಡೆನಾಡು ಮತ್ತು ಕರಾವಳಿ ಎಂದು ವಿಂಗಡಿಸಿರುವುದನ್ನು ಕಾಣಬಹುದು. ಸಮುದ್ರ ಮಟ್ಟದಿಂದ 75 ಕಿ.ಮೀ. ಎತ್ತರವಿರುವ ಪೂರ್ವ ಪರ್ವತ ಶ್ರೇಣಿಗಳ ತಪ್ಪಲು ಪ್ರದೇಶವನ್ನು ಮಲೆನಾಡು ಎಂದೂ ಸಮುದ್ರ ಮಟ್ಟದಿಂದ ಸುಮಾರು 10ರಿಂದ 75 ಮೀಟರ್ ಎತ್ತರವಿರುವ ಗುಡ್ಡಬೆಟ್ಟಗಳಿಂದ ಕೂಡಿದ ಪ್ರದೇಶವನ್ನು ಎಡೆನಾಡು ಎಂದೂ ಪಶ್ಚಿಮ ತೀರದ ತಗ್ಗಿನ ಪ್ರದೇಶವನ್ನು ಕರೆನಾಡು ಎಂದೂ ಭೂಗೋಳ ಶಾಸ್ತ್ರಜ್ಞರು ಗುರುತಿಸಿದ್ದಾರೆ.

ಕೇರಳದಲ್ಲಿ 15577 ಚ.ಕಿ.ಮೀ. ಅರಣ್ಯ ಪ್ರದೇಶವಾಗಿದೆ. ಅತಿ ಹೆಚ್ಚು ಅರಣ್ಯ ಪ್ರದೇಶವಿರುವ ರಾಜ್ಯಗಳಲ್ಲಿ ಕೇರಳಕ್ಕೆ 17ನೇ ಸ್ಥಾನ. ಕೇರಳದಲ್ಲಿ 17 ವನ್ಯಮೃಗ ಸಂರಕ್ಷಣ ಕೇಂದ್ರಗಳು, ಐದು ರಾಷ್ಟ್ರೀಯ ಉದ್ಯಾನಗಳು ಇವೆ. ಕೃಷಿ, ನಾಟಿವೈದ್ಯ, ದೋಣಿವಿಹಾರ, ಯುದ್ಧಕಲೆ, ಕರಕುಶಲ ಗುಡಿಕೈಗಾರಿಕೆಗಳು ಹಾಗೂ ಹಲವಾರು ಸಾಂಸ್ಕೃತಿಕ ಕಲೆಗಳಿಂದ ಕೂಡಿದೆ. ದೇಶವಿದೇಶಗಳ ಪ್ರವಾಸಿಗರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ.

ಬತ್ತ ಮತ್ತು ತೆಂಗು ಕೇರಳದ ಪ್ರಧಾನ ಬೆಳೆಗಳು. ಈ ಎರಡು ಕೃಷಿಗಳು ಪರಂಪರೆಯಿಂದ ಬಂದಿದ್ದು, ಕೇರಳದ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿವೆ. ಅಡಕೆ, ಬಾಳೆ, ಮರಗೆಣಸು, ಗೇರುಬೀಜ, ಏಲಕ್ಕಿ, ಚಾ,ಕಾಫಿ, ರಬ್ಬರ್, ಶುಂಠಿ, ಅರಿಸಿನ, ಕೊಕ್ಕೋ, ಹೊಗೆಸೊಪ್ಪು, ಬೇಳೆ ಧಾನ್ಯಗಳನ್ನು ಕೇರಳದ ರೈತರು ಹೇರಳವಾಗಿ ಕೃಷಿ ಮಾಡುತ್ತಾರೆ. ಋತುಮಾನಕ್ಕೆ ಹೊಂದಿಕೊಂಡು ಜನರು ತರಕಾರಿಗಳನ್ನು ಬೆಳೆಯುತ್ತಾರೆ. ಮಲೆನಾಡು ಪ್ರದೇಶದಲ್ಲಿ ಉತ್ತರ ಭಾರತದ ಪ್ರಧಾನ ಬೆಳೆಗಳಾದ ನೀರುಳ್ಳಿ, ಟೊಮ್ಯಾಟೊ, ಬಟಾಟೆ ಮೊದಲಾದ ಬೆಳೆಗಳನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಕೇರಳವು ಒಂದು ಕೃಷಿ ಪ್ರಧಾನವಾದ ರಾಜ್ಯವಾಗಿದೆ. ಇಲ್ಲಿಯ ಬಹುತೇಕ ಜನರು ಕೃಷಿಯನ್ನು ಉಪಜೀವನ ಮಾರ್ಗವಾಗಿ ಸ್ವೀಕರಿಸಿಕೊಂಡಿದ್ದಾರೆ. ಕೇರಳದ 70798 ಹೆ. ಪ್ರದೇಶದಲ್ಲಿ ಕೃಷಿ ಇರುವುದಾಗಿ ಸರಕಾರಿ ವರದಿಗಳು ತಿಳಿಸುತ್ತವೆ.

ಕೇರಳದ ನದಿಗಳು : ಕೇರಳದಲ್ಲಿ 44 ನದಿಗಳು ಹರಿಯುತ್ತವೆ. ಇವುಗಳಲ್ಲಿ 41 ನದಿಗಳು ಪಶ್ಚಿಮಕ್ಕೆ ಹರಿದು ಅರಬೀ ಸಮುದ್ರವನ್ನೂ, 3 ನದಿಗಳು ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ. 1. ನೆಯ್ಯಾರ್, 2. ಕರಮನಯಾರ್, 3. ಮಾಮಂ, 4. ವಾಮನಪುರಂ, 5. ಇತ್ತಿಕಲಯಾರ್, 6.ಅಯಿರೂರ್, 7. ಕಲ್ಲಡಯಾರ್ 8. ಪಳ್ಳಿಕ್ಕಲಾರ್, 8. ಅಚ್ಚನ್ ಕೋವಿಲಾರ್, 10. ಪಂಬ, 11. ಮಣಿಮಲಯಾರ್, 12. ಮೀನಚ್ಚಿಲಾರ್, 13. ಮೂವಾಟ್ಟು, 14. ಪೆರಿಯಾರ್, 15. ಚಾಲಕುಡಿ, 16. ಕರುವನ್ನೂರ್, 17. ಪುಯಯ್ಕಲ್, 18. ಕೀಚ್ಚೇರಿ, 19. ಭಾರತ, 20. ತಿರೂರು, 21. ಕಡಲುಂಡಿ, 22. ಚಾಲಿಯಾರ್, 23. ಕಲ್ಲಾಯಿ, 24. ಕೋರ, 25. ಕುಟ್ಯಾಡಿ, 26. ಮಯ್ಯಳಿ, 27. ತಲಶ್ಶೇರಿ, 28. ಅಂಜರಕಂಡಿ, 29. ವಳಪಟ್ಟಣಂ, 30. ಕುಪ್ಪಾ, 31. ರಾಮಪುರಂ, 32. ಪೆರುವೂಬ, 33. ಕವ್ವಾಯಿ, 34. ಕಾರ್ಯಂಗೋಡು, 35. ನೀಲೇಶ್ವರ, 36. ಚಿತ್ತಾರಿ, 37. ಚಂದ್ರಗಿರಿ, 38. ಮೊಗ್ರಾಲ್, 39. ಶಿರಿಯಾ, 40. ಉಪ್ಪಳ, 41. ಮಂಜೇಶ್ವರ ಇವು ಪಶ್ಚಿಮಕ್ಕೆ ಹರಿಯುವ ನದಿಗಳು. ಕಬಿನಿ, ಭವಾನಿ ಮತ್ತು ಪಾಂಬಾರ್ ನದಿಗಳು ಪೂರ್ವಕ್ಕೆ ಹರಿಯುವ ನದಿಗಳು. ಕೇರಳದ ನದಿಗಳಲ್ಲಿ ಪೆರಿಯಾರ್ ಅತಿ ದೊಡ್ಡ ನದಿ. ಇದು 244 ಕಿ.ಮೀ. ಉದ್ದವಿದೆ. ಅತ್ಯಂತ ಸಣ್ಣದು ಮಂಜೇಶ್ವರನದಿಯಾಗಿದ್ದು, ಉದ್ದ 16 ಕಿ.ಮೀ. ಆಗಿದೆ.

ಹಿನ್ನೀರು ತಟಾಕಗಳು ಕೇರಳದ ವೈಶಿಷ್ಟ್ಯಗಳಲ್ಲಿ ಒಂದು. ಕೇರಳದಲ್ಲಿ 34 ಹಿನ್ನೀರು ತಟಾಕಗಳಿವೆ. ಅಷ್ಟಮುಡಿ, ವೇಳಿ, ಅಂಜ್‌ತೆಜ್, ಕಡಿನಂಗುಳಂ, ಕೊಡಂಗಲ್ಲೂರು, ಕಾಯಂಗುಳಂ, ನಡವರ, ಶಾಸ್ತಾಂಗೋಟ್ಟ ಮೊದಲಾದ ತಟಾಕಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ವೇಂಬನಾಟ್ ಹಿನ್ನೀರು ತಟಾಕವು ಅತಿ ದೊಡ್ಡ ಶುದ್ಧ ನೀರಿನ ಜಲಾಶಯ.

ಹವಾಗುಣ : ಒಂದು ಪ್ರದೇಶದ ಕೃಷಿ ಮತ್ತು ಆರ್ಥಿಕತೆಯ ಮೇಲೆ ನೇರವಾಗಿ ಪ್ರಭಾವ ಬೀರುವ ಮುಖ್ಯ ಘಟಕ ಹವಾಗುಣ. ಇದರ ವೈಪರೀತ್ಯಗಳಿಂದ ಪ್ರಕೃತಿ ವಿಕೋಪಗಳು ಸಂಭವಿಸುತ್ತವೆ. ಕೃಷಿ ಚಟುವಟಿಕೆಗಳಿಗೆ ತೊಂದರೆಯನ್ನು ಉಂಟುಮಾಡುತ್ತವೆ. ಬತ್ತ, ಮರಗೆಣಸು, ತರಕಾರಿ ಮತ್ತು ಧಾನ್ಯಗಳು ಮಳೆಯನ್ನು ಆಶ್ರಯಿಸಿರುವ ಬೆಳೆಗಳು. ಹಾಗೆಯೇ ತೆಂಗು, ಕಂಗು, ರಬ್ಬರ್, ಚಾ, ಕಾಫಿ, ಗೇರುಬೀಜ ಮೊದಲಾದ ಬೆಳೆಗಳು ಮಳೆ, ಶೈತ್ಯ ಮತ್ತು ಉಷ್ಣಾಂಶಗಳನ್ನು ಅವಲಂಬಿಸಿ ಬೆಳೆಯುತ್ತವೆ. ಬತ್ತದ ಬೇಸಾಯದಲ್ಲಿ ಮಳೆ ಕೈಕೊಟ್ಟರೆ ಅಥವಾ ಕೊಯ್ಲಿನ ಸಂದರ್ಭದಲ್ಲಿ ಅತಿಯಾಗಿ ಮಳೆ ಬಂದರೆ ಬೆಳೆ ನಾಶವಾಗುತ್ತದೆ. ಹಾಗೆಯೇ ಇತರ ಬೆಳೆಗಳಲ್ಲಿ ಬಿಸಿಲು ಮತ್ತು ಮಂಜು ಇಳುವರಿಯನ್ನು ನಿರ್ಧರಿಸುತ್ತದೆ.

ಕೇರಳವು ಭೌಗೋಳಿಕವಾಗಿ ಉಷ್ಣವಲಯಕ್ಕೆ ಸೇರಿದ ಪ್ರದೇಶ. ಉದ್ದಕ್ಕೂ ಸಮುದ್ರದ ಸಾನ್ನಿಧ್ಯವಿರುವ ಕಾರಣ ಕೇರಳದಲ್ಲಿ ಒಣಹವೆಯ ವಾತಾವರಣ ಕಂಡುಬರುತ್ತದೆ. ಆದರೆ ಮಲೆನಾಡು ಪ್ರದೇಶದಲ್ಲಿ ಸಮಶೀತೋಷ್ಣ ಹವಾಗುಣವು ಅನುಭವಕ್ಕೆ ಬರುವುದು. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗರಿಷ್ಠ ಉಷ್ಣಾಂಶ ಅನುಭವಕ್ಕೆ ಬರುವುದು. 32^0ರಿಂದ 40^0 ಕೇರಳದ ಸರಾಸರಿ ಉಷ್ಣಾಂಶ 32^0 ಆಗಿದೆ.

ಆದರೆ ಜಾಗತಿಕ ತಾಪಮಾನದ ಕಾರಣವಾಗಿ ಇತ್ತೀಚೆಗಿನ ಕೆಲವು ವರ್ಷಗಳಲ್ಲಿ ಉಷ್ಣಾಂಶವು 40^0ರಿಂದ 42^0ವರೆಗೆ ಏರಿದೆ. ಕೇರಳದ ಪಾಲಕಕಾಡು, ಮಲಪ್ಪುರಂ ಮತ್ತು ಕೊಟ್ಟಾಯಂ ಜಿಲ್ಲೆಗಳಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾಗಿದ್ದು, ಈ ಪ್ರದೇಶಗಳಿಂದ ಬೇಸಗೆಯಲ್ಲಿ ಬಿಸಿಲಿನಿಂದ ಸುಟ್ಟಗಾಯಗಳಾದ ವರದಿಗಳು ಬಂದಿವೆ. ಕೇರಳದ ಕನಿಷ್ಠ ಉಷ್ಣಾಂಶ 19^0 ನವೆಂಬರ್, ಡಿಸೆಂಬರ್ ತಿಂಗಳಲ್ಲಿ ಅನುಭವಕ್ಕೆ ಬರುತ್ತದೆ. ಕರೆನಾಡು ಪ್ರದೇಶದಿಂದ ಮಲೆನಾಡು ಪ್ರದೇಶಕ್ಕೆ ಹೋದಂತೆ ಉಷ್ಣಾಂಶ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಏಲಕ್ಕಿ, ಚಾ, ಕಾಫಿ ಮೊದಲಾದ ತೋಟಗಾರಿಕಾ ಬೆಳೆಗಳಿಗೆ ಅನುಕೂಲವಾದ ಹವಾಗುಣವು ಕೇರಳದ ಮಲೆನಾಡು ಪ್ರದೇಶದಲ್ಲಿದೆ. ಆದುದರಿಂದ ಇಡುಕ್ಕಿ, ಪತ್ತನಂತಿಟ್ಟ, ವಯನಾಡು ಜಿಲ್ಲೆಗಳಲ್ಲಿ ಹೇರಳವಾಗಿ ಈ ಕೃಷಿಯನ್ನು ಮಾಡುತ್ತಾರೆ. ಉಷ್ಣಾಂಶದ ವ್ಯತ್ಯಾಸವು ಕೇರಳದ ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ಬೆಳೆಗಳನ್ನು ಬೆಳೆಯಲು ಅನುಕೂಲವನ್ನು ಕಲ್ಪಿಸಿದೆ.

ಕೇರಳದಲ್ಲಿ ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ದಟ್ಟ ಮಳೆಗಾಲವಾಗಿರುತ್ತದೆ. ಭಾರತದಲ್ಲಿ ನೈಋತ್ಯ ಮುಂಗಾರು ಮಳೆಯು ಕೇರಳದಿಂದ ಆರಂಭವಾಗುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಈಶಾನ್ಯ ಮುಂಗಾರು ಮಾರುತ ಕಾರಣವಾಗಿ ರಾಜ್ಯದಲ್ಲಿ ಮಳೆಯಾಗುತ್ತದೆ. ಅನಂತರ ಜನವರಿ ತಿಂಗಳಿಂದ ಆಗಾಗ ಬೇಸಗೆ ಮಳೆಯೂ ಸುರಿಯುವುದಿದೆ. ಕೇರಳದಲ್ಲಿ ವರ್ಷಂಪ್ರತಿ ಸರಾಸರಿ 300 ಸೆ.ಮೀ. ಮಳೆಯಾಗುತ್ತದೆ. ಕಾಸರಗೋಡು, ಕಣ್ಣೂರು, ಕಲ್ಲಿಕೋಟೆ ಜಿಲ್ಲೆಗಳನ್ನೊಳ ಗೊಂಡಿರುವ ಮಲಬಾರ್ ಪ್ರದೇಶದಲ್ಲಿ ಗರಿಷ್ಠ 400 ಮಿ.ಮೀ. ಮಳೆ ಬೀಳುವುದು. ಮಲೆನಾಡಿನ ತಪ್ಪಲು ಪ್ರದೇಶದಲ್ಲಿ ಹಾಗೂ ಕರೆನಾಡಿನ ತಗ್ಗಿನ ಪ್ರದೇಶಗಳಲ್ಲಿ ಗರಿಷ್ಠ ಮಳೆ ಬೀಳುವುದು.

ಕೇರಳದ ಹವಾಗುಣವನ್ನು ನಿಯಂತ್ರಿಸುವಲ್ಲಿ ಗಾಳಿಯು ಪ್ರಧಾನ ಪಾತ್ರ ವಹಿಸುತ್ತದೆ. ಕರೆನಾಡಿನಲ್ಲಿ ಬೀಸುವ ನೈಋತ್ಯ ಮಾರುತವು ಗಂಟೆಗೆ 20ರಿಂದ 30 ಕಿ.ಮೀ. ವೇಗದಲ್ಲಿ ಬೀಸುತ್ತದೆ. ಆಲಪ್ಪುಳ, ಕೊಚ್ಚಿ, ತಿರುವನಂತಪುರ ಜಿಲ್ಲೆಗಳಲ್ಲಿ ಸಮುದ್ರದ ಕಡೆಯಿಂದ ಬೀಸುವ ಗಾಳಿಗೆ ಗಂಟೆಗೆ 20 ಕಿ.ಮೀ. ವೇಗವಿದೆ. ಪಾಲಕ್ಕಾಡು, ತ್ರಿಶ್ಶೂರು ಜಿಲ್ಲೆಗಳಲ್ಲಿ ಬೀಸುವ ಗಾಳಿಗೆ ಗಂಟೆಗೆ 25 ಕಿ.ಮೀ. ವೇಗ ದಾಖಲಾಗಿದೆ. ನೈಋತ್ಯ ಮಾರುತ ಹಾಗೂ ಬಿರುಗಾಳಿಯಿಂದಾಗಿ ಕೇರಳದಲ್ಲಿ ವ್ಯಾಪಕ ಕೃಷಿನಾಶವಾಗುತ್ತದೆ. ಮೀನುಗಾರಿಕೆಗೆ ತೊಂದರೆಯಾಗುತ್ತದೆ. ಆದರೆ ಮಲೆನಾಡಿನ ಗುಡ್ಡ ಬೆಟ್ಟ ಅರಣ್ಯಗಳು ಬೀಸುವ ಗಾಳಿಯ ವೇಗವನ್ನು ನಿಯಂತ್ರಿಸಿ, ಕೇರಳದಲ್ಲಿ ಗರಿಷ್ಠ ಮಳೆಯಾಗುವಂತೆ ಮಾಡುತ್ತವೆ.

ಮಣ್ಣಿನ ಬಗೆಗಳು : ಕೇರಳ ಕೃಷಿ ವಿಶ್ವವಿದ್ಯಾಲಯದ ಹವಾಮಾನ ಅಧ್ಯಯನ ವಿಭಾಗವು ಕೇರಳದಲ್ಲಿ 20 ಕೃಷಿ ಭೌಗೋಳಿಕ ವಲಯಗಳನ್ನು ಗುರುತಿಸಿದೆ. ಭೂಮಿಯ ಸ್ವರೂಪ, ನೀರಿನ ಅಂಶ ಹಾಗೂ ಫಲವತ್ತತೆಯ ಆಧಾರದಲ್ಲಿ ಈ ವರ್ಗೀಕರಣವನ್ನು ಮಾಡಲಾಗಿದೆ.

ಕಾಡಿನ ಒಣ ಜೇಡಿಮಣ್ಣು (ಡ್ರೈಫಾರೆಸ್ಟ್ ಲೋಮ್) : ಒಣಗಿದ ಜೈವಿಕ ಫಲವತ್ತತೆ ಇರುವ ಮಣ್ಣಿನ ಪ್ರದೇಶಗಳು. ಕೇರಳದ ಚಿನ್ನಾರು ಪ್ರದೇಶದಲ್ಲಿ ಈ ಬಗೆಯ ಮಣ್ಣಿದೆ. ಈ ಮಣ್ಣಿನಲ್ಲಿ ತೆಂಗು ಮತ್ತು ಸುಗಂಧ ದ್ರವ್ಯಗಳ (ಸಂಬಾರ ಸಸ್ಯಗಳು) ಬೆಳೆಯನ್ನು ಬಿಟ್ಟು ಉಳಿದ ಎಲ್ಲವನ್ನು ಬೆಳೆಯಬಹುದು.

ಒಣ ಅರೆ ಕೆಂಪು ಜೇಡಿ (ಸೆಮಿ ಡ್ರೈ ರೆಡ್‌ಲೋಮ್) : ತೇವಾಂಶದಿಂದ ಕೂಡಿರುವ ಕೆಂಪು ಆವೆಮಣ್ಣಿನ ಪ್ರದೇಶ. ತಿರುವನಂತಪುರ ಜಿಲ್ಲೆಯ ನೆಯ್ಯಾಂಟಿಂಗರದಲ್ಲಿ ಈ ಬಗೆಯ ಮಣ್ಣು ಕಂಡುಬರುತ್ತದೆ. ಈ ಮಣ್ಣಿನಲ್ಲಿ ತೆಂಗು, ಮರಗೆಣಸು, ಬತ್ತ, ಮಾವು, ಗೇರುಬೀಜ ಸಮೃದ್ಧವಾಗಿ ಬೆಳೆಯುತ್ತವೆ.

ಅರೆಸಿನ ಜಂಬು ಮಣ್ಣು (ಸೆಮಿ ಡ್ರೈ ಲ್ಯಾಟರೈಟ್) : ಇದು ತೇವಾಂಶವಿರುವ ಕೆಂಪು ಮಣ್ಣಿನ ಪ್ರದೇಶವಾಗಿದ್ದು, ಕೊಲ್ಲಂ ಜಿಲ್ಲೆಯ ಚಿರಿಯನ್‌ಕೀಳ್, ತಿರುವನಂತಪುರ ಜಿಲ್ಲೆಯ ನೆಂಯ್ಯಾಂಟಿಗರ, ನೆಡುಮಂಗಾಡ್ ಪ್ರದೇಶಗಳಲ್ಲಿ ಕಂಡುಬರುತ್ತದೆ. ಬತ್ತ, ತೆಂಗು, ಮಾವು, ಗೇರುಬೀಜ ಕೃಷಿಗಳಿಗೆ ಯೋಗ್ಯ ಮಣ್ಣು.

ಅರೆ ಒಣ ಮೆಕ್ಕಲು ಮಣ್ಣು (ಸೆಮಿ ಡ್ರೈ ಅಲ್ಯೂವಿಯಮ್): ಇದು ನದೀತೀರಗಳಲ್ಲಿ ಕಂಡುಬರುವ ಫಲವತ್ತಾದ ಮೆಕ್ಕಲುಮಣ್ಣು. ಕೊಲ್ಲಂ, ಚಿರಿಯನ್‌ಕೀಳ್, ತಿರುವನಂತಪುರ, ನೆಯ್ಯಾಂಟಿಂಗರ, ಒಟ್ಟಪಾಲಂ, ತಲಪ್ಪಿಳ್ಳಿ, ಪಾಲಕ್ಕಾಡು, ಆಲತ್ತೂರು ತಾಲೂಕುಗಳ ನದೀತೀರಗಳಲ್ಲಿ ಈ ಬಗೆಯ ಮಣ್ಣು ಕಂಡುಬರುತ್ತದೆ. ಬತ್ತ, ತೆಂಗು, ಮರಗೆಣಸು, ಮಾವು, ಗೇರು ಕೃಷಿಗಳಿಗೆ ಯೋಗ್ಯವಾದುದು.

ಅರೆ ಒಣ ಕಪ್ಪು ಮಣ್ಣು (ಸೆಮಿ ಡ್ರೈ ಬ್ಲ್ಯಾಕ್ ಸಾಯಿಲ್): ಸ್ವಲ್ಪ ತೇವಾಂಶದಿಂದ ಕೂಡಿರುವ ಫಲವತ್ತಾದ ಕಪ್ಪು ಮಣ್ಣು. ಪಾಲಕ್ಕಾಡು ಜಿಲ್ಲೆಯ ಚಿತ್ತೂರು ತಾಲೂಕಿನಲ್ಲಿ ಕಂಡುಬರುತ್ತದೆ. ಬತ್ತ, ಹತ್ತಿ, ತೆಂಗು ಮೊದಲಾದ ಬೆಳೆಗಳಿಗೆ ಯೋಗ್ಯವಾದ ಮಣ್ಣು ಇದು.

ಅರೆ ಒಣ ಕಾಡಿನ ಜೇಡಿಮಣ್ಣು (ಸೆಮಿ ಡ್ರೈ ಫಾರೆಸ್ಟ್‌ಲೋಮ್) : ತೇವಾಂಶದಿಂದ ಕೂಡಿದ ಜೈವಿಕ ಮಣ್ಣು. ಕುಮಳಿ ಹಾಗೂ ಪೀರುಮೇಡು ತಾಲೂಕಿನ ಕೆಲವು ಭಾಗಗಳಲ್ಲಿ ಈ ಬಗೆಯ ಮಣ್ಣು ಕಂಡುಬರುತ್ತದೆ. ಮರಗೆಣಸು, ಚಾ, ಕಾಫಿ, ರಬ್ಬರ್ ಮೊದಲಾದ ಬೆಳೆಗಳಿಗೆ ಯೋಗ್ಯವಾದ ಮಣ್ಣು.

ತೇವ ಕೆಂಪುಜೇಡಿ (ಸಬ್ ಹ್ಯುಮಿಡ್‌ರೆಡ್ ಲೋಮ್) : ತೇವಾಂಶದಿಂದ ಕೂಡಿದ ಕೆಂಪುಮಣ್ಣು ಕಾಸರಗೋಡು, ಹೊಸದುರ್ಗ, ತಳಿಪರಂಬ ತಾಲೂಕುಗಳ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ. ಬತ್ತ, ತೆಂಗು, ಅಡಕೆ, ಗೇರುಬೀಜ, ರಬ್ಬರ್, ಕರಿಮೆಣಸು ಮೊದಲಾದ ಬೆಳೆಗಳಿಗೆ ಯೋಗ್ಯವಾಗಿದೆ.

ತೇವಜಂಬು ಮಣ್ಣು (ಸಬ್ ಹ್ಯುಮಿಡ್ ಲ್ಯಾಟರೈಟ್) : ತೇವಾಂಶದಿಂದ ಕೂಡಿದ ಕೆಂಪುಕಲ್ಲಿನ ಹುಡಿಯಿಂದ ಮಿಶ್ರಿತವಾದ ಈ ಬಗೆಯ ಮಣ್ಣು ಕಾಸರಗೋಡು ಕಣ್ಣೂರು, ತಿರೂರು, ಚಾವಕ್ಕಾಡು, ಪರವೂರು, ಹೊಸದುರ್ಗ, ತಳಿಪರಂಬ, ತಳಶ್ಶೇರಿ, ವಡಗರ, ತಲಪ್ಪಿಳ್ಳಿ, ತ್ರಿಶ್ಶೂರು, ಮುಕುಂದಪುರ, ಆಲುವ, ಕಣಯನ್ನೂರು, ಆಲತ್ತೂರು, ಚಿತ್ತೂರ್, ಏರನಾಡ್, ಮಣ್ಣಾರ್‌ಕಾಡ್, ಪಾಲಕಾಡು, ಕುನ್ನತ್ತೂರ್, ಪತ್ತನಾಪುರಂ, ನೆಯ್ಯಾಂಟಿಂಗರ, ನೆಡುಮಂಗಾಡು ತಾಲೂಕುಗಳಲ್ಲಿ ಕಂಡುಬರುತ್ತದೆ. ಬತ್ತ, ತೆಂಗು, ರಬ್ಬರ್, ಗೇರು, ಕರಿಮೆಣಸು, ಅಡಕೆ, ಮರಗೆಣಸು, ಮಾವು ಮೊದಲಾದ ಬೆಳೆಗಳಿಗೆ ಯೋಗ್ಯವಾದ ಮಣ್ಣು.

ತೇವ ಮೆಕ್ಕಲು ಮಣ್ಣು (ಸಬ್ ಹ್ಯುಯಿಡ್ ಅಲ್ಲುವಿಯಮ್) : ತೇವಾಂಶದಿಂದ ಕೂಡಿದ ಮೆಕ್ಕಲುಮಣ್ಣು. ಮೇಲೆ ಸೂಚಿಸಿದ ತಾಲೂಕುಗಳ ಕರಾವಳಿ ಪ್ರದೇಶ ಹಾಗೂ ನದೀಮುಖಜ ಭೂಮಿಗಳಲ್ಲಿ ಕಂಡುಬರುವ ಇನ್ನೊಂದು ಬಗೆಯ ಮಣ್ಣು ಇದು. ಬತ್ತ, ತೆಂಗು, ಅಡಕೆ, ಮಾವು, ಗೇರು, ರಬ್ಬರ್, ಕರಿಮೆಣಸು, ಮರಗೆಣಸು ಮೊದಲಾದ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತವೆ.

ತೇವ ಕ್ಷಾರಭರಿತ ಮಣ್ಣು (ಸಬ್ ಹ್ಯುಮಿಡ್ ಸಲೈನ್) : ಪರವೂರು, ಕಣಯತ್ತೂರ್, ಕೊಚ್ಚಿ ತಾಲೂಕುಗಳ ತೀರ ಪ್ರದೇಶಗಳಲ್ಲಿ ಪೊಕ್ಕಾಳಿ ಕೃಷಿ ಮಾಡುವುದಕ್ಕೆ ಯೋಗ್ಯವಾದ ಮಣ್ಣು ಇದಾಗಿದೆ. ಬತ್ತ, ತೆಂಗು ಮೊದಲಾದ ಬೆಳೆಗಳು ಈ ಮಣ್ಣಿನಲ್ಲಿ ಧಾರಾಳವಾಗಿ ಬೆಳೆಯುತ್ತವೆ.

ತೇವ ಕಾಡು ಜೇಡಿಮಣ್ಣು (ಸಬ್ ಹ್ಯುಮಿಡ್ ಫಾರೆಸ್ಟ್ ಲೋಮ್): ಏರನಾಡ್, ಮಣ್ಣಾರ್‌ಕಾಡ್, ದೇವೀಕುಳಂ, ಪತ್ತನಾಪುರಂ ತಾಲೂಕುಗಳ ಕೆಲವು ಕಡೆಗಳಲ್ಲಿ ಕಂಡುಬರುವ ತೇವಾಂಶದಿಂದ ಕೂಡಿರುವ ಜೈವಿಕ ಮಣ್ಣು. ಕರಿಮೆಣಸು, ಚಾ, ಕಾಫಿ, ಮರಗೆಣಸು, ಏಲಕ್ಕಿ, ಬತ್ತ ಮೊದಲಾದ ಬೆಳೆಗಳನ್ನು ಬೆಳೆಯಲು ಯೋಗ್ಯವಾಗಿದೆ.

ತೇವ ಜಂಬು ಮಣ್ಣು (ಹ್ಯುಮಿಡ್ ಅಲ್ಲುವಿಯುವ್) : ಕಾಸರಗೋಡು, ತಳಿಪರಂಬ, ತಲಶ್ಶೇರಿ, ಕೊಯಿಲಾಂಡಿ, ಕಲ್ಲಿಕೋಟೆ, ವಡಗರ, ಕುನ್ನತ್ತುನಾಡ್, ಮೀನಚ್ಚಿಲ್, ಕಾಞಿರಪಳ್ಳಿ, ಪತ್ತನಂತಿಟ್ಟ, ಚೆಂಗನ್ನೂರ್, ಮಾವೇಲಿಕರ, ನೆಡುಮಂಗಾಡ್ ತಾಲೂಕುಗಳಲ್ಲಿ ಈ ಬಗೆಯ ಮಣ್ಣು ಕಂಡುಬರುವುದು. ತರಕಾರಿಗಳು, ಅನಾನಸು, ಮೇವಿನ ಹುಲ್ಲು, ಗೇರು ಕೃಷಿಗಳಿಗೆ ಯೋಗ್ಯವಾದ ಮಣ್ಣು ಇದು.

ತೇವ ಮೆಕ್ಕಲು ಮಣ್ಣು (ಹ್ಯುಮಿಡ್ ಅಲ್ಲುವಿಯಮ್) : ಮೇಲೆ ಸೂಚಿಸಿದ ತಾಲೂಕುಗಳ ನದೀತೀರಗಳಲ್ಲಿ, ಚೇರ್ತಲ, ಅಂಬಲಪುಳ, ಕರುನಾಗಪಳ್ಳಿ ತಾಲೂಕುಗಳ ತೀರಪ್ರದೇಶಗಳಲ್ಲಿ, ಚೆಂಗನ್ನೂರು, ಮಾವೇಲಿಕರ ತಾಲೂಕುಗಳ ಪಶ್ಚಿಮ ಭಾಗದಲ್ಲಿ ಕಂಡುಬರುವ ಈ ಮಣ್ಣು, ಬತ್ತ, ತೆಂಗು, ಕೊಕ್ಕೋ, ಮರಗೆಣಸು, ಅಡಕೆ, ಬಾಳೆ, ಮಾವು ಬೆಳೆಗಳಿಗೆ ಯೋಗ್ಯವಾಗಿದೆ.

ತೇವ ಬೂದು ಬಣ್ಣದ ಒಣಟ್ಟುಕರ (ಹ್ಯುಮಿಡ್ ಗ್ರೇಯಿಷ್ ಒಣಟ್ಟುಕರ): ಒನಾಟ್ಟುಕರ, ಮಾವೇಲಿಕರ, ಕರುನಾಗಪಳ್ಳಿ, ಕಾರ್ತಿಕಪಳ್ಳಿ ತಾಲೂಕುಗಳ ಕೆಲವು ಕಡೆಗಳಲ್ಲಿ ಕಂಡುಬರುವ ಈ ಮಣ್ಣು ತೆಂಗು, ಎಳ್ಳು ಮರಗೆಣಸು ಕೃಷಿಗಳಿಗೆ ಯೋಗ್ಯವಾಗಿದೆ.

ತೇವ ಕ್ಷಾರ ಮಣ್ಣು (ಹ್ಯುಮಿಡ್ ಸಲೈನ್) : ವೇಂಬನಾಡ್ ತಟಾಕದ ಸುತ್ತಲಿನ ಪ್ರದೇಶಗಳಲ್ಲಿ ಕಂಡುಬರುವ ಈ ಮಣ್ಣಿನಲ್ಲಿ ತೆಂಗು ಮತ್ತು ಬತ್ತ ಧಾರಾಳವಾಗಿ ಬೆಳೆಯುತ್ತದೆ.

ತೇವ ಕಾಡು ಜೇಡಿಮಣ್ಣು (ಹ್ಯುಯಿಡ್ ಫಾರೆಸ್ಟ್ ಲೋಮ್): ಏರನಾಡ್, ವಯನಾಡಿನ ಉತ್ತರ ಭಾಗ, ಕಾಸರಗೋಡು, ಹೊಸದುರ್ಗ, ತಳಿಪರಂಬ ತಾಲೂಕುಗಳ ಕೆಲವು ಭಾಗಗಳಲ್ಲಿ ಹಾಗೂ ತಲಶ್ಶೇರಿ, ಪತ್ತನಂತಿಟ್ಟ, ಪತ್ತನಾಂಪುರ, ನೆಯ್ಯಾಂಟಿಗರ, ಪೀರುಮೇಡ್, ದೇವೀಕುಳಂ ತಾಲೂಕುಗಳಲ್ಲಿ ಕಂಡುಬರುವ ಈ ಬಗೆಯ ಮಣ್ಣಿನಲ್ಲಿ ಚಾ, ಕಾಫಿ, ಕರಿಮೆಣಸು, ಏಲಕ್ಕಿ, ಶುಂಠಿ, ಅರಿಸಿನ, ಬತ್ತ, ಮಾವು, ಹಲಸು ಮೊದಲಾದ ಕೃಷಿಗಳನ್ನು ಹೇರಳವಾಗಿ ಮಾಡುತ್ತಾರೆ.

ಪೂರ್ಣ ತೇವ ಜಂಬುಮಣ್ಣು : ವಯನಾಡಿನ ದಕ್ಷಿಣ ಭಾಗ. ಕೊಯಿಲಾಂಡಿ, ಏರನಾಡು, ಕುನ್ನತ್ತುನಾಡು, ದೇವೀಕುಳಂ, ತೊಡುಪುಳ, ಕೋದಮಂಗಲಂ, ಮೀನಚ್ಚಿಲ್, ಕಾಞಿರಪಳ್ಳಿ ತಾಲೂಕುಗಳಲ್ಲಿ ಕಂಡು ಬರುವ ಈ ಮಣ್ಣಿನಲ್ಲಿ ಬತ್ತ, ತೆಂಗು, ರಬ್ಬರ್, ಮರಗೆಣಸು, ಅಡಿಕೆ, ಕರಿಮೆಣಸು, ಕೊಕ್ಕೋ, ಏಲಕ್ಕಿ ಮೊದಲಾದ ಬೆಳೆಗಳು ಬೆಳೆಯುತ್ತವೆ.

ಪೂರ್ಣ ಕಾಡು ಜೇಡಿಮಣ್ಣು (ಪರ್ ಹ್ಯುಮಿಡ್ ಫಾರೆಸ್ಟ್‌ಲೋಮ್) : ಬತ್ತ, ತೆಂಗು, ಚಾ, ಕಾಫಿ, ಏಲಕ್ಕಿ ಮೊದಲಾದ ಕೃಷಿಗೆ ಯೋಗ್ಯವಾದ ಈ ಮಣ್ಣು ವೈತ್ತಿರಿ, ದೇವಿಕುಳಂ, ಪೀರುಮೇಡ್, ತೊಡುಪುಳ ಪ್ರದೇಶಗಳಲ್ಲಿ ಕಂಡಬರುವುದು.

ತರಿ ಜಂಬುಮಣ್ಣು (ವೆಟ್ ಲ್ಯಾಟರೈಟ್) : ವಯನಾಡಿನ ದಕ್ಷಿಣ, ಏರನಾಡು, ಮುಕುಂದಪುರಂ, ಪತ್ತನಂತಿಟ್ಟ ತಾಲೂಕುಗಳಲ್ಲಿ ಕಂಡು ಬರುವ ಈ ಮಣ್ಣಿನಲ್ಲಿ ಕಾಫಿ, ಚಾ, ಏಲಕ್ಕಿ, ಕರಿಮೆಣಸು, ರಬ್ಬರ್, ಶುಂಠಿ ಕೃಷಿಗಳನ್ನು ಮಾಡುವರು.

ತರಿ ಕಾಡು ಜೇಡಿಮಣ್ಣು (ವೆಟ್ ಫಾರೆಸ್ಟ್ ಲೋವ್) : ನೇರ್ಯಮಂಗಲಂ, ದೇವೀಕುಳಂ, ಕಾಞಿರಪಳ್ಳಿ, ತೊಡಪುಳ, ಮೀನಚ್ಚಿಲ್, ಪೀರುಮೇಡ್ ತಾಲೂಕುಗಳಲ್ಲಿ ಕಂಡು ಬರುವ ಈ ಬಗೆಯ ಮಣ್ಣಿನಲ್ಲಿ ಬತ್ತ, ಮರಗೆಣಸು, ಕರಿಮೆಣಸು, ಕಾಫಿ, ಚಾ, ಏಲಕ್ಕಿ ಬೆಳೆಗಳು ಧಾರಾಳವಾಗಿ ಬೆಳೆಯುತ್ತವೆ.

ಮಣ್ಣಿನ ಫಲವತ್ತತೆ ಮತ್ತು ಹವಾಗುಣವು ಕೃಷಿಯ ಮೇಲೆ ಪ್ರಭಾವ ಬೀರುವ ಎರಡು ಮುಖ್ಯ ಘಟಕಗಳಾಗಿವೆ. ವಾತಾವರಣದ ಉಷ್ಣಾಂಶ, ಮಣ್ಣಿನ ತೇವಾಂಶ, ಗಾಳಿಯ ಗತಿ, ಮಳೆಯ ತೀವ್ರತೆ, ಬಿಸಿಲು, ಶೈತ್ಯ ಮತ್ತು ಮೋಡಗಳ ಹಿನ್ನೆಲೆ ವಿವಿಧ ಬೆಳೆಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಕೇರಳವು ಉಷ್ಣವಲಯದಲ್ಲಿದ್ದು, ಮಳೆ ಮತ್ತು ಬಿಸಿಲು ಕೃಷಿಯ ನಿಯಂತ್ರಕ ಶಕ್ತಿಗಳಾಗಿವೆ. ಮಳೆ ಹಾಗೂ ಬಿಸಿಲಿನ ಪ್ರಮಾಣವನ್ನುಅನುಸರಿಸಿ, ಉತ್ಪಾದನೆಯಲ್ಲಿ ಏರಿಳಿತಗಳು ಉಂಟಾಗುತ್ತವೆ. ಕೇರಳದಲ್ಲಿ ವಾರ್ಷಿಕ ಸರಾಸರಿ ನೂರರಿಂದ ನೂರಿಪ್ಪತ್ತು ದಿವಸಗಳ ಮಳೆ ಲಭ್ಯವಾಗುತ್ತದೆ. ಪ್ರಾಚೀನ ಕಾಲದಲ್ಲಿಯೇ ಮಳೆಯನ್ನು ಆಶ್ರಯಿಸಿ ಕೇರಳದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತಿದ್ದುವು. ಬತ್ತ ಮತ್ತು ತೆಂಗು ಕೇರಳದ ಪ್ರಧಾನ ಬೆಳೆಗಳು. ಬತ್ತವು ಮಳೆಯನ್ನು ಆಶ್ರಯಿಸಿ ಬೆಳೆಯುವ ಬೆಳೆಯಾಗಿದೆ. ಮಳೆಯ ವಿರಾಮ ಕಾಲದಲ್ಲಿ ಬತ್ತದ ಕೊಯ್ಲು ನಡೆಯುತ್ತಿತ್ತು. ಮುಂಗಾರು ಮಳೆಯು ಕೊನೆಯಾಗುವ ಸೆಪ್ಟೆಂಬರ್ - ಅಕ್ಟೋಬರ್ ತಿಂಗಳಲ್ಲಿ ಸಾಮಾನ್ಯವಾಗಿ ಮಳೆಯ ಬಿರುಸು ಕಡಿಮೆಯಾಗುತ್ತದೆ. ಈ ಸಮಯದಲ್ಲಿ ಬತ್ತದ ಮೊದಲ ಬೆಳೆಯು ಕಟಾವಿಗೆ ಸಿದ್ಧವಾಗಿರುತ್ತಿತ್ತು. ಮಳೆಯ ವಿರಾಮದ ಈ ಸಂದರ್ಭದಲ್ಲಿಯೇ ಕೇರಳದಲ್ಲಿ ಅನೇಕ ಹಬ್ಬಗಳು, ಕೃಷಿ ಸಂಬಂಧಿ ಆಚರಣೆಗಳು ನಡೆಯುತ್ತಿದ್ದುವು.

ಇಳಿಜಾರು ಭೂಪ್ರಕೃತಿಯ ಕೇರಳದ ಬಯಲು ಪ್ರದೇಶಗಳು ಹಿಂದೆ ಮೆಕ್ಕಲು ಮಣ್ಣಿನಿಂದ ಸಮೃದ್ಧವಾಗಿದ್ದುವು. ಇದಕ್ಕೆ ಬೆಟ್ಟಗುಡ್ಡಗಳಿಂದ ಇಳಿದು ಬರುವ ಹೊಳೆ ನದಿಗಳು ಹೊತ್ತು ತರುವ ಮೆಕ್ಕಲುಮಣ್ಣು ಕಾರಣ. ಕಾಡುಗಳಲ್ಲಿ ಒಣಗಿದೆಲೆಗಳ ಸಾರ, ಕಾಡ್ಗಿಚ್ಚಿನ ಬೂದಿ ಇವುಗಳಿಂದ ಪುಷ್ಟವಾದ ಮಣ್ಣು ಮಳೆಯಲ್ಲಿ ಕರಗಿ ಹೊಳೆನದಿಗಳನ್ನು ಸೇರಿ

ಬಯಲುಪ್ರದೇಶಗಳನ್ನು ತಲುಪುತ್ತಿತ್ತು. ಹೀಗಾಗಿ ನದೀತಟಗಳಲ್ಲಿ ತಂಗುವ ಮೆಕ್ಕಲುಮಣ್ಣಿನಲ್ಲಿ ಜೈವಿಕ ಗೊಬ್ಬರದ ಸತ್ವ ಅಡಗಿತ್ತು. ವಯನಾಡು, ಇಡುಕ್ಕಿ ಜಿಲ್ಲೆಗಳ ನದಿಗಳ ದಡದಲ್ಲಿರುವ ಗದ್ದೆಬಯಲುಗಳಲ್ಲಿ ಜೈವಿಕ ಗೊಬ್ಬರದ ಸಾರ ತುಂಬಿಕೊಂಡಿತ್ತು. ಮಣ್ಣಿನ ಕುರಿತು ಆಳವಾದ ಅರಿವು ಇದ್ದ ರೈತರು ಮಣ್ಣಿನ ಗುಣಕ್ಕೆ ಹೊಂದಿಕೊಂಡು ವಿವಿಧ ಕೃಷಿಗಳನ್ನು ಮಾಡುತ್ತಿದ್ದರು. ಫಲವತ್ತಾದ ಇಂತಹ ಮಣ್ಣಿನಲ್ಲಿ ಸಹಜ ಕೃಷಿಯನ್ನು ಸಮೃದ್ಧವಾಗಿ ಮಾಡುತ್ತಿದ್ದರು.

ಆಧುನಿಕ ಕಾಲದಲ್ಲಿ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಲಾಗಿದೆ. ಬೆಟ್ಟಗುಡ್ಡಗಳಿಂದ ಹರಿದು ಬರುವ ನೀರು ಬಯಲು ಪ್ರದೇಶಗಳನ್ನು ನೇರವಾಗಿ ತಲುಪುತ್ತಿಲ್ಲ. ಇದರಿಂದಾಗಿ ಮೆಕ್ಕಲುಮಣ್ಣು ಬಯಲು ಪ್ರದೇಶಗಳಲ್ಲಿ ಸಂಗ್ರಹವಾಗುತ್ತಿಲ್ಲ. ಗದ್ದೆಬಯಲುಗಳ ಫಲವತ್ತತೆ ಕ್ರಮೇಣ ಕಡಿಮೆಯಾಗುತ್ತಿದೆ. ಸಮೃದ್ಧ ಬೆಳೆಯನ್ನು ತೆಗೆಯಲು ರೈತರು ಕೃತಕ ಗೊಬ್ಬರಗಳ ಮೊರೆ ಹೋಗಿದ್ದಾರೆ. ಸಹಜ ಕೃಷಿ ಮರೆಯಾಗಿದೆ. ಮಣ್ಣಿನ ಸಹಜಗುಣ ಮರೆಯಾಗುತ್ತಿದೆ. ಗುಡ್ಡಬೆಟ್ಟಗಳಿಂದ ಹರಿದು ಬರುತ್ತಿದ್ದ ಮಣ್ಣಿನಲ್ಲಿ ಎರೆಹುಳಗಳಿರುತ್ತಿದ್ದುವು. ಇವು ಗದ್ದೆಬಯಲುಗಳ ಫಲವತ್ತತೆಯನ್ನು ಕಾಪಾಡುತ್ತಿದ್ದವು. ಆದರೆ ರಾಸಾಯನಿಕ ಗೊಬ್ಬರಗಳ ಬಳಕೆಯು ಎರೆಹುಳಗಳಂತಹ ಜೈವಿಕ ಪ್ರಾಣಿಗಳ ನಾಶಕ್ಕೆ ಕಾರಣವಾಗಿದೆ. ಇದರಿಂದ ಕೃಷಿ ಭೂಮಿಯ ಜೈವಿಕ ಸಮತೋಲನ ಸ್ಥಿತಿ ನಾಶವಾಗಿದೆ.

ಕೇರಳದ ಕೃಷಿಯ ವಿಶೇಷ ವಲಯಗಳು : ಕೇರಳದ ಕೃಷಿಗಳಿಗೆ ಸಂಬಂಧಪಟ್ಟಂತೆ ವಿಶೇಷವಾದ ಕೃಷಿ ವಲಯಗಳನ್ನು ಗುರುತಿಸಲಾಗಿದೆ. ಬತ್ತ, ತೆಂಗು, ಹಣ್ಣು ಹಂಪಲುಗಳನ್ನು ವಿಶೇಷವಾಗಿ ಬೆಳೆಯುವ ಪ್ರದೇಶಗಳನ್ನು ಪ್ರತ್ಯೇಕ ಘಟಕಗಳಾಗಿ ಕೃಷಿ ವಿಜ್ಞಾನಿಗಳು ಕಂಡುಕೊಂಡಿದ್ದಾರೆ.

ಕುಟ್ಟನಾಡು : ಬತ್ತದ ಬೆಳೆಗೆ ಆಲಪ್ಪುಳ ಜಿಲ್ಲೆಯ ಕುಟ್ಟನಾಡು ಪ್ರಸಿದ್ಧವಾಗಿದೆ. ಆದುದರಿಂದಲೇ ಕುಟ್ಟನಾಡು ಪ್ರದೇಶವನ್ನು 'ಕೇರಳದ ಬತ್ತದ ಕಣಜ' ಎಂದು ಕರೆಯಲಾಗಿದೆ. ಆಲಪ್ಪುಳ ಜಿಲ್ಲೆಯ ವೇಂಬನಾಟ್ ತಟಾಕದ ಸುತ್ತಲಿನ ಎಕರೆಗಟ್ಟಲೆ ವಿಸ್ತಾರವಾಗಿ ಹಬ್ಬಿರುವ ಬತ್ತದ ಗದ್ದೆಗಳಲ್ಲಿ ವ್ಯಾಪಕ ಕೃಷಿಯನ್ನು ಮಾಡಲಾಗುತ್ತದೆ. ಆಲಪ್ಪುಳ ಜಿಲ್ಲೆಯ ಮೀನಚ್ಚಿಲ್, ಪಂಪಾ, ಮಣಿಮಲ, ಅಚ್ಚನ್ ಕೋವಿಲ್ ಮೊದಲಾದ ನದಿಗಳಿಂದ ಹರಿದು ಬಂದ ನೀರು ವೇಂಬನಾಟ್ ತಟಾಕವನ್ನು ಸಮೃದ್ಧಗೊಳಿಸಿದೆ. ಈ ನದಿಗಳಿಂದ ಹರಿದು ಬಂದಿರುವ ಮೆಕ್ಕಲುಮಣ್ಣು ಫಲವತ್ತಾಗಿದ್ದು, ಕುಟ್ಟನಾಡು ಪ್ರದೇಶದಲ್ಲಿ ವಿಸ್ತಾರವಾಗಿ ಹರಡಿಕೊಂಡಿದೆ. ಸಮುದ್ರ ಮಟ್ಟಕ್ಕಿಂತಲೂ ಅರ್ಧ ಅಡಿಯಷ್ಟು ತಗ್ಗಿನ ಪ್ರದೇಶ ಕುಟ್ಟನಾಡು. ಜಲಾಶಯ, ನದಿ, ಹೊಳೆಗಳಿಂದ ಸುಲಭವಾಗಿ ನೀರಾವರಿ ವ್ಯವಸ್ಥೆಯನ್ನುಮಾಡಬಹುದು.

ಮಹಾಭಾರತದಲ್ಲಿ ಉಲ್ಲೇಖಗೊಂಡಿರುವ ಖಾಂಡವವನವೇ ಕುಟ್ಟನಾಡು ಎಂಬುದು ಪ್ರತೀತಿ. ಕೆಲವು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಅಗೆಯುವಾಗ ಉರಿದ ಮರಗಳ ಅವಶಿಷ್ಟಗಳು ದೊರಕಿದ್ದುವಂತೆ. ಹಿಂದೆ ಈ ಪ್ರದೇಶಕ್ಕೆ ಚೂಟನಾಡು ಎಂದು ಹೆಸರಾಗಿತ್ತೆಂದೂ, ಅದುವೇ ಅನಂತರ ಕುಟ್ಟನಾಡು ಎಂದು ಜನರ ಬಾಯಲ್ಲಿ ಬದಲಾಗಿರಬೇಕೆಂದೂ ಜನರು ಹೇಳುತ್ತಾರೆ. ತಮಿಳಿನ ಪ್ರಸಿದ್ಧ ಭಕ್ತಕವಿಯಾದ ನಮ್ಮಾಳ್ವಾರಂ ರಚಿಸಿದ 'ತಿರುವಾಯ್‌ಮೊಳಿ' ಎಂಬ ಕೃತಿಯಲ್ಲಿ ಕುಟ್ಟನಾಡಿನ ಉಲ್ಲೇಖವಿದೆ. ಹೀಗೆ ಕುಟ್ಟನಾಡು ಪ್ರಾಚೀನ ಕಾಲದಿಂದಲೇ ಬೇರೆ ಬೇರೆ ಕಾರಣಗಳಿಗೆ ಪ್ರಸಿದ್ಧವಾದ ಪ್ರದೇಶವಾಗಿತ್ತು ಎಂದು ತಿಳಿಯಬಹುದು.

ಸಮುದ್ರಮಟ್ಟಕ್ಕಿಂತಲೂ ತಗ್ಗಿನ ಪ್ರದೇಶವಾಗಿರುವ ಕಾರಣ ಕುಟ್ಟನಾಡು ಪ್ರದೇಶದ ನದಿಗಳಿಗೂ, ವೇಂಬನಾಟ್ ತಟಾಕಕ್ಕೂ ಸಮುದ್ರದ ಉಪ್ಪುನೀರಿನ ಹಾವಳಿಯಾಗುತ್ತದೆ. ಸಮುದ್ರದ ಭರತ ಇಳಿತಗಳಿಗೆ ಅನುಸರಿಸಿ ಉಪ್ಪು ನೀರು ಬತ್ತದ ಗದ್ದೆಗಳಿಗೆ ನುಗ್ಗಿ ಕೃಷಿ ನಾಶವಾಗುವುದು ಸಾಮಾನ್ಯ ಸಂಗತಿಯಾಗಿತ್ತು. 1950ರಲ್ಲಿ ಸರಕಾರವು ವಿಶೇಷ ಯೋಜನೆಯ ಮೂಲಕ ತಣ್ಣೀರ್‌ಮೂಕಂ ಎಂಬಲ್ಲಿ ತಡಿಗೋಡೆಯನ್ನು ನಿರ್ಮಿಸಿ, ಈ ಸಮಸ್ಯೆಗೆ ಪರಿಹಾರ ಒದಗಿಸಿತು. ಆದರೆ ಸಮುದ್ರ ಮಟ್ಟಕ್ಕಿಂತ ತಗ್ಗಿನಲ್ಲಿರುವ ಕುಟ್ಟನಾಡು ಪ್ರದೇಶದಲ್ಲಿ ಸಾಮಾನ್ಯ ಮಳೆಯಾದರೂ ಜಲಾವೃತವಾಗುತ್ತದೆ. ಮಳೆ ಸ್ವಲ್ಪ ಹೆಚ್ಚಾದರೆ ನದಿಗಳೆಲ್ಲ ತುಂಬಿ ಹರಿದು ಗದ್ದೆ ಬಯಲುಗಳಿಗೆ ನುಗ್ಗಿ ಕೆಸರಿನಿಂದ ತುಂಬಿ ಹೋಗುತ್ತವೆ. ತೋಟಪಳ್ಳಿ ಎಂಬ ಸ್ಥಳದಲ್ಲಿ ಕಾಲುವೆಯನ್ನು ನಿರ್ಮಿಸಿ ನೆರೆಯನ್ನು ತಡೆಗಟ್ಟುವ ಪ್ರಯತ್ನವನ್ನು ಮಾಡಲಾದರೂ, ಸಮಸ್ಯೆಗೆ ಶಾಶ್ವತ ಪರಿಹಾರವಾಗಿಲ್ಲ. ಕುಟ್ಟನಾಡಿನ ಬಯಲು ಪ್ರದೇಶದಲ್ಲಿ ಜನವಸತಿ ಕೇಂದ್ರಗಳು ಹೆಚ್ಚಾಗುತ್ತಿದ್ದು, ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ. ಜನವಸತಿಯಿಂದಾಗಿ ಗದ್ದೆಬಯಲುಗಳ ವಿಸ್ತಾರ ಕಡಿಮೆಯಾಗುತ್ತಿದೆ. ನದಿ, ತಟಾಕಗಳ ನೀರು ಮಲಿನವಾಗುತ್ತಿದೆ. ಹೀಗೆ ಅನೇಕ ಪರಿಸರ ಸಂಬಂಧಿ ಸಮಸ್ಯೆಗಳಿಂದ ಕೇರಳದ ಬತ್ತದ ಕಣಜ ನಲುಗುತ್ತಿದೆ.

ಪಾಲಕಾಡು : ಕೇರಳದ ಕೃಷಿ ಸಾಧನೆಯಲ್ಲಿ ಕುಟ್ಟನಾಡಿನ ಹಾಗೆಯೇ ಪಾಲಕಾಡಿಗೂ ವಿಶೇಷ ಸ್ಥಾನವಿದೆ. ಪಾಲಕಾಡು ಕೇರಳದ ಕಣಜ ಎಂದು ಕರೆಯಲ್ಪಟ್ಟಿದೆ. ಕೇರಳದ ಪುನರುತ್ಥಾನದಲ್ಲಿ ಪಾಲಕಾಡು ಜಿಲ್ಲೆಗೆ ಮಹತ್ವದ ಸ್ಥಾನವಿದೆ. ತಮಿಳುನಾಡಿನೊಂದಿಗೆ ಗಡಿಯನ್ನುಹಂಚಿಕೊಳ್ಳುವ ಈ ಜಿಲ್ಲೆಯು ಬ್ರಿಟಿಷರ ಕಾಲದಲ್ಲಿ ಮಲಬಾರ್ ಪ್ರದೇಶಕ್ಕೆ ಸೇರಿತ್ತು. ಸ್ವಾತಂತ್ರ್ಯಾನಂತರ ಇದು ಮದ್ರಾಸ್ ಸಂಸ್ಥಾನದ ಭಾಗವಾಯಿತು. ಪ್ರಾಂತ್ಯ ಪುನರ್‌ವಿಂಗಡಣೆಯ ಸಂದರ್ಭದಲ್ಲಿ ಪಾಲಕಾಡು ಕೇರಳದ ಭಾಗವಾಯಿತು. ಇಂದಿಗೂ ಈ ಪ್ರದೇಶದಲ್ಲಿ ತಮಿಳು ಭಾಷೆ ಮತ್ತು ಸಂಸ್ಕೃತಿಯ ದಟ್ಟ ಪ್ರಭಾವವಿದೆ.

ಪಾಲಕಾಡು ಜಿಲ್ಲೆಯೂ ಕೂಡ ಕೇರಳದ ಬತ್ತದ ಕೃಷಿಗೆ ಹೆಸರಾಗಿದೆ. ಇಲ್ಲಿಯ ಪಟ್ಟಾಂಬಿಯಲ್ಲಿ ಬತ್ತದ ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಇದು ಭಾರತದ ಪ್ರಧಾನ ಬತ್ತದ ಸಂಶೋಧನ ಕೇಂದ್ರಗಳಲ್ಲಿ ಒಂದಾಗಿದೆ. ಈ ಕೇಂದ್ರದಲ್ಲಿ ಆವಿಷ್ಕರಿಸಿದ ಬತ್ತದ ತಳಿಗಳಿಗೆ ಜಾಗತಿಕ ಮಟ್ಟದಲ್ಲಿ ವಿಶೇಷ ಸ್ಥಾನವಿದೆ. ಬತ್ತದ ಕೃಷಿ ಮಾತ್ರವಲ್ಲದೆ ತೆಂಗು, ರಬ್ಬರ್, ಕಬ್ಬು, ಚಾ, ಕಾಫಿ, ಏಲಕ್ಕಿ, ಅರಿಸಿನ ಮೊದಲಾದ ಕೃಷಿಗಳಿಗೂ ಪಾಲಕಾಡು ಹೆಸರುವಾಸಿಯಾಗಿದೆ. ಹೀಗಾಗಿ ಕೇರಳದ ಕೃಷಿ ಕ್ಷೇತ್ರದಲ್ಲಿ ಪಾಲಕಾಡು ಜಿಲ್ಲೆಗೆ ವಿಶೇಷ ಸ್ಥಾನವಿದೆ.

ಕಾಂದಲ್ಲೂರ್ : ಇಡುಕ್ಕಿ ಜಿಲ್ಲೆಯ ಕಾಂದಲ್ಲೂರ್ ಅನೇಕ ಸಸ್ಯವೈವಿಧ್ಯಗಳ ತವರು. ಸಮುದ್ರಮಟ್ಟದಿಂದ ಸುಮಾರು 4000 ಅಡಿಗಳಷ್ಟು ಎತ್ತರದಲ್ಲಿರುವ ಈ ಪ್ರದೇಶವು ಕೇರಳದ ಅತ್ಯಂತ ತಂಪಿನ ಪ್ರದೇಶವಾದ ಮೂನ್ನಾರಿಗೆ ಸಮೀಪವಾಗಿದೆ. ಕಾಂದಲ್ಲೂರನ್ನು ಕೇರಳದ ಹಣ್ಣುಹಂಪಲುಗಳ ತಾಣ ಎಂದು ಕರೆಯಲಾಗಿದೆ. ಏಪಲ್, ದ್ರಾಕ್ಷಿ, ಕಿತ್ತಳೆ, ಪಾರಳೆ, ಸಪೋಟ, ದಾಳಿಂಬೆ, ಮುಸಂಬಿ, ನಿಂಬೆ ಮೊದಲಾದ ಹಣ್ಣು ಹಂಪಲುಗಳನ್ನು ಈ ಪ್ರದೇಶದಲ್ಲಿ ಧಾರಾಳವಾಗಿ ಬೆಳೆಯುತ್ತಾರೆ.

ನೆಲ್ಲಿಯಾಂಪತಿ : ಪಾಲಕಾಡು ಜಿಲ್ಲೆಯ ಇನ್ನೊಂದು ಪ್ರಧಾನ ಕೃಷಿ ವಲಯ. ಚಾ, ಕಾಫಿ, ಕರಿಮೆಣಸು ಮೊದಲಾದ ತೋಟಗಾರಿಕಾ ಬೆಳೆಗಳನ್ನು ಈ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಈ ಪ್ರದೇಶದಲ್ಲಿ ಸಾಕಷ್ಟು ಜೈವಿಕ ಕೃಷಿ ತೋಟಗಳಿವೆ. ಅಂತಾರಾಷ್ಟ್ರೀಯ ಮಾನ್ಯತೆಯನ್ನು ಪಡೆದ ಜೈವಿಕ ತೋಟಗಳು ಜಗತ್ತಿನ ಗಮನವನ್ನು ತನ್ನೆಡೆಗೆ ಸೆಳೆದಿವೆ. ಸಹಜಕೃಷಿಯನ್ನು ನಡೆಸುವ ರೈತರು ನೆಲ್ಲಿಯಾಂಪತಿ ತೋಟಗಳನ್ನು ಮಾದರಿಯಾಗಿ ಇರಿಸಿಕೊಂಡಿದ್ದಾರೆ. ಕೇರಳದ ಮೂನ್ನಾರ್, ಪೀರುಮೇಡ್ ಪ್ರದೇಶಗಳೂ ವಿಶೇಷ ಕೃಷಿ ವಲಯಗಳಾಗಿವೆ.

ಕೇರಳದ ಪ್ರಾಚೀನ ಕೃಷಿ ರೀತಿಗಳು : ಜಗತ್ತಿನ ಯಾವುದೇ ಸಂಸ್ಕೃತಿಯಲ್ಲಿ ಕೃಷಿಗೆ ವಿಶೇಷವಾದ ಸ್ಥಾನವಿದೆ. ಆಹಾರದ ಉತ್ಪಾದನೆಯು ಮನುಷ್ಯನ ಅಸ್ತಿತ್ವದ ಮೂಲಭೂತ ಘಟಕವಾಗಿದೆ. ಮನುಷ್ಯನ ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಮತ್ತು ಆಚಾರ ವಿಚಾರಗಳಲ್ಲಿ ಕೃಷಿಯ ಪ್ರಭಾವವನ್ನು ಕಂಡುಕೊಳ್ಳಬಹುದು. ಅನ್ನವನ್ನು ದೇವರು ಎಂದು ತಿಳಿದಿರುವ ಕೇರಳೀಯರು ಕೃಷಿಯನ್ನು ತಮ್ಮ ಬದುಕಿನ ಭಾಗವಾಗಿ ಅಳವಡಿಸಿಕೊಂಡಿರುವರು.

ಭೂಮಿಯ ಗುಣಸ್ವಭಾವ, ಹವಾಗುಣ, ಮಳೆಯ ಪ್ರಮಾಣ ಮತ್ತು ಸೂರ್ಯನ ಚಲನೆಯನ್ನು ಹೊಂದಿಕೊಂಡು ಪ್ರಾಚೀನ ಕೇರಳದ ರೈತರು ಕೃಷಿಯನ್ನು ಮಾಡುತ್ತಿದ್ದರು. ಇಳಿಜಾರಾದ ಭೂಮಿ ಮತ್ತು ಮಳೆಯ ಆಧಿಕ್ಯ ಕೇರಳದ ಕೃಷಿಯ ಮೇಲೆ ಪ್ರಭಾವ ಬೀರುವ ಎರಡು ಘಟಕಗಳಾಗಿದ್ದುವು. ಇದಕ್ಕಾಗಿ ಅವರು ನಿರ್ದಿಷ್ಟ ಕಾಲದಲ್ಲಿ ನಡೆಸಬೇಕಾದ ಬೆಳೆಗಳ ವಾರ್ಷಿಕಾವರ್ತನ ವ್ಯವಸ್ಥೆಯನ್ನು ರೂಪಿಸಿಕೊಂಡರು. ಮಳೆ, ಬಿಸಿಲು, ಬೆಳದಿಂಗಳು, ಮಂಜು, ಮೋಡ, ನೆರೆ ಮೊದಲಾದ ಸಂಗತಿಗಳನ್ನು ಅರಿತುಕೊಂಡು ಅವರು ಕೃಷಿ ಪದ್ಧತಿಯನ್ನು ಆವಿಷ್ಕರಿಸಿದರು.

ಞಾಟುವೇಲ : ಸೂರ್ಯನ ಚಲನೆ ಹಾಗೂ ನಕ್ಷತ್ರಗಳ ಸ್ಥಾನಗಳನ್ನು ಆಶ್ರಯಿಸಿ ಕೇರಳದಲ್ಲಿ ಕೃಷಿಯ ಕೆಲಸಗಳನ್ನು ಆರಂಭಿಸುತ್ತಿದ್ದರು. ಸೌರಮಾನ ಪದ್ಧತಿಯ ಈ ಕೃಷಿ ಕಾಲಗಣನೆಗೆ 'ಞಾಟವೇಲ' ಎಂದು ಹೆಸರು. ಒಂಟು ಞಾಟುವೇಲದ ಅವಧಿ ಸರಿಸುಮಾರು ಹದಿಮೂರೂವರೆ ದಿನಗಳು. 27 ನಕ್ಷತ್ರಗಳ ಹೆಸರಿನಲ್ಲಿ 27 ಞಾಟವೇಲಗಳು ಕೇರಳದಲ್ಲಿ ಪ್ರಚಲಿತವಾಗಿವೆ. ಮೇಷಮಾಸದಿಂದ ತೊಡಗಿ ವರ್ಷದುದ್ದಕ್ಕೂ ಆಯಾ ತಿಂಗಳ ಞಾಟುವೇಲಗಳಿದ್ದು, ಯಾವ ಅವಧಿಯಲ್ಲಿ ಮಳೆ ಹೇಗೆ, ಬೆಳೆ ಹೇಗೆ ಎಂಬ ಅರಿವು ಗ್ರಾಮೀಣ ರೈತನಿಗಿರುತ್ತಿತ್ತು. ಸಾಮಾನ್ಯವಾಗಿ ಒಂದು ತಿಂಗಳಲ್ಲಿ ಎರಡು ಅಥವಾ ಮೂರು ಞಾಟುವೇಲಗಳು ಬರುತ್ತವೆ. ಭೂಮಿಯಲ್ಲಿ ಕೃಷಿಯ ಮೇಲೆ ಸೂರ್ಯನ ಚಲನೆ ಮತ್ತು ಗ್ರಹಗತಿಗಳ ಪ್ರಭಾವವನ್ನು ಪ್ರಾಚೀನ ಜನರು ನಂಬಿದ್ದರು. ಬಿತ್ತನೆ ಎನ್ನುವುದು ಕೃಷಿಯ ಆರಂಭಿಕ ಹಂತವಾಗಿದ್ದು, ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟ ಬೀಜವನ್ನು ಬಿತ್ತಿದರೆ ಹುಲುಸಾದ ಬೆಳೆಯಾಗುವುದು ಎಂದು ರೈತರು ನಂಬಿದ್ದರು. ಹೀಗೆ ಒಂದೊಂದು ಬೆಳೆಗೂ ನಿರ್ದಿಷ್ಟ ಅವಧಿಗಳನ್ನು ಗುರುತಿಸಲಾಗಿದೆ. ಮಾತ್ರವಲ್ಲ, ನಿರ್ದಿಷ್ಟ ಞಾಟವೇಲ ಅವಧಿಯಲ್ಲಿ ಮಳೆಯ ಪ್ರಮಾಣ ಎಷ್ಟು? ಬಿಸಿಲಿನ ಶಾಖ ಹೇಗೆ ? ಮಂಜು ಮೋಡಗಳ ಪ್ರಭಾವ ಏನು? ಇತ್ಯಾದಿ ವಿಚಾರಗಳಲ್ಲಿ ಜನಪದರಿಗೆ ನಿಖರವಾದ ಜ್ಞಾನವಿತ್ತು. ಆದುದರಿಂದ ಞಾಟವೇಲಗಳನ್ನು ಪ್ರಾಚೀನ ರೈತನ ಕೃಷಿ ಸಂಬಂಧಿ ಕ್ಯಾಲೆಂಡರ್ ಎಂದು ತಿಳಿಯಬಹುದು.

ಮೇಷ ತಿಂಗಳ ಅಶ್ವಿನಿ ಞಾಟವೇಲದೊಂದಿಗೆ ಕೃಷಿ ಚಟುವಟಿಕೆಗಳ ಆರಂಭ. ರೇವತಿ ಞಾಟವೇಲದಲ್ಲಿ ಮಳೆ ಆರಂಭವಾಗುವುದು. ರೋಹಿಣಿಯಲ್ಲಿ ಹನಿಮಳೆಯಾಗು ವುದೆಂದೂ, ಪುನರ್ವಸು ಞಾಟವೇಲದಲ್ಲಿ ಬಯಲುಗಳೆಲ್ಲ ನೀರಿನಿಂದಾವೃತವಾಗುವುದೆಂದೂ ನಂಬಿಕೆ. ತಿರುವಾದಿರ ಞಾಟುವೇಲದಲ್ಲಿ ಬಿಸಿಲು ಮತ್ತು ಮಳೆ ಸಮಪ್ರಮಾಣದಲ್ಲಿರುವುದು. ತಿರುವಾದಿರ ಞಾಟುವೇಲದಲ್ಲಿ ಮಳೆಯಾದರೆ ಧಾರೆ ಕಡಿಯದ ಮಳೆ, ಬಿಸಿಲಾದರೆ ಕೆಂಡದಂಥ ಬಿಸಿಲು ಎಂದು ನಾಣ್ಣುಡಿ. ರೋಹಿಣಿ ಞಾಟುವೇಲ ಅವಧಿಯಲ್ಲಿ ಬಿಸಿಲು ಹೆಚ್ಚಾಗಿರುತ್ತದೆ. ಇದರಿಂದಾಗಿ ಬತ್ತದ ಬಯಲು ಒಣಗಿ ಕೊಯ್ಲಿಗೆ ಸಿದ್ಧವಾಗುತ್ತದೆ.

ಅಶ್ವಿನಿ, ಭರಣಿ, ಕೃತ್ತಿಕ ನಕ್ಷತ್ರಗಳನ್ನು ಒಳಗೊಂಡ ಮೇಷರಾಶಿ ಬತ್ತದ ಬಿತ್ತನೆಗೆ ಯೋಗ್ಯವಾದ ಕಾಲ. ತುಲಾಮಾಸದ ಞಾಟವೇಲಗಳಲ್ಲಿ ಗುಡುಗು ಮಿಂಚಿನಿಂದ ಕೂಡಿದ ಮಳೆಯಾಗುವುದು. ವೃಶ್ಚಿಕ ಮಾಸದ ಞಾಟವೇಲಗಳಲ್ಲಿ ಮಳೆ ಹಿಂದೆ ಸರಿದು ಮಂಜು ಸುರಿಯುವುದು. ಕುಂಭಮಾಸದ ಞಾಟುವೇಲದೊಂದಿಗೆ ಕೃಷಿ ಚಟುವಟಿಕೆಗಳ ಕೊನೆ. ರೋಹಿಣಿ ಞಾಟುವೇಲವು ಹೆಸರುಧಾನ್ಯಗಳ ಬಿತ್ತನೆಗೆ ಯೋಗ್ಯ ಕಾಲ. ರೇವತಿ ಞಾಟುವೇಲವು ಮುಂಡಕನ್ ಕೃಷಿಗೆ ಯೋಗ್ಯ ಕಾಲ. ಮಕರಮಾಸದಲ್ಲಿ ಹರಿವೆ ಮೊದಲಾದ ಸೊಪ್ಪು ತರಕಾರಿಗಳ ಕೃಷಿ ಸಮೃದ್ಧ.

ಚಂದ್ರನ ಬೆಳದಿಂಗಳು, ಅಮಾವಾಸ್ಯೆ, ಮೋಡ, ಮಂಜು ಮೊದಲಾದ ಘಟಕಗಳು ಕೃಷಿಯ ಮೇಲೆ ಪ್ರಭಾವ ಬೀರುವುದಾಗಿ ಪ್ರಾಚೀನ ರೈತರು ಕಂಡುಕೊಂಡಿದ್ದರು. ಪೂರ್ಣಚಂದ್ರನ ಬೆಳದಿಂಗಳಲ್ಲಿ ಸುವರ್ಣಗೆಡ್ಡೆಯ ಬಿತ್ತನೆ ಮಾಡಿದರೆ ಒಳ್ಳೆಯ ಫಸಲು ಲಭಿಸುವುದು ಎಂದು ನಂಬಿಕೆ. ಬತ್ತದ ತೆನೆಗಳು ಮಾಗುವ ಕಾಲದಲ್ಲಿ ಮಂಜು ಬಿದ್ದರೆ ಕದಿರು ಜಳ್ಳಾಗುವುದು. ಅಮಾವಾಸ್ಯೆಗೆ ಬೀಜ ಬಿತ್ತಿದರೆ ಗುಣ ಹೆಚ್ಚು. ಅತಿಯಾದ ಮಂಜು ಬತ್ತದ ಕೃಷಿಯ ಕೀಟಬಾಧೆಗೆ ಕಾರಣವಾಗುತ್ತದೆ. ಹೀಗೆ ಞಾಟುವೇಲ ಸಂಬಂಧಿ ನಂಬಿಕೆಗಳು ಹಲವು.

ಕುಂಭ, ಮೀನ, ಮೇಷ ಮಾಸಗಳಲ್ಲಿ ಊರಿನ ಉತ್ಸವಾದಿಗಳು ಕಳೆದು ಬಯಲುಗಳು ಕೃಷಿಗೆ ಸಜ್ಜಾಗುತ್ತವೆ. ಧೂಳಿನಿಂದ ಆವೃತವಾದ ಗದ್ದೆಬಯಲುಗಳು ವಿಷು ಕಳೆದು ಬರುವ ಮೊದಲ ಮಳೆಗೆ ಹಸನಾಗುತ್ತದೆ. ಹಿಂದಿನ ಕಾಲದಲ್ಲಿ ಊರ ಜಾತ್ರೆಗಳು, ಉತ್ಸವಗಳು ಕೃಷಿ ಸಂಬಂಧಿ ಚಟುವಟಿಕೆಗಳೇ ಆಗಿದ್ದುವು. ತಾವು ಬೆಳೆದ ದವಸ ಧಾನ್ಯಗಳನ್ನು ಮಾರಾಟ ಮಾಡಲು ಹಾಗೂ ಮುಂದಿನ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಜಾನುವಾರುಗಳನ್ನು ಕೊಳ್ಳಲು ರೈತರು ಜಾತ್ರೆ ಸಂತೆಗಳನ್ನು ನೆಚ್ಚಿಕೊಂಡಿದ್ದರು. ಉತ್ತಮ ತಳಿಯ ಬಿತ್ತನೆ ಬೀಜಗಳನ್ನು ರೈತರು ಜಾತ್ರೆ ಸಂತೆಗಳಲ್ಲಿ ಪರಸ್ಪರ ಹಂಚಿಕೊಳ್ಳುತ್ತಿದ್ದರು.

ಞಾಟುವೇಲ ಸಂಬಂಧವಾಗಿ ಕೇರಳದಲ್ಲಿ ಅನೇಕ ಗಾದೆ ಮಾತುಗಳು ರೂಢಿಗೆ ಬಂದಿವೆ. 'ಕುಂಭತ್ತಿಲ್ ಮಳ ಪೆಯ್ತಾಲ್ ಕುಪ್ಪೇಲುಂ ನೆಲ್ಲ್' (ಕುಂಭಮಾಸದಲ್ಲಿ ಮಳೆ ಬಂದರೆ ಕುಪ್ಪೆಯಲ್ಲೂ ಬತ್ತ), 'ಪೂಯ್ಯಂ ಞಾಟುವೇಲಯಿಲ್ ಪುಲ್ಲುಂ ಪೂವಿಯುಂ' (ಪುಷ್ಯ ಞಾಟುವೇಲದಲ್ಲಿ ಹುಲ್ಲು ಕೂಡಾ ಹೂ ಬಿಡುವುದು). 'ಅತ್ತಂ ಕರುತ್ತಾಲ್ ಓಣಂ ವೆಳುಕ್ಕುಂ' (ಹಸ್ತ ಕಪ್ಪಾದರೆ ಶ್ರಾವಣ ಬಿಳಿಯಾಗುವುದು), 'ಮುದಿರಕ್ಕ್ ಮೂನ್ನ್ ಮಳೆಯೇ ವೇಂಡು' (ಹುರುಳಿಗೆ ಮೂರು ಮಳೆ ಸಾಕು), 'ಕನ್ನಿ ಮಾಸತ್ತಿಲೆ ಮುದಿರ ಕ್ಕಲಂ ಪೊಳಿಕ್ಕುಂ' (ಕನ್ಯಾ ಮಾಸದ ಹುರುಳಿ ಪಾತ್ರೆ

ಒಡೆಯುವುದು) ಮೊದಲಾದ ಗಾತೆಮಾತುಗಳು ಜನಪದರ ಅನುಭವದ ನುಡಿಮುತ್ತುಗಳಾಗಿವೆ.

ಕೇರಳದ ಞಾಟುವೇಲ ಕೃಷಿ ಕ್ಯಾಲೆಂಡರ್

ಮಲಯಾಳದ ಸೌರಮಾನ ತಿಂಗಳು	ಞಾಟುವೇಲ	ಆಂಗ್ಲ ತಿಂಗಳು ಮತ್ತು ದಿನಾಂಕ
ಸಿಂಹ 1 - ಸಿಂಹ 14	ಮಖಾ	ಆಗಸ್ಟ್ 16 - ಆಗಸ್ಟ್ 30
ಸಿಂಹ 14 - ಸಿಂಹ 28	ಪುಬ್ಬಾ	ಆಗಸ್ಟ್ 30 - ಸೆಪ್ಟೆಂಬರ್ 13
ಸಿಂಹ 28 - ಕನ್ಯಾ 10	ಉತ್ತರಾ	ಸೆಪ್ಟೆಂಬರ್ 13 - ಸೆಪ್ಟೆಂಬರ್ 26
ಕನ್ಯಾ 10 - ಕನ್ಯಾ 24	ಹಸ್ತ	ಸೆಪ್ಟೆಂಬರ್ 26 - ಅಕ್ಟೋಬರ್ 10
ಕನ್ಯಾ 24 - ತುಲಾ 7	ಚಿತ್ತ	ಅಕ್ಟೋಬರ್ 10 - ಅಕ್ಟೋಬರ್ 23
ತುಲಾ 7 - ತುಲಾ 21	ಸ್ವಾತಿ	ಅಕ್ಟೋಬರ್ 23 - ನವೆಂಬರ್ 6
ತುಲಾ 21 - ವೃಶ್ಚಿಕ 4	ವಿಶಾಖ	ನವೆಂಬರ್ 6 - ನವೆಂಬರ್ 19
ವೃಶ್ಚಿಕ 4 - ವೃಶ್ಚಿಕ 17	ಅನುರಾಧ	ನವೆಂಬರ್ 19 - ಡಿಶಂಬರ್ 2
ವೃಶ್ಚಿಕ 17 - ವೃಶ್ಚಿಕ 30	ಜ್ಯೇಷ್ಠ	ಡಿಶಂಬರ್ 2 - ಡಿಶಂಬರ್ 15
ವೃಶ್ಚಿಕ 30 - ಧನು 13	ಮೂಲ	ಡಿಶಂಬರ್ 15 - ಡಿಶಂಬರ್ 28
ಧನು 13 - ಧನು 26	ಪೂರ್ವಾಷಾಢ	ಡಿಶಂಬರ್ 28 - ಡಿಶಂಬರ್ 10
ಧನು 26 - ಮಕರ 11	ಉತ್ತರಾಷಾಢ	ಜನವರಿ 10 - ಜನವರಿ 23
ಮಕರ 11 - ಮಕರ 24	ಶ್ರವಣ	ಜನವರಿ 23 - ಫೆಬ್ರವರಿ 5
ಮಕರ 24 -ಕುಂಭ 7	ಧನಿಷ್ಠ	ಫೆಬ್ರವರಿ 5 - ಫೆಬ್ರವರಿ 18
ಕುಂಭ 7 - ಕುಂಭ 20	ಶತಭಿಷ	ಫೆಬ್ರವರಿ 18 - ಮಾರ್ಚ್ 4
ಕುಂಭ 20 - ಮೀನ 3	ಪೂರ್ವಾಭಾದ್ರ	ಮಾರ್ಚ್ 4 - ಮಾರ್ಚ್ 17
ಮೀನ 3 - ಮೀನ 17	ಉತ್ತರಾಭಾದ್ರ	ಮಾರ್ಚ್ 17 - ಮಾರ್ಚ್ 30
ಮೀನ 17 - ಮೀನ 30	ರೇವತಿ	ಮಾರ್ಚ್ 30 - ಏಪ್ರಿಲ್ 13
ಮೀನ 30 - ಮೇಷ 14	ಅಶ್ವಿನಿ	ಏಪ್ರಿಲ್ 13 -ಏಪ್ರಿಲ್ 27
ಮೇಷ 14 - ಮೇಷ 28	ಭರಣಿ	ಏಪ್ರಿಲ್ 27 -ಮೇ 10
ಮೇಷ 28 - ವೃಷಭ 10	ಕೃತ್ತಿಕ	ಮೇ 10 - ಮೇ 24
ವೃಷಭ 10 - ವೃಷಭ 24	ರೋಹಿಣಿ	ಮೇ 24 - ಜೂನ್ 7
ವೃಷಭ 24 -ಮಿಥುನ 7	ಮೃಗಶಿರ	ಜೂನ್ 7 -ಜೂನ್ 21
ಮಿಥುನ 7 - ಮಿಥುನ 21	ಆರ್ದ್ರ	ಜೂನ್ 21 - ಜುಲೈ 5
ಮಿಥುನ 21 - ಕರ್ಕಟಕ 3	ಪುನರ್ವಸು	ಜುಲೈ 5 - ಜುಲೈ 18
ಕರ್ಕಟಕ 3 - ಕರ್ಕಟಕ 21	ಪುಷ್ಯ	ಜುಲೈ 18 - ಆಗಸ್ಟ್ 2
ಕರ್ಕಟಕ 21 - ಕರ್ಕಟಕ 31	ಆಶ್ಲೇಷ	ಆಗಸ್ಟ್ 2 - ಆಗಸ್ಟ್ 16

ಕೇರಳದ ನೀರಾವರಿ ವ್ಯವಸ್ಥೆ : ಕೃಷಿಗೆ ನೀರು ಅತಿ ಅಗತ್ಯವಾದ ಘಟಕವಾಗಿದ್ದು, ಹಿಂದಿನ ಕಾಲದಲ್ಲಿ ಜನರು ಮಳೆಯನ್ನು ಆಶ್ರಯಿಸಿ ಕೃಷಿ ಪದ್ಧತಿಗಳನ್ನು ಆವಿಷ್ಕರಿಸಿದರು. ಕಾಲಕಾಲದಲ್ಲಿ ಮಳೆಯ ಕೊರತೆ ಉಂಟಾದಾಗ ಅಥವಾ ಋತುಮಾನಕ್ಕೆ ಹೊಂದಿಕೊಂಡು ಬೇರೆ ಬೇರೆ ಬೆಳೆಗಳನ್ನು ಬೆಳೆಸತೊಡಗಿದಾಗ ಮಳೆಯ ನೀರನ್ನು ಮಾತ್ರ ಆಶ್ರಯಿಸದೆ ಕೃತಕವಾಗಿ ನೀರನ್ನು ಒದಗಿಸುವುದು ಅನಿವಾರ್ಯವಾಯಿತು. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ರೀತಿಯ ನೀರಾವರಿ ವ್ಯವಸ್ಥೆಗಳು ರೂಪುಗೊಂಡುವು. ನೀರಿನ ಲಭ್ಯತೆ ಹಾಗೂ ಭೌಗೋಳಿಕ ಹಿನ್ನೆಲೆಯನ್ನು ಹೊಂದಿಕೊಂಡು ನೀರಾವರಿಯ ಸರಳ ಯಂತ್ರಗಳನ್ನು ಜನಪದರು ಆವಿಷ್ಕರಿಸಿದರು.

ಕೇರಳ ಮುಖ್ಯವಾಗಿ ಹೊಳೆ, ನದಿ ಹಾಗೂ ಹಿನ್ನೀರುಗಳಿಂದ ಕೂಡಿದ ಕರಾವಳಿ ಪ್ರದೇಶವಾಗಿದೆ. ಸಮತಟ್ಟಾದ ಗದ್ದೆಬಯಲುಗಳಿಗೆ ನೀರು ಹಾಯಿಸಲೂ, ಗದ್ದೆಗಳಲ್ಲಿ ಹೆಚ್ಚುವರಿ ನೀರು ತುಂಬಿದಾಗ ಹೊರಕ್ಕೆ ಚೆಲ್ಲಲೂ ಜನಪದರು ಉಪಕರಣಗಳನ್ನು ಬಳಸಿದರು. ತಮ್ಮ ದೈಹಿಕ ಪರಿಶ್ರಮ ಅಥವಾ ಜಾನುವಾರುಗಳ ಸಹಾಯದಿಂದ ನೀರಾವರಿಯನ್ನು ಮಾಡುತ್ತಿದ್ದರು. ಆಧುನಿಕ ಕಾಲದಲ್ಲಿ ಹೊಸ ಯಂತ್ರಗಳ ಆವಿಷ್ಕಾರವಾಗಿದ್ದು, ಪ್ರಾಚೀನ ನೀರಾವರಿಯ ಉಪಕರಣಗಳನ್ನು ರೈತರು ಕೈಬಿಟ್ಟಿದ್ದಾರೆ. ಅಂತಹ ಕೆಲವು ನೀರಾವರಿ ಉಪಕರಣಗಳ ಪರಿಚಯವನ್ನು ಇಲ್ಲಿ ಕೊಡಲಾಗಿದೆ.

ತೇಕ್‌ಕೊಟ್ಟ : ತುಂಬ ಆಳವಿಲ್ಲದ ಬಾವಿ, ಕೊಳ ಹಾಗೂ ನೀರಿನ ಹೊಂಡಗಳಿಂದ ನೀರನ್ನೆತ್ತಲು ಉಪಯೋಗಿಸುವ ಒಂದು ಉಪಕರಣವಾಗಿದೆ. ಇದಕ್ಕೆ ಏತವೆಂದೂ, ಮುಟ್ಟಿಲೋನ್ ಎಂದೂ ಪ್ರಾದೇಶಿಕವಾಗಿ ವಿಭಿನ್ನ ಹೆಸರುಗಳಿವೆ. ನೀರಿನ ಹೊಂಡದ ಸಮೀಪದಲ್ಲಿ ಎರಡು ಗಟ್ಟಿಯಾದ ಕಂಬಗಳನ್ನು ನಾಟಿ, ಅದರ ಮೇಲ್ಭಾಗದಲ್ಲಿ ಉದ್ದವಾದ ಬಿದಿರಿನ ಗಳವನ್ನು ಮಧ್ಯದಲ್ಲಿ ಕಟ್ಟುವರು. ಬಿದಿರಿನ ಒಂದು ತುದಿಗೆ ನೀರು ತುಂಬಿಸುವ ದೊಡ್ಡ ಪಾತ್ರೆಯನ್ನು ಕಟ್ಟಿರುತ್ತಾರೆ. ಬಿದಿರಿನ ಇನ್ನೊಂದು ತುದಿಯಲ್ಲಿ ಎರಡು ಹಗ್ಗಗಳನ್ನು ಕಟ್ಟಿ ಇಳಿಬಿಟ್ಟಿದ್ದು, ನೀರಿನ ಹೊಂಡ ಮತ್ತು ಮರದ ಕಂಬಗಳ ಮಧ್ಯೆ ಒಬ್ಬ ವ್ಯಕ್ತಿ ನೀರು ಮೊಗೆಯುವ ಕೆಲಸವನ್ನು ನಿಯಂತ್ರಿಸುವನು. ಬಿದಿರಿನ ಒಂದು ತುದಿಯಲ್ಲಿರುವ ಮರದ ಪಾತ್ರೆಯನ್ನು ನೀರಿನಲ್ಲಿ ಮುಳುಗಿಸಿ, ಸೂಚನೆಯನ್ನು ನೀಡಿದಾಗ, ಇನ್ನೊಂದು ತುದಿಯಲ್ಲಿ ಇಳಿಬಿದ್ದಿರುವ ಹಗ್ಗವನ್ನು ಹಿಡಿದುಕೊಂಡು ಇಬ್ಬರು ವ್ಯಕ್ತಿಗಳು ಎಳೆಯುವರು. ನೀರು ತುಂಬಿದ ಪಾತ್ರೆ ಮೇಲಕ್ಕೆ ಬಂದಾಗ ನಿಯಂತ್ರಕನು ನೀರನ್ನು ದಂಡೆಗೆ ಮೊಗೆಯುವನು. ಹೀಗೆ ನಿರಂತರವಾಗಿ ನೀರನ್ನು ಮೊಗೆದು ಏತದ ನೀರಾವರಿಯನ್ನು ಮಾಡುತ್ತಿದ್ದರು.

ಚಕ್ರ : ನೀರನ್ನು ಗದ್ದೆಬಯಲುಗಳಿಗೆ ಮೊಗೆಯಲೂ ಗದ್ದೆಬಯಲುಗಳಲ್ಲಿ ತುಂಬಿರುವ ಅಧಿಕ ನೀರನ್ನು ಹೊರಚೆಲ್ಲಲೂ ಚಕ್ರ ಎಂಬ ನೀರಾವರಿ ಸಲಕರಣೆಗಳನ್ನು ಬಳಸುತ್ತಿದ್ದರು. ಚಕ್ರವು ಅಗಲವಾದ ಮರದ ಪಟ್ಟಿಗಳಿಂದ ಕೂಡಿದ್ದು, ಸುಮಾರು ಒಂದು ಅಡಿಯಷ್ಟು ಹೊರಚಾಚಿರುತ್ತದೆ. ಒಂದು ಚಕ್ರದಲ್ಲಿ ಇಂತಹ ಎಂಟರಿಂದ ಇಪ್ಪತ್ತನಾಲ್ಕು ಮರದ ಪಟ್ಟಿಗಳಿರುತ್ತವೆ. ಚಕ್ರದ ಹೊರಚಾಚಿದ ಮರದ ಪಟ್ಟಿಗಳು ನೀರಿನಲ್ಲಿ ಮುಳುಗಿರುತ್ತಿದ್ದು, ಮೇಲ್ಭಾಗದ ಪಟ್ಟಿಗಳನ್ನು ಒಬ್ಬ ವ್ಯಕ್ತಿ ಮೆಟ್ಟಿ ಚಕ್ರವನ್ನು ತಿರುಗಿಸುತ್ತಿದ್ದನು. ಹೀಗೆ ಚಕ್ರವು ತಿರುಗುವಾಗ ಮರದ ಪಟ್ಟಿಗಳ ಮೂಲಕ ನೀರು ಗದ್ದೆಗೆ ಹಾಯುವುದು. ಗದ್ದೆಗೆ ಸಮಾನಾಂತರವಾಗಿ ನೀರು ಇದ್ದಾಗ ಮಾತ್ರ ಚಕ್ರದ ಉಪಯೋಗ ಫಲಪ್ರದವಾಗುವುದು. ಚಕ್ರವನ್ನು ಕುಳಿತುಕೊಂಡು ಮೆಟ್ಟಲು ಒಂದು ಆಸನವನ್ನು ನಿರ್ಮಿಸುತ್ತಿದ್ದರು. ಗದ್ದೆಯಲ್ಲಿ ತುಂಬಿದ ಹೆಚ್ಚುವರಿ ನೀರನ್ನು ಹೊರಹಾಕಲು ಈ ಉಪಕರಣವನ್ನು ಬಳಸುತ್ತಿದ್ದರು.

ತುಂಬಿಕೊಟ್ಟ : ಆಳವಾದ ಕೆರೆ ಅಥವಾ ಬಾವಿಗಳಿಂದ ನೀರೆತ್ತಲು ಜಾನುವಾರುಗಳನ್ನು ಬಳಸುತ್ತಿದ್ದರು. ಜಾನುವಾರುಗಳನ್ನು ಬಳಸಿಕೊಂಡು ಮಾಡುವ ನೀರಾವರಿಯ ಈ ಸಲಕರಣೆಯನ್ನು ತುಂಬಿಕೊಟ್ಟ ಎಂದು ಕರೆಯುತ್ತಾರೆ. ಇದಕ್ಕೆ ಕಾಳತೇಕ್ ಕೊಟ್ಟ ಎಂಬ ಹೆಸರೂ ಇದೆ. ಸಾಮಾನ್ಯವಾಗಿ ಎತ್ತುಗಳನ್ನು ಉಪಯೋಗಿಸಿಕೊಂಡು ಇಂತಹ

ನೀರಾವರಿಯನ್ನು ಮಾಡುತ್ತಿದ್ದರು. ಇದು ಏತ ನೀರಾವರಿಯೇ ಆಗಿದೆ. ಆದರೆ ಮನುಷ್ಯರ ಬದಲಿಗೆ ನೀರೆಳೆಯುವ ಕ್ರಿಯೆಯನ್ನು ಎತ್ತುಗಳು ಮಾಡುತ್ತವೆ. ನೀರು ತುಂಬಿದ ಮರದ ದೊಡ್ಡ ಪಾತ್ರೆಯನ್ನು ಹಗ್ಗದ ಮೂಲಕ ಎತ್ತುಗಳ ನೊಗಕ್ಕೆ ಕಟ್ಟಿ ಎಳೆದು ನೀರನ್ನು ಗದ್ದೆಬಯಲುಗಳಿಗೆ ಮೊಗೆಯುತ್ತಿದ್ದರು.

ತುಡುಪ್ಪ್ : ಕಡಿಮೆ ಆಳವಿರುವ ನೀರಿನ ಹೊಂಡಗಳಿಂದ ಗದ್ದೆಬಯಲುಗಳಿಗೆ ನೀರು ಮೊಗೆಯಲು ಉಪಯೋಗಿಸುವ ಸಲಕರಣೆಗೆ ತುಡುಪ್ಪ್ ಎಂದು ಹೆಸರು. ನೀರಿನ ಹೊಂಡದ ಸಮೀಪದಲ್ಲಿ ಎರಡು ಬಲವಾದ ಕಂಬಗಳನ್ನು ನೆಟ್ಟು, ಅವುಗಳಲ್ಲಿ ನೀರು ಮೊಗೆಯುವ ದೊಡ್ಡ ದಂಬೆಯನ್ನು ಕಟ್ಟಿ, ನೀರು ಮೊಗೆಯುವ ಸರಳ ಯಂತ್ರವಿದು. ಗದ್ದೆಗೆ ಸಮಾನಾಂತರವಾಗಿ ನೀರು ಇದ್ದಾಗ ಮಾತ್ರ ಇದರಿಂದ ಪ್ರಯೋಜನವು ಲಭಿಸುವುದು.

ಪ್ರಾಚೀನ ಕಾಲದಲ್ಲಿ ಕೇರಳೀಯರು ಅತ್ಯಂತ ಸರಳವಾದ ನೀರಾವರಿ ಸಲಕರಣೆಗಳನ್ನು ಬಳಸುತ್ತಿದ್ದರು. ಕೇರಳವು ಬಹುತೇಕ ಕರಾವಳಿ ಪ್ರದೇಶವಾಗಿರುವುದರಿಂದ, ಅತ್ಯಂತ ತಗ್ಗಿನಲ್ಲಿ ನೀರಿನಾಸರೆ ಇರುವುದರಿಂದ ಇಂತಹ ಸರಳ ನೀರಾವರಿ ಉಪಕರಣಗಳು ಸಾಕಾಗುತ್ತಿದ್ದುವು. ಆಧುನಿಕ ಕಾಲದಲ್ಲಿ ವಿದ್ಯುತ್‌ಚಾಲಿತ ಮೋಟಾರ್ ಪಂಪುಗಳು ನೀರಾವರಿಯನ್ನು ನಿಯಂತ್ರಿಸುತ್ತಿದ್ದು, ಹಳೆಯ ನೀರಾವರಿ ಉಪಕರಣಗಳೆಲ್ಲ ಪಳೆಯುಳಿಕೆಗಳಾಗಿವೆ.

ಕೇರಳದ ತರಕಾರಿ ಕೃಷಿ : ಕೇರಳದಲ್ಲಿ ವ್ಯಾಪಾರದ ದೃಷ್ಟಿಯಿಂದ ವ್ಯಾಪಕವಾಗಿಯೂ, ಮನೆ ಬಳಕೆಯ ಹಿನ್ನೆಲೆಯಲ್ಲಿ ಸಣ್ಣ ಪ್ರಮಾಣದಲ್ಲಿಯೂ ತರಕಾರಿಗಳನ್ನು ಹಿಂದಿನಿಂದಲೇ ಬೆಳೆಯುತ್ತಿದ್ದರು. ಸೂರ್ಯನ ಚಲನೆ ಮತ್ತು ನಕ್ಷತ್ರಗಳ ಗತಿಯನ್ನು ಆಶ್ರಯಿಸಿದ ಕೃಷಿ ಕಾಲಗಣನೆ ಞಾಟವೇಲದ ಹಿನ್ನೆಲೆಯಲ್ಲಿ ಕೇರಳದ ತರಕಾರಿ ಕೃಷಿಗಳು ನಡೆಯುತ್ತಿದ್ದುವು. ಮಳೆಗಾಲದ ಆರಂಭದಲ್ಲಿ ಸಾಮಾನ್ಯವಾಗಿ ಕೇರಳದಲ್ಲಿ ಕೃಷಿ ಚಟುವಟಿಕೆಗಳು ಆರಂಭಗೊಳ್ಳುತ್ತವೆ. ವೃಷಭಮಾಸದ ಮಧ್ಯಭಾಗದಲ್ಲಿ ಬರುವ ರೋಹಿಣಿ ಞಾಟವೇಲವು ತರಕಾರಿ ಕೃಷಿಗೆ ಯೋಗ್ಯವಾದ ಕಾಲ ಎಂಬುದು ಕೇರಳೀಯರ ನಂಬಿಕೆ. ಅಲಸಂಡೆ, ಸೌತೆ, ಮುಳ್ಳುಸೌತೆ, ಹೀರೆಕಾಯಿ, ಕುಂಬಳಕಾಯಿ, ಚೀನಿಕಾಯಿ, ಹಾಗಲಕಾಯಿ, ಪಡುವಲಕಾಯಿ, ಬೆಂಡೆಕಾಯಿ ಮೊದಲಾದ ತರಕಾರಿಗಳನ್ನು, ಮೆಣಸು, ಅರಿಸಿನ, ಶುಂಠಿ ಮೊದಲಾದ ವ್ಯಂಜನಗಳನ್ನು ಹಾಗೂ ಹರಿವೆ ಮೊದಲಾದ ಸೊಪ್ಪು ತರಕಾರಿಗಳನ್ನು ಕೇರಳದ ಕೃಷಿಕರು ಬೆಳೆಯುವರು. ಇವುಗಳಲ್ಲಿ ಅಲಸಂಡೆ, ಹರಿವೆ ಮೊದಲಾದ ಕೃಷಿಗಳನ್ನು ಎಲ್ಲ ಕಾಲಗಳಲ್ಲಿಯೂ ಮಾಡಬಹುದು.

ರೋಹಿಣಿ ಞಾಟುವೇಲ ಕಾಲದಲ್ಲಿ ಅಂದರೆ ಜೂನ್ ತಿಂಗಳ ಮೊದಲ ವಾರದಲ್ಲಿ ಅಲಸಂಡೆ ಕೃಷಿಯನ್ನು ಆರಂಭಿಸಲು ಯೋಗ್ಯ ಕಾಲ. ಕೇರಳದಲ್ಲಿ ಇದನ್ನು 'ಪಯರ್' ಎಂದು ಕರೆಯುವರು. ಮೊದಲ ಮಳೆ ಬಿದ್ದು ಭೂಮಿ ಹಸನುಗೊಂಡಾಗ, ಮಣ್ಣಿನಲ್ಲಿ ಪಾತಿ ತೆಗೆದು ಅಲಸಂಡೆ ಬೀಜವನ್ನು ಬಿತ್ತುವರು. ಅಲಸಂಡೆಯಲ್ಲಿ ಅನೇಕ ಪ್ರಭೇದಗಳಿವೆ. ಸಣ್ಣ ಬೀಜ, ದೊಡ್ಡ ಬೀಜ ಹಾಗೂ ಉದ್ದಕ್ಕೆ ಬೆಳೆಯುವ ಅಲಸಂಡೆಗಳಿವೆ. ಅಲಸಂಡೆಯ ಸಾಲಿನಲ್ಲಿ ತೊಗರಿ ಬೀಜವನ್ನು ಬಿತ್ತಿ ಬೆಳೆ ತೆಗೆಯುವ ಕ್ರಮವಿದೆ. ಈ ಬೆಳೆಗಳಿಗೆ ಮುಖ್ಯವಾಗಿ ಸಗಣಿ ಮತ್ತು ಸುಡುಮಣ್ಣಿನ ಬೂದಿಯನ್ನು ಗೊಬ್ಬರವಾಗಿ ಬಳಸುವರು. ಜೂನ್, ಜುಲೈ ತಿಂಗಳಲ್ಲಿ ಸರಾಗವಾಗಿ ಬೀಳುವ ಮಳೆಯು ಅಲಸಂಡೆ ಕೃಷಿಗೆ ಅನುಕೂಲವಾಗಿದೆ. ಸೆಪ್ಟೆಂಬರ್ ಮೊದಲ ವಾರದಿಂದಲೇ ಬೆಳೆಯು ಕೈಗೆ ಬರುವುದು. ಓಣಂ ಹಬ್ಬದ ಸಂದರ್ಭದಲ್ಲಿ ತರಕಾರಿ ಬೆಳೆಗಳು ಕೈಗೆ ಬರುವಂತೆ ಹಿಂದಿನ ಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದರು.

ಅರಿಸಿನ ಕೃಷಿಗೆ ಕೇರಳವು ಪ್ರಸಿದ್ಧವಾಗಿದೆ. ಮರದ ನೆರಳಿರುವ ಕಡೆಯೂ ಈ ಕೃಷಿಯನ್ನು ಮಾಡಬಹುದು. ಹೊಸಮಳೆಯ ಕಾಲವಾದ ಮಿಥುನ ಮಾಸದಲ್ಲಿ ಮೊಳಕೆ ಬರಿಸಿದ ಅರಿಸಿನ ಬೀಜಗಳನ್ನು ಮಣ್ಣಿನಲ್ಲಿ ಸಾಲಾಗಿ ನೆಡುವರು. ಬೀಜದ ಅರಿಸಿನವನ್ನು ಬೈಹುಲ್ಲಿನಲ್ಲಿ ಕಟ್ಟಿ ಮೊಳಕೆ ಬರಿಸಲಾಗುವುದು. ಸಗಣಿ, ಉಮಿಕರಿ ಹಾಗೂ ಬೂದಿಯನ್ನು ಮಿಶ್ರ ಮಾಡಿ ಗೊಬ್ಬರವನ್ನು ಹಾಕುವರು. ಸುಮಾರು ಅರ್ಧ ಅಡಿ ಅಂತರದಲ್ಲಿ ಬೀಜಗಳನ್ನು ಹಾಕುವರು. ಮೊಳಕೆ ಮೇಲೆ ಬಂದಾಗ, ಸಾಲಿಗೆ ಮಣ್ಣನ್ನು ಕೂಡಿ ಹಾಕಲಾಗುವುದು. ವೃಶ್ಚಿಕ ಮಾಸದಲ್ಲಿ ಬೆಳೆಯು ಕೈಗೆ ಬರುವುದು. ಬೆಳೆ ಕೈಗೆ ಬಂದಾಗ ಮುಂದಿನ ವರ್ಷಕ್ಕೆ ಬೇಕಾದ ಅರಿಸಿನ ಬೀಜಗಳನ್ನು ಸಂಗ್ರಹಿಸಿ ಜೋಪಾನವಾಗಿ ಬೈಹುಲ್ಲಿನಲ್ಲಿ ಕಟ್ಟಿ ಇಡುವುದು ಸಂಪ್ರದಾಯ.

ಹಾಗಲಕಾಯಿ ಕೇರಳೀಯರಿಗೆ ಪ್ರಿಯವಾದ ತರಕಾರಿ. ಕೇರಳೀಯ ಸಾಂಪ್ರದಾಯಿಕ ಔತಣದ ಅವಿಲು, ಉಪ್ಪೇರಿ ಮೊದಲಾದ ವ್ಯಂಜನಗಳಿಗೆ ಹಾಗಲಕಾಯಿ ಅತ್ಯಗತ್ಯವಾಗಿದೆ. ಸಾಮಾನ್ಯವಾಗಿ ಜೂನ್-ಆಗಸ್ಟ್ ತಿಂಗಳಲ್ಲಿ ಹಾಗಲಕಾಯಿಯ ಕೃಷಿಯನ್ನು ಮಾಡುವರು. ಜನವರಿ - ಮಾರ್ಚ್ ತಿಂಗಳಲ್ಲಿ ಕೃತಕ ನೀರಾವರಿಯ ಮೂಲಕವೂ ಕೃಷಿಯನ್ನು ಮಾಡುವರು. ಮಳೆಗಾಲದ ಆರಂಭದಲ್ಲಿ ಹಾಗಲಕಾಯಿ ಬೀಜವನ್ನು ಮೊಳಕೆ ಬರಿಸಲಾಗುವುದು. ಅನಂತರ ಸುಮಾರು ಒಂದೂವರೆ ಅಡಿ ಆಳದ ಗುಂಡಿಯನ್ನು ತೆಗೆದು, ಅದಕ್ಕೆ ಸಗಣಿ, ಬೂದಿ ಮೊದಲಾದ ಗೊಬ್ಬರಗಳನ್ನು ಹಾಕಿ, ಸಸಿಯನ್ನು ನೆಡುವರು. ಹಾಗಲ ಬಳ್ಳಿಯು ಮೇಲಕ್ಕೆ ಬಂದಾಗ, ಅದಕ್ಕೆ ಆಧಾರ ಸ್ತಂಭವಾಗಿ 'ಚರೆ'ಗಳನ್ನು ಊರಿಕೊಡಬೇಕು. ಅನಂತರ ಚಪ್ಪರ ಹಾಕಿ ಬಳ್ಳಿ ವಿಸ್ತಾರವಾಗಿ ಹಬ್ಬಲು ಅನುವು ಮಾಡಿಕೊಡಬೇಕು. ಹಾಗಲಕಾಯಿಗಳನ್ನು ಕೀಟಗಳಿಂದಲೂ, ಪಕ್ಷಿಗಳಿಂದಲೂ ಸಂರಕ್ಷಿಸಲು ಕಾಗದ ಅಥವಾ ವಸ್ತ್ರಗಳಿಂದ ಮುಚ್ಚುವುದು ಉತ್ತಮ.

ಕುಂಬಳಕಾಯಿ ಮತ್ತು ಚೀನಕಾಯಿಗಳ ಕೃಷಿಯು ಕೇರಳದಲ್ಲಿ ಸಾಕಷ್ಟು ನಡೆಯುತ್ತದೆ. ಇವುಗಳ ಬೀಜಗಳನ್ನು ಒಣಗಿಸಿ ಭದ್ರವಾಗಿ ಚೀಲಗಳಲ್ಲಿ ಕಟ್ಟಿ ಜೋಪಾನವಾಗಿಡುತ್ತಾರೆ. ಮೀನಮಾಸದ ಎರಡನೇ ವಾರದಲ್ಲಿ ಈ ಬೀಜಗಳನ್ನು ಮಣ್ಣಿನಲ್ಲಿ ಸಾಲು ತೆಗೆದು ಬಿತ್ತುವರು. ಒಲೆಯ ಬೂದಿ, ಹಟ್ಟಿಯ ಗೊಬ್ಬರ ಮತ್ತು ಸೊಪ್ಪು ಗೊಬ್ಬರಗಳನ್ನು ಬಳಸುವರು. ಸಿಂಹ ಮಾಸದಲ್ಲಿ ಬೆಳೆಯು ಕೈಗೆ ಬರುವುದು. ಈ ಎರಡು ತರಕಾರಿಗಳೂ ಕೇರಳದಲ್ಲಿ ಸಮೃದ್ಧವಾಗಿ ಬೆಳೆಯುತ್ತವೆ.

ಸೌತೆ ಮತ್ತು ಮುಳ್ಳುಸೌತೆ ಕೃಷಿಯು ಕೇರಳದಲ್ಲಿ ವ್ಯಾಪಕವಾಗಿ ನಡೆಯುವುದು. ಬತ್ತದ ಗದ್ದೆಗಳಲ್ಲಿ ಎರಡು ಬೆಳೆಗಳನ್ನು ತೆಗೆದು, ನೀರಿನ ಕೊರತೆ ಇದ್ದರೆ ಮೂರನೇ ಬೆಳೆಯಾಗಿ ತರಕಾರಿ ಕೃಷಿಯನ್ನು ನಡೆಸುವುದು ಸಂಪ್ರದಾಯ. ಇವುಗಳಲ್ಲಿ ಮುಖ್ಯವಾದುದು ಸೌತೆ ಕೃಷಿ. ಗದ್ದೆಯ ಆವೆಮಣ್ಣಿನಲ್ಲಿ ಸಾಲು ತೆಗೆದು, ಸೌತೆ ಬೀಜವನ್ನು ಹಾಕಿ, ಅಗತ್ಯವಾದ ಗೊಬ್ಬರ ಹಾಗೂ ನೀರು ಹನಿಸಿ ಕೃಷಿಯನ್ನು ಮಾಡುವರು. ಮುಳ್ಳುಸೌತೆಯು ಮಳೆಗಾಲದಲ್ಲಿ ಮಾಡುವ ಕೃಷಿಯಾಗಿದೆ.

ಸೊಪ್ಪು ತರಕಾರಿಗಳಲ್ಲಿ ಕೇರಳದಲ್ಲಿ ಪ್ರಧಾನವಾಗಿ ಕಂಡು ಬರುವುದು ಹರಿವೆ ಕೃಷಿ. ಕಡಿಮೆ ಖರ್ಚು ಮತ್ತು ಕಡಿಮೆ ಕಾಲಾವಧಿಯಲ್ಲಿ ಕೃಷಿ ಮಾಡುವ ಸೊಪ್ಪು ತರಕಾರಿ ಇದಾಗಿದ್ದು, ಕೇರಳೀಯರಿಗೆ ಪ್ರಿಯವಾದ ಆಹಾರವೂ ಆಗಿದೆ. ತೇವಾಂಶವಿರುವ ಮಣ್ಣಿನಲ್ಲಿ ಯಾವ ಕಾಲದಲ್ಲಿಯೂ ಹರಿವೆ ಕೃಷಿಯನ್ನು ಮಾಡಬಹುದು. ಸೂರ್ಯ ಕಿರಣಗಳು ಧಾರಾಳವಾಗಿ ಬೀಳುವ ಗದ್ದೆ ಬಯಲುಗಳಲ್ಲಿ ಹರಿವೆ ಸಮೃದ್ಧವಾಗಿ ಬೆಳೆಯುವುದು. ಪ್ರತಿ ಎರಡು ವಾರಗಳಿಗೊಮ್ಮೆ ಹರಿವೆಯ ಬೆಳೆಯನ್ನು ಕಿತ್ತು ಹೊಸ ಬೀಜಗಳನ್ನು ಬಿತ್ತಬಹುದು. ಬೆಂಡೆಕಾಯಿ, ಪಡುವಲಕಾಯಿ, ಹೀರೆಕಾಯಿ ಮೊದಲಾದ ಬೆಳೆಗಳನ್ನು ಹಿತ್ತಲ ಕೃಷಿಯಾಗಿ ಕೇರಳೀಯರು ವ್ಯಾಪಕವಾಗಿ ಬೆಳೆಸುವರು.

ಬೇಸಾಯ ಮುಗಿದ ಗದ್ದೆ ಬಯಲುಗಳಲ್ಲಿ ಮೆಣಸು ಕೃಷಿಯನ್ನು ಮಾಡುವ ಪರಿಪಾಠ ಕೇರಳದಲ್ಲಿ ಹಿಂದೆ ಇತ್ತು. ಗದ್ದೆಯ ಮಣ್ಣಿನಲ್ಲಿ ಸಾಲು ತೆಗೆದು ಸಗಣಿಯ ನೀರಿನಲ್ಲಿ ಮುಳುಗಿಸಿದ ಮೆಣಸಿನ ಗಿಡಗಳನ್ನು ನೆಡುವರು. ಮೆಣಸು ಕೃಷಿಗೆ ಸುಡುಮಣ್ಣಿನ ಬೂದಿ ಹಾಗೂ ಹಟ್ಟಿಗೊಬ್ಬರವನ್ನು ಬಳಸುವರು. ಬೇಸಗೆಯಲ್ಲಿ ಮಾಡುವ ಈ ಕೃಷಿಗೆ ಪ್ರತಿ ದಿವಸ ನೀರು ಹನಿಸಬೇಕಾದುದು ಅಗತ್ಯ. ಪ್ರಾಚೀನ ಕಾಲದಲ್ಲಿಯೇ ಕೇರಳದಲ್ಲಿ ತರಕಾರಿ ಕೃಷಿ ವ್ಯಾಪಕವಾಗಿತ್ತು ಎಂಬುದಕ್ಕೆ ಜನಪದ ಹಾಡುಗಳಲ್ಲಿ ಕೃಷಿಪಾಟುಗಳಲ್ಲಿ ಉದಾಹರಣೆಗಳು ದೊರಕುತ್ತವೆ. ಓಣಂ, ವಿಷು ಮೊದಲಾದ ಹಬ್ಬಗಳನ್ನು ಸಂಭ್ರಮ, ಸಡಗರಗಳಿಂದ ಆಚರಿಸುವ ಕೇರಳೀಯರು ಹಬ್ಬಗಳ ಔತಣಗಳಿಗೆ ತಾವು ಬೆಳೆದ ತರಕಾರಿಗಳನ್ನು ಬಳಸುತ್ತಿದ್ದರು. ವಿಷುಕಣಿಯ ಸಂಪ್ರದಾಯವು ಕೃಷಿ ಸಂಸ್ಕೃತಿಯ ಪಳೆಯುಳಿಕೆಯಾಗಿ ಕಂಡುಬರುತ್ತದೆ.

ಕೇರಳದ ಕೃಷಿ ಸಂಬಂಧಿ ಆಚರಣೆಗಳು : ಬತ್ತದ ಬೇಸಾಯವು ಕೇರಳೀಯ ಜನಸಮುದಾಯದ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದೆ. ಬೇಸಾಯ ಚಟುವಟಿಕೆ ಹಾಗೂ ಅದರ ಹಿಂದಿರುವ ನಂಬಿಕೆಗಳು ಸಾಂಸ್ಕೃತಿಕ ಆಚರಣೆಗಳಾಗಿ, ಕೃಷಿ ಸಂಬಂಧಿ ಹಬ್ಬಗಳಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಗದ್ದೆಯ ಉಳುಮೆ ಮತ್ತು ಬೀಜ ಬಿತ್ತನೆಯಿಂದ ತೊಡಗಿ, ಬತ್ತದ ಕೊಯ್ಲು ಮತ್ತು ಧಾನ್ಯ ಸಂಗ್ರಹದವರೆಗಿನ ಬೇಸಾಯದ ಪ್ರತಿಯೊಂದು ಹಂತವೂ ಅನೇಕ ನಂಬಿಕೆ ಹಾಗೂ ಆಚರಣೆಗಳ ಮೂಲಕ ಅನಾವರಣಗೊಳ್ಳುವುದನ್ನು ಕಾಣಬಹುದು. ವಿಷು ಮತ್ತು ಓಣಂ ಕೇರಳದ ಎರಡು ಪ್ರಮುಖ ಹಬ್ಬಗಳಾಗಿವೆ. ಇವೆರಡು ಹಬ್ಬಗಳೂ ಕೃಷಿ ಸಂಸ್ಕೃತಿಯೊಂದಿಗೆ ನೇರ ಸಂಬಂಧವನ್ನು ಹೊಂದಿವೆ. ಸೌರಮಾನ ಪದ್ಧತಿಯ ಮೇಷಮಾಸದ ಮೊದಲ ದಿನವನ್ನು ವಿಷುಹಬ್ಬವಾಗಿ ಆಚರಿಸುವರು. ಮೇಷಮಾಸವು ಕೇರಳೀಯರ ವರ್ಷಾರಂಭವೂ ಹೌದು. ಹಾಗಾಗಿ ವಿಷು ಕೇರಳದ ಸೌರಮಾನ ಯುಗಾದಿ ಹಬ್ಬ. ಹಿಂದಿನ ಕಾಲದಲ್ಲಿ ವಿಷು ಸಂಕ್ರಮಣದೊಂದಿಗೆ ಕೇರಳದಲ್ಲಿ ಕೃಷಿಯ ಚಟುವಟಿಕೆಗಳು ಆರಂಭಗೊಳ್ಳುತ್ತಿದ್ದುವು. ವಿಷು ಹಬ್ಬದ ದಿವಸ ಮುಂಜಾನೆ ಕೇರಳದ ದೇವಾಲಯಗಳಲ್ಲಿ, ತರವಾಡು ಮನೆಗಳಲ್ಲಿ ಹಾಗೂ ಹಳ್ಳಿಹಳ್ಳಿಯ ಮನೆಮನೆಗಳಲ್ಲಿ 'ವಿಷುಕಣಿ' ಇಡುವ ಸಂಪ್ರದಾಯವಿದೆ. ತಾವು ಬೆಳೆದಂತಹ ತರಕಾರಿಗಳನ್ನು, ಫಲವಸ್ತುಗಳನ್ನು, ಕೃಷಿ ಉತ್ಪನ್ನಗಳನ್ನು ಹಾಗೂ ಮಂಗಳಕರ ವಸ್ತುಗಳನ್ನು ದೇವರ ಮುಂದಿರಿಸಿ ಕಣಿ ದರ್ಶನವನ್ನು ಪಡೆಯುವುದು ವಿಷುಕಣಿಯ ಉದ್ದೇಶ. ವರ್ಷಾರಂಭದಲ್ಲಿ ತಾವು ಬೆಳೆದ ಬೆಳೆಗಳನ್ನು ದೇವರಿಗೆ ಸಮರ್ಪಿಸಿ, ಅವುಗಳ ಶುಭದರ್ಶನವನ್ನು ಪಡೆದು, ಇಡೀ ವರ್ಷ ಸಮೃದ್ಧವಾಗಿರಲಿ ಎಂದು ಹಾರೈಸುವ ಆಶಯದ ಈ ಹಬ್ಬವು ವಿಶಿಷ್ಟವಾಗಿದೆ.

ವಿಷು ಸಂಕ್ರಮಣದ ದಿವಸ ರಾತ್ರಿ ತರವಾಡಿನ ಅಥವಾ ಮನೆಯ ಹಿರಿಯ ವ್ಯಕ್ತಿ ಕಣಿಯ ವಸ್ತುಗಳನ್ನು ಸಿದ್ಧಪಡಿಸುವರು. ವಿಷು ಹಬ್ಬದ ಮುಂಜಾನೆ ಸುಮಾರು ಮೂರು ಗಂಟೆಗೆ ಮಿಂದು ಮಡಿಯುಟ್ಟು, ದೇವರಕೋಣೆಯಲ್ಲಿ ದೀಪ ಬೆಳಗಿಸಿ, ಕಣಿಯ ವಸ್ತುಗಳನ್ನು ಜೋಡಿಸುವರು. ದೇವಾಲಯಗಳಲ್ಲಿ ಅರ್ಚಕರು ಈ ಕೆಲಸವನ್ನು ಮಾಡುವರು. ಎರಡು ಮಣ್ಣಿನ ಮಡಕೆಗಳಲ್ಲಿ ಬತ್ತ ಹಾಗೂ ಅಕ್ಕಿಯನ್ನು ತುಂಬಿಸಿಡುವರು. 'ಉರುಳಿ' ಎಂಬ ಕಂಚಿನ ಪಾತ್ರೆಯಲ್ಲಿ ಸೌತೆಕಾಯಿ, ಚೀನಿಕಾಯಿ, ಮಾವು, ಹಲಸು ಮೊದಲಾದ ತರಕಾರಿ ಹಾಗೂ ಫಲವಸ್ತುಗಳನ್ನೂ ಅಚ್ಚುಕಟ್ಟಾಗಿ ಜೋಡಿಸುವರು. ಇವುಗಳಿಗೆ ಅಲಂಕಾರವೆನ್ನುವಂತೆ ಕಣಿಕೊನ್ನ (ಕೊಂದೆಹೂವಿನ ಗೊಂಚಲು)ವನ್ನು ಇಡುವರು. ಅನಂತರ ಆರತಿ ಬೆಳಗಿ, ಕುಟುಂಬದ ಸದಸ್ಯರೆಲ್ಲರೂ ಕಣಿದರ್ಶನವನ್ನು ಪಡೆಯುವರು. ಕಣಿದರ್ಶನದ ಅನಂತರ ಕಿರಿಯರು ಹಿರಿಯರ ಕಾಲಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುವರು. ಕುಟುಂಬದ ಯಜಮಾನ ಮನೆಯ ಸದಸ್ಯರಿಗೆ 'ವಿಷುಕೈನೀಟ್ಟಂ' (ಉಡುಗೊರೆ) ನೀಡುವ ಸಂಪ್ರದಾಯವಿತ್ತು.

ವಿಷುವಿನ ದಿವಸ ಬೆಳಿಗ್ಗೆ ಕೃಷಿ ಚಟುವಟಿಕೆಗಳಿಗೆ ನಾಂದಿ ಹಾಡುವ ವಿಧಿಗಳನ್ನು ಆಚರಿಸುತ್ತಿದ್ದರು. ಕಣಿದರ್ಶನದ ಅನಂತರ ಮನೆಯ ಯಜಮಾನನು ಯುವಕರನ್ನು ಕರೆದುಕೊಂಡು ಗದ್ದೆಗೆ ಹೋಗುವನು. ಗದ್ದೆಯ ಈಶಾನ್ಯ ಮೂಲೆಯಲ್ಲಿ ಸ್ಥಳ ಶುದ್ಧಿ ಮಾಡಿ, ಗಣಪತಿ ಪೂಜೆ ನೆರವೇರಿಸುವನು. ಅನಂತರ ಕಾಸರಕನ ಮರದ ಎಲೆಗಳಲ್ಲಿ ಬತ್ತದ ಬೀಜಗಳನ್ನಿರಿಸಿ, ಗದ್ದೆಯಲ್ಲಿ ಬಿತ್ತುವ ಮೂಲಕ ಗದ್ದೆ ಬೇಸಾಯಕ್ಕೆ ನಾಂದಿ ಹಾಡುವನು. ಹೀಗೆ ಕೇರಳೀಯರಿಗೆ ವಿಷು ಹಬ್ಬವು ಬತ್ತ ಬೇಸಾಯದ ಆರಂಭವೂ ಆಗಿತ್ತು.

ದಕ್ಷಿಣ ಕೇರಳದಲ್ಲಿ ವಿಷು ಹಬ್ಬದ ಕೃಷಿ ಸಂಬಂಧೀ ಆಚರಣೆಯ ಸ್ವಲ್ಪ ಭಿನ್ನವಾಗಿದೆ. ಈ ಪ್ರದೇಶಗಳಲ್ಲಿ ವಿಷುಹಬ್ಬ ಕಳೆದ ಹತ್ತನೇ ದಿವಸ ಬೇಸಾಯದ ಕೆಲಸಗಳನ್ನು ಆರಂಭಿಸುವರು. ಮೇಷಮಾಸದ ಹತ್ತನೇ ದಿವಸಕ್ಕೆ 'ಪತ್ತಾಮುದಯಂ' ಎಂದು ಹೆಸರು. ಆ ದಿವಸ ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು, ಮಿಂದು, ಜಾನುವಾರುಗಳನ್ನು ಮೀಯಿಸಿ, ಆರತಿ ಬೆಳಗಿ ಅವುಗಳಿಗೆ ಆಹಾರವನ್ನು ನೀಡುವರು. ಅನಂತರ ಎತ್ತುಗಳೊಂದಿಗೆ ಗದ್ದೆಗೆ ತೆರಳಿ ಸೂರ್ಯನಿಗೆ ವಂದಿಸಿ, ಉಳುಮೆಯ ಕೆಲಸವನ್ನು ಆರಂಭಿಸುವರು. ಆದರೆ ಉತ್ತರ ಕೇರಳದಲ್ಲಿ ತುಲಾಮಾಸ ಹತ್ತರಂದು ಪತ್ತಾಮುದಯದ ಆಚರಣೆಗಳು ಜರುಗುತ್ತವೆ. ಇದನ್ನು 'ತುಲಾಪತ್ತ್' ಎಂದು ಹೇಳುವರು.

ಪತ್ತಾಮುದಯದ ದಿವಸ ಕೃಷಿ ಕೆಲಸಗಳನ್ನು ಆರಂಭಿಸುವ ವಿಧಿಗಳನ್ನು ಆಚರಿಸಲು ಅಸಾಧ್ಯವಾದರೆ, ಜ್ಯೋತಿಷಿಗಳ ಮೂಲಕ ಮುಹೂರ್ತವನ್ನು ತಿಳಿದೇ ಕೃಷಿಯನ್ನು ಆರಂಭಿಸಬೇಕು ಎಂಬುದು ಕೇರಳೀಯರ ನಂಬಿಕೆಯಾಗಿತ್ತು. ಗದ್ದೆ ಬೇಸಾಯವನ್ನು ಆರಂಭಿಸುವ ದಿವಸ ಮನೆಯ ಯಜಮಾನ ಅಂಗಳದಲ್ಲಿ ದೀಪವನ್ನು ಬೆಳಗಿಸಿ, ಬುಟ್ಟಿಯಲ್ಲಿ ತುಂಬಿಸಿದ ಬಿತ್ತನೆ ಬೀಜಗಳನ್ನು ಪೂಜಿಸುವನು. ಅನಂತರ ಅಲಂಕರಿಸಿದ ಎತ್ತುಗಳೊಂದಿಗೆ ಗದ್ದೆಗೆ ತೆರಳಿ, ಗದ್ದೆ ಬದಿಯಲ್ಲಿ ಗಣಪತಿಗೆ ಪೂಜೆಯನ್ನು

ಸಲ್ಲಿಸುವನು. ಹೊಲೆಯ ಜಾತಿಗೆ ಸೇರಿದ ಒಕ್ಕಲಿನವರು ಎತ್ತುಗಳನ್ನು ನೇಗಿಲಿಗೆ ಹೂಡಿ ಉಳುವ ಕ್ರಿಯೆಯನ್ನು ಆರಂಭಿಸುವರು. ನೇಗಿಲು ಹೂಡಿ ಉಳುವ ವ್ಯಕ್ತಿಯನ್ನು 'ತಲಪುಲಯನ್' ಎಂದು ಕರೆಯುತ್ತಾರೆ. ಗದ್ದೆಯನ್ನು ಉತ್ತ ಅನಂತರ ಗೊಬ್ಬರವನ್ನು ಹಾಕಿ, ಬೀಜಗಳನ್ನು ಬಿತ್ತುವನು. ಈ ಸಂದರ್ಭದಲ್ಲಿ ಅವರು ಯಜಮಾನನ ಆರೋಗ್ಯ ಹಾಗೂ ಸಂಪತ್ತಿಗಾಗಿ ಪ್ರಾರ್ಥಿಸುವ ಹಾಡುಗಳನ್ನು ಹಾಡುವರು. ಈ ವಿಧಿಯಾಚರಣೆಗಳೆಲ್ಲ ಮುಗಿದು, ಉಳಿದ ಬಿತ್ತನೆ ಬೀಜಗಳನ್ನು ಆಚರಣೆಯಲ್ಲಿ ಬಾಗಿಯಾದ ನಿರ್ದಿಷ್ಟ ವ್ಯಕ್ತಿಗಳಿಗೆ ಹಂಚುತ್ತಿದ್ದರು. ಅನಂತರ ತೆಂಗಿನಕಾಯಿಯನ್ನು ಒಡೆದು ಫಲಸಿದ್ಧಿಯನ್ನು ನೋಡುವ ಪರಿಪಾಠವೂ ಇತ್ತು.

ವಿಷು ಹಬ್ಬದ ದಿವಸ 'ಪಣಿಕ್ಕ' ಸಮುದಾಯದವರು ಜಮೀನ್ದಾರರಿಗೆ ಬೇಸಾಯವನ್ನು ಆರಂಭಿಸುವ ನಿರ್ದಿಷ್ಟ ದಿನಾಂಕವನ್ನು ಓಲೆಗರಿಯಲ್ಲಿ ಬರೆದುಕೊಡುವ ಸಂಪ್ರದಾಯವಿತ್ತು. ಇದನ್ನು 'ಕೈಕೋಟ್ ಚೋಲ' ಎನ್ನುವರು. ನಿರ್ದಿಷ್ಟ ಮುಹೂರ್ತದ ದಿವಸ ಎತ್ತುಗಳನ್ನು ಮೀಯಿಸಿ, ಅಲಂಕರಿಸಿ, ಮೆರವಣಿಗೆಯಲ್ಲಿ ಗದ್ದೆಗೆ ತೆರಳಿ ಉಳುಮೆಯನ್ನು ಆರಂಭಿಸುತ್ತಿದ್ದರು. ಗದ್ದೆ ಉಣಿಯಲ್ಲಿ ಗಣಪತಿಗೆ ಪೂಜೆಯನ್ನು ಸಲ್ಲಿಸಿ, ಕೊನ್ನೆ ಹೂವಿನೊಂದಿಗೆ ಬೀಜಗಳನ್ನು ಬಿತ್ತುತ್ತಿದ್ದರು.

ಓಣಂ ಕೇರಳದ ಅಧಿಕೃತವಾದ ರಾಷ್ಟ್ರೀಯ ಹಬ್ಬ. ಜಾತಿಮತಭೇದವಿಲ್ಲದೆ ಕೇರಳೀಯರೆಲ್ಲರೂ ಆಚರಿಸುವ ಓಣಂ ಹಬ್ಬವು ಮೂಲತಃ ಕೃಷಿಯ ಉತ್ಸವವಾಗಿದೆ. ಬೇಸಾಯದ ಆರಂಭದ ಚಟುವಟಿಕೆಗಳೆಲ್ಲ ಮುಗಿದು, ಗದ್ದೆಬಯಲುಗಳೆಲ್ಲ ಸಮೃದ್ಧಿಯಿಂದ ತೊನೆದಾಡುವ ಕಾಲದಲ್ಲಿ ಓಣಂ ಹಬ್ಬದ ಆಗಮನವಾಗುತ್ತದೆ. ಸಿಂಹಮಾಸದ ಹಸ್ತ ನಕ್ಷತ್ರದಿಂದ ಆರಂಭಗೊಂಡು ಹತ್ತು ದಿವಸಗಳ ಕಾಲ ಓಣಂ ಸಂಭ್ರಮ. ಪೂಕಳಂ, ತಿರುವಾದಿರಕಳಿ, ಉಯ್ಯಾಲೆ ಆಟ, ಓಣತಲ್ಲ್, ದೋಣಿಸ್ಪರ್ಧೆ ಮೊದಲಾದ ಅಂಶಗಳೆಲ್ಲ ಕೃಷಿ ವಿರಾಮದ ವಿನೋದಗಳಾಗಿ ಕಂಡುಬರುತ್ತವೆ. ಪೌರಾಣಿಕ ಹಿನ್ನೆಲೆಯ ಕಥೆಗಳೇನಿದ್ದರೂ, ಓಣಂ ಆಚರಣೆಯ ವಿಧಿವಿಧಾನಗಳು ಕೇರಳದ ಕೃಷಿ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ.

ಬತ್ತದ ಕೊಯಿಲು ಹಾಗೂ ಕೊಯಿಲಿನ ಅನಂತರದಲ್ಲಿ ಕೇರಳದಲ್ಲಿ ಅನೇಕ ಸಾಂಸ್ಕೃತಿಕ ಆಚರಣೆಗಳು ಕಂಡುಬರುತ್ತವೆ. ಬತ್ತದ ಗದ್ದೆಗಳು ಕೊಯ್ಲಿಗೆ ಸಿದ್ಧವಾದ ಸಂದರ್ಭದಲ್ಲಿ 'ಪುಳ್ಳುವ' ಸಮುದಾಯದವರು ಪ್ರತಿಯೊಬ್ಬ ರೈತನ ಗದ್ದೆಹುಣಿಗಳಲ್ಲಿ ಕುಳಿತು, ಪುಳ್ಳುವವೀಣೆಯೊಂದಿಗೆ ಸಮೃದ್ಧಿಸೂಚಕ ಹಾಡುಗಳನ್ನು ಹಾಡುತ್ತಿದ್ದರು. ಇದನ್ನು 'ಕಟ್ಟಪ್ಪಾಟ್' ಎಂದು ಕರೆಯುವರು. ಕೃಷಿಯ ಆರಂಭ, ಪುರಾಣ, ಬತ್ತದ ಬೀಜವೈವಿಧ್ಯ ಮೊದಲಾದ ವಿವರಗಳು ಈ ಹಾಡುಗಳಲ್ಲಿವೆ.

ಕೊಯ್ಲಿಗಿಂತ ಮುಂಚಿತವಾಗಿ ಹೊಸ ಬತ್ತದ ತೆನೆಗಳನ್ನು ಮನೆಯೊಳಗೆ ವಿಧಿಯುಕ್ತವಾಗಿ ಸಾಗಿಸುವ ಮಂಗಳಕರವಾದ ಆಚರಣೆಯನ್ನು 'ಇಲ್ಲಂ ನಿರಯ್ಕಲ್' ಅಥವಾ 'ಪುರ ನಿರಯ್ಕಲ್' ಎಂದು ಹೇಳುವರು. ಬತ್ತದ ತೆನೆಯನ್ನು ಲಕ್ಷ್ಮಿಯ ಅಥವಾ ಭಗವತಿಯ ಪ್ರತಿರೂಪ ಎಂದು ನಂಬಲಾಗಿದೆ. ಗದ್ದೆಗಳಿಂದ ಸಂಗ್ರಹಿಸಿದ ತೆನೆಗಳನ್ನು ಅಂಗಳದಲ್ಲಿ ಪೂಜಿಸಿ, ಫಲಭರಿತ ವೃಕ್ಷಗಳ ಎಲೆಗಳಲ್ಲಿ ಸುತ್ತಿ, ಪೊಲಿಬಳ್ಳಿಯಿಂದ ಬಿಗಿದು, ಬತ್ತದ ಕಣಜ, ಹಣದ ಪೆಟ್ಟಿಗೆ, ತೊಟ್ಟಿಲು, ಜಾನುವಾರು ಹಟ್ಟಿ ಹಾಗೂ ತೆಂಗು, ಕಂಗು, ಹಲಸು, ಮಾವು ಮೊದಲಾದ ಫಲವೃಕ್ಷಗಳಿಗೆ ಕಟ್ಟುವರು. 'ನಿರ, ನಿರ, ಪೊಲಿ, ಪೊಲಿ' ಎಂಬ ಉದ್ಘೋಷದೊಂದಿಗೆ ಮನೆಯ ಯಜಮಾನನು ಈ ವಿಧಿಗಳನ್ನು ನೆರವೇರಿಸುವನು. ಇದು ಸಮೃದ್ಧಿಸೂಚಕವಾದ ಆಚರಣೆಯಾಗಿದ್ದು, ಫಲವಂತಿಕೆಯ ಆರಾಧನೆಯೂ ಆಗಿದೆ.

ಬತ್ತದ ಕೊಯ್ಲು ಕೇರಳದಲ್ಲಿ ಹಿಂದೆ ಅತ್ಯಂತ ಸಂಭ್ರಮದ ಆಚರಣೆಯಾಗಿತ್ತು. ಕೊಯಿಲಿನ ದಿವಸ ಮನೆಯ ಯಜಮಾನ ಮಿಂದು, ಮಡಿಯುಟ್ಟು, ದೀಪದೊಂದಿಗೆ ಗದ್ದೆಗೆ ಆಗಮಿಸಿ 'ಪೊಲಿ ಪೊಲಿ' ಉದ್ಘೋಷದೊಂದಿಗೆ ಕೊಯಿಲು ಆರಂಭಿಸುವನು. ಕೊಯ್ಲಿನ ಕತ್ತಿಯೊಂದಿಗೆ ಗದ್ದೆಗಿಳಿಯುವ ಯಜಮಾನ ಕಾಸರಕನ ಎಲೆಗಳನ್ನು ಕೈಯಲ್ಲಿ ಹಿಡಿದು, ಪೈರುಗಳನ್ನು ಕಟಾವು ನಡೆಸುವನು. ಹೀಗೆ ಮೊದಲು ಕಟಾವು ಮಾಡಿದ ಪೈರುಗಳ ಕಟ್ಟವನ್ನು ಪೊಲಿ ಘೋಷದೊಂದಿಗೆ ಮನೆಗೆ ಸಾಗಿಸುವರು.

ಕೇರಳದಲ್ಲಿ ಮೊದಲ ಕೊಯ್ಲಿನ ಸಂಭ್ರಮದ ಅನಂತರ ಹೊಸ ಅಕ್ಕಿಯ ಊಟವನ್ನು ಮಾಡುವ ಸಂಪ್ರದಾಯವಿದೆ. ಇದನ್ನು 'ಪುತ್ತರಿ' ಎಂದು ಕರೆಯುವರು. ಪುತ್ತರಿಗೆ ವಿಶೇಷವಾದ ಔತಣವಿದೆ. ಕುಟುಂಬದ ಸದಸ್ಯರೆಲ್ಲರೂ ಒಂದುಗೂಡಿ ಔತಣಕೂಟದಲ್ಲಿ ಭಾಗವಹಿಸುವ ಈ ಆಚರಣೆಯ ಹಿಂದೆ ಕೇರಳೀಯ ಸಮಾಜದ ಸಾಂಘಿಕ ಪ್ರಜ್ಞೆಯನ್ನು ಮನಗಾಣಬಹುದು. ಪುತ್ತರಿಯ ದಿವಸ ಊಟಕ್ಕಿಂತ ಮೊದಲು 'ಪುತ್ತರಿಯುಂಡ' ಎಂಬ ಸಿಹಿತಿಂಡಿಯನ್ನು ವಿತರಿಸುವರು. ಹೊಸ ಅಕ್ಕಿ, ಬೆಲ್ಲ, ತೆಂಗಿನಕಾಯಿ ತುರಿ, ತುಪ್ಪ ಮತ್ತು ಜೇನುತುಪ್ಪವನ್ನು ಸೇರಿಸಿ ಈ ಸಿಹಿತಿಂಡಿಯನ್ನು ತಯಾರಿಸುವರು. ತರವಾಡು ಮನೆಗಳಲ್ಲೂ, ದೇವಸ್ಥಾನಗಳಲ್ಲೂ ಪುತ್ತರಿ ಆಚರಣೆಗಳು ವಿಭಿನ್ನವಾಗಿ ನಡೆಯುವುವು.

ಉತ್ತರ ಕೇರಳದಲ್ಲಿ ಮಕರಮಾಸದ ಕೊನೆಯಲ್ಲಿ 'ಏರ್ಪ್' ಎಂಬ ಆಚರಣೆ ಇದೆ. ತೊಗರಿ, ಉದ್ದು, ಅಕ್ಕಿ ಮೊದಲಾದ ಧಾನ್ಯಗಳನ್ನು ಬೇಯಿಸಿ ತಯಾರಿಸಿದ ವಿಶಿಷ್ಟ ತಿಂಡಿಗೆ 'ಏರ್ಪ್‌ಪುಳುಕ್ಕ್' ಎಂದು ಹೆಸರು. ಈ ಪದಾರ್ಥವನ್ನು ಒಂದು ಕೊಡಿಯೆಲೆಯಲ್ಲಿ ಹಾಕಿ ಬಯಲಿನಲ್ಲಿ ಇರುವರು. ಇದು ಪ್ರಕೃತಿಯನ್ನು ಪೂಜಿಸುವ ಫಲವಂತಿಕೆಯ ಆಚರಣೆಯಾಗಿದೆ.

ಬೇಸಾಯ ಋತುಚಕ್ರದ ಕೊನೆಯ ಹಂತದಲ್ಲಿ ಕೇರಳದಲ್ಲಿ 'ಉಚ್ಚೇರ' ಎಂಬ ಆಚರಣೆ ಕಂಡುಬರುತ್ತದೆ. ಭೂಮಿದೇವಿ ಋತುಮತಿಯಾಗುವಳೆಂಬ ನಂಬಿಕೆಯ ಹಿನ್ನೆಲೆಯ ಈ ಆಚರಣೆಯು ತುಳುನಾಡಿನ 'ಕೆಡ್ಡೆಸ'ವನ್ನು ನೆನಪಿಸುತ್ತದೆ. ಬೇಸಾಯದ ಎರಡನೇ ಬೆಳೆಯ ಕೊಯ್ಲು ಮುಗಿದು, ಬೇಸಗೆ ಕಾಲದ ಆರಂಭದಲ್ಲಿ ಈ ಆಚರಣೆಯು ನಡೆಯುವುದು. ಮೂರು ದಿವಸಗಳ ಕಾಲ ನಡೆಯುವ ಈ ಹಬ್ಬದಲ್ಲಿ ಅನೇಕ ವಿಧಿನಿಷೇಧಗಳು ಚಾಲ್ತಿಯಲ್ಲಿವೆ. ಈ ಆಚರಣೆಯ ಮೊದಲ ದಿನ ಬತ್ತದ ಕಣಜವನ್ನು ಮುಚ್ಚುವರು. ಈ ಮೂರು ದಿವಸಗಳಲ್ಲಿ ಬೇಸಾಯದ ಕೆಲಸಗಳನ್ನು ಮಾಡಬಾರದು. ಬತ್ತದ ವ್ಯಾಪಾರ, ವ್ಯವಹಾರಗಳನ್ನು ನಡೆಸಬಾರದು. ಕೃಷಿ ಸಲಕರಣೆಗಳನ್ನು ಮುಟ್ಟಬಾರದು. ಭೂಮಿತಾಯಿಗೆ ವಿಶ್ರಾಂತಿಯನ್ನು ಕೊಡುವ ನಂಬಿಕೆಯ ಹಿನ್ನೆಲೆಯಲ್ಲಿ ಈ ಆಚರಣೆಗಳು ಬಂದಿರಬೇಕು. ನಾಲ್ಕನೇ ದಿವಸ ಎತ್ತಿನ ಪ್ರತಿರೂಪಗಳನ್ನು ಪಕ್ಕದ ಭಗವತಿ ಕ್ಷೇತ್ರಗಳಿಗೆ ಕೊಂಡೊಯ್ಯುವ ವಿಧಿ ಇದೆ.

ಕರ್ಕಾಟಕ ಮಾಸದಲ್ಲಿ 'ಶಿವೋದಿ'ಯನ್ನು ಸ್ವಾಗತಿಸುವ ಆಚರಣೆ ಇದೆ. ಶಿವೋದಿ ಎಂದರೆ ಶ್ರೀ ಭಗವತಿ. ಸಮೃದ್ಧಿಯ ದೇವತೆ. ಕರ್ಕಾಟಕ

ಮಾಸದ ದಾರಿದ್ರ್ಯವನ್ನು ಹೊರದೂಡಿ, ಸಮೃದ್ಧಿಯನ್ನು ಸ್ವಾಗತಿಸುವ ನಂಬಿಕೆಯ ಈ ಆಚರಣೆಯು ವಿಶಿಷ್ಟವಾಗಿದೆ. ಸಂಜೆಯ ಹೊತ್ತು ಕನ್ನಡಿ, ಕಲಶ ಮತ್ತು ದಶಪುಷ್ಪಗಳೊಂದಿಗೆ ಶ್ರೀಭಗವತಿಯನ್ನು ಮನೆಯೊಳಗೆ ಆಹ್ವಾನಿಸುವರು. ಕೊಯ್ಲು ಮುಗಿದ ಮೇಲೆ ರೈತರೆಲ್ಲ ಕೃಷಿಯ ಸಮೃದ್ಧಿಗಾಗಿ ದೇವರನ್ನು ಸಂತುಷ್ಟಗೊಳಿಸುವ 'ವೇಲ' ಎಂಬ ಹಬ್ಬವನ್ನು ಆಚರಿಸುತ್ತಿದ್ದರು. ಬಿತ್ತನೆ ಬೀಜಗಳನ್ನು ಪೂಜಿಸಿ, ದೇವರಿಗೆ ಅರ್ಪಿಸುವುದು ಈ ಹಬ್ಬದ ವೈಶಿಷ್ಟ್ಯವಾಗಿದೆ.

ಕೇರಳದ ಹಬ್ಬಗಳು, ಆಚರಣೆಗಳೆಲ್ಲ ಕೃಷಿ ಸಂಸ್ಕೃತಿಯೊಂದಿಗೆ ನಿಕಟವಾದ ಸಂಬಂಧವನ್ನು ಇರಿಸಿಕೊಂಡಿರುವುದನ್ನು ಕಾಣಬಹುದು. ಬದಲಾದ ಸಾಮಾಜಿಕ ಜೀವನದಲ್ಲಿ ಇಂತಹ ಸಾಂಸ್ಕೃತಿಕ ಆಚರಣೆಗಳು ಕ್ರಮೇಣ ಮರೆಯಾಗುತ್ತಿದ್ದು, ಕೇವಲ ಕೃಷಿ ಪಳೆಯುಳಿಕೆಗಳಾಗಿ ಉಳಿದುಕೊಂಡಿವೆ.

ಬತ್ತದ ಬೇಸಾಯ : ಅಕ್ಕಿ ಕೇರಳೀಯರ ಮುಖ್ಯ ಆಹಾರ. ಪ್ರಾಚೀನ ಕಾಲದಿಂದಲೇ ಕೇರಳದಲ್ಲಿ ಬತ್ತದ ಬೇಸಾಯವು ವ್ಯಾಪಕವಾಗಿತ್ತು ಎಂಬುದಕ್ಕೆ ಕೇರಳದ ಜನಪದ ಹಾಡುಗಳು, ತೋಟ್ಟಂ ಪಾಟುಗಳು ಹಾಗೂ ಆರಾಧನ ಕಲೆಗಳು ಸಾಕ್ಷಿ ನುಡಿಯುತ್ತವೆ. ಆಧುನಿಕ ಕಾಲದಲ್ಲಿ ಬತ್ತದ ಗದ್ದೆಗಳು, ಬಯಲು ಮರೆಯಾಗುತ್ತಿದ್ದರೂ, ಬೇಸಾಯ ಸಂಬಂಧಿ ಆಚರಣೆಗಳು, ಹಬ್ಬಗಳು, ಆರಾಧನೆಗಳು ಉಳಿದುಕೊಂಡು ಬಂದಿವೆ. ಆ ಮೂಲಕ ಬೇಸಾಯದ ಕುರುಹುಗಳು ಕೇರಳದ ಸಂಸ್ಕೃತಿಯಲ್ಲಿ ಪಳೆಯುಳಿಕೆಯಾಗಿ ಕಾಣಿಸಿಕೊಳ್ಳುತ್ತಿದೆ. ಕೇರಳದ ಆಲಪ್ಪುಳ, ಕುಟ್ಟಪಾಡು ಪಾಲಕಾಡು,ತ್ರಿಶ್ಶೂರು ಮೊದಲಾದ ಪ್ರದೇಶಗಳಲ್ಲಿ ಬತ್ತದ ಕೃಷಿಯು ಇಂದಿಗೂ ವ್ಯಾಪಕವಾಗಿ ನಡೆಯುತ್ತಿದೆ.

ಕೇರಳದ ಹಳ್ಳಿಹಳ್ಳಿಗಳಲ್ಲಿ ಹಿಂದೆ ಸಾಕಷ್ಟು ಬತ್ತದ ಗದ್ದೆಗಳಿದ್ದುವು. ಕೃಷಿಯನ್ನು ಉಪಜೀವನ ಮಾರ್ಗವಾಗಿ ಸ್ವೀಕರಿಸಿಕೊಂಡ ಜನರು ಈ ಗದ್ದೆಗಳನ್ನು ಸಮೃದ್ಧ ಬೆಳೆಯನ್ನು ತೆಗೆಯುತ್ತಿದ್ದರು. ಗದ್ದೆಗಳನ್ನು ಕೃಷಿ ಮಾಡದೆ ಪಡಿಲು ಹಾಕುವ ಕ್ರಮವಿರಲಿಲ್ಲ. ಜಮೀನ್ದಾರಿ ಪದ್ಧತಿ ಜಾರಿಯಲ್ಲಿದ್ದ ಕಾಲದಲ್ಲಿ ಒಕ್ಕಲುಗಳಿಗೆ ಜಮೀನ್ದಾರರು ಗೇಣಿಗೆ ಗದ್ದೆಗಳನ್ನು ಒದಗಿಸುತ್ತಿದ್ದರು. ಹೀಗೆ ಗದ್ದೆ ಬೇಸಾಯವು ಪ್ರಾಚೀನ ಕಾಲದಿಂದಲೇ ಕೇರಳದಲ್ಲಿ ಜೀವಂತವಾಗಿತ್ತು. 1971ರಲ್ಲಿ ಕೇರಳದಲ್ಲಿ ಭೂಪರಿಷ್ಕರಣ ನಿಯಮವು ಜಾರಿಗೆ ಬಂತು. ಉಳುವವನೇ ಹೊಲದೊಡೆಯ ಎಂಬ ನೀತಿಯಂತೆ ಎಲ್ಲರಿಗೂ ಭೂಮಿಯ ಹಕ್ಕುಪತ್ರಗಳು ಸಿಕ್ಕಿದುವು. ಕ್ರಮೇಣ ಆರ್ಥಿಕ ಲಾಭವಿರುವ ಕೃಷಿಯ ಕಡೆಗೆ ಕೇರಳದ ಕೃಷಿಕರು ಹೊರಳಿಕೊಂಡರು. ಬತ್ತದ ಕೃಷಿಯ ಬದಲಿಗೆ ನಾಣ್ಯ ಬೆಳೆಗಳಾದ ಕಂಗು, ಚಾ, ರಬ್ಬರ್, ಗೇರುಬೀಜ ಮೊದಲಾದ ಕೃಷಿಗಳಲ್ಲಿ ರೈತರು ಆಸಕ್ತರಾದರು. ಬತ್ತದ ಕೃಷಿಗೆ ಕಾರ್ಮಿಕರ ಕೊರತೆಯುಂಟಾಯಿತು. ಕಾರ್ಮಿಕ ಸಂಘಟನೆಗಳು ಶಕ್ತವಾಗಿರುವ ಕೇರಳದಲ್ಲಿ ಕೂಲಿ ಕೊಟ್ಟು ಕೆಲಸ ಮಾಡಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಉಂಟಾಯಿತು. ಹಳ್ಳಿಗಳಲ್ಲಿ ಸಹಭಾಗಿತ್ವದ ಕೃಷಿ ಪರಂಪರೆ ನಿಂತು ಹೋಯಿತು. ಈ ಎಲ್ಲ ಕಾರಣಗಳಿಂದ ಕೇರಳದ ಹಳ್ಳಿಗಳಲ್ಲಿ ಬತ್ತದ ಬೇಸಾಯವು ಕ್ರಮೇಣ ಇಳಿಮುಖವಾಯಿತು.

ಕೇರಳದ ಸಾಂಪ್ರದಾಯಿಕ ಬೇಸಾಯ ಪದ್ಧತಿಗಳು :

ವಿರಿಪ್ಪ್ : ಬತ್ತದ ಒಂದನೇ ಬೆಳೆಯನ್ನು ಕೇರಳದಲ್ಲಿ ವಿರಿಪ್ಪ್ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ವಿಷು ಹಬ್ಬದ ಸಂದರ್ಭದಲ್ಲಿ ಕೇರಳದಲ್ಲಿ ಬತ್ತದ ಬೇಸಾಯದ ಚಟುವಟಿಕೆಗಳು ಆರಂಭಗೊಳ್ಳುತ್ತವೆ. ವಿಷು ಸಂದರ್ಭದಲ್ಲಿ ಬರುವ ರೇವತಿ ಞಾಟವೇಲವು ಬೇಸಾಯದ ಸಿದ್ಧತೆಗೆ ಯೋಗ್ಯ ಕಾಲ ಎಂದು ನಂಬಲಾಗಿದೆ. ಬೆಳೆದ ಬಿತ್ತನೆ ಬೀಜಗಳನ್ನು ರೇವತಿ, ಅಶ್ವಿನಿ ಅಥವಾ ಭರಣಿ ಞಾಟವೇಲಗಳಲ್ಲಿ ಬಿತ್ತುವುದು ಸಂಪ್ರದಾಯ. ಹಿಂದೆ ವಿಷು ಹಬ್ಬ ಕಳೆದ ಕೂಡಲೇ ಕೇರಳದಲ್ಲಿ ಮಳೆಯು ಆರಂಭಗೊಳ್ಳುತ್ತಿತ್ತು. ಸಾಮಾನ್ಯವಾಗಿ ದೇಸೀ ಬಿತ್ತನೆ ಬೀಜಗಳನ್ನು ಕೃಷಿಗೆ ಬಳಸುತ್ತಿದ್ದರು. ಒಂದು ತಿಂಗಳ ಅನಂತರ ನೇಜಿ ತೆಗೆದು, ವಿಶಾಲವಾದ ಗದ್ದೆಗಳನ್ನು ಉತ್ತು ಅವುಗಳನ್ನು ನೆಡುತ್ತಿದ್ದರು. ಸಿಂಹ - ಕನ್ಯಾ ಮಾಸಗಳಲ್ಲಿ ವಿರಿಪ್ಪ್ ಕೃಷಿಯು ಕೊಯ್ಲಿಗೆ ಸಿದ್ಧವಾಗುತ್ತಿತ್ತು.

ಮುಂಡಗನ್ : ಮೊದಲ ಕೊಯ್ಲು ಮುಗಿದ ಸಿಂಹ ಮಾಸದ ಕೊನೆಯಲ್ಲಿ ಅಥವಾ ಕನ್ಯಾ ಮಾಸದ ಆರಂಭದಲ್ಲಿ ಎರಡನೇ ಬೆಳೆಯ ಸಿದ್ಧತೆಗಳನ್ನು ಮಾಡುವರು. ಬತ್ತದ ಎರಡನೇ ಬೆಳೆಗೆ ಕೇರಳದಲ್ಲಿ ಮುಂಡಗನ್ ಎಂದು ಹೆಸರು. ಮೊದಲ ಬೆಳೆಯ ಕೊಯ್ಲು ಮುಗಿದ ತಕ್ಷಣ ಎರಡನೇ ಬೇಸಾಯದ ಚಟುವಟಿಕೆಗಳು ನಡೆಯುತ್ತಿದ್ದುವು. ಕೊಯ್ಲು ನಡೆದ ಗದ್ದೆಯನ್ನು ಉತ್ತು ಬೀಜವನ್ನು ಬಿತ್ತಿ, ಒಂದು ತಿಂಗಳ ಅನಂತರ ನೇಜಿ ತೆಗೆದು ನೆಡುತ್ತಿದ್ದರು. ಉತ್ತ ಗದ್ದೆಗಳಿಗೆ ಸೊಪ್ಪು, ಸುಡುಮಣ್ಣು, ಹಟ್ಟಿಗೊಬ್ಬರಗಳನ್ನು ಹಾಕುತ್ತಿದ್ದರು. ಬತ್ತದ ಸಸಿಯು ಬೆಳೆದು ಎರಡು ತಿಂಗಳು ಪ್ರಾಯವಾಗುವ ಹೊತ್ತಿಗೆ ಕಳೆ ಕೀಳುವ ಕೆಲಸಗಳು ನಡೆಯುತ್ತಿದ್ದುವು. ಬತ್ತದ ಕೃಷಿಗೆ ಕೀಟನಾಶಕಗಳನ್ನು ಸಿಂಪಡಿಸುವ ಕ್ರಮ ಹಿಂದೆ ಇರಲಿಲ್ಲ. ಗದ್ದೆಯ ನೀರಿನಲ್ಲಿ ವಾಸವಾಗಿರುವ ಕಪ್ಪೆ, ನೀರುಹಾವು, ಏಡಿ ಮೊದಲಾದ ಜಲಚರ ಪ್ರಾಣಿಗಳು ಹಾಗೂ ಪಕ್ಷಿಗಳು ಕೀಟಗಳನ್ನು ತಿಂದು ಬೆಳೆಗಳನ್ನು ರಕ್ಷಿಸುತ್ತಿದ್ದುವು. ಮುಂಡಗನ್ ಬೆಳೆಯು ಮಕರ - ಕುಂಭ ಮಾಸಗಳಲ್ಲಿಕೊಯ್ಲಿಗೆ ಸಿದ್ಧವಾಗುತ್ತಿತ್ತು.

ಪುಂಜ : ಕೇರಳದಲ್ಲಿ ಬತ್ತದ ಮೂರನೇ ಬೆಳೆಗೆ ಪುಂಜ ಎಂದು ಹೆಸರು. ಮಕರ ಮಾಸದ ಕೊನೆ ಅಥವಾ ಕುಂಭ ಮಾಸದ ಆರಂಭದಲ್ಲಿ ಪುಂಜ ಕೃಷಿಗೆ ತೊಡಗುತ್ತಿದ್ದರು. ನೀರಿನ ಸೌಕರ್ಯವಿರುವ ಹೊಳೆ ಬದಿಗಳಲ್ಲಿರುವ ಗದ್ದೆಗಳಲ್ಲಿ ಪುಂಜ ಕೃಷಿಯನ್ನು ಮಾಡುತ್ತಿದ್ದರು. ಸುಮಾರು 25 ದಿವಸ ಪ್ರಾಯವಾದ ನೇಜಿಯನ್ನು ತೆಗೆದು ಉತ್ತ ಗದ್ದೆಗಳಲ್ಲಿ ನೆಡುತ್ತಿದ್ದರು. ಬೇಸಗೆಯ ಹೊತ್ತಿನಲ್ಲಿ ಅಗತ್ಯವಾದರೆ ಜಲಾಶಯಗಳಿಂದ ನೀರನ್ನು ಗದ್ದೆಗಳಿಗೆ ಮೊಗೆಯುತ್ತಿದ್ದರು. ಮೀನ-ಮೇಷ ತಿಂಗಳಲ್ಲಿ ಪುಂಜ ಕೃಷಿಯು ಕೊಯ್ಲಿಗೆ ಸಿದ್ಧವಾಗುತ್ತಿತ್ತು.

ಕುಟ್ಟನಾಡು ಮೊದಲಾದ ಹಿನ್ನೀರು ತಟಾಕಗಳ ಸಮೀಪವಿರುವ ಗದ್ದೆಗಳಲ್ಲಿ ಹೆಚ್ಚುವರಿ ತುಂಬಿದ ನೀರನ್ನು ಹೊರ ಹಾಕಿ ಬತ್ತದ ಬೇಸಾಯವನ್ನು ಮಾಡುತ್ತಿದ್ದರು. ಇದನ್ನು 'ಕೋಳ್‌ಪುಂಜ' ಎಂದು ಕರೆಯುವರು. ಉಪ್ಪುನೀರು ಆವರಿಸಿದ ಹಿನ್ನೀರು ಪ್ರದೇಶದಲ್ಲಿ ಬೇಸಗೆಕಾಲದಲ್ಲಿ ನೀರನ್ನು ಇಂಗಿಸಿ ಬತ್ತದ ಕೃಷಿಯನ್ನು ಮಾಡುತ್ತಿದ್ದರು. ಇದಕ್ಕೆ 'ಕೈಪಾಡ್' ಎಂದು ಹೆಸರು. ಗುಡ್ಡದ ಇಳಿಜಾರು ಪ್ರದೇಶಗಳನ್ನು ಸಮತಟ್ಟು ಮಾಡಿ ಬತ್ತದ ಕೃಷಿಯನ್ನು ಮಾಡುವ ಸಂಪ್ರದಾಯವಿತ್ತು. ಇದಕ್ಕೆ 'ಪೂತಾಡಿ' ಎಂದು ಹೆಸರು. ನೀರಿನಾಸರೆ ಕಡಿಮೆ ಇರುವ ಗದ್ದೆಗಳಲ್ಲಿ 'ಕರಞಾಲ್' ಎಂಬ ಕೃಷಿ ರೀತಿಯನ್ನು ಅನುಸರಿಸುತ್ತಿದ್ದರು.

ಪುನಂಕೃಷಿ : ಕೇರಳದ ಆದಿವಾಸಿ ಬುಡಕಟ್ಟು ಸಮುದಾಯಗಳಿಗೆ ಸೇರಿದ ಜನರು ಕಾಡಿನ ತಪ್ಪಲುಗಳಲ್ಲಿ ಮಾಡುತ್ತಿದ್ದ ಸಹಜ ಕೃಷಿಗೆ ಪುನಂ

ಕೃಷಿ ಎಂದು ಹೆಸರು. ಆದಿವಾಸಿ ಜನರು ಎಲ್ಲ ವರ್ಷವೂ ಒಂದೇ ಕಡೆಯಲ್ಲಿ ಕೃಷಿಯನ್ನು ಮಾಡುತ್ತಿರಲಿಲ್ಲ. ಅವರು ಕಾಡಿನ ಪೊದೆಗಳನ್ನು ಕಡಿದು, ಅವುಗಳನ್ನು ಬೆಂಕಿಯಿಂದ ಸುಟ್ಟು, ಬೇರೆ ಬೇರೆ ಕೃಷಿಗಳನ್ನು ಮಾಡುತ್ತಿದ್ದರು. ಒಂದು ವರ್ಷ ಮಾಡಿದ ಕೃಷಿ ಸ್ಥಳವನ್ನು ಮರು ವರ್ಷ ಬಳಸುತ್ತಿರಲಿಲ್ಲ. ಹೀಗೆ ವಿಭಿನ್ನ ಸ್ಥಳಗಳಲ್ಲಿ ಕೃಷಿ ಮಾಡುವುದರಿಂದ ಭೂಮಿಯ ಫಲವತ್ತತೆಯು ಕಡಿಮೆಯಾಗುತ್ತಿರಲಿಲ್ಲ. ಆದಿವಾಸಿಗಳು ಮುಖ್ಯವಾಗಿ ಪುನರ್ಕೃಷಿಯಾಗಿ ಬತ್ತವನ್ನು ಬೆಳೆಯುತ್ತಿದ್ದರು. ಕಾಡಿನ ತಪ್ಪಲುಗಳಲ್ಲಿ ಮಣ್ಣನ್ನು ಉತ್ತು, ಬೀಜಗಳನ್ನು ಬಿತ್ತುತ್ತಿದ್ದರು. ಅವರ ಕೃಷಿಗೆ ಮಳೆಯೇ ಆಧಾರ. ಬೇರೆ ಯಾವುದೇ ಗೊಬ್ಬರಗಳನ್ನು ಬಳಸುತ್ತಿರಲಿಲ್ಲ. ಕಾಡಿನ ಸೊಪ್ಪು ಹೊತ್ತಿಸಿದ ಬೂದಿಯೇ ಅವರ ಕೃಷಿಗೆ ಗೊಬ್ಬರ, ಬತ್ತ ಮಾತ್ರವಲ್ಲದೆ ಅರಸಿನ, ತೊಗರಿ, ಮೆಣಸು, ಹುರುಳಿ ಮೊದಲಾದವನ್ನು ಬೆಳೆಯುತ್ತಿದ್ದರು. ಈ ಬೇಸಾಯ ಕ್ರಮಕ್ಕೆ ತುಳು ನಾಡಿನಲ್ಲಿ ಕುಮರಿ ಬೇಸಾಯ ಎಂದು ಹೆಸರು. ಪರಿಸರಕ್ಕೆ ಹಾನಿಯುಂಟು ಮಾಡದೆ ಆದಿವಾಸಿಗಳು ಮಾಡುತ್ತಿದ್ದ ಕೃಷಿ ಸಂಪ್ರದಾಯಗಳು ಆಧುನಿಕ ಕಾಲದಲ್ಲಿ ಕಣ್ಮರೆಯಾಗಿವೆ.

ಪೊಕ್ಕಾಳಿ ಕೃಷಿ : ಕೇರಳದ ಹಿನ್ನೀರು ತಟಾಕಗಳ ದಡಗಳಲ್ಲಿ ಪ್ರಚಲಿತವಾಗಿದ್ದ ವಿಶಿಷ್ಟ ಬತ್ತದ ಬೇಸಾಯದ ಸಂಪ್ರದಾಯವನ್ನು ಪೊಕ್ಕಾಳಿ ಕೃಷಿ ಎಂದು ಕರೆಯುತ್ತಾರೆ. ಸಿಗಡಿ ಮೀನುಗಳನ್ನು ಬೆಳೆಸುವ ತಟಾಕಗಳು ಕೇರಳದಲ್ಲಿವೆ. ಮೇಷಮಾಸದ ಕೊನೆಯಲ್ಲಿ ಸೀಗಡಿ ಮೀನಿನ ಇಳುವರಿ ಇಳಿಕೆಯಾದಾಗ, ಸೀಗಡಿ ಮೀನುಗಳನ್ನು ಒಣಗಿಸುತ್ತಿದ್ದ ಗದ್ದೆಗಳಲ್ಲಿ ನೀರನ್ನು ಬತ್ತಿಸಿ, ಬೇಸಾಯವನ್ನು ಮಾಡುತ್ತಿದ್ದರು. ಮಳೆ ಬಂದು ತಟಾಕದಲ್ಲಿ ನೀರಿನ ಮಟ್ಟ ಏರುವಂತೆ ಬತ್ತದ ಸಸಿಗಳು ಎತ್ತರಕ್ಕೆ ಬೆಳೆಯುತ್ತವೆ. ಇದರಿಂದಾಗಿ ಈ ಕೃಷಿ ಪದ್ಧತಿಗೆ ಪೊಕ್ಕಾಳಿ ಕೃಷಿ ಎಂದು ಹೆಸರು ಬಂತು.

ಒಣಗಿದ ಗದ್ದೆಗಳ ಆವೆಮಣ್ಣನ್ನು ಉತ್ತುಬತ್ತದ ಬೀಜ ಬಿತ್ತುವರು. ಮೊದಲ ಮಳೆಯಲ್ಲಿ ಗದ್ದೆಯ ಉಪ್ಪಿನ ಅಂಶವೆಲ್ಲ ಕಣ್ಮರೆಯಾಗಿ, ಮುಂಗಾರು ಮಳೆ ಆರಂಭವಾಗುವ ಹೊತ್ತಿಗೆ ಬತ್ತದ ಸಸಿಗಳು ಎತ್ತರಕ್ಕೆ ಬೆಳೆಯುತ್ತವೆ. ಜಲಾಶಯದಲ್ಲಿ ನೀರು ತುಂಬಿದಂತೆ ಬತ್ತದ ಸಸಿಗಳು ಎತ್ತರಕ್ಕೆ ಬೆಳೆದು ಉತ್ತಮ ಫಸಲನ್ನು ಕೊಡುವುದು.

ಬತ್ತದ ದೇಶೀ ತಳಿಗಳು : ಕೇರಳದ ರೈತರು ಪ್ರತಿಯೊಂದು ಕೃಷಿ ಪದ್ಧತಿಗೂ ಮಣ್ಣಿನ ಗುಣ, ಮಳೆ ನೀರಿನ ಲಭ್ಯತೆ, ಹವಾಗುಣಗಳ ಬದಲಾವಣೆಗಳಿಗೆ ಹೊಂದಿಕೊಂಡು ಬೀಜದ ತಳಿಗಳನ್ನು ರೂಪಿಸಿಕೊಂಡಿದ್ದರು. ಪ್ರಾಚೀನ ಕಾಲದ ಕೃಷಿ ಪದ್ಧತಿಗಳನ್ನೂ, ದೇಸಿ ತಳಿಗಳನ್ನೂ ದಾಖಲಿಸಿದ ಅಪೂರ್ವ ಜನಪದ ಹಾಡುಗಳ ಸಂಕಲನ 'ಕೃಷಿಗೀತ'. (1950 ವಿದ್ವಾನ್ ಸಿ. ಗೋವಿಂದ ವಾರ್ಯರ್ ಸಂ) ಜನಪದರ ದೇಸಿ ಕೃಷಿ ಜ್ಞಾನವು ಮೌಖಿಕ ಪರಂಪರೆಯಾಗಿ ಕೃಷಿ ಗೀತಗಳ ಮೂಲಕ ಹರಿದು ಬಂದಿದೆ. ದೇಸಿ ಕೃಷಿಯ ಅರಿವಿನ ಸಾಮೂಹಿಕ ಸೃಷ್ಟಿಯೂ ಇದಾಗಿರಬಹುದು. ಕೇರಳದ ಪ್ರಾಚೀನ ಕೃಷಿಗೆ ಸಂಬಂಧಿಸಿದ ಅಮೂಲ್ಯವಾದ ವಿವರಗಳು ಈ ಕೃತಿಯಲ್ಲಿವೆ.

'ಕೇರಳೋತ್ಪತ್ತಿ' ಎಂಬ ಕೃತಿಯ ಪ್ರಕಾರ ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ಭೂಭಾಗವು ಪರಶುರಾಮ ಸೃಷ್ಟಿಯಾಗಿದೆ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಯನ್ನು ಮಾಡಿ ಕ್ಷತ್ರಿಯರನ್ನು ನಾಶ ಮಾಡಿದ ಪರಶುರಾಮನು ತನ್ನ ಕೊಡಲಿಯನ್ನು ಎಸೆದು ಸಮುದ್ರವನ್ನು ಹಿಮ್ಮೆಟ್ಟಿಸಿ ಪಡೆದುಕೊಂಡ ಭೂಮಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದನಂತೆ. ದಾನ ಸಿಕ್ಕಿದ ಭೂಮಿಯಲ್ಲಿ ಏನು ಮಾಡಬೇಕೆಂದು ತೋಚದೆ ಚಿಂತಿತರಾದ ಬ್ರಾಹ್ಮಣರಿಗೆ ಬಗೆಬಗೆಯ ಕೃಷಿಗಳನ್ನು ಮಾಡಿ ಬದುಕುವಂತೆ ಪರಶುರಾಮನು ಉಪದೇಶವನ್ನು ನೀಡಿದಂತೆ ಕೃಷಿಗೀತವು ನಿರೂಪಿಸಲ್ಪಟ್ಟಿದೆ.

ಕೃಷಿಯನ್ನು ಮಾಡಬೇಕಾದ ಅಗತ್ಯ ಮತ್ತು ಅನಿವಾರ್ಯತೆಯ ಬಗ್ಗೆ ಕೃಷಿಗೀತದಲ್ಲಿ ಪರಶುರಾಮನು ಬ್ರಾಹ್ಮಣರಿಗೆ ಆರಂಭದಲ್ಲಿ ಉಪದೇಶವನ್ನು ಕೊಡುತ್ತಾನೆ. 'ಕೃಷಿ ಚೆಯ್ದು ಕಯ್ಯಾದವರ್ಕೊರು ವಯಿಯಿಲ್ಲ ಪಿಳಪ್ಪಿನು, ದಾರಿದ್ರ್ಯಂಗಳ್ ಕಳೆಯಣಮೆಂಗಿಲ್ ನೇರತ್ತೆ ಕೃಷಿ ಚೆಯ್ಯಣಂ ಏವರುಂ' (ಕೃಷಿ ಮಾಡಲಾರದವರ ಬದುಕಿಗೆ ದಾರಿಯಿಲ್ಲ. ಬಡತನ ದೂರವಾಗಲು ಬೇಗನೆ ಕೃಷಿಯನ್ನು ಮಾಡಬೇಕು). ಲಾಭದಾಯಕವಾದ ಕೃಷಿಯನ್ನು ಮಾಡಬೇಕು. ದೇವಾಲಯಗಳಿಗೆ ಸುಂದರವಾದ ಉದ್ಯಾನವನಗಳನ್ನು ನಿರ್ಮಿಸಬೇಕು. ದಾರಿಹೋಕರಿಗೆ ಉಪಕಾರಿಯಾಗುವಂತೆ ಮಾರ್ಗದ ಬದಿಗಳಲ್ಲಿ ಸಾಲುಮರಗಳನ್ನು ನೆಡಬೇಕು, ಮೊದಲಾದ ಉತ್ತಮ ಸಲಹೆಗಳನ್ನು ಪರಶುರಾಮನು ಬ್ರಾಹ್ಮಣರಿಗೆ ನೀಡುವಂತೆ ಕೃಷಿಗೀತದಲ್ಲಿ ವಿವರಗಳಿವೆ. ಯಾವ ಕಾಲದಲ್ಲಿ ಯಾವ ಕೃಷಿಯನ್ನು ಮಾಡಬೇಕು, ಯಾವ ಬಿತ್ತನೆ ಬೀಜಗಳನ್ನು ಬಳಸಬೇಕು ಇತ್ಯಾದಿ ವಿವರಗಳು ಕೃಷಿಗೀತೆಯಲ್ಲಿವೆ. ರೋಗಕಾರಕಗಳಾದ ವಿದೇಶಿ ತಳಿಗಳನ್ನು ವರ್ಜಿಸಿ, ದೇಸಿ ತಳಿಗಳನ್ನು ಬಳಸಬೇಕೆಂಬ ಉತ್ತಮ ಸಲಹೆ ಕೃಷಿಗೀತದ ಆರಂಭದ ಭಾಗದಲ್ಲಿದೆ. ಪ್ರಾಚೀನ ಕೇರಳವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ ನಾಡುಗಳಾಗಿ ವಿಭಜಿಸಲಾಗಿತ್ತು. ಕೃಷಿಗೀತದಲ್ಲಿ ಪ್ರತಿಯೊಂದು ನಾಡಿನಲ್ಲಿ ಬಳಸುತ್ತಿದ್ದ ದೇಸಿ ಬೀಜ ತಳಿಗಳ ವಿವರಗಳು ಇವೆ. ಕೃಷಿಗೀತದಲ್ಲಿ ಹೇಳಿದ ದೇಸಿ ಬತ್ತದ ತಳಿಗಳ ಹೆಸರುಗಳನ್ನು ನಾಡುಗಳಿಗೆ ಅನುಸರಿಸಿ ವಿಂಗಡಿಸಿ ಕೆಳಗೆ ಕೊಡಲಾಗಿದೆ.

ತುಳುನಾಡು : ಕಾಮದಾರಾ, ಮುಗಿನಾವೆಳುದೆ, ಗಿರಿಕಶಾಲ, ವೆಟ್ಟುವೆಳಿಎರಿ, ಚುರುಣಕರಿಯನ್, ವಾಳಕಣ್ಣನ್, ವೆಳ್ಳೆಚೆನ್ನೆಲ್ಲ್, ಸಂವತಾಳನ್.

ಕೋಲತ್ತುನಾಡು : ಚೆನ್ನೆಲ್ಲ್, ಕರಿಂಚೆನ್ನೆಲ್ಲ್, ಕೋಳಿವಾಲನ್, ಪೊನ್ನರಿಯನ್, ಕಳಮ, ಅರಕ್ಕಿರಿಲಿ, ಪಯ್ಯನಾಡನ್, ಇಡಿಯನ್, ವಾಲಿ, ಪೂತ್ತಾನ್, ಮೋಡನ್, ಚೆರುಮೋಡನ್, ನಿಕೇತನ್, ಪರಂಬನ್‌ಕಳಮ, ಮಲಯುಡುಂಬನ್, ವೆಳ್ಳಕೋಯಿವಾಲನ್, ಮುಂಡಗನ್, ಕುಂಞಿವಿತ್ತ್, ಚೂರಂ, ಕೊಡನೆಲ್ಲ್.

ಇಡನಾಡು : ಕರಿಪಾಲಿ, ಆರಿಯನ್, ಕಳಮ, ಕಾಳಿ, ವಟ್ಟನ್, ಮುಂಡಪ್ಪಿಳ್ಳಿ, ಕೋಳಿಯಾಳ, ಪುಂಜ, ಕುಟ್ಟನಾಡನ್, ಕೊಡನೇರಿ, ಚೆಪ್ಪಿಲಕಾಡನ್, ಕೂವಳಕೋಡನ್, ಮುಂಡಗನ್‌ಪಾಲ, ಪೆಣ್ಪಾಲ, ಕುಂಬಳವನ್, ಚೆಂದಾರ್‌ಮಣಿಯನ್, ವೆಳ್ಳಯಾತ್ತನ್, ಕರಿಂಗಾಳಿ, ಅರಿಯಾರುಮು, ಅರಿಯಂಗಾಳಿ, ತನಿಕ್ಕಾಳಿ, ಚೊರಣಾಲಿ, ವಲಿಯಚೊರಣಾಲಿ.

ವೆಳಪ್ಪನ್‌ನಾಡು: ಎರುಮಕಾರಿ, ಚಿತ್ತರಿ, ಕಾಡಕಳುಂತನ್, ವೆಳ್ಳಕುರಿಞಿ, ಕರಿಂಗುರಿಞಿ, ಅನ್ನಚೆಂಬಾನ್, ನಲ್ಲಂಗಚೆಂಬಾನ್,

ಚೆಂಚೆಂಬಾನ್, ಮಂಗಮಕಾಪನ್, ಎಲಿಂಚೆಂಬಾನಂ, ಈರ್ಕಿಲಚೆಂಬಾನ್, ಕೊದಂಬಚೆಂಬಾನ್.

ತಲಪಿಳ್ಳಿನಾಡು : ವೆಟ್ಟಿಕುಟ್ಟಾಡನ್, ತಲಪಿಳ್ಳಿಪಾಂಡಿ, ಚೆರುಪಾಂಡಿ, ವೆಗುರುಞಿ, ಕರಿಂಗುರುಞಿ, ಕುಟ್ಟಿ, ವಲಿಯಕುಟ್ಟಿ.

ಕುಟ್ಟನಾಡು : ಪೊಕ್ಕಾಳಿ, ಚೆರುಪೊಕ್ಕಾಳಿ, ಕುರ, ಕರಿಕರ್, ಕುಟ್ಟಾರಿಯನ್, ಚುವನ್ನರಿಯನ್, ಕುರುವ, ವೆನ್ನೆಲ್ಲ್.

ವೇನಾಡು : ಪಾಂಡಿ, ಕಾಡಕಳುದನ್, ಕೊಳವಾಡ, ವೆಳ್ಳಕುಟ್ಟಾಡನ್, ಸೀತಭೋಗ, ಉಳುದುವಿರಟ್ಟಿ, ಇಡಕುರವ.

ಕರಿಪುರಂ : ತುಳುನಾಡನ್, ಚೆಟ್ಟಾರಿಯನ್, ಮಣಲಾರಿಯನ್, ಕರುಕುರುವ, ಕುರುವ, ಆಯಿನಿ, ಅತಿಯನ್, ಚೆರುಯೋರತಿಯನ್.

ಪಾಂಡಿ : ಕಾರ್, ವಶಾನಂ, ಚಂಬಾವ್, ಮುಳಕುಚಂಬಾವ್, ಚೇರಗಚಂಬಾವ್, ಕಲಕ್‌ಮಾಯನ್, ಪುಂಗಾರು, ಕುಂಕುಮಚೆಂಬಾವ್, ವೆಳ್ಳಯಂಗಾರು, ಪುಳುಕುಚೆಂಬಾವ್, ಚೆಂಬಳ, ಪೂಂಬಳ, ಮಡಕಾರು, ಮತ್ತ, ಓರಿಕಲ್.

ಪರಂಬೂರನಾಡು : ಆನೆಕೊಂಬನ್ ಬತ್ತದ ತಳಿಗಳನ್ನು ಮಾತ್ರವಲ್ಲದೆ ಕೇರಳದ ಇತರ ಬೆಳೆಗಳ ದೇಸಿ ತಳಿಗಳ ಕುರಿತು ಕೃಷಿಗೀತದಲ್ಲಿ ವಿಸ್ತಾರವಾಗಿ ವಿವರಿಸಿದೆ. ಎಳ್ಳು, ತೊಗರಿ, ಸಾಸಿವೆ, ಜೋಳ, ಜೀರಿಗೆ, ಸಾಮೆ, ಅವರೆ, ಹತ್ತಿ, ಕಡಲೆ, ಸುವರ್ಣಗಡ್ಡೆ, ಗೆಣಸು, ಶುಂಠಿ, ಅರಿಸಿನ, ಬಾಳೆ, ಕುಂಬಳಕಾಯಿ, ಸೌತೆಕಾಯಿ, ಪಡುವಲಕಾಯಿ, ಹಾಗಲಕಾಯಿ, ತೊಂಡೆಕಾಯಿ, ನಿಂಬೆ, ಮೆಣಸು, ಬದನೆ, ಕಬ್ಬು, ತೆಂಗು, ಹೊಗೆಸೊಪ್ಪು, ವೀಳ್ಯದೆಲೆ, ಅಡಕೆ, ನೀರುಳ್ಳಿ ಮೊದಲಾದ ಬೆಳೆಗಳ ವೈವಿಧ್ಯಪೂರ್ಣ ದೇಸಿ ತಳಿಗಳ ವಿವರಗಳು ಕೃಷಿಗೀತದಲ್ಲಿವೆ. ಯಾವ ಕೃಷಿಯನ್ನು ಎಲ್ಲಿ ಹೇಗೆ ಮಾಡಬೇಕು ಎಂಬ ವಿವರಗಳನ್ನು ಕೃಷಿಗೀತದ ಹಾಡುಗಳಲ್ಲಿ ಹೇಳಲಾಗಿದೆ. ಜನಪದರ ಕೃಷಿಯ ಪಾರಂಪರಿಕ ಜ್ಞಾನವು ಈ ಹಾಡುಗಳಲ್ಲಿ ಹೆಪ್ಪುಗಟ್ಟಿದೆ. ಈ ಕಾರಣದಿಂದ ಕೃಷಿಗೀತವನ್ನು ಕೇರಳದ ದೇಸಿ ಕೃಷಿ ವಿಜ್ಞಾನ ಕೋಶ ಎಂದು ಕರೆಯಬಹುದು.

ಕೃಷಿಗೆ ಸಂಬಂಧಪಟ್ಟಂತೆ ಇನ್ನೂ ಅನೇಕ ಜನಪದ ಹಾಡುಗಳು ಕೇರಳದಲ್ಲಿ ಪ್ರಚಲಿತವಾಗಿವೆ. ಪುಳ್ಳವರ ವಯಲ್ ಪಾಟ್, ವಿತ್ತಿರಕಲ್‌ಪಾಟ್, ಕಟ್ಟಪಾಟ್, ಕೊಯ್ತುಪಾಟ್, ಪುಲಯರ ವಿತ್‌ಪಾಟ್, ಕೇಳಪಾಟ್, ಞಾಟುಪಾಟ್, ನೆಲ್ಲಿನಂಪಾಟ್ ಮೊದಲಾದ ಜನಪದ ಹಾಡುಗಳು ಬತ್ತದ ಅನೇಕ ತಳಿಗಳನ್ನು ಪರಿಚಯಿಸುತ್ತವೆ. ವರಿನೆಲ್ಲ್, ಕಳಮವಿತ್ತ್, ಕರಾರಿಯನ್, ಪೇರಾರಿಯನ್, ಮೋಡಗನ್, ನೀರ್‌ಕಳಮ, ತವಳಕಣ್ಣನ್, ಚಾವೇರಿಯನ್, ಪೊನ್ಮಲವಾಸಿ, ಮುಲ್ಲರಿ, ಪಾಲ್ ಕಣ್ಣಿ, ನೀರ್ಕಣ್ಣಿ, ಕೈರಳಿ, ಚಿಟ್ಟೇನಿ ಮೊದಲಾದ ತಳಿಗಳು ಜನಪದ ಹಾಡುಗಳಲ್ಲಿ ಉಲ್ಲೇಖಿಸಲಾಗಿದೆ. ಅನ್ನಪೂರ್ಣ, ಜಯ, ತ್ರಿವೇಣಿ, ಜ್ಯೋತಿ, ಅದಿರ, ಐಶ್ವರ್ಯ, ಕನಕಮಣಿ, ನಿಳ, ಧನ್ಯ, ಬಸುಮತಿ ಮೊದಲಾದವುಗಳು ಕೇರಳದಲ್ಲಿ ಕೃಷಿ ಮಾಡುವ ಆಧುನಿಕ ಬತ್ತದ ತಳಿಗಳಾಗಿವೆ.

ತೆಂಗು ಕೃಷಿ : ತೆಂಗು ಉಷ್ಣವಲಯದಲ್ಲಿ ಬೆಳೆಯುವ ವೃಕ್ಷವಾಗಿದೆ. ತಾಳೆಯ ವರ್ಗಕ್ಕೆ ಸೇರಿದ ತೆಂಗು ಕೇರಳದ ಮುಖ್ಯ ಬೆಳೆಗಳಲ್ಲಿ ಒಂದು. ತೆಂಗಿನ ಕೃಷಿಯಲ್ಲಿ ಭಾರತಕ್ಕೆ ಪ್ರಪಂಚದಲ್ಲಿ ಎರಡನೇ ಸ್ಥಾನವಿದೆ. ಕೇರಳದ ಕರಾವಳಿ ಪ್ರದೇಶದಲ್ಲಿ ಧಾರಾಳವಾಗಿ ಬೆಳೆಯುವ ತೆಂಗಿನ ಮರವನ್ನು 'ಕೇರವೃಕ್ಷ' ಎಂದೂ ಕರೆಯುತ್ತಾರೆ. ತೆಂಗಿನ ಕೃಷಿ ಕಾರಣವಾಗಿಯೇ 'ಕೇರಳ' ಎಂಬ ಹೆಸರು ಬಂತು ಎಂದು ಹೇಳಲಾಗುತ್ತದೆ.

ಆಗ್ನೇಯ ಏಷ್ಯಾ ತೆಂಗಿನ ಜನ್ಮಸ್ಥಳ ಎಂಬುದು ಒಂದು ವಾದ. ಶ್ರೀಲಂಕಾ, ಅಂಡಮಾನ್ ನಿಕೋಬಾರ್ ದ್ವೀಪ ಸಮೂಹಗಳಲ್ಲಿ ತೆಂಗು ಧಾರಾಳವಾಗಿ ಬೆಳೆಯುವುದರಿಂದ ಈ ದ್ವೀಪಗಳೇ ತೆಂಗಿನ ಕೃಷಿಯ ಮೂಲ ಸ್ಥಳ ಎಂಬ ಅಭಿಪ್ರಾಯಗಳಿವೆ. ಈ ದ್ವೀಪಗಳಿಂದ ಜನರು ಭಾರತಕ್ಕೆ ವಲಸೆ ಬಂದಾಗ ತೆಂಗಿನ ಕೃಷಿಯನ್ನು ಕೇರಳಕ್ಕೆ ತಂದರೆಂದು ನಂಬಲಾಗಿದೆ. 17ನೇ ಶತಮಾನದ ಅನಂತರ ತೆಂಗು ತೋಟಗಾರಿಕಾ ಬೆಳೆಯಾಗಿ ಅಭಿವೃದ್ಧಿ ಪಡೆಯಿತು. ಪೋರ್ಚುಗೀಸರು ಮತ್ತು ಡಚ್ಚರು ತೆಂಗಿನ ವಿವಿಧ ಉಪಯೋಗಗಳನ್ನು ತಿಳಿದುಕೊಂಡು ತೆಂಗು ಕೃಷಿಗೆ ವಿಶೇಷ ಪ್ರೋತ್ಸಾಹವನ್ನು ನೀಡಿದರು.

ತೆಂಗಿನ ಮರವು ಸಾಮಾನ್ಯವಾಗಿ 20-30 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ವೃತ್ತಾಕಾರದ ಕಾಂಡದ ಅಗ್ರಭಾಗದಲ್ಲಿ ತೆಂಗಿನ ಗರಿಗಳು ಎಲ್ಲ ದಿಕ್ಕುಗಳಿಗೆ ಚಾಚಿಕೊಂಡಿರುತ್ತವೆ. ತೆಂಗಿನ ಗರಿಗಳು ಕಾಂಡವನ್ನು ಸಂಧಿಸುವ ಭಾಗದಲ್ಲಿ ಹೂಗೊಂಚಲುಗಳು ಅರಳುತ್ತವೆ. ಈ ಹೂ ಗೊಂಚಲುಗಳಲ್ಲಿ ಪರಾಗಸ್ಪರ್ಶವಾಗಿ ಕಾಯಿಗಳಾಗುತ್ತವೆ. ಒಂದು ಗೊಂಚಲಿನಲ್ಲಿ ಸಾಮಾನ್ಯವಾಗಿ 20ರಿಂದ 30 ತೆಂಗಿನ ಕಾಯಿಗಳಿರುತ್ತವೆ. ಕಾಯಿಗಳು ಬೆಳೆದಾಗ ಅವುಗಳನ್ನು ಕೊಯ್ದು ಎಣ್ಣೆ, ಆಹಾರ ಮೊದಲಾದ ಅವಶ್ಯಕತೆಗಳಿಗೆ ಬಳಸುತ್ತಾರೆ.

ಕೃಷಿಯ ರೀತಿ : ಯೋಗ್ಯವಾದ ಮರಗಳಿಂದ ಒಣಗಿದ ತೆಂಗಿನಕಾಯಿಗಳನ್ನು ಬಿತ್ತನೆ ಬೀಜಗಳಾಗಿ ಆರಿಸಿ ನೀರಿನಲ್ಲಿ ನೆನೆ ಹಾಕುವರು. ಮೊಳಕೆ ಬಂದ ತೆಂಗಿನಕಾಯಿಗಳನ್ನು ಮಣ್ಣಿನಲ್ಲಿ ಹೂತು ಹಾಕಿ ಸಸಿ ಮಾಡುವರು. ಸಸಿಯು ಬೆಳೆದು ಸುಮಾರು ಒಂದು ವರ್ಷ ಪ್ರಾಯವಾದಾಗ, ತಲಾ ಒಂದು ಮೀಟರ್ ಉದ್ದ, ಅಗಲ, ಆಳವಿರುವ ಹೊಂಡವನ್ನು ತೆಗೆದು ನೆಡುವರು. ಮಣ್ಣಿನ ಗುಣಕ್ಕೆ ಹೊಂದಿಕೊಂಡು ಹೊಂಡದ ವಿಸ್ತೀರ್ಣದಲ್ಲಿ ಬದಲಾವಣೆಯಾಗುವುದು. ತೆಂಗಿನ ಸಸಿಯನ್ನು ಮಳೆಗಾಲದಲ್ಲಿ ನೆಡುವುದು ಕ್ರಮ. ಬೇಸಗೆಯಲ್ಲಿ ನಿರಂತರವಾಗಿ ನೀರಾವರಿಯನ್ನು ಮಾಡಬೇಕು. ಹಿಂದೆ ತೆಂಗಿನ ಕೃಷಿಗೆ ಜೈವಿಕ ಗೊಬ್ಬರಗಳನ್ನು ಬಳಸುತ್ತಿದ್ದರು. ಮಳೆಯ ಅಬ್ಬರ ಕಡಿಮೆಯಾಗುವ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ತೆಂಗಿನ ಬುಡವನ್ನು ಬಿಡಿಸಿ, ಸೊಪ್ಪು ಹಾಗೂ ಹಟ್ಟಿ ಗೊಬ್ಬರವನ್ನು ಹಾಕುತ್ತಿದ್ದರು. ದೇಸಿ ತಳಿಯ ತೆಂಗಿನ ಗಿಡವು ಸುಮಾರು ಐದಾರು ವರ್ಷಗಳಲ್ಲಿ ಹೂ ಬಿಡುತ್ತದೆ. ಬೆಳೆದ ತೆಂಗಿನ ಮರಗಳಲ್ಲಿ ಸುಮಾರು 12 ಹೂಗೊಂಚಲುಗಳಿರುತ್ತವೆ. ಸುಮಾರು 80-100 ವರ್ಷಗಳ ಕಾಲ ಬದುಕುವ ತೆಂಗಿನ ಮರಗಳಿಂದ ನಿರಂತರವಾಗಿ ಇಳುವರಿಯನ್ನು ಪಡೆಯಬಹುದು.

ತೆಂಗಿನ ಕಾಯಿಯನ್ನು ಕೇರಳದಲ್ಲಿ ಆಹಾರಕ್ಕಾಗಿ ವ್ಯಾಪಕವಾಗಿ ಬಳಸುತ್ತಾರೆ. ಬಗೆಬಗೆಯ ಕೇರಳೀಯ ವ್ಯಂಜನಗಳಿಗೆ ತೆಂಗಿನಕಾಯಿ ಅನಿವಾರ್ಯ ಘಟಕ. ಎಳನೀರು ಔಷಧಿಗೂ, ಬಾಯಾರಿಕೆ ನಿವಾರಣೆಗೂ ಬಳಕೆಯಾಗುತ್ತದೆ. ತೆಂಗಿನಿಂದ ಶೇಂದಿಯನ್ನು ಉತ್ಪಾದಿಸುತ್ತಾರೆ.

ಕೇರಳದಲ್ಲಿ ಶೇಂದಿ ಉತ್ಪಾದನೆ ಅನೇಕ ಮಂದಿಯ ಉಪಜೀವನ ಮಾರ್ಗವಾಗಿದೆ. ಶೇಂದಿಯಿಂದ ತಯಾರಿಸುವ ಬೆಲ್ಲವು ಔಷಧಿಗೆ ಅಗತ್ಯವಾಗಿದೆ. ತೆಂಗಿನಕಾಯಿಯ ಹೊರ ಸಿಪ್ಪೆಯನ್ನು ನೀರಿನಲ್ಲಿ ನೆನೆ ಹಾಕಿ, ನಾರು ತೆಗೆದು ಹುರಿಹಗ್ಗವನ್ನು ತಯಾರಿಸುತ್ತಾರೆ. ಹುರಿಹಗ್ಗ ತಯಾರಿಕೆಯು ಕೇರಳದಲ್ಲಿ ಗುಡಿಕೈಗಾರಿಕೆಯಾಗಿ ಪ್ರಸಿದ್ಧವಾಗಿದೆ. ತೆಂಗಿನಮರದ ಕಾಂಡವನ್ನು ಹೆಣೆದ ಮಡಲುಗಳನ್ನು ಮನೆಯನ್ನು ನಿರ್ಮಿಸಲು ಹಿಂದೆ ಬಳಸುತ್ತಿದ್ದರು. ತೆಂಗಿನ ಸೋಗೆ ಹಾಗೂ ಕಾಂಡದ ಭಾಗಗಳು ಇಂಧನವಾಗಿಯೂ ಬಳಕೆಯಾಗುತ್ತವೆ. ತೆಂಗಿನ ಕಾಯಿಯನ್ನು ಒಣಗಿಸಿ, ಕೊಬ್ಬರಿಯಿಂದ ಎಣ್ಣೆ ತೆಗೆಯುವರು. ತೆಂಗಿನೆಣ್ಣೆಯನ್ನು ದೀಪಕ್ಕೆ, ಆಹಾರಕ್ಕೆ ಹಾಗೂ ಔಷಧಿಗೆ ಬಳಸುತ್ತಾರೆ. ಹೀಗೆ ತೆಂಗಿನ ಮರದ ಉಪಯೋಗಗಳು ಅನೇಕ.

ಬಾಳೆ ಕೃಷಿ : ಬಾಳೆಯು ಕೇರಳದ ಅತ್ಯಂತ ಪ್ರಾಚೀನವಾದ ಕೃಷಿಯಾಗಿದೆ. ವೈವಿಧ್ಯಪೂರ್ಣವಾದ ಬಾಳೆಯ ತಳಿಗಳು ಕೇರಳದಲ್ಲಿವೆ. ಕಂಗು, ತೆಂಗು ಮತ್ತು ರಬ್ಬರ್ ತೋಟಗಳಲ್ಲಿ ಎಡೆಬೆಳೆಯಾಗಿಯೂ, ಸ್ವತಂತ್ರವಾಗಿ ಬಾಳೆತೋಟವಾಗಿಯೂ ವ್ಯಾಪಕವಾಗಿ ಕೃಷಿಯನ್ನು ಮಾಡಲಾಗುತ್ತದೆ. ನೇಂದ್ರಬಾಳೆಯಂತಹ ತಳಿಗಳು ಜಾಗತಿಕ ಮಾರುಕಟ್ಟೆಗೆ ಕೇರಳದ ಕೊಡುಗೆಯಾಗಿದೆ. ನೇಂದ್ರಬಾಳೆ ಕೇರಳದಲ್ಲಿ ಇಂದಿಗೂ ಲಾಭದಾಯಕ ಕೃಷಿಯಾಗಿದೆ.

ಉಷ್ಣವಲಯದ ತೇವಾಂಶವಿರುವ ಫಲವತ್ತಾದ ಮಣ್ಣಿನಲ್ಲಿ ಬಾಳೆ ಕೃಷಿ ಸಮೃದ್ಧವಾಗಿ ನಡೆಯುತ್ತದೆ. ಮಳೆಗಾಲದ ಕೃಷಿಯಾಗಿ ಏಪ್ರಿಲ್-ಮೇ ತಿಂಗಳಲ್ಲೂ ನೀರಾವರಿ ಸೌಕರ್ಯವಿದ್ದರೆ, ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲೂ ಬಾಳೆ ಕೃಷಿಯನ್ನು ಮಾಡಬಹುದು. ಹವಾಗುಣ ಮತ್ತು ಪ್ರಾದೇಶಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಬಾಳೆಯನ್ನು ನೆಡುವ ಕಾಲವು ವಿಭಿನ್ನವಾಗಿರುತ್ತದೆ. ಜೂನ್, ಜುಲೈ ತಿಂಗಳ ಜಡಿಮಳೆಯ ಕಾಲದಲ್ಲಿ ಬಾಳೆಯನ್ನು ನೆಡುವುದು ಯೋಗ್ಯವಲ್ಲ. ಬಾಳೆ ನೆಟ್ಟು 9-10 ತಿಂಗಳಲ್ಲಿ ಫಸಲು ಸಿಗುತ್ತದೆ. ಕೆಲವು ತಳಿಗಳ ಗೊನೆಗಳು ಬೆಳೆಯಬೇಕಾದರೆ 12 ತಿಂಗಳು ಕಾಯಬೇಕು.

ಕೇರಳದಲ್ಲಿ ಕದಳಿ ಬಾಳೆಯು ಪಾರಂಪರಿಕ ತಳಿಯಾಗಿದೆ. ಕದಳಿ ಬಾಳೆಯಲ್ಲಿ ಚೆಂಗದಳಿ, ರಸಕದಳಿ, ಪಾಳಯಂಗೋಡನ್, ಮಟ್ಟಿ, ಕರ್ಪೂರವಳ್ಳಿ ಮೊದಲಾದ ತಳಿಗಳಿವೆ. ನೇಂದ್ರಬಾಳೆಯಲ್ಲಿ ನೆಡುನೇಂದ್ರನ್, ಚೆಂಙಳಿಕೋಡನ್, ಮಂಜೇರಿ ಮೊದಲಾದ ಪ್ರಭೇದಗಳಿವೆ. ಪೂವನ್, ರೋಬಸ್ಟ್, ಞಾಲಿಪೂವನಂ ಮೊದಲಾದ ತಳಿಗಳನ್ನು ಎಡೆಬೆಳೆಗಳಾಗಿ ಬೆಳೆಸುತ್ತಾರೆ. ಅತಿ ಹೆಚ್ಚು ಕೃಷಿ ಮಾಡುವ ತಳಿ ಕದಳಿಯ ಪಾಳಯಂಗೋಡನ್. ಇದು ಕೇವಲ ಒಂಬತ್ತು ತಿಂಗಳಲ್ಲಿ ಫಲವನ್ನು ನೀಡುತ್ತದೆ. ನೇಂದ್ರಬಾಳೆ ಕೃಷಿಯನ್ನು ಕೇವಲ ವ್ಯಾಪಾರದ ದೃಷ್ಟಿಯಿಂದ ಮಾಡಲಾಗುತ್ತದೆ. ಕೇರಳದ ನೇಂದ್ರ ಬಾಳೆಯ ವಿವಿಧ ರಾಜ್ಯಗಳಿಗೂ, ವಿದೇಶಗಳಿಗೂ ರಫ್ತು ಮಾಡಲಾಗುತ್ತದೆ.

ಉತ್ತು ಸಡಿಲವಾದ ಮಣ್ಣಿನಲ್ಲಿ ಅರ್ಧ ಮೀಟರ್ ವ್ಯಾಸ ಹಾಗೂ ಆಳವಿರುವ ಹೊಂಡದಲ್ಲಿ ಬಾಳೆಗಿಡವನ್ನು ನೆಡುತ್ತಾರೆ. ನೆಟ್ಟು ಕೆಲವೇ ದಿವಸಗಳಲ್ಲಿ ನೀರು ಗೊಬ್ಬರವನ್ನು ಒದಗಿಸಬೇಕು. ಬಾಳೆಯ ಎಲೆಗಳು ಚಿಗುರಿ ಬೆಳೆಯತೊಡಗಿದಾಗ, ಉಮಿಕರಿ, ಬೂದಿ, ಗೊಬ್ಬರವನ್ನು ಹಾಕಿ ಬುಡಕ್ಕೆ ಮಣ್ಣು ಸೇರಿಸುತ್ತಾರೆ. ಬೇಸಗೆ ಕಾಲದಲ್ಲಿ ಬಾಳೆಗಿಡಗಳ ಮಧ್ಯೆ ದಂಡೆಗಳಲ್ಲಿ ನೀರು ಹರಿಸಿ, ತೋಟದಲ್ಲಿ ತೇವಾಂಶವನ್ನು ಉಳಿಸಿಕೊಳ್ಳಬೇಕು. ಬಾಳೆಯ ಎಲೆ, ಬಾಳೆಯ ನಾರು, ಬಾಳೆಗೊನೆಯ ಮೂತಿಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆಯಿದೆ.

ಕರಿಮೆಣಸು : ಪ್ರಾಚೀನ ಕಾಲದಲ್ಲಿ ಸಹ್ಯಾದ್ರಿಯ ಕಾಡಿನ ತಪ್ಪಲುಗಳಲ್ಲಿ ಕರಿಮೆಣಸು ಬೆಳೆಯುತ್ತಿದ್ದುವಂತೆ. ಕಾಲಕ್ರಮೇಣ ಕರಿಮೆಣಸಿನ ಔಷಧಿಗುಣ ಹಾಗೂ ವ್ಯಾಪಾರ ಸಾಧ್ಯತೆಯನ್ನು ಮನಗಂಡು ಜನರು ನಾಡಿನಲ್ಲಿ ಕೃಷಿಯನ್ನು ಮಾಡಲು ಆರಂಭಿಸಿದರು. ಕೇರಳವೇ ಕರಿಮೆಣಸು ಕೃಷಿಯ ತವರುಮನೆ ಎಂದು ನಂಬಲಾಗಿದೆ. ಕೇರಳದಲ್ಲಿ ಇದನ್ನು 'ನಲ್ಲಮುಳಕ್' (ಒಳ್ಳೆಮೆಣಸು) ಎಂದೂ ಕರೆಯುತ್ತಾರೆ. ಪ್ರಾಚೀನ ಸಂಸ್ಕೃತ ಕೃತಿಗಳಲ್ಲಿ ಹಾಗೂ ವಿದೇಶಿಯರ ಬರಹಗಳ ಈ ಸುಗಂಧ ಬೆಳೆಯ ಪ್ರಸ್ತಾಪಗಳಿವೆ. ಕೇರಳದ ಕಲ್ಲಿಕೋಟೆಗೆ ಆಗಮಿಸಿದ ಪೋರ್ಚುಗೀಸಿನ ವಾಸ್ಕೋ ಡ ಗಾಮನು ಕರಿಮೆಣಸಿಗೆ ಆಕರ್ಷಿತನಾದ. ಆತ ವಿದೇಶಗಳೊಂದಿಗೆ ಕರಿಮೆಣಸು ವ್ಯಾಪಾರವನ್ನು ನಡೆಸಿದ.

ಜಗತ್ತಿನಲ್ಲಿ ಅತಿ ಹೆಚ್ಚು ವ್ಯಾಪಾರವಾಗುವ ಸುಗಂಧ ಬೆಳೆ ಕರಿಮೆಣಸು. ಭಾರತದಲ್ಲಿ ಉತ್ಪಾದನೆಯಾಗುವ ಕರಿಮೆಣಸಿನ ಶೇ. 90 ವಿದೇಶಗಳಿಗೆ ರಫ್ತು ಆಗುತ್ತದೆ. ಕರಿಮೆಣಸಿನ ಕೃಷಿ ಮತ್ತು ಉತ್ಪಾದನೆಯಲ್ಲಿ ಭಾರತಕ್ಕೆ ಪ್ರಥಮ ಸ್ಥಾನವಿದೆ. ಕೇರಳದ ಕರಿಮೆಣಸು ಕೃಷಿಯ ಶೇ. 70 ಕಣ್ಣೂರು, ವಯನಾಡು, ಕಲ್ಲಿಕೋಟೆ, ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ನಡೆಯುತ್ತವೆ. ಕೇರಳದ ಕರಿಮೆಣಸು ತಳಿಗಳನ್ನು ತಿರುವಾಂಕೂರು ಮತ್ತು ಮಲಬಾರ್ ತಳಿಗಳೆಂದು ಪ್ರಾದೇಶಿಕವಾಗಿ ವರ್ಗೀಕರಿಸಲಾಗಿದೆ. ಕರಿಮುಂಡ, ಚೆರಿಯಕನಿಯಾಕಾಡನ್, ಕತ್ತನಾಡನ್, ನಾರಾಯಕೊಡಿ, ಪೆರುಂಗೊಡಿ, ಚುಮಲ ಮುಂತಾದವುಗಳು ತಿರುವಾಂಕೂರು ಪ್ರದೇಶದಲ್ಲಿ ಕೃಷಿ ಮಾಡುವ ತಳಿಗಳಾಗಿವೆ. ಕಲ್ಲುವಳ್ಳಿ, ಉದಿರನ್‌ಕೊಟ್ಟ, ಬಾಲನ್‌ಕೊಟ್ಟ, ಕೊಟ್ಟವಳಿ, ಕುದಿರವಳ್ಳಿ, ಚೆರಿಯಕೊಡಿ ಮೊದಲಾದವುಗಳು ಮಲಬಾರ್ ತಳಿಗಳಾಗಿವೆ. ಕೇರಳದ ಪನ್ನಿಯೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರಿಮೆಣಸು ಸಂಶೋಧನ ಕೇಂದ್ರವು ದೇಸಿ ತಳಿಗಳನ್ನು ಮಿಶ್ರ ಮಾಡಿ ಆಧುನಿಕ ತಳಿಗಳನ್ನು ರೂಪಿಸಿದೆ. ಕೃಷ್ಣ, ಶ್ಯಾಮ, ಅಂಜನ, ಪಂಚಮಿ, ಪೌರ್ಣಮಿ ಮೊದಲಾದವು ಪನ್ನಿಯೂರು ತಳಿಗಳಾಗಿವೆ.

ಬೀಜವನ್ನು ಬಿತ್ತಿ ಕರಿಮೆಣಸು ಬಳ್ಳಿಯನ್ನು ಬೆಳೆಸಬಹುದು. ಆದರೆ ಕೇರಳದಲ್ಲಿ ಸಾಮಾನ್ಯವಾಗಿ ಬಳ್ಳಿಯನ್ನು ಕತ್ತರಿಸಿ ನೆಟ್ಟು ಕರಿಮೆಣಸು ಬೆಳೆಯುತ್ತಾರೆ. ಕರಿಮೆಣಸಿನ ಬಳ್ಳಿಗೆ ಮೇಲೇರಿ ಹಬ್ಬಲು ಗಟ್ಟಿಯಾದ ಆಧಾರ ಕಂಬಗಳನ್ನು ಊರಿ ಕೊಡಬೇಕು. ಅಕೆ ಅಥವಾ ತೆಂಗಿನ ತೋಟಗಳಲ್ಲಿ ಎಡೆಬೆಳೆಯಾಗಿ ಕೃಷಿ ಮಾಡುವಾಗ ಮರಗಳಿಗೆ ಬಳ್ಳಿಗಳನ್ನು ಬಿಡುತ್ತಾರೆ. ಉಳಿದ ಪ್ರದೇಶಗಳಲ್ಲಿ ಕೃಷಿಯನ್ನು ಮಾಡುತ್ತಿದ್ದರೆ ಮುರಿಕ್ ಮೊದಲಾದ ಮರಗಳನ್ನು ನೆಟ್ಟು ಬೆಳೆಸುತ್ತಾರೆ. ಕರಿಮೆಣಸಿನ ಬಳ್ಳಿಗಳನ್ನು ಮೂರು ಗಂಟುಗಳು ಸಿಗುವಂತೆ ಕತ್ತರಿಸಿ, ಸುಮಾರು ಒಂದು ಅಡಿ ಆಳದ ಹೊಂಡವನ್ನು ತೆಗೆದು ನೇರವಾಗಿ ನೆಡಬಹುದು. ಆಧುನಿಕ ಕಾಲದಲ್ಲಿ ಬಳ್ಳಿಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ನರ್ಸರಿ ಮಾಡಿ, ಬೇರು ಬಂದ ಮೇಲೆ ಮಣ್ಣಿನಲ್ಲಿ ನೆಡುತ್ತಾರೆ. ಸುಮಾರು ಏಳು ವರ್ಷದ ಬಳ್ಳಿಗಳಿಂದ ಕತ್ತರಿಸಿ ತೆಗೆದ ಭಾಗವು ಕೃಷಿಗೆ ಯೋಗ್ಯ. ಸಾಮಾನ್ಯವಾಗಿ, ಫೆಬ್ರವರಿ ತಿಂಗಳಲ್ಲಿ

ಬಳ್ಳಿಗಳನ್ನು ಕತ್ತರಿಸಿ, ಪ್ಲಾಸ್ಟಿಕ್ ಚೀಲಗಳಲ್ಲಿ ಮಣ್ಣು ತುಂಬಿಸಿ ನೆಡುವರು. ಇವುಗಳಿಗೆ ಸಗಣಿ, ಬೂದಿ ಹಾಗೂ ನೀರು ಸಿಂಪಡಿಸುತ್ತ ಬೇರು ಬರಿಸುವರು. ಹೀಗೆ ಚಿಗುರಿದ ಬಳ್ಳಿಗಳನ್ನು ಜುಲೈ ತಿಂಗಳಲ್ಲಿ ಹೊಂಡ ತೋಡಿ ನೆಡುತ್ತಾರೆ. ಮಳೆಯು ಕಡಿಮೆಯಾದಾಗ ಗೊಬ್ಬರ ಹಾಕಿ, ಬುಡಗಳಿಗೆ ಮಣ್ಣು ಹೊಂದಿಸಬೇಕು. ಕೀಟಬಾಧೆಗಳಿಂದ ಗಿಡಗಳನ್ನು ಸಂರಕ್ಷಿಸಲು ಕೀಟನಾಶಕಗಳನ್ನು ಬಳಸುತ್ತಾರೆ.

ಕರಿಮೆಣಸು ಬಳ್ಳಿಗಳನ್ನು ನೆಟ್ಟ ಮೂರು ವರ್ಷಕ್ಕೆ ಹೂಬಿಟ್ಟು ಕಾಯಿಗಳಾದರೂ, ಉತ್ತಮ ಫಸಲಿಗೆ ಎಂಟು ವರ್ಷಗಳಾಗಬೇಕು. ಜೂನ್, ಜುಲೈ ತಿಂಗಳಲ್ಲಿ ಬಳ್ಳಿಗಳಲ್ಲಿ 'ತಿರಿ' ಕಾಣಿಸಿಕೊಳ್ಳುತ್ತದೆ. ಕಾಯಿಗಳ ಬೆಳವಣಿಗೆಗೆ 150-240 ದಿವಸಗಳು ಬೇಕು. ದಶಂಬರ ತಿಂಗಳಲ್ಲಿ ಬೆಳೆಯನ್ನು ಕೊಯ್ಯಬಹುದು. ಬಳ್ಳಿಗಳಲ್ಲಿ ಗೊಂಚಲು ಗೊಂಚಲುಗಳಾಗಿ ಹಸುರು ಬಣ್ಣದ ಕಾಯಿಗಳು ಒತ್ತೊತ್ತಾಗಿ ಕಾಣಿಸಿಕೊಳ್ಳುತ್ತವೆ. ಗೊಂಚಲಿನ ಹಸುರು ಮಣಿಗಳು ಕೆಂಪು ಬಣ್ಣಕ್ಕೆ ತಿರುಗುವ ಹಂತವು ಬಂದರೆ ಕೊಯ್ಯಲು ಸಿದ್ಧವಾಗಿದೆ ಎಂದು ಅರ್ಥ. ಎತ್ತರಕ್ಕೆ ಬೆಳೆಯುವ ಬಳ್ಳಿಗಳಿಂದ ಏಣಿ ಇರಿಸಿ ಬೆಳೆಯನ್ನು ಕೊಯ್ಯಬೇಕಾಗುವುದು. ಆಗ ಬಳ್ಳಿಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಕೊಯ್ದ ಕರಿಮೆಣಸಿನ ಗೊಂಚಲುಗಳನ್ನು ಅಂಗಳದಲ್ಲಿ ಹಾಕಿ, ಕಾಲಿನಿಂದ ತುಳಿದು, ಮಣಿಗಳನ್ನು ಬೇರ್ಪಡಿಸುತ್ತಾರೆ. ಅನಂತರ ಐದಾರು ದಿವಸ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಒಣಗಿದ ಮೆಣಸಿನ ಮಣಿಗಳನ್ನು ಶೇಖರಿಸಿ, ಕಸ, ಕೊಳೆಗಳನ್ನು ಬೇರ್ಪಡಿಸಿ ಮಾರಾಟ ಮಾಡುತ್ತಾರೆ. ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆಯನ್ನು ಪಡೆಯುವ ಕರಿಮೆಣಸು ಕಪ್ಪು ಮುತ್ತಿನ ಮಣಿಗಳೆಂದೇ ಪ್ರಸಿದ್ಧವಾಗಿವೆ. ಕರಿಮೆಣಸಿನ ಹುಡಿಯನ್ನು ಆಹಾರ ಪದಾರ್ಥಗಳಿಗೆ ಬಳಸುತ್ತಾರೆ. ಪ್ರಾಚೀನ ಕಾಲದಿಂದಲೇ ಆಯುರ್ವೇದ ಔಷಧಿಗಳಲ್ಲಿ ಕರಿಮೆಣಸಿನ ಸ್ಥಾನ ಹಿರಿದಾದುದು.

ರಬ್ಬರ್ : ಕೇರಳದ ಇನ್ನೊಂದು ಮುಖ್ಯ ನಾಣ್ಯಬೆಳೆ ರಬ್ಬರ್. ಸಮುದ್ರ ಮಟ್ಟದಿಂದ ಸುಮಾರು 1500 ಅಡಿ ಎತ್ತರದ ಪ್ರದೇಶಗಳವರೆಗೆ ರಬ್ಬರ್ ಕೃಷಿಯನ್ನು ಸಮೃದ್ಧವಾಗಿ ಮಾಡಬಹುದು. ಯಾವುದೇ ಮಣ್ಣಿನಲ್ಲಿ ರಬ್ಬರ್ ಕೃಷಿಯನ್ನು ಮಾಡಬಹುದು. ಆದರೆ ಮಣ್ಣಿಗೆ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವಿರಬೇಕು. ಸೂರ್ಯ ಪ್ರಕಾಶ ಚೆನ್ನಾಗಿ ಬೀಳುವ ಪ್ರದೇಶವು ರಬ್ಬರ್ ಕೃಷಿಗೆ ಉತ್ತಮ. ಸಮತಟ್ಟು ಪ್ರದೇಶಗಳಲ್ಲಿಯೂ, ಗುಡ್ಡದ ಇಳಿಜಾರು ಪ್ರದೇಶಗಳನ್ನು ಸಮತಟ್ಟುಗೊಳಿಸಿಯೂ ರಬ್ಬರ್ ಕೃಷಿಯನ್ನು ಮಾಡುತ್ತಾರೆ.

ಭಾರತದಲ್ಲಿ ಮೊದಲ ಬಾರಿ ರಬ್ಬರ್ ಕೃಷಿಯನ್ನು ಮಾಡಿದ ರಾಜ್ಯ ಕೇರಳವಾಗಿದೆ. ಹೊಸದಾಗಿ ಕೃಷಿ ಮಾಡುವ ಸ್ಥಳದಲ್ಲಿ ಗಿಡಮರಗಳನ್ನು ಕಡಿದು, ಭೂಮಿಯ ಸ್ವರೂಪಕ್ಕನುಗುಣವಾಗಿ ಸಮತಟ್ಟು ಸಾಲುಗಳನ್ನು ಮಾಡುತ್ತಾರೆ. ಅನಂತರ ಮೂರು ಅಡಿ ವ್ಯಾಸ ಮತ್ತು ಆಳವಿರುವ ಹೊಂಡಗಳನ್ನು ತೆಗೆದು, ಕಸಿ ಕಟ್ಟಿದ ರಬ್ಬರ್ ಸಸಿಗಳನ್ನು ನೆಡುತ್ತಾರೆ. ಪ್ರತಿಯೊಂದು ಸಸಿಯ ನಡುವೆ ಸುಮಾರು ಎರಡು ಮೀಟರ್‌ಗಳ ಅಂತರವಿರುವುದು. ಸಮತಟ್ಟಾದ ಪ್ರದೇಶಗಳಲ್ಲಿ ಎಕರೆಗೆ 170 ಮರಗಳು, ಇಳಿಜಾರು ಪ್ರದೇಶಗಳಲ್ಲಿ ಎಕರೆಗೆ 180 ಮರಗಳು ಎಂಬಂತೆ ರಬ್ಬರ್ ಸಸಿಗಳನ್ನು ನೆಡುತ್ತಾರೆ.

ಬೀಜಗಳಿಂದ ಸಸಿ ಮಾಡುವದು ಮತ್ತು ಕಸಿ ಕಟ್ಟಿ ಸಸಿ ಮಾಡುವುದು ಎಂಬ ಎರಡು ವಿಧಾನಗಳನ್ನು ರಬ್ಬರ್ ಕೃಷಿಗೆ ಅನುಸರಿಸುತ್ತಾರೆ. ಜೂನ್-ಜುಲೈ ತಿಂಗಳಲ್ಲಿ ರಬ್ಬರ್ ಸಸಿಗಳನ್ನು ನೆಡಲು ಉತ್ತಮ ಕಾಲ. ಹೊಂಡಗಳಲ್ಲಿ ಬೀಜಗಳನ್ನು ಬಿತ್ತಿ, ಮೊಳಕೆ ಬಂದ ಸಸಿಗಳಲ್ಲಿ ಒಳ್ಳೆಯ ಸಸಿಗಳನ್ನು ಉಳಿಸಿಕೊಂಡು ಕೃಷಿ ಮಾಡುತ್ತಾರೆ. ವರ್ತಮಾನ ಕಾಲದಲ್ಲಿ ಕಸಿ ಕಟ್ಟಿದ ಸಸಿಗಳನ್ನೇ ಕೃಷಿಕರು ಬಳಸುತ್ತಾರೆ. ಏಳು ವರ್ಷಗಳ ಕಾಲ ರಬ್ಬರ್ ಸಸಿಗಳನ್ನು ಅತೀವ ಜಾಗರೂಕತೆಯಿಂದ ಪರಿಪಾಲಿಸಬೇಕು. ಬೇಸಗೆ ಕಾಲದಲ್ಲಿ ಅವುಗಳಿಗೆ ಅಗತ್ಯವಾದರೆ ನೀರು ಹನಿಸಬೇಕು. ಬಿಸಿಲಿನ ಝಳದಿಂದ ಬಾಡಿ ಹೋಗದಂತೆ ನೆರಳನ್ನು ಒದಗಿಸಬೇಕು. ಕಾಲಕಾಲಕ್ಕೆ ಗೊಬ್ಬರವನ್ನು ಹಾಕಬೇಕು. ಸುಮಾರು ಆರಡಿ ಎತ್ತರಕ್ಕೆ ಬೆಳೆದಾಗ, ಅವುಗಳ ಚಿಗುರು ಕಿತ್ತು, ಮರಗಳು ಉದ್ದಕ್ಕೆ ಬೆಳೆಯದಂತೆ ಎಚ್ಚರಿಕೆ ವಹಿಸಬೇಕು. ರಬ್ಬರ್ ಸಸಿಗಳನ್ನು ನೆಟ್ಟು ಏಳನೇ ವರ್ಷಕ್ಕೆ ಟ್ಯಾಪಿಂಗ್ ಮೂಲಕ ರಬ್ಬರ್ ಹಾಲು ತೆಗೆದು ಸಂಸ್ಕರಿಸಿ, ಒಣಗಿಸಿ, ಮಾರಾಟಕ್ಕೆ ಸಿದ್ಧಗೊಳಿಸುವರು. ಬೇಸಗೆ ಕಾಲದಲ್ಲಿಯೂ, ಮಳೆಗಾಲದಲ್ಲಿಯೂ ರಬ್ಬರ್ ಹಾಲು ತೆಗೆಯುವ ಅವಕಾಶವಿದೆ.

ರಬ್ಬರ್ ತೋಟಗಳಲ್ಲಿ ಮಣ್ಣಿನ ಕೊರತೆ ಉಂಟಾಗದಂತೆ ಮಾಡಲು ಪ್ಯುರೇರಿಯಂ, ಕಪ್ಪಗೋನಿಯ ಮೊದಲಾದ ಸಸ್ಯಗಳನ್ನು ನೆಟ್ಟು ಬೆಳೆಸುತ್ತಾರೆ. ಮಣ್ಣಿನ ಫಲವತ್ತತೆ ಮತ್ತು ತೇವಾಂಶವನ್ನು ಕಾಪಾಡುವುದಕ್ಕೆ ಇವು ಅಗತ್ಯವಾಗಿವೆ. ರಬ್ಬರ್ ತೋಟಗಳಲ್ಲಿ ಎಡೆಬೆಳೆಗಳಾಗಿ ಮರಗೆಣಸು, ನೇಂದ್ರಬಾಳೆ, ಶುಂಠಿ, ಕರಿಮೆಣಸು, ಅನನಾಸು ಮೊದಲಾದ ಕೃಷಿಗಳನ್ನು ಮಾಡುತ್ತಾರೆ.

ಗೇರುಬೀಜ : ಕೇರಳದಲ್ಲಿ ಗೇರು ಕೃಷಿಯನ್ನು ಧಾರಾಳವಾಗಿ ಮಾಡುತ್ತಾರೆ. ಗೇರುಬೀಜವನ್ನು ಪೋರ್ಚುಗೀಸರು ಭಾರತಕ್ಕೆ ತಂದರೆಂದು ಹೇಳಲಾಗುತ್ತದೆ. ಭಾರತ ಮತ್ತು ಆಫ್ರಿಕಾದಲ್ಲಿ ಅತ್ಯಂತ ಹೆಚ್ಚು ಗೇರುಕೃಷಿ ನಡೆಯುತ್ತದೆ. ಭಾರತಕ್ಕೆ ವಿದೇಶಿ ವಿನಿಮಯವನ್ನು ಒದಗಿಸಿ ಕೊಡುವ ಒಂದು ಮುಖ್ಯ ಬೆಳೆಯಾಗಿದೆ ಗೇರು. ಕೇರಳದಲ್ಲಿ ಗೇರುಬೀಜ ಸಂಸ್ಕರಣೆಯು ಪಾರಂಪರಿಕವಾದ ಕೈಗಾರಿಕೆಯಾಗಿದೆ.

ಯಾವುದೆ ಮಣ್ಣು ಹಾಗೂ ಹವಾಗುಣದಲ್ಲಿ ಗೇರು ಮರಗಳು ಬೆಳೆಯುವುದಾದರೂ, ತೇವಾಂಶವನ್ನು ಹಿಡಿದಿಟ್ಟುಕೊಳ್ಳಬಲ್ಲ ಫಲವತ್ತಾದ ಕೆಂಪು ಅಥವಾ ಕಪ್ಪು ಮಣ್ಣು ಗೇರು ಕೃಷಿಗೆ ಯೋಗ್ಯವಾಗಿದೆ. ಸಮುದ್ರ ಮಟ್ಟಕ್ಕಿಂತ 1500 ಅಡಿ ಎತ್ತರದವರೆಗೆ ಸಮೃದ್ಧವಾಗಿ ಬೆಳೆಯುವುದು. ಸುಮಾರು 30-50 ಅಡಿ ಎತ್ತರಕ್ಕೆ ಬೆಳೆಯುವ ಗೇರುಮರಗಳು, ಸರಾಸರಿ 80 ವರ್ಷಗಳವರೆಗೆ ಬದುಕುತ್ತವೆ. ಗೇರುಹಣ್ಣಿನ ತುದಿಯಲ್ಲಿರುವ ಬೀಜವನ್ನು ಸಂಸ್ಕರಿಸಿದರೆ ಮಾರಾಟಕ್ಕೆ ಯೋಗ್ಯವಾದ ಗೋಡಂಬಿಯು ಲಭಿಸುತ್ತದೆ. ಗೇರುಮರವನ್ನು ಕೇರಳದಲ್ಲಿ ಫರಂಗಿ ಮರ ಎಂದೂ ಕರೆಯುತ್ತಾರೆ.

ಸಾಮಾನ್ಯವಾಗಿ ಎಲ್ಲ ಬಗೆಯ ಗುಡ್ಡಗಳಲ್ಲಿ ಗೇರು ಕೃಷಿಯನ್ನು ಮಾಡುತ್ತಾರೆ. ಬೇರೆ ಕೃಷಿಗೆ ಯೋಗ್ಯವಲ್ಲದ ಭೂಮಿಯೂ ಗೇರುಕೃಷಿಗೆ ಉಪಯುಕ್ತವಾಗಿರುತ್ತದೆ. ಮಳೆಗಾಲವು ಗೇರು ಸಸಿಗಳನ್ನು ನೆಡಲು

ಯೋಗ್ಯವಾದ ಸಮಯ. ಗುಡ್ಡಗಳಲ್ಲಿ ಸಾಲಾಗಿ ಎರಡು ಅಡಿ ಉದ್ದ, ಅಗಲ, ಆಳಗಳಿರುವ ಹೊಂಡಗಳನ್ನು ತೋಡಿ, ಸಸಿಗಳನ್ನು ನೆಡುವರು. ಸಸಿಗಳಿಗೆ ಒಂದೆರಡು ವರ್ಷಗಳ ಕಾಲ ನೆರಳು ಒದಗಿಸಬೇಕು. ಸಸಿಯ ಬುಡದಲ್ಲಿ ತರಗೆಲೆಗಳನ್ನು ರಾಶಿ ಹಾಕಿ ತೇವಾಂಶವನ್ನು ಕಾಯ್ದುಕೊಳ್ಳಬೇಕು. ಸರಿಯಾಗಿ ಗೊಬ್ಬರ ಹಾಕಿ ಪರಿಪಾಲಿಸಿದರೆ ಐದಾರು ವರ್ಷಗಳಲ್ಲಿ ಗೇರುಸಸಿಗಳು ಹೂ ಬಿಡುವುವು. ಗೊಂಚಲು ಗೊಂಚಲಾಗಿರುವ ಹೂಗಳಲ್ಲಿ ಗಂಡು ಹಾಗೂ ಹೆಣ್ಣು ಹೂಗಳಿರುತ್ತವೆ. ಪರಾಗಸ್ಪರ್ಶದ ಮೂಲಕ ಕಾಯಿಗಳಾಗುತ್ತವೆ. ಪರಾಗಸ್ಪರ್ಶ ನಡೆದ ಎರಡು ತಿಂಗಳಲ್ಲಿ ಗೇರುಹಣ್ಣು ಹಾಗೂ ಬೀಜಗಳು ಬಲಿಯುತ್ತವೆ. ದಶಂಬರ - ಜನವರಿ ತಿಂಗಳಲ್ಲಿ ಹೂ ಬಿಟ್ಟರೆ, ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ಬೆಳೆಯನ್ನು ಕೊಯ್ದು ಸಂಗ್ರಹಿಸಬಹುದು. ಕೀಟಬಾಧೆಯನ್ನು ನಿಯಂತ್ರಿಸಲು ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಕೇರಳದಲ್ಲಿ ಗೇರುಕೃಷಿಯನ್ನು ತೋಟಗಾರಿಕಾ ನಿಗಮವು ವ್ಯಾಪಕವಾಗಿ ನಡೆಸುತ್ತದೆ. ಕೀಟಬಾಧೆಯನ್ನು ನಿಯಂತ್ರಿಸಲು ನಿಗಮವು ಸಿಂಪಡಿಸಿದ ಎಂಡೋಸಲ್ಫಾನ್ ಕೀಟನಾಶಕವು ಆ ಪ್ರದೇಶದ ಜನರ ಬದುಕಿನ ಮೇಲೆ ಬೀರಿದ ದುಷ್ಪರಿಣಾಮವು ಪ್ರಪಂಚದಲ್ಲಿಯೇ ಚರ್ಚೆಗೆ ಗ್ರಾಸವಾಗಿತ್ತು.

ಮರಗಳಿಂದ ಉದುರಿದ ಗೇರುಹಣ್ಣುಗಳಿಂದ ಬೀಜಗಳನ್ನು ಬೇರ್ಪಡಿಸಿ ಸಂಗ್ರಹಿಸುತ್ತಾರೆ. ಹಣ್ಣುಗಳನ್ನು ಕೊಯ್ದರೆ ಹೂ ಹಾಗೂ ಮಿಡಿಗಾಯಿಗಳು ಉದುರಿ, ಬೆಳೆ ನಷ್ಟವಾಗುವ ಸಾಧ್ಯತೆಯಿದೆ. ಸಂಗ್ರಹಿಸಿದ ಬೀಜಗಳನ್ನು ಒಣಗಿಸಿ, ರೈತರು ಮಾರಾಟವನ್ನು ಮಾಡುವರು. ಅನಂತರ ಈ ಗೇರುಬೀಜಗಳನ್ನು ಬೇರೆ ಬೇರೆ ಕೇಂದ್ರಗಳಲ್ಲಿ ಸಂಸ್ಕರಿಸಿ, ವಿದೇಶಗಳಿಗೆ ರಫ್ತು ಮಾಡುವರು. ಗೇರುಹಣ್ಣಿನಿಂದಲೂ ಪಾನೀಯ, ಮದ್ಯ ಮೊದಲಾದವುಗಳನ್ನು ಮಾಡುತ್ತಾರೆ.

ಪರಾಮರ್ಶನ ಗ್ರಂಥಗಳು

ಕೃಷಿಯುಡೆ ಕೇರಳ ಪೆರುಮ - ಪೋಲ್ಸನ್ ಥಾಂ - ಮಾತೃಭೂಮಿ ಬುಕ್ಸ್, ಕಲ್ಲಿಕೋಟೆ - 2010

ಕಾರ್ಷಿಕ ವಿಜ್ಞಾನಂ - ಎಸ್. ಸುರೇಶಕುಮಾರ್ (ಸಂ.) - ಕೇರಳ ಭಾಷಾ ಇನ್‌ಸ್ಟಿಟ್ಯೂಟ್, ತಿರುವನಂತಪುರ - 2008

ಕೃಷಿಯಿಲೆ ನಾಟ್ಟರಿವ್ - ಮುರಳೀಧರನ್ ತಳಕ್ಕರ - ಕೇರಳ ಭಾಷಾ ಇನ್‌ಸ್ಟಿಟ್ಯೂಟ್, ತಿರುವನಂತಪುರ - 2012

ಸಸ್ಯಂಗಳುಡೆ ನಾಟ್ಟರಿವ್ - ಹರಿನಾರಾಯಣನ್ ಎಂ.ಕೆ. (ಸಂ.) - ಡಿಸಿ ಬುಕ್ಸ್ ಕೊಟ್ಟಾಯಂ - 2007

ಕೃಷಿಪಾಠಂ - ಆರ್. ಹೇಲಿ - ಅಥೆಂಟಿಕ್ಸ್ ಬುಕ್ಸ್, ತಿರುವನಂತಪುರ - 2011

ಕೃಷಿಯುಡೆ ನಾಟ್ಟರಿವುಗಳ್ - ವಿ.ಕೆ. ಶ್ರೀಧರನ್ (ಸಂ.) - ಡಿಸಿಬುಕ್ಸ್ ಕೊಟ್ಟಾಯಂ - 2006

ಓರ್ಮಯಿಲೆ ಕೃಷಿಕಾಯ್ಚಗಳ್ - ಮುರಳೀಧರನ್ ತಳಕ್ಕರ - ಡಿಸಿ ಬುಕ್ಸ್ ಕೊಟ್ಟಾಯಂ - 2010

ಎಸ್.ಎನ್.

ಕೇರಳದ ತೆಂಗು ಕೃಷಿ ತೆಂಗು ಬೆಳೆಯಲ್ಲಿ ಭಾರತವು ಅದ್ಭುತ ಅಭಿವೃದ್ಧಿ ಸಾಧಿಸಿದ್ದು ಇಂಡೋನೇಷ್ಯಾ, ಫಿಲಿಪೈನ್ಸ್ ದೇಶಗಳನ್ನು ಹಿಂದೆ ಹಾಕಿ ಮೊದಲ ಸ್ಥಾನ ಪಡೆದಿದೆ. ಭಾರತದಲ್ಲಿ ತೆಂಗನ್ನು ದಕ್ಷಿಣ ಭಾರತದ ರಾಜ್ಯಗಳಲ್ಲೂ ಪೂರ್ವೋತ್ತರ ರಾಜ್ಯಗಳಲ್ಲೂ ಬೆಳೆಯಲಾಗುತ್ತದೆ. ವಿಭಿನ್ನ ಹವಾಗುಣ ಮತ್ತು ಭೂಪ್ರಕೃತಿಯಲ್ಲೂ ತೆಂಗು ಬೆಳೆಯಬಲ್ಲದು. ಕೇರಳದ ಕಾಸರಗೋಡದಲ್ಲಿ ಕೇಂದ್ರೀಯ ತೋಟ ಬೆಳೆಗಳ ಸಂಶೋಧನ ಕೇಂದ್ರವು (CPCRI) 1970ರಲ್ಲಿ ಸ್ಥಾಪನೆಗೊಂಡು ಕಾರ್ಯಪ್ರವೃತ್ತವಾಗಿರುವುದು ತೆಂಗಿನ ಬೆಳೆಗೆ ಹೆಚ್ಚಿನ ಉತ್ತೇಜನ ಲಭಿಸುವಂತಾಗಿದೆ. ನೂರ ಮೂವತ್ತೆರಡು ತಳಿಗಳ ಒಂದು ಬೃಹತ್ ತೆಂಗಿನತಳಿ ಕಣಜವೇ (ಜನಿತಕ ಶೇಖರಂ. ಮ.) ಅಂಡಮಾನ್‌ನಲ್ಲಿ ಸ್ಥಾಪಿತವಾಗಿದೆ. ಕೇರಳದಲ್ಲಿ ತೆಂಗು ಕೃಷಿ ವ್ಯಾಪಕವಾಗಿದ್ದರೂ ಫಸಲು ಮಾತ್ರ ಕಡಿಮೆ. (ವರ್ಷಕ್ಕೆ ಮರವೊಂದು ಮೂವತ್ತು ಕಾಯಿಗಳು)

ಮಿತವಾದ ಹವೆ, ತೇವಾಂಶವುಳ್ಳ ಪ್ರಕೃತಿಗಳು ತೆಂಗಿನ ಕೃಷಿಗೆ ಯೋಗ್ಯ. ಉಷ್ಣತಾಮಾನವು ಸರಾಸರಿ ಇಪ್ಪತ್ತೇಳು ಡಿಗ್ರಿ ಸೆಲ್ಸಿಯಸ್ ಮತ್ತು ಮಳೆ ವಾರ್ಷಿಕ ಸರಾಸರಿ 1300 ರಿಂದ 2300 ಮಿ.ಮೀ. ಇರಬೇಕು. ಕರಾವಳಿಯ ಮರಳು ಮಣ್ಣು, ಅಲೂವಿಯಲ್ ಮಣ್ಣು ಮತ್ತು ಜವುಗು ಮಣ್ಣುಗಳಲ್ಲಿ ತೆಂಗು ಚೆನ್ನಾಗಿ ಬೆಳೆಯುತ್ತದೆ. ಸುಮಾರು ಒಂದು ವರ್ಷ ಪ್ರಾಯದ ಸಸಿಯನ್ನು ಒಂದು ಹೆಕ್ಟೇರಲ್ಲಿ ಸು. ನೂರ ಎಪ್ಪತ್ತು ಗಿಡಗಳನ್ನು ಸಮಾನ ಅಂತರದಲ್ಲಿ ನೆಡಬಹುದು. (ಪ್ರತಿಯೊಂದರ ಅಂತರ ಸು. ಎಂಟು ಮೀಟರ್‌ನಷ್ಟು). ಆರಂಭದ ಎರಡು ವರ್ಷಗಳಲ್ಲಿ ಬೇಸಗೆ ಕಾಲದಲ್ಲಿ ನಾಲ್ಕು ದಿನಗಳಿಗೊಮ್ಮೆ ಗಿಡವೊಂದಕ್ಕೆ ನಲುವತ್ತೈದು ಲೀಟರ್ ನೀರು ಕೊಡಬೇಕು. ಗಿಡವು ಪೂರ್ತಿ ಬೆಳವಣಿಗೆ ಹೊಂದಿದ ಮೇಲೆ ಪ್ರತಿವರ್ಷ 0.34 ರಿಂದ 0.50 ಕಿಲೋಗ್ರಾಂ ನೈಟ್ರೋಜನ್, 0.17 ರಿಂದ 0.32 ಗಂಧಕ, 0.68 ರಿಂದ 1.20 ಕಿ.ಗ್ರಾಂ. ಪೋಟ್ಯಾಷ್ - ಇವುಗಳನ್ನು ಕೊಡಬೇಕು. ಮಣ್ಣಲ್ಲಿ ತೇವ ಉಳಿಸಿಕೊಳ್ಳಲು ತೆಂಗಿನಕಾಯಿಯ ಸಿಪ್ಪೆಯನ್ನು ಮರದ ಬುಡದಲ್ಲಿ ಹೂಳುವುದು, ಪೊದೆ ಕೊಡುವುದು, ಹಸುರೆಲೆ ಗೊಬ್ಬರದ ಗಿಡಗಳನ್ನು ಮಧ್ಯೆ ಮಧ್ಯೆ ಬೆಳೆಸುವುದು- ಇತ್ಯಾದಿಗಳನ್ನು ಮಾಡಬಹುದು. ತೆಂಗಿನ ಗಿಡಗಳಿಗೆ ಮುಖ್ಯವಾಗಿ ಬಾಧಿಸುವ ಕೀಟಗಳೆಂದರೆ ಮಂಡರಿ, ಕಾಂಡ್ ಬಗ್ ಮುಂತಾದುವು. ಮುಖ್ಯವಾಗಿ ಬಾಧಿಸುವ ರೋಗಗಳೆಂದರೆ - ತುದಿಕೊಳೆಯುವುದು, ಗರಿಕೊಳೆಯುವುದು, ಕಾಂಡದಲ್ಲಿ ಕೆನ್ನೀರು ಸ್ರಾವ ಇತ್ಯಾದಿಗಳು.

ತಳಿಗಳು : ಪ್ರಾಚೀನ ಕಾಲದಿಂದಲೇ ತೆಂಗಿನಲ್ಲಿ ಪ್ರಮುಖವಾಗಿ ಎರಡು ತಳಿಗಳನ್ನು ಕೃಷಿಕರು ಗುರುತಿಸಿದ್ದರು. ಅವೆಂದರೆ ಗಿಡ್ಡತಳಿ ಮತ್ತು ಎತ್ತರದ ತಳಿ. ಭಾರತದ ಪ್ರಮುಖ ಗಿಡ್ಡ ತಳಿಗಳು ಈ ಕೆಳಗಿನವು :

1. **ಚೌಘಾಟ್ :** ಈ ತಳಿಯಲ್ಲಿ ಮುಖ್ಯವಾಗಿ ಹಸುರು ಮತ್ತು ಕೇಸರಿ ಬಣ್ಣದ ತಳಿಗಳಿವೆ. ಇದು ತುಂಬ ಸೂಕ್ಷ್ಮ ಪ್ರಕೃತಿಯ ತಳಿ. ಸುಲಭವಾಗಿ ರೋಗ ಮತ್ತು ಕೀಟಬಾಧೆಗೆ ತುತ್ತಾಗುತ್ತದೆ. ಅಲ್ಪಾಯುಷಿ ಕೂಡ.

2. **ಮಾಲ್ಡೀವ್ (Laccadive & Maldive dwarf) :** ಹೆಸರೇ ಸೂಚಿಸುವಂತೆ ಇದು ಲಕ್ಷದ್ವೀಪ ಮತ್ತು ಮಾಲ್ಡೀವ್ ದ್ವೀಪದ

ತಳಿ. ಗಿಡವೊಂದು ವಾರ್ಷಿಕ ಸರಾಸರಿ ಐವತ್ತು ಕಾಯಿಗಳನ್ನು ನೀಡುತ್ತದೆ. ಕೊಬ್ಬರಿ ಅತ್ಯುತ್ತಮ ಗುಣಮಟ್ಟದ್ದು. ಪ್ರತಿಯೊಂದು ಕಾಯಿಯೂ ಸರಾಸರಿ 115 ರಿಂದ 145 ಗ್ರಾಂ. ತೂಕವಿದ್ದು ಶೇ. 71ರಷ್ಟು ಕೊಬ್ಬಿನ ಅಂಶವನ್ನು ಹೊಂದಿದೆ.

3. **ಅಂಡಮಾನ್ ಗಿಡ :** ಇದು ಅಂಡಮಾನ್ ದ್ವೀಪದ ತಳಿ. ಇಳುವರಿ ಕಡಿಮೆ. ಕೊಬ್ಬರಿ ಸು. 145 ಗ್ರಾಂ. ತೂಕವಿರುತ್ತದೆ. ಶೇ. 63 ಕೊಬ್ಬಿನ ಅಂಶವಿದೆ.

4. **ಚೇನಂಗಿ :** ಇದು ಆಂಧ್ರ ಪ್ರದೇಶದ ಗಿಡ್ಡ ತಳಿ.

5. **ಗಂಗಬೊಂಡಂ :** ಇದು ಸಾಮಾನ್ಯ ಎತ್ತರದ ಗಿಡ್ಡ ಜಾತಿಯ ತಳಿ. ನಾಲ್ಕನೆಯ ವರ್ಷದಿಂದ ಇಳುವರಿ ಪಡೆಯಬಹುದು. ಹನ್ನೊಂದು ತಿಂಗಳಲ್ಲಿ ಕಾಯಿ ಬಲಿಯುತ್ತದೆ. ಇಳುವರಿ ಉತ್ತಮವಾಗಿದೆ. ಕಾಯಿಯ ಗಾತ್ರ ಸಾಮಾನ್ಯವಾದರೂ ದಪ್ಪ ತಿರುಳು ಇರುತ್ತದೆ. ಕೊಬ್ಬರಿಯು ಉತ್ತಮ ಗುಣಮಟ್ಟದ್ದು. ಪ್ರತಿ ಕೊಬ್ಬರಿಯೂ ಸು. 230 ಗ್ರಾಂ ತೂಕವಿದ್ದು ಶೇ. 72ರಷ್ಟು ಕೊಬ್ಬಿನ ಅಂಶವಿದೆ. ಇವುಗಳಲ್ಲದೆ ಚಾವಕ್ಕಾಡ್ ಆರೆಂಜ್ ಢ್ವಾರ್ಫ್ ಮತ್ತು ಚಾವಕ್ಕಾಡ್ ಗ್ರೀನ್ ಡ್ವಾಫ್ ಎಂಬ ಗಿಡ್ಡತಳಿಗಳೂ ಇವೆ.

ಹೆಸರೇ ಸೂಚಿಸುವಂತೆ ಗಿಡ್ಡತಳಿಗಳು ಹೆಚ್ಚು ಎತ್ತರಕ್ಕೆ ಬೆಳೆಯುವುದಿಲ್ಲ. ಎತ್ತರ ತಳಿಗಳಿಗಿಂತ ಮೊದಲೇ ಸಮೃದ್ಧ ಇಳುವರಿ ನೀಡುತ್ತವೆ. ಮೂರನೆಯ ವರ್ಷಕ್ಕೆ ಫಲನೀಡಲು ತೊಡಗುತ್ತವೆ. ಎತ್ತರ ತಳಿಗಳ ಕಾಯಿಗಳಷ್ಟು ಗುಣಮಟ್ಟದವು ಗಿಡ್ಡತಳಿಗಳಲ್ಲಿ ದೊರಕುವುದಿಲ್ಲ. ಗಿಡ್ಡತಳಿಗಳ ಮೂಲ ಎಲ್ಲಿ ಎಂಬ ಮಾಹಿತಿ ಅಲಭ್ಯ.

ಗಿಡ್ಡತಳಿಗಳನ್ನು ಸಾಮಾನ್ಯವಾಗಿ ಬಣ್ಣಗಳಿಂದ ಗುರುತಿಸಲಾಗುತ್ತಿದ್ದು, ಕೇರಳದಲ್ಲಿ ಮೂರು ಬಗೆಯ ತಳಿಗಳಿವೆ. ಹಸುರು, ಕಿತ್ತಳೆ ಮತ್ತು ಹಳದಿ ಬಣ್ಣದ ತಳಿಗಳು ಹೆಚ್ಚಿನ ಪ್ರಮಾಣದಲ್ಲಿವೆ. ಇವುಗಳು ನಿಕೋಬಾರ್, ಅಂಡಮಾನ್ ಅಥವಾ ಇತರ ಸ್ಥಳೀಯ ಹೆಸರಿನ ಗಿಡಗಳೆಂದು ಕರೆಯಲ್ಪಡುತ್ತವೆ. ಇವು ಸು. ಮೂರು ಮೂರೂವರೆ ವರ್ಷಗಳಲ್ಲಿ ಫಲಬಿಡುತ್ತವೆ. ಇವುಗಳ ಗೊನೆಗಳು ತುಂಬ ಆಕರ್ಷಕವಾಗಿದ್ದು, ಬಣ್ಣಗಳು ಕಣ್ಮನ ಸೆಳೆಯುತ್ತವೆ. ಕಾಯಿಗಳು ಚಿಕ್ಕವಾಗಿದ್ದು ಒರಟಾಗಿರುತ್ತವೆ. ಎಳನೀರಿಗಾಗಿ ಇವು ಹೆಚ್ಚು ಬಳಕೆಯಾಗುತ್ತವೆ. ಇವುಗಳ ನೀರು ತುಂಬ ಸವಿಯೂ ತಂಪೂ ಇರುತ್ತದೆ. ಸು. 85 ಗ್ರಾಂ. ತೂಕದ ಕಾಯಿಗಳಲ್ಲಿ ಶೇ. 65ರಷ್ಟು ಕೊಬ್ಬಿನ ಅಂಶ ಇರುತ್ತದೆ. ವಾಣಿಜ್ಯ ಬಳಕೆಗೆ ಅಷ್ಟಾಗಿ ಬಳಕೆಯಾಗದ ಕಾರಣ ಇದನ್ನು ಆದಾಯ ರಹಿತ ತಳಿ ಎಂದೇ ಗುರುತಿಸಲಾಗುತ್ತದೆ. ಈಗೀಗ ಎಳನೀರಿನ ಬಳಕೆಯ ಬಗೆಗೆ ಜನ ಹೆಚ್ಚು ಒಲವು ತೋರುವುದರಿಂದ ಇವುಗಳ ಬೇಡಿಕೆ ಹೆಚ್ಚುತ್ತಿದೆ. ಮಲಯ, ನೈಜೀರಿಯ, ಸಿಲೋನ್ ಮತ್ತು ಇತರ ದೇಶಗಳ ಗಿಡ್ಡ ತಳಿಗಳನ್ನು ಕಾಸರಗೋಡಿನ ಕೇಂದ್ರೀಯ ತೋಟಗಾರಿಕಾ ಸಂಶೋಧನ ಸಂಸ್ಥೆಯು ಸ್ಥಳೀಯ ತೆಂಗು ಕೃಷಿಕರಿಗೆ ಪರಿಚಯಿಸಿದೆ.

ಭಾರತದ ಪ್ರಮುಖ ಎತ್ತರದ ತಳಿಗಳು :

1. **ಕಪ್ಪಾಡಂ (Kappadam) :** ಇದು ಇತರ ಎಲ್ಲ ತಳಿಗಳಿಗಿಂತ ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ. ಕಾಯಿಗಳ ಗಾತ್ರವೂ ದೊಡ್ಡದು. ಇಳುವರಿ ಕಡಿಮೆಯಾಗಿದ್ದರೂ ಪ್ರತಿ ತೆಂಗು ಸರಾಸರಿ ಅರವತ್ತು ಕಾಯಿಗಳನ್ನು ವಾರ್ಷಿಕವಾಗಿ ನೀಡಬಲ್ಲುದು. ಕೊಬ್ಬರಿ ಅತ್ಯುತ್ತಮ ಗುಣಮಟ್ಟದ್ದಾಗಿದ್ದು ದಪ್ಪವೂ ಗಟ್ಟಿಯೂ ಆಗಿದೆ. ಕೇರಳದ ದಕ್ಷಿಣ ಮಲಬಾರಲ್ಲಿ ಹೇರಳವಾಗಿ ಬೆಳೆಯುತ್ತದೆ.

2. **ಅಂಡಮಾನ್ ದೈತ್ಯ (Andaman Giant)**: ಇದು ಅಂಡಮಾನ್ ದ್ವೀಪದ ತಳಿ. ಹಸುರು ಬಣ್ಣದ ಕಾಯಿಗಳು, ದೊಡ್ಡ ಗಾತ್ರದವು. ಇಳುವರಿ ಕಡಿಮೆ. ಎಂಟನೆಯ ವರ್ಷಕ್ಕೆ ಇಳುವರಿ ನೀಡುತ್ತದೆ. ತುಂಬ ರೋಗನಿರೋಧಕ ಗುಣವುಳ್ಳದ್ದು.

3. **ಅಂಡಮಾನ್ (Andaman) :** ಇದು ಮಧ್ಯಮ ಗಾತ್ರದ್ದಾಗಿದ್ದು ಉತ್ತಮ ಇಳುವರಿ ಕೊಡುವ ಒಳ್ಳೆಯ ತಳಿ.

4. **ತಿಪಟೂರು ಟಾಲ್ :** ಫಸಲು ಕೊಡಲು ಸು. ಏಳು/ಎಂಟು ವರ್ಷಗಳ ಕಾಲಾವಧಿ ಬೇಕು. ಸರಾಸರಿ ವಾರ್ಷಿಕ ಫಸಲು ಸು. ಎಂಬತ್ತೈದು ಕಾಯಿಗಳು. ಕಾಯೊಂದರ ಕೊಬ್ಬರಿಯ ಸರಾಸರಿ ತೂಕ ನೂರ ಎಪ್ಪತ್ತೆಂಟು ಗ್ರಾಂ.ಗಳು. ಕೊಬ್ಬಿನ ಅಂಶ ಶೇ. 68. ಕರ್ನಾಟಕದಲ್ಲಿ ಇದನ್ನು ಹೆಚ್ಚು ಬೆಳೆಯುತ್ತಾರೆ.

5. **ಲಕ್ಷದ್ವೀಪ ಸಾಮಾನ್ಯ (Laccadive Ordinary) :** ಇದು ಸಾಮಾನ್ಯ ಎತ್ತರಕ್ಕೆ ಬೆಳೆಯುತ್ತದೆ. ವಾರ್ಷಿಕ ಸರಾಸರಿ 127 ಕಾಯಿಗಳು. ಕೊಬ್ಬರಿಯು ಸು. 155 ಗ್ರಾಂ ಇರುತ್ತದೆ. ಶೇ. 72 ಕೊಬ್ಬಿನ ಅಂಶ ಇರುತ್ತದೆ.

6. **ಲಕ್ಷದ್ವೀಪ ಮಧ್ಯಮ (Laccadive Medium):** ಲಕ್ಷದ್ವೀಪ ಸಾಮಾನ್ಯ ತಳಿಗೆ ಹೋಲಿಸಿದರೆ ಈ ತಳಿ ಸಣ್ಣದು. ವಾರ್ಷಿಕ ಸರಾಸರಿ 182 ಕಾಯಿಗಳ ಇಳುವರಿ ಸಿಗುತ್ತದೆ. ಇದರ ಕೊಬ್ಬರಿ 85 ರಿಂದ 115 ಗ್ರಾಂ ಇದ್ದು, ಶೇ. 75ರಷ್ಟು ಕೊಬ್ಬಿನಂಶ ಇದೆ.

7. **ಲಕ್ಷದ್ವೀಪ ಸೂಕ್ಷ್ಮ (Laccadive Micro) :** ಮೇಲಿನ ಎರಡೂ ತಳಿಗಳಿಗೆ ಹೋಲಿಸಿದರೆ ಇದರ ಕಾಯಿ ಸಣ್ಣದು. ಮರವೊಂದು ವಾರ್ಷಿಕ ಸರಾಸರಿ 160 ಕಾಯಿಗಳ ಫಸಲು ನೀಡುತ್ತದೆ. 80 ರಿಂದ 95 ಗ್ರಾಂ ತೂಕವಿರುತ್ತದೆ. ಶೇ. 75ರಷ್ಟು ಕೊಬ್ಬಿನಂಶ ಇದೆ.

8. **ತೈರು ತೆಂಗು (Thairu Thengai):** ಇದು ವೆಸ್ಟ್‌ಕೋಸ್ಟ್ ತಳಿಯ ಸಾಲಲ್ಲಿ ಗುರುತಿಸಲಾದ ಉದ್ದ ತಳಿ. ಇದನ್ನು ಸ್ಥಳೀಯವಾಗಿ 'ತೈರು ತೇಂಗ' (ಮೊಸರು ತೆಂಗು) ಎನ್ನುತ್ತಾರೆ. ಇದರ ಕಾಯಿಯಲ್ಲಿ ಹಾಲು ಇಲ್ಲ. ಆದರೆ ಸಾಕಷ್ಟು ನೀರಿನಂಶವಿದ್ದು, ದಪ್ಪ ಮೊಸರಿನಂತೆ ಮೃದುವಾದ ತಿರುಳು ಹೊಂದಿದೆ. ಇದನ್ನು

ಕೇರಳೀಯರು 'ಮೊಸರು ತೆಂಗು' ಎಂದೇ ಕರೆಯುತ್ತಾರೆ. ತಿರುಳು ಗಟ್ಟಿಯಿಲ್ಲದ ಕಾರಣ ಕೊಬ್ಬರಿ ಮಾಡಲು ಸಾಧ್ಯವಾಗುವುದಿಲ್ಲ. ಆದರೆ ತಿನ್ನಲು ಯೋಗ್ಯವಾಗಿದೆ.

9. **ಕೈದತ್ತಾಳಿ (Kaithathali) :** ಇದು ವೆಸ್ಟ್ ಕೋಸ್ಟ್ ತಳಿಯ ಮೂರನೇ ಬಗೆ. ಈ ತಳಿಯನ್ನು ಕೃಷಿ ಮಾಡುವುದು ಕಡಿಮೆ. ಮೃದುವಾದ ತಾಜಾ ತಿರುಳು ಇದರ ವಿಶೇಷ. ಇದರ ಎಳನೀರು ಅನೇಕ ರೋಗಗಳಿಗೆ ಅತ್ಯುತ್ತಮ ಔಷಧವಾಗಿ ಬಳಕೆಯಾಗುತ್ತದೆ.

10. **ಗಂಗಾ ಭವಾನಿ :** ಇದು ಆಂಧ್ರಪ್ರದೇಶದ ತಳಿ. ಇದರ ಕಾಯಿಗಳು ದೊಡ್ಡವಾಗಿದ್ದು, ಎಳನೀರಿಗೆ ಉತ್ತಮವಾಗಿವೆ. ಇದನ್ನು ಕೊಬ್ಬರಿಗೂ ಬಳಸಲಾಗುತ್ತಿದ್ದು, ಸರಾಸರಿ 168 ಗ್ರಾಂ ತೂಕವಿದೆ.

11. **ವೆರ್ರಿ ಕೊಬ್ಬರಿ :** ಇದು ಆಂಧ್ರಪ್ರದೇಶದ ತಳಿಯಾಗಿದ್ದು, ಸಾಮಾನ್ಯವಾಗಿ ಲಕ್ಷದ್ವೀಪ ಸಣ್ಣ ತಳಿಯನ್ನು ಹೋಲುತ್ತದೆ. ಕೊಬ್ಬರಿ 85 ರಿಂದ 115 ಗ್ರಾಂ ತೂಕ ಇರುತ್ತದೆ.

12. **ರಂಗೂನ್ ಕೊಬ್ಬರಿ :** ಆಂಧ್ರದಲ್ಲಿ ಬೆಳೆಯಲಾಗುವ ಈ ತಳಿ ಅಂಡಮಾನ್ ದೈತ್ಯ ತಳಿಯನ್ನು ಹೋಲುತ್ತದೆ. ದೊಡ್ಡ ಗಾತ್ರದ ಕಾಯಿ ಇದ್ದು, ಕೊಬ್ಬರಿ 255 ರಿಂದ 280 ಗ್ರಾಂ ತೂಕವಿರುತ್ತದೆ.

13. **ವೆಸ್ಟ್‌ಕೋಸ್ಟ್ ತಳಿ :** ಭಾರತದಲ್ಲಿ ಲಭ್ಯವಿರುವ ಸಾಮಾನ್ಯ ಎತ್ತರದ ತಳಿಗಳಲ್ಲಿ ವೆಸ್ಟ್‌ಕೋಸ್ಟ್ ಕೂಡಾ ಒಂದು. ವಾಣಿಜ್ಯ ಬಳಕೆಗೆ ಪ್ರಶಸ್ತವಾದ ತಳಿ. ಭಾರತದಲ್ಲಿ ಇದನ್ನು ಪ್ರಾಚೀನ ಕಾಲದಿಂದಲೇ ಕೃಷಿ ಮಾಡುತ್ತಿದ್ದರು. ಇದನ್ನು ದೇಶೀಯ ತಳಿಯನ್ನಾಗಿ ಗುರುತಿಸಲಾಗಿದೆ. ಇದು ದೀರ್ಘ ಬಾಳಿಕೆ ಹೊಂದಿದೆ. ಮರ ಗಟ್ಟಿಮುಟ್ಟಾಗಿದ್ದು, ಬಹುಪಯೋಗಿಯಾಗಿದೆ. ತೆಂಗು, ಕೊಬ್ಬರಿ, ನಾರು ಅತ್ಯುತ್ತಮ ಗುಣಮಟ್ಟ ಹೊಂದಿವೆ. ಇದರ ತೆಂಗಿನಕಾಯಿ ದಪ್ಪಗಿದ್ದು, ಉತ್ತಮ ಗುಣದ ಎಳನೀರು, ಶೇಂದಿ ಲಭಿಸುತ್ತದೆ. ಶೇಂದಿಯಿಂದ ಬೆಲ್ಲ ಅಥವಾ 'ಶರ್ಕರ'ವನ್ನು ಉತ್ಪಾದಿಸುತ್ತಾರೆ.

ಸ್ಥಳನಾಮಧೇಯ ತಳಿಗಳು : ಅರಸಂಪಟ್ಟಿ ಉದ್ದ (Arasampatti Tall), ತಿಪಟೂರು ಉದ್ದ (Tiptur Tall), ತಂಗಶ್ಶೇರಿ (Thangassery), ಆಟ್ಟಿಂಗಲ್ (Attingal), ಪರವೂರ್ (Paravur), ಕಾಞ್ಞಿರಪ್ಪಳ್ಳಿ (Kanjirappally), ಚಂಗನಶ್ಶೇರಿ (Changanassery), ಚಾವಕ್ಕಾಡನ್ (Chavakkadan), ಕುಟ್ಯಾಡಿ (Kutyadi)... ಮುಂತಾದವು.

ಬಳಕೆಯಲ್ಲಿ ನಾಮ ವೈವಿಧ್ಯ

1. **ಪಾಕ್ಕು ತೆಂಗು (Pakku Thengu) :** ಎಲ್ಲಾ ಋತುಗಳಲ್ಲಿಯೂ ಸಮೃದ್ಧ ಫಸಲು ನೀಡುವ ಮಾದರಿ ತೆಂಗಿನ ಮರವನ್ನು 'ಪಾಕ್ಕು ತೆಂಗು' ಎಂದು ಕರೆಯುತ್ತಾರೆ. ಇದರಿಂದ ಉತ್ತಮ ಗುಣಮಟ್ಟದ ಬೀಜ ಲಭಿಸುತ್ತಿದೆ. ಈ ಬೀಜದಿಂದ ಉತ್ತಮ ತೆಂಗಿನ ಗಿಡಗಳನ್ನು ಪಡೆಯಲಾಗುತ್ತದೆ. ಇದು ಒಳ್ಳೆಯ ಫಸಲು ನೀಡುವ ತಾಯಿ ಮರವಾಗಿದೆ.

2. **ಅರಪ್ಪು ತೆಂಗು (Arappu Thengu) :** ಇದು ಅಡುಗೆಗೆ ಬಳಸುವ ವಿಶಿಷ್ಟ ತಳಿ. ಅತ್ಯಂತ ಸ್ವಾದ ಇದರ ವಿಶೇಷ ಗುಣ.

3. **ಎಣ್ಣೆ ತೆಂಗು (Enna Thengu) :** ರೈತರು ತಮ್ಮ ಹಿತ್ತಿಲಲ್ಲಿ ಗೃಹ ಬಳಕೆಗೆ ಅಗತ್ಯವಾದ ಕೊಬ್ಬರಿ ಮತ್ತು ಎಣ್ಣೆ ತೆಗೆಯಲು ವಿಶೇಷವಾಗಿ ಗುರುತಿಸಿ ಬೆಳೆಸುವ ತೆಂಗಿನ ಮರವನ್ನು 'ಎಣ್ಣೆ ತೆಂಗು' ಎಂದು ಕರೆಯುತ್ತಾರೆ.

ಕೇರಳದ ಇತರ ಸ್ಥಳೀಯ ತೆಂಗಿನ ತಳಿಗಳು : ನೆಡುವರಯನ್ (Neduvarayan), ಕರಿತೆಂಗು (Karinthengu), ಚಿಂತೆಂಗು ಅಥವಾ ಕೆಂಪು ತೆಂಗು (Chenthengu), ಪದಿನೆಟ್ಟಾಂಪಟ್ಟ (Pathinettampatta), ಕಪ್ಪತೆಂಗು (Kappa Thengu), ಮಣಿಯನ್ (Maniyan), ಕೋಮಡನ್ (Komadan), ವಳ್ಳಿಕೋಡನ್ (Vallikodan), ಕೂರಿತೆಂಗು (Koorithengu), ತೆಯ್ಯಂತಿರಿತ್ತಿ (Theyyanthirithy), ಮೂವಾಂಡನ್ (Moovandan), ಅರಿಕುಳಿಯನ್ (Arikuliyan), ತೊಂಡನ್ (Thondan), ನೆಯ್ ತೆಂಗು (Neythengu), ಸೂರ್ಯಕಾಂತಿ ತೆಂಗು (Sooryakanthithengu), ಎಳತೆಂಗು (Elathengu), ಗೌಳಿತೆಂಗು (Goulithengu), ನಕ್ಕಾವರಿ (Nakkavary), ಚಾವಕ್ಕಾಡನ್ ಪಚ್ಚ (Chavakkadan Pacha), ಚಾವಕ್ಕಾಡನ್ ಚೊಮಳ (ChavakkadanChomala), ಜಪ್ಪಾನಂ (Jappanam).

ಎತ್ತರ ಜಾತಿಯ ತಳಿಗಳು ತೆಂಗು ಬೆಳೆಯಲ್ಲಿ ಹೆಚ್ಚು ಬಳಕೆಯಾಗುತ್ತವೆ. ಈ ತಳಿಗಳು ಸಾಮಾನ್ಯವಾಗಿ ತೊಂಬತ್ತು ವರ್ಷಗಳಿಗೂ ಹೆಚ್ಚು ಕಾಲ ಆಯುಷ್ಯವುಳ್ಳವು. ಪ್ರಾದೇಶಿಕತೆ ಮತ್ತು ಹವಾಗುಣಕ್ಕೆ ಅನುಸಾರವಾಗಿ ಈ ತಳಿಗಳಲ್ಲಿ ವೈವಿಧ್ಯಗುಣಗಳಿದ್ದೂ ಸ್ವಾರದಿಂದ ಕೂಡಿರುತ್ತವೆ. ಸಮುದ್ರ ಮಟ್ಟಕ್ಕಿಂತ ಮೂರುಸಾವಿರ ಅಡಿ ಎತ್ತರದ ಪ್ರದೇಶಗಳಲ್ಲೂ ಇವು ಚೆನ್ನಾಗಿ ಬೆಳೆಯುತ್ತವೆ. ಏಳರಿಂದ ಹತ್ತುವರ್ಷಗಳ ಕಾಲಾವಧಿಯಲ್ಲಿ ಫಸಲು ಕೊಡಲು ಆರಂಭಿಸುತ್ತವೆ. ಗೊನೆಯು ಒಂದು ವರ್ಷದ ಕಾಲಾವಧಿಯಲ್ಲಿ ಕೊಯ್ಲಿಗೆ ಬರುತ್ತವೆ. ಸಾಧಾರಣ ಗಾತ್ರದ ಕಾಯಿಗಳು ಹಸಿರು, ಹಳದಿ ಮತ್ತು ಕೇಸರಿ ಬಣ್ಣಗಳಲ್ಲಿ ಕಂಡುಬರುತ್ತವೆ. ಕೊಬ್ಬರಿಯ ಗುಣಮಟ್ಟ ಮತ್ತು ಪ್ರಮಾಣಗಳು ತೃಪ್ತಿಕರವಾಗಿವೆ. ಒಂದು ಟನ್ ಕೊಬ್ಬರಿಗೆ ಸು. ಆರು ಸಾವಿರ ತೆಂಗಿನ ಕಾಯಿಗಳು ಬೇಕಾಗುತ್ತವೆ.

ಗಿಡ್ಡ ತಳಿಗಳು (Dwarf varieties)

	ಹೆಸರು	ತುದಿಯ ಆಕಾರ	ಗೊನೆ ಬಿಡಲು ಬೇಕಾದ ಕಾಲಾವಧಿ	ಕಾಯಿಯ ಆಕಾರ	ಸರಾಸರಿ ವಾರ್ಷಿಕ ಫಸಲು	ಕಾಯೊಂದರ ಕೊಬ್ಬರಿಯ ಸರಾಸರಿ ತೂಕ	ಸಿಗುವ % ಎಣ್ಣೆ	ಬೆಳೆಗೆ ಸೂಕ್ತ ರಾಜ್ಯ
1.	ಚಾವಕ್ಕಾಡ್ ಆರೆಂಜ್ ಡ್ವಾರ್ಫ್	ವೃತ್ತ	3/4 ವರ್ಷ	ಗೋಲ	65	150 ಗ್ರಾಂ.	66%	ಕೇರಳ ಕರ್ನಾಟಕ
2.	ಚಾವಕ್ಕಾಡ್‌ಗ್ರೀನ್ ಡ್ವಾರ್ಫ್	ವೃತ್ತ (Oblong)	3/4 ವರ್ಷ	ದೀರ್ಘಾಯತ	75	66 ಗ್ರಾಂ	66%	ಕರ್ನಾಟಕ, ತಮಿಳುನಾಡು

(ಕಾಯಿ,ಗೊನೆಗಳಿಗೆ ಹಸಿರುಬಣ್ಣ, ಬಲಿತಕಾಯಿಗಳ ತುದಿಗೆ ತುಟಿಗಳ ಆಕಾರ)

ಎತ್ತರ ಜಾತಿಯ ತಳಿಗಳು (Tall varieties)

1.	ವೆಸ್ಟ್‌ಕಾಸ್ಟ್‌ಟಾಲ್	ವೃತ್ತ/ಅರ್ಧವೃತ್ತ	6/7 ವರ್ಷ	ಅಂಡಾಕೃತಿ	80	176 ಗ್ರಾಂ.	68%	ಕೇರಳ, ಕರ್ನಾಟಕ
2.	ಲಕ್ಷದ್ವೀಪ ಆರ್ಡಿನರಿ	ವೃತ್ತ	5/6 ವರ್ಷ	ಅಂಡಾಕೃತಿ	100/ 127	155/ 176 ಗ್ರಾಂ	72%	ಕೇರಳ, ಕರ್ನಾಟಕ, ಆಂಧ್ರ, ಮಹಾರಾಷ್ಟ್ರ
3.	ತಿಪಟೂರು ಟಾಲ್	ವೃತ್ತ/ಅರ್ಧವೃತ್ತ	6/7 ವರ್ಷ	ಅಂಡಾಕೃತಿ	86	178/78 ಗ್ರಾಂ	68%	ಕರ್ನಾಟಕ
4.	ಲಕ್ಷದ್ವೀಪ ಸೂಕ್ಷ್ಮ (Micro)	-	-	-	160	80/95	75%	-

(ತಳಿಗಳ ಬಗೆಗಿನ ಹೆಚ್ಚು ವಿವರಗಳಿಗೆ ಪು. 370-371. ಪಟ್ಟಿಕೆ 2-3. ಕಾರ್ಷಿಕ ವಿಜ್ಞಾನಂ. ಸಂ. 2)

ಆಧಾರ : ಕಾರ್ಷಿಕ ವಿಜ್ಞಾನಂ - ಸಂಪುಟ 2 *ಕೆ.ಕೆ., ಎಸ್.ವೈ.*

ಕೇರಳದ ತೋಪು ಕೃಷಿ ತೆಂಗಿನ ತೋಪುಗಳು ಧಾರಾಳವಾಗಿರುವ ಕೇರಳ ರಾಜ್ಯದಲ್ಲಿ ತೋಪು ಕೃಷಿ ತುಂಬ ವ್ಯಾಪಕವಾಗಿದೆ. ಋತುಗಳ ಚಾಕ್ರಿಕ (Cyclic) ಪರಿವರ್ತನೆಗಳಿಗೆ, ಪ್ರಕೃತಿಯಲ್ಲಿ ನಡೆಯುವ ವಿಭಿನ್ನ ವಿದ್ಯಮಾನಗಳಿಗೆ ಅನುಸಾರವಾಗಿ ತೋಪುಕೃಷಿಯನ್ನು ಕೇರಳೀಯರು ಅಳವಡಿಸಿಕೊಂಡಿದ್ದಾರೆ. ಕೇರಳದ ಹವಾಗುಣ ಮತ್ತು ಮಣ್ಣಿನ ಗುಣದ ಪಾಲು ತೋಪು ಕೃಷಿಯು ಸ್ವಭಾವವನ್ನು ನಿರ್ಧರಿಸಿದೆ. ಅಂತೆಯೇ ಸೂರ್ಯನ ಗತಿಗೂ ನಕ್ಷತ್ರ ಪೂಪುಂಜಗಳ ಇರುವಿಕೆಗೂ ಅನುಗುಣವಾಗಿ ಹಿಂದಿನ ತಲೆಮಾರು ಪೂರ್ತಿ ವರ್ಷಾವಧಿಯನ್ನು ಇಪ್ಪತ್ತೇಳು 'ಞಾಟ್ಟುವೇಲ' (ಮಹಾನಕ್ಷತ್ರ)ಗಳಾಗಿ ವಿಂಗಡಿಸಿಕೊಂಡುದು ಮತ್ತು ಅನುಭವದ ಹಿನ್ನೆಲೆಯಲ್ಲಿ ಅದಕ್ಕೆ ಅನುಸಾರವಾಗಿ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡುದು ಗಮನಾರ್ಹವಾಗಿದೆ. ಒಂದು ಮಹಾನಕ್ಷತ್ರದ ಕಾಲಾವಧಿ ಎಂದರೆ ಸುಮಾರು ಎರಡು ವಾರಗಳು.

ವೃಷಭ ಮಾಸದ ಹನ್ನೊಂದನೆಯ ದಿನದಿಂದ ರೋಹಿಣೀ ನಕ್ಷತ್ರ ಪ್ರಾರಂಭ. ಆಗ ತೋಪು ಕೃಷಿಯೂ ಆರಂಭವಾಗುತ್ತದೆ. ಹೆಸರು ವರ್ಗ, ಗೆಣಸು ವರ್ಗ ಮತ್ತು ಸೊಪ್ಪು ತರಕಾರಿಗಳ ಕೃಷಿಗೆ ಅಗತ್ಯವಾದ ಪೂರ್ವಸಿದ್ಧತೆಗಳನ್ನು ಈಗಾಗಲೇ ಕೃಷಿಕರು ಮುಗಿಸಿರುತ್ತಾರೆ. ಪ್ರತಿಯೊಂದಕ್ಕೂ ಅದರದೇ ಆದ ಕೃಷಿ ವೈಧಾನಿಕತೆಗಳಿವೆ. ಕೆಲವನ್ನು ಹೊಂಡ ಮಾಡಿ ನೆಟ್ಟರೆ ಇನ್ನು ಕೆಲವನ್ನು ಮಣ್ಣು ಸೇರಿಸಿ ನೆಡಬೇಕಾಗುತ್ತದೆ. ಇನ್ನು ಕೆಲವಕ್ಕೆ ಒಳಗೊಬ್ಬರಗಳನ್ನು ಕೊಟ್ಟೇ ನೆಡಬೇಕು. ಹೊಂಡಮಾಡಿ ನೆಡಬೇಕಾದವುಗಳಾದರೆ ಆ ಹೊಂಡದಲ್ಲಿ ಕಸ ಕಡ್ಡಿಗಳನ್ನು ಧಾರಾಳ ಒಟ್ಟಿ ಅದನ್ನು ಸುಟ್ಟು, ಆಮೇಲೆ ನೆಡಲಾಗುತ್ತದೆ. ಬಳಿಕ ಅಗತ್ಯಾನುಸಾರ ಹಸುರೆಲೆಗೊಬ್ಬರ, ಸಗಣಿ ಪುಡಿ, ಬೂದಿ ಮುಂತಾದುವನ್ನು ಮಳೆ ಚೆನ್ನಾಗಿ ಬಿದ್ದ ಮೇಲೆ ಒದಗಿಸಬೇಕು.

ಗೆಣಸು ಗುಂಪಿನ ಕೆಸು, ಕೂರ್ಕ್ (ಔಷಧ ಗುಣವುಳ್ಳ ಒಂದು ತೆರನ ಸಣ್ಣ ಗಡ್ಡೆ ಕೂವೆಗಡ್ಡೆ), ಸುವರ್ಣಗಡ್ಡೆ, ಮುಂತಾದ ಗಡ್ಡೆ - ಗೆಣಸು ವರ್ಗದ ಬೆಳೆಯನ್ನು ಬೇಸಗೆ ಮುಗಿಯುತ್ತಿದ್ದಂತೆ ಆರಂಭಿಸಬೇಕು. ಕೂರ್ಕ್ ಗೆಣಸನ್ನು ಎರಡು ಬಾರಿ ಕತ್ತರಿಸಲಾಗುತ್ತದೆ. ಕರ್ಕಟಕ ತಿಂಗಳು ಮುಗಿಯುವಾಗ ಮೊದಲ ಬಾರಿಯೂ ಕನ್ಯಾ ತಿಂಗಳಲ್ಲಿ ಎರಡನೆಯ ಬಾರಿಯೂ ಕೂರ್ಕ್‌ದ ತಲೆ ಕತ್ತರಿಸಲಾಗುತ್ತದೆ. 'ಕನ್ನಿ ಕೂರ್ಕ್ ಕಲಂ ಪೊಳಿಕ್ಕುಂ' (ಕನ್ಯಾಮಾಸದ ಕೂರ್ಕ್ ಮಡಕೆ ಒಡೆದೀತು) ಎಂಬ ಮಾತಿದೆ. ಒಳ್ಳೆಯ ಫಸಲು ಕನ್ಯಾಮಾಸದಲ್ಲಿ ದೊರೆಯುತ್ತದೆ ಎಂದು ಇದರ

ಸೂಚಿತಾರ್ಥ. ಕೆಲವೊಮ್ಮೆ ಕೆಸು ಮತ್ತು ಕೂರ್ಕ್‌ಗಳಿಗೆ ಮಂದ್ (ದಂಡು ಊದಿಕೊಳ್ಳುವ ರೋಗ) ರೋಗ ತಗುಲುತ್ತದೆ. ಇದು ಮಣ್ಣಿನ ದೋಷದಿಂದ ಬರುತ್ತದೆ. ಕೆಸುಗಳಲ್ಲಿ ವಿಲಾಯಿತ ಮತ್ತು ಕರಿ ಕೆಸುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಹೆಸರು : ರೋಹಿಣಿ ಮಹಾನಕ್ಷತ್ರದಲ್ಲಿಯೇ ಇವುಗಳ ಕೃಷಿಯನ್ನು ಪ್ರಾರಂಭಿಸುತ್ತಾರೆ. ಹೆಸರುಗಳಲ್ಲಿ ಚೆರುಮಣಿ (ಸಣ್ಣಕಾಳು), ಏನ್‌ಪಯರ್ (ದೊಡ್ಡ ಹೆಸರು), ಕುರುತ್ತೋಲ ಪಯರ್ (ತೆಂಗಿನ ಎಳೆಯ ಗರಿಬಣ್ಣದ Cream colour ಹೆಸರು) ಮುಂತಾದ ಪ್ರಾದೇಶಿಕ ಪ್ರಭೇದಗಳಿವೆ. ಇದೇ ನಕ್ಷತ್ರ ಕಾಲಾವಧಿಯಲ್ಲಿ ಪಚ್ಚೆ - ಹೆಸರು, ಉದ್ದು ಮುಂತಾದವುಗಳ ಬಿತ್ತನೆಯೂ ನಡೆಯುತ್ತದೆ. ಹೆಸರಿನ ನಡುನಡುವೆ ಜೊತೆ ಜೊತೆಯಲ್ಲಿ ತೊಗರಿ ಬಿತ್ತನೆಯನ್ನು ಮಾಡುತ್ತಾರೆ. ಅವರೆಯ ಬೀಜ ಹಾಕುವುದು ಕರ್ಕಾಟಕ ಅಮಾವಾಸ್ಯೆಯಂದು. ಮಳೆ ಬಿದ್ದ ಕೂಡಲೆ ಮಾಟ್ಪ್‌ಪಯರ್ (ತುಂಬ ಸುಂದರವಾದ, ನೇರಳೆ ಬಣ್ಣದ ಹೆಸರು / ಅಳಸಂಡೆ)ನ ಬಿತ್ತನೆ ನಡೆಸುತ್ತಾರೆ. ಇವುಗಳ ಒಂದು ಪ್ರಭೇದವಾದ ತೊಂಡನ್ ಪಯರ್ (ಉದ್ದ ಜಾತಿಯ ಅಳಸಂಡೆ) ಬಯಲಲ್ಲೂ ಬದಿಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ. ಪಚ್ಚೆ ಹೆಸರನ್ನು ಕರೆ ಪ್ರದೇಶಗಳಲ್ಲೇ ಹೆಚ್ಚಾಗಿ ಬೆಳೆಯುತ್ತಾರೆ. ಸಗಣಿ, ಬೂದಿಗಳನ್ನು ಮಾತ್ರ ಗೊಬ್ಬರವಾಗಿ ಇದಕ್ಕೆ ಕೊಡಲಾಗುತ್ತದೆ. ಹೆಸರು ವರ್ಗದ ಬೆಳೆಗಳನ್ನು ತೆಂಗಿನ ಮರಗಳ ಬುಡದಲ್ಲಿ ಬೆಳೆಯುವುದರಿಂದ ತೆಂಗಿಗೂ ಅನುಕೂಲವಾಗುತ್ತದೆ.

ಮೃಗಶಿರಾ ನಕ್ಷತ್ರದಲ್ಲಿ ಹೆಸರು ಕಾಳುಗಳನ್ನು ಬಿತ್ತಿದರೆ ಅವು ಸೊಕ್ಕಿ ಬೆಳೆದು ಫಸಲು ಕಡಿಮೆ ದೊರೆಯುತ್ತದೆ ಎಂಬ ಮಾತಿದೆ. ಈ ಮಹಾನಕ್ಷತ್ರದಲ್ಲಿ ಮಳೆಯ ಪ್ರಮಾಣ ಹೆಚ್ಚು. ಇದು ಇಂಥ ಬೆಳೆಗಳಿಗೆ ಒಂದಿಷ್ಟು ಅನುಕೂಲಕರವೂ ಹೌದು. ಎಲ್ಲ ಬೆಳೆಗಳಿಗೂ ಅನುಕೂಲಕರವಾದ ಮಹಾನಕ್ಷತ್ರವೆಂದರೆ ಆರ್ದ್ರಾ. ಈ ನಕ್ಷತ್ರದ ಕಾಲದಲ್ಲಿ ಬೆರಳುಗಳಿಂದಲೇ ಒಂದಿಷ್ಟು ಗುಣಿ ಮಾಡಿ ನೆಟ್ಟರೂ ಗಿಡಗಳು ಚೆನ್ನಾಗಿ ಹುಟ್ಟಿ ಚಿಗುರಿಕೊಳ್ಳುತ್ತವೆಯೆಂದು ನಂಬಿಕೆಯಿದೆ. ಮೆಣಸು, ಬದನೆ, ಸೌತೆ - ಮುಳ್ಳುಸೌತೆ, ಬೆಂಡೆ, ಚೀನಿಕಾಯಿ (ಸಿಹಿಕುಂಬಳ), ಕುಂಬಳಕಾಯಿ, ಹಾಗಲ, ಪಡುವಲ, ಸೊರೆ ಮುಂತಾದ ಬೀಜಗಳನ್ನು ಸಿದ್ಧವಿಟ್ಟುಕೊಂಡು ಕೆಲವು ಆಚಾರ / ವಿಧಿಗಳನ್ನು ಮಾಡಬೇಕಾಗುತ್ತದೆ. ಬೀಜಗಳ ಬಿತ್ತನೆಗೆ ಮೊದಲು ತೆಂಗಿನ ಗೆರಟೆ (ಚಿಪ್ಪು)ಯಲ್ಲಿ ನೀರು ಹಾಕಿ ಅದರಲ್ಲಿ ಬೀಜಗಳನ್ನು ನೆನೆಸಿ ಇಡಲಾಗುತ್ತದೆ. ಹಾಗಲದ ಬೀಜವನ್ನು ಒಂದು ದಿನ ಪೂರ್ತಿ ನೆನಸಿ ಇಡಬೇಕು. (ಅದರ ಹೊರ ಕವಚ ತುಂಬ ಗಟ್ಟಿ). ಅದನ್ನು ಬಿತ್ತನೆ ಮಾಡುವಾಗ ಬೀಜದ ಬುಡದ ಚಿಪ್ಪನ್ನು ಹಲ್ಲಿನಿಂದ ಕಚ್ಚಿ ತೆಗೆದು ಬಿತ್ತನೆ ಮಾಡುವುದೂ ಇದೆ. ಕೆಲವು ಬೀಜಗಳನ್ನು ಸಗಣಿಯಲ್ಲಿ ಮುಚ್ಚಿ ಹಟ್ಟಿ ಕೊಟ್ಟಿಗೆಗಳ ಗೋಡೆಗಳಿಗೆ ಅಂಟಿಸಿ ಕೂಡ ತೆಗೆದಿರಿಸಿಕೊಳ್ಳುತ್ತಾರೆ. ಕೆಲವಕ್ಕೆ ಬೂದಿ ಲೇಪಿಸಿ ಒಣಗಿಸಿಟ್ಟುಕೊಳ್ಳುತ್ತಾರೆ. ಬಿತ್ತನೆ ಮಾಡುವಾಗ ಕೆಲವು ವಿಧಿಗಳನ್ನು ಪಾಲಿಸಬೇಕೆಂಬುದಕ್ಕೆ ಮೆಣಸಿನ ಬೀಜ ಬಿತ್ತನೆ ಉತ್ತಮ ಉದಾಹರಣೆ. ಅವುಗಳ ಜತೆ ಒಂದಿಷ್ಟು ಕಡಿಅಕ್ಕಿಯನ್ನು ಮಿಶ್ರ ಮಾಡಿ ಬಿತ್ತನೆ ಮಾಡುತ್ತಾರೆ. ಇದರಿಂದ ಇರುವೆಗಳು ಅಕ್ಕಿಕಡಿಯನ್ನು ಒಯ್ದು ಮೆಣಸಿನ ಬೀಜವನ್ನು ಬಿಟ್ಟು ಬಿಡುತ್ತದೆ ಅವು ಮೊಳಕೆ ಬರುತ್ತವೆ.

ಗೆಣಸು ವರ್ಗದ ಬೀಜಗಳನ್ನು ಸಿದ್ಧಪಡಿಸುವುದರಲ್ಲೂ ಕೆಲವು ವಿಶಿಷ್ಟ ಕ್ರಮಗಳಿವೆ. ಸುವರ್ಣಗೆಡ್ಡೆ, ಕೆಸು, ಕೂರ್ಕ್, ಕಾಚ್ಚಿಲ್ (ಪುಟ್ಟ ಜಾತಿಯ ಗೆಣಸು), ಅರಿಸಿನ ಮುಂತಾದ ಬೆಳೆಗಳ ಸಂರಕ್ಷಣೆಯನ್ನು ಬೇರೆ ಬೇರೆ ತೆರದಲ್ಲಿ ಮಾಡಲಾಗುತ್ತದೆ. ಕೀಟ ಬಾಧೆ ತಡೆಯುವುದಕ್ಕೆ ಸಗಣಿ ನೀರನ್ನು ಬಳಸಲಾಗುತ್ತದೆ. ತುಲಾ ವೃಶ್ಚಿಕ ತಿಂಗಳುಗಳಲ್ಲಿ ಸುವರ್ಣಗಡ್ಡೆ ಫಸಲು ಬರುತ್ತದೆ ಅಗೆಯಬಹುದು. ಹಾಗಾಗಿ ಕುಂಭಮಾಸದಲ್ಲೇ ಅದನ್ನು ನೆಡಬೇಕು. ಸ್ವಲ್ಪ ದಿನ ಮೊದಲೇ ಸುವರ್ಣಗೆಡ್ಡೆಯ ಬೀಜವನ್ನು ಸಗಣಿ ಲೇಪಿಸಿ ಒಣಗಿಸಿ ಇಟ್ಟುಕೊಳ್ಳಬೇಕು. ನೆಡುವ ಗುಣಿಯನ್ನು ಕಸಕಡ್ಡಿಗಳಿಂದ ತುಂಬಿಸಿ ಸುಡಬೇಕು. ಬಳಿಕ ಕುಂಭಮಾಸದ ಪೌರ್ಣಮಿಯ ಚಂದ್ರ ಉದಯಿಸಿ ಬರುವಾಗ ಬೀಜವನ್ನು ನೆಡಬೇಕು. ಅಂದು ಹಾಗೆ ನೆಟ್ಟರೆ ಹುಣ್ಣಿಮೆ ಚಂದ್ರನ ಗಾತ್ರದ ಗಡ್ಡೆ ಸಿಗುತ್ತದೆಯೆಂಬುದು ಜನಪದ ನಂಬಿಕೆ. ಬೀಜ ನೆಟ್ಟ ಬಳಿಕ ಸಗಣಿ ಹುಡಿ, ಸೊಪ್ಪು, ಬೂದಿಗಳನ್ನು ಗೊಬ್ಬರವಾಗಿ ಕೊಡುತ್ತಾರೆ. ನೆಟ್ಟ ಬಳಿಕ ಮೂರು ದಿವಸಗಳ ಕಾಲ ಅದಕ್ಕೆ ನೀರು ಹಾಕಬೇಕೆಂಬುದು ಕೆಲವರ ರೂಢಿ. ಸುವರ್ಣಗಡ್ಡೆಯ ದಂಟಿನ ತುದಿಯಲ್ಲಿ ಅದರ ತಾಕತ್ತಿಗೆ ಅನುಸಾರವಾಗಿ ಒಂದು ಕಲ್ಲನ್ನು ಇಡುತ್ತಾರೆ. ದಂಟು ಅನಗತ್ಯ ಬೆಳೆಯದೆ ಗಡ್ಡೆ ಚೆನ್ನಾಗಿ ಬೆಳೆಯಲಿ ಎನ್ನುವುದು ಉದ್ದೇಶ. ಹಾಗೆ ಆಗುತ್ತದೆ ಎಂಬುದು ವಿಶ್ವಾಸ. ಸುವರ್ಣಗಡ್ಡೆಯ ಕುರಿತಾಗಿ ಮಲಯಾಳಂ ಭಾಷೆಯಲ್ಲಿ ಒಂದು ಮಾತಿದೆ - 'ಚಿಂಙತ್ತಿಲಾಯಾಲ್ ಎನ್ನೆ ತಿನ್ನಾಂ, ಎನ್ನೆ ತಿನ್ನಾಲ್ ಞಾಲುಂ ತಿನ್ನುಂ' (ಸಿಂಹ ಮಾಸದಲ್ಲಿ ಆದರೆ ನನ್ನನ್ನು ತಿನ್ನಬಹುದು, ನನ್ನನ್ನು ತಿಂದರೆ ನಾನೂ ತಿಂದೇನು) ಇದರ ಆಶಯವೆಂದರೆ - ವರ್ಷಾರಂಭದಲ್ಲಿ ಕ್ರಮಬದ್ಧವಾಗಿ ನೆಟ್ಟ ಸುವರ್ಣಗಡ್ಡೆಯನ್ನು ಸಿಂಹಮಾಸದಲ್ಲಿ ಅಗೆದು ತೆಗೆಯಬಹುದು. ಸುವರ್ಣಗಡ್ಡೆ ತುರಿಕೆ ಇರುವ ಗಡ್ಡೆಯಾದರೂ ಸಿಂಹಮಾಸದಲ್ಲಿ ಅಗೆಯಬಹುದಾದ (ಫಸಲು ಬರುವ) ಗಡ್ಡೆಗಳು ತುರಿಸುವುದಿಲ್ಲ ಎನ್ನುವುದು.

ಕಿರುಗೆಣಸು (ಚೆರುಕಿಟಂಙ್. ಮ.) : ಹೊಸ ಮಳೆಗೆ ಕೃಷಿ ಆರಂಭ, ತುಲಾ ತಿಂಗಳಲ್ಲಿ ಫಸಲು ತೆಗೆಯಬಹುದು. ಬೀಜಗಳು ಹಾಳಾಗದಂತೆ ತೇವ ಆರದ ಮಣ್ಣಲ್ಲಿ ಇರಿಸಿಕೊಂಡು ಬಳಿಕ ತೆಂಗಿನ ಗರಿಯ ಗೂಡೆಗಳಲ್ಲಿ ಕಟ್ಟಿ ತೂಗಿ ಇಡುತ್ತಾರೆ. ಗೆಣಸಿನ ಮೋರೆಯ ಭಾಗವು ಮೇಲ್ಮುಖವಾಗಿ ಇರುವಂತೆ ನೆಡಬೇಕು. ಬೂದಿ, ಸಗಣಿ ಹುಡಿ ಮುಂತಾದುವನ್ನು ಹಾಕಿ ಒಂದಿಷ್ಟು ಮಣ್ಣು ಮುಚ್ಚಬೇಕು.

ಅರಿಸಿನ : ಇದು ನೆರಳಲ್ಲಿ ಬೆಳೆಸುವುದಕ್ಕೆ ಯುಕ್ತ ಬೆಳೆ. ಹಲಸಿನ ನೆರಳಲ್ಲಿ ನೆಟ್ಟರೆ ಇನ್ನೂ ಉತ್ತಮ. ಹೊಸಮಳೆ ಬೀಳಲು ತೊಡಗಿ ಮಿಥುನ ಮಾಸವಾದಾಗ ಆಯ್ಕೆ ಮಾಡಿದ ಅರಿಸಿನದ ಬೀಜಗಳನ್ನು ನೆಲದಲ್ಲಿ ಅಡ್ಡವಾಗಿರಿಸಿ ನೆಡಬೇಕು. ಪ್ರತಿಯೊಂದು ಬೀಜದ ಅಂತರ ಆರು ಇಂಚು. ಸಾಲು ತೋಡಿ ಅದರಲ್ಲಿ ಸಗಣಿ, ಬತ್ತದ ಹೊಟ್ಟು, ಬೂದಿ ಮುಂತಾದುವನ್ನು ಹಾಕಿ ನೆಟ್ಟರೆ ತುಂಬ ಒಳ್ಳೆಯದು. ಬಳಿಕ ಸಾಲಿನ ಗುಣಿಯಲ್ಲಿ ಸೊಪ್ಪು, ತರಗೆಲೆಗಳನ್ನು ಹಾಕಿ ಸ್ವಲ್ಪ ಮಣ್ಣು ಮುಚ್ಚಬೇಕು. ಇದು ಕೊಳೆತ ಬಳಿಕ ಇನ್ನೊಂದಿಷ್ಟು ಮಣ್ಣು ಹಾಕಬೇಕು. ಅನಂತರ ಬೇರೆಯಾವುದೇ ಗೊಬ್ಬರ ಕೊಡಬೇಕಾಗಿಲ್ಲ. ವೃಶ್ಚಿಕ ಮಾಸದಲ್ಲಿ ಬೆಳೆ ಫಸಲು ತೆಗೆಯಬಹುದು. ಮಣ್ಣಿನ ಪಾತ್ರೆಯಲ್ಲಿ ಬತ್ತದ ಹೊಟ್ಟು ಹಾಕಿ

ಆಯ್ದು ಅರಿಸಿನ ಬೀಜಗಳನ್ನು ಇಟ್ಟು, ಮೇಲೆ ಇನ್ನೊಂದಿಷ್ಟು ಹೊಟ್ಟು, ಅರಿಸಿನ ಬೀಜ ಮತ್ತೆ ಒಂದಿಷ್ಟು ಹೊಟ್ಟು - ಬೀಜ ಹೀಗೆ ಬೀಜ ಸಂರಕ್ಷಣೆ ಮಾಡಬಹುದು.

ಶುಂಠಿ : ಹೊಸ ಮಳೆ ಬಿದ್ದ ಕೂಡಲೆ ಬಿತ್ತನೆ ಮಾಡಬೇಕು. ಸಗಣಿ ಹುಡಿ, ಬೂದಿಗಳನ್ನು ಹಾಕಿ ಒಂದಿಷ್ಟು ಮಣ್ಣು ಸೇರಿಸಿ ಸಾಲುಗಳನ್ನು ಮಾಡಿಕೊಂಡು ಅದರಲ್ಲಿ ಬೀಜಗಳನ್ನು ನೆಡುತ್ತಾರೆ. ಮೇಲು ಗೊಬ್ಬರವಾಗಿ ಕಾಸರಕನ ಸೊಪ್ಪನ್ನು ಕೊಡುತ್ತಾರೆ. ಅದು ಕೊಳೆತ ಮೇಲೆ ಮೇಲು ಮಣ್ಣು ಕೊಡಬೇಕು. ಶುಂಠಿ ಫಸಲು ವೃಶ್ಚಿಕ ಮಾಸದಲ್ಲಿ ಲಭ್ಯ. ಆಯ್ಕೆ ಮಾಡಿದ ಬೀಜಗಳನ್ನು ತೇವರಹಿತ ಮಣ್ಣಲ್ಲಾಗಲಿ ಗೂಡೆಗಳಲ್ಲಾಗಲಿ ಸಂರಕ್ಷಿಸಿ ಇಟ್ಟುಕೊಳ್ಳಬಹುದು.

ತೊಂಡನ್ ಪಯರ್ (ದೊಡ್ಡ ಅಳಸಂಡೆ) : ಬೀಜಗಳನ್ನು ಸುಮಾರು ಒಂದು ಅಡಿ ಅಂತರದಲ್ಲಿ ಬಿತ್ತನೆ ಮಾಡಿ ಅವು ಮೊಳಕೆಯೊಡೆದು ಐದೋ ಆರೋ ಎಲೆಗಳು ಮೂಡಿದಾಗ ಸ್ವಲ್ಪ ಸ್ವಲ್ಪ ಸಗಣಿ ಸೇರಿಸಿ ಮಣ್ಣು ಕೊಡುತ್ತಾರೆ. ಗಿಡ ಇನ್ನಷ್ಟು ಹರಡಿಕೊಳ್ಳಲು ಆರಂಭಿಸಿದಾಗ ಎಲೆಗಳನ್ನು ಚಿವುಟಿ ತೆಗೆಯುತ್ತಾರೆ. (ಅವನ್ನು ಪಲ್ಯ ಮಾಡುವುದಕ್ಕೂ ಉಪಯೋಗಿಸುತ್ತಾರೆ) ಇದರಿಂದ ಹೆಚ್ಚು ಹೆಚ್ಚು ದಂಟುಗಳು ಮೂಡುತ್ತವೆ. ಕಾಯಿಗಳು ಮೂಡಿ ಬಲಿಯ ತೊಡಗಿದಾಗ ಬಿಸಿಲಲ್ಲಿ ಹಾಕಿ ಒಣಗಿಸಿ ಸ್ವಲ್ಪ ಹೊಗೆ ಮಾತ್ರ ಲಭ್ಯವಾಗುವಷ್ಟು ಎತ್ತರದಲ್ಲಿ ತೂಗುಹಾಕುತ್ತಾರೆ. ಹೊಸ ಮಳೆ ಆರಂಭವಾಗುವಾಗ ಪುನಃ ಬಿತ್ತನೆ ಮಾಡಬಹುದು.

ಕಾಳುಮೆಣಸು : ಕೇರಳದ ಎಲ್ಲೆಡೆಗಳಲ್ಲೂ ಕೃಷಿಮಾಡಲು ಸಾಧ್ಯವಿರುವ ಒಂದು ಬೆಳೆಯೆಂದರೆ ಕಾಳುಮೆಣಸು. ಹೊಸಮಳೆ ಬಿದ್ದಾಗ ದಂಟುಗಳನ್ನು ಕತ್ತರಿಸಿದ ಬಳಿಕ ಸುಮಾರು ಇಪ್ಪತ್ತೊಂದು ದಿನಗಳ ಕಾಲ ನೆರಳಲ್ಲಿ ಹರಡಿ ಇಡಬೇಕು. ಬಳಿಕ ಅವುಗಳಲ್ಲಿ ಹಾಳಾಗದೆ ಉಳಿದ ನಾಲ್ಕು / ಐದು ದಂಟುಗಳನ್ನು ಆಯ್ದುಕೊಂಡು ಆರ್ದ್ರಾ ನಕ್ಷತ್ರದಲ್ಲಿ ಅವುಗಳ ಎರಡು 'ಗಂಟುಗಳು' ಮಣ್ಣಿನೊಳಗೆ ನಿಲ್ಲುವಂತೆ ನೆಡಬೇಕು. ಹೀಗೆ ಅಗತ್ಯವಿರುವಷ್ಟು ಕಡೆ ಸಸಿಗಳನ್ನು ನಾಟಿಮಾಡುತ್ತಾರೆ. ಬುಡದಲ್ಲಿ ನೀರು ನಿಲ್ಲಬಾರದು. ಬಳ್ಳಿಯು ಬೆಳೆಯುತ್ತ ಸಾಗಿದಂತೆ ಆಧಾರವಾಗಿರುವ ಗಿಡಕ್ಕೆ ಕಾಳುಮೆಣಸಿನ ಬಳ್ಳಿಗಳನ್ನು ಕಂಗಿನ ಹಾಳೆಯಿಂದ ಬಿಗಿಯುತ್ತಾರೆ. ಹಾಗೆ ಕಟ್ಟಿದ ನಾರು ಅನತಿ ಕಾಲದಲ್ಲಿ ತುಂಡಾಗಿ ಬೀಳುವಷ್ಟು ಗಾತ್ರದ್ದಾಗದಿದ್ದರೆ ಮೆಣಸಿನ ಬಳ್ಳಿಗೆ ಕೇಡುಂಟಾಗುತ್ತದೆ. ಹಿಂಡಿ, ಸಗಣಿ, ಆಡಿನ ಹಿಕ್ಕೆ, ಬತ್ತದ ಹೊಟ್ಟು ಮುಂತಾದುವನ್ನು ಗೊಬ್ಬರವಾಗಿ ಕೊಡಬೇಕು.

ಚಂದ ಪಯರ್ (ಸಂತೆ ಹೆಸರು ಕಾಳು) : ಹೊಂಡ ಮಾಡಿ ಬೂದಿ ಸಗಣಿ ಮುಂತಾದುವುಗಳನ್ನು ಹಾಕಿ ಇಟ್ಟುಕೊಂಡು ಹೆಸರು ಕಾಳನ್ನು ಯಾವುದೇ ಕಾಲದಲ್ಲಿ ನೆಡಬಹುದು. ಬೀಜ ಹಾಕಿ ಒಂದು ವಾರ ಕಳೆದಾಗ ಬುಡವನ್ನು ಸಣ್ಣಗೆ ಅಗೆದು / ಪಾತಿ ಮಾಡಿ ಸಗಣಿ ಬೂದಿಗಳನ್ನು ಗೊಬ್ಬರವಾಗಿ ಕೊಡುತ್ತಾರೆ. ಬಳ್ಳಿ ಹಬ್ಬಿಕೊಂಡ ಬಳಿಕ ಸೊಪ್ಪು, ತರಗೆಲೆಗಳನ್ನು ಗೊಬ್ಬರ ಕೊಡುತ್ತ ಬುಡವನ್ನು ನೆನೆಸುತ್ತಾ ಇರುತ್ತಾರೆ.

ವೀಳ್ಯ : ವೀಳ್ಯದ ಬಳ್ಳಿಯನ್ನು ಕರ್ಕಾಟಕ ತಿಂಗಳಲ್ಲಿ ನೆಡುತ್ತಾರೆ. ವೃತ್ತಾಕಾರವಾಗಿ ಗುಂಡಿಮಾಡಿ ನಾಲ್ಕು ಕಂಬಗಳನ್ನು ನಾಟಿ ಅವಕ್ಕೆ ಈ ಬಳ್ಳಿಗಳನ್ನು ನೆಟ್ಟು ಸಗಣಿ, ಬೂದಿ, ಉಪ್ಪಳಿಗೆ ಸೊಪ್ಪು (ಉದ್ದ ತೊಟ್ಟಿನ ಅಗಲ ಎಲೆಯ, ಎತ್ತರಕ್ಕೆ ಬೆಳೆಯುವ ಆದರೆ ತೀರ ದುರ್ಬಲ ಸಸ್ಯ)ಗಳನ್ನು ಗೊಬ್ಬರವಾಗಿ ಕೊಡುತ್ತಾರೆ.

ಹರಿವೆ : ಬೀಜ ಬಿತ್ತಿ ಮೊಳಕೆ ಬರಿಸಿ ಮೂರು ನಾಲ್ಕು ವಾರದ ಬೆಳವಣಿಗೆಯ ಅನಂತರ ಕಿತ್ತು ನೆಡುತ್ತಾರೆ. ಮಣ್ಣನ್ನು ಸಣ್ಣ ಸಣ್ಣ ರಾಶಿಗಳಾಗಿ ಮಾಡಿಕೊಂಡು ಅಂಥ ಗಿಡಗಳನ್ನು ನಾಟಿಮಾಡಿದ ಬಳಿಕ ಗೊಬ್ಬರ, ನೀರು ಸಾಕಷ್ಟು ಪ್ರಮಾಣದಲ್ಲಿ ಕೊಟ್ಟರೆ ಎರಡು ತಿಂಗಳಲ್ಲಿ ಬೆಳೆ ಬರುತ್ತದೆ.

ಸೌತೆ, ಮುಳ್ಳುಸೌತೆ, ಕುಂಬಳ ಕಾಯಿಗಳು : ಸೌತೆಯ ಬೀಜಗಳನ್ನು ಬೂದಿ ಲೇಪಿಸಿ ಕಿರುಚೀಲಗಳಲ್ಲಿಟ್ಟು ಸಂರಕ್ಷಣೆ ಮಾಡಿ ಮೀನ ತಿಂಗಳಲ್ಲಿ ಬಿತ್ತಿ ಬೆಳೆಯುತ್ತಾರೆ. ಮುಳ್ಳು ಸೌತೆಯನ್ನು ಕೂಡ ಮೀನ ತಿಂಗಳಲ್ಲಿ ಬೀಜ ಹಾಕುತ್ತಾರೆ. ಗುಂಡಿ ಮಾಡಿ ಸಗಣಿ, ಬೂದಿ ಮುಂತಾದುವನ್ನು ತುಂಬಿಸಿ ಬಿತ್ತನೆ ಮಾಡಿ ಬಳ್ಳಿಯು ಹಬ್ಬಿದಾಗ ಚಪ್ಪರ ಹಾಕಿ ಕೊಟ್ಟರೆ ಫಸಲು ಚೆನ್ನಾಗಿ ಲಭ್ಯವಾಗುತ್ತದೆ. ಕುಂಬಳ ಕಾಯಿಯನ್ನು ಮೀನ ಎರಡನೆ ವಾರದಲ್ಲಿ ಬೀಜ ಹಾಕುತ್ತಾರೆ. ಸಿಂಹ ಮಾಸದಲ್ಲಿ ಫಸಲು ಸಿಗುತ್ತದೆ. ಇದಕ್ಕೂ ಸಗಣಿ, ಬೂದಿಗಳನ್ನು ಗೊಬ್ಬರವಾಗಿ ಕೊಡುತ್ತಾರೆ.

ನೇಂದ್ರಬಾಳೆ, ಕದಳಿ, ರಸಬಾಳೆ : ಇವುಗಳ ಕೃಷಿಯು ಕುಂಭ, ಮೀನ ಮಾಸಗಳಲ್ಲಿ ಆರಂಭವಾಗುತ್ತದೆ. ಗುಂಡಿಗಳನ್ನು ಮಾಡಿ ಮೂರು ಮೀಟರ್ ಅಂತರದಲ್ಲಿ ಬಾಳೆಯ ಕಂದುಗಳನ್ನು ನೆಡಬೇಕು. ಒಂದು ತಿಂಗಳ ಒಳಗೆ ಸಗಣಿ, ಕಸಕಡ್ಡಿ, ತರಗೆಲೆ ಮುಂತಾದುವನ್ನು ಹಾಕಬೇಕು. ಬಳಿಕ ವರ್ಷದಲ್ಲಿ ಮೂರು ತಿಂಗಳಿಗೊಮ್ಮೆ ಗೊಬ್ಬರ ಕೊಡುತ್ತಿರಬೇಕು. ಒಂದು ವರ್ಷ ಆದಾಗ ಫಸಲು ತೆಗೆಯುತ್ತಾರೆ. ಮೊಳೆತು ಬಂದ ಕಂದು / ಗುನಿಗಳನ್ನು ಅಲ್ಲಿಂದ ಕಿತ್ತು ಸ್ಥಳಾಂತರಿಸಿ ನೆಡಬೇಕು. ಗುಂಡಿ ತೆಗೆದು ಅವುಗಳಲ್ಲಿ ಕಂದುಗಳನ್ನು ನೆಡುವುದು ಸರಿಯಾದ ಕ್ರಮ. ಅಗತ್ಯಾನುಸಾರ ನೀರು ಕೊಡುತ್ತಿರಬೇಕು. ನೇಂದ್ರಬಾಳೆ ಗೊನೆ ಹಾಕುವ / ಹಾಕಿದ ಹೊತ್ತಿಗೆ ಬಾಳೆಗಿಡ ಮುರಿದು ಹೋಗದಂತೆ ಆಸರೆದಂಟು / ಗೂಟಗಳನ್ನು ಕೊಡುತ್ತಾರೆ.

ಅವರೆ / ಅಮರೆ : ಹಸುರೆಲೆ ತುಂಬಿಸಿ ಮಣ್ಣನ್ನು ಎತ್ತರಕ್ಕೆ ಪೇರಿಸಿ ಒಳಗಿನ ಹಸುರೆಲೆ ಕೊಳೆತಾಗ ಬೀಜ ಹಾಕುತ್ತಾರೆ. ಗಿಡವು ಬೆಳೆಯುತ್ತ ಬಂದಂತೆ ಸಗಣಿ, ಆಡಿನ ಹಿಕ್ಕೆ, ಕಡಲೆ ಹಿಂಡಿ, ಬೂದಿ, ಮೂತ್ರ ಇವುಗಳನ್ನು ಗೊಬ್ಬರವಾಗಿ ಕೊಡುತ್ತಾರೆ. ಬೀಜ ಬಿತ್ತನೆಯು ಕರ್ಕಾಟಕ ತಿಂಗಳ ಅಮಾವಾಸ್ಯೆಗೆ ನಡೆಯುತ್ತದೆ. ಗೊಬ್ಬರವಾಗಿ ಹಸಿ ಸಗಣಿಯನ್ನು ಕಲಸಿ ಹುಯ್ಯುವುದೂ ಮಾಡುತ್ತಾರೆ. ಇದಕ್ಕೆ ಧಾರಾಳ ನೀರು ಕೊಡಬೇಕು. ಕುಂಭ ಮಾಸ, ವೃಷಭ ಮಾಸಗಳಲ್ಲೂ ಅವರೆ ಬೀಜ ಹಾಕಿ ಬೆಳೆಸುತ್ತಾರೆ.

ಒಟ್ಟಿನಲ್ಲಿ ಕೇರಳದ ತೆಂಗಿನ ತೋಪುಗಳಲ್ಲಿ ಹಲವಾರು ಎಡೆಬೆಳೆ / ಮಿಶ್ರ ಬೆಳೆಗಳನ್ನು ಬೆಳೆದುಕೊಂಡು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಲು, ಮನೆಯ ಆಹಾರ ಅಗತ್ಯಗಳಲ್ಲಿ ಸ್ವಯಂ ಪರ್ಯಾಪ್ತತೆ ಸಾಧಿಸಲು ತೋಪು ಕೃಷಿಯು ಅನೇಕ ದಶಕಗಳಿಂದ ಕೇರಳದ ಕೃಷಿಕರಿಗೆ ನೆರವಾಗಿದೆ.

(ಆಧಾರ : ಪರಂಬ್ ಕೃಷಿ - ದೃಶ್ಯ ಎಂ.ಆರ್. ಕೃಷಿಯಡೆ ನಾಟ್ಟರಿವ್‌ಗಳ್ - ಸಂ: ವಿ.ಕೆ. ಶ್ರೀ ಧರನ್)

ಕೆ.ಕೆ.

ಕೇರಳದ ಬತ್ತ ಬೇಸಾಯ ಬತ್ತ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಇಲ್ಲಿ ಬತ್ತವನ್ನುಬೆಳೆಯುತ್ತಿದ್ದುದಕ್ಕೆ ಐತಿಹಾಸಿಕ ಪುರಾವೆಗಳಿವೆ. ಗುಜರಾತ್‌ನ ಲೋತಾಲ್, ರಾಜಪುರ್; ಉತ್ತರ ಪ್ರದೇಶದ ಇಟ್ವಾ, ಹಸ್ತಿನಾಪುರ; ಬಿಹಾರದ ಪಾಟಲೀಪುತ್ರ, ಮಧ್ಯಪ್ರದೇಶದ ಮಾಹೇಶ್ವರ್ ಮತ್ತು ಈಗ ಪಾಕಿಸ್ತಾನದಲ್ಲಿರುವ ಮೊಹೆಂಜೊದಾರೋಗಳಲ್ಲಿ ನಡೆದಿರುವ ಅಧ್ಯಯನಗಳಲ್ಲಿ ಅಕ್ಕಿ, ಬತ್ತ, ಸುಟ್ಟುಹೋದ ಬತ್ತದ ಗಿಡ ಮುಂತಾದುವು ಲಭ್ಯವಾಗಿದ್ದುವು.

ಬತ್ತ 'ಪೋಯೇಸೀ' ಕುಟುಂಬಕ್ಕೆ ಸೇರಿದ ತೃಣಸಸ್ಯ. ಇದರ ವೈಜ್ಞಾನಿಕ ಹೆಸರು - ಒರೈಸಾ. ಈ ಗುಂಪಿನಲ್ಲಿ ಇಪ್ಪತ್ತೆರಡು ತಳಿವರ್ಗಗಳು (species) ಒಳಗೊಳ್ಳುತ್ತವೆ. ಈ ತೃಣ ತಳಿವರ್ಗಗಳಲ್ಲಿ ಕೃಷಿ ಮಾಡಲು ಬಳಸಿಕೊಂಡವು ಕೇವಲ ಎರಡು. ಅವೆಂದರೆ - ಒರೈಸಸಟೈವ ಮತ್ತು ಒರೈಸ ಗ್ಲಾಮರಿಮ. ಉಳಿದುವೆಲ್ಲ ವನ್ಯತಳಿಗಳು. ಒರೈಸ ಸಟೈವವು ಏಷ್ಯದಲ್ಲಿ ಉದ್ಭವಿಸಿದ್ದರಿಂದ ಅದಕ್ಕೆ ಏಷ್ಯನ್ ಬತ್ತ ಎಂದೂ ಹೆಸರಿದೆ. ಇದನ್ನು ಏಷ್ಯ, ಅಮೆರಿಕ, ಆಸ್ಟ್ರೇಲಿಯ, ಆಫ್ರಿಕ, ಯೂರೋಪ್ ಖಂಡಗಳಲ್ಲಿ ಬೆಳೆಯಲಾಗುತ್ತದೆ. ಒರೈಸ ಗ್ಲಾಮರಿಮವನ್ನು ಆಫ್ರಿಕ ಖಂಡದ ಪಡುಭಾಗದಲ್ಲಿ ಮಾತ್ರ ಬೆಳೆಯಲಾಗುತ್ತದೆ. ಇದನ್ನು ಆಫ್ರಿಕನ್ ಬತ್ತ ಎಂದೂ ಕರೆಯುತ್ತಾರೆ. ಈ ತಳಿಗೆ ಇಳುವರಿ ಕಡಿಮೆ.

ತಳಿಯ ಆಕೃತಿ-ಪ್ರಕೃತಿ, ಇಳುವರಿ ಸಾಮರ್ಥ್ಯ ಮತ್ತು ಭೌಗೋಳಿಕ ಹಿನ್ನೆಲೆಗಳನ್ನು ಆಧಾರವಾಗಿರಿಸಿ ಅದನ್ನು ಮೂರು ವರ್ಗಗಳಲ್ಲಿ ವಿಭಾಗಿಸಲಾಗಿದೆ. ಅವುಗಳ ಸ್ಥೂಲ ವಿವರಗಳು ಇಂತಿವೆ:

ಇದೆ. ಇದು ಹೆಚ್ಚು ಎತ್ತರಕ್ಕೆ ಬೆಳೆಯುವುದರಿಂದ ಯಾವುದೋ ಒಂದು ಬದಿಗೆ ವಾಲಿಕೊಂಡು ಬಿಡುತ್ತದೆ. ದಂಟು ದುರ್ಬಲ. ಗೊಬ್ಬರವನ್ನು ಚೆನ್ನಾಗಿ ಹೀರಿಕೊಳ್ಳಲು ಅಶಕ್ತವಾಗಿರುವುದು ಇನ್ನೊಂದು ದೌರ್ಬಲ್ಯ. ಚೆನ್ನಾಗಿ ಟಿಸಿಲೊಡೆದು ಬೆಳೆಯುತ್ತದೆ. ರೋಗಗಳನ್ನು ಕೀಟಗಳನ್ನು ತಡೆದುಕೊಳ್ಳುವ ಪ್ರತಿರೋಧ ಸಾಮರ್ಥ್ಯ ಹೆಚ್ಚು. ಅಕ್ಕಿಗೆ ರುಚಿಯೂ ಅಧಿಕ.

ಕಡಿಮೆ ಎತ್ತರಕ್ಕೆ ಬೆಳೆಯುವ ಜಾಪ್ಪೋನಿಕ ಪ್ರಭೇದದ ತಳಿಗೆ ಇಳುವರಿ ಸಾಮರ್ಥ್ಯ ಹೆಚ್ಚು. ವಾಲಿಕೊಳ್ಳುವ ಸ್ವಭಾವವಿಲ್ಲ. ಗೊಬ್ಬರವನ್ನು ಚೆನ್ನಾಗಿ ಹೀರಿ ಬೆಳೆಯುತ್ತದೆ. ತೈವಾನ್‌ನಲ್ಲಿ ಬೆಳೆಸುವ ಈ ಬತ್ತದ ಪ್ರಭೇದವನ್ನು 'ಪೊನ್‌ಲೈ' ಅಥವಾ 'ಹೋರೈ' ಎಂಬ ಹೆಸರಿನಿಂದ ಕರೆಯುತ್ತಾರೆ.

ಜಾಪ್ಪೋನಿಕ ತಳಿಪ್ರಭೇದದ ಇಳುವರಿ ಸಾಮರ್ಥ್ಯವನ್ನು ಮನಗಂಡು ಅಕ್ಕಿಯ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಇದನ್ನು ಇಂಡಿಕಾ ತಳಿಗಳನ್ನು ಬೆಳೆಯುವ ಪ್ರದೇಶಗಳಲ್ಲಿ ಬೆಳೆಸಿ ನೋಡಲಾಯಿತು. ಆದರೆ ಉಷ್ಣಮೇಖಲಾ ಪ್ರದೇಶಗಳಲ್ಲಿ ಈ ತಳಿ ಯಶಸ್ವಿಯಾಗಲಿಲ್ಲ. ರೋಗಬಾಧೆಯನ್ನೂ ಕೀಟಬಾಧೆಯನ್ನೂ ತಡೆದುಕೊಳ್ಳುವ ಸಾಮರ್ಥ್ಯ ಇದಕ್ಕೆ ಇಲ್ಲದುದು ಸೋಲಿನ ಇನ್ನೊಂದು ಕಾರಣವಾಗಿತ್ತು. (ಇತರ ಹೆಚ್ಚಿನ ವಿವರಗಳು ಪು. 18, ವಾರ್ಷಿಕ ವಿಜ್ಞಾನ - IIನೇ ಸಂಪುಟ)

ಕೇರಳದ ದೇಸೀ ಬತ್ತದ ತಳಿಗಳು : ಕೇರಳದ ವಿಶಿಷ್ಟ ಹವೆ ಮತ್ತು ಭೂ ಪ್ರಕೃತಿಗಳಿಗೆ ಯುಕ್ತವೆನಿಸುವ ಹಾಗೆ ಆಯಾ ಪ್ರದೇಶದ ಬತ್ತ ಬೇಸಾಯಗಾರರು ಪಾರಂಪರಿಕವೂ ಅನುಭವ ಜನ್ಯವೂ ಆದ ಅರಿವಿನಿಂದ ಬೆಳೆ ತೆಗೆಯುತ್ತಿದ್ದ ಅನೇಕ ಬತ್ತದ ತಳಿಗಳಿವೆ. ಅವುಗಳ ವೈವಿಧ್ಯ, ವೈಚಿತ್ರ್ಯಗಳು ಕುತೂಹಲಕರವಾಗಿವೆ.

ವಳ್ಳುವ ನಾಡೆಂಬ ಪಾರಂಪರಿಕ ಪ್ರದೇಶವೊಂದರ ಒಂದು ಗ್ರಾಮ ಶ್ರೀಕಂಠಾಪುರಂ. ಇಲ್ಲಿ ಸುಮಾರು ಮೂವತ್ತಕ್ಕಿಂತಲೂ ಹೆಚ್ಚು ತಳಿಗಳ

ಬತ್ತ

- ಇಂಡಿಕ
  - ಇದನ್ನು ಶ್ರೀಲಂಕ, ದಕ್ಷಿಣ ಮಧ್ಯ ಚೀನ, ಭಾರತ, ಜಾವ, ಪಾಕಿಸ್ತಾನ ಫಿಲಿಪ್ಪೈನ್ಸ್ ಮತ್ತು ತೈವಾನ್‌ಗಳಲ್ಲಿ ಬೆಳೆಸುತ್ತಾರೆ. (ಉಷ್ಣವಲಯದ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ)
- ಜಾಪ್ಪೋನಿಕ
  - ಉತ್ತರ ಪೂರ್ವ ಚೀನ, ಜಪಾನ್ ಮತ್ತು ಕೊರಿಯಗಳಲ್ಲಿ ಬೆಳೆಸುತ್ತಾರೆ (ಸಮಶೀತೋಷ್ಣ ಮತ್ತು ಮಿತೋಷ್ಣವಲಯ ಪ್ರದೇಶ ಗಳಲ್ಲಿ ಬೆಳೆಯಲಾಗುತ್ತದೆ.)
- ಜಾವಾನಿಕ್
  - **ಟಿಜಿರ** **ಬುಳು**
  - ಜಾವ, ಇಂಡೋನೇಷ್ಯಗಳಲ್ಲಿ ಬೆಳೆಸುತ್ತಾರೆ. (ಭೂಮಧ್ಯ ರೇಖಾ ವಲಯಗಳ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ)

ವಿಶ್ವದಲ್ಲಿ ಬತ್ತ ಬೆಳೆಯುವ ಶೇಕಡಾ ತೊಂಬತ್ತರಷ್ಟು ಪ್ರದೇಶಗಳಲ್ಲಿ ಇಂಡಿಕಾ ತಳಿಯನ್ನೇ ಬಳಸುತ್ತಾರೆ. ಆದರೆ ಇದರ ಇಳುವರಿ ಸಾಮರ್ಥ್ಯ ಉಳಿದೆರಡು ಜಾತಿಯ ತಳಿಗಳಿಗಿಂತ ಕಡಿಮೆಯೇ

ಬತ್ತವನ್ನು ಬೆಳೆಯುತ್ತಿದ್ದರು. ಅವು ಯಾವುವೆಂದರೆ- ಆರ್ಯನ್, ತವಳಕಣ್ಣನ್, ಪೊನ್ನಾರಿಯನ್, ಚೆಂಗಳಮ, ತೆಕ್ಕನ್ ಚೀರ, ಚೆಂಬಾನ್, ವೆಳುತ್ತಿರಿ ಕಳಮ, ಅನ್ನಚ್ಚೆಂಬಾನ್, ಚೀರಚ್ಚೆಂಬಾನ್, ತೊಣ್ಣೂರನ್,

ವಟ್ಟನ್, ಕರುತ್ತೈನಿ, ಅರಿವಾಕರಿ, ಚುವನ್ನ ಮುಂಡಕನ್ ಪಾಲ, ಮುಂಡೋನ್ ಪಾಲ, ಕುಟ್ಟಾಡನ್, ಕುಂಬಳೋನ್, ವೆಳ್ಳಕ್ಕೋಲಿ, ಚೆರುವೆಳ್ಳರಿ, ಕಯಿಕ್ಕುಂ ಪುತ್ತಾಡ, ವೃಶ್ಚಿಕಪ್ಪಾಂಡಿ, ಕಟ್ಟಮೋಡನ್, ಕುಟ್ಟಿಮೋಡನ್, ಕರುತ್ತಮೋಡನ್, ಚೆನ್ನೆಲ್ಲ್, ಪರಂಬು ಪೊಟ್ಟನ್, ನವರ ಮುಂತಾದುವು. ಇವುಗಳಲ್ಲಿ ರೋಗ ನಿರೋಧಕ ಶಕ್ತಿ, ಅಧಿಕ ಇಳುವರಿ ಸಾಮರ್ಥ್ಯ, ಔಷಧೀಯ ಗುಣ, ಶುಶ್ರೂಷೆ ಮಾಡದೆಯೂ ಬೆಳೆಯುವ ಶಕ್ತಿ, ಬರವನ್ನು ತಾಳಿಕೊಳ್ಳುವ ತಾಕತ್ತು, ನೆರೆಯನ್ನು ತಡೆದು ನಿಲ್ಲುವ ಗುಣ, ನೆರಳಲ್ಲೂ ಉಪ್ಪುನೀರಲ್ಲೂ ಬೆಳೆಯುವ ಸತ್ತ್ವ - ಮುಂತಾದ ವೈಶಿಷ್ಟ್ಯಗಳು ಮೈಗೂಡಿದ್ದುವು. ಹೆಚ್ಚಿನ ದೇಶೀ ತಳಿಗಳಿಗೆ ಕ್ರಿಮಿಕೀಟಗಳ ಬಾಧೆ ತಡೆದುಕೊಳ್ಳುವ ಸಾಮರ್ಥ್ಯವಿತ್ತು. ವಯನಾಡ್‌ನ 'ಎಡವಕ' ಕಣ್ಣೂರಿನ 'ಓಡಚ್ಚ' ತ್ರಿಚ್ಚೂರಿನ 'ಕರಿಂಡೋನ್' ಮುಂತಾದುವು ಈ ಪೈಕಿ ಮೊದಲ ದರ್ಜೆಯವು. ಕಟ್ಟಮೋಡನ್, ಎರವಪ್ಪಾಂಡಿ, ಕರುತ್ತಪಾಂಡಿ ಮುಂತಾದುವು ಬರವನ್ನು ಪ್ರತಿರೋಧಿಸಿ ನಿಲ್ಲಬಲ್ಲುವು. ಏರಿನೆಲ್ಲ್, ಅಣ್ಣೂರಿನೆಲ್ಲ್ ಮುಂತಾದುವು ಕೃಷಿ ಮಾಡದೆ ಕೂಡ ಬೆಳೆದು ಫಸಲು ನೀಡಬಲ್ಲುವು. ಚೋಲೇಲ್ ಚುಂಕನ್, ಪಡನ್ನ ವೆಳ್ಳ, ಕೊಚ್ಚುವಿತ್ತ್ ಮುಂತಾದುವು ನೆರಳಲ್ಲೂ ಬೆಳೆಯುಬಲ್ಲುವು. ಕೊಡಿಯನ್, ಕುಟ್ಟಾಡನ್, ವಯಿಲತ್ತೂರ್, ವೇತಾಂಡನ್, ಚೇರಾಡಿ, ಚೆಂದಾಡಿ, ಕನ್ನಿಕ್ಕುಳಪ್ಪಾಲ ಮುಂತಾದುವು ನೆರೆಯನ್ನು ತಡೆದುಕೊಂಡು ಬೆಳೆಯಬಲ್ಲ ತಳಿಗಳು. ವಯನಾಡಿನ ಚೆಂದಾಡಿ ಎಂಬ ಬತ್ತದ ಗಿಡ ಒಂದು ತಿಂಗಳ ಕಾಲ ನೀರೊಳಗೇ ಇದ್ದೂ ಫಸಲು ನೀಡಿದ ಉದಾಹರಣೆಯಿದೆ. ನೀರಿನ ಮಟ್ಟ ಏರಿದಂತೆಲ್ಲ ತಲೆಯೆತ್ತಿ ಬೆಳೆಯುತ್ತ ಸಾಗಬಲ್ಲ ತಳಿಗಳೆಂದರೆ ಕುಟ್ಟಾಡನ್ ಮತ್ತು ವಯಿಲತ್ತೂರು. ವಿರಿಪ್ಪ್, ಪೊಕ್ಕಾಳಿ, ಕುರುಕ, ಓರ್‌ಕಳಮ, ಕುದಿರುವಿತ್ತ್ ಮುಂತಾದುವು ಒವುಳು (ಉಪ್ಪು) ನೀರಲ್ಲೂ ಬೆಳೆಯಬಲ್ಲುವು.

ನವರ ಎಂಬ ತಳಿ ಅದರ ಔಷಧೀಯ ಗುಣಗಳಿಗಾಗಿ ಪ್ರಸಿದ್ಧ. ಆಯುರ್ವೇದ ಚಿಕಿತ್ಸೆಯಲ್ಲಿ ಇದು ತುಂಬ ಅನಿವಾರ್ಯ. ಸ್ವಲ್ಪಮಟ್ಟಿಗೆ ನವರದ ಔಷಧೀಯ ಗುಣವು ಎರುಮಕ್ಕಾರಿ, ಕಟುಂಕ್ಕುಂ (ಕಳ್ಳುಕ್ಕುಂ) ಪೂತ್ತಾಡ, ಕುಂಞಿನೆಲ್ಲ್, ನಲ್ಲ ಚೆನ್ನೆಲ್ಲ್ ಮುಂತಾದ ತಳಿಗಳಲ್ಲೂ ಇದೆ. ಕಟುಂಕುಂ ಪೂತ್ತಾಡವು ಮಧುಮೇಹ ರೋಗಿಗಳಿಗೆ ಪಾರ್ಶ್ವ ಪರಿಣಾಮಗಳೇನೂ ಇಲ್ಲದೆ ಗಂಜಿಮಾಡಿ ಉಣ್ಣುವುದಕ್ಕೂ ನಲ್ಲಚೆನ್ನೆಲ್ಲ್ ಹೊಟ್ಟೆನೋವು, ವಾಂತಿ, ಅತಿಸಾರ (ಭೇದಿ) ಮುಂತಾದವುಗಳಿಗೆ ಔಷಧವಾಗಿಯೂ ಬಳಕೆಯಾದರೆ ಕುಂಞಿನೆಲ್ಲ್ ಜ್ವರಬಾಧಿತರಿಗೆ ಬಾಯಿರುಚಿ ಉಂಟುಮಾಡುವುದಕ್ಕೂ ಎರುಮಕ್ಕಾರಿಯು ಕೆಮ್ಮಿಗೆ ಮತ್ತು ಗಾಯವನ್ನು ಕಟ್ಟುವಾಗ ಬಳಸುವ ಔಷಧದಲ್ಲಿಯೂ ಬಳಕೆಗೆ ಬರುತ್ತದೆ.

ಊರತಳಿಯ ಬತ್ತಗಳ ರುಚಿ ಹಾಗೂ ಪೌಷ್ಟಿಕಾಂಶ ಸಮೃದ್ಧಿ ಎಲ್ಲರಿಗೂ ತಿಳಿದ ವಿಷಯ. ಗಂಜಿ - ಅನ್ನ ಬೇಯಿಸಲು, ಅರಳು ಹುರಿಯಲು, ಹುರಿಯಕ್ಕಿ (ಮಂಡಕ್ಕಿ) ತಯಾರಿಸಲು, ಪಾಯಸ ಮಾಡಲು ಯುಕ್ತವಾದ ಬತ್ತದ ತಳಿಗಳಿವೆ. ನವರ, ಮಾನಂತನ್, ಅರಿಕ್ಕಲರಿ, ಪಳ್ಯಾಲ್, ತೊಣ್ಣೂರಾನ್ ಮುಂತಾದುವು ಕಡಿಮೆ ಕಾಲಾವಧಿಯಲ್ಲಿ ಫಸಲು ನೀಡುತ್ತವೆ. ಅವುಗಳಲ್ಲೂ ನವರ ಕೇವಲ ಅರುವತ್ತು ದಿನಗಳಲ್ಲಿ ಬೆಳೆದು ನಿಂತುಬಿಡುತ್ತದೆ. ಆರ್ಯನ್, ಮುಂಡೋಡನ್‌ಪಾಲ, ಕರುತ್ತೈನಿ, ಕುಟ್ಟಾಡನ್, ಕೊಡಿಯನ್ ಮುಂತಾದುವಕ್ಕೆ ದೀರ್ಘ ಕಾಲಾವಧಿ ಬೇಕು. ಇಂಥ ತಳಿಗಳಲ್ಲೆಲ್ಲ ಕುಟ್ಟಾಡನೆ ಶ್ರೇಷ್ಠವಾದುದು. ಫಸಲು ನೀಡಲು ಒಂದು ವರ್ಷವೇ ಬೇಕಾಗುತ್ತದೆ.

ಕೇರಳದ ಬತ್ತದ ಬೆಳೆ - ಇನ್ನಷ್ಟು ವಿವರಗಳು

ಕೇರಳದಲ್ಲಿ ಸಾಮಾನ್ಯವಾಗಿ ವಾರ್ಷಿಕ ಮೂರು ಬೆಳೆಗಳನ್ನು ಬೆಳೆಯುವ ರೂಢಿ ಇದೆ (ಪ್ರಾದೇಶಿಕ ವ್ಯತ್ಯಾಸವೂ ಇದೆ). ಅವಕ್ಕೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿವೆ. ಅವನ್ನು ಸ್ಥೂಲವಾಗಿ ಹೀಗೆ ಪಟ್ಟಿಮಾಡಬಹುದು.

ಒಂದನೆಯ ಬೆಳೆ	ಎರಡನೆಯ ಬೆಳೆ	ಮೂರನೆಯ ಬೆಳೆ
ವಿರಿಪ್ಪ್	ಮುಂಡಕನ್	ಪುಂಜ
ವಯನಾಡಲ್ಲಿ:ನಂಜ	ಪುಂಜ	
ಕಣ್ಣೂರಲ್ಲಿ :		
ಪಿರಿಪ್ಪ್	ಪುಂಜ	ತಾವೂಜ
ಕಾಸರಗೋಡಲ್ಲಿ		
1. ಮಲಯಾಳಂನಲ್ಲಿ		
ಪಿರಿಪ್ಪ್	ಪುಂಜ	ಕೊಳಕ್ಕ
2. ತುಳು/		
ಕನ್ನಡಗಳಲ್ಲಿ ಏಣೆಲು	ಸುಗ್ಗಿ	ಕೊಳಕ್ಕೆ

ವಿರಿಪ್ಪ್ : ಕೃಷಿಯ ಆರಂಭ - ಮೇಷ ಮಾಸದಲ್ಲಿ; ಕೊಯ್ಲು-ಸಿಂಹ / ಕನ್ಯಾದಲ್ಲಿ, ಇದರ ಕೃಷಿಯನ್ನು ಕನ್ನಿಕೃಷಿ / ಕನ್ನಿಪ್ಪೂವ್ ಎಂದೂ ಕೊಯ್ಲನ್ನು ಕನ್ನಿಕೊಯ್ತ್ ಎಂದೂ ಕರೆಯುತ್ತಾರೆ.

ಮುಂಡಕನ್ : ಕೃಷಿಯ ಆರಂಭ - ಸಿಂಹ/ಕನ್ಯಾ ತಿಂಗಳಲ್ಲಿ; ಕೊಯ್ಲು-ಧನು/ಮಕರ ತಿಂಗಳಲ್ಲಿ, ಮುಂಡಕನ್ ಕೃಷಿಯನ್ನು ಮಕರ ಕೃಷಿ / ಮಕರವಿಳ ಎಂದೂಕೊಯ್ಲನ್ನು ಮಕರ ಕೊಯ್ತ್ ಎಂದೂ ಕರೆಯುತ್ತಾರೆ.

ಪುಂಜ : ನೀರಿನ ಲಭ್ಯತೆಯನ್ನು ಅನುಸರಿಸಿ ಕೃಷಿಯು ವೃಶ್ಚಿಕ / ಧನು / ಮಕರ ತಿಂಗಳಲ್ಲಿ ಆರಂಭ. ಅಂತೆಯೇ ಕೊಯ್ಲು ಕುಂಭ/ ಮೀನ ಮಾಸಗಳಲ್ಲಿ ನಡೆಯುತ್ತದೆ. ಮೂರನೆಯ ಬೆಳೆಗೆ ಸಾಮಾನ್ಯವಾಗಿ ಕಡಿಮೆ ಕಾಲಾವಧಿಯಲ್ಲಿ ಕೊಯ್ಲಿಗೆ ಬರುವ ತಳಿಗಳನ್ನು ಬಳಸುತ್ತಾರೆ.

ಶುದ್ಧ ತಳಿಯ ಮುಂಡಕನ್‌ನ ವೈಶಿಷ್ಟ್ಯವೆಂದರೆ ಯಾವಾಗ ಬಿತ್ತನೆ ಮಾಡಿದರೂ ಅದು ಮಕರ ಮಾಸದಲ್ಲಲ್ಲದೆ ತೆನೆಯೊಡೆಯುವುದೇ ಇಲ್ಲ.

ಈ ಹಿಂದೆ ಪ್ರಸ್ತಾಪಿಸಿದ ತಳಿಗಳನ್ನೂ ಒಳಗೊಂಡಂತೆ ಕೇರಳದ ವಿವಿಧ ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದ / ಬೆಳೆಯುವ ದೇಶೀ ಬತ್ತದ ತಳಿಗಳ ಸ್ಥೂಲ ಮಾಹಿತಿಗಳನ್ನು ನೀಡಿದೆ. ಈ ಮಾಹಿತಿಗಳಲ್ಲಿ ಅಪೂರ್ಣತೆ ಇರಬಹುದು, ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದು. ಲಭ್ಯ ಮಾಹಿತಿಗಳನ್ನು ಸ್ಥೂಲವಾಗಿಯಾದರೂ ಕೊಡಲು ಪ್ರಯತ್ನಿಸಿದೆ.

ಜಿಲ್ಲೆ : ಎರ್ನಾಕುಲಂ		ಇಳುವರಿ - ಬೀಜ ಹಾಕಿದುದರ ಪಟ್ಟು (times) ಎಂಬ ಲೆಕ್ಕದಲ್ಲಿ ಕೊಟ್ಟಿದೆ				
ಹೆಸರು	ಬೆಳೆನೆಲ	ಯಾವಬೆಳೆ	ಪೈರಿನ ಎತ್ತರ	ಕಾಲಾವಧಿ	ಸರಾಸರಿ ಇಳುವರಿ	ಬತ್ತ / ಅಕ್ಕಿಯ ವೈಶಿಷ್ಟ್ಯ
ಆಮಕ್ಕೊಡಿ		ಒಂದನೆಯ		120 ದಿನ	20	ಬತ್ತಕ್ಕೂ ಅಕ್ಕಿಗೂ ಬಿಳಿಯ ಬಣ್ಣ
ಅರುಪ(ವ)ದಾಂಕಾರಿ	ಒಣಭೂಮಿ	ವಿರಿಪ್ಪ್(I)		60 ದಿನ		ಬತ್ತದ ಕಾಳುಗಳಿಗೆ ನಸುಗೆಂಪು ಬಣ್ಣ
ಕರಿಕ್ಕನ್	ಬೆಟ್ಟದಪ್ಪಲು	ಒಂದನೆಯ		90 ದಿನ		ಕಾಳುಗಳಿಗೆ ಕಪ್ಪು ಬಣ್ಣ
ತೊಳುಕ್ಕ್	ಒಣಭೂಮಿ			90ದಿನ	15-20	ಕಾಳುಗಳಿಗೆ ಕೆಂಪು ಬಣ್ಣ
ನೂವ	ಹೊಲ		3-3½ಅಡಿ	70ದಿನ	15	ಕಾಳುಗಳಿಗೆ ಬಿಳಿಬಣ್ಣ
ಮಲಮೂಡ ರಾಜಮೇನಿ	ಪೊಕ್ಕಾಳಿಭೂಮಿ ಕಡಿಮೆ ಆಳ			90 ದಿನ		ಕಾಳುಗಳಿಗೆ ಬಿಳಿ ಬಣ್ಣ, ಬೇಗ ಉದುರುತ್ತದೆ ಉಪ್ಪುನೀರಿಗೆ ಸಣ್ಣಮಟ್ಟಿನ ಪ್ರತಿರೋಧ ಉರುಟಾಗಿ ಸಣ್ಣಗಾತ್ರದ ಕೆಂಪುಕಾಳುಗಳು
ಜಿಲ್ಲೆ : ಕಣ್ಣೂರು						
ಅಲ್ಲಿಕ್ಕಣ್ಣನ್		ಒಂದನೆಯ	5ಅಡಿ	130 ದಿನ	10-12	ಬಿಳಿ ಬಣ್ಣದ ಕಾಳುಗಳು
ಅರಿಕ್ಕರಾಯಿ ಚಿಟ್ಟೇನಿ		ಎರಡನೆಯ				ದಂಟುಗಳು ಬಲಶಾಲಿ. ಸಮೃದ್ಧ ಹುಲ್ಲು
ಎರಿಕ್ಕಟಿಮ		ಒಂದನೆಯ	3½	-	15	ಕುಮರಿಬೇಸಾಯಕ್ಕೆ ಯುಕ್ತ. ಕಾಳುಗಳಿಗೆ ಬಿಳಿಬಣ್ಣ
ಓರ್ಕಟಿಮ	ಗದ್ದೆ	ಒಂದನೆಯ		6 ತಿಂಗಳು		ಉಪ್ಪು/ಸವುಳು ನೀರಲ್ಲೂ ಬೆಳೆಯುತ್ತದೆ. ಬಂಗಾರದ ಬಣ್ಣದ ಕಾಳುಗಳು. ದೊಡ್ಡಗಾತ್ರ. ಕೀಟ ಪ್ರತಿರೋಧಕಶಕ್ತಿ ಉಳ್ಳದ್ದು. ಕಾಳುಗಳು. ದೊಡ್ಡಗಾತ್ರ ಕೀಟ ಪ್ರತಿರೋಧಕಶಕ್ತಿ ಉಳ್ಳದ್ದು, ಕಾಳುಗಳು ಬಲಿತಾಗ ಒಂದೇ ಕಡೆಗೆ ವಾಲಿಬೀಳುವ ಪೈರು. ಸೊಕ್ಕಿ ಬೆಳೆಯುತ್ತದೆ. ಒಂದೇ ಬುಡದಲ್ಲಿ ಹತ್ತಾರು ಕದಿರುಗಳು
ಏರಾನ್	ಒಣಭೂಮಿ		51/2	170-175 ದಿನ	30-38	ಕುಮರಿಬೇಸಾಯಕ್ಕೆ ಯೋಗ್ಯ. ಒಳ್ಳೆಯ ತೆನೆಗಳು. ಕಪ್ಪುಬಣ್ಣದ ಕಾಳುಗಳು. ಕಾಳು ಇಬ್ಬದಿಯಲ್ಲೂ ರೆಕ್ಕೆಯಂಥ ಬೆಳೆವಣಿಗೆ. ರೆಕ್ಕೆಯ ಕುರಿತು ಕಥೆ ಇದೆ.
ಓಡಚ್ಚನ್		ಮೊದಲನೆಯ	5 ಅಡಿ	120 ದಿನ	30	ಕಪ್ಪು-ಬಿಳಿ ಮಿಶ್ರಿತ ಬಣ್ಣ. ಉದ್ದನ ಕಣ್ಣು. ಸುಂಗು ಇರುತ್ತದೆ. ರೋಗ ಪ್ರತಿರೋಧ ಶಕ್ತಿ ಅಧಿಕ.
ಕಮಾಲ್		ಮೊದಲನೆಯ				ಔಷಧ ಗುಣವಿದೆ. ಔಷಧಕ್ಕಾಗಿಯೇ ಬೆಳೆಯುವುದು. ಇದರ ಪಾಯಸ ತುಂಬ ರುಚಿಕಟ್ಟು.
ಕರಿಮಾಲ	ಗದ್ದೆ (ಧಾರಾಳ ನೀರು)	ಮೊದಲನೆಯ	5-5½ ಅಡಿ	6 ತಿಂಗಳು		ಬುಡದಲ್ಲಿ 'ಮಾಲೆ' ಇರುವುದರಿಂದ ಪ್ರತ್ಯೇಕವಾಗಿ ಗುರುತು ಹಿಡಿಯಲು ಸಾಧ್ಯ. ಉರುಟು ಕಪ್ಪು ಕಾಳು, ಕಾಳಿನ ಅಡಿಭಾಗದಲ್ಲಿ ಸ್ವಲ್ಪ ಬಿಳುಪು. ಸ್ವಲ್ಪ ನೆರೆಯನ್ನು ತಡೆಯಬಲ್ಲುದು.
ಕರಿವಡಕ್ಕನ್		ಒಂದನೆಯ	4½-5ಅಡಿ	150 ದಿನ	15	ಕಪ್ಪು ಬಣ್ಣದ ಕಾಳುಗಳು

ಕಿವಿಕ್ಕನ್ ಚೆನ್ನೆಲ್ಲ್	ಒಣನೆಲ			170-175 ದಿನ	30-38	ಕುಮರಿ ಬೇಸಾಯಕ್ಕೆ ಬಳಕೆ. ಕಾಳುಗಳಿಗೆ ಕೆಂಪುಬಣ್ಣ
ಕೀರಿಪ್ಪಾಲ	ಒಂದು ಬೆಳೆ ಗದ್ದೆ			100-110 ದಿನ		ಬಿಳಿ ಕಾಳುಗಳು. ಹೊಸಕ್ಕಿ ಪಾಯಸಕ್ಕೆ, ಕದಿರಿನ ಮಾಲೆ ಕಟ್ಟಲು ವಿಶೇಷವಾದುದು. ಅರಳು ಹುರಿಯುವುದಕ್ಕೂ
ಕುಂಞಿನೆಲ್ಲ್				120 ದಿನ	ಹೆಚ್ಚು	ಪುಷ್ಪದ ಸುವಾಸನೆಯ ಬತ್ತ. ರುಚಿಕರವಾದ ಅನ್ನ. ಕದಿರಮಾಲೆಗೂ ಬಳಕೆ. ಸಾಧಾರಣ ತಳಿಗಳ ಇಮ್ಮಡಿ ಫಸಲು. ಜ್ವರ ಬಂದಾಗ ಇದರ ಗಂಜಿಗೆ ಬಹುರುಚಿ.
ಕುಂಞಿವಿತ್ತ್	ಗದ್ದೆ	ಒಂದನೆಯದು	4½-5ಅಡಿ	100-110ದಿನ	30	ಬಿಳಿಬಣ್ಣದ ಕಾಳುಗಳು
ಕುದಿರು ವಿತ್ತ್	ಗದ್ದೆ			4 ತಿಂಗಳು	ಹೆಚ್ಚು ಒಂದು ಎಕರೆಗೆ 2000 ಪರೆ ಭತ್ತ	ಒವಳು ನೀರನ್ನು ಸಹಿಸಬಲ್ಲುದು. ತೆನೆ ಬಿರಿದಾಗ ಜೋಳದ ತೆನೆ ಬಿರಿದಂತೆ ದೊಡ್ಡಗಾತ್ರದ ಬಿಳಿ ಬತ್ತ. ಕೀಟಬಾಧೆ ತಡೆಯಬಲ್ಲುದು. ಚೆನ್ನಾಗಿ ಪುಷ್ಪವಾಗಿ ಬೆಳೆಬರುವುದರಿಂದ ಬೀಜ ಕಡಿಮೆ ಸಾಕು. ಒಂದೇ ಬುಡದಲ್ಲಿ ಅನೇಕ ಕದಿರುಗಳು. ದಂಡು ಬಲಯುತವಾದುದು.
ಕುರುಂಕಳ(ಟ)ಮ	ಎರಡು ಬೆಳೆ ಗದ್ದೆ	ಮೊದಲ ಬೆಳೆ	5 ಅಡಿ	120-130 ದಿನ	25	ಬಿಳಿಕಾಳುಗಳು. ತೃಚ್ಚೂರು ಪಾಲ್ಘಾಟು ಜಿಲ್ಲೆಗಳಲ್ಲೂ ಬೆಳೆಯುತ್ತಾರೆ.
ಕುರುರಾಯಿ	ಗದ್ದೆ			100 ದಿನ		
ಕೊತ್ತಂಪಾಲಟಿಕ್ಕಂಮ	ಏಕಬೆಳೆ ಗದ್ದೆ			120-130 ದಿನ	20-25	ಕಪ್ಪು ಸಣ್ಣ ಕಾಳುಗಳು. ಅಕ್ಕಿಗೆ ಸುವಾಸನೆ ಇದೆ. ತುಪ್ಪದನ್ನ (Ghee Rice)ಕ್ಕೆ ಸೂಕ್ತ. ಒಳ್ಳೆ ಬೆಳೆ ಹೆಚ್ಚು ಮಳೆ ಯುಕ್ತವಲ್ಲ.
ಕೋಟಿವಾಲನ್	ಗದ್ದೆ (ಕೆಸರು)		5-5½ಅಡಿ	6 ತಿಂಗಳು	ಕಡಿಮೆ	ಬಿಳಿ ಬತ್ತ, ಒಂದು ವಾರ ತುಂಬಾ ನೀರು ನಿಂತರೂ ಲೆಕ್ಕಿಸದು. ಹೊಳೆಯಿಂದ ನೀರು ಏರುವ, ಕೆಸರು ನೆಲದಲ್ಲಿ ಬೆಳೆಯುತ್ತದೆ.
ಚುವನ್ನ ಚೋಮನ್	ಹೊಲ		3-3½ ಅಡಿ	80-85 ದಿನ		ಕಾಳುಗಳಿಗೆ ಕೆಂಪು ಬಣ್ಣ. ಹೊದಲು/ಪುರಿ/ ಚುರ್ಮುರಿ ಹುರಿಯಲು ಅತ್ಯುತ್ತಮ. (ಅರಳು)
ಚೂರಿಕ್ಕಣ್ಣಿ	ಕುಮರಿ					ಕುಮರಿ ಬೇಸಾಯಕ್ಕೆ ಯೋಗ್ಯಬೀಜ
ಚೋಲೇಲ್‌ಚುಂಗನ್	ಹೊಲ			80 ದಿನ		ನೆರಳಲ್ಲೂ ಬೆಳೆಯುತ್ತದೆ. ನೀಳ ಜೀರಿಗೆ ಗಾತ್ರದ ಕಾಳುಗಳು. ಕೆಂಪು ಬಣ್ಣ
ತೈಯನ್	ಗದ್ದೆ		4½-5ಅಡಿ	160 ದಿನ	18-23	ಕಾಳುಗಳಿಗೆ ಕೆಂಪು ಬಣ್ಣ
ನಲ್ಲ ಚೆನ್ನೆಲ್ಲ್	ಗದ್ದೆ			4 ತಿಂಗಳು		ಕೆಂಬಣ್ಣದ ಬತ್ತ, ವಾಂತಿ, ಭೇದಿ, ಹೊಟ್ಟೆ ನೋವುಗಳಿಗೆ ಇದರ ಅರಳಿನಿಂದ ಮಾಡಿದ ಗಂಜಿ ಅತ್ಯುತ್ತಮ.
ನಾಟ್ಟಿ ಕಟಿಮ	ಗದ್ದೆ			4ತಿಂಗಳು		ಕೆಂಬಣ್ಣದ ಕಾಳುಗಳು, ರುಚಿಕಟ್ಟಾದ ಗಂಜಿ/ಅನ್ನ
ನಾರೋನ್	ಕರೆಕೃಷಿ ಒಣನೆಲ			60 ದಿನ		ಔಷಧ ಗುಣವುಳ್ಳದ್ದು

ಪರಂಬನ್ ಕಟಿಮ	ಹೊಲ			85- 90 ದಿನಗಳು	7-10	ಬಿಳಿ ಕಾಳುಗಳು. ಹಿಂದಿನ ವರ್ಷ ಕುಮರಿ ಬೇಸಾಯ ಮಾಡಿದ ಜಾಗದಲ್ಲಿ ಬೆಳೆಯು ವಂಥದು. ಗೊಬ್ಬರ ಕಡಿಮೆ ಇದ್ದಾಗಲೂ ಬೆಳೆಯುತ್ತದೆ.
ಪಳ್ಳಿಯೋಡನ್						ಕುಮರಿ ಬೇಸಾಯಕ್ಕೆ ಯೋಗ್ಯತಳಿ
ಪಾಂಡಿಮೋರೋನ್	ಗದ್ದೆ	ಮೊದಲ ಬೆಳೆ		115- 120 ದಿನ	12	ಕಾಳುಗಳಿಗೆ ಕಪ್ಪು ಬಣ್ಣ
ಪಾರ್ಯನ್	ಒಣನೆಲ/ ಕುಮರಿ		4½ ಅಡಿ	120 ದಿನ	30	ಕುಮರಿ ಬೇಸಾಯಕ್ಕೆ ಬಳಕೆ. ಹಳದಿ ಮಿಶ್ರಿತ ಬಿಳಿ ಬಣ್ಣ
ಪೇರಾಟಾನ್	ಗದ್ದೆ (ಕೆಸರು)		4½-5 ಅಡಿ	180 ದಿನ	30	ದೃಢವಾದ ಗಿಡಗಳು. ಒಂದು- ಒಂದೂವರೆ ಅಡಿ ಆಳದ ತನಕದ ಕೆಸರಲ್ಲಿ ಒಳ್ಳೆಯ ಬೆಳೆ.
ಮಲಯುಡುಂಬನ್	ಏಕಬೆಳೆಗದ್ದೆ	ಮೊದಲಬೆಳೆ	4ಅಡಿ	120- 140 ದಿನ	15-20	ನೇಜಿ ಕಿತ್ತು ನೆಡುವುದು ಪದ್ಧತಿ. ಎಳೆಗೆಂಪು ಮಿಶ್ರಿತ ಬಿಳಿಬಣ್ಣ; ದೊಡ್ಡ ಕಾಳುಗಳು. ಕಾಳುಗಳ ತುದಿಯಲ್ಲಿ ಕಪ್ಪು.
ಮೂನ್ನಾಂವಿಳ	ಗದ್ದೆ	ಎರಡನೇ	5½-6 ಅಡಿ	85- 90 ದಿನ		ಎಳೆಗೆಂಪು ಕಾಳುಗಳು
ವಡಕ್ಕನ್	ಕರೆನೆಲ			85 ದಿನ		ಔಷಧ ಗುಣವಿದೆ.
ವಾಳನ್/ವಾಯನ್	ಗದ್ದೆ	1ನೇ	3½ ಅಡಿ	90- 95 ದಿನ್ನ	15	ಕಪ್ಪುಕಾಳುಗಳು
ವೆಳ್ಳಚೋಮನ್	ಹೊಲ/ ಕುಮರಿ		3½ ಅಡಿ	90- 95 ದಿನ	15	ಕಾಳುಗಳಿಗೆ ನಸುಗೆಂಪು ಬಣ್ಣ
ವೆಳ್ಳತ್ತಿರಿ ಕಟಿಮ	ಏಕಬೆಳೆ ನೆಲ	ಒಂದನೇ ಬೆಳೆ	3½ಅಡಿ- 4½ ಅಡಿ	120- 135 ದಿನಗಳು	20-25	ರೇವತಿ ಮಹಾನಕ್ಷತ್ರದಲ್ಲಿ (ಹುಡಿಮಣ್ಣಲ್ಲಿ) ಬಿತ್ತನೆ. ಉದ್ದನೆಯ ಪುಷ್ಪಕಾಳುಗಳು. ಬಿಳಿ ಅಕ್ಕಿ, ತೃಶ್ಶೂರ್ ಪಾಲ್ಘಾಟು ಜಿಲ್ಲೆಗಳಲ್ಲಿ ಬೆಳೆಯುತ್ತಾರೆ.
ಜಿಲ್ಲೆ : ಕಾಸರಗೋಡು						
ಉಂಡಕಟಿಮ	ಗದ್ದೆ	ಒಂದನೇ ಬೆಳೆ	4 ಅಡಿ	ನಾಲ್ಕು ತಿಂಗಳು	30	ಬಿಳಿ ಅಕ್ಕಿ
ಕರಿಂದಡಿಚ್ಚಿಲ್	ಹೊಲ/ ಒಣನೆಲ	ಒಂದನೇ ಬೆಳೆ				ಹೊಟ್ಟು ಕಪ್ಪುಬಣ್ಣ
ಕರಿಯಡುಕ್ಕನ್	ಹೊಲ/ಗುಡ್ಡ		4½-5ಅಡಿ	5 ತಿಂಗಳು	20	ಕಪ್ಪು ಕಾಳುಗಳು
ಕುಟ್ಟಿಪುಂಜ	ಗದ್ದೆ	ಎರಡನೆ ಬೆಳೆ	3-3½ ಅಡಿ	3½ತಿಂಗಳು	30-35	ಕೆಂಪು ಕಾಳುಗಳು. ಮಳೆ ಇಲ್ಲದೆ ಇದ್ದರೂ ಮಂಜಿನಿಂದಲೇ ಬೆಳೆಯಬಲ್ಲುದು. ಮಂಞ್‌ವಿತ್ತ್ (ಮಂಜುಬೀಜ) ಎಂದೂ ಕರೆಯುತ್ತಾರೆ.
ಕೂವಚ್ಚನ್		ಒಂದನೇ ಬೆಳೆ				ಎಳೆಗೆಂಪು ಬತ್ತ
ಕೊಳಾರನ್	ಗದ್ದೆ	ಒಂದು/ಮೂರು	3- 3½ ಅಡಿ	85- 90 ದಿನ	20	ಕಪ್ಪು ಬಣ್ಣ ನವರ ಸಿಗದಿದ್ದಾಗ ಬದಲಿಗೆ ಇದನ್ನು ಉಪಯೋಗಿಸುವುದಿದೆ.

ಚೆಮ್ಮೊಳ್	ಹೊಲ/ಕುಮರಿ			5 ತಿಂಗಳು	30	ಬಿಳಿ-ಕೆಂಪು ಬತ್ತಗಳು. ಬಿಳಿ ಚೆಮ್ಮೋಳನ್ನು ಗದ್ದೆಯಲ್ಲೂ ಬೆಳೆಯಬಹುದು.
ತಡಿಚ್ಚಿಲ್	ಹೊಲ/ಕುಮರಿ			5 ತಿಂಗಳು		ಮೀನ/ಮೇಷಗಳಲ್ಲಿ ಬಿತ್ತಿ ಕನ್ಯಾ ತಿಂಗಳಲ್ಲಿ ಬೆಳೆ ತೆಗೆಯುತ್ತಾರೆ. ಬಿಳಿ, ಕೆಂಪು ಬತ್ತಗಳು
ತೆಕ್ಕನ್ ಪುಂಜ ಪಾಲಿಯನ್	ಗದ್ದೆ	ಎರಡನೆಯ ಬೆಳೇ	4 ಅಡಿ 3½ ಅಡಿ	4ತಿಂಗಳು	20-30	ಕೆಂಪು ಬತ್ತ ಬಿಳಿಬಣ್ಣ ಹೂ ಅರಳಿದಂತೆ ನೀಳವಾದ ಕದಿರ್ಬು
ಪುಂಜ ಕಯಮ	ಹೊಳಬದಿಯ ಗದ್ದೆಗಳು	ಎರಡನೆ ಬೆಳೆ	4 ಅಡಿ	4 ತಿಂಗಳು	25-30	ಬಿಳಿ ಬಣ್ಣದ ಅಕ್ಕಿ
ಮುಂಡೋಡನ್	ಗದ್ದೆ	ಒಂದು/ಮೂರು	4 ಅಡಿ	90-100 ದಿನಗಳು	20	ದೊಡ್ಡಬಿಳಿ ಅಕ್ಕಿ, ಕದಿರಲ್ಲಿ ಎಡೆಎಡೆ ಬಿಟ್ಟು ಕಾಳುಗಳು ಇರುತ್ತವೆ.
ವೆಂಕಿ	ಕರೆ/ಒಣನೆಲ		5-5½ ಅಡಿ	4ತಿಂಗಳು		ಸಪುರ ಬಿಳಿ ಕಾಳುಗಳು
ವೆಳ್ಳಚ್ಚನ್			4 ಅಡಿ	5 ತಿಂಗಳು	20-30	ಬಿಳಿ ಕಾಳುಗಳು
ಸ್ವರ್ಣಮಲ್ಲಿ	ಗದ್ದೆ	ಮೊದಲಬೆಳೆ		4 ತಿಂಗಳು		ಕೆಂಪು ಕಾಳುಗಳು
ಜಿಲ್ಲೆ : ಕೊಲ್ಲಂ						
ಆರಾಂವೆಳ್ಳ	ಗದ್ದೆ	ಇಲ್ಲ ಯಾವುದಕ್ಕೂ ಸೈ	2 ಅಡಿ	90 ದಿನ	8	ಬಿಳಿ ಕಾಳುಗಳು
ಕಪ್ಪಚೆಂಬಾವ್	ಗದ್ದೆ	ಒಂದು/ಎರಡು	3ಅಡಿ	3ತಿಂಗಳು	10-25	ಬಿಳಿ, ಸಣ್ಣ ಕಾಳುಗಳು.
ಕಿಳಿಕ್ಕುರುವ	ಗದ್ದೆ		2½-3ಅಡಿ	120 ದಿನ	12 ದಿನ	ಬಿಳಿ ಕಾಳುಗಳು
ಕುರಿಚ್ಚೆಂಬಾವ್	ಗದ್ದೆ	ಯಾವುದಕ್ಕೂ ಸೈ	2 ಅಡಿ	90 ದಿನ	8	ಸಣ್ಣ ಬಿಳಿಕಾಳುಗಳು
ಚುಟ್ಟಿಯಾರ್ಯನ್	ಗದ್ದೆ		2½-3ಅಡಿ	120 ದಿನ	10-12	ಕಪ್ಪು ಕಾಳುಗಳು
ಚೆರುಮಲ್ಲಿಯಾರ್ಯನ್	ಗದ್ದೆ	ಒಂದು/ಎರಡು	-	3-4 ತಿಂಗಳು	10-30	
ಜಿಲ್ಲೆ : ಕೋಟ್ಟಯಂ						
ಓರ್ಮುಂಡಕನ್	ಗದ್ದೆ	ಎರಡನೆಯದು	5½ - 6 ಅಡಿ	120 ದಿನ		ಬತ್ತದ ಮೂಗು (ತೊಟ್ಟು)ಗಳಿಗೆ ಕಾಮನ ಬಿಲ್ಲಿನ ಬಣ್ಣ. ಅದಕ್ಕೆ ಬಿಸಿಲು ಬಿದ್ದು ಗದ್ದೆಗಳನ್ನು ನೋಡಲು ಅತಿ ಮನೋಹರ
ಓವನ್‌ಚಾರ	ಗದ್ದೆ	ಒಂದನೆಯದು	3-3½ ಅಡಿ	120 ದಿನ	10	ಕಪ್ಪು ಗೆರೆಗಳು
ಚಾಕ್ಕಿ ಚೆಂಬಾವ್	ಗದ್ದೆ/ಹೊಲ	ಯಾವಾಗಲೂ	2½ ಅಡಿ	90 ದಿನ	8-10	ಬತ್ತಕ್ಕೆ ಎಳೆಗೆಂಪು ಬಣ್ಣ
ಚೇನಾಳಿ	ಗದ್ದೆ(ಕೆಸರು)	ಎರಡನೆಯದು	5-5½ ಅಡಿ		15-20	
ಪೊನ್ನಾರಿ ಮಾಲ	ಗದ್ದೆ					ಚಿನ್ನದ ಬಣ್ಣ. ಕದಿರನ್ನು ಬಾಗಿಸಿದರೆ ಚಿನ್ನದ ಆಭರಣದಂತೆ ಕಾಣುತ್ತದೆ. ಗಂಜಿಗೆ ವಿಶೇಷ ರುಚಿ.
ಜಿಲ್ಲೆ : ಕೋಯಿಕ್ಕೋಡು						
ಅರುವಾಂ ಪಟ್ಟನ್	ಗದ್ದೆ	ಒಂದನೆಯದು	3½ಅಡಿ	90 ದಿನ	15	ಕಪ್ಪು ಕಾಳುಗಳು
ಎಚ್ಚಿಲಾಡನ್	ಕರೆನೆಲ		2½-3ಅಡಿ ತಿಂಗಳು	3-4	10	ಚಿನ್ನದ ಬಣ್ಣದ ಕಾಳುಗಳು, ದೊಡ್ಡಮೂಗು

ಓಂಜನ್	ಗದ್ದೆ	ಒಂದನೆಯದು	3½ ಅಡಿ	120 ದಿನ		ಕೆಂಪು ಬತ್ತಕ್ಕೆ ದೊಡ್ಡ ಮೂಗು
ಕಮ್ಮಳ್ ಪಿತ್ತ್	ಗದ್ದೆ (ಕೆಸರು)	ಎರಡನೆಯದು	ಬಹಳ ಎತ್ತರಕ್ಕೆ	10 ತಿಂಗಳು	20	ಕೂಟ್ಟ್ ಮುಂಡಕನ್ ತಿಂಗಳು ಎಂಬ ಬೆಳೆಗೆ ಬಳಸುವಂಥದು. ತುಂಬ ಗೊಬ್ಬರಬೇಕು. ಕಪ್ಪು ಬತ್ತ.
ಕರುಂಡ	ಗದ್ದೆ	ಎರಡನೆಯದು	5-6 ಅಡಿ	5-6 ತಿಂಗಳು	20	ಕಾಳುಗಳಿಗೆ ಕಪ್ಪು ಬಣ್ಣ
ಕೋಟಿಂಞೇಲ್	ಹೊಲ	4-4½ ಅಡಿ	100 ದಿನ	20		ಬತ್ತಕ್ಕೆ ಕೆಂಪು ಬಣ್ಣ
ಕೋಟಿಯಾಳ	ಕುಮರಿ					ಕುಮರಿ ಬಿತ್ತನೆಯ ತಳಿ
ಚಾಮೋಡನ್	ಹೊಲ		4-4½ ಅಡಿ	90 ದಿನ	20	ಕಾಳುಗಳಿಗೆ ಬಿಳಿ ಬಣ್ಣ
ತೆಕ್ಕನ್	ಗದ್ದೆ(ಕೆಸರು)	ಎರಡನೆಯದು	3½ ಅಡಿ	120 ದಿನ		ಕೆಂಪು ಕಾಳುಗಳು, ಒಳ್ಳೆಯ ರುಚಿ ಮತ್ತು ಪೋಷಕಾಂಶಗಳುಳ್ಳ ಬತ್ತ
ಮಲಪ್ಪೊರೋನ್	ಗದ್ದೆ	ಎರಡನೆಯದು	5-6 ಅಡಿ	5-6 ತಿಂಗಳು	20	ಕಾಳುಗಳಿಗೆ ಬಿಳಿಬಣ್ಣ
ರಾಮನ್‌ಕಾರಿ	ಮುಂಡಕಬೀಜ	4½-5ಅಡಿ	120 ದಿನ	15-20		ಕಪ್ಪುಕಾಳುಗಳು
ವೆದಾಂಡನ್	ಮುಂಡಕಬೀಜ ಜವುಗುನೆಲದಲ್ಲಿ ಬಳಕೆ	ಕೆಸರು ನೆಲ	5-6 ಅಡಿ	10 ತಿಂಗಳು	25-30	ನೇಜಿ ಕಿತ್ತು ನೆಡುವುದು ರೂಢಿ. ಮೀನದಲ್ಲಿ ಅಥವಾ ಕರ್ಕಟದಲ್ಲಿ ಬಿತ್ತನೆ. ಆಗಾಗ ತುದಿ ಕತ್ತರಿಸಲಾಗುತ್ತದೆ.
ಜಿಲ್ಲೆ : ತಿರುವನಂತಪುರಂ						
ಅರವನ್‌ವೆಳ್ಳ		ಯಾವುದೇ ಬೆಳೆ	2-2½ ಅಡಿ	90 ದಿನ		ಬಿಳಿ ಕಾಳುಗಳು
ಇಂಜಕ್ಕಾಡನ್	ಗದ್ದೆ/ಹೊಲ/ ಮರಳು ಮಿಶ್ರಿತ	ಒಂದನೆಯದು	2-3ಅಡಿ	4 ತಿಂಗಳು	10-12	ಬಿಳಿಕಾಳು
ಓರುವೆಳ್ಳ	ಗದ್ದೆ		3-3½ಅಡಿ	100-105 ದಿನಗಳು		ಉದ್ದ ಕಾಳುಗಳಿಗೆ ಕಪ್ಪು ಮೂಗು
ಕರಿಪ್ಪೂವಾಲಿ	ಗದ್ದೆ	ಒಂದನೆಯದು	2-2½ ಅಡಿ	3 ತಿಂಗಳು	7-8	ಕಪ್ಪುಕಾಳುಗಳು
ಕರುತ್ತ ಚೆಂಬಾವ್	ಗದ್ದೆ	ಒಂದು/ಎರಡು	3½-4 ಅಡಿ	4 ತಿಂಗಳು	15-17	ಬತ್ತ, ತವುಡು, ಹೊಟ್ಟು - ಎಲ್ಲವೂ ಕಪ್ಪು. ಅನ್ನ ಕೂಡ ಬೂದಿಯ ಬಣ್ಣ. ಔಷಧೀಯ ಗುಣವುಳ್ಳದ್ದು. ನವರ ಬತ್ತದ ಬದಲಾಗಿಯೂ ಉಪಯೋಗ. ಆರೋಗ್ಯ, ಯೌವನ, ಓಜಸ್ಸುಗಳನ್ನು ಹೆಚ್ಚಿಸುತ್ತದೆ. ಕಣ್ಣಿನ ಶಕ್ತಿ ವರ್ಧಿಸುತ್ತದೆ.
ಕಲ್ಲನ್ ಚೆಂಬಾವ್	ಗದ್ದೆ	ಮೊದಲನೆಯದು	3½-4ಅಡಿ	3½-4 ತಿಂಗಳು	25	ಬಿಳಿ ಕಾಳುಗಳು
ಕಲ್ಲನ್(ಚೆರಿಯ) ತಟ್ಟಾರವಿಳ	ಗದ್ದೆ	ಮೊದಲನೆಯದು	4-4½ಅಡಿ	4½ ತಿಂಗಳು	26	ಬಿಳಿ ಕಾಳುಗಳು
ಕಿಟಿಕ್ಕನ್‌ವೆಳ್ಳ	ಗದ್ದೆ	ಮೊದಲನೆಯದು	3½-4ಅಡಿ	110-125 ದಿನ		ಉದ್ದ ಕಾಳುಗಳು. ಬೆಳೆಯುತ್ತ ಬಿದ್ದು ಬಿಡುವ ಗಿಡಗಳು
ಕುನಿಪ್ಪಾನ್	ಗದ್ದೆ	ಯಾವುದೇ ಬೆಳೆ	1-1½ ಅಡಿ	90 ದಿನ	25	ಬಿಳಿ ಕಾಳುಗಳು

ಕುಳವಾಲಿ (ಕುಟ್ಟಿಚ್ಚೇರಯಾಡಿ)	ಗದ್ದೆ		2 ಅಡಿ	4½ ತಿಂಗಳು		ಮಸುಕು ಬಿಳಿಬಣ್ಣದ ಕಾಳು. ಬಲವಾದ ದಂಟು ತುಂಬ ಟಿಸಿಲುಗಳಿರುತ್ತವೆ.
ಚಡಕ್ಕುರುವ	ಗದ್ದೆ	ಒಂದನೆಯದು	3½	100-115 ದಿನ		
ಚವಿಟ್ಟಾನಪ್ಪೊರಿಯನ್	ಗದ್ದೆ/ಹೊಲ	ಒಂದನೆಯದು	3½			ಗಿಡ್ಡ, ಭಾರವಾದ, ಮಸುಕು-ಬಿಳಿ ಕಾಳುಗಳು. ಬೆಳೆ ಬೀಳದು. ಬತ್ತ ಬೇಗ ಉದುರುವುದಿಲ್ಲ. ಆನೆ ತುಳಿದರೂ ಬತ್ತ ಉದುರದು ಎಂಬ ಅರ್ಥದಲ್ಲಿ ಹೆಸರು
ಜೀರಗ ಚೆಂಬಾವ್	ಗದ್ದೆ	ಒಂದನೆಯದು		4 ತಿಂಗಳು		ಸಣ್ಣ ಬತ್ತ, ಸಣ್ಣ ಅಕ್ಕಿ, ಬಿಳಿ ಕಾಳುಗಳು, ತುಂಬ ರುಚಿಕರವಾದ ಅನ್ನ, ಔಷಧೀಯ ಗುಣವಿದೆ.
ತುಳುನಾಡನ್	ಗದ್ದೆ	ಒಂದನೆಯದು	5-6 ಅಡಿ	5 ತಿಂಗಳು	25	ನೀರು ನಿಂತರೂ ಪ್ರತಿರೋಧಿಸುವ ಶಕ್ತಿ, ಉದ್ದಕ್ಕೆ ಸಪುರ ಕಾಳುಗಳು, ಹೊಟ್ಟು ತೆಳ್ಳಗೆ, ಒಳ್ಳೆಯ ರುಚಿ
ದರ್ಭಕ್ಕುರುವ	ಗದ್ದೆ	ಎರಡನೆಯದು		4 ತಿಂಗಳು		ನೇಜಿ ಕಿತ್ತು ನೆಡುವುದು ಕ್ರಮ
ಪುನಕ್ಕುರುವ				4 ತಿಂಗಳು		ಕುಮರಿಬೀಜ, ನಸುಗೆಂಪು ಬಣ್ಣದ ಸಣ್ಣ ಕಾಳುಗಳು ಚೆನ್ನಾಗಿ ಬೆಳೆದಾಗ ಬಿರಿಯುತ್ತದೆ.
ಮುತ್ತುಚ್ಚೇರಿ	ಮುಂಡಕಬೀಜ ಎರಡನೆಯ ಬೆಳೆ	ಮೊದಲನೆಯದು	4 ಅಡಿ 4½ಅಡಿ	120-130 40 ದಿನ 2/3ನೆಯದು		ಒಂದು ಬೆಳೆ ಮಾಡಿದರೆ ಹಳೆಯ ಗಿಡಗಳಲ್ಲೇ ಟಿಸಿಲು ಒಡೆದು ಎರಡು ಮೂರುಬಾರಿ ಬೆಳೆ ತೆಗೆಯಬಹುದು. ತಪ್ಪಲುಗಳಲ್ಲಿ ಬೆಳೆಯುತ್ತಿದ್ದು ರೂಢಿ. ಗಿಡ್ಡ, ಭಾರವಾದ ಕೆಂಪು ಕಾಳುಗಳು
ವಲಯ ತಟ್ಟಾರವಿಳ	ಗದ್ದೆ		4-4½ಅಡಿ	5 ತಿಂಗಳು	25	ಬಿಳಿ ಕಾಳುಗಳು
ವಾಂಕ್	ಗದ್ದೆ		5-5½ಅಡಿ	5-6 ತಿಂಗಳು		ಉದ್ದನೆಯ, ಭಾರ ಕಡಿಮೆಯುಳ್ಳ, ಬಿಳಿ ಕಾಳುಗಳು ಅಕ್ಕಿಯೂ ಬಿಳಿ. ಅರಳು ಮಾಡಲು ಯೋಗ್ಯ
ವಿಳನೆಲ್ಲ್	ಕುಮರಿ/ಹೊಲ		2 ಅಡಿ	110-115 ದಿನ		ಉಳದೆ, ಕುಮರಿಗಳಲ್ಲಿ (ಕಾಡು ಕಡಿದ ಬಳಿಕ) ಅಂತೆಯೇ ಬಿತ್ತನೆ. ಬಿಳಿ ಕಾಳುಗಳು.
ಜಿಲ್ಲೆ : ತೃಶ್ಯೂರು/ತ್ರಿಚ್ಚೂರು						
ಉಂಡಚೆಂಬಾವ್	ಗದ್ದೆ	ಮೊದಲನೆಯದು		90-100		ಸಣ್ಣ ಉಂಡೆ / ಉರುಟು ಕಾಳುಗಳು. ಅನ್ನಕ್ಕೆ ಒಳ್ಳೆಯ ರುಚಿ
ಓರ್‌ಪಾಂಡಿ/ ಕರುತ್ತಪಾಂಡಿ ಕರಿಂಡೋನ್	ಗದ್ದೆ (ಕೆಸರು) ಮುಂಡಕ ಬೀಜ ನೀರು ನಿಲ್ಲುವ ಜವುಗುನೆಲ * ಎರಡನೆಯ ಬೆಳೆ	ಮೊದಲನೆಯದು ತುಂಬ ಹೆಚ್ಚು	6 ಅಡಿ 8 ತಿಂಗಳು		15	ನೀರು ಹೆಚ್ಚಿದಂತೆ ಎತ್ತರಕ್ಕೆ ಬೆಳೆಯುವ ಶಕ್ತಿ. ಕೀಟಬಾಧೆ ತಡೆದುಕೊಳ್ಳುತ್ತದೆ. ಕಪ್ಪುಕಾಳು ಹುಡಿ ಬಿತ್ತನೆ, ಕಪ್ಪು ಬಣ್ಣದ ಕಾಳುಗಳು. ಉದ್ದನೆಯ, ಕಪ್ಪು ಬೈಹುಲ್ಲು, ನೀರು ಮೇಲೇರಿದಂತೆ ಬೆಳೆಯುತ್ತಿರುತ್ತದೆ. ಅದ್ಭುತ ರೋಗ ಪ್ರತಿರೋಧ ಸಾಮರ್ಥ್ಯ.
ಕರುವಾಂಕಾರಿ	ಗದ್ದೆ/ಹೊಲ	ಮೊದಲನೆಯದು		90 ದಿನ		ತಿಂಡಿ/ಫಲಾಹಾರ ತಯಾರಿಸಲು ಸೂಕ್ತ. ಇದರಿಂದ ತಯಾರಿಸಿದ 'ಪುಟ್ಟ್' ತುಂಬ ರುಚಿಕರ ಪ್ರಸಿದ್ಧ.

ಕಾರಕ್ಕೊಡಿಯನ್	ಗದ್ದೆ		5-6ಅಡಿ	5-6 ತಿಂಗಳು	15-20	ಕೆಂಪು ಬತ್ತ, ಬೆಳೆ ಬೀಳುತ್ತದೆ.
ಕುಟ್ಟಿ	ಗದ್ದೆ			90 ದಿನ		ಸವಳು ನೆಲದಲ್ಲೂ ಬೆಳೆಯುವ ಶಕ್ತಿ. ಹತ್ತಿರ ಹತ್ತಿರ ಕಾಳು.
ತುಳುಕ್ಕಿಡಾವ್	ಗದ್ದೆ		3 ಅಡಿ	70-80		ನೀರು ಬಿತ್ತನೆ. ಉದ್ದವೂ ದಪ್ಪವೂ ಒಂದೇ ತೆರನಾದ ಸಣ್ಣ ಕಾಳು. ನಸುಬಿಳುಪು ಬಣ್ಣ. ಬತ್ತ, ಅನ್ನಗಳು ತುಂಬ ಸುಂದರ. ಬೀಳುವ ಬೆಳೆ.
ಪತ್ತೊಂಬದರ	ನೀರು ನಿಲ್ಲುವ ಗದ್ದೆ	ಎರಡನೆಯದು		140-160	15-20	––
ಮೇರತ್ತರಿ	ಮುಂಡಕಬೀಜ ಎರಡನೆಯ ಬೆಳೆ					ಉದ್ದನೆಯ, ಭಾರವಿಲ್ಲದ, ಬಿಳಿ ಕಾಳುಗಳು. ಅರಳು ಹುರಿಯುವುದಕ್ಕೆ ಯುಕ್ತ. ಬೀಳುವುದು ಕಡಿಮೆ.
ವಯಿಲತ್ತೂರ್	ಜವುಗುನೆಲ ಮೆಕ್ಕಲು ಮಣ್ಣು		ತುಂಬ ಹೆಚ್ಚು	8-9 ತಿಂಗಳು		ನೀರು ನಿಲ್ಲುವುದನ್ನು ತಡೆದುಕೊಂಡು ಬೆಳೆಯುವ ಸಾಮರ್ಥ್ಯ. ದೋಣಿಯಲ್ಲಿ ಹೋಗಿ ಕಟಾವು
ಸ್ವರ್ಣಪಾಂಡಿ/ ಕರುತ್ತಪಾಂಡಿ	ಜವುಗುನೆಲ/ ಮೆಕ್ಕಲುಮಣ್ಣು	ಒಂದನೆಯದು				ನೀರು ನಿಂತಂತೆ ಮೇಲಕ್ಕೆ ಬೆಳೆಯುವ ಶಕ್ತಿ. ಕೀಟಬಾಧೆ ತಡೆದುಕೊಳ್ಳುವ ಸಾಮರ್ಥ್ಯ. ಕಪ್ಪು ಬಣ್ಣದ ಕಾಳುಗಳು
ಜಿಲ್ಲೆ : ಪತ್ತನಂ ತಿಟ್ಟ						
ಚಾಂಬಕಣ್ಣನ್	ಗದ್ದೆ	ಒಂದನೆಯದು	4-5 ಅಡಿ	6 ತಿಂಗಳು	15-20	ಎಳೆಗೆಂಪು ಬಣ್ಣದ ಕಾಳುಗಳು'ಕಣ ಮಾಡಲು' ತ್ರಾಸ.
ಚುವನ್ನಪಾಂಡಿ ವೆಳ್ಳ	ಮುಂಡಕಬೀಜ (ಎರಡನೆಯ ಬೆಳೆ)	4-5 ಅಡಿ	6 ತಿಂಗಳು			ಉದ್ದನೆಯ ಎಳೆಗೆಂಪು ಕಾಳುಗಳು. ಬಿತ್ತನೆ ಮಾಡಿದರೆ 4-5 ಅಡಿ ಬೆಳೆಯುತ್ತದೆ. ಮಹಾ ನಕ್ಷತ್ರಾನುಸಾರ ಬಿತ್ತನೆ ಮಾಡುವ ವಾರ್ಷಿಕ ಬೀಜ
ಪಡನ್ನವೆಳ್ಳ	ಗದ್ದೆ	ಯಾವುದೇಕಾಲ	4ಅಡಿ	100-110 ದಿನ	25-30	ಉರುಟಾದ, ಬಿಳಿಯ ಕಾಳುಗಳು. ನೆರಳಿರುವ ಗದ್ದೆಗಳಲ್ಲೂ ಬೆಳೆಯಬಲ್ಲುದು ನೆರಳು ಗದ್ದೆಗಳಲ್ಲಿ ಇತರ ತಳಿಗಳು ಫಸಲು ಕೊಡಲಾರವು.
ಜಿಲ್ಲೆ : ಪಾಲ್ಘಾಟು/ಪಾಲಕ್ಕಾಡು						
ಅನ್ನಚ್ಚೆಂಬಾವ್	ಗದ್ದೆ	ಮೊದಲನೆಯದು ಎರಡನೆಯದು	3 ಅಡಿ	90 ದಿನ	18	ಬಿಳಿಕಾಳುಗಳು ಉರುಟು, ಪುಷ್ಟ, ಆಢ್ಯತೆಗೆ ಸಂಕೇತವಾಗಿರುವ ಅನ್ನ/ಅಕ್ಕಿ
ಅರಿಕ್ಕಲ್ಲರಿ	ಮುಂಡಕನ್ ಬೀಜ	38 ಇಂಚು	75	22 ದಿನ	ಕಪ್ಪು ಬಣ್ಣದ ಕಾಳುಗಳು	
ಅರಿವಾಕರಿ	ಗದ್ದೆ	ಒಂದನೆಯದು	30 ಇಂಚು	150 ದಿನ		ಬಿಳಿ ಬಣ್ಣದ ಕಾಳುಗಳು
ಅರುವದಾಂಮೋಡನ್	ಗದ್ದೆ		20-30 ಇಂಚು	60 ದಿನ	4	ಕಪ್ಪು-ಕೆಂಪು ಬಣ್ಣ ಮಿಶ್ರಿತ ಕಾಳುಗಳು. ಸಪುರ ಲಘು ಗಿಡಗಳು. ಹೆಚ್ಚು ಟಿಸಿಲೊಡೆಯುವುದಿಲ್ಲ

ಎರವಪ್ಪಾಂಡಿ	ನೀರಾವರಿ ಗದ್ದೆ	ಎರಡನೆಯದು	4-5ಅಡಿ	120 ದಿನ	12	ಕೆಂಬಣ್ಣದ ಕಾಳುಗಳು (ಕದಿರಿನ ಮೊದಲೆರಡು ಕಾಳುಗಳ ಬಳಿಕೆ) ಬರವನ್ನು ಎದುರಿಸುವ ಸಣ್ಣ ಶಕ್ತಿ. ಮನೆಗಳ ಮಾಡು ಹೊದಿಸಲು ಬೈಹುಲ್ಲು ಬಳಕೆ.
ಕಟ್ಟಿಮೋಡನ್	ಮೋಡನ್ ಬೆಳೆ		40 ಇಂಚು	120-130 ದಿನ	10-15	ಭಾರವಾದ ಬತ್ತ, ಪುಷ್ಟವಾದ ಅಕ್ಕಿ. 'ಒದಗು' (ಬತ್ತ ಕುಟ್ಟಿದರೆ ಹೆಚ್ಚು ಅಕ್ಕಿ ಸಿಗುವುದು) ಉಳ್ಳದ್ದು. ಬಿಳಿಬಣ್ಣದ ಮತ್ತು ಬಿಳಿಮಿಶ್ರಿತ ಕೆಂಪು ಎರಡು ಬಣ್ಣದ ಬತ್ತ
ಕುಟ್ಟಿಮೋಡನ್	ಹೊಲ	30 ಇಂಚು	130 ದಿನ	10-15		ಸಣ್ಣ ಕಾಳುಗಳು
ಕುರುಮಾಟ್ಟಿ (ಕುರುಮ)				120 ದಿನ		ಸ್ಫಟಿಕದ ಬಣ್ಣ. ಸಣ್ಣ ಕಾಳುಗಳು. ಅನ್ನವೂ ಸಣ್ಣದು. ಒಳ್ಳೆ 'ಒದಗು' ಚೆನ್ನಾಗಿ ಅರಳಿಕೊಳ್ಳುತ್ತದೆ (ಅನ್ನ).
ಕರುತ್ತಪಾಂಡಿ	ಪಳ್ಳಾಲ(?) ಒಣನೆಲ(?)	ಎರಡನೇಬೆಳೆ	3½ಅಡಿ	95-100 ದಿನ		ಕಪ್ಪುಕಾಳುಗಳು, ದಪ್ಪ ಫಲಾಹಾಲ (ತಿಂಡಿ)ಕ್ಕೆ ಅತ್ಯುತ್ತಮ, ಬರವನ್ನು ಸಹಿಸಬಲ್ಲುದು. ಭಾವಣಿಗೆ ಹೊದೆಯಿಸುತ್ತಾರೆ.
ಕರುತ್ತಮೋಡನ್	ಹೊಲ	30 ಇಂಚು	130 ದಿನ	10-15		ಸಣ್ಣ, ಪುಷ್ಟಕಾಳುಗಳು
ಕರುತ್ತೇನಿ	ಗದ್ದೆ	ಒಂದನೆಯ	24 ಇಂಚು	170 ದಿನ	20	ಕಪ್ಪು ಕಾಳುಗಳು. ಬೆಳೆ ಬೀಳುವ ಸ್ವಭಾವದ್ದು. ಕದಿರು ಮೇಲಕ್ಕೆ ಬೆಳೆಯುತ್ತದೆ.
ಚೀರಚೆಂಬಾನ್	ಗದ್ದೆ	ಒಂದನೆಯ	35 ಇಂಚು	110 ದಿನ	20	ಬಿಳಿ ಬಣ್ಣದ ಕಾಳುಗಳು. ದೊಡ್ಡಗಾತ್ರದವು
ಚುವನ್ನ ಮುಂಡೋಂಬಾಲ	ಗದ್ದೆ	ಎರಡನೆಯದು	40 ಇಂಚು	180	30 ದಿನ	ಕೆಂಪು ಕಾಳುಗಳು, ದಪ್ಪಪುಷ್ಟ
ಚೆಂದಾರ್ಣಿ		ಎರಡನೇ ಬೆಳೆ				
ಚೆಂಬಾನ್	ಗದ್ದೆ	ಒಂದನೆಯ ಬೆಳೆ ಎರಡನೆಯದಕ್ಕೂ	3 ಅಡಿ	90 ದಿನ	20	ನಸುಗೆಂಪು ಬಣ್ಣ
ಚೆನ್ನಿನಾಯಕಂ		ಎರಡನೇ ಬೆಳೆ				
ಚೆನ್ನೆಲ್ಲ್	ಹೊಲ		40 ಇಂಚು	130 ದಿನ	12-15	ಕಾಳುಗಳಿಗೆ ಕೆಂಬಣ್ಣ. ದಪ್ಪಪುಷ್ಟ
ಚೆರುತೆಕ್ಕನ್		ಎರಡನೇ ಬೆಳೆ				
ಚೆರುವೆಳ್ಳಂ			32 ಇಂಚು	145 ದಿನ	22	ಬಿಳಿಬಣ್ಣದ ಕಾಳುಗಳು
ನೊಣ್ಣ		ಎರಡನೇಬೆಳೆ				
ಪರಂಬುಪೊಟ್ಟನ್	ಮೋಡನ್		30 ಇಂಚು	120 ದಿನ	12	ಕಪ್ಪುಬಣ್ಣದ ಕಾಳುಗಳು, ಬಲಯುತ.
ಪುಕ್ಕುಲತ್ತರಿ/ 'ಬೀವಿ/ವಿಳ್ಳಿಚ್ಚೇರಿ	ನೀರಿನ ಲಭ್ಯತೆ ಇದ್ದಲ್ಲಿ	ಎರಡು	4½-5 ಅಡಿ	4 ತಿಂಗಳು	10-12	ಕನ್ಯಾ ತಿಂಗಳ ಆರಂಭದಲ್ಲಿ ನಾಟಿ-ಮಕರದಲ್ಲಿ ಕೊಯ್ಲು ಮಸುಕು ಕೆಂಬಣ್ಣದ ಬತ್ತ. ಹಗುರ/ತೆಳು ಬತ್ತ. ಕಡ್ಡಿಯಂತೆ ಸಪುರ ಕಾಳು. ಇದರ ಸ್ವರೂಪದಿಂದ ಇದಕ್ಕೆ 'ಬೀವಿ' (ಮುಸ್ಲಿಂ ಸ್ತ್ರೀ) ಎಂದೂ ಹೆಸರು. ಬಿಳಿ ಅಕ್ಕಿ. ಅನ್ನ ಬಹಳ ರುಚಿ. ಬರವನ್ನು ಸ್ವಲ್ಪ ಮಟ್ಟಿಗೆ ತಡೆಯಬಲ್ಲುದು. ಭಾವಣಿಗೆ ಹೊದೆಸುತ್ತಾರೆ.

ಪೂಚೆಂಬಾನ್	ಗದ್ದೆ	ಒಂದು	3 ಅಡಿ	130 ದಿನ	10	ಬಿಳಿ ಕಾಳುಗಳು
ಮಟ್ಟಚೆಂಬಾನ್/ ಪಾಲಕ್ಕಾಡನ್ ಮಟ್ಟ/ ಪನಂಜೂಟ್ಟರಿ ಮಟ್ಟ	ಗದ್ದೆ	ಒಂದು		120 ದಿನ	14	ಚಿತ್ತೂರು ತಾಲೂಕಲ್ಲಿ ಬೆಳೆಯಲಾಗುತ್ತಿತ್ತು.
ಮುಂಡಕ ಕುಟ್ಟಿ	ಮುಂಡಕ ಗದ್ದೆ	ಬೀಜ IIನೇ ಬೆಳೆ	4½-5 ಅಡಿ	150-155 ದಿನ	15-17	ದೊಡ್ಡ ಮುಂಡಕ ಕುಟ್ಟಿ ಮತ್ತು ಸಣ್ಣ ಮುಂಡಕ ಕುಟ್ಟಿ ಎಂದು ಎರಡು ವಿಧ. ಸಣ್ಣದರ ಕಾಳುಗಳು ಸಣ್ಣವು. ಎರಡರದೂ ಬಿಳಿ ಬಣ್ಣ
ಮುಂಡೊಂಬಾಲ	ಗದ್ದೆಮುಂಡಕ	ಎರಡು	40 ಇಂಚು	180 ದಿನ	30	ಕೆಂಬಣ್ಣದ ಕಾಳುಗಳು. ದಪ್ಪಪುಷ್ಟ
ರಾಜಕ(ಟ)ಯಮ ತಂಜಾವೂರ್ ಕುರುವ	ಗದ್ದೆ	ಒಂದನೆಯದು	6-6½ ಅಡಿ	ಕೆಂಪು ಕಟಮದ ಕಾಲಾವಧಿ	30-35	ಬಿಳಿ ಬಣ್ಣದ ಕಾಳು. ಗೊಬ್ಬರ ಕಡಿಮೆಯಾದರೆ ಗರಿಗಳಲ್ಲಿ ವಯಲೆಟ್ ಚುಕ್ಕೆಗಳು. ಒಳ್ಳೇ 'ಒದಗು' ಉಳ್ಳ ಅಕ್ಕಿ. ತುಪ್ಪಶನ (Ghee Rice)ಗೆ ಅತ್ಯುತ್ತಮ. ಕಣ್ಣೂರು ಕಾಸರಗೋಡಲ್ಲೂ ಬೆಳೆಯುತ್ತಿದ್ದರು.
ವೃಶ್ಚಿಕಪಾಂಡಿ	ಗದ್ದೆ ಮುಂಡಕ	ಎರಡನೆಯದು	40 ಇಂಚು	130 ದಿನ	20	ತೌಡು ಬಣ್ಣದ ಕಾಳುಗಳು. ಅಕ್ಕಿಗೆ ತ್ರಾಣವಿಲ್ಲ.
ಜಿಲ್ಲೆ : ಮಲಪ್ಪುರಂ						
ಇರುವಾಕ್ಕರಿ	ಪಳ್ಳಾಲ(?)	ಒಂದನೇ	2ಅಡಿ	3-4 ತಿಂಗಳು	15	ಬಿಳಿ ಕಾಳುಗಳು
ಉರುಣಿಕ್ಕಟಮ	ಗದ್ದೆ	ಒಂದನೇ	4½ ಅಡಿ	180 ದಿನ		ಉರುಟು, ಬಿಳಿ ಕಾಳುಗಳು
ಕಲ್ಲುರುಣ್ಣಿ	ಹೊಲ	IIನೇ	3ಅಡಿ	90-100 ದಿನ	10	
ಮುಂಡಿ	ಗದ್ದೆ	ಒಂದನೇ	3 ಅಡಿ	3ತಿಂಗಳು	15	ದಪ್ಪ, ಉರುಟು, ಬಿಳಿಯ ಕಾಳುಗಳು
ವೆಳ್ಳಾತ್ತನ್	ಪಳ್ಳಾಲ(?) ಒಣನೆಲ	ಎರಡನೇ	3½ ಅಡಿ	90 ದಿವಸ	15	ಬರವನ್ನು ಎದುರಿಸುವ ಸಾಮರ್ಥ್ಯವಿದೆ. ಬಿಳಿ ಬಣ್ಣದ ಕಾಳುಗಳು
ಜಿಲ್ಲೆ : ವಯನಾಡು						
ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಬಳಸುವ/ಬಳಸುತ್ತಿದ್ದ ತಳಿಗಳು ಚಿಹ್ನೆ - 0						
ಅದಿಯನ್	ಮುಂಡಕ ಗದ್ದೆ	ಎರಡು	5½-6 ಅಡಿ	120-130 ದಿನ		ಎರ್ನಾಕುಲಂ-ತೃಶ್ಶೂರು ಜಿಲ್ಲೆಗಳಲ್ಲಿ
ಅರಿಕ್ಕರಾಯಿ/ ಅರಿಕ್ಕಿನಾವ್	ಗದ್ದೆ	ಎರಡು	3-3½ಅಡಿ	110-120	15	ಸಪುರ, ಉದ್ದ, ನಸುಗೆಂಪು ಬಣ್ಣದ ಕಾಳುಗಳು, ಕಣ್ಣಾನೂರು, ಕಾಸರಗೋಡು.
ಆರ್ಯನ್/ ವಲಿಯ ಆರ್ಯನ್	ಹಿನ್ನೀರಿನ ಬದಿ ನೀರು ಹೆಚ್ಚಾಗಬಾರದು	ಒಂದು	4½-5 ಅಡಿ	170-180 ದಿನ	20	ಹಳೆಯ ತಳಿ. ಬೆಳೆ ಬೀಳುತ್ತದೆ. ನೀರಲ್ಲಿ ಬಿದ್ದರೂ ತಲೆಯೆತ್ತಿ ಕದಿರು ಬಿಡುತ್ತದೆ. ಉದುರದು. ಕೆಂಬಣ್ಣದ ಸೂಜಿ ಕಾಳುಗಳು. ಮಲಪ್ಪುರಂ, ಕೊಟ್ಟಾಯಂ, ಎರ್ನಾಕುಲಂ, ತೃಚ್ಚೂರು, ಪಾಲ್ಘಾಟು
ಆರ್ಯಂಕಾಳಿ	ಗದ್ದೆ	ಒಂದು	4-6 ಅಡಿ	ಪೊನ್ನಾರ್ಯನ್ ಗಿಂತ ಕಮ್ಮಿ	10	ಕಾಳುಗಳಿಗೆ ಪುಷ್ಟಿ ಕಡಿಮೆ. ದಂಟಿಗೆ ಕಡಿಮೆ ಬಲ. ಬೆಳೆ ಬೀಳುವ ಸ್ವಭಾವ. ಕೊಳೆಯುವುದು ಹೆಚ್ಚು ಕೆಂಬಣ್ಣ

ತೃಶ್ಶೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕ್ಕೋಡು						
ಇಟ್ಟಿಕಂಡಪ್ಪನ್	ಒಣಭೂಮಿ	ಎರಡು	4-4½ ಅಡಿ	130-150	15	ಕೆಂಪು-ಕಪ್ಪು-ಬಿಳುಪು; ಸಣ್ಣದು ದೊಡ್ಡದು ಎಂಬ ಭೇದಗಳಿವೆ ಭಾರವಾದ ದಂಡುಗಳು ಒಳ್ಳೆಯ ಬೈಹುಲ್ಲು
ಕೊಟ್ಟಾಯಂ, ಎರ್ನಾಕುಲಂ, ತೃಶ್ಶೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕ್ಕೋಡು, ಕಣ್ಣೂರು, ಕಾಸರಗೋಡು						
ಎರುಮಕ್ಕಾರಿ	ಹೊಲ ತೆಂಗಿನ ತೋಪು			120- 130 ದಿನ		ಅಕ್ಕಿ, ತೌಡುಗಳಿಗೆ ಔಷಧ ಗುಣ. ಹುಡಿಮಾಡಿ ಔಷಧಗಳಿಗೆ ಬಳಕೆ. ಕೆಮ್ಮಿಗೆ, ಗಾಯಗಳಿಗೆ. ಮೂಗು ಕಪ್ಪು.
ಎರ್ನಾಕುಲಂ, ತೃಚ್ಚೂರು						
ಓಣೋಟ್ಟನ್	ಹೊಲ/ಗದ್ದೆ	ಒಂದು	5-6 ಅಡಿ	ಹೊಲದಲ್ಲಿ 90 ದಿನ ಗದ್ದೆ-100	20	ಬಿಳಿ ಕಾಳುಗಳು, ಗಂಜಿಗೆ ಬಹಳ ಒಳ್ಳೆಯದು
ಕೊಟ್ಟಾಯಂ, ಎರ್ನಾಕುಲಂ, ತೃಶ್ಶೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕ್ಕೋಡು						
ಕರುತ್ತ ಅಲ್ಲಿಕಣ್ಣನ್/ ಕರಿಂಜನ್	ಕೋಟಿವಾಲನ್‌ಗೆ ಸೂಕ್ತವಾದ ನೆಲವೇ ಇದಕ್ಕೂ	ಒಂದು	5½-6ಅಡಿ	6 ತಿಂಗಳು		ಕಪ್ಪು ಬತ್ತ ನೆರೆ ನೀರನ್ನು ತಡೆದುಕೊಳ್ಳಬಲ್ಲುದು
ಕಣ್ಣೂರು, ಕಾಸರಗೋಡು						
ಕರುತ್ತ ಆರ್ಯನ್	ಗದ್ದೆ	ಒಂದು	5-6 ಅಡಿ	170-180 ದಿನಗಳು	20	ಬೆಳೆ ಬೀಳುತ್ತದೆ. ಬಿದ್ದರೂ ತಲೆಯೆತ್ತಿ ಬೆಳೆಯುತ್ತದೆ. ಕೊಳೆತ ಹೆಚ್ಚು 'ಕೆಂಬಣ್ಣದ ಬತ್ತ'.
ಕೊಟ್ಟಾಯಂ, ಎರ್ನಾಕುಲಂ, ತೃಶ್ಶೂರು, ಪಾಲ್ಘಾಟು						
ಕರುತ್ತಚುಟ್ಟಿ ಆರ್ಯನ್		ಒಂದು	3-4 ಅಡಿ	5 ತಿಂಗಳು	20	ಮೇಷದಲ್ಲಿ ಬಿತ್ತನೆ; ಸಿಂಹದಲ್ಲಿ ಕೊಯ್ಲು. ಕೆಲವು ಮಣ್ಣಲ್ಲಿ ಕಡುಕಪ್ಪು ಕಾಳುಗಳು. ಇನ್ನು ಕೆಲವೆಡೆ ಕಪ್ಪಿನೊಂದಿಗೆ ಕೆಂಬಣ್ಣ ಮಿಶ್ರವಾಗುತ್ತದೆ.
ಪಟ್ಟಣಂತಿಟ್ಟ, ಕೋಟ್ಟಯಂ						
ಕರುವಾಟಿ		ಒಂದು	2 ಅಡಿ			ಕಪ್ಪು (ಓವ್) ಗೆರೆಯುಳ ? ಕಾಳು
ಕೋಝಿಕ್ಕೋಡ್, ಕಣ್ಣೂರು, ಕಾಸರಗೋಡು						
ಕುಂಬಳೋನ್	ಹೊಲ	ಎರಡು	40 ಇಂಚು	180 ದಿನ	30	ಕೆಂಪು, ದಪ್ಪ ಬತ್ತ
ಪಾಲ್ಘಾಟು, ಮಲಪ್ಪುರಂ						
ಕಟಿಮ	ತಿಡಿಲ್‌ನಿಲಂ	ಒಂದು	4½ ಅಡಿ	120-140		ಬೆಳೆ ಬೀಳುತ್ತದೆ
ಕಣ್ಣೂರು, ಕಾಸರಗೋಡು						
ಕಟುಂಗುಂ ಪೂತ್ತಾಡ (ಕಂಗಿನ ಗೊನೆ)	ಒಣನೆಲ	ಎರಡು	36 ಇಂಚು	160 ದಿನ	20	ಬಿಳಿ ಕಾಳುಗಳು, ಕದಿರುಗಳು ಕಂಗಿನ ಹೂಗೊನೆಯಂಥವು.
						ಅಕ್ಕಿ ದುರ್ಬಲ, ಸಕ್ಕರೆ ಕಾಯಿಲೆಗೆ ಔಷಧ
ತೃಚ್ಚೂರ್, ಮಲಪ್ಪುರಂ, ಪಾಲಕ್ಕಾಡ್, ಕೋಝಿಕೋಡ್						
ಕುಟ್ಟಾಡನ್	ಕುಟ್ಟಾಡನ್‌ಗದ್ದೆ	ಮುಂಡಕ IIನೇ ಬೆಳೆ	ತುಂಬ	10 ತಿಂಗಳು	10	ಕಪ್ಪು ಕಾಳುಗಳು, ಬಿಳಿ ಮಿಶ್ರಿತವೂ ಇವೆ. ಹೆಚ್ಚು ಗೊಬ್ಬರ ಬೇಡ. ದಪ್ಪ ದಂಟುಗಳು ಅನ್ನಕ್ಕೆ ರುಚಿ ಕಡಿಮೆ

ತೃಚ್ಚೂರು, ಪಾಲ್ಘಾಟು, ಮಲಪ್ಪುರಂ, ಕೋಝಿಖ್ಕೋಡ್, ಕಣ್ಣೂರು, ಕಾಸರಗೋಡು						
ಕುಟ್ಟಾಲನ್/ ಕುರಿಕುಟ್ಟಾಲನ್	ಕರೆನೆಲ/ಹೊಲ	ಒಂದು	3 ಅಡಿ	100 ದಿನ		ಬಿಳಿ, ಸಣ್ಣ ಕಾಳುಗಳು, ಉದುರಲು ಕಷ್ಟ, ಕುಟ್ಟಾಲನಿಗಿಂತ ಕುರಿಕುಟ್ಟಾಲನಿಗೆ ಕೊಳೆತ ಅಧಿಕ
ತಿರುವನಂತಪುರಂ, ಪತ್ತನಂ ತಿಟ್ಟ						
ಕುರುಕ	ಪೊಕ್ಕಾಳಿ ಬೀಜ ಜವುಗು ನೆಲ			90 ದಿನ		ಕುರುಕ, ಚೆರುಕುರುಕ ಎಂದು ಎರಡು ವಿಧ, ಚೆರುಕುರುಕಕ್ಕೆ ಚಿನ್ನದ ಬಣ್ಣ
ಎರ್ನಾಕುಲಂ ತೃಶ್ಶೂರು						
ಕೊಚ್ಚುವಿತ್ತ್	ಹೊಲ/ಗದ್ದೆ	ಯಾವುದೇ ಕಾಲ	2-2½ ಅಡಿ	90 ದಿನ	25	ಬಿಳಿ ಕಾಳುಗಳು
ತಿರುವನಂತಪುರಂ, ಪತ್ತನಂತಿಟ್ಟ, ಕೊಲ್ಲಂ, ಆಲಪ್ಪುದಿ						
ಕೊಡಿಯನ್	ಗದ್ದೆ(ಜವುಗು)	ಎರಡನೆಯದು	7 ಅಡಿ	8-9 ತಿಂಗಳು	15	ಬಿಳಿ ಕಾಳುಗಳು, ದೊಡ್ಡಗಾತ್ರ, ನೀರು ಏರಿದಂತೆ ತಲೆಯೆತ್ತಿ ಬೆಳೆಯಬಲ್ಲುದು.
ತೃಶ್ಶೂರು, ಪಾಲ್ಘಾಟು						
ಚಿಟ್ಟೇನಿ		ಎರಡನೆಯದು	5 ಅಡಿ	5 ತಿಂಗಳು		ಕಪ್ಪು, ಕೆಂಪು, ಉಂಡೆ ಎಂಬ ಪ್ರಭೇದಗಳು, ಕೆಂಪು ಚಿಟ್ಟೇನಿಗೆ ಕೆಂಪಿಗಿಂತ ಹತ್ತುದಿನ ಹೆಚ್ಚುಬೇಕು.
ಎರ್ನಾಕುಳಂ, ತೃಶ್ಶೂರು, ಪಾಲ್ಘಾಟ್, ಮಲಪ್ಪುರಂ, ಕೋಝಿಖ್ಕೋಡ್, ಕಣ್ಣೂರು, ಕಾಸರಗೋಡು						
ಚೀರ	ಗದ್ದೆ	(ಯಾವುದೇ ಬೆಳೆ) (ಮೂರನೆಯದು)		90 ದಿನ	15-20	ಕೆಂಪು, ಕಪ್ಪು ಎರಡು ಪ್ರಭೇದಗಳು ಮೂರನೆ ಬೆಳೆಗೆ ಕೆಂಪುಚೀರ. ಇದಕ್ಕೆ ತೆಕ್ಕನ್‌ಚೀರ ಎಂದೂ ಹೆಸರು
ಎರ್ನಾಕುಲಂ, ತೃಶ್ಶೂರು, ಪಾಲ್ಘಾಟು, ಮಲಪ್ಪುರಂ, ಕೋಝಿಖ್ಕೋಡು						
ಚುವನ್ನವಟ್ಟನ್	ಹೊಲ		4 ಅಡಿ	90 ದಿನ	15	ಚೀರದಂಥ ಕಾಳುಗಳು
ತೃಶ್ಶೂರು, ಪಾಲ್ಘಾಟು, ಮಲಪುರಂ						
ಚೆಂಗಟಮ		ಒಂದನೆಯದು	4½-5 ಅಡಿ	140-148	30	ಪಾಲಕ್ಕಾಡನ್ ಕಟಮ ಎಂದೂ ಹೆಸರು.
ತೃಶ್ಶೂರು, ಪಾಲ್ಘಾಟು, ಮಲಪ್ಪುರಂ						ತವಳಕಣ್ಣನ್‌ನೊಂದಿಗೆ ಸಾದೃಶ್ಯ. ಗೊಬ್ಬರ ಕಡಿಮೆಯಾದರೆ ನೇರಳೆ ಬಣ್ಣದ ಚುಕ್ಕೆಗಳು. ಗರಿಯಲ್ಲಿ ಬತ್ತದ ಬುಡದಲ್ಲಿ ಕಪ್ಪುಬೊಟ್ಟು, ಬತ್ತ ಕೆಂಬಣ್ಣದ್ದು. ಒಳ್ಳೆಯ ಒದಗುಳ್ಳದ್ದು. ತವಳಕಣ್ಣನ ಕೃಷಿ ರೀತಿ
ಚೆಂಬಾವ್ (ವಲ್ಯಂಬಾನ್)		ಒಂದನೆಯದು	4-5 ಅಡಿ	120	12 ದಿನ	ಬಿತ್ತನೆ ಇಲ್ಲ. ಒಂದು ತೆರನ ಕೆಂಬಣ್ಣದ ಕಾಳು. ಒದಗು ಹೆಚ್ಚು
ಕೊಟ್ಟಾಯಂ, ಎರ್ನಾಕುಲಂ, ತೃಶ್ಶೂರು, ಪಾಲ್ಘಾಟು						
ಚೇರಾಡಿ	ಗದ್ದೆ		6 ಅಡಿಗಿಂತ ಹೆಚ್ಚು	6 ತಿಂಗಳು	15-30	ಮಹಾನಕ್ಷತ್ರಾನು ಸಾರಿ ಏಕಬೆಳೆಬೀಜ. ಕಪ್ಪು-ಬಿಳಿ ಪ್ರಭೇದಗಳು.
ಪತ್ತನಂತಿಟ್ಟ, ಕೊಲ್ಲಂ, ಆಲಪ್ಪುಟಿ						
ಚೆನ್ನೆಲ್ಲ್	ಗದ್ದೆ/ಹೊಲ	ಒಂದನೆಯದು	5 ಅಡಿ	160ದಿನ	12	ಕೀಟಬಾಧೆ ತಡೆಯಬಲ್ಲುದು. ಬಿಳಿ ಕಾಳುಗಳು

ಕಣ್ಣಾನೂರು, ಕಾಸರಗೋಡು **ಚೋಮಾಲ ನೋವಯನಾಡನ್ ಬೀಜಗಳು**						
ತವಳ ಕಣ್ಣನ್	ಮರಳುಮಿಶ್ರಿತ ಒದ್ದೆನೆಲ	ಒಂದನೆಯದು	5 ಅಡಿ	5ತಿಂಗಳು	35-40	ಹುಡಿ ಬಿತ್ತನೆ, ಬಿಳಿ ಕಾಳುಗಳು, ಕಾಳುಗಳ ತುದಿಗೆ ನೇರಳೆ ಚುಕ್ಕೆ, ದಪ್ಪಕಾಳುಗಳು, ಒದಗು ಹೆಚ್ಚು ಸಾವಯವ ಗೊಬ್ಬರ ಸೂಕ್ತ. ಒಳ್ಳೆ ಗೊಬ್ಬರ ಬೇಕು. ದಪ್ಪದಂಟುಗಳು. ಕದಿರಿನಿಂದ ಕಾಳು ಬೇಗ ಬೇರ್ಪಡದು. ನೀರು ಏರಿದಂತೆ ತಲೆ ಎತ್ತಿ ಬೆಳೆಯುವ ಸ್ವಭಾವ.
ತೃಶ್ಶೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕ್ಕೋಡು, ಕಣ್ಣೂರು, ಕಾಸರಗೊಂಡು						
ತವ್ವನ್	ಹೊಲ	ಒಂದೇ ಬೆಳೆ				ಮೀನದಲ್ಲಿ ಬಿತ್ತನೆ, ಕನ್ನಿಯಲ್ಲಿ ಕೊಯ್ಲು, ಮೇಷದಲ್ಲಿ ಬಿತ್ತನೆ ಮಾಡಿದರೂ ಅಷ್ಟೆ. ಕೆಂಬಣ್ಣದ ಕಾಳುಗಳು
ಕಣ್ಣೂರು, ಕಾಸರಗೋಡು						
ತೊಣ್ಣಾರಾನ್	ಗದ್ದೆ	ಮೂರು ಬೆಳೆಗಳಲ್ಲೂ	3-3½ ಅಡಿ	90 ದಿನ	15-20	ಬಿಳಿಕಾಳುಗಳು
ತೃಚ್ಘೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕ್ಕೋಡು, ಕಣ್ಣಾನೂರು, ಕಾಸರಗೋಡು						
ಪಳ್ಯಾಲ	ಗದ್ದೆ		4½-5 ಅಡಿ	120 ದಿನ	10-12	ಕಪ್ಪುಕಾಳುಗಳು. ಬಿತ್ತನೆ ಮಾಡುವುದಿಲ್ಲ. ಚೆಂಬಾವ್ ತಳಿಯ ಅನೇಕ ಸ್ವಭಾವಗಳು
ತೃಚ್ಚೂರು, ಪಾಲ್ಘಾಟು, ಮಲಪ್ಪುರಂ						
ಪೊಕ್ಕಾಳಿ	ಜವುಗು		5-5½ ಅಡಿ	120 ದಿನ ಚೋರ 130 ದಿನ		ವೆಳ್ಳ(ಬಿಳಿ) ಚೋರ (ನೆತ್ತರು) ಎಂಬ ಭೇದಗಳು
ಎರ್ನಾಕುಲಂ, ತೃಚ್ಚೂರು						
ಪೊನ್ನಾರಿಯನ್ (ಚೆರಿಯ ಆರ್ಯನ್)/ ಸ್ವರ್ಣ ಆರ್ಯನ್	ಗದ್ದೆ	ಒಂದನೆಯದು	4½2ಅಡಿ -5ಅಡಿ		15-18	ವಲಿಯಾರ್ಯನ್‌ಗಿಂತ ಹದಿನಾಲ್ಕು ದಿನ ಕಡಿಮೆ ಕಾಲಾವಧಿ ಚಿನ್ನದ ಬಣ್ಣದ ಕಾಳು. ಬೀಳುವ ಬೆಳೆಯಲ್ಲ.
ತೃಚ್ಚೂರು, ಪಾಲ್ಘಾಟು, ಮಲಪ್ಪುರಂ, ಕೋಝಿಕೋಡು, ಕಣ್ಣೂರು						
ಮಲಯಾರ್ಯನ್	ಕೆಸರುನೆಲ	ಒಂದನೆಯದು	5½-6 ಅಡಿ	41/2ತಿಂಗಳು	25-30	ಮೇಷದಲ್ಲಿಬಿತ್ತನೆ, ಸಿಂಹದಲ್ಲಿ ಕೊಯ್ಲು, ಕೆಂಪುಕಾಳುಗಳು, ನೀರೇರಿದಂತೆ ತಲೆಯೆತ್ತಿ ಬೆಳೆಯುತ್ತದೆ
ಪತ್ತನಂತಿಟ್ಟ, ಆಲಪ್ಪುಟಿ						
ಮಲವೆಳ್ಳ	ಗದ್ದೆ		4-4½ ಅಡಿ	4½-5 ತಿಂಗಳು	20	ಬಿಳಿ ಕಾಳುಗಳು
ತಿರುವನಂತಪುರಂ, ಕೊಲ್ಲಂ						
ಮಾಲಕ್ಕಾರನ್/ ಮಾಲಚೆನ್ನೆಲ್ಲ್	ಗದ್ದೆ	ಒಂದನೆಯದು		4½ ತಿಂಗಳು		ಕಪ್ಪು ಬಣ್ಣದಕಾಳು (ತುಂಬ ಕಪ್ಪು ಅಲ್ಲ) ಗಿಡಗಳ ಬುಡದಲ್ಲಿ ಮಾಲೆಯಂತೆ ಒಂದು ಸುತ್ತು ಇರುತ್ತದೆ ಅದರಿಂದಲೇ ಇದೇ ಹೆಸರು. ರೋಗ ಪ್ರತಿರೋಧ ಶಕ್ತಿ ಹೆಚ್ಚು.
ಕಣ್ಣೂರು, ಕಾಸರಗೋಡು						
ಮುಂಡಕ ಕುರುವ	ಗದ್ದೆ	ಎರಡನೆಯದು	5ಅಡಿ	6 ತಿಂಗಳು	10-12	ಕಪ್ಪು ಕಾಳುಗಳು, ನಕ್ಷತ್ರ ಲೆಕ್ಕಾಚಾರದ ವಾರ್ಷಿಕ ಬೆಳೆ

ಪತ್ತನಂ ತಿಟ್ಟ, ಕೊಲ್ಲಂ						
ಮುನ್ನಾಯಕನ್	ಗದ್ದೆ		3½-4 ಅಡಿ	3ತಿಂಗಳು	20	ಕಪ್ಪು ಮಿಶ್ರಿತ ಕೆಂಬಣ್ಣದ ಸಣ್ಣ ಕಾಳುಗಳು ಬೇವು ತುಂಬ ಕಡಿಮೆ. ಬೇಯಿಸುವಾಗಲೇ ಒಡೆದು ಹೋಗುತ್ತದೆ.
ಪತ್ತನಂ ತಿಟ್ಟ, ಆಲಪ್ಪುಟಿ						
ಮೋಡನ್	ಹೊಲ/ಒಣನೆಲ		4½ಅಡಿ	90 ದಿನ	7-10	ನಸುಗೆಂಪು ಬಣ್ಣದ ಕಾಳುಗಳು
ತೃಚ್ಛೂರು, ಪಾಲ್ಘಾಟು, ಮಲಪ್ಪುರಂ						
ವಾಚ್ಚನ್	ಆಳದ ಜವುಗು ಕೆಸರುಗದ್ದೆ	ಒಂದನೆಯದು		150 ದಿನ		ಕೆಂಬಣ್ಣದ ಕಾಳುಗಳು
ಕಣ್ಣೂರು, ಕಾಸರಗೋಡು						
ವಿರಿಪ್ಪ್	ಹಿನ್ನೀರು ನೆಲ	ಒಂದನೆಯದು	5-5½ಅಡಿ	130 ದಿನ		ಬಿಳಿಬಣ್ಣದ ಕಾಳುಗಳು-ಚೆರು, ಚೆಟ್ಟಿ ಎಂಬ ಇತರ ಎರಡು ಪ್ರಭೇದಗಳು. ಚೆರು ವಿರಿಪ್ಪ್‌ಗೆ ಕೋಂದನ್ ಎರಿಪ್ಪ್ ಎಂದೂ ಹೆಸರಿದೆ. ಸಣ್ಣ ಕಾಳುಗಳು
ಎರ್ನಾಕುಲಂ, ತ್ರಿಚ್ಛೂರು						
ವೆಕ್ಕತ್ತಾರ‍್ಯನ್	ಜವುಗು ಗದ್ದೆ		5-6ಅಡಿ	4½ ತಿಂಗಳು	25-30	ಮೇಷದಲ್ಲಿ ಬಿತ್ತನೆ; ಸಿಂಹದಲ್ಲಿ ಕೊಯ್ಲು ಕೆಂಬಣ್ಣದ ಕಾಳುಗಳು, ನೀರೇರುವುದಕ್ಕೆ ಅನುಸರಿಸಿ ತಲೆಯೆತ್ತುತ್ತದೆ. (ಕೊಳೆಯುವಿಕೆ) ಕಮ್ಮಿ ಉದುರುವಿಕೆ
ಪತ್ತನಂ ತಿಟ್ಟ, ಆಲಪ್ಪುಟಿ						
ವೆಟ್ಟುವಾರಿ	ಗದ್ದೆ	ಒಂದನೆಯದು	4-5 ಅಡಿ	15		ಆರ‍್ಯನ್ ಜಾತಿಯದು. ಬೆಳೆದಾಗು ಕದಿರು ಮುರಿಯುವ ಸ್ವಭಾವ ಕೆಂಬಣ್ಣದ ಕಾಳುಗಳು
ಪಾಲ್ಘಾಟು, ಮಲಪ್ಪುರಂ						
ವೆಳ್ಳಕ್ಕಟಿಮ	ಗದ್ದೆ	ಒಂದನೆಯದು				ಹಳೆಯ ಕಾಲದ ಬೀಜ. ಬಿಳಿಕಾಳುಗಳು, ಆರ‍್ಯಂಕಾಲಿಯ ಗುಣಸ್ವಭಾವ, ಎರಡೂ ಜತೆಗೆ ಕೃಷಿಯೂ ಇದೆ 'ಕಾಳಿಯುಂ ಕಟಿಮುಯುಂ' ಎಂಬ ನುಡಿಗಟ್ಟಿದೆ.
ತೃಚ್ಛೂರು, ಪಾಲ್ಘಾಟು						
ವೆಳ್ಳತ್ತಿರಿ	ಗದ್ದೆ	ಎರಡನೆಯದು		75 ದಿನ		ಮೊಳೆಯಿಸಿ ಬಿತ್ತನೆ. ಬಿಳಿ ಬಣ್ಣದ ಸುಂದರ ಕಾಳುಗಳು
ವೆಳ್ಳಕ್ಕೋಲಿ	ಗದ್ದೆ	ಎರಡನೆಯದು	3½-4ಅಡಿ	160 ದಿನ	15	ಬಿಳಿ ಕಾಳುಗಳು, ಬೇಗು ಉದುರುತ್ತದೆ. ಬಿತ್ತನೆ ಮಾಡಬೇಕಾಗಿಲ್ಲ ಎಂಬ ಹೇಳಿಕೆ ಇದರಿಂದಲೇ. ಮಿಶ್ರ ಬೆಳೆಯಲ್ಲಿ ದೀರ್ಘಕಾಲಿಕವಾಗಿ ಬೆಳೆಯಲಾಗುತ್ತದೆ.
ವೆಳ್ಳಾರಿಯನ್	ಕೆಸರುಗದ್ದೆ, ಆಳಜವುಗು	ಎರಡನೆಯದು	3½-4ಅಡಿ	140-145ದಿನ	15	ನೇಜಿ ಕಿತ್ತು ನೆಡುವುದು ಪದ್ಧತಿ. 25 ದಿನವಾದಾಗ ನೇಜಿ ನೆಡಲಾಗುತ್ತದೆ. ಬಿಳಿ ಕಾಳುಗಳು
ತೃಚ್ಛೂರು, ಪಾಲ್ಘಾಟು, ಮಲಪ್ಪುರಂ						
ವೆಳುತ್ತ ತವ್ವಲ್	ಏಕಬೆಳೆ ಹೆಚ್ಚುನೀರು ಇರುವುದು	ಒಂದನೆಯದು		100ದಿನ		

ಕುಮರಿ ಬೇಸಾಯದ ತಳಿ ಬೀಜಗಳು

ತಳಿ	ಬೆಳೆಯುವವರು	ಪೈರು/ಬತ್ತ/ಅಕ್ಕಿಯ ವೈಶಿಷ್ಟ್ಯ
ಅಡುಕ್ಕನ್	ಕುಂಚ್ಚೆರು	ಕರಿಯಡುಕ್ಕನ್, ಪೆಂದಿಯಡುಕ್ಕನ್-ಭೇದಗಳು, ವಿಷುವಿಗೆ ಬಿತ್ತನೆ ಕನ್ಯಾ-ತುಲಾದಲ್ಲಿ ಕೊಯ್ಲು
ಅನ್ನೂರಿ	ಕಾಣಿಕ್ಕಾರ್	ಕೃಷಿ ಮಾಡುವುದರಲ್ಲಿ ಸಹಜ ಬೆಳೆ. ಸಪುರದಂಟು, ಸಣ್ಣ ಕದಿರು, ಉದ್ದದ ಸಣ್ಣ ಕಾಳು, ಕದಿರಲ್ಲಿ 5-10 ಕಾಳುಗಳು ಅಷ್ಟೇ. ಆಹಾರವಾಗಿ ಬಳಕೆ ಇಲ್ಲ. ಮಸೂರಿಗೆ ಔಷಧವಾಗಿ ಬಳಕೆ ಕಾಡುಕೋಳಿಗಳ ಆಹಾರ.
ಅರಿಮೋಡನ್	ಮುದುವರು	ಬಿಳಿ,ಕಪ್ಪು ಎಂಬೆರಡು ಭೇದಗಳು. ಕಾಲಾವಧಿ ಕಡಿಮೆ. ವಿಷು ಬಿತ್ತನೆ
ಅಟಕಪ್ಪೆರುಮಾಳ್	ಕಾಣಿಕ್ಕಾರ್	ಸಣ್ಣ ಕಾಳುಗಳು
ಆಟ್ಟಕ್ಕಾಲಿ	"	ಬಿಳಿ ಬಣ್ಣದ ಕಾಳುಗಳು, ತುಲಾ ಮಾಸ ಪ್ರಾರಂಭದಲ್ಲಿ ಕೊಯ್ಲು (ವಿಷು ಬಿತ್ತನೆ)
ಆಡಿಮೋಡನ್	ಮುದುವರು	ಬಿಳಿ-ಕಪ್ಪು ಎಂಬೆರಡು ಪ್ರಭೇದ. ಕಾಲಾವಧಿ ಕಡಿಮೆ, ವಿಷಬಿತ್ತನೆ
ಕಲ್ಲುಣ್ಣಿ	"	ಸಣ್ಣಕಾಳುಗಳು, ವಿಷು ಬಿತ್ತನೆ, ಅಲ್ಪಕಾಲಾವಧಿ
ಊರಾಳಿಚ್ಚಿ	"	ದೊಡ್ಡ ಕಾಳುಗಳು, ವಿಷುಬಿತ್ತನೆ, ದೀರ್ಘಾಕಾಲಾವಧಿ
ಕಂಬಿಕಾದಲ್	ಕಾಣಿಕ್ಕಾರ್	ಕಪ್ಪು ಬಣ್ಣ, ಅಲ್ಪಕಾಲಾವಧಿ
ಕಾಮದೇವನ್	ಕಾಣಿಕ್ಕಾರ್	ಕೆಂಪುಬಣ್ಣ, ಉದ್ದ-ದೊಡ್ಡ ಕಾಳುಗಳು, ವಿಷುಬಿತ್ತನೆ, ದೀರ್ಘಕಾಲಾವಧಿ
ಕುರಿಕಣ್ಣಿ	ಮುದುವರು	ದೀರ್ಘಕಾಲಾವಧಿ
ಕುಂಜಿನೆಲ್ಲ್	"	ಬಿಳಿಯ ದೊಡ್ಡ ಕಾಳುಗಳು, ಅಲ್ಪಕಾಲಾವಧಿ
ಕುಂಜಿಮುಳ್ಳನ್	"	ಎತ್ತರದ ತಳಿ, ನಸುಗೆಂಪು ಬಣ್ಣದ ಕಾಳುಗಳು. 'ತೂವನ್' ಎಂದೂ ಹೆಸರು. ಅಲ್ಪಕಾಲಾವಧಿ
ಕುಚ್ಚರಿ ಕುರುವ	ಕಾಣಿಕ್ಕಾರ್	ಬಿಳಿಕಾಳುಗಳು, ಅಲ್ಪಕಾಲಾವಧಿ
ಕೂರನ್	"	ಕೆಂಬಣ್ಣ, ದೀರ್ಘಕಾಲಾವಧಿ, ಸಿಂಹದಲ್ಲಿ ಕೊಯ್ಲು
ಕೋಡಾಲಿಕಣಯನ್	"	ಉದ್ದದ ಕಾಳುಗಳು, ಅಲ್ಪಕಾಲಾವಧಿ
ಕೋಳಟಿಯಾಳ	ಕುಂಚ್ಚೆರು	ಬಾಗಿದ ಕದಿರು, ಮುಳ್ಳನ್, ಕಲ್ಲೋರ ಎಂಬ ಪ್ರಭೇದಗಳು. ಒಳ್ಳೆಯ ಫಸಲು ಕೊಡುವ ಉತ್ತಮ ತಳಿಗಳು. ವಿಷು ಬಿತ್ತನೆ; ಕನ್ಯಾ-ತುಲಾದಲ್ಲಿ ಕೊಯ್ಲು.
ಚೀರಪ್ಪಾಲ		ಹಳೆಯ ಕಾಲದ ತಳಿ. ಸಣ್ಣ ಕಾಳುಗಳು, ಒಳ್ಳೆಯ ಫಸಲು - ವಿಷುಬಿತ್ತನೆ; ಕನ್ಯಾತುಲಾದಲ್ಲಿಕೊಯ್ಲು
ಚೆಂದಂಗನ್	ಕಾಣಿಕ್ಕಾರ್	ಕೆಂಬಣ್ಣದ ಕಾಳು, ದೀರ್ಘಕಾಲಾವಧಿ
ಚೆರಗ್‌ನೆಲ್ಲ್	ಮುದುವರು	ನಾಮಾವಶೇಷವಾಗಿದೆ. ಹೆಸರು ಸೂಚಿಸುವಂತೆ ಬತ್ತದ ಇಬ್ಬದಿ ರೆಕ್ಕೆಯಂಥ ರಚನೆ. ಬೆಳ್ಳಿ ಬಣ್ಣದ ಕಾಳು, ಕಪ್ಪು ಭೇದವೂ ಇತ್ತು.
ಚೇರುವೆಳ್ಳ	ಕಾಣಿಕ್ಕಾರ್	ಬಿಳಿಬಣ್ಣ
ಚೋರಮೋಡನ್	ಮುದುವರು	ದೊಡ್ಡಕಾಳುಗಳು, ಕೆಂಬಣ್ಣ, ಅಲ್ಪಕಾಲಾವಧಿ
ಚೋಲಪ್ಪೆರುವಿತ್ತ್	ಕುರುಚ್ಚರು	ಬೇಗನೆ ಬೆಳೆಯುವ ತಳಿ, ವಿಷುವಿಗೆ ಬಿತ್ತನೆ
ತಲಪಿರಿಚ್ಚಾನ್	ಮುದುವರು	ಕಪ್ಪು-ಬಿಳಿ ಪ್ರಭೇದಗಳು, ಕದಿರುಗಳು ಹೂವಿನಂತೆ ಅರಳಿರುತ್ತವೆ.
ತೋಕ್ಕಾನ್	ಮುದುವರು	ಬಿಳಿಬಣ್ಣ
ಪನ್ನಿಮುಂಡನ್	ಕಾಣಿಕ್ಕಾರ್	ಉದ್ದಕಡಿಮೆ, ಕಪ್ಪುಬಣ್ಣ, ಕದಿರು ಬಾಗುವುದಿಲ್ಲ ನೆಟ್ಟಗಿರುತ್ತದೆ, ದೀರ್ಘಕಾಲಾವಧಿ
ಪಾಲ್ಕಟಿಮ	ಕುರುಚ್ಚರು	ಅಲ್ಪಕಾಲಾವಧಿ, ಕಡಿಮೆ ಇಳುವರಿ
ಮಂಞಕ್ಕುರುವ-ಕಾಣಿಕ್ಕಾರರು-ಸಣ್ಣಕಾಳುಗಳು-ದೀರ್ಘಕಾಲಾವಧಿ		
ಪುದಕ್ಕಾಳಿ	ಮುಂದುವರು	ಕಪ್ಪುಬತ್ತ (ಕರಿಂಬೆರು ವಾಟಿಯಷ್ಟು ಇಲ್ಲ) ದೀರ್ಘಕಾಲಾವಧಿ, ಬಿಳಿ, ಕಪ್ಪು, ಮಾಲಿ, ಪುದಕ್ಕಾಳಿಗಳನ್ನು ಒಟ್ಟಾಗಿಯೂ ಬಿತ್ತನೆ ಮಾಡುತ್ತಾರೆ.
ಪುನಕ್ಕುರುವ		ನಾಲ್ಕು ತಿಂಗಳ ಕಾಲಾವಧಿ, ಸಣ್ಣ ಕಾಳುಗಳು, ನಸುಗೆಂಪು ಬಣ್ಣ. ಒಳ್ಳೆ ಮಳೆಯಾದರೆ ಒಳ್ಳೆ ಬೆಳೆ, ಚೆನ್ನಾಗಿ ಬೆಳೆದಾಗ ಹೊಟ್ಟು ಬಿರಿದು ನಿಲ್ಲುತ್ತದೆ.
ಪುಶಕನ್	ಮುದುವರು	ನೀಳವಾದ, ಕಪ್ಪು ಮಿಶ್ರಿತ ಕಾಳು, ತಿಂಡಿ/ಫಲಾಹಾರಕ್ಕೆ ಅತ್ಯುತ್ತಮ, ದೀರ್ಘಕಾಲಾವಧಿ
ಪೆರುವಾಟಿ		ಬಿಳಿ, ಕಪ್ಪು, ಮಾಲಿ, ಹಳದಿ (ಅವಲಕ್ಕಿ ತಯಾರಿಸಲು ಉತ್ತಮ), ಮುಂಡನ್ - ಎಂದು ಐದು ತೆರ. ಕಪ್ಪು ಬಿಳುಪು ಬಣ್ಣಗಳಿರುತ್ತವೆ. ದೀರ್ಘ ಕಾಲಾವಧಿ, ಎತ್ತರಕ್ಕೆ ಬೆಳೆಯುವವು. ದೊಡ್ಡಕಾಳುಗಳು.
ಪೊನ್ನರಪ್ಪಾಲನ್	ಕಾಣಿಕ್ಕಾರ್	ಹುಲಿಯಬಣ್ಣದ/ವಿನ್ಯಾಸದ ಕಾಳುಗಳು
ಪೋಕ್ಕುರುವ	ಮುದುವರು	ಬಿಳಿಬಣ್ಣ, ದೀರ್ಘ ಕಾಲಾವಧಿ
ಮುತ್ತಿಚ್ಚೇರಿ (ರಾಮತಿ)	ಕಾಣಿಕ್ಕಾರರು	ಹೊಸ ಕಾಡು ಕಡಿದಾಗ, ಜವುಗು ನೆಲವಿದ್ದಾಗ ಕೃಷಿ ಮಾಡುತ್ತಿದ್ದ ತಳಿ. ಬಿಳಿಬಣ್ಣ, ದೊಡ್ಡ ಗಾತ್ರದ ಕದಿರುಗಳು, ಒಳ್ಳೆಯ ಇಳುವರಿ ಕೊಡುವ ತಳಿ.
ವಯಿಲನೆಲ್ಲ್	ಮುದುವರು	ಬಿಳಿಬಣ್ಣದ, ಉದ್ದ ಬತ್ತದ ಕಾಳುಗಳು, ಗಿಡಗಳು ಎತ್ತರದವಲ್ಲ.

ನವರ ಎಂಬ ವಿಶೇಷ ತಳಿ ಬತ್ತ

ನೀರಿನ ಲಭ್ಯತೆಯಿದ್ದಲ್ಲಿ ಯಾವಾಗ ಬೇಕಾದರೂ ಕೃಷಿ ಮಾಡಬಹುದು. 60 ದಿನಗಳ ಕಾಲಾವಧಿ. ಮೊಳೆತು ಬೇರುಕೊಡುವವರೆಗೆ ಮಾತ್ರ ಕೆಸರು ಮಣ್ಣು ಸಾಕು (ನೀರು ನಿಲ್ಲಬೇಕೆಂಬ ನಿರ್ಬಂಧವಿಲ್ಲ). ಬಳಿಕ ನೀರಿನ ತೇವಾಂಶವಿದ್ದರೂ ಸಾಕು. ಬಿಳಿ ಬಣ್ಣದ ಕಾಳುಗಳು 4-6 ಪಟ್ಟು ಇಳುವರಿ. ಕಪ್ಪುಬಣ್ಣದ ನವರವೂ ಇದೆ. ಇದಕ್ಕೆ ಇಳುವರಿ ಹೆಚ್ಚು. ನವರವು ಔಷಧೀಯ ಗುಣಗಳಿಗಾಗಿ ಪ್ರಸಿದ್ಧವಾಗಿದೆ. ಆಯುರ್ವೇದ ಚಿಕಿತ್ಸೆಯಲ್ಲಿ ಇದಕ್ಕೆ ವಿಶೇಷ ಪ್ರಾಧಾನ್ಯವಿದೆ. ನವರದ ಗಂಜಿ ಮತ್ತು ನವರ ಕೀಟಿ (?) ವಾತಚಿಕಿತ್ಸೆಯಲ್ಲಿ ತುಂಬ ಪ್ರಶಸ್ತವಾದುದು. ಹಿಂದಿನ ಕಾಲದಿಂದಲೇ ಇದರ ಮಹತ್ತ್ವ ತಿಳಿದಿತ್ತು. ಮಾರ್ಗಶಿರ ಮಹಾನಕ್ಷತ್ರದಲ್ಲಿ ಬಿತ್ತನೆ ಮಾಡಿದರೆ ಹತ್ತು ಪಟ್ಟು ಇಳುವರಿ ಸಿಗುತ್ತದೆ ಎನ್ನಲಾಗುತ್ತದೆ.

ಅಟ್ಟಪ್ಪಾಡಿಯ ಬತ್ತದ ತಳಿಗಳು

ಏರ್ನೆಲ್ಲ್ : 5½-6 ಅಡಿ, 6 ತಿಂಗಳು - ಮನೆಯ ಮಾಡುಗಳಿಗೆ ಹೊದೆಸಲು ಬೈಹುಲ್ಲಿನ ಬಳಕೆ. ಗೊಟ್ಟಿಯಾರ್ ಕಂಡಿ, ಕೊಟ್ಟು ಮಲೈಗಳಲ್ಲಿ ಕೃಷಿ ಮಾಡುತ್ತಿದ್ದರು. ತುಂಬ ಟಿಸಿಲೊಡೆದು ಬೆಳೆಯುವ ಗುಣ.

ಕರಮೋಡನ್ : ಕಪ್ಪುಬತ್ತ

ಕೂಕೆನೆಲ್ಲ್ : ಹಳೆಯ ಕಾಲದಲ್ಲಿ ಕೃಷಿ ಮಾಡುತ್ತಿದ್ದತಳಿ. ಕಾಲಾವಧಿ - 8 ತಿಂಗಳು. ಮಿಥುನದಲ್ಲಿ ಬಿತ್ತನೆ ಮಾಡಿದರೆ ಮಕರ ಮಾಸದಲ್ಲಿಕೊಯ್ಲು (6½ ತಿಂಗಳು) ದಪ್ಪನಾದ, ದೊಡ್ಡ ಕಾಳುಗಳು. ಬಿಳಿ ಬಣ್ಣ 2½-3ಅಡಿ ಎತ್ತರ. ಒಳ್ಳೆ ಶೈತ್ಯವಿದ್ದಲ್ಲಷ್ಟೆ ಬೆಳೆಯುವುದು. ಅಟ್ಟಪ್ಪಾಡಿಯ ಮೂಡುಭಾಗದಲ್ಲಿ ಈ ತಳಿ ಗೊತ್ತಿಲ್ಲ. ಗೊಟ್ಟಿಯಾರ್ ಕಂಡಿ, ಪೊಟ್ಟಿಕಲ್ಲು ಸುತ್ತಮುತ್ತ ಬೆಳೆಯಲಾಗುತ್ತಿತ್ತು.

ಗುಡ್ಡೆನೆಲ್ಲ್ : ಚಿಟ್ಟೂರಲ್ಲಿ ಬೆಳೆಯುತ್ತಿದ್ದರು. ಇದರ ಒಂದೆ ಬುಡದಲ್ಲಿ 2-3 ಕಿಲೋ ಬತ್ತ ಸಿಗುತ್ತದೆ.

ಪಿಂಜನೆಲ್ಲ್ : ಮೂರುತಿಂಗಳ ಕಾಲಾವಧಿ, ಗಂಜಿಗೆ ಮಾತ್ರ ಉಪಯೋಗ

ಪುಳುದಿನೆಲ್ಲ್ : (ಹೆಸರು ಮಾತ್ರ ಲಭ್ಯ)

ವಾಳನ್ ನೆಲ್ಲ್ : ಚಿಟ್ಟೂರು ಭಾಗದಲ್ಲಿ ಬೆಳೆಯುತ್ತಿದ್ದರು. ಹೊಟ್ಟು (ತೋಡ್.ಮ.) ಒಂದು ತೆರನ ಹಳದಿ ಬಣ್ಣದ್ದು. ಐದೂವರೆ-ಆರು ಅಡಿ ಎತ್ತರ.

ವೆಳ್ಳಪ್ಪೆರುವಾಟಿ : (ಹೆಸರು ಮಾತ್ರ ಲಭ್ಯ)

ಕುಟ್ಟನಾಡಿನ ಬತ್ತ ತಳಿಗಳು

ಅತಿಕ್ಕರ/ಅದುಕ್ಕಾರ : 4 ಅಡಿ, 120 ದಿನ, ಒಳ್ಳೆಯ ಭಾರದ ಕಾಳುಗಳು

ಆನಕ್ಕೊಡನ್ 80-86 10 - ಪಟ್ಟು ಇಳುವರಿ

ಉಪ್ಪುಕುರವ್ - 90 ದಿನಗಳು, ನೀರನ್ನು ತಡೆದುಕೊಳ್ಳ ಬಲ್ಲುದು

ಕರಿವೆಣ್ಣನ್ - 120 ದಿನ

ಕರಿವೆಣ್ಣಲನ್/ಕರಿವೆಣ್ಣಲಿ - 120 ದಿನ, ಕಪ್ಪು ಬಣ್ಣದ ಕಾಳುಗಳು. ಉದ್ದನ ಮೂಗು

ಕರುತ್ತಚಾರ - 100 ದಿನ, ಕಪ್ಪು ಬಣ್ಣದ ಕಾಳುಗಳು

ಕರುತ್ತಚೇಟ್ಟಿಕೇರಂ - -

ಕರುತ್ತಮೈಲ - 85 ದಿನ

ಕುಂಜಿಒಡಿಯನ್ - 120 ದಿನ, ಬೀಳುವ ಸ್ವಭಾವವಿದ್ದರೂ ತಲೆಯೆತ್ತಿ ಬೆಳೆಯುವ ಗುಣ.

ಕೊಡುಂಗಲ್ಲೂರ್ ಕುರುವ - 95 ದಿನ, 10-25 ಪಟ್ಟು ಇಳುವರಿ.

ಜೀರಗ ಕುರುವ - 3 ತಿಂಗಳು

ಪುಂಜಕುಳಪ್ಪಾಲ - 4 ಅಡಿ 95-100 ದಿನಗಳು. ಬಿಳಿ ಬಣ್ಣದ ಕಾಳುಗಳು. ಬತ್ತಕ್ಕೆ ಒಳ್ಳೆಯ ಭಾರ

ಪುನ್ನಪುಂಜಕರಿಯನ್ - 80-85 ದಿನಗಳು, ಹೆಚ್ಚಾಗಿ ಕರೆನೆಲದಲ್ಲಿ ಕೃಷಿ ಮಾಡಲಾಗುತ್ತಿತ್ತು.

ವೆಳ್ಳಮೈಲ - 85 ದಿನಗಳು ಎಕ್ಕಲು/ಮೆಕ್ಕಲು ಮಣ್ಣು ಬೀಳುವಲ್ಲಿ ಚೆನ್ನಾಗಿ ಬೆಳೆಯುತ್ತದೆ. ಬಿಳಿ ಬಣ್ಣದ ಕಾಳುಗಳು.

ಇವುಗಳಲ್ಲದೆ ನವರ, ಚೆಂಬಾವ್, ಪೊಕ್ಕಾಳಿ, ತುಣಿಪ್ಪಾವ, ಕರುತ್ತ ಚುಟ್ಟಿಯಾರ್ಯನ್, ಪಡನ್ನವೆಳ್ಳ, ಕೊಚ್ಚುವಿತ್ತ್ ಮುಂತಾದ ದೇಸೀ ಬತ್ತದ ತಳಿಗಳನ್ನು ಕುಟ್ಟನಾಡಲ್ಲಿ ಕೃಷಿ ಮಾಡುತ್ತಿದ್ದುದಾಗಿ ತಿಳಿದು ಬರುತ್ತದೆ.

ವಯನಾಡನ್ ಬತ್ತದ ತಳಿಗಳು

ಎಡವಗ - ಕೀಟರೋಗ ಪ್ರತಿರೋಧದಲ್ಲಿ ಅದ್ವಿತೀಯ ತಳಿ. ಮನೆಯ ಮಾಡು ಹೊದೆಸಲು ಯೋಗ್ಯ

ಓವನ್‌ಪೂಜ - ಅಲ್ಪಕಾಲಾವಧಿ. ಮೂರನೇ ಬೆಳೆ (ಪುಂಜ)ಗೆ ಬಳಕೆ. ಬರವನ್ನು ತಡೆದು ನಿಲ್ಲುತ್ತದೆ. ಕಪ್ಪುಕಾಳುಗಳು.

ಕನಲ್ - 6 ತಿಂಗಳ ಕಾಲಾವಧಿ. ಕಪ್ಪುಕಾಳುಗಳು. 5 ಅಡಿ ಎತ್ತರ. ಗಂಜಿಗೆ ತುಂಬ ರುಚಿ, ವಯನಾಡನ್ ತಳಿಗಳಲ್ಲೆಲ್ಲ.

ಕರುತ್ತನ್ - ಕುಮರಿತಳಿ. 6-7 ತಿಂಗಳ ಕಾಲಾವಧಿ. ಕಪ್ಪು ಕಾಳುಗಳು

ಕಲ್ಲಡಿಯಾರನ್ - ಕೇರಳದ ಬೇರೆ ಕಡೆಗಳಿಂದ ಬಂದಿರಬಹುದಾದ ತಳಿ. 4 ತಿಂಗಳ ಕಾಲಾವಧಿ. ತುಂಬ ಎತ್ತರಕ್ಕೆ ಬೆಳೆಯದು. ಹೊಟ್ಟೆ ತುಂಬ ದಪ್ಪ (?)

ಕಲ್ಲೆಲ್ಲಿ - 5-6 ತಿಂಗಳು ಬೆಳವಣಿಗೆ. ಎತ್ತರಕ್ಕೆ ಬೆಳೆಯುತ್ತದೆ.

ಕುಟ್ಟಿವೆಳಿಯನ್ - ಬತ್ತ, ಅಕ್ಕಿಗಳು ಬಿಳಿಯವು. 4-5 ಅಡಿ ಎತ್ತರಕ್ಕೆ ಬೆಳೆಯುತ್ತದೆ.

ಗಂಧಕ ಶಾಲ - 5-6 ತಿಂಗಳ ಬೆಳವಣಿಗೆ. ಬಿಳಿಯ, ಸಣ್ಣ ಬತ್ತ ಮತ್ತು ಅಕ್ಕಿ. 5-5½ ಅಡಿ ಎತ್ತರಕ್ಕೆ ಬೆಳೆಯುತ್ತದೆ. ಗಂಧದ ಪರಿಮಳದ ಸುಗಂಧರಾಜ. ಇದರ ಗಂಜಿಗೆ ಹಾಲು ಗಂಜಿಯ ಯೋಗ್ಯತೆ. ಇದಕ್ಕೆ ತಂಬಾಯಿ (ದೈವ) ಕಂಞಿ ಎಂದು ಹೆಸರು. ಉಪ್ಪಿಟ್ಟು, ಬಿರಿಯಾನಿ, ತುಪ್ಪಶನ, ಫಲಾಹಾರಗಳಿಗೂ ಅತ್ಯುತ್ತಮ. ಇಳುವರಿ ಕಮ್ಮಿ. ಸದಾ ಬೆಲೆಬಾಳುವ ಬತ್ತ. ಇದನ್ನು ಬೆಳ್ತಿಗೆ ಅಕ್ಕಿಯಾಗಿಯೇ ಉಪಯೋಗಿಸಲಾಗುತ್ತದೆ. ರೋಗ ಪ್ರತಿರೋಧ ಶಕ್ತಿ ಕಡಿಮೆ. ರಾಸಾಯನಿಕ ಗೊಬ್ಬರದಿಂದ ಇದರ ಪರಿಮಳ ನಷ್ಟವಾಗುತ್ತದೆ.

ಚಣ್ಣ : 5-6 ತಿಂಗಳು ಬೆಳವಣಿಗೆ, ಸಣ್ಣ, ಕೆಂಪು ಕಾಳುಗಳು.

ಚೆಂದಾಡಿ : ನೆರೆ ನೀರನ್ನು, ರೋಗವನ್ನು ಎದುರಿಸುವ ಅಸಾಧಾರಣ ತಳಿ. ಒಂದು ತಿಂಗಳು ನೆರೆಯಲ್ಲಿ ನಿಂತರೂ ಕುಸಿಯದು. ಆತ್ತಿಗದ್ದೆಗಳಲ್ಲಿನ ಎರೆಹುಳುಗಳಿಗೆ ಕೂಡ ಇದರ ಬೇರುಗಳನ್ನು ಕಡಿಯಲು ಸಾಧ್ಯವಾಗುವುದಿಲ್ಲ. 51/2-6 ತಿಂಗಳ ಕಾಲಾವಧಿ; ಆರುಅಡಿ ಎತ್ತರಕ್ಕೆ ಬೆಳವಣಿಗೆ. ಕಾಳುಗಳಿಗೆ ಕಪ್ಪು ಬಣ್ಣ.

ಚೆಂಬತ್ತಿ : ಅಸಾಧಾರಣ ಕೆಂಬಣ್ಣದ ಕಾಳುಗಳು. ಗಿಡಗಳು ಹೆಚ್ಚು ಎತ್ತರಕ್ಕೆ ಬೆಳೆಯವು.

ಚೆನ್ನೆಲ್ಲ್ : ಇದೇ ಹೆಸರಿನ ಬೇರೆ ತಳಿಗಳಿಗಿಂತ ವಯನಾಡಿನದರ ಬತ್ತ ಹೆಚ್ಚು ಬಿಳಿಯದು. ಆರು ತಿಂಗಳ ಬೆಳವಣಿಗೆ. ಬೆಳೆ ಬೀಳುವ ಸ್ವಭಾವವುಳ್ಳದ್ದು. ರೋಗ ಪ್ರತಿರೋಧ ಶಕ್ತಿ ಕಡಿಮೆ.

ಚೇಟ್ಟುವೆಳಿಯನ್ : ಕೆಸರು ಗದ್ದೆಗಳಿಗೆ ಯೋಗ್ಯತಳಿ. ಏಳು ತಿಂಗಳ ಬೆಳವಣಿಗೆ. ಕೆಂಪು ಕಾಳುಗಳು. 5 ಅಡಿ ಎತ್ತರ. ಒಳ್ಳೆ ಇಳುವರಿ; ಅನ್ನಕ್ಕೆ ಒಳ್ಳೆಯ ರುಚಿ.

ಚೋಮಾಲ್ : ಹುಡಿಬಿತ್ತನೆ. $5^1/_2$-6 ತಿಂಗಳ ಬೆಳವಣಿಗೆ. ಬಿಳಿಯ ಸಣ್ಣಕಾಳು. ಅಕ್ಕಿಗೆ ಬಿಳಿ-ಕೆಂಪು ಮಿಶ್ರಿತ ಬಣ್ಣ. ಪರಿಮಳ ಇದೆ. ಎತ್ತರಕ್ಕೆ ಬೆಳೆಯುತ್ತದೆ. ಬೆಳೆ ಬೀಳುವ ಸ್ವಭಾವ. ರೋಗ ಪ್ರತಿರೋಧ ಮತ್ತು ಕಳೆಗಳನ್ನು ಮೀರಿ ಬೆಳೆವ ಸಾಮರ್ಥ್ಯ. ಅನ್ನ, ಪಾಯಸ, ತಿಂಡಿಗಳಿಗೆ ಯೋಗ್ಯ ಅಕ್ಕಿ.

ಜೀರಗಶಾಲ : ಜೀರಿಗೆ ಸುವಾಸನೆಯ ಉದ್ದದ, ಸಣ್ಣ ಅಕ್ಕಿ. 5-6 ತಿಂಗಳ ಬೆಳವಣಿಗೆ. 5-$5^1/_2$. ಎತ್ತರ ಬೀಳುವ ಸ್ವಭಾವ. ತುಪ್ಪಶನ, ಬಿರಿಯಾನಿಗಳಿಗೆ ಸೂಕ್ತ. ರೋಗಪ್ರತಿರೋಧಕ ಶಕ್ತಿಗಳು ಕಮ್ಮಿ. ಬತ್ತಕ್ಕೆ ಒಳ್ಳೆಯ ಬೆಲೆ.

ಜೀವಿ : 5 ತಿಂಗಳ ಬೆಳವಣಿಗೆ, ಬಿಳಿಯ ಸಣ್ಣ, ಉದ್ದದ ಅಕ್ಕಿ. 3-4 ಅಡಿ ಎತ್ತರ ಬೀಳುವುದಿಲ್ಲ. ಅಕ್ಕಿ ಸುವಾಸನಾಭರಿತ.

ತೊಂಡಿ: ಸುಮಾರು 6 ತಿಂಗಳ ಬೆಳವಣಿಗೆ. ಕೆಲವೊಮ್ಮೆ 7-8 ತಿಂಗಳು. ಪಾಲ್, ಪುನ್ನಾಡನ್, ಕೊಟ್ಟ, ಮರನೆಲ್, ವೆಳುತ್ತವಾಲ್, ಚೆನ್, ಮುಳ್ಳನ್, ತೊಣ್ಣೂರಾನ್ - ಇತ್ಯಾದಿ ಪ್ರಭೇದಗಳು. ಪಾಲ್ತೊಂಡಿಗೆ ಬಿಳಿ ಅಕ್ಕಿ. ಗಂಜಿ ಹಾಲಿನಂತಿರುತ್ತದೆ. ಹಾಲಿನದೆ ರುಚಿ. ಪುನ್ನಾಡನದು ದೊಡ್ಡ ಕಾಳುಗಳು. ಕೊಟ್ಟತೋಂಡಿಯ ಬತ್ತವೂ ಅಕ್ಕಿಯೂ ಕೆಂಪು.

ಪಾಲ್‌ವೆಳಿಯನ್ : ಬಣ್ಣಬಿಳಿಯದು. ಇದರ ಕುಟುಂಬದ ಇತರ ಗುಣಲಕ್ಷಣಗಳಿಲ್ಲ.

ಪೂತಾಡಿಕಟಮ : 6 ತಿಂಗಳ ಬೆಳವಣಿಗೆ. ಬಿಳಿ ಕೆಂಪು ಮಿಶ್ರಿತ ಅಕ್ಕಿ. ಎತ್ತರದ ಜಾತಿ. ಬೀಳುವ ಸ್ವಭಾವವಿದೆ. ಅನ್ನ, ಫಲಾಹಾರಗಳಿಗೆ ಒಳ್ಳೆಯ ರುಚಿ. ರೋಗಪ್ರತಿರೋಧ ಶಕ್ತಿ ಹೆಚ್ಚು.

ಪೊನ್ನರಿಮಾಲ :ದಕ್ಷಿಣದಿಂದ ಬಂದ ವಲಸೆಗಾರರು ತಂದ ತಳಿ. ಕುಮರಿ ಬೇಸಾಯ ಯೋಗ್ಯ. ಬಿಳಿಕಾಳು. ಅಲ್ಪಾವಧಿ.

ಮಣ್ಣುವೆಳಿಯನ್ : ಕೆಂಪು ಬತ್ತ, ಬಿಳಿ ಅಕ್ಕಿ, ಪೊಂದಿವೆಳಿಯನ್ ಎಂಬ ಇನ್ನೊಂದು ತಳಿಯೂ ಇದೆ.

ಮಲ್ಲಿಕ್ಕುರುವ :ಬಿಳಿ ಬಣ್ಣ, ಕಡಿಮೆ ಕಾಲಾವಧಿ, ಎತ್ತರವೂ ಕಡಿಮೆ, ಇದೂ ವಲಸೆ ತಳಿ ಇರಬಹುದು.

ಮುಳ್ಳಚಣ್ಣ : 5-6ತಿಂಗಳ ಬೆಳವಣಿಗೆ. ಕಪ್ಪು-ಬಿಳುಪು ಪ್ರಭೇದವಿದೆ. ಪರಿಮಳವಿದೆ.

ವಾಳಿಚ್ಚ : ಸುಮಾರು ಏಳು ತಿಂಗಳ ಬೆಳವಣಿಗೆ. ಕಪ್ಪು ಮಿಶ್ರಿತ ಬಣ್ಣ. ಸಣ್ಣ ಮುಳ್ಳುಗಳಿವೆ.

ವೆಳಿಯನ್ : 6 ತಿಂಗಳ ಬೆಳವಣಿಗೆ. ಬಿಳಿ ಬತ್ತ, ಕೆಂಪು ಅಕ್ಕಿ 'ವಾಳಿಚ್ಚ' ಪದ್ಧತಿಗೆ ಬಳಕೆ. ಟಿಸಿಲೊಡೆದು ಬೆಳೆಯುತ್ತದೆ. ಎತ್ತರಕ್ಕೆ ಬೆಳೆಯುತ್ತದೆ. ಬೀಳುವ ಸ್ವಭಾವವಿದೆ. ಬೈಹುಲ್ಲು ಮಾಡು ಹೊದೆಸಲು ಯೋಗ್ಯವಾದುದು. ಒಳ್ಳೆ ಪ್ರತಿರೋಧ ಶಕ್ತಿ ಇದೆ. ಇತರ ಬತ್ತಗಳಿಗಿಂತ ಭಾರ ಹೆಚ್ಚು. ಅನ್ನಕ್ಕೆ ತುಂಬ ಶಕ್ತಿ (ಉರಂ.ಮ)

ವೆಳುಂಬಾಲ : ಆರು ತಿಂಗಳ ಬೆಳವಣಿಗೆ. ಉದ್ದ, ಸಪುರ ಕಾಳುಗಳು. ಬತ್ತ, ಅಕ್ಕಿ-ಬಿಳಿಯವು. ಒಳ್ಳೆಯ ಪರಿಮಳವಿದೆ. ಗಂಜಿ, ಫಲಾಹಾರಗಳಿಗೆ ಅತ್ಯುತ್ತಮ. ಇಳುವರಿ ಕಡಿಮೆ. ಕಾಡಾನೆಗಳಿಗೆ ತುಂಬ ಪ್ರಿಯವಾದ ಬತ್ತ. ಬಯಲಿನ ಮಧ್ಯದಲ್ಲಿದ್ದರೂ ಆನೆಗಳು ಹುಡುಕಿ ಬಂದು ತಿಂದಾವು.

ಅಡುಕ್ಕನ್, ಮುಂಡಕನ್, ಚೆರುಕಣಿ,ಕೊಚ್ಚುವಿತ್, ವಲಿಚ್ಚೂರಿ, ಓಣಾಟ್ಟನ್, ರಾಜಮೇನಿ, ಚೆರುಪುಂಜ ಮುಂತಾದ ಇತರ ತಳಿಗಳನ್ನು ಇಲ್ಲಿ ಬೆಳೆಯಲಾಗುತ್ತದೆ. ಕೋದಾಂಡನ್ ಎಂಬೊಂದು ತಳಿಯ ಬಗ್ಗೆ ಪ್ರಸ್ತಾಪವಿದ್ದರೂ ಅದರ ಬಗೆಗೆ ಹೆಚ್ಚು ವಿವರಗಳು ತಿಳಿದು ಬಂದಿಲ್ಲ.

ಒಟ್ಟಿನಲ್ಲಿ ಸುಮಾರು ಒಂದು ಶತಮಾನದ ಹಿಂದಿನ ಕೇರಳದ ಬತ್ತ ಕೃಷಿಯ ದೇಸೀ ತಳಿಗಳ ಒಂದು ಸ್ಥೂಲ ಚಿತ್ರವು ಈ ಮಾಹಿತಿಗಳಿಂದ ಮೂಡುತ್ತದೆ. ಕಾಲ ಬದಲಾಯಿಸಿದಂತೆ ಬತ್ತ ಕೃಷಿಯ ಉತ್ಸಾಹ, ಶ್ರದ್ಧೆ, ಅಗತ್ಯಗಳು ಬದಲಾಗಿದೆ.

ಆಕರಗಳು

ಕೃಷಿ ಮಲಯಾಳಂ : ಅಕ್ಷರ ಸಂಸ್ಕೃತಿ, ಪಾಲಮೃತ್ ಇಲ್ಲಂ, ಕಣ್ಣೂರು

ಕಾರ್ಷಿಕ ವಿಜ್ಞಾನಂ - ಸಂ. ೨ (ಧಾನ್ಯವಿಳಗಳ್) ಕೇರಳ ಭಾಷಾ ಇನ್ಸ್‌ಸ್ಟಿಟ್ಯೂಟ್

ಕೆ.ಕೆ.

ಕೇರಳದ ಭೂಸ್ವರೂಪ ಮತ್ತು ಕೃಷಿ ಪೂರ್ವದಲ್ಲಿ ಪಶ್ಚಿಮ ಘಟ್ಟಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ (ಲಕ್ಷದ್ವೀಪ ಸಮುದ್ರ), ದಕ್ಷಿಣಕ್ಕೆ ತಮಿಳುನಾಡಿನ ಕನ್ಯಾಕುಮಾರಿ, ಉತ್ತರಕ್ಕೆ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಗಳು ಮೇರೆಯಾಗಿರುವ ರಾಜ್ಯ ಕೇರಳ. ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರದ ನಡುವೆ ತೀರ ಕಡಿಮೆ ಅಗಲವಿದ್ದುಒಟ್ಟು 38,863 ಚ.ಕಿ.ಮೀ. ವಿಸ್ತೀರ್ಣವಿದೆ. ವರ್ಷದಲ್ಲಿ ಸರಾಸರಿ ಸು. 3000 ಮೀ. ಮಳೆ, ಒಳ್ಳೆಯ ಬಿಸಿಲು,ಲಘು ಚಳಿಗಾಲ. ಕೇರಳವನ್ನು ಸ್ಥೂಲವಾಗಿ ಮಲೆನಾಡು,

ಕ್ರಮ ಸಂಖ್ಯೆ	ವಲಯ	ವಿಸ್ತಾರ ಚ.ಕಿ.ಮೀ.	ಶೇಕಡ	ಮಣ್ಣಿನ ಸ್ವರೂಪ	ಪ್ರದೇಶ	ಮುಖ್ಯ ಬೆಳೆಗಳು
1.	ಓಣಾಟ್ಟುಕ್ಕರ	519	1.6	ಸ್ಯಾಂಡಿ ಲೋಂ	ಕೊಲ್ಲಂ–ಹರಿಪ್ಪಾಡ್	ಬತ್ತ, ತೆಂಗು, ಮರಗೆಣಸು, ಅಡಕೆ
2.	ಕರಾವಳಿ ಮರಳು	1564	4.8	ಸ್ಯಾಂಡಿ ಲೋಂ	ಅಂಬಲಪುವಿ–ವೈಕಂಗಳ ಮತ್ತು ಎರ್ನಾಕುಲಂ–ಪೊನ್ನಾನಿಗಳ ಮಧ್ಯೆ	ಬತ್ತ, ತೆಂಗು
3.	ದಕ್ಷಿಣದ ನಡುನಾಡು	3224	10	ಲ್ಯಾಟರೈಟ್ (ಚೆಂಬಿಟ್ಟಿಗೆ–ಹೊರೇಯ್ನ್ ಇಲ್ಲದ್ದು)	ತಿರುವನಂತಪುರಂನಿಂದ ಚೆರುತ್ತುರುತ್ತಿಯವರೆಗೆ	ತೆಂಗು, ಬತ್ತ, ಮರಗೆಣಸು, ಅಡಕೆ
4.	ಮಧ್ಯದ ನಡುನಾಡು	2666	8.2	ಲ್ಯಾಟರೈಟ್	ಪಂಬಕ್ಕಡದಿಂದ ಒಟ್ಟಪ್ಪಾಲಂವರೆಗೆ	ತೆಂಗು, ಬತ್ತ, ಮರಗೆಣಸು ಅಡಕೆ, ಬಾಳೆ
5.	ಉತ್ತರದ ನಡುನಾಡು	3765	11.6	ಲ್ಯಾಟರೈಟ್	ಪಂದಲಾಯಿನಿಯಿಂದ ಪಯ್ಯನ್ನೂರು ವರೆಗೆ	ತೆಂಗು, ಬತ್ತ, ಅಡಕೆ
6.	ಉತ್ತರದ ನಡುನಾಡು (ಮಲಪ್ಪುರಂ)	4524	13.1	ಲ್ಯಾಟರೈಟ್ (ಹೊರೇಯ್ನ್ ಇಲ್ಲದ್ದು)	ತಿರೂರ್‌ನಿಂದ ಮಂಜೇಶ್ವರ ವರೆಗೆ	ಬತ್ತ, ತೆಂಗು, ಗೋಡಂಬಿ, ಅಡಕೆ
7.	ಹೈಲ್ಯಾಂಡ್ಸ್	8861	27.4	ಲ್ಯಾಟರೈಟ್	ಪೆರುಂಗಡವಿಳದಿಂದ ವಂಡೂರ್‌ವರೆಗೆ	ರಬ್ಬರ್, ತೆಂಗು, ಕಾಳುಮೆಣಸು, ಬತ್ತ
8.	ಪಾಲ್ಘಾಟ್	1280	3.9	ರೆಡ್ ಲೋಂ	ಪಾರಶಾಲ, ಆಲತ್ತೂರು ಮತ್ತು ಪಾಲ್ಘಾಟುಗಳ ಮಧ್ಯೆ	ರಬ್ಬರ್, ತೆಂಗು, ಕಡಲೆ (ನೆಲಗಡಲೆ) ಪರುಷ ಧಾನ್ಯಗಳು (Rough grain)
9.	ರೆಡ್‌ಲೋಂ	317	1	ರೆಡ್‌ಲೋಂ	ನೇರಂ, ಪಾರಶಾಲ ಪ್ರದೇಶ	ತೆಂಗು, ಮರಗೆಣಸು, ಬತ್ತ
10.	ಚಿಟ್ಟೂರು ಬ್ಲಾಕ್	508	1.6	ಕಪ್ಪು ಮಣ್ಣು	ಚಿಟ್ಟೂರು–ಕೊಲ್ಲಂಗೋಡು ಪ್ರದೇಶ	ಬತ್ತ, ಕಬ್ಬು, ಹತ್ತಿ ಕಡಲೆ (ನೆಲಕಡಲೆ)
11.	ಕುಟ್ಟನಾಡು	284	0.9	ಪೀಟ್ (ಸುಡು ಮಣ್ಣು)	ಚಂಬಂಗುಳಂ–ಪುಳಿಂಗೀಟ್ ಪ್ರದೇಶ	ಬತ್ತ, ತೆಂಗು
12.	ರಿವರ್ ಬ್ಯಾಂಕ್ ಅಲ್ಲೂವಿಯಂ	–	–	ಅಲ್ಲೂವಿಯಂ	ಅವೀದಾ–ದೇವಿಕುಳಂ	ಬತ್ತ, ತೆಂಗು, ಕಬ್ಬು, ಅಡಕೆ
13.	ಹೊರೇಂಜಸ್	5140	15.9	ರೆಡ್‌ಲೋಂ	ಅಟ್ಟಪ್ಪಾಡಿ, ಮಾನಂತವಾಡಿ	ಚಹಾ, ಕಾಫಿ, ಏಲಕ್ಕಿ

(Report of the committee on Agro-climatical zones & Cropping pattern- Dept. of Agriculture (1974 April))

ಎಡೆನಾಡು, ಕರಾವಳಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಿಕೊಳ್ಳಬಹುದು. ಕೇರಳದ ಒಟ್ಟು ವಿಸ್ತೀರ್ಣದಲ್ಲಿ ಅರ್ಧ ಪಾಲು ಮಲೆನಾಡು. ಮಲೆನಾಡು ಕೃಷಿಯ ಜೀವನಾಡಿ ಕೂಡ.

ಕೇರಳದ ಕೃಷಿ ಇಲಾಖೆಯು ಒಂದು ವರದಿಯಲ್ಲಿ ಕೇರಳವನ್ನು ಒಟ್ಟು ಹದಿಮೂರು 'ಕೃಷಿ - ಹವಾಮಾನ ವಲಯ'ಗಳಾಗಿ ವಿಂಗಡಿಸಿದೆ. ಸಮುದ್ರ ಮಟ್ಟದಿಂದ ಇರುವ ಎತ್ತರ, ಮಳೆಯ ಪ್ರಮಾಣ, ಮಣ್ಣಿನ ಸ್ವರೂಪ, ಭೂಮಿಯ ಸ್ವರೂಪ (Topography) ಈ ನಾಲ್ಕು ಘಟಕಗಳನ್ನು ತಳಹದಿಯಾಗಿಟ್ಟುಕೊಂಡು ಈ ವಿಭಾಗಗಳನ್ನು ಮಾಡಲಾಗಿದೆ.

ಕೇರಳದ ಮಣ್ಣಿನ ವಿಧಗಳು

ಅ. ಜಂಬಿಟ್ಟಿಗೆ ಮಣ್ಣು (ಲ್ಯಾಟರೈಟ್ ಸಾಯಿಲ್) : ಇದು ಕೇರಳದಲ್ಲಿ ಅತಿ ಹೆಚ್ಚಾಗಿ ಕಂಡು ಬರುವ ಮಣ್ಣಿನ ವಿಧ. ಸಾವಯವ ಅಂಶ ಮತ್ತು ಜಲ ಸಂಗ್ರಹಣಾ ಸಾಮರ್ಥ್ಯವು ಈ ಮಣ್ಣಿಗೆ ಕಡಿಮೆ. ಫಲವತ್ತಾದ ಮಣ್ಣು ಅಲ್ಲ. ಕೃಷಿಗೆ ತುಂಬ ಯೋಗ್ಯವಾದುದೇನೂ ಅಲ್ಲ. ಆದರೆ ಗೊಬ್ಬರ ಹಾಕಿ ಕೃಷಿಗೆ ಯೋಗ್ಯವಾಗುವಂತೆ ಮಾಡಿಕೊಳ್ಳಬಹುದು. ಹವಾಗುಣಕ್ಕೆ ತುಂಬ ತೆರೆದು ಕೊಂಡದ್ದರಿಂದ ಈ ಮಣ್ಣಿನ ಸಾವಯವ ಅಂಶವು ಕಡಿಮೆಯಾಗಿ ಜಂಬಿಟ್ಟಿಗೆಯಾಗಿ ಮಾರ್ಪಟ್ಟಿದೆ.

ಆ. ಅರಣ್ಯದ ಮಣ್ಣು (ಫಾರೆಸ್ಟ್‌ಲೋಮ್) : ಕಾಡುಗಳಿರುವೆಡೆ ಸಾಮಾನ್ಯವಾಗಿ ಕಾಣಸಿಗುವ ಈ ಮಣ್ಣಿನಲ್ಲಿ ಸಾವಯವ ಅಂಶಗಳು ಅಧಿಕವಾಗಿರುತ್ತವೆ. ಮರ ಗಿಡಗಳ ಅವಶೇಷಗಳು ಮಣ್ಣಿನಲ್ಲಿ ಬೆರೆತು ಸಾವಯವ ಅಂಶ ಹೆಚ್ಚಿದೆ. ಈ ಮಣ್ಣಿನಲ್ಲಿ ಸಾರಜನಕ ಮತ್ತು ಲವಣಾಂಶ ಹೆಚ್ಚು. ಜಂಬಿಟ್ಟಿಗೆಯ ಬಳಿಕ ಕೇರಳದಲ್ಲಿ ಹೆಚ್ಚಿನ ಕಡೆ ಕಾಣಸಿಗುವ ಮಣ್ಣು ಇದು.

ಇ. ರೇವೆಮಣ್ಣು / ಮೆಕ್ಕಲು ಮಣ್ಣು (ಅಲ್ಯೂವಿಯಲ್ ಸಾಯಿಲ್): ಹೊಳೆಗಳು ಸಾಗಿಸಿ ತಂದ ಮೆಕ್ಕಲು ಮಣ್ಣು ನದಿಗಳ ಮುಖಜ ಭೂಮಿಗಳಲ್ಲಿ ಸಂಗ್ರಹವಾಗಿ ಈ ರೀತಿಯ ಮಣ್ಣು ಉಂಟಾಗುತ್ತದೆ. ಸಾವಯವ ಅಂಶ ಹಾಗೂ ಜಲ ಸಂಗ್ರಹಣ ಸಾಮರ್ಥ್ಯ ಹೆಚ್ಚಾಗಿರುವ ಈ ಮಣ್ಣು ಫಲವತ್ತತೆಯಿಂದ ಕೂಡಿದೆ. ನದೀತೀರ ಹಾಗೂ ಜಲಾಶಯಗಳಲ್ಲಿ (ಕುಟ್ಟನಾಡು, ಜವುಗು ಪ್ರದೇಶ) ಕಂಡು ಬರುವ ಇದರಲ್ಲಿ ಸಾರಜನಕ ಹಾಗೂ ಪೊಟ್ಯಾಷ್ ಅಧಿಕವಾಗಿದ್ದು ಆಮ್ಲೀಯ ಗುಣವುಳ್ಳದ್ದಾಗಿದೆ.

ಈ. ಕೆಮ್ಮಣ್ಣು (ರೆಡ್ ಲೋಮ್) : ಈ ಮಣ್ಣು ಆವೆ ಮಣ್ಣು ಮತ್ತು ಮರಳಿನ ಮಿಶ್ರಣವಾಗಿದೆ. ಕೆಮ್ಮಣ್ಣಿನ ಜಲರಹಿತ ಫೆರಿಕ್ಸ್ ಆಕ್ಸೈಡ್‌ನ (anhydrous ferrie oxide) ಇರುವಿಕೆ ಅದಕ್ಕೆ ಕೆಂಬಣ್ಣವನ್ನು ನೀಡುತ್ತದೆ.

ಉ. ಕರಿಮಣ್ಣು (ಪಿಯಟಿಸಾಯಿಲ್) : ಅತಿ ಹೆಚ್ಚು ಸಾವಯವ ಅಂಶಗಳು ಈ ಮಣ್ಣಿನಲ್ಲಿದ್ದು ಕಪ್ಪು ಬಣ್ಣವನ್ನು ಹೊಂದಿದೆ. ಈ ಮಣ್ಣಿನಲ್ಲಿ ನೀರಿನ ತೇವವು ಬತ್ತಿ ಹೋಗುವುದು ತುಂಬ ನಿಧಾನ. ವಾಯು ಸಂಚಾರ ಕೂಡ ಹಾಗೆಯೇ. ಆಮ್ಲೀಯ ಅಂಶ ಅಧಿಕವಾಗಿದ್ದು ಮಣ್ಣಿನಲ್ಲಿ ಪೂರ್ತಿಲೀನವಾಗದ ಮರದ ಅವಶೇಷಗಳು (ಮ. ಕಾಂಡಾ ಮರಂಬಿಳ್) ಈ ಮಣ್ಣಿನ ವೈಶಿಷ್ಟ್ಯ. ಇಂಥ ಮಣ್ಣಿನ ಪ್ರದೇಶಗಳನ್ನು 'ಕರಿನೆಲಗಳು' ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ವೈಕ್ಕಂ, ಅಂಬಲಪುಯ, ಚೇರ್ತಲ, ವೆಚ್ಚೂರ್, ಪೊನ್ನಾನಿ ಮುಂತಾದೆಡೆಗಳಲ್ಲಿ ಕರಿನೆಲಗಳು ಧಾರಾಳ ಕಂಡುಬರುತ್ತವೆ. ಕರಿನೆಲಗಳಲ್ಲಿ ಇಳುವರಿ ಕಡಿಮೆ.

ಊ. ಕಪ್ಪು ಹತ್ತಿ ಮಣ್ಣು (ಬ್ಲಾಕ್ ಕಾಟನ್ ಸಾಯಿಲ್) : ಹೆಚ್ಚು ತೇವಾಂಶವನ್ನು ಹಿಡಿದಿಡಬಲ್ಲ ಮತ್ತು ಕ್ಷಾರಗುಣವುಳ್ಳ ಮಣ್ಣು. ಚಿಟ್ಟೂರ್, ಪಾಲ್ಘಾಟ್ ತಾಲ್ಲೂಕುಗಳಲ್ಲಿ ಈ ಮಣ್ಣು ಕಾಣಸಿಗುತ್ತದೆ.

ಋ. ಮರಳು ಮಣ್ಣು (ಸ್ಯಾಂಡಿ ಸಾಯಿಲ್) : ಕರಾವಳಿ ತೀರಗಳಲ್ಲಿ ಕಂಡುಬರುವ ಈ ಮಣ್ಣಿನಲ್ಲಿ ಹೆಚ್ಚು ರಂಧ್ರಗಳಿರುವ ಕಾರಣ ಜಲಸಂಗ್ರಹಣ ಸಾಮರ್ಥ್ಯ ಕಡಿಮೆ. ಆಮ್ಲೀಯ ಗುಣವುಳ್ಳ ಇದು ಕರಾವಳಿ ಪ್ರದೇಶದಲ್ಲಿ ಕಂಡುಬರುತ್ತಿದ್ದು ಆವೆ ಮಣ್ಣು ಹಾಗೂ ಸಾವಯವ ಅಂಶಗಳು ಇದರಲ್ಲಿ ಇಲ್ಲದಿರುವುದರಿಂದ ಫಲವತ್ತತೆ ಕಡಿಮೆ. ಗೊಬ್ಬರ ನೀಡಿ ತೆಂಗಿನ ಕೃಷಿಯನ್ನು ಚೆನ್ನಾಗಿ ಮಾಡಲು ಈ ಮಣ್ಣು ಯುಕ್ತವಾಗಿದೆ.

ನದಿಗಳು ಹಾಗೂ ಜಲಾಶಯಗಳ ತೀರಗಳು : 600 ಕಿ.ಮೀ.ಗಿಂತಲೂ ಕಡಿಮೆ ಉದ್ದವಿರುವ ಕೇರಳದಲ್ಲಿ ಪೂರ್ವ ಹಾಗೂ ಪಶ್ಚಿಮಕ್ಕೆ ಹರಿಯುವ ಒಟ್ಟು ನಲವತ್ತನಾಲ್ಕು ಹೊಳೆಗಳು ಅವುಗಳ ಪೋಷಕ ಹೊಳೆಗಳೂ ಇವೆ. ಅವುಗಳಲ್ಲಿ ಸು. ಮೂವತ್ತರಷ್ಟು ಹೊಳೆಗಳು ನೂರು ಕಿ.ಮೀ.ಗಳಿಗಿಂತಲೂ ಕಡಿಮೆ ಉದ್ದ ಇವೆ. ಈ ಎಲ್ಲ ಹೊಳೆಗಳು ಕೃಷಿಗೆ ಬಹಳಷ್ಟು ನೆರವು ನೀಡುತ್ತವೆ. ಮಲೆನಾಡಿನ ಕಾಡುಗಳಿಂದ ಹ್ಯೂಮಸ್ (ವನಸ್ಪತಿ, ಪ್ರಾಣಿಗಳು ಕೊಳೆತು ರೂಪಾಂತರಗೊಂಡದ್ದು), ಗುಡ್ಡ ಗಾಡಿನ ಮೆಕ್ಕಲುಗಳನ್ನು ಹೊಳೆಗಳು ವರ್ಷಂಪ್ರತಿ ಸಾಗಿಸಿ ತೀರ ಪ್ರದೇಶಗಳಲ್ಲಿ ಸಂಚಯನಗೊಳ್ಳುತ್ತವೆ. ಇದು ಮಣ್ಣನ್ನು ನವೀಕರಿಸಿ ಕೃಷಿ ಯೋಗ್ಯವನ್ನಾಗಿ ಮಾಡುತ್ತದೆ. ಬತ್ತ, ತೆಂಗು, ಕಂಗು, ಬಾಳೆ ಮೊದಲಾದವು ಇಲ್ಲಿಯ ಪ್ರಧಾನ ಬೆಳೆಗಳು. ದಟ್ಟವಾದ ಕಾಡುಗಳು, ಗೊಬ್ಬರ ಯುಕ್ತ ಮಣ್ಣು, ಫಲವತ್ತಾದ ಬಯಲು ಹೆಚ್ಚಾಗಿ ನದೀತೀರಗಳಲ್ಲಿ ಕಾಣಸಿಗುತ್ತದೆ.

ಸಮುದ್ರ ತೀರಕ್ಕೆ ಸಮಾನಾಂತರವಾಗಿ ಜಲಾಶಯಗಳ ಒಂದು ಶೃಂಖಲೆಯೇ ಕೇರಳದಲ್ಲಿ ಕಾಣಸಿಗುತ್ತದೆ. ಹೆಚ್ಚಿನ ಹೊಳೆಗಳು ಹರಿದು ಬಂದು ಇವನ್ನು ಸೇರುತ್ತವೆ. ಹೊಳೆ ಹಾಗೂ ಈ ಜಲಾಶಯಗಳು ಅನೇಕ ಜೀವ ಜಾಲಗಳ ವಾಸಸ್ಥಾನವೂ ಆಗಿವೆ. ಆಳ ಕಡಿಮೆಯಿರುವ ಜಲಾಶಯಗಳ ನೀರನ್ನು ಪ್ರಯತ್ನ ಪೂರ್ವಕವಾಗಿ ಇಂಗಿಸಿ ಕೃಷಿ ಯೋಗ್ಯವಾಗಿ ಮಾಡಿಕೊಂಡು ಸಾಹಸಿಗಳಾದ ಜನ ಬೆಳೆಗಳನ್ನು ಬೆಳೆಯುತ್ತಾರೆ. ಇಂಥ ಜಲಾಶಯಗಳ ತಳದಲ್ಲಿ ಸಂಗ್ರಹವಾಗುವ ಮೆಕ್ಕಲು ಮಣ್ಣು ಬತ್ತದ ಕಣಜವಾಗಿ ಮಾರ್ಪಾಡಾಗಿ ಬಿಡುತ್ತದೆ.

ಎಡೆನಾಡು ಮತ್ತು ಬಯಲು ಕೃಷಿ : ಸಹಜವಾಗಿಯೇ ಈ ಪ್ರದೇಶಗಳು ಸಮತಲವಾಗಿದ್ದು ಅಲ್ಲಲ್ಲಿ ಚದುರಿಕೊಂಡಂತೆ ಸಣ್ಣಪುಟ್ಟ ಗುಡ್ಡ ಬೆಟ್ಟಗಳನ್ನು ಮಧ್ಯ ಮಧ್ಯ ಹೊಂದಿವೆ. ಇದನ್ನು ಎಡೆನಾಡು ಎಂದು ಹೆಸರಿಸಲಾಗಿದೆ. ಇದು ಕೇರಳದ ಕೃಷಿ ಅರ್ಥವ್ಯವಸ್ಥೆಯ ಹೃದಯ ಭಾಗ. ಬತ್ತ, ತೆಂಗು, ಅಡಕೆ ಮುಂತಾದುವು ಎಡೆನಾಡಿನ ಪ್ರಧಾನ ಬೆಳೆಗಳು. ಶುಂಠಿ, ಕರಿಮೆಣಸು, ಮರಗೆಣಸು, ಅರಿಸಿನಗಳನ್ನು ಕೂಡ ಬೆಳೆಯಲಾಗುತ್ತದೆ.

ಮಧ್ಯ ಕೇರಳ, ದಕ್ಷಿಣ ಮಲಬಾರ್ ಹಾಗೂ ಮಧ್ಯ ತಿರುವಾಂಕೂರಿನಲ್ಲಿ ಎಡೆನಾಡು ಹೆಚ್ಚು ಅಗಲವಾಗಿದೆ. ಆದುದರಿಂದಲೇ

ತುಂಬ ವಿಸ್ತಾರವಾದ ಬತ್ತದ ಬಯಲುಗಳು ಇಲ್ಲಿ ಕಾಣಸಿಗುತ್ತವೆ. ಉತ್ತರ ಮಲಬಾರಿ ಕೋರ ಹೊಳೆಗಿಂತ ಬಡಗು ಭಾಗಕ್ಕೆ ಪಶ್ಚಿಮ ಘಟ್ಟ ಮತ್ತು ಸಮುದ್ರಗಳ ಮಧ್ಯದ ಅಂತರ ಕಡಿಮೆ ಇರುವುದರಿಂದ ಇಲ್ಲಿ ಎಡೆನಾಡಿನ ಅಗಲವೂ ಕಡಿಮೆಯಾಗುತ್ತದೆ. ಗುಡ್ಡ ಬೆಟ್ಟಗಳ ನಡುವೆ ಅಲ್ಲಲ್ಲಿ ಚದುರಿ ಹೋದಂತೆ ಬಯಲುಗಳು ಕಾಣಸಿಗುವುದರಿಂದ ಈ ಭಾಗದಲ್ಲಿ ವಿಸ್ತಾರವಾದ ಬಯಲುಗಳು ತುಂಬ ವಿರಳ. ಇಲ್ಲಿಯ ಮಣ್ಣು ಮರಳು ಮಿಶ್ರಿತವಾಗಿರುವುದರಿಂದ ಇತರ ಭಾಗಗಳಿಗಿಂತ ಫಸಲಿನ ವ್ಯತ್ಯಾಸ ಕಡಿಮೆಯೆಂದೇ ಹೇಳಬಹುದು.ಉದ್ದ ಕಡಿಮೆಯಿದ್ದರೂ ಸಂಖ್ಯೆಯಲ್ಲಿ ಹೊಳೆಗಳು ಅಧಿಕವಿರುವುದರಿಂದ ಈ ಬಯಲುಗಳು ಕೃಷಿಗೆ ಅನುಕೂಲಕರವಾಗಿವೆ. ಎಡೆನಾಡಿನ ಗುಡ್ಡಗಳಲ್ಲಿ ಕುಮರಿ ಬೇಸಾಯ ಪದ್ಧತಿ ಕಾಲ ಸರಿದಂತೆ ಹೆಚ್ಚು ಮರೆ ಸರಿದಿದೆ.

ಆಕರ : ಕೇರಳತ್ತಿಂಡೆ ಕಾರ್ಷಿಕ ಭೂಮಿಶಾಸ್ತ್ರಂ - ಲೇಖಕ ಸಿ.ಕೆ. ಸುಜಿತ್ ಕುಮಾರ್

ಕೆ.ಕೆ.

ಕೇರಳದ ಮರಗೆಣಸು ಕೃಷಿ ಮರಗೆಣಸು ಯುಫೋರ್ಬಿಯೇಸಿ ಸಸ್ಯ ಕುಟುಂಬದಲ್ಲಿ ಮಾನಿಹೋಸ್ಟ್ ಎಸ್ಕುಲೆಂಟ್ ಎಂಬ ಸಸ್ಯಶಾಸ್ತ್ರೀಯ ಹೆಸರಿನಿಂದ ಕರೆಯಲ್ಪಡುವ ಸಸ್ಯ. ಉಷ್ಣವಲಯದಲ್ಲಿ ವಾಸಿಸುವ ಸುಮಾರು ಐನೂರು ದಶಲಕ್ಷ ಜನರಿಗೆ ಮರಗೆಣಸು ಒಂದು ಪ್ರಧಾನ ಶಕ್ತಿ /ಚೈತನ್ಯಮೂಲವಾಗಿದೆ. ಭಾರತದಲ್ಲಿ ಬೆಳೆಯುವ ಗೆಣಸುವರ್ಗದಲ್ಲಿ ಕೃಷಿಗೆ ಬಳಕೆಯಾಗುವ ಒಟ್ಟು ಜಾಗ, ಒಟ್ಟು ಉತ್ಪಾದನೆ ಮುಂತಾದ ವಿಚಾರಗಳಲ್ಲಿ ಮರಗೆಣಸು ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. ಕೇರಳವು ಮರಗೆಣಸು ಬೆಳೆಯುವುದರಲ್ಲೂ ಮುಖ್ಯರಾಜ್ಯವೆಂಬ ಗೌರವಕ್ಕೆ ಪಾತ್ರವಾಗಿದೆ. ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿ ಕೇರಳದಲ್ಲಿ ನೆಲೆಯೂರಿದ್ದ ಪೋರ್ಚುಗೀಸ್ ವ್ಯಾಪಾರಿಗಳು ಬ್ರೆಜಿಲ್ ದೇಶದಿಂದ ಇದನ್ನು ಅಲ್ಲಿಗೆ ತಂದುಕೊಟ್ಟರು. ಬಹುಕಾಲ ಇದಕ್ಕೆ ಹಿಂದಿನ 'ತಿರುವಾಂಕೂರು' ಸಂಸ್ಥಾನದಲ್ಲಿ ಪ್ರಚಾರ ಸಿಗಲಿಲ್ಲ. ವಿಶಾಖಂ ತಿರುನಾಳ್ ರಾಮವರ್ಮ (1850-85) ಮಹಾರಾಜನ ಕಾಲದಲ್ಲಿ ಜನಪ್ರಿಯವಾಯಿತು. ಅರಮನೆಯ ಹಿತ್ತಿಲಲ್ಲಿ ಮರಗೆಣಸನ್ನು ಬೆಳೆಯಿಸಿ ಸ್ವತಃ ತಾನು ತಿಂದು ನೋಡಿದ ಬಳಿಕ ರಾಮವರ್ಮ ತನ್ನ ರಾಜ್ಯದ ಕೃಷಿಕರು ಅದನ್ನು ವ್ಯಾಪಕವಾಗಿ ಬೆಳೆಯುವಂತೆ ಆಜ್ಞೆ ಹೊರಡಿಸಿದನಂತೆ.

1982ರಲ್ಲಿ ಎರಡು ಲಕ್ಷ ಎಪ್ಪತ್ತಮೂರು ಸಾವಿರದ ನಾನ್ನೂರ ಎಪ್ಪತ್ತು (273471) ಹೆಕ್ಟೇರ್ ಪ್ರದೇಶದಲ್ಲಿ ನಲವತ್ತು ಲಕ್ಷ ಐವತ್ತೆಂಟು ಸಾವಿರದ ಇನ್ನೂರು ಟನ್ ಮರಗೆಣಸನ್ನು ಕೇರಳದಲ್ಲಿ ಉತ್ಪಾದಿಸಲಾಯಿತು. 2001-2002ರಲ್ಲಿ ಒಟ್ಟು ಮರಗೆಣಸು ಕೃಷಿ ಭೂಮಿಯ ವಿಸ್ತೀರ್ಣವು ಒಂದು ಲಕ್ಷ ಹನ್ನೊಂದು ಸಾವಿರದ ನೂರ ತೊಂಬತ್ತು ಹೆಕ್ಟೇರ್ ಆಗಿತ್ತು. ಉತ್ಪಾದನೆಯು ಇಪ್ಪತ್ತನಾಲ್ಕು ಲಕ್ಷ ಐವತ್ತೈದು ಸಾವಿರದ ಎಂಟುನೂರ ಎಂಬತ್ತು ಟನ್‌ಗಳಷ್ಟಿತ್ತು. ವರ್ಷಗಳು ಸರಿದಂತೆ ಮರಗೆಣಸು ಕೃಷಿ ಮಾಡುವ ಸ್ಥಳದ ವಿಸ್ತೀರ್ಣವು ಇತರ ವಾಣಿಜ್ಯ ಬೆಳೆಗಳನ್ನು ಬೆಳೆಸುವುದು, ಮನೆಯ ನಿವೇಶನಗಳಿಗಾಗಿ ಕೃಷಿ ಮಾಡುವ ಭೂಮಿಯನ್ನು ಬಳಸುವುದು ಮುಂತಾದ ಕಾರಣಗಳಿಂದ ಮರಗೆಣಸನ್ನು ಬೆಳೆಯುವ ನೆಲವು ಕಿರಿದಾಗುತ್ತ ಬರುತ್ತಿದೆ. 1971ರಲ್ಲಿ ಭಾರತದಾದ್ಯಂತ 3.45 ಲಕ್ಷ ಹೆಕ್ಟೇರ್ ಜಾಗವು ಮರಗೆಣಸು ಕೃಷಿಗಾಗಿ ಬಳಕೆಯಾಗಿದೆ. 1993ರಲ್ಲಿ ಅದು 2.35 ಲಕ್ಷ ಹೆಕ್ಟೇರುಗಳಾಗಿ ಕುಗ್ಗಿತು. ಪೂರ್ತಿಯಾಗಿ ಈ ಕಡಿತವು ಕಂಡುಬಂದುದು ಕೇರಳದಲ್ಲಿ. ಆದರೆ ಆಂಧ್ರ, ತಮಿಳು ನಾಡುಗಳಲ್ಲಿ ಕೃಷಿ ಜಾಗ ಮತ್ತು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವುಂಟಾಯಿತು. ಈ ಸಾಹಚರ್ಯದ ಪರಿಣಾಮವೆಂದರೆ ಭಾರತದಲ್ಲಿ ಒಟ್ಟು ಮರಗೆಣಸಿನ ಉತ್ಪಾದನೆಯಲ್ಲಿನ ಗಣನೀಯ ವ್ಯತ್ಯಾಸ ಇಲ್ಲದಂತಾಯಿತು. ಒಟ್ಟು ಮರಗೆಣಸಿನ ರಾಷ್ಟ್ರೀಯ ಉತ್ಪಾದನೆಯಲ್ಲಿ (53.4 ಲಕ್ಷ ಟನ್) ಕೇರಳದ ಕೊಡುಗೆ ಶೇಕಡಾ 54 ಮಾತ್ರ. ಕೃಷಿ ಮಾಡುವ ಜಾಗವು ಶೇಕಡಾ ಅರವತ್ತರಷ್ಟು ಇದ್ದೂ ಉತ್ಪಾದನೆಯಲ್ಲಿ ಹಿನ್ನಡೆಯುಂಟಾಗಿದೆ. ಅದೇ ವೇಳೆ ಶೇಕಡ ಮೂವತ್ತು ಮಾತ್ರ ಕೃಷಿ ಜಾಗವುಳ್ಳ ತಮಿಳುನಾಡಿನಲ್ಲಿ ಶೇಕಡಾ ನಲುವತ್ತೊಂದರಷ್ಟು ಉತ್ಪಾದನೆ ಮಾಡಿ ಕೇರಳಕ್ಕೆ ತೀವ್ರ ಪೈಪೋಟಿ ನೀಡುತ್ತಿದೆ. ತಮಿಳುನಾಡಲ್ಲಿ ಒಂದು ಹೆಕ್ಟೇರಿಗೆ ಸರಾಸರಿ ಮೂವತ್ತು ಟನ್ ಮರಗೆಣಸನ್ನು ಉತ್ಪಾದಿಸಿದರೆ ಕೇರಳದಲ್ಲಿನ ಸರಾಸರಿ ಉತ್ಪಾದನೆ ಇಪ್ಪತ್ತು ಟನ್ ಅಷ್ಟೇ. ಅಧಿಕ ಉತ್ಪಾದನಾ ಸಾಮರ್ಥ್ಯದ ತಳಿಗಳು ಹಾಗೂ ಸಮರ್ಪಕ ನೀರಾವರಿ ಸೌಕರ್ಯಗಳು ಕಾರಣವಾಗಿ ತಮಿಳುನಾಡಿಗೆ ಈ ಸಾಧನೆ ಸಾಧ್ಯವಾಗಿದೆ.

ಮರಗೆಣಸು ಉತ್ಪಾದನೆಯನ್ನು ತೀವ್ರವಾಗಿ ಬಾಧಿಸುವ ಅನೇಕ ಕಾರಣಗಳಿವೆ. ಮರಗೆಣಸಿನ ನಾಟಿಯು ಅದರ ದಂಟುಗಳನ್ನು ಅಲ್ಲಲ್ಲಿ ತುಂಡರಿಸಿಕೊಂಡು ಅದನ್ನೇ ಗಿಡಮೂಲವಾಗಿ ಬಳಸಿಕೊಂಡು ನಡೆಯುತ್ತದೆ. ದಂಟುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಾಟ ಮಾಡುವ ಸಮಸ್ಯೆ, ನಾಟಿಗೆ ಬಳಕೆಯಾಗಬೇಕಾದ ದಂಟುಗಳು ಬೇಗನೆ ಒಣಗಿ ಹೋಗುವುದು, ಮೊಸೇಕ್ ಎಂಬ ವೈರಸ್ ರೋಗ - ಮುಂತಾದವು ಮರಗೆಣಸು ಕೃಷಿಯು ಎದುರಿಸಬೇಕಾಗುವ ಮುಖ್ಯ ಸಮಸ್ಯೆಗಳು. ಈ ಸಮಸ್ಯೆಗಳನ್ನು ನಿವಾರಿಸಲು 'ಮರಗೆಣಸು ಬೀಜ ಉತ್ಪಾದನಾ ಕಾರ್ಯಕ್ರಮ' (True Cassava Seed Programme) ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು ಭಾರತದಲ್ಲಿಯೇ ಮೊದಲು ಜಾರಿಗೆ ಬಂತು. ಈ ಯೋಜನೆಯ ಪರಿಣಾಮವಾಗಿ ಪ್ರತ್ಯುತ್ಪಾದನಾ ಸಾಮರ್ಥ್ಯವನ್ನು ನೂರ ಐವತ್ತು ಪಟ್ಟು ಹೆಚ್ಚಿಸುವುದು, ಬೀಜದ ಮೊಳಕೆ ಸಾಮರ್ಥ್ಯವನ್ನು ಗಂಟುಗಳಲ್ಲಿ ಈಗ ಇರುವುದಕ್ಕಿಂತ ಹೆಚ್ಚಿಸಿ ಕಾಪಾಡಿಕೊಳ್ಳುವುದು, ಮೊಸೇಕ್ ರೋಗವು ಹರಡದಂತೆ ತಡೆಯುವುದು - ಇತ್ಯಾದಿಗಳು ಸಾಧ್ಯವಾಗಿದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಮರಗೆಣಸು ಕೃಷಿಯನ್ನು ರಾಷ್ಟ್ರಾದ್ಯಂತ ಜನಪ್ರಿಯಗೊಳಿಸಿ, (ಮುಖ್ಯವಾಗಿ ಬಡತನವು ಅಧಿಕವಾಗಿರುವ ರಾಜ್ಯಗಳಲ್ಲಿ) ವ್ಯಾಪಕಗೊಳಿಸಲು ಸಾಧ್ಯವಾಗಿದೆ.

ಮರಗೆಣಸಿನ ಕೃಷಿಯನ್ನು ಮೊಸೇಕ್ ರೋಗವು ತೀವ್ರವಾಗಿ ಕಾಡುತ್ತದೆ. ಶೇಕಡಾ ಎಂಬತ್ತರಷ್ಟು ಉತ್ಪಾದನಾ ಹಾನಿಯನ್ನುಂಟು ಮಾಡಬಲ್ಲ ಈ ರೋಗವು ಒಂದು ತೆರನ ವೈರಸ್ಸುಗಳಿಂದ ಉಂಟಾಗುತ್ತದೆ. ಭಾರತದಲ್ಲಿ ಮಾತ್ರವಲ್ಲ, ಮರಗೆಣಸು ಕೃಷಿ ಇರುವ ಎಲ್ಲ ರಾಷ್ಟ್ರಗಳಲ್ಲೂ ಈ ರೋಗವು ಕಂಡುಬರುತ್ತದೆ. ಭಾರತದಲ್ಲಿ ಪತ್ತೆಯಾಗಿರುವ ರೋಗವು ಆಫ್ರಿಕನ್ ಮೊಸೇಕ್ ರೋಗದ ಒಂದು ಪ್ರಭೇದವಾಗಿದೆ. ಭಾರತದಲ್ಲಿ ಇದು ಹೆಚ್ಚು ಬಾಧಿಸಿರುವುದು ತಮಿಳು ನಾಡಿನಲ್ಲಿ. ಕೇರಳದಲ್ಲೂ ಎಲ್ಲ ಕಡೆ ಈ ರೋಗವು ಕಾಣಿಸಿಕೊಂಡಿದೆ. ಮೊಸೇಕ್ ರೋಗವು ಎರಡು ವಿಧದಲ್ಲಿ ಹರಡುತ್ತದೆ. ವೆಳ್ಳೀಚ್ಚ(ಬಿಳಿನೊಣ/ಬೆಳ್ಳಿನೊಣ) ಎಂದು

ಕರೆಯಲಾಗುವ ಒಂದು ತೆರನ ಕಿರುಕೀಟವು ಇದನ್ನು ಒಂದು ಗಿಡದಿಂದ ಇನ್ನೊಂದಕ್ಕೆ ರವಾನಿಸುತ್ತದೆ. ಈ ಕೀಟಗಳು ರೋಗಬಾಧಿತ ಗಿಡಗಳಿಂದ ರಸ ಹೀರುವಾಗ ವೈರಸ್‌ಗಳೂ ಅವುಗಳ ದೇಹವನ್ನು ಪ್ರವೇಶಿಸುತ್ತವೆ. ಸರಿಸುಮಾರು ನಾಲ್ಕು ಗಂಟೆ ಹೊತ್ತಿನ ಬಳಿಕ ವೈರಸುಗಳು ಕೀಟಗಳ ಜೊಲ್ಲಿನೊಂದಿಗೆ ಬೆರೆಯುತ್ತವೆ. ಬಳಿಕ ಈ ಬಿಳಿನೊಣಗಳು ರೋಗವಿಲ್ಲದ ಗಿಡಗಳಿಂದ ರಸಹೀರುವ ಸಂದರ್ಭದಲ್ಲಿ ವೈರಸುಗಳು ಆ ಗಿಡಗಳಿಗೆ ಕ್ರಮಿಸುತ್ತವೆ. ಇದು ರೋಗದ ಪ್ರಾಥಮಿಕ ವ್ಯಾಪನ ರೀತಿ. ಬೇರೆ ಬೇರೆ ತಳಿಗಳಲ್ಲಿ ಬಿಳಿನೊಣಗಳಿಂದ ಹರಡುವ ರೋಗದ ಪ್ರಮಾಣದಲ್ಲಿ ಹೆಚ್ಚು ಕಡಿಮೆ ಇರುವುದು ಸಂಶೋಧನೆಗಳ ಮೂಲಕ ಕಂಡುಬಂದಿದೆ. ರೋಗ ಪ್ರತಿರೋಧ ಸಾಮರ್ಥ್ಯವು ಅಧಿಕವಾಗಿರುವ ತಳಿಗಳಲ್ಲಿ ವರ್ಷವೊಂದರಲ್ಲಿ ನಾಲ್ಕೊ ಐದೋ ಶೇಕಡಾ ವೈರಸ್ ಸಂಕ್ರಮಣವು ನಡೆದರೆ ಪ್ರತಿರೋಧ ಶಕ್ತಿಯು ದುರ್ಬಲವಾಗಿರುವ ತಳಿಗಳಲ್ಲಿ ಶೇಕಡಾ ಎಪ್ಪತ್ತೈದರಷ್ಟು ರೋಗ ಬಾಧೆ ತಗಲುತ್ತದೆ. ಇದೊಂದು ವೈರಸ್ ಕಾಯಿಲೆಯಾಗಿರುವುದರಿಂದ ರೋಗ ಬಾಧಿತ ಗಿಡದ ಎಲ್ಲ ಭಾಗಗಳಲ್ಲೂ ರೋಗಕಾರಕ ವೈರಸ್‌ಗಳು ಹರಡಿಕೊಳ್ಳುತ್ತವೆ. ರೋಗವು ಬಾಧಿಸಿದ ದಂಟು ಬೀಜವಾಗಿ ಬಳಕೆಯಾದಾಗ ಅದರಿಂದ ಮೊಳಕೆಯೊಡೆದು ಬೆಳೆಯುವ ಗಿಡಗಳಿಗೂ ರೋಗವುಂಟಾಗುತ್ತದೆ. ಇದು ರೋಗವು ತಗಲುವ ಎರಡನೆಯ ರೀತಿ. ಒಂದು ಬೆಳೆಯಿಂದ ಮುಂದಿನ ವರ್ಷದಲ್ಲಿ ಮಾಡುವ ಬೆಳೆಗೂ ಒಂದು ಜಾಗದಿಂದ ಇನ್ನೊಂದು ಜಾಗಕ್ಕೂ ನಡೆಯುವ ರೋಗಪ್ರಸಾರಕ್ಕೆ ರೋಗಬಾಧಿತ ದಂಟುಗಳೇ ಮಾಧ್ಯಮವಾಗಿವೆ.

ಬೆಳೆ ನಷ್ಟದ ಪ್ರಮಾಣ ಕೃಷಿ ಮಾಡಲು ಬಳಸಿಕೊಂಡ ತಳಿಯನ್ನು ಅವಲಂಬಿಸಿದೆ. ಕೇರಳದಲ್ಲಿಯ ಕಲಿಕಾಲನ್‌ನಂಥ ತಳಿಯಲ್ಲಿ ಶೇಕಡಾ ಎಪ್ಪತ್ತೈದರವರೆಗೆ ಬೆಳೆಹಾನಿ ಸಂಭವಿಸಿರುವುದು ಸಂಶೋಧನ ವರದಿಗಳಿಂದ ವಿದಿತವಾಗಿದೆ. ಆದರೆ ಎಚ್-165, ಎಚ್-97, ಶ್ರೀ ವಿಶಾಖಂ, ಶ್ರೀ ಸಹ್ಯ ಮುಂತಾದ ಸಂಕರ ತಳಿಗಳಲ್ಲೂ ವ್ಯಾಪಕ ಬಳಕೆಯಲ್ಲಿರುವ ಮಲಯನ್-4 ಮುಂತಾದವುಗಳಲ್ಲೂ ಒಂದು ವರ್ಷದ ಕಾಲಾವಧಿಯಲ್ಲಿ ಶೇಕಡಾ ಐದಕ್ಕಿಂತ ಕಡಿಮೆ ಪ್ರಮಾಣದಲ್ಲಷ್ಟೇ ರೋಗವು ತಗಲುತ್ತದೆ. ರೋಗಬಾಧೆಗೆ ಪ್ರತ್ಯೇಕ ಕಾಲ ಮಿತಿಯೇನೂ ನಿಗದಿತವಾಗಿಲ್ಲ. ಎಷ್ಟು ಪ್ರಾಯದ ಗಿಡಗಳಾದರೂ ರೋಗವು ಸಂಕ್ರಮಿಸಿ ಬಿಡುತ್ತದೆ. ರೋಗಬಾಧಿತ ದಂಟುಗಳಿಂದ ಹುಟ್ಟಿಕೊಂಡ ಗಿಡಗಳು ಆರಂಭದಲ್ಲೇ ರೋಗಲಕ್ಷಣವನ್ನು ತೋರುತ್ತವೆ. ಮೊಸೇಕ್ ರೋಗ ಕಾರಣವಾಗಿ ಬೆಳೆ ಹಾನಿ ಸಂಭವಿಸಬಹುದೇ ವಿನಃ ರೋಗ ಬಾಧಿತ ಗಿಡಗಳು ಬೆಳೆಯುವ ಗೆಣಸಿನಲ್ಲಿ ಯಾವುದೇ ದೋಷಗಳಿರುವುದಿಲ್ಲ. ವೈರಸ್‌ನಿಂದ ರೋಗವು ತಗಲುವುದರಿಂದ ಗಿಡಕ್ಕೆ ಆರೈಕೆ ಮಾಡಿ ರೋಗವನ್ನು ತಡೆಯುವುದು ಅಸಾಧ್ಯ. ಮಾಡಬಹುದಾದ ಫಲಪ್ರದ ಕೆಲಸವೆಂದರೆ ರೋಗವು ತಗಲದಂತೆ ಎಚ್ಚರವಹಿಸುವುದು. ರೋಗ ತಗಲದ ಮರಗೆಣಸಿನ ದಂಟುಗಳನ್ನು ಆಯ್ದುಕೊಂಡು ನಾಟಿಗೆ ಬಳಸಿಕೊಳ್ಳುವಂತೆಯೇ 'ಮುಕುಳಾಗ್ರಪ್ರಜನನ ವಿಧಾನ'ವನ್ನು ಅವಲಂಬಿಸಬಹುದು. ರೋಗ ತಗಲಿದ ಗಿಡದ ತುದಿಗೆ ರೋಗವು ತಗಲಿರುವುದಿಲ್ಲ. ಅಂಥ ತುದಿಗಳನ್ನು ಕಂಡುಕೊಂಡು ಅನುಯೋಜ್ಯವಾದ ಮಾಧ್ಯಮವೊಂದರ ಮೂಲಕ ಅವನ್ನು ಬೆಳೆಸಿ ರೋಗರಹಿತ ಗಿಡಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಈ ವಿಧಾನವು ಸಾಮಾನ್ಯ ಕೃಷಿಕರಿಗೆ ಪ್ರಾಯೋಗಿಕವಲ್ಲದಿರಬಹುದು, ಆದರೆ ಸರಕಾರಿ ಸಂಸ್ಥೆಗಳು, ಸಂಶೋಧನ ಕೇಂದ್ರಗಳಲ್ಲಿ ಈ ವಿಧಾನದಲ್ಲಿ ದಂಟುಗಳನ್ನು ಉತ್ಪಾದಿಸಿಕೊಂಡು ವಂಶವರ್ಧನೆ ಮಾಡಿ ಅವುಗಳನ್ನು ಅಗತ್ಯವಿರುವವರಿಗೆ ವಿತರಿಸಬಹುದು.

ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಮರಗೆಣಸು ಕೃಷಿಯು ಕೇವಲ ಆಹಾರೋತ್ಪನ್ನವಲ್ಲ, ಅದು ವಾಣಿಜ್ಯ ಬೆಳೆಯೂ ಹೌದು. ಸ್ಟಾರ್ಚ್, ಸಾಗೋ ಮುಂತಾದ ಉದ್ದಿಮೆಗಳು ಹಲವು ತೆರನ ತೊಂದರೆಗಳನ್ನು ಎದುರಿಸುತ್ತಿವೆ. ಗೆಣಸುಗಳು ಹಾಳಾಗದಂತೆ ದಾಸ್ತಾನಿರಿಸುವುದು, ಗೆಣಸು ಸಂಸ್ಕರಣಾ ಯಂತ್ರಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು, ಪರಿಸರ ಮಾಲಿನ್ಯವುಂಟಾಗದಂತೆ ಫ್ಯಾಕ್ಟರಿ ತ್ಯಾಜ್ಯಗಳ ವಿಲೇವಾರಿ ಮುಂತಾದವುಗಳು ಕಾಲಯೋಗ್ಯವಾದ ಶೋಧನೆಗಳಿಂದ ಇಂಥ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗಿದೆ. ತಮಿಳುನಾಡಿನಲ್ಲಿ ಸ್ಟಾರ್ಚ್, ಸ್ಯಾಗೋ ಉದ್ದಿಮೆಗಳು ಎದುರಿಸುತ್ತಿರುವ ಎರಡು ಮುಖ್ಯ ಸಮಸ್ಯೆಗಳೆಂದರೆ - ಫ್ಯಾಕ್ಟರಿ ತ್ಯಾಜ್ಯಗಳನ್ನು ಹೊರಹಾಕಲು ವ್ಯವಸ್ಥೆ ಮಾಡುವುದು, ಸ್ಟಾರ್ಚ್ ಸ್ಯಾಗೋಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು. ತಮಿಳುನಾಡಿನ ಸೇಲಂ, ಕನ್ಯಾಕುಮಾರಿ, ದಕ್ಷಿಣ ಆರ್ಕಾಟ್, ತಿರುಚ್ಚಿರಪ್ಪಳ್ಳಿ, ಧರ್ಮಪುರಿ ಜಿಲ್ಲೆಗಳು ಮರಗೆಣಸು ಕೃಷಿಯ ಮುಖ್ಯಸ್ಥಾನಗಳಾಗಿ ಬದಲಾಗುತ್ತಿವೆ. ಅತ್ಯುತ್ಪಾದನ ಸಾಮರ್ಥ್ಯದ ತಳಿಗಳನ್ನು ಬಳಸಿಕೊಳ್ಳುವ ಮೂಲಕ ಈ ಸಾಧನೆ ಅಲ್ಲಿ ಸಾಧ್ಯವಾಗಿರುವಾಗ, ಕೇರಳೀಯ ಕೃಷಿಕರು ಕೃಷಿಯಲ್ಲಿ ನಾನಾ ವೈವಿಧ್ಯಗಳನ್ನು ರೂಢಿಸಿಕೊಳ್ಳುವುದರಲ್ಲಿ ಹಿಂದೆಯೇ ಉಳಿದಿದ್ದಾರೆ.

ಕೇರಳದ ಒಟ್ಟು ಮರಗೆಣಸು ಉತ್ಪಾದನೆಯಲ್ಲಿ ಶೇಕಡಾ ಎಂಬತ್ತಕ್ಕಿಂತಲೂ ಹೆಚ್ಚು ಆಹಾರೋದ್ದೇಶಗಳಿಗಾಗಿಯೇ ಬಳಕೆಯಾಗುತ್ತಿದೆ. ಮರಗೆಣಸಿನ ಇತರ ಯಾವುದೇ ಉದ್ದಿಮೆಗಳು ಕೇರಳದಲ್ಲಿ ಇಲ್ಲ. ಆದರೆ ತಮಿಳುನಾಡಿನಲ್ಲಿ ಅವು ಸಾಕಷ್ಟಿವೆ. ಅಲ್ಲಿ ಒಟ್ಟು ಉತ್ಪಾದನೆಯ ಶೇಕಡಾ ಇಪ್ಪತ್ತೈದರಷ್ಟನ್ನು ಆಹಾರೋದ್ದೇಶಗಳಿಗೆ ಬಳಸಿಕೊಂಡು ಉಳಿದುದನ್ನು ಉದ್ದಿಮೆಗಳಿಗೆ ಕಚ್ಚಾವಸ್ತುಗಳನ್ನಾಗಿ ಸದುಪಯೋಗಪಡಿಸಿಕೊಳ್ಳುತ್ತಾರೆ. ಮರಗೆಣಸು ಕೃಷಿ ಲಾಭದಾಯಕವಲ್ಲ ಎನ್ನುವ ದಿನಗಳು ಈಗ ಇಲ್ಲ, ಸದ್ಯ ಅದು ಲಾಭದಾಯಕವಾದ ಬೆಳೆಯಾಗಿದೆ. ಮರಗೆಣಸಿಗೆ ಬೇರೆ ಬೇರೆ ಉದ್ದೇಶಗಳಿಗಾಗಿ ಒಳ್ಳೆ ಬೇಡಿಕೆಯಿದೆ, ಒಂದು ಹೆಕ್ಟೇರಲ್ಲಿ ಸರಾಸರಿ ಇಪ್ಪತ್ತು ಟನ್ ಬೆಳೆ ತೆಗೆಯಬಹುದು. ಆದುದರಿಂದ ಅದರ ಲಾಭದ ಬಗೆಗೆ ಸಂದೇಹ ಪಡಬೇಕಾಗಿಲ್ಲ. ಇಷ್ಟಾಗಿಯೂ ಕೇರಳದಲ್ಲಿ ಮರ ಗೆಣಸು ಕೃಷಿ ವ್ಯಾಪಕವಾಗಿ ಇನ್ನೂ ಹಬ್ಬಿಕೊಂಡಿಲ್ಲ. ಆಹಾರದ ಕುರಿತ ನಿರಾತಂಕ ಮನಸ್ಥಿತಿಯನ್ನು ಹೊಂದಿರುವ ಕೇರಳೀಯ ಕೃಷಿಕರನ್ನು ಮರಗೆಣಸು ಕೃಷಿ ಮತ್ತು ಹೆಚ್ಚು ಹೆಚ್ಚು ವಶಪಡಿಸಿಕೊಳ್ಳುವುದಾಗಲಿ ಒಲಿಸುವುದಾಗಲಿ ಕಷ್ಟಸಾಧ್ಯ. ಕೇರಳದಲ್ಲಿನ ಆಹಾರ ಪದಾರ್ಥಗಳ ಉತ್ಪಾದನಾ ಕೊರತೆಯನ್ನು ನೀಗಿಸಲು ವ್ಯಾಪಕವಾದ ಮರಗೆಣಸು ಕೃಷಿಯು ಯೋಗ್ಯ ಪರಿಹಾರವಾಗಿದೆ. ಅಕ್ಕಿಯ ಹಾಗೆಯೇ ಮರಗೆಣಸು ಕೂಡ ಸಾಕಷ್ಟು ಪಿಷ್ಟ (Starch)ವನ್ನುಳ್ಳ ಆಹಾರ. ಕೇರಳೀಯನಿಗೆ ಅದನ್ನು ಹೊಸದಾಗಿ ಪರಿಚಯಿಸಬೇಕಿಲ್ಲದಿರುವುದರಿಂದ ಮರಗೆಣಸು ಬೆಳೆಗೆ ಹೆಚ್ಚಿನ ಉತ್ಸಾಹವೂ ಪ್ರೋತ್ಸಾಹವೂ ಅಪೇಕ್ಷಣೀಯವಾಗಿವೆ.

ಮರಗೆಣಸನ್ನು ಪ್ರೋತ್ಸಾಹಿಸುವ, ಅದಕ್ಕೆ ಪ್ರಾಧಾನ್ಯ ನೀಡುವ ಬಹುಬೆಳೆಯ ಕೃಷಿ ಪದ್ಧತಿಯನ್ನು ಸಂಶೋಧನೆಗಳಿಂದ ಕಂಡುಕೊಳ್ಳಲಾಗಿದೆ. ತೆಂಗು, ಬಾಳೆ, ಗೋಡಂಬಿ (ಗೇರುಬೀಜ)ಗಳ ಜತೆಗೆ

ಕೂಡ ಮರಗೆಣಸು ಕೃಷಿ ಮಾಡಬಹುದಾಗಿದೆ. ರಬ್ಬರ್ ಬೆಳೆಯ ಆರಂಭಿಕ ವರ್ಷಗಳಲ್ಲೂ ಅಲ್ಲಿ ಮರಗೆಣಸನ್ನು ಕೃಷಿ ಮಾಡಬಹುದಾಗಿದೆ. ಇತರ ಜಾಗಗಳಲ್ಲೂ ಮರಗೆಣಸು ಒಂದನ್ನೇ ಕೃಷಿ ಮಾಡಿದರೂ ನಿಶ್ಚಿತ ಆದಾಯಕ್ಕೆ ಬಾಧಕವಿಲ್ಲ. ಮರಗೆಣಸನ್ನೇ ಮುಖ್ಯ ಕೃಷಿಯಾಗಿ ಬೆಳೆಯುವಾಗಲೂ ಅದರ ಜತೆಗೆ ಇತರ ಮಿಶ್ರ / ಎಡೆ ಬೆಳೆಗಳನ್ನು ಬೆಳೆಯಬಹುದು. ಬಿತ್ತನೆ ಮಾಡಿ ಸುಮಾರು ಮೂರೂವರೆ ತಿಂಗಳೊಳಗೆ ಫಸಲು ಬರುವ ಬೆಳೆಗಳು ಮಾತ್ರ ಇದಕ್ಕೆ ಯುಕ್ತ. ಹ್ರಸ್ವ ಕಾಲಾವಧಿಯ ಬೆಳೆಗಳಾದ ನೆಲಕಡಲೆ, ತರಕಾರಿ, ಹೆಸರು, ಬೀನ್ಸ್ ಮುಂತಾದವು ಮರಗೆಣಸಿನ ಜತೆಗಿನ ಎಡೆ ಬೆಳೆಯಾಗಿ ಬೆಳೆಯಲು ಅತ್ಯಂತ ಯೋಗ್ಯವಾಗಿವೆ. ನೆಲ ಕಡಲೆ, ತರಕಾರಿ, ಹೆಸರು ಕಾಳು ಮುಂತಾದುದನ್ನು ಬೆಳೆಯುವುದರಿಂದ ಮಣ್ಣಿನ ಫಲವತ್ತತೆಯು ಮರುಕಳಿಸಿ ಕೃಷಿಕನಿಗೆ ಲಭ್ಯವಾಗುತ್ತದೆ. ಜತೆಗೆ ಒಂದಿಷ್ಟು ಹೆಚ್ಚು ಆದಾಯವೂ ಕೈಗೆ ಬರುತ್ತದೆ.

ಮರಗೆಣಸಿನಿಂದ ವೈವಿಧ್ಯಮಯ ಆಹಾರ ಪದಾರ್ಥಗಳನ್ನು ತಯಾರಿಸಿಕೊಳ್ಳಬಹುದು. ಹಸಿಮರಗೆಣಸಿನಂತೆಯೇ ಬೇಯಿಸಿ ಒಣಗಿಸಿದ ಮರಗೆಣಸು ಕೂಡ ಉತ್ತಮ ಆಹಾರವಾಗಿದೆ. ಮರಗೆಣಸಿನ ಹುಡಿ / ಹಿಟ್ಟಿನಿಂದ ಸಿಹಿ ತಿಂಡಿಗಳನ್ನು ಬೇಕರಿ ವಸ್ತುಗಳನ್ನು ತಯಾರಿಸಬಹುದಾಗಿದೆ. ಇದರಿಂದ ಅದರ ಮಾರುಕಟ್ಟೆಯು ಅಪಾರವಾಗಿ ವಿಸ್ತರಿಸಿ ಅದನ್ನು ಬೆಳೆಯುವ ರೈತರು ಸಂತಸ ಪಡಬಹುದಾಗಿದೆ.

ಮರಗೆಣಸಿನಲ್ಲಿರುವ ವಿಷಾಂಶಗಳ ಬಗೆಗೆ ಅನೇಕ ವರ್ಷಗಳ ಹಿಂದಿನಿಂದಲೇ ಜನರು ತಿಳುವಳಿಕೆಯುಳ್ಳವರಾಗಿದ್ದಾರೆ. ಇದರಲ್ಲಿ ಸಣ್ಣ ಪ್ರಮಾಣದಲ್ಲಿ ಸಯನೈಡ್ ಇರುವುದನ್ನು, ಇದರ ಸಿಪ್ಪೆಯನ್ನು ಕಳೆದು ಉಳಿದ ಭಾಗಗಳನ್ನು ಅನೇಕ ಬಾರಿ ನೀರಿನಿಂದ ತೊಳೆಯಬೇಕು. ಇದು ಪರಂಪರಾಗತ ರೀತಿ ಕೂಡ, ಬಳಿಕವೂ ಉಳಿದಿರಬಹುದಾದ ವಿಷಾಂಶ ಬೇಯುವಾಗ ಆವಿಯಾಗಿ ಹೋಗುತ್ತದೆ.

ಮರಗೆಣಸು ಮುಖ್ಯವಾಗಿ ವರ್ಷದಲ್ಲಿ ಎರಡು ಬಾರಿ ಕೃಷಿ ಮಾಡುವ ಬೆಳೆ. ಒಂದು ಬೆಳೆಯು ಕುಂಭಮಾಸದಲ್ಲಿ ತೊಡಗಿ ಮುಂದಿನ ಮಕರ ಮಾಸದ ತನಕವೂ ಇನ್ನೊಂದು ಕನ್ಯಾ / ತುಲಾ ತಿಂಗಳಲ್ಲಿ ತೊಡಗಿ ಮುಂದಿನ ಕರ್ಕಟಕ ತಿಂಗಳಲ್ಲಿ ಫಸಲು ತೆಗೆಯುವಂಥದು. ಮೊದಲನೆಯದನ್ನು 'ಮಕರಕಪ್ಪ' ಎಂದೂ ಎರಡನೆಯದನ್ನು 'ಕರ್ಕಟಕ ಕಪ್ಪ' ಎಂದೂ ಕರೆಯುತ್ತಾರೆ. ಮೊದಲನೆಯದಕ್ಕೆ ಒಳ್ಳೆಯ ರುಚಿ, ಚೆನ್ನಾಗಿ ಬೇಯುತ್ತದೆ. ಇದೇ ಮುಖ್ಯ ಬೆಳೆ. ಎರಡನೆಯದು ರುಚಿಯಲ್ಲಿ ಅಷ್ಟಕ್ಕಷ್ಟೆ.

ಬೇಸಗೆಯಲ್ಲಿ ಮಣ್ಣಿನಿಂದ ತೇವಾಂಶವು ಪೂರ್ತಿ ಆರುವ ಮೊದಲು ನೆಲವನ್ನು, ಅಗೆದು ಹದಗೊಳಿಸಬೇಕು. ಹೀಗೆ ಅಗೆಯುವುದಕ್ಕೆ 'ವೆಟ್ಟುಕಿಳ್' ಎಂದು ಹೆಸರು. ಮೀನ ಮಾಸದಲ್ಲಿ ಇನ್ನೊಮ್ಮೆ ಅಗೆದು ಮಣ್ಣನ್ನು ಸಡಿಲುಗೊಳಿಸಬೇಕು. ಆಗಲೂ ಪುಡಿಯಾಗದ ಹೆಂಟೆಗಳನ್ನು ಒಡೆದು ಪುಡಿಮಾಡಲಾಗುತ್ತದೆ. ಬಳಿಕ ತುಂಬ ಆಳವಲ್ಲದ (ಸುಮಾರು ಒಂದೂವರೆ ಅಡಿ) ಪಾತಿ ಮಾಡಿಕೊಂಡು ಅದರಲ್ಲಿ ತರಗೆಲೆ, ಬೂದಿ, ಸೆಗಣಿ ಹುಡಿ ಮುಂತಾದುವನ್ನು ತುಂಬಿ ಮೇಲೆ ಮಣ್ಣು ಪೇರಿಸುತ್ತಾರೆ. ಪ್ರತಿಪಾತಿಗೆ ಎರಡೂವರೆ ಅಡಿ ಅಂತರವಿರುತ್ತದೆ. ಈ ಪಾತಿಗಳಲ್ಲಿ ಮೇಷ ಮಾಸ ಆರಂಭದ ಹೊಸ ಮಳೆ ಬೀಳುವಾಗ ಮರಗೆಣಸಿನ ದಂಟು ಬೀಜಗಳನ್ನು ನಿರ್ದಿಷ್ಟ ಅಳತೆಗೆ ತುಂಡುರಿಸಿಕೊಂಡು ನೆಡಬೇಕು. ನಾಲ್ಕೈದು ಎಲೆಗಳು ಒಡೆದ ಬಳಿಕ ಪುನಃ ಪಾತಿಗಳ ಮಧ್ಯದ ಎಡೆಗಳನ್ನು ಅಗೆಯಬೇಕು, ಕಳೆ ಕೀಳಬೇಕು. ಸಿಂಹ ಮಾಸದಲ್ಲಿ ಮತ್ತೆ ಮಣ್ಣು ಪೇರಿಸಬೇಕು.

ನೇಂದ್ರಬಾಳೆ ಕೃಷಿ ಮಾಡಿದ ಹೊಂಡಗಳಲ್ಲೂ ಇತರ ತರಕಾರಿಗಳೊಂದಿಗೆ ಮರಗೆಣಸನ್ನು ಎಡೆ ಬೆಳೆಯಾಗಿ ಬೆಳೆಯಬಹುದು. ಶುಂಠಿಯ ಜತೆಗೆ ಕೂಡ ಬೆಳೆಯಬಹುದು. ಇಂಥ ಸಂದರ್ಭಗಳಲ್ಲಿ ಮತ್ತೆ ಗೊಬ್ಬರ ಕೊಡಬೇಕಾಗಿಲ್ಲ. ಮರಗೆಣಸಿನ ಜತೆ ತೊಗರಿಯನ್ನು ಬೆಳೆಯಬಹುದು.

ಪಾರಂಪರಿಕವಾಗಿ ಮರಗೆಣಸು ಕೃಷಿಗೆ ಬಳಸುತ್ತಿದ್ದ ತಳಿಗಳು ಇವು: ಕೋವಿಲ್ ವೆಳ್ಳ, ಮಲವೆಳ್ಳ, ನೆಡುವೆಳ್ಳ, ಕೊಕ್ಕಿಯನ್ ವೆಳ್ಳ, ಅರಿಯನ್ ವೆಳ್ಳ, ಪಿರಿಯನ್ ವೆಳ್ಳ (ವೆಳ್ಳ = ಬಿಳಿಯದು), ಕುರುತ್ತ ಅವಿಯನ್, ಕರುತ್ತ (ಕಪ್ಪು) ವರಿಕ್ಕ್, ನಾಂಬನ್, ತಾಮರಕ್ಕಾಡನ್, ಚೋಲತ್ತಂ, ಎರಪ್ಪನ್ ತಲ, ವೆಳ್ಳಿ ರೊಟ್ಟಿ, ಕಾಕ್ಕಪ್ಪ್, ವೆಳ್ಳಕ್ಕೋಲ್‌ಕಪ್ಪ, ಮುಳ್ಳನ್ ಕಪ್ಪ, ಕಟ್ಟನ್ ಕಪ್ಪ, ಇಟ್ಟಿಕ್ಕಾಡನ್, ಕುರೀಕ್ಕೊಲ್ಲ, ಕೊಚ್ಚುಕಣ್ಣನ್, ಅಟಿಕನ್, ಕೋಟಿವಾಲನ್, ಚೆಮನ್ನತಂಡನ್, ನೆಡುಮಂಜಾಡನ್, ಇಲಮುರಿಯನ್, ಕಾಂದಾರಿ ಪಡರ್ಪನ್. ಇಲಮುರಿಯನ್, ನೇಂದ್ರನ್, ರೊಟ್ಟಿವೆಳ್ಳ, ಕಾಕ್ಕಕ್ಕಾಲನ್ ಮುಂತಾದ ತಳಿಗಳು ಇಂದು ನಾಮಾವಶೇಷವಾಗಿವೆ. ಹಬೆಯಲ್ಲಿ ಬೇಯಿಸುತ್ತಿದ್ದ ಚೆಂಜಟಿಕ್ಕೋಡನ್ ಬಣ್ಣದಲ್ಲೂ ಗುಣದಲ್ಲೂ ನೇಂದ್ರಬಾಳೆಯನ್ನು ಮೀರಿಸುವಂಥದಾಗಿತ್ತು. ನೇಂದ್ರ ಮರ ಗೆಣಸು ಬೇಯಿಸಿದ್ದನ್ನು ಎಲ್ಲಿಯಾದರೂ ಕಂಡ ಕೇರಳೀಯನಿಗೆ ಗತಕಾಲದ ಸವಿನೆನಪು ಮರುಕಳಿಸುತ್ತದೆ ಎಂಬ ಮಾತಿದೆ. ಈ ನೆನಪುಗಳು ಮರಗೆಣಸಿನ ಮರುಪ್ರವೇಶಕ್ಕೆ ರಂಗಸಿದ್ಧತೆ ಮಾಡುವಲ್ಲಿ ಸಹಕಾರಿಯಾಗಿದೆ. ಮಲೇಶ್ಯಾದಿಂದ ಆಮದಾಗಿರುವುದಾದರೂ ರುಚಿಯ ವಿಚಾರದಲ್ಲಿ ಇವುಗಳ ಜತೆ ಸ್ಪರ್ಧಿಸಬಲ್ಲ ತಳಿ ಮಲಯನ್ 4 (M-4). ಪ್ರಚಾರದ ವಿಚಾರದಲ್ಲಿ ಮಲಯನ್-4 ತಳಿಯೊಂದಿಗೆ ಹೆಗಲೆಣೆಯಾಗಿರುವ ಅಂಬಕ್ಕಾಡನ್ ರುಚಿಯ ವಿಚಾರಕ್ಕೆ ಬಂದರೆ ಒಂದು ಹೆಜ್ಜೆ ಮುಂದೆಯೇ ಇದೆ.

ಮರಗೆಣಸಿನ ತಳಿಗಳನ್ನು ಸುಧಾರಿಸಲು ಅನೇಕ ಹೊಸ ವಿಧಾನಗಳು ಬಳಕೆಯಾಗಿವೆ. ಅವುಗಳ ರೀತಿ ಭಿನ್ನವಿರಬಹುದು. ಅಂತಿಮ ಲಕ್ಷ್ಯ ಒಂದೇ. ಅತ್ಯುತ್ಪಾದನ ಸಾಮರ್ಥ್ಯ, ಪೌಷ್ಟಿಕಾಂಶ ವಿಪುಲತೆ, ಶೀಘ್ರ ಬೆಳವಣಿಗೆ, ರೋಗ ಪ್ರತಿರೋಧ ಶಕ್ತಿ - ಇತ್ಯಾದಿಗಳುಳ್ಳ ತಳಿಗಳನ್ನು ಅಭಿವೃದ್ಧಿಗೊಳಿಸುವುದು.

ಹೊಸತಳಿಗಳು : ಕೇರಳದ ತಿರುವನಂತಪುರಂನಲ್ಲಿ ಕಾರ್ಯನಿರತವಾಗಿರುವ ಕೇಂದ್ರ ಗೆಣಸು ಬೆಳೆಗಳ ಸಂಶೋಧನ ಸಂಸ್ಥೆ (Central Tiber Crops Research Institute - CTC R1), ಕಾಯಂ ಕುಳಂ, ಕುಮರಗಂ ಮುಂತಾದೆಡೆಗಳಲ್ಲಿ ಕಾರ್ಯನಿರತವಾಗಿರುವ ರೀಜಿನಲ್ ಅಗ್ರಿಕಲ್ಚುರಲ್ ರಿಸರ್ಚ್ ಸ್ಟೇಷನ್ (Regional Agricultural Research Station - RARS) ಸಂಸ್ಥೆಗಳ ವತಿಯಿಂದ ಸೃಷ್ಟಿಯಾಗಿರುವ ಅತ್ಯುತ್ಪಾದನ ಸಾಮರ್ಥ್ಯದ ಮರಗೆಣಸು ತಳಿಗಳ ಕುರಿತು ಕೆಲವು ಲಘು ವಿವರಗಳನ್ನು ಮುಂದೆ ನೀಡಿದೆ.

ಎಚ್-97 (H-97) ಇದು ಮುಂಞವೆಳ್ಳ ಎಂಬ ದೇಶೀ ತಳಿ ಮತ್ತು ACC 300 ಎಂಬ ಬ್ರೆಜಿಲಿಯನ್ ತಳಿಯ ಸಂಕರ. ಮಧ್ಯಮ ಎತ್ತರ,

ಸಾಮಾನ್ಯ ಗಾತ್ರದ ಗೆಣಸುಗಳು, ಹತ್ತು ತಿಂಗಳ ಬೆಳವಣಿಗೆ, ಹೆಕ್ಟೇರಿಗೆ 25-30 ಟನ್ ಇಳುವರಿ. ಪ್ರತಿರೋಧ ಶಕ್ತಿ ಸಾಮಾನ್ಯ.

ಎಚ್- 195 (H-1650) ಚಡಯ ಮಂಗಲಂ ವೆಳ್ಳ, ಕಲಿಕಾಲನ್ ಎಂಬ ತಳಿಗಳ ಸಂಕರ. ಶೀಘ್ರ ಬೆಳೆವಣಿಗೆ ಶಾಖೆಗಳಿಲ್ಲವಾಗಿರುವುದರಿಂದ ಸಮೀಪನಾಟಿ ಯೋಗ್ಯ. ಬತ್ತದ ಬೆಳೆ ತೆಗೆದ ಬಳಿಕ ಗದ್ದೆಗಳಲ್ಲೂ ನೆಡಬಹುದು. ಗೆಣಸು ಉರುಟುರುಟು. ಉದ್ದ ಕಡಿಮೆ. ಹೆಕ್ಟೇರಿಗೆ 33-38 ಟನ್ ಇಳುವರಿ. ಒಳ್ಳೆಯ ರೋಗ ಪ್ರತಿರೋಧ ಶಕ್ತಿ.

ಎಚ್-226 (H-226) ಏತಯ್ಕಾ ಕರುಪ್ಪನ್ (ನೇಂದ್ರಕಪ್ಪು) ಮತ್ತು ಮಲಯನ್ - 4 ತಳಿಗಳ ಸಂಕರ. ಗೆಣಸು ಸಾಮಾನ್ಯ ಗಾತ್ರವುಳ್ಳದ್ದು. ಹತ್ತು ತಿಂಗಳ ಬೆಳವಣಿಗೆ, ಹೆಕ್ಟೇರಿಗೆ 30-35 ಟನ್ ಇಳುವರಿ. ರೋಗ ಪ್ರತಿರೋಧ ಶಕ್ತಿ ಕಡಿಮೆ. ಜಲಸೇಚನ ಸೌಕರ್ಯವಿದ್ದರೆ ಒಳ್ಳೆಯ ಫಸಲು.

ಶ್ರೀವಿಶಾಖಂ - ACC 150 ಎಂಬ ದೇಶೀ ತಳಿ ಮತ್ತು ಮಲಗಾಸಿ ರಿಪಬ್ಲಿಕ್‌ನ S-2312ರ ಸಂಕರ. ಒಳ್ಳೆಯ ಇಳುವರಿ ಮತ್ತು ರುಚಿ. ಹತ್ತು ತಿಂಗಳ ಬೆಳೆ. ಹೆಕ್ಟೇರಿಗೆ 35-38 ಟನ್ ಇಳುವರಿ. ರೋಗ ಪ್ರತಿರೋಧ ಶಕ್ತಿ ಚೆನ್ನಾಗಿದೆ.

ಶ್ರೀ ಸಹ್ಯ - ಇದು ಮಲಯನ್ 4ನ್ನೂ ಸೇರಿ ನಾಲ್ಕೈದು ತಳಿಗಳ ಸಂಕರ. ಹೆಕ್ಟೇರಿಗೆ 44.9 ಟನ್ ಇಳುವರಿ.

ಶ್ರೀ ಪ್ರಕಾಶ್ - ದೇಸೀ ತಳಿಗಳಿಂದ ಸೃಷ್ಟಿಸಿದ್ದು, ಹೆಕ್ಟೇರಿಗೆ 40 ಟನ್ ಇಳುವರಿ. ಎಂಟು ತಿಂಗಳ ಬೆಳವಣಿಗೆ. ರೋಗ ಪ್ರತಿರೋಧ ಶಕ್ತಿ ಕಡಿಮೆ.

ಶ್ರೀ ಹರ್ಷ - ಇದು ಒಂದು ಟ್ರಿಪ್ಲೋಯ್ಡ್ ತಳಿ. ಹೆಕ್ಟೇರಿಗೆ 60 ಟನ್ ಇಳುವರಿ. ಬರಗಾಲವನ್ನು ತಡೆದು ನಿಲ್ಲಬಲ್ಲುದು. ಹತ್ತು ತಿಂಗಳ ಬೆಳವಣಿಗೆ.

ಶ್ರೀಜಯ - ದೇಶೀ ತಳಿಗಳಿಂದ ಪಡೆದ ತಳಿ ಹೆಕ್ಟೇರಿಗೆ 58ಟನ್ ಇಳುವರಿ. ಏಳು ತಿಂಗಳ ಬೆಳೆ. ಬತ್ತ ಕೃಷಿಯ ಬಳಿಕ ಬೆಳೆಯಬಹುದು.

ಇವುಗಳಲ್ಲದೆ ಶ್ರೀ ವಿಜಯ, ಶ್ರೀರೇಖ, ಶ್ರೀಪ್ರಭ, ನಿಧಿ, ಕಲ್ಪಕ, ವೆಳ್ಳಾಯಣಿ ಹ್ರಸ್ವ ಮುಂತಾದ ತಳಿಗಳೂ ಇವೆ. ನಿಧಿ, ವೆಳ್ಳಾಯಣಿ ಮುಂತಾದುವು ಐದೂವರೆ ಆರು ತಿಂಗಳಲ್ಲಿ ಫಸಲು ನೀಡುತ್ತದೆ. ನಿಧಿಗೆ ಇಳುವರಿ ಕಡಿಮೆ (ಹೆಕ್ಟೇರಿಗೆ 25ಟನ್), ವೆಳ್ಳಾಯಣಿಗೆ ಒಳ್ಳೆಯ ಇಳುವರಿ ಕೂಡ (ಹೆಕ್ಟೇರಿಗೆ 44 ಟನ್).

ಆಕರ : ಕಾರ್ಷಿಕ ವಿಜ್ಞಾನಂ

ಕೆ.ಕೆ.

ಕೇರಳದಲ್ಲಿ ಕೀಟ ನಿಯಂತ್ರಣ ಪ್ರಕೃತಿಯ ಜೈವಿಕ ಪ್ರಕ್ರಿಯೆಗಳಿಗೆ ಮಾರಕವಾಗದ ರೀತಿಯಲ್ಲಿ ಹಿಂದಿನ ಕಾಲದ ಜನ ಬೆಳೆಗಳನ್ನು ಸಂರಕ್ಷಿಸುವ ಪಾರಂಪರಿಕ ದೇಸಿ ಉಪಾಯಗಳನ್ನು ಕಂಡುಕೊಂಡಿದ್ದರು. ಕೀಟ, ಪ್ರಾಣಿ, ಪಕ್ಷಿಗಳ ಪ್ರತ್ಯುತ್ಪಾದನ ಚಕ್ರವನ್ನು ಅರಿತುಕೊಂಡು ಅದಕ್ಕೆ ಬೇಕಾದಂತೆ ಕೃಷಿ ತಂತ್ರಗಳನ್ನು ಹೊಂದಿಸಿಕೊಂಡು ಕೀಟಬಾಧೆಯನ್ನು ತಡೆಯುವುದು ಅವರ ಮುಖ್ಯ ಜಾಣ್ಮೆಗಳಲ್ಲೊಂದಾಗಿತ್ತು.

ಬೇವಿನ ಕಷಾಯ, ಸೆಗಣಿನೀರು, ಬೂದಿ ಎರಚುವುದು, ಹಿಡಿಸೂಡಿ (ಪೊರಕೆ)ಯಿಂದ ಗುಡಿಸುವುದು- ಮುಂತಾದ ಉಪಾಯಗಳಿಂದ ಕೀಟಗಳನ್ನು ನಿಯಂತ್ರಿಸುವ ನೈಪುಣ್ಯ ಅವರಲ್ಲಿತ್ತು. ಕೀಟ ನಿಯಂತ್ರಣದ ಕೆಲವು ಕೇರಳೀಯ ವಿಧಾನಗಳನ್ನು ಇಲ್ಲಿ ಸಂಗ್ರಹಿಸಿದೆ. ಬತ್ತದ ಒಂದನೆಯ ಬೆಳೆಗೆ ತಗಲುವ ಪ್ರಮುಖ ರೋಗ ಗರಿಸುರುಟುವ ಹುಳು (leaf roller)ವಿನ ಬಾಧೆ. ಇದನ್ನು ತಡೆಯಲು ಈ ಕೆಳಗಿನ ಉಪಾಯಗಳ ಬಳಕೆ ಮಾಡುತ್ತಾರೆ.

ಕೌಶಲಪೂರ್ಣವಾಗಿ ಮೊರ/ಗೆರಸೆಯಿಂದ ಬೀಸಿ ಅವುಗಳನ್ನು ನಿವಾರಿಸುವುದು. ಇದಕ್ಕೆ ಆನಕೊಟ್ಟ, ವಾಲನ್‌ಕೊಟ್ಟ (ಬಾಲವಿರುವ), ಕಂಬು ಮುರ (= ಕೊಂಬಿರುವ), ಮುಂತಾದ ಮೊರಗಳನ್ನು ಉಪಯೋಗಿಸುತ್ತಾರೆ. ಹಿಡಸೂಡಿ (ಪೊರಕೆ)ಯಿಂದಗುಡಿಸಿ ಹಾಕುವುದು. ಪಾರಕ (ಇದಕ್ಕೆ ಎರುಮನಾಕ್, ಕಾಟ್ಟತ್ತಿ ಎಂಬ ಪರ್ಯಾಯ ಹೆಸರುಗಳೂ ಇವೆ) ಎಂಬ ಗಿಡದ ಕೊಂಬೆಗಳಿಂದ ಬೀಸಿ (ಇದನ್ನು 'ಮಿನುಗ' ಎನ್ನುತ್ತಾರೆ) ಹುಳಗಳನ್ನು ಹಿಡಿಯುವ ವಿಧಾನಗಳು ಇವೆ. ಪಾರಕದ ಎಲೆಗಳು ಬಲಯುತವೂ ಒರಟಾಗಿಯೂ ಇರುವುದರಿಂದ ಅವಕ್ಕೆ ಹುಳುಗಳನ್ನು ಬತ್ತ ಗರಿಗಳಿಂದ ಉದುರಿಸುವ ಶಕ್ತಿ ಇದೆ. ಬೀಸುವುದಕ್ಕೆ ಮುಳ್ಳಿನ ಗಿಡಗಳನ್ನೂ ಬಳಸುವುದಿದೆ. ತೊಡಲಿ (ತೊರಡಿ) ಮುಳ್ಳು ಇದಕ್ಕೆ ತುಂಬ ಯುಕ್ತ. ಮುಂಡಗೆ ಗಿಡದ ಓಲೆಗಳಿಂದಲೂ ಬೀಸುವುದಿದೆ. ಮುರದಿಂದಬೀಸುವುದಾದಲ್ಲಿ ಮುಂಜಾನೆ ಒಳ್ಳೆಯದು. ಮುಳ್ಳು, ಹಿಡಿಸೂಡಿಗಳ ಪ್ರಯೋಗಕ್ಕೂ ಈ ಹೊತ್ತೇ ಒಳ್ಳೆಯದು. ಆ ಹೊತ್ತಲ್ಲಿ ಹುಳುಗಳು ಗರಿಗಳ ಒಳಗಿಂದ ಹೊರ ಬಂದು ಗರಿಗಳ ತುದಿಭಾಗಕ್ಕೆ ಬಂದಿರುತ್ತವೆ. ಮುರದಿಂದ ಬೀಸಿದಾಗ ಕೆಳಗೆ ಉದುರಿದ ಹುಳುಗಳನ್ನು ಕೋಳಿಗಳಿಗೆ ಆಹಾರವಾಗಿ ನೀಡಿಯಾಗಲಿ, ನೆಲದಲ್ಲಿ ಹಾಕಿ ತುಳಿದಾಗಲಿ, ಮಣ್ಣಿನೊಳಗೆ ಹೂತಾಗಲಿ, ಹರಿವ ನೀರಲ್ಲಿ ಬಿಟ್ಟಾಗಲಿ, ರಾಶಿ ಹಾಕಿ ಸುಟ್ಟಾಗಲಿ ಕೊಲ್ಲಬಹುದು. ಮುರ ಇಲ್ಲವೇ ಮುಳ್ಳಿನ ಪ್ರಯೋಗ ಮಾಡುವುದಾದರೆ ಬತ್ತದ ಗದ್ದೆಯಲ್ಲಿ ನೀರುಕಟ್ಟಿ ನಿಲ್ಲಿಸಿರಬೇಕು. ಬೀಸಿದಾಗ ನೀರಿಗೆ ಬಿದ್ದ ಹುಳಗಳನ್ನು ಕಪ್ಪೆ, ಮೀನು ಮುಂತಾದುವು ತಿಂದು ಬಿಡುತ್ತವೆ. ಇನ್ನು ಕೆಲವು ಉಸಿರುಕಟ್ಟಿಯೂ ಸಾಯುತ್ತವೆ.

ಬತ್ತದ ಸಸಿಗಳು ಇನ್ನೂ ಚಿಕ್ಕವಿರುವಾಗ ಅವು ಪೂರ್ತಿ ಮುಳುಗುವಂತೆ ನೀರು ಕಟ್ಟಿ ನಿಲ್ಲಿಸಬೇಕು. ಆಗ ಹುಳುಗಳು ನೀರ ಮೇಲೆ ತೇಲಲು ಆರಂಭಿಸುತ್ತವೆ. ಬೀಸುವ ಗಾಳಿಗೆ ಇವೆಲ್ಲ ಒಂದು ಬದಿಗೆ ತಳ್ಳಲ್ಪಟ್ಟು ಒಂದೆಡೆ ಸೇರುವಂತಾಗುತ್ತದೆ. ಆಗ ಆ ನೀರನ್ನೆಲ್ಲ ಬಳಿಯ ತೋಡು, ಕಾಲುವೆಗಳಿಗೆ ಹರಿಸಿಬಿಟ್ಟರೆ ಆ ಪ್ರವಾಹಕ್ಕೆ ಸಿಕ್ಕು ಅವು ಸಾಯುತ್ತವೆ. ಈ ಅನುಕೂಲ ಇಲ್ಲದಿದ್ದಾಗ ನೀರಿಗಿಳಿದು ಪೊರಕೆಯಿಂದ ಹುಳುಗಳನ್ನೆಲ್ಲ ಗುಡಿಸಿ ಒಂದೆಡೆಗೆ ಸೇರಿಸಿ ಸಾಯಿಸಬಹುದು. ಹುಳುಗಳು ಸಾಮಾನ್ಯವಾಗಿ ಬತ್ತದ ಎಳೆಯ ಗರಿಗಳನ್ನು ತಿನ್ನದೆ ಬಲಿತವನ್ನು ಮಾತ್ರ ತಿನ್ನುವುದರಿಂದ ದೊಡ್ಡ ಹಾನಿಯಾಗುವುದಿಲ್ಲ. ಕೆಲವೊಂದು ಗರಿಗಳನ್ನು ಹುಳುಗಳು ತಿಂದರೂ ದೇಸೀ ತಳಿಯ ಬತ್ತದ ಸಸಿಗಳು ಇದನ್ನು ಲೆಕ್ಕಿಸುವುದಿಲ್ಲ. ಕೆಲವೊಮ್ಮೆ ಹುಳು ತಿಂದ ಗಿಡಗಳು ಉಳಿದವುಗಳಿಗಿಂತ ಆರೋಗ್ಯವಂತವಾಗಿ ಬೆಳೆಯುತ್ತವೆ ಎನ್ನುವುದು ಅನುಭವಿ ರೈತರ ಅನಿಸಿಕೆ ಕೂಡ.

ಸೂರ್ಯೋದಯಕ್ಕಿಂತ ಮುಂಚಿತವಾಗಿ ಬತ್ತದ ಸಸಿಗಳ ಮೇಲೆ ಬೂದಿಯನ್ನು ತೆಳ್ಳಗೆ ಹಾರಿಸುವ ಮೂಲಕ ಕೂಡ ಹುಳ ಬಾಧೆಯನ್ನು ನಿಯಂತ್ರಿಸುತ್ತಿದ್ದರು. ಸಸಿಗಳಲ್ಲಿ ಮುಂಜಾನೆ ಹೊತ್ತಿನಲ್ಲಿ ಮಂಜಿನ ತೇವವು ಇರುವುದರಿಂದ, ಹಾರಿಸಿದ ಬೂದಿ ಅದಕ್ಕೆ ಅಂಟಿಕೊಳ್ಳುತ್ತದೆ.ಕಮ್ಮಾರ ಸಾಲೆಯ ಬೂದಿ ಇನ್ನಷ್ಟು ಒಳ್ಳೆಯದು. ತ್ರಿಶ್ಶೂರ್ ಜಿಲ್ಲೆಯ ಕೊಡುಂಗಲ್ಲೂರ್ ತೀರ ಪ್ರದೇಶಗಳಲ್ಲಿ ಕೊಳವೆ ಹುಳ(Rice Cafe Worms)ವನ್ನು ಬೇರೆ ರೀತಿಯಲ್ಲಿ ನಿಯಂತ್ರಿಸುತ್ತಾರೆ. ಈ ಹುಳವು ಬತ್ತದ ಗರಿಯನ್ನು ಸುರುಟಿದ ಬಳಿಕ ಆ ಗರಿಯನ್ನುಗುರುತಿಸಿ ಕತ್ತರಿಸಿ ನೀರಿಗೆ ಹಾಕುತ್ತಾರೆ. ಈ ನೀರಿಗೆ ಗೋಡಂಬಿ ಸಿಪ್ಪೆಗಳನ್ನು (ಗೇರುಬೀಜದ ಸಿಪ್ಪೆ) ಮೊದಲೇ ಹಾಕಿರುವುದರಿಂದ ಗೇರು ಎಣ್ಣೆಯು ನೀರಿನ ಮೇಲ್ಪದರದಲ್ಲಿ ತೆಳುವಾದ ಪೊರೆಯನ್ನು ನಿರ್ಮಾಣಮಾಡಿರುತ್ತದೆ. ಇದರಿಂದ ಹುಳುಗಳಿಗೆ ಉಸಿರಾಟವು ಸಾಧ್ಯವಾಗದೆ ಅವು ಸತ್ತುಹೋಗುತ್ತವೆ. ಎರ್ನಾಕುಲಂ ಜಿಲ್ಲೆಯ ಕಾಲಡಿ ಪ್ರದೇಶದಲ್ಲೂ ಇದೇ ವಿಧಾನವನ್ನು ಬಳಸುವುದಾದರೂ ಗೋಡಂಬಿ ಸಿಪ್ಪೆಯನ್ನು ನೀರಿಗೆ ಹಾಕುವ ತಂತ್ರವನ್ನು ಮೊದಲು ಪ್ರಯೋಗಿಸಿದವರು ಕಾಲಡಿಯವರೇ. ಕೊಳವೆ ಹುಳವು ನೀರಲ್ಲಿ ಉಸಿರಾಡುವುದರಿಂದ ನೀರನ್ನು ಬತ್ತಿಸುವ ಮೂಲಕವೂ ಈ ಹುಳುವಿನ ಬಾಧೆಯನ್ನು ತಡೆಯಬಹುದು. ಅಷ್ಟೇ ಅಲ್ಲದೆ ಈ ಹುಳವು ಒಂದು ಗಿಡದಿಂದ ಇನ್ನೊಂದು ಗಿಡಕ್ಕೆ ದಾಟಿಹೋಗುವುದು ನೀರಿನ ಮೇಲೆಯೇ. ನೀರನ್ನು ಬತ್ತಿಸುವುದರಿಂದಲೂ ಕೀಟನಿಯಂತ್ರಣ ಸಾಧ್ಯ. ಕಲ್ಲುಬಂಡೆಗಳಲ್ಲಿ ಬೆಳೆಯುವ 'ಅರಿತ್ತೂಂಬ' ಎಂಬ ಗಿಡಗಳನ್ನು ಒಂದು ಹಿಡಿಯಷ್ಟು ಎತ್ತಿಕೊಂಡು ಕೋಲೊಂದಕ್ಕೆ ಕಟ್ಟಿ ಅದರಿಂದ ಬತ್ತದ ಸಸಿಗಳನ್ನು ಗುಡಿಸುವ ಮೂಲಕ ಹುಳಗಳನ್ನು ನಿಯಂತ್ರಿಸುವ ಕ್ರಮ ಕಾಸರಗೋಡು ಪ್ರದೇಶದಲ್ಲಿದೆ. ಅಂತೆಯೇ 'ಚೇರೆ' ಎಂಬ ಮರದ ಪುಟ್ಟ ಕೊಂಬೆಗಳನ್ನು ಗದ್ದೆಯಲ್ಲಿ ನಾಟುವುದರಿಂದಲೂ ಹುಳಬಾಧೆಯು ನಿಯಂತ್ರಣಕ್ಕೆ ಬರುತ್ತದೆ. ಎಮ್ಮೆಯ ಸೆಗಣಿ, ಮತ್ತಿ ಎಂಬ ಮೀನಿನ ಎಣ್ಣೆ, ಹೊಗೆಸೊಪ್ಪಿನ ರಸ, ಬೇವಿನ ಹಿಂಡಿ, 'ಮರೋಟ್ಟಿ' (ಮ.) ಹಿಂಡಿ ಮುಂತಾದವು ಹಸುರು ಹುಳುಗಳ ನಿಯಂತ್ರಣಕ್ಕೆ ಬಳಕೆಯಾಗುತ್ತದೆ. ಎಮ್ಮೆ ಸೆಗಣಿಯಲ್ಲಿ ಹಗ್ಗವೊಂದನ್ನು ಮುಳುಗಿಸಿ ಬತ್ತದ ಸಸಿಗಳ ಮೇಲೆ ಹೊಡೆಯುತ್ತಾರೆ. ಕೊಳೆತ ಮತ್ತಿಮೀನಿನ ನೀರನ್ನು ಕೂಡ ಹೀಗೆಯೇ ಹಗ್ಗ, ಹಿಡಿಸೂಡಿ, ಗಿಡಗಳ ಕೊಂಬೆ- ಮುಂತಾದವುಗಳಿಂದ ಸಸಿಗಳ ಮೇಲೆ ಸಿಂಪಡಣೆಯಾಗುವಂತೆ ಮಾಡಬೇಕು. ಹೊಗೆಸೊಪ್ಪಿನ ರಸವನ್ನು ಕೂಡ ಹೀಗೆಯೇ ಸಿಂಪಡಿಸಬಹುದು. ಬೇವು ಮತ್ತು ಮರೋಟ್ಟಿಹಿಂಡಿಗಳನ್ನು ಪುಡಿಮಾಡಿ ಸಸಿಗಳ ಮೇಲೆ ಎರಚಲಾಗುತ್ತದೆ. ಜೇಡರ ಹುಳುಗಳ ಗೂಡುಗಳನ್ನು ತಂದು ಬತ್ತದ ಗದ್ದೆಗಳ ಬದುಗಳಲ್ಲಿ ಇರಿಸುವುದರಿಂದ ಕೂಡ ಹುಳಗಳನ್ನು ನಿಯಂತ್ರಿಸುತ್ತಾರೆ. ಜೇಡನ ಹುಳುಗಳು ಈ ಹುಳುಗಳನ್ನು ಹಿಡಿದು ಭಕ್ಷಿಸಿ ಬಿಡುತ್ತವೆ.

ತಿರುವನಂತಪುರಂನ ನೆಯ್ಯಾಟಿಂಕರ ಪ್ರದೇಶದಲ್ಲಿ ಹುಳಬಾಧೆಯನ್ನು ತಡೆಯುವ ಇನ್ನೊಂದು ವಿಧಾನ ಕಾರ್ತಿಕ ದಿನದಂದು ಹೊಂಗರಕನ ಮರದ ಕೋಲೊಂದಕ್ಕೆ ಬಟ್ಟೆ ಸುತ್ತಿ ಅದನ್ನು ತೆಂಗಿನ ಎಣ್ಣೆಯಲ್ಲಿ ಮುಳುಗಿಸಿ ಬೆಂಕಿ ಹಚ್ಚಿ ಗದ್ದೆಯ ಬಯಲುಗಳಲ್ಲಿ ಊರುತ್ತಾರೆ. ಬೆಳದಿಂಗಳಿನ ಲಭ್ಯತೆಗೆ ಅನುಸಾರವಾಗಿ ಬತ್ತದ ಬೀಜ ಮೊಳಕೆ ಬರುವಂತೆ ಮಾಡುವುದು ಮತ್ತು ಬಿತ್ತನೆ ಮಾಡುವ ಕ್ರಮದಿಂದಲೂ ಕೀಟಬಾಧೆ ನಿಯಂತ್ರಣಕ್ಕೆ ಬರುತ್ತದೆ. ಅಮಾವಾಸ್ಯೆ ಕಳೆದು ಐದು ದಿನಗಳವರೆಗೆ (ಕೆಲವೆಡೆ ಮೂರುದಿನಗಳ ಕಾಲ), ಅಮಾವಾಸ್ಯೆಯಂದು ಬೀಜ ನೆನೆಹಾಕುವುದಾಗಲಿ ಬಿತ್ತನೆ ಮಾಡುವುದಾಗಲಿ ನಿಷಿದ್ಧ. ಅವು ಏನಿದ್ದರೂ ಅಮಾವಾಸ್ಯೆಗೆ ಮೊದಲು ನಡೆಯಬೇಕು. ಒಂದು ವೇಳೆ ಅದು ಸಾಧ್ಯವಾಗದಿದ್ದಲ್ಲಿ ಶುಕ್ಲಪಕ್ಷ ಪಂಚಮಿಯ ಬಳಿಕ ಅವನ್ನು ಮಾಡಬಹುದು. ಹೀಗೆ ಮಾಡುವುದರಿಂದ ಪೌರ್ಣಮಿಯ ಆಸುಪಾಸಲ್ಲಿ ಬೀಜಗಳು ಚೆನ್ನಾಗಿ ಮೊಳಕೆಯೊಡೆದಿರುತ್ತವೆ. ಹುಳಗಳು ಹುಣ್ಣಿಮೆಯ ಹೊತ್ತಿಗೆ ಪ್ಯೂಪಾವಸ್ಥೆಗೆ ತಲುಪಿರುತ್ತವೆ. ನಿಷಿದ್ಧ ದಿನಗಳಲ್ಲಿ ಬೀಜ ನೆನೆಸುವುದು ಅಥವಾ ಬಿತ್ತನೆ ಮಾಡುವುದರಿಂದಕೀಟಗಳಿಗೆ ಅನುಕೂಲವಾಗುತ್ತದೆ. (ಇವೇ ಹುಳ/ಕೀಟಗಳು ಪತಂಗಗಳಾಗಿ ಪರಿವರ್ತಿತವಾದರೆ ಕೃಷಿಕರಿಗೆ ಹಿತಕಾರಿಗಳಾಗುತ್ತವೆ!). ಅಮಾವಾಸ್ಯೆಯ ಹಿಂದಿನ ದಿನ ಕೂಡ ಕೆಲವರ ಅಭಿಪ್ರಾಯದಲ್ಲಿ ನಿಷಿದ್ಧ ದಿನವೇ ಆಗಿದೆ. ಅಂದು 'ಹುಳು ಕರಣ', ಅದು ಎಲ್ಲ ಬೆಳೆಗಳಿಗೂ ನಿಷಿದ್ಧ.

ಎರಡನೆಯ ಬತ್ತ ಬೆಳೆಗೆ ತಗಲುವ ಮುಖ್ಯ ರೋಗವೆಂದರೆ ದಂಟುರೋಗ (ಕಟ್ಟಕ್ಕೇಡ್. ಮ.). ಈ ರೋಗಕ್ಕೆ ಕೊಡಪ್ಪುಟು (ಕೊಡಹುಳ?) ಮುಖ್ಯಕಾರಣ. ನೇಜಿ ಕೀಳುವಾಗ ಹೆಚ್ಚು ತೇವಾಂಶವಿದ್ದರೆ ಮಣ್ಣು ಬೇರುಗಳಲ್ಲಿ ಅಂಟಿಕೊಳ್ಳುತ್ತದೆ. ಅದನ್ನು ಚೆನ್ನಾಗಿ ತೊಳೆಯದಿದ್ದರೆ ಬೇರಿನ ಮಣ್ಣಿಗೆ ಕೊಡಹುಳವು ತಗಲಿಕೊಳ್ಳುತ್ತದೆ. ಈ ರೋಗ ತಗಲಿತೆಂದರೆ ಗರಿಗಳು ಹಣ್ಣಾಗಲಾರಂಭಿಸಿ ಗಿಡಗಳ ಬೆಳವಣಿಗೆ ಮುರುಟಿಹೋಗುತ್ತವೆ. ವಳ್ಳುವ ನಾಡಲ್ಲಿ ಈ ರೋಗವನ್ನು ಒಡುಕ್ (ಮ.) ಎಂಬ ಸೊಪ್ಪನ್ನು ಬಳಸಿ ತಡೆಯುತ್ತಾರೆ.

ಈ ಸೊಪ್ಪು ಒಂದು ತೆರನ ಕಟುವಾಸನೆ ಮತ್ತು ನೀಲಿ ಬಣ್ಣ ಉಂಟು ಮಾಡುವ ದ್ರವ ಪದಾರ್ಥವನ್ನು ಒಳಗೊಂಡಿದೆ. ನೀಲಿ ಬಣ್ಣಕ್ಕೆ ಕಲೆಯುಂಟು ಮಾಡುವ ಶಕ್ತಿಯಿದೆ. ನಾಟಿ ಮಾಡುವ ಮೊದಲೇ ಒಡುಕಿನ ಸೊಪ್ಪನ್ನು, ಗದ್ದೆಗಳಿಗೆ ಹಾಕಿ ಉಳುಮೆ ಮಾಡಲಾಗುತ್ತದೆ. ಈ ಸೊಪ್ಪಿಗೆ ದಂಟುರೋಗವನ್ನು ನಿಯಂತ್ರಿಸುವ ಸಾಮರ್ಥ್ಯವಿದೆ. ಒಡುಕಿನ ಸೊಪ್ಪು ಇಲ್ಲವೇ ತೊಗಟೆಯನ್ನು ಜಜ್ಜಿ ಅದರ ರಸತೆಗೆದು, ರಸವನ್ನು ನೀರಲ್ಲಿ ಬೆರೆಸಿ ಸಿಂಪಡಣೆ ಮಾಡಿದರೂ ದಂಟುಕೊರೆಯುವ ಹುಳವನ್ನು ನಿಯಂತ್ರಿಸಬಹುದು. ಕಲೆ ಉಂಟುಮಾಡುವ ಶಕ್ತಿಯುಳ್ಳ ಎಲೆಗಳಿಗೆ ಮಣ್ಣಲ್ಲಿರುವ ದೋಷಕರವಾದ ಕೀಟಗಳನ್ನು ನಿಯಂತ್ರಿಸುವ ಶಕ್ತಿಯಿದೆ. ಹಸಿ ಸೊಪ್ಪನ್ನು ಗೊಬ್ಬರವಾಗಿ ಕೊಡುವಾಗ ಕಲೆಯುಂಟು ಮಾಡುವ ಹೆಚ್ಚು ಸೊಪ್ಪುಗಳನ್ನು ಬಳಸಿಕೊಳ್ಳಲು ನಮ್ಮ ಹಿಂದಿನ ತಲೆಮಾರು ಗಮನಕೊಡುತ್ತಿತ್ತು. ಉದಾಹರಣೆಗೆ : ವಟ್ಟ (ಮ.), ಬೇಂಙ, ಮರುವ, ಶೀಲಾಂತಿ (ಮ.), ಪೂವರಶ್ (ಮ.), ಊರಕೊಂದೆ, ಪೂಕ್ಕ್ (ಮ.), ಬಾಗೆ, ಮಾವು, ನೆಲ್ಲಿ, ಹೊನ್ನೆ, ದಡ್ಡಾಲ, ಆಲ- ಇತ್ಯಾದಿ ಸೊಪ್ಪುಗಳು. ಆಲ ಮುಂತಾದುವಕ್ಕೆ ಕಲೆಯುಂಟು ಮಾಡುವ ಶಕ್ತಿಯು ಒಂದು ವರ್ಷದ ತನಕವೂ ಉಳಿದುರುತ್ತದೆ ಎನ್ನಲಾಗಿದೆ. ಪಾಲ್ಘಾಟು ಜಿಲ್ಲೆಯ ಹಲವು ಕಡೆ ಆರವೇಪ್ಪಿನ ಸೊಪ್ಪನ್ನು (ಬೇವಿನ ಸೊಪ್ಪು?) ಗದ್ದೆಗಳಿಗೆ ಹಾಕುತ್ತಾರೆ. ಇದರಿಂದ ಹುಳುಗಳನ್ನು ತಡೆಯಲು ಸಾಧ್ಯ ಎಂಬುದು ಅವರ ಅನುಭವ ಸಿದ್ಧ ಮಾತು. ಕಾಸರಕನ, ಗೇರುಬೀಜ, ಪಾಣಲ್ (ಮ.) ಮುಂತಾದುವು ಕೂಡ ಇಂಥ ಅಧಿಕ ಶಕ್ತಿಯ ಸೊಪ್ಪುಗಳೇ.

ಕೇರಳದ ವಳ್ಳುವ ನಾಡಲ್ಲಿ ಎರಡನೆಯ ಬೆಳೆ ಮುಂಡಕಕ್ಕೆ ನೇಜಿ ಕಿತ್ತ ಕೂಡಲೇ ನಾಟಿ ಮಾಡುವ ಪರಿಪಾಠವಿರಲಿಲ್ಲ. ನೇಜಿಯನ್ನು ನಾಲ್ಕು

ದಿನ 'ಹಣ್ಣುಮಾಡಿ' ನೆಡುತ್ತಿದ್ದರು. ನೇಜಿಯ ಸೂಡಿ (ಸಣ್ಣ ಕಟ್ಟು)ಗಳನ್ನು ಒಂದೆಡೆ ರಾಶಿ ಹಾಕಿ ಬಿಸಿಲು ತಾಗದಂತೆ ತಾಳೆಯ/ತೆಂಗಿನ ಗರಿಗಳಿಂದ ಮುಚ್ಚಿ ಬಿಡುತ್ತಿದ್ದರು. ನಾಲ್ಕು ಕಡೆಗೂ ಬೈಹುಲ್ಲಿನ ಹುಡಿಯನ್ನು ಹಾಕಿ ನೀರು ಚಿಮುಕಿಸುತ್ತಿದ್ದರು. ಹೀಗೆ ನಾಲ್ಕು ದಿನಗಳ ಕಾಲ ಇರಿಸುವುದರಿಂದ ನೇಜಿಯ ಸೂಡಿಗಳು ಹಳದಿ ಬಣ್ಣಕ್ಕೆ ತಿರುಗಿ ಕೊಳ್ಳುತ್ತದೆ. ಒಳಗಿನ ತಾಪಕ್ಕೆ ಹುಳಗಳೆಲ್ಲ ಸತ್ತುಹೋಗುತ್ತವೆ. ಅಲ್ಲದೆ, ಹಣ್ಣಾದನೇಜಿಯ ಮೇಲೆ ಹುಳಕೀಟಗಳು ಎರಗುವುದೂ ಇಲ್ಲ. ಜತೆಗೆ ಹೀಗೆ ಹಣ್ಣಾದ ನೇಜಿಯು ನಾಟಿ ಮಾಡಿದ ಬಳಿಕ ಹುಲುಸಾಗಿಯೂ ಆರೋಗ್ಯಪೂರ್ಣವಾಗಿಯೂ ಬೆಳೆಯತೊಡಗುತ್ತದೆ.

ಮೂರನೆಯ ಬೆಳೆ 'ಪುಂಜ'ದ ಕಾಲದಲ್ಲಿ, ಧನುರ್ಮಾಸ ಇಪ್ಪತ್ತೇಳರಿಂದ ಮುಂದಿನ ಒಂದು ವಾರವನ್ನು 'ಪುಳಿಕ್ಕಾಲಂ' (ಹುಳಗಳ ಕಾಲ? ಹುಳಿತ ಕಾಲ?) ಎಂದು ಕರೆದು ಯಾವುದೇ ಕೃಷಿ ಕೆಲಸಗಳನ್ನು ಮಾಡಲು ನಿಷಿದ್ಧ ಎಂಬ ರೂಢಿಯನ್ನು ಇಟ್ಟುಕೊಂಡಿದ್ದಾರೆ. ಈ ಕಾಲಾವಧಿಯಲ್ಲಿ ಬೀಜ ನೆನೆಹಾಕುವುದು, ಬಿತ್ತನೆ-ಇತ್ಯಾದಿಗಳನ್ನು ಮಾಡಿದರೆ ಬೆಳೆ ಕರಚಿ (ಟಿ) ಹೋಗುತ್ತದೆ ಎಂದು ಹೇಳುತ್ತಾರೆ.

ಬತ್ತಕ್ಕೆ ತಗಲುವ ಕೀಟಗಳ ನಿವಾರಣೆಗೆ ಕಡತ್ತನಾಡಲ್ಲಿ ಮೈಲುತುತ್ತನ್ನೂ ಹೊಗೆಸೊಪ್ಪಿನ ಪುಡಿಯನ್ನೂ ಬಳಸುತ್ತಾರೆ. ಪಾಲ್ಘಾಟು ಜಿಲ್ಲೆಯಲ್ಲಿ ದುಷ್ಟಬಾಧೆಯ ನಿವಾರಣೆಯ ಅಂಗವಾಗಿ ಸೆಗಣಿ ನೀರಿನ ಉಪಯೋಗ ಮಾಡುತ್ತಾರೆ. ಬತ್ತದ ಗರಿಗಳಿಗೆ ಚುಕ್ಕೆ ಬೀಳುವ ರೋಗಕ್ಕೆ ಸೆಗಣಿನೀರು ದಿವ್ಯೌಷಧ. ಕೊಯ್ಲು ಮುಗಿದ ಗದ್ದೆಗಳಲ್ಲಿ ಬಾತುಕೋಳಿಗಳ ಹಿಂಡನ್ನು ಬಿಟ್ಟು ಕೀಟ ಹುಳ ಹುಪ್ಪಟೆಗಳನ್ನು ತಿನ್ನಿಸುವುದೂ ಒಂದು ಫಲಪ್ರದವಾದ ತಂತ್ರವೇ. 'ಚಾಟು = ಮಿಡಿತೆ ಎಂಬ ಕೀಟವನ್ನು ಇಬ್ಬರು ಸೇರಿ ಪಂಚೆಬೀಸಿ ಅಥವಾ ಬರಿಗೈಗಳಿಂದ ಹಿಡಿಯುವುದು ಕೂಡ ರೂಢಿಯಲ್ಲಿತ್ತು. ಇದೇ ಕೆಲಸಕ್ಕೆ 'ಚಾಟಿಬಲೆ'ಯ ಬಳಕೆಯೂ ಇತ್ತು. ಬೈರಾಸು (ಚಿಕ್ಕಪಂಚೆ) ಒಂದನ್ನು ಒಂದು ಕೋಲಿಗೆ ಬಲೆಯಂತೆ ಕಟ್ಟಿಕೊಂಡು, ಗದ್ದೆಗೆ ಇಳಿದು ಆ ಕೋಲುಬಲೆಯನ್ನು ಅತ್ತಿತ್ತ ಬೀಸುತ್ತ ಸಾಗಿದಂತೆ ಕೀಟಗಳು ಆ ಕೋಲುಬಲೆಗೆ ಸಿಕ್ಕಿಕೊಳ್ಳುತ್ತವೆ. ಬಲೆಯ ಕೆಳಭಾಗದಲ್ಲಿ ಬಟ್ಟೆಯಿಂದಲೇ ತಯಾರಿಸಿಕೊಂಡ ಒಂದು ಚೀಲವೂ ಇದ್ದು ಆಗಾಗ ಬಲೆಯನ್ನು ತಟ್ಟಿದಾಗ ಕೀಟಗಳು ಚೀಲಕ್ಕೆ ಬೀಳುತ್ತವೆ. ಅಂಥ ಬಲೆಗಳನ್ನು ಕಟ್ಟುವುದಕ್ಕೂ ಬೀಸುವುದಕ್ಕೂ ತಟ್ಟುವುದಕ್ಕೂ ನಿಪುಣ ಕೆಲಸಗಾರರು ಇರುತ್ತಾರೆ.

ಪಂಜು (ತೆಂಗಿನ ಒಣಗರಿಗಳನ್ನು ಕಟ್ಟಿಮಾಡಿದ 'ಸೂಟೆ')ಗಳನ್ನು ಬಯಲಲ್ಲಿ ಉರಿಸಿ ಕೊಂಬಾರಂ (ಒಂದು ವಿಧದ ಮುರ)ನಿಂದ ಬೀಸುತ್ತಾರೆ. ಈ ಕ್ರಿಯೆಯನ್ನು ಮುಂಜಾನೆಯ ಹೊತ್ತಿಗೆ ಮಾಡಬೇಕು. ಅಂತೆಯೇ ಪೈರು ತೆನೆಕಟ್ಟುವಾಗಲೂ ಮಾವಿನ ಪುಟ್ಟಗೆಲ್ಲುಗಳನ್ನು ಎಲೆಗಳ ಸಮೇತ ಬಯಲುಗಳಲ್ಲಿ ಅಲ್ಲಲ್ಲಿ ನಾಟುತ್ತಾರೆ. ಪೇರಳೆ ಗಿಡದ ಗೆಲ್ಲುಗಳನ್ನು ಹೀಗೆ ನಾಟುತ್ತಾರೆ. ಬೆಳ್ಳುಳ್ಳಿಯನ್ನು ಗುದ್ದಿ ರಸತೆಗೆದು ಸಿಂಪಡಿಸುತ್ತಾರೆ. ತ್ರಿಚ್ಚೂರು ಜಿಲ್ಲೆಯ ತೀರ ಪ್ರದೇಶಗಳಲ್ಲಿ 'ಚಾಟಿ' ಎಂಬ ಕೀಟ ನಿಯಂತ್ರಣಕ್ಕೆ ಚಾಳ ಎಂಬ ಮೀನನ್ನು ಬಳಸಿಕೊಳ್ಳುತ್ತಾರೆ. ಚಾಟಿಯ ಬಾಧೆಯು ಹೆಚ್ಚಿದಾಗ ದಷ್ಟಪುಷ್ಟವಾದ ಚಾಳ ಮೀನನ್ನು ಕೊಳೆಯಿಸಿ ಗದ್ದೆಗಳಲ್ಲಿ ಹರಡಿ ಬಿಡುತ್ತಾರೆ. ಅದರ ಕಡುವಾಸನೆಗೆ ಚಾಟಿಗಳು ಕಣ್ಮರೆಯಾಗಿ ಬಿಡುತ್ತವೆ. ಹುಳಗಳಿಗೆ ಹೇಗೋ ಹಾಗೆ ಚಾಟಿ ನಿಯಂತ್ರಣಕ್ಕೂ ಎಮ್ಮೆ ಸೆಗಣಿಯನ್ನು ಬಳಸಲಾಗುತ್ತದೆ. ಆದಿವಾಸಿಗಳು ಕಾಡುಕೂವೆಯ ಗೆಡ್ಡೆಯನ್ನು ಜಜ್ಜಿ ಅದರ ರಸವನ್ನು ತಳಿದು ಚಾಟಿ ಬಾಧೆಯನ್ನು ನಿಯಂತ್ರಿಸುತ್ತಾರೆ. ನಸುಬಿಸಿ ಬೂದಿ ಎರಚುವುದೂ ಒಳ್ಳೆಯ ಫಲಿತಾಂಶವನ್ನು ಕೊಡುತ್ತದೆ. ಸೂಚಿಮೊನೆಯುಳ್ಳ ಒಂದು ಬೆತ್ತದ ಕೋಲಿನ ತುದಿಯಿಂದ ಚುಚ್ಚಿಯೂ ಚಾಟಿಗಳನ್ನು ಅಟ್ಟುತ್ತಿದ್ದರು. ಹೀಗೆ ಓಡಿಸಿದರೆ ಅವು ತುಂಬ ದಿನಗಳ ಬಳಿಕವಷ್ಟೆ ಮರಳುವುವು ಎಂದು ತಿಳಿಯುತ್ತಾರೆ. ಈಂದ್ (eyens)ನ ಓಲೆ ಮತ್ತು ಕಾಯಿಗಳನ್ನು ಚಾಟಿನಿಯಂತ್ರಣಕ್ಕೆ ವ್ಯಾಪಕವಾಗಿ ಬಳಸುತ್ತಾರೆ. ಇದರ ಓಲೆಗಳನ್ನು ಚಳಯೋಲ, ಕಳಂಜೋಲ ಮುಂತಾದ ಪರ್ಯಾಯ ಹೆಸರುಗಳಿಂದಲೂ ಮಲಯಾಳಂನಲ್ಲಿ ಕರೆಯುತ್ತಾರೆ. ಬತ್ತದ ಸಸಿಗಳು ಕದಿರೊಡೆಯುವ ಕಾಲದಲ್ಲೇ ಈಂದ್‌ನ (ಒಂದು ಬಗೆಯ ಈಚಲು) ಮರ ಕೂಡ ಹೂಬಿಡುತ್ತದೆ. ಆಗ ಅದರ ಗೊನೆಗಳನ್ನು ಕಡಿದು ತಂದು ಅದರ ಹಣ್ಣುಗಳ ಸಮೇತವಾದ ಒಂದೊಂದು ಬಳ್ಳಿಯನ್ನು ಕೋಲುಗಳಿಗೆ ಕಟ್ಟಿ ಗದ್ದೆಯ ಬದಿಗಳಲ್ಲಿ ನಾಟುವ ಮೂಲಕ ಬತ್ತಕ್ಕೆ (ತೆನೆಗಳಿಗೆ) ತಗಲುವ ಕೀಟ ಬಾಧೆಯನ್ನು ನಿಯಂತ್ರಿಸಬಹುದು.

ಕೇರಳದ ಅನೇಕ ಕಡೆ ಆದಿವಾಸಿ ಜನ ತಂತ್ರ ಮಂತ್ರಗಳಿಂದ ಚಾಟಿ (ಮಿಡಿತೆ?) ನಿಯಂತ್ರಣವು ಸಾಧ್ಯವೆಂದು ತಿಳಿದಿದ್ದಾರೆ. ಅಂಥ ಅನೇಕ ಪ್ರಯೋಗಗಳು ರೂಢಿಯಲ್ಲಿದ್ದುದು ತಿಳಿದು ಬರುತ್ತದೆ. ತ್ರಿಚ್ಚೂರು ಜಿಲ್ಲೆಯಲ್ಲಿ ದೀರ್ಘ ನಿರೀಕ್ಷಣೆ, ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ಇಂಥ ಆಚರಣೆಗಳನ್ನು ರೈತರು ಮಾಡುವುದರಿಂದ ಅವು ಹೆಚ್ಚು ಪರಿಣಾಮಕಾರಿಯಾಗಿ ಕೆಲಸಮಾಡುತ್ತವೆ. ಚಾಟಿಯ ಜೀವನಚಕ್ರವನ್ನು ಅಧ್ಯಯನ ಮಾಡಿ ಸಿಕ್ಕ ವೈಜ್ಞಾನಿಕ ತಥ್ಯವೇನೆಂದರೆ ಆ ಕಾಲಘಟ್ಟದಲ್ಲಿ ಅವು ಕೀಟಾವಸ್ಥೆ ಹೊಂದುತ್ತವೆ. ಆ ಅವಧಿಯಲ್ಲಿಯೇ ಈ ಪ್ರಯೋಗಗಳು ನಡೆಯುತ್ತವೆ. ಸಾಮಾನ್ಯವಾಗಿ ಇಂಥ ಮಂತ್ರ ತಂತ್ರಗಳು ಸಾಯಂಕಾಲದ ವೇಳೆಯಲ್ಲಿ ನಡೆಯುತ್ತವೆ. ಹೀಗೆ ಮಂತ್ರ ತಂತ್ರ ಪ್ರಯೋಗ ಮತ್ತು ಕೆಲವು ಆಚರಣೆಗಳು ಜತೆಯಾದ ಕ್ರಿಯೆಗಳು ಜನಪದರಲ್ಲಿ ತುಂಬ ಪ್ರಚಾರದಲ್ಲಿವೆ. ಇವಕ್ಕೆ 'ಚಾಟಿ ವಿಲಕ್ಕ್ (ಚಾಟಿಕೀಟ ಬಹಿಷ್ಕಾರ) ಎಂದೇ ಹೆಸರು. ತುಳುವಿನಲ್ಲಿ 'ನಾಯಿ ಕುಟ್ಟಿ' ಎಂದು ಕರೆಯುವ ಒಂದು ಬಳ್ಳಿಯನ್ನು (ಅದರಲ್ಲಿ ಕಾಯಿ ಆಗುವ ಮೊದಲು) ತಂದು ಗದ್ದೆಯಲ್ಲಿ ಹೂಳುವುದು ಕೂಡ ಕೀಟ ನಿಯಂತ್ರಣಕ್ಕೆ ಸಹಕಾರಿ.

ಬತ್ತದ ತೆನೆಗಳನ್ನು ಕತ್ತರಿಸುವ 'ಮೊಂಟೆ' (ಹಸುರು ಕುದುರೆ?)ಗಳನ್ನು ಪಾಲ್ಘಾಟು ಜಿಲ್ಲೆಯ ಆಲತ್ತೂರು ಪ್ರದೇಶಗಳಲ್ಲಿ ಬೆನ್ನಟ್ಟಿ ಹಿಡಿಯುತ್ತಿದ್ದರು. ಆಗ ಗದ್ದೆ ತುಂಬ ಜನ. ಎಲ್ಲರ ಕೈಗಳಲ್ಲೂ ಯಾವುದೋ ರೂಪದ ಹಿಡಿಸೂಡಿಗಳು. ಗದ್ದೆಯ ಇನ್ನೊಂದು ಬದಿಯಲ್ಲಿ ಮೀನು ಹಿಡಿಯಲು ಬಳಸುತ್ತಿದ್ದ ಕುರುದಿಯಂಥ ದ್ರವ (ತು.ಕಡು)ವನ್ನು ಇಡುತ್ತಾರೆ. ಮೊಂಟೆಗಳನ್ನು ಜನರೆಲ್ಲ ಅಟ್ಟುತ್ತ ಬಂದು ಈ ದ್ರವಕ್ಕೆ ಅವು ಬೀಳುವಂತೆ ಮಾಡುತ್ತಾರೆ. ಹೀಗೆ ಕೆಲವು ಬಾರಿ 'ಅಟ್ಟಿಕೊಲ್ಲುವ' ತಂತ್ರವನ್ನು ಮಾಡಿದರೆ ಮೊಂಟೆಗಳ ಬಾಧೆ ನಿಯಂತ್ರಣಕ್ಕೆ ಬರುತ್ತದೆ. ಕೆಲವು ಕಡೆ ಹಸುವಿನ ಮೂತ್ರ ಸಿಂಪಡಿಸಿಯೂ ಮೊಂಟೆ ನಿಯಂತ್ರಣ ಮಾಡುತ್ತಾರೆ.

ಇಲಿಬಾಧೆಯನ್ನು ನಿಯಂತ್ರಿಸುವುದಕ್ಕೂ ಕೆಲವು ಉಪಾಯಗಳಿವೆ. ಬತ್ತದ ಪೈರು ಬದುವಿಗೆ ತಾಗದಂತೆ ಅವನ್ನು ಗದ್ದೆಯ ಬದಿಗೆ ಬಾಗಿಸಿ

ಇಟ್ಟು ಅಲ್ಲಲ್ಲಿ ಬಾಳೆಯ ಪಟ್ಟೆಗಳನ್ನು ಹಾಕಿದಾಗ ಇವು ಯಾವುದೋ ವೈರಿಗಳೆಂದು ಹೆದರಿ ಇಲಿಗಳು ಆ ಕಡೆ ಸುಳಿಯುವುದಿಲ್ಲ. ಗದ್ದೆಗಳ ಬದಿಗಳಲ್ಲಿ ಗೂಟಗಳನ್ನು ನಾಟಿ ಅವುಗಳ ತುದಿಗಳಲ್ಲಿ ತೆಂಗಿನಕಾಯಿಯ ಸಿಪ್ಪೆಗಳನ್ನು ಇಡಲಾಗುತ್ತದೆ. ಅವುಗಳ ಮೇಲೆ ಗೂಬೆಯಂಥ ಹಕ್ಕಿಗಳು ಕುಳಿತುಕೊಂಡು ಇಲಿಗಳನ್ನು ಕೊಂದು ತಿನ್ನುತ್ತವೆ.

ಹುಳ/ಕೀಟ ನಿಯಂತ್ರಣ ಪ್ರಕ್ರಿಯೆಯು ಬೀಜವನ್ನು ಮೊಳಕೆ ಬರಿಸುವ ಹಂತದಲ್ಲೇ ಪ್ರಾರಂಭವಾಗುತ್ತದೆ. ಬೀಜ ಮೊಳಕೆ ಬರಲು ಕೂವೆ ಎಲೆಗಳನ್ನು ಹಾಸುವುದರಿಂದ ಅವುಗಳ ಪ್ರತಿರೋಧ ಶಕ್ತಿಯು ಬೀಜಗಳಿಗೂ ರವಾನೆಯಾಗುತ್ತದೆ. ಬೀಜಗಳಿಗೆ ಗೆದ್ದಲು ತಗಲುವುದಿಲ್ಲ. ಕೂವೆ ಸೊಪ್ಪು ಹಾಕಿ ಗದ್ದೆಗಳನ್ನು ಉಳುಮೆ ಮಾಡುವ ಕ್ರಮವೂ ಇದೆ. ಅದರಲ್ಲೂ ಕಾಡುಕೂವೆಯ ಸೊಪ್ಪಾದರೆ ಇನ್ನೂ ಒಳ್ಳೆಯದೇ. ಅಂತೆಯೇ 'ಕರಿಂಜೊಟ್ಟ' (ಮ.)ದ ಎಲೆ ಕೂಡ. ನೀರನ್ನು ಕಟ್ಟಿ ನಿಲ್ಲಿಸಿದರೂ ಗೆದ್ದಲ ಬಾಧೆ ನಿಯಂತ್ರಣಕ್ಕೆ ಬರುತ್ತದೆ. ಒಂದು ಚೀಲ ಉಪ್ಪಿನ ಜತೆ ಒಂದು ಕಟ್ಟು ಸೋಮಲತೆಯನ್ನು ಕೆರೆ/ಬಾವಿಯಲ್ಲಿ ಕಟ್ಟಿ ಮುಳುಗಿಸಿ ಆ ನೀರನ್ನು ಗೆದ್ದಲ ಬಾಧೆಯ ನೆಲಕ್ಕೆ ಹಾಯಿಸುವುದರಿಂದಲೂ ಗೆದ್ದಲ ಬಾಧೆಯನ್ನು ನಿಯಂತ್ರಿಸಬಹುದು.

ಕಳೆಗಳನ್ನು ಮತ್ತು ಏಡಿಗಳನ್ನು ನಿಯಂತ್ರಿಸುವುದಕ್ಕೆ ಗದ್ದೆಯನ್ನು ಸರಿಯಾಗಿ ಸಮತಟ್ಟು ಮಾಡುವುದೇ ಉಪಾಯ. ಗದ್ದೆಯು ಸಮತಟ್ಟಾಗಿದ್ದಾಗ ನೀರನ್ನು ಕಟ್ಟಿನಿಲ್ಲಿಸಿ ಅಥವಾ ನೀರನ್ನು ಪೂರ್ತಿಯಾಗಿ ಹೊರಹರಿಸಿ ಈ ತೊಂದರೆಗಳನ್ನು ನಿವಾರಿಸಬಹುದು. ಗಂಟೊಡೆದ ಬತ್ತದ ಸಸಿಗಳನ್ನು ನೆಟ್ಟರೆ ಖಂಡಿತವಾಗಿಯೂ ಏಡಿಯ ಬಾಧೆ ತಗಲುತ್ತದೆ.

ಗದ್ದೆಗಳಲ್ಲಿ ಬೇಸಗೆ ಕಾಲದಲ್ಲಿ ಕಸಕಡ್ಡಿಗಳನ್ನು ಹಾಕಿ ಉರಿಸುವುದು ಕೂಡ ಕಳೆನಿಯಂತ್ರಣಕ್ಕೆ ಸಹಾಯಕ. ಎರಡು ಸಾಲು ಉತ್ತು ಗದ್ದೆಯ ಮಣ್ಣು ಚೆನ್ನಾಗಿ ಒಣಗಿದ ಮೇಲೆ ಕಸಕಡ್ಡಿಗಳನ್ನು ರಾಶಿ ಹಾಕಿ ಉರಿಸಬೇಕು. ಇಲ್ಲವಾದರೆ ಮಣ್ಣಿನಲ್ಲಿಯ ಎರೆಹುಳ ಮತ್ತು ಸೂಕ್ಷ್ಮಾಣು ಜೀವಿಗಳಿಗೆ ಅಪಾಯ ತಟ್ಟುತ್ತದೆ. ಬಿತ್ತನೆ ಮಾಡಿದರೆ ಕಳೆಯ ತೊಂದರೆ ಹೆಚ್ಚು, ನಾಟಿ ಮಾಡಿದರೆ ಕಡಿಮೆ. ಕಲೆಯುಂಟು ಮಾಡುವ ಸೊಪ್ಪುಗಳಿಗೂ ಕೆಲವು ಕಳೆಗಳನ್ನು ನಿಯಂತ್ರಿಸುವ ಶಕ್ತಿ ಇದೆ. ಪೂವೆ ಸೊಪ್ಪು ಹಾಕಿದ ಗದ್ದೆಗಳಲ್ಲಿ 'ಹರಡುವ ಹುಲ್ಲಿ'ನ ಕಳೆ (ಮ. ಶೇಕೇರಿ) ಬೆಳೆಯುವುದಿಲ್ಲ. ನೀರು ಕಟ್ಟಿ ನಿಲ್ಲಿಸಿ ಕಳೆನಿಯಂತ್ರಿಸುವ ಸಂಪ್ರದಾಯವು ಪತ್ತನಂ ತಿಟ್ಟ ಜಿಲ್ಲೆಯಲ್ಲಿ ವ್ಯಾಪಕವಾಗಿದೆ. ಹಾಗೆ ಕಟ್ಟಿನಿಲ್ಲಿಸಿದ ನೀರಲ್ಲೂ ಕೊಳೆಯದಂಥ ಚೇರಾಡಿ ಮುಂತಾದ ಬತ್ತದ ತಳಿಗಳನ್ನು ಅಲ್ಲಿ ಉಪಯೋಗಿಸುತ್ತಾರೆ. ಕಳೆಗಳು ಕೊಳೆತು ಗೊಬ್ಬರವಾಗಿ ಬಿಡುತ್ತವೆ.

ತೆಂಗಿನ ಎಳೆಯ ಗರಿಗಳನ್ನು ಕೊರೆಯುವ ಕೂರ್ವಾಯಿ(ತು.) ಎಂಬ ದುಂಬಿಜಾತಿಯ ಕೀಟಗಳ ಬಾಧೆ ತಡೆಯಲು ತೆಂಗಿನ ತೋಪುಗಳ ಸಮೀಪವೇ ತಾಳೆಮರಗಳನ್ನು ಬೆಳೆಸಲಾಗುತ್ತದೆ. ತೆಂಗಿಗೆ ತೊಂದರೆ ಮಾಡುವ ಈ ಕೀಟಗಳನ್ನು ತಾಳೆ ಮರಗಳು ಆಕರ್ಷಿಸಿ ತೆಂಗನ್ನು ಕಾಪಾಡುತ್ತವೆ. ಈ ಕೀಟಗಳನ್ನು ನಾಶಮಾಡಲು ಅನುಭವಿ ಕೃಷಿಕರು ಮಣ್ಣಿನ ದೊಡ್ಡ ಗಡಿಗೆಯಲ್ಲಿ ನೆಲಗಡಲೆ ಹಿಂಡಿಯನ್ನು ನಾಲ್ಕಾರು ದಿನ ಕೊಳೆಹಾಕಿ ಅದರ ಪರಿಮಳಕ್ಕೆ ದುಂಬಿಗಳು ಆಕರ್ಷಿತವಾಗಿ ಆ ಗಡಿಗೆಯಲ್ಲಿ ಬಿದ್ದು ಸಾಯುವಂತೆ ಉಪಾಯವನ್ನು ಮಾಡುತ್ತಾರೆ. ಮರೋಟ್ಟಿ(ಮ.) ಹಿಂಡಿಯನ್ನು ನೆನೆಹಾಕಿ ಒಂದು ದಿನ ಇರಿಸಿ ಮಣ್ಣಿನ ಕೊಡಗಳಲ್ಲಿ ತುಂಬಿಸಿ ತೆಂಗಿನ ತೋಪಲ್ಲಿ ಅಲ್ಲಲ್ಲಿ ಇರಿಸಿದರೆ ಗರಿಕೊರೆಯುವ ಕೀಟಬಾಧೆ ಕಡಿಮೆಯಾಗುತ್ತದೆ. ಇನ್ನೊಂದು ದ್ರಾವಣದ ತಯಾರಿ ಹೀಗಿದೆ. 10 ಕಿ.ಲೋ ಸೆಗಣಿ, 5 ಲೀ ಗೋಮೂತ್ರ 250 ಗ್ರಾಂ ಬೆಲ್ಲಗಳ ಜತೆ ಗೊಬ್ಬರದ ಸತ್ವವುಳ್ಳ ಒಂದು ಹಿಡಿ ಮೇಲು ಮಣ್ಣನ್ನೂ ಒಂದು ಕಿಲೋ ಕಡಲೆ ಹಿಂಡಿಯನ್ನೂ ಹಾಕಿ ಮಿಶ್ರ ಮಾಡಿ ನೂರು ಲೀಟರ್ ನೀರಲ್ಲಿ ನಾಲ್ಕು ದಿನ ಕೊಳೆಹಾಕುತ್ತಾರೆ. ಕೆಲವರು ಇದಕ್ಕೆ ಅಗ್ಗದ ಮೀನನ್ನೂ ಹಾಕುತ್ತಾರೆ. ನಾಲ್ಕೈದು ದಿನಗಳ ಬಳಿಕ ಇದರ ಒಂದು ಲೀಟರ್ ದ್ರಾವಣಕ್ಕೆ ಹತ್ತುಪಟ್ಟು ನೀರು ಸೇರಿಸಿ ಸಿಂಪಡಿಸಿ ಕೀಟಬಾಧೆಯನ್ನು ನಿವಾರಿಸಿಕೊಳ್ಳುತ್ತಾರೆ. ಗೋಮೂತ್ರಕ್ಕೆ ಹದಿನೆಂಟು ಮಡಿ ನೀರು ಸೇರಿಸಿ ಗಿಡಗಳಿಗೆ ಸಿಂಪಡಿಸುವ ಕ್ರಮಕೂಡ ಕೇರಳದಲ್ಲಿ ರೂಢಿಯಲ್ಲಿದೆ.

ಕಡಲೆ ಬೆಳೆಯ ಜತೆಜತೆಗೆ ಔಡಲಗಿಡಗಳನ್ನು ಬೆಳೆಯುವುದರಿಂದ ಕಡಲೆಗೆ ಬಾಧಿಸುವ ಕೀಟಗಳನ್ನು ಔಡಲು ಆಕರ್ಷಿಸಿ ಕಡಲೆಯನ್ನು ಕಾಪಾಡುತ್ತದೆ. ಹಸಿ ಅರಿಸಿನವನ್ನು ಅರೆದು ನೀರು ಅಥವಾ ಸೆಗಣಿಯೊಂದಿಗೆ ಮಿಶ್ರಮಾಡಿ ಅದರಲ್ಲಿ ಬೀಜಗಳನ್ನು ಅದ್ದಿ ತೆಗೆದು ಸಂಜೆಯ ಬಿಸಿಲಲ್ಲಿ ಒಣಗಿಸಿ ಬಿತ್ತನೆ ಮಾಡಿದರೆ ಫಲಸಮೃದ್ಧಿ ಹೆಚ್ಚು, ರೋಗ ಬಾಧೆ ಕಡಿಮೆ. ತೆಂಗಿನ ಮರದ ಬುಡದಲ್ಲೊಂದು ಅರಿಸಿನ ಕೊಂಬುನೆಟ್ಟರೆ ಗೆದ್ದಲ ಬಾಧೆ ಕಡಿಮೆಯಾಗುತ್ತದೆ. ಕೂವೆ, ಕಾಸರಕನ ಸೊಪ್ಪುಗಳು ತೆಂಗು ಅರಿಸಿನ ಬಣ್ಣಕ್ಕೆ ತಿರುಗುವುದನ್ನು ತಡೆಯುತ್ತದೆ. ಗೆದ್ದಲ ಬಾಧೆ ಇರುವ ಮಣ್ಣಲ್ಲಿ ಬೇವಿನ ಹಿಂಡಿ ಹುಡಿಮಾಡಿ ಸೇರಿಸುವ ರೂಢಿ ಕೇರಳದಲ್ಲಿ ತುಂಬ ಹಿಂದಿನದು. ಇದರಲ್ಲಿಯ ನಿಂಬಿನ್, ನಿಂಬಿನಿನ್, ಅಸಾಡಿ ಟಾಕ್ಸಿನ್ ಮುಂತಾದ ಆಲ್ಕಲೈಡುಗಳು ಗೆದ್ದಲನ್ನು ದೂರವಿರಿಸುತ್ತವೆ ಮತ್ತು ಗಿಡಗಳ ರೋಗನಿರೋಧಕ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಕರಿಮೆಣಸಿನ ಬಳ್ಳಿಗಳಿಗೆ ಬೇವಿನ ಹಿಂಡಿಕೊಟ್ಟರೆ ಬಾಡುವ ರೋಗವನ್ನು ತಡೆಯಲು ಸಹಾಯಕವಾಗುತ್ತದೆ. ಮಕೋಟ್ಟಿ (ಮ.) ಬೇವು, ನೆಲಗಡಲೆ, ಹರಳಿನ ಹಿಂಡಿಗಳಿಗೆ ಮಣ್ಣಿನಲ್ಲಿಯ ಕೆಲವು ಕೀಟಗಳನ್ನು (ನಿಮಾವಿರಗಳ್ ಮ.) ದೂರಮಾಡುವ ಸಾಮರ್ಥ್ಯವಿದೆ.

ಮೃದು ದೇಹದ ಹುಳ ಕೀಟಗಳನ್ನು ಹೋಗಲಾಡಿಸಲು ಆಗಾಗ ಬೂದಿಯ ಉಪಯೋಗ ತುಂಬ ಸಹಾಯಕ. ಬೂದಿಯದು ಗೊಬ್ಬರವೇ ಕೀಟನಾಶಿನಿಯೂ ಆಗಿಬಿಡುವ ವಿಸ್ಮಯ. ಅಲಸಂದೆ/ಹೆಸರು ವರ್ಗದ ಗಿಡಗಳ ದಂಟು- ಎಲೆಗಳಲ್ಲಿ ಅಂಟಿಕೊಂಡು ಅದರ ರಸವನ್ನುಹೀರಿ ಬೆಳೆಯುವ ಹೇನಿನಂಥ (ಮ. ಕುನಿಯನ್; ತು. ಪೇನ್) ಕೀಟವು ಹರಡಿದಾಗ ಹುಳಿರಸ ಹೆಚ್ಚಾಗಿರುವ ಬೂದಿಯನ್ನು ತೇವಾಂಶವು ಉಳಿದುಕೊಂಡಿರುವ ಗಿಡಗಳ ಮೇಲೆ ಎರಚಿದರೆ ಅಲ್ಲಿ ಅಂಟಿಕೊಂಡ ಕೀಟಗಳನ್ನು ಹೋಗಲಾಡಿಸುತ್ತದೆ. ಹುಳಿ ಬೂದಿ ಕಲಸಿ ಬ್ರಷ್‌ನಿಂದ ಅದನ್ನು ಹಚ್ಚಿದಾಗ ಶಲ್ಕ್ (ಮ.) ಕೀಟಗಳು ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತವೆ.

ಮಣ್ಣಿನ ಪ್ರತಿರೋಧ ಶಕ್ತಿ ಹೆಚ್ಚಿಸುವುದಕ್ಕೆ ಅಲ್ಲಿ ನಿರಂತರವಾಗಿ ಕೃಷಿ ಮಾಡದೆ ಸ್ವಲ್ಪಕಾಲ ಹಾಗೆಯೇ ಬಿಡುವುದು (ಹಡ್ಲು ಬಿಡುವುದು) ಒಳ್ಳೆಯದು. ಹುಳಗಳು / ಕೀಟಗಳು ಹೆಚ್ಚಬಹುದಾದ ಜಾಗಗಳನ್ನು ಖಾಲಿ ಬಿಡದೆ ಅಲ್ಲಿ ತೊಗರಿ, ಹೆಸರು ಮುಂತಾದುವನ್ನು ಬೆಳೆಸುವ ಮೂಲಕವೂ ಕೀಟನಿಯಂತ್ರಣವಾಗುತ್ತದೆ. ಗದ್ದೆಗಳಲ್ಲೂ ಬಯಲುಗಳಲ್ಲೂ

ಹೊಲಗಳಲ್ಲೂ ತೆಂಗಿನ ಹೆಡೆಗಳನ್ನು ತುಂಡುಮಾಡಿಕೊಂಡು ಅಲ್ಲಲ್ಲಿ ನೆಲದಲ್ಲಿ ನೆಟ್ಟಿಗೆ ಊರಿ ಕೊಡುವುದರಿಂದ ಗೂಬೆ, (ಓಲೇ ಇಞಿಲಿ (ಮ.) ಕಾಕ್ಕಾಕುಯಲ್ (ಮ.) ಕೆಂಬೋತ ಮುಂತಾದ ಹುಳುತಿನ್ನುವ ಹಕ್ಕಿಗಳು ಕುಳಿತುಕೊಂಡು ಹುಳು/ಕೀಟಗಳನ್ನು ತಿಂದು ನಾಶಪಡಿಸುತ್ತವೆ.

ಸಸ್ಯಗಳನ್ನು ಅವುಗಳ ವಿವಿಧ ಭಾಗಗಳನ್ನೂ ಬಳಸಿಕೊಂಡು ಕೀಟ ನಿಯಂತ್ರಣ ಮಾಡುವ ವಿಧಾನದ ಕುರಿತು ಒಂದು ತಖ್ತೆಯನ್ನು ಕೆಳಗೆ ನೀಡಲಾಗಿದೆ.

ಕ್ರ.ಸಂ.	ಸಸ್ಯಭಾಗ	ಉಪಯೋಗದ ರೀತಿ	ನಿಯಂತ್ರಣಗೊಳ್ಳುವ ಹುಳ/ಕೀಟಗಳು
1.	**ಹೊಗೆಸೊಪ್ಪು**	ಹತ್ತು ಗ್ರಾಂ ಹೊಗೆಸೊಪ್ಪನ್ನು ಒಂದು ಲೀಟರ್ ನೀರಲ್ಲಿ ನೆನೆಹಾಕಿ ಒಂದು ದಿನ ಇಡಬೇಕು. ಇಪ್ಪತ್ತೈದು ಗ್ರಾಂ ಬಾರ್‌ಸೋಪ್ ಹಾಕಿ ಕುದಿಸಿ ಪುನಃ ಆರು ಪಟ್ಟು ನೀರು ಸೇರಿಸಿ ಸಿಂಪಡಿಸಬೇಕು.	ಬೆಣ್ಣೆಹಾತೆ (ವೆಣ್ಣಪ್ಪಾಟ್ಟ (ಮ.)), ಹುಳಗಳು ಇತರ ಎಲೆ ತಿನಿಸಗಳನ್ನು ನಾಶಮಾಡುತ್ತದೆ.
2.	**ಬೇವಿನ ಸೊಪ್ಪು, ಬೀಜಗಳು**	ಬೇವಿನ ಸೊಪ್ಪುಗಳು ಮತ್ತು ಬೀಜ ಗಳನ್ನು ಸೇರಿಸಿ ಪುಡಿಮಾಡಿ ನೀರಲ್ಲಿ ಕಲಸಿ ಸೋಸಿ ಸಿಂಪಡಿಸಬೇಕು.	ಹಾತೆಗಳು ಮತ್ತು ಹುಳಗಳನ್ನು ದೂರ ಮಾಡುತ್ತದೆ.
3.	**ಬೆಳ್ಳುಳ್ಳಿ**	ಗುದ್ದಿ ನೀರು ಸೇರಿಸಿ ಮಿಶ್ರ ಮಾಡಿ ಸೋಸಿ ಸಿಂಪಡಿಸಬೇಕು.	ಗಿಡಗಳ ಸಹಜ ವಾಸನೆಯನ್ನು ಮರೆಮಾಡುತ್ತದೆ. ಶಲಭಗಳನ್ನು ಆಕರ್ಷಿಸುವುದು ಗಿಡಗಳ ಸಹಜವಾಸನೆ.
4.	**ಚಾಕೊಟ್ಟೆ ?(ಕರಿಂದೊಟ್ಟ. ಮ.)**	ಹಲಗೆ ಹಾಸಿ ಮನೆಗೆ ಅಂತಸ್ತು ನಿರ್ಮಿಸುವಾಗ ಹಲಗೆಗಳ ಮೇಲೆ ಹಾಸಬೇಕು.	ಗೆದ್ದಲು, ಕೀಟಗಳನ್ನು ಬಾರದಂತೆ ತಡೆಯುತ್ತದೆ.
5.	**ಮಾವಿನ ಎಲೆ**	ಅರಿಸಿನ, ಶುಂಠಿ ಮುಂತಾದವುಗಳ ಬೀಜವನ್ನು ಮರಳಲ್ಲಿ ಹಾಕಿ ಸಂರಕ್ಷಿಸಿಡುವಾಗ ಬೀಜಗಳನ್ನು ಆವರಿಸಿಡಬೇಕು.	ಮಾವಿನ ಎಲೆಗಳಲ್ಲಿರುವ ಫಿನೋಲಿಕ್ ರಾಸಾಯನಿಕವು ಕೀಟಗಳು ಬಾರದಂತೆ ತಡೆಯುತ್ತದೆ.
6.	**ಈಂದ್‌ನ ಹೂ (ಈಚಲು)**	ಗಂಡು ಈಂದ್ ಮರದ ಹೂಗೊಂಚಲನ್ನು ಕತ್ತರಿಸಿ ತಂದು ಕೋಳಿಗೂಡಿನ ಸಮೀಪ ಇರಿಸುವುದು.	ಕೋಳಿಹೇನನ್ನು ಹೋಗಲಾಡಿಸುತ್ತದೆ.
7.	**ಕಾಸರಕನ ಎಲೆ**	ಶುಂಠಿಗೆ ಇದರ ಎಲೆಗಳನ್ನು 'ಪೊದೆ' ಯಾಗಿ ಕೊಡಬೇಕು.	ಗೆದ್ದಲು ಬಾರದಂತೆ ತಡೆಯುತ್ತದೆ. ಗಾಳಿ ಸಂಚಾರಕ್ಕೆ ಅವಕಾಶ ಮಾಡಿಕೊಡುತ್ತದೆ.
8.	**? (ಕಾಟ್ಟ್‌ಕೂರ್ಕಯಿಲ. ಮ.)**	ಅಟ್ಟಪ್ಪಾಡಿಯಲ್ಲಿಯ ಇರುಳರು ರಾಗಿ ಹೊಲಗಳಲ್ಲಿ ಅಲ್ಲಲ್ಲಿ ಕಟ್ಟಿ ತೂಗುತ್ತಾರೆ.	ಇದರ ಕಟುವಾಸನೆ ರಾಗಿಗೆ ತಗಲುವ ಓಲೆ/ಗರಿಸುರುಟುವ ಹುಳಗಳನ್ನು ಅಟ್ಟುತ್ತದೆ.
9.	**? (ಅರಿಪ್ಪೂವ್ವೆಟ್ಟಿಡಿಯಿಲ. ಮ.)**	ಇದನ್ನು ಬೆಳ್ಳುಳ್ಳಿಯನ್ನೂ ಸೇರಿಸಿ ಗುದ್ದಿ ನೀರಲ್ಲಿ ಹಾಕಿ ಸೋಸಿಕೊಳ್ಳಬೇಕು.	ಷಟ್ಪದ ಕೀಟಗಳನ್ನು ದೂರಮಾಡುತ್ತದೆ.
10.	**? (ಒಟ್ಟುಚೆಟ್ಟಿಡಿತ್ತುಂಬ್. ಮ.)**	ಅಟ್ಟಪ್ಪಾಡಿಯ ಇರುಳರು ರಾತ್ರಿ ಹೊತ್ತಲ್ಲಿ ಕೋಳಿಗೂಡಿನ ಸಮೀಪವೂ ಗೋಡೆ ಸಮೀಪವೂ ಇರಿಸುತ್ತಾರೆ.	ಮೊಟ್ಟೆಗಳು, ಹೇನು ಮುಂತಾದವು ಇದರ ಎಲೆಗಳಲ್ಲೂ ದಂಟುಗಳಲ್ಲೂ ಅಂಟಿಕೊಂಡು ಬಿಡುತ್ತವೆ. ಬೆಳಗ್ಗೆ ಅವನ್ನು ಉರಿಸಿಬಿಡಲಾಗುತ್ತದೆ.

11.	ಕರಿಜೀರಿಗೆ, ಕಾಳುಮೆಣಸು, ಹಸಿಕರ್ಪೂರ, ಶುಂಠಿಗರಿಗಳ ಎಣ್ಣೆ	ಬಟ್ಟೆ, ಪುಸ್ತಕ ಮುಂತಾದವುನ್ನು ಇರಿಸುವ ಪೆಟ್ಟಿಗೆಯಲ್ಲಿ ತಳದಲ್ಲಿ ಹಾಕಿ ಇಡಬೇಕು.	ಬಾಲದ ಹುಳಗಳನ್ನು (Silver Fish?) ದೂರಮಾಡುತ್ತದೆ.
12.	? (ಕೋಳಾಂಬಿಚ್ಚೆಡಿಯಿಲ. ಮ.)	ಇದರ ಎಲೆಗಳನ್ನು ಬೇವಿನ ಬೀಜ ಗಳೊಂದಿಗೆ ಸೇರಿಸಿ ಅರೆದು ಸಿಂಪಡಿಸಬೇಕು.	ಎಲೆ ತಿನಿಹುಳುಗಳನ್ನು ನಿಯಂತ್ರಿಸುತ್ತದೆ.

ಒಟ್ಟಿನಲ್ಲಿ ಮಾರಕ ರಾಸಾಯನಿಕ ಕೀಟನಾಶಕಗಳನ್ನು ಬಳಸದೆ ಪ್ರಕೃತಿ ಸ್ನೇಹಿಯಾದ ನಾನಾ ತೆರನ ಕೀಟನಿಯಂತ್ರಣ ವಿಧಾನಗಳನ್ನು ಕೇರಳದ ಕೃಷಿಕರು ಅನುಸರಿಸುತ್ತಿದ್ದುದನ್ನು ತಿಳಿದುಕೊಂಡು ಅವುಗಳಲ್ಲಿ ಸೂಕ್ತವಾದುದನ್ನು ತಿಳಿದುಕೊಂಡು ಇಂದೂ ಮುಂದೆಯೂ ಬಳಸಿಕೊಳ್ಳ ಬಹುದಾಗಿದೆ.

ಆಕರಗಳು :

ಕೃಷಿಯುಡೆ ನಾಟ್ಟರಿವ್ - ಜೈವಿಕ ಕೀಟ ನಿಯಂತ್ರಣ - ಲೇಖನ

ಕೃಷಿ ಮಲಯಾಳಂ

ಕೃಷಿಯುಡೆ ಕೇರಳಪ್ಪೆರಮ - ಪಾಲ್‌ಸನ್ ಥಾಂ

ಕೆ.ಕೆ.

ಕೇರಳದ ಸಂಬಾರ(ಸುಗಂಧ) ಬೆಳೆಗಳು ಪುರಾತನ ಕಾಲದಿಂದಲೇ ವಿಶ್ವದ ನಾನಾ ಭಾಗಗಳ ಜನರನ್ನು ಪರಸ್ಪರ ಸಂಪರ್ಕಕ್ಕೆ ಒಳಗಾಗಿಸುವುದರಲ್ಲಿ ಸಂಬಾರ ಪದಾರ್ಥಗಳು ದೊಡ್ಡ ಪಾತ್ರವಹಿಸಿವೆ. ಉಷ್ಣವಲಯದ ಅನೇಕ ಕಾಗಳಲ್ಲಿ ಜನ್ಮ ತಳೆದ ಇವು ಇತರ ಕಡೆಯ ಜನರ ಬದುಕನ್ನೂ ಇತಿಹಾಸವನ್ನೂ ಪ್ರಭಾವಿಸಿವೆ. ಪೂರ್ವದ ಮತ್ತು ಪಶ್ಚಿಮದ ಐತಿಹಾಸಿಕ ಸಂಪರ್ಕಕ್ಕೆ ಇವೇ ಮೂಲವಾಗಿದ್ದುವೆಂದರೂ ತಪ್ಪಿಲ್ಲ.

ಅಂತಾರಾಷ್ಟ್ರೀಯ ಸಂಬಾರ ಪದಾರ್ಥ ಗುಣಮಟ್ಟ ಸುಧಾರಣ ಸಂಸ್ಥೆ ಇಂಟರ್‌ನ್ಯಾಷನಲ್ ಆರ್ಗನೈಸೇಷನ್ ಫಾರ್ ಸ್ಟ್ಯಾಂಡರ್ಡೈಸೇಷನ್ ಸ್ಪೈಸಸ್ ಸ್ಟ್ಯಾಂ ಮಾನದಂಡದಲ್ಲಿ ನೂರ ಒಂಬತ್ತು ಸಂಬಾರ ಜಿನಿಸುಗಳಿವೆ. ಇವುಗಳ ಪೈಕಿ ಅರವತ್ತಮೂರು ಭಾರತದಲ್ಲಿ ಉತ್ಪನ್ನವಾಗುತ್ತವೆ. ಭಾರತವನ್ನು ಸಂಬಾರಪದಾರ್ಥಗಳ ದೇಶವೆಂದೇ ಕರೆಯಲಾಗುತ್ತದೆ. ಸುಮಾರು ಇಪ್ಪತ್ತೈದು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿಯನ್ನು ಮಾಡಲಾಗುತ್ತದೆ. ಸುಮಾರು ಇಪ್ಪತ್ತೇಳು ಲಕ್ಷಟನ್ ಉತ್ಪಾದನೆಯಾಗುತ್ತವೆ. ಪ್ರಪಂಚಾದ್ಯಂತ ವಾರ್ಷಿಕವಾಗಿ ಪಡೆಯುವ ಸುಮಾರು ಐದು ಲಕ್ಷ ಟನ್ ಸಂಬಾರ ಪದಾರ್ಥಗಳಲ್ಲಿ ಸುಮಾರು 1.9 ಲಕ್ಷ ಟನ್ ಭಾರತದಿಂದ ರಫ್ತಾಗುತ್ತದೆ. 1999-2000ರಲ್ಲಿ ರಫ್ತು 2.9 ಲಕ್ಷ ಟನ್. ಈ ಮೂಲಕ ಸಾವಿರದ ಎಂಟನೂರ ಅರುವತ್ತೊಂದು ಕೋಟಿ ರೂಪಾಯಿಗಳ ವಾಣಿಜ್ಯ ವಹಿವಾಟು ಪ್ರತಿವರ್ಷವೂ ಭಾರತಕ್ಕೆ ಲಭ್ಯವಾಗಿದೆ.

ಇವುಗಳ ಮುಖ್ಯ ಆಮದುಗಾರ ರಾಷ್ಟ್ರಗಳೆಂದರೆ ಉತ್ತರ ಅಮೇರಿಕಾ, ಯೂರೋಪಿಯನ್ ಯೂನಿಯನ್‌ಗಳು ಅದರಲ್ಲೂ ಅತಿ ಹೆಚ್ಚು ಆಮದು ಮಾಡಿಕೊಳ್ಳುವುದು ಯುನೈಟೆಡ್ ಸ್ಟೇಟ್ಸ್. ಯೂರೋಪಿಯನ್ ಜರ್ಮನಿ, ನೆದರ್‌ಲ್ಯಾಂಡ್ಸ್, ಫ್ರಾನ್ಸ್, ಇಂಗ್ಲೆಂಡ್ - ರಾಷ್ಟ್ರಗಳೂ ಪ್ರಧಾನ ಆಮದು ದೇಶಗಳು. ಜಪಾನ್ ಕೂಡಾ ಒಂದು ಮುಖ್ಯ ಆಮದು ರಾಷ್ಟ್ರವಾಗಿದೆ.

ಭಾರತದಲ್ಲಿ ಅತಿ ಹೆಚ್ಚು ಸಂಬಾರ ಪದಾರ್ಥಗಳನ್ನು ಉತ್ಪಾದಿಸುವ ರಾಜ್ಯವೆಂದರೆ ಕೇರಳ. ಕಾಳುಮೆಣಸು, ಏಲಕ್ಕಿ, ಶುಂಠಿ, ಅರಿಸಿನ, ಜಾಯಿಕ್ಕಾಯಿ, ದಾಲ್ಚೀನಿ, ಲವಂಗ ಮುಂತಾದವು ಇಲ್ಲಿಯ ಬೆಳೆಗಳು.

ಶೀತವಲಯಕ್ಕಿಂತ ಉಷ್ಣವಲಯದಲ್ಲಿ ಬೆಳೆಯುವ ಸಂಬಾರ ಜಿನಿಸುಗಳು ರುಚಿಯಲ್ಲೂ ಕಟುತ್ವ (ಖಾರ)ದಲ್ಲೂ ಮೇಲು ಮಟ್ಟದವು. ಆದರೆ ಪರಿಮಳ ಕಡಿಮೆ. ಆಹಾರ ಪದಾರ್ಥಗಳಿಗೆ ಬಣ್ಣ ಮತ್ತು ಪರಿಮಳ ಒದಗಿಸಲು ಇವು ಶೇಕಡಾ ಮೂರು / ನಾಲ್ಕು ತಯಾರಿಕೆಗೆ ಬಳಕೆಯಾದರೆ ಶೇಕಡಾ ಒಂದು / ಎರಡರಷ್ಟೂ ಔಷಧ ತಯಾರಿಕೆಗೆ ಬಳಕೆಯಾಗುತ್ತದೆ. ಶುಂಠಿ, ಕಾಳುಮೆಣಸು, ಅರಿಸಿನ, ಬೆಳ್ಳುಳ್ಳಿ, ಕುಂಕುಮದ ಹೂವು, ಅಜೋವನ್ ಮುಂತಾದವುಗಳಿಗೆ ಅಪಾರ ಔಷಧಿಯ ಗುಣಗಳಿವೆ. ಆಯುರ್ವೇದ ಔಷಧಿಗೆ ಇವು ಅತ್ಯಗತ್ಯ. ಕೆಲವು ದ್ರವ್ಯಗಳು ಸೌಂದರ್ಯ ಸಂರಕ್ಷಕಗಳೂ ಆಗಿವೆ. ಅರಿಸಿನ, ಕುಂಕುಮ ಹೂವು, ಜೀರಿಗೆ ಮುಂತಾದವು ಇಂಥವು. ಪರಿಮಳದ ಎಣ್ಣೆ (Spice Oil) ಯೂಡಿಕೋಲನ್ ಮುಂತಾದವುಗಳ ತಯಾರಿಕೆಯಲ್ಲೂ ಇವು ಬಳಕೆಯಾಗುತ್ತದೆ. ಕೇರಳದ ದೇವಾಲಯಗಳಲ್ಲಿ ಬಳಸುವ ಕುರುದಿ (ಅರಿಸಿನ, ಸುಣ್ಣ ಮಿಶ್ರಿತ ನೀರು)ಯಲ್ಲೂ ಕಳಮೆಟುತ್ (ಕಳಂ ಬರೆಯುವುದು)ಆಚರಣೆಗಳಲ್ಲೂ ಅರಿಸಿನದ ಬಳಕೆಯಿದೆ.

ಪರಿಮಳ ದ್ರವ್ಯಗಳನ್ನು ಹುಡಿ ಮಾಡಿ ದಾಸ್ತಾನಿಟ್ಟುಕೊಳ್ಳುವುದರಿಂದ ಉಂಟಾಗುವ ಗುಣಮಟ್ಟದ ಕುಸಿತವನ್ನು ತಡೆಯಲು ಕ್ರಯೋ ಗ್ರೈಂಡಿಂಗ್ (ಕಡಿಮೆ ಪ್ರಮಾಣದ ತಾಪದಲ್ಲಿ ಹುಡಿಮಾಡುವುದು) ಪದ್ಧತಿಯನ್ನು ತಿರುವನಂತಪುರದ CSIRನ ಕೈಕೆಳಗೆ ಕಾರ್ಯವೆಸಗುವ RRL (ರೀಜನಲ್ ರಿಸರ್ಚ್ ಲ್ಯಾಬೊರೆಟರಿ) ಸಂಸ್ಥೆ ಕಂಡು ಹಿಡಿದಿದೆ. ಈ ಪದ್ಧತಿಯು ತುಂಬ ವೆಚ್ಚದಾಯಕವಾಗಿರುವುದರಿಂದ ಇವುಗಳ ತೈಲವನ್ನು 'ಮೈಕ್ರೋ ಎನ್‌ಕಾಪ್ಸುಲೇಟೆಡ್' ರೀತಿಯಲ್ಲಿ ದಾಸ್ತಾನು ಮಾಡಲಾಗುತ್ತದೆ. ಇದರಿಂದ ಗುಣವಾಗಲಿ ಪರಿಮಳವಾಗಲಿ ಕೆಡುವುದಿಲ್ಲ.

ಮುಖ್ಯ ಸಂಬಾರ ಪದಾರ್ಥಗಳು : 1. ಕಾಳುಮೆಣಸು : ಇದು ಸಂಬಾರ ಸಸ್ಯಗಳ ರಾಜ ಎನಿಸಿಕೊಂಡಿದೆ. ಪೈಪ್ಪರ್ ನಿಗ್ರಮ್ ಎಂಬುದು ಇದರ ಸಸ್ಯ ವೈಜ್ಞಾನಿಕ ಹೆಸರು. 'ಪೈಪ್ಪರೇಸಿ' ಸಸ್ಯ ವರ್ಗಕ್ಕೆ ಸೇರಿದ್ದು ಪ್ರಪಂಚದ ಮಾರುಕಟ್ಟೆಯಲ್ಲಿ 25-30 ಪಾಲು ವಹಿವಾಟು ಇದರದೇ. ಶೇ. 80ರಷ್ಟು ಭಾರತದಿಂದ ರಫ್ತಾಗುತ್ತದೆ. ಬ್ರೆಜಿಲ್, ಇಂಡೋನೇಷ್ಯಾಗಳು ಸ್ಪರ್ಧಿಗಳು. ಈ ರಾಷ್ಟ್ರಗಳಲ್ಲದೆ ಉಷ್ಣವಲಯದ ಶ್ರೀಲಂಕಾ, ಥಾಯ್ಲೆಂಡ್, ಮಲೇಷ್ಯಾಗಳಲ್ಲೂ ಬೆಳೆಯಲಾಗುತ್ತದೆ. ಉತ್ಪಾದನ

ಸಾಮರ್ಥ್ಯದಲ್ಲಿ ಭಾರತ ತುಂಬ ಹಿಂದಿದೆ. ಹೆಕ್ಟೇರಿಗೆ ಇನ್ನೂರ ತೊಂಬತ್ತು ಕಿ.ಗ್ರಾಂ. ಮಲೇಷ್ಯಾದಲ್ಲಿ ಸರಾಸರಿ ಇದರ ಹತ್ತು ಪಟ್ಟು ಹೆಚ್ಚು ಬೆಳೆಯಲಾಗುತ್ತದೆ. ಅಲ್ಲಿ ಹೆಕ್ಟೇರಿಗೆ ಐದು ಸಾವಿರ ಗಿಡಗಳು ; ಭಾರತದಲ್ಲಿ ಆರ್‍ನೂರು ಗಿಡಗಳು. (ಭಾರತದಲ್ಲಿ ಇದು ಮಿಶ್ರ / ಎಡೆ ಬೆಳೆ, ಮಲೇಷ್ಯಾದಲ್ಲಿ ಏಕಬೆಳೆ). ಕಾಳುಮೆಣಸು ಹುಟ್ಟಿದ್ದು ಪಶ್ಚಿಮ ಘಟ್ಟಗಳಲ್ಲಿ, ಭಾರತದ ಕಾಳುಮೆಣಸು ಕೃಷಿಯ ಸಿಂಹಪಾಲು ಕೇರಳದ್ದು. 1990-2000ರ ಲೆಕ್ಕಪ್ರಕಾರ ಕೇರಳದಲ್ಲಿ ಒಂದು ಲಕ್ಷ ತೊಂಬತ್ತೆಂಟು ಸಾವಿರದ ನಾನ್ನೂರ ಹದಿಮೂರು ಹೆಕ್ಟೇರಲ್ಲಿ ನಲವತ್ತೇಳು ಸಾವಿರದ ಐನೂರ ನಲವತ್ತು ಟನ್ ಕಾಳು ಮೆಣಸು ಬೆಳೆಯಲಾಯಿತು. ಅಂದರೆ ಹೆಕ್ಟೇರಿಗೆ ಇನ್ನೂರ ನಲವತ್ತು ಕಿ.ಗ್ರಾ. ಎರಡನೆಯ ಸ್ಥಾನ ಕರ್ನಾಟಕಕ್ಕೆ. ತಮಿಳುನಾಡು, ಅಂಡಮಾನ್, ನಿಕೋಬಾರ್‌ಗಳಲ್ಲಿ, ಪಾಂಡಿಚೇರಿಗಳಲ್ಲೂ ಇದರ ಕೃಷಿ ಇದೆ. ಮಲಬಾರ್ ಕರಿಮೆಣಸು ಮತ್ತು ತಲಚ್ಚೇರಿ ಕರಿಮೆಣಸು / ಕಾಳುಮೆಣಸು (ಎರಡೂ ಕೇರಳದ್ದು) ವಿಶ್ವವಿಖ್ಯಾತ, ಕೇರಳದಲ್ಲೂ ಕಣ್ಣಾನೂರು, ಕಾಸರಗೋಡು, ವಯನಾಡು, ಕೋಝಿಕ್ಕೋಡು, ಕೊಟ್ಟಾಯಂ, ಇಡುಕ್ಕಿ ಜಿಲ್ಲೆಗಳಲ್ಲಷ್ಟೇ ಕಾಳುಮೆಣಸು ಬೆಳೆಯುತ್ತಾರೆ. ಸುಮಾರು ಅರವತ್ತರಷ್ಟು ವಿಭಿನ್ನ ತಳಿಗಳನ್ನು ಬೆಳಸಲಾಗುತ್ತದೆ. ಬಾಲನ್ ಕೊಟ್ಟ್, ಕಲ್ಲುವಳ್ಳಿ ತಳಿಗಳು ಮುಖ್ಯ. ತಿರುವಾಂಕೂರು ಭಾಗದಲ್ಲಿ ಕರಿಮುಂಡ, ನಾರಾಯಕ್ಕೊಡಿ, ಕುದಿರವಾಲಿ, ಕೊಟ್ಟನಾಡನ್ - ಮುಖ್ಯ ತಳಿಗಳು. ಇಡುಕ್ಕಿ ವಯನಾಡ್‌ನಂಥ ಎತ್ತರ ಪ್ರದೇಶಗಳಲ್ಲಿ ಎಂಬಿರಿಯನ್ ಎಂಬ ತಳಿ. ಕೇರಳದಲ್ಲಿ ವೈಜ್ಞಾನಿಕವಾಗಿ ಕಾಳುಮೆಣಸಿನ ಕೃಷಿಗೆ ಆರಂಭವಾದುದು. 1949ರಲ್ಲಿ ಪನ್ನಿಯೂರಿನ ಕಾಳುಮೆಣಸು ಸಂಶೋಧನ ಕೇಂದ್ರದಿಂದ ಅಧಿಕ ಇಳುವರಿಯ ಪನ್ನಿಯೂರ್-1, ಪನ್ನಿಯೂರ್-2 (ಕೃಷ್ಣ), ಪನ್ನಿಯೂರ್-3 (ಶ್ಯಾಮ), ಪನ್ನಿಯೂರ್-4 (ಅಂಜನ), ಪನ್ನಿಯೂರ್-5, ಪನ್ನಿಯೂರ್-6, ಪನ್ನಿಯೂರ್-7 ಎಂಬ ತಳಿಗಳನ್ನು ರೂಪಿಸಲಾಯಿತು. ಶ್ರೀಕರ, ಶುಭಕರ, ಪಂಚಮಿ, ಪೌರ್ಣಮಿ, ಪಿ.ಎಲ್.ಡಿ-2 ಎಂಬ ಇತರ ತಳಿಗಳು ಬೇರೆ ಸಂಶೋಧನ ಸಂಸ್ಥೆಗಳಿಂದ ರೂಪಿತವಾಗಿವೆ.

ಕಾಳುಮೆಣಸಿಗೆ 'ಕಪ್ಪು ಚಿನ್ನ' ಎಂಬ ಬಿರುದು ಇದೆ. ಚೆನ್ನಾಗಿ ಬಲಿತ, ಆದರೆ ಹಣ್ಣಾಗದ ಕಾಳುಗಳನ್ನು ಒಣಗಿಸಿಕೊಂಡು ಇದರ ದಾಸ್ತಾನು ಮಾಡಲಾಗುವುದು. ಎಳೆಯದನ್ನು ಎಳೆಯ ಕಾಳು ಮೆಣಸು ಎಂದೂ ಹಣ್ಣಾದ್ದನ್ನು ಬಿಳಿ ಕಾಳುಮೆಣಸು ಎಂದೂ ಸಂಸ್ಕರಿಸಿ ದಾಸ್ತಾನು ಮಾಡಬಹುದು. ಹಣ್ಣಾದ ಬಿಳಿ ಕಾಳುಮೆಣಸಿನಿಂದ ಪಡೆಯುವ ಉತ್ಪಾದನೆಯ ತೊಂದರೆಗಳೆಂದರೆ ಹಕ್ಕಿಗಳು ತಿನ್ನುವುದು ಮತ್ತು ಹಣ್ಣು ಕಾಳುಗಳು ಉದುರುವುದು. ಬಿಳಿ ಕಾಳುಮೆಣಸು ಮತ್ತು ಕರಿಕಾಳುಮೆಣಸುಗಳಿಗಿಂತ ಹಸುರುಕಾಳು ಮೆಣಸನ್ನು ಜರ್ಮನಿ, ಫ್ರಾನ್ಸ್, ಬೆಲ್ಜಿಯಂ, ಫಿನ್ಲೆಂಡ್, ಡೆನ್ಮಾರ್ಕ್, ಅಮೆರಿಕಾ, ಜಪಾನ್ ದೇಶದವರು ಅದರ ಆಕರ್ಷಕ ಬಣ್ಣ, ಸಹಜ ಸುವಾಸನೆ ಮತ್ತು ಹದ ಖಾರಗುಣಗಳಿಗೂ ಇಷ್ಟಪಡುತ್ತಾರೆ. ಕಾಳುಮೆಣಸಿನ ಹಿಂಡಿ, ಅದರ ತೈಲ, ಅದರ ಸತ್ತ್ವಗಳು ಕೂಡ ಸಾಕಷ್ಟು ಪ್ರಮಾಣದಲ್ಲಿ ರಫ್ತಾಗುತ್ತವೆ.

ಕೆಮ್ಮು, ಶೀತ, ಗಂಟಲು ನೋವು / ಗಂಟಲು ಬಾವು, ತುರಿಕೆ ಮುಂತಾದವುಗಳಿಗೆ ಕಾಳುಮೆಣಸು ಔಷಧ. ಬೀಜಗಳ ಮೂಲಕ ಗಿಡಗಳನ್ನು ಉತ್ಪಾದಿಸಬಹುದಾದರೂ ಇದರ ಬಳ್ಳಿಗಳಿಂದಲೇ ಗಿಡಗಳನ್ನು ಬೆಳೆಸಲಾಗುತ್ತದೆ. ನವೆಂಬರ್‌ನಿಂದ ಮಾರ್ಚ್‌ವರೆಗೆ ಎಂಟು / ಹತ್ತು ದಿನಗಳ ಅಂತರದಲ್ಲಿ ಕಾಳುಮೆಣಸು ಬಳ್ಳಿಯ ಬುಡವೊಂದಕ್ಕೆ ನೂರು ಲೀಟರ್ ನೀರು ಒದಗಿಸಿದರೆ ಶೇ. 50 ಹೆಚ್ಚು ಇಳುವರಿ ಪಡೆಯಬಹುದು.

ಥಕ್ಕನೆ ಬಾಡುವ 'ದ್ರುತಬಾಡುರೋಗ' ದೊಡ್ಡ ಸಮಸ್ಯೆ. ಇನ್ನೊಂದು ಕಾಯಿಲೆ 'ಮಂದಬಾಡುವಿಕೆ'. ವೈರಸ್ ಮೂಲವಾಗಿರುವ 'ಸ್ಪಂಡ್' ಕಾಯಿಲೆಗೆ ಇನ್ನೂ ಪರಿಹಾರ ಹುಡುಕಲಾಗಿಲ್ಲ. ಸಾವಯವ ಗೊಬ್ಬರವನ್ನು ಬಳಸಿ ಉತ್ಪಾದಿಸುವ ಕಾಳುಮೆಣಸಿಗೆ ವಿದೇಶಗಳಲ್ಲಿ ವಿಶೇಷ ಬೇಡಿಕೆ ಇದೆ.

ಏಲಕ್ಕಿ : ಏಲಕ್ಕಿ ಮತ್ತು ಲವಂಗಗಳೇ ನಿಜವಾಗಿಯೂ ಭಾರತವನ್ನು ವಿಶ್ವ ಮಾರುಕಟ್ಟೆಗಳಿಗೆ ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದೆಯೇ ಪರಿಚಯಿಸಲು ಸಹಾಯ ಮಾಡಿದ ಸಂಬಾರ ಸಸ್ಯಗಳು. ಕಾಳುಮೆಣಸನ್ನು ಬಿಟ್ಟರೆ ಅತಿ ಮುಖ್ಯವಾದುದು ಏಲಕ್ಕಿಯೇ. ಅದನ್ನು 'ಸುಗಂಧ ದ್ರವ್ಯಗಳ ರಾಣಿ' ಎಂದು ಕರೆಯಲಾಗುತ್ತದೆ. ಇದರ ವೈಜ್ಞಾನಿಕ ಹೆಸರು ಎಲೆತ್ತರ ಕಾರ್ಡಮಮ್. ಮಲಯಾಳಂ ಪದ 'ಏಲತ್ತಂ' ಮತ್ತು ಸಂಸ್ಕೃತದ 'ಕರ್ದಮ'ಗಳನ್ನು ಸೇರಿಸಿ ಈ ಹೆಸರನ್ನು ರೂಪಿಸಲಾಗಿದೆ. ಇದು ಒಂದು ಸ್ಥಾಯೀಗಿಡ. ಒಂದರೊಳಗಿಂದ ಒಂದು ಹಾಳೆಯಂಥ ಎಲೆಗಳು ಹೊರಬರುತ್ತವೆ. ಇದೇ ಇದರ ಕಪಟದಂಟು ಕೂಡ. ಭೂಕಾಂಡಗಳಿಂದ ಹೊರಡುವ 'ಶರ' (ಹೂಗೊನೆ)ಗಳಿಂದ ಕಾಯಿಗಳ ಉತ್ಪಾದನೆ.

ಭಾರತದಲ್ಲಿ ಬೆಳೆಯುವ ಏಲಕ್ಕಿಯೇ ವಿಶ್ವದ ರಾಷ್ಟ್ರಗಳಲ್ಲಿ ಅತ್ಯಧಿಕ ಪ್ರಮಾಣದ್ದು. 1996-97ರ ಲೆಕ್ಕ ಪ್ರಕಾರ ಎಪ್ಪತ್ತೆರಡು ಸಾವಿರದ ನಾನ್ನೂರ ನಲವತ್ತು ಹೆಕ್ಟೇರ್‌ಲ್ಲಿ ಆರು ಸಾವಿರದ ಆರ್‍ನೂರ ಮೂವತ್ತು ಟನ್ ಉತ್ಪಾದನೆಯಾಗಿದೆ. ಹೆಕ್ಟೇರಿಗೆ ನೂರನಲವತ್ತೊಂಬತ್ತು ಕಿ.ಗ್ರಾಂ. ಭಾರತವಲ್ಲದೆ ಶ್ರೀಲಂಕಾ, ಗ್ವಾಟೆಮಾಲ, ಥಾಯ್ಲೆಂಡ್‌ಗಳಲ್ಲೂ ಏಲಕ್ಕಿ ಬೆಳೆಯುತ್ತಾರೆ. ಲಾವೋಸ್, ಕೋಸ್ಟಾರಿಕಾ, ಎಲ್ ಸಾಲ್ವದೋರ್, ತಾಂಜಾನಿಯಾಗಳಲ್ಲೂ ಸಣ್ಣ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಉತ್ಪಾದನೆ ಮತ್ತು ರಫ್ತುಗಳಲ್ಲಿ ಭಾರತಕ್ಕೆ ಅಗ್ರಸ್ಥಾನವಿತ್ತು. 1985-86ರಲ್ಲಿ ಆ ಆಸ್ಥಾನಕ್ಕೆ ಗ್ವಾಟೆಮಾಲ ಏರಿತು. ಈಗಲೂ ಸ್ಥಾನಮಾನ ಹಾಗೆಯೇ ಇದೆ. ಹದಿನಾರು ಸಾವಿರ ಟನ್ ಏಲಕ್ಕಿಯನ್ನು ಗ್ವಾಟೆಮಾಲ ಉತ್ಪಾದಿಸುತ್ತಿದ್ದರೆ ಭಾರತ ಆರು ಸಾವಿರದ ಆರ್‍ನೂರ ಮೂವತ್ತು ಟನ್ ಮಾತ್ರ ಈಗ ಬೆಳೆಯುತ್ತಿದೆ. ಭಾರತದಲ್ಲಿಯ ಉತ್ಪಾದನೆಯ ಶೇ. 92 ಆಂತರಿಕ ಮಾರುಕಟ್ಟೆಯಲ್ಲೇ ವಿಕ್ರಯವಾಗುತ್ತದೆ. ಗ್ವಾಟೆಮಾಲದಲ್ಲಿ 2 ರಿಂದ 17 ಮಾತ್ರ.

ಗುಣದಲ್ಲೂ ತಳಿಯಲ್ಲೂ ಭಾರತೀಯ ಏಲಕ್ಕಿಗೇ ಮೊದಲನೆಯ ಸ್ಥಾನ. ಅದರಲ್ಲೂ 'ಆಲೆಪ್ಪಿಗ್ರೀನ್' ಎಂಬ ಕೇರಳೀಯ ತಳಿ ವಿಶ್ವಮಾರುಕಟ್ಟೆಯಲ್ಲೇ ಉತ್ಕೃಷ್ಟತೆಗೆ ಪ್ರಸಿದ್ಧ. 1999-2000ರಲ್ಲಿ ಐನೂರ ಐವತ್ತು ಟನ್ ಏಲಕ್ಕಿ ಭಾರತಕ್ಕೆ ಇಪ್ಪತ್ತೇಳು ಕೋಟಿ ರೂಪಾಯಿ ವಿದೇಶಿ ವಿನಿಮಯ ಸಂಪಾದಿಸಿಕೊಟ್ಟಿದೆ.

ಭಾರತದಲ್ಲಿ ಅತ್ಯಧಿಕ ಏಲಕ್ಕಿ ಬೆಳೆಯುವುದು 'ಪೂರ್ವದಿಕ್ಕಿನ ಏಲಕ್ಕಿ ತೋಟ' ಎಂದು ಹೆಸರಾದ ಕೇರಳದಲ್ಲಿ. ಶೇ. 53 ಏಲಕ್ಕಿ ಕೇರಳದಲ್ಲಿ ಬೆಳೆಯುತ್ತದೆ. ಕರ್ನಾಟಕದಲ್ಲಿ ಶೇ. 34 ತಮಿಳ್ನಾಡಲ್ಲಿ ಶೆ. 7 ಏಲಕ್ಕಿ ಉತ್ಪಾದನೆಯಾಗುತ್ತದೆ. ಹೆಕ್ಟೇರ್ ಸರಾಸರಿ ಬೆಳೆಯನ್ನು ಪರಿಗಣಿಸಿದರೆ

ತಮಿಳ್ನಾಡು ಮುಂದೆ ಇದೆ. ಅಲ್ಲಿ ಹೆಕ್ಟೇರಿಗೆ ನೂರ ಎಪ್ಪತ್ತೆರಡು ಕಿ.ಗ್ರಾಂ. ಬೆಳೆದರೆ ಕರ್ನಾಟಕದಲ್ಲಿ ನೂರ ಮೂರು ಕಿ.ಗ್ರಾಂ.ಗಳು ಮಾತ್ರ. ಕೇರಳದ ಇಡುಕ್ಕಿ, ವಯನಾಡು, ಪಾಳ್ಘಾಟು ಜಿಲ್ಲೆಗಳಲ್ಲಿ ಏಲಕ್ಕಿ ಹೆಚ್ಚು ಬೆಳೆಯುತ್ತದೆ. 1999-2000ರ ಲೆಕ್ಕಾನುಸಾರ ಕೇರಳವು ನಲವತ್ತೊಂದು ಸಾವಿರದ ನಾನ್ನೂರ ತೊಂಬತ್ತು ಹೆಕ್ಟೇರ್ ಪ್ರದೇಶದಲ್ಲಿ ಆರುಸಾವಿರದ ಐನೂರ ತೊಂಬತ್ತು ಟನ್ ಏಲಕ್ಕಿ ಬೆಳೆಯಲಾಯಿತು.

ಏಲಕ್ಕಿ ಬೆಳೆಯ ಕುರಿತಾಗಿ ಸಂಶೋಧನೆ ನಡೆಸಿದ ಫಲರೂಪವಾಗಿ ಸಾಲುಪದ್ಧತಿ (ಟ್ರೆಂಚ್‌ಮೆತೆಡ್) ಬಳಸಲಾಗುತ್ತದೆ. 1966ರಲ್ಲಿ 'ಕಾರ್ಡಮಮ್ ಬೋರ್ಡ್'ಅನ್ನು ರೂಪಿಸಲಾಯಿತು, ಈಗ ಇದರ ಜವಾಬ್ದಾರಿಗಳನ್ನು ಸ್ಪೈಸ್‌ಬೋರ್ಡ್ ವಹಿಸಿಕೊಂಡಿದೆ. ಸಂಶೋಧನ ಕಾರ್ಯಗಳು ಕೇರಳದ ಪಾಂಬಾಡುಂಪಾರ, ಕರ್ನಾಟಕದ ಮೂಡಿಗೆರೆಗಳಲ್ಲಿ ನಡೆಯುತ್ತಿದೆ. ಮಯಿಲಾಡುಂ ಪಾರ (ಕೇರಳ), ಸಕಲೇಶಪುರ (ಕರ್ನಾಟಕ), ಗ್ಯಾಂಗ್‌ಟೊಕ್ (ಅಸ್ಸಾಂ), ಎಂಬಲ್ಲಿಯ ಪ್ರಾದೇಶಿಕ ಕೇಂದ್ರಗಳಲ್ಲೂ ಸಂಶೋಧನೆಗಳು ನಡೆಯುತ್ತಿದೆ. ಈ ಕೇಂದ್ರಗಳಲ್ಲಿ ಅತ್ಯುತ್ಪಾದನ ಸಾಮರ್ಥ್ಯದ ಆರು ಹೊಸ ತಳಿಗಳನ್ನು ಸೃಷ್ಟಿಸಲಾಗಿದೆ. ಮೂಡಿಗೆರೆ-1, ಪಿ.ವಿ.-1, ಸಿ.ಸಿ.ಎಸ್.-1, ಐ.ಸಿ.ಆರ್.ಐ.-1, ಐ.ಸಿ.ಆರ್.ಐ.-2, ಐ.ಸಿ.ಆರ್.ಐ.-3ಗಳು ಆ ಆರು ತಳಿಗಳಾಗಿವೆ. ಅವುಗಳ ವೈಶಿಷ್ಟ್ಯವನ್ನು ಕೆಳಗಿನ ಕಿರು ಕೋಷ್ಟಕದಿಂದ ತಿಳಿಯಬಹುದು.

ಕ್ರ.ಸಂ.	ತಳಿಯ ಹೆಸರು	ಇಳುವರಿ ಕಿ.ಗ್ರಾಂ./ಹೆಕ್ಟೇರಿಗೆ		ಯುಕ್ತಪ್ರದೇಶ
		ಮಳೆನೀರು	ಜಲಸೇಚನ	
1.	ಮೂಡಿಗೆರೆ-1	300	-	ಕರ್ನಾಟಕ
2.	ಪಿ.ವಿ.-1	260	500	ಕೇರಳ, ತಮಿಳ್ನಾಡು
3.	ಸಿ.ಸಿ.ಎಸ್.-1	408	-	ಕರ್ನಾಟಕ
4.	ಐ.ಸಿ.ಆರ್.ಐ.-1	325	656	ಕೇರಳ, ತಮಿಳ್ನಾಡು
5.	ಐ.ಸಿ.ಆರ್.ಐ.-2	375	766	ಕೇರಳ, ತಮಿಳ್ನಾಡು
6.	ಐ.ಸಿ.ಆರ್.ಐ.-3	439	600	ಕರ್ನಾಟಕ

ಏಲಕ್ಕಿಯನ್ನು ಮುಖ್ಯವಾಗಿ ಬಾಧಿಸುವ ರೋಗವೆಂದರೆ 'ಕಟ್ಟೆ', ಇದಕ್ಕೆ ಪ್ರತಿರೋಧವನ್ನು ಕಂಡುಕೊಳ್ಳುವ ಪ್ರಯತ್ನ ಫಲಕಾರಿಯಾಗಿದ್ದರೆ ಇನ್ನೊಂದು ರೋಗ - ವೆಯ್ನ್ ಕ್ಲಿಯರಿಂಗ್ ವೈರಸ್‌ಗೆ ಪ್ರತಿರೋಧವನ್ನು ಕಂಡುಕೊಳ್ಳುವ ಯತ್ನ ವಿಫಲವಾಗಿದೆ.

ಶುಂಠಿ : ಜಿಂಜಿಬೆರೇಸಿ ಕುಟುಂಬಕ್ಕೆ ಸೇರಿದ ಜಿಂಜಿಬೇರ್ ಓಫೀಸಿನೇಲ್ ಎಂಬ ವೈಜ್ಞಾನಿಕ ಹೆಸರಿನ ಶುಂಠಿಗೆ ಏಲಕ್ಕಿಯ ಬಳಿಕದ ಉನ್ನತ ಸ್ಥಾನ. ಶುಂಠಿಯ ತವರು ದಕ್ಷಿಣ ಏಷ್ಯಾ. ಕಾಂಡವನ್ನು ಒಣಗಿಸಿ ತೆಗೆದರೆ ಚುಕ್ಕ್ (ಒಣಶುಂಠಿ) ಎಂಬ ಹೆಸರು. ರಫ್ತಾಗುವುದರಲ್ಲಿ ಶೇ. 90 ಕೂಡ ಒಣಶುಂಠಿಯ ರೂಪದಲ್ಲಿ.

ಭಾರತ, ಜಮೈಕಾ, ನೈಜೀರಿಯ, ದಕ್ಷಿಣ ಚೀನಾ, ಜಪಾನ್, ಬಾಂಗ್ಲಾದೇಶ, ಶ್ರೀಲಂಕಾ ಮುಂತಾದ ರಾಷ್ಟ್ರಗಳಲ್ಲಿ ಶುಂಠಿಯನ್ನು ಬೆಳೆಸುತ್ತಾರೆ. ತೈವಾನ್, ಆಸ್ಟ್ರೇಲಿಯಾಗಳಲ್ಲೂ ಇತ್ತೀಚಿನ ವರ್ಷಗಳಲ್ಲಿ ಶುಂಠಿ ಬೆಳೆಯತೊಡಗಿದ್ದಾರೆ. ಗುಣೌಧಿಕ್ಯವುಳ್ಳ ಶುಂಠಿಯನ್ನು ಜಮೈಕಾ ಮತ್ತು ಭಾರತಗಳಲ್ಲಷ್ಟೇ ಬೆಳೆಯಲಾಗುತ್ತದೆ. ನೈಜಿರಿಯಾದಲ್ಲೂ ಒಳ್ಳೆಯ ಶುಂಠಿ ಬೆಳೆಯಲಾಗುತ್ತದೆ. ಚೈನಾದ ಶುಂಠಿಗೆ ಖಾರ ಮತ್ತು ಪರಿಮಳ ಕಡಿಮೆ. ಜಪಾನ್ ಇದಕ್ಕೂ ಕಡಿಮೆ. ಅಮೆರಿಕಾ, ಇಂಗ್ಲೆಂಡ್, ಸೌದಿ ಅರೇಬಿಯಾ, ಕೆನಡಾ, ಜಪಾನ್, ಸಿಂಗಾಪುರ ಮುಂತಾದ ರಾಷ್ಟ್ರಗಳು ಶುಂಠಿ ಆಮದು ಮಾಡಿಕೊಳ್ಳುವ ಪ್ರಧಾನ ದೇಶಗಳು. ಪಾನೀಯ ತಯಾರಿ, ಮಸಾಲೆ ಮಿಶ್ರಣ, ಆಹಾರ ಪದಾರ್ಥಗಳ ಸಂಸ್ಕರಣೆ ಮುಂತಾದ ಅಗತ್ಯಗಳಿಗೆ ಶುಂಠಿ ಬಳಕೆಯಾಗುತ್ತದೆ. ಸೌದಿ ಅರೇಬಿಯಾದಲ್ಲಿ ಕಾಫಿಯ ರುಚಿ ಹೆಚ್ಚಿಸುವುದಕ್ಕೆ ಶುಂಠಿಯನ್ನು ಸೇರಿಸಲಾಗುತ್ತದೆ.

ಶುಂಠಿಯ ಉತ್ಪಾದನೆ ಮತ್ತು ರಫ್ತಿನ ವಿಚಾರದಲ್ಲಿ ಭಾರತಕ್ಕೆ ಮೊದಲ ಸ್ಥಾನವಿದೆ. ಎಪ್ಪತ್ತೇಳು ಸಾವಿರದ ಐನೂರು ಹೆಕ್ಟೇರುಗಳಲ್ಲಿ (1998-99ರಲ್ಲಿ) ಇನ್ನೂರ ಐವತ್ತೆರಡು ಸಾವಿರ ಟನ್ ಶುಂಠಿ ಬೆಳೆಯಲಾಯಿತು. ಇದರಲ್ಲಿ ಎಂಟು ಸಾವಿರದ ಏಳ್ನೂರ ಎಪ್ಪತ್ತೆಂಟು ಟನ್ ರಫ್ತು ಮಾಡಲಾಯಿತು. ನಲವತ್ತೈದು ಕೋಟಿ ರೂಪಾಯಿಗಳು ಆ ಮೂಲಕ ಲಭ್ಯವಾದವು. ಭಾರತೀಯ ಶುಂಠಿ 'ಕೊಚ್ಚಿನ್ ಜಿಂಜರ್' ಎಂಬ ಹೆಸರಲ್ಲಿ ಖ್ಯಾತವಾಗಿದೆ. ವಿಶ್ವದಲ್ಲೇ ಇದು ಗುಣಮಟ್ಟದಲ್ಲಿ ಒಂದನೆಯ ಸ್ಥಾನದಲ್ಲಿದೆ.

ಹಸಿಶುಂಠಿ ಮತ್ತು ಬ್ಲೀಚ್ ಮಾಡಿದ ಶುಂಠಿಯನ್ನು ಸೌದಿ ಅರೇಬಿಯಾ ಮುಂತಾದ ರಾಷ್ಟ್ರಗಳು ಭಾರತದಿಂದ ಆಮದು ಮಾಡಿಕೊಳ್ಳುತ್ತವೆ. ಅಮೆರಿಕಾ, ಬ್ರಿಟನ್, ಕೆನಡಾ, ಸಿಂಗಾಪುರ ಮುಂತಾದವು ಒಣ ಶುಂಠಿಯನ್ನು ಆಮದು ಮಾಡಿಕೊಳ್ಳುತ್ತವೆ. ಹಸಿ / ಒಣಶುಂಠಿಗಳಂತೆ ಶುಂಠಿ ತೈಲ ಮತ್ತು ಒಳಿಯೋರಸ್‌ಗಳನ್ನು ಅಧಿಕ ಪ್ರಮಾಣದಲ್ಲಿ ರಫ್ತು ಮಾಡುವ ದೇಶ ಭಾರತ. ನಾರಿನ ಆಧಿಕ್ಯ ಮತ್ತು ಅಧಿಕ ಉತ್ಪಾದನಾ ವೆಚ್ಚ - ಇವು ಶುಂಠಿ ರಫ್ತನ್ನು ಬಾಧಿಸುವ ಎರಡು ಸಮಸ್ಯೆಗಳಾಗಿದೆ. ಉತ್ಪಾದನಾ ಪ್ರಮಾಣದಲ್ಲಿ ನಾವು ಮುಂದಿದ್ದರೂ ಉತ್ಪಾದನಾ ಕ್ಷಮತೆಯಲ್ಲಿ ಹಿಂದುಳಿದಿದ್ದೇವೆ. ಫಿಲಿಫೈನ್ಸ್‌ನಲ್ಲಿ ಹೆಕ್ಟೇರೊಂದರಲ್ಲಿ 7.47 ಟನ್, ಶ್ರೀಲಂಕಾದಲ್ಲಿ 6.21ಟನ್ ಶುಂಠಿ ಬೆಳೆಯುವಾಗ ಭಾರತದ ಉತ್ಪಾದನಾ ಸಾಮರ್ಥ್ಯ ಕೇವಲ 3.66 ಟನ್ ಮಾತ್ರ.

ಭಾರತದಲ್ಲಿ ಬೆಳೆಯುವ ಶುಂಠಿಯಲ್ಲಿ ಅತ್ಯಧಿಕ ಪ್ರಮಾಣವು (ಶೇಕಡಾ ಇಪ್ಪತ್ತರಷ್ಟು) ಕೇರಳದಲ್ಲಿ ಬೆಳೆಯುತ್ತದೆ. ಸಿಕ್ಕಿಂ, ಅಸ್ಸಾಂ,

ತ್ರಿಪುರ, ಅರುಣಾಚಲ ಪ್ರದೇಶಗಳಂಥ ಈಶಾನ್ಯ ರಾಜ್ಯಗಳ ಪ್ರಧಾನ ವಾಣಿಜ್ಯ ಬೆಳೆ ಶುಂಠಿಯಾಗಿದೆ. ತಮಿಳ್ನಾಡು, ಕರ್ನಾಟಕ, ಆಂಧ್ರ, ಹಿಮಾಚಲ ಪ್ರದೇಶಗಳಲ್ಲೂ ಶುಂಠಿಯನ್ನು ಬೆಳೆಯಲಾಗುತ್ತದೆ. ಒಣಶುಂಠಿಯ ಸಿಂಹಪಾಲು ಉತ್ಪಾದನೆಯೂ ಕೇರಳದ್ದೇ ಆಗಿದೆ. 2001-02ರಲ್ಲಿ ನಲವತ್ತು ಸಾವಿರದ ನೂರ ಎಂಬತ್ತು ಟನ್ ಒಣಶುಂಠಿ ಉತ್ಪಾದಿಸಲಾಗಿತ್ತು. ಇತರ ರಾಜ್ಯಗಳಲ್ಲಿ ಶುಂಠಿಯನ್ನು ಒಣಗಿಸಲು ಅನುಕೂಲಕರ ಸೌಕರ್ಯಗಳಿಲ್ಲ.

ಮಾರನ್, ವಯನಾಡ್, ಕುರುಪ್ಪಂ ಪಡಿ, ರಿಯೋಡಿಜನಿರೋ, ಚೈನಾ, ಏರನಾಡ್, ಚೇರನಾಡ್ ಮುಂತಾದ ತಳಿಗಳ ಹೊರತಾಗಿ ಉತ್ಪಾದನ ಸಾಮರ್ಥ್ಯ ಅಧಿಕವಾಗಿರುವ ಸುಪ್ರಭ, ಸುರುಚಿ, ಸುರಭಿ, ಹಿಮಗಿರಿ, ವರದ ಮುಂತಾದ ಹೊಸ ತಳಿಗಳನ್ನು ಕೃಷಿಗಾಗಿ ಶಿಫಾರಸ್ಸು ಮಾಡಲಾಗಿದೆ. ಕುರುಮ ಅಮಡ ಎಂಬ ಹೆಸರಿನ ಮಾವು ಶುಂಠಿ ಅಡುಗೆಗೆ ತುಂಬ ಒದಗುವಂಥದು. ಕೇರಳದಲ್ಲಿ ಇದಕ್ಕೆ ಅಂಗೀಕಾರ ಕಡಿಮೆ. ಆಂಧ್ರ ತಮಿಳ್ನಾಡುಗಳಲ್ಲಿ ತುಂಬ ಪ್ರಿಯ.

ಹೊಸ ತಳಿಗಳ ವೈಶಿಷ್ಟ್ಯವನ್ನು ಕೆಳಗಿನ ಕಿರುಕೋಷ್ಠಕವು ವಿಶದ ಪಡಿಸುತ್ತದೆ.

ತಳಿಯ ಹೆಸರು	ಸರಾಸರಿ ಇಳುವರಿ	ಶೇಕಡಾ	ಒಣಶುಂಠಿಯ ಪ್ರಮಾಣ ಟನ್/ಹೆಕ್ಟೇರ್‌ಗೆ	ನಾರಿನ ಒಳಿಯೋರೇಸಿನ್‌ನ ಪ್ರಮಾಣ
ಸುಪ್ರಭ	16.6	20.5	ಶೇ. 4.4	ಶೇ. 8.9
ಸುರುಚಿ	11.6	23.5	ಶೇ. 3.8	ಶೇ. 10
ಸುರಭಿ	17.5	23	ಶೇ. 4	ಶೇ. 10.2
ವರದ	22.6	19.5	ಶೇ. 4	ಶೇ. 6.73
ಹಿಮಗಿರಿ	13.5	20.6	ಶೇ. 6	ಶೇ. 4.29

ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಿ ಉತ್ಪಾದನಾ ಕ್ಷಮತೆಯನ್ನು ಹೆಚ್ಚಿಸುವುದು ಶುಂಠಿ ಕೃಷಿಯ ಅಭಿವೃದ್ಧಿಗೆ ಅಗತ್ಯವಾಗಿದೆ. ಶುಂಠಿಯು ಸಣ್ಣ ಪ್ರಮಾಣದ ನೆರಳನ್ನು ಇಷ್ಟ ಪಡುವುದರಿಂದ ಅದನ್ನು ಒಂದು ಎಡೆಬೆಳೆಯಾಗಿ ಶಿಫಾರಸ್ಸು ಮಾಡಲಾಗಿದೆ. ಶುಂಠಿಗೆ ತಗುಲುವ ಮಾರಕ ರೋಗವೆಂದರೆ ತಿರಿ ಕೊಳೆತ (ಮುಟ್ಟುಚೀಯಲ್. ಮ.). ಶುಂಠಿ ನಾಟಿಯ ಮುಂಚಿತವಾಗಿ ಮಣ್ಣನ್ನು ಸೋಲರೈಸೇಶನ್ ಮಾಡುವುದು, ಜೈವಿಕ ನಿಯಂತ್ರಣ ಮಾಡುವುದು ಮುಂತಾದವು ಇದಕ್ಕೆ ಪ್ರತಿರೋಧ. ಆದರೆ ಬಾಕ್ಟೀರಿಯಾಗಳಿಂದ ತಗುಲುವ ಬಾಡುರೋಗಕ್ಕೆ ಪ್ರತಿರೋಧವನ್ನು ಇನ್ನೂ ಕಂಡುಕೊಳ್ಳಲಾಗಿಲ್ಲ.

ಅರಿಸಿನ : ಜಿಂಜಿಬೇರೇಸಿ ಕುಟುಂಬದ ಕುರ್ಕುಮ ಲೋಂಗ/ ಕುರ್ಕುಮ ಡೊಮೆಸ್ಟಿಕ್ ಎಂಬ ವೈಜ್ಞಾನಿಕ ಹೆಸರುಳ್ಳ ಇದು ರುಚಿಯನ್ನು, ಬಣ್ಣವನ್ನು, ಪರಿಮಳವನ್ನು ಕೊಡುವ ವೈಶಿಷ್ಟ್ಯವುಳ್ಳದ್ದು. ಇದರ ತವರೂರು ಭಾರತ. ಅರಿಸಿನ ಉತ್ಪಾದನೆ ಮತ್ತು ರಫ್ತುಗಳಲ್ಲಿ ಅಗ್ರಪಂಕ್ತಿಯಲ್ಲಿರುವುದೂ ಭಾರತವೇ. ಭಾರತದ ಒಟ್ಟು ಉತ್ಪಾದನೆಯಲ್ಲಿ ಕೇರಳದ ಪ್ರಮಾಣ ಕಡಿಮೆಯಾದರೂ ಕೇರಳದಲ್ಲಿ ಬೆಳೆಯುವ ಅರಿಸಿನವೇ ಗುಣಮಟ್ಟದಲ್ಲಿ ಉತ್ಕೃಷ್ಟ ಎನ್ನಲಾಗಿದೆ. 'ಆಲೆಪ್ಪಿ' ಅರಿಸಿನ ಎಂಬ ಹೆಸರಲ್ಲಿ ಇದು ಪ್ರಸಿದ್ಧವಾಗಿದೆ. ಇದರಲ್ಲಿ ಕುರ್ಕುಮಿನ್ ಎಂಬ 'ಅರಿಸಿನ ವರ್ಣಕ'ವು ಶೇ. 5.5 ಇದ್ದು ಇದು ಇತರ ರಾಜ್ಯಗಳಲ್ಲಿ ಬೆಳೆಯುವ ಅರಿಸಿನಕ್ಕಿಂತ ಪ್ರಮಾಣದಲ್ಲಿ ಅಧಿಕ. ಕುರ್ಕುಮ ಅರೋಮಾಟ್ಟಿಕಾ ಎಂಬ ಹೆಸರಿನ ಕಸ್ತೂರಿ ಅರಿಸಿನವು ಸೌಂದರ್ಯ ವರ್ಧಕವಾಗಿದ್ದು ಸ್ತ್ರೀಯರಿಗೆ ಪ್ರಿಯವಾದುದಾಗಿದೆ. ಆಂಧ್ರ, ತಮಿಳ್ನಾಡುಗಳಲ್ಲಿ ಅರಿಸಿನವನ್ನು ಬೆಳೆಯುತ್ತಾರೆ.

ಭಾರತದಲ್ಲಿ ಸಂಬಾರ ಬೆಳೆಗಳ ಅಭಿವೃದ್ಧಿಗಾಗಿ ಅನೇಕ ಸಂಸ್ಥೆಗಳು ಕಾರ್ಯ ಪ್ರವೃತ್ತವಾಗಿವೆ. ಅವುಗಳಲ್ಲಿ ಮುಖ್ಯವಾದ ಕೆಲವು ಸಂಸ್ಥೆಗಳ ವಿವರ.

1. ಭಾರತೀಯ ಕೃಷಿ ಸಂಶೋಧನ ಕೌನ್ಸಿಲ್ (ICAR) : 1951ರಲ್ಲಿ ಪ್ಲಾನಿಂಗ್ ಕಮಿಷನ್‌ನ ಶಿಫಾರಸ್ಸಿನ ಮೇರೆಗೆ ಭಾರತ ಸರಕಾರವು ಸ್ಪೈಸಸ್ ಎನ್ಕ್ವಯರಿ ಕಮಿಟಿಯನ್ನು ನೇಮಿಸಿತು. 1953ರಲ್ಲಿ ಅದರ ವರದಿಯನ್ನು ಸ್ವೀಕರಿಸಿ ಈ ಸಂಸ್ಥೆಯನ್ನು ಸ್ಥಾಪಿಸಿ ಈ ಬೆಳೆಗಳ ಅಭಿವೃದ್ಧಿಗೆ ಕ್ರಮ ತೆಗೆದು ಕೊಳ್ಳುವಂತೆ ನಿರ್ದೇಶಿಸಿತು. 1961ರಲ್ಲಿ ಸಂಬಾರ ಪದಾರ್ಥಗಳ ಗೋಡಂಬಿ ಕಮಿಟಿ ರೂಪಿತವಾಯಿತು.

2. ಸೆಂಟ್ರಲ್ ಪ್ಲಾನ್ಟೇಷನ್ ಕಾಪ್ರ್ಸ್ ರಿಸರ್ಚ್ ಇನ್ಸಿಟ್ಯೂಟ್ (CPCRI) : 1970ರಲ್ಲಿ ಸ್ಥಾಪಿತ. ಇದು ತೋಟ ಬೆಳೆಗಳ ಹೊರತಾಗಿ ಸುಗಂಧ ದ್ರವ್ಯ ಬೆಳೆಗಳ ಸಂಶೋಧನೆಗೂ ಗಮನಹರಿಸಿದೆ. ಇದರ ಕೈಕೆಳಗೆ ಹತ್ತು ಕೋ - ಆರ್ಡಿನೇಶನ್ ಸಂಸ್ಥೆಗಳಿವೆ. AICSCIP (ಆಲ್ ಇಂಡಿಯಾ ಕ್ರೊಪರೇಟಿವ್ ಸ್ಪೈಸ್ ಅಂಡ್ ಕ್ಯಾಶನೆಟ್ ಇಪ್ರೂವ್‌ಮೆಂಟ್ ಪ್ರಾಜೆಕ್ಟ್)ನಲ್ಲಿ ಇವು ಕಾರ್ಯಪ್ರವೃತ್ತವಾಗಿವೆ. ಅಧಿಕ ಇಳುವರಿ ನೀಡುವ, ರೋಗನಿರೋಧಕ ಮಾರ್ಗಗಳನ್ನು ಸಂಶೋಧನೆಯ ಮೂಲಕ ಇವು ಕಂಡುಕೊಳ್ಳುತ್ತವೆ.

3. ಆಲ್ ಇಂಡಿಯಾ ಕೋ-ಆರ್ಡಿನೇಟೆಡ್ ಇಂಪ್ರೂವ್‌ಮೆಂಟ್ ಪ್ರಾಜೆಕ್ಟ್ ಫೋರ್ ಸ್ಪೈಸಸ್ (AICIPS) : 1986ರಲ್ಲಿ ಹಿಂದಿನ ಸಂಸ್ಥೆಗಿದ್ದ ಗೋಡಂಬಿ ಅಭಿವೃದ್ಧಿ ವಿಭಾಗವನ್ನು ಬೇರ್ಪಡಿಸಿ ರೂಪುಗೊಂಡ ಸಂಸ್ಥೆ. ಇದರ ಕೈಕೆಳಗೆ ಇಪ್ಪತ್ತು ಕೇಂದ್ರಗಳು ಕಾರ್ಯ ಪ್ರವೃತ್ತವಾಗಿವೆ. ಕೇರಳದ ಕೋಝಿಕ್ಕೋಡ್‌ನಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ಸ್ಪೈಸಸ್ ರೀಸರ್ಚ್ (IISR) ಈ ಕೇಂದ್ರಗಳನ್ನು ನಿಯಂತ್ರಿಸುತ್ತದೆ.

4. ಇಂಡಿಯನ್ ಇನ್ಸಿಟ್ಯೂಟ್ ಆಫ್ ಸ್ಪೈಸಸ್ ರೀಸರ್ಚ್ : 1986 ಸ್ಥಾಪಿತವಾದ IISR ಸಂಸ್ಥೆಯ ಪುನರ್ ರೂಪಿತ ಸಂಸ್ಥೆ. ಕಾಳುಮೆಣಸಿನ 'ದ್ರುತಬಾಡುವಿಕೆ', ಶುಂಠಿಯ ತಿರಿಕೊಳೆಯುವ ರೋಗ ನಿಯಂತ್ರಣ, ಬೆಳೆಗಳ ಬೀಜೋತ್ಪಾದನೆ ಮುಂತಾದುವು ಇದರ ಆದ್ಯತೆಗಳು. AICIPSನ ಮುಖ್ಯ ಕೇಂದ್ರವೂ ಇಲ್ಲಿಯೇ ಇದೆ.

5. ಸ್ಪೈಸಸ್ ಬೋರ್ಡ್ : ಏಲಕ್ಕಿ ಬೋರ್ಡ್‌ನ್ನು ಸ್ಪೈಸಸ್ ಎಕ್ಸ್ಪೋಟ್ ಪ್ರೋಮೋಶನ್ ಕೌನ್ಸಿಲ್‌ನ್ನೂ ಒಂದಾಗಿಸಿ ರೂಪಿತವಾದುದು (1986) ಎರ್ನಾಕುಲಂನಲ್ಲಿ ಕೇಂದ್ರ ಕಛೇರಿ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಕಡಿಮೆ ವೆಚ್ಚದಲ್ಲಿ ಶ್ರೇಷ್ಠ ಗುಣಮಟ್ಟದ ಈ ಬೆಳೆಗಳನ್ನು ಬೆಳೆಸಲು ರೈತರಿಗೆ ತಿಳಿವಳಿಕೆ ನೀಡುವುದು, ನಾನಾ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುವುದು, ಕೇರಳದ ಏಲಕ್ಕಿ ಬೆಳೆಯ ಸಮಸ್ಯೆಗಳನ್ನು ಪರಿಹರಿಸುವುದು ಇತ್ಯಾದಿಗಳನ್ನು ಈ ಸಂಸ್ಥೆ ಮಾಡುತ್ತಿದೆ.

(ಕಾರ್ಷಿಕ ವಿಜ್ಞಾನಂ - IIರಲ್ಲಿ 'ಸುಗಂಧ ವ್ಯಂಜನ ವಿಳಗಳ್' ಎಂಬ ಲೇಖನ : ಡಾ. ಬಿ.ಕೆ. ರವಿಚಂದ್ರನ್)

ಕೆ.ಕೆ.

'ಕೇರಳೋತ್ಪತ್ತಿ'ಯಲ್ಲಿಯ ಕೃಷಿವಿಚಾರ ಕೇರಳೋತ್ಪತ್ತಿ ಎಂಬ ಕೃತಿಯಲ್ಲಿಯ 'ಕೃಷಿಗೀತೆ' ಎಂಬ ಭಾಗವು ತುಂಬ ಕುತೂಹಲಕಾರಿಯಾಗಿದೆ. ಪರಶುರಾಮನು ತನ್ನ ಪರಶುವನ್ನು ಎಸೆದು ಗೋಕರ್ಣದಿಂದ ಕನ್ಯಾಕುಮಾರಿಯವರೆಗಿನ ನೆಲವನ್ನು ಸಮುದ್ರರಾಜನಿಂದ ಪಡೆದು, ಆಮೇಲೆ ಅದನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಕಥೆಯನ್ನು ಕೇಳದವರು ವಿರಳ. ಪರಶುರಾಮನು ಕೇವಲ ಭೂಮಿಯನ್ನು ಮಾತ್ರ ಕೊಡದೆ ಕೃಷಿ ಮಾಡುವ ಜ್ಞಾನವನ್ನೂ ಅವರಿಗೆ ನೀಡಿದ್ದನಂತೆ. ಬ್ರಾಹ್ಮಣರು ಹೇಗೆ ಏನನ್ನು ಎಲ್ಲಿ ಕೃಷಿ ಮಾಡಬೇಕೆಂಬುದನ್ನು ಪರಶುರಾಮನು ತಿಳಿಸಿಕೊಟ್ಟ ವಿವರವನ್ನು ಕೇರಳೋತ್ಪತ್ತಿ ಗ್ರಂಥದ 'ಕೃಷಿಗೀತಂ' ಭಾಗವು ಒಳಗೊಂಡಿದೆ. ಇದನ್ನೇ ಕೃಷಿಯಲ್ಲಿಯ ಪರಶುರಾಮ ವಚನ ಎಂದೂ ಕರೆಯಲಾಗುತ್ತದೆ. ಕೃಷಿ ಮಾಡಬೇಕಾದುದರ ಮಹತ್ವವನ್ನು ಪರಶುರಾಮನು ಕೃಷಿ ಗೀತದಲ್ಲಿ ನಿಚ್ಚಳಗೊಳಿಸಿದ್ದಾನೆ :

ಕೃಷಿ ಮಾಡಲಾರದವರಿಗೆ ಭೂಮಿಯ ಮೇಲೆ
ಬದುಕುವ ದಾರಿ ಬೇರಾವುದೂ ಇಲ್ಲ ವಯ್ಯಾ
ದಾರಿದ್ರ್ಯಗಳನ್ನು ಕಳೆದುಕೊಳ್ಳಬೇಕೆಂದಿದ್ದರೆ
ಆರಂಭದಿಂದಲೇ ಎಲ್ಲರೂ ಮಾಡಬೇಕು, ಕೃಷಿಯನ್ನು

ಆದಾಯ ತರುವ ಕೃಷಿಗಳನ್ನು ಮಾಡಬೇಕು, ಮಾತ್ರವಲ್ಲ ದೇವಾಲಯ ಮುಂತಾದುವುಗಳಿಗೂ ಅಲಂಕಾರ ಪ್ರಾಯವಾಗುವ ಹೂದೋಟಗಳನ್ನು ನಿರ್ಮಿಸಬೇಕೆಂದೂ ಅದರಲ್ಲಿ ಹೇಳಿದೆ. ಇದರ ಜೊತೆಗೆ ದಾರಿಹೋಕರಿಗೆ ಆಹ್ಲಾದವನ್ನುಂಟುಮಾಡುವ ಹಾಗೂ ಅವರಿಗೆ ತುಂಬ ಪ್ರಯೋಜನಕಾರಿಗಳಾದ ಕಾಲುದಾರಿಗಳನ್ನು ನಿರ್ಮಿಸಬೇಕೆಂದೂ ದಾರಿಯುದ್ದಕ್ಕೂ ನೆರಳಿನ ಮರಗಳನ್ನು ಬೆಳೆಸಬೇಕೆಂದೂ ಅವನು ಆಜ್ಞಾಪಿಸಿದ್ದಾನೆ. ಹೂದೋಟಗಳನ್ನು ನಿರ್ಮಿಸುವವರು ಸಂಸಾರ ಸಮುದ್ರವನ್ನು ದಾಟುತ್ತಾರೆ, ಕಾಲುದಾರಿಗಳನ್ನು ನಿರ್ಮಿಸುವವರು ಸದ್ಗತಿ ಹೊಂದುತ್ತಾರೆ ಎಂದೂ ಪರಶುರಾಮ ಹೇಳಿದ್ದಾನೆ.

ವಿದೇಶೀ ಬೀಜಗಳನ್ನು ತಿರಸ್ಕರಿಸಿ ದೇಶೀಯ ಬೀಜಗಳನ್ನು ಪ್ರಸಾರಮಾಡಬೇಕು ; ಪ್ರತಿ ಮನೆಯೂ ಕುಷ್ಠ ರೋಗಾದಿಗಳನ್ನು ಹೆಚ್ಚಿಸುವ ಪರದೇಶೀ ಬೀಜಗಳನ್ನು ತಿರಸ್ಕರಿಸಿ ಸ್ವದೇಶೀ ಬೀಜ ಮತ್ತು ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮುಂತಾಗಿ ಕೇರಳ ಜನತೆಯನ್ನು ಉದ್ಬೋಧಿಸುತ್ತಾನೆ.

ನೆಲದ ಸ್ವಭಾವಕ್ಕನುಗುಣವಾಗಿ ಬೆಳೆ ಬೆಳೆಯುತ್ತದೆಂಬ ಅರಿವನ್ನು ನೀಡುವ ಮಾತುಗಳೂ ಅಲ್ಲಿ ಕಾಣಸಿಗುತ್ತವೆ. ಕೆಳಗೆ ಕಲ್ಲು ಬಂಡೆಗಳಿರುವ ನೆಲದಲ್ಲಿ ನೀರು ಸಾಕಷ್ಟು ಲಭ್ಯವಿದ್ದರೂ ಬೆಳೆ ಬರಲಾರದು ; ಪ್ರತಿಯೊಂದು ಪ್ರದೇಶಕ್ಕೂ ಅನುಯೋಜ್ಯವಾದ ಬತ್ತದ ತಳಿಗಳನ್ನು ಬಳಸಬೇಕು ಮುಂತಾದ ನಿರ್ದೇಶಗಳಿವೆ. ಪ್ರದೇಶಾನುಸಾರಿ ಬತ್ತದ ತಳಿಗಳ ವಿವರ ಇಂತಿದೆ.

ತುಳುನಾಡು : ಕಾಮಾದಾರಾ, ಸಂವತಾಳನ್, ವಾಟಿಕಣ್ಣನ್, ಚುರುಣಕ್ಕರಿಯನ್, ವೆಳ್ಳೆಚ್ಚೆನ್ನೆಲ್ಲ್, ಮುಕಿನ್ನಾವೆರುದೆ, ಗಿರಿಕಶಾಲ, ವೆಟ್ಟುವೆಳಿ ಎರಿ.

ಕೋಲನಾಡು : ಚೆನ್ನೆಲ್ಲ್, ವೆಳ್ಳಕ್ಕೋಟಿವಾಲನ್, ಮುಂಡಕನ್, ಪರಂಬನ್ ಕಟಮ, ಮಲಯುಡುಂಬನ್, ನಿಕೇತನ್, ಚೆರುಮೋಡನ್, ಮೋಡನ್, ಇಡಿಯನ್, ಪಯ್ಯನಾಡನ್, ಕರಿಂಚೆನ್ನೆಲ್ಲ್.

ಪಾಂಡಿ : ಈರ್ಕಿಲಿ ಚೆಂಬಾವ್, ಓರಿಕ್ಕೋಲ್, ಪೂಂಬಳ, ಚೆಂಬಳ, ಮೇಳಂಕ್ಕಾರು, ಕುಂಕುಮ ಚೆಂಬಾವ್, ಪೂಂಕಾರು, ಚೀರಕ ಚೆಂಬಾವ್, ವಶಾನಂ ಮತ್ತು ಮಡಕ್ಕಾರು.

ಕುಟ್ಟನಾಡು : ಪೊಕ್ಕಾಳಿ, ಚೆರುಪೊಕ್ಕಾಳಿ, ಕುಟ್ಟಾರಿಯನ್, ವೆನ್ನೆಲ್ಲ್, ಕುರುವ, ಚುವನ್ನಾರಿಯನ್, ಕರಿಕ್ಕರ್.

ವೇನಾಡು : ಪಾಂಡಿ, ಇಡಕ್ಕುರುವ, ಉಟಿದಿವಿರಟ್ಟಿ, ಕೊಳವಾಡ್, ವೆಳ್ಳಕುಟ್ಟಾಡನ್, ಕಾಡಕಟುತ್ತನ್.

ಎಡೆನಾಡು : ಚೋರಣಾರಿ, ತನಿಕ್ಕಾಳಿ. ಆರಿಯಂಕಾಳಿ, ಕುಂಬಳವನ್, ಚೆಂದಾರ್ ಮಣಿಯನ್, ವೆಳ್ಳಯಾತ್ತನ್, ಕರಿಂಗಾಳಿ, ಕೋಡನೇರಿ, ವಟ್ಟನ್, ಮುಂಡಪ್ಪಳ್ಳಿ, ಪುಂಜ ಕಟಮ, ಕಾಳಿ.

ಕರಪ್ಪುರಂ (ಕರಾವಳಿ) : ತುಳುನಾಡನ್, ಚೆಟ್ಟಾರಿಯನ್, ಕರಕ್ಕುರವ, ಕುರುವ, ಅಯಿನಿ, ಅತಿಯನ್, ಚೆರುಯೋರತಿಯನ್, ಮಣಲಾರಿ ಯನ್.

ಪರಂಬುರನಾಡು : ಆನಕೊಂಬನ್.

ತಲಪ್ಪಿಳ್ಳಿನಾಡ್ : ವೆಟ್ಟಿಕುಟ್ಟಾಡನ್, ತಳಪ್ಪಿಳ್ಳಿ ಪಾಂಡಿ, ಚೆರುಪಾಂಡಿ, ವೆಂಜ್ಞುರುಂಞಿ, ವಲಿಯ ಕುಟ್ಟಿ, ಕರಿಂಕುರುಂಞಿ.

ವೆಳುಪ್ಪನ್ ನಾಡು : ಎಲಿಂಜೇಂಬನ್, ಈರ್ಕಿಲಿಚ್ಚೆಂ ಸಾವ್. ಚೆಂಚೆಂಬಾನ್, ಅನ್ನಚ್ಚೆಂಬಾನ್, ಕರಿಂಕುರುಞಿ, ಎರುಮಕ್ಕಾರಿ, ಚಿಟ್ಟಂ, ಕಾಡಕಟುತ್ತನ್, ವೆಳ್ಳಕುರುಂಞಿ.

ಇತರ ಬೆಳೆಗಳು ಹಾಗೂ ಅವುಗಳ ಪ್ರಭೇದಗಳು ಕೂಡ ಕೇರಳೋತ್ಪತ್ತಿಯಲ್ಲಿ ನಮೂದಿತವಾಗಿದೆ.

ಎಳ್ಳು	:	ಕಾರೆಳ್ಳ್, ವಟ್ಟೆಳ್ಳ್, ಪನಿಕುಡುಪ್ಪನ್, ಕುಟ್ಟುನಾಡನ್, ವೆಳ್ಳೆಳ್ಳ್, ವಲಿಯ ಎಳ್ಳ್, ಚೆರಿಯ ಎಳ್ಳ್
ಹೆಸರು	:	ಕರಿಂಬಯರ್, ಚೆಂಬಯರ್, ಚೆರುಪಯರ್, ಕಾಳಿ, ಉದ್ದು. ಪಯರ್.ಮ.) (ಕಪ್ಪು) (ಕೆಂಪು) (ಸಣ್ಣದು)
ತೊಗರಿ	:	ತುವರ, ಚೆರುತುವರ, ಕೋದಂಬಂ ಕೊಟ್ಟ (ತುವರ.ಮ.) (ಸಣ್ಣದು)
ಸಾಸಿವೆ	:	ವೆಂಕಡುಗ್, ಕರಿಂಕಡುಗ್, ಕಾಡಕಣ್ಣಿ, ಕಂಬಂ, (ಕಡುಗ್.ಮ.) (ದೊಡ್ಡದು) (ಕಪ್ಪು)
ಜೋಳ	:	ಮುತ್ತ್‌ಚೋಳಂ, ಅರಿಂಞನೋಳಂ, ಕರಿಂಞನೋಳಂ, (ಚೋಳಂ.ಮ.) (ಮುತ್ತು) (ಕಪ್ಪು)

ಚೆಂಚೋಳಂಮ, ವರಕ್ಕ್, ಕುದಿರವಾಲನ್, ಕುರುವಕ್ಕಂಬಿ,
(ಕೆಂಪು)
ವೆಳ್ಳಡಂಬನ್, ವೆಳ್ಳಚ್ಚೋಳಂ

ಜೀರಿಗೆ : ಚೀರಕಂ, ಕರಿಂಜೀರಗಂ, ವೆಂಜೀರಗಂ
(ಜೀರಕಂ) (ಕಪ್ಪು) (ಬಿಳಿ)

ಬೆಳ್ಳುಳ್ಳಿ : ವೆಳ್ಳಂವೆಂಗಾಯಂ, ಈರ ವೆಂಗಾಯಂ
(ವೆಳುತ್ತುಳ್ಳಿ)
(ವೇಂಕಾಯಂ)

ಸಾಮೆ : ಚಾಮ, ಚೆರುಚಾಮ.
(ಚಾಮ) (ಕಿರಿಯ)

ಅವರೆ : ಪುಳಿ ಅಮರ, ಚುವನ್ನ ಅಮರ, ಆಟ್ಟುಕೊಂಬನಮರ,
(ಅಮರ) (ಕೆಂಪು) (ಆಡಿನಕೋಡು)(ವೆಳ್ಳಮರ, ಮುಂಡನಮರ, ವಟ್ಟನಮರ, ಪೊಳ್ಳಮರ, ಮುಳ್ಳನಮರ, ಚಿಟ್ಟಮರ.
(ಬಿಳಿ) (ಉರುಟು)

ಹತ್ತಿ : ಕಲ್ಪರುತ್ತಿ, ಮಲಂಬರುತ್ತಿ, ಕೊಟ್ಟಪ್ಪರುತ್ತಿ.
(ಪರುತ್ತಿ) (ಮಲೆ) (ಬೀಜ)

ಕಡಲೆ : ಚೆರಕಡಲ, ಹೋಮಂ
(ಕಿರಿದು/ಸಣ್ಣದು)

ಸುವರ್ಣಗೆಡ್ಡೆ :ಚೇನ, ಚೆರುಚೇನ.
(ಚೇನ) (ಸಣ್ಣದು)

ಗೆಣಸು : ಚೆರುಕಿವಿಂಙ್, ವಳ್ಳಿಕಿಟಂಙ್, ಪಿಡಿಕಿಟಂಙ್, ಮುಕ್ಕಿಟಂಙ್. (ಕಿಟಂಙ್)

ಕೆಸು : ಕರಿಂಜೇಂಬ್, ವೆಳಿಂಜೇಂಬ್ಷ ಪಟಕಿಟಂಙ್ ಚೇಂಬ್, ವಲಿಯ
(ಚೇಂಬ್) (ಕಪ್ಪು)
ಚೇಂಬ್, ಮಲರಾಮನ್, ಪೇಟಿಚ್ಚೇಂಬ್, ಕುಟಿಚ್ಚೇಂಬ್, ನನಚ್ಚೇಂಬ್, ಪಾಲ್ಚೇಂಬ್, ಪೂಟಿಚ್ಚೇಂಬ್, ಕೋಟಿಕ್ಕಾಲನ್, ಚಾರಕ್ಕಂಡನ್
(ಗುಳಿ) (ಮರಳು)

ಸಜ್ಜೆ : ಕೂರ್ಕ್, ಚೆರುಕೂರ್ಕ್, ಕಾವಿತ್ತ್, ಚೀರ್ತಕ್ಕಲ್ಲನ್, ಪಾಲ್‌ನೀಂಡಿ,
(ಕೂರ್ಕ್)

ಶುಂಠಿ : ಇಂಜಿ, ಮಲಯಿಂಜಿ
(ಇಂಜಿ)

ಅರಸಿಣ : ಮಲಿವಾನ್, ವಯನಾಡನ್, ಚೆರುಕೊಡಿ.
(ಮಂಞಳ್)

ಬಾಳೆ : ಫಲರಾಜನ್, ಕದಳಿ, ಪೂವನ್, ಕದಳಿಪ್ಪೂವನ್, ಕುನ್ನನ್, ವಣ್ಣನ್, ಇರುಮುಡಿಕುನ್ನನ್, ಕಾಳಿ, ಏರನಾಡನ್, ಚಿಂಙನ್, ನೇಂದ್ರನ್, ಕಣ್ಣನ್ ಆಟ್ಟುನೇಂದ್ರನ್, ಪೊಣ್ಣನ್, ನಾಡನ್, ನೀರನ್ ವಾಟಿ, ವೇನಿನ್ ವಾಟಿ, ಮುಂದನ್, ಮಲವಾಟಿ.

ಕುಂಬಳಕಾಯಿ :ಕುಂಬಳಂ, ಮತ್ತಕುಂಬಳಂ, ಚುರಕುಂಬಳಂ.
(ಸಿಹಿಕುಂಬಳ) (ಸೊರೆಕುಂಬಳ)

ಸೌತೆ : ಚವತ್ತೇಕ್ಕ್, ಕಕ್ಕರಿ, ಕುಮ್ಮಿಟ್ಟಿ, ಕರುತ್ತೂಕ್ಕಿ, ವೆಂಕುಮ್ಮಿಟ್ಟಿ.
(ವೆಳ್ಳಂ)

ಹಾಗಲ : ಮುಂಡನ್ ಕೈಪ್ಪಕ್ಕ, ಕೊಂಡ ಕೈಪ್ಪಕ್ಕ.
(ಕೈಪಕ್ಕ)

ಪಡುವಲ : ವೇಪ್ಪಡುವಲಂಙ, ಮುಂಡನ್, ಕೊಂಡ.
(ಪಡುಮಂಙ)

ತೊಂಡೆ : ಕೋವಕ್ಕ, ಚೆರುಕೋವಕ್ಕ, ಪೆರುಂಕೋವಕ್ಕ, ವೆಳ್ಳಕೋವಕ್ಕ
(ಕೋವಕ್ಕ)

ಕಿತ್ತಳೆ/ನಿಂಬೆ : ನಾರಂಙ, ಚೆರುನಾರಂಙ, ಮಾದಳ ನಾರಂಙ, ವಡಕಪ್ಪುಳಿ, ಅಲ್ಲಿನಾರಂಙ, ಇಲ್ಲಿನಾರಂಙ, ಈಳಿನಾರಂಙ
(ನಾರಂಙ)

ಮೆಣಸು : ತೊಂಡಿ ಮುಳಗ್, ಚೆರುಮುಳಗ್, ಕಯ್ಪನ್‌ಮುಳಗ್, ಕಾಟ್ಟುಮುಳಗ್, ಚೀನಮುಳಗ್, ಕೊಂಡಮುಳಗ್, ಮುಂಡನ್ ಮುಳಗ್, ಚೆರುಕಯ್ಪನ್ ಮುಳಗ್.
(ಮುಳಗ್)

ಬದನೆ : ಮುಳ್ಳನ್, ಚೆರುಮುಳ್ಳಿ, ಕವಲಿಯಾಡನ್, ಇಲಿಚ್ಚಿ, ವೆಳ್ಳಿಮುಳ್ಳಾನ್, ನೀಳಮುಳ್ಳನ್, ಪಿಂಡಿ ವಟುದಿನ, ಕೊಟ್ಟಕ್ಕಾಡನ್, ಮುಂಡನ್ ಪನ್ನಿ, ಚೀನತ್ತಂಡನ್.
(ವಟುದಿನ)

ಕಬ್ಬು : ಬದರಿಕ್ಕರಿಂಬ್, ನಾಯ್ಕರಿಂಬ್, ರಸದಾಳಿ ಕರಿಂಬ್, ನೀಲ ಕರಿಂಬ್,
(ಕರಿಂಬ್) ವೆಳ್ಳಕ್ಕರಿಂಬ್.

ಹೊಗೆಸೊಪ್ಪು :ಕಾಪ್ಪಾರಿ, ಮಾನೇರಿ, ವಡಕ್ಕನ್, ಮದಾನಂತಕನ್, ಚಾಪ್ಪಾಡನ್, ಪಚ್ಚ, ಪಶ್ಚಿಮನ್, ಕಿವಿಕ್ಕನ್
(ಪುಗಯಿಲ) (ಬಡಗು)
(ಪಡು) (ಮೂಡು)

ವೀಳ್ಯದೆಲೆ : ತೆಕ್ಕನ್, ಮುಕ್ಕಣ್ಮಿ, ಕೋಟುಕ್ಕೋಡನ್, ಇಾಲಿ, ಕೊಲ್ಲಂ, ವೆಟ್ಟಿಲ, ಪೊಟಿಕ್ಕೋಡನ್, ಕೊಡಿ ವೆಟ್ಟಿಲ,

		ವೆಳ್ಳ ವೆಟ್ಟಿಲ, ಕಿಂಜ್ಣಿ ವೆಟ್ಟಿಲ, ಸೇಲಂ ವೆಟ್ಟಿಲ, ಕುಟಿವೆಟ್ಟಿ, ಚುವ್ವರ್, ವೆಟ್ಟಿಲ.
		(ವೆಟ್ಟಿಲ) (ತೆಂಕು)
ಅಡಕೆ	:	ತುಳುನಾಡನ್, ಕೋಟುಕ್ಕೋಡನ್, ರಾಮನಾಡನ್, ವೆಳ್ಳಡಯ್ಕು, ಇಡನಾಡನ್, ಪುತ್ತೂರಡಯ್ಕು, ಆರಂಕನ್
		(ಅಡಯ್ಕ)
ತೆಂಗು	:	ಚೆರುತೆಂಜ್, ಚೆಂದೆಂಜ್
		(ತೆಂಜ್)

ಭೌಗೋಳಿಕ ವೈಶಿಷ್ಟ್ಯಗಳಿಗೆ ಅನುಯೋಜ್ಯವಾದ ದೇಶೀ ಬೀಜದ ತಳಿಗಳನ್ನು ಪರಶುರಾಮನು ಕೇರಳದ ಕೃಷಿಕರಿಗಾಗಿ ಶಿಫಾರಸ್ಸು ಮಾಡಿದ್ದಾನೆ. ಎಂಬುದು ಮೇಲಿನ ಪಟ್ಟಿಯಿಂದ ವಿಷದವಾಗುತ್ತದೆ. ಇದಕ್ಕೆ ಯೋಗ್ಯವಾದ ಕೃಷಿ ರೀತಿಗಳು ಮತ್ತು ಅವುಗಳ ಬಳಕೆ ಅಂದಿನ ದಿನಗಳಲ್ಲಿ ರೂಢಿಯಲ್ಲಿದ್ದವು ಎಂಬುದರ ಬಗೆಗೂ ಕೃಷಿಗೀತೆಯು ಸೂಚನೆ ನೀಡುತ್ತದೆ.

ಕೇರಳೋತ್ಪತ್ತಿ ಗ್ರಂಥದ ರಚನಾಕಾಲದಲ್ಲಿ ಕೇರಳದ ಜನಸಂಖ್ಯೆಯ ದೊಡ್ಡದೊಂದು ಭಾಗ ಬ್ರಾಹ್ಮಣರದಾಗಿತ್ತು. ಕೃಷಿ ಭೂಮಿಯಲ್ಲಿ ಹೆಚ್ಚಿನ ಭಾಗವೂ ಇವರ ಕೈಕೆಳಗೆ ಇತ್ತು. ವೈವಿಧ್ಯಪೂರ್ಣ ಸಸ್ಯೋತ್ಪನ್ನಗಳೇ ಇವರ ಆಹಾರವಾಗಿದ್ದುವು. ಈ ಕಾರಣದಿಂದ ಮತ್ತು ಅಗತ್ಯಗಳಿಗಾಗಿ ಅವರು ಇಂಥ ಸಸ್ಯಗಳನ್ನು ಚೆನ್ನಾಗಿ ಕಾಪಾಡಿಕೊಂಡು ಬೆಳೆಯುತ್ತಿದ್ದರು. ತಮ್ಮ ಕೃಷಿ ಭೂಮಿಯಲ್ಲಿ ಆ ಸಸ್ಯಗಳನ್ನು ಬೆಳೆಯುವಂತೆ ಇತರರನ್ನು ಪ್ರೋತ್ಸಾಹಿಸುತ್ತಿದ್ದರು.

ತಾನು ದಾನವಾಗಿ ನೀಡಿದ ಭೂಮಿಯಲ್ಲಿ ಕೃಷಿ ಮಾಡುವುದು ಹೇಗೆ, ಏನನ್ನು ಕೃಷಿ ಮಾಡಬೇಕು ಮುಂತಾದ ಸಮಗ್ರ ವಿವರಗಳನ್ನು ಪರಶುರಾಮನು ಬ್ರಾಹ್ಮಣರಿಗೆ ನಿರ್ದೇಶನ ನೀಡಿರುವಂತೆ 'ಕೇರಳೋತ್ಪತ್ತಿ'ಯ ಬರೆವಣಿಗೆಯ ಶೈಲಿ ಇದೆ. 'ಕೃಷಿಗೀತೆ' ಪ್ರತಿಪಾದಿಸುವ ವಿಷಯ ಕೂಡ ಇದೇ ಆಗಿದೆ. ಹದಿನೈದನೆಯ ಶತಮಾನದಲ್ಲಿಯ ಕೇರಳದಲ್ಲಿ ಜಾರಿಯಲ್ಲಿದ್ದುದು ಬಹುಮಟ್ಟಿಗೆ ಕೃಷಿಗೀತದಲ್ಲಿಯ ವಿಷಯಗಳೇ ಆಗಿವೆ. ಇದನ್ನು ವಿದೇಶೀಯರ ಟಿಪ್ಪಣಿಗಳು ಕೂಡ ಬಹಿರಂಗಪಡಿಸುತ್ತವೆ.

ಕೆ.ಕೆ.

ಕೈತೋಟ ಕೈತೋಟ ಎಂದರೆ ಮನೆಯ ಹತ್ತಿಂಟು ಅಗತ್ಯಗಳನ್ನು ಪೂರೈಸುವ ಉದ್ಯಾನ. ಪೂಜೆಗೆ ಬೇಕಾದ ಹೂಪತ್ರೆ, ಅಡುಗೆಗೆ ಅಗತ್ಯವಾದ ತರಕಾರಿ, ಬಾಳೆಎಲೆ, ಗೆಡ್ಡೆಗೆಣಸು, ಸಣ್ಣಪುಟ್ಟ ಕಾಯಿಲೆಗೆ ಬೇಕಾದ ಮನೆ ಮದ್ದು, ಮಕ್ಕಳಾಟದ ವನ, ಕಸಕಡ್ಡಿ ಅಡಗಿಸುವ ತಾಣವಾಗಿದೆ.

ಸ್ಥಳದ ಆಯ್ಕೆ : ಕೈತೋಟದ ಸ್ಥಳದ ಆಯ್ಕೆಗೆ ಸೀಮಿತ ಅವಕಾಶವಿದೆ. ಸಾಧಾರಣವಾಗಿ ಹಿತ್ತಲು ಇದಕ್ಕೆ ಬಹು ಅನುಕೂಲವಾದುದು. ಮನೆಯ ಎಲ್ಲಾ ಸದಸ್ಯರು ಬಿಡುವಿದ್ದಾಗ ತರಕಾರಿ ಸಸ್ಯಗಳ ಕಡೆ ಗಮನ ಕೊಡಬಹುದು. ಅಡುಗೆ ಮನೆ ಮತ್ತು ಬಚ್ಚಲು ನೀರನ್ನು ಅವುಗಳತ್ತ ಸುಲಭವಾಗಿ ಹಾಯಿಸಬಹುದು. ಕೈತೋಟದ ಅಳತೆಯು ಲಭ್ಯವಿರುವ ಜಾಗ ಮತ್ತು ಎಷ್ಟು ಜನರಿಗೆ ತರಕಾರಿ ಬೆಳೆಯಬೇಕು ಎಂಬ ಅಂಶಗಳನ್ನು ಅವಲಂಬಿಸಿದೆ. ಕೈತೋಟದ ಆಕಾರಕ್ಕೆ ಯಾವುದೇ ನಿರ್ದಿಷ್ಟ ಮಾದರಿ ಇಲ್ಲ. ಆಯತಾಕಾರವಿದ್ದರೆ ಉತ್ತಮ.



ಭೂಮಿಯ ಸಿದ್ಧತೆ : ಮೊದಲು ಗುದ್ದಲಿಯಿಂದ 30-40 ಸೆಂ.ಮೀ. ಆಳ ಅಗೆಯಬೇಕು. ಕಲ್ಲು, ಪೊದೆ ಮತ್ತು ಕಳೆಗಳನ್ನು ತೆಗೆದು ಹಾಕಿ ಸಾಕಷ್ಟು ಕೊಟ್ಟಿಗೆಗೊಬ್ಬರ ಅಥವಾ ಎರೆಗೊಬ್ಬರ ಹಾಕಿ, ಮಣ್ಣಿನೊಳಗೆ ಚೆನ್ನಾಗಿ ಬೆರೆಸಿ ಮಡಿ ಮತ್ತು ಸಾಲುಗಳನ್ನು 45 ಸೆ.ಮೀ. ಅಥವಾ 60 ಸೆಂ.ಮೀ. ಅಂತರದಲ್ಲಿ ಅಗತ್ಯಕ್ಕೆ ತಕ್ಕಂತೆ ಮಾಡಿಕೊಳ್ಳಬೇಕು. ಒಂದು ವೇಳೆ ಸಿಮೆಂಟ್ ಹಾಕಿಸಿದ್ದರೆ, ಕುಂಡಗಳಲ್ಲಿ, ಮಣ್ಣಿನ ಜಾಗವಾದರೆ ನೆಲದಲ್ಲಿ ಬೆಳೆಯುವ ಸಸಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಯುಕ್ತ. ಕುಂಡಗಳ ಗಾತ್ರಕ್ಕೆ ಅನುಗುಣವಾಗಿ ಗಿಡಗಳನ್ನು ಆಯ್ಕೆಮಾಡಿಕೊಳ್ಳಬೇಕು. ಬೆಳೆಸಿದ ಅಲಂಕಾರಿಕ ಎಲೆ ಸಸ್ಯಗಳು, ಹೂಗಿಡಗಳನ್ನು ಆಕರ್ಷಕವಾಗಿ ಜೋಡಿಸಿಡಬಹುದು. ಕನಿಷ್ಠ ಎರಡು ವರ್ಷಕ್ಕೊಮ್ಮೆ ಮಣ್ಣು ಬದಲಿಸಬೇಕು.

ಬಿತ್ತನೆ ಮತ್ತು ನಾಟಿ : ನೇರ ಬೀಜ ಬಿತ್ತಿ ಬೆಳೆಯಬಹುದಾದ ಬೆಂಡೆ, ಬೀನ್ಸ್, ಅವರೆ, ಅಲಸಂದೆ ಇನ್ನೂ ಹಲವು ಬೀಜಗಳನ್ನು ಮಡಿಯ ಒಂದು ಭಾಗದಲ್ಲಿ 50 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು. ಸಣ್ಣ ಈರುಳ್ಳಿ, ಶುಂಠಿ ಕೊತ್ತಂಬರಿಗಳನ್ನು ಮಡಿಯ ಬದುವಿನ ಪಕ್ಕದಲ್ಲಿ ಹಾಕಬಹುದು.

ನಾಟಿ ಮಾಡುವ ಬೆಳೆಗಳಾದ ಟೊಮ್ಯಾಟೊ, ಬದನೆ, ಮತ್ತು ಮೆಣಸಿನ ಸಸಿಗಳನ್ನು ಮಡಿಗಳಲ್ಲಿ ಇಲ್ಲವೆ ಕುಂಡಗಳಲ್ಲಿ ಒಂದು ತಿಂಗಳ ಮುಂಚಿತವಾಗಿ ಮೊದಲು ಬಿತ್ತನೆ ಮಾಡಿ ಅನಂತರ ನಾಟಿ ಮಾಡುವುದು.

ಕೈತೋಟದ ಮುಖ್ಯ ಉದ್ದೇಶ ವರ್ಷವಿಡೀ ತರಕಾರಿಯ ಗರಿಷ್ಠ ಉತ್ಪನ್ನ ಮತ್ತು ಸತತ ಪೂರೈಕೆ. ಕೆಲವು ಕ್ರಮಗಳನ್ನು ಅನುಸರಿಸುವ ಮೂಲಕ ಈ ಗುರಿ ಮುಟ್ಟಬಹುದು. ತೋಟದ ಸುತ್ತಲಿನ ಕಾಲುದಾರಿ ಮತ್ತು ಮಧ್ಯದ ಬದುವಿನ ಮೇಲೆ ಅಲ್ಪಾವಧಿ ತರಕಾರಿಗಳಾದ ಕೊತ್ತಂಬರಿ, ಸ್ಪಿನಾಚ್ (ಪಾಲಕ್), ಮೆಂತ್ಯ, ದೊಡ್ಡಪತ್ರೆ, ಪುದೀನಗಳನ್ನು ಬೆಳೆಯಬಹುದು.

ಅಚ್ಚ ಹಸುರಿನ ಲಾನ್ : ಲಾನ್ ಬೆಳೆಸುವುದರಿಂದ ಅಂಗಳದ ಸೌಂದರ್ಯ ಇಮ್ಮಡಿಸುತ್ತದೆ. ನೆಡುವ ಮೊದಲು ಕಳೆ ಇಲ್ಲದಂತೆ ನೋಡಿಕೊಳ್ಳಬೇಕು. ಚೆನ್ನಾಗಿ ಬಿಸಿಲು ಬೀಳುವಂತಿರಬೇಕು. ಮರಳಿನಲ್ಲಿ ಬೀಜ ಬಿತ್ತಬಹುದು ಅಥವಾ ಹುಲ್ಲನ್ನು ಅಲ್ಲಲ್ಲಿ ನಾಟಿ ಮಾಡಿ ದಿನಕ್ಕೆರಡು ಸಲ ನೀರುಣಿಸಿದರೆ ಒಂದೆರಡು ತಿಂಗಳಲ್ಲಿ ಚಿಗುರೊಡೆಯುತ್ತದೆ. ಲಭ್ಯವಿರುವ ಕಲ್ಲುಗಳು, ಇತ್ಯಾದಿಗಳಿಂದ ಆಕರ್ಷಕ ವಿನ್ಯಾಸವನ್ನು ನಿರ್ಮಿಸಬಹುದು.

ಹೂ ಬಿಡುವ ಸಸ್ಯಗಳು : ಮನೆಯ ಸೌಂದರ್ಯ ಹೆಚ್ಚಿಸುವುದು ಅಂದವಾದ ಹೂ ಗಿಡಗಳಿಂದ ಸಾಧ್ಯ. ಇದರಲ್ಲಿ ಸೌಂದರ್ಯದ ಜೊತೆಗೆ ಲಾಭವು ಇದೆ. ಬೋಗನ್‌ವಿಲ್ಲ, ಯುಫೋಬಿಯ, ಪಿಟೋನಿಯ, ಗಜಾನೀಯ, ಜಿರೇನಿಯಂ, ಬರ್ಡ್ ಆಫ್ ಪ್ಯಾರಡೈಸ್, ವಿಂಕರೋಸಿಯ, ಮಲ್ಲಿಗೆ, ಕಾಕಡ, ಮೊಲ್ಲೆ ಜಾಜಿ, ಸೇವಂತಿಗೆ, ಇರುವಂತಿಗೆ, ದಾಸವಾಳ, ಚೆಂಡು ಹೂ ಇತ್ಯಾದಿಗಳಿಗೆ ಬಿಸಿಲು ಬೇಕು. ಕೈತೋಟದ ರಾಣಿಯರಾದ ದಾಸವಾಳ, ಗುಲಾಬಿಗಳು ಬಿಸಿಲು ಬಿದ್ದಷ್ಟು ಅಧಿಕ ಹೂವರಳಿಸುತ್ತವೆ.

ಋತುವಿಗೆ ಅನುಗುಣವಾಗಿ ಹೂ ಬೀಜಗಳನ್ನು ಬಿತ್ತಬಹುದು. ಝೀನಿಯ, ಚೆಂಡುಹೂ ಸರ್ವಕಾಲಕ್ಕೂ ಸುಂದರ. ಇವು ಚಳಿ, ಮಳೆಗಾಲದಲ್ಲಿ ಮುದ ನೀಡುತ್ತವೆ. ಕನಕಾಂಬರ, ಮಲ್ಲಿಗೆ, ಇನ್ನೂ ಹಲವು ಸುಮಧುರ ಹೂಗಳು ಕೈತೋಟದ ಪರಿಮಳ ಹೆಚ್ಚಿಸಲು ಸಹಾಯಕ. ರೋಗಬಾಧೆಗಳಿಗೆ ಹುಳಿಮಜ್ಜಿಗೆ, ಬೂದಿ, ಬೆಳ್ಳುಳ್ಳಿ, ಕಷಾಯ ಬಳಸಬಹುದು. ತರಕಾರಿ ತ್ಯಾಜ್ಯಗಳಿಂದ ಗೊಬ್ಬರ ಮಾಡಿ ಬಳಸಬಹುದು. ಅಲ್ಲಲ್ಲಿ ತುಳಸಿ, ಚೆಂಡುಹೂವಿನ ಗಿಡಗಳಿದ್ದರೆ ಕೀಟಬಾಧೆ ಕಡಿಮೆ.

ಉಪಯೋಗಗಳು :

ಪಕ್ಷಿಗಳ ಆಗಮನದಿಂದ ಕೀಟಗಳ ನಿರ್ಮೂಲನೆ, ಸಮಾರಂಭಗಳಲ್ಲಿ ಶುಭಕೋರಲು ಹೂಗುಚ್ಛಗಳನ್ನು ಮಾಡಿಕೊಳ್ಳಬಹುದು. ಮಿತವಾದ ಕೆಲಸದಿಂದ ಹಿತವಾದ ವ್ಯಾಯಾಮವೂ ಲಭಿಸುತ್ತದೆ. ಪುಟ್ಟ ಭೂಮಿಯಲ್ಲಿ ಕೈತೋಟ ಮಾಡಬಹುದು. ಸುತ್ತಲಿನ ಜಾಗದಲ್ಲಿ ತರಕಾರಿ, ಹಣ್ಣು, ಮರಮುಟ್ಟು ಔಷಧಿ ಸಸ್ಯಗಳನ್ನು ಬೆಳೆಯಬಹುದು. ಸ್ವಲ್ಪ ಬುದ್ಧಿವಂತಿಕೆ, ಕೌಶಲವಿದ್ದರೆ ಲಾಭವನ್ನು ಹೆಚ್ಚಿಸಬಹುದು.

ಆದಾಯದ ಮೂಲ ಹೆಚ್ಚಿಸಬಹುದಾದ ಮೆಣಸು, ಕಾಫಿ, ಏಲಕ್ಕಿ, ಹಲಸು, ತೆಂಗು, ದಾಳಿಂಬೆ, ಬಾಳೆ, ಅಡಕೆ ಮಾವು, ಸಪೋಟ ಇತ್ಯಾದಿ; ಸೊಪ್ಪುಗಳು, ಗಡ್ಡೆ, ಹೂವುಗಳು, ವೀಳ್ಯದೆಲೆ, ಜೇನು, ಹಣ್ಣುಗಳು, ಅರಿಸಿನ, ಶುಂಠಿ ಹಾಗೂ ಜಾನುವಾರುಗಳಿಗೆ ಬೇಕಾದ ಹುಲ್ಲನ್ನು ಸ್ವತಃ ಕೃಷಿ ತ್ಯಾಜ್ಯ ಹಾಗೂ ಕೊಟ್ಟಿಗೆ ಗೊಬ್ಬರ ಬಳಸಿ ಅಧಿಕ ಫಸಲು ಪಡೆಯಬಹುದು. ಉತ್ತಮ ಕೈತೋಟದ ನಿರ್ಮಾಣದಿಂದ ಮನ ಮನೆ ಸಂತಸ, ಸೌಂದರ್ಯ, ಆರೋಗ್ಯ ಹೆಚ್ಚುತ್ತದೆ.

ಎನ್.ಸಿ.

ಪರಾಮರ್ಶನ ಗ್ರಂಥಗಳು

ಅಂತರ್ಜಾಲ

ಪ್ರಜಾವಾಣಿ ದಿನ ಪತ್ರಿಕೆ ದಿನಾಂಕ : 29-02-2012 ಮತ್ತು 14-03-2012

ಕೊಕೇನ್ ಇದು ಎರಿತ್ರೊಝೈಲೇಸೀ ಕುಟುಂಬದ್ದಾಗಿದ್ದು, ಎರಿತ್ರೋಝೈಲಮ್ ಇದರ ವೈಜ್ಞಾನಿಕ ಹೆಸರು. ಇದು ಆಲ್ಕಲಾಯ್ಡ್‌ನ್ ಪ್ರಭೇದಕ್ಕೆ ಸೇರಿದೆ. ಇದರ ಮೂಲ ಸ್ಥಳ ದಕ್ಷಿಣ ಅಮೆರಿಕ, ಜಾವ, ಇಂಡೋನೇಷ್ಯ, ದಕ್ಷಿಣ ಅಮೇರಿಕ. ಆಂಡೀಸ್ ಪರ್ವತ ಪ್ರದೇಶಗಳಲ್ಲಿ ಇದರ ಕೃಷಿ ಉಂಟು.



ಕ್ರಮೇಣ ಇದು ಭಾರತದ ತಮಿಳುನಾಡು, ಮಹಾರಾಷ್ಟ್ರ, ಕರ್ನಾಟಕ, ಬಂಗಾಳ, ಅಸ್ಸಾಂ ಮೊದಲಾದ ರಾಜ್ಯಗಳಲ್ಲಿ ಬೆಳೆಸಲು ಪ್ರಯತ್ನಿಸಿದರಾದರೂ ವಿಫಲವಾಯಿತು. ತೋಟಗಳಲ್ಲಿ ಅಲ್ಲೊಂದು ಇಲ್ಲೊಂದು ಮಾತ್ರ ಉಳಿದುಕೊಂಡಿದೆ. ಇದು 15-20 ಅಡಿ ಬೆಳೆಯಬಲ್ಲ ಮರವಾದರೂ ಎಲೆಗಳನ್ನು ಪಡೆಯಲು ಅನುಕೂಲವಾಗಲೆಂದು 8-10 ಅಡಿಯಷ್ಟು ಮಾತ್ರ ಎತ್ತರ ಬೆಳೆಸುತ್ತಾರೆ. ಇದರ ಎಲೆಗಳು ಕಡು ಹಸುರು ಬಣ್ಣದವಾಗಿದ್ದು, ಅಂಡಾಕಾರವಿರುತ್ತವೆ. ಅದರಲ್ಲಿರುವ ಕೊಕೋನ್ ಆಲ್ಕಲಾಯ್ಡ್ ಎಲೆ ಕಹಿಯಾಗಿರಲು ಕಾರಣ. ಹಳದಿಬಣ್ಣದ ಚಿಕ್ಕ ಹೂಗಳನ್ನು ಬಿಡುತ್ತದೆ. ಐದು ಪತ್ರಗಳು, ಐದು ದಳಗಳು, ಹತ್ತು ಕೇಸರಗಳಿರುತ್ತವೆ. ಏಕಬೀಜೀಯ ಅಷ್ಟಿಫಲ ಮಾದರಿ ಬೀಜ ಉಳ್ಳದ್ದು.

ಕೊಕೇನ್ ಕೃಷಿಗೆ 70-80 ಅಂಗುಲ ಮಳೆ ಬೀಳುವ ಪ್ರದೇಶ ಬೇಕು. 50°-70° ಫ್ಯಾ. ಉಷ್ಣಾಂಶ ಅಗತ್ಯ. ಉತ್ತಮ ಇಳುವರಿಗಾಗಿ ಇದನ್ನು ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಬೆಳೆಸಲಾಗುತ್ತಿದೆ. ಸಸಿ ನೆಟ್ಟ ಮೂರು ವರ್ಷಗಳ ಅನಂತರ ಬಲಿತ ಎಲೆಗಳನ್ನು ಕಿತ್ತು ಒಣಗಿಸಿ ಕೊಕೇನ್ ಪಡೆಯಲಾಗುತ್ತದೆ. ಎಲೆಗಳಷ್ಟೇ ಅಲ್ಲದೆ ಈ ಮರದ ತೊಗಟೆ ಮತ್ತು ಬೀಜಗಳಿಂದಲೂ ಕೊಕೇನ್ ಸಿಗುತ್ತದೆ. ಒಂದು ವರ್ಷದಲ್ಲಿ ಮೂರು ನಾಲ್ಕು ಬಾರಿ ಎಲೆಗಳನ್ನು ಕೊಯ್ಯಬಹುದು. ಕೊಕೇನ್ ಮರದಲ್ಲಿ ಕೆಲವು ಔಷಧೀಯ ಗುಣಗಳಿವೆ. ಚರ್ಮರೋಗಗಳು, ವಾತಪಿತ್ತಾದಿಗಳಿಂದುಂಟಾಗುವ ರೋಗಗಳಿಗೂ ಮುಲಾಮು ಮತ್ತು ಕಷಾಯವಾಗಿ ಬಳಸುವರು.

ಕೆ.ಎಂ.

ಕೊಕೋ ಮಧ್ಯ ಮತ್ತು ದಕ್ಷಿಣ ಅಮೆರಿಕದ ಮೂಲನಿವಾಸಿಗಳಾದ ಮಾಯ ಮತ್ತು ಅಝುಟೆಕ್ ಜನರು ಮೊದಲಿಗೆ ಈ ಸಸ್ಯವನ್ನು ಬೆಳೆಸುತ್ತಿದ್ದರು. ಇದು ಸ್ಟರ್ಕ್ಯುಲಿಯೇಸಿ ಕುಟುಂಬಕ್ಕೆ ಸೇರಿದೆ. ವೈಜ್ಞಾನಿಕ ಹೆಸರು ಥಿಯೋಬ್ರೋಮ. ಇದರಲ್ಲಿ 72 ಜಾತಿ ಇದ್ದು 1500 ಪ್ರಭೇದಗಳಿವೆ. ಕರ್ನಾಟಕದಲ್ಲಿ 11 ಜಾತಿಯಿದ್ದು 23 ಪ್ರಭೇದಗಳನ್ನು ಕಾಣಬಹುದು.

ತಂಪಾದ ಪ್ರದೇಶಗಳಲ್ಲಿ ಕೋಕೊ ಬೆಳೆಯಲಾಗುತ್ತದೆ. 10 ಡಿಗ್ರಿ ಸೆಂಟಿಗ್ರೇಡ್‌ನಿಂದ 30 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶ ಇರುವ ವಾತಾವರಣವಿರಬೇಕು. ನೆರಳು ಹೆಚ್ಚಾಗಿರಬೇಕಾದುದರಿಂದ ತೆಂಗು ಮತ್ತು ಅಡಕೆ ತೋಟದಲ್ಲಿ ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ.

ಚೆನ್ನಾಗಿ ಫಸಲು ಕೊಡುತ್ತಿರುವ ಗಿಡದಿಂದ ಬೀಜಕ್ಕಾಗಿ ಹಣ್ಣನ್ನು ಸಂಗ್ರಹಿಸಬೇಕು. ಹಣ್ಣಿನಿಂದ ಆದಷ್ಟು ಬೇಗನೆ ಬೀಜವನ್ನು ಹೊರತೆಗೆದು ಬಿತ್ತನೆ ಮಾಡಬೇಕು. ಒಂದು ಹಣ್ಣಿನಲ್ಲಿ ಮೂವತ್ತರಿಂದ ಮೂವತ್ತೈದು ಬೀಜಗಳಿರುತ್ತವೆ. ಡಿಸಂಬರ್ ಅಥವಾ ಜನವರಿ ತಿಂಗಳಿನಲ್ಲಿ ಬೀಜ ಬಿತ್ತನೆ ಮಾಡಿದರೆ ಮಳೆಗಾಲದಲ್ಲಿ ನಾಟಿ ಮಾಡಲು ಸಸಿಗಳು ಸಿದ್ಧವಾಗಿರುತ್ತವೆ. ಪಾತಿಯಲ್ಲಿ ಬೀಜವನ್ನು ತುಂಬ ಆಳಕ್ಕೆ ಹಾಕಬಾರದು. ಬೀಜವನ್ನು ಬಿತ್ತಿದ ಮೇಲೆ ಮಣ್ಣನ್ನು ಎರಚಬೇಕು. ಅನಂತರ ಪ್ರತಿದಿನ ನೀರನ್ನು ಚಿಮುಕಿಸುತ್ತಾ ಇರಬೇಕು. ಹೀಗೆ ಮಾಡುವುದರಿಂದ ಒಂದು ವಾರದಲ್ಲಿ ಬೀಜಗಳು ಮೊಳಕೆಯೊಡೆಯುತ್ತವೆ. ಬಿತ್ತುವ ಬೀಜದಲ್ಲಿ ಹಣ್ಣಿನ ಪದರ ಅಂಟಿಕೊಂಡಿದ್ದರೆ ಅದನ್ನು ತೆಗೆದು ಹಾಕಬೇಕು. ಹೀಗೆ ಮಾಡುವುದರಿಂದ ಶೇ. 90ರಷ್ಟು ಬೀಜಗಳು ಮೊಳಕೆಯೊಡೆಯುತ್ತವೆ. ಬಿಸಿಲು ಬೀಳುವ ಸ್ಥಳವಾಗಿರಬೇಕು. ಸದಾ ಮಣ್ಣಲ್ಲಿ ತೇವಾಂಶವಿರುವಂತೆ ನೋಡಿಕೊಳ್ಳಬೇಕು.



ಏಕಕೃಷಿ ಪದ್ಧತಿಯಲ್ಲಿ ಪ್ರತಿ ಹೆಕ್ಟೇರಿಗೆ ಸುಮಾರು 1,100 ಗಿಡಗಳನ್ನು ನೆಡಬಹುದು. ಗಿಡದಿಂದ ಗಿಡಕ್ಕೆ ಮತ್ತು ಸಾಲಿನಿಂದ ಸಾಲಿಗೆ ಒಂಬತ್ತು ಅಡಿ ಅಂತರವಿರುತ್ತದೆ. ಮಿಶ್ರಬೆಳೆಯಾಗಿ ತೆಂಗಿನ ತೋಟದಲ್ಲಿ ಬೆಳೆಸುವಾಗ ಗಿಡದಿಂದ ಗಿಡಕ್ಕೆ ಒಂಬತ್ತು ಅಡಿ ಮತ್ತು ಸಾಲಿನಿಂದ ಸಾಲಿಗೆ ಹನ್ನೆರಡು ಅಡಿ ಅಂತರವಿರುತ್ತದೆ. ಹಾಗೆಯೇ ಅಡಕೆ ತೋಟದಲ್ಲಾದರೆ ಗಿಡದಿಂದ ಗಿಡಕ್ಕೆ ಎಂಟು ಅಡಿ, ಸಾಲಿನಿಂದ ಸಾಲಿಗೆ ಹದಿನಾರು ಅಡಿ ಅಂತರವಿರುತ್ತದೆ. ಹೀಗೆ ನಾಟಿ ಮಾಡುವುದರಿಂದ ತೆಂಗಿನ ತೋಟದಲ್ಲಾದರೆ ಪ್ರತಿ ಹೆಕ್ಟೇರಿಗೆ 813 ಸಸಿ, ಅಡಿಕೆ ತೋಟದಲ್ಲಾದರೆ 685 ಸಸಿ ಬೇಕಾಗುತ್ತವೆ.

90ಸೆಂ.ಮೀ. ಅಗಲ ಮತ್ತು 15 ಸೆಂ.ಮೀ. ಎತ್ತರವಿರುವ ಸಸಿ ಮಡಿಯನ್ನು ಸಿದ್ಧಪಡಿಸಿರಬೇಕು. ಬೀಜವನ್ನು ಚೆನ್ನಾಗಿ ಸ್ವಚ್ಛಗೊಳಿಸಿದ ಮೇಲೆ ಸಾಲಿನಿಂದ ಸಾಲಿಗೆ ಮತ್ತು ಬೀಜದಿಂದ ಬೀಜಕ್ಕೆ 7.5 ಸೆಂ.ಮೀ. ಅಂತರದಲ್ಲಿ ಬೀಜದ ಮೊಳಕೆ ಬರುವ ಭಾಗವನ್ನು ಮೇಲ್ಮುಖ ಮಾಡಿ ಬಿತ್ತಬೇಕು. ಮೇಲೆ ಮಣ್ಣನ್ನು ತೆಳುವಾಗಿ ಎರಚಿ ಪ್ರತಿದಿನ ನೀರನ್ನು ಚಿಮುಕಿಸಬೇಕು. ಮೊಳಕೆ ಒಡೆದ ಎರಡು ವಾರದ ಬಳಿಕ ಪಾಲಿಥಿನ್ ಚೀಲಗಳಲ್ಲಿ ನೆಡಬೇಕು. 18 ಸೆಂ.ಮೀ. x 35 ಸೆಂ.ಮೀ. ಇರುವ ಪಾಲಿಥಿನ್ ಚೀಲಗಳಿಗೆ ಸಾವಯವ ಗೊಬ್ಬರ ಮತ್ತು ಮಣ್ಣನ್ನು ಸಮಪ್ರಮಾಣದಲ್ಲಿ ಬೆರೆಸಿ ತುಂಬಿಸಿಡಬೇಕು. ಮೊಳಕೆ ಒಡೆದ ಸಸಿಗಳನ್ನು ನೆಡಬೇಕು. ಸಸಿ ಪಾಲಿಥಿನ್ ಚೀಲದಲ್ಲಿ ಬೆಳೆಯುತ್ತಿರಬೇಕಾದರೆ ಬಹಳ ಎಚ್ಚರಿಕೆಯಿಂದ ಗಮನಿಸುತ್ತಿರಬೇಕಾಗುತ್ತದೆ. ಹೆಚ್ಚಿನ ನೆರಳು ಇರುವಂತೆ ನೋಡಿಕೊಳ್ಳುವುದರ ಜೊತೆಗೆ ಸ್ವಲ್ಪ ಸ್ವಲ್ಪವೇ ನೆರಳಿನ ಪ್ರಮಾಣ ಕಡಿಮೆ ಮಾಡುತ್ತಾ ಬರಬೇಕು. ಯಾಕೆಂದರೆ ನಾಟಿ ಮಾಡಿದ ಮೇಲೆ ಪೂರ್ಣಪ್ರಮಾಣದ ನೆರಳು ಕೊಡಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಮುಂದಿನ ಬೆಳೆವಣಿಗೆಗೆ ಸಹಾಯಕವಾಗುವಂತೆ ಸಸಿಯನ್ನು ತಯಾರು ಮಾಡಬೇಕು. ಹಾಗೆಯೇ ಪಾಲಿಥಿನ್ ಚೀಲದಿಂದ ಬೇರುಗಳು ಹೊರಬಂದು ನೆಲಕ್ಕೆ ಮುಟ್ಟಿ ಅಲ್ಲಿಯೆ ಗಟ್ಟಿಯಾಗಿ ತಳವೂರುವ ಸಾಧ್ಯತೆ ಇರುತ್ತದೆ. ಹಾಗಾಗಿ ಗಿಡ ನಾಟಿ ಮಾಡಲು ಸಿದ್ಧವಾದ ಹಾಗೆ ಅದನ್ನು ಗಟ್ಟಿ ಜಾಗದೆಡೆಗೆ ಸ್ಥಳಾಂತರ ಮಾಡಬೇಕು. ಈ ಸಸಿಗಳನ್ನು ಆರು ತಿಂಗಳಾದ ಮೇಲೆ ನೆಡಬಹುದು.

ಸಸಿಯನ್ನು ನಾಟಿ ಮಾಡುವ ಸಂದರ್ಭದಲ್ಲಿ ಆಳ, ಅಗಲ ಮತ್ತು ಉದ್ದ ಪ್ರತಿಯೊಂದು 90 ಸೆಂ.ಮೀ.ನಷ್ಟು ಇರಬೇಕು. ಮೇಲ್ಮಣ್ಣು, ಸಾವಯವ ಗೊಬ್ಬರ ಮಿಶ್ರಮಾಡಿ ತುಂಬಿದ ಅನಂತರ ಗಿಡವನ್ನು ನಾಟಿಮಾಡಬೇಕು. ಗಿಡವೊಂದಕ್ಕೆ 25 ಕೆ.ಜಿ. ಸಾವಯವ ಗೊಬ್ಬರ ಕೊಟ್ಟು ನೀರನ್ನು ಹಾಯಿಸುತ್ತಿರಬೇಕು.

ಸಸಿಯನ್ನು ಹಿಟ್ಟು ತಿಗಣೆ, ಟೀ ಸೊಳ್ಳೆ, ಕಾಂಡ ಕೊರೆಯುವ ಹುಳು, ಗಿಡಹೇನು ಮತ್ತು ಇಲಿ ಅಳಿಲಿನಿಂದ ಸಂರಕ್ಷಣೆಯನ್ನು ಮಾಡಬೇಕಾಗುತ್ತದೆ. ಗಿಡವನ್ನು ಆರೋಗ್ಯಯುತವಾಗಿ ಮಾಡಲು ಅನಗತ್ಯವಾಗಿರುವ ರೆಂಬೆಗಳನ್ನು ಕತ್ತರಿಸಬೇಕು. ಹಳೇ ಮರವಾದರೆ ಮೇಲ್ಭಾಗವನ್ನು ಸಂಪೂರ್ಣವಾಗಿ ಕತ್ತರಿಸಬೇಕು. ಇದರಿಂದ ಹೆಚ್ಚು ಇಳುವರಿ ಪಡೆಯಬಹುದು. ಹೀಗೆ ಮಾಡುವುದರಿಂದ ಅದರ ಬುಡದ ಭಾಗಕ್ಕೆ ಹೆಚ್ಚಿನ ಬಿಸಿಲು ತಾಗುತ್ತದೆ. ಅದರಿಂದ ಅಧಿಕ ಫಸಲು ನೀಡಲು ಸಹಾಯಕವಾಗುತ್ತದೆ. ದೀರ್ಘಕಾಲದವರೆಗೆ ಮರಗಳು ಚೆನ್ನಾಗಿರುತ್ತವೆ. ಸುಮಾರು ಮೂವತ್ತು ವರ್ಷಕಾಲ ಒಳ್ಳೆಯ ಫಸಲು ನೀಡುತ್ತವೆ. ಹಣ್ಣುಗಳನ್ನು ಅಥವಾ ಬಲಿತ ಕಾಯಿಗಳನ್ನು ಕಿತ್ತು ಅಡ್ಡಕ್ಕೆ ಕತ್ತರಿಸಿ ಬೀಜಗಳನ್ನು ತೆಗೆಯಬೇಕು. ಹೆಚ್ಚು ದಿನ ಹಣ್ಣಿನೊಳಗೆ ಬೀಜ ಬಿಡಬಾರದು.

ಬೀಜವನ್ನು ಸಂಸ್ಕರಿಸಿ ಚಾಕೋಲೇಟ್ ಮತ್ತು ಕುಡಿಯುವ ಚಾಕೋಲೇಟ್‌ನ್ನು ತಯಾರಿಸಲಾಗುತ್ತದೆ.

ಎ.ಬಿ.ಪಿ.

ಕೊಟ್ಟಂಬಾಳೆ ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಟ್ಟಿಗೊಬ್ಬರ ಮತ್ತು ಮಣ್ಣು ಹೊರುವ ಸಂದರ್ಭದಲ್ಲಿ ಬಳಸುವ ಶಿರಸ್ತ್ರಾಣ. ಇದು ಮುಖದ ಮೇಲೆ ಸೆಗಣಿ ನೀರು, ಹುಡಿಮಣ್ಣು ಮತ್ತು ಕೆಸರು ನೀರು ಬಿದ್ದು ಕಿರಿಕಿರಿಯಾಗದಂತೆ ತಡೆಯುತ್ತದೆ.

ಅಡಕೆ ಮರದ ಸೋಗೆಯಿಂದ ಹಾಳೆಯನ್ನು ತುಂಡರಿಸಿ ತೆಗೆದ ಬಳಿಕ ಅದರ ಒಂದು ಪಾರ್ಶ್ವದ ಎರಡೂ ತುದಿಗಳನ್ನು ಸುಮಾರು ಒಂದೂವರೆ ಅಂಗುಲದಷ್ಟು ಒಂದರ ಮೇಲೆ ಇನ್ನೊಂದು ಬರುವಂತೆ ಪರಸ್ಪರ ಜೋಡಿಸುತ್ತಾರೆ. ಜೋಡಿಸಿದ ಬಳಿಕ ಚಾಕುವಿನಿಂದ ತೂತು ಮಾಡಿ ಪರಸ್ಪರ ಬಿಚ್ಚಿಕೊಳ್ಳದಂತೆ ಅಡಕೆ ಸೋಗೆಯ ದಂಟಿನ ದಪ್ಪಗಿನ ನಾರನ್ನು ಸಿಕ್ಕಿಸಿಡುತ್ತಾರೆ. ಈ ನಾರಿನ ತುಂಡು ಸುಮಾರು ಒಂದಂಗುಲದಷ್ಟು ಉದ್ದವಿರುತ್ತದೆ.

ಕೊಟ್ಟಂಬಾಳೆಯ ನೆತ್ತಿಯ ಭಾಗದಲ್ಲಿ ಚೂಪಾದ ಭಾಗವನ್ನು ಮಡಚಿ ಹಾಳೆಯ ಅಡಿಭಾಗದಿಂದ ಸಣ್ಣಗೆ ಎಬ್ಬಿಸಿದ ನಾರಿನೊಳಗೆ ಸಿಕ್ಕಿಸುತ್ತಾರೆ. ಈಗ ಹಾಳೆಯ ಇನ್ನೊಂದು ಪಾರ್ಶ್ವ ಬಿಲ್ಲಿನಂಥ ಆಕೃತಿಯಲ್ಲಿರುತ್ತದೆ. ಅದನ್ನು ಒಂದು ಅಂಗುಲದಷ್ಟು ಮೇಲಕ್ಕೆ ಮಡಚುತ್ತಾರೆ. ಇದರಿಂದ ಕೊಟ್ಟಂಬಾಳೆಯ ಮೇಲೆ ಹರಿದು ಬರುವ ಸೆಗಣಿ ನೀರು, ಮಣ್ಣು, ಕೆಸರು ಮುಖದ ಮೇಲೆ ಬೀಳುವುದಿಲ್ಲ. ಭಾರದಿಂದ ಉಂಟಾಗುವ ನೇರ ಒತ್ತಡವನ್ನು ತಡೆದು ನೆತ್ತಿಗೆ ಆಗುವ ನೋವನ್ನು ನಿಯಂತ್ರಿಸುತ್ತದೆ. ಕೊಟ್ಟಂಬಾಳೆಯ ಮೇಲೆ ಸಿಂಬೆಯನ್ನು ಇಟ್ಟುಕೊಂಡು ಕಲ್ಲು, ಮರದ ದಿಮ್ಮಿಯನ್ನೂ ಹೊರುತ್ತಾರೆ.

ಎಸ್.ವೈ.

ಕೊಟ್ಟೆ ಇದು ಅಡಕೆ ಹಾಳೆಯ ಉತ್ಪನ್ನವಾಗಿದೆ. ಹಾಳೆಯು ಅಗಲ ಮತ್ತು ಉದ್ದವಿದ್ದಷ್ಟು ಪ್ರಯೋಜನ ಹೆಚ್ಚು.

ಹಾಳೆಯನ್ನು ಸೋಗೆಯಿಂದ ಕತ್ತರಿಸಿದ ಬಳಿಕ ಮಧ್ಯಭಾಗದಿಂದ ಉದ್ದಕ್ಕೆ ಬಾಗಿಸಿ ಹಾಳೆಯ ಎರಡೂ ಪಾರ್ಶ್ವಗಳನ್ನು ಕಟ್ಟುತ್ತಾರೆ. ಇದಕ್ಕೆ ಅಡಿಕೆ ಸೋಗೆಯ ದಂಟಿನ ನಾರು ಅಥವಾ ತೆಂಗಿನ ಮಡಲಿನ ದಂಟಿನ ತೆಳುವಾದ ನಾರಿನಿಂದ ಹೆಣೆಯುತ್ತಾರೆ. ಒಳಭಾಗ ಹೊಟ್ಟೆಯಂತಿದ್ದು, ಟೊಳ್ಳಾಗಿರುತ್ತದೆ. ಹಾಳೆ ಹಸಿಯಾಗಿರುವಾಗ ಇದನ್ನು ಮಾಡುತ್ತಾರೆ. ಬಳಿಕ ಟೊಳ್ಳಿನ ಒಳಗೆ ಅಡಿಕೆ ಸಿಪ್ಪೆಯನ್ನು ತುಂಬಿಸಿ ಬಿಸಿಲಿನಲ್ಲಿ ಒಣಗಿಸುತ್ತಾರೆ. ಒಣಗಿದ ಬಳಿಕ ಬಳಕೆಗೆ ಸಿದ್ಧವಾಗುತ್ತದೆ.

ತೋಟದಲ್ಲಿ ಅಡಕೆ ಹೆಕ್ಕಲು, ಗೇರುಬೀಜ ಸಂಗ್ರಹಿಸಲು ಇದು ಹೇಳಿ ಮಾಡಿಸಿದ ತಂತ್ರಜ್ಞಾನ. ಹಳ್ಳಿಯಲ್ಲಿ ತರಕಾರಿ ಬೀಜಗಳನ್ನು ಸಂರಕ್ಷಿಸಿಡಲು ಇದನ್ನು ಬಳಸುವ ಕ್ರಮವಿದೆ. ಹಾಳೆಯನ್ನು ಸೋಗೆಯಿಂದ ಕತ್ತರಿಸುವಾಗ ಸುಮಾರು ಒಂದು ಅಡಿಯಷ್ಟು ಸೋಗೆಯ ದಂಟನ್ನು ಇಟ್ಟು ಕತ್ತರಿಸುತ್ತಾರೆ. ಈ ದಂಟು ಇದ್ದರೆ ಹಿಡಿಯಲು ಆಧಾರವಾಗುತ್ತದೆ. ಕತ್ತರಿಸಿದ ಹಾಳೆಯನ್ನು ಉದ್ದಕ್ಕೆ ಸುರುಳಿ ಸುತ್ತಿ ಮಧ್ಯಭಾಗಕ್ಕೆ ಹಾಳೆಯ ಬಳ್ಳಿಯಿಂದ ಕಟ್ಟಿ ಇನ್ನೊಂದು ಬಗೆಯ ಕೊಟ್ಟೆಯನ್ನೂ ತುಳುನಾಡಿನ ಕೃಷಿಕರು ತಮ್ಮ ಅಡಿಕೆ ತೋಟದಲ್ಲಿ ಬಳಸುತ್ತಾರೆ. ಅಡಿಕೆ ಮತ್ತು ಅದಕ್ಕಿಂತ ಸಣ್ಣ ಕೃಷಿ ಉತ್ಪನ್ನಗಳನ್ನು ಹೆಕ್ಕಿ ಇದರಲ್ಲಿ ಹಾಕಲು ಬಳಸುತ್ತಾರೆ.

ಎಸ್.ವೈ.

ಕೊಡಗಿನ ಎರೆಹುಳು ಗೊಬ್ಬರ ದೇಶಿ ಕ್ರಮವನ್ನು ಅನುಸರಿಸಿ ಕೊಡಗಿನಲ್ಲಿ ಎರೆಹುಳುವನ್ನು ಸಾವಯವ ರೀತಿಯಿಂದ ಉಪಯೋಗಿಸುತ್ತಾರೆ. ಇವು ಕೊಡಗಿನಲ್ಲಿ ಎಷ್ಟೋ ಕಡೆಗಳಲ್ಲಿ ಸಹಜವಾಗಿಯೆ ಉಪಯೋಗಕ್ಕೆ ಬರುತ್ತಿವೆ. ಇವನ್ನು ರೈತನ ಮಿತ್ರ, ರೈತ ಬಂಧು, ಭೂನಾಗ, ಮಳೆಹುಳು, ಪ್ರಕೃತಿಯ ನೇಗಿಲು - ಹೀಗೆ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ. ಎರೆಹುಳು ರೈತನ ಹಾಗೆ ನಿರಂತರ ಭೂಮಿಯಲ್ಲಿ ಕೆಲಸ ಮಾಡುತ್ತಲೇ ಇರುತ್ತದೆ. ಅದು ಕೆಳಭಾಗದ ಮಣ್ಣನ್ನು ಮೇಲಕ್ಕೆ ತಂದು ಭೂಮಿಯನ್ನು ನಿರಂತರವಾಗಿ ಉಳುತ್ತಾ, ಭೂಮಿಯ ಫಲವತ್ತತೆಯನ್ನು ಕಾಪಾಡಲು ಸಹಕರಿಸುತ್ತದೆ. ಮಣ್ಣಿನಲ್ಲಿ ತೇವಾಂಶ, ನೆರಳು ಮತ್ತು ಸಾವಯವ ಅಂಶ ಈ ಜೀವಿಗೆ ಬಹಳ ಇಷ್ಟವಾದ್ದರಿಂದ ತೇವಾಂಶ, ನೆರಳು ಮತ್ತು ಸಾವಯವ ಅಂಶ ಒದಗಿಸಬೇಕು. ಇದು ಸಾವಯವ ವಸ್ತುಗಳನ್ನು ತನ್ನ ಜಠರದಲ್ಲಿ ವಿಭಜಿಸಿ, ವಿವಿಧ ಪೋಷಕಾಂಶಗಳನ್ನು ಒಳಗೊಂಡ ಹಿಕ್ಕೆಗಳನ್ನು ಹಾಕುತ್ತದೆ. ಈ ಹಿಕ್ಕೆಯೇ ಎರೆಗೊಬ್ಬರ. ಕೃಷಿಯಲ್ಲಿ ಸಿಗುವ ತ್ಯಾಜ್ಯ ವಸ್ತುಗಳನ್ನು ಉತ್ಕೃಷ್ಟವಾದ ಗೊಬ್ಬರವನ್ನಾಗಿ ಪರಿವರ್ತಿಸಲು ಎರೆಹುಳುಗಳನ್ನು ಬಳಸಬಹುದು.

ಎರೆಗೊಬ್ಬರದ ಉಪಯೋಗ ಮತ್ತು ಮಹತ್ವ :

ಎರೆಹುಳು ಗೊಬ್ಬರ ಮಣ್ಣಿಗೆ ಸಾವಯವ ಅಂಶ ಒದಗಿಸಿ ಮಣ್ಣಿನ ರಚನೆ, ನೀರನ್ನು ಹಿಡಿದಿಟ್ಟುಕೊಳ್ಳುವ ಗುಣ ಮತ್ತು ಮಣ್ಣಿನ ಗಾಳಿಯಾಡುವಿಕೆಯನ್ನು ಉತ್ತಮಗೊಳಿಸುತ್ತದೆ.

ಎರೆಗೊಬ್ಬರ ಸಾರಜನಕ ಸ್ಥಿತಿಕರಿಸುವ, ರಂಜಕ ಕರಗಿಸುವ ಹಾಗೂ ರೋಗ ನಿರೋಧಕ ಉತ್ಪಾದಿಸುವ ಜೀವಾಣುಗಳಿಗೆ ಉತ್ತಮ ವಾತಾವರಣ ಕಲ್ಪಿಸಿ ಅವುಗಳ ವೃದ್ಧಿಗೆ ಸಹಕಾರಿಯಾಗುತ್ತದೆ.

ಎರೆಹುಳು ಗೊಬ್ಬರ ಬೆಳೆಗಳಿಗೆ ಬೇಕಾದ ಮುಖ್ಯ, ಲಘು ಪೋಷಕಾಂಶಗಳು ಮತ್ತು ಬೆಳೆವರ್ಧಕಗಳನ್ನು ಸಮತೋಲನ ಪ್ರಮಾಣದಲ್ಲಿ ಒದಗಿಸುತ್ತದೆ.

ಎರೆಹುಳು ಗೊಬ್ಬರ ಸಸ್ಯ ಬೆಳೆವಣಿಗೆಗೆ ಬೇಕಾದ ಹಾರ್ಮೋನ್/ ಬೆಳೆವರ್ಧಕಗಳನ್ನು ಒದಗಿಸುವುದರಿಂದ ಸಸ್ಯಗಳಲ್ಲಿ ಕೀಟ ಮತ್ತು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಸಮಸ್ಯಾತ್ಮಕ ಮಣ್ಣುಗಳಲ್ಲಿ ಎರೆಹುಳು ಗೊಬ್ಬರ ಬಳಸುವುದರಿಂದ ಲವಣಾಂಶ, ಕ್ಷಾರೀಯತೆ ಮತ್ತು ಆಮ್ಲೀಯತೆ ಪ್ರಮಾಣ ಕಡಿಮೆಯಾಗಿ ಬೆಳೆಗಳಿಗೆ ಬೇಕಾಗುವ ಸಸ್ಯ ಪೋಷಕಾಂಶಗಳ ಲಭ್ಯತೆ ಹೆಚ್ಚುತ್ತದೆ.

ಎರೆಹುಳು ಗೊಬ್ಬರದ ಬಳಕೆಯಿಂದ ರಾಸಾಯನಿಕರಹಿತ ಉತ್ಪನ್ನಗಳನ್ನು ಪಡೆಯುವುದರ ಜೊತೆಗೆ ಸ್ವಲ್ಪಮಟ್ಟಿಗೆ ಮಣ್ಣಿನ ಸವಕಳಿಯನ್ನು ತಡೆಗಟ್ಟಬಹುದು.

ಎರೆಹುಳು ಗೊಬ್ಬರ ತಯಾರಿಕೆಯಿಂದ ಜಮೀನಿನ ಸಾವಯವ ತ್ಯಾಜ್ಯವಸ್ತುಗಳ ಸಮರ್ಥ ಬಳಕೆ ಮತ್ತು ಮನೆಯಂಗಳದಲ್ಲಿ ಸ್ವಚ್ಛತೆಯನ್ನು ಕಾಪಾಡಿ ಪರಿಸರ ಮಾಲಿನ್ಯ ತಡೆಗಟ್ಟಬಹುದು.

ಗ್ರಾಮೀಣ ಯುವಕ ಯುವತಿಯರಿಗೆ ಕೃಷಿಪರ ಸ್ವಯಂ ಉದ್ಯೋಗ ಕೈಗೊಳ್ಳುವ ಅವಕಾಶ.

ಎರೆಗೊಬ್ಬರದ ಪೋಷಕಾಂಶಗಳು : ಸಾವಯವ ಗೊಬ್ಬರಗಳಲ್ಲಿ ಹೆಚ್ಚು ಉತ್ಕೃಷ್ಟವಾದ ಹಾಗೂ ಹೆಚ್ಚು ಪೋಷಕಾಂಶಗಳನ್ನು ಒದಗಿಸುವ ಗೊಬ್ಬರ ಎರೆಹುಳು ಗೊಬ್ಬರ. ಪ್ರತೀ ಕ್ವಿಂಟಾಲ್ ಎರೆಗೊಬ್ಬರ ಸುಮಾರು 800 ಗ್ರಾಂ. ಸಾರಜನಕ, 1100 ಗ್ರಾಂ. ರಂಜಕ ಮತ್ತು 500 ಗ್ರಾಂ. ಪೊಟ್ಯಾಷ್ ಹೊಂದಿರುವುದಾಗಿ ತಿಳಿದು ಬಂದಿದೆ. ಅಲ್ಲದೆ ಲಘು ಪೋಷಕಾಂಶಗಳಾದ ಕ್ಯಾಲ್ಸಿಯಂ, ಬೋರಾನ್, ಸತು, ಮಾಲಿಬ್ಡಿನಂ, ಬೆಳೆವರ್ಧಕಗಳು ಮತ್ತು ಸೂಕ್ಷ್ಮಾಣುಜೀವಿಗಳನ್ನು ಹೊಂದಿರುತ್ತದೆ.

ಎರೆಹುಳಗಳ ಆಯ್ಕೆ : ನಮ್ಮ ರಾಜ್ಯದಲ್ಲಿ ಸುಮಾರು 150-200 ಜಾತಿಗೆ ಸೇರಿರುವ ಎರೆಹುಳುಗಳು ಸಿಗುತ್ತವೆ. ಆದರೆ ಎರೆಹುಳು ಸಾಕಾಣಿಕೆ ಮತ್ತು ಎರೆಗೊಬ್ಬರ ತಯಾರಿಕೆಯ ದೃಷ್ಟಿಯಿಂದ ಮೂರು ಜಾತಿಯ ಹುಳುಗಳು ಬಹಳ ಪ್ರಮುಖವಾದುವು ಎಂದು ಗುರುತಿಸಲಾಗಿದೆ.

ಎರೆಹುಳು ಜೀವನ ಶೈಲಿ : ಎರೆಹುಳುಗಳು ದ್ವಿಲಿಂಗಿಗಳು. ಗಂಡು ಮತ್ತು ಹೆಣ್ಣು ಜನನೇಂದ್ರಿಯಗಳು ಒಂದೇ ಹುಳುವಿನಲ್ಲಿದ್ದರೂ ಗಂಡು ಹೆಣ್ಣು ಹುಳುಗಳ ಮಿಲನದಿಂದ ಮಾತ್ರ ಸಂತಾನೋತ್ಪತ್ತಿಯಾಗುತ್ತದೆ. ಎರೆಹುಳುಗಳ ದೇಹದ ಮುಂಭಾಗದಲ್ಲಿರುವ ಉಂಗುರಗಳ ಪಟ್ಟಿಯು ಮೊಟ್ಟೆಯಿಡುವ ಸಮಯ ಸಮೀಪಿಸಿದಂತೆ ದಪ್ಪವಾಗಿ ಸ್ಪಷ್ಟವಾಗಿ ಕಾಣುತ್ತದೆ. ಎರೆಹುಳುಗಳು ಮೊಟ್ಟೆಯ ಕೋಶವನ್ನು ತೇವದ ಮಣ್ಣಿನಲ್ಲಿಡುತ್ತದೆ ಮತ್ತು ಮೊಟ್ಟೆಯ ಕೋಶವು ಕೊತ್ತಂಬರಿ ಬೀಜದ ಆಕಾರದಲ್ಲಿದ್ದು ಎರಡು ತುದಿಗಳಲ್ಲಿ ಮುಳ್ಳಿನಂತೆ ರಚನೆಗಳಿರುತ್ತವೆ. ಈ ಮೊಟ್ಟೆಯ ಕೋಶಗಳು ಮೊದಲು ನಸುಬಿಳಿ ಬಣ್ಣವಿದ್ದು ಮರಿಗಳು ಹೊರಬರುವ ಸಮಯದಲ್ಲಿ ಕಂದುಬಣ್ಣವಿರುತ್ತವೆ. ಒಂದು ಮೊಟ್ಟೆಯ ಕೋಶದಲ್ಲಿ ಸುಮಾರು 2-20 ಮೊಟ್ಟೆಗಳಿರುತ್ತವೆ. ಒಂದು ಜೋಡಿ ಎರೆಹುಳುಗಳು 3-6 ತಿಂಗಳ ಅವಧಿಯಲ್ಲಿ ಸುಮಾರು 100 ಮೊಟ್ಟೆಯ ಕೋಶಗಳನ್ನು ಹಾಕುತ್ತವೆ. ಒಂದು ಮೊಟ್ಟೆಯ ಕೋಶದಿಂದ ಸರಾಸರಿ 3-7 ಮರಿಗಳು ಹೊರಬರುತ್ತವೆ. ಎರೆಹುಳುಗಳು ಸುಮಾರು 2-3 ವರ್ಷ ಬದುಕುತ್ತವೆ.

ಎರೆಹುಳು ಗೊಬ್ಬರ ತಯಾರಿಕೆಗೆ ಬೇಕಾಗುವ ಸಾವಯವ ತ್ಯಾಜ್ಯವಸ್ತುಗಳು : ಎರೆಹುಳು ಗೊಬ್ಬರ ತಯಾರಿಕೆಗೆ ಸಸ್ಯ ಮತ್ತು ಪ್ರಾಣಿಜನ್ಯ ತ್ಯಾಜ್ಯವಸ್ತುಗಳು, ಅಡುಗೆ ಮನೆ ತ್ಯಾಜ್ಯ ವಸ್ತು, ತೆಂಗಿನ ನಾರು, ತೆಂಗಿನ ಗರಿ, ಅಡಕೆ ಸಿಪ್ಪೆ, ಅಡಕೆ ಸೋಗೆ, ಕಬ್ಬಿನ ಸಿಪ್ಪೆ, ಹಸುರೆಲೆ, ತರಗೆಲೆ, ಹಿಂದಿನ ಬೆಳೆಯ ಕೂಳೆ/ಅವಶೇಷ, ನಗರ/ಪಟ್ಟಣದ ಕಸ, ಆಹಾರ, ಕೈಗಾರಿಕೆಯ ತ್ಯಾಜ್ಯ ವಸ್ತು ಮುಂತಾದುವುಗಳನ್ನು ಸಂಗ್ರಹಿಸಿ ನೀರು ಮತ್ತು ಸಗಣಿಯೊಂದಿಗೆ ಮಿಶ್ರಣ ಮಾಡಿ ಸುಮಾರು ಮೂರು ವಾರಗಳವರೆಗೆ ಕೊಳೆಯಲು ಬಿಡಬೇಕು. ಈ ಸಮಯದಲ್ಲಿ 2-3 ಸಾರಿ ಮಿಶ್ರಣವನ್ನು ತಿರುವಿ ಹಾಕಿ ಅದರಲ್ಲಿರುವ ಪ್ಲಾಸ್ಟಿಕ್ ಮತ್ತು ಗಾಜಿನ ಚೂರುಗಳನ್ನು ಬೇರ್ಪಡಿಸಬೇಕು. ಅನಂತರ ತೊಟ್ಟಿಗೆ ತುಂಬಿ ಎರೆಹುಳುಗಳನ್ನು ಬಿಡಬೇಕು. ಅಮೋನಿಯ ಎರೆಹುಳುವಿಗೆ ಅಪಾಯಕಾರಿ (ಉದಾ : ಕೋಳಿ ಹಿಕ್ಕೆ). ಆದ್ದರಿಂದ ಸಾವಯವ ವಸ್ತುಗಳನ್ನು ಮೊದಲೇ ಕೊಳೆಯಿಸಿ ಉಪಯೋಗಿಸಬೇಕು. ಉಪ್ಪಿನಂಶ ಹೆಚ್ಚಿನ ಪ್ರಮಾಣದಲ್ಲಿದ್ದರೂ ಕೂಡಾ ಅಪಾಯಕಾರಿ. ಆದ್ದರಿಂದ ಇತರ ಸಾವಯವ ವಸ್ತುಗಳ ಜೊತೆ ಮಿಶ್ರಣ ಮಾಡಿ ಬಳಸಬೇಕು.

ಎರೆಗೊಬ್ಬರ ತಯಾರಿಸುವ ತೊಟ್ಟಿಯ ನಿರ್ಮಾಣ : ತೊಟ್ಟಿಯನ್ನು ಭೂಮಿಯ ಒಳಗೂ ಇಲ್ಲವೇ ಮೇಲೂ ಇಟ್ಟಿಗೆಯ ಸಹಾಯದಿಂದ ತಯಾರಿಸಬಹುದು. ಭೂಮಿಯ ಮೇಲೆ ತೊಟ್ಟಿಯಲ್ಲಿ ಎರೆಗೊಬ್ಬರ ತಯಾರಿಸುವುದು ಉತ್ತಮ. ಸುಮಾರು 8-10 ಅಡಿ ಉದ್ದ ಮೂರು ಅಡಿ ಅಗಲ ಮತ್ತು ಒಂದೂವರೆ ಅಡಿ ಎತ್ತರ ಇರುವ ಹಾಗೆ ಸಿಮೆಂಟಿನ ತೊಟ್ಟಿಗಳನ್ನು ನಿರ್ಮಿಸಿಕೊಳ್ಳುವುದು ಯುಕ್ತ. ತೊಟ್ಟಿಯ ಎತ್ತರ ಹೆಚ್ಚಾದಲ್ಲಿ ಹೆಚ್ಚಿನ ಶಾಖ ಉತ್ಪತ್ತಿಯಾಗಿ ಎರೆಹುಳುವಿನ ಚಟುವಟಿಕೆ ಬಹಳ ಕುಂದುತ್ತದೆ. ತೊಟ್ಟಿಯನ್ನು ಬಿಸಿಲು ಮತ್ತು ಮಳೆಯಿಂದ ರಕ್ಷಿಸಲು ತೊಟ್ಟಿಗಳನ್ನು ನೆರಳಿರುವ ಸುರಕ್ಷಿತ ಪ್ರದೇಶಗಳಲ್ಲಿ ನಿರ್ಮಿಸಬೇಕು ಅಥವಾ ಚಪ್ಪರ ಹಾಕುವುದರ ಮೂಲಕ ಬಿಸಿಲು ಮತ್ತು ಮಳೆಯಿಂದ ರಕ್ಷಣೆ ಒದಗಿಸಬೇಕು.

ತೊಟ್ಟಿಯನ್ನು ಕಚ್ಚಾವಸ್ತುಗಳಿಂದ ತುಂಬುವುದು : ತೊಟ್ಟಿಯ ತಳಭಾಗಕ್ಕೆ ಹೆಚ್ಚು ನಾರಿನಂಶವಿರುವ ತೆಂಗಿನ ಸಿಪ್ಪೆ ಅಥವಾ ಕೃಷಿ ತ್ಯಾಜ್ಯವಸ್ತು, ಸಗಣಿ, ತರಗೆಲೆ, ಹಸಿರೆಲೆ ಗೊಬ್ಬರ, ಮಣ್ಣು ಹೀಗೆ ಒಂದರ ಮೇಲೆ ಒಂದರಂತೆ ಪದರ ಪದರವಾಗಿ ತೊಟ್ಟಿಯಲ್ಲಿ ತುಂಬಿಸಬೇಕು. ಕಚ್ಚಾವಸ್ತುಗಳನ್ನು ತುಂಬಿದ ಮೇಲೆ 15-20 ದಿವಸಗಳವರೆಗೆ ಈ ಮಡಿಗೆ 1-2 ಬಕೆಟ್ ನೀರನ್ನು ಪ್ರತೀ ದಿನ ಹಾಕಬೇಕು. 15 ದಿನಗಳ ಅನಂತರ ಸುಮಾರು 1000 ಹುಳುಗಳನ್ನು ಮಡಿಯಲ್ಲಿ ಬಿಡಬೇಕು. ಅನಂತರ ಕೊನೆಯ ಪದರವಾಗಿ 3-4 ಇಂಚು ದಪ್ಪವಾಗಿ ಸಗಣಿ ಗೊಬ್ಬರವನ್ನು ಹರಡಿ ಹೊದಿಕೆಯಾಗಿ ಬೀಳುವಂತೆ ಬತ್ತದ ಹುಲ್ಲಿನಿಂದ ಮುಚ್ಚಬೇಕಾಗುತ್ತದೆ. ತೊಟ್ಟಿಯನ್ನು ಯಾವಾಗಲೂ ನೆರಳು ಮತ್ತು ಶೇ. 40-50 ತೇವಾಂಶವಿರುವಂತೆ ಕಾಪಾಡಿಕೊಳ್ಳಬೇಕು. ತೊಟ್ಟಿಯ ಮೇಲೆ ಇರುವ ಪದರ ಯಾವಾಗಲೂ ಒದ್ದೆ ಇರುವಂತೆ ಮಾಡಿದರೆ ತೊಟ್ಟಿಯಲ್ಲಿ ನಿಗದಿತ ತೇವಾಂಶ ಉಳಿಯುವುದು. ಈ ರೀತಿ ತೇವಾಂಶವನ್ನು ಕಾಯ್ದುಕೊಳ್ಳುವುದರಿಂದ ಎರೆಹುಳುಗಳು ಬೇಗನೆ ಅಭಿವೃದ್ಧಿ ಹೊಂದುತ್ತವೆ.

ಎರೆಗೊಬ್ಬರ ಉತ್ಪಾದನೆ ಮತ್ತು ಹುಳುಗಳ ಬೇರ್ಪಡಿಸುವಿಕೆ : ಎರೆಹುಳುಗಳು ತಮ್ಮ ದೇಹದ ತೂಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಆಹಾರ ಸೇವಿಸುತ್ತವೆ. ಆದರೆ ಸೇವಿಸಿದ ಆಹಾರದಲ್ಲಿ ಶೇ. 12-15 ರಷ್ಟು ಜೀರ್ಣಿಸಿಕೊಂಡು ಉಳಿದ ಭಾಗವನ್ನು ಹಿಕ್ಕೆಯ ರೂಪದಲ್ಲಿ ಹೊರಹಾಕುತ್ತವೆ. ಇವು ತೊಟ್ಟಿಯಲ್ಲಿ ತ್ಯಾಜ್ಯವಸ್ತುಗಳನ್ನು ಮೇಲಿಂದ ತಿಂದುಕೊಂಡು ಕೆಳಮುಖವಾಗಿ ಚಲಿಸುತ್ತವೆ. ಹಿಕ್ಕೆಯು ಮೇಲ್ಭಾಗದಲ್ಲಿ ಶೇಖರಣೆಗೊಳ್ಳುತ್ತದೆ. ಎರೆಹುಳುಗಳನ್ನು ಬಿಟ್ಟ 35-40 ದಿನಗಳಲ್ಲಿ ಮೇಲಿನ ಪದರದಲ್ಲಿ ಗೊಬ್ಬರ ಶೇಖರಣೆಯಾಗುವುದು ಕಂಡು ಬರುತ್ತದೆ. ಆಗ 3-4 ದಿನಗಳ ಕಾಲ ತೊಟ್ಟಿಗೆ ನೀರು ಹಾಕುವುದನ್ನು ನಿಲ್ಲಿಸಬೇಕು. ಹೀಗೆ ಮಾಡುವುದರಿಂದ ಎರೆಹುಳುಗಳು ಒಣಪದರದಿಂದ ಹಸಿ ಇರುವ ಪದರದ ಕಡೆಗೆ ಚಲಿಸುತ್ತದೆ. ಅನಂತರ ಹಿಕ್ಕೆಯ ರೂಪದಲ್ಲಿರುವ ಗೊಬ್ಬರವನ್ನು ಒಂದೆಡೆ ರಾಶಿ ಮಾಡಿ ಉಳಿದಿರುವ ಕಸಕಡ್ಡಿ ಮತ್ತು ಎರೆಹುಳುಗಳನ್ನು ಮತ್ತೆ ಪಕ್ಕದ ತೊಟ್ಟಿಯಲ್ಲಿ ಬಿಡಬೇಕು. ರಾಶಿ ಮಾಡಿದ ಎರೆಗೊಬ್ಬರವನ್ನು 4-5 ಮಿ.ಮೀ. ಇರುವ ಜರಡಿಯಿಂದ ಜರಡಿ ಮಾಡಿದರೆ ಇದರಲ್ಲಿ ತಿನ್ನದೆ ಉಳಿದಿರುವ ಕಸಕಡ್ಡಿ, ಸಣ್ಣ ಸಣ್ಣ ಎರೆಹುಳುಗಳ ಮರಿಗಳು ಮತ್ತು ಮೊಟ್ಟೆಯ ಕೋಶಗಳು ಜರಡಿಯಲ್ಲಿ ಉಳಿಯುತ್ತವೆ. ಇದನ್ನು ಪಕ್ಕದ ತೊಟ್ಟಿಗೆ ಹಾಕಬೇಕು. ಕೆಳಭಾಗದಲ್ಲಿ ಹರಳಿನ

ರೂಪದಲ್ಲಿರುವ ಎರೆಗೊಬ್ಬರ ಸಂಗ್ರಹವಾಗುತ್ತವೆ. ಇದನ್ನು ನೆರಳಿನಲ್ಲಿ ಒಣಗಿಸಿ ಅನಂತರ ಶೇಖರಿಸಬೇಕು.

ಗಮನಿಸಬೇಕಾದ ಮುಂಜಾಗ್ರತ ಕ್ರಮಗಳು :

ಎರೆಹುಳುಗಳನ್ನು ಸಾಕುವ ತೊಟ್ಟಿಯಲ್ಲಿ ಉಷ್ಣಾಂಶವು 20-30^{o} ಸೆ. ಮತ್ತು ತೇವಾಂಶ ಶೇ. 44-50ರವರೆಗೆ ಇರಬೇಕು. ಇದು ಏರುಪೇರಾದಲ್ಲಿ ಅದರಲ್ಲಿಯ ರಸಸಾರ ಕಡಿಮೆಯಾಗಿ ಹುಳುಗಳ ಸರ್ವತೋಮುಖ ಬೆಳವಣಿಗೆ ಮತ್ತು ಅಭಿವೃದ್ಧಿ ಕುಂಠಿತಗೊಳ್ಳುತ್ತದೆ.

ತೊಟ್ಟಿಯಲ್ಲಿ ಹೆಗ್ಗಣ, ಇಲಿ, ಹಕ್ಕಿ, ನಾಯಿ, ಬೆಕ್ಕು, ಹಾವು, ಇರುವೆ, ಚೇಳು ಮತ್ತು ಗೆದ್ದಲು ಎರೆಹುಳುಗಳಿಗೆ ಶತ್ರುಗಳು.

ಇರುವೆ ಹತೋಟಿಗೆ ತೊಟ್ಟಿಯ ಸುತ್ತು ಸಣ್ಣ ಕಾಲುವೆ ಮಾಡಿ ನೀರು ನಿಲ್ಲಿಸಬೇಕು.

ಗೆದ್ದಲು ಹತೋಟಿಗೆ ತೊಟ್ಟಿಯಲ್ಲಿ ಶೇ. 40-50 ರಷ್ಟು ತೇವಾಂಶ ಕಾಪಾಡಿದರೆ ಇದರ ತೊಂದರೆ ಇರುವುದಿಲ್ಲ.

ಉಳಿದೆಲ್ಲಾ ಶತ್ರುಗಳ ಹತೋಟಿಗೆ ತೊಟ್ಟಿಯ ಮೇಲ್ಭಾಗದಲ್ಲಿ ತಂತಿಯ ಜರಡಿಯನ್ನು (ವೈರ್‌ಮೆಸ್) ಮುಚ್ಚುವುದರಿಂದ ಇವುಗಳನ್ನು ಹತೋಟಿಮಾಡಬಹುದು. ತೊಟ್ಟಿಯಿಂದ ಹೊರ ತೆಗೆದ ಎರೆಗೊಬ್ಬರವನ್ನು 10-15 ದಿನಗಳ ಕಾಲ ನೆರಳಿನಲ್ಲಿ ಒಣಗಿಸಿ ಅನಂತರ ಕೃಷಿಗೆ ಉಪಯೋಗಿಸಬಹುದು ಅಥವಾ ಚೀಲದಲ್ಲಿ ತುಂಬಿಸಿ ಮಾರಾಟ ಮಾಡಬಹುದು.

ಎಸ್.ಎಚ್.

ಕೊಡಗಿನ ಕಿತ್ತಳೆ ಕೊಡಗಿನ ಪ್ರಮುಖ ತೋಟಗಾರಿಕೆ ಬೆಳೆ. ಇದನ್ನು ಸಮಶೀತೋಷ್ಣವಲಯದ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಇದೇ ಹವಾಗುಣ ಕಿತ್ತಳೆ ಹಣ್ಣಿಗೆ ಯುಕ್ತವಾಗಿದ್ದು ಬ್ರೆಝಿಲ್, ಅಮೆರಿಕಾ ದೇಶಗಳ ಅನಂತರ ಕಿತ್ತಳೆಯ ಉತ್ಪಾದನೆಯಲ್ಲಿ ಭಾರತ ಮತ್ತು ಮೆಕ್ಸಿಕೋ ಮೂರನೆಯ ಸ್ಥಾನದಲ್ಲಿವೆ.

ಪ್ರತಿ ನೂರು ಗ್ರಾಂ ಹಣ್ಣಿನಲ್ಲಿ 11.54 ಗ್ರಾಂ. ಶರ್ಕರ ಪಿಷ್ಟ, 9.14 ಗ್ರಾಂ ಸಕ್ಕರೆ, 2.4 ಗ್ರಾಂ ನಾರು, 0.21 ಗ್ರಾಂ ಕೊಬ್ಬು, 0.7 ಗ್ರಾಂ ಸಸಾರಜನಕ, 'ಬಿ' ಮತ್ತು 'ಸಿ' ಜೀವಸತ್ವಗಳೂ ಹೇರಳ ಪ್ರಮಾಣದಲ್ಲಿ ಇವೆ. ಖನಿಜಾಂಶಗಳಾದ ಕ್ಯಾಲ್ಸಿಯಂ, ಕಬ್ಬಿಣ, ಮ್ಯಾಗ್ನೇಷಿಯಂ, ಪೊಟ್ಯಾಷಿಯಂ ಮತ್ತು ಸತು ಸಹ ಸೇರಿವೆ. 'ಸಿ' ಜೀವಸತ್ವ ಹಾಗೂ ಸಕ್ಕರೆಯ ಅಂಶ ಅಧಿಕ ಪ್ರಮಾಣದಲ್ಲಿದೆ.

1970ರಲ್ಲಿ ಕೊಡಗಿನಲ್ಲಿ 43,500 ಎಕರೆಯಷ್ಟು ಪ್ರದೇಶದಲ್ಲಿ ಕಿತ್ತಳೆ ಪ್ರಮುಖ ಬೆಳೆಯಾಗಿ ಆವರಿಸಿತ್ತು. ಕಾಲಕ್ರಮೇಣ ಕಿತ್ತಳೆಯ ಜಾಗವನ್ನು ಕಾಫಿ ಆಕ್ರಮಿಸಿತು. ಪರಿಣಾಮವಾಗಿ ಕಿತ್ತಳೆ ಅಂತರ್‌ಬೆಳೆಯಾಗಿ ಪರಿವರ್ತನೆಗೊಂಡಿತು. ಕೇವಲ ಹತ್ತು ವರ್ಷಗಳಲ್ಲಿ ಅಂದರೆ 1980ರ ವೇಳೆಗೆ ಕಿತ್ತಳೆಯ ಕೃಷಿ 43,500 ಎಕರೆಯಿಂದ 15,000 ಎಕರೆಗೆ ಇಳಿಮುಖಗೊಂಡಿತು. ಇದಕ್ಕೆ ಕಾರಣವನ್ನು ಎರಡು ರೀತಿಯಲ್ಲಿ ಕೊಡಬಹುದು. ಒಂದನೆಯದು ಕಾಫಿ ಬೆಳೆಗೆ ಆದ್ಯತೆ ನೀಡಿ ಕಿತ್ತಳೆ ಕೃಷಿಯನ್ನು ನಿರ್ಲಕ್ಷಿಸಿದ್ದು, ಎರಡನೆಯದು ಕಿತ್ತಳೆಯನ್ನು ವಿನಾಶಗೊಳಿಸಲೆಂದೇ ತಲೆದೋರಿದ 'ಸಿಟ್ರಸ್ ಟ್ರಿಸ್ಟೀಜಾ' ಎಂಬ ಮಾರಣಾಂತಿಕ ರೋಗ. ಫಲವಾಗಿ 1999-2000ದ ವೇಳೆಗೆ ಕಿತ್ತಳೆ ಫಸಲು ಎಷ್ಟು ಕ್ಷೀಣಿಸಿತೆಂದರೆ ಜಿಲ್ಲೆಯಲ್ಲಿ ಕೇವಲ 3000 ಎಕರೆ ಪ್ರದೇಶಕ್ಕೆ ಬೆಳೆ ಸೀಮಿತಗೊಂಡಿತು. ನಾಗಪುರದ ವಿಶ್ವವಿಖ್ಯಾತ ಕಿತ್ತಳೆಯನ್ನು ಹಿಂದಿಕ್ಕಿ ತಮ್ಮ ರಸವಂತಿಕೆಗೆ ಜನರ ಮನಸ್ಸಿನಲ್ಲಿ ವಿಶೇಷ ಸ್ಥಾನ ಹಾಗೂ



ಬೇಡಿಕೆಯನ್ನು ಪಡೆದಿದ್ದ ಕೊಡಗಿನ ಕಿತ್ತಳೆಗೆ ಕೇಂದ್ರ ಸರ್ಕಾರದಿಂದ 2005ರಲ್ಲಿ ಭೌಗೋಳಿಕ ಮನ್ನಣೆಯೂ ದೊರೆತಿತ್ತು. ಇದೀಗ ಅರಣ್ಯ ಮತ್ತು ತೋಟಗಾರಿಕಾ ಇಲಾಖೆಗಳು ಕೊಡಗಿನ ಕಿತ್ತಳೆಗೆ ಮರುಜೀವ ನೀಡಲು ಮುಂದಾಗಿವೆ.

1830ರಲ್ಲಿ ಫ್ಲೋರಿಡಾದಿಂದ ಕೊಡಗಿಗೆ ಬಂದ ಕಿತ್ತಳೆ ತಳಿ ಕ್ರಮೇಣ ಕೊಡಗಿನ ಕಿತ್ತಳೆಯಾಗಿಯೇ ರೂಪಾಂತರಗೊಂಡಿತು. ಬಣ್ಣವಾಗಲಿ, ರುಚಿಯಾಗಲಿ, ಪರಿಮಳವಾಗಲಿ, ಪೌಷ್ಠಿಕಾಂಶವಾಗಲಿ ಎಲ್ಲದರಲ್ಲೂ ಮುಂದಿದ್ದು, ಪ್ರತಿ ಕಿತ್ತಳೆ ಮರ ವರ್ಷಕ್ಕೆ 2 ರಿಂದ 3 ಸಾವಿರ ಕೆ.ಜಿ.ಯಷ್ಟು ಹಣ್ಣು ನೀಡುತ್ತಿತ್ತು. ಕೇವಲ 50 ವರ್ಷಗಳ ಹಿಂದೆ ಕೊಡಗಿನ 50 ರಿಂದ 60 ಸಾವಿರ ಎಕರೆ ಪ್ರದೇಶಗಳಲ್ಲಿ ಕಿತ್ತಳೆ ಬೆಳೆದಿತ್ತು. ಆದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿಗೆ ದೊರೆತ ಚಿನ್ನದ ಬೆಲೆಗೆ ಮಾರುಹೋಗಿ ನಿರ್ಲಕ್ಷ್ಯಕ್ಕೊಳಗಾದ ಕಿತ್ತಳೆ ಬೆಳೆಯನ್ನು ಮತ್ತೆ ಮರುಚೇತನಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ, ನಡೆಯಲೇ ಬೇಕಿದೆ.

ಕೊಡಗಿನಲ್ಲಿ ಕಿತ್ತಳೆ ಬೆಳೆಯ ಅಭಿವೃದ್ಧಿಗಾಗಿ 2005-06ರಲ್ಲಿ ತೋಟಗಾರಿಕಾ ಇಲಾಖೆಗೆ 'ಎನ್.ಎಚ್.ಎಂ.' ಎಂಬ ಯೋಜನೆಯೊಂದು ಜಾರಿಗೊಂಡಿತು. ಇದರ ಪ್ರಕಾರ ಕಿತ್ತಳೆಗಿಡಗಳನ್ನು ನರ್ಸರಿಗಳಿಗೆ ಹಾಜರುಪಡಿಸಿ ಅನಂತರ ರೈತರಿಗೆ ಉಚಿತವಾಗಿ ವಿತರಿಸುವುದು; ಹಳೆಗಿಡಗಳನ್ನು ಪುನಶ್ಚೇತನಗೊಳಿಸುವ ಸಲುವಾಗಿ ರೈತರಿಗೆ ಶೇ. 50 ರಷ್ಟು ಸಹಾಯಧನ ಒದಗಿಸುವುದು ಹಾಗೂ ರೋಗಗ್ರಸ್ತ ಗಿಡಗಳನ್ನು ಕಿತ್ತು ನಾಶಪಡಿಸುವುದು. ಇಷ್ಟೆ ಅಲ್ಲದೆ ಪರಿಣತ ವಿಜ್ಞಾನಿಗಳ ತೋಟಗಾರಿಕಾ ಅಧಿಕಾರಿಗಳನ್ನೊಳಗೊಂಡು, ಹಲವು ಸಭೆ ನಡೆಸಿ ಚರ್ಚಿಸಿ ಅದರ ಪ್ರಕಾರ ಕೊಡಗಿನ ಕಿತ್ತಳೆಯನ್ನು ಪುನಶ್ಚೇತನಗೊಳಿಸುವುದು.

ದಕ್ಷಿಣ ಕೊಡಗಿನ ಬಾಳೆಲೆ, ಕುಟ್ಟ, ನಾಲ್ಕೇರಿ, ಪಾಲಿಬೆಟ್ಟ, ಗೋಣಿಕೊಪ್ಪ ಹಾಗೂ ಉತ್ತರ ಕೊಡಗಿನ ಚೆಟ್ಟಳ್ಳಿ, ಸುಂಟಿಕೊಪ್ಪಗಳಲ್ಲಿ ಸಾಂಪ್ರದಾಯಿಕವಾಗಿ

ಬೆಳೆಯುತ್ತಿದ್ದ ಕೊಡಗಿನ ಕಿತ್ತಳೆಯನ್ನು ಪ್ರಸ್ತುತ ಚೇರಂಬಾಣೆ ಹಾಗೂ ನಾಪೋಕ್ಲುಗಳಲ್ಲೂ ಬೆಳೆಯಲಾಗುತ್ತಿದೆ. 2006-07ರಿಂದ ಸುಮಾರು 2 ಲಕ್ಷ ಗಿಡಗಳನ್ನು ತೋಟಗಾರಿಕಾ ಇಲಾಖೆ ರೈತರಿಗೆ ಉಚಿತವಾಗಿ ಒದಗಿಸಿದೆ. ಕಳೆದ ಸಾಲಿನಲ್ಲಿ ಒಂದೂವರೆ ಲಕ್ಷಗಿಡ ವಿತರಿಸಲಾಗಿದೆ. 2011-12ನೇ ಸಾಲಿನಲ್ಲಿ 1,87,000 ಗಿಡಗಳನ್ನು ವಿತರಿಸಲಾಗಿದ್ದು 272 ಎಕರೆಯಷ್ಟು ನಾಟಿಯಾಗಿದೆ. ಇದರ ವಿಸ್ತಾರ ರೂಪವಾಗಿ ಹಾಸನ ಜಿಲ್ಲೆಯ ಸಕಲೇಶಪುರ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಪ್ರದೇಶಗಳಲ್ಲೂ ಕೊಡಗಿನ ಕಿತ್ತಳೆ ಬೆಳೆಯನ್ನು ನೋಡಬಹುದಾಗಿದೆ.

ವಿವಿಧ ಹವಾಗುಣ ಸ್ಥಿತಿಗಳಲ್ಲೂ ಬೆಳೆಯಬಹುದಾದ ಕಿತ್ತಳೆ ಬೆಳೆಗೆ ಭಾರತದಲ್ಲಿ ಮಳೆನೀರು ಅಥವಾ ನೀರಾವರಿಯ ಅವಶ್ಯಕತೆ ಇದೆ. ಸಮುದ್ರಮಟ್ಟದಿಂದ 1500 ರಿಂದ 5000 ಅಡಿ ಎತ್ತರದ ಸ್ಥಳ ಇದಕ್ಕೆ ಪ್ರಶಸ್ತ. ಯಶಸ್ವೀ ಕಿತ್ತಳೆ ಕೃಷಿಗೆ 25° ರಿಂದ 30° ಸೆಂಟಿಗ್ರೇಡ್ ಉಷ್ಣತೆ ಬೇಕಾಗುತ್ತದೆ. ವಾರ್ಷಿಕವಾಗಿ 40 ಇಂಚಿನಿಂದ 50 ಇಂಚಿನವರೆಗೆ ಮಳೆಯ ಅವಶ್ಯಕತೆ ಇದೆಯಾದರೂ ಅದು ಮಾರ್ಚ್‌ನಿಂದ ನವಂಬರ್ ತಿಂಗಳಿನ ಅವಧಿಯಲ್ಲಿ ಬೀಳಬೇಕಾದುದು ಅಗತ್ಯ. ತೇವಾಂಶ ಶೇ. 85 - 100 ಅವಶ್ಯ. ಯಾವುದೇ ತೆರನಾದ, ಚೆನ್ನಾಗಿ ನೀರು ಬಸಿದುಹೋಗುವಂತಿರುವ ಗೋಡು ಮಣ್ಣು ಈ ಬೆಳೆಗೆ ಉತ್ತಮ. ಭೂಮಿ ಫಲವತ್ತಾಗಿರಬೇಕು, ಗಡಸು ನೆಲವಾಗಿದ್ದು, ಭೂಮಿಯ ತಳಭಾಗದಲ್ಲಿ ಕಲ್ಲು ಇಲ್ಲದಿರುವಂತಹ ಭೂಮಿಯನ್ನು ಆಯ್ಕೆ ಮಾಡಿಕೊಳ್ಳಬೇಕು.

ಕೊಡಗಿನ ಕಿತ್ತಳೆ ವರ್ಷಕ್ಕೆರಡು ಬಾರಿ ಫಸಲು ನೀಡುತ್ತದೆ. ಒಂದು ಜೂನ್ ತಿಂಗಳಲ್ಲಿ ಬಿಡುವ ಮಳೆಗಾಲದ ಕಿತ್ತಳೆ, ಮತ್ತೊಂದು ಡಿಸೆಂಬರ್‌ನಲ್ಲಿ ಬಿಡುವ ಚಳಿಗಾಲದ ಕಿತ್ತಳೆ. ರುಚಿಯ ದೃಷ್ಟಿಯಿಂದ ಡಿಸೆಂಬರ್ ಕಿತ್ತಳೆಗೆ ಬೇಡಿಕೆ ಹೆಚ್ಚು.

ಕಿತ್ತಳೆ ಬಹಳ ಸಂವೇದನಾಶೀಲವಾದ ಹಣ್ಣಿನ ಗಿಡ. ಅದನ್ನು ನಾಟಿ ಮಾಡುವುದರಿಂದ ಮೊದಲ್ಗೊಂಡು ಎರಡು ವರ್ಷದ ಸಸಿಯಾಗುವವರೆಗೂ ಬಹಳ ಎಚ್ಚರಿಕೆಯಿಂದ ಪೋಷಿಸಬೇಕು. ಅಗತೆ ಮಾಡುವಾಗಲೂ 3 ಇಂಚಿಗಿಂತ ಹೆಚ್ಚು ಆಳಕ್ಕೆ ಇಳಿಯಬಾರದು. ಪೋಷಕಾಂಶಗಳ ಕೊರತೆಯಾಗದಂತೆ ಎಚ್ಚರವಹಿಸಬೇಕು. ಸಿಟ್ರಸ್ ಡಿಕ್ಲೈನ್/ಸಿಟ್ರಸ್ ಡೈಬ್ಯಾಕ್‌ನಂತಹ ರೋಗಾಣುಗಳು ಸಂಪೂರ್ಣ ಮರವನ್ನೇ ಆವರಿಸಿಕೊಂಡು ಒಣಗಿಸಿ ನಾಶಮಾಡದಂತೆ ಮೂರು ತಿಂಗಳಿಗೊಂದು ಬಾರಿ 'ಸಿಟ್ರಸ್ ಸ್ಪೆಷಲ್' ಸಿಂಪಡಣೆ ಮೂಲಕ ಕಿತ್ತಳೆ ಸಸಿಯನ್ನು ರೋಗಮುಕ್ತಗೊಳಿಸಬಹುದು. ಕಿತ್ತಳೆ ಚಿಟ್ಟೆ, ಕಿತ್ತಳೆ ಹೇನು, ಕಿತ್ತಳೆ ಹಣ್ಣಿನ ನೊಣ ಹಾಗೂ ಫಂಗಸ್‌ಗಳು ಕಿತ್ತಳೆ ಬೆಳೆಗೆ ಶಾಪವಾಗಿವೆ. ಅದಲ್ಲದೆ ಅಕಾಲ ಮಳೆ ಗಿಡ ಹೂ ಬಿಡುವ ಕಾಲದಲ್ಲಿ ಬಿದ್ದರೆ ಹೂಗಳು ಉದುರಿ ಉತ್ಪಾದನೆಯೇ ಕ್ಷೀಣವಾಗುತ್ತದೆ. ಪರಪುಟ್ಟಗಳಾದ ಬಂದಳಿಕೆಗಳೂ ಇದಕ್ಕೆ ಹಬ್ಬಿ ಗಿಡವನ್ನೇ ನಾಶಮಾಡುತ್ತವೆ.

ಮಣ್ಣಿನ ಅಪೌಷ್ಟಿಕತೆಯೋ ಕಾಫಿ ತೋಟಗಳ ನಿರ್ವಹಣೆಯಲ್ಲಿ ಬಳಸುವ ರಾಸಾಯನಿಕಗಳೊ ಅಥವಾ ಹವಾಗುಣ ಪರಿಸ್ಥಿತಿಯೋ ಮಾಲಿನ್ಯದ ದುಷ್ಪರಿಣಾಮವೋ ಇಂದಿನ ಕಿತ್ತಳೆಗೆ ಹಿಂದಿನ ಗಾತ್ರವಿಲ್ಲ. ಆದರೂ ಅದರ ಸ್ವಾದ ಮಾತ್ರ ಸಮ್ಮೋಹನಗೊಳಿಸುವಂತಹುದು. ಗೋಣಿಕೊಪ್ಪಲಿನಲ್ಲಿರುವ 'ಕೊಡಗು ಕಿತ್ತಳೆ ಸಹಕಾರ ಸಂಘ'ವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಚೆಟ್ಟಳ್ಳಿಯ ಪ್ರಾಯೋಗಿಕ ಸಂಶೋಧನಾ ಕೇಂದ್ರವು ರೈತರ ಅರಿವನ್ನು ವಿಸ್ತರಿಸಲು ಹಲವಾರು ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿದೆ. ಇವೆರಡೂ ಸ್ಥಳಗಳಲ್ಲಿ 'ಕೇಂದ್ರೀಯ ತೋಟಗಾರಿಕಾ ಸಂಶೋಧನಾ ಕೇಂದ್ರ'ಗಳಿವೆ.

ಮಾರುಕಟ್ಟೆಗೆ ಕಿತ್ತಳೆ ಹಣ್ಣುಗಳನ್ನು ಪೂರೈಸುವಾಗ ಕಿತ್ತಳೆ ಹಣ್ಣುಗಳನ್ನು ಅವುಗಳ ಗಾತ್ರ, ಬಣ್ಣ, ಆಕಾರ ಹಾಗೂ ತೂಕವನ್ನಾಧರಿಸಿ ಮೂರು ಇಲ್ಲವೇ ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗುತ್ತದೆ. ಸದೃಢವಾಗಿರುವ ಆದಷ್ಟು ಒಂದೇ ಆಕಾರ ಹಾಗೂ ಒಂದೇ ಬಣ್ಣ ಹೊಂದಿರುವ ಕಿತ್ತಳೆಹಣ್ಣುಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಯಂತ್ರಗಳ ಮೂಲಕವೂ ವರ್ಗೀಕರಿಸಲಾಗುತ್ತದೆ. ಚೆನ್ನಾಗಿ ಗಾಳಿಯಾಡುವ ಹಗುರ ಕಟ್ಟಿಗೆ ಡಬ್ಬಗಳು ಅಥವಾ ರಂಧ್ರವಿರುವ ಸಿ.ಎಫ್.ಬಿ. ಡಬ್ಬಿಗಳಲ್ಲಿ ಹಾಗೂ ಬಿದಿರಿನ ಬುಟ್ಟಿಗಳಲ್ಲಿ ತುಂಬಿಸಿ ಸಾಗಾಟ ಮಾಡಬಹುದಾಗಿದೆ. ಬಣ್ಣದ ಪಾಲಿಥಿನ್ ಬಲೆಗಳಲ್ಲಿ ಹಣ್ಣುಗಳನ್ನಿಟ್ಟು ಮಾರಾಟಮಾಡುವುದು ಇಂದು ಸಾಮಾನ್ಯವಾಗಿದೆ. ಇತ್ತೀಚೆಗೆ ಸೆಣಬಿನ ಜೊತೆ ಪ್ಲಾಸ್ಟಿಕ್ ಸೇರಿಸಿ ಅಭಿವೃದ್ಧಿಗೊಳಿಸಲಾದ ಬ್ಯಾಸ್ಕೆಟ್‌ಗಳನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ.

ನೆಡಲಿಕ್ಕಿರುವ ಸಸಿಗಳಿಗೆ ಇರಬೇಕಾದ ಸ್ವರೂಪ : ನಾನಾ ರೀತಿಯಲ್ಲಿ ರೋಗಗ್ರಸ್ತವಾಗುವ ಈ ಸಸಿಗಳನ್ನು ನರ್ಸರಿಯಲ್ಲಿ ಬೆಳೆಸಿದ ನಂತರವೇ ರೈತರು ತಮ್ಮ ತೋಟಗಳಿಗೆ ತಂದು ನೆಡುವುದುತ್ತಮ. ಏಕೆಂದರೆ ಕೀಟರಹಿತ ವಾತಾವರಣದಲ್ಲಿ ಬೆಳೆಸಿದ ರಂಗಪೂರ್, ಕ್ಲಿಯೋಪಾತ್ರ, ಮ್ಯಾಂಡರಿನ್ ಅಥವಾ ಟ್ರೋಯರ್ ಸಿಟ್ರೇಟ್ ಸಸ್ಯಗಳ ಮೇಲೆ ರೋಗರಹಿತ ತಾಯಿ ಗಿಡಗಳಿಂದ ಪಡೆದ ಕಣ್ಣುಗಳನ್ನು ಉಪಯೋಗಿಸಿಕೊಂಡು ಕಣ್ಣು ಅಭಿವೃದ್ಧಿ ಮಾಡಿರುವ 'ಕೊಡಗಿನ ಕಿತ್ತಳೆ'' ಗಿಡಗಳನ್ನು ಬೆಳೆಸಬೇಕು ಅಥವಾ ರೋಗರಹಿತ ತೋಟದಿಂದ ಬೀಜವನ್ನು ಪಡೆದು ಸಸಿ ಮಡಿಯಲ್ಲಿ ಬೆಳೆಸಿದ ಬೇರು ಗಿಡಗಳನ್ನು ಸಹ ಉಪಯೋಗಿಸಬಹುದು. ಉತ್ತಮ ಆರೋಗ್ಯವಂತ ಗಿಡದ ಹಣ್ಣುಗಳನ್ನು ಆರಿಸಿ ಅವುಗಳಿಂದ ಪಡೆದ ಬೀಜಗಳಿಂದ ಬೆಳೆಸಿದ ಗಿಡಗಳನ್ನು ಸಹ ಉಪಯೋಗಿಸಬಹುದು.

ಗಿಡ ನೆಡುವಿಕೆ : ಗಿಡ ನೆಡುವ ಮೊದಲು ಪ್ರತಿಗುಂಡಿಗೆ 40 ಗ್ರಾಂ ಡೆಥ್ರೊಮೇಟ್ ರೋಗನಾಶಕ ರಾಸಾಯನಿಕವನ್ನು ಗುಂಡಿಯ ಮಣ್ಣಿನೊಂದಿಗೆ ಚೆನ್ನಾಗಿ ಮಿಶ್ರಗೊಳಿಸಿ ಗುಂಡಿಗಳನ್ನು ಪಾಲಿಥೀನ್ ಹಾಳೆಯಿಂದ ಮುಚ್ಚಿ 7 ರಿಂದ 15 ದಿನಗಳವರೆಗೆ ಗಾಳಿಯಾಡದಂತೆ ಇಡಬೇಕು. ಅನಂತರ ಗಿಡನೆಡುವ ಮುನ್ನ ಮಣ್ಣಿನಲ್ಲಿ ಸಾಕಷ್ಟು ಗಾಳಿಯಾಡುವಂತೆ ಗುಂಡಿಯಲ್ಲಿನ ಮಣ್ಣನ್ನು ಸಡಿಲಗೊಳಿಸಬೇಕು. ಕೈಗಳಿಗೆ ಗ್ಲೌಸ್, (ಪ್ಲಾಸ್ಟಿಕ್ ಕೈಚೀಲ) ಧರಿಸಿರಬೇಕು. ಪಾಲಿಥೀನ್ ಚೀಲದಲ್ಲಿರುವ ಗಿಡಗಳ ಮಣ್ಣಿನ ಮೇಲ್ಭಾಗವು ನೆಲದ ಮಟ್ಟಕ್ಕೆ ಸಮನಾಗಿ ಕೂರುವ ಹಾಗೆ ಎಚ್ಚರವಹಿಸಿ ಗಿಡಗಳನ್ನು ನೆಟ್ಟು ಸುತ್ತಲಿನ ಮಣ್ಣನ್ನು ಗಟ್ಟಿಮಾಡಿ ಕಾಲಕಾಲಕ್ಕೆ ಹಿತಮಿತವಾಗಿ ನೀರುಣಿಸುತ್ತಿರಬೇಕು. ಕಣ್ಣು ಕಟ್ಟಿದ ಭಾಗವು ಮಣ್ಣಿನ ಮಟ್ಟದಿಂದ ಮೇಲಿರಬೇಕು.

ಆರೈಕೆ : ಗಿಡ ನೆಟ್ಟ ಒಂದು ತಿಂಗಳ ಬಳಿಕ ಟ್ರೈಕೊಡರ್ಮ ಜೈವಿಕ ಮೂಲದ ರೋಗ ನಿರೋಧಕ ವಸ್ತುವನ್ನು 150 ಗ್ರಾಂ.ನಂತೆ 10-15 ಕಿಲೊ ಕೊಟ್ಟಿಗೆ ಗೊಬ್ಬರದೊಂದಿಗೆ ಬೆರೆಸಿ ಪ್ರತಿಗಿಡಕ್ಕೆ ಹಾಕಬೇಕು. ಇದರೊಂದಿಗೆ ಪ್ರತಿಗಿಡಕ್ಕೆ 5 ಕಿಲೊ ಬೇವಿನ ಹಿಂಡಿ ಅಥವಾ ಹರಳಿನ ಹಿಂಡಿ ಕೊಡುವುದು ಲಾಭದಾಯಕ. ಬೇರುಗಿಡದಲ್ಲಿ ಆಗಾಗ್ಗೆ ಬರುವ ಹೊಸ ಚಿಗುರುಗಳನ್ನು ತೆಗೆದುಹಾಕಿ ಭೂಮಿಯಿಂದ ಸುಮಾರು ಒಂದು

ಮೀ. ಎತ್ತರದವರೆಗೆ ಸ್ವಚ್ಛವಾದ ಕಾಂಡವಿರುವಂತೆ ನೋಡಿಕೊಳ್ಳಬೇಕು. ಚೆನ್ನಾಗಿ ಬೇರುಬಿಟ್ಟಿರುವ ಪ್ರತಿ ಗಿಡಕ್ಕೆ 15 ರಿಂದ 20 ಕಿಲೊ ಕೊಟ್ಟಿಗೆ ಗೊಬ್ಬರವನ್ನು ವರ್ಷಕ್ಕೊಮ್ಮೆ ಹಾಕಬೇಕು. ಸಾರಜನಕ, ರಂಜಕ, ಪೊಟಾಷ್ ರಸಗೊಬ್ಬರಗಳ ಜೊತೆಗೆ ಕಿತ್ತಳೆ ಗಿಡಗಳಿಗೆ ಕ್ಯಾಲ್ಸಿಯಂ ಸತು, ಮ್ಯಾಗ್ನೇಷಿಯಂ ಹಾಗೂ ತಾಮ್ರದ ಲವಣಾಂಶಗಳ ಅವಶ್ಯಕತೆಯೂ ಇದೆ.

ಈ ಮೊದಲೇ ತಿಳಿಸಿದ ರೋಗಗಳ ಜೊತೆಗೆ ಕಿತ್ತಳೆಗೆ ಹಳದಿ ಎಲೆ ರೋಗ, ಕಿತ್ತಳೆ ಚಿಟ್ಟೆ ಅಷ್ಟೇ ಅಲ್ಲದೆ ಕಿತ್ತಳೆ ಹಣ್ಣಿನ ನೊಣ ಹಾಗೂ ಕಾಂಡಕೊರಕ ಹುಳುಗಳ ಬಾಧೆಯಂತೂ ಇದ್ದೇ ಇದೆ.

ತೋಟಗಾರಿಕಾ ವಿಸ್ತರಣಾ ಯೋಜನೆಯ ಫಲರೂಪವಾಗಿ ಅಸ್ತಿತ್ವಕ್ಕೆ ಬಂದಿರುವ 'ಹಾರ್ಟಿ ಕ್ಲಿನಿಕ್'ಗಳು ತೋಟಗಾರಿಕೆ ಅಭಿವೃದ್ಧಿಗೆ ಏಕಗವಾಕ್ಷಿ ರೂಪದ ಸಲಹಾಕೇಂದ್ರವಾಗಿದೆ. ಈ ಕೇಂದ್ರವು ಕೊಡಗಿನ ಮುಖ್ಯಪಟ್ಟಣವಾದ ಮಡಿಕೇರಿಯಲ್ಲಿದ್ದು ಇಲ್ಲಿ ರೈತರಿಗೆ ತರಬೇತಿ, ಕ್ಷೇತ್ರೋತ್ಸವ, ಮೇಳ ಮತ್ತಿತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಆಧುನಿಕ ತಾಂತ್ರಿಕ ಮಾಹಿತಿ ಹಾಗೂ ನೂತನ ರೀತಿಯ ತೋಟಗಳ ವಿನ್ಯಾಸ ಭೂದೃಶ್ಯ ಚಟುವಟಿಕೆಗಳಿಗೆ ನೆರವು ನೀಡುತ್ತಿವೆ.

ಬಹುಜನಪ್ರಿಯವಾಗಿರುವ ನಾಗಪುರದ ಹಾಗೂ ಕೊಡಗಿನ ಕಿತ್ತಳೆಗಳು ಒಂದೇ ಜಾತಿಯ ತಳಿಗಳಾಗಿದ್ದು ಹವಾಗುಣ ವ್ಯತ್ಯಾಸದಿಂದಾಗಿ ರುಚಿಯಲ್ಲಿ ವ್ಯತ್ಯಾಸ ಹೊಂದಿದೆ. 'ರಂಗಪುರ' ತಳಿಯು ಬೇರುಗಿಡವಾಗಿದ್ದು ಕೊಡಗು ಮ್ಯಾಂಡ್ರಿಯಾನ್ ತಳಿ ಸುಳಿಗಿಡವಾಗಿದೆ.

ಡಾ. ಬರ್ನ್ಸ್ ಭಾರತ ಸರ್ಕಾರದ ಕೃಷಿ ಆಯುಕ್ತರಾಗಿ ಕ್ರಿ.ಶ. 1941ರಲ್ಲಿ ದಕ್ಷಿಣ ಭಾರತಕ್ಕೆ ಭೇಟಿ ನೀಡಿದಾಗ ಕೊಡಗಿನ ಪಾಲಿಬೆಟ್ಟದಲ್ಲಿರುವ 'ನಿರೀಕ್ಷಣಾಬಂಗಲೆ'ಯಲ್ಲಿ ಕಿತ್ತಳೆ ಬೆಳೆಗಾರರ ಪ್ರತಿನಿಧಿಗಳ ಒಂದು ಸಭೆ ನಡೆಸಿದ್ದರು. ಅಲ್ಲಿ ಹಾಜರಿದ್ದ ಕನ್ಸಾಲಿಡೇಟೆಡ್ ಕಾಫಿ ಎಸ್ಟೇಟಿನ ಮ್ಯಾನೇಜಿಂಗ್ ಡೈರೆಕ್ಟರ್ 'ಶ್ರೀ ಐವರ್ ಬುಲ್'ರವರು ಅವರ ಮುಂದೆ ಕಿತ್ತಳೆ ಕೃಷಿಯ ಪ್ರಸ್ತುತ ಸ್ಥಿತಿಯನ್ನು ಮನದಟ್ಟು ಮಾಡಿಕೊಟ್ಟು ವೈಜ್ಞಾನಿಕವಾಗಿ ಈ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಅನುಕೂಲಮಾಡಿಕೊಡಬೇಕೆಂದು ಅವರಲ್ಲಿ ಕೇಳಿಕೊಂಡ ಮೇರೆಗೆ, ಸಿ.ಸಿ. ಎಸ್ಟೇಟ್ ಇದ್ದ ಚೆನ್ನನಕೋಟೆ ತೋಟದ ಒಂದು ಭಾಗವನ್ನು ಲೀಸಿಗೆ (Lease) ಪಡೆದು ಅಲ್ಲಿಯೇ ಕಿತ್ತಳೆ ಸಂಶೋಧನಾ ಕೇಂದ್ರ ಪ್ರಾರಂಭಗೊಂಡಿತ್ತು. ಫಲವಾಗಿ ಕಿತ್ತಳೆ ಬೆಳೆ ಬೆಳೆಯುವ ಪ್ರದೇಶ ಹೆಚ್ಚಾದಂತೆ ಅದೇ ಸಂಶೋಧನಾ ಕೇಂದ್ರ ಎರಡು ವಿಭಾಗಗಳಾಗಿ ಮತ್ತೊಂದು ಚೆಟ್ಟಳ್ಳಿಯಲ್ಲಿ ಪ್ರಾರಂಭಗೊಂಡಿತು.

ಎಸ್.ಎ.ಬಿ.

ಕೊಡಗಿನ ಕೃಷಿ ಉಪಕರಣಗಳು ಕೊಡಗಿನ ಬೇಸಾಯ ಕ್ರಮ ಇತರ ಪ್ರದೇಶಗಳಿಗಿಂತ ತುಸು ಭಿನ್ನ. ಸಾಮಾನ್ಯವಾಗಿ ಬಳಸುವ ಉಪಕರಣಗಳ ಜೊತೆಗೆ ಈ ಭಾಗದ ಕೃಷಿಗೆಂದೇ ಕೆಲವು ವಿಶಿಷ್ಟ ಉಪಕರಣಗಳು ಬೇಕಾಗುತ್ತವೆ.

ನೇಗಿಲು (ನೇಂಗಿ) : ಕೃಷಿ ಉಪಕರಣಗಳಲ್ಲಿ ನೇಗಿಲಿಗೆ ಪ್ರಥಮ ಸ್ಥಾನ. ಆದಿಕಾಲದಿಂದಲೂ ಮರದ ನೇಗಿಲು ಬಳಕೆಯುಂಟು ಕ್ರಮೇಣ ಕಬ್ಬಿಣದ ನೇಗಿಲು ಬಂತು.

ಕೊಡಲಿ (ಕೊಡ್ಲಿ) : ಸಾಮಾನ್ಯ ಸಾಧನವಾಗಿದ್ದು ಒಂದು ತುದಿಯಲ್ಲಿ ಹರಿತವಾಗಿದ್ದು ಇನ್ನೊಂದು ತುದಿಯಲ್ಲಿ ಹಿಡಿ ಅಥವಾ ಕಾವು ಹಾಕಲು ರಂಧ್ರವಿದೆ. ಕೊಡಲಿ ವಿವಿಧ ಗಾತ್ರ ಮತ್ತು ಆಕಾರದಲ್ಲಿ ದೊರೆಯುತ್ತದೆ. ಕೈಕೊಡಲಿ, ಮರಕತ್ತರಿಸುವ ಕೊಡಲಿ, ಮರಸೀಳುವ ಕೊಡಲಿ ಮುಂತಾದ ನಮೂನೆಗಳಿವೆ. ಕಬ್ಬಿಣದಿಂದ ಮಾಡಲ್ಪಟ್ಟು ಇದರ ಹರಿತವಾದ ಕೊನೆಯನ್ನು ಗಡಸುಗೊಳಿಸಲಾಗಿದೆ. ಇದೊಂದು ವಿವಿಧೋಪಯೋಗಿ ಸಾಧನವಾಗಿದ್ದು ಮರಕತ್ತರಿಸಲು, ಕೊಂಬೆಕತ್ತರಿಸಲು, ಸೌದೆಗಾಗಿ ಮರಸೀಳಲು, ಮರದ ದಿಮ್ಮಿಯನ್ನು ನಯಗೊಳಿಸುವ ಮುಂತಾದ ಕೆಲಸಗಳಲ್ಲಿ ಬಳಸುತ್ತಾರೆ. ಕೈಕೊಡಲಿಯನ್ನು ಕಾಡು ಕಡಿಯಲು ಸಹ ಬಳಸುತ್ತಾರೆ.

ಹಾರೆ (ಇರಂಪಾರೆ) : ಕೈಯಿಂದ ಉಪಯೋಗಿಸುವ ಉದ್ದನೆಯ ಕಬ್ಬಿಣದ ತುಂಡು. ಒಂದು ಕೊನೆ ಮೊನಚಾಗಿದ್ದರೆ, ಇನ್ನೊಂದು ಕೊನೆ ಉಳಿ ಅಥವಾ ಚಮಚದ ಆಕಾರದಲ್ಲಿ ಇರುತ್ತದೆ. ಮಧ್ಯಮ ಕಾರ್ಬನ್ ಸ್ಟೀಲಿನಿಂದ ಹಾರೆಯನ್ನು ತಯಾರಿಸುತ್ತಾರೆ. ಗಿಡನೆಡಲು, ಬೇಲಿ ಕಂಬಕ್ಕಾಗಿ ಹಾರೆಯಿಂದ ಗುಂಡಿಗಳನ್ನು ತೋಡಬಹುದು. ಸನಿಕೆ, ಗುದ್ದಲಿ, ಮುಳ್ಳು ಗುದ್ದಲಿ ಇವು ತೋಟಗಾರಿಕೆಯಲ್ಲಿ ಉಪಯೋಗಿಸುವ ಇನ್ನಿತರ ಸಲಕರಣೆಗಳು.

ಕತ್ತಿ : ಕೃಷಿ ಮತ್ತು ತೋಟಗಾರಿಕೆಯಲ್ಲಿ ವಿವಿಧ ರೀತಿಯ ಕತ್ತಿಗಳನ್ನು ಬಳಸುತ್ತಾರೆ. ಇವುಗಳು ವಿವಿಧ ಗಾತ್ರ ಮತ್ತು ಆಕಾರಗಳನ್ನು ಹೊಂದಿವೆ. ಕತ್ತಿಗಳನ್ನು ಸ್ಟೀಲ್ ಸ್ಪ್ರಿಂಗ್ ಪಟ್ಟಿಯಿಂದ ಹೆಚ್ಚಾಗಿ ತಯಾರಿಸುತ್ತಾರೆ. ಕೆಲಸ ಮಾಡುವ ಬದಿಯನ್ನು ತಟ್ಟಿ ಹರಿತಗೊಳಿಸಲಾಗುತ್ತದೆ. ಹಿಡಿಯುವ ತುದಿಗೆ ಮರದ ಹಿಡಿಕೆಯನ್ನು ತೂರಿಸಲಾಗುತ್ತದೆ. ಇನ್ನೊಂದು ತುದಿಯು ಕತ್ತರಿಸುವ ಕಡೆಗೆ ಸ್ವಲ್ಪ ಬಾಗಿರುತ್ತದೆ. ಕತ್ತಿಯ ಎರಡೂ ಬದಿಗಳನ್ನು ಕೆಲಸ ಕಾರ್ಯಗಳಿಗೆ ಬಳಸುತ್ತಾರೆ. ಇದೊಂದು ಕತ್ತರಿಸುವ ಸಾಧನವಾಗಿದ್ದು ವಿವಿಧ ಕೃಷಿ ಕಾರ್ಯಗಳಲ್ಲಿ ಮತ್ತು ಮನೆಕೆಲಸದಲ್ಲಿ ಬಳಸುತ್ತಾರೆ.

ಕಸಿ ಚಾಕು (ಚಾಕ್) : ಪ್ರತಿಯೊಬ್ಬ ಕೃಷಿಕನ ಪ್ರಮುಖ ಸಾಧನವಾಗಿದೆ. ಉತ್ತಮ ಕಾರ್ಬನ್ ಸ್ಟೀಲ್‌ನಿಂದ ತಯಾರಿಸಲ್ಪಟ್ಟ ಈ ಅಲಗನ್ನು ಸುಲಭವಾಗಿ ಮಡಚಬಹುದು. ಇದು ಮರದ ಅಥವಾ ಫೈಬರ್‌ನ ಹಿಡಿಕೆಯನ್ನು ಹೊಂದಿರುತ್ತದೆ. ಒಂದು ಬದಿಯಲ್ಲಿ ಉದ್ದಕ್ಕೂ ಹರಿತವಾಗಿದ್ದರೆ ಇನ್ನೊಂದು ಬದಿಯ ತುದಿಯಲ್ಲಿ ಸ್ವಲ್ಪ ಮಾತ್ರ ಹರಿತವಾಗಿದ್ದು ಸ್ವಲ್ಪ ಮೇಲಕ್ಕೆ ಬಾಗಿರುತ್ತದೆ. ಈ ಭಾಗವನ್ನು 'ಟಿ' ಕಸಿಮಾಡಲು, ಕಸಿ ಕಣ್ಣನ್ನು ಒಳಸೇರಿಸಲು ಬಳಸುತ್ತಾರೆ. ಹರಿತವಾದ ಬದಿಯನ್ನು ಕಸಿ ಕೊಂಬೆ, ಎಲೆ, ಕಸಿ ಕಣ್ಣು ಕತ್ತರಿಸಲು ಬಳಸುತ್ತಾರೆ. ಕೆಲವೊಂದು ಕಸಿ ಚಾಕುಗಳ ಒಂದು ಕಡೆಯಲ್ಲಿ ಬಡ್ಡರ್ ಎಂದು ಕರೆಯಲ್ಪಡುವ ಪ್ಲಾಸ್ಟಿಕ್ ಬ್ಲೇಡು ಇರುತ್ತದೆ. ಇದನ್ನು ಗಿಡದ ಸಿಪ್ಪೆ ಮೇಲೆತ್ತಿ ಕಸಿ ಕಣ್ಣು ಸೇರಿಸಲು ಬಳಸುತ್ತಾರೆ. ಅಲಗು ಬಳಕೆಯಲ್ಲಿ ಇಲ್ಲದಿರುವಾಗ ಹಿಡಿಕೆಯೊಳಗೆ ಸೇರಿಸಲ್ಪಡುತ್ತದೆ.

ಗ್ರಾಫ್ಟಿಂಗ್ ಚಾಕು : ಗ್ರಾಫ್ಟಿಂಗ್ ಚಾಕು ಸಸ್ಯದ ಕಸಿ ಕೊಂಬೆ ಕತ್ತರಿಸಲು ಬಳಸುವ ಇನ್ನೊಂದು ಸಾಧನವಾಗಿದ್ದು ಮನೆ ಬಳಕೆಯ ಕತ್ತಿಯನ್ನು ಹೋಲುತ್ತದೆ. ಇದು ಸಹ ಅಲಗು ಮತ್ತು ಹಿಡಿಯನ್ನು ಹೊಂದಿದೆ. ಅಲಗಿನ ಒಂದು ಬದಿಯು ಹರಿತವಾಗಿದ್ದು ಇನ್ನೊಂದು ಕಡೆ

ಮೊಂಡಾಗಿದೆ. ಅಲಗನ್ನು ಬಳಸದೇ ಇದ್ದಾಗ ಮಡಚಿ ಹಿಡಿಯೊಳಗೆ ಸೇರಿಸಬಹುದು. ಉತ್ತಮ ಕಾರ್ಬನ್ ಸ್ಟೀಲಿನಿಂದ ತಯಾರಿಸಲ್ಪಟ್ಟ ಇದು ಕಸಿ ಚಾಕುವಿನಂತೆ ಬಳಸಲ್ಪಡುತ್ತದೆ. ಪ್ರಮುಖವಾಗಿ ವೆನೀರ್, ಕ್ಲೆಫ್ಟ್ ಮತ್ತು ಸ್ಪೋನ್ ಗ್ರಾಫ್ಟಿಂಗ್‌ನಲ್ಲಿ ಕಸಿ ಕೊಂಬೆ ಕತ್ತರಿಸಲು ಬಳಸುತ್ತಾರೆ. ಹಿಡಿಯ ಮೇಲ್ಭಾಗದಲ್ಲಿ ಕೊಂಬು/ಪ್ಲಾಸ್ಟಿಕ್/ಹಿತ್ತಾಳೆ ಪಟ್ಟಿ ಅಳವಡಿಸಲಾಗಿರುತ್ತದೆ. ಇದಲ್ಲದೆ ಒಂದು ಸ್ಟೀಲ್‌ನ ಸ್ಪ್ರಿಂಗ್‌ನಂತ ಕೊಂಡಿಯಿದ್ದು, ಕೆಲಸ ಮಾಡುವಾಗ ಅಲಗನ್ನು ಬಿಗಿಯಾಗಿ ಹಿಡಿದಿಡುತ್ತದೆ.

ಕಸಿ ಮತ್ತು ಗ್ರಾಫ್ಟಿಂಗ್ ಚಾಕು : ಕಸಿ ಮತ್ತು ಗ್ರಾಫ್ಟಿಂಗ್ ಮಾಡಲು ಎರಡು ಬೇರೆ ಬೇರೆ ಅಲಗುಗಳಿದ್ದು ಒಂದು ಬದಿಯಲ್ಲಿ ಹಿಡಿಗೆ ಸೇರಿಸಲ್ಪಟ್ಟಿದೆ. ಹಿಡಿಯ ಇನ್ನೊಂದು ಬದಿಯಲ್ಲಿ ಪ್ಲಾಸ್ಟಿಕ್ ಬಡ್ಡರ್ ಇದೆ. ಉಪಯೋಗದಲ್ಲಿ ಇಲ್ಲದಿದ್ದಾಗ ಎರಡು ಅಲಗುಗಳನ್ನು ಮಡಚಿ ಹಿಡಿಯೊಳಗೆ ಸೇರಿಸಬಹುದು. ಅಲಗನ್ನು ಕಾರ್ಬನ್ ಸ್ಟೀಲ್‌ನಿಂದ ತಯಾರಿಸಲ್ಪಟ್ಟಿದ್ದು ಗಡುಸಾಗಿರುತ್ತದೆ. ಕೃಷಿಕರ ಉಪಯುಕ್ತ ಸಾಧನವಾಗಿದ್ದು ವ್ಯಾಪಕವಾಗಿ ಹಣ್ಣು, ತರಕಾರಿ ಮತ್ತು ವಾಣಿಜ್ಯ ಬೆಳೆಯ ತೋಟಗಳಲ್ಲಿ ಹೊಸ ತಳಿಗಳ ಅಭಿವೃದ್ಧಿಗಾಗಿ ಕಸಿ ಮತ್ತು ಗ್ರಾಫ್ಟಿಂಗ್ ಕೆಲಸಗಳಲ್ಲಿ ಬಳಸುತ್ತಾರೆ. ಎರಡು ಅಲಗುಗಳನ್ನು ಸೇರಿಸಲು ಹಿಡಿಯು ದಪ್ಪವಾಗಿದೆ. ಹಿಡಿಯ ಹೊರಭಾಗ ಪ್ಲಾಸ್ಟಿಕ್, ಕೊಂಬು ಅಥವಾ ಮರದಿಂದ ಮಾಡಲ್ಪಟ್ಟಿದೆ. ಒಳಭಾಗದಲ್ಲಿ ಅಲ್ಯುಮಿನಿಯಂ ಅಥವಾ ಹಿತ್ತಾಳೆಯ ಪಟ್ಟಿಯಿದೆ. ಕೆಲಸ ಮಾಡುವಾಗ ಅಲಗನ್ನು ಭದ್ರವಾಗಿ ಹಿಡಿದಿಡಲು ಸ್ಟೀಲ್‌ಕೊಂಡಿಯಿದೆ.

ಸವರುವ ಮತ್ತು ಕೊಚ್ಚುವ ಕತ್ತಿ : ಸಸ್ಯಕ್ಕೆ ಗಾಳಿಯಾಡಲು, ಬೆಳಕು ಬೀಳಲು, ಆಕಾರ ಕೊಡಲು, ಬೇಡವಾದ ಗಿಡದ ಅಥವಾ ಮರದ ರೆಂಬೆ ಕೊಂಬೆಗಳನ್ನು ತೆಗೆಯಲು ಇದು ಉಪಯುಕ್ತ ಸಾಧನ. ಸಸ್ಯವನ್ನು ಸರಿಯಾದ ಕಾಲಕ್ಕೆ ಸವರುವುದರಿಂದ ಉತ್ತಮ ಇಳುವರಿ ದೊರೆಯುತ್ತದೆ. ಸವರುವ ಮತ್ತು ಕೊಚ್ಚುವ ಕತ್ತಿಗೆ ಅಲಗು ಮತ್ತು ಹಿಡಿಯ ಭಾಗವಾಗಿರುತ್ತದೆ. ಅಲಗಿನ ತುದಿ ಕೊಕ್ಕೆಯಂತೆ ಬಾಗಿರುವುದರಿಂದ ಕೊಂಬೆ ಮತ್ತು ರೆಂಬೆ ಕತ್ತರಿಸಲು ಅಥವಾ ಕೊಚ್ಚಲು ಅನುಕೂಲವಾಗಿರುತ್ತದೆ.

ತುಂಡರಿಸುವ ಕತ್ತಿ : ಇದನ್ನು ಸ್ಪ್ರಿಂಗ್ ಸ್ಟೀಲ್ ಅಥವಾ ಮೆದು ಸ್ಟೀಲ್‌ನಿಂದ ತಯಾರಿಸಲಾಗುತ್ತದೆ. ಅಲಗು ಮತ್ತು ಹಿಡಿಕೆ ಎಂಬ ಎರಡು ಭಾಗಗಳಿವೆ. ಅಲಗಿನ ತುದಿಯು ಕೊಕ್ಕೆಯಂತೆ ಬಾಗಿರುತ್ತದೆ ಮತ್ತು ಅಲಗಿನ ಒಂದು ಬದಿ ಹರಿತವಾಗಿರುತ್ತದೆ. ಅಲಗನ್ನು ಗಡಸುಗೊಳಿಸಲಾಗಿರುತ್ತದೆ. ಹಿಡಿಯನ್ನು ಬಿದಿರು ಅಥವಾ ಮರದಿಂದ ಮಾಡಿರುತ್ತಾರೆ. ಮರ ಮತ್ತು ಬಿದಿರು ಕತ್ತರಿಸಲು ಕತ್ತಿ ಒಳ್ಳೆಯ ಸಾಧನ.

ಸಿಕೇಚರ್ : ಕಸಿ ಚಾಕುವಿನಿಂದ ಕತ್ತರಿಸಲಾಗದ ರೆಂಬೆಗಳನ್ನು ತುಂಡರಿಸಲ ಸಿಕೇಚರ್ ಬಳಸುತ್ತಾರೆ. ಇದು ಅವಶ್ಯವಾದ ಸಾಧನವಾಗಿದ್ದು ಉಪಯೋಗಿಸಲು ಸುಲಭವಾಗಿದೆ. ರೆಂಬೆ, ಟೊಂಗೆಗಳನ್ನು ಕತ್ತರಿಸಲು ವಿವಿಧ ರೀತಿಯ ಸಿಕೇಚರ್‌ಗಳು ಬಳಕೆಯಲ್ಲಿವೆ. ಸಿಕೇಚರುಗಳಿಗೆ ಕತ್ತರಿಸುವ ಒಂದು ಅಥವಾ ಎರಡು ಅಲಗು ಮತ್ತು ಹಿಡಿಕೆಯಿದೆ. ಇವೆರಡರ ಮಧ್ಯೆ ಅಳವಡಿಸಿದ ಸ್ಪ್ರಿಂಗ್‌ನ ಸಹಾಯದಿಂದ ಅಲಗು ಮತ್ತು ಹಿಡಿಕೆಯನ್ನು ತೆಗೆಯಬಹುದು. ಒಂದು ಚಿಕ್ಕ ಕೊಂಡಿಯಂತಿರುವ ಸಾಧನದಿಂದ ಸಿಕೇಚರನ್ನು ಮುಚ್ಚಿದ ಸ್ಥಿತಿಯಲ್ಲಿ ಇಡಬಹುದು. ಹಣ್ಣಿನ ತೋಟದಲ್ಲಿ ಬೇಡವಾದ ಕೊಂಬೆ, ರೆಂಬೆ, ಬಳ್ಳಿ, ಕಸಿಕೊಂಬೆ, ಎಲೆ ಕತ್ತರಿಸಲು ಸಿಕೇಚರನ್ನು ಬಳಸುತ್ತಾರೆ.

ವಾಯು ಒತ್ತಡ ಸಿಕೇಚರ್‌ಗಳು : ಗಾಳಿ ಒತ್ತಡವನ್ನು ಉಪಯೋಗಿಸಿ ಗಿಡ ಸವರಲು ಈ ಸಿಕೇಚರನ್ನು ಬಳಸುತ್ತಾರೆ. ಇದರ ಒಂದು ಅಲಗು ನಿಶ್ಚಲವಾಗಿರುತ್ತದೆ ಮತ್ತು ಕತ್ತರಿಸುವ ಅಲಗು ಪಿಸ್ಟನ್ ಸಹಾಯದಿಂದ ಕೆಲಸ ಮಾಡುತ್ತದೆ. ಪಿಸ್ಟನ್‌ನ ಒಂದು ತುದಿಗೆ ಒತ್ತಡ ಒದಗಿಸುವ ಮತ್ತು ಸಾಗಿಸಲು ಸಾಧ್ಯವಾದ ಸಿಲಿಂಡರು ಇರುತ್ತದೆ. ಕರಾರುವಾಕ್ಕಾಗಿ, ಸುಲಭವಾಗಿ, ಕಷ್ಟಪಡದೆ ಕೊಂಬೆಗಳನ್ನು ಕತ್ತರಿಸಲು ಸಾಧ್ಯವಾಗುತ್ತದೆ.

ಪವರ್ ಸಾ : ಒಬ್ಬ ವ್ಯಕ್ತಿ ಉಪಯೋಗಿಸುವ ಹಗುರವಾದ ಯಂತ್ರ. ಸರಪಳಿಗೆ ಜೋಡಿಸಿದ ಚಿಕ್ಕ ಕಟ್ಟರುಗಳು ಪಟ್ಟಿಯ ಮೇಲೆ ಸುತ್ತುತ್ತವೆ. ಸರಪಳಿಯನ್ನು ಸ್ಪ್ರಾಕೆಟ್ಟಿಗೆ ಅಳವಡಿಸಲಾಗಿರುತ್ತದೆ. ಸ್ಪ್ರಾಕೆಟ್ಟನ್ನು ಪೆಟ್ರೋಲ್ ಅಥವಾ ವಿದ್ಯುತ್‌ನ ಸಹಾಯದಿಂದ ಜೋರಾಗಿ ತಿರುಗಿಸಲಾಗುತ್ತದೆ. ಸ್ಪ್ರಾಕೆಟ್ಟಿನೊಂದಿಗೆ ಸರಪಳಿಯು ತಿರುಗಲ್ಪಟ್ಟು ಕಟ್ಟರುಗಳ ಸಹಾಯದಿಂದ ಮರ ಅಥವಾ ಕೊಂಬೆಯನ್ನು ಸುಲಭವಾಗಿ ಕತ್ತರಿಸಬಹುದು.

ಬೇಲಿ ಸವರುವ ಕತ್ತಿ : ಬೇಲಿಯನ್ನು ಸವರಲು, ಕತ್ತರಿಸಲು ಕೈಯಿಂದ ಬಳಸುವ ಸಾಧನ. ಉದ್ದನೆಯ ಅಲಗಿದ್ದು ಎರಡು ಬದಿಯೂ ಹರಿತವಾಗಿದೆ. ಒಂದು ಬದಿಯಲ್ಲಿ ಹಿಡಿಕೆಯನ್ನು ಸೇರಿಸಲಾಗಿದೆ. ಬ್ಲೇಡಿನ ಎರಡು ಬದಿಯಿಂದ ಬೇಲಿಯನ್ನು ಸವರಬಹುದು. ಸವರು ಕತ್ತರಿಯನ್ನು ಬೇಲಿ ಸವರಲು ಮತ್ತು ಬೇಲಿಗೆ ಆಕಾರ ಕೊಡಲು ಉಪಯೋಗಿಸಲಾಗುತ್ತದೆ. ಉದ್ಯಾನದಲ್ಲಿ ಅಡ್ಡಾದಿಡ್ಡಿ ಬೆಳೆದ ಪೊದರುಗಳನ್ನು ಕತ್ತರಿಸಲು ಸಹ ಸವರು ಕತ್ತರಿಯನ್ನು ಬಳಸಬಹುದು.

ಬೇಲಿ ಕತ್ತರಿ : ಬೇಲಿ ಕತ್ತರಿಯಲ್ಲಿ ಎದುರು ಬದುರಾದ ಎರಡು ಅಲಗುಗಳಿವೆ. ಮೇಲಿನ ಬ್ಲೇಡಿನಲ್ಲಿ ವಜ್ರಾಕೃತಿಯ ಹಲ್ಲುಗಳಿದ್ದು ಎರಡು ಬದಿಯಲ್ಲಿ ಹರಿತವಾಗಿದ್ದು, ಹೆಚ್ಚು ಸಮಯ ಬಾಳಿಕೆ ಬರುವಂತೆ ತಯಾರಿಸಲಾಗಿದೆ. ಮೋಟಾರಿನ ಸಹಾಯದಿಂದ ಚಲಾಯಿಸಲಾಗುವ ಕತ್ತರಿಯಿಂದ 16 ಮಿ.ಮೀ. ದಪ್ಪದ ಕೊಂಬೆಗಳನ್ನು ಸಹ ಕತ್ತರಿಸಬಹುದು. ಎಡ, ಬಲ, ಮೇಲೆ ಅಥವಾ ಕೆಳಗೆ ವಿವಿಧ ಕೋನಗಳಲ್ಲಿ ಕೆಲಸ ಮಾಡುವಾಗ ಹಾರಾಡುವ ಎಲೆ, ಕೊಂಬೆಗಳಿಂದ ರಕ್ಷಣೆ ಪಡೆಯಲು ತಡೆಯನ್ನು ಅಳವಡಿಸಲಾಗಿದೆ. ಬಳಕುವ ವೈರಿನಿಂದ ಮೋಟಾರಿಗೆ ವಿದ್ಯುತ್ ಸಂಪರ್ಕ ಕೊಡಲಾಗಿರುವುದರಿಂದ ಕತ್ತರಿಯನ್ನು ತೋಟದ ಬೇಕಾದೆಡೆ ಸಾಗಿಸಲು ಅನುಕೂಲವಾಗಿದೆ. ಹಿಡಿಕೆಯಲ್ಲಿ ಸ್ವಿಚ್ಚನ್ನು ಕೊಟ್ಟಿರುವುದರಿಂದ ಸುರಕ್ಷಿತವಾಗಿ ಮತ್ತು ಕ್ಷಿಪ್ರವಾಗಿ ಬಳಸಬಹುದು. ಬೇಲಿ, ಪೊದೆ ಸವರಲು ಬಳಸುವುದಲ್ಲದೆ ಹೂತೋಟದ ಗಿಡಗಳಿಗೆ ವಿವಿಧ ಗಾತ್ರ ಮತ್ತು ಆಕಾರಗಳನ್ನು ಕೊಡಲು ಬಳಸುತ್ತಾರೆ. ಇದರಿಂದ ಹೂ ತೋಟದ ಅಂದ ಹೆಚ್ಚುತ್ತದೆ.

ಮರಕತ್ತರಿಸುವ ಕತ್ತರಿ : ಒಂದು ಸ್ಥಾನದಲ್ಲಿ ನಿಂತು ಮರವನ್ನು ಸವರಲು ಕೈಯಿಂದ ಉಪಯೋಗಿಸುವ ಸಾಧನ. ಕಾರ್ಮಿಕರಿಗೆ ತಲುಪಲಾಗದ ರೆಂಬೆಗಳನ್ನು ಈ ಕತ್ತಿಯಿಂದ ತುಂಡರಿಸುತ್ತಾರೆ. ಸಿಕೇಚರು ಅಥವಾ ಸವರು ಕತ್ತರಿಯಂತೆ ಎರಡು ಅಲಗುಗಳಿದ್ದು ಸಾಕೆಟ್ಟಿಗೆ ಜೋಡಿಸಲ್ಪಟ್ಟು, ಮರದ ಹಿಡಿಗಳನ್ನು ಹೊಂದಿದೆ.

ಫಾರೆಸ್ಟರು ಕತ್ತರಿ : ಮರ ಕತ್ತರಿಸುವ ಕತ್ತರಿಯಂತಿದ್ದು ಒಂದು ಕಡೆ ನಿಂತು ಕೊಂಬೆಗಳನ್ನು ಕತ್ತರಿಸಲು ಬಳಸುತ್ತಾರೆ. ಉದ್ದನೆಯ ಹಿಡಿಯನ್ನು ಹೊಂದಿದ್ದು ಕತ್ತರಿಸಲು ಹೆಚ್ಚಿನ ಬಲವನ್ನು ಕೊಡಲು ಸಾಧ್ಯವಾಗುತ್ತದೆ. ಅಲಗು ಮತ್ತು ಉದ್ದನೆಯ ಹಿಡಿಯನ್ನು ಸಾಕೆಟ್ಟಿನಲ್ಲಿ ಸೇರಿಸಲಾಗಿದೆ. ಉದ್ದನೆಯ ಹಿಡಿಯ ಸಹಾಯದಿಂದ ಕೈಗೆ ಎಟುಕಲಾರದ ಮತ್ತು 60 ಮಿ.ಮೀ.ನಷ್ಟು ದಪ್ಪದ ಬೇಡವಾದ ಕೊಂಬೆಗಳನ್ನು ಕತ್ತರಿಸಲು ಸಾಧ್ಯವಿದೆ. ತೋಟದಲ್ಲಿ ಅಥವಾ ಕಾಡಿನಲ್ಲಿ ಇದು ಉಪಯೋಗಕ್ಕೆ ಬರುತ್ತದೆ.

ಹುಲ್ಲು ಕತ್ತರಿ : ಹುಲ್ಲು ಹಾಸು ಕತ್ತರಿಸಲು ಕೈಯಿಂದ ಉಪಯೋಗಿಸುವ ಸಾಧನ. ವಿವಿಧ ರೀತಿಯ ಹುಲ್ಲು ಕತ್ತರಿಗಳು ಬಳಕೆಯಲ್ಲಿವೆ. ಕತ್ತರಿಸುವ ಅಲಗುಗಳು ಇದರ ಮುಖ್ಯಭಾಗ. ಅಲಗುಗಳನ್ನು 'V' ಆಕಾರದಲ್ಲಿ ಸ್ಪ್ರಿಂಗ್‌ನೊಂದಿಗೆ ಹಿಡಿಕೆಗೆ ಸೇರಿಸಲಾಗಿದೆ. ಇದು ಯಾವಾಗಲೂ ತೆರೆದ ಸ್ಥಿತಿಯಲ್ಲಿರುತ್ತದೆ. ಹುಲ್ಲು ಮತ್ತು ಹುಲ್ಲು ಹಾಸಿನ ಅಂಚನ್ನು ಕತ್ತರಿಸಲು, ಮೆದು ಸಸಿಗಳನ್ನು ಕತ್ತರಿಸಲು ಬಳಸಬಹುದು.

ಹೂ ತೋಟದ ಕತ್ತಿ (ಕುಡುಗೋಲು) : ಕುಳಿತುಕೊಂಡು ಕೆಲಸ ಮಾಡಲು ಕೈಯಿಂದ ಬಳಸಬಹುದಾದ ಒಂದು ಸಲಕರಣೆ. ಇದನ್ನು ಲೋಹದಿಂದ ಮಾಡಿರುತ್ತಾರೆ. ಒಂದು ಬದಿ ಹರಿತವಾಗಿರುವ ಅಲಗನ್ನು ಮರದ ಹಿಡಿಗೆ ಜೋಡಿಸಿದ್ದು ಸ್ಟೀಲ್ ಅಥವಾ ಕಾರ್ಬನ್ ಸ್ಟೀಲ್‌ನಿಂದ ಮಾಡಲಾಗಿದೆ. ಕತ್ತಿಯನ್ನು ಹೂತೋಟದಲ್ಲಿ ಹುಲ್ಲು ಕತ್ತರಿಸಲು ಬಳಸುತ್ತಾರೆ ಹಾಗೂ ತೋಟದಲ್ಲಿ ಮೆದು ಕಳೆ ಕೊಚ್ಚಲು ಸಹ ಬಳಸಬಹುದು.

ಹೂ ಕತ್ತರಿ : ಶಸ್ತ್ರ ಚಿಕಿತ್ಸೆಯ ಕತ್ತರಿಯನ್ನು ಹೋಲುವ ಹೂ ಕತ್ತರಿಸುವ ಸರಳ ಸಾಧನ. ಎರಡು ಬ್ಲೇಡುಗಳಿದ್ದು ಹಿಡಿಕೆಗಳಿವೆ. ಬೆರಳನ್ನು ತೂರಿಸಲು ರಂಧ್ರಗಳಿದ್ದು ಹೂ ಕತ್ತರಿಸಲು ಅನುಕೂಲವಾಗಿದೆ.

ಹುಲ್ಲು ಕತ್ತರಿಸುವ ಯಂತ್ರ : ಅತ್ಯಂತ ವೇವಾಗಿ ತಿರುಗುವ ಇದು ಹುಲ್ಲನ್ನು ಸುಲಭವಾಗಿ ಕತ್ತರಿಸುತ್ತದೆ. ವೃತ್ತಾಕಾರದ ಡಿಸ್ಕಿಗೆ ಅಡ್ಡಲಾಗಿ 2 ಅಥವಾ 4 ತ್ರಿಕೋನಾಕಾರದ ಅಥವಾ ಆಯತಾಕಾರದ ಉತ್ತಮ ಕಾರ್ಬನ್ ಸ್ಟೀಲಿನಿಂದಾದ ಬ್ಲೇಡನ್ನು ಅಳವಡಿಸಲಾಗಿದೆ. ಬ್ಲೇಡುಗಳನ್ನು ಬದಲಾಯಿಸುವ ವ್ಯವಸ್ಥೆ ಇದೆ. ಬ್ಲೇಡು ಹರಿತವಿಲ್ಲದಿದ್ದರೆ ಹುಲ್ಲು ಕಿತ್ತು ಬರುತ್ತದೆ. ಯಂತ್ರವು ವಿದ್ಯುತ್ ಮೋಟಾರು ಅಥವಾ ಎಂಜಿನಿಂದ ಕೆಲಸ ನಿರ್ವಹಿಸುತ್ತದೆ.

ಸಿಲಿಂಡರ್ ಆಕಾರದ ಹುಲ್ಲು ಕತ್ತರಿಸುವ ಯಂತ್ರ : ಸಿಲಿಂಡರ್‌ನಂಥ ರಾಟೆಯಿದ್ದು ಅದಕ್ಕೆ ಬ್ಲೇಡನ್ನು ಸಿಂಬಿಯಾಕಾರದಲ್ಲಿ ಅಳವಡಿಸಲಾಗಿದೆ. ಮುಂದೆ ಉರುಳು ಪಟ್ಟಿಯಿದ್ದು ಹುಲ್ಲನ್ನು ನಿಗದಿತ ಎತ್ತರಕ್ಕೆ ಕತ್ತರಿಸಲು ಅಳವಡಿಸಿಕೊಳ್ಳಬಹುದು. ಹಿಂಭಾಗದಲ್ಲಿ ಕತ್ತರಿಸಿದ ಹುಲ್ಲನ್ನು ಸಂಗ್ರಹಿಸಿಡಲು ಲೋಹದ ಡಬ್ಬಿಯಿದೆ.

ಗುಂಡಿ ತೆಗೆಯುವ ಯಂತ್ರ : ಟ್ರಾಕ್ಟರಿಗೆ ಜೋಡಿಸಲ್ಪಡುವ ಈ ಯಂತ್ರದಿಂದ ಗುಂಡಿ ತೋಡಬಹುದು. ಗುಂಡಿ ತೆಗೆಯುವ ಅಗಾರನ್ನು ಟ್ರಾಕ್ಟರಿಗೆ ಜೋಡಿಸಲಾಗುವುದು. ಅಗಾರಿನ ತುದಿಯು ವಜ್ರಾಕೃತಿ ಅಥವಾ ಮೊನಚಾಗಿದೆ. ಟ್ರಾಕ್ಟರು ಚಾಲನೆಯಿಂದ ಶಾಫ್ಟ್ ತಿರುಗಿ ಅಗಾರು ತಿರುಗಲ್ಪಡುತ್ತದೆ. ಅಗಾರು ಬದಲಾಯಿಸುವುದರಿಂದ ಬೇಕಾದ ಅಳತೆಯ ಗುಂಡಿಗಳನ್ನು ತೆಗೆಯಬಹುದು. ಹಣ್ಣಿನ ಸಸಿಗಳನ್ನು ನೆಡಲು ಬೇಕಾಗುವ ಗುಂಡಿ ತೆಗೆಯಲು ಈ ಯಂತ್ರವನ್ನು ಬಳಸುತ್ತಾರೆ.

ಎಸ್.ಎಚ್.

ಕೊಡಗಿನ ಬತ್ತದ ವ್ಯವಸಾಯ ಕೊಡಗಿನಲ್ಲಿ ವಿವಿಧ ರೀತಿಯ ಬತ್ತದ ತಳಿಗಳನ್ನು ಬೆಳೆಸಲಾಗುತ್ತಿದೆ.

1. ಕಿಗ್ಗಟ್ಟು ಬಿಳಿಯ - ದಪ್ಪಕ್ಕಿ
2. ಇಂಟಾನ್ - ತುಸು ಉದ್ದ
3. ಜೀರಿಗೆ ಸಣ್ಣ - ಪುಟ್ಟದಾಗಿ - ಆಕಾರದಲ್ಲಿ ಉರುಟು
4. ಗಮನ ಸಣ್ಣ - ತೆಳುವಾಗಿ ಉದ್ದವಾಗಿರುತ್ತದೆ. ಗಮಗಮಿಸುವ ಸುವಾಸನೆಯನ್ನು ಉಳ್ಳದ್ದು. ತುಪ್ಪದನ್ನ ಮಾಡಲು ವಿಶೇಷವಾಗಿ ಬಳಸಲಾಗುತ್ತದೆ.
5. ಕರಿ ಸಣ್ಣ - ಸಿಪ್ಪೆ ಕಪ್ಪು - ಸಣ್ಣ ಅಕ್ಕಿ
6. ಬಿ.ಕೆ.ಬಿ. - ಸಣ್ಣಕ್ಕಿ - ಮಡಿಕೇರಿ ತಾಲ್ಲೋಕಿನ ಮೂರ್ನಾಡು ಗ್ರಾಮದ ಬಡುವಂಡ್ರ ಕೆ. ಬೆಳ್ಳಿಯಪ್ಪ ಅವರು 60ರ ದಶಕದಲ್ಲಿ ಸಂಶೋಧಿಸಿದ - ಕೊಡಗಿನ ವಾತಾವರಣಕ್ಕೆ ಹೊಂದಿಕೊಳ್ಳುವ ಸಣ್ಣ ಬತ್ತದ ತಳಿ.

ನೀರಾವರಿ : ಕೊಡಗಿನಲ್ಲಿ ಬತ್ತದ ಬೆಳೆಯನ್ನು ಸಂಪೂರ್ಣವಾಗಿ ಮುಂಗಾರು ಮಳೆಯ ಆಶ್ರಯದಲ್ಲಿಯೇ ಬೆಳೆಯಲಾಗುತ್ತದೆ. ಮುಂಗಾರಿನಲ್ಲಿ ಪ್ರಾರಂಭವಾಗುವ ಮೃಗಶಿರಾ, ಆರಿದ್ರಾ, ಪುನರ್ವಸು, ಪುಷ್ಯ ಹಾಗೂ ಆಶ್ಲೇಷಾ - ಈ ಐದು ದೊಡ್ಡ ಮಳೆ ಸತತವಾಗಿ ಬಂದಾಗ, ಭೂಮಿಯಲ್ಲಿ ಜಲದ ಕಣ್ಣು (ನೀರಿನ ಒರತೆ) ತೆರೆದು ನೀರು ಹರಿಯುತ್ತದೆ. ಬರೆ (ತೋಡಿನ ಪಕ್ಕದ ಎತ್ತರದ ಜಾಗ)ಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಒಸರುವ ನೀರು ಗದ್ದೆ ಬದಿಯಲ್ಲಿಯ ತೋಡಿಗೆ ಹರಿಯುತ್ತದೆ. ಗದ್ದೆಗೆ ನೀರಿನ ಆವಶ್ಯಕತೆ ಬಿದ್ದಾಗ ತೋಡನ್ನು ಬೇಕಾದ ಗದ್ದೆಗಳಿಗೆ ತಿರುಗಿಸಿಕೊಂಡು ನೀರಿನ ಪೂರೈಕೆ ಮಾಡಿಕೊಳ್ಳುತ್ತಾರೆ. ಇಂತಹ ನೀರು ಡಿಸೆಂಬರ್‌ವರೆಗೆ ಸಾಕಾಗುತ್ತದೆ.

ಮಣ್ಣು : ಕೊಡಗಿನಲ್ಲಿ ಕಪ್ಪು-ಕೆಂಪು ಹಾಗೂ ಮರಳು ಮಿಶ್ರಿತ ಮಣ್ಣುಗಳಿವೆ. ಮರಳು ಮಿಶ್ರಿತ ಕೆಂಪು-ಕಪ್ಪು ಮಣ್ಣು (ಮಂಗಟ್ಟು) ಇಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ಗೊಬ್ಬರ : ದನದ ಗೊಬ್ಬರ ಎಲ್ಲಾ ಕೃಷಿಗೂ ಬಳಕೆಯಾಗುತ್ತದೆ. ಹಟ್ಟಿ ಗೊಬ್ಬರಕ್ಕೆ ಕಾಡಿನಲ್ಲಿ ಸಿಗುವ ನಾನಾ ಮರಗಳ ಸೊಪ್ಪು (ಎಲೆ)ಗಳನ್ನು ಕತ್ತರಿಸಿ ಹಾಕಿ ಕೊಳೆಸುತ್ತಾರೆ. ವಿಶೇಷವಾಗಿ ನೇರಳೆ, ನೀಲಿ ಮರ, ಹೊಂಗೆ ಮರದ ಎಲೆಗಳನ್ನು ಗೊಬ್ಬರದ ಗುಂಡಿಗೆ ಹಾಕುತ್ತಾರೆ.

ಕಂಪೆನಿ ಗೊಬ್ಬರ (ರಸಗೊಬ್ಬರ)ದ ಮಿಶ್ರಣವನ್ನೂ ಬಳಸುತ್ತಾರೆ. ಯೂರಿಯಾ, ಪೊಟಾಷ್, ಫಾಸ್ಪೇಟ್, ವಿಜಯ, ಸುಫಲಾ ಇತ್ಯಾದಿಗಳ ಮಿಶ್ರಣ- ಒಂದು ಎಕರೆಗೆ 20 ಕೆ.ಜಿ.ಯಷ್ಟು ಹಾಕುತ್ತಾರೆ.

ಬೀಜ ಬಿತ್ತನೆ : ಅಕ್ಟೋಬರ್‌ನಿಂದ ನವೆಂಬರ್ ತಿಂಗಳ ಕೊನೆಯ ಅವಧಿಯಲ್ಲಿ ಉತ್ತಮ ಫಸಲು ನೀಡುವ ಬಲಿತ ಉತ್ತಮ ಹೊಡೆಯನ್ನು (ತೆನೆ) ಆರಿಸಿ, ಹೊಡೆಯಿಂದ ಬತ್ತವನ್ನು ಬೇರ್ಪಡಿಸಿ, ಬಿಸಿಲಿಗೆ ಹಾಕಿ ಒಣಗಿಸಲಾಗುತ್ತದೆ. ಸತತವಾಗಿ ಮೂರುದಿನಗಳ ಕಾಲ ಮೂರು ಬಿಸಿಲು ಹಾಗೂ ಮೂರು ಮಂಜಿನಲ್ಲಿ (ರಾತ್ರಿಯ ಇಬ್ಬನಿ) ಒಣಗಿದ ಅನಂತರ ಬೀಜದ ಬತ್ತ ಸಿದ್ಧವಾಗುತ್ತದೆ. ಈ ಬೀಜದ ಬತ್ತವನ್ನು ಗೋಣಿ ತಾಟಿನಲ್ಲಿ ಕಟ್ಟಿ ತೇವಾಂಶ ಕಾಡದಂತೆ ಕಡಿಕೆ (ಬಿದಿರಿನಿಂದ ಮಾಡಿದ ಸಣ್ಣ ಪ್ರಮಾಣದ ಕಣಜ)ಯಲ್ಲಿ ಶೇಖರಿಸಲಾಗುತ್ತದೆ. ಬೀಜ ಬಿತ್ತುವಾಗ ಕೆಲವೊಮ್ಮೆ ಬರ

(ಒಣಗಿದ) ಬತ್ತವನ್ನು ಎರಚುತ್ತಾರೆ. ಇನ್ನೂ ಕೆಲವೊಮ್ಮೆ 2 ರಿಂದ 3 ದಿವಸಗಳ ಕಾಲ ಗೋಣಿಚೀಲದ ಸಮೇತ ನೀರಿನಲ್ಲಿ ನೆನೆಸಿ ಬಿತ್ತನೆ ಮಾಡುತ್ತಾರೆ.

ಗದ್ದೆಗಳ ವಿಧಗಳು

ಯಾಕ್ಲು/ಅಗಾಡಿ	:	ಅಗೆಗದ್ದೆ
ಮುಟ್ಲುಗದ್ದೆ	:	ಅಗಲ ಕಡಿಮೆ ಇದ್ದು ಉದ್ದ ಜಾಸ್ತಿ ಇರುತ್ತದೆ. ಎತ್ತರದ ಜಾಗದಲ್ಲಿರುವ ಆಕರ್ಷಕವಾದ ಈ ಗದ್ದೆಗಳು ಮೆಟ್ಟಿಲು ಮೆಟ್ಟಿಲಾಗಿ (ಏಣಿಯಂತೆ) ಕಂಡುಬರುತ್ತವೆ.
ಮಾನಿ ಗದ್ದೆ	:	ಪ್ರತಿ ಕುಟುಂಬದ ಮೇಲಿನ ಹಾಗೂ ಮೊದಲ ಗದ್ದೆ
ಓಟು ಪಾಳಿ	:	ಅಗಲ ಕಡಿಮೆ ಇದ್ದು ಉದ್ದಜಾಸ್ತಿ ಇರುತ್ತದೆ. ನಾಟಿ ಓಟಕ್ಕಾಗಿ ಈ ಗದ್ದೆಯನ್ನು ಬಳಸುತ್ತಾರೆ.
ಗನ್ನ	:	ಸುಮಾರು 10 ಅಡಿ ಅಗಲ - 10 ಅಡಿ ಉದ್ದ ಇರುವ ಪುಟ್ಟ ಪುಟ್ಟ ಗದ್ದೆಗಳು.

ಮೇ ತಿಂಗಳ ಮೊದಲ ದಿನಗಳಲ್ಲಿ ಗದ್ದೆಗೆ ಅಲ್ಲಲ್ಲಿ ಗೊಬ್ಬರದ ಗುಡ್ಡೆಯನ್ನು ಹಾಕುತ್ತಾರೆ. ಬಿಷುವಿನ ದಿವಸ ಮೊದಲಿಗೆ ಕೊಡಗಿನಲ್ಲಿ ಆರು (ಹೊನ್ನಾರು) ಕಟ್ಟುತ್ತಾರೆ. (ಇದಕ್ಕೂ ಮುನ್ನ ಎತ್ತುಗಳನ್ನು ಗದ್ದೆಗಳಿಗೆ ಇಳಿಸುವುದೇ ಇಲ್ಲ.) ಅಂದು ಮೊದಲ ಉಳುಮೆ ಮಾಡಿ ಒಂದು ತಿಂಗಳವರೆಗೆ ಗದ್ದೆಗೆ ನೀರು ಕಟ್ಟಿ, ಕಾಡು ಸೊಪ್ಪುಗಳನ್ನು ಹಾಕಿ ನೆಲವನ್ನು ಕೊಳೆಸುತ್ತಾರೆ. ಹೀಗೆ ನೀರು ಹಾಗೂ ಗೊಬ್ಬರದೊಂದಿಗೆ ಭೂಮಿಯನ್ನು ಉಳುಮೆ ಮಾಡಿ ಮಣ್ಣನ್ನು ಹದ ಮಾಡುತ್ತಾರೆ. ಬಿತ್ತನೆ ಮಾಡುವವರೆಗೆ ಗದ್ದೆಯನ್ನು ಐದರಿಂದ ಆರು ಸಾಲು (ಸಲ) ಉಳುಮೆ ಮಾಡುತ್ತಾರೆ. ನಾಟಿಯ ದಿವಸ ಬೆಳಗ್ಗೆ ನೇಗಿಲ ಕುಳವನ್ನು ಬದಲಿಸಿ ಮರದ ಹಲಗೆಯನ್ನು ಕಟ್ಟಿ - ಏರು - ತಗ್ಗಿನ ಚರಂಡಿಗಳನ್ನು ಸಮ ಮಾಡುವ ಈ ಕೆಲಸವನ್ನು ಮರ ಹೊಡೆಯುವುದು ಎನ್ನುತ್ತಾರೆ.

ಮೊದಲ ಉಳುಮೆಯ ಬಳಿಕ ತೆವರು (ಗದ್ದೆಯ ಬದು/ಏರಿ) ಕಡಿಯುತ್ತಾರೆ. ಗದ್ದೆಯ ಸುತ್ತಲ ಬದುವನ್ನು ವಿಶೇಷವಾಗಿ ಕೆಳಗಿನ ಭಾಗವನ್ನು ಒಂದೇ ಸಮನಾಗಿ ಬರುವಂತೆ ಹುಲ್ಲು ಹಾಗೂ ಸಣ್ಣ ಪುಟ್ಟ ಗಿಡಗಳನ್ನು ಗುದ್ದಲಿಯನ್ನು ಬಳಸಿ ಕೆತ್ತುತ್ತಾರೆ. ಅನಂತರ ಅಗೆ (ಬತ್ತದ ಸಸಿ) ಸಿದ್ಧವಾಗುವವರೆಗೆ ಗದ್ದೆಗಳಲ್ಲಿ ನೀರು ಕಟ್ಟುತ್ತಾರೆ. ಜೊತೆ ಜೊತೆಗೆ ಹೊಗುಳು (ಇಲಿ ಹಾಗೂ ನಳ್ಳಿ (ಏಡಿ)ಗಳು ಬದುವಿನಲ್ಲಿ ಮಾಡಿರುವ ತೂತುಗಳನ್ನು ಮುಚ್ಚಿ ಮಣ್ಣು ಸವರುವ ಕೆಲಸ) ಹೊಡೆಯುತ್ತಾರೆ.

ಆ ಹೊತ್ತಿಗಾಗಲೇ ಮಂಗಟ್ಟೆ ಮಣ್ಣಿನ ಯಾಕಲಿನಲ್ಲಿ ಪಟ (ಮಣ್ಣಿನ ಎತ್ತರದ ಹಾಸಿಗೆ, ಮಡಿ) ಮಾಡಿರುತ್ತಾರೆ. ಆ ಪಟಗಳಿಗೆ ಬೀಜ ಬಿತ್ತುತ್ತಾರೆ. ಪ್ರತಿವರ್ಷ ಅಗೆ (ಬತ್ತದ ಸಸಿ)ಯನ್ನು ಪ್ರತ್ಯೇಕವಾದ ಯಾಕಲಿನಲ್ಲೇ ಬಿತ್ತುತ್ತಾರೆ. ಆರಿದ್ರ ಮಳೆಯಲ್ಲಿಬಿತ್ತನೆ ಆರಂಭವಾಗಿ ಸರಿಯಾಗಿ ಒಂದು ತಿಂಗಳ ಕಾಲ ಸಸಿಯನ್ನು ಬಲಿಯಲು ಬಿಡುತ್ತಾರೆ. ಕೊಡಗಿನಲ್ಲಿ ಮಳೆ ಪ್ರಮಾಣ ಹೆಚ್ಚು. ತಿಂಗಳಿಗೆ ಮೊದಲೇ ಸಸಿಯನ್ನು ಕಿತ್ತರೆ ಪೈರು ಕೊಳೆಯುವ ಸಾಧ್ಯತೆ ಇರುತ್ತದೆ. ಮೂಡಲ ಸೀಮೆಯಲ್ಲಿ ಬತ್ತದ ಸಸಿಯನ್ನು ಇಪ್ಪತ್ತೆರಡು ದಿವಸಕ್ಕೆ ನಾಟಿ ಮಾಡುತ್ತಾರೆ. ಅಗೆ ಕೀಳುವ ದಿವಸ ಮನೆಯ ಒಡತಿ ಸಗಣಿಯ ಬೆನಕನನ್ನು ಮಾಡಿ ಹೂವು ಹಣ್ಣು ಸಮರ್ಪಿಸಿ ತೆಂಗಿನಕಾಯಿ ಒಡೆದು, ಕುಂಕುಮ ಹಚ್ಚಿ ಅಗೆ (ಮಡಿಯನ್ನು) ಪೂಜಿಸುತ್ತಾಳೆ. ಪೂಜೆಯ ಅನಂತರ ಅಗೆ ಕಿತ್ತು ಹೊರೆ ಕಟ್ಟುತ್ತಾರೆ. ಇಲ್ಲಿ ಅಗೆ ಕೀಳುವ ಕೆಲಸವನ್ನು ಹೆಣ್ಣಾಳುಗಳು ಮಾತ್ರ ಮಾಡುತ್ತಾರೆ.

ಒಂದು ಹೊರೆಯಲ್ಲಿ 50 ಕಟ್ಟು ಇರುತ್ತದೆ. ಒಬ್ಬ ಹೆಣ್ಣಾಳು ಒಂದು ದಿವಸಕ್ಕೆ 3 ಹೊರೆ ಪೈರು ಕಟ್ಟುತ್ತಾಳೆ. ಮೂರು ಹೊರೆಯನ್ನು ಮಧ್ಯಾಹ್ನದ ಹೊತ್ತಿಗೆ ಕಿತ್ತರೆ, ಮಧ್ಯಾಹ್ನದ ಅನಂತರವೂ 3 ಹೊರೆ ಪೈರು ಕಿತ್ತು 2 ಕೂಲಿಗಳಿಸುವ ಹೆಣ್ಣಾಳುಗಳೂ ಇದ್ದಾರೆ.

ಅಗೆ ಕಿತ್ತಮೇಲೆ ನಾಟಿ ನೆಡುವ ಕೆಲಸ ಬಿರುಸಿನಿಂದ ಪ್ರಾರಂಭವಾಗುತ್ತದೆ. ಗಂಡಸರು ಮಾತ್ರ ನಾಟಿ ನೆಡುವುದು ಇಲ್ಲಿಯ ವಿಶೇಷ. ಮಧ್ಯಾಹ್ನದ ತನಕ ಗದ್ದೆಗೆ ಮರ ಹೊಡೆದು ಸಮ ತಟ್ಟು ಮಾಡಿ ಊಟವಾದ ಬಳಿಕ 35 ರಿಂದ 40 ಜನ ಗಂಡಾಳುಗಳು ನಾಟಿ ಮಾಡಲು ಪ್ರಾರಂಭಿಸುತ್ತಾರೆ. ಒಂದು ದಿನಕ್ಕೆ 100 ಬಟ್ಟಿ (ಅಂದಾಜು 3 ಎಕರೆ 1 ಬಟ್ಟಿಗೆ 80 ಸೇರು ಬತ್ತ) ಭೂಮಿ ನಾಟಿ ಮಾಡುತ್ತಾರೆ.

ನಾಟಿ ನೆಡುವ ಅಷ್ಟೂ ದಿವಸಗಳಲ್ಲಿ ಗದ್ದೆಯ ಒಡೆಯರು ಪ್ರತಿ ನಿತ್ಯ ಮಧ್ಯಾಹ್ನದ ಊಟವನ್ನು ನೀಡುತ್ತಾರೆ. ಅವರವರ ಹಣಕಾಸಿನ ಸ್ಥಿತಿಯನ್ನು ಅವಲಂಬಿಸಿದ ಅಡುಗೆ ಇರುತ್ತದೆ. ಕೊಡಗಿನಲ್ಲಿ ವಿಶೇಷವಾಗಿ ಪಂದಿ ಕರಿ (ಹಂದಿಮಾಂಸ), ಕಡುಂಬುಟ್ಟು (ಕಡುಬು), ಕುರಿ/ಕೋಳಿ, ಮೀನು ಒಣ ಮೀನು, ತುಪ್ಪದನ್ನ, ತರಕಾರಿ ಸಾರು ಹಾಗೂ ಪಾಯಸಗಳೊಂದಿಗೆ ಕಡ್ಡಾಯವಾಗಿ ಕಳ್ಳು(ಹೆಂಡ) ಇದ್ದೇ ಇರುತ್ತದೆ. ಗ್ರಾಮದ ಅಷ್ಟೂ ಗದ್ದೆಗಳಲ್ಲಿ ಮುಯ್ಯಾಳು ರೀತಿಯಲ್ಲಿ ನಾಟಿ ಕೆಲಸ ನಡೆಯುತ್ತದೆ. ಹೆಂಗಸರು ಅಗೆ ಕೀಳುತ್ತಾ ನಾಟಿ ಗದ್ದೆಗೆ ಹೊರೆಗಳನ್ನು ನೀಡುತ್ತಿರುತ್ತಾರೆ. ನಾಟಿ ಮಾಡುವಾಗ ಕೆಲಸ ಸರಾಗವಾಗಿ ಸಾಗಲು ಓ ವಯ್ಯಾ... . ಎಂದು ಒಬ್ಬ ರಾಗ ತೆಗೆದರೆ ಉಳಿದವರು ಓವಯ್ಯಾ ಎಂದು ದನಿಗೂಡಿಸುತ್ತಾರೆ. ಕುಟುಂಬದ ಓಟುಪಾಳಿಯಲ್ಲಿ ನಾಟಿ ನೆಡುವಾಗ ಬಹಳ ಸಂಭ್ರಮ. ಗದ್ದೆಯ ನಡು ಮಧ್ಯಕ್ಕೆ ಮಾತ್ರ ಕೊಡಿನಾಟಿ ನೆಡಲಾಗುತ್ತದೆ. ಗದ್ದೆಯ ಒಂದು ತುದಿಯಿಂದ ಕೊನೆಯ ತುದಿಯವರೆಗೆ ನೇರವಾಗಿ ಮೂರು ಸಾಲನ್ನು ನೆಡುವುದು. ಆ ಕೆಸರು ತುಂಬಿದ ಗದ್ದೆಯಲ್ಲಿ ಕೊಡಿನಾಟಿಯ ಸಾಲಿನ ಒಳಗೆ ನಾಟಿ ಓಟ ನಡೆಯುತ್ತದೆ. ಸುಮಾರು 15 ವರ್ಷಗಳಿಂದೀಚೆಗೆ ಮೇಕೇರಿಯ ಗದ್ದೆ ಓಟ, ಕಬ್ಬಡಿ, ಹಗ್ಗ-ಜಗ್ಗಾಟ, ವಾಲಿಬಾಲ್-ಗಂಡಸರಿಗೆ ಹೆಂಗಸರಿಗೆ ಪ್ರತ್ಯೇಕವಾಗಿ ನಡೆಯುತ್ತದೆ. ಮಧ್ಯಾಹ್ನದ ಊಟದ ನಂತರ ಕಳ್ಳು ಸೇವನೆಯಿಂದ ರಂಗೇರಿದ ಉತ್ಸಾಹಿತ ಗಂಡಾಳುಗಳು ನಾಟಿ ಓಟದ ಆಟದಲ್ಲಿ ಲವಲವಿಕೆಯಿಂದ ಪಾಲ್ಗೊಳ್ಳುತ್ತಾರೆ. ನಾಟಿ ಓಟದಲ್ಲಿ ಮೊದಲು ಬಂದವನಿಗೆ ಹಲಸಿನ ಕಾಯಿ, ಎರಡನೆ ಸ್ಥಾನ ಪಡೆದವನಿಗೆ ಬಾಳೆ ಗೊನೆ ಹಾಗೂ ಮೂರನೇ ಸ್ಥಾನ ಪಡೆದವನಿಗೆ ತೆಂಗಿನ ಕಾಯಿಯನ್ನು ಬಹುಮಾನವಾಗಿ ನೀಡಲಾಗುತ್ತದೆ. ನಾಟಿ ಓಟದ ಸಂಭ್ರಮವನ್ನು ಸವಿಯಲು ಬಂದ ಎಲ್ಲರಿಗೂ ಹಾಲು-ನೀರು, ತೆಂಗಿನತುರಿ, ಬೆಲ್ಲ, ಹುರಿಗಡಲೆ ಹಾಗೂ ಎಳ್ಳು ಹಾಕಿ ಕಲೆಸಿದ ಅವಲಕ್ಕಿಯನ್ನು ಕೊಡುತ್ತಾರೆ. ಬೆಲ್ಲದಲ್ಲಿ ಮಾಡಿದ ಕರಿ ಕಾಫಿಯ ಸೇವನೆಯೊಂದಿಗೆ ನಾಟಿ ಓಟದ ಸಂಭ್ರಮ ಮುಗಿಯುತ್ತದೆ. ಕಕ್ಕಡ (ಆಷಾಢ) ಮಾಸದಲ್ಲಿ ನಾಟಿ ಕೆಲಸವನ್ನು ಮುಗಿಸುತ್ತಾರೆ.

ನಾಟಿ ಮುಗಿದ 15 ರಿಂದ 20 ದಿವಸಗಳ ಅನಂತರ ಗಂಡಾಳು - ಹೆಣ್ಣಾಳುಗಳು ಎಲ್ಲಾ ಸೇರಿ ಕಳೆ ತೆಗೆಯುತ್ತಾರೆ. ಕಳೆ ತೆಗೆದ ಅನಂತರ ಮಳೆ ಇಲ್ಲದ ಸಮಯವನ್ನು ನೋಡಿಕೊಂಡು ರಾಸಾಯನಿಕ - ಗೊಬ್ಬರದ ಮಿಶ್ರಣವನ್ನು ಗದ್ದೆಗೆ ಹಾಕುತ್ತಾರೆ. ಕಾಲಕಾಲಕ್ಕೆ ಮಳೆ ಬಂದರೆ ಮನೆಯವರ ಮೇಲುಸ್ತುವಾರಿಯಲ್ಲಿ ಕಾವೇರಿ ಸಂಕ್ರಮಣ ಹೊತ್ತಿಗೆ ಸರಿಯಾಗಿ (ಅಕ್ಟೋಬರ್ 17) ಹೊಡೆ ಒಡೆದಿರುತ್ತದೆ. ಮಳೆ ಇಲ್ಲವಾದರೆ ತೋಡನ್ನು ತಿರುಗಿಸಿಕೊಂಡು ಗದ್ದೆಗಳಿಗೆ ಅಗತ್ಯವಿರುವಷ್ಟು ನೀರನ್ನು ಬಿಟ್ಟುಕೊಳ್ಳುತ್ತಾರೆ. ನವೆಂಬರ್ ಆಖೈರು (ಕೊನೆಗೆ)ಗೆ ಹೊಡೆ ಬಲಿತಿರುತ್ತದೆ. ನವೆಂಬರ್ ಅನಂತರ ಬಗಾಲೆ ತೆಗೆಯುತ್ತಾರೆ. ಗದ್ದೆ ಮಧ್ಯೆ ನಿಂತ ನೀರಿಗೆ ಚರಂಡಿ ಹೊಡೆಯುತ್ತಾರೆ. ಬಗಾಲೆ ತೆಗೆದ 15 ದಿನಕ್ಕೆ ಗದ್ದೆ ಸಂಪೂರ್ಣವಾಗಿ ಒಣಗುತ್ತದೆ.

ಡಿಸೆಂಬರ್ ತಿಂಗಳ ಮೊದಲ ವಾರಕ್ಕೆ ಹುತ್ತರಿಯ ಸಂಭ್ರಮ. ಅಂದು ತೆನೆ ಪೂಜಿಸಿ, ಕೊಯ್ದು ಅನಂತರದ ದಿನಗಳಲ್ಲಿ ಗದ್ದೆ ಇಳಿದು ತೆನೆ ಕೊಯ್ಯಲು ಆರಂಭಿಸುತ್ತಾರೆ. ಚಿನ್ನದ ಬಣ್ಣದ ಬತ್ತದ ತೆನೆಗಳು ಗಾಳಿಗೆ ತಲೆದೂಗುತ್ತಾ ಗದ್ದೆಯ ಒಡೆಯರಿಗೆ, ನೋಡುಗರಿಗೆ ಸಂತೃಪ್ತಿಯನ್ನು ನೀಡುತ್ತವೆ. ಗದ್ದೆ ಸಂಪೂರ್ಣವಾಗಿ ಒಣಗಿದ ಮೇಲೆ ಗಂಡಾಳು - ಹೆಣ್ಣಾಳುಗಳು ಬತ್ತದ ತೆನೆಗಳನ್ನು ಕೊಯ್ದು ಸಾಗಿ ತೆನ್ನೇರಿ ಹಾಕುತ್ತಾರೆ. ತೆನ್ನೇರಿ ಹಾಕಿದ 8 ದಿವಸದ ಬಳಿಕ ಹೊರೆ ಕಟ್ಟುತ್ತಾರೆ. ಬತ್ತದ ಹೊರೆಗಳನ್ನು ಕಣಕ್ಕೆ ಸಾಗಿಸುವ ಮುನ್ನ ಕಣಗಳನ್ನು ಸಿದ್ಧಗೊಳಿಸುತ್ತಾರೆ. ವಿಶಾಲವಾದ ಸಮತಟ್ಟಾದ ಜಾಗವನ್ನು ಕಲ್ಲುಮಣ್ಣುಗಳಿಲ್ಲದಂತೆ ಶುದ್ಧಗೊಳಿಸಿ ಸಗಣಿ ಹಾಗೂ ಗಂಜಲ ಮಿಶ್ರಿತ ನೀರನ್ನು ಎರಡೆರಡು ಬಾರಿ ಕಣಕ್ಕೆ ಸಾರಿಸಿ ಒಣಗಿಸುತ್ತಾರೆ. ಬತ್ತದ ಕೊನೆಯ ಒಕ್ಕಲು ಮುಗಿಯುವವರೆಗೂ ಪ್ರತಿ ವಾರ ಸಗಣಿಯಿಂದ ಕಣವನ್ನು ಸಾರಿಸಿ ಒಣಗಿಸುತ್ತಾರೆ. ಬಿಸಿಲಲ್ಲಿ ಚೆನ್ನಾಗಿ ಒಣಗಿದ ಕಣಕ್ಕೆ ಬತ್ತದ ಹೊರೆಗಳನ್ನು ಸಾಗಿಸುತ್ತಾರೆ. ಬತ್ತದ ಹೊರೆಗಳನ್ನು ಮೆದೆ ಒಟ್ಟುತ್ತಾರೆ. 15 ದಿವಸಗಳ ಅನಂತರ ಒಕ್ಕಲು ಹಾಕುತ್ತಾರೆ. (ಇತ್ತೀಚೆಗೆ ಹೊರೆ ಬಡಿಯುವ ಕ್ರಮಗಳೂ ಇವೆ.) ಕಣದ ಮಧ್ಯದ ಬೇಟಿ ಅಥವಾ ಮೇಟಿ ಕಲ್ಲಿನ ಸುತ್ತ (ಮೆದೆಯಿಂದ ಬತ್ತದ ಪೈರನ್ನು ತೆಗೆದು) ಹರಡುತ್ತಾರೆ. ಬತ್ತದ ತೆನೆಯ ಭಾಗ ಮೇಟಿಯ ಕಡೆಗೆ ಮುಖ ಮಾಡುವಂತೆ ದನಗಳ ಬಾಯಿಗೆ ಸಿಗದಂತೆ ಹರಡುತ್ತಾರೆ. (ದನಗಳು ಒಕ್ಕಲು ಹೊಡೆಯುವ ಸಂದರ್ಭದಲ್ಲಿ ತೆನೆ ತಿಂದು - ನೀರು ಕುಡಿದರೆ ಹೊಟ್ಟೆ ಉಬ್ಬರಿಸಿ ಸತ್ತು ಹೋಗುತ್ತವೆ. ಕೆಲವೊಮ್ಮೆ ದನಗಳು ತೆನೆ ತಿನ್ನದಂತೆ ದನದ ಬಾಯಿಗೆ ಹಗ್ಗದ ಕುಕ್ಕೆಯನ್ನು ಕಟ್ಟುತ್ತಾರೆ.) ದನಗಳು ಬತ್ತದ ಪೈರಿನ ಮೇಲೆ ಓಡಾಡಿದಾಗ ಬತ್ತದ ಕಾಳು ಬೇರ್ಪಡುತ್ತವೆ.

ಬತ್ತವನ್ನು ಹುಲ್ಲಿನಿಂದ ಬೇರ್ಪಡಿಸಲು ಮೆರೆ ಕೊಕ್ಕೆಯನ್ನು ಬಳಸುತ್ತಾರೆ. (ಉದ್ದದ ದೊಣ್ಣೆಗೆ ಪಡ್ಚಿಮರದ ಕೊಕ್ಕೆಯನ್ನು ಕಟ್ಟುವುದು) ಒಣ ಹುಲ್ಲನ್ನು ಎಳೆದುಕೊಡು ಗಂಡಸರು-ಹೆಂಗಸರು ಕಂತೆ ಕಟ್ಟುತ್ತಾರೆ. ಕಂತೆ ಕಟ್ಟಿದ ಹುಲ್ಲನ್ನು ಮುಂಡ ಮೆಟ್ಟುತ್ತಾರೆ. ಕಣದಲ್ಲಿ ಹರಡಿರುವ ಬತ್ತದ ಕಾಳನ್ನು ಒಟ್ಟುಗೂಡಿಸಿ ಜೊಳ್ಳು ಹಾಗೂ ಗಟ್ಟಿಯನ್ನು ಬೇರ್ಪಡಿಸುತ್ತಾರೆ.

ಮೊದಲಿಗೆ ಬತ್ತವನ್ನು ತೂರುತ್ತಾರೆ. ಗಂಡಸರು ಬತ್ತವನ್ನು ತೂರಿದಾಗ ಅರ್ಧ ಚಂದ್ರಾಕಾರವಾಗಿ ಬತ್ತದ ಗಟ್ಟಿ ಕಾಳುಗಳು ಶೇಖರವಾಗುತ್ತವೆ. ಹೀಗೆ ಶೇಖರವಾದ ಗಟ್ಟಿ ಕಾಳನ್ನು ಒಂದೆಡೆ ರಾಶಿ ಮಾಡಿ ಮುಂಭಾಗದಲ್ಲಿ ಹರಡಿರುವ ಹುಡಿ ಹುಲ್ಲು ಅರೆಚೆಟ್ಟು ಬತ್ತವನ್ನು ಹೆಂಗಸರು ಹುಕ್ಕಡೆ ಹೊಡೆಯುತ್ತಾರೆ. ಗಟ್ಟಿಕಾಳು ಕಾಲ ಬುಡಕ್ಕೆ ಶೇಖರವಾಗುತ್ತದೆ.

ಹೀಗೆ ಶೇಖರಗೊಂಡ ಬತ್ತದ ಕಾಳಿನ ರಾಶಿಯನ್ನು ಪೂಜಿಸುತ್ತಾರೆ. ಮೇಟಿ ಪೂಜೆಗೊಳ್ಳಲು ಸಿದ್ಧವಾಗುತ್ತದೆ. ದನಗಳನ್ನು ತೊಳೆದು ಕೊಂಬಿಗೆ ಕಾಲಿಗೆ ಶೃಂಗಾರ ಮಾಡಿ, ಮೇಟಿಯ ಸುತ್ತ ಮೂಲೆ ಮೊರ (ಹೊಟ್ಟು ಬೀಸಲು ಬಳಸುವುದು) ಮೆರೆಕೊಕ್ಕೆ, ಸಣ್ಣ ಮೊರಗಳನ್ನು ಮೇಟಿಯ ಪಕ್ಕ ಇರಿಸಿ ರಾಶಿ ಪೂಜೆ ಮಾಡುತ್ತಾರೆ. ಅನಂತರ ಪರೆಯಲ್ಲಿ ಅಳೆದು ಮೂಟೆಗೆ ತುಂಬಿ ಕಡಿಕೆಗೆ ಸುರಿಯುತ್ತಾರೆ.

ಶೇಖರಣೆ : ಬಲಿತ ಬಿದಿರನ್ನು ತಟ್ಟಿ ಅಥವಾ ಚಾಪೆಯಂತೆ ಅವಶ್ಯವಿದ್ದಷ್ಟು ವಿಸ್ತಾರಕ್ಕೆ ಹೆಣೆಯುತ್ತಾರೆ. ಎರಡೆರಡು ಸಾರಿ ಗಂಜಲ ಮಿಶ್ರಿತ ಸಗಣಿಯಿಂದ ಸಾರಿಸಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸುತ್ತಾರೆ. ಒಣಗಿದ ಕಡಿಕೆಯನ್ನು ಒಳಭಾಗ ಟೊಳ್ಳಾಗಿರುವಂತೆ ವೃತ್ತಾಕಾರವಾಗಿ ಸುತ್ತ ಹಗ್ಗದಿಂದ ಕಟ್ಟುತ್ತಾರೆ. ಪ್ರತಿವರ್ಷ ಶೇಖರಿಸಿಡುವ ಮನೆಯ ಒಣಕೋಣೆಯಲ್ಲಿ ನೆಲಕ್ಕೆ ಸಾಕಷ್ಟು ಒಣ ಹುಲ್ಲನ್ನು ಹಾಕಿ ಅದರ ಮೇಲೆ ಗೋಣಿ ತಾಟನ್ನು ಹಾಸಿ (ತೇವಾಂಶ ತಟ್ಟದಂತೆ) ಕಡಿಕೆಯಿಟ್ಟು ಬತ್ತ ಸುರಿಯುತ್ತಾರೆ.

ಸಾಧಾರಣವಾಗಿ ಈ ಕಡಿಕೆಯನ್ನು ಬೀಜದ ಬತ್ತದ ಶೇಖರಣೆ, ಜೀರಿಗೆ ಸಣ್ಣ ಅಥವಾ ಗಮನಸಣ್ಣ ಬತ್ತಗಳನ್ನು ಶೇಖರಿಸಲು ಬಳಸುತ್ತಾರೆ. ಉಳಿದಂತೆ ಮನೆಯ ಒಳಭಾಗದ ಕೋಣೆಯೊಂದಕ್ಕೆ ನೆಲ ಹಾಗೂ ಗೋಡೆಗಳಿಗೆ ಮರದ ಹಲಗೆಯನ್ನು ಜೋಡಿಸಿ ಹುಲ್ಲು ಹಾಕಿ ಶೇಖರಿಸುವ ಸಂಪ್ರದಾಯವಿದೆ. ಮರದ ಹಲಗೆಯ ಬದಲಿಗೆ ಕಲ್ಲಿನ ಚಪ್ಪಡಿಗಳನ್ನು ನೆಲ ಹಾಗೂ ಗೋಡೆಗಳಿಗೆ ಬಳಸುವುದೂ ಇದೆ. ಈ ರೀತಿಯ ಶೇಖರಣಾ ರೀತಿ ಪತ್ತಾಯ/ಕಣಜ ಎಂದು ಗುರುತಿಸಿಕೊಂಡಿದೆ.

ಬತ್ತವನ್ನು ಪತ್ತಾಯಕ್ಕೆ ಸುರಿಯುವ ಮುನ್ನ ಕಣಜ ಪೂಜೆ ಮಾಡುತ್ತಾರೆ. ಪತ್ತಾಯಕ್ಕೆ ಬತ್ತ ಸುರಿಯುವ ಮುನ್ನ ಬಿಸಿಲಿನಲ್ಲಿ ಬತ್ತವನ್ನು ಚೆನ್ನಾಗಿ ಒಣಗಿಸಿದರೆ ಸುಮಾರು ನಾಲ್ಕರಿಂದ ಐದು ವರ್ಷಗಳ ಕಾಲ ಬತ್ತ ಹಾಳಾಗುವುದಿಲ್ಲ.

ಬತ್ತಕ್ಕೂ ಕೆಲವೊಮ್ಮೆ ರೋಗ ಹತ್ತುವುದುಂಟು. ನೀರು ಕಡಿಮೆ ಆಗಿ / ಮಳೆ ಬಾರದ ಸಂದರ್ಭಗಳಲ್ಲಿ ಬೆಂಕಿ ರೋಗ ಕಾಡುತ್ತದೆ. ಹಿನೋಸನ್ ಔಷಧಿಯ ಸಿಂಪಡಿಕೆಯಿಂದ ರೋಗ ನಿವಾರಣೆಯಾಗುತ್ತದೆ. ಹುಳ ಹೊಡೆದರೆ (ಮಿಡತೆ) ರೋಗರ್ ಸಿಂಪಡಿಕೆ ಮಾಡುತ್ತಾರೆ.

ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ ಉಳುವ, ಪೈರು ಬಿತ್ತುವ, ಕಟಾವು ಮಾಡುವ, ಒಕ್ಕಲು ಮಾಡುವ ಕೆಲಸಗಳೆಲ್ಲಾ ಯಾಂತ್ರಿಕರಣವಾಗುತ್ತಿವೆ. ಮುಂಗಾರು ಮಳೆಯ ಆಶ್ರಯದಲ್ಲಿ ನಡೆಯುತ್ತಿದ್ದ ಏಕ ಬೆಳೆ, ನೀರಾವರಿ ಸೌಲಭ್ಯ ಇದ್ದ ಕಡೆ (ಹೊಳೆ) ಎರಡನೇ ಬೆಳೆಯಾಗಿಯೂ ವಿಸ್ತರಿಸಿದ್ದುಂಟು. ಆದರೆ ದುರ್ಬಲವಾದ ಮುಂಗಾರು, ಕೂಲಿಯಾಳುಗಳ ಕೊರತೆ, ವಾಣಿಜ್ಯ ಬೆಳೆಯಿಂದ ಬರುವ ದುಪ್ಪಟ್ಟು ಆರ್ಥಿಕ ಲಾಭಾಂಶಗಳು ಗದ್ದೆಯನ್ನೇ ಇಲ್ಲವಾಗಿಸುತ್ತಿದೆ. ಗದ್ದೆಗಳನ್ನು ತೋಟವನ್ನಾಗಿಸಿ ಕಾಫಿ, ಕಾಳು ಮೆಣಸು, ಅಡಿಕೆ, ಬಾಳೆ - ಶುಂಠಿ ಮೊದಲಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಕೊಡಗಿನಲ್ಲಿ ಮೂಲ ನಿವಾಸಿಗಳ ಸಂಖ್ಯೆ ಕಡಿಮೆ ಆದಂತೆ ಬತ್ತದ ಕೃಷಿಯೂ ಕಡಿಮೆಯಾಗುತ್ತಿದೆ.

ಗದ್ದೆಯ ಒಂದು ತುದಿಯಿಂದ ಕೊನೆಯ ತುದಿಯವರೆಗೆ ನೇರವಾಗಿ ಮೂರು ಸಾಲನ್ನು ನೆಡುವುದು. ಆ ಕೆಸರು ತುಂಬಿದ ಗದ್ದೆಯಲ್ಲಿ ಕೊಡಿ ನಾಟಿಯ ಸಾಲಿನ ಒಳಗೆ ನಾಟಿ ಓಟ ನಡೆಯುತ್ತದೆ.

ಸುಮಾರು 15 ವರ್ಷಗಳಿಂದೀಚೆಗೆ ಮೇಲೆರಿಯ ಕಗ್ಗೋಡ್ಲು ಗ್ರಾಮದಲ್ಲಿ ನಾಟಿ ಓಟದ ಬದಲಿಗೆ ಕೆಸರು ಗದ್ದೆ ಓಟ, ಕಬಡ್ಡಿ, ಹಗ್ಗ ಜಗ್ಗಾಟ ವಾಲಿಬಾಲ್ - ಗಂಡಸರಿಗೆ ಹೆಂಗಸರಿಗೆ ಪ್ರತ್ಯೇಕವಾಗಿ ನಡೆಯುತ್ತದೆ.

ಕೇರಳದ ಪ್ರಸಿದ್ಧ ಹಬ್ಬ. ಕೊಡಗು-ಕೇರಳದ ಗಡಿ ಭಾಗದಲ್ಲಿದೆ. ಕೇರಳದ ಸಂಸ್ಕೃತಿ, ಧರ್ಮ, ಸಮಾಜ ಹಾಗೂ ಹಣಕಾಸಿನ ವ್ಯವಸ್ಥೆಗಳು ಕೊಡಗಿನ ಮೇಲೆ ಬಹಳಷ್ಟು ಪ್ರಭಾವವನ್ನು ಬೀರಿವೆ. ವಿಷುವಿನ ದಿವಸ ಮಳೆ ಕಡ್ಡಾಯವಾಗಿ ಸುರಿಯುತ್ತದೆ.

ಕಾವೇರಿ ಸಂಕ್ರಮಣದ ದಿವಸ - ಸೂರ್ಯೋದಯದ ಮುನ್ನ ಬೆಚ್ಚು ಮರದ ಕಾಂಡ ಹಾಗೂ ಬಳ್ಳಿಗೆ ಕೆಂಪು ಹೂವಿನಿಂದ ಅಲಂಕರಿಸಿ ಅರಳಿ ಎಲೆಯನ್ನು ಕಟ್ಟಿ, ಮೂರು ಕೋಲುಗಳನ್ನು ಗದ್ದೆಯ ಬದುವಿನಲ್ಲಿ ತ್ರಿಕೋನಾಕಾರದಲ್ಲಿ ನೆಟ್ಟು, ಎರಡು ದೋಸೆ - ತೆಂಗಿನ ಕಾಯಿಯ ಸಿಹಿ ಚಟ್ನಿ, ಬೆಲ್ಲ, ತೆಂಗು, ಬಾಳೆಹಣ್ಣನ್ನು ಇಟ್ಟು, ಕೂ... ಎಂದು ಕೂಗಿ, ಪೂಜಿಸುತ್ತಾರೆ. ಕೂಗಿನ ಸದ್ದು ಕೇಳಿಸಿ ಕೊಂಡ ಮನೆಯ ಕೆಲಸದಾಳುಗಳು ಬಂದು ದೋಸೆಯನ್ನು ಹೊತ್ತೊಯ್ದು ತಿನ್ನುತ್ತಾರೆ. ಬೆಚ್ಚಿನ ಮರದ ಬೆಚ್ಚನ್ನು (ಕೋಲು) ಮನೆಯ ಮುಂಭಾಗ ಹಿಂಭಾಗ, ತುಳಸಿಕಟ್ಟೆ, ಬಾವಿ, ದನದ ಕೊಟ್ಟಿಗೆ, ದೇವಸ್ಥಾನ ಹೀಗೆ ನಾನಾ ಕಡೆಯಲ್ಲಿ ಚುಚ್ಚುತ್ತಾರೆ.

ತೆವರು ಒಡೆದು ಗದ್ದೆಯಲ್ಲಿರುವ ನೀರನ್ನು ಆರಿಸುವುದು ಅಥವಾ ತೋಡಿಗೆ ನೀರನ್ನು ಹರಿಸುವುದು.

ಪುತ್ತರಿ ಪುದಿಯ + ಅರಿ = ಹೊಸ + ಅಕ್ಕಿ = ಹೊಸ ಅಕ್ಕಿ. ನವೆಂಬರ್ ಕೊನೆಯ ಅಥವಾ ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿವಸ ಹುತ್ತರಿ ಹಬ್ಬವನ್ನು ಆಚರಿಸುತ್ತಾರೆ. ಕೊಡಗಿನ ಸಂಪ್ರದಾಯದಲ್ಲಿ ಸೆಪ್ಟೆಂಬರ್ 4 ಅಥವಾ 5ರ ಕೈಲ್‌ಪೊಳ್ದ್ ಹಾಗೂ ಹುತ್ತರಿ ಹಬ್ಬಗಳು ಅಪ್ಪಟ ದೇಸಿ ಸೊಗಡನ್ನು ಹೊಂದಿವೆ. ಕೈಲ್ ಪೊಳ್ದ್ - ಆಯುಧ (ಬೇಟೆಗೆ ಹಾಗೂ ಕೃಷಿಗೆ ಬಳಸುವ)ಗಳ ಪೂಜೆಯಾದರೆ ಹುತ್ತರಿ ಹೊಸ ಅಕ್ಕಿಯ ಪೂಜೆ. ಊರಿನ ದೇವಸ್ಥಾನಕ್ಕೆ ಬಿಟ್ಟಿರುವ ಗದ್ದೆಯ ಸಮೀಪ ಊರಿನ ಸಮಸ್ತ ಕುಟುಂಬಗಳು ಸೇರುತ್ತವೆ. ಕೊಡಗಿನ ವಿಶೇಷವಾದ ವಾಲಗ, ಪಟಾಕಿ, ದೀಪಗಳ ಸಂಭ್ರಮದೊಂದಿಗೆ 'ಬಿದಿರಿನ ಕುತ್ತಿ'ಯಲ್ಲಿ ಹಾಲು, ಹುತ್ತರಿಗೆಣಸು, ಹಾಗಲಕಾಯಿಗಳನ್ನು ಹಾಕಿ ಮನೆಯಿಂದಲೇ ಪೂಜಿಸಿ ದೇವಸ್ಥಾನದ ಗದ್ದೆಯಲ್ಲಿ ಸೇರುತ್ತಾರೆ. ಅಲ್ಲಿ ಊರಿನ ತಕ್ಕ (ಯಜಮಾನ) ರಾತ್ರಿ ಹೊತ್ತಿನಲ್ಲಿ ಎಲ್ಲರ ಸಮಕ್ಷಮದಲ್ಲಿ ಕಾವೇರಿ ತಾಯಿ, ಇಗ್ಗುತಪ್ಪ (ಮಳೆದೇವರು)ರನ್ನು ನೆನೆದು ಪೊಲಿಪೊಲಿಯೇ ಬಾ... ಎಂದು ಹತ್ತಾರು ಬಾರಿ ಕರೆದು ಕದಿರನ್ನು ಕೊಯ್ದು 'ಬಿದಿರಿನ ಕುತ್ತಿ'ಗೆ ಹಾಕುತ್ತಾರೆ. ಅನಂತರ 3 ಅಥವಾ 4 ಕದಿರನ್ನು ಗೊಂಚಲಾಗಿ ಮಾಡಿ ಅರಳಿ ಎಲೆ ಸುತ್ತಿ ನೆರೆದ ಸಮಸ್ತ ಕುಟುಂಬಕ್ಕೂ ಹತ್ತಾರು ಗೊಂಚಲನ್ನು ಕೊಡುತ್ತಾರೆ. ಅಲ್ಲಿ ಸೇರಿರುವ ಬೇರೆ ಬೇರೆ ಕುಟುಂಬದವರ (ಕೊಡಗಿನಲ್ಲಿ ವ್ಯಕ್ತಿಗಳನ್ನು ಮನೆ ಹೆಸರಿನಿಂದ ಗುರುತಿಸುತ್ತಾರೆ. ಬಡುವಂಡ, ಕೂಪದಿರ, ಮುಂಡಂಡ, ಬೊಪ್ಪಿರಂಡ ಇತ್ಯಾದಿ) ಸಂಖ್ಯೆಗೆ ಅನುಸಾರವಾಗಿ ಗುಂಡು ಹಾರಿಸುತ್ತಾರೆ. ಕದಿರು ಕೊಯ್ದು ಸಂಕೇತಕ್ಕೆ ಗುಂಡು ಹಾರಿಸುತ್ತಾರೆ. ನೆಲ್ಲಕ್ಕಿ ಕದಿರನ್ನು ದೇವಸ್ಥಾನದಲ್ಲಿ ಪೂಜಿಸಿ ತಮ್ಮ ತಮ್ಮ ಮನೆಗಳಿಗೆ ಕೊಂಡೊಯ್ಯುತ್ತಾರೆ. ಕದಿರನ್ನು ತಂದ ಮನೆಯ ಯಜಮಾನನ ಕಾಲು ತೊಳೆದು ಆರತಿ ಎತ್ತಿ ಒಳಗೆ ಕರೆದೊಯ್ದು ಕದಿರನ್ನು ದೇವರ ಕೋಣೆಗಳಲ್ಲಿ ಮತ್ತೊಮ್ಮೆ ಪೂಜಿಸಿ, ದೇವರ ಕೋಣೆ, ಕಡಿಕೆ, ಮನೆಯ ಮುಂಬಾಗಿಲುಗಳಲ್ಲಿ ಕಟ್ಟುತ್ತಾರೆ. ಈಗಾಗಲೇ ಮಾಡಿರುವ ಪಾಯಸಕ್ಕೆ ನಾಲ್ಕಾರು ಹೊಸ ಬತ್ತದ ಕಾಳನ್ನು ಹಾಕಿ ಭಕ್ತಿಯಿಂದ ಸ್ವೀಕರಿಸುತ್ತಾರೆ. ಹುತ್ತರಿಯ ಮೂರನೇ ದಿವಸ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತವೆ.

ತೆನ್ನೇರಿ - ಪೈರನ್ನು ಕೊಯ್ದು ಗದ್ದೆಯಲ್ಲಿ ತೆಳುವಾಗಿ ಹರಡುವುದು.

ಮೆದೆ - ತೆನೆಯು ಒಳಭಾಗಕ್ಕೆ ಬರುವಂತೆ ಚೌಕಾಕಾರದ ಅಥವಾ ವೃತ್ತಾಕಾರವಾಗಿ ಮೇಲು ಮೇಲಕ್ಕೆ ಗೋಪುರದಂತೆ ಒಟ್ಟುತ್ತಾ ಹೋಗುತ್ತಾರೆ. ಮಳೆ ಬಂದರೆ ಮೆದೆಯ ಒಳಕ್ಕೆ ನೀರು ನುಗ್ಗಿ ಒದ್ದೆಯಾಗದಂತೆ ಮೇಲ್ಭಾಗವನ್ನು ಗೋಪುರಾಕಾರಕ್ಕೆ ಸಿದ್ಧಪಡಿಸುತ್ತಾರೆ.

ಹೆಂಗಸರು ಮೊರದಲ್ಲಿ ಅರೆಚೆಟ್ಟು (ಜೊಳ್ಳು) ಬತ್ತವನ್ನು ತುಂಬಿಕೊಂಡು ತಲೆಯ ಮೇಲಿನವರೆಗೆ ಎತ್ತಿ ಹಿಡಿದು ಕೊಂಡು ಮಾಡುತ್ತಾರೆ.

ಪರೆ - ಅಳತೆಯ ಸಾಧನ. 1 ಪರೆ - 10 ಸೇರು, 1 ಬಟ್ಟಿ ಬತ್ತ ಎಂದರೆ 8 ಪರೆ ಅಥವಾ 80 ಎಂಬ ಲೆಕ್ಕ. 1 ಬತ್ತ ಮಾರಾಟಕ್ಕೆ ಸಿದ್ಧ ಎಂದರೆ 80 ಸೇರಿನ 15 ಚೀಲ.

ಕೆ.ಕೆ.ಜಿ.

ಕೊಡಗಿನ ಬೀನ್ಸ್ ಕಪ್ಪು ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಗದ್ದೆಗಳಲ್ಲಿ ಬತ್ತದ ಬೆಳೆಯ ಕಟಾವಿನ ಬಳಿಕ ಬೀನ್ಸ್ ಕೃಷಿ ಮಾಡುತ್ತಾರೆ. ಇನ್ನೂ ಕೆಲವರು ಗದ್ದೆ ಬದಿಯ ಜಾಗದಲ್ಲಿ ಬೆಳೆಯುತ್ತಾರೆ. ವ್ಯಾಪಾರ ದೃಷ್ಟಿಯಿಂದ ಬೆಳೆಯುವವರು ವಿಶಾಲ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ನೆಲವನ್ನು ಉತ್ತು ಅಥವಾ ಅಗತೆ ಮಾಡಿ ಹೆಂಟೆ ಪುಡಿ ಮಾಡಿ ಹುಲ್ಲು, ಕಳೆ, ಕಲ್ಲು ತೆಗೆದು ಪಾತಿ ಮಾಡುತ್ತಾರೆ. ಈಚೆಯಿಂದ ಆಚೆಗೆ ಕೈ ಎಟುಕುವಷ್ಟು ಅಗಲದ, ಅರ್ಧ - ಒಂದು ಅಡಿ ಎತ್ತರದ ಪಾತಿ ಮಾಡಬೇಕು. ನೀರು ಹೋಗದಿದ್ದರೆ ಬಿತ್ತನೆ ಮಾಡಿದ ಕಾಳು ಕೊಳೆತು ಹೋಗುತ್ತದೆ ಅಥವಾ ಗಿಡಕ್ಕೂ ಹಾನಿಯಾಗುತ್ತದೆ. ಹಾಗಾಗಿ ನೀರು ಬಸಿದು ಹೋಗುವ ಚರಂಡಿ ಅಗತ್ಯ. ಬೀನ್ಸ್‌ಕಾಳನ್ನು ಗೇಣಿಗೆ ಒಂದರಂತೆ ಒಂದೊಂದೇ ಕಾಳನ್ನು ಒಂದು ಇಂಚಿನಷ್ಟು ಆಳದಲ್ಲಿ ಹುದುಗಬೇಕು. ಅನಂತರ ಮಣ್ಣು ಮುಚ್ಚಿ ಮೃದುವಾಗಿ ಅದುಮಬೇಕು. ಪಾತಿಯಲ್ಲಿ ನೀರಿನ ಪಸೆ ಇದ್ದರೆ ನೀರು ಚಿಮುಕಿಸುವ ಅಗತ್ಯವಿಲ್ಲ. ನೀರಿನ ಪಸೆ ಇಲ್ಲವೆಂದು ವಿಪರೀತ ನೀರುಣಿಸಬಾರದು. ಇರುವೆ ಬಾರದಂತೆ ಪಾತಿಯ ಮೇಲೆ ಬೂದಿಯನ್ನು ಎರಚಬೇಕು. ನಾಲ್ಕೈದು ದಿನಕ್ಕೆಲ್ಲಾ ಕಾಳು ಮೊಳಕೆ ಬರುತ್ತದೆ.

ಮೊಳಕೆಯೊಡೆಯುತ್ತಿದ್ದಂತೆ ಮಿಡತೆಗಳ ಹಾವಳಿ ಶುರುವಾಗುತ್ತದೆ. ಆಗ ಬೂದಿ ಎರಚಬೇಕು. ನಾಲ್ಕಾರು ಎಲೆ ಬಂತೋ

ಇಲ್ಲವೋ ಮೊಲಗಳ ಹಾವಳಿ ಶುರುವಾಗುತ್ತದೆ. ಪರಿಹಾರವಾಗಿ ಪಾತಿಯ ಪಕ್ಕದಲ್ಲಿ ಬೆದರು ಬೊಂಬೆಯನ್ನು ನಿಲ್ಲಿಸಬೇಕು. ಆ ಬೊಂಬೆ ಯಾವಾಗಲೂ ನಿಂತಲ್ಲೇ ಇದ್ದರೆ ಮೊಲಗಳು ಬೆದರುವುದಿಲ್ಲ.



ಆದುದರಿಂದ ಬೊಂಬೆಯನ್ನು ಸ್ಥಳಾಂತರಿಸುತ್ತಲೇ ಇರಬೇಕು. ಇದರಿಂದ ಪ್ರಯೋಜನವಾಗದಿದ್ದರೆ ಕಾವಲುಕಾಯಬೇಕು ಅಥವಾ ಸೀಮೆಎಣ್ಣೆ ಟಿನ್ನಿಗೆ ದೊಣ್ಣೆ ಕಟ್ಟಿ, ಕಟ್ಟಿದ ಹಗ್ಗವನ್ನು ಮನೆ ಹತ್ತಿರ ಬಿಗಿದಿರಬೇಕು. ರಾತ್ರಿ ನಡುನಡುವೆ ಹಗ್ಗವನ್ನು ಎಳೆಯಬೇಕು. ಆಗ ಟಿನ್ನಿಗೆ ಕಟ್ಟಿದ ದೊಣ್ಣೆ ದಬದಬ ಸದ್ದು ಮಾಡುತ್ತದೆ. ಮೊಲಗಳು ಹೆದರಿ ಓಡುತ್ತವೆ. ಇನ್ನೂ ಮಿಡತೆಗಳು ಎಲೆಯನ್ನು ತಿನ್ನುವುದು ಮಾತ್ರವಲ್ಲ, ಗಿಡವನ್ನೆ ಕತ್ತರಿಸುವುದುಂಟು. ಅದಕ್ಕೆ ಬೂದಿ ಎರಚುವುದೇ ಮದ್ದು.

ಗಿಡ ಕುಡಿ ಒಡೆದು ಬಳ್ಳಿಯಾಗುವ ಲಕ್ಷಣ ಕಂಡ ಕೂಡಲೆ ಅದಕ್ಕೆ ಆಧಾರ ಕಡ್ಡಿ ಕೊಡಬೇಕು. ಇದನ್ನು ಕೊಡಗಿನಲ್ಲಿ 'ಚೆರೆ' ಎನ್ನುವರು. ಬಳ್ಳಿ ಹಬ್ಬುತ್ತಿದ್ದಂತೆ ಹೂವು ಬಿಡಲಾರಂಭಿಸುತ್ತದೆ. ಈಗ ಬುಲ್‌ಬುಲ್ ಹಕ್ಕಿಗಳು ಧಾಳಿ ಇಡುತ್ತವೆ. ಕಂಬಳಿ ಹುಳು, ಮಿಡತೆಗಳು ಬೀನ್ಸನ್ನು ತಿನ್ನುತ್ತವೆ. ಹಕ್ಕಿಗಳ ಕಾಟ ತಡೆಯಲು ಕಾವಲು ಕೂರಬೇಕು. ಮಿಡತೆ ಮತ್ತು ಕಂಬಳಿ ಹುಳುಗಳಿಗೆ ಬೂದಿಯೇ ಮದ್ದು. ಮಾರಾಟಕ್ಕೆಂದು ಬೀನ್ಸ್ ಕುಯ್ಯುವಾಗ ಮಳೆ ಅಥವಾ ಮಂಜು ಹನಿ ಇರಬಾರದು.

ಬೀನ್ಸ್‌ನಲ್ಲಿ ಹಲವಾರು ಬಗೆಗಳುಂಟು. ನಾಡುಬೀನ್ಸ್, ಡಬಲ್ ಬೀನ್ಸ್ ಮತ್ತು ಗಿಡಬೀನ್ಸ್ ಮುಖ್ಯವಾದುದು. ಡಬಲ್ ಬೀನ್ಸ್‌ಅನ್ನು 'ಮಾಂಸ ಬಾಳು' ಅನ್ನುತ್ತಾರೆ. ಗಾತ್ರದಲ್ಲಿ ದೊಡ್ಡದಿದ್ದು ಬೀನ್ಸ್ ಬಲಿತರೂ ಸಾರು ಮಾಡಬಹುದು. ಗಿಡ ಬೀನ್ಸ್‌ಗೆ ಯಾವ ಆಧಾರ ಕಡ್ಡಿಯೂ ಬೇಕಿಲ್ಲ. ಆದರೆ ಬಳ್ಳಿ ಬೀನ್ಸ್‌ನಷ್ಟು ಗಿಡ ಬಿನ್ಸ್ ಫಸಲು ಕೊಡುವುದಿಲ್ಲ.

ಹೊಲದಲ್ಲಿ ಮುಸುಕಿನ ಜೋಳ ಬೆಳೆಯುವವರು ಜೋಳ ಬಿತ್ತನೆಯೊಡನೆ ಬೀನ್ಸ್ ಕಾಳನ್ನು ಬಿತ್ತುತ್ತಾರೆ. ಜೊಳದ ಗಿಡವನ್ನೇ ಆಧಾರ ಮಾಡಿಕೊಂಡು ಬೀನ್ಸ್ ಬಳ್ಳಿ ಹಬ್ಬುತ್ತದೆ. ಫಸಲು ಕೊಡುತ್ತದೆ. ಒಮ್ಮೆ ಮಾಡುವ ಕೃಷಿಯಲ್ಲಿ ಎರಡು ಬೆಳೆ ಬೆಳೆಯಬಹುದು. ಬೀನ್ಸ್ ಬೆಳೆಯ ಎರಡನೇ ಫಸಲಿನ ಕಾಳನ್ನು ಉಳಿಸಿಕೊಂಡು ಬಿತ್ತನೆಗೆ ಬಳಸುತ್ತಾರೆ.

ಜೆ.ಬಿ.ಆರ್.

ಕೊಡಗಿನಲ್ಲಿ ತರಕಾರಿ ಕೃಷಿ ಭಾರತದಲ್ಲಿ ತರಕಾರಿ ಬೆಳೆಯನ್ನು ಸುಮಾರು 7.8 ಮಿಲಿಯ ಹೆಕ್ಟೇರು ಪ್ರದೇಶದಲ್ಲಿ ಬೆಳೆಯುತ್ತಾರೆ. ವಾರ್ಷಿಕ ಉತ್ಪನ್ನ ಸುಮಾರು 125 ಮಿಲಿಯ ಟನ್ನಿಗಿಂತಲೂ ಅಧಿಕವಾಗಿದೆ. ಜಾಗತಿಕ ಮಟ್ಟದಲ್ಲಿ ಅತೀ ಹೆಚ್ಚು ತರಕಾರಿ ಬೆಳೆಯುವ ರಾಷ್ಟ್ರ ಚೀನಾ. ಭಾರತವು ಎರಡನೆಯ ಸ್ಥಾನದಲ್ಲಿದೆ. ದೇಶದ ಶೇಕಡ 4ರಷ್ಟು ಪ್ರದೇಶದಲ್ಲಿ ತರಕಾರಿ ಬೆಳೆಯಲ್ಪಡುತ್ತದೆ. ಭಾರತ ಬೆಂಡೆಕಾಯಿ ಮತ್ತು ಹೂಕೋಸನ್ನು ಪ್ರಪಂಚದಲ್ಲೇ ಅತೀ ಹೆಚ್ಚು ಬೆಳೆಯುವ ರಾಷ್ಟ್ರ. ತರಕಾರಿ ಉತ್ಪಾದನೆಯ ಬೆಳವಣಿಗೆ ಶೇಕಡ 3.5ರಷ್ಟಿದೆ. ರಫ್ತಿನ ಬೆಳವಣಿಗೆ ಶೇಕಡ 20, ವಾರ್ಷಿಕ ರಫ್ತು ಪ್ರಮಾಣ ರೂ. 2000 ಕೋಟಿಯಷ್ಟಿದೆ. ಇತ್ತೀಚೆಗೆ ತರಕಾರಿ ಬೇಸಾಯವನ್ನು ವಾಣಿಜ್ಯೀಕರಣಗೊಳಿಸಲಾಗಿದೆ. ಉತ್ಪಾದನೆ ಮತ್ತು ಉತ್ಪಾದನ ಸಾಮರ್ಥ್ಯದ ನಡುವೆ ಬಹಳಷ್ಟು ಅಂತರವಿದೆ. ಸಣ್ಣ ರೈತರು ಮತ್ತು ಭೂರಹಿತರು ತರಕಾರಿ ಬೇಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಭೂರಹಿತರು ಭೂಮಿಯನ್ನು ಗುತ್ತಿಗೆ ಪಡೆದು ಕೃಷಿಯಲ್ಲಿ ನಿರತರಾಗಿದ್ದಾರೆ. ಇಡೀ ಕುಟುಂಬದ ಜನರು ತರಕಾರಿ ಬೇಸಾಯದಲ್ಲಿ ತೊಡಗಿಕೊಂಡು ಕಡಿಮೆ ಭೂಮಿಯಿಂದ ಹೆಚ್ಚಿನ ಆದಾಯವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಇಲ್ಲಿ ಕುಟುಂಬದ ಪ್ರತಿಯೊಬ್ಬ ಸದಸ್ಯನ ಪಾತ್ರ ಬಹು ಮುಖ್ಯವಾದುದು. ತರಕಾರಿ ಬೆಳೆಯುವ ಪ್ರದೇಶ ಕಳೆದ ಕೆಲವು ದಶಕಗಳಲ್ಲಿ ಗಣನೀಯವಾಗಿ ಹೆಚ್ಚಿದೆ. 1950 ರಿಂದ 1980ರವರೆಗೆ ಬೆಳವಣಿಗೆಯ ಸ್ತರ ಕಡಿಮೆ ಮಟ್ಟದಲ್ಲಿತ್ತು. ತೋಟಗಾರಿಕೆ ವಲಯ ಕಳೆದ ಮೂರು ದಶಕಗಳಲ್ಲಿ ವೇಗವಾಗಿ ಬೆಳೆದಿದ್ದು, ಉತ್ಪಾದನ ವಲಯ, ಕೊಯ್ಲಿನ ಅನಂತರ ನಿರ್ವಹಣೆ, ಮೌಲ್ಯಾಧಾರಿತ ಬೆಲೆ ಮತ್ತು ರಫ್ತು ವಲಯದಲ್ಲಿ ಅನೇಕ ಮಾರ್ಗಗಳು ತೆರೆದುಕೊಂಡಿವೆ ಹಾಗೂ ಅನೇಕ ಉದ್ಯಮಗಳು ಈ ಕೆಲಸದಲ್ಲಿ ನಿರತವಾಗಿದೆ.

ಕೊಡಗಿನಲ್ಲಿ ಭೂ ಪ್ರದೇಶದ ವಾಯುಗುಣ ಮತ್ತು ತಾಪಮಾನಕ್ಕೆ ತಕ್ಕಂತೆ ತರಕಾರಿ ಕೃಷಿ ಮಾಡುತ್ತಾರೆ.

ಬೆಳೆಯುವ ಋತುಮಾನ ಆಧರಿಸಿದ ವರ್ಗೀಕರಣ : ಚಳಿಗಾಲ, ಬೇಸಗೆಕಾಲ ಮತ್ತು ಮಳೆಗಾಲ ಎಂಬ ಮೂರು ಮುಖ್ಯ ಋತುಮಾನಗಳಿವೆ. ಬೆಳೆಯುವ ಋತುವನ್ನು ಅವಲಂಬಿಸಿ ತರಕಾರಿ ಬೆಳೆಯನ್ನು ವರ್ಗೀಕರಿಸಲಾಗಿದೆ.

ಚಳಿಗಾಲದ/ರಾಬಿ ಋತುವಿನ ತರಕಾರಿ : ಅಕ್ಟೋಬರ್‌ನಿಂದ ಫೆಬ್ರವರಿಯವರೆಗೆ ಬೆಳೆಯುವ ಮುಖ್ಯ ತರಕಾರಿಗಳೆಂದರೆ ಎಲೆಕೋಸು, ಹೂಕೋಸು, ಸ್ಪಿನಾಚ್, ಫೆನುಗ್ರೀಕ್, ಕೊತ್ತಂಬರಿ, ಟರ್ನಿಫ್, ಬೀಟ್‌ರೂಟ್, ಈರುಳ್ಳಿ, ಬೆಳ್ಳುಳ್ಳಿ.

ಬೇಸಗೆ ಕಾಲದ ತರಕಾರಿ : ಫೆಬ್ರವರಿಯಿಂದ ಮೇವರೆಗೆ ಬೇಸಗೆಯಲ್ಲಿ ಬೆಳೆಯುವ ಪ್ರಮುಖ ತರಕಾರಿಗಳೆಂದರೆ ಕಲ್ಲಂಗಡಿ, ಕರ್ಬೂಜ, ಸೋರೆಕಾಯಿ, ಸೌತೆಕಾಯಿ, ಬೆಂಡೆಕಾಯಿ, ಕುಂಬಳಕಾಯಿ.

ಮಳೆಗಾಲದ ತರಕಾರಿ/ಖಾರಿಫ್ ತರಕಾರಿ : ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಬೆಳೆಯುವ ಮುಖ್ಯ ತರಕಾರಿಗಳು ಬೆಂಡೆಕಾಯಿ, ಕುಂಬಳ ಜಾತಿಯ ತರಕಾರಿಗಳು, ಹರಿವೆ ಸೊಪ್ಪು ಮುಂತಾದವು.

ಜೀವನ ಚಕ್ರ ಆಧಾರದ ವರ್ಗೀಕರಣ

ವಾರ್ಷಿಕ ತರಕಾರಿಗಳು : ತಮ್ಮ ಜೀವನ ಚಕ್ರವನ್ನು ಒಂದು ಋತುಮಾನದಲ್ಲಿ (ಬೀಜದಿಂದ ಬೀಜಕ್ಕೆ) ಪೂರೈಸುವ ತರಕಾರಿಗಳು. ಉದಾ : ಸೋರೆಕಾಯಿ, ಹಾಗಲಕಾಯಿ, ಕುಂಬಳಕಾಯಿ, ಬೆಂಡೆ, ಟೊಮ್ಯಾಟೊ, ಮೊದಲಾದವು.

ದ್ವೈವಾರ್ಷಿಕ ತರಕಾರಿಗಳು : ಈ ತರಕಾರಿಗಳ ಜೀವನಚಕ್ರ ಪೂರೈಸಲು ಎರಡು ಋತುಮಾನಬೇಕು. ಉದಾ : ಹೂಕೋಸು, ಎಲೆಕೋಸು, ಈರುಳ್ಳಿ ಮುಂತಾದವು.

ಬಹುವಾರ್ಷಿಕ ತರಕಾರಿಗಳು : ಈ ಜಾತಿಯ ಗಿಡಗಳು ಒಂದಕ್ಕಿಂತ ಹೆಚ್ಚು ವರ್ಷ ಬದುಕುಳಿಯುತ್ತವೆ. ಉದಾ : ನುಗ್ಗೆಕಾಯಿ, ಎಸ್ಪರಾಗಸ್ ಮೊದಲಾದವು. ಬೇಸಾಯಕ್ರಮ, ಮಣ್ಣಿನ ಆಮ್ಲೀಯ ಮತ್ತು ಕ್ಷಾರೀಯ ಗುಣ ಸಹಿಷ್ಣುತೆಯನ್ನು ಆಧರಿಸಿ ಸಹ ತರಕಾರಿಯನ್ನು ವರ್ಗೀಕರಿಸಬಹುದು.

ಬೇಸಾಯ ವಿಧಾನ : ಕುಟುಂಬದ ಉಪಯೋಗಕ್ಕೆ ಚಿಕ್ಕ ಜಾಗದಲ್ಲಿ ಕೆಲವೇ ತರಕಾರಿಗಳನ್ನು ಬೆಳೆಯುತ್ತಾರೆ. ಮಾರಾಟಕ್ಕೆ ಇತರ ಉದ್ದೇಶಗಳಿಗೆ ಹಲವು ತರಕಾರಿಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಬೇಸಾಯ ಕ್ರಮವನ್ನು ಉದ್ದೇಶದ ಆಧಾರದ ಮೇಲೆ ನಿತ್ಯ ಬಳಕೆಗೆ ತಾಜಾ ತರಕಾರಿ, ಸಂಸ್ಕರಣೆ ಮತ್ತು ಬೀಜೋತ್ಪಾದನೆಗಾಗಿ ಎಂದು ವರ್ಗೀಕರಿಸಲಾಗಿದೆ. ಇವುಗಳನ್ನು ಕೆಳಗಿನಂತೆ ವಿವರಿಸಬಹುದು.

ಕೈತೋಟ : ಕೈತೋಟದಲ್ಲಿ ಕುಟುಂಬದ ಉಪಯೋಗಕ್ಕಾಗಿಯೇ ತರಕಾರಿಗಳನ್ನು ಬೆಳೆಸಲಾಗುತ್ತದೆ. ಕೈತೋಟದಲ್ಲಿ ಬೆಳೆಯುವ ತರಕಾರಿ ಗಿಡಗಳು ಆ ಪ್ರದೇಶದಲ್ಲಿ ಹೆಚ್ಚು ಇಳುವರಿಯನ್ನು ಕೊಡುವಂತಿರಬೇಕು. ಬೀನ್ಸ್, ಎಲೆಕೋಸು, ಕ್ಯಾರೆಟ್, ಈರುಳ್ಳಿ, ಕೊತ್ತಂಬರಿ, ಬಟಾಣಿ, ಕಾಳುಮೆಣಸು, ಮೂಲಂಗಿ, ಸ್ಪಿನಾಚ್, ಟೊಮ್ಯಾಟೋ ಮುಂತಾದವು ಕೈ ತೋಟಕ್ಕೆ ಯುಕ್ತ ತರಕಾರಿ ಬೆಳೆಗಳು. ಕೈತೋಟವನ್ನು ಚಿಕ್ಕ ಚಿಕ್ಕ ಭಾಗಗಳಾಗಿ ವಿಂಗಡಿಸಿ ಹಬ್ಬುವ ತರಕಾರಿಗಳನ್ನು ಬೇಲಿಯ ಬದಿ ಬೆಳೆಯುವರು.

ಒಂದು ಬದಿಯಲ್ಲಿ ಹಣ್ಣಿನ ಗಿಡಗಳಾದ ನಿಂಬೆ, ಬಾಳೆ ಮೊದಲಾದವನ್ನು ಬೆಳೆಸುವರು. ವರ್ಷವಿಡೀ ತರಕಾರಿ ಸಿಗುವಂತೆ ಯೋಜನೆ ಸಿದ್ಧಮಾಡಬೇಕು. ಒಂದು ಸಂಸಾರಕ್ಕೆ 100 ಚದರ ಅಡಿಯ ಕೈತೋಟ ಸಾಕು. ಪ್ರದೇಶದ ಹವಾಗುಣ ಅವಲಂಬಿಸಿ ತರಕಾರಿ ಗಿಡಗಳನ್ನು ನೆಡಲು ಆರಿಸಬೇಕು.

ವಾಣಿಜ್ಯ ತರಕಾರಿ ತೋಟ : ಆಯ್ದ ತರಕಾರಿಗಳನ್ನು ಸ್ಥಳೀಯ ಮಾರುಕಟ್ಟೆಗಾಗಿ ಬೆಳೆಯಲಾಗುತ್ತದೆ. ಉತ್ತಮ ರಸ್ತೆ, ವಾಹನ ಸೌಕರ್ಯ ಮೊದಲಾದವು ಮಾರುಕಟ್ಟೆಯ ವಿಸ್ತಾರವನ್ನು ಹೆಚ್ಚಿಸಿದೆ. ಇತ್ತೀಚೆಗೆ ಬೆಳೆಗಾರ ತನ್ನ ಉತ್ಪನ್ನವನ್ನು ಸ್ಥಳೀಯ ಮಾರುಕಟ್ಟೆಗಾಗಿ ಸೀಮಿತವಾಗಿಟ್ಟಿಲ್ಲ, ಬೇಡಿಕೆಯಿರುವ ಕೆಲವೇ ತರಕಾರಿ ಬೆಳೆಯುವಲ್ಲಿ ನೈಪುಣ್ಯತೆ ಪಡೆಯುತ್ತಿದ್ದಾನೆ. 20ನೆಯ ಶತಮಾನದಲ್ಲಿ ಮಾರಾಟ ಉದ್ದೇಶದ ತರಕಾರಿ ತೋಟ ಟ್ರಕ್ ತರಕಾರಿ ತೋಟಕ್ಕೆ ಮಾರ್ಪಾಡುಗೊಂಡಿದೆ.

ಟ್ರಕ್ ತರಕಾರಿ ತೋಟ : ಕೆಲವು ನಿಶ್ಚಿತ ತರಕಾರಿಗಳನ್ನು ದೂರದ ಮಾರುಕಟ್ಟೆಗೆಂದು ವ್ಯಾಪಕವಾಗಿ ಬೆಳೆಯಲಾಗುತ್ತದೆ. ಸಾಮಾನ್ಯವಾಗಿ ಋತುಮಾನದಲ್ಲಿ ತೆರೆದ ಪರಿಸರದಲ್ಲಿ ಬೆಳೆಯುವ ತರಕಾರಿಗಳನ್ನು ಬಲವಂತವಾಗಿ ಕೃತಕ ವಾತಾವರಣದಲ್ಲಿ ಬೆಳೆಸಲಾಗುತ್ತದೆ. ಹಸುರು ಮನೆ, ತಂಪಿನ ಮನೆ ಮತ್ತು ಬೆಚ್ಚಗಿನ ಪಾತಿಗಳಿರುವ ಕಟ್ಟಡಗಳಲ್ಲಿ ಗಿಡದ ಬೆಳವಣಿಗೆಗೆ ಬೇಕಾದ ಬೆಳಕು ಮತ್ತು ತಾಪಮಾನದ ಅನುಕೂಲಕರ ವಾತಾವರಣ ನಿರ್ಮಿಸಲಾಗುತ್ತದೆ. ಮಣ್ಣನ್ನು ಉಪಯೋಗಿಸದೆ ಬೇಸಾಯ ಮಾಡುವುದನ್ನು ಹೈಡ್ರೋಪೋನಿಕ್ಸ್ ಎಂದು ಕರೆಯುತ್ತಾರೆ. ಇದರಲ್ಲಿ ಗಿಡಗಳಿಗೆ ಯಾಂತ್ರಿಕವಾಗಿ ನೀರು ಮತ್ತು ಪೋಷಕಾಂಶಗಳನ್ನು ಒದಗಿಸುತ್ತಾರೆ ಹಾಗೂ ಕಾರ್ಮಿಕರ ಬಳಕೆ ಕಡಿಮೆ. ಇತರ ಬೆಳೆಗಾರರೊಡನೆ ಸ್ಪರ್ಧಿಸಿ ಯಶಸ್ವಿಯಾಗಬೇಕಾದರೆ ಪೂರೈಕೆ ಕಡಿಮೆ ಇದ್ದಾಗ ಉತ್ಪಾದಿಸಿ, ಗುಣಮಟ್ಟ ಕಾಪಾಡಬೇಕು. ಇದರಿಂದ ಉತ್ತಮ ಬೆಲೆಯೂ ದೊರೆಯುತ್ತದೆ.

ಸಂಸ್ಕರಣೆಗಾಗಿ ಉತ್ಪಾದನೆ : ತರಕಾರಿಗಳನ್ನು ಡಬ್ಬಿಗಳಲ್ಲಿ ಘನೀಭವಿಸಿ, ಒಣಗಿಸಿ ಮತ್ತು ಉಪ್ಪಿನಕಾಯಿಯಂತೆ ಸಂಸ್ಕರಿಸಿ ಶೇಖರಿಸಿಡಬಹುದು. ಕಡಿಮೆ ಗುಣಮಟ್ಟದ ತರಕಾರಿಗಳನ್ನು ಸಂಸ್ಕರಿಸಲು ಬಳಸುವುದರಿಂದ ಉತ್ಪಾದನಾ ವೆಚ್ಚ, ಮಾರಾಟಕ್ಕಾಗಿ ಬೆಳೆದ ತರಕಾರಿಗಳ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ. ಆದ್ದರಿಂದ ಇಲ್ಲಿ ಸ್ಥಳದ ಬೆಲೆ, ಕಾರ್ಮಿಕ ಮತ್ತು ವ್ಯವಹಾರದ ವೆಚ್ಚ ಕಡಿಮೆ ಇರುತ್ತದೆ. ಸಾಧಾರಣವಾಗಿ ಎಲ್ಲಾ ತರಕಾರಿಗಳನ್ನು ಸಂಸ್ಕರಿಸಬಹುದಾದರೂ ವಿವಿಧ ತಳಿಗಳ ಸಂಸ್ಕರಣೆ ಬೇರೆ ಬೇರೆಯಾಗಿದೆ. ಚಿಕ್ಕ ಮತ್ತು ಒಂದೇ ಗಾತ್ರದ ಗುಣಮಟ್ಟದ ತರಕಾರಿಗಳನ್ನು ಸಂಸ್ಕರಣೆಗೆ ಹೆಚ್ಚಾಗಿ ಬಳಸಲಾಗುತ್ತದೆ. ವಿವಿಧ ತರಕಾರಿಗಳು ಎಲ್ಲಾ ಕಾಲದಲ್ಲಿ ದೊರೆಯುವಂತೆ ಮಾಡುವುದರಿಂದ ತರಕಾರಿ ಉದ್ಯಮ ವರ್ಷವಿಡೀ ಕೆಲಸದಲ್ಲಿ ನಿರತವಾಗಿರುತ್ತದೆ. ಸಂಸ್ಕರಿಸಿದ ತರಕಾರಿಗಳು ರುಚಿ, ಸುವಾನೆ ಜನ ಸ್ವೀಕರಿಸುವಂತಿರಬೇಕು ಮತ್ತು ಪೋಷಕಾಂಶ ಹಾಳಾಗದೆ ದೀರ್ಘಕಾಲ ಬಾಳಿಕೆ ಬರುವಂತಿರಬೇಕು.

ಬೀಜೋತ್ಪಾದನೆ : ಬೀಜೋತ್ಪಾದನೆಯಲ್ಲಿ ಜನರಿಗೆ ವಿಶೇಷ ಕೌಶಲ್ಯ ಮತ್ತು ತಾಂತ್ರಿಕತೆಯ ಅರಿವಿರಬೇಕು. ಬೆಳೆದ ತರಕಾರಿಗಳನ್ನು ಬಳಸದೆ ಅದನ್ನು ಜಮೀನಿನಲ್ಲಿ ಬಲಿಯಲು ಬಿಡಬೇಕು. ಬೀಜೋತ್ಪಾದನೆಗಾಗಿರುವ ತರಕಾರಿಯನ್ನು ಪ್ರತ್ಯೇಕ ಸ್ಥಳದಲ್ಲಿ ಬೆಳೆಸುವುದರಿಂದ ತಳಿಯ ಶುದ್ಧತೆಯನ್ನು ಕಾಪಾಡಬಹುದು. ಹೂ, ಬೀಜ ಅಭಿವೃದ್ಧಿ, ಕೊಯ್ಲಿನ ಸಮಯದಲ್ಲಿ ಮತ್ತು ಬೀಜ ಬಿಡಿಸುವಾಗ ವಿಶೇಷ ತಾಂತ್ರಿಕತೆಯನ್ನು ಅಳವಡಿಸಲಾಗುತ್ತದೆ.

ಹಸುರು ಮನೆಯಲ್ಲಿ ತರಕಾರಿ ಉತ್ಪಾದನೆ : ಒಂದು ಋತುಮಾನಕ್ಕೆ ಹೊಂದಿಕೊಂಡ ತರಕಾರಿಗಳನ್ನು ಹಸುರು ಮನೆಯಲ್ಲಿ ಎಲ್ಲಾ ಕಾಲದಲ್ಲಿ ಬೆಳೆಸುವುದನ್ನು ರಕ್ಷಿತ ಬೇಸಾಯ ಎಂದು ಕರೆಯುತ್ತಾರೆ. ಇದು ವೆಚ್ಚದಾಯಕ ಹಾಗೂ ತೀವ್ರ ನಿಗಾದ ಅಗತ್ಯವಿದೆ. ಮಹಾನಗರಗಳ ಸುತ್ತಲೂ ಇಂತಹ ಬೇಸಾಯ ಇಂದು ಜನಪ್ರಿಯವಾಗುತ್ತಿದೆ. ಬೆಲೆಬಾಳುವ ತರಕಾರಿಗಳನ್ನು ಹಸುರು ಮನೆಯಲ್ಲಿ ಬೆಳೆಯಲಾಗುತ್ತದೆ. ಮೈದಾನ ಪ್ರದೇಶಕ್ಕಿಂತ ಬೇರೆಯದಾದ ಹವಾಗುಣ ಗುಡ್ಡ ಪ್ರದೇಶದಲ್ಲಿರುವುದರಿಂದ ನಿರ್ದಿಷ್ಟ ಋತುಮಾನದ ತರಕಾರಿಗಳನ್ನು ಇತರ ಕಾಲಗಳಲ್ಲಿಯೂ ಇಲ್ಲಿ ಬೆಳೆಯುತ್ತಾರೆ.

ತೇಲಾಡುವ ತರಕಾರಿ ತೋಟ : ಕೆರೆ, ಕೊಳಗಳಲ್ಲಿ ತರಕಾರಿ ಬೆಳೆಯುವುದನ್ನು ತೇಲಾಡುವ ತರಕಾರಿ ತೋಟವೆಂದು ಕರೆಯುತ್ತಾರೆ.

ಹುಲ್ಲಿನಿಂದ ವಿಶೇಷ ರೀತಿಯ ಚಾಪೆ ತಯಾರಿಸಿ ಮಣ್ಣು ಸಾವಯವ ಗೊಬ್ಬರದ ಮಿಶ್ರಣವನ್ನು ಹರಡಲಾಗುತ್ತದೆ. ಇದನ್ನು ನೀರಿನ ಮೇಲೆ ತೇಲಿಬಿಟ್ಟು ತರಕಾರಿ ಬೆಳೆಯಲಾಗುತ್ತದೆ.

ಪ್ರದರ್ಶನಕ್ಕಾಗಿ ತರಕಾರಿ ಬೇಸಾಯ : ಸಾಧಾರಣವಾಗಿ ಈ ರೀತಿಯ ಬೇಸಾಯವನ್ನು ಪ್ರಗತಿಪರ ರೈತರು ಪ್ರದರ್ಶನಕ್ಕಾಗಿ ಮಾಡುತ್ತಾರೆ. ದೊಡ್ಡಗಾತ್ರದ, ವಿಶೇಷ ಆಕಾರದ ತರಕಾರಿ ಬೆಳೆಯಲು ಒತ್ತು ಕೊಡಲಾಗುತ್ತದೆ.

ಉತ್ಪಾದನಾ ಅಂಶ ಮತ್ತು ತಾಂತ್ರಿಕತೆ : ವಾಣಿಜ್ಯ ಉದ್ದೇಶಕ್ಕೆ ತರಕಾರಿ ಬೆಳೆಯುವಾಗ ಎಲ್ಲಾ ರೀತಿಯ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಕೀಟ ಬಾಧೆ ಮತ್ತು ಕಳೆ ನಿಯಂತ್ರಣದ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ. ಬೇಡಿಕೆಯನ್ನು ಅನುಸರಿಸಿ ವಿವಿಧ ಪ್ರಕಾರದ ತರಕಾರಿಗಳನ್ನು ಬೆಳೆಯಲಾಗುತ್ತದೆ. ತಳಿ ಗಾತ್ರ, ಸುವಾಸನೆ, ತಾಜಾತನ ಮುಂತಾದವು ಸಹ ಬೇಡಿಕೆಯಲ್ಲಿ ಪ್ರಭಾವ ಬೀರುತ್ತವೆ. ಲಭ್ಯವಿರುವ ತಾಂತ್ರಿಕತೆಯನ್ನು ಉಪಯೋಗಿಸಿ ಆಯಾ ಋತುಮಾನದಲ್ಲಿ ಬೆಳೆಯುವ ತರಕಾರಿಯನ್ನು ಬೇಡಿಕೆಗೆ ಅನುಗುಣವಾಗಿ ನಿರಂತರವಾಗಿ ಪೂರೈಸಬೇಕಾಗುತ್ತದೆ. ಹಲವು ತರಕಾರಿಗಳನ್ನು ವರ್ಷಪೂರ್ತಿ ಬೆಳೆಯಬಹುದಾದರೂ ವಿವಿಧ ಪ್ರಕಾರದ ತರಕಾರಿಯ ಎಕರೆವಾರು ಇಳುವರಿ ಋತುಮಾನಕ್ಕೆ ಮತ್ತು ಬೆಳೆಯುವ ಪ್ರದೇಶಕ್ಕೆ ಅನುಗುಣವಾಗಿರುತ್ತದೆ.

ಹವಾಗುಣ : ಒಂದು ಪ್ರದೇಶದಲ್ಲಿರುವ ಉಷ್ಣಾಂಶ, ತೇವಾಂಶ, ದಿನದಲ್ಲಿ ದೊರಕುವ ಸೂರ್ಯನ ಬೆಳಕು ಮತ್ತು ಬೀಸುವ ಗಾಳಿ ಸಸ್ಯಗಳ ಬೆಳವಣಿಗೆಯ ಎಲ್ಲಾ ಹಂತದಲ್ಲಿ ಬಲವಾದ ಪರಿಣಾಮ ಬೀರುತ್ತದೆ.

ಉಷ್ಣಾಂಶ : ಗಿಡದ ಬೆಳವಣಿಗೆಗೆ ಅಗತ್ಯವಾದ ದಿನದ ಕನಿಷ್ಟ, ಗರಿಷ್ಟ ಮತ್ತು ಅನುಕೂಲಕರ ಉಷ್ಣಾಂಶ ವಿವಿಧ ತರಕಾರಿ ಮತ್ತು ಅದರ ತಳಿಯನ್ನು ಅವಲಂಬಿಸಿದೆ. ತರಕಾರಿಯನ್ನು ಚಳಿಗಾಲದ ಮತ್ತು ಬೇಸಗೆಯ ಬೆಳೆಗಳೆಂದು ವಿಂಗಡಿಸಲಾಗಿದೆ. ಸಮಶೀತೋಷ್ಣ ವಲಯದ ತರಕಾರಿಗಳು ಉಷ್ಣಾಂಶ 21^o ಸೆ. ಗಿಂತ ಕಡಿಮೆ ಇದ್ದಾಗ ಉತ್ತಮವಾಗಿ ಬೆಳೆಯುತ್ತವೆ. ಬೀಟ್‌ರೂಟ್, ಬ್ರೊಕೋಲಿ, ಬ್ರಸೆಲ್‌ಸ್ಪ್ರೌಟ್ಸ್, ಎಲೆಕೋಸು, ಕ್ಯಾರೆಟ್, ಹೂಕೋಸು, ಸೆಲೆರಿ, ಬೆಳ್ಳುಳ್ಳಿ, ಲೀಕ್, ಲಟ್ಯೂಸ್, ಈರುಳ್ಳಿ, ಪಾರ್ಸ್ಲೆ, ಬಟಾಣಿ, ಆಲೂಗೆಡ್ಡೆ, ಮೂಲಂಗಿ, ಸ್ಪಿನಾಚ್ ಮತ್ತು ಟರ್ನಿಫ್ ಈ ಗುಂಪಿಗೆ ಸೇರಿವೆ. ಬೀನ್ಸ್, ಕುಂಬಳ, ಬದನೆ, ಬೆಂಡೆ, ಕರ್ಬೂಜ, ಕಾಳುಮೆಣಸು, ಸ್ಕ್ವಾಸ್, ಸಿಹಿ ಜೋಳ, ಸಿಹಿಗೆಣಸು, ಟೊಮ್ಯಾಟೋ, ಕಲ್ಲಂಗಡಿಗೆ 21^o ಸೆ.ಗಿಂತ ಜಾಸ್ತಿಯಿರಬೇಕು ಭಾರತ ದೇಶವು ವೈವಿಧ್ಯಮಯ ವಾಯುಗುಣ ಹೊಂದಿದೆ. ಸಮಶೀತೋಷ್ಣದ ತರಕಾರಿಗಳನ್ನು ಜಮ್ಮುಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರ ಕಾಂಡ, ಉತ್ತರ ಪೂರ್ವರಾಜ್ಯಗಳಲ್ಲಿ ಬೆಳೆಯಬಹುದು. ಉಳಿದ ರಾಜ್ಯಗಳಲ್ಲಿ ಬೆಚ್ಚನೆ ಹವಾಗುಣ ಬಯಸುವ ತರಕಾರಿಗಳನ್ನು ಬೆಳೆಯುತ್ತಾರೆ.

ತೇವಾಂಶ : ಸ್ಥಳೀಯ ಮಳೆಯ ಪ್ರಮಾಣ ಅದರ ವಾರ್ಷಿಕ ಹಂಚಿಕೆ ಕೆಲವೊಂದು ತರಕಾರಿಗಳ ಬೆಳವಣಿಗೆಯ ಸಮಯದಲ್ಲಿ ಪ್ರಭಾವ ಬೀರುತ್ತದೆ. ಮಳೆಯ ಪ್ರಮಾಣ ಕಡಿಮೆಯಾದರೆ ನೀರು ಹಾಯಿಸಬೇಕು. ಅನುಕೂಲಕರ ಬೆಳವಣಿಗೆಗೆ ಮಣ್ಣು, ನೀರು, ಪೋಷಕಾಂಶ ಮತ್ತು ಸದೃಢ ಬೇರಿನ ಅವಶ್ಯಕತೆಯಿದೆ. ಒಣ ಮಣ್ಣಿನಲ್ಲಿ ಬೇರಿನ ಬೆಳವಣಿಗೆ ಕುಂಠಿತವಾಗುತ್ತದೆ. ಹೆಚ್ಚು ತೇವಾಂಶವಿರುವ ಮಣ್ಣಿನಲ್ಲಿ ಬೇರು ಸಾಕಷ್ಟು ವಿಸ್ತಾರಗೊಳ್ಳುವುದಿಲ್ಲ ಮತ್ತು ಉಸಿರಾಟಕ್ಕೆ ತೊಂದರೆಯಾಗುತ್ತದೆ. ಸಮುದ್ರ ತೀರ ಪ್ರದೇಶದಲ್ಲಿ ಹೆಚ್ಚಿನ ಆರ್ದ್ರತೆಯಿದ್ದು ಅದಕ್ಕೆ ಹೊಂದಿಕೊಂಡ ತರಕಾರಿಗಳಾದ ಆರ್ಟಿಚೋಕು ಮತ್ತು ಲೈಮ ಬೀನ್ ಉತ್ಪಾದಿಸಲಾಗುತ್ತದೆ. ಹೆಚ್ಚಿನ ಆರ್ದ್ರತೆಯಿಂದ ಕೆಲವೊಂದು ರೋಗಗಳು ಬಾಧಿಸುವ ಸಾಧ್ಯತೆ ಇದೆ.

ಸೂರ್ಯನ ಬೆಳಕು : ಸೂರ್ಯನ ಬೆಳಕು ಗಿಡಗಳಿಗೆ ಶಕ್ತಿಯ ಮೂಲವಾಗಿದೆ. ಪ್ರಖರತೆ, ಗುಣ ಮತ್ತು ಅವಧಿಯನ್ನು ಅವಲಂಬಿಸಿ ಗಿಡಗಳು ಬೆಳಕಿಗೆ ಸ್ಪಂದಿಸುತ್ತವೆ. ಋತುವಿನಲ್ಲಾಗುವ ಬದಲಾವಣೆಯಿಂದ ಕೆಲವೊಂದು ತರಕಾರಿಗಳ ಬೆಳವಣಿಗೆ ಮತ್ತು ಹೂ ಬಿಡುವುದರ ಮೇಲೆ ಪರಿಣಾಮ ಬೀರುತ್ತದೆ. ಈರುಳ್ಳಿ ಮತ್ತು ಬೆಳ್ಳುಳ್ಳಿಗೆ ಅತ್ಯಂತ ಕಡಿಮೆ ಅವಧಿಯ ಬೆಳಕು ಸಾಕು.

ಜಮೀನು : ತರಕಾರಿ ಕೃಷಿ ಸ್ಥಳದ ಆಯ್ಕೆ ಮಣ್ಣು ಮತ್ತು ವಾಯುಗುಣವನ್ನೂ ಅವಲಂಬಿಸಿದೆ. ಹೆಚ್ಚಿನ ಕೌಶಲ್ಯ ಮತ್ತು ಯಾಂತ್ರೀಕರಣವಾಗುತ್ತಿರುವ ಕಾಲದಲ್ಲಿ ಬೇಸಾಯಕ್ಕೆ ಜಾಸ್ತಿ ಜಮೀನು ಬೇಕಾಗಿದೆ. ಸಾಕಷ್ಟು ನೀರು ಮತ್ತು ಉತ್ತಮ ಸಾಗಾಟದ ವ್ಯವಸ್ಥೆ ಸಹ ಅಗತ್ಯ. ಮಣ್ಣು ಗಿಡಗಳಿಗೆ ಖನಿಜಯುಕ್ತ ಪೋಷಕಾಂಶ ಮತ್ತು ನೀರನ್ನು ಒದಗಿಸುತ್ತದೆಯಲ್ಲದೆ, ಸ್ಥಿರವಾಗಿ ಬೇರೂರುವಂತೆ ಮಾಡುತ್ತದೆ. ಮರಳು ಮಣ್ಣು ಮತ್ತು ಮರಳು ಮಿಶ್ರಿತ ಜೇಡಿ ಮಣ್ಣನ್ನು ಸಾಮಾನ್ಯವಾಗಿ ತರಕಾರಿ ಬೇಸಾಯಕ್ಕೆ ಆಯ್ದುಕೊಳ್ಳುತ್ತಾರೆ.

ಜಮೀನು ತಯಾರಿ ಮತ್ತು ನಿರ್ವಹಣೆ : ಜಮೀನು ತಯಾರಿಗೆ ಹಲವಾರು ಮಜಲುಗಳಿವೆ. ನೀರು ಬಸಿದು ಹೋಗುವ ವ್ಯವಸ್ಥೆ ಉತ್ತಮವಾಗಿರಬೇಕು. ಮಣ್ಣಿನ ತೇವಾಂಶ ಹೆಚ್ಚಾದರೆ ಬೇರಿನ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಮಣ್ಣು ಸವಕಳಿಯಾಗದಂತೆ ತಡೆದು ಕಡಿಮೆ ಶ್ರಮದಲ್ಲಿ ಬೆಳೆ ಉತ್ಪಾದಿಸುವಂತಿರಬೇಕು. ಸಾವಯವ ವಸ್ತುಗಳ ನಿರ್ವಹಣೆ, ಬೆಳೆ ಆವರ್ತನ ಮೊದಲಾದವುಗಳತ್ತ ಗಮನಹರಿಸಬೇಕು. ಮಣ್ಣಿನಲ್ಲಿರುವ ಸಾವಯವ ವಸ್ತು ಮಣ್ಣಿನ ಗುಣವನ್ನು ನಿರ್ಧರಿಸುತ್ತದೆ ಮತ್ತು ಗಿಡಗಳಿಗೆ ಪೋಷಕಾಂಶ ಒದಗಿಸುತ್ತದೆ.

ನೀರಾವರಿ : ತರಕಾರಿ ಬೇಸಾಯಕ್ಕೆ ನೀರು ಆವಶ್ಯಕ. ನೀರಿನ ಆವಶ್ಯಕತೆ ಮಣ್ಣಿನ ರಚನೆ, ಸಾಂದ್ರತೆ, ನೀರು ಹಿಡಿದಿಡುವ ಸಾಮರ್ಥ್ಯ, ಫಲವತ್ತತೆ, ಗಾಳಿ, ನೀರು ಬಸಿದು ಹೋಗುವ ಗುಣ, ಉಷ್ಣಾಂಶ, ತರಕಾರಿಯ ಪ್ರಾಕಾರ, ಬೇರಿನ ಆಳ, ಬೆಳವಣಿಗೆಯ ಹಂತ, ಬರಸಹಿಷ್ಣುತೆ ಮೇಲೆ ನಿರ್ಧರಿತವಾಗಿದೆ.

ಗೊಬ್ಬರದ ಬಳಕೆ : ಗಿಡಗಳಿಗೆ ಪೋಷಕಾಂಶ ಒದಗಿಸುವ ಮಣ್ಣಿನ ಸಾಮರ್ಥ್ಯವನ್ನು ಮಣ್ಣಿನ ಫಲವತ್ತತೆ ಎಂದು ಕರೆಯುತ್ತಾರೆ. ಹೆಚ್ಚಿನ ಪೋಷಕಾಂಶ ಒದಗಿಸಲು ರಸಗೊಬ್ಬರವನ್ನು ಬಳಸುತ್ತಾರೆ. ಗಿಡಗಳಿಗೆ ಬೇಕಾದ ಹೆಚ್ಚಿನ ಸಾರಜನಕ, ರಂಜಕ ಮತ್ತು ಪೊಟ್ಯಾಸಿಯಂ ಪೋಷಕಾಂಶವನ್ನು ರಾಸಾಯನಿಕ ಗೊಬ್ಬರಗಳ ಮೂಲಕ ಪೂರೈಸುತ್ತಾರೆ. ಮಣ್ಣು ಮತ್ತು ಗಿಡ ಪರೀಕ್ಷಣೆಯಿಂದ ಪೋಷಕಾಂಶದ ಅವಶ್ಯಕತೆಯನ್ನು ನಿರ್ಧರಿಸಲಾಗುವುದು ಮತ್ತು ಗೊಬ್ಬರದ ಪ್ರಮಾಣ ಮಣ್ಣಿನ ಫಲವತ್ತತೆ, ಬೇಸಾಯ ಕ್ರಮ, ತರಕಾರಿಯ ವಿಧ, ನಿರೀಕ್ಷಿತ ಆದಾಯದ ಮೇಲೆ ಅವಲಂಬಿತವಾಗಿದೆ. ನಾಟಿಗಿಂತ ಮೊದಲು ಮತ್ತು ನಾಟಿ ಮಾಡುವಾಗ

ಡ್ರಿಲ್ ಮುಖಾಂತರ ಮಣ್ಣಿಗೆ ಸೇರಿಸುವುದು, ನಾಟಿಗಿಂತ ಮೊದಲು ಅಥವಾ ಅನಂತರ ಮತ್ತು ಬೆಳೆವಣಿಗೆಯ ಸಮಯದಲ್ಲಿ ಸಾಲುಗಳಲ್ಲಿ ಬಳಸುವುದು ಮುಂತಾಗಿ ಅನೇಕ ರೀತಿಯಲ್ಲಿ ಗೊಬ್ಬರವನ್ನು ಬೇಸಾಯದಲ್ಲಿ ಬಳಸುತ್ತಾರೆ.

ಕಳೆ ನಿರ್ವಹಣೆ : ಕಳೆಯಿಂದ ಇಳುವರಿ ಕಡಿಮೆಯಾಗಿ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ಬೆಳೆಹಾನಿ ಮಾಡುವ ಅನೇಕ ರೋಗ ಮತ್ತು ಕೀಟಗಳಿಗೆ ಆಶ್ರಯ ಒದಗಿಸುತ್ತದೆ. ಕಾರ್ಮಿಕರಿಂದ, ಯಂತ್ರ, ಕಳೆನಾಶಕಗಳ ಸಮಗ್ರ ಬಳಕೆಯಿಂದ ಕಳೆ ನಿರ್ಮೂಲನೆ ಮಾಡಲಾಗುತ್ತದೆ. ಕಳೆ ನಿರ್ಮೂಲನೆಗೆ ಕಳೆನಾಶಕವನ್ನು ನಾಟಿಯ ಪೂರ್ವ ಅಥವಾ ನಾಟಿ ಅನಂತರ ಜಮೀನಿನಲ್ಲಿ ಸಿಂಪಡಿಸಲಾಗುತ್ತದೆ. ಕಳೆನಾಶಕ ಬಳಸುವ ಸಮಯ ಅದರ ರಚನೆ ಮತ್ತು ತರಕಾರಿಯ ತಳಿಯನ್ನು ಅವಲಂಬಿಸಿದೆ.

ರೋಗ ಮತ್ತು ಕೀಟನಿಯಂತ್ರಣ : ಉತ್ತಮ ಇಳುವರಿ ಪಡೆಯಲು ರೋಗ ಮತ್ತು ಕೀಟ ಹತೋಟಿಗೆ ಕಠಿಣ ಕ್ರಮಗಳನ್ನು ಅನುಸರಿಸಬೇಕು. ಕೀಟ ಮತ್ತು ರೋಗಗಳಿಂದ ಇಳುವರಿ ಕಡಿಮೆಯಾಗುತ್ತದಲ್ಲದೆ, ಎಳೆಯ ಸಸಿಗಳನ್ನು ಬಾಧಿಸಿದರೆ ಸಂಪೂರ್ಣ ಬೆಳೆ ನಾಶವಾಗುತ್ತದೆ. ರೋಗ ಮತ್ತು ಕೀಟದ ಹಾನಿಯಿಂದ ತರಕಾರಿ ಗುಣಮಟ್ಟ ಸಹ ಕಡಿಮೆಯಾಗುತ್ತದೆ. ಬ್ಯಾಕ್ಟೀರಿಯಾ, ಶಿಲೀಂಧ್ರ ಮತ್ತು ವೈರಾಣುಗಳು ರೋಗವನ್ನು ಪ್ರಚೋದಿಸುತ್ತವೆ. ರೋಗ ಪ್ರತಿಬಂಧಕ ಕ್ರಮ ಮತ್ತು ರೋಗ ನಿರೋಧಕ ತಳಿಗಳ ಬಳಕೆಯಿಂದ ಅಧಿಕ ಫಸಲನ್ನು ನಿರೀಕ್ಷಿಸಬಹುದು. ಬೆಳೆಯನ್ನು ಹಾನಿಕಾರಕ ಕೀಟಗಳಿಂದ ರಕ್ಷಿಸಲು ಕೀಟನಾಶಕಗಳನ್ನು ಬಳಸಬೇಕು.

ಹಿಮಪಾತದಿಂದ ರಕ್ಷಣೆ : ಚಳಿಗಾಲದಲ್ಲಿ ಬೆಳೆಯುವ ತರಕಾರಿಗಳನ್ನು ಹಿಮದಿಂದ ರಕ್ಷಿಸಬೇಕಾಗುತ್ತದೆ. ಹಿಮ ಬೀಳುವ ಹಿಂದಿನ ದಿನ ಗಿಡಗಳಿಗೆ ನೀರು ಒದಗಿಸುವುದರಿಂದ ಹಾನಿ ಕಡಿಮೆಯಾಗುವುದು. ನಿರಂತರ ತುಂತುರು ನೀರಾವರಿ ಸಹ ಹಿಮದಿಂದಾಗುವ ಹಾನಿಯನ್ನು ತಪ್ಪಿಸುತ್ತದೆ.

ಕೊಯ್ಲು : ಹಣ್ಣು, ಕಾಯಿ ಮತ್ತು ಸೇವನೆಗೆ ಯೋಗ್ಯವಾದ ಭಾಗವನ್ನು ಕಟಾವು ಮಾಡುವುದನ್ನು ಕೊಯ್ಲು ಎಂದು ಕರೆಯುತ್ತಾರೆ. ನಾಟಿಯ ದಿನಾಂಕ, ತಳಿ ಮತ್ತು ವಾತಾವರಣದ ಪರಿಸ್ಥಿತಿ ಕಟಾವಿನ ಸಮಯವನ್ನು ನಿರ್ಧರಿಸುತ್ತದೆ. ವಿವಿಧ ತಳಿಗಳ ಕಾಯಿ ಪಕ್ವವಾಗುವ ಸಮಯ ಬೇರೆ ಬೇರೆಯಾಗಿರುತ್ತದೆ ಮತ್ತು ಬೇರೆ ಬೇರೆ ಕಾಲದಲ್ಲಿ ನಾಟಿ ಮಾಡುವುದರಿಂದ ನಿರಂತರ ಇಳುವರಿ ದೊರೆಯುತ್ತದೆ. ಹೆಚ್ಚಿನ ಬೆಳೆಗಳಲ್ಲಿ ಕೊಯ್ಲು ಕೈಯಿಂದ ಮಾಡಲಾಗುತ್ತದೆ. ಆಲೂಗೆಡ್ಡೆ ಕೀಳಲು ಸನಿಕೆಯನ್ನು ಉಪಯೋಗಿಸುತ್ತಾರೆ.

ಸಂರಕ್ಷಣೆ : ಹಸುರು ತರಕಾರಿಗಳು ಹೆಚ್ಚು ನೀರನ್ನು ಒಳಗೊಂಡಿರುತ್ತವೆ. ಹೆಚ್ಚು ಕಾಲ ಸಂಗ್ರಹಿಸಿಡಲು ಸಾಧ್ಯವಿಲ್ಲ. ನೀರಿನಂಶ ಕಡಿಮೆಯಾಗುವುದು, ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು, ಸಕ್ಕರೆಯನ್ನು ಪಿಷ್ಟವಾಗಿ ಬಣ್ಣ ಮತ್ತು ರುಚಿ ಬದಲಾವಣೆ, ಗಟ್ಟಿಯಾಗುವುದು, ವಿಟಮಿನ್ ಸೇರ್ಪಡೆ ಅಥವಾ ಕಳೆದುಕೊಳ್ಳುವುದು, ಮೊಳಕೆಯೊಡೆಯುವುದು, ಬೇರು ಮೂಡುವುದು, ಮೆತ್ತಗಾಗುವುದು ಮತ್ತು ಕೊಳೆಯುವುದು ಇವು ಶೇಖರಣೆಯಲ್ಲಿ ಕಂಡುಬರುವ ಇನ್ನಿತರ ಬದಲಾವಣೆಗಳು. ಕೆಲವೊಂದು ಸಂದರ್ಭದಲ್ಲಿ ಬೆಳೆಯನ್ನು ಹಿಡಿತದಲ್ಲಿಡಲು ತರಕಾರಿಗಳನ್ನು ಸಂಗ್ರಹಣೆ ಮಾಡಬೇಕಾಗುತ್ತದೆ. ಉಷ್ಣತೆ ಮತ್ತು ತೇವಾಂಶ ನಿಯಂತ್ರಣದಿಂದ ತರಕಾರಿಯನ್ನು ತಾಜಾತನದಲ್ಲಿಡಬಹುದು. ತರಕಾರಿಯನ್ನು ಸಾಮಾನ್ಯವಾಗಿ ಶೇಖರಣಾ ಕೋಣೆ ಮತ್ತು ಶೀತಲ ಗೃಹಗಳಲ್ಲಿ ಸಂಗ್ರಹಿಸಿ ಇಡಲಾಗುವುದು.

ಮಾರುಕಟ್ಟೆ ಮತ್ತು ಮಾರಾಟ : ಶುಚಿಗೊಳಿಸುವುದು, ಸವರುವುದು ಮತ್ತು ಪ್ಯಾಕ್ ಮಾಡುವುದು ಇವು ಮಾರುಕಟ್ಟೆ ಪೂರ್ವ ಕ್ರಮಗಳು. ಬೀಟ್‌ರೂಟ್, ಕ್ಯಾರೆಟ್, ಸೆಲೆರಿ, ಲೆಟ್ಯೂಸ್, ಮೂಲಂಗಿ, ಸ್ಪಿನಾಚ್‌ಗಳಿಗೆ ಮಣ್ಣು ಅಂಟಿಕೊಂಡಿರುತ್ತದೆ. ಇವುಗಳ ಎಲೆ ಕತ್ತರಿಸಿ ನೀರಿನಿಂದ ತೊಳೆದು ಶುಚಿಗೊಳಿಸಬೇಕು. ಬಣ್ಣಕಳೆದು ಕೊಂಡ ಎಲೆಗಳನ್ನು ಕಿತ್ತು ಹಾಕಬೇಕು. ತಂಪಾಗಿಸುವುದರಿಂದ ಹಾನಿ ಉಂಟು ಮಾಡುವ ಸೂಕ್ಷ್ಮಾಣು ಜೀವಿಗಳ ಬೆಳೆವಣಿಗೆಯ ವೇಗವನ್ನು ತಡೆಗಟ್ಟಿ ತರಕಾರಿಯನ್ನು ದೀರ್ಘಕಾಲದವರೆಗೆ ಕಾಪಾಡಬಹುದು ಮತ್ತು ನೀರಿನಂಶ ಕಡಿಮೆಯಾಗುವುದನ್ನು ತಡೆಯಬಹುದು. ಸಮಾನ ಗಾತ್ರ, ಆಕಾರ, ಬಣ್ಣ, ಮಾಗುವಿಕೆ ಮಾರಾಟಕ್ಕೆ ಅತೀ ಅಗತ್ಯವಾದ್ದರಿಂದ ವರ್ಗೀಕರಣ ಅತೀ ಅವಶ್ಯ. ಪ್ಯಾಕಿಂಗ್ ಸಹ ಉತ್ತಮ ಬೆಲೆ ಪಡೆಯುವುದರಲ್ಲಿ ಸಹಕಾರಿಯಾಗುತ್ತದೆ. ಪಾರದರ್ಶಕ ಪ್ಲಾಸ್ಟಿಕ್ ಹಾಳೆ, ಟ್ರೇ, ಬುಟ್ಟಿ, ಚೀಲಗಳಲ್ಲಿ ತರಕಾರಿಗಳನ್ನು ಪ್ಯಾಕ್ ಮಾಡಬಹುದು. ರೈತರು ಉತ್ಪನ್ನಗಳನ್ನು ಚಿಲ್ಲರೆಯಾಗಿ ಅಥವಾ ಸಗಟಾಗಿ ಮಾರಾಟ ಮಾಡುತ್ತಾರೆ. ಹೆಚ್ಚಿನ ಬೆಳೆಗಾರರು ವಿವಿಧ ಖರೀದಿದಾರರಿಗೆ ಚಿಲ್ಲರೆಯಾಗಿಯೂ ಅಥವಾ ಸಗಟಾಗಿ ವಿವಿಧ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಾರೆ. ಮಾರುಕಟ್ಟೆಯಿಂದ ದೂರದಲ್ಲಿರುವ ಬೆಳೆಗಾರರು ಉತ್ಪನ್ನವನ್ನು ಸಗಟು ವ್ಯಾಪಾರಿಗಳಿಗೆ ಮಾರಾಟಮಾಡುತ್ತಾರೆ. ಕೆಲವೊಂದು ಬೆಳೆಗಾರರು ಸಂಸ್ಕರಣೆ ಉದ್ಯಮದೊಂದಿಗೆ ಸಂಬಂಧವಿರಿಸಿಕೊಳ್ಳುತ್ತಾರೆ. ಹರಾಜಿನ ಮುಖಾಂತರ ಮತ್ತು ಸಹಕಾರ ಸಂಸ್ಥೆಗಳ ಮೂಲಕ ಸಹ ಮಾರಾಟ ಮಾಡುತ್ತಾರೆ.

ಎಸ್.ಎಚ್.

ಕೊಡಗಿನಲ್ಲಿ ಹಣ್ಣು ಕೃಷಿ ಮತ್ತು ಸಂಸ್ಕರಣೆ ಕೊಡಗಿನಲ್ಲಿ ತೋಟಗಾರಿಕೆಯು ಕೃಷಿಯ ಒಂದು ಅಂಗವಾಗಿದ್ದು ಹಣ್ಣು, ತರಕಾರಿ, ಅಣಬೆ ಹೂ, ಮರ, ಪೊದರು, ಹುಲ್ಲುಹಾಸು, ಔಷಧಿ ಸಸ್ಯ ಮುಂತಾದವುಗಳನ್ನು ಒಳಗೊಂಡಿದೆ. ಇದು ಭೂವಿನ್ಯಾಸ, ಉದ್ಯಾನ ವಿನ್ಯಾಸ, ನಿರ್ಮಾಣ, ನಿರ್ವಹಣೆ ಸಹ ಒಳಗೊಂಡಿರುತ್ತದೆ. 'ಹಾರ್ಟಿಕಲ್ಚರ್' ಎಂಬ ಪದವು ಲ್ಯಾಟಿನ್ 'ಹಾರ್ಟಸ್' ಮತ್ತು 'ಕಲ್ಚರ್' ಎಂಬ ಶಬ್ದಗಳಿಂದ ಕೂಡಿದೆ. 'ಹಾರ್ಟಸ್' ಎಂದರೆ ಉದ್ಯಾನ ಅಥವಾ ತೋಟ ಮತ್ತು 'ಕಲ್ಚರ್' ಎಂದರೆ ಕೃಷಿ. ಇತ್ತೀಚಿನ ದಿನಗಳಲ್ಲಿ ತೋಟಗಾರಿಕೆ ಬರೀ ಹಣ್ಣಿನ ತೋಟ ಮತ್ತು ಉದ್ಯಾನಕ್ಕೆ ಸೀಮಿತವಾಗಿರದೆ ಅನೇಕ ಆಯಾಮಗಳನ್ನು ಒಳಗೊಂಡಿದೆ.

ಬೇಸಾಯ : ಕೊಡಗಿನಲ್ಲಿ ಹಣ್ಣಿನ ಬೇಸಾಯವು ಹಣ್ಣಿನ ಅಭಿವೃದ್ಧಿ, ಬೇಸಾಯ, ಬೆಳೆವಣಿಗೆಯ ಅಧ್ಯಯನಕ್ಕೆ ಹೆಚ್ಚಿನ ಗಮನ ಕೊಟ್ಟಿದೆ. ಹಣ್ಣಿನ ಮರಗಳ ಸುಧಾರಣೆಯ ಮುಖ್ಯ ಗುರಿ ಎಂದರೆ ಗುಣಮಟ್ಟವನ್ನು ಹೆಚ್ಚಿಸುವುದು, ಉತ್ಪಾದನೆಯ ಅವಧಿಯನ್ನು ನಿಯಂತ್ರಿಸುವುದು ಮತ್ತು ಉತ್ಪಾದನೆಯ ಖರ್ಚನ್ನು ಕಡಿಮೆ ಮಾಡುವುದು.

ಹಣ್ಣಿನ ಉತ್ಪಾದನೆಯಲ್ಲಿ ಪ್ರಭಾವ ಬೀರುವ ಅಂಶಗಳು : ಕೊಡಗಿನಲ್ಲಿ ಹವಾಗುಣ, ಮಣ್ಣು, ಉಷ್ಣತೆ, ಮಳೆಯ ಪ್ರಮಾಣ

ಮತ್ತಿತರ ಅಂಶಗಳು ಹಣ್ಣಿನ ಕೃಷಿಯಲ್ಲಿ ಪ್ರಭಾವ ಬೀರುತ್ತವೆ. ಇವು ಒಂದು ಪ್ರದೇಶದಲ್ಲಿ ಬೆಳೆಯುವ ಹಣ್ಣಿನ ಉತ್ಪಾದನೆ ಮತ್ತು ವಲಯಕೊಪ್ಪುವ ತಳಿಯನ್ನು ನಿರ್ಧರಿಸುತ್ತವೆ. ಹೀಗಾಗಿ ವಿವಿಧ ಹವಾಗುಣದಲ್ಲಿ ಬೆಳೆಯುವ ಗಿಡದ ಬೆಳವಣಿಗೆ, ಉತ್ಪಾದನೆ, ಗುಣಮಟ್ಟ ಮತ್ತು ಉತ್ಪತ್ತಿಯಲ್ಲಿ ವ್ಯತ್ಯಾಸ ಹೊಂದಿರುತ್ತದೆ. ಹಣ್ಣಿನ ಬೇಸಾಯದ ಯಶಸ್ಸು ಹವಾಗುಣಕ್ಕೊಪ್ಪುವ ತಳಿಗಳನ್ನು ಬೆಳೆಸುವುದರಲ್ಲಡಗಿದೆ. ಹವಾಗುಣದ ಅಗತ್ಯತೆಗೆ ಅನುಗುಣವಾಗಿ ಹಣ್ಣಿನ ಬೆಳೆಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

1. ಉಷ್ಣವಲಯದ ಹಣ್ಣುಗಳು : ಈ ಹಣ್ಣುಗಳು ಬೇಸಿಗೆ ಮತ್ತು ಚಳಿಗಾಲದಲ್ಲಿ ಉಷ್ಣತೆ ಮತ್ತು ಆರ್ದ್ರತೆಯನ್ನು ಬಯಸುತ್ತದೆ. ಚಳಿಯನ್ನು ಸಹಿಸುವುದಿಲ್ಲ. ಮಾವು, ಬಾಳೆ, ಗೇರು, ಸಪೋಟ, ಪಪ್ಪಾಯ, ಹಲಸು, ಅನಾನಸ್ ಉಷ್ಣವಲಯಕ್ಕೆ ಸೇರಿದ ಹಣ್ಣುಗಳು.

2. ಅರೆ ಉಷ್ಣವಲಯದ ಹಣ್ಣುಗಳು : ಅರೆ ಉಷ್ಣವಲಯದ ಹಣ್ಣುಗಳು ಒಣ ಮತ್ತು ಉಷ್ಣತೆಯ ಹವಾಗುಣವನ್ನು ಬೇಸಗೆಯಲ್ಲಿ ಬಯಸುತ್ತವೆ ಮತ್ತು ಚಳಿಗಾಲದಲ್ಲಿ ಸೌಮ್ಯ ಹವಾಗುಣ ಅಗತ್ಯವಾಗಿದೆ. ಈ ವಲಯದ ಕೆಲವೊಂದು ಹಣ್ಣುಗಳೆಂದರೆ ಗ್ರೇಪ್ ಫ್ರೂಟ್, ಕಿತ್ತಳೆ, ಲಿಚ್ಚಿ, ದ್ರಾಕ್ಷಿ, ದಾಳಿಂಬೆ, ಅಂಜೂರ ಮೊದಲಾದವು. ಅರೆ ಉಷ್ಣವಲಯದ ಹಣ್ಣುಗಳನ್ನು ಉಷ್ಣವಲಯದಲ್ಲೂ ಬೆಳೆಯಬಹುದು.

3. ಸಮಶೀತೋಷ್ಣವಲಯದ ಹಣ್ಣುಗಳು : ಬೇಸಗೆಯಲ್ಲಿ ಈ ವಲಯದ ಹವಾಗುಣ ಆಹ್ಲಾದಕರವಾಗಿದ್ದು ಚಳಿ ಅತೀ ಹೆಚ್ಚಿರುತ್ತದೆ. ಮುಖ್ಯ ಬೆಳೆಗಳೆಂದರೆ ಸೇಬು, ಪ್ಲಮ್, ಮರಸೇಬು, ಎಪ್ರಿಕಾಟ್, ವಾಲ್‌ನಟ್ ಮುಂತಾದವು.

ಉಷ್ಣತೆ : ಕೊಡಗಿನಲ್ಲಿ ಹಣ್ಣುಕೃಷಿ ಉಷ್ಣತೆಗೆ ಅನುಗುಣವಾಗಿರುತ್ತದೆ. ಉಷ್ಣತೆಯಲ್ಲಿ ವ್ಯತ್ಯಾಸವಾದರೆ ಬೆಳವಣಿಗೆ ಮತ್ತು ಇಳುವರಿ ಮೇಲೆ ಪರಿಣಾಮ ಬೀರುತ್ತದೆ. ಮಾವನ್ನು ಚಳಿ ಪ್ರದೇಶದಲ್ಲಿ ಬೆಳೆಸಿದರೆ ಕಡಿಮೆ ತಾಪಮಾನ ಮತ್ತು ಹಿಮದಿಂದ ಗಿಡ ಸತ್ತು ಹೋಗುತ್ತದೆ. ಹಾಗೆಯೇ ಚಳಿ ಪ್ರದೇಶದ ಹಣ್ಣಿನ ಗಿಡಗಳನ್ನು ಉಷ್ಣವಲಯುದಲ್ಲಿ ಬೆಳೆದರೆ ಅವುಗಳಿಗೆ ಸಾಕಷ್ಟು ಚಳಿ ದೊರೆಯುವುದಿಲ್ಲ ಮತ್ತು ಹಣ್ಣುಗಳನ್ನು ಉತ್ಪಾದಿಸಲಾರವು. ತಾಪಮಾನದ ವ್ಯತ್ಯಾಸದಿಂದ ಹಣ್ಣಿನ ಗುಣಮಟ್ಟದಲ್ಲಿ ಗಾತ್ರದಲ್ಲಿ ವ್ಯತ್ಯಾಸವಾಗುತ್ತದೆ, ರೋಗ ಹಾಗೂ ಕೀಟಗಳು ಬಾಧಿಸುತ್ತವೆ.

ಮಳೆ : ಒಂದು ಪ್ರದೇಶದಲ್ಲಿ ಬೀಳುವ ಮಳೆ ಮತ್ತು ಮಳೆಯ ಪ್ರಮಾಣ ಸಹ ಹಣ್ಣಿನ ಬೆಳೆಯನ್ನು ನಿರ್ಧರಿಸುತ್ತದೆ. ಹೂ ಬಿಡುವ ಸಮಯದಲ್ಲಿ ಹೆಚ್ಚು ಮಳೆಯಾದರೆ ಮಿಡಿ ಕಚ್ಚುವುದು ಮತ್ತು ಇಳುವರಿಯ ಮೇಲೆ ಪರಿಣಾಮ ಬೀರುತ್ತದೆ. ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಗಿಡದ ಬುಡದಲ್ಲಿ ನೀರು ನಿಂತು ಬೇರು ಕೊಳೆರೋಗ ಉಂಟಾಗುತ್ತದೆ. ಅದೇ ರೀತಿ ಒಣ ಪ್ರದೇಶದಲ್ಲಿ ನೀರಾವರಿಯ ಅಗತ್ಯತೆ ಇದೆ. ವರ್ಷವಿಡೀ ಹಂಚಿಕೆಯಾದ 100 ಸೆ.ಮೀ. ಮಳೆ ಹಣ್ಣಿನ ಬೇಸಾಯಕ್ಕೆ ಅತ್ಯಂತ ಅನುಕೂಲಕರ.

ತೇವಾಂಶ : ವಾತಾವರಣದ ತೇವಾಂಶ ಸಹ ಹಣ್ಣಿನ ಗಿಡಗಳ ಬೆಳವಣಿಗೆ ಮತ್ತು ಇಳುವರಿಯ ಮೇಲೆ ಪ್ರಭಾವ ಬೀರುತ್ತದೆ. ಬಿಸಿ ಮತ್ತು ಒಣ ವಾತಾವರಣದಲ್ಲಿ ಬಾಷ್ಪೀಕರಣದಲ್ಲಿ ವ್ಯತ್ಯಾಸವಾಗುತ್ತದೆ. ಮಾವು, ಬಸಳೆ ಮತ್ತು ಅನಾನಸ್ ಬೆಳೆಗೆ ಉಷ್ಣತೆಯಿಂದ ಕೂಡಿದ ತೇವಾಂಶ ಉತ್ತಮ. ಅತಿಯಾದ ತೇವಾಂಶದಿಂದ ಹಣ್ಣಿನ ಗುಣಮಟ್ಟ ಕಡಿಮೆಯಾಗುತ್ತದೆ. ಕೀಟ ಹಾಗೂ ರೋಗ ಬಾಧೆ ಜಾಸ್ತಿಯಿರುತ್ತದೆ.

ಗಾಳಿ : ಅತೀ ವೇಗವಾಗಿ ಬೀಸುವ ಗಾಳಿಯಿರುವ ಪ್ರದೇಶ ಹಣ್ಣಿನ ಬೇಸಾಯಕ್ಕೆ ಯೋಗ್ಯವಲ್ಲ. ಹಣ್ಣು ಮತ್ತು ಹೂ ಗಾಳಿಯ ಹೊಡೆತದಿಂದ ಕಳಚಿ ಬೀಳುತ್ತದೆ. ಮರ ಮತ್ತು ಕೊಂಬೆಗಳಿಗೆ ಆಗಾಗ್ಗೆ ಹಾನಿಯುಂಟಾಗುತ್ತದೆ.

ಬೆಳಕು : ಬೆಳವಣಿಗೆ ಮತ್ತು ಹಣ್ಣಿನ ಆಕರ್ಷಕ ಬಣ್ಣಕ್ಕೆ ಬೆಳಕು ಅತ್ಯವಶ್ಯ. ಮೋಡ ಕವಿದ ಮತ್ತು ಮಂಜಿನ ವಾತಾವರಣದಿಂದ ಹಣ್ಣು ಆಕರ್ಷಕ ಬಣ್ಣ ಪಡೆಯಲಾರದು ಮತ್ತು ಕೆಲವೊಮ್ಮೆ ಕಪ್ಪು ಚುಕ್ಕೆ ಆವರಿಸುವುದರಿಂದ ಮಾರುಕಟ್ಟೆಯಲ್ಲಿ ಹಣ್ಣಿಗೆ ಉತ್ತಮ ಬೆಲೆ ದೊರೆಯುವುದಿಲ್ಲ.

ಹಿಮ ಮತ್ತು ಆಲಿಕಲ್ಲು : ಹಿಮ, ಆಲಿಕಲ್ಲು ಮತ್ತು ಬಿರುಗಾಳಿಯಿಂದ ಮರ ಮತ್ತು ಹಣ್ಣುಗಳು ಕೆಳಗೆ ಬಿದ್ದು ನಷ್ಟವಾಗುತ್ತವೆ. ಚಿಕ್ಕ ಸಸಿಗಳು ಸತ್ತು ಹೋಗುತ್ತವೆ. ಉಷ್ಣವಲಯದ ಸಸ್ಯಗಳು ಹೆಚ್ಚಾಗಿ ಹಿಮಾಪತಕ್ಕೆ ತುತ್ತಾಗುತ್ತವೆ. ಆಲಿಕಲ್ಲಿನಿಂದ ಕೂಡಿದ ಬಿರುಗಾಳಿಯಿಂದ ಹಣ್ಣು ಮತ್ತು ಎಲೆಗಳಿಗೆ ಹಾನಿಯಾಗಿ ಇಡೀ ತೋಟವೇ ಹಾಳಾಗಬಹುದು.

ಅನಾವೃಷ್ಟಿ ಮತ್ತು ನೆರೆಹಾವಳಿ : ಬರ ಮತ್ತು ನೆರೆ ಕಡಿಮೆ ಅವಧಿಯದ್ದಾದರೆ ಹಣ್ಣಿನ ಮರಗಳಿಗೆ ಅಷ್ಟೇನು ನಷ್ಟ ಉಂಟು ಮಾಡುವುದಿಲ್ಲ. ಆದರೆ ಎಳೆಯ ಸಸಿಗಳಿಗೆ ಹಾನಿಯಾಗುತ್ತದೆ ಅಥವಾ ನಾಶವಾಗುತ್ತದೆ. ಹೂ ಮೂಡುವುದು ಮತ್ತು ಮಿಡಿ ಕಚ್ಚುವುದರ ಮೇಲೆ ಪರಿಣಾಮ ಬೀರುತ್ತದೆ. ನೆರೆಯಿಂದ ಬೇರು ಹಾಳಾಗಿ ಬೆಳವಣಿಗೆ ಕುಂಠಿತವಾಗುತ್ತದೆ.

ಹಣ್ಣಿನ ಮರಗಳ ಸಂರಕ್ಷಣೆ :

1. ಕೊಡಗಿನಲ್ಲಿ ಹಣ್ಣಿನ ತೋಟದ ಸಂರಕ್ಷಣೆಮಾಡುವಾಗ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಗಾಳಿ ತಡೆ ಮರಗಳನ್ನು ನೆಡುವರು. ಇವು ಬಿಸಿ ಮತ್ತು ತಣ್ಣನೆ ಗಾಳಿಯಿಂದ ರಕ್ಷಿಸುತ್ತದೆ. ಸಿಲ್ವರ್, ನೀಲಗಿರಿ, ಮಹ್ವ, ಬೀಜದಿಂದ ಬೆಳೆಸಿದ ಮಾವಿನ ಗಿಡಗಳನ್ನು ಗಾಳಿ ತಡೆಯಾಗಿ ಬೆಳೆಸಬಹುದು.
2. ರೋಗ ನಿರೋಧಕ ಸಸಿಗಳನ್ನು ರೋಗ ಬಾಧೆಯಿರುವ ಪ್ರದೇಶದಲ್ಲಿ ನಾಟಿ ಮಾಡಬೇಕು.
3. ನೀರಾವರಿಯಿಂದ ಗಿಡಗಳನ್ನು ಹಿಮ ಮತ್ತು ಚಳಿಯಿಂದ ರಕ್ಷಿಸಬಹುದು.
4. ಹೊಗೆಯಾಡುವುದರಿಂದ ಸಹ ಹಿಮದಿಂದ ರಕ್ಷಣೆ ದೊರೆಯುವುದು.
5. ಆಸರೆಯೊದಗಿಸುವುದರ ಮೂಲಕ ಚಳಿಗಾಲದಲ್ಲಿ ಗಿಡಗಳಿಗೆ ರಕ್ಷಣೆಯೊದಗಿಸಬಹುದು.

ಹಣ್ಣು ತೋಟದ ಸ್ಥಾಪನೆ : ಪ್ರಾರಂಭದ ಹಂತದಲ್ಲಿ ಗಿಡಗಳನ್ನು ನೆಲೆಗೊಳಿಸಿದ ಆಧಾರದ ಮೇಲೆ ಹಣ್ಣಿನ ತೋಟದ ಯಶಸ್ಸು

ಅವಲಂಬಿತವಾಗಿದೆ. ಚೆನ್ನಾಗಿ ಸ್ಥಾಪಿತಗೊಂಡ ತೋಟಗಳಲ್ಲಿ ಬೆಳೆವಣಿಗೆ ಮತ್ತು ಕ್ಷಮತೆಯ ತೊಂದರೆಗಳು ಕಡಿಮೆ ಇರುತ್ತವೆ. ಉತ್ತಮ ನಿರ್ವಹಣೆಯಿಂದ ತೋಟ ಅಪಾಯಕ್ಕೆ ಗುರಿಯಾಗುವುದನ್ನು ತಡೆಗಟ್ಟಬಹುದು.

ಜಮೀನು ಆಯ್ಕೆ ಮತ್ತು ತಯಾರಿ : ಮೇಲೆ ತಿಳಿಸಿದ ವಿಷಯಗಳ ಆಧಾರದ ಮೇಲೆ ಜಮೀನನ್ನು ಆಯ್ಕೆ ಮಾಡಬೇಕು. ಪ್ರವಾಹ, ಆಲಿಕಲ್ಲು, ಭೂಕುಸಿತದಂತಹ ಯಾವುದೇ ಸಮಸ್ಯೆಗಳಿಗೆ ತುತ್ತಾಗಿದ್ದಿರಬಾರದು. ಮತ್ತು ಯಾವುದೇ ಅಡೆತಡೆಯಿಲ್ಲದೆ ಜಮೀನು ಪ್ರವೇಶಿಸುವಂತಿರಬೇಕು. ಆಳದ ಉಳುಮೆಯ ಮೂಲಕ ಬಹುವಾರ್ಷಿಕ ಕಳೆ, ಕಳೆಯ ಬೇರು ತೆಗೆದು ಮಣ್ಣಿನ ಹೆಂಟೆಗಳನ್ನು ಪುಡಿ ಮಾಡಬೇಕು. ಕಾಡು ಬೆಳೆದಿದ್ದರೆ ಅವನ್ನೆಲ್ಲಾ ಕಡಿದು ತೆಗೆದು ಉಳುಮೆ ಮಾಡಬೇಕು. ಜಮೀನು ಇಳಿಜಾರಾಗಿದ್ದರೆ ಉಳುಮೆ ಮಾಡಬಾರದು. ಅಲ್ಲಿ ತಡೆ ಬದುಗಳನ್ನು ನಿರ್ಮಿಸಬೇಕು. ಜಮೀನು ಹದಗೊಳಿಸಿ ಸಮತಟ್ಟಾಗಿಸಿದ ಅನಂತರ ಒಂದು ದಿಕ್ಕಿಗೆ ಸ್ವಲ್ಪವೇ ಇಳಿಜಾರು ಬರುವಂತೆ ನೋಡಿಕೊಳ್ಳಬೇಕು. ಇದರಿಂದ ನೀರಾವರಿಗೆ ಅನುಕೂಲ ಮತ್ತು ಮಳೆಗಾಲದಲ್ಲಿ ಹೆಚ್ಚಿನ ನೀರು ಬಸಿದು ಹೋಗುತ್ತದೆ. ಒಣ ಹವೆಯದಲ್ಲಿ ಮತ್ತು ಹಿಂದಿನ ಬೇಸಾಯದಿಂದ ನೆಲಗಟ್ಟಿಯಾಗಿದ್ದಲ್ಲಿ ಆಳದ ಉಳುಮೆಯಿಂದ ಗಿಡಗಳು ಸಮಾನವಾಗಿ ಬೆಳೆಯುತ್ತವೆ. ಹೆಚ್ಚಿನ ಬೆಳೆಗಳು ಸಮರ್ಥವಾಗಿ ಬೆಳೆವಣಿಗೆ ಮತ್ತು ಅಭಿವೃದ್ಧಿ ಹೊಂದಲು ಮಣ್ಣಿನ ರಸಸಾರ ತಟಸ್ಥವಾಗಿರಬೇಕು. ರಸಸಾರ ಕಡಿಮೆ ಇದ್ದರೆ ಜಮೀನಿನಲ್ಲಿ ಸುಣ್ಣವನ್ನು ಹರಡಬೇಕು. ಮೆಗ್ನೇಷಿಯಂ ಕೊರತೆಯಿದ್ದರೆ ಡೋಲಾಮೈಟ್ ಉಪಯೋಗಿಸಬೇಕು ಮತ್ತು ಕ್ಷಾರಯುಕ್ತ ಮಣ್ಣಿಗೆ ಜಿಪ್ಸಂ ಬಳಸಬೇಕು.

ವಿನ್ಯಾಸ : ಸರಿಯಾದ ವಿನ್ಯಾಸ ಹಣ್ಣಿನ ತೋಟಕ್ಕೆ ಅವಶ್ಯ. ವಿನ್ಯಾಸ ಮತ್ತು ಸಸಿಗಳ ಅಂತರ ಬೆಳೆಯ ಆವಶ್ಯಕತೆಗೆ ಅನುಗುಣವಾಗಿ ನಿರ್ಧರಿಸಬೇಕು. ಸಮತಟ್ಟಿನ ಜಮೀನಿನಲ್ಲಿ ವಿನ್ಯಾಸ ಸುಲಭ. ಮೊದಲು ರಸ್ತೆ ಅಥವಾ ಬೇಲಿಗೆ ಹೊಂದಿಕೊಂಡು ನೇರವಾದ ಆಧಾರ ರೇಖೆಯನ್ನೆಳೆಯಬೇಕು. ಆಧಾರ ರೇಖೆಗೆ ಅನುಗುಣವಾಗಿ ಸಮಕೋನದಲ್ಲಿ 2-3 ಗಿಡಗಳನ್ನು ಜಮೀನಿನ ಎರಡು ಬದಿಗಳಲ್ಲಿ ಗುರುತಿಸಬೇಕು. ಜಮೀನನ್ನು ಆಯತಾಕಾರ ಅಥವಾ ಚೌಕಾಕಾರವಾಗಿ ವಿಂಗಡಿಸಿ ಗಿಡಗಳನ್ನು ಸಮಾನ ಅಂತರದಲ್ಲಿ ನಾಟಿ ಮಾಡಬಹುದು. ಇಳಿಜಾರಿನಲ್ಲಿ ವಿನ್ಯಾಸಕ್ಕೆ ಮೋಜಣಿದಾರನ ಉಪಕರಣದ ಆವಶ್ಯಕತೆ ಇದೆ. ಪ್ರಥಮ ಸಾಲು ಜಮೀನಿನ ಮೇಲ್ಮಟ್ಟದಲ್ಲಿ ಸಮಾನಾಂತರವಾಗಿರುತ್ತದೆ. ಆಳವಾದ ಇಳಿಜಾರಿನ ಉದ್ದಕ್ಕೂ ಗಿಡಕ್ಕೆ ಕೊಡಬೇಕಾದ ಅಂತರವನ್ನು ಗುರುತಿಸಬೇಕು. ಇದಕ್ಕೆ ಸಮಾನವಾಗಿ ಎರಡನೇ ಸಾಲನ್ನು ಗುರುತಿಸಬೇಕು. ಹಾಗೆಯೇ ಮುಂದಿನ ಎಲ್ಲಾ ಸಾಲುಗಳನ್ನು ಗುರುತಿಸುತ್ತಾ ಹೋಗಬೇಕು. ಕಡಿಮೆ ಇಳಿಜಾರಿಗೆ ಹೋದಂತೆ ಸಾಲಿನ ಅಂತರ ಹೆಚ್ಚಾಗುತ್ತಾ ಹೋಗುತ್ತದೆ. ಎರಡು ಸಾಲುಗಳಷ್ಟು ಅಂತರ ಬಂದಾಗ ಬದುಗಳನ್ನು ನಿರ್ಮಿಸಬೇಕು.

ಸಾಮಾನ್ಯವಾಗಿ ಆಯತಾಕಾರ, ಚೌಕಾಕಾರ, ಪಂಚಾಕಾರ ಮತ್ತು ಷಟ್ಬುಜಾಕೃತಿಯ ವಿನ್ಯಾಸ ಪ್ರಚಲಿತದಲ್ಲಿದೆ. ಹೆಚ್ಚಿನ ಗಿಡಗಳ ಸಾಂಧ್ರತೆಗಾಗಿ ಏಕಸಾಲಿನ ವ್ಯವಸ್ಥೆ ಅಥವಾ ಎರಡು ಸಾಲಿನ ವ್ಯವಸ್ಥೆಯ (ಆಯಾತಾಕಾರ) ವಿನ್ಯಾಸವನ್ನು ಅಳವಡಿಸಬೇಕು.

ಗಿಡಗಳ ಅಂತರ : ಜಮೀನನ್ನು ಸಮರ್ಥ ಮತ್ತು ಲಾಭದಾಯಕವಾಗಿ ಬಳಸಲು ಅನುಕೂಲಕರ ಅಂತರದಲ್ಲಿ ಗಿಡಗಳನ್ನು ನೆಡಬೇಕು. ಗಿಡಗಳಿಗೆ ಬೆಳಕು, ನೀರು ಮತ್ತು ಪೋಷಕಾಂಶಗಳು ಸಮೃದ್ಧವಾಗಿ ದೊರಕುವಂತೆ ಮಾಡಿ ಕಡಿಮೆ ಪ್ರದೇಶದಲ್ಲಿ ಹೆಚ್ಚು ಆದಾಯ ಪಡೆಯುವಂತಿರಬೇಕು. ಮಣ್ಣಿನ ಫಲವತ್ತತೆ, ತಳಿಯ ಬೆಳೆವಣಿಗೆ, ಬೆಳೆವಣಿಗೆಯ ಗತಿ ಮತ್ತು ತೋಟದ ಉದ್ದೇಶವನ್ನು ಅನುಸರಿಸಿ ಗಿಡಗಳಿಗೆ ಕೊಡಬೇಕಾದ ಅಂತರವನ್ನು ನಿರ್ಧರಿಸಲಾಗುತ್ತದೆ. ಕಡಿಮೆ ಗುಣಮಟ್ಟದ ಮಣ್ಣಿನಲ್ಲಿ ಗಿಡಗಳ ಬೆಳೆವಣಿಗೆ ನಿಧಾನವಾಗಿರುವುದರಿಂದ ಕಡಿಮೆ ಅಂತರವಿಡಬೇಕು. ಫಲವತ್ತತೆ ಜಾಸ್ತಿ ಇರುವಲ್ಲಿ ಗಿಡಗಳು ಹುಲುಸಾಗಿ ಬೆಳೆಯುವುದರಿಂದ ಹೆಚ್ಚು ಅಂತರ ಇಡಬೇಕು.

ಸಸಿ ನೆಡುವುದು : ಯಾವುದೇ ಸನ್ನಿವೇಶದಲ್ಲೂ ಸಸಿಯ ಕಾಂಡ ಹಿಡಿದು ಸಾಗಾಟ ಮಾಡಬಾರದು. ಮೊದಲೇ ಗುರುತಿಸಿದ ಗುಂಡಿಯ ಮಧ್ಯದಲ್ಲಿ ಗಿಡದ ಮಣ್ಣಿನ ಮುದ್ದೆ ಸರಾಗವಾಗಿ ಕುಳಿತುಕೊಳ್ಳುವಂತೆ ಮಾಡಬೇಕು. ಪ್ಲಾಸ್ಟಿಕ್ ಕೊಟ್ಟೆಯನ್ನು ಬಿಚ್ಚುವ ಮೊದಲು ಚೆನ್ನಾಗಿ ನೀರು ಹಾಕಿರಬೇಕು. ತಳಭಾಗದಲ್ಲಿ ಮತ್ತು ಬದಿಯಲ್ಲಿ ಪ್ಲಾಸ್ಟಿಕ್ ಕೊಟ್ಟೆಯನ್ನು ಕೊಯ್ದು ತೆಗೆದು ಹಾಕಬೇಕು. ಗಿಡವನ್ನು ಗುಂಡಿಯಲ್ಲಿ ಇಟ್ಟ ಮೇಲೆ ಮಣ್ಣು ಹಾಕಿ ಮೆದುವಾಗಿ ಒತ್ತಬೇಕು. ಇದರಿಂದ ಗಿಡ ಮಣ್ಣಿನಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳುತ್ತದೆ.

ನೆಡುವಾಗ ಮಣ್ಣಿನ ಮುದ್ದೆ ಒಡೆದು ಹೋಗದಂತೆ ಎಚ್ಚರವಹಿಸಬೇಕು. ಸಸಿಯ ಸುತ್ತಲೂ ನೀರು ನಿಲ್ಲಲು ವ್ಯವಸ್ಥೆ ಮಾಡಬೇಕು. ಪ್ರಥಮ ತಿಂಗಳಿನಲ್ಲಿ ಗಿಡದ ನೀರಿನ ಆವಶ್ಯಕತೆ ವಾಯುಗುಣವನ್ನು ಅವಲಂಬಿಸಿದೆ. ಗಿಡ ಹೆಚ್ಚು ಆಳದಲ್ಲಿ ಅಥವಾ ಮೇಲ್ಭಾಗದಲ್ಲಿ ಬೇರು ಕಾಣುವಂತೆ ನೆಡಬಾರದು. ಕೋಲಿನ ಆಧಾರದಿಂದ ನೇರವಾಗಿ ಬೆಳೆಯುವಂತೆ ಮಾಡಬೇಕು. ನೀರಾವರಿ, ಬಸಿಕಾಲುವೆ ಮತ್ತು ಮುಚ್ಚಳಿಕೆ, ಬೇಲಿ, ಗಾಳಿ ತಡೆ, ಮರು ನಾಟಿಯ ಕುರಿತಾಗಿಯೂ ದೇಸಿ ಕ್ರಮವನ್ನು ಉಳಿಸಿಕೊಂಡಿದ್ದಾರೆ.

ಹಣ್ಣಿನ ತೋಟ ನಿರ್ವಹಣೆ : ಕೊಡಗಿನಲ್ಲಿ ಹಣ್ಣಿನ ತೋಟದ ನಿರ್ವಾಣಕ್ಕೆ ದೇಸಿ ಕ್ರಮವನ್ನು ಅಳವಡಿಸಿಕೊಂಡು ಅತ್ಯಂತ ಎಚ್ಚರಿಕೆಯಿಂದ ಮಣ್ಣಿನ ಆರೋಗ್ಯ ಕಾಪಾಡಿ, ಅತೀ ಕಡಿಮೆ ಖರ್ಚಿನಲ್ಲಿ ಗಿಡಗಳ ಅಗತ್ಯತೆಯನ್ನು ಪೂರೈಸುವುದನ್ನು ಮಾಡುತ್ತಾರೆ. ಮಣ್ಣನ್ನು ಸುಸ್ಥಿತಿಯಲ್ಲಿ ಇಟ್ಟು, ಅದರಲ್ಲಿರುವ ತೇವಾಂಶ ಮತ್ತು ಪೋಷಕಾಂಶಗಳನ್ನು ಹಾಳು ಮಾಡದಂತೆ ಕಾರ್ಯನಿರ್ವಹಿಸಬೇಕು. ಉತ್ತಮ ತೋಟನಿರ್ವಹಣೆ ಈ ಕೆಳಗಿನ ಕ್ರಮಗಳನ್ನೊಳಗೊಂಡಿದೆ.

1. ಕಳೆನಿರ್ವಹಣೆ ಮತ್ತು ಮಣ್ಣಿನ ತೇವಾಂಶ ಹಾಗೂ ಪೋಷಕಾಂಶ ಉಳಿಸಿಕೊಳ್ಳುವುದು.

2. ಮಣ್ಣಿನ ಸವಕಳಿಯನ್ನು ತಡೆಯುವುದು.

3. ಕಡಿಮೆ ಖರ್ಚಿನ ಬೇಸಾಯ.

ನೀರುಣಿಸುವಿಕೆ : ದೇಸಿ ಕ್ರಮವನ್ನು ಆಧರಿಸಿ ಗಿಡ ನೆಟ್ಟ ಪ್ರಾರಂಭಿಕ ವರ್ಷಗಳಲ್ಲಿ ನೀರುಣಿಸುವುದರಿಂದ ಗಿಡಗಳು ಬೇಗನೆ ನೆಲೆಯೂರುತ್ತವೆ. ನೀರಿನ ಆವಶ್ಯಕತೆ, ಮರದ ಗಾತ್ರ, ಮಣ್ಣಿನಗುಣ, ವಾತಾವರಣ ಮತ್ತು ಋತುಗಳನ್ನು ಅವಲಂಬಿಸಿದೆ. ಬೇಸಗೆಯಲ್ಲಿ ನೀರಿನ ಆವಶ್ಯಕತೆ ಚಳಿಗಾಲಕ್ಕಿಂತ ಜಾಸ್ತಿಯಿರುತ್ತದೆ. ಮರಗಳ ಅಥವಾ ಗಿಡಗಳ ಬುಡದಲ್ಲಿ ಎಲೆ ಅಥವಾ ಹುಲ್ಲಿನ ಹೊದಿಕೆ ನೀಡುವುದರಿಂದ ನೀರಿನ ಆವಶ್ಯಕತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ಗಿಡ ಸವರುವಿಕೆ : ಚಿಕ್ಕ ಗಿಡ ಸವರುವಿಕೆಯಿಂದ ಗಿಡ ಗಟ್ಟಿಮುಟ್ಟಾಗಿಯೂ, ಉತ್ತಮ ಆಕಾರ ಹೊಂದಿಯೂ ಬೀಸುವ ಗಾಳಿಯಿಂದ ಉಂಟಾಗುವ ಹಾನಿ ಕಡಿಮೆಯಾಗುತ್ತದೆ. ಒಣಗಿದ, ದುರ್ಬಲ ಮತ್ತು ವಕ್ರ ಕೊಂಬೆಗಳನ್ನು ಕತ್ತರಿಸಿ ತೆಗೆಯಬೇಕು. ಚಿಕ್ಕ ಗಿಡ ಸವರುವಿಕೆಯನ್ನು ಗಿಡ ನೆಟ್ಟ ಒಂದು ವರ್ಷದ ಅನಂತರ ಕೈಗೊಳ್ಳಬೇಕು.

ಕೀಟ ಹಾಗೂ ರೋಗ ನಿರ್ವಹಣೆ : ನಾನಾ ರೀತಿಯ ಕೀಟಗಳು ಮತ್ತು ರೋಗಗಳು ವಿವಿಧ ಹಂತದಲ್ಲಿ ಗಿಡಗಳನ್ನು ಬಾಧಿಸುತ್ತವೆ. ಇವು ಗಿಡಗಳಿಗೆ ಹಾನಿಕಾರಕ. ಹೂ ಬಿಡುವ ಪ್ರಮಾಣ ಕಡಿಮೆಯಾಗಿ ಇಳುವರಿ ಕಡಿಮೆಯಾಗುತ್ತದೆ. ಶಿಫಾರಸ್ಸು ಮಾಡಿದ ಕೀಟ ನಾಶಕಗಳನ್ನು ಮತ್ತು ಶಿಲೀಂದ್ರ ನಾಶಕಗಳನ್ನು ಬಳಸಿ ಇವುಗಳನ್ನು ನಿಯಂತ್ರಿಸಬೇಕು. ಕೆಲವೊಂದು ಕೀಟಗಳು ಹಾನಿಕಾರಕ ರೋಗ ವಾಹಕಗಳಾಗಿವೆ. ಹಾಗಾಗಿ ಅವುಗಳನ್ನು ನಾಶಪಡಿಸುತ್ತಿರಬೇಕು.

ಕಳೆ ನಿರ್ವಹಣೆ : ದೇಸಿ ಕ್ರಮವನ್ನು ಆಧರಿಸಿ ಹಣ್ಣನ್ನು ಬೆಳೆಯುವಾಗ ನೀರು, ಪೋಷಕಾಂಶ ಮತ್ತು ಸೂರ್ಯರಶ್ಮಿಗಾಗಿ ಕಳೆಗಳು ಗಿಡಗಳೊಂದಿಗೆ ಪೈಪೋಟಿ ನಡೆಸುತ್ತವೆ. ಅಲ್ಲದೆ ಇವು ಅನೇಕ ಕೀಟಗಳಿಗೆ ಆಶ್ರಯತಾಣ ಆಗುವುದನ್ನು ತಡೆಯುತ್ತದೆ. ಗಿಡದ ಸಾಲಿನ ನಡುವೆ ಗೊಬ್ಬರದ ಗಿಡಗಳನ್ನು ಬೆಳೆಸುವುದು, ಮಿಶ್ರ ಬೆಳೆಯ ಮುಖಾಂತರ ಕಳೆಯನ್ನು ಕಡಿಮೆ ಮಾಡಬಹುದು. ಗಿಡದ ಬುಡದ ಕಳೆಯನ್ನು ಎಲೆ ಅಥವಾ ಹುಲ್ಲಿನ ಹೊದಿಕೆಯಿಂದ, ಕತ್ತರಿಸುವುದರಿಂದ, ಎಚ್ಚರಿಕೆಯಿಂದ ಕಳೆನಾಶಕ ಬಳಸುವುದರ ಮುಖಾಂತರ ನಿಯಂತ್ರಿಸಬಹುದು.

ಹಣ್ಣು ಸಂಸ್ಕರಣೆ : ಹಣ್ಣು ಸಂಸ್ಕರಣೆಯ ಮೂಲ ತತ್ವಗಳು : ಆಹಾರ ಪದಾರ್ಥಗಳು ಕೊಳೆತು ಹೋಗದ ಹಾಗೆ ಅಥವಾ ಕೆಡದಂತೆ ದೀರ್ಘ ಕಾಲದ ತನಕ ಶೇಖರಿಸಿಡುವುದಕ್ಕೆ ಸಂಸ್ಕರಣೆ ಎನ್ನುತ್ತೇವೆ. ಅತಿ ಹೆಚ್ಚಾಗಿ ಸಿಗುವ ಕಾಲದಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಶೇಖರಿಸಿ ಇಡಲಾಗುವುದಿಲ್ಲ. ಏಕೆಂದರೆ ಇದರಲ್ಲಿರುವ ನೀರಿನ ಅಂಶ, ಕಿಣ್ವ (ಎನ್‌ಜೈಮ್), ರಾಸಾಯನಿಕ ವಸ್ತು ಹಾಗೂ ಗಾಳಿಯ ಸಂಪರ್ಕದಿಂದ ಬೇಗನೆ ಕೊಳೆತು ಹೋಗುತ್ತದೆ. ತಾಜಾವಾಗಿ ತಯಾರಿಸಿದ ಉತ್ಪನ್ನಗಳು ನೋಡಲು ಆಕರ್ಷಕವಾಗಿಯೂ ರುಚಿಯಾಗಿಯೂ ಹಾಗೂ ಪರಿಮಳ ಭರಿತವಾಗಿಯೂ (ಫ್ಲೇವರ್) ಇರುತ್ತವೆ. ಆದರೆ ಇದನ್ನು ಹೆಚ್ಚು ಸಮಯ ಕೆಡದೆ ಇಡಲಾಗುವುದಿಲ್ಲ.

ಕೊಡಗಿನಲ್ಲಿ ಸಂಸ್ಕರಣೆಗೆ ದೊರೆಯುವ ಹಣ್ಣುಗಳು : ಸಂಸ್ಕರಣೆ ಮಾಹಿತಿಯ ಕೊರತೆಯಿಂದ ಹೆಚ್ಚಿನ ಹಣ್ಣು ನಾಶವಾಗುತ್ತವೆ. ಕಿತ್ತಳೆ ಹಣ್ಣಿನಿಂದ ಸ್ಕ್ವಾಷ್, ಜ್ಯಾಮ್, ಜೆಲ್ಲಿಯನ್ನು ತಯಾರಿಸಬಹುದು. ಸೀಬೆ ಹಣ್ಣಿನಿಂದ ಜ್ಯಾಮ್, ಜೆಲ್ಲಿ ಚೀಸ್, ಜ್ಯೂಸ್‌ನ್ನು, ಪಪ್ಪಾಯದಿಂದ ಜ್ಯಾಂ, ಜೆಲ್ಲಿ, ನೆಕ್ಟರ್, ಕ್ಯಾಂಡಿ, ಟಾಫಿ, ಉಪ್ಪಿನಕಾಯಿ, ಫ್ಯಾಷನ್ ಫ್ರೂಟ್‌ನಿಂದ ಸ್ಕ್ವಾಷ್, ಜ್ಯಾಂ, ಜೆಲ್ಲಿಯನ್ನು ಸುಲಭವಾಗಿ ತಯಾರಿಸಿ ಸಂಸ್ಕರಣೆ ಮಾಡಬಹುದು. ಸಂಸ್ಕರಿಸುವ ವಿಧಾನ ಬೇರೆ ಬೇರೆ ಆಹಾರಗಳಿಗೆ ಬೇರೆ ಬೇರೆ ರೀತಿಯಾಗಿರುತ್ತದೆ. ಗೃಹ ಬಳಕೆಗೆ ವೈಜ್ಞಾನಿಕ ರೀತಿಯಲ್ಲಿ ಹಣ್ಣು ತರಕಾರಿಗಳನ್ನು ಸಂಸ್ಕರಿಸಿ, ಬೇಕಾದ ಸಮಯದಲ್ಲಿ ಉಪಯೋಗಿಸಬಹುದು.

ಸಂಸ್ಕರಣೆಯ ಪ್ರಮುಖ ಅಂಶಗಳು : ಸ್ಕ್ವಾಷ್, ಸಿರಪ್ ಮತ್ತು ನೆಕ್ಟರ್, ಜ್ಯಾಂ, ಜೆಲ್ಲಿ ಮತ್ತು ಮಾರ್ಮಲೇಡ್‌ಗಳ ತಯಾರಿಕೆ, ಪ್ರಿಸರ್ವ್‌ಡ್ ಮತ್ತು ಹರಳುಗೊಳಿಸಿದ ಹಣ್ಣು ಮತ್ತು ತರಕಾರಿಗಳು, ಉಪ್ಪಿನ ದ್ರಾವಣದಲ್ಲಿ ಹಾಕುವುದು, ಟೊಮ್ಯಾಟೋ ಕೆಚಪ್ ಮತ್ತು ಚಟ್ನಿಗಳ ತಯಾರಿಕೆ, ಉಪ್ಪಿನಕಾಯಿ ತಯಾರಿಕೆ, ಹಣ್ಣು ಮತ್ತು ತರಕಾರಿಗಳನ್ನು ಒಣಗಿಸುವ ಕ್ರಮಗಳು.

ಶೀತಲೀಕರಣ, ರಾಸಾಯನಿಕ ಆಹಾರ ಸಂರಕ್ಷಕಗಳನ್ನು ಬಳಸುವುದು, ಆಮ್ಲೀಯತೆಯನ್ನು ಹೆಚ್ಚಿಸುವುದು.

ಮೇಲೆ ತಿಳಿಸಿರುವ ಯಾವುದಾದರೂ ವಿಧಾನವನ್ನು ಬಳಸಿ ಹಣ್ಣು ಮತ್ತು ತರಕಾರಿಗಳನ್ನು ಸಂಸ್ಕರಿಸಬಹುದು. ಯಾವುದೇ ಹಣ್ಣು ಮತ್ತು ತರಕಾರಿಗಳನ್ನು ಸಂಸ್ಕರಿಸಿ ಮೌಲ್ಯವರ್ಧನೆಗೊಳಿಸುವಾಗ ಆಯಾ ಪ್ರದೇಶದಲ್ಲಿಯ ಲಭ್ಯತೆಯ ಪ್ರಮಾಣ ಹಾಗೂ ಸ್ವಾಭಾವಿಕ ಸಂಪನ್ಮೂಲಗಳ ಬಗ್ಗೆ ಅರಿವಿರಬೇಕು. ಸರಿಯಾದ ತರಬೇತಿ ಹಾಗೂ ಮಾರ್ಗದರ್ಶನದಿಂದ ಕ್ರಮಬದ್ಧವಾಗಿ ಪ್ರಾರಂಭಿಸಿದರೆ ಬೆಳೆಗಳ ಜೊತೆಗೆ ಉತ್ಪನ್ನಗಳಿಂದಲೂ ಲಾಭಗಳಿಸಬಹುದು.

ಹಣ್ಣಿನ ಸ್ಕ್ವಾಷ್ : ದೇಶದಲ್ಲಿ ಮಳೆಗಾಲ ಹೊರತುಪಡಿಸಿ ವರ್ಷದ ಬಹುಭಾಗ ತಂಪು ಪಾನೀಯಗಳಿಗೆ ಬೇಡಿಕೆಯಿದೆ. ಈ ಪೈಕಿ ಫಲಸಾರ ಪಾನೀಯಗಳಿಗೆ ಮಹತ್ವ ಸ್ಥಾನವಿದೆ. ಇಂತಹ ಪಾನೀಯಗಳಲ್ಲಿ ಅಗತ್ಯವಾದ ಲವಣಗಳು ಮತ್ತು ಇತರ ಪೌಷ್ಟಿಕಾಂಶಗಳು ಅಧಿಕ ಪ್ರಮಾಣದಲ್ಲಿರುವುದರಿಂದ ಹೆಚ್ಚು ಜನಪ್ರಿಯವಾಗಿದೆಯಲ್ಲದೆ ರುಚಿಕರವಾಗಿವುದರಿಂದ ಎಲ್ಲರಿಗೂ ಹಿತ ಪಾನೀಯವಾಗಿದೆ.

ಕದಂಬ (ಪ್ಯಾಷನ್ ಫ್ರೂಟ್) ಹಣ್ಣಿನ ಸ್ಕ್ವಾಷ್ : ಸ್ಕ್ವಾಷ್ ತಯಾರಿಕೆಯಲ್ಲಿ ನಾಲ್ಕು ಹಂತಗಳಿವೆ :

ಹಣ್ಣಿನ ರಸವನ್ನು ತೆಗೆಯುವುದು

ಸಕ್ಕರೆ ಪಾಕ ತಯಾರಿಕೆ

ಪಾಕದ ಜೊತೆ ರಸದ ಬೆರೆಕೆ

ಸಂರಕ್ಷಕ ವಸ್ತುವನ್ನು ಸೇರಿಸಿ ಬಾಟಲಿಗಳಲ್ಲಿ ಶೇಖರಿಸುವುದು

ಹಣ್ಣಿನ ರಸವನ್ನು ತೆಗೆಯುವುದು : ಚೆನ್ನಾಗಿ ಮಾಗಿದ ಹಣ್ಣುಗಳನ್ನು ಕತ್ತರಿಸಿ, ಚಮಚದ ಸಹಾಯದಿಂದ ಬೀಜ ಮತ್ತು ರಸವನ್ನು ತೆಗೆದು ಜಾಲರಿಯ ಮೂಲಕ ಸೋಸಿ ರಸ ತೆಗೆಯಬೇಕು.

ಸಕ್ಕರೆ ಪಾಕ ತಯಾರಿಕೆ : ಸಕ್ಕರೆ ಮತ್ತು ನೀರನ್ನು, ಸಕ್ಕರೆ ಕರಗುವವರೆಗೆ ಕುದಿಸಿ ಅನಂತರ ಸ್ವಲ್ಪ ನೀರಿನಲ್ಲಿ ಕರಗಿಸಿದ ಸಿಟ್ರಿಕ್ ಆಮ್ಲವನ್ನು ಸೇರಿಸಿ ಉರಿಯಿಂದ ಇಳಿಸಿ ಸೋಸಬೇಕು.

ಪಾಕದ ಜೊತೆ ರಸದ ಬೆರೆಕೆ : ಆರಿದ ಸಕ್ಕರೆ ಪಾಕವನ್ನು ಹಣ್ಣಿನ ರಸದೊಂದಿಗೆ ಬೆರೆಸಬೇಕು.

ಸಂರಕ್ಷಕ ವಸ್ತುವನ್ನು ಸೇರಿಸಿ ಬಾಟಲಿಯಲ್ಲಿ ತುಂಬಿಸುವುದು : ಪೊಟಾಷಿಯಂ ಮೆಟಾ ಬೈಸಲ್ಫೇಟನ್ನು ಸ್ವಲ್ಪ ನೀರಿನಲ್ಲಿ ಕರಗಿಸಿ ಮಿಶ್ರಣದೊಂದಿಗೆ ಸೇರಿಸಿ ಶುದ್ಧೀಕರಿಸಿದ ಬಾಟಲಿಯಲ್ಲಿ ತುಂಬಿಸಿ ಒಂದು ವಾರದ ಬಳಿಕ ಉಪಯೋಗಿಸಬೇಕು.


ಮಿಶ್ರ ಹಣ್ಣಿನ ಜ್ಯಾಮ್ : ಚೆನ್ನಾಗಿ ಮಾಗಿದ ಹಣ್ಣುಗಳನ್ನು ಆರಿಸಬೇಕು. ಪಪ್ಪಾಯ, ಬಾಳೆ, ಸೀಬೆ, ಅನಾನಸು, ಕಿತ್ತಳೆ, ದ್ರಾಕ್ಷಿ ಇತ್ಯಾದಿ

ಹಣ್ಣುಗಳನ್ನು ತೊಳೆದು ಸಿಪ್ಪೆ ತೆಗೆದು ಸಣ್ಣದಾಗಿ ಹಚ್ಚಿ ಸ್ವಲ್ಪ ನೀರು ಸೇರಿಸಿ ಬೇಯಿಸಬೇಕು. (ಸೀಬೆಹಣ್ಣಿನ ಸಿಪ್ಪೆಯನ್ನು ತೆಗೆಯಬೇಕಾಗಿಲ್ಲ). ಸ್ಟೇನ್‌ಲೆಸ್ ಜಾಲರಿಯ ಮೂಲಕ ಉಜ್ಜಿ ಗಟ್ಟಿ ರಸವನ್ನು ತೆಗೆಯಬೇಕು. ಬೇಯಿಸುವಾಗ ಒಂದು ಕೆ.ಜಿ. ಹಣ್ಣಿನ ರಸಕ್ಕೆ ಅರ್ಧ ಟೀ.ಚ. ಸಿಟ್ರಿಕ್ ಆಮ್ಲವನ್ನು ಹಾಕಬೇಕು.

ಸೀಬೆ ಹಣ್ಣಿನ ಜೆಲ್ಲಿ : ಉತ್ತಮವಾದ ಹಣ್ಣನ್ನು ಆರಿಸಿ ತೊಳೆದು ನಾಲ್ಕಾರು ಭಾಗಗಳಾಗಿ ಕತ್ತರಿಸಿ ಹಣ್ಣಿನ ಚೂರು ಮುಳುಗುವಷ್ಟು ನೀರು ಹಾಕಿ ಬೇಯಿಸಬೇಕು. ಒಂದು ಕೆ.ಜಿ. ಹಣ್ಣಿಗೆ ಅರ್ಧ ಚಮಚ ಸಿಟ್ರಿಕ್ ಆಮ್ಲ ಹಾಕಿ ಸುಮಾರು ಅರ್ಧ ತಾಸು ಕುದಿಸಬೇಕು. ಮಸ್ಲಿನ್ ಬಟ್ಟೆಯ ಮುಖಾಂತರ ಸೋಸಿದ ರಸವನ್ನು ಒಂದು ರಾತ್ರಿ ಅಲುಗಾಡದಂತೆ ಹಾಗೆಯೇ ಇಡಬೇಕು.

ಪಪ್ಪಾಯ ಕ್ಯಾಂಡಿ (ಟೂಟಿ ಫ್ರೂಟಿ) : ಕಾಯಿ ಪಪ್ಪಾಯದ ಸಿಪ್ಪೆ ತೆಗೆದು ಒಳಗಿನ ಬೇಡವಾದ ಭಾಗವನ್ನು ತೆಗೆದು ಹಾಕಬೇಕು. ಒಂದೇ ಸಮಾನಾಗಿ ಸಣ್ಣ ಚೂರುಗಳಾಗಿ ಕತ್ತರಿಸಿ ಅರ್ಧ ನಿಮಿಷದಿಂದ ಮೂರು ನಿಮಿಷದವರೆಗೆ ನೀರಿನಲ್ಲಿ ಕುದಿಸಿ ತಣ್ಣೀರಿನಲ್ಲಿ ತೊಳೆಯಬೇಕು. ಬೇಕಾದ ಬಣ್ಣ ಸೇರಿಸಿ ಮಿಶ್ರ ಮಾಡಬೇಕು. ಸಕ್ಕರೆಯನ್ನು ಮೂರು ಭಾಗ ಮಾಡಬೇಕು. ಪಾತ್ರೆಯಲ್ಲಿ 250 ಮಿ.ಲಿ. ನೀರಿಗೆ ಒಂದು ಭಾಗ ಸಕ್ಕರೆ ಸೇರಿಸಿ ಕುದಿಸಬೇಕು. ಅನಂತರ ಪಪ್ಪಾಯ ಚೂರನ್ನು ಹಾಕಿ ಎರಡು ನಿಮಿಷಗಳ ಬಳಿಕ ಮುಚ್ಚಳ ಹಾಕಿ ಉರಿಯಿಂದ ಇಳಿಸಿ ಹಾಗೆಯೇ ಇಡಬೇಕು. ಮಾರನೆಯ ದಿನ ಪಾತ್ರೆಯಿಂದ ಪಾಕ ಸೋಸಿ ತೆಗೆದು ಎರಡನೇ ಭಾಗದ ಸಕ್ಕರೆಯನ್ನು ಸೇರಿಸಿ ಮೇಲೆ ಹೇಳಿದಂತೆ ಕುದಿಸಿ ಮುಚ್ಚಿಡಬೇಕು. ಮೂರನೇ ದಿನವೂ ಪಪ್ಪಾಯ ಚೂರು ಮತ್ತು ಪಾಕವನ್ನು ಬೇರ್ಪಡಿಸಬೇಕು. ಮೂರನೇ ಭಾಗದ ಸಕ್ಕರೆ ಒಂದೆಳೆ ಪಾಕ ಬಂದಾಗ ನೀರಿನಲ್ಲಿ ಕರಗಿಸಿದ ಸಿಟ್ರಿಕ್ ಆಮ್ಲ ಸೇರಿಸಿ ಕುದಿಯುವ ಮಿಶ್ರಣಕ್ಕೆ ಪಪ್ಪಾಯ ಚೂರು ಹಾಕಿ ಪಾತ್ರೆ ಇಳಿಸಿ ಮುಚ್ಚಿಡಬೇಕು. ನಾಲ್ಕನೇ ದಿನ ಪಾಕ ಮತ್ತು ಪಪ್ಪಾಯ ಚೂರನ್ನು ಬೇರ್ಪಡಿಸಿ ಪಾಲಿಥಿನ್ ಹಾಳೆಯ ಮೇಲೆ ನೆರಳಿನಲ್ಲಿ ಒಣಗಿಸಿ ಪಾಲಿಥಿನ್ ಚೀಲದಲ್ಲಿ ತುಂಬಿಡಬೇಕು.

ಎಸ್.ಎಚ್.



ಕೊಡಗು ಜಿಲ್ಲೆಯ ಕೃಷಿ ಕರ್ನಾಟಕದಲ್ಲಿ ಕೊಡಗು ಒಂದು ವಿಶಿಷ್ಟವಾದ ಭೂ ಪ್ರದೇಶ. ಇಲ್ಲಿಯ ಜನಜೀವನ, ಕೃಷಿ, ಸಾಮಾಜಿಕ, ಧಾರ್ಮಿಕ ಆಚರಣೆಗಳು ಎಲ್ಲವೂ ಭಿನ್ನ. ಪಶ್ಚಿಮ ಘಟ್ಟದ ಸಾಲಿನಲ್ಲಿರುವ ಕೊಡಗು ಮೇಲ್ನೋಟಕ್ಕೆ ಒಂದು ದೊಡ್ಡ ಕಾಡು. ಇಲ್ಲಿರುವಷ್ಟು ಜೀವ ವೈವಿಧ್ಯಗಳಾಗಲೀ, ಸಸ್ಯಗಳಾಗಲೀ, ಮರ ಗಿಡಗಳಾಗಲೀ ಮತ್ತೊಂದು ಕಡೆ ಕಾಣುವುದು ಅಪರೂಪ.

ಬೆಟ್ಟಗುಡ್ಡಗಳಿಂದ ಕೂಡಿ ಸಸ್ಯಸಂಪತ್ತನ್ನು ಹೊಂದಿದ ಕೊಡಗು ಜಿಲ್ಲೆ ಒಂದು ರಮ್ಯವಾದ ಪ್ರಕೃತಿ ತಾಣ. ಭೌಗೋಳಿಕ ವಿಸ್ತೀರ್ಣ ಕಡಿಮೆ. ಆದರೂ ಎಲ್ಲ ರೀತಿಯಿಂದಲೂ ಉನ್ನತ ಸ್ಥಾನದಲ್ಲಿದೆ. ಕೊಡಗಿನಲ್ಲಿ ರಸ್ತೆ ಸಂಚಾರ ಮಾತ್ರ ಇರುವುದು. ರೈಲು ಮತ್ತು ವಿಮಾನ ಸಂಚಾರವಿಲ್ಲ. ಎತ್ತರವಾದ ಪ್ರದೇಶದಲ್ಲಿರುವ ಕೊಡಗು ಪಶ್ಚಿಮಘಟ್ಟಗಳ ಪೂರ್ವ ಮತ್ತು ಪಶ್ಚಿಮ ಇಳಿಜಾರು ಪ್ರದೇಶವನ್ನು ಹೊಂದಿದೆ. ಈ ಜಿಲ್ಲೆಯು ರಾಜ್ಯದ ನೈಋತ್ಯ ಭಾಗದಲ್ಲಿದ್ದು ಉತ್ತರ ಅಕ್ಷಾಂಶ 11O56 ರಿಂದ 12O52 ರವರೆಗೆ, ಪೂರ್ವ ರೇಖಾಂಶ 75O22-76O12 ರವರೆಗೆ ಇರುವ ಪ್ರದೇಶವನ್ನು ಹೊಂದಿದೆ. ಉತ್ತರ ಭಾಗಕ್ಕೆ ಹಾಸನ ಮತ್ತು ದಕ್ಷಿಣಕನ್ನಡ ಜಿಲ್ಲೆಯನ್ನು, ಪೂರ್ವಭಾಗಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳನ್ನು, ಪಶ್ಚಿಮಭಾಗಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯವನ್ನು ಹಾಗೂ ದಕ್ಷಿಣ ಭಾಗಕ್ಕೆ ಕೇರಳ ರಾಜ್ಯವನ್ನು ಹೊಂದಿದೆ. ದಕ್ಷಿಣೋತ್ತರವಾಗಿ ಜಿಲ್ಲೆಯ ಉದ್ದವು ಬ್ರಹ್ಮಗಿರಿ ಬೆಟ್ಟದಿಂದ ಹೇಮಾವತಿ ನದಿಯವರೆಗೆ 96 ಕಿ.ಮೀ. ಪೂರ್ವ ಪಶ್ಚಿಮವಾಗಿ ಜಿಲ್ಲೆಯ ಅಗಲವು ಕುಶಾಲನಗರದಿಂದ ಸಂಪಾಜೆಯವರೆಗೆ 64 ಕಿ.ಮೀ. ಇದೆ.

ಕೊಡಗು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 2.14 ರಷ್ಟು ಮಾತ್ರ ಹೊಂದಿರುವುದು. ಅಂದರೆ ಭೌಗೋಳಿಕ ವಿಸ್ತೀರ್ಣ 4.102 ಚ.ಕಿ.ಮೀ. ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ ಮೂರು ತಾಲೂಕುಗಳನ್ನು ಹೊಂದಿದ್ದು, ಹದಿನಾರು ಹೋಬಳಿಗಳಿದ್ದು, ಇನ್ನೂರ ತೊಂಬತ್ತಾರು ಜಿಲ್ಲೆಗಳನ್ನು ಒಳಗೊಂಡಿದೆ. ಮಡಿಕೇರಿಯಲ್ಲಿ ಮಾತ್ರ ಪುರಸಭೆ ಇದ್ದು, ಪ್ರತಿ ತಾಲೂಕಿನಲ್ಲಿನ ಒಂದೊಂದು ತಾಲೂಕು ಪಂಚಾಯಿತಿ ಇದೆ. ಅರವತ್ತೈದು ಮಂಡಲ ಪಂಚಾಯತಿಗಳಿವೆ.

ಕೊಡಗು ಮಲೆನಾಡಾದ್ದರಿಂದ, ಇಲ್ಲಿ ಹೆಚ್ಚಾಗಿ ಮಳೆ ಆಗುತ್ತದೆ. 30-40 ಇಂಚಿನಿಂದ 250-300 ಇಂಚುಗಳಷ್ಟು ಮಳೆ ಆಗುವ ಪ್ರದೇಶ

ಇಲ್ಲಿದೆ. ಸೋಲೋ ಕಾಡುಗಳಿರುವ ಬೆಟ್ಟ ಪ್ರದೇಶಗಳಿರುವ ಕಾರಣದಿಂದ ಮಳೆ ನೀರು ಪೂರ್ಣವಾಗಿ ಇಂಗುತ್ತದೆ. ಆ ಕಾರಣದಿಂದಲೂ ಕರ್ನಾಟಕ ಜೀವ ನದಿ ಕಾವೇರಿ ಇಲ್ಲಿಯ ಬ್ರಹ್ಮಗಿರಿಯ ತಪ್ಪಲಿನಲ್ಲಿ ಹುಟ್ಟಿ ಹರಿಯುತ್ತಾಳೆ. ಈಕೆ ಇಲ್ಲಿಯ ಮೂಲ ನಿವಾಸಿಗಳ ಕುಲದೇವತೆ.

ಇಲ್ಲಿಯ ಜನ ಬಹಳ ಹಿಂದಿನ ಕಾಲದಿಂದಲೂ ಕೃಷಿಯನ್ನು ನಂಬಿ ಬದುಕುತ್ತಿದ್ದಾರೆ. ಅದರಲ್ಲೂ ಬತ್ತ ಕೃಷಿ ಅವರ ಮುಖ್ಯ ಬೆಳೆ. ಇತ್ತೀಚಿನ ಕೆಲವು ದಶಕಗಳವರೆಗೂ ಬತ್ತ ವ್ಯವಸಾಯದ ಕೊಡಗಿನ ಅರ್ಥ ವ್ಯವಸ್ಥೆಯ ಮೂಲವಾಗಿತ್ತು.

ದಟ್ಟ ಕಾಡನ್ನು ಕಡಿದು, ಇಳಿಜಾರು ಪ್ರದೇಶಗಳಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಗದ್ದೆಗಳನ್ನು ಮಾಡಿಕೊಂಡಿದ್ದಾರೆ. ಅಲ್ಲಿ ಮೇಲ್ಭಾಗದಿಂದ ಕೆಳಕ್ಕೆ ನೀರಿನ ಹರಿವು ಇದ್ದು ಅದು ಹರಿಯಲು ಗದ್ದೆಗಳ ಬದಿಯಲ್ಲಿ 'ತೋಡು' ಅಥವಾ 'ಕಣಿ'ಯ ಏರ್ಪಾಡು ಮಾಡಿರುತ್ತಾರೆ. ಇದರಿಂದ ಬೇಕಾದಾಗ ನೀರನ್ನು ಗದ್ದೆಗೆ ಹಾಯಿಸಲು ಸಾಧ್ಯವಾಗುತ್ತದೆ. ಇಲ್ಲಿ ಗದ್ದೆ ಬೇಸಾಯಕ್ಕೆ ಮಳೆ ನೀರನ್ನೇ ಶೇ. 90 ರಷ್ಟು ಅವಲಂಬಿಸಿರುತ್ತಾರೆ. ಹಾಗಾಗಿ ವರ್ಷಕ್ಕೆ ಒಂದೇ ಬೆಳೆ ತೆಗೆಯುತ್ತಾರೆ.

ಇಲ್ಲಿಯ ಗದ್ದೆಗಳಲ್ಲಿ ಕೆಲವು ಎತ್ತರದ ಪ್ರದೇಶಗಳಲ್ಲಿರುತ್ತವೆ. ಅದಕ್ಕೆ ಮಳೆ ಬಿದ್ದಾಗಲಷ್ಟೇ ನೀರು ಸಿಗುತ್ತದೆ. ಅದನ್ನು 'ಮಾಣಿ ಗದ್ದೆಗಳು' ಎಂದು ಕರೆಯುತ್ತಾರೆ. ಕೆಲವು ಕಡೆ ಮಣ್ಣಿನಲ್ಲಿ ಹೆಚ್ಚು ಶೀತ ಇರುತ್ತದೆ. ಅದನ್ನು 'ಸೋಲೆ ಗದ್ದೆ' ಎನ್ನುತ್ತಾರೆ. ಅಂಟು ಮಣ್ಣು ಇರುವುದನ್ನು 'ಮುಂಗಟ್ಟು' ಎಂದು ಕರೆಯುತ್ತಾರೆ. ಇದರಲ್ಲಿ ಬೆಳೆ ಚೆನ್ನಾಗಿ ಬರುತ್ತದೆ. ಹಾಗೆಯೇ ಕಪ್ಪು ಮಣ್ಣು ಇರುವ ಭೂಮಿಯನ್ನು 'ಗೋಡು ಭೂಮಿ' ಎಂದು ಕರೆಯುತ್ತಾರೆ. ಮರಳು ಮಿಶ್ರಿತವಾದ ಭೂಮಿ ಇದೆ. ಇವೆಲ್ಲ ಹೆಚ್ಚು ಮಳೆ ಬೀಳುವ ಕೊಡಗಿನ ಭಾಗಗಳಲ್ಲಿ ಇದ್ದು, ಉತ್ತರ ಕೊಡಗಿನ ಕಡೆ ಮಳೆ ಕಡಿಮೆ ಇದ್ದು ಅಲ್ಲಲ್ಲಿ ಬಯಲು ಸೀಮೆಯ ಹಾಗೆ ಹೊಲಗಳು ಇವೆ.

ಮಣ್ಣು : ಕೆಂಪುಗೋಡು ಮಣ್ಣು ಮತ್ತು ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಬೆಟ್ಟಗುಡ್ಡಗಳು ಮತ್ತು ಏರುತಗ್ಗಿರುವ ಗ್ರಾನೈಟ್ ಕಲ್ಲಿನ ಪ್ರದೇಶಗಳಲ್ಲಿ ಕೆಂಪುಗೋಡು ಮಣ್ಣು ಕಂಡುಬರುತ್ತದೆ. ಮರಳು ಅಚ್ಚ ಕಂದು ಬಣ್ಣದಿಂದ ಅಚ್ಚಕೆಂಪು ಬಣ್ಣದವರೆಗೆ ಇದ್ದು ಮೇಲ್ಭಾಗದ ಪದರುಗಳಲ್ಲಿ ಮರಳು ಮಿಶ್ರಿತ ಗೋಡಿನಿಂದ ಜೇಡಿ ಮಿಶ್ರಿತ ಗೋಡು ಮಣ್ಣನ್ನು ಏರು ತಗ್ಗಿರುವ ಪ್ರದೇಶಗಳಲ್ಲಿ ಕಾಣಬಹುದು. ನೀರು ಬಸಿಯುವ ಗುಣವಿರುವ ಕೆಲವು ಮಣ್ಣುಗಳು ಕಂಡು ಬರುತ್ತವೆ. ಅವು ತಳ ಪದರಗಳಲ್ಲಿ ಗೋಡು, ಜೇಡಿ ಮಿಶ್ರಿತ ಗೋಡು ಮತ್ತು ನೊರಜುಗಲ್ಲು ಮಿಶ್ರಿತ ಮರಳುಗೋಡು. ಇದು ತೆಂಗು, ಕಾಫಿ, ಕಿತ್ತಳೆ ಬೆಳೆಗಳಿಗೆ ಅನುಕೂಲಕರವಾದದು. ಕಣಿವೆ ಪ್ರದೇಶದ ಮಣ್ಣುಗಳು ಆಳದವರೆಗೂ ಒಂದೇ ತೆರನಾಗಿದ್ದು ಕಪ್ಪು ಮಿಶ್ರಿತ ಕಂದು, ಕಂದು ಮಿಶ್ರಿತ ಕೆಂಪು ಮತ್ತು ಬೂದಿ ಮಿಶ್ರಿತ ಕಪ್ಪು ಬಣಗಳಿಂದ ಕೂಡಿದ್ದು, ಮೇಲ್ಪದರಗಳಲ್ಲಿ ಮರಳು ಮಿಶ್ರಿತ ಗೋಡು ಮಣ್ಣು ಮತ್ತು ಕೆಳಪದರದಲ್ಲಿ ಜೇಡು ಮಣ್ಣು ಇರುತ್ತದೆ.

ಕಲ್ಲುಬಂಡೆಗಳಿಂದ ಕೂಡಿದ ಬೆಟ್ಟಗುಡ್ಡಗಳು ಮತ್ತು ಮೈದಾನಪ್ರದೇಶದಲ್ಲಿ ಜಂಬಿಟ್ಟಿಗೆ ಮಣ್ಣು ಕಂಡುಬರುತ್ತದೆ. ಈ ಮಣ್ಣನ್ನು ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಕಾಣಬಹುದು. ಬಹಳ ಆಳದವರೆಗೂ ಜಂಬಿಟ್ಟಿಗೆ ಮಣ್ಣು ಒಂದೇ ತೆರನಾಗಿರುತ್ತದೆ. ಹಳದಿ ಮಿಶ್ರಿತ ಕೆಂಪು, ಕಪ್ಪು ಮಿಶ್ರಿತ ಕೆಂಪು ಬಣ್ಣದಾಗಿರುತ್ತದೆ. ಒಟ್ಟಿನಲ್ಲಿ ಜಿಲ್ಲೆಯಲ್ಲಿ ಕಂಡು ಬರುವ ಮಣ್ಣು ಹುಳಿ ಮಣ್ಣು ಮಣ್ಣಿನಲ್ಲಿ ಸಾರಜನಕ ಅಂಶ ಹೆಚ್ಚಾಗಿದ್ದು, ರಂಜಕದ ಅಂಶ ಕಡಮೆಯಿದ್ದು ಪೊಟ್ಯಾಷ್ ಅಂಶ ಮಧ್ಯಮಮಟ್ಟದಲ್ಲಿರುತ್ತದೆ. ಅಂದರೆ ಪ್ರದೇಶದಿಂದ ಪ್ರದೇಶಕ್ಕೆ ಮಣ್ಣಿನಲ್ಲಿ ಅನೇಕ ವ್ಯತ್ಯಾಸಗಳಿದ್ದು, ಮಳೆ ಹೆಚ್ಚಾಗಿರುವ ಕಡೆ ಕಪ್ಪು ಬಣ್ಣದ ಮಣ್ಣು, ಪಶ್ಚಿಮ ಭಾಗದಲ್ಲಿ ಮಣ್ಣು ಕಲ್ಲು ಮಿಶ್ರಿತವಾಗಿದ್ದು ಸುಣ್ಣದ ಕೊರತೆಯಿಂದಿರುತ್ತದೆ. ಮಧ್ಯಭಾಗದಲ್ಲಿ ಮಣ್ಣು ತಿಳಿಕಂದು ಬಣ್ಣದಲ್ಲಿದ್ದು ಜೇಡಿಮಣ್ಣಿನಿಂದ ಕೂಡಿರುತ್ತದೆ.

ಮಣ್ಣಿನ ಸಾರವನ್ನು ರಕ್ಷಣೆ ಮಾಡುವ ಸಲುವಾಗಿ ಏನ ನಿರ್ಮಾಣ ಯೋಜನೆಯನ್ನು ಹಾಕಿಕೊಂಡು ಅನೇಕ ಮರಗಳನ್ನು ನೆಡುತ್ತಿದ್ದಾರೆ. ಇದರಿಂದ ಭೂಸಾರದ ರಕ್ಷಣೆಯ ಜೊತೆಗೆ ತಾಪಮಾನವನ್ನು ಕಾಯ್ದುಕೊಳ್ಳುವುದು ಸಾಧ್ಯವಾಗುತ್ತದೆ. ಪಶ್ಚಿಮ ಘಟ್ಟದ ಕಡೆಯಲ್ಲಿ ಬೆಟ್ಟದಿಂದ ಮೆಕ್ಕಲು ಮಣ್ಣು ಮತ್ತು ಪೋಷಕಾಂಶಯುಕ್ತ ಮಣ್ಣು ಸಾಗಿಬರುವುದರಿಂದ ಕಣಿವೆಗಳ ಮಣ್ಣು ಫಲವತ್ತಾಗಿರುತ್ತದೆ.

ವಾಯುಗುಣ : ಅರಣ್ಯ ಸಂಪತ್ತು ಹೇರಳವಾಗಿರುವುದರಿಂದ ವಾಯುಗುಣ ಹಿತಕರವಾಗಿದೆ. ಅತೀ ಹೆಚ್ಚು ಮಳೆ ಬೀಳುವುದರಿಂದಲೂ ಮಣ್ಣಿನಲ್ಲಿ ತೇವಾಂಶ ಇರುತ್ತದೆ. ಚಳಿ ಅತಿಯಾದರೂ ಕೆಲವು ಬೆಳೆಗಳಿಗೆ ಅದರಿಂದ ಅನುಕೂಲವೆ. ಪಶ್ಚಿಮ ಘಟ್ಟಪ್ರದೇಶಗಳಲ್ಲಿ ಅತೀ ಹೆಚ್ಚು ಮಳೆಯನ್ನು, ಮಧ್ಯಭಾಗದಲ್ಲಿ ಸಾಧಾರಣದಿಂದ ಹೆಚ್ಚು ಮಳೆಯನ್ನು ಮತ್ತು ಪೂರ್ವಭಾಗದಲ್ಲಿ ಸಾಧಾರಣ ಮಳೆಯನ್ನು ಕಾಣಬಹುದು. ವಾಯುಗುಣವನ್ನು ಮಳೆಮಾರುತಗಳು ಮತ್ತು ಪ್ರಾಕೃತಿಕ ಲಕ್ಷಣಗಳು ರೂಪಿಸುತ್ತವೆ. ಹಾಗೆಯೇ ಬೆಟ್ಟಗುಡ್ಡ, ನೈಸರ್ಗಿಕ ಸಂಪತ್ತು ಕೂಡ ಮಳೆಗೆ ಕಾರಣವಾಗಿವೆ. ಜಿಲ್ಲೆಯ ಎಲ್ಲ ಭಾಗದಲ್ಲೂ ಒಂದೇ ತೆರನಾಗಿ ಮಳೆ ಬೀಳುವುದಿಲ್ಲ. ಪಶ್ಚಿಮ ಘಟ್ಟದೆಡೆ 4000 ಮಿ.ಮೀ.ಗಿಂತ ಹೆಚ್ಚಾಗಿದ್ದು ಪೂರ್ವದ ಕಡೆ 2000 ಮಿ.ಮೀ. ನಷ್ಟು ಮಳೆಯಾಗುತ್ತದೆ.

ಕೊಡಗಿನಲ್ಲಿ ನಾಲ್ಕು ಋತುಗಳನ್ನು ಜನವರಿಯಿಂದ ಫೆಬ್ರವರಿವರೆಗೆ ಚಳಿಗಾಲವೆಂದು, ಮಾರ್ಚಿನಿಂದ ಮೇ ವರೆಗೆ ಬೇಸಿಗೆ ಕಾಲವೆಂದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈಋತ್ಯ ಮಾನ್ಸೂನ್ ಕಾಲವೆಂದು ಮತ್ತು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಈಶಾನ್ಯ ಮಾನ್ಸೂನ್ ಕಾಲವೆಂದು ವಿಂಗಡಣೆ ಮಾಡಲಾಗಿದೆ. ಚಳಿಗಾಲದಲ್ಲಿ ಮಳೆ ಕಡಿಮೆಯಿದ್ದು, ತಿಳಿಯಾದ ಆಕಾಶವಿದ್ದು, ಸುಖೋಷ್ಣದಿಂದ ಕೂಡಿರುತ್ತದೆ. ಬೇಸಿಗೆ ಕಾಲದಲ್ಲಿ ಉಷ್ಣತೆ ಗರಿಷ್ಠ ಮಟ್ಟವನ್ನು ತಲುಪಿರುತ್ತದೆ. ನೈಋತ್ಯ ಮಾನ್ಸೂನ್ ಕಾಲದಲ್ಲಿ ಜೋರಾಗಿ ಮಳೆ ಬೀಳುತ್ತದೆ. ಈಶಾನ್ಯ ಮಾನ್ಸೂನ್ ಕಾಲದಲ್ಲಿ ವಾತಾವರಣ ತೇವಾಂಶದಿಂದ ಕೂಡಿದ್ದು, ಸ್ವಲ್ಪ ಸ್ವಲ್ಪ ಮಳೆಯಾಗುತ್ತದೆ. ವರ್ಷಕ್ಕೆ ಸರಾಸರಿ ಮಳೆ ಪ್ರಮಾಣ 2.718 ಮಿ.ಮೀ. ಸಿಡಿಲು, ಬಿರುಗಾಳಿ ಆಲಿಕಲ್ಲು ಮಳೆ, ಮಂಜು ಕಾಲಕ್ಕೆ ತಕ್ಕಂತೆ ಸ್ಥಿತ್ಯಂತರವಾಗುತ್ತಿರುತ್ತದೆ. ಮುಂಗಾರಿನಲ್ಲಿ ಹೆಚ್ಚು ಮಳೆ ಬೀಳುತ್ತದೆ.

ಕೊಡಗಿನಲ್ಲಿ ಬೆಳೆ ಬೆಳೆಯುವ ಪ್ರದೇಶ 1,51,007 ಹೆಕ್ಟೇರ್ ಅದರಲ್ಲಿ ಆಹಾರ ಬೆಳೆಯುವ ಪ್ರದೇಶ 73,590 ಹೆಕ್ಟೇರ್. ಆಹಾರೇತರ ಬೆಳೆಗಳನ್ನು 77,487 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಬತ್ತ,

ರಾಗಿ, ಮುಸುಕಿನ ಜೋಳ, ಕಾಫಿ, ಏಲಕ್ಕಿ, ಕರಿಮೆಣಸು, ತೆಂಗು, ಅಡಿಕೆ- ಹೀಗೆ ನಾನಾ ವಿಧದ ಬೆಳೆಗಳನ್ನು ಬೆಳೆಯಲಾಗುತ್ತದೆ.

ವ್ಯವಸಾಯ ಕ್ರಮ : ಮೇ ತಿಂಗಳ ಕೊನೆಯ ವಾರದಲ್ಲಿ ಮುಂಗಾರು ಪ್ರಾರಂಭವಾಗಿ ಒಂದೆರಡು ಮಳೆ ಬಿದ್ದು, ಮಣ್ಣಿನಲ್ಲಿ ತೇವ ಸೇರಿದಾಗ ಉಳುಮೆ ಮಾಡುತ್ತಾರೆ. ಇದನ್ನು 'ಹಡ್ಲು' ತೆಗೆಯುವುದು ಎಂದು ಕರೆಯುತ್ತಾರೆ. ಕೊಡಗಿನಲ್ಲಿ ಮೊದಲಿನಿಂದಲೂ ಉಳುಮೆಗೆ ಎತ್ತುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಅಲ್ಲಲ್ಲಿ ಕೋಣಗಳನ್ನು ಬಳಸುವುದಿದೆ. ಮಧ್ಯಾಹ್ನದ ಮೇಲೆ ಹೂಟೆ ಮಾಡುವುದಿಲ್ಲ. ಸೋಮವಾರ ಉಳುಮೆ ಇಲ್ಲ.

ಹಡ್ಲು ತೆಗೆದಾದ ಮೇಲೆ ಕೊಟ್ಟಿಗೆಯ ಗೊಬ್ಬರವನ್ನು ಗದ್ದೆ ತುಂಬಾ ಚೆಲ್ಲುತ್ತಾರೆ. ಜೂನ್ ತಿಂಗಳ ಮೊದಲ ವಾರದಲ್ಲಿಯೇ ಸಾಧಾರಣವಾಗಿ ಮಳೆಗಾಲ ಪ್ರಾರಂಭವಾಗುತ್ತದೆ. ಸತತ ಮಳೆಯಿಂದ ತೋಡುಗಳಲ್ಲಿ ನೀರು ಹರಿಯತೊಡಗುತ್ತದೆ. ಆ ಸಮಯದಲ್ಲಿ ಬೀಜ ಹಾಕಲಿರುವ ಗದ್ದೆಗಳನ್ನು ಸಿದ್ಧಗೊಳಿಸುತ್ತಾರೆ. ಅದನ್ನು 'ಯಾಕಲು' ಎಂದು ಕರೆಯುತ್ತಾರೆ. ಯಾಕಲುನ್ನು ಆರಿಸುವಾಗ ಅಲ್ಲಿ ಯಾವಾಗಲೂ ನೀರಿನ ಕೊರತೆ ಆಗದಂತೆ ಎಚ್ಚರವಹಿಸುತ್ತಾರೆ. ಯಾಕಲನ್ನು ಎರಡೆರಡು ಬಾರಿ ಉದ್ದುದ್ದವಾಗಿ, ಅಡ್ಡಡ್ಡವಾಗಿ ಉಳುಮೆ ಮಾಡುತ್ತಾರೆ. 'ಪುಣೆ'ಯನ್ನು ಅಂದರೆ ಏರಿ ಬದಿಯನ್ನು ಕಡಿದು ಸ್ವಚ್ಛಗೊಳಿಸುತ್ತಾರೆ. ಪುಣೆ ಕಡಿದುದಕ್ಕೆ ಕೆಸರನ್ನು ಗುದ್ದಲಿಯಿಂದ ಮೆತ್ತಿ ನೀರು ಸೋರಿ ಹೋಗದಂತೆ ಮಾಡುತ್ತಾರೆ. ಹೀಗೆ ಒಂದು ಹದದವರೆಗೆ ನೀರು ನಿಲ್ಲುವಂತೆ ಮಾಡುವರು.

ತಮ್ಮ ಹಿಂದಿನ ಫಸಲಿನ ಆರಿಸಿದ, ಸ್ವಚ್ಛಗೊಳಿಸಿದ ಬತ್ತವನ್ನೇ ಬೀಜ ಬತ್ತವನ್ನಾಗಿ ಉಪಯೋಗಿಸುತ್ತಾರೆ. ಅದನ್ನು ಮೊಳಕೆ ಬರಿಸಿ ಅಥವಾ ಹಾಗೆಯೇ ಯಾಕಲಿಗೆ ಸಾಲಲ್ಲಿ ಕೈಯಿಂದ ಉದುರಿಸುತ್ತಾರೆ. ಆ ಸಮಯದಲ್ಲಿ ಯಾಕಲಿನ ನೀರನ್ನು ಆರಿಸಿರುತ್ತಾರೆ. ಅನಂತರ ಒಂದು ಹದಕ್ಕೆ ನೀರನ್ನು ನಿಲ್ಲಿಸುತ್ತಾರೆ. ಏಳೆಂಟು ದಿನಗಳಲ್ಲಿ ಬತ್ತ ಮೊಳಕೆ ಒಡೆದು ಹಚ್ಚ ಹಸುರಾಗಿ ಕಂಗೊಳಿಸುತ್ತದೆ.

ಈ ಸಮಯದಲ್ಲಿಯೇ ರೈತ ಉಳಿದೆಲ್ಲಾ ಗದ್ದೆಗಳನ್ನು ಹೂಡಿ ಹದಗೊಳಿಸಿ ನಾಟಿಗೆ ಸಿದ್ಧಗೊಳಿಸುವ ಶ್ರಮದಾಯಕ ಕೆಲಸದಲ್ಲಿ ತೊಡಗಿರುತ್ತಾನೆ. ಚಳಿ, ಗಾಳಿ, ಮಳೆಯನ್ನು ಲೆಕ್ಕಿಸದೇ ಅವನ ಕುಟುಂಬ ವರ್ಗವು ಈ ಎಲ್ಲಾ ಕೆಲಸಗಳಲ್ಲಿ ಅವನೊಂದಿಗೆ ಸಹಕರಿಸುತ್ತದೆ.

ಯಾಕಲಿನಲ್ಲಿ ಬೆಳೆಯುವ ಸಸಿಗಳನ್ನು ಆಯಾ ತಳಿಗಳ ಗುಣಲಕ್ಷಣಗಳಿಗೆ ಸರಿಯಾಗಿ ಮತ್ತು ನೀರಿನ, ಮಳೆಯ ಅನುಕೂಲಗಳನ್ನು ನೋಡಿಕೊಂಡು, 20 ರಿಂದ 30 ದಿನಗಳೊಳಗೆ ಗದ್ದೆಗಳಲ್ಲಿ ನೆಡುತ್ತಾರೆ. ಇದನ್ನೇ ನಾಟಿ ಮಾಡುವುದು ಎನ್ನುತ್ತಾರೆ. ಒಂದು ಮೊಳಕ್ಕೆ 3 ನಾಟಿಗಳನ್ನು ಹಿಂದೆಲ್ಲಾ ಮಾಡುತ್ತಿದ್ದರು. ಹೆಚ್ಚಾಗಿ ಗಂಡಸರೇ ನಾಟಿ ಕೆಲಸ ಮಾಡುತ್ತಾರೆ. ಆದರೆ 'ಅಗೆ' ಎಂದು ಕರೆಯುವ ಬತ್ತದ ಸಸಿಗಳನ್ನು ಮಹಿಳೆಯರೇ ಕಿತ್ತು ಕಂತೆಯನ್ನಾಗಿ ಕಟ್ಟುತ್ತಾರೆ.

ದೇಶಿಯ ಲೆಕ್ಕಾಚಾರ : ಹೆಂಗಸರು ಎರಡು ಕೈಗಳಲ್ಲಿ ಹಿಡಿಯಬಹುದಾದ ಬತ್ತದ ಸಸಿಗಳನ್ನು ಅಂದರೆ ಅಗೆಯನ್ನು ಒಂದು ಕಂತೆ ಅಥವಾ ಸುಡಿ ಎನ್ನುತ್ತಾರೆ. ಅಂತಹ ಐದು ಕಂತೆಗಳನ್ನು ಒಂದು ಮೆದೆ ಎನ್ನುತ್ತಾರೆ. ಹತ್ತು ಮೆದೆಗಳನ್ನು ಒಂದು ಹೊರೆ ಎಂದು ಕರೆಯುತ್ತಾರೆ. ಕೆಲವು ಕಡೆ ಎಂಟು ಮೆದೆಗಳನ್ನು ಒಂದು ಹೊರೆ ಎಂದು ಹೇಳುವುದಿದೆ. ಒಟ್ಟಿನಲ್ಲಿ ಒಂದು ಹೊರೆ ಎಂದರೆ ಒಬ್ಬ ಮನುಷ್ಯ ಹೊರಕಬಹುದಾದ ಭಾರ. ಇಂತಹ 20 ರಿಂದ 25 ಹೊರೆಗಳು 100 ಭಟ್ಟಿ (ಮೂರು ಎಕರೆ) ಭೂಮಿಗೆ ಸಾಕಾಗುತ್ತದೆ. ಎನ್ನುವುದು ರೈತರ ಪರಂಪರಾನುಗತ ಅಂದಾಜು.

ಭೂ ಅಳತೆಗೋಲು : ಕರ್ನಾಟಕದ ಬೇರೆ ಪ್ರದೇಶಗಳಿಗಿಂತ ಕೊಡಗಿನ ಭೂ ಲೆಕ್ಕಾಚಾರವೇ ಬೇರೆ. ಇಲ್ಲಿಯ ಗದ್ದೆಗಳನ್ನು ಎಕರೆ ಲೆಕ್ಕದಲ್ಲಿ ಅಳೆಯುವುದಿಲ್ಲ. 'ಭಟ್ಟಿ' ಲೆಕ್ಕದಲ್ಲಿ ಅಳೆಯುತ್ತಾರೆ.

ಹಿಂದೆಲ್ಲಾ ಇಲ್ಲಿ ಅಳೆಯುತ್ತಿದ್ದದ್ದು 'ಪರೆ'ಯಲ್ಲಿ ಪರೆ ಎಂದರೆ ಚೌಕಕಾರದ ಮರದ ಒಂದು ಪೆಟ್ಟಿಗೆ. ಅದರ ತುಂಬಾ ಬತ್ತ ತುಂಬಿ ಮೇಲ್ಭಾಗದಲ್ಲಿ ಒಂದು ಉರುಟಾದ ಪರೆದೊಣ್ಣೆಯನ್ನು ಉರುಳಿಸಿ ಸಮತಟ್ಟು ಮಾಡುತ್ತಾರೆ. ಇದು 10 ಸೇರಿನ ಅಳತೆ. ಇಂತಹ 8 ಪರೆಗಳಿಗೆ 1 ಭಟ್ಟಿ ಎನ್ನುತ್ತಾರೆ. ಅಂದರೆ 80 ಸೇರು. 15 ಭಟ್ಟಿಗಳನ್ನು ಒಂದು ಗಾಡಿ ಎನ್ನುತ್ತಾರೆ. ಅಂದರೆ ಒಂದು ಎತ್ತಿನ ಗಾಡಿಯಲ್ಲಿ ತುಂಬಬಹುದಾದ ಪ್ರಮಾಣ.

ಈ ಭಟ್ಟಿ ಬತ್ತವನ್ನೇ ಆಧಾರವಾಗಿರಿಸಿ ಗದ್ದೆಯ ವಿಸ್ತೀರ್ಣವನ್ನು ನಿರ್ಧರಿಸುತ್ತಿದ್ದರು. 100 ಭಟ್ಟಿ ಭೂಮಿ ಎಂದರೆ, ಅಲ್ಲಿ ಸರಿಯಾಗಿ ಬೇಸಾಯ ಮಾಡಿದರೆ ಅಷ್ಟು ಬತ್ತವನ್ನು ಬೆಳೆಯಬಹುದೆಂದು ಅಂದಾಜು. ಸಾಧಾರಣವಾಗಿ 100 ಭಟ್ಟಿ ಗದ್ದೆ ಎಂದರೆ 3 ಎಕರೆ ವಿಸ್ತೀರ್ಣ ಇರುತ್ತದೆ.

ಹಿಂದೆಲ್ಲಾ 100, 200, 500, 1000 ಭಟ್ಟಿ ಭೂಮಿ ರೈತರ ಹತ್ತಿರ ಇದ್ದು ಅದಕ್ಕೆ ತಕ್ಕಂತೆ ಬೇಸಾಯ ನಡೆಯುತ್ತಿತ್ತು. ಈ ಭೂಮಿಯಲ್ಲಿ ಸಾಗು, ಜಮ್ಮಾ, ಉಂಬಳಿ, ಜೋಡಿ, ಮುಂತಾದ ವರ್ಗಗಳು ಇದ್ದವು. ಆ ವರ್ಗಕ್ಕೆ ಸರಿಯಾಗಿ ಕಂದಾಯ ನಿಗದಿಯಾಗಿರುತ್ತಿತ್ತು. ವ್ಯವಸಾಯವೇ ಪ್ರಧಾನವಾಗಿದ್ದ ಕಾಲದಲ್ಲಿ ರಾಜರು ಸಹ ಬತ್ತ ಗದ್ದೆಯನ್ನು ಬಹುಮಾನವಾಗಿ ಕೊಡುತ್ತಿದ್ದರು. ಆ ಕಾಲದಲ್ಲಿ ರೈತರ ಸಾಮಾಜಿಕ ಅಂತಸ್ತಿನ ಮಾನದಂಡವೂ ಗದ್ದೆಗಳೇ ಆಗಿರುತ್ತಿದ್ದವು. ಕೊಡಗನ್ನಾಳಿದ ಹಾಲೇರಿ ಅರಸರಲ್ಲಿ ಲಿಂಗರಾಜೇಂದ್ರನು ಆಗಲೇ ಭೂಮಿ ಕಂದಾಯ ಮೊದಲಾದ ವಿಷಯಗಳಿಗೆ ನೀತಿ ನಿಯಮದ ಕಾನೂನುಗಳ ಆದೇಶವನ್ನು ಹೊರಡಿಸಿದ್ದ. ಅದನ್ನು ಆ ರಾಜನ ಹೆಸರಿನ 'ಶಿಸ್ತು' ಎಂದು ಕರೆಯುತ್ತಿದ್ದರು. ಆ ಕಾಲದಲ್ಲಿ ಬತ್ತ ಬೇಸಾಯಕ್ಕೆ ಜನರ ಅಭಾವ ಇದ್ದುದರಿಂದ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಸುತ್ತಮುತ್ತಲಿನಿಂದ ಅರೆ ಭಾಷೆ ಮಾತನಾಡುವ ಗೌಡರನ್ನು ಕರೆಸಲಾಯಿತು. ಇವತ್ತಿಗೂ ಬತ್ತ ಕೃಷಿಯಲ್ಲಿ ಅವರೇ ಹೆಚ್ಚಾಗಿದ್ದಾರೆ. ಅವರಲ್ಲದೇ ಬಿಲ್ಲ, ಬಂಟ ಮೊದಲಾದವರು ಅಲ್ಪ ಪ್ರಮಾಣದಲ್ಲಿದ್ದಾರೆ. ಬುಡಕಟ್ಟಿನ ಜನ, ಪರಿಶಿಷ್ಟ ವರ್ಗದವರು ಕೃಷಿ ಕಾರ್ಮಿಕರಾಗಿ ಹೆಚ್ಚಾಗಿ ದುಡಿಯುತ್ತಿದ್ದಾರೆ.

ಜುಲೈ ತಿಂಗಳಲ್ಲಿ ಕೊಡಗಿನಲ್ಲಿ ಪೂರ್ಣ ಪ್ರಮಾಣದಲ್ಲಿ ಮಳೆ ಸುರಿಯುತ್ತಿರುತ್ತದೆ. ಜೊತೆಗೆ ಚಳಿಗಾಳಿಯೂ ಇರುತ್ತವೆ. ಅಲ್ಲಲಿ ಜಲಮೂಲಗಳು ಹುಟ್ಟುತ್ತವೆ. ತೋಡು - ತೊರೆಗಳು ತುಂಬಿ ಹರಿಯುತ್ತಿರುತ್ತವೆ. 'ಆಟಿ' ತಿಂಗಳು (ಆಷಾಢ) ಎಂದು ಕರೆಯುವ ಈ ಸಮಯದಲ್ಲಿಯೇ ಎಲ್ಲರೂ ಗದ್ದೆಯಲ್ಲಿ ನಾಟಿ ನೆಡುವ ಕೆಲಸದಲ್ಲಿ ತೊಡಗುತ್ತಾರೆ. 'ಗೊರಗ' ಎಂಬ ಮಳೆ ಕವಚವನ್ನು ತಲೆಗೆ ಹಾಕಿರುತ್ತಾರೆ. ಅದು ಬೆನ್ನನ್ನು ಮುಚ್ಚಿ ಮಳೆಯಿಂದ ರಕ್ಷಣೆ ನೀಡುತ್ತಿರುತ್ತದೆ.

ಬೇಗ ನಾಟಿ ಮಾಡಿ ಮುಗಿಸಬೇಕೆಂಬ ಹುಮ್ಮಸ್ಸಿನಲ್ಲಿಯೇ ಎಲ್ಲರೂ ಇರುತ್ತಾರೆ. ಆದುದರಿಂದ ವಾತಾವರಣದ ಶೀತವಾಗಲೀ, ದೇಹ ಶ್ರಮವಾಗಲೀ ಇಲ್ಲಿಯ ರೈತರನ್ನು ಬಾಧಿಸುವುದಿಲ್ಲ. ನಾಟಿ ಕೆಲಸ ಆಗಸ್ಟ್ ತಿಂಗಳವರೆಗೆ ಮುಂದುವರಿಯುತ್ತದೆ. ಆದರೆ ಅಲ್ಲಿಂದ ಮುಂದಕ್ಕೆ ದಾಟುವುದಿಲ್ಲ.

ಆ ಮೇಲೆ ಒಂದು ತಿಂಗಳು ಕಳೆದು ಕಳೆ ತೆಗೆದು ಕಾಲಾಡಿಸುತ್ತಾರೆ. ಅದೇ ಸಮಯದಲ್ಲಿ ಮೇಲು ಗೊಬ್ಬರವಾಗಿ ಕೆಲವರು ರಾಸಾಯನಿಕ ಗೊಬ್ಬರವನ್ನು ಈಗ ಕೊಡುವುದಿದೆ. ಆದರೆ ಸಾಂಪ್ರದಾಯಿಕವಾಗಿ ಹಿಂದಿನಿಂದಲೂ ಬಂದ ಕೃಷಿ ಪದ್ಧತಿಯಲ್ಲಿ ಕೇವಲ ಸಗಣಿ ಗೊಬ್ಬರವನ್ನಷ್ಟೇ ಕೊಡುತ್ತಾರೆ.

ಬತ್ತದ ತಳಿಗೆ ಅನುಗುಣವಾಗಿ ನಾಲ್ಕೈದು ತಿಂಗಳುಗಳಲ್ಲಿ ಬತ್ತ ಕುಯ್ಲಿಗೆ ಬರುತ್ತದೆ. ಅದನ್ನು ಕುಯಿದು, ಹೊತ್ತು ಕಣದಲ್ಲಿ ಮೆದೆ ಒಟ್ಟುತ್ತಾರೆ. ಈ ಕೆಲಸಗಳಿಗೆಲ್ಲಾ ರೈತರು ಪರಸ್ಪರ ಸಹಾಯ ಮಾಡುವ ಪದ್ಧತಿ ಇದೆ. ಇದನ್ನು 'ಮುಯ್ಯಿ' ಎನ್ನುತ್ತಾರೆ. ಜನಬಲವನ್ನು ನೋಡಿಕೊಂಡು ಆಮೇಲೆ ಸಾವಕಾಶವಾಗಿ ಪೈರನ್ನು ಬಡಿದು ಬತ್ತವನ್ನು ಬೇರ್ಪಡಿಸಿ ಗಾಳಿಗೆ ತೂರಿ ಜಳ್ಳನ್ನು ಬೇರೆ ಮಾಡುತ್ತಾರೆ. ಉಳಿದ ಹುಲ್ಲಿನ ಮೇಲೆ ದನಗಳನ್ನು ಸುತ್ತಾಕಾರವಾಗಿ ಮೇಟಿಯ ಸುತ್ತಲು ಓಡಾಡಿಸುತ್ತಾರೆ. ಇದನ್ನು 'ಒಕ್ಕಲು ಹಾಕುವುದು'ಎಂದು ಕರೆಯುತ್ತಾರೆ. ಅಲ್ಲಿಯೂ ಒಕ್ಕಲು ಬತ್ತ ಸಿಗುತ್ತದೆ. ಉಳಿದ ಹುಲ್ಲನ್ನು ಕಂತೆಗಳಾಗಿ ಕಟ್ಟಿ ಒಟ್ಟುತ್ತಾರೆ. ಗುಡಾರದ ಆಕಾರದಲ್ಲಿ ಒಟ್ಟುವ ಈ ಹುಲ್ಲಿನ ರಾಶಿಯನ್ನು 'ಹುಲ್ಲುಮುಂಡ' ಎಂದು ಕರೆಯುತ್ತಾರೆ. ಇದರ ಮೇಲ್ಭಾಗ ಎರಡೂ ಕಡೆಗೂ ಇಳಿಜಾರಾಗಿರುವುದರಿಂದ ಮಳೆಯ ನೀರು ಒಳಕ್ಕೆ ಸೇರುವುದಿಲ್ಲ. ಹಾಗಾಗಿ ಮಳೆಗಾಲದಲ್ಲೂ ಹುಲ್ಲು ಒಣಗಿ ಸುರಕ್ಷಿತವಾಗಿರುತ್ತದೆ. ವರ್ಷವಿಡೀ ಜಾನುವಾರುಗಳಿಗೆ ಮೇವಾಗಿ ಇದು ಉಪಯೋಗಕ್ಕೆ ಬರುತ್ತದೆ.

ಕೊಡಗಿನಲ್ಲಿ ಹಿಂದಿನಿಂದಲೂ ಕೇವಲ ಒಂದು ಬೆಳೆ ತೆಗೆಯುತ್ತಾರೆ. ಗದ್ದೆ ಕುಯಿಲಿನ ಅನಂತರ ಗದ್ದೆಯನ್ನು ಹಾಗೆಯೇ ಬಿಟ್ಟಿರುತ್ತಾರೆ. ಆದರೆ ಸ್ವಲ್ಪ ಮಟ್ಟಿನ ನೀರಿನ ಸೌಕರ್ಯ ಇರುವಲ್ಲಿ ಸೌತೆ, ಬದನೆ, ಅಲಸಂದೆ, ಮೆಣಸಿನ ಕಾಯಿ ಮೊದಲಾದವನ್ನು ರೈತರು ಸಾಧಾರಣವಾಗಿ ಗದ್ದೆಯಲ್ಲಿ ಬೆಳೆಸುತ್ತಾರೆ.

ದೇಶೀಯ ಬತ್ತ ತಳಿಗಳು : ಬಹಳ ಹಿಂದಿನಿಂದಲೂ ಕೊಡಗಿನಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದದ್ದು 'ಬಿಳಿಯ' ಅಥವಾ ಸ್ಥಳೀಯ ಭಾಷೆಯಲ್ಲಿ 'ಬೊಳಿಯ' ಎಂಬ ತಳಿ. ಇದರಲ್ಲಿ ಸಾಕಷ್ಟು ಭಿನ್ನ ತಳಿಗಳು ಇವೆ. ಅವು ಯಾವುದೆಂದರೆ ಪಾಲು ಬೊಳಿಯ, ಕಿರು ಬೊಳಿಯ, ಮುಂಬೊಳಿಯ ಇತ್ಯಾದಿ. ಈ ಬತ್ತ ಗಾತ್ರದಲ್ಲಿ ದಪ್ಪ. ಅಕ್ಕಿಯೂ ಹಾಗೆ. ಇದು ಸಾಧಾರಣ ರುಚಿ ಇರುತ್ತದೆ. ಜೋರು ಮಳೆಗೆ ಒಗ್ಗಿಕೊಂಡು ರೋಗ ಮುಕ್ತವಾಗಿದ್ದರೂ ಈ ಬೆಳೆಯನ್ನು ರೈತರು ಹೆಚ್ಚು ಕೃಷಿ ರೈತರಿಗೆ ನಷ್ಟ ಇದು ಅಲ್ಲಿಯ ಮಾಡುತ್ತಿರಲಿಲ್ಲ. ಆದರೆ ಅಧಿಕ ಫಸಲು ಇಲ್ಲದಿದ್ದರೂ ರೈತರಿಗೆ ಮೋಸ ಮಾಡುತ್ತಿರಲಿಲ್ಲ. ಕುಚಲಕ್ಕಿಗಾಗಿ ಇದಕ್ಕೆ ಹೊರಗೆ ಬೇಡಿಕೆ ಇರುತ್ತಿತ್ತು.

ಕರ್ತ ಅಥವಾ ಕೆಂಬತ್ತಿ ಎನ್ನುವುದು ಇಲ್ಲಿಯ ಮತ್ತೊಂದು ದೇಶಿಯ ತಳಿ. ಇದು ರುಚಿಯಲ್ಲಿ ಸಿಹಿ. ಹೆಚ್ಚು ಬಿಳಿ ಇಲ್ಲ. ರೊಟ್ಟಿ ಮಾಡಲು ಇದರ ಹಿಟ್ಟು ಒಳ್ಳೆಯದು ಎನ್ನುವುದು ರೈತ ಮಹಿಳೆಯರ ಅನಿಸಿಕೆ. ಇದರಲ್ಲಿ ಪಂದಿ ಕರ್ತ ಮತ್ತು ಮಾನಿ ಕರ್ತ ಎಂಬ ಎರಡು ಪ್ರಭೇದಗಳಿವೆ.

ಜೀರಿಗೆ ಸಣ್ಣ ಎನ್ನುವುದು ಹೆಸರೇ ಹೇಳುವ ಹಾಗೆ ಗಾತ್ರದಲ್ಲಿ ಸಣ್ಣಗಿದ್ದು. ಆದರೆ ಪರಿಮಳ ಇರುವ ಬತ್ತ. ಹಾಗೆಯೇ ಗಂಧ ಸಾಲೆ ಎಂಬ ಮತ್ತೊಂದು ತಳಿಯು ಸುವಾಸನೆಯಿಂದ ಕೂಡಿದ ಅಕ್ಕಿ.

ಚೂಪಾದ ಮುಳ್ಳಿನಂತಿರುವ ಬತ್ತವನ್ನು ಮುಳ್ಳ ಅಥವಾ ಚೂಡು ಎಂದು ಕರೆಯುತ್ತಾರೆ. ಇದಲ್ಲದೇ ಕಾಕೆ ಕಳಮೆ, ಪೊರಿ ಕಳಮೆ ಎಂಬ ಎರಡು ದೇಶಿಯ ತಳಿಗಳು ಹಿಂದೆ ಪ್ರಚಲಿತದಲ್ಲಿದ್ದವು.

ಕೊಡಗಿನವರೇ ಆದ ಬಡುವಂಡ್ರ ಕಾರ್ಯಪ್ಪ ಬೆಳ್ಯಪ್ಪ ಎಂಬುವವರು ಈ ಹಿಂದೆ ಸಂಶೋಧಿಸಿದ ಬತ್ತವನ್ನು ಅವರದೇ ಹೆಸರಿನಲ್ಲಿ ಸಂಕ್ಷಿಪ್ತವಾಗಿ ಬಿ.ಕೆ.ಬಿ. ಎಂದು ಕರೆಯುತ್ತಾರೆ. ಇದು ಇಲ್ಲಿಯ ಹವಾಗುಣಕ್ಕೆ ಮತ್ತು ಮಣ್ಣಿಗೆ ಒಗ್ಗಿ ಜನಪ್ರಿಯವಾಗಿದೆ. ಈಗ ಹೆಚ್ಚಿನವರು ಬಿಕೆಬಿಯನ್ನು ಬೆಳೆಸುತ್ತಿದ್ದಾರೆ.

ಹಾಗೆಯೇ ಪಟ್ಟಡ ಉತ್ತಪ್ಪ ಬೆಳ್ಯಪ್ಪ ಎನ್ನುವವರು ಪ್ರಚಲಿತಕ್ಕೆ ತಂದ ಬತ್ತದ ತಳಿಯನ್ನು ಪಿಯುಬಿ ಎಂದು ಅವರ ಹೆಸರಿನಲ್ಲಿಯೇ ಗುರುತಿಸುತ್ತಾರೆ. ಆದರೆ ಇದು ಹೆಚ್ಚು ಪ್ರಚಲಿತಕ್ಕೆ ಬಂದಿಲ್ಲ.

ಮೇಲೆ ಹೇಳಿದ ಈ ತಳಿಗಳಲ್ಲದೇ ಪುಟ್ ಬತ್ತ, ದೊಡ್ಡಿ, ಸಣ್ಣ, ರಾಜಮುಡಿ ಮೊದಲಾದ ಹಲವಾರು ದೇಶಿಯ ತಳಿಗಳನ್ನು ಇಲ್ಲಿಯ ರೈತರು ಮೊದಲಿನಿಂದಲೂ ನೆಡುತ್ತಾ ಬಂದಿದ್ದಾರೆ. ಇವುಗಳಿಗೆ ರೋಗ ನಿರೋಧಕ ಶಕ್ತಿ ಜಾಸ್ತಿ ಇದ್ದು ಸಾಧಾರಣ ರೋಗ ಕೀಟ ಬಾಧೆಗಳಿಂದ ಮುಕ್ತವಾಗಿರುತ್ತದೆ. ಇವುಗಳಿಂದ ಸಾಕಷ್ಟು ಹುಲ್ಲು ಸಿಗುವುದರಿಂದ ಜಾನುವಾರುಗಳ ಸಾಕಾಣಿಕೆಗೆ ಅನುಕೂಲವಾಗುತ್ತದೆ.

ಈಗಲೂ ಕೊಡಗಿನಲ್ಲಿ ಶೇಕಡಾ 40 ಈ ಸಾಂಪ್ರದಾಯಿಕ ತಳಿಗಳನ್ನು ಬೆಳೆಯುತ್ತಿದ್ದಾರೆ ಎನ್ನುವುದು ಕೃಷಿ ಇಲಾಖೆಯ ಮಾಹಿತಿ. ಅದರಲ್ಲೂ ಹೆಚ್ಚು ಮಳೆ ಬೀಳುವ ಮಡಿಕೇರಿ ತಾಲೂಕಿನ ಭಾಗಮಂಡಲ, ಗಾಳಿಬೀಡು, ಕಾಲೂರು ಮೊದಲಾದ ಕಡೆ ರೈತರು ಇವತ್ತಿಗೂ ಇದನ್ನೇ ನಂಬಿ ಬೇಸಾಯ ಮಾಡುತ್ತಿದ್ದಾರೆ.

ಕೊಡಗಿನ ಉತ್ತರ ಭಾಗಗಳಲ್ಲಿ ಶೇ. 60ರಲ್ಲಿ ಈಗ ಅಧಿಕ ಇಳುವರಿ ತಳಿಗಳಾದ ಇಂಟಾನ ತುಂಗಾ, ಹೇಮಾವತಿ, ಅತಿರ, ಜಯ, ಲೋಕನಾಥ ಮುಂತಾದ ತಳಿಗಳನ್ನು ಬೆಳೆಸುತ್ತಿದ್ದಾರೆ.

ಕೊಡಗಿನ ಉತ್ತರ ಭಾಗದ ಕುಶಾಲನಗರ, ಸೋಮವಾರಪೇಟೆ ಭಾಗದ ಕೆಲವು ಕಡೆ ಮಳೆ ಕಡಿಮೆ ಇದ್ದು ಬಯಲುಸೀಮೆಯ ವಾತಾವರಣ ಇದೆ. ಅಲ್ಲಿಯದು ಕಪ್ಪು ಮಣ್ಣು, ಅಲ್ಲೆಲ್ಲಾ ಸ್ವಲ್ಪ ಪ್ರಮಾಣದಲ್ಲಿ ಜೋಳ ಬೆಳೆಯಲಾಗುತ್ತದೆ. ಡಿಕೆ 972, ಹೈಸೆಲ್, ಸಿಪಿ 818 ಮುಂತಾದ ತಳಿಗಳನ್ನು ಪ್ರಸ್ತುತ ಬೆಳೆಯುತ್ತಿದ್ದಾರೆ. ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪದಲ್ಲಿ ಟಿಬೆಟ್ಟಿಯನ್ನರು ನೆಲಸಿದ ಮೇಲೆ ಅವರ ಪ್ರಭಾವದಿಂದ ಈ ಬೆಳೆಗಳು ಇಲ್ಲಿ ಪರಿಚಯವಾದವು ಎನ್ನಬಹುದು.

ಕೊಡಗಿನಲ್ಲಿ ಮುಖ್ಯ ನದಿಗಳಾಗಿ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಬರಪೊಳೆ ಕಂಡುಬಂದರೆ, ಕನ್ನಿಕೆ, ಕಕ್ಕಬ್ಬೆ, ಕಾಡನೂರು ಹೊಳೆ, ಚಿಕ್ಕಹೊಳೆ, ಹಟ್ಟಿಹೊಳೆ - ಹೀಗೆ ಇನ್ನೂ ಅನೇಕ

ಉಪನದಿಗಳು ಕಂಡುಬರುತ್ತವೆ. ಮಳೆಯನ್ನೇ ಆಶ್ರಯಿಸಿ ಕೃಷಿ ಚಟುವಟಿಕೆಗಳನ್ನು ಮಾಡುವುದರಿಂದ ನದಿಗಳ ನೀರನ್ನು ಕೃಷಿಗಾಗಿ ಬಳಸುವುದು ಕಡಿಮೆ. ಇತ್ತೀಚೆಗೆ ಕಾಫಿ ತೋಟಗಳಿಗೆ ನೀರನ್ನು ಹಾಯಿಸಲು ಬಳಸಿಕೊಳ್ಳುತ್ತಿದ್ದಾರೆ. ಹಾಗೆಯೇ ಕೆರೆಗಳನ್ನು ತೋಡಿ ಅದರಿಂದಲೂ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಸೋಮವಾರಪೇಟೆ ಸಮೀಪ ಹುದುಗೂರಿನಲ್ಲಿ ಹಾರಂಗಿಗೆ ಅಣೆಕಟ್ಟುಕಟ್ಟಿ ನೀರನ್ನು ಬಳಸಿಕೊಳ್ಳಲಾಗುತ್ತಿದೆ. ಹೊಳೆಗೂ ರಂಗಸಮುದ್ರದ ಬಳಿ ಅಣೆಕಟ್ಟು ಕಟ್ಟಿ ಅದರಿಂದ ಕೂಡ ನೀರನ್ನು ಅನೇಕ ಭೂಪ್ರದೇಶಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಹೆಚ್ಚು ಅರಣ್ಯಪ್ರದೇಶವನ್ನು ಹೊಂದಿರುವುದರಿಂದ ಅಂತರ್ಜಲ ಕೂಡ ಹೆಚ್ಚಿದೆ. ಇದರಿಂದಾಗಿ ರೈತನಿಗೆ ಅನುಕೂಲವೇ ಆಗಿದೆ. ಸಸ್ಯರಾಶಿಯು ಅಗಾಧವಾಗಿರುವ ಕಾರಣ ತೇವಾಂಶ ಹೆಚ್ಚಾಗಿರುತ್ತದೆ. ಸಸ್ಯರಾಶಿಯಲ್ಲಿ ಮುಖ್ಯವಾಗಿ 1. ಕುರುಚಲು ಮತ್ತು ಮುಳ್ಳುಕಂಟಿಗಳು 2. ತೇವಾಂಶಭರಿತ ಉದುರೆಲೆ ಅರಣ್ಯ, 3. ನಿತ್ಯಹರಿದ್ವರ್ಣ ಮತ್ತು ಭಾಗಶಃ ನಿತ್ಯಹರಿದ್ವರ್ಣ ಅರಣ್ಯಗಳು, 4. ಷೋಲಾಗಳು ಮತ್ತು ಹುಲ್ಲುಗಾವಲುಗಳು ಎಂಬ ನಾಲ್ಕು ಗುಂಪುಗಳನ್ನು ಕಾಣಬಹುದು.

ಸದಾ ಹಸಿರಿನಿಂದ ಕೂಡಿರುವ ಸಸ್ಯವರ್ಗದಿಂದ ಬೇಸಾಯಕ್ಕೆ ತಕ್ಕ ವಾತಾವರಣ ನಿರ್ಮಿತವಾಗಿದೆ. ಅಲ್ಲದೇ ರೈತನಿಗೆ ಬೇಕಾದ ಅನೇಕ ವಸ್ತುಗಳು ಕೂಡ ಈ ಅರಣ್ಯಗಳಿಂದ ಲಭ್ಯ. ಉದಾ : ಎಲೆಗಳು ಉದುರಿ ಮಣ್ಣಿನಲ್ಲಿ ಬೆರೆತು ಕರಗುವುದರಿಂದ ನೈಸರ್ಗಿಕ ಗೊಬ್ಬರ ಸಿದ್ಧವಾಗುತ್ತದೆ.

ಹಾರಂಗಿ ಅಣೆಕಟ್ಟು : ಕಾವೇರಿಯ ಉಪ ನದಿಯಾದ ಹಾರಂಗಿಗೆ ಸೋಮವಾರಪೇಟೆ ತಾಲೂಕಿನ ಹುದುಗೂರು ಗ್ರಾಮದಲ್ಲಿ ಅಣೆಕಟ್ಟೆ ಕಟ್ಟಿರುತ್ತಾರೆ. ಕುಶಾಲನಗರದಿಂದ 9 ಕಿ.ಮೀ. ದೂರದಲ್ಲಿದ್ದು 49.99 ಮೀ. ಎತ್ತರವಿದೆ. 845.82 ಮೀ. ಉದ್ದವಿದೆ. ಆದರೂ ಕೊಡಗಿನವರಿಗೆ ಹೆಚ್ಚು ಏನು ಉಪಯೋಗವಾಗಿಲ್ಲ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ರೈತರಿಗೆ ಇದರಿಂದ ಹೆಚ್ಚು ಉಪಯೋಗವಾಗಿರುತ್ತದೆ.

ಗುಡ್ಡೆ ಹೊಸೂರು ಬಳಿ ಚಿಕ್ಲಿ ಹೊಳೆಗೊಂದು ಸಣ್ಣ ಅಣೆಕಟ್ಟು ಇದ್ದು ಅದು ಸೀಮಿತ ಭೂಮಿಗಷ್ಟೇ ನೀರು ಒದಗಿಸುತ್ತದೆ. ಒಟ್ಟಿನಲ್ಲಿ ಕೊಡಗಿನ ರೈತರು ಇವತ್ತಿಗೂ ಮಳೆ ನೀರನ್ನೇ ನಂಬಿ ಬೇಸಾಯ ಮಾಡುತ್ತಿದ್ದಾರೆ.

3.11.2012ರ ಕೃಷಿ ಇಲಾಖೆಯ ಮಾಹಿತಿಯಂತೆ ಮಳೆಯಾಶ್ರಿತ ಬೆಳೆಯ ವಿಸ್ತೀರ್ಣ 31,223 ಹೆ. ಅದೇ ನೀರಾವರಿ ಅನುಕೂಲ ಪಡೆದ ವಿಸ್ತೀರ್ಣ ಕೇವಲ 2250 ಹೆ.

ಮುಸುಕಿನ ಜೋಳ, ರಾಗಿ, ಎಣ್ಣೆಕಾಳು, ದ್ವಿದಳ ಧಾನ್ಯಗಳು, ತರಕಾರಿ ಮೊದಲಾದವುಗಳನ್ನು ಈ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಆದರೆ ಕೊಡಗಿನ ಮುಖ್ಯ ಆಹಾರ ಬೆಳೆಯಾಗಿ ಬತ್ತವೇ ಇಂದಿಗೂ ಉಳಿದು ಬಂದಿದೆ.

ಆಹಾರಪದ್ಧತಿ : ಬತ್ತ ಅಂದರೆ ಅಕ್ಕಿ, ಇಲ್ಲಿಯ ಜನರ ಮುಖ್ಯ ಆಹಾರ. ಅಕ್ಕಿಯನ್ನು ಹುಡಿ ಮಾಡಿ ಅದರಿಂದ ಸಾಕಷ್ಟು ತಿನಿಸುಗಳನ್ನು ಇಲ್ಲಿಯ ಜನ ದಿನನಿತ್ಯದಲ್ಲಿ ಉಪಯೋಗಿಸುತ್ತಾರೆ. ಸ್ಥಳೀಯ ಭಾಷೆಯಲ್ಲಿ ಅಕ್ಕಿಯಿಂದ ತಯಾರಿಸುವ ತಿಂಡಿಗಳ ಹೆಸರು ಈ ರೀತಿ ಇವೆ. ತಳಿಯಪುಟ್ಣ, ದೋಸೆಪುಟ್, ಜಾಡುಪುಟ್, ನೀರುಪುಟ್, ಪಾಪುಟ್, ಕಡಂಬುಟ್, ನೀರು ಕಡಂಬುಟ್, ಭೂಕಜ್ಜಾಯ, ಚಟ್ಟಿಪುಟ್, ಕತ್ತಿಪುಟ್, ಚಿರಂಬುಟ್, ತಂಬುಟ್, ಕುವಲ್‌ಪುಟ್, ಚಿತ್ತಡಿಪುಟ್ ಮೊದಲಾದವು.

ಹಬ್ಬಗಳು : ಬತ್ತ ಕೃಷಿಯನ್ನು ಮೂಲವನ್ನಾಗಿರಿಸಿ ಇಲ್ಲಿಯ ಹಬ್ಬಗಳು ಆಚರಿಸಲ್ಪಡುತ್ತವೆ. 'ಕೈಲ್‌ಪೋಳ್ದ್' ಅಥವಾ ಕನ್ನಡದಲ್ಲಿ ಕೈಲು ಮುಹೂರ್ತ ಎಂಬ ಹಬ್ಬ. ಮಳೆಗಾಲದ ಅನಂತರ ಎಡೆಬಿಡದೆ ಬೇಸಾಯದ ದುಡಿಮೆಯ ವಿರಾಮದಲ್ಲಿ ಸೆಪ್ಟೆಂಬರ್ ತಿಂಗಳ 3 ನೇ ತಾರೀಖು ಈ ಹಬ್ಬವನ್ನು ಕೊಡಗಿನಾದ್ಯಂತ ಆಚರಿಸುತ್ತಾರೆ. ಅಲ್ಲಿಯವರೆಗೆ ಬೇಸಾಯಕ್ಕೆ ಉಪಯೋಗಿಸಿದ ನೊಗ, ನೇಗಿಲು ಮುಂತಾದ ಸಲಕರಣೆಗಳೊಂದಿಗೆ ಕತ್ತಿ, ಕೋವಿಗಳನ್ನು ಶುದ್ಧಗೊಳಿಸಿ ಪೂಜಿಸುತ್ತಾರೆ. ಇದನ್ನು ಒಂದು ರೀತಿಯಲ್ಲಿ ಆಯುಧ ಪೂಜೆಗೆ ಹೋಲಿಸಬಹುದಾದರೂ ಇದು ಪೂರ್ಣವಾಗಿ ರೈತರು ದುಡಿಮೆಯ ಆಯಾಸದಿಂದ ಹೊರ ಬಂದು ಸಂತಸ, ವಿಶ್ರಾಂತಿ,ಮೋಜು ಮಾಡುವ ಹಬ್ಬವಾಗಿರುತ್ತದೆ. ಆ ದಿನ ಸಾಕಷ್ಟು ಮದ್ಯ, ಮಾಂಸಗಳನ್ನು ಅದರಲ್ಲೂ ಮುಖ್ಯವಾಗಿ ಹಂದಿ ಮಾಂಸವನ್ನು ಸೇವಿಸುತ್ತಾರೆ. ಅಲ್ಲದೇ ಕಾಡಿನಲ್ಲಿ ಬೇಟೆಯಾಡುವ ಪದ್ಧತಿ ಇತ್ತು. ಆದರೆ ಈಗ ಬೇಟೆ ನಿಷೇಧವಾಗಿರುವುದರಿಂದ ಮರಕ್ಕೆ ಎತ್ತರದಲ್ಲಿ ತೆಂಗಿನಕಾಯಿ ಕಟ್ಟಿ ಅದಕ್ಕೆ ಗುರಿಯಿಟ್ಟು ಹೊಡೆಯುವ ಸ್ಪರ್ಧೆ ಏರ್ಪಡಿಸುತ್ತಾರೆ. ಅದಲ್ಲದೆ ಮನರಂಜನೆಗಾಗಿ ಇನ್ನಿತರ ಆಟಗಳನ್ನು ಆಡುತ್ತಾರೆ.

ನಾಟಿ ಓಟ : ಗದ್ದೆಯಲ್ಲಿ ನಾಟಿ ನೆಡುವ ಸಮಯದಲ್ಲಿ ಅದರ ಕೊನೆಯ ಹಂತದಲ್ಲಿ 'ನಾಟಿ ಓಟ' ಎಂಬ ಸ್ಪರ್ಧೆ ನಡೆಸಿ ಇಲ್ಲಿಯ ರೈತರು ಖುಷಿಪಡುವುದಿದೆ. ಈಗೆಲ್ಲಾ ಗದ್ದೆ ಕೆಸರಿನ ಓಟ ಇದೆ. ಅದಕ್ಕೆ ಮೂಲ ಪ್ರೇರಣೆ ಕೊಡಗಿನ ನಾಟಿ ಓಟವೇ ಆಗಿದೆ. ಇದು ರಾಜರ ಕಾಲದಿಂದಲೂ ನಡೆಸಿಕೊಂಡು ಬರುತ್ತಿರುವ ರೈತ ಸಮೂಹದ ಕ್ರೀಡೆ. ನಾಟಿ ನೆಟ್ಟ ಮೇಲೆ ಅದರ ಮೇಲೆಯೇ ವಿಶಾಲ ಗದ್ದೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಓಡುವ ಸ್ಪರ್ಧೆ ಇದು. ಈಗಲೂ ಸಾಂಪ್ರದಾಯಿಕವಾಗಿ ಅಲ್ಲಲ್ಲಿ ನಾಟಿ ಓಟ ನಡೆಸುತ್ತಾರೆ. ವಿಜೇತರಿಗೆ ದೇಶಿಯ ಪದ್ಧತಿಯಲ್ಲಿ ಬಾಳೆಗೊನೆಯನ್ನು ಒಂದಿಷ್ಟು ಹಣದೊಂದಿಗೆ ನೀಡಿ ಪ್ರೋತ್ಸಾಹಿಸುತ್ತಾರೆ. ಈ ಕ್ರೀಡೆಯಲ್ಲಿ ಆಯಾ ಗ್ರಾಮದ ರೈತಾಪಿ ಜನರೇ ಭಾಗವಹಿಸುತ್ತಾರೆ.

ಕಾವೇರಿ ತುಲಾ ಸಂಕ್ರಮಣ : ಇದು ಸಾಧಾರಣವಾಗಿ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಾರೀಖು 17 ರಂದು ಬರುತ್ತದೆ. ಈ ದಿನ ತಲಕಾವೇರಿಯಲ್ಲಿರುವ ಕುಂಡಿಕೆಯಲ್ಲಿ ಕಾವೇರಿ ತೀರ್ಥರೂಪದಲ್ಲಿ ಉದ್ಭವಗೊಂಡು ಕಾಣಿಸಿಕೊಳ್ಳುತ್ತಾಳೆ ಎಂಬುದು ಇಲ್ಲಿಯವರ ನಂಬಿಕೆ. ಆ ದಿನ ತಲಕಾವೇರಿ ಮತ್ತು ಭಾಗಮಂಡಲದಲ್ಲಿ ಜಾತ್ರೆ ನಡೆಯುತ್ತದೆ.

ಕಾವೇರಿ ನೇರವಾಗಿ ಇಲ್ಲಿಯ ರೈತರ ಬೇಸಾಯಕ್ಕೆ ನೆರವಾಗದಿರಬಹುದು. ಆದರೆ ಆಕೆಯನ್ನು ಇಲ್ಲಿಯ ಮೂಲ ನಿವಾಸಿಗಳು ತಮ್ಮ ಕುಲದೇವತೆಯೆಂದು ಭಾವಿಸುತ್ತಾರೆ. ಕೊಡಗಿನ ಪ್ರತಿಯೊಂದು ಜನ ಸಮೂಹ ಕಾವೇರಿಯನ್ನು ಪೂಜಿಸಿ, ಭಕ್ತಿಭಾವದಿಂದ ಆರಾಧಿಸುತ್ತಾರೆ.

ತೀರ್ಥೋದ್ಭವಕ್ಕೂ ಮುಂದಿನ ದಿನ ತಮ್ಮ ಹಚ್ಚ ಹಸುರಿನ ಗದ್ದೆಗಳ ನಡುವೆ 'ಬೆಚ್ಚು' ಅಥವಾ 'ಬೆತ್ತು'ವನ್ನು ನೆಡುತ್ತಾರೆ. ಇದು ಕಾವೇರಿಗೆ ಸ್ವಾಗತ ಬಯಸುವ ಪರಿ ಎಂದು ಹೇಳುತ್ತಾರೆ. ವೈಜ್ಞಾನಿಕವಾಗಿ ಗಮನಿಸಿದರೆ

ಇದು ಹಕ್ಕಿಗಳಿಗೆ ತಂಗುದಾಣವಾಗಿ ಅದು ಮುಂದೆ ಗದ್ದೆಗೆ ಬೀಳುವ ಕ್ರಿಮಿಕೀಟಗಳನ್ನು ನಿಯಂತ್ರಿಸಲು ಸಹಾಯಕವಾಗುತ್ತದೆ ಎಂದು ನಂಬಲಾಗಿದೆ.

ಬೆತ್ತು ಎಂದರೆ ಅದೊಂದು ಕಾಡಿನಲ್ಲಿ ಸಿಗುವ ಮರ. ಅದರ ನೇರ ಕೋಲನ್ನು ಕಡಿದು ತೊಗಟೆ ತೆಗೆಯುತ್ತಾರೆ. 'ನೊಕಟ್ಟೆ' ಬಳ್ಳಿಯನ್ನು ಸುತ್ತು ಹಾಕಿ ಕೋಲಿನ ತುದಿಯ ಕವಟೆಗೆ ಸಿಕ್ಕಿಸುತ್ತಾರೆ. ಅದಕ್ಕೊಂದಿಷ್ಟು ಹೂವಿನ ಸಿಂಗಾರ ಮಾಡುವುದು ಇದೆ. ಹೀಗೆ ಸಿದ್ಧವಾದ ಬೆತ್ತುವನ್ನು ಪೈರಿಗಿಂತ ಎತ್ತರದಲ್ಲಿ ಕಾಣುವ ಹಾಗೆ ಗದ್ದೆಗಳ ಮಧ್ಯದಲ್ಲಿ ನೆಡುತ್ತಾರೆ. ಇದನ್ನು ಕಾವೇರಿ ತುಲಾ ಸಂಕ್ರಮಣದ ಕಾಲದಲ್ಲಿ ಕೊಡಗಿನಾದ್ಯಂತ ಎಲ್ಲ ಗದ್ದೆಗಳಲ್ಲಿ ಕಾಣಬಹುದು. ಇದು ಅನಾದಿ ಕಾಲದಿಂದಲೂ ಕೊಡಗಿನಲ್ಲಿ ನಡೆದು ಬಂದು ಈಗಲೂ ಜಾರಿಯಲ್ಲಿದೆ. ಇದೇ ಸಮಯದಲ್ಲಿ ಈ ಬೆತ್ತುವಿನ ಬುಡದಲ್ಲಿ ದೋಸೆ ಮಾಡಿ ಇಡುತ್ತಾರೆ. ಆದಿನ ರೈತರ ಮನೆಗಳಲ್ಲಿ ದೋಸೆ ಮಾಡಿ ತಿನ್ನುವುದು ಒಂದು ಪದ್ಧತಿ. ತೀರ್ಥೋದ್ಭವಾದ ಮೇಲೆ ಎಲ್ಲ ರೈತರ ಮನೆಯಲ್ಲಿ ಕಾವೇರಿಯನ್ನು ಪೂಜಿಸಿ ಅಲ್ಲಿಂದ ತಂದ ತೀರ್ಥವನ್ನು ಸ್ವೀಕರಿಸುತ್ತಾರೆ.

ಹುತ್ತರಿ : ಇದು ಸಂಪೂರ್ಣವಾಗಿ ಬತ್ತ ಬೇಸಾಯದ ಪರಿಪೂರ್ಣತೆಯನ್ನು ಸಫಲತೆಯನ್ನು ಬಿಂಬಿಸುವ ಹಬ್ಬ. 'ಅರಿ' ಅಂದರೆ ಅಕ್ಕಿ, ಪುದಿಯ ಎಂದರೆ ಹೊಸತು. ಹೊಸ ಅಕ್ಕಿಯನ್ನು ಸ್ವೀಕರಿಸುವ ಹಬ್ಬವೇ ಪುತ್ತರಿ. ಕನ್ನಡದಲ್ಲಿ ಅದು ಹುತ್ತರಿ ಎಂದಾಗಿದೆ.

ಬಯಲು ಪ್ರದೇಶಗಳಲ್ಲಿ ಆಚರಿಸುವ ಸುಗ್ಗಿ ಹಬ್ಬಕ್ಕೆಇದನ್ನು ಸ್ವಲ್ಪಮಟ್ಟಿಗೆ ಹೋಲಿಸಬಹುದಾಗಿದೆ. ಆದರೂ ಇದರ ಆಚರಣೆ ತೀರಾ ಭಿನ್ನ. ಹೆಚ್ಚಾಗಿ ನವೆಂಬರ್, ಡಿಸೆಂಬರ್ ತಿಂಗಳ ಅಂದರೆ ವೃಶ್ಚಿಕ ಮಾಸದಲ್ಲಿ ಹುಣ್ಣಿಮೆಯ ರಾತ್ರಿ ರೋಹಿಣಿ ನಕ್ಷತ್ರದಲ್ಲಿ ತಮ್ಮ ತಮ್ಮ ಗದ್ದೆಗಳಲ್ಲಿ ಕದಿರನ್ನು ಅಂದರೆ ಪೈರಿನ ಕೆಲವು ನುಲಿಗಳನ್ನು ಬುಡ ಸಮೇತ ಕತ್ತರಿಸುತ್ತಾರೆ. ಸಡಗರ ಸಂಭ್ರಮದಿಂದ ಇದನ್ನು ಮನೆಗೆ ತಂದು ಸಣ್ಣಸಣ್ಣ ಕಟ್ಟುಗಳನ್ನು ಮಾಡುತ್ತಾರೆ.

ಹೀಗೆ ಕಟ್ಟು ಮಾಡುವುದಕ್ಕೂ ಒಂದು ಕ್ರಮ ಇದೆ. ಹಲಸು, ಮಾವು, ಗೇರು, ಕುಂಬಳ ಮತ್ತು ಅಶ್ವತ್ಥ ಮರಗಳ ಎಲೆಗಳಲ್ಲಿ ಕದಿರನ್ನು ಇರಿಸಿ 'ಪಡ್ಚಿ' ಮರದ ನಾರಲ್ಲಿ ಕಟ್ಟುತ್ತಾರೆ. ಅದನ್ನು ದೇವರ ಮುಂದೆ ಇರಿಸುತ್ತಾರೆ. 'ಐನ್‌ಮನೆ' ಎಂದು ಕರೆಯುವ ತಮ್ಮ ಹಿರಿಯರ ಮನೆಯಲ್ಲಿ ತಮ್ಮ ಹಿರಿಯ ಜೀವಗಳನ್ನೇ 'ಕಾರಣರು' ಎಂದು ಇಲ್ಲಿಯ ಮೂಲ ನಿವಾಸಿಗಳು ಆರಾಧಿಸುತ್ತಾರೆ. 'ನೆಲ್ಲಕ್ಕಿಬಾಡೆ' ಎಂದು ಕರೆಯುವ ಈ ಪವಿತ್ರ ಕೋಣೆಯಲ್ಲಿ ಕದಿರನ್ನು ಇಟ್ಟು ಪೂಜಿಸುತ್ತಾರೆ. ಅನಂತರ ಕದಿರನ್ನು ಸಣ್ಣ ಕಟ್ಟುಗಳಾಗಿ ಮಾಡಿ ಮನೆ ಬಾಗಿಲಿಗೆ, ಕೊಟ್ಟಿಗೆಗೆ, ಕಣಕ್ಕೆ ಹೀಗೆ ಹಲವು ಕಡೆ ಕಟ್ಟುತ್ತಾರೆ. ಪಟಾಕಿ ಸಿಡಿಸುತ್ತಾರೆ.

ಅಕ್ಕಿಯಿಂದ ಮಾಡಿದ ಪಾಯಸ, ತಂಬಿಟ್ಟು ಮೊದಲಾದ ಸಸ್ಯಾಹಾರವನ್ನಷ್ಟೇ ಸೇವಿಸಿ ಹಬ್ಬವನ್ನು ಸಡಗರದಿಂದ ಆನಂದಿಸುತ್ತಾರೆ. ರಾತ್ರಿಯೆಲ್ಲಾ ಪಟಾಕಿ ಸಿಡಿತದೊಂದಿಗೆ 'ಪೊಲಿಪೊಲಿಯೇ ಬಾ' ಎಂಬ ಘೋಷಣೆಯನ್ನು ಕೂಗುತ್ತಿರುತ್ತಾರೆ. ಅಂದರೆ ಧಾನ್ಯ ಸಮೃದ್ಧಿಯಾಗಲಿ ಎಂಬ ಹಾರೈಕೆ.

ಕೊಡಗಿನ ಮಳೆ ದೇವರು ಪಾಡಿಯಲ್ಲಿರುವ ಶ್ರೀ ಇಗ್ಗುತಪ್ಪ. ಇಕ್ಕುವ ಅಂದರೆ ಕೊಡುವ ಅಪ್ಪ ಈ ಇಗ್ಗುತಪ್ಪ. ಪಾಡಿ ಇಗ್ಗುತಪ್ಪ ದೇವಸ್ಥಾನದಲ್ಲಿ ದೇವಮುಖ್ಯಸ್ಥರು, ಹಿರಿಯರು ಸೇರಿ ಹುತ್ತರಿಯ ದಿನವನ್ನು ಗದ್ದೆಯಿಂದ ಕದಿರು ತೆಗೆಯುವ, ಊಟ ಮಾಡುವ ಮುಹೂರ್ತಗಳನ್ನು ನಿಶ್ಚಯಿಸಿರುತ್ತಾರೆ. ಅದರಂತೆ ಕೊಡಗಿನ ರೈತರು ನಡೆದುಕೊಳ್ಳುತ್ತಾರೆ. ಮೊದಲು ಪಾಡಿ ಇಗ್ಗುತಪ್ಪ ದೇವಸ್ಥಾನದಲ್ಲಿ ಅನಂತರ ಗ್ರಾಮಗಳ ದೇವಸ್ಥಾನಗಳಲ್ಲಿ ಕದಿರನ್ನು ತೆಗೆಯುವುದು ಪದ್ಧತಿ. ಅನಂತರವಷ್ಟೇ ರೈತರ ಮನೆಗಳಲ್ಲಿ ಈ ಕಾರ್ಯಕ್ರಮ ನಡೆದು ಹಬ್ಬ ಆಚರಿಸಲ್ಪಡುತ್ತದೆ.

ಹೀಗೆ ಕೊಡಗಿನ ಹಬ್ಬಗಳೆಲ್ಲಾ ಬತ್ತ ಬೇಸಾಯದೊಂದಿಗೆ ಹಾಸುಹೊಕ್ಕಾಗಿದೆ. ಬತ್ತ ಬೇಸಾಯವಿಲ್ಲದಿದ್ದರೆ ಕೊಡಗಿನ ಹಬ್ಬಗಳು ತಮ್ಮ ಅರ್ಥ ಕಳೆದುಕೊಳ್ಳುತ್ತದೆ.

ಏಲಕ್ಕಿ ಕೃಷಿ : ಬತ್ತವಲ್ಲದೇ ಕೊಡಗಿನಲ್ಲಿ ಮೊದಲಿನಿಂದಲೂ ಸಾಂಬಾರ ಪದಾರ್ಥಗಳ ರಾಣಿ ಎಂದು ಕರೆಯುವ ಏಲಕ್ಕಿಯನ್ನು ಸ್ವಲ್ಪ ಮಟ್ಟಿಗೆ ಬೆಳೆಯುತ್ತಾ ಬಂದಿದ್ದಾರೆ. ಕೊಡಗಿನ ದಟ್ಟ ಕಾಡು ಮತ್ತು ಹವಾಗುಣ ಏಲಕ್ಕಿ ಬೆಳೆಗೆ ಹೇಳಿ ಮಾಡಿಸಿದಂತೆ ಇದ್ದುದರಿಂದ ಸಹಜವಾಗಿ ಬೆಳೆಯುತ್ತಿತ್ತು. ರೈತರು ಆರ್ಥಿಕ ದೃಷ್ಟಿಯಿಂದ ಅದನ್ನು ಬೆಳೆದಿದ್ದು ಕಡಿಮೆ. ಅಧರ ಸುವಾಸನೆಗೆ ಆಕರ್ಷಿತರಾಗಿ ಬೆಳೆದರು. ಹೆಚ್ಚಾಗಿದ್ದನ್ನು ಆಗಿನ ಕಾಲದಲ್ಲಿ ರಾಜರಿಗೆ ಒಪ್ಪಿಸುತ್ತಿದ್ದರು. ರಾಜ ಅದನ್ನು ತಮ್ಮ ವಿದೇಶಿ ಮಿತ್ರರಿಗೆ ಕೊಡುತ್ತಿದ್ದ. ಕ್ರಮೇಣ ವಿದೇಶಿಯರು ಅದನ್ನು ಮೆಚ್ಚಿ ಅದಕ್ಕೆ ಹೆಚ್ಚು ಬೇಡಿಕೆ ಇಡತೊಡಗಿದರು. ಈ ದಿನಗಳಲ್ಲಿ ಏಲಕ್ಕಿಯನ್ನು ವೈಜ್ಞಾನಿಕವಾಗಿ ಬೆಳೆಯಲಾಗುತ್ತಿದೆ. ಮಲಬಾರ್ ಮತ್ತು ಮೈಸೂರು ಎಂಬ ಎರಡು ಸಾಂಪ್ರದಾಯಿಕ ತಳಿಗಳಿವೆ. ಅದರಲ್ಲಿ ಮಲಬಾರ್ ತಳಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಇತ್ತೀಚೆಗೆ ಬಹಳಷ್ಟು ಹೈಬ್ರಿಡ್ ತಳಿಗಳು ಬಂದಿವೆ. 'ಕಟ್ಟೆ' ಎಂಬ ಮಾರಕ ರೋಗದಿಂದ ಏಲಕ್ಕಿ ಕೃಷಿ ಮೊದಲಿನಷ್ಟು ಸರಳವಾಗಿಲ್ಲ. ಈಗ ರೋಗನಿರೋಧಕ ತಳಿಯ ಸಂಶೋಧನೆ ಆಗಿದೆ. ಹೈಬ್ರಿಡ್ ತಳಿಗಳು ಬಂದಿವೆ. 'ನೆಲ್ಯಾಣಿ' ಎಂಬ ಬಹಳ ಇಳುವರಿ ಕೊಡುವ ಹಸುರು ಏಲಕ್ಕಿಯನ್ನು ಅಲ್ಲಲ್ಲಿ ಪ್ರಗತಿಪರ ರೈತರು ಬೆಳೆಯುತ್ತಿದ್ದರು. ಏಲಕ್ಕಿ ಮಾರುಕಟ್ಟೆ ಅಸ್ಥಿರವಾಗಿರುವುದರಿಂದ ಮತ್ತು ಇತ್ತೀಚಿಗೆ ಬದಲಾದ ಹವಾಗುಣ ಕಾರಣದಿಂದ ಸಾಮಾನ್ಯ ರೈತರು ಏಲಕ್ಕಿ ಕೃಷಿಯಿಂದ ವಿಮುಖವಾಗಿದ್ದಾರೆ.

ಕರಿಮೆಣಸು ಅಥವಾ ಒಳ್ಳೆ ಮೆಣಸು : ಕೊಡಗಿನಲ್ಲಿ ಕರಿ ಮೆಣಸನ್ನು ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಈ ಹಿಂದೆ ಬೆಳೆಯುತ್ತಿದ್ದರು. ಆದರೆ ಕೇರಳದವರ ಸಂಪರ್ಕದಿಂದ ಈಗ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಕಾಫಿಯ ಜೊತೆಯ ಮಿಶ್ರ ಬೆಳೆಯಾಗಿ ಬೆಳೆಯುವ ಇದು ಆರ್ಥಿಕವಾಗಿ ಲಾಭದಾಯಕ ಬೆಳೆಯಾಗಿದೆ.

'ಕರಿಮುಂಡ' ಮತ್ತು 'ಜಾಟ್‌ಮಣಿ'ಎಂಬ ಸಾಂಪ್ರದಾಯಿಕ ತಳಿಯನ್ನು ಬಿಟ್ಟು ಈಗ 'ಪಯನೂರು' ಎಂಬ ತಳಿಯನ್ನು ಎಲ್ಲಾ ಕಡೆ ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲದೇ ಬಹಳಷ್ಟು ಹೊಸ ಹೈಬ್ರಿಡ್ ತಳಿಗಳನ್ನೂ ಹೆಚ್ಚಾಗಿ ಬೆಳೆಯುತ್ತಿದ್ದರು. ಅಲ್ಲದೇ ಬಹಳಷ್ಟು ಹೊಸ ಹೈಬ್ರಿಡ್ ತಳಿಗಳನ್ನು ವಿಜ್ಞಾನಿಗಳು ಬಿಡುಗಡೆ ಮಾಡುತ್ತಲೇ ಬಂದಿದ್ದಾರೆ. ಆದರೂ

'ಸೊರಗು' ರೋಗವೆಂಬ ಉಪದ್ರವ ಇದನ್ನು ಬಾಧಿಸುವುದರಿಂದ ಮತ್ತು ಅದಕ್ಕೆ ಶಾಶ್ವತ ಪರಿಹಾರ ಇಲ್ಲದ್ದರಿಂದ ರೈತರು ಮೆಣಸಿನ ಕೃಷಿಯಲ್ಲಿ ನಷ್ಟವನ್ನು ಅನುಭವಿಸಬೇಕಾಗಿದೆ.

ಕಾಫಿ : ಕೊಡಗು ಒಂದು ಕಾಲದಲ್ಲಿ ಕೇವಲ ಬತ್ತ ಬೇಸಾಯಕ್ಕೆ ಹೆಸರಾಗಿತ್ತು. ಅನಂತರ ಬ್ರಿಟಿಷರ ಕಾಲದಲ್ಲಿ ಕಾಫಿ ತೋಟಗಳ ಪರಿಚಯವಾಯಿತು. ಬ್ರಿಟಿಷರು ಹೋದರೂ ಕಾಫಿ ತೋಟಗಳು ಉಳಿದವು. ಇಲ್ಲಿಯ ಜನ ಕಾಫಿ ಕೃಷಿಯಲ್ಲಿ ಲಾಭ ಕಂಡುಕೊಂಡು ಅದನ್ನು ಹೆಚ್ಚು ಹೆಚ್ಚಾಗಿ ವಿಸ್ತಾರಗೊಳಿಸ ತೊಡಗಿದರು. ಇವತ್ತು ಕೊಡಗು ಎಂದರೆ ಕಾಫಿ ಎನ್ನುವಷ್ಟು 'ಕಾಫಿ ಸಂಸ್ಕೃತಿ'ಯೊಂದು ಇಲ್ಲಿ ಮೈತಾಳಿದೆ.

'ರೋಬಸ್ಟಾ', ಮತ್ತು 'ಅರೇಬಿಕಾ' ಎಂಬ ಎರಡು ಪ್ರಭೇದ ಕಾಫಿಯಲ್ಲಿದೆ. ' ಪೆಂಡಿನ್' ತಳಿಯನ್ನು ಹಿಂದಿನಿಂಲೂ ಬೆಳೆಸುತ್ತಾಬಂದಿದ್ದರು. ಹಾಗೆಯೇ ಅರೇಬಿಕಾದಲ್ಲಿ 'ಕೆಂಟ್' ಎಂಬ ತಳಿಯೇ ಪ್ರಚಲಿತದಲ್ಲಿತ್ತು. ಆದರೆ ಇತ್ತೀಚೆಗೆ ಕಾಫಿ ಸಂಶೋಧನಾ ಕೇಂದ್ರದಿಂದ ಸಾಕಷ್ಟು ತಳಿಗಳು ಬಿಡುಗಡೆಯಾಗಿವೆ.

ಕಿತ್ತಳೆ : ಕೊಡಗಿನ ಕಿತ್ತಳೆಗೆ ಎಲ್ಲಿಲ್ಲದ ಬೇಡಿಕೆ ಒಂದು ಕಾಲದಲ್ಲಿ ಇತ್ತು. ಹುಳಿ ಮಿಶ್ರಿತ ಸಿಹಿಯ ಕೊಡಗಿನ ಕಿತ್ತಳೆಯ ಸಿಪ್ಪೆ ತೆಳುವಾಗಿದ್ದು ನೋಡಲು ಆಕರ್ಷಿತವಾಗಿದೆ. ಇದನ್ನು ಇಲ್ಲಿ ಹೆಚ್ಚಾಗಿ ಮಿಶ್ರ ಬೆಳೆಯಾಗಿ ಬೆಳೆಯುತ್ತಾ ಬಂದಿದ್ದಾರೆ. ಆದರೆ ದುರ್ದೈವದಿಂದ ಇತ್ತೀಚಿನ ವರ್ಷಗಳಲ್ಲಿ ಕಿತ್ತಳೆ ಗಿಡಗಳು ನಂಜು ರೋಗವೊಂದರಿಂದ ನಾಶವಾಗಿ ಹೋಗಿವೆ. ಇತ್ತೀಚೆಗೆ ಅದರ ಪುನಃಶ್ಚೇತನದ ಕಾರ್ಯಗಳು ನಡೆಯುತ್ತಿವೆ.

ಕೊಡಗಿನ ರೈತರು ಕಿತ್ತಳೆಯೊಂದಿಗೆ ಮೊದಲಿನಿಂದಲೂ ಬೆಳೆಯುತ್ತಿದ್ದ ಹಣ್ಣು ಬಾಳೆ, ಮರಬಾಳೆ ಎಂಬ ದೊಡ್ಡ ಗಾತ್ರದ ಸ್ಥಳೀಯ ತಳಿ ಹೆಚ್ಚು ಜನಪ್ರಿಯವಾಗಿತ್ತು. ಕದಳಿ ಎಂಬ ಮತ್ತೊಂದು ತಳಿಯನ್ನು ಬೆಳೆಯಲಾಗುತ್ತಿತ್ತು. ಬಾಳೆ ಅಲ್ಲದೇ ಇನ್ನಿತರ ಹಣ್ಣುಗಳಾದ ಅನನಾಸು, ಹಲಸು, ಸೀಬೆ, ಪನ್ನೇರಳೆ ಮೊದಲಾದ ದೇಶೀಯ ಹಣ್ಣುಗಳನ್ನು ಅಲ್ಲಲ್ಲಿ ಬೆಳೆಸುತ್ತಿದ್ದರು. ಇದಲ್ಲದೆ ಕೊಡಗಿನ ಕಾಡುಗಳಲ್ಲಿ ಹತ್ತು ಹಲವಾರು ಹಣ್ಣು ಬಿಡುತ್ತವೆ.

ಕೊಡಗಿನ ರೈತರು ಕಾಫಿಯೊಂದನ್ನು ಹೊರತುಪಡಿಸಿ ಮತ್ಯಾವ ಬೆಳೆಗೂ ರಾಸಾಯನಿಕ ಗೊಬ್ಬರವನ್ನು ಹಾಕುತ್ತಿರಲಿಲ್ಲ. ಪ್ರಕೃತಿಯೊಂದಿಗೆ ಬದುಕುವ ಇಲ್ಲಿಯ ರೈತರು 'ಸಾವಯವಪ್ರಜ್ಞೆ' ಇಲ್ಲದೆಯೇ ಮೊದಲಿನಿಂದಲೂ ಹಟ್ಟಿ ಗೊಬ್ಬರ, ಹಸಿರೆಲೆ ಸೊಪ್ಪುಗಳನ್ನೇ ಭೂಮಿಗೆ ಹಾಕಿ ಕೃಷಿ ಮಾಡುತ್ತಾ ಬಂದಿದ್ದರು. ಮಧ್ಯದಲ್ಲಿ ರಾಸಾಯನಿಕ ಗೊಬ್ಬರಕ್ಕೆ ಮರುಳಾಗಿದ್ದರೂ ಈಗ ಮತ್ತೆ ಸಾವಯವ ಕೃಷಿಗೆ ಬಂದಿದ್ದಾರೆ. ಒಟ್ಟಿನಲ್ಲಿ ಕೊಡಗಿನ ದೇಶೀಯ ಕೃಷಿ ಪದ್ಧತಿಗೆ ಹತ್ತು ಹಲವು ಮುಖಗಳಿದ್ದು ಎಲ್ಲವೂ ಸಂಸ್ಕೃತಿಗೆ ಹಾಸು - ಹೊಕ್ಕಾಗಿವೆ. ಕೃಷಿಯಿಂದಲೇ ಇಲ್ಲಿಯ ಜನಜೀವನ, ಆಚಾರ ವಿಚಾರ, ಕಟ್ಟುಪಾಡುಗಳು, ಹಬ್ಬಗಳು, ಆಚರಣೆ ಎಲ್ಲವೂ ರೂಪಿತವಾಗಿವೆ.

ಕೊಡಗಿನ ಜನ ಮೂಲತಃ ಮಣ್ಣಿನ ಮಕ್ಕಳು. ನಿಸರ್ಗ ಅವರ ಉಸಿರು. ಅದರೊಂದಿಗೆ ಅವರ ಬದುಕು. ಕಾಡುಗಳಲ್ಲಿಯೇ ಒಂಟಿ ಮನೆಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರು. ನಾಗರೀಕ ಸಮಾಜದ ಎಲ್ಲ ಲಕ್ಷಣಗಳೊಂದಿಗೆ ವಿದ್ಯಾವಂತರಾಗಿರುವುದು ಅವರ ವಿಶೇಷ. ಹಿಂದಿನಿಂದಲೂ ಮನೆ ಮನೆಗಳಲ್ಲಿ ಮಾಡುತ್ತಾ ಬಂದಿರುವ ಇಲ್ಲಿಯವರ ಜೀವನವೂ ಅಷ್ಟೇ ಮಧುರ ಮತ್ತು ಜೇನುನೊಣಗಳ ಹಾಗೆ ಸೈನಿಕ ಶಿಸ್ತಿಗೂ ಒಳಪಟ್ಟಿರುವುದು ವಿಶೇಷ.

ಎಸ್. ಪಿ. ಆರ್.

ಕೊತ್ತಂಬರಿ (ಕೊರಿಯಾಂಡರ್) ಅಂಬೆಲಿಫೆರೇ ಕುಟುಂಬಕ್ಕೆ ಸೇರಿದ ಈ ಸಸ್ಯಕ್ಕೆ ಸಸ್ಯಶಾಸ್ತ್ರದಲ್ಲಿ 'ಕೊರಿಯಾಂಡ್ರಮ್ ಸಟೈವಮ್' ಎಂದು ಕರೆಯುತ್ತಾರೆ.

ಕೊತ್ತಂಬರಿಯು ಮೆಡಿಟರೇನಿಯನ್ ಪ್ರದೇಶದ ಗಿಡ. ಇದನ್ನು ಭಾರತ, ರಷ್ಯಾ, ಮಧ್ಯಯೂರೋಪು, ಏಷ್ಯಾ (ಮೈನರ್ ಮತ್ತು



ಮೊರಾಕ್ಕೊ)ಗಳಲ್ಲಿ ಹೇರಳವಾಗಿ ಬೆಳೆಯುತ್ತಾರೆ. ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಇದರ ಬೇಸಾಯವಿದೆ. ಉತ್ತರ ಭಾರತದ ಫಲವತ್ತಾದ ಮಣ್ಣುಗಳಲ್ಲಿ ಮತ್ತು ದಕ್ಷಿಣ ಭಾರತದ ಕಪ್ಪು ಮಣ್ಣು ಪ್ರದೇಶಗಳಲ್ಲಿ ಇದೊಂದು ಉಪಬೆಳೆಯಾಗಿದೆ. ಕೊತ್ತಂಬರಿಯನ್ನು ನೀರಾವರಿ ಸೌಕರ್ಯವಿರುವ ಪ್ರದೇಶಗಳಲ್ಲಿ ಬೆಳೆಸಬಹುದಾದರೂ ಮಳೆ ಆಶ್ರಿತ ಸ್ಥಳಗಳಲ್ಲೇ ಇದರ ಬೇಸಾಯ ಹೆಚ್ಚು. ಶುದ್ಧ ಬೆಳೆಯಾಗಿಯೂ ಮಿಶ್ರ ಬೆಳೆಯಾಗಿಯೂ ಇದರ ಕೃಷಿ ಮಾಡಬಹುದು.

ಕೊತ್ತಂಬರಿಯು 20-50 ಸೆಂ.ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುವ ಸಸ್ಯ. ಇದರ ಕಾಂಡದ ಮೇಲೆ ನವುರಾದ ಉದ್ದುದ್ದನೆಯ ಏಣುಗಳಿರುತ್ತವೆ. ಎಲೆಗಳು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಕೆಳಗಿನ ಎಲೆಗಳು ಅಗಲ, ಮೇಲಿನ ಎಲೆಗಳು ಕಿರಿದಾಗಿದ್ದು ಛಿದ್ರ ಛಿದ್ರವಾಗಿ ನೇರ್ಪುಗೊಂಡಿರುತ್ತವೆ.

ಬೀಜಗಳು ಗುಂಡಗಿದ್ದು ಏಣಿಯಾಕಾರದ ಗೊಂಚಲಿನಲ್ಲಿ ಹುದುಗಿರುತ್ತವೆ. ಇವು ಹಳದಿ ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತವೆ. ಗಾತ್ರ 2-3.5 ಮಿಲಿಮೀಟರ್‌ನಷ್ಟು, ಇದನ್ನು ಅದುಮಿದರೆ ಎರಡು ಭಾಗಗಳಾಗಿ ವಿಂಗಡವಾಗುತ್ತದೆ. ಬಿತ್ತನೆಗೆ ಮೊದಲು ಕೊತ್ತಂಬರಿಯನ್ನು ಈ ರೀತಿ ಉಜ್ಜಿ ವಿಂಗಡಿಸಿಕೊಳ್ಳಬೇಕು. ಈ ಭಾಗಗಳ ಒಳಗೆ ಮತ್ತೆ ಸಣ್ಣ ಸಣ್ಣ ಬೀಜಗಳಿರುತ್ತವೆ. ಅನಂತರ ಜಮೀನಿನಲ್ಲಿ ಚೆಲ್ಲಿ ಬಿತ್ತಬಹುದು ಅಥವಾ ಸಾಲುಗಳಲ್ಲಿ ಹಾಕಬಹುದು. ಒಂದು ಎಕರೆಗೆ ಸು. 5-7.5ಕಿ.ಗ್ರಾಂ. ಬೀಜಗಳು ಬೇಕಾಗುತ್ತವೆ. ಈ ಬೀಜಗಳು ಸು. ಒಂಬತ್ತು ದಿವಸಗಳಲ್ಲಿ ಮೊಳಕೆ ಬರುತ್ತವೆ. ಬಿತ್ತನೆಯ ಬಳಿಕ ಸೊಪ್ಪು 20ದಿನಕ್ಕೆ ಸಿಗುತ್ತದೆ.

ಹೂಗಳು ಛತ್ರಿಯಾಕಾರದಲ್ಲಿದ್ದ ಬಿಳಿ ಮತ್ತು ಕಂದು ಬಣ್ಣಗಳಿಂದ ಕೂಡಿರುತ್ತವೆ. ಬೆಳೆಯು ಕೊಯ್ಲಿಗೆ ಬರಲು 3-3½ ತಿಂಗಳುಗಳು ಬೇಕು. ಗಿಡಗಳು ಸರಿಯಾದ ಹದಕ್ಕೆ ಬಂದಾಗ ಅವುಗಳನ್ನು ಬೇರು ಸಹಿತ ಕಿತ್ತು ಒಣಗಿಸಿ ಅನಂತರ ಬಡಿದು ಬೀಜಗಳನ್ನು ಬೇರ್ಪಡಿಸಬೇಕು. ಕರ್ನಾಟಕದಲ್ಲಿ ಇದರ ಇಳುವರಿ ಹೆಕ್ಟೇರಿಗೆ ಸು. 1.5 ಟನ್‌ಗಳಷ್ಟು, ಭಾರತದಲ್ಲಿ ಉತ್ಪತ್ತಿಯಾಗುವ ಕೊತ್ತಂಬರಿಯ ಅರ್ಧಭಾಗ ನಮ್ಮ ದೇಶದಲ್ಲೇ ಉಪಯೋಗಿಸಲ್ಪಡುತ್ತಿದೆ. ಉಳಿದ ಭಾಗವನ್ನು ಸಿಲೋನ್, ಮಲಯ, ಈಸ್ಟ್ ಆಫ್ರಿಕ ಮುಂತಾದ ಸ್ಥಳಗಳಿಗೆ ರಫ್ತು ಮಾಡಲಾಗುತ್ತಿದೆ.

ಕೊತ್ತಂಬರಿ ಮುಖ್ಯವಾಗಿ ಸಾಂಬಾರ ಸಸ್ಯ, ಇದರ ಎಲೆಗಳಲ್ಲಿ ಮತ್ತು ಬೀಜಗಳಲ್ಲಿ ಸುವಾಸನೆ ಇರುವುದು ಅವುಗಳಲ್ಲಿರುವ ಸುವಾಸನಾ ಎಣ್ಣೆಯಿಂದ. ಆದರೆ ಭಾರತದಲ್ಲಿ ಉತ್ಪಾದಿಸುವ ಬೀಜಗಳಲ್ಲಿ ಸುವಾಸನ ತೈಲದ ಅಂಶ ಬಹಳ ಕಡಿಮೆ. ಯುರೋಪ್ ದೇಶಗಳಲ್ಲಿ ಉತ್ಪಾದಿಸುವ ಬೀಜಗಳಲ್ಲಿ ಎಣ್ಣೆಯ ಅಂಶವು ಯಥೇಚ್ಛವಾಗಿರುತ್ತದೆ. ಕೊತ್ತಂಬರಿ ಬೀಜಗಳಿಂದ ಬಟ್ಟಿ ಇಳಿಸುವ ಕ್ರಮದಿಂದ ಎಣ್ಣೆಯನ್ನು ಪಡೆಯಬಹುದು. ಈ ಎಣ್ಣೆ ನಸು ಹಳದಿ ಬಣ್ಣದಿಂದ ಕೂಡಿದ್ದು ಸುವಾಸನೆ ಮತ್ತು ರುಚಿ ತುಂಬಾ ವಿಶಿಷ್ಟವಾಗಿರುತ್ತದೆ. ಎಣ್ಣೆಯನ್ನು ಮಾದಕ ಪಾನೀಯಗಳಲ್ಲಿ ಮತ್ತು ಕೋಕೋ ಚಾಕಲೇಟುಗಳಲ್ಲಿ ಸುವಾಸನೆಗಾಗಿ ಉಪಯೋಗಿಸುತ್ತಾರೆ.

ನಮ್ಮ ದೇಶದಲ್ಲಿನ ಕೊತ್ತಂಬರಿ ಗಿಡಗಳು ಚಿಕ್ಕವು. ಯುರೋಪಿನಲ್ಲಿ ಇವು 100 ರಿಂದ 130 ಸೆಂ.ಮೀ. ಎತ್ತರ ಹುಲುಸಾಗಿ ಬೆಳೆಯುತ್ತವೆ ಮತ್ತು ಹೆಕ್ಟೇರಿಗೆ 2 ಟನ್‌ಗಳಷ್ಟು ಬೀಜ ಇಳುವರಿಯನ್ನು ಕೊಡುತ್ತವೆ. ನಮ್ಮ ದೇಶದ ಕೊತ್ತಂಬರಿ 3-3½ ತಿಂಗಳ ಬೆಳೆಯಾದರೆ, ಯುರೋಪಿನಲ್ಲಿ 5 ತಿಂಗಳ ಬೆಳೆ. ಇವುಗಳಲ್ಲಿ ಅಧಿಕ ಸೊಪ್ಪಿನ ಇಳುವರಿಯನ್ನು ಕೊಡುವ ಮತ್ತು ಅಧಿಕ ಬೀಜದ ಇಳುವರಿಯನ್ನು ಕೊಡುವ ಹಾಗೂ ಅಧಿಕ ಎಣ್ಣೆಯನ್ನು ಕೊಡುವ ವಿವಿಧ ರೀತಿಯ ಗಿಡಗಳು ಕೊತ್ತಂಬರಿಯಲ್ಲಿ ಕಂಡುಬರುತ್ತವೆ.

ಎನ್. ಆರ್.

ಕೊನ್ನಾರಿಗೆಡ್ಡೆ ಇದು ಒಂದು ಕಳೆ ಸಸ್ಯ. ಹೊಲಗದ್ದೆಗಳಲ್ಲಿ ಹಾಗೂ ಇನ್ನಿತರೆಡೆಗಳಲ್ಲಿ ಬೆಳೆಯುತ್ತದೆ. ಸೈಪರೇಸೀ ಕುಟುಂಬಕ್ಕೆ ಸೇರಿದೆ. ಸೈಪರಸ್ ರೊಟಂಡಸ್ ಎಂಬುದು ಇದರ ವೈಜ್ಞಾನಿಕ ಹೆಸರು. ಇಂಗ್ಲಿಷಿನಲ್ಲಿ ಕೋಕೋಗ್ರಾಸ್, ನಟ್‌ಗ್ರಾಸ್ ಎಂದೂ, ಕನ್ನಡದಲ್ಲಿ ಕೊನ್ನಾರಿ ಹುಲ್ಲು, ತುಂಗೆ ಹುಲ್ಲು ತುಂಗೆಗೆಡ್ಡೆ ಎಂದೂ ತೆಲುಗಿನಲ್ಲಿ ತುಂಗಗಡ್ಡಲು ಎಂದೂ ಕರೆಯುತ್ತಾರೆ.

ಸ್ವಾಭಾವಿಕವಾಗಿ ಪ್ರಪಂಚಾದ್ಯಂತ ಬೆಳೆಯುವ ಇದು ಭಾರತದಲ್ಲೂ ಯಥೇಚ್ಛವಾಗಿ ಬೆಳೆಯುತ್ತದೆ. ಇದೇ ಬಗೆಯ ಸೈಪ್ರಸ್ ಎಸ್ಕುಲೆಂಟಸ್, ಲೈಪ್ರಸ್ ಬಲ್ಬೋಸಸ್, ಸೈಪ್ರಸ್ ಸಿರ್‌ಪಸ್ ಎಂಬ ಪ್ರಭೇದಗಳು ಭಾರತದಲ್ಲಿ ಕಂಡುಬರುತ್ತವೆ. 0.5-2 ಅಡಿ ಎತ್ತರಬೆಳೆಯುತ್ತದೆ. ಇದರ ಕಾಂಡ ಪ್ರಕಂದ ಮತ್ತು ಗೆಣ್ಣುಕಾಂಡವೆಂಬ ಎರಡು ಭಾಗಗಳನ್ನು ಒಳಗೊಂಡಿದೆ. ಪ್ರಕಂದ ಭೂಮಿಯ ಒಳಗೂ ಗೆಣ್ಣುಕಾಂಡ ಭೂಮಿಯ ಮೇಲೂ ಇದ್ದು ಅಲ್ಲಲ್ಲಿ ಉಬ್ಬಿದಂತೆ ಗೆಡ್ಡೆಗಳು ರೂಪುಗೊಂಡಿರುತ್ತವೆ. ಎಳಸಾಗಿದ್ದಾಗ ಬೆಳ್ಳಗೂ ರಸವತ್ತಾಗಿಯೂ ಇದ್ದು, ಬಲಿತಾಗ ಕಪ್ಪಗೆ ಗಟ್ಟಿಯಾಗುತ್ತವೆ. ಈ ಸಂದರ್ಭದಲ್ಲಿ ಗೆಡ್ಡೆಗಳಿಂದಲೇ ಬೇರುಗಳು ಬೆಳೆಯುತ್ತವೆ. ಕಾಂಡ ಬೆಳೆದಂತೆ ಹುಲ್ಲಿನ ಎಸಳುಗಳು ಉದ್ದವಾಗುತ್ತವೆ. ಎರಡು ಮೂರು ತಿಂಗಳ ಬಳಿಕ ಬಿಟ್ಟ ಹೂಗೊಂಚಲು ಸಂಯುಕ್ತ ಪತ್ರಮಂಜರಿ ರೀತಿ ಇರುತ್ತದೆ. ಇದರ ಹೂಗಳು ದ್ವಿಲಿಂಗಿಗಳಾಗಿದ್ದು, ಎರಡು ಪುಚ್ಛಗಳು, ಮೂರುಕೇಸರಿಗಳು ಹಾಗೂ ಅಂಡಾಶಯವನ್ನು ಹೊಂದಿರುತ್ತವೆ.


ಕೊನ್ನಾರಿ ಗೆಡ್ಡೆ ಎಂತಹ ಮಣ್ಣಿನಲ್ಲಾದರೂ ಯಾವುದೇ ವಾತಾವರಣದಲ್ಲಾದರೂ ಸಮೃದ್ಧವಾಗಿ ಬೆಳೆಯಬಲ್ಲದು. ಪ್ರಕಂದದಲ್ಲಿ ಅಸಂಖ್ಯಾತ ಗೆಡ್ಡೆಗಳು ಹುಟ್ಟಿ ಬಲುಬೇಗ ಪುನರುತ್ಪತ್ತಿಯಾಗಿ ಇಡೀ ಹೊಲಗದ್ದೆಗಳನ್ನೆಲ್ಲ ವ್ಯಾಪಿಸಿಬಿಡುತ್ತವೆ. ಬೀಜಗಳಿಂದ ಸಂತಾನೋತ್ಪತ್ತಿ ಆಗುವುದಾದರೂ ಇದರ ಅಭಿವೃದ್ಧಿ ನಿಧಾನಗತಿಯದು. ಒಮ್ಮೆ ಕಾಣಿಸಿಕೊಂಡಿತೆಂದರೆ ನಿರ್ಮೂಲನ ಮಾಡುವುದು ತುಂಬ ಕಷ್ಟ. ಬೇರು ಸಹಿತವಾಗಿ ಗೆಡ್ಡೆಯನ್ನು ಪದೇ ಪದೇ ತೆಗೆಯುತ್ತಾ ಹೋದರೆ ಕಳೆಯನ್ನು ನಿಯಂತ್ರಿಸಬಹುದು. ಮಳೆಗಾಲ ನಿಲ್ಲುತ್ತಿದ್ದಂತೆ ಭೂಮಿ ತೇವವಿರುವಾಗಲೇ ಆಳವಾಗಿ ಉಳುಮೆ ಮಾಡಿ ಗೆಡ್ಡೆಗಳನ್ನು ವಿಂಗಡಿಸಿ ಒಂದೆಡೆ ಗುಡ್ಡೆ ಹಾಕಿ ಸುಟ್ಟರೆ ಕಳೆ ನಿರ್ನಾಮವಾಗುವುದು ಅಸಾಧ್ಯವೇನಲ್ಲ. ಬೇಸಗೆ ಕಾಲದಲ್ಲಿ ನೆಲ ಚೆನ್ನಾಗಿ ಒಣಗಿ ಗೆಡ್ಡೆಗಳು ಉಳಿದಿದ್ದರೆ ಹಲಬೆ ಹೊಡೆಯುವುದರ ಮೂಲಕ ಇದನ್ನು ನಾಶಪಡಿಸಬಹುದು. ಹುರುಳಿ, ಹೆಸರು, ಅಲಸಂದೆ ಮುಂತಾದ ಬೀಜಗಳನ್ನು ಬಿತ್ತಿ ಸಸಿ ಸ್ವಲ್ಪ ಎತ್ತರಕ್ಕೆ ಬೆಳೆವಾಗ ಭೂಮಿಯನ್ನು ಉಳುಮೆ ಮಾಡುವುದರ ಮೂಲಕವೂ ಕೊನ್ನಾರಿ ಹುಲ್ಲನ್ನು ಕಳೆಯನ್ನು ನಾಶಪಡಿಸಬಹುದು. ಇತ್ತೀಚಿನ ದಿನಗಳಲ್ಲಿ ಉಪ್ಪು ಮತ್ತು ಸುಣ್ಣದ ದ್ರಾವಣ ಸಿಂಪಡಿಸಿ ಈ ಕಳೆಯನ್ನು ನಿಯಂತ್ರಿಸಲಾಗುತ್ತಿದೆ. ಕಳೆ ನಿಯಂತ್ರಣದ ಔಷಧಿಯೂ ಲಭ್ಯವಿದೆ.

ಉಪಯೋಗ : ಇದು ಕಳೆ ಸಸ್ಯವಾದರೂ ಜನಪದರು ಇದರಲ್ಲಿ ಔಷಧೀಯ ಗುಣವನ್ನುಕಂಡುಕೊಂಡಿದ್ದಾರೆ. ತುಂಗೆಗೆಡ್ಡೆ ಪರಿಮಳ ಪೂರಿತವಾಗಿರುವುದರಿಂದ ಇವನ್ನು ಒಣಗಿಸಿ ಪುಡಿಮಾಡಿ ಕೆಲವು ಔಷಧಿ, ಸುಗಂಧ ದ್ರವ್ಯ ಮತ್ತು ಅಗರಬತ್ತಿ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಉತ್ತೇಜನಕಾರಿ, ಶಕ್ತಿವರ್ಧಕ, ಜಂತುನಾಶಕ, ಪಚನಕಾರಿ, ಸ್ವೇದಕಾರಿ, ಮೂತ್ರಸ್ರಾವ ಉತ್ತೇಜಕ, ಶಾಮಕ ಮುಂತಾದ ಔಷಧೀಯ ಗುಣ ಈ ಗೆಡ್ಡೆಯಲ್ಲಿದೆ.

ಎ.ಎಂ.ಡಿ.

ಕೊಪ್ಪಳ ಜಿಲ್ಲೆಯ ಕೃಷಿ ಹೈದರಾಬಾದಿನ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ ಕೊಪ್ಪಳ, ಕರ್ನಾಟಕದ ಏಕೀಕರಣದ ಅನಂತರ ರಾಯಚೂರು ಜಿಲ್ಲೆಯಲ್ಲಿ ಸೇರ್ಪಟ್ಟು 1997ರಲ್ಲಿ ಹೊಸ ಜಿಲ್ಲೆಯಾಗಿ ರೂಪುಗೊಂಡಿತು. ಕೊಪ್ಪಳದ 'ಆನೆಗುಂದಿ' ವಿಜಯನಗರದ ಅರಸರ ಮೊದಲ ರಾಜಧಾನಿಯಾಗಿ ಮೆರೆದಿದ್ದು ಜಿಲ್ಲೆಯ ಶ್ರೇಷ್ಠತೆಯ ಸಂಕೇತ. ರಾಜ್ಯದ ಈಶಾನ್ಯ ಭಾಗದಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿರುವ ಜಿಲ್ಲೆಯು, ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ಯಲಬುರ್ಗ ಈ ನಾಲ್ಕು ತಾಲ್ಲೂಕುಗಳಿಂದ ಕೂಡಿದ್ದು, ಜಿಲ್ಲೆಯಲ್ಲಿ 20 ಹೋಬಳಿಗಳು, 618 ಗ್ರಾಮಗಳು ಇವೆ. ಉತ್ತರದಲ್ಲಿ ಬಾಗಲಕೋಟೆ ಮತ್ತು ರಾಯಚೂರು, ಪೂರ್ವದಲ್ಲಿ ರಾಯಚೂರು ಮತ್ತು ಬಳ್ಳಾರಿ, ಪಶ್ಚಿಮದಲ್ಲಿ

ಗದಗ, ದಕ್ಷಿಣದಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಹೆಣೆದುಕೊಂಡಿದೆ. 2011ರ ಜನಗಣತಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 2.28ರಷ್ಟನ್ನು ಹೊಂದಿರುವ ಜಿಲ್ಲೆಯ ಒಟ್ಟು ಜನಸಂಖ್ಯೆ 1391292.



ಜಿಲ್ಲೆಯ ವಿಸ್ತೀರ್ಣ : ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 8458 ಚ.ಕಿ.ಮೀ. (2010-11). ಇದು ಕ್ರಮವಾಗಿ ಗಂಗಾವತಿ 132131 ಹೆ., ಕೊಪ್ಪಳ 136755 ಹೆ., ಕುಷ್ಟಗಿ 135779 ಹೆ ಮತ್ತು ಯಲಬುರ್ಗ 147830 ಹೆ. ಪ್ರದೇಶವನ್ನು ಒಳಗೊಂಡಿರುವುದು. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಜಿಲ್ಲೆಯ ಪಾಲು ಶೇ. 4.41ರಷ್ಟಾಗಿದ್ದು, ರಾಜ್ಯದ ನಾಲ್ಕು ಪ್ರಾದೇಶಿಕ ಆಡಳಿತ ವಿಭಾಗಗಳಲ್ಲಿ ಬೆಳಗಾವಿ ವಿಭಾಗಕ್ಕೆ ಜಿಲ್ಲೆಯು ಸೇರಿದೆ.

ಮೇಲ್ಮೈ ಲಕ್ಷಣ : ಜಿಲ್ಲೆಯು ದಖನ್ನಿನ ಕಣಿವೆಗಳ ಪ್ರದೇಶದಲ್ಲಿದ್ದು, ಸಮುದ್ರ ಮಟ್ಟಕ್ಕೆ ಹೆಚ್ಚು ಎತ್ತರವಿರದ ಪ್ರದೇಶದಲ್ಲಿದೆ. ಇಲ್ಲಿ ಬೆಟ್ಟಸಾಲುಗಳು ಕಡಿಮೆ ಇದ್ದು, ಅಲ್ಲಲ್ಲಿ ಗುಡ್ಡಗಳು ಕಂಡುಬರುತ್ತವೆ. ಕುಷ್ಟಗಿಯಲ್ಲಿ ಕಂಡುಬರುವ ಬಾದಾಮಿ ಬೆಟ್ಟಗಳ ಶ್ರೇಣಿಗೆ ಸೇರಿದ ಸಾಲೊಂದು ಗಂಗಾವತಿಯವರೆಗೆ ಮುಂದುವರಿದಿದೆ. ಕುಷ್ಟಗಿಯಿಂದ 32 ಕಿ.ಮೀ. ದೂರದಲ್ಲಿರುವ ಜಗದ ಗುಡ್ಡ 736 ಮೀ ಎತ್ತರವಿದೆ. ಗಂಗಾವತಿಯ ಎಮ್ಮೆಗುಡ್ಡ 821 ಮೀ, ಕನಕಗಿರಿಯ ಈಶಾನ್ಯದ ನಿಶಾಗುಡ್ಡ 580 ಮೀ. ಮಾರಿಗುಡ್ಡ 597 ಮೀ ಎತ್ತರ ಇವೆ. ಜಿಲ್ಲೆಯಲ್ಲಿ ಮಳೆ ಕಡಿಮೆ ಬೀಳುವುದರಿಂದ ಸಸ್ಯಸಂಪತ್ತು ವಿರಳವಾಗಿ ಕಂಡುಬರುವುದು. ಕಡಿದಾದ ಮತ್ತು ವಿವಿಧ ಆಕಾರದ ಬಂಡೆಗಳಿಂದ ಆವೃತವಾದ ಭೂದೃಶ್ಯಾವಳಿಯ ಇಲ್ಲಿಯ ಬೆಟ್ಟಗಳು ಪ್ರಾಕೃತಿಕವಾಗಿ ರೂಪಾಂತರ ಹೊಂದಿದ ಪ್ರಾಚೀನ ಶಿಲಾಯುಗಕ್ಕೆ ಸೇರಿದವು. ಕೆಲವೆಡೆ ಗ್ರಾನೈಟ್ ಕಲ್ಲಿನ ಬೆಟ್ಟಗಳನ್ನು ಕಾಣಬಹುದು. ಈ ಶಿಲಾಪದರದಲ್ಲಿ ನೈಸ್ ಶಿಲೆಗಳು, ಪದರಗಲ್ಲು ಶಿಲೆಗಳು, ಬೆಣಚುಕಲ್ಲುಗಳು ಕಂಡುಬರುತ್ತವೆ. ಕೇಂಬ್ರಿಯನ್ ಯುಗಪೂರ್ವದ ರೂಪ ಪರಿವರ್ತನಾ ಪದರಗಲ್ಲುಗಳು ಮತ್ತು ಗ್ರಾನೈಟ್ ಕಲ್ಲುಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವುಗಳಾಗಿದ್ದು, ಪರ್ಯಾಯ ದ್ವೀಪದ ಸಂಬಂಧವಾದ ಡೈಕ್ ಮಾದರಿಯ ಶಿಲೆಗಳು ಅಲ್ಲಲ್ಲಿವೆ. ಕಲಾದಗಿ ಶ್ರೇಣಿಗೆ ಸೇರಿದ ಶಿಲೆಗಳು ಕುಷ್ಟಗಿಯಲ್ಲಿವೆ. ಹಾಗೆಯೆ ಕಣಶಿಲೆಯ ಗುಡ್ಡಗಳು ಟ್ರ್ಯಾಪ್ ಶಿಲೆಯ ಉಬ್ಬುಗಳು ಗಂಗಾವತಿಯಲ್ಲಿವೆ. ಉಳಿದಂತೆ ಸಮತಟ್ಟಾದ ಬಯಲು ಪ್ರದೇಶ ಜಿಲ್ಲೆಯನ್ನು ಆವರಿಸಿದೆ.

ಹವಾಗುಣ : ಕೊಪ್ಪಳ ಜಿಲ್ಲೆ ಉಷ್ಣವಲಯದ ಪ್ರದೇಶವಾಗಿದ್ದು ಜಿಲ್ಲೆಯಲ್ಲಿ ಅತಿ ಉಷ್ಣ ಹವಾಗುಣ ಮತ್ತು ವಾತಾವರಣದಲ್ಲಿ ಕಡಿಮೆ ತೇವಾಂಶ ಸಹಜವಾಗಿ ಕಂಡುಬರುವುದು. ಹವಾಗುಣವು ವರ್ಷದಲ್ಲಿ ಹೆಚ್ಚುಕಾಲ ಉಷ್ಣಾಂಶದಿಂದ ಕೂಡಿದ್ದು ಗರಿಷ್ಠ ಉಷ್ಣಾಂಶ 40^0 ಸೆಂ.ವರೆಗೆ ಇರುವುದು. ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ರಾತ್ರಿ ವೇಳೆ ಉಷ್ಣಾಂಶ ಬೇಗ ಕಡಿಮೆ ಆಗುವುದು. ಡಿಸೆಂಬರ್‌ನಲ್ಲಿ ಗರಿಷ್ಠ ಉಷ್ಣಾಂಶ 29.30^0 ಸೆಂ. ಇದ್ದರೆ ಕನಿಷ್ಠ ಉಷ್ಣಾಂಶ 17.70^0 ಸೆಂ.ಗೆ ಇಳಿಯುವುದು ದಾಖಲಾಗಿದೆ. ನವೆಂಬರ್‌ನಿಂದ ಮೇ ತಿಂಗಳವರೆಗೆ ಒಣ ಹವೆ ಇರುತ್ತದೆ.

ಮಳೆ : ಹವಾಗುಣದ ವೈಪರೀತ್ಯದಿಂದಾಗಿ ಜಿಲ್ಲೆಯಲ್ಲಿ ಮಳೆ ಪ್ರಮಾಣ ಏರುಪೇರಾಗುವುದು. ವರ್ಷದ ಬಹುಭಾಗ ಉಷ್ಣಾಂಶದಿಂದ ಕೂಡಿರುವುದರಿಂದ ಕೆಲವು ವರ್ಷಗಳಲ್ಲಿ ಮಳೆ ಕಡಿಮೆ ಇದ್ದು, ಕೆಲವು ವರ್ಷ ಹೆಚ್ಚು ಆಗುವುದುಂಟು. 2000ನೇ ಇಸವಿಯಲ್ಲಿ 701 ಮಿ.ಮೀ. ಮಳೆ ಜಿಲ್ಲೆಯಲ್ಲಿ ಆಗಿರುವುದು ದಾಖಲಾಗಿದೆ. ವರ್ಷದ 41 ದಿನಗಳು ಮಾತ್ರ ಜಿಲ್ಲೆಯಲ್ಲಿ ಮಳೆಯ ದಿನಗಳಾಗಿವೆ. ಮುಂಗಾರಿನಲ್ಲಿ ಹೆಚ್ಚು ಮಳೆಯಾದರೂ, ಹಿಂಗಾರಿನಲ್ಲಿ ಚಂಡಮಾರುತದ ಮಳೆ ಬಿರುಸಿನಿಂದ ದೊಡ್ಡ ಪ್ರಮಾಣದಲ್ಲಿ ಬೀಳುತ್ತದೆ. ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 595 ಮಿ.ಮೀಗಳಾಗಿದ್ದು ತಾಲ್ಲೂಕುವಾರು ಹೆಚ್ಚು ಕಡಿಮೆ ಆಗುವುದು ಸಾಮಾನ್ಯ.

ಕೃಷಿ ಭೂಮಿ : ಜಿಲ್ಲೆಯ ಪ್ರಧಾನ ಕಸುಬು ಕೃಷಿ. ಒಟ್ಟು 552495 ಹೆ., ಭೌಗೋಳಿಕ ಪ್ರದೇಶದಲ್ಲಿ ವ್ಯವಸಾಯೇತರ ಭೂಮಿ 39003 ಹೆ., ಬಂಜರು 16627 ಹೆ., ಸಾಗುವಳಿಗೆ ಯೋಗ್ಯವಾದ ಬಂಜರು 2568 ಹೆ., ಖಾಯಂ ಗೋಮಾಳ 14675 ಹೆ. 210 ಹೆ. ಪ್ರದೇಶದಲ್ಲಿ ವೃಕ್ಷ ಮತ್ತು ತೋಪುಗಳು ಕಂಡುಬರುತ್ತವೆ. 30104 ಹೆ. ಬೀಳು ಭೂಮಿ, ಬಿತ್ತನೆಯಾದ ನಿವ್ವಳ ಭೂಮಿ 369857 ಹೆ. ಪ್ರದೇಶ ಜಿಲ್ಲೆಯಲ್ಲಿದೆ. ಹಾಗೆಯೆ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡುವ 130585 ಹೆ. ಕಂಡುಬರುವುದು.

ಭೂ ಹಿಡುವಳಿದಾರರು : ಶೇ 75ರಷ್ಟು ಜನರು ತಮ್ಮ ಜೀವನಕ್ಕಾಗಿ ಕೃಷಿಯನ್ನೆ ಅವಲಂಬಿಸಿದ್ದು, ವಿವಿಧ ರೀತಿಯಲ್ಲಿ ಭೂಹಿಡುವಳಿ ಹೊಂದಿದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿಯ 7319 ಅತಿ ಸಣ್ಣ ಭೂಹಿಡುವಳಿದಾರರು 4314 ಹೆ. ಪ್ರದೇಶದಲ್ಲಿ ಕೃಷಿಕಾರ್ಯ ಹಮ್ಮಿಕೊಂಡಿದ್ದಾರೆ. ಪರಿಶಿಷ್ಟ ಪಂಗಡದ 5996 ಅತಿ ಸಣ್ಣ ಭೂ

ಹಿಡುವಳಿದಾರರು 3518 ಹೆ. ಪ್ರದೇಶದಲ್ಲಿ ಮತ್ತು ಇತರೆ 44043 ಅತಿ ಸಣ್ಣ ಭೂ ಹಿಡುವಳಿದಾರರು 26053 ಹೆ. ಕೃಷಿಯಲ್ಲಿ ನಿರತರಾಗಿದ್ದಾರೆ. ಸಣ್ಣ ಹಿಡುವಳಿದಾರರ ಪೈಕಿ ಪರಿಶಿಷ್ಟ ಜಾತಿಯ 7349 ಭೂ ಹಿಡುವಳಿದಾರರು 10607 ಹೆ., ಪರಿಶಿಷ್ಟ ಪಂಗಡದ 8031 ಹಿಡುವಳಿದಾರರು 11642 ಹೆ. ಪ್ರದೇಶದಲ್ಲಿ ಹಾಗೂ ಇತರೆ 15195 ಹಿಡುವಳಿದಾರರು 21589 ಹೆ. ಕೃಷಿ ಮಾಡುವುದು ಗೋಚರಿತ. ಅರೆಮಧ್ಯಮ ಭೂ ಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ 3444 ಹಿಡುವಳಿದಾರರು 8981 ಹೆಕ್ಟೇರ್, ಪರಿಶಿಷ್ಟ ಪಂಗಡದ 5747 ಹಿಡುವಳಿದಾರರು 15669 ಹೆ. ಮತ್ತು ಇತರೆ 45797 ಭೂ ಹಿಡುವಳಿದಾರರು 125751 ಹೆ. ಭೂ ಹಿಡುವಳಿ ಹೊಂದಿದ್ದಾರೆ. ಮಧ್ಯಮ ಭೂಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ 785 ಹಿಡುವಳಿದಾರರು 4312 ಹೆ., ಪರಿಶಿಷ್ಟಪಂಗಡದ 2123 ಭೂಹಿಡುವಳಿದಾರರು 12095 ಹೆ., ಪ್ರದೇಶದಲ್ಲಿ ಮತ್ತು ಇತರೆ 19375 ಭೂಹಿಡುವಳಿದಾರರು 113163 ಹೆ. ಪ್ರದೇಶದಲ್ಲಿ ಹಾಗೆಯೇ ದೊಡ್ಡ ಭೂ ಹಿಡುವಳಿದಾರರಲ್ಲಿ ಪರಿಶಿಷ್ಟ ಜಾತಿಯ 49 ಹಿಡುವಳಿದಾರರು 625 ಹೆ. ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ 185 ಹಿಡುವಳಿದಾರರು 2422 ಹೆ. ಪ್ರದೇಶದಲ್ಲಿ ಮತ್ತು ಇತರೆ 2569 ದೊಡ್ಡ ಭೂ ಹಿಡುವಳಿದಾರರು 35905 ಹೆ. ಕೃಷಿ ಕಾರ್ಯ ಮಾಡುವುದರೊಂದಿಗೆ ಭೂ ಹಿಡುವಳಿ ಹೊಂದಿರುವುದು ಕಾಣಬಹುದು.

ಭೂಗುಣ ಮತ್ತು ಉಪಯೋಗ : ಕಡಿಮೆ ಮಳೆ ಬೀಳುವ ಈ ಜಿಲ್ಲೆಯು ಕಡಿದಾದ ಹಾಗೂ ವಿವಿಧ ಆಕಾರದ ಬಂಡೆಗಳಿಂದ ಆವೃತವಾಗಿದೆ. ಸಮತಟ್ಟಾದ ಬಯಲು ಪ್ರದೇಶ ಅಲ್ಲಲ್ಲಿ ಕಂಡುಬರುತ್ತದೆ. ಕಬ್ಬಿಣ, ತಾಮ್ರ, ಸೀಸದ ಅದುರು, ಅಭ್ರಕ, ಸ್ಫಟಿಕದ ಶಿಲೆ ಮುಂತಾದ ಖನಿಜಗಳು ಇವೆ. ಜಂಬುಮಣ್ಣು ಮತ್ತು ಕಾವಿ ಮಣ್ಣು ಉಪಯುಕ್ತವಾಗಿದೆ. ಕೊಪ್ಪಳ ತಾಲ್ಲೂಕಿನ ಬಹುಭಾಗ ಕಪ್ಪು ಮೆಕ್ಕಲು ಮಣ್ಣಿನಿಂದ ಕೂಡಿದ್ದು, ಫಲವತ್ತಾಗಿದೆ. ಭೂ ಉಪಯೋಗವನ್ನು ನೋಡಿದಾಗ ಒಟ್ಟು 5,52,495 ಹೆ. ಪ್ರದೇಶದ ವ್ಯಾಪ್ತಿಯಲ್ಲಿ ವ್ಯವಸಾಯಕ್ಕೆ ದೊರೆಯದ 39009 ಹೆ. ಪ್ರದೇಶ, 16627 ಹೆ. ಬರಡು ಮತ್ತು ವ್ಯವಸಾಯಕ್ಕೆ ಯೋಗ್ಯವಲ್ಲದ್ದು. 2568 ಹೆ. ಪ್ರದೇಶ ಬಳಕೆಯಾಗದ ವ್ಯವಸಾಯ ಭೂಮಿ, 30104 ಹೆ. ಪ್ರದೇಶ ಬೀಳುಭೂಮಿ ಮತ್ತು 369857 ಹೆ. ಪ್ರದೇಶ ಸಾಗುವಳಿ ಕ್ಷೇತ್ರವಾಗಿದ್ದು, 130585 ಹೆ. ಪ್ರದೇಶ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆ ಮಾಡುವ ಕ್ಷೇತ್ರವಾಗಿದೆ. ದೊಡ್ಡ ದೊಡ್ಡ ಬಂಡೆಗಳಿಂದ ಕೂಡಿದ ನೆಲವನ್ನು 'ಕಲ್ಚೆಟ್ಟ' ಎಂದು ಕರೆಯುವುದು ವಾಡಿಕೆ. ನೀರು ಕೆಸರುಗಳಿಂದ ತುಂಬಿದ ಒಂದೆರಡು ಅಡಿ ಉಬ್ಬರ ಬರುವ ಭೂಮಿಯನ್ನು 'ಕಳ್ಳ ಉಬ್ಬಳ' ಎಂದು, ಸಾಗುವಳಿ ಇಲ್ಲದ ಭೂಮಿಯನ್ನು 'ಪಡ' ಎಂದು, ಎತ್ತರವಾದ ಭೂಮಿಯನ್ನು 'ಬಗಡಿ' ಎಂದು, ಹಳ್ಳದ ದಡಕ್ಕೆ ಇರುವ ಭೂಮಿಯನ್ನು 'ಮಡೆ' ಮತ್ತು ಸುಣ್ಣ ಕಲ್ಲುಗಳಿಂದ ಮಿಶ್ರಿತವಾದ ಕಪ್ಪು ಭೂಮಿಯನ್ನು 'ಮರ್ಚಿ' ಎಂದು ಕರೆಯುವರು.

ಮಣ್ಣು : ಕಣಶಿಲೆಗಳಿಂದ ಉತ್ಪನ್ನವಾದ ಕೆಂಪು ಮತ್ತು ಕಪ್ಪು ಮಣ್ಣನ್ನೊಳಗೊಂಡ ಜಿಲ್ಲೆ ಇದು. ಕೆಂಪು ಜೇಡಿ ಮತ್ತು ಮರಳು ಭೂಮಿ ಗಂಗಾವತಿ, ಕುಷ್ಟಗಿ, ಕೊಪ್ಪಳ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಕೆಲವು ಭಾಗಗಳಲ್ಲಿ ಬೂದುವರ್ಣದ ತೆಳು ಪದರವಿದೆ. ಅಚ್ಚ ಕಪ್ಪು ಮರದ ಪದರ ಕುಷ್ಟಗಿ ಮತ್ತು ಯಲಬುರ್ಗಿ ತಾಲ್ಲೂಕುಗಳಲ್ಲಿ ಇದೆ. ಇದು ಫಲವತ್ತಾದ ಮಣ್ಣು. ಬಹುವಾಗಿ ಅನಿಯತ, ಆಮ್ಲಿಯ ಮಣ್ಣು ಕೆಲವೆಡೆ ಇದೆ. ಭೂಮಿಯಲ್ಲಿ ಹೆಚ್ಚು ಸಾವಯವ ಪದಾರ್ಥವಿರಬಹುದಾದರು ಹೆಚ್ಚು ಭಾಗದಲ್ಲಿ ರಂಜಕಾಂಶದ ಪ್ರಮಾಣ ಕಡಿಮೆ. ಆದರೆ ಸಾಕಷ್ಟು ಪೊಟ್ಯಾಷ್ ಭೂಮಿಯಲ್ಲಿರುತ್ತವೆ. ಕೆಂಪು ಮಣ್ಣು ನೀರನ್ನು ಚೆನ್ನಾಗಿ ಬಸಿಯುತ್ತದೆ. ಇದು ಕೊಪ್ಪಳ, ಕುಷ್ಟಗಿ, ಗಂಗಾವತಿ ತಾಲ್ಲೂಕುಗಳ ಭಾಗಗಳಲ್ಲಿ ಇದೆ. ತೆಳು ಸಾಮಾನ್ಯ ಕಪ್ಪು ಭೂಮಿ ಗಂಗಾವತಿ ಪ್ರದೇಶದಲ್ಲಿ ಕಾಣುತ್ತದೆ. ದಪ್ಪ ಪದರದ ಎರೆಭೂಮಿ ಕುಷ್ಟಗಿ, ಕೊಪ್ಪಳ, ಯಲಬುರ್ಗ ತಾಲ್ಲೂಕುಗಳಲ್ಲಿ, ಮೆಕ್ಕಲು ಮಣ್ಣು ಗಂಗಾವತಿಯಲ್ಲೂ ಹರಡಿದೆ - ಇದು ನೀರನ್ನು ಹೀರಿ ಹಿಡಿಯುತ್ತದೆ.

ಅರಣ್ಯಗಳು : ಜಿಲ್ಲೆಯು ಅತಿ ಉಷ್ಣ ಹವಾಗುಣ ಹೊಂದಿರುವುದರಿಂದ ಸಸ್ಯಗಳ ಬೆಳವಣಿಗೆಗೆ ಸಹಾಯಕವಾಗಿಲ್ಲ. ಅಲ್ಲಲ್ಲಿ ಪೊದೆಗಳು ಗುಡ್ಡಗಳ ಇಳಿಜಾರಿನಲ್ಲಿ ಕಾಣುತ್ತವೆ. ಕುಷ್ಟಗಿ ತಾಲ್ಲೂಕಿನಲ್ಲಿ ಅರಣ್ಯ ಇತರೆಡೆಗಿಂತ ಹೆಚ್ಚು ಕಂಡುಬರುತ್ತದೆ. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 29451 ಹೆ. ಗಂಗಾವತಿಯಲ್ಲಿ 14482 ಹೆ. ಕೊಪ್ಪಳದಲ್ಲಿ 10779 ಹೆ. ಕುಷ್ಟಗಿಯಲ್ಲಿ 4110 ಹೆ. ಮತ್ತು ಯಲಬುರ್ಗಿಯಲ್ಲಿ 80 ಹೆ. ಅರಣ್ಯವಿರುವುದು. ಇಲ್ಲಿಯ ಕಾಡುಗಳಲ್ಲಿ ಜಾಲಿ, ಹುಣಿಸೆ, ಹೊಂಗೆ, ಹಾಲೆ, ಮುತ್ತುಗ, ದಿಂಡಿಗ, ಚುಜ್ಜಲು, ಹುಲುಗಲು (ಹೊಂಗೆ), ಹೊನ್ನೆ, ಬಿಲ್ವ, ಬಾಗೆ, ಕಕ್ಕೆ ಮುಂತಾದ ಮರಗಳು ಕಂಡುಬರುತ್ತವೆ. ಅಲ್ಲಲ್ಲಿ ಕುರುಚಲು ಸಸ್ಯಗಳೂ ಇವೆ.

ನೀರಾವರಿ : ಜಿಲ್ಲೆಯಲ್ಲಿ ತುಂಗಭದ್ರಾ ಮತ್ತು ಕೃಷ್ಣಾ ನದಿಗಳು ಎರಡೂ ಪಾರ್ಶ್ವಗಳಲ್ಲಿ ಹರಿಯುವುದರಿಂದ ಜಲಸಂಪನ್ಮೂಲ ಉತ್ತಮವಾಗಿದೆ. ಯಲಬುರ್ಗಿ ತಾಲೂಕಿನಲ್ಲಿ ಹುಟ್ಟುವ ಒಂದು ತೊರೆ, ಕೊಪ್ಪಳದ ಸಮೀಪ ತುಂಗಭದ್ರಾ ಜಲಾಶಯದ ಹಿನ್ನೀರನ್ನು ಸೇರುತ್ತದೆ. ಕುಷ್ಟಗಿ ತಾಲ್ಲೂಕಿನಲ್ಲಿ ಹುಟ್ಟುವ ಕನಕಗಿರಿ ನಾಲಾ ಗಂಗಾವತಿ ತಾಲ್ಲೂಕನ್ನು ಪ್ರವೇಶಿಸಿ, ತುಂಗಭದ್ರಾ ನದಿಯನ್ನು ಸೇರುತ್ತದೆ. ಅನೇಕ ಸಣ್ಣಪುಟ್ಟ ತೊರೆಗಳು ಆಗ್ನೇಯಾಭಿಮುಖವಾಗಿ ಹರಿಯುತ್ತವೆ. ತುಂಗಭದ್ರಾ ನದಿಗಳ ದೋಅಬ್ ಪ್ರದೇಶದಲ್ಲಿ ಜಿಲ್ಲೆಯು ಇರುವುದರಿಂದ ನೀರಾವರಿ ಯೋಜನೆಗಳಿಂದ ಜಿಲ್ಲೆ ಹೆಚ್ಚು ಪ್ರಯೋಜನ ಪಡೆದಿದೆ. 1950ರ ದಶಕದಲ್ಲಿ ತುಂಗಭದ್ರಾ ನದಿಗೆ ಹೊಸಪೇಟೆ ಬಳಿ ಬೃಹತ್ ಜಲಾಶಯ ನಿರ್ಮಿಸುವ ಯೋಜನೆ ರೂಪಿತವಾಗಿ 1968ರಲ್ಲಿ ಪೂರ್ಣವಾದಾಗ ಕೊಪ್ಪಳ ಒಳಗೊಂಡಂತೆ ಹಿಂದಿನ ರಾಯಚೂರು ಜಿಲ್ಲೆ ಈಗಿನ ಕೊಪ್ಪಳ ಗಂಗಾವತಿ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ಹೆಚ್ಚಿತು. ಇದರಿಂದಾಗಿ ಕಾಲುವೆಗಳಿಂದ 63411 ಹೆ. ಕೆರೆಗಳಿಂದ 1763 ಹೆ. ಬಾವಿಗಳಿಂದ 20262 ಹೆ. ಮತ್ತು ಕೊಳವೆ ಬಾವಿಗಳಿಂದ 6363 ಹೆ. ಪ್ರದೇಶಕ್ಕೆ ನೀರೊದಗುವಂತಾಯಿತು. 2010-11ರ ಸಮೀಕ್ಷಾ ವರದಿಯಂತೆ ವಿವಿಧ ಮೂಲಗಳಿಂದ ಪಡೆಯುವ ನೀರಾವರಿ ಸೌಕರ್ಯ ಇಂತಿದೆ.

ಕಾಲುವೆಗಳಿಂದ : ಗಂಗಾವತಿಯಲ್ಲಿ ಒಟ್ಟು ನೀರಾವರಿಯಾದ ವಿಸ್ತೀರ್ಣ 75401 ಹೆ. ಇದರಲ್ಲಿ ನಿವ್ವಳ ನೀರಾವರಿಯಾದ ವಿಸ್ತೀರ್ಣ 35689 ಹೆ. ಕೊಪ್ಪಳ ತಾಲ್ಲೂಕಿನಲ್ಲಿ 7352 ಹೆ. ಒಟ್ಟು ನೀರಾವರಿಯಾದ ಪ್ರದೇಶ, ಇದರಲ್ಲಿ 4211 ಹೆ. ನಿವ್ವಳ ನೀರಾವರಿಯಾಗಿರುವುದು

ಕಂಡುಬರುತ್ತದೆ. ಜಿಲ್ಲೆಯ ಒಟ್ಟು 82753 ಹೆ. ಪ್ರದೇಶದ ನೀರಾವರಿಯಲ್ಲಿ 39900 ಹೆ. ಪ್ರದೇಶ ನಿವ್ವಳ ನೀರಾವರಿಯ ಪ್ರದೇಶವಾಗಿದೆ.

ಕೆರೆಗಳಿಂದ : ಜಿಲ್ಲೆಯಲ್ಲಿ ಒಟ್ಟು 218 ಹೆ. ಪ್ರದೇಶದಲ್ಲಿ ನೀರಾವರಿಯಾಗಿದ್ದು ನಿವ್ವಳ ನೀರಾವರಿ ಕೂಡ 218 ಹೆ. ಆಗಿದೆ. ಗಂಗಾವತಿಯಲ್ಲಿ 82 ಹೆ. ಕೊಪ್ಪಳದಲ್ಲಿ 43 ಹೆ. ಕುಷ್ಟಗಿಯಲ್ಲಿ 74 ಹೆ. ಮತ್ತು ಯಲಬುರ್ಗಿಯಲ್ಲಿ 19 ಹೆ. ಪ್ರದೇಶದಲ್ಲಿ ನೀರಾವರಿಯಾಗಿದೆ.

ಕೊಳವೆ ಬಾವಿಗಳಿಂದ : ಒಟ್ಟು 95094 ಹೆ. ನೀರಾವರಿಯಾಗಿದ್ದು, ಇದು 72335 ಹೆ. ನಿವ್ವಳ ನೀರಾವರಿಯಾಗಿದೆ. ಗಂಗಾವತಿಯಲ್ಲಿ 13087 ಹೆ., ಕೊಪ್ಪಳದಲ್ಲಿ 26374 ಹೆ. ಕುಷ್ಟಗಿಯಲ್ಲಿ 14412 ಹೆ. ಮತ್ತು ಯಲಬುರ್ಗಿಯಲ್ಲಿ 18462 ಹೆ. ಪ್ರದೇಶದಲ್ಲಿ ನಿವ್ವಳ ನೀರಾವರಿಯಾಗಿದೆ.

ಜಿಲ್ಲೆಯ ಕೊಪ್ಪಳ ತಾಲ್ಲೂಕಿನಲ್ಲಿ ಮಾತ್ರ 612 ಹೆ. ಪ್ರದೇಶದಲ್ಲಿ ಏತ ನೀರಾವರಿಯಿದ್ದು ಇತರೆ ಮೂಲಗಳಿಂದ 261 ಹೆ. ನೀರಾವರಿ ಸೌಲಭ್ಯ ಪಡೆಯುತ್ತದೆ.

ಬೆಳೆಗಳು : ಖಾರಿಫ್ ಮತ್ತು ರಬಿ ಎರಡೂ ಬೆಳೆಗಳನ್ನು ಜಿಲ್ಲೆಯಾದ್ಯಂತ ಬೆಳೆಯುವುದು ಸಾಮಾನ್ಯವಾಗಿದೆ. ಜಿಲ್ಲೆಯಲ್ಲಿ ಬೆಳೆಯುವ ಆಹಾರ ಮತ್ತು ಆಹಾರೇತರ ಬೆಳೆಗಳನ್ನು ಅಂಕಿ ಸಂಖ್ಯೆಯ ಮೂಲಕ ಈ ಕೆಳಗಿನಂತೆ ನೋಡಬಹುದು. (2010-11ರ ಸಮೀಕ್ಷೆಯಂತೆ)

ಬತ್ತ : ಒಟ್ಟು 78134 ಹೆ.ನಲ್ಲಿ 406219 ಟನ್ ಜಿಲ್ಲೆಯಲ್ಲಿ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು

ಗಂಗಾವತಿಯಲ್ಲಿ 69955 ಹೆ. 36369 ಟನ್

ಕೊಪ್ಪಳದಲ್ಲಿ 7869 ಹೆ. 40911 ಟನ್

ಕುಷ್ಟಗಿಯಲ್ಲಿ 203 ಹೆ. 1055 ಟನ್

ಯಲಬುರ್ಗಿಯಲ್ಲಿ 107 ಹೆ. ಪ್ರ - 556 ಟನ್ ಉತ್ಪಾದಿಸಲಾಗಿದೆ.

ಜೋಳ : ಜಿಲ್ಲೆಯಾದ್ಯಂತ 61078 ಹೆ.ನಲ್ಲಿ 36402 ಟನ್ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು

ಗಂಗಾವತಿ - 10021 ಹೆ. 5973 ಟನ್

ಕೊಪ್ಪಳ - 10283 ಹೆ. 6129 ಟನ್

ಕುಷ್ಟಗಿ - 18328 ಹೆ. 10923 ಟನ್

ಯಲಬುರ್ಗಿ - 22446 ಹೆ. 13378 ಟನ್ ಉತ್ಪಾದಿಸಿದೆ.

ಸಜ್ಜೆ : ಒಟ್ಟು 66897 ಹೆ. ಪ್ರದೇಶದಲ್ಲಿ 23213 ಟನ್ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು

ಗಂಗಾವತಿ 6194 ಹೆ. 2149 ಟನ್

ಕೊಪ್ಪಳ - 17153 ಹೆ. 5952 ಟನ್

ಕುಷ್ಟಗಿ - 29108 ಹೆ. 10100 ಟನ್

ಯಲಬುರ್ಗಿ - 14442 ಹೆ. 5011 ಟನ್ ಉತ್ಪಾದಿಸಿದೆ.

ಮುಸುಕಿನ ಜೋಳ : ಒಟ್ಟು 48187 ಹೆ. ಪ್ರದೇಶದಲ್ಲಿ 76328 ಟನ್ ಉತ್ಪಾದಿಸಿದ್ದು,

ತಾಲ್ಲೂಕುವಾರು

ಗಂಗಾವತಿ 3607 ಹೆ. 5713 ಟನ್

ಕೊಪ್ಪಳ - 27555 ಹೆ. 43647 ಟನ್

ಕುಷ್ಟಗಿ - 5884 ಹೆ. 9320 ಟನ್

ಯಲಬುರ್ಗಿ - 11141 ಹೆ. ಪ್ರ - 17647 ಟನ್ ಉತ್ಪಾದಿಸಿವೆ.

ಗೋಧಿ : ಒಟ್ಟು 9156 ಹೆ. ಪ್ರದೇಶದಲ್ಲಿ 4551 ಟನ್ ಉತ್ಪಾದಿಸಲಾಗಿದೆ

ತಾಲ್ಲೂಕುವಾರು

ಗಂಗಾವತಿ - 154 ಹೆ. ಪ್ರ - 77 ಟನ್

ಕೊಪ್ಪಳ - 2010 ಹೆ. ಪ್ರ - 999 ಟನ್

ಕುಷ್ಟಗಿ - 1771 ಹೆ. ಪ್ರ - 880 ಟನ್

ಯಲಬುರ್ಗಿ - 5221 ಹೆ. ಪ್ರ - 2595 ಟನ್ ಉತ್ಪಾದಿಸಲಾಗಿದೆ.

ದ್ವಿದಳ ಧಾನ್ಯಗಳು

ತೊಗರಿ : ಒಟ್ಟು 12677 ಹೆ. ಪ್ರದೇಶದಲ್ಲಿ 2928 ಟನ್ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು

ಗಂಗಾವತಿ - 2781 ಹೆ. ಪ್ರದೇಶದಲ್ಲಿ 642 ಟನ್

ಕೊಪ್ಪಳ - 2365 ಹೆ. ಪ್ರದೇಶದಲ್ಲಿ 546 ಟನ್

ಕುಷ್ಟಗಿ - 1622 ಹೆ. ಪ್ರದೇಶದಲ್ಲಿ 1068 ಟನ್

ಯಲಬುರ್ಗಿ - 2909 ಹೆ. ಪ್ರದೇಶದಲ್ಲಿ - 672 ಟನ್ ಉತ್ಪಾದಿಸಲಾಗಿದೆ.

ಹುರುಳಿ : ಒಟ್ಟು 10747 ಹೆ. ಪ್ರದೇಶದಲ್ಲಿ 2203 ಟನ್ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು ಹೀಗಿದೆ.

ಗಂಗಾವತಿ 745 ಹೆ. ಪ್ರ.ದಲ್ಲಿ - 153 ಟನ್

ಕೊಪ್ಪಳ 2117 ಹೆ. ಪ್ರ.ದಲ್ಲಿ - 434 ಟನ್

ಕುಷ್ಟಗಿ - 4134 ಹೆ. ಪ್ರ.ದಲ್ಲಿ - 847 ಟನ್

ಯಲಬುರ್ಗಿ - 3751 ಹೆ. ಪ್ರ.ದಲ್ಲಿ - 769 ಟನ್

ಉದ್ದು : ಒಟ್ಟು 251 ಹೆ. ಪ್ರದೇಶದಲ್ಲಿ 103 ಟನ್ ಉತ್ಪಾದನೆಯಾಗಿದ್ದು ಗಂಗಾವತಿ 151 ಹೆ. ಪ್ರದೇಶದಲ್ಲಿ 62 ಟನ್, ಕೊಪ್ಪಳ 100 ಹೆ. ಪ್ರದೇಶದಲ್ಲಿ 41 ಟನ್ ಉತ್ಪಾದಿಸಿವೆ.

ಹೆಸರು : ಒಟ್ಟು 12049 ಹೆ. ಪ್ರದೇಶದಲ್ಲಿ 1096 ಟನ್ ಉತ್ಪಾದನೆಯಾಗಿದೆ.

ತಾಲ್ಲೂಕುವಾರು

ಗಂಗಾವತಿ - 1047 ಹೆ. ಪ್ರದೇಶದಲ್ಲಿ 95 ಟನ್

ಕೊಪ್ಪಳ - 2452 ಹೆ. ಪ್ರದೇಶದಲ್ಲಿ 223 ಟನ್

ಕುಷ್ಟಗಿ - 3967 ಹೆ. ಪ್ರ - 261 ಟನ್

ಯಲಬುರ್ಗಿ - 4583 ಹೆ. ಪ್ರ - 417 ಟನ್

ಅವರೆ : ಒಟ್ಟು 1045 ಹೆ. ಪ್ರದೇಶದಲ್ಲಿ 366 ಟನ್ ಉತ್ಪಾದಿಸಲಾಗಿದೆ.

ತಾಲ್ಲೂಕುವಾರು

ಗಂಗಾವತಿ 303 ಹೆ. ಪ್ರ.ದಲ್ಲಿ 106 ಟನ್

ಕೊಪ್ಪಳ 247 ಹೆ. ಪ್ರ - 86 ಟನ್

ಕುಷ್ಟಗಿ 231 ಹೆ. ಪ್ರ. - 81 ಟನ್

ಯಲಬುರ್ಗಿ 264 ಹೆ. ಪ್ರ. 92 ಟನ್ ಉತ್ಪಾದಿಸಿದೆ

ಅಲಸಂದೆ : ಒಟ್ಟು 7292 ಹೆ. ಪ್ರದೇಶದಲ್ಲಿ 3493 ಟನ್ ಉತ್ಪಾದನೆಯಾಗಿದೆ.

ತಾಲ್ಲೂಕುವಾರು

ಗಂಗಾವತಿ - 1137 ಹೆ. ಪ್ರ - 545 ಟನ್

ಕೊಪ್ಪಳ - 3046 ಹೆ. ಪ್ರ - 1459 ಟನ್

ಕುಷ್ಟಗಿ - 1690 ಹೆ. ಪ್ರ - 810 ಟನ್

ಯಲಬುರ್ಗಿ - 1418 ಹೆ. ಪ್ರ - 680 ಟನ್ ಉತ್ಪಾದಿಸಿದೆ.

ಕಡಲೆ : ಒಟ್ಟು 41074 ಹೆ. ಪ್ರದೇಶದಲ್ಲಿ 18524 ಟನ್ ಉತ್ಪಾದನೆಯಾಗಿದೆ.

ತಾಲ್ಲೂಕುವಾರು

ಗಂಗಾವತಿಯಲ್ಲಿ 4292 ಹೆ. ಪ್ರ - 1936 ಟನ್

ಕೊಪ್ಪಳದಲ್ಲಿ 4707 ಹೆ. ಪ್ರ - 4727 ಟನ್

ಕುಷ್ಟಗಿಯಲ್ಲಿ 8581 ಹೆ. ಪ್ರ - 3876 ಟನ್

ಯಲಬುರ್ಗಿಯಲ್ಲಿ 17719 ಹೆ.ಪ್ರ - 7991 ಟನ್ ಉತ್ಪಾದನೆಯಾಗಿದೆ.

ಎಣ್ಣೆಕಾಳುಗಳು : ಶೇಂಗಾ : ಜಿಲ್ಲೆಯಾದ್ಯಂತ ಒಟ್ಟು 17001 ಹೆ. ಪ್ರದೇಶದಲ್ಲಿ 26462 ಟನ್ ಶೇಂಗಾ ಉತ್ಪಾದನೆಯಾಗಿದೆ.

ತಾಲ್ಲೂಕುವಾರು

ಗಂಗಾವತಿ 7773ಹೆ. ಪ್ರದೇಶದಲ್ಲಿ 4376 ಟನ್

ಕೊಪ್ಪಳ 11511 ಹೆ. ಪ್ರ - 6481 ಟನ್

ಕುಷ್ಟಗಿ 10832 ಹೆ. ಪ್ರ - 6098 ಟನ್

ಯಲಬುರ್ಗಿ 16885 ಹೆ. ಪ್ರ. 9506 ಟನ್ ಉತ್ಪಾದನೆಯಾಗಿದೆ.

ಸೂರ್ಯಕಾಂತಿ : ಜಿಲ್ಲೆಯಲ್ಲಿ 39951 ಹೆ. ಪ್ರದೇಶದಲ್ಲಿ 9548 ಟನ್ ಸೂರ್ಯಕಾಂತಿ ಉತ್ಪಾದನೆಯಾಗಿದ್ದು

ತಾಲ್ಲೂಕುವಾರು

ಗಂಗಾವತಿ - 8470 ಹೆ. ಪ್ರ - 2024 ಟನ್

ಕೊಪ್ಪಳ - 5857 ಹೆ. ಪ್ರ - 1400 ಟನ್

ಕುಷ್ಟಗಿ - 13104 ಹೆ. ಪ್ರ - 3132 ಟನ್

ಯಲಬುರ್ಗಿ - 12520 ಹೆ. ಪ್ರ - 2992 ಟನ್ ಉತ್ಪಾದಿಸಿದೆ.

ಕುಸುಬೆ : ಒಟ್ಟು 4675 ಹೆ. ಪ್ರದೇಶದಲ್ಲಿ 2006 ಟನ್ ಉತ್ಪಾದಿಸಿದ್ದು

ಗಂಗಾವತಿ - 386 ಹೆ. ಪ್ರ - 166 ಟನ್

ಕೊಪ್ಪಳ - 342 ಹೆ. ಪ್ರ - 147 ಟನ್

ಕುಷ್ಟಗಿ - 2009 ಹೆ. ಪ್ರ - 862 ಟನ್

ಯಲಬುರ್ಗಿ - 1938 ಹೆ.ಪ್ರದೇಶದಲ್ಲಿ 831 ಟನ್ ಉತ್ಪಾದಿಸಿವೆ.

ಹರಳು : ಜಿಲ್ಲೆಯಲ್ಲಿ ಒಟ್ಟು 922 ಹೆ. ಪ್ರದೇಶದಲ್ಲಿ 394 ಟನ್ ಉತ್ಪಾದನೆಯಾಗಿದೆ.

ಗಂಗಾವತಿ - 175 ಹೆ. ಪ್ರ.ದಲ್ಲಿ 75 ಟನ್

ಕೊಪ್ಪಳ - 144 ಹೆ. ಪ್ರ - 61 ಟನ್

ಕುಷ್ಟಗಿ - 449 ಹೆ. ಪ್ರ - 912 ಟನ್

ಯಲಬುರ್ಗಿ - 154 ಹೆ. ಪ್ರ - 66 ಟನ್ ಉತ್ಪಾದಿಸಿವೆ.

ಹುಚ್ಚೆಳ್ಳು : ಒಟ್ಟು 1320 ಹೆ. ಪ್ರದೇಶದಲ್ಲಿ 1224 ಟನ್ ಹುಚ್ಚೆಳ್ಳು ಉತ್ಪಾದನೆಯಾಗಿದ್ದು

ಗಂಗಾವತಿ 198 ಹೆ. ಪ್ರ. 90ಟನ್

ಕೊಪ್ಪಳ - 267 ಹೆ. ಪ್ರ. 288 ಟನ್

ಕುಷ್ಟಗಿ - 486 ಹೆ. ಪ್ರ - 513 ಟನ್

ಯಲಬುರ್ಗಿ - 429 ಹೆ. ಪ್ರ - 334 ಟನ್ ಉತ್ಪಾದಿಸಿವೆ.

ವಾಣಿಜ್ಯ ಬೆಳೆಗಳು : ಕೊಪ್ಪಳಾದ್ಯಂತ ಮಳೆ ಪ್ರಮಾಣ ಕಡಿಮೆ ಇರುವುದರಿಂದ ವಾಣಿಜ್ಯ ಬೆಳೆಗಳ ಉತ್ಪಾದನೆ ಕಡಿಮೆ ಕಂಡುಬರುತ್ತದೆ.

ಹತ್ತಿ : ಒಟ್ಟು 21367 ಹೆ. ಪ್ರದೇಶದಲ್ಲಿ 1624 ಟನ್ ಹತ್ತಿಯನ್ನು ಉತ್ಪಾದನೆ ಮಾಡಲಾಗಿದೆ.

ಗಂಗಾವತಿಯಲ್ಲಿ 1583 ಹೆ. ಪ್ರದೇಶದಲ್ಲಿ 120 ಟನ್

ಕೊಪ್ಪಳದ 4539 ಹೆ. ಪ್ರದೇಶದಲ್ಲಿ 345 ಟನ್

ಕುಷ್ಟಗಿಯಲ್ಲಿ 4248 ಹೆ. ಪ್ರದೇಶದಲ್ಲಿ 323 ಟನ್

ಯಲಬುರ್ಗಿಯಲ್ಲಿ 10997 ಹೆ. ಪ್ರದೇಶದಲ್ಲಿ 836 ಟನ್ ಉತ್ಪಾದನೆಯಾಗಿದೆ.

ಕಬ್ಬು : ಒಟ್ಟು 2250ಹೆ. ಪ್ರದೇಶದಲ್ಲಿ 227 ಟನ್ ಕಬ್ಬು ಉತ್ಪಾದನೆಯಾಗಿದ್ದು ಅದರಲ್ಲಿ

ಗಂಗಾವತಿಯ 291 ಹೆ. ಪ್ರದೇಶದಲ್ಲಿ 29 ಟನ್

ಕೊಪ್ಪಳದ 1945 ಹೆ. ಪ್ರದೇಶದಲ್ಲಿ 196 ಟನ್

ಯಲಬುರ್ಗಿಯ 14 ಹೆ. ಪ್ರದೇಶದಲ್ಲಿ 01 ಟನ್ ಉತ್ಪಾದನೆ ಮಾಡಿವೆ.

ಸಾಂಬಾರ ಬೆಳೆಗಳು : ಕೊಪ್ಪಳ ಜಿಲ್ಲೆಯಲ್ಲಿ ಸಾಂಬಾರ ಬೆಳೆಗಳ ಉತ್ಪಾದನೆ ಕಡಿಮೆ ಇದ್ದು ಕೆಲವೆಡೆ ಹುಣಸೆ, ಮೆಣಸಿನಕಾಯಿ, ಉಳ್ಳಾಗಡ್ಡಿ, ಬೆಳ್ಳುಳ್ಳಿ ಬೆಳೆಯುವುದು ಮಾತ್ರ ಕಾಣಬಹುದು.

ಹೂವಿನ ಬೆಳೆಗಳು : ಹೂವಿನ ಉತ್ಪಾದನೆಯಲ್ಲಿ ಜಿಲ್ಲೆ ಹಿಂದೆ ಇದ್ದು ಗಂಗಾವತಿ ಮತ್ತು ಕೊಪ್ಪಳದ ಸುತ್ತಮುತ್ತ ಮಲ್ಲಿಗೆ, ಸೇವಂತಿಗೆ, ಗುಲಾಬಿ, ಕನಕಾಂಬರ ಹೂಗಳನ್ನು ಬೆಳೆಯುವುದು ಕಂಡುಬರುತ್ತದೆ.

ರೇಷ್ಮೆ : ಕೊಪ್ಪಳದಲ್ಲಿ ರೇಷ್ಮೆ ಕೃಷಿಯು ಕಡಿಮೆ ಪ್ರಮಾಣದಲ್ಲಿ ಗೋಚರವಾಗುವುದು. ಕಮಿಷನ್ನೇರೇಟ್ ಸೆರಿಕಲ್ಚರ್ ಬೆಂಗಳೂರು ಇವರ ವರದಿಯಂತೆ 207 ಹೆಕ್ಟೇರ್ ಪ್ರದೇಶದಲ್ಲಿ 52 ಟನ್ ರೇಷ್ಮೆಗೂಡುಗಳ ಉತ್ಪಾದನೆಯು ದಾಖಲಾಗಿದೆ.

ಹಣ್ಣುಗಳ ಉತ್ಪಾದನೆ : ಕೊಪ್ಪಳದಾದ್ಯಂತ ಮಾವು, ಸೀಬೆ, ಬಾಳೆ, ನಿಂಬೆ, ಸಪೋಟ, ದಾಳಿಂಬೆ, ಅಂಜೂರ, ಸೀತಾಫಲ ಮೊದಲಾದ ಹಣ್ಣುಗಳ್ನು 9072 ಹೆ. ಪ್ರದೇಶದಲ್ಲಿ ಬೆಳೆಯಲಾಗಿದ್ದು ಇದು ಗಂಗಾವತಿಯಲ್ಲಿ 2803 ಹೆ. ಕೊಪ್ಪಳದಲ್ಲಿ 1046 ಹೆ. ಕುಷ್ಟಗಿಯಲ್ಲಿ 2192 ಹೆ. ಮತ್ತು ಯಲಬುರ್ಗಿಯಲ್ಲಿ 3031 ಹೆ. ಹಣ್ಣುಗಳನ್ನು ಬೆಳೆಯಲಾಗಿದೆ.

ತರಕಾರಿಗಳು : ಜಿಲ್ಲೆಯಲ್ಲಿ ಟೊಮ್ಯಾಟೋ, ಬದನೆಕಾಯಿ, ಕುಂಬಳ, ಉಳ್ಳಾಗಡ್ಡಿ, ಕೊತ್ತಂಬರಿ, ಮೆಣಸಿನಕಾಯಿ, ಬೀನ್ಸ್ (ತಿಂಗಳ ಹುರುಳಿ) ಮೊದಲಾದ ಬೆಳೆಗಳನ್ನು ಬೆಳೆಯುವುದು ಕಾಣಬಹುದು. ಒಟ್ಟು 9692 ಹೆ.ನಲ್ಲಿ ತರಕಾರಿಗಳನ್ನು ಬೆಳೆಯಲಾಗುತ್ತಿದ್ದು ಗಂಗಾವತಿಯಲ್ಲಿ 3193 ಹೆ., ಕೊಪ್ಪಳದಲ್ಲಿ 3469 ಹೆ., ಕುಷ್ಟಗಿಯಲ್ಲಿ 1776 ಹೆ. ಮತ್ತು ಯಲಬುರ್ಗಿಯಲ್ಲಿ 1254 ಹೆ. ಪ್ರದೇಶದಲ್ಲಿ ತರಕಾರಿ ಬೆಳೆಯುವುದು ದಾಖಲಾಗಿದೆ.

ಸಾಂಪ್ರದಾಯಿಕ ಕೃಷಿ ಪಾರಿಭಾಷಿಕ ಪದಗಳು : ಅಗಿ ಹಚ್ಚು - ಸಸಿಗಳನ್ನು ಬೆಳೆಯಲು ಬೀಜ ಬಿತ್ತುವುದನ್ನು ಅಗಿ ಹಚ್ಚು ಎನ್ನುವರು.

ಅಕ್ಕಡಿ ಹಾಕು - ಮುಖ್ಯ ಬೆಳೆಗಳ ನಡುವೆ ಉಪಬೆಳೆಗಳನ್ನು ಬೆಳೆಯುವುದು.

ಮಾಸಲು ಮಾಡು - ಬೆಳೆಗಳನ್ನು ಒಕ್ಕುವ ವಿಧಾನ.

ಜಟ್ಟು ಕಟ್ಟು - ಬಣಿವೆ ಒಡ್ಡಿನ ಮೇಲೆ ತುದಿಯಲ್ಲಿ ಗಂಟು ಹಾಕುವುದು.

ಯಡೆ ಹೊಡಿ - ಎಡೆಕುಂಟೆಯಿಂದ ಹಸನು ಮಾಡುವುದು.

ಒಳಗಟ್ಟಿ - ಮಳೆ ನೀರಿನಿಂದಾಗಿ ಭೂಮಿ ಕೊಚ್ಚಿ ಹೋಗದಂತೆ ಮಣ್ಣು ತಡೆಯಲು ಹಾಕಿದ ಕಟ್ಟೆ ಸಹಿತವಾದ ಒಡ್ಡು.

ಇಂಗ್ಲಿ - ಕುಂಟೆ ಹಿಂಡಿಗೆ ಈಸು ಜೋಡಿಸಿದಾಗ - ದಿಂಡಿನಿಂದ ಹೊರಗೆ ಬಂದ ಈಸಿಗೆ ಕಡಾಣಿಯಂತೆ ಕಟ್ಟಿಗೆ ಜೋಡಿಸುವುದು.

ಇಡುಗೊಬ್ಬರ - ಗಿಡಗಳ ಹತ್ತಿರದಲ್ಲಿ ಚಿಟಿಕೆಯಾಗಿ ಇಡುವುದರ ಮೂಲಕ ಬೆಳೆ ಸಂವೃದ್ಧಿಯಾಗಿ ಬೆಳೆಯುವಂತೆ ಮಾಡುವುದು.

ಚಲ್ಲುವುದು - ಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಚೆಲ್ಲುವ ಮೂಲಕ ಬೆಳೆ ಬೆಳೆಯುವುದು.

ಎರಚುವುದು - ಪೈರಿನ ಬುಡದಲ್ಲಿ ಗೊಬ್ಬರ ಹಾಕುವ ಮೂಲಕ ಬೆಳೆ ಬೆಳೆಯುವುದು.

ಸಾಲು ಬಿಡುವುದು - ಗೊಬ್ಬರ ಹಾಗೂ ಬೀಜಗಳನ್ನು ಸಾಲು ಬಿಡುವುದು.

ನಾಟಿ - ಬೆಳೆದ ಪೈರುಗಳನ್ನು ನೇರವಾಗಿ ಹೊಡೆದ ಸಾಲುಗಳಲ್ಲಿ ನಾಟಿ ಮಾಡುವುದು.

ನೆಡುವುದು - ಜಿಲ್ಲೆಯ ಕೆಲವು ಕಡೆ ಹತ್ತಿ ಬೀಜಗಳನ್ನು ನೆಡುವ ಮೂಲಕ ಬೆಳೆಯುವುದು ಕಾಣುತ್ತದೆ.

ದೇಶೀಯ ತಳಿಗಳು

ಉಳ್ಳಾಗಡ್ಡಿ - ಇದು ಒಂದು ತರಕಾರಿ ಬೆಳೆ. ಉಳ್ಳಾಗಡ್ಡಿ, ಕೆಂಪುಳ್ಳುಗಡ್ಡಿ, ಗಂಡುಳ್ಳುಗಡ್ಡಿ, ಜವಾರಿ ಉಳ್ಳಾಗಡ್ಡಿ ಇವು ವಿವಿಧ ತಳಿಗಳು.

ಕಾಡೆಳ್ಳು - ಎಳ್ಳಿನ ಒಂದು ದೇಶೀಯ ತಳಿ.

ಕಡಲೆ - ಕರಿಗಡಲೆ ಉತ್ತಮವಾದ ದೇಶೀತಳಿ ಎಂದು ಬಳಕೆ ಮತ್ತು ಯಣ್ಣಿಗಿರಕಲ್ಲಿ

ಅವುಡಲಗೆ - ಔಡ್ಲದ ಒಂದು ತಳಿ (ಹರಳು)

ಗೋಲಗೇರಿ - ಸಜ್ಜೆಯ ಒಂದು ವಿಧದ ತಳಿ

ಹುಚ್ಚೆಳ್ಳು - ದೇಶೀಯ ತಳಿ, ಕರಿ ಹುಚ್ಚೆಳ್ಳು

ಕೊತ್ತಂಬರಿ - ಧನಿಯ, ಸಂಬಾರದ ಸೊಪ್ಪು

ಹಾಗೆಯೆ ಜಿಲ್ಲೆಯ ವಿವಿದೆಡೆ ಕುಂಬಳ, ಸಿಹಿಕುಂಬಳ, ತೊಂಡೆಕಾಯಿ, ಹಾಗಲಕಾಯಿ, ಗೆಡ್ಡೆಕೋಸು, ಗೋರಿಕಾಯಿ, ಟೊಮ್ಯಾಟೋ ಜೊತೆಗೆ ವಿವಿಧ ಸೊಪ್ಪುಗಳನ್ನು ಬೆಳೆಯುವರು.

ಗೊಬ್ಬರ ಮತ್ತು ಕೀಟನಾಶಕಗಳು : 2010-11ರ ಸಮೀಕ್ಷೆಯಂತೆ ಜಿಲ್ಲೆಯಲ್ಲಿ 50637 ಟನ್ ನೈಟ್ರೋಜನ್, 42363 ಟನ್ ಫಾಸ್ಫರಸ್, 27482 ಟನ್ ಪೊಟ್ಯಾಷಂ ರಾಸಾಯನಿಕ ಗೊಬ್ಬರವನ್ನು ಬಳಸಲಾಗಿದೆ. ಇದರಲ್ಲಿ ದೇಶೀಯ ಗೊಬ್ಬರದ ಬಳಕೆಯು ಸಾಮಾನ್ಯವಾಗಿದೆ. ಅವುಗಳೆಂದರೆ

ಬೇವಿನ ಹಿಂಡಿ : ಬೇವಿನ ಎಲೆಗಳನ್ನು ಕೊಳೆ ಹಾಕಿ ಕರಗಿದ ಅನಂತರ ಅದನ್ನು ಹಿಂಡಿಯಾಗಿ, ಗೊಬ್ಬರದ ವಿಧವಾಗಿ ಬಳಸಲಾಗುವುದು.

ಸೋಸಿದ್ ಗೊಬ್ಬರ : ಗುಂಡಿಯಲ್ಲಿ ಕಳಿತ ಗೊಬ್ಬರವನ್ನು ಸೋಸಿದ್ ಗೊಬ್ಬರವಾಗಿ ಬಳಸಲಾಗುವುದು.

ಸಣೆಗೊಬ್ಬರ : ಹುಡಿ ಹುಡಿಯಾದ ಗೊಬ್ಬರ (ಒಣಗಿದ ಕಸ).

ಮನಿಗೊಬ್ಬರ : ಮನೆಯಲ್ಲಿ ದನಕರುಗಳು ಮೇಕೆ, ಕುರಿ ಮೊದಲಾದವುಗಳಿಂದ ಸಗಣಿ, ಹಿಕ್ಕೆಗಳಿಂದ ಬರುವ ಗೊಬ್ಬರ.

ಜಿನುಗು ಗೊಬ್ಬರ : ಕೊಳೆತ ಕಾಂಪೋಸ್ಟ್ ಗೊಬ್ಬರದ ಜಿನುಗುವ ರಸವನ್ನು ಗೊಬ್ಬರವಾಗಿ ಬಳಸುವುದು.

ನೈಸರ್ಗಿಕ ಗೊಬ್ಬರ : ಪ್ರಾಕೃತಿಕವಾಗಿ ದೊರೆಯುವ ಕಾಂಪೋಸ್ಟ್ ಗೊಬ್ಬರ.

ಕೀಟನಾಶಕಗಳು : ಎಲೆಕಾಲೆಕ್ಸ್ : ಇದೊಂದು ಕೀಟನಾಶಕ ಔಷಧಿ

ಬೇವಿನ ರಸ : ಚೆನ್ನಾಗಿ ಕೊಳೆತ ಅಥವಾ ಬೇಯಿಸಿದ ಬೇವಿನ ಎಲೆಗಳಿಂದ ಬರುವ ರಸವನ್ನು ಕೀಟನಾಶಕವಾಗಿ ಬಳಸುವುದು.

ದನ-ಎಮ್ಮೆಗಳ ಮೂತ್ರ : ಗಂಜಲವನ್ನು ಕೀಟನಾಶಕವಾಗಿ ಬಳಸುವುದು.

ವ್ಯವಸಾಯಕ್ಕೆ ಬಳಸುವ ಉಪಕರಣಗಳು : **ಡಬ್ಬಿ :** ನೊಗಕ್ಕೆ ಸಿಕ್ಕಿಸುವ ಕೂರಿಗೆ ಜೋಡಿಸುವ ತೆಳುವಾದ ಮಣೆ

ತಟ್ಟಿ : ಎತ್ತುಗಳಿಗೆ ನುಚ್ಚು ತಿನ್ನಿಸಲು ಇಡುವ ಬಿದಿರುನಿಂದ ಮಾಡಿದ ಉಪಕರಣ

ತಲುಬು : ಕೂರಿಗೆಯಿಂದ ಬಿತ್ತನೆ ಮಾಡುವಾಗ ಬೀಜ ಬಿತ್ತಲು ಮಾಡಿರುವ ಉಪಕರಣ

ತಾಳ : ಹುಲ್ಲು ಕೀಳಲು ಉಪಯೋಗಿಸುವ ಸಾಧನ

ತೂರಮಣಿ : ರಾಶಿ ತೂರಲು ಮಾಡಿರುವ ಎತ್ತರವಾದ ಮೂರು ಕಾಲಿನ ಮಂಚ

ನೆರ್ಗಣಿ : ಕುಂಟೆ ಕಟ್ಟಲು ಬಳಸುವ ತೊಗಲಿನ ಸಾಧನ

ಬುಕ್ಕ : ಕಾಳು ಗೊಬ್ಬರ ಬಿತ್ತಲು ಮಾಡಿರುವ ಕೊಳವೆ

ಕೊಲ್ಗುಂಡು : ಕಣದಲ್ಲಿ ತೆನೆ ತುಳಿಯಲು ಮಾಡಿರುವ ಕಲ್ಲಿನ ಗುಂಡು

ಹೆಡೆ : ಬೆಳೆಯಲ್ಲಿರುವ ಹುಲ್ಲು ನಾಶಮಾಡಲು ಬಳಸುವ ಕುಂಟೆ

ಉಡಿಚೀಲ : ಬಿತ್ತುವಾಗ ಬೀಜ ಹಾಕಿಕೊಳ್ಳಲು ಮಾಡಿದ ಸಣ್ಣ ಚೀಲ

ಉದ್ದಿಗಿ : ಕುಂಚಿ ಎಳೆಯಲು ಸಹಾಯಕವಾಗುವಂತೆ ಕುಂಟೆಗೆ ಜೋಡಿಸಿರುವ ಉದ್ದನೆಯ ಬೊಂಬಿನ ಕಟ್ಟಿಗೆ

ಗಡ್ಡಿಗುಂಟೆ : ಹರಗಲು ಬಳಸುವ ಕುಂಟೆ

ಕುಡ : ಕುಂಟೆಗೆ ಜೋಡಿಸುವ ಕಬ್ಬಿಣದ ಪಟ್ಟೆ

ಹಲಕ್ಕು : ಹತ್ತಿಕಾಳು ಬಿತ್ತುವ ಮೂರು ಗೇಣಿನ ಮೂರು ತಾಳುಗಳಿರುವ ಕೂರಿಗೆ

ಸಹಾಯಕ ಗ್ರಂಥಗಳು

ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ (ಪರಿಷ್ಕೃತ) ಸಂಪುಟ - 01

ಕರ್ನಾಟಕ ಸಂಕ್ಷಿಪ್ತ ಇತಿಹಾಸ - ಡಾ. ಸೂರ್ಯನಾಥಕಾಮತ್

ಕರ್ನಾಟಕ ಭೂಗೋಳಶಾಸ್ತ್ರ - ಪ್ರೊ.ಪಿ. ಮಲ್ಲಪ್ಪ

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ

ಕೊಪ್ಪಳ ಜಿಲ್ಲೆಯ ಅಂಕಿ ಅಂಶಗಳ ನೋಟ 2010-11 ಕರ್ನಾಟಕ ಸರ್ಕಾರ [www.koppal.com]

ಕರ್ನಾಟಕ ವೃತ್ತಿಪರ ಮಂಜರಿ 1 - ಕೃಷಿಪದ ಕೋಶ

ಬೆಳೆಗಳು ಮತ್ತು ಬೇಸಾಯ -ಬಿ.ಎನ್. ನಂಜಾರೆಡ್ಡಿ

ವ್ಯವಸಾಯ ಕೈಪಿಡಿ - ಜಿ.ವಿ.ಬಿ. ನಾಯ್ಡು, ಬಿ. ರಮೇಶ್ ಮತ್ತು ಬಿ.ಸುರೇಶ್ ಪ್ರಸಾರಾಂಗ - ಮೈಸೂರು

ವಕ್ತೃ : ವೀರಣ್ಣ ಜೋಗಿನ್ - ಕೃಷಿಕ - ಅಳವಂಡಿ - ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ

ಎಲ್.ಆರ್.

ಕೊರಸಿಗನ ಮರ ಪೊದೆಯಂತೆ ಬೆಳೆಯುವಂಥದ್ದು. ಅಪೋಸೈನೇಸಿ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು 'ಹೊಲೊರಿನ ಆಂಟಿಡಿಸಿಂಟ್ರಿಕ'. ಕನ್ನಡದಲ್ಲಿ ಇದನ್ನು ಕುಡ್ಸಾಲೆ, ಬೆಪ್ಪಾಲೆ, ಕೊಚ್ಚಿಮರ ಎಂದು ಕರೆಯುತ್ತಾರೆ. ಇದರ ತವರು ಭಾರತ. ಸ್ವಾಭಾವಿಕವಾಗಿ ಕಾಡುಗಳಲ್ಲಿ ಬೆಳೆಯುತ್ತಿದ್ದ ಈ ಮರವನ್ನು ಹೂವಿನ ಸುವಾಸನೆಯಿಂದಾಗಿ ಉದ್ಯಾನ, ದೇವಾಲಯದ ಆವರಣ, ಶಾಲಾ ಆವರಣ, ಅತಿಥಿಗೃಹ, ಭವ್ಯಬಂಗಲೆಗಳ ಅಂಗಳಗಳಲ್ಲಿ ಬೆಳೆಸುವುದುಂಟು. ಪರ್ಣಪಾತಿ ಜಾತಿಗೆ ಸೇರಿದ ಈ ಮರ 30-40 ಅಡಿ ಎತ್ತರ ಬೆಳೆಯುತ್ತದೆ. ಇದು ಏಕ ಪ್ರಧಾನ ಕಾಂಡಹೊಂದಿದ್ದು 20 ಅಡಿ ಎತ್ತರ ಬೆಳೆಯಬಲ್ಲುದು. ಬಿರುಸಾದ, ಕಂದುಬಣ್ಣದ ತೊಗಟೆಯಿರುತ್ತದೆ. ಅಭಿಮುಖ ಜೋಡಣೆಯ ಇದರ ಎಲೆಗಳು 6-12 ಇಂಚು ಉದ್ದವಾಗಿರುತ್ತವೆ. ಎಲೆ ತೊಟ್ಟು ಚಿಕ್ಕದು. ಮಧ್ಯಾರಂಭಿ ಹೂಗೊಂಚಲುಗಳು ರೆಂಬೆಗಳ ತುದಿ ಅಥವಾ ಕಂಕುಳಲ್ಲಿ ಜೋಡಣೆಗೊಂಡಿರುತ್ತವೆ. ಒಂದು ಹೂವಿನಲ್ಲಿ ಐದು ಪುಷ್ಪ ಪತ್ರಗಳು, ಐದು ದಳಗಳು, ಐದು ಕೇಸರಗಳು, ಎರಡು ಕಾರ್ಪೆಲುಗಳು ಇದ್ದು ಉಚ್ಚಸ್ಥಾನದ ಅಂಡಾಶಯುವಿದ್ದು, ದಳಗಳು ಪರಸ್ಪರ ಹೆಣೆದುಕೊಂಡಂತಿದ್ದು, ಕೇಸರಗಳ ಬುಡ ಕಂಠದಲ್ಲಿ ಅಂಟಿಕೊಂಡಿದೆ. ಹಣ್ಣು ಕೊಳವೆಯಾಕಾರದಲ್ಲಿದ್ದು, ಬೀಜಗಳ ತುದಿಯಲ್ಲಿ ನುಣುಪಾದ ಉದ್ದನೆಯ ಕುಚ್ಚುರೂಪದ ಕೂದಲುಗಳಿದ್ದು ಹಗುರವಾಗಿ ಗಾಳಿಯಲ್ಲಿ ತೇಲುವುದರಿಂದ ಬೀಜ ಪ್ರಸಾರ ಸುಲಭ.

ಉಪಯೋಗ : ಉರುವಲಿಗೆ ಉಪಯೋಗವಾಗುವ ಇದು ಔಷಧೀಯ ಗುಣಗಳನ್ನೂ ಹೊಂದಿದೆ. ಪ್ರತಿಬಂಧಕ, ಜಂತುನಾಶಕ, ಜ್ವರ ನಿವಾರಕ, ಶಕ್ತಿವರ್ಧಕ ಗುಣಗಳು ಇದರ ತೊಗಟೆಯಲ್ಲಿದ್ದು ಮಾರುಕಟ್ಟೆಯಲ್ಲಿ ದೊರೆಯುತ್ತದೆ. ತೊಗಟೆಯಲ್ಲಿ ಕ್ಷಾರ ಗುಣವಿರುವುದರಿಂದ ಅಜೀರ್ಣ, ಚರ್ಮರೋಗ, ಮೂಲವ್ಯಾಧಿ, ಗುಲ್ಮರೋಗ ಇತ್ಯಾದಿಗಳಿಗೆ ರಾಮಬಾಣ. ತೊಗಟೆಯಲ್ಲಿಯ ಅಂಟು ಆಮಶಂಕೆ ನಿವಾರಣೆಗೆ ಉಪಯೋಗವಾಗುತ್ತದೆ. ಬಾಚಣಿಗೆ, ಪೆಟ್ಟಿಗೆ, ಚಿತ್ರಗಳ ಕಟ್ಟು, ಆಟದ ಸಾಮಾನು, ಊರುಗೋಲು, ನೇಗಿಲು, ಮಣೆ ಮುಂತಾದವನ್ನು ತಯಾರಿಸುವಲ್ಲಿ ಹೆಚ್ಚು ಉಪಯೋಗ.

ಪಿ.ಸಿ.ಎಸ್.

ಕೋಲಾರ ಜಿಲ್ಲೆಯ ಕೃಷಿ ಕರ್ನಾಟಕದ 30 ಜಿಲ್ಲೆಗಳ ಪೈಕಿ ಕೋಲಾರ ಒಂದು. ಇದು ಕರ್ನಾಟಕದ ಪೂರ್ವದ ಹೆಬ್ಬಾಗಿಲು ಎನಿಸಿಕೊಂಡಿದೆ. ಭೌಗೋಳಿಕವಾಗಿ ಜಿಲ್ಲೆಯು ವೈವಿಧ್ಯತೆಯಿಂದ ಕೂಡಿದೆ. ನಂದಿ ಬೆಟ್ಟ, ಸೀತೆಬೆಟ್ಟ, ಟೇಕಲ್, ಕುರುಡು ಮಲೆ, ಮುರುಗುಮಲೆ, ಆವನಿ, ಅಂಬಾಜಿದುರ್ಗ, ರೆಹಮಾನ್ ದುರ್ಗ, ಇಟ್ಕಲ್ ದುರ್ಗ ಮುಂತಾದ ಬೆಟ್ಟ ಗುಡ್ಡಗಳನ್ನು ಗಿರಿದುರ್ಗಗಳನ್ನು ಹೊಂದಿದ್ದರೂ ಮೈದಾನ ಪ್ರದೇಶವೇ ಹೆಚ್ಚು. ಪಾಲಾರ್, ಉತ್ತರ ಪಿನಾಕಿನಿ, ದಕ್ಷಿಣ ಪಿನಾಕಿನಿ, ಚಿತ್ರಾವತಿ ಹಾಗೂ ಪಾಪಾಗ್ನಿ ನದಿಗಳು ಇದ್ದರೂ ಇಂದು ಇವು ಯಾವುವೂ ವರ್ಷ ಪೂರ್ತಿ ಹರಿಯುವುದಿಲ್ಲ. ಈ ನದಿಗಳು ಕೆರೆಗಳು ತುಂಬಲು ನೆರವಾಗುತ್ತವೆ. ಹಿಂದಿನಿಂದಲೂ ಜಿಲ್ಲೆಯ ಕೃಷಿ ಪ್ರಧಾನವಾಗಿ ಅವಲಂಭಿಸಿರುವುದು ಕೆರೆಯ ನೀರಾವರಿಯನ್ನು ಮಾತ್ರ.

ಜಿಲ್ಲೆಯ ಮೇರೆಗಳು : ಕರ್ನಾಟಕ ರಾಜ್ಯದ ದಕ್ಷಿಣ ಬಯಲು ನಾಡಿನ ಪೂರ್ವದಲ್ಲಿರುವ ಕೋಲಾರ ಜಿಲ್ಲೆಯ ಎಲ್ಲೆಗಳು ವಾಯವ್ಯ ಮತ್ತು ದಕ್ಷಿಣಭಾಗದಲ್ಲಿ ಪೂರ್ವಘಟ್ಟಗಳ ಬೆಟ್ಟ ಶ್ರೇಣಿಯನ್ನು ಮುಟ್ಟುತ್ತವೆ. ಜಿಲ್ಲೆಯಲ್ಲಿ ಹಲವಾರು ಬೆಟ್ಟ ಶ್ರೇಣಿಗಳಿದ್ದು ದೊಡ್ಡ ದೊಡ್ಡ ಬಂಡೆಗಳನ್ನು ಒಂದರ ಮೇಲೊಂದು ವಿಚಿತ್ರಾಕಾರದಲ್ಲಿ ಪೇರಿಸಿದಂತಿರುವುದೇ ಈ ಜಿಲ್ಲೆಯ ವೈಶಿಷ್ಟ್ಯ.


ಜಿಲ್ಲೆಯ ಪಶ್ಚಿಮಕ್ಕೆ ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳಿವೆ. ಉತ್ತರ ದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಪೂರ್ವದಲ್ಲಿ ಚಿತ್ತೂರು ಜಿಲ್ಲೆ (ಆಂಧ್ರಪ್ರದೇಶ) ಇವೆ. ದಕ್ಷಿಣದಲ್ಲಿ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳಿವೆ.

ಹವಾಗುಣ: ಜಿಲ್ಲೆಯಲ್ಲಿಯ ಹವಾಗುಣ ವನ್ನು ಡಿಸೆಂಬರ್‌ನಿಂದ ಫೆಬ್ರವರಿಯ ತನಕ ಒಣಹವೆ ಮತ್ತು ಶುಭ್ರವಾತಾವರಣ ವಿರುವ ಚಳಿಗಾಲ, ಮಾರ್ಚಿನಿಂದ ಮೇ ವರೆಗೆ ಬೇಸಗೆ ಕಾಲ, ಜೂನ್ ತಿಂಗಳಿನಿಂದ ಅಕ್ಟೋಬರ್ ತಿಂಗಳ ತನಕ ಮುಂಗಾರು (ನೈರುತ್ಯ ಮಾರುತ ಗಳು) ಮತ್ತು ನವೆಂಬರ್ ತಿಂಗಳು ಹಿಂಗಾರು (ಈಶಾನ್ಯ ಮಾರುತಗಳು) ಮಳೆಗಾಲ ಎಂದು ನಾಲ್ಕು ಋತುಗಳಾಗಿ ವಿಂಗಡಿಸಬಹುದು.

ಮಳೆ : ಜಿಲ್ಲೆಯ ವಾಯವ್ಯ ದಿಕ್ಕಿನಲ್ಲಿರುವ ನಂದಿ ದುರ್ಗ ಬೆಟ್ಟಗಳು ಮತ್ತು ಅವುಗಳ ಭಾಗಗಳು ನದಿಗಳ ಪ್ರಮುಖ ಉಗಮ ಸ್ಥಾನಗಳಾಗಿವೆ. ನಂದಿ ದುರ್ಗದಲ್ಲಿ ಸಮುದ್ರ ಮಟ್ಟದಿಂದ 1,420 ಮೀ. ಎತ್ತರದಲ್ಲಿ ವಾರ್ಷಿಕ ಸರಾಸರಿ 730,05 ಮಿ.ಮೀ., ಇದರಲ್ಲಿ ನೈಋತ್ಯ ಮಾರುತಗಳಿಂದ ಶೇ. 69ರಷ್ಟು, ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ನಂದಿದುರ್ಗದಲ್ಲಿ ಸೆಪ್ಟೆಂಬರ್ ತಿಂಗಳಿಗೆ ಹೋಲಿಸಿದರೆ ಅಕ್ಟೋಬರ್ ತಿಂಗಳಲ್ಲಿ ಹೆಚ್ಚು ಮಳೆಯಾದರೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಈಶಾನ್ಯ ಮಾರುತಗಳಿಂದ ಗುಡುಗು ಸಹಿತ ಸಾಮಾನ್ಯ ಮಳೆಯಾಗುತ್ತದೆ.

ಜೂನ್‌ನಿಂದ ಸೆಪ್ಟೆಂಬರ್ ತಿಂಗಳ ತನಕ ಮತ್ತು ಅಕ್ಟೋಬರ್‌ನಿಂದ ನವೆಂಬರ್ ತಿಂಗಳ ತನಕ ಆಕಾಶ ಹೆಚ್ಚಿನ ಮೋಡಗಳಿಂದ ಮುಸುಕಿರುತ್ತದೆ. ಮುಂಗಾರು ಮಾರುತದ ಅವಧಿಯಲ್ಲಿ ಆರ್ದ್ರತೆ ಹೆಚ್ಚುತ್ತದೆ. ಉಳಿದಂತೆ ಸಾಮಾನ್ಯವಾಗಿರುತ್ತದೆ. ಫೆಬ್ರವರಿ - ಮೇ ತಿಂಗಳುಗಳ ಅವಧಿಯಲ್ಲಿ ಗುಡುಗು ಮಿಂಚುಗಳಿಂದ ಕೂಡಿದ ಮಳೆಯಾಗುವುದು ಸಾಮಾನ್ಯ. ಮುಂಗಾರು ಮಾರುತಗಳ ಅವಧಿಯಲ್ಲಿ ಮತ್ತು ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಕೆಲವೊಮ್ಮೆ ಆಲಿಕಲ್ಲಿನಿಂದ ಕೂಡಿದ ಬಿರುಮಳೆಯಾಗುತ್ತದೆ. ಚಳಿಗಾಳದಲ್ಲಿ ವಿರಳವಾಗಿ ಮಂಜು ಕವಿಯುತ್ತದೆ.

ಜಲಸಂಪನ್ಮೂಲಗಳು : ಜಿಲ್ಲೆಯ ಮುಖ್ಯ ಜಲಾನಯನವು ಈಶಾನ್ಯದಲ್ಲಿರುವ ನಂದಿದುರ್ಗ ಆಸುಪಾಸಿನಲ್ಲಿ ಪ್ರಾರಂಭವಾಗುತ್ತದೆ. ಆದರೆ ಈ ವಲಯದಲ್ಲಿ ಸರ್ವಋತು ನದಿಗಳು ಇಲ್ಲ. ಬಹುತೇಕ ನದಿಗಳು ಸಣ್ಣವಿದ್ದು ಮಳೆಗಾಲದಲ್ಲಿ ಮಾತ್ರ ಪ್ರವಾಹ ಕಾಣಿಸಿಕೊಳ್ಳುತ್ತದೆ. ಅವುಗಳಲ್ಲಿ ಮುಖ್ಯವಾದವು : 108 ಕಿ.ಮೀ.



ಉದ್ದದ ಪಾಲಾರ್ ನದಿ ಮತ್ತು 55 ಕಿ.ಮೀ. ಉದ್ದದ ಉತ್ತರ ಪಿನಾಕಿನಿ ನದಿ. ಇವಲ್ಲದೆ ದಕ್ಷಿಣ ಪಿನಾಕಿನಿ, ಪಾಪಾಘ್ನಿ, ಚಿತ್ರಾವತಿ, ನಂಗ್ಲಿ ಹೊಳೆ, ಕುಮುದ್ವತಿ, ಕುಶಾವತಿ, ವೃಷಭಾವತಿ, ಅರ್ಕಾವತಿ ಮುಂತಾದ ಉಪನದಿಗಳು ಇವೆಯಾದರೂ ವರ್ಷದ ಬಹುಕಾಲ ನೀರಿಲ್ಲದ ನದಿಗಳೇ ಆಗಿವೆ. ಸರ್ವಋತುನದಿಗಳಲ್ಲದಿರುವುದರಿಂದಲೂ ಮಳೆ ಕಡಿಮೆ ಬೀಳುವುದರಿಂದಲೂ ಜಿಲ್ಲೆಯ ವ್ಯವಸಾಯಕ್ಕೆ ಕೆರೆಗಳೇ ಮುಖ್ಯ ಆಧಾರ. ಒಟ್ಟು 8223 ಚ.ಕಿ.ಮೀ. ಜಲಾನಯನ ಪ್ರದೇಶದಲ್ಲಿ 4.112 (ಶೇ. 50) ಚ.ಕಿ.ಮೀ. ಉತ್ತರ ಪಿನಾಕಿನಿ ಜಲಾನಯನ ಪ್ರದೇಶ, 1562 ಚ.ಕಿ.ಮೀ. (ಶೇ. 19), ದಕ್ಷಿಣ ಪಿನಾಕಿನಿ ಜಲಾನಯನ ಪ್ರದೇಶ ಮತ್ತು 2546 ಚ.ಕಿ.ಮೀ. (ಶೇ. 31) ಪಾಲಾರ್ ಜಲಾನಯನ ಪ್ರದೇಶವಾಗಿದೆ.

ಅಂತರ್ಜಲ ಸಂಪನ್ಮೂಲಗಳು : ಇಲ್ಲಿ ಶೇ. 70 ಕ್ಕಿಂತಲೂ ಹೆಚ್ಚಿನ ಭಾಗ ಮುಂಗಾರು ಮಾರುತಗಳಿಂದ ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆಯಾಗುವ ದಿನಗಳು 48. ಮುಂಗಾರ ನಿಶ್ಚಿತವಾಗಿದ್ದು ಮಳೆಯ ಪ್ರಮಾಣದಲ್ಲಿ ಏರು ಪೇರುಗಳಾಗುತ್ತವೆ.

ಅಂತರ್ಜಲ ಪ್ರಮುಖ ನೀರಾವರಿ ಮೂಲವಾಗಿದ್ದು. ನಿವ್ವಳ ಬಿತ್ತನೆ ಪ್ರದೇಶದ ಶೇ. 18.8 ರಷ್ಟು ಭಾಗ ಮಾತ್ರ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ 3298 ಕ್ಕೂ ಹೆಚ್ಚು ಕೆರೆಗಳಿದ್ದರೂ ಮುಂಗಾರು ಮಳೆಯಾದರೆ ಮಾತ್ರ ಕೆರೆಗಳಿಗೆ ನೀರು ಬರುತ್ತದೆ. ಬೇಸಗೆಯಲ್ಲಿ ಬಹುತೇಕ ಕೆರೆಗಳು ಬರಿದಾಗಿರುತ್ತವೆ. ಆದುದರಿಂದ ಬಾವಿಗಳು ಮತ್ತು ಕೊಳವೆ ಬಾವಿಗಳು ಮಾತ್ರ ಪ್ರಮುಖ ನೀರಾವರಿ ಮೂಲಗಳಾಗಿ ಕೆಲಸಮಾಡುತ್ತಿವೆ. ಆದರೆ ಒಂದುಕೊಳವೆ ಬಾವಿಯಿಂದ ಮತ್ತೊಂದಕ್ಕೆ ಇರಬೇಕಾದ ಕನಿಷ್ಠ ದೂರದ ನಿಯಮವನ್ನು ಉಲ್ಲಂಘಿಸಿರುವುದರಿಂದ ನೀರು ಕಡಿಮೆಯಾಗುತ್ತಿರುವುದು ಕಂಡು ಬರುತ್ತದೆ. ಹಲವು ಕೊಳವೆ ಬಾವಿಗಳು ಬತ್ತಿ ಹೋಗಿವೆ.

ಶೇಕಡಾವಾರು ಉಪಯೋಗಿಸಲ್ಪಡುವ ಅಂತರ್ಜಲ ಪ್ರಮಾಣವನ್ನು ಆಧರಿಸಿ ಜಿಲ್ಲೆಯ ತಾಲ್ಲೂಕುಗಳನ್ನು ಬಿಳಿ (ಶೇ. 65 ರವರೆಗೆ) ಬೂದು (ಶೇ. 65 ರಿಂದ ಶೇ. 85) ಕಪ್ಪು (ಶೇ. 85 ಕ್ಕಿಂತಹೆಚ್ಚು) ವರ್ಗಗಳೆಂದು ವಿಂಗಡಿಸಲಾಗಿದೆ. 1965 ರಲ್ಲಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ 40 ಅಡಿಗಳಷ್ಟಿದ್ದಿತು. 2001ರಲ್ಲಿ ಅದು ಕೆಲವೆಡೆ 650 ಅಡಿ ಆಳಕ್ಕೆ ಇಳಿದಿದೆ. ಜಿಲ್ಲೆಯಲ್ಲಿರುವ ಕೆರೆಗಳು ಅಂತರ್ಜಲವೃದ್ಧಿಗೆ ಸಹಕಾರಿಯಾಗಿದ್ದರೂ ಬಹುತೇಕ ಕೆರೆಗಳು ಶೇ. 60 ಕ್ಕಿಂತಲೂ ಹೆಚ್ಚು ಭಾಗ ಹೂಳು ತುಂಬಿದೆ. ಹೂಳು ನಯವಾದಷ್ಟು ನೀರು ಇಂಗುವಿಕೆ ಕಡಿಮೆಯಾಗಿ ಅಂತರ್ಜಲ ವೃದ್ಧಿಗೆ ಮಾರಕವಾಗುತ್ತದೆ. ಜತೆಗೆ ಇತ್ತೀಚೆಗೆ ಕೆರೆಗಳ ಅಂಚುಗಳು ಒತ್ತುವರಿಯಾಗಿ ನೀರು ನಿಲ್ಲುವ ಪ್ರದೇಶ ಸಹ ಕಡಿಮೆಯಾಗಿದೆ. 2010-2011 ರಲ್ಲಿ ಅಂತರ್ಜಲ ಈ ವಲಯದಲ್ಲಿ ತೀರ ಕುಸಿದಿದ್ದು ಒಂದು ಸಾವಿರದ ಐನೂರು ಅಡಿಗಳಷ್ಟು ಕೊರೆದರೂ ಅನೇಕ ಕಡೆ ನೀರು ಸಿಗುತ್ತಿಲ್ಲ. ಅಂತರ್ಜಲಕ್ಕೆ ಪೂರಕವಾದ ಬಾವಿಗಳು ಸಹ ಮಳೆಗಾಲದಲ್ಲಿ ಮಾತ್ರ ಅಲ್ಪಸ್ವಲ್ಪ ತುಂಬುತ್ತಿದ್ದು ಬೇಸಗೆಯಲ್ಲಿ ಬತ್ತಿಹೋಗುತ್ತಿವೆ.

ಕೆರೆಗಳು : ಪ್ರಾಚೀನಕಾಲದಿಂದಲೂ ಒಂದು ಕೆರೆ ತುಂಬಿ ಕೋಡಿ ಹರಿದು ಮತ್ತೊಂದು ಕೆರೆಗೆ ನೀರು ಹರಿದು ಬರುವಂತೆ ಜಾಲ ಏರ್ಪಾಡಾಗಿತ್ತು. ಪಾಲಾರ್ ಮತ್ತು ಉತ್ತರ ಪಿನಾಕಿನಿ ನದಿಗಳ ಶೇಕಡ 85 ಕ್ಕೂ ಹೆಚ್ಚು ನೀರನ್ನು ಜಿಲ್ಲೆಯಲ್ಲಿ ನೀರಾವರಿಗಾಗಿ ಬಳಸಿಕೊಳ್ಳಲಾಗುತ್ತಿತ್ತು.

ಕೋಲಾರ ಮತ್ತು ಬಂಗಾರ ಪೇಟೆ ಪ್ರದೇಶಗಳಲ್ಲಿ ಪಾಲಾರ್‌ನದಿಗೆ ಅಡ್ಡಲಾಗಿ ಸೋಮಾಂಬು ಕೆರೆಯಿದ್ದು ಜನ್ನಘಟ್ಟ ಮುದುವಾಡಿ, ಚಿಲ್ಲಪಲ್ಲಿ, ಮಣಿಘಟ್ಟ, ಬೇತಮಂಗಲ ಮತ್ತು ರಾಮಸಾಗರ ಕೆರೆಗಳ ಸರಣಿಯಿದೆ. ಕೋಲಾರ, ನಂಗಲಿ ಮತ್ತು ಕುರುಬೂರು ಕೆರೆಗಳು ಇದೇ ಸರಣಿಗೆ ಸೇರುತ್ತವೆ. ರಾಮಸಾಗರ ಕೆರೆ ಜಿಲ್ಲೆಯಲ್ಲಿ ಅತಿ ದೊಡ್ಡದು. ಶ್ರೀನಿವಾಸ ಪುರದ ಬಾಗವಾಡು ಕೆರೆಯ ಅಚ್ಚುಕಟ್ಟು 269 ಹೆಕ್ಟೇರ್, ರೋಣೂರು ಕೆರೆಯ 113 ಹೆಕ್ಟೇರ್, ಕೊಳತೂರು ಕೆರೆ 61 ಹೆಕ್ಟೇರ್ ಮತ್ತು ಲಕ್ಷ್ಮಣ ಸಾಗರ 92 ಹೆಕ್ಟೇರ್ ಅಚ್ಚುಕೊಟ್ಟು ಹೊಂದಿದೆ. ಉತ್ತರ ಪಿನಾಕಿನಿ ಮತ್ತು ಅದರ ಉಪನದಿಗಳಾದ ಚಿತ್ರಾವತಿ ಮತ್ತು ಪಾಪಾಘ್ನಿ ನದಿಗಳು ಅನೇಕ ಕೆರೆಗಳಿಗೆ ನೀರಿನ ಮೂಲಗಳಾಗಿವೆ. ಗುಡಿಬಂಡೆಯ ಬೈರಸಾಗರ ಕೆರೆಯು ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಗುಡಿ ಬಂಡೆ ತಾಲ್ಲೂಕಿನ ವಾಟದ ಹೊಸಹಳ್ಳಿ, ಹುದುಗೂರು, ನಗರಕೆರೆ ಮತ್ತು ನಾಮಗೊಂಡ್ಲು ಕೆರೆಗಳು ಮುಖ್ಯವಾದಂಥವು.

ಕೆರೆ ನಿರ್ವಹಣೆ : ಪ್ರಸ್ತುತ ಕೆರೆಗಳ ಜಲಾನಯನ ಪ್ರದೇಶದಲ್ಲಿ ಪರಿಸರನಾಶ ಪೋಷಕ ನಾಲೆಗಳ ಅತಿಕ್ರಮಣ, ಕೆರೆಯಂಗಳದಲ್ಲಿ ತುಂಬಿರುವ ಹೂಳು, ಶಿಥಿಲಗೊಂಡಿರುವ ಏರಿ, ತೂಬು, ಕೋಡಿ ಮತ್ತು ನಾಲೆಗಳು ಮುಂತಾದ ಸಮಸ್ಯೆಗಳಿಂದಾಗಿ ಅಚ್ಚುಕಟ್ಟಿಗೆ ನೀರುಣಿಸುವುದು ಗಣನೀಯವಾಗಿ ಇಳಿಮುಖವಾಗುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ 'ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ'ಯನ್ನು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಅನುಷ್ಠಾನಕ್ಕೆ ತಂದಿದೆ. ನಿಗದಿತ ಕಾಲ ಮಿತಿಯಲ್ಲಿ ಇದನ್ನು ಯಶಸ್ವಿಗೊಳಿಸಲು ಸರ್ಕಾರ ಜಲಸಂವರ್ಧನೆ ಯೋಜನಾ ಸಂಘವನ್ನು ರಚಿಸಿ ಕಾರ್ಯಗತಗೊಳಿಸಿದೆ.

ಸಸ್ಯ ಸಂಪತ್ತು : ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶ 8,22,300 ಹೆಕ್ಟೇರ್ ಇದ್ದು, ಅದರಲ್ಲಿ ಅರಣ್ಯ ಪ್ರದೇಶವು 1,03941 ಹೆ. ಇದು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ಶೇ. 12.64 ರಷ್ಟಿದೆ. 2003-04 ನೇ ಸಾಲಿನಲ್ಲಿ ಜಿಲ್ಲೆಯಲ್ಲಿ 87793 ಚ.ಕಿ.ಮೀ. ಮೀಸಲು ಅರಣ್ಯ, 4331 ಚ.ಕಿ.ಮೀ. ರಕ್ಷಿಸಲ್ಪಟ್ಟ ಅರಣ್ಯ, 6156 ಚ.ಕಿ.ಮೀ. ಪ್ರದೇಶದಲ್ಲಿ ವರ್ಗೀಕರಿಸದ ಅರಣ್ಯ ಮತ್ತು 5660 ಚ.ಕಿ.ಮೀ. ಗ್ರಾಮಾಂತರ ಅರಣ್ಯ ಪ್ರದೇಶವಿದೆ. ಜಿಲ್ಲೆಯು ಬಹುತೇಕ ಎಲೆ ಉದುರುವ ಕಾಡು ಹಾಗೂ ಕುರುಚಲು ಗಿಡಗಳಿಂದ ಆವೃತವಾಗಿದೆ. ಹೀಗಾಗಿ ಇಲ್ಲಿಯ ಗುಡ್ಡಗಾಡು ಪ್ರದೇಶದ ಹವಾಗುಣ ಮತ್ತು ಮಣ್ಣಿನ ಗುಣದಿಂದಾಗಿ ಒಣ ಎಲೆ ಉದುರುವ ಅಥವಾ ಕುರುಚಲ ಮತ್ತು ಮುಳ್ಳು ಗಿಡಗಳಿಂದ ಕೂಡಿರುವ ಅರಣ್ಯವಿದೆ. ಮರಗಳು ಕುಬ್ಜವಾಗಿದ್ದು ಮೇಲ್ಭಾಗ ಛತ್ರಿಯಂತಿರುತ್ತವೆ. ಉರುವಲು ಮತ್ತು ಇದ್ದಲಿನ ಬಳಕೆಗಾಗಿ ಅರಣ್ಯಗಳನ್ನು ಆಶ್ರಯಿಸುವುದರಿಂದ ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಮರಗಳು ಕಡಿಮೆಯಾಗುತ್ತಿವೆ. ಭಾರತದ ಅರಣ್ಯ ಸರ್ವೇಕ್ಷಣಾ ವರದಿಯಂತೆ, ಜಿಲ್ಲೆಯಲ್ಲಿಯ ಅರಣ್ಯ ಪ್ರದೇಶವು ಭೌಗೋಳಿಕ ಪ್ರದೇಶದ ಶೇ. 13.33. ಬಹುತೇಕ ಅರಣ್ಯ ಪ್ರದೇಶ ಗುಡ್ಡಗಾಡು ವಲಯಕ್ಕೆ ಸೀಮಿತವಾಗಿದ್ದು ಗುಡ್ಡಗಳ ನಡುವಿನ ಕಣಿವೆ ಪ್ರದೇಶವನ್ನು ಒತ್ತುವರಿ ಮಾಡಿ ಕೃಷಿ ಭೂಮಿಯನ್ನಾಗಿ ಮಾರ್ಪಡಿಸಲಾಗಿದೆ. ಜಿಲ್ಲೆಯಲ್ಲಿ ವಿವಿಧ ಮಾದರಿಯ ಅರಣ್ಯ ನೆಡು ತೋಪುಗಳನ್ನು ಬೆಳೆಸಲು ವ್ಯಾಪಕ ಅವಕಾಶಗಳಿದ್ದು ಅರಣ್ಯ ಇಲಾಖೆ ನೆಡು ತೋಪುಗಳನ್ನು ಬೆಳೆಸಲು ಕ್ರಮ ಕೈಗೊಂಡಿದೆ. ಕೆಲವು ಕಡೆ ಈಗಾಗಲೆ ಸಸಿ ನೆಟ್ಟು ಬೆಳೆಸುತ್ತಿದೆ. ಅರಣ್ಯ ಇಲಾಖೆ ನೆಡುತೋಪುಗಳಲ್ಲಿ ಬೆಳೆಸುತ್ತಿರುವ ಸಸ್ಯಗಳು:

(ಆಧಾರ : ಕೋಲಾರ ಜಿಲ್ಲಾ ಗ್ಯಾಸೆಟಿಯರ್)

ಸಸ್ಯದ ಹೆಸರು	ವೈಜ್ಞಾನಿಕ ಹೆಸರು	ಸಸ್ಯದ ಹೆಸರು	ವೈಜ್ಞಾನಿಕ ಹೆಸರು
ಕರಿಜಾಲಿ ಬಾಬುಲ್	Acacia arabica	ನಲ್ಲ ಹಲಸು	Canthium didymm
ಕಗ್ಗಲಿ	Acacia catechu	ತಂಗಡಿ	Cassia auriculata
ಬನ್ನಿ	Acacia ferruginea	ಕಕ್ಕೆ	Cassia fistula
ಬಿಳಿ ಜಾಲಿ	Acacia leucophloea	ಸೀಮೆ ತಂಗಡಿ	Cassia siamia
ಬಿಲ್ವಪತ್ರೆ	Aegle marmelos	ಸರ್ವೆ ಮರ	Casuarina equestifolia
ಅಂಕೊಲೆ	Alanguim lamarcki	ಹುರಗಲು	Chloroxylon swietenia
ಚುಜ್ಜುಲು	Albizzia amara	ಪಚರಿ	Dalbergia peniculata
ಬಾಗಿ	Albizzia lebbeck	ಸಿಸ್ಸೂ	Dalbergia sisoo
ಬಿಲ್ವಾರ	Albizzia odoratissima	ಜಗಳಗಂಟಿ	Diospyros montana
ದಿಂಡಿಗ	Anogeissus latifolia	ತುಪ್ರ	Diospyros tupra
ಸೀತಾಫಲ	Anona squamosa	ಬಂದ್ರಿಕೆ	Dodonea viscosa
ಗೊಜೆ	Bridelia retusa	ಮುಕುರ್ತಿ	elaeodendron glaucum
ಮರಡಿ	Buchanania angustifolia	ನೀಲಗಿರಿ	Eucalyputus spp
ಮುತ್ತುಗ	Butea frondosa	ನೇರಳೆ	Eugemia jambolana
ದೇವದಾರು	Eythroxylon monogynum	ಬಳ್ಳಾರಿ ಜಾಲಿ	Prosopia fuliflora
ಬೇಲ	Feronia elephantum	ಕಾರೆ	Randia dumetorum
ಆಲ	Ficus benghalensis	ಗಂಧ/ಶ್ರೀಗಂಧ	Santalum album
ಬಿಕ್ಕೆ	Gardenia gummifera	ಕುರುಡಿ	Scutea indica
ತಂಡರಿಸಿ	Gymnosporia montana	ಆಲರಿ	Shorea talura
ಗೊರವಿ	Isora parviflora	ಹುಣಸೆ	Tamarindus indica
ಚನ್ನಂಗಿ	Lagerstroemia parviflora	ತೊರೆಮತ್ತಿ	Terminalia arjuna
ಲಂಟಾನ	Lantana camara	ಅಳಲೆ	Terminalia chebula
ಬೇವು	Melia azadirachta	ನವಿಲಾದಿ	Vitex altissima
ಪಾವಟೆ	Pavetta indica	ಬೆಪ್ಪಲೆ/ಹಾಲೆ	Wrightia tinctoria
ಹೊಂಗೆ	Pongamia glabra	ಬೋರೆ	Zyziphus jujuba
ಇಜೆ	Premna tomentosa	ಚೊಟ್ಟೆ	Zyzipus xylopyros

ಅರಣ್ಯ ಅಭಿವೃದ್ಧಿ ಚಟುವಟಿಕೆಗಳು : ಅರಣ್ಯ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳಲ್ಲಿ ಮುಖ್ಯವಾದವು - ರಸ್ತೆ ಬದಿ ನೆಡು ತೋಪು ನಿರ್ಮಾಣ ಯೋಜನೆ, ನಗರ ಹಸುರೀಕರಣ ಯೋಜನೆ, ಸಾರ್ವಜನಿಕರಿಗೆ ಸಸಿ ವಿತರಣೆ ಯೋಜನೆ, ದೇವರ ಕಾಡು, ಕೇಂದ್ರ ಪುರಸ್ಕೃತ ಉರುವಲು ಮತ್ತು ಮೇವು ಅಭಿವೃದ್ಧಿಯೋಜನೆ, ಕೇಂದ್ರ ಪುರಸ್ಕೃತ ಮರವಲ್ಲದ ಕಿರು ಅರಣ್ಯ ಉತ್ಪನ್ನ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮುಂತಾದ ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಯೋಜನೆಯಲ್ಲಿ ಗ್ರಾಮ ಅರಣ್ಯ ಸಮಿತಿಗಳ ಮೂಲಕ ಅರಣ್ಯೀಕರಣ ಕೆಲಸಗಳಿಗೆ ಸಾರ್ವಜನಿಕರನ್ನು ಮತ್ತು ಅರಣ್ಯ ಪ್ರದೇಶದ ಸ್ಥಳೀಯ ಜನರನ್ನು ತೊಡಗಿಸಿಕೊಳ್ಳಲಾಗಿದೆ. ಈ ಯೋಜನೆಯ ಗುರಿಯು ಗ್ರಾಮೀಣ ಅರಣ್ಯ ಸಮಿತಿಗಳ ಸ್ಥಾಪನೆ, ಮರಮುಟ್ಟು ನೀಡಿಕೆ, ಅರಣ್ಯ ರಕ್ಷಣೆ ಹಾಗೂ ಇತರೆ ಕಾರ್ಯ ಚಟುವಟಿಕೆಯನ್ನು ಹೊಂದಿದೆ.

ಜಿಲ್ಲೆಯೊಂದರಲ್ಲಿ 100 ಶಾಲೆಗಳಲ್ಲಿ ರಾಷ್ಟ್ರೀಯ ಹಸುರು ಪಡೆಗಳ ಸ್ಥಾಪನೆ ಮೂಲಕ ದೇಶಾದ್ಯಂತ ಒಟ್ಟು 50,000 ರಾಷ್ಟ್ರೀಯ ಹಸುರು ಪಡೆಗಳ ಸ್ಥಾಪನೆಗೆ ಪರಿಸರ ಮತ್ತು ಅರಣ್ಯ ಮಂತ್ರಾಲಯ ಘೋಷಿಸಿರುತ್ತದೆ. ಪ್ರತೀ ವರ್ಷ ಜೂನ್ 5 ರಂದು ವಿಶ್ವದಾದ್ಯಂತ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

ಕೃಷಿ ಮತ್ತು ನೀರಾವರಿ : ಪ್ರಾಚೀನ ಕಾಲದಿಂದಲೂ ಜಿಲ್ಲೆಯಲ್ಲಿ ಒಣ ಬೇಸಾಯ ಪದ್ಧತಿಯೇ ರೂಢಿಯಲ್ಲಿದೆ. ಸಾಂಪ್ರದಾಯಕವಾಗಿ ಮಳೆಯನ್ನವಲಂಬಿಸಿ ಕೃಷಿಯನ್ನು ಕೈಗೊಳ್ಳಲಾಗುತ್ತದೆ. ಬರಗಾಲ ಮತ್ತು ಕ್ಷಾಮ ಎದುರಾದಾಗ ಬಿತ್ತನೆ ಪ್ರದೇಶ ತುಂಬಾ ಕಡಿಮೆಯಾಗುತ್ತದೆ. 1901 ರಿಂದ 1950ರ ಅವಧಿಯ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 730 ಮಿ.ಮೀ. ಆಗಿದೆ. ಜಿಲ್ಲೆಯಲ್ಲಿಯ ವಾರ್ಷಿಕ ಮಳೆಯ ಪ್ರಮಾಣದಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಗಮನಿಸಬಹುದು. ಈ ಅವಧಿಯಲ್ಲಿ ಕೆಲವು ವರ್ಷಗಳಲ್ಲಿ ವಾರ್ಷಿಕ ಸರಾಸರಿ ಮಳೆಗಿಂತ ಶೇಕಡ 80 ರಷ್ಟು ಕಡಿಮೆ ಮಳೆಯಾಗಿದೆ. ಆ ಎಲ್ಲ ಕಾರಣಗಳಿಂದಾಗಿ ಈ ಪ್ರದೇಶವನ್ನು ಮುಂಗಾರು ಮಳೆಯ ಪ್ರದೇಶ ಎಂದು ಕರೆಯುತ್ತಾರೆ. ಜಿಲ್ಲೆಯಲ್ಲಿ ಕೆಂಪು ಗೋಡು ಮಣ್ಣಿನ ಪ್ರದೇಶ ಹೆಚ್ಚಾಗಿದ್ದು ಉಳಿದ ಭಾಗವನ್ನು ಜೇಡಿ ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣು ಆವರಿಸಿದೆ.

ಪೂರ್ವದ ಒಣವಲಯವು ಮಳೆಯಾಶ್ರಿತ ಪ್ರದೇಶ 'ವಾಗಿದ್ದು ರಾಗಿ ಮತ್ತು ಸಜ್ಜೆ ಪ್ರಧಾನವಾದ ಆಹಾರ ಬೆಳೆಗಳಾಗಿವೆ. ದ್ವಿದಳ ಧಾನ್ಯದ ಬೆಳೆಗಳಲ್ಲಿ ಹುರುಳಿ, ಅವರೆ, ತೊಗರಿ. ಎಣ್ಣೆ ಕಾಳು ಬೆಳೆಗಳಲ್ಲಿ - ನೆಲಗಡಲೆ, ಹರಳು ಮತ್ತು ಸೂರ್ಯಕಾಂತಿ ಹಾಗೂ ತೋಟದ ಬೆಳೆಗಳಲ್ಲಿ - ಮಾವು, ದ್ರಾಕ್ಷಿ, ತೆಂಗು ಪ್ರಮುಖ ಬೆಳೆಗಳಾಗಿವೆ. ನೀರಾವರಿಯಲ್ಲಿ ಕಬ್ಬು, ಮುಸುಕಿನ ಜೋಳ ಮುಖ್ಯ ಬೆಳೆಗಳು. ಬಾವಿ ಮತ್ತು ಕೆರೆ ನೀರಾವರಿ ಆಶ್ರಯದಲ್ಲಿ ಎಲೆ ಕೋಸು ಟೊಮ್ಯಾಟೋ, ಬದನೆ, ಮೆಣಸಿನಕಾಯಿ ಮುಂತಾದ ತರಕಾರಿಗಳನ್ನು ಬೆಳೆಯಲಾಗುತ್ತದೆ. ಆರ್ಥಿಕ ಬೆಳೆಗಳಲ್ಲಿ ಹಿಪ್ಪು ನೇರಳೆ, ಆಲೂಗಡ್ಡೆ, ಅರಿಸಿನ, ಶುಂಠಿ, ದ್ರಾಕ್ಷಿ, ಬಾಳೆ ಮತ್ತು ವೀಳೆದೆಲೆ ಪ್ರಮುಖ ಬೆಳೆಗಳು.

ಪ್ರಮುಖ ಬೆಳೆಯ ಯೋಜನೆಗಳು :

1. ರಾಗಿ ಮತ್ತು ಜೋಳವನ್ನೊಳಗೊಂಡಂತೆ ದ್ವಿದಳ ಧಾನ್ಯ ಅಥವಾ ಎಣ್ಣೆ ಕಾಳು ಬೆಳೆಯಿಂದ ಕೂಡಿದ ಮಿಶ್ರ ಬೆಳೆ ಯೋಜನೆ.
2. ತೆಂಗಿನ ಬೆಳೆ ಜೊತೆಗೆ ಮೇವಿನ ಬೆಳೆಗಳು, ಅಲಸಂದೆ, ಬಾಳೆ ಅರಿಸಿನ, ಶುಂಠಿ, ಹಿಪ್ಪುನೇರಳೆ ಮುಂತಾದ ಬೆಳೆಗಳ ಯೋಜನೆ.
3. ಬಾವಿ ನೀರಿನ ಪ್ರದೇಶದಲ್ಲಿ ಖುಷ್ಕಿ ರಾಗಿಯ ಅನಂತರ ಚಳಿಗಾಲದಲ್ಲಿ ಆಲೂಗಡ್ಡೆ, ಬೇಸಗೆಯಲ್ಲಿ ಈರುಳ್ಳಿ ಅಥವಾ ತರಕಾರಿ ಬೆಳೆಯಲು ಪ್ರತ್ಯೇಕವಾದ ಯೋಜನೆಯನ್ನು ರೂಢಿಸಿಕೊಂಡಿದ್ದಾರೆ.

ಕೃಷಿ ಋತುಗಳು : ಜಿಲ್ಲೆಯಲ್ಲಿ ಸಾಂಪ್ರದಾಯಿಕವಾಗಿ ವಾರ್ಷಿಕ ಎರಡು ಬೆಳೆ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಖಾರೀಫ್ ಅಥವಾ ಮುಂಗಾರು ಪ್ರಮುಖ ಕೃಷಿ ಋತುವಾಗಿದ್ದು ರಬಿ ಅಥವಾ ಹಿಂಗಾರು ಮತ್ತೊಂದು ಋತುವಾಗಿದೆ. ನೀರಾವರಿ ಸೌಲಭ್ಯವಿದ್ದಲ್ಲಿ ವಾರ್ಷಿಕ ಮೂರು ಬೆಳೆಗಳನ್ನು ಬೆಳೆಯಲಾಗುತ್ತದೆ. ಸ್ಥಳೀಯವಾಗಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬಿತ್ತುವ ಬೆಳೆಗಳನ್ನು ಕಾರ್ ಅಥವಾ ಮುಂಗಾರು ಪೂರ್ವ ಬೆಳೆಗಳು, ಜುಲೈ ತಿಂಗಳಲ್ಲಿ ಬಿತ್ತುವ ಬೆಳೆಗಳನ್ನು ಹೈನ್ ಅಥವಾ ಮುಂಗಾರು ಅನಂತರದ ಬೆಳೆಗಳು ಮತ್ತು ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಬಿತ್ತುವ ಬೆಳೆಗಳನ್ನು ಹಿಂಗಾರು ಬೆಳೆಗಳೆಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ಅನಿಶ್ಚಿತ ಮಳೆಯಿಂದಾಗಿ ಕಾರ್ ಬೆಳೆಯ ಬದಲು ಹೈನ್ ಬೆಳೆಯನ್ನು ಬೆಳೆಯುವರು. ಸಾಮಾನ್ಯ ಚಾಲ್ತಿಯಲ್ಲಿರುವಂತೆ ಜೂನ್ ತಿಂಗಳಲ್ಲಿ ಬಿತ್ತನೆಯಾಗಿ ಡಿಸೆಂಬರ್ ತಿಂಗಳಲ್ಲಿ ಕೊಯಿಲಿಗೆ ಬರುವ ಬೆಳೆಗಳನ್ನು ಮುಂಗಾರು ಬೆಳೆಗಳೆಂದು, ಡಿಸೆಂಬರ್ ತಿಂಗಳಿನಿಂದ ಏಪ್ರಿಲ್ ತಿಂಗಳವರೆಗೆ ಬೆಳೆಯುವ ಬೆಳೆಗಳನ್ನು, ಹಿಂಗಾರು ಬೆಳೆಗಳೆಂದು ಕರೆಯಲಾಗುತ್ತಿದೆ. ಬತ್ತವನ್ನು ಮುಂಗಾರು, ಹಿಂಗಾರು ಮತ್ತು ಬೇಸಗೆ ಹೀಗೆ ಮೂರು ಋತುಗಳಲ್ಲೂ ಬೆಳೆಯುವ ಪದ್ಧತಿಯಿದೆ. ಬತ್ತವನ್ನು ಸಾಮಾನ್ಯವಾಗಿ ನೀರಾವರಿ ಬೆಳೆಯನ್ನಾಗಿ ಬೆಳೆಯಲಾಗುತ್ತದೆ.

ಪ್ರಮುಖ ಬೆಳೆಗಳು ಮತ್ತು ಬಿತ್ತನೆ ಕಾಲ

ಕ್ರ.ಸಂ.	ಬೆಳೆ	ಋತು	ಬಿತ್ತನೆ	ಅಂತರಬೇಸಾಯ	ಕೊಯಿಲು
1.	ಬತ್ತ	ಹೈನ್	ಜೂನ್-ಜುಲೈ	ಆಗಸ್ಟ್-ಸೆಪ್ಟೆಂಬರ್	ಡಿಸೆಂಬರ್-ಜನವರಿ
	ಕಾರ್	ಫೆಬ್ರವರಿ-ಮಾರ್ಚ್	ಏಪ್ರಿಲ್-ಮೇ	ಜೂನ್-ಜುಲೈ	
2.	ರಾಗಿ	ಹೈನ್	ಜೂನ್-ಜುಲೈ	ಆಗಸ್ಟ್-ಸೆಪ್ಟೆಂಬರ್	ಡಿಸೆಂಬರ್-ಜನವರಿ
	ಕಾರ್	ಫೆಬ್ರವರಿ-ಮಾರ್ಚ	ಏಪ್ರಿಲ್-ಮೇ	ಜೂನ್-ಜುಲೈ	
3.	ಕಬ್ಬು	ವಾರ್ಷಿಕ	ಜನವರಿ-ಫೆಬ್ರವರಿ	ಏಪ್ರಿಲ್-ಮೇ	ಜೂನ್-ಜುಲೈ
		ಸೆಪ್ಟೆಂಬರ್-ಅಕ್ಟೋಬರ್		ಡಿಸೆಂಬರ್-ಜನವರಿ	ಜನವರಿ-ಫೆಬ್ರವರಿ

ಮಣ್ಣು : ಜಿಲ್ಲೆಯಲ್ಲಿ ಕೆಂಪು ಮಣ್ಣು, ಕೆಂಪು ಗೋಡು ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣು ಎಂದು ಮೂರು ವಿಧದ ಮಣ್ಣು ಕಂಡುಬರುತ್ತದೆ.

ಒಳನಾಡಿನಮಣ್ಣು

ಕೆಂಪುಮಣ್ಣು : ಇದನ್ನು ಒಳನಾಡಿನ ಮಣ್ಣು, ನಡುನಾಡಿನಮಣ್ಣು ಮತ್ತು ತಗ್ಗು ಪ್ರದೇಶದ ಮಣ್ಣು ಎಂದು ಮೂರು ಉಪ ಗುಂಪುಗಳಾಗಿ ವಿಂಗಡಿಸಬಹುದು.

ಇದು ಸಾಧಾರಣ ಆಳವನ್ನು ಹೊಂದಿರುತ್ತದೆ. ಮೇಲ್ಭಾಗದಲ್ಲಿ ನೊರಜುಕಲ್ಲು, ಗೋಡುಕಲ್ಲು, ಮಿಶ್ರಿತ ಮರಳು ಹಾಗೂ ಮರಳು ಮಿಶ್ರಿತ ಗೋಡಿನ ಭಾಗ ಹೆಚ್ಚಾಗಿದ್ದು ತಳಭಾಗದಲ್ಲಿ ನೊರಜುಕಲ್ಲು, ಮರಳು ಮಿಶ್ರಿತ ಜೇಡಿಮಣ್ಣು ಇರುತ್ತದೆ.

ನಡುನಾಡಿನ ಮಣ್ಣು : ಇದನ್ನು ಸಾಧಾರಣ ಇಳಿಜಾರಿರುವ ಕಡೆ ಕಾಣಬಹುದು. ಇದು ಅತೀ ಹೆಚ್ಚು ಕೆಂಪುಮಿಶ್ರಿತ ಕಂದು ಬಣ್ಣದಿಂದ ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದಿಂದ ಕೂಡಿರುತ್ತದೆ. ಮೇಲ್ಭಾಗದ ಮಣ್ಣು ಮರಳು ಮಿಶ್ರಿತ ಗೋಡಿನಿಂದ ಕೂಡಿದ್ದು ತಳಭಾಗದ ಮಣ್ಣಿನಲ್ಲಿ

ಮರಳು ಮಿಶ್ರಿತ ಜೇಡಿಮಣ್ಣು ಮತ್ತು ನೊರಜುಕಲ್ಲು ಮಿಶ್ರಿತ ಜೇಡಿಮಣ್ಣಿರುತ್ತದೆ. ಈ ಮಣ್ಣಿನಲ್ಲಿ ನೀರು ಬಸಿಯುವ ಶಕ್ತಿ ಇದೆ.

ತಗ್ಗು ಪ್ರದೇಶದ ಮಣ್ಣು : ಸಾಧಾರಣ ಇಳಿಜಾರು ಮತ್ತು ಕಣಿವೆ ಪ್ರದೇಶಗಳಲ್ಲಿ ಕಂಡುಬರುತ್ತದೆ. ಈ ಮಣ್ಣು ಕಪ್ಪು ಮತ್ತು ಕಪ್ಪು ಮಿಶ್ರಿತ ಕಂದು ಬಣ್ಣದಿಂದ ಕೂಡಿದೆ. ಇದರ ಗುಣ ಸಾಮಾನ್ಯವಾಗಿದ್ದು ಕೆಲವು ಕಡೆ ಸ್ವಲ್ಪ ಮಟ್ಟಿಗೆ ಚೌಳಿನ ಅಂಶವನ್ನು ಹೊಂದಿದ್ದು, ನೀರನ್ನು ಹಿಡಿದಿಟ್ಟು ಕೊಳ್ಳುವ ಶಕ್ತಿ ಇದೆ.

ಕೆಂಪು ಗೋಡುಮಣ್ಣು : ಇದು ಏರು ತಗ್ಗು ಇರುವ ಗ್ರಾನೈಟ್ ಕಲ್ಲಿನ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇದರ ಬಣ್ಣ ಅಚ್ಚ ಕಂದು ಮತ್ತು ಕೆಂಪು. ಇದರ ಮೇಲ್ಭಾಗದ ಪದರುಗಳಲ್ಲಿ ಮರಳು ಮಿಶ್ರಿತ ಗೋಡಿನಿಂದ ಜೇಡಿಮಿಶ್ರಿತ ಗೋಡಿರುವುದು ಕಂಡು ಬರುತ್ತದೆ. ಇದು ನೀರು ಬಸಿಯುವ ಶಕ್ತಿಯನ್ನು ಹೊಂದಿದೆ.

ಜಂಬಿಟ್ಟಿಗೆಯ ಮಣ್ಣು : ಈ ಮಣ್ಣಿನ ಪದರಗಳು ಬಹು ಆಳದವರೆಗೂ ಒಂದೇ ಸಮನಾಗಿರುತ್ತದೆ. ಇದು ಹಳದಿ ಮಿಶ್ರಿತ ಕೆಂಪಿನಿಂದ ಕಪ್ಪು ಮಿಶ್ರಿತ ಕೆಂಪು ಬಣ್ಣದಲ್ಲಿ ಕಂಡು ಬರುತ್ತದೆ. ಈ ಮಣ್ಣಿನಲ್ಲಿ ನೆಲಗಡಲೆ, ಹುಚ್ಚೆಳ್ಳು, ದ್ವಿದಳ ಧಾನ್ಯ, ರಾಗಿ ಮತ್ತು ತೃಣ ಧಾನ್ಯಗಳನ್ನು ಬೆಳೆಯುತ್ತಾರೆ.

ಜೈವಿಕ ಗೊಬ್ಬರಗಳ ಬಳಕೆ : ಸೂಕ್ಷ್ಮಾಣು ಜೀವಿಗಳಿಂದ ಜೈವಿಕ ಗೊಬ್ಬರಗಳು ಸಸ್ಯಗಳಿಗೆ ಪೋಷಕಾಂಶಗಳನ್ನು ಮುಖ್ಯವಾಗಿ ಸಾರಜನಕವನ್ನು ಒದಗಿಸುತ್ತದೆ. ಜೈವಿಕ ಗೊಬ್ಬರಗಳನ್ನು ಉತ್ಪಾದಿಸುವ ಸೂಕ್ಷ್ಮಾಣುಜೀವಿಗಳು, ಅಜೋಲ, ಪಾಚಿ ಮತ್ತು ರೈಜೋಬಿಯಂ ಗುಂಪಿಗೆ ಸೇರಿವೆ. ಅಜೋಲ -ಇದು ನೀರಿನ ಮೇಲೆ ತೇಲಿಕೊಂಡು ಬೆಳೆಯಬಲ್ಲ ಸಸ್ಯ. ಇದಕ್ಕೆ ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಹಿಡಿದಿಟ್ಟುಕೊಳ್ಳುವ ಶಕ್ತಿ ಇದೆ. ನೀರಿನಲ್ಲಿ ಅಜೋಲ ಹುಲುಸಾಗಿ ಬೆಳೆಯುತ್ತದೆ. ಶೇಕಡ ನಾಲ್ಕರಿಂದ ಆರರಷ್ಟು ಸಾರಜನಕ ಅಂಶ ಇದರಲ್ಲಿದೆ. ಜತೆಗೆ ಸಸ್ಯ ಬೆಳೆವಣಿಗೆಗೆ ಬೇಕಾದ ಹಲವಾರು ಲಘು ಪೋಷಕಾಂಶಗಳು ಇದರಲ್ಲಿವೆ.

ರೈಜೋಬಿಯಂ ದ್ವಿದಳ ಧಾನ್ಯ ಬೆಳೆಗಳ ಬೇರು ಮತ್ತು ಕಾಂಡಗಳಲ್ಲಿ ಗಂಟುಗಳನ್ನುಂಟು ಮಾಡಬಲ್ಲ ಏಕಾಣು ಜೀವಿಯಾಗಿದೆ. ನೀಲಿ ಹಸುರು ಪಾಚಿ ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಬೆಳೆಗಳಿಗೆ ಪೋಷಕಾಂಶವನ್ನು ಒದಗಿಸುತ್ತದೆ. ಒಂದು ಹೆಕ್ಟೇರಿಗೆ 25 ಕಿ.ಲೋ.ಗ್ರಾಂ. ನೀಲಿ ಹಸುರು ಪಾಚಿಯನ್ನು ಮೂರು ಬತ್ತದ ಬೆಳೆಗಳಿಗೆ ನಿರಂತರವಾಗಿ ಒದಗಿಸಿದರೆ ಮುಂದೆ ಅದನ್ನು ಒದಗಿಸುವ ಆವಶ್ಯಕತೆ ಇಲ್ಲ.

ರಂಜಕ ಕರಗಿಸುವ ಜೀವಾಣುಗೊಬ್ಬರ : ಕೆಲವು ಏಕಾಣು ಹಾಗೂ ಶಿಲೀಂಧ್ರ ವರ್ಗಗಳಿಗೆ ಸೇರಿದ ಸೂಕ್ಷ್ಮಾಣುಗಳು ಪದಾರ್ಥಗಳ ಮೇಲೆ ಬೆಳೆದು ಸಾವಯವ ಆಮ್ಲಗಳನ್ನು ಉತ್ಪಾದಿಸುತ್ತವೆ. ಇವುಗಳಿಂದ ಬೆಳೆಗಳಿಗೆ ಹೆಚ್ಚಿನ ರಂಜಕ ಲಭ್ಯವಾಗುತ್ತದೆ.

ಎರೆ ಹುಳು ಗೊಬ್ಬರ : ದನ, ಕುರಿ, ಮೇಕೆಗಳ ತಾಜ್ಯ ವಸ್ತುಗಳು ಮತ್ತು ಕಳೆ, ಕೂಳೆ, ಹೊಟ್ಟು, ತರಕಾರಿ, ಹಸುರೆಲೆ, ತರಗು ಇತ್ಯಾದಿ ಕಚ್ಚಾವಸ್ತುಗಳಿಂದ ಎರೆಹುಳು ಗೊಬ್ಬರವನ್ನು ಉತ್ಪಾದಿಸಲಾಗುತ್ತದೆ. ಇಂಥ ಗೊಬ್ಬರದಲ್ಲಿಯ ಪೋಷಕಾಂಶಗಳ ಪ್ರಮಾಣ ಬಳಸುವ ತ್ಯಾಜ್ಯ ವಸ್ತುಗಳ ಪ್ರಮಾಣವನ್ನವಲಂಬಿಸಿರುತ್ತದೆ.

ಜಲಾನಯನ ಅಭಿವೃದ್ಧಿ ವಿಧಾನಗಳು : ಬಿದ್ದ ನೀರಿನ ಹೆಚ್ಚಿನಾಂಶ ಸ್ಥಳದಲ್ಲೇ ಇಂಗುವಂತೆ ಮಾಡುವುದು ಮತ್ತು ಅನಿವಾರ್ಯವಾಗಿ ಹರಿದು ಹೋಗುವ ಹೆಚ್ಚುವರಿ ನೀರು ಮಣ್ಣನ್ನು ಕೊಚ್ಚಿ ಹೋಗದಂತೆ ನೋಡಿ ಕೊಳ್ಳುವುದು ಜಲಾನಯನ ಅಭಿವೃದ್ಧಿಯ ಎರಡು ಮುಖ್ಯ ಅಂಶಗಳಾಗಿವೆ. ಇದಲ್ಲದೆ ಹೆಚ್ಚುವರಿ ನೀರನ್ನು ಸಾಧ್ಯತೆ ಇರುವೆಡೆಯಲ್ಲಿ ಕೃಷಿ ಹೊಂಡ, ನಾಲಾ ಬದು, ತಡೆ ಒಡ್ಡು ಇತ್ಯಾದಿ ನೀರು ಸಂಗ್ರಹಾಗಾರಗಳಲ್ಲಿ ಶೇಖರಿಸಿ ಬಳಸಿ ಬೆಳೆಗಳ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು.

ತಿರುವುಗಾಲುವೆಗಳ ನಿರ್ಮಾಣ : ಕೃಷಿ ಭೂಮಿಯನ್ನು ಅಭಿವೃದ್ಧಿಗೊಳಿಸುವ ಮೊದಲು, ಆ ಭೂಮಿಯ ಮೇಲ್ಭಾಗದಲ್ಲಿ ಇರಬಹುದಾದ ಇಳಿಜಾರಾದ ಗುಡ್ಡ, ಬೆಟ್ಟ ಮತ್ತು ಕೃಷಿ ಯೋಗ್ಯವಲ್ಲದ ಭೂಮಿಗಳಿಂದ ಹರಿದು ಬರುವ ಹೆಚ್ಚುವರಿ ಮಳೆ ನೀರು ಭೂಮಿಗೆ ಕಾಲುವೆಗಳ ಮೂಲಕ ಹರಿದು ಹೋಗುವಂತೆ ಮಾಡುವುದು ತಿರುವುಕಾಲುವೆಗಳ ನಿರ್ಮಾಣದ ಉದ್ದೇಶ. ಕಡಿದಾದ ತಿರುವುಗಾಲುವೆಗಳಲ್ಲಿ ವೇಗವಾಗಿ ಹರಿಯುವ ನೀರಿನಿಂದ ಮಣ್ಣು ಕೊಚ್ಚಿ ಹೋಗದಂತೆ ಮಾಡಲು, ಹುಲ್ಲು ಮತ್ತಿತರ ಸಸ್ಯಗಳನ್ನು ಬಳಸಿ ಮೆಟ್ಟಲುಗಳನ್ನು ನಿರ್ಮಿಸಿ ಕಾಲುವೆಗಳ ಎರಡೂ ಬದುಗಳಲ್ಲಿ ಗಿಡಗಳನ್ನು ಬೆಳೆಸುವುದರಿಂದ ಬದುಗಳನ್ನು ಸದೃಢಗೊಳಿಸಬಹುದು.

ಖುಷ್ಕಿ ಭೂಮಿಯಲ್ಲಿ ಮಣ್ಣು ಮತ್ತು ತೇವಾಂಶ ರಕ್ಷಣೆಯನ್ನು ಮಾಡುವುದು ಅಗತ್ಯ. ಜಮೀನಿನ ಸುತ್ತ ಮಣ್ಣು ಕಲ್ಲಿನ ಬದುಗಳನ್ನು ನಿರ್ಮಿಸುವುದು ಹಿಂದಿನಿಂದ ರೂಢಿಯಲ್ಲಿದೆ. ಇದರಿಂದ ಬದು ಸಂರಕ್ಷಣೆ ಜತೆಗೆ, ಮನೆಗೆ ಅಗತ್ಯವಾದ ಉರುವಲು ಮತ್ತು ದನಗಳಿಗೆ ಮೇವನ್ನು ಪಡೆಯಬಹುದು.

ಕೃಷಿ ಹೊಂಡ : ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ಹೆಚ್ಚು ಮಳೆ ಬಂದಾಗ ಹೆಚ್ಚಾಗಿ ಹರಿದು ಬರುವ ನೀರನ್ನು ಸಾಧ್ಯವಿರುವೆಡೆಯಲ್ಲಿ ಕೃಷಿ ಹೊಂಡಗಳನ್ನು (ಕುಂಟೆ) ನಿರ್ಮಿಸಿ ಶೇಖರಿಸಿಟ್ಟುಕೊಂಡು ಆವಶ್ಯಕವೆನಿಸಿದಾಗ ಬೆಳೆಗಳಿಗೆ ಬಳಸುವುದರಿಂದ ಬೆಳೆಗಳಿಗಾಗುವ ಹಾನಿಯನ್ನು ತಪ್ಪಿಸಬಹುದು. ಈ ವಲಯದಲ್ಲಿ ಕಂಡು ಬರುವ ಕೃಷಿ ಪದ್ಧತಿಗಳಲ್ಲಿ ಇದು ಮುಖ್ಯವಾದುದು. ಆರು ತಿಂಗಳುಗಳಿಗಿಂತ ಹೆಚ್ಚುಕಾಲ ಕೃಷಿ ಹೊಂಡಗಳಲ್ಲಿ ನೀರಿರುವುದಾದಲ್ಲಿ ಹೊಂಡದಲ್ಲಿ ಮೀನಿನ ಮರಿಗಳನ್ನು ಬೆಳೆಸಿ ಲಾಭಗಳಿಸಬಹುದು. ತರಕಾರಿ ಮತ್ತು ಹಣ್ಣಿನ ಬೆಳೆಗಳನ್ನು ಮಾಡಬಹುದು.

ಕೃಷಿಯೇತರ ಭೂಮಿಯ ಅಭಿವೃದ್ಧಿ ಮತ್ತು ನಿರ್ವಹಣೆ : ಇಂಥ ಭೂಮಿಯ ಹೆಚ್ಚು ಇಳಿಜಾರಿರುವೆಡೆಯಲ್ಲಿ ಸಮತಾಳಿಯಲ್ಲಿ ವಿ(V) ಆಕಾರದ ಕಂದಕಗಳನ್ನು ತೆಗೆಯುವುದರಿಂದ ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡಬಹುದು. ಕೃಷಿಯೇತರ ಭೂಮಿಯಲ್ಲಿ ಮೇವು, ಉರುವಲು, ಹಣ್ಣು, ಮರ ಇತರ ಕಚ್ಚಾವಸ್ತು ಇತ್ಯಾದಿ ಆವಶ್ಯಕತೆಗಳನ್ನು ಪೂರೈಸಬಲ್ಲ ಸಸಿಗಳನ್ನು ನೆಡುವುದರಿಂದ ಹೆಚ್ಚಿನ ಆದಾಯಬರುತ್ತದೆ. ಈ ವಲಯದಲ್ಲಿ ಹವಾಗುಣ ಮತ್ತು ಗುಣಲಕ್ಷಣಗಳನ್ನವಲಂಬಿಸಿ

ಬೆಳೆಸಬಹುದಾದ ಸಸಿಗಳೆಂದರೆ ಜಾಲಿ, ಬಂಗಾಳ ಜಾಲಿ, ಸೀಮೆ ತಂಗಡಿ, ಬೇವು, ಹೊಂಗೆ, ಹಿಪ್ಪೆ, ನೇರಳೆ, ಹುಣಿಸೆ, ಹಲಸು, ಮಾವು, ನೆಲ್ಲಿ, ಸೀತಾಫಲ, ಬಾರೆ ಮೊದಲಾದವು. ತೀವ್ರ ಹಾನಿಗೆ ತುತ್ತಾಗಬಲ್ಲ ಅತಿ ಇಳಿಜಾರಿನ, ಕಡಿಮೆ ಆಳದ ಕೊಲ್ಲಿಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಕಲ್ಲುಗಳನ್ನು / ಚಪ್ಪಡಿಗಳನ್ನು ಬಳಸಿ ಶೋಧಕ ನಿರ್ಮಿಸಬೇಕು. ಇವುಗಳ ರಕ್ಷಣೆಗಾಗಿ ಅಕ್ಕಪಕ್ಕ ಕತ್ತಾಳೆ, ಬಿದಿರು, ಹೊಂಗೆ, ಆಲ, ಅರಳಿ ಇತ್ಯಾದಿ ಗಿಡ ನೆಟ್ಟು ಹೆಚ್ಚಿನ ಭೂ ಕೊರೆತವಾಗದಂತೆ ನೋಡಿಕೊಳ್ಳಬೇಕು.

ನೀರಾವರಿ : ಜಿಲ್ಲೆಯಲ್ಲಿ 1965-66 ರಲ್ಲಿ 99, 340 ಎಕರೆಗಳಿಗೆ (40, 218 ಹೆಕ್ಟೇರು) ನೀರಾವರಿ ಸೌಲಭ್ಯ ಒದಗಿಸಲಾಗಿತ್ತು ಹಾಗೂ 5,31,671 ಎಕರೆಗಳಲ್ಲಿ (2,15,251 ಹೆಕ್ಟೇರುಗಳಲ್ಲಿ) ಖುಷ್ಕಿ ಬೇಸಾಯ ಕೈಗೊಳ್ಳಲಾಗಿತ್ತು. ರಾಜ್ಯದ ಒಟ್ಟು ನಿವ್ವಳ ನೀರಾವರಿ ಪ್ರದೇಶ 1957-58ರಲ್ಲಿ ಶೇ. 5.9 ರಷ್ಟಿದ್ದು, ಅದು 2000-2001ರಲ್ಲಿ ಶೇ. 25ಕ್ಕೆ ಇಳಿಯಿತು. ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ 1957-58ರಲ್ಲಿ ಶೇ. 17 ರಷ್ಟಿದ್ದರೆ 2000-2001ರಲ್ಲಿ ಶೇ. 18.8ಕ್ಕೆ ಏರಿಕೆಯಾಯಿತು. 2000-2001ನೇ ಸಾಲಿನಲ್ಲಿ 80.089 ಹೆಕ್ಟೇರುಗಳಿಗೆ ನೀರಿನ ಸೌಲಭ್ಯ ಒದಗಿಸಲಾಯಿತು.

ನೀರಿನ ನಿರ್ವಹಣೆ ಪದ್ಧತಿಗಳು : ಕೃಷಿ ಭೂಮಿಯಲ್ಲಿ ನೀರಿನ ನಿರ್ವಹಣೆಗಾಗಿ ಈ ಪದ್ಧತಿಗಳನ್ನು ಅನುಸರಿಸಲಾಗಿದೆ.

1. ಪಟ್ಟೆ ನೀರಾವರಿ (ಬಾರ್ಡರ್ ಸ್ಟ್ರಿಪ್)ಪದ್ಧತಿ, 2. ಮಡಿ ನೀರಾವರಿ (ಚೆಕ್ ಬೇಸಿನ್) ಪದ್ಧತಿ, 3. ಬದು ಮತ್ತು ಸಾಲು ಪದ್ಧತಿ, 4. ಹನಿ ನೀರಾವರಿ ಪದ್ಧತಿ, 5. ತುಂತುರು ಪದ್ಧತಿ

1. **ಪಟ್ಟೆ ನೀರಾವರಿ ಪದ್ಧತಿ (ಬಾರ್ಡರ್‌ಸ್ಟ್ರಿಪ್) :** ಜಮೀನನ್ನು ಮಟ್ಟ ಮಾಡಲು ಸಾಧ್ಯವಿರುವ ಕಡೆಗಳಲ್ಲಿ ಮಣ್ಣಿನ ಫಲವತ್ತತೆ ಹೆಚ್ಚು ವ್ಯತ್ಯಾಸವಾಗದಂತೆ ನೋಡಿಕೊಳ್ಳಲು ಈ ಪದ್ಧತಿಯನ್ನು ಅನುಸರಿಸುತ್ತಾರೆ. ಪಟ್ಟೆಗಳ ಮಧ್ಯದ ಜಮೀನನ್ನು ಮಟ್ಟಗೊಳಿಸಿ ನೀರು ಹರಿಯಲು ಸಾಧ್ಯವಾಗುವಂತೆ ಪಟ್ಟೆ ಉದ್ದಕ್ಕೂ ಸಾಧಾರಣ ಇಳಿಜಾರು ಮಾಡಬೇಕು. ಪಟ್ಟೆಗಳ ಅಗಲವನ್ನು 30 ಸೆಂ.ಮೀ. ಮಿತಿಗೊಳಿಸುವುದರಿಂದ ಭೂಮಿಯ ಮಟ್ಟವನ್ನು ಕಾಪಾಡಿಕೊಳ್ಳಬಹುದು. ನೆಲಗಡಲೆ, ದ್ವಿದಳ ಧಾನ್ಯ ಮತ್ತು ಮೇವಿನ ಬೆಳೆಗಳಿಗೆ ಈ ಪದ್ಧತಿ ಉಪಯುಕ್ತ.

2. **ಮಡಿ ನೀರಾವರಿ (ಚೆಕ್ ಬೇಸಿನ್) ಪದ್ಧತಿ :** ಸುತ್ತಲೂ ಬದುವಿದ್ದು ಸಮತಟ್ಟಾದ ಜಮೀನಿಗೆ ನೀರು ಹಾಯಿಸುವ ವಿಧಾನವಿದು. ಕಡಿಮೆ ನೀರು ಹಿಂಗುವ ಸಮತಲ ಭೂಮಿಗೆ ಹೆಚ್ಚು ಯೋಗ್ಯವಾದ ಈ ವಿಧಾನದಿಂದ ಪಾತಿಗಳಲ್ಲಿ ಇಂಗಿದಷ್ಟು ನೀರನ್ನು ಹಿಡಿದಿಡಲಾಗುತ್ತದೆ. ಮುಸುಕಿನ ಜೋಳ, ದ್ವಿದಳ ಧಾನ್ಯ, ಎಣ್ಣೆ ಕಾಳು ಹಾಗೂ ಮೇವಿನ ಬೆಳೆಗಳಿಗೆ ಇದು ಹೆಚ್ಚು ಉಪಯುಕ್ತವಾದ ಪದ್ಧತಿ.

3. **ಬದು ಮತ್ತು ಸಾಲು ಪದ್ಧತಿ :** ಸಾಲುಗಳಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಹರಿಯುವ ಈ ಪದ್ಧತಿಯನ್ನು ಹಲವು ರೀತಿಯ ಬೆಳೆಗಳಿಗೆ ಅನುಸರಿಸಬಹುದು. ಆದರೆ ಬದು ಮತ್ತು ಸಾಲುಗಳನ್ನು ಆಯಾ ಬೆಳೆಗೆ ಯುಕ್ತವಾದ ರೀತಿಯಲ್ಲಿ ನಿರ್ಮಿಸಬೇಕು. ಕಬ್ಬು, ತೊಗರಿ, ಮುಸುಕಿನ ಜೋಳ, ಸೂರ್ಯಕಾಂತಿ, ಆಲೂಗೆಡ್ಡೆ, ಮೆಣಸಿನ ಕಾಯಿ, ಟೊಮ್ಯಾಟೋ ಮೊದಲಾದ ಬೆಳೆಗಳನ್ನು ಈ ಪದ್ಧತಿಯಿಂದ ಮಾಡಲಾಗುತ್ತದೆ.

4. **ಹನಿ ನೀರಾವರಿ ಪದ್ಧತಿ :** ಒಣ ಬೇಸಾಯದ ವಲಯಗಳಿಗೆ ಬಹು ಉಪಯುಕ್ತ ಪದ್ಧತಿ ಇದು. ನೀರಿನ ಕೊರತೆ ಇರುವ ಮತ್ತು ಕ್ಷಾರಯುಕ್ತ ಜಮೀನಿನ ಪ್ರದೇಶಗಳಲ್ಲಿ ಇದು ಜನಪ್ರಿಯವಾದ ಪದ್ಧತಿ. ಈ ಪದ್ಧತಿಯಲ್ಲಿ ನೀರನ್ನು ಹನಿ ಹನಿಯಾಗಿ ಬೇರಿನ ಸುತ್ತ ಮೇಲಿಂದ ಮೇಲೆ ಸಿಂಪಡಿಸಲಾಗುತ್ತದೆ. ಇದರಿಂದ ನೀರು ಬೇರಿನ ವಲಯಕ್ಕಿಂತ ಆಳವಾಗಿ ಇಂಗುವುದರಿಂದ ಮತ್ತು ಆವಿಯಾಗಿ ಹೋಗುವುದರಿಂದ ಆಗುವ ನಷ್ಟವನ್ನು ಆದಷ್ಟು ಕಡಿಮೆ ಮಾಡಬಹುದು.

5. **ತುಂತುರು ಪದ್ಧತಿ :** ಜಮೀನು ಮಟ್ಟ ಮಾಡಲು ಸಾಧ್ಯವಾಗದ ಇಳಿಜಾರು ಇರುವ ಕಡೆಗಳಲ್ಲಿ ಹೆಚ್ಚು ಉಪಯುಕ್ತವಾಗಿದೆ. ಮಣ್ಣಿನ ನೀರು ಇಂಗುವ ಸಾಮರ್ಥ್ಯದ ಆಧಾರದ ಮೇಲೆ ಬೆಳೆಗಳ ಅಂತರಕ್ಕೆ ತಕ್ಕಂತೆ ಸಂಪರ್ಕಗಳನ್ನು ಜೋಡಿಸಿ ನೀರು ಕೊಡುವ ಪದ್ಧತಿ ಇದು. ಹಲವು ಬೆಳೆ ಹಾಗೂ ವಿವಿಧ ಜಾತಿಯ ಮಣ್ಣುಗಳಿಗೆ ಇದನ್ನು ಅಳವಡಿಸಬಹುದು. ಆದರೆ ನೀರು ಇಂಗುವ ಸಾಮರ್ಥ್ಯ ಗಂಟೆಗೆ 4 ಮಿ.ಮೀ.ಗಿಂತ ಕಡಿಮೆ ಇರುವ ಜಮೀನಿಗೆ ಉಪಯೋಗವಾಗಲಾರದು.

ತೋಟಗಾರಿಕೆ : ಕೋಲಾರಜಿಲ್ಲೆ ರಾಜ್ಯದಲ್ಲಿ ಅತಿ ಹೆಚ್ಚು ಹಣ್ಣು ಮತ್ತು ತರಕಾರಿ ಬೆಳೆಯುವ ಪ್ರದೇಶವಾಗಿದೆ. ಅದರಲ್ಲೂ ಮಾವಿನ ಹಣ್ಣು ಬೆಳೆಯುವುದರಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದೆ. ರಾಜ್ಯದಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳಾದ ಆಲೂಗೆಡ್ಡೆ, ಟೊಮ್ಯಾಟೋ, ಈರುಳ್ಳಿ ಮತ್ತು ವಾಣಿಜ್ಯ ಪುಷ್ಪ ಬೆಳೆಗಳಾದ ಗುಲಾಬಿ, ಚೆಂಡುಮಲ್ಲಿಗೆ, ಕನಕಾಂಬರ, ಸೇವಂತಿಗೆ ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಈ ವಲಯದಲ್ಲಿ ಬೆಳೆಯಲಾಗುತ್ತದೆ. ಜಿಲ್ಲೆಯಲ್ಲಿ 2000-2001ನೆಯ ಸಾಲಿನಲ್ಲಿ 45.97 ಹೆ. ಹಣ್ಣಿನ ಬೆಳೆಗಳನ್ನು 37-085 ಹೆ. ಪ್ರದೇಶದಲ್ಲಿ ತರಕಾರಿ ಬೆಳೆಗಳನ್ನು 24.832 ಹೆ. ತೋಟದ ಮತ್ತು ಸಂಬಾರ ಬೆಳೆಗಳನ್ನು ಮತ್ತು 2.004 ಹೆ. ವಾಣಿಜ್ಯ ಪುಷ್ಪಗಳನ್ನು ಬೆಳೆಯಲಾಗಿದೆ. ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರಗಳು ಮತ್ತು ಐದು ನರ್ಸರಿಗಳು ಕಾರ್ಯನಿರ್ವಹಿಸುತ್ತಿವೆ.

ತೋಟಗಾರಿಕೆ ಇಲಾಖೆಯು ಕಾರ್ಯಗತಗೊಳಿಸುತ್ತಿರುವ ಪ್ರಮುಖ ಯೋಜನೆಗಳು :

1. ಬೀಜದ ತೆಂಗಿನ ಕಾಯಿಗಳ ಸಂಗ್ರಹಣೆ ಮತ್ತು ಸಸ್ಯಾಗಾರ ನಿರ್ವಹಣೆ ಯೋಜನೆ ಅಡಿಯಲ್ಲಿ ಉತ್ತಮ ಕಾಯಿಗಳನ್ನು ಶೇಖರಣೆ ಮಾಡಿ ಸಸಿಗಳನ್ನು ಬೆಳೆಸಿ ಫಲಾನುಭವಿಗಳಿಗೆ ವಿತರಿಸಲಾಗುತ್ತದೆ. ಸಾರ್ವಜನಿಕರಿಗೂ ಸಸಿಗಳನ್ನು ವಿತರಿಸುವುದಲ್ಲದೇ ತೆಂಗಿನ ಬೇಸಾಯದ ಬಗ್ಗೆ ರೈತರಿಗೆ ತಿಳಿವಳಿಕೆಯನ್ನು ಸಹ ನೀಡಲಾಗುತ್ತದೆ. ತೆಂಗಿನ ಮರಕ್ಕೆ ತಗಲುವ ಕಪ್ಪು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳನ್ನು ಉತ್ಪಾದಿಸಲು ಕಿರು ಪ್ರಯೋಗಶಾಲೆಯನ್ನು ತೆರೆಯಲಾಗಿದೆ. ಇದು 2001-02ನೇ ಸಾಲಿನಲ್ಲಿ ಸುಮಾರು 2.97 ಲಕ್ಷ ಪರೋಪ ಜೀವಿಗಳನ್ನು ಉತ್ಪಾದಿಸಿ 2.78 ಲಕ್ಷ ತೆಂಗಿನ ಮರಗಳಿಗೆ ಬಿಡುಗಡೆ ಮಾಡಲಾಗಿದೆ.

2. **ತೋಟಗಾರಿಕಾ ತರಬೇತಿ :** ರೈತರಿಗೆ ಹಾಗೂ ಗ್ರಾಮಾಂತರ ಮಹಿಳೆಯರಿಗೆ ತೋಟಗಾರಿಕೆ ತರಬೇತಿ ಯೋಜನೆ ಅಡಿಯಲ್ಲಿ ನೂತನ ತಾಂತ್ರಿಕ ವಿಧಾನದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಸುವುದು, ರಸ ಗೊಬ್ಬರ ನೀಡುವುದು, ಸಸ್ಯ ಸಂರಕ್ಷಣೆ, ಮಿಶ್ರ ಬೇಸಾಯ ಪದ್ಧತಿ, ಬೆಳೆಗಳ

ಬದಲಾವಣೆ ಮತ್ತು ವಿವಿಧ ರೀತಿಯಲ್ಲಿ ಸಸಿಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಅಲ್ಪಾವಧಿ ತರಬೇತಿಯನ್ನು ನೀಡಲಾಗುತ್ತದೆ. ಮನೆ ಅಂಗಳದಲ್ಲಿ, ಕೈ ತೋಟಗಳಲ್ಲಿ ಬೆಳೆಸಬಹುದಾದ ಸೊಪ್ಪು ಮತ್ತು ತರಕಾರಿಗಳ ಬಗ್ಗೆ ಹಾಗೂ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಬಗ್ಗೆ ಗ್ರಾಮೀಣ ರೈತರು ಮತ್ತು ಮಹಿಳೆಯರಿಗೆ ಉಪಯುಕ್ತ ತರಬೇತಿಯನ್ನು ನೀಡಲಾಗುತ್ತದೆ.

3. **ಸಾಮಾಜಿಕ ತೋಟಗಾರಿಕೆ ಯೋಜನೆ :** ಇದರಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳ ಆವರಣದಲ್ಲಿ ತೋಟದ ಅಭಿವೃದ್ಧಿಗಾಗಿ ಹಣ್ಣಿನ ಗಿಡಗಳು, ತೆಂಗಿನ ಸಸಿ ಹಾಗೂ ಆಲಂಕಾರಿಕ ಗಿಡಗಳನ್ನು ಮತ್ತು ಸಲಕರಣೆಗಳನ್ನು ವಿತರಿಸಲಾಗುತ್ತದೆ. ತೋಟಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಶೇಕಡ 50ರ ರಿಯಾಯಿತಿಯಲ್ಲಿ ಔಷಧಿಯನ್ನು ಒದಗಿಸಲಾಗುತ್ತದೆ.

ಜಿಲ್ಲೆಯಲ್ಲಿ ತಾಲ್ಲೂಕುವಾರು 1998-99ರಲ್ಲಿ ಕಂಡು ಬಂದ ಒಟ್ಟು ಬಿತ್ತನೆ ಪ್ರದೇಶದಲ್ಲಿರುವ ತೋಟಗಾರಿಕ ಪ್ರದೇಶದ ವಿವರ (ಹೆಕ್ಟೇರುಗಳಲ್ಲಿ) ಹೀಗಿತ್ತು. ಬಂಗಾರ ಪೇಟೆ 2876 (43235) ಕೋಲಾರ 7566 (46473) ಮಾಲೂರು 6446 (36659) ಮುಳಬಾಗಿಲು 11417 (49100) ಶ್ರೀನಿವಾಸಪುರ 13876 (44771) ಆವರಣದಲ್ಲಿರುವ ಸಂಖ್ಯೆ ಒಟ್ಟು ಬಿತ್ತನೆ ಪ್ರದೇಶವನ್ನು ಸೂಚಿಸುತ್ತದೆ. (ಆಧಾರ ಕೋಲಾರ ಜಿಲ್ಲೆ ಗ್ಯಾಸೆಟಿಯರ್)

ಹಿಪ್ಪುನೇರಳೆ ಸೊಪ್ಪು : ಜಿಲ್ಲೆಯಲ್ಲಿ ಹಿಪ್ಪುನೇರಳೆ ಸೊಪ್ಪಿನ ಇಳುವರಿ ನಾಲ್ಕು ಮುಖ್ಯ ಅಂಶಗಳನ್ನು ಅವಲಂಬಿಸಿದೆ. ಹಿಪ್ಪುನೇರಳೆ ತಳಿ, ವ್ಯವಸಾಯ ಪದ್ಧತಿ, ರೋಗ ಮತ್ತು ಕೀಟಗಳ ಸಮಗ್ರ ನಿರ್ವಹಣೆ ಹಾಗೂ ತೋಟದ ಸಮರ್ಪಕ ನಿರ್ವಹಣೆ.

ವ್ಯವಸಾಯ ಪದ್ಧತಿಗಳಿಗೆ ಯೋಗ್ಯವಾಗುವ ಹಿಪ್ಪು ನೇರಳೆ ತಳಿಗಳು ಎರಡು ಅಂಶಗಳನ್ನು ಅವಲಂಬಿಸಿರುತ್ತವೆ. 1. ಕೃಷಿ ಪೂರಕ ಗುಣಗಳಾದ ಬೇರು ಬಿಡುವಿಕೆ, ಬೆಳೆವಣಿಗೆಯ ಗತಿ, ಇಳುವರಿ ವಿವಿಧ ವಾತಾವರಣಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯ, ರೋಗ ನಿರೋಧಕ ಶಕ್ತಿ ಮತ್ತು ಕೊಡುವ ಪೋಷಕಾಂಶಗಳಿಗೆ ಸರಿಯಾಗಿ ಪ್ರತಿಕ್ರಿಯಿಸುವಿಕೆ, 2. ಸೊಪ್ಪಿನ ಗುಣ ಮಟ್ಟವು ಚಾಕಿ ಮತ್ತು ಪ್ರೌಢ ಹುಳುಗಳಿಗೆ ಯುಕ್ತವಾಗಿದ್ದು, ಸಾಕಣೆ ಕ್ರಮಗಳು ಹಾಗೂ ವಿವಿಧ ಋತುಗಳಿಗೆ ಸರಿ ಹೊಂದುವಂತಿರಬೇಕು. ಆಯ್ಕೆ ಮಾಡಿದ ಹಿಪ್ಪು ನೇರಳೆ ತಳಿ ಸಾಮಾನ್ಯ ವ್ಯವಸಾಯ ಕ್ರಮಗಳಿಗೆ ಮತ್ತು ರೋಗಗಳ ಹತೋಟಿ ಕ್ರಮಗಳಿಗೆ ಹೊಂದಿಕೊಂಡು ಬೆಳೆಯುವಂತಿರಬೇಕು.

ಜಿಲ್ಲೆಯ ವಿವಿಧ ಹವಾಗುಣಗಳಿಗೆ ಮತ್ತು ವಿವಿಧ ಬೇಸಾಯ ಕ್ರಮಗಳಿಗೆ ಹೊಂದಿಕೊಂಡು ನೀರಾವರಿ ಮತ್ತು ಮಳೆ ಆಶ್ರಿತ ಪ್ರದೇಶಗಳಲ್ಲಿ ಬೆಳೆಯಬಲ್ಲ ಕೆಲವು ಹಿಪ್ಪು ನೇರಳೆ ತಳಿಗಳ ಗುಣಲಕ್ಷಣಗಳು ಇಂತಿವೆ.

1. ನಾಟಿ ತಳಿ, 2. ಸುಧಾರಿತ ತಳಿ, 3. ಅಧಿಕ ಇಳುವರಿಯ ತಳಿ, 4. ಮಳೆಯಾಶ್ರಿತ ಹಿಪ್ಪುನೇರಳೆ ತಳಿಗಳು :

ಹಿಪ್ಪು ನೇರಳೆ ಬೇಸಾಯ :

1. ಹಿಪ್ಪು ನೇರಳೆ ಸಸಿಗಳನ್ನು ಬೆಳೆಸುವುದು, 2.ಬಲಿತ ಕಡ್ಡಿಗಳನ್ನು ಉಪಯೋಗಿಸಿ ಸಸಿಗಳನ್ನು ಬೆಳೆಸುವುದು, 3.ಸಸಿ ಮಡಿ ಸಿದ್ಧಪಡಿಸುವಿಕೆ, 4.ಬಿತ್ತನೆ ಕಡ್ಡಿ ಸಿದ್ಧಪಡಿಸುವಿಕೆ, 5. ಬಿತ್ತನೆ ಕಡ್ಡಿ ಸಾಗಣೆ ಮತ್ತು ಶೇಖರಣೆ, 6.ಬಿತ್ತನೆ ಕಡ್ಡಿ ನಾಟಿ ಮಾಡುವುದು, 7.ನೀರಾವರಿ, 8. ಕಳೆ ತೆಗೆಯುವುದು, 9. ಗೊಬ್ಬರಗಳ ಬಳಕೆ, 10. ಸಸ್ಯ ಸಂರಕ್ಷಣೆ, 11. ಸಸಿಗಳನ್ನು ಕೀಳುವುದು, ಸಾಗಿಸುವುದು ಮತ್ತು ನಾಟಿ ಮಾಡುವುದು, 12. ಕಿಸಾನ್ ನರ್ಸರಿ ಇತ್ಯಾದಿ.

ಭೂಮಿಯ ಆಯ್ಕೆ : ಸಮತಟ್ಟಾದ ಅಥವಾ ಸ್ವಲ್ಪ ಇಳಿ ಜಾರಾದ ಭೂಮಿಯು ಹಿಪ್ಪು ನೇರಳೆಗೆ ಯೋಗ್ಯ. ಹಿಪ್ಪು ನೇರಳೆಯನ್ನು ಎಲ್ಲ ರೀತಿಯ ಮಣ್ಣಿನಲ್ಲಿ ಬೆಳೆಯಬಹುದಾದರೂ ಮರಳು ಮಿಶ್ರಿತ ಗೋಡು ಅಥವಾ ಎರೆಗೋಡು ಮಣ್ಣು ಉತ್ತಮ. ಹಿಪ್ಪು ನೇರಳೆ ಆಳಕ್ಕೆ ಬೇರು ಬಿಡುವುದರಿಂದ ಮೇಲ್ಮಣ್ಣು ಸಾಕಷ್ಟು ಆಳವಾಗಿರಬೇಕು.

ಜಿಲ್ಲೆಯಲ್ಲಿ ಮುಂಗಾರು ಪ್ರಾರಂಭವಾಗುವುದಕ್ಕೆ ಮೊದಲು ಭೂಮಿಯನ್ನು ಆಳಕ್ಕೆ ಉಳುಮೆ ಮಾಡಿ, ಹೆಂಟೆಗಳನ್ನು ಒಡೆದು, ಸಮತಟ್ಟು ಮಾಡುತ್ತಾರೆ. ಹೆಕ್ಟೇರಿಗೆ 20 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸುತ್ತಾರೆ. ಬಯಲು ಪ್ರದೇಶಕ್ಕೆ 60x60 ಸೆಂ.ಮೀ. ಮತ್ತು ಕಪ್ಪು ಮಣ್ಣು ಪ್ರದೇಶಗಳಿಗೆ 90x90 ಸೆಂ.ಮೀ. ಸಸ್ಯ ಮತ್ತು ಸಾಲುಗಳ ಮಧ್ಯೆ ಅಂತರವನ್ನು ಮಾಡಲಾಗುತ್ತದೆ.

ತೋಟ ಮಾಡಿದ ಆರು ತಿಂಗಳಿಗೆ ಸೊಪ್ಪು ಸಿಗುವುದಾದರೂ ಎರಡನೇ ವರ್ಷದಿಂದ ಪೂರ್ಣ ಪ್ರಮಾಣದಲ್ಲಿ ಸೊಪ್ಪಿನ ಇಳುವರಿ ಪಡೆಯಬಹುದು. ಅಲ್ಲದೆ 15-20 ವರ್ಷಗಳವರೆಗೆ ಉತ್ತಮ ಇಳುವರಿಯನ್ನು ಪಡೆಯಬಹುದು. ಅಧಿಕ ಇಳುವರಿ ನೀಡುವ ತಳಿಗಳಾದ ವಿ / ಮತ್ತು ಎಸ್ 36 ಗಳನ್ನು ಜೋಡಿ ಸಾಲು ಪದ್ಧತಿಯಲ್ಲಿ ಬೆಳೆಯಲು [(3+6) x 2 ಅಥವಾ (3+5) x 2] ಅಡಿಅಗಲ ಅಂತರವನ್ನು ಶಿಫಾರಸ್ಸು ಮಾಡಲಾಗುತ್ತಿದೆ. ಉತ್ತಮ ತೋಟದ ಸ್ಥಾಪನೆಗೆ ಮಳೆಗಾಲದಲ್ಲಿ ನಾಟಿ ಮಾಡುವುದು ಈ ವಲಯದಲ್ಲಿ ಹೆಚ್ಚು. ನಾಟಿಯ ಅನಂತರ ಕಾಲುವೆಗಳ ಮೂಲಕ ನೀರನ್ನು ಹಾಯಿಸುವರು. ಕಡ್ಡಿಗಳು ಅಥ್ವಾ ಸಸಿಗಳು 2-3 ವಾರಗಳಲ್ಲಿ ಚಿಗುರದಿದ್ದರೆ, ಹೊಸ ಸಸಿಗಳನ್ನು ನೆಟ್ಟು ತೋಟ ಒಂದೇ ಸಮನೆ ಬೆಳೆಯುವಂತೆ ಮಾಡಬೇಕು.

ಜಿಲ್ಲೆಯ ಮೀನು ಕೃಷಿ ಸಂಪನ್ಮೂಲಗಳು : ಕೋಲಾರ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚಿನ ಕೆರೆಗಳಿರುವ ಜಿಲ್ಲೆಯಾಗಿದೆ. ಜಿಲ್ಲೆಯಲ್ಲಿ ಸುಮಾರು 3,833 ಕೆರೆಗಳಿದ್ದು, ಇವುಗಳ ಒಟ್ಟು ಅಂದಾಜು ಜಲವಿಸ್ತೀರ್ಣ 48,043 ಹೆಕ್ಟೇರುಗಳಷ್ಟು ಇರುತ್ತದೆ. ಇವುಗಳಲ್ಲಿ 2,697 ಕೆರೆಗಳು 10 ಹೆಕ್ಟೇರ್ ಒಳಗಿನ ವಿಸ್ತೀರ್ಣವುಳ್ಳವುಗಳಾಗಿದ್ದು ಇವು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಯ ಆಡಳಿತ ವ್ಯಾಪ್ತಿಗೆ ಒಳಪಡುತ್ತವೆ. 10 ರಿಂದ 25 ಹೆಕ್ಟೇರ್ ವಿಸ್ತೀರ್ಣವುಳ್ಳ 743 ಕೆರೆಗಳು ಜಿಲ್ಲಾಪಂಚಾಯತ್ ಆಡಳಿತ ವ್ಯಾಪ್ತಿಯಲ್ಲಿ ಬರುತ್ತವೆ. ಉಳಿದ 393 ಕೆರೆಗಳು 25 ಹೆಕ್ಟೇರ್‌ಗಿಂತ ಮೇಲ್ಪಟ್ಟ ವಿಸ್ತೀರ್ಣವುಳ್ಳವುಗಳಾಗಿದ್ದು, ಮೀನುಗಾರಿಕೆ ಇಲಾಖೆಯ ಆಡಳಿತ ವ್ಯಾಪ್ತಿಗೆ ಸೇರಿರುತ್ತವೆ. ಜಿಲ್ಲೆಯ ಕೆರೆಗಳ ತಾಲೂಕುವಾರು ಸಂಖ್ಯೆ ಮತ್ತು ಜಲವಿಸ್ತೀರ್ಣದ ವಿವರಗಳು.

ತಾಲೂಕುವಾರು ಕೆರೆಗಳ ಸಂಖ್ಯೆ ಮತ್ತು ಜಲವಿಸ್ತೀರ್ಣದ ವಿವರಗಳು (2001-02)

ತಾಲೂಕು	ಸಂಖ್ಯೆ	ಜಲವಿಸ್ತೀರ್ಣ	ಸಂಖ್ಯೆ	ಜಲವಿಸ್ತೀರ್ಣ	ಸಂಖ್ಯೆ	ಜಲವಿಸ್ತೀರ್ಣ	ಸಂಖ್ಯೆ	ಜಲವಿಸ್ತೀರ್ಣ
ಕೋಲಾರ	54	4,405	89	1,459	193	1,008	336	6,872
ಗುಡಿಬಂಡೆ	9	404	22	359	58	238	89	1,001
ಗೌರಿಬಿದನೂರು	52	2,993	46	764	43.	191	141	3,948
ಚಿಂತಾಮಣಿ	28	1,.196	100	1,540	429	1,795	557	4,531
ಚಿಕ್ಕಬಳ್ಳಾಪುರ	18	1,269	22	319	96	251	136	1,8739
ಬಂಗಾರಪೇಟೆ	25	1,874	75	1,108	434	1,752	534	4,734
ಬಾಗೇಪಲ್ಲಿ	32	1,406	79	1,290	284	1,198	395	3,694
ಮಾಲೂರು	30	1,525	50	765	258	1,011	338	3,301
ಮುಳಬಾಗಿಲು	55	2,825	131	1,936	502	1,943	688	6,704
ಶಿಡ್ಲಘಟ್ಟ	32	2,921	42	611	148	608	222	4,140
ಶ್ರೀನಿವಾಸಪುರ	58	4,333	87	1,304	252	1,362	397	6,999
ಒಟ್ಟು	393	25,231	743	11,456	2,697	11,356	3,833	48,043

ಮೇಲಿನ ಕೋಷ್ಟಕವನ್ನು ಪರಿಶೀಲಿಸಿದರೆ ಜಿಲ್ಲೆಯ ಕೆರೆಗಳು ಕೃಷಿಗೆ ಪೂರಕವಾಗಿರುವಂತೆ, ಮೀನು ಸಾಗಾಣಿಕೆಗೂ ಅನುಕೂಲಕರವಾಗಿದ್ದು ರೈತರ ಬದುಕಿಗೆ ಸಹಕಾರಿಯಾಗಿವೆ ಎಂಬುದು ಅರಿವಿಗೆ ಬರುತ್ತದೆ.

ಮೀನು ಸಾಕಾಣಿಕೆ : ಜಿಲ್ಲೆಯಲ್ಲಿ ಸದಾ ನೀರು ತುಂಬಿರುವ ಬೇತಮಂಗಲ ಮತ್ತು ಮಾರ್ಕಂಡೇಯ ಜಲಾಶಯಗಳು ಅನುಕ್ರಮವಾಗಿ 317 ಹೆ. ಮತ್ತು 145 ಹೆ. ಆಗಿದೆ. ಈ ಜಲಾಶಯಗಳಲ್ಲಿ ವಿಪುಲವಾಗಿ ಮೀನು ಸಾಕಲು ಅವಕಾಶವಿದ್ದು ಅನೇಕ ಕುಟುಂಬಗಳು ಮೀನುಗಾರಿಕೆ ಕೈಗೊಂಡಿದ್ದಾರೆ. ಜಿಲ್ಲೆಯಲ್ಲಿ ಸಾವಿರಾರು ಕೊಳವೆ ಬಾವಿಗಳಿದ್ದು, ನೀರು ಶೇಖರಣಾ ತೊಟ್ಟಿಗಳನ್ನು ಮೀನು ಕೃಷಿಗೆ ಯೋಗ್ಯವಾಗುವ ರೀತಿಯಲ್ಲಿ ಮಾರ್ಪಾಡು ಮಾಡಿ ಮೀನು ಸಾಕಾಣಿಕೆ ಮಾಡುವವರು ಇದ್ದಾರೆ. ಮೀನು ಸಹಕಾರ ಸಂಘಗಳು ಮೀನುಗಾರರನ್ನು ಸಂಘಟಿತರನ್ನಾಗಿ ಮಾಡಿ ಅವರು ಆರ್ಥಿಕವಾಗಿ ಅಭಿವೃದ್ಧಿಯಾಗಲು ಅನುಕೂಲವಾಗುವಂತೆ ಪ್ರೋತ್ಸಾಹನೀಡುತ್ತಿವೆ.

ಮೀನು ತಳಿಗಳು : ಹೂಮೀನು, ಕುಚ್ಚು ಮೀನು, ಕೊರವ ಮೀನು, ಕಲ್ಲು ಕೊರವ ಮೀನು, ಹಾವು ಮೀನು, ಮಾರವೆ ಮೀನು, ಚೇಳುಮೀನು, ಬಾಳೆಮೀನು, ಗೊದ್ದಲೆಮೀನು, ಗಿರಲ್ಲಮೀನು, ಮುತ್ತಿನ ಮೀನು, ಗಾಜಿನ ಮೀನು, ಜಿಲೇಬಿ ಮೀನು, ಚಪ್ಪಲಿ ಮೀನು, ನೆತ್ತಿಮೀನು, ಕೊರವ ಮೀನು, ಗುಂಡು ಪಕ್ಕೆ ಮೀನು, ಕೋಲುಪಕ್ಕೆ ಮೀನು, ಮೀಸೆ ಪಕ್ಕೆ, ಗಪ್ಪಿಮೀನು, ಗಾಂಬೂಸಿಯಾ ಮೀನು, ಉಣಸೆಮೀನು ಮುಂತಾದವು.

ಪಾಲನೆ ಮತ್ತು ವಿತರಣೆ : ಪ್ರತಿ ಹೆಕ್ಟೇರಿಗೆ ಸರಾಸರಿ ಒಂದು ಸಾವಿರ ವಿವಿಧ ಜಾತಿಯ ಮೀನು ಮರಿಗಳು ಬೇಕಾಗುತ್ತವೆ. ಮೀನು ಮರಿ ಉತ್ಪಾದನಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಮಟ್ಟದ ಮೀನು ಮರಿ ಪಾಲನಾ ಕೇಂದ್ರಗಳಲ್ಲಿ ಪಾಲನೆ ಮಾಡಿ ಅವುಗಳನ್ನು ಬೆರಳುದ್ದದ ಗಾತ್ರಕ್ಕೆ ಬೆಳೆಸಿ, ಬಿತ್ತನೆಗೆ ಸರಬರಾಜು ಮಾಡಲಾಗುತ್ತದೆ. ಮೀನು ಸಾಕಾಣಿಕಾ ಕೊಳಗಳನ್ನು ನಿರ್ಮಿಸಲು ಮೀನು ಕೃಷಿಕರಿಗೆ ಸಹಾಯಧನ ನೀಡಲಾಗುವುದು.

ಪಶುಸಂಗೋಪನೆ : ಜಿಲ್ಲೆಯ ರೈತರ ಜೀವನಾಡಿಯಾಗಿ ಹೈನುಗಾರಿಕೆ ಇಲ್ಲಿಯ ಜನರ ಆರ್ಥಿಕ ಸಾಮಾಜಿಕ ಸ್ಥಾನಮಾನಗಳನ್ನು ಉತ್ತಮಪಡಿಸಿದೆ. ರೈತರಿಗೆ ವ್ಯವಸಾಯದ ವಿವಿಧ ಕೆಲಸಗಳಿಗೆ, ಆರ್ಥಿಕ ಅಭಿವೃದ್ಧಿಗೆ, ಜಾನುವಾರುಗಳು ಅತ್ಯಾವಶ್ಯಕ. ವ್ಯವಸಾಯದ ಜೊತೆಯಲ್ಲಿಯೇ ಪಶುಸಂಗೋಪನೆ ಅವ್ಯಾಹತವಾಗಿ ಸಾಗುತ್ತಾ ಬಂದಿದೆ.

ಹಾಲಿಗಾಗಿ ಹಸು ಮತ್ತು ಎಮ್ಮೆಗಳು : ಮೊಟ್ಟೆ ಮತ್ತು ಮಾಂಸಕ್ಕಾಗಿ ಕೋಳಿ ; ಉಣ್ಣೆ ಮತ್ತು ಮಾಂಸಕ್ಕಾಗಿ ಕುರಿ, ಮೇಕೆ, ಹಂದಿ ಮತ್ತು ಮೊಲ ಮುಂತಾದ ಪ್ರಾಣಿಗಳನ್ನು ರೈತರು ಸಾಕುತ್ತಾರೆ. ಜಿಲ್ಲೆಯಲ್ಲಿ ಒಟ್ಟು ಸುಮಾರು 17.32 ಲಕ್ಷ ವಿವಿಧ ಜಾನುವಾರುಗಳಿದ್ದು, (2000-2001) ಒಟ್ಟು 21 ಪಶು ಆಸ್ಪತ್ರೆಗಳು 59 ಪಶು ಚಿಕಿತ್ಸಾಲಯಗಳು, 68 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು 11 ಸಂಚಾರಿ ಪಶು ಚಿಕಿತ್ಸಾಲಯಗಳು, ಮೂರು ಕೃತಕ ಗರ್ಭಧಾರಣಾ ಕೇಂದ್ರಗಳು. 17 ತೀವ್ರ ತಳಿ ಅಭಿವೃದ್ಧಿ ಯೋಜನಾ ಘಟಕಗಳು, ಎರಡು ಪ್ರಧಾನ ಗ್ರಾಮೀಣ ಯೋಜನೆಗಳು ಮತ್ತು 15 ಪ್ರಧಾನ ಗ್ರಾಮೀಣ ಯೋಜನೆಯ ಉಪಕೇಂದ್ರಗಳು ಸೇರಿದಂತೆ ಜಿಲ್ಲೆಯಾದ್ಯಂತ 204 ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ.

ಈ ವಲಯದಲ್ಲಿ ಹಳ್ಳಿಕಾರ್ ತಳಿ ಪ್ರಸಿದ್ಧವಾಗಿದೆ. ಇದು ವ್ಯವಸಾಯಕ್ಕೆ ಯೋಗ್ಯವಾದ ತಳಿ. ಎತ್ತರವಾಗಿ, ಸದೃಢವಾಗಿ ಬೆಳೆಯುವ ಈ ತಳಿ, ನೇರವಾದ ನೀಳವಾಗಿರುವ ಕೊಂಬುಗಳನ್ನು ಹೊಂದಿರುತ್ತದೆ. ಬಣ್ಣ ಅಥವಾ ಬೂದಿ, ಕತ್ತಿನ ಕೆಳಭಾಗ ಹಾಗೂ ಕಣ್ಣಿನ ಸುತ್ತ ಅಲ್ಲಲ್ಲಿ ಹರಡಿರುವ ಬಿಳಿಯ ಮಚ್ಚೆಗಳು, ಎತ್ತರವಾದ ಆಕರ್ಷಣೆಯ ಗೋಪುರ, ಬಲಯುತವಾದ ತೊಡೆಗಳು, ಉದ್ದನೆಯ ಬಾಲ ಈ ತಳಿಯ ಪ್ರಮುಖ ಲಕ್ಷಣಗಳು. ಇವು ಬೆದೆಗೆ ಬರುವುದು ತುಂಬ ತಡ. ಕರುಗಳನ್ನು ಹಾಕುವ ಅಂತರವೂ ಹೆಚ್ಚು. ಹಾಲು ಕಡಿಮೆ ಕೊಟ್ಟರೂ ವ್ಯವಸಾಯಕ್ಕೆ ಯೋಗ್ಯ. ಗಂಡು - ಕರುಗಳನ್ನು ಬೆಳೆಸಿ ವ್ಯವಸಾಯಕ್ಕೆ ಉಪಯೋಗಿಸಿದರೆ, ಹೆಣ್ಣು ಕರುಗಳು ಬೆಳೆದ ಮೇಲೆ ಸಂತಾನ ಅಭಿವೃದ್ಧಿಗೆ ಸಹಾಯವಾಗುತ್ತದೆ.

ಕುರಿ (ಸಾಕಾಣಿಕೆ) : 'ಕುರಿಯಿದ್ದವನು ಕುಬೇರ' ಎಂಬ ಗಾದೆಯಂತೆ ಕುರಿ ಸಾಕಾಣಿಕೆಯಿಂದ ಹೆಚ್ಚು ಲಾಭವಿದೆ. ಜಿಲ್ಲೆಯಲ್ಲಿ ಮಾಂಸ ಮತ್ತು ಉಣ್ಣೆಗೆ ಹೆಚ್ಚು ಬೇಡಿಕೆಯಿರುವುದರಿಂದ ಕುರಿಗಳನ್ನು ಹೆಚ್ಚಾಗಿ ಸಾಕಾಣಿಕೆ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ 2001 ರ ಗಣತಿಯಂತೆ 7,25,182 ಕುರಿಗಳಿದ್ದವು. ಕುರಿಗೊಬ್ಬರವೂ ಉತ್ತಮ ಗೊಬ್ಬರವಾದುದರಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಸಾಕುತ್ತಿದ್ದರು. ಇತ್ತೀಚೆಗೆ ಗೋಮಾಳಗಳು ಕಡಿಮೆಯಾಗುತ್ತಿರುವುದರಿಂದ ಕುರಿಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಬೇಸಗೆಯಲ್ಲಿ ಮೇವಿರುವ ಕಡೆ ವಲಸೆ ಕುರಿಗಳು ಬರುವುದು ಹೆಚ್ಚು. ಇದರಿಂದಾಗಿ ಕುರಿಗಳಿಗೆ ಹಸುರು ಮೇವು ಸಿಕ್ಕರೆ ಗದ್ದೆಗಳಿಗೆ ಹೆಚ್ಚು ಗೊಬ್ಬರವೂ ದೊರೆಯುತ್ತದೆ.

ಹುಲ್ಲು ಬಯಲು ಮತ್ತು ಗೋವಾಳಗಳ ಸಂಖ್ಯೆ ಕಡಿಮೆಯಾಗುತ್ತಿದ್ದರೂ ಕೃಷಿ ಭೂಮಿಯಲ್ಲೇ ಸುಧಾರಿತ ಹುಲ್ಲು ಬೆಳೆದು ಕುರಿಗಳನ್ನು ಸಾಕಬಹುದು. ಇದಕ್ಕಾಗಿ ಮಿಶ್ರಿತಳಿಯ ಬೀಜದ ಟಗರುಗಳನ್ನು ಒದಗಿಸಲಾಗುತ್ತಿದೆ.

ಮೇಕೆಗಳಿಗೆ ಗಿಡಮರಗಳ ಎಲೆಯೇ ಮುಖ್ಯ ಆಹಾರ. ಹಾಗಾಗಿ ಕಾಡಿರುವ ಪ್ರದೇಶಗಳಲ್ಲಿ ಮೇಕೆಗಳನ್ನು ಸಾಕಬಹುದು. ಮೇಕೆಗಳಿಗೆ ರೋಗನಿರೋಧಕ ಶಕ್ತಿ ಹೆಚ್ಚಿದ್ದು. ಎಲ್ಲಾ ವಾತಾವರಣಗಳಲ್ಲಿಯೂ ಸಾಕಾಣಿಕೆ ಸುಲಭ. ಕೋಲಾರದಲ್ಲಿ ಕುರಿ ಪೋಷಕರ ಸಂಘವಿದ್ದು ಸುಧಾರಿತ ತಳಿಯ ಕುರಿಮರಿಗಳನ್ನು ರೈತರಿಗೆ ವಿತರಿಸಲಾಗುತ್ತಿದೆ.

ಹಂದಿ ಸಾಕಾಣಿಕೆ : ಇತ್ತೀಚೆಗೆ ಹಂದಿ ಸಾಕಾಣಿಕೆಯೂ ರೈತರಿಗೆ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾದ ಲಾಭದಾಯಕ ಕೃಷಿಯಾಗಿ ಕಂಡು ಬರುತ್ತಿದೆ. ವೈಜ್ಞಾನಿಕ ರೀತಿಯಲ್ಲಿ ಹಂದಿ ಸಾಕಾಣಿಕೆಯನ್ನು ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ವಿದ್ಯಾವಂತ ನಿರುದ್ಯೋಗಿಗಳೂ ಮುಂದೆ ಬರುತ್ತಿದ್ದಾರೆ.

ಮೊಲ ಸಾಕಾಣಿಕೆ : ಮೊಲ ಸಾಕಾಣಿಕೆಯೂ ರೈತರಿಗೆ ಉತ್ತಮ ಲಾಭದಾಯಕ ಕೃಷಿಯಾಗಿದೆ. ಮಾಂಸ ಮತ್ತು ಉಣ್ಣೆಗಾಗಿ ಮೊಲ ಸಾಕಾಣಿಕೆಯನ್ನು ಇತ್ತೀಚೆಗೆ ರೈತರು ಕೈಗೊಳ್ಳುತ್ತಿದ್ದಾರೆ. ಮೊಲ ಸಾಕಾಣಿಕೆ ವಿಧಾನವನ್ನು ಕುರಿತು ತರಬೇತಿಯನ್ನು ಕೆಲವು ಪ್ರಯೋಗ ಶಾಲೆಗಳಲ್ಲಿ ನೀಡಲಾಗುತ್ತದೆ. ಜಿಲ್ಲಾ ಪರಿಷತ್‌ವತಿಯಿಂದ ಮೊಲದ ಮರಿಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ.

ಕೋಳಿ ಸಾಕಾಣಿಕೆ : ರೈತರಿಗೆ ಕೋಳಿ ಸಾಕಾಣಿಕೆ ಮೊದಲಿಂದಲೂ ಪರಿಚಯವಿದೆ. ಇತ್ತೀಚೆಗೆ ಕುಕ್ಕುಟ ಅಭಿವೃದ್ಧಿಯ ಕಾರ್ಯ ಚಟುವಟಿಕೆಗಳಲ್ಲಿ ಪ್ರಮುಖವಾಗಿ 1. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಿಂದ ಪಡೆದ ಗಿರಿರಾಜ ಮಾತೃ ಕೋಳಿಗಳನ್ನು ವೈಜ್ಞಾನಿಕ ರೀತಿ ಸಾಕಾಣಿಕೆ ಮತ್ತು ಸಂವರ್ಧಿಸುವುದು, 2. ಕೋಳಿ ಮರಿಗಳನ್ನು ಉತ್ಪಾದಿಸಿ ರೈತರಿಗೆ ಮತ್ತು ಇಲಾಖೆಯ ಸಾಕಾಣಿಕೆ ಕ್ಷೇತ್ರಗಳಿಗೆ ಸರಬರಾಜು ಮಾಡುವುದು, 3. ಗಿರಿರಾಜ ಮರಿಗಳನ್ನು ಎಂಟು ವಾರಗಳವರೆಗೆ ಸಾಕಿ ವಿವಿಧ - ಆರ್ಥಿಕ - ಸಾಮಾಜಿಕ ಯೋಜನೆಯಡಿ ಸಾಕಲು ರೈತರಿಗೆ ನೀಡುವುದು, 4. ಆಸಕ್ತ ರೈತರಿಗೆ ಆಧುನಿಕ ಮೊಟ್ಟೆ ಕೋಳಿ ಸಾಕಾಣಿಕೆ ಮತ್ತು ಮಾಂಸದ ಕೋಳಿಗಳ ಸಾಕಾಣಿಕೆ ಬಗ್ಗೆ ತರಬೇತಿ ನೀಡುವುದು, 5. ಖಾಸಗೀ ಮತ್ತು ಸರ್ಕಾರಿ ಸ್ವಾಮ್ಯದಲ್ಲಿ ಉತ್ಪಾದಿಸಲಾಗುತ್ತಿರುವ ಜಾನುವಾರು ಮತ್ತು ಕುಕ್ಕುಟ ಆಹಾರದ ಗುಣ ಮಟ್ಟವನ್ನು ಕಾಪಾಡಿಕೊಂಡು ಹೋಗಲು ನಿಗಾ ನೀಡುವುದು ಮುಖ್ಯವಾಗಿದೆ.

ಭೂ ಉಪಯೋಗ : ಕೋಲಾರ ಜಿಲ್ಲೆಯಲ್ಲಿ 1955-56 ರಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣವು ಮೋಜಣಿದಾರರುಗಳ ಪರಿಶೀಲನೆಯ ಮೇರೆಗೆ 8.20 ಲಕ್ಷ ಹೆಕ್ಟೇರುಗಳಾಗಿದ್ದು, ಗ್ರಾಮ ಮೇರೆಗೆ 7.31 ಲಕ್ಷ ಹೆಕ್ಟೇರುಗಳಾಗಿತ್ತು. 1983-84 ರಲ್ಲಿ ಗ್ರಾಮ ದಾಖಲೆಗಳ ಮೇರೆಗೆ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು 7.8 ಲಕ್ಷ ಹೆಕ್ಟೇರುಗಳಾಗಿತ್ತು. 2000-01ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ಗ್ರಾಮ ದಾಖಲೆಗಳ ಮೇರೆಗೆ 7,79,467 ಹೆಕ್ಟೇರುಗಳಾಗಿದ್ದು ಅದರಲ್ಲಿ 3,62,593 ಹೆಕ್ಟೇರು ಪ್ರದೇಶವು ನಿವ್ವಳ ಬಿತ್ತನೆ ಪ್ರದೇಶವಾಗಿದೆ. ಪ್ರಸ್ತುತ ಜಿಲ್ಲೆಯ ರೈತರು (ಸಿಲ್ಕ್ ಮತ್ತು ಮಿಲ್ಕ್) ರೇಷ್ಮೆ ಮತ್ತು ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು ಕೃಷಿಯ ಉಪಉತ್ಪನ್ನಗಳಿಂದ ಆರ್ಥಿಕವಾಗಿ ತಕ್ಕಮಟ್ಟಿಗೆ ಸುಧಾರಿಸಿದ್ದಾರೆ.

ಗ್ರಂಥಋಣ :

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಕೋಲಾರ ಜಿಲ್ಲೆ, ಸಂ. ಚಿತ್ತರಂಜನ್, 2005

ಕೋಲಾರ ಜಿಲ್ಲೆಯ ಅಂಕಿ ಅಂಶಗಳ ನೋಟ 2011-2012

ಜಯನಗರದ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ 2010 ಬಿ. ವೆಂಕಟರಾಮಣ್ಣ.

ವಿ. ಆರ್. ಬಿ.

ಕೋಶಾವೃತ ಬೀಜ ಸಸ್ಯಗಳು ಈ ಸಸ್ಯಗಳ ಬೀಜಗಳು ಹಣ್ಣಿನ ಒಳಗೆ ರಕ್ಷಣೆ ಪಡೆದಿರುತ್ತವೆ. ಇದು ಆಂಜಿಯೋಸ್ಪರ್ಮ ಎಂಬ ಗ್ರೀಕ್ ಪದದಿಂದ ಬಂದಿದ್ದು ಆಂಜಿಯಾನ್ ಎಂದರೆ ಕೋಶ, ಸ್ಪರ್ಮ ಎಂದರೆ ಬೀಜ ಎಂದರ್ಥ. ಬೀಜಗಳನ್ನು ಮೂಲತಃ ಎರಡು ಗುಂಪುಗಳಾಗಿ ವಿಂಗಡಿಸಿದವನು ಪಾಲ್ ಹರ್ಮಾನ್. ಪ್ರಪಂಚದ ಅಧಿಕ ಭೂಭಾಗವನ್ನು ಆವರಿಸುವಂಥವು ಆವೃತ ಬೀಜ ಸಸ್ಯಗಳೇ. ಮಾನವನ ಮೂಲ ಅಗತ್ಯಗಳಾದ ಆಹಾರ, ಬಟ್ಟೆ, ವಸತಿ ಸಕಲವೂ ಸಮೃದ್ಧಿಯಾಗಿ ಸಿಗುವುದು ಈ ಸಸ್ಯವರ್ಗದಿಂದಲೇ. ಅಷ್ಟೇ ಅಲ್ಲ ಸಕಲ ಜೀವರಾಶಿಗಳ ಉಸಿರಾಟಕ್ಕೆ ಅತ್ಯಗತ್ಯವಾಗಿ ಬೇಕಾದ ಆಕ್ಸಿಜನ್ ಇವುಗಳಿಂದ ಬಿಡುಗಡೆಯಾಗುತ್ತವೆ. ಉದಾ : ಬತ್ತ, ರಾಗಿ, ಗೋಧಿ, ಜೋಳ, ಬಾರ್ಲಿ, ದ್ವಿದಳ ಧಾನ್ಯಗಳು ಮತ್ತು ಅನೇಕ ಹಣ್ಣುಗಳು; ನಾರು, ಹತ್ತಿ, ಅಗಸೆ, ಸೆಣಬು ಇತ್ಯಾದಿ ಬಟ್ಟೆ ಮತ್ತು ಹುರಿ ತಯಾರಿಕೆಯ ಸಸ್ಯಗಳು; ಟೀ, ಕಾಫಿ ಮೊದಲಾದವು; ಹೊಗೆಸೊಪ್ಪು, ರಬ್ಬರ್, ಬಿದಿರು, ಕಬ್ಬು ಇತ್ಯಾದಿ ಮರಗಳು ; ಅನೇಕ ಔಷಧೀಯ ಸಸ್ಯಗಳು ಈ ವರ್ಗದವೇ ಆಗಿವೆ.

ಆವೃತ ಬೀಜ ಸಸ್ಯಗಳಲ್ಲಿ ಸು. 350 ಕುಟುಂಬಗಳು, 2,50,000 ಪ್ರಭೇದಗಳೂ ಇವೆ. ಇತ್ತೀಚೆಗೆ ಕೃತಕವಾಗಿ ಅನೇಕ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕೋಶಾವೃತ ಬೀಜಗಳಲ್ಲಿ ಅನೇಕ ಬಗೆಯಿದ್ದು ವಿವಿಧ ಮಣ್ಣು ವಾಯುಗುಣಗಳಿಗನುಗುಣವಾಗಿ ಹೊಂದಿಕೊಳ್ಳುವ ಗುಣ

ಇವಕ್ಕಿರುವುದರಿಂದಲೇ ಹೆಚ್ಚು ಭೂಪ್ರದೇಶವನ್ನು ವ್ಯಾಪಿಸಿವೆ. ಇದಕ್ಕೆ ಕಾರಣ ಹೂ, ಹಣ್ಣು ಮತ್ತು ಬೀಜ ರಚನೆ. ಆರಂಭದಲ್ಲಿ ಇವುಗಳ ಪ್ರಸಾರ ಗಾಳಿ, ನೀರು ಮತ್ತು ಪ್ರಾಣಿಗಳಿಂದಲೇ ನಡೆಯುತ್ತಿತ್ತು.

ಬೆಟ್ಟ ಗುಡ್ಡ ಇಳಿಜಾರು, ಬಯಲು ಪ್ರದೇಶ, ಕೃಷಿಗೆ ಯೋಗ್ಯವಲ್ಲದ ಭೂಮಿಗಳಲ್ಲಿ ಇವು ಸಮೃದ್ಧವಾಗಿ ಬೆಳೆದು ದಟ್ಟ ಅರಣ್ಯಗಳು ಉದಯಿಸಲು ಸ್ವಾಭಾವಿಕ ಬೀಜಪ್ರಸಾರವೇ ಕಾರಣ. ಈ ಬೀಜಗಳಿಂದ ಕೇವಲ ಮಣ್ಣಿನ ಮೇಲಷ್ಟೇ ಅಲ್ಲ ನೀರಿನ ಮೇಲೂ ಅಲ್ಪ ಪ್ರಮಾಣದಲ್ಲಿ ಸಸ್ಯಗಳು ಬೆಳೆಯುವುದುಂಟು. ಕೋಶಾವೃತ ಬೀಜದ ಸಸ್ಯಗಳು ಅರ್ಧ ಅಂಗುಲದಿಂದ ಹಿಡಿದು 300 ಅಡಿಗಳವರೆಗೆ ಬೆಳೆಯುವಂಥವು. ಇವುಗಳ ಪೈಕಿ ಕೆಲವು ಕಡಿಮೆ ಅವಧಿ ಜಾತಿಯವಾದರೆ ಇನ್ನು ಕೆಲವು ಶತಮಾನಗಳ ಕಾಲ ಉಳಿಯುವಂಥವೂ ಇವೆ. ಕೆಲವು ಪ್ರಭೇದಗಳು ಹೆಚ್ಚು ಮಳೆ ಬೀಳುವ ಕನಿಷ್ಠ ಪ್ರಮಾಣ ಮಳೆ ಬೀಳುವ, ಹಿಮದಿಂದ ಕೂಡಿದ ಪ್ರದೇಶಗಳಲ್ಲೂ ಬೆಳೆಯುವವು. ಆವೃತಬೀಜ ಸಸ್ಯಗಳನ್ನು ಪ್ರಧಾನವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು : 1. ಸ್ವಾವಲಂಬಿ 2. ಪರಾವಲಂಬಿ ಮೊದಲನೆಯ ಬಗೆಯ ಸಸ್ಯಗಳು ಆಳವಾಗಿ ಬೇರು ಬಿಟ್ಟು ಸ್ವಯಂ ಆಹಾರ ತಯಾರಿಸಿಕೊಂಡು ದೃಢವಾಗಿ ಬೆಳೆಯುತ್ತವೆ. ಎರಡನೆಯ ಬಗೆಯ ಸಸ್ಯಗಳು ಬೇರೆ ಸದೃಢ ಸಸ್ಯಗಳ ಆಹಾರ, ನೀರು ಪಡೆದು ಬೆಳೆಯುತ್ತವೆ. ಹಾಗಾಗಿ ಇವು ಪೋಷಕ ಸಸ್ಯಗಳಿಗೆ ಮಾರಕ. ಅಪವಾದವೆಂಬಂತೆ ಕೆಲವು ಆಶ್ರಯವನ್ನಷ್ಟೇ ಪಡೆಯುತ್ತವೆಯೇ ಹೊರತು ಆಹಾರವನ್ನು ನಿರೀಕ್ಷಿಸುವುದಿಲ್ಲ.

ಕೊಳೆತ ಜೈವಿಕ ಪದಾರ್ಥಗಳಿಂದ ಆಹಾರ ಸ್ವೀಕರಿಸಿ ಹಲವು ಪೂತಿಜನ್ಯ ಸಸ್ಯಗಳು ಬೆಳೆಯಬಲ್ಲವು. ಇವುಗಳಲ್ಲಿ ಕೆಲವೊಂದು ವಿಶೇಷ ಬಗೆಯ, ಕುತೂಹಲ ಉಂಟು ಮಾಡುವ ಸಸ್ಯಗಳೂ ಇವೆ. ಅವು ಸಣ್ಣಪುಟ್ಟ ಕ್ರಿಮಿಕೀಟಗಳನ್ನು ಕಬಳಿಸಿ, ಜೀರ್ಣಿಸಿಕೊಂಡು ಜೀವಿಸುತ್ತವೆ.

ಸಸ್ಯಗಳ ಸ್ವರೂಪ : ಇವು ದೃಢವಾದ ತಾಯಿಬೇರನ್ನೂ ಅಸಂಖ್ಯಾತ ಸಹಾಯಕ ಬೇರುಗಳನ್ನೂ ಕಾಂಡ ಮತ್ತು ಕೆಲವು ಕೊಂಬೆಗಳನ್ನೂ ಅಸಂಖ್ಯಾತ ಕವಲುಗಳನ್ನೂ ಹೊಂದಿರುತ್ತವೆ. ಕಾಂಡ ದಪ್ಪವಾದಂತೆ ಒಳವೃತ್ತಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇವು ಮರದ ಆಯಸ್ಸನ್ನು ತಿಳಿಸುತ್ತವೆಂಬ ಅಭಿಪ್ರಾಯವಿದೆ. ಎಲೆಗಳು ಅಗಲವಾಗಿದ್ದು, ಸೂರ್ಯನ ಕಿರಣಗಳು ಮರದ ಮೇಲೆ ಬೀಳುವಂತೆ ಜೋಡಣೆಗೊಂಡು ನಾಳಜಾಲದಿಂದ ಕೂಡಿರುತ್ತವೆ.

ಬೀಜೋತ್ಪತ್ತಿ : ಹೂಗಳಿಂದ ಬೀಜೋತ್ಪತ್ತಿಯಾಗಿ, ಬೀಜ ಮೊಳೆತು ಸಸಿಯಾಗಿ ಕ್ರಮೇಣ ಕಾಂಡ, ಎಲೆಗಳನ್ನು ಪಡೆದು ವಿವಿಧ ಆಕಾರ ಮತ್ತು ಬಣ್ಣ ತಳೆದು ಮರವಾಗುತ್ತದೆ. ಹೂವಿನಲ್ಲಿ ಹಸುರು ಬಣ್ಣದ ಪುಷ್ಪಪತ್ರದ ಹೊರಮಂಡಲ ಹಾಗೂ ವಿವಿಧ ಬಣ್ಣಗಳ ದಳಗಳು ಜೋಡಿಸಿದಂತಿರುತ್ತವೆ. ಈ ಪುಷ್ಪಪತ್ರದ ದಳಗಳು ಕೇಸರಿ ಮತ್ತು ಅಂಡಾಶಯಗಳನ್ನು ಎಲ್ಲ ವಿಧದ ಉಪದ್ರವಗಳಿಂದಲೂ ರಕ್ಷಿಸುತ್ತವೆ. ದಳಗಳು ಪರಿಮಳಯುಕ್ತವೂ ವರ್ಣಮಯವೂ ಆಗಿರುವುದರಿಂದ ಕ್ರಿಮಿಕೀಟಗಳನ್ನು ಆಕರ್ಷಿಸಿ ಪರಾಗಸ್ಪರ್ಶದ ಮೂಲಕ ವಂಶಾಭಿವೃದ್ಧಿಗೆ ಸಹಾಯಕವಾಗಿವೆ.

ಬೀಜದ ಸಿಪ್ಪೆ ಒಳಭಾಗಗಳನ್ನು ರಕ್ಷಿಸಬೇಕಾಗಿರುವುದರಿಂದ ಮೇಲ್ಪದರ ದಪ್ಪವಾಗಿಯೂ ಒಳಪದರ ತೆಳುವಾಗಿಯೂ ಇರುತ್ತದೆ. ಭ್ರೂಣ ಶಲಾಕೆ ಆಕಾರ ಹೊಂದಿದ್ದು, ಇದರಿಂದ ಬೇರು ಉದಿಸಿ, ಮೊಳಕೆ ಒಡೆದು ಎರಡು ಎಲೆಗಳುಳ್ಳ ಕಾಂಡ ಕಾಣಿಸಿಕೊಳ್ಳುತ್ತದೆ. ಭ್ರೂಣದಲ್ಲಿ ಆಹಾರ ಸಂಗ್ರಹಣೆಯ ಶಕ್ತಿ ಕೆಲವು ಸಸ್ಯಗಳಿಗೆ ಮಾತ್ರ ಇದ್ದು ಭ್ರೂಣ ಸಣ್ಣಗಿರುತ್ತದೆ. ಅಂಥವುಗಳಲ್ಲಿ ಅಂಕುರ ದಳಗಳೇ ಭ್ರೂಣವಾಗಿ ಬೆಳೆಯುತ್ತವೆ. ಉದಾ : ಹುರುಳಿ, ಅವರೆ ಇತ್ಯಾದಿ.

ಸಸ್ಯ ಜಗತ್ತು ಪ್ರಮುಖವಾಗಿ ಎರಡುರೀತಿಯ ಸಂತಾನಾಭಿವೃದ್ಧಿ ಕ್ರಮವನ್ನು ಹೊಂದಿದೆ. ಒಂದುಕೋಶ ಸಹಿತವಾದರೆ ಮತ್ತೊಂದು ನಗ್ನಬೀಜ. ಹಣ್ಣಿನ ಒಳಗೆ ಅಥವಾ ಸಿಪ್ಪೆಯ ಒಳಗೆ ಇರುವುದನ್ನು ಕೋಶ ಬೀಜವೆಂದೂ ಹಣ್ಣಿನ ಹೊರಭಾಗದಲ್ಲಿರುವುದನ್ನು ನಗ್ನಬೀಜವೆಂದೂ ಕರೆಯುವರು. ಜಗತ್ತಿನ ಎಲ್ಲ ಸಸ್ಯಗಳಿಗೂ ಈ ಬೀಜಗಳೇ ಆಧಾರ. ಹಾಗಾಗಿ ಕೃಷಿಗೆ ಮೂಲವೇ ಬೀಜ ಎಂಬುದು ಶತಸ್ಸಿದ್ಧ.

ಎಂ. ಆರ್.

ಕೋಳಿ ಸಾಕಾಣಿಕೆ 'ಕೋಳಿ' ಮೂಲತಃ ದೇಸಿ ಪದ. ಸಂಸ್ಕೃತದಲ್ಲಿ ಕುಕ್ಕುಟ ಎಂದೂ ತಮಿಳಿನಲ್ಲಿ ಕೋಟಿ ಎಂದೂ ಮಲಯಾಳಂನಲ್ಲಿ ಕೋಟಿ ಎಂದೂ ತೆಲುಗಿನಲ್ಲಿ ಕೋಡಿ ಎಂದೂ ಕರೆಯುತ್ತಾರೆ. ಆಧುನಿಕತೆ ಬೆಳೆದಂತೆ ತಳಿಗಳು ಬರಲಾರಂಭಿಸಿದವು. ದೇಸಿ ಪದಕ್ಕೆ 'ನಾಟಿ' ಸೇರಿ 'ನಾಟಿ ಕೋಳಿ' ಆಯಿತು. ಕೋಳಿಯ ವೈಜ್ಞಾನಿಕ ಹೆಸರು- ಗ್ಯಾಲಸ್. ಗ್ಯಾಲಸ್ ಎಂಬ ಕಾಡುಕೋಳಿಯಿಂದ ಬಂದುದಾಗಿದೆ. ವರ್ಗ-ಏವಿಸ್, ಗಣ-ಗ್ಯಾಲಿಫಾರ್ಮಿಸ್. ಎಲ್ಲಾ ತಳಿಗಳ ಒಟ್ಟು ಕುಟುಂಬಕ್ಕೆ 'ಫೇನಿಯಾನಿಡೆ' ಎಂದು ಕರೆಯುವರು.



ಕೋಳಿಗಳ ದೈಹಿಕ ಲಕ್ಷಣಗಳು ಎಲ್ಲಾ ಪಕ್ಷಿ ಜಾತಿಗಳಿಗಿಂತಲೂ ಭಿನ್ನವಾಗಿವೆ. ನಸುಬಾಗಿದ ಚಿಕ್ಕದಾದ ಮತ್ತು ಸದೃಢವಾದ ಕೊಕ್ಕನ್ನು ಹೊಂದಿದ್ದು ಆಹಾರವನ್ನು ಹೆಕ್ಕುವಲ್ಲಿ ತುಂಬಾ ಸಹಾಯಕವಾಗಿದೆ. ಕೋಳಿಗೆ ನಾಲ್ಕು ಬೆರಳುಗಳುಳ್ಳ ಎರಡು ಪಾದಗಳು. ಪಾದ ಒಂದರಲ್ಲಿ ಮೂರು ಬೆರಳುಗಳ ಹಿಂದೆ ಒಂದು ದಪ್ಪ ಬೆರಳು ಇರುವುದು ಕಂಡುಬರುತ್ತದೆ. ಪಾದಗಳ ಮೇಲೆ ಪುಕ್ಕಗಳಿಲ್ಲ. ಚಿಕ್ಕ ರೆಕ್ಕೆಗಳಿದ್ದರು ಹಾರಲಾಗುವುದಿಲ್ಲ. ಕೋಳಿಯಲ್ಲಿ ಎರಡು ಜಾತಿಗಳಿವೆ. ಹೆಣ್ಣು ಕೋಳಿಗಳಿಗೆ ಹೇಂಟೆ, ಹ್ಯಾಟೆ ಎಂದೂ ಗಂಡುಕೋಳಿಗೆ ಹುಂಜ ಎಂದು ಕರೆಯಲಾಗುವುದು. ಹ್ಯಾಟೆಗೆ ಜುಟ್ಟು ಮೂಗಿನಿಂದ ನೆತ್ತಿಯವರೆಗೆ ಸಣ್ಣದಾಗಿದ್ದರೆ ಹುಂಜಕ್ಕೆ ದೊಡ್ಡದಾದ (ಶಿಖೆ) ಜುಟ್ಟು ಇರುತ್ತದೆ.

ಎರಡಕ್ಕೂ ಮೂಗಿನ ಹೊಳ್ಳೆಯ ಮೇಲೆ ಪುಕ್ಕಗಳಿರುವುದಿಲ್ಲ. ಹ್ಯಾಟೆಗೆ ಬಾಲದ ಪುಕ್ಕಗಳು ಅಷ್ಟಾಗಿ ಉದ್ದವಿರುವುದಿಲ್ಲ. ಉದ್ದ ಪುಕ್ಕಗಳೇ ಬಾಲದಂತಿರುತ್ತವೆ.

ಕೋಳಿ ನೆಲದ ಮೇಲೆ ಮಾತ್ರ ವಾಸ ಮಾಡುವ ಪಕ್ಷಿ. ಗೂಡನ್ನು ಕಟ್ಟುವ ಕಲೆ ಇದಕ್ಕೆ ತಿಳಿಯದು. ಪೊದೆಯಲ್ಲಿ ಬದುಕುವ ಸಾಮರ್ಥ್ಯ ಇದಕ್ಕಿದೆ. ಈ ಲಕ್ಷಣವನ್ನು ಅರಿತ ಮನುಷ್ಯ ಇದಕ್ಕಾಗಿಯೇ ಗೂಡುಗಳನ್ನು ನಿರ್ಮಿಸಲು ಕಲಿತ. ಕೋಳಿಗಳಿಗೆ ಹೆಚ್ಚು ಹಾರುವ ಸಾಮರ್ಥ್ಯವಿಲ್ಲ, ಓಡುವ ಸಾಮರ್ಥ್ಯವಿದೆ. ರೆಕ್ಕೆಗಳನ್ನು ವೇಗವಾಗಿ ಬಡಿಯುತ್ತ ಒಂದು ರೀತಿಯಲ್ಲಿ ಕುಪ್ಪಳಿಸುತ್ತ ಸಾಗಬಲ್ಲದು. ಹ್ಯಾಟೆ ದಿನಕ್ಕೊಂದರಂತೆ ಸುಮಾರು 20-30 ಮೊಟ್ಟೆಗಳನ್ನು ಇಡುತ್ತದೆ. 3-4 ತಿಂಗಳು ಕಳೆದ ಮೇಲೆ ಮತ್ತೆ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. ಮರಿಗಳನ್ನು ಸಾಕುವ ಜವಾಬ್ದಾರಿ ಹ್ಯಾಟೆಗೆ ಸೇರಿದ್ದು.

ಕೋಳಿಯ ಆಹಾರಗಳು : ನಾಟಿ ಕೋಳಿಗಳಿಗೆ ವಿಶೇಷವಾದ ಆಹಾರಗಳಿಲ್ಲ. ಮನೆಯಲ್ಲಿಯೇ ಬಳಸುವ ರಾಗಿ, ಬತ್ತ, ಗೋಧಿ ಮುಂತಾದ ದವಸ ಧಾನ್ಯಗಳನ್ನು ಹಾಕುತ್ತಾರೆ. ಬತ್ತದ ತೌಡನ್ನು ನುಚ್ಚನ್ನು ಆಹಾರವಾಗಿ ಹಾಕುತ್ತಾರೆ. ಅನ್ನದ ಅಗುಳು, ರಾಗಿ ಮುದ್ದೆ, ಸೀಗಡಿ, ಕರಿಮೀನು ಪುಡಿಗಳನ್ನು ಬಳಸುತ್ತಾರೆ. ಮಿಕ್ಕಂತೆ ಕೋಳಿಗಳಿಗೆ ಬೀದಿಯೇ ಆಹಾರದ ಉಗ್ರಾಣ.

ಕೋಳಿಗಳ ಪ್ರಧಾನ ಆಹಾರ : ಕಾಳುಗಳು, ಹುಳು-ಹುಪ್ಪಟೆಗಳು. ಸಾಕಾಣಿಕೆ ಕೇಂದ್ರಗಳಲ್ಲಿ ಇವುಗಳ ಆಹಾರ ಬದಲಾಗುತ್ತದೆ. ಮುಖ್ಯವಾಗಿ ಅಕ್ಕಿ ತೌಡು, ಬೂಸ, ಕಡಲೆಕಾಯಿ ಹಿಂಡಿಪುಡಿ, ಮೀನಿನ ಪುಡಿ, ಗೋವಿನ ಜೋಳ, ಉಗ್ರಾಣ ಮತ್ತು ಹಿಟ್ಟಿನ ಗಿರಣಿಗಳಲ್ಲಿ ದೊರೆಯುವ ನಿರಪಯುಕ್ತ ಕಾಳು ಮತ್ತು ಹಿಟ್ಟು, ಲವಣಸತ್ವ ಮತ್ತು ವಿಟಮಿನ್‌ಗಳನ್ನು ಬೆರಕೆ ಮಾಡಿ ತಯಾರಿಸಿದ ಸಮತೂಕದ ಆಹಾರವನ್ನು ಕೋಳಿಗಳಿಗೆ ನೀಡುತ್ತಾರೆ.

ತಳಿಗಳು : ಕೋಳಿ ಸಾಕಾಣಿಕೆ ಈಗ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಅದರಂತೆ ಕೋಳಿಗಳ ಹೊಸ ಹೊಸ ತಳಿಗಳು ಕೂಡ ಕಾಣಸಿಗುತ್ತವೆ. ಈ ತಳಿಗಳನ್ನು ಲಾಭದ ಉದ್ದೇಶದಿಂದ ಎರಡು ವಿಧಗಳಾಗಿ ವಿಂಗಡಿಸಬಹುದು.

1) ಅತಿ ಹೆಚ್ಚು ಮೊಟ್ಟೆ ಕೊಡುವ ಕೋಳಿಗಳು

2) ಮಾಂಸದ ಕೋಳಿಗಳು

1) ಅತಿ ಹೆಚ್ಚು ಮೊಟ್ಟೆ ಕೊಡುವ ಕೋಳಿಗಳ ತಳಿಗಳು : ಲೆಗ್‌ಹಾರ್ನ್, ಮಿನಾರ್ಕ್, ರೋಡ್ ಐಲೆಂಡ್ ರೆಡ್

2) ಮಾಂಸದ ಕೋಳಿಗಳು : ರಾಕ್, ವೈಯಾನೆಟ್, ಕಾರ್ನಿಕ್

ಕೋಳಿಗಳಿಗೆ ತಗಲುವ ರೋಗಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. 1) ಗಾಯಗಳು 2) ಭೇದಿ ರೋಗ 3) ಸಾಂಸರ್ಗಿಕ ರೋಗಗಳು

ಕಾಯಿಲೆಗಳು ಮತ್ತು ಮನೆ ಮದ್ದುಗಳು : ಹಳ್ಳಿಗಳಲ್ಲಿ ಕೋಳಿಗಳಿಗೆ ಬರುವ ಕಾಯಿಲೆ ಒಂದೇ ಆದರೂ ಅವುಗಳನ್ನು ನಿವಾರಿಸುವ ಕ್ರಮಗಳು ಬೇರೆಯೆ ಆಗಿವೆ.

ಕಣ್ಣು ಬೇನೆ : ಕೋಳಿಗಳಿಗೆ ಕಣ್ಣು ಬೇನೆ ಬಂದಾಗ ಕಾಲಲ್ಲಿ ಸಣ್ಣ ಸಣ್ಣ ಕಜ್ಜಿ ಆಗುತ್ತವೆ. ಇದನ್ನು ಸಿಡುಬಿನ ರೋಗ ಎಂತಲೂ ಕರೆಯುತ್ತಾರೆ. ಈ ರೋಗಕ್ಕೆ ಬೇವಿನ ಎಲೆಯ ರಸ ತೆಗೆದು ಅದಕ್ಕೆ ಅರಿಸಿನ ಪುಡಿ ಬೆರೆಸಿ ಕಣ್ಣಿನ ಸುತ್ತ ಹಚ್ಚುತ್ತಾರೆ.

ಗಂಟಲು ಬೇನೆ : ಕೋಳಿಯ ಕುತ್ತಿಗೆಯಲ್ಲಿ ಗೆಡ್ಡೆ ಕಾಣಿಸಿಕೊಳ್ಳುವುದು ಇದರ ಲಕ್ಷಣ. ಇದಕ್ಕೆ 'ಅಂಗಳು ಗಪ್ಪೆ', ಎಂತಲೂ ಅಮ್ಮಾರ್ ಬೀಸ್ಗೆ ಎಂತಲೂ ಕರೆಯುತ್ತಾರೆ. ಔಷಧಿಯಾಗಿ ಜೆಜ್ ಮೆಣಸಿನಕಾಯಿ (ಇದಕ್ಕೆ ಜಿರಿ ಮೆಣಸು, ಜೀರಿಗೆ ಮೆಣಸು, ಸಣ್ಣಮೆಣಸಿನ ಕಾಯಿ, ಚೋಟ್‌ಮೆಣಸಿನ ಕಾಯಿ, ಮೂಗ್ ಮೆಣಸಿನ ಕಾಯಿ ಎಂದು ವಿವಿಧ ಹೆಸರುಗಳಿವೆ) ಉಪ್ಪು ಇವುಗಳನ್ನು ಬೆರೆಸಿ ಅನ್ನಕ್ಕೆ ಕಲಸಿ, ಇಲ್ಲವೆ ನೇರವಾಗಿ ಕೋಳಿಗಳಿಗೆ ಕೊಡುತ್ತಾರೆ.

ಮುಖದಲ್ಲಿ ಕಜ್ಜಿ ಬಂದರೆ : ಅರಿಸಿನ ಪುಡಿ ಜೊತೆಗೆ ಉಗುರು ಬೆಚ್ಚಗೆ ಕಾಯಿಸಿದ ಕೊಬ್ಬರಿ ಎಣ್ಣೆಯನ್ನ ಸೇರಿಸಿ ಕಜ್ಜಿ ಬಂದ ಜಾಗದಲ್ಲಿ ಹಚ್ಚಲಾಗುತ್ತದೆ. ಈ ಕಾಯಿಲೆಗೆ ಮಂಗಳೂರಿನ ಕಡೆ 'ಪರಂಗಿ ಕಾಯಿಲೆ' ಎಂತಲೂ ಕರೆಯುತ್ತಾರೆ. ಮನೆ ಮದ್ದಾಗಿ ಜೇಡಿ ಮಣ್ಣನ್ನು ಹಚ್ಚುವುದು, ಇಲ್ಲವೆ ಪೈನಾಪಲ್/ಅನಾನಸ್ ಎಲೆಯ ರಸವನ್ನು ಕುಡಿಸುತ್ತಾರೆ.

ಕೋಳಿಗೆ ಜ್ವರ ಬಂದಾಗ : ಮಂಗಳೂರಿನ ಕಡೆ- ಈರುಳ್ಳಿ ರಸಕ್ಕೆ ಬೆಲ್ಲದ ರಸ ಹಾಕಿ ಕೋಳಿಗೆ ಕುಡಿಸುತ್ತಾರೆ. ಗುಲಬರ್ಗಾ ಕಡೆ ಬೆಳ್ಳುಳ್ಳಿ ರಸವನ್ನು ಕುಡಿಸುತ್ತಾರೆ.

ಕೋಳಿಗೆ ಹೇನು ಹತ್ತಿದಾಗ : ಸಾಮಾನ್ಯವಾಗಿ ಕೋಳಿ ಮರಿ ಮಾಡುವ ಸಂದರ್ಭದಲ್ಲಿ ಹೇನಿನ ಹಾವಳಿ ಜಾಸ್ತಿ. ಇದನ್ನು ತಪ್ಪಿಸುವುದಕ್ಕಾಗಿ ಕೆಲ ಮನೆ ಮದ್ದುಗಳು ಇವೆ.

1) ಕಾಡಿನಲ್ಲಿ ಸಿಗುವ ಇಜಿನಿ ಸೊಪ್ಪನ್ನು (ತುಳು ಭಾಷೆಯದ್ದು- ಪಲಾವ್‌ಗೆ ಬಳಸುವ ಎಲೆಯಂತಿರುವ) ಬಳಸುವುದು.
2) ಸಂಪಿಗೆ ಹೂವನ್ನು ಗೂಡಿನೊಳಗೆ ಹಾಕುವುದು.
3) ಕರಿಮೀನು ತೊಳೆದ ನೀರನ್ನು ಆಶ್ರಯ ತಾಣದಲ್ಲಿ ಸಿಂಪಡಿಸುವುದು.
4) ಗೂಡಿನೊಳಗೆ ಬಿಸಿಬೂದಿಯನ್ನು ಹರಡಲಾಗುತ್ತವೆ.
5) ಕೆರೆಗೆ ಕೋಳಿಗಳನ್ನು ಬಿಟ್ಟು ಈಜು ಹೊಡೆಸುವುದು.

ಹೀಗೆ ಹಳ್ಳಿಗಳಲ್ಲಿ ಕೋಳಿಗಳನ್ನ ಸಾಕುತ್ತಾರೆ, ಕಾಯಿಲೆ ಬಂದಾಗ ಮನೆ ಮದ್ದುಗಳನ್ನು ಕೊಟ್ಟು ಕೋಳಿಗಳನ್ನು ಉಳಿಸಿಕೊಳ್ಳುತ್ತಾರೆ.

1) ಗಾಯಗಳು : ಕೋಳಿಗಳು ಬಿರುಸಾದ ಭಾಗದಲ್ಲಿ ನಡೆದರೆ ಅಂಗಾಲುಗಳಿಗೆ ಗಾಯಗಳಾಗುತ್ತವೆ. ಇದರಿಂದ ಆಹಾರ, ನೀರು ತ್ಯಜಿಸಿ ನೋವಿನಿಂದ ಸೊರಗುತ್ತವೆ. ಕೋಳಿಯ ಎದೆ ಮೇಲೆ ಗಾಯಗಳಾಗದಂತೆ ಎಚ್ಚರ ವಹಿಸಬೇಕು. ಏಕೆಂದರೆ ಕೋಳಿ ನಿಶ್ಯಕ್ತವಾದಾಗ ತನ್ನ ಎದೆಯ ಮೇಲೆಯೆ ಕುಳಿತುಕೊಳ್ಳುವ ಅಭ್ಯಾಸ ಅವುಗಳಿಗೆ ಇರುವುದರಿಂದ ಗಾಯದ ತೀವ್ರ ಪರಿಣಾಮ ಅದರ ದೇಹಕ್ಕೂ ಆಗಿಬಿಡುವ ಸಾಧ್ಯತೆ ಹೆಚ್ಚು. ಈ ಪರಿಣಾಮವಾಗಿ ಕೋಳಿಗಳು ಸಾಯಬಹುದು. ಇಲ್ಲವೆ ದೈಹಿಕ ಸಮತೋಲನವನ್ನು ಕಳೆದುಕೊಳ್ಳಬಹುದು.

2) ಭೇದಿರೋಗ : ಕೋಳಿಯನ್ನು ಅತಿಯಾಗಿ ಕಾಡುವಂಥದ್ದು. ಏಕೆಂದರೆ ಕೋಳಿ ತೆಗೆದುಕೊಳ್ಳುವ ಆಹಾರದಲ್ಲಿ ವ್ಯತ್ಯಾಸವಾದರೆ ಅಥವಾ ವಿಷ ಆಹಾರ ಸೇರಿದರೆ ಜೀರ್ಣಾಂಗ ವ್ಯವಸ್ಥೆಯಲ್ಲಿ ರೋಗದ ಪರಿಣಾಮವನ್ನು ಕಾಣಬಹುದು.

ಕಾರಣಗಳು : ನೀರಿನಲ್ಲಿ ಲವಣಾಂಶ ಹೆಚ್ಚಾಗಿರುವುದು, ತಿಂಡಿಯಲ್ಲಿ ಕಾಕಾಂಬಿಯ ಭಾಗ ಹೆಚ್ಚಾಗಿರುವುದು, ಮೀನಿನ ಪುಡಿಯಲ್ಲಿ ಉಪ್ಪಿನಾಂಶ ಹೆಚ್ಚಾಗಿರುವುದು, ಕಲುಷಿತ ನೀರು ಸೇವನೆ, ಅನ್ನನಾಳಿಕೆಯ ರೋಗ, ಜಂತುಹುಳುಗಳ ಏರಿಕೆ.

3) ಸಾಂಸರ್ಗಿಕ ರೋಗಗಳು : ಸಾಂಸರ್ಗಿಕ ರೋಗಗಳೆಂದರೆ ನೈಸರ್ಗಿಕ ಬದಲಾವಣೆಯ ಪರಿಣಾಮಗಳಿಂದ ಬರುವ ರೋಗಗಳು. ಮತ್ತು ಬೇರೊಂದರ ಸಂಪರ್ಕ ಕೋಳಿಗಳಿಗೆ ಆದರೆ ಇಂಥ ರೋಗಗಳು ಬರುತ್ತವೆ. ಉದಾ :

1) **ರಾಣಿಖೇತ ಅಥವಾ ಕೊಕ್ಕರೆ ರೋಗ :** ಕೋಳಿಗಳಿಗೆ ಈ ರೋಗ ತಗುಲಲು ವಯಸ್ಸಿನ ಮಿತಿ ಇಲ್ಲ. ರೋಗ ಒಮ್ಮೆ ಬಂದರೆ ಸಾವು ಖಚಿತ.

ರೋಗದ ಕ್ಷಣಗಳು : ಕೋಳಿ ಅನಿಯಮಿತವಾಗಿ ತೂಕಡಿಸುತ್ತದೆ. ಕೋಳಿಗಳ ತುರಾಯಿ ಮತ್ತು ಪದರಗಳು ಕಳೆಗುಂದಿರುತ್ತವೆ. ಉಸಿರಾಡುವಾಗ ಸಣ್ಣದಾದ ಸದ್ದು ಹೊರಹೊಮ್ಮುತ್ತದೆ. ಹಸುರಾದ ಮತ್ತು ಕೆಟ್ಟ ವಾಸನೆಯ ಭೇದಿ ಆಗುತ್ತಿರುತ್ತದೆ.

2) **ಪಾರ್ಶ್ವವಾಯು :** ಇದು ಹೆಚ್ಚಾಗಿ ಕುತ್ತಿಗೆ ಮತ್ತು ಕಾಲುಗಳಿಗೆ ತಗಲುತ್ತದೆ. ಕಾಲಿಗೆ ಪಾರ್ಶ್ವವಾಯು ಬಂದಾಗ ಕೋಳಿ ನಿಲ್ಲಲು ಸಾಧ್ಯವಾಗದೆ ಒಂದೇ ಕಡೆ ವಾಲುತ್ತದೆ. ಇಲ್ಲವೆ ಬೀಳುತ್ತದೆ. ರೋಗ ಬಂದ ಮೇಲೆ ಚಿಕಿತ್ಸೆ ಅಪ್ರಯೋಜಕ. ಆದ್ದರಿಂದ ಮುಂಜಾಗರೂಕತೆ ವಹಿಸಬೇಕಾಗುತ್ತದೆ.

3) **ಮೈಲಿಬೇನೆ :** ಈ ಕಾಯಿಲೆ ಕಾಲವನ್ನು ಅವಲಂಬಿಸಿದೆ. ಆದರೆ ವಯಸ್ಸಿನ ಮಿತಿ ಇಲ್ಲ. ಬೇಸಗೆ ಕಾಲದಲ್ಲಿ ಹೆಚ್ಚಾಗಿ ಕಾಡುತ್ತದೆ.

ಲಕ್ಷಣಗಳು : ಕೋಳಿಗಳಿಗೆ ಅಶಕ್ತತೆ ಉಂಟಾಗಿ ಮೊಟ್ಟೆ, ಮಾಂಸದ ಉತ್ಪನ್ನ ಕಡಿಮೆಯಾಗುತ್ತದೆ. ತುರಾಯಿ, ಪದರಗಳಲ್ಲಿ, ಬಾಯಿಯ ಸಂದಿ ಮತ್ತು ಕಾಲು ಬೆರಳುಗಳಲ್ಲಿ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ಕಣ್ಣುಗಳ ಮೇಲೆ ಗುಳ್ಳೆಗಳಾದರೆ ಕುರುಡು ಸಂಭವಿಸಬಹುದು.

4) **ನೆಗಡಿ :** ಮನುಷ್ಯರಂತೆ ಕೋಳಿಗಳಿಗೂ ನೆಗಡಿ ಬರುತ್ತದೆ. ಈ ರೋಗ ವಾತಾವರಣವನ್ನು ಅವಲಂಬಿಸಿರುತ್ತದೆ. ವಯಸ್ಸಿನ ಮಿತಿ ಇಲ್ಲ. ಕೋಳಿಗಳಿಗೆ ನೆಗಡಿ ಬರಲು ಹವಾ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆ ತೋರಿದರೆ, ಜಾಗದಲ್ಲಿ ಹೆಚ್ಚು ಕೋಳಿಗಳಿದ್ದರೆ, ಲಿಟ್ಟರ್ ತೇವವಾಗಿದ್ದರೆ, ಗಾಳಿ ಸಂಚಾರ ಚೆನ್ನಾಗಿಲ್ಲದಿದ್ದರೆ ನೆಗಡಿ ಬರುತ್ತದೆ.

ಲಕ್ಷಣ : ಕಣ್ಣು ಮೂಗಿನಿಂದ ನೀರು ಸೋರುವುದು, ಕಣ್ಣುಗಳು ಮತ್ತು ತಲೆ ಊದಿಕೊಳ್ಳುವುದು, ಕೋಳಿ ಆಹಾರ ತೆಗೆದುಕೊಳ್ಳುವ ಪ್ರಮಾಣ ಕಡಿಮೆಯಾಗುವುದು.

5) **ಸ್ಟೈರೋಕೀಟ/ಬೊರಿಲ್ಲಾ ಗ್ಯಾಲಿನೇರಮ್ :** ಸ್ಟೈರೋಕೀಟ ಇದೊಂದು ಬ್ಯಾಕ್ಟೀರಿಯಾ. ಇದು ಕೋಳಿಯ ದೇಹವನ್ನು ಆಕ್ರಮಿಸಿದಾಗ ವಾಯುರೋಗ, ಭೇದಿ ಕಂಡುಬರುತ್ತದೆ. ಇದರಿಂದಾಗಿ ಕೋಳಿಗಳು ದೀರ್ಘಾವಧಿಯವರೆಗೆ ನರಳಾಡುತ್ತವೆ. ಪರಿಣಾಮವಾಗಿ ಪಾರ್ಶ್ವವಾಯು ರೋಗಕ್ಕೆ ತುತ್ತಾಗುತ್ತವೆ.

6) **ಹೇನು ಬಂದಾಗ :** ಆದರೂ ಹೇನುಗಳು ಕೋಳಿಗಳನ್ನು ಕಾಡುತ್ತವೆ. ಇವು ಹೆಚ್ಚಾದಾಗ ಕೋಳಿಗೂಡಿನ ಒಳಗೆ ಬಿಸಿ ಬೂದಿಯನ್ನು ಹರಡಿ ಕೋಳಿಯನ್ನು ಒಳಗಡೆ ಬಿಟ್ಟು ಬಾಗಿಲು ಮುಚ್ಚುತ್ತಾರೆ. ಇಲ್ಲವೆ, ಕೋಳಿ ಹೊರಗಡೆ ಹೋದ ಮೇಲೆಯೂ ಬಿಸಿ ಬೂದಿಯನ್ನು ಗೂಡಿನೊಳಗೆ ಹಾಕುತ್ತಾರೆ. ಅಷ್ಟೇ ಅಲ್ಲದೆ ಕೋಳಿಗಳನ್ನು ಕೆರೆಗೆ ಬಿಸಾಕಿ ಅವುಗಳನ್ನು ಈಜಾಡಿಸುತ್ತಾರೆ.

ದೇಸಿವಿಧಾನದಲ್ಲಿ ಗೂಡಿನ ರಚನೆ : ಕೋಳಿ ಗೂಡು ಕೋಳಿಗಳ ಸಂಖ್ಯೆಯ ಮೇಲೆ ನಿರ್ಧಾರವಾಗುತ್ತದೆ. ಸಂಖ್ಯೆ ದೊಡ್ಡದಿದ್ದಷ್ಟು ಗೂಡಿನ ಗಾತ್ರ ಬದಲಾಗುತ್ತದೆ. ಸಾಮಾನ್ಯವಾಗಿ ಹಳ್ಳಿಯ ಮನೆಗಳಲ್ಲಿ ಕೋಳಿಗೂಡುಗಳು ಅಷ್ಟಕಷ್ಟೆ. ಎಲ್ಲರೂ ಕೋಳಿಗಳನ್ನು ದೊಡ್ಡ ಕುಕ್ಕೆಯಲ್ಲಿ ಕೌಚುವ ವಿಧಾನ ಇದೆ. ಕೆಲವು ಕಡೆ ಗೂಡುಗಳನ್ನು ನಿರ್ಮಿಸುತ್ತಾರೆ.

1) ಇಟ್ಟಿಗೆ ನಿರ್ಮಿತ ಗೂಡು : ಒಂದರಿಂದ ಕನಿಷ್ಠ 10 ಕೋಳಿಗಳಿದ್ದರೆ ಇಟ್ಟಿಗೆ ನಿರ್ಮಿತ ಗೂಡು ಅವಶ್ಯಕ. ಈ ಗೂಡನ್ನು ಕಟ್ಟುವಲ್ಲಿ ಬಳಸುವ ಸಾಧನಗಳು ಇಟ್ಟಿಗೆ, ಕಡಪ ಕಲ್ಲು (ಅರಿ, ಪರ್ಸಿ ಕಲ್ಲುಗಳು) ಇವುಗಳನ್ನು ಬಳಸಿ ಆಯತಾಕಾರದ ಗೂಡುಗಳನ್ನು ಕಟ್ಟುತ್ತಾರೆ. ಮೇಲ್ಛಾವಣಿಯಲ್ಲಿ ನೀರು ಬಸಿದು ಹೋಗುವಂತೆ ಹೆಂಚನ್ನು ಅಥವಾ ಮಂದ ಹಲಗೆಯನ್ನು ಜೋಡಿಸಿರುತ್ತಾರೆ.

2) ಕುಕ್ಕೆ/ಬುಟ್ಟಿ/ಪುಟ್ಟಿ/ಮಂಕ್ರಿ- : ಹಳ್ಳಿಗಳಲ್ಲಿ ಕೋಳಿಗೆ ಆಶ್ರಯ ನೀಡಲು ಮನೆಗಳಲ್ಲಿ ಕುಕ್ಕೆಗಳನ್ನು ಬಳಸುತ್ತಾರೆ. ನೆಲಕ್ಕೆ ಗೋಣಿಚೀಲ ಹಾಗೂ ಕೋಳಿಗಳನ್ನು ಕವುಚಿ ಹಾಕುತ್ತಾರೆ. ಕುಕ್ಕೆಯ ಆವರಣದಿಂದ ಕೋಳಿಗಳು ಹೊರ ಹೋಗದಂತೆ ಮುಚ್ಚಿ ಕುಕ್ಕೆಯ ಮೇಲೆ ಭಾರವಾದ ವಸ್ತುವೊಂದನ್ನು ಇಡುತ್ತಾರೆ. ಈ ಕುಕ್ಕೆಗಳನ್ನ ಸಿಂದೆಮರ (ಈಚಲು ಮರದ ಗರಿ)ದಿಂದ ಇಲ್ಲವೆ ಬಿದಿರಿನಿಂದ ಇಲ್ಲವೆ ಲಕ್ಕಿಗಿಡದ ಬಡಿಗೆಯಿಂದ (ಗುಲಬರ್ಗಾ ಕಡೆ ಕಂಡು ಬರುತ್ತದೆ) ತಯಾರಿಸುತ್ತಾರೆ. ಈ ಕುಕ್ಕೆಗಳು ಗಾತ್ರದಲ್ಲಿ ಬದಲಾವಣೆ ಇರುತ್ತವೆ. ಕುಕ್ಕೆಗಳ ಗಾತ್ರದ ಆಧಾರದ ಮೇಲೆ ಕೋಳಿಗಳನ್ನು ಮುಚ್ಚಾಕಿ ಅವುಗಳಿಗೆ ಆಶ್ರಯ ನೀಡುತ್ತಾರೆ.

ಮರಿಗಳಿಗಾಗಿ ಕುಕ್ಕೆಯ ಬಳಕೆ : ಹೆಂಟೆ/ಹ್ಯಾಟೆ ಮೊಟ್ಟೆಗಳಿಗೆ ಕಾವು ಕೊಟ್ಟು ಮರಿಮಾಡಲು ಯುಕ್ತ ವಾತಾವರಣವನ್ನು ಕಲ್ಪಿಸಲಾಗುತ್ತದೆ. ದೊಡ್ಡ ಕುಕ್ಕೆಯಲ್ಲಿ ರಾಗಿ, ಬತ್ತದ ಹುಲ್ಲನ್ನು ಹಾಸಿ ದೊಡ್ಡ ಕುಕ್ಕೆಯಲ್ಲಿ ಇಟ್ಟು ಯಾರ ದೃಷ್ಟಿಯೂ ತಗುಲದಂತೆ ಮೆಣಸಿನಕಾಯಿ, ಇದ್ದಿಲು, ಇಡ್ಲುಗರಿ, ಕೂದಲು ಎಲ್ಲವನ್ನೂ ಸೇರಿಸಿ ಕುಕ್ಕೆಯ ತಳಗಿಡುತ್ತಾರೆ. ಅನಂತರ ಮೊಟ್ಟೆಗಳನ್ನು ಜೋಡಿಸಿ ಅವುಗಳ ಮೇಲೆ ಕೋಳಿಯನ್ನು ಕೂರಿಸುತ್ತಾರೆ. ಈ ಎಲ್ಲವನ್ನು ಒಳಗೊಂಡ ಕುಕ್ಕೆಯನ್ನು ನೆಲುವುಗೆ ಇಟ್ಟು ತೂಗುಹಾಕಿ ಬೆಕ್ಕು, ಹಾವು, ನಾಯಿಗಳಿಂದ ರಕ್ಷಿಸಲಾಗುತ್ತದೆ. ಕಾವು ಕೂತ ದಿನದಿಂದ 30 ದಿನಗಳಲ್ಲಿ ಮೊಟ್ಟೆ ಒಡೆದು ಮರಿಗಳು ಹೊರಬರುತ್ತವೆ. ಮರಿಗಳನ್ನ ಜೋಪಾನ ಮಾಡಲು ದೊಡ್ಡದಾದ ಜಿಲ್ಲೆ (ತೆಳು ಬಿದಿರಿನ ದೊಡ್ಡ ಕುಕ್ಕೆ) ಮಾಡಿ ಅದರೊಳಗೆ ತಾಯಿ-ಮರಿಗಳನ್ನು ಬಿಟ್ಟು ಹದಿನೈದು ದಿನಗಳಾದ ಮೇಲೆ ತಾಯಿ ಮತ್ತು ಅದರ ಮರಿಗಳನ್ನು ಹೊರಗೆ

ಬಿಡಲಾಗುತ್ತದೆ. ಅನಂತರ ತನ್ನ ಮರಿಗಳ ಜವಾಬ್ದಾರಿಯನ್ನು ತಾಯಿ ಕೋಳಿಯೇ ವಹಿಸಿಕೊಳ್ಳುತ್ತದೆ.

ಕೋಳಿ ಮನೆಗಳು : ಕೋಳಿಗೂಡು ಬೇರೆ, ಕೋಳಿ ಮನೆ ಬೇರೆ. ಗೂಡು ಕೋಳಿಗಳ ಸೀಮಿತ ಲೆಕ್ಕವನ್ನು ಸೂಚಿಸಿದರೆ, ಮನೆ ಕೋಳಿಯ ಸಂಖ್ಯೆಯನ್ನು ಮೀರುತ್ತದೆ. ಹಿತಕರವಾದ ಪರಿಸರವಿದ್ದರೆ ಮೊಟ್ಟೆಗಳ ಉತ್ಪತ್ತಿಯಲ್ಲಿ ಗಮನಾರ್ಹ ಬದಲಾವಣೆ ಕಾಣಬಹುದು. ಕೋಳಿ ಮನೆಗಳಿಗೆ ನೀರು ನುಗ್ಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ನೆಲ ತೇವಗೊಂಡರೆ ಒಣಗಿದ ಎಲೆಗಳನ್ನು, ಕಬ್ಬಿನ ಸಿಪ್ಪೆ, ರಾಗಿ ಉಬ್ಬಲು, ಮರದ ಹೊಟ್ಟು, ನೆಲಗಡಲೆ ಸಿಪ್ಪೆ ಅಥವಾ ಬತ್ತದ ಹೊಟ್ಟನ್ನು ಹಾಕಬೇಕು. ಮನೆಗಳ ಛಾವಣಿಗಳಿಗೆ ಸತುವಿನ ತಗಡನ್ನು ಹಾಕಬಾರದು. ಬೇಸಗೆಯಲ್ಲಿ ವಿಪರೀತ ಸೆಕೆಯಾಗಿ, ಚಳಿಗಾಲದಲ್ಲಿ ಚಳಿಯಾಗಿ ಕೋಳಿಗಳಿಗೆ ಹಾನಿಯುಂಟು ಮಾಡಬಹುದು.

ಕೋಳಿಗಳನ್ನು ಬೆಳೆಸಲು ಬಳಸುವ ಉಪಕರಣಗಳಿಗೆ ಒಟ್ಟಾಗಿ 'ಬ್ರೂಡರ್' ಎಂದು ಕರೆಯಲಾಗುತ್ತದೆ. ಇದೊಂದು ವಿಶಿಷ್ಟವಾದ ಪೆಟ್ಟಿಗೆ. ಇದರಲ್ಲಿ ಎರಡು ವಿಧಗಳಿವೆ.

1) ಬ್ಯಾಟರಿ ಬ್ರೂಡರ್ಸ್

2) ಫ್ಲೋರ್ ಬ್ರೂಡರ್ಸ್

ಬ್ಯಾಟರಿ ಬ್ರೂಡರ್ಸ್ : ತಂತಿ ಜಾಳಿಗೆಯ ಮೇಲೆ ಮರಿಗಳ ಬೆಳವಣಿಗೆಗೆ ಅವಕಾಶ ಉಳ್ಳವು.

ಫ್ಲೋರ್ ಬ್ರೂಡರ್ಸ್ : ನೆಲಮಟ್ಟದ ಮರಿಗಳ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಬ್ರೂಡರ್‌ಗಳು.

ಬ್ರೂಡರ್‌ಗಳನ್ನು ತಯಾರಿಸುವ ವಿಧಾನ : 25 ರಿಂದ 30 ಸೆಂ.ಮೀ. ಎತ್ತರವಿರುವ ವಿಶಾಲವಾದ ಕಬ್ಬಿಣ/ಬಿದಿರಿನ ಬುಟ್ಟಿಯನ್ನು ಮಾಡಿ ಮೇಲ್ಛಾವಣಿಗೆ ತೂಗು ಹಾಕಬೇಕು. ಒಳಭಾಗದಲ್ಲಿ ಬುಟ್ಟಿಯ ಮಧ್ಯದಲ್ಲಿ ಒಂದೆರಡು ಬಲ್ಬುಗಳನ್ನು ಹಾಕಲು ಯೋಜಿಸಬೇಕು. ಬುಟ್ಟಿಯ ಸುತ್ತಲೂ ನೆಲದ ಮೇಲೆ 25 ರಿಂದ 30 ಸೆಂ.ಮೀ. ಎತ್ತರ ಮತ್ತು 30 ರಿಂದ 35 ಸೆಂ.ಮೀ. ಉದ್ದವಿರುವ ಚಾಪೆ ಅಥವಾ ಕಾರ್ಡ್‌ಬೋರ್ಡ್‌ಗಳನ್ನು ಸುತ್ತಲೂ ವರ್ತುಲಾಕಾರದಲ್ಲಿ ನಿಲ್ಲಿಸಬೇಕು. ಈ ವರ್ತುಲಾಕಾರವನ್ನು ದಿನವೂ ಹೆಚ್ಚಿಸುತ್ತ ಮರಿ ಸಾಕುವುದನ್ನು ಆರಂಭಿಸಿದ ದಿನದಿಂದ 4-6 ದಿನಗಳವರೆಗೆ ಇಟ್ಟು ಆ ಮೇಲೆ ತೆಗೆಯಬಹುದು. ವರ್ತುಲಾಕಾರದ ಉಪಕರಣಕ್ಕೆ 'ಮರಿಗಳ ರಕ್ಷಕ' ಎಂದು ಹೆಸರು. ನೆಲದ ಮೇಲೆ ಹೊಟ್ಟಿನ ಹಾಸನ್ನು ತಿಂಡಿ ಮತ್ತು ನೀರಿನ ಪಾತ್ರೆಗಳನ್ನು ಯೋಗ್ಯಸ್ಥಳದಲ್ಲಿ ಇಡಬೇಕು. ಬೆಳಕು ಹಾಯುವಂತೆ ವ್ಯವಸ್ಥೆ ಮಾಡಬೇಕು.

ತಿಂಡಿ ಪಾತ್ರೆಗಳು : ಕೋಳಿಗಳು ಪಾತ್ರೆಗಳಲ್ಲಿ ಕಾಲಿಡಲು ಅವಕಾಶವಾಗದಂತೆ ಬಿದಿರಿನಿಂದ ಅಥವಾ ಮರದ ಹಲಗೆಗಳಿಂದ ತಯಾರಿಸಬೇಕು. ಆಹಾರ ಹೊರಗೆ ಬರದಂತೆ ನೋಡಿಕೊಳ್ಳಬೇಕು.

ನೀರಿನ ಪಾತ್ರೆಗಳು : ನೀರು ಹೊರಗೆ ಬರದಂತೆ, ಕೋಳಿಗಳು ನೀರಿನ ಪಾತ್ರೆಗೆ ಇಳಿಯದಂತೆ ಸುವ್ಯವಸ್ಥಿತ ರೀತಿಯಲ್ಲಿ ಇರಬೇಕು. ಕಲುಷಿತ ನೀರು ಸರಾಗವಾಗಿ ಹೊರ ಹೋಗುವಂತೆ ನಿರ್ಮಿಸಬೇಕು.

ಮೊಟ್ಟೆ ಇಡುವ ಗೂಡುಗಳು : 5:1ರ ಪ್ರಮಾಣದಂತೆ ಅಂದರೆ ಐದು ಹೇಟೆಗಳಿಗೆ ಒಂದು ಗೂಡು ಬರುವಂತೆ ಕೋಳಿಗಳ ಸಂಖ್ಯೆಯ ಆಧಾರದ ಮೇಲೆ ರಚಿಸಬೇಕು. ಗೂಡುಗಳನ್ನು ಸ್ವಚ್ಛವಾಗಿ ತೊಳೆಯಲು ಮತ್ತು ಕೋಳಿಗಳು ಸುಲಭವಾಗಿ ಹೋಗಿ ಬರಲು ಅನುಕೂಲವಾಗುವಂತೆ ರಚಿಸಬೇಕು. ಗೂಡುಗಳನ್ನು ಮರ, ತಗಡು, ಇಟ್ಟಿಗೆಗಳಿಂದ ತಯಾರಿಸಬಹುದು.

ಆಹಾರದ ಘಟಕಗಳು : ಕೋಳಿಯ ಆಹಾರದಲ್ಲಿಯ ಸತ್ವ ಅದರ ಘಟಕಗಳಾದ ನೀರು, ಸಾರಜನಕ, ಪಿಷ್ಟ, ಮೇದಸ್ಸು, ಲವಣಗಳು ಮತ್ತು ವಿಟಮಿನ್ನುಗಳನ್ನು ಅವಲಂಬಿಸಿದೆ. ಕೋಳಿಗಳ ಖಾದ್ಯ ಪದಾರ್ಥದಲ್ಲಿ ಸಾಮಾನ್ಯವಾಗಿ ಶೇ.10ರಂತೆ ನೀರಿನ ಅಂಶ ಇರಬೇಕು. ಜಾಸ್ತಿಯಾದರೆ ಆಹಾರದಲ್ಲಿ ಬೂಸ್ಟ್ ಬರುವುದುಂಟು. ಮುಖ್ಯವಾದ ಆರ್ಜಿನಿನ್, ಸಿಸ್ಟನ್, ಲ್ಯೂಸಿನ್, ಮೀಥಿಯೋನಿನ್, ಟ್ರಿಪ್ಟೋಫೇನ್, ಲೈಸೀನ್ ಎಂಬ ಅಮೈನೋ ಆಮ್ಲಗಳು ಹೆಚ್ಚು ಅವಶ್ಯಕ. ಈ ಎಲ್ಲಾ ಅಮೈನೋ ಆಮ್ಲಗಳು. ಒಂದೇ ತರಹದ ಸಾರಜನಕ ಖಾದ್ಯದಲ್ಲಿ ಸಾಕಷ್ಟು ಸಿಕ್ಕುವುದಿಲ್ಲ. ಕಡಲೆಕಾಯಿ ಹಿಂಡಿ, ಮೀನಿನ ಪುಡಿ, ರೇಷ್ಮೆ ಹುಳುವಿನ ಗೂಡು, ಒಣಗಿದ ಮಾಂಸದ ಪುಡಿ, ಇತ್ಯಾದಿ ಆಹಾರದಲ್ಲಿ ಬೆರೆಸಬೇಕಾಗುತ್ತದೆ. ಕ್ಲೋರಿನ್ ಮತ್ತು ಸೋಡಿಯಂ ಲವಣಗಳಿಗಾಗಿ ಅಡುಗೆಯ ಉಪ್ಪನ್ನು 0.5% ಪ್ರಮಾಣದಲ್ಲಿ ಕೋಳಿಯ ತಿಂಡಿಯಲ್ಲಿ ಉಪಯೋಗಿಸುತ್ತಾರೆ.

ಗಿರಿರಾಜ/ಸ್ವರ್ಣಧಾರಾ/ಹಿತ್ತಲ ಕೋಳಿ ಸಾಕಾಣಿಕೆ : ಪೂರ್ವಜರು ಮೋಜಿಗೆ, ಜೂಜಿಗೆ, ಮೊಟ್ಟೆ ಮತ್ತು ಮಾಂಸಕ್ಕಾಗಿ ಕೋಳಿಗಳನ್ನು ಸಾಕುತ್ತಿದ್ದರು. ಇಂದು ಕೋಳಿ ಸಾಕಾಣಿಕೆಗೆ ಒಂದು ವ್ಯವಸ್ಥಿತ ವಾಣಿಜ್ಯ ಉದ್ಯಮವಾಗಿ ಬೆಳೆದಿದೆ. ಆದರೆ ಸಣ್ಣ / ಅತಿ ಸಣ್ಣ ರೈತರು/ ಕೃಷಿ ಕಾರ್ಮಿಕರು ಈಗಲೂ ನಾಟಿ ಕೋಳಿಗಳನ್ನು ಸಾಕಾಣಿಕೆ ಮಾಡುತ್ತಿದ್ದು. ಇವುಗಳಿಂದ ಅಂತಹ ಹೆಚ್ಚಿನ ವರಮಾನ ಬರುತ್ತಿಲ್ಲ. ಆದುದರಿಂದ ಗಿರಿರಾಜ/ಸ್ವರ್ಣಧಾರ ಕೋಳಿಗಳನ್ನು ಹೆಚ್ಚಾಗಿ ಸಾಕಿದಲ್ಲಿ ಆರ್ಥಿಕ ಮಟ್ಟವು ಹೆಚ್ಚಾಗುವುದಲ್ಲದೆ, ಅವರ ಆಹಾರದಲ್ಲಿಯ ಪೌಷ್ಠಿಕಾಂಶಗಳ ಕೊರತೆಯನ್ನು ಸಹ ನೀಗಿಸಲು ಸಹಕಾರಿಯಾಗುತ್ತಿದೆ.

ಗಿರಿರಾಜ/ಸ್ವರ್ಣಧಾರ ಕೋಳಿಯು ನಾಟಿಕೋಳಿಯನ್ನು ಹೋಲುವ ರೆಕ್ಕೆ ಪುಕ್ಕಗಳನ್ನು ಹೊಂದಿದ್ದು. ಯಾವುದೇ ಪ್ರದೇಶಕ್ಕಾಗಿ, ಹವಾಗುಣಕ್ಕಾಗಲಿ ಹೊಂದಿಕೊಳ್ಳುತ್ತದೆ. ಇತರೆ ನಾಟಿ ಕೋಳಿಗಳಂತೆ ಜೀವಿಸಬಲ್ಲ ಶಕ್ತಿಹೊಂದಿದ್ದು, ಯಾವುದೇ ಸುಸಜ್ಜಿತ ಕ್ರಮ ಸವಲತ್ತುಗಳ ಅವಶ್ಯಕತೆ ಇರುವುದಿಲ್ಲ. ಮೊಟ್ಟೆ ಹಾಗೂ ಮಾಂಸದ ಉತ್ಪಾದನೆಯಲ್ಲಿ ನಾಟಿ ಕೋಳಿಗಳಿಗಿಂತ ಮೂರು ಪಟ್ಟು ಹೆಚ್ಚು ದೊರೆಯುತ್ತದೆ.

ಸಾಕಾಣಿಕೆ : ಗುಂಪು ಗುಂಪಾಗಿ ಅಥವಾ ಒಂಟಿಯಾಗಿ ಸಾಕಬಹುದು. ಸುಗ್ಗಿಯ ಕಾಲದಲ್ಲಿ ಉಳಿಯುವ ದವಸ ಧಾನ್ಯಗಳನ್ನು ತಿಂದು ಉತ್ತಮ ಮೊಟ್ಟೆ ಮತ್ತು ಮಾಂಸವನ್ನು ನೀಡುತ್ತವೆ. ಆದ್ದರಿಂದ ಆಹಾರಕ್ಕಾಗಿ ವಿಶೇಷ ವೆಚ್ಚವಾಗುವುದಿಲ್ಲ. ಎಮ್ಮೆ, ಹಸು, ಕುರಿಗಳೊಂದಿಗೆ ಸಾಕುವುದರಿಂದ ಹೆಚ್ಚಿನ ವಿಶೇಷವಾದ ಕೊಟ್ಟಿಗೆ ವ್ಯವಸ್ಥೆ ಬೇಕಿಲ್ಲ. ಆದರೆ ಮರಿಗಳನ್ನು ಹೊಸದಾಗಿ ಹ್ಯಾಚರಿಗಳಿಂದ ತಂದು ಸಾಕಬೇಕಾದ ಸಮಯದಲ್ಲಿ ಕೆಲವು ಅಂಶಗಳನ್ನು ಪಾಲಿಸಬೇಕಾಗುತ್ತದೆ.

ಹೊಸದಾಗಿ ತಂದ ಮರಿಗಳನ್ನು ಸಮತಟ್ಟಾದ ಜಾಗದಲ್ಲಿ ಬತ್ತದ ಹೊಟ್ಟು ಹರಡಿ ಅದರ ಮೇಲೆ ಕಾಗದದ ಹಾಳೆಯನ್ನು ಹಾಸಿ, ಮರಿಗಳನ್ನು ಬಿಡಬೇಕು. ಇದನ್ನು ಮರಿಗಳನ್ನು ಪೋಷಿಸುವ ಮರಿತಡೆಯಿಂದ ಹಟ್ಟಿನಿಂದ ಅಥವಾ ತಗಡಿನಿಂದ ನಿರ್ಮಿಸಬಹುದು. ನೀರು ಕುಡಿಯುವ ಪಾತ್ರೆಗಳನ್ನು ಅಥವಾ ತಟ್ಟೆಗಳನ್ನು ಸ್ವಚ್ಛವಾಗಿಡಬೇಕು. ಮರಿಗಳಿಗೆ ವಿದ್ಯುತ್ ಬಲ್ಬ್ ಮೂಲಕ ಕಾವು ಕೊಡಬೇಕು. ಇದಕ್ಕಾಗಿ ಬಲ್ಬನ್ನು ಒಂದು ಕಾಲು ಅಡಿ ಎತ್ತರದಲ್ಲಿ ತೂಗುಹಾಕಬೇಕು. ಅನಂತರ ತಿನ್ನಲು ಆಹಾರ ಅಂದರೆ ಸಣ್ಣ ಅಕ್ಕಿ ನುಚ್ಚು, ರವೆ ಅಥವಾ ಇತರೆ ಆಹಾರ ಪದಾರ್ಥಗಳನ್ನು ನುಚ್ಚು ಮಾಡಿ ಹಾಕಬೇಕು. ಈ ರೀತಿ 3-4 ವಾರ ಸಾಕಿದ ಅನಂತರ ಹೊರಗಡೆ ಬಿಡಬಹುದು. 7ನೇ ದಿವಸಕ್ಕೆ ಕೊಕ್ಕರೆ ರೋಗದ F1 ಲಸಿಕೆ ಮತ್ತು 6 ರಿಂದ 8ನೇ ವಾರದಲ್ಲಿ ಅದೇ ರೋಗದ R2B ಚುಚ್ಚುಮದ್ದು, ಹಾಗೂ 8ನೇ ವಾರದ ಅನಂತರ ಜಂತು ನಾಶಕವನ್ನು ಕೊಡಿಸಬೇಕು.

ಹೀಗೆ ಕೋಳಿ ಸಾಕಾಣಿಕೆಯನ್ನು ಮಾಡುವುದರಿಂದ ರೈತ ಮೊದಲಿಂದಲೂ ಲಾಭವನ್ನು ಕಾಣುತ್ತಿದ್ದಾನೆ. ಕೋಳಿ ಸಾಕಿದರೆ ಕೋಟಿ 'ಲಾಭ'ಎಂಬ ಗಾದೆ ಇದೆ. ಇಂದು ಕೋಳಿ ಸಾಕಾಣಿಕೆ ಒಂದು ವ್ಯವಸ್ಥಿತ ಕೈಗಾರಿಕೆ ಎಂದು ಪರಿಗಣಿಸಿ ಒಂದು ಉದ್ಯಮವನ್ನಾಗಿ ಮಾಡಲಾಗಿದೆ.

ಜಿ.ಎಂ.ಬಿ.

ಕ್ಯಾರೆಟ್ ಕನ್ನಡದ ಗಜ್ಜರಿ ಇಂಗ್ಲಿಷ್‌ನ ಕ್ಯಾರೆಟ್. ಮನುಷ್ಯ ನೇರವಾಗಿ ತಿನ್ನುವ ತರಕಾರಿಯಾಗಿ (ಹಸಿ ಅಥವಾ ಬೇಯಿಸಿದ) ಹಾಗೂ ಪರೋಕ್ಷವಾಗಿ ಸೇವಿಸುವ ಔಷಧ ಮೂಲವಾಗಿರುವ ಇದು ಒಂದು ಗಿಡಮೂಲಿಕೆ ಹಾಗೂ ಗಡ್ಡೆ. ಇದರ ವೈಜ್ಞಾನಿಕ ಹೆಸರು ಡೆನಕಸ್ ಕ್ಯಾರೊಟ. 5000 ವರ್ಷಗಳ ಹಿಂದಿನಿಂದಲೂ ಕ್ಯಾರೆಟ್ ಕೃಷಿ ಮಾಡುತ್ತಿರುವ ಆಫ್ಘಾನಿಸ್ತಾನದಿಂದ ಹಿಡಿದು ಈಜಿಪ್ಟ್, ಸ್ವಿಟ್ಜರ್ಲೆಂಡ್, ಬ್ಯಾಬಿಲೋನ್, ಗ್ರೀಸ್, ರೋಮ್, ಮೆಡಿಟರೇನಿಯನ್, ಮೊರಕ್ಕೊ, ಯೂರೋಪ್‌ನ ಸ್ಪೇನ್, ಹಾಲೆಂಡ್, ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ, ಚೀನಾ ಮತ್ತು ಭಾರತದಲ್ಲಿ ಹಂತ ಹಂತವಾಗಿ ಕ್ಯಾರೆಟ್ ಕೃಷಿ ಹರಡಿತು. ಹಾಗಾಗಿ ಇಂದು ಕ್ಯಾರೆಟ್ ಅನ್ನು 'ತರಕಾರಿಗಳ ರಾಜ' ಎಂದೇ ಕರೆಯಬಹುದು.

ಯಾಕೆಂದರೆ ಇಂಗ್ಲೆಂಡ್‌ನ ಎಲಿಜಬೆತ್ ರಾಣಿಯ ಆಳ್ವಿಕೆಯ ಕಾಲದಲ್ಲಿ ಇಂಗ್ಲೆಂಡಿನ ಮಹಿಳೆಯರು ತಾವು ಧರಿಸುತ್ತಿದ್ದ ಟೊಪ್ಪಿಗೆಗಳಿಗೆ ಕ್ಯಾರೆಟ್ ಅನ್ನು ಸೇರಿಸಿ ಹೆಮ್ಮೆಯಿಂದ ನಡೆಯುತ್ತಿದ್ದರು ಮತ್ತು ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ವಿದ್ಯಾರ್ಥಿಗಳ ದೃಷ್ಟಿಯನ್ನು ಹೆಚ್ಚಿಸಲು ಕ್ಯಾರೆಟ್ ಬಳಕೆ ಸಾರ್ವತ್ರಿಕವಾಗಿತ್ತು.

ಅಕ್ಬರನ ಆಸ್ಥಾನಕವಿಯಾಗಿದ್ದ ಅಬ್ದುಲ್ ಫಜಲ್ ತನ್ನ 'ಐನ್-ಎ-ಅಕ್ಬರಿ' ಕೃತಿಯಲ್ಲಿ ಕ್ಯಾರೆಟ್ ಗಡ್ಡೆ ಮತ್ತು ಸೊಪ್ಪನ್ನು ಸಾಮ್ರಾಟನ ಪ್ರತಿದಿನದ ಆಹಾರದಲ್ಲಿ ಬಳಸಲಾಗುತ್ತಿತ್ತು ಮತ್ತು ಅಕ್ಬರನಿಗೆ ಕ್ಯಾರೆಟ್ ಉಪ್ಪಿನಕಾಯಿ ಅಂದರೆ ಬಹಳ ಇಷ್ಟವಾಗಿತ್ತೆಂದು ತಿಳಿಸಿದ್ದಾನೆ.

ಗ್ರೀಕ್ ಮತ್ತು ರೋಮನ್ನರು ಕ್ಯಾರೆಟ್ ಅನ್ನು ಬಹಳ ಹಿಂದೆ ಆಹಾರವಾಗಿ ಕಾಣುವುದಕ್ಕಿಂತ ಅದೊಂದು ಅತ್ಯಮೂಲ್ಯವಾದ ಔಷಧಿ ಗಿಡಮೂಲಿಕೆ ಎಂದು ಅರಿತು ಅದನ್ನು ಗೌರವಿಸಿದರು. ತೀರ ಇತ್ತೀಚಿನ ಕಾಲದಲ್ಲಷ್ಟೇ ಕ್ಯಾರೆಟ್ ಒಂದು ಪ್ರಮುಖ ತರಕಾರಿಯಾಗಿ ಸ್ಥಾನ ಪಡೆದಿದೆ. ಕ್ಯಾರೆಟ್ ಜನಪ್ರಿಯತೆಯ ಮೊದಲ ಮೆಟ್ಟಿಲಲ್ಲಿರುವ ತರಕಾರಿಯಾಗಿದೆ.

ಕ್ರಿ.ಶ. 1556ನೇ ಇಸವಿಯಲ್ಲಿ ಚೀನಾದಲ್ಲಿ ವೈದ್ಯಕೀಯ ಹುದ್ದೆಗಾಗಿ ನಡೆದ ಪರೀಕ್ಷೆಯಲ್ಲಿ ಲಿ ಶಿನ್ ಚೆನ್ ಎಂಬ ಯುವಕನು "ಹಸಿ ಕ್ಯಾರೆಟ್ ಅನ್ನು ಕತ್ತರಿಸಬೇಕು. ಇದರೊಂದಿಗೆ ಕ್ಯಾರೆಟ್ ಸೊಪ್ಪನ್ನು ಕತ್ತರಿಸಿ ಒಂದು ಪಾತ್ರೆಗೆ ಹಾಕಿ ನೀರಿನಲ್ಲಿ ಕುದಿಸಿ ತಣಿಸಿದ ನೀರನ್ನು ಶೋಧಿಸಿ ಪ್ರತಿದಿನ 3 ಬಾರಿ ಆಹಾರ ಸೇವನೆಗೆ ಮುನ್ನ ಕುಡಿಯಬೇಕು. ಇದರಿಂದ ಮೂತ್ರಪಿಂಡ ಮತ್ತು ಪಿತ್ತಕೋಶಗಳ ಆರೋಗ್ಯ ಸುಧಾರಣೆಗೊಂಡು ವ್ಯಕ್ತಿಯ ದೇಹಾರೋಗ್ಯ ಉತ್ತಮಗೊಳ್ಳುತ್ತದೆ. ರಾಜಮನೆತನದವರಿಗೆ ಈ ಸರಳ ಮದ್ದು ಉಪಯುಕ್ತವೆಂದು ಹೇಳಿದ್ದನ್ನು ಕಂಡು ಲಿಶಿನ್‌ಚೆನ್ ಅವರನ್ನು ವೈದ್ಯಕೀಯ ಹುದ್ದೆಗೆ ಆಯ್ಕೆ ಮಾಡಿದರು. ಕ್ಯಾರೆಟ್ ಅಂಬೆಲ್ಲಿಫೆರೀ ಕುಟುಂಬದ ಒಂದು ಸಸ್ಯ. ಈ ಕುಟುಂಬದ ಇನ್ನಿತರ ಸದಸ್ಯ ಸಸ್ಯಗಳೆಂದರೆ ಕೊತ್ತಂಬರಿ ಮತ್ತು ಜೀರಿಗೆ. ಮೆಡಿಟರೇನಿಯನ್ ಪ್ರದೇಶ ಮತ್ತು ಮಧ್ಯ ಏಷ್ಯಾ ಕ್ಯಾರೆಟಿನ ತವರೂರು ಎಂದು ಹೇಳುತ್ತಾರೆ. ಈ ಪ್ರದೇಶದಲ್ಲಿ 2000 ವರ್ಷಗಳಿಂದ ಕ್ಯಾರೆಟ್‌ನ್ನು ಬೆಳೆಸುತ್ತಿದ್ದಾರೆ.

ಕ್ಯಾರೆಟ್ ವೈವಿಧ್ಯ ಮತ್ತು ಕೃಷಿ ಹಾಗೂ ಉಪಯೋಗಗಳು

ಕ್ಯಾರೆಟ್ ವೈವಿಧ್ಯ : ಕ್ಯಾರೆಟ್ ಎಲ್ಲಾ ಗಿಡಗಳ ಹಾಗೆಯೇ ಆಹಾರವನ್ನು ತಯಾರಿಸಿಕೊಂಡು ನೆಲದಾಳದ ಗಡ್ಡೆಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತದೆ. ಇದರ ದಿಂಡಿನ ಸುತ್ತಲೂ ಇರುವ ತಿರುಳಿನಲ್ಲಿ ಆಹಾರ ಸಂಗ್ರಹವಾಗಿದ್ದು ತಿನ್ನಲು ರುಚಿಕರ ಮತ್ತು ಯೋಗ್ಯವಾಗಿರುತ್ತದೆ. ಪಂಜಾಬ್‌ನ ವನ್ಯ ಕ್ಯಾರೆಟ್ 'ಪಹಾಡಿ ಗಾಜಾರ್'ನ ಬೇರುಗಳು ಕಾಮೋತ್ತೇಜಕವಾಗಿದ್ದು, ನರದ ಶಕ್ತಿಯನ್ನು ಹೆಚ್ಚಿಸುವ ಗುಣವನ್ನು ಹೊಂದಿದೆ.



ಹಲವು ವಿಧದ ಕ್ಯಾರೆಟ್‌ಗಳಿದ್ದು ಅವುಗಳೆಂದರೆ ಬಿಳಿ, ಅರಿಸಿಣ, ಕಿತ್ತಳೆ, ಕೆಂಪು, ಗಾಢ ಕೆಂಪು ಮತ್ತು ನೀಲಿ ಬಣ್ಣಗಳಲ್ಲಿ ಕಂಡುಬರುತ್ತದೆ. ಇದರಲ್ಲಿ ಕೆಂಪು ಬಣ್ಣದ ಕ್ಯಾರೆಟ್‌ನ ದಿಂಡು ತೆಳುವಾಗಿದ್ದು ಹೆಚ್ಚು ಬೇಡಿಕೆ ಇದೆ.

ಯುರೋಪ್ ಮತ್ತು ಮಧ್ಯಪ್ರಾಚ್ಯ ದೇಶಗಳ ಮೂಲದ್ದಾಗಿರುವ ಕಿತ್ತಳೆ ಬಣ್ಣದ ಕ್ಯಾರೆಟ್‌ನಲ್ಲಿ 'ಎ' ಜೀವಸತ್ವ ಸಮೃದ್ಧವಾಗಿರುವುದರಿಂದ ಮತ್ತು ಬೀಟಾ ಕ್ಯಾರೋಟಿನ್ ಹಾಗೂ ಆಲ್ಫಾ ಕ್ಯಾರೋಟಿನ್ ಇರುವುದರಿಂದ ಕಿತ್ತಲೆ ಬಣ್ಣ ಎದ್ದು ಕಾಣುತ್ತದೆ. ಇದು ಆರೋಗ್ಯಕ್ಕೆ ಅತ್ಯುಪಯುಕ್ತವಾಗಿದ್ದು ಹೆಚ್ಚಾಗಿ ಸೇವಿಸಬೇಕು.

ಹಳದಿ ಬಣ್ಣದ ಕ್ಯಾರೆಟ್‌ನಲ್ಲಿ ಝೂಂತೋಫಿಲ್ಸ್ ಹೆಚ್ಚಾಗಿದ್ದು ಕಣ್ಣು, ಶ್ವಾಸಕೋಶ ಮತ್ತು ಇತರ ದೇಹಾಂಗಗಳಿಗೆ ರಕ್ಷಣೆ ನೀಡುವುದರಿಂದ ಇದು ಆರೋಗ್ಯಕರವಾದುದಾಗಿದೆ.

ಕೆಂಪು ಕ್ಯಾರೆಟ್‌ನಲ್ಲಿ ಲೈಕೋಫಿನ್ ಸಮೃದ್ಧವಾಗಿದ್ದು ಇದು ಹೃದಯದ ಆರೋಗ್ಯಕ್ಕೆ ಒಳಿತಾಗಿದೆ. ಇದರ ಮೂಲ ಭಾರತ ಮತ್ತು ಚೀನಾ. ನೇರಳೆ ಬಣ್ಣದ ಕ್ಯಾರೆಟ್‌ನಲ್ಲಿ ಒಳಬದಿ (ತಿರುಳು) ಕಿತ್ತಳೆ ಬಣ್ಣದಿಂದ ಕೂಡಿದ್ದು ಪ್ರಬಲ ಆಂಟಿ ಆಕ್ಸಿಡೆಂಟ್‌ಗಳಾದ ಆಂತೋಸೈನಿನ್‌ಗಳು ಇರುವುದರಿಂದ ಕ್ಯಾನ್ಸರ್ ಉಂಟುಮಾಡುವಂತಹ ಫ್ರೀರ್‍ಯಾಡಿಕಲ್‌ಗಳನ್ನು ತೊಡೆದುಹಾಕಿ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ.

ಸಾರ್ವತ್ರಿಕವಾಗಿ ಬೆಳೆಯುತ್ತಿದ್ದಂತಹ ಬಿಳಿ ಕ್ಯಾರೆಟ್ ಈಗ ಏಷ್ಯಾ ಖಂಡದ ಕೆಲವು ಕಡೆ ಮಾತ್ರ ಬೆಳೆಯುತ್ತಿದ್ದು ಇದರ ಮೂಲ ಆಫ್ಘಾನಿಸ್ತಾನ, ಇರಾನ್ ಮತ್ತು ಪಾಕಿಸ್ತಾನ. ಬಿಳಿ ಕ್ಯಾರೆಟ್‌ನಲ್ಲಿ ವರ್ಣಕಾರಕಗಳು ಇರದಿದ್ದರೂ ದೇಹದ ಆರೋಗ್ಯವನ್ನು ಕಾಪಾಡಬಲ್ಲ ಅನೇಕ ರಾಸಾಯನಿಕಗಳು ಇರುತ್ತವೆ. ಕ್ಯಾರೆಟ್‌ನ ಬಣ್ಣ ಮತ್ತು ಬೆಳವಣಿಗೆಯ ಮೇಲೆ ಗಿಡದ ವಯಸ್ಸು ಮತ್ತು ಪರಿಸರದ ಉಷ್ಣತೆ ಪ್ರಭಾವ ಬೀರುತ್ತದೆ.

ನಡುಬೆರಳ ಉದ್ದದಷ್ಟು ಕ್ಯಾರೆಟ್ ಇರುವಂತೆ ತೀರ ಉದ್ದದ ಕ್ಯಾರೆಟ್‌ಗಳು ಇವೆ. ಜಪಾನಿನಲ್ಲಿ ಕೆಲವೊಮ್ಮೆ 90 ಸೆಂ.ಮೀನಷ್ಟು ಉದ್ದದ ಕ್ಯಾರೆಟ್ ಸಿಗುತ್ತದೆ. ಮತ್ತೊಂದು ಬಗೆಯ ಕ್ಯಾರೆಟ್ ತುಸು ನೇರಳೆ ಬಣ್ಣದಲ್ಲಿದ್ದು ಬೀಟ್ರೂಟ್‌ನಂತೆ ದುಂಡಗಿರುತ್ತದೆ.

ಕ್ಯಾರೆಟ್ ಗಿಡದ ಎಲೆಗಳು ಹಸುರಾಗಿರುತ್ತವೆ ಮತ್ತು ಸೀಳಿರುತ್ತವೆ. ಬೇರು ಆಹಾರ ಸಂಗ್ರಹಣೆ ಕೆಲಸವನ್ನು ಮಾಡುವುದರಿಂದಾಗಿ ಅದು ದಪ್ಪ ಗಾತ್ರದಲ್ಲಿ ಉದ್ದಕ್ಕೆ ಬೆಳೆಯುತ್ತದೆ. ಗಡ್ಡೆ ಚೆನ್ನಾಗಿ ಬೆಳೆಯುತ್ತಿದ್ದರೆ ಗಿಡದಲ್ಲಿ ಹೂವಿನ ತೆನೆ ಕಾಣಿಸಿಕೊಳ್ಳುತ್ತದೆ.

ಫ್ರಾನ್ಸ್‌ನಲ್ಲಿ ಕ್ಯಾರೆಟ್ ಬೀಜದ ಎಣ್ಣೆಯ ತಯಾರಿಕೆ ಮತ್ತು ಬಳಕೆ ಇದ್ದು ಅದರ ಬೀಜದ ತೈಲವು ಹಳದಿ ಬಣ್ಣವಿದ್ದು ಪರಿಮಳದಿಂದ ಕೂಡಿದೆ.

ಕ್ಯಾರೆಟ್ ಕೃಷಿ : ಕ್ಯಾರೆಟ್ ತಂಪಾದ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ ಪೊಟ್ಯಾಷ್ ಗೊಬ್ಬರ ಅತ್ಯುಪಯುಕ್ತವಾಗಿದೆ. ಈ ಕೃಷಿಗೆ ಹೆಚ್ಚಿನ ಶ್ರಮ ಮತ್ತು ಕೂಲಿಯಾಳುಗಳು ಬೇಕಾಗುವುದರಿಂದ ಕೃಷಿಕಾರ್ಯ ಶ್ರಮದಾಯಕವಾಗಿರುತ್ತದೆ. ಕೊಯ್ಲಿನ ಸಮಯದಲ್ಲಿ ಗಡ್ಡೆಗಳು ಎಳೆಯದಾಗಿರುವಾಗಲೇ ಕೊಯ್ಲು ಮಾಡಬೇಕು.

ಸಾಮಾನ್ಯವಾಗಿ ಇದಕ್ಕೆ ಅತಿ ಕಡಿಮೆಯಾದ 10^0 ಸೆಂಟಿಗ್ರೇಡ್‌ನಿಂದ 15^0 ಸೆಂಟಿಗ್ರೇಡ್‌ನವರೆಗೆ ಮತ್ತು ಅತಿ ಹೆಚ್ಚಾದ 20ರಿಂದ 25 ಸೆಂಟಿಗ್ರೇಡ್ ಉಷ್ಣತೆ ಇದರ ಬೆಳವಣಿಗೆಗೆ ಉಪಯುಕ್ತವಲ್ಲ. ಸಮತೋಲನವಾದ 15ರಿಂದ 20 ಡಿಗ್ರಿ ಸೆಂಟಿಗ್ರೇಡ್‌ನ ಒಳಗಿನ ಉಷ್ಣತೆಯಲ್ಲಿ ಬೆಳೆಸಿದರೆ ಕ್ಯಾರೆಟ್ ಉತ್ತಮವಾಗಿರುತ್ತದೆ.

ಕ್ಯಾರೆಟ್ ಕೃಷಿಗೆ ಮರಳು ಮಿಶ್ರಿತ ಗೋಡು ಮಣ್ಣು ಅತ್ಯಂತ ಯುಕ್ತವಾಗಿದೆ. ಈ ಮಣ್ಣಿನಲ್ಲಿ ಆಮ್ಲೀಯತೆಯು ಹೆಚ್ಚಾಗಿದ್ದರೆ ಒಳ್ಳೆಯ ಇಳುವರಿ ಸಿಗುವುದಿಲ್ಲ. ಇದರ ರಸಸಾರವು 6.5ರಷ್ಟು ಇರಬೇಕು. ಇದಕ್ಕಿಂತ 2.5ರಷ್ಟು ಕಡಿಮೆ ಇದ್ದರೆ ಇಳುವರಿ ಕಡಿಮೆಯಾಗುತ್ತದೆ. ಮಣ್ಣಿನಲ್ಲಿ ಪೊಟ್ಯಾಷ್ ಅಂಶ ಹೆಚ್ಚಾಗಿರಬೇಕು.

ಸಾಮಾನ್ಯವಾಗಿ ಒಂದು ಹೆಕ್ಟೇರ್‌ನಲ್ಲಿ 275 ಕ್ವಿಂಟಾಲ್ ಕ್ಯಾರೆಟ್ ಬೆಳೆದಾಗ ಮಣ್ಣಿನಲ್ಲಿ 125 ಕೆ.ಜಿ.ಪೊಟ್ಯಾಷ್, 40 ಕೆ.ಜಿ.ಸಾರಜನಕ ಮತ್ತು 22.5 ಕೆ.ಜಿ.ಫಾಸ್ಪೇಟ್ ಖಾಲಿಯಾಗುವುದರಿಂದ ಕ್ಯಾರೆಟ್ ಬಿತ್ತನೆ ಮತ್ತು ಕೊಯ್ಲಿನ ಅನಂತರ ಸಾಕಷ್ಟು ಪ್ರಮಾಣದಲ್ಲಿ ಒಂದು ಹೆಕ್ಟೇರ್ ಪ್ರದೇಶಕ್ಕೆ ಕೊಳೆತಿರುವ ಅಥವಾ ಕಳಿತಿರುವ ಗೊಬ್ಬರವನ್ನು 30ಟನ್‌ಗಳಷ್ಟು ಆ ಮಣ್ಣಿಗೆ ಹಾಕಬೇಕಾಗುತ್ತದೆ.

ಕ್ಯಾರೆಟ್‌ನ ಪ್ರಮುಖ ತಳಿಗಳು : ನ್ಯಾಂಟೆಸ್, ಚಾಂಟೆನಿ, ಅರ್ಕಸೂರಜ್, ಪೂಸಾ ಕೇಸರ್

ನ್ಯಾಂಟೆಸ್ : ಇದು ಯೂರೋಪಿನ ತಳಿ. ಮೈದಾನ ಪ್ರದೇಶಗಳಲ್ಲೂ ಇದನ್ನು ಬೆಳೆಸಬಹುದು. ಇವು ಎತ್ತರದ ಪ್ರದೇಶಗಳಲ್ಲಿ ಮಾತ್ರ ಬೀಜಗಳನ್ನು ಬಿಡುತ್ತವೆ. ಬೇರು ಗಡ್ಡೆಗಳು ಸಾಧಾರಣ ಉದ್ದವಾಗಿದ್ದು ನೋಡಲು ಆಕರ್ಷಕವಾಗಿರುತ್ತವೆ. ಗೆಡ್ಡೆಯ ತುದಿ ಇಲಿಯ ಬಾಲದಂತೆ ಸಪೂರವಾಗಿದ್ದು, ಗೆಡ್ಡೆಯ ತಿರುಳು ಕಿತ್ತಳೆ ಬಣ್ಣದಿಂದ ಕೂಡಿದ್ದು ರುಚಿಯಾಗಿರುತ್ತದೆ.

ಚಾಂಟೆನಿ : ಇದು ಸಹ ಯೂರೋಪಿನ ತಳಿಯಾಗಿದ್ದು, ಸಾಧಾರಣ ಉದ್ದವಾದ ಬೇರು ಗಡ್ಡೆಗಳು ನಯವಾಗಿದ್ದು ಆಕರ್ಷಕ ದಟ್ಟ ಕಿತ್ತಳೆ ಕೆಂಪು ಬಣ್ಣ ಹೊಂದಿರುತ್ತದೆ. ತಿರುಳು ಸಿಹಿ ರುಚಿಯಿಂದ ಕೂಡಿರುತ್ತದೆ.

ಅರ್ಕಸೂರಜ್ : ಇದು ಸಹ ಕಿತ್ತಳೆ ಬಣ್ಣದಿಂದ ಕೂಡಿರುತ್ತದೆ. ಗಡ್ಡೆ 10 ಸೆಂ.ಮೀ ಉದ್ದವಿರುತ್ತದೆ. ಈ ತಳಿಯು ಕ್ಯಾರೆಟ್ ಬೆಳೆಗೆ ಬರುವ ಬೂದುರೋಗ ನಿರೋಧಕ ಶಕ್ತಿಯನ್ನು ಹೊಂದಿದೆ. ಇದರಲ್ಲಿ ಕ್ಯಾರೋಟಿನ್ ಅಂಶ ಹೆಚ್ಚಾಗಿರುತ್ತದೆ. ಚಳಿಗಾಲಕ್ಕೆ ಹೆಚ್ಚು ಯುಕ್ತವಾದ ತಳಿಯಾಗಿದ್ದು ಬೆಳೆಯ ಅವಧಿ 80ರಿಂದ 85 ದಿನಗಳು. ಈ ತಳಿಯಿಂದ ಹೆಕ್ಟೇರಿಗೆ 20ರಿಂದ 25 ಟನ್ ಇಳುವರಿಯನ್ನು ನಿರೀಕ್ಷಿಸಬಹುದು.

ಪೂಸಾ ಕೇಸರ್ : ಇದೊಂದು ಮಿಶ್ರ ತಳಿ. ಬೇರು ಸಾಧಾರಣ ಗಾತ್ರದಲ್ಲಿ ಉದ್ದವಾಗಿದ್ದು, ಮಧ್ಯಭಾಗ ಸಂಕುಚಿತವಾಗಿರುತ್ತದೆ. ಕೆರೋಟಿನ್ ಅಂಶ ಹೆಚ್ಚಾಗಿರುತ್ತದೆ. ಗಡ್ಡೆಯ ಬಣ್ಣ ಕೆಂಪು. ಮೈದಾನ ಪ್ರದೇಶದಲ್ಲಿ ಈ ತಳಿಯನ್ನು ಬೆಳೆಸಿದಾಗ ಬೀಜಗಳು ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತವೆ.

ಬಿತ್ತನೆ ಕ್ರಮ : ಮಣ್ಣನ್ನು ಚೆನ್ನಾಗಿ ಉಳುಮೆ ಮಾಡಿ 5 ಅಡಿ ಉದ್ದಗಲದ ಮಡಿಗಳನ್ನು ಮಾಡಬೇಕು. ಅಗತ್ಯವಿರುವಷ್ಟು ಕೊಟ್ಟಿಗೆ ಗೊಬ್ಬರವನ್ನು ಮಿಶ್ರ ಮಾಡಬೇಕು. ಬೀಜಗಳನ್ನು ತೆಳುವಾಗಿ ಬಿತ್ತಬೇಕು. ನೀರನ್ನು ಹಾಯಿಸಬೇಕು. ಸಾಮಾನ್ಯವಾಗಿ ಒಂದು ವಾರದಲ್ಲಿ ಕ್ಯಾರೆಟ್ ಬೀಜಗಳು ಮೊಳೆಯುತ್ತವೆ. ಬೀಜಗಳು ಮೊಳಕೆ ಬಂದು ಸಸಿಗಳಾದಾಗ 10 ಸೆಂ.ಮೀ.ಗೆ ಒಂದರಂತೆ ಸಸಿಯನ್ನು ಉಳಿಸಿಕೊಂಡು ಉಳಿದ ಸಸಿಗಳನ್ನು ತೆಗೆಯಬೇಕು. ಪ್ರತಿ ಹೆಕ್ಟೇರ್ ಪ್ರದೇಶಕ್ಕೆ 5-6 ಕೆ.ಜಿ.ಯಷ್ಟು ಬೀಜ ಬೇಕಾಗುತ್ತದೆ.

ನೀರಾವರಿ ಮತ್ತು ಕೃಷಿ ನಿರ್ವಹಣೆ : ಕ್ಯಾರೆಟ್ ಕೃಷಿಗೆ ಅಧಿಕವಾದ ನೀರು ಅವಶ್ಯವಿರುವುದಿಲ್ಲ. ಮಣ್ಣಿನ ಆರ್ದ್ರತೆಯನ್ನು ಕಾಯ್ದುಕೊಂಡು

ನಾಲ್ಕೈದು ದಿನಗಳಿಗೊಮ್ಮೆ ನೀರು ಹಾಯಿಸಬೇಕಾಗುತ್ತದೆ. ಅತಿ ಕಡಿಮೆ ನೀರಿನ ಪ್ರಮಾಣವಿದ್ದಾಗಲೂ ಗಡ್ಡೆ ಚೆನ್ನಾಗಿ ಬೆಳೆಯುವುದಿಲ್ಲ. ಸಮರ್ಪಕ ನೀರಿನ ಹಾಯಿಸುವಿಕೆ ಪ್ರಮುಖವಾಗಿರುತ್ತದೆ. ಕ್ಯಾರೆಟ್ ಬೆಳೆಗೆ ಕಳೆಗಿಡಗಳ ಕಾಟ ಹೆಚ್ಚು. ಬಲಿಷ್ಠವಾದ ಕಳೆ ಗಿಡಗಳ ಜೊತೆ ಸ್ಪರ್ಧಿಸಲು ಕ್ಯಾರೆಟ್‌ಗೆ ಸಾಧ್ಯವಿರುವುದಿಲ್ಲ. ಹಾಗಾಗಿ ಕ್ಯಾರೆಟ್ ಗಿಡದ ಸುತ್ತ ಬೆಳೆಯುವ ಕಳೆ ಗಿಡಗಳನ್ನು ಆಗಾಗ ಕೀಳಬೇಕು.

ಕ್ಯಾರೆಟ್‌ನ ಉಪಯೋಗಗಳು : ತೀರ ಎಳೆಯ ಕ್ಯಾರೆಟ್ ಅನ್ನು ಬೇಬಿ ಕ್ಯಾರೆಟ್ ಎನ್ನುತ್ತಾರೆ. ಇದು ತಿನ್ನಲು ರುಚಿಯಾಗಿರುತ್ತದೆ. ಇದನ್ನು ಕೋಸಂಬರಿ, ಜ್ಯೂಸ್, ಉಪ್ಪಿನಕಾಯಿ, ಜಾಮ್, ಹಲ್ವ ಇತ್ಯಾದಿ ತಿನಿಸು ತಯಾರಿಸಲು ಬಳಸಲಾಗುತ್ತದೆ.

ಕ್ಯಾರೆಟ್‌ನಲ್ಲಿರುವ ಕ್ಯಾರೋಟಿನ್ ಅಂಶಗಳನ್ನು ತೆಗೆದು ಬೆಣ್ಣೆಗೆ ಮತ್ತು ಇತರ ಆಹಾರ ವಸ್ತುಗಳಿಗೆ ಆಕರ್ಷಕ ಬಣ್ಣ ಕೊಡಲು ಉಪಯೋಗಿಸುತ್ತಾರೆ. ಕ್ಯಾರೆಟ್ ಬೀಜದಲ್ಲಿ ತೈಲಾಂಶವಿದೆ. ಇದೊಂದು ಚಂಚಲ ತೈಲವಾಗಿದೆ. ಕ್ಯಾರೆಟ್ ಬೀಜವನ್ನು ಉತ್ತೇಜಕವಾಗಿ ಮತ್ತು ಹೊಟ್ಟೆಯಲ್ಲಿ ಸಂಚಯಗೊಂಡಿರುವ ಗ್ಯಾಸ್ ಅನ್ನು ತೆಗೆದು ಹಾಕಲು ಉಪಯೋಗಿಸುತ್ತಾರೆ. ಕ್ಯಾರೆಟ್ ಮತ್ತು ಅದರ ಸೊಪ್ಪನ್ನು ಕುದುರೆ, ದನಕರುಗಳು ಮತ್ತು ಇನ್ನಿತರ ಪ್ರಾಣಿಗಳಿಗೂ ಆಹಾರವಾಗಿ / ಮೇವಾಗಿ ಬಳಸಲಾಗುತ್ತದೆ. ಕ್ಯಾರೆಟ್ ಬೀಜಗಳನ್ನು ಬೇಯಿಸಿ, ಜೇನುತುಪ್ಪ ಸೇರಿಸಿ ಹುದುಗು ಬರಿಸಿ, ಒಂದು ಮಾದಕ ಪಾನಿಯವನ್ನು ತಯಾರಿಸುತ್ತಾರೆ.

ಕ್ಯಾರೆಟ್‌ನಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿದೆ. ಇದೇ ತರಹದ ಸಕ್ಕರೆಯ ಅಂಶ ಬೀಟ್ರೂಟ್‌ನಲ್ಲಿಯೂ ಇದೆ. ಬೀಟ್ರೂಟ್ ಅನ್ನು ಬಳಸಿ ಸಕ್ಕರೆಯನ್ನು ಉತ್ಪಾದಿಸುವ ಕಾರ್ಯ ಈಗಾಗಲೇ ಪ್ರಪಂಚದ ಅನೇಕ ಕಡೆ ನಡೆದಿದೆ. ಅದೇ ರೀತಿ ಕ್ಯಾರೆಟ್‌ನ ರಸದಿಂದ ಸಕ್ಕರೆಯನ್ನು ತಯಾರಿಸಬಹುದು. ಆದರೆ ಅದು ಹರಳು ಕಟ್ಟದೆ ಇರುವುದರಿಂದ ಕ್ಯಾರೆಟ್ ಸಕ್ಕರೆ ಸದ್ಯಕ್ಕೆ ಸಿಗುತ್ತಿಲ್ಲ. ಅದೇ ರೀತಿ ಕ್ಯಾರೆಟ್‌ನಲ್ಲಿ 'ಎ' ಮತ್ತು 'ಸಿ' ಜೀವಸತ್ವಗಳು ಹೆಚ್ಚಾಗಿರುತ್ತವೆ. ಕ್ಯಾರೆಟ್ ಸೊಪ್ಪಿನಲ್ಲಿ ಬಿ1 ಮತ್ತು ಬಿ2 ಜೀವಸತ್ವಗಳು ಸಮೃದ್ಧವಾಗಿರುತ್ತವೆ. ಇದು ಕಣ್ಣಿನ ಆರೋಗ್ಯಕ್ಕೆ ಹೆಚ್ಚು ಅನುಕೂಲವಾಗಿದೆ.

ಕ್ಯಾರೆಟ್ ಸೇವನೆಯಿಂದ ಉಸಿರಾಟದ ಸಮಸ್ಯೆಗಳು, ಹೊಟ್ಟೆಯ ತೊಂದರೆಗಳು, ಸಂಧಿವಾತ, ಮೂತ್ರ ವಿಸರ್ಜನೆಯಲ್ಲಿಯ ಉರಿಯ ಸಮಸ್ಯೆ, ಚರ್ಮರೋಗದ ಸಮಸ್ಯೆ, ಕೊಲೆಸ್ಟರಾಲ್ ಸಮಸ್ಯೆ, ರಕ್ತಹೀನತೆಯ ಸಮಸ್ಯೆ, ಅಸ್ತಮಾ, ಆಮ್ಲೀಯತೆ, ಅನೀಮಿಯಾ, ಇರುಳು ಕುರುಡು, ದೇಹದಲ್ಲಿ ಕಲ್ಲುಗಳಾಗಿರುವುದು, ಅಸಿಡೋಸಿಸ್, ರಕ್ತಮಾಲಿನ್ಯ, ಎಂಫಿಸೀಮಾ, ಅಥೆರೋಸ್ಕ್ಲೆರೋಸಿಸ್, ಕ್ಯಾನ್ಸರ್, ಮಲಬದ್ಧತೆ, ವಾತ ನೋವು, ಅಲ್ಸರ್ ಹಾಗೂ ಇನ್ನಿತರ ಹಲವಾರು ರೋಗಗಳಿಗೂ ಕ್ಯಾರೆಟ್ ಅತ್ಯಂತ ಉಪಯುಕ್ತವಾದುದಾಗಿದೆ. ಕ್ಯಾರೆಟ್ ಮಹಿಳೆಯರ ಹಲವಾರು ಸಮಸ್ಯೆಗಳಿಗೂ ಪರಿಹಾರ ನೀಡುತ್ತದೆ.

ಕ್ಯಾರೆಟ್‌ನಲ್ಲಿರುವ ಪೋಷಕಾಂಶಗಳು : 100 ಗ್ರಾಂ.ನಲ್ಲಿ ತೇವಾಂಶ - 86 ಗ್ರಾಂ, ಕೊಬ್ಬು - 0.2 ಗ್ರಾಂ, ಖನಿಜಗಳು - 1.1 ಗ್ರಾಂ, ಪ್ರೋಟಿನ್ - 0.9 ಗ್ರಾಂ, ನಾರು - 1.2 ಗ್ರಾಂ, ಕ್ಯಾಲೋರಿ - 47 ಗ್ರಾಂ, ಇತರ ಕಾರ್ಬೋಹೈಡ್ರೇಟ್‌ಗಳು - 10.6 ಗ್ರಾಂ, ಕ್ಯಾಲ್ಸಿಯಂ - 80 ಮಿ.ಗ್ರಾಂ, ಮೆಗ್ನಿಷಿಯಂ - 14ಮಿ.ಗ್ರಾಂ, ಆಕ್ಸಾಲಿಕ್ ಆಮ್ಲ - 5 ಮಿ. ಗ್ರಾಂ, ರಂಜಕ - 30 ಮಿ.ಗ್ರಾಂ, ಕಬ್ಬಿಣಾಂಶ - 2.2 ಮಿ.ಗ್ರಾಂ, ಸೋಡಿಯಂ - 35.6 ಮಿ.ಗ್ರಾಂ, ಪೊಟ್ಯಾಷಿಯಂ - 108 ಮಿ.ಗ್ರಾಂ, ತಾಮ್ರ - 0.13 ಮಿ. ಗ್ರಾಂ, ಗಂಧಕ - 27 ಮಿ.ಗ್ರಾಂ, 'ಎ' ಜೀವಸತ್ವ - 3.150 ಐಯು, ಸಿ. ಜೀವಸತ್ವ - 3 ಮಿ.ಗ್ರಾಂ.

ಕ್ಯಾರೆಟ್‌ನಿಂದ ಹಲವಾರು ರೀತಿಯ ತಿಂಡಿ ತಿನಿಸುಗಳನ್ನು ಮಾಡಬಹುದು. ಮುರಬ್ಬ, ಹಲ್ವ, ಕಂಜಿ, ಜ್ಯೂಸ್, ಜಾಮ್, ಸಲಾಡ್, ಹೋಳಿಗೆ, ಕೋಸಂಬರಿ, ಹೆಸರುಬೇಳೆ, ಶುಂಠಿ ಕೋಸಂಬರಿ, ಸೂಪ್, ಉಪ್ಪಿನಕಾಯಿ, ಕೇಕ್, ಲಡ್ಡು, ಒಣದ್ರಾಕ್ಷಿ ಕೇಕ್, ಪಪ್ಪಾಯ ಸಲಾಡ್, ಶರಬತ್ತು. ಹೀಗೆ ಕ್ಯಾರೆಟ್ ಸರ್ವಜನೋಪಕಾರಿ ತರಕಾರಿಯಾಗಿದೆ.

ಎಂ.ಜಿ.

ಕ್ರೋಟನ್ ಇದು ಪ್ರಸಿದ್ಧ ಆಲಂಕಾರಿಕ ಸಸ್ಯ. ಇದರ ಮೂಲಸ್ಥಾನ ಮಲಯ. ವೈಜ್ಞಾನಿಕ ಹೆಸರು 'ಕೋಡೀಯಮ್ ವೇರಿಗೇಟಮ್'. ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದೆ. ಇದರಲ್ಲಿ ವೈವಿಧ್ಯಮಯವಾದ ಜಾತಿಗಳಿವೆ. ಒಂದೊಂದು ಜಾತಿಯಲ್ಲೂ ಬಣ್ಣದಲ್ಲಿ, ಎಲೆಗಳ ಆಕಾರದಲ್ಲಿ ವ್ಯತ್ಯಾಸವಿರುತ್ತದೆ. 2-6 ಅಡಿ ಎತ್ತರಕ್ಕೆ ಬೆಳೆಯುತ್ತದೆ. ಬುಡದಿಂದ ಎರಡುಮೂರು ಮುಖ್ಯ ಕಾಂಡಗಳು ಕವಲೊಡೆಯುತ್ತವೆ. ಎಲೆಗಳ ತೊಟ್ಟು ಚಿಕ್ಕದು. ಎಲೆಗಳು ನಯವಾಗಿದ್ದು ಅಂಕುಡೊಂಕಾಗಿರುತ್ತವೆ. ಎಲೆಗಳ ತುದಿ ಮೊಂಡು ಅಥವಾ ಮೊನಚು; ಬಿಳಿ, ಕೆಂಪು, ಕಡುಗೆಂಪು ಹಳದಿ, ಕಿತ್ತಲೆ, ನೇರಳೆ ಬಣ್ಣಗಳಿರುತ್ತವೆ. ಎಲೆಗಳ ಮೇಲೆ ಆಕರ್ಷಕ ಬಣ್ಣದ ಚುಕ್ಕಿಗಳಿದ್ದು ನಯನಮನೋಹರವಾಗಿರುತ್ತವೆ. ಹೂಗಳು ನಿಸ್ತೇಜವಾಗಿದ್ದು ಏಕಲಿಂಗಿಯಾಗಿವೆ. ಅಂತ್ಯಾರಂಭಿ ಮಾದರಿಯ



ಹೂಗೊಂಚಲಿದ್ದು ಇದರಲ್ಲಿ ಹೆಣ್ಣು ಮತ್ತು ಗಂಡು ಹೂಗಳಿರುತ್ತವೆ. ಗಂಡು ಹೂ 20-30 ಕೇಸರಗಳು; ದಳಗಳು ಮತ್ತು ಪುಷ್ಪಪತ್ರಗಳನ್ನು ಹೊಂದಿದೆ. ಉಚ್ಚಸ್ಥಾನದ ಅಂಡಾಶಯವುಳ್ಳ ಹೆಣ್ಣು ಹೂವಿನಲ್ಲಿ ಪುಷ್ಪಪತ್ರ ಮತ್ತು ಮೂರು ಕಾರ್ಪೆಲ್ಲುಗಳಿರುತ್ತವೆ.

ಜನಪ್ರಿಯ ಆಲಂಕಾರಿಕ ಸಸ್ಯವಾಗಿರುವುದರಿಂದ ಇಂದು ಪ್ರಪಂಚಾದ್ಯಂತ ಇದನ್ನು ಬೆಳೆಸುತ್ತಿದ್ದಾರೆ. 19ನೆಯ ಶತಮಾನದಲ್ಲಿ ಯುರೋಪಿಗೆ ಕಾಲಿಟ್ಟು ಅನಂತರ ಭಾರತದಲ್ಲಿ ಬೇರೂರಿತು.

ಬೆಳೆಸುವ ವಿಧಾನ : ಕಾಂಡವನ್ನು ಕತ್ತರಿಸಿ ಗೂಟಿ ಮಾಡುವ ಮೂಲಕ ಸಸಿಯನ್ನು ಬೆಳೆಸುತ್ತಾರೆ. ಬೀಜಗಳಿಂದಲೂ ಬೆಳೆಸುವುದಿದೆ. ಬೇರೆ ಬೇರೆ ಜಾತಿಯ ಕ್ರೋಟನ್‌ಗಳ ಕಾಂಡವನ್ನು ಕಸಿ ಮಾಡುವುದರ ಮೂಲಕ ವಿವಿಧ ಬಗೆಯ ಆಕರ್ಷಕ ತಳಿಗಳನ್ನು ವೃದ್ಧಿಪಡಿಸಬಹುದು. ಇಂಥ ತಳಿಯನ್ನು ಗೂಟಿ ವಿಧಾನದಿಂದ ಸುಲಭವಾಗಿ ಬೆಳೆಸಬಹುದು. ಒಂದು ಅಡಿ ಉದ್ದದ ಬಲಿತ ಕಾಂಡಗಳನ್ನು ತುಂಡರಿಸಿ ಮರಳು ಬೆರೆಸಿ ಗೊತ್ತುಪಡಿಸಿದ ಚೌಕಟ್ಟಿನಲ್ಲಿ ನೆಟ್ಟು ಎಡೆಬಿಡದೆ ನೀರನ್ನು ಹನಿಸುತ್ತಿದ್ದರೆ ಬೇಗನೆ ಬೇರುಬಿಡುತ್ತವೆ. ಕುಂಡದಲ್ಲೂ ನೆಲದಲ್ಲೂ ಸುಲಭವಾಗಿ ಬೆಳೆಸಬಹುದಾದರೂ ನೆಲದಲ್ಲಿ ಸೊಂಪಾಗಿ ಬೆಳೆಯುತ್ತದೆ.

ಸಸಿಯನ್ನು ಬೆಳೆಸಲು ಬಳಸುವ ಮಣ್ಣು ಫಲವತ್ತಾಗಿರಬೇಕು. ಕೆಂಪು ಮಣ್ಣಿನ ಜೊತೆಗೆ ಸಮಪ್ರಮಾಣದಲ್ಲಿ ಕುದುರೆಗೊಬ್ಬರ ಅಥವಾ ಕುರಿಗೊಬ್ಬರ, ಮರಳು, ಎಲೆಗೊಬ್ಬರ ಮತ್ತು ಸುಣ್ಣದ ಅಂಶವಿರುವ ಮಣ್ಣು ಬೆರೆಸಿಟ್ಟುಕೊಂಡು ಮೂರು ತಿಂಗಳಿಗೊಮ್ಮೆಯಾದರೂ ಕುಂಡಗಳಿಗೆ ಮಣ್ಣು ತುಂಬಿಸಬೇಕು. ಗಿಡ ದೊಡ್ಡದಾದಂತೆ ಬೆಳೆಸುವ ಕುಂಡವೂ ದೊಡ್ಡದಾಗಿರಬೇಕು. ಇದಕ್ಕೆ ತೇವಾಂಶ ಕಡಿಮೆಯಾಗದಂತೆ ನೀರುಣಿಸುತ್ತಿರಬೇಕು. ಕುಂಡದಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಬೇಕು. ನೀರು ನಿಂತಿದ್ದರೆ ಗಿಡ ಕೊಳೆಯುತ್ತದೆ.

ಇದನ್ನು ನೇರವಾಗಿ ಬಿಸಿಲು ಬೀಳದಂತೆ ಅರೆನೆರಳಿನಲ್ಲಿ ಬೆಳೆಸಬೇಕು. ಪ್ರಖರವಾದ ಬಿಸಿಲಿಗೆ ಎಲೆಗಳ ಬಣ್ಣ ಮಾಸುತ್ತದೆ. ಎಲೆಗಳ ಮೇಲೆ ದೂಳು ಕೂರದಂತೆ ಮೇಲಿನಿಂದ ನೀರನ್ನು ಚಿಮುಕಿಸಬೇಕು. ಹೀಗೆ ಮಾಡುವುದರಿಂದ ಎಲೆಗಳ ಹೊಳಪು ಹೆಚ್ಚಾಗಿ ಸಣ್ಣ ಪುಟ್ಟ ಕ್ರಿಮಿಕೀಟಗಳು ಬಾರದಂತೆ ತಡೆಗಟ್ಟಬಹುದು. ಬಿಳಿ ತಿಗಣೆ, ಕೆಂಪುಜೇಡ ಮುಂತಾದವು ಈ ಸಸ್ಯವನ್ನು ಕಾಡುತ್ತವೆ. ಇವುಗಳ ಹಾವಳಿ ಹೆಚ್ಚಾದರೆ ಸಸ್ಯವೇ ನಾಶವಾಗುವುದುಂಟು.

ಮಲಯದಲ್ಲಿ ಇದನ್ನು ಕೇವಲ ಆಲಂಕಾರಿಕ ಸಸ್ಯವಾಗಿ ಬೆಳೆಸದೆ ಔಷಧಿಗೂ ಆಹಾರವಾಗಿಯೂ ಬಳಸುತ್ತಾರೆಂದೂ ತಿಳಿದುಬಂದಿದೆ.

ಜಿ.ಎನ್.ಎಸ್.

ಕ್ಲೆಮಾಟಿಸ್ ಇದೊಂದು ಆಲಂಕಾರಿಕ ಬಳ್ಳಿರೂಪದ ಸಸ್ಯ. ಇದರ ವೈಜ್ಞಾನಿಕ ನಾಮ ರ್‍ಯಾನನ್‌ಕ್ಯುಲೇಸೀ. ಇಂಗ್ಲಿಷಿನಲ್ಲಿ ವರ್ಜಿನ್ಸ್ ಬವರ್ ಎಂದೂ ಕನ್ನಡದಲ್ಲಿ ಹೊಟ್ಟು, ಅಂಬು, ತಲೆಜಡಾರಿ ಎಂದೂ ಕರೆಯುತ್ತಾರೆ. ಪ್ರಪಂಚಾದ್ಯಂತ 250 ಪ್ರಭೇದಗಳನ್ನು ಗುರುತಿಸಲಾಗಿದೆ. ಭಾರತದಲ್ಲಿ ಸು. 25 ಪ್ರಭೇದಗಳಿದ್ದರೂ ಕ್ಲೆಮಾಟಿಸ್ ಗೌರಿಯಾನ ಎಂಬ ಪ್ರಭೇದ ಸ್ವಾಭಾವಿಕವಾಗಿ ಬೆಳೆಯುತ್ತದೆ. ಈ ಬಳ್ಳಿಯಲ್ಲಿ ಬೆಳೆಯುವ ಹೂಗಳು ಅತಿ ಸುಂದರವಾಗಿದ್ದು ಉದ್ಯಾನವನಗಳಲ್ಲಿ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ಭವ್ಯವಾದ ಬಂಗಲೆಗಳ ಗೋಡೆಗಳ ಮೇಲೆ ಅಥವಾ ಅಂಗಳದಲ್ಲಿ ಚಪ್ಪರದಂತೆ ಆಲಂಕಾರಿಕವಾಗಿ ಹಬ್ಬಿಸಿ ಬೆಳೆಸುವುದಿದೆ. ಇದು ಬಹುವಾರ್ಷಿಕವಾಗಿ ಬೆಳೆಯುವಂಥದು. ಎಲೆಯತೊಟ್ಟುಗಳ ಸಹಾಯದಿಂದ ಆಸರೆ ಪಡೆದು ಹಬ್ಬುತ್ತವೆ. ಅಭಿಮುಖ ಜೋಡಣೆಯ ಸಂಯುಕ್ತ ಮಾದರಿಯ ಎಲೆಗಳಿವೆ. ಒಂದೊಂದು ಹೂವಿನಲ್ಲೂ ನಾಲ್ಕು ಇಲ್ಲವೆ ಐದು ಪುಷ್ಪಪತ್ರಗಳು, ಅನೇಕ ಕೇಸರಗಳು, ಕಾರ್ಪೆಲುಗಳು ಹಾಗೂ ಅಂಡಾಶಯವನ್ನು ಹೊಂದಿದೆ. ಈ ಸಸ್ಯದ ಹೂವಿನಲ್ಲಿ ದಳಗಳು ಇರುವುದಿಲ್ಲ. ಕಾರ್ಪೆಲ್ಲುಗಳು ಬಿಡಿಬಿಡಿಯಾಗಿರುತ್ತವೆ. ಎಕೀನ್ ಎಂಬ ಏಕಬೀಜವನ್ನು ಹೊಂದಿದೆ. ಪ್ರತಿ ಶಲಾಕೆಯ ಮೇಲೆ ಕೂದಲುಗಳು ಯಥೇಚ್ಛವಾಗಿದ್ದು ಗಡ್ಡದಂತೆ ಕಾಣುವುದರಿಂದ ಇದನ್ನು ಮುದುಕನ ಗಡ್ಡ ಎಂದು ಕರೆಯುತ್ತಾರೆ.

ಇದರ ಬೇರಿನಿಂದ ಕಷಾಯ ತೆಗೆದು ಕುರು, ಇಸಬು, ರಕ್ತದೋಷ,ಜ್ವರ ಮುಂತಾದವುಗಳನ್ನು ಗುಣಪಡಿಸಲು ಬಳಸುತ್ತಾರೆ. ಬೀಜ, ಲೇಯರಿಂಗ್ ಪದ್ಧತಿ ಇಲ್ಲವೆ ಇನಾರ್ಚಿಂಗ್ ಪದ್ಧತಿಯಿಂದ ಇದನ್ನು ಬೆಳೆಸಬಹುದು. ಉತ್ತಮ ಬೆಳವಣಿಗೆಗೆ ಆಳವಾದ ಗೋಡು ಮಣ್ಣು, ಕುದುರೆಗೊಬ್ಬರ, ಕೊಟ್ಟಿಗೆ ಗೊಬ್ಬರ ಬಳಸಬಹುದು.

ವಿ.ಸಿ.ಎಸ್.

ಖರ್ಜೂರ ಖರ್ಜೂರ ಅತಿ ಸಿಹಿಯಾದ ಹಣ್ಣುಗಳ ಗುಂಪಿಗೆ ಸೇರಿದೆ. ಇದು ಮರು ಭೂಮಿಯ ಬೆಳೆ. ಸೌದಿ ಅರೇಬಿಯವನ್ನು ಖರ್ಜೂರ ಉತ್ಪಾದನೆಯ ತವರು ಭೂಮಿ ಎಂದು ಕರೆಯುತ್ತಾರೆ.



ಇಲ್ಲಿಯ ರಾಷ್ಟ್ರೀಯ ಲಾಂಛನವಾದ ಎರಡು ಖಡ್ಗಗಳ ಮಧ್ಯೆ ಖರ್ಜೂರದ ಮರವಿದೆ. ಸುಮಾರು ಹತ್ತು ಸಾವಿರ ವರ್ಷಗಳಷ್ಟು ಪುರಾತನವಾದ ಖರ್ಜೂರ ಮರವು ಸೌದಿ ಅರೇಬಿಯಾದಲ್ಲಿ ಕಾಣಸಿಗುತ್ತದೆ. ಇಲ್ಲಿ ಬೆಳೆಯುವ ಖರ್ಜೂರ ಹೆಚ್ಚು ರುಚಿಕರ ಮತ್ತು ಸ್ವಾದಿಷ್ಟವಾಗಿರುತ್ತದೆ. ಸುಮಾರು ಮುನ್ನೂರು ಬಗೆಯ ಖರ್ಜೂರಗಳಿದ್ದು ಬಗೆ ಬಗೆಯ ಸ್ವಾದ ಹಾಗೂ ಆಕಾರವನ್ನು ಹೊಂದಿವೆ. ಇಲ್ಲಿಯ ಆರ್ಥಿಕ ಬೆಳೆಯಾಗಿ ಖರ್ಜೂರ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಖರ್ಜೂರವನ್ನು ಮೃದು, ಅರೆಮೃದು, ಒಣಖರ್ಜೂರವೆಂದು ವಿಂಗಡಿಸಲಾಗುತ್ತದೆ. ಚೆನ್ನಾಗಿ ಫ್ರೀಜ್ ಆಗುವುದರಿಂದ ಇದನ್ನು ಫ್ರೀಜರ್‌ನಲ್ಲಿಟ್ಟು ವರ್ಷವಿಡಿ ಉಪಯೋಗಿಸಬಹುದು. ಸಾಮಾನ್ಯವಾಗಿ ಖರ್ಜೂರವು ಉರುಳೆ ಆಕಾರದಲ್ಲಿದ್ದು 2.5.5 ಸೆಂ.ಮೀ. ಉದ್ದ 1.5.2 ಸೆಂ.ಮೀ. ಸುತ್ತಳತೆ (ವ್ಯಾಸ) ಹೊಂದಿರುತ್ತದೆ. ಒಳಗಿನ ಬೀಜವು 2.2 ಸೆಂ.ಮೀ ಉದ್ದ 5.7 ಎಂ.ಎಂ. ದಪ್ಪವಾಗಿರುತ್ತದೆ.

ತಳಿಗಳು : ಖರ್ಜೂರದ ಸ್ವಾದ, ಪೌಷ್ಟಿಕತೆ ಮತ್ತು ಆಕಾರಕ್ಕೆ ತಕ್ಕಂತೆ ವಿಂಗಡಿಸಲಾಗುತ್ತದೆ.

ಮೃದು - ಖಲಾಸ್ - ಖಾಸಿಂ, ಖಲಾಸ್ - ಖರ್ಜ್

ಅರೆಮೃದು - ಅಜ್ವಾ, ಅನ್ಬರಾ, ಮಬ್ರೂಂ, ಮೆದ್‌ಜೋಲ್, ಬರ್ನಿ

ಒಣ - ರುತಾನ, ನಬ್ತ್‌ತ್‌ಅಲಿ, ಸೆಗ್ಗಾಯಿ, ಸುಕ್ಕಾರಿ.

ಅಮೆರಿಕದಲ್ಲಿ ಉಪಯೋಗಿಸುವ ಖರ್ಜೂರವನ್ನು ಡೆಗ್ಲೆಟ್‌ನೂರ್ ಮತ್ತು ಮೆಡ್‌ಜೋಲ್ ಎಂದು ಕರೆಯುತ್ತಾರೆ.

ಇತಿಹಾಸ : ಕ್ರಿ.ಪೂ. 2500 ರಲ್ಲಿ ಖರ್ಜೂರದ ಕೃಷಿ ಮಾಡುತ್ತಿದ್ದರೆನ್ನುತ್ತಾರೆ. ಈ ಮರದ ಸೌಂದರ್ಯ ಹಾಗೂ ಹಣ್ಣಿನ ರುಚಿಗೆ ಮಾರು ಹೋಗಿ ಪ್ರಪಂಚದ ಬೇರೆ - ಬೇರೆ ರಾಷ್ಟ್ರಗಳಲ್ಲಿ ವೃದ್ಧಿಸಿ ಬೆಳೆಸಿದರು. ಅಲೆಕ್ಸಾಂಡರ್ ಮೊದಲ ಬಾರಿಗೆ ಪಶ್ಚಿಮ ಭಾರತ, ಈಗಿನ ಪಾಕಿಸ್ತಾನಕ್ಕೆ ಪರಿಚಯಿಸಿದನೆಂದು ಹೇಳುತ್ತಾರೆ. ಕಲೀಫಾ ಅಬ್ದುಲ್ ರೆಹಮಾನ್ ಅಲ್ಕಾಡಕೇಲ್‌ರವರು ಸ್ಪೇನ್ ದೇಶಕ್ಕೆ, ಪೋರ್ಚ್‌ಗೀಸರು ಮೆಕ್ಸಿಕೋ ದೇಶಕ್ಕೆ ಪರಿಚಯಿಸಿದರು. ಇರಾನ್,ಇರಾಕ್, ಈಜಿಪ್ಟ್‌ಗಳಲ್ಲಿಯು ಇದನ್ನು ಬೆಳೆಸುತ್ತಾರೆ. ಸುಮಾರು ಹದಿನೆಂಟನೆಯ ಶತಮಾನದಲ್ಲಿ ಅಮೆರಿಕ ದೇಶವನ್ನು ಇದು ತಲಪಿತು ಎಂದು ಕೆಲವರು ಹೇಳುವುದುಂಟು.

ಕೃಷಿ : ಖರ್ಜೂರದ ಮರ (ಫೀನಿಕ್ಸ್ ಡ್ಯಾಕ್ಟಲಿ ಫೆರಾ) ಭಿನ್ನ ಲಿಂಗಿಯಾಗಿರುತ್ತದೆ. ಅಂದರೆ ಗಂಡು ಮತ್ತು ಹೆಣ್ಣು ಸಸ್ಯಗಳು ಇವೆ. ಹೆಣ್ಣು ಹೂವುಗಳು ಫಲೀಕರಣಕ್ಕೆ ಪುರುಷ ಪರಾಗದ ಅಗತ್ಯವಿರುತ್ತದೆ. ಪರಾಗ ಸ್ಪರ್ಶ ಪ್ರಕ್ರಿಯೆಯನ್ನು ಸಾಂಪ್ರದಾಯಿಕವಾಗಿ ಕೈಯಲ್ಲಿ ಮಾಡಲಾಗುತ್ತದೆ. ಪುರುಷ ಹೂವಿನ ಒಂದು ಸ್ಪಿಕ್‌ಲೈಟ್ ತುಣುಕುಗಳನ್ನು ಸ್ತ್ರೀ ಹೂವಿನ ಆರಂಭಿಕ ಸಮಯದಲ್ಲಿ ತೂರಿಸುವ ಮೂಲಕ ನಡೆಯುತ್ತದೆ. ಅರೇಬಿಯಾದಲ್ಲಿವಿವಿಧ ಜಾತಿಯ ಕೀಟಗಳು ಕಾಣಸಿಗುವುದಿಲ್ಲ. ಆದ್ದರಿಂದ ಈ ಪ್ರಾಕೃತಿಕ ಪರಾಗಸ್ಪರ್ಶತೆಯು ಇಲ್ಲವಾದರಿಂದ ಕೃತಕವಾಗಿ ಪರಾಗ ಸ್ಪರ್ಶ ಮಾಡಲಾಗುತ್ತದೆ.

ಒಂದು ಬಲಿಷ್ಟವಾದ ಗಂಡು ಮರವು 40 - 50 ಹೆಣ್ಣು ಮರಗಳಿಗೆ ಫಲೀಕರಣ ಪ್ರಕ್ರಿಯೆ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದರೆ ಸ್ವಾದಿಷ್ಟವಾದ ಹಣ್ಣುಗಳನ್ನು ಹೆಣ್ಣು ಮರವೇ ಕೊಡುತ್ತದೆ.

ಖರ್ಜೂರದ ಮರವನ್ನು ಬೀಜದಿಂದಲೆ ವೃದ್ಧಿಸಿ ಬೆಳೆಯಲಾಗುತ್ತದೆ. ಮರದ ಬೆಳವಣಿಗೆ ಐದು ಹಂತಗಳಲ್ಲಿ ನಡೆಯುತ್ತದೆ. ಪ್ರತಿ ಹಂತದಲ್ಲೂ ವಿಶೇಷ ಲಕ್ಷಣಗಳನ್ನು ಹೊಂದಿರುತ್ತದೆ. ಮೊದಲನೆಯ ಹಂತವು ತಾಯಿ ಬೇರಿನ ಬೆಳವಣಿಗೆಯಾಗಿದ್ದು, ಸುಮಾರು ಐದು - ಎಂಟು ವರ್ಷ ತೆಗೆದು ಕೊಳ್ಳುತ್ತದೆ.

ಹಸುರು ಕಾಯಿಯನ್ನು 'ಕ್ರಿಮಿ' ಎಂದೂ ಹಳದಿ ಅಥವಾ ಕೆಂಪು ಬಣ್ಣಕ್ಕೆ ಬಂದಾಗ 'ಖಲಾಲ್' ಎಂದೂ ಮರದಲ್ಲೇ ಹಣ್ಣಾಗಿರುವುದನ್ನು 'ರುತುಬ್' ಎಂದೂ ಅರ್ಧ ಕಂದು ಅರ್ಧ ಹಳದಿ ಬಣ್ಣವನ್ನು 'ಟಾಮ್' ಎಂದೂ ಕರೆಯುವರು.

ಎರಡನೆಯ ಹಂತದಲ್ಲಿ ಗಿಡಗಳನ್ನು ಪ್ರತ್ಯೇಕಿಸಿ ಬೆಳೆಯಲಾಗುತ್ತದೆ. ಇದು ನಾಲ್ಕರಿಂದ ಆರುವರ್ಷ ಹಿಡಿಯುತ್ತದೆ. ಮರದ ಹಣ್ಣಿನ ಇಳುವರಿಯನ್ನು ಹೆಚ್ಚಿಸಿ, ಹೊಸ ಕವಲುಗಳನ್ನು ರೂಪಿಸುವ ಕೆಲಸವನ್ನು ಮಾಡುತ್ತದೆ. ಇದು ಮೂರನೆಯ ಹಂತ ನಾಲ್ಕನೇ ಹಂತದ ಉತ್ಪಾದನೆಗೆ ಅಥವಾ ಫಸಲಿಗೆ ಸಂಬಂಧಿಸುವಂತಹದ್ದು. ಐದನೇ ಹಂತಸಂಪೂರ್ಣವಾಗಿ ಫಸಲನ್ನು ನೀಡುತ್ತದೆ.

ಖರ್ಜೂರ ವಾರ್ಷಿಕ ಬೆಳೆಯಾದರೂ ವಾತಾವರಣ, ಮರದ ವಯಸ್ಸು ಮತ್ತು ಬೆಳೆಯುವ ಸಾಮರ್ಥ್ಯವನ್ನು ಅವಲಂಭಿಸಿರುತ್ತದೆ. ಮರದಲ್ಲಿ ಕಾಯಿ ಬಿಟ್ಟು ಹಣ್ಣಾಗುವವರೆಗೆ ಇನ್ನೂರು ದಿವಸಗಳು ಹಿಡಿಯುತ್ತದೆ.

ಖರ್ಜೂರ ಋತುಮಾನಕ್ಕನುಗುಣವಾಗಿ ಕಾಲೋಚಿತ ಉತ್ಪನ್ನವಾಗಿರುವುದರಿಂದ, ಅಮೆರಿಕದಲ್ಲಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಫಸಲು ಬರುತ್ತದೆ. ಅರಿಜೋನಾ ಮತ್ತು ಕ್ಯಾಲಿಫೋರ್ನಿಯದಲ್ಲಿ ಅದೇ ತಿಂಗಳುಗಳಲ್ಲಿ ಕೊಯ್ಲು ಮಾಡಲಾಗುತ್ತದೆ. ತಾಜಾ ಖರ್ಜೂರ ಬಹಳ ಮೃದು, ರುಚಿ ಹಾಗೂ ಸ್ವಾದಿಷ್ಟವಾಗಿರುತ್ತದೆ. ಖರ್ಜೂರವನ್ನು ಒಣಗಿಸುವುದಕ್ಕಾಗಿ ಸಾಮಾನ್ಯವಾಗಿ ಮರದಲ್ಲಿಯೇ ಬಿಟ್ಟಿರುತ್ತಾರೆ. ಇದರ ಗೊಂಚಲಿನಲ್ಲಿ ಕೆಳ ತುದಿಯಿಂದ ಪಕ್ವವಾಗುವುದಕ್ಕೆ ಆರಂಭವಾಗುತ್ತದೆ. ಹಣ್ಣನ್ನು ಸಂಗ್ರಹಿಸುವುದಕ್ಕಾಗಿ ಹಲವು ಬಾರಿ ಮರವನ್ನು ಹತ್ತಬೇಕಾಗುತ್ತದೆ. ಭಾರಿ ಎತ್ತರದ ಮರವನ್ನು ಹತ್ತುವುದು ಪ್ರಯಾಸದ ಕೆಲಸ ಮತ್ತು ಹೆಚ್ಚು ಸಮಯ ಬೇಕಾಗುತ್ತದೆ. ಇಂದು ನವೀಕರಿಸಿದ ಹೊಸ ತಂತ್ರಜ್ಞಾನದಿಂದಾಗಿ ಶ್ರಮ ಕಡಿಮೆಯಾಗಿ ವ್ಯವಸಾಯದಲ್ಲಿ ಸುಧಾರಣೆ ಮಾಡಲಾಗಿದೆ. ಗರ್ಭೋತ್ಪತ್ತಿ ಮತ್ತು ಹಣ್ಣು ಸಂಗ್ರಹಣೆ ಕಾರ್ಯವನ್ನು ಯಾಂತ್ರಿಕವಾಗಿ ನಿರ್ವಹಿಸುತ್ತಾರೆ. ಸಂಸ್ಕರಣೆ ಮತ್ತು ಪ್ಯಾಕೇಜಿಂಗ್ ಕಾರ್ಯಗಳನ್ನು ಪ್ಲಾಂಟ್‌ಗಳಲ್ಲಿ ಜಾಗರೂಕತೆಯಿಂದ ಕೈಗೊಳ್ಳಬೇಕಾಗುತ್ತದೆ. ಹಣ್ಣು ಆಗುವಾಗ ಕೀಟ ಮತ್ತು ಪಕ್ಷಿಗಳಿಂದ ರಕ್ಷಿಸಲು ಅದರ ಸುತ್ತಲೂ ಪೇಪರ್ ಬ್ಯಾಗ್‌ಗಳನ್ನು ಕಟ್ಟುತ್ತಾರೆ.

ಖರ್ಜೂರವನ್ನು ನಾಲ್ಕು ಬಗೆಯಲ್ಲಿ ಮಾರಾಟಮಾಡುತ್ತಾರೆ.

1. ಪ್ರೆಸ್‌ಪ್ಯಾಕ್ ಅಂದರೆ ಖಲಾಸ್ ಖಾಸ್ಸಿಂ
2. ತಾಜಾ ಖರ್ಜೂರಗಳು.
3. ಒಣ ಖರ್ಜೂರ ಅಂದರೆ ಸುಕ್ಕಾರಿ
4. ಖರ್ಜೂರ ಫೇಸ್ಟ್ ಅಂದರೆ ಮೃದು ಖರ್ಜೂರದ ಫೇಸ್ಟ್ (ಅಂಟು)

ಸೌದಿ ಅರೇಬಿಯಾದ ಓಯಿಸಿಸ್ ಮರುಭೂಮಿಗಳಲ್ಲಿ ಈ ಮರಗಳು ಅತಿ ಎತ್ತರಕ್ಕೆ ಬೆಳೆದು ಎಲೆಗಳು ವಿಶಾಲವಾಗಿ ಹರಡಿ ಕೊಂಡಿರುತ್ತದೆ. ರಸ್ತೆಗಳ ಪಕ್ಕದಲ್ಲಿ ಮನೆಯ ಅಂಗಳ ಗಳಲ್ಲಿಯೂ ಬೆಳೆಸುತ್ತಾರೆ.



ಖರ್ಜೂರದಲ್ಲಿ ಪೌಷ್ಠಿಕಾಂಶ : 100 ಗ್ರಾಂ ತಾಜಾ ಖರ್ಜೂರದಲ್ಲಿ ವಿಟಮಿನ್ 'ಸಿ' ಹೆಚ್ಚಾಗುತ್ತದೆ. ನೀರಿನ ಪ್ರಮಾಣವನ್ನು ಹೆಚ್ಚು ಹೊಂದಿರುತ್ತದೆ. ಒಣಗಿಸಿದಾಗ 'ಸಿ' ವಿಟಮಿನ್ ಕಡಿಮೆ ಯಾಗುತ್ತದೆ. ಇದರಲ್ಲಿ ಕಾರ್ಬೋಹೈಡ್ರೇಟ್ ಗಳು ನಾರಿನ ಅಂಶ ಪೊಟ್ಯಾಷಿಯಂ ಹಾಗೂ ಅಲ್ಪ ಪ್ರಮಾಣದಲ್ಲಿ ಕ್ಯಾಲ್ಸಿಯಂ ಮತ್ತು ಕಬ್ಬಿಣದ ಅಂಶ ಮಿನರಲ್ಸ್‌ಗಳು ಇವೆ. ಕೊಬ್ಬು, ಕೊಲೆಸ್ಟ್ರಾಲ್, ಸೋಡಿಯಾ ಇದರಲ್ಲಿ ಇಲ್ಲದಿರುವುದು ಗಮನಾರ್ಹ.

ಕೆಲವು ಖರ್ಜೂರಗಳ ಪೌಷ್ಟಿಕತೆ ಇಂತಿವೆ : **ಖಲಾಸ್** (100ಗ್ರಾಂ), 82.9 ಗ್ರಾಂ ಸಕ್ಕರೆ, 2.9 ಎಂ.ಜಿ. ವಿಟಮಿನ್ 'ಸಿ', ಶೇ.1.59 ಪ್ರೋಟೀನ್, ಶೇ.0.93 ಕೊಬ್ಬು,

ಸುಕ್ಕಾರಿ (100ಗ್ರಾಂ), 66.7 ಗ್ರಾಂ ಸಕ್ಕರೆ, 80 ಯು ವಿಟಮಿನ್ 'ಸಿ', 2.9 ಎಂ.ಜಿ. ವಿಟಮಿನ್ 'ಸಿ' ಶೇ.1.32 ಪ್ರೋಟೀನ್, ಶೇ.1.73 ಕೊಬ್ಬು

ಸೆಗ್ಗಾಯಿ (100ಗ್ರಾಂ), 79.4 ಗ್ರಾಂ ಸಕ್ಕರೆ, 2.4 ಎಂ.ಜಿ. ವಿಟಮಿನ್ 'ಸಿ', ಶೇ.2.7 ಪ್ರೋಟೀನ್, ಶೇ.0.96 ಕೊಬ್ಬು

ಖರ್ಜೂರ ಮತ್ತು ಮರದ ಉಪಯೋಗಗಳು : ನಿತ್ಯ ಒಂದೆರಡು ಖರ್ಜೂರ ಸೇವಿಸಿದರೆ ಜೀರ್ಣಕ್ರಿಯೆ ಹೆಚ್ಚುತ್ತದೆ. ರಕ್ತಹೀನತೆ, ಮಲಬದ್ಧತೆ, ಅಸಿಡಿಟಿ, ಎದೆಉರಿ ಕಡಿಮೆಯಾಗುತ್ತದೆ. ಹೃದಯ ಸಂಬಂಧಿ ತೊಂದರೆಗಳಿಗೆ, ಹೊಟ್ಟೆಯ ಕ್ಯಾನ್ಸರ್ ತಡೆಗಟ್ಟುವಿಕೆಯಲ್ಲಿ ಪರಿಣಾಮಕಾರಿಯಾಗಿದೆ. ಲಕ್ವಾವನ್ನು ಶೇ. 40ರಷ್ಟು ತಡೆಗಟ್ಟಬಹುದಾಗಿದೆ ಎಂದು ಸಂಶೋಧಕರು ಹೇಳುತ್ತಾರೆ.

ಇದರ ಎಲೆಗಳಿಂದ ಮ್ಯಾಟ್, ಬುಟ್ಟಿ, ಪೊರಕೆ, ಪರದೆ, ಟೋಪಿ, ಬೀಸಣಿಗೆ - ಹೀಗೆ ಅನೇಕ ಬಗೆಯ ವಸ್ತುಗಳನ್ನು ತಯಾರಿಸಬಹುದು.

ಖರ್ಜೂರ ಉತ್ಪಾದನೆಗಳ ದೇಶಗಳಲ್ಲಿ ಇರಾಕ್ ಮೊದಲನೆಯ ಸ್ಥಾನದಲ್ಲಿತ್ತು. ಸೌದಿ ಅರೇಬಿಯಾದ ಅಲ್-ಹಸಾ ಎಂಬ ಊರಿನಲ್ಲಿ ಅತಿಯಾಗಿ ಖರ್ಜೂರವನ್ನು ಬೆಳೆಯುತ್ತಾರೆ. 1982ರಲ್ಲಿ ಖರ್ಜೂರ ಸಂಶೋಧನ ಕೇಂದ್ರ ಸ್ಥಾಪಿಸಲಾಯಿತು. ಈ ದೇಶದಲ್ಲಿ ತೈಲ ಮಾರುಕಟ್ಟೆಯೊಂದಿಗೆ, ಖರ್ಜೂರವು ಉತ್ತಮ ಆರ್ಥಿಕ ಬೆಳೆಯಾಗಿ ಪ್ರಮುಖ ಸ್ಥಾನ ಪಡೆದು ಕೊಂಡಿದೆ. ಈ ಮರಗಳನ್ನು ಬೆಳೆಸುವುದರಿಂದ ಮರುಭೂಮಿಯಲ್ಲಿ ನೆರಳು ಸಹ ದೊರೆಯುತ್ತದೆ. ಇಲ್ಲಿ ಅತಿಥಿ ಸತ್ಕಾರಕ್ಕೆ ಕಾಫಿಯೊಂದಿಗೆ ಖರ್ಜೂರವನ್ನು ನೀಡುತ್ತಾರೆ. ಇಲ್ಲಿಯ ಜನರ ಪವಿತ್ರ ಹಣ್ಣಾಗಿದೆ. ಪ್ರಯಾಣ ಮಾಡುವಾಗ, ಉಪವಾಸವಿದ್ದಾಗ ಈ ಹಣ್ಣುಗಳನ್ನು ಉಪಯೋಗಿಸುತ್ತಾರೆ.

ಎಸ್.ಬಿ.

ಖುಷ್ಕಿ ತೋಟಗಾರಿಕೆ ಮಳೆನೀರನ್ನು ಆಧರಿಸಿ ವಿವಿಧ ಹಣ್ಣು, ತರಕಾರಿ, ಹೂವು ಹಾಗೂ ಸುಗಂಧ ಸಸ್ಯಗಳು ಮೊದಲಾದವನ್ನು ಬೆಳೆಯುವುದೆ 'ಖುಷ್ಕಿ ತೋಟಗಾರಿಕೆ'. ಮಳೆ ನೀರಿನ ಸಮರ್ಥ ನಿರ್ವಹಣೆ ಇಲ್ಲಿ ಅಗತ್ಯ. ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದ ವಿಧಾನವಿದು. ಬೇಸಾಯವನ್ನೇ ಮುಖ್ಯವಾಗಿ ಅವಲಂಬಿಸಿದ್ದ ಗ್ರಾಮೀಣರು ವಿವಿಧ ಉದ್ದೇಶಗಳಿಗಾಗಿ ಬೆಳೆಸಿದ ಮಾವು, ಬೇವು, ಹಲಸಿನಂತಹ ಮರಗಳೇ ಇಂದಿನ ವ್ಯವಸ್ಥಿತ ಖುಷ್ಕಿ ತೋಟಗಾರಿಕೆಯ ಮೂಲ. ಹಣ್ಣು, ತರಕಾರಿ, ಮೇವು, ನೆರಳು ಮೊದಲಾದವುಗಳಿಗಾಗಿ ಗಿಡ-ಮರಗಳನ್ನು ಬೆಳೆಸುತ್ತಿದ್ದರಾದರೂ ಅದಾವುದಕ್ಕೂ ಯುಕ್ತ ನಿರ್ವಹಣೆ ಇರಲಿಲ್ಲವಾದ್ದರಿಂದ ಹಿಂದೆ ಲಾಭದಾಯಕವಾಗಿರಲಿಲ್ಲ. ಆದರೆ ಇತ್ತೀಚೆಗೆ ಸರಿಯಾದ ನಿರ್ವಹಣಾ ಕ್ರಮಗಳಿಂದ ನಿರೀಕ್ಷಿತ ಆದಾಯ ತಂದುಕೊಡುವ ತೋಟಗಾರಿಕೆಯಾಗಿ ಇದು ವೃದ್ಧಿಗೊಂಡಿದೆ. ಫಲವಾಗಿ ಇಂದು ಖುಷ್ಕಿ ತೋಟಗಾರಿಕೆಯಲ್ಲಿ ಮಾವು, ಹಲಸು, ಬೋರೆ, ಬೆಟ್ಟದನೆಲ್ಲಿ, ಹುಣಸೆ, ಸೀಬೆ, ಸೀತಾಫಲದಂತಹ ಹಣ್ಣಿನ ಗಿಡಗಳನ್ನು ಸಂಪಿಗೆ, ಕಣಗಿಲೆ, ಕನಕಾಂಬರ, ನಂದಿಬಟ್ಟಲು, ಚೆಂಡು ಹೂ ಮೊದಲಾದ ಹೂವಿನ ಸಸ್ಯಗಳನ್ನು ಕಾಮಕಸ್ತೂರಿ, ಶ್ರೀಗಂಧ, ಕರ್ಪೂರದಂಥ ಸುಗಂಧ ಸಸ್ಯಗಳನ್ನು ಬೆಳೆಯುವ ಮೂಲಕ ಅಧಿಕ ಇಳುವರಿಯನ್ನು ಪಡೆಯಬಹುದು.

ಭಾರತದಲ್ಲಿ ಇಂದು ಖುಷ್ಕಿ ತೋಟಗಾರಿಕೆಯನ್ನು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಪಂಜಾಬ್, ಹರಿಯಾಣ, ಗುಜರಾತ್ ಹಾಗೂ ರಾಜಸ್ಥಾನ ಮೊದಲಾದ ರಾಜ್ಯಗಳಲ್ಲಿ ಮಾಡಲಾಗುತ್ತಿದೆ.

ಬೇಸಾಯ : ಹೆಚ್ಚು ಫಲವತ್ತಾದ ಮಣ್ಣಿನಿಂದ ಹಿಡಿದು ಮಧ್ಯಮ ಫಲವತ್ತತೆಯಿಂದ ಕೂಡಿರುವ ಮಣ್ಣಿನಲ್ಲೂ ತೋಟಗಾರಿಕಾ ಬೆಳೆಗಳನ್ನು ಬೆಳೆಯಬಹುದಾಗಿದ್ದು, ಖುಷ್ಕಿ ತೋಟಗಾರಿಕೆಯಲ್ಲಿ ಸಾಮಾನ್ಯವಾಗಿ ಒಣ ಹಾಗೂ ಅರೆ ಒಣ ಪ್ರದೇಶಗಳನ್ನು ಬಳಸಿಕೊಳ್ಳಲಾಗುತ್ತದೆ. ಕಡಿಮೆ ಫಲವತ್ತತೆಯಿಂದ ಕೂಡಿರುವ ಅಂಚು ಪ್ರದೇಶಗಳಲ್ಲೂ ಹಾಗೂ ಜಲಾನಯನ ಪ್ರದೇಶಗಳಲ್ಲೂ ಖುಷ್ಕಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಾರೆ.

ಖುಷ್ಕಿ ತೋಟಗಾರಿಕೆಯಲ್ಲಿ ಸಸಿಗಳನ್ನು ಮುಂಗಾರು ಮಳೆ ಪ್ರಾರಂಭವಾದ ದಿನಗಳಲ್ಲಿ ನೆಡುವುದು ಒಳಿತು. ಈ ಅವಧಿಯಲ್ಲಿ ನೆಟ್ಟ ಸಸಿಗಳು ಮಳೆಗಾಲದ ಕಡೆಯ ಹೊತ್ತಿಗೆ ಚೆನ್ನಾಗಿ ಬೇರುಬಿಟ್ಟು ಸ್ಥಿರಗೊಳ್ಳುತ್ತವೆ. ನೆಡುವ ಮೊದಲು ಗುಣಿಗಳನ್ನು ತೆಗೆದು ಗೊಬ್ಬರ ಮರಳು ಮತ್ತು ಗೋಡುಮಣ್ಣನ್ನು ಸೇರಿಸಿ ಅದರ ಮಧ್ಯಭಾಗದಲ್ಲಿ ಸ್ವಲ್ಪ ತಗ್ಗು ತೆಗೆದು ಸಸಿಯನ್ನು ನೆಟ್ಟು ಸಸ್ಯಗಳ ಬುಡದ ಸುತ್ತಲೂ ಹಸಿ ಮಣ್ಣನ್ನು ಹರಡಿ, ಸಸ್ಯಗಳು ಬಾಗದಂತೆ ಅವುಗಳ ಬುಡದಲ್ಲಿ ಆಸರೆ ಕೋಲೊಂದನ್ನು ಸಿಕ್ಕಿಸಿ ಕಟ್ಟಬೇಕು.

ಕಾವಲು, ಇಳಿಜಾರು ಮುಂತಾದ ಅಂಶಗಳನ್ನು ಅವಲಂಬಿಸಿ ಖುಷ್ಕಿ ತೋಟಗಾರಿಕೆಯಲ್ಲಿ ಚೌಕ, ಆಯತಾಕಾರದ, ತ್ರಿಕೋನಾಕಾರದ ಪೂರಕ ಹಾಗೂ ಸಮಪಾತಳಿ ಪದ್ಧತಿಯಂತಹ ಅಗತ್ಯ ಬೇಸಾಯ ಕ್ರಮಗಳನ್ನು ಅನುಸರಿಸಲಾಗುತ್ತದೆ. ಸಸ್ಯಗಳು ಬೇರು ಬಿಟ್ಟು ಸ್ಥಿರಗೊಂಡ ಅನಂತರ ಅನಗತ್ಯ ಭಾಗಗಳನ್ನು ತೆಗೆಯುವುದರಿಂದ ಗಿಡ ದೃಢವಾಗಿ ಬೆಳೆಯುತ್ತದೆ. ಮಣ್ಣಿನ ಫಲವತ್ತತೆ ಮತ್ತು ಬೆಳೆಯನ್ನಾಧರಿಸಿ ಆಯಾ ಬೆಳೆಗಳಿಗನುಗುಣವಾಗಿ ಅಗತ್ಯವಾಗಿ ಗೊಬ್ಬರವನ್ನು ನೀಡಬೇಕು.

ನೀರಾವರಿ : ಮಳೆ ಇಲ್ಲದ ಸಂದರ್ಭದಲ್ಲಿ ಕೈನೀರು ಕೊಡುವ ಮೂಲಕ ಗಿಡಗಳನ್ನು ಪೋಷಣೆ ಮಾಡಲಾಗುತ್ತದೆ. ಮಳೆ ನೀರು ಬಿದ್ದ ಸ್ಥಳದಲ್ಲಿಯೇ ಸಂರಕ್ಷಣೆ ಮಾಡುವ ಮೂಲಕ ಇಲ್ಲವೆ ಹರಿದು ಹೋಗುವ ನೀರನ್ನು ಹೊಂಡಗಳಲ್ಲಿ ಶೇಖರಿಸಿ ಅವಶ್ಯ ಬಿದ್ದಾಗ ಬೆಳೆಗೆ ನೀರುಣಿಸುವ ಮೂಲಕ ಸಮರ್ಥವಾಗಿ ಬಳಸಿಕೊಳ್ಳುವರು.

ರೋಗಗಳು : ಖುಷ್ಕಿ ತೋಟಗಾರಿಕಾ ಬೆಳೆಗಳಿಗೆ ಮಳೆಗಾಲ, ಚಳಿಗಾಲ ಹಾಗೂ ಹೂ ಬಿಟ್ಟು ಕಾಯಿ ಕಚ್ಚುವ ಸಮಯದಲ್ಲಿ ಕೀಟ ಮತ್ತು ರೋಗಗಳ ಬಾಧೆ ಕೊಂಚ ಮಟ್ಟಿಗೆ ಕಾಣಿಸಿಕೊಳ್ಳುತ್ತದೆ. ಮಾವು, ಹಲಸು, ಸೀಬೆ, ಗೋಡಂಬಿ, ಹುಣಿಸೆ, ನೆಲ್ಲಿ, ದಾಳಿಂಬೆ, ಖರ್ಜೂರ, ನುಗ್ಗೆ ಮತ್ತು ಸೀತಾಫಲ ಮೊದಲಾದ ಬೆಳೆಗಳಿಗೆ ಎಲೆಜಿಗಿ, ಮೂತಿಹುಳು, ಹಣ್ಣಿನ ನೊಣ, ಹಿಟ್ಟು ತಿಗಣೆ, ನಿಂಬೆ ಚಿಟ್ಟೆಯಂತಹ ಕೀಟಗಳ ದೆಸೆಯಿಂದ ಮುಖ್ಯವಾಗಿ ಬೂದಿರೋಗ, ಹಣ್ಣು ಕೊಳೆಯುವ ರೋಗ, ಕಪ್ಪು ಬೂಷ್ಟು, ಕಜ್ಜಿ ಹಾಗೂ

ಎಲೆಚುಕ್ಕೆಯಂತಹ ರೋಗಗಳು ಬಾಧಿಸಿದರೆ ಮಂಜು ಬೀಳುವ ದಿವಸಗಳಲ್ಲಿ ಶಿಲೀಂಧ್ರ ರೋಗವು ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ.

ಹತೋಟಿ ಕ್ರಮಗಳು : 10 ಲೀ. ನೀರಿಗೆ 30 ಗ್ರಾಂ ಗಂಧಕವನ್ನು ಬೆರೆಸಿ ಸಿಂಪಡಿಸುವುದರಿಂದ ಬೂದಿ ರೋಗವನ್ನು ತಡೆಗಟ್ಟಬಹುದು. ಖರ್ಜೂರ ಮತ್ತು ಬೋರೆ ಹಣ್ಣಿನ ಮರಗಳಲ್ಲಿ ಕಾಣಿಸಿಕೊಳ್ಳುವ ಎಲೆಚುಕ್ಕೆ ರೋಗ ಹಾಗೂ ಹಲಸು, ಸೀತಾಫಲ ಮರಗಳಲ್ಲಿ ಕಾಣಿಸಿಕೊಳ್ಳುವ ಹಣ್ಣು ಕೊಳೆಯುವ ರೋಗಕ್ಕೆ ಶೇ.1 ರಷ್ಟು ಬೋರ್ಡೊ ದ್ರಾವಣವನ್ನು ಸಿಂಪಡಿಸಿ ರೋಗವನ್ನು ನಿವಾರಿಸಬಹುದು. ಪಿಷ್ಟವನ್ನು ನೀರಿನಲ್ಲಿ ಕರಗಿಸಿ ಬೆಳೆಯ ಮೇಲೆ ಸಿಂಪಡಿಸಿದರೆ ಎಲೆ, ಕಾಯಿಗಳಿಗೆ ಅಂಟಿರುವ ಬೂಷ್ಟು ನಿವಾರಣೆಯಾಗುತ್ತದೆ.

ಕೊಯ್ಲು : ಋಷ್ಟಿ ತೋಟಗಾರಿಕಾ ಬೆಳೆಗಳಲ್ಲಿ ಕೊಯ್ಲಿನ ಅವಧಿ ಹಾಗೂ ಕೊಯ್ಲು ಮಾಡುವ ವಿಧಾನ ಬೆಳೆಗಳನ್ನವಲಂಬಿಸಿ ವ್ಯತ್ಯಾಸಗೊಳ್ಳುತ್ತದೆ. ಮಾವು, ಸೀತಾಫಲ, ಸೀಬೆ, ರಾಮಫಲ, ದಾಳಿಂಬೆಯಂತಹ ಹಣ್ಣಿನ ಬೆಳೆಗಳು ಹೂ ಬಿಟ್ಟ 4 ರಿಂದ 7 ತಿಂಗಳುಗಳಲ್ಲಿ ಕೊಯ್ಲಿಗೆ ಬಂದರೆ ಹಿಪ್ಪುನೇರಳೆ, ಅಂಜೂರ, ಹಲಸಿನಂತಹ ಬೆಳೆಗಳು ಕ್ರಮೇಣ 2, 3 ಹಾಗೂ 8 ರಿಂದ 10 ವರ್ಷಗಳ ಅಂತರ ಕೊಯ್ಲಿಗೆ ಬರುತ್ತವೆ. ಹಣ್ಣಿನ ಬೆಳೆಗಳಾದ್ದರಿಂದ ಹಣ್ಣು ಬಲಿತು ಪಕ್ವಗೊಂಡ ಅನಂತರವೆ ಕೊಯ್ಲು ಮಾಡುವುದು ಉತ್ತಮ.

ತರಕಾರಿ ಬೆಳೆ ಸ್ವಲ್ಪ ಎಳಸಾಗಿರುವ ಹಂತದಲ್ಲೇ ಕೊಯ್ಲು ಮಾಡಬೇಕು. ಹೂವಿನ ಬೆಳೆಗಳನ್ನು ಕೊಯ್ಯುವಾಗ ಮೊಗ್ಗು ಅರಳುವ ಹಂತದಲ್ಲಿರಬೇಕು. ಎಳಸಾಗಿರುವಾಗಲೆ ಕೊಯ್ದಲ್ಲಿ ಮೊಗ್ಗು ಅರಳದೇ ಹೋಗಬಹುದು. ಮುಖ್ಯವಾಗಿ ಸಂಪಿಗೆ, ಕಣಗಿಲೆ, ನಂದಿಬಟ್ಟಲು, ಸೇವಂತಿಗೆಯಂತಹ ಹೂಗಳನ್ನು ಪೂರ್ಣ ಅರಳುವ ಮೊದಲೆ ಕೊಯ್ಲು ಮಾಡದಿದ್ದಲ್ಲಿ ದಳಗಳು ಉದುರುವ ಸಂಭವವಿರುತ್ತದೆ. ಸುಗಂಧ ಸಸ್ಯ ಬಲಿತಷ್ಟೂ ತೈಲದ ಪ್ರಮಾಣ ಹೆಚ್ಚಾಗುವುದರಿಂದ ಪೂರ್ಣ ಬಲಿತ ಅನಂತರವೆ ಕೊಯ್ಲು ಮಾಡಬೇಕಾಗುತ್ತದೆ.

ಇಳುವರಿ : ಹಣ್ಣಿನ ಬೆಳೆಗಳಲ್ಲಿ ಮಾವು ಪ್ರತಿ ಹೆಕ್ಟೇರಿಗೆ 59 ಮರಗಳು ಬೆಳೆಯಲು ಸಾಧ್ಯವಿದ್ದು, ಮರವೊಂದಕ್ಕೆ 1500 ರಿಂದ 2000 ಹಣ್ಣುಗಳನ್ನು, ಬೋರೆ ಹೆಕ್ಟೇರಿಗೆ 156 ಮರಗಳನ್ನು ಹೊಂದಿದ್ದು ಮರವೊಂದಕ್ಕೆ 40 ರಿಂದ 60 ಕಿ.ಗ್ರಾಂ. ಹಣ್ಣುಗಳನ್ನು, ಹುಣಿಸೆ ಪ್ರತಿ ಹೆಕ್ಟೇರಿಗೆ 100 ಮರಗಳಿದ್ದು, ಮರವೊಂದಕ್ಕೆ 1250 ರಿಂದ 1500 ಕಿ.ಗ್ರಾಂ. ಹಣ್ಣುಗಳನ್ನು, ನೇರಳೆ ಮರವೊಂದಕ್ಕೆ 150 ರಿಂದ 500 ಕಿ.ಗ್ರಾಂ. ಹಣ್ಣುಗಳನ್ನು ಹಾಗೂ ಹಲಸು ಹೆಕ್ಟೇರಿಗೆ 100 ಮರಗಳಿದ್ದು, ಮರವೊಂದಕ್ಕೆ 50 ರಿಂದ 250 ಹಣ್ಣುಗಳನ್ನು ಪಡೆಯಲು ಸಾಧ್ಯ.

ಹೂವಿನ ಬೆಳೆಗಳಾದ ಸೇವಂತಿಗೆ, ಸಂಪಿಗೆಗಳು ಕೆಲವು ನಿರ್ದಿಷ್ಟ ಮಾಸಗಳಲ್ಲಿಮಾತ್ರ ಹೂ ನೀಡಿದರೆ, ಕಣಗಲೆ, ನಂದಿಬಟ್ಟಲು, ಮುಳ್ಳುಜಾಜಿ ಮೊದಲಾದ ಹೂಗಳು ವರ್ಷವಿಡೀ ದೊರೆಯುತ್ತವೆ.

ಸುಗಂಧ ಸಸ್ಯಗಳಾದ ಶ್ರೀಗಂಧ, ಬರ್ಸೆರಗಳು ಅನೇಕ ವರ್ಷಗಳ ಅನಂತರ ಕೊಯ್ಲಿಗೆ ಬಂದರೂ ಹೆಚ್ಚಿನ ಪ್ರಮಾಣದ ಸುಗಂಧ ತೈಲವನ್ನು ಒದಗಿಸುತ್ತವೆ. ಕಾಮಕಸ್ತೂರಿಯು ಪ್ರತಿ ಹೆಕ್ಟೇರಿಗೆ 30 ರಿಂದ 40 ಕಿ.ಗ್ರಾಂ. ಸುಗಂಧತೈಲವನ್ನು ಕೊಡಬಲ್ಲದು.

ಡಿ.ಎಸ್.

ಗಂಡಿ ಗಂಡಿಗಳು ಕಾಸರಗೋಡು ಪರಿಸರದ ಪಾರಂಪರಿಕ ನೀರಾವರಿ ವಿಧಾನಗಳ ಪ್ರಮುಖ ಮಾದರಿಗಳಾಗಿವೆ. ಇವು ನೀರಿನ ಮೂಲಗಳೂ ಹೌದು, ನೀರು ಹಾಯಿಸುವ ನಾಲೆಗಳೂ ಹೌದು. ಒಂದು ನಿಶ್ಚಿತ ನೀರಿನ ತಾಣವನ್ನು ಗುರುತಿಸಿ, ಸುರಂಗಗಳಂತೆಯೇ, ಆದರೆ ನೆಲದ ಮೇಲ್ಪದರದವರೆಗೆ ಸುಮಾರು ಮೂರು, ನಾಲ್ಕು ಅಡಿ ಅಗಲದ ಗಂಡಿಯನ್ನು ಅಗೆಯಲಾಗುತ್ತದೆ. ಇದು ಸಣ್ಣ ಸಣ್ಣ ಒರತೆಗಳನ್ನು ತುಂಡರಿಸುತ್ತ ಗುಡ್ಡದ ಆಳಕ್ಕೆ ಮುಂದುವರಿಯುತ್ತದೆ. ಮುಂದಕ್ಕೆ ಹೋದಂತೆ ತುಸು ಎತ್ತರಕ್ಕೆ ಚಾಚಿಕೊಳ್ಳುವ ಗಂಡಿಗಳು ಸುಲಭವಾಗಿ ನೀರು ಹೊರಗೆ ಹರಿದುಬರುವಂತೆ ರೂಪುಗೊಂಡಿರುತ್ತವೆ.

ಬಾವಿ ಅಗೆಯುವಾಗ ಬಾವಿಗೆ ಬಾಲದಂತೆ ಗಂಡಿ ತೋಡುವುದೂ ಇದೆ. ಬಾವಿಯ ಮಣ್ಣನ್ನು ಹೊತ್ತು ಹೊರಗೆ ಹಾಕುವುದು ಇದರ ಒಂದು ಉದ್ದೇಶ. ಅಡಿಕೆ ತೋಟಗಳಲ್ಲಿರುವ ಬಾವಿಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದಲೂ ಗಂಡಿಗಳನ್ನು ತೋಡಲಾಗುತ್ತದೆ. ಜತೆಗೆ ಬಾವಿಯಲ್ಲಿ ಸಾಕಷ್ಟು ನೀರು ದೊರೆತರೆ ಅದನ್ನು ಹೊರಗೆ ಹಾಯಿಸಲು ಈ ಗಂಡಿಗಳನ್ನು ತಳಮಟ್ಟಕ್ಕೆ ತಗ್ಗಿಸಲಾಗುತ್ತದೆ. ಗಂಡಿಗಳ ಕೊನೆಯಲ್ಲಿ ಸಣ್ಣ ಕೆರೆಯನ್ನು ಕಟ್ಟಿ ನೀರನ್ನು ಸಂಗ್ರಹಿಸುವುದೂ ಇದೆ. ಸುಮಾರು 50 ಅಡಿಗಳಷ್ಟು ಉದ್ದದ ಗಂಡಿಗಳೂ ಕಾಸರಗೋಡು ಪ್ರದೇಶದಲ್ಲಿ ಕಾಣಸಿಗುತ್ತವೆ. ಗುಡ್ಡದ ಇಳುಕಲಿನಲ್ಲಿ ಮನೆ, ಮನೆಗಿಂತ ತುಸು ಎತ್ತರದಲ್ಲಿ ಗಂಡಿ, ಮನೆಗಿಂತ ಕೆಳಗೆ ಕೃಷಿ - ಇದು ಕಾಸರಗೋಡಿನ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ವಿನ್ಯಾಸ.

ಆರ್.ಕೆ.ಬಿ.

ಗಂಧದ ಮರ ದಕ್ಷಿಣ ಭಾರತದ ಜನಪ್ರಿಯ ಮರಗಳಲ್ಲಿ ಪ್ರಧಾನವಾದದ್ದು. ಸುವಾಸನಾಭರಿತವಾದ, ಔಷಧೀಯ ಗುಣವುಳ್ಳ ತೈಲಯುಕ್ತ ಪ್ರಸಿದ್ಧ ವೃಕ್ಷ. ಭಾರತದಲ್ಲಿ ಗಂಧದ ಮರದ ಪ್ರಾಚೀನತೆಯನ್ನು ಕುರಿತು ಪುರಾಣಗಳಲ್ಲಿ ಉಲ್ಲೇಖಗಳಿವೆ. ಇದರ ವೈಜ್ಞಾನಿಕ ಹೆಸರು ಸ್ಯಾಂಟಲಮ್ ಅಲ್ಬಮ್ ಸ್ಯಾಂಟಲೇಸಿ ಕುಟುಂಬಕ್ಕೆ ಸೇರಿದೆ. ಇಂಗ್ಲೀಷಿನಲ್ಲಿ ಸ್ಯಾಂಡಲ್ ಟ್ರೀ ಎಂದೂ ತಮಿಳಿನಲ್ಲಿ ಸಂದನಂ, ಚಂದನಂ ಎಂದೂ ಕನ್ನಡದಲ್ಲಿ ಶ್ರೀಗಂಧದ ಮರ, ಚಂದನ ಮರ ಎಂದೂ ತೆಲುಗಿನಲ್ಲಿ ಚಂದನವು, ಚಂದನ, ಮಲಯಾಳಂನಲ್ಲಿಚಂದನಂ, ಚಂದನಮುಟ್ಟಿ ಎಂದೂ ಕರೆಯುವರು. ಇದರ ಮೂಲ ಭಾರತವಾದರೂ ದಕ್ಷಿಣ ಭಾರತದ ಕರ್ನಾಟಕದಲ್ಲಿ ಅತಿ ಹೆಚ್ಚು ಬೆಳೆಯಲಾಗುತ್ತದೆ.ಕರ್ನಾಟಕದ ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ವಿಸ್ತಾರ ಪ್ರದೇಶಗಳಲ್ಲಿ ಬೆಳಸುವರು. ಬೆಂಗಳೂರು ಕೋಲಾರ, ತುಮಕೂರು ಭಾಗಗಳ ಕುರುಚಲು ಕಾಡುಗಳಲ್ಲಿ; ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ತಮಿಳುನಾಡಿನ ಕೊಯಮತ್ತೂರು, ಸೇಲಂ ಮತ್ತು ನೀಲಗಿರಿ ಜಿಲ್ಲೆಗಳಲ್ಲೂ ಆಂಧ್ರ ಮತ್ತು ಕೇರಳದ ಕೆಲವು ಪ್ರದೇಶಗಳಲ್ಲೂ ಬೆಳೆಯುವುದುಂಟು.

ಕರ್ನಾಟಕದ ಮೈಸೂರು ಭಾಗದಲ್ಲಿ ಸಮೃದ್ಧವಾಗಿ ಬೆಳೆಯುವ ಇದನ್ನು ರಾಜವೃಕ್ಷವೆಂದು ಗೌರವಿಸಲಾಗುತ್ತದೆ. ಮರಗಳಲ್ಲೆಲ್ಲ ಇದಕ್ಕೆ ಹೆಚ್ಚು ಮೌಲ್ಯವಿದೆ. ಸರ್ಕಾರದ ಅನುಮತಿಯಿಲ್ಲದೆ ಗಂಧದ ಮರವನ್ನು

ಕಡಿಯುವಂತಿಲ್ಲ. ಒಂದು ವೇಳೆ ಕಡಿದು ಕೆತ್ತನೆ ಕೆಲಸಗಳಿಗೆ ಅಥವಾ ಎಣ್ಣೆ ತೆಗೆಯಲು ಉಪಯೋಗಿಸಿದಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ. ಗಂಧದ ಮರವನ್ನೇ ಹೋಲುವ ಕೆಲವು ಮರಗಳು ಪ್ರಪಂಚದ ಇತರೆಡೆಗಳಲ್ಲಿ ಕಂಡುಬರುತ್ತವೆ. ಸ್ಯಾಂಟಲವಮ್‌ಯಾಸಿ, ಫೀಜಿ ದ್ವೀಪಗಳಲ್ಲೂ ಮೆಗಾಕಾರ್ಪಮ್ ಎಂಬುದು ಆಸ್ಟ್ರೇಲಿಯಾದಲ್ಲೂ ಸ್ಯಾ. ಮಾರ್ಗರೆಟೀ ಎಂಬುದು ಮಲೇಷಿಯಾದಲ್ಲೂ ಬೆಳೆಯುತ್ತವೆ.



ಆಶ್ರಯದಾತ ಮರಗಳೊಂದಿಗೆ ಬೆಳೆಯುವ ಅರ್ಧಪರಾವಲಂಬಿ ಮರವಿದು. ಹೀಗೆ ಬೆಳೆಯುವ ಮೂಲಕ ತನಗೆ ಅಗತ್ಯವಾದ ಖನಿಜಾಂಶಗಳನ್ನು ಹೀರಿ ಬೆಳೆಯುತ್ತದೆ. ಖನಿಜಾಂಶಗಳನ್ನು ಬಳಸಿಕೊಂಡು ಸುಲಭವಾಗಿ ದ್ಯುತಿಸಂಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತದೆ. ಹೀಗಾಗಿ ಇದರ ತಾಯಿಬೇರು ಆಳವಾಗಿ ಬೆಳೆಯುವ ಅವಶ್ಯಕತೆಯಿಲ್ಲದಿದ್ದರೂ ಕವಲು ಬೇರುಗಳು ಮಾತ್ರ ಸಾಕಷ್ಟು ದೂರದವರೆಗೂ ಬೆಳೆದು ಮರದ ಪೋಷಣೆಗೆ ಆಧಾರವಾಗುತ್ತವೆ.

ನಿತ್ಯಹರಿದ್ವರ್ಣದ ಮಧ್ಯಮ ಗಾತ್ರದ ಮರವಿದು. ಅತಿ ಹೆಚ್ಚು ಎಂದರೆ 60 ಅಡಿ ಎತ್ತರದವರೆಗೆ ಬೆಳೆಯುವುದಾದರೂ ಸಾಮಾನ್ಯವಾಗಿ 30-40 ಅಡಿ ಎತ್ತರಕ್ಕೆ ಬೆಳೆಯುವುದು. ಮರ ಚೆನ್ನಾಗಿ ಬಲಿತರೆ 3-3½ ಅಡಿ ಸುತ್ತಳತೆ ಬರಬಹುದು. ಅಭಿಮುಖ ಮಾದರಿಯ ಅಂಡಾಕಾರದ ಎಲೆ; ಮೇಲ್ಮೈ ನುಣುಪಾಗಿರುತ್ತದೆ. ವಾಸನಾರಹಿತ ಕಂದುಬಣ್ಣದ 3 ಚಿಕ್ಕ ಹೂ ಬಿಡುತ್ತದೆ. ಇದು 4 ಪೆರಿಯಾಂತ್ ಹಾಲೆಗಳು, 4 ಕೇಸರಗಳು, ಸರಳ ಅಂಡಾಶಯವನ್ನು ಹೊಂದಿದೆ. ಹಣ್ಣುಹೂವಿನ ಬಣ್ಣವನ್ನೇ ಹೋಲುತಿದ್ದು ದುಂಡಾಗಿರುತ್ತದೆ.

ಬೆಳೆಯುವ ವಿಧಾನ : ಉಷ್ಣವಲಯ ಪ್ರದೇಶದ ಬೆಟ್ಟದ ಇಳಿಜಾರು ಭಾಗಗಳಲ್ಲಿಉತ್ತಮವಾಗಿ ಬೆಳೆಯುತ್ತದೆ. ಉತ್ಕೃಷ್ಟವಾಗಿ ಬೆಳೆಯಲು ನೀರು ಬಸಿದು ಹೋಗುವಂತಹ ಗೋಡು ಮಣ್ಣು ಇದ್ದರೆ ಒಳ್ಳೆಯದು. ಇದು ನಾಟಿ ಮಾಡುವ ಮಟ್ಟಕ್ಕೆ ಬೆಳೆಯಲು ಒಂದು ವರ್ಷ ಮೊದಲೇ ಉತ್ತಮ ಬೀಜಗಳನ್ನು ಆಯ್ಕೆ ಮಾಡಿ ಮಡಿಗಳಲ್ಲಿ ಬೆಳೆಸಬೇಕು. ಆಶ್ರಯದ ಸಸ್ಯಗಳ ಜೊತೆಗೇ ಸಸಿಗಳನ್ನು ನೆಡಬೇಕು. ಸಸಿ ಬೆಳೆಯುವ ಕಾಲದಲ್ಲಿ ನೆರಳಿರುವಂತೆ ನೋಡಿಕೊಳ್ಳಬೇಕು. ಸಸಿಗಳನ್ನು ಆರೈಕೆ ಮಾಡುವಾಗ ದನಕರುಗಳಿಗೆ ಮತ್ತು ಇತರ ಪ್ರಾಣಿ ಪಕ್ಷಿಗಳಿಗೆ ಹಾಗೂ ಆಕಸ್ಮಿಕ ಬೆಂಕಿ ಅನಾಹುತಕ್ಕೆ ಸಿಗದಂತೆ ರಕ್ಷಿಸಬೇಕು.

ರೋಗಗಳು : ಗಂಧದ ಸಸಿ ಸ್ಪೈಕ್ ರೋಗಕ್ಕೆ (ಎಲೆ ಮುರುಟು ರೋಗ) ಈಡಾಗುತ್ತದೆ. ಈ ರೋಗ ತಗಲಿದರೆ ಸ್ಪೈಕ್ ಎಲೆಗಳು ಸಣ್ಣದಾಗಿ ಗಡಸಾಗಿ ಕೊಂಬೆಗಳು ಬಾಗಿ ಕ್ರಮೇಣ ಮರಗಳೇ ಒಣಗುವುದುಂಟು. ಇದರ ನಿವಾರಣೆಗೆ ಉತ್ತಮ ಬೀಜದ ಆಯ್ಕೆ ಮತ್ತು ಆರೈಕೆ ಮುಖ್ಯವೇ ಹೊರತು ಬೇರಾವುದೇ ಔಷಧಿ ಇದಕ್ಕಿಲ್ಲ.

ಉಪಯೋಗ : ಭಾರತೀಯ ಸಂಸ್ಕೃತಿಯಲ್ಲಿ ಇದರ ಚೇಗದಿಂದ ತೇದ ಗಂಧಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ದೇವರ ಪೂಜಾಕಾರ್ಯಗಳಲ್ಲಿ ಮಹಿಳೆಯರ ಅಲಂಕಾರದಲ್ಲಿ ಬಹುಮುಖ್ಯಪಾತ್ರ ವಹಿಸುತ್ತದೆ. ಗಂಧ ಲೇಪನ ತಂಪುಕಾರಕ ಹಾಗೂ ದೇಹಕ್ಕೆ ಸುವಾಸನೆ ನೀಡುವಂಥದು. ಹಿಂದೆ ಗಂಧ ತೇದು ದೇಹದ ಮೇಲೆ ಚಿತ್ರ ಬಿಡಿಸಿಕೊಳ್ಳುತ್ತಿದ್ದರು. ಇದು ಚರ್ಮರೋಗಕ್ಕೆ ಒಳ್ಳೆಯ ಔಷಧಿ. ಗಂಧಯುಕ್ತ ನೀರಿನ ಸೇವನೆಯಿಂದ ದೇಹದಲ್ಲಿಯ ಕ್ರಿಮಿ ನಾಶವಾಗುತ್ತದೆ. ಸುಗಂಧದ್ರವ್ಯಗಳಲ್ಲಿ ಇದರ ಬಳಕೆ ಹೆಚ್ಚು. ಮರ ಬಲಿತ ಮೇಲೆ ಕತ್ತರಿಸಿ ದೇವರ ವಿಗ್ರಹ ಮತ್ತಿತರ ಆಲಂಕಾರಿಕ ಕೆತ್ತನೆಗಾಗಿ ಬಳಸುವುದುಂಟು. ಚೇಗು ಹೆಚ್ಚಾದಷ್ಟೂ ಇದರ ಬೆಲೆಯೂ ಅಧಿಕ. ಮರದ ಪ್ರತಿಯೊಂದು ಭಾಗವೂ ಉಪಯುಕ್ತವೇ. ಪುಡಿಯನ್ನು ಧೂಪಕ್ಕಾಗಿ, ಸುರಳಿಯಾಕಾರದ ತೆಳುಪದರಗಳನ್ನು ಹಾರಕ್ಕೂ ಬಳಸುತ್ತಾರೆ.

ಎ.ಎಂ.ಡಿ.

ಗಜನಿಂಬೆ ನಿಂಬೆಯ ಬಗೆಗಳಲ್ಲಿ ದೊಡ್ಡ ಗಾತ್ರದ ಹಣ್ಣು ಕೊಡುವ ಮರ. ರೂಟೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಸಿಟ್ರಸ್‌ಲೈಮನ್. ಸಾಮಾನ್ಯ ನಿಂಬೆ ಗಿಡಕ್ಕಿಂತ ಎತ್ತರವಾಗಿ, ದಪ್ಪವಾಗಿ ಬೆಳೆಯುವ ಮರ. ಇದರ ಸಿಪ್ಪೆ ಒರಟಾಗಿದ್ದು ರುಚಿ ಹುಳಿ ಇಲ್ಲವೆ ತುಸು ಒಗರು. ಹಣ್ಣು ದುಂಡನೆ ಮೊಟ್ಟೆಯಂತಿರುತ್ತದೆ.



ಇದರ ಮೂಲಸ್ಥಾನ ಉತ್ತರಭಾರತ. ಗಟ್ಟಿ ಮುಳ್ಳುಗಳಿರುವ ಇದು 10-20 ಅಡಿ ಎತ್ತರ ಬೆಳೆಯುತ್ತದೆ. ಆಯತಾಕಾರದ ಎಲೆ ನಸು ಹಸುರು ಬಣ್ಣವಿದ್ದು ಅಂಚು ನುಣುಪಾಗಿರುತ್ತದೆ. ಎಲೆಗಳ ತೊಟ್ಟು ರೆಕ್ಕೆಯಂತಿದ್ದು ಹೂಗೊಂಚಲು ಮಧ್ಯಾರಂಭಿಯಾಗಿ ಸಮಾವೇಶಗೊಂಡಿರುತ್ತದೆ.

ಗಜನಿಂಬೆ ಉಷ್ಣಪ್ರದೇಶದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ. ಇದರ ಬೇಸಾಯಕ್ಕೆ 6-8 ಅಡಿವರೆಗೆ ಸಡಿಲವಾಗಿ, ಮೃದುವಾಗಿ, ಫಲವತ್ತಾಗಿ ನೀರು ಇಂಗು ಹೋಗುವಂಥ ಮಣ್ಣು ಉಪಯುಕ್ತ.

ಬಗೆಗಳು : ಬೆಟ್ಟದ ಗಜನಿಂಬೆ, ಇಟಲಿಯ ಗಜನಿಂಬೆ, ಅಸ್ಸಾಂ ಗಜನಿಂಬೆ, ಬರ್ಮಾಸಿಯ ಗಜನಿಂಬೆ, ಜಿನೋವ ಗಜನಿಂಬೆ. ಬೆಟ್ಟದ ಗಜನಿಂಬೆ ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅಂಡಾಕಾರದ ಈ ಹಣ್ಣಿನಲ್ಲಿ ಬೀಜಗಳು ಕಡಿಮೆ. ಹೆಚ್ಚು ಇಳುವರಿ ಕೊಡುವ ಇದು ಉಪ್ಪಿನಕಾಯಿ ತಯಾರಿಕೆ, ತಂಪು ಪಾನೀಯಗಳಿಗೆ ಉಪಯುಕ್ತ.

ಇಟಲಿ ಗಜನಿಂಬೆಯ ಮೂಲಸ್ಥಾನ ಯೂರೋಪ್. ಸಾಮಾನ್ಯವಾಗಿ ಎಲ್ಲ ಬಗೆಯ ಮಣ್ಣು ಹಾಗೂ ಎಲ್ಲ ಬಗೆಯ ವಾತಾವರಣದಲ್ಲೂ ಬೆಳೆಯಬಲ್ಲುದು. ಬೀಜರಹಿತ ಈ ಹಣ್ಣು ಅಂಡಾಕಾರವಾಗಿದ್ದು ಸಿಪ್ಪೆ ಒರಟು ಮತ್ತು ರಸಭರಿತ. ಅಸ್ಸಾಂ ಗಜನಿಂಬೆ ಅಸ್ಸಾಂ ಮೂಲದ ಈ ಹಣ್ಣು ಉತ್ತಮ ಫಲ ಕೊಡುವುದಾದರೂ ರುಚಿ ಕಡಿಮೆ. ಬರ್ಮಾಸಿಯಾರ್ ಗಜನಿಂಬೆ ಉತ್ತರ ಪ್ರದೇಶದ ಪೂರ್ವಜಿಲ್ಲೆಗಳಲ್ಲೂ ಪಂಜಾಬಿನಲ್ಲೂ ಬೆಳೆಯುತ್ತದೆ. ಸಾಧಾರಣ ಗಾತ್ರದ ದುಂಡನೆಯ ಹಣ್ಣಿದು. ತೆಳು ಸಿಪ್ಪೆಯ ರಸಭರಿತ ಹಣ್ಣಿದು. ರುಚಿಯೂ ಹೆಚ್ಚು, ಇಳುವರಿಯೂ ಹೆಚ್ಚು. ಜಿನೋವ ಗಜನಿಂಬೆ ಬೀಜರಹಿತವಾಗಿದ್ದು ಆಂಧ್ರಪ್ರದೇಶದ ಕಡಪ ಜಿಲ್ಲೆಯಲ್ಲಿ ಬೆಳೆಯಲಾಗುತ್ತದೆ.

ನೆಟ್ಟ ನಾಲ್ಕು ವರ್ಷಕ್ಕೆ ಫಲಬಿಡುವ ಇದು ಹವಾಗುಣ ಮತ್ತು ಮಣ್ಣಿನಗುಣಕ್ಕನುಸಾರವಾಗಿ ಫಸಲನ್ನು ಕೊಡುತ್ತದೆ. ಅಡುಗೆಯಲ್ಲಿ ಬಳಸುವುದಕ್ಕಿಂತ ಹೆಚ್ಚಾಗಿ ಕ್ಯಾಂಡಿ, ಜಾವ್, ಜೆಲ್ಲಿ ಮುಂತಾದವುಗಳಲ್ಲಿ ಸುವಾಸನೆ ಉಂಟುಮಾಡಲು ಬಳಸುವುದಿದೆ. ಸಿಟ್ರಿಕ್ ಆಮ್ಲ, ಪೆಕ್ಟಿನ್, ನಿಂಬೆ ಎಣ್ಣೆ ತಯಾರಿಕೆಯಲ್ಲಿ, ಬಟ್ಟೆಗಳ ಮೇಲಿನ ಕಲೆ ತೆಗೆಯಲು, ಔಷಧಿ ತಯಾರಿಕೆಯಲ್ಲಿ ಸುವಾಸನೆ ನೀಡಲು ಬಳಸಲಾಗುವುದು.

ಎನ್. ಆರ್.

ಗಜ್ಜರಿ ಏಪಿಯೇಸೀ ಕುಟುಂಬಕ್ಕೆ ಸೇರಿದ ಕ್ಯಾರೆಟನ್ನು ಸಸ್ಯಶಾಸ್ತ್ರದ ಪರಿಭಾಷೆಯಲ್ಲಿ ಡಾಕಸ್ ಕ್ಯಾರೋಟಾ ಎಂದು ಕರೆಯುತ್ತಾರೆ. ಅಕ್ಬರನ ಕಾಲದಲ್ಲಿಯೇ ಈ ಕೆಂಪು ಮೂಲಂಗಿಗೆ "ಗಜರ್" ಎಂಬ ಹೆಸರಿತ್ತು. ಅದರ ತದ್ಭವ ರೂಪವೇ 'ಗಜ್ಜರಿ'. ಮೊಗಲರ ಕಾಲಕ್ಕೆ ಮೊದಲೇ ಇದು ಭಾರತಕ್ಕೆ ಬಂದಿರಬೇಕೆಂದು ಊಹಿಸಲಾಗಿದೆ. ಅನೇಕ ತಜ್ಞರು ಇದರ ಮೂಲ ಯೂರೋಪ್, ಏಷ್ಯಾ, ಉತ್ತರ ಆಫ್ರಿಕ, ಉತ್ತರ ಅಮೇರಿಕಾ ಹಾಗೂ ದಕ್ಷಿಣ ಅಮೇರಿಕ ಎಂಬ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ.

ಯುರೋಪ್ ಮೆಡಿಟರೇನಿಯನ್ ಪ್ರದೇಶದಲ್ಲಿ ಕ್ರಿ.ಪೂ.ದ ಶತಮಾನಗಳಲ್ಲೇ ಗಜ್ಜರಿ ಕೃಷಿಯಲ್ಲಿತ್ತು. ಗ್ರೀಕರಿಗೆ ಇದು ಜಠರ ಮಾಂದ್ಯವನ್ನು ನೀಗಿಸುವ ವಸ್ತುವಾಗಿತ್ತು. 'ಕೆಂಪು ಮೂಲಂಗಿ' ಎಂದೂ ಕೆಲವು ಪ್ರದೇಶಗಳಲ್ಲಿ ಇದನ್ನು ಕರೆಯುತ್ತಾರೆ.

ಇದು ಅತಿ ಉತ್ತಮವಾದ ಆಹಾರವೆನಿಸಿಕೊಂಡು ಅತ್ಯಧಿಕ ಪ್ರಮಾಣದ 'ಎ' ಜೀವಸತ್ವವನ್ನು ಒಳಗೊಂಡಿದೆ. ಇದರಲ್ಲಿರುವ ಪಾಚಕ ಎಂಜೈಮ್ ಒಳ್ಳೆಯ ಮೂತ್ರ ಸ್ರಾವಕವಾಗಿ ಕೆಲಸ ಮಾಡುತ್ತದೆ. ಸುಲಭ ಬೆಲೆಗೆ ಸಿಗುವ ಮತ್ತು ಹಸಿಯಾಗಿ ಉಪಯೋಗಿಸಬಹುದಾದ ತರಕಾರಿ. ಕೊಬ್ಬಿನಂಶದ ಆಹಾರ ಸೇವನೆ ಮಾಡಿದಾಗ ಗಜ್ಜರಿಯನ್ನು ತಿಂದರೆ ಕೊಬ್ಬಿನಂಶ ಪಚನವಾಗಿ ಆಗಬಹುದಾದ ದುಷ್ಪರಿಣಾಮವನ್ನು ತಡೆಯುತ್ತದೆ.

ಹವಾಗುಣ : ಗಜ್ಜರಿಯನ್ನು ಎಲ್ಲಾ ವಿಧದ ಮಣ್ಣುಗಳಲ್ಲಿ ಸಾಗುವಳಿ ಮಾಡಲು ಸಾಧ್ಯವಿದ್ದರೂ ಆಳವಾದ ಮತ್ತು ಸಡಿಲವಾದ ಗೋಡುಮಣ್ಣು ಒಳ್ಳೆಯದು. ಮರಳು ಗೋಡುಗಳಲ್ಲಿ ಬೆಳೆ ಬೇಗ ಇಳುವರಿಗೆ ಬರುತ್ತದೆ. ಆಮ್ಲಿಮಣ್ಣು ಇದಕ್ಕೆ ಯುಕ್ತವಲ್ಲ. ಭಾರತದ ಮೈದಾನದ ಪ್ರದೇಶಗಳಲ್ಲಿ ಚಳಿಗಾಲದಲ್ಲಿ ಬೆಳೆಯುವ ಬೆಳೆ ಇದಾಗಿದೆ. ಬೀಜ ಮೊಳೆಯುವಿಕೆ ಮತ್ತು ಬೇರುಬೆಳವಣಿಗೆ ಉಷ್ಣತೆಯನ್ನವಲಂಬಿಸಿದೆ. ಹೆಚ್ಚು ಉಷ್ಣತೆ ಮತ್ತು ಕಡಿಮೆ ಉಷ್ಣತೆ ಬೇರಿನ ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.



ಬಿತ್ತನೆ ಮತ್ತು ನಾಟಿ : ಭೂಮಿಯನ್ನು ಆಳಕ್ಕೆ ಹದವಾಗಿ ಉತ್ತು, ಕೊಟ್ಟಿಗೆ ಗೊಬ್ಬರ ಮತ್ತು ಪೋಷಕಾಂಶ ಗೊಬ್ಬರಗಳನ್ನು ಮಣ್ಣಿನಲ್ಲಿ ಚೆನ್ನಾಗಿ ಮಿಶ್ರಮಾಡಬೇಕು. ಅನಂತರ ಬೀಜವನ್ನು 4 x 4 ಅಡಿ ಪಟಗಳಲ್ಲಿ ಚೆಲ್ಲಿ ಬಿತ್ತಬಹುದು ಅಥವಾ 7 ಅಂಗುಲ ಅಂತರದಲ್ಲಿ ಮಾಡಿದ ಸಣ್ಣ ಸಾಲುಗಳಲ್ಲಿ ಬಿತ್ತಿ ಅನಂತರ ತೆಳುವಾಗಿ ನೀರು ಹಾಯಿಸಬೇಕು. ಮೊಳಕೆಯೊಡೆದು ಚಿಗುರಿದ ಮೇಲೆ 4 ಅಂಗುಲಕ್ಕೊಂದರಂತೆ ಸಸ್ಯಗಳನ್ನು ಉಳಿಸಿಕೊಂಡು ಉಳಿದವುಗಳನ್ನು ತೆಗೆದು ಹಾಕಬೇಕು. ಈ ರೀತಿ ಬಿತ್ತಲು ಎಕರೆಗೆ 2 ಸೇರು ಬೀಜ ಸಾಕು.

ನೀರಾವರಿ : ಗಜ್ಜರಿಗೆ ನೀರನ್ನು ಆಗಿಂದಾಗ್ಗೆ ಹಾಯಿಸಬೇಕು. ಹಾಗೂ ಗೆಡ್ಡೆ ಬೆಳವಣಿಗೆಯ ಹಂತಗಳಲ್ಲಿ ಹೆಚ್ಚು ನೀರು ಕೊಡುವುದರಿಂದ ಇಳುವರಿ ಮತ್ತು ಗುಣಮಟ್ಟ ಉತ್ತಮವಾಗಿರುತ್ತದೆ. ಬೆಳೆಯ ಪ್ರಾಥಮಿಕ ಹಂತಗಳಲ್ಲೇ ಕಳೆ ತೆಗೆಯಬೇಕು. ಅದಕ್ಕಾಗಿ ಆಗಾಗ ಕುಂಟೆ ಹಾಯಿಸಿದರೆ ಮಣ್ಣು ಸಡಿಲವಾಗುವುದಲ್ಲದೇ ಕಳೆ ನಿರ್ಮೂಲನವಾಗುತ್ತದೆ. ಮಣ್ಣು ಏರು ಹಾಕುವುದರಿಂದ ಬೇರಿನ ಬಣ್ಣ ಉತ್ತಮವಾಗಿರುತ್ತದೆ ಹಾಗೂ ಗೆಡ್ಡೆ ಬೆಳವಣಿಗೆ ಚೆನ್ನಾಗಿ ಆಗುತ್ತದೆ.

ರೋಗಗಳು : ಗಜ್ಜರಿ ಗಿಡ ಚೆನ್ನಾಗಿ ಬೆಳೆದು ನಿಂತಂತ ಸಂದರ್ಭದಲ್ಲಿ ಅನೇಕ ರೋಗಗಳಿಗೆ ತುತ್ತಾಗುತ್ತದೆ. ಸಾಮಾನ್ಯವಾಗಿ ಕಂಡುಬರುವ ರೋಗಗಳೆಂದರೆ ಎಲೆಚುಕ್ಕೆ ರೋಗ, ಅಂಗಮಾರಿ ರೋಗ ಮತ್ತು ಬೂಜುರೋಗ.

ಶಿಲೀಂಧ್ರದಿಂದ ಉಂಟಾಗುವ ರೋಗಕ್ಕೆ ಎಲೆ ಚುಕ್ಕೆರೋಗ ಎನ್ನುತ್ತಾರೆ. ಎಲೆಗಳಲ್ಲಿ ಚುಕ್ಕೆಗಳು ಕಾಣಿಸಿಕೊಂಡು ಇವು ಕ್ರಮೇಣ ವೃದ್ಧಿಯಾಗಿ ಒಂದಕ್ಕೊಂದು ಸೇರಿಕೊಂಡು ಎಲೆ ಹಾಳಾಗುತ್ತದೆ ಮತ್ತು

ಇಳುವರಿ ಬಹಳ ಕಡಿಮೆಯಾಗುತ್ತದೆ. ಅಂಗಮಾರಿ ರೋಗದಿಂದ ಹೂಗೊಂಚಲು ಮತ್ತು ಎಲೆಗಳು ಕಂದುಬಣ್ಣಕ್ಕೆ ತಿರುಗುತ್ತವೆ. ಇದು ಎಲೆತೊಟ್ಟು ಮತ್ತು ಕಾಂಡಗಳ ಮೇಲೆ ಕಾಣಿಸಿಕೊಳ್ಳುತ್ತದೆ. ರೋಗವು ತೀವ್ರವಾದಾಗ ಸಸ್ಯಗಳು ಸತ್ತು ಹೋಗುತ್ತವೆ. ಬೂಜು ರೋಗವು ಎಲೆಗಳ ಮೇಲೆ ಬಿಳಿ ಬಣ್ಣದ ಪುಡಿಯಂತೆ ಶಿಲೀಂಧ್ರವು ಕಾಣಿಸಿಕೊಂಡು ಎಲೆಹಳದಿ ಬಣ್ಣಕ್ಕೆ ತಿರುಗುತ್ತದೆ. ಈ ರೋಗಗಳಲ್ಲದೇ ಅನೇಕ ಕೀಟಗಳ ಉಪದ್ರವವೂ ಕ್ಯಾರೆಟ್ ಗಿಡಕ್ಕಿದೆ. ಜಿಗಿಹುಳು, ಮೂತಿಹುಳು, ಹೇನು ಮುಂತಾದವೂ ಈ ಗಿಡವನ್ನು ಹಾಳುಮಾಡುತ್ತವೆ. ಆಧುನಿಕ ಕಾಲದಲ್ಲಿ ಈ ರೋಗಗಳನ್ನು ನಿಯಂತ್ರಿಸಲು ಮ್ಯಾಲಥಿಯಾನ್, ಕಾರ್ಬರಿಲ್, ಗಂಧಕ ಮುಂತಾದ ದ್ರಾವಣಗಳನ್ನು ಬಳಸುತ್ತಾರೆ.

ಇಳುವರಿ : ಈ ಬೆಳೆ ಸಾಮಾನ್ಯವಾಗಿ ಮೂರು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಮೂಲಂಗಿಯಂತೆಯೇ ಇದನ್ನು ಸಹ ಗೆಡ್ಡೆಯ ಗಾತ್ರಕ್ಕನುಗುಣವಾಗಿ ಸರಿಯಾದ ಸಮಯಕ್ಕೆ ಕೊಯ್ಲು ಮಾಡಬೇಕು. ಎಳೆ ಗೆಡ್ಡೆ ಬಲಿತಂತೆ ಗೆಡ್ಡೆಯ ಕ್ಯಾರೋಟಿನ್ ಮತ್ತು ಸುಕ್ರೋಸ್ (ಸಕ್ಕರೆ) ಅಂಶ ಹೆಚ್ಚುತ್ತದೆ. ಆದರೆ ಗ್ಲುಕೋಸ್ ಮತ್ತು ಫ್ರುಕ್ಟೋಸ್ ಅಂಶ ಕಡಿಮೆಯಾಗುತ್ತದೆ. ತಡವಾದರೆ ಗೆಡ್ಡೆಗಳು ಪೊಳ್ಳಾಗುವುದಲ್ಲದೇ ಉಪಯೋಗಿಸಲು ಉತ್ತಮವಾಗಿರುವುದಿಲ್ಲ. ಗೆಡ್ಡೆ ವಿಪರೀತ ಬಲಿತರೆ ಗೆಡ್ಡೆ ಸೀಳುವಿಕೆ ಉಂಟಾಗುತ್ತದೆ.


ಸಾಮಾನ್ಯವಾಗಿ ಎಲೆಗಳು ನಸುಹಳದಿ ಬಣ್ಣಕ್ಕೆ ತಿರುಗಿದಾಗ ಮತ್ತು ಗೆಡ್ಡೆಗಳು ದಪ್ಪವಾದಾಗ ಕೊಯ್ಲಿಗೆ ಸಿದ್ಧ ಎಂದು ತಿಳಿಯಬೇಕು. ಚೆನ್ನಾಗಿ ನೀರು ಹಾಯಿಸಿ ಅನಂತರ ಗೆಡ್ಡೆಯನ್ನು ಕೀಳಬೇಕು ಅಥವಾ ಅಗೆದು ತೆಗೆಯಬಹುದು. ಪ್ರತಿ ಎಕರೆಯಿಂದ ಸುಮಾರು 8 ಟನ್ ಇಳುವರಿ ದೊರೆಯುತ್ತದೆ. ಕ್ಯಾರೋಟನ್ನು ಸಾಮಾನ್ಯವಾದ ಸ್ಥಿತಿಗಳಲ್ಲಿ 3-4 ದಿನಗಳಿಗಿಂತ ಹೆಚ್ಚು ದಿನಗಳವರೆಗೆ ಸಂಗ್ರಹಿಸಿಡಲು ಸಾಧ್ಯವಿಲ್ಲ. ಆದ್ದರಿಂದ ಹೆಚ್ಚು ಕಿಟಕಿಗಳನ್ನು ಹೊಂದಿರುವ ಕೊಠಡಿಗಳಲ್ಲಿ ಪಾಲಿಥೀನ್ ಚೀಲಗಳಲ್ಲಿ ಪ್ಯಾಕ್ ಮಾಡಿ ಶೇಖರಿಸಿದರೆ ಅದರ ತೂಕ ಕಡಿಮೆಯಾಗುವುದಿಲ್ಲ ಹಾಗೂ ಒಣಗದೇ ತಾಜಾತನದಿಂದ ಕೂಡಿರುತ್ತದೆ.

ಎನ್. ಆರ್.

ಗದಗ ಜಿಲ್ಲೆಯ ಕೃಷಿ ಕರ್ನಾಟಕದ 30 ಜಿಲ್ಲೆಗಳಲ್ಲಿ ಒಂದಾಗಿರುವ ಗದಗ ಜಿಲ್ಲೆಯು 1997ರಲ್ಲಿ ಜಿಲ್ಲಾ ಮರುವಿಂಗಡಣೆಯ ಮೇರೆಗೆ ಧಾರವಾಡ ಜಿಲ್ಲೆಯ ಐದು ತಾಲ್ಲೂಕುಗಳನ್ನು ಬೇರ್ಪಡಿಸಿ ರಚಿತವಾಯಿತು. ಗದಗ, ರೋಣ, ನರಗುಂದ, ಮುಂಡರಗಿ ಮತ್ತು ಶಿರಹಟ್ಟಿ ತಾಲ್ಲೂಕುಗಳನ್ನು ಒಳಗೊಂಡಿದ್ದು, ಉತ್ತರಕ್ಕೆ ಬಾಗಲಕೋಟೆ, ದಕ್ಷಿಣಕ್ಕೆ ಹಾವೇರಿ, ಪೂರ್ವಕ್ಕೆ ಕೊಪ್ಪಳ ಹಾಗೂ ಬಳ್ಳಾರಿ; ಪಶ್ಚಿಮಕ್ಕೆ ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳು ಇದರ ಮೇರೆಗಳಾಗಿವೆ. ಜಿಲ್ಲೆಯಲ್ಲಿ ನಾಡ ಕಛೇರಿಗಳು 6, 194 ವೃತ್ತಗಳು, 11 ಹೋಬಳಿಗಳು, 1061 ಗ್ರಾಮ ಪಂಚಾಯಿತಿಗಳು, 9 ನಗರ / ಪಟ್ಟಣ ಪ್ರದೇಶಗಳು, 337 ಗ್ರಾಮಗಳು ಮತ್ತು 9 ಪುರಸಭೆಗಳು / ನಗರಪಾಲಿಕೆಗಳು ಇದ್ದು 2011ರ ಜನಗಣತಿಯಂತೆ 10,65,235 ಜನಸಂಖ್ಯೆಯಿದೆ. ಇದು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ. 1.74ರಷ್ಟಿದೆ.

ಜಿಲ್ಲೆಯ ವಿಸ್ತೀರ್ಣ : ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 4657 ಚ.ಕಿ.ಮೀ. ಇದ್ದು ಇದರಲ್ಲಿ ಕ್ರಮವಾಗಿ ಗದಗ 1097 ಚ.ಕಿ.ಮೀ., ಮುಂಡರಗಿ 884 ಚ.ಕಿ.ಮೀ., ನರಗುಂದ 435 ಚ.ಕಿ.ಮೀ, ರೋಣ 1291 ಚ.ಕಿ.ಮೀ ಮತ್ತು ಶಿರಹಟ್ಟಿ 949 ಚ.ಕಿ.ಮೀ ವಿಸ್ತೀರ್ಣ ಹೊಂದಿವೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 2.43ರಷ್ಟಿದೆ. ಹಾಗೆಯೆ ಜಿಲ್ಲೆಯು ರಾಜ್ಯದ ನಾಲ್ಕು ಪ್ರಾದೇಶಿಕ ಆಡಳಿತ ವಿಭಾಗಗಳಲ್ಲಿ ಒಂದಾದ ಬೆಳಗಾವಿ ವಿಭಾಗಕ್ಕೆ ಸೇರಿದೆ.

ಮೇಲ್ಮೈ ಲಕ್ಷಣ : ರಾಜ್ಯದ ಪೂರ್ವಭಾಗವು ಏರುತಗ್ಗಿನ ಭೂಸ್ವರೂಪದಿಂದ ಕೂಡಿದ್ದು, ವಿಶಾಲ ಮೈದಾನವನ್ನು ಹೊಂದಿದೆ. ಇದಕ್ಕೆ ಸಮೀಪವರ್ತಿಯಾದ ಗದಗ ಜಿಲ್ಲೆಯು ಮೇಲೆತ್ತಲ್ಪಟ್ಟಿರುವ ಆಳವಾಗಿ



ಕೊರೆಯಲ್ಪಟ್ಟಿರುವ ಮೂಲತಃ ಮಟ್ಟಸವಾದ ಅಂತ್ಯಸ್ವರೂಪದ ಮೈದಾನವನ್ನು ಹೊಂದಿದೆ. ಈ ಪ್ರಸ್ಥಭೂಮಿಯು ಅತ್ಯಂತ ಪುರಾತನವಾದ ಕ್ಯಾಂಬ್ರಿಯನ್ ಪೂರ್ವದ ಶಿಲೆಗಳಿಂದ ಕೂಡಿದೆ. ಕೆಲವೆಡೆ ಗ್ರ್ಯಾನೈಟ್ ಕಲ್ಲಿನ ಬೆಟ್ಟಗಳು ಕಂಡುಬರುವವು. ಈ ಶಿಲಾಪದರದಲ್ಲಿ ನೈಸ್‌ಶಿಲೆಗಳು, ಪದರುಶಿಲೆಗಳು, ಬೆಣಚುಕಲ್ಲಿನ ಶಿಲಾಪದರಗಳು ಇವೆ. ಗ್ರ್ಯಾನೈಟ್ ಕಲ್ಲುಗಳು ಧಾರವಾಡ ಶಿಲಾವರ್ಗಕ್ಕೆ ಸೇರಿದವಾಗಿದ್ದು, ಪರ್ಯಾಯ ದ್ವೀಪದ ಸಂಬಂಧವಾದ ಡೈಕ್ ಮಾದರಿಯ ಶಿಲೆಗಳು ಅಲ್ಲಲ್ಲಿವೆ. ಕಲಾದಗಿ ಶ್ರೇಣಿಗೆ ಸೇರಿದ ಶಿಲೆಗಳು, ಕಣಶಿಲೆಯ ಗುಡ್ಡಗಳು, ಟ್ರಾಪ್‌ಶಿಲೆಯ ಉಬ್ಬುಗಳು ಇದರೊಂದಿಗೆ ಮಟ್ಟಸವಾದ ಬಯಲು ಪ್ರದೇಶವಿದೆ. ಪಶ್ಚಿಮದಿಂದ ಪೂರ್ವದತ್ತ ಇಳಿಜಾರಾಗಿರುವ ಪ್ರದೇಶವನ್ನು ಹೊಂದಿರುವ ಜಿಲ್ಲೆ ಪಾರಂಪರಿಕವಾಗಿ 'ಬೆಳವಲ ನಾಡೆಂದು' ಪ್ರಸಿದ್ಧವಾಗಿದೆ. ಇದು ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದ್ದು ಸಾಧಾರಣವಾದ ಬೆಟ್ಟಗುಡ್ಡಗಳು ಇವೆ. ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡ, ನರಗುಂದ ಮತ್ತು ಗಜೇಂದ್ರಗಡದಲ್ಲಿ ಹಾಗೂ ಗದಗದ ಬಳಿ ಬೆಟ್ಟಸಾಲುಗಳು ಕಂಡುಬರುವವು. ಈ ಬೆಟ್ಟಶ್ರೇಣಿಯ ಹೆಚ್ಚಿನ ಎತ್ತರ 937 ಮೀ. ಇಲ್ಲಿಯ ಶಿಲಾಪದರಗಳಲ್ಲಿ ಮ್ಯಾಂಗನೀಸ್ ಅದುರು ಹೆಚ್ಚು, ಕಪ್ಪತಗುಡ್ಡದಿಂದ ಪ್ರಾರಂಭವಾಗಿ ದೋಣಿ ಸಾಲಿನಲ್ಲಿ ತಾಮ್ರದ ಅದುರಿನ ಅಂಶ ಕಂಡುಬಂದಿದೆ. ಹಾಗೆಯೆ ಕಬ್ಬಿಣ ಮತ್ತು ಹೆಮಟೈಟ್ ನಿಕ್ಷೇಪಗಳು ಇರುವುದರೊಂದಿಗೆ ಕಪ್ಪತಗುಡ್ಡ ಹಾಗೂ ಅಲ್ಲಲ್ಲಿ ಚಿನ್ನದ ಅದುರು ಇದೆ. ಹೀಗೆ ವಿಶಾಲ ಮೈದಾನ ಹೊಂದಿದ್ದು ಉತ್ತಮ ಖನಿಜಾಂಶಗಳನ್ನು ಒಳಗೊಂಡಿದೆ.

ಹವಾಗುಣ : ಬೇಸಗೆಯಲ್ಲಿ ಅಂದರೆ ಏಪ್ರಿಲ್-ಮೇ ನಲ್ಲಿ ಅಧಿಕ ಉಷ್ಣಾಂಶವು ಜಿಲ್ಲೆಯಲ್ಲಿ ಕಂಡುಬರುವುದು. ಉಳಿದಂತೆ ಹಿತಕರವಾದ ವಾತಾವರಣವಿರುತ್ತದೆ. ಕೆಲವು ವೇಳೆ ಈ ಅವಧಿಯಲ್ಲಿ 40.4^0ಸೆಂ.ನಿಂದ 39.6^0ಸೆ.ವರೆಗೂ ಉಷ್ಣಾಂಶವಿರುವುದು. ಜೂನ್ ತಿಂಗಳಲ್ಲಿ ಮುಂಗಾರು ಮಳೆ ಪ್ರಾರಂಭವಾದಾಗ ಉಷ್ಣಾಂಶ ತಗ್ಗುವುದು, ಇತ್ತೀಚಿನ ಅಂಕಿ-ಸಂಖ್ಯೆಯಂತೆ ಜಿಲ್ಲೆಯ ವಾರ್ಷಿಕ ಉಷ್ಣಾಂಶ ಗರಿಷ್ಠ 31.7^0 ಮತ್ತು ಕನಿಷ್ಠ 20.1^0 ಸೆ.ರಷ್ಟು ದಾಖಲಾಗಿದೆ.

ಮಳೆ : ಹವಾಗುಣ ವೈಪರೀತ್ಯವು ಜಿಲ್ಲೆಯ ಮಳೆಯ ಪ್ರಮಾಣದ ಮೇಲೆ ಪರಿಣಾಮ ಬೀರಿದೆ. ಸಾಮಾನ್ಯವಾಗಿ ಜೂನ್‌ನಿಂದ ನವೆಂಬರ್ ನಡುವೆ ವಾರ್ಷಿಕ ಮಳೆಯ ಅಧಿಕ ಭಾಗ ಬೀಳುವುದು. ಸರಾಸರಿ ವಾರ್ಷಿಕ ಮಳೆಯು ವಾಡಿಕೆಯಂತೆ 631 ಮಿ.ಮೀ. ಬೀಳುವುದು. ಮುಂಗಾರು ಮಾರುತದ ಅವಧಿಯಲ್ಲಿ ಬೀಳುವ ಮಳೆ ಹಿಂಗಾರು ಮಾರುತದ ಅವಧಿಗಿಂತ ಸ್ವಲ್ಪ ಹೆಚ್ಚಾಗಿರುತ್ತದೆ. ಹಿಂಗಾರುಗಳಲ್ಲಿ ಚಂಡಮಾರುತಗಳಿಂದ ಕೂಡಿದ ಮಳೆ ಬೀಳುವುದುಂಟು. ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಮುಂಗಾರು ಅಧಿಕವಾಗಿ ಬಿದ್ದರೆ, ಪೂರ್ವ ಭಾಗದಲ್ಲಿ ಹಿಂಗಾರು ಬೀಳುವುದು. 2010-11ರಲ್ಲಿ ಜಿಲ್ಲೆಯಲ್ಲಿ ಕ್ರಮವಾಗಿ 696 ಮತ್ತು 397 ಮಿ.ಮೀ. ಮಳೆಯಾಗಿದೆ. ಇದು ತಾಲ್ಲೂಕುವಾರು ಇಂತಿದೆ: ಗದಗ 856.6-539.9ಮಿಮೀ, ಮುಂಡರಗಿ 680.9-416.7ಮಿಮೀ, ನರಗುಂದ 730.7-449.3 ಮಿ.ಮೀ, ರೋಣ 730.7-426.0ಮಿ.ಮೀ ಮತ್ತು ಶಿರಹಟ್ಟಿ 769.8-631.5 ಮಿ.ಮೀ ಮಳೆಯಾಗಿರುವುದು ದಾಖಲಾಗಿದೆ.

ಕೃಷಿ ಭೂಮಿಯ ವಿಸ್ತೀರ್ಣ : ಜಿಲ್ಲೆಯಲ್ಲಿ ಶೇ. 70ರಷ್ಟು ಜನರು ವ್ಯವಸಾಯವನ್ನು ಅವಲಂಬಿಸಿದ್ದಾರೆ. ಪಶ್ಚಿಮದ ಕರಾವಳಿಯಿಂದ ಬೀಸುವ ಮುಂಗಾರು ಮಾರುತಗಳು ವ್ಯವಸಾಯಕ್ಕೆ ಅನುಕೂಲವಾಗಿವೆ. ಇಲ್ಲಿಯ ಬೇಸಾಯ ಮಳೆಯನ್ನೇ ಅವಲಂಬಿಸಿದೆ. ಒಣಬೆಳೆಗಳು ಬೆಳೆಯುವ ಜಿರಾಯತು ಮತ್ತು ನೀರಾವರಿ ಬೆಳೆ ಬೆಳೆಯುವ ಬಾಗಾಯತು ಜಮೀನು ಜಿಲ್ಲೆಯಲ್ಲಿದ್ದು, ಇದಕ್ಕೆ ಅನುಸಾರವಾಗಿ ಶಿರಹಟ್ಟಿ ತಾಲ್ಲೂಕಿನ ಮಚ್ಚೂರು, ಮಾಗಡಿ, ಶೆಟ್ಟಿಕೇರಿ, ಮುಂಡರಗಿಯ ಡಬ್ಬಳ ಕೆರೆಗಳು ಹೆಸರುವಾಸಿಯಾಗಿವೆ. ಮಲಪ್ರಭ ಬಲದಂಡೆ ಯೋಜನೆಯಿಂದ ನರಗುಂದ, ಗದಗ ಮತ್ತು ರೋಣ ತಾಲ್ಲೂಕುಗಳು ನೀರಾವರಿ ಸೌಲಭ್ಯ ಪಡೆದಿದ್ದು, ಕಾಲುವೆಗಳಿಂದ 34.621, ಕೆರೆಗಳಿಂದ 2030 ಮತ್ತು ಬಾವಿಗಳಿಂದ 7373 ಹೆಕ್ಟೇರ್ ಪ್ರದೇಶ ಕೃಷಿ ನೀರಾವರಿಗೆ ಒಳಪಟ್ಟಿದೆ. 2011ರ ಅಂಕಿ ಸಂಖ್ಯೆಯಂತೆ ಜಿಲ್ಲೆಯ ಒಟ್ಟು ಬಂಜರಾದ 1010 ಹೆ.ಪ್ರದೇಶದಲ್ಲಿ ಕೃಷಿಕಾರ್ಯ ನಡೆದಿದೆ. ಕ್ರಮವಾಗಿ ಗದಗದಲ್ಲಿ 291 ಹೆ. ಮುಂಡರಗಿಯಲ್ಲಿ 163 ಹೆ. ರೋಣದಲ್ಲಿ 370 ಹೆ. ಮತ್ತು ಶಿರಹಟ್ಟಿಯಲ್ಲಿ 186 ಹೆ., ಪ್ರದೇಶವಾಗಿದ್ದು ಒಟ್ಟಾರೆ 390265 ಹೆ. ಪ್ರದೇಶದಲ್ಲಿ ವಿವಿಧ ಭೂ ಹಿಡುವಳಿದಾರರು ಕ್ರಮವಾಗಿ ಗದಗದಲ್ಲಿ 96043 ಹೆ., ಮುಂಡರಗಿಯಲ್ಲಿ 613 ಹೆ.ನಲ್ಲಿ ನರಗುಂದದಲ್ಲಿ 39339 ಹೆ.ನಲ್ಲಿ, ರೋಣದಲ್ಲಿ 117363 ಹೆ.ನಲ್ಲಿ ಮತ್ತು ಶಿರಹಟ್ಟಿಯಲ್ಲಿ 76203 ಹೆ. ಪ್ರದೇಶದಲ್ಲಿ ಕೃಷಿ ಕಾರ್ಯ ನಡೆಯುತ್ತಿದೆ.

ಭೂ ಹಿಡುವಳಿದಾರರು : ಶೇ 70ರಷ್ಟು ಮಂದಿ ಕೃಷಿಯನ್ನು ತಮ್ಮ ಮೂಲ ಕಸುಬವನ್ನಾಗಿ ಮಾಡಿಕೊಂಡು ಜೀವನ ನಡೆಸುತ್ತಿದ್ದು ಭೂ ಹಿಡುವಳಿಯನ್ನು ಹೊಂದಿರುವಲ್ಲಿ ಅಸಮತೋಲನ ಕಂಡುಬರುವುದು ಸಾಮಾನ್ಯವಾಗಿದೆ. ಇದರಲ್ಲಿ ಪರಿಶಿಷ್ಟ ಜಾತಿಯ 4727 ಅತಿಸಣ್ಣ ಭೂ ಹಿಡುವಳಿದಾರರು 2924 ಹೆಕ್ಟೇರ್ ಪ್ರದೇಶದಲಿ ಪರಿಶಿಷ್ಟ ಪಂಗಡದ ಅತಿಸಣ್ಣ ಭೂ ಹಿಡುವಳಿದಾರರ ಪೈಕಿ 2302 ಜನರು 1386 ಹೆ. ಪ್ರದೇಶದಲ್ಲಿ ಮತ್ತು 28378 ಇತರೆ ಅತಿಸಣ್ಣ ಭೂ ಹಿಡವಳಿದಾರರು 16954 ಹೆ. ಪ್ರದೇಶದಲ್ಲಿ, 5139 ಪರಿಶಿಷ್ಟ ಜಾತಿಯ ಸಣ್ಣ ಭೂ ಹಿಡುವಳಿದಾರರು 7229 ಹೆ. ಪ್ರದೇಶದಲ್ಲಿ, ಪರಿಶಿಷ್ಟ ಪಂಗಡದ 3327 ಸಣ್ಣ ಭೂ ಹಿಡುವಳಿದಾರರು 4811 ಹೆ. ಪ್ರದೇಶದಲ್ಲಿ ಮತ್ತು 51626 ಇತರೆ ಸಣ್ಣ ಭೂ ಹಿಡುವಳಿದಾರರು 75729 ಹೆ. ಪ್ರದೇಶದಲ್ಲಿ, ಪರಿಶಿಷ್ಟ ಜಾತಿಯ 2581 ಅರೆ ಮಧ್ಯಮ ಭೂ ಹಿಡುವಳಿದಾರರು 6626 ಹೆ.ನಲ್ಲಿ, ಪರಿಶಿಷ್ಟ ಪಂಗಡದ 1788 ಅರೆ ಮಧ್ಯಮ ಭೂ ಹಿಡುವಳಿದಾರರು 4761 ಹೆ.ನಲ್ಲಿ ಮತ್ತು ಇತರೆ 39196 ಅರೆ ಮಧ್ಯಮ ಭೂ ಹಿಡುವಳಿದಾರರು 107137 ಹೆ.ನಲ್ಲಿ ಪರಿಶಿಷ್ಟ ಜಾತಿಯ 558 ಮಧ್ಯಮ ಭೂ ಹಿಡುವಳಿದಾರರು 3055 ಹೆ.ನಲ್ಲಿ, ಪರಿಶಿಷ್ಟ ಪಂಗಡದ 543 ಮಧ್ಯಮ ಭೂ ಹಿಡುವಳಿದಾರರು 3030 ಹೆ.ನಲ್ಲಿ ಮತ್ತು ಇತರೆ 20087 ಮಧ್ಯಮ ಭೂ ಹಿಡುವಳಿದಾರರು 116124 ಹೆ.ನಲ್ಲಿ ಮತ್ತು ದೊಡ್ಡ ಭೂ ಹಿಡುವಲಿಯ 47 ಪರಿಶಿಷ್ಟ ಜಾತಿ ಹಿಡುವಳಿದಾರರು 603 ಹೆ.ನಲ್ಲಿ, 48 ಪರಿಶಿಷ್ಟ ಪಂಗಡದ ದೊಡ್ಡ ಭೂ ಹಿಡುವಳಿದಾರರು 603 ಹೆ.ನಲ್ಲಿ ಮತ್ತು 2802 ಇತರೆ ಭೂ ಹಿಡುವಳಿದಾರರು 37518 ಹೆ.ನಲ್ಲಿ, ದೊಡ್ಡ ಭೂ ಹಿಡುವಳಿ ಹೊಂದಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ.

ಭೂಗುಣ ಮತ್ತು ಭೂ ಉಪಯೋಗ : ಜಿಲ್ಲೆಯ ಬಹುಭಾಗ ಪ್ರಾಚೀನ ಬೆಣಚುಕಲ್ಲು ಮತ್ತು ಪದರ ಶಿಲೆಗಳಿಂದ ಕೂಡಿದೆ. ಧಾರವಾಡ ಬಂಡೆಗಳಿಂದ ರಚಿತವಾಗಿರುವ ಪಳೆಯುಳಿಕೆಯ ಬೆಟ್ಟಗಳು ಗದಗದಿಂದ ದಕ್ಷಿಣಕ್ಕೆ ತುಂಗಭದ್ರಾ ಕಡೆ ಹರಡಿವೆ. ಇಲ್ಲಿ ಕಣಿವೆಗಳು, ಕಂದರಗಳು ಹೆಚ್ಚು. ಭೂಮಿಯ ಫಲವತ್ತತೆ ಪೂರ್ವಕ್ಕೆ ಬಂದಂತೆಲ್ಲ ಕಡಿಮೆಯಾಗಿದೆ. ರೇವೆ, ಎರೆ, ಕೆಂಪು ಮಸಾರಿ ಮತ್ತು ಮಡಿಕಟ್ಟು ಮಣ್ಣು ಜಿಲ್ಲೆಯಲ್ಲಿದ್ದು ಇದಕ್ಕನುಸಾರವಾಗಿ ಭೂ ಉಪಯೋಗ ಕಂಡುಬರುವುದು. ಜಿಲ್ಲೆಯ ಒಟ್ಟು ಭೌಗೋಳಿಕ 465715 ವಿಸ್ತೀರ್ಣದಲ್ಲಿ 32614 ಹೆ. ಅರಣ್ಯ ಪ್ರದೇಶ, 10628 ಹೆ. ವ್ಯವಸಾಯೇತರ ಭೂಮಿ, 11628 ಬಂಜರು, 1010 ಹೆ. ಸಾಗುವಳಿಗೆ ಯೋಗ್ಯವಾದ ಭೂಮಿ, 2592 ಹೆ. ಖಾಯಂ ಗೋಮಾಳ ಮತ್ತು ವೃಕ್ಷ ಮತ್ತು ತೋಪುಗಳಿಗೆ 273 ಹೆ. ಬಳಕೆಯಾಗಿರುವುದು ಕಂಡುಬರುವುದು.

ಮಣ್ಣು : ಗದಗ ಜಿಲ್ಲೆಯಲ್ಲಿ ಕಂಡುಬರುವ ಮಣ್ಣು ವಿವಿಧ ಪ್ರಕಾರದ ವಿಭಜಿತ ಶಿಲಾ ಮಿಶ್ರಣದಿಂದ ಕೂಡಿದೆ. ಹುಳಕೆರೆ, ಎರೆ, ಕೆಂಪು ಮಸಾರಿ, ಮದಿಕಟ್ಟು ಮತ್ತು ರೇವೆ ಮಣ್ಣುಗಳು ಸೇರಿವೆ. ರೋಣ, ಗದಗ, ಶಿರಹಟ್ಟಿ ಮತ್ತು ಮುಂಡರಗಿಯಲ್ಲಿ ಮರಳುಮಿಶ್ರಿತ ಮಣ್ಣು ಕಂಡುಬರುತ್ತದೆ. ರೋಣ ಮತ್ತು ನರಗುಂದ ತಾಲ್ಲೂಕುಗಳಲ್ಲಿ ಮಲಪ್ರಭಾ ನದಿಯ ಬಲದಂಡೆಯುದ್ದಕ್ಕೂ ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ತುಂಗಭದ್ರಾ ನದಿಯ ಎಡದಂಡೆಯಲ್ಲಿ ರೇವೆಮಣ್ಣು ಹರಡಿದೆ. ಕಪ್ಪು ಮಣ್ಣು ಹೆಚ್ಚು ಫಲವತ್ತಾಗಿದ್ದು ಇದು ರೋಣ, ಗದಗ, ನರಗುಂದ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಅರಣ್ಯಗಳು : ಜಿಲ್ಲೆ ಅತಿ ಉಷ್ಣ ವಾತಾವರಣ ಹೊಂದಿದ್ದು, ಕಡಿಮೆ ಮಳೆ ಪಡೆಯುವುದರಿಂದ ಅರಣ್ಯದ ಬೆಳವಣಿಗೆಗೆ ಸಹಕಾರಿಯಾಗಿಲ್ಲ. ಅಲ್ಲಲ್ಲಿ ಪೊದೆಗಳು ಗಿಡಗಂಟೆಗಳು, ಕುರುಚಲು ಸಸ್ಯವರ್ಗ ಕಂಡುಬರುವುದು. ಜಿಲ್ಲೆಯ ಒಟ್ಟು ಅರಣ್ಯ ಪ್ರದೇಶ 32614 ಹೆಕ್ಟೇರ್. ಇದರಲ್ಲಿ 1749 ಹೆ. ಗದಗ ತಾಲ್ಲೂಕಿನಲ್ಲಿ 17646 ಮುಂಡರಗಿಯಲ್ಲಿ, 276 ಹೆ. ರೋಣದಲ್ಲಿ ಮತ್ತು 12943 ಹೆ. ಶಿರಹಟ್ಟಿಯಲ್ಲಿ ಅರಣ್ಯವಿದೆ. ಇಲ್ಲಿಯ ಅರಣ್ಯದಲ್ಲಿ ಜಾಲ, ಹೊಂಗೆ, ಮುತ್ತುಗ, ದಿಂಡಿಗ, ಚುಚ್ಚಲು, ಹೊನ್ನೆ, ಕಮ್ಮಾರ, ಬಾಗೆ, ಕಕ್ಕೆ ಮೊದಲಾದ ಮರಗಳು ಕಂಡುಬರುತ್ತವೆ. ಅಲ್ಲಲ್ಲಿ ಕುರುಚಲು ಸಸ್ಯಗಳೂ ಇವೆ.

ನೀರಾವರಿ : ಸೌಕರ್ಯ ಜಿಲ್ಲೆಯ ಬೇಸಾಯವು ಮಳೆಯನ್ನೇ ಆಶ್ರಯಿಸಿದೆ. ಜಿಲ್ಲೆಯಲ್ಲಿ ಯಾವುದೆ ನದಿಗಳು ಹರಿಯುವುದಿಲ್ಲ. ಪ್ರಾಚೀನ ಕಾಲದಲ್ಲಿ ಕಟ್ಟಿದ ಕೆರೆಗಳು ಮತ್ತು ಜಲಾಶಯಗಳು ಇಂದಿಗೂ ಉಪಯುಕ್ತವಾಗಿವೆ. ಮಲಪ್ರಭ ಬಲದಂಡೆ ಯೋಜನೆಯಿಂದ ನರಗುಂದ, ಗದಗ ಮತ್ತು ರೋಣ ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯವಿದೆ. ತುಂಗಭದ್ರಾ ನದಿಯಿಂದ ತೀರ ಪ್ರದೇಶದ ಜಮೀನುಗಳಿಗೆ ನೀರಾವರಿ ಅನುಕೂಲವಿದೆ. ಬಾವಿ, ಕಾಲುವೆ ಮತ್ತು ಕೆರೆ ಮೂಲಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 47689 ಹೆ. ಮತ್ತು ನಿವ್ವಳ ನೀರಾವರಿಯಾದ ವಿಸ್ತೀರ್ಣ 28700 ಹೆ. ಕೆರೆಗಳಿಂದ 1269 ಹೆ. ಜಿಲ್ಲೆ ನೀರಿನ ಸೌಕರ್ಯವನ್ನು ಪಡೆಯುತ್ತಿದ್ದು 108 ಕಿ.ಮೀ. ಉದ್ದ ಕಾಲುವೆಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ ಮತ್ತು ಬಾವಿಗಳಿಂದ ಒಟ್ಟು ನೀರಾವರಿಯಾದ ವಿಸ್ತೀರ್ಣ 2487 ಹೆ. ಪ್ರದೇಶವಾಗಿರುವುದು ಅಂಕಿ ಅಂಶಗಳಿಂದ ತಿಳಿಯುತ್ತದೆ.

ಬೆಳೆಗಳು : ಗದಗ ಜಿಲ್ಲೆಯಲ್ಲಿ ಜಿರಾಯತು ಮತ್ತು ಬಾಗಾಯತು ಜಮೀನುಗಳಲ್ಲಿ ವಿವಿಧ ಋತುಮಾನಗಳಿಗೆ ಅನುಸಾರವಾಗಿ ವಿವಿಧ ಬೆಳೆಗಳನ್ನು ಬೆಳೆಯುವುದು ಕಂಡುಬರುತ್ತದೆ. ಇಲ್ಲಿಯ ಬೆಳೆಗಳನ್ನು ಆಹಾರ ಬೆಳೆಗಳು ಮತ್ತು ಆಹಾರೇತರ ಬೆಳೆಗಳೆಂದು ವಿಂಗಡಿಸಿ ಕೆಳಕಂಡಂತೆ ನೋಡಬಹುದು.

ಜೋಳ : ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಜೋಳವನ್ನು ಬೆಳೆಯಲಾಗುತ್ತದೆ. ಇದು ಉಷ್ಣವಲಯದ ಬೆಳೆಯಾಗಿದ್ದು ಮುಂಗಾರು ಮತ್ತು ಹಿಂಗಾರು ಎರಡೂ ಅವಧಿಯಲ್ಲಿ ಬೆಳೆಯಲಾಗುತ್ತದೆ. 2009ರ ಅಂಕಿ ಸಂಖ್ಯೆಯಂತೆ ಜಿಲ್ಲೆಯ 74.3 ಸಾವಿರ ಹೆಕ್ಟೇರ್‌ನಲ್ಲಿ 78.7 ಟನ್ ಜೋಳವನ್ನು ಉತ್ಪಾದನೆ ಮಾಡಲಾಗಿದೆ.

ಗೋದಿ : ಗದಗವನ್ನು ರಾಜ್ಯದ 'ಗೋಧಿಯ ಕಣಜ'ವೆಂದು ಕರೆಯುತ್ತಾರೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿಯೂ ಗೋಧಿ ಬೆಳೆ ಕಂಡುಬರುವುದು. ಜಿಲ್ಲೆಯಲ್ಲಿ 35181 ಹೆ. ಪ್ರದೇಶದಲ್ಲಿ ಗೋಧಿಯನ್ನು ಬೆಳೆಯಲಾಗುತ್ತದೆ.

ಮುಸುಕಿನ ಜೋಳ : ಖಾರೀಫ್ ಬೆಳೆಯಾಗಿ ಇದನ್ನು ಬೆಳೆಯುವರು. ಜಿಲ್ಲೆಯಲ್ಲಿ 18,063 ಹೆ. ಪ್ರದೇಶದಲ್ಲಿ ಮುಸುಕಿನ ಜೋಳವನ್ನು ಬೆಳೆಯಲಾಗಿದೆ.

ಸಜ್ಜೆ : ಅತಿಮುಖ್ಯ ತೃಣ ಧಾನ್ಯವಾದ ಸಜ್ಜೆಯನ್ನು ಜಿಲ್ಲೆಯ 1.190 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುವುದು.

ದ್ವಿದಳ ಧಾನ್ಯಗಳು (2011-12ರ ಅಂಕಿ ಅಂಶದಂತೆ)

ತೊಗರಿ : ಜಿಲ್ಲೆಯಾದ್ಯಂತ 2749 ಹೆಕ್ಟೇರ್‌ನಲ್ಲಿ 782 ಮೆ.ಟನ್ ಉತ್ಪಾದಿಸಲಾಗಿದ್ದು ಗದಗದಲ್ಲಿ 732 ಹೆ.ನಲ್ಲಿ ಮುಂಡರಗಿಯಲ್ಲಿ 506 ಹೆ.ನಲ್ಲಿ ನರಗುಂದದಲ್ಲಿ 30 ಹೆ.ನಲ್ಲಿ ರೋಣದಲ್ಲಿ 559 ಹೆ.ನಲ್ಲಿ ಮತ್ತು ಶಿರಹಟ್ಟಿಯಲ್ಲಿ 922 ಹೆ. ಪ್ರದೇಶದಲ್ಲಿ ತೊಗರಿ ಉತ್ಪಾದಿಸಲಾಗಿದೆ.

ಹುರುಳಿ : ಜಿಲ್ಲೆಯ ಒಟ್ಟು 1.610 ಹೆ. ಪ್ರದೇಶದಲ್ಲಿ 1027 ಮೆ.ಟನ್ ಉತ್ಪಾದಿಸಲಾಗಿದ್ದು ತಾಲ್ಲೂಕುವಾರು ಗದಗದ 106 ಹೆ., ಮುಂಡರಗಿಯ 129 ಹೆ., ರೋಣದ 397 ಹೆ. ಮತ್ತು ಶಿರಹಟ್ಟಿಯ 978 ಹೆ. ಪ್ರದೇಶದಲ್ಲಿ ಹುರುಳಿ ಬೆಳೆಯಲಾಗಿದೆ.

ಹೆಸರು : ಜಿಲ್ಲೆಯಲ್ಲಿ ಒಟ್ಟು 54831 ಹೆ. ಪ್ರದೇಶದಲ್ಲಿ 13944 ಮೆ.ಟನ್ ಹೆಸರನ್ನು ಉತ್ಪಾದಿಸಲಾಗಿದ್ದು ತಾಲ್ಲೂಕುವಾರು ಗದಗ 9431 ಹೆ., ಮುಂಡರಗಿ 2522 ಹೆ., ನರಗುಂದ 1000 ಹೆ., ರೋಣ 31458 ಹೆ. ಮತ್ತು ಶಿರಹಟ್ಟಿ 10420 ಹೆ. ಪ್ರದೇಶದಲ್ಲಿ ಹೆಸರನ್ನು ಬೆಳೆಯಲಾಗಿದೆ.

ಅಲಸಂದೆ : ಜಿಲ್ಲೆಯ 1336 ಹೆ. ಪ್ರದೇಶದಲ್ಲಿ 929 ಮೆ.ಟನ್ ಅಲಸಂದೆಯನ್ನು ಉತ್ಪಾದಿಸಲಾಗಿದ್ದು, ತಾಲ್ಲೂಕುವಾರು ಗದಗ 140 ಹೆ., ಮುಂಡರಗಿ 148 ಹೆ., ರೋಣ 200 ಹೆ. ಮತ್ತು ಶಿರಹಟ್ಟಿ 848 ಹೆ. ಪ್ರದೇಶದಲ್ಲಿ ಅಲಸಂದೆಯನ್ನು ಬೆಳೆಯಲಾಗಿದೆ.

ಕಡಲೆ : ಜಿಲ್ಲೆಯಲ್ಲಿ ಬೆಳಯುವ ಮುಖ್ಯ ಬೆಳೆಗಳಲ್ಲಿ ಒಂದು. 2011-12ರ ವರದಿಯಂತೆ 67604 ಹೆ.ನಲ್ಲಿ 18924 ಮೆ.ಟನ್ ಉತ್ಪಾದಿಸಲಾಗಿದ್ದು, ತಾಲ್ಲೂಕುವಾರು ಗದಗ 17996 ಹೆ., ಮುಂಡರಗಿ 5836 ಹೆ., ನರಗುಂದ 9073 ಹೆ., ರೋಣ 31245 ಹೆ. ಮತ್ತು ಶಿರಹಟ್ಟಿ 3454 ಹೆ. ಪ್ರದೇಶದಲ್ಲಿ ಕಡಲೆಯನ್ನು ಬೆಳೆಯಲಾಗಿದೆ.

ವಾಣಿಜ್ಯ ಬೆಳಗಳು (2011-12)

ಹತ್ತಿ : ಜಿಲ್ಲೆಯ ಅತಿಮುಖ್ಯ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದ್ದು 49.5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದ್ದು (2009) 76.9 ಸಾವಿರ ಟನ್ ಉತ್ಪಾದನೆಯಾಗಿದೆ. ಜಿಲ್ಲೆಯಲ್ಲಿ 59706 ಟನ್ ಹತ್ತಿ ಉತ್ಪಾದಿಸಲಾಗಿದ್ದು ತಾಲ್ಲೂಕುವಾರು ಗದಗ 18186 ಟನ್, ಮುಂಡರಗಿ 7416 ಟನ್, ನರಗುಂದ 4705 ಟನ್, ರೋಣ 16072 ಟನ್ ಮತ್ತು ಶಿರಹಟ್ಟಿ 13327 ಟನ್ ಹತ್ತಿ ಉತ್ಪಾದಿಸಿದೆ.

ಕಬ್ಬು : ಜಿಲ್ಲೆಯ 5659 ಟನ್ ಕಬ್ಬು ಉತ್ಪಾದಿಸಲಾಗಿದ್ದು ಗದಗ 101 ಟನ್, ಮುಂಡರಗಿ 4597 ಟನ್, ನರಗುಂದ 150 ಟನ್, ರೋಣ 262 ಟನ್ ಮತ್ತು ಶಿರಹಟ್ಟಿ 549 ಟನ್ ಕಬ್ಬನ್ನು ಉತ್ಪಾದಿಸಿವೆ.

ಎಣ್ಣೆಕಾಳುಗಳು : ಜಿಲ್ಲೆಯಾದ್ಯಂತ ನೆಲಗಡಲೆ, ಸೂರ್ಯಕಾಂತಿ, ಕುಸುಬೆ, ಎಳ್ಳು, ಹುಚ್ಚೆಳ್ಳು, ಹರಳು (ಔಡಲ) ಅಗಸೆ ಮೊದಲಾದ ಎಣ್ಣೆಕಾಳುಗಳನ್ನು ಬೆಳೆಯಲಾಗುವುದು. ಶೇಂಗಾವನ್ನು ಶಿರಹಟ್ಟಿ ಮುಂಡರಗಿ ಮತ್ತು ರೋಣ ತಾಲ್ಲೂಕುಗಳಲ್ಲಿ ಬೆಳೆದರೆ ಕುಸುಬೆ, ಎಳ್ಳು, ಔಡಲ ಇವು ಬೆಳವಲನಾಡಿನಲ್ಲಿ ಬೆಳೆಯಲಾಗುವುದು.

ಸಂಬಾರ ಪದಾರ್ಥಗಳು ಈ ಬೆಳೆಗಳ ಉತ್ಪಾದನೆ ಕಡಿಮೆ ಪ್ರಮಾಣದಲ್ಲಿದ್ದು ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ ಮತ್ತು ಹುಣಿಸೆ ಮೊದಲಾದವು ಅಲ್ಲಲ್ಲಿ ಕಂಡುಬರುತ್ತವೆ.

ಹೂವಿನ ಬೆಳೆಗಳು : ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದಲ್ಲಿ ಹೂವಿನ ಬೆಳೆ ಕಂಡುಬರುವುದು. ನೀರಾವರಿ ಇರುವೆಡೆ ಮತ್ತು ಮನೆಯ ಅಂಗಳಗಳಲ್ಲಿ ಅಲ್ಲಲ್ಲಿ ಮಲ್ಲಿಗೆ, ಕನಕಾಂಬರ, ಬೆಟ್ಟತಾವರೆ, ಚೆಂಡುಹೂವು, ಸೇವಂತಿಕೆ, ಕಾಕಡ ಮೊದಲಾದವನ್ನು ಬೆಳೆಯಲಾಗುವುದು.

ರೇಷ್ಮೆ : ಹಿಪ್ಪುನೇರಳೆ ಮೂಲದಿಂದ ರೇಷ್ಮೆಯನ್ನು ಜಿಲ್ಲೆಯಲ್ಲಿ ಉತ್ಪಾದಿಸಲಾಗುವುದು. ರೇಷ್ಮೆ ಹುಳುಗಳನ್ನು ಸಾಕಿ ರೇಷ್ಮೆ ಗೂಡುಗಳನ್ನು ಪಡೆದು ಅನಂತರ ಸಂಸ್ಕರಣೆಯನ್ನು ಕೈಗಾರಿಕೆಯ ಹಂತದಲ್ಲಿ ನಿರ್ವಹಿಸಲಾಗುವುದು. ಕಮಿಷನರೇಟ್ ಆಫ್ ಸಿರಿಕಲ್ಚರ್, ಬೆಂಗಳೂರು ಇವರ ವರದಿಯಂತೆ ಜಿಲ್ಲೆಯಲ್ಲಿ 197 ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ 94.0 ಟನ್ ಹಿಪ್ಪುನೇರಳೆಯಿಂದ ರೇಷ್ಮೆಗೂಡುಗಳನ್ನು ಉತ್ಪಾದಿಸಲಾಗಿದೆ.

ಹಣ್ಣುಗಳು : ಗದಗ ಜಿಲ್ಲೆಯಲ್ಲಿ ದ್ರಾಕ್ಷಿ, ಪೇರಲ, ಬೋರೆ, ಮಾವು, ಬಾಳೆ, ನಿಂಬೆ ಮೊದಲಾದ ಹಣ್ಣುಗಳನ್ನು ಬೆಳೆಯಲಾಗುವುದು. ಇದು ಕಡಿಮೆ ಪ್ರಮಾಣದಲ್ಲಿ ಕಂಡುಬಂದರೂ ಜಿಲ್ಲೆಯ 1415 ಹೆ. ಪ್ರದೇಶದಲ್ಲಿ ಹಣ್ಣುಗಳ ಉತ್ಪಾದನೆ ಕಂಡುಬರುವುದು. ಇದು ತಾಲ್ಲೂಕುವಾರು ಗದಗ 617 ಹೆ., ಮುಂಡರಗಿ 274 ಹೆ., ನರಗುಂದ 102 ಹೆ., ರೋಣ 257 ಹೆ., ಮತ್ತು ಶಿರಹಟ್ಟಿ 165 ಹೆ., ಪ್ರದೇಶದಲ್ಲಿ 2011-12ರ ವರದಿಯಂತೆ ಹಣ್ಣುಗಳನ್ನು ಉತ್ಪಾದಿಸಿವೆ.

ತರಕಾರಿಗಳು : ಜಿಲ್ಲೆಯಲ್ಲಿ ಬದನೆ, ಬೆಂಡೆ, ಹೀರೆ, ಪಡುವಲ, ಬಟಾಟೆ, ಗೆಣಸು, ಈರುಳ್ಳಿ ಮತ್ತು ಟೊಮ್ಯಾಟೊ ಮೊದಲಾದ ತರಕಾರಿಗಳನ್ನು ಬೆಳೆಯಲಾಗುವುದು. 2011-12ರ ವರದಿಯಂತೆ ಜಿಲ್ಲೆಯ 36514 ಹೆ. ಪ್ರದೇಶದಲ್ಲಿ ತರಕಾರಿಗಳನ್ನು ಉತ್ಪಾದಿಸಲಾಗಿದ್ದು, ತಾಲ್ಲೂಕುವಾರು ಗದಗ 11105 ಹೆ., ಮುಂಡರಗಿ 663 ಹೆ., ನರಗುಂದ 818 ಹೆ., ರೋಣ 20887 ಹೆ., ಮತ್ತು ಶಿರಹಟ್ಟಿ 3041 ಹೆ., ಪ್ರದೇಶದಲ್ಲಿ ತರಕಾರಿಗಳನ್ನು ಬೆಳೆಯಲಾಗಿದೆ.

ಸಾಂಪ್ರದಾಯಿಕ ಕೃಷಿ ವಿಧಾನಗಳು

ಅಕ್ಕಡಿ ಹಾಕು - ಪ್ರಧಾನ ಬೆಳೆಗಳ ನಡುವೆ ಉಪ ಬೆಳೆಗಳನ್ನು ಬೆಳೆಯುವುದು.

ಚೆಲ್ಲುವುದು - ಬಿತ್ತನೆ ಬೀಜಗಳನ್ನು ಎರಚುವ ಹಾಗೂ ಚೆಲ್ಲುವ ಮೂಲಕ ಬೆಳೆ ಬೆಳೆಯುವುದು.

ಇಳುವು - ಜಮೀನಿನ ತಗ್ಗಾದ ಭೂಮಿಯನ್ನು ವ್ಯವಸಾಯಕ್ಕೆ ಬಳಸುವರು. ಈ ತಗ್ಗಾದ ಭೂಮಿಗೆ ಇಳುವು ಎನ್ನುವರು.

ಹೊಳಗಟ್ಟಿ - ಪಕ್ಕದ ಹೊಲಕ್ಕೆ ನೀರು ಹಾದು ಹೋಗಲು ಬಿಟ್ಟು ಕಾಲುವೆ ಮಾಡಿ ಬೆಳೆ ಬೆಳೆಯುವುದು.

ಬಿತ್ತುವುದು - ಹತ್ತಿ, ಹೆಸರು, ಅಲಸಂದಿ ಮೊದಲಾದ ಕಾಳುಗಳನ್ನು ಸಾಲಿನಲ್ಲಿ ಬಿತ್ತುವ ಮೂಲಕ ಬೆಳೆ ಬೆಳೆಯುವುದಕ್ಕೆ ಬಿತ್ತುವುದು ಎನ್ನುವರು.

ನೆಡುವ ವಿಧಾನ- ಹತ್ತಿ ಬೀಜಗಳನ್ನು ಸಾಲು ಮಾಡಿ ಗುಣಿಗಳಲ್ಲಿ ನೆಡುವ ಮೂಲಕ ಬೆಳೆಯಲಾಗುವ ವಿಧಾನ

ಇಡುಗೊಬ್ಬರ - ಗಿಡಗಳ ಬುಡದಲ್ಲಿ ಗೊಬ್ಬರವನ್ನು ಇಡುವ ಮೂಲಕ ಗೊಬ್ಬರ ಪೋಲಾಗುವುದನ್ನು ತಡೆಗಟ್ಟಿ ಬೆಳೆ ತೆಗೆಯುವುದು.

ದೇಶೀ ತಳಿಗಳು

ಅಮೃತ್ : ಅಲ್ಪಾವಧಿಯ ಗೋಧಿಯ ಒಂದು ತಳಿ

ಹಳದಿ ಬೀಜಗ ಮತ್ತು ಕೆಂಪು ಬೀಜಗ : ಗೋಧಿಯ ಬಹುಮುಖ್ಯ ಸ್ಥಳೀಯ ತಳಿಗಳು

ಪುಲ್ಲರ್ ಬಿಳಿ : ಜೋಳದ ಒಂದು ತಳಿ

ಜಯಧರ : ಹತ್ತಿಯ ಒಂದುತಳಿ

ಸುಯೋಧರ : ಹತ್ತಿಯ ತಳಿ

ಮೈಸೂರು ವಿಜಯ : ನೀರಾವರಿಯ ಸೌಲಭ್ಯವಿರುವಲ್ಲಿ ಬೆಳೆಯುವ ಹತ್ತಿ ತಳಿ

ಮುಂಗ್ - 781 : ಹೆಸರು ಕಾಳಿನ ತಳಿ

ಹಂಪಿ ಹತ್ತಿ : ಹತ್ತಿಯ ಒಂದು ತಳಿ

ಗೊಬ್ಬರ ಮತ್ತು ಕೀಟನಾಶಕಗಳು

ಜಿನುಗು ಗೊಬ್ಬರ : ಕೊಳೆತ ಕಾಂಪೋಸ್ಟ್ ಗೊಬ್ಬರದ ಜಿನುಗುವ ರಸ

ಸೋಸಿದ್ ಗೊಬ್ಬರ : ಗುಂಡಿಯಲ್ಲಿ ಕಳಿತ ಗೊಬ್ಬರ

ಸೆಗ್ಣಿ ಗೊಬ್ಬರ : ದನಕರುಗಳ ಸಗಣಿಯಿಂದ ತಯಾರಾದ ಗೊಬ್ಬರ

ಎರೆಹುಳುವಿನ ಗೊಬ್ಬರ : ಎರೆಹುಳುವಿನ ಮಲದಿಂದ ತಯಾರಾದ ಗೊಬ್ಬರ

ಮಜ್ಜಿಗೆ ಬಳಕೆ : ಹೂವು ಮತ್ತು ಕಾಯಿ ಕಟ್ಟುವಾಗ ರೋಗ ಬಾರದಂತೆ ತಡೆಯಲು ಕೀಟನಾಶಕವಾಗಿ ಬಳಕೆ

ಬೇವಿನ ಕಹಿ : ಬೇವಿನ ಎಲೆಗಳ ಕೊಳೆತ ರಸದ ಬಳಕೆ

ಸಗಣಿ ಮತ್ತು ಗೋಮೂತ್ರ : ಬೀಜಗಳನ್ನು ಹಾಕುವಾಗ ರೋಗ ತಡೆಯಲು ಸಾಲುಗಳಿಗೆ ಬಳಸಲಾಗುವುದು

ವ್ಯವಸಾಯಕ್ಕೆ ಬಳಸುವ ಉಪಕರಣಗಳು

ಪರಿಗುಂಟೆ-ಪಿಳ್‌ಗುಂಟೆ-ಕುಂಟೆಯ ಒಂದು ವಿಧ

ಸೈಜಂತಿ - ಈರುಳ್ಳಿ ಬಿತ್ತನೆಗೆ ಬಳಸುವ ನಾಲ್ಕು ತಾಳಿನ ಕೂರಿಗೆ

ಚಳ್ಳು - ಕಣದಲ್ಲಿ ರಾಶಿಯನ್ನು ಬಳಿಯಲು ಮಾಡಿದ ಪೊರಕೆ

ತಲುಬ್ದಾರ್ - ಬಿತ್ತನೆಗೆ ಬಳಸುವ ಸೆಡ್ಡೆ ಬಟ್ಟಲನ್ನು ಕೂರಿಗೆಗೆ ಬಿಗಿದು ಕಟ್ಟಲು ಬಳಸುವ ತೊಗಲಿನ ಪಟ್ಟಿ

ದಿಂಡು - ಕುಂಟೆ, ಕೂರಿಗೆ ಮುಂತಾದ ಉಪಕರಣಗಳಿಗೆ ಪ್ರಧಾನವಾಗಿ ಬಳಸುವ ಮರದ ಕೊರಡು

ಬುಕ್ಕ - ಕಾಳು-ಗೊಬ್ಬರ ಬಿತ್ತಲು ಮಾಡಿರುವ ಕೊಳವಿ

ರಂಟೆ - ಭೂಮಿ ಉಳುಮೆ ಮಾಡಲು ಬಳಸುವ ಉಪಕರಣ

ಒಂದ್ ಅಕ್ಡಿ - ಬೆಳೆಯ ಆರು ಸಾಲುಗಳ ಭೂ ಪ್ರಮಾಣ

ಸಹಾಯಕ ಗ್ರಂಥಗಳು

ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ (ಪರಿಷ್ಕೃತ) ಸಂಪುಟ 1

ಕರ್ನಾಟಕದ ಪ್ರಾದೇಶಿಕ ಭೂಗೋಳಶಾಸ್ತ್ರ - ರಂಗನಾಥ

ಕರ್ನಾಟಕ ವೃತ್ತಿಪರ ಮಂಜರಿ 1 - ಕೃಷಿ ಪದಕೋಶ

ವ್ಯವಸಾಯ ಕೈಪಿಡಿ - ಜಿ.ವಿ.ಬಿ. ನಾಯ್ಡು, ಬಿ. ರಮೇಶ್ ಮತ್ತು ಬಿ. ಸುರೇಶ್, ಪ್ರಸಾರಾಂಗ, ಮೈಸೂರು

ಗದಗ ಜಿಲ್ಲೆಯ ಅಂಕಿ-ಅಂಶಗಳ ನೋಟ 2011-12 ಕರ್ನಾಟಕ ಸರ್ಕಾರ [www.gadag district.com]

ಎಲ್. ಆರ್.

ಗರಿಕೆ ಪಶುಗಳಿಗೆ ಉತ್ತಮ ಆಹಾರವಾದ ಹುಲ್ಲು. ಇದರಲ್ಲಿ ಕೆಲವು ಔಷಧೀಯ ಗುಣಗಳೂ ಇವೆ. ಇದು ಪೋಯೇಸೀ ಕುಟುಂಬಕ್ಕೆ ಸೇರಿದ್ದು, ಇದರ ವೈಜ್ಞಾನಿಕ ಹೆಸರು ಸೈನೊಡಾನ್ ಡ್ಯಾಕ್ಟಿಲಾನ್. ಬಹುವಾರ್ಷಿಕ ಸಸ್ಯವಾದ ಇದನ್ನು ಕುಡಿಗರಿಕೆ ಬರ್ಮ್ಯೂಡ ಹುಲ್ಲು, ಬಹಾಮ ಹುಲ್ಲು ಎಂದೂ ಕರೆಯುವರು. ಇದರಲ್ಲಿ ಹತ್ತಕ್ಕೂ ಮೇಲ್ಪಟ್ಟ ಪ್ರಭೇದಗಳಿವೆ. ಇದರ ವಿಶೇಷ ಲಕ್ಷಣವೆಂದರೆ ಆಳವಾಗಿ ಬೇರು ಬಿಟ್ಟು ಹಬ್ಬಿ ಹರಡುವುದು. ಮಳೆಯಿಲ್ಲದೆಯೂ ಬಹು ಕಾಲ ಜೀವಿಸುವಂಥದ್ದು. ಇದರ ಮೂಲಸ್ಥಾನ ಯೂರೇಷ್ಯವಾದರೂ ಪ್ರಪಂಚದ ಎಲ್ಲ ಭಾಗಗಳಲ್ಲೂ ಬೆಳೆಯುತ್ತದೆ. ಗರಿಕೆ ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲೂ ಇದೆ. ಎಲ್ಲ ವಾತಾವರಣದಲ್ಲೂ ಎಲ್ಲ ಮಣ್ಣಿನಲ್ಲೂ ಎಲ್ಲ ಕಾಲದಲ್ಲೂ ಬೆಳೆಯುವ ಗುಣ ಇದಕ್ಕಿದೆ. ನಿರುಪಯುಕ್ತ ಜಾಗಗಳೆಲ್ಲವೂ ಇದರ ಬೆಳವಣಿಗೆಗೆ ಉಪಯುಕ್ತ. ಮಣ್ಣು ಫಲವತ್ತಾಗಿದ್ದು ತೇವಾಂಶವಿದ್ದರಂತೂ ಚಿಗುರೊಡೆದು ನಳನಳಿಸುತ್ತದೆ. ಗರಿಕೆ ತುಂಡೊಂದು ಬಿದ್ದರೆ ಸಾಕು ಗಟ್ಟಿಯಾಗಿ ಬೇರೂರುತ್ತದೆ. ವರ್ಷದ ಯಾವ ಋತುವಿನಲ್ಲಾದರೂ ಹೂ ಬಿಡುವ ಗುಣ ಇದರದು. ಕೃಷಿಕರಿಗೆ ಮಿತ್ರ ಹೌದು ಶತ್ರುವೂ ಹೌದು. ಸಮೃದ್ಧವಾದ ಮತ್ತು ಪುಷ್ಟಿದಾಯಕ ಹುಲ್ಲು ನೀಡುವುದರ ಮೂಲಕ ದನಕರುಗಳಿಗೆ ಉತ್ತಮ ಮೇವಾಗಿ ಮಿತ್ರನಂತೆ ಕೆಲಸ ಮಾಡಿದರೆ, ಹೊಲ ಗದ್ದೆ ತೋಟ ತುಡಿಕೆ ಗಿಡಗಳ ಬುಡದಲ್ಲೂ ಬೇರೂರಿ ಬೆಳೆದು ಪೋಷಕಾಂಶವನ್ನು ಹೀರಿ ಹಿಪ್ಪೆ ಮಾಡುತ್ತದೆ. ಇದನ್ನು ತೋಟದಿಂದ ಬೇರ್ಪಡಿಸುವುದೇ ರೈತನಿಗೆ ಪ್ರಯಾಸದ ಕೆಲಸ.

ಗರಿಕೆ ಹಿಂದೂಧರ್ಮದಲ್ಲಿ ಪವಿತ್ರ ಸ್ಥಾನ ಪಡೆದಿದೆ. ವಿಘ್ನ ನಿವಾರಕ ಗಣಪನೆಂದು ಸಗಣಿ ಉಂಡೆಗೆ ಗರಿಕೆ ಸಿಕ್ಕಿಸಿ ಪೂಜೆ ಮಾಡುವುದು ತಲೆತಲಾಂತರದಿಂದ ಬಂದ ಸಂಪ್ರದಾಯ.

ಗರಿಕೆ ಹುಲ್ಲಿನ ಕೆಲವು ಪ್ರಭೇದಗಳನ್ನು ಮನೆಯ ಅಂಗಳ, ಉದ್ಯಾನವನ, ಸರ್ಕಾರಿ ಕಛೇರಿಗಳ, ಶಾಲಾ ಕಾಲೇಜುಗಳ ಆವರಣಗಳಲ್ಲಿ ಪ್ರತ್ಯೇಕವಾಗಿ ಬೆಳೆಸುವುದಿದೆ.

ಹೊಸದಾಗಿ ನಿರ್ಮಾಣಗೊಂಡ ಕೆರೆ ಕಟ್ಟೆಗಳ ಮಣ್ಣು ಕೊಚ್ಚಿ ಹೋಗದಂತೆ ತಡೆಯಲು ಗರಿಕೆ ಹುಲ್ಲನ್ನು ಮಣ್ಣಿನ ಸಮೇತ ಅಗೆದು ತಂದು ನಾಟಿ ಮಾಡಿ ಬೆಳೆಸುವುದುಂಟು.



ಬೇರು ಕಾಂಡ, ಬೀಜಗಳಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು. ಹಿಂದೆ ಗರಿಕೆ ಹುಲ್ಲನ್ನು ಕುದುರೆಗಳಿಗಾಗಿ ಬೆಳೆಸಿ ಮಾರುವ ಕುಟುಂಬಗಳೇ ಇದ್ದುವು. ಇದನ್ನು ಸಂಸ್ಕರಿಸಿ ಬಹಳ ಕಾಲ ಇಟ್ಟು ಪಶುಗಳಿಗೆ ಮೇವಿಗಾಗಿ ಉಪಯೋಗಿಸಬಹುದು. ಹೆಚ್ಚು ಪುಷ್ಟಿದಾಯಕವಾದ ಇದರಲ್ಲಿ ಕಚ್ಚಾ ಪ್ರೋಟೀನ್ ಶೇ. 10.47, ನಾರು ಶೇ. 28.17, ಸಾರಜನಕ ಯುಕ್ತ ವಸ್ತುಗಳು ಶೇ. 47.8, ಈಥರ್ ಶೇ. 1.80 ಮತ್ತು ಇತರ ಖನಿಜಗಳು ಶೇ. 11.75 ರಷ್ಟು ಇವೆ. ಗರಿಕೆ ತೆನೆ ಬಿಟ್ಟಾಗ ಕತ್ತರಿಸಲಾಗುತ್ತದೆ. ವಾಣಿಜ್ಯ

ದೃಷ್ಟಿಯಿಂದ ಬೆಳೆಸುವವರು ಎಕರೆ ಗಟ್ಟಲೆ ಕೃಷಿ ಮಾಡುವರು. ಸರಿಯಾಗಿ ಹದಮಾಡಿದ ಫಲವತ್ತಾದ ಭೂಮಿಯಲ್ಲಿ ಗೊಬ್ಬರ ಮತ್ತು ನೀರನ್ನು ಒದಗಿಸಿ ಉತ್ತಮ ಇಳುವರಿ ಪಡೆಯುವುದುಂಟು. ಎರಡು ತಿಂಗಳಿಗೆ ಒಮ್ಮೆ ಕೊಯ್ಲು ಮಾಡಬಹುದು.

ರೈತರ ಶತ್ರು ಎನಿಸಿರುವ ಇದನ್ನು ನಿಯಂತ್ರಿಸಲು ಅನೇಕ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಾನೆ. ಮಳೆ ನಿಂತ ಮೇಲೆ ಭೂಮಿಯನ್ನು ಆಳವಾಗಿ ಅಗೆದು, ಉತ್ತು ಗರಿಕೆ ಹುಲ್ಲಿನ ಬೇರುಗಳನ್ನು ಮಣ್ಣಿನಿಂದ ಬೇರ್ಪಡಿಸಿ ಹೆಂಟೆ ಒಡೆದು ಪುಡಿ ಮಾಡಿ ಒಣಗಲು ಬಿಡುತ್ತಾರೆ. ಅಳಿದುಳಿದಿರುವ ಗರಿಕೆ ಬೇರುಗಳನ್ನು ಮತ್ತೊಮ್ಮೆ ಮಣ್ಣು ಕೆದಕಿ ಹುಡುಕಿ ತೆಗೆಯುತ್ತಾರೆ. ಎಲ್ಲವನ್ನೂ ಒಂದೆಡೆ ಶೇಖರಿಸಿ ಬೆಂಕಿ ಇಟ್ಟು ಸುಡುತ್ತಾರೆ. ಕೆಲವು ಬೆಳೆಗಳನ್ನು ಬೆಳೆಯುವುದರ ಮೂಲಕವೂ ಗರಿಕೆಯನ್ನು ನಿಯಂತ್ರಿಸಬಹುದು. ಗೋದಿ ಕೃಷಿ ಗರಿಕೆ ನಿಯಂತ್ರಕ ಎಂದು ತಿಳಿದು ಬಂದಿದೆ. ಆದರೆ ನಿರಂತರ ಬೇಸಾಯ, ಕಳೆ ನಿಯಂತ್ರಣ ಮತ್ತು ಅಚ್ಚು ಕಟ್ಟು ತನವೇ ಇದರ ನಿಯಂತ್ರಣಕ್ಕೆ ಮದ್ದು.

ಔಷಧೀಯ ಗುಣಗಳು : ಪ್ರತಿದಿನ ಗರಿಕೆ ಸೇವನೆಯಿಂದ ಸರ್ವರೋಗಗಳೂ ನಿವಾರಣೆಯಾಗುತ್ತವೆಂಬ ಮಾತಿದೆ. ಇದರ ಕಷಾಯವನ್ನು ಪ್ರತಿದಿನ ಸೇವಿಸುವುದರಿಂದ ಜಲೋದರ ರೋಗ ನಿವಾರಣೆಯಾಗುತ್ತದೆ.

ಜಾನಪದ ದೃಷ್ಟಿಯಲ್ಲಿ ಗರಿಕೆಗೆ ವಿಶೇಷ ಸ್ಥಾನವಿದೆ.

ಹಾಲುಂಡ ತವರೀಗೆ ಏನೆಂದು ಹರಸಲಿ
ಹೊಳೆದಂಡೇಲಿರುವ ಗರಕೀಯ ಕುಡಿಯಂಗ
ಹಬ್ಬಲಿ ಅವರ ರಸಬಳ್ಳಿ

ಮೇಲಿನ ಜನಪದ ತ್ರಿಪದಿ ಗರಿಕೆ ಹುಲ್ಲಿನ ಅಮರತ್ವವನ್ನು ಸದಾ ಹಸುರಾಗಿರುವ ಗುಣವನ್ನೂ ತಿಳಿಸುತ್ತದೆ. ಹೆಣ್ಣು ಮಗಳೊಬ್ಬಳು ತವರನ್ನು ಗರಿಕೆಯಂತೆ ಸಮೃದ್ಧವಾಗಿರಲಿ ಎಂದು ಹರಸುವ ಪರಿಯಿದು.

ಎಸ್.ವಿ.

ಗಸಗಸೆ ಸಾಂಬಾರ ಪದಾರ್ಥವಾಗಿಯೂ ಅಫೀಮು ತಯಾರಿಕೆಯಲ್ಲಿಯೂ ಇದರ ಬೀಜಗಳನ್ನು ಬಳಸುವುದುಂಟು. ಇದು ಪಪ್ಪಾವರೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಪಪೇವರ್ ಸಾಮ್ನಿಫೆರಂ. ಇದನ್ನು ಅಫೀಮು ಗಿಡವೆಂದೂ ಇಂಗ್ಲಿಷಿನಲ್ಲಿ ಪೋಪಿಯಮ್ ಪಾಪಿ ಅಥವಾ ವೈಟ್ ಪಾಪಿ ಎಂದೂ ಕರೆಯುತ್ತಾರೆ. ಪ್ರಾಚೀನ ಕಾಲದಿಂದಲೂ ಕೃಷಿಯಲ್ಲಿದ್ದು ಮೆಡಿಟರೇನಿಯನ್ ಪ್ರದೇಶ, ಮಧ್ಯಪ್ರಾಚ್ಯ, ಭಾರತ, ರಷ್ಯ ದೇಶಗಳಲ್ಲಿ ಬೆಳೆಯುತ್ತಿದ್ದರು.ಇದರ ಉಪಯೋಗ ಎರಡು ಬಗೆಯದು. ಪಶ್ಚಿಮ ಯುರೋಪ್ ದೇಶಗಳಲ್ಲಿ ಇದನ್ನು ಬೀಜಗಳಿಗಾಗಿಯೂ ಭಾರತ ಇರಾನ್ ಟರ್ಕಿ ಮೊದಲಾದ ದೇಶಗಳಲ್ಲಿ ಅಫೀಮಿಗಾಗಿಯೂ ಕೃಷಿ ನಡೆಯುತ್ತದೆ. 16ನೇ ಶತಮಾನದಿಂದಲೂ ಭಾರತದಲ್ಲಿ ಇದರ ಕೃಷಿ ಇತ್ತು. ಭಾರತದ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಬಿಹಾರ- ಈ ಭಾಗಗಳಲ್ಲಿ ಇದರ ಕೃಷಿ ಹೆಚ್ಚು. ಅಲ್ಪಪ್ರಮಾಣದಲ್ಲಿ ಕಾಶ್ಮೀರದಲ್ಲೂ ಇದನ್ನು ಬೆಳೆಸುವುದುಂಟು. ಹಿಮಾಚಲ ಪ್ರದೇಶದಲ್ಲೂ ಹಿಂದೆ ಇದರ ಕೃಷಿ ಇದ್ದು ಇಂದು ಸರ್ಕಾರ ನಿಷೇಧಿಸಿದೆ.



ಇದು ಏಕವಾರ್ಷಿಕ ಸಸ್ಯ. ಇದರಲ್ಲಿ ಸೆಟಿಜರ್ಮ್, ಗ್ಲೇಬ್ರಮ್ ಮತ್ತು ಆಲ್ಬಂ ಎಂಬ ಮೂರು ಜಾತಿಗಳಿವೆ. ಮೊದಲನೆಯದು ಕಾಡು ಸಸ್ಯ. ಇದರ ಎಲೆಗಳಿಗೆ ಗರಗಸದಂಥ ಅಂಚಿದ್ದು ರೋಮಗಳಿಂದಾವೃತವಾಗಿರುತ್ತದೆ. ಇಡೀ ಗಿಡವೇ ರೋಮಾವೃತ. ಆಕರ್ಷಕವಾದ ಅಗಲವಾದ ದಳಗಳಿದ್ದು ಏಳೆಂಟು ಪುಷ್ಪಪತ್ರವನ್ನು ಹೊಂದಿದೆ. ಎರಡನೇ ಪ್ರಕಾರ ಇದರ ಎಲೆಗಳು ರೋಮರಹಿತ, ಹಣ್ಣು ಗೋಳಾಕಾರ ಪುಷ್ಪ ಪತ್ರಗಳ ಸಂಖ್ಯೆ 10-12. ಮೂರನೆಯ ಪ್ರಕಾರದಲ್ಲಿ ಕೆಂಪು ಅಥವಾ ನೀಲಿ ಬಣ್ಣದ ಹೂಗಳನ್ನೂ ಹೊಂದಿದೆ. ಹಣ್ಣು ಅಂಡಾಕಾರದ್ದು. ಬೀಜಗಳು ಪಾಚಿಬಣ್ಣದವು.

ಇದರ ಕೃಷಿಗೆ ಉಷ್ಣಹವೆ ಬೇಕು. ಹೆಚ್ಚು ನೀರನ್ನು ಬಯಸುವುದಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಕೃಷಿಯ ಸ್ವರೂಪ ಭಿನ್ನವಾಗಿರುತ್ತದೆ. ತುರ್ಕಿಸ್ತಾನದಲ್ಲಿ ಔಷಧೀಯ ಸಸ್ಯವಾಗಿ ಇದರ ಕೃಷಿ ಉಂಟು. ಉತ್ತಮ ಇಳುವರಿಗಾಗಿ ಭೂಮಿಯನ್ನು ಅಚ್ಚುಕಟ್ಟಾಗಿ ಹದಗೊಳಿಸಿ ಕೊಟ್ಟಿಗೆ ಗೊಬ್ಬರವನ್ನು ಯಥೇಚ್ಛವಾಗಿ ಬಳಸಬೇಕು. ಬೀಜ ಅತಿಸಣ್ಣವಾಗಿರುವುದರಿಂದ ಒಂದಕ್ಕೆ ನಾಲ್ಕರಿಂದ ಐದು ಭಾಗ ಮರಳು ಮಿಶ್ರಮಾಡಿ ಬಿತ್ತಬೇಕು. ಒಂದು ಎಕರೆಗೆ ಎರಡು ಕೆಜಿ ಬಿತ್ತನೆಬೀಜ ಸಾಕು. ಈ ಬೆಳೆಗೆ ರೋಗರುಜಿನಗಳು ಹೆಚ್ಚು. ಸಸಿ ತುಂಬ ಚಿಕ್ಕದಾಗಿದ್ದಾಗ ಕಾಪಾಡುವುದು ತುಂಬ ತ್ರಾಸದಾಯಕವಾಗಿರುವುದರಿಂದ ಅಕ್ಟೋಬರ್‌ನಿಂದ ಮಾರ್ಚ್ ತಿಂಗಳ ತನಕ ಕನಿಷ್ಠ ಮೂರು ಬಾರಿಯಾದರೂ ಬಿತ್ತನೆ ಮಾಡುವರು. ತೇವಾಂಶವಿರುವ ಪ್ರದೇಶಗಳಲ್ಲಿ ಮೇ ತಿಂಗಳಲ್ಲಿ ಹೂ ಬಿಟ್ಟರೆ ಉಷ್ಣಹವೆಯಿರುವೆಡೆ ಜೂನ್

ತಿಂಗಳಲ್ಲಿ ಹೂ ಬಿಡುತ್ತದೆ. ಇದರ ವಿಶೇಷವೆಂದರೆ ಹೂ ಬಿಟ್ಟ 15 ದಿನಗಳಲ್ಲೇ ಕಾಯಿ ಬಲಿಯುತ್ತದೆ. ಹಸುರು ಬಣ್ಣದ ಈ ಕಾಯಿ ತುಂಬ ಮೃದುವಾಗಿರುತ್ತದೆ. ಹಣ್ಣು ಪಕ್ವವಾಗಿದೆಯೆಂಬ ಸೂಚನೆ ಕಂಡುಬಂದಾಗ ಅದರ ಮೇಲೆ ಒಂದು ಬಗೆಯಹೊದಿಕೆ ಕಾಣಿಸಿಕೊಳ್ಳುತ್ತದೆ. ಅದನ್ನು ಚುಚ್ಚುವ ಕೆಲಸ ಸಾಮಾನ್ಯವಾಗಿ ನಡುಬಿಸಿಲಿನಲ್ಲಿ ನಡೆಯುತ್ತದೆ. ಹೀಗೆ ಮಾಡಿದ ಮಾರನೆಯ ದಿವಸ ಗಟ್ಟಿಯಾದ ರಸ ಒಸರಿದಾಗ ಎಲೆಗಳನ್ನೇ ಬಟ್ಟಲಿನಂತೆ ಬಳಸಿ ರಸವನ್ನು ಶೇಖರಿಸುತ್ತಾರೆ. ಹೀಗೆ ಶೇಖರಣೆಗೊಂಡ ರಸವನ್ನು ಹೆಚ್ಚು ಕಾಲ ನೆರಳಿನಲ್ಲೇ ಇಟ್ಟು ಒಣಗಿಸುತ್ತಾರೆ. ಇದನ್ನೇ ಅಫೀಮು ಎನ್ನುವರು. ಕಟುವಾಸನೆಯುಳ್ಳ ಇದು ಅತಿ ಕಹಿಯಾಗಿರುತ್ತದೆ. ಗಸಗಸೆ ಬೀಜದಿಂದ ಬರುವ ಎಣ್ಣೆ ಹೆಚ್ಚು ಲಾಭದಾಯಕವಾದುದು.

ಸರ್ಕಾರದ ಅನುಮತಿಯಿಲ್ಲದೆ ಭಾರತದಲ್ಲಿ ಅಫೀಮು ಬೆಳೆಯುವುದಾಗಲಿ ಮಾರಾಟ ಮಾಡುವುದಾಗಲಿ ಸಾಧ್ಯವಿಲ್ಲ. ಇದರಲ್ಲಿರುವ ಔಷಧೀಯ ಗುಣದಿಂದಾಗಿ ಸರ್ಕಾರ ಕೆಲವು ರಾಜ್ಯಗಳಿಗೆ ಮಾತ್ರ ಕೃಷಿ ಮಾಡಲು ಅನುಮತಿಸಿದೆ. ಔಷಧೀಯ ಉಪಯೋಗಕ್ಕೆ ಎಷ್ಟು ಬೇಕೊ ಅಷ್ಟು ಉಳಿಸಿಕೊಂಡು ಬೇರೆ ದೇಶಗಳಿಗೆ ರಫ್ತು ಮಾಡುತ್ತದೆ. ಇದರ ಬೆಲೆ ನಿಗದಿಪಡಿಸುವುದೂ ಸರ್ಕಾರವೇ. ಔಷಧಿಯಾಗಲ್ಲದೆ ಮಾದಕ ವಸ್ತುವಾಗಿಯೂ ಕೆಲಸ ಮಾಡುತ್ತದೆ. ಇದರ ಸೇವನೆಯಿಂದ ಮನಸ್ಸಿಗೆ ತಾತ್ಕಾಲಿಕ ನೆಮ್ಮದಿ ಸಿಗುತ್ತದೆ. ಒಮ್ಮೆ ಇದರ ಚಟಕ್ಕೆ ಒಳಗಾದವರು ಹೊರ ಬರಲಾರರು. ಇದನ್ನು ನಿರಂತರ ಸೇವಿಸುವುದರಿಂದ ದೈಹಿಕ, ಮಾನಸಿಕ ಸ್ತಿಮಿತ ಕಳೆದುಕೊಳ್ಳುತ್ತಾರೆ. ಆದ್ದರಿಂದಲೇ ಸರ್ಕಾರ ಕಟ್ಟುನಿಟ್ಟಿನ ನಿಯಂತ್ರಣ ಮಾಡಿದೆ. ಪ್ರಪಂಚಾದ್ಯಂತ ಇದರ ಉಪಯೋಗವಿರುವುದರಿಂದ ವಿಶ್ವಸಂಸ್ಥೆಯ ಅನುಮತಿ ಪಡೆದು ಅದರ ನಿರ್ದೇಶನದಂತೆ ಮಾತ್ರ ಬೆಳೆಸಬೇಕೆಂಬ ಕಾನೂನಿದೆ.

ಗಸಗಸೆ ಬೀಜದಲ್ಲಿ ಸಾಕಷ್ಟು ಪೌಷ್ಟಿಕಾಂಶಗಳಿವೆ. ಇದರ ಬೀಜದಿಂದ ಎಣ್ಣೆ ತೆಗೆದು ಸಾಬೂನು, ಡಾಲ್ಡಾ, ವಾರ್ನಿಷ್ ಬಣ್ಣ ಇತ್ಯಾದಿಗಳ ತಯಾರಿಕೆಗೂ, ಹಿಂಡಿಯನ್ನು ದನಕರುಗಳ ಮೇವಾಗಿ ಬಳಸುವುದುಂಟು. ಇದರ ಎಳೆಯ ಸೊಪ್ಪು ಆಹಾರ ಪದಾರ್ಥವಾಗಿ ಬಳಕೆಯಾದರೆ ಹೂಗಳಿಂದ ಸಿಹಿತಿಂಡಿ ಮಾಡುವುದುಂಟು. ಇದರ ಎಲೆಗಳನ್ನು ಬಿಸಿಮಾಡಿ ಊತವಿದ್ದ ಸ್ಥಳಕ್ಕೆ ಅಂಟಿಸಿದರೆ ಉಪಶಮನವಾಗುತ್ತದೆ.

ಕೆ.ಎಂ.

ಗಾಂಜಾಗಿಡ ಏಷ್ಯಾ ಇದರ ಮೂಲಸ್ಥಾನ. ಹಿಮಾಲಯದ ಉತ್ತರ ಭಾಗದಲ್ಲಿ ಇದು ಬಹಳ ಪ್ರಾಚೀನ ಕಾಲದಲ್ಲೇ ಇತ್ತೆಂದು ತಿಳಿದು ಬಂದಿದೆ. ಕ್ರಿಸ್ತಪೂರ್ವದಲ್ಲೇ ಚೀನೀಯರಿಗೆ ಇದರ ಪರಿಚಯವಿತ್ತಂತೆ. ಇದು ಕ್ಯಾನ್‌ಬಿನೇಸಿ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಕ್ಯಾನ್‌ಬಿಸ್‌ಸೇಟಿವ. ದಕ್ಷಿಣ ಭಾರತದಲ್ಲಿ ಇದನ್ನು ಭಂಗಿ ಎನ್ನುವರು. ಇನ್ನು ಕೆಲವು ಪ್ರಾಂತ್ಯಗಳಲ್ಲಿ ಹೆಂಪ್, ಸಾಫ್ಟ್ ಹೆಂಪ್ ಎಂದೂ ಕರೆಯುವರು. ಇದು ಜನಪ್ರಿಯ ಮಾದಕ ವಸ್ತುವಾಗಿರುವುದರಿಂದ ಬಲು ಬೇಗನೆ ಪ್ರಪಂಚಾದ್ಯಂತ ಹರಡಿತು. ಪಶ್ಚಿಮ ಯುರೋಪಿನಲ್ಲಿ ಕ್ರಿ.ಶ. ಸು. 500 ರ ವೇಳೆಗೆ, ದಕ್ಷಿಣ ಅಮೆರಿಕದ ಚಿಲಿ ಪ್ರದೇಶಕ್ಕೆ 16ನೆಯ ಶತಮಾನದಲ್ಲಿ, 17ನೆಯ ಶತಮಾನದ ಪೂರ್ವಾರ್ಧದಲ್ಲಿ ಇಂಗ್ಲೆಂಡ್ ಮತ್ತು ವರ್ಜೀನಿಯವನ್ನು ತಲುಪಿತು. ಉತ್ತರ ಸಮಶೀತೋಷ್ಣವಲಯದಲ್ಲಿರುವ ಎಲ್ಲ ಭಾಗಗಳಿಗೂ ಹಾಗೂ ದಕ್ಷಿಣ ಸಮಶೀತೋಷ್ಣ ವಲಯದ ಕೆಲವು ಭಾಗಗಳಿಗೂ 20ನೆಯ ಶತಮಾನದ ಆರಂಭದಲ್ಲಿ ಇದು ಕಾಣಿಸಿಕೊಂಡಿತು. ಬೇಡಿಕೆ ಹೆಚ್ಚಿದಂತೆ ವಿಶೇಷವಾಗಿ ಇದನ್ನು ಬೆಳೆಸಲಾರಂಭಿಸಿದರು. ಇಂದು ಪ್ರಪಂಚಾದ್ಯಂತ ಇದರ ನಾರಿಗಾಗಿ ಬೆಳೆಸಲಾಗುತ್ತಿದೆಯಾದರೂ ಮಾನವ ಮೊತ್ತಮೊದಲು ಉಪಯೋಗಿಸಿದ ನಾರುಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ.



ಗಾಂಜಾ ವಾರ್ಷಿಕ ಸಸ್ಯ. 2-15 ಅಡಿವರೆಗೂ ಬೆಳೆಯಬಲ್ಲುದು. ಇದರಲ್ಲಿ ಗಂಡು ಹೆಣ್ಣು ಎಂದು ಎರಡು ಬಗೆ. ಕೆಲವೊಮ್ಮೆ ಯಾವುದಾದರೂ ಒಂದು ಗಿಡ ದ್ವಿಲಿಂಗಿಯಾಗಿಯೂ (ಹೆಣ್ಣು ಗಂಡು ಎರಡೂ ಗುಣ) ಇರುವುದುಂಟು. ಕೃಷಿ ಮಾಡುವಾಗ ಗಂಡು ಹೆಣ್ಣು ಗಿಡಗಳು ಸಮಸಂಖ್ಯೆಯಲ್ಲಿ ಬೆಳೆದರೂ ಪರಾಗಸ್ಪರ್ಶದ ಬಳಿಕ ಗಂಡುಗಿಡ ಕ್ರಮೇಣ ನಶಿಸಿಹೋಗುತ್ತದೆ. ಹೆಣ್ಣು ಗಿಡ ಮಾತ್ರ ಕವಲು ಕವಲಾಗಿ ಸಮೃದ್ಧವಾಗಿ ಬೆಳೆಯುತ್ತದೆ. ಹೂಬಿಟ್ಟು ಬೀಜ ಬಲಿಯುವ ಕಾಲದಲ್ಲಿ ಸುವಾಸನಾಭರಿತ ಪರಿಮಳವನ್ನು ಹೊರಸೂಸುತ್ತದೆ. ನಾರಿಗಾಗಿ ಬೆಳೆಯುವವರು ಉತ್ತಮ ಬೀಜಗಳನ್ನು ಆಯ್ಕೆ ಮಾಡಿಕೊಂಡು ಗೊಬ್ಬರವನ್ನು ಹದವಾಗಿ ನೀಡಿ ನೀರುಣಿಸಿದರೆ ಸಮೃದ್ಧವಾಗಿ ಬೆಳೆಯುತ್ತವೆ. ಬೀಜವನ್ನು ನಿರ್ದಿಷ್ಟ ಅಂತರದಲ್ಲಿ ಬಿತ್ತಿದರೆ ಕಾಂಡದ ಆರಂಭದಿಂದ ಅಂತ್ಯದವರೆಗೂ ಕವಲೊಡೆಯುತ್ತಲೇ ಇರುತ್ತವೆ. ಗಿಡ ಬೆಳೆದಂತೆಲ್ಲ ತೂಕ ಹೆಚ್ಚಾಗಿ ಬಾಗುತ್ತದೆ. ಗಾಂಜಾ ಬೀಜದಿಂದ ರಷ್ಯದೇಶದಲ್ಲಿ ಎಣ್ಣೆಯನ್ನು ಉತ್ಪಾದನೆ ಮಾಡುವುದೂ ಉಂಟು. ಭಾರತ ಮತ್ತು ಅರಬ್ ದೇಶಗಳಲ್ಲಿ ಮತ್ತು ಉತ್ತರ ಆಫ್ರಿಕಾದಲ್ಲಿ ಇದರಿಂದ ಔಷಧಿಯನ್ನೂ ತಯಾರಿಸುವುದಿದೆ.

ಬುಡ ಮತ್ತು ತುದಿ ಭಾಗವನ್ನು ಬಿಟ್ಟು ಮಧ್ಯಭಾಗದ ಕಾಂಡ ಟೊಳ್ಳಾಗಿರುತ್ತದೆ. ಹೆಣ್ಣು ಹೂಗಳಿಗಿಂತ ಗಂಡು ಹೂಗಳು ಗಾತ್ರದಲ್ಲಿ ದೊಡ್ಡವು. ಕಾಂಡದ ತುದಿ ಮತ್ತು ಪ್ರತಿ ಗಿಣ್ಣಿನಲ್ಲಿ ಹೂಗಳು ಗೊಂಚಲು ಗೊಂಚಲಾಗಿ ಬಿಡುತ್ತವೆ. ಹೆಣ್ಣು ಹೂಗಳು ಚಿಕ್ಕದಾಗಿದ್ದರೂ ಆಕರ್ಷಣೀಯವಾಗಿರುತ್ತವೆ. ಕಡುಬೂದಿ ಬಣ್ಣದ ಅಂಡಾಕಾರದ ಮಧ್ಯಮಗಾತ್ರದ ಗೋಧಿಕಾಳಿನಷ್ಟು ಗಾತ್ರದ ಬೀಜ ಇದರದು.

ಇದರ ಉತ್ತಮ ಇಳುವರಿಗಾಗಿ ಮಳೆಗಾಲ ಆರಂಭವಾಗುತ್ತಿದ್ದಂತೆ ಬಿತ್ತುವುದು ಕ್ಷೇಮ. ಭೂಮಿಯನ್ನು ಉತ್ತಿ ಹೆಂಟೆ ಒಡೆದು ಹದಮಾಡಿ ಗೊಬ್ಬರವನ್ನು ಯಥೇಚ್ಛವಾಗಿ ಬಳಸಬೇಕು. ಒಂದು ಎಕರೆಗೆ ಸುಮಾರು 20 ಕೆ.ಜಿ. ಬೀಜ ಬೇಕಾಗುತ್ತದೆ. ಒತ್ತೊತ್ತಾಗಿ ಬೀಜ ಬಿತ್ತುವವರಿಗೆ 40 ಕೆ.ಜಿ. ಬೀಜ ಬೇಕು. ಬೀಜ ಎರಚಿದ ಮೇಲೆ ಹಲುಬೆಯಿಂದ ಬೀಜ ಒಳಸೇರುವಂತೆ ಮಾಡಬೇಕು. ತುಂಬ ಆಳಕ್ಕೆ ಬಿದ್ದರೆ ಮೊಳಕೆಯೊಡೆಯುವುದು ನಿಧಾನ; ಮತ್ತು ಕಡಿಮೆ ಪ್ರಮಾಣ. ಸಸಿ ಬೆಳೆದ ಮೇಲೆ ಹೆಚ್ಚು ಆರೈಕೆಯ ಅಗತ್ಯವಿಲ್ಲ, ಕೆಲವೆಡೆ ಕಳೆಯನ್ನೂ ಕೀಳುವುದಿಲ್ಲ. ನಾರಿಗಾಗಿ ಮಾತ್ರ ಬೆಳೆಸುವವರು ಗಿಡ ಹಣ್ಣಾಗುವ ಮೊದಲೇ ಕತ್ತರಿಸಿಬಿಡುತ್ತಾರೆ. ಗಿಡಗಳನ್ನು ಕಂತೆ ಕಟ್ಟಿ ನೀರಿನಲ್ಲಿ ಮುಳುಗಿಸಿ ಮೇಲೆ ಏಳದಂತೆ ಭಾರವನ್ನು ಇಡುತ್ತಾರೆ. ಹಿಮಾಲಯ ಪರ್ವತದಂಥ ಭಾಗಗಳಲ್ಲಿ ದಟ್ಟವಾದ ಮಂಜಿನಲ್ಲಿ ತೆರೆದಿಟ್ಟರೆ ಸಾಕು. ಕೊಳೆಯುವ ಅವಧಿ ಗಿಡದ ಪಕ್ವತೆಯನ್ನವಲಂಬಿಸಿರುತ್ತದೆ. ಕೊಳೆಯಲು 15-20 ದಿನಗಳು ಬೇಕು. ಇದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗಲೂಬಹುದು. ಗಿಡ ಕೊಳೆತಿದೆ ಎಂದು ಪರೀಕ್ಷಿಸಿ ಹೊರತೆಗೆದು ನೀರು ಸೋರಿಸಿ ಅನಂತರ ಅದಕ್ಕಾಗಿಯೇ ಇಟ್ಟುಕೊಂಡಿರುವ ಕೊಡತಿಯಾಕಾರದ ದೊಣ್ಣೆಗಳಿಂದ ಹದವಾಗಿ ಚಚ್ಚಿ ನಾರನ್ನು ಬೇರ್ಪಡಿಸಿ ಶುದ್ಧಗೊಳಿಸಿಕೊಳ್ಳುತ್ತಾರೆ. ಭಾರತಕ್ಕಿಂತ ಈ ನಾರಿನ ಉಪಯೋಗ ಇತರೆಡೆಗಳಲ್ಲಿ ಹೆಚ್ಚು. ಈ ನಾರನ್ನು ಹುರಿಗಳ ಟ್ವೈನ್‌ದಾರ ಕೃತಕ ಸ್ಪಂಜು ತಯಾರಿಕೆಗೆ ಬಳಸುವರು.

ಉಪಯೋಗಗಳು : ಗಾಂಜಾ ಗಿಡದ ಹೂ, ಎಲೆ, ಕುಡಿಗಳಲ್ಲಿ ಔಷಧೀಯ ಗುಣಗಳಿವೆ. ಗಾಂಜಾದಲ್ಲಿ ಎಣ್ಣೆ ಇರುವುದರಿಂದ ಇದಕ್ಕೆ ಮಾದಕ ಗುಣ ಬಂದಿದೆ. ಮಾದಕ ದ್ರವ್ಯದ ಪ್ರಮಾಣಕ್ಕೆ ಅನುಗುಣವಾಗಿ ಇದನ್ನು ಮೂರು ಬಗೆಯಾಗಿ ವಿಂಗಡಿಸಬಹುದು :

1. ಪ್ರಥಮ ದರ್ಜೆ ಗಾಂಜಾ : ಹೆಚ್ಚು ಮತ್ತು ಬರಿಸುವ ಗುಣವಿದೆ. ಅದರಲ್ಲಿರುವ ಗೋಂದಿನಿಂದ ಬರುತ್ತದೆ. ಇದನ್ನು ಭಾರತದಲ್ಲಿ ಚರಸ್ ಎಂದೂ ಆಫ್ರಿಕ, ಮಧ್ಯಪ್ರಾಚ್ಯಗಳಲ್ಲಿ ಹಶೀಶ್ ಎಂದೂ ಕರೆಯುವುದು.

2. ಮಧ್ಯಮ ದರ್ಜೆ ಗಾಂಜಾವನ್ನು ಗಿಡದ ಕುಡಿ ಹೂ ಮತ್ತು ಎಲೆಗಳಿಂದ ತಯಾರಿಸುತ್ತಾರೆ.

3. ಕನಿಷ್ಠದರ್ಜೆಯ ಗಾಂಜಾ : ಇದನ್ನು ಭಂಗಿ ಎಂದೂ ಭಾಂಗ್ ಎಂದೂ ಕರೆಯುವುದುಂಟು. ಸ್ವಾಭಾವಿಕವಾಗಿ ಬೆಳೆದ ಕಾಡು ಗಿಡದ ಕುಡಿ, ಹೂ ಮತ್ತು ಎಲೆಗಳಿಂದ ಇದನ್ನು ಪಡೆಯಲಾಗುತ್ತದೆ.

ಮೊದಲು ಚೀನದಲ್ಲಿ, ಅನಂತರ ಭಾರತ, ಆಫ್ರಿಕ, ಯುರೋಪ್ ದೇಶಗಳಲ್ಲಿ ಆದಿವಾಸಿಗಳಿಗೆ ಇದರ ಉಪಯೋಗ ಗೊತ್ತಾಗಿತ್ತು. ಅವರು ಇದನ್ನು ನೋವು ಮತ್ತಿತರ ರೋಗಗಳಿಗೆ ಬಳಸುತ್ತಿದ್ದರು. ಕಾಲಕ್ರಮೇಣ ಇದರ ಮಾದಕ ಗುಣಕ್ಕೆ ಮಾರುಹೋದ ಯುವಕ ಯುವತಿಯರು ಭಂಗಿ ಸೇವನೆಗೆ ತೊಡಗಿದರು. ಇದರ ಸೇವನೆಯಿಂದಾಗುವ ದುಷ್ಪರಿಣಾಮಗಳನ್ನು ಮನಗಂಡ ಸರ್ಕಾರ ಗಾಂಜಾ ಸಾರ್ವಜನಿಕವಾಗಿ ಬೆಳೆಸುವುದನ್ನು ರದ್ದುಗೊಳಿಸಿದೆ. ಕದ್ದು ಮುಚ್ಚಿ ಭಂಗಿ ಸೇವಿಸುವುದರಿಂದ ಚೆಂಡು ಮಲ್ಲಿಗೆ ಮುಂತಾದ ಹೂ ತೋಟಗಳಲ್ಲಿ ಬದನೆ, ಮೆಣಸು, ಹರಳು ಬೆಳೆಯುವಲ್ಲಿ, ಎಲೆತೋಟಗಳಲ್ಲಿ ವಿರಳವಾಗಿ ಗಾಂಜಾ ಗಿಡ ಬೆಳೆಸುತ್ತಾರೆ.

ಗಾಂಜಾವನ್ನು ಹಿಂದೆ ಋಷಿಮುನಿಗಳು, ಅಲೆಮಾರಿಗಳು ಚಳಿ ತಡೆಯಲು, ಕಷ್ಟನಷ್ಟ ನೋವುಗಳನ್ನು ಮರೆಯಲು ಸೇವಿಸುತ್ತಿದ್ದರು. ಪಾನೀಯಗಳಲ್ಲಿ, ತಾಂಬೂಲ ಹಾಗೂ ಮಿಠಾಯಿಗಳೊಂದಿಗೆ ಕೆಲವರು ಸೇವಿಸಿದರೆ, ಇದರ ದ್ರವವನ್ನು ದೇಹಕ್ಕೆ ಚುಚ್ಚಿಸಿಕೊಳ್ಳುವ ವ್ಯಸನಿಗಳ ಸಂಖ್ಯೆಯೂ ಇಂದು ಹೆಚ್ಚಾಗುತ್ತಿದೆ.

ಪರಿಣಾಮಗಳು : ಇದನ್ನು ಸದಾ ಸೇವಿಸುವುದರಿಂದ ನಾಡಿಬಡಿತ ಹೆಚ್ಚಾಗುತ್ತದೆ. ಅಧಿಕ ರಕ್ತದೊತ್ತಡ, ಕಣ್ಣುಗಳು ಕೆಂಪಾಗುವಿಕೆ, ರಕ್ತದಲ್ಲಿಯ ಸಕ್ಕರೆ ಅಂಶದ ಹೆಚ್ಚಳ, ಆಗಾಗ ಮೂತ್ರವಿಸರ್ಜನೆಗೆ ಒತ್ತಡ, ಬಾಯಾರಿಕೆ, ಗಂಟಲು ಒಣಗುವಿಕೆ, ಓಕರಿಕೆ, ವಾಂತಿ, ಭೇದಿ ಮುಂತಾದವು ಸಂಭವಿಸುತ್ತವೆ. ಅತಿಯಾದ ಸೇವನೆಯಿಂದ ಕಣ್ಣಿನಲ್ಲಿಯ ಸ್ಥಿತಿಸ್ಥಾಪಕ ಶಕ್ತಿ ಕುಂದುತ್ತದೆ. ಕೈ ನಡುಕ, ದೈಹಿಕ ಮತ್ತು ಮಾನಸಿಕ ಹೊಂದಾಣಿಕೆ ತಪ್ಪುತ್ತದೆ.

ಸಾಮಾನ್ಯವಾಗಿ ಕಂಡುಬರುವ ಕೆಲವು ಮಾನಸಿಕ ಪರಿಣಾಮಗಳಿವು: ತಮ್ಮಷ್ಟಕ್ಕೆ ತಾವೇ ಮಾತನಾಡುವುದು, ಸದಾ ಸ್ವಪ್ನಾವಸ್ಥೆಯಲ್ಲಿ ತೇಲಾಡುವುದು, ಅಸಂಬದ್ಧ ಭಾವನಾತರಂಗಗಳು, ಹಿಂದಿನ ವಿಚಾರಗಳನ್ನು ಮೆಲುಕು ಹಾಕುವುದು, ಒಂದೆಡೆ ನಿಲ್ಲಲಾರದೆ ಕೂರಲಾರದೆ ಚಡಪಡಿಸುವುದು, ಸಣ್ಣ ವಸ್ತುಗಳು ದೊಡ್ಡದಾಗಿಯೂ ದೊಡ್ಡ ವಸ್ತುಗಳು ಸಣ್ಣದಾಗಿಯೂ ಕಾಣುವುದು. ಕ್ಷಣವೊಂದು ದಿನವಾಗಿ ದಿನವೊಂದು ಕ್ಷಣವಾಗುವುದು, ಮಾನಸಿಕವಾಗಿ ಭ್ರಮೆಗೊಳಗಾಗಿ ಭ್ರಮೆಯೇ ಸತ್ಯವೆಂದು ಭಾವಿಸುವರು. ಸಂತೋಷ ಹಾಗೂ ಆನಂದಾನುಭವ ಹೆಚ್ಚಾಗಿ ನಿಯಂತ್ರಣಕ್ಕೆ ಸಿಗದ ಹುಚ್ಚು ನಗೆ ಬೀರುವರು.

ವ್ಯಕ್ತಿಯ ಸಾಮಾಜಿಕ, ಕೌಟುಂಬಿಕ, ಸಾಂಸ್ಕೃತಿಕ ಹಿನ್ನೆಲೆ, ಪರಿಸರದ ಪ್ರಭಾವದಿಂದಾಗಿ ಕೆಲವರು ಸಾಧುಸಂತರು ಹಾಗೂ ಶಾಂತಚಿತ್ತರಾಗಿ ವರ್ತಿಸಿದರೆ ಇನ್ನು ಕೆಲವರಲ್ಲಿ ಪಾಶವೀಪ್ರವೃತ್ತಿ, ಮನೋವಿಕಾರಗಳು ಉಂಟಾಗುತ್ತವೆ.

ವಿ.ಆರ್.ಬಿ.

ಗಾಂಧಾರಿ ಮೆಣಸು ಮನೆಯ ಹಿತ್ತಲಲ್ಲಿ ಅನಾಯಾಸವಾಗಿ ಬೆಳೆಯುವ ಮೆಣಸಿನ ವಿಶಿಷ್ಟ ತಳಿ. ಕೇರಳವನ್ನೊಳಗೊಂಡಂತೆ ಕರಾವಳಿಯಲ್ಲಿ ಇದನ್ನು ಕಾಣಬಹುದು. ಹಸಿರು ಮತ್ತು ಹಳದಿ ಬಣ್ಣಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಮೂರ್ತಿ ಚಿಕ್ಕದಾದರೂ ಖಾರ ಹೆಚ್ಚು. ಈ ಮೆಣಸಿಗೆ ಅದರದ್ದೇ ಆದ ವಿಶೇಷ ಪರಿಮಳವಿದೆ.

ಇದು ಕರಾವಳಿಯ ಬಡಜನರ ಅಚ್ಚುಮೆಚ್ಚಿನ ವಸ್ತು. ಬೆಳಗ್ಗೆ ಕೃಷಿ ಅಥವಾ ಕೂಲಿ ಕೆಲಸಕ್ಕೆ ಹೋಗುವ ಜನ ತಂಗಳನ್ನ ಊಟಕ್ಕೆ ಗಾಂಧಾರಿ ಮೆಣಸನ್ನು ಬಳಸುತ್ತಾರೆ. ಖಾರಕ್ಕೆ ಅಗತ್ಯವಿರುವಷ್ಟು ಮೆಣಸನ್ನು ತಂಗಳನ್ನಕ್ಕೆ ಮುರಿದು ರುಚಿಗೆ ತಕ್ಕಷ್ಟು ಹುಣಿಸೆ ಹುಳಿ ಮತ್ತು ಉಪ್ಪನ್ನು ಸೇರಿಸಿದರೆ ಅದರ ರುಚಿಯೇ ಬೇರೆ. ಸಾರು-ಸಾಂಬಾರು ಇಲ್ಲದಿದ್ದರೂ ಊಟ ಹೊಟ್ಟೆಗೆ ಸೇರುತ್ತದೆ.

ಚಿಕ್ಕ ಗಾತ್ರದ ಈ ಮೆಣಸು ಮೇಲ್ಮುಖವಾಗಿ ಗಿಡದ ತುಂಬಾ ಬೆಳೆಯುತ್ತದೆ. ಸಮುದ್ರಮಟ್ಟದಿಂದ 1,800 ಮೀ. ಎತ್ತರದ ಉಷ್ಣ

ಹವೆಯಲ್ಲಿ ಸಹಜವಾಗಿ ಬೆಳೆಯುವ ಇದಕ್ಕೆ ಹಿತಮಿತ ಮಳೆಯೇ ಆಧಾರ. ಗಾಂಧಾರದೇಶ ಇದರ ಮೂಲ. ಕೊಲೆಸ್ಟರಾಲ್ ಶಮನಗೊಳಿಸುವ ದಿವ್ಯೌಷಧವೂ ಹೌದು.

ಎಸ್.ವೈ.

ಗುಗ್ಗುಳದ ಮರ ಮಡ್ಡಿ ಮರ ಎಂದು ಕರೆಯುವ ಇದರ ವೈಜ್ಞಾನಿಕ ಹೆಸರು 'ಬಾಸ್‌ವೆಲಿಯ ಸೆರ್ರೇಟಿ. ಇದು ಬರ್‌ಸೆರೇಸೀ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ಒಣ ಹವೆಯುಳ್ಳ ಬೆಟ್ಟಗಾಡುಗಳಿರುವ ಪ್ರದೇಶದಲ್ಲಿ ಬೆಳೆಯುವ ಇದು ಭಾರತದ ಬಿಹಾರ, ಒರಿಸ್ಸಾ, ರಾಜಸ್ತಾನ, ಪೂರ್ವ ಪ್ರಾಂತ್ಯಗಳಲ್ಲಿ ಕಂಡುಬರುತ್ತದೆ.

ಸುಮಾರು 20 ರಿಂದ 30 ಅಡಿ ಎತ್ತರಕ್ಕೆ ಬೆಳೆಯುವ ಮರದ ಮುಖ್ಯ ಕಾಂಡ 12-15 ಅಡಿ ಉದ್ದ ಹೊಂದಿರುತ್ತದೆ. ಇದರ ಎಲೆಗಳು ಸಂಯುಕ್ತವಾಗಿ ಕಂಡುಬರುತ್ತವೆ. ಅವುಗಳ ಮೇಲೆ ತುಪ್ಪಳದಂಥ ಕೂದಲುಗಳುಳ್ಳ ಹೊದಿಕೆ ಇದೆ. ಎಲೆಗಳ ಅಂಚು ಗರಗಸದಂತೆ ಚೂಪಾಗಿದೆ.

ಮರದ ಕಾಂಡದಿಂದ ಅಂಟುದ್ರವ ಹೊರಬರುತ್ತದೆ. ಇದು ನೋಡಲು ಗಾಜಿನಂತೆ ಕಾಣುತ್ತದೆ. ಇದನ್ನೇ ಗುಗ್ಗುಳ ಎನ್ನುವುದು. ತೆಳು ಹಳದಿ ಬಣ್ಣದ ಈ ದ್ರವ ಗಾಳಿಗೆ ಗಟ್ಟಿಯಾಗುತ್ತದೆ. ಗುಗ್ಗುಳ ತೆಗೆಯಲು ದಪ್ಪ ಕಾಂಡ ಉತ್ತಮ. ಸುಮಾರು 30 ಅಂಗುಲ ಅಥವಾ ಅದಕ್ಕಿಂತ ದಪ್ಪದ ಕಾಂಡ ಹೊಂದಿರುವ ಮರಗಳಿಂದ ತೆಗೆಯುತ್ತಾರೆ. ಮರದ ಬುಡದಿಂದ ಮೂರರಿಂದ ಮೂರೂವರೆ ಅಂಗುಲ ಬಿಟ್ಟು ಸುಮಾರು 6 ಅಂಗುಲಗಳಷ್ಟು ಅಗಲದ ತೊಗಟೆಯನ್ನು ಕೆತ್ತುತ್ತಾರೆ. ಇದರಿಂದ ಸ್ರವಿಸುವ ಅಂಟಾದ ದ್ರವವನ್ನು, ರಬ್ಬರ್ ಗಿಡದಿಂದ ರಬ್ಬರ್ ಶೇಖರಿಸುವಂತೆ ಶೇಖರಿಸುತ್ತಾರೆ. ಅಂಟನ್ನು ತೆಗೆಯುವುದಕ್ಕೆ ಸಕಾಲ ನವೆಂಬರ್‌ನಿಂದ ಜುಲೈ. ಈ ಅಂಟಿನಲ್ಲಿ ಶೇ. 10-11 ತೇವಾಂಶ, ಶೇ. 8-9 ತೈಲ, ಶೇ. 55-57 ರಾಳ, ಶೇ. 4-5 ಕರಗದಿರುವ ವಸ್ತುಗಳು ಇವೆ.

ಉಪಯೋಗ : ಗುಗ್ಗುಳವನ್ನು ಧೂಪ ಹಾಕಲು ಬಳಸುತ್ತಾರೆ. ಇದರಲ್ಲಿ ಕೆಲವು ಉಪಯುಕ್ತವಾದ ಸಾರ ತೈಲವಿದ್ದು ಅದನ್ನು ಸಂಧಿವಾತ ಹಾಗೂ ನರದೌರ್ಬಲ್ಯ ಹೊಂದಿದ ವ್ಯಕ್ತಿಗಳಿಗೆ ಔಷಧಿಯಾಗಿ ಬಳಸುವುದೂ ಉಂಟು. ಈ ಮರ ತುಸು ಗಟ್ಟಿಯಾಗಿ ಇರುವುದರಿಂದ ಪೀಠೋಪಕರಣಗಳು, ಪೆಟ್ಟಿಗೆಗಳು, ಎರಡನೇ ದರ್ಜೆಯ ಪ್ಲೈವುಡ್‌ಗಳನ್ನು ತಯಾರಿಸಲು ಬಳಸುತ್ತಾರೆ.

ಪಿ.ಸಿ.ಎಸ್.

ಗುಮ್ಮಡಿ ಕಾಯ (ಕುಂಬಳಕಾಯಿ) 'ವಾರ್ತಾಕಂ ಕೋಮಲಂ ಪಥ್ಯಂ-ಕೂಷ್ಮಾಂಡಂ ಕೋಮಲಂ ವಿಷಂ' ಎಂದು ಲೋಕೋಕ್ತಿ. ಇದರ ಅರ್ಥ ತಿನ್ನಲು ಎಳೇ ಬದನೆಕಾಯಿ ಶ್ರೇಷ್ಠವೇ ಆದರೂ ಎಳೆ ಕುಂಬಳಕಾಯಿ ಮಾತ್ರ ವಿಷಕ್ಕೆ ಸಮಾನ. (ಪಕ್ವವಾದ ಬದನೇಕಾಯಿ ಬೀಜಗಳಲ್ಲಿ ಅಮಲು ಉಂಟುಮಾಡುವ ವಿಷಪದಾರ್ಥಗಳಿರುವಂತೆ, ಎಳೇ ಕುಂಬಳಕಾಯಿಯಲ್ಲಿಯೂ ಹಾನಿಕಾರಕ ಪದಾರ್ಥಗಳಿರುತ್ತವೆ) ಆದುದರಿಂದಲೆ ಎಳೆ ಕುಂಬಳಕಾಯಿಯನ್ನು ತಿನ್ನಬಾರದು.

ಕುಂಬಳಕಾಯಿ ಏಕವಾರ್ಷಿಕ ಬೆಳೆ. ಇದರ ದೊಡ್ಡ ಎಲೆಗಳಿಗೂ, ಕಾಂಡಕ್ಕೂ ಕೋಮಲವಾದ ನವುರಾದ ರೋಮಗಳಿರುತ್ತವೆ. ಪ್ರತಿಯೊಂದು ಗಿಣ್ಣಿನಲ್ಲಿಯೂ ಸ್ಪ್ರಿಂಗ್‌ಗಳಂತಹ 'ಟೆಂಡ್ರಿಲ್ಸ್' ಇರುತ್ತವೆ. ಇವುಗಳ ಸಹಾಯದಿಂದಲೇ ಕುಂಬಳಕಾಯಿಯ ಬಳ್ಳಿ ಮೇಲಕ್ಕೇರುತ್ತದೆ. ಇದರ ಹಳದಿ ಬಣ್ಣದ ದೊಡ್ಡ ಹೂಗಳು ಏಕಲಿಂಗ ಹೂಗಳು. ಗಂಡು, ಹೆಣ್ಣು ಹೂಗಳು ಬಿಡಿಬಿಡಿಯಾಗಿರುತ್ತವೆ. ಕುಂಬಳಕಾಯಿ (ಹಣ್ಣು) ಸಾಧಾರಣವಾಗಿ ಏಳೆಂಟು ಕೆಜಿಗಳಿರುತ್ತವೆ. ಅಪರೂಪವಾಗಿ 20 ಕಿಲೋಗಳ ಭಾರವಿರುತ್ತದೆ. ಚಪ್ಪಟೆಯಾ ಅಂಡಾಕಾರದ ಬೀಜಗಳಿರುತ್ತವೆ.

ತೆಲುಗು ಗ್ರಾಮನಾಮಗಳಲ್ಲಿ ಗುಮ್ಮಡಿಗುಂಟ, ಗುಮ್ಮಡಿ ದೊಡ್ಡಿ, ಗುಮ್ಮಡಿ ಪೂಂಡಿ ಇತ್ಯಾದಿ; ಗುಮ್ಮಡಿ, ಗುಮ್ಮಡಿದಲ, ಗುಮ್ಮಳ್ಳ ಮುಂತಾದ ಮನೆ ಹೆಸರುಗಳು 'ಗುಮ್ಮಡಿ'ಯೊಂದಿಗೆ ಆಂಧ್ರರೊಂದಿಗೆ ಪ್ರಾಚೀನ ಅನುಬಂಧಕ್ಕೆ ದೃಷ್ಟಾಂತವಾಗಿವೆ. ದಕ್ಷಿಣ ಅಮೇರಿಕಾದಲ್ಲಿಯ ಪ್ರಾಚೀನ ರೆಡ್ ಇಂಡಿಯನ್ ಸಮಾಧಿಗಳಲ್ಲಿ ದೊರಕಿದ ಅವಶೇಷಗಳಿಂದ ಸಾವಿರಾರು ವರ್ಷಗಳಿಂದಲೂ ಕುಂಬಳಕಾಯಿಯನ್ನು ಆಹಾರವಾಗಿ ಉಪಯೋಗಿಸುತ್ತಾರೆಂದು ತಿಳಿದು ಬರುತ್ತದೆ.

ಔಷಧೀಯ ಗುಣಗಳು : ಕುಂಬಳಕಾಯಿಯಲ್ಲಿ ಪೊಟ್ಯಾಷಿಯಂ, ಫಾಸ್ಪರಸ್, ಸಲ್ಫರ್, ಮೆಗ್ನಿಷಿಯಂ, ಕ್ಯಾಲ್ಸಿಯಂ ಅಂತಹ ಉಪಯುಕ್ತ ಖನಿಜಗಳೇ ಅಲ್ಲದೆ, ವಿಟಮಿನ್ ಎ (ಹೆಚ್ಚಾಗಿಯೂ), ಅಲ್ಪವಾಗಿ ವಿಟಮಿನ್ ಸಿ ಇರುವುದರಿಂದ ಇದು ಪುಷ್ಟಿದಾಯಕ. ಹೊಟ್ಟೆಯಲ್ಲಿರುವ 'ಟೇಪ್‌ವರ್ಮ್ಸ್' ನಿರ್ಮೂಲನೆಗಾಗಿ ಕುಂಬಳಕಾಯಿ ಬೀಜಗಳನ್ನು ಸಕ್ಕರೆಯಲ್ಲಿ ಸೇರಿಸಿ ತಿನ್ನಿಸುತ್ತಾರೆ. ರಾತ್ರಿ ಮಲಗುವ ಮುನ್ನ ತಿನ್ನಿಸಿ, ಬೆಳಗಿನ ಜಾವ ಹರಳೆಣ್ಣೆಯನ್ನು ಕುಡಿಸುತ್ತಾರೆ. ಗನೇರಿಯಾ, ಮೂತ್ರವ್ಯಾಧಿಗಳುಳ್ಳ ರೋಗಿಗಳಿಗೆ ಮಾತ್ರ ಸುಲಭವಾಗಿ ಹೋಗಲು ಕುಂಬಳಕಾಯಿ ಬೀಜಗಳನ್ನು ಸಕ್ಕರೆ ಅಥವಾ ಜೇನುತುಪ್ಪದಲ್ಲಿ ತಿನ್ನಿಸುತ್ತಾರೆ. ಕುರುಗಳು, ವ್ರಣಗಳಿಗೆ ಹಣ್ಣಿನ ತಿರುಳನ್ನು ಮಲಾಂ ಪಟ್ಟು ಹಾಕುತ್ತಾರೆ. ಚೇಳು, ಜರಿ, ದೊಡ್ಡ ಕಪ್ಪು ಚೇಳು (ಮಂಡ್ರಕಪ್ಪೆ) ಇತ್ಯಾದಿ ಕಚ್ಚಿದಾಗ, ಕುಂಬಳಹಣ್ಣಿನ ತೊಟ್ಟನ್ನು ಬಿಸಿಲಲ್ಲಿ ಒಣಗಿಸಿ, ಪುಡಿಮಾಡಿ, ಅದರಿಂದ ಮಾಡಿದ ಮುದ್ದೆಯನ್ನು ಲೇಪಿಸಿದರೆ ತಕ್ಷಣ ಗುಣವಾಗುತ್ತದೆ. ನರಗಳ ಬಲಹೀನತೆಯುಳ್ಳವರಿಗೆ ಟಾನಿಕ್ ಆಗಿ ಕೆಲಸ ಮಾಡುತ್ತದೆ.

(ಆಕರ : ಆಂಧ್ರಜ್ಯೋತಿ, ಭಾನುವಾರ 22.9.2013)

ಎಂ.ಜಿ.ಎಸ್.

ಗುಲಗಂಜಿ ಗುಲಗಂಜಿ ಒಂದು ಬಳ್ಳಿ. ಇದರ ಶಾಸ್ತ್ರೀಯನಾಮ ಏಬ್ರಸ್ ಪ್ರಿಕ್‌ಟೋರಿಯಸ್ ಎಂದು. ಇದರ ಕುಟುಂಬದ ಹೆಸರು ಲೆಗ್ಯೂಮಿನೋ ಸೀ. ಉಪಕುಟುಂಬ ಪ್ಯಾಪಿಲಿಯೋನೇಸಿ ಗುಲಗಂಜಿಗೆ ಇಂಗ್ಲೀಷಿನಲ್ಲಿ ಕ್ಯೂಬ್ಸ್ 3 ಇಂಡಿಯನ್ ಲಿಕರಿಸ್ ಎಂಬ ಹೆಸರಿದೆ.

ಭಾರತಾದ್ಯಂತ ಬಯಲು ಸೀಮೆಗಳಲ್ಲಿ ಹೇರಳವಾಗಿ ಬೆಳೆಯುತ್ತವೆ. ಬೇರೆ ಸಸ್ಯಗಳನ್ನು ಆಶ್ರಯಿಸಿ ಬೆಳೆಯುವ ಬಳ್ಳಿಯಾದರೂ ಸುಮಾರು 5-6 ಮೀ. ಎತ್ತರಕ್ಕೆ ಬೆಳೆಯುತ್ತದೆ. ಒಂದಕ್ಕೆ ನೇರವಾಗಿ ಮತ್ತೊಂದು ಎಲೆ ಇರುವುದು ಇದರ ವಿಶೇಷ. ಇವು ಗರಿರೂಪ ಹೊಂದಿವೆ. ಇದರ

ಚಿಕ್ಕ ಚಿಕ್ಕ ಹೂಗೊಂಚಲುಗಳು ಸುಂದರವಾಗಿ ಕಾಣುತ್ತವೆ. ಇದಕ್ಕೆ ರೇಸೀಮ್ ಮಾದರಿ ಎಂದೂ ಕರೆಯುತ್ತಾರೆ. ಇವುಗಳ ಬಣ್ಣ ಬಿಳಿ ಅಥವಾ ನಸುಗೆಂಪಾಗಿರುತ್ತದೆ. ಈ ಹೂಗಳೇ ಕಾಯಿಗಳಾಗಿ ಬದಲಾಗುತ್ತವೆ. ಗೊಂಚಲು ಗೊಂಚಲಾಗಿ ಇರುವಂತಹ ಈ ಕಾಯಿಗಳು ಬಲಿತಾದ ಮೇಲೆ ಬಿರಿದು ಬೀಜಗಳು ಕಂಡುಬರುತ್ತವೆ. ಸಾಮಾನ್ಯವಾಗಿ 3 ರಿಂದ 5 ಬೀಜಗಳುಳ್ಳ ಇವುಗಳ ಬಣ್ಣ ಕೆಂಪಾಗಿದ್ದು, ಬೀಜ ಹುಟ್ಟುವ ತುದಿಯಲ್ಲಿ ಕಪ್ಪಾದ ಮಚ್ಚೆಯಂತೆ ಕಾಣುವುದು ಇದರ ವಿಶೇಷ. ಬೀಜ ಕಪ್ಪು ಮತ್ತು ಕೆಂಪುಬಣ್ಣಗಳಿಂದ ಫಳಫಳನೆ ಹೊಳೆಯುತ್ತಿರುತ್ತವೆ. ಆಕರ್ಷಣೀಯ ಬಣ್ಣ



ಹೊಂದಿರುವ ಈ ಬೀಜಗಳನ್ನು ತಿಂದರೆ ಏಬ್ರಿನ್ ಎಂಬ ಕಟುವಿಷವಿದ್ದು ಪ್ರಾಣಹಾನಿ ಆಗುವ ಸಂಭವವಿರುತ್ತದೆ. ಬೀಜಗಳನ್ನು ಪುಡಿಮಾಡಿ ತಯಾರಿಸಿದ ದ್ರಾವಣ ಕಣ್ಣಿನ ರೆಪ್ಪೆಯ ಒಳಭಾಗದಲ್ಲೇನಾದರೂ ಸೇರಿದರೆ, ಅದು ರಕ್ತದೊಂದಿಗೆ ಸೇರಿ ಪ್ರಾಣಹೋಗಬಹುದು. ಆದರೆ ಬಾಯಿ, ಅನ್ನನಾಳ, ಹೊಟ್ಟೆಯ ಭಾಗದಲ್ಲಿ ನಿರುಪದ್ರವಿಯಾಗಿ ಪಚನಗೊಳ್ಳುತ್ತದೆ. ಪ್ರಾಣಿಗಳಿಗೂ ಮನುಷ್ಯರಿಗೂ ಸಾವು ತರುವ ಈ ಗುಲಗಂಜಿಯನ್ನು ದುರುಪಯೋಗಪಡಿಸಿಕೊಳ್ಳುವುದೂ ಉಂಟು.


ಗುಲಗಂಜಿ ಸ್ವಾಭಾವಿಕವಾಗಿ ಬೆಳೆಯುವ ಬಳ್ಳಿ. ಎಲ್ಲ ರೀತಿಯ ಮಣ್ಣುಗಳಲ್ಲೂ ಬೆಳೆಯುತ್ತದೆ. ಭಾರತವಲ್ಲದೆ ಶ್ರೀಲಂಕಾ, ಮ್ಯಾನ್ಮಾರ್, ಕಾಂಬೋಡಿಯ, ಸಯಾಮ್ ಮುಂತಾದ ಕಡೆ ಬೆಳೆಯುತ್ತದೆ.

ಉಪಯೋಗ : ಗುಲಗಂಜಿಯ ಬೇರು ಮತ್ತು ಎಲೆಗಳಲ್ಲಿ ಗ್ಲೈಸಿರೈಸಿನ್ ಎಂಬ ಮುಖ್ಯ ವಸ್ತುವಿದೆ. ಇದರ ಕಷಾಯವನ್ನು ನೆಗಡಿ, ಕೆಮ್ಮು ಹೊಟ್ಟೆಯಲ್ಲಿ ಆಗುವ ನುಲಿತಗಳಿಗೆ ಔಷಧಿಯಾಗಿ ಬಳಸುತ್ತಾರೆ. ಶೀತದಿಂದ ಆಗುವ ಗೊಗ್ಗರು ಧ್ವನಿ ಹೋಗಲಾಡಿಸಲು ಇದರ ಎಲೆಗಳನ್ನು ತಿನ್ನುವುದೂ ಉಂಟು.

ಗುಲಗಂಜಿ ಬೀಜಗಳು ಚಿನ್ನದ ವ್ಯಾಪಾರಿಗಳಿಗೆ ಹೆಚ್ಚು ಆಕರ್ಷಕ, ಪುರಾತನ ಕಾಲದಿಂದಲೂ ಇವರು ಬೀಜಗಳನ್ನು ತೂಕದ ಮಾನವಾಗಿ ಬಳಸುತ್ತಿದ್ದಾರೆ. ಇದರೊಂದಿಗೆ ಹಾರಗಳು ಮತ್ತು ಜಪಮಾಲೆಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. (ಈಜಿಪ್ಟ್ ದೇಶದಲ್ಲಿ ಗುಲಗಂಜಿಯನ್ನು ಬೇಯಿಸಿ ಆಹಾರವಾಗಿ ಬಳಸುತ್ತಾರೆ. ಭಾರತದಲ್ಲಿ ಬರಗಾಲವಿದ್ದಾಗ ಆಹಾರವಾಗಿ ಉಪಯೋಗಿಸುವ ಉದಾಹರಣೆಗಳಿವೆ.)

ಪಿ.ಸಿ.ಎಸ್.

ಗುಲಾಬಿ ಹೂವುಗಳ ರಾಣಿ ಗುಲಾಬಿ. ಸಂಸ್ಕೃತದಲ್ಲಿ ತರುಣೀಪುಷ್ಪ, ಅತಿಮಂಜುಲ, ಸೇಮಂತಿಕ ಎಂಬ ಹೆಸರುಗಳಿಂದ ಕರೆಯುತ್ತಾರೆ. ಗುಲಾಬಿ ತನ್ನ ಆಕರ್ಷಕ ಬಣ್ಣದಿಂದ ಕೇವಲ ಹೂವು ಮಾತ್ರವಾಗಿರದೆ ವಾಣಿಜ್ಯ ದೃಷ್ಟಿಯಿಂದಲೂ ಜನಾಧರಣೆಯನ್ನು ಪಡೆದಿದೆ. ಇಂಗ್ಲೆಂಡಿನ ರಾಷ್ಟ್ರೀಯ ಕುಸುಮವಾಗಿ ಗುರುತಿಸಿಕೊಂಡಿದೆ. ಇದರ ಸಸ್ಯಶಾಸ್ತ್ರೀಯ ನಾಮ Rose centifalia, ರೋಸಾಸಿಯೋಸಿ ಕುಟುಂಬಕ್ಕೆ ಸೇರಿದ್ದು. ಆಂಗ್ಲ ಭಾಷೆಯಲ್ಲಿ Rose ಎಂದು ಕರೆಯುವರು. ಗುಲಾಬಿಯನ್ನು ಮೊದಲು ಉದ್ಯಾನಗಳಲ್ಲಿ ಬೆಳೆಸಿದವರು ಗ್ರೀಕರು. ಪ್ರಾಚೀನ ಗ್ರೀಕ್



ಬಹುಶೀಘ್ರವಾಗಿ ಸಸ್ಯಗಳನ್ನು ಬೆಳೆಸಬಹುದು. ಪ್ರಧಾನ ಕಾಂಡವನ್ನು ತೆಗೆದು, ಉತ್ತಮ ಕಣ್ಣನ್ನು ಆಯ್ದು ಕಣ್ಣು ಹಾಕುವುದು. ಇದನ್ನು ಭೂಮಿಯಿಂದ ಸುಮಾರು 5 ರಿಂದ 8 ಸೆಂ.ಮೀ. ಎತ್ತರದಲ್ಲಿ ಬಲಿಷ್ಠವಾದ ಕಾಂಡದ ಮೇಲೆ ಮಾಡಬೇಕು. ಕಾಂಡದ ಮೇಲಿನ ಮುಳ್ಳುಗಳನ್ನು ಪ್ರಧಾನ ಕಾಂಡದ ಇತರ ರೆಂಬೆಗಳನ್ನು ತೆಗೆದುಹಾಕಬೇಕು. ಕೇವಲ ಕಣ್ಣು ಹಾಕುವ ಒಂದೇ ಕಾಂಡವನ್ನು ಬಿಡಬೇಕು. ಸಂಪೂರ್ಣ ಶ್ರೇಷ್ಠಮಟ್ಟದ ಗುಲಾಬಿ ಸಸ್ಯ ಕಾಂಡದಲ್ಲಿ ಬೆಳೆಸಲು ಕಣ್ಣು ಹಾಕುವುದನ್ನು ಸುಮಾರು ಒಂದು ಮೀಟರ್ ಎತ್ತರದ ಕಾಂಡದಲ್ಲಿ ಮಾಡಬೇಕು. ಮೊಗ್ಗನ್ನು ಹರಿತವಾದ ಚಾಕುವಿನಿಂದ ತೆಗೆದುಕೊಂಡು, 'ಟಿ' ಆಕಾರದ ಗಾಯದಲ್ಲಿ ಇಟ್ಟು ಔಷಧಿ ಯುಕ್ತ ಟೇಪ್ ಕಟ್ಟಿ ಕಣ್ಣು ಕಾಣಿಸುವಂತೆ ಬಿಡಬೇಕು. ಕಣ್ಣು ಹಾಕಿದ ಗಿಡವು ಸುಮಾರು ಆರು ತಿಂಗಳ ಅನಂತರ ನಾಟಿ ಮಾಡಲು ಬಳಸಬಹುದು. ಗುಲಾಬಿಗಿಡವನ್ನು ಒಂದೊಂದೇ ಬೆಳೆಸುವುದಕ್ಕಿಂತ ಮಡಿಗಳಲ್ಲಿ ಗುಂಪುಗಳಲ್ಲಿ ಬೆಳೆಸುವುದು ಉತ್ತಮ. ಬಿಸಿಲಿರುವ ಸ್ಥಳಗಳಲ್ಲಿ ಗುಲಾಬಿ ಗಿಡಗಳು ಚೆನ್ನಾಗಿ ಬೆಳೆಯುತ್ತವೆ. ಕಾಂಡಗಳ ತುಂಡುಗಳಿಂದ ಡಿಸೆಂಬರ್‌ನಿಂದ ಫೆಬ್ರವರಿ ಇಲ್ಲವೇ ಜುಲೈನಿಂದ ಆಗಸ್ಟ್‌ನಲ್ಲಿ ಸಸಿ ಬೆಳೆಸಬಹುದು. ಇದನ್ನು ಮರಳಿನಲ್ಲಿ ನೆಡಬೇಕು.

ನೀರು ಬಸಿಯುವಂತಹ ಮಣ್ಣು ಗುಲಾಬಿ ಬೇಸಾಯಕ್ಕೆ ಉತ್ತಮ. ನೀರು ಬಸಿಯದೆ ಇದ್ದರೆ ಮಣ್ಣು ಭಾರವಾಗಿದ್ದರೆ ಮರಳನ್ನು ಮಡಿಯ ತಳಭಾಗಕ್ಕೆ ಹಾಕಿ ನಾಟಿ ಮಾಡಬೇಕು. ಕನಿಷ್ಟ 15 ದಿನಗಳ ಮೊದಲು ಮಡಿಗಳನ್ನು ರಚಿಸಬೇಕು. ಮಡಿಗಳನ್ನು ಸುಮಾರು 75 ಸೆಂ.ಮೀ. ಆಳ ತೋಡಿ ಚೆನ್ನಾಗಿ ಕೊಳೆತ ಕೊಟ್ಟಿಗೆ ಗೊಬ್ಬರವನ್ನು 1 : 3 ರ ಪ್ರಮಾಣದಲ್ಲಿ ಹಾಕಿ ತಯಾರಿಸಬೇಕು. ಭಾರತದಲ್ಲಿ ಗುಲಾಬಿಯನ್ನು ನಾಟಿ ಮಾಡುವ ಕಾಲ ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ. ಆದರೆ ಮುಂಚಿತವಾಗಿಯೇ ನಾಟಿಮಾಡುವುದರಿಂದ ಡಿಸೆಂಬರ್‌ನಲ್ಲಿ ಉತ್ತಮದರ್ಜೆಯ ಪುಷ್ಪಗಳನ್ನು ಕೊಡಲು ಉಪಯುಕ್ತವಾಗುತ್ತದೆ.

ಸಸಿಗಳನ್ನು ಸುಮಾರು 75 ಸೆಂ.ಮೀ. ಅಂತರದಲ್ಲಿ ನಾಟಿ ಮಾಡಬೇಕು. ಶ್ರೇಷ್ಠಮಟ್ಟದ ಟೀ ಗುಲಾಬಿಗಳನ್ನು ಸುಮಾರು 1 ರಿಂದ 1.25 ಮೀ ಅಂತರದಲ್ಲಿ ಬಳ್ಳಿ ಗುಲಾಬಿಗಳನ್ನು ಸುಮಾರು 2 ರಿಂದ 2.5 ಮೀ. ಅಂತರದಲ್ಲಿ ನಾಟಿ ಮಾಡಬೇಕು. ನಾಟಿ ಮಾಡುವುದಕ್ಕೆ ಮೊದಲು ಮೂಳೆಗೊಬ್ಬರ ಮಣ್ಣಿನಲ್ಲಿ ಸೇರಿಸಬೇಕು. ಮಡಿ ತಯಾರಿಸುವಾಗ ಸುಮಾರು 227 ಗ್ರಾಂ ಸೂಪರ್ ಫಾಸ್ಫೇಟನ್ನು ಪ್ರತಿ ಗಿಡಕ್ಕೆ ಕೊಡಬೇಕು. ನಾಟಿ ಮಾಡುವ ಸಮಯದಲ್ಲಿ ಮಡಿಯಲ್ಲಿ 100 ಸೆಂ.ಮೀ. ವ್ಯಾಸದ ಮತ್ತು 75 ಸೆಂ.ಮೀ. ಆಳದ ರಂಧ್ರವನ್ನು ಮಾಡಬೇಕು. ನಾಟಿಗೆ ಸಿದ್ಧವಿರುವ ಗಿಡದ ಬುಡದಲ್ಲಿ ಇರುವ ಮಣ್ಣಿನೊಂದಿಗೆ ರಂಧ್ರದಲ್ಲಿ ಇಟ್ಟು ನಾಟಿ ಮಾಡಬೇಕು. ಅನಂತರ ಸುತ್ತಲಿನ ಮಣ್ಣನ್ನು ಬಿಗಿಗೊಳಿಸಿ ನೀರು ಹಾಕಬೇಕು. ಅದೇ ಸಮಯದಲ್ಲಿ ಅರ್ಧ ಮಕರಿ ಕೊಟ್ಟಿಗೆ ಗೊಬ್ಬರವನ್ನು ಪ್ರತಿ ಮಡಿಗೂ ಕೊಡಬೇಕು.

ಗಿಡಗಳನ್ನು ಸವರುವುದಕ್ಕೆ ಮುಂಚೆ ನೀರು ಹಾಕುವುದನ್ನು ಮೂರು ನಾಲ್ಕು ದಿನಗಳವರೆಗೆ ನಿಲ್ಲಿಸಬೇಕು. ಅಕ್ಟೋಬರ್ ಎರಡನೇ ವಾರ ಸವರಬೇಕು. ಗಿಡಗಳನ್ನು ಸವರಿದ 6 ರಿಂದ 7 ವಾರಗಳ ಅನಂತರ ಹೂವು ಬಿಡಲು ಆರಂಭಿಸುತ್ತವೆ. ಬೊಗಸೆ ಗಾತ್ರದ ಹೂವುಗಳು, ಪ್ರದರ್ಶನಕ್ಕೆ ಬೇಕಾಗುವ ಹೂವುಗಳನ್ನು ಪಡೆಯಲು 3 ರಿಂದ 4 ಮೊಗ್ಗುಗಳನ್ನು ಪ್ರತಿ ಕಾಂಡದಲ್ಲಿ ಉಳಿಸಿ ಹೆಚ್ಚಿನಮೊಗ್ಗುಗಳನ್ನು ತೆಗೆಯಬೇಕು. ಸವರಿದ ಅನಂತರ 9 ಸೆಂ.ಮೀ ಆಳವಾಗಿಮಣ್ಣನ್ನು ಗಿಡದಸುತ್ತ ತೆಗೆದು ಹೊರಕ್ಕೆ ಹಾಕಿ ಮೂರರಿಂದ ನಾಲ್ಕು ದಿನಗಳವರೆಗೆ ಬೇರುಗಳನ್ನು ಹೊರಗೆಡವಬೇಕು. ಅನಂತರ 8 ರಿಂದ 10 ಕೆ.ಜಿ. ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಮಿಶ್ರಮಾಡಿ ಬೇರು ಮುಚ್ಚಿ ನೀರು ಹಾಕುವುದು. 15 ದಿನಗಳ ಮೇಲೆ ಪ್ರತಿ ಗಿಡಕ್ಕೂ ಅಮೋನಿಯಂ ಸಲ್ಫೇಟ್ ಮತ್ತು ಸಲ್ಫೇಟ್ ಆಫ್ ಪೊಟ್ಯಾಶನ್ನು 58 ಗ್ರಾಂನಷ್ಟು ಕೊಡಬೇಕು. ಗುಲಾಬಿಗೆಂದೇ ಶಿಫಾರಸ್ಸು ಮಾಡಿದ ಗೊಬ್ಬರವನ್ನು ಉಪಯೋಗಿಸುವುದು ಉತ್ತಮ.

ಗಿಡಗಳನ್ನು ಚೆನ್ನಾಗಿ ಬೆಳೆಸಲು ಪ್ರತಿ ವರುಷವೂ ಪ್ರತಿ ಚದರ ಮೀಟರ್‌ಗೆ 60 ಗ್ರಾಂ. ಮೂಳೆ ಗೊಬ್ಬರವನ್ನು ಕೊಡಬೇಕು. ಅಮೋನಿಯಂ ಸಲ್ಫೇಟ್ ಮತ್ತು ಸಲ್ಫೇಟ್ ಆಫ್ ಪೊಟ್ಯಾಷ್‌ನ್ನು ಮತ್ತೆ ಜನವರಿ - ಫೆಬ್ರವರಿಗಳಲ್ಲಿ ಆರಂಭದ ಹೂವುಗಳು ಬಿಟ್ಟ ಅನಂತರ ಕೊಡಬೇಕು. ಉಜ್ವಲವಾದ ಹೂವಿಗಳಿಗಾಗಿ ತಿಂಗಳಿಗೊಂದು ಸಾರಿ ಪ್ರತಿ ಚದುರ ಮೀಟರಿಗೆ 15 ಗ್ರಾಂ ಮ್ಯಾಗ್ನೇಷಿಯಂ ಸಲ್ಫೇಟ್ ಮತ್ತು ಐರನ್ ಸಲ್ಫೇಟ್‌ನ್ನು 4 : 1 ಪ್ರಮಾಣದಲ್ಲಿ ಕೊಡಬೇಕು.

ಎರಡು ಮೂರು ದಿನಗಳಿಗೊಮ್ಮೆ ಯಥೇಚ್ಛವಾಗಿ ನೀರು ಕೊಡುತ್ತಿರಬೇಕು. ಚಳಿಗಾಲದಲ್ಲಿ ವಾರಕ್ಕೊಮ್ಮೆ ನೀರು, ಸಾಕಾಗುವುದು. ಬೇಸಗೆಯಲ್ಲಿ ವಾತಾವರಣವನ್ನು ನೋಡಿಕೊಂಡು ಮಣ್ಣಿಗೆ ಅನುಗುಣವಾಗಿ ನೀರು ಕೊಡಬೇಕು.

ರೋಗಗಳು : 'ಡೈ ಬ್ಯಾಕ್' ಮತ್ತು 'ಬ್ಲ್ಯಾಕ್ ಸ್ಪ್ಯಾಪ್'. ಡೈ ಬ್ಯಾಕ್ ರೋಗವನ್ನು ಕರಿಬಣ್ಣದ ಕಾಂಡಗಳಿಂದಲೂ ಒಣಗಿದ ರೆಂಬೆಗಳಿಂದಲೂ ಕಂಡುಹಿಡಿಯಬಹುದು. ಇದನ್ನು ಶಿಲೀಂಧ್ರನಾಶಕ ಪೇಂಟ್ ಮತ್ತು ಕೆಂಪು ಸೀಸವನ್ನು ಸಿಂಪಡಿಸುವುದರಿಂದ ತಡೆಗಟ್ಟಬಹುದು. ಕೀಟಗಳಲ್ಲಿ ಆಫಿಡ್ಸ್, ಛಾಪರ್ ಬೀಟಲ್, ರೆಡ್ ಸ್ಕೇಲ್ಸ್, ಡಿಗರ್ ವ್ಯಾಸ್ಪ್, ಥ್ರಿಪ್ಸ್, ಮೈಟ್ಸ್ ಮತ್ತು ಗೆದ್ದಲುಗಳು ಮುಖ್ಯವಾದವು.


ಚಳಿಗಾಲದಲ್ಲಿ ಆಫಿಡ್ಸ್ ಮತ್ತು ಥ್ರಿಪ್ಸ್‌ಗಳು ಕಾಣಿಸಿಕೊಳ್ಳುತ್ತವೆ. ಶೇ. 0.2ರ ಪೈರೊಡೆಸ್ಟ್ ಇಲ್ಲವೇ ಭಾಸುದಿನ್ ಬಳಸುವುದರಿಂದ ಹತೋಟಿ ಮಾಡಬಹುದು. ಜುಲೈ - ಆಗಸ್ಟ್‌ನಲ್ಲಿ ಶೇ. 0.2ರ ಡಿ.ಡಿ.ಟಿ. ಬಳಸುವುದರಿಂದ ಗಿಡಗಳನ್ನು ಛಾಫರ್ ಬೀಟಲ್ ಮತ್ತು ಥ್ರಿಪ್ಸ್‌ಗಳಿಂದ ಸಂರಕ್ಷಿಸಬಹುದು.

ಆಗಸ್ಟ್‌ನಿಂದ ಅಕ್ಟೋಬರ್ ಮತ್ತು ಏಪ್ರಿಲ್‌ನಲ್ಲಿ ಶೇ. 0.1 ಪ್ಯಾರಥಿಯಾನ್ ಬಳಸುವುದರಿಂದ ರೆಡ್‌ಸ್ಕೇಲ್ಸ್‌ಗಳನ್ನು ನಿಯಂತ್ರಿಸಬಹುದು.

ನಾಟಿ ಮಾಡುವ ಸಮಯದಲ್ಲಿ ಶೇ. 5 ರ ಬಿ.ಎಚ್.ಸಿ. ಮತ್ತು ಡಿ.ಡಿ.ಟಿ.ಯನ್ನು ಸಮ ಪ್ರಮಾಣದಲ್ಲಿ ಬೆರೆಸಿ ಭೂಮಿಗೆ ಹಾಕಿದರೆ ಗೆದ್ದಲು ಹುಳು ಮತ್ತು ಛಾಫರ್ ಗ್ರಬ್ಸ್‌ಗಳನ್ನು ನಾಶಮಾಡಲು ಸಹಾಯಕವಾಗುತ್ತದೆ.

ಎಸ್.ಕೆ.ಎಸ್.

ಗುಲ್ಬರ್ಗಾ ಜಿಲ್ಲೆಯ ಕೃಷಿ ಕರ್ನಾಟಕ 30 ಜಿಲ್ಲೆಗಳಲ್ಲಿ ಗುಲ್ಬರ್ಗಾವೂ ಒಂದು. 1956ರ ರಾಜ್ಯ ಪುನರ್‌ವಿಂಗಡಣೆಯೊಂದಿಗೆ ಹೈದರಾಬಾದ್ ಸಂಸ್ಥಾನದಿಂದ ಮೈಸೂರು ರಾಜ್ಯಕ್ಕೆ ಸೇರಿತು. 'ಕಲ್ಬುರ್ಗಿ' ಎಂದೇ ಖ್ಯಾತವಾಗಿರುವ ಗುಲಬರ್ಗಾ 11,001 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಇದು ರಾಜ್ಯದಲ್ಲಿ 2ನೇ ದೊಡ್ಡ ಜಿಲ್ಲೆ. ರಾಜ್ಯದ ವಿಸ್ತೀರ್ಣದಲ್ಲಿ ಶೇ. 5.7 ಹೊಂದಿದ್ದರೆ ಜನಸಂಖ್ಯೆಯಲ್ಲಿ ಶೇ. 2.78 ಪಾಲು ಪಡೆದಿದೆ. ಕರ್ನಾಟಕ ರಾಜ್ಯದ ಈಶಾನ್ಯ ಭಾಗದಲ್ಲಿರುವ ಜಿಲ್ಲೆ. 16º12'-17º40' ಎತ್ತರ ಅಕ್ಷಾಂಶ ಮತ್ತು 76º-77º.42' ಪೂರ್ವರೇಖಾಂಶ (ಯಾದಗಿರಿಯನ್ನು ಸೇರಿದಂತೆ)ದ ಪರಿಧಿಯೊಳಗೆ ವಿಸ್ತರಿಸಿದೆ. ಉತ್ತರದಲ್ಲಿ ಬೀದರ್ ಜಿಲ್ಲೆ, ದಕ್ಷಿಣದಲ್ಲಿ ಯಾದಗಿರಿ, ಈಶಾನ್ಯದಲ್ಲಿ ಆಂಧ್ರಪ್ರದೇಶ, ಮಹಾರಾಷ್ಟ್ರದ ಎಸ್ಮಾನಾದ್ ಜಿಲ್ಲೆ, ಬಿಜಾಪುರ ಜಿಲ್ಲೆಯ ಗಡಿಯವರೆಗೂ ಚಾಚಿಕೊಂಡಿದೆ. ಕರ್ನಾಟಕದ ಉತ್ತರ ಭಾಗದಲ್ಲಿರುವ ಈ ಜಿಲ್ಲೆ ನಾಲ್ಕು ಆಡಳಿತ ವಿಭಾಗಗಳಲ್ಲಿ ಒಂದು. ಈ ವಿಭಾಗದಲ್ಲಿ ಬಳ್ಳಾರಿ, ಬೀದರ್ ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಗುಲಬರ್ಗಾ ಜಿಲ್ಲೆಗಳು ಸೇರುತ್ತವೆ. 44,108 ಚ.ಕಿ.ಮೀ. ವಿಸ್ತೀರ್ಣವನ್ನು ಆರು ಜಿಲ್ಲೆಗಳು ಹೊಂದಿವೆ. ಈ ವಿಭಾಗಕ್ಕೆ ಅತೀ ಹಿಂದುಳಿದ ಜಿಲ್ಲೆಗಳೆಂದು, ಹೈದರಾಬಾದ್



ಕರ್ನಾಟಕದ ಜಿಲ್ಲೆಗಳೆಂದೂ 371(ಜೆ) ಎಂಬ ವಿಧಿಯ ಅನ್ವಯ ವಿಶೇಷ ಸ್ಥಾನಮಾನವನ್ನು ಸರ್ಕಾರ ಕಲ್ಪಿಸಿದೆ (2013ರಿಂದ).

ವಿಸ್ತೀರ್ಣ : 2010ಕ್ಕೂ ಮೊದಲು ಗುಲ್ಬರ್ಗಾವು ಕರ್ನಾಟಕದ ವಿಸ್ತೀರ್ಣದಲ್ಲಿ ದೊಡ್ಡ ಜಿಲ್ಲೆ ಎನಿಸಿತ್ತು. 2010ರಲ್ಲಿ ಗುಲ್ಬರ್ಗಾದಿಂದ ಯಾದಗಿರಿಯನ್ನು ಬೇರ್ಪಡಿಸಲಾಯಿತು. ಯಾದಗಿರಿ ಪ್ರತ್ಯೇಕ ರಾಜ್ಯವಾಯಿತು. 2011-12ರ ಸಮೀಕ್ಷೆಯಂತೆ ಗುಲಬರ್ಗಾ ಜಿಲ್ಲೆಯಲ್ಲಿ 7 ತಾಲ್ಲೂಕುಗಳು, 14 ನಾಡಕಛೇರಿಗಳು 32 ಹೋಬಳಿಗಳು, 220 ಗ್ರಾಮ ಪಂಚಾಯಿತಿಗಳು, 918 ಗ್ರಾಮಗಳು, 10 ಪುರಸಭೆ/ನಗರಸಭೆಗಳಿವೆ. ಯಾದಗಿರಿ ಪ್ರತ್ಯೇಕವಾಗುವ ಮೊದಲು 16,224 ಚ.ಕಿ.ಮೀ. ವಿಸ್ತೀರ್ಣ ಹೊಂದಿತ್ತು. ಪ್ರತ್ಯೇಕವಾದ ಅನಂತರ 11,001 ಚ.ಕಿ.ಮೀ. ವಿಸ್ತೀರ್ಣವಿದೆ. ಇನ್ನು ತಾಲ್ಲೂಕುವಾರು ವಿಸ್ತೀರ್ಣ ಸಮೀಕ್ಷೆಯಂತೆ (2011-12), ಅಫಜಲಪುರ - 1304.74 ಚ.ಕಿ.ಮೀ., ಆಳಂದ - 1734.07 ಚ.ಕಿ.ಮೀ.,ಚಿಂಚೋಳಿ 1552.22 ಚ.ಕಿ.ಮೀ., ಚಿತ್ತಾಪುರ 1767.55 ಚ.ಕಿ.ಮೀ., ಗುಲಬರ್ಗಾ 1734.53 ಚ.ಕಿ.ಮೀ., ಜೇವರ್ಗಿ 1825.71 ಚ.ಕಿ.ಮೀ., ಸೇಡಂ - 1036 ಚ.ಕಿ.ಮೀ., ವಿಸ್ತೀರ್ಣ ಹೊಂದಿವೆ. ತಾಲ್ಲೂಕುವಾರು ವಿಸ್ತೀರ್ಣದಲ್ಲಿ ಜೇವರ್ಗಿಯೇ ದೊಡ್ಡದಾಗಿದೆ. ಅಂತೆಯೇ ಸೇಡಂ ಅತೀ ಚಿಕ್ಕ ತಾಲ್ಲೂಕಾಗಿದೆ.

ಮೇಲ್ಮೈಲಕ್ಷಣ : ಕರ್ನಾಟಕದ ಪ್ರಾಕೃತಿಕ ವಿಭಾಗಗಳಲ್ಲಿ ಗುಲ್ಬರ್ಗಾ ಉತ್ತರ ಮೈದಾನ ಪ್ರದೇಶಕ್ಕೆ ಸೇರುತ್ತದೆ. ಇದು ಪ್ರಸ್ಥಭೂಮಿಯ ಭಾಗವಾಗಿದ್ದು ಬಸಾಲ್ಟ್ ಶಿಲೆಯಿಂದ ರಚನೆಯಾಗಿದೆ ಮತ್ತು ಕಪ್ಪು ಮಣ್ಣಿನಿಂದ ಆವೃತವಾಗಿದೆ. ವಿಶೇಷ ಎಂದರೆ ಈ ಶಿಲೆಗಳು ಜ್ವಾಲಾಮುಖಿ ಜನ್ಯವಾಗಿವೆ. ಕಲ್ಲಡ್ಡಿ ಶಿಲೆಗಳು ಹೆಚ್ಚಾಗಿ ಕಂಡುಬರುತ್ತವೆ. ಜಿಲ್ಲೆಯಲ್ಲಿ ಭೀಮ, ಬೆಣ್ಣೆತೊರೆ, ಕಾಗಿನ, ಬೋರಿ, ಮುಲ್ಲಾಮುರಿ ಮತ್ತು ಕೃಷ್ಣ ನದಿಗಳು ಹರಿಯುತ್ತವೆ. ಕೃಷ್ಣ ನದಿಯು ಸು. 160 ಕಿ.ಮೀ. ಈ ಜಿಲ್ಲೆಯ ಗಡಿಯಾಗಿ ಹರಿಯುತ್ತದೆ. ಸುರಪುರದ ನಾರಾಯಣಪುರದ ಬಳಿ 66 ಮೀ. ಎತ್ತರದ ಜಲಪಾತವನ್ನು ಸೃಷ್ಟಿಸಿದೆ. ಭೀಮನದಿಯು 215 ಕಿ.ಮೀ. ಹರಿದು ಕೃಷ್ಣನದಿಯನ್ನು ಸೇರುತ್ತದೆ. ಗುಲಬರ್ಗಾವು ವಿಶೇಷವಾದ ಬೆಟ್ಟಗುಡ್ಡಗಳನ್ನು ಹೊಂದಿಲ್ಲ. ವಿಸ್ತಾರವಾದ ಉಬ್ಬು - ತಗ್ಗುಗಳನ್ನು, ಎತ್ತರವಾದ ಶಿಖರ, ಪರ್ವತಗಳನ್ನು ಹೊಂದಿಲ್ಲ. ಇದೊಂದು ಮೈದಾನ ಪ್ರದೇಶವೆಂದು ಹೇಳಬಹುದು.

ಹವಾಗುಣ : ಗುಲಬರ್ಗಾ ಸಾಮಾನ್ಯವಾಗಿ ಶುಷ್ಕ ವಾಯುಗುಣವನ್ನು ಹೊಂದಿದೆ. ಫೆಬ್ರವರಿ-ಜೂನ್ ಅವಧಿಯಲ್ಲಿ ಬೇಸಗೆಕಾಲ, ಜೂನ್‌ನಿಂದ-ಸೆಪ್ಟೆಂಬರ್‌ವರೆಗೆ ಮಳೆಗಾಲ, ಡಿಸೆಂಬರ್-ಫೆಬ್ರವರಿವರೆಗೆ ಚಳಿಗಾಲವಿದೆ. ಇದು ಸಂಪೂರ್ಣವಾಗಿ ಉಷ್ಣವಲಯದಲ್ಲಿಯೇ ಇರುವುದರಿಂದ ಅತಿ ಹೆಚ್ಚು ಉಷ್ಣಾಂಶವಿದೆ. ಗರಿಷ್ಠ ಉಷ್ಣಾಂಶ 40.6^{o}ಸೆ.-45^{o}ಸೆ.ವರೆಗೂ ದಾಖಲಾಗುತ್ತದೆ. ಅಂತೆಯೇ ಅತೀ ಕಡಿಮೆ ಉಷ್ಣಾಂಶವೆಂದರೆ 5.6^{o}ಸೆ. ಆಗಿದೆ. ಸಮುದ್ರಪಟ್ಟದಿಂದ ಸಾಮಾನ್ಯವಾಗಿ 305-609 ಮೀ. ಎತ್ತರದಲ್ಲಿದೆ. ಮೇ ತಿಂಗಳಲ್ಲಿ ಅತಿ ಹೆಚ್ಚು ಉಷ್ಣಾಂಶ ದಾಖಲಾದರೆ, ಡಿಸೆಂಬರ್-ಜನವರಿ ತಿಂಗಳಲ್ಲಿ ಕಡಿಮೆ ಉಷ್ಣಾಂಶ ಕಂಡುಬರುತ್ತದೆ. ಗುಲ್ಬರ್ಗದಲ್ಲಿ ಪರ್ವತ, ಬೆಟ್ಟಗುಡ್ಡ, ಶಿಖರ, ಬೃಹತ್ ಪ್ರಮಾಣದ ಕಾಡು ಮುಂತಾದವುಗಳಿಲ್ಲದ ಕಾರಣ ಅಧಿಕ ಉಷ್ಣಾಂಶ ಕಂಡುಬರುತ್ತದೆ. ಅಲ್ಲದೆ ಕರ್ನಾಟಕದಲ್ಲಿ ಅತಿ ಹೆಚ್ಚು ಬರಗಾಲಕ್ಕೆ ತುತ್ತಾಗುವ ಜಿಲ್ಲೆಗಳಲ್ಲಿ ಗುಲ್ಬರ್ಗಾವೂ ಸೇರಿದೆ.

ಮಳೆ : ಗುಲ್ಬರ್ಗಾ ಜಿಲ್ಲೆಯು ನೈಋತ್ಯ ಮಾನ್‌ಸೂನ್ ಮಾರುತಗಳಿಂದ ಮಳೆಯನ್ನು ಪಡೆಯುತ್ತಿದೆ. ಈ ಮಾರುತಗಳು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಳೆಯನ್ನು ಸುರಿಸುತ್ತವೆ. ಅಕ್ಟೋಬರ್‌ನಿಂದ ನವೆಂಬರ್‌ವರೆಗಿನ ಮಾನ್‌ಸೂನ್ ಮಾರುತಗಳ ನಿರ್ಗಮನ ಕಾಲದಲ್ಲಿ ಕೆಲವು ತಾಲ್ಲೂಕುಗಳು ಮಾತ್ರ ಮಳೆಯನ್ನು ಪಡೆಯುತ್ತವೆ. ಒಟ್ಟಾರೆಯಾಗಿ ಇದೊಂದು ಮಳೆ ನೆರಳಿನ ಪ್ರದೇಶ. ವಾರ್ಷಿಕ ಮಳೆಯ ಪ್ರಮಾಣ 700 ಮಿ.ಮೀಗಳಿಗಿಂತಲೂ ಕಡಿಮೆಯಿದೆ. ಆದರೆ ವಾಡಿಕೆ ಮಳೆಯ ಪ್ರಮಾಣ 840 ಮಿ.ಮೀ. ಜಿಲ್ಲೆಯ ಉತ್ತರದ ಭಾಗ ಸಾಧಾರಣ ಮಳೆ ಪಡೆದರೆ, ದಕ್ಷಿಣದ ಭಾಗ ಅತೀ ಕಡಿಮೆ ಮಳೆ ಪಡೆಯುತ್ತಿದೆ. ವಾರ್ಷಿಕ ವಾರು ಸರಾಸರಿ ಮಳೆ ಪ್ರಮಾಣ ಈ ರೀತಿ ಇದೆ.

2001-698.0 ಮಿ.ಮೀ. 2005-856.0 ಮಿ.ಮೀ. 2009-904.0 ಮಿ.ಮೀ. 2010-987.0 ಮಿ.ಮೀ. 2011-670 ಮಿ.ಮೀ. ಮಳೆ ಆಗಿದೆ. ವಾರ್ಷಿಕವಾಗಿ ಕೇವಲ 46 ದಿನಗಳು ಮಾತ್ರ ಸರಾಸರಿ ಮಳೆ ದಿನಗಳಾಗಿವೆ. ಅಫಜಲಪುರ - 43, ಆಳಂದ - 7, ಚಿಂಚೋಳಿ - 49, ಚಿತ್ತಪೂರ-47, ಗುಲ್ಬರ್ಗಾ-48, ಜೇವರ್ಗಿ - 43, ಸೇಡಂ - 49, ಸರಾಸರಿ ಮಳೆದಿನಗಳನ್ನು ಹೊಂದಿವೆ.

ತಾಲ್ಲೂಕುವಾರು ಮಳೆ ವಿವರ ಇಂತಿದೆ. (ಮಿ.ಮೀ.ಗಳಲ್ಲಿ)

ತಾಲ್ಲೂಕು	2001	2005	2007	2009	2011
ಅಫಜಲಪುರ	485	408	674	899	483
ಆಳಂದ	705	653	557	1352	722
ಚಿಂಚೋಳಿ	670	683	1029	706	986
ಚಿತ್ತಾಪೂರ	711	753	828	788	598
ಗುಲಬರ್ಗಾ	692	1082	689	678	706
ಜೇವರ್ಗಿ	718	712	762	936	397
ಸೇಡಂ	905	859	973	974	802

ಗುಲ್ಬರ್ಗ ಜಿಲ್ಲೆಯು ಈ ಮೇಲಿನಂತೆ ಅಸಮಾನವಾದ ಮಳೆ ಹಂಚಿಕೆ ಹೊಂದಿದೆ. ಈ ಕಾರಣದಿಂದಾಗಿಯೇ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದೆ.

ಕೃಷಿ ಭೂಮಿಯ ವಿಸ್ತೀರ್ಣ : ಕರ್ನಾಟಕದಲ್ಲಿ ಬೆಳಗಾವಿಯ ಅನಂತರದಲ್ಲಿ ಹೆಚ್ಚು ಭೂವಿಸ್ತೀರ್ಣವನ್ನೊಂದಿದೆ. ಇದರ ಒಟ್ಟು ಭೌಗೋಳಿಕ ವಿಸ್ತೀರ್ಣ 11,001 ಚ.ಕಿ.ಮೀ.ಗಳು. ಇದರಲ್ಲಿ ಅರಣ್ಯ - 35316 ಹೆ, ವ್ಯವಸಾಯೇತರ ಭೂಮಿ - 38420 ಹೆ, ಬಂಜರುಭೂಮಿ - 35113 ಹೆ, ಸಾಗುವಳಿಗೆ ಲಭ್ಯವಿದ್ದು ಸಾಗುವಳಿ ಮಾಡದಿರುವ ಭೂಮಿ - 36403 ಹೆ, ಇದರಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು - 9417 ಹೆ, ಖಾಯಂ ಗೋಮಾಳ 25855 ಹೆ, ವೃಕ್ಷ ಮತ್ತು ತೋಪುಗಳು - ಈ ಭೂಮಿಯೊಳಗೆ ಸೇರಿವೆ.

ತಾಲ್ಲೂಕುವಾರು ಕೃಷಿ ಭೂಮಿ ಇಂತಿದೆ (ಹೆಕ್ಟೇರುಗಳಲ್ಲಿ) : ಅಫಜಲಪುರ - 130479 ಹೆ, ಆಳಂದ - 173417 ಹೆ, ಚಿಂಚೋಳಿ - 155854 ಹೆ, ಚಿತ್ತಾಪೂರ - 176447 ಹೆ, ಗುಲಬರ್ಗಾ - 173165 ಹೆ, ಜೇವರ್ಗಿ - 182313 ಹೆ, ಸೇಡಂ - 102445 ಹೆ, ಈ ಪ್ರಕಾರ ಜೇವರ್ಗಿ ತಾಲ್ಲೂಕು ಅತಿ ಹೆಚ್ಚಿನ ಕೃಷಿ ಭೂಮಿಯನ್ನೊಂದಿದೆ.

ಭೂಹಿಡುವಳಿದಾರರು : 2011-12ರ ಸಮೀಕ್ಷೆಯಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು 395497 ಭೂಹಿಡುವಳಿದಾರರಿದ್ದರು. 972506 ಬಿತ್ತನೆ ಮಾಡಲಾಗಿತ್ತು. ಒಟ್ಟು ಭೂಹಿಡುವಳಿದಾರರಲ್ಲಿ ಪುರುಷರು - 324306, ಮಹಿಳೆಯರು - 70921, ಸಂಘಸಂಸ್ಥೆಗಳು - 270 ಇವೆ. ಚಿಂಚೋಳಿ ಜಿಲ್ಲೆಯು ಅತಿ ಹೆಚ್ಚು ಭೂಹಿಡುವಳಿದಾರರನ್ನು ಹೊಂದಿದೆ. ಇವರಲ್ಲಿ 3920 ಪರಿಶಿಷ್ಟ ಪಂಗಡಕ್ಕೆ ಸೇರಿದರೆ 70203 ಪರಿಶಿಷ್ಟ ಜಾತಿಗೆ 7200 - ಅತೀ ದೊಡ್ಡ ಭೂಹಿಡುವಳಿದಾರು, 47329 - ಮಧ್ಯಮ ಭೂಹಿಡುವಳಿದಾರರು, 321104 - ಇತರೆ ಭೂಹಿಡುವಳಿದಾರರಿದ್ದಾರೆ. ಅಂತೆಯೇ ತಾಲ್ಲೂಕು ಭೂಹಿಡುವಳಿದಾರರ ಪಟ್ಟಿ ಇಂತಿದೆ. (ಸಾವಿರಗಳಲ್ಲಿ)

ಅಫಜಲಪುರ - 47640, ಆಳಂದ - 68471, ಚಿಂಚೋಳಿ - 48611, ಚಿತ್ತಾಪುರ - 62638, ಗುಲಬರ್ಗಾ - 58739, ಸೇಡಂ - 41370, ಜೇವರ್ಗಿ - 68028, ಇವರಲ್ಲಿ ಅತಿ ಸಣ್ಣ ಭೂಹಿಡುವಳಿದಾರರು ಸೇರಿಕೊಂಡಿದ್ದಾರೆ.

ಮಣ್ಣು : ಗುಲಬರ್ಗಾ ಜಿಲ್ಲೆಯಾದ್ಯಂತ ಪ್ರಧಾನವಾಗಿ ಕಪ್ಪುಮಣ್ಣು ಕಂಡುಬರುತ್ತದೆ. ಕೆಲವೆಡೆ ಜಂಬಿಟ್ಟಿಗೆ ಮಣ್ಣು ವ್ಯಾಪಿಸಿದೆ. ಜಿಲ್ಲೆಯಲ್ಲಿ ಕಂಡುಬರುವ ಕಪ್ಪುಮಣ್ಣು ಮೂರು ವಿಧದಲ್ಲಿ ಹರಡಿಕೊಂಡಿದೆ.

1. ಆಳವಿಲ್ಲದ ಕಪ್ಪು ಮಣ್ಣು, 2. ಮಧ್ಯಮ ಕಪ್ಪು ಮಣ್ಣು, 3, ಕಡುಕಪ್ಪು ಮಣ್ಣು.

ಆಳವಿಲ್ಲದ ಕಪ್ಪು ಮಣ್ಣು : ಜ್ವಾಲಾಮುಖಿಯಿಂದ ಜನಿತವಾದ ಮಣ್ಣು. ಇದರ ಮಂದ ಕಡಿಮೆ, ತಿಳಿ ಹಸುರು, ಅಚ್ಚ ಕೆಂಪು ಮಿಶ್ರಿತ ಕಂದುಬಣ್ಣ ಹೊಂದಿದೆ. ಜೊತೆಗೆ ಸುಣ್ಣ ಮಿಶ್ರಿತ ಗಡಸು ಕಪ್ಪು ಜೇಡಿಯೂ ಇದೆ. ಸಾಧಾರಣ ಪ್ರಮಾಣದಲ್ಲಿ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ. ಇದರಿಂದಾಗಿಯೇ ಮಳೆ ಕಡಿಮೆ ಬಿದ್ದರೂ ಜೋಳ, ಸಜ್ಜೆ, ಹುರುಳಿ, ಮುಂತಾದ ತೃಣ ಧಾನ್ಯಗಳನ್ನು ಬೆಳೆಯಲಾಗುತ್ತಿದೆ. ಇನ್ನು ನೀರಾವರಿ ಸೌಲಭ್ಯ ಪಡೆದಿರುವ ಈ ಬಗೆಯ ಮಣ್ಣಿನಲ್ಲಿ ಬತ್ತ, ರಾಗಿ, ಜೋಳ, ಬೆಳೆಯುತ್ತಾರೆ.

ಮಧ್ಯಮ ಕಪ್ಪು ಮಣ್ಣು : ಇದು ಪದರು ಸುಣ್ಣಕಲ್ಲು ಮತ್ತು ಜ್ವಾಲಾಮುಖಿ ಜನಿತ ಶಿಲೆಯಿಂದಾದ ಮಣ್ಣು. ಸಾಧಾರಣ ಆಳ ಹೊಂದಿದೆ. ಸಾಧಾರಣ ಫಲವತ್ತತೆ ಮತ್ತು ಬೇಗ ಬಿರುಕು ಬಿಡುತ್ತದೆ. ಕಪ್ಪು ಮಿಶ್ರಿತ ಕಂದು ಬಣ್ಣ ಪಡೆದಿದೆ. ಈ ಮಣ್ಣಿನಲ್ಲಿ ಖುಷ್ಕಿ ಬೆಳೆಗಳಾದ ತೊಗರಿ, ಕಡಲೆ, ಮೆಣಸಿನಕಾಯಿ, ಮುಸುಕಿನಜೋಳ, ನೆಲಗಡಲೆ, ಕುಸುಬೆ, ಹತ್ತಿ, ಗೋಧಿ, ಜೋಳ, ಮತ್ತು ತೃಣ ಧಾನ್ಯಗಳನ್ನು ಬೆಳೆಯಲಾಗುತ್ತದೆ. ನೀರಾವರಿ ಸೌಲಭ್ಯವಿರುವ ಪ್ರದೇಶದಲ್ಲಿ ಬತ್ತ, ಕಬ್ಬು, ಈರುಳ್ಳಿ, ತಂಬಾಕು ಮತ್ತು ಹತ್ತಿಯನ್ನು ಬೆಳೆಯಲಾಗುತ್ತದೆ.

ಕಡುಕಪ್ಪುಮಣ್ಣು : ಕಂದು ಮಿಶ್ರಿತ ಬೂದಿ ಬಣ್ಣ ಮತ್ತು ಅಚ್ಚ ಕಪ್ಪು ಬಣ್ಣವುಳ್ಳದ್ದು. ಇದರಲ್ಲಿ ಹೆಚ್ಚಿನ ಪ್ರಮಾಣ ಜೇಡಿಮಿಶ್ರಿತಗೊಂಡಿದೆ. ಹೆಚ್ಚು ಗಡಸುತನ ಹೊಂದಿದ್ದು ಸುಲಭವಾಗಿ ಸವೆತಕ್ಕೆ ಒಳಗಾಗುವುದಿಲ್ಲ. ಈ ಮಣ್ಣಿನಲ್ಲಿ ಪ್ರಧಾನವಾಗಿ ತೊಗರಿ, ಕಡಲೆ, ಶೇಂಗಾ, ಹತ್ತಿ, ಈರುಳ್ಳಿ, ಗೋಧಿಯನ್ನು ಬೆಳೆಯಲಾಗುತ್ತದೆ.

ಜಂಬಿಟ್ಟಿಗೆ ಮಣ್ಣು : ಅತಿ ಪುರಾತನವಾದ ಜಂಬಿಟ್ಟಿಗೆ ಮಣ್ಣು ಕೆಲೆವೆಡೆ ಕಂಡುಬರುತ್ತದೆ. ಹೆಚ್ಚು ಫಲವತ್ತೆ ಇಲ್ಲದಿದ್ದರೂ ಜೋಳ, ನೆಲಗಡಲೆ, ಕುಸುಬೆ, ಅಗಸೆ, ರಾಗಿ ಮೊದಲಾದವುಗಳನ್ನು ಬೆಳೆಯಲಾಗಿದೆ. ಒಟ್ಟಿನಲ್ಲಿ ಗುಲಾಬರ್ಗಾ ಜಿಲ್ಲೆಯಲ್ಲಿ ಹರಡಿರುವ ಕಪ್ಪು ಮಣ್ಣು ಫಲವತ್ತಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಿಡಿದಿಡುತ್ತದೆ. ಈ ಕಾರಣದಿಂದಾಗಿಯೇ ಕಡಿಮೆ ಮಳೆ ಪಡೆದರೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಹಾರಧಾನ್ಯಗಳ ಉತ್ಪಾದನೆ ಸಾಧ್ಯವಾಗಿದೆ.

ನೀರಾವರಿ : ಗುಲ್ಬರ್ಗಾ ಜಿಲ್ಲೆಯು ಕಾಲುವೆ ನೀರಾವರಿ, ಬಾವಿ ನೀರಾವರಿ, ಕೆರೆ ನೀರಾವರಿ, ಏತ ನೀರಾವರಿ, ಮೊದಲಾದ ನೀರಾವರಿ ಪದ್ಧತಿಗಳನ್ನು ಅನುಸರಿಸುತ್ತಿದೆ. ಜಿಲ್ಲೆಯು ಕೇವಲ ನೈಋತ್ಯ ಮಾನ್‌ಸೂನ್ ಮಾರುತಗಳ ಅವಧಿಯಲ್ಲಿ ಮಾತ್ರ ಹೆಚ್ಚು ಮಳೆ ಪಡೆಯುವುದರಿಂದ ನೀರಾವರಿ ಬಹುಮುಖ್ಯವಾಗಿದೆ. 2011-12ರ ವರದಿಯಂತೆ ಕಾಲುವೆಗಳಿಂದ - 26615 ಹೆ. ಕೆರೆಗಳಿಂದ - 689 ಹೆ, ಬಾವಿಗಳಿಂದ - 34087 ಹೆ. ಕೊಳವೆಬಾವಿಗಳಿಂದ - 26649 ಹೆ, ಏತನೀರಾವರಿಯಿಂದ 2974 ಹೆ. ಇತರ ಮೂಲಗಳಿಂದ 1337 ಹೆ. ನಿವ್ವಳ ನೀರಾವರಿ ಪ್ರದೇಶವನ್ನು ಹೊಂದಿದೆ. ಜಿಲ್ಲೆಯಲ್ಲಿ 131 ಕಿ.ಮೀ. ಉದ್ದದ

ಕಾಲುವೆ ಇದೆ, 1871 ಕೊಳವೆ ಬಾವಿಗಳಿದ್ದು ಪ್ರಮುಖ ನೀರಾವರಿ ಮೂಲಗಳೆನಿಸಿವೆ. ಕೃಷ್ಣ ಮೇಲ್ದಂಡೆ ಯೋಜನೆ, ಬೆಣ್ಣೆ ತೊರೆ ಯೋಜನೆಗಳು ಪ್ರಮುಖ ನೀರಾವರಿ ಯೋಜನೆಗಳಾಗಿವೆ. ಕೃಷ್ಣ ಮತ್ತು ಇದರ ಉಪನದಿಯಾದ ಭೀಮನದಿ ಬಹುಪಾಲು ಪ್ರದೇಶಕ್ಕೆ ನೀರುಣಿಸುತ್ತಿವೆ. ಈ ಜಿಲ್ಲೆಯಲ್ಲಿ ನೀರಾವರಿಯನ್ನು ವಿಸ್ತರಿಸುವ ಸಾಕಷ್ಟು ಅವಕಾಶಗಳಿದ್ದು, ಹೊಸ ಹೊಸ ಯೋಜನೆಗಳು ಸರ್ಕಾರ ಹಮ್ಮಿಕೊಂಡಿದೆ.

ವ್ಯವಸಾಯ : ಗುಲ್ಬರ್ಗಾ ಜಿಲ್ಲೆಯಾದ್ಯಂತ ಕೃಷಿ ಪ್ರಮುಖ ಉದ್ಯೋಗ. ಶೇ. 70 ಕ್ಕೂ ಹೆಚ್ಚು ಜನ ಕೃಷಿಯನ್ನು ಮೂಲ ಕಸುಬನ್ನಾಗಿಸಿಕೊಂಡಿದ್ದಾರೆ. ಜಿಲ್ಲೆ ಯಾದಗಿರಿಯನ್ನು ಒಳಗೊಂಡಂತೆ ರಾಜ್ಯದಲ್ಲೆ ಅತೀ ಹೆಚ್ಚಿನ ಬಿತ್ತನೆ ಪ್ರದೇಶವನ್ನೊಂದಿದೆ. 2011-12ರ ಸಮೀಕ್ಷೆಯ ವರದಿಯಂತೆ 972506 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗಿತ್ತು.

ಕೃಷಿ ಪ್ರದೇಶಗಳು : ಬೆಳೆಗಳ ನಿಗದಿತ ವಿಶೇಷ ಮತ್ತು ವೈಶಿಷ್ಟ್ಯ ಪರಿಸ್ಥಿತಿಗಳ ಗುಣಧರ್ಮಗಳನ್ನೊಳಗೊಂಡ ಒಂದು ಸರೂಪಿ ಪ್ರದೇಶವನ್ನೇ 'ಕೃಷಿ ಪ್ರದೇಶ' ಎನ್ನುವರು. ಇಂತಹ ಸರೂಪಿ ಪ್ರದೇಶಗಳು ಕರ್ನಾಟಕದಲ್ಲಿ ಹತ್ತು ಇವೆ. ಈ ಹತ್ತು ವಲಯಗಳಲ್ಲಿ ಗುಲ್ಬರ್ಗಾ ಜಿಲ್ಲೆಯಾದ್ಯಂತ ಎರಡು ಪ್ರದೇಶಗಳು ಕಂಡುಬರುತ್ತವೆ.

1. ಈಶಾನ್ಯ ಸ್ಥಿತ್ಯಂತರ ಪ್ರದೇಶ
2. ಈಶಾನ್ಯ ಒಣ ಪ್ರದೇಶ

ಈಶಾನ್ಯ ಸ್ಥಿತ್ಯಂತರ ವಲಯ ವ್ಯಾಪ್ತಿಗೆ ಆಳಂದ, ಚಂಚೋಳಿ ತಾಲ್ಲೂಕುಗಳು ಸೇರಿವೆ. ಈ ಪ್ರದೇಶ ಸಾಧಾರಣ ಕಪ್ಪುಮಣ್ಣು ಹೊಂದಿದ್ದು, ಹೆಚ್ಚಿನ ಪ್ರಮಾಣದಲ್ಲಿ ಮುಂಗಾರು ಮಳೆಯನ್ನು ಪಡೆಯುತ್ತಿದೆ. ಸರಾಸರಿ ಉಷ್ಣಾಂಶ ಹೊಂದಿದೆ. ನೀರಾವರಿ ಸೌಲಭ್ಯದಿಂದಾಗಿ ಎಣ್ಣೆಕಾಳು, ಗೋಧಿ, ಜೋಳ, ಶೇಂಗಾ, ಹತ್ತಿ, ಕಬ್ಬು ಬೆಳೆಯುತ್ತಾರೆ.

ಈಶಾನ್ಯ ಒಣಪ್ರದೇಶದ ವ್ಯಾಪ್ತಿಗೆ ಗುಲ್ಬರ್ಗಾದ ಅಫಜಲಪುರ, ಚಿತ್ತಾಪುರ, ಸೇಡಂ, ಜೇವರ್ಗಿಗಳು ಸೇರುತ್ತವೆ. ಸಮುದ್ರಮಟ್ಟದಿಂದ 300-450 ಕಿ.ಮೀ. ಎತ್ತರ ಹೊಂದಿದೆ. ಹೆಚ್ಚಿನ ಪ್ರಮಾಣದಲ್ಲಿ ಹಿಂಗಾರು ಮಳೆ ಪಡೆಯುತ್ತದೆ. ಜೋಳ, ಗೋಧಿ, ಸಜ್ಜೆ, ಬತ್ತವನ್ನು ನೀರಾವರಿ ಸೌಲಭ್ಯದಿಂದ ಬೆಳೆಯಲಾಗುತ್ತಿದೆ.

ಕೃಷಿ ಬೆಳೆಗಳು : ಏಕದಳ ಧಾನ್ಯಗಳು : ಬತ್ತ, ಜೋಳ, ಮುಸುಕಿನ ಜೋಳ, ರಾಗಿ, ಗೋಧಿ ಇತರೆ ಕೆಲವು ಏಕದಳ ಧಾನ್ಯಗಳನ್ನು ಗುಲ್ಬರ್ಗಾದ ತಾಲ್ಲೂಕುಗಳಲ್ಲಿ ಬೆಳೆಯಲಾಗುತ್ತಿದೆ. 2011-12ರ ವರದಿಯಂತೆ, ಬತ್ತ - 3963 ಹೆ. ಜೋಳ - 207898 ಹೆ. ಸಜ್ಜೆ - 209442 ಹೆ. ಮುಸುಕಿನ ಜೋಳ - 6959 ಹೆ. ಗೋಧಿ - 16516 ಹೆ. ಇತರೆ ತೃಣಧಾನ್ಯಗಳು - 25 ಹೆ. ಒಟ್ಟು 256303 ಹೆಕ್ಟೇರ್‌ಗಳಲ್ಲಿ ಏಕದಳ ಧಾನ್ಯಗಳನ್ನು ಬಿತ್ತನೆ ಮಾಡಲಾಗಿತ್ತು.

ಬತ್ತದ ಬಿತ್ತನೆಯಲ್ಲಿ ಜೇವರ್ಗಿಯು ಪ್ರಥಮ ಸ್ಥಾನದಲ್ಲಿದ್ದರೆ, ಅಫಜಲಪುರದ ಕೇವಲ 67 ಹೆಕ್ಟೇರ್ಸ್‌ಗಳಲ್ಲಿ ಮಾತ್ರ ಬತ್ತ ಬೆಳೆಯಲಾಗಿದೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಅತಿ ಕಡಿಮೆ ಬತ್ತವನ್ನು ಉತ್ಪಾದಿಸುತ್ತಿದೆ.

ಜೋಳ : ಗುಲ್ಬರ್ಗಾ ಜಿಲ್ಲೆಯು ಜೋಳ ಬೆಳೆಯುವ ಪ್ರಮುಖ ಪ್ರದೇಶವಾಗಿದೆ. ಇದು ವಿಸ್ತೀರ್ಣ ಮತ್ತು ಉತ್ಪಾದನೆ ಎರಡರಲ್ಲೂ ಪ್ರಮುಖ ಸ್ಥಾನ ಪಡೆದಿದೆ. ಚಿತ್ತಾಪುರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜೋಳ ಬೆಳೆಯಲಾಗಿದೆ. ಬೀಜ ಬಿತ್ತನೆ ವಿಧಾನದಿಂದ ಜೋಳ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಹಿಂಗಾರು ಮತ್ತು ಮುಂಗಾರು ಎರಡು ಹಂಗಾಮುಗಳಲ್ಲಿ ಬೆಳೆಯಲಾಗುತ್ತಿದೆ. ಮಳೆ ಕಡಿಮೆ ಇರುವ ಕಾರಣದಿಂದ ಇಬ್ಬನಿ ಜೋಳದ ತಳಿಯನ್ನು ಹೆಚ್ಚು ಬೆಳೆಯಲಾಗುತ್ತಿದೆ. ಆಳಂದ, ಜೇವರ್ಗಿ, ಚಿತ್ತಾಪುರ, ಅಫಜಲಪುರ ತಾಲ್ಲೂಕುಗಳು ಜೋಳ ಉತ್ಪಾದಿಸುವ ಪ್ರಮುಖ ಪ್ರದೇಶಗಳಾಗಿವೆ.

ಸಜ್ಜೆಯ ಉತ್ಪಾದನೆಯಲ್ಲಿ ಗುಲ್ಬರ್ಗಾದ ಆಳಂದ ತಾಲ್ಲೂಕಿಗೆ ಉನ್ನತ ಸ್ಥಾನವಿದೆ. ಸುಮಾರು 7175 ಹೆಕ್ಟೇರ್‌ಗಳಲ್ಲಿ ಸಜ್ಜೆಯನ್ನು ಬೆಳೆಯಲಾಗುತ್ತಿದೆ. ಕಪ್ಪು ಮಣ್ಣು ಮತ್ತು ಶುಷ್ಕ ವಾಯುಗುಣ ಈ ಬೆಳೆಗೆ ಹಿತಕರವಾಗಿರುವುದರಿಂದ ಅಲ್ಪಾವಧಿ ಬೆಳೆಯಾಗಿ ಗುಲ್ಬರ್ಗಾದಲ್ಲಿ ಬೆಳೆಯಲಾಗುತ್ತಿದೆ.

ಮುಸುಕಿನ ಜೋಳದ ಉತ್ಪಾದನೆಯನ್ನು ಸಾಧಾರಣ ಪ್ರಮಾಣದಲ್ಲಿ ಮಾಡುತ್ತಿದೆ. ಜೇವರ್ಗಿ ತಾಲ್ಲೂಕಿನಲ್ಲಿ ಸುಮಾರು 2347 ಹೆ.ಗಳಲ್ಲಿ ಮುಸುಕಿನ ಜೋಳದ ಉತ್ಪಾದನೆ ಆಗುತ್ತಿದೆ.

ಪ್ರಮುಖ ಆಹಾರ ಬೆಳೆಯಾದ ಗೋಧಿಯ ಉತ್ಪಾದನೆಯು ಈ ಜಿಲ್ಲೆಯಲ್ಲಿದೆ. ಜೇವರ್ಗಿ ತಾಲ್ಲೂಕು ಹೆಚ್ಚಿನ ಪ್ರದೇಶದಲ್ಲಿ ಗೋಧಿಯನ್ನು ಉತ್ಪಾದಿಸುತ್ತಿದೆ.

ದ್ವಿದಳ ಧಾನ್ಯಗಳು : ಪ್ರಮುಖ ದ್ವಿದಳ ಧಾನ್ಯಗಳಾದ ತೊಗರಿ, ಹುರುಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ ಮುಂತಾದವುಗಳನ್ನು ಬೆಳೆಯಲಾಗುತ್ತಿದೆ.

ತೊಗರಿ : ಭಾರತದಲ್ಲಿ ತೊಗರಿ ಉತ್ಪಾದನೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನ ಪಡೆದಿದೆ. ಕರ್ನಾಟಕದಲ್ಲಿ ಗುಲ್ಬರ್ಗಾ ಜಿಲ್ಲೆಗೆ ಅಗ್ರಸ್ಥಾನ. ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳು ತೊಗರಿಯ ಒಟ್ಟು ಉತ್ಪಾದನೆಯಲ್ಲಿ ಶೇ. 63 ರಷ್ಟನ್ನು ಬೆಳೆಯುತ್ತಿವೆ. ಗುಲ್ಬರ್ಗಾವನ್ನು 'ತೊಗರಿಯ ಕಣಜ' ಎಂದೇ ಕರೆಯಲಾಗುತ್ತಿದೆ. ಮೇ - ಜುಲೈ ಅವಧಿಯಲ್ಲಿ ಬಿತ್ತನೆ ಮಾಡಿ ಡಿಸೆಂಬರ್ - ಮಾರ್ಚ್ ಅವಧಿಯಲ್ಲಿ ಕಟಾವು ಮಾಡುತ್ತಾರೆ. ಇದನ್ನು ಮಳೆಯಾಶ್ರಿತ ಬೆಳೆಯಾಗಿ, ನೀರಾವರಿ ಆಧಾರಿತ ಬೆಳೆಯಾಗಿ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಮಿಶ್ರ ಬೆಳೆಯಾಗಿಯೂ ಬೆಳೆಯುತ್ತಿದ್ದಾರೆ. ಮುಖ್ಯವಾಗಿ ಇದು ಉಷ್ಣವಲಯದ ಬೆಳೆ. 2011-12ರ ವರದಿಯಂತೆ ಸುಮಾರು 370523 ಹೆ.ಗಳಲ್ಲಿ ತೊಗರಿ ಬೆಳೆಯಲಾಗುತ್ತಿದೆ. ಜೇವರ್ಗಿ, ಗುಲ್ಬರ್ಗಾ, ಚಿತ್ತಾಪುರ, ಅಫಜಲಪುರ ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದ ತೊಗರಿ ಉತ್ಪಾದಿಸುತ್ತಿವೆ.

ಉದ್ದು : ತೊಗರಿಯನ್ನು ಬಿಟ್ಟರೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವ ಪ್ರಮುಖ ದ್ವಿದಳ ಧಾನ್ಯ. ಇದನ್ನು ಹೆಚ್ಚು ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ. 2011-12ರಲ್ಲಿ ಸುಮಾರು 30220 ಹೆ.ಗಳಲ್ಲಿ ಉದ್ದನ್ನು ಬಿತ್ತನೆ ಮಾಡಲಾಗಿತ್ತು.

ಕಡಲೆ : ಅಕ್ಟೋಬರ್ - ನವೆಂಬರ್ ತಿಂಗಳಲ್ಲಿ ಬಿತ್ತನೆ ಮಾಡಿ, ಫೆಬ್ರವರಿ - ಮಾರ್ಚಿನಲ್ಲಿ ಕಟಾವು ಮಾಡುವ ಉಷ್ಣವಲಯದ ಪ್ರಮುಖ

ಬೆಳೆ. ಗುಲ್ಬರ್ಗಾದ, ಚಿತ್ತಾಪುರ, ಅಫಜಲಪುರ, ಸೇಡಂಗಳಲ್ಲಿ ಹೆಚ್ಚು ಕಡಲೆ ಉತ್ಪಾದಿಸಲಾಗುತ್ತಿದೆ ಮತ್ತು ಹೆಚ್ಚು ಇಳುವರಿಯನ್ನು ಪಡೆಯಲಾಗುತ್ತಿದೆ. 2011-12ರಲ್ಲಿ ಸುಮಾರು 166956 ಹೆ.ಗಳಲ್ಲಿ ಕಡಲೆಯನ್ನು ಬಿತ್ತನೆ ಮಾಡಲಾಗಿತ್ತು.

ಉಳಿದಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ 2011-12ರ ಸಮೀಕ್ಷೆಯಂತೆ ಹುರುಳಿ - 1233 ಹೆ, ಹೆಸರು - 21905 ಹೆ. ಅವರೆ -3 380 ಹೆ. ಅಲಸಂದೆ - 1143 ಹೆ.ಗಳಲ್ಲಿ ಬಿತ್ತನೆ ಮಾಡಲಾಗಿತ್ತು. ಇವು ಗುಲ್ಬರ್ಗಾದಲ್ಲಿ ಬೆಳೆಯಲಾಗುತ್ತಿರುವ ಪ್ರಮುಖ ದ್ವಿದಳ ಧಾನ್ಯಗಳು.

ಎಣ್ಣೆ ಕಾಳುಗಳು : ಶೇಂಗಾ, ಸೂರ್ಯಕಾಂತಿ, ಕುಸುಮೆ, ಹರಳು, ಎಳ್ಳು, ಅಗಸೆ, ಸೋಯ ಅವರೆ, ಹುಚ್ಚೆಳ್ಳು ಮುಂತಾದವು ಗುಲ್ಬರ್ಗಾ ಜಿಲ್ಲೆಯಾದ್ಯಂತ ಉತ್ಪಾದಿಸಲಾಗುತ್ತಿರುವ ಪ್ರಮುಖ ಎಣ್ಣೆಕಾಳಿನ ಬೆಳೆಗಳು. 2011-12ರ ಸಾಲಿನಲ್ಲಿ ಬಿತ್ತನೆ ಮಾಡಲಾದ ವಿಸ್ತೀರ್ಣವನ್ನು (ಹೆಕ್ಟೇರ್‌ಗಳಲ್ಲಿ) ಕೊಡಲಾಗಿದೆ.

ಶೇಂಗಾ - 7446, ಸೂರ್ಯಕಾಂತಿ - 35731, ಕುಸುಮೆ - 5880, ಹರಳು - 108, ಎಳ್ಳು -5720, ಅಗಸೆ - 395, ಸೋಯಾಅವರೆ - 875, ಹುಚ್ಚೆಳ್ಳು - 126 ಹೀಗೆ ಒಟ್ಟು 57525 ಹೆಕ್ಟೇರ್‌ಗಳಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲಾಗಿತ್ತು.

ಸೂರ್ಯಕಾಂತಿ : ಗುಲ್ಬರ್ಗಾದಲ್ಲಿ ಬೆಳೆಯುವ ಪ್ರಮುಖ ಎಣ್ಣೆಕಾಳಿನ ಬೆಳೆ. ಮೊಳಕೆ ಸಂದರ್ಭದಲ್ಲಿ ತಂಪಾದ ವಾತಾವರಣ ಮತ್ತು ಸಾಧಾರಣ ಮಳೆ ಬೀಳುವ ಪ್ರದೇಶಗಳಲ್ಲಿ ಇದನ್ನು ಹೆಚ್ಚು ಬೆಳೆಯಲಾಗುತ್ತದೆ. ಬಿತ್ತನೆ ಮಾಡಲಾದ ಒಟ್ಟು ಪ್ರದೇಶದಲ್ಲಿ ಶೇ. 70 ಭಾಗ, 22380 ಹೆಕ್ಟೇರ್‌ಗಳು ಆಳಂದ ತಾಲ್ಲೂಕಿನಲ್ಲಿವೆ.

ನೆಲಗಡಲೆ / ಶೇಂಗಾ : ಕಡಿಮೆ ಮಳೆ, ಉಷ್ಣವಲಯದ ವಾಯುಗುಣಕ್ಕೆ ಯುಕ್ತವಾದ ಬೆಳೆ. ಇದನ್ನು ಗುಲ್ಬರ್ಗಾದ ಜೇವರ್ಗಿ, ಸೇಡಂ, ಮುಂತಾದ ಪ್ರದೇಶಗಳಲ್ಲಿ ಹೆಚ್ಚು ಉತ್ಪಾದಿಸಲಾಗುತ್ತಿದೆ.

ಎಳ್ಳು : ಮಳೆಯ ಆಶ್ರಯದಲ್ಲೇ ಹೆಚ್ಚು ಬೆಳೆಯುವ ಬೆಳೆ. ಉಷ್ಣವಲಯದ ಚಿನ್ನದ ಬೆಳೆ. ಪ್ರತಿವರ್ಷ ಸುಮಾರು 5500 ಹೆ.ಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ ಎಳ್ಳನ್ನು ಬೆಳೆಯಲಾಗುತ್ತಿದೆ.

ಹುಚ್ಚೆಳ್ಳು, ಹರಳು ಇವುಗಳನ್ನು ಮಿಶ್ರಬೆಳೆಯಾಗಿ, ಸಾಲುಗಳ ರೂಪದಲ್ಲಿ ಬೆಳೆಯುವ ಪದ್ಧತಿ ಗುಲ್ಬರ್ಗಾದಲ್ಲಿ ರೂಢಿಯಲ್ಲಿದೆ.

ಒಟ್ಟಿನಲ್ಲಿ ಗುಲ್ಬರ್ಗಾದ, ಆಳಂದ ತಾಲ್ಲೂಕಿನಲ್ಲೆ 27000 ಹೆಕ್ಟೇರ್‌ಗಳಲ್ಲಿ ಪ್ರತಿವರ್ಷವೂ ಎಣ್ಣೆ ಕಾಳಿನ ಬೆಳೆಯನ್ನು ಬೆಳೆಯಲಾಗುತ್ತಿದೆ.

ವಾಣಿಜ್ಯ ಬೆಳೆಗಳು : ಗುಲ್ಬರ್ಗಾದಲ್ಲಿ ಬೆಳೆಯುವ ಪ್ರಮುಖ ವಾಣಿಜ್ಯ ಬೆಳೆಗಳೆಂದರೆ ಹತ್ತಿ, ಕಬ್ಬು, ತಂಬಾಕು, ಮೊದಲಾದವು.

ಹತ್ತಿ : ಕಪ್ಪುಮಣ್ಣು ಹತ್ತಿ ಬೆಳೆಗೆ ಹೆಚ್ಚು ಯುಕ್ತ. ಕಪ್ಪುಮಣ್ಣು ಹೆಚ್ಚಾಗಿ ಹೊಂದಿರುವ ಜಿಲ್ಲೆಯಲ್ಲಿ ಹತ್ತಿಯನ್ನು ಪ್ರಧಾನವಾಗಿ ಬೆಳೆಯಲಾಗುತ್ತಿದೆ. 2011-12ರ ಸಾಲಿನಲ್ಲಿ ಸುಮಾರು 26496 ಹೆಕ್ಟೇರ್‌ಗಳಲ್ಲಿ ಹತ್ತಿಯನ್ನು ಬಿತ್ತನೆ ಮಾಡಲಾಗಿತ್ತು. ಜೇವರ್ಗಿ ತಾಲ್ಲೂಕು ಅತೀ ಹೆಚ್ಚು ಅಂದರೆ 24937 ಹೆ. ಪ್ರದೇಶದಲ್ಲಿ ಹತ್ತಿ ಬಿತ್ತನೆ ಮಾಡಿತ್ತು. ಅಫಜಲಪುರ, ಸೇಡಂ ತಾಲ್ಲೂಕುಗಳಲ್ಲೂ ಹತ್ತಿ ಬೆಳೆಯಲಾಗುತ್ತಿದೆ.

ಕಬ್ಬು : ಪ್ರಮುಖ ವಾಣಿಜ್ಯ ಬೆಳೆಯಾದ ಕಬ್ಬನ್ನು ಸು. 25917 ಹೆಕ್ಟೇರ್‌ಗಳಲ್ಲಿ ಬೆಳೆಯಲಾಗಿತ್ತು. (2011-12) ಅಫಜಲಪುರದಲ್ಲೇ 10,351 ಹೆ. ಪ್ರದೇಶದಲ್ಲಿ ಕಬ್ಬು ಬೆಳೆದಿತ್ತು.

ತಂಬಾಕು : ತಂಬಾಕು ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆಯಲಾಗುವ ಪ್ರಧಾನ ಬೆಳೆಯಲ್ಲಿ ಆದರೂ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ತಂಬಾಕನ್ನು ಬೆಳೆಯಲಾಗುತ್ತಿದೆ.

ತೋಟಗಾರಿಕೆ ಬೆಳೆಗಳು : ತೋಟಗಾರಿಕೆ ವ್ಯವಸಾಯದ ಒಂದು ಪ್ರಮುಖ ಅಂಗವಾಗಿದೆ. ಇಲ್ಲಿ ಹಣ್ಣಿನ ಬೆಳೆಗಳು, ತರಕಾರಿ ಬೆಳೆಗಳು, ಸಾಂಬಾರ ಬೆಳೆಗಳು, ತೋಟದ ಬೆಳೆಗಳು, ಹೂವಿನ ಬೆಳೆಗಳು, ಔಷಧೀಯ ಮತ್ತು ಸುಗಂಧಿತ ಗಿಡಗಳು ಸೇರುತ್ತವೆ.

ಹಣ್ಣಿನ ಬೆಳೆಗಳು : ಮಾವು, ನಿಂಬೆ, ದ್ರಾಕ್ಷಿ, ಬಾಳೆ ಗುಲ್ಬರ್ಗಾ ಜಿಲ್ಲೆಯಲ್ಲಿ ಉತ್ಪಾದಿಸುತ್ತಿರುವ ಪ್ರಮುಖ ಹಣ್ಣುಗಳು.

ನಿಂಬೆ : ಇದು ಉತ್ಪಾದನೆಯಲ್ಲಿ ಗುಲ್ಬರ್ಗಾ ಬೀದರ್‌ನ ಅನಂತರದ ಸ್ಥಾನ ಪಡೆದಿದೆ. 2001-10ನೇ ಸಾಲಿನ ಅಂಕಿ ಅಂಶಗಳಂತೆ ಸುಮಾರು 763 ಹೆಕ್ಟೇರ್ ವಿಸ್ತೀರ್ಣದಲ್ಲಿ ನಿಂಬೆಯನ್ನು ಬೆಳೆಯಲಾಗಿತ್ತು. ಸುಮಾರು 17.4 ಟನ್ ಪ್ರಮಾಣದಲ್ಲಿ ಉತ್ಪಾದನೆ ಸಾಧ್ಯವಾಗಿತ್ತು.

ದ್ರಾಕ್ಷಿ : ಗುಲ್ಬರ್ಗಾದಲ್ಲಿ ಬೀಜರಹಿತ ದ್ರಾಕ್ಷಿಯನ್ನು ವಿಶೇಷವಾಗಿ ಮಾಡಿ ಬೆಳೆಯಲಾಗುತ್ತಿದೆ. 2009-10ನೇ ಸಾಲಿನಲ್ಲಿ ಸುಮಾರು 398 ಹೆ. ಗಳಲ್ಲಿ ದ್ರಾಕ್ಷಿ ಬೆಳೆಯಲಾಗಿತ್ತು.

ಮಾವು : ಮಾವಿನ ಉತ್ಪಾದನೆ ಈ ಜಿಲ್ಲೆಯಲ್ಲಿ ಪ್ರಧಾನವಾಗಿಲ್ಲ. ಆದರೂ ಕೆಲವೊಂದು ಪ್ರದೇಶಗಳಲ್ಲಿ ಅಲ್ಪ ಪ್ರಮಾಣದಲ್ಲಿ ಮಾವು ಉತ್ಪಾದನೆ ಆಗುತ್ತಿದೆ.

ಬಾಳೆ : ಸುಮಾರು 3452 ಹೆಕ್ಟೇರ್‌ಗಳಲ್ಲಿ ಬಾಳೆ ಬಿತ್ತನೆ ಮಾಡಲಾಗಿದ್ದು. ನೀರಾವರಿ ಬೆಳೆಯಾಗಿ ಬೆಳೆಯಲಾಗುತ್ತಿದೆ.

ಉಳಿದಂತೆ ಕಿತ್ತಳೆ 21 ಹೆ.ಗಳಲ್ಲಿ ಬಿತ್ತನೆ ಮಾಡಿದ್ದು ಸು. 386 ಟನ್ ಬೆಳೆಯಲಾಗಿತ್ತು. ಅಂತೆಯೇ ಮೂಸಂಬಿ 166 ಹೆ. ದಾಳಿಂಬೆ, ಪರಂಗಿ, ಕಲ್ಲಂಗಡಿ ಹಣ್ಣುಗಳನ್ನು ಅಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ.

ತೋಟದ ಬೆಳೆಗಳು : ತೋಟದ ಬೆಳೆಗಳಲ್ಲಿ ತೆಂಗು, ಅಡಕೆ, ಗೋಡಂಬಿ, ಟೀ, ಕಾಫಿ ಮುಂತಾದವುಗಳು ಪ್ರಮುಖವಾಗಿವೆ. ತೆಂಗನ್ನು ಹೊರತು ಪಡಿಸಿ (ಅಲ್ಪ ಪ್ರಮಾಣ) ಉಳಿದ ಯಾವುದೇ ತೋಟಗಾರಿಕೆ ಬೆಳೆಯನ್ನು ಪ್ರಮುಖವಾಗಿ ಬೆಳೆಯಲಾಗುತ್ತಿಲ್ಲ. ಇದಕ್ಕೆ ಕಾರಣ ಬಹುಶಃ ಗುಲ್ಬರ್ಗಾ ಶುಷ್ಕ ವಾಯುಗುಣ ಹೊಂದಿರುವುದೇ ಆಗಿದೆ.

ತರಕಾರಿ ಬೆಳೆಗಳು ಮತ್ತು ಸಂಬಾರ ಪದಾರ್ಥಗಳು : ಕ್ಯಾರೆಟ್, ಈರುಳ್ಳಿ, ಆಲೂಗೆಡ್ಡೆ, ಅರಿಸಿನ, ಧನಿಯ, ಒಣಮೆಸಿನ ಕಾಯಿ, ಮೆಣಸು, ಜೀರಿಗೆ ಮುಂತಾದವುಗಳನ್ನು ಈ ಜಿಲ್ಲೆಯಲ್ಲಿ ಪ್ರಧಾನವಾಗಿ ಬೆಳೆಯಲಾಗುತ್ತಿಲ್ಲ.

ಕ್ಯಾರೆಟ್ : ಗಜ್ಜರಿಯನ್ನು ಗುಲ್ಬರ್ಗಾವು ಅತ್ಯಲ್ಪ ಪ್ರಮಾಣದಲ್ಲಿ ಉತ್ಪಾದಿಸುತ್ತಿದೆ. ಈರುಳ್ಳಿ ಸ್ವಲ್ಪ ಭಾಗಕ್ಕೆ ಮಾತ್ರ ಸೀಮಿತವಾಗಿದೆ.

ಸಾಂಬಾರ ಪದಾರ್ಥಗಳಲ್ಲಿ ಅರಿಸಿನವನ್ನು 886 ಹೆಕ್ಟೇರ್‌ಗಳಲ್ಲಿ, 6368 ಟನ್ 2009-10ರಲ್ಲಿ ಬೆಳೆಯಲಾಗಿತ್ತು. ಉಳಿದಂತೆ ಧನಿಯವನ್ನು 154 ಹೆ. ಒಣಮೆಣಸಿನಕಾಯಿಯನ್ನು ಸ್ವಲ್ಪವೇ ಪ್ರದೇಶದಲ್ಲಿ ಬೆಳೆಯಲಾಗಿತ್ತು. ಬೆಳ್ಳುಳ್ಳಿಯ ಉತ್ಪಾದನೆಯು ಸ್ವಲ್ಪ ಇದೆ.

ಹಿಪ್ಪುನೇರಳೆ / ರೇಷ್ಮೆ ಕೃಷಿ : 2009-10ರ ವರದಿಯಂತೆ ಸುಮಾರು 340 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆದಿದ್ದು, ಸುಮಾರು 122ಟನ್ ರೇಷ್ಮೆ ಗೂಡು ಉತ್ಪಾದಿಸಲಾಗಿತ್ತು. ಆಗ ಯಾದಗಿರಿಯು ಗುಲ್ಬರ್ಗಾದ ವ್ಯಾಪ್ತಿಯಲ್ಲೇ ಇತ್ತು.

ಪಶುಸಂಗೋಪನೆ : ಕೃಷಿಯ ಅವಿಭಾಜ್ಯ ಅಂಗವಾದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಾಧಾರಣ ಮಟ್ಟದಲ್ಲಿ ಅಭಿವೃದ್ಧಿ ಹೊಂದಿದೆ. ದನಗಳು, ಎಮ್ಮೆಗಳು, ಕುರಿ, ಮೇಕೆ, ಕೋಳಿ, ಹಂದಿಗಳನ್ನು ಪ್ರಮುಖವಾಗಿ ಗುಲ್ಬರ್ಗಾ ಜಿಲ್ಲೆಯಾದ್ಯಂತ ಸಾಕಲಾಗುತ್ತಿದೆ.

ದನಗಳು : 'ದೇವನಿ' ತಳಿಯ ದನಗಳನ್ನು ಹೆಚ್ಚಿನ ಪ್ರಮಾಮದಲ್ಲಿ ಭಾಗ ಹೇರುವುದಕ್ಕೆ, ಹಾಲು ಉತ್ಪಾದನೆಗೆ ಮತ್ತು ಉಳುಮೆಯ ಉದ್ದೇಶಗಳಿಗಾಗಿ ಸಾಕುತ್ತಿದ್ದಾರೆ. ಇದೊಂದು ದೇಶೀಯ ತಳಿ. 2009-10ರ ಮಾಹಿತಿಯಂತೆ ಯಾದಗಿರಿಯನ್ನು ಸೇರಿಕೊಂಡಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ 516.3 (ಸಾವಿರಗಳಲ್ಲಿ) ದನಗಳಿದ್ದವು. ಒಟ್ಟು ರಾಜ್ಯದಲ್ಲಿ ಶೇ. 4.9 ರಷ್ಟನ್ನು ಗುಲ್ಬರ್ಗಾವೇ ಹೊಂದಿತ್ತು.

ಎಮ್ಮೆ : ದೇಶೀಯ ತಳಿಯಲ್ಲದ 'ಮುರ್ರಾ' ಎಂಬ ಎಮ್ಮೆಯನ್ನು ಹೆಚ್ಚಿನ ಹಾಲಿನ ಪ್ರಯೋಜನಕ್ಕಾಗಿ ಗುಲ್ಬರ್ಗಾದಲ್ಲಿ ಸಾಕಲಾಗುತ್ತಿದೆ. 2010-11ರ ಮಾಹಿತಿಯಂತೆ ಗುಲ್ಬರ್ಗಾದಲ್ಲಿ 2248 24 ಎಮ್ಮೆಗಳಿದ್ದವು. ಅಂದರೆ ಈ ಪ್ರಮಾಣ ರಾಜ್ಯದಲ್ಲಿ 5.6 ಆಗಿತ್ತು.

ಕುರಿ : 2010-11ರ ಸಮೀಕ್ಷೆಯಂತೆ ಸುಮಾರು 458951 ಕುರಿಗಳು ಅಂದರೆ ಬಿಟ್ಟು ಕುರಿಗಳಲ್ಲಿ ಶೇ. 6.3 ಗುಲ್ಬರ್ಗಾ ಜಿಲ್ಲೆಯಲ್ಲೆ ಕೇಂದ್ರಿಕೃತವಾಗಿತ್ತು.

ಹಂದಿ : ಹಂದಿಸಾಕಾಣಿಕೆ ಯಾದಗಿರಿಯನ್ನು ಸೇರಿದಂತೆ ಗುಲ್ಬರ್ಗಾದ ಪ್ರಮುಖ ಕೃಷಿ. ಶೇ. 12.5 ಪ್ರಮಾಣದ ಹಂದಿಗಳನ್ನು ಈ ಜಿಲ್ಲೆ ಹೊಂದಿದೆ. 2009ರ ವರದಿಯಂತೆ ಸು. 39995 ಹಂದಿಗಳು ಈ ಜಿಲ್ಲೆಯಲ್ಲಿದ್ದವು.

ಹೈನುಗಾರಿಕೆ : ಗುಲ್ಬರ್ಗಾ ಜಿಲ್ಲೆ ಸಾಕಷ್ಟು ವಿಸ್ತಾರವಾದ ಭೂಪ್ರದೇಶವನ್ನು ಹೊಂದಿದೆ. ಇದರಿಂದಾಗಿ ಸಹಜವಾಗಿ ಹೈನುಗಾರಿಕೆಗೆ ವಿಪುಲ ಅವಕಾಶಗಳಿವೆ. ಇಲ್ಲಿ ಹೈನುಗಾರಿಕೆ ಕೇಂದ್ರವೂ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ದನ - ಕರುಗಳ ಸಂಖ್ಯೆಯೇ ಕ್ಷೀಣಿಸುತ್ತಿದ್ದು ಹೈನುಗಾರಿಕೆ ನೆಲಕಚ್ಚುತ್ತಿದೆ.

ಸಸ್ಯವರ್ಗ : ಸ್ವಾಭಾವಿಕ ಸಸ್ಯವರ್ಗವು ಗುಲ್ಬರ್ಗಾ ಜಿಲ್ಲೆಯಲ್ಲಿ ಕಂಡುಬರುತ್ತದೆ. ಇಲ್ಲಿ ದೊಡ್ಡ ಪ್ರಮಾಣದ ಕಾಡು ಕಂಡುಬರುವುದಿಲ್ಲ. ಕುರುಚಲು ಸಸ್ಯವರ್ಗ ಹೆಚ್ಚು ಕೇಂದ್ರಿಕೃತವಾಗಿದೆ.

ಕುರುಚಲು ಸಸ್ಯವರ್ಗ : ಈ ಪ್ರದೇಶದಲ್ಲಿ 600 ಮಿ.ಗಿಂತಲೂ ಕಡಿಮೆ ವಾರ್ಷಿಕ ಮಳೆ ಬೀಳುತ್ತದೆ. ವರ್ಷದಲ್ಲಿ 6 ತಿಂಗಳಿಗೂ ಹೆಚ್ಚು ಒಣ ಹವೆಯುಳ್ಳ ಭಾಗಗಳಲ್ಲಿ ಈ ಸಸ್ಯವರ್ಗ ಕಂಡುಬರುತ್ತದೆ. ನೀರಿನ ಕೊರತೆ ಇರುವ ಕಾರಣ ಎಲೆ ರಹಿತ, ಕಾಂಡದಿಂದ ಆವೃತವಾದ ಮಂಡಕಳ್ಳಿ, ಹಂಚಿಹುಲ್ಲು, ಗುಲಗಂಜಿ, ಈಚಲು, ಚುಜ್ಜಲಿ, ಪಾಪಸಕಳ್ಳಿ, ಕತ್ತಾಳಿ, ಉರಿಸೀಗೆ, ಕರೀಜಾಲ ಮುಂತಾದವು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಒಟ್ಟಿನಲ್ಲಿ ಗುಲ್ಬರ್ಗಾದ ಒಟ್ಟು ಭೂಪ್ರದೇಶದಲ್ಲಿ 35316 ಹೆ. ಪ್ರದೇಶದಲ್ಲಿ ಅರಣ್ಯವಿದೆ.

ಸಾಂಪ್ರದಾಯಿಕ ಕೃಷಿ ವಿಧಾನಗಳು : ಸಾಲುಬಿಡುವುದು : ನೇಗಿಲಿನಿಂದ ಅಥವಾ ಕೂರಿಗೆಯಂತಹ ಕೃಷಿ ಉಪಕರಣಗಳ ಸಹಾಯದಿಂದ ಸಾಲುಗಳನ್ನು ಹೊಡೆಯಲಾಗುತ್ತದೆ. ಈ ಸಾಲುಗಳಲ್ಲಿ ಬಿತ್ತನೆಯನ್ನು ಬಿತ್ತಲಾಗುತ್ತಿದೆ. ಉದಾಹರಣೆಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆಯುವ ತೊಗರಿ, ಜೋಳ, ಸಜ್ಜೆ, ಅವರೆ, ಮುಸುಕಿನ ಜೋಳ, ಶೇಂಗಾವನ್ನು ಈ ವಿಧಾನದ ಮೂಲಕ ಬಿತ್ತಲಾಗುತ್ತದೆ. ಸಾಲುಗಳ ಅಂತರ ಮಾತ್ರ ಆಯಾ ಬೆಳೆಗಳ ಗುಣಲಕ್ಷಣಕ್ಕೆ ಅನುಗುಣವಾಗಿರುತ್ತದೆ.

ನಾಟಿ ವಿಧಾನ : ಗುಲ್ಬರ್ಗಾ ಜಿಲ್ಲೆಯಲ್ಲಿ ಬತ್ತ, ಕಬ್ಬು, ತಂಬಾಕುಗಳನ್ನು ನಾಟಿ ಮಾಡುವ ವಿಧಾನದ ಮೂಲಕ ಬೆಳೆಯಲಾಗುತ್ತದೆ. ನಿರ್ದಿಷ್ಟ ಸಾಲುಗಳಲ್ಲಿ, ನಿರ್ದಿಷ್ಟ ಪ್ರಮಾಣದ ಪೈರುಗಳನ್ನು ನೆಡಲಾಗುವುದು. ಇದರಲ್ಲಿ ಸಾಲು ನಾಟಿ ಮತ್ತು ಕೈನಾಟಿ ಎರಡೂ ವಿಧಾನಗಳೂ ಸೇರಿವೆ. ಬತ್ತಕ್ಕೆ ಕೈ ನಾಟಿ ಯುಕ್ತವಾದರೆ, ಕಬ್ಬಿಗೆ ಸಾಲು ನಾಟಿ ಹೆಚ್ಚು ಯೋಗ್ಯ ವಿಧಾನವಾಗಿದೆ.

ಎರಚುವ ವಿಧಾನ : ಗುಲ್ಬರ್ಗಾ ಜಿಲ್ಲೆಯಲ್ಲಿ ಎರಚುವ ವಿಧಾನದ ಮೂಲಕವೂ ಬಿತ್ತನೆ ಮಾಡಲಾಗುತ್ತಿದೆ. ಹುರುಳಿ, ಉದ್ದು, ಹೆಸರು, ಅಲಸಂದೆ, ಕಡಲೆ ಈ ವಿಧಾನದ ಮೂಲಕವೇ ಬೆಳೆಯಲಾಗುತ್ತಿದೆ.

ಮಡಿಕಟ್ಟು / ಪಾತಿಮಾಡು : ಈ ವಿಧಾನದಲ್ಲಿ ಬತ್ತದ ಬೀಜವನ್ನು ಬಿತ್ತಿ, ಹದವಾಗಿ ನೀರು ನಿಲ್ಲುವಂತೆ ಮಾಡಿ ಬತ್ತವನ್ನು ಮೊಳಕೆ ಬರಿಸಲಾಗುತ್ತದೆ. ಅಗತ್ಯಕ್ಕೆ ತಕ್ಕಂತೆ ಪಾತಿ ಅಥವಾ ಪಟಗಳನ್ನು ವಿಸ್ತಾರ ಮಾಡಿಕೊಳ್ಳಲಾಗುತ್ತದೆ. ಸಾಮಾನ್ಯವಾಗಿ ಬತ್ತ, ಕೆಲವು ತರಕಾರಿ ಬೆಳೆಗಳನ್ನು ಈ ವಿಧಾನದಲ್ಲೇ ಪೈರು ಬೆಳೆಸಿ 20-30 ದಿನಗಳೊಳಗೆ ಕಿತ್ತು, ಬೇರೆಡೆ ನಾಟಿ ಮಾಡುತ್ತಾರೆ.

ಮೊಳಕೆ ಬರಿಸುವುದು : ಒಂದು ಗೋಣಿ ಚೀಲದೊಳಕ್ಕೆ ಬಿತ್ತನೆ ಬೀಜಗಳನ್ನು ತುಂಬಿಟ್ಟು ನಿರ್ದಿಷ್ಟ ಪ್ರಮಾಣದಲ್ಲಿ ನೀರು ಹಾಕಿ, ಅದರ ಬಾಯಿಯನ್ನು ಭದ್ರವಾಗಿ ಕಟ್ಟಿ ಮೊಳಕೆ ಬರಿಸಲಾಗುತ್ತದೆ. 4-5 ದಿನಗಳ ಅನಂತರ ಆ ಮೊಳಕೆಯನ್ನು ಬೇರೆಡೆಗೆ ಸ್ಥಳಾಂತರ ಮಾಡುತ್ತಾರೆ. ಉದಾಹರಣೆ : ಬತ್ತ, ಕೆಲವು ತರಕಾರಿ ಪೈರು ಸಸಿಗಳು.

ಈ ವಿಧಾನಗಳಲ್ಲದೆ ಬೇರೆ ಬೇರೆ ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಬಳಸುತ್ತಿದ್ದಾರೆ. ಉದಾಹರಣೆಗೆ ಮಳೆ ನೀರಿಗೆ ತಡೆಹಾಕುವುದು. ಒಟ್ಲು ಹಾಕುವುದು ಇತ್ಯಾದಿ.

ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯು ಆಧುನಿಕ ಕೃಷಿ ವಿಧಾನಕ್ಕೆ ತೆರೆದುಕೊಂಡಿದೆ. ಅಂದರೆ ದನಗಳನ್ನು ಕಟ್ಟಿ ಉಳುವುದಕ್ಕೆ ಬದಲಾಗಿ ಟ್ರ್ಯಾಕ್ಟರ್ ಬಂದಿದೆ. ಕೂರಿಗೆಯನ್ನು ಬಳಸಿ ಬಿತ್ತುವುದಕ್ಕೆ ಬದಲಾಗಿ ಹೊಸ

ಹೊಸ ಉಪಕರಣಗಳನ್ನು ಬಳಸಲಾಗುತ್ತಿದೆ. ಕೈಯಿಂದ ಕಳೆ ಕೀಳುವುದಕ್ಕೆ ಬದಲಾಗಿ ಯಂತ್ರಗಳು ಬಂದಿವೆ.

ಗೊಬ್ಬರಗಳು ಮತ್ತು ಕೀಟನಾಶಕಗಳು : ಸಾಂಪ್ರದಾಯಿಕ ಗೊಬ್ಬರಗಳಾದ ದನ, ಕುರಿ, ಮೇಕೆ, ಎಮ್ಮೆ, ರೇಷ್ಮೆ ಕೋಳಿ ಸಗಣಿಯನ್ನು ಅತೀ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದಾರೆ. ಜೊತೆಗೆ ಶೇಂಗಾದ ಹಿಂಡಿ, ಬೇವಿನ ಹಿಂಡಿಗಳನ್ನು ಗೊಬ್ಬರವಾಗಿ ಬಳಸುತ್ತಿದ್ದಾರೆ. ಜೈವಿಕ ರೀತಿಯಲ್ಲಿ ತಯಾರಿಸಿದ ಕಾಂಪೋಸ್ಟ್ ಗೊಬ್ಬರ, ಹಸುರು ಎಲೆಗಳ ಗೊಬ್ಬರಗಳ ಬಳಕೆಯೂ ಹೆಚ್ಚಿದೆ. ಇತ್ತೀಚೆಗೆ ಈ ಸಾಂಪ್ರದಾಯಿಕ ಗೊಬ್ಬರಗಳ ಬಳಕೆ ಕಡಿಮೆಯಾಗಿ ಸಾರಜನಕ, ರಂಜಕ, ಮೆಗ್ನೀಷಿಯಂ, ಪೊಟ್ಯಾಷ್ ಮುಂತಾದ ರಾಸಾಯನಿಕ ಗೊಬ್ಬರಗಳ ಬಳಕೆ ಹೆಚ್ಚಾಗಿದೆ.

ಕೀಟನಾಶಕಗಳು : ಗಂಜಲ, ಬೇವಿನರಸ, ಬೂದಿ, ಮುಂತಾದ ಸಾಂಪ್ರದಾಯಿಕ ಕೀಟನಾಶಕಗಳ ಬಳಕೆ ಕಂಡುಬರುತ್ತದೆ. ಇತ್ತೀಚೆಗೆ ಇವುಗಳ ಬಳಕೆಯ ಪ್ರಮಾಣ ಕಡಿಮೆಯಾಗಿದೆ. ಇವುಗಳ ಜಾಗದಲ್ಲಿ ಡಿ.ಡಿ.ಟಿ. ರೋಗಾರ್, ಜೈನೆಬ್, ಮಿಥೈಲ್ ಪ್ಯಾರಾಥಿಯಾನ್‌ಗಳನ್ನು ಬಳಸಲಾಗುತ್ತಿದೆ.

ಬೀಜ ಸಂರಕ್ಷಣೆ : ಗುಲ್ಬರ್ಗಾ ಜಿಲ್ಲೆಯಲ್ಲಿ ಬೀಜ ಸಂರಕ್ಷಣೆಗೆ ಹಲವು ವಿಧಾನಗಳಿವೆ. ಸಾಂಪ್ರದಾಯಿಕ ವಿಧಾನವಿರುವಂತೆ, ಆಧುನಿಕ ವಿಧಾನವು ಪ್ರಸಿದ್ಧಿ ಪಡೆದಿದೆ. ಸಾಂಪ್ರದಾಯಿಕ ವಿಧಾನದಲ್ಲಿ ಮಣ್ಣನ್ನು ಬೀಜಸಂರಕ್ಷಕವನ್ನಾಗಿ ಬಳಸುತ್ತಾರೆ. ಉದಾಹರಣೆಗೆ : ತೊಗರಿ ಕಾಳನ್ನು ಸಂರಕ್ಷಿಸಿ, ಕೀಟಗಳಿಂದ, ಇರುವೆಗಳಿಂದ ದೂರವಿಡಲು ಕೆಂಪುಮಣ್ಣು, ಬೂದಿ ಮೊದಲಾದವುಗಳನ್ನು ಬಳಸಿ ಲೇಪನ ಮಾಡಿ ಬಿತ್ತುತ್ತಾರೆ. ಆಧುನಿಕ ವಿಧಾನದಲ್ಲಿ ಬೀಜಗಳ ಸಂರಕ್ಷಣೆಗೆ ಪಾದರಸ ಸಂಯುಕ್ತ ವಸ್ತು, ಸ್ಟೈಪ್ಟೋಸೈಕ್ಲಿನ್, ಮೈಲುತುತ್ತ, ಕ್ಯಾಪ್ಟಾನ್, ಥೈರಾಮ್, ಬ್ರಾಸಿಕಾಲ್, ಅಗ್ರಿಮೈಸಿನ್ ಇತ್ತೀಗೆ ರೈಜೋಬಿಯಂ ಪೌಡರನ್ನು ಬೀಜೋಪಚಾರಕ್ಕಾಗಿ ಬಳಸುತ್ತಿದ್ದಾರೆ.

ಕೃಷಿ ಉಪಕರಣಗಳು :

ಕುಂಟೆ/ಗಳೇ : ಈ ಉಪಕರಣವನ್ನು ಗುಲ್ಬರ್ಗಾದಲ್ಲಿ ಬಳಸಲಾಗುತ್ತಿದೆ. ಇದನ್ನು ಸಾಮಾನ್ಯವಾಗಿ ಸಾಲುಗಳ ನಡುವೆ ಮಧ್ಯೆ ಇರುವ ಕಳೆಯನ್ನು ತೆಗೆಯಲು ಬಳಸಲಾಗುತ್ತದೆ. ಉದಾಹರಣೆಗೆ : ಶೇಂಗಾದ ಎರಡು ಸಾಲುಗಳ ನಡುವೆ ಇರುವ ಕಳೆ ತೆಗೆಯಲು ಬಳಸುವ ಉಪಕರಣ.

ಸಲಿಕಿ / ಸನಿಕೆ / ಸೆಲ್ಕೆ / ಸನಿಕ : ಇದು ಭೂಮಿಯನ್ನು ಸಡಿಲ ಮಾಡಲು ಬಳಸುವ ಸಾಧನೆ. ಇದನ್ನು ಸಾಮಾನ್ಯವಾಗಿ ಚಿಕ್ಕ ಚಿಕ್ಕ ಗದ್ದೆ, ಹೊಲಗಳ ಭೂಮಿಯನ್ನು ಅಗೆಯಲು ಬಳಸುತ್ತಾರೆ.

ಎಗ್ಗಪತ್ತಿ : ವೀಳ್ಯದೆಲೆಗಳನ್ನು ಬಳ್ಳಿಯಿಂದ ಬೇರ್ಪಡಿಸಲು ಉಪಯೋಗಿಸುವ ಸಣ್ಣ ಸಾಧನ.

ಬೇರು : ಕಲ್ಲನ್ನು ಇಟ್ಟು ತಿರುಗಿಸಿ ಬೀಸಿ ಹೊಡೆಯುವುದಕ್ಕೆ ಮಾಡಿದ ಸಾಧನ. ಇದು ಫಸಲಿಗೆ ಮುತ್ತುವ ಹಕ್ಕಿಗಳನ್ನು ಹೊಡೆಯಲು ಬಳಸುವ ಕೃಷಿ ಉಪಕರಣ.

ಪುಟ್ಟಿ : ಧಾನ್ಯ ಸಂಗ್ರಹಿಸಲು ಬಳಸುವ ಸಾಧನ.

ಹಂತಿಕಣ್ಣಿ : ಕಣದಲ್ಲಿ ಎತ್ತುಗಳನ್ನು ಮೇಟಿಗೆ ಹೂಡಲು ಉಪಯೋಗಿಸುವ ಹಗ್ಗ.

ಹಾರಿ : ಕೋಲಿನಾಕಾರವಿದ್ದು ಮಣ್ಣು ಅಗೆಯಲು ಬಳಸುವ ಸಾಧನ.
ಗಾದಿಗೆ - ಈರುಳ್ಳಿ ಸಂಗ್ರಹಣೆಗಾಗಿ ಮಾಡುವ ಗೂಡು.

ಗುಮ್ಮಿ : (ಗುಡಾಣ) ಧಾನ್ಯ ತುಂಬಿಡಲು ಬಳಸುವ ಉಪಕರಣ.

ಚಬಕಾ : ಗಾಡಿ ಹೊಡೆಯುವಾಗ ಎತ್ತುಗಳನ್ನು ಹೆದರಿಸಲು ಬಳಸುವ ಬಾರು ಕೋಲು.

ನೇಗಿಲು : ನೆಲವನ್ನು ಉಳಲು ಬಳಸುವ ಸಾಧನ.

ಗಿರಕಿ : ಮಟ್ಟಿಯ ಮಣಿ ಹಾಯ್ದು ಹೋಗಲು ಬಳಸುವ ಕಟ್ಟಿಗೆಯ ಯಂತ್ರ.

ಸಹಾಯಕ ಗ್ರಂಥಗಳು :

ಕನ್ನಡ ವಿಷಯ ವಿಶ್ವಕೋಶ - ಭೂಗೋಳ ವಿಜ್ಞಾನ.

ಕರ್ನಾಟಕ ಭೂಗೋಳಶಾಸ್ತ್ರ - ಪಿ. ಮಲ್ಲಪ್ಪ.

ಕರ್ನಾಟಕ ಪ್ರಾದೇಶಿಕ ಭೂಗೋಳಶಾಸ್ತ್ರ - ಡಾ. ರಂಗನಾಥ

ಕೃಷಿ ಪದಕೋಶ - ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.

ಧಾನ್ಯ ಸಂರಕ್ಷಣೆ - ಡಿ. ಶೇಷಗಿರಿರಾವ್.

ಬೆಳೆಗಳು ಮತ್ತು ಬೇಸಾಯ - ಬಿ.ಎನ್. ನಂಜಾರೆಡ್ಡಿ.

ಗುಲ್ಬರ್ಗಾ ಜಿಲ್ಲೆಯ ಕೃಷಿ - ಅಂತರಜಾಲ ಆಧಾರಿತ ಮಾಹಿತಿ. (2011-12, ಅಂಕಿ ಅಂಶಗಳನ್ನು ಈ ವೆಬ್‌ಸೈಟ್‌ನಿಂದಲೇ ಪಡೆಯಲಾಗಿದೆ.)

ಸಹಾಯಕರು :

ಶಂಕರಪ್ಪ - ಕೃಷಿಕರು, ಚಿಂಚೋಳಿ ತಾಲ್ಲೂಕು.

ಎಸ್.ಬಿ.ಕೆ.

ಗೆಣಸು ಕೃಷಿ (ಕೇರಳದಲ್ಲಿ) ಐಪೋಮಿಯ ಬಟಾಟಾಸ್ ಎಂಬ ವೈಜ್ಞಾನಿಕ ಹೆಸರಿನಲ್ಲಿ ಕರೆಯಲಾಗುವ, ಕನ್ವೋಲ್‌ವುಲೇಸೀ ಕುಟುಂಬಕ್ಕೆ ಸೇರಿದ ಗೆಣಸು ಪ್ರಪಂಚದ ಆಹಾರಪದಾರ್ಥಗಳಲ್ಲಿ ಆರನೆಯ ಸ್ಥಾನದಲ್ಲಿದೆ. ಸುಮಾರು 9.3 ದಶಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ 129.2 ದಶಲಕ್ಷ ಟನ್ ಗೆಣಸು ಪ್ರತಿವರ್ಷ ಉತ್ಪಾದಿಸಲಾಗುತ್ತದೆ. ಮಿತಶೀತೋಷ್ಣವಲಯದ ಪ್ರದೇಶಗಳಲ್ಲಿ ಬಹುಪಾಲು ಗೆಣಸನ್ನು ಬೆಳೆಯಲಾಗುತ್ತದೆ. ಅಲ್ಪಾವಧಿಯ ಬೆಳೆ ಎಂಬ ನೆಲೆಯಲ್ಲಿ ಇದಕ್ಕೆ ಇತರ ಬೆಳೆಗಳಷ್ಟು ಕಾಲಾವಧಿ ಬೇಕಾಗುವುದಿಲ್ಲ ಹಾಗೂ ಹೆಚ್ಚು ಲಾಭ ತರುವ ಬೆಳೆಯೂ ಆಗಿದೆ. ಗೆಣಸಿನಲ್ಲಿ ಶೇಕಡಾ 20-25 ಪಿಷ್ಟ, 3.5 ಸಕ್ಕರೆ, ಸಣ್ಣ ಪ್ರಮಾಣದಲ್ಲಿ ಪ್ರೋಟೀನ್, ವಿಟಮಿನ್-ಸಿ ಗಳಿವೆ. ಕಿತ್ತಳೆ ಬಣ್ಣದ ಇದರ ಮಾಂಸಲ ಭಾಗದಲ್ಲಿ ಧಾರಾಳ ಕಾರ್ಬೋಹೈಡ್ರೇಟುಗಳು,

ಕರೋಟ್ಟಿನ್ (ಮ) ಒಳಗೊಂಡಿದೆ. ಒಂದು ಆಹಾರಪದಾರ್ಥ ಎಂಬುದಕ್ಕೂ ಮಿಗಿಲಾಗಿ ಇದು ಪಶು ಆಹಾರವಾಗಿಯೂ ವ್ಯವಸಾಯಗಳಿಗೆ ಅಗತ್ಯವಾದ ಕಚ್ಚಾವಸ್ತುವಾಗಿಯೂ ಉಪಯೋಗವಾಗುತ್ತದೆ.

ಗೆಣಸುವರ್ಗದ ಬೆಳೆಗಳಲ್ಲೆಲ್ಲ ಆಹಾರ ಪದಾರ್ಥಗಳ ವಿಫುಲ ಸಾಧ್ಯತೆಯಿರುವುದು ಸಿಹಿಗೆಣಸಿಗೆ. ಸಿಹಿಗೆಣಸಿನಿಂದ ನಾನಾ ತೆರನಾದ ಜಾಮುಗಳು, ಸ್ಕ್ವಾಷ್‌ಗಳು ಮುಂತಾದುವನ್ನು ತಯಾರಿಸಬಹುದು.



ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಸಿಹಿಗೆಣಸಿನ ಕೃಷಿ ಇದೆಯಾದರೂ ಒರಿಸ್ಸಾ, ಬಿಹಾರ್, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಇದನ್ನು ವಿಫುಲವಾಗಿ ಬೆಳೆಯುತ್ತಾರೆ. ಭಾರತದಲ್ಲಿ ಸುಮಾರು 0.15 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 12 ದಶಲಕ್ಷ ಟನ್ ಸಿಹಿಗೆಣಸನ್ನು ಉತ್ಪಾದಿಸುತ್ತಾರೆ. ಕೇರಳದಲ್ಲಿ ಸಿಹಿಗೆಣಸು ಬೆಳೆಯುವುದು ಕಾಲ ಸರಿದಂತೆ ಕಡಿಮೆಯಾಗುತ್ತಿದೆ. 1991-92ರಲ್ಲಿ 2460 ಹೆಕ್ಟೇರ್ ಬೆಳೆಯುತ್ತಿದ್ದ ಸಿಹಿಗೆಣಸು 2001-02ರ ಹೊತ್ತಿಗೆ 750 ಹೆಕ್ಟೇರ್‌ಗೆ ಕಮ್ಮಿಯಿದೆ. ಕೇರಳದಲ್ಲಿ ಈಗಲೂ ಬೆಳೆಯುತ್ತಿರುವ ತಳಿಗಳೆಂದರೆ - ಭದ್ರಕಾಳಿಚ್ಚುಂವಲ, ಕೊಟ್ಟಾರಂ ಚುವಲ, ಚಕ್ಕರವಳ್ಳಿ, ಆನಕೊಂಬನ್, ಚೀನವೆಳ್ಳ, ಕಾಞಂಗಾಡ್ ಸ್ಥಳೀಯ (Local) ಎಂಬಿವುಗಳು.

ಕೇಂದ್ರ ಗೆಣಸು ಬೆಳೆಗಳ ಸಂಶೋಧನ ಸಂಸ್ಥೆಗಳಲ್ಲಿ ಭಾರತದ ಹೆಚ್ಚಿನ ಎಲ್ಲ ರಾಜ್ಯಗಳಿಂದಲೂ ಸಂಗ್ರಹಿಸಿದ ತಳಿಗಳಲ್ಲದೆ ಜಪಾನ್, ಅಮೇರಿಕಾ, ಚೈನಾ, ಫಿಜಿ, ಸ್ವಿಟ್ಜರ್‌ಲೆಂಡ್, ತೈವಾನ್, ಅರ್ಜೆಂಟೀನಾ, ಟಾನ್ಜಾನಿಯ, ನೈಜೀರಿಯ ಎಂಬ ರಾಷ್ಟ್ರಗಳಿಂದಲೂ ತರಿಸಿಕೊಂಡಿರುವ ಸಾವಿರಕ್ಕೂ ಮಿಕ್ಕ ತಳಿಗಳ ಸಂಗ್ರಹವಿದೆ. ಈಗ ದಕ್ಷಿಣ ಅಮೇರಿಕಾದ ಪೆರುವಿನಲ್ಲಿ ಕಾರ್ಯವೆಸಗುತ್ತಿರುವ ಅಂತಾರಾಷ್ಟ್ರಿಯ ಆಲೂಗಡ್ಡೆ ಸಂಶೋಧನ ಕೇಂದ್ರದ ಮೂಲಕ ಪ್ರಪಂಚದ ವಿವಿಧ ಭಾಗಗಳಿಂದ ಅನೇಕ ಸುಧಾರಿತ ತಳಿಗಳೂ ನಮಗೆ ಲಭ್ಯವಿದೆ. ಈ ತಳಿಗಳ ಸಂಗ್ರಹದಲ್ಲಿನ ಪ್ರತಿಯೊಂದು ತಳಿಯ ಬೆಳವಣಿಗೆ, ದಂಟು, ಎಲೆ ಮುಂತಾದವುಗಳ ಸ್ವರೂಪ, ಬಣ್ಣ, ಗೆಣಸಿನ ಆಕಾರ, ಸಿಪ್ಪೆ ಮತ್ತು ಮಾಂಸಲ ಭಾಗದ ಬಣ್ಣ, ರುಚಿಭೇದಗಳು ; ಗೆಣಸಿನಲ್ಲಿ ಅಡಕವಾಗಿರುವ ಪಿಷ್ಟ, ಕಾರ್ಬೋಹೈಡ್ರೇಟುಗಳು, ಸಕ್ಕರೆ ಎಂಬ ಮೂಲಾಂಶಗಳ ಪ್ರಮಾಣ ; ರೋಗ - ಕೀಟ ಪ್ರತಿರೋಧ ಸಾಮರ್ಥ್ಯ ; ಉತ್ಪಾದನ ಕ್ಷಮತೆ ಮುಂತಾದವುಗಳ ಬಗೆಗಿನ ವೈವಿಧ್ಯದ ಕುರಿತು ಸಮಗ್ರವಾದ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡಿಸಿ ವಿಭಾಗ ಮಾಡಿ ಕೊಳ್ಳಲಾಗಿದೆ. ಇದರಿಂದ ಒಂದೊಂದು ಪ್ರದೇಶಕ್ಕೂ ಯುಕ್ತವಾದ ತಳಿಗಳನ್ನು ಕೃಷಿಕರಿಗೆ ವಿತರಿಸಲು ಸಾಧ್ಯ ಮಾತ್ರವಲ್ಲ ಹೊಸ ಸಂಕರ ತಳಿಗಳನ್ನು ಸೃಷ್ಟಿಸಲೂ ಸಾಧ್ಯವಾಗುತ್ತದೆ.

ಅಲ್ಪಕಾಲಾವಧಿ ಗೆಣಸಿನ ತಳಿಗಳನ್ನು ಬತ್ತದ ಗದ್ದೆಗಳಲ್ಲಿ ಮಿಶ್ರಬೆಳೆ / ಎಡೆಬೆಳೆ ಕೃಷಿಯಾಗಿ ವ್ಯಾಪಿಸಿಕೊಳ್ಳಬಹುದಾಗಿದೆ. ಈ ಕೃಷಿ ಪದ್ಧತಿಯಾಗಿ ಹೆಚ್ಚು ಲಾಭದಾಯಕ ಎಂಬುದು ಸಾಬೀತಾಗಿದೆ.

ಹೊಸ ತಳಿಗಳು : ದೀರ್ಘ ಕಾಲಾವಧಿಯ ಸಂಶೋಧನೆಯ ಪರಿಣಾಮವಾಗಿ ಕೇಂದ್ರ ಗೆಣಸು ಬೆಳೆಗಳ ಸಂಶೋಧನಾ ಸಂಸ್ಥೆ (CTCRI) ಯಲ್ಲಿ ತಯಾರಾದ ತಳಿಗಳು ಇಂತಿವೆ.

ಎಚ್-41 ನೇರಿಲ್ ಎಂಬ ಜಪಾನ್ ತಳಿ ಮತ್ತು ಒಂದು ನಾಡ ತಳಿಯ ಸಂಕರ. ನಾಲ್ಕು ತಿಂಗಳ ಒಳಗೆ ಹೆಕ್ಟೇರಿಗೆ 20-25 ಟನ್ ಫಸಲು ತೆಗೆಯಬಹುದು. ಕೆಂಪು ತವುಡು ಬಣ್ಣದ ಸಿಪ್ಪೆ, ಒಳಭಾಗ ಬಿಳಿ.

ಎಚ್-42 ಬಿಳಿ ಡಾಂಫ್ ಎಂಬ ಜಾತಿಯ ಮತ್ತು ಟ್ರಯಂಫ್ ಎಂಬ ಅಮೆರಿಕನ್ ತಳಿಗಳ ಸಂಕರ. ಸಿಪ್ಪೆಗೆ ಚಿಕ್ಕುವಿನ ಬಣ್ಣ, ಒಳಗೆ ಹಳದಿ ಮಿಶ್ರಿತ ಬಿಳಿ. ಹೆಕ್ಟೇರ್‌ಗೆ 20-25 ಟನ್ ಫಸಲು. ಎಚ್ಚ್-41ಕ್ಕಿಂತ ಹೆಚ್ಚು ಪೋಷಕ ಗುಣಗಳಿವೆ.

ಎಚ್-268(ವರ್ಷ) ಇದು ಕೂಡ ಸಂಕರ ತಳಿ. ಹೆಕ್ಟೇರಿಗೆ 18-22 ಟನ್ ಇಳುವರಿ. ಹೊರಸಿಪ್ಪೆ ಕಡುಗೆಂಪು, ಒಳಗೆ ಎಳೆ ಹಳದಿ ಬಣ್ಣ. ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಶ್ರೀನಂದಿನಿ - S-32 ಎಂಬ ತಳಿಯಿಂದ ಸೃಷ್ಟಿಸಿಕೊಂಡುದು.

ಶ್ರೀ ವರ್ಧಿನಿ - S-13ರಿಂದ ಸೃಷ್ಟಿಸಿದ್ದು - ಹೆಕ್ಟೇರಿಗೆ 20-25 ಟನ್ ಇಳುವರಿ. ನೂರು-ನೂರ ಐದು ದಿನಗಳ ಅವಧಿ.

ಶ್ರೀ ರತ್ನ - ಶ್ರೀ ವರ್ಧಿನಿ ಮತ್ತು S-187 ತಳಿಗಳ ಸಂಕರ. ಹೆಕ್ಟೇರಿಗೆ 20-29 ಟನ್. ತೊಂಬತ್ತೈದು - ನೂರು ದಿನಗಳಲ್ಲಿ ಬೆಳೆ ಬರುತ್ತದೆ.

ಶ್ರೀ ಭದ್ರ - ನೈಜೀರಿಯನ್ ತಳಿಯಿಂದ ದೊರೆತ ಬೀಜಗಳನ್ನು ಮೊಳಕೆ ಬರಿಸಿ ಸೃಷ್ಟಿಸಿಕೊಂಡ ತಳಿ. ತೊಂಭತ್ತು ದಿನದಲ್ಲಿ ಬೆಳೆ ಕೈಗೆ ಬರುತ್ತದೆ. ಹೆಕ್ಟೇರಿಗೆ 20-27 ಟನ್ ತನಕ ಇಳುವರಿ ಕೊಡುತ್ತದೆ.

ಶಂಕರ್ - ನೂರ ಇಪ್ಪತ್ತು ದಿನಗಳ ದೀರ್ಘ ಕಾಲಾವಧಿ ಬೇಕು. ಹೆಕ್ಟೇರಿಗೆ ಸರಾಸರಿ ಹದಿನಾಲ್ಕು ಟನ್. ಒಳ್ಳೇ ರುಚಿಯ ತಳಿ.

ಗೌರಿ - ಭುವನೇಶ್ವರಿ ಮೇಖಲೆಯ ಕೇಂದ್ರದಿಂದ ಸೃಷ್ಟಿಸಿಕೊಂಡುದು. ನೂರು ನೂರ ಹನ್ನೆರಡು ದಿನಗಳ ಕಾಲಾವಧಿ ಬೇಕು. ಒಂದು ಹೆಕ್ಟೇರ್‌ಗೆ ಸರಾಸರಿ ಹತ್ತೊಂಬತ್ತು ಟನ್ ಫಸಲು ಸಿಗುತ್ತದೆ. ಒಳ್ಳೇ ರುಚಿಯ ತಳಿ.

ಕೇರಳದ ಗೆಣಸಿನ ಉತ್ಪಾದನೆ ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣವೆಂದರೆ ಕೀಟಬಾಧೆ. ಪ್ರಪಂಚಾದ್ಯಂತ ಮುನ್ನೂರಕ್ಕಿಂತಲೂ ಹೆಚ್ಚು ಕೀಟಗಳು ಗೆಣಸಿನ ಮೇಲೆ ಆಕ್ರಮಣ ಮಾಡುತ್ತವೆ. ಭಾರತದಲ್ಲಿ ಸುಮಾರು ಎಂಬತ್ತರಷ್ಟು ಕೀಟಗಳು ಉಪದ್ರವಕಾರಿಗಳೆಂದು ತಿಳಿದು ಬರುತ್ತದೆ.

ಇದರಲ್ಲಿ ಅತ್ಯಂತ ಮಾರಕವಾದುದೆಂದರೆ ಗೆಣಸು 'ವೀವಿಲ್' ಎಂಬ ಜಂತು.

ಇತ್ತೀಚಿನ ದಿನಗಳಲ್ಲಿ ವೀವಿಲ್‌ನ ನಿಯಂತ್ರಣಕ್ಕೆ ಅತ್ಯಂತ ಫಲಪ್ರದ ತಂತ್ರಜ್ಞಾನವನ್ನು ಗೆಣಸು ಬೆಳೆ ಸಂಶೋಧನವು ಕಂಡುಕೊಂಡಿದೆ. ಲೈಂಗಿಕಾರ್ಷಣ ವಸ್ತುವನ್ನು ಪ್ರಯೋಗಿಸಿ ಗಂಡು ಪ್ರಾಣಿಗಳನ್ನು ಆಕರ್ಷಿಸಿ ನಾಶಪಡಿಸುವುದು ಎಂಬುದು. ಇದರಲ್ಲಿ ತಂತ್ರಜ್ಞಾನ, ಹೆಣ್ಣು ಪ್ರಾಣಿಗಳು ಹೊರಡಿಸುವ ಲೈಂಗಿಕಾರ್ಷಣ ರಾಸಾಯನಿಕ ವಸ್ತುಗಳನ್ನು ಕೃತಕವಾಗಿ ತಯಾರಿಸಿ ಸಣ್ಣ ರಬ್ಬರ್ ನಳಿಕೆಗಳಲ್ಲಿರಿಸಿ ಕಳ್ಳಬಲೆಗಳಲ್ಲಿ ತೂಗಾಡಿಸಿ ತೋಟದಲ್ಲಿ ಇರಿಸಲಾಗುತ್ತದೆ. ಆ ಬಲೆಗಳಲ್ಲಿ ಪ್ರವಹಿಸುವ ರಸ ವಸ್ತು ವಾಸನೆ ಹೆಣ್ಣುಗಳಿಂದ ಬರುತ್ತಿದೆಯೆಂದು ಭಾವಿಸಿ ಗಂಡುಗಳು ಅಲ್ಲಿಗೆ ಆಕರ್ಷಿಸಲ್ಪಟ್ಟು ಬಲೆಗಳಲ್ಲಿ ಸಿಕ್ಕಿಕೊಂಡು ಸಾಯುತ್ತವೆ. ಸಂತತಿಯ ಅಭಿವೃದ್ಧಿಯು ಕುಂಠಿತವಾಗುತ್ತದೆ.

ಮರಗೆಣಸಿಗಿಂತ ಬೇರೆಯಾಗಿ, ಹವಾಗುಣ ಮತ್ತು ಮಣ್ಣಿನ ಗುಣವು, ಗೆಣಸಿನ ಬೆಳೆಯನ್ನು ಗಣನೀಯವಾಗಿ ಪ್ರಭಾವಿಸುತ್ತದೆ. ವೀವಿಲ್ ಬಾಧೆಯನ್ನು ಎದುರಿಸಿ ಬೆಳೆಯಬಲ್ಲ ಮತ್ತು ಅಧಿಕ ಇಳುವರಿ ನೀಡಬಲ್ಲ ತಳಿಗಳ ಅಲಭ್ಯತೆಯು ಗೆಣಸು ಕೃಷಿಯನ್ನು ಅಪಾರವಾಗಿ ಬಾಧಿಸುತ್ತದೆ.

ಕೆ.ಕೆ.

ಗೇರು ಇದರ ವೈಜ್ಞಾನಿಕ ಹೆಸರು ಅನಕಾರ್ಡಿಯಂ ಬಕ್ಸಿಡೆಂಟೆಲ್. ಇದು ಅನಾಕಾರ್ಡಿಯೇಸಿ ಕುಟುಂಬಕ್ಕೆ ಸೇರಿದೆ. ಭಾರತದಿಂದ ವಿದೇಶಗಳಿಗೆ ಅಧಿಕ ಪ್ರಮಾಣದಲ್ಲಿ ರಫ್ತು ಮಾಡಲಾಗುವುದು. ವಿದೇಶಿ ವಿನಿಮಯದ ಮೂಲಕ ರಾಷ್ಟ್ರೀಯ



ಆದಾಯವನ್ನು ಹೆಚ್ಚಿಸಿಕೊಟ್ಟಿದೆ. ಇದರ ಮೂಲಸ್ಥಾನ ದಕ್ಷಿಣ ಅಮೇರಿಕದ ಬ್ರೆಜಿಲ್‌ದೇಶ. ಪೋರ್ಚುಗೀಸರ ಜೊತೆಗೆ ಇದು ಭಾರತವನ್ನು ಪ್ರವೇಶಿಸಿತು. ಕರಾವಳಿಪ್ರದೇಶಗಳಲ್ಲಿ ಇದರ ಬೆಳೆ ಸಮೃದ್ಧವಾಗಿದೆ. ದಕ್ಷಿಣಕನ್ನಡ, ಬೆಂಗಳೂರು, ಕೋಲಾರ, ಮಂಡ್ಯ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಉತ್ತರಕನ್ನಡಜಿಲ್ಲೆಗಳಲ್ಲಿ ಈ ಬೇಸಾಯದ ಅಭಿವೃದ್ಧಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದವರು ಆರ್ಥಿಕ ಸೌಲಭ್ಯ ಹಾಗೂ ಇತರೆ ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಗೇರು ಹಣ್ಣಿನ ಮರವನ್ನು ಹಣ್ಣಿಗಿಂತ ಹೆಚ್ಚಾಗಿ ಗೋಡಂಬಿ ಬೀಜಕ್ಕಾಗಿ ಬೆಳೆಸುತ್ತಾರೆ. ವಾಣಿಜ್ಯ ಬೆಳೆಗಳ ಸಾಲಿನಲ್ಲಿ ಇದು ಮುಂಚೂಣಿಯಲ್ಲಿದೆ.

ಆರಂಭದಲ್ಲಿ ಗೇರುಹಣ್ಣನ್ನು ಕೃಷಿ ಬೆಳೆಯಾಗಿ ಎಲ್ಲಿಯೂ ಬೆಳೆಸುತ್ತಿರಲಿಲ್ಲ. ಆದರೆ ಈಗೀಗ ಕಾಡು-ಮೇಡುಗಳಲ್ಲಿನ ವನ್ಯಸಸ್ಯಗಳನ್ನು ಕಡಿದು ಗೇರು ಬೆಳೆಯನ್ನು ಬೆಳೆಯುತ್ತಾರೆ. ಪೊದರಿನಂತೆ ಹಬ್ಬಿ ಬೆಳೆಯುವ ಇವುಗಳಲ್ಲಿ ಕಾಡುಜಾತಿ ಮತ್ತು ಬೆಳೆಸುಜಾತಿಗಳೆಂದು ಎರಡು ಬಗೆಗಳಿವೆ. ಈ ಮರಗಳು ಸಾಮಾನ್ಯವಾಗಿ ಗುಡ್ಡ ಪ್ರದೇಶಗಳಲ್ಲಿ ಕಾಡುದಾರಿಗಳಲ್ಲಿ ಹುಲುಸಾಗಿ ಬೆಳೆಯುತ್ತವೆ. ಇದಕ್ಕೆ ಮರಳು ಮಿಶ್ರಿತ ಕಲ್ಲು ಮತ್ತು ಜರಗು ಮಣ್ಣು ಉತ್ತಮ.

ಬಿತ್ತನೆ : ಇವುಗಳ ಸಸ್ಯಾಭಿವೃದ್ಧಿ ಬೀಜಗಳಿಂದ, ಕಸಿವಿಧಾನಗಳಿಂದ ನಡೆಯುತ್ತದೆ. ಈ ಬೀಜಗಳನ್ನು ಮಡಿಗಳಲ್ಲಿ ಬಿತ್ತಿ ಅವು ಮೂರರಿಂದ ನಾಲ್ಕು ಇಂಚು ಎತ್ತರಕ್ಕೆ ಬೆಳೆದಾಗ ಸಣ್ಣ ಬಿದಿರು ಬುಟ್ಟಿಗಳಲ್ಲಿ ಅಥವಾ ಸಣ್ಣ ಚೀಲಗಳಲ್ಲಿ ಬೆಳೆಸುತ್ತಾರೆ. ಗಿಡ ಸ್ವಲ್ಪ ದೊಡ್ಡದಾದ ಮೇಲೆ ಏರುಪೇರಿನ ಗುಡ್ಡಗಳಲ್ಲಿ ಅಥವಾ ಸಮತಟ್ಟಾದ ಮೈದಾನಗಳಲ್ಲಿ 15-20ಅಡಿ ಅಂತರದಲ್ಲಿ ನೆಡಬೇಕು. ನೆಡುವಾಗ ಪ್ರತಿಯೊಂದು ಗುಂಡಿಗೂ ಸುಡುಮಣ್ಣು ಮತ್ತು ಸ್ವಲ್ಪ ಬೂದಿಯ ಮಿಶ್ರಣವನ್ನು ಹಾಕಬೇಕು. ಮರದ ಆಕೃತಿ ಬಹಳ ಚೆಲುವಾಗಿದ್ದು ಮರ, ನೆಲದಿಂದಲೇ ಎಲ್ಲಾ ದಿಕ್ಕುಗಳಿಗೂ ರೆಂಬೆ ಕೊಂಬೆಗಳನ್ನು ಹರಡಿಕೊಂಡಿರುತ್ತದೆ. ತುಂಬು ಎಲೆ, ಎಲೆ ಗುತ್ತಿಗಳ ತುದಿಯಿಂದ ಬಣ್ಣಬಣ್ಣದ ಹಳದಿ ಕೆಂಪು ಹಣ್ಣುಗಳು ತೂಗುತ್ತಿರುತ್ತವೆ. ಹಣ್ಣಿನಲ್ಲಿ ಎರಡು ಭಾಗಗಳು 1. ಬುಗುರಿಯಾಕಾರದ ಮೃದು ಭಾಗ ಇದು ಹಳದಿ - ಕೆಂಪು ಬಣ್ಣಗಳಿಂದ ಕೂಡಿರುತ್ತದೆ, 2. ಹಣ್ಣಿನ ಅಗಲದ ತುದಿಗೆ ಅಂಟಿಕೊಂಡಿರುವ ಹುರುಳಿಯಾಕಾರದ ಗಟ್ಟಿಭಾಗವೇ ಗೇರು ಬೀಜ. ಹಣ್ಣಿನ ಹೊರ ಭಾಗದಲ್ಲಿ ಬೀಜ ಹೊಂದಿರುತ್ತದೆ. ಆದುದರಿಂದಲೇ ನಗ್ನ ಬೀಜಿ ವರ್ಗಕ್ಕೆ ಇದು ಸೇರುತ್ತದೆ. ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಎಂದು ದಾಸರು ಸಹ ಹಾಡಿದ್ದಾರೆ.

ಇಳುವರಿ : ನೆಟ್ಟ ಗಿಡ ಮೂರ್ನಾಲ್ಕು ವರ್ಷಗಳಲ್ಲಿ ಫಲ ಕೊಡಲಾರಂಭಿಸುತ್ತದೆ. ಹತ್ತನೇ ವರ್ಷದಿಂದ ತುಂಬು ಫಸಲನ್ನು ನೀಡುತ್ತದೆ. ನವೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ಹಣ್ಣುಗಳನ್ನು ಕೊಡುತ್ತದೆ. ಗೇರು ಮರಕ್ಕೆ ಸಂಬಂಧಪಟ್ಟ ರೋಗಗಳ ಬಗ್ಗೆ ಹೆಚ್ಚು ತಿಳಿದುಬಂದಿಲ್ಲ. ಸಾಮಾನ್ಯವಾಗಿ ಕರಿಬೂಜುರೋಗ ಇದರ ಹೂ ಮತ್ತು ಮಿಡಿಗಳಿಗೆ ಅಂಟುತ್ತದೆ.

ಉಪಯೋಗಗಳು : ಈ ಹಣ್ಣಿನಲ್ಲಿ ಪಾನಕ, ಮದ್ಯ, ಬ್ರಾಂದಿ ಮುಂತಾದುವನ್ನು ತಯಾರಿಸುತ್ತಾರೆ. ಸಕ್ಕರೆ ಪಾಕದೊಂದಿಗೆ ಈ ಹಣ್ಣನ್ನು ಕುದಿಸಿ ತಿಂದರೆ ತುಂಬಾ ರುಚಿ. ವಿಟಮಿನ್ 'ಸಿ' ಮತ್ತು ಆಮ್ಲದ ಅಂಶಗಳು ಈ ಹಣ್ಣಿನಲ್ಲಿ ಅಧಿಕವಾಗಿದೆ. ಇದರ ಬೀಜವನ್ನು ಗೋಡಂಬಿ, ಗೇರು ಪಪ್ಪು ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಗೋಡಂಬಿ ತುಂಬಾ ರುಚಿಯಾಗಿದ್ದು ಅನೇಕ ತಿಂಡಿ ತಿನಿಸುಗಳಲ್ಲಿ ಬಳಸುತ್ತಾರೆ. ಅಲ್ಲದೇ ಇದರ ಸಿಪ್ಪೆಯಿಂದ ಅಥವಾ ಇಡೀ ಬೀಜದಿಂದ ಎಣ್ಣೆ ತಯಾರಿಸಿ ಆ ಎಣ್ಣೆಯನ್ನು ಪ್ರಾಣಿಗಳ ಗೊರಸಿನ ವ್ರಣವನ್ನು ನಾಶಪಡಿಸುವ ಔಷಧಿಯನ್ನಾಗಿ ಬಳಸುತ್ತಾರೆ. ಇದನ್ನು ತೆಲುಗಿನಲ್ಲಿ ಜೀಡಿಗಿಂಜ ಎಂದು ಕರೆಯುತ್ತಾರೆ. ರಜಕರು ಹಿಂದೆ ಈ ಬೀಜವನ್ನು ಸುಟ್ಟು ಬಟ್ಟೆಗಳಿಗೆ ಗುರುತನ್ನು ಹಾಕುತ್ತಿದ್ದರು.

ಎನ್. ಆರ್.

ಗೊಬ್ಬರದ ತಾಂಗು ಹಟ್ಟಿಯ ಸಮೀಪ ನೆಟ್ಟ ಎರಡು ಕಂಬಗಳಿಗೆ ನಾಲ್ಕೈದು ಅಡಿ ಉದ್ದದ ಸಲಿಕೆ ಅಥವಾ ಮರದ ದಂಟನ್ನು ಅಡ್ಡಲಾಗಿ ಕಟ್ಟುತ್ತಾರೆ. ಗೊಬ್ಬರ ಹೊರುವ ಆಳಿನಷ್ಟು ಎತ್ತರಕ್ಕೆ ಸಲಿಕೆಯನ್ನು ಕಟ್ಟುತ್ತಾರೆ. ಈ ಸಲಿಕೆಯ ಮೇಲೆ ಗೊಬ್ಬರದ ಬುಟ್ಟಿಯನ್ನು ಇಟ್ಟು ಆಳೆತ್ತರದ ಇನ್ನೊಂದು ಸಲಿಕೆ ಅಥವಾ ಬಿದಿರಿನ ಕೋಲನ್ನು ಬುಟ್ಟಿಯ ಅಡಿಗೆ ಅಥವಾ ಒಂದು ಕೈಗೆ ಆಧಾರವಾಗಿ ಕೊಡುತ್ತಾರೆ.

ಮೂರ್‍ನಾಲ್ಕು ಜನ ಮಾತ್ರ ಕೆಲಸಕ್ಕೆ ಬಂದಿದ್ದರೆ, ಸಾಮಾನ್ಯವಾಗಿ ಎಲ್ಲರಿಗೂ ಗೊಬ್ಬರ ಹೊರಲು ಸಾಧ್ಯವಾಗುವುದಿಲ್ಲ. ಕೊನೆಯ ಆಳಿನ ತಲೆಗೆ ಗೊಬ್ಬರದ ಬುಟ್ಟಿಯನ್ನು ಎತ್ತಿ‌ಇಟ್ಟುಕೊಳ್ಳಲು ಕಷ್ಟಸಾಧ್ಯ. ಇಂಥ ಸಂದರ್ಭದಲ್ಲಿ ಮೊದಲೇ ಸಲಿಕೆಯ ಮೇಲಿಟ್ಟ ಗೊಬ್ಬರದ ಬುಟ್ಟಿಗೆ ಕೊಟ್ಟ ಆಧಾರದ ಕೋಲನ್ನು ಬದಿಗಿಟ್ಟು ತನ್ನ ತಲೆಗೆ ಬುಟ್ಟಿಯನ್ನು ತಂದುಕೊಳ್ಳಲು ಸಾಧ್ಯವಾಗುತ್ತದೆ. ಹಳ್ಳಿಯಲ್ಲಿ ನಿಗದಿತ ಸಂಖ್ಯೆಯ ಕಾರ್ಮಿಕರು ಗೊಬ್ಬರ ಹೊರುವ ಸಂದರ್ಭದಲ್ಲಿ ಇದರ ಪ್ರಯೋಜನ ಸಾಕಷ್ಟಿದೆ. ಅಷ್ಟೂ ಸಂಖ್ಯೆಯ ಕಾರ್ಮಿಕರ ಗರಿಷ್ಟ ಸೇವೆ, ಶ್ರಮ ಮತ್ತು ಸಮಯ ಲಭ್ಯವಾಗುತ್ತದೆ. ಕಾಸರಗೋಡು, ದಕ್ಷಿಣ ಕನ್ನಡ ಪ್ರದೇಶಗಳಲ್ಲಿ ಈ ಜನಪದ ತಂತ್ರಜ್ಞಾನವನ್ನು ಬಳಸುತ್ತಾರೆ. ಇದು ಕರಾವಳಿಯ ವೈಶಿಷ್ಟ್ಯಪೂರ್ಣ ಆವಿಷ್ಕಾರಗಳಲ್ಲಿ ಒಂದು. ಹಳ್ಳಿಯ ಈ ಅನನ್ಯ ತಂತ್ರ ಇತ್ತೀಚಿನ ದಿನಗಳಲ್ಲಿ ಕಣ್ಮರೆಯಾಗುತ್ತಿದೆ.

ಎಸ್.ವೈ.

ಗೋಡು ಕೆರೆಯಲ್ಲಿ ಇರುವ ಗೊಬ್ಬರದಂತಹ ಉತ್ಕೃಷ್ಟವಾದ ಮಣ್ಣು 'ಗೋಡು'. ಇದು ಕೆರೆಯ ಮೇಲ್ ಪದರದಲ್ಲಿ ಸುಮಾರು 2 ಅಡಿಯಿಂದ 5-6 ಅಡಿಗಳ ಆಳದವರೆಗೆ ಇರುತ್ತದೆ. ಕೆರೆಯ ಮೇಲ್ ಭಾಗದಲ್ಲಿ ಕೆನಕಲು ಇರುತ್ತದೆ. ಅದನ್ನು ಬಿಟ್ಟರೆ ಅದರ ಕೆಳಗೆ ಸುಮಾರು 5 ರಿಂದ 6 ಅಡಿ ಆಳದವರೆಗೆ ಸಿಗುವುದೆ ಗೋಡು.

ಮಳೆಯಲ್ಲಿ ತೇಲಿ ಬಂದ ಕಸ, ಕಡ್ಡಿ, ಉಳುಮೆ ಜಮೀನಿನ ಸವಕಲು ಮಣ್ಣು ಮಾತ್ರವಲ್ಲದೆ ಗೋಮಾಳಗಳ ಸಗಣಿ ಹುಲ್ಲುಗಳು ತೇಲಿಬಂದು ಕೆರೆಯಲ್ಲಿ ವರ್ಷಗಟ್ಟಲೆ ನೀರಿನಲ್ಲಿ ಕರಗಿ ಕೆರೆಯ ತಳಭಾಗಕ್ಕೆ ಇಳಿಯುತ್ತದೆ. ಅದು ಕಾಲಾಂತರದಲ್ಲಿ ಕೊಳೆತು ಗೋಡಾಗಿ ಪರಿವರ್ತನೆಗೊಳ್ಳುತ್ತದೆ.

ಗೋಡನ್ನು ಕೃಷಿ ಭೂಮಿಗೆ ಸರಿಯಾದ ಪ್ರಮಾಣದಲ್ಲಿ ಹಾಕಿದರೆ ಉತ್ತಮ ಬೆಳೆಯನ್ನು ಬೆಳೆಯುವುದಲ್ಲದೆ ಭೂಮಿಯಲ್ಲಿ ಅನೇಕ ದಿನ ಮಳೆ ಬರದೇ ಹೋದರು ತೇವಾಂಶ ಇರುವಂತೆ ಕಾಪಾಡುತ್ತದೆ. ಗೋಡಿನ ಬಣ್ಣವು ಆ ಭೂಪ್ರದೇಶದ ಬಣ್ಣಕ್ಕೆ ಸಂಬಂಧಿಸಿದ್ದು ಬಹುತೇಕ ಕಪ್ಪಗೆ ಇರುತ್ತದೆ. ಗೋಡನ್ನು ಕೃಷಿ ಭೂಮಿಗೆ ಪ್ರತಿ ವರ್ಷವು ಹಾಕುವ ಅವಶ್ಯಕತೆ ಇಲ್ಲ, ಮೂರು ಅಥವಾ ನಾಲ್ಕು ವರ್ಷಕ್ಕೆ ಹಾಕಿದರೂ ಸಾಕು.

ಕೆ.ಜಿ.ಪಿ.

ಗೋಣಿಚೀಲ ಸೆಣಬಿನ (ಜೂಟ್) ನಾರಿನಿಂದ ತಯಾರಿಸಿದ ಚೀಲ. ಗೋಣಿಚೀಲ ತಯಾರಿಸಲು ಸೆಣಬು, ಅಪ್ಸೆಣಬು, ಪುಂಡಿ ನಾರನ್ನು ಸಾಮಾನ್ಯವಾಗಿ ಬಳಸುತ್ತಾರೆ. ಸೆಣಬನ್ನು ಸಾವಯವ ಗೊಬ್ಬರವಾಗಿ ಉಪಯೋಗಿಸಲು ಗದ್ದೆ ಮತ್ತು ತೋಟಗಳಲ್ಲಿ ಬೆಳೆಯುತ್ತಾರೆ. ಮೂರ್‍ನಾಲ್ಕು ಅಡಿ ಎತ್ತರ ಬೆಳೆದ ಸೆಣಬನ್ನು ಕೊಯ್ದು ನೀರಿನಲ್ಲಿ ಕೊಳೆ ಹಾಕಬೇಕು. 20 ರಿಂದ ಮೂವತ್ತು ದಿನಗಳ ಅನಂತರ ಅದರಲ್ಲಿ ಸೆಣಬು ಬಿಟ್ಟುಕೊಳ್ಳುತ್ತದೆ. ಹೊರ ತೆಗೆದ ಸೆಣಬಿನಿಂದ ನಾರನ್ನು ಬೇರ್ಪಡಿಸಿ ಹದಗೊಳಿಸಬೇಕು. ಹದಗೊಳಿಸಿದ ನಾರಿನಿಂದ ಅಗಲವಾದ ತಾಟು ತಯಾರಿಸಿ ಅದರಿಂದ ಗೋಣಿಚೀಲವನ್ನು ಹೊಲಿಯುತ್ತಾರೆ.

ಗೋಣಿಚೀಲಗಳನ್ನು ಅವರವರ ಅನುಕೂಲಕ್ಕೆ ತಕ್ಕಂತೆ ಹೊಲಿಯುತ್ತಾರೆ. ಉದಾಹರಣೆಗೆ ಸಕ್ಕರೆ ಚೀಲಗಳು 100 ಕೆ.ಜಿ. ತುಂಬಲು ತೊಗರಿ, ಅವರೆ, ಉದ್ದಿನ ಬೇಳೆಗಳನ್ನು ತುಂಬಲು, 50 ಕೆ.ಜಿ. ಚೀಲ ತಯಾರಿಸು ತ್ತಾರೆ. ಇವುಗಳನ್ನು ತಯಾರಿಸಲು ಅನೇಕ ಕಾರ್ಖಾನೆಗಳೆ ಇವೆ. ಇವು ಉತ್ತರ ಭಾರತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಗೋಣಿಚೀಲವನ್ನು ಯಂತ್ರದ ಸಹಾಯದಿಂದ ಹೊಲಿಯು ತ್ತಾರೆ. ಆದರೆ ವಸ್ತುಗಳನ್ನು ತುಂಬಿದ ಅನಂತರ ಯಂತ್ರ ಹಾಗೂ ಮಾನವ ಸಹಾಯದಿಂದ ದಬ್ಬಳ ಹಾಗೂ ಗೋಣಿದಾರ ಉಪಯೋಗಿಸಿ ಹೊಲಿಯುತ್ತಾರೆ. ಇಂಥ ಚೀಲಗಳು ಗಡುಸಾಗಿರುತ್ತವೆ.

ಹಾಸಗೆಯ ಅಡಿ ಹಾಕಲು, ಈರುಳ್ಳಿ ತುಂಬಲು ರೇಷ್ಮೆಗೂಡು ತುಂಬಲು ಹಾಗೂ ಅನ್ನ ಬಸಿಯಲು ತೆಳುವಾದ ಗೋಣಿ ತಾಟುಗಳನ್ನು ಬಳಸುತ್ತಾರೆ. 1980 ರ ದಶಕದಲ್ಲಿ ಗೋಣಿಚೀಲಗಳನ್ನು 50 ಕೆ.ಜಿ. ಸಿಮೆಂಟ್ ತುಂಬಲು ಉಪಯೋಗಿಸುತ್ತಿದ್ದರು. ಆಲಂಕಾರಿಕ ಬ್ಯಾಗ್‌ಗಳನ್ನು ತಯಾರಿಸಲು ಸೆಣಬನ್ನು ಉಪಯೋಗಿಸುತ್ತಾರೆ.

ಕಾಲಾನುಕ್ರಮದಲ್ಲಿ ಸೆಣಬಿನ ಬೆಳೆ ಕಡಿಮೆಯಾಗಿ ಹಾಗೂ ಸಾವಯವ ಗೊಬ್ಬರಕ್ಕೆ ಹೆಚ್ಚಾಗಿ ಸೆಣಬು, ಅಪ್ಸೆಣಬು ಮತ್ತು ಪುಂಡಿಯನ್ನು ಉಪಯೋಗಿಸುವುದರಿಂದ, ಇದರ ಬದಲಾಗಿ ಪ್ಲಾಸ್ಟಿಕ್ ಹಾಗೂ ಹತ್ತಿಯಿಂದ ತಯಾರಾದ ಬ್ಯಾಗುಗಳನ್ನು ಉಪಯೋಗಿಸುತ್ತಿದ್ದಾರೆ. ಇವುಗಳ ಬೆಲೆಯು ದುಬಾರಿಯಾಗಿದೆ.

ಆರ್.ಎಚ್.ಎಸ್.

ಗೋಣಿಮರ ಇದರ ಮೂಲಸ್ಥಾನ ಕರ್ನಾಟಕ. ಇದು ಮೊರೇಸಿ ಕುಟುಂಬಕ್ಕೆ ಸೇರಿದ್ದು, ಅಂಜೂರ, ಅರಳಿ, ಆಲ ಮುಂತಾದವು ಇದರ ಸಂಬಂಧಿ. ವೈಜ್ಞಾನಿಕ ಹೆಸರು ಫೈಕಸ್‌ಡ್ರೂಪೇಸಿಯ ಅಥವಾ ಫೈಕಸ್ ಮೈಸೂರೆನ್ಸಿಸ್. ಶ್ರೀಲಂಕಾ ಬರ್ಮ, ಖಾಸಿಬೆಟ್ಟಗಳಲ್ಲಿ ಇದು ಇಂದಿಗೂ ಕಂಡುಬರುತ್ತದೆ. ಅಲಂಕಾರಕ್ಕಾಗಿ ಇದನ್ನು ಉದ್ಯಾನವನಗಳಲ್ಲಿಯೂ ರಸ್ತೆಯ ಬದಿಯಲ್ಲಿ ಸಾಲುಮರವಾಗಿಯೂ ಬೆಳೆಸುತ್ತಾರೆ.

ಸು. 30-60 ಅಡಿ ಬೆಳೆಯಬಲ್ಲದು. ಕಾಂಡ ಬೂದು ಬಣ್ಣ. ಎಳಸು ಕಾಂಡ ಮುರಿದರೆ ಹಾಲು ಸ್ರವಿಸುತ್ತದೆ. ಪರ್ಯಾಯ ಮಾದರಿಯ ಸರಳ ಜೋಡಣೆಯ ಎಲೆಗಳು ಇದರದು. ಅಂಡಾಕಾರ, ತುದಿ ಚೂಪಾದ, ಹೊರಮೈ ಹೊಳಪಾದ ಎಲೆಗಳಿರುತ್ತವೆ. ಚಿಕ್ಕ ಚಿಕ್ಕ ಹೂಗಳು ಗುಂಡನೆಯ ಹೂಗೊಂಚಲು ಇದರದು. ಹೂವೇ ಕಾಯಿಯಂತೆ ಹಸುರಾಗಿರುತ್ತದೆ. ಮಾಗಿದ ಮೇಲೆ ಕಿತ್ತಲೆ ಬಣ್ಣಕ್ಕೆ

ತಿರುಗುತ್ತದೆ. ಇದು ಹೆಣ್ಣು ಮತ್ತು ಗಂಡು ಹೂಗಳುಳ್ಳ ಏಕಲಿಂಗಿ ಹೂವಿರುವಂಥದು. ವಿಶೇಷವಾದ ಪರಾಗಸ್ಪರ್ಶವನ್ನು ಇದರಲ್ಲಿ ಕಾಣುತ್ತೇವೆ. ಕೀಟವೊಂದು ಹೂಗೊಂಚಲಿನ ಒಳಗೆ ಹೋಗಿ ಮೊಟ್ಟೆಯನಿಟ್ಟು ಮೇಲೆ ಹೊರಬರದೇ ಸಾಯುತ್ತದೆ. ಮೊಟ್ಟೆ ಮರಿಯಾಗಿ ಹೊರಬಂದು ಗಂಡು ಹೂಗಳ ಮೇಲೆ ಚಲಿಸಿ ಪರಾಗರೇಣು ಪಡೆದು ಹೆಣ್ಣು ಹೂವಿನ ಒಳಗೆ ಮೊಟ್ಟೆ ಇಡಲು ಹೋದಾಗ ಶಲಾಕಾಗ್ರದ ಮೇಲೆ ಪರಾಗರೇಣು ಬಿದ್ದು ಪರಾಗಸ್ಪರ್ಶ ಉಂಟಾಗುತ್ತದೆ.

ಇದರ ಹಾಲನ್ನು ಮೇಕೆ ಅಥವಾ ಹಸುವಿನ ಹಾಲಿನೊಂದಿಗೆ ಬೆರೆಸಿ ದಡಾರ ಬಂದ ಮಕ್ಕಳಿಗೆ ಔಷಧಿಯಾಗಿ ಕುಡಿಸುತ್ತಾರೆ.

ಜಿ.ಎಸ್.ಎಸ್

ಗೋದಿ ಇದು ಏಕದಳ ಸಸ್ಯ. ಹುಲ್ಲು ಜಾತಿಯ ಸಸ್ಯ ಕುಟುಂಬಕ್ಕೆ ಸೇರುತ್ತದೆ. ಪ್ರಪಂಚದಲ್ಲಿ ಹೆಚ್ಚು ಜನ ಬಳಸುವ ಆಹಾರ ಧಾನ್ಯಗಳಲ್ಲಿ ಬತ್ತ ಮೊದಲನೆಯ ಸ್ಥಾನವನ್ನು ಗೋದಿ ಎರಡನೆಯ ಸ್ಥಾನವನ್ನು ಪಡೆದಿದೆ. ಭಾರತದ ಉತ್ತರ ಭಾಗದಲ್ಲಿ ಇದು ಪ್ರಧಾನ ಬೆಳೆ. ಅಲ್ಲಿಯ ಆಹಾರದಲ್ಲಿ ಗೋದಿ ಪ್ರಥಮಸ್ಥಾನವನ್ನು ಪಡೆದಿದೆ. ಕರ್ನಾಟಕದಲ್ಲಿ ಅಕ್ಕಿ ಮತ್ತು ರಾಗಿಯ ಅನಂತರದ ಸ್ಥಾನ ಗೋದಿಯದು.

ಪಂಜಾಬು, ಗಂಗಾನದಿಯ ಮೈದಾನ, ಸಿಂಧು, ಗಡಿನಾಡು ಪ್ರದೇಶಗಳಲ್ಲಿ ಗೋದಿಯನ್ನು ಹೆಚ್ಚಾಗಿ ಬೆಳೆಯುವುದಿದೆ. ಪ್ರಪಂಚದ 120 ದೇಶಗಳಲ್ಲಿ ಗೋದಿಯನ್ನು ಬೆಳೆಯುತ್ತಾರೆ. ಹೊಟ್ಟೆಗೋಧಿ, ಜವೆಗೋದಿ ಎಂದು ಇದರಲ್ಲಿ ಎರಡು ವಿಧ. ಹೊಟ್ಟೆ ಗೋದಿ ಮೃದುವಾಗಿದ್ದು ಹಿಟ್ಟಿಗಾಗಿಯೂ, ಜವೆಗೋದಿ ಗಟ್ಟಿಯಾಗಿದ್ದು ರವೆಗಾಗಿಯೂ ಉಪಯೋಗಿಸುತ್ತಾರೆ.

ಚಳಿಗಾಲದ ಬೆಳೆಯಾದ ಇದನ್ನು ಕರ್ನಾಟಕದ ಉತ್ತರ ಜಿಲ್ಲೆಗಳಾದ ಬೆಳಗಾವಿ, ಬೀದರ್, ಬಿಜಾಪುರ, ಧಾರವಾಡ ಮತ್ತು ರಾಯಚೂರು



ಜಿಲ್ಲೆಗಳಲ್ಲಿ ಕಪ್ಪು ಜೇಡಿಮಣ್ಣು ಹೆಚ್ಚಾಗಿದ್ದು ಗೋಧಿ ಬೆಳೆಯಲು ಯೋಗ್ಯವಾಗಿದೆ. ಕೋಲಾರ ಜಿಲ್ಲೆಯ ಪೂರ್ವ ಭಾಗದಲ್ಲಿ ಅಲ್ಪ ಪ್ರಮಾಣದಲ್ಲಿ ಇದನ್ನು ಬೆಳೆಯುತ್ತಾರೆ.

ಹವಾಗುಣ : ಸಾಧಾರಣವಾಗಿ ಗೋದಿಯನ್ನು ಹಿಮಗಾಲದಲ್ಲಿ ಬೆಳೆಯುವುದುಂಟು. ಇದನ್ನು ಬಿತ್ತಲು ಯೋಗ್ಯವಾದ ಕಾಲ ಅಕ್ಟೋಬರ್‌ನಿಂದ ಮಾರ್ಚ್‌ವರೆಗೆ. ಈ ಬೆಳೆಗೆ ಮಳೆಗಿಂತ ತಂಪಾದ ಶೀತ ವಾತಾವರಣ ಹಿತಕರ. ಸದಾ ತೇವದಿಂದ ಕೂಡಿರುವ ಜೇಡಿಮಣ್ಣಿನ ನೆಲವಾದರೆ ಉತ್ತಮ ಇಳುವರಿಯನ್ನು ಪಡೆಯಬಹುದು.

ಉಳುಮೆ : ಬಿತ್ತುವ ಮೊದಲು ನೆಲವನ್ನು ಎರಡು ಭಾರಿ ಅಡ್ಡಲಾಗಿ ಎರಡು ಬಾರಿ ಉದ್ದವಾಗಿ ಆಳವಾಗಿ ಉಳುಮೆ ಮಾಡಬೇಕು. (ಅಡ್ಡಸಾಲು ನೇರಸಾಲು). ಮತ್ತೊಮ್ಮೆ ಹಲುಬೆ ಹೊಡೆದು ಕಸ ಕಡ್ಡಿ, ಹುಲ್ಲು ತೆಗೆದು ಸಮ ಮಾಡಬೇಕು. ಹೆಂಟೆಗಳಿದ್ದರೆ ಒಡೆದು ಪುಡಿ ಮಾಡಬೇಕು. ಇನ್ನೊಮ್ಮೆ ಸಣ್ಣ ಹಲ್ಲಿನ ಹಲುಬೆ ಹೊಡೆದು ಹದಮಾಡಿ ಒಂದರೆಡು ದಿನ ಒಣಗಲು ಬಿಡಬೇಕು. ಅನಂತರ ಆವಶ್ಯವಾದಷ್ಟು ಗೊಬ್ಬರವನ್ನು ಹರಡಿ ಹಲುಬೆ ಹೊಡೆದು ಕೊಟ್ಟಿಗೆ ಗೊಬ್ಬರ ಮಣ್ಣಿನಲ್ಲಿ ಚೆನ್ನಾಗಿ ಬೆರೆಯುವಂತೆ ಮಾಡಬೇಕು.

ಬಿತ್ತನೆ : ಒಂದು ಎಕರೆ ಪ್ರದೇಶದಲ್ಲಿ ಬಿತ್ತಲು 7 ರಿಂದ 10 ಸೇರು ಗೋಧಿ ಬೇಕಾಗಬಹುದು. ಚೆನ್ನಾಗಿ ಬೆಳೆದ ಹೊಲದಲ್ಲಿಯ ಬಲಿತ ಕಾಳುಗಳನ್ನು ಪ್ರತ್ಯೇಕವಾಗಿ ಶೇಖರಿಸಿ ಸಿಪ್ಪೆ ಸಹಿತ ಒಣಗಿಸಿ ಬಿತ್ತನೆಗೆ ಉಪಯೋಗಿಸಬೇಕು. ನೇಗಿಲಿನಿಂದ 1¼ ಅಡಿ ಅಂತರದ ಸಾಲು ಹೊಡೆಯುತ್ತಾ ಹೋದಂತೆ 6-8 ಅಂಗಲಕ್ಕೆ ಒಂದೆರಡು ಬೀಜ ಬೀಳುವಂತೆ ಬಿತ್ತಬೇಕು. ಬಿತ್ತನೆ ಮಾಡಿದ ಕೂಡಲೆ ಹಲುಬೆಯಿಂದ ಹಗುರವಾಗಿ ಸಾಲುಗಳಿಗೆ ಅಡ್ಡಲಾಗಿ ಹೊಡೆದು ಹದಮಾಡಬೇಕು. ಕೈಯಿಂದ ಬಿತ್ತಿದರೆ ಒಂದು ಎಕರೆಗೆ 15 ಸೇರು ಗೋದಿಬೇಕಾಗುತ್ತದೆ. ಹೀಗೆ ಎರಚಿ ಬಿತ್ತಿದ ಮೇಲೆ ಹಲುಬೆಯನ್ನು ಎರಡು ಸಲ ಅಡ್ಡಲಾಗಿ ಮತ್ತು ಉದ್ದವಾಗಿ ಹೊಡೆಯಬೇಕು. ಗೋದಿ ಬಿತ್ತಿದ 5-6 ದಿನಗಳಲ್ಲಿ ಮೊಳಕೆ ಕಾಣಿಸಿಕೊಳ್ಳುತ್ತದೆ. ಆದರೆ ಬೀಜ ಮೊಳೆಯಲು ಸಾಕಷ್ಟು ತೇವಾಂಶವಿರಬೇಕು. ಇಲ್ಲವಾದರೆ ನೀರನ್ನು ಹಾಯಿಸಬೇಕಾಗುತ್ತದೆ. ಮೊಳಕೆ ಬಂದ 25-30



ದಿನಗಳಲ್ಲಿ ಕೈ ಉಳುಮೆ ಸಾಧನ (ಕೈ ಗುದ್ದಲಿ) ಬಳಸಿ ಸಾಲುಗಳ ಮಧ್ಯೆ ನೇಗಿಲಿನಂತೆ ಎಳೆಯಬೇಕು. ಕೈ ಗುದ್ದಲಿ ಅಥವಾ ಎಡಕೋಲು ಗುದ್ದಲಿಯಿಂದ ತಾಕುಗಳನ್ನು ಕೆದಕಿ ಎರಡು ಸಾಲುಗಳ ಮಧ್ಯೆ ಪೈರಿನ ಬುಡಕ್ಕೆ ಮಣ್ಣು ಬೀಳುವಂತೆ, ಹಾಕಬೇಕು. ಗೋಧಿ ಪ್ರಾಥಮಿಕ ಹಾಗೂ ಪ್ರಬುದ್ಧ ಬೇರಿನ ಗುಣವನ್ನು ಹೊಂದಿರುವುದರಿಂದ ಪ್ರಾಥಮಿಕ ಬೇರು ಆರಂಭದ ಹಂತದಲ್ಲಿ ತೆಳುವಾಗಿದ್ದು ಸಸ್ಯಗಳು ಬಲವಾಗಿ ನಿಂತು ಹೆಚ್ಚು ತೆಂಡೆಹೊಡೆದು ಬರಲು

ನೆರವಾಗುತ್ತದೆ. ಒಂದು ಪೈರಿನಲ್ಲಿ ಸುಮಾರು 40 ರವರೆಗೆ ತೆಂಡೆ ಹೊಡೆಯುವ ಸಾಧ್ಯತೆ ಇದೆ. ಮಣ್ಣು ಏರಿ ಹಾಕಿದ ಕೆಲವು ದಿನಗಳಲ್ಲಿ ಪ್ರಬುದ್ಧ ಬೇರು ಮಣ್ಣಿನ ಮೇಲ್ಭಾಗದಲ್ಲಿ ಹರಡಿ ಕೊಳ್ಳುತ್ತದೆ. ಅನಂತರ ಭೂಗುಣ ಮತ್ತು ಹವಾಗುಣಗಳನ್ನು ನೋಡಿಕೊಂಡು ಆಗಾಗ ನೀರನ್ನು ಒದಗಿಸಬೇಕು. ಪೈರು ಬೆಳೆದಂತೆ ಕಳೆಯೂ ಬೆಳೆಯುವುದರಿಂದ ಕೆದಕಿ ಆಗಾಗ ಕಳೆ ತೆಗೆಯಬೇಕು. ತೆನೆ ಕಚ್ಚುವ ಮೊದಲು ಎರಡು ಮೂರು ಬಾರಿ ಕೆದಕಿ ಶುದ್ಧ ಮಾಡುವುದರಿಂದ ಪೈರಿಗೆ ತಾಕತ್ತು ಸಿಕ್ಕಿ ಹುಲುಸಾಗಿ ಬೆಳೆದು ಉತ್ತಮ ಇಳುವರಿಯನ್ನು ಕೊಡುತ್ತದೆ.

ತೆನೆ ಕಟ್ಟಿದಂತೆಲ್ಲ ನೀರನ್ನು ಹೆಚ್ಚಾಗಿ ಕೊಡಬೇಕು. ತೇವಾಂಶ ಕಡಿಮೆಯಾದರೆ ಬೀಜ ಸಣ್ಣದಾಗುತ್ತದೆ.

ಕೊಯ್ಲು : ತೆನೆ ಬಂದ 40 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ತೆನೆ ಒಣಗಿ ಪೈರು ಬಾಡಿ ಕೆಂಪೇರಿದಾಗ ತೆನೆ ಬಲಿತಿದೆ ಎಂದು ತಿಳಿದು ಕಟಾವು ಮಾಡಬಹುದು. ಕಟಾವು ಮಾಡಿದ ಮೇಲೆ ಅದೇ ಜಾಗದಲ್ಲಿ ಒಂದೆರಡು ದಿನ ಒಣಗಲು ಬಿಡಬೇಕು. ಒಣಗಿದ ಪೈರನ್ನು ಕಂತೆ ಕಟ್ಟಿ ಕಣಕ್ಕೆ ತಂದು ತೆಳುವಾಗಿ ಚೆನ್ನಾಗಿ ಒಣಗಿಸಿದ ಮೇಲೆ ರೋಣು ಕಲ್ಲಿನಿಂದ ಒಕ್ಕಣೆ ಮಾಡಬೇಕು.

ಗೋದಿಯಲ್ಲಿ ಸೂಲು ಬರುವ ಮತ್ತು ಸೂಲಿಲ್ಲದ ಎರಡು ಜಾತಿಗಳಿವೆ. ಸೂಲಿರುವ ಜಾತಿಯೇ ಉತ್ತಮವಾದುದು. ಒಕ್ಕಣೆ ಮಾಡಿದ ಮೇಲೆ ಹುಲ್ಲನ್ನು ಶೀತ ಕಾಲದಲ್ಲಿ ಹಾಲು ಕರೆಯುವ ರಾಸುಗಳಿಗೆ ಮೇವಾಗಿ ಕೊಡಬಹುದು.

ರೋಗಗಳು : ಗೋದಿ ಬೆಳೆಗೆ ಕಾಂಡ ಕೊರೆಯುವ ಹುಳ, ಮಿಡತೆ, ಮತ್ತು ಕಂಬಳಿ ಹುಳುಗಳು ಬಾಧಿಸುತ್ತವೆ. ಗೆದ್ದಲು ಮತ್ತು ಸುಳಿ ನೊಣ ಸಹ ಈ ಬೆಳೆಗೆ ಕಾಟವನ್ನು ಕೊಡುತ್ತವೆ. ನಿಯಂತ್ರಣಕ್ಕೆ ಬೇವಿನೆಲೆ ಮತ್ತು ಬೀಜದಿಂದ ಕಷಾಯ ಮಾಡಿ ಸಿಂಪಡಿಸಬೇಕು. ಇತರ ರೋಗಗಳೆಂದರೆ ಕಾಂಡದ ಭಂಡಾರರೋಗ, ಎಲೆ ಭಂಡಾರ, ಎಲೆ ಚುಕ್ಕೆ, ಎಲೆ ಮೊಟ್ಟೆ ರೋಗ, ಕಾಡಿಗೆ ರೋಗ, ಬುಡಕೊಳೆ ರೋಗಗಳು ಒಮ್ಮೊಮ್ಮೆ ಭಾದಿಸುವುದುಂಟು. ಇವುಗಳ ನಿಯಂತ್ರಣಕ್ಕೆ ಮೇಲೆ ತಿಳಿಸಿದ ಔಷಧಿಯ ಜೊತೆಗೆ ಉತ್ತಮ ಬಿತ್ತನೆ ಬೀಜಗಳನ್ನು ಆಯ್ಕೆ ಮಾಡಿ ಸರಿಯಾದ ಸಮಯದಲ್ಲಿ ಬಿತ್ತನೆ ಮಾಡಿ ಆರೈಕೆ ಮಾಡಬೇಕು.

ವಿ.ಆರ್.ಬಿ.

ಗೋಮಾಳ ಗೋಮಾಳ ಎಂದರೆ ದನಕರುಗಳು ಮೇಯಲು ಬಿಟ್ಟಿರುವ ವಿಶಾಲ ಬಯಲು. ಗೋಚರಾವು, ಹುಲ್ಲು ಬನಿ, ಎಂಬ ಹೆಸರುಗಳೂ ಇವೆ. ಕಿಟ್ಟೆಲ್ ನಿಘಂಟುವಿನಲ್ಲಿ ಗೋಮಾಳ ಎಂಬುದಕ್ಕೆ A public pastore ground. ಎಂಬ ಅರ್ಥವನ್ನು ಕೊಡಲಾಗಿದೆ. ಒಟ್ಟಾರೆ ಗೋವುಗಳು ಪವಿತ್ರವಾದ ಪ್ರಾಣಿಗಳು, ಅವುಗಳಿಗೆ ಹುಲ್ಲು ನೀರು ಒದಗಿಸುವುದು ವ್ಯವಸ್ಥೆಯ ಹಾಗೂ ಸಾರ್ವಜನಿಕ ಹೊಣೆ ಎಂಬ ಭಾವನೆಯ ಹಿನ್ನೆಲೆಯಲ್ಲಿ ದನಕರುಗಳಿಗಾಗಿ ಮೀಸಲಿಟ್ಟಿರುವ 'ಬಯಲು' ಎಂಬುದು ವೇದ್ಯವಾಗುತ್ತವೆ.

ಗೋಮಾಳಗಳಲ್ಲಿ ಎರಡು ವಿಧಗಳಿವೆ ; ಸಾರ್ವಜನಿಕ (ಸರ್ಕಾರಿ) ಗೋಮಾಳಗಳು. ಖಾಸಗಿ ಗೋಮಾಳಗಳು. ಊರಿನ ಹತ್ತು ಜನಗಳ ದನಕರುಗಳು ಮೇಯಲೆಂದು ಸರ್ಕಾರದ ವತಿಯಿಂದ ಗುರುತಿಸಿ ಮೀಸಲಿಟ್ಟಿರುವಂತಹವು. ಸಾರ್ವಜನಿಕ ಗೋಮಾಳಗಳು. ಇಂಥ ಕಡೆ ಎಲ್ಲರ ದನಕರುಗಳಾದರೂ ಮುಕ್ತವಾಗಿ ಪ್ರವೇಶಿಸಬಹುದು, ಮೇಯಬಹುದು, 'ಗೋಮಾಳದ ಹುಲ್ಲು-ಗೋ ಕಟ್ಟೆಯ ನೀರು' ಎಂಬ ಗಾದೆಯಂತೆ ಇಲ್ಲಿ ಮುಕ್ತವಾದ ಹಾಗಿರುತ್ತದೆ. ಖಾಸಗಿ ಗೋಮಾಳಗಳು ಎಂದರೆ ಒಬ್ಬ ಖಾಸಗಿ ವ್ಯಕ್ತಿಯ ಒಡೆತನದಲ್ಲಿರುವ ಗೋಮಾಳಗಳೆಂದರ್ಥ. ಹಿಂದೆ ಸಾವಿರಾರು ಸಂಖ್ಯೆಯಲ್ಲಿ ದನಕರುಗಳನ್ನು ಸಾಕುವ ಜನರಿದ್ದರು. ಮುಖ್ಯವಾಗಿ ಗೊಲ್ಲರು, ಗೌಳಿಗರು ಹೆಚ್ಚು ದನಕರುಗಳನ್ನು ಸಾಕುತ್ತಿದ್ದರು. ಅವರಿಗೆ ದನಕರುಗಳು ಮೇಯಲು ಅಗತ್ಯವಾದ ಹುಲ್ಲು ಬನಿಯ ಅಗತ್ಯವಿತ್ತು. ಆದ್ದರಿಂದ ಅಂಥವರು ಸರ್ಕಾರಕ್ಕೆ ಅರ್ಜಿಸಲ್ಲಿಸಿ ತಮ್ಮ ಗೋವುಗಳ ಆಹಾರಕ್ಕಾಗಿ ಹತ್ತಾರು ಎಕರೆ ಗೋಮಾಳವನ್ನು ಪಡೆಯುತ್ತಿದ್ದರು. ಸರ್ಕಾರಕ್ಕೆ ಇಂತಿಷ್ಟು ತೆರಿಗೆಯನ್ನು ಕಟ್ಟುತ್ತಿದ್ದರು. ಇಂತಹವುಗಳನ್ನು ಖಾಸಗಿ ಗೋಮಾಳ ಗಳೆಂದು ಅವರವರ ಹೆಸರಿನಲ್ಲಿಯೇ ಗುರುತಿಸುತ್ತಿದ್ದರು. ಇಲ್ಲಿ ಆ ವ್ಯಕ್ತಿಯ ದನಕರುಗಳು ಮಾತ್ರ ಪ್ರವೇಶಿಸುವ ಅವಕಾಶ, ಉಳಿದವರಾರೂ ಆದರಲ್ಲಿ ಪ್ರವೇಶ ಮಾಡುವಂತಿರಲಿಲ್ಲ. ಒಂದು ವೇಳೆ ಅತಿ ಕ್ರಮವಾದಲ್ಲಿ ಅಂತಹ ದನಗಳನ್ನು ದೊಡ್ಡಿಗೆ ಹಾಕಿಸಿ ದಂಡ ವಸೂಲು ಮಾಡುವ ಪದ್ಧತಿಯಿತ್ತು.

ಸಾರ್ವಜನಿಕ ಗೋಮಾಳವಿರಲಿ ಇಲ್ಲವೆ ಖಾಸಗಿ ಗೋಮಾಳವಾಗಿರಲಿ ಅವುಗಳಲ್ಲಿ ದನಕರುಗಳ ಕುಡಿಯುವ ನೀರಿಗಾಗಿ ಗೋ ಕಟ್ಟೆ ಅಥವಾ ನೀರಿನ ಒಡ್ಡುಗಳು, ಕಲ್ಯಾಣಿಯಂತಹ ನೀರಿನಾಶ್ರಯಗಳನ್ನು ವ್ಯವಸ್ಥೆ ಮಾಡಲಾಗುತ್ತಿತ್ತು. ಇದರಿಂದ ದನಕರುಗಳು ವರ್ಷಪೂರ್ತಿ ಆಹಾರ - ವಿಹಾರಕ್ಕೆ ಪರದಾಡುವ ಪರಿಸ್ಥಿತಿಯಿಲ್ಲದೆ ಸಮೃದ್ಧವಾಗಿ ಮೇಯ್ದು ನೀರು ಕುಡಿದು ಸಂಜೆ ಗೋಧೂಳಿ ಸಮಯದಲ್ಲಿ ನಲಿಯುತ್ತಾ ಮನೆಗೆ ಮರಳುವ ಚಿತ್ರಣವಿತ್ತು. ಎಷ್ಟೋ ಕಾವ್ಯಗಳಲ್ಲಿ ಇಂತಹ ಹಳ್ಳಿಯ ಸೊಗಸಾದ, ಸಮುದಾಯ ಹಿತದ ಚಿತ್ರಣಗಳಿವೆ.

ಆದರೆ ಇತ್ತೀಚೆಗೆ ಜನಸಂಖ್ಯಾ ಸ್ಫೋಟ, ಕೈಗಾರೀಕರಣ, ನಗರೀಕರಣ, ಕೃಷಿ ಬದುಕಿನ ನಾಶ, ಹಳ್ಳಿಗಳ ಸಾಂಸ್ಕೃತಿಕ ಚಿತ್ರಣದ ಪಲ್ಲಟ ಮೊದಲಾದ ಕಾರಣಗಳಿಂದ ಗೋವುಗಳೂ, ಗೋಮಾಳಗಳೂ ಕಣ್ಮರೆಯಾಗುತ್ತಿವೆ. ಅಂತಹ ಭೂಮಿಯನ್ನು ವಸತಿ ಉದ್ದೇಶಕ್ಕೆ, ಕೃಷಿ ಉದ್ದೇಶಕ್ಕೆ ಇಲ್ಲವೆ ಕೈಗಾರಿಕೆಗಳ ಸ್ಥಾಪನೆಗಳಾಗಿ ಬಳಸುತ್ತಿರುವುದು ವಿಶಾದನೀಯ.

ಟಿ.ಕೆ.

ಗೋರಂಟಿ ಸೌಂದರ್ಯವರ್ಧಕವಾಗಿ ಹಾಗೂ ಬಣ್ಣಕ್ಕಾಗಿ ಬೆಳೆಸುವ ಸಸ್ಯ. ಲಿತ್ರೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಲಾಸೋನಿಯ ನರ್ಮಿಸ್. ಇದಕ್ಕೆ ಮದರಂಗಿ, ಮೆಹಂದಿ, ನಖರಂಜನಿ, ರಾಗಾಂಗಿ, ರಕ್ತಗರ್ಭ, ಮದಯಂತಿಕಾ, ಮೇಧನಿ ಎಂಬ ಪರ್ಯಾಯ ಹೆಸರುಗಳಿವೆ. ಇಂಗ್ಲಿಷಿನಲ್ಲಿ ಇದನ್ನು ಹೆನ್ನ ಎಂದು ಕರೆಯುವರು.

ಇಸ್ಲಾಂ ಧಾರ್ಮಿಕ ಗ್ರಂಥವಾದ ಖುರಾನ್ ಹಾಗೂ ಇನ್ನಿತರ ಅರಬ್ ಸಾಹಿತ್ಯ ಕೃತಿಗಳಲ್ಲಿ 'ಗೋರಂಟಿಯ ಬಗ್ಗೆ ಉಲ್ಲೇಖಗಳಿವೆ. ಈಜಿಪ್ಟ್‌ನ ಪ್ರಾಚೀನ ಇತಿಹಾಸದಲ್ಲೂ ಇದರ ಉಲ್ಲೇಖವಿದ್ದು ರಾಜಮನೆತನದವರು ಸತ್ತರೆ ಹೆಣದ ಅಂಗಾಂಗಗಳಿಗೆ ಇದರ ಸೊಪ್ಪನ್ನು ಹಚ್ಚಿ ಬಣ್ಣ ಕೊಡಲಾಗುತ್ತಿತ್ತು.



ಇದು ಪೊದೆಯಂತೆ ಬೆಳೆಯುವ ಸಸ್ಯ. ತೊಗಟೆ ಬೂದು ಮಿಶ್ರಿತ ಕಂದು, ಎಲೆಗಳು ಅಂಡಾಕಾರವಾಗಿದ್ದು ಅಭಿಮುಖ ಮಾದಿರಯಲ್ಲಿ ಜೋಡಣೆಗೊಂಡಿವೆ. ಇನ್ನು ಕೆಲವು ಜಾತಿಗಳಲ್ಲಿ ಈ ಬಗೆಯ ಜೋಡಣೆ ಇರುವುದಿಲ್ಲ. ಸುಗಂಧಯುಕ್ತವಾದ ಬಿಳಿ ಇಲ್ಲವೇ ಗುಲಾಬಿ ಬಣ್ಣದ ಹೂಗಳಿರುತ್ತವೆ. ಗುಲಗಂಜಿ ಗಾತ್ರದ ಹಣ್ಣುಗಳು ದ್ರಾಕ್ಷಿ ಗೊಂಚಲಿನಂತಿರುತ್ತವೆ. ಹಣ್ಣಿನೊಳಗೆ ಗಸಗಸೆ ಬೀಜದಂತೆ ಸಣ್ಣ ಸಣ್ಣ ಬೀಜಗಳು ತುಂಬಿರುತ್ತವೆ. ಇದನ್ನು ಉಷ್ಣ ಹಾಗೂ ಸಮಶೀತೋಷ್ಣ ಪ್ರದೇಶಗಳಲ್ಲಿ ಬೆಳೆಯಹುದು. ಇವು ಈಜಿಪ್ಟ್, ಪರ್ಶಿಯಾ, ಪಾಕಿಸ್ತಾನ, ಸೂಡಾನ್, ಮಡಗಾಸ್ಕರ್ ಪ್ರದೇಶಗಳಲ್ಲಿ ಬಣ್ಣಕ್ಕಾಗಿಯೇ ಬೆಳೆಸುತ್ತಾರೆ. ಭಾರತದ ಪಂಜಾಬ್, ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಬಣ್ಣಕ್ಕಾಗಿ ಬೆಳೆಸಿದರೆ, ಗುಜರಾತ್, ಬಾರ್ಡೋಲಿ, ಫರಿದಾಬಾದ್‌ಗಳಲ್ಲಿ ವಾಣಿಜ್ಯಿಕ ಉದ್ದೇಶಕ್ಕಾಗಿ ಅಧಿಕವಾಗಿ ಬೆಳೆಸುವುದುಂಟು.

ಜೌಗು ಅಲ್ಲದ ಯಾವುದೇ ಮಣ್ಣಿನಲ್ಲಿ ಗೋರಂಟಿ ಬೆಳೆಯಬಲ್ಲುದು. ಉತ್ಕೃಷ್ಟವಾಗಿ ಬೆಳೆಯಲು ಮರಳು ಮಿಶ್ರಿತ ಗೋಡುಮಣ್ಣು, ಮರಳು ಮಿಶ್ರಿತ ಜಿಗುಟು ಗೋಡು ಮಣ್ಣು ಉತ್ತಮ. ನೀರು ನಿಲ್ಲದೇ ಇಂಗಿ ಹೋಗುವಂತಿದ್ದರೆ ಕಪ್ಪು ಮಣ್ಣಿನಲ್ಲೂ ಬೆಳೆಯಬಹುದು. ಕನಿಷ್ಠ ಮಟ್ಟದ ಮಳೆ ಬೀಳುವ ಪ್ರದೇಶದಲ್ಲೂ ಬೆಳೆಯುತ್ತವೆ.

ಸಸ್ಯಾಭಿವೃದ್ಧಿ : ಬೀಜ ಮತ್ತು ಕಾಂಡಗಳಿಂದ ಸಸ್ಯ ಅಭಿವೃದ್ಧಿ ಮಾಡಬಹುದು. ಇದರ ಬೀಜ ಗಡುಸಾಗಿರುವುದರಿಂದ ಎಲ್ಲವೂ ಮೊಳಕೆಯೊಡೆಯುವುದಿಲ್ಲ. ನೂರಕ್ಕೆ ಕೇವಲ ಇಪ್ಪತ್ತರಷ್ಟು ಮಾತ್ರ ಮೊಳೆತು ಚಿಗುರೊಡೆಯಬಹುದು. ಒಂದು ಎಕರೆಗೆ 1:5 ಪ್ರಮಾಣದಲ್ಲಿ ಬಿತ್ತನೆ ಮಾಡಬೇಕು. ತೇವಾಂಶ ಸದಾ ಇರುವಂತೆ ನೋಡಿಕೊಂಡರೆ ಮೂರು ತಿಂಗಳಲ್ಲಿ ನಾಟಿ ಮಾಡಲು ಸಸಿ ಸಿದ್ಧಗೊಳ್ಳುತ್ತದೆ. ಸಸಿಗಳನ್ನು ಬೇಲಿಗಾಗಿ ಬೆಳೆಸುವುದಾದರೆ ಹತ್ತಿರ ಹತ್ತಿರ ಸಸಿಗಳನ್ನು ನೆಡಬೇಕು. ಸೊಪ್ಪಿಗಾಗಿ ಬೆಳೆಸುವುದಾದರೆ ಸು. 10 ಅಡಿ ಅಂತರದಲ್ಲಿ ನಾಟಿ ಮಾಡಬೇಕಾಗುತ್ತದೆ. ಗೊಬ್ಬರ, ನೀರು ಸರಿಯಾದ ಪ್ರಮಾಣದಲ್ಲಿದ್ದರೆ ಸೊಪ್ಪು ಹುಲುಸಾಗಿ ದೊರೆಯುತ್ತದೆ. ಶೀಘ್ರ ಮತ್ತು ಉತ್ತಮ ಇಳುವರಿಗಾಗಿ ಸಸಿ ಬೆಳೆಯುವ ಹಂತದಲ್ಲಿ ತೇವ ಕಡಿಮೆಯಾಗದಂತೆ ನೋಡಿಕೊಳ್ಳಬೇಕು. ಹೀಗೆ ಒಂದು ವರ್ಷ ಕಾಪಾಡಿದರೆ ಮುಂದೆ ಗಿಡ ಸೊಂಪಾಗಿ ಬೆಳೆಯುತ್ತದೆ. ವಾಣಿಜ್ಯ ದೃಷ್ಟಿಯಿಂದ ಬೆಳೆಸುವವರು ಗೋರಂಟಿ ತೋಟದಲ್ಲಿ ಇತರ ಯಾವುದೇ ಕಳೆ ಅಥವಾ ನಿರುಪಯುಕ್ತ ಸಸ್ಯ ಬೆಳೆಯದ ಹಾಗೆ ಆಗಾಗ ಕಳೆಗಳನ್ನು ಕಿತ್ತು ಶುದ್ಧಗೊಳಿಸಿ ಬುಡದ ಸುತ್ತ ಕೆದಕುತ್ತಿರಬೇಕು. ಹೀಗೆ ಮಾಡಿದ್ದಲ್ಲಿ ಉತ್ತಮ ಇಳುವರಿಯನ್ನು ಪಡೆಯಬಹುದು. ಒಂದು ವರ್ಷದಲ್ಲಿ ಎರಡು ಬಾರಿ ಕೊಯ್ಲು ಮಾಡಬಹುದು. ಏಪ್ರಿಲ್, ಮೇ ತಿಂಗಳಿನಲ್ಲಿ ಮೊದಲ ಕೊಯ್ಲು, ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ 2ನೇ ಕೊಯ್ಲನ್ನು ಮಾಡಬಹುದು.

ಉಪಯೋಗಗಳು : ಅಲಂಕಾರಕ್ಕಾಗಿ ಗೋರಂಟಿಯನ್ನು ಬೆಳೆಯುವುದು ಮೂಲ ಉದ್ದೇಶವಾದರೂ ಇದರಲ್ಲಿ ಹೇರಳವಾದ ಔಷಧೀಯ ಗುಣಗಳು ಇರುವುದನ್ನು ಕಂಡು ಕೊಂಡ ಮೇಲೆ ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಯಿತು. ಅನೇಕ ದೇಶಗಳಲ್ಲಿ ಉಗುರುಗಳಿಗೆ ತಲೆಗೂದಲು, ಗಡ್ಡಗಳಿಗೆ, ಉಬ್ಬು, ಕುದುರೆಬಾಲ, ಚರ್ಮ ಮುಂತಾದವುಗಳಿಗೆ ಬಣ್ಣಕೊಡಲು ; ಉಣ್ಣೆ ಬಟ್ಟೆಗಳಿಗೆ ಬಣ್ಣ ಕಟ್ಟಲು ಉಪಯೋಗಿಸುವುದುಂಟು.

ಈ ಸೊಪ್ಪನ್ನು ನಿಂಬೆರಸದಲ್ಲಿ ಅರೆದು ಬೆರಳಿಗೆ ಕಟ್ಟಿದ್ದರೆ ಉಗುರು ಸುತ್ತು ಕಡಿಮೆಯಾಗುವುದು. ಬೆವರು ಸೆಲೆ ಇದ್ದಾಗ ಇದರ ರಸವನ್ನು ಲೇಪಿಸಬೇಕು. ಇದರ ರಸವನ್ನು ತಲೆಗೆ ಹಚ್ಚಿದರೆ ತಲೆಯಲ್ಲಿರುವ ಹೇನು ಮತ್ತು ಹೊಟ್ಟು ನಿವಾರಣೆಯಾಗುತ್ತದೆ. ಕಾಫಿ ಪುಡಿಯ ಕಷಾಯಕ್ಕೆ ಗೋರಂಟಿ ಪುಡಿಯನ್ನು ಸೇರಿಸಿ ತಲೆಗೆ ಹಚ್ಚಿಕೊಳ್ಳುವುದರಿಂದ ನೆರೆದ ಕೂದಲು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಮಧುಮೇಯಿಗಳಿಗೆ ಈ ಸೊಪ್ಪಿನ ರಸವನ್ನು ಕೊಡುವುದುಂಟು. ಮಹಿಳೆಯರ ಅನೇಕ ರೋಗಗಳಿಗೆ ಇದರ ರಸವನ್ನು ಔಷಧಿಯಾಗಿ ಕೊಡುವುದುಂಟು. ಮೂತ್ರದ ಸಮಸ್ಯೆಗಳಿಗೂ ಇದರ ರಸವನ್ನು ಕೊಡುತ್ತಾರೆ. ಹಲ್ಲುನೋವಿಗೆ ಇದರ ಬೀಜವನ್ನು ಹುಲ್ಲಿನ ಸಂಧಿಯಲ್ಲಿ ಇಟ್ಟುಕೊಂಡರೆ ; ಗಂಟಲು ನೋವಿಗೆ ಇದರ ಕಷಾಯವನ್ನು ಮುಕ್ಕಳಿಸುವುದರಿಂದ ಕಡಿಮೆಯಾಗುತ್ತದೆ.

ಉತ್ತರ ಭಾರತದ ಪಂಜಾಬ್, ಗುಜರಾತ್, ರಾಜಸ್ಥಾನಗಳಲ್ಲಿ ಅಧಿಕವಾಗಿ ಗೋರಂಟಿಯನ್ನು ಬೆಳೆಯಲಾಗುತ್ತದೆ. ಮದರಂಗಿಯ ಒಣ ಎಲೆ ಮತ್ತು ಪುಡಿಗಳನ್ನು ಪ್ರಪಂಚದ ಇತರ ದೇಶಗಳಿಗೆ ಭಾರತದಿಂದ ರಫ್ತು ಮಾಡಲಾಗುತ್ತದೆ.

ಗೋರಂಟಿಯಲ್ಲಿ ಸು. 90 ರೀತಿಯ ಪ್ರಭೇದಗಳಿದ್ದು ಅವುಗಳಲ್ಲಿ ಅಡವಿ ಗೋರಂಟಿಯೂ ಒಂದು. ಇದರ ಉಪಯೋಗವೇ ಬೇರೆ. ಸ್ವಾಭಾವಿಕವಾಗಿ ಉಷ್ಣವಲಯ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಬೆಳೆಯುವ ಎರಿತ್ರಾಕ್ಸಿಲಾನ್ 90 ರೀತಿಯ ಪ್ರಭೇದಗಳಲ್ಲಿ ಒಂದು.

ಮತ್ತೊಂದು ಪ್ರಭೇದವಾದ ಕೋಕ ಗಿಡದ ಎಲೆಗಳನ್ನು ಕೊಕೇನ್ ತಯಾರಿಕೆಯಲ್ಲಿ ಬಳಸಲಾಗುವುದು. ಮಾನೋಗೈನಾ ಪ್ರಭೇದದ ಮರದ ತೊಗಟೆ ಹೊಟ್ಟೆನೋವಿಗೂ ಅಂಗಿಪುಗಂ ಎಂಬ ಮರದ ತೊಗಟೆ ಹಾವಿನ ವಿಷಕ್ಕೆ ಔಷಧ. ಎರಿತ್ರಾಕ್ಸಿಲಾನ್ ಮರದ ಕಾಂಡದ ಭಾಗದಿಂದ ಉತ್ಪಾದಿತವಾಗುವ ಎಣ್ಣೆ ಗಂಧದ ಎಣ್ಣೆಯಂತೆ ಸುವಾಸನಾಯುಕ್ತವಾಗಿರುತ್ತದೆ. ಅತ್ತರ್ ಮತ್ತಿತರ ದ್ರವ್ಯಗಳ ತಯಾರಿಕೆಯಲ್ಲಿ ಇದರ ಬಳಕೆಯುಂಟು. ಭಾರತದಲ್ಲಿ ಈ ಜಾತಿಯವು ತಮಿಳುನಾಡು, ಕರ್ನಾಟಕ, ಬಂಗಾಳ, ರಾಂಚಿ ಮುಂತಾದ ಪ್ರದೇಶಗಳಲ್ಲಿ ಇದರ ಕೃಷಿ ಮಾಡುತ್ತಿದ್ದಾರೆ. ಕೋಕಾ ಎಲೆಗಳಲ್ಲಿ ಶೇ. 0.4-08 ಕೊಕೇನ್ ಅಂಶ ಇರುತ್ತದೆ.

ಎಚ್. ಈ.

ಗೋರಿಕಾಯಿ ಗೋರಿಕಾಯಿಯನ್ನು ಆಂಗ್ಲಭಾಷೆಯಲ್ಲಿ ಕ್ಲಸ್ಟರ್ ಬೀನ್ಸ್ ಎಂದು ಕರೆಯುತ್ತಾರೆ. ಕರ್ನಾಟಕದ ಬಹುತೇಕ ಬಯಲು ಪ್ರದೇಶ ಹಾಗೂ ಅರೆ ನೀರಾವರಿ ಸೌಲಭ್ಯವಿರುವ ಕಡೆಗಳಲ್ಲಿ ಗೋರಿಕಾಯಿಯನ್ನು ಬೆಳೆಯುತ್ತಾರೆ. ಸುಲಭವಾಗಿ ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾದ ತರಕಾರಿ ಇದು.

ಬೇಸಾಯ : ಬೀಜವನ್ನು ಬಿತ್ತುವ ಮುನ್ನ ಭೂಮಿಯನ್ನು ಮೂರ್‍ನಾಲ್ಕು ಬಾರಿ ಉಳುಮೆ ಮಾಡಬೇಕು. ಒಂದು ಉಳುಮೆಗೂ ಮತ್ತೊಂದು ಉಳುಮೆಗೂ ಏಳೆಂಟು ದಿನ ಅಂತರವಿರಬೇಕು. ಉಳುಮೆ ಮಾಡಿದ ಅನಂತರ ಏಳುವ ಹೆಂಟೆಗಳನ್ನು ಒಡೆದು ಕಳೆಗಳಿದ್ದರೆ ಕಿತ್ತು ಸಮತಟ್ಟು ಗೊಳಿಸಬೇಕು. ಕಲ್ಲುಗಳಿದ್ದರೆ ಆಯ್ದು ಭೂಮಿಯನ್ನು ಹದವಾಗಿರುವಂತೆ ನೋಡಿಕೊಳ್ಳಬೇಕು. ಮೂರು ಅಥವಾ ನಾಲ್ಕನೆಯ ಉಳುಮೆಗೆ ತಿಪ್ಪೆ ಗೊಬ್ಬರವನ್ನು ಎರಚಿ ಮತ್ತೆ ಉಳುಮೆ ಮಾಡಬೇಕು. ಇದಾದ ಅನಂತರ ಹಲುಬೆ ಅಥವಾ ಕುಂಟೆಯನ್ನು ಹೊಡೆದು ಗೊಬ್ಬರವು ಮಣ್ಣಿನೊಂದಿಗೆ ಮಿಶ್ರಣವಾಗುವಂತೆ ಮಾಡಬೇಕು. ಈ ವೇಳೆಗೆ ಗೋರಿಕಾಯಿ ಬೀಜ ಬಿತ್ತಲು ಭೂಮಿ ಒಂದು ಉತ್ತಮ ಸ್ಥಿತಿಯಲ್ಲಿರುತ್ತದೆ. ಎರಡುವರೆ ಅಡಿಗೊಂದರಂತೆ ನೇಗಿಲಿನಲ್ಲಿ ಸಾಲು ಹೊಡಿಯಬೇಕು. ಈ ಸಾಲುಗಳ ದಿಂಡುಗಳ ಇಳಿಜಾರಿನಲ್ಲಿ ಅರ್ಧ ಅಂಗುಲದಷ್ಟು ಆಳಕ್ಕೆ ಗೋರಿ ಬೀಜವನ್ನು ನೆಡಬೇಕು. ಬೀಜದಿಂದ ಬೀಜಕ್ಕೆ ಹತ್ತರಿಂದ ಹನ್ನೆರಡು ಅಂಗುಲದಷ್ಟು ದೂರವಿರಬೇಕು. ಹತ್ತಿರ ನೆಟ್ಟಿದ್ದರೂ ಮೊಳಕೆ ಬಂದ ಮೇಲೆ ಕಿತ್ತು ತೆಳ್ಳಗೆ ಮಾಡಬೇಕಾಗುತ್ತದೆ. ಭೂಮಿಯಲ್ಲಿ ನೀರಿನ ಹದವಿದ್ದರೆ ಬೀಜಗಳು ಮೊಳಕೆಯೊಡೆಯುತ್ತವೆ. ಹದವಿಲ್ಲದಿದ್ದರೆ ನೀರು ಹಾಯಿಸಬೇಕಾಗುತ್ತದೆ. ಬೀಜಗಳೆಲ್ಲ ಮೊಳಕೆಯೊಡೆದು ಸಸಿಗಳಾದಾಗ ಒಂದೆರಡು ವಾರದ ಅನಂತರ ಹದ ನೋಡಿಕೊಂಡು ಸಾಲುಗಳ ಮಧ್ಯೆ ಕೆದಕಬೇಕು. ಸಾಲುಗಳ ಮಧ್ಯೆ ಇರುವ ಕಳೆಯನ್ನು ಕಿತ್ತು ಹಾಕಿ ಸಸಿಗಳ ಬುಡಕ್ಕೆ ಪುಡಿ ಮಣ್ಣು ಬೀಳುವಂತೆ ಮಾಡಬೇಕು. ಅನಂತರ ನೀರು ಹಾಯಿಸಿದರೆ ಸಸಿಗಳು ಸಮೃದ್ಧವಾಗಿ ಬೆಳೆಯುತ್ತವೆ. ಸಾಮಾನ್ಯವಾಗಿ ಗೋರಿಕಾಯಿ ಗಿಡ ಎರಡುವರೆ ಅಡಿಯಿಂದ ಮೂರುವರೆ ಅಡಿಯಷ್ಟು ಎತ್ತರಕ್ಕೆ ಬೆಳೆಯುತ್ತದೆ. ಮಳೆ ಬೀಳದಿದ್ದರೆ ಹದನೋಡಿಕೊಂಡು ನೀರು ಹಾಯಿಸುತ್ತಿರಬೇಕು. ಹೆಚ್ಚಿಗೆ ನೀರು ಹಾಯಿಸಿದರೂ ಸರಿಯಾಗಿ ಫಸಲು ಕಚ್ಚುವುದಿಲ್ಲ. ಭೂಮಿಯಲ್ಲಿನ



ಹಸಿಯನ್ನು ಗಮನಿಸಿ ನೀರು ಕೊಡುತ್ತಿರಬೇಕು. ಕಳೆ ಬಾರದಂತೆ ಎಚ್ಚರವಹಿಸಬೇಕು. ಬೀಜ ನೆಟ್ಟ ಎರಡು ತಿಂಗಳಲ್ಲಿ ಹೂವಾಗಿ ಕಾಯಿಗಳು ಗೊಂಚಲು ಗೊಂಚಲುಗಳಾಗಿ ಬಿಡಲಾರಂಭಿಸುತ್ತವೆ. ಬಲಿತು ನಾರಾಗುವುದಕ್ಕೆ ಮೊದಲೇ ಎಳೆಯದರಲ್ಲಿ ಕಿತ್ತು ತರಕಾರಿಯಾಗಿ ಉಪಯೋಗಿಸಬೇಕು. ಇದನ್ನು ಹಸಿಯಾಗಿಯೂ ತಿನ್ನಬಹುದು. ಇದು ಪಲ್ಯಕ್ಕೆ ಸಾಂಬಾರಿಗೆ ತುಂಬಾ ಚೆನ್ನಾಗಿರುತ್ತದೆ. ಆದರೆ ಇದನ್ನು ನಿರಂತರವಾಗಿ ಬಳಸುವುದು ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲ. ವಿಪರೀತ ಪಿತ್ತಕಾರಿಯೆಂದು ಅಪರೂಪಕ್ಕೆ ಬಳಸಲಾಗುತ್ತದೆ. ಭೂಮಿ ಫಲವತ್ತಾಗಿದ್ದು ನೀರು ಹದವಾಗಿ ಬೀಳುತ್ತಿದ್ದರೆ ಆರೇಳು ತಿಂಗಳವರೆಗೂ ಫಸಲು ಕೊಡುತ್ತದೆ.

ಬಿತ್ತನೆ : ಭೂಮಿಯನ್ನು ಚೆನ್ನಾಗಿ ಹದಮಾಡಿಕೊಂಡು ಮೇ ಅಥವಾ ಜೂನ್ ತಿಂಗಳಿನಲ್ಲಿ ಬೀಜವನ್ನು ಬಿತ್ತುತ್ತಾರೆ. ಒಂದು ಎಕರೆ ಜಮೀನಿನಲ್ಲಿ ಗೋರಿಕಾಯಿ ಬೆಳೆಯಲು ಸುಮಾರು ನಾಲ್ಕರಿಂದ ಐದು ಸೇರು ಬೀಜ ಬೇಕು. ಬಿತ್ತನೆಗೆ ನೆಲವನ್ನು ಹದಮಾಡಿಕೊಂಡಂತೆ ಬೀಜವನ್ನು ಮುಂಜಾಗ್ರತೆಯಾಗಿ ಸಂಗ್ರಹಿಸಿಟ್ಟುಕೊಳ್ಳಬೇಕು. ಒಳ್ಳೆಯ ಮತ್ತು ಚೆನ್ನಾಗಿ ಬಲಿತಿರುವ ಬೀಜಗಳನ್ನು ಒಣಗಿಸಿಟ್ಟುಕೊಂಡಿರಬೇಕು. ಹದವರಿತು ಬೀಜವನ್ನು ಬಿತ್ತನೆ ಮಾಡಬೇಕು. ಗೋರಿಕಾಯಿಯಲ್ಲಿ ವಿವಿಧ ಜಾತಿಗಳು ಕಂಡುಬರುವುದಿಲ್ಲ. ಮೈಸೂರು ಸುತ್ತಮುತ್ತಲಿನ ಭಾಗದಲ್ಲಿ ಬೆಳೆಯುತ್ತಿರುವುದೆಲ್ಲಾ ಒಂದೆ ಬಗೆಯದು. ಗೊಂಚಲು ಗೊಂಚಲಾಗಿ ಹಸುರಾಗಿರುವ ಈ ತರಕಾರಿ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ ಒಂದೇ ರೀತಿಯಲ್ಲಿ ಕಂಡುಬರುತ್ತದೆ.

ಭೂಗುಣ : ಗೋರಿಕಾಯಿ ಬೆಳೆಗೆ ಒಂದು ನಿರ್ದಿಷ್ಟವಾದ ಭೂಗುಣ ಎಂಬುದಿಲ್ಲ. ಎಲ್ಲಾ ಕಡೆಗಳಲ್ಲಿಯೂ ಬೆಳೆಯುತ್ತದೆ. ಆದರೆ ವಿಶೇಷವಾಗಿ ಮರಳು ಮಿಶ್ರಿತ ಮಣ್ಣು, ಕೆಬ್ಬೆ ಮಣ್ಣು, ಗೋಡು ಮಣ್ಣು, ಮೆಕ್ಕಲು ಮಣ್ಣುಗಳಲ್ಲಿ ಹುಲುಸಾಗಿ ಬೆಳೆಯುತ್ತದೆ.

ವಿ.ಸಿ.ಡಿ.

ಗ್ರೇಪ್ ಮರ ರುಚಿಯಾದ ಹಣ್ಣುಗಳನ್ನು ಕೊಡುವ ಮರಗಳ ಪೈಕಿ ಒಂದು. ಇದು ರೂಟೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಸಿಟ್ರಸ್ ಪ್ಯಾರಡಿಸಿ. ಇದರ ಹಣ್ಣು ಚಕ್ಕೋತ ಹಣ್ಣನ್ನು ಹೋಲುವಂತಿದ್ದು, ಅದರ ಪರಿವರ್ತನ ತಳಿಯಂತೆ ಇದೆ. ಇದರ ಮೂಲಸ್ಥಾನ ವೆಸ್ಟ್‌ಇಂಡೀಸ್. ಅಮೆರಿಕ, ಆಫ್ರಿಕ, ಇಸ್ರೇಲ್ ಮೊದಲಾದ ದೇಶಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಯುವರು. ಭಾರತದ ಉತ್ತರ ಭಾಗಗಳಾದ ಪಂಜಾಬ್ ಮತ್ತು ಹರಿಯಾಣಗಳಲ್ಲಿ ಹೆಚ್ಚಾಗಿಯೂ ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇದರ ಕೃಷಿ ಉಂಟು. 25-30 ಅಡಿ ಎತ್ತರ ಬೆಳೆಯುವ ಮರವಿದು. ಇದರ ಎಲೆಗಳು ಸಾಧಾರಣ ಅಗಲದವು. ಹೂಗಳು ಒಂಟಿಯಾಗಿಯೂ ಗೊಂಚಲುಗೊಂಚಲಾಗಿಯೂ ಎಲೆಗಳ ಕಂಕುಳಲ್ಲಿ ಹುಟ್ಟುತ್ತವೆ. ಇದರ ಹಣ್ಣು ಚಕ್ಕೋತ ಹಣ್ಣಿಗಿಂತ ಸ್ವಲ್ಪ ಚಿಕ್ಕದಾಗಿದ್ದು ತಿರುಳು ರಸಭರಿತವಾಗಿರುತ್ತದೆ. ಈ ಹಣ್ಣಿನಲ್ಲಿ ಹಸಿವನ್ನು ಹೆಚ್ಚಿಸುವ ಗುಣವಿದ್ದು ಇದರ ರಸವನ್ನು ಬೆಳಗಿನ ತಿಂಡಿಯೊಂದಿಗೆ ಬಳಸುವರು. ವೈನ್, ಬ್ರಾಂದಿ ಮುಂತಾದ ಮಾದಕ ಪಾನೀಯಗಳಿಗೆ ರುಚಿ ಹೆಚ್ಚಿಸಲು ಈ ಹಣ್ಣಿನ ರಸವನ್ನು ಅಲ್ಪ ಪ್ರಮಾಣದಲ್ಲಿ ಬಳಸುವುದುಂಟು. ಇದರ ಸಿಪ್ಪೆಯೂ ಉಪಯುಕ್ತವೇ.

ಎನ್.

ಚಕ್ಕೋತ ಇದನ್ನು ಇಂಗ್ಲಿಷ್‌ನಲ್ಲಿ ಷಡಾಕ್ ಫ್ರೂಟ್ ಎಂದು ಕರೆಯುತ್ತಾರೆ. ಇದು 'ಸಿಟ್ರಸ್ ಗ್ರಾಂಡಿಸ್' ಕುಟುಂಬಕ್ಕೆ ಸೇರಿದೆ. ಚಕ್ಕೋತ ಹಣ್ಣು ಮಲೆಯ ಆಕ್ಕಿಪೆಲಾಗೊ ಪ್ರದೇಶದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಫಿಜಿ ಪೆಂಡ್ಲಿ ದ್ವೀಪಗಳಲ್ಲಿ ಹೇರಳವಾಗಿದೆ. ಫ್ರೆಂಚರು ಇದನ್ನು ಪೋಮಮ್ ಮಿಲೋ, ಪೆಮೆಲೋ ಎಂದು ಕರೆಯುತ್ತಾರೆ. ತೆಲುಗಿನಲ್ಲಿಷಡಪಂಡು ಎಂದೂ ಹಿಂದಿಯಲ್ಲಿ ಶಡಾಫಲ್, ಸದಾಫಲ್, ಸದ್‌ಫಲ್ ಎಂದೂ ತಮಿಳುನಲ್ಲಿ ಬೊಂಬಳಿಮಾಸ್ ಎಂದೂ ಕರೆದರೆ ಕನ್ನಡದಲ್ಲಿ ಶಕೋತ, ಚಕ್ಕೋ, ಚಕ್ಕವತ್ತಿ ಎಂದು ಕರೆಯುವರು.

ಮೈಸೂರು ಕನ್ನಡದಲ್ಲಿ ಇದನ್ನು ಚಕ್ಕೋತ ಎಂದು ಕರೆಯುತ್ತಾರೆ. ಇದರ ಮೂಲಸ್ಥಾನ ಮಲೇಷ್ಯಾ ಮತ್ತು ಪಾಲಿನೇಷ್ಯಾ. ಇದು ಕಿತ್ತಳೆ ಮತ್ತು ನಿಂಬೆಗಳ ಮಿಶ್ರಿ ತಳಿ. ಚಕ್ಕೋತ ಮರದ ಎಲೆಗಳು ಅಗಲವಾಗಿರುತ್ತವೆ. ಕಿತ್ತಳೆ ಮರಕ್ಕಿಂತ ಎತ್ತರವಾಗಿ ಬೆಳೆಯುತ್ತದೆ. ಸಸಿ ನೆಟ್ಟ 8-10 ತಿಂಗಳಲ್ಲಿ ಫಲ ಕೊಡುತ್ತದೆ. ಆರೋಗ್ಯವಾಗಿ ಬೆಳೆದ ಮರದಲ್ಲಿ ನೂರರಿಂದ ನೂರ ಐವತ್ತು ಹಣ್ಣುಗಳು ದೊರೆಯುತ್ತವೆ. ಹಣ್ಣಿನ ಸಿಪ್ಪೆ ದಪ್ಪಗಿರುತ್ತದೆ. ಒಂದು ಹಣ್ಣಿನಲ್ಲಿ 40 ರ ವರೆಗೆ ಬೀಜಗಳಿರುತ್ತವೆ. ಹಣ್ಣು ಬಲಿಯುತ್ತಿರುವಂತೆ ಹಲವು ಬೀಜಗಳು ಸಣ್ಣಗಾಗಿ ಕೇವಲ 10-12 ಬೀಜಗಳು ಮಾತ್ರ ಉಳಿದು ಬಿತ್ತನೆ ಯೋಗ್ಯವಾಗಿ ಉಳಿಯುತ್ತವೆ.

ಭಾರತ, ಶ್ರೀಲಂಕಾ, ಜಾವಾ ಪ್ರದೇಶಗಳಲ್ಲಿ ಚಕ್ಕೋತ ಹಣ್ಣನ್ನು ಬೆಳೆಯುತ್ತಾರೆ. ಭಾರತದಲ್ಲಿ ಕರ್ನಾಟಕ, ಉತ್ತರ ಪ್ರದೇಶ, ಪಾಟಿಯಾಲ, ಪಂಜಾಬುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುವರು. ಮುಂಬೈಯ ತೆಳು ಸಿಪ್ಪೆ ಚಕ್ಕೋತ, ಕರ್ನಾಟಕದ ದೇವನಹಳ್ಳಿ, ಕೋಲಾರದ ಚಿಕ್ಕಬಳ್ಳಾಪುರದ ನಂದಿ ಬೆಟ್ಟ ಚಕ್ಕೋತ ರುಚಿಗೆ ಹೆಸರಾಗಿದೆ. ಚಕ್ಕೋತದಲ್ಲಿ ಸಕ್ಕರೆ ಕಂಚಿ, ಸಿಹಿಕಂಚಿ, ದೊಡ್ಡ ಕಂಚಿ ಎಂಬ ತಳಿಗಳಿವೆ.

ಬಿತ್ತನೆ : ಬೀಜದಿಂದ, ಗೂಟಿವಿಧಾನದಿಂದ ಹಾಗೂ ಕಣ್ಣು ಕಸಿವಿಧಾನದಿಂದಲೂ ಇದನ್ನು ಬೆಳೆಸಬಹುದು. ಬೀಜದಿಂದ ಸಸಿಗಳನ್ನು ಬೆಳೆಸುವುದು ಸುಲಭ ವಿಧಾನ. ಸಸಿಗಳಲ್ಲಿ ಹೆಚ್ಚು ಮುಳ್ಳುಗಳಿದ್ದರೆ ಸುಂಕರವಾಗಿದೆ ಎಂತಲೂ ಕಡಿಮೆ ಮುಳ್ಳುಗಳಿದ್ದರೆ ಮೂಲತಳಿ ಎಂತಲೂ ಗುರುತಿಸುತ್ತಾರೆ. ಸಸಿಗಳಲ್ಲಿರುವ ಮುಳ್ಳುಗಳನ್ನು ಒಂದು ವರ್ಷದೊಳಗೆ ಮುರಿದರೆ ಮತ್ತೆ ಮುಳ್ಳು ಹುಟ್ಟುವುದಿಲ್ಲ. ಮೂಲಗುಣವನ್ನು ಹೊಂದಿರದ ಸಸಿಗಳನ್ನು ಕಸಿಕಟ್ಟಲು ಬಳಸಿಕೊಳ್ಳುತ್ತಾರೆ. ಗೂಟಿಕಟ್ಟಿದ ಸಸಿಗಳ ಫಸಲಿನ ಅವಧಿ ತುಂಬ



ಕಡಿಮೆ. ಹೆಚ್ಚೆಂದರೆ 15 ವರ್ಷಗಳ ವರೆಗೆ ಮಾತ್ರ ಫಲ ಕೊಡಬಹುದು. ಕಣ್ಣು ಕಸಿ ಮಾಡಿದರೆ ಹೆಚ್ಚು ಕಾಲ ಫಲವನ್ನು ಕೊಡುತ್ತವೆ.

ಹೆಚ್ಚು ಮಳೆಯಾಗುವ ಕರಾವಳಿ ಪ್ರದೇಶ ಮತ್ತು ನೀರಿನ ಸೌಕರ್ಯವಿರುವ ಬಯಲು ಪ್ರದೇಶಗಳಲ್ಲಿ ಚಕ್ಕೋತ ಮರ ಸಮೃದ್ಧವಾಗಿ ಬೆಳೆಯುತ್ತದೆ. ದಕ್ಷಿಣ ಭಾರತದ ಎತ್ತರವಾದ ಗುಡ್ಡುಗಾಡುಗಳಲ್ಲಿ, ಚಹ ತೋಟಗಳಲ್ಲಿ, ಉಪ ಬೆಳೆಯಾಗಿ ಅಥವಾ ಪ್ರಧಾನ ಬೆಳೆಯಾಗಿ ಬೆಳೆಸುತ್ತಾರೆ.

ಹವಾಗುಣ : ದ್ರಾಕ್ಷಿ ಬೆಳೆಗಿಂತ ಹೆಚ್ಚು ಉಷ್ಣಾಂಶವಿರುವ ವಾತಾವರಣ ಇರಬೇಕು. ನೆಲದ ಗುಣ, ಹವಾಗುಣಗಳನ್ನು ಅವಲಂಬಿಸಿ ಚಕ್ಕೋತದ ಮೂಲಗುಣ ಬರುತ್ತದೆ ಎಂಬ ಅಭಿಪ್ರಾಯವಿದೆ. ಉತ್ತಮ ಪೋಷಣೆ ಮಾಡಿದರೆ ಒಂದು ವರ್ಷದಲ್ಲಿ ಒಂದು ಮರದಿಂದ ಎರಡರಿಂದ ಮೂರು ನೂರು ಕೆ.ಜಿ.ಯವರೆಗೆ ಇಳುವರಿಯನ್ನು ಪಡೆಯುಬಹುದು.

ಹಣ್ಣುಗಳು ಗಾತ್ರದಲ್ಲಿ ಸಾಧಾರಣ ಕುಂಬಳಕಾಯಿಂದ, ದೊಡ್ಡ ತೆಂಗಿನ ಕಾಯಿಯಷ್ಟಿರುತ್ತದೆ. ವರ್ಷಕ್ಕೊಮ್ಮೆ ಕೊಟ್ಟಿಗೆ ಗೊಬ್ಬರವನ್ನು ಕೊಡಬೇಕು. ಸತ್ತ ಪ್ರಾಣಿಗಳನ್ನು ಬುಡದಲ್ಲಿ ಹುಗಿದರೆ ಉತ್ತಮ ಇಳುವರಿಯನ್ನು ಕೊಡುತ್ತದೆ. ಬೇಸಗೆಯಲ್ಲಿ ಹೆಚ್ಚುನೀರನ್ನು ಕೊಡಬೇಕು. ಮರ ಬೆಳೆದಂತೆಲ್ಲಾ ಇಳುವರಿ ಹೆಚ್ಚಾಗುತ್ತದೆ.

ರೋಗಗಳು : ನವೆಂಬರ್, ಡಿಸೆಂಬರ್ ತಿಂಗಳುಗಳಲ್ಲಿ ಬೀಳುವ ಹಿಮಕ್ಕೆ ಕಾಯಿಗಳು ಅರಿಸಿನ ಬಣ್ಣಕ್ಕೆತಿರುಗುತ್ತವೆ. ರಂಗೋಲಿ ಹುಳು ಎಲೆಗಳ ಮೇಲೆ ಹರಿದರೆ ರೋಗ ಆರಂಭವಾಗುತ್ತದೆ. ಕೊಂಬೆಗಳಲ್ಲಿ ಕಾಂಡಗಳಲ್ಲಿ ಅಂಟು ಜಿನುಗುವ ರೋಗ ತಗುಲಿ ಅದು ಬುಡವನ್ನು ತಲುಪಿದರೆ ಮರ ಸಾಯುತ್ತದೆ. ರೋಗನಿವಾರಣೆಗೆ ಲಕ್ಕಿ ಸೊಪ್ಪನ್ನು ಗಂಜಳದಲ್ಲಿ ನೆನೆಸಿ ಸಿಂಪಡಿಸಬೇಕು. ಇದರಿಂದ ಕ್ರಿಮಿಕೀಟಗಳು ಸತ್ತು ಮರ ರೋಗ ಮುಕ್ತವಾಗುತ್ತದೆ.

ಉಪಯೋಗ : ಹಣ್ಣಿನ ಸಿಪ್ಪೆಯನ್ನು ತಲೆಗೆ ಕಟ್ಟಿಕೊಂಡರೆ ಉಷ್ಣ ಕಡಿಮೆಯಾಗುತ್ತದೆ. ಇದರ ಇದ್ದಲಿನಿಂದ ಹಲ್ಲು ಉಜ್ಜಿದರೆ ಹುಳುಕು ನಿವಾರಣೆಯಾಗಿ ಹಲ್ಲಿಗೆ ಹೊಳಪು ಬರುತ್ತದೆ. ಇತ್ತೀಚೆಗೆ ಹಾಸನ, ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು ಕಡೆ ಈ ಮರಗಳನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಹಣ್ಣಿನ ತೊಳೆಗಳು ಕೆಲವು ಗುಲಾಬಿ ಬಣ್ಣದಲ್ಲಿಯೂ ಕೆಲವು ಅರಿಸಿನ ಬಣ್ಣದ್ದಾಗಿರುತ್ತವೆ. ತೊಳೆಗಳಲ್ಲಿ ಹೆಚ್ಚು ರಸವಿದ್ದು ತಿನ್ನಲು ರುಚಿಯಾಗಿರುತ್ತವೆ. ತೊಳೆಗಳಿಗೆ ಉಪ್ಪು ಖಾರ ಬೆರೆಸಿ ತಿನ್ನಬಹುದು.

ವಿ.ಆರ್.ಬಿ.

ಚಕ್ರಮುನಿ ತರಕಾರಿ ಸೊಪ್ಪುಗಳನ್ನು ನೀಡುವ ಮರಗಳ ಪೈಕಿ ಒಂದು. ಯೂಫೋರ್ಬಿಯೇಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಸೌರೋಪಸ್ ಅಂಡ್ರೊಗ್ಯೆನಸ್. ಇದರ ಮೂಲಸ್ಥಾನ ಕರ್ನಾಟಕ. ಇದು ಎಲ್ಲೆಂದರಲ್ಲಿ ಬೆಳೆಯುವ ಸ್ವಾಭಾವಿಕ ಸಸ್ಯ. ಇದರಲ್ಲಿ ಉತ್ತಮ ಪೋಷಕಾಂಶಗಳಿರುವುದರಿಂದ ಕೃಷಿ ಮಾಡುವುದುಂಟು. ಸುಮಾರು 4-6 ಅಡಿ ಎತ್ತರ ಬೆಳೆಯಬಲ್ಲದು. ಇದರ ಎಲೆ ಕಿರುನೆಲ್ಲಿ ಎಲೆಯ ಆಕಾರವನ್ನು ಹೋಲುತ್ತದೆ. ರೆಂಬೆಯ ಎರಡೂ ಕಡೆ ಅಭಿಮುಖವಾಗಿ ಎಲೆಗಳು ಜೋಡಣೆ ಗೊಂಡಿರುತ್ತವೆ. ಒಂಟಿಯಾಗಿ ಇಲ್ಲದೆ ಗೊಂಚಲಾಗಿ ಬಿಡುತ್ತದೆ. ಎಲೆಗಳ ಕಂಕುಗಳಲ್ಲಿ ಹೂಗಳು ಕಂಡುಬರುತ್ತವೆ. ಏಕಲಿಂಗಿ ಹೂಗಳು. ಹಣ್ಣುಗಳು ಗುಂಡಗಿದ್ದು ಒಂದೊಂದರಲ್ಲಿ ಅರ್ಧ ಡಜನ್ ಬೀಜಗಳಿರುತ್ತವೆ.

ಕೃಷಿ : ತೆಳುವಾದ ಇದರ ಕಾಂಡವನ್ನು ಬಲಿತ ಬಳಿಕ ಕತ್ತರಿಸಿ ನೆಡಬೇಕು. ಎಲ್ಲ ತರಹದ ಭೂಮಿಗಳಲ್ಲಿ ಬೆಳೆಯುತ್ತದೆ. ನೀರು ನಿಲ್ಲಬಾರದು, ಮಣ್ಣು ಫಲವತ್ತಾಗಿದ್ದರೆ ಸಮೃದ್ಧವಾಗಿ ಬೆಳೆಯುತ್ತದೆ. ಸುಮಾರು ಅರ್ಧ ಅಡಿ ಉದ್ದದ ತುಂಡುಗಳನ್ನು ಮರಳು ಮಿಶ್ರಿತ ಕೆಂಪು ಮಣ್ಣಿನಲ್ಲಿ ನೆಟ್ಟು ನೆರಳನ್ನು ಕೊಟ್ಟು ಬೆಳೆಸಬೇಕು. ಚಿಗುರೊಡೆದು ಬೇರು ಬಿಡುವ ತನಕ ಅಂದರೆ ಸುಮಾರು ಇಪ್ಪತ್ತು ದಿವಸಗಳ ತನಕ ಪೋಷಿಸಬೇಕು. ಅನಂತರ ನಿರ್ದಿಷ್ಟ ಜಾಗದಲ್ಲಿ ಗುಂಡಿಗಳನ್ನು ತೋಡಿ ಒಂದು ವಾರ ಕಾಲ ಒಣಗಲು ಬಿಟ್ಟು ಚೆನ್ನಾಗಿ ಕೊಳೆತ ಗೊಬ್ಬರ ಮತ್ತು ಮರಳನ್ನು ಬೆರೆಸಿ ಗುಂಡಿ ತುಂಬಿಸುತ್ತಾರೆ. ಎರಡು ಅಡಿ ಅಂತರವಿರುವ ಗುಂಡಿಗಳಲ್ಲಿ ನೆಡುವರು. ಉತ್ತಮ ಮಳೆಬೀಳುವ ಕಾಲದಲ್ಲಿ ಇದನ್ನು ನೆಡುತ್ತಾರೆ. ಗಿಡ ಬೆಳೆದಂತೆಲ್ಲ ಪೊದೆಯಂತೆ ಹರಡುತ್ತದೆ. ನಾಟಿ ಮಾಡಿದ ದಿನದಿಂದ ಮೂರು ತಿಂಗಳ ಒಳಗೆ ಸೊಪ್ಪು ಕೊಯ್ಲಿಗೆ ಸಿದ್ಧವಾಗುತ್ತದೆ.

ಗಿಡದ ಸುತ್ತ ಅಗೆದು ಮಣ್ಣನ್ನು ಸಡಿಲಗೊಳಿಸಿ ಬುಡದಿಂದ ಸ್ವಲ್ಪ ದೂರ ವೃತ್ತಾಕಾರದಲ್ಲಿ ಕೊಟ್ಟಿಗೆ ಗೊಬ್ಬರ ಹಾಕಿ ಮೇಲೆ ತೆಳುವಾಗಿ ಮಣ್ಣು ಹರಡಿ ಕೆದಕಿ ಮಿಶ್ರ ಮಾಡಿ ಒಂದೆರಡು ದಿನ ಒಣಗಲು ಬಿಟ್ಟು ನೀರನ್ನು ಕೊಟ್ಟರೆ ಉತ್ಕೃಷ್ಟವಾಗಿ ಬೆಳೆಯುತ್ತದೆ. ಸುಮಾರು 20 ವರ್ಷ ಕಾಲ ಜೀವಿಸಬಲ್ಲ ಸಸ್ಯವಾದುದರಿಂದ ಮುತುವರ್ಜಿಯಿಂದ ನೋಡಿಕೊಂಡರೆ ಮೂರು ತಿಂಗಳಿಗೊಂದಾವರ್ತಿಯಂತೆ ಸೊಪ್ಪನ್ನು ಕಟಾವು ಮಾಡಬಹುದು.

ಉಪಯೋಗ : ಇದರ ಸೊಪ್ಪು ಉತ್ತಮ ಪೋಷಕಾಂಶಗಳಿಂದ ಕೂಡಿದೆ. ಬಾಯಿಹುಣ್ಣು ನಿವಾರಕವಾಗಿ, ಪಚನಕ್ರಿಯೆ ವೃದ್ಧಿಯಾಗಲು,



ದೇಹದೃಢವಾಗಲು, ದೇಹದ ಉಷ್ಣಾಂಶವನ್ನು ಶಮನಗೊಳಿಸಲು ಅತ್ಯಂತ ಉಪಯುಕ್ತ. ವಾರಕ್ಕೆ ಒಂದೆರಡು ಬಾರಿ ಕನಿಷ್ಠ ಮೂರು ತಿಂಗಳು ಉಪಯೋಗಿಸಿದರೆ ಕಣ್ಣಿನ ದೃಷ್ಟಿ ಉತ್ತಮಗೊಳ್ಳುವುದೆಂದು ತಿಳಿದು ಬಂದಿದೆ. ಹುಳಿ, ತಂಬುಳಿ, ಚಟ್ನಿ ಮಾಡುವರು. ಒಣಗಿಸಿದ ಎಲೆಗಳನ್ನು ಚಟ್ನಿ ಪುಡಿಯಲ್ಲಿ ಉಪಯೋಗಿಸುವರು.

ಸಿ.ಎಚ್.

ಚನ್ನಂಗಿ ದ್ವಿದಳಧಾನ್ಯ ಸಸ್ಯಗಳ ಪೈಕಿ ಒಂದು. ಲೆಗ್ಯುಮಿನೋಸೀ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಲೈನ್ಸ್ ಕ್ಯುಲಿನಾರಿಸ್. ಕನ್ನಡದಲ್ಲಿ ಕಡಲೆ, ಚನ್ನಂಗಿ ಎಂದೂ ಉತ್ತರ ಭಾರತದಲ್ಲಿ ಇದನ್ನು ಮಸ್ಸೂರ್ ಎಂದು, ಇಂಗ್ಲಿಷಿನಲ್ಲಿ ಲೆಂಟಿಲ್ ಎಂದು ಕರೆಯುವರು. ಏಷ್ಯಾ ಮೈನರ್, ಗ್ರೀಸ್ ಅಥವಾ ಈಜಿಪ್ಟ್ ಇದರ ಮೂಲಸ್ಥಾನವೆಂದು ತಿಳಿದುಬರುತ್ತದೆ. ಪ್ರಪಂಚಾದ್ಯಂತ ಇದರ ಕೃಷಿ ಉಂಟು. ಭಾರತ ಮತ್ತು ಪಾಕಿಸ್ತಾನಗಳಲ್ಲಿ ಬೇರೆಡೆಗಳಿಗಿಂತ ಹೆಚ್ಚು ಬೆಳೆಯುತ್ತಾರೆ. ಭಾರತದಲ್ಲಿ ದಕ್ಷಿಣಕ್ಕಿಂತ ಉತ್ತರದಲ್ಲೇ ಇದರ ಕೃಷಿ ಹೆಚ್ಚು.

ಸಸ್ಯ ಸ್ವರೂಪ : ಸಾಧಾರಣ ಎತ್ತರಕ್ಕೆ ಬೆಳೆಯುವ ಸಸ್ಯ. ಹೆಚ್ಚೆಂದರೆ ಒಂದೂವರೆಯಿಂದ ಎರಡು ಅಡಿ ಇದರ ಎತ್ತರ. ಗಿಡ ಮತ್ತು ಎಲೆಗಳ

ಮೇಲೆ ಮೃದುವಾದ ರೋಮಗಳಿರುತ್ತವೆ. ಇದರ ಎಲೆಗಳು ತುಂಬ ಸಣ್ಣವು. ಕೆನ್ನೀಲಿ, ಕೆಂಪು, ಗುಲಾಬಿ ಹಾಗೂ ಬಿಳಿ ಬಣ್ಣದ ಹೂಗಳಿರುತ್ತವೆ. ಬಟಾಣಿ ಕಾಯಿಯಂತೆ ತೆಳುವಾದ ಸಿಪ್ಪೆಯೊಳಗೆ ಎರಡು ಮೂರು ಬೀಜಗಳಿರುತ್ತವೆ. ಇವುಗಳ ಬಣ್ಣ ಎಳಸಾಗಿದ್ದಾಗ ಬೀಜ ಹಸುರಾಗಿಯೂ ಬಲಿತಂತೆಲ್ಲ ಹಳದಿ ಮಿಶ್ರಿತ ಕಂದುಬಣ್ಣವಾಗಿಯೂ ಇರುತ್ತದೆ. ಬೀಜಗಳ ಗಾತ್ರಕ್ಕನುಗುಣವಾಗಿ ಎರಡು ಪ್ರಭೇಧಗಳನ್ನು ಗುರುತಿಸಲಾಗಿದೆ. ಮೊದಲನೆಯ ಜಾತಿಯದು ಗಾತ್ರದಲ್ಲಿ ದೊಡ್ಡದು. ಇದನ್ನು ಮ್ಯಾಕ್ರೋಸ್ಪರ್ಮೀ ಎನ್ನುವರು. ಆಫ್ರಿಕ ಮೆಡಿಟರೇನಿಯನ್ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇನ್ನೊಂದು ಬಗೆಯನ್ನು ಮೈಕ್ರೋಸ್ಪರ್ಮೀ (ಚಿಕ್ಕಗಾತ್ರ) ಎಂದೂ ಕರೆಯುವರು. ಇದನ್ನು ಪಶ್ಚಿಮ ಮತ್ತು ನೈಋತ್ಯ ಏಷ್ಯಾಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಭೂಗುಣ ಮತ್ತು ವಾಯುಗುಣಕ್ಕನುಗುಣವಾಗಿ ಬೀಜದ ಗಾತ್ರದಲ್ಲಿ ವ್ಯತ್ಯಾಸ ಕಾಣಬಹುದು. ಭಾರತದಲ್ಲಿ ದಪ್ಪ ಮತ್ತು ಸಣ್ಣ ಬಗೆಯ ಪ್ರಭೇದಗಳಿವೆ.

ಕೃಷಿ : ಎಲ್ಲ ಬಗೆಯ ಮಣ್ಣುಗಳಲ್ಲೂ ಬೆಳೆಯುವ ಸಾಮರ್ಥ್ಯ ಹೊಂದಿದೆ. ಮೆಕ್ಕಲು ಮಣ್ಣು, ಎರೆಮಣ್ಣು, ಮರಳುಮಿಶ್ರಿತ ಗೋಡು ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ವಿವಿಧ ವಾಯುಗುಣ ಮತ್ತು ಹವಾಗುಣಕ್ಕನುಗುಣವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಇದರ ಬೇಸಾಯ ಮಾಡುವರು. 60 ಕ್ಕೂ ಮೇಲ್ಪಟ್ಟ ತಳಿಗಳು ಕಂಡುಬರುತ್ತದೆ. ಒಂದೊಂದು ತಳಿಯು ಕೃಷಿ ಪ್ರದೇಶಕ್ಕನುಗುಣವಾಗಿದ್ದು ಹೂ ಬಿಡುವ ಕಾಲ, ಕಾಂಡ, ಸಸ್ಯ ಸ್ವರೂಪ ಎಲೆ ಹೀಗೆ ಎಲ್ಲದರಲ್ಲೂ ಕೆಲವು ವಿಶಿಷ್ಟ ಲಕ್ಷಣಗಳಿರುತ್ತವೆ. ಮಿಶ್ರ ಬೆಳೆಯಾಗಿಯೂ ಇದನ್ನು ಬೆಳೆಸಬಹುದು, ಚಳಿಗಾಲದ ಬೆಳೆಯಾಗಿದ್ದು ಬಾರ್ಲಿ, ಸಾಸಿವೆ, ಹರಳು ಬೆಳೆಗಳ ಮಧ್ಯೆ



ಕೂಡ ಬೆಳೆಸುವುದುಂಟು. ಬೀಜಗಳನ್ನು ಸಾಲುಗಳಲ್ಲಿ ಬಿತ್ತಬಹುದು ಅಥವಾ ಎರಚಬಹುದು. ತುಂಬ ಆಳಕ್ಕೆ ಬೀಜಗಳನ್ನು ನೆಡುವ ಆವಶ್ಯಕತೆಯಿಲ್ಲ. ಸಾಲುಗಳಲ್ಲಿ ಬೆಳೆಸುವವರು (ಮಿಶ್ರ ಬೆಳೆಯಾಗಿ) ಒಂದು ಎಕರೆಗೆ 10-12 ಕೆ.ಜಿ. ಉಪಯೋಗಿಸಿದರೆ, ಕೈಯಿಂದ ಚೆಲ್ಲುವವರು ಅಥವಾ ಬೇರೆ ವಿಧಾನದಲ್ಲಿ ಬೆಳೆಸುವವರು 30-40 ಕೆ.ಜಿ. ಬಳಸುವರು.

ನೀರೊದಗಿಸುವಿಕೆ : ಕಡಲೆಯನ್ನು ನೀರಾವರಿ ಬೆಳೆಯಾಗಿಯೂ ಕುಷ್ಕಿ ಬೆಳೆಯಾಗಿಯೂ ಬೆಳೆಸಬಹುದು. ನೀರಾವರಿಯಾದರೆ ಉತ್ತಮ ಇಳುವರಿಯನ್ನು ನಿರೀಕ್ಷಿಸಬಹುದು. ಕುಷ್ಕಿ ಅಥವಾ ಮಿಶ್ರ ಬೆಳೆಯಾಗಿ ಬೆಳೆಸುವಾಗ ನೀರು ಮತ್ತು ಆರೈಕೆ ಕಡಿಮೆಯಾಗುವುದರಿಂದ ಇಳುವರಿ ಕಡಿಮೆಯಾಗುತ್ತದೆ. ಉತ್ತಮ ಬಿತ್ತನೆ ಬೀಜಗಳನ್ನು ಆಯ್ಕೆ ಮಾಡಿ ಕೃಷಿ ಮಾಡುವುದರಿಂದಲೂ ಒಳ್ಳೆಯ ಫಸಲು ದೊರೆಯುತ್ತದೆ.

ಉಪಯೋಗಗಳು : ಇದನ್ನು ಕಾಳಿನ ರೂಪದಲ್ಲೂ ಬೇಳೆಯ ರೂಪದಲ್ಲೂ ಉಪಯೋಗಿಸಬಹುದು. ಕಾಯಿಗಳನ್ನು ಬಲಿಯುವ ಮೊದಲೇ ಕಿತ್ತು ತರಕಾರಿಯಂತೆ ಬೆಳೆಸಬಹುದು. ಬೇಳೆಯಲ್ಲಿ ಪೌಷ್ಟಿಕಾಂಶಗಳು ಹೆಚ್ಚಾಗಿರುವುದರಿಂದ ಇದನ್ನು ಸಾಂಬಾರು, ಗುಗ್ಗರಿ, ಪಲ್ಯ ಮುಂತಾದ ಖಾದ್ಯಗಳಿಗೆ ಬಳಸುತ್ತಾರೆ. ಇದರ ಬೇಳೆಯನ್ನು ಹಿಟ್ಟು ಮಾಡಿಸಿ ಇತರ ಕಾಳುಗಳ ಹಿಟ್ಟಿನೊಂದಿಗೆ ಬೆರೆಸಿ ಬೆಲ್ಲ, ಹಾಲು, ದ್ರಾಕ್ಷಿ, ಗೋಡಂಬಿ, ಬಾದಾಮಿಗಳನ್ನು ಹಾಕಿ ಮಕ್ಕಳಿಗೆ ಪೌಷ್ಟಿಕಾಹಾರವಾಗಿ ಕೊಡಲಾಗುವುದು. ಕಡಲೆಯಲ್ಲಿ ವಿವಿಧ ಅಮೈನೊ ಆಮ್ಲಗಳು, ವಿಟಮಿನ್ ಬಿ ಗುಂಪಿಗೆ ಸೇರಿದ ಥೈಯಾಮೀನ್, ನಿಕೋಟಿನಿಕ್ ಆಮ್ಲ, ಕೋಲಿನ್ ಮತ್ತು ವಿಟಮಿನ್, ಕೆ ಹಾಗೂ ಆಸ್ಕಾರ್ಬಿಕ್ ಆಮ್ಲಗಳು ಸಾಕಷ್ಟಿವೆ. ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಗಂಧಕ, ಮ್ಯಾಂಗನೀಸ್ ಮುಂತಾದ ಖನಿಜಗಳಿವೆ.

ಪಿಷ್ಟವನ್ನು ಬಟ್ಟೆ ಹಾಗೂ ಕ್ಯಾಲಿಕೊಗೆ ಬಳಸುವರು. ಬೇಳೆಯಿಂದ ಬೇರ್ಪಡಿಸಿದ ಸಿಪ್ಪೆಯನ್ನೂ ಹಸುರು ಗಿಡವನ್ನು ದನಗಳ ಮೇವಿಗಾಗಿ ಬಳಸುವರು. ಇದು ಸುಮಾರು ಮೂರ ರಿಂದ ನಾಲ್ಕು ತಿಂಗಳ ಬೆಳೆಯಾಗಿದ್ದು ಕಾಯಿ ಬಲಿತ ಮೇಲೆ ಬುಡ ಸಮೇತ ಕೀಳುವರು. ಇಲ್ಲವೆ ನೆಲಮಟ್ಟಕ್ಕೆ ಕೊಯ್ದು ಒಣಗಿಸಿ ಕಾಳುಗಳನ್ನು ಬೇರ್ಪಡಿಸುವರು. ವಾಣಿಜ್ಯ ದೃಷ್ಟಿಯಿಂದಲೂ ಇದು ಲಾಭದಾಯಕವಾಗಿರುವುದರಿಂದ ಕಾಳುಗಳನ್ನು ಶುದ್ಧಮಾಡಿ ಮತ್ತೊಮ್ಮೆ ಒಣಗಿಸಿ ಮಾರುಕಟ್ಟೆಗೆ ಕಳುಹಿಸುತ್ತಾರೆ.

ಸಿ.ಎಚ್.

ಚಪ್ಪರದವರೆ (ಪೆಂಡಾಲ್ ಚೀನ್) ಇದು ಫ್ಯಾಬೇಸೀ ಕುಟುಂಬಕ್ಕೆ ಸೇರಿದುದಾಗಿದೆ. ಭಾರತದಲ್ಲಿ ಹುಟ್ಟಿ ಬೆಳೆದ ಸ್ವದೇಸಿ ತರಕಾರಿ. ದಾಲಿಕೋಸ್ ಲ್ಯಾಬ್ ಲ್ಯಾಬ್ ವರ್ ಲಿಗ್ನೋಸಸ್ ಇದರ ಸಸ್ಯ ವೈಜ್ಞಾನಿಕ ಹೆಸರು. ಚಪ್ಪರದವರೆಗೆ ಈ ಹೆಸರು ಬರಲು ಕಾರಣ ಅದನ್ನು ಹಬ್ಬಿಸುವಂತಹ ಚಪ್ಪರದ ಆಸರೆ. ಇದನ್ನು ಭಾರತದಲ್ಲಲ್ಲದೆ ಚೀನಾ, ತೈವಾನ್, ಜಾವಾ, ಮಲಯ, ಹಾಂಕಾಂಗ್ ಮುಂತಾದ ದೇಶಗಳಲ್ಲಿ ಬೆಳೆಸುತ್ತಾರೆ.

ಇದನ್ನು ಎಂತಹ ಭೂಮಿಯಲ್ಲಾದರೂ ಬೆಳೆಯಬಹುದು. ಆದರೆ ನೀರು ನಿಲ್ಲಬಾರದು. ಒಳ ಪದರಗಳಲ್ಲಿ ಗೊರಜಿಲ್ಲದ ಮರಳು ಮಿಶ್ರಿತ ಕೆಂಪು ಗೋಡು ಅತ್ಯುತ್ತಮವಾದುದು. ಸಾಮಾನ್ಯವಾಗಿ ಬೀಜವನ್ನು ಬಿತ್ತಿ ಬೆಳೆಸುತ್ತಾರೆ. ಒಂದು ಎಕರೆಗೆ 1.5 ರಿಂದ 2.0 ಕೆ.ಜಿ. ಬೀಜ ಬೇಕಾಗುತ್ತದೆ. ಚೆನ್ನಾಗಿ ಬೆಳೆದು ಒಣಗಿದ ಕಾಯಿಗಳಿಂದ ಬಿತ್ತನೆಗೆ ಬೀಜವನ್ನು ಆರಿಸಿಕೊಳ್ಳಬೇಕು. ಭೂಮಿಯನ್ನು ಆಳವಾಗಿ 2 ರಿಂದ 3 ಬಾರಿ ಉತ್ತು ಸಮ ಮಾಡಿ 10 ಅಡಿ ಅಂತರದಲ್ಲಿ 2 ಅಡಿ ಆಳದ ಗುಂಡಿಗಳನ್ನು ತೆಗೆದು ಎಕರೆಗೆ 4 ರಿಂದ 5 ಟನ್ ಕೊಟ್ಟಿಗೆಗೊಬ್ಬರದ ಜೊತೆಗೆ ಮೇಲ್ಮಣ್ಣು

ಸೇರಿಸಿ ಪಾತಿ ತುಂಬಿ ನೀರು ಹಾಯಿಸಬೇಕು. ಪ್ರತಿ ಗುಂಡಿಗೆ 3 ರಿಂದ 4 ಕಾಳು ಬಿತ್ತಬೇಕು. ನಾಲ್ಕೈದು ದಿನಗಳಲ್ಲಿ ಮೊಳೆಯುತ್ತದೆ.

ಮಣ್ಣು ಮತ್ತು ಹವಾಗುಣವನ್ನನುಸರಿಸಿ ನೀರು ಕೊಡಬೇಕು. ಮಳೆ ಇಲ್ಲದ ಸಮಯದಲ್ಲಿ ಮತ್ತು ಬೇಸಗೆಗಳಲ್ಲಿ ಹೆಚ್ಚು ನೀರು ಬೇಕಾದರೆ, ಮಳೆಗಾಲದಲ್ಲಿ ಕಡಿಮೆ ನೀರು ಸಾಕಾಗುತ್ತದೆ. ಗಿಡದ ಬೇರು ಗಂಟುಗಳಿಂದ ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿಕೊಳ್ಳುತ್ತದೆ.

ಬಳ್ಳಿಗಳನ್ನು ಆರು ಅಡಿ ಎತ್ತರದಲ್ಲಿರುವ ತಂತಿ ಜಾಲರಿಮೇಲೆ ಅಥವಾ ಮರದ ಕೊಂಬೆಗಳಿಂದ ನಿರ್ಮಿಸಿದ ಚಪ್ಪರದ ಮೇಲೆ ಹಬ್ಬಿಸಬೇಕು. ಕೆಲವರು ಮರಗಳು, ಬೇಲಿ ಮುಂತಾದವುಗಳ ಮೇಲೆಯೂ ಹಬ್ಬಿಸುತ್ತಾರೆ. ಹವಾಗುಣವು ಹೆಚ್ಚು ಬಿಸಿಲಿನಿಂದ ಕೂಡಿದ್ದರೆ ಒಳ್ಳೆಯದು. ಬಳ್ಳಿಯ ಬೆಳವಣಿಗೆ ಮಳೆಗಾಲದಲ್ಲಿ ಹೆಚ್ಚಿದ್ದರೆ ಚಳಿಗಾಲದಲ್ಲಿ ಕಡಿಮೆ. ಇದು ಅಧಿಕ ಮಳೆಯನ್ನು ತಡೆದುಕೊಳ್ಳಲಾರದು. ಬಿತ್ತನೆಗೆ ಜುಲೈ - ಆಗಸ್ಟ್ ತಿಂಗಳುಗಳು ಉತ್ತಮ.

ಹಲವಾರು ಕಪ್ಪು ಬಣ್ಣದ ಕೀಟಗಳು ಗಿಡವನ್ನು ಒಣಗುವಂತೆ ಮಾಡುವುದರಿಂದ ಕ್ರಿಮಿನಾಶಕ (ಮನೋಕ್ರೊಟೋಫಾಸ್) ಸಿಂಪಡಿಸಬೇಕಾಗುತ್ತದೆ. ಗಿಡಕ್ಕೆ ಸೋಂಕು ರೋಗ ಬಂದರೂ ಒಣಗಿ ಹೋಗುತ್ತದೆ.



ಸಾಮಾನ್ಯವಾಗಿ ತರಕಾರಿಗೆ ಎಳಸು ಮತ್ತು ಬಲಿತ ಕಾಯಿ ಬೀಜಗಳನ್ನು ಬಳಸುವರು. ಕಾಯಿಗಳಲ್ಲಿ ಹೆಚ್ಚು ನಾರು ಉಂಟಾಗುವ ಮೊದಲು ಕೊಯ್ಲು ಮಾಡಿ ಬಳಸುವದು ಒಳ್ಳೆಯದು. ಕೊಯ್ಲುಗಳನ್ನು 3 - 4 ದಿನಗಳಿಗೊಮ್ಮೆ ಮಾಡಬಹುದು. ಬೀಜ ಬಿತ್ತಿದ ಅನಂತರ ಸುಮಾರು 4 ವರ್ಷದವರೆಗೆ ಇಳುವರಿ ಪಡೆಯಬಹುದು. ಪ್ರತಿ ಬಳ್ಳಿಯಿಂದ ಕನಿಷ್ಠ 20 - 25 ಕೆ.ಜಿ. ಕಾಯಿ ಪಡೆಯಬಹುದು.

ಇದರಲ್ಲಿ ಅನೇಕ ವಿಧಗಳಿದ್ದರೂ ನಿರ್ದಿಷ್ಟವಾದ ತಳಿಗಳು ಬೇಸಾಯದಲ್ಲಿಲ್ಲ. ಬಣ್ಣಗಳಲ್ಲಿ ಹಸುರು, ಬಿಳಿ ಮಿಶ್ರಿತ ಹಸುರು ಮತ್ತು ಬಿಳಿ ಹಳದಿ ವಿಧಗಳು ಕಂಡುಬರುತ್ತವೆ. ಕೆಲವು ನೀಳವಾದ ಮತ್ತು ಉದ್ದವಾದ ಕಾಯಿಗಳಾಗಿದ್ದರೆ ಕೆಲವು ಕುಡುಗೋಲಿನಂತೆ ಬಾಗಿರುತ್ತವೆ.

ಉಪಯೋಗಗಳು : ಇದರ ಎಳೆಯ ಕಾಯಿಗಳಿಂದ ರುಚಿಯಾದ ಪಲ್ಯ, ಹುಳಿ, ಸಾಂಬಾರುಗಳನ್ನು ತಯಾರಿಸಿ ಉಪಯೋಗಿಸಲಾಗುತ್ತದೆ. ಇದರಲ್ಲಿ ಪಿಷ್ಠ, ಸಾರಜನಕ ಕೊಬ್ಬು, ಸುಣ್ಣ, ರಂಜಕದ ಅಂಶಗಳಿವೆ. ಇದರಿಂದ ತಯಾರಿಸಿದ ಸೂಪ್‌ನ್ನು ಸ್ವಲ್ಪ ಉಪ್ಪಿನೊಂದಿಗೆ ಸೇವಿಸಿದರೆ ಕೆಮ್ಮು ನಿವಾರಣೆಯಾಗುತ್ತದೆ. ಬೀಜವನ್ನು ಅರೆದು ಮುಖಕ್ಕೆ ಹಚ್ಚಿದರೆ ಕಲೆ ಹೋಗುತ್ತದೆ. ಇದರೊಂದಿಗೆ ನಿಂಬೆರಸ ಸೇರಿಸಿ ಅರೆದು ಉಪಯೋಗಿಸುವುದರಿಂದ ಚರ್ಮದ ಬಣ್ಣ ತಿಳಿಯಾಗುತ್ತದೆ. ಎಲೆಗಳನ್ನು ಅರೆದು ಹಚ್ಚಿದರೆ ಹುಳಕಡ್ಡಿ ಗುಣವಾಗುತ್ತದೆ ಮತ್ತು ತಲೆ ಹೊಟ್ಟು ನಿವಾರಣೆಯಾಗುತ್ತದೆ. ಕೋಲಾರದ ಕಡೆ ಇದನ್ನು (ಚಿಕ್ಕಡಿ) ಚಕ್ಕರೆಕಾಯಿ ಎನ್ನುತ್ತಾರೆ.

ಆಧಾರ ಗ್ರಂಥಗಳು

ಬಳ್ಳಿ ತರಕಾರಿಗಳು

ಅಂತರ್ಜಾಲದ ಮೂಲಗಳಿಂದ

ಕೆ.ಎಲ್.

ಚಪ್ಪರ ಬದನೆ / ಸೀಮೆಬದನೆ (ಸೇಖಿಯಂ ಎಡ್ಯೂಲ್)

ಇದು ಕುಕುರ್ಬಿಟೇಸಿ ಕುಟುಂಬಕ್ಕೆ ಸೇರಿದ ತರಕಾರಿ. ಕುಂಬಳ ಜಾತಿಗೆ ಸೇರಿದ ಬಹುವಾರ್ಷಿಕ ಬಳ್ಳಿ. ನೋಡಲು ಬುಗುರಿಯಾಕಾರದಲ್ಲಿದ್ದು, ನಾಲ್ಕೈದು ಅಂಗುಲ ಉದ್ದವಿರುತ್ತದೆ. ಇದನ್ನು 'ಅಜ್ಟೆಕ್' ಜನಸಮುದಾಯದವರು 'ಚಯೋಟ್' ಎಂಬ ಹೆಸರಿನಿಂದ ತರಕಾರಿಯನ್ನಾಗಿ ಮೊದಲು ಬಳಸಿದರು. ಅನಂತರ 'ಚಾಚೋ' ಎಂಬ ಹೆಸರಿನಿಂದ ದಕ್ಷಿಣ ಅಮೇರಿಕಾದಲ್ಲಿ, 'ಚೋ ಚೋ' ಎಂಬ ಹೆಸರಿನಿಂದ ಆಸ್ಟ್ರೇಲಿಯಾದಲ್ಲಿ ಬಳಕೆಯಲ್ಲಿತ್ತು. 1884ರಲ್ಲಿ ಉತ್ತರ ಭಾರತ, 1890ರ ಸುಮಾರಿಗೆ ದಕ್ಷಿಣ ಭಾರತದ ಬೆಂಗಳೂರಿಗೆ ಬಂದಿತು. ಮೊತ್ತಮೊದಲು ಬೆಂಗಳೂರಿನ ದಂಡು ಪ್ರದೇಶದಲ್ಲಿ (ಕಂಟೋನ್ಮೆಂಟ್) ನೆಲಸಿದ್ದ ಯೂರೋಪಿಯನ್ನರು 1900ರಲ್ಲಿ ಉಪಯೋಗಿಸಿದರು. ಅವರ ಸಪ್ಪೆ ಆಹಾರಕ್ಕೆ ಇದು ಒಗ್ಗಿತು.

20ನೆಯ ಶತಮಾನದ ಆರಂಭದಲ್ಲಿ ಲಾಲ್‌ಬಾಗಿನ ಅಧಿಕಾರಿಯಾಗಿದ್ದ ಕ್ರಂಬಿಗಲ್ ಎಂಬಾತ ಬೆಂಗಳೂರಿನ ಸುತ್ತಮುತ್ತಲಿನ ತರಕಾರಿ ತೋಟಗಳಿಗೆ ಹಂಚಿದ್ದಾಗಿ ಬಿ.ಜಿ.ಎಲ್. ಸ್ವಾಮಿ ತಿಳಿಸಿದ್ದಾರೆ.

ಉಷ್ಣ ಹಾಗೂ ಸಮಶೀತೋಷ್ಣ ವಲಯದ ಬೆಳೆಯಾದ ಇದಕ್ಕೆ ಫಲವತ್ತಾದ ಗೋಡು ಮಣ್ಣು ಆವಶ್ಯಕ. ಮಣ್ಣು ಸ್ವಲ್ಪ ಆಮ್ಲೀಯಗುಣ ಹೊಂದಿದ್ದರೆ ಫಸಲು ಹೆಚ್ಚಾಗಿ ದೊರೆಯುತ್ತದೆ. ಭೂಮಿ ಸದಾ ತೇವಾಂಶ ಹೊಂದಿದ್ದರೆ ಒಳ್ಳೆಯದು. ಆದರೆ ನೀರು ನಿಂತಿರಬಾರದು. ನೀರು ಹೆಪ್ಪುಗಟ್ಟುವ ತಂಪಿನ ಹವಾಗುಣದಲ್ಲಿ ಬಳ್ಳಿ ಸಾಯುತ್ತದೆ. ಬೆಚ್ಚಗಿನ ವಾತಾವರಣದಲ್ಲಿ ಕಾಯಿಗಳು ದೊಡ್ಡವಿರುತ್ತವೆ.

ಬಿತ್ತನೆಗೆ ಪೂರ್ಣ ಬಲಿತು, ಮೊಳಕೆಯೊಡೆದ ಕಾಯಿಗಳನ್ನು ಬಳಸಲಾಗುತ್ತದೆ. ಮೊಳಕೆ ಇಲ್ಲದಿರುವ ಕಾಯಿಗಳನ್ನುಮೊಳಕೆ ಬರಿಸಲು ತೇವದಿಂದ ಕೂಡಿದ ಮರಳಿನಲ್ಲಿ ಹೂತಿಟ್ಟು ಅನಂತರ

ಬಳಸಬಹುದು. ಬಿತ್ತನೆಗೆ ಯಾವಾಗಲೂ ಮೊದಲು ಬಿಟ್ಟ ಕಾಯಿಗಳನ್ನು ಆರಿಸಿಕೊಂಡರೆ ಒಳ್ಳೆಯದು. ಒಂದು ಎಕರೆಗೆ 680 ಬಿತ್ತನೆ ಕಾಯಿಗಳು ಬೇಕಾಗುತ್ತವೆ.

ಬೀಜ ಬಿತ್ತುವ ಮುನ್ನ ಭೂಮಿಯನ್ನು ಉತ್ತು 8 ಅಡಿ ಸಾಲುಗಳಲ್ಲಿ 8 ಅಡಿಗೆ ಒಂದರಂತೆ 2 ಘನ ಅಡಿಯ ಪಾತಿಗಳನ್ನು ಮಾಡಿ



ಸಮಪ್ರಮಾಣದ ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣಿನಿಂದ ತುಂಬಿ ಮಧ್ಯದಲ್ಲಿ ಕಾಯಿಯನ್ನು ನಾಟಿ(ನೆಟ್ಟು) ಮಾಡಿ ನೀರು ಹಾಕಬೇಕು. ಸೀಮೆ ಬದನೆಗೆ ಅಧಿಕ ಪ್ರಮಾಣದ ಗೊಬ್ಬರ ಬೇಕಾಗಿರುವುದರಿಂದ ಗೊಬ್ಬರವನ್ನು ಕಂತುಗಳಲ್ಲಿ ಹಾಕಬೇಕು. ಪ್ರತಿ ಎಕರೆಗೆ 10 ಟನ್ ಕೊಟ್ಟಿಗೆ ಗೊಬ್ಬರದ ಜೊತೆಗೆ 17 ಕೆ.ಜಿ. ಸಾರಜನಕ, 17 ಕೆ.ಜಿ. ರಂಜಕ, 17 ಕೆ.ಜಿ. ಪೊಟ್ಯಾಷ್‌ಗಳನ್ನು 4 ಸಮಕಂತುಗಳನ್ನಾಗಿ ಮಾಡಿಕೊಂಡು ಬಳ್ಳಿಗಳನ್ನು ಸವರುವ ಸಮಯದಲ್ಲಿ ಒದಗಿಸಬೇಕು.

ಸೀಮೆ ಬದನೆಯ ಇಳುವರಿ ಹೆಚ್ಚಿಸಲು ಬಳ್ಳಿಗಳಿಗೆ ಸರಿಯಾದ ಆಸರೆ ಮತ್ತು ಹಬ್ಬಿಸುವಿಕೆ ಅಗತ್ಯ. ಹೀಗೆ ಮಾಡುವುದರಿಂದ ಕಾಯಿಗಳು ಹಾಳಾಗುವುದಿಲ್ಲ. ಬಳ್ಳಿಗಳನ್ನು ಮರ, ಬೇಲಿ, ತಡಿಕೆ ಅಥವಾ ಚಪ್ಪರಗಳ ಮೇಲೆ ಹಬ್ಬಿಸಬಹುದು. ನೆಲಮಟ್ಟದಿಂದ 4 ರಿಂದ 6 ಅಡಿ ಎತ್ತರಕ್ಕೆ ತಂತಿ ಬಲೆ ನಿರ್ಮಿಸಿದರೆ ಒಳ್ಳೆಯದು. ತೇವಾಂಶದ ಸಂರಕ್ಷಣೆ ಮಾಡಿದಲ್ಲಿ ಕಾಯಿ ಬಿತ್ತಿದ 5 ತಿಂಗಳಿನಲ್ಲಿ ಹಂಬು ಚಪ್ಪರದ ತುಂಬಾ ಹಬ್ಬುತ್ತದೆ.

ಸೀಮೆಬದನೆ ಬಳ್ಳಿಗಳಿಗೆ ಮಣ್ಣು ಯಾವಾಗಲೂ ಹಸಿ ಇರಬೇಕು. ಮಳೆ ಇಲ್ಲದಿದ್ದಾಗ ವಾರಕ್ಕೊಮ್ಮೆ ನೀರು ಹಾಯಿಸಬೇಕು. ಸರಿಯಾದ ನೀರಾವರಿ ಇಲ್ಲದಿದ್ದರೆ ಇಳುವರಿ ಕಡಿಮೆಯಾಗುವುದರಿಂದ, ಗಿಡಗಳ ಬುಡದಲ್ಲಿ ಪಾತಿಗಳನ್ನು ಒಣ ಎಲೆ, ಕಸ ಮುಂತಾದವುಗಳನ್ನು ಬಳಸಿ ಸುಮಾರು 10 ಸೆಂ.ಮೀ. ಮಂದಕ್ಕೆ ಹರಡಿದರೆ ತೇವಾಂಶ ಸಂರಕ್ಷಣೆಯಾಗುತ್ತದೆ. ಬಳ್ಳಿಯು ಚಪ್ಪರವನ್ನು ಆವರಿಸುವವರೆಗೆ ಆಗಾಗ್ಗೆ ಮಡಿಗಳಲ್ಲಿ ಮಣ್ಣನ್ನು ಕೆದಕಿ, ಸಡಿಲಗೊಳಿಸಿ, ಕಳೆಗಳ ನಿಯಂತ್ರಣ ಮಾಡಬೇಕು. ಈ ಬೆಳೆಯ ಬಳ್ಳಿಗಳನ್ನು ಜನವರಿ, ಏಪ್ರಿಲ್, ಜುಲೈ ಹಾಗೂ ಅಕ್ಟೋಬರ್ ತಿಂಗಳಲ್ಲಿ ಭೂಮಿಯಿಂದ 30 ಸೆಂ.ಮೀ. ಎತ್ತರಕ್ಕೆ ಸವರುವುದು ಆವಶ್ಯಕ.

ಬಳ್ಳಿಗೆ ಕೀಟಗಳು ಹತ್ತದಂತೆ ರೋಗ ಬಾರದಂತೆ ಔಷಧಿ ಸಿಂಪಡಿಸಬೇಕು. ಚಪ್ಪರವನ್ನು ಆವರಿಸಿದ ಮೇಲೆ ಹೂಗಳು ಕಾಯಾಗಲು ಒಂದು ತಿಂಗಳು ಬೇಕಾಗುತ್ತದೆ. ವರ್ಷಪೂರ್ತಿಕಾಯಿ ಪಡೆಯ ಬಹುದಾದರೂ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಜುಲೈ - ಡಿಸೆಂಬರ್ ತಿಂಗಳಲ್ಲಿ ಅತ್ಯಧಿಕ ಫಸಲು ಬರುತ್ತದೆ. ಕೊಯ್ಲಾಗುವ ಸಮಯದಲ್ಲಿ ಗಿಡಕ್ಕೆ ಹೆಚ್ಚು ನೀರು ಬಿಡಬಾರದು. ಪ್ರತಿ ಬಳ್ಳಿಗೆ 200 ರಿಂದ 400 ಗ್ರಾಂ. ತೂಕವಿರುವ 50 ರಿಂದ 100 ಕಾಯಿಗಳು ಸಿಗುತ್ತವೆ. ಪ್ರತಿ ಎಕರೆಗೆ ಸುಮಾರು 20 ಟನ್ ಇಳುವರಿ ಪಡೆಯಬಹುದಾಗಿದೆ. ಈ ಬಳ್ಳಿ 5 ವರ್ಷಗಳವರೆಗೆ ಇರುತ್ತದೆ.

ಉಪಯೋಗಗಳು : ಹಸಿ ತರಕಾರಿಗಿಂತ ಬೇಯಿಸಿ ತಿಂದರೆ ರುಚಿ ಹೆಚ್ಚು. ಕಾಯಿಗಳನ್ನು ಉದ್ದಕ್ಕೆ ಸೀಳಿ, ಉಪ್ಪು ಮತ್ತು ಈರುಳ್ಳಿಯೊಂದಿಗೆ ಕೊಚ್ಚಿ, ಬಾಳೆ ಎಲೆಯಲ್ಲಿಟ್ಟು ಮುಚ್ಚಿ ಪಾತ್ರೆಯಲ್ಲಿ ಬೇಯಿಸಿ ತಿಂದರೆ ತುಂಬಾ ರುಚಿಯಾಗಿರುತ್ತದೆ. ಇದರ ರುಚಿ ಬೇಯಿಸಿದ ಅಣಬೆಯಂತಿರುತ್ತದೆ. ಇದು ಡಚ್, ಈಸ್ಟ್‌ಇಂಡೀಸಿನ ಬಹಳ ಪ್ರಿಯವಾದ ಅಡುಗೆ. ಕಾಯಿಗಳಿಂದ ಕೊಲೆಕ್ ಎಂಬ ಪದಾರ್ಥವನ್ನು ತಯಾರಿಸುತ್ತಾರೆ. ಸಾರು, ಸಾಗು, ಪಲ್ಯ, ಗೊಜ್ಜು ಮುಂತಾದವುಗಳನ್ನು ತಯಾರಿಸಬಹುದು. ಇದರಲ್ಲಿ ಪಿಷ್ಟ, ಕೊಬ್ಬು, ಸುಣ್ಣ, ರಂಜಕ ಮತ್ತು ಸಸಾರಜನಕದ ಅಂಶಗಳಿವೆ. ಇದರ ಎಲೆಯ ರಸವನ್ನು ಕಣ್ಣಿನ ನೋವಿಗೆ ಬಳಸುತ್ತಾರೆ. ತಮಿಳುನಾಡಿನಲ್ಲಿ 'ಬೆಂಗಳೂರು ವಂಕಾಯ ಕತ್ತರಿ ಕಾಯಿ' ಎಂದೂ ಆಂಧ್ರದಲ್ಲಿ 'ಬೆಂಗಳೂರು' ಎಂದೂ, ಕೇರಳದಲ್ಲಿ 'ಬೆಂಗಳೂರಾ' ಎಂದು ಕರೆಯುತ್ತಾರೆ. ಬೆಂಗಳೂರು ಕಡೆ ಸೀಮೆ ಬದನೆ, ಚೌಚೌ ಕಾಯಿ ಎಂದು ಪರಿಚಿತವಾಗಿದೆ.

ಕೆ.ಎಲ್.

ಚರಗ ಉತ್ತರ ಕರ್ನಾಟಕದ ಕೃಷಿಗೆ ಸಂಬಂಧಿಸಿದಂತೆ ಇರುವ ಜನಪದ ಆಚರಣೆಗಳಲ್ಲಿ 'ಚರಗ' ಬಹುಮುಖ್ಯವಾದುದು. 'ಚರುಗ'- ಚರಗ, ಸರಗ ಎಂಬವು ಈ ಪದದ ಆಡುಮಾತಿನ ರೂಪಗಳು. ವಿಶೇಷವಾಗಿ ರೈತವರ್ಗಕ್ಕೆ ಸೀಮಿತವಾದದ್ದು. (ಎಳ್ಳು) ಅಮಾವಾಸ್ಯೆಯ ದಿನದಂದು ವಿವಿಧ ರೀತಿಯ ವಿಶಿಷ್ಟವಾದ ಆಹಾರ ಪದಾರ್ಥಗಳನ್ನು ತಯಾರಿಸಿ, ನಳನಳಿಸಿ, ಕೊಬ್ಬಿ ಕೊನೆವಾಯ್ದ ಬೆಳೆಯ ಹೊಲದಲ್ಲಿ ದೈವ ಪೂಜೆಯನ್ನು ಸಲ್ಲಿಸಿ, ನೈವೇದ್ಯ ಮಾಡಿ ಅನಂತರ ಆ ಎಡೆಯನ್ನು ಪೈರಿಗೆ ಪ್ರೋಕ್ಷಿಸುವುದನ್ನು ಚರಗ ಚಲ್ಲುವುದು (ಹುಯ್ಯುವುದು) ಎಂದು ಹೇಳುತ್ತಾರೆ.

ಚರಗ ಪದ ನಿಷ್ಪತ್ತಿ : ಕನ್ನಡದ 'ಚರಗ' ಪದದ ಮೂಲ 'ಚರು'ವಿನಲ್ಲಿ ಧ್ವನಿಸುತ್ತದೆ. ಸಂಸ್ಕೃತ 'ಚರುಕ' ಪದದ ತದ್ಭವವೇ 'ಸರುಗ'ವೆಂಬುದಾಗಿ ಕಿಟೆಲ್ ಕೋಶದಲ್ಲಿ ಉಕ್ತವಾಗಿದ್ದರೂ ಒಂದರಲ್ಲಿ ವಿಶೇಷವಾಗಿ ವರ್ತಿಸುವ ಕಡೆಗಳಲ್ಲಿ 'ತ' ಪ್ರತ್ಯಯ ಕ್ರಿಯಾ ಇಲ್ಲವೆ ನಾಮ ಪ್ರಕೃತಿಗಳಿಗೆ ಹತ್ತಿ ತದ್ಧಿತ ನಾಮಪದಗಳು ಕನ್ನಡದಲ್ಲಿ ಘಟಿಸುತ್ತದೆ.

i) ಚರು+ಗ = ಚರಗ, ಬಲಿ ಅಥವಾ ಅರ್ಪಣೆಯಾಗುವ ಅನ್ನ. ಸಚಗಳ ಸ್ವಚ್ಛಂದ ಪರಿವರ್ತನೆಯಿಂದ ಚರುಗ, ಸರುಗ ಪದಗಳೆರಡು

ಪ್ರಚಲಿತದಲ್ಲಿವೆ; ii) ಚರ+ಪು = ಚರಪು (ಅರ್ಪಣೆ ಭಾವದ ಅನ್ನ - ತದ್ಧಿತ ಭಾವನಾಮ)ವೆಂಬ ಪದವೂ ಹಿಂದೆ ಪ್ರಯೋಗದಲ್ಲಿತ್ತು. ಇಲ್ಲಿಯ ಚರಗ, ಸರಗ ಇವೆರಡರಲ್ಲಿ 'ಸರಗ' ಪದ ಹೆಚ್ಚು ಪ್ರಾಚೀನ. ಈಗ 'ಸರಗ' ಪದ ಬಳಕೆಯಲ್ಲಿ 'ಚರುಗ'ವೆಂದಿದ್ದದರೂ ಮೂಲ ಅರ್ಥ ಉಳಿದಿಲ್ಲ. 'ಚರಗ' ಸಂಸ್ಕೃತದಿಂದ ನೇರವಾಗಿ ಕನ್ನಡಕ್ಕೆ ಬಂದಿಲ್ಲ. ಮರಾಠಿಯಲ್ಲಿ 'ಚರಗ' ಪದ ಹೆಚ್ಚು ಪ್ರಚುರವಾಗಿದ್ದು, ಅಲ್ಲಿರುವ ಅರ್ಥವೇ ಪ್ರಧಾನವಾಗಿ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಉಳಿದುಕೊಂಡು ಬಂದಿದೆ. ಅಲ್ಲಿ ಅದಕ್ಕಿರುವ ಅರ್ಥ ಹೊಲದ ಬೆಳೆಗೆ ಅರ್ಪಿಸುವ ಅನ್ನವೆಂದೇ (ಸಾಧನೆ, ಸಂಚಿಕೆ, 2, 1981, ಪು. 62). 'ಚರಗ' ಪದದ ಅವಸ್ಥೆಯನ್ನು ಕಾವ್ಯ ಮತ್ತು ಶಾಸನಾಧಾರಗಳಿಂದ ನಿರೂಪಿಸಲಾಗಿದೆ. ಅ) **ಕಾವ್ಯಾಧಾರಗಳು :** i) ಅನರ್ಘ್ಯ ಮಣಿವಿಷ್ಟರದೊಳ್ ಕುಳ್ಳಿರ್ದ್ದ ಸರಗಮನುಣೆ (ಆದಿ. ಪು. 13-39); ii) ಜಿನಪದಯುಗಳಕ್ಕೆತ್ತಿ ನೈವೇದ್ಯಮಂ ಜಾತ್ರೆಗೆ ಬಂದಮ್ಮರ್ತ್ತೆ ತೊರ್ಪ್ಪಸ್ಸರುಗ (ಸಮಪ; ಅಧಿಕಾರ 2-69); iii) ಮತ್ತಂ ಶುಚಿರ್ಭೂತರಾಗಿ ಚಕ್ಕುಲಿಯಂತೆ ಪಿಟ್ಟಿನಿಂ ಬಟ್ಟಿತುವಾಗಿ ಬರೆದವಱ ಮೇಲೆ ಸರುಗದ ಮುದ್ದೆಗಳನ್ನಿಟ್ಟು (ಪದಾರ್ಥಸಾರ ಪು. 465); iv) 'ಪರಕೆನೀಯದೆ ಮೀಸಲಸರುಗಮನಿಡದೆ' (ಅದೇ ಪು. 465); v) 'ಬಂಡಿತೀವಿದ ಚರುಗುವೆರಸು ತನ್ನ ಮಗನಪ್ಪ ಮುಂಡಕೌಶಿಕನಂ ಕುಂಭಂಗಾಹಾರ ನಿಮಿತ್ತಮಟ್ಟಿದೊಡೆ (ಚಾವುಂ. ಪು. II, 54-33); vi) 'ಗಂಧಮಾಲ್ಯಾದಿಗಳನರ್ಚ್ಚಿಸಿರ್ದ್ದ ಸಿಂಹಾಸನವನೇರೇ ನಾಮ್ ಸರುಗನುಣೆ ಕಂಡು (ಚಾವುಂ. ಪು. 75-25); **ಆ) ಶಾಸನಾಧಾರ :** 'ಗಂಧ ಧೂಪದೀಪಕ್ಕಂ, ಸರುಗಿಗಂ............ ಕುಡುವ ಭೂಮಿ (EI Vol. XVII, Pp. 122-7; 1047)

ಹೀಗೆ ಚರಗ ಸಂಪ್ರದಾಯ ಪಂಪನ ಕಾಲಕ್ಕೇ ಅಸ್ತಿತ್ವದಲ್ಲಿ ಇದ್ದಿರುವುದು ಗಮನಾರ್ಹ. ಕಾವ್ಯ ಶಾಸನಗಳೆರಡರಲ್ಲೂ ಚರುಗ - ಸುರುಗ ಎಂಬ ಆಡುಮಾತಿನ ರೂಪಗಳು ಎಡೆ ಪಡೆದಿರುವುದು, ಅವೇ ಪದಗಳು ಅಲ್ಪ ಮಾರ್ಪಾಡಿನೊಂದಿಗೆ ಇಂದಿಗೂ ರೈತವಲಯದಲ್ಲಿ ಉಳಿದುಕೊಂಡು ಬಂದಿರುವುದು ಬಹು ಮಹತ್ತ್ವದ ಸಂಗತಿ. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಚರಗ ಪದ ಪ್ರಯೋಗಕ್ಕೆ ಸಂಬಂಧಪಟ್ಟಂತೆ ಎರಡು ವಿಧವಾದ ಅರ್ಥ ಭೇದಗಳನ್ನು ಗುರುತಿಸಬಹುದು.

ಕನ್ನಡ : i) ಗ್ರಂಥಸ್ಥ : ಸರುಗ ('ಚರುಕ'ದ ತದ್ಭವ) ಗುರು, ಮುನಿ; ದೈವಕ್ಕಿಡುವ ನೈವೇದ್ಯ ಅಥವಾ ಮೃಷ್ಟಾನ್ನ; **ಕಂಠಸ್ಥ :** ಚರಗ (ಚೊರವಾ, (ಮರಾಠಿ ಪ್ರಭಾವ,); ಹೊಲದ ಬೆಳೆಗೆ ಚಲ್ಲುವ ಅನ್ನದ ಅಗುಳು (ನೈವೇದ್ಯ), (ಪ್ರಾದೇಶಿಕ) ಚರಗ (ಸರಗ) ಹೊಲದ ಬೆಳೆಗೆ ಅರ್ಪಿಸುವ ಅನ್ನ. **ಸಂಸ್ಕೃತ :** i) ಚರು - 'ಹವ್ಯಪಾಕೇ ಚರುಃ' (ಅ.ಕೋ; 7 ಬ್ರಹ್ಮಮಗ; 731-152), ii) ಯಾಗದ ಭೂಮಿ ವೇದಿಯಕ್ಕಾ ಯಜ್ಞ ಪಾತ್ರಮೆನೆ ಭಾಂಡ ಭಾಜನಗಳಕ್ಕಾಬೇಳ್ಪ ತುತ್ತುಗಳು ಚರು' (ಅಭಿನವಾಭಿಧಾನಂ ಪು. 77-13) iii) **ಚರು-ಹವಿಸ್ಸು :** ಅಗ್ನಿಯಲ್ಲಿ ಹೋಮ ಕೊಡುವ ಭಾಗ, ಬಲಿವಸ್ತು, ದೇವತೆ ಇಲ್ಲವೆ ಪಿತೃವರ್ಗಕ್ಕೆ ಮಾಡುವ ಯಜ್ಞದ ಅನ್ನ.

ಆಡುನುಡಿಯಲ್ಲಿ ಪ್ರಯೋಗವಿರುವಂತೆ - ಚರಗ ಸರಗ ಎಂಬ ರೂಪಗಳು ಮಾತ್ರ ಉತ್ತರ ಕರ್ನಾಟಕದಲ್ಲಿ ಹೊಲಕ್ಕೆ ಚೆಲ್ಲುವ ನೈವೇದ್ಯದ ಅನ್ನವೆಂಬರ್ಥದಲ್ಲಿ ಮಾತ್ರ ಬಳಕೆಯಲ್ಲಿವೆ.

ಚರಗ ಸಂಪ್ರದಾಯ : ಚರು, ಚರಕ>ಚರಗವೆಂದರೆ ಯಜ್ಞದ ಅನ್ನವೆಂದರ್ಥ. ಹೊಲಗಳಿಗೆ ರೈತರು ಆಹುತಿಯಾಗಿ ಅರ್ಪಿಸುವ ಅನ್ನವೆಂಬರ್ಥದಲ್ಲಿಯೂ ಪ್ರಚಲಿತದಲ್ಲಿದೆ. ಭೂಮಿಯ ಫಲವತ್ತತೆ ಕುರಿತ ನಂಬುಗೆ, ಅದಕ್ಕೆ ಸಂಬಂಧಿಸಿದ ದೇವತಾರಾಧನೆಯ ಸಂಪ್ರದಾಯದೊಂದಿಗೆ ಈ ಆಚರಣೆ ಬೆಳೆದು ಬಂದಿದೆ. ಪ್ರಾದೇಶಿಕವಾಗಿ ಇದು ಬೇರೆ, ಬೇರೆ ರೂಪಗಳಲ್ಲಿ ಪ್ರಚಲಿತದಲ್ಲಿತ್ತು. ಈ ಹಿಂದೆ ಮನುಷ್ಯರನ್ನೇ 'ಮೆಹರ್' ದೇವತೆಗೆ ಆಹುತಿಯಾಗಿ ಕೊಡುತ್ತಿದ್ದ ಸಂಪ್ರದಾಯ ಒರಿಸ್ಸಾದ 'ಖೊಂಡ' ಜನರಲ್ಲಿ 18ನೇ ಶತಮಾನದವರೆಗೂ ಅಸ್ತಿತ್ವದಲ್ಲಿತ್ತು. (Ling-sur-Indi Vol.iv.p. 457-Ed; G.A. Grieyson)

ಈ ಆಚರಣೆಯ ಮುಂದುವರಿಕೆಯಾಗಿ ಪ್ರಾಣಿಬಲಿ ಬಂದಿತು. ಇದಕ್ಕೆ ಕರ್ನಾಟಕದಲ್ಲಿ ಕೆಲವು ಜನ ಸಮೂಹ ಆಚರಿಸುವ ಪದ್ಧತಿ ನಮಗೆ ಈಗಲೂ ಕಾಣಸಿಗುತ್ತವೆ. ಕಿಟ್ಟೆಲ್ ಕೋಶದಲ್ಲಿ 'ಚರಗ' ಪದಕ್ಕೆ ಕೊಡುವ ಅರ್ಥ ವಿವರಣೆ ಇಂತಿದೆ.

'ಚರಗ' - an offering to Demavva, for which holeyas kill one are more he - buffeloes, cut up the flesh and throw the pieces about on the fields of the village or town to which they belong" (Kan-Eng Dictionary Vol-II, 1969, p. 633)

ಮನುಷ್ಯ ತನ್ನನ್ನೇ ಬಲಿಯಾಗಿ ಅರ್ಪಿಸಿಕೊಳ್ಳುವಂತೆ ಬೆಳೆದು ಬಂದ ನೈಸರ್ಗಿಕ ಭಯಪೀಡಿತ ನಂಬುಗೆ ಮುಂದೆ ಪ್ರಾಣಿಗಳನ್ನು ಬಲಿಕೊಡುವ ಅಂಧಶ್ರದ್ಧೆಯಾಗಿ ಕೊನೆಯಲ್ಲಿ ಅದನ್ನು ದಾಟಿ ವಿವೇಕಯುಕ್ತವಾದ ಭಕ್ತಿ ಶ್ರದ್ಧೆಗಳಿಂದ ಆಹಾರವನ್ನು ಭೂಮಾತೆಗೆ ಪ್ರಸಾದವಾಗಿ, ನೈವೇದ್ಯವಾಗಿ ಕೊಡುವ ಭಾವನೆ ಬೆಳೆದು ಬಂದುದು ಈ ಜನ ಸಮುದಾಯದ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ವಿಕಾಸದ ಹಂತ. ಆದರೆ ಒಂದಿಲ್ಲೊಂದು ಬಗೆಯ ನಂಬುಗೆಯಿಂದ ಅವನು ಹೊರ ಹೋಗುವಂತಿಲ್ಲ. ಜನಪದ ಜೀವನದಲ್ಲಂತೂ ಇವು ಹಾಸು ಹೊಕ್ಕಾಗಿರುವ ಅಂಶಗಳು. 'ಚರಗ' ಪದ್ಧತಿ ಇಂದು ಭೂಮಿಯ ಬೆಳೆಗಳಿಗೆ ಅರ್ಪಿಸುವ ಅನ್ನದ ಒಂದು ವ್ರತ. ಅದುವೇ ಹಬ್ಬದಾಚರಣೆಯಾಗಿ ಮುಂದುವರಿದಿದೆ.

ಉತ್ತರ ಕರ್ನಾಟಕದಲ್ಲಿಯ ಚರಗದ ಸ್ವರೂಪ ಅಲ್ಲಿ ಭೂಮಿಗೆ ಅನ್ನ ಚೆಲ್ಲುವ ಚರಗದ ಸಂದರ್ಭ, ಆ ಸಂದರ್ಭದಲ್ಲಿ ಅರ್ಪಿಸವ ನೈವೇದ್ಯ (ಎಡೆ) ಪ್ರಕಾರಗಳು ಹಾಗೂ ಅಲ್ಲಿಯ ಜನತೆ ಉಚ್ಚಾರ ಮಾಡುವ ಕೆಲವೊಂದು 'ನುಡಿಗಳನ್ನು' ಡಾ. ವಿ. ಶಿವಾನಂದ ಅವರು ಈ ಕೆಳಗಿನಂತೆ ಸಂಗ್ರಹಿಸಿ, ಪರಿಶೀಲಿಸಿ, ಪಟ್ಟಿ ಮಾಡಿದ್ದಾರೆ.

ಚರಗ ಸಂದರ್ಭ ಅದು ಇಂತಿದೆ. ಅಧಿದೈವ ಭೂಮಿ / ಚರಗದ ಅನ್ನ

		ವೇಳೆ	ಸಾಂಕೇತಿಕ ದೇವರುಗಳು	ಎಡೆ / ನೈವೇದ್ಯ
1)	ಮೊದಲ ಚರಗ	ಭಾದ್ರಪದ ಅಷ್ಟಮಿ	ಜೋಕುಮಾರ	ಅಳ್ಳಕ ಅಂಬಳಿ (ಹುಳಿನುಚ್ಚು)
2)	ಎರಡನೆಯ ಚರಗ	ಶೀಗೆಹುಣ್ಣಿಮೆ ಅಶ್ವಿನಿ ಶುದ್ಧ	ಪಾಂಡವರು ಶೀಗಮ್ಮ	ಹುರಿಯಕ್ಕಿಯ ಹೋಳಿಗೆ ಹೂರಣ ಗಡಬು, ಉಂಡಗಡಬು, ಪುಂಡಿ ಪಲ್ಲೆ ಮುಂತಾದವು
3)	ಮೂರನೆಯ ಚರಗ	ಎಳ್ಳಮಾವಾಸ್ಯೆ	ಪಾಂಡವರು	ಕಡುಬು ಹೋಳಿಗೆ ಬಜ್ಜಿ ಮುಂತಾದವು
	i. ಮುಖ್ಯಚರಗ	ಪುಷ್ಯಮಾಸ (ದಿನದ ವೇಳೆ)	ಪಾಂಡವರು	ಹಿಂಡಿಪಲ್ಯ, ಪುಂಡಿಪಲ್ಯ
	ii. ಕಳ್ಳಸರಗ	ಪುಷ್ಯಮಾಸ (ನಸುಕಿನ ವೇಳೆ)	ಪಾಂಡವರು	ಹುಲುಸಿನ ಉಂಡೆ
4)	ನಾಲ್ಕನೆಯ ಚರಗ	ಹಿಂಗಾರಿನಸುಗ್ಗಿ	ರಾಶಿ ಪೂಜೆ ಕಣದ ದೈವ	ರಾಶಿ ಬುತ್ತಿ, ಹೋಳಿಗೆ, ಸಜ್ಜಕದ ಉಂಡೆಗಳು

ಚರಗದಲ್ಲಿಯ ಕೆಲವು ಸಂಕೇತಗಳು : ಚರಗದ ಆಚರಣೆಲ್ಲಿ ಅಡಕವಾಗಿರುವ ಕೆಲವೊಂದು ಸಂಕೇತಗಳು ಇಂತಿವೆ.

1) ಚರಗದ ದೈವ ಸಂಕೇತಗಳು

1.1) ಜೋಕುಮಾರನ ಚರಗ : ಅನಂತನ ಹುಣ್ಣಿಮೆಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಈ ಆಚರಣೆ ಜರುಗುತ್ತದೆ. ಇದನ್ನು ಜನರು 'ಜ್ಯೋಕ್ಯಾನ ಹುಣ್ಣಿಮೆ', 'ಕೊಮರಾಮನ ಹಬ್ಬ'ವೆಂತಲೂ ಕರೆಯುತ್ತಾರೆ. ಈ ಹಬ್ಬಕ್ಕೆ ಜೋಕುಮಾರನಿಗೆ ಒಕ್ಕಲಿಗರು ಅರ್ಪಿಸುವ ನೈವೇದ್ಯವೆಂದರೆ ಹುಲಿಯುಂಬಲಿ. ಇದನ್ನೇ ರೈತರು ತಾವು ಹೊಲಕ್ಕೊಯ್ದು 'ಚರಗ'ವೆಂದು ಹುಗಿಯುವರು (ಬೆಚ್ಚುವುದು). ಕಲಬುರ್ಗಿ ಪ್ರಾಂತ್ಯದಲ್ಲಿ ಚೆಲ್ಲುವ ಪದ್ಧತಿ ಇದೆ. ಜೋಕುಮಾರನನ್ನು ಗ್ರಾಮೀಣ ದೇವತೆ, ಫಲದೇವತೆ, ಮಳೆದೇವತೆ, ಮಕ್ಕಳನ್ನು ಕೊಡುವ ದೇವತೆ ಹೀಗೆ ಹಲವು ವಿಧಗಳಿಂದ ನೋಡಿ ಭಕ್ತಿ ಗೌರವಗಳಿಂದ ಪೂಜಿಸುತ್ತಾರೆ. ಗಣಪತಿ ರಾಜ ಐಶ್ವರ್ಯದ ಪ್ರತೀಕವೆಂತಲೂ ಜೋಕುಮಾರನು ಬಡವರ ಪ್ರತಿನಿಧಿಯೆಂತಲೂ ಬಡವರಿಗಾಗಿ ಮಳೆ ತರಿಸುತ್ತಾನೆಂಬ ನಂಬಿಕೆಯಿದೆ.

1.2) ಪಾಂಡವರ (ಪಾಂಡೋರು) ಚರಗ : ಉತ್ತರ ಕರ್ನಾಟಕದಲ್ಲಿ ಪಾಂಡವರ ಪೂಜೆಯನ್ನು ಸೀಗಿಹುಣ್ಣಿಮೆ ಸಂದರ್ಭದಲ್ಲಿ ಆಚರಿಸಿದರೆ, ಕಲಬುರ್ಗಿ, ಬೀದರ ಜಿಲ್ಲೆಗಳಲ್ಲಿ ಎಳ್ಳಮಾಸೆಯಂದು ಆಚರಿಸುತ್ತಾರೆ. ತಮ್ಮ ಹೊಲದಲ್ಲಿ ಶಮಿ ಅಥವಾ ಬೇವಿನ ಮರದಡಿಯಲ್ಲಿ ಐದು ಕಲ್ಲುಗಳನ್ನು ಸಾಲಾಗಿರಿಸಿ, ಸ್ವಲ್ಪ ದೂರದಲ್ಲಿ ಸುಣ್ಣದ ಕಲ್ಲು ಇರಿಸುತ್ತಾರೆ. ಎಲ್ಲಾ ಕಲ್ಲುಗಳಿಗೂ ಕೆಮ್ಮಣ್ಣು ಹಚ್ಚುತ್ತಾರೆ. ಐದು ಕಲ್ಲುಗಳನ್ನು ಪಾಂಡವರೆಂದು ಒಂದು ಕಲ್ಲನ್ನು ಕಳ್ಳಪ್ಪ (ಕರ್ಣ)ನೆಂದು ಕರೆಯುತ್ತಾರೆ. ಆರು ಕಲ್ಲುಗಳನ್ನು ಅರಿಸಿನ, ಕುಂಕುಮ ಹಾಗೂ ಹೂಗಳಿಂದ ಶೃಂಗರಿಸಿ, ಎಡೆಮಾಡುತ್ತಾರೆ. ಆರತಿ ಎತ್ತಿ ಪೂಜಿಸಿದ ಅನಂತರ ಕಳ್ಳಪ್ಪನ ಎದುರಿನ ಎಡೆಯನ್ನು ಅಲ್ಲಿಯೇ ಹುಗಿಯುತ್ತಾರೆ. ಪಾಂಡವರ ಕಲ್ಲಿನ ಎಡೆಗಳನ್ನು ಎತ್ತಿ ನೈವೇದ್ಯವನ್ನು ಸಣ್ಣ ಸಣ್ಣ ಚೂರು ಮಾಡಿ ಹೊಲದಲ್ಲಿ ಚರಗ ಚಲ್ಲುತ್ತಾರೆ. ಹೀಗೆ ಎರಚುವುದರಿಂದ ಹೊಲದಲ್ಲಿ ಬೆಳೆ ಸಮೃದ್ಧವಾಗಿ ಬರುವುದೆಂದು ನಂಬುತ್ತಾರೆ.

2. ಆಹಾರ ಸಾಮಗ್ರಿ : ಅಂಬಲಿ (ಹುಳಿನುಚ್ಚು) : ಅಳ್ಳಕಿನ ಅಂಬಲಿ (ತೆಳುವಾದ ಅಂಬಲಿ) ಇದು ಉತ್ತರ ಕರ್ನಾಟಕದಲ್ಲೇ ಹೆಚ್ಚು ಪ್ರಚುರವಾಗಿರುವ ಜೋಕುಮಾರನ ಎಡೆ. ಜೋಕುಮಾರನನ್ನು ಬಡಿದು ಸಾಯಿಸುವಾಗ ಅವನು ಉಂಡಿದ್ದ ಅಂಬಲಿಯೆಲ್ಲ ಭೂಮಿಗೆ ಸೂರಾಡಿತು. ಒಕ್ಕಲಿಗ ಅದನ್ನೇ 'ಚರಗ'ವಾಗಿ ಚಲ್ಲಿದ. ಭೂಮಿ ಫಲವತ್ತಾಗಿ ಬೆಳೆಯಿತು. ಅಂಬಲಿ ಬಡವನ ಊಟ ಹಾಗೆಯೇ ಬಡವನ ಕುಲದೈವಕ್ಕೂ ಅದೇ ಊಟ. ಇಲ್ಲಿ ಪ್ರಾದೇಶಿಕ ಅಂಶಗಳು ಹಿನ್ನೆಲೆಯಾಗಿರುವುದನ್ನು ಗಮನಿಸಬಹುದು.

ಹುಲುಸಿನ ಉಂಡಿಗಳು : ರೈತರು ಎತ್ತುವ ಈ ಹುಲುಸಿನ ಉಂಡಿಗಳು ಪರಂಪರೆಯೊಂದಿಗೆ ತಾವು ಸಂಲಗ್ನಗೊಂಡಿರುವುದನ್ನು ಸೂಚಿಸುತ್ತದೆ. ಇವರು ಪಾಂಡವರ ಜೀವನದ ಅನೇಕ ಪ್ರಸಂಗಗಳನ್ನು ತಮ್ಮ ಆಚರಣೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಹುಲುಸಿನ ಉಂಡಿಯನ್ನು ಎತ್ತುವುದು ಪುರುಷರು ಮಾತ್ರ. ಈ ದೃಷ್ಟಿಯಿಂದ 'ಹುಲುಸು' ಪದ ಸಮೃದ್ಧಿ ಸೂಚಕ. ಹಿಂದೆ ಕೈಕಟ್ಟಿ ಉಂಡಿಗಳನ್ನೆತ್ತುವಲ್ಲಿ ಇವು ನಿನಗೆ ಶುಭದ ಸಂಕೇತವಾಗಿರುವುದರಿಂದ ನಿನ್ನ ಪ್ರಯತ್ನಕ್ಕೆ ನಿನ್ನ ಬೆನ್ನ ಹಿಂದೆಯೇ ಜಯ ಅಡಗಿದೆ ಎಂಬುದರ ಪ್ರತೀಕವಿರಬಹುದು.

ರೈತ ಭೂಮಿತಾಯಿಗೆ ಅನ್ನ ಅರ್ಪಣೆ ಮಾಡಿ ಜಯದ ಉಂಡಿಗಳನ್ನು ಕೈಯಲ್ಲಿ ಎತ್ತುವುದು ಒಂದು ರೋಚಕ ವಿಷಯ. ಶಮೀ ಪತ್ರದೊಡನೆ ಬೆರೆತ ಮಣ್ಣಿನ ಉಂಡಿಗಳನ್ನು ಎತ್ತಿ ಹಿಡಿಯುತ್ತಿದ್ದುದು ರಾಜರ ಹಾಗೂ ಪಾಂಡವರ ವೀರ ಪ್ರತಿಜ್ಞೆಗಳು. ಅಂತೆಯೇ ರೈತರಿಗೆ ಈಗಲೂ ಆದರ್ಶ.

ಚರಗ ಚಲ್ಲುವ ಕಾಲದ ಶಬ್ದ ಸಂಕೇತಗಳು : ಚರಗ ಚೆಲ್ಲುವಾಗ ಒಬ್ಬ ರೈತ ಮುಂದೆ ಬೆಳೆಯ ಮೇಲೆ ಅನ್ನ ಚೆಲ್ಲುತ್ತ ನಡೆಯುವನು.

ಪ್ರಾದೇಶಿಕ ಪ್ರಭೇದಗಳು ಮುಂದಿನ ವ್ಯಕ್ತಿ ಹಿಂದಿನ ವ್ಯಕ್ತಿ

ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲೂಕು
'ಹುಲಗ್ಯೋ, ಹುಲಗ್ಯೋ'
'ಸರ ಮಲಗ್ಯೋ'

ಬಸವಕಲ್ಯಾಣದ ಸುತ್ತಮುತ್ತ 'ಹುಲಗ್ಯೋ, ಹುಲಗ್ಯೋ'
'ಚಲ್ಲಂ ಪಿಲಿಗ್ಯೋ'

ಹುಮ್ನಾಬಾದ ಬೀದರ ಪ್ರದೇಶ 'ಒಲ್ಗ್ಯೋ, ಒಲ್ಗ್ಯೋ'
'ಚಲಂಪಲ್ಗ್ಯೋ'

ಕಲಬುರ್ಗಿ ಜಿಲ್ಲೆಯ ಅಫಝಲಪುರದ ಕಡೆ
'ಹಿಂಡಿಪಲ್ಯೋ ಪುಂಡಿಪಲ್ಯೋ'
ಫೋ ಉಫೋ

ಕಲಬುರ್ಗಿ ಜಿಲ್ಲೆಯ ನಂದೀಪುರ ಗ್ರಾಮದ ಕಡೆ
ಮೌನವ್ರತ
ಮೌನವ್ರತ

ಧಾರವಾಡ ಜಿಲ್ಲೆಯ ಅಣ್ಣಿಗೇರಿ ಪರಿಸರ
'ಹುಲ್ಹುಲ್ಗೋ...'
'ಪುಂಡಿ ಪಲ್ಯೋ'
'ಸರ ಮಲಗ್ಯೊ'; 'ಸೋರಗಯಾ'

ಮೇಲಿನ ರೂಪದಲ್ಲಿ ಮೊದಲ ವ್ಯಕ್ತಿ ಹೇಳುವ ಮುಖ್ಯವಾದ ಪದ 'ಹುಲಗ್ಯೋ' - ಇದು 'ಹುಲುಸು' ಪದದಿಂದ ಬೆಳೆಯ ಸಮೃದ್ಧಿ ಎಂಬರ್ಥ ಕೊಡುತ್ತದೆ. ವಿಧ್ಯರ್ಥಕ ಕ್ರಿಯಾಪದದಲ್ಲಿಯ ಹಾರೈಕೆ ಸೂಚನೆಯ ವಾಕ್ಯಗಳು ಇವಾಗಿವೆ. 'ಹುಲಗ್ಯೋ, ಹುಲಗ್ಯೋ' ಎಂಬಲ್ಲಿ ಈ ಒಂದೇ ಅರ್ಥದ 'ಮಾರುಲಿ' ರೂಪವಾಗಿ ಕೇಳಿಬರುತ್ತವೆ. 'ಚಲ್ಲಂ ಪಿಲ್ಲಿ', 'ಚಳ್ಳಂಪಿಳ್ಳಿ', 'ಚಲ್ಲಂ ಪಲ್ಗಿ' ಎಂಬುದು ಈಗಿನ 'ಚೆಲ್ಲಾಪಿಲ್ಲಿ' ಎಂಬ ರೂಪವೇ (ಚೆಲ್ಲು : ಚೆಲ್ಲಾಟ, ಚೆಲ್ಲಾಡು) ಹೊಲದಲ್ಲಿಯ ತೆನೆ ಕಾಳು ತುಂಬಿ ಭೂಮಿಯ ತುಂಬ ಸೂರಾಡುವಂತೆ ಬೆಳೆಯಲಿ ಎಂಬ ಹಾರೈಕೆಯ ಧ್ವನಿಯಿದೆ. ಈ ಅರ್ಥವಲ್ಲದೆ 'ಹುಲಗ್ಯೋ ಹುಲಗ್ಯೋ' ಎಂಬಲ್ಲಿ ಹುಲ್ಲು ಹುಲ್ಲಿಗೆ ಫಸಲು ತುಂಬಿ ಹರಡಲು ಎಂಬರ್ಥವನ್ನೂ ಕೆಲವು ಕಡೆ ಹೇಳುವುದುಂಟು. ಆದರೆ 'ಹುಲುಸು' ಪದವೇ ಇಲ್ಲಿ ಸಮಂಜಸವಾಗಿ ತೋರುತ್ತದೆ.

ಒಟ್ಟಿನಲ್ಲಿ 'ಚರಗ' ಈಗಲೂ ವಿಶಿಷ್ಟವಾದ ಒಂದು ಸಾಂಸ್ಕೃತಿಕ ಪದವಾಗಿ ಒಕ್ಕಲಿಗರ ಹಬ್ಬದ ಆಚರಣೆಯಲ್ಲಿ ಜೀವಂತವಾಗಿ ಉಳಿದುಕೊಂಡು ಬಂದುದು ಇದುವರೆಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಭೂಮಿಯ ಫಲವತ್ತತೆಗಾಗಿ ಮನುಷ್ಯ ತನ್ನನ್ನೇ ಆಹುತಿಯಾಗಿ ಅರ್ಪಿಸಿಕೊಳ್ಳುವ ವೀರಮನೋಭಾವದಿಂದ ಮೊದಲಾಗಿ ಈಗಲೂ ಒಂದಿಲ್ಲೊಂದು ರೀತಿಯ ನೈವೇದ್ಯವನ್ನು ಚರಗವಾಗಿ ಚೆಲ್ಲುವ ಸಂಪ್ರದಾಯ ಉಳಿದುಕೊಂಡು ಬಂದಿರುವುದು ಜನತೆಯ ಶ್ರದ್ಧೆ ಸಂಪ್ರದಾಯಗಳ ಅಧ್ಯಯನದಲ್ಲಿ ಹಾಗೂ ಇಂದಿನ ಕ್ರಿಯಾತ್ಮಕ ಜಾನಪದಾಧ್ಯಯನದಲ್ಲಿ ತುಂಬ ಕಾಳಜಿಯ ವಿಷಯಗಳಾಗುತ್ತವೆ. ಎಳ್ಳು ಅಮಾವಾಸೆಗೆ ಸಂಬಂಧಿಸಿದ ಒಂದು ಜನಪದ ಗೀತೆ ಇಂತಿದೆ.

ಏರು - ಎಳ್ಳಾಮಾಸಿ ಹಬ್ಬ ಬಂತಮರೆ ಹ್ಯಂಗ ಮಾಡಮುರೇಽ
ಇಳು - ಬೆಳ್ಳದ ಚಿಕ್ಕ್ಯೊಂಟೇಳಮರೆ | ಬ್ಯಾಳಿಗ್ರಾಹಕಮುರೇಽ
ಏರು - ಬೆಳ್ಳದ ಚಿಕ್ಕ್ಯೊಂಟೇಳಮುರೆ | ಬ್ಯಾಳಿಗ್ಹಾಕಮುರೇಽ
ಇಳು - ಉಂಡಿ ಹಿಂಡಿಪಲ್ಯ ಮಾಡಮುರೆ | ಬುಟ್ಟಿತುಂಬಮರೇಽ
ಏರು - ಉಂಡಿ ಹಿಂಡಿ ಪಲ್ಯ ಮಾಡಮುರೆ | ಬುಟ್ಟಿ ತುಂಬಮರೇಽ
ಇಳು - ನೀಲವ್ವ, ನಿಂಬೆವ್ವ ತಯ್ಯಾರ | ನಮ್ಮ್ಹಪ್ಲದೊರ
ಏರು - ನೀಲವ್ವ ನಿಂಬೆವ್ವ ತಯ್ಯಾರ ನಮ್ಮ ಹ್ವಲದೂರಽ
ಇಳುವು - ಸರಗದ ಬುಟ್ಟಿ ಮುಂದ ಗಂಡುಸುರ | ಹಿಂದೆ ಹಂಗುಸುರು
ಏರು - ಸರಗ ಇಳುವರಿ ನಮ್ಮ ಹ್ವಲುದಲ್ಲೆ | ಹಿಂದ ಹೆಂಗುಸುರಽ
ಇಳುವು - ಸರಗ ಇಳುವರಿ ನಮ್ಮ ಹ್ವಲದಲ್ಲೆ | ಬನ್ನಿಮರದಲ್ಲೆ
ಏರು - ಸರಗ ಇಳುವರಿ ನಮ್ಮ ಹ್ವಲದಲ್ಲೆ | ಬನ್ನಿ ಮರದಲ್ಲೆಽ
ಇಳುವು - ಸರಗ ಚೆಲ್ಲರಿ ನಮ್ಮ ಹ್ವಲುದಲ್ಲೆ | ಸಾಲುಪಟ್ಯಲ್ಲೆ
ಏರು - ಸರಗ ಚೆಲ್ಲರಿ ನಮ್ಮ ಹ್ವಲುದಲ್ಲೆ | ಸಾಲು ಪಟ್ಯಲ್ಲೇ
ಇಳುವು - ಕಾಯಿ ಒಡೆಯಿರಿ ನಮ್ಮ ಕಣದಲ್ಲೇ | ಭೂಮಿತಾಯಿಬಲ್ಲೆ

(ಕೃಪೆ ವಿ. ಶಿವಾನಂದ ಅವರ ಸಂಗ್ರಹ)

ಡಿ.ಎಚ್.

ಚಹ ಪ್ರಪಂಚಾದ್ಯಂತ ಅಧಿಕ ಮಂದಿ ಉಪಯೋಗಿಸುವ ಬಿಸಿ ಪಾನೀಯ. ತೀಯೇಸೀ ಕುಟುಂಬಕ್ಕೆ ಸೇರಿದೆ. ತಿಯಾಸೈನಿಸ್ ಅಥವಾ ಕಮೆಲಿಯ ಸೈನೆನ್ಸಿಸ್ ಇದರ ವೈಜ್ಞಾನಿಕ ಹೆಸರು. ಕನ್ನಡದಲ್ಲಿ ಇದನ್ನು ಚಹ ಎಂದೂ ತಮಿಳಿನಲ್ಲಿ ತೈಲಮ್ ಎಂದೂ ತೆಲುಗಿನಲ್ಲಿ ತೇಯ್‌ಕು ಎಂದೂ ಮಲೆಯಾಳಂನಲ್ಲಿ ತೆಯಿಲ ಎಂದೂ ಇಂಗ್ಲಿಷಿನಲ್ಲಿ ಟೀ ಎಂದೂ ಕರೆಯುವರು. 26 ಜಾತಿಗಳು 520 ಪ್ರಭೇದಗಳು ಇದರಲ್ಲಿವೆ. ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಸೊಪ್ಪು ಇದು. ಇದರ ಮೂಲಸ್ಥಾನ ಚೀನ ಎಂದು ತಿಳಿದು ಬರುತ್ತದೆ. ಕೆಲವರ ಅಭಿಪ್ರಾಯದಲ್ಲಿ ಇದು ಭಾರತ ಮೂಲದ್ದಾಗಿದ್ದು ಅಸ್ಸಾಂ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಡುಬಂದಿತ್ತು ಎನ್ನಲಾಗಿದೆ. ಕ್ರಮೇಣ ಚೀನ, ಜಪಾನ್, ಫಾರ್ಮೋಸ, ಮ್ಯಾನ್ಮಾರ್, ಜಾವ, ಸುಮಾತ್ರ, ಪೂರ್ವ ಆಫ್ರಿಕ ಮತ್ತು ಶ್ರೀಲಂಕಗಳಲ್ಲಿ ಇದರ ಬೇಸಾಯ ಆರಂಭವಾಯಿತು. ಸಾಮಾನ್ಯವಾಗಿ ಬೆಟ್ಟ ಮತ್ತು ಘಟ್ಟ ಪ್ರದೇಶಗಳಲ್ಲಿ ಬೆಳೆಯುವಂಥದ್ದು. ಭಾರತದಲ್ಲಿ ಬ್ರಹ್ಮಪುತ್ರಾ ನದೀ ಕಣಿವೆ, ಡಾರ್ಜಿಲಿಂಗ್, ರಾಂಚಿ, ಡೆಹ್ರಾಡೂನ್, ಕಾಂಗ್ರಾ, ತಮಿಳುನಾಡಿನ ನೀಲಗಿರಿ ಬೆಟ್ಟ ಪ್ರದೇಶ, ಅಣ್ಣಾಮಲೈ, ಕೇರಳದ ತಿರುವಾಂಕೂರು ಜಿಲ್ಲೆ, ವೈನಾಡು, ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶ, ಚಿಕ್ಕಮಗಳೂರು ಮೊದಲಾದ ಸ್ಥಳಗಳಲ್ಲೂ ಚಹದ ಕೃಷಿ ಉಂಟು.

ಕತ್ತರಿಸದೆ ಬಿಟ್ಟರೆ ಚಹ ಗಿಡ ಸು. 50 ಅಡಿ ಬೆಳೆಯಬಲ್ಲದು. ಆದರೆ ಕೊಯ್ಲಿನ ಅನುಕೂಲಕ್ಕಾಗಿ ಇದನ್ನು 2-5 ಅಡಿ ಎತ್ತರ ಮಾತ್ರ ಬೆಳೆಸಿ ಆಗಾಗ ಕತ್ತರಿಸಿ ಪೊದೆಯಾಕಾರ ಬರುವಂತೆ ಮಾಡುತ್ತಾರೆ. ಇದರ ಎಲೆಗಳು ಸರಳ ಮತ್ತು ಪರ್ಯಾಯ ಮಾದರಿಯಲ್ಲಿ ಜೋಡಣೆಗೊಂಡು

ಮೂರ್‍ನಾಲ್ಕು ಅಂಗುಲ ಉದ್ದ, ಎರಡು ಅಂಗುಲ ಅಗಲವಿರುತ್ತವೆ. ಎಲೆಗಳ ಮೇಲ್ಭಾಗ ನುಣುಪಾಗಿದ್ದು ಕೆಳಭಾಗ ವಿರಳ ರೋಮಗಳಿಂದ ಕೂಡಿರುತ್ತದೆ. ಎಲೆಗಳ ಆಕಾರ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದ್ದರೂ ನಿತ್ಯ ಹಸುರು ಬಣ್ಣದವಾಗಿರುತ್ತವೆ. ಎಲೆಗಳ ಕಂಕುಳಲ್ಲಿ ಬೆಳೆಯುವ ಹೂಗಳು ದ್ವಿಲಿಂಗಿಗಳು. ಒಂಟಿಯಾಗಿ ಅಥವಾ ಗುಂಪಾಗಿ ಹೂಗಳಿದ್ದು, ಹೂವಿನಲ್ಲಿ ಐದು ಪುಷ್ಪಪತ್ರಗಳು, ಐದು ದಳಗಳು, ಸಾಕಷ್ಟು ಕೇಸರಗಳು ಇರುತ್ತವೆ. ಪರಿಮಳಯುಕ್ತ ಹೂ ಅರಿಸಿನ ಅಥವಾ ತೆಳುಕೆಂಪು ಬಣ್ಣದ್ದು. ಹಣ್ಣಿನಲ್ಲಿ ಮೂರು ಕೋಣೆಗಳಿದ್ದು ಪ್ರತಿ ಕೋಣೆಯಲ್ಲೂ ಒಂದೊ ಎರಡೊ ಕಂದು ಬಣ್ಣದ ಬೀಜವಿರುತ್ತವೆ.



ಪ್ರಸ್ತುತ ಕೃಷಿಯಲ್ಲಿರುವ ಚಹ ಗಿಡಗಳೆಂದರೆ ಚೀನ ಮತ್ತು ಭಾರತದ (ಅಸ್ಸಾಂ) ಚಹ. ಚೀನಾದ ಚಹಕ್ಕೆ ವೈಜ್ಞಾನಿಕ ಹೆಸರು ಸೈನೆನ್ಸಿಸ್. ಅಸ್ಸಾಂ ಚಹದಲ್ಲಿ ಅಸ್ಸಾಮಿಕ ಮತ್ತು ಮ್ಯಾಕ್ರೊಫಿಲ ಎಂದು ಎರಡು ಬಗೆ. ಮೊದಲನೆಯ ಗುಂಪಿನದು ಹೆಚ್ಚು ಎತ್ತರವಾಗಿದ್ದು ಎಲೆಗಳು ವಿಸ್ತಾರವಾಗಿ ಇಳಿ ಬಿದ್ದಿರುತ್ತವೆ. ಇದರ ಎಲೆಗಳಲ್ಲಿ ಹಸುರು ಬಣ್ಣದ ಅಸ್ಸಾಂ ತಳಿ ಮತ್ತು ಮಣಿಪುರಿ ತಳಿಗಳೆಂದು ಎರಡು ಬಗೆ. ಚೀನ ಮತ್ತು ಅಸ್ಸಾಂ ತಳಿಗಳ ಸಂಕರದಿಂದ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದಾರೆ.

ಈ ಗಿಡವನ್ನು ಸಾಮಾನ್ಯವಾಗಿ ಬೀಜದಿಂದ ಸಂವರ್ಧಿಸಲಾಗುತ್ತದೆ. ಉತ್ತಮ ಇಳುವರಿಗಾಗಿ ಗುಣಮಟ್ಟದ ಬೀಜಗಳನ್ನು ಆಯ್ದು ಪ್ರತ್ಯೇಕವಾಗಿ ಸಸಿ ಬೆಳೆಸಿ ನಾಟಿ ಮಾಡುವರು. ಎಕರೆಗೆ 70-100 ಸಸಿಗಳು ಬೇಕಾಗುತ್ತವೆ. ಹೆಚ್ಚು ತೇವಾಂಶ ಹಾಗೂ ಫಲವತ್ತಾದಂಥ ನೆಲದಲ್ಲಿ ಮಾತ್ರ ಇವು ಬೆಳೆಯಲು ಸಾಧ್ಯ.

ಸಸಿ ನೆಟ್ಟ ಆರಂಭದ ದಿನಗಳಲ್ಲಿ ಪ್ರತಿಯೊಂದು ಗಿಡಕ್ಕೆ ಒಂದೂವರೆ ಕೆ.ಜಿ. ಅಮೋನಿಯಂ ಸಲ್ಫೇಟ್, ಅರ್ಧ ಕೆಜಿ ಸೂಪರ್‌ಫಾಸ್ಫೇಟ್, ಅರ್ಧ ಕೆ.ಜಿ. ಮ್ಯೂರಿಯೆಟ್ ಆಫ್ ಪೊಟ್ಯಾಶ್ ಗೊಬ್ಬರಗಳನ್ನು ಕೊಡಲಾಗುತ್ತದೆ. ಯಾವುದೇ ರೀತಿಯ ಕಳೆ ಬರದ ಹಾಗೆ ಸದಾ ಎಚ್ಚರವಹಿಸಬೇಕು. ಗಿಡದ ಸುತ್ತ ಸ್ವಚ್ಛವಾಗಿದ್ದರೆ, ಕಾಯಿ ಬಲಿತು ಬೀಜ ಸಿಡಿದಾಗ ಆಯ್ದುಕೊಳ್ಳಲು ಸುಲಭ. ಬೀಜಗಳನ್ನು ಸಂಗ್ರಹಿಸಿ ನರ್ಸರಿಗಳಲ್ಲಿ ವಿಶೇಷ ಮುತುವರ್ಜಿಯಿಂದ ಮೊಳಕೆ ಬರಿಸಲಾಗುತ್ತದೆ. ಆರು ಅಂಗುಲ ಬೆಳೆದ ಸಸಿಗಳನ್ನು ಬಿದಿರುಬುಟ್ಟಿ, ಪಾಲಿಥೀನ್ ಚೀಲ ಅಥವಾ ಕುಂಡಗಳಲ್ಲಿ 6 ರಿಂದ 12 ತಿಂಗಳ ತನಕ ಬೆಳೆಸಲಾಗುತ್ತದೆ. ಅನಂತರ ಸಿದ್ಧಪಡಿಸಿಕೊಂಡಿರುವ ತೋಟದ ಭೂಮಿಯಲ್ಲಿ ನಿರ್ದಿಷ್ಟ ಆಳತೆ ಮತ್ತು ನಿರ್ದಿಷ್ಟ ಕ್ರಮದಲ್ಲಿ ನಾಟಿ ಮಾಡಲಾಗುತ್ತದೆ. ನಾಟಿ ಮಾಡುವಾಗ ಕುಂಡ ಅಥವಾ ಬುಟ್ಟಿಯಿಂದ ಗಿಡವನ್ನು ಪ್ರತ್ಯೇಕಿಸದೆ ತಳಭಾಗವನ್ನಷ್ಟೇ ತೆರವು ಮಾಡಿ ನೆಡಬೇಕು. ಇವನ್ನು ಬೆಳೆಸಲು ಯೋಗ್ಯವಾದ ಸ್ಥಳವೆಂದರೆ ಕಾಡನ್ನು ಕಡಿದು ಹದಗೊಳಿಸಿದ ಭೂಮಿ. ಹುಲ್ಲುಗಾವಲಿನಲ್ಲೊ ಅಥವಾ ಇತರೆ ಬೆಳೆ ತೆಗೆದ ಜಾಗಗಳಲ್ಲೊ ಚಹ ಬೆಳೆಯುವವರು ಅಲ್ಲಿಯ ಗಿಡಗಂಟೆಗಳನ್ನು ಕಿತ್ತು ಹೊರಹಾಕಬೇಕೇ ಹೊರತು ಸುಡುವಂತಿಲ್ಲ. ಬೂದಿ ಇರುವೆಡೆ ಚಹ ಸಸಿ ಸರಿಯಾಗಿ ಬೆಳೆಯುವುದಿಲ್ಲ.

ನೀರು ಹರಿದು ಹೋಗುವಂತೆ ಕಾಲುವೆಗಳನ್ನು ತೋಡಬೇಕು. ಗುಂಡಿಯಿಂದ ಗುಂಡಿಗೆ ಐದು ಅಡಿ ಅಂತರ, ಪ್ರತಿಗುಂಡಿಯ ಆಳ ಒಂದೂವರೆ ಅಡಿ ಇರಬೇಕು. ಎಳೆ ಸಸಿಗಳು ಬೆಳೆಯುವಾಗ ಪ್ರಖರವಾದ ಬಿಸಿಲು ಬೀಳದಂತೆ ನೋಡಿಕೊಳ್ಳಬೇಕು. ಕಾಡುಜೋಳ, ಜರಿ ಗಿಡಗಳನ್ನು ತಾತ್ಕಾಲಿಕ ನೆರಳಿಗಾಗಿ ಬೆಳೆಸಬೇಕು. ಇದರಿಂದ ಕೇವಲ ನೆರಳಷ್ಟೇ ಅಲ್ಲದೆ ಅತಿಯಾದ ಶೀತಗಾಳಿಯಿಂದಲೂ ರಕ್ಷಣೆ ದೊರೆಯುತ್ತದೆ. ಗಿಡದ ಬುಡದಲ್ಲಿ ಸದಾ ಮಣ್ಣು ಸಡಿಲವಾಗಿರಲು ಆಗಾಗ ಅಗೆದು ಕಳೆ ತೆಗೆದು ಶುದ್ಧಗೊಳಿಸುತ್ತಿರಬೇಕು. ಯಥೇಚ್ಛವಾಗಿ ಗೊಬ್ಬರ ಬಯಸುವ ಗಿಡವಿದು. ಕೊಟ್ಟಿಗೆ ಗೊಬ್ಬರ, ಹಸುರೆಲೆ ಗೊಬ್ಬರ ಮುಂತಾದವನ್ನು ಗಿಡ ಬೆಳೆದಂತೆ ಹೆಚ್ಚು ಹೆಚ್ಚು ಕೊಡುತ್ತಿರಬೇಕು. ಜೊತೆಗೆ ಬೇವು, ಹೊಂಗೆ, ಕಡಲೆಕಾಯಿ ಹಿಂಡಿ ಮುಂತಾದವನ್ನು ಹಾಕಬೇಕು.

ಚಹಗಿಡವನ್ನು ಅದರ ಸೊಪ್ಪಿಗಾಗಿಯೇ ಬೆಳೆಸುವುದರಿಂದ ಉತ್ಕೃಷ್ಟವಾಗಿ ಬೆಳೆಯುವಂತೆ ನೋಡಿಕೊಳ್ಳಬೇಕು. ಚಿಗುರನ್ನು ಕೊಯ್ಯಲು ಅನುಕೂಲವಾಗುವಂತೆ ಮಾಡಲು ಆಗಾಗ್ಗೆ ಸವರುತ್ತಿರಬೇಕು. ಗಿಡ ಬೆಳೆಯುತ್ತಿದ್ದಂತೆ ವರ್ಷಕ್ಕೊಮ್ಮೆ ಗಿಡವನ್ನು ಕ್ರಮಬದ್ಧ ರೀತಿಯಲ್ಲಿ ಸವರುವುದು ಮುಖ್ಯ. ಇಳುವರಿ ಇಳಿಮುಖವಾಗುತ್ತಿದ್ದಂತೆ ಇಡೀ ಗಿಡವನ್ನು ಬುಡದ ಸ್ವಲ್ಪ ಭಾಗವನ್ನು ಬಿಟ್ಟು ಪುನಃ ಚಿಗುರಲು ಅವಕಾಶವಾಗುವಂತೆ ಕತ್ತರಿಸಬೇಕು. ಮೂರು ವರ್ಷಗಳ ಬಳಿಕ ಇದರ ಕೊಯ್ಲು ಆರಂಭವಾಗುತ್ತದೆ. ಕೆಲವರು ಇನ್ನೂ ಸ್ವಲ್ಪ ಮೊದಲೇ ಕೊಯ್ಯುವುದೂ ಉಂಟು. ಒಣಹವೆಯಿದ್ದು ಮಳೆಯು ಕಾಲಕ್ಕೆ ಸರಿಯಾಗಿ ಬೀಳುತ್ತಿದ್ದರೆ ವರ್ಷದ ಎಲ್ಲ ಕಾಲದಲ್ಲೂ ಚಿಗುರೆಲೆಯನ್ನು ಪಡೆಯಬಹುದು. ಕುಡಿಯನ್ನು ಮತ್ತು ಚಿಗುರೆಲೆಗಳನ್ನಷ್ಟೇ ಕಿತ್ತು ಉಳಿದವನ್ನು ಹಾಗೆಯೇ ಬಿಡಬೇಕು. ಒಂದು ವರ್ಷದಲ್ಲಿ ಸಾಮಾನ್ಯವಾಗಿ ಇಪ್ಪತ್ತೈದರಿಂದ ಮೂವತ್ತು ಬಾರಿ ಎಲೆಯನ್ನು ಚಿವುಟಬಹುದು. ವರ್ಷದಲ್ಲಿ ಹತ್ತರಿಂದ ಹದಿನೈದು ಸಲ ಚಿಗುರೊಡೆಯುತ್ತದೆ. ಚಹ ಗಿಡವನ್ನು ಕಾಂಡದ ತುಂಡುಗಳನ್ನು ಬಳಸಿ ಬೆಳೆಸಿದರೆ ಎರಡೇ ವರ್ಷಕ್ಕೆ ಇಳುವರಿ ಕೊಡುತ್ತದೆ. ಬೀಜದಿಂದ ಸಸ್ಯಾಭಿವೃದ್ಧಿ ಮಾಡಿದರೆ ಇಳುವರಿಗೆ ನಾಲ್ಕು ವರ್ಷವಾದರೂ ಬೇಕು. ಬೆಟ್ಟದ ತಪ್ಪಲಿನಲ್ಲಿರುವ ತೋಟದಲ್ಲಿ ಗಿಡ ಸ್ವಲ್ಪ ಚಿಕ್ಕದಿರುವಾಗಲೇ ಎಲೆಯನ್ನು ಚಿವುಟಬಹುದು. ಇತರ ಭಾಗಗಳಲ್ಲಿ ಗಿಡ ಒಂದು ಹಂತಕ್ಕೆ ಬೆಳೆದ ಮೇಲೆಯೇ ಚಿವುಟುವುದು ಒಳ್ಳೆಯದು. ಚಹಾ ಸೊಪ್ಪನ್ನು ಬಿಡಿಸಿ ಸಂಗ್ರಹಿಸುವ ಕ್ರಮ ಕೂಡಾ ವೈಜ್ಞಾನಿಕವಾದುದು. ಬೆನ್ನಿಗೆ ಬಿದಿರಿನ ಬುಟ್ಟಿ ಕಟ್ಟಿಕೊಂಡು ತಿಂಗಳಿಗೆ ಕನಿಷ್ಠ ಎರಡು ಬಾರಿ ಎಲೆಯನ್ನು ಚಿವುಟಿ ಬುಟ್ಟಿಗೆ ಹಾಕುತ್ತಾರೆ. ಒಂದು ಬುಟ್ಟಿ ಸುಮಾರು ಏಳೆಂಟು ಕೆಜಿ ಸೊಪ್ಪು ಹಿಡಿಸುತ್ತದೆ. ಇದಕ್ಕಿಂತ ಹೆಚ್ಚು ತುಂಬಬೇಕೆಂದು ಸೊಪ್ಪನ್ನು ಒತ್ತುವಂತಿಲ್ಲ. ಹೀಗೆ ಮಾಡಿದರೆ ಅದರ ಗುಣಮಟ್ಟ ಮತ್ತು ಉತ್ಕೃಷ್ಟತೆ

ಕಡಿಮೆಯಾಗುತ್ತದೆ. ದೀರ್ಘಾಯುಷ್ಯವುಳ್ಳ ಈ ಸಸಿಗಳು ಆರಂಭದಲ್ಲಿ ಕಡಿಮೆ ಇಳುವರಿಯನ್ನು ಕ್ರಮೇಣ ಹೆಚ್ಚು ಇಳುವರಿಯನ್ನು ಕೊಡುತ್ತಾ ಹೋಗುತ್ತವೆ. ಪ್ರದೇಶದಿಂದ ಪ್ರದೇಶಕ್ಕೆ ಇದರ ಆಯಸ್ಸು ವ್ಯತ್ಯಾಸವಾಗುತ್ತದೆ. ಸುಮಾರು 70-100 ವರ್ಷದ ತನಕ ಇಳುವರಿ ನೀಡುತ್ತದೆ.

ಟೀ ತೋಟದಲ್ಲಿ ಯಾವುದಾದರೂ ಕಾರಣದಿಂದ ಮರ ಸತ್ತುಹೋದರೆ ಆ ಸ್ಥಳದಲ್ಲಿ ಬೇರೊಂದು ಸಸಿ ನೆಟ್ಟು ಬೆಳೆಸುವುದುಂಟು. ಅದಕ್ಕೆಂದೇ ಕೆಲವು ಸಸಿಗಳನ್ನು ಬೆಳೆಸಿಕೊಂಡಿದ್ದು ಮೂರು ವರ್ಷಗಳಾಗಿರುವ ಸಸಿ ತಂದು ನೆಡುವುದುಂಟು. ಚಹ ಸೊಪ್ಪಿನ ಗುಣಮಟ್ಟಕ್ಕನುಗುಣವಾಗಿ ಕೆಲವು ಬಗೆಗಳನ್ನು ಗುರುತಿಸಬಹುದು. ಕೇವಲ ತುದಿಯನ್ನಷ್ಟೇ ಚಿವುಟಿ ತಯಾರಿಸುವ ಸೊಪ್ಪು ಮೊದಲನೇ ದರ್ಜೆಯದು. ತುದಿಯೊಂದಿಗೆ ಎರಡು ಮೂರು ಎಲೆಗಳನ್ನು ಕಿತ್ತು ತಯಾರಿಸುವಂಥದು ಎರಡನೇ ದರ್ಜೆ. ಹೆಚ್ಚು ಎಲೆಗಳನ್ನು ತೆಗೆದು ತಯಾರಿಸುವಂಥದು ಗುಣಮಟ್ಟದಲ್ಲಿ ಕೊನೆಯದು. ಇವುಗಳಲ್ಲೂ ಗುಣಮಟ್ಟಕ್ಕನುಗುಣವಾಗಿ ಉಪವಿಭಾಗಗಳಾಗಿ ಮಾಡಿಕೊಳ್ಳುವುದುಂಟು.

ಸೊಪ್ಪನ್ನು ಪರಿಷ್ಕರಿಸಿ ಮಾರುಕಟ್ಟೆಗೆ ತರುವಲ್ಲಿಯೂ ಕೆಲವು ಕ್ರಮಗಳಿರುತ್ತವೆ. ಕಪ್ಪು ಚಹ ಮತ್ತು ಹಸುರು ಚಹಾ ಪ್ರಮುಖವಾದಂಥವು. ಇವುಗಳ ಜೊತೆಗೆ ಊಲಾಂಗ್ ಮತ್ತು ಇಟ್ಟಿಗೆ ಚಹ ಎಂಬ ಮತ್ತೆರಡು ವರ್ಗಗಳೂ ಇವೆ.

ಕಪ್ಪು ಚಹ : ಇದರ ಸಂಸ್ಕರಣೆಯಲ್ಲಿ ನಾಲ್ಕು ಹಂತಗಳಿವೆ. ಬಿಡಿಸುವುದು, ಅರೆಯುವುದು, ಹುದುಗಿಸುವುದು, ಒಣಗಿಸುವುದು. ಎಲೆಗಳನ್ನು ತೆಳುವಾಗಿ ಹರಡಿ ಅರ್ಧ ತೇವವಿರುವಂತೆ ಒಣಗಿಸುವುದರಿಂದ ಎಲೆಗಳು ಮುದುಡಿಕೊಂಡು ಒರಟಾಗುತ್ತವೆ. ಬಿಸಿಲಿಲ್ಲದ ಸಮಯದಲ್ಲಿ ಕೃತಕ ವಿಧಾನಗಳಿಂದ ಎಲೆಗಳನ್ನು ಒಣಗಿಸುವರು. ಎಲೆ ಸರಿಯಾಗಿ ಬಾಡಲು ಕನಿಷ್ಠ ಹದಿನೆಂಟು ಗಂಟೆಗಳ ಕಾಲವಾದರೂ ಬೇಕು. ಬಾಡಿದ ಸೊಪ್ಪು ಹೆಚ್ಚಾಗಿದ್ದರೆ ಯಂತ್ರಗಳ ಸಹಾಯದಿಂದ ಅರೆಯಬೇಕು. ಹೀಗೆ ಅರೆದ ಸೊಪ್ಪನ್ನು ಅರ್ಧ ಗಂಟೆಯ ಅನಂತರ ಜರಡಿ ಆಡಿ ಉಳಿದ ಸೊಪ್ಪು ಪುನಃ ಅರೆಯಬೇಕು. ಇದಾದ ಬಳಿಕ ನಾಲ್ಕಾರು ಗಂಟೆಗಳ ತನಕ ವ್ಯವಸ್ಥಿತ ಕ್ರಮ ಮತ್ತು ನಿರ್ದಿಷ್ಟ ಉಷ್ಣತೆಯಲ್ಲಿಟ್ಟು ಅದರ ಬಣ್ಣ ಮತ್ತು ವಾಸನೆ ನೋಡಿ ಹದವಾಗಿದೆಯೆ ಎಂದು ತಿಳಿಯುತ್ತಾರೆ. ಹೀಗೆ ಹದ ಮಾಡಿದರೆ ಎಲೆಗಳಿಗೆ ತಾಮ್ರದ ಬಣ್ಣ ಬರುತ್ತದೆ. ಇಲ್ಲದಿದ್ದರೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಎಲೆಗಳು ಚೆನ್ನಾಗಿ ಒಣಗಿ ಗರಿಗರಿಯಾದಾಗ ಶುಚಿ ಮಾಡಿ ವಿವಿಧ ವರ್ಗಗಳಾಗಿ ವಿಂಗಡಿಸಿ ಡಬ್ಬಗಳಲ್ಲಿ ತುಂಬಿ ಮಾರಾಟಕ್ಕೆ ಬಿಡುತ್ತಾರೆ.

ಹಸುರು ಚಹ : ಅಮೇರಿಕ, ಚೀನ, ಜಪಾನ್‌ಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿದ್ದು ಇದರ ಸಂಸ್ಕರಣ ವಿಧಾನ ತುಂಬ ಸುಲಭ. ಊಲಾಂಗ್ ಚಹ ಅಮೇರಿಕಾ ಫಾರ್ಮೋಸಗಳಲ್ಲಿ ಹಿಂದೆ ಬಳಕೆಯಲ್ಲಿತ್ತು. ಈಗ ಇದರ ಬೇಡಿಕೆ ಅಷ್ಟಕ್ಕಷ್ಟೆ. ಇಟ್ಟಿಗೆ ಚಹವನ್ನು ಟಿಬೆಟ್, ಏಷ್ಯಾ ಭಾಗಗಳಲ್ಲಿ ಬಳಸುವರು. ಇದರ ತಯಾರಿಕೆಯಲ್ಲಿ ಎಲೆಗಳನ್ನು ಹಬೆಯಲ್ಲಿಟ್ಟು ಒಣಗಿಸಿ ಗಾಳಿಗೆ ಬಿಡುತ್ತಾರೆ. ಇದರಿಂದ ಎಲೆಗಳು ಮೃದುವಾಗಿ ಹಸುರು ಬಣ್ಣ ತಳೆಯುತ್ತವೆ. ಅನಂತರ ಯಂತ್ರಗಳಿಂದ ಅರೆದು ಮಂದವಾಗಿ ಚಾಪೆಯ ಮೇಲೆ ಹರಡಿ ಗಾಳಿ ಆಡದಂತೆ ನಾಲ್ಕೈದು ದಿನ ಮುಚ್ಚಿಟ್ಟು ಮತ್ತೆ ದರ್ಜೆಗಳಾಗಿ ವಿಂಗಡಿಸಿ ಗಂಜಿ ಬೆರೆಸಿ ಮತ್ತೊಮ್ಮೆ ಹದವಾಗಿ ಬೇಯಿಸಿ ಅಚ್ಚುಗಳಲ್ಲಿ ಒತ್ತಿಡುತ್ತಾರೆ.

ರೋಗಗಳು : ಚಹಕ್ಕೆ ತಗಲುವ ರೋಗಗಳೆಂದರೆ ಸೊಳ್ಳೆ ಮಚ್ಚೆ ಮತ್ತು ಕೆಂಪು ಜೇಡ. ಸೊಳ್ಳೆ ಮಚ್ಚೆ ಹಾಲೊಪೆಲ್ಟಿಸ್ ಎಂಬ ತಿಗಣೆಯಿಂದ ಬರುತ್ತದೆ. ಇದು ಎಲೆಗಳನ್ನು ತಿಂದು ನಾಶಮಾಡುತ್ತದೆ. ಇದಕ್ಕೆ ಯಾವುದೇ ರೀತಿಯ ಔಷಧಿಗಳಿಲ್ಲ. ಔಷಧಿ ಬಳಸಿದರೆ ಸೊಪ್ಪಿಗೆ ತೊಂದರೆ. ಮಳೆ ಬಿದ್ದರಂತೂ ಔಷಧಿಯು ಪರಿಣಾಮಕಾರಿಯಾಗುವುದಿಲ್ಲ. ಆದ್ದರಿಂದ ವಯಸ್ಸಿಗೆ ಬಂದ ತಿಗಣೆಗಳನ್ನು ಬಲೆಬೀಸಿ ತೆಗೆಯುವುದುಂಟು. ಗಿಡವನ್ನು ಸವರುವುದರಿಂದಲೂ ತಿಗಣೆ ಕಾಟ ತಪ್ಪಿಸಬಹುದು.

ಕೆಂಪು ಜೇಡ ಎಲೆಗಳ ರಸ ಹೀರಿ ಎಲೆ ಮುದುಡುವಂತೆ ಮಾಡುತ್ತದೆ. ಮಳೆಗಾಲ ಆರಂಭವಾಗುವ ಕಾಲದಲ್ಲೆ ಇವುಗಳ ಕಾಟಹೆಚ್ಚು. ಮೊದಲು ಎಲೆ ಮೇಲೆ ನೀರು ಎರಚಿ ಬೂದಿ ಮಿಶ್ರಿತ ಗಂಧಕದ ಪುಡಿಯನ್ನು ಸಿಂಪಡಿಸಿ ಜೇಡಬಾಧೆಯನ್ನು ತಡೆಗಟ್ಟಬಹುದು.

ಇವಲ್ಲದೆ ನುಸಿ, ಹಸುರುನೊಣ, ಪಿಂಕ್‌ಜೇಡ, ಕೊರೆಯುವ ಕೆಲವು ಹುಳುಗಳು ಚಹ ಗಿಡವನ್ನು ಬಾಧಿಸುತ್ತವೆ. ಇವಕ್ಕಿಂತ ಅಪಾಯಕರ ಸ್ಥಿತಿಯೆಂದರೆ ಬೇರಿಗೆ ಬರುವ ಮೋಟು ಕೊಳೆತ. ಇದು ಮಣ್ಣಿನ ಮೂಲಕ ಮತ್ತು ಇತರ ಗಿಡಗಳ ಮೋಟುಗಳ ಮೂಲಕ ಹರಡುತ್ತದೆ. ಇದರಿಂದ ಎಲೆಗಳು ಒಣಗಿ ಗಿಡ ಬೇಗನೆ ಸಾಯುತ್ತದೆ. ಇಂತಹ ಗಿಡಗಳನ್ನು ಬೇರು ಸಹಿತ ಸುಟ್ಟುಬಿಡುವುದು ಒಳ್ಳೆಯದು. ಕಾಂಡಕೊರೆಯುವ ಕೆಂಪು ತುಕ್ಕು ರೋಗ ಕೂಡ ತುಂಬ ಅಪಾಯಕಾರಿ. ಇದು ಗಾಳಿ ಮತ್ತು ನೀರಿನಿಂದ ಬರುವಂಥದು. ಇದನ್ನು ತಡೆಗಟ್ಟಲು ಗಿಡವನ್ನು ಸವರಿ ಅನಂತರ ಬೋರ್ಡೋ ದ್ರಾವಣ ಸಿಂಪಡಿಸಬೇಕು. ಹೀಗೆ ರೋಗರುಜಿನಗಳಿಂದ ಕಾಪಾಡುವ ಮೂಲಕ ಸಸ್ಯದಿಂದ ಉತ್ತಮ ಇಳುವರಿ ಪಡೆಯಬಹುದು.

ಆರ್. ಡಿ.

ಚಾಮರಾಜನಗರ ಜಿಲ್ಲೆಯ ಕೃಷಿ ಕರ್ನಾಟಕ ರಾಜ್ಯದ 30 ಜಿಲ್ಲೆಗಳ ಪೈಕಿ ಒಂದು. ಚಾಮರಾಜನಗರ 15.08.1997ರಂದು ಮೈಸೂರು ಜಿಲ್ಲೆಯಿಂದ ಪ್ರತ್ಯೇಕ ಜಿಲ್ಲೆಯಾಯಿತು. ಈ ಜಿಲ್ಲೆಯು ರಾಜ್ಯದ ದಕ್ಷಿಣ ಭಾಗದ ತುತ್ತತುದಿಯಲ್ಲಿ ತಮಿಳುನಾಡು ಮತ್ತು ಕೇರಳಗಳ ಗಡಿಗೆ ಅಂಟಿಕೊಂಡಿದೆ. ಪ್ರಾಚೀನ ಸಂಸ್ಕೃತಿಗೆ ಹೆಸರುವಾಸಿಯಾಗಿರುವ ಇದು ಇತಿಹಾಸ ಪರಂಪರೆಗಳಿಂದ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೆಗಾಲ, ಯಳಂದೂರು ಎಂಬ ನಾಲ್ಕು ತಾಲ್ಲೂಕುಗಳಿವೆ. ಇತ್ತೀಚಿನ ದಿನಗಳಲ್ಲಿ ಐದನೇ ತಾಲ್ಲೂಕು ಕೇಂದ್ರವಾಗಿ ಹನೂರನ್ನು ಹೊಸದಾಗಿ ಸೇರಿಸಲಾಗಿದೆ. ಜಿಲ್ಲೆ ಚಾಮರಾಜನಗರದಿಂದ - ಗುಂಡ್ಲುಪೇಟೆಗೆ 35 ಕಿ.ಮೀ. ಕೊಳ್ಳೆಗಾಲಕ್ಕೆ 35 ಕಿ.ಮೀ, ಯಳಂದೂರು 20 ಕಿ.ಮೀ, ಹನೂರು 45 ಕಿ.ಮೀ. ದೂರ ಇರುತ್ತದೆ.

ಮೇಲ್ಮೈ ಲಕ್ಷಣ : ಜಿಲ್ಲೆಯ ಬಹುಭಾಗ ಗ್ರಾನೈಟ್ ಶಿಲೆಗಳಿಂದ ಕೂಡಿದ್ದು ದಖನ್ ಪ್ರಸ್ಥಭೂಮಿಯ ಒಂದು ಭಾಗವಾಗಿದೆ. ಇದು ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ನೀಲಗಿರಿಯ ಸಾಲಿನಿಂದ ಚಾಚಿಕೊಂಡಿದೆ. ಏರು ತಗ್ಗುಗಳಿಂದ ಕೂಡಿದ ಅರಣ್ಯ ಪ್ರದೇಶವನ್ನು ಹೊಂದಿದೆ. ಎತ್ತರವಿರುವ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ

ಬೆಟ್ಟ, 1687 ಮೀ ಇದೆ. ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರ ಬೆಟ್ಟ ಶ್ರೇಣಿಗಳು (976ಮೀ) ಇವು ದಕ್ಷಿಣೋತ್ತರವಾಗಿ ಉದ್ದವಾದ ಶ್ರೇಣಿಗಳಾಗಿವೆ. ಮಲೆಮಹದೇಶ್ವರ ಬೆಟ್ಟ ಎಪ್ಪತ್ತೇಳು ಮಲೆಗಳನ್ನು ಹೊಂದಿರುವುದು ಜಿಲ್ಲೆಯ ವಿಶಿಷ್ಟತೆಯನ್ನು ಸೂಚಿಸುತ್ತದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗೋಪಾಲಸ್ವಾಮಿ ಬೆಟ್ಟ 1074 ಮೀ. ಇದು ಜಿಲ್ಲೆಯಲ್ಲಿ ಮುಖ್ಯವಾದುದಾಗಿದೆ. ಇನ್ನು ಉಳಿದಂತೆ ಕೆಲವು ಭಾಗ ಸಮತಟ್ಟಾಗಿದ್ದು ಚಿಕ್ಕ ಚಿಕ್ಕ ಗುಡ್ಡಗಳು ಕಂಡುಬರುತ್ತವೆ. ಜಿಲ್ಲೆಯ $10^0 30'$-$12^0 15'$ ಉತ್ತರ ಅಕ್ಷಾಂಶ 76^0 $20'$-79^0 ಪೂರ್ವ ರೇಖಾಂಶದವರೆಗೆ ಹರಡಿಕೊಂಡಿದೆ.

ಜಿಲ್ಲೆಯ ವಿಸ್ತೀರ್ಣ : ಜಿಲ್ಲೆಯು ಒಟ್ಟು 5686 ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದ್ದು ಇದು ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ 3.37ರಷ್ಟಿದೆ. ಜಿಲ್ಲೆಯಲ್ಲಿ 16 ಹೋಬಳಿಗಳಿದ್ದು 514 ಹಳ್ಳಿಗಳು 120 ಗ್ರಾಮ ಪಂಚಾಯಿತಿಗಳು, 2 ನಗರಸಭೆ, 2 ಪುರಸಭೆ, 1 ಪಟ್ಟಣ ಪಂಚಾಯಿತಿ, 222 ಗ್ರಾಮ ಲೆಕ್ಕಿಗರ ವೃತ್ತಗಳು, 7 ನಾಡ ಕಛೇರಿಗಳು, 5 ತಾಲ್ಲೂಕು ಕೇಂದ್ರಗಳನ್ನು ಒಳಗೊಂಡಿದೆ. ಕರ್ನಾಟಕ ಸರ್ಕಾರ ಆಯೋಜಿಸಿರುವ 4 ಆಡಳಿತ ವಿಭಾಗಗಳಲ್ಲಿ ಚಾಮರಾಜನಗರ ಮೈಸೂರು ವಿಭಾಗಕ್ಕೆ ಸೇರುತ್ತದೆ. ತಮಿಳುನಾಡಿನ ಗಡಿಯಲ್ಲಿರುವ ಈ ಜಿಲ್ಲೆ ಕರ್ನಾಟಕಕ್ಕೆ ಸೇರಿದ್ದು ಕನ್ನಡ ಮಾತನಾಡುವವರಿದ್ದರೂ ತಮಿಳಿನ ಪ್ರಭಾವ ನಿಚ್ಚಳವಾಗಿ ಕಾಣುತ್ತದೆ.

ಹವಾಗುಣ : ಉಷ್ಣವಲಯದಲ್ಲಿರುವ ಜಿಲ್ಲೆಯ ಹವಾಗುಣ ಹಿತಕರವಾಗಿದೆ. ಮುಂಗಾರು ಮಾದರಿಯ ವಾಯುಗುಣವನ್ನು ಹೊಂದಿದ್ದು ಇದರ ಆಧಾರದಿಂದ ಜಿಲ್ಲೆಯಲ್ಲಿ ಕಾಲಕ್ಕನುಗುಣವಾಗಿ ಋತುಗಳನ್ನು ವಿಂಗಡಿಸಲಾಗುತ್ತದೆ. ಫೆಬ್ರವರಿ-ಮಾರ್ಚಿ ತಿಂಗಳ ಅನಂತರ ಉಷ್ಣಾಂಶವು ಗಣನೀಯವಾಗಿ ಹೆಚ್ಚಾಗುತ್ತ ಹೋಗುತ್ತದೆ. ಕನಿಷ್ಠ 33^0ಸೆ.ನಿಂದ ಗರಿಷ್ಠ 37^0 ಸೆಂ. ಇರುತ್ತದೆ. ಅನಂತರದ ದಿನಗಳಲ್ಲಿ ಹವೆ ತಂಪಾಗುತ್ತದೆ.

ಮಳೆ : ಜಿಲ್ಲೆಯಲ್ಲಿ ನೈರುತ್ಯ ಮಾನ್‌ಸೂನ್ ಮಾರುತಗಳಿಂದ ಮಳೆಯಾಗುತ್ತದೆ. ಹಾಗೂ ಕೆಲವು ಸಂದರ್ಭಗಳಲ್ಲಿ ಈಶಾನ್ಯ ಮಾನ್‌ಸೂನ್ ಮಾರುತದಿಂದಲೂ ಮಳೆಯಾಗುತ್ತದೆ. ಜಿಲ್ಲೆಯ ಪಶ್ಚಿಮ ಘಟ್ಟಗಳು ಮಳೆಯ ನೆರಳಿನ ಪ್ರದೇಶವಾಗಿರುವುದರಿಂದ ಮಾನ್‌ಸೂನ್ ಮಾರುತಗಳ ಪ್ರಭಾವಕ್ಕೆ ಒಳಗಾಗಿದ್ದು ಮಳೆಯ ಪ್ರಮಾಣ ವಾರ್ಷಿಕವಾಗಿ 705 ಮಿ.ಮೀ.ಗಳಷ್ಟಿರುತ್ತದೆ.


ಜಿಲ್ಲೆಯ ವಾರ್ಷಿಕ ಮಳೆ ಸರಾಸರಿ 835 ಮಿ.ಮೀ ಇದ್ದು 2013ರ ಜನವರಿ-ಮೇ ತಿಂಗಳಲ್ಲಿ 235 ಮಿ.ಮೀ ಮಳೆಯಾಗಿದ್ದು ವಾಡಿಕೆ ಮಳೆ ಸರಾಸರಿ 111.37 ಮಿ.ಮೀ. ಆಗಿದೆ.

2011-12ನೇ ಮಳೆ ವಿವರವನ್ನು ಗಮನಿಸಿದಾಗ ಚಾಮರಾಜನಗರ ತಾಲ್ಲೂಕಿನಲ್ಲಿ ವಾಡಿಕೆ ಮಳೆ 3.00 ಇದ್ದು ಮಳೆಯ ಪ್ರಮಾಣ 1.00 ಆಗಿರುತ್ತದೆ. ಗುಂಡ್ಲುಪೇಟೆ 4.00 ಕೊಳ್ಳೆಗಾಲ ವಾಡಿಕೆ ಮಳೆ 4.00 ಬಿದ್ದಮಳೆ ಶೂನ್ಯ.

ಜಿಲ್ಲೆಯ ಸರಾಸರಿ ಮಳೆ : 2011-12 ವಾಡಿಕೆ ಮಳೆ 714.25 ಬಿದ್ದ ಮಳೆ 444.73

2012-13 ವಾಡಿಕೆ ಮಳೆ 731.00 ಬಿದ್ದ ಮಳೆ 567.99

ಕೃಷಿ ಭೂಮಿ ವಿಸ್ತೀರ್ಣ : ವಾರ್ಷಿಕವಾಗಿ ಸಾಧಾರಣ ಮಳೆಯನ್ನು ಪಡೆಯುವ ಜಿಲ್ಲೆಯಾದ್ದರಿಂದ ಕೃಷಿಗೆ ಯೋಗ್ಯವಾದ ಪ್ರದೇಶವನ್ನು ಹೊಂದಿದೆ. ಇಲ್ಲಿಯ ಜನರ ಪ್ರಧಾನ ಉದ್ಯೋಗ ಕೂಡ ಕೃಷಿಯೇ. ಶೇ.



ಸು. 80ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದು ಹೆಚ್ಚಾಗಿ ಜನರು ಕೃಷಿಯನ್ನೆ ಅವಲಂಬಿಸಿರುತ್ತಾರೆ. ಜಿಲ್ಲೆಯಲ್ಲಿ ಒಟ್ಟು 21,1750 ಕೃಷಿ ಹಿಡುವಳಿದಾರರಿದ್ದು ಸುಮಾರು 21,5142 ಹೆ. ಭೌಗೋಳಿಕ ಪ್ರದೇಶ ಇದ್ದು ಇದರಲ್ಲಿ 21.3493ರಷ್ಟು ನಿವ್ವಳ ಸಾಗುವಳಿಯಾದ ಪ್ರದೇಶವಾಗಿದೆ.

ಭೂ ಹಿಡುವಳಿದಾರರು : ಜಿಲ್ಲೆಯಲ್ಲಿ 212196 ಭೂ ಹಿಡುವಳಿದಾರರಿದ್ದು 215142 ಹೆ. ಭೂಮಿಯನ್ನು ಹಿಡುವಳಿದಾರರು ಹೊಂದಿರುವರು. ಇದರಲ್ಲಿ 2010-11ರ ಪ್ರಕಾರ 28132 ಪರಿಶಿಷ್ಟರು (ಅತಿಸಣ್ಣ ಭೂಹಿಡುವಳಿದಾರರು) 12085 ಹೆ. ವಿಸ್ತೀರ್ಣ, 361 ಪರಿಶಿಷ್ಟ ಮಧ್ಯಮ ಭೂ ಹಿಡುವಳಿದಾರರು 1824 ಹೆ. ವಿಸ್ತೀರ್ಣ, 13 ಪರಿಶಿಷ್ಟ ದೊಡ್ಡ ಭೂ ಹಿಡುವಳಿದಾರರು 163 ಹೆ. ವಿಸ್ತೀರ್ಣ ಹೊಂದಿದ್ದು, 8613 ಪರಿಶಿಷ್ಟ ಪಂಗಡದ ಅತಿ ಸಣ್ಣ ಭೂ ಹಿಡುವಳಿದಾರರು 3516 ಹೆ. ವಿಸ್ತೀರ್ಣ, 114 ಪರಿಶಿಷ್ಟ ಪಂಗಡದ ಮಧ್ಯಮ ಭೂ ಹಿಡುವಳಿದಾರರು 593 ಹೆ. ವಿಸ್ತೀರ್ಣ ಹೊಂದಿದ್ದು, 05 ಪರಿಶಿಷ್ಟ ಪಂಗಡದ ದೊಡ್ಡ ಭೂ ಹಿಡುವಳಿದಾರರು 59 ಹೆ. ವಿಸ್ತೀರ್ಣ ಹೊಂದಿರುವರು. ಉಳಿದಂತೆ ಇತರರು 97298 ಅತಿ ಸಣ್ಣ ಭೂ ಹಿಡುವಳಿದಾರರಿದ್ದು 43836 ಹೆ. ವಿಸ್ತೀರ್ಣ ಪ್ರದೇಶವನ್ನು ಹೊಂದಿರುತ್ತಾರೆ. ಮಧ್ಯಮ ಭೂ ಹಿಡುವಳಿದಾರರು 3920 ಇದ್ದು 21127 ಹೆ. ವಿಸ್ತೀರ್ಣ, ದೊಡ್ಡ ಭೂ ಹಿಡುವಳಿದಾರರು 284 ಇದ್ದು 3842 ಹೆ. ವಿಸ್ತೀರ್ಣವನ್ನು ಹೊಂದಿರುತ್ತಾರೆ. ಈ ಎಲ್ಲಾ ಅಂಕಿ ಅಂಶಗಳನ್ನು ಗಮನಿಸಿದಾಗ ಸಾಮಾಜಿಕ ವರ್ಗವಾರು ಹಿಡುವಳಿಯಲ್ಲಿ ಶೇ 60 ಏರಿಕೆಯಾಗಿದ್ದು ಇವುಗಳ ಭೂ ಹಿಡುವಳಿ ವಿಭಾಗವಾಗಿ ಇದೆಯೇ ಹೊರತು ಇದನ್ನು ಕೃಷಿ ಉಪಯೋಗಕ್ಕೆ ಬಳಸಿರುವ ಪ್ರಮಾಣ ಕಡಿಮೆಯಾಗಿರುವುದನ್ನು ಕಾಣಬಹುದು.

ಭೂ ಉಪಯೋಗ : ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 569901 ಹೆ. ವಿಸ್ತೀರ್ಣದಲ್ಲಿ 2011-12 ವಾರ್ಷಿಕ ಬೆಳೆಗಳ ವರದಿಗಳ ಪ್ರಕಾರ 275610 ಹೆ.ವಿ. ಅರಣ್ಯ ಪ್ರದೇಶ. 46045 ಹೆ. ಪ್ರದೇಶ ಭೂ ಬಳಕೆ ಸಾಗುವಳಿ ಲಭ್ಯವಿಲ್ಲದಿರುವ ಭೂಮಿ, 7637 ಹೆ. ಪ್ರದೇಶ ಭೂ ಬಳಕೆ ಸಾಗುವಳಿ ಲಭ್ಯವಿಲ್ಲದಿರುವ ಭೂಮಿ 7637 ಹೆ. ಪ್ರದೇಶ ಸಾಗುವಳಿ ಮಾಡಿರುವ ಭೂಮಿ 35128 ಸಾಗುವಳಿ ಮಾಡದಿರುವ ಇತರ ಭೂಮಿ ಪ್ರದೇಶ ಹಾಗೂ 24611 ಹೆ. ಪ್ರದೇಶ ವ್ಯವಸಾಯೇತರ ಸಾಗುವಳಿಗೆ ಬಳಸಿರುವ ಪ್ರದೇಶವಾಗಿದ್ದು 28722 ಹೆ. ಬೀಳು ಭೂಮಿ ಹಾಗೂ 184396 ಹೆ. ನಿವ್ವಳ ಸಾಗುವಳಿಯಾಗಿರುವ ಪ್ರದೇಶವಾಗಿದೆ.

ಕೃಷಿ ಭೂಮಿ : 2011-12ನೇ ಸಾಲಿನಲ್ಲಿ ಚಾಮರಾಜನಗರ 54504 ಹೆಕ್ಟೇರ್, ಗುಂಡ್ಲುಪೇಟೆ 53995 ಹೆ. ಕೊಳ್ಳೇಗಾಲ 66427 ಹೆ. ಯಳಂದೂರು 9470 ಹೆ. ಒಟ್ಟು 184396 ಹೆ. ಗಳಲ್ಲಿ ಭೂಮಿಯು ಬಿತ್ತನೆ ಬೆಳೆಗೆ ಲಭ್ಯವಾಗಿತ್ತು. 2011-12ರಲ್ಲಿ ಬಿತ್ತನೆ 184366 ಹೆ. ಪ್ರ. ಅರಣ್ಯಕ್ಕೆ 275600 ಹೆ. ಪ್ರದೇಶ, ನೀರಾವರಿ ಕ್ಷೇತ್ರಕ್ಕೆ 48062 ಹೆ. ವೃಕ್ಷ ಮತ್ತು ತೋಪುಗಳು 4741 ಹೆ. ವ್ಯವಸಾಯೇತರ 24611 ಹೆ. ಸಾಗುವಳಿಗೆ ಯೋಗ್ಯವಾದ ಬಂಜರು 7637 ಹೆ. ಖಾಯಂ ಗೋಮಾಳಕ್ಕೆ 22750 ಹೆ. ಬೀಳು ಭೂಮಿ 15745 ಹೆ. ಒಟ್ಟು ಕೃಷಿಗೆ ಉಪಯೋಗಿಸುವ ಭೂಮಿಯನ್ನು ಗಮನಿಸಿದಾಗ ಕೃಷಿಯೇತರ ಚಟುವಟಿಕೆಗೆ ಬಳಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಮಳೆಯಾಶ್ರಿತ ಪ್ರದೇಶಗಳು ಹೆಚ್ಚಾಗಿರುವುದರಿಂದ ಇದರ ಸಮಸ್ಯೆ ಕಾಡುತ್ತದೆ.

ತೋಟಗಾರಿಕೆ ಹಾಗೂ ವಿವಿಧ ಬೆಳೆಗಳಿಗೆ ವಿಸ್ತೀರ್ಣ ಹೆಚ್ಚಾಗಿ ಕಂಡುಬಂದರೂ ಅವುಗಳಲ್ಲಿ ಕೃಷಿ ಚಟುವಟಿಕೆಯು ಕಡಿಮೆಯಾಗುತ್ತಾ ಬಂದಿದೆ. ಬಂಜರು ಭೂಮಿಯ ಹೆಚ್ಚಳವನ್ನು ಗಮನಿಸಿದರೆ ನಿವ್ವಳವಾಗಿ ಬಿತ್ತನೆಯಾಗಿರುವ ಪ್ರದೇಶ ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಒಟ್ಟು 28722 ಹೆ. ಪ್ರದೇಶ ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶವಾಗಿದ್ದು ಕೃಷಿಯ ಇನ್ನಿತರ ಚಟುವಟಿಕೆಗೆ ಯೋಗ್ಯವಾಗಿದೆ.

ಭೂಗುಣ : ವಿವಿಧ ನೆಲಗಳು : ಚಾಮರಾಜನಗರ ಜಿಲ್ಲೆಯಲ್ಲಿಯ ಭೂ ಪ್ರದೇಶವು ಏರು ತಗ್ಗುಗಳಿಂದ ಕೂಡಿದ್ದು ಹೆಚ್ಚಾಗಿ ಬೆಟ್ಟ ಗುಡ್ಡಗಳು ಕಂಡುಬರುತ್ತವೆ. ಈ ಭೂಮಿಯಲ್ಲಿ ಹೇರಳವಾಗಿ ಖನಿಜ ಸಂಪತ್ತುಗಳ ನಿಕ್ಷೇಪಗಳಿರುತ್ತವೆ. ಬಂಜರು ಭೂಮಿಯನ್ನು ನೀರಂಕಮೂಲ, ಕಲ್ಲಾರ ಪ್ರದೇಶಗಳೆಂದು ಕೆಲವು ಕಡೆ ಕರೆಯುತ್ತಾರೆ. ನೀರಿಲ್ಲದ ಪ್ರದೇಶವನ್ನು ಬಂಜರು ಭೂಮಿ ಎನ್ನುವರು. ನೀರು ಹೆಚ್ಚಾಗಿ ನಿಲ್ಲುವ ಪ್ರದೇಶವನ್ನು 'ನೀರಂಕ ಮೂಲ' ಎಂದೂ ಕರೆಯುವರು. ಅತಿಯಾಗಿ ಸಣ್ಣ ಸಣ್ಣ ಕಲ್ಲುಗಳು ಇರುವಂತಹ ಪ್ರದೇಶ ಹಾಗೂ ದೊಡ್ಡ ಬಂಡೆಗಳೂ ಇರುವಂತ ಪ್ರದೇಶವನ್ನು 'ಕಲ್ಲಾರ' ಎಂದೂ ಕರೆಯುವರು.

ಮಣ್ಣು : ಜಿಲ್ಲೆಯಲ್ಲಿ ಮಣ್ಣು ವಿವಿಧ ಲಕ್ಷಣ ಹೊಂದಿದೆ. ಕಪ್ಪು ಮಣ್ಣು, ಕೆಂಪು ಮಣ್ಣು, ಮರಳು ಮಿಶ್ರಿತ ಕೆಂಪು ಮಣ್ಣು, ಮೆಕ್ಕಲು ಮಣ್ಣು ಮುಂತಾದ ಮಣ್ಣುಗಳಿವೆ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಮರಳು ಮಿಶ್ರಿತವಾದ ಕೆಂಪು ಮಣ್ಣು ದೊರೆಯುತ್ತದೆ ಹಾಗೂ ಕೆಲವೆಡೆ ನೀರು ಹೆಚ್ಚಾಗಿ ಕಂಡುಬರುವ ಕಡೆ ಕಪ್ಪು ಮಣ್ಣು ದೊರೆಯುತ್ತದೆ. ಇದು ಹತ್ತಿ, ಕಡ್ಲೆ ಬೆಳೆಗೆ ಯುಕ್ತವಾದ ಮಣ್ಣಾಗಿದೆ. ಇದು ಹೆಚ್ಚಾಗಿ ಕಾಲಿಗೆ ಅಂಟುತ್ತದೆ. ಇದನ್ನು ಅಂಟುಮಣ್ಣು ಎನ್ನುವರು. ಜಿಲ್ಲೆಯ ಕೆಲವೆಡೆ ಹೆಚ್ಚಾಗಿ ಕೆಂಪು ಮಣ್ಣು ಕಂಡುಬರುತ್ತದೆ. ಇದು ಆಮ್ಲ ಗುಣವನ್ನು ಹೊಂದಿದ್ದು ಫಲವತ್ತತೆಯಿಂದ ಕೂಡಿದೆ.

ಕಾಡುಗಳು : ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ಘಟ್ಟಗಳು ನೀಲಗಿರಿಯಲ್ಲಿ ಸಂಧಿಸುತ್ತವೆ. ಇಲ್ಲಿ ದಟ್ಟವಾದ ನೀಲಗಿರಿ ಮರಗಳು ಬೆಳೆದಿವೆ. ಈ ಜಿಲ್ಲೆ ಕಾಡುಗಳಲ್ಲಿ ಬೆಲೆ ಬಾಳುವಂತಹ ಶ್ರೀಗಂಧ, ಹೊನ್ನೆ, ತಾಳೆ, ನೇರಳೆ ಮರಗಳು ಹೆಚ್ಚಾಗಿ ಕಂಡುಬರುತ್ತವೆ. ಜಿಲ್ಲೆಯಲ್ಲಿ ಬಿಳಿಗಿರಿರಂಗನ ಬೆಟ್ಟಶ್ರೇಣಿ, ಮಲೆಮಹದೇಶ್ವರ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಬೆಟ್ಟದ ಕಾಡುಗಳು. ಯಳಂದೂರಿನ ನಿತ್ಯಹರಿದ್ವರ್ಣದ ಮಳೆಯ ನೆರಳಿನ ಪ್ರದೇಶದಲ್ಲಿ ಪೊದೆ ರೀತಿಯ ಸಸ್ಯವರ್ಗಗಳು ಹಾಗೂ ಹರಡಿಕೊಂಡಂತೆ ಕಂಡುಬರುವ ಗಿಡಮರಗಳು ಕಂಡುಬರುತ್ತವೆ. ಬಿದಿರು ಇಲ್ಲಿಯ ಮುಖ್ಯಮರಗಳಲ್ಲಿ ಒಂದಾಗಿದೆ.

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಸು. 2,75,600 ಹೆ. ಪ್ರದೇಶದಲ್ಲಿ ಅರಣ್ಯ ವ್ಯಾಪಿಸಿದೆ. ಇಲ್ಲಿಯ ಬಂಡೀಪುರ ಅಭಯಾರಣ್ಯ ಕೆ.ಗುಡಿ ಅರಣ್ಯವಲಯ ಪ್ರದೇಶಗಳಲ್ಲಿ ಕಾಡು ಪ್ರಾಣಿಗಳು ಕಂಡುಬರುತ್ತವೆ ಹಾಗೂ ಕೊಳ್ಳೇಗಾಲ ವ್ಯಾಪ್ತಿಯಲ್ಲಿ ಹಲವಾರು ಸಣ್ಣ ಪ್ರಮಾಣದ ಕಾಡುಗಳಿವೆ.

ನೀರಾವರಿ ಸೌಕರ್ಯಗಳು : ಜಿಲ್ಲೆಯಲ್ಲಿ ನೀರಾವರಿಯ ಕ್ಷೇತ್ರದಿಂದ ಕೃಷಿ, ಕೃಷಿಯೇತರ ಚಟುವಟಿಕೆಗಳಿಗೆ ಉಪಯುಕ್ತತೆ ಆಗುತ್ತಿದೆ. ಜಿಲ್ಲೆಯ ನಿವ್ವಳ ನೀರಾವರಿ ಆದಾಯವು 48067 ಹೆ. ಇದೆ. ಜಿಲ್ಲೆಯಲ್ಲಿ ಸುವರ್ಣವತಿ, ನಲ್ಲೂರು ಅಮ್ಮಾನಿಕೆರೆ, ಚಿಕ್ಕಹೊಳೆ ಜಲಾಶಯಗಳಿದ್ದು ಇವುಗಳನ್ನು ಸುಧಾರಣೆ ಮಾಡಲಾಗಿದೆ. ಸುವರ್ಣಾವತಿ ನದಿಗೆ ಚಾಮರಾಜನಗರ ತಾಲ್ಲೂಕಿನ ಅಟ್ಟುಗುಳಿಪುರ ಬಳಿ ಅಣೆಕಟ್ಟನ್ನು ಕಟ್ಟಲಾಗಿದ್ದು, ಇದು 1170 ಮೀ ಉದ್ದ 25.9 ಮೀ. ಎತ್ತರವಿದೆ. ಇದರ ನೀರನ್ನು ಶೇಖರಿಸುವ ಸಾಮರ್ಥ್ಯ 35.4 ಮಿ ಘ.ಮೀ ಇದೆ. ಚಾಮರಾಜನಗರ ತಾಲ್ಲೂಕಿನ ವಿವಿಧ ಭಾಗಗಳಿಗೆ ಈ ನದಿಗಳೇ ಜೀವನಾಡಿಯಾಗಿವೆ.

ಜಿಲ್ಲೆಯಲ್ಲಿ 5500 ಹೆ. ಪ್ರದೇಶ ಕೆರೆಗಳಿಂದಲೂ 13000 ಹೆ. ಪ್ರದೇಶ ಬಾವಿಯಿಂದಲೂ 16650 ಹೆ. ಕೊಳವೆ ಬಾವಿಗಳಿಂದಲೂ 900 ಹೆ. ಪ್ರದೇಶ ಏತ ನೀರಾವರಿಯಿಂದಲೂ 13902 ಹೆ. ಪ್ರ. ಕಾಲುವೆಗಳಿಂದಲೂ ನೀರಾವರಿ ಸೌಲಭ್ಯ ಇದೆ. ಇದಲ್ಲದೆ ರೈತರು ಕೊಳಾಯಿ, ಕೈ ಪಂಪು, ಚಿಲುಮೆ ಇನ್ನೂ ಮುಂತಾದವುಗಳಿಂದ ನೀರಿನ ಸೌಲಭ್ಯ ಪಡೆಯುತ್ತಿದ್ದಾರೆ.

ಭೂಗರ್ಭ ಸಂಪತ್ತು : ಇಲ್ಲಿ ಕಪ್ಪು ಶಿಲೆ (ಗ್ರಾನೈಟ್) ಮತ್ತು ಅಪಾರ ಪ್ರಮಾಣದ ಖನಿಜ ಸಂಪತ್ತು ದೊರೆಯುತ್ತದೆ. ಅವುಗಳೆಂದರೆ ಮ್ಯಾಂಗನೀಸ್ ಮತ್ತು ಅವುಗಳನ್ನೊಳಗೊಂಡಿರುವ ಪುನರ್ ಸ್ಪಟೀಕೃತ ಡೈನೆಟ್ ಶಿಲೆಗಳು. ಇವನ್ನೇ ಸ್ಯಾಗ್‌ವಾಂಡೈಟ್ ಎಂದು ಕರೆಯುವುದು. ಆಂಪಿಬೋಲೈಟ್ ಶಿಲೆಗಳು, ಕ್ವಾರ್ಡ್ಜೈಟ್ (ಹಸುರು ಮೈಕರಹಿತ) ಸುಣ್ಣಾಂಶ ಹೆಚ್ಚಿರುವ ಕೆಲವು ವಲಯಗಳು, ಅಮೃತ (ಅಶುದ್ಧ) ಸುಣ್ಣಶಿಲೆ, ರಕ್ತ ಮಣಿಯುಕ್ತ ಶಿಲೆಗಳು, ನೀಲಮಣಿ, ಪದರಯುತ ಮ್ಯಾಂಗನೀಸ್ ಕ್ವಾರ್ಡ್ಜೈಟ್ ಶಿಲೆ, ಪುನರ್‌ಸ್ಪಟಿಕೀಕೃತಗೊಂಡ ಅತಿಕ್ಷಾರ ಶಿಲೆಗಳು (ಸ್ಯಾಗ್‌ವಾಂಡೈಟ್) ಗ್ಯಾಬ್ರೋ, ಡಯೋರೈಟ್, ಡಾಲರೈಟ್ ಮತ್ತು ಕಿರಿಯ ಕಣ ಶಿಲೆಗಳು ಇವೇ ಮುಂತಾದವು. ಈ ಎಲ್ಲಾ ಶಿಲೆಗಳೂ ಸರಗೂರು ಶಿಲೆಗಳ ಭೂ ರಾಸಾಯನಿಕ ರಚನಾವಿನ್ಯಾಸ ಸಾಮ್ಯತೆ ಮತ್ತು ಕಣಶಿಲೀಕರಣದ ವಿವಿಧತೆಯನ್ನು ತೋರುತ್ತದೆ. ನೀಲಗಿರಿ ಬೆಟ್ಟವು ಇಂದಿನ ಎತ್ತರ ಮತ್ತು ಸಮತೋಲನ ಸ್ಥಿತಿಯನ್ನು ಪಡೆಯಲು ಗುಂಡ್ಲುಪೇಟೆ ಶಿಲೆಗಳಲ್ಲುಂಟಾದ ವಿಶೇಷ ರಚನಾ ವಿನ್ಯಾಸದ ಮಾರ್ಪಾಡುಗಳೇ ಬಹುಮುಖ್ಯ ಎಂಬ ಅಂಶವನ್ನು ಡ್ರ್ಯೂರಿ ಮತ್ತು ಹೋಲ್ಟ್‌ರು 1981ರಲ್ಲಿ ವಿಶದೀಕರಿಸಿದ್ದಾರೆ. ಭೂ ಉಪಗ್ರಹವಾದ ಚಂದ್ರನಲ್ಲಿ ಕಾಣಸಿಗುವ ಶಿಲೆಯು ಗುಂಡ್ಲುಪೇಟೆಯ ಕೊಡಸೋಗೆ, ಶೀಲವಂತಪುರ, ರಾಮಯ್ಯನಪುರ ಮತ್ತು ಕುರುಬರ ಹುಂಡಿಯಲ್ಲಿ ದೊರೆತಿವೆ.

ಈ ತಾಲ್ಲೂಕಿನ ಖನಿಜ ಸಂಪತ್ತು ಅಷ್ಟಾಗಿ ಸಮೃದ್ಧಿಯಾಗಿಲ್ಲ. ಆದರೂ ಸುಣ್ಣದಕಲ್ಲನ್ನು ಬಿಟ್ಟರೆ ಲಾಭದಾಯಕವಾದ ಗಣಿ ಉದ್ಯಮವನ್ನು ಆರಂಭಿಸಬಹುದಾದ ಬೃಹತ್ ಖನಿಜ ನಿಕ್ಷೇಪಗಳು ಯಾವುವೂ ಕಂಡುಬರುವುದಿಲ್ಲ. ಇಲ್ಲಿ ದೊರೆಯುವ ಶಿಲೆ ಮತ್ತು ಖನಿಜಗಳ ವಿವರಣೆಯನ್ನು ಕೆಳಕಂಡಂತೆ ಗಮನಿಸಬಹುದು.

ಕುರಂದ ಅಥವಾ ಕೊರಂಡಂ : ಈ ಖನಿಜವು ಲೋಹಗಳಿಗೆ ಮೆರುಗನ್ನು ಕೊಡಲು ಸಾಣೆ ವಸ್ತುವಾಗಿ ಉಪಯುಕ್ತವಾಗಿದೆ. ಇದು ಕೆಲವೊಮ್ಮೆ ಅಪರೂಪವಾಗಿ ಬೆಲೆಬಾಳುವ ರತ್ನವಾಗಿ ದೊರೆಯುತ್ತದೆ. ಇದಕ್ಕಾಗಿ ಭೀಮನ ಬೀಡುವಿನಲ್ಲಿ ಗಣಿ ಮಾಡುತ್ತಿದ್ದಾರೆ.

ಕಂಕರ್-ಸುಣ್ಣದಕಲ್ಲು : ಕೀಳು ದರ್ಜೆಯದಾದರೂ ಬಹು ಉಪಯುಕ್ತವಾದ ಸುಣ್ಣದ ಕಲ್ಲು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹೇರಳವಾಗಿ ದೊರೆಯುತ್ತಿದೆ. ಗುಂಡ್ಲುಪೇಟೆಗೆ ಉತ್ತರಕ್ಕಿರುವ ಸುಣ್ಣದ ಬೇಗೂರು ಎಂದೇ ಹೆಸರುವಾಸಿಯಾಗಿರುವ ಬೇಗೂರಿನ ಸಮೀಪದ ಬೆಟ್ಟದ ಮಾದಳ್ಳಿ ಮತ್ತು ಕೋಡಿಹಳ್ಳಿಯಲ್ಲಿ ಸುಣ್ಣದ ಕಲ್ಲು ಯಥೇಚ್ಛವಾಗಿ ದೊರೆಯುವುದು. ಸುಣ್ಣ ತಯಾರಿಕೆಗೆ ಬೇಕಾಗುವ ಮೂಲವಸ್ತು ಈ ಕಲ್ಲು. ಈ ಕಲ್ಲನ್ನು ಸುಟ್ಟರೆ ಗೋಡೆಗೆ ಹಚ್ಚುವ ಸುಣ್ಣ ಸಿದ್ಧವಾಗುತ್ತದೆ. ಹಲವಾರು ಕೈಗಾರಿಕೆಗಳಲ್ಲೂ ಇದರ ಉಪಯೋಗ ಇದೆ. ಉದಾಹರಣೆಗೆ ಸಿಮೆಂಟ್, ಗಾಜು, ಬಣ್ಣ, ಬಟ್ಟೆ ಮತ್ತು ಕಾಗದಕ್ಕೆ ಬಿಳುಪು ಮತ್ತು ಹೊಳಪನ್ನು ಕೊಡಲು ಔಷಧಿ, ಗೊಬ್ಬರ, ರಾಸಾಯನಿಕ ಸುಣ್ಣ - ಹೀಗೆ ನೂರಾರು ಸಾವಿರಾರು ಉಪಲಬ್ಧ ವಸ್ತುಗಳ ತಯಾರಿಕೆಯಲ್ಲಿ ಈ ವಸ್ತು ಆವಶ್ಯಕವಾಗಿ ಬೇಕಾಗಿದೆ. ಬೇಗೂರಿನ ಬೆಟ್ಟದ ಮಾದಹಳ್ಳಿ ಪ್ರದೇಶ ಒಂದರಿಂದಲೇ ದಿನಂಪ್ರತಿ ಸಹಸ್ರಾರು ಟನ್‌ಗಳಷ್ಟು ಸುಣ್ಣದ ಕಲ್ಲನ್ನು ಗಣಿ ಮಾಡಿ ಹಲವಾರು ಉದ್ಯಮಗಳಿಗೆ ಕಚ್ಚಾ ವಸ್ತುವನ್ನಾಗಿ ಬಳಸುತ್ತಿದ್ದಾರೆ. ಈ ಕಲ್ಲಿನಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ರಾಜಧನದ ರೂಪದಲ್ಲಿ ಸಂದಾಯವಾಗುತ್ತದೆ.

ಅಮೃತ ಶಿಲೆ : ಸುಣ್ಣ ಶಿಲೆಯು ಭೂ ಅಂತರಾಳದಲ್ಲಿ ಶಾಖ ಮತ್ತು ಒತ್ತಡಗಳಿಗೆ ಸಿಲುಕಿಕೊಂಡಾಗ ಅದು ಅಮೃತಶಿಲೆಯಾಗುತ್ತದೆ. ಇದು ವಿವಿಧ ಬಣ್ಣಗಳಲ್ಲಿ ದೊರೆಯುತ್ತದೆ. ಇದು ಅಲಂಕಾರ ಶಿಲೆಯಾಗಿ ಉಪಯುಕ್ತ. ಈ ಶಿಲೆಗಳು ಲಾಭದಾಯಕ. ಏಕೆಂದರೆ ಗೃಹಕಟ್ಟಡಗಳಿಗೆ ಸೌಂದರ್ಯದ ಮೆರುಗನ್ನು ಕೊಡಲು ಬಣ್ಣಬಣ್ಣದ ಅಮೃತಶಿಲೆಯು ಅಪಾರ ಬೇಡಿಕೆಯನ್ನು ಹೊಂದಿದೆ. ಈ ಶಿಲೆ ತೆರಕಣಾಂಬಿ ಮಲ್ಲಯ್ಯನಪುರ, ಕುಂದ ಕೆರೆಗಳಲ್ಲಿ ದೊರೆಯುತ್ತದೆ.

ಮ್ಯಾಗ್ನಸೈಟ್ : ಮೆಗ್ನೀಷಿಯಂ ಧಾತುವಿಗೆ ಮೂಲ ವಸ್ತು. ಇದರ ಉಪಯೋಗ ಹಲವಾರು. ಇದು ಶಾಖ ಮತ್ತು ವಿದ್ಯುತ್‌ಗಳಿಗೆ ಅವಾಹಕವಾಗಿರುವುದರಿಂದ ಕುಲುಮೆ ಇಟ್ಟಿಗೆ, ವಿದ್ಯುತ್ ಉಪಕರಣಗಳ ತಯಾರಿಕೆಯಲ್ಲೂ ಬಣ್ಣ ಮತ್ತು ಇತರ ಕೈಗಾರಿಕೆಯಲ್ಲೂ ಬೇಕೇ ಬೇಕು. ಈ ಖನಿಜ ಅಲ್ಲಲ್ಲಿ ಕಾಣಸಿಗುತ್ತದೆ.

ಕಬ್ಬಿಣದ ಅದುರು : ಅಷ್ಟೇನು ಉತ್ಕೃಷ್ಟವಲ್ಲದ ಅದುರು ಹಾಗೂ ಗಣಿಕಾರ್ಯಕ್ಕೆ ಯುಕ್ತವಲ್ಲದ ಕಡಿಮೆ ಕಬ್ಬಿಣಾಂಶವಿರುವ ಈ ಖನಿಜವು ಬೊಮ್ಮನಳ್ಳಿ ಮತ್ತು ಯರಗನಹಳ್ಳಿಗಳಲ್ಲಿ ದೊರೆಯುತ್ತದೆ.

ಮ್ಯಾಂಗನೀಸ್‌ಯುಕ್ತ ಶಿಲೆಗಳು : ಅಷ್ಟೇನು ಉತ್ಕೃಷ್ಟವಲ್ಲದ ಅದುರು, ಕ್ವಾಡ್ಜೈಟ್ ಮತ್ತು ಸುಣ್ಣಾಂಶಯುಕ್ತ ಶಿಲೆಗಳಲ್ಲಿ ದೊರೆಯುತ್ತದೆ. ಇಂತಹ ಶಿಲೆಗಳು ಕುರುಬರ ಹುಂಡಿ, ವಣಕನಪುರ, ಮಡಳ್ಳಿ, ಮದ್ದೂರು, ತೆರಕಣಾಂಬಿ, ತ್ರಿಯಂಬಕಪುರ, ಹನುಮಂತ ರಾಯನಹುಂಡಿ ಮತ್ತು ಬಾಚಳ್ಳಿಗಳಲ್ಲಿ ದೊರೆಯುತ್ತದೆ. ಈ ಶಿಲೆಯು ಪೂರ್ವಘಟ್ಟಗಳಲ್ಲಿ ಕಾಣಸುವ ಖಾಂಡಲೈಟ್ ಶಿಲೆಗಳಿಗೆ ಸಮವೆಂದು ಪರಿಗಣಿಸಲಾಗಿದೆ. ಆದುದರಿಂದ ಪಶ್ಚಿಮ ಮತ್ತು ಪೂರ್ವಘಟ್ಟಗಳ ಸಮತೋಲನವು ಸಾಧ್ಯವಾಗಿದೆ.

ಡಾಲರೈಟ್ ಡೈಕುಗಳು : ಕರಿಕಲ್ಲಿನ ಒಡ್ಡುಗಳು, ಇವು ಭೂಮಿಯ ಬಹು ಆಳದಿಂದ 10ರಿಂದ 20 ಕಿ.ಮೀ. ಗೋಡೆಯಂತೆ ಮೇಲೆ ಬಂದಿರುತ್ತದೆ. ಇದನ್ನು ಬ್ಲ್ಯಾಕ್ ಗ್ರಾನೈಟ್ ಎಂದು ಕರೆಯುವರು (ಕಪ್ಪುಶಿಲೆ). ಈ ಕಲ್ಲಿನ ಗಣಿಯನ್ನು ಮಂಚೇನಹಳ್ಳಿ, ಬರಗಿ, ಶೀಲವಂತನಪುರ, ಬೊಮ್ಮನಹಳ್ಳಿ ಮತ್ತು ತೆರಕಣಾಂಬಿಯಲ್ಲಿ ಕಾಣಬಹುದು.

ಕಣಶಿಲೆ ಮತ್ತು ಪಟ್ಟಶಿಲೆ : ಇವು ಸಾಧಾರಣವಾಗಿ ಗುಂಡ್ಲುಪೇಟೆಯ ಎಲ್ಲ ಸ್ಥಳಗಳಲ್ಲಿಯೂ ದೊರೆಯುವ ಶಿಲೆ. ಈ ಖನಿಜವು ಬೇಗೂರಿಗೆ ಸಮೀಪವಿರುವ ಅರೇಪುರ, ಹಿರೀಕಾಟಿ, ಕಂದೇಗಾಲ, ಹಂಗಳಗಳಲ್ಲಿ ದೊರೆಯುತ್ತದೆ.

ನೀರಾವರಿ : 2004-05ನೆಯ ಸಾಲಿನ ಜನಗಣತಿಯ ಪ್ರಕಾರ ಜಿಲ್ಲೆಯ 6,419 ಹೆಕ್ಟೇರ್ ಪ್ರದೇಶ ಕಾಲುವೆಗಳಿಂದಲೂ 4,679 ಹೆಕ್ಟೇರ್ ಪ್ರದೇಶ ಕೆರೆಗಳಿಂದಲೂ 3,430 ಹೆಕ್ಟೇರ್ ಪ್ರದೇಶ ತೆರೆದ ಬಾವಿಗಳಿಂದಲೂ 36,572 ಹೆಕ್ಟೇರ್ ಪ್ರದೇಶ ಕೊಳವೆ ಬಾವಿಗಳಿಂದಲೂ ಹಾಗೂ 800 ಹೆಕ್ಟೇರ್ ಪ್ರದೇಶ ಏತನೀರಾವರಿಯಿಂದಲೂ ಕೂಡಿದೆ.

ಚಾಮರಾಜನಗರ ಗಡಿ ಮತ್ತು ಒಳಭಾಗದಲ್ಲಿ ಸಾಧಾರಣ ಪ್ರಮಾಣದ ನದಿಗಳು ಮತ್ತು ಸಣ್ಣ ಝರಿಗಳು ಹರಿಯುತ್ತಿವೆ. ಅವುಗಳಲ್ಲಿ ಕಾವೇರಿ, ಕಬಿನಿ, ಸುವರ್ಣಾವತಿ, ಚಿಕ್ಕಹೊಳೆ, ಗುಂಡಲ್ ಮತ್ತು ಮಾಯಾರ್‌ನದಿಗಳು ಪ್ರಮುಖವಾದವು. ಅವುಗಳಲ್ಲಿ ಕಾವೇರಿ ನದಿಯು ಕೊಡಗಿನ ತಲಕಾವೇರಿಯಲ್ಲಿ ಉಗಮಹೊಂದಿ ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಮೂಲಕ ಹರಿದು ತಲಕಾಡಿನ ಸಮೀಪ ಚಾಮರಾಜನಗರ ಗಡಿಯನ್ನು ಪ್ರವೇಶಿಸುತ್ತದೆ. ಜಿಲ್ಲಾ ಗಡಿಯ ಬಹುಭಾಗವನ್ನು ನಿರ್ಧರಿಸುವಲ್ಲಿ ಇದರ ಪಾತ್ರ ಪ್ರಮುಖವಾದುದು. ಇದು ಮಂಡ್ಯ-ಚಾಮರಾಜನಗರ, ಬೆಂಗಳೂರು ಗ್ರಾಮಾಂತರ - ಚಾಮರಾಜನಗರ ಗಡಿಯಲ್ಲಿ ಹರಿದು ಮುಂದೆ ಚಾಮರಾಜನಗರ (ಕರ್ನಾಟಕ), ಸೇಲಂ (ತಮಿಳುನಾಡು) ಜಿಲ್ಲೆಗಳ ಗಡಿಯಲ್ಲಿ ಹರಿಯುತ್ತದೆ. ಹಾಗಾಗಿ ಜಿಲ್ಲೆಯ ಈಶಾನ್ಯ ಮತ್ತು ಪೂರ್ವ ಗಡಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ. ಈ ನದಿಯು ಜಿಲ್ಲೆಯ ಗಡಿಯಲ್ಲಿ ಸುಮಾರು 110 ಕಿ.ಮೀ. ದೂರ ಹರಿಯುತ್ತದೆ.

ಕಬಿನಿ ನದಿ ಕಾವೇರಿನದಿಯ ಉಪನದಿ. ಇದು ಕೇರಳ ರಾಜ್ಯದ ವೈನಾಡ್ ಸರಣಿಯಲ್ಲಿ ಸಮುದ್ರ ಮಟ್ಟದಿಂದ ಸುಮಾರು 2,140 ಮೀ ಎತ್ತರದಲ್ಲಿ ಉಗಮ ಹೊಂದುತ್ತದೆ. ಇದು ಕೇರಳರಾಜ್ಯದ ಕಲ್‌ಪೆಟ ಮತ್ತು ಕರ್ನಾಟಕ ರಾಜ್ಯದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಗಡಿಯಲ್ಲಿ ಸುಮಾರು 12 ಕಿ.ಮೀ. ದೂರ ಹರಿದು ಅನಂತರ ಪೂರ್ವಕ್ಕೆ ತಿರುಗುತ್ತದೆ. ಅಲ್ಲಿ ನುಗು ಮತ್ತು ಗುಂಡಲ್ ನದಿಗಳು ಇದಕ್ಕೆ ಸೇರುತ್ತವೆ. ಮೈಸೂರು ಜಿಲ್ಲೆಯ ನಂಜನಗೂಡಿನ ಮೂಲಕ ಹರಿದು ಟಿ. ನರಸೀಪುರದ ಬಳಿ ಕಾವೇರಿ ನದಿಯಲ್ಲಿ ಸಂಗಮಿಸುತ್ತವೆ.

ಗುಂಡಲ್‌ನದಿ ಅಥ್‌ವಾ ಕೌಂಡಿನ್ಯ ಎಂದು ಕರೆಯುವ ಗುಂಡ್ಲುಪೇಟೆ ತಾಲೂಕಿನ ಗೋಪಾಲಸ್ವಾಮಿ ಬೆಟ್ಟದಲ್ಲಿ ಉಗಮ ಹೊಂದುವ ಈ ನದಿಯನ್ನು ಕೌಂಡಿನ್ಯ ನದಿ ಎಂತಲೂ ಕರೆಯುತ್ತಾರೆ. ಇದು ಕಬಿನಿ ನದಿಯ ಉಪನದಿಗಳಲ್ಲೊಂದಾಗಿದ್ದು ನಂಜನಗೂಡಿನ ಸಮೀಪ ಕಬಿನಿ ನದಿಯನ್ನು ಸೇರುತ್ತದೆ. ಪ್ರಸ್ತುತ ಈ ನದಿ ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ.

ಸುವರ್ಣವತಿ ಅಥವಾ ಹೊನ್ನ ಹೊಳೆ ನದಿಯು ಜಿಲ್ಲೆಯ ಆಗ್ನೇಯ ಭಾಗದ ಬೆಟ್ಟಗುಡ್ಡಕ್ಕೆ ಸೇರಿದ ಗಜ್ಜಲಗಟ್ಟೆ ಕಂದರದ ಸಮೀಪ ಉಗಮ ಹೊಂದುತ್ತದೆ. ಪ್ರಾರಂಭದಲ್ಲಿ ಇದು ನಿರೆದುರ್ಗಿ ಹಳ್ಳಿ ಮತ್ತು ಅರೈಕದಿಹಳ್ಳ ಎಂಬ ಎರಡು ಜಲಮೂಲಗಳನ್ನು ಹೊಂದಿದ್ದು, ಇವೆರಡು ಬೂದಿಪಡಗದ ಬಳಿ ಸಂಗಮಗೊಂಡು ಅನಂತರ ಸುವರ್ಣಾವತಿಯಾಗಿ ಹರಿಯುತ್ತದೆ. ಇದು ಉತ್ತರಕ್ಕೆ ತಿರುಗಿ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳ ಮೂಲಕ ಹರಿಯುವುದು. ಇದರ ಜಲಾನಯನ ಪ್ರದೇಶ 1787 ಚ.ಕಿ.ಮೀಟರ್‌ಗಳು ಇದು ಜಿಲ್ಲೆಯಲ್ಲಿ 888 ಕಿ.ಮೀ. ಹರಿಯುವುದು. ಸುವರ್ಣಾವತಿ ತಲಕಾಡಿನ ಸಮೀಪವಿರುವ ಕಲ್ಲೂರು ಬಳಿ ಕಾವೇರಿ ನದಿಯನ್ನು ಸೇರುವುದು. ಸುವರ್ಣಾವತಿ ನದಿಗೆ ಅಟ್ಟುಗೂಳಿಪುರದ ಬಳಿ ಸುಂದರ ಅಣೆಕಟ್ಟೆಯೊಂದನ್ನು ನಿರ್ಮಿಸಲಾಗಿದೆ. ಇದನ್ನು ಸುವರ್ಣವತಿ ಜಲಾಶಯವೆಂದು ಕರೆಯುತ್ತಾರೆ. ಪ್ರಮುಖ ಉಪನದಿಯಾದ ಚಿಕ್ಕಹೊಳೆಗೆ ಚೆಕ್‌ಪೋಸ್ಟ್ ಬಳಿ ಚಿಕ್ಕಹೊಳೆ ಜಲಾಶಯವೆಂಬ ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ.

ಮಾಯಾರ್ ನದಿಯು ತಮಿಳುನಾಡಿನ ಉದಕ ಮಂಡಲಂ ಮತ್ತು ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು ಉತ್ತರ ಗಡಿಯಲ್ಲಿ ಸುಮಾರು 22 ಕಿ.ಮೀ. ದೂರ ಹರಿಯುತ್ತದೆ. ಈ ನದಿ ನಿರ್ಮಿಸಿರುವ ಮಾಯರ್‌ಡಿಚ್ ಕಂದಕವು ನೀಲಗಿರಿ ಅಭಯಾರಣ್ಯ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಗಡಿಯಾಗಿದ್ದು, ರಮಣೀಯವಾದ ಸ್ಥಳವಾಗಿದೆ.

ಮೇಲ್ಕಂಡ ನದಿಗಳು ಜಿಲ್ಲೆಯ ಗಡಿರೇಖೆಯನ್ನು ನಿರ್ಮಿಸುವಲ್ಲಿ ಸಹಕಾರಿಯಾಗಿವೆ ಹೊರತು ಜಿಲ್ಲೆಯಾದ್ಯಂತ ಯಾವುದೇ ನದಿ ಸದಾಕಾಲ ಹರಿಯುವುದಿಲ್ಲ. ಇದು ಜಿಲ್ಲೆಯ ಅಭಿವೃದ್ಧಿಯ ಮೇಲೆ ಅಪಾರ ಅನಾನುಕೂಲವನ್ನುಂಟು ಮಾಡಿದೆ. ಜಿಲ್ಲೆಯು ಸಾಮಾನ್ಯವಾಗಿ ಈಶಾನ್ಯದ ಕಡೆಗೆ ಇಳಿಜಾರಾಗಿದ್ದು ಕಬಿನಿ ಎರಡನೇ ಹಂತ ಪ್ರಾರಂಭವಾದಲ್ಲಿ ಕಾಲುವೆಗಳ ಮೂಲಕ ಈ ಜಿಲ್ಲೆಯು ಬಹುಪಾಲು ನೀರಾವರಿಗೆ ಒಳಪಡುತ್ತದೆ.

ಚಾಮರಾಜನಗರ ಜಿಲ್ಲೆಯು ಕೃಷಿಯಲ್ಲಿ ವೈವಿಧ್ಯವಿದೆ. ಈ ಜಿಲ್ಲೆಯಲ್ಲಿ ಅತಿ ಹೆಚ್ಚು ನೀರಾವರಿ ಸೌಲಭ್ಯವಿಲ್ಲದಿದ್ದರೂ ಚಾಮರಾಜನಗರ ಹಾಗೂ ಕೊಳ್ಳೆಗಾಲ, ಯಳಂದೂರಿನ ಪ್ರದೇಶಗಳಲ್ಲಿ ಬತ್ತವನ್ನು ಬೆಳೆಯುತ್ತಾರೆ. ಸುಮಾರು 19701 ಕ್ವಿಂಟಾಲ್‌ನಷ್ಟು ಬತ್ತವನ್ನು ಬೆಳೆಯುತ್ತಿರುವುದು ಕಂಡುಬರುತ್ತದೆ. ಅದರಲ್ಲಿ ಚಾಮರಾಜನಗರವು 2760 ಕ್ವಿಂಟಾಲ್, ಕೊಳ್ಳೆಗಾಲದಲ್ಲಿ 10886 ಕ್ವಿಂಟಾಲ್, ಯಳಂದೂರಿನಲ್ಲಿ 6042 ಕ್ವಿಂಟಲ್, ಆದರೆ ಗಂಡ್ಲುಪೇಟೆಯಲ್ಲಿ ಮಳೆಯಾಶ್ರಿತ ಭೂಪ್ರದೇಶವಾದ್ದರಿಂದ ಕೊಳವೆ ಬಾವಿಯ ಆಶ್ರಯದಿಂದ ಬತ್ತವನ್ನು ಬೆಳೆಯುವುದರಿಂದ 13 ಕ್ವಿಂಟಾಲ್ ಮಾತ್ರ ಬತ್ತವನ್ನು ಬೆಳೆಯುತ್ತಾರೆ.

ರಾಗಿ, ಜೋಳ, ಸಜ್ಜೆ, ಮುಸುಕಿನ ಜೋಳ ಕೂಡ ಇಲ್ಲಿ ಬೆಳೆಯುವ ಬೆಳೆಗಳಲ್ಲಿ ಮುಖ್ಯವಾಗಿವೆ. ಈ ಧಾನ್ಯಗಳನ್ನು ನಾಲ್ಕು ತಾಲ್ಲೂಕುಗಳಲ್ಲಿ

ಬೆಳೆಯುವರು. ಇವು ಮಳೆಯಾಶ್ರಿತ ಬೆಳೆಗಳಾದುದರಿಂದ ಹೆಚ್ಚು ರೈತರು ಈ ಬೆಳೆಯನ್ನೆ ಅವಲಂಬಿಸಿರುವುದು ಕಂಡುಬರುತ್ತದೆ. ನಾಲ್ಕು ತಾಲ್ಲೂಕುಗಳಲ್ಲಿ ಸುಮಾರು 19011 ಕ್ವಿಂಟಾಲ್ ರಾಗಿ ಬೆಳೆಯುವರೆಂದು ಅಂದಾಜು ಮಾಡಲಾಗಿದೆ. 2009-10 ಮತ್ತು 2011-12ರ ಮಾಹಿತಿಯನ್ನು ಗಮನಿಸಿದಾಗ ಹತ್ತು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿನ ನೀರಾವರಿ ಸೌಕರ್ಯದ ಅಂಶ ತಿಳಿಯುತ್ತದೆ. 2009ರಲ್ಲಿ ಕೆರೆ, ಕೊಳ, ಹೊಂಡಗಳಿಂದ ಶೇ 38ರಷ್ಟು ನದಿಗಳು, ಕಾಲುವೆಗಳು ಶೇ 33, ಚಿಲುಮೆ ಶೇ 11ರಷ್ಟು ಕೊಳಾಯಿ ಶೇ 46.74, ಕೈಪಂಪು ಶೇ 40.39, ಕೊಳವೆ ಬಾವಿ ಶೇ 6.02, ಬಾವಿ ಶೇ 5.8ರಷ್ಟು ನೀರಿನ ಹಂಚಿಕೆಯಾಗಿದೆ. ಅದರಂತೆ 2011-12ರ ಅಂಕಿ ಅಂಶವನ್ನು ಗಮನಿಸಿದಾಗ ಕೊಳವೆ ಬಾವಿಗಳಿಂದ ನಿವ್ವಳ ನೀರಾವರಿ 46060 ಹೆ.ವಿ., ಏತ ನೀರಾವರಿಯಿಂದ 528 ಹೆ.ವಿ., ಕಾಲುವೆಗಳಿಂದ 13902 ಹೆ.ವಿ., ಕೆರೆಗಳಿಂದ 8165 ಹೆ.ವಿ., ಬಾವಿಗಳಿಂದ 4699 ಹೆ.ವಿ. ಹೊಂದಿದೆ. ಇದರಿಂದ ಜಿಲ್ಲೆಯಲ್ಲಿ ನೀರಾವರಿಗಾಗಿ ಕೃಷಿಕರು ಬಾವಿ, ಅಂತರ್ಜಲವನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಜೊತೆಯಲ್ಲಿ ಕೆರೆಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕಂಡುಬರುತ್ತದೆ. ಈ ಜಿಲ್ಲೆಯ ರೈತರು ದೇಶೀ ನೀರಾವರಿ ಪದ್ಧತಿಯನ್ನು ಅನುಸರಿಸುತ್ತಿದ್ದರು.

ದೇಶಿ ನೀರಾವರಿ ಪದ್ಧತಿ : ಏತ : ಬಾವಿಯಿಂದ ನೀರನ್ನು ಎಳೆದುಕೊಂಡು ಅದನ್ನು ತೋಟಕ್ಕೆ ಹಾಕುವುದನ್ನು ಏತ ನೀರಾವರಿ ಪದ್ಧತಿ ಎನ್ನುವರು. ಇದು ಕಾಲಕ್ರಮೇಣ ಕಡಿಮೆಯಾಗುತ್ತಿದೆ.

ಹನಿ ನೀರಾವರಿ : ಇತ್ತೀಚಿನ ದಿನಗಳಲ್ಲಿ ರೈತರು ಕೃಷಿಯಲ್ಲಿ ಈ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ನೀರು ಮರಗಳ/ಗಿಡಗಳ ಬೇರಿಗೆ ಹನಿಹನಿಯಾಗಿ ತೊಟ್ಟಿಕ್ಕುವ ಹಾಗೆ ಗಿಡದ/ಮರದ ಬೇರಿಗೆ ಒಂದು ಕಪ್ಪು ಪೈಪನ್ನು ಕಟ್ಟಿರುತ್ತಾರೆ. ಅದು ಅನುಕ್ರಮವಾಗಿ ಒಂದೊಂದು ಗಿಡಕ್ಕೂ/ಮರಕ್ಕೂ ಜೋಡಣೆಯಲ್ಲಿರುತ್ತದೆ. ಅದಕ್ಕೆ ಒಂದು ಪೈಪಿನಿಂದ ನೀರನ್ನು ಬಿಟ್ಟಾಗ ಅದು ಸುತ್ತುವರಿದಿರುವ ಎಲ್ಲಾ ಮರಗಳಿಗೂ ಹನಿಹನಿಯಾಗಿ ತೊಟ್ಟಿಕ್ಕುವಂತೆ ರಂಧ್ರವನ್ನು ಕೊರೆದಿರುತ್ತಾರೆ. ಈ ಪದ್ಧತಿ ಪ್ರಸ್ತುತದಲ್ಲೂ ಇದೆ.

ಅಡ್ಡ ನೀರು : ಕಾಲುವೆಯಿಂದ / ಕೊಳದಿಂದ / ಮಳೆ ನೀರು ಹರಿಯುವಾಗ ಅದಕ್ಕೆ ಮಣ್ಣಿನ ದಿನ್ನೆಯಿಂದ ಅಡ್ಡಕಟ್ಟಿ ಅದನ್ನು ತಮ್ಮ ಜಮೀನಿಗೆ ಹಾಯಿಸಿಕೊಂಡು ಫಸಲನ್ನು ಬೆಳೆಯುತ್ತಾರೆ. ಜಿಲ್ಲೆಯಲ್ಲಿ ಇದು ಯಳಂದೂರು, ಕೊಳ್ಳೆಗಾಲ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ.

ಬಾವಿ ನೀರಾವರಿ : ನೂರು / ಇನ್ನೂರು / ಅದಕ್ಕಿಂತ ಹೆಚ್ಚು ಅಡಿ ಬಾವಿಯನ್ನು ತೋಡಿಸಿ ಅದರೊಳಗೆ ಅಂತರ್ಜಲವನ್ನು ತೆಗೆಸಿ ಯಂತ್ರಗಳಿಂದ ಮೇಲೆತ್ತಿಕೊಂಡು ನೀರನ್ನು ಹಾಯಿಸಿ ಫಸಲನ್ನು ಬೆಳೆಯುವ ಪದ್ಧತಿಯನ್ನು ಬಾವಿ ನೀರಾವರಿ ವ್ಯವಸ್ಥೆ ಎನ್ನುವರು. ಇದು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಅಂತರ್ಜಲ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಇದು ಕೂಡ ಕ್ಷೀಣಿಸುತ್ತಿದೆ.

ಸಂಬಳದ ನೀರು : ಒಂದು ಉದ್ದವಾದ ತಗಡನ್ನು ನೀರು ನಿಲ್ಲುವ ಹಾಗೆ ಮಾಡಿಕೊಂಡು ಅದರ ಎರಡು ಕಡೆ ತುದಿಯಲ್ಲಿ ಬಿಗಿಯಾಗಿ ಹಗ್ಗವನ್ನು ಕಟ್ಟಿ ಅದನ್ನು ಎರಡು ಕಡೆಯಲ್ಲಿ ಒಬ್ಬೊಬ್ಬರು ಹಿಡಿದುಕೊಂಡು ಅಲ್ಲಿರುವ ನೀರನ್ನು ಹೊಲಕ್ಕೆ ಹಾಕುವ ಪದ್ಧತಿಯು ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಇದೂ ಕಣ್ಮರೆಯಾಗಿದೆ.

ಬೆಳೆಗಳು : ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು, ಋತುವಿನಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ. ಪ್ರಮುಖವಾಗಿ ಆಹಾರ ಧಾನ್ಯಗಳಾದ ಬತ್ತ, ಜೋಳ, ರಾಗಿ, ಸಜ್ಜೆ, ನವಣೆ ಮುಂತಾದ ಧಾನ್ಯಗಳನ್ನು ಬೆಳೆಯುತ್ತಾರೆ. ದ್ವಿದಳ ಧಾನ್ಯಗಳಾದ ತೊಗರಿ, ಕಡಲೆ, ಹುರುಳಿ, ಉದ್ದು, ಹೆಸರು, ಅಲಸಂದೆ, ಅವರೆ ಹಾಗೂ ತರಕಾರಿ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳಲ್ಲಿ ದ್ವಿದಳ ಧಾನ್ಯಗಳನ್ನು ಹಿಂಗಾರು ಮತ್ತು ಮುಂಗಾರಿನ ಅವಧಿಯಲ್ಲಿ ಹೆಚ್ಚಾಗಿ ಬೆಳೆಯುವರು. ಬೇಸಗೆಯಲ್ಲಿ ಅಷ್ಟೊಂದು ಕೃಷಿಗೆ ಯೋಗ್ಯವಾದ ವಾತಾವರಣ ಇಲ್ಲದಿರುವುದರಿಂದ ಆ ಸಮಯದಲ್ಲಿ ಬೆಳವಣಿಗೆ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಜಿಲ್ಲೆಯಲ್ಲಿ ಕಬ್ಬು, ಬತ್ತ, ರೇಷ್ಮೆ ಬೆಳೆ ವಾಣಿಜ್ಯ ಬೆಳೆಗಳಾಗಿವೆ.

ಆಹಾರ ಮತ್ತು ಆಹಾರೇತರ ಬೆಳೆಗಳು : ಜಿಲ್ಲೆಯಲ್ಲಿ 2010-11ನೇ ಸಾಲಿನಲ್ಲಿ ಬತ್ತದ ಬೆಳೆ ಇದ್ದರೆ 2012-13ನೇ ಸಾಲಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಇಳುವರಿ ಕಡಿಮೆಯಾಗಿರುವುದನ್ನು ಕಾಣಬಹುದು. ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ರೈತರು ಮಳೆಯನ್ನೆ ಆಶ್ರಯಿಸಿರುವುದರಿಂದ ಹಾಗೂ ಆಳುಗಳ ಕೊರತೆಯಿಂದ ಮತ್ತು ಯೋಗ್ಯವಾದ ನೀರಾವರಿಯ ಸೌಲಭ್ಯ ಇಲ್ಲದಿರುವುದರಿಂದ ಬತ್ತವನ್ನು ಬೆಳೆಯುವುದರ ಬಗ್ಗೆ ಅಷ್ಟೊಂದು ಒಲವು ತೋರಿಸುತ್ತಿಲ್ಲ ಎಂದು ಹೇಳಬಹುದು. ಇದರ ಬದಲು ಅಡಕೆ, ತೆಂಗು, ಬಾಳೆ, ಮಾವು ಮುಂತಾದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತದೆ.

ಜಿಲ್ಲೆಯಲ್ಲಿ ಇದರ ಅಂಕಿ ಅಂಶಗಳನ್ನು ಗಮನಿಸಿದಾಗ 2010-11ನೇ ಸಾಲಿನ ಮುಂಗಾರಿನಲ್ಲಿ 87550 ಹೆ. ಗುರಿಯನ್ನು ಹೊಂದಿದ್ದು 85593 ಹೆ. ಸಾಧನೆಯನ್ನು ಮಾಡಿದೆ ಈ ಅವಧಿಯಲ್ಲಿ ಕೃಷಿಕರ ಕೊರತೆ ಹಾಗೂ ಮಳೆಯ ಕೊರತೆಯಿಂದ ಸಾಧನೆ ಇಳಿಮುಖವಾಯಿತು. ಇದನ್ನು ಒಳಗೊಂಡಂತೆ ಅಂಕಿ ಅಂಶಗಳನ್ನು ಗಮನಿಸಿದಾಗ ಏಕದಳ ಧಾನ್ಯಗಳು : 2010-11ನೇ ಮುಂಗಾರಿನಲ್ಲಿ 85593 ಹೆ. ಹಿಂಗಾರಿನಲ್ಲಿ 1216 ಹೆ. ಬೇಸಗೆಯಲ್ಲಿ 3674 ಹೆ. ಇದ್ದರೆ 2012-13ರಲ್ಲಿ ಮುಂಗಾರಿನ ಅವಧಿಯಲ್ಲಿ 87436ಹೆ. ಹಿಂಗಾರಿನಲ್ಲಿ 19813 ಹೆ. ಬೇಸಗೆಯಲ್ಲಿ 2761 ಹೆ. ಇದೆ. ಇದನ್ನು ಗಮನಿಸಿದಾಗ ಬೆಳೆಗಳ ಪ್ರಮಾಣ ಮುಂಗಾರು ಹಿಂಗಾರಿನಲ್ಲಿ ಹೆಚ್ಚಾಗಿದ್ದು ಬೇಸಿಗೆಯಲ್ಲಿ ಇಳಿಮುಖವಾಗಿರುವುದನ್ನು ಕಾಣಬಹುದು.

ದ್ವಿದಳ ಧಾನ್ಯಗಳು : 2010-11 ಮುಂಗಾರಿನಲ್ಲಿ 35115 ಹೆ. ಹಿಂಗಾರಿನಲ್ಲಿ 11079 ಹೆ. ಬೇಸಗೆಯಲ್ಲಿ ಯಾವುದೇ ಬೆಳವಣಿಗೆ ಕಂಡುಬಂದಿಲ್ಲ. ಇದನ್ನು ಗಮನಿಸಿದಾಗ 24036 ಹೆ.ರಷ್ಟು ಕಡಿಮೆಯಾಗಿದೆ. 2012-13ರ ಮುಂಗಾರಿನಲ್ಲಿ 20328 ಹೆ. ಹಿಂಗಾರಿನಲ್ಲಿ 40886.

ಆಹಾರ ಧಾನ್ಯಗಳು : 2010-11ರ ಮುಂಗಾರಿನಲ್ಲಿ 12070 ಹೆ. ಹಿಂಗಾರಿನಲ್ಲಿ 12295 ಹೆ. ಬೇಸಗೆಯಲ್ಲಿ 3674 ಹೆ. ಇದ್ದರೆ 2012-13 ಮುಂಗಾರು 93715 ಹೆ. ಹಿಂಗಾರಿನಲ್ಲಿ 60699 ಹೆ. ಬೇಸಗೆಯಲ್ಲಿ 2761 ಹೆ.

ಎಣ್ಣೆ ಕಾಳುಗಳು : 2010-11ರ ಮುಂಗಾರಿನಲ್ಲಿ 30990 ಹೆ. ಹಿಂಗಾರಿನಲ್ಲಿ 403 ಹೆ. ಬೇಸಗೆ 110 ಹೆ. 2012-13ನೇ ಮುಂಗಾರು ಬೆಳೆ 19446 ಹೆ. ಹಿಂಗಾರಿನಲ್ಲಿ 816 ಹೆ. ಬೇಸಗೆಯಲ್ಲಿ 85 ಹೆ.

ತರಕಾರಿ ಬೆಳೆಗಳು 2010-11ರ ಮುಂಗಾರಿನಲ್ಲಿ 15404.20 ಹೆ. ಇದ್ದು 2012ರಲ್ಲಿ 12,401.50 ಹೆ. ಇದ್ದು, ವರ್ಷದಲ್ಲಿ ಒಂದು ಕಡಿಮೆಯಾಗಿರುವುದನ್ನು ಕಾಣಬಹುದು.

ವಾಣಿಜ್ಯ ಬೆಳೆಗಳು : 2010-11ರ ಮುಂಗಾರಿನಲ್ಲಿ 8808 ಹೆ. ಹಿಂಗಾರಿನಲ್ಲಿ 2493 ಹೆ. ಬೇಸಗೆಯ ಹಂಗಾಮಿನಲ್ಲಿ 2013 ಹೆ. ಇದೆ. 2012-13ರಲ್ಲಿ ಮುಂಗಾರು 13721 ಹೆ. ಹಿಂಗಾರು 2479 ಹೆ. ಬೇಸಗೆ 1783 ಹೆ.

ಒಟ್ಟಿನಲ್ಲಿ ಆಹಾರ ಧಾನ್ಯಗಳು ಬೆಳೆಗಳ ವಿವರಣೆಯನ್ನು ಗಮನಿಸಿದಾಗ ವರ್ಷದಿಂದ ವರ್ಷಕ್ಕೆ ಇಳುವರಿ ಕಡಿಮೆಯಾಗುತ್ತಿರು ವುದನ್ನು ಕಾಣಬಹುದು. ಆದರೂ ಕೆಲವೊಂದು ಬೆಳೆಗಳು/ಧಾನ್ಯಗಳು ಉತ್ತಮವಾದ ರೀತಿಯಲ್ಲಿ ಬೆಳೆವಣಿಗೆ ಹೊಂದಿವೆ. ಅತಿ ಹೆಚ್ಚು ಇಳಿಮುಖವಾಗುವುದಕ್ಕೆ ಕಾರಣ ಅವುಗಳ ನಿರ್ವಹಣೆ ಹಾಗೂ ವ್ಯವಸಾಯದ ಭದ್ರತೆಯಲ್ಲಿ ಕೊರತೆ ಎಂದೂ ಹೇಳಬಹುದು. ಚಾಮರಾಜನಗರ ತಾಲ್ಲೂಕಿನಲ್ಲಿ ನಿವ್ವಳ ಬಿತ್ತನೆ ಶೇ. 79ರಷ್ಟಿದ್ದು ಗುಂಡ್ಲುಪೇಟೆ ಶೇ 93, ಕೊಳ್ಳೇಗಾಲ ಶೇ. 59 ಹಾಗೂ ಯಳಂದೂರು ಶೇ. 64ರಷ್ಟು ಬಿತ್ತನೆಯಾಗಿರುತ್ತದೆ. ಜಿಲ್ಲೆಯಲ್ಲಿ ಯಾವುದೇ ರೀತಿಯಲ್ಲಿ ದೊಡ್ಡ ಪ್ರಮಾಣದ ನೀರಿನ ವ್ಯವಸ್ಥೆ ಇಲ್ಲದಿರುವುರಿಂದ ಋತುಮಾನಕ್ಕೆ ತಕ್ಕಂತೆ ಮಳೆಯಾಶ್ರಿತದ ಬೆಳೆಯನ್ನು ಬೆಳೆಯುವುದು ಇಲ್ಲಿಯ ವಿಷಾದಕರ ಸಂಗತಿಯಾಗಿದೆ.

ಕೃಷಿ ಉತ್ಪಾದನೆ : ಜಿಲ್ಲೆಯಲ್ಲಿ 2011-12ರಲ್ಲಿ 65721 ಹೆ. ಪ್ರದೇಶದಲ್ಲಿ 156424 ಹೆ. ಉತ್ಪಾದನೆಯಾಗಿದ್ದು 21293 ಹೆ. ಪ್ರದೇಶದಲ್ಲಿ ಸರಾಸರಿ ಇಳುವರಿ ಅದೇ ರೀತಿ 2012-13ರಲ್ಲಿ 63718 ಹೆ. ಪ್ರದೇಶ ಭೂಮಿಯಲ್ಲಿ 18734 ಟನ್ ಉತ್ಪಾದನೆ ಸಿಗುತ್ತಿತ್ತು. 3210 ಹೆ.ಗೆ. ಸರಾಸರಿ ಇಳುವರಿ ದೊರೆಯುತ್ತಿತ್ತು.

ತೋಟದ ಬೆಳೆಗಳು : ಜಿಲ್ಲೆಯಲ್ಲಿ ಅಡಕೆ, ತೆಂಗು, ವೀಳ್ಯೆದೆಲೆ, ತಾಳೆಬೆಳೆಗಳನ್ನು ಬೆಳೆಯಲಾಗುತ್ತಿತ್ತು. ಕೊಳ್ಳೆಗಾಲ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಅಡಕೆ, ತೆಂಗು ಬೆಳೆದರೆ ಗುಂಡ್ಲುಪೇಟೆ ಹಾಗೂ ಚಾಮರಾಜನಗರ ತಾಲ್ಲೂಕುಗಳಲ್ಲಿ ಸಾಧಾರಣವಾಗಿ ಬೆಳೆಯುತ್ತಾರೆ. 2007-08 ಮತ್ತು 2011-12 ಅಂಕಿ ಅಂಶಗಳನ್ನು ಗಮನಿಸಿದಾಗ ಅದರಲ್ಲಿಯ ವ್ಯತ್ಯಾಸ ಹೀಗಿದೆ.

ತೆಂಗು 2007-08ರಲ್ಲಿ 8287 ಹೆ.ವಿ. 2011-12ರಲ್ಲಿ 11375 ಹೆ.ವಿ.

ಅಡಕೆ 2007-08ರಲ್ಲಿ 909.00 ಹೆ.ವಿ. 2011-12ರಲ್ಲಿ 342 ಹೆ.ವಿ.

ವೀಳ್ಯೆದೆಲೆ 2007-08ರಲ್ಲಿ 9090 ಹೆ.ವಿ. 2011-12ರಲ್ಲಿ 57.00 ಹೆ.ವಿ.

ಕೊಕೋ 2007-08ರಲ್ಲಿ 12.00 ಹೆ.ವಿ. 2011-12ರಲ್ಲಿ 63.00 ಹೆ.ವಿ.

ತಾಳೆ ಬೆಳೆ 2007-08ರಲ್ಲಿ 348.00 ಹೆ.ವಿ. 2011-12ರಲ್ಲಿ 486.00 ಹೆ.ವಿ.

ಒಟ್ಟಾರೆಯಾಗಿ ಜಿಲ್ಲೆಯಲ್ಲಿ ತೋಟ ಬೆಳೆಗಳು 2007-08ರಲ್ಲಿ 9761.00 ಹೆ.ವಿ ಇದ್ದು 2011-12ರಲ್ಲಿ 12328.00 ಹೆ.ವಿ. ಇರುತ್ತದೆ. ಇದನ್ನು ಗಮನಿಸಿದಾಗ ಬೆಳೆ ಏರಿಕೆಯಲ್ಲಿರುವುದು ತಿಳಿಯುತ್ತದೆ.

ತರಕಾರಿ ಬೆಳೆಗಳು : ಆಲೂಗೆಡ್ಡೆ 2007-08ರಲ್ಲಿ 92.00 ಹೆ.ವಿ. 2011-12ರಲ್ಲಿ 1123.00 ಹೆ.ವಿ

ಟೊಮ್ಯಾಟೊ 2007-08ರಲ್ಲಿ 1865.00 ಹೆ.ವಿ 2011-12ರಲ್ಲಿ 2225.00 ಹೆ.ವಿ

ಬೆಂಡೆಕಾಯಿ 2007-08 ರಲ್ಲಿ 93.50 ಹೆ.ವಿ. 2011-12ರಲ್ಲಿ 111.00 ಹೆ.ವಿ

ಬಟಾಣಿ 2007-08ರಲ್ಲಿ 96.00 ಹೆ.ವಿ. 2011-12ರಲ್ಲಿ 13.00 ಹೆ.ವಿ.

ಮರಗೆಣಸು 2007-08ರಲ್ಲಿ 10.00 ಹೆ.ವಿ. 2011-12ರಲ್ಲಿ 5.00 ಹೆ.ವಿ

ಮೂಲಂಗಿ 2007-08ರಲ್ಲಿ 93.50 ಹೆ.ವಿ. 2011-12ರಲ್ಲಿ 98.00 ಹೆ.ವಿ

ಪಡವಲಕಾಯಿ 2007-08ರಲ್ಲಿ 10.00 ಹೆ.ವಿ. 2011-12ರಲ್ಲಿ 9.00 ಹೆ.ವಿ

ಸೌತೆಕಾಯಿ 2007-08ರಲ್ಲಿ 89.50 ಹೆ.ವಿ. 2011-12ರಲ್ಲಿ 70.00 ಹೆ.ವಿ.

ಇವುಗಳಲ್ಲದೆ ಜಿಲ್ಲೆಯಲ್ಲಿ ನುಗ್ಗೆ, ಹಾಗಲ, ಬೂದುಕುಂಬಳ, ತೊಂಡೆಕಾಯಿ, ಸೊಪ್ಪಿನ ತರಕಾರಿಗಳಾದ ಮೆಂತ್ಯೆಸೊಪ್ಪು ಕರಿಬೇವು, ಗೆಡ್ಡೆ ತರಕಾರಿಗಳಾದ ಗೆಡ್ಡೆ ಕೋಸು, ಹೂಕೋಸುಗಳನ್ನು ಅಲ್ಲಲ್ಲಿ ಬೆಳೆಯುವರು. ಜಿಲ್ಲೆಯಲ್ಲಿ ಒಟ್ಟು 2007-08ರಲ್ಲಿ 16978.90 ಹೆ.ವಿ ಇದ್ದು 2011-12ರಲ್ಲಿ 16137.00 ಹೆ.ವಿ. ಹೊಂದಿದೆ.

ಹೂವಿನ ಬೆಳೆಗಳು : ಕನಕಾಂಬರ 2007-08ರಲ್ಲಿ 35.00 ಹೆ.ವಿ. 2011-12ರಲ್ಲಿ 37 ಹೆ.ವಿ.

ಚೆಂಡುಹೂ - 2007-08ರಲ್ಲಿ 1905 ಹೆ.ವಿ. 2011-12ರಲ್ಲಿ 1040.00 ಹೆ.ವಿ

ಮಲ್ಲಿಗೆ - 2007-08ರಲ್ಲಿ 25.00 ಹೆ.ವಿ. 2011-12ರಲ್ಲಿ 26.00 ಹೆ.ವಿ.

ಸೇವಂತಿಗೆ 2007-08ರಲ್ಲಿ 19.00 ಹೆ.ವಿ. 2011-12ರಲ್ಲಿ 12.00 ಹೆ.ವಿ.

ಗುಲಾಬಿ 2007-08ರಲ್ಲಿ 6.00 2011-12ರಲ್ಲಿ 41.00 ಹೆ.ವಿ

ಒಟ್ಟಾರೆಯಾಗಿ ಜಿಲ್ಲೆಯಲ್ಲಿ 2007-08ರಲ್ಲಿ 2028.00 ಹೆ.ವಿ. ಹೊಂದಿದ್ದು 2011-12ರಲ್ಲಿ 1142.00 ಹೆ.ವಿ ಆಗಿರುತ್ತದೆ.

ಸಂಬಾರು ಬೆಳೆಗಳು : ಮೆಣಸು - 2007-08ರಲ್ಲಿ 7.00 ಹೆ.ವಿ. 2011-12ರಲ್ಲಿ 28.00 ಹೆ.ವಿ

ಏಲಕ್ಕಿ - 2007-08ರಲ್ಲಿ 1.00 ಹೆ.ವಿ. 2011-12ರಲ್ಲಿ 1.00 ಹೆ.ವಿ

ಹುಣಿಸೆ 2007-08ರಲ್ಲಿ 180.00 ಹೆ.ವಿ. 2011-12ರಲ್ಲಿ 142.00 ಹೆ.ವಿ

ಶುಂಠಿ 2007-08ರಲ್ಲಿ 25.00 ಹೆ.ವಿ. 2011-12ರಲ್ಲಿ 79.00 ಹೆ.ವಿ

ಬೆಳ್ಳುಳ್ಳಿ 2007-08ರಲ್ಲಿ 105.ರವರೆಗೆ ಹೆ.ವಿ. 2011-12ರಲ್ಲಿ 70.00 ಹೆ.ವಿ

ಹಸುರು ಮೆಣಸಿನಕಾಯಿ 2007-08ರಲ್ಲಿ 730.00 ಹೆ.ವಿ. 2011-12ರಲ್ಲಿ 1014.00 ಹೆ.ವಿ.

ಒಣಮೆಣಸಿನಕಾಯಿ 2007-08ರಲ್ಲಿ 5.00 ಹೆ.ವಿ. 2011-12ರಲ್ಲಿ ರಾ.ಹೆ.ವಿ.

ಧನಿಯ - 2007-08ರಲ್ಲಿ 306.00 ಹೆ.ವಿ. 2011-12ರಲ್ಲಿ 98.00 ಹೆ.ವಿ.

ವನಿಲ್ಲಾ 2007-08ರಲ್ಲಿ 36.00 ಹೆ.ವಿ. 2011-12ರಲ್ಲಿ 10.50 ಹೆ.ವಿ.

ಸಂಬಾರು ಬೆಳೆಗಳ ಒಟ್ಟು ವಿಸ್ತೀರ್ಣ 2007-08ರಲ್ಲಿ 7496.00 ಹೆ.ವಿ. ಇದ್ದುಅದು 2011-12ರಲ್ಲಿ 12401.50 ಹೆ.ವಿ. ಆಗಿದೆ.

ಹಣ್ಣಿನ ಬೆಳೆಗಳು : ಬಾಳೆ 2007-08ರಲ್ಲಿ 10344 ಹೆ. 2011-12ರಲ್ಲಿ 128890 ಟನ್

ಮಾವು 2007-08ರಲ್ಲಿ 9.40 ಹೆ. 2011-12ರಲ್ಲಿ 6958.00

ನಿಂಬೆ 2007-08 ರಲ್ಲಿ 104 ಹೆ. 2011-12ರಲ್ಲಿ 1286 ಹೆ.ವಿ

ಸೀಬೆ - 2007-08ರಲ್ಲಿ 1638. ಹೆ. 2011-12ರಲ್ಲಿ 1893.80 ಹೆ.ವಿ.

ಸಪೋಟ 2007-08ರಲ್ಲಿ 4320 ಹೆ.ವಿ. 2011-12ರಲ್ಲಿ 4738.50 ಹೆ.ವಿ.

ದಾಳಿಂಬೆ 2007-08ರಲ್ಲಿ 348 ಹೆ. 2011-12ರಲ್ಲಿ 641.00 ಹೆ.ವಿ.

ಪಪ್ಪಾಯ 2007-08ರಲ್ಲಿ 2140 ಹೆ. 2011-12ರಲ್ಲಿ 20620 ಹೆ.ವಿ.

ಹಲಸು, ಚಕೋತ ಹಣ್ಣುಗಳನ್ನು ಅಲ್ಲಲ್ಲಿ ಬೆಳೆಯುತ್ತಾರೆ.

ರೇಷ್ಮೆ ಕೃಷಿ : ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅತ್ಯಂತ ಉತ್ಕೃಷ್ಟವಾದ ಕಸುಬಾಗಿದೆ. ಇಲ್ಲಿ ಶತಮಾನಗಳಿಂದಲೂ ಆರ್ಥಿಕವಾಗಿ ಈ ಕೃಷಿಯನ್ನು ಅವಲಂಬಿಸಿರುವುದನ್ನು ಕಾಣಬಹುದು. ಕಳೆದ ಕೆಲವು ವರ್ಷಗಳಿಂದ ರೋಗಗಳಿಂದ ಹಾಗೂ ರೇಷ್ಮೆಗೂಡಿನ ಬೆಲೆ ಕುಸಿತ ಕಂಡಿರುವುದರಿಂದ ಜಿಲ್ಲೆಯಲ್ಲಿ ಇದರ ಬೆಳೆವಣಿಗೆ ಕುಂಠಿತಗೊಳ್ಳುತ್ತದೆ.

ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ತಂತ್ರಜ್ಞಾನಗಳು ರೋಗ ನಿರೋಧಕ ತಳಿಗಳು ಹಾಗೂ ರೇಷ್ಮೆ ಬೆಲೆ ಪ್ರಬಲತೆಗೊಳ್ಳುತ್ತಿರುವುದರಿಂದ ಆರ್ಥಿಕ ಕಸುಬಾಗಿ ಮತ್ತೆ ತಲೆ ಎತ್ತುತ್ತಿದೆ. ಜಿಲ್ಲೆಯ ಚಾ|| ನಗರ ಮತ್ತು ಕೊಳ್ಳೆಗಾಲದಲ್ಲಿ ಅತಿ ಹೆಚ್ಚು ರೇಷ್ಮೆ ಕೃಷಿ ಬೆಳೆಗಾರರಿದ್ದಾರೆ. ಕೊಳ್ಳೆಗಾಲ ತಾಲ್ಲೂಕಿನ ಮಾಂಬಳ್ಳಿಯಲ್ಲಿ ಇರುವ ಸಿಲ್ಕ್ ತಂತ್ರಜ್ಞಾನ ದೇಶಾದ್ಯಂತ ಪ್ರಸಿದ್ಧಿ ಪಡೆದಿದೆ.

ರೇಷ್ಮೆ ಬೆಳೆಗೆ ಸಂಬಂಧಿಸಿದಂತೆ ಹಿಪ್ಪನೇರಳೆಯನ್ನು ಬೆಳೆಯಲು ಜಿಲ್ಲೆಯ ಜನರು ಮಳೆ ಹಾಗೂ ನೀರಾವರಿ ಅವಲಂಬಿಸಿದ್ದಾರೆ. ಇದರಿಂದ ಗೂಡು ಉತ್ಪಾದನೆ, ಸೀರೆ, ಬಟ್ಟೆಯನ್ನು ತಯಾರಿಸುವುದು ಎಳೆ ಬಿಚ್ಚುವುದನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಕೊಳ್ಳೆಗಾಲ ಮತ್ತು ಚಾಮರಾಜನಗರ ತಾಲ್ಲೂಕುಗಳನ್ನು ಹೊರತುಪಡಿಸಿ ಬೇರೆ ತಾಲೂಕುಗಳಲ್ಲಿ ಈ ಕೃಷಿ ಅಲ್ಪ ಪ್ರಮಾಣದಲ್ಲಿದೆ.

ಸಾಂಪ್ರದಾಯಿಕ ಕೃಷಿ ವಿಧಾನಗಳು : ಜಿಲ್ಲೆಯಲ್ಲಿ ಕೆಲವು ಕಡೆ ಸಾಂಪ್ರದಾಯಿಕ ಕೃಷಿ ಪದ್ಧತಿ ಕೂಡಾ ಬಳಕೆಯಲ್ಲಿದೆ.

ನಾಟಿ / ಏರುಪದ್ಧತಿ : ಒಂದು ಸ್ಥಳದಲ್ಲಿ ಸಮತಟ್ಟಾಗಿ ಮಾಡಿ ಮಣ್ಣನ್ನು ಏರಿಮಾಡಿ ಚೆನ್ನಾಗಿ ಹದ ಮಾಡಿಕೊಂಡು ಅದಕ್ಕೆ ಕೊಟ್ಟಿಗೆ ಗೊಬ್ಬರವನ್ನು ಬೆರಿಸಿ ಬೀಜಗಳನ್ನು ಬಿತ್ತನೆ ಮಾಡಿ ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಚಿಮುಕಿಸಿ, ತೆಂಗಿನ ಗರಿಯಿಂದ ನೆಯ್ದ ಮಟ್ಟಾಲ ಗರಿಯಿಂದ ಮುಚ್ಚುವರು. ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ನೀರನ್ನು ಗರಿಯ ಮೇಲೆ ಚಿಮುಕಿಸುವರು. ಹೀಗೆ ಪೈರು ಒಂದು ಹಂತಕ್ಕೆ ಬರುವವರೆಗೆ ನೀರನ್ನು ಒದಗಿಸಿ ಅನಂತರ ಕಿತ್ತು ನಾಟಿಮಾಡುತ್ತಾರೆ. ಇದರಿಂದ ಉತ್ತಮವಾದ ಇಳುವರಿಯನ್ನು ಪಡೆಯಬಹುದು.

ಅಗೆ ಪದ್ಧತಿ : ಇದು ಯಳಂದೂರು, ಕೊಳ್ಳೆಗಾಲ ತಾಲ್ಲೂಕುಗಳಲ್ಲಿ ವಿರಳವಾಗಿ ಕಂಡುಬರುತ್ತದೆ. ಚಾಮರಾಜನಗರ ಕೆಲವು ಪ್ರದೇಶಗಳಲ್ಲಿ ಮಾತ್ರ ಹೆಚ್ಚಾಗಿ ಬಳಕೆಯಲ್ಲಿದೆ. ಕೆಸರು ಗದ್ದೆಯನ್ನು ಚೆನ್ನಾಗಿ ಉಳುಮೆ ಮಾಡಿ ದನಕರುಗಳಿಂದ ಚೆನ್ನಾಗಿ ತುಳಿಸಿ ಹದಮಾಡಿ ಅಂಟು ಬರುವಂತೆ ಮಾಡಿ ನೀರು ಹಾಯಿಸಿ, ನೀರು ಇರುವಾಗಲೇ ಮೊಳಕೆ ಬಂದಿರುವ ಸಸಿಗಳನ್ನು ನಾಟಿಮಾಡುವುದರಿಂದ ಇಳುವರಿ ಹೆಚ್ಚಾಗುತ್ತದೆ.

ಸಾಲು ಬಿತ್ತುವ ಪದ್ಧತಿ : ನೇಗಿಲಿನಿಂದ ಹದ ಮಾಡಿಕೊಂಡು ಕೃಷಿ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಅನಂತರ ಮಳೆ ಬಂದಾಗ ಭೂಮಿಯಲ್ಲಿ ತೇವಾಂಶ ಇರುವುದನ್ನು ಗಮನಿಸಿ ಮರದ ನೇಗಿಲಿನಿಂದ ಸಾಲುಸಾಲಾಗಿ ಉಳುಮೆ ಮಾಡಿಕೊಂಡು ಹೋಗುವಾಗ ಉಳುಮೆ ಮಾಡುವವರ ಹಿಂದೆಯೇ ಕೈಯಿಂದ ಬಿತ್ತನೆ ಕಾಳುಗಳನ್ನು ತೆಳುವಾಗಿ ಬಿತ್ತುವರು. ಅನಂತರ ಬಳ್ಳು ಹೊಡೆಯುವರು ಈ ಪದ್ಧತಿಯು ಹೆಚ್ಚಾಗಿ ಮಳೆಯಾಶ್ರಿತ ಪ್ರದೇಶದಲ್ಲಿ ಕಂಡುಬರುತ್ತದೆ.

ಇನ್ನೊಂದು ವಿಧಾನವೆಂದರೆ ಕೃಷಿ ಭೂಮಿಯನ್ನು ಉಳುಮೆ ಮಾಡಿಕೊಂಡು ಬಿತ್ತುವ ಬೀಜವನ್ನು ಚೆಲ್ಲುವರು, ಎರಚಿ ಬಳ್ಳು ಹೊಡೆಯುವರು.

ಕೈನಾಟಿ ಪದ್ಧತಿ : ಇದು ಹೆಚ್ಚಾಗಿ ರಾಗಿ, ಬತ್ತದ ಪೈರನ್ನು ಗದ್ದೆಯಲ್ಲಿ ನೆಡುವ ವಿಧಾನವಾಗಿದೆ. ಮೊಳಕೆ ಬಂದಿರುವ ಪೈರುಗಳನ್ನು ಗದ್ದೆಯಲ್ಲಿ ನಾಟಿ ಮಾಡುವರು. ಪೈರುಗಳನ್ನು ಸೊಡಿಕಟ್ಟಿ ಗದ್ದೆಯಲ್ಲಿ ಸಾಲು ಸಾಲಾಗಿ ಅಲ್ಲಲ್ಲಿ ಇಟ್ಟು ನೆಡುತ್ತಾರೆ. ಇದರಿಂದ ಪೈರು ಚೆನ್ನಾಗಿ ಬೆಳೆದು ಅಧಿಕ ಇಳುವರಿ ಕೊಡುತ್ತದೆ.

ಕಳೆ ತೆಗೆಯುವ ವಿಧಾನ : ಯಾವುದೇ ತರಹದ ಬೀಜವನ್ನು/ಧಾನ್ಯಗಳನ್ನು ಬಿತ್ತನೆ ಮಾಡಿದ ಮೇಲೆ ಅವುಗಳ ಪಕ್ಕದಲ್ಲಿ ಕಳೆ ಬೆಳೆದುಕೊಂಡು ಬಿತ್ತನೆ ಮಾಡಿದ ಪೈರುಗಳ ಬೆಳವಣಿಗೆಗೆ ತೊಂದರೆ ಕೊಡುತ್ತಿರುತ್ತವೆ. ಸಾಲು ಉಳುಮೆ ಮಾಡುವ ಮುಖಾಂತರ ಕಳೆ ಕೀಳಿಸುವುದರಿಂದ ಪೈರುಗಳನ್ನು ಸಂರಕ್ಷಿಸಬಹುದು.

ದೇಶೀ ತರಕಾರಿಗಳು : ಜಿಲ್ಲೆಯಲ್ಲಿ ಹಲವಾರು ವಿಧವಾದ ದೇಸಿ ತರಕಾರಿಗಳನ್ನು ಬೆಳೆಯುತ್ತಾರೆ.

ಬಾಳೆ : ಜಿಲ್ಲೆಯಲ್ಲಿ ಏಲಕ್ಕಿ ಬಾಳೆ, ರಸಬಾಳೆ, ಚುಕ್ಕಿಬಾಳ, ಮೈಸೂರು ಬಾಳೆ, ಬೂದುಬಾಳೆ ಇನ್ನೂ ಮುಂತಾದ ಬಾಳೆಗಳನ್ನು ಬೆಳೆಯುತ್ತಾರೆ. ಏಲಕ್ಕಿ ಬಾಳೆಯನ್ನು ಹೆಚ್ಚಾಗಿ ಬೆಳೆಯುವರು.

ಬದನೆ : ಉದ್ದಬದನೆ, ಗುಂಡು ಬದನೆ, ಕುಚ್ಚುಬದನೆ, ಹಸುರು ಬದನೆಕಾಯಿಗಳನ್ನು ವಿಶೇಷವಾಗಿ ಬೆಳೆಯುವರು.

ಮೆಣಸಿನಕಾಯಿ : ಜಿಲ್ಲೆಯಲ್ಲಿ ಚಿಕ್ಕದಾದ ಚುರುಕು ಮೆಣಸಿನಕಾಯಿ (ಇದು ಅತಿಯಾದ ಖಾರ ಇರುತ್ತದೆ) ಬೆಳೆಯುವರು.

ಕುಂಬಳಕಾಯಿ : ಬೂದು ಕುಂಬಳ, ಸಿಹಿ ಕುಂಬಳ, ಹೆಚ್ಚಾಗಿ ಬೆಳೆಯುವರು.

ಈರುಳ್ಳಿ : ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಸಣ್ಣ ಈರುಳ್ಳಿಯನ್ನು ಆರ್ಥಿಕ ಬೆಳೆಯಾಗಿ ನೀರಾವರಿಯಲ್ಲಿ ಬೆಳೆಯುವರು.

ಮಿಣಕೆ ಹಣ್ಣು : ಆರ್ಥಿಕ ಬೆಳೆಯಾಗಿ ಹಾಗೂ ಆಹಾರ ತಂಪು ಪಾನಿಯದ ಬೆಳೆಯಾಗಿ ಬೆಳೆಯುವರು. ಇದು ಬೇಸಗೆ ಕಾಲದ ಬೆಳೆ.

ಕಬ್ಬು : ನಾಡಕಬ್ಬು, ಕೆಂಪು ಕಬ್ಬುಗಳನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವರು. ನಾಡ ಕಬ್ಬಿನಿಂದ ಬೆಲ್ಲವನ್ನು ತಯಾರಿಸುವರು. ಕೆಂಪು ಕಬ್ಬು ಸಕ್ಕರೆ ತಯಾರಿಕೆಗೆ ಯುಕ್ತವಾದುದ್ದಾಗಿದೆ.

ಅರಿಸಿನ : ಇದನ್ನು ಹೆಚ್ಚಾಗಿ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಬೆಳೆಯುವರು. ಸಣ್ಣ ಅರಿಸಿನ, ಕಡ್ಡಿ ಅರಿಸಿನವನ್ನು ಬೆಳೆಯುವರು. ಇದೊಂದು ಆರ್ಥಿಕ ಬೆಳೆ.

ಸೊಪ್ಪುಗಳು : ಅಣ್ಣೆಸೊಪ್ಪು, ಕೊತ್ತಂಬರಿ ಸೊಪ್ಪು, ಬೆಳಗುಳಕೆ ಸೊಪ್ಪು, ಸಪ್ಪಸೀಗೆ ಸೊಪ್ಪು ಮುಂತಾದವನ್ನು ಬೆಳೆಯುವರು.

ಕೋಸುಗಳು : ಗೆಡ್ಡೆಕೋಸು, ಹೂ ಕೋಸುಗಳನ್ನು ವಾಣಿಜ್ಯ ಬೆಳೆಯಾಗಿ ಜಿಲ್ಲೆಯ ಕೆಲವು ಕಡೆ ಬೆಳೆಯುತ್ತಾರೆ.

ಟೊಮ್ಯಾಟೊ : ಹುಳಿ ಟೊಮ್ಯಾಟೊ ದಪ್ಪ ಟೊಮ್ಯಾಟೊ ಜಾಮುನು ಟೊಮ್ಯಾಟೊಗಳನ್ನು ಬೆಳೆಯುವರು.

ಗೊಬ್ಬರಗಳು ಮತ್ತು ಕೀಟನಾಶಕಗಳು : ಕೊಟ್ಟಿಗೆ ಗೊಬ್ಬರ : ಪ್ರತಿದಿನ ಬೆಳಿಗ್ಗೆ ಎದ್ದಾಗ ಮನೆಯ ಮುಂದಿನ ಹಾಗೂ ಕೊಟ್ಟಿಗೆಯಲ್ಲಿ ಇರುವ ತರಗುಗಳನ್ನು ಗುಡಿಸಿ ಅದನ್ನು ಒಂದು ಕಡೆ ರಾಶಿ ಮಾಡಿ ಮೇಲೆ ತೊಪ್ಪೆಯನ್ನು ಸೇರಿಸಿದಾಗ ಅದು ಚೆನ್ನಾಗಿ ಕೊಳೆಯುತ್ತದೆ. ಹೊಲ ಗದ್ದೆಗಳಿಗೆ ಸೇರಿಸಿ ಉಳುಮೆ ಮಾಡುವರು.

ಸಗಣಿ/ತೊಪ್ಪೆ ಗೊಬ್ಬರ : ಪ್ರತಿದಿನ ದನಕರುಗಳನ್ನು ಕಟ್ಟಿಹಾಕುವ ಜಾಗದಲ್ಲಿ ಅವುಗಳ ಸಗಿಯನ್ನು ಒಂದು ಜಾಗದಲ್ಲಿ ರಾಶಿ ಹಾಕಿ ಅದು ಚೆನ್ನಾಗಿ ಮಣ್ಣಿನ ಜೊತೆ ಬೆರೆತು ಕೊಳೆತ ಮೇಲೆ ಜಮೀನಿಗೆ ಹಾಗೂ ಬೆಳೆಗಳಿಗೆ ಹಾಕುವರು. ಕೃಷಿ ಭೂಮಿಗೆ ಬೆಳೆಯನ್ನು ಬಿತ್ತನೆ ಮಾಡುವ ಮೊದಲು ಈ ಗೊಬ್ಬರವನ್ನು ಹಾಕಿ ಚೆನ್ನಾಗಿ ಉಳುಮೆ ಮಾಡುವರು. ಇದರಿಂದ ಭೂಮಿ ಫಲವತ್ತತೆಯನ್ನು ಕೂಡಿರುತ್ತದೆ.

ಗುಂಡಿ ಗೊಬ್ಬರ : ನಿರ್ದಿಷ್ಟ ಸ್ಥಳದಲ್ಲಿ ನಾಲ್ಕು/ಐದು ಅಡಿ ಆಳವಾದ ಗುಂಡಿಯನ್ನು ತೋಡಿ ಅದರಲ್ಲಿ ಎಲ್ಲಾ ರೀತಿಯ ಕಸಗಳನ್ನು, ಕೊಳೆಯುವ ಪದಾರ್ಥಗಳನ್ನು ಹಾಕುವರು. ಗುಂಡಿಯಲ್ಲಿ ಚೆನ್ನಾಗಿ ಕೊಳೆತ ಅನಂತರ ನೆರಳಲ್ಲಿ ಒಣಗಿಸಿ ಅದನ್ನು ಗಿಡಗಳಿಗೆ ಉಪಯೋಗಿಸುವರು.

ಒಣ ಎಲೆ ಗೊಬ್ಬರ : ಒಣಗಿದ ಎಲೆಗಳನ್ನು ಬೇಸಗೆಯ ಕಾಲದಲ್ಲಿ ಒಂದು ಕಡೆ ಸಂಗ್ರಹಣ ಮಾಡಿ ಸುಟ್ಟು ಬೂದಿ ಮಾಡುವರು. ಸಗಣಿಯೊಂದಿಗೆ ಬೆರೆಸಿ ಗಿಡಗಳಿಗೆ ಹಾಕುವರು.

ಆಧುನಿಕವಾಗಿ ರಾಸಾಯನಿಕ ಗೊಬ್ಬರಗಳಾದ ಯೂರಿಯಾ, ಡಿ.ಎ.ಪಿ ಪೊಟ್ಯಾಷ್ ಸಾಸರ್ ಪಾಸ್ಪೆಟ್ 17-17-17, 19-19-19, 20-20-20 ಮುಂತಾದ ರಾಸಾಯನಿಕವಾದ ರಸಗೊಬ್ಬರಗಳನ್ನು ಬಳಸುವರು ಹಾಗೂ ಮನೆ ತೊಳೆದ ನೀರನ್ನು ದನದ ಮೂತ್ರವನ್ನು, ಸಗಣೆ ನೀರನ್ನು ರಾಸಾಯನಿಕ ವಸ್ತುಗಳಾದ ಸಾರಜನಕ, ರಂಜಕದ ಜೊತೆ ಬೆರೆಸಿ ಮದ್ದಿನ ಗಿಡಗಳಿಗೆ ಹಾಗೂ ಆಹಾರದ ಸೊಪ್ಪುಗಳನ್ನು ಬೆಳೆಸುವಲ್ಲಿ ಸಿಂಪಡಿಸುವರು. ಇದರಿಂದ ಗಿಡಗಳಿಗೆ ತಗಲುವ ರೋಗಗಳನ್ನು ತಡೆಯಬಹುದು.

ಜಿಲ್ಲೆಯಲ್ಲಿ ಇರುವ ಅರಣ್ಯ ಸಂಪತ್ತು ಹಾಗೂ ಕೃಷಿ ಸಂಬಂಧಿಸಿದ ಸಂಸ್ಥೆಗಳಿಂದ ಹಲವಾರು ಮಾಹಿತಿಯನ್ನು ಪಡೆದು ಇತ್ತೀಚಿನ ದಿನಗಳಲ್ಲಿ ಸಾವಯವ ಗೊಬ್ಬರ ರಾಸಾಯನಿಕ ಗೊಬ್ಬರಗಳನ್ನು ಹೆಚ್ಚಾಗಿ ಬಳಸಿ ಉತ್ತಮವಾದ ಇಳುವರಿಯನ್ನು ಪಡೆಯುತ್ತಿದ್ದಾರೆ.

ಕೀಟನಾಶಕಗಳು : ಜಿಲ್ಲೆಯಲ್ಲಿ ತರಕಾರಿಗಳು, ಸೊಪ್ಪುಗಳು ಏಕದಳ, ದ್ವಿದಳ ಧಾನ್ಯಗಳು ಆಹಾರ ಧಾನ್ಯಗಳನ್ನು ಬೆಳೆಯುವಾಗ ಫಸಲು ಬರುವ ತನಕ ಸಂರಕ್ಷಣೆಯನ್ನು ರೈತರು ಅನೇಕ ರೀತಿಯಲ್ಲಿ ಕೀಟನಾಶಕಗಳನ್ನು ಬಳಸಿ ಮಾಡುತ್ತಿದ್ದರು.

ಬೂದಿ : ಇದನ್ನು ತರಕಾರಿಗಳ ಬೆಳೆಗಳಿಗೆ ಸಿಂಪಡಿಸುತ್ತಾರೆ. ಬೂದಿಯನ್ನು ಚೆನ್ನಾಗಿ ಒಣಗಿದ ಮೇಲೆ ಗಿಡದ ಬೇರಿಗೆ ಹಾಕುವುದರಿಂದ ಯಾವುದೇ ಹುಳ ಹಿಡಿಯುವುದಿಲ್ಲ. ಇದರಿಂದ ಬೆಳೆ ಚೆನ್ನಾಗಿ ಬೆಳೆಯುತ್ತದೆ.

ಬೇವಿನ ಸೊಪ್ಪು : ಇದನ್ನು ಹಲವಾರು ಧಾನ್ಯಗಳ ಜೊತೆಗೆ ಅರೆದು ಮಿಶ್ರಮಾಡಿ ಅದನ್ನು ಮುಂದಿನ ವರ್ಷದ ಬಿತ್ತನೆಗೆ ಇಟ್ಟುಕೊಳ್ಳುವುದು. ಇದರಿಂದ ವರ್ಷದ ತನಕ ಆ ಧಾನ್ಯಕ್ಕೆ ಯಾವುದೇ ಹುಳು ಹಿಡಿಯುವುದಿಲ್ಲ. ಅದು ಸುರಕ್ಷಿತವಾಗಿರುತ್ತದೆ.

ಸುಣ್ಣ : ಸುಣ್ಣದೊಂದಿಗೆ ಮಣ್ಣನ್ನು ಮಿಶ್ರಣಮಾಡಿ ಅದನ್ನು ಗಿಡಗಳ ಬುಡಕ್ಕೆ ಹಾಕುವರು ಇದರಿಂದ ನುಸಿರೋಗ ಬರುವುದನ್ನು ತಡೆಯಬಹುದು.

ಉಪ್ಪು : ಇದನ್ನು ಹೆಚ್ಚಾಗಿ ತೆಂಗಿನ ಸಸಿಗಳನ್ನು ಬೆಳೆಸಲು ಬಳಸುವರು. ಒಂದು ಗಡಿಗೆ ಉಪ್ಪನ್ನು ತೆಂಗಿನಮರದ ಬುಡಕ್ಕೆ ಸುರಿಯುವುದರಿಂದ ಮರಕ್ಕೆ ಯಾವುದೇ ರೋಗ ತಗಲದಂತೆ ನೋಡಿಕೊಳ್ಳಬಹುದು.

ಕೆಂಪು ಮಣ್ಣು ಮತ್ತು ಬೂದಿ : ಕೆಂಪು ಮಣ್ಣನ್ನು ನೀರಿನಲ್ಲಿ ಕಲಸಿಕೊಂಡು ಅದಕ್ಕೆ ಬೂದಿಯನ್ನು ಮಿಶ್ರಣಮಾಡಿ ತೊಗರಿಗೆ ಮಿಶ್ರಣ ಮಾಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿದರೆ ದೀರ್ಘಕಾಲದವರೆಗೂ ಇಟ್ಟುಕೊಳ್ಳಬಹುದು.

ಬೀಜ, ಧಾನ್ಯ, ತರಕಾರಿಗಳ ಸಂರಕ್ಷಣೆ : ಬೀಜಗಳು : ಬೂದಿಯನ್ನು ನೀರಿನಲ್ಲಿ ಮಿಶ್ರಣ ಮಾಡಿ ಬಿತ್ತನೆ ಬೀಜಗಳಿಗೆ ಸಿಂಪಡಿಸಿ ಬಿಸಿಲಿನಲ್ಲಿ ಒಣಗಿಸಿದರೆ ಆಳಾಗುವುದಿಲ್ಲ.

ಬತ್ತದ ಕಾಳುಗಳನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿ ಸೂರ್ಯನ ಶಾಖದಿಂದ ಚೆನ್ನಾಗಿ ಒಣಗಿಸಲಾಗುವುದು. ಇದರಿಂದ ಬತ್ತ ಸಂಪೂರ್ಣವಾಗಿ ಉಪಯುಕ್ತವಾಗುತ್ತದೆ.

ಬತ್ತದ ಹುಲ್ಲನ್ನು ಕಂತೆಯಂತೆ ಸಣ್ಣದಾಗಿ ಕಟ್ಟಿ ಒಂದು ಸುಂದರವಾದ ಮೆದೆ ರೂಪದಲ್ಲಿ ಹಾಕಿ ಸಂರಕ್ಷಿಸಿಡುವರು.

ಜೋಳವನ್ನು ಶುದ್ಧಿಕರಿಸಿದ ಅನಂತರ ಗೋಣಿ ಚೀಲದಲ್ಲಿ ಅದಕ್ಕೆ ಡಿಡಿಟಿ ಪೌಡರನ್ನು ಸಿಂಪಡಿಸಿ / ಮಿಶ್ರಣ ಮಾಡಿ ಬಿಗಿಯಾಗಿ ಕಟ್ಟಿ ಇಡುವರು.

ಬತ್ತದ ಬೀಜವನ್ನು ಚೆನ್ನಾಗಿ ಒಣಗಿಸಿ ಅದಕ್ಕೆ ಔಷಧೀಯ ಮೂಲಿಕೆಯನ್ನು ಸೇರಿಸಿ ಸಿಂಪಡಿಸಿ ನುಸಿರೋಗ ಬರದಂತೆ ನುಗ್ಗೆಸೊಪ್ಪನ್ನು ಪುಡಿ ಮಾಡಿ ಅದಕ್ಕೆ ಸಗಣಿ ನೀರನ್ನು ಸಿಂಪಡಿಸಿ ಇಡುವರು.

ತರಕಾರಿ, ಧಾನ್ಯ, ಹಣ್ಣುಗಳ ಸಂರಕ್ಷಣೆ : ಗೆಡ್ಡೆ ಜಾತಿ ಯವುಗಳಾದ ಗೆಡ್ಡೆಕೋಸು ಅರಿಸಿನ ಇತ್ಯಾದಿಗಳನ್ನು ಮಣ್ಣಿನಲ್ಲಿ ಹುದುಗಿ ಇಟ್ಟು ಆಗಾಗ ನೀರನ್ನು ಹಾಕುತ್ತಿರಬೇಕು.

ಗೆಣಸನ್ನು ಒಳಗೊಂಡಂತೆ ಕಾಯಿ ಪದಾರ್ಥಗಳನ್ನು ಕತ್ತರಿಸಿ ಉಪ್ಪನ್ನು ಬೆರೆಸಿ ಬಿಸಿಲಿನಲ್ಲಿ ಒಣಗಿಸಿದರೆ ಕೆಡದಂತೆ ದೀರ್ಘ ಸಮಯದವರೆಗೆ ಬಳಕೆ ಮಾಡಬಹುದು.

ಅಡಕೆಯನ್ನು ನೀರಿನಲ್ಲಿ ಬೇಯಿಸಿ ಬಿಸಿಲಿನಲ್ಲಿ ಚನ್ನಾಗಿ ಒಣಗಿಸಿ ಇಡಬೇಕು. ಆಗ ಅಡಕೆ ಶುದ್ಧವಾಗಿ ಕೆಂಪು ಬಣ್ಣಕ್ಕೆ ಬರುತ್ತದೆ.

ಕುಂಬಳಕಾಯಿ, ಸೌತೆಕಾಯಿ ಬೀಜಗಳಿಗೆ ಬೂದಿಯನ್ನು ಸವರಿ ಇಡುವರು.

ಮಾವು, ಹೇರಳೆ, ಕಹಿಹಾಗಲಕಾಯಿ, ನಿಂಬೆಹಣ್ಣು ಮುಂತಾದ ಹುಳಿ ಇರುವಂತಹ ಹಣ್ಣುಗಳು / ಕಾಯಿಗಳನ್ನು ಸಣ್ಣ ಪ್ರಮಾಣದಲ್ಲಿ ಕತ್ತರಿಸಿ ಅವುಗಳಿಗೆ ಉಪ್ಪು ಖಾರವನ್ನು ಮಿಶ್ರಣಮಾಡಿ ಒಂದು ಡಬ್ಬದಲ್ಲಿ ಸಂಗ್ರಹಿಸಿ ಇಡುವರು.

ಹಲಸಿನ ಬೀಜ, ಪಪ್ಪಾಯಿ ಬೀಜಗಳಿಗೆ ಬೂದಿಯನ್ನು ಸವರಿ ಬಿಸಿಲಿನಲ್ಲಿ ಹರಡಿ ಒಣಗಿದ ಮೇಲೆ ಬಿತ್ತನೆಗೆ ಬಳಸುವರು.

ಬಾಳೆಕಾಯಿ / ಹಣ್ಣನ್ನು ಒಂದು ಗೋಣಿ ಚೀಲದಲ್ಲಿ ಕಟ್ಟಿ ಅದಕ್ಕೆ ಹೊಗೆಯನ್ನು ಕೊಟ್ಟು ಸಂರಕ್ಷಿಸಿಡುವರು.

ಹಸಿ ಅವರೆ, ಕಾಳುಗಳನ್ನು ನೀರಿನಲ್ಲಿ ನೆನೆಸಿ ಅವುಗಳ ಸಿಪ್ಪೆಯನ್ನು ತೆಗೆದು ಬಿಸಿಲಿನಲ್ಲಿ ಒಣಗಿಸಿ ಇಡುವರು.

ಸೊಪ್ಪಿನ ಜಾತಿಯ ತರಕಾರಿಗಳನ್ನು ಪದೇ ಪದೇ ನೀರನ್ನು ಚಿಮುಕಿಸುವ ಮೂಲಕ ಬೇಗನೆ ಬಾಡದಂತೆ ರಕ್ಷಿಸುವರು.

ಉಪಕರಣಗಳು : ಜಿಲ್ಲೆಯಲ್ಲಿ ಆರಂಭದಿಂದಲೂ ಕೃಷಿ ಸಲಕರಣೆಗಳು ಬಳಕೆಯಲ್ಲಿರುವುದನ್ನು ಕಾಣಬಹುದು. ಇತ್ತೀಚಿನ ದಿನಗಳಲ್ಲಿ ತಾಂತ್ರಿಕ ಬದಲಾವಣೆಯಿಂದ ಉನ್ನತವಾದ ತಾಂತ್ರಿಕ ಉಪಕರಣಗಳು ಕೂಡಾ ಬಳಕೆಯಲ್ಲಿವೆ.

ನೇಗ್ಲು / ನೇಗಿಲು : ಇದೊಂದು ಮರದ ಉಪಕರಣವಾಗಿದೆ. ಇದನ್ನು ಮರದಿಂದ ಮಾಡಲಾಗುತ್ತದೆ. ಭೂಮಿಯನ್ನು ಉಳುಮೆ ಮಾಡುವಾಗ, ಬೀಜವನ್ನು ಬಿತ್ತನೆ ಮಾಡುವಾಗ ಕೃಷಿಕರು ಬಳಸುವಂತಹ ಒಂದು ಪ್ರಮುಖವಾದ ಉಪಕರಣವಾಗಿದೆ.

ಎತ್ತುಗಳು, ಎಮ್ಮೆಗಳ ಹೆಗಲ ಮೇಲೆ ಮರದಿಂದ ತಯಾರಿಸಿದ ನೊಗವನ್ನು ಇಟ್ಟು ಇದಕ್ಕೆ ಸೇರಿದಂತೆ ಹಗ್ಗವನ್ನು ಎತ್ತು/ಎಮ್ಮೆಗಳ ಕುತ್ತಿಗೆಗೆ ಕಟ್ಟಿ ಅದಕ್ಕೆ ನೇಗಿಲನ್ನು ಇಟ್ಟು ಉಳುಮೆ ಮಾಡುತ್ತಿದ್ದರು. ನೇಗಿಲಿನ ಕೆಳಭಾಗಕ್ಕೆ ಕಬ್ಬಿಣದಿಂದ ಮಾಡಿದ ಚೂಪಾದ ಗುಳವನ್ನು ಕಟ್ಟಿ ಮಣ್ಣನ್ನು ಹದ ಮಾಡಲು ಬಳಸುವರು.

ಗುದ್ದಲಿ : ಇದೊಂದು ಕಬ್ಬಿಣದಿಂದ ಮಾಡಿದ ಉಪಕರಣವಾಗಿದೆ. ಇದನ್ನು ಮಣ್ಣನ್ನು ಅಗೆಯಲು ಹಾಗೂ ಹದಮಾಡಲು ಬಳಸುವರು.

ಪಿಕಾಸಿ, ಎಲೆಕೊಟ್ಟು : ಪಿಕಾಸಿಯು ಕೂಡಾ ಗುದ್ದಲಿಯಂತೆ ಬಳಸುವ ಉಪಕರಣ. ಆದರೆ ಪಿಕಾಸಿ ಎರಡು ಬದಿಯಲ್ಲಿ ಉಪಯೋಗಕ್ಕೆ ಬರುತ್ತದೆ. ಮಣ್ಣನ್ನು ಎಳೆಯಲು ಹದಮಾಡಲು ಹಾಗೂ ಗುಂಡಿಯನ್ನು ತೋಡುವಾಗ ಮಣ್ಣನ್ನು ಮೇಲೆತ್ತಿ ಹಾಕಲು ಎಲೆತೊಟ್ಟನ್ನು ಬಳಸುವರು.

ಮಕ್ಕರಿ : ಇದೊಂದು ಬಿದಿರಿನಿಂದ ಮಾಡಿದ ಉಪಕರಣ. ಇದನ್ನು ಗೊಬ್ಬರ ಹೊರಲು, ಕಸವನ್ನು ತುಂಬಲು ಹಾಗೂ ಕೃಷಿ ಚಟುವಟಿಕೆ ಕೆಲಸಗಳಿಗೆ ಬಳಸುವರು.

ಗೆರ್‌ಸಿ/ಗೆರಸಿ ಮೊರ : ಈ ಉಪಕರಣವನ್ನು ಅಕ್ಕಿಯನ್ನು ಸೋಸಲು, ಬತ್ತವನ್ನು ಒಣಗಿಸಲು ಹಾಗೂ ಮದುವೆಯ ಸಂದರ್ಭದಲ್ಲಿ ಶಾಸ್ತ್ರಮಾಡಲು ಬಳಸುವರು.

ಕೊಂಗ : ಇದೊಂದು ತಗಡಿನಿಂದ ಮಾಡಿದ ಉಪಕರಣವಾಗಿದೆ. ಬತ್ತ, ಜೋಳ, ರಾಗಿಯನ್ನು ಕಟಾವು ಮಾಡಿದಾಗ ಅದನ್ನು ಶುದ್ಧ ಮಾಡಲು ಬಳಸುವರು. ಅಂದರೆ ಕೊಂಗದ ಸಹಾಯದಿಂದ ಧಾನ್ಯಗಳನ್ನು ಗಾಳಿಯಲ್ಲಿ ತೂರುವರು. ಇದರಿಂದ ಶುದ್ಧವಾದ ಧಾನ್ಯ ಉಳಿದು ಜೆಳ್ಳು ಬೇರೆಯಾಗುವುದು.

ವಂದ್ರಿ / ಒಂದ್ರಿ : ಇದು ತಗಡಿನಿಂದ ಮಾಡಿದ ಉಪಕರಣ. ಇದು ಕೆಳಭಾಗದಲ್ಲಿ ತೂತು ತೂತಾಗಿ ರಂಧ್ರಗಳಲ್ಲಿರುತ್ತವೆ. ಇದನ್ನು ಅಕ್ಕಿಯನ್ನು ಶುದ್ದಮಾಡಲು ವಿವಿಧ ಧಾನ್ಯಗಳನ್ನು ಶುದ್ಧಮಾಡಲು ಬಳಸುವರು.

ಒನ್ಕೆ / ಒನಕೆ : ಇದೊಂದು ಮರದಿಂದ ಮಾಡಿದ ಉಪಕರಣ ಇದು ಕೋಲಿನಂತೆ ಉದ್ದವಾಗಿ, ದಪ್ಪವಾಗಿ ಇರುತ್ತದೆ. ಇದರ ಮುಂದಿನ ಹಾಗೂ ಹಿಂದಿನ ಭಾಗದಲ್ಲಿ ಕಬ್ಬಿಣದಿಂದ ಮಾಡಿದ ಬಳೆಯನ್ನು ಹಾಕಿರುತ್ತಾರೆ. ಇದನ್ನು ಬತ್ತಕುಟ್ಟಲು, ಮತ್ತಿತರ ಕೆಲಸಗಳಿಗೆ ಬಳಸುವರು.

ಬಾಂಡ್ಲಿ : ಈ ಉಪಕರಣವನ್ನು ಕಬ್ಬಿಣದಿಂದ ಹಾಗೂ ಪ್ಲಾಸ್ಟಿಕ್‌ನಿಂದಲೂ ಮಾಡುತ್ತಾರೆ. ಇದನ್ನು ಕೃಷಿಕರು ಕೃಷಿ ಚಟುವಟಿಕೆಯ ಎಲ್ಲಾ ರೀತಿಯ ಕೆಲಸದಲ್ಲೂ ಬಳಸುವರು.

ಕೊಪ್ಪರಿಗೆ : ಇದರ ಗಾತ್ರ ದೊಡ್ಡದು. ಇದನ್ನು ಹೆಚ್ಚಾಗಿ ನೀರಾವರಿ ವ್ಯವಸಾಯ ಮಾಡುವವರು ಬಳಸುತ್ತಾರೆ. ಕಬ್ಬಿನ ಹಾಲನ್ನು ಹರೆದು ಬೆಲ್ಲವನ್ನು ಮಾಡಲು ಕೊಪ್ಪರಿಗೆಯನ್ನು ಬಳಸುವರು.

ದೋಣಿ/ಬಾಣಿ : ಇದನ್ನು ಮಣ್ಣಿನಿಂದ ಮಾಡುವರು. ದನಕರುಗಳು ಇತರ ಸಾಕು ಪ್ರಾಣಿಗಳಿಗೆ ನೀರನ್ನು ಕುಡಿಸಲು ಇದನ್ನು ಬಳಸುವರು. ಇತ್ತೀಚಿನ ದಿನಗಳಲ್ಲಿ ಇದು ಕಡಿಮೆಯಾಗುತ್ತಿದೆ.

ದಬಿಕೆ / ಹರ : ಇದು ಕಬ್ಬಿಣದ ಸಲಕರಣೆಯಾಗಿದೆ. ಉದ್ದವಾಗಿರುತ್ತದೆ. ಹಾಗೂ ಮುಂದಿನ ಭಾಗ ಚೂಪಾಗಿರುತ್ತದೆ. ಇದನ್ನು ಗುಂಡಿ ತೆಗೆಯಲು ಹಾಗೂ ಕಲ್ಲನ್ನು ಸಾಗಿಸಲು ಬಳಸುವರು.

ಸುತ್ತಿಗೆ / ಸುತ್ಗೆ : ಇದನ್ನು ಕಬ್ಬಿಣದಿಂದ ಮಾಡಲಾಗುತ್ತದೆ. ಇದನ್ನು ಕಲ್ಲು ಒಡೆಯಲು ಹಾಗೂ ಇತರ ಕೆಲಸಗಳಿಗೆ ಬಳಸುವರು.

ಸಹಾಯಕ ಗ್ರಂಥಗಳು

ಚಾಮರಾಜನಗರ ಜಿಲ್ಲೆಯ ಕೃಷಿ ಇಲಾಖೆಯ ಮಾಹಿತಿ (ಜಂಟಿಕೃಷಿ ನಿರ್ದೇಶಕರ ಕಛೇರಿ)

ಚಾಮರಾಜನಗರ ತೋಟಗಾರಿಕೆ ಇಲಾಖೆ ಮಾಹಿತಿ

ಚಾಮರಾಜನಗರ ಜಿಲ್ಲಾ 2011ರ ಮಾಹಿತಿ (ಅಂಕಿ-ಅಂಶಗಳು)

ಚಾಮರಾಜನಗರ ಜಿಲ್ಲಾ ವೆಬ್‌ಸೈಟ್

ಹೊನ್ನು ಹೊಳೆ (ಚಾಮರಾಜನಗರ ಜಿಲ್ಲೆ ಇತಿಹಾಸ)

(ಪ್ರಧಾನ ಸಂಪಾದಕರು - ಮಲೆಯೂರು ಗುರುಸ್ವಾಮಿ)

ಕರ್ನಾಟಕ ಕೈಪಿಡಿ - (ಕರ್ನಾಟಕ ಸರ್ಕಾರ ಪ್ರಕಟಣೆ)


ಎಸ್.; ಆರ್.ಡಿ.

ಚಿಕೋರಿ ಬಹೂಪಯೋಗಿ ಸಸ್ಯವಿದು. ಇದು ಆಸ್ಟರೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಸಿಕೋರಿಯಮ್ ಇಂಟಿಬಸ್. ಇದರ ಮತ್ತೊಂದು ಹೆಸರು ಸಕೋರಿ. ಇದರ ಮೂಲ ಸ್ಥಳ ಯೂರೋಪ್. ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಭಾರತದಲ್ಲೂ ಇದರ ಕೃಷಿ ಉಂಟು. ಚಿಕೋರಿಯನ್ನು ಆಲಂಕಾರಿಕ ಸಸ್ಯವಾಗಿ ಉದ್ಯಾನವನಗಳಲ್ಲಿ ಬೆಳೆಸುವರು. 4-6 ಅಡಿ ಎತ್ತರ ಬೆಳೆಯುತ್ತದೆ. ಇದರ ಎಳಸಾದ ಬೇರನ್ನು ಹಸಿಯಾಗಿಯೇ ತಿನ್ನುವುದುಂಟು. ಎಲೆಗಳನ್ನು ತರಕಾರಿಯಾಗಿ ಬಳಸುವರು. ಇದರ ಬೇಡಿಕೆ ಹೆಚ್ಚಾಗಲು ಕಾರಣ ಬೇರನ್ನು ಒಣಗಿಸಿ ಹುರಿದು ಪುಡಿ ಮಾಡಿ ಕಾಫಿ ಪುಡಿಯೊಂದಿಗೆ ಮಿಶ್ರಮಾಡುವುದು. ಕಾಫಿಯ ಬಣ್ಣ ಆಕರ್ಷಕವಾಗಲು, ರುಚಿ ಹೆಚ್ಚಾಗಲು ಇದನ್ನು ಬಳಸುತ್ತಾರೆ. ಬೇರು



ಉದ್ದ ಹಾಗೂ ರಸಭರಿತ; ಆಯತಾಕಾರ ಅಥವಾ ಭರ್ಜಿ ಆಕಾರದ ಅಗಲವಾದ ಎಲೆಗಳು ಇದ್ದು, ಅಂಚು ಮುಳ್ಳಿನಂತೆ ಇರುತ್ತವೆ. ಹೊಳೆಯುವ ನೀಲಿ ಬಣ್ಣದ ಹೂಗಳು ಇದರವು.

ಚಿಕೋರಿಯನ್ನು ಸಾಧಾರಣವಾಗಿ ಎಲ್ಲ ಮಣ್ಣುಗಳಲ್ಲೂ ಬೆಳೆಯಬಹುದು. ಉತ್ತಮ ಇಳುವರಿಗಾಗಿ ಮರಳುಯುಕ್ತ ಗೋಡು ಮಣ್ಣಿನಲ್ಲಿ ಬೆಳೆಯುವರು. ಆಲೂಗೆಡ್ಡೆ, ಕ್ಯಾರೆಟ್, ಈರುಳ್ಳಿ ಮುಂತಾದ ಬೆಳೆಗಳಿಗೆ ಮಾಡುವ ರೀತಿಯಲ್ಲಿ ಚಿಕೋರಿ ಸೊಪ್ಪಿಗಾಗಿ ಕೃಷಿ ಮಾಡುವರು.



ಸಸ್ಯಾಭಿವೃದ್ಧಿ ಬೀಜಗಳಿಂದಲೇ ಆಗುತ್ತದೆ. ಒಂದು ಎಕರೆಗೆ 20-30 ಕೆಜಿ. ಬಿತ್ತನೆ ಬೀಜ ಬೇಕು. ವಿಸ್ತಾರ ಜಾಗದಲ್ಲಿ ಬೆಳೆಸುವವರು ಕೂರಿಗೆಯಿಂದ ಬೀಜ ಬಿತ್ತಿದರೆ ಕಡಿಮೆ ಪ್ರಮಾಣದಲ್ಲಿ ಬೆಳೆಯುವವರು ಕೈಯಿಂದಲೇ ಬಿತ್ತುವರು. ಇದರ ಆಯಸ್ಸು ಸು. 5-10 ವರ್ಷಗಳಿದ್ದು ಒಂದು ವರ್ಷದ ಅನಂತರ ಎಲೆಗಳನ್ನು ಉಪಯೋಗಿಸಬಹುದು. ಬೇರಿಗಾಗಿ ಚಿಕೋರಿ ಬೆಳೆಸುವವರು ನಿರ್ದಿಷ್ಟ ಅಂತರದಲ್ಲಿ ಸಾಲುಗಳನ್ನು ಮಾಡಿ ಒಂದೊಂದು ಬೀಜದಂತೆ ನೆಡುತ್ತಾರೆ. ಹೀಗೆ ನೆಡಲು ಒಂದು ಎಕರೆಗೆ 4-8 ಕೆಜಿ. ಬೀಜ ಸಾಕು. ಬೇರು ಚೆನ್ನಾಗಿ ಬಲಿತ ಮೇಲೆ

(ಉಪಯೋಗಕ್ಕೆ ಬರುವಷ್ಟು ಹದವಾಗಿ) ಅಗೆದು ಒಣಗಿಸಿ ಉಪಯೋಗಿಸುತ್ತಾರೆ. ಬೇರಿಗಾಗಿ ಕೃಷಿ ಮಾಡುವವರು ಬೀಜ ಬರುವ ಮೊದಲೇ ಉಪಯೋಗಿಸಿಕೊಳ್ಳುತ್ತಾರೆ. ಬಿತ್ತನೆಗೆ ಬೀಜ ಬೇಕಾದ ಪಕ್ಷದಲ್ಲಿ ಬಿಸಿಲಿನಲ್ಲಿ ಒಣಗಿಸಿ ಜೋಪಾನ ಮಾಡಿ ಇಟ್ಟುಕೊಳ್ಳುತ್ತಾರೆ.

ಎನ್. ಆರ್.


ಚಿಕ್ಕಬಳ್ಳಾಪುರ ಜಿಲ್ಲೆಯ ಕೃಷಿ ಕರ್ನಾಟಕದ ರಾಜ್ಯದ 30 ಜಿಲ್ಲೆಗಳ ಪೈಕಿ ಒಂದು. ಮೊದಲು ಕೋಲಾರ ಜಿಲ್ಲೆಯಲ್ಲಿಯ ಒಂದು ತಾಲ್ಲೂಕಾಗಿದ್ದು 2008ರಲ್ಲಿ ಜಿಲ್ಲಾ ಆಡಳಿತ ಕೇಂದ್ರವಾಯಿತು. ಈ ಜಿಲ್ಲೆಗೆ ಸರ್.ಎಂ. ವಿಶ್ವೇಶ್ವರಯ್ಯ ಜಿಲ್ಲೆ ಎಂದು ನಾಮಕರಣ ಮಾಡುವ ಅಪೇಕ್ಷೆ ಜನರಲ್ಲಿದೆ. ಜಿಲ್ಲೆಯು ರಾಜ್ಯದ ಆಂಧ್ರಪ್ರದೇಶದ ಗಡಿ ಭಾಗಕ್ಕೆ ಅಂಟಿಕೊಂಡಿದೆ. ಪ್ರಾಚೀನ ಚಾರಿತ್ರಿಕ ಇತಿಹಾಸ ಹೊಂದಿರುವ ಇಲ್ಲಿಯ ನಂದಿ ದೇವಸ್ಥಾನ ಬಹಳ ಪ್ರಾಚೀನವಾದುದು. ಗಂಗ, ಕದಂಬರಿಗಿಂತ ಹಳೆಯ ಶಿಲಾಶಾಸನಗಳನ್ನು ಇಲ್ಲಿ ಕಾಣಬಹುದು. ಜಿಲ್ಲೆ ಮೆಣಸಿನಕಾಯಿಗೆ ತುಂಬ ಪ್ರಸಿದ್ಧಿ. ಇಲ್ಲಿಯ ರೈತ ಸಮುದಾಯ ಬಹಳ ಪ್ರಗತಿಪರವಾಗಿದೆ.

ಜಿಲ್ಲೆಯಲ್ಲಿ ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಶಿಡ್ಲಘಟ್ಟ ಎಂಬ ಆರು ತಾಲ್ಲೂಕುಗಳಿವೆ. ಚಿಕ್ಕಬಳ್ಳಾಪುರದಿಂದ ಚಿಂತಾಮಣಿ -35 ಕಿ.ಮೀ, ಗುಡಿಬಂಡೆ - 33 ಕಿ.ಮೀ, ಶಿಡ್ಲಘಟ್ಟ - 15 ಕಿ.ಮೀ ಗೌರಿಬಿದನೂರು 30, ಬಾಗೇಪಲ್ಲಿ 40 ಕಿ.ಮೀ. ದೂರದಲ್ಲಿದೆ.

ಮೇಲ್ಮೈ ಲಕ್ಷಣ : ಪ್ರಾಕೃತಿಕವಾಗಿ ಜಿಲ್ಲೆಯು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಒಳಗೊಂಡಿದೆ. ಕೆಲವು ಕಡೆ ಬಹು ಭಾಗ ಏರು-ತಗ್ಗು ಪ್ರದೇಶದಿಂದ ಕೂಡಿದೆ. ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿ ಬಹುಭಾಗ ಭೂಮಿ ಸಮತಟ್ಟಾಗಿದ್ದು ವ್ಯವಸಾಯ ಚಟುವಟಿಕೆಗಳು ನಡೆಯುತ್ತಿವೆ. ಈ ಮೇಲಿನ ತಾಲ್ಲೂಕುಗಳು ಹೆಚ್ಚಾಗಿ ಹಸುರಿನಿಂದಲೇ ಕೂಡಿರುತ್ತವೆ. ಬಾಗೆಪಲ್ಲಿ, ಗುಡಿಬಂಡೆ, ಗೌರಿಬಿದನೂರು ಭಾಗದಲ್ಲಿ ಗ್ರಾನೈಟ್ ಕಣಶಿಲೆಗಳಿಂದ ಕೂಡಿದ್ದು ಬೆಟ್ಟ, ದಿನ್ನೆ ಪ್ರದೇಶ ಇರುವುದರಿಂದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಕಡಿಮೆ, ನೀರಾವರಿಯೂ ಕಡಿಮೆ ಇದೆ. ಜಿಲ್ಲೆಯ ಬಹುಭಾಗ ಸಮತಟ್ಟಾಗಿದ್ದು ಕೃಷಿ, ಆರ್ಥಿಕ ಚಟುವಟಿಕೆಗಳು ಇದ್ದರೂ ಜಿಲ್ಲೆಯ ಒಟ್ಟಾರೆ ಬೆಳೆವಣಿಗೆ ಕಡಿಮೆ ಇದೆ. ಜಿಲ್ಲೆಯಲ್ಲಿ 2011ರ ಜನಗಣತಿ ಪ್ರಕಾರ ಒಟ್ಟು 12,55,104ರಷ್ಟಿದ್ದು ಇದರಲ್ಲಿ ಪುರುಷರು 6,36,437, ಮಹಿಳೆಯರು 6,18,667 ಲಿಂಗಾನುಪಾತ 972, ಜನಸಾಂದ್ರತೆ 296 ಹಾಗೂ ಜಿಲ್ಲೆಯ ಸಾಕ್ಷರತೆ 69.76 ಆಗಿರುತ್ತದೆ.

ಜಿಲ್ಲೆಯ ಪ್ರಮುಖ ಸ್ಥಳಗಳು : ನಂದಿಬೆಟ್ಟ, ನಂದಿಗ್ರಾಮ, ಮುದ್ದೇನಹಳ್ಳಿ, ಪಾಪಾಗ್ನಿ, ರಂಗಸ್ಥಳ, ಶ್ರೀನಿವಾಸನಗರ, ಆದಿಚುಂಚನಗಿರಿ ಮಠ, ಸತ್ಯಸಾಯಿ ಬಾಬ ಶಾಲೆಗಳು, ಕೈವಾರ, ವಿದುರಾಶ್ವತ್ಥ, ಕೈಲಾಸಗಿರಿ, ಆಲಂಬಗಿರಿ ಕ್ಷೇತ್ರ, ಗೋಳೂರು ಮಠ ಇತ್ಯಾದಿ. ಕೋಲಾರ ಜಿಲ್ಲೆಯಂತೆಯೇ ಚಿಕ್ಕಬಳ್ಳಾಪುರ ಗಡಿ ಜಿಲ್ಲೆಯಾಗಿದ್ದರೂ ಆಂಧ್ರಪ್ರದೇಶದ ಗಡಿಯನ್ನು ಜಿಲ್ಲೆಯುದ್ದಕ್ಕೂ ಹೊಂದಿದೆ. ಕನ್ನಡ, ತೆಲುಗು, ಉರ್ದು ಭಾಷಿಕರ ಸಂಖ್ಯೆ ಹೆಚ್ಚಾಗಿಯೇ ಇದೆ. ಜಿಲ್ಲೆ ಬೆಂಗಳೂರಿನಿಂದ 56 ಕಿ.ಮೀ. ದೂರದಲ್ಲಿದೆ.

ಜಿಲ್ಲೆಯ ವಿಸ್ತೀರ್ಣ : ಜಿಲ್ಲೆಯ ಒಟ್ಟು ವಿಸ್ತೀರ್ಣ 4254 ಚ.ಕಿ.ಮೀ. ಇದ್ದು ಒಟ್ಟು 6 ತಾಲ್ಲೂಕುಗಳು, 26 ಹೋಬಳಿಗಳು, 1511 ಗ್ರಾಮಗಳು, 150ಗ್ರಾಮ ಪಂಚಾಯ್ತಿಗಳು ಎರಡು ನಗರಸಭೆ ಮೂರು ಪುರಸಭೆಗಳಿವೆ. ಒಂದು ಪಟ್ಟಣ ಪಂಚಾಯತ್ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ನಾಡ ಕಛೇರಿಗಳು, ಗ್ರಾಮ ಪಂಚಾಯತ್ ಕಛೇರಿಗಳನ್ನು ಕಾಣಬಹುದು. ಆಂಧ್ರಪ್ರದೇಶದ ಗಡಿಯಲ್ಲಿರುವ ಈ ಜಿಲ್ಲೆ ಕರ್ನಾಟಕಕ್ಕೆ ಸೇರಿದ್ದು ಕನ್ನಡ ಮಾತನಾಡುವವರಿದ್ದರೂ ತೆಲುಗಿನ ಪ್ರಭಾವಕ್ಕೆ ಒಳಗಾಗಿದೆ.



ಹವಾಗುಣ : ಜಿಲ್ಲೆಯು ಸಮುದ್ರ ಮಟ್ಟದಿಂದ ಎತ್ತರದಲ್ಲಿದ್ದು ವರ್ಷದಲ್ಲಿ ಬಹುಭಾಗ ತೇವಾಂಶಕ್ಕಿಂತ ಉಷ್ಣಾಂಶವೇ ಹೆಚ್ಚಾಗಿರುತ್ತದೆ. ಆದರೂ ಸಮಶೀತೋಷ್ಣತೆಯನ್ನು ಕಾಪಾಡುತ್ತದೆ. ಆದ್ದರಿಂದ ಜಿಲ್ಲೆಯಲ್ಲಿ ಆಯಾ ಕಾಲಕ್ಕೆ ನಿಗದಿಯಾಗಿ ಋತುಗಳನ್ನು ವಿಭಾಗಿಸಬಹುದು. ಜಿಲ್ಲೆಯಲ್ಲಿ ಫೆಬ್ರವರಿ - ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಹೆಚ್ಚಿನ ಉಷ್ಣಾಂಶ ಕಂಡುಬರುತ್ತದೆ. ಎಲ್ಲೆಲ್ಲೂ

ಬರಡು ಭೂಮಿಯಿಂದ ಕೂಡಿರುತ್ತದೆ. ಅನಂತರದ ತಿಂಗಳುಗಳಲ್ಲಿ ತೇವಾಂಶ ಹೆಚ್ಚಾಗಿ ಮಳೆ, ಬೆಳೆ, ಉತ್ತಮವಾಗಿ ಸಾಧಾರಣ ವಾತಾವರಣ ಇರುತ್ತದೆ.

ಮಳೆ : ಭೌಗೋಳಿಕವಾಗಿ, ಜಿಲ್ಲೆಯು ಪೂರ್ವಘಟ್ಟಗಳ ಅಂಚನ್ನು ಈಶಾನ್ಯದಲ್ಲಿ ಮತ್ತು ದಕ್ಷಿಣದಲ್ಲಿ ಗಡಿಯಾಗಿ ಹೊಂದಿದೆ. ಜಿಲ್ಲೆಯ ಮುಖ್ಯ ಜಲಾನಯನವು ಈಶಾನ್ಯದಲ್ಲಿರುವ ನಂದಿದರ್ಗದ (ಸಮುದ್ರಮಟ್ಟದಿಂದ 1,455 ಮೀ) ಆಸುಪಾಸಿನಲ್ಲಿ ಆರಂಭವಾಗುತ್ತದೆ.

ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಕೃಷಿ ಚಟುವಟಿಕೆ ಕೊಂಚ ಬಿರುಸು ಪಡೆದಿದ್ದು ರೈತರು ಬೀಜ ಮತ್ತು ಗೊಬ್ಬರಗಳಿಗೆ ಮುಂದಾಗುತ್ತಿದ್ದಾರೆ. ಜಿಲ್ಲೆಯ ತಾಲ್ಲೂಕಿನಲ್ಲಿ ಬಹುತೇಕ ರೈತರು ಮುಸುಕಿನ ಜೋಳ ಮತ್ತು ರಾಗಿ ಬಿತ್ತನೆ ಮಾಡಿದ್ದು ಅವು ನಾಲ್ಕರಿಂದ ಐದು ಅಡಿಯವರೆಗೆ ಬೆಳೆದಿವೆ.

ಇತರೆ ತಾಲ್ಲೂಕುಗಳಲ್ಲಿ ನೀರಾವರಿ ಸೌಕರ್ಯಕ್ಕೆ ಅನುಗುಣವಾಗಿ ಬತ್ತ, ರಾಗಿ, ಜೋಳ, ಮುಸುಕಿನ ಜೋಳ, ತೃಣಧಾನ್ಯ, ತೊಗರಿ, ಅಲಸಂದೆ, ನೆಲಗಡಲೆ, ಸೂರ್ಯಕಾಂತಿ ಮತ್ತು ಇತರ ವಾಣಿಜ್ಯ ಬೆಳೆಗಳು ಚೇತರಿಸಿಕೊಂಡಿವೆ.

ಸೆಪ್ಟೆಂಬರ್ 01ರಿಂದ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು ಶೇ 37ರಷ್ಟು ಮಳೆ ಬಿದ್ದು ಕೊರತೆಯನ್ನು ನೀಗಿಸಿದೆ. ಸೆ. 12ರವರೆಗಿನ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಈವರೆಗೆ 14.01 ಸೆಂ.ಮೀ. ಮಳೆಯಾಗಿದೆ. ವರ್ಷದಲ್ಲೆ ಅತ್ಯಧಿಕ ಮಳೆ ಈ ತಿಂಗಳಿನಲ್ಲಾಗಿದೆ. ಇಡೀ ಜಿಲ್ಲೆಯಲ್ಲಿ ಅತ್ಯಧಿಕ 25.4 ಸೆಂ.ಮೀ.ಗಳಷ್ಟು ಮಳೆ ಸೆಪ್ಟೆಂಬರ್ 9ರಂದು ಸುರಿಯಿತು.

ಮಳೆ ಪ್ರಮಾಣ : ಸೆ. 1ರಿಂದ 12ರವರೆಗಿನ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ 6 ತಾಲ್ಲೂಕುಗಳಲ್ಲೂ ಮಳೆಯಾಗಿದೆ. ಮಳೆ ವಿವಿರ ಹೀಗಿದೆ.

ಬಾಗೇಪಲ್ಲಿ - 10.04 ಸೆಂ.ಮೀ
ಚಿಕ್ಕಬಳ್ಳಾಪುರ - 12.42 ಸೆಂ.ಮೀ
ಚಿಂತಾಮಣಿ - 12.78 ಸೆಂ.ಮೀ
ಗೌರಿಬಿದನೂರು - 20.78 ಸೆಂ.ಮೀ
ಗುಡಿಬಂಡೆ - 13.28 ಸೆಂ.ಮೀ
ಶಿಡ್ಲಘಟ್ಟ - 14.76 ಸೆಂ.ಮೀ.

ಸೆಪ್ಟೆಂಬರ್ 12ರವರೆಗೆ ತಾಲ್ಲೂಕಿನಲ್ಲಿ ಸರಾಸರಿ 45.24 ಸೆಂ.ಮೀ. ಮಳೆಯಾಗಿದೆ. ಸಾಮಾನ್ಯ ಮಳೆ ಪ್ರಮಾಣ 51.06 ಸೆಂ.ಮೀ. ಮಳೆಯಾಗಬೇಕಿತ್ತು. ಆದರೆ ಸೆಪ್ಟೆಂಬರ್ ತಿಂಗಳಲ್ಲಿ 11.98 ಸೆಂ.ಮೀ. ಮಳೆಯಾಗಿದೆ. ಬಹುತೇಕ ಬಿತ್ತನೆ ಕಾರ್ಯ ಮುಗಿದಿದೆ.

ಜಿಲ್ಲೆಯಲ್ಲಿ ಜೂನ್-ಜುಲೈ ತಿಂಗಳಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ ಬಿತ್ತನೆಯೂ ಕಡಿಮೆಯಾಯಿತು. ಆಗಸ್ಟ್ ಅಂತ್ಯದಲ್ಲಿ ಹಾಗೂ ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾಗಿರುವುದರಿಂದ ತಾಲ್ಲೂಕಿನಲ್ಲಿ ಶೇ. 86.65ರಷ್ಟು ಬಿತ್ತನೆಯಾಗಿದೆ. ಮುಂಗಾರು ಹಂಗಾಮಿನಲ್ಲಿ ಒಟ್ಟು 33120 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಕೃಷಿ ಇಲಾಖೆ ಹೊಂದಿತ್ತು. ಆದರೆ ಸೆಪ್ಟೆಂಬರ್ 12ರವರೆಗೆ 28698 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ.

ಕೃಷಿ ಭೂಮಿ ವಿಸ್ತೀರ್ಣ : ಜಿಲ್ಲೆಯ ಜನರ ಪ್ರಧಾನ ವೃತ್ತಿ ಕೃಷಿ. ಶೇ.ಸು. 74 ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿರುತ್ತಾರೆ. ಒಟ್ಟು ಸು. 28698 ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ ರಾಗಿ, ತೊಗರಿ, ಮುಸುಕಿನ ಜೋಳ, ಟೊಮ್ಯಾಟೋ, ಆಲೂಗಡ್ಡೆ, ನೆಲಗಡಲೆ ಪ್ರಮುಖವಾಗಿ ಬೆಳೆಯುತ್ತಿದ್ದರು. 12 ಸಾವಿರ ಹೆಕ್ಟೇರ್ ರಾಗಿಯ ಬಿತ್ತನೆ ಗುರಿಯನ್ನು ಹೊಂದಿದ್ದು 14025 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ನಡೆದಿದೆ. ಅಂದರೆ ಶೇ 116.88 ಸಾಧನೆಯಾಗಿದೆ. 2850 ಹೆಕ್ಟೇರ್ ಪ್ರದೇಶದಲ್ಲಿ ಹೈಬ್ರಿಡ್ ಮುಸುಕಿನ ಜೋಳ ಬಿತ್ತನೆ ಗುರಿ ಹೊಂದಿದ್ದು 4545 ಹೆಕ್ಟೇರ್ ಬಿತ್ತನೆಯಾಗುವ ಮೂಲಕ ಶೇ 159.47ರಷ್ಟು ಸಾಧನೆಯಾಗಿದೆ.

ಪ್ರಾಚೀನ ಕಾಲದಿಂದಲೂ ಜಿಲ್ಲೆಯಲ್ಲಿ ಒಣಬೇಸಾಯವು ರೂಢಿಯಲ್ಲಿದೆ. ಸಾಂಪ್ರದಾಯಿಕವಾಗಿ ಮಳೆಯನ್ನವಲಂಬಿಸಿ ಕೃಷಿಯನ್ನು ಕೈಗೊಳ್ಳಲಾಗುತ್ತಿದೆ. ಮಣ್ಣು ಮತ್ತು ನೀರು ಸಂರಕ್ಷಣೆಯ ಬಗ್ಗೆ ಯುಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಜಿಲ್ಲೆಯ ಪೂರ್ವ ಮತ್ತು ಪಶ್ಚಿಮ ಘಟ್ಟಗಳ ನಡುವೆ ವಿಸ್ತರಿಸಿದ್ದು ಈಶಾನ್ಯ ಮತ್ತು ನೈಋತ್ಯ ಮಾರುತಗಳ ಪ್ರಭಾವಕ್ಕೆ ಒಳಗಾಗಿದೆ. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 730 ಮಿ.ಮೀ. ಆಗಿದೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಗರಿಷ್ಠ 36 ಡಿಗ್ರಿ ಉಷ್ಣತೆ ಕಂಡುಬರುತ್ತದೆ.

ಪೂರ್ವದ ಒಣ ವಲಯವು ಮಳೆಯಾಶ್ರಿತ ಪ್ರದೇಶವಾಗಿದ್ದು, ರಾಗಿ ಮತ್ತು ಸಜ್ಜೆ ಪ್ರಧಾನವಾದ ಆಹಾರ ಬೆಳೆಗಳಾಗಿವೆ. ದ್ವಿದಳ ಧಾನ್ಯ ಬೆಳೆಗಳಲ್ಲಿ ಹುರುಳಿ, ಅವರೆ, ತೊಗರಿ; ಎಣ್ಣೆಕಾಳು, ಹರಳು ಮತ್ತು ಸೂರ್ಯಕಾಂತಿ ಹಾಗೂ ತೋಟದ ಬೆಳೆಗಳಲ್ಲಿ ಮಾವು, ದ್ರಾಕ್ಷಿ, ತೆಂಗು, ಪ್ರಮುಖ ಬೆಳೆಗಳಾಗಿವೆ. ನೀರಾವರಿಯಲ್ಲಿ ಕಬ್ಬು ಮತ್ತು ಮುಸುಕಿನ ಜೋಳ ಪ್ರಧಾನ ಬೆಳೆಗಳು.

ಬಾವಿ ಮತ್ತು ಕೆರೆ ನೀರಿನ ಆಶ್ರಯದಲ್ಲಿ ಎಲೆಕೋಸು, ಟೊಮ್ಯಾಟೋ, ಬದನೆ, ಮೆಣಸಿನಕಾಯಿ ಮುಂತಾದ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಆರ್ಥಿಕ ಬೆಳೆಗಳಲ್ಲಿ ಹಿಪ್ಪುನೇರಳೆ, ಆಲೂಗಡ್ಡೆ, ಅರಿಸಿನ, ಶುಂಠಿ, ದ್ರಾಕ್ಷಿ, ಬಾಳೆ ಮತ್ತು ವೀಳ್ಯದೆಲೆ ಮುಖ್ಯವಾದ ಬೆಳೆಗಳು.

ಕೃಷಿ ಋತುಗಳು : ವಾರ್ಷಿಕವಾಗಿ ಎರಡು ಬೆಳೆ ಬೆಳೆಯುವ ಪದ್ಧತಿ ರೂಢಿಯಲ್ಲಿದೆ. ಖಾರೀಫ್ ಅಥವಾ ಮುಂಗಾರು ಪ್ರಮುಖ ಕೃಷಿ ಋತುವಾಗಿದ್ದು ವಾರ್ಷಿಕ ಮೂರು ಬೆಳೆಗಳನ್ನು ಬೆಳೆಯಲಾಗುತ್ತದೆ. ಸ್ಥಳೀಯವಾಗಿ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬಿತ್ತುವ ಬೆಳೆಗಳನ್ನು ಕಾರ್ ಅಥವಾ ಮುಂಗಾರು ಪೂರ್ವ ಬೆಳೆಗಳು, ಜುಲೈ ತಿಂಗಳಲ್ಲಿ ಬೆಳೆಯುವ ಬೆಳೆಗಳನ್ನು ಹೈನ್ ಅಥವಾ ಮುಂಗಾರು ಅನಂತರದ ಬೆಳೆಗಳು ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತುವ ಬೆಳೆಗಳನ್ನು ಹಿಂಗಾರು ಬೆಳೆಗಳೆಂದು ಕರೆಯಲಾಗುತ್ತದೆ. ಜಿಲ್ಲೆಯಲ್ಲಿ ಒಟ್ಟು 111892 ಕೃಷಿ ಭೂ ಹಿಡುವಳಿದಾರರಿದ್ದು ಒಟ್ಟು ವಿಸ್ತೀರ್ಣ 52147 ಹೆ.

ಭೂಗುಣ-ಮಣ್ಣು : ಜಿಲ್ಲೆಯಲ್ಲಿರುವ ಮಣ್ಣನ್ನು ಕೆಂಪು ಮಣ್ಣು, ಕೆಂಪುಗೋಡು ಮಣ್ಣು ಮತ್ತು ಜಂಬಿಟ್ಟಿಗೆ ಮಣ್ಣುಎಂದು ಮೂರು ಮುಖ್ಯ ಗುಂಪುಗಳನ್ನಾಗಿ ವಿಂಗಡಿಸಬಹುದು. ಜೇಡಿಮಣ್ಣು ಅಲ್ಲಲ್ಲಿ ಕಂಡುಬರುವುದು.

ಕೆಂಪುಮಣ್ಣು : ಈ ಮಣ್ಣು ಆಮ್ಲಯುಕ್ತವಾದುದು, ನೈಸ್ ಮತ್ತು ಗ್ರಾನೈಟ್ ಶಿಲೆಗಳಿಂದ ರೂಪುಗೊಂಡಿದೆ. ಇಳಿಜಾರು ಹೆಚ್ಚಾಗಿರುವ ಪ್ರದೇಶದಲ್ಲಿ ಕಾಣಬಹುದು. ಇದು ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಕೆಂಪು ಮಣ್ಣು ಕೃಷಿಗೆ ಯೋಗ್ಯವಾಗಿದ್ದು ರಸಗೊಬ್ಬರಗಳ ಬಳಕೆಗೆ ಸ್ಪಂದಿಸುತ್ತದೆ. ಈ ಮಣ್ಣಿನಲ್ಲಿ ವಿಶೇಷವಾಗಿ ತರಕಾರಿ ಬೆಳೆಗಳನ್ನು ಬೆಳೆಯಬಹುದು. ಗುಡಿಬಂಡೆ, ಚಿಂತಾಮಣಿ ತಾಲ್ಲೂಕಿನಲ್ಲಿಯೂ ಇದು ಕಂಡುಬರುತ್ತದೆ. ರಾಗಿ, ನೆಲಗಡಲೆ ಮತ್ತು ದ್ವಿದಳ ಧಾನ್ಯ ಬೆಳವಣಿಗೆಗೆ ಯೋಗ್ಯವಾದುದು.

ಕೆಂಪು ಗೋಡು ಮಣ್ಣು : ಏರು ತಗ್ಗಿನಲ್ಲಿರುವ ಗ್ರಾನೈಟ್ ಕಲ್ಲಿನ ಪ್ರದೇಶಗಳಲ್ಲಿ ಕಾಣಬರುತ್ತದೆ. ಇದು ಅಚ್ಚ ಕಂದು ಬಣ್ಣದಿಂದ ಅಚ್ಚ ಕೆಂಪು ಬಣ್ಣ ಹೊಂದಿದ್ದು, ಮೇಲ್ಭಾಗದ ಪದರಗಳಲ್ಲಿ ಮರಳು ಮಿಶ್ರಿತ ಗೋಡಿನಿಂದ ಜೇಡಿಮಿಶ್ರಿತ ಗೋಡಿರುವುದು ಕಂಡುಬರುತ್ತದೆ. ಈ ಮಣ್ಣಿಗೆ ನೀರು ಬಸಿಯುವ ಶಕ್ತಿ ಇದೆ. ಈ ವಿಧದ ಮಣ್ಣು ಗೌರಿಬಿದನೂರು, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಹರಡಿದೆ.

ಜಂಬಿಟ್ಟಿಗೆ ಮಣ್ಣು : ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಕೆಲವು ಕಡೆ ಈ ಮಣ್ಣು ಕಂಡುಬರುತ್ತದೆ. ಇದರಲ್ಲಿ ಪದರಗಳು ಬಹು ಆಳದವರೆವಿಗೂ ಒಂದೇ ಸಮನಾಗಿರುವುದನ್ನು ಕಾಣಬಹುದು. ಇವು ಹಳದಿ ಮಿಶ್ರಿತ ಕೆಂಪು ಬಣ್ಣದವರೆಗೂ ಕಂಡುಬರುತ್ತವೆ. ಈ ಮಣ್ಣಿನಲ್ಲಿ ನೆಲಗಡಲೆ, ಹುಚ್ಚೆಳ್ಳು, ದ್ವಿದಳ ಧಾನ್ಯ ಹಾಗೂ ತೃಣ ಧಾನ್ಯಗಳನ್ನು ಬೆಳೆಯಲಾಗುತ್ತದೆ.

ಕೃಷಿ ಪಾಠಶಾಲೆ : ಜಿಲ್ಲೆಯಲ್ಲಿ ಕಾಗತಿಯಲ್ಲಿ ಕೃಷಿ ಪಾಠಶಾಲೆಯನ್ನು ಸ್ಥಾಪಿಸಲಾಗಿದೆ. ಕೃಷಿಯು ಸಾಂಪ್ರದಾಯಿಕವಾಗಿ ಒಂದು ಕೌಟುಂಬಿಕ ಉದ್ದಿಮೆ ಎಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ ಇದುರೈತ ಮಹಿಳೆಯರು ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ. ಕೃಷಿ ಉತ್ಪಾದನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಹಿಳೆಯರು ಅತಿ ಮುಖ್ಯ ಪಾತ್ರ ವಹಿಸುತ್ತಾರೆ.

ಜೈವಿಕ ಗೊಬ್ಬರಗಳ ಬಳಕೆ : ಸೂಕ್ಷ್ಮಾಣುಜೀವಿಗಳಿಂದ ತಯಾರಿಸಲ್ಪಡುವ ಜೈವಿಕ ಗೊಬ್ಬರಗಳು ಸಸ್ಯಗಳಿಗೆ ಪೋಷಕಾಂಶಗಳನ್ನು ಅದರಲ್ಲೂ ಹೆಚ್ಚಾಗಿ ಸಾರಜನಕವನ್ನು ಒದಗಿಸುತ್ತವೆ. ಜೈವಿಕ ಗೊಬ್ಬರಗಳನ್ನು ತಯಾರಿಸುವ ಸೂಕ್ಷ್ಮಾಣುಜೀವಿಗಳು ಅಜೋಲ, ಪಾಚಿ ಮತ್ತು ರೈಜೋಬಿಯಂ ಗುಂಪಿಗೆ ಸೇರಿವೆ.

ಅಜೋಲ ಎಂಬುದು ನೀರಿನ ಮೇಲೆ ತೇಲಾಡಿಕೊಂಡು ಬೆಳೆಯಬಲ್ಲ ಒಂದು ಸಸ್ಯ. ಇದಕ್ಕೆ ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಹಿಡಿದಿಟ್ಟುಕೊಳ್ಳುವ ಶಕ್ತಿ ಇದೆ. ಈ ಕಾರ್ಯದಲ್ಲಿ ಇದರಲ್ಲಿರುವ ಅನಬಿನಾ ಎಂಬ ನೀಲಿ ಹಸುರು ಪಾಚಿ ಸಹಾಯ ಮಾಡುತ್ತದೆ.

ರಂಜಕ ಕರಗಿಸುವ ಜೀವಾಣು ಗೊಬ್ಬರ : ಕೆಲವೊಂದು ಏಕಾಣು ಹಾಗೂ ಶಿಲೀಂಧ್ರ ವರ್ಗಗಳಿಗೆ ಸೇರಿದ ಸೂಕ್ಷ್ಮಾಣುಗಳು ಸಾವಯವ ಪದಾರ್ಥಗಳ ಮೇಲೆ ಬೆಳೆದು ಗ್ಲುಕೋನಿಕ್, ಸಿಟ್ರಿಕ್, ಅಸಿಟಿಕ್ ಇತ್ಯಾದಿ ಸಾವಯವ ಆಮ್ಲಗಳನ್ನು ಉತ್ಪಾದಿಸುತ್ತವೆ.

ಎರೆಹುಳು ಗೊಬ್ಬರ : ದನ, ಕುರಿ, ಮೇಕೆಗಳ ತ್ಯಾಜ್ಯ ವಸ್ತುಗಳು ಮತ್ತು ಕಳೆ, ಕೊಳೆ, ಹೊಟ್ಟು, ತರಕಾರಿ, ಹಸುರೆಲೆ, ತರಗು ಇತ್ಯಾದಿ ಕಚ್ಚಾ ವಸ್ತುಗಳಿಂದ ಎರೆಹುಳು ಗೊಬ್ಬರವನ್ನು ತಯಾರಿಸಲಾಗುತ್ತದೆ. ಈ ಗೊಬ್ಬರದಲ್ಲಿರುವ ಪೋಷಕಾಂಶಗಳ ಪ್ರಮಾಣವು ಬಳಸುವ ತ್ಯಾಜ್ಯ ವಸ್ತುಗಳನ್ನವಲಂಬಿಸಿರುತ್ತದೆ.

ಜಲಾನಯನ ಅಭಿವೃದ್ಧಿ : ಜಿಲ್ಲೆಯ ಸಾಗುವಳಿ ಪ್ರದೇಶವು ಮಳೆಯನ್ನೇ ಹೆಚ್ಚು ಅವಲಂಬಿಸಿರುವುದರಿಂದ ಖುಷ್ಕಿ ಪ್ರದೇಶವೆಂದು ಗುರುತಿಸಲ್ಪಟ್ಟಿದೆ. ಕಡಿಮೆ ಪ್ರಮಾಣದಲ್ಲಿ ಬೀಳುವ ಮಳೆಯು ಅಸಮರ್ಪಕವಾಗಿ ಹಂಚಲ್ಪಟ್ಟಿದ್ದು, ಮಳೆ ನೀರಿನ ಬಹು ಅಂಶ ಮಣ್ಣಿನಲ್ಲಿ ಇಂಗದೇ ಪೋಲಾಗುತ್ತಿರುವುದೇ ಈ ಪ್ರದೇಶದ ಪ್ರಮುಖ ಸಮಸ್ಯೆಯಾಗಿದೆ. ಇದರಿಂದ ಉದ್ಭವಿಸುವ ಶುಷ್ಕ ಪರಿಸ್ಥಿತಿಯಿಂದ ಬೆಳೆ ಇಳುವರಿ ಕಡಿಮೆಯಾಗುವುದಲ್ಲದೆ ಅನೇಕ ಸಂದರ್ಭಗಳಲ್ಲಿ ಬೆಳೆ ಪೂರ್ತಿ ನಾಶವಾಗುವ ನಿದರ್ಶನಗಳಿವೆ.

ಮಣ್ಣು ಮತ್ತು ತೇವಾಂಶ ಸಂರಕ್ಷಣೆ : ಖುಷ್ಕಿ ಭೂಮಿಯಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಅತ್ಯಂತ ಅಗತ್ಯದ ಅಂಶವಾಗಿದೆ. ಇದಕ್ಕೆ ಮಣ್ಣು/ಕಲ್ಲಿನ ಬದುಗಳ ಬಳಕೆ ಹಿಂದಿನಿಂದ ಬಳಕೆಯಲ್ಲಿರುವ ಪದ್ಧತಿಯಾಗಿದೆ. ಬದುಗಳ ಮೇಲ್ಮಣ್ಣಿನಲ್ಲಿ ಗಿಡಗಳನ್ನು ಬೆಳೆಸುವುದರಿಂದ ಬದುಗಳನ್ನು ಸುಭದ್ರಗೊಳಿಸುವುದರ ಜೊತೆಗೆ ಉರುವಲು ಮತ್ತು ಮೇವು ದೊರೆಯುತ್ತದೆ.

ನೀರಾವರಿ : ಜಿಲ್ಲೆಯಲ್ಲಿ 1998-99ರಲ್ಲಿ ತಾಲ್ಲೂಕುವಾರು ನೀರಾವರಿ ಪ್ರದೇಶ (ಹೆಕ್ಟೇರ್‌ಗಳಲ್ಲಿ)

ತಾಲ್ಲೂಕು	**ನಿವ್ವಳ ಬಿತ್ತನೆಯಾದ ಪ್ರದೇಶ**	**ನಿವ್ವಳ ನೀರಾವರಿಯಾದ ಪ್ರದೇಶ**	**ಶೇಕಡಾ**
ಗುಡಿಬಂಡೆ	14401	1848	12.83
ಗೌರಿಬಿದನೂರು	45999	13527	29.41
ಚಿಂತಾಮಣಿ	41441	8885	21.44
ಚಿಕ್ಕಬಳ್ಳಾಪುರ	25522	7926	31.06
ಬಾಗೇಪಲ್ಲಿ	30733	4416	14.37
ಶಿಡ್ಲಘಟ್ಟ	26905	7689	28.58

ನೀರಾವರಿ ಪದ್ಧತಿಗಳು : ಪಟ್ಟೆ ನೀರಾವರಿ : ಮಣ್ಣಿನ ಫಲವತ್ತತೆಯಲ್ಲಿ ಹೆಚ್ಚು ವ್ಯತ್ಯಾಸವಾಗುವಂತೆ ಜಮೀನನ್ನು ಮಟ್ಟಮಾಡಲು ಸಾಧ್ಯವಿರುವ ಕಡೆಗಳಲ್ಲಿ ಈ ಪದ್ಧತಿಯನ್ನು ಅನುಸರಿಸಬಹುದು.

ಮಡಿ ನೀರಾವರಿ ಪದ್ಧತಿ : ಈ ಪದ್ಧತಿಯಲ್ಲಿ ಸುತ್ತಲೂ ಬದುವಿದ್ದು ಮಧ್ಯದ ಮಟ್ಟವಾದ ಜಮೀನಿಗೆ ನೀರು ಹಾಯಿಸಲಾಗುತ್ತದೆ. ಕಡಿಮೆ ನೀರು ಹಿಂಗುವ ಸಾಧಾರಣದಿಂದ ಸಮತಲ ಭೂಮಿಗೆ ಹೆಚ್ಚು ಯೋಗ್ಯವಾದ ಈ ಪದ್ಧತಿಯಲ್ಲಿ ಪಾತಿಗಳಲ್ಲಿ ಇಂಗುವಷ್ಟು ನೀರನ್ನು ಹಿಡಿದಿಡಲಾಗುತ್ತದೆ. ಮುಸುಕಿನ ಜೋಳ ದ್ವಿದಳ ಧಾನ್ಯ, ಎಣ್ಣೆಕಾಳು ಹಾಗೂ ಮೇವಿನ ಬೆಳೆಗಳಿಗೆ ಈ ಪದ್ಧತಿ ಯುಕ್ತ.

ಬದು ಮತ್ತು ಸಾಲು ಪದ್ಧತಿ : ಸಾಲುಗಳಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಹರಿಯುವ ಈ ಪದ್ಧತಿಯನ್ನು ಹಲವು ಬೆಳೆಗಳಲ್ಲಿ ಅನುಸರಿಸಬಹುದು. ಬದು ಮತ್ತು ಸಾಲುಗಳನ್ನು ಬೆಳೆಗಳಿಗೆ ತಕ್ಕಂತೆ ನಿರ್ಮಿಸಬೇಕು. ಕಬ್ಬು, ತೊಗರಿ, ಮುಸುಕಿನ ಜೋಳ, ಸೂರ್ಯಕಾಂತಿ,

ಆಲೂಗಡ್ಡೆ, ಮೆಣಸಿನಕಾಯಿ, ಟೊಮ್ಯಾಟೊ ಮುಂತಾದ ಬೆಳೆಗಳನ್ನು ಈ ಪದ್ಧತಿಯಲ್ಲಿ ಕೃಷಿ ಮಾಡಬಹುದು.

ಹನಿ ನೀರಾವರಿ ಪದ್ಧತಿ : ಈ ಪದ್ಧತಿಯಲ್ಲಿ ನೀರನ್ನು ಹನಿ ಹನಿಯಾಗಿ ಬುಡದ ವಲಯದಲ್ಲಿ ಮೇಲಿಂದ ಮೇಲೆ ಒದಗಿಸಲಾಗುತ್ತದೆ. ನೀರಿನ ಕೊರತೆ ಇರುವ ಮತ್ತು ಕ್ಷಾರಯುಕ್ತ ಜಮೀನಿನ ಪ್ರದೇಶಗಳಲ್ಲಿ ಈ ಪದ್ಧತಿ ಜನಪ್ರಿಯವಾಗಿದೆ.

ತುಂತುರು ಪದ್ಧತಿ : ಜಮೀನು ಮಟ್ಟ ಮಾಡಲು ಸಾಧ್ಯವಾಗದಂತೆ ಹೆಚ್ಚು ಇಳಿಜಾರು ಅಥವಾ ಕಡಿಮೆ ಆಳ ಇರುವ ಕಡೆಗಳಲ್ಲಿ ಈ ಪದ್ಧತಿ ತುಂಬಾ ಉಪಯುಕ್ತ. ಮಣ್ಣಿನ ನೀರು ಇಂಗುವ ಸಾಮರ್ಥ್ಯದ ಆಧಾರದ ಮೇಲೆ ಬೆಳೆಗಳ ಅಂತರಕ್ಕೆ ತಕ್ಕಂತೆ ಸಂಪರ್ಕಗಳನ್ನು ಜೋಡಿಸಿ ನೀರು ಕೊಡಬೇಕು.

ಕೃಷಿ ಉಪಕರಣಗಳು : ಭೂಮಿಯನ್ನು ಹದಮಾಡುವ ಉಪಕರಣಗಳಲ್ಲಿ ನೇಗಿಲು, ಬಂಡ್, ಪಾರ್ಮರ್, ಪಡ್ಲರ್, ರಿಡ್ಜರ್; ಬಿತ್ತನೆ ಉಪಕರಣಗಳಲ್ಲಿ ರಾಗಿ ಸಂಯುಕ್ತ ಕೂರಿಗೆ, ನೆಲಗಡಲೆ ಸಂಯುಕ್ತ ಕೂರಿಗೆ ಹಾಗೂ ಬಹುಸಾಲು ಸಾಧನ, ಡ್ರಂ ಸೀಡರ್; ಒಕ್ಕಣೆ ಸಾಧನಗಳಲ್ಲಿ ಕಡಲೆಕಾಯಿ ಸುಲಿಯುವ ಯಂತ್ರ, ತೆಂಗಿನ ಮರ ಹತ್ತುವ ಸಾಧನ, ತೆಂಗಿನಕಾಯಿ ಸುಲಿಯುವ ಸಾಧನ, ಗಾಳಿ ತೂರುವ ಯಂತ್ರ ಹಾಗೂ ಸುಧಾರಿತ ಕಣಜ.

ತೋಟಗಾರಿಕೆ : ರಾಜ್ಯದ ಅತಿ ಹೆಚ್ಚು ಹಣ್ಣು ಮತ್ತು ತರಕಾರಿ ಬೆಳೆಯುವ ಜಿಲ್ಲೆಯಾಗಿದೆ. ಮಾವಿನ ಹಣ್ಣು ಹೆಚ್ಚಾಗಿ ಬೆಳೆಯುವರು. ಇಲ್ಲಿ ವಿವಿಧ ಜಾತಿಯ ಮಾವಿನ ಹಣ್ಣುಗಳನ್ನು ದ್ರಾಕ್ಷಿಯನ್ನು ಹಲವಾರು ವರುಷಗಳಿಂದ ಹೊರ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ವಾಣಿಜ್ಯ ಬೆಳೆಗಳಾದ ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ ಮತ್ತು ವಾಣಿಜ್ಯ ಪುಷ್ಪ ಬೆಳೆಗಳಾದ ಗುಲಾಬಿ, ಚೆಂಡುಮಲ್ಲಿಗೆ, ಕನಕಾಂಬರ, ಸೇವಂತಿಗೆ ಮುಂತಾದವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ.

ತೋಟಗಾರಿಕೆ ಇಲಾಖೆ ಕಾರ್ಯಗತಗೊಳಿಸುತ್ತಿರುವ ಪ್ರಮುಖ ಯೋಜನೆಗಳು

1. ಬೀಜದ ತೆಂಗಿನಕಾಯಿಗಳ ಸಂಗ್ರಹಣೆ ಮತ್ತು ಸಸ್ಯಾಗಾರ ನಿರ್ವಹಣೆ
2. ರೈತರಿಗೆ ಹಾಗೂ ಗ್ರಾಮಾಂತರ ಮಹಿಳೆಯರಿಗೆ ತೋಟಗಾರಿಕೆ ತರಬೇತಿ
3. ಸಾಮಾಜಿಕ ತೋಟಗಾರಿಕೆ ಯೋಜನೆ
4. ಸಸ್ಯ ಸಂರಕ್ಷಣೆ ಔಷಧಿ ವಿತರಣೆ
5. ಶೀತಲ ಗೃಹಗಳ ಸಹಾಯಧನ ಯೋಜನೆ

ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹೆಕ್ಟೇರುಗಳಲ್ಲಿ [1990-91]

ತೆಂಗು - 74, ಗೋಡಂಬಿ - 2047, ವೀಳೆಯದೆಲೆ - 191, ಮೆಣಸಿನಕಾಯಿ - 1486, ಈರುಳ್ಳಿ 1181, ಆಲೂಗಡ್ಡೆ - 6395, ಟೊಮ್ಯಾಟೊ - 5056, ಬೀಟ್‌ರೂಟ್ - 341, ಕ್ಯಾರೆಟ್ - 816, ಮಾವು - 24298, ದ್ರಾಕ್ಷಿ - 1689, ದಾಳಿಂಬೆ 199, ಗುಲಾಬಿ - 21, ಚೆಂಡುಮಲ್ಲಿಗೆ - 54, ಸಂಪಿಗೆ 11

ಮೀನುಗಾರಿಕೆ : ರಾಜ್ಯದಲ್ಲೆ ಅತಿ ಹೆಚ್ಚು ಕೆರೆಗಳನ್ನು ಹೊಂದಿರುವುದರಿಂದ ಮೀನು ಉತ್ಪಾದನೆ ಕೃಷಿ ಮಾಡಲು ಅನುಕೂಲಕರವಾಗಿದೆ. ಜಿಲ್ಲೆಯ ಹೆಚ್ಚಿನ ಕೆರೆಗಳು ಹೂಳು ತುಂಬಿಕೊಂಡಿರುವುದರಿಂದ ಕೆರೆಗಳು ಕೇವಲ 233 ಮಾತ್ರ ಮೀನುಗಾರಿಕೆಗೆ ಯೋಗ್ಯವಾಗಿವೆ. ಸದಾ ತುಂಬಿರುವ ಕೆರೆಗಳಾಗಿರುವುದರಿಂದ ನೀರಾವರಿ ಸುಗಮವಾಗಿದೆ.

ಮೀನುಗಾರರ ತಾಲೂಕುವಾರು ಜನಸಂಖ್ಯೆ :

ತಾಲೂಕು	ಗಂಡಸರು	ಹೆಂಗಸರು	ಒಟ್ಟು
ಬಾಗೇಪಲ್ಲಿ	4400	3100	7500
ಚಿಕ್ಕಬಳ್ಳಾಪುರ	4120	3730	7850
ಚಿಂತಾಮಣಿ	4730	3960	8690
ಗೌರಿಬಿದನೂರು	4800	3830	8930
ಗುಡಿಬಂಡೆ	1150	9200	2070
ಶಿಡ್ಲಘಟ್ಟ	4270	3830	8100

ಮೀನುಮರಿ ಉತ್ಪಾದನಾ ಕೇಂದ್ರಗಳು : ಶಿಡ್ಲಘಟ್ಟ ತಾಲೂಕಿನ ಆನೂರು ಬಳಿಯಲ್ಲಿ ಮೀನುಮರಿ ಪರಿಪಾಲನ ಕೇಂದ್ರ ನಿರ್ಮಿಸಲಾಗಿದೆ. ಗೌರಿಬಿದನೂರು ಚಿಂತಾಮಣಿಯಲ್ಲಿಯೂ ಇದೆ.

ಜಿಲ್ಲೆಯಲ್ಲಿ ಲಭ್ಯವಿರುವ ಮೀನು ತಳಿಗಳು : ಹೂಮೀನು, ಕುಚ್ಚುಮೀನು, ಕೊರವ ಮೀನು, ಹಾವು ಮೀನು, ಮಾರವೆ ಮೀನು, ಚೇಳು ಮೀನು, ಬಾಳೆ ಮೀನು, ಗೊದ್ದಲೆ ಮೀನು, ಗಿರ್ಲು ಮೀನು, ಮುತ್ತಿನ ಮೀನು, ಗಾಜಿನ ಮೀನು, ಜಿಲಾಬಿ ಮೀನು, ಚಪ್ಪಲಿ ಮೀನು, ನೆತ್ತಿ ಕಣ್ಣು ಕೊರವ ಮೀನು, ಗುಂಡು ಪಕ್ಕ ಮೀನು, ಮೀಸೆ ಪಕ್ಕ, ಗಪ್ಪಿ ಮೀನು ಉಣಸೆ ಮೀನು ಇತ್ಯಾದಿ.

ಮೀನುಗಾರಿಕೆ ಇಲಾಖೆಯ ಉದ್ದೇಶಗಳು :

1 ಪ್ರಾಣಿ ಮೂಲದ ಸಸಾರಜನಕವನ್ನು ಅತಿ ಕಡಿಮೆ ಖರ್ಚಿನಲ್ಲಿ ಉತ್ಪಾದಿಸಿ ಜನಸಾಮಾನ್ಯರಿಗೆ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವುದು.

2. ಜಿಲ್ಲೆಯಲ್ಲಿ ಲಭ್ಯವಿರುವ ಎಲ್ಲಾ ಜಲಸಂಪನ್ಮೂಲ ಗಳನ್ನು ಸರ್ಕಾರದ ಆದೇಶದ ರೀತ್ಯಾ ವ್ಯವಸ್ಥಿತವಾಗಿ ವಿಲೇವಾರಿ ಮಾಡುವುದು

3. ರೈತರಿಗೆ ಸ್ವಂತ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಿಸಿ, ಮಿಶ್ರಮೀನು ಕೃಷಿ ಕೈಗೊಳ್ಳಲು ಉತ್ತೇಜನ ನೀಡುವುದು.

4. ಮೀನುಗಾರರ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು.

ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಮೀನುಗಾರಿಕೆ ಇಲಾಖೆಯ ಕೆಲವು ಮುಖ್ಯ ಕಾರ್ಯಕ್ರಮಗಳು

1. ಮೀನುಗಾರಿಕೆ ಕ್ಷೇತ್ರಗಳ ನಿರ್ಮಾಣ
2. ಮೀನುಗಾರಿಕೆ ಉತ್ಪಾದನೆ ಪಾಲನೆ ಮತ್ತು ವಿತರಣೆ

3. ಮೀನು ಸಾಕಾಣಿಕಾ ಕೊಳಗಳನ್ನು ನಿರ್ಮಿಸಲು ಮೀನು ಕೃಷಿಕರಿಗೆ ಸಹಾಯಧನ
4. ಮತ್ಸ್ಯಾಲಯ ಸ್ಥಾಪನೆ ಮತ್ತು ನಿರ್ವಹಣೆ
5. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ
6. ಮೀನುಗಾರರ ಸಹಕಾರ ಸಂಘಗಳ ಸ್ಥಾಪನೆ

ಪಶು ಸಂಗೋಪನೆ : ಪಶುಸಂಪತ್ತನ್ನು ರೈತನ ಬೆನ್ನೆಲುಬು ಎಂದು ಕರೆಯುತ್ತಾರೆ. ರೈತರ ಆರ್ಥಿಕ ಅಭಿವೃದ್ಧಿಗೆ ಹಾಗೂ ವ್ಯವಸಾಯದ ವಿವಿಧ ಕೆಲಸ ಕಾರ್ಯಗಳಿಗೆ ಜಾನುವಾರುಗಳು ಅತ್ಯಾವಶ್ಯಕ. ಹಾಗಾಗಿ ಹಸು ಮತ್ತು ಎಮ್ಮೆ, ಮಾಂಸಕ್ಕಾಗಿ ಕೋಳಿ, ಕುರಿ, ಮೇಕೆ, ಹಂದಿ ಮತ್ತು ಮೊಲ ಮುಂತಾದವುಗಳನ್ನು ಸಾಕಲಾಗುತ್ತದೆ. ಪಶುಸಂಗೋಪನೆಯು ವ್ಯವಸಾಯದ ಜೊತೆಯಲ್ಲಿಯೇ ಸಾಗುತ್ತಾ ಬಂದಿದೆ.

ವ್ಯವಸಾಯಕ್ಕೆ ಎತ್ತುಗಳೇ ಆಧಾರ ಹಾಗಾಗಿ ಹಳ್ಳಿಕಾರ್ ತಳಿಯನ್ನು ಅಭಿವೃದ್ಧಿಪಡಿಸಲಾಗಿತ್ತು. ರಾಜ್ಯದಲ್ಲಿ ಹನ್ನೊಂದು ಜಾನುವಾರು ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿವೆ.

ಕುರಿ ಅಭಿವೃದ್ಧಿ : ಇತ್ತೀಚೆಗೆ ಗೋಮಾಳಗಳು ಕಡಿಮೆ ಆಗುತ್ತಿರುವುದರಿಂದಲೂ ಕುರಿ ಸಂತಾನ ಅಭಿವೃದ್ಧಿಗಿಂತ ಕುರಿಯ ಮಾಂಸದ ಬೇಡಿಕೆ ಹೆಚ್ಚಾಗಿರುವುದರಿಂದಲೂ ಕುರಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿದೆ. ಕುರಿಯ ಗೊಬ್ಬರ ಬೆಳೆಗೆ ಉತ್ತಮವಾಗಿರುವುದರಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕುರಿಗಳನ್ನು ಸಾಕಬೇಕಾಗಿದೆ. (ಕುರಿಯಿದ್ದವನು ಕುಬೇರ) ನಾಣ್ಣುಡಿ ಇದೆ. ವ್ಯವಸಾಯ ಜಮೀನಿನಲ್ಲಿಯೇ ಸುಧಾರಿತ ಹುಲ್ಲು ಬೆಳೆದು ಕುರಿಗಳನ್ನು ಸಾಕಬಹುದು. ಇದಕ್ಕಾಗಿ ಮಿಶ್ರ ತಳಿಯ ಬೀಜ ಟಗರುಗಳನ್ನು ಒದಗಿಸಲಾಗುತ್ತಿದೆ.

ಮೇಕೆಗಳಿಗೆ ಗಿಡ ಮರಗಳ ಎಲೆಯೇ ಮುಖ್ಯ ಆಹಾರ. ಮೇಕೆಗಳಿದ್ದಲ್ಲಿ ಗಿಡ ಮರಗಳು ನಾಶ ಎಂಬ ಪ್ರತೀತಿಯಿದೆ. ಹಾಗಾಗಿ ಮೇಕೆ ಸಾಕಾಣಿಕೆಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿಲ್ಲ.

ಹಂದಿ ಸಾಕಾಣಿಕೆ : ಆರ್ಥಿಕ ಅಭಿವೃದ್ಧಿಗೆ ಹಂದಿ ಸಾಕಾಣಿಕೆಯೂ ಮುಖ್ಯ ಉದ್ಯೋಗವಾಗಿದೆ. ಇತ್ತೀಚೆಗೆ ವೈಜ್ಞಾನಿಕ ರೀತಿಯಲ್ಲಿ ಹಂದಿ ಸಾಕಾಣಿಕೆಯನ್ನು ಕೈಗೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮತ್ತು ವಿದ್ಯಾವಂತ ನಿರುದ್ಯೋಗಿಗಳೂ ಮುಂದೆ ಬರುತ್ತಿದ್ದಾರೆ.

ಮೊಲ ಸಾಕಾಣಿಕೆ : ಕೋಳಿ ಸಾಕಾಣಿಕೆ : ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಿಂದಪಡೆದ ಗಿರಿರಾಜ ಮಾತೃಕೋಳಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಾಕಿ, ಸಂವರ್ಧಿಸಿ ಕೋಳಿ ಮರಿಗಳನ್ನು ಉತ್ಪಾದಿಸಿ ಅವುಗಳನ್ನು ರೈತರಿಗೆ ಮತ್ತು ಇಲಾಖೆಯ ಸಾಕಾಣಿಕೆ ಕ್ಷೇತ್ರಗಳಿಗೆ ಸರಬರಾಜು ಮಾಡುವರು.

ಒಟ್ಟು ಜಾನುವಾರುಗಳಲ್ಲಿ ಬಾಗೇಪಲ್ಲಿ 74,280, ಚಿಕ್ಕಬಳ್ಳಾಪುರ 54,514, ಚಿಂತಾಮಣಿ 96674, ಗೌರಿಬಿದನೂರು 83558, ಗುಡಿಬಂಡೆ 24881, ಶಿಡ್ಲಘಟ್ಟ 63246ರಷ್ಟು ಪಶುಗಳನ್ನು ಹೊಂದಿವೆ.

ರೇಷ್ಮೆ ಕೃಷಿ : ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಅತ್ಯಂತ ಉತ್ಕೃಷ್ಟವಾಗಿದೆ. ಇಲ್ಲಿ ಹಿಂದಿನಿಂದ ಪ್ರಸ್ತುತದಲ್ಲಿ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ರೇಷ್ಮೆ ಬೆಳೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ತಂತ್ರಜ್ಞಾನಗಳು, ತಳಿಗಳು ಮತ್ತು ರೇಷ್ಮೆ ಬೆಳೆಯ ಬೆಲೆ ಹೆಚ್ಚಾಗುತ್ತಿರುವುದರಿಂದ ಆರ್ಥಿಕ ಕಸುಬಾಗಿ ತಲೆ ಎತ್ತುತ್ತಿದೆ. ಜಿಲ್ಲೆಯ ಚಿಕ್ಕಬಳ್ಳಾಪುರ ಮತ್ತು ಶಿಡ್ಲಘಟ್ಟದಲ್ಲಿ ಅತಿ ಹೆಚ್ಚು ರೇಷ್ಮೆ ಬೆಳೆಗಾರರಿದ್ದಾರೆ. ಶಿಡ್ಲಘಟ್ಟ ತಾಲ್ಲೂಕು ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ಕೃಷಿಯಲ್ಲಿ ರಾಜ್ಯಾದ್ಯಂತ ಹೆಚ್ಚಿನ ಸ್ಥಾನ ಪಡೆದಿದೆ.

ರೇಷ್ಮೆ ಬೆಳೆಗೆ ಸಂಬಂಧಿಸಿದಂತೆ ಹಿಪ್ಪುನೇರಳೆಯನ್ನು ಬೆಳೆಯಲು ಜನರು ನೀರಾವರಿ ಹಾಗೂ ಮಳೆಯನ್ನು ಆಶ್ರಯಿಸಿದ್ದಾರೆ. ಇದರಿಂದ ಗೂಡು ಉತ್ಪಾದನೆ, ರೇಷ್ಮೆ ಬಟ್ಟೆಗಳನ್ನು ತಯಾರಿಸುವುದು ಎಲೆ ಬಿಚ್ಚುವುದನ್ನು ಮಾಡಲಾಗುತ್ತದೆ. ಚಿಕ್ಕಬಳ್ಳಾಪುರ ಹಾಗೂ ಶಿಡ್ಲಘಟ್ಟ ಬಿಟ್ಟರೆ ಉಳಿದ ತಾಲೂಕುಗಳಲ್ಲಿ ರೇಷ್ಮೆ ಬೆಳೆ ಅಲ್ಪ ಪ್ರಮಾಣದಲ್ಲಿದೆ.

ಸಾಂಪ್ರದಾಯಿಕ ಕೃಷಿ ವಿಧಾನಗಳು

ನಾಟಿ/ಏರು ಪದ್ಧತಿ : ಒಂದು ಸ್ಥಳದಲ್ಲಿ ಮಣ್ಣನ್ನು ರಾಶಿ ಮಾಡಿ ಅದನ್ನು ಚೆನ್ನಾಗಿ ಹದಮಾಡಿಕೊಂಡು ಅದಕ್ಕೆ ಕೊಟ್ಟಿಗೆ ಗೊಬ್ಬರವನ್ನು ಬೆರೆಸಿ ಬೀಜಗಳನ್ನು ಬಿತ್ತನೆ ಮಾಡಿ ನೀರನ್ನು ಸ್ವಲ್ಪ ಪ್ರಮಾಣದಲ್ಲಿ ಚಿಮುಕಿಸಿ, ಸಮತಟ್ಟಾದ ಜಾಗಕ್ಕೆ ತೆಂಗಿನ ಗರಿಯಿಂದ ನೆಯ್ದು, ಮಟ್ಟಾಲ ಗರಿಯಿಂದ ಮುಚ್ಚುವರು. ಅದಕ್ಕೆ ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ನೀರನ್ನು ಚಿಮುಕಿಸಿದರೆ ಒಂದು ವಾರದ ಬಳಿಕ ಮೊಳಕೆಯೊಡೆಯುತ್ತದೆ. ಅನಂತರ ಒಂದು ತಿಂಗಳ ಒಳಗಾಗಿ ನಾಟಿ ಮಾಡುವರು.

ಅಗೆ ಪದ್ಧತಿ : ಈ ಪದ್ಧತಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಂಡುಬರುತ್ತದೆ. ಕೆಸರು ಗದ್ದೆಯಲ್ಲಿ ಮಣ್ಣನ್ನು ಚೆನ್ನಾಗಿ ಉಳುಮೆ ಮಾಡಿ ದನಕರುಗಳಿಂದ ಚೆನ್ನಾಗಿ ತುಳಿಸಿ ಹದ ಮಾಡಿ ಹಾಗೂ ಅಂಟುಬರುವಂತೆ ಮಾಡಿ ಚೆನ್ನಾಗಿ ನೀರು ಹಾಯಿಸಿ ನೀರು ಇರುವಾಗಲೇ ಮೊಳಕೆ ಬಂದಿರುವ ಸಸಿಗಳನ್ನು ನಾಟಿಮಾಡುವುದರಿಂದ ಇಳುವರಿ ಹೆಚ್ಚಾಗಿ ಬರುತ್ತದೆ.

ಸಾಲು ಬಿತ್ತುವ ಪದ್ಧತಿ : ನೇಗಿಲಿನ ಸಹಾಯದಿಂದ ಚೆನ್ನಾಗಿ ಉಳುಮೆಮಾಡಿ ಅನಂತರ ಮಳೆ ಬಂದಾಗ ಭೂಮಿ ತೇವಾಂಶ ಇರುವುದನ್ನು ಗಮನಿಸಿ ಮರದ ನೇಗಿಲಿನಿಂದ ಸಾಲಾಗಿ ಉಳುಮೆ ಮಾಡಿ ಬಿತ್ತನೆ ಕಾಳುಗಳನ್ನು ಸಾಲಾಗಿ ಬಿತ್ತುಕೊಂಡು ಹೋಗುವುದು. ಬಿತ್ತಿ ಮುಗಿದ ಮೇಲೆ ನೆಲದ ಮೇಲೆ ಬಳ್ಳು ಹೊಡೆಯುವುದು. ಈ ಪದ್ಧತಿಯು ಹೆಚ್ಚಾಗಿ ಮಳೆಯನ್ನೆ ಆಶ್ರಯಿಸಿದೆ.

ಕೈನಾಟಿ ಪದ್ಧತಿ : ಈ ಪದ್ಧತಿಯ ಮೂಲಕ ರಾಗಿ ಮತ್ತು ಬತ್ತವನ್ನು ಹೊಲ ಮತ್ತು ಗದ್ದೆಗಳಲ್ಲಿ ನೆಡುವ ವಿಧಾನ. ಮೊಳಕೆ ಬಂದಿರುವ ಪೈರನ್ನು ಗದ್ದೆಯಲ್ಲಿ ನಾಟಿ ಮಾಡಿಸುವರು ಪೈರನ್ನು ಕಟ್ಟುಕಟ್ಟಿ ಗದ್ದೆಯಲ್ಲಿ ಅಲ್ಲಲ್ಲಿ ಇಡುತ್ತಾರೆ. ಅನಂತರ ಕೃಷಿಕರು ಸಾಲುಸಾಲಾಗಿ ನಾಟಿ ಮಾಡುವರು. ಇದರಿಂದ ಪೈರು ಚೆನ್ನಾಗಿ ಬೆಳೆದು ಅಧಿಕ ಇಳುವರಿ ಬರುತ್ತದೆ.

ಕಳೆ ತೆಗೆಯುವ ವಿಧಾನ : ಯಾವುದೇ ಧಾನ್ಯಗಳನ್ನು ಬಿತ್ತನೆ ಮಾಡಿದ ಅನಂತರ ಅವುಗಳ ಪಕ್ಕದಲ್ಲಿ ಕಳೆ ಬೆಳೆದು ಪೈರಿನ ಉತ್ತಮ ಬೆಳವಣಿಗೆಗೆ ತೊಂದರೆ ಕೊಡುತ್ತಿರುತ್ತದೆ. ಅವುಗಳನ್ನು ಬೇರ್ಪಡಿಸಿ ಪೈರನ್ನು ಚೆನ್ನಾಗಿ ಬೆಳೆಯಲು ಅನುಕೂಲ ಮಾಡಿಕೊಡುವುದು ಒಳ್ಳೆಯದು.

ಕಾಡುಗಳು : ಜಿಲ್ಲೆಯಲ್ಲಿ ಒಟ್ಟು 49704 ಚ.ಕಿ.ಮೀ. ಅರಣ್ಯ ಪ್ರದೇಶವಿದೆ. ಹೆಚ್ಚಾಗಿ ನೀಲಗಿರಿ ನೇರಳೆಮರಗಳು, ಹೊನ್ನೆ, ಬೇವು ಇತ್ಯಾದಿ

ಬಗೆ ಬಗೆಯ ಮರಗಳು ಅಲ್ಲಲ್ಲಿ ತೋಪುಗಳಾಗಿ ಕಂಡುಬರುತ್ತವೆ. ಮರಗಳ ನೆರಳಿನ ಭಾಗದಲ್ಲಿ ಪೊದೆ ರೀತಿಯ ಸಸ್ಯವರ್ಗ ಹರಡಿಕೊಂಡಿದೆ. ಬಿದಿರೂ ಕೂಡ ಮುಖ್ಯ ಮರಗಳಲ್ಲಿ ಒಂದು ಅಲ್ಲಲ್ಲಿ ಕಾಡು ಪ್ರಾಣಿಗಳು ಕಂಡುಬರುತ್ತವೆ.

ಇತರೆ ಸೌಲಭ್ಯಗಳು : ಜಿಲ್ಲೆಯಲ್ಲಿ ಕೃಷಿಗೆ ಅಷ್ಟೇ ಅಲ್ಲದೆ ಜನಾರೋಗ್ಯ ಹಾಗೂ ನೈರ್ಮಲ್ಯ ವ್ಯವಸ್ಥೆಯಡಿ ನಗರ ಸಭೆ 54 ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದೆ. ಸಾಂಕ್ರಾಮಿಕ ರೋಗಗಳ ತಡೆಯಲ್ಲಿ ಮುಂಜಾಗ್ರತಾ ಕ್ರಮಗಳಾದ ಕ್ರಿಮಿನಾಶಕಗಳ ಸಿಂಪರಣೆ, ರೋಗ ನಿರೋಧಕ ಮದ್ದು ನೀಡುವಿಕೆ ಮುಂತಾದವುಗಳನ್ನು ಕೈಗೊಳ್ಳುತ್ತಿದೆ. ಶೈಕ್ಷಣಿಕ ಸೇವೆಯಡಿ ನಗರಸಭೆ ಒಂದು ಸಂಜೆಕಾಲೇಜು ಒಂದು ಶಿಶುವಿಹಾರ ನಡೆಸಲಾಗುತ್ತಿದೆ.

ಆಧಾರ ಗ್ರಂಥಗಳು

ಅಂತರ್‌ಜಾಲ (ರೈತಮಿತ್ರ)
ಕ್ಷೇತ್ರಕಾರ್ಯ - ಚಿಕ್ಕಬಳ್ಳಾಪುರ ಜಿಲ್ಲೆ
ಕೋಲಾರ ಜಿಲ್ಲಾ ಗ್ಯಾಸೆಟಿಯರ್, ಎಚ್. ಚಿತ್ತರಂಜನ್
'ಕರ್ನಾಟಕ' ವಿಷಯ ವಿಶ್ವಕೋಶ ಸಂ. 1
ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆ ಕೊಡುಗೆ, ಡಾ.ಬಿ. ವೆಂಕಟರಾಮಣ್ಣ


ಎನ್. ಪಿ.

ಚಿಕ್ಕಮಗಳೂರು ಜಿಲ್ಲೆಯ ಕೃಷಿ ಕರ್ನಾಟಕ ರಾಜ್ಯದ ಮೂವತ್ತು ಜಿಲ್ಲೆಗಳ ಪೈಕಿ ಒಂದು. 'ಮಾಯದಂಥಾ ಮಳೆ ಬಂತಣ್ಣಾ ಮದಗಾದ ಕೆರೆಗೆ...' ಎಂದು ಜನಪದರು ಹಾಡುವ ಮದಗದ ಕೆರೆ, ಲಕ್ಷ್ಮೀಶ ಕವಿಯ ದೇವನೂರು, ಆದಿ ಶಂಕರರು ವಿದ್ಯಾಧಿದೇವತೆ ಯನ್ನು ಆರಾಧಿಸಿ ಮಠ ಸ್ಥಾಪಿಸಿದ ಶೃಂಗೇರಿ, ರಾಜ್ಯದ ಅತ್ಯಂತ ಎತ್ತರದ ಶಿಖರ ಮುಳ್ಳಯ್ಯನ ಗಿರಿ, ಕಬ್ಬಿಣದ ಅದುರು ಉತ್ಪಾದನೆಗೆ ಹೆಸರಾಗಿದ್ದ ಕುದುರೆಮುಖ, ಬೇಸಗೆಯ ಗಿರಿಧಾಮ ಕೆಮ್ಮಣ್ಣುಗುಂಡಿ ಮತ್ತು ಹತ್ತು ಹಲವು ನದಿಗಳು ಉಗಮವಾಗುವ ಜಿಲ್ಲೆ.

ಮೇಲ್ಮೈ ಲಕ್ಷಣಗಳು : ಈ ಜಿಲ್ಲೆಯ ಪರ್ವತ ಶ್ರೇಣಿಯಿಂದ ಒಳಚಾಚಿ ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಲ್ಲಿ ಹಬ್ಬಿರುವ ಶಿಖರಗಳ ಪೈಕಿ ಮುಳ್ಳಯ್ಯನ ಗಿರಿಯ ಎತ್ತರ ಸಮುದ್ರ ಮಟ್ಟದಿಂದ 2,123 ಮೀ. ಇದರ ಸಮೀಪದಲ್ಲಿ ಇರುವ ಬಾಬಾ ಬುಡನ್‌ಗಿರಿ ಮತ್ತು ಕಲ್ಲತ್ತಿ ಗಿರಿಗಳು ಸಮುದ್ರಮಟ್ಟದಿಂದ ಅನುಕ್ರಮವಾಗಿ 2,071 ಮೀ ಮತ್ತು 2,051 ಮೀ ಎತ್ತರವಾಗಿವೆ. ಪಶ್ಚಿಮ ಘಟ್ಟದ ಕುದುರೆ ಮುಖ ಶಿಖರ 2,071 ಮೀ ಎತ್ತರವಾಗಿದೆ. ಕುದುರೆಮುಖದಂತೆ ತೋರುವ ಈ ಶಿಖರ ನಾವಿಕರಿಗೆ ಭೂಮಿಯ ಹೆಗ್ಗುರುತಾಗಿತ್ತು. ಇದೇ ಶ್ರೇಣಿಯಲ್ಲಿ ಬಲ್ಲಾಳರಾಯನ ದುರ್ಗ (1496 ಮೀ), ಗಂಗಾ ಮೂಲ (1,554 ಮೀ), ಶಕುನಗಿರಿ (1,551 ಮೀ), ಕಂಚಿಕಲ್ ದುರ್ಗ (1,360ಮೀ) ಮೊದಲಾದ ಶಿಖರಗಳಿವೆ.

ಜಿಲ್ಲೆಯ ಪೂರ್ವಭಾಗಕ್ಕೆ ಹೋದಂತೆಲ್ಲ ಬಯಲು ನಾಡಿನ ಲಕ್ಷಣಗಳು ಕಂಡುಬರುತ್ತವೆ. ಬಾಬಾ ಬುಡನ್‌ಗಿರಿಯ ತಪ್ಪಲಿನಿಂದ ಪೂರ್ವಕ್ಕೆ ಥಟ್ಟನೆ ಭೂಮಿಯ ಮಟ್ಟ ಇಳಿಯುತ್ತದೆ. ಮಲೆನಾಡಿನ ಸರಹದ್ದಿನಲ್ಲಿರುವ ಚಿಕ್ಕಮಗಳೂರಿನ ಎತ್ತರ 1,160 ಮೀ ಆದರೆ ಬಯಲು ಸೀಮೆಯಲ್ಲಿರುವ ಕಡೂರು 851 ಮೀ. ತರೀಕೆರೆ 745 ಮೀ. ಎತ್ತರವಾಗಿದೆ. ಕಡೂರು, ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ತರೀಕೆರೆಗಳೆಂಬ ಏಳು ತಾಲ್ಲೂಕುಗಳಲ್ಲಿ 32 ಹೋಬಳಿಗಳು, 1113 ಗ್ರಾಮಗಳು, 226 ಗ್ರಾಮಪಂಚಾಯ್ತಿಗಳು, 10 ಪಟ್ಟಣಗಳು ಇವೆ.

ಜಿಲ್ಲೆಯ ವಿಸ್ತೀರ್ಣ : ತಾಲ್ಲೂಕು ಕೇಂದ್ರಗಳನ್ನು ಒಳಗೊಂಡಿರುವ ಚಿಕ್ಕಮಗಳೂರು ರಾಜ್ಯದ 11ನೆಯ ದೊಡ್ಡ ಜಿಲ್ಲೆ. ಇದರ ಒಟ್ಟು ವಿಸ್ತೀರ್ಣ 7,199 ಚ.ಕಿ.ಮೀ. ಉತ್ತರಕ್ಕೆ ಶಿವಮೊಗ್ಗ, ಪೂರ್ವಕ್ಕೆ ಚಿತ್ರದುರ್ಗ ಹಾಗೂ ತುಮಕೂರು, ದಕ್ಷಿಣಕ್ಕೆ ಹಾಸನ, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು. ಇವು ಇದರ ಮೇರೆಗಳು. ಪೂರ್ವ



ಪಶ್ಚಿಮವಾಗಿ ಜಿಲ್ಲೆಯ ಗರಿಷ್ಠ ಉದ್ದ 137 ಕಿ.ಮೀ. ಉತ್ತರ ದಕ್ಷಿಣವಾಗಿ ಗರಿಷ್ಠ ಅಗಲ 88 ಕಿ.ಮೀ.

ವಾಯುಗುಣ : ಜಿಲ್ಲೆಯ ವಾಯುಗುಣ ಸಾಮಾನ್ಯವಾಗಿ ಹಿತಕರವಾದದ್ದು. ಇದರ ಪಶ್ಚಿಮ ಭಾಗ ಹೆಚ್ಚು ತಂಪು. ಚಳಿಗಾಲದಲ್ಲಿ ಚಳಿ ಹೆಚ್ಚು. ಗರಿಷ್ಠ ಉಷ್ಣತೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ. ತೇವಾಂಶ ಫೆಬ್ರವರಿಯಲ್ಲಿ ಶೇ 65, ಆಗಸ್ಟ್, ಸೆಪ್ಟೆಂಬರ್‌ಗಳಲ್ಲಿ ಶೇ 89.

ನದಿಗಳು : ಕರ್ನಾಟಕದಲ್ಲಿ ಹರಿಯುವ ಅನೇಕ ನದಿಗಳು ಹುಟ್ಟುವುದು ಈ ಜಿಲ್ಲೆಯಲ್ಲಿ. ಇಲ್ಲಿಯ ಪರ್ವತಗಳು ನದಿಗಳನ್ನು ಇಬ್ಭಾಗವಾಗಿ ಒಡೆಯುತ್ತವೆ. ಕಳಸದ ಬಳಿ ಇರುವ ಬಲ್ಲಾಳರಾಯ ದುರ್ಗದಿಂದ ಹಿಡಿದು ಚಿಕ್ಕಮಗಳೂರು ಪಟ್ಟಣದ ಸಮೀಪ ಇರುವ ಬಾಬಾಬುಡನ್‌ಗಿರಿಯವರೆಗೂ ಹಬ್ಬಿರುವ ಪರ್ವತಶ್ರೇಣಿ ಕರ್ನಾಟಕದ ಉತ್ತರದ ಮತ್ತು ದಕ್ಷಿಣ ನದಿಗಳನ್ನು ಪ್ರತ್ಯೇಕಿಸುತ್ತದೆ. ವರಾಹ ಪರ್ವತದ ಗಂಗಾಮೂಲದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರಾ ನದಿಗಳು ಉತ್ತರ ದಿಕ್ಕಿಗೆ ಹರಿದರೆ, ದಕ್ಷಿಣ ಭಾಗದಲ್ಲಿ ಮೇಲ್ಬಂಗಾಡಿಯ ಜಾವಳಿಯ ಬಳಿ ಹುಟ್ಟುವ ಹೇಮಾವತಿ ನದಿ ಮೂಡಿಗೆರೆ ತಾಲ್ಲೂಕಿನಲ್ಲಿ ದಕ್ಷಿಣ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ತುಂಗಾ ಮತ್ತು ಭದ್ರಾ ನದಿಗಳು ಒಂದೇ ಪ್ರದೇಶದಲ್ಲಿ ಹುಟ್ಟಿದರೂ ಕೊಪ್ಪ ತಾಲ್ಲೂಕಿನಲ್ಲಿ ಬೆಟ್ಟಗಳ ಸಾಲು ಅವನ್ನು ಪ್ರತ್ಯೇಕಿಸುತ್ತವೆ. ತುಂಗಾ ನದಿ ಶೃಂಗೇರಿಯವರೆಗೂ ಈಶಾನ್ಯ ದಿಕ್ಕಿಗೆ ಹರಿದು ಅನಂತರ ವಾಯವ್ಯ ದಿಕ್ಕಿಗೆ ತಿರುಗಿ ಶಿವಮೊಗ್ಗ ಜಿಲ್ಲೆಯನ್ನು ಪ್ರವೇಶಿಸುತ್ತದೆ. ದಕ್ಷಿಣದ ಕಡೆಗೆ ಹರಿಯುವ ಹೇಮಾವತಿ ನದಿಯನ್ನು ಸ್ವಲ್ಪ ದೂರದಲ್ಲಿಯೆ 'ಸೋಮಾವತಿ' ಎಂಬ ಹೊಳೆ ಸೇರುತ್ತದೆ. ಮುಂದೆ ಇದು ಆಗ್ನೇಯ ದಿಕ್ಕಿಗೆ ಹರಿದು ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮುಳ್ಳಯ್ಯನ ಗಿರಿ ಬಳಿ ಹುಟ್ಟುವ ಯಗಚಿ ನದಿ ಚಿಕ್ಕಮಗಳೂರನ್ನು ದಾಟಿ ಹಾಸನ ಜಿಲ್ಲೆಯನ್ನು ಪ್ರವೇಶಿಸಿ ಇದು ಗೊರೂರು ಬಳಿ ಹೇಮಾವತಿಯನ್ನು ಸೇರುತ್ತದೆ.

ವೇದಾ ಮುಳ್ಳಯ್ಯನ ಗಿರಿ ಶ್ರೇಣಿಯಲ್ಲಿ ಹುಟ್ಟುವ ಹೊಳೆ. ಇದು ಕಡೂರಿನ ಮೂಲಕ ಮುಂದುವರಿದು ವೇದಾವತಿ ಎಂಬ ಹೆಸರಿನಿಂದ ಹರಿಯುತ್ತದೆ.

ಮಣ್ಣು : ಚಿಕ್ಕಮಗಳೂರು ತಾಲ್ಲೂಕಿನ ಬೆಟ್ಟ ಪ್ರದೇಶದಲ್ಲಿ ಹೆಚ್ಚಾಗಿ ಕಪ್ಪು ಮಣ್ಣು ಕಂಡುಬರುತ್ತದೆ. ಇದು ಕಾಫಿ ಬೆಳೆಗೆ ಅನುಕೂಲಕರ. ತರೀಕೆರೆ ತಾಲ್ಲೂಕಿನ ಪಶ್ಚಿಮ ಭಾಗದ್ದು ಮರಳು ಮತ್ತು ಸುಣ್ಣದ ಕಲ್ಲು ಮಿಶ್ರಿತ ನೆಲ. ಮೂಡಿಗೆರೆ ತಾಲ್ಲೂಕಿನ ಬಹುಭಾಗ ಕೆಂಪು ಮಣ್ಣಿನಿಂದ ಕೂಡಿದೆ. ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ಅಧಿಕ ಮಳೆಯಿಂದಾಗಿ ಗಟ್ಟಿಮಣ್ಣು ಮತ್ತು ಕೆಮ್ಮಣ್ಣು ಕಂಡುಬರುತ್ತದೆ. ಇಲ್ಲಿಯ ನದಿ ಬಯಲುಗಳು ಫಲವತ್ತಾಗಿದ್ದು ಅಡಕೆ ಬೆಳೆಗೆ ಇದು ಅನುಕೂಲಕರವಾಗಿದೆ.

ವ್ಯವಸಾಯ : ಕಾಫಿ ಇಲ್ಲಿಯ ಮುಖ್ಯ ವಾಣಿಜ್ಯ ಬೆಳೆ. ಸು. 1600 ಚ.ಕಿ.ಮೀ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತದೆ. ಅತ್ಯಧಿಕ ಮಳೆ ಬೀಳುವ ಕೊಪ್ಪ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಅರೇಬಿಕ ಕಾಫಿ ಉತ್ತಮವಾಗಿ ಬೆಳೆಯುತ್ತದೆ. ಉಳಿದೆಡೆಗಳಲ್ಲಿ ರೊಬಸ್ಟ ಕಾಫಿ ಚೆನ್ನಾಗಿ ಬೆಳೆಯುತ್ತದೆ. ಏಲಕ್ಕಿ ಇನ್ನೊಂದು ವಾಣಿಜ್ಯ ಬೆಳೆ. ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಕಳಸಕ್ಕೆ ಸಮೀಪದಲ್ಲಿ ಕೆಲವು ಚಹ ತೋಟಗಳಿವೆ. ಈ ಜಿಲ್ಲೆಯಲ್ಲಿ ಅಡಕೆಯನ್ನೂ ಹೆಚ್ಚಾಗಿ ಬೆಳೆಯುತ್ತಾರೆ. ಕೊಪ್ಪ, ಶೃಂಗೇರಿ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಮತ್ತು ಕಳಸದ ಸುತ್ತಮುತ್ತ ಬಯಲು ಸೀಮೆಯಲ್ಲಿ ಕೆಲವೆಡೆ ತೋಟಗಳಿವೆ.

ಬತ್ತ ಇಲ್ಲಿಯ ಮುಖ್ಯ ಆಹಾರ ಬೆಳೆ. ಕಪ್ಪು ಮಣ್ಣಿನಿಂದ ಕೂಡಿದ ಪೂರ್ವ ಭಾಗದಲ್ಲಿ ಅದರಲ್ಲೂ ಬಯಲು ನಾಡಿನ ಭಾಗದಲ್ಲಿ ಬತ್ತದ ಇಳುವರಿ ಹೆಚ್ಚು; ಅದನ್ನು ಬೆಳೆಯುವ ಪ್ರದೇಶವೂ ಹೆಚ್ಚು. ಮಲೆನಾಡಿನ ಪ್ರದೇಶಗಳಲ್ಲಿ ಬತ್ತದ ಬಯಲುಗಳು ಕಡಿಮೆ. ತರೀಕೆರೆ ತಾಲ್ಲೂಕಿನಲ್ಲಿ ಭದ್ರಾ ನದಿಗೆ ಅಡ್ಡಲಾಗಿ ಲಕ್ಕವಳ್ಳಿ ಅಣೆಕಟ್ಟನ್ನು ಕಟ್ಟಲಾಗಿದೆ. ಇದರ ಹೆಚ್ಚಿನ ನೀರಾವರಿ ಸೌಲಭ್ಯ ಶಿವಮೊಗ್ಗ ಜಿಲ್ಲೆಗೆ ದೊರೆಯುತ್ತದೆ. ಕಬ್ಬನ್ನು ಕೆಲವೆಡೆ ಬೆಳೆಯಲಾಗುತ್ತದೆ. ತೆಂಗು ಕಡೂರು ತಾಲ್ಲೂಕಿನ ಮುಖ್ಯ ಬೆಳೆ.

ಮುಖ್ಯ ಬೆಳೆಗಳು : ಕಾಫಿ, ಏಲಕ್ಕಿ, ಅಡಕೆ, ಕಿತ್ತಳೆ, ಬತ್ತ, ರಾಗಿ, ಕಬ್ಬು, ಹುರುಳಿ, ಆಲೂಗಡ್ಡೆ, ತೆಂಗು, ಹತ್ತಿ, ಈರುಳ್ಳಿ, ಬೆಳ್ಳುಳ್ಳಿ, ಸಾಸಿವೆ, ತರಕಾರಿ, ಹೊಗೆಸೊಪ್ಪು, ಮೆಣಸಿನಕಾಯಿ ಇತ್ಯಾದಿ.

ಇಲ್ಲಿ ವ್ಯಕ್ತಪಡಿಸುತ್ತಿರುವ ಕೃಷಿ ಮಾಹಿತಿ 'ಚಿಕ್ಕಮಗಳೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು' ಚಿಕ್ಕಮಗಳೂರು ವೆಬ್‌ಸೈಟ್‌ನಲ್ಲಿ ಹೊರಡಿಸಿರುವ ಅಂಕಿ ಅಂಶಗಳ ಆಧಾರವನ್ನು ಅವಲಂಬಿಸಿದೆ. (2009-10)

ಮಳೆ : ಜಿಲ್ಲೆಯಲ್ಲಿ ಜೂನ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಅಧಿಕ ಮಳೆ. ಜುಲೈ ತಿಂಗಳೊಂದರಲ್ಲೆ ವರ್ಷದ ಒಟ್ಟು ಮಳೆಯ ಸು. $^1/_3$ ಭಾಗ ಮಳೆ ಬೀಳುತ್ತದೆ. ಪೂರ್ವಭಾಗದಲ್ಲಿ ಮಳೆ ಕಡಿಮೆ. ಕಡೂರು ತಾಲ್ಲೂಕಿನಲ್ಲಿ ಕನಿಷ್ಠ. ಕೊಪ್ಪ, ಮೂಡಿಗೆರೆ, ಶೃಂಗೇರಿಗಳಲ್ಲಿ ಗರಿಷ್ಠ ಮಳೆಯಾಗುತ್ತದೆ. ಜಿಲ್ಲೆಯಲ್ಲಿ 1941ರಿಂದ 92ರವರೆಗಿನ ವಾಡಿಕೆ ಮಳೆಯ ಒಟ್ಟು ಪ್ರಮಾಣ 13,331 ಮಿ.ಮೀ, ಸರಾಸರಿ - 1,904 ಮಿ.ಮೀ. ಆದರೆ 2009ರ ವಾಸ್ತವಿಕ ಮಳೆಯ ಒಟ್ಟು ಪ್ರಮಾಣ 15451.0 ಮಿ.ಮೀ, ಸರಾಸರಿ 2,207 ಮಿ.ಮೀ. ವಾಡಿಕೆಯಂತೆ 1941ರಿಂದ 92ರವರೆಗಿನ ಮಳೆಯ ದಿನಗಳು ಒಟ್ಟು 607, ಸರಾಸರಿ 87 ದಿನಗಳು. 2009ರ ವಾಸ್ತವಿಕ ಮಳೆ ದಿನಗಳು 666, ಸರಾಸರಿ - 95 ದಿನಗಳು.

ಭೂ ವಿವರಣೆ : ಭೌಗೋಳಿಕ ವಿಸ್ತೀರ್ಣ : ಒಟ್ಟು 722075 ಹೆ

ಅರಣ್ಯ : ಒಟ್ಟು 200485 ಹೆ

ವ್ಯವಸಾಯೇತರ : ಒಟ್ಟು 42639 ಹೆ

ಬಂಜರು ಭೂಮಿ : ಒಟ್ಟು 28322 ಹೆ

ಸಾಗುವಳಿ ಮಾಡದಿರುವ ಭೂಮಿ : 19404 ಹೆ. ಭೂ ಪ್ರದೇಶ

ಖಾಯಂ ಗೋಮಾಳ : 90186 ಹೆ.

ವೃಕ್ಷ ಮತ್ತು ತೋಪುಗಳು : 21249 ಹೆ.

ಬೀಳು ಭೂಮಿ : ಚಾಲ್ತಿಯಲ್ಲಿರುವ ಒಟ್ಟು ಬೀಳು ಭೂಮಿ ಪ್ರಮಾಣ : ಒಟ್ಟು ಜಿಲ್ಲಾ ಮೊತ್ತ - 19073 ಹೆ

ಇತರೆ - 4797 ಹೆ.

ಒಟ್ಟು - 295920 ಹೆ.

ಬಿತ್ತನೆಯಾದ ಪ್ರದೇಶ : ನಿವ್ವಳ ಪ್ರಮಾಣ - 295920 ಹೆ.

ಒಂದಕ್ಕಿಂತ ಹೆಚ್ಚು - 33349 ಹೆ.

ಒಟ್ಟು - 329269 ಹೆ.

ಭೂ ಹಿಡುವಳಿಗಳು ಮತ್ತು ವಿಸ್ತೀರ್ಣ : 2005-06ರ ಕೃಷಿ ಗಣತಿ ಆಧಾರದ ಅನ್ವಯ ಜಿಲ್ಲೆಯ ಒಟ್ಟು 7 ತಾಲ್ಲೂಕುಗಳ ಭೂ ಹಿಡುವಳಿದಾರರ ಪ್ರಮಾಣವನ್ನು ಲಿಂಗಾಧಾರಿತ ಅವರುಗಳು ಹೊಂದಿರುವ ಭೂ ವಿಸ್ತೀರ್ಣದ ಆಧಾರದ ಮೇಲೆ ಅತಿ ಸಣ್ಣ, ಸಣ್ಣ, ಅರೆ ಮಧ್ಯಮ, ಮಧ್ಯಮ ಮತ್ತು ದೊಡ ಭೂ ಹಿಡುವಳಿದಾರರು ಎಂದು ವಿಭಾಗಿಸಿ ಅಂಕಿ ಅಂಶಗಳನ್ನು ನೀಡಲಾಗಿದೆ.

ಅತಿ ಸಣ್ಣ ಭೂ ಹಿಡುವಳಿದಾರರು : ಇವರುಗಳನ್ನು ಒಂದು ಹೆ.ಗಿಂತ ಕಡಿಮೆ ಇರುವವರೆಂದು ಪರಿಗಣಿಸಿ ಅಂಕಿ ಅಂಶಗಳನ್ನು ನೀಡಲಾಗಿದೆ.

ಭೂಹಿಡುವಳಿದಾರರು		ವಿಸ್ತೀರ್ಣ
ಗಂಡಸರು	97976	46939 ಹೆ.
ಹೆಂಗಸರು	20230	9775 ಹೆ.
ಸಂಘ ಸಂಸ್ಥೆಗಳು	530	233 ಹೆ.

ಭೂ ಹಿಡುವಳಿದಾರರು : 1ಹೆ.ನಿಂದ 2 ಹೆ.ವರೆಗೆ ಭೂಮಿಯನ್ನು ಹೊಂದಿರುವವರನ್ನು ಸಣ್ಣ ಭೂ ಹಿಡುವಳಿದಾರರು ಎಂದು ಗುರುತಿಸಲಾಗಿದೆ ಮತ್ತು ನಿರ್ಧರಿಸಲಾಗಿದೆ.

ಭೂಹಿಡುವಳಿದಾರರು		ವಿಸ್ತೀರ್ಣ
ಗಂಡಸರು	44805	62690 ಹೆ.
ಹೆಂಗಸರು	8768	12275 ಹೆ.
ಸಂಘ ಸಂಸ್ಥೆಗಳು	227	316 ಹೆ.

ಅರೆ ಮಧ್ಯಮ ಭೂ ಹಿಡುವಳಿದಾರರು : ಅರೆ ಮಧ್ಯಮ ಭೂ ಹಿಡುವಳಿದಾರರ ನಿರ್ಧರಿತ ಭೂ ವಿಸ್ತೀರ್ಣ ಪ್ರಮಾಣ : 2ರಿಂದ 4 ಹೆ.

ಭೂಹಿಡುವಳಿದಾರರು		ವಿಸ್ತೀರ್ಣ
ಗಂಡಸರು	21846	57908 ಹೆ.
ಹೆಂಗಸರು	4042	10683 ಹೆ.
ಸಂಘ ಸಂಸ್ಥೆಗಳು	177	467 ಹೆ.

ಮಧ್ಯಮ ಭೂ ಹಿಡುಳಿದಾರರು : 4ರಿಂದ 10 ಹೆ. ಭೂಪ್ರದೇಶ ಹೊಂದಿರುವ ರೈತರನ್ನು ಮಧ್ಯಮ ಭೂಹಿಡುವಳಿದಾರರು ಎಂದು ಗುರುತಿಸಲಾಗಿದೆ.

ಭೂಹಿಡುವಳಿದಾರರು		ವಿಸ್ತೀರ್ಣ
ಗಂಡಸರು	8295	47385 ಹೆ.
ಹೆಂಗಸರು	1533	8745 ಹೆ.

ದೊಡ್ಡ ಭೂ ಹಿಡುವಳಿದಾರರು: ಹತ್ತು ಹೆ.ಗಿಂತ ಜಾಸ್ತಿ ಭೂ ಪ್ರದೇಶ ಹೊಂದಿರುವ ರೈತರನ್ನು ದೊಡ್ಡ ಭೂ ಹಿಡುವಳಿದಾರರು ಎಂದು ಗುರುತಿಸಲಾಗಿದೆ.

ಭೂಹಿಡುವಳಿದಾರರು		ವಿಸ್ತೀರ್ಣ
ಗಂಡಸರು	1577	32729 ಹೆ.
ಹೆಂಗಸರು	282	5277 ಹೆ.
ಸಂಘಸಂಸ್ಥೆಗಳು	166	10895 ಹೆ.

ನೀರಾವರಿಯಾದ ನಿವ್ವಳ ಪ್ರದೇಶ : ನೀರಾವರಿಯ ಮೂಲಗಳಾದ ಕಾಲುವೆ, ಕೆರೆ, ಬಾವಿ, ಕೊಳವೆ ಬಾವಿ, ಏತ ನೀರಾವರಿ ಹೀಗೆ ಮುಂತಾದವುಗಳ ಸಹಾಯದಿಂದ ಕೃಷಿ ಭೂಮಿಯ ಕೆಲಸಗಳು ನಡೆಯುತ್ತಿರುತ್ತವೆ. ನೀರಾವರಿಗೊಳಪಟ್ಟ ಭೂ ಪ್ರದೇಶದ ಅಂಕಿ - ಅಂಶಗಳ ವರದಿಯನ್ನು ನೀಡಲಾಗಿದೆ.

ಕಾಲುವೆಗಳಿಂದ	4194 ಹೆ.
ಕೆರೆಗಳಿಂದ	9972 ಹೆ.
ಬಾವಿಗಳಿಂದ	577 ಹೆ.
ಕೊಳವೆ ಬಾವಿಗಳಿಂದ	9697 ಹೆ.
ಏತ ನೀರಾವರಿ	190 ಹೆ.
ಇತರೆ ಮೂಲಗಳಿಂದ	8445 ಹೆ.

ದ್ವಿದಳ ಧಾನ್ಯಗಳು : ಜಿಲ್ಲೆಯಲ್ಲಿ ದ್ವಿದಳ ಧಾನ್ಯಗಳನ್ನು ಬೆಳೆಯುವ ಒಟ್ಟು ಭೂವಿಸ್ತೀರ್ಣದ ಪ್ರಮಾಣವನ್ನು ಇಲ್ಲಿ ತಿಳಿಸಲಾಗಿದೆ.

ಕಡಲೆ - 7663 ಹೆ.

ತೊಗರಿ - 597 ಹೆ.

ಇತರೆ ದ್ವಿದಳ ಧಾನ್ಯಗಳು 16,981 ಹೆ.

ಒಟ್ಟು ದ್ವಿದಳ ಧಾನ್ಯಗಳು 25,241 ಹೆ.

ಎಣ್ಣೆ ಕಾಳುಗಳು : ಶೇಂಗಾ 3,169 ಹೆ.

ಸೂರ್ಯಕಾಂತಿ - 13951 ಹೆ.

ಇತರೆ - 7904 ಹೆ.

ಒಟ್ಟು - 25624 ಹೆ.

ಒಟ್ಟು ಹಣ್ಣುಗಳು - 5653 ಹೆ.

ಒಟ್ಟು ತರಕಾರಿಗಳು - 10390 ಹೆ.

ತೋಟಗಾರಿಕಾ ಬೆಳೆಗಳು

ಬಾಳೆ - 2085 ಹೆ.

ಅಡಿಕೆ - 19750 ಹೆ.

ತೆಂಗು - 37990 ಹೆ.

ಕಾಫಿ - 73919 ಹೆ.

ಟೀ - 1651 ಹೆ.

ಏಲಕ್ಕಿ - 2304 ಹೆ.

ಕರಿಮೆಣಸು - 2274 ಹೆ.

ಮಾವು - 2473 ಹೆ.

ಒಟ್ಟು ಮಸಾಲೆ ಹಾಗೂ ಸಂಬಾರ ಪದಾರ್ಥಗಳು 28809 ಹೆ.

ಕಬ್ಬು - 1308 ಹೆ.

ಹೊಗೆಸೊಪ್ಪು - 38 ಹೆ.

ಹತ್ತಿ - 1202 ಹೆ. ಭೂ ಪ್ರದೇಶದಲ್ಲಿ ಬೆಳೆಯಲಾಗುತ್ತದೆ

ಉತ್ಪಾದನೆ : ಇಲ್ಲಿ ಎಲ್ಲಾ ಬೆಳೆಗಳ ಉತ್ಪಾದನೆಯನ್ನು ಟನ್‌ಗಳಲ್ಲಿ ಗುರುತಿಸಲಾಗಿದೆ (ಎಲ್ಲಾ ಋತುಗಳು ಸೇರಿ - 2007-08)

ಅಕ್ಕಿ - 110992 ಟನ್

ರಾಗಿ - 77983 ಟನ್

ಜೋಳ - 11143 ಟನ್

ಮುಸುಕಿನ ಜೋಳ - 12300 ಟನ್

ಗೋಧಿ - 15 ಟನ್‌ಗಳು

ಇತರೆ ಏಕದಳ ಮತ್ತು ಉಪತೃಣ ಬೆಳೆಗಳು - 421 ಟನ್‌ಗಳು

ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು - 212,839 ಟನ್‌ಗಳು

ದ್ವಿದಳ ಧಾನ್ಯಗಳು

ಕಡಲೆ - 2751 ಟನ್

ತೊಗರಿ - 537 ಟನ್

ಇತರೆ ದ್ವಿದಳ ಧಾನ್ಯ - 10036

ಒಟ್ಟು ದ್ವಿದಳ ಧಾನ್ಯ - 13324

ಒಟ್ಟು ಆಹಾರ ಧಾನ್ಯ - 226163

ಎಣ್ಣೆ ಕಾಳುಗಳು

ನೆಲಗಡಲೆ - 3281 ಟನ್

ಸೂರ್ಯಕಾಂತಿ - 11530 ಟನ್

ಇತರೆ ಎಣ್ಣೆ ಕಾಳುಗಳು - 5731 ಟನ್

ಒಟ್ಟು ಹಣ್ಣುಗಳು - 10075 ಟನ್

ಒಟ್ಟು ತರಕಾರಿಗಳು - 82380 ಟನ್

ಒಟ್ಟು ಮಸಾಲೆ ಸಾಂಬಾರ ಪದಾರ್ಥಗಳು - 45573 ಟನ್

ಕಬ್ಬು - 64423 ಟನ್

ಹತ್ತಿ - 3372 ಟನ್

ತಂಬಾಕು - 22 ಟನ್

ಇತರೆ - 140787 ಟನ್

ಬೆಳೆಕಟಾವು ಪ್ರಯೋಗಗಳ ವಿವರ

2009-10ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಕೈಗೊಂಡ ಬೆಳೆ ವಿಮೆ ಯೋಜನೆಯಡಿ ಕೈಗೊಂಡ ಬೆಳೆ ಕಟಾವು ಪ್ರಯೋಗಗಳ

ಋತುವಾರು ವಿವರ : ಮುಂಗಾರು ಸಮಯದಲ್ಲಿ

ಬತ್ತ 454

ಜೋಳ 118

ರಾಗಿ 204

ಮು.ಜೋಳ 84

ಸಾವೆ 60

ಉದ್ದು 24

ಹುರುಳಿ 156

ಹೆಸರು 96

ಆಲೂಗಡ್ಡೆ 40

ಶೇಂಗಾ 148

ಎಳ್ಳು 156

ಸೂ.ಕಾಂತಿ 120

ಹಿಂಗಾರು ಸಮಯದಲ್ಲಿ	**ಮುಂಗಾರು/ವಾರ್ಷಿಕ**
ಜೋಳ - 146	ಮೆಣಸಿನ ಕಾಯಿ - 30
ಕಡಲೆ - 120	ಈರುಳ್ಳಿ - 30
ಹುರುಳಿ - 180	ಅವರೆ - 30
ಸೂರ್ಯಕಾಂತಿ - 12	ಕಬ್ಬು - 20
	ಹತ್ತಿ - 14

ಮುಂಗಾರು ಸಮಯದಲ್ಲಿ

ಬತ್ತ - 5860.24 ಕ್ವಿಂ

ರಾಗಿ - 1568.90 ಕ್ವಿಂ

ಜೋಳ - 119.68 ಕ್ವಿಂ

ಮು.ಜೋಳ - 1946.85 ಕ್ವಿಂ

ತೊಗರಿ - 29.00 ಕ್ವಿಂ

ಹೆಸರು - 141.95 ಕ್ವಿಂ

ಉದ್ದು - 28.60 ಕ್ವಿಂ

ಅಲಸಂದೆ - 31.40 ಕ್ವಿಂ

ನೆಲಗಡಲೆ - 1575.90 ಕ್ವಿಂ

ಸೂರ್ಯಕಾಂತಿ - 483.46 ಕ್ವಿಂ

ಹತ್ತಿ - 5.38 ಕ್ವಿಂ

ಹರಳು - 0.00 ಕ್ವಿಂ

ಹಿಂಗಾರು ಸಮಯದಲ್ಲಿ

ಕಡಲೆ - 3845.42 ಕ್ವಿಂ

ಜೋಳ - 532.63 ಕ್ವಿಂ

ಬೇಸಗೆ ಸಮಯದಲ್ಲಿ

ಬತ್ತ - 1520.20 ಕ್ವಿಂ

ನೆಲಗಡಲೆ - 411.40 ಕ್ವಿಂ

ಅಲಸಂದೆ - 19.50 ಕ್ವಿಂ

ಉದ್ದು - 13.15 ಕ್ವಿಂ

ಜಾನುವಾರು ಗಣತಿ (2007)

ದನಕರುಗಳು : ಸ್ಥಳೀಯ - 336080

ಮಿಶ್ರತಳಿ - 50183

ಎಮ್ಮೆಗಳು - 98281

ಕುರಿಗಳು : ಸ್ಥಳೀಯ 96209

ವಿದೇಶಿ 01

ಹಂದಿಗಳು : ಸ್ಥಳೀಯ 2300

ವಿದೇಶಿ - 23

ಮಿಶ್ರತಳಿ - 137

ಮೇಕೆಗಳು - 74701

ಮೊಲಗಳು - 250

ನಾಯಿಗಳು - 73546

ಕೋಳಿಗಳು - 2323557

ಪಶು ವೈದ್ಯಶಾಲೆಗಳು

ಆಸ್ಪತ್ರೆಗಳು - 17

ಚಿಕಿತ್ಸಾಲಯಗಳು - 67

ಪ್ರಾ.ಪಶುವೈದ್ಯ ಕೇಂದ್ರಗಳು - 42

ಪಂಚಾರಿ ಚಿಕಿತ್ಸಾಲಯ - 7

ಕೃತಕ ಗರ್ಭಧಾರಣೆ ಕೇಂದ್ರಗಳು - 3

ಪಾಲಿಕ್ಲಿನಿಕ್‌ಗೆ - 3

ಗೋಸದನ - 1

ಕೋಳಿ ವಿಸ್ತರಣಾ ಕೇಂದ್ರಗಳು - 01

ಪ್ರಧಾನ ಗ್ರಾಮೀಣ ಯೋಜನೆ ಉಪಕೇಂದ್ರಗಳು - 4

ದೊಡ್ಡ ರೋಗ ನಿವಾರಣಾ ಯೋಜನೆ - 01

ಪರಾಮರ್ಶನ ಗ್ರಂಥಗಳು


1. ಕನ್ನಡ ವಿಷಯ ವಿಶ್ವಕೋಶ - ಭೂಗೋಳ ವಿಜ್ಞಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 2009
2. ಕನ್ನಡ ವಿಶ್ವಕೋಶ, ಪು. 354-362 ಸಂ. 07, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
3. ಕಸ್ತೂರಿ, ಮೇ 2013
4. ದಿಕ್ಸೂಚಿ, ಕರ್ನಾಟಕ ಜಿಲ್ಲಾ ದರ್ಶನ - ಬೇದ್ರೆ ಮಂಜುನಾಥ, ಬೇದ್ರೆ ಪ್ರತಿಷ್ಠಾನ, ಚಿತ್ರದುರ್ಗ, ದಿಕ್ಸೂಚಿ ಪ್ರಕಾಶನ, 2007
5. ಅಂತರ್ಜಾಲ ಮಾಹಿತಿ : www.chikcmagalur.nic.in

ಜಿ.ಎಂ.ಬಿ.

ಚಿತ್ರದುರ್ಗ ಜಿಲ್ಲೆಯ ಕೃಷಿ ಚಿತ್ರದುರ್ಗ ಜಿಲ್ಲೆ ಈಗಿನ ಕರ್ನಾಟಕದ ಮೂವತ್ತು ಜಿಲ್ಲೆಗಳ ಪೈಕಿ ಒಂದು. ಇಲ್ಲಿರುವ ಜನಪದ ಸಂಸ್ಕೃತಿಯ ಶ್ರೀಮಂತಿಕೆ, ಭವ್ಯವಾದ ಚರಿತ್ರೆಯ ಪರಂಪರೆ, ಜಿಲ್ಲೆಯನ್ನು ಪದೇ ಪದೇ ಕಾಡುತ್ತಿರುವ ಬಡತನ ಮತ್ತು ಬರ ಮೊದಲಾದ ಕಾರಣಗಳಿಂದಾಗಿ ಸದಾ ಜನರ ಮನಸ್ಸಿನಲ್ಲಿ ಉಳಿಯುವಂತಾಗಿದೆ. ಪ್ರಧಾನವಾಗಿ ಗೊಲ್ಲರು, ಮ್ಯಾಸಬೇಡರು, ಕುರುಬರು, ಮಾದಿಗರು, ಲಿಂಗಾಯತರು, ಒಡ್ಡರು, ಕುಂಚಟಿಗರು, ಒಕ್ಕಲಿಗರು, ರೆಡ್ಡಿಗರು, ಉಪ್ಪಾರರು - ಇವೇ ಮೊದಲಾದ ಜನ ಸಮುದಾಯಗಳು ನೆಲೆನಿಂತಿವೆ. ಹಾಗೆಯೇ ಕ್ರೈಸ್ತ, ಬೌದ್ಧ, ಜೈನ ಧರ್ಮದ ಜನರು ಕೂಡ ಈ ಪ್ರದೇಶದಲ್ಲಿ ವಾಸಿಸುತ್ತಿರುವುದನ್ನು ಕಾಣಬಹುದು. ಇಲ್ಲಿಯ ಜನರು ಪ್ರಧಾನವಾಗಿ ಕೃಷಿ, ಪಶುಪಾಲನೆ, ವ್ಯಾಪಾರ ಆಶ್ರಯಿಸಿ ಬದುಕುತ್ತಿದ್ದಾರೆ.

ಭೂಗೋಳ : ಜಿಲ್ಲೆಗಳ ಪುನರ್‌ವಿಂಗಡಣೆ ಪ್ರಕ್ರಿಯೆಯ ಭಾಗವಾಗಿ 1997ರಲ್ಲಿ ದಾವಣಗೆರೆ, ಹರಿಹರ ಹಾಗೂ ಜಗಳೂರು ತಾಲ್ಲೂಕುಗಳನ್ನು ಬಿಟ್ಟು ಕೊಡುವುದರ ಮೂಲಕ ವಿಭಜನೆಯಾದ ಜಿಲ್ಲೆ 8,437 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. ಭೂ ನಕ್ಷೆಯಲ್ಲಿ ಉತ್ತರ ಅಂಕ್ಷಾಂಶ 13^{o}-34$'$ ರಿಂದ 15^{o}-02$'$ ವರೆಗೆ, ಪೂರ್ವ ರೇಖಾಂಶ 75^{o}-37$'$ ರಿಂದ 77^{o}-01$'$ ರವರೆಗೆವ್ಯಾಪಿಸಿಕೊಂಡಿದ್ದು ; ಜಿಲ್ಲೆಯ ಗಡಿಯು ಪೂರ್ವಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯ ಮತ್ತು ದಕ್ಷಿಣಕ್ಕೆ ತುಮಕೂರು ಜಿಲ್ಲೆ, ನೈಋತ್ಯ ದಿಕ್ಕಿಗೆ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮಕ್ಕೆ ದಾವಣಗೆರೆ ಜಿಲ್ಲೆ, ಉತ್ತರಕ್ಕೆ ಬಳ್ಳಾರಿ ಜಿಲ್ಲೆಗಳಿಂದ ಆವೃತ್ತವಾಗಿದೆ. ಚಿತ್ರದುರ್ಗವನ್ನು ಜಿಲ್ಲಾ ಕೇಂದ್ರವಾಗಿಸಿಕೊಂಡಿರುವ ಒಂದು ಉಪವಿಭಾಗವನ್ನು ಹೊಂದಿದ್ದು, ಚಿತ್ರದುರ್ಗ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ, ಚಳ್ಳಕೆರೆ, ಮೊಳಕಾಲ್ಮೂರು ಎಂಬ ಆರು ತಾಲ್ಲೂಕುಗಳನ್ನು ಹೊಂದಿದೆ. 2011ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 16,60,378 ಜನರಿದ್ದು, ರಾಜ್ಯದಲ್ಲಿ ಜನಸಂಖ್ಯೆಯ ದೃಷ್ಟಿಯಿಂದ 12ನೇ ಸ್ಥಾನವನ್ನು ಪಡೆದುಕೊಂಡಿದೆ. ಇದರಲ್ಲಿ 8,43,411 ಜನ ಪುರುಷರೂ 8,16,967 ಜನ ಮಹಿಳೆಯರೂ ಇದ್ದಾರೆ. ಜಿಲ್ಲೆ 1,146 ಹಳ್ಳಿಗಳನ್ನು ಹೊಂದಿದೆ.

ಹವಾಗುಣ : ಚಿತ್ರದುರ್ಗ ಜಿಲ್ಲೆಗಳು ಬೆಟ್ಟ - ಗುಡ್ಡ, ಕೋಟೆ - ಕೊತ್ತಲಗಳ ನಾಡು. ದಕ್ಷಿಣದ ಬಿಳಿಗಿರಿ ರಂಗನಬೆಟ್ಟದಿಂದ ಆರಂಭವಾಗುವ ಪೂರ್ವ ಘಟ್ಟಗಳು ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನವರೆಗೂ ವಿಸ್ತರಿಸಿಕೊಂಡಿವೆ. ಇಲ್ಲಿನ ಬಹುತೇಕ ಹವಾಗುಣವು ಒಣ ಹವೆಯಿಂದ ಕೂಡಿರುತ್ತದೆ. ಜಿಲ್ಲೆಯಲ್ಲಿ 2000-01ನೇ ಸಾಲಿನಿಂದ 2011-12ನೇ ಸಾಲಿನ ವರೆಗೆ ಆಗಿರುವ ಮಳೆಯ



ಪ್ರಮಾಣ ಇಂತಿದೆ. 2000 ದಲ್ಲಿ 6,65.3 ಮಿ.ಮೀ.ನಷ್ಟು ಮಳೆಯಾಗಿದ್ದರೆ 2001 ರಿಂದ 2004ರ ವರೆಗೆ ಕ್ರಮವಾಗಿ 494.6, 443.9, 329 ಮತ್ತು 544.9 ಮಿ.ಮೀ. ಮಳೆಯಾಗಿದೆ. ಈ ಸಮಯದಲ್ಲಿ ಜಿಲ್ಲೆಯು ತೀವ್ರವಾದ ಬರಗಾಲವನ್ನು ಎದುರಿಸಿದೆ. ಇಲ್ಲಿಂದ 2010ರ ವರೆಗೆ ಉತ್ತಮ ಮಳೆಯಾಗಿದ್ದು, ಮತ್ತೆ 2011, 2012 ರಲ್ಲಿ ಮಳೆಯ ಪ್ರಮಾಣ ವಾಡಿಕೆಗಿಂತ ತೀರಾ ಕಡಿಮೆಯಾಗಿದೆ. ಈ ಮಧ್ಯೆ ಗಮನಿಸಬೇಕಾದ ಅಂಶವೆಂದರೆ ಮಳೆಯ ಪ್ರಮಾಣ ಹೆಚ್ಚು ಕಡಿಮೆ ಆಗಿರುವುದಕ್ಕಿಂತ ಸಕಾಲಿಕವಾಗಿ ಮಳೆ ಬರದೇ ಅಕಾಲಿಕವಾಗಿ ಬಂದದ್ದು ರೈತರಿಗೆ ಅತೀದೊಡ್ಡ ಸಮಸ್ಯೆಯಾಗಿದೆ. ಜಿಲ್ಲೆಯ ಬಹುಭಾಗ ಬರುಡಾಗಿದ್ದು ಹವಾಗುಣವು 35 ಡಿ.ಸೆ. 42 ಡಿ.ಸೆ. ನವರೆಗೆ ಉಷ್ಣಾಂಶ ಹೊಂದಿರುತ್ತದೆ. ಜಿಲ್ಲೆಯಲ್ಲಿ ಸರ್ವಋತುಮಾನದ ಏಕೈಕ ನದಿ ವೇದಾವತಿ ಹರಿಯುತ್ತಿದ್ದು, ನೀರಾವರಿಯಿಂದ ಬಹುಪಾಲು ರೈತರು ವಂಚಿತರಾಗಿ ಕೇವಲ ಮಳೆ ನೀರನ್ನು ಆಶ್ರಯಿಸಿದ್ದಾರೆ.

ಕೃಷಿ ಭೂಮಿ : ಚಿತ್ರದುರ್ಗ ಜಿಲ್ಲಾ ಕೃಷಿ ಇಲಾಖೆಯ 2010-11ನೇ ಸಾಲಿನ ವರದಿಯ ಪ್ರಕಾರ ಜಿಲ್ಲೆಯ ಭೂ ವಿಸ್ತೀರ್ಣ ಸುಮಾರು 19,04,450 ಎಕರೆ (7,70,702 ಹೆಕ್ಟೇರ್) ಇದ್ದು ಇದರಲ್ಲಿ 1,26,570 ಎಕರೆ (51,243 ಹೆಕ್ಟೇರ್) ವ್ಯವಸಾಯೇತರ ಉಪಯೋಗಗಳಿಗಾಗಿ ಬಳಕೆಯಾಗಿದೆ. ಹಾಗೆಯೇ 1,82,164 ಎಕರೆ (73,719 ಹೆಕ್ಟೇರ್) ಅರಣ್ಯವಿದೆ. ವ್ಯವಸಾಯಕ್ಕೆ ಯೋಗ್ಯವಲ್ಲದ ಶಾಶ್ವತ ಬಂಜರು 62,745 ಎಕರೆ (25,403 ಹೆಕ್ಟೇರ್) ಇದೆ. ಸಾಗುವಳಿ ಯೋಗ್ಯ ಬಂಜರು (21,612 ಹೆಕ್ಟೇರ್) 53,381 ಎಕರೆ ಇದೆ. ಉಳಿದಂತೆ 2,40,124 ಎಕರೆ (1,00,052 ಹೆಕ್ಟೇರ್) ಖಾಯಂ ಗೋಮಾಳ ಹಾಗೂ ವೃಕ್ಷ ತೋಪುಗಳಿವೆ. ಒಟ್ಟಾರೆ ಕೃಷಿಯೋಗ್ಯ ಭೂಮಿ 11,96,803 ಎಕರೆ (4,98,668 ಹೆಕ್ಟೇರ್) ಇದೆ.ಇದರಲ್ಲಿ 2010-11ರಲ್ಲಿ ಎಲ್ಲಾ ರೀತಿಯ ಬೆಳೆಗಳೂ ಸೇರಿದಂತೆ 10,40, 40 ಎಕರೆ ಬಿತ್ತನೆಯಾಗಿತ್ತು.

ಚಿತ್ರದುರ್ಗ ಜಿಲ್ಲೆಯಾದ್ಯಂತ ಮುಖ್ಯವಾಗಿ ಬೆಳೆಯುತ್ತಿರುವ ಕೃಷಿ ಬೆಳೆಗಳೆಂದರೆ ಬತ್ತ, ಜೋಳ, ಸಜ್ಜೆ, ಮುಸುಕಿನ ಜೋಳ, ರಾಗಿ, ಗೋಧಿ-ಮೊದಲಾದ ಏಕದಳ ಧಾನ್ಯಗಳು ; ತೊಗರಿ, ಹುರಳಿ, ಉದ್ದು, ಹೆಸರು, ಅವರೆ, ಅಲಸಂದೆ, ಕಡಲೆ - ಮೊದಲಾದ ದ್ವಿದಳ ಧಾನ್ಯಗಳು ; ಶೇಂಗಾ ಸೂರ್ಯಕಾಂತಿ, ಕುಸುಬೆ, ಹರಳು, ಎಳ್ಳು, ಹುಚ್ಚೆಳ್ಳು - ಮೊದಲಾದ ಎಣ್ಣೆಕಾಳುಗಳು ; ಹತ್ತಿ, ಕಬ್ಬು, ತಂಬಾಕು, ಹರಳು, ಎಳ್ಳು, ಅಗಸೆ, ಸೋಯ - ಮೊದಲಾದ ವಾಣಿಜ್ಯ ಬೆಳೆಗಳು ; ತೆಂಗು - ಅಡಕೆ, ಬಾಳೆ, ಈರುಳ್ಳಿ, ವಿವಿಧ ರೀತಿಯ ಪುಷ್ಪಗಳು, ವಿವಿಧ ತರಕಾರಿ, ಬಾಳೆ,ಪರಂಗಿ, ಸಪೋಟ, ದಾಳಿಂಬೆ, ಮಾವು ಮೊದಲಾದ ತೋಟಗಿರಾಕ ಬೆಳೆಗಳು ಇವೆ. ಈ ಎಲ್ಲಾ ಬೆಳೆಗಳ ಒಟ್ಟು ಉತ್ಪಾದನೆಯು 2010-11 ನೇ ಸಾಲಿನ ಸಮೀಕ್ಷೆಯಂತೆ 2,04,997 ಮೆಟ್ರಿಕ್ ಟನ್ ಏಕದಳ ಆಹಾರ ಧಾನ್ಯಗಳು ಉತ್ಪಾದನೆಯಾಗಿದ್ದು, ಒಂದು ಹೆಕ್ಟೇರ್ ಗೆ 1196 ಕೆ.ಜಿ. ಇಳುವರಿ ಬಂದಿದೆ. ಇದರಲ್ಲಿ ಮುಸುಕಿನ ಜೋಳ, ಜೋಳ, ರಾಗಿ, ಬತ್ತ, ಕ್ರಮವಾಗಿ ಹೆಚ್ಚಿನ ಉತ್ಪಾದನೆಯಾಗಿವೆ. ಇನ್ನೂ 19333 ಮೆಟ್ರಿಕ್ ಟನ್ಸ್ ದ್ವಿದಳ ಆಹಾರ ಧಾನ್ಯಗಳು ಉತ್ಪಾದನೆಯಾಗಿದ್ದು, ಒಂದು ಹೆಕ್ಟೇರ್ ಗೆ 553 ಕೆ.ಜಿ. ಇಳುವರಿ ಬಂದಿದೆ. ಹಾಗೆಯೇ 56404 ಮೆಟ್ರಿಕ್ ಟನ್ಸ್ ಎಣ್ಣೆಕಾಳುಗಳ ಉತ್ಪಾದನೆಯಾಗಿದೆ. ಇವುಗಳ ಇಳುವರಿ ಒಂದು ಹೆಕ್ಟೇರ್ ಗೆ 297ಕೆ.ಜಿ. ಯಷ್ಟಿದೆ. ವಾಣಿಜ್ಯ ಬೆಳೆಗಳಲ್ಲಿ 30235 ಮೆಟ್ರಿಕ್ ಟನ್ಸ್ ಉತ್ಪಾದನೆಯಾಗಿದೆ. ತೋಟದ ಬೆಳೆಗಳಲ್ಲಿ ಈರುಳ್ಳಿ, ವಿವಿಧ ರೀತಿಯ ಪುಷ್ಪಗಳು ಹೆಚ್ಚಿನ ಪ್ರಮಾಣದ ಉತ್ಪಾದನೆ ಮತ್ತು ಇಳುವರಿಯಾಗಿರುವುದು ಕಂಡುಬರುತ್ತದೆ.

ಭೂ ಗುಣ : ದಖಿನ್ ಪ್ರಸ್ಥಭೂಮಿಯ ಭೂ ಭಾಗವಾಗಿರುವ ಈ ಜಿಲ್ಲೆ ರಾಜ್ಯದಲ್ಲೇ ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಒಂದಾಗಿದೆ. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಮೊಳಕಾಲ್ಮೂರು, ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕುಗಳಲ್ಲಿ ವಾಡಿಕೆಯ ಮಳೆಯ ಪ್ರಮಾಣಕಿಂತ ತೀರಾ ಕಡಿಮೆ ಮಳೆಯಾಗುತ್ತಿರುವುದು ಕಂಡುಬರುತ್ತದೆ. ಜಿಲ್ಲೆಯ ಮುಕ್ಕಾಲು ಭಾಗಕ್ಕೂ ಹೆಚ್ಚು ಕೃಷಿ ಭೂಮಿ ನೈಋತ್ಯ ದಿಕ್ಕಿನಿಂದ ಮತ್ತು ಈಶಾನ್ಯ ದಿಕ್ಕಿನಿಂದ ಪ್ರಾರಂಭವಾಗುವ ಮಳೆಗಳನ್ನು ಅವಲಂಬಿಸಿದೆ. "ಹಿರಿಯೂರು ತಾಲ್ಲೂಕಿನ ವಾಣೀವಿಲಾಸ ಸಾಗರದ ಅಚ್ಚುಕಟ್ಟು ಪ್ರದೇಶದ ಕೆಲವು ಭಾಗಗಳಲ್ಲಿರುವ ತೋಟಗಳನ್ನು ಬಿಟ್ಟರೆ ಪೂರ್ವದ ತಾಲ್ಲೂಕುಗಳಾದ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ಈ ಮೂರೂ ತಾಲ್ಲೂಕುಗಳೂ ಸಹ ವಿರಳ ಬೆಟ್ಟಗಳ ವಿಶಾಲ ಸಮತಲ ಭೂ ಪ್ರದೇಶಗಳು. ಇಲ್ಲಿಯ ತಾಪಮಾನ ಕೆಲವೊಮ್ಮೆ 40 ಡಿಗ್ರಿ ಸೆಲ್ಸಿಯಸ್ ದಾಟುವುದರಿಂದ ಸಹಿಸಲಸದಳವಾಗುತ್ತದೆ. ಇದಕ್ಕೆ ವಿರುದ್ಧವಾಗಿ ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳ ಬಹು ಭಾಗದಲ್ಲಿ ಹರಡಿರುವ ಎತ್ತರದ ಬೆಟ್ಟ ಪ್ರದೇಶಗಳಿಂದಾಗಿ, ಹಿತಕರ ಹವಾಗುಣವನ್ನು ಹೊಂದಿದ ಕಡಿಮೆ ಉಷ್ಣಾಂಶದ ಪ್ರದೇಶವಾಗಿದೆ. ಇಲ್ಲಿಯ ಬೆಟ್ಟಗಳಲ್ಲಿ ಅಪಾರವಾಗಿ ಸಂಗ್ರಹವಾಗಿರುವ ಖನಿಜ ಸಂಪತ್ತಿನ ದೆಸೆಯಿಂದಾಗಿ ಈ ಎಲ್ಲ ನೈಸರ್ಗಿಕ ಸಮತೋಲನಗಳು ಇತ್ತೀಚಿನ ದಿನಗಳಲ್ಲಿ ಮಾನವನ ದುರಾಸೆಗೆ ಬಲಿಯಾಗಿ ತನ್ನ ವೈವಿಧ್ಯವನ್ನು ಕಳೆದುಕೊಂಡು ವಿರೂಪಗೊಳ್ಳುತ್ತಿವೆ. ಕಾಡುಗಳು ಸರ್ವ ನಾಶವಾಗಿ ಬೋಳು ಗುಡ್ಡಗಳಾಗುತ್ತಿವೆ. ಚಿತ್ರದುರ್ಗ ಜಿಲ್ಲೆಯ ಕೃಷಿ ಕ್ಷೇತ್ರ ವೈವಿಧ್ಯಮಯವಾದುದು. ಪೂರ್ವದ ವಿಶಾಲ ಸಮತಲ ಭೂಪ್ರದೇಶದಲ್ಲಿ ಮಳೆಯ ಪ್ರಮಾಣವು ತೀರಾ ಕಡಿಮೆ ಇರುವುದರಿಂದ, ವರ್ಷಕ್ಕೆ ಒಂದೇಬೆಳೆ, ಅದರಲ್ಲೂ ಶೇಂಗಾ ಪ್ರಮುಖ ಬೆಳೆಯಾಗಿರುವುದರಿಂದ ಅಲ್ಲಿನ ವ್ಯವಸಾಯ ತೀರಾ ಬರಡು ರೀತಿಯಲ್ಲಿದೆ. ವರ್ಷದಲ್ಲಿ ಇರುವ ಒಂದು ಬೆಳೆಯೂ ಸಹ ಮಳೆಯ ಪ್ರಮಾಣ, ಹವಾಗುಣದ ವೈಪರೀತ್ಯಗಳಿಂದ ಅನೇಕ ಬಾರಿ ಕೈ ಕೊಡುವುದರಿಂದ, ರೈತಾಪಿ ಜೀವನ ತುಂಬಾ ದುರ್ಭರವಾಗಿದೆ. ಆದರೆ ಜಿಲ್ಲೆಯ ಪಶ್ಚಿಮದ ತಾಲ್ಲೂಕುಗಳಲ್ಲಿ ಮಳೆಯ ಪ್ರಮಾಣ ಪೂರ್ವಕ್ಕಿಂತ ಹೆಚ್ಚಾಗಿರುವುದರಿಂದ ಮತ್ತು ಭೂಮಿಯ ಫಲವತ್ತತೆ, ಹವಾಗುಣ ವೈವಿಧ್ಯಗಳಿಂದ ಎಲ್ಲಾ ವಿಧದ ಬೆಳೆಗಳನ್ನೂ ಬೆಳೆಯಬಹುದಾಗಿದೆ; ವರ್ಷದಲ್ಲಿ ಕನಿಷ್ಠ ಎರಡು ಬೆಳೆ ತೆಗೆಯುವ ಅವಕಾಶವಿದೆ. ಆದರೆ ಇಲ್ಲಿಯೂ ಮಳೆಯ ಅನಿಶ್ಚಿತ ಪರಿಸ್ಥಿತಿಯಿಂದಾಗಿ ರೈತರ ಬದುಕು ಸಹನೀಯವಾಗಿಲ್ಲ. ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ ಹರಿಯುತ್ತಿದ್ದ ಏಕಮಾತ್ರ ದೊಡ್ಡ ನದಿ ತುಂಗಭದ್ರ. ವಿಭಜನೆಯ ಅನಂತರ ಚಿತ್ರದುರ್ಗ ಜಿಲ್ಲೆಯಿಂದ ದೂರ ಸರಿದಿದ್ದಾಳೆ. ಈಗ ವೇದಾವತಿ, ಸುವರ್ಣಮುಖಿಯಂತಹ ಚಿಕ್ಕ ನದಿಗಳೇ ಜಿಲ್ಲೆಯ ಗೆಳತಿಯರು. ಇವರ ಜೊತೆಗೆ ಜಿನಗಿಹಳ್ಳ, ಗುಂಡಿಹಳ್ಳ, ಹಿರೇಹಳ್ಳದಂತಹ ಸುಗ್ಗಿಯಲ್ಲಿ ಮಾತ್ರ ಶ್ರೀಮಂತಿಕೆಯ ನಟನೆ ಮಾಡಿ ಉಳಿದ ಸಮಯದಲ್ಲಿ ಬಡತನದ ಬೇಗೆಯಿಂದ ನಲುಗುವ ಶ್ರೀಸಾಮಾನ್ಯನಂತೆ, ಮಳೆಗಾಲದಲ್ಲಿ ಮಾತ್ರ ಮೈದುಂಬಿಕೊಳ್ಳುವ ಬಡ ಗೆಳತಿಯರೇ ಜಿಲ್ಲೆಯ ಆಸರೆಯ ನೀರೆಯರು"

(ಸಿ. ಸೋಮಶೇಖರ್, ಚಿತ್ರದುರ್ಗ ಜಿಲ್ಲೆಯ ಜನಜೀವನ - ಸಂಸ್ಕೃತಿ - 3). ಒಟ್ಟಾರೆ ಚಿತ್ರದುರ್ಗ ಜಿಲ್ಲೆ ಒಣ ಹವೆ ಪ್ರಧಾನ ಭೂಪ್ರದೇಶವಾಗಿದ್ದು ಅಂತರ್ ಜಲದ ಪ್ರಮಾಣವು ಕೂಡ ಆಳಕ್ಕಿಳಿದಿದೆ. ಭೂ ವಿಜ್ಞಾನಿಗಳ ಪ್ರಕಾರ 2000ದಲ್ಲಿ ಜಿಲ್ಲೆಯ ಅಂತರ್ ಜಲ ಲಭ್ಯತೆಯು 50364 ಹೆಕ್ಟೋ ಮೀಟರ್‌ನಷ್ಟು ಆಳಕ್ಕಿಳಿದಿದೆ.

ನೆಲಗಳು : ಜಿಲ್ಲೆಯಲ್ಲಿ ಪ್ರಧಾನವಾಗಿ ಕಪ್ಪು ನೆಲ ಮತ್ತು ಕೆಂಪು ನೆಲ ಎಂಬ ಎರಡು ತರದ ಮಣ್ಣಿನ ನೆಲಗಳಿವೆ. ಅದರಲ್ಲಿ ಸುಮಾರು 4,77,835 ಹೆಕ್ಟರ್ ಮಣ್ಣಿನ ನೆಲ ಹಾಗೂ 2,92,867 ಹೆಕ್ಟರ್ ಕೆಂಪು ಮಣ್ಣಿನ ನೆಲ ಇದೆ. ಇವುಗಳ ಜೊತೆಗೆ ಬಿಳಿ ನೆಲಗಳು, ಬರ್ಜು ನೆಲಗಳು ಇವೆ. "ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಮುಖವಾಗಿ ಯರೆನೆಲ, ಕೆಂಪು ನೆಲ, ಮರಳು ನೆಲ, ಕೆಂಬಗಡೆ ನೆಲ, ಮರಳು ಮಿಶ್ರಿತ ಬೂದಿ ಮಣ್ಣಿನ ನೆಲ ದೊರಕುತ್ತದೆ. ಇದರಲ್ಲಿ ಯರೆ ನೆಲ (ಕಪ್ಪುನೆಲ) ಮತ್ತು ಕೆಂಬಗಡೆ ನೆಲವು ಉಳುಮೆಗೆ ಕಠಿಣವಾದುದಾಗಿದೆ. ಯರೆಳುನೆಲ (ಕಪ್ಪು ನೆಲ) ಮತ್ತು ಕೆಂಪು ನೆಲ ತುಂಬಾ ಫಲವತ್ತಾದುದು. ನೀರಿನ ಆಸರೆ ಇದ್ದರೆ ಅಥವಾ ಕಾಲಕಾಲಕ್ಕೆ ಮಳೆಯ ಪ್ರಮಾಣವು ಕರಾರುವಕ್ಕಾಗಿ ಆದರೆ ರೈತನು ತೃಪ್ತಿಪಡುವಂತಹ ಬೆಳೆ ಈ ನೆಲಗಳಲ್ಲಿ ದೊರೆಯುತ್ತವೆ". (ಎಂ.ಜಿ. ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಪು. 123)

ಕಾಡು : ಚಿತ್ರದುರ್ಗ ಜಿಲ್ಲೆ ಕೆಲವೇ ಕೆಲವು ವರ್ಷಗಳ ಹಿಂದೆ ದಟ್ಟವಾದ ಅರಣ್ಯ ಪ್ರದೇಶವಾಗಿತ್ತು ಎಂಬುದಕ್ಕೆ ಪ್ರಸ್ತುತ ಈ ಭೂ ಭಾಗದಲ್ಲಿ ನೆಲೆ ನಿಂತಿರುವ ಪಶುಪಾಲಕ ಬುಡಕಟ್ಟು ಸಮುದಾಯಗಳೇ ಸಾಕ್ಷಿ. ಇಂಥ ದಟ್ಟ ಅರಣ್ಯ ಪ್ರದೇಶ ಕಾಲಾನಂತರ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿರುವುದನ್ನು ಗುರುತಿಸಬಹುದು. ಈ ಭೂಪ್ರದೇಶದ ಕಾಡಿನ ಲಕ್ಷಣಗಳೆಂದರೆ ಇಲ್ಲಿರುವ ಕುರುಚಲು ಕಾಡುಗಳು. ಕರ್ನಾಟಕದ ಅಮೃತ್ ಮಹಲ್ ದನಗಳ ಮೇವಿಗಾಗಿ ನಿರ್ಮಿಸಲಾಗಿರುವ ಸಂರಕ್ಷಿತ ಅರಣ್ಯಗಳೂ ಇವೆ. ಹೊಸದುರ್ಗ, ಹೊಳಲ್ಕೆರೆ, ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದ ಕಾಡುಗಳು ಸಿಗುತ್ತವೆ. ಮೊಳಕಾಲ್ಮೂರು ತಾಲ್ಲೂಕಿನ ಮುತ್ತಿಗಾರಹಳ್ಳಿ, ಸೂರಮ್ಮನಹಳ್ಳಿ ಮೀಸಲು ಅರಣ್ಯಗಳು, ಚಳ್ಳಕೆರೆ ತಾಲ್ಲೂಕಿನ ವರವು, ನೇರಲಗುಂಟೆ, ಹಿರೇಕೆರೆ ಕಾವಲು, ಮಲ್ಲೂರಹಳ್ಳಿ ಕಾಡುಗಳು, ಹೊಸದುರ್ಗ ತಾಲ್ಲೂಕಿನ ಬಾಗೂರು, ಬೆನಕನಹಳ್ಳಿ, ನೀರಗುಂದ, ಮಾಡದಕೆರೆ, ದೇವಾಪುರ, ಕೈನಡು, ಸಾಣೆಹಳ್ಳಿ ಮೊದಲಾದವು ಜಿಲ್ಲೆಯ ಪ್ರಮುಖ ಅರಣ್ಯಗಳಾಗಿವೆ. ಈ ಕಾಡುಗಳ ಜೊತೆಗೆ ಇಲ್ಲಿಯ ಪಶುಪಾಲಕರ ಅನುಕೂಲಕ್ಕಾಗಿ ನಿರ್ಮಾಣ ಮಾಡಿರುವ ಖಾಯಂ ಗೋಮಾಳುಗಳೂ ಸಾಕಷ್ಟು ಪ್ರಮಾಣದಲ್ಲಿವೆ. ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯ ಒಟ್ಟು ಭೂ ವಿಸ್ತೀರ್ಣದಲ್ಲಿ ಶೇ. 10.45 ರಷ್ಟು (73,719 ಹೆಕ್ಟೇರ್) ಅರಣ್ಯಪ್ರದೇಶವಿದೆ. ಇದರ ಜೊತೆಗೆ ಶೇ. 8.68 ರಷ್ಟು (88,740 ಹೆಕ್ಟರ್) ಖಾಯಂ ಗೋಮಾಳ ಪ್ರದೇಶಗಳಿವೆ. ಹೊಸದುರ್ಗ ತಾಲ್ಲೂಕಿನಲ್ಲಿ ಅತೀ ಹೆಚ್ಚು ಅಂದರೆ 19074 ಹೆಕ್ಟೇರ್ ಅರಣ್ಯವನ್ನು ಹೊಂದಿದ್ದರೆ ; ಚಳ್ಳಕೆರೆ ಅತೀ ಕಡಿಮೆ ಅಂದರೆ 6,987 ಹೆಕ್ಟೇರ್ ಅರಣ್ಯವನ್ನು ಹೊಂದಿದೆ. ಗೋಮಾಳಗಳ ಪ್ರಮಾಣದಲ್ಲಿ ಹಿರಿಯೂರು ಮತ್ತು ಚಳ್ಳಕೆರೆ ಕ್ರಮವಾಗಿ 25,926, 21,768 ಹೆಕ್ಟೇರ್‌ಗಳಷ್ಟು ಗೋಮಾಳ ಪ್ರದೇಶವನ್ನು ಹೊಂದಿ ಮೊದಲ ಸ್ಥಾನದಲ್ಲಿದ್ದರೆ, 3,392 ಹೆಕ್ಟೇರ್ ಗೋಮಾಳ ಹೊಂದಿರುವ ಹೊಸದುರ್ಗ ಕೊನೆಯ ಸ್ಥಾನದಲ್ಲಿದೆ.

ನೀರಾವರಿ ಸೌಕರ್ಯಗಳು : ಚಿತ್ರದುರ್ಗ ಜಿಲ್ಲೆಯ ಸುಮಾರು 498668 ಹೆಕ್ಟೇರ್ ಕೃಷಿ ಭೂಮಿಯಲ್ಲಿ 93170 ಹೆಕ್ಟೇರ್ ಭೂಮಿ ನೀರಾವರಿ ಸೌಲಭ್ಯವನ್ನು ಹೊಂದಿದೆ. 341.819 ಹೆಕ್ಟೇರ್ ಭೂಮಿಯಲ್ಲಿ ಮಳೆ ಆಧಾರಿತ ಕೃಷಿ ಮಾಡಲಾಗುತ್ತಿದೆ. ಇಲ್ಲಿ ನೀರಾವರಿಗೆ ಕೆರೆಗಳು, ಕಾಲುವೆಗಳು, ಬಾವಿಗಳು, ಕೊಳವೆಬಾವಿಗಳು - ಇವೇ ಮೊದಲಾದ ಜಲ ಮೂಲಗಳನ್ನು ಅವಲಂಬಿಸಲಾಗಿದೆ. ಜಿಲ್ಲೆಯಲ್ಲಿ 142 ಕಿ.ಮೀ. ಹರಿಯುವ ಕಾಲುವೆಗಳು, 25249 ಕೊಳವೆಬಾವಿಗಳು, 11997 ಬಾವಿಗಳು, 167 ಕೆರೆಗಳು, 107 ಏತ ನೀರಾವರಿ, 166 ಟ್ಯಾಂಕ್‌ಗಳು ಅಸ್ತಿತ್ವದಲ್ಲಿರುವುದನ್ನು ಗುರುತಿಸಲಾಗಿದೆ. ಈ ಕುರಿತಂತೆ ಜಿಲ್ಲೆಯಲ್ಲಿ ನೀರಾವರಿಗೆ ಒಳಪಟ್ಟ ಒಟ್ಟು ಭೂಮಿಯಲ್ಲಿ ಶೇ. 93ರಷ್ಟು (82415 ಹೆಕ್ಟೇರ್) ನೀರಾವರಿ ಬರೀ ಕೊಳವೆ ಬಾವಿಗಳಿಂದಲೇ ಆಗಿದೆ. ಉಳಿದಂತೆ ಶೇ. 5.6ರಷ್ಟು (4940 ಹೆಕ್ಟೇರ್) ಕಾಲುವೆಗಳಿಂದ, 806 ಹೆಕ್ಟೇರ್ ಟ್ಯಾಂಕ್‌ಗಳಿಂದ ನೀರಾವರಿಯಾಗಿರುವುದು ಕಂಡುಬರುತ್ತದೆ. "ಜಲಸಂಪತ್ತಿನಲ್ಲಿ ಈ ಜಿಲ್ಲೆಮಹತ್ತರವಾದ ಸ್ಥಾನವೇನು ಪಡೆದಿಲ್ಲ. ವೇದಾವತಿ ನದಿ ಚಿನ್ನಹಗರಿ (ಜನಿಗೆಹಳ್ಳ), ಸ್ವರ್ಣಮುಖಿ ಹಳ್ಳ ಮುಂತಾದ ನದಿಗಳು ಹರಿದು ನೀರಾವರಿ ಸೌಲಭ್ಯವನ್ನು ಅಲ್ಪವಾಗಿ ಕಲ್ಪಿಸಿವೆ. ಈ ಜಿಲ್ಲೆಯಲ್ಲಿ ವೇದಾವತಿ ನದಿ 208 ಕಿ.ಮೀ., ಜನಿಗಿಹಳ್ಳ 128 ಕಿ.ಮೀ., ಸ್ವರ್ಣಮುಖಿ ಹಳ್ಳ 11 ಕಿ.ಮೀ. ಹರಿದು 2020 ಎಕರೆಗೆ ನೀರೊದಗಿಸುತ್ತದೆ. ಇದಲ್ಲದೆ ಭದ್ರಾಜಲಾಶಯದಿಂದ 47,460 ಎಕರೆ, ವಾಣಿವಿಲಾಸ ಸಾಗರದಿಂದ 10,000 ಹೆಕ್ಟೇರ್, ಗಾಯತ್ರಿ ಜಲಾಶಯದಿಂದ 928 ಹೆಕ್ಟೇರ್, ರಂಗಯ್ಯನ ದುರ್ಗ ಜಲಾಶಯದಿಂದ ಸು. 1000 ಎಕರೆಗೆ ನೀರಾವರಿ ಸೌಲಭ್ಯವಾಗಿದೆ. ಚಂದ್ರವಳ್ಳಿ, ರಾಣಿಕೆರೆ, ಸಂಗೇನಹಳ್ಳಿ, ನಾಯಕನಹಟ್ಟಿ, ಭರಮಸಾಗರ, ಗೌರಸಮುದ್ರ, ಗೋನೂರು, ನಾಗಸಮುದ್ರ, ಪರುಶಾಂಪುರ, ಬುಕ್ಕಂಬೂದಿ ಮುಂತಾದ ಪ್ರಾಚೀನ ಕೆರೆಗಳಿಂದ ಸಾವಿರಾರು ಎಕರೆ ನೀರಾವರಿಯಾಗುತ್ತದೆ". (ವೀರುಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪು : 10) ಹೊಳಲ್ಕೆರೆ ತಾಲ್ಲೂಕಿನಲ್ಲಿ ಹಿರಿಕೆರೆ, ಹೊನ್ನೆಕೆರೆ, ಕೆಸರುಕಟ್ಟೆ ಎಂಬ ಮೂರು ಮುಖ್ಯ ಕೆರೆಗಳಿದ್ದು ಅವುಗಳಲ್ಲಿ 'ಹಿರಿಕೆರೆ', ಹೆಸರಿಗೆ ತಕ್ಕ ಹಾಗೆ, ದೊಡ್ಡಕೆರೆ, ಸುಮಾರು ಒಂದೂವರೆ ಮೈಲಿಗಿಂತ ಹೆಚ್ಚು ವಿಸ್ತೀರ್ಣ ಒಮ್ಮೆ ತುಂಬಿದರೆ, ಸುಮಾರು ವರ್ಷವೆಲ್ಲಾ ತೊಂದರೆ ಇಲ್ಲ. ಹೊನ್ನೆಕೆರೆ, ಚಿಕ್ಕದು. ಮರಳಿನಿಂದ ಆವೃತ್ತ. ಬೇಗ ನೀರು ಇಂಗಿಹೋಗುತ್ತದೆ. ಕೆಸರು ಕಟ್ಟೆ, ಹೆಸರಿಗೆ ತಕ್ಕಂತೆ ಕೆಸರು ತುಂಬಿದ ಚಿಕ್ಕ ಕೆರೆ. ಆಳವಿಲ್ಲ. ಯಾವ ಕೆರೆಯ ನೀರೂ ಕುಡಿಯಲು ಯೋಗ್ಯವಿಲ್ಲ.

ಜಿಲ್ಲೆಯಲ್ಲಿರುವ ನದಿ, ಕೆರೆ, ಕಾಲುವೆ ಹಾಗೂ ಬಾವಿಗಳಲ್ಲಿ ಪ್ರಮುಖವಾದ ಕೆಲವುಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬಹುದು.

ರಂಗಯ್ಯನ ದುರ್ಗ ಜಲಾಶಯ : ಮೊಳಕಾಲ್ಮೂರು ತಾಲ್ಲೂಕಿನ ಹಾನಗಲ್ ಸಮೀಪದಲ್ಲಿ ಚಿನ್ನಹಗರಿ ಹಳ್ಳಕ್ಕೆ ನಿರ್ಮಿಸಲಾಗಿರುವ ಈ ಜಲಾಶಯವು 1989ರಲ್ಲಿ ಪ್ರಾರಂಭವಾಗಿ 1992ರಲ್ಲಿ ಪೂರ್ಣಗೊಂಡಿದೆ. ಬರದ ನಾಡಿನಲ್ಲಿ ನಿರ್ಮಿಸಲಾಗಿರುವ ಈ ಜಲಾಶಯದ ಬಲದಂಡೆ ನಾಲೆಯು 14 ಕಿ.ಮೀ. ಸಾಗಿ 2226 ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸುತ್ತದೆ. ಚಿತ್ರದುರ್ಗ ಕಡೆಯಿಂದ ಹರಿದು ಬರುವ ಚಿನ್ನಹಗರಿ ನದಿಯು ಇಲ್ಲಿ ಪೂರ್ವೋತ್ತರವಾಗಿ ಹರಿದು ಊರನ್ನು ಸುತ್ತುವರೆದಿದೆ.

ಗಾಯತ್ರಿ ಜಲಾಶಯ : ಹಿರಿಯೂರು ತಾಲ್ಲೂಕಿನ ಜವ್ವಗೊಂಡನಹಳ್ಳಿಯಿಂದ ಆರು ಕಿ.ಮೀ. ದೂರದಲ್ಲಿದೆ.ಮೊದಲು ಕರಿಯಾಲಕೆರೆಯೆಂದು ಕರೆಯಲ್ಪಡುತ್ತಿದ್ದು ಅನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮೊಮ್ಮಗಳು ಗಾಯತ್ರಿ ಹೆಸರಿನಿಂದ ಕರೆಯಲ್ಪಡುತ್ತಿದೆ. 1958 ರಲ್ಲಿ ದೊಡ್ಡಹಳ್ಳಕ್ಕೆ ಅಣೆಕಟ್ಟೆಯನ್ನು ಕಾಂಪೊಸಿಟ್ ವಿಧಾನದಲ್ಲಿ ಕಟ್ಟಲಾಗಿದೆ. ಅಂದರೆ ಕೆರೆ ತುಂಬಿದ ಅನಂತರ ಮಧ್ಯದಲ್ಲಿ ನೀರು ಹೊರ ಹೋಗಲು ಕಲ್ಲು ಮತ್ತು ಗಾರೆಗಳ ಕೋಡಿಯನ್ನು ನಿರ್ಮಿಸಿದೆ. ಕೆರೆಯ ನೀರಿನ ಒಟ್ಟು ಸಾಮರ್ಥ್ಯ 0.97 ಟಿ.ಎಂ.ಸಿ.

ವಾಣಿವಿಲಾಸ ಸಾಗರ (ಮಾರಿ ಕಣಿವೆ) : ಹಿರಿಯೂರು ತಾಲ್ಲೂಕಿನ ವಾಣಿವಿಲಾಸಪುರದ ಬಳಿ ಎರಡು ಗುಡ್ಡಗಳ ಕಣಿವೆಯಲ್ಲಿ ಹರಿದು ಬರುವ ವೇದಾವತಿ ನದಿಗೆ ಅಣೆಕಟ್ಟೆಯನ್ನು ಕಟ್ಟಿ ಸಾವಿರಾರು ಎಕರೆ ಭೂಮಿಯ ದಾಹವನ್ನು ತಣಿಸಲಾಗುತ್ತಿದೆ. 1898ರಲ್ಲಿ ಪ್ರಾರಂಭಿಸಿ 1907ರಲ್ಲಿ ಪೂರ್ಣಗೊಂಡ ಈ ಜಲಾಶಯವನ್ನು ಮೈಸೂರಿನ ದಿವಾನರಾಗಿದ್ದ ಶ್ರೀ ಶೇಷಾದ್ರಿ ಅಯ್ಯರ್ ಅವರು ಕೃಷ್ಣರಾಜ ಒಡೆಯರ ತಾಯಿ ಕೆಂಪನಂಜಮ್ಮಣ್ಣಿ ವಾಣಿವಿಲಾಸರವರ ಹೆಸರಿನಲ್ಲಿ ನಿರ್ಮಿಸಿದರು. ಈ ಅಣೆಕಟ್ಟಿನ ಉದ್ದ 1330 ಅಡಿ ಮತ್ತು ಅಗಲ 150 ಅಡಿ ಹಾಗೂ ಎತ್ತರ 142 ಅಡಿಗಳು. 1907ರಲ್ಲಿ ನಿರ್ಮಾಣಗೊಂಡಾಗ ಭಾರತದ ಅತಿದೊಡ್ಡ ಅಣೆಕಟ್ಟು ಎಂಬ ಖ್ಯಾತಿಯನ್ನು ಪಡೆದಿತ್ತು. ಇದನ್ನು ಗಾರೆ ಮತ್ತು ಸುಟ್ಟ ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ.

ಜನಿಗಿಹಳ್ಳ : ಜನಿಗಿಹಳ್ಳ ಅಥವಾ ಚಿನ್ನಹಗರಿ ಹಳ್ಳ ಈ ಭಾಗದ ಜನರಿಗೆ ಪವಿತ್ರವಾದುದು. ಇದು ಚಿತ್ರದುರ್ಗ ಸಮೀಪದ ಬೆಟ್ಟಗಳಲ್ಲಿ ಹುಟ್ಟಿ ಹೊಳಲ್ಕೆರೆ, ಜಗಳೂರು ತಾಲ್ಲೂಕುಗಳ ಮೂಲಕ ಕೂಡ್ಲಿಗಿ ತಾಲ್ಲೂಕಿನಲ್ಲಿ ಹರಿದು ಮುಂದೆ ರಾಯದುರ್ಗ ತಾಲ್ಲೂಕನ್ನು ಪ್ರವೇಶಿಸಿ ತುಂಗಾಭದ್ರ ನದಿಯನ್ನು ಸೇರುತ್ತದೆ. ಇದಕ್ಕೆ ಮೊಳಕಾಲ್ಮೂರು ಸಮೀಪದ ರಂಗಯ್ಯನದುರ್ಗ ಜಲಾಶಯವನ್ನು ನಿರ್ಮಿಸಲಾಗಿದೆ. ಭಟ್ಟರ ಹಳ್ಳಿ, ದೇವಸಮುದ್ರ ಕೆರೆಗಳ ನೀರು ಬಂದು ಈ ನದಿಯನ್ನು ಸೇರುತ್ತವೆ.

ಸ್ವರ್ಣಮುಖಿ ಹಳ್ಳ : ಪ್ರಮುಖ ಹೊಳೆ. ತುಮಕೂರು ಜಿಲ್ಲೆಯ ಮೂಲದ ಇದು ಚಿತ್ರದುರ್ಗ ಜಿಲ್ಲೆಯಲ್ಲಿ ಸು. 7 ಕಿ.ಮೀ. ಹರಿಯುತ್ತದೆ. ಹಿರಿಯೂರು ತಾಲ್ಲೂಕಿನ ಇಕ್ಕೂರು ಸಮೀಪ ನದಿಯನ್ನು ಸೇರುತ್ತದೆ.

ನಾಯಕನಹಟ್ಟಿ ಕೆರೆಗಳು : ನಾಯಕನಹಟ್ಟಿಯನ್ನು ಆಳುತ್ತಿದ್ದ ರಾಜಹಟ್ಟಿ ಮಲ್ಲಪ್ಪನಾಯಕನ ಕಾಲದಲ್ಲಿ (15-16ನೇ ಶತಮಾನದಲ್ಲಿ) ಶರಣ ತಿಪ್ಪೇಸ್ವಾಮಿಯವರ ಮಾರ್ಗದರ್ಶನ ಹಾಗೂ ಪವಾಡ ಸದೃಶ ಸಾಹಸಗಳಿಂದ ನಾಯಕನಹಟ್ಟಿ ಸುತ್ತಮುತ್ತ 7 ಕೆರೆಗಳನ್ನು ನಿರ್ಮಿಸಿದರೆಂಬ ಅಭಿಪ್ರಾಯಗಳಿವೆ. ಅವುಗಳಲ್ಲಿ ಪ್ರಮುಖವಾದ ಎರಡು ಕೆರೆಗಳನ್ನು ಇಂದಿಗೂ ನೋಡಬಹುದಾಗಿದ್ದು, ಒಂದು ದೊಡ್ಡಕೆರೆ ಮತ್ತೊಂದು ಚಿಕ್ಕ ಕೆರೆ. ಇವುಗಳಲ್ಲಿ ದೊಡ್ಡ ಕೆರೆ ಸಾಕಷ್ಟು ಬೃಹತ್ತಾಗಿದ್ದು ಆ ಭಾಗದ ರೈತರ ಜೀವವಾಗಿದೆ.

ಬೆಳೆಗಳು : ಜಿಲ್ಲೆಯ ಕೃಷಿಪದ್ಧತಿಯಲ್ಲಿ ನೀರಾವರಿಗಿಂತ ಮಳೆಯಾಧಾರಿತ ಖುಷ್ಕಿ ಪದ್ಧತಿಯೇ ಹೆಚ್ಚು ಪ್ರಧಾನವಾಗಿದೆ. ಈ ಭಾಗದ ರೈತರು ಖುಷ್ಕಿ ಜಮೀನನ್ನು ಬೆದ್ದು, ಹಂಕಲು ಎಂದು ಕರೆಯುವುದು ವಾಡಿಕೆ. ಗಮನಿಸಬೇಕಾದ ಸಂಗತಿಯೆಂದರೆ ಈ ಖುಷ್ಕಿ ವ್ಯವಸಾಯ ಪದ್ಧತಿಯಲ್ಲಿ ಹೆಚ್ಚಿನದಾಗಿ ಸಾಂಪ್ರದಾಯಿಕ ವ್ಯವಸಾಯ ಕ್ರಮಗಳು, ಪಾರಂಪರಿಕ ತಳಿಗಳು, ಮಿಶ್ರಬೆಳೆ ಪದ್ಧತಿ ಕಂಡುಬರುತ್ತದೆ. ಖುಷ್ಕಿ ಮತ್ತು ತರಿ - ಈ ಎರಡು ಕೃಷಿ ಪದ್ಧತಿಗಳಲ್ಲಿ ಬೆಳೆಯುವ ವಿವಿಧ ರೀತಿಯ ಧಾನ್ಯಗಳು ಹಾಗೂ ಹೂವು - ಹಣ್ಣು - ತರಕಾರಿಗಳ ಮಾಹಿತಿಯನ್ನು ಸಂಕ್ಷಿಪ್ತವಾಗಿ ಮುಂದಿನಂತೆ ತಿಳಿಯಬಹುದಾಗಿದೆ.

ಆಹಾರ ಧಾನ್ಯಗಳು : ಜೋಳ, ರಾಗಿ, ಸಜ್ಜೆ, ನವಣೆ, ಮುಸುಕಿನ ಜೋಳ, ಗೋಧಿ, ಬತ್ತ, ಸಾವೆ, ಉರುಳಿ, ಕಡ್ಲೆ, ತೊಗರಿ, ಅವರೆ, ಹೆಸರು, ಅಲಸಂದೆ, ಉದ್ದು.

ಎಣ್ಣೆಕಾಳುಗಳು : ಶೇಂಗಾ, ಸೂರ್ಯಕಾಂತಿ, ಕುಸುಬೆ, ಎಳ್ಳು, ಹುಚ್ಚೆಳ್ಳು (ಕುರಸಾಣಿ), ಔಡಲ

ತೋಟಗಾರಿಕಾ ಬೆಳೆಗಳು : ಈರುಳ್ಳಿ, ಹತ್ತಿ, ಕಬ್ಬು, ರೇಷ್ಮೆ, ತಂಬಾಕು, ವೀಳ್ಯದ ಎಲೆ, ಅಡಕೆ, ತೆಂಗು ಮೊದಲಾದ ವಾಣಿಜ್ಯ ಬೆಳೆಗಳು, ಪಪ್ಪಾಯಿ, ದಾಳಿಂಬೆ, ಮೂಸಂಬೆ, ಸಪೋಟ, ಬಾಳೆ, ಮಾವು ಮೊದಲಾದ ಹಣ್ಣುಗಳು, ಸೇವಂತಿಗೆ, ಕಾಕಡ, ಕನಕಾಂಬರ ಮುಂತಾದ ವಿವಿಧ ರೀತಿಯ ಹೂವುಗಳು; ಮೆಣಸಿನಕಾಯಿ, ಬದನೆಕಾಯಿ, ಟೊಮ್ಯಾಟೋ, ಕ್ಯಾರೆಟ್, ಮೂಲಂಗಿ, ವಿವಿಧ ರೀತಿಯ ಸೊಪ್ಪು ಮೊದಲಾದವು.

ಇವುಗಳಲ್ಲಿ ಬಹಳ ಮುಖ್ಯವಾದ ಕೆಲವು ಬೆಳೆಗಳ ಬೀಜ ಬಿತ್ತನೆ, ಕಳೆ, ಕೊಯ್ಲುಗಳು, ಉತ್ಪಾದನೆ ಮತ್ತು ಉತ್ಪಾದಕತೆಯ ಬಗ್ಗೆ ಮುಂದಿನಂತೆ ವಿವರಿಸಬಹುದು.

ಜೋಳ : ಚಿತ್ರದುರ್ಗ ಜಿಲ್ಲೆಯ ಕೃಷಿಕರು ಬೆಳೆಯುವ ಆಹಾರ ಧಾನ್ಯಗಳಲ್ಲಿ ಜೋಳವೂ ಒಂದು. ಜನರಿಗೆ ಮತ್ತು ಜಾನುವಾರುಗಳಿಗೆ ಆಹಾರ ಮೂಲವಾಗಿರುವ ಈ ಬೆಳೆಯನ್ನು ಬಹುತೇಕ ಎಲ್ಲ ರೈತರು ಬೆಳೆಯುತ್ತಾರೆ. ಪ್ರಧಾನವಾಗಿ ಹಿಂಗಾರು ಮತ್ತು ಮುಂಗಾರು ಹಂಗಾಮಗಳಲ್ಲಿ ಬೆಳೆಯುತ್ತಾರೆ. ಸಾಮಾನ್ಯ ಸ್ವರೂಪದಲ್ಲಿ ಹೊಲವನ್ನು ಹಸನುಮಾಡಿ ಬೀಜ ಬಿತ್ತುತ್ತಾರೆ. ಮುಂಗಾರಿನಲ್ಲಿ ರೋಹಿಣಿ ಮತ್ತು ಕೃತ್ತಿಕೆ ಮಳೆಗಳು ಜೋಳ ಬಿತ್ತನೆಗೆ ಹದವಾದ ಕಾಲ. ಹಿಂಗಾರಿನಲ್ಲಿ ಉತ್ತರೆ ಮಳೆ ಹದ ಮಳೆಯಾಗಿದೆ. ಬೀಜಗಳನ್ನು ಅಕ್ಕಡಿಸಡ್ಡೆ ಅಥವಾ ಕೂರಿಗೆಬಟ್ಟಲು ಇವೆರಡರಲ್ಲಿ ಯಾವುದಾದರೂ ಒಂದರಲ್ಲಿ ಬಿತ್ತುವುದುಂಟು. ಜೋಳ ಬಿತ್ತಿದ ನಾಲ್ಕು ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಆಗ ತೆನೆ ಇಲ್ಲವೇ ಬುಡವನ್ನು ಕೊಯ್ದು ಕಣಕ್ಕೆ ಹಾಕುವುದುಂಟು. ಜೋಳದ ಕಾಳಿಗೆ ಹುಳಗಳ ಬಾಧೆ ಹೆಚ್ಚಿರುತ್ತದೆ. ಹಾಗಾಗಿ ಕೊಯ್ಲುಮಾಡಿದ ತಕ್ಷಣ ತುಳಿಸುವುದಿಲ್ಲ. ತೆನೆ ಕೊಯ್ದರೆ ಜೋಳದ ಸೊಪ್ಪೆಯಿಂದ ಗೂಡು ಕಟ್ಟಿ ಅದರ ಮಧ್ಯೆದಲ್ಲಿ ಕೊಯ್ದ ಜೋಳದ ತೆನೆಯನ್ನು ಹಾಕಿ ಸೊಪ್ಪೆಯಿಂದಲೇ ಮುಚ್ಚುತ್ತಾರೆ. ಅನಂತರ ಒಂದು ದಿನ ಕಣಕ್ಕೆ ಹಾಕಿ ರೋಣಗಲ್ಲಿನಿಂದ ತುಳಿಸಿ ಕಾಳನ್ನು ಬೇರ್ಪಡಿಸುತ್ತಾರೆ. ಜಿಲ್ಲೆಯ ರೈತರು ಒಂದು ವರ್ಷದಲ್ಲಿ ಮೂರು ಹಂಗಾಮಿನಲ್ಲೂ ಜೋಳದ ಬೆಳೆಯನ್ನು ಬೆಳೆಯುತ್ತಿದ್ದು, 2010-11ನೇ ಸಾಲಿನ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ 16,713 ಹೆಕ್ಟೇರ್ ಪ್ರದೇಶದಲ್ಲಿ ಜೋಳದ ಬೆಳೆ ಬೆಳೆದಿದ್ದೂ ಒಟ್ಟು ಉತ್ಪಾದನೆ 19,295 ಮೆಟ್ರಿಕ್‌ಟನ್. ಹಾಗೆಯೇ 2011-12ನೇ ಸಾಲಿನಲ್ಲಿ 24,679 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಿದ್ದು ಉತ್ಪಾದನೆ 11,083 ಮೆಟ್ರಿಕ್ ಟನ್ ಮಾತ್ರ. ಇದಕ್ಕೆ ಕಾರಣ ಹಿಂಗಾರು ಹಂಗಾಮಿನ

ಬರ ಪರಿಸ್ಥಿತಿಯಿಂದಾಗಿ ಸುಮಾರು 56,329 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ನಾಶವಾಗಿದ್ದು, ಚಿತ್ರದುರ್ಗ, ಹೊಳಲ್ಕೆರೆ ತಾಲ್ಲೂಕುಗಳು ಮುಂಗಾರು ಹಂಗಾಮಿನಲ್ಲಿ, ಚಳ್ಳಕೆರೆ, ಚಿತ್ರದುರ್ಗ ತಾಲ್ಲೂಕುಗಳು ಹಿಂಗಾರು ಹಂಗಾಮಿನಲ್ಲಿ, ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳು ಬೇಸಗೆ ಹಂಗಾಮಿನಲ್ಲಿ ಹೆಚ್ಚು ಜೋಳವನ್ನು ಉತ್ಪಾದಿಸುವುದು ಕಂಡುಬರುತ್ತದೆ.

ರಾಗಿ : ರಾಗಿ ಬೆಳೆಯು ಜಿಲ್ಲೆಯಲ್ಲಿ ಬಹು ಮುಖ್ಯವಾದ ಬೆಳೆ. 2011-12ನೇ ಸಾಲಿನಲ್ಲಿ 37,502 ಮೆ.ಟನ್ ಉತ್ಪಾದನೆಯಾಗಿದೆ. ರಾಗಿ ಕೃಷಿ ಅತೀ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಮೊದಲು ಕೋಣನ ಕೊಂಬಿನರಾಗಿ, ಹಿಪ್ಪರಿಗೆ ರಾಗಿ - ಇವೇ ಮೊದಲಾದ ದೇಶಿಯ ತಳಿಗಳಿದ್ದವು. ಇವುಗಳನ್ನು ಖುಷ್ಕಿ ಮತ್ತು ನೀರಾವರಿಗಳೆರಡರಲ್ಲೂ ಬೆಳೆಯುತ್ತಿದ್ದರು. ರಾಗಿಯನ್ನು ಕೂರಿಗೆ ಬಟ್ಟಲು ಬಳಸಿ ಬಿತ್ತುವುದು, ಸಾಲು ಹೊಡೆದು ಚೆಲ್ಲುವುದು, ಸಸಿಹೊಯ್ದು ನಾಟಿಮಾಡುವುದು ಈ ಮೂರು ಕ್ರಮಗಳಲ್ಲಿ ಬೀಜ ಹಾಕುವ ಪದ್ಧತಿಯಿದೆ. ರಾಗಿ ಬೀಜವನ್ನು ಬಿತ್ತಿ ಒಂದು ಅಥವಾ ಎರಡು ಗೇಣು ಸಸಿಯಾಗಿ ಬೆಳೆದಾಗ ಅದನ್ನು ದನಕರುಗಳನ್ನು ಬಿಟ್ಟು ಜೋಲು ತಿನ್ನಿಸುತ್ತಾರೆ. ಇದರಿಂದ ಉದ್ದಕ್ಕೆ ಬೆಳೆಯುವ ರಾಗಿ ಸಸಿಗಳಲ್ಲಿ ತೆಂಡೆ ತೆಂಡೆಯಾಗಿ ಬೆಳೆದು ಹೊಡೆಗಟ್ಟುತ್ತವೆ. ಇಲ್ಲಿಂದ ನಾಲ್ಕು ತಿಂಗಳಿನ ಅನಂತರ ಕೊಯ್ಲಿಗೆ ಬರುತ್ತದೆ. ಇದನ್ನು ಬುಡಕ್ಕೆ ಕೊಯ್ಯಬಹುದು ಇಲ್ಲವೇ ತೆನೆ ಕೊಯ್ಯಬಹುದು. ಕೊಯ್ದು ಕಣಕ್ಕೆ ಹಾಕಿ, ಕಣದಲ್ಲಿ ಜಾನುವಾರುಗಳಿಂದ ತುಳಿಸಿ ಅಥವಾ ರೋಣಗಲ್ಲಿನಿಂದ ತುಳಸಿ ಧಾನ್ಯಗಳನ್ನು ಬೇರ್ಪಡಿಸುತ್ತಾರೆ. ಹುಲ್ಲು ದನಗಳಿಗೆ ಅತ್ಯುತ್ತಮವಾದ ಆಹಾರವಾದ್ದರಿಂದ ಅದನ್ನು ಬಣವೆ ಹಾಕಿ ಸಂರಕ್ಷಿಸುತ್ತಾರೆ.

ಸಜ್ಜೆ : ಸಜ್ಜೆಯೂ ಕೂಡ ಈ ಭಾಗದ ಅತೀ ಪ್ರಾಚೀನ ಬೆಳೆ. ಸಜ್ಜೆ ಬೆಳೆಗೆ ಸಾಧಾರಣವಾಗಿ ಕೆಂಪು ನೆಲ ಅಥವಾ ಬೂದುನೆಲವು ಯುಕ್ತ. ಸಜ್ಜೆ ಖುಷ್ಕಿ ಬೆಳೆಯಾಗಿ ಮಾತ್ರ ಬೆಳೆಯವಂತಹದ್ದು. ಪುನರ್ವಸು, ಪುಷ್ಯ, ಅಸ್ಲೆ ಮಳೆಗಳು ಸಜ್ಜೆ ಬಿತ್ತಲು ಪ್ರಶಸ್ತ್ಯವಾದ ಕಾಲ. ಇದು ನಾಲ್ಕು ತಿಂಗಳ ಬೆಳೆ. ತೆನೆ ಬಲಿತ ತಕ್ಷಣ ಬುಡಕ್ಕೆ ಕೊಯ್ದು ಚಿಕ್ಕ ಚಿಕ್ಕ ಪೆಂಡಿಗಳಾಗಿ ಕಟ್ಟಿ ಗೂಡಿಗೆ ಹಾಕುತ್ತಾರೆ. ಅನಂತರ ಕಣಗಳ ಕಾಲದಲ್ಲಿ ಪೆಂಡಿಗಳಿಂದ ತೆನೆಗಳನ್ನು ಮುರಿದು ಬೇರ್ಪಡಿಸಿ ಕಡ್ಡಿಯನ್ನು ದನಗಳ ಮೇವಿಗೆ ಬಳಸುತ್ತಾರೆ. ಅನ್ನ, ರೊಟ್ಟಿ, ಕಡಬು ಇತ್ಯಾದಿ ಆಹಾರ ಪದಾರ್ಥಗಳ ತಯಾರಿಕೆಗೆ ಬರುವ ಸಜ್ಜೆ ಕಾಳುಗಳಲ್ಲಿ, ಬೀಜಗಳನ್ನು ಆರಿಸುವ ಕ್ರಮ ಅತ್ಯಂತ ಸುಲಭವಾಗಿದ್ದು ಬೆಳೆಯಲ್ಲಿ ದೃಢವಾದ ತೆನೆಗಳನ್ನು ಆಯ್ದು ಮುರಿದು ಅವುಗಳನ್ನು ಚೀಲದಲ್ಲಿ ಕಟ್ಟಿಡುತ್ತಾರೆ. ಸಜ್ಜೆ ಬೀಜಗಳಿಗೆ ಬಹು ಬೇಗ ಹುಳ ಬೀಳುವ ಸಾಧ್ಯತೆಗಳಿದ್ದು ತೆನೆ ಸಮೇತ ಇಡುವುದರಿಂದ ಹುಳಗಳನ್ನು ತಪ್ಪಿಸಬಹುದು. ಬಿತ್ತುವ ದಿನಗಳಲ್ಲಿ ತೆನೆಯಿಂದ ಕಾಳನ್ನು ಬೇರ್ಪಡಿಸಿ (ಬೀಜವನ್ನು ನೀರಲ್ಲಿ ತೊಳೆದು) ಬಿತ್ತುತ್ತಾರೆ. ಈ ಬೀಜಗಳ ಸಂರಕ್ಷಣೆಗೆ ಯಾವುದೇ ವಿಶೇಷವಾದ ಕೀಟನಾಶಕಗಳನ್ನು ಬಳಸುವುದಿಲ್ಲ. 2011-12ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ರೈತರು 453 ಮೆ.ಟನ್ ಸಜ್ಜೆಯನ್ನು ಬೆಳೆದಿದ್ದಾರೆ. ಅದರಲ್ಲಿ ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಉತ್ಪಾದನೆ ಹೆಚ್ಚಿದೆ. ಇದಕ್ಕೆ ಕಾರಣ ಜಿಲ್ಲೆಯ ಮ್ಯಾಸಬೇಡರು ಹಾಗೂ ಕಾಡುಗೊಲ್ಲ ಬುಡಕಟ್ಟುಗಳು ನೆಲೆ ನಿಂತಿರುವುದು. ಈ ಬುಡಕಟ್ಟುಗಳಿಗೆ ಪ್ರಧಾನವಾದ ಹಾಗೂ ಪವಿತ್ರವಾದ ಆಹಾರ ಧಾನ್ಯಗಳಲ್ಲಿ ಸಜ್ಜೆಯೂ ಕೂಡ ಒಂದು. ಇವರಲ್ಲಿ ದೇವರಿಗೆ ನೈವೇದ್ಯ ಮಾಡಲು ಸಜ್ಜೆ ಅನ್ನಕ್ಕೆ ಅತೀ ಮಹತ್ವದ ಸ್ಥಾನವಿದೆ. ಈ ಕಾರಣದಿಂದಾಗಿಯೇ ಹೈಬ್ರಿಡ್ ಕಾಲದಲ್ಲಿಯೂ ಈ ಧಾನ್ಯ ಉಳಿದು ಬರಲು ಸಾಧ್ಯವಾಗಿದೆ.

ಸಾವೆ : ಸಾವೆ ಒಂದು ವಿಶಿಷ್ಟ ಬಗೆಯ ಧಾನ್ಯ. ನವಣೆಯನ್ನೇ ಹೋಲುವ ಇದು ಪ್ರಾಚೀನ ಮಾನವನ ಪ್ರಮುಖ ಧಾನ್ಯ. ಅಸ್ಲೆ ಮಳೆಯು ಇದನ್ನು ಬಿತ್ತಲು ಸರಿಯಾದ ಕಾಲ. ಖುಷ್ಕಿ ಭೂಮಿಯಲ್ಲಿ ಮಾತ್ರ ಬೆಳೆಯುವ ಈ ಧಾನ್ಯವನ್ನು ಬಹಳ ಹಿಂದೆ ಗೊಬ್ಬರದ ಜೊತೆ ಸೇರಿಸಿ ಸಾಲು ಹೊಡೆದ ನೆಲಕ್ಕೆ ಚೆಲ್ಲಿ, ಕೊರಡೋ ಅಥವಾ ಕುಂಟೆಯೋ ಹೊಡೆದು ಸಾಲು ಮುಚ್ಚುವ ಕ್ರಮವಿತ್ತು. ಆದರೆ ಬರುಬರುತ್ತಾ ಕೂರಿಗೆಯಲ್ಲಿ ಬಿತ್ತುವ ಕ್ರಮ ರೂಢಿಗೆ ಬಂದಿದೆ. ಮೂರು ತಿಂಗಳಿಗೆ ಬೆಳೆ ಕೊಯ್ಲಿಗೆ ಬರುತ್ತದೆ. ಇದನ್ನು ತೆನೆ ಸಮೇತ ಬುಡಮಟ್ಟ ಕೊಯ್ದು ಕಣಕ್ಕೆ ತಂದು ದನಗಳಿಂದ ತುಳಿಸಿ ಧಾನ್ಯವನ್ನು ಬೇರ್ಪಡಿಸಿಕೊಳ್ಳುತ್ತಾರೆ. ಮೊದಲು ಸಾಮಾನ್ಯವಾಗಿದ್ದ ಸಾವೆ ಇಂದು ಅಪರೂಪವಾಗಿದೆ. ಇಂದು ಮಾರುಕಟ್ಟೆಗೆ ತಂದು ಮಾರುವಷ್ಟು ಸಾವೆಯನ್ನು ಯಾರೂ ಬೆಳೆಯುವುದಿಲ್ಲ. ಆದರೆ ತಮ್ಮ ತಮ್ಮ ಮನೆ ಬಳಕೆಗೆ ಬೇಕಾಗುವಷ್ಟು ಬೆಳೆಯುತ್ತಾರೆ.

ನವಣೆ : ಸಾವೆಯ ಬೇಸಾಯ ಕ್ರಮದಂತೆಯೇ ನವಣೆಯ ಬೇಸಾಯ ಕ್ರಮವೂ ಇದೆ.ಇದನ್ನು ಮುಂಗಾರು ಜೋಳ ಬಿತ್ತುವ ಸಮಯದಲ್ಲಿ ಬಿತ್ತಬಹುದು ಹಿಂಗಾರು ಜೋಳದ ಜೊತೆ ಉತ್ತರ ಮಳೆಯಲ್ಲಿ ಬಿತ್ತಬಹುದು. ನಾಲ್ಕು ತಿಂಗಳಿಗೆ ಈ ಬೆಳೆ ಕೊಯ್ಲಿಗೆ ಬರುತ್ತದೆ. ಇಂದು ಸಾವೆಗೆ ಹೋಲಿಸಿದರೆ ನವಣೆಯ ಉತ್ಪಾದನೆ ಉತ್ತಮವಾಗಿದೆ.

ಮುಸುಕಿನಜೋಳ : ಚಿತ್ರದುರ್ಗ ಜಿಲ್ಲೆಯ ರೈತರ ಪ್ರಮುಖ ವಾಣಿಜ್ಯ ಬೆಳೆ ಮುಸುಕಿನ ಜೋಳ ಅಥವಾ ಮೆಕ್ಕೆಜೋಳ, ಖುಷ್ಕಿ ಮತ್ತು ನೀರಾವರಿ ಈ ಎರಡು ವ್ಯವಸಾಯ ಪದ್ಧತಿಗಳಲ್ಲಿ ಇದನ್ನು ಬೆಳೆಯುತ್ತಾರೆ. ಹದಮಾಡಿದ ಹೊಲದಲ್ಲಿ ನೇಗಿಲು ಸಾಲು ಹೊಡೆದು ಅದರಲ್ಲಿ ಒಂದೊಂದೇ ಬೀಜವನ್ನು ಹಾಕುತ್ತಾ ಅನಂತರ ಕುಂಟೆಯಿಂದ ಸಾಲು ಮುಚ್ಚುತ್ತಾರೆ. ಬೀಜಗಳನ್ನು ಹೆಚ್ಚು ಅಂತರಕ್ಕೆ ಹಾಕಿದಂತೆಲ್ಲಾ ತೆನೆಗಳ ಸಂಖ್ಯೆ ಮತ್ತು ಪ್ರಮಾಣ ಜಾಸ್ತಿಯಾಗುತ್ತದೆ. ಬೀಜ ಮೊಳಕೆಯೊಡೆದು 15-20 ದಿನಗಳ ಅನಂತರ ಸಾಲುಗಳ ಮಧ್ಯೆ ಚಿಕ್ಕ ಕುಂಟೆಯನ್ನು ಹೊಡೆಯುತ್ತಾರೆ. ಕುಂಟೆ ಹೊಡೆಯುವುದರಿಂದ ಕಳೆ ನಾಶವಾಗುವುದಲ್ಲದೇ ಬುಡವು ಮೃದುವಾಗುತ್ತದೆ. ಬೆಳೆಯಲ್ಲಿ ತೆನೆ ಬಿಟ್ಟು ಮಾಗಿದಂತೆಲ್ಲ ಗಿಡದ ತುದಿಯಲ್ಲಿ ಸೂಲಂಗಿ ಬೆಳೆಯುತ್ತದೆ. ಅದನ್ನು ಹಸಿ ಇರುವಾಗಲೇ ಮುರಿದು ದನಕರುಗಳಿಗೆ ತಿನಿಸುತ್ತಾರೆ. ತೆನೆಗಳು ಪೂರ್ಣ ಮಾಗಿದ ಅನಂತರ ಅವುಗಳನ್ನು ಮುರಿದು ಮುಸುಕಿನ ಸಮೇತ ಕಣದಲ್ಲಿ ಕೆಲವು ದಿನ ಒಣಗಿಸುತ್ತಾರೆ. ಅನಂತರ ಪ್ರತಿ ತೆನೆಯ ಮುಸುಕನ್ನು ಬಿಚ್ಚಿ ಕುಟ್ಟಿ ಬೀಜವನ್ನು ಬೇರ್ಪಡಿಸುತ್ತಾರೆ. ಈಗ ಇದಕ್ಕೆ ಯಂತ್ರ ಬಂದಿದ್ದು ಎಲ್ಲರು ಇದನ್ನೇ ಬಳಸುತ್ತಾರೆ. ಕುಟ್ಟಿ ತೆಗೆಯುವ ಹಳೆಯ ಕ್ರಮ ಇಂದು ಇಲ್ಲವಾಗಿದೆ. 2011-12ನೇ ಚಿತ್ರದುರ್ಗ ಜಿಲ್ಲೆಯಲ್ಲಿಒಟ್ಟು ಮೂರು ಹಂಗಾಮುಗಳಲ್ಲಿ 1,79,358 ಮೆಟ್ರಿಕ್ ಟನ್ ಮುಸುಕಿನ ಜೋಳ ಬೆಳೆಯಲಾಗಿದೆ. ಇದರಲ್ಲಿ ಚಿತ್ರದುರ್ಗ ತಾಲ್ಲೂಕು 87,548 ಮೆಟ್ರಿಕ್ ಟನ್ ಬೆಳೆದು ಮೊದಲ ಸ್ಥಾನದಲ್ಲಿದೆ. ಹೊಳಲ್ಕೆರೆ ತಾಲ್ಲೂಕು 64,072 ಮೆಟ್ರಿಕ್ ಟನ್ ಉತ್ಪಾದಿಸಿ ಎರಡನೇ ಸ್ಥಾನದಲ್ಲಿದೆ. ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು ಮತ್ತು ಹೊಸದುರ್ಗ ತಾಲ್ಲೂಕುಗಳು ಕ್ರಮವಾಗಿ 3,4,5 ಮತ್ತು 6ನೇ ಸ್ಥಾನವನ್ನು ಪಡೆದಿವೆ.

ಗೋದಿ : ನೀರಾವರಿ ಭೂಮಿಯಲ್ಲಿ ಮಾತ್ರ ಬೆಳೆಯುವ ಧಾನ್ಯಗಳಲ್ಲಿ ಗೋದಿಯು ಒಂದು. ಜಿಲ್ಲೆಯ ರೈತರು ಬೆಳೆಯುವ ಗೋದಿಯಲ್ಲಿ ಪ್ರಧಾನವಾದ ಎರಡು ತಳಿಗಳಿವೆ. ಅವುಗಳಲ್ಲಿ ಒಂದು ಜವೆ ಗೋದಿ ಮತ್ತೊಂದು ಹೊಟ್ಟೆಗೋದಿ. ಗೋದಿಯನ್ನು ಸಾಮಾನ್ಯವಾಗಿ ಹದಮಾಡಿಟ್ಟ ಹೊಲಕ್ಕೆ ಮೊದಲು ಚೆಲ್ಲಿಅನಂತರ ಕುಂಟೆಯ ಮೂಲಕ ಸಾಲನ್ನು ಮುಚ್ಚುತ್ತಾರೆ. ಕೆಲವೊಮ್ಮೆ ಅಪರೂಪಕ್ಕೆ ನೇಗಿಲಿನಿಂದ ಬಿತ್ತುವುದುಂಟು. ಮೂರರಿಂದ ನಾಲ್ಕು ತಿಂಗಳೊಳಗೆ ಕೊಯ್ಲಿಗೆ ಬರುವ ಈ ಬೆಳೆಯನ್ನು ಬುಡಮಟ್ಟ ಕೊಯ್ದು ಕಣದಲ್ಲಿ ಜಾನುವಾರುಗಳಿಂದ ತುಳಿಸಿ ಧಾನ್ಯವನ್ನು ಬೇರ್ಪಡಿಸುತ್ತಾರೆ.

ಬತ್ತ : ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ ಬತ್ತದ ಬೆಳೆಯನ್ನು ವಿಪುಲ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ಕಾರಣ ದಾವಣಗೆರೆ ಹಾಗೂ ಹರಿಹರ ತಾಲ್ಲೂಕುಗಳ ಬಹುಪಾಲು ರೈತರ ಜಮೀನುಗಳಿಗೆ ತುಂಗಾ ಬಲದಂಡೆನಾಲೆಯ ನೀರು ಲಭ್ಯವಿತ್ತು. ದಾವಣಗೆರೆ ಜಿಲ್ಲೆಯಾಗಿ ಆ ಭೂಪ್ರದೇಶವೆಲ್ಲ ಜಿಲ್ಲೆಯನ್ನು ಬಿಟ್ಟಿದ್ದರಿಂದ ಉಳಿದ ಪ್ರದೇಶದ ರೈತರಿಗೆ ಈ ರೀತಿಯ ಯಾವುದು ನೀರಿನ ಮೂಲವಿಲ್ಲದ್ದರಿಂದ ಅಲ್ಲಲ್ಲಿ ಕೊಳವೆ ಬಾವಿಗಳಲ್ಲಿ ತೃಪ್ತಿಕರವಾದ ನೀರು ದೊರೆತ ರೈತರು ಮಾತ್ರ ಬತ್ತವನ್ನು ಬೆಳೆಯುತ್ತಿದ್ದಾರೆ. ಸದ್ಯದಲ್ಲಿ ಹಿರಿಯೂರು ತಾಲ್ಲೂಕಿನ ಮಾರಿಕಣಿವೆ ಪ್ರದೇಶದ ರೈತರು, ಹಾಗೆಯೇ ಕೆಲವಾರು ದೊಡ್ಡ ಹಳ್ಳಗಳ ಪ್ರದೇಶದ ರೈತರು ಸದ್ಯ ಬತ್ತವನ್ನು ಬೆಳೆಯುತ್ತಾರೆ. 2011-12ನೇಯ ಸಾಲಿನ ಕೃಷಿ ಇಲಾಖೆಯ ವರದಿಯಂತೆ ಜಿಲ್ಲೆಯ ಬತ್ತದ ಉತ್ಪಾದನೆ ಒಟ್ಟು 18,844 ಮೆ.ಟನ್. ಇದರಲ್ಲಿ ಚಳ್ಳಕೆರೆ ತಾಲ್ಲೂಕು 12,012 ಮೆ.ಟನ್ ಬತ್ತವನ್ನು ಬೆಳೆಯುವ ಮೂಲಕ ಮೊದಲ ಸ್ಥಾನದಲ್ಲಿದೆ. ಅನಂತರದ ಸ್ಥಾನವನ್ನು ಹಿರಿಯೂರು ಪಡೆದಿದ್ದು ಈ ತಾಲ್ಲೂಕಿನ ರೈತರು 4,642 ಮೆ.ಟನ್ ಬತ್ತ ಬೆಳೆಯುವುದರ ಮೂಲಕ ಎರಡನೇ ಸ್ಥಾನವನ್ನು ಪಡೆದಿದೆ. ಚಳ್ಳಕೆರೆ ತಾಲ್ಲೂಕಿನ ರೈತರಿಗೆ ಸಹಾಯಕವಾಗಿರುವ ಕೆರೆಗಳು ಹಾಗೂ ಅಂತರ್ಜಲದ ಪ್ರಮಾಣ ಸಹಾಯಕ್ಕೆ ಒದಗಿ ಬಂದಿರುವುದನ್ನು ನೋಡಬಹುದು. ಈಗಾಗಲೇ ಹೇಳಿದಂತೆ ಚಿತ್ರದುರ್ಗ ಜಿಲ್ಲೆಯ ರೈತರು ಅತೀಪ್ರಾಚೀನ ಕಾಲದಿಂದಲೂ ಬತ್ತ ಬೆಳೆಯುತ್ತಾ ಬಂದಿದ್ದು ಅವರು ಮುಖ್ಯವಾಗಿ ಹಾಲುಬ್ಬಲು, ಕೂದಲು ಚನ್ನಂಗಿ, ಹುಣಸೆಹೂವು, ಕೆಂಬತ್ತಿ, ಕೆಂಬಗಡೆ, ಸಣ್ಣನೆಲ್ಲು ಮೊದಲಾದ ಪ್ರಾಚೀನ ತಳಿಗಳನ್ನು ಬೆಳೆಸುತ್ತಿದ್ದರು ಎಂಬುದನ್ನು ಈಗಿನ ಹಿರಿಯರಿಂದ ತಿಳಿಯಬಹುದಾಗಿದೆ.

ಹುರುಳಿ, ಕಡ್ಲೆ, ತೊಗರಿ, ಅವರೆ, ಹೆಸರು, ಅಲಸಂದೆ, ಉದ್ದು ಇವೆಲ್ಲವು ಸಾರಿನ ಕಾಳುಗಳಾಗಿದ್ದು ಇವುಗಳನ್ನು ಜೋಳ, ರಾಗಿ, ಸಜ್ಜೆ, ನವಣೆ, ಶೇಂಗ ಮೊದಲಾದ ಬೆಳೆಗಳಲ್ಲಿ ಅಕ್ಕಡಿಸಾಲುಗಳಾಗಿ ಬೆಳೆಯುವರು. ಆವಶ್ಯಕತೆಗೆ ಅನುಗುಣವಾಗಿ ರೈತರು ಈ ಧಾನ್ಯಗಳನ್ನು ಬೆಳೆಯುವುದುಂಟು. ಮಾರುಕಟ್ಟೆಗೆ ಹೋಗಿ ಮಾರಾಟ ಮಾಡುವಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಿಲ್ಲ. ಜಿಲ್ಲೆಯಲ್ಲಿ 2011-12 ನೇ ಸಾಲಿನಲ್ಲಿ 11,811 ಮೆ.ಟನ್ ಬೇಳೆ ಕಾಳುಗಳನ್ನು ಬೆಳೆಯಲಾಗಿದೆ. ಇದರಲ್ಲಿ ತೊಗರಿ ಉತ್ಪಾದನೆಯಲ್ಲಿ ಚಳ್ಳಕೆರೆ ಮತ್ತು ಚಿತ್ರದುರ್ಗ ಮುಂಚೂಣಿಯಲ್ಲಿವೆ. ಹುರುಳಿ ಉತ್ಪಾದನೆಯಲ್ಲಿ ಹೊಸದುರ್ಗ ಮತ್ತು ಹೊಳಲ್ಕೆರೆ ಮೊದಲ ಸ್ಥಾನದಲ್ಲಿದೆ.

ಶೇಂಗಾ : ಚಿತ್ರದುರ್ಗ ಜಿಲ್ಲೆ ಇಂದಿಗೂ ಶೇಂಗಾ ನಾಡೆಂದೇ ಜನಪ್ರಿಯವಾಗಿರುವಂಥದ್ದು. ಇಲ್ಲಿಯ ರೈತರ ಪ್ರಧಾನ ವಾಣಿಜ್ಯ ಬೆಳೆ ಶೇಂಗಾ. ಕನಿಷ್ಠ ಒಂದು ಚೀಲದಿಂದ 10-20 ಚೀಲದ ವರೆಗೆ ಶೇಂಗಾ ಬೀಜಗಳನ್ನು ಬಿತ್ತುತ್ತಾರೆ. ತಾವು ಬೆಳೆದ ಕಾಯಿಯಲ್ಲೇ ಗಟ್ಟಿ ಇರುವುದನ್ನು ಬೀಜಕ್ಕೆಂದು ತೆಗೆದು ಚೀಲಗಳಲ್ಲಿ ಸಂಗ್ರಹಿಸಿ ಇಟ್ಟಿರುತ್ತಾರೆ. ಅನಂತರ ಬಿತ್ತನೆ ಕಾಲ ಹತ್ತಿರ ಬರುತ್ತಿದ್ದಂತೆ ಅವುಗಳನ್ನು ಸಿಪ್ಪೆ ಬಿಡಿಸಿ ಬೀಜವನ್ನು ಸ್ವಚ್ಛ ಮಾಡಿಕೊಂಡು ಹೊಲಕ್ಕೆ ಬೀಜ ಹಾಕುತ್ತಾರೆ. ಕೂರಿಗೆಯಲ್ಲಿ ಕೂರಿಗೆ ಬಟ್ಟಲನ್ನು ಜೋಡಿಸಿ ಅದರ ಜೊತೆಗೆ ಕೂರಿಗೆ ತಾಳಿಗೆ ಅಕ್ಕಡಿಸಡ್ಡೆಯನ್ನು ಸೇರಿಸಿ ಬಿತ್ತುತ್ತಾರೆ. ಕೂರಿಗೆ ಬಟ್ಟಲಲ್ಲಿ ಗೊಬ್ಬರವನ್ನು ಹಾಗೂ ಸಡ್ಡೆಯಲ್ಲಿ ಶೇಂಗಾ ಬೀಜವನ್ನು ಬಿತ್ತುತ್ತಾರೆ. ಸಾಮಾನ್ಯವಾಗಿ ಶೇಂಗಾ ಹೊಲದಲ್ಲಿ ತೊಗರಿ, ಹುರಳಿ, ಹೆಸರು, ಅಲಸಂದೆ ಕಾಳುಗಳನ್ನು ಅಕ್ಕಡೆಗಳಾಗಿ ಬಿತ್ತುತ್ತಾರೆ. ಶೇಂಗಾವನ್ನು ಹಿಂಗಾರು ಮತ್ತು ಬೇಸಗೆ ಎರಡು ಸಮಯಗಳಲ್ಲಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಹಿಂಗಾರು ಶೇಂಗಾವನ್ನು ಪುಷ್ಯ, ಪುನರ್ವಸು, ಅಸಲೆ ಮಳೆಗಳಲ್ಲಿ ಬಿತ್ತುವುದು ವಾಡಿಕೆ. ಬೇಸಗೆ ಕಾಲದ ಶೇಂಗಾವನ್ನು ಸಾಮಾನ್ಯವಾಗಿ ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಬಿತ್ತನೆ ಮಾಡುತ್ತಾರೆ. 2011-12ನೇ ಸಾಲಿನ ಅಂಕಿ ಅಂಶಗಳ ಪ್ರಕಾರ ಎರಡು ಹಂಗಾಮಿನಲ್ಲಿ 37,716 ಮೆ.ಟನ್ ಶೇಂಗಾವನ್ನು ಬೆಳೆಯಲಾಗಿದೆ. ಇದರಲ್ಲಿ 19975 ಮೆ.ಟನ್ ಶೇಂಗಾವನ್ನು ಚಳ್ಳಕೆರೆ ತಾಲ್ಲೂಕಿನಲ್ಲೊಂದರಲ್ಲೇ ಬೆಳೆದಿರುವುದನ್ನು ಗಮನಿಸಬಹುದು. ಮೊಳಕಾಲ್ಮೂರು ತಾಲ್ಲೂಕು 8347 ಮೆ.ಟನ್ ಬೆಳೆಯುವುದರ ಮೂಲಕ ಎರಡನೇ ಸ್ಥಾನದಲ್ಲಿದೆ.

ಸೂರ್ಯಕಾಂತಿ : ಸೂರ್ಯಕಾಂತಿ ರೈತರ ಮಿತ್ರನಂತಿದೆ ಎನ್ನಬಹುದು. ಕಾರಣ ಯಾವುದೇ ಬೆಳೆಯನ್ನು ಇಡಲು ಸಾಧ್ಯವಾಗದೇ ಇದ್ದಾಗ ಸೂರ್ಯಕಾಂತಿಯನ್ನು ಇಡಬಹುದು. ಹಾಗಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಉದ್ದೇಶ ಪೂರ್ವಕವಾಗಿ ಸೂರ್ಯಕಾಂತಿ ಬೆಳಯುವ ರೈತರು ಸಿಗುವುದು ಅಪರೂಪ. ಆದರೆ ಉದ್ದೇಶ ಪೂರ್ವಕವಾಗಿ ಬೆಳೆಯುವುದಿಲ್ಲ ಎಂದೇನು ಅಲ್ಲ. 2011-12ನೇ ಸಾಲಿನಲ್ಲಿ ಒಟ್ಟು 1977 ಮೆ.ಟನ್. ಸೂರ್ಯಕಾಂತಿ ಬೆಳೆಯನ್ನು ಬೆಳೆಯಲಾಗಿದೆ. ಇದರಲ್ಲಿ ಚಿತ್ರದುರ್ಗ 788 ಮೆ.ಟನ್. ಹಿರಿಯೂರು 656 ಮೆ.ಟನ್. ಉತ್ಪಾದಿಸುವುದರ ಮೂಲಕ ಮುಂಚೂಣಿಯಲ್ಲಿವೆ.

ಈರುಳ್ಳಿ : ತೋಟಗಾರಿಕಾ ಬೆಳೆಗಳಲ್ಲಿ ಈರುಳ್ಳಿ ಬಹಳ ಮುಖ್ಯವಾದುದು. ಈ ಜಿಲ್ಲೆಯ ರೈತರ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಇದನ್ನು ಎಲ್ಲಾ ರೈತರು ಬೆಳೆಯುವ ಪ್ರಯತ್ನ ಮಾಡುತ್ತಾರೆ. ಬೀಜವನ್ನು ತಾವೆ ಬೆಳೆದುಕೊಳ್ಳುತ್ತಾರೆ. ಇಲ್ಲವೇ ಮಾರುಕಟ್ಟೆಯಿಂದ ತರುತ್ತಾರೆ. ಬೀಜವನ್ನು ಸಸಿ ಮಾಡಿ ನಾಟಿ ಮಾಡುವ ಪದ್ಧತಿ ಹಿಂದೆ ಪ್ರಚಲಿತದಲ್ಲಿತ್ತು. ಆದರೆ ಈಗ ಬೀಜವನ್ನು ಚೆಲ್ಲುವುದೇ ಹೆಚ್ಚು. ಬೀಜದ ತಳಿಗಳಲ್ಲಿ ಹಳೆಯ ಯಾವ ತಳಿಗಳು ಈಗ ಇದ್ದಂತಿಲ್ಲ. ಬದಲಿಗೆ ಸತಾರ ಮೊದಲಾದ ಹೈಬ್ರಿಡ್ ಬೀಜಗಳೇ ಜಾಸ್ತಿ. ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಈರುಳ್ಳಿ ಬೆಳೆ ಹೆಚ್ಚಿದೆ.

ಹೂವು : ಚಿತ್ರದುರ್ಗ ಪರಿಸರದಲ್ಲಿ ಮೊದಲಿಂದಲೂ ಹೂವು ಬೆಳೆಯುವ ಪದ್ಧತಿಯಿತ್ತು. ಸೇವಂತಿಗೆ, ಕಾಕಡ, ಚೆಂಡು ಹೂವು ಇವೇ

ಮೊದಲಾದ ಹೂವುಗಳನ್ನು ಬೆಳೆಯುತ್ತಿದ್ದರು. ಆದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ಜಿಲ್ಲೆಯೊಳಗೆ ಪುಷ್ಪ ಕೃಷಿ ಊಹಿಸಲು ಅಸಾಧ್ಯವೆನಿಸುವಷ್ಟು ಅಭಿವೃದ್ಧಿಯಾಗಿದೆ. ಅದರಲ್ಲೂ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಹೋಬಳಿ, ಹಿರಿಯೂರು ತಾಲ್ಲೂಕಿನ ಐಮಂಗಳ ಹೋಬಳಿ, ಚಿತ್ರದುರ್ಗ ತಾಲ್ಲೂಕಿನ ಭೂಪ್ರದೇಶದಲ್ಲಿ ಪುಷ್ಪ ಕೃಷಿ ಬಿಟ್ಟು ಉಳಿದೆಲ್ಲವು ಗೌಣವಾಗಿವೆ. ವರ್ಷವಿಡೀ ವಿವಿಧ ರೀತಿಯ ಪುಷ್ಪಗಳನ್ನು ಬೆಳೆಯುತ್ತಾರೆ. ಮಾರುಕಟ್ಟೆಯೂ ಸಹ ಇವರಿಗೆ ಅನುಕೂಲಕರವಾಗಿದೆ. ಇಂದು ಈ ಭಾಗದ ರೈತರು ಬೆಳೆಯುತ್ತಿರುವ ಹೂವುಗಳನ್ನು ನೋಡುವುದಾದರೆ ಸೇವಂತಿಗೆ ಜಾತಿಯಲ್ಲಿ ಸಾಮಾನ್ಯ ಸೇವಂತಿಗೆ, ಬಿಳಿ ಸೇವಂತಿಗೆ, ಬೆಳ್ಳಟ್ಟಿ, ಕುಪ್ಪಂ, ಚಾಂದಿನಿ ಇವೇ ಮೊದಲಾದವು. ಇವಲ್ಲದೇ ಬಟನ್ಸ್, ಆಸ್ಟ್ರೇಲಿಯಾ, ರುದ್ರಾಕ್ಷಿ, ಚೆಂಡುಹೂ, ಕಾಕಡ, ಕನಕಾಂಬರ ಮುಂತಾದ ವಿವಿಧ ರೀತಿಯ ಹೂವುಗಳು.

ತೋಟಗಾರಿಕೆ ಬೆಳೆಗಳಲ್ಲಿ ಮುಖ್ಯವಾಗಿ ಪಪ್ಪಾಯಿ, ದಾಳಿಂಬೆ, ಮೂಸುಂಬೆ, ಸಪೋಟ, ಬಾಳೆ, ಮಾವು, ಮೊದಲಾದ ಹಣ್ಣುಗಳನ್ನು ಚಿತ್ರದುರ್ಗ ಹಾಗೂ ಹಿರಿಯೂರು ತಾಲ್ಲೂಕುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ಹಾಗೆಯೇ ಮೆಣಸಿನಕಾಯಿ, ಬದನೆಕಾಯಿ, ಟೊಮ್ಯಾಟೋ, ಕ್ಯಾರೆಟ್, ಮೂಲಂಗಿ ; ವಿವಿಧ ರೀತಿಯ ಸೊಪ್ಪು ; ಇನ್ನೂ ಮೊದಲಾದವುಗಳನ್ನು ಒಂದು ಸೀಮಿತ ಪ್ರಮಾಣದಲ್ಲಿ ಎಲ್ಲಾ ತಾಲ್ಲೂಕಿನ ರೈತರು ಬೆಳೆಯುವುದುಂಟು.

ಗೊಬ್ಬರ ಕೀಟನಾಶಕಗಳು : ಗೊಬ್ಬರ ಮತ್ತು ಕೀಟನಾಶಕಗಳ ವಿಷಯದಲ್ಲಿ ರೈತನ ಈ ಹೊತ್ತಿನ ಸ್ಥಿತಿ ದುರಂತಮಯವಾಗಿದೆ. ಹಸುರು ಕ್ರಾಂತಿಯ ಹೆಸರಿನಲ್ಲಿ ಭಾರತ ದೇಶದೊಳಗೆ ಸುಮಾರು ನೂರಾರು ಸಂಖ್ಯೆಯ ಗೊಬ್ಬರ ಹಾಗೂ ಕೀಟನಾಶಕಗಳ ತಯಾರಿಕಾ ಕಂಪನಿಗಳು ತಲೆ ಎತ್ತಿ ನಿಂತು ರೈತರನ್ನು ಪರಾವಲಂಬಿಸಿಯಾಗಿಸಿವೆ. ಇಂದಿನ ಅಂಕಿಅಂಶಗಳನ್ನು ನೋಡಿದರೆ ಗಾಬರಿ ಹುಟ್ಟುವಷ್ಟು ರಸಗೊಬ್ಬರಗಳನ್ನು ಬಳಸುತ್ತಿದ್ದಾರೆ. ಚಿತ್ರದುರ್ಗ ಜಿಲ್ಲಾ ಕೃಷಿ ಇಲಾಖೆಯ ಸಮೀಕ್ಷೆಯಂತೆ 2010-11ನೇ ಸಾಲಿನಲ್ಲಿ ಬಿತ್ತನೆಯಾದ ಪ್ರತಿ ಹೆಕ್ಟೇರಿಗೆ 76 ಕೆ.ಜಿ. ರಾಸಾಯನಿಕ ಗೊಬ್ಬರವನ್ನು ಬಳಸಿದ್ದಾರೆ. ಅದರಲ್ಲೂ ಮೊಳಕಾಲ್ಮೂರು ಹಾಗೂ ಹೊಳಲ್ಕೆರೆ ತಾಲ್ಲೂಕಿನ ರೈತರು ಕ್ರಮವಾಗಿ ಪ್ರತಿ ಹೆ. 90.5 ಮತ್ತು 82.6 ಕೆ.ಜಿ. ರಾಸಾಯನಿಕ ಗೊಬ್ಬರವನ್ನು ಬಳಸಿದ್ದಾರೆ. ಜಿಲ್ಲೆಯ ರೈತರಲ್ಲಿ ಒಂದೊಂದು ಭಾಗದವರು ಒಂದೊಂದು ರೀತಿಯ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದಾರೆ. ಇದರ ಜೊತೆಗೆ ಕೀಟನಾಶಕಗಳು ಕೂಡ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುತ್ತಿರುವುದನ್ನು ನೋಡಬಹುದು. ಇತ್ತೀಚಿನ ದಿನಗಳಲ್ಲಿ ರೈತರು ಹೆಚ್ಚು ಬೆಳೆಯುತ್ತಿರುವುದು ಈರುಳ್ಳಿ, ವಿವಿಧ ರೀತಿಯ ಪುಷ್ಪಗಳು, ದಾಳಿಂಬೆಯಂತಹ ಹಣ್ಣುಗಳು ಇವೇ ಮೊದಲಾದ ಕೀಟಬಾಧೆ ಹೆಚ್ಚಿರುವ ಬೆಳೆಗಳನ್ನು, ಹಾಗಾಗಿಯೇ ಕೀಟನಾಶಕಗಳ ಬಳಕೆ ಹೆಚ್ಚಿದೆ. ಇನ್ನೂ ಗಮನಿಸಬೇಕಾದ ಸಂಗತಿಯೆಂದರೆ ಬೆಳೆಗಳಿಗೆ ಕಳೆ ಬಿದ್ದರೆ ತೆಗೆಸಲು ಕಳೆನಾಶಕಗಳನ್ನು ಬಳಸುವುದನ್ನು ಕಲಿತಿದ್ದಾರೆ. ಆರಂಭದಲ್ಲಿ ಈ ಭಾಗದ ರೈತ ಸಾಕಷ್ಟು ಪ್ರಮಾಣದಲ್ಲಿ ದನ - ಕುರಿಗಳನ್ನು ಹೊಂದಿದ್ದು ರೈತನ ಎಲ್ಲಾ ಜಮೀನುಗಳಿಗೂ ಕೊಟ್ಟಿಗೆ ಗೊಬ್ಬರವೇ ಲಭ್ಯವಾಗುತ್ತಿದ್ದುದನ್ನು, ಕೀಟ ಬಾಧೆ ಕಡಿಮೆ ಇರುವ ತಳಿಗಳ ಬೆಳೆಗಳನ್ನು ಬೆಳೆಯುತ್ತಿದ್ದುದನ್ನು, ಜಮೀನಿಗೆ ವರ್ಷಕ್ಕೆ ಒಂದೇ ಬೆಳೆ ಇಟ್ಟು ಹೆಚ್ಚು ಕಳೆ ಬೀಳದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದುದನ್ನು ಇಂದಿಗೂ ಜಿಲ್ಲೆಯ ಹಿರಿಯ ಕೃಷಿಕರು ನೆನೆಪಿಸಿಕೊಳ್ಳುತ್ತಾರೆ.

ಈ ನಡುವೆಯೂ ಬೇರೆ ಪ್ರದೇಶಗಳಿಗೆ ಹೋಲಿಸಿದರೆ ಚಿತ್ರದುರ್ಗ ಜಿಲ್ಲೆಯು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಲ್ಲಿ ಒಂದು ಸಮತೋಲನ ಕಾಪಾಡಿಕೊಂಡಿದೆ ಎನ್ನಬಹುದು. ಈ ಹೊತ್ತಿಗೂ ಜಿಲ್ಲೆಯ ಬಹುತೇಕ ರೈತರ ಮನೆಗಳಲ್ಲಿ ದನಕರುಗಳಿವೆ. ಬೀಜಗಳ ನಾಟಿ ತಳಿಗಳಿವೆ. ಉದಾ : ನವಣೆ, ಸಜ್ಜೆ, ಔಡಲ, ರಾಗಿ, ಜೋಳ ಮುಂತಾದವು. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು ಬಳಕೆಯಾಗುತ್ತಿರುವುದೇ ನೀರಾವರಿ ಕ್ಷೇತ್ರದಲ್ಲಿ. ಈ ದೃಷ್ಟಿಯಿಂದಲೂ ಚಿತ್ರದುರ್ಗ ಒಟ್ಟು ಸುಮಾರು 4,98,668 ಹೆ. ಕೃಷಿ ಭೂಮಿಯಲ್ಲಿ 93,070 ಹೆ. ಭೂಮಿ ಮಾತ್ರ ನೀರಾವರಿ ಸೌಲಭ್ಯವನ್ನು ಹೊಂದಿದೆ. ಅಂದರೆ ಮಳೆಯಾಧಾರಿತ ಕೃಷಿ ಹೆಚ್ಚಿರುವುದರಿಂದ ರಾಸಾಯನಿಕಗಳ ಬಳಕೆಯ ಪ್ರಮಾಣವು ಕೂಡ ಕಡಿಮೆಯಿದೆ ಎಂಬುದನ್ನು ಗಮನಿಸಬಹುದು.

ಉಪಕರಣಗಳು : ಯಾವುದೇ ಪ್ರದೇಶದ ಕೃಷಿ ಚಟುವಟಿಕೆಗಳಲ್ಲಿ ಕೃಷಿ ಉಪಕರಣಗಳ ಪಾತ್ರ ಮಹತ್ವದ್ದಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ರೈತರು ಬಳಸುವ ಉಪಕರಣಗಳು ವೈವಿಧ್ಯವೂ ವೈಶಿಷ್ಟ್ಯ ಪೂರ್ಣವೂ ಆದಂಥವು. ಅಂತಹವುಗಳಲ್ಲಿ ಮುಖ್ಯವಾದ ಕೆಲವನ್ನು ಎರಡು ವಿಧಗಳಲ್ಲಿ ಗುರುತಿಸಬಹುದು.

ಉಳುಮೆ ಉಪಕರಣಗಳು : ನೊಗ, ನೇಗಿಲು, ಕುಂಟೆ, ಕೂರಿಗೆ, ಕೂರಿಗೆಬಟ್ಟಲು, ಎಡೆಕುಂಟೆ, ಎಂಟೆ ಮರ, ರಂಟೆ, ಬಾರುಕೋಲು, ಗುದ್ದಲಿ, ಗಿಡಗುದ್ದಲಿ, ಕುಡಗೋಲು, ಕುರ್ಜಿಗಿ, ಗರಗಸ, ಕೊಡತಿ, ಸಲಿಕೆ, ಉಳಿ, ಹಿಡಿ, ಹಗ್ಗ, ಮಿಣಿ, ಸರ್ವೆ ಬಾಯಿಕುಕ್ಕೆ ಮೊದಲಾದವು.

ಒಕ್ಕಲು ಉಪಕರಣಗಳು : ಗಾಡಿ, ರೋಣಗಲ್ಲು, ಮೇಟಿಗೂಟ, ಪೊರಕೆ, ತೂರುವ ಪುಟ್ಟಿ, ಜಲ್ಲೆ, ಮೆರಗೋಲು - ಇವುಗಳಲ್ಲಿ ಕೆಲವು ಪ್ರಮುಖವಾದ ಉಪಕರಣಗಳ ಸ್ವರೂಪ, ಉಪಯೋಗ ಮತ್ತು ವಿಶೇಷತೆಗಳನ್ನು ಈ ಮುಂದಿನಂತೆ ವಿವರಿಸಿಕೊಳ್ಳಬಹುದು :

ನೊಗ : ಕೃಷಿಯಲ್ಲಿ ಎತ್ತಿನ ಬೇಸಾಯಕ್ಕೆ ನೊಗವು ಅತ್ಯಂತ ಅನಿವಾರ್ಯ. ಜಿಲ್ಲೆಯಲ್ಲಿ ಬಳಸುವ ನೊಗಗಳಲ್ಲಿ ಮೂರು ವಿಧ. ಸಾಮಾನ್ಯವಾಗಿ ನೇಗಿಲು, ಕುಂಟೆ, ಕೂರಿಗೆ, ಎಡೆಕುಂಟೆ ಇವೇ ಮೊದಲಾದವುಗಳ ಸಂದರ್ಭದಲ್ಲಿ ಸಾಮಾನ್ಯವಾದ ನೊಗವನ್ನೇ ಬಳಸುತ್ತಾರೆ. ಉಳಿದಂತೆ ಎಂಟೆಮರ, ರಂಟೆಕುಂಟೆಗಳನ್ನು ಊಡುವಾಗ ಸಾಮಾನ್ಯ ನೊಗಕ್ಕಿಂತ ಸ್ವಲ್ಪ ಉದ್ದವಾದ ನೊಗವನ್ನು ಬಳಸುತ್ತಾರೆ. ಇವೆರಡರಲ್ಲಿ ಉದ್ದದಲ್ಲಿ ಮಾತ್ರ ವ್ಯತ್ಯಾಸ ಕಾಣುತ್ತದೆ. ಆದರೆ ಎತ್ತಿನ ಗಾಡಿಗೆ ಊಡುವ ನೊಗ ಮಾತ್ರ ಸ್ವರೂಪದಲ್ಲಿ ತೀರಾ ಭಿನ್ನವಾಗಿರುತ್ತದೆ. ಇವುಗಳನ್ನು ಸಾಧಾರಣವಾಗಿ ಮೃದು ಮರಗಳಾದ ಆಲ, ಹಲಸು, ಮಾವು, ಅರೆಬೇವು ಮುಂತಾದ ಮರಗಳಿಂದ ತಯಾರಿಸಲಾಗುತ್ತದೆ.

ನೇಗಿಲು : ಭೂಮಿಯನ್ನು ಉತ್ತುವ ಸಾಧನಗಳಲ್ಲಿ ಬಹಳ ಪ್ರಧಾನವಾದುದು. ನೇಗಿಲಲ್ಲಿ ಪ್ರಧಾನವಾಗಿ 7 ಭಾಗಗಳಿರುತ್ತವೆ. ಅವುಗಳೆಂದರೆ : ಬಾಳು, ಮೇಣಿ, ಈಸು, ಕುಳ, ಜಿಗಳಿ, ಬೆನೆಚೆಕ್ಕೆ, ಹಿಡಿಗೈ, ಇವುಗಳ ಅಳತೆಗೆ ನಿರ್ದಿಷ್ಟ ಮಾನದಂಡಗಳಿಲ್ಲದಿದ್ದರೂ ರೈತರು

ಪ್ರದೇಶದಿಂದ ಪ್ರದೇಶಕ್ಕೆ ತಮ್ಮದೇ ಆದ ಅನುಕೂಲ ಹಾಗೂ ಅಗತ್ಯತೆಗಳಿಗೆ ಅನುಗುಣವಾಗಿ ನೇಗಿಲನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಇದರ ತಯಾರಿಕೆಯಲ್ಲಿ ಸಾಮಾನ್ಯವಾಗಿ ಜಾಲಿ ಮರವನ್ನು ಬಳಸುತ್ತಾರೆ. ಜಾಲಿ ಮರಕ್ಕಿರುವ ಗಟ್ಟಿತನವೇ ಇದಕ್ಕೆ ಕಾರಣ. ಬಾಳಿಗೆ ಕಬ್ಬಿಣದ ಕುಳವನ್ನು ಜಿಗಳಿಯ ಸಹಾಯದಿಂದ ಅಳವಡಿಸುತ್ತಾರೆ. ಹಿಂದೆ ರೈತರು ಜಾಲಿಮರವನ್ನು ತಾವೇ ಕಡಿದು ಕೆತ್ತಿನೇಗಿಲು ಮಾಡುತ್ತಿದ್ದು ಈಗ ಇದು ತ್ರಾಸದಾಯಕವೆಂದು ಮರವನ್ನು ಸಾಮಿಲ್‌ಗೆ ಒಯ್ದು ಕೊಯ್ಸಿ ತರುತ್ತಾರೆ. ಮುಂದುವರಿದು ಹಲವಾರು ರೈತರು ಕೃಷಿ ಇಲಾಖೆಯವರು ನೀಡುವ ಕಬ್ಬಿಣದ ನೇಗಿಲನ್ನು ಬಳಸುತ್ತಾರೆ. ಮೊದಲು ದೊಡ್ಡ ಪ್ರಮಾಣದ ಕಬ್ಬಿಣದ ನೇಗಿಲನ್ನು ನಾಲ್ಕು ಆರು ಎತ್ತುಗಳನ್ನು ಬಳಸಿ ಊಳುತ್ತಿದ್ದರು. ಆದರೆ ಇಂಥ ನೇಗಿಲಿನ ಬಳಕೆ ಇಂದು ಸಂಪೂರ್ಣ ಮಾಯವಾಗಿದೆ. ಈ ಕೆಲಸಕ್ಕೆ ಟ್ರಾಕ್ಟರ್‌ನ ಸಹಾಯ ಪಡೆಯುತ್ತಾರೆ.

ಕುಂಟೆ : ಕೃಷಿಯಲ್ಲಿ ನೇಗಿಲಿಗೆ ಮೊದಲ ಸ್ಥಾನವಾದರೆ ಕುಂಟೆಗೆ ಎರಡನೇ ಸ್ಥಾನ. ಭೂಮಿಯನ್ನು ಸಮಮಾಡಲು ಬಿತ್ತಿದ ಸಾಲುಗಳನ್ನು ಮುಚ್ಚಲು ಕುಂಟೆಯನ್ನು ಪ್ರಧಾನವಾಗಿ ಬಳಸುತ್ತಾರೆ. ಇದರಲ್ಲಿ ಒಂದು ದಿಂಡು ಎರಡು ಈಸು, ಒಂದು ಮೇಣಿ, ಎರಡು ತಾಲು, ಒಂದು ಕಬ್ಬಿಣದ ಕುಳ ಇರುತ್ತದೆ. ದಿಂಡನ್ನು ಸಾಮಾನ್ಯವಾಗಿ ಜಾಲಿ ಮರದಿಂದ ಮಾಡಲಾಗುತ್ತದೆ. ಸರ್ವೆ ಅಥವಾ ನೀಟಾಗಿ, ಭಾರ ಕಡಿಮೆ ಇರುವ ಯಾವುದೇ ಮರದಿಂದ ಈಸುಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

ಕೂರಿಗೆ : ನೆಲಕ್ಕೆ ಬೀಜ ಬಿತ್ತಲು ಬಳಸುವ ಕೃಷಿ ಸಾಧನವೇ ಕೂರಿಗೆ. ಕೂರಿಗೆಗೆ ಮೂರು ತಾಳು ಇರುವುದು ಹೆಚ್ಚು. ಆದರೆ ಜಿಲ್ಲೆಯ ಕೆಲವಾರು ಕಡೆ ಎರಡು ತಾಳಿನ ಕೂರಿಗೆಗಳು ಬಳಕೆಗೊಳ್ಳುತ್ತಿವೆ. ದಿಂಡು, ಈಸುಗಳು ಸಾಮಾನ್ಯವಾಗಿದ್ದು ತಾಳುಗಳು ಮಾತ್ರ ನೇಗಿಲಿನಂತೆ ಕಬ್ಬಿಣದ ಚಿಕ್ಕ ಕುಳಗಳನ್ನು ಅಳವಡಿಸಿರುತ್ತಾರೆ. ಇದರ ದಿಂಡು ತಾಳುಗಳು ಇಷ್ಟಿಷ್ಟೇ ಅಳತೆಗೆ ಇರಬೇಕೆಂಬ ನಿಯಮವಿದೆ. ಏಕೆಂದರೆ ಈ ಸಾಲುಗಳ ಮಧ್ಯೆ ಎಡೆಕುಂಟೆ ಹೊಡೆಯಬೇಕಾಗುತ್ತದೆ. ಇಲ್ಲಿ ಅಳತೆ ಬೆರಳುಗಳ ಲೆಕ್ಕದಲ್ಲಿ ಇದ್ದು, ಒಂದು ತಾಳದಿಂದ ಇನ್ನೊಂದು ತಾಳಕ್ಕೆ 10-12 ಬೆರಳ ಅಳತೆ ಇರುತ್ತದೆ.

ಎಡೆಕುಂಟೆ : ಕಳೆಯನ್ನು ತೆಗೆಯಲು ಇದನ್ನು ಹೊಡೆಯುತ್ತಾರೆ. ಇದು ಬೇರ್‍ಯಾವುದೇ ಬೇಸಾಯಕ್ಕಿಂತ ಸೂಕ್ಷ್ಮವಾದ ಕಾರ್ಯವಾಗಿದೆ. ಏಕೆಂದರೆ ಬೆಳೆದು ನಿಂತ ಪೈರಿನ ಮಧ್ಯೆ ಮಾಡಬೇಕಾದ ಕೆಲಸ. ಸ್ವಲ್ಪ ವ್ಯತ್ಯಾಸವಾದರೂ ಪೈರೆಲ್ಲ ಕುಂಟೆಗೆ ಸಿಕ್ಕು ನಾಶವಾಗುವ ಸಂಭವವಿರುತ್ತದೆ. ಈ ಸಾಧನವು ನೋಡಲು ಕೂರಿಗೆಯಂತಿರುತ್ತದೆ. ಆದರೆ ತಾಳುಗಳಲ್ಲಿ ಮಾತ್ರ ವ್ಯತ್ಯಾಸ. ಕೂರಿಗೆ ತಾಳಗಳಿಗೆ ಚಿಕ್ಕ ಕುಳಗಳು ಇರುವುದನ್ನು ನೋಡಿದೆವು. ಆದರೆ ಇಲ್ಲಿ ಕುಳಗಳ ಬದಲಿಗೆ T ಆಕಾರದ ಕಬ್ಬಿಣದ ಚಿಪ್ಪುಗಳು ಇರುತ್ತವೆ. ವಿಶೇಷವೆಂದರೆ ಬಹುಪಾಲು ಸಂದರ್ಭಗಳಲ್ಲಿ ಕೂರಿಗೆಯ ತಾಳುಗಳ ಬದಲಾಗಿ ಎಡೆಕುಂಟೆಗೆ ಅಗತ್ಯವಿರುವ ತಾಳುಗಳನ್ನು ಹಾಕಿ ಕೂರಿಗೆಯನ್ನೇ ಎಡೆಕುಂಟೆಯಾಗಿ ಪರಿವರ್ತಿಸಿಕೊಳ್ಳುವರು.

ಕೂರಿಗೆ ಬಟ್ಟಲು : ಬೀಜಬಿತ್ತಲು ನೆಲದಲ್ಲಿ ಸಾಲು ಮಾಡಿದರೆ ಆ ಸಾಲಿಗೆ ಬೀಜ ಬೀಳುವಂತೆ ಮಾಡುವ ಸಾಧನವೇ ಕೂರಿಗೆ ಬಟ್ಟಲು. ಇದರ ಸ್ವರೂಪ ವಿಶಿಷ್ಟವಾಗಿದ್ದು ಮೃದುವಾದ ಮರದಿಂದ ಮಾಡಿದ ಬಟ್ಟಲು ಹಾಗೂ ಅದಕ್ಕೆ ಅಳವಡಿಸಿರುವ ಬಿದಿರಿನ ಕೊಳವೆಗಳು (ಇತ್ತೀಚೆಗೆ ಬಿದಿರಿನ ಕೊಳವೆಗಳ ಬದಲಿಗೆ ಪ್ಲಾಸ್ಟಿಕ್ ಅಥವಾ ಸ್ಟೀಲ್‌ನ ಚಿಕ್ಕ ಪೈಪುಗಳನ್ನು ಬಳಸುತ್ತಿರುವುದು ಸಾಮಾನ್ಯವಾಗಿದೆ) ಈ ಕೊಳವೆಗಳನ್ನು ಕೂರಿಗೆಯ ತಾಳಗಳಿಗೆ ಸೇರಿಸಿ ಬೀಜಗೊಬ್ಬರಗಳನ್ನು ಬಿತ್ತುತ್ತಾರೆ.

ಹೆಂಟೆ ಮರ : ಇದು ನೆಲ ಸಮಮಾಡುವ ಸಾಧನ. ಕುಂಟೆಯಿಂದ ನೆಲಸಮ ಮಾಡುವುದು ಸಾಧ್ಯವಿಲ್ಲ ಎನಿಸಿದ ಸಂದರ್ಭದಲ್ಲಿ ಹೆಂಟೆ ಮರಗಳನ್ನು ಬಳಸುತ್ತಾರೆ. ಇದನ್ನು ಕೊರಡು ಎಂದು ಸಹಾ ಕರೆಯುವುದುಂಟು. ಚಪ್ಪಟೆಯಾದ ಮರದ ಉದ್ದನೆಯ ತುಂಡನ್ನು ಹಗ್ಗದ ಸಹಾಯದಿಂದ ನೊಗಕ್ಕೆ ಜೋಡಿಸಿ ಬಳಸುತ್ತಾರೆ. ಇದರಿಂದ ನೇಗಿಲಿಂದ ಎದ್ದ ದೊಡ್ಡ ಪ್ರಮಾಣದ ಹೆಂಟೆಗಳನ್ನು ಒಡೆದು ನೆಲಸಮ ಮಾಡಲಾಗುತ್ತದೆ.

ರಂಟೆ : ಚಿಕ್ಕ ಪ್ರಮಾಣದ ಕುಂಟೆಯನ್ನೇ ರಂಟೆ ಎನ್ನುತ್ತಾರೆ. ಇದನ್ನು ಮೆಕ್ಕೆ ಜೋಳ, ಮೆಣಸಿನಕಾಯಿ ಮತ್ತಿತರ ದೊಡ್ಡ ಸಾಲುಗಳಿರುವ ಬೆಳೆಗಳಲ್ಲಿ ಕಳೆ ನಾಶಮಾಡಲು ಬಳಸುತ್ತಾರೆ. ಅಳತೆಯಲ್ಲಿ ಚಿಕ್ಕದು ಎನ್ನುವುದನ್ನು ಬಿಟ್ಟರೆ ಉಳಿದಂತೆ ಎಲ್ಲವು ಕುಂಟೆಯಂತೆಯೇ. ವಿಶೇಷವೆಂದರೆ ಬಿತ್ತುವ ಕೂರಿಗೆ ಎರಡು ತಾಳಿನದಾದರೆ ರಂಟೆಯನ್ನು ಬಳಸುತ್ತಾರೆ. ಎರಡು ಎತ್ತಿನ ಒಂದು ನೊಗಕ್ಕೆ ಎರಡು ಅಥವಾ ಮೂರು ಚಿಕ್ಕರಂಟೆಗಳನ್ನು ಕಟ್ಟುತ್ತಾರೆ. ಇತ್ತೀಚೆಗೆ ಚಳ್ಳಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕಿನ ರೈತರು ಒಬ್ಬೊಬ್ಬರೆ ಮೂರು ಚಿಕ್ಕ ರಂಟೆಗಳನ್ನು ಒಡೆಯುವ ರೀತಿಯ ರಂಟೆಗಳನ್ನು ತಯಾರಿಸಿಕೊಂಡಿದ್ದಾರೆ.

ಬಾರುಕೋಲು : ಬಾರುಕೋಲು ವ್ಯವಸಾಯದ ಪ್ರಮುಖ ಸಾಧನ. ಎತ್ತುಗಳನ್ನು ಬೆದರಿಸುವ ಸಾಧನ ಇದಾದರೂ ಇಷ್ಟಕ್ಕೆ ಇದರ ಮಹತ್ವ ನಿಲ್ಲುವುದಿಲ್ಲ. ಬಾರುಕೋಲು ಹೇಗಿದೆ ಎನ್ನುವುದರ ಮೇಲೆ ಆ ರೈತನ ಶಿಸ್ತು ತಿಳಿಯುತ್ತದೆ. ಒಂದು ಬಿದಿರಿನ ಕೋಲಿಗೆ ನಾರು ಅಥವಾ ವೈರಿನಲ್ಲಿ ವಿಶಿಷ್ಟವಾಗಿ ಹೆಣೆದ ಹಗ್ಗವನ್ನು ಜೋಡಿಸಿರುತ್ತಾರೆ.

ಬೇಸಾಯದ ಹಗ್ಗ : ಈ ಪ್ರದೇಶದ ರೈತ ವ್ಯವಸಾಯಕ್ಕೆ ಬಳಸುವ ಹಗ್ಗಗಳಲ್ಲಿ ಪ್ರಮುಖವಾದವುಗಳೆಂದರೆ ಕಟಾವಾದ ಫಸಲನ್ನು ಕಣಕ್ಕೆ ಏರಲು ಎತ್ತಿನ ಗಾಡಿಗೆ ಬಿಗಿದು ಕಟ್ಟಲು ಅಗತ್ಯವಿರುವ ಹಗ್ಗ, ನೇಗಿಲು-ಕುಂಟೆರಂಟೆಗಳನ್ನು ಕಟ್ಟಲು ಮಿಣಿ, ಸರ್ವೆ ಹಗ್ಗಗಳು ಮುಂತಾದವು. ಇಂಥ ಹಗ್ಗಗಳನ್ನು ತಾನೆ ತಯಾರಿಸಿಕೊಳ್ಳುವ ಪರಿಪಾಟವನ್ನು ಬೆಳೆಸಿಕೊಂಡಿದ್ದನ್ನೂ ಇಂದಿಗೂ ಕಾಣಬಹುದು. ಇದಕ್ಕೆ ಮುಖ್ಯವಾಗಿ ಸ್ಥಳೀಯವಾಗಿ ಸಿಗುವ ಈಚಲು ಗರಿಯಿಂದ ನಾರನ್ನು ತೆಗೆದು ಹಗ್ಗ ತಯಾರಿಸುತ್ತಿದ್ದ. ರೈತರು ಈಚಲು ಗಿಡಗಳು ಕಡಿಮೆಯಾದಾಗ ಯಥೇಚ್ಛವಾಗಿ ಸಿಗುವ ಕತ್ತಾಳೆ ನಾರಿನಿಂದ ಬೇಸಾಯಕ್ಕೆ ಅಗತ್ಯವಿರುವ ಎಲ್ಲಾ ಹಗ್ಗಗಳನ್ನು ತಯಾರಿಮಾಡಿಕೊಳ್ಳುತ್ತಾನೆ. ಕತ್ತಾಳೆ ನಾರು ತಯಾರು ಮಾಡುವುದು ಒಂದು ಪ್ರಮುಖ ಪಾರಂಪರಿಕ ಜ್ಞಾನ. ಬಲಿತ ಕತ್ತಾಳೆ ಮಟ್ಟೆಗಳನ್ನು ಕಡಿದು ತಂದು ನೀರಿರುವ ಗುಂಡಿಗೆ ಹಾಕಿ ಚೆನ್ನಾಗಿ ಕೊಳೆಯುವಂತೆ ಮಾಡಿ ಅದನ್ನು ಬಟ್ಟೆ ತೊಳೆದಂತೆ ಚೆನ್ನಾಗಿ ತೊಳೆದರೆ ಅಚ್ಚ ಬಿಳಿಯ ನಾರು ದೊರೆಯುತ್ತದೆ. ನೋಡಲು ಸುಂದರವಾಗಿ ಕಾಣುವ ಈ ಹಗ್ಗಗಳು ಪರಿಮಾಣದ ದೃಷ್ಟಿಯಿಂದಲೂ ಉನ್ನತವಾಗಿರುತ್ತವೆ. ಇತ್ತೀಚೆಗೆ ಈ ಕತ್ತಾಳೆಯೂ ಕಡಿಮೆಯಾಗಿ ತೆಂಗಿನ ನಾರಿನಿಂದ ತಯಾರಾದ ಹಗ್ಗಗಳನ್ನು ಬಳಸುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದೆಂದರೆ ತೆಂಗಿನ ನಾರಿನ ಹಗ್ಗಗಳನ್ನು ರೈತ ಮಾರುಕಟ್ಟೆಯಿಂದ ಮಾತ್ರ ಪಡೆಯುವಂತಾಗಿದೆ.

ಬಾಯಿಕುಕ್ಕೆ : ಬೆಳೆದ ಪೈರುಗಳಲ್ಲಿ ಎಡೆಕುಂಟೆ, ರಂಟೆ ಹಾಗೂ ಹಸುರು ಹುಲ್ಲಿರುವ ಸ್ಥಳದಲ್ಲಿ ಕೆಲಸ ಮಾಡುವಾಗ ಎತ್ತುಗಳ ಬಾಯಿಗೆ ಕಟ್ಟುವ ಕುಕ್ಕೆ. ಇದರಿಂದ ಎತ್ತುಗಳು ಬೇಸಾಯದಲ್ಲಿ ತಿನ್ನಲು ಹೋಗಿ ಕೆಲಸಕ್ಕೆ ತೊಂದರೆ ಕೊಡುವ ಸಾಧ್ಯತೆ ಕಡಿಮೆಯಾಗುತ್ತದೆ.

ಪಿಕಾಸಿ : ಭೂಮಿಯನ್ನು ಅಗೆಯಲು ಅಗತ್ಯವಿರುವ ಸಲಕರಣೆ. ಹೆಚ್ಚು ಬಿರುಸಾದ ಭೂಮಿಯಲ್ಲಿ ಸಣ್ಣಪುಟ್ಟ ಕಲ್ಲಿನಂತಹ ವಸ್ತುಗಳನ್ನು ಹೊರತೆಗೆಯಲು ಇದು ಸಹಕಾರಿ. ಇದರಿಂದ ತರಕಾರಿ ಮತ್ತು ಹೂವಿನ ಮಡಿಗಳನ್ನು ಅಗೆದು ಮಣ್ಣನ್ನು ಸಡಿಲಿಸಬಹುದು.

ಸನಿಕೆ : ಸನಿಕೆ ಅಥವಾ ಸಲಿಕೆ ಪಿಕಾಸಿಗಿಂತ ಭಿನ್ನವಾದುದು. ಪಿಕಾಸಿ ಕೆಲಸ ಮುಗಿದ ಮೇಲೆ ಸನಿಕೆ ಪಾತ್ರ ಬರುತ್ತದೆ. ಅಗೆದ ಮಣ್ಣನ್ನು ಸಮಗೂಡಿಸುವುದು, ಗೊಬ್ಬರ, ಮಣ್ಣು ಇತ್ಯಾದಿ ತುಂಬಲು ಮತ್ತು ನೀರು ಹಾಯಿಸಲು ಇದು ಬೇಕೆ ಬೇಕು.

ಬುಟ್ಟಿ : ರೈತನ ಜೀವನದಲ್ಲಿ ಬುಟ್ಟಿ ಅಥವಾ ಪುಟ್ಟಿಯ ಪಾತ್ರ ದೊಡ್ಡದು. ದಿನ ಬೆಳಗಾದರೆ ದನದ ಕೊಟ್ಟಿಗೆಯಿಂದ ಸಗಣಿ ಎತ್ತಿ ಹಾಕುವುದು, ಹೊಲದಲ್ಲಿ ಕೆಲಸ ಮಾಡುವವರಿಗೆ ಬುತ್ತಿ ಒಯ್ಯುವುದು ಹೊಲದಲ್ಲಿ ಮಣ್ಣು, ಗೊಬ್ಬರ ಇತ್ಯಾದಿಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಸಹಾಯಕವಾಗುತ್ತದೆ.

ತೂರುವ ಪುಟ್ಟಿ : ಹುಬ್ಬಲಿನಿಂದ ಧಾನ್ಯಗಳನ್ನು ಬೇರ್ಪಡಿಸಲು ಹಾಗೂ ಧಾನ್ಯಗಳಲ್ಲಿಯೇ ಜೊಳ್ಳು ಗಟ್ಟಿಯನ್ನು ಬೇರ್ಪಡಿಸಲು ತೂರುವ ಕೆಲಸಕ್ಕೆ ಅನುಕೂಲವಾಗುವಂತೆ ಚಿಕ್ಕ ಪುಟ್ಟಿಗಳನ್ನು ತಯಾರಿಸಿ ಬಳಸುತ್ತಾರೆ. ಇದನ್ನೇ ತೂರುವ ಪುಟ್ಟಿ ಎಂದು ಕರೆಯಲಾಗುತ್ತದೆ. ಇದನ್ನು ಸಾಮಾನ್ಯವಾಗಿ ಹೂಲಿ, ಬಿದಿರು, ಈಚಲು ಕಡ್ಡಿಗಳಿಂದ ತಯಾರಿಸಲಾಗುತ್ತದೆ.

ಜಲ್ಲೆ : ಇದು ದೊಡ್ಡ ಪ್ರಮಾಣದ ಪುಟ್ಟಿಯಾಗಿದ್ದು ಈಚಲು ಅಥವಾ ಬಿದಿರಿನಿಂದ ತಯಾರಿಸುತ್ತಾರೆ. ಹೊಲದಲ್ಲಿ ಕೊಯ್ಲಾದ ಬೆಳೆಯನ್ನು ಒಟ್ಟಾಗಿಸಲು ಜಲ್ಲೆಯನ್ನು ಬಳಸುತ್ತಾರೆ.

ಕುಡುಗೋಲು : ಹೊಲದಲ್ಲಿ ಕಳೆ ಕೀಳಲು ಮತ್ತು ಬೆಳೆ ಕೊಯ್ಲು ಮಾಡಲು ಸಹಾಯಕ್ಕೆ ಬರುವ ಸಾಧನ. ಇವುಗಳ ಸ್ವರೂಪ ವೈವಿಧ್ಯಮಯವಾಗಿದೆ.

ಸಣ್ಣ ಗುದ್ದಲಿ : ಸಣ್ಣಪುಟ್ಟ ಹೆಂಟೆಗಳನ್ನು ಒಡೆದು ಪುಡಿ ಮಾಡಲು, ಮಡಿಗಳಲ್ಲಿ ಸಾಲು ತೆಗೆಯಲು, ಬೀಜ ಬಿತ್ತಲು, ಕಳೆ ತೆಗೆಯಲು, ತಗ್ಗು ತೆಗೆಯಲು ಮತ್ತು ಮಡಿಗಳಲ್ಲಿ ಮಣ್ಣನ್ನು ಪುಡಿ ಮಾಡಲು ಬೇಕಾಗುತ್ತದೆ.

ಗರಗಸ : ಉದ್ದನೆಯ ಮರದ ತುಂಡುಗಳನ್ನು ಕತ್ತರಿಸಲು ಗರಗಸ ಸಹಕಾರಿಯಾಗುತ್ತದೆ. ಮುಖ್ಯವಾಗಿ ಬೇಸಾಯದ ಮುಟ್ಟು ತಯಾರಿಸಲು ಈ ಸಾಧನ ಬಹಳ ಅನಿವಾರ್ಯ. ಇದರ ಜೊತೆಗೆ ಉಳಿ, ಕೊಡತಿ, ಬೈರಿಗೆ ಬಹಳ ಮುಖ್ಯವಾದವುಗಳಾಗಿವೆ.

ಗಾಡಿ : ಬಂಡಿ ಎಂದು ಕರೆಯಲ್ಪಡುವ ಎತ್ತಿನ ಗಾಡಿಯು ರೈತನ ಪ್ರಮುಖ ಸಾರಿಗೆ ಸಾಧನ. ಬಹಳ ನಿಪುಣತೆಯಿಂದ ತಯಾರಿಸಲಾದ ವಾಹನವಿದು. ಇತ್ತೀಚೆಗೆ ಇದರ ಸ್ವರೂಪ ಬದಲಾಗುತ್ತಿದೆ. ಅದರಲ್ಲಿ ಮುಖ್ಯವಾಗಿ ಗಾಡಿಗೆ ಬಳಸುತ್ತಿದ್ದ ಕಬ್ಬಿಣದ ಹಳಿಯ ಚಕ್ರಗಳ ಬದಲಿಗೆ ಟಯರ್‌ಗಳು ಬಂದಿವೆ. ಹಾಗೆಯೇ ಕೃಷಿಯಲ್ಲಿ ಟ್ರ್ಯಾಕ್ಟರ್‌ಗಳು ಬಳಕೆ ಜಾಸ್ತಿಯಾಗಿದೆ. ನಿದರ್ಶನಕ್ಕೆ ನೋಡುವುದಾದರೆ 2011ನೇಯ ಸಾಲಿನ ಸಮೀಕ್ಷೆಯಂತೆ ಚಿತ್ರದುರ್ಗ ಜಿಲ್ಲೆಯಲ್ಲಿರುವ ಟ್ರ್ಯಾಕ್ಟರ್‌ಗಳ ಸಂಖ್ಯೆ 11,116, ಇವುಗಳ ಜೊತೆಗೆ 6,848 ಟಿಲ್ಲರ್‌ಗಳು ಕೂಡ ಬಳಕೆಯಾಗುತ್ತಿರುವುದರಿಂದ ರೈತ ಎತ್ತಿನ ಗಾಡಿ ಮತ್ತು ಎತ್ತಿನ ಬೇಸಾಯ ಮಾಡುವುದನ್ನು ಸಾಕಷ್ಟು ಕಡಿಮೆಮಾಡಿರುವುದು ಕಾಣಬಹುದು.

ರೋಣಗಲ್ಲು : ಬೆಳೆದ ಪೈರನ್ನು ಕಣಕ್ಕೆ ತಂದು ಧಾನ್ಯ ಬೇರ್ಪಡಿಸಲು ಬಳಸುವ ಕಲ್ಲಿನ ಸಾಧನವಿದು. ಇದರ ಸ್ವರೂಪವನ್ನು ನೋಡಬಹುದು. ರಸ್ತೆಯನ್ನೇ ಕಣವನ್ನಾಗಿಸಿಕೊಂಡಿರುವ ಇಂದಿನ ಬಹುಪಾಲು ರೈತರು ಇದರ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ.

ಮೇಟಿಗೂಟ : ಕಣದಲ್ಲಿ ಪೈರನ್ನು ತುಳಿಸುವಾಗ ಕಣದ ಮಧ್ಯೆಭಾಗದಲ್ಲಿ ಒಂದು ಮರದ ಗೂಟವನ್ನು ನೆಟ್ಟು ಅದಕ್ಕೆ ಹಗ್ಗದ ಸಹಾಯದಿಂದ ಎತ್ತುಗಳನ್ನು ಕಟ್ಟಿ ಸುತ್ತ ತಿರುಗಿಸುತ್ತಾ ಹುಲ್ಲಿನಿಂದ ಧಾನ್ಯಗಳನ್ನು ಬೇರ್ಪಡಿಸುತ್ತಾರೆ. ಇಡೀ ಕೆಲಸದಲ್ಲಿ ಮೇಟಿಗೂಟದ ಪಾತ್ರ ಮುಖ್ಯವಾಗಿರುತ್ತದೆ. ಇದು ಭದ್ರವಿದ್ದರೆ ಮಾತ್ರ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಇದರ ಆಧಾರದ ಮೇಲೆ ಕೆಲವು ಅನುಭವದ ಮಾತುಗಳು ಹುಟ್ಟಿಕೊಂಡಿವೆ. ಮೇಟಿ ಭದ್ರವಾಗಿದ್ದರೆ ಎಲ್ಲವು ಭದ್ರ ಎನ್ನುವ ಮಾತನ್ನು ಇಲ್ಲಿ ಗಮನಿಸಬಹುದು.

ಮೆರಗೋಲು : ರೈತ ಬೆಳೆದ ಬೆಳೆಯನ್ನು ಕಣಕ್ಕೆ ತಂದು ಒಟ್ಟಾಕಿದ ಸಂದರ್ಭದಲ್ಲಿ ಅದರಲ್ಲಿರುವ ಮಣ್ಣು ಧೂಳನ್ನು ಬೇರ್ಪಡಿಸಲು ಬಳಸುವ ಸಾಧನ. ಮೆರಗೋಲಿನಿಂದ ಮಾಡುವ ಈ ಕೆಲಸವನ್ನು ಕುಡಗೋಲು ಮತ್ತಿತರ ಸಾಧನಗಳಿಂದ ಮಾಡಬಹುದು. ಆದರೆ ಮೆರಗೋಲಿನಿಂದ ಮಾಡುವ ಕೆಲಸ ಆರಾಮದಾಯಕವಾಗಿರುತ್ತದೆ. ರೈತ ತನ್ನ ಬದುಕಿನ ಅನುಭವದಲ್ಲಿ ನಡೆಸಿದ ಶೋಧನೆಯಿದು ಎಂದರೆ ತಪ್ಪಾಗಲಾರದು. ಇದನ್ನು ವಿಶೇಷವಾಗಿ ಶೇಂಗಾ, ಹುರುಳಿ ಮತ್ತಿತರ ಬೆಳೆಗಳ ಕಣಕೆಲಸದಲ್ಲಿ ಉಪಯೋಗಿಸುವುದುಂಟು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಹೆಚ್ಚು ಬಳಸುವುದನ್ನು ಇಂದಿಗೂ ನೋಡಬಹುದು.

ಬೀಜ, ಬೆಳೆ, ಧಾನ್ಯ ಸಂಗ್ರಹಣೆ - ಸಂರಕ್ಷಣೆ : ರೈತನ ಬದುಕಲ್ಲಿ ತಾನು ಬೆಳೆದ ಧಾನ್ಯ, ಬೀಜ, ಹಣ್ಣು ಮತ್ತು ತರಕಾರಿಗಳ ಸಂಗ್ರಹಣೆ ಮತ್ತು ಸಂರಕ್ಷಣೆ ಬಹಳ ಮುಖ್ಯವಾದುದು. ಈ ಸಂಗ್ರಹಣೆ ಮತ್ತು ಸಂರಕ್ಷಣೆಯ ವಿಧಾನಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ ಎಂಬುದನ್ನು ವಿಶೇಷವಾಗಿ ಹೇಳಬೇಕಿಲ್ಲ. ಇಂಥ ವಿಧಾನಗಳು ಹಲವಿದ್ದು ಅವುಗಳಲ್ಲಿ ಕೆಲವು ಇಂತಿದೆ.

ಕೃಷಿಯನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೆ ಹೇಳಿದಂತೆ ಈರುಳ್ಳಿ, ಹೂವು, ಶೇಂಗಾ, ಅಡಕೆ ಬೆಳೆಗಳ ಜೊತೆಗೆ ಪಾರಂಪರಿಕ ಬೆಳೆಗಳಾದ ರಾಗಿ, ನವಣೆ, ಸಾವೆ, ಸಜ್ಜೆ, ಜೋಳ, ಹೆಸರು, ಅವರೆ, ತೊಗರಿ, ಜಣಬಿ, ಪುಂಡಿ, ಕುಸುಬೆ, ಗುರೆಳ್ಳು ಮೊದಲಾದ ನಾಟಿತಳಿಗಳನ್ನು ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಜೊತೆಗೆ ಜೋಳ, ಮುಸುಕಿನ ಜೋಳ, ರಾಗಿ, ಸೂರ್ಯಕಾಂತಿ, ಹತ್ತಿ, ಬಹುತೇಕ ತರಕಾರಿಗಳು, ವಿವಿಧ ರೀತಿಯ ಹಣ್ಣುಗಳು ಇವೇ ಮೊದಲಾದ ಹೈಬ್ರಿಡ್

ತಳಿಗಳನ್ನು ಬೆಳೆಯುತ್ತಿದ್ದಾರೆ. ಹೈಬ್ರಿಡ್‌ತಳಿಗಳ ಬೀಜಗಳು ಕಂಪನಿಗಳು ಉತ್ಪಾದಿಸಿದ್ದು ಅವುಗಳಿಗೆ ಹುಳ ಬೀಳದಂತೆ ಮೊದಲೇ ಜಾಗೃತಿ ವಹಿಸಿರುವುದರಿಂದ ಬೀಜ ಸಂರಕ್ಷಣೆಯ ಪ್ರಮೇಯವಿರುವುದಿಲ್ಲ. ಆದರೆ ನಾಟಿ ತಳಿಗಳಿಗೆ ಯಾವ ಮುಂಜಾಗ್ರತೆ ಇರುವುದಿಲ್ಲವಾದರೂ ಅವುಗಳಿಗೆ ಬೇರೊಂದು ಸಾಧ್ಯತೆಯಿದೆ. ಅದೇನೆಂದರೆ ; ನಾಟಿತಳಿಗಳಿಗೆ ಹುಳ ಬೀಳುವುದೇ ಕಡಿಮೆ. ಆದರೆ ಹುಳವೇ ಬೀಳುವುದಿಲ್ಲವೆಂದು ಹೇಳಲಾಗದು. ಈ ದೃಷ್ಟಿಯಿಂದ ರೈತ ತನ್ನ ಸುತ್ತಮುತ್ತ ಸಿಗುವ ಕೆಲವೊಂದು ಪದಾರ್ಥಗಳಿಂದಲೇ ಬೀಜಗಳಿಗೆ ಹುಳಬೀಳದಂತೆ ಎಚ್ಚರವಹಿಸಿರುವುದು ಗಮನಾರ್ಹ. ರೈತನ ಪಾರಂಪರಿಕ ಬೀಜೋತ್ಪಾದನೆ ಮತ್ತು ಸಂರಕ್ಷಣೆಯ ಕ್ರಮಗಳು ತುಂಬಾ ವಿಶಿಷ್ಟವಾಗಿದ್ದು ಅವುಗಳನ್ನು ಈ ಮುಂದಿನಂತೆ ಗಮನಿಸಬಹುದಾಗಿದೆ.

ಸಜ್ಜೆ,ನವಣೆ, ಸಾವೆ, ರಾಗಿ, ಜೋಳ ಬೆಳೆಗಳಲ್ಲಿ ದೃಢವಾದ ತೆನೆಗಳನ್ನು ಆಯ್ದು ಚೀಲದಲ್ಲಿ ಕಟ್ಟಿಡುತ್ತಾರೆ. ಬಿತ್ತುವ ದಿನಗಳಲ್ಲಿ ತೆನೆಯಿಂದ ಕಾಳನ್ನು ಬೇರ್ಪಡಿಸಿ ಬಿತ್ತುತ್ತಾರೆ. ಬೀಜಗಳ ಸಂರಕ್ಷಣೆಗೆ ಯಾವುದೇ ವಿಶೇಷವಾದ ಕೀಟನಾಶಕಗಳನ್ನು ಬಳಸುವುದಿಲ್ಲ. ಬೀಜಗಳಿಗೆ ಕೀಟಬಾಧೆ ಕಡಿಮೆ. ಇದರ ವಿಶೇಷವೆಂದರೆ ಬಿತ್ತಬೇಕಾದ ಬೀಜಗಳಿಗೆ ಈಸರಬಳ್ಳಿ ಮತ್ತು ಬೆಳ್ಳುಳ್ಳಿಯನ್ನು ಅರಿದು ಹಚ್ಚಿ ಬಿತ್ತುತ್ತಾರೆ. ಇದರಿಂದ ಬೀಜಗಳು ಸರಿಯಾದ ರೀತಿಯಲ್ಲಿ ಮೊಳಕೆ ಒಡೆದು ಯಾವುದೇ ಬೇರು ರೋಗಗಳಿಲ್ಲದಂತೆ ಮಾಡಲು ಅನುಕೂಲವಾಗುತ್ತದೆ.

ಅಲಸಂದೆ, ಹೆಸರು, ತೊಗರಿ, ಅವರೆ ಮೊದಲಾದ ದ್ವಿದಳ ಧಾನ್ಯಗಳನ್ನು ರೈತ ಸ್ವತಃ ತಾನೇ ಬೀಜ ಉತ್ಪಾದಿಸಿ ಬಳಸುತ್ತಿದ್ದ. ಇವುಗಳಲ್ಲಿ ದೃಢವಾದ ಕಾಯಿಗಳನ್ನು ತೆಗೆದಿಟ್ಟು ಕಾಳನ್ನು ಬೇರ್ಪಡಿಸಿ ಬಿತ್ತುವುದುಂಟು. ಹುಳಗಳ ಬಾಧೆ ಇವುಗಳಿಗೂ ಇರುತ್ತದೆ. ಆದರೂ ಇರುವ ಕಾಳಿನಲ್ಲೇ ಗಟ್ಟಿ ಕಾಳುಗಳನ್ನು ಬಿತ್ತುತ್ತಾರೆ. ವಿಶೇಷವಾಗಿ ತೊಗರಿ ಕಾಳುಗಳಲ್ಲಿ ಗಟ್ಟಿಯಾದುದನ್ನು ಹೊರತೆಗೆದು ಅವುಗಳಿಗೆ ಕೆಂಪು ಮಣ್ಣನ್ನು ನೀರಿನ ಜೊತೆ ಬೆರೆಸಿ ಬೀಜಗಳಿಗೆ ಹಚ್ಚಿ ಹುಳಗಳಿಂದ ಸಂರಕ್ಷಿಸುವ ಕ್ರಮವಿದೆ. ಇಂಥ ಬೀಜಗಳನ್ನು ಚೀಲದಲ್ಲಿ ಕಟ್ಟಿಟ್ಟು ಆಗಾಗ ಗಮನಹರಿಸುವುದರ ಮುಖಾಂತರ ಎಚ್ಚರ ವಹಿಸಬೇಕಾಗುತ್ತದೆ. ಅವರೆ ಕಾಳುಗಳಲ್ಲಿ ದೃಢವಾಗಿ ಬೆಳೆದ ತೂತಿಲ್ಲದ ಬೀಜಗಳನ್ನು ತೊಳೆದು ಆ ಬೀಜಗಳಿಗೆ ಆಡಿನ ಮೂತ್ರ ಮತ್ತು ಸುಣ್ಣವನ್ನು ಸವರಿ ಬಿಸಿಲಲ್ಲಿ ಒಣಗಿಸಿ ಕಟ್ಟಿಡಬೇಕು. ಬಿತ್ತುವವರೆಗೂ ಆಗಾಗ ಬಿಸಿಲಲ್ಲಿ ಒಣಗಿಸಿ ಹುಳ ಬೀಳದಂತೆ ಎಚ್ಚರವಹಿಸಬೇಕು. ಬದನೆಕಾಯಿಯಿಂದ ಬೀಜಗಳನ್ನು ತೆಗೆದು ತೊಳೆದು ಬೂದಿಯ ಮಿಶ್ರಣವನ್ನು ಮಾಡಿ ಚೆನ್ನಾಗಿ ಒಣಗಿಸಿ ಅನಂತರ ಬಟ್ಟೆಯಲ್ಲಿ ಕಟ್ಟಿಡುತ್ತಾರೆ. ಮೆಣಸಿನ ಗಿಡಗಳಲ್ಲಿ ಹಣ್ಣುಗಳನ್ನು ತೆಗೆದಿಟ್ಟು ಉತ್ತಮದರ್ಜೆ ಬೀಜಗಳನ್ನು ಹೊರತೆಗೆದು ಬೂದಿ ಹಚ್ಚಿ ಬಟ್ಟೆಯಲ್ಲಿ ಕಟ್ಟಿಡುವುದು ಒಂದು ಕ್ರಮ.

ಮೇಲೆ ವಿವರಿಸಿದಂತೆ ಈ ಭಾಗದ ರೈತರ ಪ್ರಾಚೀನ ಕೃಷಿ ಪದ್ಧತಿಗಳಲ್ಲಿ ಕೃಷಿ ಬೀಜಗಳನ್ನು ಉತ್ಪಾದಿಸುವ ಕ್ರಮಗಳು ಸಾಮಾನ್ಯವಾಗಿದ್ದು, ಬೀಜಗಳನ್ನು ವಿಶೇಷವಾಗಿ ಬೆಳೆಯುವ ಪದ್ಧತಿಗಳು ಇಲ್ಲ. ಬದಲಿಗೆ ಸಹಜ ರೀತಿಯಲ್ಲಿಯೇ ಬೆಳೆದ ಕಾಳುಗಳಿಂದಲೇ ಗಟ್ಟಿಯಾದ, ಬೀಜಗಳನ್ನು ಆರಿಸಿ ಬಿತ್ತಲು ಬಳಸಲಾಗುತ್ತದೆ. ಉಳಿದಂತೆ ಬಿತ್ತನೆ ಬೀಜಗಳೆಂದು ಆರಿಸಿದ ಬೀಜಗಳನ್ನು ಹುಳುಗಳಿಂದ ಸಂರಕ್ಷಿಸಲು ಮುಖ್ಯವಾಗಿ ಕೆಂಪು ಮಣ್ಣು, ಬೂದಿ, ಉಪ್ಪು, ಅರಿಸಿನ, ಸುಣ್ಣ, ಚವಳುಮಣ್ಣು, ಬೆಳ್ಳುಳ್ಳಿ, ಈಸರಬಳ್ಳಿ, ಆಡಿನ ಮೂತ್ರ ಮೊದಲಾದ ವಸ್ತುಗಳನ್ನು ಬಳಸಲಾಗುತ್ತದೆ. ಇವುಗಳನ್ನು ತಮ್ಮ ಪರಂಪರೆಯ ಕೃಷಿ ಚಟುವಟಿಕೆಗಳ ದೀರ್ಘ ಅನುಭವದಿಂದ ಕಂಡುಕೊಳ್ಳಲಾಗಿದೆ. ಇವರ‍್ಯಾರು ಈ ವಸ್ತುಗಳಲ್ಲಿರುವ ರೋಗನಿರೋಧಕ / ಕೀಟನಾಶಕ ಗುಣಗಳ ಬಗ್ಗೆ ಪ್ರಯೋಗಶಾಲೆಗಳಲ್ಲಿ ಕಲಿತಿಲ್ಲ. ಆದರೆ ಈಗಿನ ವೈಜ್ಞಾನಿಕ ಪ್ರಯೋಗಗಳಿಗೆ ಒಳಪಡಿಸಿದರೆ ಅವುಗಳ ನಿಜವಾದ ಸತ್ಯಗಳು ದೊರೆಯುತ್ತವೆ. ಇವರು ಬಳಸುವ ಈ ಪರಿಕರಗಳಲ್ಲಿ ಬೀಜಗಳನ್ನು ಹುಳುಗಳಿಂದ ಸಂರಕ್ಷಿಸುವಂತಹ ಶಕ್ತಿ ಏನಿವೆ ಎಂಬುದನ್ನು ಈಗಾಗಲೇ ಅನೇಕ ಸಸ್ಯವಿಜ್ಞಾನಿಗಳು ಪತ್ತೆ ಹಚ್ಚಿದ್ದು, ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಬಹುದು.

ಬೂದಿ : ಅನೇಕ ರೀತಿಯ ಬೀಜಗಳ ಸಂರಕ್ಷಣೆಗೆ ಬೂದಿಯನ್ನು ಪ್ರಧಾನವಾಗಿ ಬಳಸುತ್ತಿದ್ದ. ಇದರಲ್ಲಿ ಬೀಜಗಳ ರಕ್ಷಣೆಗೆ ಅಗತ್ಯವಾಗಿರುವ ಮೈಕ್ರೋ ಹಾಗೂ ಮೈಕ್ರೋ ನ್ಯೂಟ್ರಿಯನ್ಸ್‌ಗಳು ಇರುತ್ತವೆ. ಅಷ್ಟೇ ಅಲ್ಲದೆ ಮೈಕ್ರೋ ಆರ್ಗ್ಯಾನಿಸಂಗಳು ನೂರಕ್ಕೆ ನೂರರಷ್ಟು ಇರುವುದಿಲ್ಲ. ಇದು ಬೀಜಗಳು ಕೆಡದಂತೆ, ಹುಳುಗಳು ಮುಟ್ಟದಂತೆ ಸಹಕಾರಿ.

ಸುಣ್ಣ : ಇದರಲ್ಲಿ ತಂಪುಕಾರಕ ಗುಣ ಜಾಸ್ತಿ ಇದ್ದು, ಬೀಜಗಳು ಕೆಡದಂತೆ ಕಾಪಾಡುತ್ತದೆ. ಸುಣ್ಣದಲ್ಲಿರುವ ಬಿಳಿಬಣ್ಣ ಬಿಸಿಲನ್ನು ಹೆಚ್ಚು ಸ್ವೀಕರಿಸದೇ ಇರುವುದರಿಂದ, ಇದನ್ನು ಬೀಜಗಳಿಗೆ ಸವರಿದರೆ ತಂಪು ಸ್ಥಿತಿಯನ್ನು ತಂದು ಕೊಡುತ್ತದೆ.

ಚವಳುಮಣ್ಣು : ಹಳ್ಳದ ದಂಡೆಗಳಲ್ಲಿ ಸಿಗುವ ಈ ಚವಳುಮಣ್ಣು ಕೊಳೆನಾಶಕ ಗುಣಗಳನ್ನು ಹೊಂದಿರುತ್ತದೆ. ಇದರಲ್ಲಿ ಮುಖ್ಯವಾಗಿ ಆಮ್ಲೀಯ ಜಾಸ್ತಿ ಇದ್ದು, ಸೋಡಿಯಂ ಕೂಡ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇವು ಆಸಿಡಿಕ್ ಅಂಶಗಳು ಬೀಜಗಳಿಗೆ ಅಪಾಯ ತಂದೊಡ್ಡುವ ಮೈಕ್ರೋ ಆರ್ಗ್ಯಾನಿಸಂಗಳನ್ನು ಕೊಲ್ಲುತ್ತದೆ. ಇದರಿಂದ ಬೀಜಗಳ ರಕ್ಷಣೆ ಸಾಧ್ಯವಾಗುತ್ತದೆ.

ಕೆಮ್ಮಣ್ಣು : ಇದರಲ್ಲಿಯೂ ಕೂಡ ಮೈಕ್ರೋ ಆರ್ಗ್ಯಾನಿಸಂಗಳು ಹಾಗೂ ಪೋರೋಸ್ಯಾಟಿಕ್ ಅಂಶವೂ ಕಡಿಮೆ ಪ್ರಮಾಣದಲ್ಲಿರುತ್ತದೆ. ಹಾಗೆಯೇ ಇದು ಆಸಿಡಿಕ್ ನಿಯಂತ್ರಣವನ್ನು ಹೊಂದಿರುತ್ತದೆ. ಮಣ್ಣಿನ ರಂಧ್ರಗಳು ಅತೀ ಸೂಕ್ಷ್ಮವಾಗಿರುವುದರಿಂದ ಬೀಜಗಳ ರಕ್ಷಣೆಗೆ ಸಹಕಾರಿಯಾಗಲಿದೆ.

ಹೀಗೆ ಪಾರಂಪರಿಕ ಕೃಷಿ ಪದ್ಧತಿಗಳಲ್ಲಿ ಬಳಸಲಾಗುತ್ತಿದ್ದ ಬೀಜ ಸಂರಕ್ಷಕ ವಸ್ತುಗಳು ಜೀವರಕ್ಷಕ ಗುಣಗಳನ್ನು ಹೊಂದಿದ್ದರಿಂದಲೇ ಅಂದಿನಿಂದ ಇಂದಿನವರೆಗೂ ಉಳಿದು ಬಂದಿವೆ.

ಬೀಜ ಸಂರಕ್ಷಕ ಸಂಬಂಧಿ ನಂಬಿಕೆಗಳು : ಪ್ರಾಚೀನ ಕೃಷಿಕರು ತಮ್ಮ ಪ್ರತಿ ಕೆಲಸ ಕಾರ್ಯಗಳನ್ನು ನಂಬಿಕೆಗಳೊಂದಿಗೆ ನಿರ್ವಹಿಸುತ್ತಿದ್ದುದರ ಪರಿಣಾಮ ಆ ಛಾಯೆ ಅವರ ಕೃಷಿ ಚಟುವಟಿಕೆಗಳಿಗೂ ವ್ಯಾಪಿಸಿದೆ. ಈ ಹಿನ್ನೆಲೆಯಲ್ಲಿ ಪ್ರಾಚೀನ ಕೃಷಿ ಪರಂಪರೆಯಲ್ಲಿ ಬೀಜಗಳ ಸಂರಕ್ಷಣೆಗಾಗಿ ಅವರು ನಂಬಿಕೊಂಡ ಸಂಪ್ರದಾಯ, ಆಚರಣೆಗಳು ಹಲವಾರು. ಅವುಗಳಲ್ಲಿ ಕೆಲವನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

ಅಮಾವಾಸ್ಯೆ ದಿನದ ಬಿಸಿಲಲ್ಲಿ ಬಿತ್ತನೆ ಬೀಜಗಳನ್ನು ಒಣಗಿಸಿದರೆ ಹುಳುಗಳ ಬಾಧೆ ತಪ್ಪುತ್ತದೆ.

ಮನೆದೇವರ ಪೂಜೆಮಾಡಿ ತೀರ್ಥವನ್ನು ಬೀಜಗಳಿಗೆ ಲೇಪಿಸುವುದರಿಂದ ಹುಳುಗಳು ಬೀಳುವುದಿಲ್ಲ.

ನವಣೆ ಮತ್ತಿತರ ಕೆಲವು ಬೀಜಗಳನ್ನು ಬಿತ್ತಿದ ದಿನಗಳಲ್ಲಿ ಮನೆಯಲ್ಲಿ ಯಾರೂ ಸ್ನಾನ ಮಾಡುವಂತಿಲ್ಲ. ಹಾಗೆಯೇ ಮನೆಯಲ್ಲಿ ಎಣ್ಣೆಯಲ್ಲಿ ಯಾವುದೇ ಆಹಾರ ಪದಾರ್ಥಗಳನ್ನು ಕರಿಯುವಂತಿಲ್ಲ. ಹಾಗೇನಾದರೂ ಮಾಡಿದ್ದಲ್ಲಿ ಬಿತ್ತಿದ ಬೀಜಗಳು ಸರಿಯಾಗಿ ಮೊಳಕೆ ಒಡೆಯುವುದಿಲ್ಲ.

ಶೇಂಗಾ ಮತ್ತಿತರ ಬೀಜಗಳನ್ನು ಬಿತ್ತಿದ ದಿನ ಮನೆಯಲ್ಲಿ ಅದನ್ನು ಹೆಂಚಲ್ಲಿ ಉರಿಯುವಂತಿಲ್ಲ. ಇಂಥ ಹಲವಾರು ನಂಬಿಕೆ - ಸಂಪ್ರದಾಯ ಆಚರಣೆಗಳು ಸಮುದಾಯದಲ್ಲಿ ಚಾಲ್ತಿಯಲ್ಲಿವೆ. ವೈಜ್ಞಾನಿಕ ಸತ್ಯಗಳು ಅಡಗಿವೆ.

ಬೆಳೆಗಳ ಸಂರಕ್ಷಣೆ : ರೈತ ತಾನು ಬಿತ್ತಿದ ಬೀಜ ಮೊಳಕೆಯೊಡೆದ ದಿನದಿಂದ ಬೆಳೆಯನ್ನು ಕೊಯ್ದು ಕಣಕ್ಕೆ ಒಯ್ಯುವವರೆಗೂ ಬೆಳೆಯನ್ನು ಆರೈಕೆ ಮಾಡಬೇಕಾದ ಆವಶ್ಯಕತೆ ಇರುತ್ತದೆ.

ಬೆಳೆಗಳಿಗೆ ಬರುವ ಸಾಮಾನ್ಯ ರೋಗಗಳೆಂದರೆ ಜೋನಿ ಬೀಳುವುದು, ಬೆಂಕಿರೋಗ, ಮುಲ್ಡು ರೋಗ, ಬೂದಿರೋಗ, ಬೇರುಹುಳು, ಕಾಡಿಗೆರೋಗ, ಸುಳಿಬೀಳುವುದು ಮೊದಲಾದವು. ಇಂಥ ಎಲ್ಲಾ ರೋಗಗಳಲ್ಲಿ "ಮುಖ್ಯವಾದ ಮೂರು ರೀತಿಯಲ್ಲಿ ರೋಗಗಳನ್ನು ಗುರುತಿಸಿಕೊಳ್ಳುತ್ತಾರೆ. ಒಂದನೆಯದು ಕಣ್ಣಿಗೆ ಕಾಣುವ ಕೀಟಗಳನ್ನು ನೋಡಿ ಅವುಗಳ ಹೆಸರು ಹೇಳುವುದು, ಎರಡನೆಯದು ಬೆಳೆಗಳ ಮೇಲಾಗಿರುವ ಪರಿಣಾಮವನ್ನು ಗಮನಿಸಿ ರೋಗವನ್ನು ಹೆಸರಿಸುವುದು, ಮತ್ತೊಂದು ಅತಿಮಾನುಷ ಶಕ್ತಿಯಿಂದ ಬರುವ ರೋಗಗಳು" (ಎಂ.ಜಿ. ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, ಪು. 293) ಇಂಥ ರೋಗಗಳಿಗೆ ಇತ್ತೀಚೆಗೆ ರಾಸಾಯನಿಕಗಳು ಬಳಕೆಯಾಗುತ್ತಿವೆ. ಜೊತೆಗೆ ಪಾರಂಪರಿಕ ಬೆಳೆ ಸಂರಕ್ಷಣಾ ಪದ್ಧತಿಗಳು ಕೂಡ ಚಾಲ್ತಿಯಲ್ಲಿವೆ.

ಚಿತ್ರದುರ್ಗ ಪರಿಸರದ ಪಾರಂಪರಿಕ ಕೃಷಿಯಲ್ಲಿ ಸಜ್ಜೆ, ಜೋಳ, ರಾಗಿ, ಹೆಸರು, ತೊಗರಿ ಮೊದಲಾದ ಬೀಜಗಳು ದೇಶೀ ತಳಿಗಳಾಗಿದ್ದು ಅವುಗಳಿಗೆ ಹುಳುಗಳೇ ಬೀಳುವುದಿಲ್ಲ. ರೋಗಗಳು ಬರುವುದಿಲ್ಲ.

ವಾತಾವರಣದಿಂದ ಬರುವ ಕೆಲವು ರೋಗಗಳನ್ನು ತಪ್ಪಿಸಲು ಪರಂಪರೆಯಿಂದ ಕಂಡುಕೊಂಡ ಬಹಳ ಸುಲಭ ತಂತ್ರವೆಂದರೆ : ರೋಗ ಯಾವ ವಾತಾವರಣಕ್ಕೆ ಬರುತ್ತವೆಯೋ ಆ ವಾತಾವರಣ ಬರುವುದರ ಒಳಗೆ ಕಟಾವು ಮಾಡುವಂತೆ ಬಿತ್ತನೆ ಮಾಡುವುದು. ಉದಾ : ಸಜ್ಜೆ, ಜೋಳ, ತೊಗರಿ ಮೊದಲಾದ ಬೆಳೆಗಳಿಗೆ ಮಾಗಿ ಕಾಲಕ್ಕೆ ಹೆಚ್ಚಾಗಿ ಜೋನಿ ರೋಗ ಬರುತ್ತದೆ. ಆದ್ದರಿಂದ ಮಾಗಿ ಕಾಲ ಮೊದಲು ಈ ಬೆಳೆಗಳನ್ನು ಕಟಾವು ಮಾಡುತ್ತಾರೆ.

ಬೆಳೆಗಳಿಗೆ ಬಾಧಿಸುವ ಅತ್ಯಂತ ಅಪಾಯಕಾರಿ ರೋಗಗಳಲ್ಲಿ ಬೆಂಕಿ ರೋಗ ಒಂದು. ಇದು ಎಲ್ಲಾ ರೀತಿಯ ಬೆಳೆಗಳಲ್ಲಿ ಕಾಣಿಸಿಕೊಳ್ಳು ವುದುಂಟು. ಬೆಳೆಯ ಕೊನೆ ಸುಟ್ಟಂತೆ ಕಪ್ಪಾಗುವುದು ಇದರ ಪ್ರಧಾನ ಲಕ್ಷಣ. ಇದು ಮಳೆ ಬಂದರೆ ತನ್ನಿಂದ ತಾನೆ ಹೋಗುತ್ತದೆ. ಮಳೆ ಬರದೇ ಇದ್ದರೆ ಈ ರೋಗ ಹೆಚ್ಚಾಗುತ್ತದೆ. ಆಗ ಈ ಭಾಗದ ರೈತರು ಹಂದಿಯ ಮಲವನ್ನು ಚೆಲ್ಲುವುದು, ವಿವಿಧ ರೀತಿಯ ಎಲೆಗಳ ಸಹಾಯದಿಂದ ಹೊಗೆ ಹಾಕುವುದರ ಮೂಲಕ ರೋಗ ನಿವಾರಣೆಗೆ ಪ್ರಯತ್ನಿಸುತ್ತಾರೆ.

ನವಣೆ ಬೆಳೆಗೆ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕಾಡಿಗೆ ರೋಗಕ್ಕೆ ಮುಂಜಾಗ್ರತಾ ಕ್ರಮವಾಗಿ ಬೀಜಕ್ಕೆ ಮೈಲುತುತ್ತು ಸೇರಿಸಿ ಬಿತ್ತನೆ ಮಾಡುತ್ತಾರೆ.

ಈರುಳ್ಳಿ ಮತ್ತಿತರ ಬೆಳೆಗಳಿಗೆ ಕಾಡುವ ಬೂದಿ ರೋಗದ ನಿವಾರಣೆಗೆ ಕುಲುಮೆ ಬೂದಿಯನ್ನು ಸಿಂಪಡಿಸುತ್ತಾರೆ. ಹೊಗೆಸೊಪ್ಪಿನ ಬೆಳೆಗೂ ಬೂದಿ ರೋಗ ಬರುವುದುಂಟು. ಈ ಸಂದರ್ಭದಲ್ಲಿ ಗಂಧಕವನ್ನು ಮಣ್ಣಿನಲ್ಲಿ ಬೆರೆಸಿ ಗಿಡದ ಬುಡಕ್ಕೆ ಇಡುತ್ತಾರೆ. ತೋಟಗಾರಿಕಾ ಬೆಳೆಗಳಾದ ಬಾಳೆ, ಎಲೆ ಬಳ್ಳಿ. ಬೆಳೆಗಳಿಗೆ ಬೂದಿರೋಗ ಬಂದರೆ ಯಾವುದೇ ಔಷಧೋಪಚಾರ ಮಾಡುವುದಿಲ್ಲ. ಅವು ನೇರವಾಗಿ ತಿನ್ನುವ ವಸ್ತುಗಳಾಗಿರುವುದರಿಂದ ಆರೋಗ್ಯ ಪೂರ್ಣವಾದ ಉಪಚಾರ ಮಾಡುವುದುಂಟು. ಅದರಲ್ಲಿ ಮುಖ್ಯವಾಗಿ ಬೆಳೆಯ ಬುಡಗಳಲ್ಲಿ ರಂಧ್ರಮಾಡಿ ಅದರೊಳಗೆ ಮೈಲುತುತ್ತು, ಗಂಧಕ, ಗೋರಾಂಜನ ಮತ್ತು ಸುಣ್ಣವನ್ನು ಒಂದು ಹದದಲ್ಲಿ ಬೆರೆಸಿ ರಂಧ್ರದೊಳಗೆ ಸೇರಿಸಿ ಮುಚ್ಚುತ್ತಾರೆ.

ದ್ವಿದಳ ಧಾನ್ಯಗಳ ಬೆಳೆಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕೋರೆಹುಳು (ಕಂಬಳಿ ಹುಳು)ಗಳನ್ನು ನಾಶ ಮಾಡಲು ಹಚ್ಚ ಹಸುರಿನ ಚಿಟ್ಲಟ್ಲಿ ಸೊಪ್ಪು (ಜತ್ರೋಪ) ಬಿಡಿಸಿ ತಂದು ಹೊಲದ ಸುತ್ತ ಹರಡುತ್ತಾರೆ. ಈ ಸೊಪ್ಪಿಗೆ ಹುಳುಗಳು ಆಕರ್ಷಿತವಾಗಿ ಬಂದು ಸೊಪ್ಪಿನಲ್ಲೇ ವಾಸಿಸಿ ಅಲ್ಲೇ ಗೂಡು ಕಟ್ಟುತ್ತವೆ. ಆಗ ಆ ಹುಳುಗಳನ್ನು ಹಿಡಿದು ಸಾಯಿಸುತ್ತಾರೆ.

ಬೆಳೆಗಳನ್ನು ರೋಗ ರುಜಿನಗಳಿಂದ ಸಂರಕ್ಷಿಸುವುದು ಒಂದು ಕ್ರಮ. ಬಿತ್ತನೆಯ ದಿನದಿಂದ ಹಂದಿ, ನರಿ ಹಲವಾರು ರೀತಿಯ ಪ್ರಾಣಿ ಪಕ್ಷಿಗಳಿಂದ ಬೆಳೆಯನ್ನು ರಕ್ಷಿಸುವುದು ಮತ್ತೊಂದು ಕ್ರಮ.

ರೈತನಿಗೆ ಬಹಳ ದೈವ ಭಕ್ತಿ. ಆತನ ಬದುಕು ಮತ್ತು ಕಾರ್ಯದಲ್ಲಿ ಸದಾ ನಂಬಿಕೆ ಹಾಗೂ ಭಕ್ತಿ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ತಾನು ಬೆಳೆದ ಬೆಳೆಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ನೋಡಿಕೊಳ್ಳಲು ದೇವರನ್ನು ಪ್ರಾರ್ಥಿಸುತ್ತಾನೆ. ಬೀಜ ಬಿತ್ತುವ ದಿನ ಬಿತ್ತನೆ ಬೀಜಗಳಲ್ಲಿ ಮೂರು ಹಿಡಿ ದೇವರ ಮುಂದಿಟ್ಟು ಪ್ರಾರ್ಥಿಸುತ್ತಾನೆ. ಬೆಳೆಗಳ ಕಾಲದಲ್ಲಿ ತಮ್ಮ ಇಷ್ಟ ದೈವಗಳನ್ನು ವಿಶೇಷವಾಗಿ ಪೂಜಿಸಿ ಅಲ್ಲಿಂದ ತೀರ್ಥ ತಂದು ಬೆಳೆ ಇರುವ ಹೊಲದ ಸುತ್ತ ಚೆಲ್ಲುತ್ತಾನೆ. ಬೆಳೆ ಸಂರಕ್ಷಣೆಗಾಗಿ ಎಲ್ಲಾ ದೇವರುಗಳನ್ನು ಪೂಜಿಸುತ್ತಾರಾದರೂ ಇದಕ್ಕೆ ಕೆಲವು ನಿರ್ದಿಷ್ಟ ದೇವರುಗಳು ಇದ್ದಂತಿವೆ. ಉದಾ : ಚಿತ್ರದುರ್ಗ ಸುತ್ತ ಮುತ್ತಲಿನ ರೈತರು ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿಯ ಚಿತ್ರಲಿಂಗ ದೇವರನ್ನು ಪೂಜಿಸುತ್ತಾರೆ. ಇನ್ನು ಕೆಲವು ಕಡೆ ಕೆಲವು ರೋಗಗಳಿಗೆ ಕೆಲವು ದೇವರುಗಳನ್ನು ಮೀಸಲಿನಂತೆ ಪೂಜಿಸಲಾಗುತ್ತದೆ. ಬೆಳೆಗಳನ್ನು ಯಾವುದೇ ರೋಗಗಳು ಬರಬಾರದೆಂದು ಹರಕೆ ಕೂಡ ಮಾಡುತ್ತಾರೆ.

ಬೀಜ ಬಿತ್ತಿದ ದಿನ ಹಂದಿ ಮತ್ತು ನರಿಗಳ ಕಾಟ ಬಹಳ. ಹೊಲದ ಸುತ್ತ ಗೊಂಬೆಗಳನ್ನು ಮಾಡಿ ನಿಲ್ಲಿಸುವುದರ ಮೂಲಕ ಹಾಗೂ ಆಗಾಗ

ಪಟಾಕಿ ಮತ್ತಿತರ ವಸ್ತುಗಳ ಮೂಲಕ ಶಬ್ದಗಳನ್ನು ಮಾಡುತ್ತಾ ರಾತ್ರಿಯೆಲ್ಲ ಕಾಯುವುದರ ಮೂಲಕ ರಕ್ಷಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಬೆದರುಗೊಂಬೆಯ ಪಾತ್ರಹಿರಿದು. ಇದು ಬಿತ್ತಿದ ಬೀಜದ ರಕ್ಷಣೆ ಮಾತ್ರವಲ್ಲದೆ ಬೆಳೆದು ಫಲಕ್ಕೆ ಬಂದಾಗಲೂ ಬಳಕೆಯಾಗುತ್ತದೆ. ವಿವಿಧ ಪ್ರಾಣಿ, ಪಕ್ಷಿ ಹಾಗೂ ಮನುಷ್ಯರು ಈ ಬೆದರುಗೊಂಬೆಯನ್ನು ಯಾರೋ ಮನುಷ್ಯ ಇರುವನೆಂದೇ ಭಾವಿಸಿ ಹತ್ತಿರಕ್ಕೆ ಬರುವುದಿಲ್ಲ.

ಚರಗ ಸಂಪ್ರದಾಯ : ಬೆಳೆಗಳಿಗೆ ತಗಲುವ ರೋಗ ನಿವಾರಣೆ ಹಾಗೂ ಪೀಡೆ ಪರಿಹಾರವಾಗಿ ರೈತರಲ್ಲಿ ದಟ್ಟವಾಗಿ ಪ್ರಚಲಿತವಿರುವ ಸಂಪ್ರದಾಯವೇ ಚರಗ. ಚರಗಗಳಲ್ಲಿ ಪ್ರಧಾನವಾಗಿ ಎರಡು ವಿಧಗಳಿವೆ. ಒಂದು ರಕ್ತ - ಅನ್ನದ ಚರಗ, ಇನ್ನೊಂದು ಬರೀ ಅನ್ನ ಮತ್ತಿತರ ಸಸ್ಯಹಾರಿ ಪದಾರ್ಥಗಳ ಚರಗ. ಬೆಳೆಗಳಿಗೆ ಅಮಾವಾಸ್ಯೆಗೊಮ್ಮೆ ಹುಣ್ಣಿಮೆಗೊಮ್ಮೆ ಮುದ್ದೆ, ಅನ್ನ ಇಂತಹ ಯಾವುದಾದರೂ ಅಡುಗೆಯನ್ನು ನೀರಿನಲ್ಲಿ ತೆಳ್ಳಗೆ ಕಲಸಿಕೊಂಡು ಹೊಲದ ಸುತ್ತ ಚೆಲ್ಲುತ್ತಾರೆ. ಚರಗ ಚೆಲ್ಲುವಾಗ ಹೋಲಿಗ್ಯ ಹೋಲಿಗ್ಯ ಎಂದು ಉದ್ಘರಿಸುತ್ತಾನೆ. 'ಹೋಲಿಗ್ಯ' ಎಂಬ ಕೂಗು ಎಲ್ಲಿಯವರೆಗೆ ಕೇಳಿಸುತ್ತದೆಯೋ ಅಷ್ಟು ವ್ಯಾಪ್ತಿಯ ಬೆಳೆಗಳಿಗೆ ಒಳ್ಳೆಯದಾಗುತ್ತದೆ. ಎಂದು ನಂಬಿಕೆ. "ಚರಗ ಚೆಲ್ಲುವ ಈ ಆಚರಣೆಯಿಂದ ಲೌಕಿಕ ಉಪಯೋಗವೂ ಇದೆ. ಚರಗದಲ್ಲಿರುವ ರಕ್ತ, ಅನ್ನದಗುಳು, ಮುದ್ದೆ ಚೂರು ಮುಂತಾದ ಆಹಾರದ ಪದಾರ್ಥಗಳನ್ನು ತಿನ್ನಲು ಬರುವ ಹಕ್ಕಿಗಳು ಆಹಾರವನ್ನು ತಿಂದು ಮುಗಿಸಿದ ಅನಂತರ ಅಲ್ಲಿಯೇ ಕಣ್ಣಿಗೆ ಬೀಳುವ ಹುಳುಗಳನ್ನು ತಿಂದು ಹಾಕುತ್ತವೆ. ಹಾಗಾಗಿ ಚರಗ ಚೆಲ್ಲುವುದು ಕೀಟ ನಿವಾರಣೆ ಮಾಡುವ ಸರಳ ವಿಧಾನವೂ ಆಗಿದೆ. ಔಡಲ ಗಿಡಗಳಿಗೆ, ಹೆಸರು ಗಿಡಗಳಿಗೆ ಹತ್ತಿದ ಹುಳಗಳನ್ನು ಚರಗ ಹಾಕಿ ಪಕ್ಷಿಗಳನ್ನು ಆಕರ್ಷಿಸಿ ನಿವಾರಣೆ ಮಾಡಿಕೊಂಡ ಉದಾಹರಣೆಗಳೂ ಸಾಕಷ್ಟು ಸಿಗುತ್ತವೆ". ರಕ್ತದ ಜೊತೆ ಅನ್ನವನ್ನು ಬೆರೆಸಿದ ಚರಗದಲ್ಲಿ ಕುರಿಯನ್ನು ಬಲಿಕೊಟ್ಟು ಅದರ ಹೊಟ್ಟೆ ಬಗೆದು ಅದರಲ್ಲಿ ಕರಸು ತೆಗೆದು ದೇವತೆಯ ಪೂಜೆಗಿಟ್ಟ ಪದಾರ್ಥಗಳನ್ನು ಬೆರೆಸಿ ಹೋಲಿಗ್ಯ ಹೋಲಿಗ್ಯ ಎನ್ನುತ್ತಾ ಹೊಲದ ಸುತ್ತ ಚೆಲ್ಲುತ್ತಾರೆ. ಈ ಸಂಪ್ರದಾಯವು ಸಾಮಾನ್ಯವಾಗಿ ರಾತ್ರಿ ಹೊತ್ತು ಜರುಗುತ್ತದೆ. ಹಾಗಾಗಿ ಚರಗ ಚೆಲ್ಲುವ ವ್ಯಕ್ತಿಯ ಮುಂದೆ ಒಂದು ಕೊಳ್ಳಿ ಹಿಡಿದು ಮತ್ತೊಬ್ಬನು ಸಾಗುತ್ತಾನೆ.

ಧಾನ್ಯ ಸಂಗ್ರಹಣೆಯ ಕ್ರಮಗಳು

ಕಣಜ : ಬಿದಿರು ಅಥವಾ ಈಚಲು ಕಡ್ಡಿಗಳಿಂದ ತಯಾರಿಸುವ ಕಣಜದಲ್ಲಿ ರಾಗಿ, ಜೋಳ, ಸಜ್ಜೆ ಮತ್ತಿತರ ಧಾನ್ಯಗಳನ್ನು ತುಂಬುತ್ತಿದ್ದರು. ದುಂಡಾಗಿರುವ ಇದರಲ್ಲಿ ಧ್ಯಾನಗಳನ್ನು ಸುರಿದು ಬಿದಿರು ಅಥವಾ ಈಚಲು ತಟ್ಟೆಯಿಂದ ಮುಚ್ಚುತ್ತಿದ್ದರು. ಧಾನ್ಯಗಳನ್ನು ಬಳಸುವಾಗ ಕಣಜದ ಕೆಳ ಭಾಗದಲ್ಲಿ ಒಂದು ರಂಧ್ರಮಾಡಿ ಅದರಿಂದ ಧಾನ್ಯಗಳನ್ನು ಸೋರಿಸಿಕೊಳ್ಳುತ್ತಿದ್ದರು. ಇದನ್ನು ಸಗಣಿಯಿಂದ ಬಳಿಯುತ್ತಾರೆ. ಇದರಲ್ಲಿ 5-30 ಚೀಲದವರೆಗೆ ಧಾನ್ಯವನ್ನು ತುಂಬುವುದುಂಟು. ಇಂದಿಗೂ ಜಿಲ್ಲೆಯ ಅನೇಕ ರೈತರ ಮನೆಗಳಲ್ಲಿ ಇದನ್ನು ಉಪಯೋಗಿಸುತ್ತಾರೆ.

ವಡೇವು : ಮಣ್ಣಿನಿಂದ ಮಾಡುವ ಈ ಸಾಧನದ ಸ್ವರೂಪವನ್ನು ಚಿತ್ರ 06 ರಲ್ಲಿ ನೋಡಬಹುದು. "ಮೂರು ಅಡಿ ಎತ್ತರದಿಂದ ಹಿಡಿದು ಆರು ಅಡಿ ಎತ್ತರದ ಮೂರು ನಾಲ್ಕು ಅಡಿ ಸುತ್ತಳತೆಯ ವಡೇವುಗಳು ನಮಗೆ ಕಾಣಸಿಗುತ್ತವೆ. ಕುಂಬಾರನು ಇವುಗಳನ್ನು ಮಾಡುವಾಗ ಅರ್ಧ ಅರ್ಧ ಭಾಗ ಮಾಡಿ ಅನಂತರ ಮಧ್ಯಕ್ಕೆ ಬೆಸುಗೆ ಹಾಕುತ್ತಾನೆ. ತಳವನ್ನು ಮುಚ್ಚಿ ಬಾಯಿ ಭಾಗವು ತೆರವಿರುತ್ತದೆ. ತಳಭಾಗದಲ್ಲಿ ಒಂದು ತೆಂಗಿನ ಚಿಪ್ಪಿನ ಪ್ರಮಾಣದ ರಂಧ್ರ ಮಾಡಿರುತ್ತಾನೆ. ಹಿಟ್ಟು ಮಾಡಿಸಿಕೊಳ್ಳುವ ರಾಗಿ, ಸಜ್ಜೆ, ಜೋಳ, ನವಣೆ, ಸಾವೆ, ಬತ್ತ ಮೊದಲಾದವುಗಳನ್ನು ಈ ವಡೇವುಗಳಲ್ಲಿ ತುಂಬಿ ಮೇಲುಭಾಗವನ್ನು ಸಗಣಿಯಿಂದ ಮೆತ್ತುತ್ತಾರೆ. ರಂಧ್ರವನ್ನು ತೆಂಗಿನ ಚಿಪ್ಪೊಂದರ ಕಣ್ಣಿಗೆ ಹುರಿ ಕಟ್ಟಿ ರಂಧ್ರಕ್ಕೆ ಆನಿಸಿ ಮೆತ್ತಿಗೆ ಹಾಕುತ್ತಾರೆ. ಕಾಳು ಬೇಕಾದಾಗ ಚಿಪ್ಪನ್ನು ಒಳದಬ್ಬಿ, ಬೇಕಾಗುವಷ್ಟು ಕಾಳನ್ನು ತೆಗೆದುಕೊಂಡು ಪುನಃ ಚಿಪ್ಪೆಳೆದು ಸಗಣಿಯಿಂದ ಮೆತ್ತುತ್ತಾರೆ. (ಎಂ.ಜಿ. ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ ಪು. 300). ಸಹಜವಾಗಿ ಆಧುನಿಕ ಸಮಾಜದಲ್ಲಾದ ಬದಲಾವಣೆಯ ಕಾರಣಕ್ಕೆ ವಡೇವುಗಳ ಬದಲಿಗೆ ಪ್ಲಾಸ್ಟಿಕ್ ಡಬ್ಬಿಗಳು ಬಳಕೆಗೊಳ್ಳುತ್ತಿದ್ದು ವಡೇವುಗಳ ಬಳಕೆ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿದೆ.

ಹಗೇವು : ವರ್ಷಗಟ್ಟಲೆ ಧಾನ್ಯಗಳನ್ನು ಸಂಗ್ರಹಿಸಲು ಹಗೇವುಗಳನ್ನು ಸಾಮಾನ್ಯವಾಗಿ ದೊಡ್ಡ ರೈತರು ಮಾತ್ರ ನಿರ್ಮಿಸಿಕೊಂಡಿದ್ದನ್ನು ನೋಡಬಹುದು. 20 ಚೀಲದಿಂದ 50, 60 ಚೀಲದವರೆಗು ತುಂಬುವ ಹಗೇವುಗಳು ಇರುವುದನ್ನು ನೋಡಬಹುದು. ಇದನ್ನು ಊರ ಮಧ್ಯದಲ್ಲಿ ನಿರ್ಮಿಸುತ್ತಾರೆ. ನೀರು ಇಂಗದ ಎತ್ತರದ ಜಾಗ ನೋಡಿ ಶುಭ ದಿನದಂದು ವಡ್ಡರ ಕೈಯಲ್ಲಿ ಈ ಹಗೇವುಗಳನ್ನು ತೆಗೆಸುತ್ತಾರೆ. ನೆಲದಲ್ಲಿ ಗುಂಡಿ ತೆಗೆದು ಗುಂಡಿಯ ಒಳ ಭಾಗಕ್ಕೆ ಹುಲ್ಲನ್ನು ಹಾಸಿ ಅದರ ಮೇಲೆ ಕಾಳನ್ನು ಹಾಕಿ ಮೇಲಿನ ಬಾಯಿಗೆ ಬಂಡೆ ಮುಚ್ಚಿ ಮೇಲೆ ಮಣ್ಣನ್ನು ಹಾಕಿ ಭೂಮಿಯ ಮಟ್ಟಕ್ಕೆ ತಂದು ಸಮ ಮಾಡುತ್ತಾರೆ. ಒಳಗೆ ಇರುವ ಧಾನ್ಯ ಎಷ್ಟು ದಿನಗಳಾದರೂ ಕೆಡುವುದಿಲ್ಲ. ಹುಳ ಹುಪ್ಪಡಿ, ಇಲಿ ಹೆಗ್ಗಣಗಳ ಕಾಟದಿಂದ ಮುಕ್ತ. ಇದಕ್ಕೆ ಕಾಳು ಹಾಕುವ ಸಂದರ್ಭ, ಹೊರತೆಗೆಯುವ ಸಂದರ್ಭ, ಧಾನ್ಯವನ್ನು ಹೊರತೆಗೆಯುವಾಗ ನಡೆಸುವ ಸಂಪ್ರದಾಯಗಳು ಇವೆಲ್ಲವು ಅತ್ಯಂತ ವೈಜ್ಞಾನಿಕ ಅರ್ಥವುಳ್ಳವಾಗಿರುತ್ತವೆ.

ಪಳತ : ಪರಂಪರೆಯಲ್ಲಿ ರೈತ ಕಂಡುಕೊಂಡ ಧಾನ್ಯ ಸಂಗ್ರಹ ಮಾರ್ಗಗಳಲ್ಲಿ ಪಳತವೂ ಒಂದು. ಸಣ್ಣ ಪ್ರಮಾಣದ ಹಗೇವನ್ನು ಪಳತ ಎನ್ನಬಹುದು. ಇವುಗಳಲ್ಲಿ ನೆಲದ ಒಳಗಿರುವ ಪಳತಗಳು, ನೆಲದ ಮೇಲಿರುವ ಪಳತಗಳು ಎಂಬುದಾಗಿ ಎರಡು ವಿಧಗಳಿವೆ. ನೆಲದ ಒಳಗಿರುವ ಪಳತಗಳನ್ನು ವಾಸಿಸುವ ಮನೆಯ ಒಳಗೆ ನಿರ್ಮಾಣ ಮಾಡುವುದುಂಟು. ಸುಮಾರು 25 ರಿಂದ 30 ಚೀಲ ಧಾನ್ಯ ತುಂಬುವಷ್ಟು ಗುಂಡಿಯನ್ನು ತೆಗೆದು ಸುತ್ತ ಚಪ್ಪಡಿ ಕಲ್ಲನ್ನು ಅಥವಾ ಗಾರೆ, ಹಾಕಿಸಿ ಧಾನ್ಯ ತುಂಬಿದ ಮೇಲೆ ಅದರ ಮೇಲೆ ಒಂದು ಬಂಡೆಯನ್ನು ಮುಚ್ಚುವುದು ಇಲ್ಲವೇ ಪಳತದ ಬಾಯಿಗೆ ಬೀಗ ಹಾಕುವುದುಂಟು. ನೆಲದ ಮೇಲಿರುವ ಪಳತಗಳನ್ನು ಅದಕ್ಕೆಂದೇ ಪ್ರತ್ಯೇಕವಾಗಿ ಕೋಣೆಗಳಲ್ಲಿ ನಿರ್ಮಿಸಲಾಗುತ್ತದೆ. ಇದರ ವಿಸ್ತೀರ್ಣ ಸಾಕಷ್ಟು ದೊಡ್ಡದಿರುತ್ತದೆ. ಒಟ್ಟಾರೆ ಹಗೇವುಗಳಲ್ಲಿ ತಮಗೆ ಬೇಕೆನಿಸಿದಾಗಲೆಲ್ಲ ಧಾನ್ಯಗಳನ್ನು ತೆಗೆಯಲು ಬರುವುದಿಲ್ಲ, ಆದ್ದರಿಂದ ತಮಗೆ ಅವಶ್ಯವೆನಿಸಿದ ಧಾನ್ಯಗಳನ್ನು ಇಂಥ ಪಳತಗಳಲ್ಲಿ ಸಂಗ್ರಹಿಸುತ್ತಿದ್ದರು.



ಅಡಕಲು : ಅಡುಗೆ ಮನೆಯಲ್ಲಿ ದಿನ ನಿತ್ಯದ ಬಳಕೆಗೆ ಬೇಕಾದ ಬೇಳೆ, ಸಾಸುವೆ, ಹಿಟ್ಟು ಹುಣಿಸೆಹಣ್ಣು ಮೊದಲಾದ ವಸ್ತುಗಳನ್ನು ಸಂಗ್ರಹಿಸಲು ವಿವಿಧ ಗಾತ್ರದ ಮಡಕೆಗಳನ್ನು ಬಳಸುತ್ತಾರೆ. ಇದನ್ನು ಅಡಕಲು ಎಂದು ಕರೆಯುತ್ತಾರೆ. ಇವುಗಳ ಮಾದರಿಯನ್ನು ಚಿತ್ರದಲ್ಲಿ ನೋಡಬಹುದು. ಬಿತ್ತನೆ ಬೀಜಗಳನ್ನು ಹಾಗೂ ದಿನ ಬಳಕೆಯ ಧಾನ್ಯಗಳನ್ನು ಈ ಅಡಕಲುಗಳಲ್ಲಿ ಇಟ್ಟು ಕಾಪಾಡುವುದು ಹಳ್ಳಿ ರೈತರ ಸಾಮಾನ್ಯ ಕ್ರಮವಾಗಿದೆ.

ಮೂಡೆ : ಆರ್ಥಿಕವಾಗಿ ಹಿಂದುಳಿದ ರೈತರು ಹೆಚ್ಚಾಗಿ ಬಳಸುತ್ತಿದ್ದ ಧಾನ್ಯಸಂಗ್ರಹ ಕ್ರಮದಲ್ಲಿ ಇದು ಒಂದು. ಇದನ್ನು ಹುಲ್ಲಿನಿಂದ ತಯಾರಿಸಲಾಗುತ್ತದೆ. ಬತ್ತ ಅಥವಾ ಕವಚಿ ಹುಲ್ಲನ್ನು ಪ್ರಧಾನವಾಗಿ ಬಳಸುವುದುಂಟು. ಬತ್ತದ ಹುಲ್ಲಿನ ಅಥವಾ ಈಚಲು ಹುರಿಯನ್ನು ಹಾಸಿ ಅದರ ಮೇಲೆ ಹೊದಿಕೆಯಾಗಿ ಹುಲ್ಲನ್ನು ಹರಡಿ ಅದರ ಮೇಲೆ ಕಾಳು ಸುರಿದು ಸುತ್ತಿ ಬಿಗಿಯಾಗಿ ಕಟ್ಟಿ ಅದನ್ನು ಹುಲ್ಲಿನ ಬಣವೆಯಲ್ಲಿ ಇಡುವ ಪದ್ಧತಿಯಿತ್ತು. ಇದರ ಬಳಕೆ ಇಂದು ಇಲ್ಲದಂತಾಗಿದೆ.

ಪರಾಮರ್ಶನ ಗ್ರಂಥಗಳು

ಎಂ.ಜಿ. ಈಶ್ವರಪ್ಪ, ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ, 1995 ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು: ಇಲ್ಲಿಯ ಬಹುತೇಕ ವಿಚಾರಗಳು ಈ ಕೃತಿಗೆ ಋಣಿಯಾಗಿವೆ.

ಎಚ್.ಜೆ. ಲಕ್ಕಪ್ಪಗೌಡ (ಪ್ರ.ಸಂ.), ಕರ್ನಾಟಕದ ಬುಡಕಟ್ಟುಗಳು ಸಂ. 1, ಸಂ. 2, 1998, ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಬಸವರಾಜ ನೆಲ್ಲೀಸರ (ಸಂ), ಜಾನಪದ ಮತ್ತು ಪೂರಕ ಕ್ಷೇತ್ರಗಳು, 1991, ಕನ್ನಡ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ

ಎಚ್.ಜೆ. ಲಕ್ಕಪ್ಪಗೌಡ (ಸಂ), ವಿಶಿಷ್ಟ ಜಾನಪದ, 1990, ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಬಿ.ಆರ್.ಪಿ. ಶಂಕರಘಟ್ಟ

ಗಂಗನಾಯ್ಕ, ಲಂಬಾಣಿಗರು, 2004, ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ

ರಾಘುವೇಂದ್ರ ಆರ್. ಚಿತ್ರದುರ್ಗ ಜಿಲ್ಲೆಯ ಕೈಗಾರಿಕಾ ಚಿತ್ರ (ಲೇಖನ) ಇದರಲ್ಲಿ : www. Chithaaradurga.com

ಶ್ರೀ ಸೋಮಶೇಖರ್, ಚಿತ್ರದುರ್ಗ ಜಿಲ್ಲೆಯ ಜನಜೀವನ - ಸಂಸ್ಕೃತಿ - 3 (ಲೇಖನ), 2009, ಇದರಲ್ಲಿ : www. sampada.net

ಜಿ.ಬಿ. ಚನ್ನೇಶ್, ಜನಪದ ಆಚರಣೆಗಳು ಮತ್ತು ಕೃಷಿ ತಂತ್ರಜ್ಞಾನ (ಲೇಖನ), ಇದರಲ್ಲಿ : ಜಾನಪದ ಕರ್ನಾಟಕ - 5, ಸಂಪುಟ - 3, ಸಂಚಿಕೆ - 1, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಎಸ್.ಎಂ. ಮುತ್ತಯ್ಯ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳಲ್ಲಿನ ಬೀಜೋತ್ಪತ್ತಿ ಮತ್ತು ಸಂರಕ್ಷಣಾ ವಿಧಾನಗಳು, ಕನ್ನಡ ವಿಜ್ಞಾನ ಸಮ್ಮೇಳನ - 7 (ಲೇಖನ), ಸ್ವದೇಶಿ ಆಂದೋಲನ (ಕರ್ನಾಟಕ), ಬೆಂಗಳೂರು.

B.N. Sri Sathyan(Ed.) Chitradurga District Gazetter, 1967, Govt. of Mysore

ಚಿತ್ರದುರ್ಗ ಜಿಲ್ಲೆಯ ಅಂಕಿ ಅಂಶಗಳ ನೋಟ - 2010-11,11-12 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ

Chitradurga : District Agricultural Profile, Agricultural Contingency Plan, www.nicra-icar.in/nicraevised/ index.php/state-wise-Plan

ವೀರುಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, 2002, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಿಮ್ಮ ಕೈತೋಟ, ಬಿ.ಎಸ್. ಮಟ್ಟಿಮನಿ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಚಿತ್ರದುರ್ಗ ಜಿಲ್ಲೆಯಾದ್ಯಂತ ನಡೆಸಿದ ಕ್ಷೇತ್ರಕಾರ್ಯದಲ್ಲಿ ಅನೇಕ ಹಿರಿಯ ರೈತರು ಹಾಗೂ ರೈತ ಮಹಿಳೆಯರಿಂದ, ಮತ್ತು ಅವಲೋಕನದಿಂದ ಸಂಗ್ರಹಿಸಿದ ಮಾಹಿತಿ.

ಎಂ.ಎಸ್.ಎಂ.

ಚಿಲ್ಕರಿವೆ ಸೊಪ್ಪು ಸಾಂಬಾರಿಗೆ ಬಳಸುವ ಜನಪ್ರಿಯ ತರಕಾರಿ ಸೊಪ್ಪು. ಅಮರ‍್ಯಾಂತೇಸೀ ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು ಅಮರ‍್ಯಾಂತಸ್ ಗ್ಯಾಂಜಟಿಕಸ್. ಕನ್ನಡದಲ್ಲಿ ದಂಟು ಎಂದು ಕರೆಯುವರು. ಉಷ್ಣ ವಲಯಗಳಿರುವೆಡೆಯಲ್ಲೆಲ್ಲ ಬೆಳೆಯುತ್ತದೆ. ಭಾರತದ ಎಲ್ಲ ರಾಜ್ಯಗಳಲ್ಲೂ ಇದರ ಕೃಷಿ ಉಂಟು. ಇದರಲ್ಲಿ ಮುಖ್ಯವಾಗಿ ನಾಲ್ಕು ಬಗೆಗಳು : 1. ಲ್ಯಾನ್ಸಿಯೋಲೇಟಸ್. 2. ಲಿವಿಡಸ್, 3. ಪಾಲಿಗ್ಯಾಮಸ್ 4. ಟ್ರಿಸ್ಟಸ್. ಏಕವಾರ್ಷಿಕ ಸಸ್ಯವಿದು. ಕಾಂಡ ಹಸುರು ಅಥವಾ ಕಡುಗೆಂಪಾಗಿದ್ದು ಎಲೆಗಳು ದಟ್ಟ ಹಸುರು ಬಣ್ಣದಿಂದ ಕೂಡಿವೆ. ರೆಂಬೆಯ ತುದಿಯಲ್ಲಿ ಹೂಗಳು ರೇಸೀಮ್ ಮಾದರಿಯಲ್ಲಿ ಗೊಂಚಲಿನಲ್ಲಿ ಸಮಾವೇಶಗೊಂಡಿರುತ್ತವೆ. ಬೀಜ ಸಾಸುವೆಗಿಂತ ಚಿಕ್ಕದಾಗಿದ್ದು ಮಿರುಗುವ ಕಪ್ಪು ಬಣ್ಣವಿರುತ್ತದೆ.

ಚಿಲ್ಕರಿವೆ ಸೊಪ್ಪಿಗೆ ಎಲ್ಲ ಮಣ್ಣಿನಲ್ಲೂ ಬೆಳೆಯುವ ಗುಣವಿದೆ. ನೀರು ಪಾತಿಗಳಲ್ಲಿ ನಿಂತಿದ್ದೇ ಆದರೆ ಕಾಂಡ ಕೊಳೆತು ಹೋಗುತ್ತದೆ. ವಾಣಿಜ್ಯ ದೃಷ್ಟಿಯಿಂದ ಬೆಳೆಯುವುದಾದರೆ ವಿಸ್ತಾರ ಭೂಮಿಯನ್ನು ಮೂರ‍್ನಾಲ್ಕು ಬಾರಿ ಉತ್ತು ಕಳೆತೆಗೆದು ಹದಮಾಡಿ ಸಮತಟ್ಟುಗೊಳಿಸಬೇಕು. ಇದು ಶೀಘ್ರವಾಗಿ ಮತ್ತು ಹುಲುಸಾಗಿ ಬೆಳೆಯಬೇಕಾಗಿರುವುದರಿಂದ ಒಂದು ಎಕರೆಗೆ 30 ಗಾಡಿಯಷ್ಟು ಕೊಳೆತ ಪುಡಿ ಗೊಬ್ಬರ ಬೇಕಾಗುತ್ತದೆ. ಗೊಬ್ಬರವನ್ನು ಎಲ್ಲೆಡೆ ಸಮವಾಗಿ ಹರಡಿ ಸಣ್ಣ ನೇಗಿಲು ಅಥವಾ ಹಲುಬೆಯಿಂದ ಮಣ್ಣಿನಲ್ಲಿ ಬೆರೆಯುವಂತೆ ಮಾಡಬೇಕು. ಅನಂತರ ಒಂದು ಎಕರೆಗೆ 2-3 ಕೆಜಿಯಷ್ಟು ಉತ್ತಮ ಬೀಜಗಳನ್ನು ಬಿತ್ತಿ ಮತ್ತೊಮ್ಮೆ ಸಣ್ಣ ಹಲುಬೆಯಿಂದ ಬೀಜಗಳು 1-2 ಇಂಚು ಆಳಕ್ಕಷ್ಟೆ ಮಣ್ಣಿನಲ್ಲಿ ಸೇರುವಂತೆ ಮಾಡಬೇಕು. ಭೂಮಿಯ ಸಮತಟ್ಟಿಗನುಗುಣವಾಗಿ ಪಾತಿಗಳನ್ನು ವಿಂಗಡಿಸಿಕೊಂಡು ನೀರು ಹೆಚ್ಚು

ನಿಲ್ಲದಂತೆಯೂ ಎಲ್ಲ ಕಡೆ ತೇವ ಸಮವಾಗಿರುವಂತೆಯೂ ನೋಡಿಕೊಳ್ಳಬೇಕು. ಬಿತ್ತಿದ ಮೂರು ದಿವಸಕ್ಕೆ ಮೊಳಕೆಯೊಡೆಯುತ್ತದೆ. ಈ ಸಮಯದಲ್ಲಿ ನೀರನ್ನು ಸೂಕ್ಷ್ಮವಾಗಿ ಎರಚಬೇಕು. ಬೆಳಗ್ಗೆ ಅಥವಾ ಸಂಜೆ ತಂಪು ಹವೆಯಲ್ಲಿ ನೀರನ್ನು ಎರಚಬೇಕು.

ಕೈತೋಟದಲ್ಲಿ ಸೊಪ್ಪನ್ನು ಬೆಳೆಸುವವರು ಜಾಗಕ್ಕನುಗುಣವಾಗಿ ಪಾತಿಗಳನ್ನು ಸಿದ್ಧಮಾಡಿಕೊಂಡು ಚೆನ್ನಾಗಿ ಕೊಳೆತ ಹುಡಿ ಗೊಬ್ಬರವನ್ನು ಪ್ರತಿಯೊಂದು ಪಾತಿಗೂ ಒಂದು ಮಕರಿಯಷ್ಟು ಸುರಿದು ಕೈಗುದ್ದಲಿಯಿಂದ ಅಗೆದು ಮಣ್ಣಿನಲ್ಲಿ ಸೇರಿಸಿ ಮೂರ್‍ನಾಲ್ಕು ದಿವಸಗಳು ಕೊಳೆಯಲು ಬಿಟ್ಟು ಮತ್ತೊಮ್ಮೆ ಕೆದಕಿ ಬೀಜವನ್ನು ಬಿತ್ತಿ ಬೀಜ ಒಳಸೇರುವಂತೆ ಮಾಡಬೇಕು. ಬೀಜ ಬಿತ್ತುವ ಮೊದಲು ಒಂದು ಹಿಡಿ ಕಾಳಿಗೆ ಮೂರು ಹಿಡಿ ಮರಳು ಅಥವಾ ಹುಡಿಗೊಬ್ಬರದೊಂದಿಗೆ ಬೆರೆಸಿ ಎರಚುವುದರಿಂದ ಕಾಳು ಹದವಾಗಿ ಬಿದ್ದು ಸಸ್ಯ ಹುಲುಸಾಗಿ ಬೆಳೆಯಲು ಅನುಕೂಲವಾಗುತ್ತದೆ. ಬೀಜಬಿತ್ತಿದ ಮೇಲೆ ಒಣಹುಲ್ಲು ಅಥವಾ ಸಣ್ಣ ಎಲೆಗಳಿರುವ ಸೊಪ್ಪನ್ನು ಹದವಾಗಿ ಹರಡಿ ನೀರನ್ನು ಎರಚುವುದರಿಂದ ಪ್ರಖರವಾದ ಬಿಸಿಲಿನಿಂದ ರಕ್ಷಣೆ ದೊರೆಯುತ್ತದೆ. ಬೀಜ ಒಂದೆಡೆ ಒತ್ತೊತ್ತಾಗಿ ಸೇರಲು ಅವಕಾಶವಾಗುವುದಿಲ್ಲ. ಒಂದು ತಿಂಗಳ ಒಳಗೆ ಕೊಯ್ಲಿಗೆ ಸಿದ್ಧವಾಗುತ್ತದೆ. ಬೆಳಗಿನ ಜಾವ ಅಥವಾ ಸಂಜೆ ಹೊತ್ತಿನಲ್ಲಿ ಸೊಪ್ಪು ಕೊಯ್ಯಬೇಕು.

ಸಾಮಾನ್ಯವಾಗಿ ರೈತರು ವಾರಕ್ಕೊಮ್ಮೆಯಾದರೂ ಸೊಪ್ಪು ಸಿಗುವ ಹಾಗೆ ಒಂದು ಎಕರೆ ಭೂಮಿಯಲ್ಲಿ ಹಲವು ಭಾಗಗಳನ್ನು ಮಾಡಿ ಬೇರೆ ಬೇರೆ ಅವಧಿಯಲ್ಲಿ ಬಿತ್ತುವುದುಂಟು.

ಈ ಸೊಪ್ಪಿಗೆ ರೋಗರುಜಿನಗಳ ಬಾಧೆ ಕಡಿಮೆ. ಒಂದು ವೇಳೆ ಯಾವುದಾದರೂ ರೋಗ ಕಾಣಿಸಿಕೊಂಡರೆ ಎಲೆಯ ಮೇಲೆ ಮಂಜು ಇರುವ ಸಮಯದಲ್ಲಿ ಅಥವಾ ನೀರು ಹಾಯಿಸಿದ ಅನಂತರ ಬೂದಿಯನ್ನು ಎರಚಬೇಕು.

ಎ.ಬಿ.ಪಿ.

ಚೆಂಡುಹೂ (ಚಣ್ಣು ಹೂವು) ಚೆಂಡು ಹೂ ಗಿಡಕ್ಕೆ ಚೆಂಡು ಮಲ್ಲಿಗೆ ಎಂಬ ಹೆಸರಿದ್ದು 'ಆಸ್ಟರೇನೇ' ಕುಟುಂಬಕ್ಕೆ ಸೇರಿದ ಏಕ ವಾರ್ಷಿಕ ಸಸ್ಯ. ಇದರ ಶಾಸ್ತ್ರೀಯ ಹೆಸರು 'ಟಿಜಿಟೀಸ್' ಎಂದಿದೆ. ಆದರೆ ಕನ್ನಡ



ಇಂಗ್ಲಿಷ್ ಡಿಕ್ಷನರಿಯಲ್ಲಿ (ಕ್ರಿಸಾಂಥೆಮಮ್) ಎಂದಿದೆ. ಎಲ್ಲ ತರಹದ ಮಣ್ಣು ಮತ್ತು ಹವಾಗುಣದಲ್ಲಿ ಬೆಳೆಯ ಬಹುದಾದ ಆಲಂಕಾರಿಕ ಸಸ್ಯ. ಫಲವತ್ತಾಗಿರುವ ಮತ್ತು ನೀರು ಚೆನ್ನಾಗಿ ಬಸಿದು ಹೋಗುವಂತಹ ಮಣ್ಣು ಉತ್ತಮ. ಫೆಬ್ರವರಿಯಿಂದ ಜೂನ್ ತಿಂಗಳ ನಡುವಣ ಕಾಲ (ಇಂದು ಎಲ್ಲಾ ಕಾಲದಲ್ಲಿಯೂ ಬೆಳೆಯುತ್ತಿದ್ದಾರೆ)ದಲ್ಲಿ ಮಡಿಗಳಲ್ಲಾಗಲಿ, ಕುಂಡಗಳಲ್ಲಾಗಲಿ ಒಣಗಿದ ಚೆಂಡು ಹೂವಿನ ಬೀಜಗಳನ್ನು ಬಿತ್ತಬಹುದು. ಬಿತ್ತಿದ ಬೀಜಗಳು 4-6 ದಿವಸಗಳಲ್ಲಿ ಮೊಳೆತು ಒಂದು ತಿಂಗಳಿನಲ್ಲಿ ನಾಟಿ ಮಾಡಲು ಸಿದ್ಧವಾಗುತ್ತವೆ.

ಇಂಗ್ಲೀಷ್‌ನಲ್ಲಿ ಮಾರಿ ಗೋಲ್ಡ್ ಎಂದೂ ಸಂಸ್ಕೃತದಲ್ಲಿ ಕಂದುಕ ಪುಷ್ಪಮ್ ಎಂದೂ ಹಿಂದಿಯಲ್ಲಿ ಚಂಡಲಿಕಾ ಎಂಬ ಹೆಸರುಗಳಿವೆ.

ಬಿತ್ತನೆ: ನೇಗಿಲಿನ ಸಹಾಯದಿಂದ 2-3 ಬಾರಿ ಉಳುಮೆ ಮಾಡಿ ಹದಗೊಳಿಸಿರುವ ಭೂಮಿಗೆ ಈ ಸಸಿಗಳನ್ನು ನಾಟಿ ಮಾಡಬೇಕು. ನಾಟಿಮಾಡುವ ಮೊದಲೇ ಕೊಟ್ಟಿಗೆ ಗೊಬ್ಬರ ಮತ್ತು ಯೂರಿಯಾವನ್ನು ಮಣ್ಣಿನಲ್ಲಿ ಮಿಶ್ರಣ ಮಾಡುವುದುಂಟು. ಕೆಲವೆಡೆ ನಾಟಿ ಮಾಡಿದ ಒಂದು ವಾರದೊಳಗೆ ಹಾಕುವುದೂ ಬಳಕೆಯಲ್ಲಿದೆ. ಪ್ರಾರಂಭದಲ್ಲಿ ಪ್ರತಿದಿನ ನೀರು ಕೊಟ್ಟರೆ ಅನಂತರ ದಿನಗಳಲ್ಲಿ ವಾರಕ್ಕೊಮ್ಮೆ ಕೊಡುವುದು ಒಳ್ಳೆಯದು. ಗಿಡದಿಂದ ಗಿಡಕ್ಕೆ 2 ಅಡಿ ಮತ್ತು ಸಾಲಿನಿಂದ ಸಾಲಿಗೆ 3 ಅಡಿ ಅಂತರವಿರುವಂತೆ ನೋಡಿಕೊಳ್ಳಬೇಕು. ನಾಟಿಮಾಡಿದ 10 ರಿಂದ



15 ದಿನಗಳಲ್ಲಿ ಬೇರು ಭೂಮಿಯಲ್ಲಿ ಭದ್ರವಾಗುತ್ತದೆ. ಸಸಿಗಳು ಸುಮಾರು 2 ಅಡಿ ಎತ್ತರ ಬೆಳೆದ ಮೇಲೆ ಕುಡಿಗಳನ್ನು ಚಿವುಟಿ ಹಾಕಬೇಕು. ಅನಂತರ ಗಿಡದಿಂದ 6-7 ಇಂಚು ದೂರದಲ್ಲಿ ಯಾವುದಾದರೂ ರಾಸಾಯನಿಕ ಗೊಬ್ಬರವನ್ನು ಸ್ವಲ್ಪ ಸ್ವಲ್ಪ ಹಾಕಬೇಕು. ಹೆಚ್ಚು ಹಾಕಿದರೆ ಎಲೆಗಳೇ ಹೆಚ್ಚು ಬೆಳೆದು ಹೂಗಳು ಕಡಿಮೆಯಾಗುತ್ತವೆ. ಸುಮಾರು 2 ತಿಂಗಳ ಮೇಲೆ ಗಿಡಗಳು ಹೂ ಬಿಡಲು ಪ್ರಾರಂಭಿಸುತ್ತವೆ.ಇದರ ಹೂಗಳು ಹಳದಿ ಬಣ್ಣ ಕೆಂಪು ಬಣ್ಣದವಾಗಿರುತ್ತವೆ. ಇವೆರಡರಲ್ಲೂ ಹಲವಾರು ತಳಿಗಳಿವೆ.

ಗಿಡಗಳಿಗೆ ಹುಳುಗಳು ಹತ್ತಿ ರೋಗ ಲಕ್ಷಣ ಕಂಡು ಬಂದರೆ ಔಷಧಿ ಸಿಂಪಡಿಸಬೇಕು. ಹೂವು ಬಲಿತಿರುವುದನ್ನು ನೋಡಿಕೊಂಡು ನಿಧಾನವಾಗಿ ಕೀಳಬೇಕು. ಬಲ ಪ್ರಯೋಗ ಮಾಡಿದರೆ ಬುಡ ಸಮೇತ ಗಿಡವೇ ಕಿತ್ತು ಬರುತ್ತದೆ. 3 ತಿಂಗಳ ಬೆಳೆಯಾದ್ದರಿಂದ 4-5 ಸಲ ಹೂವನ್ನು ಕೀಳಬಹುದಾಗಿದೆ. ಚೆನ್ನಾಗಿ ಬೆಳೆದರೆ ಎಕರೆಗೆ 10 ರಿಂದ 12 ಟನ್ ಹೂವನ್ನು ಪಡೆಯಬಹುದು.

ಉಪಯೋಗಗಳು : ದೀಪಾವಳಿ ಹಬ್ಬಗಳಲ್ಲಿ ಮನೆ, ದೇವರ ಫೋಟೋ ದನಗಳ ಅಲಂಕಾರಗಳಿಗೆ ಹೆಚ್ಚು ಬಳಸುತ್ತಾರೆ. ಆಯುಧ ಪೂಜೆಯ ಸಂದರ್ಭದಲ್ಲಿ ವಾಹನಗಳಿಗೆ, ಆಷಾಢ ಮಾಸಗಳಲ್ಲಿ ದೇವಸ್ಥಾನಗಳ ಅಲಂಕಾರಕ್ಕೆ, ಹಾರಗಳ ತಯಾರಿಕೆಯಲ್ಲಿ ಬಳಸುತ್ತಾರೆ.

ಔಷಧಿ ತಯಾರಿಕೆಯಲ್ಲಿ ವಿಟಮಿನ್ ಮಾತ್ರೆಗಳಲ್ಲಿ ಬಳಸುವ ಸ್ವಾಭಾವಿಕ ಬಣ್ಣಕ್ಕಾಗಿ, ತೈಲ ಚಿತ್ರಗಳ ತಯಾರಿಕೆಯ ಬಣ್ಣದಲ್ಲಿ ಮತ್ತು ಕೋಳಿಗಳ ಆಹಾರ ತಯಾರಿಕೆಯಲ್ಲಿ ಬಳಸುತ್ತಾರೆ.

ಹತ್ತಿ, ಬೆಂಡೆ, ಬದನೆ, ಟೊಮ್ಯಾಟೋ, ಬೆಳೆಗಳ ಜೊತೆಯಲ್ಲಿ ಚೆಂಡು ಹೂವನ್ನು ಮಿಶ್ರ ಬೆಳೆಯಾಗಿ ಬೆಳೆಯುವುದರಿಂದ ಕ್ರಿಮಿ ಕೀಟಗಳು, ರೋಗ ಬಾಧೆಗಳು ಬರದಂತೆ ಕಾಪಾಡುತ್ತದೆ. ಇದರಿಂದ ಏಕ ಕಾಲದಲ್ಲಿನಿರೀಕ್ಷಿಸಿದ ಮಟ್ಟದ ಫಸಲು ಪಡೆಯುವುದು ಸಾಧ್ಯ.

ಆಧಾರ ಗ್ರಂಥಗಳು

ಕನ್ನಡ ವಿಶ್ವಕೋಶ ಸಂಪುಟ 3 ಕು.ಕ.ಅ. ಸಂಸ್ಥೆ, ಮೈಸೂರು ವಿ.ವಿ. 1971

ಪ್ರಜಾವಾಣಿ ದಿನ ಪತ್ರಿಕೆ ಕೃಷಿ ವಿಭಾಗ, ಸೆಪ್ಟೆಂಬರ್ 4, 2012,

ಮಾಹಿತಿ ಸಂಗ್ರಹ :

ಜಯಮ್ಮ - ಮಾಕನಹಳ್ಳಿ, ಮೈಸೂರು ಜಿಲ್ಲೆ.

ಕೆ.ಎಲ್.

ಚೌಳು (ಚವುಳು) ಕೆಲವು ಪ್ರದೇಶಗಳಲ್ಲಿ ಭೂಮಿ ಯಾವ ಬೆಳೆ ಮತ್ತು ಸಸ್ಯಗಳು ಬೆಳವಣಿಗೆಗೂ ಸಹಕರಿಸದೆ ಪ್ರತಿಕೂಲ ಗುಣಗಳಿಂದ ಕೂಡಿರುತ್ತದೆ. ಎಲ್ಲಾ ವಿಧವಾದ ಮಣ್ಣುಗಳಲ್ಲಿ ಕಂಡುಬರುವ ಹುಳಿ ಮತ್ತು ಚೌಳು ಮಣ್ಣುಗಳು ಕೆಲವು ಸ್ಥಳೀಯ ಕಾರಣಗಳಿಂದ ಉಂಟಾದ ಸಮಸ್ಯೆಗಳಾಗಿರುತ್ತವೆ. ಒಮ್ಮೆ ಫಲವತ್ತಾದ ಬೃಹತ್ ಪ್ರದೇಶಗಳು ಉಪ್ಪಿನಿಂದ ತುಂಬಿಕೊಂಡು ಬಹುಮಟ್ಟಿಗೆ ಬಂಜರು ಭೂಮಿಯಾಗಿ ಪರಿವರ್ತನೆಯಾಗಿವೆ.

ತೋಟದಲ್ಲಿ ಹೆಚ್ಚಾಗಿ ಸೊಪ್ಪು, ಗಿಡಗಳು ಕೊಳೆಯುವುದರಿಂದ ಆಮ್ಲದ ಅಂಶ ಅಧಿಕವಾಗುತ್ತದೆ. ಜೀವಾಣುಕ್ರಿಯೆ ಕುಂದಿ, ಅವಶ್ಯಕ ಸಸ್ಯ ಪೋಷಕಗಳು ಒದಗುವುದು ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಸಸ್ಯಗಳ ಬೆಳೆವಣಿಗೆ ಕುಂಠಿತಗೊಳ್ಳುತ್ತದೆ. ಮಣ್ಣುಗಳು ಚೌಳಾಗುವುದಕ್ಕೆಪ್ರಮುಖ ಕಾರಣವೆಂದರೆ, ಭೂಮಿಯ ಮೇಲಿನ ಬಂಡೆಗಳು ಮತ್ತು ಖನಿಜಗಳು ಶಿಥಿಲವಾದಾಗ ಅದರಲ್ಲಿರುವ ಉಪ್ಪುಗಳು ಕರಗಿ ಆ ನೆಲದಲ್ಲಿ ಬಸಿಯದೆ ಹಾಗೆಯೇ ಉಳಿಯುವುದು. ಇಂತಹ ಮಣ್ಣು ಮಳೆ ಕಡಿಮೆಯಿರುವ ಪ್ರದೇಶಗಳಲ್ಲಿಕಂಡು ಬರುತ್ತದೆ. ಮಳೆಗಾಲದಲ್ಲಿಅತಿಹೆಚ್ಚು ನೀರಿನಿಂದ ಕೂಡಿರುವ ಚಪ್ಪಟೆಯಾಕಾರದ ತಗ್ಗು ಪ್ರದೇಶಗಳಲ್ಲಿ ನೀರನ್ನು ಬಸಿಯುವುದು ಸಾಧ್ಯವಾಗದೆ ಇರುವಾಗ ಉಪ್ಪುಗಳ ಮೊತ್ತ ಅಧಿಕವಾಗುತ್ತದೆ.ಸೋಡಿಯಂ ಲವಣಾಂಶವು ಒಂದು ಮಿತಿಯನ್ನು ಮೀರಿದರೆ ಆ ಮಣ್ಣು ಕ್ಷಾರ ಗುಣ ಹೊಂದುತ್ತದೆ. ಮಣ್ಣಿನ ರಚನೆ ಕೆಟ್ಟು ಗಾಳಿಗೆ ತೂರುವುದು. ನೀರು ಬಸಿಯಲು ಸಾಧ್ಯವಾಗದೆ ಭೂಮಿ ಹಾಳಾಗುತ್ತದೆ. ಭೂಮಿಯನ್ನು ನೀರಾವರಿಗೆ ತಂದಾಗ 90-120 ಸೆಂ.ಮೀ. ಕೆಳಗಡೆ ಕ್ಷಾರದ ಅಂಶಗಳಿದ್ದು ಅವು ಮೇಲಕ್ಕೆ ಬಂದು ಶೇಖರಣೆಯಾಗಿ ಚೌಳು ಸಮಸ್ಯೆ ಉದ್ಭವಿಸುತ್ತದೆ. ಶುಷ್ಕ ಕಾಲದಲ್ಲಿ ಈ ಮಣ್ಣುಗಳು ಬಿಳಿಯ ಉಪ್ಪಿನಿಂದ ಕೂಡಿದ್ದು ಇವುಗಳ ಹೊರ ಪದರ ನಯವಾಗಿ ಬೂದು ಬಣ್ಣದಿಂದ ಕೂಡಿರುತ್ತದೆ. ಮಣ್ಣಿನಲ್ಲಿ ಹೂವಾಗಿ ಅರಳುತ್ತದೆ. ಇದರ ಕೆಳಗೆ ದಪ್ಪನೆಯ ಸಾಂದ್ರವಾದ ಗಟ್ಟಿಯ ಪದರವಿರುತ್ತದೆ. ಮೈಸೂರು ಪ್ರಾಂತ್ಯದಲ್ಲಿ ನೀರಾವರಿ ಕೃಷಿ ಮಾಡದಿರುವ ಕಡೆ ಹೆಚ್ಚಾಗಿ ಈ ಮಣ್ಣು ಕಂಡುಬರುತ್ತದೆ. ಇದನ್ನು ಚೌಳು, ಕರಲು ಎಂದು ಕರೆಯುತ್ತಾರೆ.

ಉತ್ತರ ಪ್ರದೇಶದಲ್ಲಿ ಎರಡು ಮಿಲಿಯನ್‌ಎಕರೆ ಪ್ರದೇಶದಲ್ಲಿ ಚೌಳು ಮತ್ತು ಕ್ಷಾರ ಮಣ್ಣುಗಳಿವೆ. ಸ್ಥಳೀಯವಾಗಿ ಅದನ್ನು ಉಸರ್ ಅಥವಾ ರೆಹ್ ಎಂದು ಕರೆಯುತ್ತಾರೆ. ಪಂಜಾಬಿನಲ್ಲಿ ಕಲ್ಲರ್, ಥರ್ ಮತ್ತು ಬಾರಾ ಎನ್ನುವರು. ನಿಯಮಿತವಾಗಿ ನೀರನ್ನು ಕೊಡುವುದರಿಂದ ಇಂತಹ ಮಣ್ಣು (ಚೌಳು), ಉಪ್ಪಾಗದಂತೆ ನೋಡಿಕೊಳ್ಳಬಹುದು. ನಾಲಾ ಜಮೀನುಗಳಲ್ಲಿ ಎಚ್ಚರ ತಪ್ಪಿ ನೀರಾವರಿ ಮಾಡುವುದರಿಂದ ಭೂಮಿ ಪಾಳಾಗುತ್ತದೆ. ಪರಿಸ್ಥಿತಿ ಹೆಚ್ಚು ಹದಗೆಡದಿದ್ದಲ್ಲಿ ನೀರಾವರಿ ಮಾಡಿ ಉಪ್ಪನ್ನು ಕರಗಿಸಬಹುದು. ಕೆಮ್ಮಣ್ಣನ್ನು ತಂದು ಸುರಿಯುವುದು, ಹೆಚ್ಚು ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ, ಹಸುರು ಗೊಬ್ಬರ ಕೊಡುವುದರಿಂದ ಕಣ ಜೋಡಣೆ ಕುದುರಿ ಉಪ್ಪುಗಳು ಬಸಿದುಹೋಗುತ್ತವೆ. ಕ್ಷಾರ ಯುಕ್ತವಾದ ಭೂಮಿಯನ್ನು ಸಾಗುವಳಿಗೆ ಯೋಗ್ಯವನ್ನಾಗಿಸಲು ಅಧಿಕ ವೆಚ್ಚ ತಗಲುತ್ತದೆ. ಜಿಪ್ಸಂ,ಗಂಧಕ, ಮುಂತಾದ ಆಮ್ಲ ಕಾರಕಗಳನ್ನು ಕೊಟ್ಟು ಪ್ರತ್ಯಾಮ್ಲಗಳನ್ನು ನಾಶಮಾಡಿ ಭೂಮಿಯನ್ನು ತಟಸ್ಥ ಸ್ಥಿತಿಗೆ ತರಬಹುದು. ಇಂತಹ ಕ್ಷಾರತೆ ಕೂಡಿದ ಮಣ್ಣಿನಲ್ಲಿ ತೆಂಡೆಯಂತಹ ಹುಲ್ಲುಗಳು ವಿರಳವಾಗಿ ಆವರಿಸಿರುತ್ತವೆ.

ಆರ್.ಎ.

ಚೌಳು ಮಣ್ಣಿನ ಕೃಷಿ ವಸುಂಧರೆಯ ಒಡಲಲ್ಲಿಯ ಮಣ್ಣು ಯಾವ ರೀತಿಯಲ್ಲಿಯೇ ಇರಲಿ ಅದು ನಿಷ್ಪ್ರಯೋಜಕ ಎನ್ನುವಂತಿಲ್ಲ. ಮಾನವ ತನ್ನ ಜ್ಞಾನದ ಮಿತಿಯಲ್ಲಿ ಬಂಜರು, ಕರಲು, ಚೌಳು ಎಂದು ತಾತ್ಸಾರ ತೋರಿದರೂ, ಅದರ ಉಪಯೋಗವನ್ನು ಪಡೆಯುವಲ್ಲಿ ರೈತ ಪರಂಪರೆ ತನ್ನ ಪ್ರಯತ್ನವನ್ನು ನಿಲ್ಲಿಸಿಲ್ಲ.

ಮುಖ್ಯವಾಗಿ ಚೌಳುಮಣ್ಣಿನ ಬಗ್ಗೆ ವಿಚಾರ ಮಾಡುವಾಗ - ಪ್ರಪಂಚದಲ್ಲಿ ಸುಮಾರು 954 ಮಿಲಿಯನ್ ಭೂಮಿ ಚೌಳುಮಣ್ಣಿನಿಂದ ಕೂಡಿದೆ. ಭಾರತದ ರಾಷ್ಟ್ರೀಯ ಕೃಷಿ ಆಯೋಗದ ಪ್ರಕಾರ 7.42 ಮಿ.ಹೆ. ಮತ್ತು ಕರ್ನಾಟಕದಲ್ಲಿ 2.42 ಲಕ್ಷ ಹೆ. ಪ್ರದೇಶ ಚೌಳು ಮಣ್ಣಿನಿಂದ ಆವೃತವಾಗಿದೆ. ಇದು ದೇಶದ ಹಾಗೂ ಜಾಗತಿಕ ಸಮಸ್ಯೆಯಾಗಿ ಕಾಡುತ್ತಿದೆ.

ಚೌಳುಮಣ್ಣು, ಕ್ಷಾರಮಣ್ಣು, ಕರಕಲು ಮಣ್ಣು ಎಂದು ಕರೆಯುವ ಮಣ್ಣುಗಳಲ್ಲಿ ಸ್ವಲ್ಪ ವ್ಯತ್ಯಾಸಗಳು ಇರುತ್ತವೆ. ಚೌಳುಮಣ್ಣಿನಲ್ಲಿ ಹೆಚ್ಚು ಉಪ್ಪಿನ ಅಂಶವಿರುತ್ತದೆ. ಭೂಮಿಯ ಮಣ್ಣಿನ ಮೇಲ್ಭಾಗವು ಸಾಮಾನ್ಯವಾಗಿ ಬಿಳಿ ಬಣ್ಣಕ್ಕಿರುತ್ತದೆ. ಮಣ್ಣು ಗಟ್ಟಿಯಾಗಿದ್ದು ಹೆಪ್ಪುಗಟ್ಟಿ ಬೀಜ ಬಿತ್ತಿದರೆ ಮೊಳಕೆ ಬರುವುದಿಲ್ಲ. ಬಂದರೂ ಬೆಳೆ ಬೆಳೆಯುವುದಿಲ್ಲ. ಕೃಷಿ ಭೂಮಿಯ ಶೇ. 10 ಭಾಗ ಅನುತ್ಪಾದಕವಾಗಿದೆ.

ನಿಸ್ಸಾರವಾದ ಚೌಳು, ಮಳೆನೀರು ನಿಲ್ಲುವ ತಗ್ಗಾದ ಪ್ರದೇಶಗಳಲ್ಲಿ ಹೆಚ್ಚು ಸೃಷ್ಟಿಯಾಗುತ್ತದೆ. ಬೆಳ್ಳನೆಯ ಪುಡಿ ಉಪ್ಪಿನ ಪುಡಿ ರೂಪದಲ್ಲಿರುತ್ತದೆ. ಚೌಳು ತುಂಬಿದ ಭೂಮಿ ವ್ಯವಸಾಯಕ್ಕೆ ಅನುಪಯುಕ್ತವಾಗಿದ್ದು ಬೆಳೆ ಬೆಳೆಯುವುದು ಅಸಾಧ್ಯ. ಈ ಚೌಳು ಮಣ್ಣನ್ನು ಗ್ರಾಮೀಣ ಜನರು ಬಟ್ಟೆಗಳನ್ನು ಸ್ವಚ್ಛಗೊಳಿಸಲು ಉಪಯೋಗಿಸುತ್ತಿದ್ದರು. ಚೌಳುಮಣ್ಣನ್ನು ಕೆಲವು ಕಾಳುಗಳ ಸಂರಕ್ಷಣೆಗಾಗಿ ಬಳಕೆ ಮಾಡುವ ಪ್ರಯೋಜನದ ಅರಿವು ರೈತರಿಗಿತ್ತು. ಒಂದು ಸೇರು ರಾಗಿಗೆ ಒಂದು ಸೇರು ಚೌಳನ್ನು ಮಾರಾಟ ಮಾಡುತ್ತಿದ್ದರು.

ಸುಮಾರು ನೂರು ವರ್ಷಗಳ ಹಿಂದೆ ಇದನ್ನು ಉಪಯೋಗಿಸಿಕೊಂಡು ಉಪ್ಪನ್ನು ತಯಾರಿಸುವ ವಿಧಾನವನ್ನು ಕೆಲವು ಜನರು ಕಲಿತಿದ್ದರು. ಹಳ್ಳಗಳಲ್ಲಿ ಉಕ್ಕುತ್ತಿದ್ದ ಚೌಳುಮಣ್ಣನ್ನು ಸಂಗ್ರಹಿಸಿ ತಂದು ಗಾರೆ ಅಥವಾ ಕಲ್ಲು ತೊಟ್ಟಿಗಳಿಗೆ ಸುರಿದು ಅದಕ್ಕೆ ನೀರು ತುಂಬಿಸಿ 15-20 ದಿನಗಳ ಕಾಲ ಬಿಟ್ಟಲ್ಲಿ, ಚೌಳು ಮಣ್ಣಿನ ಕ್ಷಾರ ಉಪ್ಪಾಗಿ ಮೇಲೆ ಪದರಗಟ್ಟಿ ಉಕ್ಕುತ್ತಿತ್ತು. ಈ ಉಪ್ಪನ್ನು ಶೇಖರಿಸಿ ಜನರಿಗೆ ಮಾರಾಟ ಮಾಡುತ್ತಿದ್ದರು. ಚೌಳುಮಣ್ಣಿನಿಂದ ಉಪ್ಪು ಮಾಡುವ ಕಲೆ ಕಲಿತಿದ್ದ ಹಾಗೂ ಮಾರಾಟ ಮಾಡುತ್ತಿದ್ದ ಜನರನ್ನು 'ಉಪ್ಪಾರ ಜಾತಿ' ಎಂದೇ ಗುರುತಿಸುತ್ತಾರೆ. ಈಗಲೂ ಮೈಸೂರು ಭಾಗದಲ್ಲಿ ಉಪ್ಪಾರ ಜಾತಿಗೆ ಸೇರಿದವರು ಕಂಡುಬರುತ್ತಾರೆ. ಈಗ ಅವರು ಕಸುಬು ಇಲ್ಲವಾಗಿ ಬೇರೆ ಬೇರೆ ಉದ್ಯೋಗವನ್ನು ಮಾಡುತ್ತಿದ್ದಾರೆ.

ವ್ಯವಸಾಯದ ದೃಷ್ಟಿಯಿಂದ ಚೌಳು ಭೂಮಿಯು ರೈತರ ಪಾಲಿಗೆ ಕಂಟಕವಾಗಿದ್ದು, ಉಳುಮೆ ಮಾಡುವಲ್ಲಿ ಹೆಚ್ಚು ಶ್ರಮ ಪಡಬೇಕು. ಮಣ್ಣು ಹೆಂಟೆ ಹೆಂಟೆಯಾಗಿ ನೀರು ಹಾಯಿಸಿದಷ್ಟೂ ಗಟ್ಟಿಯಾಗುತ್ತದೆ. ಚೌಳು ಮಣ್ಣಿನಲ್ಲಿ ಪೈರು ನಾಟಿಮಾಡುವುದು ಕಷ್ಟ. ಗೊಬ್ಬರ ಬಳಸಿದರೂ ಅದು ಬೆಳೆಗೆ ಸಿಗದಂತೆ ಚೌಳಾಗುತ್ತದೆ. ಮಳೆ - ಬಿಸಿಲು ಹೆಚ್ಚಾದಷ್ಟು ಚೌಳು ಹೆಚ್ಚೆಚ್ಚು ಉಕ್ಕುತ್ತದೆ. ಕ್ಷಾರದಿಂದ ಬೆಳೆ ಬೆಂದು ಹೋಗುತ್ತದೆ.

ಚೌಳು ಭೂಮಿಯ ಸಮಸ್ಯೆ ವಿಪರೀತವಾದರೂ ರೈತರು ಇಂತಹ ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವನ್ನಾಗಿಸಲು ಸತತ ಪ್ರಯತ್ನ ಮತ್ತು ಪ್ರಯೋಗಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ನಿಸ್ಸಾರವಾದ ಮಣ್ಣನ್ನು ಫಲವತ್ತಾಗಿ ಮಾಡಲು ಈ ಭೂಮಿಗೆ ಹಸಿ ಸಗಣಿ, ಬೇರೆಡೆಯಿಂದ ತಂದ ಕೆಂಪು ಮಣ್ಣು, ಮರಳು, ಕೊಟ್ಟಿಗೆ ಗೊಬ್ಬರ, ಹಸುರೆಲೆ ಗೊಬ್ಬರ, ಹೊಂಗೆ, ಬೇವು, ಕಕ್ಕೆ, ಬಂದ್ರೆ, ತಂಗಡಿ, ಕಾಡು ತಂಗಡಿ, ಮಾವು, ಹಲಸು ಮುಂತಾದ ಸೊಪ್ಪುಗಳನ್ನು ಜೊತೆಗೆ ಕೆರೆಯ 'ಗೋಡುಮಣ್ಣು' ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ಸಿಗುವ 'ಮಡ್ಡಿ'ಯನ್ನು ಭೂಮಿಗೆ ಸೇರಿಸುವುದು.

ಚೌಳುಮಣ್ಣನ್ನು ವ್ಯವಸಾಯಕ್ಕೆ ಹದಗೊಳಿಸಿಕೊಂಡ ರೈತರು ತಮ್ಮದೇ ಆದ ರೀತಿಯಲ್ಲಿ ಬೆಳೆ ತೆಗೆಯುವ ವಿಧಾನವನ್ನು ಕಂಡುಕೊಂಡಿದ್ದಾರೆ.

ಸಾಮಾನ್ಯವಾಗಿ ಮೇ ತಿಂಗಳಲ್ಲಿ ರಾಗಿ ಬಿತ್ತಿ ಸೆಪ್ಟೆಂಬರ್‌ನಲ್ಲಿ ರಾಗಿ ಕಟಾವು ಆದ ಅನಂತರ ನವೆಂಬರ್ ತಿಂಗಳಿನಲ್ಲಿ ಹಿಂಗಾರು ಬೆಳೆಯಾಗಿ ಬತ್ತ ಬಿತ್ತುತ್ತಾರೆ.

ವ್ಯವಸಾಯದ ದೃಷ್ಟಿಯಿಂದ ಚೌಳು ಭೂಮಿಯು ರೈತರ ಪಾಲಿಗೆ ಕಂಟಕವಾಗಿದ್ದು, ಉಳುಮೆ ಮಾಡುವಲ್ಲಿ ಹೆಚ್ಚು ಶ್ರಮ ಪಡಬೇಕು. ಮಣ್ಣು ಹೆಂಡೆ ಹೆಂಡೆಯಾಗುತ್ತದೆ. ನೀರು ಹಾಯಿಸಿದಷ್ಟು ಮಣ್ಣು ಗಟ್ಟಿಯಾಗುತ್ತದೆ. ಚೌಳು ಮಣ್ಣಿನಲ್ಲಿ ಪೈರು ನಾಟಿ ಮಾಡುವುದು ಕಷ್ಟ. ಗೊಬ್ಬರ ಬಳಸಿದರೂ ಅದು ಬೆಳೆಗೆ ಸಿಗದಂತೆ ಚೌಳಾಗುತ್ತದೆ. ಮಳೆ - ಬಿಸಿಲು ಹೆಚ್ಚಾದಷ್ಟು ಚೌಳು ಹೆಚ್ಚೆಚ್ಚು ಉಕ್ಕುತ್ತದೆ. ಬೆಳೆ ಕ್ಷಾರದಿಂದ ಬೆಂದು ಹೋಗುತ್ತವೆ.

ಚೌಳು ಭೂಮಿಯ ಗುಣ ಲಕ್ಷಣಗಳಿಗೆ ಅನುಗುಣವಾಗಿ ಬತ್ತದ ತಳಿಗಳನ್ನು ಆರಿಸಿಕೊಳ್ಳುತ್ತಾರೆ. ಚೌಳು ಭೂಮಿ ಪ್ರದೇಶ, ಒಣ ಭೂಮಿಯ ಪ್ರದೇಶ, ನೀರಾವರಿ ಚೌಳುಭೂಮಿ, ಜೌಗು ಭೂಮಿ, ಕರಲು ಭೂಮಿ ಹೀಗೆ ಭೂಮಿಗೆ ತಕ್ಕಂತೆ ತಳಿಗಳು. ಇವನ್ನು ಅದರದೇ ಆದ ವಿಧಾನದಲ್ಲಿ ಬಿತ್ತನೆ ಮಾಡುತ್ತಾರೆ.

ಚೌಳುಭೂಮಿ ಪ್ರದೇಶಕ್ಕೆ ಪಿಚ್ಚ ನೆಲ್ಲು, ತೋಕೆಬತ್ತ ಚನ್ನಂಗಿ, ಹುಣಸೇ ಹೂವಿನ ಬತ್ತ. ಈ ತಳಿಗಳ ಬತ್ತವನ್ನು ಮೊಳಕೆ ಬರಿಸಿ, ಸಿದ್ಧಗೊಂಡ ಹೊಲಕ್ಕೆ ಸ್ವಲ್ಪ ಹದ ಮಳೆ ಬಂದಾಗ ಬತ್ತವನ್ನು ಕೂರಿಗೆ ಅಥವಾ ನೇಗಿಲಿನಿಂದ ಬಿತ್ತಿ ದಿಂಡುಹೊಡೆಯಲಾಗುವುದು, ಮಳೆಯ ಬಂದಾಗ ಬತ್ತದ ಪೈರುಗಳು ಹೊರಬರುತ್ತವೆ.

ನೀರಾವರಿ ಪ್ರದೇಶದಲ್ಲಿ 20-25 ದಿನಗಳ ಕಾಲ ಬೆಳೆದ ಸಸಿಗಳನ್ನು ಸಿದ್ಧ ಗೊಂಡ ಗದ್ದೆಯಲ್ಲಿ ನಾಟಿ ಮಾಡುತ್ತಾರೆ. ಕೆಲವು ಭಾಗದಲ್ಲಿ ಕೆಸರುಗದ್ದೆಗೆ ಮೊಳಕೆ ಬರಿಸಿದ ಬತ್ತವನ್ನು ಎರಚುತ್ತಾರೆ. ಇಲ್ಲಿ ಬಳಕೆಯಾಗುವ ತಳಿ, ಹಾಲುಬ್ಬಲು ಮತ್ತು ದಿಲ್ಲಿ ಭೋಗ.

ಜೌಗು ಭೂಮಿಯಲ್ಲಿ ಮಳೆ ಬಂದಾಗ ನೇಗಿಲುಹೊಡೆದು ಕೂರಿಗೆಯಿಂದ ಬಿತ್ತನೆ ಮಾಡುವುದು ರೂಢಿ. ಜೌಗು ಬತ್ತ ಮತ್ತು ದೊಡ್ಡಿ ಬತ್ತ ಇಲ್ಲಿಯ ತಳಿಗಳು.

ಕರಕಲು ಭೂಮಿಯಲ್ಲಿ ಮೊಳಕೆ ಬಂದ ಬತ್ತ ಎರಚುವುದು ಅಥವಾ ಸಸಿ ಮಾಡಿ ನಾಟಿ ಮಾಡುವ ಪದ್ಧತಿ ಇದೆ. ಇಲ್ಲಿಯ ತಳಿಗಳು ಪಿಚ್ಚನೆಲ್ಲು, ತೋಕೆ ಬತ್ತ. ನೀರಾವರಿ ಗದ್ದೆಗಳಲ್ಲಿ ನೀರು ನಿರ್ವಹಣೆ ಅತಿ ಮುಖ್ಯ. ಗದ್ದೆಗಳಲ್ಲಿ ಪ್ರತಿದಿನವೂ ನೀರನ್ನು ಬಸಿದು ಹೊಸ ನೀರನ್ನು ತುಂಬಿಸಬೇಕು. ಬೆಳಗಿನ ಹೊತ್ತು ಹಳೆ ನೀರು ಬಸಿದು ಹೊಸ ನೀರು ತುಂಬಿಸುವ ಪದ್ಧತಿ ಇದೆ. ಒಂದಕ್ಕಿಂತ ಹೆಚ್ಚು ದಿನ ಹಳೆಯ ನೀರನ್ನು ನಿಲ್ಲಿಸಿದರೆ ಪೈರು ಕೊಳೆಯುತ್ತವೆ. ನೀರು ಹುಳಿಯಾಗುತ್ತದೆ. ನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳಬೇಕು.

ಚೌಳು ನಿರೋಧಕ ಬತ್ತದ ತಳಿ ವೈವಿಧ್ಯ : ನೂರಾರು ವರ್ಷಗಳಿಂದ ಚೌಳು ಮಣ್ಣಿಗೆ ಹೊಂದಿಕೊಂಡಿರುವಂತಹ ಬತ್ತದ ತಳಿಗಳನ್ನು ತುಮಕೂರು ಜಿಲ್ಲೆಯ ಮಧುಗಿರಿ, ಪಾವಗಡ, ಶಿರಾ; ಚಿತ್ರದುರ್ಗದ ಮೊಳ ಕಾಲ್ಮೂರು ತಾಲ್ಲೂಕುಗಳಲ್ಲಿ ಮಾತ್ರವಲ್ಲದೆ ಆಂಧ್ರದ ಪೆನುಗೊಂಡ, ಮಡಕಶಿರಾ, ಹಿಂದೂಪುರಗಳಲ್ಲಿ ಈ ತಳಿಯನ್ನು ಬೆಳೆಯುವರು.

ಜನಪ್ರಿಯ ದೇಸಿ ತಳಿಗಳು : ಕಾಸರನೆಲ್ಲು, ಮುಳ್ಳು ಬತ್ತ, ಸಣ್ಣನೆಲ್ಲು, ಚಿಂತಪೂಲವಡ್ಲು (ಹುಣಿಸೆ ಹೂ ಬತ್ತ), ತೆಲ್ಲತೋಕುವಡ್ಲು (ಬಿಳಿ ಮುಳ್ಳಿನ ಬಾಲದ ಬತ್ತ), ನಲ್ಲತೋಕುವಡ್ಲು (ಕರಿ ಮುಳ್ಳಿನ ಬಾಲದ ಬತ್ತ), ಪಿಚ್ಚನೆಲ್ಲು, ತೆಲ್ಲಪಿಚ್ಚನೆಲ್ಲು, ತೋಕಪಿಲ್ಲನೆಲ್ಲು, ಚೌಳುಚನ್ನಂಗಿ ಮುಂತಾದವು ಕಾಸರನೆಲ್ಲು, ಇದು ಐದು ತಿಂಗಳ ಬೆಳೆ. ಜೂನ್ -

ಜುಲೈನಲ್ಲಿ ಬಿತ್ತಿದರೆ ಡಿಸೆಂಬರ್‌ನಲ್ಲಿ ಕೊಯ್ಲಿಗೆ ಬರುತ್ತದೆ. ಒಂದು ಎಕರೆಗೆ 40-45 ಸೇರು ಬಿತ್ತನೆ ಬೀಜ ಬೇಕು. 4-5 ಅಡಿ ಎತ್ತರ ಬೆಳೆಯುತ್ತದೆ. ಎಕರೆಯೊಂದಕ್ಕೆ 20-25 ಕ್ವಿಂಟಾಲ್ ಇಳುವರಿ ನೀಡುತ್ತದೆ. ಇದರ ಪೈರನ್ನು 45 ದಿನಗಳಾದ ಮೇಲೂ ನಾಟಿ ಮಾಡಬಹುದು. ಇದು ಕೆಂಪು ಮಿಶ್ರಿತ ಕಂದು ಬಣ್ಣವಾಗಿರುವುದರಿಂದ ಕಾಸರನೆಲ್ಲು ಎಂಬ ಹೆಸರಿದೆ. ಅಕ್ಕಿಯೂ ಕೆಂಪಗೆ ದಪ್ಪಗೆ ಇದ್ದು ರುಚಿಯಾಗಿದ್ದು ಬಾಣಂತಿಯರಿಗೆ ಪೌಷ್ಟಿಕ ಆಹಾರವಾಗಿದೆ.

ಮುಳ್ಳು ಬತ್ತ : 4 ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಜೂನ್-ಜುಲೈನಲ್ಲಿ ಬಿತ್ತನೆ ಮಾಡಬಹುದು. ಒಂದು ಎಕರೆಗೆ 35-40 ಸೇರು ಬತ್ತ ಬಿತ್ತನೆಗೆ ಬೇಕು. ಸಾಧಾರಣ ಎತ್ತರಕ್ಕೆ ಬೆಳೆಯುತ್ತದೆ. ಇದು ಹೆಚ್ಚು ಬೇಡಿಕೆಯಿರುವ ಬತ್ತ. ತುದಿಯಲ್ಲಿ ಮುಳ್ಳಿನ ಹಾಗೆ ಮೀಸೆ ಇರುವುದರಿಂದ ಇದಕ್ಕೆ ಮುಳ್ಳು ಬತ್ತ ಎಂದು ಹೆಸರು. ಎಕರೆಗೆ 20-25 ಕ್ವಿಂಟಾಲ್ ಇಳುವರಿ ಇರುತ್ತದೆ.

ಸಣ್ಣನೆಲ್ಲು : ಗಾತ್ರದಲ್ಲಿ ಸಣ್ಣದು. ಎಕರೆಗೆ 45 ಸೇರು ಬಿತ್ತನೆ ಬೀಜ ಬೇಕಾಗುತ್ತದೆ. ಜೂನ್-ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿದರೆ ಐದು ತಿಂಗಳಿಗೆ ಬೆಳೆ ಬರುತ್ತದೆ. 2-3 ಅಡಿ ಎತ್ತರ ಬೆಳೆಯುತ್ತದೆ. ಅಕ್ಕಿ ಗಟ್ಟಿಯಾಗಿದ್ದು, ಅನ್ನ ರುಚಿಯಾಗಿರುತ್ತದೆ. ಇದು ಮಂಡಕ್ಕಿಗೆ ಹೆಚ್ಚು ಉಪಯೋಗ ಎಕರೆಗೆ 15-20 ಕ್ವಿಂಟಾಲ್ ಇಳುವರಿ ನೀಡುತ್ತದೆ.

ಚಿಂತಪೂಲವೊಡ್ಲು : ಹುಣಿಸೆ ಹೂವಿನ ಬಣ್ಣ ಇರುವುದರಿಂದ ಇದಕ್ಕೆ ಈ ಹೆಸರು. ಜೂನ್-ಜುಲೈನಲ್ಲಿ ಬಿತ್ತಿದರೆ ನಾಲ್ಕು ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಎಕರೆಗೆ 40 ಸೇರು ಬಿತ್ತನೆ ಬೀಜಬೇಕು. 2-3 ಅಡಿ ಎತ್ತರ ಬೆಳೆಯುವ ಇದು ಎಕರೆಗೆ ಸು. 15-20 ಕ್ವಿಂಟಾಲ್ ಇಳುವರಿ ನೀಡುತ್ತದೆ. ತಿನ್ನಲು ತುಂಬ ರುಚಿಕರವಾಗಿರುತ್ತದೆ.

ತೋಕುವೊಡ್ಲು : ಇದರಲ್ಲಿ ತುದಿಯಲ್ಲಿ ಮೀಸೆ ಅಥವಾ ಮುಳ್ಳು ಇರುವ ಬಿಳಿ ಮತ್ತು ಕಪ್ಪು ಬಣ್ಣದ ತಳಿಗಳಿವೆ. ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿದರೆ ನಾಲ್ಕು ತಿಂಗಳಲ್ಲೇ ಕೊಯ್ಲಿಗೆ ಬರುತ್ತದೆ. ಎಕರೆಗೆ 30-40 ಸೇರು ಬಿತ್ತನೆ ಬೀಜ ಬೇಕು. ಒಂದು ಎಕರೆಗೆ ಸು. 15 ಕ್ವಿಂಟಾಲ್ ಇಳುವರಿ.

ಪಿಚ್ಚನೆಲ್ಲು : ಚೌಳು ಭೂಮಿಯಲ್ಲೇ ಬೆಳೆಯುವ ವಿಶೇಷ ತಳಿಯಿದು. ಆರಿದ್ರಾ ಮಳೆಗೆ ಬಿತ್ತನೆ ಮಾಡಿದರೆ ಸು. 150 ದಿನಗಳ ಅವಧಿಯಲ್ಲಿ ಕೊಯ್ಲಿಗೆ ಬರುವುದು. ಬಿತ್ತನೆಗೆ ಒಂದು ಎಕರೆಗೆ 40 ಸೇರು ಬತ್ತ ಬೇಕಾಗುತ್ತದೆ. 4-5 ಅಡಿ ಎತ್ತರವಿದ್ದು, ಬಿಳಿ ಕಂದು ಮಿಶ್ರಿತ ಬಣ್ಣ ಹೊಂದಿದೆ. ಒಂದು ಎಕರೆಗೆ ಸು. 20-25 ಕ್ವಿಂಟಾಲ್ ಇಳುವರಿ ನೀಡುತ್ತದೆ. ಇದು 5 ತಿಂಗಳು ಬೆಳೆ. ಜೂನ್-ಜುಲೈನಲ್ಲಿ ಎಕರೆಗೆ 40 ಸೇರು ಬಿತ್ತಿದರೆ 25-30 ಕ್ವಿಂಟಾಲ್ ಇಳುವರಿ ನೀಡುತ್ತದೆ. ಕರ್ನಾಟಕ, ಆಂಧ್ರದ ಗಡಿ ಭಾಗಗಳಲ್ಲಿ ಬಿಳಿಪಿಚ್ಚನೆಲ್ಲು ಬೆಳೆಯುವರು. ಅಕ್ಕಿ ಮೃದು, ತಿನ್ನಲು ರುಚಿ. ಬತ್ತದ ತುದಿಯಲ್ಲಿ ಬಾಲವಿದ್ದರೆ ತೋಕು ಪಿಚ್ಚನೆಲ್ಲು ಎನ್ನುವರು. ಕರ್ನಾಟಕದಲ್ಲಿ ಇದನ್ನೇ ಕೂರ್ಲು ಚನ್ನಂಗಿ ಎನ್ನುವರು.

ಚೌಳು ಚನ್ನಂಗಿ : ಚೌಳು ಭೂಮಿಯಲ್ಲೇ ಬೆಳೆಯುವ ಧಾನ್ಯ. ತೆಲುಗು ಪ್ರಭಾವವಿರುವ ಪ್ರದೇಶದಲ್ಲಿ ಇದನ್ನೇ ಪಿಚ್ಚೊಡ್ಲು ಎನ್ನುವರು. ಕೊಟ್ಟಿಗೆ ಗೊಬ್ಬರದಿಂದಲೇ ಚೆನ್ನಾಗಿ ಬೆಳೆಯುವುದು. ಬತ್ತ ಮತ್ತು ಹುಲ್ಲಿಗಾಗಿ ಬೆಳೆಯುವರು. ಇದರ ಕಾಂಡ ಜೋಳದ ದಂಟಿನಂತಿರುತ್ತದೆ. ಮೂರೂವರೆ ತಿಂಗಳ ಅವಧಿಯ ಬೆಳೆ. ಒಂದು ಎಕರೆಗೆ 10-15 ಕ್ವಿಂಟಾಲ್ ಇಳುವರಿ ಕೊಡುತ್ತದೆ. ಅಕ್ಕಿ ಹೆಚ್ಚು ಮೃದುವಾಗಿದ್ದು ಅನ್ನಕ್ಕಿಂತ ರೊಟ್ಟಿ, ದೋಸೆ, ಇಡ್ಲಿ, ಕಜ್ಜಾಯಕ್ಕೆ ಬಳಸುತ್ತಿದ್ದರು. ಎಕರೆಯೊಂದಕ್ಕೆ 5-6 ಗಾಡಿ ಹುಲ್ಲು ಸಿಗುತ್ತದೆ.

ಭೂಮಿಸಿದ್ಧತೆ ಮತ್ತು ಬಿತ್ತನೆ : ಹಿಂಗಾರು ಬೆಳೆ ಕಟಾವು ಮಾಡಿದ ಮೇಲೆ ಗದ್ದೆಗೆ ನೀರು ಹಾಯಿಸಿ ಉತ್ತು ಹದಮಾಡಿ, 8-10 ಗಾಡಿ ಕೊಟ್ಟಿಗೆ ಗೊಬ್ಬರ ಹಾಕಿ ಮತ್ತೆರಡು ಬಾರಿ ನೇಗಿಲಿನಿಂದ ಉಳುಮೆ ಮಾಡಿ ಅನಂತರ ಕುಂಟೆಹೊಡೆದು ನೀರು ಹಾಯಿಸಿ 25-30 ದಿನದ ಪೈರನ್ನು ನಾಟಿಮಾಡುತ್ತಾರೆ.

ಚೌಳು ಭೂಮಿಯಲ್ಲಿ ಬೆಳೆಯುವ ಇತರ ಬೆಳೆಗಳು : ರಾಗಿ, ಕೊರಲು, ಆರಕ, ತರಕಾರಿಗಳನ್ನೂ ಚೌಳು ನೆಲದಲ್ಲಿ ಬೆಳೆಯುವುದುಂಟು. ಕುರುಬ ರಾಗಿ, ಹೊಂಬಾಳೆ ರಾಗಿಗಳು ಈ ನೆಲಕ್ಕೆ ಒಗ್ಗುವಂಥವು. ಹೊಂಬಾಳೆ ರಾಗಿಗೆ ಚೌಳು ನಿರೋಧಕ ಶಕ್ತಿಯಿದೆ. ಇದರ ತೆನೆ ಹೊಂಬಾಳೆಯಂತಿರುತ್ತದೆ. ಐದು ತಿಂಗಳ ಬೆಳೆ; ಎಕರೆಗೆ 15 ಕ್ವಿಂಟಾಲ್ ಇಳುವರಿ. ಐದು ಅಡಿ ಎತ್ತರವಿದ್ದು ಮೂರು ಗಾಡಿ ಹುಲ್ಲು ನೀಡುತ್ತದೆ. ಕುರುಬ ರಾಗಿಯ ಅವಧಿ 120 ದಿವಸಗಳು, ಇದಕ್ಕೆ ರೋಗ ನಿರೋಧಕ ಶಕ್ತಿಯಿದೆ. ಇದರ ಹುಲ್ಲು ಮತ್ತು ಕಾಳಿನಲ್ಲಿ ಔಷಧೀಯ ಗುಣಗಳಿದ್ದು ಜಾನುವಾರುಗಳಿಗೆ ಕಾಯಿಲೆ ಬಂದಾಗ ಗುಣಪಡಿಸಲು ಬಳಸುತ್ತಾರೆ. ಇದರ ಮುದ್ದೆ ಜೇನುಮೇಣದಂತೆ ಇರುತ್ತದೆ. ಅದೇ ನೆಲದಲ್ಲಿ ಬೆಳೆದ ಉತ್ತಮ ಬಿತ್ತನೆ ಬೀಜಗಳನ್ನು ಮುಂದಿನ ಬೆಳೆಗೆ ಉಪಯೋಗಿಸುವರು. ಇನ್ನಾವುದೇ ಬಿತ್ತನೆ ಈ ನೆಲಕ್ಕೆ ಯೋಗ್ಯವಲ್ಲ.

ಬೀಟ್‌ರೂಟ್ ಮತ್ತಿತರ ಗೆಡ್ಡೆ ತರಕಾರಿಗಳನ್ನು ಬಸಿಗಾಲುವೆಗಳ ಮೂಲಕ ನೀರು ಹಾಯಿಸಿ ಬೆಳೆಯುವುದುಂಟು.

ಚೌಳುಭೂಮಿ ನಿರುಪಯುಕ್ತ ಎಂದು ಬಿಡದೆ ಆ ನೆಲಕ್ಕೆ ಹೊಂದಿಕೆಯಾಗುವ ಬೆಳೆಗಳನ್ನು ಯೋಗ್ಯರೀತಿಯಲ್ಲಿ ಬಿತ್ತಿ ಇಳುವರಿ ಪಡೆಯುವಲ್ಲಿ ರೈತ ಸಫಲನಾಗಿದ್ದಾನೆ.

ಸಹಾಯಕ ಗ್ರಂಥ :

ಚೌಳು ನೆಲದ ಬಂಗಾರ, ಮಲ್ಲಿಕಾರ್ಜುನ ಹೊಸಪಾಳ್ಯ ಶಾಂತಕುಮಾರ. ಸಿ. ಜಯರಾಂ. ಸಿ., ಧಾನ್ಯ ತೆನೆ, ಸದಾಶಿವನಗರ, ತುಮಕೂರು, 2010.

ಎಸ್.ಜಿ.ವಿ.

ಜಂಬೀರ ಫಲದ ಮರಗಳು ನಿಂಬೆ ಜಾತಿಗೆ ಸೇರಿದ ಸಸ್ಯಗಳ ಗುಂಪು. ಈ ಗುಂಪಿಗೆ ಕಿತ್ತಳೆ, ಗ್ರೇಪ್ ಹಣ್ಣು, ಮಾದಲ, ಮೋಸಂಬಿ, ಚಕೋತ, ನಿಂಬೆ, ಹೇರಿಳೆ ಇತ್ಯಾದಿ ಹಣ್ಣುಗಳು ಸೇರಿವೆ. ರೂಟೇಸೀ ಕುಟುಂಬಕ್ಕೆ ಸೇರಿದಂಥವು. ಈ ಮರಗಳು ಉಷ್ಣ ಹಾಗೂ ಸಮಶೀತೋಷ್ಣ ವಲಯದಲ್ಲಿ ಕೃಷಿಯಲ್ಲಿವೆ.ಸಿಟ್ರಸ್ ಇಂಡಿಕ, ಸಿಟ್ರಸ್ ಲ್ಯಾಟಿಪಸ್ ಮತ್ತು ಸಿಟ್ರಸ್ ಹಿಸ್ಟ್ರಿಕ್ಸ್ ಎಂಬ ಮೂರು ಪ್ರಭೇದಗಳನ್ನು ಬಿಟ್ಟು ಉಳಿದ 13 ಪ್ರಭೇದಗಳು ಕಂಡುಬರುತ್ತವೆ. ಈ ಗಿಡಗಳಲ್ಲಿ ಕೆಲವು ವ್ಯತ್ಯಾಸಗಳಿದ್ದರೂ ಕೆಲವು ಸಮಾನ ಲಕ್ಷಣಗಳಿವೆ. ಜಂಬೀರ ಜಾತಿಗೆ ಸೇರಿದ ಸಸ್ಯಗಳಿಗೆ ಮುಳ್ಳುಗಳುಂಟು. ಇವು ಪೊದೆ ಅಥವಾ ಮರಗಳಾಗಿ ಬೆಳೆಯುವುವು. ಎಲೆಗಳು ಸಂಯುಕ್ತ ಮಾದರಿಯ

ಚಿಕ್ಕಪತ್ರಗಳಾಗಿದ್ದು ತೊಟ್ಟಿನ ಅಕ್ಕಪಕ್ಕಗಳಲ್ಲಿ ರೆಕ್ಕೆಗಳಿರುತ್ತವೆ. ವಿಶೇಷವೆಂದರೆ ಮಾದಳ ಮತ್ತು ಗ್ರೇಪ್ ಎಲೆಗಳಿಗೆ ರೆಕ್ಕೆಗಳಿರುವುದಿಲ್ಲ. ಈ ಜಾತಿಯ ಎಲೆಗಳಲ್ಲಿ ತೈಲ ಗ್ರಂಥಿಗಳಿದ್ದು ವಿಶಿಷ್ಟ ವಾಸನೆಯನ್ನು ಕೊಡುತ್ತವೆ. ಹೂಗಳು ಕೆನೆಬಣ್ಣ ಅಥವಾ ಬಿಳಿಬಣ್ಣದವಾಗಿದ್ದು ಹೂಗೊಂಚಲು ಮಧ್ಯಾರಂಭಿಯಾಗಿ ಸಮಾವೇಶಗೊಳ್ಳುತ್ತದೆ. ಜಂಬೀರ ಫಲಗಳಿಗೆ ಇರುವ ವೈಜ್ಞಾನಿಕ ಹೆಸರು ಎಸ್ಪರಿಯಮ್. ಹಣ್ಣಿನಲ್ಲೂ ಸಮಾನ ಗುಣ ಲಕ್ಷಣಗಳಿವೆ. ಸಾಮಾನ್ಯವಾಗಿ ಮೇಲ್ಭಾಗದ ಸಿಪ್ಪೆ ದಪ್ಪ ಮತ್ತು ಒರಟು. ಒಳಪದರು ತೆಳು ಹಾಗೂ ಬಿಳಿ ಬಣ್ಣದ್ದು. ತೊಳೆಗಳನ್ನು ಬೇರ್ಪಡಿಸುವ ತೆಳು ಪೊರೆಯಂತಹ ಒಳ ಸಿಪ್ಪೆಯುಳ್ಳ ಹಲವು ಕೋಣೆಗಳಿರುತ್ತವೆ. ಈ ಕೋಣೆಗಳೊಳಗೆ ಸಾಕಷ್ಟು ರಸಪೂರಿತ ಕುಸುಮಗಳು ಇರುತ್ತವೆ. ಜಂಬೀರ ಫಲಗಳಲ್ಲಿ ಸಿ ಜೀವಸತ್ವ ಅಧಿಕವಾಗಿರುವುದರಿಂದ ಇವು ಅತಿ ಉಪಯುಕ್ತ. ಸಿಪ್ಪೆಯಿಂದ ತೈಲವನ್ನು ಪಡೆದು ವಿವಿಧ ಆಹಾರ ಪದಾರ್ಥಗಳ ರುಚಿ ಮತ್ತು ವಾಸನೆಗೆ ಉಪಯೋಗಿಸುತ್ತಾರೆ. ಜಾಮ್, ಜೆಲ್ಲಿ, ಉಪ್ಪಿನಕಾಯಿ, ಪಾನೀಯಗಳ ತಯಾರಿಕೆಯಲ್ಲಿ ಇವುಗಳ ಬಳಕೆ ಹೆಚ್ಚು. ಅನೇಕ ಔಷಧೀಯ ಗುಣಗಳೂ ಈ ಹಣ್ಣುಗಳಲ್ಲಿವೆ.

ಎ.ಬಿ.ಪಿ.

ಜಂಬುನೇರಳೆ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ ಜಂಬು ನೇರಳೆಯ ಉಲ್ಲೇಖವಿದೆ. ಭಾರತದಂತೆ ಶ್ರೀಲಂಕಾ ಮತ್ತು ಮಲೇಷ್ಯಾ ಕೂಡ ಈ ಹಣ್ಣಿನ ತವರೂರು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ವಿಶ್ವದಲ್ಲೇ ಅತಿ ಹೆಚ್ಚು ರೋಗ ನಿರೋಧಕ ಔಷಧೀಯ ಗುಣ ಹೊಂದಿರುವ ಹಣ್ಣು ಎಂದರೆ ಜಂಬು ನೇರಳೆ. ಇದು ಮಿರ್ಟೇಸಿ ಕುಟುಂಬಕ್ಕೆ ಸೇರಿದ ಬಹುದೊಡ್ಡ ಗಾತ್ರದ ನಿತ್ಯ ಹಸುರಿನ ಎತ್ತರದ ಮರ. ಸುಮಾರು 50 ಅಡಿಯಿಂದ 100 ಅಡಿ ಅಂದರೆ 30 ಮೀಟರ್ ಎತ್ತರಕ್ಕೆ ಬೆಳೆಯಬಲ್ಲದು.



ಜಂಬೂಲ್, ಜಾಪ್ ಪ್ಲಾಮ್, ಪೋರ್ಚುಗೀಸ್ ಪಾಮ್, ಜಂಬೋಲನ್ ಪಾಮ್, ಬಾಕ್‌ಪ್ಲಾಮ್ ಜಮ್‌ಬ್ಲಾಗ್ ನೆರೆಡು ಪಂಡು, ನೇರಳೆಹಣ್ಣು, ಜಾಮುನ್, ಜಾವ್‌ಕಲೋಜಾವ್ ಎಂದೂ ಕರೆಯುತ್ತಾರೆ. ಹೀಗೆ ವಿವಿಧ ಹೆಸರಿನ ಜಂಬು ನೇರಳೆ ಯು.ಎಸ್.ಎ. ಫ್ಲೋರಿಡಾ, ಆಫ್‌ಘಾನಿಸ್ಥಾನ, ಮ್ಯೆನಮಾರ್, ಫಿಲಿಫೈನ್ಸ್, ಇಂಡೋನೇಷ್ಯಾ, ಪಾಕಿಸ್ಥಾನ, ನೇಪಾಳ, ಬಾಂಗ್ಲಾ, ಬ್ರಜಿಲ್, ಟೊಬಾಗೋ, ಟ್ರಿನಿಡಾಡ್ ಮುಂತಾದ ದೇಶಗಳಲ್ಲಿ ಕಂಡುಬರುತ್ತದೆ. ಮರ ತುಂಬಾ ಗಟ್ಟಿಯಾಗಿರುವುದರಿಂದ ಮನೆ ಕಟ್ಟಲು ಮತ್ತು ಪೀಠೋಪಕರಣಗಳ ತಯಾರಿಕೆಯಲ್ಲಿ, ವಿಶೇಷವಾಗಿ ರೈಲ್ವೇ ವಿಭಾಗದವರು ಹೆಚ್ಚಾಗಿ ಬಳಸುತ್ತಾರೆ.

ಬಿತ್ತನೆ : ಜಂಬುನೇರಳೆ ಹಳ್ಳಕೊಳ್ಳ, ಕೊರಕಲು, ಇಳಿಜಾರು, ಕಣಿವೆ, ಬೆಟ್ಟ ಗುಡ್ಡ, ಕಾಡುಗಳಲ್ಲಿ, ಹೊಲ - ಗದ್ದೆಗಳ ಬದುಗಳಲ್ಲಿ ಎಲ್ಲೆಂದರಲ್ಲಿ ಬೆಳೆಯುತ್ತದೆ. ಸಾಮಾನ್ಯವಾಗಿ ಪಕ್ಷಿ-ಪ್ರಾಣಿಗಳು ಹಣ್ಣು ತಿಂದು ಬೀಜವನ್ನು ಪ್ರಸರಣ ಮಾಡುತ್ತವೆ. ಇದರಿಂದ ಸಸಿ ಹುಟ್ಟಿ ಸಹಜವಾಗಿ ಬೆಳೆದು ಹಣ್ಣು ಬಿಡುವುದು ಒಂದು ವಿಧ. ಕುಷ್ಕಿ ತೋಟಗಾರಿಕೆಯಲ್ಲಿ ಬೀಜಗಳನ್ನು ಸುಮಾರು 3-4 ಅಡಿ ತಗ್ಗು ಪಾತಿ ಅಥವಾ ಏರುಪಾತಿ ಮಾಡಿ ನೆಟ್ಟು ಬೆಳೆಸಲಾಗುವುದು. ಕ್ರಮಬದ್ಧವಾಗಿ ಮರಳು, ಮಣ್ಣು, ಫಲವತ್ತಾದ ಗೊಬ್ಬರ ಮಿಶ್ರಣ ಮಾಡಿ ಚೀಲ ಅಥವಾ ಪಾಟ್‌ಗಳಲ್ಲಿ ತುಂಬಿ ಹದವರಿತು ನೀರುಣಿಸಿ ಯುಕ್ತ ಕಾಲದಲ್ಲಿ ಬೀಜ ಬಿತ್ತನೆ ಮಾಡಿ ಇತ್ತೀಚೆಗೆ ಬೆಳೆಸಲಾಗುತ್ತದೆ. ಸಣ್ಣ ಸಸಿಯಾಗಿದ್ದಾಗ ಬಿಸಿಲಿನಿಂದ ರಕ್ಷಣೆ ಮಾಡಬೇಕು. ಬೀಜ ಮೊಳೆತು ಎಲೆ ಕಾಣಿಸಿಕೊಂಡು ಸ್ವಲ್ಪ ಬೆಳೆದ ಬಳಿಕ ಸಸಿಗಳನ್ನು ಮೊದಲೇ ಸಿದ್ಧಪಡಿಸಿದ ಜಾಗಗಳಲ್ಲಿ ನೆಟ್ಟು, ಕೈ ನೀರುಣಿಸಿ, ದನ-ಕರು, ಮೇಕೆ ಮುಂತಾದ ಪ್ರಾಣಿಗಳ ಬಾಯಿಗೆ ಸಿಗದಂತೆ ಆರೈಕೆ ಮಾಡಬೇಕು.

ನೀರು : ಕುಷ್ಕಿ ಭೂಮಿಗೆ ಯೋಗ್ಯ ಬೆಳೆ ಇದಾಗಿರುವುದರಿಂದ ಸದಾ ನೀರಿನ ಆವಶ್ಯಕತೆ ಇರುವುದಿಲ್ಲ. ಮಳೆಗಾಲದಲ್ಲಿ ಮಳೆ ನೀರಿನಿಂದ ಬೆಳೆಯುತ್ತದೆ. ಆದರೆ ಬೇಸಗೆಯಲ್ಲಿ 20-30 ದಿನಗಳಿಗೊಮ್ಮೆ ನೀರಾಯಿಸಬೇಕಾಗುತ್ತದೆ. ಕಾಂಡ ಸ್ವಲ್ಪ ಬಲಿತು ಗಾಳಿ ಮಳೆಗೆ ತಡೆಯಬಲ್ಲ ಶಕ್ತಿ ಬಂದ ಮೇಲೆ ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಇದರ ಬೇರುಗಳು ತುಂಬಾ ಆಳವಾಗಿರುವುದರಿಂದ ಭೂಮಿಯ ತೇವಾಂಶ ಮತ್ತು ಅಂತರ್‌ಜಲವನ್ನು ಹೀರಿಕೊಂಡು ಸ್ವತಂತ್ರವಾಗಿ ಬೆಳೆಯುತ್ತದೆ.

ಬೆಳೆಸುವ ವಿಧಾನ : ಕಾಡು-ಮೇಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುವುದು ಒಂದು ವಿಧವಾದರೆ ಕುಷ್ಕಿ ತೋಟಗಾರರು ಸ್ವಪ್ರಯತ್ನದಿಂದ ಸುಮಾರು 15 ರಿಂದ 20 ಅಡಿ ಅಂತರಗಳಲ್ಲಿ ಸಸಿಗಳನ್ನು ನೆಟ್ಟು ಬೆಳೆಸುತ್ತಾರೆ. ಸುಮಾರು 10 - 15 ವರ್ಷಗಳು ಬೆಳೆದ ಅನಂತರ ಫಲ ಕಾಣಿಸಿಕೊಳ್ಳುತ್ತವೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಸಮೃದ್ಧ ಎಲೆ - ಹೂ - ಹಣ್ಣುಗಳಿಂದ ಮರದ ಸೌಂದರ್ಯ ನೋಡಲು ಸುಂದರವಾಗಿರುತ್ತದೆ. ಹಸುರು ಕಾಯಿಗಳು ಕ್ರಮೇಣ ಬಲಿತು ಕೆಂಪು ಮಿಶ್ರಿತ ಕಪ್ಪು ದೋರುಗಾಯಿಯಾಗಿ ಈರುಳ್ಳಿ ಸಿಪ್ಪೆಯ ಬಣ್ಣದಿಂದ ರೆಂಬೆ - ಕೊಂಬೆಗಳಲ್ಲಿ ಗೊಂಚಲು ಗೊಂಚಲುಗಳಾಗಿ ಬಾಗಿ ಒಂದೆರಡು ದಿನಗಳಲ್ಲಿ ಕಪ್ಪು ನೀಲಿ ಬಣ್ಣದ ಮಿರಿ ಮಿರಿ ಮಿಂಚುವ ಗೋಲಾಕಾರದ ಹೆಬ್ಬೆಟ್ಟು ಗಾತ್ರದ ಹಣ್ಣುಗಳು ಸಿದ್ಧವಾಗಿರುತ್ತದೆ. ಹುಳಿ ಮಿಶ್ರಿತ ಹಣ್ಣನ್ನು ಉಪ್ಪು ಕರಗಿಸಿದ ನೀರಿನಲ್ಲಿ ತೊಳೆದು ತಿಂದರೆ ಒಳಿತು. ಇದು ತುಂಬಾ ಪೌಷ್ಟಿಕವಾಗಿದ್ದು ಅನೇಕ ಔಷಧೀಯ ಗುಣಗಳನ್ನು ಹೊಂದಿರುತ್ತದೆ.

ಗೊಬ್ಬರ : ಸಾಮಾನ್ಯವಾಗಿ ಎಲ್ಲೆಂದರಲ್ಲಿ ಇದು ಬೆಳೆಯುವುದರಿಂದ ಸ್ವಾಭಾವಿಕವಾಗಿಯೇ ಭೂಮಿಯಲ್ಲಿ ಸಿಗುವ

ಸಾರವನ್ನು ಹೀರಿ ಬೆಳೆಯುತ್ತದೆ. ಕಾಡು - ಹಳ್ಳ, ಹೊಲ - ಗದ್ದೆಗಳ ಬದು, ರಸ್ತೆ ಬದಿಗಳ ಸಸಿಗಳು ಎಲೆ, ಕಡ್ಡಿ - ಕಸದಿಂದ, ದನಕರು - ಕುರಿ - ಮೇಕೆಗಳ ಗೊಬ್ಬರದಿಂದ ಫಲವತ್ತತೆ ಪಡೆದು ಬೆಳೆಯುತ್ತವೆ. ಸಾವಯವ ಗೊಬ್ಬರವನ್ನು ಕೊಟ್ಟರೆ ಹೆಚ್ಚು ಫಲವತ್ತಾಗಿ ಬೆಳೆದು ಉತ್ತಮ ಫಲವನ್ನು ಕೊಡುತ್ತವೆ.

ಉಪಯೋಗಗಳು : ಜಂಬುನೇರಳೆಯಲ್ಲಿ ವೈದ್ಯಕೀಯ ಪ್ರಯೋಜನಗಳು ಸಾಕಷ್ಟಿವೆ. ಪೈಲ್ಸ್‌ಗೆ ಹಣ್ಣಿನ ಬಳಕೆಯಿಂದ ಉಪಚರಿಸಬಹುದು. ರೋಗಿಗಳಿಗೆ ಹಣ್ಣು ಮತ್ತು ಬೀಜ ಅತ್ಯುಪಯುಕ್ತ. ಮಧುಮೇಹ ಅತಿಸಾರ ಆಮಶಂಕೆಗೆ ಹಣ್ಣು ಮತ್ತು ಹಣ್ಣಿನ ಶರಬತ್ತು, ಎಲೆ - ರಸ - ಬೇರುಗಳ ಉಪಯೋಗವಿದೆ. ಲಿವರ್ ಸಮಸ್ಯೆಗಳಿಗೆ ಅತ್ಯುಪಯುಕ್ತವಾದದ್ದು. ಹೆಂಗಸರ ಬಂಜೆತನ ನಿವಾರಣೆಗೆ ಉಪಯೋಗಕಾರಿಯಾಗಿದೆ. ಮೇಧೋಜೀರಕ ಗ್ರಂಥಿಯ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ. ಬೀಜವನ್ನು ಒಣಗಿಸಿ ಪುಡಿಮಾಡಿ, ಕಷಾಯ ಮಾಡಿ ಕುಡಿಯುವುದರಿಂದ ದೇಹದಲ್ಲಿ ಸಕ್ಕರೆ ಪ್ರಮಾಣ ಕಡಿಮೆಯಾಗುತ್ತದೆ. ಹಣ್ಣಿನ ರಸ ಮತ್ತು ಬೀಜಗಳಲ್ಲಿ ಇನ್ಸುಲಿನ್ ಹೆಚ್ಚಿಸುವ ಗುಣವಿರುವುದರಿಂದ ಮೇಧೋಜಿರಕ ಗ್ರಂಥಿ ಸರಿಯಾಗಿ ಕೆಲಸ ಮಾಡಲು ಸಹಕಾರಿಯಾಗುತ್ತದೆ.

ಬಳಸುವ ವಿಧಾನ : ಜಂಬು ನೇರಳೆ ಬೀಜಗಳನ್ನು ಒಣಗಿಸಿ ಪುಡಿ ಮಾಡಿ ಪ್ರತಿದಿನ 3 ರಿಂದ 4 ಬಾರಿ ನೀರಿನ ಜೊತೆ ಬೆರಸಿ ಕುಡಿದರೆ ಮೂತ್ರದಲ್ಲಿಯ ಸಿಹಿ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಇದರ ತೊಗಟೆಯನ್ನು ಸುಟ್ಟು ಪುಡಿ ಮಾಡಿ ನೀರಿನ ಜೊತೆ ಬೆರಸಿ, ಶೋಧಿಸಿ ಖಾಲಿ ಹೊಟ್ಟೆಗೆ ಬೆಳಿಗ್ಗೆ - ಮಧ್ಯಾಹ್ನ - ಸಂಜೆ ಮಧುಮೇಹ ರೋಗಿಗಳು ಉಪಯೋಗಿಸಿದಲ್ಲಿ ಉತ್ತಮ ಪರಿಣಾಮವನ್ನುಂಟು ಮಾಡುತ್ತದೆ. ಪಾಲಿಯೂರಿಯ ಅಂದರೆ ಶರೀರದಲ್ಲಿ ಹೆಚ್ಚು ಮೂತ್ರ ಉತ್ಪಾದನೆಯಾಗುವವರಿಗೆ ಬೀಜಗಳನ್ನು ಒಣಗಿಸಿ ಪುಡಿಮಾಡಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಒಂದು ಗ್ರಾಂನಂತೆ ನೀರಿನೊಂದಿಗೆ ನೀಡಿದರೆ ರೋಗ ನಿಯಂತ್ರಣಕ್ಕೆ ಬರುತ್ತದೆ. ಪುರಾತನ ಭಾರತದ ವೈದ್ಯ ಚರಕನು ಯಕೃತ್ತಿನ ಸಮಸ್ಯೆಗಳಿಗೆ ಈ ಹಣ್ಣಿನ ರಸವನ್ನು ಚಿಕಿತ್ಸೆಯಾಗಿ ಕೊಡುತ್ತಿದ್ದನು. ಹಣ್ಣಿನ ರಸವು ದೇಹದಲ್ಲಿ ಜೀರ್ಣ ಶಕ್ತಿಗೆ ಬೇಕಾದ ಎಲ್ಲ ಅಂಶಗಳನ್ನು ಒದಗಿಸುತ್ತದೆ ; ಯಕೃತ್ತಿಗೆ ಸಹಕಾರಿಯಾಗಿ ಕೆಲಸ ಮಾಡುತ್ತದೆ.

ಅತಿಭೇದಿ ಮತ್ತು ಆಮಶಂಕೆ ಈ ರೀತಿಯ ರೋಗಿಗಳಿಗೆ ಈ ಬೀಜದ ಪುಡಿ, ಎಲೆಯ ಕಷಾಯ, ಹಣ್ಣಿನ ರಸ, ತೊಗಟೆಯ ರಸ ಇವುಗಳನ್ನು ಕೊಡುವುದರಿಂದ ಪರಿಣಾಮಕಾರಿ. ಬೀಜದ ಪುಡಿಯನ್ನು 5 ರಿಂದ 10 ಗ್ರಾಂ ನಷ್ಟನ್ನು ಬೆಣ್ಣೆ ಅಥವಾ ಹಾಲಿಗೆ ಬೆರಸಿ ಸೇವಿಸಬೇಕು. ತಾಜಾ ಎಲೆ ಕಷಾಯವನ್ನು ಜೇನು ತುಪ್ಪದೊಂದಿಗೆ ಕುಡಿಯಬೇಕು. ಗರ್ಭಪಾತವಾಗುವ ಮತ್ತು ಬಂಜೆತನದ ಹೆಂಗಸರಿಗೆ ಈ ಹಣ್ಣಿನ ಮತ್ತು ತಾಜಾ ಎಲೆಗಳ ಬಳಕೆಯಿಂದ ಪರಿಣಾಮಕಾರಿ ಚಿಕಿತ್ಸೆ ದೊರೆಯುತ್ತದೆ. ಅಂದರೆ ತಾಜಾ ಎಲೆಗಳನ್ನು ಚೆನ್ನಾಗಿ ನೀರಿನಲ್ಲಿ ಕುದಿಸಿ, ರಸ ತೆಗೆದು ಹಾಲು ಅಥವಾ ಜೇನು ಅಥವಾ ಬೆಣ್ಣೆಯೊಂದಿಗೆ ಸೇವಿಸಬೇಕು. ಎಲೆಗಳಲ್ಲಿ ವಿಟಮಿನ್ 'ಈ' ಕೂಡ ಸಿಗುತ್ತದೆ.

ಕೆಮ್ಮು - ದಮ್ಮುಗಳಿಗೆ ನೇರಳೆ ರಾಮಬಾಣ. ಬೀಜದ ಪುಡಿಯನ್ನು ನೀರಿನೊಂದಿಗೆ ಸೇವಿಸಿದರೆ ಹೊಟ್ಟೆ ನೋವು ಮತ್ತು ಅಜೀರ್ಣ ನಿವಾರಣೆಯಾಗುತ್ತದೆ. ಗಾಯಗಳು ಬೇಗ ಒಣಗುತ್ತವೆ. ಹಲ್ಲು ಮತ್ತು ವಸಡಿಗಳ ಕಾಯಿಲೆಗಳಿಗೆ ಉತ್ತಮ ಗುಣಕಾರಿ. ಆರಂಭದಲ್ಲಿ ಬಳಸಿದಲ್ಲಿ ಕ್ಯಾನ್ಸರ್‌ನಂತಹ ತೊಂದರೆಗಳಿಂದಲೂ ಗುಣಕಾಣಬಹುದು. ದೇಹದ ಜೀವಕೋಶಗಳು ಹಾಳಾಗದಂತೆ ನೋಡಿಕೊಳ್ಳುತ್ತದೆ. ಗಂಟಲಿನ ತೊಂದರೆ ಇರುವವರು ಅತಿಯಾಗಿ ಸೇವಿಸಬಾರದು.

ಎಚ್.ಕೆ.ಎಂ.

ಜತ್ರೋಫಾ ಇದು 'ಯುಫೋರ್‌ಬಿಯೆಸೀ' ಕುಟುಂಬದ 'ಕ್ರೋಟೋನೊಯ್ದೆ' ವರ್ಗದ 'ಜೋನೇಸೀ' ಎಂಬ ಉಪವರ್ಗದಲ್ಲಿ ಗುರುತಿಸಲ್ಪಟ್ಟಿದೆ. ಬ್ರೆಜಿಲ್‌ದೇಶ ಈ ಸಸ್ಯದ ಮೂಲ ಸ್ಥಳ. ಜೈವಿಕ ಇಂಧನವಾಗಿ ಜತ್ರೋಫಾವನ್ನು ಬಳಸುವ ಸಾಧ್ಯತೆಗಳಿರುವುದರಿಂದ ಇಂದು ವಿಶ್ವದ ಬಹುತೇಕ ಭಾಗಗಳಲ್ಲಿ ಈ ಸಸ್ಯವನ್ನು ಕೃಷಿ ಮಾಡಲಾಗುತ್ತಿದೆ.

ಸಸ್ಯ ವಿವರ : ಸುಮಾರು 15 ಅಡಿಗಳಷ್ಟು ಎತ್ತರ ಬೆಳೆಯಬಲ್ಲ ಜತ್ರೋಫಾ ತೀರಾ ಚಿಕ್ಕ ಪೊದೆ ಗಿಡವೂ ಅಲ್ಲ, ದೊಡ್ಡ ಗಾತ್ರದ ಮರವೂ ಅಲ್ಲ. ಇದರ ಸಣ್ಣ ಸಣ್ಣ ರೆಂಬೆಗಳಲ್ಲಿ ಅಂಟು ದ್ರವವಿರುತ್ತದೆ. ಎಲೆಯು ಪಂಚಭುಜಾಕೃತಿಯ ಆಕಾರದಲ್ಲಿದ್ದು ಕೋನಗಳ ತುದಿಯಲ್ಲಿ ಚೂಪಾಗಿರುತ್ತದೆ. ಅಲ್ಲದೆ ಉದ್ದವಾದ ನೇರ ತೊಟ್ಟನ್ನು ಹೊಂದಿರುತ್ತದೆ. ಇದರ ಹೂಗಳು ಹಸುರು ಮಿಶ್ರ ಬಿಳಿ ಬಣ್ಣದಲ್ಲಿರುತ್ತವೆ. ಹೂಗಳಲ್ಲಿ ಸಾಕಷ್ಟು ಮಕರಂದವಿರುವುದರಿಂದ, ದುಂಬಿಗಳಿಂದ ಪರಾಗಸ್ಪರ್ಶವಾದ ಅನಂತರ ಕಾಯಿಗಳು ಕಚ್ಚಿ ನಿಧಾನವಾಗಿ ಮಾಗಿ ಹಳದಿ ಬಣ್ಣಕ್ಕೆ ಮಾರ್ಪಡುತ್ತವೆ. ಇವುಗಳ ಒಳಗೆ ಕಪ್ಪನೆಯ ಬೀಜಗಳಿದ್ದು, ಒಂದು ಸೆಂ.ಮೀ.ನಷ್ಟು ಉದ್ದ ಹಾಗೂ ದಪ್ಪವಿರುತ್ತವೆ.

ಕೃಷಿ : ಜತ್ರೋಫಾದ ಎಲೆಗಳನ್ನು ದನಕರುಗಳು ತಿನ್ನುವುದಿಲ್ಲ. ಯಾವುದೇ ಆರೈಕೆಯಿಲ್ಲದೆ ಹುಲುಸಾಗಿ ಬೆಳೆಯುವುದು. ಈ ಕಾರಣಗಳಿಂದ ಇದನ್ನು ಹಿಂದೆ ಬೇಲಿಗಿಡವಾಗಿ ಮಾತ್ರ ಬೆಳೆಸುತ್ತಿದ್ದರು. ಆದರೆ ಇಂದು ಜೈವಿಕ ಇಂಧನದಲ್ಲಿ ಈ ಸಸ್ಯದ ಬಳಕೆ ಇರುವುದರಿಂದ ಕೃಷಿ ಮಾಡುವ ಅಗತ್ಯವಿದೆ.

ಜತ್ರೋಫಾ ಕೃಷಿಯನ್ನು ವಿಧಾನಗಳಲ್ಲಿ ಕೈಗೊಳ್ಳಬಹುದು. ಮೊದಲನೆಯದಾಗಿ ಬೀಜಗಳಿಂದ ಸಸಿ ಬೆಳೆಸಿ ನಾಟಿ ಮಾಡಿ ಗಿಡಗಳನ್ನು ಬೆಳೆಸುವುದು. ಆದರೆ ಈ ವಿಧಾನಕ್ಕೆ ಹೆಚ್ಚು ಸಮಯದ ಅಗತ್ಯವಿದೆ. ಎರಡನೆಯದಾಗಿ ಗಿಡದ ಕಾಂಡಗಳನ್ನು ನೆಟ್ಟು ಬೆಳೆಸುವುದು. 20 ಸೆಂ.ಮೀ. ಉದ್ದದ ಕಾಂಡಗಳನ್ನು ನಾಟಿ ಮಾಡಬೇಕು. ಕಾಂಡಗಳು ಬೇಗನೆ ಬೇರು ಬಿಟ್ಟು ಬೆಳೆಯುತ್ತವೆ.

ಗಟ್ಟಿಯಾಗಿ ಬೇರು ಬಿಟ್ಟು ಹುಲುಸಾಗಿ ಬೆಳೆದ ಅನಂತರ ಗಿಡವು ತೀರಾ ಮೇಲಕ್ಕೆ ಹೋಗದಂತೆ ಮೇಲ್ಭಾಗವನ್ನು ಕತ್ತರಿಸಬೇಕು. ಇದರಿಂದ ಹಲವಾರು ರೆಂಬೆ ಕೊಂಬೆಗಳು ಮೂಡಿ ಹೆಚ್ಚು ಇಳುವರಿ ಪಡೆಯಲು ಸಾಧ್ಯವಾಗುತ್ತದೆ.

ಜತ್ರೋಫಾವನ್ನು ಪಾಳುಭೂಮಿ ಮತ್ತು ಬಂಜರು ಭೂಮಿಯಲ್ಲಿ ಬೆಳೆಸಬಹುದು. ಇದಕ್ಕೆ ಹೆಚ್ಚು ನೀರಿನ ಅಗತ್ಯವಿಲ್ಲ. ಸಾಧಾರಣ 300 ಮಿ.ಮೀ. ಮಳೆ ಬೀಳುವ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದು ಮಣ್ಣಿನಲ್ಲಿರುವ ಪೋಷಕಾಂಶಗಳನ್ನು ಹೀರಿಕೊಂಡು ಬೆಳೆಯುವ ಸಾಮರ್ಥ್ಯವನ್ನು ಹೊಂದಿದ್ದು ರಾಸಾಯನಿಕ ಗೊಬ್ಬರದ ಅವಶ್ಯಕತೆ ಇಲ್ಲ.

ನೆರಳು ಇರುವ ಕಡೆಯಲ್ಲಿ ಜತ್ರೋಫಾ ಸೊಂಪಾಗಿ ಬೆಳೆಯುವುದಿಲ್ಲ. ಜತ್ರೋಫಾ ಒಂದು ಬಗೆಯ ಕಳೆಗಿಡವಾಗಿರುವುದರಿಂದ ಇದಕ್ಕೆ ಯಾವುದೇ ಬಗೆಯ ರೋಗ, ಕೀಟಬಾಧೆಯಾಗಲೀ ಇರುವುದಿಲ್ಲ.

ಉಪಯೋಗ :ಜತ್ರೋಫಾ ಬೇಲಿಗಿಡವಾಗಿದ್ದು ದನಕರುಗಳಿಂದ ಬೆಳೆಗೆ ರಕ್ಷಣೆ ಒದಗಿಸುತ್ತದೆ. ಇದರಲ್ಲಿರುವ ವಿಷಕಾರಕ ರಾಸಾಯನಿಕಗಳು ಎಷ್ಟೋ ಬಗೆಯ ಕಾಯಿಲೆಗಳಿಗೆ ಔಷಧವಾಗಿವೆ. ಇದರ ಬೀಜದ ತೈಲವನ್ನು ಇಂದು ಜೈವಿಕ ಇಂಧನವಾಗಿ ಬಳಸಲು ಸಾಧ್ಯವಿರುವುದರಿಂದ ಪೆಟ್ರೋಲಿಯಂನ ಕೊರತೆಯನ್ನು ಈ ಮೂಲಕ ಸರಿದೂಗಿಸಲು ಸಾಧ್ಯ. ಅಲ್ಲದೆ ಇದನ್ನು ಮತ್ತೆ ಬೆಳೆಸಲು ಸಾಧ್ಯವಿರುವುದರಿಂದ ನವೀಕರಿಸಬಹುದಾದ ಇಂಧನ ಮೂಲವಾಗಿದೆ. ಜತ್ರೋಫಾ ತೈಲವನ್ನು ಸಾಬೂನಿನ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ವಿ.ಎಸ್.ಕೆ.

ಜಮಾಬಂದಿ ಪದ್ಧತಿ ಹಳೆ ಮೈಸೂರು ಪ್ರದೇಶದಲ್ಲಿ 'ಜಮಾಬಂದಿ' ನಡೆಸುವ ರೂಢಿ 1900ರಲ್ಲಿ ಪ್ರಾರಂಭವಾಯಿತು. 'ಜಮಾಬಂದಿ' ಅಥವಾ ವಾರ್ಷಿಕ ಕಂದಾಯ ನಿರ್ಧಾರದಲ್ಲಿ ಗ್ರಾಮದ ಹಾಗೂ ತಾಲ್ಲೂಕಿನ ನೋಂದಣಿಗಳ ಮತ್ತು ಲೆಕ್ಕಗಳ ವಿವರವಾದ ಪರಿಶೋಧನೆ ನಡೆಯುತ್ತದೆ. ಕಂದಾಯದ ಎಲ್ಲಾ ಬಾಬ್ತುಗಳನ್ನು ಸರಿಯಾಗಿ ನಿರ್ಧರಿಸಿ ಲೆಕ್ಕಕ್ಕೆ ಸೇರಿಸಲಾಗಿದೆಯೇ ಆರ್ಥಿಕ ಹಾಗೂ ಆಡಳಿತದ ಉದ್ದೇಶಗಳಿಗಾಗಿ ಗೊತ್ತುಪಡಿಸಿದ ಅಂಕಿ ಅಂಶಗಳನ್ನು ಸರಿಯಾಗಿ ಸಂಗ್ರಹಿಸಲಾಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಬೇಕು. ಇವೆಲ್ಲವನ್ನು ತಿಳಿದುಕೊಂಡು ಗ್ರಾಮ ಲೆಕ್ಕವನ್ನು ವಿವರವಾಗಿ ಪರಿಶೀಲಿಸುವುದು ಜಮಾಬಂದಿಯ ಉದ್ದೇಶವಾಗಿದೆ. ಗ್ರಾಮ ಲೆಕ್ಕಿಗರು ಸರಿಯಾಗಿ ಕಂದಾಯದ ಲೆಕ್ಕವನ್ನು ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡುವ ಅವಕಾಶವೂ ಜಮಾಬಂದಿಗೆ ದೊರೆಯುತ್ತದೆ. ರಾಜನಿಗೆ ಬರಬೇಕಾದ ರಾಜಸ್ವ ನಿಗದಿಪಡಿಸುವುದು ಬಹು ಹಿಂದಿನಿಂದಲೂ ನಡೆದು ಬಂದಿದೆ. ಅದೇ ಸರ್ಕಾರಕ್ಕೆ ಬರುವ ಜಮೀನುಗಳು ಪ್ರತಿ 30 ವರ್ಷಗಳಿಗೊಮ್ಮೆ ಪ್ರತಿಯೊಂದು ಜಮೀನನ್ನು ಅಳತೆ ಮಾಡಿಸಿ ಅದರ ಫಲವತ್ತತೆ, ಉತ್ಪತ್ತಿ, ಮಳೆ ಇತ್ಯಾದಿಗಳನ್ನು ಗಮನಿಸಿ 'ಆಕಾರಬಂದ್' (ನಿರ್ದಿಷ್ಟ ಜಮೀನಿನ ಉತ್ಪತ್ತಿ) ತಯಾರಿಸಿ ಅದರ ಆಧಾರದ ಮೇಲೆ ಭೂಕಂದಾಯ ನಿರ್ಧರಿಸುವರು.

ಪ್ರತಿಕಂದಾಯ ಸಾಲಿಗೂ ನಿಗದಿಯಾದ ಜಮೀನುಗಳ ಅಧಿಭೋಗದಾರರು ಭೂಕಂದಾಯ ಕೊಡಬೇಕಾಗುತ್ತದೆ. ಪ್ರತಿಜಮೀನಿನ ಅಧಿಭೋಗದಾರನು ಪ್ರಸ್ತುತ ಕಂದಾಯ ಸಾಲಿಗೆ ಕೊಡಬೇಕಾದ ಭೂಕಂದಾಯವೆಷ್ಟು ಸೆಸ್ಸುಗಳೆಷ್ಟು ಎಂಬುದನ್ನು ಜಿಲ್ಲಾಧಿಕಾರಿಗಳು ನಿರ್ಧರಿಸುವರು. ಜುಲೈ ಒಂದನೇ ತಾರೀಖಿನಿಂದ ಜೂನ್ 30ನೇ ತಾರೀಖಿನ ಅವಧಿಗೆ ಕಂದಾಯ ವರ್ಷವೆನ್ನುವರು. ಪ್ರತಿ ಅಧಿಭೋಗದಾರನ ಲೆಕ್ಕವನ್ನು ಜಿಲ್ಲಾಧಿಕಾರಿಗಳು ಅಥವಾ ಉಪವಿಭಾಗಾಧಿಕಾರಿಗಳು ದೃಢೀಕರಿಸಬೇಕಾಗುತ್ತದೆ. ಈ ರೀತಿ ಕಂದಾಯ ಸಾಲಿನ ಲೆಕ್ಕಗಳನ್ನು ದೃಢೀಕರಿಸುವ ಕಾರ್ಯವನ್ನೂ ವಿಶೇಷಾರ್ಥದಲ್ಲಿ 'ಹುಜೂರ್ ಜಮಾಬಂದಿ' ಎಂದು ಕರೆಯುತ್ತಾರೆ. ಹುಜೂರ್ ಜಮಾಬಂದಿಗೆ ಪೂರ್ವಭಾವಿಯಾಗಿ ಮಾಡುವುದೇ ತಾಲ್ಲೂಕು ಅಥವಾ 'ದಿತ್ತಂ ಜಮಾಬಂದಿ'. ಇದನ್ನು ಆಯಾ ತಾಲ್ಲೂಕಿನ ತಹಶೀಲ್ದಾರರು ನಡೆಸುತ್ತಾರೆ. ಹುಜೂರ್ ಜಮಾಬಂದಿ ಡಿಸೆಂಬರ್ ಅಂತ್ಯದ ವೇಳೆಗೆ ಮುಗಿಯಬೇಕಾಗುತ್ತದೆ. ಅಂದರೆ ದಿತ್ತಂ ಜಮಾಬಂದಿಯನ್ನು ಅದಕ್ಕೆ ಒಂದು ತಿಂಗಳು ಮುಂಚೆಯೇ ಮುಗಿಸಬೇಕು. ತಾಲ್ಲೂಕು ದಿತ್ತಂ ಜಮಾಬಂದಿಯಲ್ಲಿ ಕಳೆದ ಕಂದಾಯ ಸಾಲಿನ ಲೆಕ್ಕಗಳನ್ನು ಮುಕ್ತಾಯಗೊಳಿಸುವರು ಹಾಗೂ ಪ್ರಸಕ್ತ ಸಾಲಿನ ಕಂದಾಯ ಲೆಕ್ಕಗಳನ್ನು ಸಿದ್ಧಪಡಿಸುವರು. ಜಮಾಬಂದಿಯನ್ನು ಆಯಾ ಕಂದಾಯ ಆಡಳಿತ ಘಟಕದ ಕೇಂದ್ರಸ್ಥಾನದಲ್ಲಿ ಮಾಡಬೇಕೆಂಬ ನಿಯಮವಿದೆ.

ವಿ.ಕೆ.

ಜಲಚಕ್ರಗಳು ಕೇರಳದ ಹಿನ್ನೀರುಗಳಲ್ಲೂ ಹೆಚ್ಚು ಆಳದ ಗದ್ದೆಗಳಲ್ಲೂ ನೀರನ್ನು ಎತ್ತಿ ಹೊರ ಹಾಕಲು ಜಲ ಚಕ್ರಗಳನ್ನು ಬಳಸಲಾಗುತ್ತದೆ. ಗದ್ದೆಗಳಿಗೆ ನೀರು ಹಾಯಿಸುವುದಕ್ಕೂ ಇವನ್ನು ಬಳಸಬಹುದು. ಜಲಚಕ್ರಗಳನ್ನು ತಯಾರಿಸಲು ತೇಗ ಅಥವಾ ಆಂಜಿಲಿ ಎಂಬ ಮರಗಳನ್ನು ಬಳಸುತ್ತಾರೆ. ದಳಗಳಿಂದ (ಚಕ್ರದ ಹಲ್ಲುಗಳು / ಎಲೆಗಳು) ಕೂಡಿದ ವೃತ್ತಾಕಾರದ ಉಪಕರಣವಿದು. ದಳಗಳು ಚಕ್ರದ ಅಚ್ಚಿನ ಹೊರಗೆ ಚಾಚಿರುತ್ತವೆ. ಚಕ್ರಗಳನ್ನು ಬೇರೆ ಬೇರೆ ಗಾತ್ರಗಳಲ್ಲಿ ನಿರ್ಮಿಸುತ್ತಾರೆ. ಗಾತ್ರಕ್ಕೆ ಅನುಸಾರವಾಗಿ ದಳಗಳ ಸಂಖ್ಯೆ ಇರುತ್ತದೆ. ಗಾತ್ರವು ಹೆಚ್ಚಾದಂತೆ ದಳಗಳ ಸಂಖ್ಯೆ ಏರುತ್ತದೆ. ನಾಲ್ಕು ದಳಗಳ ಕಿರು ಚಕ್ರದಿಂದ ತೊಡಗಿ ಇಪ್ಪತ್ತನಾಲ್ಕು ದಳಗಳ ದೊಡ್ಡ ಚಕ್ರಗಳೂ ಇರುತ್ತವೆ. ದೊಡ್ಡ ಚಕ್ರವು ಸು. ಹತ್ತು ಅಡಿ ವ್ಯಾಸವುಳ್ಳದ್ದಾಗಿರುತ್ತದೆ. ಚಕ್ರಗಳು ಹೆಚ್ಚಾಗಿ ವೃತ್ತಾಕಾರದಲ್ಲಿಯೇ ಇರುವುದಾದರೂ ಕೆಲವೊಮ್ಮೆ ಚತುರ್ಭುಜ, ಷಟ್ಭುಜಾಕಾರದಲ್ಲೂ ಇರುವುದಿದೆ. ಚತುರ್ಭುಜ ಚಕ್ರಗಳಿಗೆ ನಾಲ್ಕು ದಳಗಳೂ ಷಟ್ಭುಜಗಳಿಗೆ ಆರು ದಳಗಳೂ ಇರುತ್ತವೆ. ಚಕ್ರಗಳ ನಿರ್ಮಾಣವನ್ನು ಪರಿಣತ ಬಡಗಿಗಳಷ್ಟೇ ಮಾಡಬಲ್ಲರು. ದೊಡ್ಡ ಚಕ್ರಗಳು ನೀರನ್ನು ಎತ್ತಿ ಹೊರ ಹಾಕುವುದಕ್ಕೂ ಕಿರು ಚಕ್ರಗಳು ನೀರನ್ನು ಹಾಯಿಸುವುದಕ್ಕೂ ಬಳಕೆಯಾಗುತ್ತವೆ.

ಆಲಪ್ಪುಳ ಜಿಲ್ಲೆಯ ಕುಟ್ಟನಾಡಲ್ಲೂ ತೃಶ್ಶೂರ್ ಜಿಲ್ಲೆಯ ಜವುಗು ನೆಲಗಳಲ್ಲೂ ಜಲ ಚಕ್ರಗಳು ವ್ಯಾಪಕವಾಗಿ ಬಳಕೆಯಲ್ಲಿದ್ದುವು. ಈಗ ಹೆಚ್ಚಿನ ಕಡೆಗಳಲ್ಲಿ ಇವನ್ನು ಪಂಪ್ ಸೆಟ್ಟುಗಳು ಕಣ್ಮರೆ ಮಾಡಿದ್ದರೂ ತೃಶ್ಶೂರ್ ಜಿಲ್ಲೆಯ ತೆಂಕು ಭಾಗದ ಕಾಟ್ಟೂರ್ ಮುಂತಾದೆಡೆ ಅವು ಇನ್ನೂ ಬಳಕೆಯಲ್ಲಿವೆ. ಅಲ್ಲಿ ನಾಲ್ಕರಿಂದ ಹನ್ನೆರಡು ದಳಗಳ ಜಲ ಚಕ್ರಗಳು ಸಾಮಾನ್ಯ ಬಳಕೆಯಲ್ಲಿವೆ. ತೃಶ್ಶೂರು ಜಿಲ್ಲೆಯ ಕಡಲಾಶ್ಶೇರಿ ಸಮೀಪದ 'ಚಾಪ್ಪಕ್ಕಾಯಲ್' (ಚಾಪ್ಪ ಎಂಬ ಹೆಸರಿನ ಹಿನ್ನೀರು)ನಲ್ಲೂ ಚಾಲಕ್ಕುಡಿ ಮತ್ತು ಎರ್ನಾಕುಳಂ ಜಿಲ್ಲೆಯ ಅಂಕಮಾಲಿಯ ಮಧ್ಯೆ ಇರುವ ಹೆಚ್ಚು ಆಳದ ಗದ್ದೆಗಳಲ್ಲೂ ಕೊಟ್ಟಾಯಂ, ಕೊಲ್ಲಂ, ಪತ್ತನಂ ತಿಟ್ಟ ಜಿಲ್ಲೆಗಳ ಕೆಲವು ಹಿನ್ನೀರುನೆಲಗಳಲ್ಲೂ ವಿರಳವಾಗಿ ಚಕ್ರಗಳ ಬಳಕೆ ಇದೆ.

ಜಲಚಕ್ರಗಳ ಕೆಳಗಿನ ದಳಗಳು ನೀರಲ್ಲಿ ಮುಳುಗುವ ಹಾಗೆ ಬಿದಿರಿನ ತುಂಡುಗಳಿಂದ ಗಟ್ಟಿಗೊಳಿಸಿ ನಿಲ್ಲಿಸಿರುವ ಚಕ್ರವನ್ನು ಬಿದಿರು ಅಥವಾ ಕೌಂಗಿನ ಹೋಳುಗಳಿಂದ ನಿರ್ಮಿಸಿದ ಅಟ್ಟಳಿಗೆಗಳಲ್ಲಿ ಕುಳಿತು ಸರದಿ ಪ್ರಕಾರ ದಳಗಳನ್ನು ಕಾಲುಗಳಿಂದ ತುಳಿಯುತ್ತಾರೆ. ಆಗ ಕೆಳಗಿನ ದಳಗಳು ನೀರನ್ನು ತುಂಬಿಕೊಂಡು ಮೇಲೆ ಬಂದು ಒಂದು ನಿರ್ದಿಷ್ಟ ಎತ್ತರದಲ್ಲಿ

ಅದನ್ನು ಕೆಳಗೆ ಸುರಿಯುತ್ತವೆ. ಹಾಗೆ ಸುರಿದ ನೀರು ಮುಂದಕ್ಕೆ ಹರಿದು ಸಾಗುತ್ತದೆ. ಚಕ್ರದ ಗಾತ್ರದ ಹೆಚ್ಚಳಕ್ಕೆ ಅನುಸಾರವಾಗಿ ತುಳಿಯುವ ಜನರ ಸಂಖ್ಯೆಯೂ ಹೆಚ್ಚಾಗುತ್ತದೆ. ಇಪ್ಪತ್ತಕ್ಕಿಂತ ಹೆಚ್ಚು ದಳಗಳಿರುವ ಒಂದು ದೊಡ್ಡ ಜಲಚಕ್ರವು ತಿರುಗಬೇಕಾದರೆ ಸಾಮಾನ್ಯವಾಗಿ ಇಪ್ಪತ್ತೈದರಷ್ಟು ಜನ ಏಕಕಾಲದಲ್ಲಿ ಕಾರ್ಯನಿರತವಾಗಬೇಕಾಗುತ್ತದೆ. ತಟ್ಟು ತಟ್ಟುಗಳಾಗಿ ಕಟ್ಟಿ ನಿರ್ಮಿಸಿಕೊಂಡ ಒರಗು ಅಟ್ಟಳಿಗೆಗಳಲ್ಲಿ ಕುಳಿತು ಅಥವಾ ನಿಂತುಕೊಂಡು ಜನರು ಚಕ್ರದಳಗಳನ್ನು ತುಳಿಯುತ್ತಿರುತ್ತಾರೆ. ಅನುಭವದಲ್ಲಿ ಹಿರಿಯನು ಅತ್ಯಂತ ಮೇಲೆ ನಿಂತಿರುತ್ತಾನೆ. ಚಕ್ರಗಳು ತಿರುಗಲಾರಂಭಿಸಿದರೆ ಗದ್ದೆಯ ನೀರು ಬತ್ತುವವರೆಗೂ ಎರಡು ಮೂರು ದಿನಗಳ ತನಕವೂ ಹಗಲು ರಾತ್ರಿಯೆನ್ನದೆ ತಿರುಗುತ್ತಲೇ ಇರುತ್ತವೆ. ಸು. ಆರು ತಾಸುಗಳಿಗೊಮ್ಮೆ ತುಳಿಯುವ ಜನ ಬದಲಾಗುತ್ತಾರೆ. ಚಕ್ರದಳಗಳನ್ನು ತುಳಿಯುವಾಗ ಒಂದು ಲಯವಿದ್ದು 'ಚಕ್ರಂ ಚವಿಟ್ಟಿಪ್ಪಾಟ್ಟ್' (ಚಕ್ರತುಳಿಯುವ ಹಾಡು) ಹಾಡುತ್ತ ತುಳಿಯುವುದೂ ಇದೆ.

ಮೂರು ಚಕ್ರಗಳೂ ಮೂವತ್ತಾರು ಜನರೂ ತುಳಿಯುತ್ತಿದ್ದರೆ ಹತ್ತು ಪರೆಗದ್ದೆ (ಒಂದೂ ಕಾಲು ಎಕರೆ)ಯಿಂದ ಒಂದು ದಿನದಲ್ಲಿ ಮೂರು ಅಡಿ ನೀರನ್ನು (174800 ಕ್ಯೂಬಿಕ್ ಅಡಿ) ಹೊರಹಾಕಲು ಸಾಧ್ಯ. ಚಕ್ರವೊಂದರಿಂದಲೇ ಒಂದೆರಡು ಅಡಿಗಳಿಗಿಂತ ಹೆಚ್ಚಿನ ಎತ್ತರಕ್ಕೆ ನೀರನ್ನು ಎತ್ತಲು ಸಾಧ್ಯವಿಲ್ಲ. ಕುಟ್ಟನಾಡಲ್ಲೂ ಇತರ ಜವುಗು ನೆಲಗಳಲ್ಲೂ ಮೂರು ನಾಲ್ಕು ಅಡಿಗಳಿಗಿಂತಲೂ ಹೆಚ್ಚು ಆಳದಿಂದ ನೀರನ್ನು ಮೇಲೆತ್ತಿ ಹಾಕಬೇಕಾಗುತ್ತದೆ. ಆಗ ಎರಡು ಚಕ್ರಗಳನ್ನು ಒಂದರ ಹಿಂದೆ ಒಂದಾಗಿ ಸ್ಥಾಪಿಸಿಕೊಳ್ಳುತ್ತಾರೆ. ಹಿಂದೆ ಇರುವ ಚಕ್ರದಿಂದೊಂದು ನಿರ್ದಿಷ್ಟ ಎತ್ತರಕ್ಕೆ ನೀರನ್ನು ಎತ್ತಿ ಹಾಕಿದ ಬಳಿಕ ಮುಂದೆ ಸ್ಥಾಪಿಸಿದ ಚಕ್ರದಿಂದ ಆ ನೀರನ್ನು ಎತ್ತಿ ಮುಂದಕ್ಕೆ ತಳ್ಳಲಾಗುತ್ತದೆ.

ಆಕರ : ಜಲಸೇಚನ ಉಪಕರಣಂಙಳ್-ಲೇಖಿನ ಸಿ.ಕೆ. ಸುಜಿತ್ ಕುಮಾರ್.

ಕೆ.ಕೆ.

ಜಹಗೀರು ರಾಜಮನೆತನಗಳು ಕೊಡುಗೆ ನೀಡುತ್ತಿದ್ದ ಕಂದಾಯ ರಹಿತ ಭೂಮಿ. ಆಳರಸರು ಜಹಗೀರನ್ನು ವಿಶೇಷ ಸೇವೆಗಾಗಿ ಪ್ರಜೆಗಳಿಗೆ ಅಥವಾ ಜಹಗೀರು ಪಡೆಯುವವನ ಸ್ಥಾನಮಾನ ಗೌರವಗಳನ್ನು ಕಾಯ್ದುಕೊಳ್ಳಲು ಉಚಿತವಾಗಿ ಭೂಮಿಯನ್ನು ಕೊಡುತ್ತಿದ್ದರು. ಅಲ್‌ತಮ ಎಂಬ ಜಹಗೀರುಗಳು ರಾಜಮುದ್ರೆಯ ಮೂಲಕ ದತ್ತವಾದ ಕಂದಾಯ ರಹಿತ ಭೂಕೊಡುಗೆಗಳಾಗಿದ್ದವು. ಇದು ಖಾಯಂ ಅಥವಾ ವಂಶಪಾರಂಪರಿಕ ಜಹಗೀರುಗಳಾಗಿತ್ತು. ಯಾವುದೇ ಸೇವಾ ನಿರ್ಬಂಧವೂ ಇಲ್ಲದೆ ದಾನ ಪಡೆಯುವವನ ಉಪಜೀವನಕ್ಕಾಗಿ ನೀಡಿದ ವಿಸ್ತಾರವಾದ ಭೂಕಾಣಿಕೆ ಜಾಬ್ ಜಹಗೀರಾಗಿತ್ತು. 'ಮಶ್‌ರೂತ್' ಜಹಗೀರನ್ನು ನಿರ್ದಿಷ್ಟ ಸೇವೆಗೆ ಅಂದರೆ ಸೈನಿಕ ಅಥವಾ ನಾಗರೀಕ ಅಥವಾ ಧಾರ್ಮಿಕ ಸೇವೆಗಳಿಗೆ ಪ್ರತಿಯಾಗಿ ನೀಡಲಾಗುತ್ತಿತ್ತು. ಈ ಸೇವೆಗಳು ದೊರೆಯುವವರೆಗೆ ಮಾತ್ರ ಜಹಗೀರು ಮುಂದುವರಿಯುತ್ತಿತ್ತು. ಜಹಗೀರುದಾರರು ತಮ್ಮ ಜಹಗೀರಿನ ವ್ಯಾಪ್ತಿಯಲ್ಲಿ ಕಂದಾಯ, ಅಬಕಾರಿ, ಅರಣ್ಯ, ಮೀನುಗಾರಿಕೆ, ನ್ಯಾಯಾಧಿಕಾರ ಮತ್ತು ಪೊಲೀಸ್ ಅಧಿಕಾರಿಗಳನ್ನು ಹೊಂದಿದ್ದರು. ಜಹಗೀರುದಾರರು ತಮಗೆ ಜಹಗೀರು ಪ್ರಾಪ್ತವಾದಾಗಿನಿಂದ ತಾವೇ ನೇಮಿಸಿಕೊಂಡ ಅಧಿಕಾರಿಗಳಿಂದ ಕಂದಾಯ ವಸೂಲಿ ಮಾಡುತ್ತಿದ್ದರೂ ಅಗತ್ಯವಾದ, ಸ್ಪಷ್ಟವಾದ, ವಿಧ್ಯುಕ್ತ ಅಧಿಕಾರಿಗಳ ಅಧಿಕೃತ ಮಂಜೂರಾತಿ ಇರಲಿಲ್ಲ. ಜಹಗೀರುದಾರರ ಕಂದಾಯ ವಸೂಲಿಯ ಅಧಿಕಾರವನ್ನು ರೈತರು ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಜಹಗೀರು 1935ರಲ್ಲಿ ಕಂದಾಯ ವಸೂಲಿಯ ನಿಯಮಗಳನ್ನು ಜಾರಿಗೆ ತಂದು ಈ ಲೋಪವನ್ನು ಸರಿಪಡಿಸಲಾಯಿತು. 1947 ರ ಜಹಗೀರು ಆಯೋಗದ ವರದಿ ಪ್ರಕಾರ ಜಹಗೀರುದಾರರಿಗೆ ಭೂಮಿಯ ಒಡೆತನದ ಯಾವ ಹಕ್ಕೂ ಇರಲಿಲ್ಲ. 1949ರಲ್ಲಿ ಎಲ್ಲಾ ಜಹಗೀರು ಮತ್ತು ಗುತ್ತಿಗೆ (ಮುಕ್ತಾ) ಗ್ರಾಮಗಳ ಆಡಳಿತವನ್ನು ಸರ್ಕಾರ ವಹಿಸಿಕೊಂಡಿತು. ಜಹಗೀರುಗಳ ಆಡಳಿತಕ್ಕೆ ಓರ್ವ ಆಡಳಿತಾಧಿಕಾರಿಯನ್ನು ನೇಮಿಸಲಾಯಿತು. ಜಹಗೀರು ಪದ್ಧತಿಯನ್ನು ತೆಗೆದು ಹಾಕಿದ್ದರಿಂದ ಸರ್ಕಾರ ಮತ್ತು ರೈತರ ನಡುವೆ ಇದ್ದ ಭೂಹಿಡುವಳಿಯ ಸಮಸ್ಯೆಯನ್ನು ತುಲನಾತ್ಮಕವಾಗಿ ಸರಳಗೊಳಿಸಲಾಯಿತು.

ವಿ.ಕೆ.

ಜಾಕಾಯಿ, ಜಾಪತ್ರೆ (ಮ್ಯೆರಿಸ್ಟಿಕ ಫ್ರಾಗ್ರೆನ್ಸ್ ಹೌಟ್) ಜಾದಿ (ಜಾತಿ) ಕಾಯಿ ಅಥವಾ ಜಾಕಾಯಿ ಎಂದು ಪರಿಚಿತವಾಗಿರುವ ಇದು ಕಾಯಿ ಅಲ್ಲ. ಕಾಯಿಯೊಳಗಿನ ಬೀಜ. ಅದರ ಮೇಲೆ ಬಲೆಯಂತೆ ಹರಡಿ ಅಂಟಿಕೊಂಡಿರುವ ಕೇಸರಿ ಬಣ್ಣದ ಹೊದಿಕೆಯೇ ಜಾಪತ್ರೆ. ಇಂಗ್ಲಿಷ್‌ನಲ್ಲಿ ನಟ್‌ಮೆಗ್ ಮತ್ತು ಮೇಸ್ ಎನ್ನುತ್ತಾರೆ. ಪೊರೆಯ ಹೊರಗೆ ದಪ್ಪವಾದ ಪದರವಿರುತ್ತದೆ. ಇದರ



ಬಳಕೆ ಅನಾದಿ ಕಾಲದಿಂದಲೂ ಇದೆ. ಕ್ರಿ.ಶ. 916 ರಿಂದ 920 ರವರೆಗೆ ಭಾರತದಲ್ಲಿ ಪ್ರವಾಸ ಮಾಡಿದ ವಿದೇಶಿ ಯಾತ್ರಿಕ 'ಮಸೂದಿ' ಈ ಸರಕು ಮಲಯ ದ್ವೀಪಗಳಿಂದ ಸರಬರಾಜಾಗುತ್ತಿತ್ತೆಂದು ಹೇಳಿದರೆ, 13ನೇ ಶತಮಾನದ ಅರಬ್ಬೀ ಲೇಖಕ ಕಸ್ವನೀ ಎಂಬುವವರು ಮಲಕ್ಕಾ ದ್ವೀಪವನ್ನು ಜಾಕಾಯಿಯ ತವರು ಎಂದು ಖಚಿತವಾಗಿ ಹೇಳಿದ್ದಾರೆ.

ಇದರ ವಹಿವಾಟನ್ನು ಪೋರ್ಚುಗೀಸರು ಸುಮಾರು ಒಂದು ಶತಮಾನದ ಕಾಲ ತಮ್ಮದಾಗಿಸಿಕೊಂಡರು. ಅದರ ಅನಂತರ ಡಚ್ಚರು ತಮ್ಮ ವಶಕ್ಕೆ ತೆಗೆದುಕೊಂಡರು. ಅವರು ಜಗತ್ತಿನ ಇತರ ಪ್ರದೇಶಗಳಿಗೆ ಪರಿಚಯಿಸಿದರು.

1512ರಲ್ಲಿ ಪೋರ್ಚುಗೀಸರು ಜಾಕಾಯಿಮರಗಳನ್ನು ಬಾಡಾ ಮತ್ತು ಆಂಬೋಯ್ನ ದ್ವೀಪಗಳಲ್ಲಿ ಗುರುತಿಸಿದರು. ಅವರಿಂದ ವ್ಯಾಪಾರದ ಸ್ವಾಧೀನವನ್ನು ತೆಗೆದುಕೊಂಡ ಡಚ್ಚರು ಆ ಪ್ರದೇಶಗಳು ತಮ್ಮ ಕೈ ತಪ್ಪಿ ಹೋಗದಂತೆಮಾಡಲು ಈ ಎರಡು ಪ್ರದೇಶಗಳ ಬೆಳೆಯನ್ನು ಉಳಿಸಿಕೊಂಡು ಸುತ್ತ ಮುತ್ತಲಿನ ದ್ವೀಪಗಳಲ್ಲಿದ್ದ ಮರಗಳನ್ನೆಲ್ಲ ಕೆಡವಿದರು. ಆ ವೇಳೆಗಾಗಲೇ (1760) ಹಾಲೆಂಡಿನ ವ್ಯಾಪಾರ ಮಳಿಗೆಗಳಲ್ಲಿ ಸು. 16 ವರ್ಷಗಳ ಬೆಳೆ ಶೇಖರಗೊಂಡಿತು. ಈ ಸಂದರ್ಭದಲ್ಲಿ ಜಾಕಾಯಿ, ಜಾಪತ್ರೆಯ ಕೃತಕ ಬೇಡಿಕೆಯನ್ನು ಸೃಷ್ಟಿಸಿ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿದ್ದರು.

ಡಚ್ಚರ ಅನಂತರ 1796ರಲ್ಲಿ ಮಲೇಷಿಯಾಕ್ಕೆ ಬಂದ ಬ್ರಿಟಿಷ್ ಅಧಿಕಾರಿ ಕ್ರಿಸ್ಟೋಫರ್ ಸ್ಮಿತ್, ಜಾಕಾಯಿ ಬೆಳೆಯ ವಿಸ್ತೀರ್ಣಕ್ಕಾಗಿ ಭೂಮಿಯನ್ನು ನಿಯಮಿಸಿದರು. ಸು. 71,000 ಸಸಿಗಳನ್ನು ಬೆಳೆಸಿ ಕಲ್ಕತ್ತ ಮತ್ತು ಮದರಾಸುಗಳಿಗೆ ರವಾನಿಸಿ ನೀಲಗಿರಿ ಬೆಟ್ಟದ ತಪ್ಪಲು ಮತ್ತು ತಿರುನಲ್ವೇಲಿ ಜಿಲ್ಲೆಯ ಕಾಡುಗಳಲ್ಲಿ ಸು. 300 ಎಕರೆ ಭೂಮಿಯಲ್ಲಿ ಇದರ ಕೃಷಿಯನ್ನು ಆರಂಭಿಸಲಾಯಿತು. ಆದರೆ ಭಾರತದ ಹವಾಗುಣಕ್ಕೆ ಈ ಕೃಷಿ ಒಗ್ಗಲಿಲ್ಲವೋ ಅಥವಾ ಕೃಷಿ ವಿಧಾನ ತಿಳಿಯಲಿಲ್ಲವೋ ಈ ಬೆಳೆಯನ್ನು ಅಷ್ಟಾಗಿ ಮುಂದುವರಿಸಲಾಗಲಿಲ್ಲ. ಆಗ ನೆಟ್ಟ ಮರಗಳಿಂದಲೇ ಹಲ ಕೆಲವು ಉಳಿದು ಬಂದಿವೆ. ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಜಾಕಾಯಿ ಬೆಳೆ ಸ್ವಲ್ಪ ಮಟ್ಟಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅಡಕೆತೋಟದ ಮಧ್ಯೆ ಕಾಲುವೆಯ ಬಳಿ ಹತ್ತು ಮಾರಿಗೊಂದು ಗಿಡ ನೆಡುತ್ತಾರೆ. ಇದು ನೆಟ್ಟಗೆ ಬೆಳೆದು ಮರವಾಗಿ ಬುಡದಿಂದ ತುದಿಯವರೆಗೂ ಹೆಣಿಕೆಗಳು, ಹೆಣಿಕೆಯ ತುಂಬಾ ಕಾಯಿಗಳು ಬಿಡುತ್ತವೆ. ಎರಡು ಅಡಿ ಆಳ, ಅಗಲ - ಉದ್ದದ ಕುಣಿಗಳಿಗೆ ಸೊಪ್ಪು, ಗೊಬ್ಬರ ತುಂಬಿ ಸಸಿ ನೆಟ್ಟರೆ ನಾಲ್ಕು ವರ್ಷಕ್ಕೆ ಫಸಲು ಬಿಡುತ್ತದೆ.

ಸಸ್ಯಾಭಿವೃದ್ಧಿ : ಜಾಕಾಯಿಯ ಸಸ್ಯಾಭಿವೃದ್ಧಿಯನ್ನು ಬೀಜಗಳಿಂದ ಮತ್ತು ಕಸಿ ವಿಧಾನದಿಂದಲೂ ಮಾಡುತ್ತಾರೆ. ಇವುಗಳಲ್ಲಿ ಗಂಡು ಮತ್ತು ಹೆಣ್ಣು ಗಿಡಗಳಿದ್ದು ಗಿಡ ನೆಟ್ಟು ಅದು ಫಲ ನೀಡಿದ ಅನಂತರವೇ ಅದು ಹೆಣ್ಣೆಂದು ತಿಳಿಯುವುದು. (ಹೆಣ್ಣು ಗಿಡ ಕಾಯಿ ಬಿಡಬೇಕಾದರೆ ಗಂಡು ಮರಬೇಕೇ ಬೇಕು.) ಜಾಕಾಯಿ ಬೆಳೆ ಮಾಡುವ ಪದ್ಧತಿ ಮೊದಲು ದೀರ್ಘಕಾಲೀನದಾಗಿದ್ದು ಸು. ಏಳು ವರ್ಷಗಳ ಬೆಳೆಯಾಗಿತ್ತು. ಏಳು ವರ್ಷಗಳ ಅನಂತರವೂ ಹೆಚ್ಚಿನ ಗಿಡ ಗಂಡಾಗಿದ್ದರೆ ರೈತನಿಗೆ ನಿರಾಶೆ ಕಾದಿರುತ್ತಿತ್ತು. ಆದರೆ ಈಗ ಕೇರಳದ ಕಲ್ಲಿಕೋಟೆ ವಿಶ್ವವಿದ್ಯಾನಿಲಯದಲ್ಲಿ ಇದರ ಬೀಜವನ್ನು ನೋಡಿಯೇ ಸಸಿಯನ್ನು ಹೆಣ್ಣು, ಗಂಡು ಮತ್ತು ಮಿಶ್ರ ತಳಿ (ಸೆಮಿಮೇಲ್) ಎಂದು ಗುರುತಿಸುವ ಸಂಶೋಧನೆ ನಡೆದಿವೆ.

ಸಂಶೋಧನೆಗೆ ಒಳಗಾದ ಮಿಶ್ರ ತಳಿಯ ಬೀಜಗಳು ನೆಟ್ಟು ಮೂರ್ನಾಲ್ಕು ವರ್ಷಕ್ಕೆ ಫಲ ನೀಡುತ್ತವೆ. ಹೆಚ್ಚು ಗೊಬ್ಬರ, ನೀರು ಮತ್ತು ನೆರಳನ್ನು ಬಯಸುವ ಈ ಬೆಳೆ ಫಸಲು ನೀಡುವುದೇ ಮಳೆಗಾಲದಲ್ಲಿ. ಮರದ ತುಂಬಾ ಬಿರಿದ ಅರಿಸಿನ ಬಣ್ಣದ ಕಾಯಿಗಳು ಬಿರಿದ ಜಾಗದಿಂದ ಆಕರ್ಷಕವಾಗಿ ಕೆಂಪನೆಯ ಬಣ್ಣದ ಬಲೆ ಇಣುಕುತ್ತದೆ. ಮರದಲ್ಲೇ ಈ ಕಾಯಿ ಬಿರಿಯ ಬೇಕು. ಇಲ್ಲದಿದ್ದರೆ ಪತ್ರೆ ಕೆಂಪಗಿರುವುದಿಲ್ಲ. ಕೊಯ್ಲು ತಡಮಾಡಿದರೂ ಕಾಯಿಗಳೆಲ್ಲಾ ಉದುರಿ ಮಣ್ಣು ಪಾಲಾಗುತ್ತವೆ ಅಥವಾ ಮಳೆಗೆ ಕೊಳೆತು ಹೋಗಿ ಮೊಳಕೆ ಬರುವ ಸಂಭವವೂ ಇದೆ. ಕೊಯ್ಲಿನ ಅನಂತರ ಪತ್ರೆ ಮತ್ತು ಕಾಯಿಯನ್ನು ಬೇರೆ ಬೇರೆ ಒಣಗಿಸಬೇಕು.

ಜಾಕಾಯಿ ಜಾಪತ್ರೆಗಳು ಮುಖ್ಯವಾಗಿ ಸಾಂಬಾರ ಪದಾರ್ಥಗಳು. ಹಳೆಯ ಆಯುರ್ವೇದ ಗ್ರಂಥಗಳಲ್ಲೂ ಇದು ದಾಖಲಾಗಿದೆ. ಉದ್ರೇಕ ಸ್ಥಿತಿಯನ್ನು ಹದಕ್ಕೆ ತರುವ ಗುಣವನ್ನು ಇದು ಪಡೆದಿದೆ. ಹೊಟ್ಟೆ ನೋವಿನಿಂದ ನರಳುವ ಹಸುಳೆಗಳಿಗೆ ಜಾಕಾಯಿ ಗಂಧವನ್ನು ನೆಕ್ಕಿಸುತ್ತಾರೆ. ಇದರಲ್ಲಿಯ 'ಟ್ರಾಂ ಕ್ವೈಲೈಸರ್' ಸತ್ವ ನರ ಮಂಡಲದ ಉದ್ವೇಗವನ್ನು ಕುಗ್ಗಿಸಿಮನಸ್ಸನ್ನು ನೆಮ್ಮದಿಯ ನೆಲೆಗೆ ತರುತ್ತದೆ. ಜಾಕಾಯಿ ಪುಡಿಯನ್ನು ಸಿಹಿ ತಿಂಡಿ, ಮಿಠಾಯಿ, ಹಾಲು, ರೊಟ್ಟಿ, ಪೇಯ ಪಾನೀಯಗಳಲ್ಲಿ ಬಳಸುತ್ತಾರೆ. ಬೀಜದ ತೈಲವನ್ನು ತಂಬಾಕಿನ ರುಚಿ ಹೆಚ್ಚಿಸಲು, ಸ್ನಾನದ ಸಾಬೂನು, ಸುಗಂಧವಸ್ತು ಮುಂತಾದವುಗಳಲ್ಲಿ ಬಳಸುತ್ತಾರೆ.

ಜಾಕಾಯಿಗಿಂತ ಜಾಪತ್ರೆಗೆ ಒಳ್ಳೆಯ ಬೆಲೆಯಿದೆ. ಮಾಂಸದ ಅಡುಗೆಗಳು, ಸಾಂಬಾರದ ಅಡುಗೆಗಳು, ಸಿಹಿತಿಂಡಿಗಳು ಮತ್ತು ಔಷಧಿಗಳಿಗೆ ಇವು ಹೆಚ್ಚು ಉಪಯುಕ್ತ. ಉಪ್ಪಿನ ಕಾಯಿ, ಚಟ್ನಿ, ಜಾಂ, ಜೆಲ್ಲಿ, ಪಲಾವ್ ಮುತಾದವುಗಳಲ್ಲಿ ವಾಸನೆ ಮತ್ತು ರುಚಿಗಾಗಿ ಬಳಸುತ್ತಾರೆ.

ಪತ್ರೆಯ ಕಷಾಯವನ್ನು ಕುಡಿದರೆ ತಾಸು ಕಳೆಯುವುದರೊಳಗೆ ನಿದ್ರೆ ಆವರಿಸಿಬಿಡುತ್ತದೆ. ಜಾಕಾಯಿ ಬೀಜದ ಹೊಗೆಗೆ ಸೊಳ್ಳೆ ಪರಾರಿಯಾಗುತ್ತವೆ. ಮೊಟ್ಟೆಗೆ ಕಾವು ಕೊಡಬೇಕಾದ ನೂರಾರು ಹೆಣ್ಣು ಹಕ್ಕಿಗಳ ದೇಹವನ್ನು ಬೆಚ್ಚಗಿಡುವ, ದೇಹದ ಕಾವು ಆರದಿರುವಂತೆ ಮಾಡುವ ವಸ್ತು ಜಾಕಾಯಿ. ಅದರಿಂದಾಗಿ ಗಂಡು ಹಕ್ಕಿಗಳು ತಮ್ಮ ದೊಡ್ಡ ಕೊಕ್ಕುಗಳ ತುಂಬಾ ಒಂದೇ ಬಾರಿಗೆ 200 ಕ್ಕೂ ಹೆಚ್ಚು ಕಾಯಿಗಳನ್ನು ಹೊತ್ತೊಯ್ಯುತ್ತವೆ ಮತ್ತು ಇದರ ರುಚಿಗೆ ಆಸೆ ಪಟ್ಟ ಮಂಗಗಳು ದಾಳಿಯಿಟ್ಟು ಈ ಬೆಳೆಯನ್ನು ನಾಶ ಮಾಡುವ ಸಂಭವವೂ ಉಂಟು. ಭಾರತದಲ್ಲಿಯ ಉತ್ಪತ್ತಿ ಸಾಕಾಗದೇ ಗಣನೀಯ ಪ್ರಮಾಣದಲ್ಲಿ ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ಎನ್. ಆರ್.

ಜೀತಪದ್ಧತಿ ಮಧ್ಯಯುಗೀನ ಭಾರತದ ಒಂದು ವ್ಯವಸ್ಥೆಯಿದು. ಊಳಿಗಮಾನ್ಯವ್ಯವಸ್ಥೆಯಲ್ಲಿ ಉದಯವಾದ ಈ ಪದ್ಧತಿ ಇಂದಿಗೂ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ ಜೀವಂತವಾಗಿದೆ. ಈ ವ್ಯವಸ್ಥೆಯಲ್ಲಿ ಮೂರು ಹಂತಗಳನ್ನು ಗುರುತಿಸಬಹುದು. 1. ವ್ಯವಸಾಯ ಮಾಡುವುದರ ಜೊತೆಗೆ ಒಡೆಯನಿಂದ ಪಡೆದ ತುಂಡು ಭೂಮಿಯನ್ನು ಜೀತಗಾರ ತಾನು ಉಳುಮೆ ಮಾಡಿಕೊಂಡು ಜೀವಿಸುವುದು. 2. ವಾರಕ್ಕೆ ಎರಡು ಮೂರು ದಿವಸ ಜೀತಗಾರ ಒಡೆಯನ ಕೆಲಸ ಮಾಡುವುದು, ಉಳಿದಂತೆ ತನ್ನ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು. 3. ಒಡೆಯನ ಒಡೆತನದಲ್ಲೇ ಇದ್ದು ಅವನ ಎಲ್ಲ ಕೆಲಸ ಕಾರ್ಯಗಳಲ್ಲಿ ಸದಾ ದುಡಿಯುವುದು.

ಸಾಮಾನ್ಯವಾಗಿ ಜೀತಗಾರ ಸ್ವತಂತ್ರನಾಗಿರಲಾರ. ಅವನು ಒಡೆಯನಿಗೆ ಕೆಲವು ಸಂದರ್ಭಗಳಲ್ಲಿ ಬಿಟ್ಟಿ ಚಾಕರಿ ಮಾಡಬೇಕಿತ್ತು. ತನ್ನ ಕೆಲಸಗಳು ಎಷ್ಟೇ ತುರ್ತಾಗಿದ್ದರೂ ಅದನ್ನು ಬದಿಗಿಟ್ಟು ಮೊದಲು ಒಡೆಯನ ಕೆಲಸ

ಕಾರ್ಯಗಳನ್ನು ಮಾಡಿ ಅವನನ್ನು ತೃಪ್ತಿಪಡಿಸಬೇಕು. ಅವನ ತೋಟ, ತುಡಿಕೆ, ಹೊಲ, ಗದ್ದೆ ಮತ್ತಿತರ ಕೃಷಿ ವ್ಯವಸ್ಥೆಯನ್ನು ಸುರಕ್ಷಿತವಾಗಿ ಕಾಪಾಡುವುದು ಕರ್ತವ್ಯವಾಗಿತ್ತು. ಜೀತಗಾರನಿಗೆ ಸೇರಿದ ಸಾಕು ಪ್ರಾಣಿಗಳಿಂದ ಹಿಡಿದು ಮಡದಿ ಮಕ್ಕಳು ಕೂಡ ತುರ್ತು ಸಂದರ್ಭಗಳಲ್ಲಿ ಒಡೆಯನಿಗೆ ಭಕ್ತಿ ಮತ್ತು ವಿನಯಪೂರ್ವಕವಾಗಿ ಸೇವೆ ಮಾಡಬೇಕಾಗಿತ್ತು. ಜೀತಗಾರಿಕೆ ಪದ್ಧತಿ ತಲತಲಾಂತರಗಳಿಗೂ ಮುಂದುವರಿಯುವ ಅನಿವಾರ್ಯ ಪರಿಸ್ಥಿತಿ ಕೆಲವೊಮ್ಮೆ ಒಡೆಯನಿಂದ ಸೃಷ್ಟಿಯಾಗುತ್ತಿತ್ತು. ಜೀತಗಾರನ ಕಷ್ಟಸುಖದಲ್ಲಿ ಭಾಗಿಯಾಗುವ ನೆವದಲ್ಲಿ- ಮಗಳ ಮದುವೆ, ಮನೆಕಟ್ಟುವ ಸಂದರ್ಭ, ಆರೋಗ್ಯ ಹದಗೆಟ್ಟಾಗ ಇತ್ಯಾದಿ ಸಂದರ್ಭಗಳಲ್ಲಿ ಅಲ್ಪಪ್ರಮಾಣದಲ್ಲಿ ಹಣ ನೀಡಿ ಅವರು ಅನ್ಯಮಾರ್ಗವಿಲ್ಲದೆ ಒಡೆಯನ ಹಂಗಿನಲ್ಲೇ ಇರುವಂತೆ ಮಾಡಲಾಗುತ್ತಿತ್ತು. ತಂದೆಗೆ ವಯಸ್ಸಾದ ಅನಂತರ ಹೆಂಡತಿ ಅಥವಾ ಮಗ; ಮಗಳು ಮತ್ತು ಅಳಿಯ- ಹೀಗೆ ಎಲ್ಲರೂ ತುತ್ತಿಗೆ ತೊತ್ತಾಗಿ ದುಡಿಯಲೇಬೇಕಾಗಿತ್ತು.

ಇಷ್ಟಾದರೂ ಜೀತಗಾರನಿಗೆ ಗೇಣಿದಾರ ಅಥವಾ ಗುಲಾಮಗಿರಿಗಿಂತ ಭಿನ್ನವಾದ ಕೆಲವು ಅನುಕೂಲಗಳಿದ್ದುವೆಂದೇ ಭಾವಿಸಬೇಕು. ತನ್ನದೆ ಆದ ಪ್ರತ್ಯೇಕ ಮನೆ, ಮನೆಯ ಊಟ ಎಲ್ಲವೂ ಇರುತ್ತಿದ್ದವು. ತನ್ನ ಪಾಲಿಗೆ ಬಂದ ಜಮೀನಿನಿಂದ ಅವನು ಸಾಕಷ್ಟು ಉತ್ಪಾದನೆ ಮಾಡಿಕೊಳ್ಳಬಹುದಿತ್ತು. ಜೀತಗಾರನಿಗೆ ಕೊಟ್ಟ ಭೂಮಿಯನ್ನು ವಿನಾಕಾರಣ ಮಾರುವ ಹಕ್ಕು ಒಡೆಯನಿಗಿರಲಿಲ್ಲ. ಆದರೆ ಒಡೆಯ ತನ್ನ ಜಮೀನಿನ ಒಡೆತನವನ್ನು ಬೇರೆಯವರಿಗೆ ಬಿಟ್ಟುಕೊಡಬಹುದಿತ್ತು. ಇಂಥ ಸಂದರ್ಭದಲ್ಲಿ ಜೀತಗಾರ ಹೊಸ ಒಡೆಯನ ಬಳಿ ಭೂಮಿ ಪಡೆದು ಸಾಗುವಳಿ ಮಾಡಿ ಜೀವನ ಸಾಗಿಸಲು ಅವಕಾಶವಿತ್ತು.

ಜೀತಗಾರ ಪದ್ಧತಿಯಲ್ಲಿ ಕೆಲವು ಅನುಕೂಲಗಳಿದ್ದರೂ ಹಲವು ಅನಾನುಕೂಲಗಳಿದ್ದುವು. ಸ್ವತಂತ್ರವಾಗಿ ಜೀವಿಸುವ ಅವಕಾಶವಿರದ ಪರಿಸ್ಥಿತಿ ಕೆಲವರದು. ಇನ್ನು ಕೆಲವರು ಇತರರ ಜಮೀನಿನಲ್ಲಿ ದುಡಿಯುವುದರಲ್ಲಿ ತೃಪ್ತಿಕಂಡುಕೊಂಡಿದ್ದರು. ಭೂಮಾಲೀಕರು ಜೀತಪದ್ಧತಿಯ ಲಾಭ ಪಡೆದು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದ್ದರೆ ಜೀತಗಾರನ ಬದುಕು ಮಾತ್ರ ದಿನೇ ದಿನೇ ಕ್ಷೀಣಿಸುತ್ತಿತ್ತು.

ಎ.ಎಂ.ಡಿ.

ಜೀರಿಗೆ ಇದು ಸಾವಿರಾರು ವರ್ಷಗಳಿಂದ ಗ್ರಾಮೀಣ ಜನತೆ ಬೆಳಗಾಗೆದ್ದು ಭೂಮಿತಾಯಿಯನ್ನು ನೆನೆಯುವ ಪರಿ ಇಂತಿದೆ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನ

ಸಂಬಾರ ಪದಾರ್ಥಗಳ ಉತ್ಪತ್ತಿಯಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಭಾರತದಲ್ಲಿ ಜೀರಿಗೆ ಬೆಳೆಯೂ ಕೂಡ ಒಂದಾಗಿದೆ. ಜೀರಿಗೆ 'ಏಪಿಯೇಸಿ' ಕುಟುಂಬಕ್ಕೆ ಸೇರಿದೆ. ಇದರ ವೈಜ್ಞಾನಿಕ ಹೆಸರು "ಕುಮಿನಮ್ ಸೈಮಿನಮ್" ಎಂದು. ಇಂಗ್ಲಿಷಿನಲ್ಲಿ "ಕುಮಿನ್‌ಸೀಡ್" ಎಂದು ಕರೆಯಲಾಗುತ್ತದೆ. ಇದರಲ್ಲಿ 2 ವಿಧ : 1. ಬಿಳಿ ಜೀರಿಗೆ ಇದು ಸಣ್ಣ ಗಾತ್ರದಲ್ಲಿ ಬಿಳಿ ಮತ್ತು ಕಂದು ಬಣ್ಣದಿಂದ ಕೂಡಿದ್ದು ಸಾಮಾನ್ಯವಾಗಿ ಅಡುಗೆಯಲ್ಲಿ ಬಳಕೆ ಮಾಡುತ್ತಾರೆ.

2. **ಕರಿಜೀರಿಗೆ :** ಇದರ ವೈಜ್ಞಾನಿಕ ಹೆಸರು "ಕಾರುಮ್‌ಕಾರ್ವಿ". ಸಂಸ್ಕೃತದಲ್ಲಿ 'ಕೃಷ ಜೀರಕ' ಎಂದೂ, ಇದನ್ನು ಔಷಧಗಳ ತಯಾರಿಕೆಗೆ ಮಾತ್ರ ಬಳಸುತ್ತಿದ್ದು ಆಹಾರ ಬಳಕೆಗೆ ಯೋಗ್ಯವಾಗಿರುವುದಿಲ್ಲ.

ಮನುಷ್ಯ ಉಪಯೋಗಿಸುತ್ತಿದ್ದ ಪ್ರಾಚೀನ ಮಸಾಲೆ ಪದಾರ್ಥಗಳಲ್ಲಿ ಜೀರಿಗೆಯೂ ಒಂದು. ಒಣಗಿಸಿ ಹುರಿದ ಜೀರಿಗೆಯು ಜೀರ್ಣಕ್ರಿಯೆಗೆ ಮತ್ತು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಣೆ ಮಾಡುತ್ತದೆ.

ಇದರಲ್ಲಿ 418 ಜಾತಿಗೆ ಸೇರಿದ ಸುಮಾರು 3,100 ಪ್ರಭೇದಗಳಿವೆ. ಕರ್ನಾಟಕದಲ್ಲಿ 14 ಜಾತಿಗೆ ಸೇರಿದ 23 ಪ್ರಭೇದಗಳಿವೆ. ಎಲೆ ಮತ್ತು ಕಾಂಡಗಳು ಹೆಚ್ಚು ಪರಿಮಳಭರಿತವಾಗಿರುತ್ತವೆ.

ಈ ಕುಟುಂಬ ವರ್ಗಕ್ಕೆ ಸೇರಿದ ಇತರೆ ಸಸ್ಯ. ಒಂದೆಲಗ, ಸೋಂಪು, ಪಾರ್ಸ್ಲೆ, ಡಿಲ್, ಕ್ಯಾರವೇ ಮುಂತಾದವು.

ಜೀರಿಗೆಯು ಒಂದು ವರ್ಷದ ಬೆಳೆಯಾಗಿದ್ದು, ಸಸಿ 30-90 ಸೆಂ.ಮೀ. ಎತ್ತರ ಇರುತ್ತದೆ. ಅನೇಕ ಕವಲುಗಳಿಂದ ಕೂಡಿದ್ದು ಗಿಡ ಪೊದೆಯಂತೆ ಕಾಣುತ್ತದೆ ಮತ್ತು ಕಾಂಡ ಸಪೂರ. ಛತ್ರಿಯಾಕಾರದ ಗಿಡದಲ್ಲಿ ತಿಳಿಗುಲಾಬಿಬಣ್ಣದ ಗೊಂಚಲು ಇರುತ್ತದೆ.

ಜೀರಿಗೆ ಮೊದಲು ಉತ್ತರ ಈಜಿಪ್ಟ್‌ನಲ್ಲಿ ಬೆಳೆದದ್ದು ಎಂದು



ತಿಳಿದು ಬಂದರೂ, ಅತ್ಯಂತ ಪುರಾತನ ಕಾಲದಿಂದಲೂ ಭಾರತ, ಚೀನಾ ಮುಂತಾದ ದೇಶಗಳಲ್ಲಿ ಬೆಳೆಯಲಾಗುತ್ತಿದೆ. ಇತ್ತೀಚೆಗೆ ಬಲೂಚಿಸ್ಥಾನ, ಇರಾಕ್, ಇಂಡೋನೇಷಿಯಾ, ಪ್ಯಾಲಿಸ್ತೀನ್, ಸಿರಿಯಾ, ಟರ್ಕಿ, ಮೊರಕ್ಕೋ, ಪಾಕಿಸ್ತಾನ, ಆಫ್ರಿಕಾ, ತುರ್ಕಿಸ್ತಾನ್, ಪರ್ಷಿಯಾ, ಇರಾನ್ ಮುಂತಾದ ದೇಶಗಳಲ್ಲಿ ಬೆಳೆಯಲಾಗುತ್ತಿದೆ.

ಕೃಷಿ : ಭಾರತದ ಬಹುತೇಕ ರಾಜ್ಯಗಳಲ್ಲಿ ಜೀರಿಗೆ ಬೆಳೆಯುತ್ತಾರೆ. ದೇಶೀಯವಾಗಿ ತೀವ್ರ ಬೇಡಿಕೆ ಇದ್ದರೂ ಆಫ್ರಿಕಾ, ಮಲೇಷಿಯಾ, ಶ್ರೀಲಂಕಾ ಮುಂತಾದ ದೇಶಗಳಿಗೆ ರಫ್ತು ಮಾಡಲಾಗುತ್ತದೆ. ಭಾರತದಲ್ಲಿ ಪ್ರತೀವರ್ಷ ಶೇ. 8.9 ರಷ್ಟು ಜೀರಿಗೆಗೆ ಬೇಡಿಕೆ ಇದೆ. ಉತ್ತರ ಭಾರತದ ಮಧ್ಯಪ್ರದೇಶ ರಾಜ್ಯದ ಜಬ್ಬಲಪುರ ಮತ್ತು ರತ್ಲಮ್, ರಾಜಸ್ಥಾನದ ಜೈಪುರ ಮತ್ತು ಗಂಗಾಪುರಗಳಲ್ಲಿ ಜೀರಿಗೆ ಮಾರಾಟ ವ್ಯವಸ್ಥೆಯ ಕೇಂದ್ರಸ್ಥಾನಗಳಿವೆ.

ಜೀರಿಗೆ ಬೆಳೆಯುವ ಭೂಮಿ ಸಮಶೀತೋಷ್ಣತೆಯಿಂದ ಕೂಡಿರಬೇಕು. ಗೋಡು ಮಣ್ಣು ಇದ್ದರೆ ಒಳ್ಳೆಯದು. ಬೀಜಗಳಿಂದಲೇ ಜೀರಿಗೆಯನ್ನು ಬೆಳೆಯಲಾಗುತ್ತದೆ. ಭೂಮಿಯನ್ನು 2-3 ಬಾರಿ ಉಳುಮೆ ಮಾಡಿ, ಹೆಂಟೆಗಳನ್ನು ಒಡೆದು ಹದ ಮಾಡಿದ ಅನಂತರ, ಹೆಕ್ಟೇರಿಗೆ 25 ಟನ್ ಹಟ್ಟಿ ಗೊಬ್ಬರ ಸೇರಿಸಿ ಮಣ್ಣಿನಲ್ಲಿ ಚೆನ್ನಾಗಿ ಮಿಶ್ರ ಮಾಡಲಾಗುತ್ತದೆ.

ಜೀರಿಗೆಯು ಗಾತ್ರದಲ್ಲಿ ಸಣ್ಣದಾಗಿದ್ದು, ಸಾಲಿನಲ್ಲಿ ಬಿತ್ತುವುದಾದರೆ ಸಾಲಿನಿಂದ ಸಾಲಿಗೆ 60 ಸೆಂ.ಮೀ. ಮತ್ತು ಗಿಡದಿಂದ ಗಿಡಕ್ಕೆ 30 ಸೆಂ.ಮೀ. ಅಂತರ ಇರುವಂತೆ ಬಿತ್ತಲಾಗುತ್ತದೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ಜೀರಿಗೆ ವ್ಯವಸಾಯ ಮಾಡಲು 25-30 ಕೆ.ಜಿ.ಯಷ್ಟು ಜೀರಿಗೆ ಬೇಕು. ಬಿತ್ತನೆ ಮಾಡಿದ 3-4 ತಿಂಗಳಲ್ಲಿ ಹೂಬಿಟ್ಟು ಮುಂದಿನ 2 ತಿಂಗಳುಗಳಲ್ಲಿ ಕಾಳುಗಳು ಹಳದಿ ಬಣ್ಣಕ್ಕೆ ತಿರುಗಿದಾಗ ಕೊಯ್ಲು ಮಾಡುತ್ತಾರೆ. ಒಂದು ಹೆಕ್ಟೇರಿಗೆ 500-750 ಕಿ.ಗ್ರಾಂ ಜೀರಿಗೆ ಸಿಗುತ್ತದೆ. ಏಪ್ರಿಲ್ ಮತ್ತು ಅಕ್ಟೋಬರ್ ಬಿತ್ತನೆಗೆ ಯೋಗ್ಯ ಸಮಯ.

ಉಪಯೋಗಗಳು : ಜೀರಿಗೆ ಮುಂತಾದ ಸಾಂಬಾರು ಪದಾರ್ಥಗಳಿಂದ ತಯಾರಿಸುವ ರಸಂ ತುಂಬಾ ರುಚಿ ಮತ್ತು ಆರೋಗ್ಯಕರ. ಜೀರಿಗೆ ಆರೋಗ್ಯಕ್ಕೆ ತುಂಬಾ ಉಪಯುಕ್ತವಾಗಿದ್ದು ಅದರ



ಪಾನೀಯವನ್ನು ಆಗಾಗ್ಗೆ ಸೇವಿಸುವುದರಿಂದ ಅನೇಕ ತೊಂದರೆಗಳು ಪರಿಹಾರವಾಗುತ್ತವೆ. ಜೀರಿಗೆ ಎಣ್ಣೆ ತುರಿಕಜ್ಜಿಗೆ ಉತ್ತಮ ಔಷಧಿ. ಹೊಟ್ಟೆಯಲ್ಲಿ ವಾಯುತುಂಬಿ ಸಂಕಟವಾದಾಗ ಸ್ವಲ್ಪ ಜೀರಿಗೆಯನ್ನು ಜಗಿದು ಉಪಶಮನ ಪಡೆಯಬಹುದು. ಗೊಗ್ಗರ ಧ್ವನಿ, ಅತಿಸಾರಗಳಿಗೂ ಇದು ಒಳ್ಳೆಯ ಔಷಧಿ. ಗರ್ಭಿಣಿಯರು ಸತತವಾಗಿ ಜೀರಿಗೆಯನ್ನು ಉಪಯೋಗಿಸಿದರೆ ಹೆರಿಗೆ ಸುಸೂತ್ರವಾಗುತ್ತದೆ. ಬಿಕ್ಕಳಿಕೆ ಉಂಟಾದಾಗ ಜೀರಿಗೆ ಮತ್ತು ತುಪ್ಪವನ್ನು ಬೆಂಕಿಗೆ ಹಾಕಿ ಹೊಗೆಯನ್ನು ಆಘ್ರಾಣಿಸಬೇಕು. ಅಜೀರ್ಣ ರೋಗದಲ್ಲಿ ದಿನನಿತ್ಯ ಜೀರಿಗೆ ಉಪಯೋಗಿಸಬಹುದು. ತಲೆ ಸುತ್ತು, ರಕ್ತಹೀನತೆ ಇದ್ದಲ್ಲಿ ಒಂದು ಲೋಟ ನೀರಿಗೆ ಅರ್ಧ ಚಮಚ ದನಿಯಾ, ಜೀರಿಗೆ ಪುಡಿ ಹಾಕಿ ಕುಡಿಯಬಹುದು. ಮಧುಮೇಹ ಸಮಸ್ಯೆ ಇರುವವರು ದಿನದಲ್ಲಿ ಎರಡು ಬಾರಿ ಅರ್ಧ ಚಮಚೆಯಷ್ಟು ಜೀರಿಗೆಯನ್ನು ಸ್ವಲ್ಪ ನೀರಿನೊಂದಿಗೆ ಸೇವಿಸಬಹುದು. ಚರ್ಮದ ಸಮಸ್ಯೆ, ತಲೆಕೂದಲಿನ ಸಮಸ್ಯೆ, ಮಾನಸಿಕ ಸಮಸ್ಯೆ, ನಿಶ್ಯಕ್ತಿ, ಕಣ್ಣಿನ ಸಮಸ್ಯೆ, ಬಾಯಿ ಹುಣ್ಣಿನ ಸಮಸ್ಯೆ, ಹಲ್ಲಿನ ಸಮಸ್ಯೆ, ನೆಗಡಿ, ಕೆಮ್ಮು, ಶ್ವಾಸಕೋಶದ ಸಮಸ್ಯೆ, ಹೃದಯದ ಸಮಸ್ಯೆಗಳು, ಮೂಲವ್ಯಾಧಿ, ಗಾಯ, ಜ್ವರ, ಪಿತ್ತಜನಕಾಂಗ, ಮೂತ್ರ ಜನಕಾಂಗದ ಸಮಸ್ಯೆಗಳು ಮಹಿಳೆ, ಮಕ್ಕಳ ಸಮಸ್ಯೆಗಳು ಇಂತಹ ಅನೇಕ ಸಮಸ್ಯೆಗಳಿಗೆ ಜೀರಿಗೆಯು ಅತ್ಯುಪಯುಕ್ತ ಔಷಧಿಯಾಗಿದೆ. ಇದರ ತೈಲ ಸುಗಂಧ ದ್ರವ್ಯ ತಯಾರಿಕೆಗೆ ಉಪಯುಕ್ತವಾಗಿದೆ.

ಎಸ್‌ಯು.ಎಚ್.

ಜೋಳ ಆಹಾರಧಾನ್ಯವಾಗಿ ಅತ್ಯಂತ ಪ್ರಸಿದ್ಧವಾದ ಬೆಳೆ. ಇದೊಂದು ಏಕದಳ ಸಸ್ಯ. ಇದು ಪೋಯೇಸೀ ಕುಟುಂಬದ ಆಂಡ್ರೋಪೋಗೋನಿಯ ಗುಂಪಿನದು. ಇದರ ವೈಜ್ಞಾನಿಕ ಹೆಸರು ಸಾರ್ಗಮ್. ಇದರಲ್ಲಿ ಅನೇಕ ಪ್ರಭೇಧಗಳಿವೆ. ಸುಮಾರು 30ಕ್ಕೂ ಹೆಚ್ಚು ಬಗೆಗಳು ದೇಶದ ನಾನಾ ಭಾಗಗಳಲ್ಲಿ ಕೃಷಿಯಲ್ಲಿವೆ. ಅವುಗಳ ಪೈಕಿ ಗ್ರೈನ್ ಸಾರ್ಗಮ್, ಸೋರ್ಗಾಸ್, ಗ್ರಾಸ್‌ಸಾರ್ಗಮ್ ಮತ್ತು ಬ್ರೂಮ್‌ಕಾರ್ನ್ ಮುಖ್ಯವಾದಂಥವು.

ಜೋಳದ ತವರು ಪಶ್ಚಿಮ ಆಫ್ರಿಕ ಎಂದು ತಿಳಿದುಬರುತ್ತದೆ. ಭಾರತದಲ್ಲಿ ಕ್ರಿ.ಪೂರ್ವದಿಂದಲೂ ಇದರ ಬೇಸಾಯ ಇದ್ದಿರಬೇಕು. ಆಫ್ರಿಕ, ಭಾರತ, ಚೀನ, ಮಂಚೂರಿಯ, ಅಮೇರಿಕ ಮೊದಲಾದ ದೇಶಗಳಲ್ಲಿ ಇದು ಮುಖ್ಯವಾದ ಬೆಳೆ. ಭಾರತದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗುಜರಾತ್, ಮಹಾರಾಷ್ಟ್ರ, ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶಗಳಲ್ಲಿ ಹೆಚ್ಚಾಗಿ ಇದರ ಕೃಷಿ ಉಂಟು. ಇರಾನ್, ತುರ್ಕಿ, ಏಷ್ಯಾ ಮೈನರ್, ದಕ್ಷಿಣ ಅಮೆರಿಕಾ, ಈಸ್ಟ್ ಹಾಗೂ ವೆಸ್ಟ್ ಇಂಡೀಸ್ ಈ ಭಾಗಗಳಲ್ಲೂ ಅಲ್ಪ ಪ್ರಮಾಣದಲ್ಲಿ ಕೃಷಿ ಮಾಡುವರು.

ಸಸ್ಯಸ್ವರೂಪ : ಸುಮಾರು 12-15 ಅಡಿ ಎತ್ತರ ಬೆಳೆಯುವ ಹುಲ್ಲು ಜಾತಿಯ ಸಸ್ಯವಿದು. ಇದರಲ್ಲಿ ಸುಮಾರು 10-15 ಗಿಣ್ಣುಗಳು 3-6 ಇಂಚು ಅಂತರದಲ್ಲಿರುತ್ತವೆ. ಬುಡದಲ್ಲಿ ಅನೇಕ ತಂತು ಬೇರುಗಳಿದ್ದು ಸುತ್ತಲೂ ಸಮ ಪ್ರಮಾಣದಲ್ಲಿ 1-2ಅಡಿವರೆಗೂ ಭೂಮಿಯ ಒಳಗೆ ಇಳಿಯಬಲ್ಲವು. ಇದರ ಕಾಂಡ ರಸಭರಿತವಾಗಿದ್ದು 1-2 ಅಂಗುಲದವರೆಗೂ, ವ್ಯಾಸವಿರುತ್ತದೆ. ತೆನೆ ಬರುವುದು ಬಿತ್ತನೆಯಾದ ಸುಮಾರು 5-6 ತಿಂಗಳ ಬಳಿಕ. ಕಾಂಡದ ತುದಿಯಲ್ಲಿ ತೆನೆಯಿರುತ್ತದೆ.



ಮೂರು ಅಂಗುಲ ಅಗಲ, 2-3 ಅಡಿ ಉದ್ದವಾದ ಎಲೆಗಳು ಕೆಳಮುಖವಾಗಿ ಬಾಗಿರುತ್ತವೆ. ಗಿಡ ಹುಲುಸಾಗಿದ್ದಷ್ಟು ಎಲೆಗಳು ಕಡು ಹಸುರು ಬಣ್ಣದಿಂದ ಕೂಡಿದ್ದು ರಸಭರಿತವಾಗಿರುತ್ತವೆ. ಗಿಣ್ಣೆಗೊಂದರಂತೆ ಎಲೆಗಳಿದ್ದು ಸುಮಾರು 30ರ ವರೆಗೂ ಇರುತ್ತವೆ. ತಳಿಗಳಿಗೆ ಅನುಗುಣವಾಗಿ ಜೋಳದ ತೆನೆ ಉದ್ದ, ದಪ್ಪ ಮತ್ತು ಇಳುವರಿಯಲ್ಲೂ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಇದರ ಗೊಂಚಲು 3-15 ಅಂಗುಲದವರೆಗೂ ಉದ್ದ, 3-10 ಅಂಗುಲದವರೆಗೂ ಅಗಲವುಳ್ಳ ಹಲವು ಕವಲುಗಳಿರುತ್ತವೆ. ಇವು ತೆನೆಯ ಬುಡದಲ್ಲಿ ಕಡಿಮೆ ಇದ್ದು, ಮಧ್ಯದಲ್ಲಿ ದಟ್ಟವಾಗಿ ಮೇಲೆ ಹೋದಂತೆ ವಿರಳವಾಗುತ್ತವೆ. ಕಾಂಡ ರೋಮಯುಕ್ತವಾಗಿದೆ. ಫಲವತ್ತಾದ ಮಣ್ಣಿನಲ್ಲಿ ಕಾಂಡದಿಂದ ಕೆಲವು ಕವಲುಗಳೂ ಮೂಡುತ್ತವೆ. ತೆನೆಗಳು ಗಿಡ್ಡವಾಗಿದ್ದು ಅಲ್ಪ ಪ್ರಮಾಣದ ಕಾಳುಗಳನ್ನು ಹೊಂದಿರುತ್ತವೆ. ತೆಳು ಬೂದು ಬಣ್ಣದ ಹೂಗಳು ಇದರವು. ಸಾಮಾನ್ಯವಾಗಿ ಮಧ್ಯರಾತ್ರಿ ಅಥವಾ ಬೆಳಗಿನ ಜಾವ ಅರಳುತ್ತವೆ. ಸುಮಾರು ಒಂದು ವಾರದಿಂದ ಹತ್ತು ದಿನಗಳ ಒಳಗೆ ಸಂಪೂರ್ಣವಾಗಿ ವಿಕಸಿಸುತ್ತವೆ. ನಾಲ್ಕು ಪುಚ್ಛಗಳಿರುವ ಪುಷ್ಪ ಪಾತ್ರೆ ಇದರದು. ಪುಚ್ಛಗಳಿಂದ ಶಲಾಕಾಗ್ರ ಹಾಗೂ ಪರಾಗಕೋಶಗಳು ಹೊರಬರುವಾಗಲೇ ಅದರಿಂದ ಪರಾಗ ಕಾಣಿಸಿಕೊಳ್ಳುತ್ತದೆ. ಅನಂತರ 15 ದಿನಗಳ ಕಾಲ ಸ್ವಪರಾಗಸ್ಪರ್ಶ ನಡೆಯುತ್ತದೆ. ಕೆಲವೊಮ್ಮೆ ಅನ್ಯಪರಾಗಸ್ಪರ್ಶವೂ ಆಗುವುದುಂಟು.

ಇದರ ಬೀಜ ಗುಂಡಗಿದ್ದು ತಳಿಯಿಂದ ತಳಿಗೆ ಗಾತ್ರದಲ್ಲಿ ವ್ಯತ್ಯಾಸವಿರುತ್ತದೆ. ಕೆಲವು ಜಾತಿಯ ಬೀಜಗಳ ಮೇಲ್ಪದರ ದಪ್ಪವಾಗಿದ್ದು ಇನ್ನು ಕೆಲವು ತೆಳು ಸಿಪ್ಪೆ ಹೊಂದಿರುತ್ತವೆ. ಕೆಲವು ಗಡುಸಾಗಿದ್ದು ಇನ್ನು ಕೆಲವು ಸುಲಭವಾಗಿ ಪುಡಿಯಾಗುವಂಥವು.

ಕೃಷಿ : ಭಾರತದಲ್ಲಿ ಜೋಳದ ಬೇಸಾಯ ಬತ್ತದ ಅನಂತರದ ಸ್ಥಾನ ಪಡೆದಿದೆ. ಅದರಲ್ಲೂ ಕರ್ನಾಟಕ ಭಾರತದಲ್ಲಿ ಎರಡನೆಯ ಸ್ಥಾನ ಪಡೆದರೆ ಮಹಾರಾಷ್ಟ್ರ ಮೊದಲನೆಯ ಸ್ಥಾನ ಪಡೆಯುತ್ತದೆ. ಇದನ್ನು ಹಿಂಗಾರು ಮುಂಗಾರು ಬೆಳೆಯಾಗಿ ಬೆಳೆಯುತ್ತಾರೆ. ಆದರೆ ಮುಂಗಾರಿನ ಅವಧಿಯಲ್ಲಿ ಬೆಳೆಯುವಷ್ಟು ವಿಸ್ತಾರವಾದ ಪ್ರದೇಶಗಳಲ್ಲಿ ಹಿಂಗಾರು ಬೆಳೆ ಬೆಳೆಯುವುದಿಲ್ಲ. ಕರ್ನಾಟಕದಲ್ಲಿ ಬಿಜಾಪುರ, ಗುಲ್ಬರ್ಗಾ, ರಾಯಚೂರು, ಧಾರವಾಡ, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ಜಿಲ್ಲೆಗಳ ಹೆಚ್ಚಿನ ಭಾಗದಲ್ಲಿ ಇದನ್ನು ಹಿಂಗಾರು ಬೆಳೆಯಾಗಿ ಕೃಷಿ ಮಾಡುತ್ತಾರೆ. ಧಾರವಾಡ, ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಬೆಳಗಾವಿ ಜಿಲ್ಲೆಗಳ (ನಿರ್ದಿಷ್ಟ ಅವಧಿಯಲ್ಲಿ) ಮಳೆ ಬೀಳುವ ಪ್ರದೇಶಗಳಲ್ಲಿ ಹಾಗೂ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು ಭಾಗಗಳಲ್ಲಿ ಮುಂಗಾರಿನಲ್ಲಿ ಇದರ ಕೃಷಿ ನಡೆಯುತ್ತದೆ. ವರ್ಷದ ಮಧ್ಯಭಾಗದಲ್ಲಿ ಬಿತ್ತನೆ ಮಾಡಿ ವರ್ಷದ ಕೊನೆಯಲ್ಲಿ ಕೊಯ್ಲು ಮಾಡುತ್ತಾರೆ. ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲೂ ಇದರ ಕೃಷಿ ಉಂಟು. ಆದ್ದರಿಂದ ಇದನ್ನು ಕುಷ್ಕಿ ಬೆಳೆಯಾಗಿ ಬೆಳೆಯುತ್ತಾರೆ. ಜೋಳ ಬೆಳೆಯಲು ಸಾಮಾನ್ಯ ಫಲವತ್ತಾಗಿರುವ ಭೂಮಿ ಸಾಕು. ಆದರೆ ಇಂಥ ಪ್ರದೇಶದಲ್ಲಿ ಇಳುವರಿ ಕಡಿಮೆ.

ಮುಂಗಾರು ಜೋಳ : ಕೆಂಪು, ಕಪ್ಪು ಮತ್ತು ಮರಳು ಭೂಮಿಯಲ್ಲೂ ಮುಂಗಾರು ಬೆಳೆಯಾಗಿ ಜೋಳವನ್ನು ಬೆಳೆಸುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ ಈ ಅವಧಿಯಲ್ಲಿ ಬೆಳೆಯುವ ತಳಿಗಳು ಬೇರೆಯಾಗಿರುತ್ತವೆ. ಕರಾಡ, ತಲಗೊಂಡ, ಬಿ.ಎಚ್. 4-1-4, ಗಿಡ ಮಾಲದಂಡಿ ತಳಿಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಬೆಳೆಸುವರು. ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ನಂದ್ಯಾಲ, ಸದಗರ ನಂದ್ಯಾಲ, ಫುಲ್ಗರ್, ಡಿ-340 ತಳಿಗಳನ್ನು ಬೆಳೆಸುತ್ತಾರೆ. ಸಾಮಾನ್ಯವಾಗಿ ಕಪ್ಪು ಮಣ್ಣಿನಲ್ಲಿ ಹಿಂಗಾರು ಜೋಳವನ್ನು ಬೆಳೆಸುವುದುಂಟು. ಕರ್ನಾಟಕದ ಎಲ್ಲ ಭಾಗಗಳಲ್ಲೂ ಜೂನ್-ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿದರೆ ಮೈಸೂರಿನ ಸುತ್ತಮುತ್ತ ಏಪ್ರಿಲ್-ಮೇ ತಿಂಗಳಲ್ಲಿ ಬಿತ್ತುವುದು ರೂಢಿ.



ಜೋಳದ ಬೇಡಿಕೆ ಮತ್ತು ಅದರ ಕೃಷಿಯ ವ್ಯಾಪಕತೆಯ ದೃಷ್ಟಿಯಿಂದ ಅನೇಕ ರೀತಿಯ ಸಂಶೋಧನೆಗಳು ಈ ನಿಟ್ಟಿನಲ್ಲಿ ನಡೆದಿವೆ. ಇದರ ಪರಿಣಾಮವಾಗಿ ಅಖಿಲ ಭಾರತ ಮಟ್ಟದಲ್ಲಿ 1960ರಲ್ಲಿ ಜೋಳದ ತಳಿ ಅಭಿವೃದ್ಧಿ ಮಾಡುವ ಯೋಜನೆ ಆರಂಭವಾಯಿತು. ಪ್ರಪಂಚದ ಎಲ್ಲ ಭಾಗಗಳಿಂದ ಸು. 10,000 ವಿವಿಧ ತಳಿಗಳನ್ನು ಸಂಗ್ರಹಿಸಿ ಅವುಗಳಲ್ಲಿ ಉತ್ತಮ ತಳಿಗಳನ್ನು ವೃದ್ಧಿ ಪಡಿಸಲಾಯಿತು. ಹೀಗೆ ವೃದ್ಧಿಸಿದ ಸಿ.ಕೆ. 60ಎ, ಯನ್ನು ಅಮೇರಿಕಾದಿಂದ ಸಂಗ್ರಹಿಸಿ ವಿವಿಧ ಆನುವಂಶಿಕ ತಳಿಗಳೊಡನೆ ಸಂಪರ್ಕಗೊಳಿಸಿ ಸಿ.ಕೆ. 60ಎxಐ.ಎಸ್. 84 ಎನ್ನುವ ಶಕ್ತಿಮಾನ್ ಹೆಸರಿನ ತಳಿಯನ್ನು ಅಭಿವೃದ್ಧಿಪಡಿಸಲಾಯಿತು. ಹೀಗೆ ಅನೇಕ ರೀತಿಯ ತಳಿಗಳನ್ನು ವರ್ಧಿಸಿ ಪ್ರಪಂಚದ ವಿವಿಧ ಭಾಗಗಳಲ್ಲಿ ಕೃಷಿ ಮಾಡಲಾಗುತ್ತಿದೆ.

ಬಿತ್ತನೆ : ಮೇಲ್ಕಂಡ ತಳಿಗಳು ಮುಂಗಾರಿನಲ್ಲಿಯೂ ಹಿಂಗಾರಿನಲ್ಲಿಯೂ ಬೆಳೆಯಲು ಯೋಗ್ಯವಾಗಿವೆ. ವೈಜ್ಞಾನಿಕ ಆವಿಷ್ಕಾರದ ಫಲವಾಗಿ ಕಂಡುಕೊಂಡ ತಳಿಗಳು ಹೆಚ್ಚು ಇಳುವರಿಯನ್ನು ಕೊಡುತ್ತಿವೆ. ಈ ತಳಿಗಳನ್ನು ಸಾಲುಗಳ ರೂಪದಲ್ಲಿ ನಾಟಿ ಮಾಡಿ ಬೆಳೆಸುವರು. ಮಳೆಗಾಲಕ್ಕೆ ಮೊದಲೇ ಭೂಮಿಯಲ್ಲಿರುವ ಗಿಡಗೆಂಟೆಗಳನ್ನು ತೆಗೆದು ಶುದ್ಧಗೊಳಿಸಿ ಮೊದಲ ಮಳೆಯಲ್ಲೇ ಉತ್ತು, ಹದಮಾಡಿ ನಾಟಿ ಮಾಡಲು ಸಿದ್ಧತೆ ಮಾಡಿಕೊಳ್ಳುವರು. ಎರಡು ಸಾಲುಗಳ ನಡುವೆ ಒಂದೂವರೆ ಅಡಿ ಅಂತರವಿರಬೇಕು. ಪ್ರತಿಯೊಂದು ಸಾಲಿನಲ್ಲಿ ಸಸಿಯಿಂದ ಸಸಿಗೆ ಒಂದೂವರೆ ಅಡಿ ಅಂತರವಿರುವಂತೆ ಜೋಡಿ ಬೀಜಗಳನ್ನು ಬಿತ್ತುತ್ತಾರೆ. ಒಂದು ಎಕರೆಗೆ ಸುಮಾರು 4-5 ಕೆ.ಜಿ ಬೀಜ ಸಾಕು. ಕೆಲವು ಜಮೀನುಗಳಲ್ಲಿ ಕೀಟಬಾಧೆ, ಹುಳು ಹುಪ್ಪಟೆಗಳ ಹಾವಳಿ ಹೆಚ್ಚಾಗಿರುವುದರಿಂದ ಸ್ವಲ್ಪ ಹೆಚ್ಚು ಬೀಜಗಳನ್ನು ಉಪಯೋಗಿಸುತ್ತಾರೆ. ನಾಟಿ ಮಾಡಿದ ಇಪ್ಪತ್ತು ದಿವಸಗಳಲ್ಲಿ ಪೈರು

ಸುಮಾರು 2 ಅಡಿ ಎತ್ತರ ಬೆಳೆಯುತ್ತದೆ. ಈ ಅವಧಿಯಲ್ಲಿ ಕೈಗುದ್ದಲಿಯಿಂದ ಕೆದಕಿ ಮಣ್ಣನ್ನು ಸಡಿಲಗೊಳಿಸಿ ಕಳೆಯನ್ನು ತೆಗೆದು ಮಣ್ಣಿನೊಳಗೆ ಬೆರೆಸುತ್ತಾರೆ. ಪೈರು ಹುಲುಸಾಗಿ ಬರದಿದ್ದರೆ ಕೊಟ್ಟಿಗೆ ಗೊಬ್ಬರವನ್ನು ಮಕರಿಗಳಲ್ಲಿ ತಂದು ಹೊತ್ತು ಪ್ರತಿ ಪೈರಿನ ಬುಡಕ್ಕೆ ಸಮ ಪ್ರಮಾಣದಲ್ಲಿ ಕೊಡಬೇಕು. ಅನಂತರ ನೀರಾವರಿ ಬೆಳೆಯಾದರೆ (ಹಿಂಗಾರು) ಎರಡೂ ಸಾಲುಗಳ ಮಧ್ಯೆ ಸಣ್ಣ ಎಲೆ ಕೊಟ್ಟಿನಿಂದ ಕಾಲುವೆಯಂತೆ ಮಣ್ಣನ್ನು ತೆಗೆದು ಪೈರಿನ ಬುಡದ ಮೇಲೆ ಹರಡಿರುವ ಗೊಬ್ಬರ ಮುಚ್ಚಿ ಕೊಳ್ಳುವಂತೆ ಮಾಡಬೇಕು. ಒಂದೆರಡು ದಿನ ಬಿಟ್ಟು ಸಾಲುಗಳ ಗುಂಟ ನೀರನ್ನು ಹಾಯಿಸುವರು. ಹೀಗೆ ವಾರಕ್ಕೊಂದೆರಡು ಬಾರಿ ನೀರುಣಿಸಬೇಕು. ತೆನೆ ಬರುವ ಅವಧಿ ತಳಿಯಿಂದ ತಳಿಗೆ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ 50-60 ದಿವಸಗಳಲ್ಲಿ ಕೆಲವು ತಳಿಗಳು ತೆನೆ ಬಿಡುತ್ತವೆ. ಸಿ.ಎಸ್.ಎಚ್-1 ರಲ್ಲಿ 56 ದಿವಸ ಸಿಎಸ್‌ಎಚ್-2, 3 ತಳಿಗಳಿಗೆ 65-70 ದಿವಸ ಬೇಕು.

ಹಿಂಗಾರು ಜೋಳ : ಇದು ಕಡು ಬಿಳುಪಿನ ಹೊಳೆಯುವ ಕಾಳುಗಳನ್ನು ಕೊಡುವ ತಳಿ. ಹೆಚ್ಚು ಉಷ್ಣವಲಯಗಳಲ್ಲಿ ಹಾಗೂ ಕಪ್ಪು ಮಣ್ಣಿನಲ್ಲಿ ಕೃಷಿ ಮಾಡುವರು. ಹಿಂಗಾರು ತಳಿಗಳಲ್ಲಿ ಮುಖ್ಯವಾದವುಗಳೆಂದರೆ, 1. ಮಾಲದಂಡಿ, 2. ಮೂಗುತಿ, 3. ಅಣ್ಣಿಗೇರಿ.

ಮಾಲದಂಡಿ 35-1 : ಭಾರತದ ಎಲ್ಲ ರಾಜ್ಯಗಳಲ್ಲೂ ಹಿಂಗಾರಿನಲ್ಲಿ ಇದರ ಕೃಷಿ ಉಂಟು. ಬಿತ್ತಿದ 4-5 ತಿಂಗಳ ಒಳಗೆ ಕೊಯ್ಲಿಗೆ ಬರುತ್ತದೆ. ಸುಮಾರು 10-12 ಅಡಿ ಎತ್ತರ ಬೆಳೆಯಬಲ್ಲುದು. ಬಿಸಿಲನ್ನು ತಡೆಯುವ ಗುಣ ಇದಕ್ಕಿರುವುದರಿಂದ ಎಲ್ಲ ಶುಷ್ಕ ಪ್ರದೇಶಗಳಲ್ಲೂ ಬೆಳೆಯುವರು. ರೋಗನಿರೋಧಕ ಶಕ್ತಿಯೂ ಇದಕ್ಕಿದೆ. ಇದರದೇ ಮತ್ತೊಂದು ತಳಿ ಮಾಲದಂಡಿ 75-2 ಅನ್ನು ಚೌಳುಭೂಮಿಗಳಲ್ಲಿ ಕೃಷಿ ಮಾಡುತ್ತಾರೆ.

ಮೂಗುತಿ 5-4-1 : ಇದನ್ನು M 35-1 ಹಾಗೂ ಗುಜರಾತಿನ ವಿರಮಗಾಂವ್ ತಳಿಗಳ ಸಂಯೋಗದಿಂದ ವೃದ್ಧಿಪಡಿಸಲಾಗಿದೆ. ಇದು ಸುಮಾರು ಐದು ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಹೆಚ್ಚು ಪೌಷ್ಠಿಕಾಂಶದಿಂದ ಕೂಡಿರುವ ತಳಿಯಿದು. ಕಾಂಡ ದೃಢವಾಗಿದ್ದು ಹೆಚ್ಚು ಪ್ರೋಟೀನ್ ಮತ್ತು ಲವಣಾಂಶಗಳನ್ನು ಹೊಂದಿದೆ. ಇದು ಕಡು ಬಿಸಿಲಿನಲ್ಲೂ ಬೆಳೆಯಬಲ್ಲುದು. ಇದರ ದಂಟು ದನಗಳಿಗೆ ಉತ್ತಮ ಮೇವು.

ಅಣ್ಣಿಗೇರಿ 7-47-3 : ಇದನ್ನು ಮಾಲದಂಡಿ 35-1 ಮತ್ತು ಎಣ್ಣೆಗಾರ ಜಿ.ಎಸ್. 560-1-1 ತಳಿಗಳ ಸಂಕರಣದಿಂದ ಅಭಿವೃದ್ಧಿ ಪಡಿಸಲಾಗಿದೆ. ಇದನ್ನು ಸ್ವಲ್ಪ ತೇವಾಂಶವಿರುವ ಎಂದರೆ ಹೆಚ್ಚು ಮಳೆ ಬೀಳುವ ಹಿಂಗಾರಿನಲ್ಲಿ ಬೆಳೆಸುತ್ತಾರೆ. ಮೇಲಿನ ಎರಡೂ ತಳಿಗಳಿಗಿಂತ ಹೆಚ್ಚು ಇಳುವರಿ ಕೊಡುತ್ತದೆ.

ರೋಗರುಜಿನಗಳು : ಎಲೆ ಮಚ್ಚೆ ರೋಗ, ತುಕ್ಕುರೋಗ, ಕಾಡಿಗೆ ರೋಗಗಳಲ್ಲದೆ ಸುಳಿನೊಣ, ಕಾಂಡಕೊರಕ, ಮಿರುಜುನೊಣ, ಧಾನ್ಯಕೊರಕ ಮುಂತಾದ ಕೀಟಗಳು ಬಾಧಿಸುತ್ತವೆ.

ಎಲೆಮಚ್ಚೆ ರೋಗ : ಪೈರು ಬೆಳೆದ ಒಂದೆರಡು ತಿಂಗಳಲ್ಲಿ ಎಲೆಮಚ್ಚೆರೋಗ ತಗಲುತ್ತದೆ. ತೇವ ಹೆಚ್ಚಾದರೂ ಉಷ್ಣ ಹೆಚ್ಚಾದರೂ ಇದರ ಬಾಧೆ ಹೆಚ್ಚು. ಎಲೆಯ ಮೇಲೆ ಅಲ್ಲಲ್ಲಿ ಕಪ್ಪು ಚುಕ್ಕಿಗಳು ಕಾಣಿಸಿಕೊಳ್ಳುವುದು ಇದರ ಲಕ್ಷಣ.

ತುಕ್ಕುರೋಗ : ಸಸ್ಯ ಬೆಳೆದ ಯಾವುದೇ ಕಾಲದಲ್ಲಾದರೂ ಈ ರೋಗ ಕಾಣಿಸಿಕೊಳ್ಳಬಹುದು. ಎಲೆಯ ಮೇಲೆ ಕೆಂಪು, ಕಂದು, ನೇರಳೆ ಬಣ್ಣದ ಚುಕ್ಕಿಗಳು ಕಾಣಿಸಿಕೊಳ್ಳುವುದು ಇದರ ಲಕ್ಷಣ. ಈ ರೋಗ ಹೆಚ್ಚಾದಂತೆಲ್ಲಾ ಎಲೆಯ ಸುತ್ತಲೂ ಹರಡುತ್ತಾ ಹೋಗಿ ಕೊನೆಗೆ ಸಸ್ಯ ಒಣಗಿ ಹೋಗುತ್ತದೆ.

ಕಾಡಿಗೆ ರೋಗ : ಇದು ತೆನೆಗೆ ಬರುವ ರೋಗ. ತೆನೆಯಲ್ಲಿ ಮೂಡುವ ಕಾಳುಗಳು ಕಾಡಿಗೆಯಂತೆ ಮೆದುವಾಗಿ ಕೋಶಗಳಂತೆ ಕಾಣಿಸಿಕೊಳ್ಳುತ್ತವೆ. ತೆನೆಯನ್ನು ಅದುಮಿದರೆ ಒಂದು ಬಗೆಯ ಬೂದಿಯಂಥ ಧೂಳು ಹೊರಬರುತ್ತದೆ. ಇದು ತೆನೆಯ ಯಾವುದೇ ಹಂತದಲ್ಲಾದರೂ ಬರಬಹುದಾದರೂ ಇದು ಜೋಳಕ್ಕೆ ತಗಲುವುದು ಅಪರೂಪ.

ಸುಳಿನೊಣ : ಅಕಾಲದಲ್ಲಿ ಬಿತ್ತನೆ ಮಾಡಿದ ಪೈರಿಗೆ ಈ ರೋಗ ತಗಲುತ್ತದೆ. ಪೈರು ಎಳೆಯದಾಗಿರುವಾಗಲೇ ಇದರ ಸುಳಿಯನ್ನು ನೊಣದ ಮರಿಗಳು ತಿನ್ನುವುದರಿಂದ ಸಸಿ ಕೊಳೆಯಲಾರಂಭಿಸಿ, ಪೈರು ಸತ್ತು ಹೋಗುವುದು. ಬುಡದಿಂದ ಹಲವು ನಿಷ್ಪ್ರಯೋಜಕ ಕವಲುಗಳೊಡೆದು ಪೊದೆಯಂತೆ ಬೆಳೆಯುತ್ತದೆ. ಸುಳಿಯನ್ನು ಬಿಚ್ಚಿ ನೋಡಿದರೆ ನೊಣದ ಮರಿಗಳು ಕಾಣಿಸುತ್ತವೆ.

ಕಾಂಡಕೊರಕ : ಜೋಳದ ಪೈರಿಗೆ ತಗಲುವ ಎರಡನೆಯ ಹಂತದ ರೋಗವಿದು. ಪೈರು ಬೆಳೆದು 30-40 ದಿನಗಳಾದ ಮೇಲೆ ಈ ರೋಗ ಕಾಣಿಸಿಕೊಳ್ಳುತ್ತದೆ. ಸಸಿ ನಿಸ್ತೇಜವಾಗಿ ಕಾಣುವುದು ಇದರ ಲಕ್ಷಣ. ಪೈರಿನ ಮೇಲೆಲ್ಲ ಸಣ್ಣಸಣ್ಣ ತೂತುಗಳು ಕಾಣಿಸಿಕೊಳ್ಳುತ್ತವೆ. ಕಾಂಡ ಕೊರಕದ ಹುಳುಗಳು ಸಸ್ಯವನ್ನು ತಿನ್ನುವುದರಿಂದ ಗಿಡದ ಮೇಲೆ ಮಚ್ಚೆಗಳು ಕಾಣಿಸಿಕೊಂಡು ಇಳುವರಿ ಕಡಿಮೆಯಾಗುತ್ತದೆ. ಈ ರೋಗ ಹೆಚ್ಚಾದರೆ ಕಾಳು ಕಟ್ಟುವುದು ಕಡಿಮೆಯಾಗಿ ಜಳ್ಳಾಗುವ ಸಂಭವವುಂಟು.

ಮಿರ್ಜ್‌ನೊಣ ಮತ್ತು ಧಾನ್ಯಕೊರಕನೊಣ ಅನುಕ್ರಮವಾಗಿ ಕಾಳು ಹಾಲು ತುಂಬದಂತೆ ಹಾಗೂ ಹಾಲು ತುಂಬಿದ ಗುಂಡನೆಯ ಕಾಳುಗಳನ್ನು ಕೊರೆದು ನಾಶಪಡಿಸಿ ನಷ್ಟವುಂಟು ಮಾಡುತ್ತದೆ.

ರೋಗ ನಿವಾರಣೆ : ಉತ್ತಮ ಬೀಜಗಳ ಆಯ್ಕೆ, ಸರಿಯಾದ ಕಾಲದಲ್ಲಿ ಬಿತ್ತನೆ, ಕಾಲಕಾಲಕ್ಕೆ ಕಳೆ ತೆಗೆಯುವುದು, ಒತ್ತು ಪೈರನ್ನು ಸಡಿಲಗೊಳಿಸಿ ಬೇರುಗಳಿಗೆ ಗಾಳಿಯಾಡುವಂತೆ ಮಾಡುವುದು, ಕೊಟ್ಟಿಗೆ ಗೊಬ್ಬರವನ್ನು ಕಾಲಕ್ಕೆ ಸರಿಯಾಗಿ ಹಾಕುವುದರಿಂದ ಬಹುಪಾಲು ರೋಗಗಳನ್ನು ತಡೆಗಟ್ಟಬಹುದು. ರೋಗ ತಗಲಿದ ಪೈರನ್ನು ಕಿತ್ತು ಸುಡುವುದು. ಇಡೀ ತೋಟವನ್ನು ಆಕ್ರಮಿಸಿದಂತೆ ಕಂಡರೆ ಉತ್ತು ಪರ್ಯಾಯ ಬೆಳೆ ತೆಗೆಯುವುದು, ದೇಸಿ ಔಷಧಿಗಳಾದ ಬೇವಿನ ಹಿಂಡಿ, ಸೀತಾ ಫಲದ ಸೊಪ್ಪು, ಬೇವಿನ ಸೊಪ್ಪು ಜಜ್ಜಿ ಮೂರ್‍ನಾಲ್ಕು ದಿವಸ ನೀರಿನಲ್ಲಿ ನೆನೆಸಿ, ಸಗಣಿ ಬೆರೆಸಿದ ನೀರನ್ನು ಬೆಳಗಿನ ಜಾವ ಅಥವಾ ಸಂಜೆ ಹೊತ್ತು ಸಿಂಪಡಿಸಬೇಕು. ರೋಗ ಬರುವ ಮೊದಲೇ ಈ ಕೆಲಸ ಮಾಡುವುದು ಉಚಿತ.

ಉಪಯೋಗ : ಕೆಲವು ಪ್ರದೇಶಗಳಲ್ಲಿ ಜೋಳವೇ ಮುಖ್ಯ ಆಹಾರ. ಕರ್ನಾಟಕದ ಉತ್ತರಭಾಗ, ಮಹಾರಾಷ್ಟ್ರದ ಅನೇಕ ಜಿಲ್ಲೆಗಳಲ್ಲಿ, ಆಂಧ್ರದಲ್ಲಿ ಕೆಲವು ಭಾಗಗಳಲ್ಲೂ ಇದನ್ನು ಪ್ರಮುಖ ಆಹಾರವಾಗಿ ಉಪಯೋಗಿಸುತ್ತಾರೆ. ಜೋಳದ ಹಿಟ್ಟಿನಿಂದ ಅನೇಕ ರೀತಿಯ ಖಾದ್ಯಗಳನ್ನು ತಯಾರಿಸುತ್ತಾರೆ. ಗೋಧಿ ಹಿಟ್ಟಿನೊಂದಿಗೆ ಬೆರೆಸಿ ಮಿಠಾಯಿ ತಯಾರಿಸುವರು. ಕೆಲವು ತಳಿಗಳು ಮದ್ಯ ತಯಾರಿಕೆಯಲ್ಲೂ ಉಪಯೋಗವಾಗುತ್ತವೆ. ಒಳ್ಳೆಯ ಬೀಜಗಳನ್ನು ಹುರಿದು ಅರಳು ಮಾಡಿ ಸಿಹಿ ತಿಂಡಿ ಮಾಡುವುದಿದೆ. ಇತ್ತೀಚಿನ ದಿನಗಳಲ್ಲಿ ಸೀಮೆ ಹಸುಗಳಿಗೆ ಮೇವಿಗಾಗಿ ಜೋಳದ ದಂಡನ್ನು ಪ್ರತ್ಯೇಕವಾಗಿ ಬೆಳೆಸುತ್ತಿದ್ದಾರೆ. ಉತ್ತಮ ವಾಣಿಜ್ಯ ಬೆಳೆಯಾಗಿರುವುದರಿಂದ ತೆನೆ ಬರುವ ಮೊದಲು ಕೊಯ್ದು ಕಂತೆ ಕಟ್ಟಿ ಗಾಡಿನಲ್ಲಿ ತುಂಬಿಕೊಂಡು ಮಾರುತ್ತಾರೆ.

ದಕ್ಷಿಣ ಭಾರತದ ಹಲವು ಪ್ರದೇಶಗಳಲ್ಲಿ ಮಿಶ್ರ ಬೆಳೆಯಾಗಿ ಜೋಳದ ಕೃಷಿ ಮಾಡುತ್ತಾರೆ. ರಾಗಿ ಹೊಲಗಳಲ್ಲಿ ಸಾಲುಗಳಂತೆ ಜೋಳ, ಅವರೆ, ತೊಗರಿ, ಹೆಸರು ಕಾಳುಗಳನ್ನು ಮಿಶ್ರಮಾಡಿ ಕೂರಿಗೆಯಿಂದ ಬಿತ್ತುವರು. ಇಲ್ಲಿ ಬಳಸುವ ಜೋಳಗಳು ಬಿಳಿ, ಕಪ್ಪು ಮತ್ತು ಕೆಂಪು ಬಣ್ಣದವು. ಕಪ್ಪು ಮತ್ತು ಕೆಂಪು ಜೋಳದ ದಂಟುಗಳನ್ನು ತೆನೆ ಬಿಡುವ ಮೊದಲೇ ಕೊಯ್ದು ದನಗಳಿಗೆ ಅದರಲ್ಲೂ ಮುಖ್ಯವಾಗಿ ಹೋರಿಗಳಿಗೆ ತಿನ್ನಿಸುತ್ತಾರೆ. ಬಿಳಿ ಜೋಳವನ್ನು ತೆನೆ ಬಲಿಯುವ ತನಕ ಬಿಟ್ಟು ಅನಂತರ ಕೊಯ್ದು ರೊಟ್ಟಿ, ಮುದ್ದೆ ಉಪ್ಪಿಟ್ಟು ಇತ್ಯಾದಿಗಳಿಗೆ ಬಳಸುವರು. ಕೆಂಪು ಮತ್ತು ಕಪ್ಪು ಜೋಳಗಳನ್ನು ದನಗಳಿಗೆ ಮೇವಾಗಿ ಬಳಸುವುದುಂಟು. ಒಟ್ಟಿನಲ್ಲಿ ಬರಗಾಲದ ಬಂಗಾರವಾದ ಇದು ಒಂದು ಕಾಲದಲ್ಲಿ (ದಕ್ಷಿಣಭಾರತದಲ್ಲಿ) ಬಡವರ ಭಾಗ್ಯವಾಗಿ ಬದುಕು ನೀಗಿಸುವ ಮುಖ್ಯ ಆಹಾರವಾಗಿತ್ತು.

ಎನ್. ಆರ್.

ಟರ್ನಿಪ್ ಬ್ರ್ಯಾಸಿಕೇಸಿ ಕುಟುಂಬಕ್ಕೆ ಸೇರಿದ ಈ ತರಕಾರಿಯನ್ನು ಸಸ್ಯ ವೈಜ್ಞಾನಿಕ ಪರಿಭಾಷೆಯಲ್ಲಿ ಬ್ರ್ಯಾಸಿಕಾ ರೆಪಾ ಎಂದು ಕರೆಯುತ್ತಾರೆ. ಇದರ ಮೂಲದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು ರಷ್ಯಾ ಮತ್ತು ಸೈಬೀರಿಯಾ ಎಂದರೆ ಮತ್ತೆ ಹಲವರು ಏಷ್ಯಾದ ಮಧ್ಯಭಾಗ ಎಂದೂ ಪಂಜಾಬ್ ಮತ್ತು ಕಾಶ್ಮೀರವೆಂತಲೂ ಹೇಳುತ್ತಾರೆ. ಆದರೆ ಭಾರತದಲ್ಲಿ ಇದನ್ನು ಆದಿ ಕಾಲದಿಂದಲೂ ಬೆಳೆಯಲಾಗುತ್ತಿದೆ. ಇದು ಜಮ್ಮು, ಕಾಶ್ಮೀರ, ಹಿಮಾಚಲಪ್ರದೇಶ ಮುಂತಾದ ತಂಪು ಹವಾಗುಣವಿರುವ ಪ್ರದೇಶಗಳಲ್ಲಿ ಹೆಚ್ಚು ಬೇಸಾಯದಲ್ಲಿದೆ. ಇದನ್ನು ಜುಲೈ ತಿಂಗಳಿನಿಂದ ಡಿಸೆಂಬರ್ ತಿಂಗಳವರೆಗೆ ಬೆಳೆಯುತ್ತಾರೆ.

ಬಿತ್ತನೆ ಮತ್ತು ನಾಟಿ: ಇನ್ನಿತರ ಬೆಳೆಗಳಂತೆ ಇದಕ್ಕೂ ಕೂಡ ಮರಳು ಮಿಶ್ರಿತ ಗೋಡು ಹಾಗೂ ಫಲವತ್ತಾಗಿರುವ, ನೀರು ಇಂಗಿ ಹೋಗಬಲ್ಲ ಉದುರು ಮಣ್ಣು ಉಪಯುಕ್ತ. ಇದನ್ನೇ ಸ್ವತಂತ್ರಬೆಳೆಯಾಗಿ ಬೆಳೆಯುವುದು ಕಡಿಮೆ. ನವಿಲುಕೋಸು, ಕ್ಯಾರೆಟ್, ಬೀಟ್‌ರೂಟ್ ಮತ್ತು ಲೆಟ್ಯೂಸ್‌ಗಳ ಜೊತೆ ಮಿಶ್ರ ಬೆಳೆಗಳನ್ನಾಗಿ ಹೆಚ್ಚಾಗಿ ಬೆಳೆಯುತ್ತಾರೆ. ಸ್ವತಂತ್ರ ಬೆಳೆಯಾಗಿ ಬೆಳೆಯುವುದಾದರೆ ಚೆನ್ನಾಗಿ ಉತ್ತು ಪಾತಿಗಳನ್ನು ಮಾಡಿ ಒಂದು ಸೇರು ಬೀಜವನ್ನು ಮರಳಿನೊಂದಿಗೆ ಸೇರಿಸಿ ತೆಳ್ಳಗೆ ಬಿತ್ತಿ ಅನಂತರ ಸಸಿಗಳ 5-7 ಅಂಗುಲದ ಅಂತರ ಇರುವಂತೆ ಮಾಡಿ, ಉಳಿದ ಒತ್ತಾದ ಸಸಿಗಳನ್ನು ಕಿತ್ತು ಹಾಕಬೇಕು. ಕಾಲಕಾಲಕ್ಕೆ ನೀರು ಕೊಟ್ಟು ಕಳೆತೆಗೆದು ಪೋಷಿಸಿದರೆ ಬಿತ್ತಿದಂದಿನಿಂದ 70-80 ದಿನಗಳಲ್ಲಿ ಕೊಯ್ಲಿಗೆ ಸಿದ್ಧವಾಗುತ್ತದೆ. ಒಂದು ಎಕರೆಗೆ 8 ಟನ್ ಕೊಟ್ಟಿಗೆ ಗೊಬ್ಬರ ಮತ್ತು ಇತರೆ ಪೋಷಕಾಂಶಗಳನ್ನು ಒದಗಿಸಬೇಕು. ಸಕಾಲಕ್ಕೆ ಗೊಬ್ಬರ ಒದಗಿಸದಿದ್ದಲ್ಲಿ ಬೆಳೆ ಅನೇಕ ರೀತಿಯ ರೋಗ ರುಜಿನಗಳಿಗೆ ಒಳಗಾಗುತ್ತದೆ.

ರೋಗಗಳು : ಈ ಬೆಳೆಗೆ ಸಾಮಾನ್ಯವಾಗಿ ತಗಲುವ ರೋಗಗಳೆಂದರೆ ತುಪ್ಪಳ ರೋಗ, ಬಿಳಿತುಕ್ಕುರೋಗ, ಇವಲ್ಲದೇ ಹೇನು, ಗರಗಸ ನೊಣ ಮತ್ತು ಕೊಂಡ್ಲಿಹುಳದ ಬಾಧೆಯೂ ಸಾಮಾನ್ಯವಾಗಿ ಬರುತ್ತದೆ. ತುಪ್ಪಳ ರೋಗದ ಉಪಟಳ ಬೇಸಿಗೆಯಲ್ಲಿ ಹೆಚ್ಚು. ಎಲೆಗಳ ಮೇಲೆ ಬಿಳಿ ಬೂದಿಯಂತಹ ವಸ್ತು ಕಾಣಿಸಿಕೊಂಡು ಎಲೆ ಸುಕ್ಕಾಗಿ ಜೋತು ಬೀಳುತ್ತವೆ. ಈ ಕಾರಣ ಗಿಡದ ಬೆಳವಣಿಗೆ ಕುಂಠಿತಗೊಂಡು ಇಳುವರಿ ಕಡಿಮೆಯಾಗುತ್ತದೆ. ಬಿಳಿ ತುಕ್ಕು ರೋಗವು ಎಲೆಗಳ ತಳಭಾಗದಲ್ಲಿ ಬಿಳಿಯ ಪುಡಿಯಂತೆ ಕಾಣಿಸಿಕೊಂಡು ಎಲೆ ಮತ್ತು ಹೂಗೊಂಚಲುಗಳಿಗೆ ಹಾನಿಯನ್ನುಂಟುಮಾಡುತ್ತದೆ. ಈ ರೋಗಗಳ ನಿಯಂತ್ರಣಕ್ಕೆ ಮ್ಯಾಂಕೋಜೆಬ್ ಮತ್ತು ಜೈನೇಬ್‌ದ್ರಾವಣಗಳನ್ನು, ಹೊಂಗೆ ಎಣ್ಣೆ, ಬೇವಿನೆಣ್ಣೆಗಳನ್ನು ಸಿಂಪಡಿಸಬೇಕು. ಉತ್ತಮ ಬೀಜಗಳನ್ನು ಬಿತ್ತನೆಗೆ ಬಳಸಬೇಕು.



ಇಳುವರಿ : ಗೆಡ್ಡೆ 5-10 ಸೆಂ.ಮೀ. ವ್ಯಾಸವಿದ್ದು ಎಳಸಾಗಿರುವಾಗಲೇ ಕೊಯ್ಲು ಮಾಡಬೇಕಾಗುತ್ತದೆ. ಬಲಿಯಲು ಬಿಟ್ಟರೆ ನಾರು ಹೆಚ್ಚಾಗಿ ಗಡಸಾಗುತ್ತದೆ. ಗೆಡ್ಡೆ ಬೆಂಡಾಗಿ ರುಚಿ ಕಡಿಮೆಯಾಗುತ್ತದೆ. ಪ್ರತಿ ಎಕರೆಗೆ

6 ರಿಂದ 8 ಟನ್ ಇಳುವರಿಯನ್ನು ತಳಿಗಳಿಗನುಗುಣವಾಗಿ ಪಡೆಯಬಹುದು. ಕರ್ನಾಟಕದಲ್ಲಿ ಬೆಂಗಳೂರು, ದೇವನಹಳ್ಳಿ, ಮಾಲೂರು, ಹೊಸಕೋಟೆ, ಆನೇಕಲ್ಲು ಮುಂತಾದ ಕಡೆಗಳಲ್ಲಿ ಇದನ್ನು ಬೆಳೆಯುತ್ತಾರೆ.

ಔಷಧೀಯ ಗುಣಗಳು : ಬೇಯಿಸಿದ ಟರ್ನಿಪ್ ಪ್ರತಿನಿತ್ಯ ಉಪಯೋಗಿಸಿದರೆ ಕಫ ಕಡಿಮೆಯಾಗುತ್ತದೆ. ಕಣ್ಣುಗಳನ್ನು ರಕ್ಷಿಸಿ ಹೆಚ್ಚಿನ ರಕ್ತ ವೃದ್ಧಿಗೆ ಸಹಾಯಮಾಡುತ್ತದೆ. ಮಲಬದ್ಧತೆಯನ್ನು ನಿವಾರಿಸಿ ಮೂತ್ರದ ಆಮ್ಲತೆಗಳನ್ನು ತಗ್ಗಿಸುತ್ತದೆ.

ಎನ್. ಆರ್.

ಟೊಮ್ಯಾಟೋ ಇದು ಮೂಲತಃ ದಕ್ಷಿಣ ಅಮೇರಿಕಾದಲ್ಲಿ ಮುಸುಕಿನ ಜೋಳದ ಹೊಲಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿದ್ದ ಗಿಡ. ಇದನ್ನು ಮೊದಲು ಮೆಕ್ಸಿಕನ್ನರು ಕೃಷಿ ಬೆಳೆಯಾಗಿ ಮಾಡಿಕೊಂಡರು. ಅನಂತರ 'ಕೊಲಂಬಸ್, ಟೊಮೊಟೋವನ್ನು ಯುರೋಪ್‌ಗೆ ಪರಿಚಯಿಸಿದ. ಯೂರೋಪಿಯನ್ನರು ಇದರ ಉಪಯೋಗವನ್ನು ತಿಳಿಯದೆ ಅನೇಕ ವರ್ಷಗಳ ಕಾಲ ಅಲಂಕಾರ ಗಿಡದಂತೆ ಮನೆಯ ಅಂಗಳದಲ್ಲಿ ಬೆಳೆಸುತ್ತಿದ್ದರು. ಇದರ ಹಣ್ಣುಗಳನ್ನು ಆಹಾರ ಪದಾರ್ಥವಾಗಿ ಉಪಯೋಗಿಸಬಹುದೆಂದು ಇವರು ಸ್ವೀಕರಿಸಿದ ಮೇಲೆ ಎಲ್ಲಾ ಕಡೆ ಬಳಸಲಾರಂಭಿಸಿದರು.

ಇದನ್ನು ತೆಲುಗಿನಲ್ಲಿ 'ತಕ್ಕಾಳಿ ಪಂಡು', ತಮಿಳುನಲ್ಲಿ 'ತಕ್ಕಳಿ ಪಳಂ', ಹಿಂದಿಯಲ್ಲಿ 'ತಂಬಾಟ' ಎಂದು ಕರೆಯುತ್ತಾರೆ. ಇಂದು ದಿನನಿತ್ಯದ ಅಡುಗೆಯಲ್ಲಿ ಇದು ಪ್ರಧಾನವಾದ ಆಹಾರ ಪದಾರ್ಥವಾಗಿ ಹೋಗಿದೆ. ಭಾರತದ ನೆಲಗಳಿಗೆ ಹೊಂದಿಕೊಂಡಂತೆ ಇದರಲ್ಲಿ ಅನೇಕ ತಳಿಗಳಿವೆ.

ಬೀಜ ಸಿದ್ಧತೆ ಮತ್ತು ಬಿತ್ತನೆ : ಉತ್ತಮ ಜಾತಿಯ, ಚೆನ್ನಾಗಿ ಹಣ್ಣಾದ, ಆರಂಭದಲ್ಲಿ ಬಿಟ್ಟ ದಪ್ಪನೆಯ ಹಣ್ಣುಗಳನ್ನು ಆಯ್ದುಕೊಂಡು ಎರಡು ಹೋಳು ಮಾಡಿ ಒಂದು ಪಾತ್ರೆಯಲ್ಲಿ ನಿಂಬೆಹಣ್ಣಿನಂತೆ ಹಿಂಡಿ ಸ್ವಲ್ಪ ನೀರನ್ನು ಸೇರಿಸಿ 1-2 ದಿನ ಬಿಟ್ಟರೆ ಮೇಲ್ಭಾಗದಲ್ಲಿ ಕೆನೆಯಂಥ ಬೂಸ್ಟ್‌ನ ಪದರ ಕಾಣಿಸಿಕೊಳ್ಳುತ್ತದೆ. ಅದನ್ನು ಹೊರತೆಗೆದು ಉಳಿದ ಬೀಜಗಳನ್ನು ಚೆನ್ನಾಗಿ ತೊಳೆದು ಶುದ್ಧ ಮಾಡಿ ಬೂದಿ ಬೆರೆಸಿ ಸ್ವಲ್ಪ ದಿನ ಒಣಗಿಸಬೇಕು.



ಬಿತ್ತನೆ ಬೀಜ ಸಿದ್ಧವಾದ ಮೇಲೆ ಒಟ್ಲು ಪಾತಿಗಳಲ್ಲಿ ಬಿತ್ತಿ 25-30 ದಿನ ಬಿಟ್ಟರೆ ನಾಟಿ ಮಾಡಲು ಸಸಿಗಳು ಸಿದ್ಧವಾಗುತ್ತವೆ. ಇದರ ಬೀಜ ಮೂರು ನಾಲ್ಕು ವರ್ಷಗಳವರೆಗೂ ಮೊಳಕೆ ಹೊಡೆಯುವ ಸಾಮರ್ಥ್ಯವನ್ನು ಹೊಂದಿದೆ.

ಹದ ಮಾಡಿಕೊಂಡಿರುವ ತೋಟದಲ್ಲಿ ಗೊಬ್ಬರ ತುಂಬಿ ಒಂದಡಿ ಅಂತರದಲ್ಲಿ ಎರಡೆರಡು ಸಸಿಗಳನ್ನು ನೆಟ್ಟು ಆಧಾರವಾಗಿ ಕಡ್ಡಿಗಳನ್ನು ನೆಡಬೇಕು. ಹೆಚ್ಚು ಗಾಳಿ ಸೋಕದ ಹಾಗೆ ತಡೆ ಮರ ಅಥವಾ ಬೇಲಿಯನ್ನು ನಿರ್ಮಾಣ ಮಾಡಿಕೊಳ್ಳಬಹುದು. ಟೊಮ್ಯಾಟೋ ಮಳೆಗಾಲಕ್ಕಿಂತ ಬೇಸಗೆಯಲ್ಲಿ ಹೆಚ್ಚು ಇಳುವರಿಯನ್ನು ಕೊಡುತ್ತದೆ.

ತಳಿಗಳು : ಮಣ್ಣಿನ ಗುಣಕ್ಕೆ ಅನುಗುಣವಾಗಿ ಗೋಲಿ ಗಾತ್ರದಿಂದ ಹಿಡಿದು ಬೇಲದ ಹಣ್ಣಿನ ಗಾತ್ರದವರೆಗೆ ತಳಿ ವೈವಿಧ್ಯ ಕಂಡು ಬರುತ್ತದೆ.

1. ಮದನಪಲ್ಲಿ ಟೊಮ್ಯಾಟೋ : ಇದು ನಾಲ್ಕು ತಿಂಗಳ ಬೆಳೆ. ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆ ಮತ್ತು ಆಂಧ್ರದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಸುಮಾರು 4-5 ಅಡಿಯವರೆಗೆ ಬೆಳೆಯುವುದರಿಂದ ಅಷ್ಟೆತ್ತರದ ಕಡ್ಡಿಗಳನ್ನು ನೆಟ್ಟು ದಾರದ ಸಹಾಯದಿಂದ ಬಳ್ಳಿಗಳು ನೆಲಕ್ಕೆ ತಾಕದಂತೆ ಕಟ್ಟಬೇಕು. ಹಣ್ಣು ನೆಲಕ್ಕೆ ತಾಕಿದರೆ ಬೇಗ ಕೊಳೆತು ಹೋಗುತ್ತದೆ. ದೊಡ್ಡ ಗಾತ್ರದ ಹಣ್ಣುಗಳನ್ನು ಬಿಡುತ್ತದೆ. ಹುಳಿ ಹೆಚ್ಚಾಗಿದ್ದು ಅಡುಗೆಗೆ ಉತ್ತಮ. ಈ ಜಾತಿಯ ಗಿಡಕ್ಕೆ ರೋಗಗಳು ಕಡಿಮೆ.

2. ಕೆನ್ನೀಲಿ ಟೊಮ್ಯಾಟೋ : ಇದು ಮೂರು ತಿಂಗಳ ತಳಿ. ವಾಣಿಜ್ಯ ಬೆಳೆಗೆ ಯೋಗ್ಯವಾದ ಈ ತಳಿಯನ್ನು ಪ್ರತ್ಯೇಕ ತೋಟಗಳಲ್ಲಿ ಬೆಳೆಯುತ್ತಾರೆ. ಇದರ ಮೂಲ ಪಾಂಡಿಚೇರಿ. ವರ್ಷವಿಡೀ ಬೆಳೆಯಬಹುದಾದ ಜಾತಿ ಇದು. ಮಳೆಗಾಲಕ್ಕಿಂತ ಬೇಸಗೆಯಲ್ಲಿ ಹೆಚ್ಚು ಫಸಲನ್ನು ಕೊಡುತ್ತದೆ. ಎರಡು ತಿಂಗಳವರೆಗೂ ಹಣ್ಣು ಬಿಡುತ್ತದೆ. ಹಣ್ಣು ರುಚಿಯಾಗಿದ್ದು ನೇರವಾಗಿ ತಿನ್ನಲು ಯೋಗ್ಯವಾಗಿರುತ್ತದೆ. ಹಣ್ಣನ್ನು ಸಲಾಡ್‌ಗೆ ಬಳಸುತ್ತಾರೆ. ಈ ಜಾತಿಯ ಗಿಡಕ್ಕೆ ರೋಗ ಬಾಧೆ ಹೆಚ್ಚು. (ಕಾಲ ಕಾಲಕ್ಕೆ) ಹೂ ಬಿಡುವ ಸಮಯದಲ್ಲಿ ಮತ್ತು ಕಾಯಿ ಕಚ್ಚುವಾಗ ಕ್ರಿಮಿನಾಶಕಗಳನ್ನು ಸಿಂಪಡಿಸಬೇಕು. ಬೂದಿ ಮತ್ತು ದನಗಳ ಗಂಜಳವನ್ನು ಬೇವಿನಸೊಪ್ಪು, ಲಕ್ಕೆ ಸೊಪ್ಪು, ಸೀತಾಫಲ ಸೊಪ್ಪುಗಳನ್ನು ನೀರಿನಲ್ಲಿ ಕೊಳೆಯುವಂತೆ ಮಾಡಿ, ಬೆಳಗಿನ ಜಾವ ಹದವಾಗಿ ಚೆಲ್ಲಿದ್ದರೆ ಹುಳುಗಳು ಸಾಯುತ್ತವೆ.

3. ಗುಳಿ ಟೊಮ್ಯಾಟೋ : ಇದು ನಾಲ್ಕು ತಿಂಗಳ ಬೆಳೆ. ಬೇಲಿಯ ಅಂಚಿನಲ್ಲಿ ಊರಿನ ಸುತ್ತಮುತ್ತಲಿನ ತಿಪ್ಪೆಗಳ ಅಂಚಿನಲ್ಲಿ ಸ್ವಾಭಾವಿಕವಾಗಿ ಕಳೆಯಂತೆ ಬೆಳೆಯುವ ಜಾತಿ. ಮುಂಗಾರಿನ ಮಳೆಗೆ ಸಸಿ ಹುಟ್ಟಿ ಮಳೆಗಾಲದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದು ಬಳ್ಳಿಯಂತೆ ಹಬ್ಬುವುದರಿಂದ ಬೇಲಿಗಳ ಮೇಲೆ ಗಿಡ ಗಂಟಿಗಳ ಮೇಲೆ ಹರಡುತ್ತದೆ. ಸಾದಾರಣ ಗಾತ್ರದ ಗೋಲಿಯಾಕಾರದ ಹಣ್ಣುಗಳನ್ನು ಗಿಡದ ತುಂಬ ಬಿಡುತ್ತದೆ. ಗೊಂಚಲು ಗೊಂಚಲು ಬಿಡುವುದರಿಂದ ಬರ ನಿವಾರಕ ತಳಿ ಎಂದೂ ಇದನ್ನು ಕರೆಯುತ್ತಾರೆ. ಹಣ್ಣುಗಳು ಕೆಂಪು ಮತ್ತು ಹಳದಿ ಬಣ್ಣವನ್ನು ಹೊಂದಿದ್ದು ಕತ್ತರಿಸದೇ ಇಡೀ ಹಣ್ಣನ್ನು ಆಹಾರದಲ್ಲಿ ಉಪಯೋಗಿಸಬಹುದು. ಔಷಧಿ ಗುಣವಿರುವ ಗಿಡವಾಗಿದ್ದು ಸಾವಯವ ಕೃಷಿಗೆ ಯೋಗ್ಯವಾದ ತಳಿ.

4. ಬಲ್ಬು ಟೊಮ್ಯಾಟೋ : ಮೂರು ತಿಂಗಳ ಬೆಳೆ. 5 ಅಡಿಗಳವರೆಗೆ ಎತ್ತರವಾಗಿ ಬೆಳೆಯುವಂಥದ್ದು. ಹಣ್ಣಿನ ಆಕಾರ ಬಲ್ಬನ್ನು ಹೋಲುತ್ತದೆ. ಸಾಧಾರಣ ಗಾತ್ರದ ಗೊಂಚಲು ಗೊಂಚಲು ಕಾಯಿ ಬಿಡುತ್ತದೆ. ಈ ಜಾತಿಯ ಹಣ್ಣನ್ನು ಹೆಚ್ಚು ಕಾಲ ಸಂಗ್ರಹಿಸಿಡಬಹುದು. ರೋಗಗಳು ಕಡಿಮೆ, ಅಡುಗೆಗೆ ಹೆಚ್ಚು ಉಪಯುಕ್ತವಾದ ಹಣ್ಣು.

5. ಹುಲಿಪಟ್ಟೆ ಟೊಮ್ಯಾಟೋ : ಇಂಗ್ಲೆಂಡ್ ಮೂಲದ ಈ ತಳಿಯ ಅವಧಿ 70 ದಿನ. ಸಣ್ಣಗಾತ್ರದ ಹಣ್ಣನ್ನು ಬಿಡುತ್ತದೆ. ಗಿಡ ಪೊದೆಯಂತೆ ಬೆಳೆಯುತ್ತದೆ. ಹಣ್ಣು ಗೋಲಿಯಾಕಾರವಾಗಿದ್ದು, ಕೆಂಪು ಹಣ್ಣಿನ ಮೇಲೆ ಕೇಸರಿಬಣ್ಣದ ಪಟ್ಟೆಗಳಿರುತ್ತವೆ. ಕಾಯಿಯಾಗಿದ್ದಾಗ ಹುಲಿ ಮೇಲಿನ ಪಟ್ಟೆಗಳ ಹಾಗೆ ಕಾಣುತ್ತದೆ. ಕೀಟ ನಿರೋಧಕ ಗುಣವನ್ನು ಹೊಂದಿದೆ. ಮನೆ ಬಳಕೆಗೆ ಯೋಗ್ಯವಾದ ತಳಿ.

6. ಹೃದಯಾಕಾರದ ಟೊಮ್ಯಾಟೋ : ಇದರ ಅವಧಿ ಮೂರು ತಿಂಗಳು. ಮೂಲ ಯೂರೋಪ್. ದೊಡ್ಡಗಾತ್ರದ ಹೃದಯಾಕಾರದ ಹಣ್ಣುಗಳನ್ನು ಬಿಡುವ ತಳಿ. ಹಸುರು ಬಣ್ಣದ ಕಾಯಿ. ಹಣ್ಣಾಗುವುದು ನಿಧಾನ. ಹಣ್ಣಾಗುವಾಗ ಕಿತ್ತಳೆ ಬಣ್ಣಕ್ಕೆ ಬರುತ್ತದೆ. ಒಂದು ಹಣ್ಣು 250 ಗ್ರಾಂ. ತೂಕದವರೆಗೂ ಇರುತ್ತದೆ.

ಎಲೆ ಸುರಳಿ ರೋಗ, ಕಾಯಿ ಕೊರಕ ಹುಳುಗಳ ಕಾಟ ಹೆಚ್ಚು. ಆಧುನಿಕ ಔಷಧಿಗಳನ್ನು ಸಿಂಪಡಿಸಿ ಗುಣಪಡಿಸಬಹುದು. ಸಾಧಾರಣ ಎತ್ತರದ ಗಿಡ. ಈ ತಳಿಯ ಹಣ್ಣಿನಲ್ಲಿ ಬೀಜ ಕಡಿಮೆ ಹಣ್ಣು ಸಿಹಿಯಾಗಿರುತ್ತದೆ. ತಿರುಳು ಹೆಚ್ಚಿದ್ದು ಅಡುಗೆಗೆ ಉಪಯುಕ್ತ.

7. ಚೆರ್ರಿಟೊಮ್ಯಾಟೋ : ಮೂರು ತಿಂಗಳ ಬೆಳೆ. ಹೆಚ್ಚು ಆರೈಕೆ ಬಯಸದ ತಳಿ. ಬಳ್ಳಿಯಂತೆ ಹಬ್ಬುತ್ತದೆ. ಸಣ್ಣ ಗಾತ್ರದ ಹಣ್ಣುಗಳನ್ನು ಕೊಡುವ ಗಿಡ. ಸಾವಯವ ಕೃಷಿಗೆ ಯೋಗ್ಯವಾದ ತಳಿ ಇದು.

8. ಚಕ್ರ ಟೊಮ್ಯಾಟೋ : ನಾಲ್ಕು ತಿಂಗಳ ಬೆಳೆ. ಗಿಡ್ಡ ಜಾತಿಯ ತಳಿ. 2 ರಿಂದ 3 ಅಡಿ ಎತ್ತರ ಬೆಳೆಯುತ್ತದೆ. ಕಾಯಿಗಳು ಚಕ್ರದಂತೆ ಅಗಲವಾಗಿರುತ್ತದೆ. ಸಾಧಾರಣ ಗಾತ್ರದ ಹಣ್ಣು, ಹುಳಿಯಾಗಿದ್ದು ವಾಣಿಜ್ಯ ಬೆಳೆ ಎನಿಸಿಕೊಂಡಿದೆ. ರೋಗ ಬಾಧೆ ಇಲ್ಲ.

9. ಕುಂಕುಮ ಕೇಸರಿ : ನಾಲ್ಕು ತಿಂಗಳ ಬೆಳೆ. ಐದು ಅಡಿ ಎತ್ತರ ಬೆಳೆಯುತ್ತದೆ. ಕುಂಕುಮ ಬಣ್ಣವನ್ನು ಹೊಂದಿದ್ದು, ನೋಡಲು ಆಕರ್ಷಕವಾಗಿರುತ್ತದೆ. ಚೆನ್ನಾಗಿ ಆರೈಕೆ ಮಾಡಿದರೆ ಗಿಡದ ತುಂಬ ಕಾಯಿ ಬಿಡುತ್ತದೆ. ಈ ತಳಿಯ ಗಿಡಗಳಿಗೆ ರೋಗ ನಿರೋಧಕ ಮತ್ತು ಕೀಟ ನಿರೋಧಕ ಗುಣವಿದೆ. ಬೇಸಗೆಯಲ್ಲಿ ಬೆಳೆಯಲು ಯೋಗ್ಯವಾದ ತಳಿ. ಜೂನ್ - ಜುಲೈ ತಿಂಗಳುಗಳಲ್ಲಿ ನಾಟಿ ಮಾಡಿದರೆ ಉತ್ತಮ ಇಳುವರಿಯನ್ನು ಪಡೆಯಬಹುದು. ಹಣ್ಣು ರುಚಿಯಾಗಿದ್ದು. ಅಡುಗೆಗೆ ಯೋಗ್ಯ.

10. ಬಳ್ಳಿ ಟೊಮ್ಯಾಟೋ : ಸಾವಯವ ಕೃಷಿಗೆ ಯೋಗ್ಯವಾದ ತಳಿ. ಇದರ ಫಸಲಿನ ಅವಧಿ 4 ರಿಂದ 4½ ತಿಂಗಳು. ಚೆನ್ನಾಗಿ ಗೊಬ್ಬರ ಕೊಟ್ಟು, ನೀರುಣಿಸಿ ಬೆಳೆಸಿದರೆ ಎಂಟು ಅಡಿಯವರೆಗೆ ಬಳ್ಳಿಯಂತೆ ಬೆಳೆಯುತ್ತದೆ. ನೆಲದ ಮೇಲೆ ಬೀಳದಂತೆ ಚಪ್ಪರದಂತೆ ದಾರ ಮತ್ತು ಕಡ್ಡಿಗಳ ಸಹಾಯದಿಂದ ಕಟ್ಟಿದರೆ ಹಣ್ಣುಗಳು ಕೊಳೆಯುವುದಿಲ್ಲ. ಅಡುಗೆಗೆ ಯೋಗ್ಯವಾದ ಹಣ್ಣು. ಈ ತಳಿಗೆ ಎಲೆಸುರಳಿರೋಗ ಕಾಡುವುದುಂಟು.

11. ಆರೋವಿಲೆ ಟೊಮ್ಯಾಟೋ : ಪಾಂಡಿಚೇರಿಯ ಆರೋವಿಲೆ ಆಶ್ರಯದವರು ಸಂಗ್ರಹಿಸಿದ ತಳಿ ಇದು. ಮೂರು ತಿಂಗಳಲ್ಲಿ ಫಸಲು ಕೊಡುತ್ತದೆ. ಮಾರುಕಟ್ಟೆಗೆ ಉಪಯುಕ್ತ ತಳಿ. ಕೆನೆ ಬಣ್ಣದ ಗುಂಡನೆಯ ಕಾಯಿಗಳನ್ನು ಕೊಡುತ್ತದೆ. ಈ ತಳಿಯ ಹಣ್ಣನ್ನು ಹೆಚ್ಚು ದಿನ ಸಂಗ್ರಹಿಸಿಡಬಹುದು. ರೋಗ ನಿರೋಧಕ ಗುಣವಿರುವ ಈ ತಳಿ ಆರೈಕೆ ಮಾಡಿದಂತೆಲ್ಲಾ ಹೆಚ್ಚು ಇಳುವರಿ ಕೊಡುತ್ತದೆ.

ಇತರ ತಳಿಗಳು : ದುಂಡುಗಿರುವ ದೊಡ್ಡ ಜಾತಿಯ ಪಾಂಡು ರೋಜಾ. ಇದರಲ್ಲಿ ಬೀಜ ಕಡಿಮೆಯಿದ್ದು ತಿರುಳು ದಪ್ಪಗಿರುತ್ತದೆ. ಆಕಾರದಲ್ಲಿ ಗುಂಡಗಿದ್ದು ಸಾಧಾರಣ ಗಾತ್ರ ಮತ್ತು ರುಚಿ ಹೊಂದಿರುತ್ತದೆ. ಮಾರ್‌ಗ್ಲೋಬ್ - ಹೃದಯಾಕಾರ ದಪ್ಪ ತಿರುಳಿನ ಹಣ್ಣು. ಆಕ್ಸ್ ಹಾರ್ಟ್ ಮತ್ತು ದಪ್ಪ ಹಣ್ಣಿನ ವಕ್ರ ವಕ್ರವಾಗಿರುವ ಹಳ್ಳ ತಿಟ್ಟುಗಳುಳ್ಳ ಮಿಕ್ಯಾಡೋ ಜಾತಿಯ ತಳಿಗಳೂ ಇವೆ.

ಬೇಸಾಯ : ನೆಲವನ್ನು ಮೂರು ನಾಲ್ಕು ಬಾರಿ ಚೆನ್ನಾಗಿ ಉತ್ತು ಕಳೆ ತೆಗೆದು ಹದ ಮಾಡಿಕೊಂಡು ಕೊಟ್ಟಿಗೆ ಗೊಬ್ಬರವನ್ನು ಹರಡಿ ಮೂರು ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿ, ಈಗಾಗಲೆ ಪಾತಿಗಳಲ್ಲಿ ಬೆಳೆಸಿ ಕೊಂಡಿರುವ ಸಸಿಗಳನ್ನು ಸಸಿಯಿಂದ ಸಸಿಗೆ ½ ಅಡಿ ಅಂತರದಲ್ಲಿ



ನೆಟ್ಟು, ಬೇಸಗೆಯಾದರೆ ಹೆಚ್ಚು ನೀರನ್ನು ಕೊಡಬೇಕು. ಒಂದು ಗುಂಡಿಯಲ್ಲಿ ಮೂರು ಸಸಿಗಳನ್ನು ನೆಡಬೇಕು. ತೇವಾಂಶ ಕಡಿಮೆಯಾಗದಂತೆ ಆಗಾಗ ನೀರನ್ನು ಹದವಾಗಿ ಕೊಡುತ್ತಿರಬೇಕು. ಕೆಲ ಕಾಯಿಗಳು ನೆಲಕ್ಕೆ ತಾಕದಂತೆ ಗಿಡದ ರೆಂಬೆಗಳನ್ನು ತಡಿಕೆಯ ಮೇಲೆ ಬರುವಂತೆ ಮಾಡಿದರೆ ಕಾಯಿ ಕೊಳೆಯುವುದಿಲ್ಲ. ಇಲಿ, ಹೆಗ್ಗಣ, ಇಣಚಿಗಳ ಕಾಟವೂ ಕಡಿಮೆಯಾಗುತ್ತದೆ. ತಡಿಕೆ ಮೇಲೆ ಬೆಳೆಸುವುದರಿಂದ ಸುತ್ತಲು ಬೆಳೆಯುವ ಕಳೆಯನ್ನು ತೆಗೆಯಲು ಅನುಕೂಲವಾಗುತ್ತದೆ. ಗಾಳಿ, ಬೆಳಕು ಗಿಡಕ್ಕೆ ಸಿಗುವುದರಿಂದ ಚೆನ್ನಾಗಿ ಬೆಳೆದು ಉತ್ತಮ ಇಳುವರಿ ನೀಡುತ್ತದೆ. ಸಸಿ ನೆಟ್ಟ ಎರಡು ತಿಂಗಳಲ್ಲಿ ಫಸಲನ್ನು ಕೊಡುತ್ತದೆ. ಕಾಯಿ ಹಣ್ಣಾಗುವ ಮೊದಲೇ ದೋರುಕಾಯಿ ಎನಿಸಿದಾಗಲೆ ಕಿತ್ತು ಶೇಖರಿಸಿ ಮಾರಾಟಕ್ಕೆ ಒಯ್ಯಬೇಕು.

ಟೊಮ್ಯಾಟೋ ಗಿಡ ಬೆಳೆಸಲು ಮರಳು ಮಿಶ್ರಿತ ನೆಲ ಉತ್ತಮ. ತುಂಬಾ ಗಡುಸಾದ ನೆಲದಲ್ಲಿ ಹುಲುಸಾಗಿ ಬೆಳೆಯಲಾರದು. ಹಗುರವಾದ, ಹದವಾದ ಆಳವಾದ, ಫಲವತ್ತಾದ ಗೋಡು ಮಣ್ಣಿನಲ್ಲಿ ಚೆನ್ನಾಗಿ ಬೆಳೆದು ಒಳ್ಳೆಯ ಇಳುವರಿಯನ್ನು ಕೊಡುತ್ತದೆ.

ಟೊಮ್ಯಾಟೋ ದೇಹದ ಬೆಳವಣಿಗೆಗೆ ಬೇಕಾದ ಕಬ್ಬಿಣಾಂಶ, ರಂಜಕ ಸುಣ್ಣ ಮತ್ತು ಮುಖ್ಯವಾದ ವಿಟಮಿನ್‌ಗಳನ್ನು ಹೊಂದಿರುವುದರಿಂದ ಹೆಚ್ಚು ಆರೋಗ್ಯಕರ ಆಹಾರವೆನಿಸಿದೆ.

ಮಾಹಿತಿ :

ಪ್ರಮೀಳ ಕೋಲಾರ
ಶ್ರೀನಿವಾಸಮೂರ್ತಿ ಎಚ್.ಎಂ., ಕೋಲಾರ

ವಿ.ಆರ್.ಬಿ.

ಡೇಲಿಯ ಆಕರ್ಷಕ ಬಣ್ಣದಿಂದ ಎಲ್ಲರ ಕಣ್ಮನಗಳನ್ನು ಸೆಳೆಯುವ ಪುಷ್ಪ. ಆಸ್ಟರೇಸೀ ಕುಟುಂಬಕ್ಕೆ ಸೇರಿದ್ದಾಗಿದೆ. ಇದರ ಹುಟ್ಟೂರು ಮೆಕ್ಸಿಕೊ. ಸ್ವೀಡನ್ನಿನ ಸುಪ್ರಸಿದ್ಧ ಸಸ್ಯವಿಜ್ಞಾನಿ ಡಾ. ಆಡ್ರಿಯಾಸ್ ಡಾಲ್‌ಎಂಬುವವರು 1789ರಲ್ಲಿ ಮೆಕ್ಸಿಕೋದಲ್ಲಿ ಇದನ್ನು ಮೊತ್ತಮೊದಲಬಾರಿಗೆ ಪರಿಚಯಿಸಿದರು. ಇವರ ಜ್ಞಾಪಕಾರ್ಥವಾಗಿ ಈ ಗಿಡಕ್ಕೆ ಡೇಲಿಯಾ ಎಂದು ಹೆಸರಿಡಲಾಗಿದೆ. ನೆಲದೊಳಗಿರುವ ಗೆಡ್ಡೆಯಿಂದ ಹುಟ್ಟುವ ಗಿಡವಿದು. ಮಳೆ ಆರಂಭವಾದಂತೆ ಚಿಗುರಿ ಹೊರಬರುತ್ತದೆ. ಕ್ರಮೇಣ ಹೂವುಗಳು ಬಿಡುತ್ತವೆ.




ವ್ಯವಸಾಯ : ಇದನ್ನು ಬೆಳೆಸಲು ಮರಳು ಮಿಶ್ರಿತ ಮೃದುವಾದ ಮಣ್ಣು ಬೇಕಾಗುತ್ತದೆ. ಗೆಡ್ಡೆಗಳಿಂದ, ಕಾಂಡಗಳಿಂದ ಸಸ್ಯಾಭಿವೃದ್ಧಿ ಮಾಡುತ್ತಾರೆ. ಗೆಡ್ಡೆಗಳನ್ನು ನಾಟಿ ಮಾಡುವ ಮೊದಲು ಮಣ್ಣಿಗೆ ಜೈವಿಕ ಗೊಬ್ಬರವನ್ನು ಮಿಶ್ರಣ ಮಾಡುತ್ತಾರೆ. ಹಾಗೆಯೇ ತರಗೆಲೆ ಗೊಬ್ಬರ ಮತ್ತು ಕೊಟ್ಟಿಗೆ ಗೊಬ್ಬರಗಳನ್ನು ಮೇಲುಗೊಬ್ಬರವಾಗಿ ಕೊಡುವುದರಿಂದ ಬೊಗಸೆ ಗಾತ್ರದ ಹೂವುಗಳನ್ನು ಪಡೆಯಬಹುದು. ನೀರನ್ನು ಗಿಡಗಳಿಗೆ ಮೇಲಿಂದ ಮೇಲೆ ಹಾಯಿಸಬೇಕು. ಹೆಚ್ಚು ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಗೆಡ್ಡೆಗಳು ಹಾಳಾಗದಂತೆ ಬೇವಿನ ಹಿಂಡಿಯನ್ನು ಭೂಮಿಗೆ ನೀಡಬೇಕು. ಸಸಿಗಳು ಬೆಳೆಯಲು ಆರಂಭಿಸಿದಾಗ ಅವುಗಳಿಗೆ ಆಸರೆಯಾಗಿ ಕೋಲನ್ನು ನೆಟ್ಟು ಎಳೆಯ ರೆಂಬೆಗಳನ್ನು ದಾರದಿಂದ ಕಟ್ಟಬೇಕು. ಸಸಿಗಳ ಬೆಳವಣಿಗೆಯನ್ನು ಗಮನಿಸಿ ದಾರದ ಕಟ್ಟನ್ನು ಸಡಿಲಿಸಿ ಕಟ್ಟಬೇಕು. ಮಾರ್ಚ್‌ನಿಂದ ಏಪ್ರಿಲ್‌ನಲ್ಲಿ ಬಿತ್ತನೆ ಮಾಡುವುದರಿಂದ ಮಳೆಗಾಲ ಪ್ರಾರಂಭವಾದ ಅನಂತರ ಜುಲೈನಲ್ಲಿ ಗೆಡ್ಡೆಗಳು ಚಿಗುರುತ್ತವೆ. ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಹೂ ಬಿಡುತ್ತವೆ. ಕುಂಡಗಳಲ್ಲಿ, ನೆಲದ ಸಾಲುಗಳಲ್ಲಿ ಆಕರ್ಷಕವಾಗಿ ಬೆಳೆಸಬಹುದು. ಬಿಟ್ಟ ಹೂವುಗಳನ್ನೆಲ್ಲಾ ಅರಳಲು ಬಿಡುವುದರಿಂದ ಹೂವಿನ ಗಾತ್ರ ದೊಡ್ಡದಾಗುವುದಿಲ್ಲ. ಆ ಕಾರಣಕ್ಕೆಮೂರು ಮೊಗ್ಗುಗಳು ಬಂದಾಗ ಮಧ್ಯದ ಮೊಗ್ಗನ್ನು ಉಳಿಸಿಕೊಂಡು ಉಳಿದ ಮೊಗ್ಗನ್ನು ತೆಗೆಯಬೇಕು. ಹೂವು ಬಿಟ್ಟ ಅನಂತರ ಗೆಡ್ಡೆಗಳನ್ನು ಹೊರ ತೆಗೆದು ಬಿಸಿಲಿನಲ್ಲಿ ಒಣಗಿಸಿ ಮರಳಿನಲ್ಲಿ ಸಂಗ್ರಹಿಸಿ ಇಡುವುದರಿಂದ ಮುಂದಿನ ವರುಷಕ್ಕೆ ಬಳಸಿಕೊಳ್ಳಬಹುದು.

ಎಸ್.ಕೆ.ಎಸ್.

ತಮಿಳು ಜನಪದ ಸಾಹಿತ್ಯದಲ್ಲಿ ಕೃಷಿ ಮಾನವನ ಸಾಂಸ್ಕೃತಿಕ ಇತಿಹಾಸದಲ್ಲಿ ಕೃಷಿಗೆ ಪ್ರಮುಖ ಸ್ಥಾನ. ಉಳುಮೆ, ಸಾಗುವಳಿಯಂತಹ ಭೂಮಿಗೆ ಸಂಬಂಧಿಸಿದ ವಿಷಯಗಳಷ್ಟೇ ಜನಪದ ಕೃಷಿ ವಿಷಯಗಳಾಗಲಾರವು. ಪ್ರಾಚೀನ ಕಾಲದಿಂದಲೂ ಇಲ್ಲಿಯತನಕ ಮಾನವ ಸಂಶೋಧಿಸಿದ ವಿಷಯಗಳ ಕುರಿತ ಭಾವನಾತ್ಮಕ ಹಂತಗಳೆಲ್ಲದರಲ್ಲೂ ಜನಪದ ಚಿಂತನೆಯ ಸೊಗಡಿಗೆ ಕಲಾಜಗತ್ತನ್ನು ಕಡೆದಿಟ್ಟ ಮಾದರಿಯಂತಿರುವ ಗ್ರಾಮಗಳಲ್ಲಿಯ ಕೃಷಿ ಚಟುವಟಿಕೆಗಳೇ ಇಂದಿನ ನಾಗರಿಕ ಸಮಾಜ ನಿರ್ಮಾಣದ ಪ್ರಾರಂಭಿಕ ಹಂತಗಳು. ಹಾಡುಗಳು, ಕುಣಿತಗಳು, ಮನುಷ್ಯ ಜೀವನದ ಆಯಾಸದ ಕ್ಷಣಗಳನ್ನು ಹಗುರವಾಗಿಸಿಕೊಳ್ಳುವ ಮಾಧ್ಯಮಗಳು. ಎಷ್ಟೋ ವೇಳೆ ಇವು ಕೃಷಿಯ ಕುರಿತಂತೆ ಆಯಾ ಕಾಲಘಟ್ಟದ ಮಾಹಿತಿದರ್ಶನಗಳೂ ಆಗಿರುತ್ತವೆ. ಉಳುಮೆ ಕೃಷಿಯ ಆರಂಭಿಕ ಹಂತ. ಮನುಷ್ಯ ಮನುಷ್ಯನ ನಡುವೆ ಒಂದು ಆರೋಗ್ಯಕರ ಅಂತರ್ಸಂಬಂಧ ಗಟ್ಟಿಗೊಳ್ಳಲು ಇದು ಹೇಗೆ ಮಾಧ್ಯಮವಾಗಿತ್ತೆಂದರೆ, ಬೆಳೆಗಳನ್ನು ಪರಸ್ಪರ ವರ್ಗಾಯಿಸಿಕೊಳ್ಳುತ್ತ ಸಂಬಂಧಗಳನ್ನು ಕಾಯ್ದುಕೊಳ್ಳಲಾಗುತ್ತಿತ್ತು ಹಾಗೂ ಈ ವಿಷಯಗಳನ್ನು ಹಾಡು, ಪಡೆಮಾತು, ಕಥೆ ಇತ್ಯಾದಿಗಳ ಮೂಲಕ ದಾಖಲಿಸಲಾಗುತ್ತಿತ್ತು.

ಕೃಷಿ ಸಂಬಂಧಿತ ಚಿಂತನೆಗಳಿಗೆ ಸುಮಾರು ಹತ್ತು ಸಾವಿರ ವರ್ಷಗಳ ಇತಿಹಾಸವಿದೆ. ಕೃಷಿಯೊಂದಿಗೆ ಅದರ ಇತರ ಚಿಂತನ ಸಾಧ್ಯತೆಗಳು, ಹೊಸ ಆವಶ್ಯಕತೆಗಳೂ ಕಾಲ ಸಂದಂತೆ ವಿಸ್ತಾರವಾಗಿ ಮೈದೆರೆಯುತ್ತ ಈ ಕ್ಷೇತ್ರದ ಆರ್ಥಿಕ, ಸಾಮಾಜಿಕ, ಕವಲುಗಳಿಗೆ ದಾರಿಮಾಡಿಕೊಟ್ಟಿದೆ. ಉಳುಮೆಯ ಪರಿಕರಗಳು, ಗಾಳಿ ಯಂತ್ರಗಳು, ಕೀಟನಾಶಕಗಳು, ನೀರು ಅಥವಾ ಮದ್ದು ಸಿಂಪರಣಾ ಯಂತ್ರಸಾಧ್ಯತೆಗಳು ಇತ್ಯಾದಿಗಳು ಒಂದಿಲ್ಲೊಂದು ಬಗೆಯಲ್ಲಿ ಬಹಳ ಹಿಂದಿನಿಂದಲೂ ಬಳಕೆಯಲ್ಲಿವೆ. ತಮಿಳು ಸಾಹಿತ್ಯ ಇಂತಹ ವಿಷಯಗಳನ್ನು ವಿಸ್ತಾರವಾಗಿ ದಾಖಲಿಸಿದೆ. ಇವು ಮೌಖಿಕವಾಗಿ, ಚಿತ್ರಕಲೆಯಾಗಿ, ಗುರು ಮುಖೇನ, ಗಾದೆಗಳಾಗಿ, ಟಂಗ್‌ಟ್ವಿಸ್ಟರುಗಳಾಗಿ ಸಹ ಬಳಕೆಯಲ್ಲಿವೆ. (ಉದಾ-ತಿರುಪ್ಪುಗಳ್ - ತಿರುವುಗಳು)

ಸಂಘಂಕಾಲ : ಕ್ರಿ.ಪೂ. 250ರಿಂದ ಕ್ರಿ.ಶ. 300ರವರೆಗೆ 'ಸಂಘಂ ಕಾಲ' ಎಂಬುದನ್ನು ಗುರುತಿಸಲಾಗಿದೆ. ಇದನ್ನು 'ವೀರಯುಗ' ಎಂದೂ ಕರೆಯಲಾಗುತ್ತದೆ. ಏಕೆಂದರೆ ಈ ಕಾಲದ ಸಾಹಿತ್ಯದಲ್ಲಿ ವೀರಗುಣಕ್ಕೂ,


ತಮಿಳುನಾಡು
ಆಂಧ್ರಪ್ರದೇಶ
ಕರ್ನಾಟಕ
ಬಂಗಾಳ
ಕೊಲ್ಲಿ
ವೆಲ್ಲೂರ
ಕೃಷ್ಣಗಿರಿ
ಧರ್ಮಪುರಿ
ವಿಲ್ಲುಪುರಂ
ಸೇಲಂ
ಈರೋಡ್
ನಾಮಕ್ಕಲ್
ಕರೂರ್
ದಿಂಡಿಗಲ್
ಪುದುಕೋಟ್ಟೈ
ಶಿವಗಂಗಾ
ಮದುರೈ
ವಿರುಧುನಗರ
ತೂತುಕುಡಿ

ಪ್ರೀತಿಗೂ ಹೆಚ್ಚು ಆದ್ಯತೆ ನೀಡಲಾಗಿದೆ. ಇದೇ ಕಾಲದಲ್ಲಿ ಪ್ರಪಂಚದ ಇತರ ಸಮುದಾಯಗಳ ಸಾಹಿತ್ಯಗಳಲ್ಲೂ ವೀರಗುಣಕ್ಕೆ ಪ್ರಾಧಾನ್ಯವಿತ್ತು. ಕಾವ್ಯ ನಾಯಕ ವೀರನೇ ಆಗಿರುತ್ತಿದ್ದ. ಅವನ ಕುರಿತಂತೆಯೇ ಕಾವ್ಯಗಳಿದ್ದರೂ ಅವು ಜನಪದರ ಆಶಯಗಳನ್ನೇ ಕಡೆದು ರೂಪಿಸಿದಂತೆ ಇರುತ್ತಿದ್ದುವು. ಶಿಷ್ಟ ಸಾಹಿತ್ಯ ಸೃಷ್ಟಿಯಾಗುವ ಮುಂಚೆಯೇ ಜನಪದ ಸಾಹಿತ್ಯವಿತ್ತು. ಸಂಘ ಸಾಹಿತ್ಯದಲ್ಲಿ ಯುದ್ಧದ ಹಾಡುಗಳು ನಾಯಕನ ವೀರಗುಣದ ಔನ್ನತ್ಯವನ್ನು ವರ್ಣಿಸುವ ಹಾಡುಗಳು, ಹೆಣ್ಣುಮಕ್ಕಳ ಚೆಂಡಾಟ, ನೇಗಿಲ ಹಾಡುಗಳು, ಕೋಣನ ಓಟ, ಕಂಬಳ, ಹುಂಜನ ಕಾಳಗ, ವೇಲನು ಭೂತಗಳನ್ನು ಅಡಗಿಸಿದ ಹಾಡುಗಳು ಅಥವಾ ಕುಣಿತಗಳು ಮುಂತಾದವುಗಳಿಗೆ ಆದ್ಯತೆ ಇದ್ದುದನ್ನು ಗಮನಿಸಬಹುದು. ಸ್ಥಳ ಮತ್ತು ಕಾಲಗಳಿಗೆ ಮಾನವನ ಬದುಕಿನಲ್ಲಿ ಬಹಳ ಪ್ರಾಮುಖ್ಯವಿದೆ. ಇದಕ್ಕೆ ಸಂಬಂಧಿಸಿದಂತೆಯೇ ಭೂಮಿತತ್ತ್ವ ಹಾಗೂ ಶೌರ್ಯತತ್ತ್ವಗಳನ್ನು ಕುರಿತ ಚಿಂತನೆಗಳು ಮೂಡಿವೆ. ಇವುಗಳನ್ನು ತಮಿಳು ಸಂಘಂ ಸಾಹಿತ್ಯ ಕ್ರಮವಾಗಿ 'ಅಗಂ' ಮತ್ತು 'ಪುರಂ' ಎಂದು ಶಾಸ್ತ್ರೀಯ ಪರಿಭಾಷೆಯಲ್ಲಿ ಬಳಸುತ್ತದೆ. ಅಗಂ ಅಥವಾ ಭೂಮಿತತ್ತ್ವದ ಹಿನ್ನೆಲೆಯಲ್ಲಿ ಐದು ರೀತಿಯ ವಿಷಯಗಳನ್ನು ಸಾಹಿತ್ಯವು ಬಳಸಿಕೊಳ್ಳುತ್ತದೆ. ಹಕ್ಕಿಗಳು, ಆಹಾರ, ಜನ, ಹಾಡು ಹಾಗೂ ಕಟ್ಟುಪಾಡುಗಳು, ಇವೆಲ್ಲವನ್ನೂ ಒಳಗೊಂಡ ದೈವ - ಇವುಗಳನ್ನು ಪ್ರಧಾನವಾಗಿ ಆಧರಿಸಿ 'ಅಗಂ' ಅನ್ನು ಕುರಿತ ಚಿಂತನೆಗಳಿವೆ. ಮಲೆ, ಬಯಲು, ಕಾಡು, ದಿಣ್ಣೆ, ಕಡಲು ಮುಂತಾದವುಗಳಿಗೆ ಸಂಬಂಧಿಸಿದಂತೆ ಸಂಘಂ ಸಾಹಿತ್ಯವು ಅತ್ಯಂತ ವಿವರವಾದ ಜನಪದ ಚಿಂತನೆಗಳನ್ನು ಚಿತ್ರಿಸುತ್ತದೆ. ಈ ಎಲ್ಲ ಸಂದರ್ಭಗಳಲ್ಲಿ ಸಹ ಕೃಷಿ ಸಂಬಂಧಿತ ಸಂಗತಿಗಳು ಬೇರೆ ಬೇರೆ ಕೋನಗಳಿಂದ ಚರ್ಚಿತವಾಗಿವೆ.

ವಿಶ್ವ ಸಾಹಿತ್ಯದ ಮೂಲ ಬೇರುಗಳಿರುವುದೇ ಜನಪದ ಚಿಂತನೆಗಳಲ್ಲಿ. ಸಂಘಂ ಸಾಹಿತ್ಯದ ಅಗಂ ಹಾಡುಗಳಲ್ಲಿ ನಾಯಕ ನಾಯಕಿಯರ ದಾರಿ ಸಾಗುವ ಪ್ರಯಾಣದ ಹಾಡುಗಳು, ಬೇಟೆ ಹಾಡುಗಳು, ಸಮುದ್ರ ತೀರದ ಹಾಡುಗಳು, ದೋಣಿ ಹಾಡುಗಳು, ಹರಸುವ ಹಾಡುಗಳು, ಗುರುಗಳ ಹಾಡುಗಳು, ಆಟೋಟಗಳ ಹಾಡುಗಳು ಕುರಿತಂತೆ ವಿಸ್ತಾರವಾದ ಸರಕು ಸಿಗುತ್ತದೆ. ಅನಂತರದ ಕಾಲಘಟ್ಟಗಳಲ್ಲಿ ಮಾಣಿಕ್ಯವಾಚಗರ್ ಅವರಂತಹ ಸಂತಕವಿಗಳ ಭಕ್ತಸಾಹಿತ್ಯದಲ್ಲೂ ಸಮುದ್ರಗೀತಗಳು, ಉಯ್ಯಾಲೆ ಹಾಡುಗಳು, 'ಜೋ' ಮಟ್ಟುಗಳು, ಹೆಣ್ಣುಮಕ್ಕಳ ಕೈಪರೆಗುಟ್ಟು ಹಾಡುಗಳಿಗೆ ವಿಶೇಷ ಆದ್ಯತೆ ದೊರಕಿದೆ. 20ನೇ ಶತಮಾನದಲ್ಲಿ ಭಾರತಿಯವರಂತಹ ಸಾಹಿತಿಗಳು ಜಾನಪದ ಮಟ್ಟುಗಳಲ್ಲಿ ಶಾಸ್ತ್ರೀಯ ಚಿಂತನೆಗಳನ್ನು ಅಳವಡಿಸಿದ್ದಾರೆ. ಪಿಳ್ಳೈತಮಿಳ್ ಸಾಹಿತ್ಯದಲ್ಲೂ ಜೋಗುಳದ ಹಾಡುಗಳು ಹೇರಳವಾಗಿವೆ. ಸಂಘ ಸಾಹಿತ್ಯದಲ್ಲಿ ಕುರಂಜಿ ಹೂ ಮತ್ತು ಮಲೆಗಳಿಗೆ ಸಂಬಂಧಿಸಿದ ಹಾಡುಗಳು ಅಥವಾ ಜನಪದ ಪ್ರೇಮ ಕಾವ್ಯಗಳು, ನಾಡಮದ್ದುಗಳ ಕುರಿತ ಹಾಡುಗಳು, ಮೀನುಕೃಷಿ ಕುರಿತ ಹಾಡುಗಳೂ ಯಥೇಚ್ಛವಾಗಿ ದೊರೆಯುತ್ತದೆ.

ತೊಲ್‌ಕಾಪ್ಪಿಯಮ್ ಸು. ಕ್ರಿ.ಪೂ. 300 ರಲ್ಲಿತ್ತೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇದರ ಕರ್ತೃ ತೊಲ್‌ಕಾಪ್ಪಿಯರ್. ಈ ಕಾವ್ಯ ತಮಿಳಿನ ಮೊದಲ ಲಭ್ಯ ಕೃತಿ. ಪ್ರಾದೇಶಿಕ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕಾದ ವಿಚಾರಗಳನ್ನು ಕುರಿತು ಈ ಕೃತಿ ಮಹತ್ವಪೂರ್ಣ ಮಾರ್ಗದರ್ಶನಗಳನ್ನು ನೀಡುತ್ತದೆ.

ಕೃಷಿ ಚಿಂತನೆ : ತಮಿಳು ಜನಪದದಲ್ಲಿ ಇದಕ್ಕೆ 'ವೇಳಾಣ್ಮೈ' ಎನ್ನಲಾಗುತ್ತದೆ. 'ವೇಳ್' ಎಂಬ ಪದ ಗಂಡು, ಗಂಡುತನದ ಕಾರ್ಯ, ಮಣ್ಣಿನ ಸಂಬಂಧವಿರುವ ಕೆಲಸ ಇತ್ಯಾದಿ ಅರ್ಥಗಳನ್ನು ವಿಶಾಲಾರ್ಥದಲ್ಲಿ ಒಳಗೊಳ್ಳುತ್ತದೆ. ನೆಲಕ್ಕೆ ಸಂಬಂಧಿಸಿರುವ ಶಕ್ತಿಯನ್ನು (ತೋಳ್ಬಲ) ಆಧರಿಸಿ ಕೆಲಸವಾದ್ದರಿಂದ ಕೃಷಿ ಕಾರ್ಯಗಳು ಗಂಡಿಗೆ ಸಂಬಂಧಿಸಿದವು ಎಂಬ ಅರ್ಥವನ್ನು ಪ್ರಾಚೀನ ಕಾಲದಲ್ಲಿ ಹೊಂದಿದ್ದುವು ಎಂದುಕೊಳ್ಳಬಹುದೇನೋ. 'ವೆಳ್ಳಂ' ಎಂಬುದು 'ನೀರು' ಆಗಿರುವುದರಿಂದ ನೀರನ್ನು ಬಳಸುವವ ಎಂಬ ವಿಶೇಷಾರ್ಥದಲ್ಲೂ ಈ ಪದ ಬಳಕೆಯಾಗಿರಬಹುದು. ಆಂಗ್ಲ ಭಾಷೆಯಲ್ಲೂ 'agriculture' ಎಂಬ ಪದ ನೆಲವನ್ನು ಬಳಸುವವನು ಎಂಬ ಅರ್ಥದ ಸಂಯುಕ್ತ ಪದವೇ ಆಗಿದೆ. ನೆಲವನ್ನು ಬಳಸು, ಗಮನಿಸು, ನೆಲವನ್ನು ಕುರಿತು ಕಲಿ, ಅಗೆ, ವಿಸ್ತರಿಸು ಹೀಗೆ ಕೃಷಿಯನ್ನು ಮಾಡುವ ಬಗೆಗಿನ ನಾನಾರ್ಥಗಳು ಕೂಡಿ ಕೃಷಿ ಪದ ಬಳಕೆಯಲ್ಲಿದೆ. ಪ್ರಾಚೀನ ಕಾಲದಲ್ಲಿ ಈಜಿಪ್ಟ್, ಮಧ್ಯಪ್ರಾಚ್ಯ ಹಾಗೂ ಭಾರತ ದೇಶಗಳಲ್ಲಿ, ಕಾಡುಗಳಲ್ಲಿಯ ಕೆಲ ಪ್ರದೇಶಗಳನ್ನು ಅಗೆದು ಸಮಮಾಡಿ, ಬೆಳೆ ಬೆಳೆದು ಸಾಗಿಸುತ್ತಿದ್ದ ಕೆಲಸವನ್ನೇ 'ಕೃಷಿಕಾರ್ಯ' ಎನ್ನಲಾಗುತ್ತಿತ್ತು.

ವ್ಯವಸಾಯ ಕೆಲಸಗಳು : ಜನಸಂಖ್ಯೆ ಅಧಿಕವಾದಂತೆ ಆಹಾರದ ಬೇಡಿಕೆಯೂ ಅಧಿಕವಾಗಿದೆ. ಬೆಳೆ ಪ್ರದೇಶಗಳೊ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಲೇ ಇದೆ. ಕೃಷಿಯಲ್ಲಿ ಹೊಸ ಬಗೆಯ ಚಿಂತನೆಗಳನ್ನೂ ನೂತನ ವ್ಯವಸಾಯ ಸಾಧನಗಳನ್ನೂ ಪರಿಚಯಿಸಬೇಕಾದ ಆವಶ್ಯಕತೆ ಇದೆ. ಬಿತ್ತನೆಯಿಂದ ಕುಯಿಲಿನವರೆಗೆ ಅಷ್ಟೂ ಬಗೆಯ ಕೆಲಸಗಳೂ ಕೃಷಿಕಾರ್ಯಗಳೇ. ಅವನ್ನು ಹೀಗೆ ವಿಂಗಡಿಸಿಕೊಳ್ಳಬಹುದು: ಉಳುಮೆ ಮತ್ತು ಬಿತ್ತನೆ; ಕೃಷಿಯ ಕುರಿತಾದ ಚಿಂತನಾ ಸಾಮರ್ಥ್ಯ ಹಾಗೂ ಕ್ರಿಯಾಸಾಮರ್ಥ್ಯವನ್ನು ಮೊದಲೇ ಲೆಕ್ಕಾಚಾರ ಮಾಡಿಟ್ಟುಕೊಳ್ಳುವುದು; ಹಲವು ಬಗೆಯ ಗೊಬ್ಬರಗಳನ್ನು ಬಳಸುವ ವಿಧಿ, ವಿಧಾನಗಳು; ಕಳೆ ತೆಗೆಯುವುದು (ಅದರಲ್ಲಿಯ ಆಹಾರ ಸಂಬಂಧಿ ಪಯಿರುಗಳನ್ನು ವಿಭಾಗಿಸಿ ರಕ್ಷಿಸಿಕೊಳ್ಳುವುದು); ಕುಯಿಲು; ಕಾಳು ಸಂಗ್ರಹ ಹಾಗೂ ಮಾರಾಟ.

ಭೂಮಿ/ನೆಲವನ್ನು ಸಿದ್ಧಗೊಳಿಸುವ ಕ್ರಮ : ಭೂಮಿಯನ್ನು ಸಿದ್ಧಗೊಳಿಸುವುದು ಸರಿಯಾದ ಆರೋಗ್ಯಕರವಾದ ಬೆಳೆ ಬೆಳೆಯುವುದಕ್ಕೆ ಬೇಕಾದ ಅತ್ಯಗತ್ಯವಾದ ಮೊದಲ ಕೆಲಸ. ನೆಲದೊಳಗಿನ ಸತ್ತ್ವವನ್ನು ಭೂಮಿಯ ಎಲ್ಲ ಭಾಗಕ್ಕೆ ಸಮನಾಗಿ ಹರಡಿಕೊಳ್ಳುವಂತೆ ಮಾಡುವುದು, ಮಣ್ಣಿನ ಕಠಿಣವಾದ ಹೆಂಟೆಗಳನ್ನು ಒಡೆದು ಹಗುರ ಮಾಡಿಕೊಳ್ಳುವುದು ಸಹ ಅತಿ ಮುಖ್ಯ. ಉಳುಮೆ ಹಾಗೂ ಆರು ಹೊಡೆಯುವ ಕೆಲಸದ ಸಾಮರ್ಥ್ಯದ ಮೇಲೆ ಇದು ಅವಲಂಬಿಸಿದೆ.

'ತಿರುಕ್ಕುರಳ್' ಗ್ರಂಥದ ಉಳುಮೆ ಎಂಬ ಅಧ್ಯಾಯದಲ್ಲಿ ವ್ಯವಸಾಯವನ್ನು ಕುರಿತಂತೆ ಹಲವು ನಿರ್ದೇಶನಗಳು ದೊರೆಯುತ್ತವೆ.

"ಉಳುವವನು ಭೂಮಿಯು ಫಲವತ್ತಾಗುವಂತೆ ನೆಲವನ್ನು ಹದವಾಗಿ ಉತ್ತು ಹರವಿ ಬಿಸಿಲಾಡಲು ಬಿಟ್ಟರೆ ಒಂದು ಹಿಡಿ ಬತ್ತವನ್ನು ಬಿತ್ತುವ ಮೊದಲೇ ಪಯಿರು ಮೊಳೆತು ಬರುತ್ತದೆ" ಎಂಬ ಮಾತಿನಲ್ಲಿ ಉಳುಮೆಗೆ ಇರುವ ಮಹತ್ವವೇನು ಎಂಬುದು ಅರ್ಥವಾಗುತ್ತದೆ. ಚೆನ್ನಾಗಿ ಉತ್ತಾಗ ಭೂಮಿಯು ಉಸಿರಾಡಲು ಅನುವಾಗುತ್ತದೆ. ಭೂಮಿಯಲ್ಲಿ ಹರಡಿ ಹೋಗಿರುವ ಎಲೆ, ಕಡ್ಡಿ ಕಸಗಳು ಸಮನಾಗಿ ಒಳಸೇರಿ

ಭೂಮಿಯನ್ನು ಸತ್ತ್ವಯುತವನ್ನಾಗಿಸುತ್ತವೆ ಎಂಬ ನಿರ್ದೇಶನ ಇಲ್ಲಿದೆ. ಎರಡನೆಯದಾಗಿ "ಕಳೆ ತೆಗೆದು, ಪಯಿರುಗಳನ್ನು ರಕ್ಷಿಸಿ, ನೀರು ಹಾಯಿಸಬೇಕು" ಎಂಬ ಮಾತಿನಲ್ಲಿ ಪ್ರಾಚೀನರು ಎಷ್ಟು ಸಣ್ಣ ಸಣ್ಣ ಸಂಗತಿಗಳಿಗೂ ಆದ್ಯತೆ ನೀಡುತ್ತ ವ್ಯವಸಾಯಕ್ಕೆ ತೊಡಗುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

ಉಳುಮೆ : ಮೊದಲೇ ಹೇಳಿದಂತೆ ಸರಿಯಾಗಿ ಉತ್ತರೆ ಮಣ್ಣಿನ ಒಳಪದರಗಳು ಆರೋಗ್ಯಕರವಾಗಿ ಉಸಿರಾಡಲು ಅನುವಾಗುತ್ತದೆ. ಅನಂತರ ನೀರು ಹಾಯಿಸಿ ದೀರ್ಘಕಾಲ ಅದು ನಿಲ್ಲುವಂತೆ ಮಾಡಬೇಕು. ಇದೂ ಮಣ್ಣಿನ ಒಳಪದರಗಳಲ್ಲಿಯ ಸತ್ತ್ವಯುತ ಖನಿಜಾಂಶಗಳು ಸಮನಾಗಿ ಎಲ್ಲೆಡೆ ಬೆರೆಯುವುದಕ್ಕೆ ಸಹಾಯಕವಾಗುತ್ತದೆ ಹಾಗೂ ಬೆಳೆದ ಪಯಿರಿನ ಬೇರುಗಳು ಸರಾಗವಾಗಿ ಮಣ್ಣಿನಲ್ಲಿ ಊರಿಕೊಂಡು ನಿಲ್ಲುವುದಕ್ಕೂ ಅನುಕೂಲವಾಗುತ್ತದೆ. ಅನಂತರ ಕಳೆಗಳನ್ನೂ ಅದರ ಬೀಜಗಳನ್ನು ಇಲ್ಲವಾಗಿಸಬೇಕು. ಆಗ ಮಣ್ಣಿನ ಸಾರವನ್ನೆಲ್ಲ ಬೆಳೆ ಯಥೇಚ್ಛವಾಗಿ ಹೀರಿ ಬೆಳೆಯಲು ಸಹಾಯವಾಗುತ್ತದೆ, ಇಳುವರಿಯೂ ಹೆಚ್ಚುತ್ತದೆ. ಮಣ್ಣಿನ ಸವಕಲು ಕಡಿಮೆಯಾಗಿ ಅನನುಕೂಲ ಅನಿಲಗಳನ್ನು ಬೆಳೆ ಹೀರಿ ವಾತಾವರಣವನ್ನು ನಿರ್ಮಲವಾಗಿಡಲು ಅನುವಾಗುತ್ತದೆ. ಮಣ್ಣಿನ ಸತ್ತ್ವವೂ, ಆಯುಷ್ಯವೂ ಹೆಚ್ಚುತ್ತದೆ.

ಬಿತ್ತನೆ, ನಾಟಿ : ಬೆಳೆಯ ಮೌಲ್ಯ ಬಿತ್ತನೆಯ ಶೈಲಿಯ ಮೇಲೂ ಆಧಾರಿತವಾಗಿರುತ್ತದೆ. ಅನಂತರ ಮೇಲೆ ಬಂದ ಸಸಿಗಳನ್ನು ಸರಿಯಾದ ಅಂತರಗಳಲ್ಲಿ ನೆಲದಲ್ಲಿ ಊರಿ ನಾಟಿ ಮಾಡಬೇಕು. ಮಳೆಯಾಧಾರಿತ ಬೆಳೆಗಳು, ನೀರಾವರಿ ಬೆಳೆಗಳು ಎಂಬುದನ್ನು ಗುರುತಿಸಿಕೊಳ್ಳುವುದರಿಂದ ಬೆಳೆಗೆ ಹೇಗೆ ನೀರು ಒದಗಿಸುವುದು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ನೀರಿನ ಅಭಾವ ಇರುವಲ್ಲಿ ಸಮಯಾಧಾರಿತ ನೀರಾಹಾಯಿ ಕೊಳವೆಗಳನ್ನು ಸಿದ್ಧಪಡಿಸಿಕೊಂಡಿರಬೇಕು. ನೀರ್ಗಾಲುವೆಗಳು, ಕೊಳಗಳು, ಅಣೆಕಟ್ಟುಗಳು ಮುಂತಾದವನ್ನು ನೀರಿಗೆ ಆಧಾರವಾಗಿ ಬಳಸಿಕೊಳ್ಳಬಹುದು. ಹಿಂದಿನ ಕಾಲದಲ್ಲಿ ಏತ, ಬಾವಿ ಇತ್ಯಾದಿಗಳನ್ನು ಆಶ್ರಯಿಸಲಾಗುತ್ತಿತ್ತು. ಆಧುನಿಕ ಪದ್ಧತಿಗಳ ಇಂದಿನ ಕಾಲಕ್ಕೆ ಇವುಗಳ ಸಾಮರ್ಥ್ಯ ಸಾಲದು ಎನ್ನಲಾಗುತ್ತದೆ.

ನಾಟಿ ಹಾಕುವ ಹಾಡು

ಚಂದಿರರೇ ಸೂರಿಯರೇ
ಶಾಮೀ ಭಗವಾನೇ
ಚಂದಿರರೇ ನಾನ್ ನಿನ್ನೈಚ್ಚಿ
ಶಾಯ್‌ಚ್ಚೇನ್ ತಿರುಆಳವು
ಶಾಯ್ಚ ತಿರು ಆಳವು
ಶಮಚ್ಚಿ ಪರಿ ಏರಣುಂ
ಎಡುತ್ತ ತಿರು ಆಳವು
ಏಲುಂ ದು ಪರಿ ವರಣುಂ

(ಚಂದ್ರ ಸೂರ್ಯರೇ ನಾನು ನಟ್ಟ ಸಸಿ ಎದ್ದು ತಲೆಯೆತ್ತಿ ನಿಂತು ಬೆಳೆಯಬೇಕು ಎಂದು ಮೊದಲು ನಾಟಿ ಮಾಡಿದ ಹೆಣ್ಣು ಮಗಳು ದೇವರನ್ನು ಪ್ರಾರ್ಥಿಸುವ ಚಿತ್ರ ಇದು)

ತಂಗರದಮ್ ನಾನಿರುಕ್ಕ ಅಮ್ಮಾ ಡಿಯೋವ್
ಅಂದ ತಟ್ಟುಗೆಟ್ಟ ಅತ್ತಪುಳ್ಳ ಅಮ್ಮಾಡಿಯೋವ್
ತಂಗಾಳೈಯುಂ ಮಾಲೈಯಿಟ್ಟಾನ್
ಉರುಮತ್ತಿಲ್ ಪೂತ್ತ ಪೂವು
ಊಸಿ ಮಲ್ಲಿ ನಾನಿರುಕ್ಕ
ಊಶಡಿಚ್ಚ ಪೂವುಕ್ಕೈದಾನ್
ಊರು ಊರಾ ಶುತ್ತು ರಾನೇ
ಕಾಲೈಯಿಲ್ ಪೂತ್ತ ಪೂವು
ಕನಕಾಂಬರಮ್ ನಾನಿರುಕ್ಕ
ಕವುಕ್ಕಡಿಚ್ಚ ಪೂವುಕ್ಕೇದಾನ್
ಅವನ್ ಕಾಡುಕ್ಕಾಡಾ ಶುತ್ತು ರಾನೇ

ಹೆಣ್ಣೊಬ್ಬಳು ತನ್ನ ಅತ್ತೆಮಗನನ್ನು ಇಲ್ಲಿ ಲೇವಡಿ ಮಾಡುತ್ತಲೇ ತನ್ನ ಕುರಿತಾದ ಅವನ ಅವಜ್ಞೆಯನ್ನು ಕುರಿತು ನೊಂದು ನುಡಿಯುತ್ತಿದ್ದಾಳೆ. ಚಿನ್ನದ ರಥದಂತೆ, ಸೂಜಿ ಮಲ್ಲಿಗೆಯಂತೆ, ಬೆಳಿಗ್ಗೆ ತಾನೇ ಅರಳಿದ ಕನಕಾಂಬರದಂತೆ ನಾನಿರುವಾಗ ಇವನು ಕೋಣಕ್ಕೆ ಮಾಲೆ ಹಾಕಲು ಹೊರಟಿದ್ದಾನೆ. ಕಾಡು ಕಾಡಾಗಿ, ಊರು ಊರಾಗಿ ಸುತ್ತಿ ಹಳಸಲು ಹೂವಿಗಾಗಿ ಹಂಬಲಿಸುತ್ತಿದ್ದಾನೆ ಎಂಬುದು ಅವಳ ನೋವು.

ಯಾವುದೇ ಪ್ರದೇಶದ ಜನರಾಗಲಿ ತಮ್ಮ ಬದುಕಿನ ಬವಣೆಗಳನ್ನು ಸಂತೋಷ ಸಂಭ್ರಮಗಳನ್ನು ಹಂಚಿಕೊಳ್ಳುವ ಹಾಡಿಕೊಳ್ಳುವ, ಸಂಪ್ರದಾಯ ಬಹಳ ಪ್ರಾಚೀನವಾದುದು. ಹುಟ್ಟಿನಿಂದ ಸಾವಿನ ತನಕ ಆಯಾ ಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲೇ ಸೃಷ್ಟಿಯಾಗುವ ಗೀತೆಗಳಲ್ಲಿ ಹೆಚ್ಚು ಪಾಲು ಕೃಷಿಗೆ ಸಂಬಂಧಿಸಿದವೇ ಆಗಿರುತ್ತದೆ. ಅದರಲ್ಲೂ ಸಂಸಾರವೆಂಬ ಬಂಡಿಯ ಎರಡು ಚಕ್ರಗಳಂತೆ ಜೋಡಿಯಾಗಿ ಬದುಕು ಸಾಗಿಸುವ ದಂಪತಿಗಳು ಹಾಡುವ ಹಾಡುಗಳು ಕೃಷಿಯ ಪ್ರಧಾನ ಭಾಗವಾಗಿಯೇ ಹುಟ್ಟಿಕೊಂಡಂಥ'ವು. ವಿವಾಹದ ಮೊದಲು ಸ್ವೇಚ್ಛೆಯಿಂದ ವಿಹಾರಿಸುವ ಯುವಕ ಯುವತಿಯರು ಕೃಷಿಯಲ್ಲಿ ಪಾಲ್ಗೊಂಡರೂ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಹಂತವನ್ನು ತಲುಪುವುದು ಕಡಿಮೆ. ವಿವಾಹನಂತರ ಜವಾಬ್ದಾರಿಗಳೇ ಹೆಚ್ಚು. ಇಂಥ ಸಂದರ್ಭದಲ್ಲಿ ಒದಗುವ ಅನುಭವಗಳಿಗೆ ಅಭಿವ್ಯಕ್ತಿರೂಪವಾಗಿ ಹುಟ್ಟುವ ಹಾಡುಗಳಿಗೆ ತೊಳಿಲ್‌ಪಾಟ್ಟು (ಶ್ರಮಗೀತೆ) ಎಂದು ಹೆಸರು:

ವೃತ್ತಿಸಂಬಂಧಿ ಹಾಡುಗಳು : (ತೊಳಿಲ್‌ಪಾಟ್ಟು ಶ್ರಮಗೀತೆಗಳು) : ಗಂಡಸು ಭೂಮಿಯನ್ನು ಉತ್ತು ಹದಮಾಡಿದರೆ ಹೆಂಗಸರು ಪೈರನ್ನು ನಾಟಿ ಮಾಡುತ್ತಾ ಇಂಪಾಗಿ ಹಾಡುವರು. ಗಂಡಸರು ಏತದ ಮೂಲಕ ನೀರೆತ್ತುವ ಸಂದರ್ಭದಲ್ಲಿ ಹೆಂಗಸರ ಹಾಡುಗಳಿಗೆ ದನಿಗೂಡಿಸುತ್ತ ಹಿಮ್ಮೇಳದವರಂತೆ ತಲ್ಲೀನರಾಗಿ ಆಯಾಸ ಮರೆತು ಅರ್ಥಪೂರ್ಣ ಯುಗಲಗೀತೆಗಳಿಗೆ ಸ್ಪಂದಿಸುತ್ತಾರೆ. ತಮಿಳಿನ ಏತದ ಹಾಡುಗಳು ಹೀಗಿವೆ

ಪಿಳ್ಳೈಯಾರೇ ವಾರೀರ್ ಶಿವನುಂ ಪೆರಮಾಳುಂ
ಪಿಳ್ಳೈಯಾರೇ ವಾರೀರ್ ಶೇರ್‌ನ್ದು ರದಮೇರ
ಪೆರುಮಾಳೇ ವಾರೀರ್ ಅರಿಯುಮ್ ಸಿವನುಮ್
ಪೆರುಮಾಳೇ ವಾರೀರ್ ಅಮರ್‌ನ್ದಂ ಮಲಲೇರ
ಸಿವನಾರೇ ವಾರೀರ್ ಗುರುವುಂ ಪೆರುಮಾಳುಂ
ಸಿವನಾರೇ ವಾರೀರ್ ಕೂಡಿ ರದಮೇರ
ಪೊರ್‌ಕೊಡೈಯುಮ್ ತೇರುಮ್
ಪೋಗ ವರವೇಣುಂ

ಶಿವನೂ ಹರಿಯೂ ಸೇರಿ ರಥವೇರಿ ಬರುವುದನ್ನು ಸ್ವಾಗತಿಸುತ್ತಿರುವ ಹಾಡಿದು.

ಕೈ ಏತ (ಮರದ ಏತ) ಇಬ್ಬರು ಜೊತೆಯಾಗಿ ನಿಂತು ಏತವನ್ನು ಎಳೆಯುವಂಥದು. ಈ ಸಂದರ್ಭದಲ್ಲಿ ಹಾಡುವ ಗೀತೆ:

ಒರು ಇರುವೈ ಒಣ್ಣು
ಒರು ಇರವೈ ಒಣ್ಣು
ಒರು ಇರವೈ ಇರಂಡು
ಒರು ಇರವೈ ಇರಂಡು
ಒರು ಇರವೈ ಮೂಣು
ಒರು ಇರವೈ ಮೂಣು...

ಅತ್ತ ವೀಟ್ಪ್ ಪೆಣ್ಣೇ
ಒಲಪ್ಪೊಟ್ಟಿ ಸೋರು
ಕೊಂಡು ವಂದನೀಯುಂ
ಎರಚ್ಚೆಡುವೇನ್ ತಣ್ಣೀರ್

ಇಲ್ಲಿ ಒಂದು ಬಿಟ್ಟು ಒಂದು ಅಂಕಿಯನ್ನು ಎಣಿಸಿ ನೂರು ಮರ ಇಳಿಸಿದರೆ ಅದು 'ಮಾತ್' ಆಗುತ್ತದೆ. ನೂರು ಎಣಿಸಿ ಮುಗಿಸುವಾಗ ಒಂದು ಬಿಟ್ಟು ಒಂದು ಎಂಬ ಲೆಕ್ಕದಲ್ಲಿ ಇನ್ನೂರು ಆಗುತ್ತದೆ. ಇಬ್ಬರೂ ಸೇರಿ ಇಳಿಸುವಾಗ (200+200=400) ನಾನೂರು ಆಗುತ್ತದೆ. ಹೀಗೆ ಎಣಿಕೆ ಮಾಡುತ್ತ ಹೋಗಿ ಒಂದು ಸಾವಿರ ತಲುಪಿದಾಗ ಅದನ್ನು ಒಂದು ಪಿಳ್ಳೈಯರ್ ಎನ್ನುವರು.

ಕಮಲೈ-ಇರವೈ : ಕೊಳ ಅಥವಾ ಕೆರೆಯ ನೀರನ್ನು ಹೊಲ ಗದ್ದೆಗಳಿಗೆ ಹಾಯಿಸುವ ವಿಧಾನವಿದು. ಇಲ್ಲಿ ಮಾನವ ಶಕ್ತಿಗೆ ಬದಲು ಪಶುಶಕ್ತಿ ಬಳಕೆಯಾಗುತ್ತದೆ. ಎತ್ತುಗಳಿಗೆ ನೊಗದ ಹಗ್ಗ ಹಾಗೂ ಕಪ್ಪಿ (ಉರುಳು)ಯನ್ನು ಬಳಸುವರು. ಕೆರೆ ಅಥವಾ ಕೊಳದ ಬಳಿ ಆಳದಿಂದ ನೀರನ್ನು ಎತ್ತಲು ಉದ್ದನೆಯ ಕಂಬ ನೆಟ್ಟಿರುತ್ತಾರೆ. ಅದಕ್ಕೆ ಕೊಕ್ಕೆ ಸಿಕ್ಕಿಸಿ ಉರುಳನ್ನು ಬಿಗಿಯಲಾಗುತ್ತದೆ.

ಸಸಿ ನೆಡುವ ಹಾಡುಗಳು : ಇದು ಜನಪದ ಗೀತ ಪ್ರಕಾರಗಳಲ್ಲೊಂದು. ಇವು ನೆಡುವ ಕಾರ್ಯದ ಶೈಲಿ, ನೀರು ಹಾಯಿಸುವ ಕ್ರಮ ಭೂಮಿಯ ಕುರಿತಾಗಿನ ಭಕ್ತಿ ಪ್ರೀತಿ ಶ್ರದ್ಧೆ ಇತ್ಯಾದಿಗಳ ಕುರಿತು ವರ್ಣನೆಗಳನ್ನೊಳಗೊಂಡಿರಬಹುದು. ಸಸಿ ನೆಡುವಾಗಿನ ದೈಹಿಕ ಶ್ರಮವನ್ನು ಹಾಡು ಮರೆಸುತ್ತದೆ. ಹೀಗೆಯೇ ಏತದ ಹಾಡು, ಏರು ಕಟ್ಟುವ ಹಾಡು, ನಾಟಿ ಹಾಕುವ ಹಾಡು, ಕಳೆ ತೆಗೆಯುವ ಹಾಡು, ಕದಿರು ಕುಯ್ಯುವ ಹಾಡು, ಕಾಳು ತೂರುವ ಹಾಡು, ಬಂಡಿ ಹೊಡೆಯುವವನ ಹಾಡು - ಹೀಗೆ ಕೃಷಿ ಕುರಿತಾಗಿನ ಎಲ್ಲ ವಿವರಗಳನ್ನೊಳಗೊಂಡ ನಾನಾ ಬಗೆಯ ಜನಪದ ಹಾಡುಗಳು ಸಾಂದರ್ಭಿಕ ಚಮತ್ಕಾರಗಳೊಂದಿಗೆ ಬಳಕೆಯಲ್ಲಿವೆ. ಇವು ಪಾರಂಪರಿಕವಾಗಿ ಸಹ ಹೆಣ್ಣುಮಕ್ಕಳ ಬಾಯಲ್ಲಿ ಹರಿದು ಬಂದಿವೆ. ಇವು ಸಮೂಹಗಾನವಾಗಿಯೂ ಸಹ ಬಳಕೆಯಲ್ಲಿವೆ. ಅನೇಕ ವೇಳೆ ಈ ಹಾಡುಗಳು ಹೆಣ್ಣುಮಕ್ಕಳ ಬಾಯಲ್ಲಿ ಹರಿದು ಬರುವಾಗ ಅವರ ಬದುಕಿನ ಭಾವಪೂರ್ಣ ಕ್ಷಣಗಳನ್ನು ಒಳಗೊಂಡು ಆಶು ಕವಿತೆಗಳಾಗಿ ಹೊರಬೀಳುವುದುಂಟು. ಏತ, ನೀರು ಹಾಯಿಸುವುದು, ನೆಲದ ಗುಣ, ಭೂಮಿಯ ಅಥವಾ ಪ್ರಕೃತಿಯ ಚೆಲುವು, ಭಕ್ತಿ, ಜೀವಿತ ಕ್ಷಣಗಳು, ಅತ್ತೆಯ ಕಾಟ, ನಾದಿನಿಯ ಬಿಂಕ ಬಿನ್ನಾಣಗಳ ಕುರಿತ ಕೊಂಕು, ಕೂಲಿ ದೊರೆಯದ ಸಂಕಟ, ಅತ್ತೆಯ ಮಗನನ್ನು ಕೆಣಕುವ ಸಂದರ್ಭಗಳನ್ನು ಸಹ ಕೃಷಿ ಹಾಡುಗಳು ಸ್ಪರ್ಶಿಸಿರುವುದುಂಟು. ಹಿಂದೆಲ್ಲ ಬತ್ತವನ್ನು ಕುಟ್ಟಿ ಅಕ್ಕಿ ಮಾಡುತ್ತಿದ್ದುದರಿಂದ ದೈಹಿಕ ಶ್ರಮವನ್ನು ತಣಿಸಲು ಹಾಡುತ್ತಿದ್ದ ಹಾಡುಗಳು ಬತ್ತ ಕುಟ್ಟುವ ಹಾಡುಗಳಾದವು.

ಮೊಳಕೆ ಪಯಿರ ಹಾಡು : ನಾಟಿ ಹಾಕುವ ಹಾಡು, ಏತದ ಹಾಡುಗಳು ಮುಂತಾದವುಗಳಲ್ಲೆ ಅನೇಕ ಬಾರಿ ಚಂದ್ರ ಸೂರ್ಯರ ಶಕ್ತಿ ಪರಾಕ್ರಮ, ಚೆಲುವು ಹಾಗೂ ವ್ಯಕ್ತಿತ್ವ ಚರಿತ್ರೆಗಳನ್ನೂ ಪ್ರಾಂತೀಯ ರಾಜಮಹಾರಾಜರು, ಮಾಂಡಳಿಕರು, ಚಾರಿತ್ರಿಕ ವೀರಾಧಿವೀರರ ಕುರಿತೂ ಹಾಡುವುದುಂಟು. ಅವರ ಮೇಧಾವಿತನ, ಚುರುಕು ಬುದ್ಧಿ, ಕಿಲಾಡಿತನ, ಕೀಟಲೆ ಬುದ್ಧಿಗಳೂ ಹಲವು ಬಾರಿ ಅವರ ಹಾಡುಗಳಲ್ಲಿ ಬೆರೆತು ಮೈಮನಸ್ಸು ಹಗುರವಾಗುವುದಲ್ಲದೆ ಪರಸ್ಪರ ಸ್ನೇಹಭಾವವೂ ಆರೋಗ್ಯಕರ ವಾತಾವರಣವೂ ಉಂಟಾಗುತ್ತದೆ. ಇಂತಹ ಹಾಡುಗಳಲ್ಲಿ ಜನಪದ ಗೀತೆಗಳು, ಕೃಷಿ ಗೀತೆಗಳು, ಭಕ್ತಿ ಗೀತೆಗಳು ಎಂದು ಬಿಡಿಸಿ ವರ್ಗೀಕರಿಸಲಾಗುವುದಿಲ್ಲ. ಇವು ಬರೆದಿಡದ, ಮೊದಲೇ ಚಿಂತಿಸಿಕೊಂಡಿರದ ಪ್ರಾಸಂಗಿಕವಾದ ಆಶು ಕವಿತೆಗಳು.

ತಾನಾನೇ ತಾನಾನೇ ತಾನಾನೇ ತಾನಾನೇ
ವೇಳಾರು ಕಿಟ್ಟಿ ಚೊಲ್ಲಿ ಕೋಳಾರಾ ಓಡೊಡಚ್ಚು
ವಟ್ಟಿ ವಟ್ಟಿ ಓಡೊಡಚ್ಚು ಕುಟ್ಟಿಮುಳ್ಳಿ ಮುಳೈಪ್ಪಯಿರು
ಆಟ್ಟಾಂದೊಳು ತೆರಂದು ಆಟ್ಟೆರವು ಅಳ್ಳಿವಂದು
ಮಾಟ್ಟಾಂದೊಳು ತೆರಂದು ಮಾಟ್ಟೆರವು ಅಳ್ಳಿವಂದು
ಕಡುಗುಲಯುಂಚಿರುಪ್ಪಯರು ಕಾರಾಮಣಿಪ್ಪಯರು
ಮಿಳಗುಳಯುಂಚಿರುಪ್ಪಯಿರು ಮುತ್ತಾನ ಮಣಿಪ್ಪಯರು
ಮೊಳಪೋಟ್ಟಿ ಒಣ್ಣಾಂನಾಳು ಓರೆಲೆಯಾಯ್
ಮುಳೈಪ್ಪಾರಿ
ಓರೆಲೈಕ್ಕುಂಕ್ಕಾಪ್ಪುಕಟ್ಟಿ ಒರುಪಾನೈ ಪೊಂಗಲಿಟ್ಟು
ಮುಳೈಪ್ಪಾರಿ ಪೋಡುಂಗಮ್ಮಾ ಮುತ್ತಾಲಮ್ಮನೈ
ಪಾಡುಂಗಮ್ಮಾ
ತಾನಾನೇ ಪೋಡುಂಗಮ್ಮಾ ತೈಯಲರೇ ಒರುಕುಲವೈ

ಈ ಹಾಡು ಕೃಷಿಕನ ಹತ್ತಿರ ಹೇಳಿ ಸಣ್ಣ ಸಣ್ಣ ಪಾತಿ ಮಾಡಿಸಿ ಬಿತ್ತನೆ ಮಾಡಿದ ಅನಂತರ ಚಿಕ್ಕ ಚಿಕ್ಕ ಮೊಳಕೆ ಬಂದುದನ್ನು ಕಂಡು ಆನಂದಿಸುವುದನ್ನು ವರ್ಣಿಸುತ್ತದೆ. ಚಿಕ್ಕಚಿಕ್ಕ ಮೊಳಕೆ ಒಡೆದು ಮೊದಲನೇ ದಿನವೇ ಒಂದು ಎಲೆ ಮೂಡಿದಾಗ, ಮುತ್ತು ಮುತ್ತಾಗಿ ಮಣಿಯಂತೆ ಅದು ಕಂಡಾಗ ಅದರ ಸೌಂದರ್ಯಕ್ಕೆ ದೃಷ್ಟಿಯಾಗದಿರಲಿ ಎಂದು ನೀವಾಳಿಸಿ ಕಟ್ಟುವುದು; ಅದು ಪಯಿರನ್ನು ಹೊತ್ತು ತೂಗಿದಾಗ ಸಂಭ್ರಮದಿಂದ ಮಡಕೆಯಲ್ಲಿ ತುಂಬಿ ಅದೆಲ್ಲವನ್ನು ಹರಸಿಕೊಟ್ಟ ಮುತ್ತಾಲಮ್ಮನನ್ನು ಹಾಡಿರಿ ಎಂದು ಜೊತೆಯ ಹೆಂಗಳೆಯರನ್ನು ಆಹ್ವಾನಿಸುತ್ತದೆ ಈ ನುಡಿ ಚಿತ್ರ.

ಜನಪದ ಗೀತೆಗಳ ವೈಶಿಷ್ಟ್ಯ : "ಜನಪದ ಗೀತೆಗಳ ವೈಶಿಷ್ಟ್ಯ ಅದರ ರಚನೆಯಲ್ಲಿಲ್ಲ. ಅದರ ಬಳಕೆಯ ರೀತಿ ನೀತಿಗಳಲ್ಲಿದೆ" ಎಂದು ಹೇಳಲಾಗುತ್ತದೆ. ಅವು ಜನಪದರ ಬದುಕಿನ ಕ್ರಿಯಾವಿಧಿಗಳಲ್ಲಿ ಹಾಸುಹೊಕ್ಕಾಗಿರುವುದರಿಂದ, ಒಂದೊಮ್ಮೆ ಅವುಗಳ ರಚನಕರ್ತೃ

ಯಾರೆಂಬುದು ತಿಳಿದಿದ್ದರೂ ಅವು ಜನಪದ ಗೀತೆಗಳೇ ಆಗುತ್ತವೆ. ಇಲ್ಲಿ ವ್ಯಕ್ತಿ ಮುಖ್ಯವಲ್ಲ. ಕ್ರಿಯೆ ಹಾಗೂ ಬಳಕೆ ಮುಖ್ಯ.

ಇವನ್ನು ಹಾಡಲು ವಿಶೇಷ ಶಿಕ್ಷಣದ ಆವಶ್ಯಕತೆ ಬೇಕಿಲ್ಲ, ದೀರ್ಘಕಾಲೀನ ತಾಲೀಮು ರಾಗಗಳ ರಚನಾ ವಿಧಿಗಳ ಪರಿಚಯ ಇತ್ಯಾದಿಗಳ ಅಗತ್ಯವಿಲ್ಲ. ಎತ್ತರದ ದನಿಯಲ್ಲಿ ಹಾಡುವುದೇ ಇವುಗಳಿಗೆ ಒದಗುವ ಮೆರುಗು. ಬಹುತೇಕ ಇವೆಲ್ಲ ಮೌಖಿಕವಾಗಿ ಹರಿದು ಬಂದವು. ಪಾಮರ ಜನಗಾನ, ಗ್ರಾಮ್ಯಗಾನ ಎಂಬಿತ್ಯಾದಿ ರೂಪದಲ್ಲಿಯೂ ಜನಪದರು ಈ ಹಾಡುಗಳನ್ನು ಕರೆದಿರುವುದುಂಟು.

ಇವುಗಳಲ್ಲಿ ಹಲವು ಬಗೆಯ ಹಾಡುಗಳನ್ನು ಪ್ರಧಾನವಾಗಿ ಗುರುತಿಸಬಹುದು. 1. ದೈವಗಳ ಕುರಿತು 2. ಮಳೆ, ಮಾರುತಗಳು 3. ಜೋಗುಳ 4. ಆಟ 5. ಪ್ರೀತಿ-ಪ್ರೇಮ 6. ವಿವಾಹ 7. ಕುಟುಂಬ 8. ಸಮೂಹ 9. ಕೃಷಿ 10. ಹೋಲಿಕೆ.

ತೈ ಪಿರಂದಾ ವಳಿ ಪಿರಕ್ಕುಂ ತಂಗಮೇ ತಂಗಂ|
ತಂಗ ಶಂಬಾ ನೆಲೆ ವಿಳೈಯುಂ ತಂಗಮೇ ತಂಗಂ |

ತೈ ಪೊರಕ್ಕುಂ ನಾಳ್ಳೆ ವಿಡಿಯುಂ ನಲ್ಲ ವೇಳ್ಳೆ
ಪೊಂಗ ಪಾನ ವೆಳ್ಳಂಪೋಲ್‌ಪಾಯಲಾಮ್

ಅಚ್ಚುವೆಲ್ಲಂ ಪಚ್ಚರಿಸಿ ವೆಟ್ಟವಚ್ಚ ಶೆಂಗರುಂಬುತಿ
ಅತ್ತನೈಯುಂ ತಿತ್ತಿಕ್ಕಿರ ನಾಳ್ ದಾನ್..

ತಿರುವಿಳಾ ಪಾಟ್ಟು : ಈ ಸಂದರ್ಭದಲ್ಲಿ ರೈತನಿಗೆ ಭೂಮಿಯೇ ದೇವರು. ಎತ್ತು ಹಾಗೂ ಇತರ ಸಹ ಕೃಷಿಕರು, ನೊಗ, ಗಾಲಿ, ಮಡಕೆಗಳನ್ನು ತಯಾರಿಸಿಕೊಟ್ಟ ಕೂಲಿಕಾರ್ಮಿಕರು ಎಲ್ಲರೂ ದೇವರು ಒದಗಿಸಿದ ಸಹಾಯಕರು. ಎಲ್ಲಕ್ಕೂ ಧನ್ಯವಾದಗಳನ್ನು ಅರ್ಪಿಸುವುದು ಹಾಗೂ ಸುಗ್ಗಿಯ ಫಸಲನ್ನು ಎಲ್ಲರೊಂದಿಗೂ ಹಂಚಿಕೊಳ್ಳುವುದೆ ಧರ್ಮ ಎಂದು ಅವನು ಭಾವಿಸಿದ್ದಾನೆ. ಆಗ ಹಾಡುವುದೇ 'ತಿರುವಿಳಾ ಪಾಟ್ಟು'

'ಹಂಚಿ ಉಂಡರೆ ಹಸಿವೆ ಇಲ್ಲ' ಎಂಬ ಮಾತಿಗನುಗುಣವಾಗಿ ಈ ಹಾಡು:

ಚಿನ್ನದ ಸೇರನು ತನ್ನಿ
ಬತ್ತವ ಅದರಲಿ ಅಳೆಯಿರಿ

ದೇಗುಲದರ್ಚಕನಿಗಿಷ್ಟಿರಲಿ

ಶಂಖನಾದದವನಿಗಷ್ಟಿರಲಿ
ಸಹಕಾರ್ಮಿಕರಿಗಿನ್ನಷ್ಟಿರಲಿ
ನನ್ನಿನಿಯಳಿಗಿಷ್ಟು ಮಿಕ್ಕಿರಲಿ

ಚಿನ್ನದ ಸೇರನು ತನ್ನಿ
ಬತ್ತವ ಅದರಲಿ ಅಳೆಯಿರಿ
ಕಮ್ಮಾರನಿಗಿಷ್ಟಿರಲಿ
ಬಡಿಗನಿಗಷ್ಟಿರಲಿ
ಕುಂಬಾರನಿಗಿನ್ನಷ್ಟಿರಲಿ
ನಾಪಿತನಿಗಷ್ಟು
ಮಡಿವಾಳನಿಗಿಷ್ಟು ಮಿಕ್ಕಿರಲಿ

ಬಿದಿರಿನ ಮೊರವನ್ನಿಲ್ಲಿಗೆ ತನ್ನಿ
ಬತ್ತದ ಜೊಳ್ಳನು ತೆಗೆದು ಬಿಡಿ
ಮತ್ತೆ ಮತ್ತೆ ಒಮ್ಮೆ ಅದನಳೆಯಿರಿ
ಅನಾಥ ವಿಧವೆಯರಿಗೆತ್ತಿಡಿ
ಮತ್ತಿನ್ನಿಷ್ಟು ತಿರುಕನಿಗೆ

ಕೃಷಿಕರ ಸಂಬಂಧಿ ಹಬ್ಬಗಳು : ಪೊಂಗಲ್ : ಕರ್ನಾಟಕದ ಸಂಕ್ರಾಂತಿ ವೇಳೆಯ ಸಂಭ್ರಮವನ್ನು ತಮಿಳು ಜನಾಂಗ 'ತೈಪೊಂಗಲ್' ಎಂದು ಆಚರಿಸುತ್ತದೆ. ಇದಲ್ಲದೇ ಶ್ರೀಲಂಕಾ, ಮಲೇಷಿಯಾ, ಸಿಂಗಾಪುರ, ಐರೋಪ್ಯ ದೇಶಗಳು, ಅಮೆರಿಕಾ, ದಕ್ಷಿಣ ಆಫ್ರಿಕಾ, ಮಾರಿಷಸ್ ಮುಂತಾದಲ್ಲಿ ವಾಸಿಸುವ ತಮಿಳರೂ ಪೊಂಗಲ್ ಕೊಂಡಾಡುತ್ತಾರೆ. ಇದು ಭೂಮಿತಾಯಿಗೂ, ಪ್ರಕೃತಿಗೂ ಅಲ್ಲಿ ವಾಸಿಸುವ ಸಕಲಜೀವಿಗಳಿಗೂ ಶುಭವನ್ನೂ, ಧನ್ಯವಾದವನ್ನೂ ಸಮರ್ಪಿಸುವ ಸಂಭ್ರಮಾಚರಣೆಯಾಗಿದೆ.

ಸಂಘಕಾಲದಲ್ಲಿ : ಕುಯಿಲು ಕಾಲದಲ್ಲಿ ಒಳ್ಳೆಯ ಬೆಳೆ ಕೈಹತ್ತಲು ಸುಭಿಕ್ಷವಾಗಿ ಮಳೆಯುರಿಯಲಿ, ನಾಡು ಸಮೃದ್ಧಿಯಿಂದ ತುಂಬಲಿ ಎಂದು ಹೆಣ್ಣು ಮಕ್ಕಳು ವ್ರತ ಮಾಡುತ್ತಿದ್ದರು. ಅದು 'ಪೊಂಗಲ್' ಆಚರಣೆಯ ದಿನ ಮುಗಿಯುತ್ತಿತ್ತು. ಹಾಗೆ ಒಳ್ಳೆಯ ಬೆಳೆ ನೀಡಿದ್ದಕ್ಕಾಗಿ ಭೂಮಿ, ಸೂರ್ಯ, ಕೃಷಿಗೆ ಸಹಾಯಕವಾದ ನೀರು ಇತ್ಯಾದಿಗಳಿಗೆ ಧನ್ಯವಾದ ಸಮರ್ಪಿಸಲು ಸಕ್ಕರೆ ಪೊಂಗಲ್ ಮಾಡಿ ನೈವೇದ್ಯಕ್ಕಿಡುವುದು ವಾಡಿಕೆ. ಅದೇ ಕಾಲ ಸಂದಂತೆ ಮೂರು ದಿನಗಳು ಆಚರಿಸುವ ಪೊಂಗಲ್ ಹಬ್ಬವಾಗಿ ಬದಲಾಯಿತು. ಮತ್ತು ಇಡೀ ಆ ತಿಂಗಳನ್ನೇ ಹಾಡಿಹೊಗಳುವ ಪರಿಪಾಠವೂ ಬೆಳೆಯಿತು. "ತೈಮಾಸ ಹುಟ್ಟಿದರೆ ಬದುಕಿನ ದಾರಿ ಸುಗಮವಾಗುತ್ತದೆ, ತುಂಬಿದ ಬೆಳ್ಳಿ, ಚಿನ್ನದ ಕೊಡಗಳಲ್ಲಿ ಹಾಲು ತುಪ್ಪ ತೊರೆಯಾಗಿ ಹರಿಯುತ್ತದೆ; ಈ ದಿನಗಳು ಬೆಳಗಾದರೆ ಬದುಕಿನ ಬೆಳಕೂ ಉದಯಿಸುತ್ತದೆ. ಹಾಲು ಹೊಳೆಯಾಗಿ ಅಕ್ಕಿ ಬೆಲ್ಲ ಬಾಳು ತುಂಬುತ್ತದೆ" ಎಂಬ ಅರ್ಥದ ಹಾಡಿನ ಸಾಲುಗಳು ತುಂಬ ಪ್ರಸಿದ್ಧವಾಗಿವೆ. ಮತ್ತೊಂದು ಹಿಗ್ಗಿನ ಹಾಡು ಹೀಗಿದೆ

ಬೇಸಗೆಯ ಸುಗ್ಗಿ ಬಂದಿದೆ
ವೀಳ್ಯದೆಲೆಯ ತೋಟದ ಮಗ್ಗುಲ ಹೊಲ ಫಲಿಸಿ ನಿಂತಿದೆ

ಕೊಯ್ಲಿಗೆ ತೆನೆ ತುಂಬಿ
ಚೆಲುವೆ ತನ್ನ ಕತ್ತಿಯ, ಬತ್ತದ
ತೆನೆಗಳ ಮೇಲೆ ಹಾಡಿನ ಲಯಕ್ಕೆ
ಮೇಳೈಸಿ ಚುರುಕಾಗಿ ಕೈಚಳಕದಿಂದ

ಆಡಿಸುತಿರಲಿ ಗಾಜಿನ ಬಳೆಗಳು
ಹೊಳೆಯುತಿವೆ ಗಲಗಲಸದ್ದು ಕೇಳುತಿದೆ
ಆದರೇನು ಹಾಯ್! ಆ ಹಾಡು ಆ ಹೊಳೆತ
ಆಸುಪಾಸಿನ ಹೃದಯಗಳ ಸೂರೆಗೊಳ್ಳುವುದಿಲ್ಲ!
ಕೆಲಸ ಸಾಗದಂತೆ ಕಟ್ಟಿಹಾಕುವುದಿಲ್ಲ!

ಅತ್ತ, ಆ ಮಲ್ಲಿ ಕನ್ಯೆ
ಸುಸ್ತಾದಂತೆ ನಟಿಸುತ್ತ
ತೆನೆಗಳ ಹೊರೆ ಕೂಡಿಸುವ ತನ್ನ
ನಲ್ಲನತ್ತ ಮೋಹಕ ನಗೆಯ ಚೆಲ್ಲಿಹಳು

ಅವಳು ಹೊರುವ ಹೊರೆಯ ಭಾರ
ಅತಿ ಕಡಿಮೆಯಹದೂ ಖಚಿತ!

ಕೃಷಿಕರ ಪವಿತ್ರ ದಿನ : ಆಷಾಢದಿಂದ ಒಂದೇ ಸಮ ಭೂಮಿಯೊಂದಿಗೆ ಒಂದಾಗಿ ದುಡಿದು ಆಯಾಸಗೊಂಡ ಕೃಷಿಕರು ಬೆಳೆದ ಬತ್ತ ಇತ್ಯಾದಿ ಬೆಳೆಗಳನ್ನು ಮನೆಗೆ ತಂದು ಸೇರಿಸುವ ಕಾರ್ಯವನ್ನು ಮಂಗಳಕರವಾಗಿ ಭಾವಿಸುತ್ತಾರೆ. ಮನೆಯ ಮುಂದೆ ಮಣ್ಣಿನ ಮಡಕೆಯಲ್ಲಿ ಹೊಸ ಅಕ್ಕಿ ಬೇಯಿಸುತ್ತಾರೆ. ಹೊಸ ಅರಿಸಿನಗೆಡ್ಡೆ, ಹೊಸ ಕಬ್ಬು, ತರಕಾರಿಗಳನ್ನು ಅಂದೇ ಬಳಸುತ್ತಾರೆ. 'ಹಳೆಯದು ಕಳೆದು ಹೊಸತು ಉದಯಿಸಲಿ' ಎಂಬ ಆಶಯದೊಂದಿಗೆ ಸೂರ್ಯನಿಗೆ ನಮಿಸಿ, ಎತ್ತು, ಹಸು, ನೇಗಿಲುಗಳನ್ನು ಪೂಜಿಸುತ್ತಾರೆ. ಹಸು, ಎತ್ತು ಇತ್ಯಾದಿ ಜಾನುವಾರುಗಳನ್ನು ಹೊಸಗೆಜ್ಜೆ ಕುಚ್ಚು, ಬಣ್ಣಗಳಿಂದ ಅಲಂಕರಿಸಿ ಕಿಚ್ಚು ಹಾಯಿಸುತ್ತಾರೆ. ಇದನ್ನು ಸೂರ್ಯಪೊಂಗಲ್, ಮಾಟ್ಟುಪೊಂಗಲ್ ಹಾಗೂ ಭೋಗಿ ಪೊಂಗಲ್ ಎಂದು ಮೂರು ದಿನ ಆಚರಿಸುತ್ತಾರೆ. ಹೊಸ ಪೊಂಗಲ್ ಅನ್ನು ಅಕ್ಕಿ ಉಪ್ಪು ಹೆಸರುಬೇಳೆ ಹೊಸ ಜೀರಿಗೆ ಮೆಣಸುಗಳಿಂದ ಬೇಯಿಸಿ ಅದು ಉಕ್ಕಿ ಹರಿಯುವಾಗ 'ಪೊಂಗಲೋ ಪೊಂಗಲ್!' ಎಂದು ಸಮೂಹ ಧ್ವನಿಯಲ್ಲಿ ಹುಯಿಲಿಡುತ್ತಾರೆ.

ಪಟ್ಟಿನೋಂಲು : ಕೃಷಿ ಕಾರ್ಯಗಳು ಮುಗಿದ ಸಂಭ್ರಮದಲ್ಲಿ 'ಪೊಂಗಲ್' ಆಚರಣೆಯ ಮೂಲಕ ತಾನು ತನ್ನ ಸಹ ಕೃಷಿ ಬಳಗ, ಬಂಧು ಬಾಂಧವರನ್ನು ಕೂಡಿಕೊಂಡು ಧಾನ್ಯಗಳನ್ನು ಹಂಚಿಕೊಂಡು ಸಂಭ್ರಮಿಸಿದಷ್ಟಕ್ಕೆ ರೈತ ನಿರಾಳವಾಗಿ ಕುಳಿತುಬಿಡುವುದಿಲ್ಲ. ತನ್ನ ಸಂತಸವನ್ನು ತನ್ನೊಂದಿಗೆ ದುಡಿದ ಮೂಕ ಪ್ರಾಣಿಗಳಾದ ಎತ್ತುಗಳೂ ಹಂಚಿಕೊಳ್ಳಲೆಂಬ ತುಯ್ತ ಅವನಿಗೆ. ಹಾಗಾಗಿ ಬಿದಿರಿನ ಕಡ್ಡಿಗಳನ್ನು ಕತ್ತರಿಸಿ ಕೊಳಲು ಮಾಡಿಕೊಳ್ಳುತ್ತಾನೆ. ಸಹ ಗೋವಳರೊಂದಿಗೆ ಹೊಸ ಹೊಸ ರಾಗ ಹೊರಡಿಸುತ್ತಾನೆ. ಭೂವ್ಯಾಕಾಶಗಳು ತುಂಬುವಂತೆ ಇಡೀ ಪರಿಸರ ಹೊಸ ಆನಂದವನ್ನು ಮೂಡಿಸುತ್ತಾ ಆ ದಿನವನ್ನು ಸಂಭ್ರಮಾಚರಣೆಗಳಿಂದ ಕಳೆಯುತ್ತಾನೆ. ಆ ದಿನ ಅವನ ಗಮನ ದನಕರುಗಳ ಕಡೆಗೆ ಅದನ್ನೆ 'ಪಟ್ಟಿನೋಂಬು' ಎನ್ನುತ್ತಾರೆ. 'ಪಟ್ಟಿ' ಎಂದರೆ ದೊಡ್ಡಿ ಅಥವಾ ಮನೆ ಅಥವಾ ವಿಶ್ರಾಂತಿ ತಾಣ. 'ನೋಂಬು' ಎಂದರೆ 'ವ್ರತ' ಅಥವಾ ಹಬ್ಬ. ಇದು ಅತಿ ಮುಖ್ಯವಾದ ಹಬ್ಬ ತಮಿಳುನಾಡಿನ ರೈತರಿಗೆ ಹಲವೆಡೆ ಬೆಳಗ್ಗೆಯೆ ಹೊಸ ಬಟ್ಟೆ ಹೊಸ ಮಡಕೆಗಳನ್ನು ಕೊಂಡು ತಮಟೆ, ಕೊಂಬು ಕಹಳೆಗಳ ಹುಯಿಲಿನಿಂದ ಹೊಲಗಳಿಗೆ ತೆರಳುತ್ತಾರೆ. ಸ್ನಾನ ಮಾಡಿ ಭೂಮಿ ಪೂಜೆ ಮಾಡಿ ಹೊಸ ಬಟ್ಟೆ ಧರಿಸಿ ಹೊಲವನ್ನು ಶುದ್ಧಗೊಳಿಸುತ್ತಾರೆ. ಸಂಜೆ ದನಕರುಗಳಿಗೆ ಸ್ನಾನ ಮಾಡಿಸಿ, ದೊಡ್ಡಿಯ ಸುತ್ತ ಬೆಂಕಿ ಹಾಕಿ ಹೊಸ ಅಕ್ಕಿಯಿಂದ ಪೊಂಗಲ್ ತಯಾರಿಸುತ್ತಾರೆ. ದನಗಳ ಕೊಂಬುಗಳಿಗೆ ಗೆಜ್ಜೆ, ಹೂಕುಚ್ಚು, ಮಣಿಗೊಂಚಲುಗಳನ್ನು ಕಟ್ಟಿ ಹಣೆಗೆ ಅರಿಸಿನ ಕುಂಕುಮ ಹಚ್ಚಿ ಪೂಜಿಸಿ ಅವುಗಳಿಗೆ ಪೊಂಗಲ್ ತಿನ್ನಿಸುತ್ತಾ ಹಾಡುತ್ತಾರೆ.

ವಾರುಂ ವಾರುಂ ಗೋ ಪೆರುಮಾಳೇ
ವಾರೀರ್ ಕೈಯ್ಯೆ ಕಳುವಿಕ್ಕೊಳ್ಳೀರ್
ಇದೋ ಕೊಳ್ಳೀರ್ ನೈ ಪೊಂಗಲ್
ವಾರೀರೇ ಇನ್ನೊಲತ್ತಿ ನಯ್ಯಾರೇ

ನಾರೀರ್ ವಾಯ್ಯೆ ಕಳುವಿಕ್ಕೊಳ್ಳೀರ್
ಕೊಳ್ಳೀರ್ ನೈ ಪೊಂಗಲೈ ತಿರುಪ್ಪೊಂಗಲೈ

ಹೀಗೆ ಗೋವುಗಳನ್ನು ಸಹಜೀವಿಗಳಂತೆ ಆದರಿಸುತ್ತ, ಗೌರವಿಸುತ್ತ, ಪ್ರೀತಿಯಿಂದ ಸಲಹುವುದು ತಮ್ಮ ಕರ್ತವ್ಯ ಎಂಬುದನ್ನು ಸಮಾಜದಲ್ಲಿ ನೆಲೆಯೂರಿಸುವ ನೆಲದ ಹಿನ್ನೆಲೆ ಈ ಹಬ್ಬಕ್ಕೆ ಇದೆ.

ಗೂಳಿ ಕಾಳಗ : ಇದನ್ನು 'ಏರುತಳುವುದಲ್' ಎಂಬ ಹೆಸರಿನಿಂದ ಆಚರಿಸಲಾಗುತ್ತದೆ. ವಿಶೇಷವಾಗಿ ಅಶ್ವಿನಿ ನಕ್ಷತ್ರದ ದಿನ ಇದನ್ನು ನಡೆಸುವುದು ವಾಡಿಕೆ. ಇದನ್ನೆ 'ಜಲ್ಲಿಕಟ್ಟು' ಎಂದೂ ಹೇಳುವುದುಂಟು. ಗೂಳಿಗಳ ಓಟವನ್ನೇರ್ಪಡಿಸಿ ಅವುಗಳ ಹಿಂದೆ ಓಡುತ್ತ ಕೊಂಬನ್ನು ಹಿಡಿದು ಅವುಗಳನ್ನು ಪಳಗಿಸುವ ಪುರುಷ 'ವೀರ' ಪಟ್ಟಕ್ಕೆ ಅರ್ಹನಾಗುತ್ತಾನೆ. ಜನರ ಚಪ್ಪಾಳೆ ಹೆಣ್ಣುಮಕ್ಕಳ ಪ್ರೋತ್ಸಾಹಕರ ಹಾಡುಗಳು ಹಿಮ್ಮೇಳವಾಗಿದ್ದು ಪಂದ್ಯ ಆಕರ್ಷಕವಾಗುತ್ತದೆ. ಸಾಮಾನ್ಯವಾಗಿ ಉತ್ತಮ ತಳಿಯ ಸುಂದರ ಎತ್ತುಗಳಿಗೆ ಹಸು ಇತ್ಯಾದಿ ಜಾನುವಾರಗಳಿಗೆ ಮಧುರೈ ಹೆಸರುವಾಸಿ. ಮಧುರೈಯ ಅಲಂಗಾನಲ್ಲೂರ್, ಪಾಲಮೇಡು ಎಂಬ ಊರುಗಳಲ್ಲಿ: ಪುದುಕೋಟೆಯ ತೇನೀಮಲೈ, ತೇನೀ, ಪಲ್ಲವರಾಯನ್ ಪಟ್ಟಿ; ಆವರಂಗಾಡು ಮುಂತಾದ ಊರುಗಳಲ್ಲಿ 'ಜಲ್ಲಿಕಟ್ಟು' ಆಚರಣೆ ತುಂಬ ಪ್ರಸಿದ್ಧಿ ಪಡೆದಿದೆ. 'ಜಲ್ಲಿ' ಎಂದರೆ ಎತ್ತುಗಳ ಕತ್ತಿಗೆ ಅಂದು ಕಟ್ಟುವ ಒಂದು ಬಗೆಯ ಬಳೆ. ಹುಣಿಸೆ ನಾರಿನಿಂದ ಬಳೆ ತಯಾರಿಸಿ ಗೂಳಿ, ಎತ್ತುಗಳ ಕತ್ತಿಗೆ ಇಂದೂ ಕಟ್ಟುವ ಸಂಪ್ರದಾಯವಿದೆ. 50 ವರ್ಷಗಳ ಹಿಂದೆಲ್ಲ ಸಿಗುತ್ತಿದ್ದ ತಾಮ್ರದ ತೂತುಕಾಸುಗಳನ್ನು ಪೋಣಿಸಿ ಎತ್ತು, ಗೂಳಿಗಳ ಕೊಂಬುಗಳಿಗೆ ಕಟ್ಟುವ ಪದ್ಧತಿ ಇತ್ತು. ಗೂಳಿಯನ್ನು ಹಿಡಿದು ಪಳಗಿಸಿದ ವೀರನಿಗೆ ಅವು ಸೇರುತ್ತಿದ್ದುವು. ಅದನ್ನು 'ಶಲ್ಲಿಕಾಸು' ಎನ್ನಲಾಗುತ್ತಿದ್ದು ಅದೇ ಇಂದಿನ ಜಲ್ಲಿಕಟ್ಟು.

ಪ್ರಾಚೀನ ತಮಿಳು ಕಾವ್ಯಗಳಲ್ಲಿಯೂ ಸಿಂಧೂಕಣಿವೆ ನಾಗರಿಕತೆಯ ಇತಿಹಾಸದಲ್ಲೂ ಗೂಳಿಕಾಳಗಗಳನ್ನು ನಡೆಸುತ್ತಿದ್ದುದರ ಕುರಿತು ಮಾಹಿತಿಗಳಿವೆ. ಅದೊಂದು 'ವೀರಗಾಳಗ' ಎಂಬರ್ಥದಲ್ಲಿ ತಮಿಳು ಕಾವ್ಯಗಳು ವರ್ಣಿಸುತ್ತವೆ. 'ಕೊಲ್ಲೇರು ತಳುವುದಲ್' ಎಂದು ಅದಕ್ಕೆ ಹೆಸರು.

ಐಂದಿಣೈ ಎಂದು ಪ್ರಸಿದ್ಧವಾದ ನೆಲಗಳಲ್ಲಿ 'ಮುಲ್ಲೈ' ನೆಲ ಇದಕ್ಕೆ ಪ್ರಸಿದ್ಧವಾಗಿತ್ತು. ಸಂಘ ಸಾಹಿತ್ಯಗಳಲ್ಲಿ 'ಕಲಿತ್ತೊಗೈ' ಕೊಲ್ಲೇರು ತಳುವುದಲ್'ನಲ್ಲಿ ಗೂಳಿಯ ಕೊಂಬನ್ನು ಅಡಗಿಸಿದ ವೀರ ಮರುಜನ್ಮದಲ್ಲೂ ಆ ಬಾಕಿಯನ್ನು ಉಳಿಸಿಕೊಳ್ಳುತ್ತಾನೆ ಎನ್ನುತ್ತದೆ. ನೆಲದೊಂದಿಗಿನ ಸಂಬಂಧವನ್ನು ಜನಪದರು ಬರಿಯ ಉಳುವ ಅಥವಾ ಬೆಳೆಯುವ ಸಂದರ್ಭಗಳಲ್ಲಷ್ಟೇ ಮುಗಿಸಿಕೊಂಡಿರುತ್ತಿರಲಿಲ್ಲ ಎಂಬುದಕ್ಕೆ ಇದು ನಿದರ್ಶನ.

ಕುರುವೈಕೊತ್ತು ಮತ್ತು ಏರುತಳುವುದಲ್ : ಕುರುವೈಕೊತ್ತು ಎಂಬುದು ರೈತ ಮಹಿಳೆಯರು ಕೈಯೊಂದಿಗೆ ಕೈ ಪೋಣಿಸಿಕೊಂಡು ದೊಡ್ಡ ದನಿಯಲ್ಲಿ ಹುಯಿಲಿಡುತ್ತಾ ಕುಣಿಯುವುದನ್ನು ಹೇಳುತ್ತದೆ. ಏರುತಳುವುದಲ್‌ಗೆ ಮೊದಲ ದಿನ ಸಂಜೆ ಊರ ನಡುವಿನ ಅಂಗಳದಲ್ಲಿ, ತಮ್ಮ ಕಾದಲರು ಮರು ದಿನ ವೀರಗಾಳಗಕ್ಕೆ ತೊಡಗಲು ಉತ್ತೇಜಿಸುವ ನುಡಿಗಳನ್ನು ಹಾಡುತ್ತ ಹೆಣ್ಣು ಮಕ್ಕಳು ಕುಣಿಯುತ್ತಾರೆ. ಅನೇಕ ವೇಳೆ

ಏರುತಳುವುದಲ್‌ನಲ್ಲಿ ಗೆದ್ದ ವೀರರ ಮದುವೆ ಈ ಸಂದರ್ಭದೊಂದಿಗೆ ತಳುಕು ಹಾಕಿಕೊಂಡಿರುತ್ತಿದ್ದುದರಿಂದ ಈ ದಿನಕ್ಕೆ ತುಂಬ ಮಹತ್ವ ವೀರನಿಗೆ ಹೆಣ್ಣನ್ನು ಬಹುಮಾನವಾಗಿ ನೀಡುವ ಅರ್ಥ ಅಲ್ಲಿದೆ.

ಗಾದೆ ಮಾತುಗಳಲ್ಲೂ ಕೃಷಿ ಒಡಮೂಡಿರುವುದುಂಟು. ದಿನ ದಿನದ ಪ್ರತಿ ಕೆಲಸ ಕಾರ್ಯಗಳಲ್ಲಿ ಸಹ ಕೃಷಿ ಕಾರ್ಯದ ರೂಪುರೇಷೆಗಳು ಬೆರೆತು ಒಂದು ವಿಶಿಷ್ಟ ಸಾಂಸ್ಕೃತಿಕ ಸೊಗಡನ್ನು ಭಾಷೆಗೆ ಒದಗಿಸಿರುತ್ತದೆ ಹಾಗಾಗಿ ಜಾನಪದವು ಬದುಕಿನ ಮತ್ತೊಂದು ಮುಖಪುಟವೇ ಆಗಿರುತ್ತದೆ. ಉದಾಹರಣೆಗೆ ಕೆಲವು ಗಾದೆಗಳನ್ನು ನೋಡಬಹುದು.

ಅಂಬಿಕೆಯ ಭಾಗ್ಯದಿಂದ ಸಂಪಿಗೆ ಬೆಳೆಯಿತು
ಎತ್ತಿನಿಂದಲೇ ಬದುಕಿದರೂ ಒತ್ತೊತ್ತಾಗಿ ಬಾಳಬೇಕು
ಕಂತೆಯನ್ನು ಅಮುಕಿ ಕಟ್ಟು
ಹೆಣ್ಣು ನಕ್ಕರೆ ಹೋಯಿತು
ಹೊಗೆಸೊಪ್ಪು ಬಿಚ್ಚಿದರೆ ಹೋಯಿತು
ಹಸು ಮೇಯದೆ ಕೆಟ್ಟಿತು
ಪಯಿರು ನೋಡದೆ ಕೆಟ್ಟಿತು
ಔತಣವೂ ಔಷಧವೂ ಮರುದಿನಕ್ಕೆ ಚೆನ್ನ
ಆ ದಡದ ಹಸುವಿಗೆ ಈ ದಡ ಹಸುರು
ಕಡಿ ಚಿಕ್ಕದಾದರೂ ಹಲ್ಲು ಚುಚ್ಚಲು ಒದಗುತ್ತದೆ
ಉಪ್ಪಿಲ್ಲದ ಊಟ ತಿಪ್ಪೆಗೆ
ಬಿಡಿಮರ ತೋಪಾಗದು
ಸಾಕು ಎಂಬ ಮನಸೇ ಬೇಕಾದಷ್ಟು ಮಾಡಬಲ್ಲುದು
ಅನ್ನಮಯವೆ ಪ್ರಾಣಮಯ
ಆರಂಬದ ಗಂಜಿಯೇ ದೈವಗಂಜಿ
ಗೇದು ಉಂಡದ್ದು ಗಟ್ಟಿತನಕ್ಕಾಯಿತು.

ಮತ್ತೊಂದುಹಿಗ್ಗಿನ ಹಾಡು ಹೀಗಿದೆ

ಬೇಸಗೆಯ ಸುಗ್ಗಿ ಬಂದಿದೆ
ವೀಳ್ಯದೆಲೆಯ ತೋಟದ ಮಗ್ಗುಲ ಹೊಲ
ಫಲಿಸಿ ನಿಂತಿದೆ ಕೊಯ್ಲಿಗೆ ತೆನೆತುಂಬಿ
ಚೆಲುವೆ ತನ್ನ ಕತ್ತಿಯ, ಬತ್ತದ
ತೆನೆಗಳ ಮೇಲೆ ಹಾಡಿನ ಲಯಕ್ಕೆ
ಮೇಳೈಸಿ ಚುರುಕಾಗಿ ಕೈಚಳಕದಿಂದ
ಆಡಿಸುತಿರಲು ಗಾಜಿನ ಬಳೆಗಳು
ಹೊಳೆಯುತಿವೆ ಗಲಗಲಸದ್ದು ಕೇಳುತಿದೆ
ಆದರೇನು ಹಾಯ್! ಆ ಹಾಡು ಆ ಹೊಳೆತ
ಆಸುಪಾಸಿನ ಹೃದಯಗಳ ಸೂರೆಗೊಳ್ಳುವುದಲ್ಲ!
ಕೆಲಸ ಸಾಗದಂತೆ ಕಟ್ಟಿಹಾಕುವುದಲ್ಲ1
ಅತ್ತ, ಆ ಮಳ್ಳಿ ಕನ್ಯೆ
ಸುಸ್ತಾದಂತೆ ನಟಿಸುತ್ತ
ತೆನೆಗಳ ಹೊರೆ ಕೂಡಿಸುವ ತನ್ನ
ನಲ್ಲನತ್ತ ಮೋಹಕ ನಗೆಯ ಚೆಲ್ಲಿ ಹಳು
ಅವಳು ಹೊರುವ ಹೊರೆಯ ಭಾರ
ಅತಿ ಕಡಿಮೆಯಹುದೂ ಖಚಿತ!

ವಾರುಂ ವಾರುಂ ಗೋ ಪೆರುಮಾಳೇ
ವಾರೀರ್ ಕೈಯ್ಯೆ ಕಳುವಿಕ್ಕೊಳ್ಳೀರ್
ಇದೋ ಕೊಳ್ಳೀರ್ ನೈ ಪೊಂಗಲ್
ವಾರೀರೇ ಇನ್ನೆಲತ್ತಿನಯ್ಯಾರೇ
ವಾರೀರ್ ವಾಯ್ಯೆ ಕಳುವಿಕ್ಕೊಳ್ಳೀರ್
ಕೊಳ್ಳೀರ್ ನೈ ಪೊಂಗಲ್ಯೆ ತಿರುಪ್ಪೊಂಗಲ್ಯೆ

ಹೀಗೆ ಗೋವುಗಳನ್ನು ಸಹಜೀವಿಗಳಂತೆ ಆದರಿಸುತ್ತ, ಗೌರವಿಸುತ್ತ, ಪ್ರೀತಿಯಿಂದ ಸಲಹುವುದು ತಮ್ಮ ಕರ್ತವ್ಯ ಎಂಬುದನ್ನು ಸಮಾಜದಲ್ಲಿ ನೆಲೆಯೂರಿಸುವ ನೆಲದ ಹಿನ್ನೆಲೆ ಈ ಹಬ್ಬಕ್ಕೆ ಇದೆ.

ದನಿಯಲ್ಲಿ ಹುಯಿಲಿಡುತ್ತಾ ಕುಣಿಯುವುದನ್ನು ಹೇಳುತ್ತದೆ. ಏರುತಳುವುದಲ್‌ಗೆ ಮೊದಲ ದಿನ ಸಂಜೆ ಊರ ನಡುವಿನ ಅಂಗಳದಲ್ಲಿ, ತಮ್ಮ ಕಾದಲರು ಮರು ದಿನ ವೀರಗಾಳಗಕ್ಕೆ ತೊಡಗಲು ಉತ್ತೇಜಿಸುವ ನುಡಿಗಳನ್ನು ಹಾಡುತ್ತ ಹೆಣ್ಣು ಮಕ್ಕಳು ಕುಣಿಯುತ್ತಾರೆ. ಅನೇಕ ವೇಳೆ ಏರುತಳುವುದಲ್‌ನಲ್ಲಿ ಗೆದ್ದ ವೀರರ ಮದುವೆ ಈ ಸಂದರ್ಭದೊಂದಿಗೆ ತಳುಕು ಹಾಕಿಕೊಂಡಿರುತ್ತಿದ್ದುದರಿಂದ ಈ ದಿನಕ್ಕೆ ತುಂಬ ಮಹತ್ತ್ವ. ವೀರನಿಗೆ ಹೆಣ್ಣನ್ನು ಬಹುಮಾನವಾಗಿ ನೀಡುವ ಅರ್ಥ ಇಲ್ಲಿದೆ.

ಗಾದೆ ಮಾತುಗಳಲ್ಲೂ ಕೃಷಿ ಒಡಮೂಡಿರುವುದುಂಟು. ದಿನದಿನದ ಪ್ರತಿ ಕೆಲಸ ಕಾರ್ಯಗಳಲ್ಲಿ ಸಹ ಕೃಷಿಕಾರ್ಯದ ರೂಪುರೇಷಗಳು ಬೆರೆತು ಒಂದು ವಿಶಿಷ್ಟ ಸಾಂಸ್ಕೃತಿಕ ಸೊಗಡನ್ನು ಭಾಷೆಗೆ ಒದಗಿಸುತ್ತದೆ. ಹಾಗಾಗಿ ಜಾನಪದವು ಬದುಕಿನ ಮತ್ತೊಂದು ಮುಖಪುಟವೇ ಆಗಿರುತ್ತದೆ.

ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಭಾಷೆಯಾದ ತಮಿಳಿನ ಜನಪದ ಸಾಹಿತ್ಯದಲ್ಲಿ ಕೃಷಿಗೆ ಪ್ರಧಾನ ಸ್ಥಾನವಿದೆ. ಗೀತೆ, ಗಾದೆ, ಆಟ, ಆಚರಣೆ ಇತ್ಯಾದಿಗಳಲ್ಲಿ ಕೃಷಿ ಸಂಬಂಧಿ ವಿಚಾರಗಳಲ್ಲಿ ವಿಪುಲವಾಗಿ ವ್ಯಕ್ತವಾಗಿರುವುದು ಕಂಡುಬರುತ್ತದೆ.

ಟಿ.ಡಿ. ಅನುವಾದ ಜಿ.ಎನ್.ಎಸ್.

ತಮಿಳುನಾಡಿನ ಕೆಲವು ಕೃಷಿ ಉಪಕರಣಗಳು ಭಾರತದ ಎಲ್ಲ ರಾಜ್ಯಗಳಲ್ಲೂ ಬಳಸುವ ಕೃಷಿ ಉಪಕರಣಗಳಲ್ಲಿ ಸಾಕಷ್ಟು ಸಾಮ್ಯವಿದ್ದರೂ ಆಯಾ ರಾಜ್ಯ ಅಲ್ಲಿಯ ಭೂಗುಣಕ್ಕನುಗುಣವಾಗಿ ಕೆಲವು ಉಪಕರಣಗಳನ್ನು ತಯಾರಿಸಿಕೊಂಡಿರುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ರಾಜ್ಯದ ಕೃಷಿ ಉಪಕರಣಗಳನ್ನು ಕುರಿತಂತೆ ತಿಳಿದುಕೊಳ್ಳುವುದು ಅಗತ್ಯ. ಹೀಗೆ ಅಧ್ಯಯನ ಮಾಡುವುದರಿಂದ ಪ್ರಾಚೀನ ಕಾಲದಿಂದ ಇಲ್ಲಿಯ ತನಕ ಉಳಿದುಕೊಂಡಿರುವ ಉಪಕರಣಗಳಾವುವು? ಬದಲಾದ ಪರಿಸ್ಥಿತಿಯಲ್ಲಿ ಉಪಯೋಗಿಸಲು ಯೋಗ್ಯವಲ್ಲವೆಂದು ತಿಳಿದು ಮೂಲೆ ಗುಂಪು ಮಾಡಿರುವ ಉಪಕರಣಗಳಾವುವು? ಎಂಬುದನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಇಂಥ ಉಪಕರಣಗಳ ವಿನ್ಯಾಸ, ಬಳಕೆಯ ವಿಧಾನ ಇತ್ಯಾದಿಗಳನ್ನು ದಾಖಲಿಸುವುದರಿಂದ ಮುಂದೊಂದು ದಿನ ಇವು ಅಗತ್ಯವೆನಿಸಿದಾಗ ಪುನರುತ್ಪಾದನೆ ಮಾಡಿ ಬಳಸಲು ಸಾಧ್ಯವಾಗುತ್ತದೆ.

ಕೃಷಿ ಉತ್ಪಾದನೆಗೆ ಪೂರಕವಾದ ಉಪಕರಣಗಳನ್ನು ತಮಿಳುನಾಡಿಗೆ ಸಂಬಂಧಿಸಿದ ಹಾಗೆ ಆರು ರೀತಿಯಲ್ಲಿ ವಿಂಗಡಿಸಲಾಗಿದೆ. 1. ನೇಗಿಲು, 2. ಎತ್ತಿನಗಾಡಿ, 3. ನೀರೆತ್ತುವ ಸಾಧನಗಳು, 4. ಕೊಯ್ಯುವ ಸಾಧನಗಳು,

5. ಧಾನ್ಯ ಶುದ್ಧೀಕರಿಸುವ ಸಾಧನಗಳು, 6. ಧಾನ್ಯ ಸಂರಕ್ಷಿಸಿಡುವ ಸಾಧನಗಳು.

1. ನೇಗಿಲು : ನೇಗಿಲುಗಳಲ್ಲಿ ಹಲವು ವಿಧ. ಒಂದೊಂದು ಮಣ್ಣಿಗೆ ಒಂದೊಂದು ಬಗೆಯ ನೇಗಿಲು. ಆರಂಭದಲ್ಲಿ ಭೂಮಿಯನ್ನು ಹದಮಾಡಲು ಬಳಸುವ ನೇಗಿಲು ದೊಡ್ಡದು, ಅನೇಕ ವೇಳೆ ಇದು ಹೊಸದಾಗಿರುತ್ತದೆ. ಸಾಲು ಹೊಡೆಯಲು ಬಳಸುವ ನೇಗಿಲನ್ನು ಗೂಟ್ನೇಣಿ ನೇಗಿಲು ಎಂದೂ ಎರಡರಿಂದ ಐದು ಜೊತೆ ದನಗಳನ್ನು ಬಳಸಿ ಉಳುಮೆ ಮಾಡುವ ನೇಗಿಲನ್ನು ನಾಡನೇಗಿಲು ಎಂದೂ ಒಣ ಭೂಮಿಯನ್ನು ಉಳಲು ಬಳಸುವ ನೇಗಿಲನ್ನು ಬಂಡ್ನೇಗಿಲು ಎಂದೂ ಒಂದು ಕಡೆ ರೆಕ್ಕೆ ಇರುವಂಥದ್ದನ್ನು ಮಗುಚು ನೇಗಿಲು ಎಂದೂ ಗಟ್ಟಿಮುಟ್ಟಾಗಿ ದೊಡ್ಡದಾಗಿರುವ ನೇಗಿಲನ್ನು ಮಣಿಹೊಳ್ಳು ಅಥವಾ ಮಣ್ಣೇರಿಸುವ ನೇಗಿಲು ಎಂದೂ ಭೂಮಿಯನ್ನು ಹಸನು ಮಾಡುವ ನೇಗಿಲನ್ನು ಮೊರ್ವ ನೇಗಿಲು ಎಂದೂ ಎರಡು ಹಿಡಿ ಇರುವ ನೇಗಿಲನ್ನು ಎಣ್ಬ್ರಬ್ ಎಂದೂ ಹೊಸ ನೇಗಿಲನ್ನು ಸಾದಾ ನೇಗಿಲು ಎಂದೂ ಕಬ್ಬಿಣದ ನೇಗಿಲನ್ನು ಸೀಮೆ ನೇಗಿಲು ಎಂದೂ ಕಬ್ಬಿಣದ ಮಡ್ಕ ಎಂದೂ ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುವರು. ನೇಗಿಲುಗಳ ಸ್ವರೂಪಕ್ಕೆ ಅನುಗುಣವಾಗಿ ಅವುಗಳ ಕೆಲಸವೂ ವೈವಿಧ್ಯಮಯವಾಗಿರುತ್ತದೆ.

2. ಎತ್ತಿನ ಗಾಡಿ : ರೈತನಿಗೆ ಮೊದಲ ಮಿತ್ರ ನೇಗಿಲಾದರೆ ಎರಡನೆಯ ಮಿತ್ರ ಎತ್ತಿನಗಾಡಿ. ಇವೆರಡೂ ಎರಡು ಭುಜಗಳಂತೆ ರೈತನ ಆತ್ಮಬಲವನ್ನು ಹೆಚ್ಚಿಸುತ್ತವೆ. ಭೂಮಿಯನ್ನು ಹದಮಾಡಲು ಬಳಸುವ ಎಲ್ಲ ವಸ್ತುಗಳನ್ನು ಹೊಲ ಗದ್ದೆಗಳಿಗೆ ಸಾಗಿಸುವ, ಹೊಲದಲ್ಲಿ ಬೆಳೆದ ಸಕಲ ಸರಕುಗಳನ್ನು ನಿರ್ದಿಷ್ಟ ಸ್ಥಳಕ್ಕೆ ಸಾಗಿಸುವ ಸಾಧನವಿದು. ಎತ್ತಿನಗಾಡಿಯಲ್ಲೂ ಕೆಲವು ವಿಧಗಳಿವೆ. ಒಂಟೆತ್ತಿನ ಗಾಡಿ (ಬಂಡಿ), ಜೋಡೆತ್ತಿನ ಗಾಡಿ (ಬಂಡಿ), ಟೈರು ಬಂಡಿ ಇತ್ಯಾದಿ. ಇವುಗಳ ಆಕಾರ, ವಿನ್ಯಾಸ, ಬಳಸುವ ಸಂದರ್ಭ, ಕೊಂಡೊಯ್ಯುವ ವಸ್ತುಗಳು ವೈವಿಧ್ಯಮಯವಾಗಿರುತ್ತವೆ. ಒಂಟೆತ್ತಿನ ಬಂಡಿಯನ್ನು ಸಾಮಾನ್ಯವಾಗಿ ಅಂಗಡಿಗಳಿಗೆ ವಸ್ತು ಸರಬರಾಜು ಮಾಡಲು ಅಂಗಡಿಗಳಿಂದ ವಸ್ತುಗಳನ್ನು ತರಲು ಬಳಸುವುದೇ ಹೆಚ್ಚು. ಜೋಡೆತ್ತಿನ ಗಾಡಿ ರೈತನಿಗೆ ಬಹುಪಯೋಗಿ. ಗೊಬ್ಬರವನ್ನು ಹೊಲಕ್ಕೆ ಸಾಗಿಸಲು, ಪೈರು, ಉಳುಮೆಯ ಉಪಕರಣಗಳನ್ನು ಸಾಗಿಸಲು, ಕೂಲಿಕಾರ್ಮಿಕರನ್ನು ಕೊಂಡೊಯ್ಯಲು, ಹಿಂದಿರುಗಿ ಬರುವಾಗ ಸಂಗ್ರಹಿಸಿದ ಹುಲ್ಲನ್ನು ಮನೆಗೆ ಕೊಂಡೊಯ್ಯಲು, ಕೊಯ್ಲಿನ ಅನಂತರ ಬೆಳೆಯನ್ನು ಕಣಕ್ಕೆ ಸಾಗಿಸಲು, ಕಣದಿಂದ ಧವಸ ಧಾನ್ಯಗಳನ್ನು ಮನೆಗೆ ಸಾಗಿಸಲು, ಮಿಗಿತ ಉತ್ಪನ್ನಗಳನ್ನು ಸಂತೆ/ಪೇಟೆಗೆ ಸಾಗಿಸಲು ಸುತ್ತಮುತ್ತ ನಡೆಯುವ ಜಾತ್ರೆ ಹಬ್ಬ ಉತ್ಸವ ಮೊದಲಾದ ಸಮಾರಂಭಗಳಿಗೆ ಜನ-ವಸ್ತು-ತಿಂಡಿತಿನಿಸುಗಳನ್ನು ಸಾಗಿಸಲು - ಹೀಗೆ ಹಲವು ವಿಧವಾಗಿ ರೈತನ ಒಡನಾಡಿಯಾಗಿ ಎತ್ತಿನ ಗಾಡಿ ಉಪಯೋಗವಾಗುತ್ತಿದೆ. ಟೈರುಗಾಡಿ ಇತರ ಎತ್ತಿನ ಬಂಡಿಗಳಿಗಿಂತ ದೊಡ್ಡದಾಗಿದ್ದು ಹೆಚ್ಚು ವಸ್ತುಗಳನ್ನು ಸಾಗಿಸಲು ಎಲ್ಲ ಬಿಡಿಭಾಗಗಳೂ ಮರದಿಂದಲೇ ಮಾಡಲಾಗಿದ್ದು ಕಡೆಗೀಲು, ಚಕ್ರಗಳ ಅಚ್ಚು ಮತ್ತು ಪಟ್ಟಿ ಮಾತ್ರ ಕಬ್ಬಿಣದ್ದಾಗಿರುತ್ತದೆ. ಟೈರು ಗಾಡಿಯಲ್ಲಿ ಮರದ ಬಳಕೆ ಕೇವಲ ಅಚ್ಚಿನ ಮೇಲೆ ಜೋಡಿಸಿರುವ ಹಲಗೆಗಳು ಮತ್ತು ಸುತ್ತಲೂ ಪಟ್ಟಿಯಂತೆ ಕಟ್ಟಿರುವ ಹಲಗೆಗಳು ಮಾತ್ರ ಮರದ್ದು. ಉಳಿದಂತೆ ಟೈರು ಮತ್ತು ಕಬ್ಬಿಣ ಬಳಸಿದ ಚಕ್ರಗಳು, ಅಚ್ಚು, ಮೂಕಿಗಳಲೆಲ್ಲ ಕಬ್ಬಿಣವಾಗಿದ್ದು ಕಾಡಿಮರ ಮಾತ್ರ ಮರದ್ದಾಗಿರುತ್ತದೆ.

ಎತ್ತಿನಗಾಡಿ ತಯಾರಿಸಲು ತೇಗ (ಚಕ್ರಕ್ಕೆ), ವೈಮರ (ನೇಮಿ), ಬಾಗೆಮರ (ಚಕ್ರದ ಅರ), ಗೊಬ್ಬಳಿ (ಪಟ್ಟಿಗಳು), ನೆಲ್ಲಿ, ಬಾಗೆ, ಗೊಬ್ಬಳಿ (ಗಾಡಿ ಅಚ್ಚಿಗೆ), ನೆಲ್ಲಿ (ಪೋಲುಮರ), ಹಡಗಿನ ಕೂವೆ ಮರ (ನೊಗ) ಇತ್ಯಾದಿ ಮರಗಳನ್ನು ತಮಿಳುನಾಡಿನಲ್ಲಿ ಬಳಸುತ್ತಾರೆ.

3. ನೀರೆತ್ತುವ ಸಾಧನಗಳು : ಏತ/ಕಪಿಲೆ, ಪಂಪ್‌ಸೆಟ್ ಮತ್ತು ಪವನಯಂತ್ರಗಳಿಂದ ನೀರೆತ್ತಿ ಹೊಲಗದ್ದೆಗಳಿಗೆ ಪೂರೈಕೆ ಮಾಡುವುದುಂಟು.

ಅ) ಏತ : ತಮಿಳುನಾಡಿನಲ್ಲಿ ಏತದ ಬಳಕೆ ವಿಶೇಷವಾಗಿದ್ದು ನೀರೆತ್ತಲು ಇದನ್ನು ಹೆಚ್ಚಿನ ಪ್ರದೇಶಗಳಲ್ಲಿ ಬಳಸುತ್ತಾರೆ. ಏತ ತಯಾರಿಸುವ ಮೂಲವಸ್ತುಗಳು ಹೀಗಿವೆ :

ಕಬ್ಬಿಣ ತಗಡಿನಿಂದ ಮಾಡಿದ ಕಡಾಯಿ, ಕಲ್ಲಿನಿಂದ ತಯಾರಿಸಿಕೊಂಡ ಬತ್ತು, ಕಲ್ಲು, ತೇಗ ಅಥವಾ ಗೊಬ್ಬಳ್ಳಿ ಮರದಿಂದ ತಯಾರಿಸಿದ ಆಧಾರ ಕಂಬ. ಗೊಬ್ಬಳಿ ಮರದಿಂದ ಮಾಡಿದ ಚಕ್ರಗಳು, ತೇಗ, ಗೊಬ್ಬಳಿ ಮರದಿಂದ ತಯಾರಿಸಿದ ಉದ್ದದ ಎರಡು ಮರಗಳು, ಬಾಗೆಮರದಿಂದ ಮಾಡಿದ ಏತದ ಬಂಡಿ, ಬಾಗೆಮರದಿಂದ ಮಾಡಿದ ಬಿಲ್ಲೆ, ದನದ ಚರ್ಮದಿಂದ ಚರ್ಮದಿಂದ ತಯಾರಿಸಿಕೊಂಡ ಹಗ್ಗ ಇವೆಲ್ಲವನ್ನು ಪರಿಣಿತ ರೈತರಿಂದ ಸೃಷ್ಟಿಸಿಕೊಂಡು ಬಾವಿ ಮತ್ತು ನದಿಗಳಿಂದ ನೀರೆತ್ತಲು ಉಪಯೋಗಿಸುವರು. ಇಲ್ಲಿ ಮುಖ್ಯವಾಗಿ ಮಾನವಶಕ್ತಿ ಮತ್ತು ಪಶುಗಳ ಸಹಾಯವಿರುತ್ತದೆ.

ಆ) ಪಂಪ್‌ಸೆಟ್ : ಕಾಲಕ್ರಮೇಣ ಏತ ಮತ್ತು ಕಪಿಲೆಯ ಸ್ಥಾನವನ್ನು ಪಂಪ್‌ಸೆಟ್ ಆಕ್ರಮಿಸಿತು. ವಿದ್ಯುಚ್ಚಾಲಿತ ಯಂತ್ರಗಳಿಂದ ನೀರೆತ್ತುವ ಸಾಧನವೇ ಪಂಪ್‌ಸೆಟ್. ಇಲ್ಲಿ ಮನುಷ್ಯನ ಪಾತ್ರ ಗೌಣ. ಮೋಟರಿಗೆ ಚಾಲನೆ ನೀಡುವುದು, ಬೇಕಾದೆಡೆಗೆ ನೀರನ್ನು ತಿರುಗಿಸಿಕೊಳ್ಳುವುದು, ಯಂತ್ರವನ್ನು ಸ್ಥಗಿತಗೊಳಿಸುವುದು ಇತ್ಯಾದಿ ಸಣ್ಣ ಪುಟ್ಟ ಜವಾಬ್ದಾರಿಗಳಷ್ಟೇ ಅವನು ನಿರ್ವಹಿಸುವಂಥದು.

ಇ) ಪವನಯಂತ್ರ : ನೈಸರ್ಗಿಕ ಅನುಕೂಲವಿರುವ ಕೆಲವೆಡೆ ಪವನ ಶಕ್ತಿಯಿಂದ ವಿದ್ಯುತ್ ಉತ್ಪಾದಿಸಿ ನೀರೆತ್ತುವ ಕ್ರಮವನ್ನು ಆಧುನಿಕ ಸಂದರ್ಭದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದು ಪಶುಗಳನ್ನು ಬಳಸದೆ, ಮನುಷ್ಯನೂ, ಶ್ರಮಪಡದೆ, ವಿದ್ಯುತ್ತನ್ನೂ ಬಳಸದೆ ಸುಲಭವಾಗಿ ನೀರೆತ್ತುವ ಸಾಧನವಾಗಿದ್ದರೂ ಎಲ್ಲ ಕಡೆ ಉಪಯೋಗಕ್ಕೆ ಬರುವುದಿಲ್ಲ. ಆದ್ದರಿಂದ ಇದರ ಬಳಕೆ ಮೇಲೆ ತಿಳಿಸಿದಂತೆ ಪ್ರಾಕೃತಿಕವಾಗಿ ಎತ್ತರವಾಗಿರುವ ಪ್ರದೇಶಗಳಲ್ಲಿ ಗಾಳಿ ಯಥೇಚ್ಛವಾಗಿ ಬೀಸುವೆಡೆಗಳಲ್ಲಿ ಇಂಥ ಯಂತ್ರಗಳನ್ನು ಆಯಾ ಜಾಗಕ್ಕೆ ತಕ್ಕಂತೆ ನಿರ್ದಿಷ್ಟ ದಿಕ್ಕಿನಲ್ಲಿ ಜೋಡಿಸಿರುತ್ತಾರೆ.

ರೈತ ಕೃಷಿಯನ್ನೇ ಪ್ರಧಾನವಾಗಿ ಅವಲಂಬಿಸಿದಂತೆಲ್ಲ ತನಗೆ ಆವಶ್ಯಕವಾದ ಆಹಾರಪದಾರ್ಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡತೊಡಗಿದನು. ಅನುಭವಜನ್ಯವಾಗಿ ಕಂಡುಕೊಂಡ ಪರಿಕರಗಳು ಆಧುನಿಕ ಸಂದರ್ಭದಲ್ಲಿ ಅನೇಕ ರೀತಿಯ ಆವಿಷ್ಕಾರಗಳಿಗೆ ಅವಕಾಶ ಒದಗಿಸಿದುದರ ಪರಿಣಾಮವಾಗಿ ತ್ವರಿತವಾಗಿ ಮತ್ತು

ಹರಿತವಾಗಿ ಉಪಯೋಗವಾಗುವ ಉಪಕರಣಗಳನ್ನು ಉತ್ಪಾದನೆ ಮಾಡಿಕೊಂಡನು. ನೇಗಿಲಿನ ಸ್ಥಾನವನ್ನು ಟ್ರ್ಯಾಕ್ಟರ್, ಟಿಲ್ಲರ್ ಮತ್ತು ಡೆಸ್ಕ್‌ನಂತಹ ಯಂತ್ರಗಳು ಆಕ್ರಮಿಸಿದವು. ಇಷ್ಟಾದರೂ ಇಕ್ಕಟ್ಟಿನ ಜಾಗಗಳಲ್ಲಿ ಇವುಗಳನ್ನು ಬಳಸಿ ಕೃಷಿ ಮಾಡಲು ಅಸಾಧ್ಯವಾದುದರಿಂದ ಸಾಂಪ್ರದಾಯಿಕ ಸಲಕರಣೆಗಳ ಸಹಾಯವನ್ನು ಅನಿವಾರ್ಯವಾಗಿ ಪಡೆಯಲೇಬೇಕು.

ಎ.ಎಂ.ಡಿ.

ತಮಿಳುನಾಡಿನ ಗೊಬ್ಬರಗಳು ರೈತರು ಕೆಲವು ಗೊಬ್ಬರಗಳನ್ನು ತಯಾರಿಸುವಾಗ ಯಾವುದೇ ವೆಚ್ಚವಿಲ್ಲದೆ ತಯಾರಿಸಬಹುದು. ಅದು ಕೊಟ್ಟಿಗೆ ಗೊಬ್ಬರವಾಗಿ, ಕಾಂಪೋಸ್ಟ್ ಗೊಬ್ಬರವಾಗಲಿ ಅದನ್ನು ತಯಾರಿಸಲು ಸ್ವಲ್ಪ ಶ್ರಮ ಪಡಬೇಕಾಗುತ್ತದಷ್ಟೆ.

ಕೊಟ್ಟಿಗೆ ಗೊಬ್ಬರ : ಇದನ್ನು ಅನಾದಿಕಾಲದಿಂದಲೂ ರೈತರು ಬೆಳೆಗೆ ಬಳಸುತ್ತಾ ಬಂದಿದ್ದಾರೆ. ಇದನ್ನು ದನದ ಗೊಬ್ಬರ, ಸಗಣಿಯ ಗೊಬ್ಬರವೆಂದೂ ಹೇಳುತ್ತಾರೆ. ದನಗಳು ತಿಂದು ಬಿಟ್ಟ ಹುಲ್ಲು, ಕಣಿಕೆ ಮುಂತಾದವುಗಳನ್ನು ದನದ ಕೊಟ್ಟಿಗೆಯಲ್ಲಿ ಹರಡುವುದರಿಂದ ಗಂಜಲ ನಷ್ಟವಾಗದಂತೆ ತಡೆಯುವುದು. ದನದ ಕೊಟ್ಟಿಗೆಯಲ್ಲಿ ಶೇಖರಿಸಲಾದ ಸಗಣಿ ಮತ್ತು ಗಂಜಲವನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿ ಕೊಟ್ಟಿಗೆ ಗೊಬ್ಬರವನ್ನು ರೈತರು ತಯಾರಿಸುತ್ತಾರೆ.

ಪ್ರತಿದಿನ ಕೊಟ್ಟಿಗೆ ಗುಡಿಸುವಾಗ ಸಿಗುವ ಕಸ, ಸಗಣಿ ಹಾಗೂ ಗಂಜಲವನ್ನು ಗೊಬ್ಬರದ ಗುಂಡಿಯಲ್ಲಿ ಹಂತ ಹಂತವಾಗಿ ತುಂಬುತ್ತಾರೆ. ಇವು ಗುಂಡಿಗಳು 6 ರಿಂದ 8 ಮೀಟರ್ ಉದ್ದ, 2 ಮೀಟರ್ ಆಳ, 1 ಮೀಟರ್ ಅಗಲದಾಗಿರುತ್ತದೆ. ಈ ಗುಂಡಿಗಳನ್ನು ಪೂರ್ತಿಯಾಗಿ ತುಂಬಿಸಿ ಭೂಮಿಯ ಮೇಲೆ 0.6 ಮೀಟರ್ ಎತ್ತರಕ್ಕೆ ಬಂದಾಗ ಅದನ್ನು ಮಣ್ಣಿನಿಂದ ಮುಚ್ಚಿ ಸಗಣಿ ರಾಡಿಯಿಂದ ಸಾರಿಸುತ್ತಾರೆ. ಹೀಗೆ ಇದನ್ನು ಸುಮಾರು 3-4 ತಿಂಗಳು ಬಿಟ್ಟರೆ ಗುಂಡಿಯಲ್ಲಿರುವ ಸಾವಯವ ಪದಾರ್ಥಗಳು ಜೈವಿಕ ಕ್ರಿಯೆಯಿಂದ ಪಕ್ವವಾಗಿ ಗೊಬ್ಬರ ಸಿದ್ಧವಾಗುತ್ತದೆ. ಹೀಗೆ ರೈತರು ಕೊಟ್ಟಿಗೆ ಗೊಬ್ಬರಗಳನ್ನು ತಯಾರಿಸಿದರೆ ವ್ಯವಸಾಯಕ್ಕೆ ಅತ್ಯಂತ ಸಹಕಾರಿಯಾಗುತ್ತದೆ.

ಕಾಂಪೋಸ್ಟ್ ಗೊಬ್ಬರ : ಕೊಟ್ಟಿಗೆ ಗೊಬ್ಬರದಂತೆಯೆ ಕಾಂಪೋಸ್ಟನ್ನು ರೈತರು ತಯಾರಿಸುತ್ತಾರೆ. ಗುಂಡಿಯಲ್ಲಿ ಸಗಣಿ, ಗಂಜಲ, ಕಸ ಇವುಗಳೊಡನೆ ಬೆಳೆಗಳಿಂದ ದೊರೆತ ಎಲೆ, ತರಗು, ಕಡ್ಡಿ, ಸದೆ, ಬೂದಿ ಮತ್ತು ಕತ್ತರಿಸಿದ ಕಳೆಗಳು ಹೀಗೆ ಅನೇಕ ತರಹದ ಸಾವಯವ ವಸ್ತುಗಳನ್ನು ಗುಂಡಿಯಲ್ಲಿ ಪದರ - ಪದರವಾಗಿ ಹಂತ ಹಂತವಾಗಿ ತುಂಬುತ್ತಾರೆ. ಇದಕ್ಕೆ ಗುಂಡಿಯಲ್ಲಿ ಯಾವಾಗಲೂ ತೇವ ಇರುವಂತೆ ಗಮನವಹಿಸುವುದು ಅತ್ಯವಶ್ಯ. ಈ ಗುಂಡಿಯು ನೆಲದಿಂದ ಒಂದು ಅಡಿ ಎತ್ತರಕ್ಕೆ ಬಂದಾಗ ಮಣ್ಣಿನಿಂದ ಚೆನ್ನಾಗಿ ಮುಚ್ಚಿ ಸಗಣಿ ರಾಡಿಯಿಂದ ಬಳಿಯುತ್ತಾರೆ. ಇದನ್ನು ಸುಮಾರು ನಾಲ್ಕು ತಿಂಗಳುಗಳ ಕಾಲ ಬಿಟ್ಟರೆ ಗೊಬ್ಬರ ಸಿದ್ಧವಾಗುತ್ತದೆ. ಈ ಸಾವಯವ ಗೊಬ್ಬರಗಳನ್ನು ತಮಿಳುನಾಡಿನ ಮಧುರೈ, ತಂಜಾವೂರು ಮುಂತಾದ ಅನೇಕ ಕಡೆ ತಯಾರಿಸುತ್ತಾರೆ.

ಎರೆಹುಳು ಹಾಗೂ ಎರೆ ಹುಳುವಿನ ಗೊಬ್ಬರ : ಎರೆಹುಳುವನ್ನು ರೈತರ ಗೆಳೆಯನೆಂದೂ, ನೈಸರ್ಗಿಕ ಇಂಜನಿಯರ್ ಎಂದೂ ಭೂಮಿಯೊಳಗಿನ ಡೈನೋಸಾರ್ ಎಂದು ವರ್ಣಿಸಿದ್ದಾರೆ. ಸಾಕ್ರೆಟಿಸ್ ಅಂತೂ ದೇಶಿ ಎರೆಹುಳುವನ್ನು ಭೂಮಿಯ ಹೃದಯ ಎಂದೇ ವರ್ಣಿಸಿದ್ದಾರೆ. ಸುಮಾರು 600 ಕೋಟಿ ವರ್ಷಗಳಿಂದ ನೈಸರ್ಗಿಕವಾಗಿ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಗಳಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಸದುಪಯೋಗಿ ಜೀವ ಜಂತು ಎಂದರೆ ಎರೆಹುಳು. ಇತ್ತೀಚಿನ ವರದಿಗಳ ಪ್ರಕಾರ ಭೂಮಂಡಲದ 100 ಜೀವಜಂತುಗಳ ಪೈಕಿ ಅತ್ಯಂತ ಯಶಸ್ವಿ ಜೀವಿಯಾಗಿದ್ದು, ಪ್ರಬಲ ಜೀವಿಯಾದ ಮಾನವನನ್ನು ಮೀರಿದ್ದು ಎಂದರೆ ಎರೆಹುಳು. ಇವು ಜಮೀನಿನಲ್ಲಿರುವ ಕೃಷಿ ತ್ಯಾಜ್ಯ ವಸ್ತುಗಳಾದ ತರಗೆಲೆ, ಕಸ, ಕೂಳೆ ಮುಂತಾದವುಗಳನ್ನು ತಿಂದು ಮಲಮೂತ್ರ ರೂಪದಲ್ಲಿ ಉಪಯುಕ್ತವಾದ ಸಾವಯವ ಗೊಬ್ಬರವನ್ನು ಮಣ್ಣಿಗೆ ಸೇರಿಸುತ್ತದೆ. ಒಂದು ಚದುರ ಅಡಿಗೆ 4 ರಂತೆ ಪ್ರತಿ ಎಕರೆಗೆ ಎರಡು ಲಕ್ಷ ದೇಶಿ ಎರೆಹುಳುಗಳು ಪ್ರತಿದಿನವೂ ಮೂರು ನಾಲ್ಕು ಅಡಿ ಆಳಕ್ಕೆ ಹೋಗಿ, ಮೇಲಕ್ಕೆ ಬಂದು ಪ್ರತಿಸಲವೂ ಹೊಸರಂಧ್ರವನ್ನು ಉಂಟುಮಾಡುತ್ತದೆ. ಹೀಗಾಗಿ ಜಮೀನು ಜರಡಿಯಂತಾಗಿರುತ್ತದೆ. ಸಾವಿರಾರು ರಂಧ್ರಗಳಿಂದಾಗಿ ಎಂತಹ ಬಿರುಮಳೆ ಬಿದ್ದರೂ ನೀರೆಲ್ಲಾ ಭೂಮಿಯ ಒಳಗಡೆಗೇ ಸೇರುತ್ತದೆ. ಅತಿವೃಷ್ಟಿಯ ಸಂದರ್ಭದಲ್ಲೂ ಮಣ್ಣು ಕೊಚ್ಚಿ ಹೋಗದಿರಲು ಎರೆಹುಳು ಸಹಕರಿಸುತ್ತದೆ. ಅಂತರ್ಜಲದ ಮಟ್ಟ ಸುಧಾರಿಸಲು ಅತ್ಯಂತ ಇದು ಉಪಕಾರಿ.

ಎರೆಹುಳುವಿನ ಸಾವಯವ ಗೊಬ್ಬರವನ್ನು ತಯಾರಿಸಲು ಗುಂಡಿಯಲ್ಲಿ ಒಂದು ಭಾಗ ಸಗಣಿ, ಎರಡು ಭಾಗ ಹಸುರೆಲೆ, ಎರಡು ಭಾಗ ಒಣ ಎಲೆ ಮಿಶ್ರಣವನ್ನು ತುಂಬಿ ಹದಿನೈದು ದಿನಗಳವರೆಗೆ ಕೊಳೆಸಿ ನಂತರ ಎರೆಹುಳುಗಳನ್ನು ಆ ಗುಂಡಿಯಲ್ಲಿ ಬಿಟ್ಟರೆ ಭಾಗಶಃ ಕಳಿತ ಪದಾರ್ಥಗಳನ್ನು ಹುಳುಗಳು ತಿಂದು ಗೊಬ್ಬರವನ್ನಾಗಿ ಮಾರ್ಪಾಟು ಮಾಡುತ್ತದೆ. ಗುಂಡಿಯಲ್ಲಿ ತೇವಾಂಶ ಇರುವಂತೆ ಗಮನಿಸಬೇಕಾದುದು ಅತ್ಯವಶ್ಯ.

ಹಸುರೆಲೆಗೊಬ್ಬರ : ಇದೂ ಸಹ ಕೊಟ್ಟಿಗೆ ಗೊಬ್ಬರದಂತೆ ಸಾವಯವ ಗೊಬ್ಬರಗಳ ಪಟ್ಟಿಯಲ್ಲಿ ಸೇರುತ್ತದೆ. ಇದನ್ನು ಜಮೀನಿಗೆ ಬಳಸುವುದರಿಂದ ಮಣ್ಣಿನಲ್ಲಿರುವ ಸೆಂದ್ರಿಯ ವಸ್ತು ಹೆಚ್ಚಾಗಿ ಬೆಳೆಗೆ ಬೇಕಾದ ಪೋಷಕಾಂಶಗಳು ದೊರೆಯುತ್ತವೆ. ಹೊಂಗೆ, ಸೆಣಬು, ಕೊಳಂಜಿ ಮುಂತಾದ ಹಸುರೆಲೆಗಳನ್ನು ರೈತರು ಬಳಸುತ್ತಾರೆ. ಕೃಷಿಯಲ್ಲಿ ಹಸುರೆಲೆ ಗೊಬ್ಬರಕ್ಕೆ ಹೆಚ್ಚಿನ ಮಹತ್ವವಿದೆ. ಅದರಲ್ಲೂ ಬತ್ತ ಬೆಳೆಯಲು ಇದು ಅತ್ಯವಶ್ಯ. ಏಕೆಂದರೆ ಇದರಲ್ಲಿ ಸಾರಜನಕ, ರಂಜಕ, ಪೋಟಾಷಿಯಂ ಮುಂತಾದವುಗಳು ಇರುತ್ತವೆ.

ಹಿಂಡಿಗೊಬ್ಬರ : ಸಾಮಾನ್ಯವಾಗಿ ಬೇವು, ಹೊಂಗೆ, ಸೂರ್ಯಕಾಂತಿ, ಹತ್ತಿಕಾಳು ಮತ್ತು ಹರಳು ಹಿಂಡಿಗಳನ್ನು ಗೊಬ್ಬರಕ್ಕೆ ರೈತರು ಬಳಸುತ್ತಾರೆ. ಈ ಹಿಂಡಿ ಗೊಬ್ಬರಗಳು ಅಧಿಕ ಪೋಷಕಾಂಶಗಳನ್ನು ಹೊಂದಿರುತ್ತವೆ. ಇಂತಹ ಸಾವಯವ ಗೊಬ್ಬರಗಳನ್ನು ಉಪಯೋಗಿಸಿ ಕೃಷಿ ಮಾಡಿದರೆ ಒಳ್ಳೆಯದು. ತಮಿಳುನಾಡಿನಲ್ಲಿ ತಂಜಾವೂರು, ಮಧುರೈ, ತಿರುವಣ್ಣಾಮಲೈ ಮುಂತಾದ ಅನೇಕ ಜಿಲ್ಲೆಗಳಲ್ಲಿ ಇಂದಿಗೂ ಸಾವಯವ ಗೊಬ್ಬರಗಳನ್ನು ಉಪಯೋಗಿಸುತ್ತಾರೆ.

ಆಧುನಿಕ ರಸಗೊಬ್ಬರಗಳ ಬಳಕೆಯಿಂದ ಉಂಟಾಗುವ ಹಾನಿ : ರಸಗೊಬ್ಬರಗಳ ಬಳಕೆಯಿಂದ ರೋಗ ಮತ್ತು ಕೀಟಗಳ ಬಾಧೆ ಹೆಚ್ಚುತ್ತದೆ. ಇವುಗಳ ಬಾಧೆಯನ್ನು ತಡೆಯಲು ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಇದರಿಂದಾಗಿ ಕೀಟನಾಶಕ ಔಷಧಿಗಳು ಬೆಳೆಗಳಲ್ಲಿ, ತರಕಾರಿಗಳಲ್ಲಿ, ಹಣ್ಣುಗಳಲ್ಲಿ ಸೇರಿಹೋಗುತ್ತವೆ. ಇಂತಹ ಔಷಧ ಭರಿತ ಆಹಾರ ಸೇವನೆಯಿಂದಾಗಿ ನೂರಾರು ರೋಗಗಳು ಕಂಡುಬರುತ್ತವೆ. ಈಗೀಗಂತೂ ಇಳುವರಿಯನ್ನು ಹೆಚ್ಚಿಸಲು ರಸಗೊಬ್ಬರಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ಇಂತಹ ಹೈಬ್ರಿಡ್ ಬೆಳೆಗಳಲ್ಲಿ ಪೋಷಕಾಂಶಗಳು ಕಡಿಮೆಯಾಗಿರುತ್ತವೆ. ಸಾರಜನಕ, ಪೊಟ್ಯಾಷ್, ರಂಜಕ ಮುಂತಾದ ರಾಸಾಯನಿಕ ವಸ್ತುಗಳನ್ನು ಸೇರಿಸಿ ತಯಾರಿಸಿದ ಗೊಬ್ಬರಗಳನ್ನು ಉಪಯೋಗಿಸಿ ಕೃಷಿ ಮಾಡುವುದರಿಂದ ಮಾನವನಿಗೆ ಹಾನಿಯುಂಟಾಗುತ್ತಿದೆಯೇ ವಿನಹ ಸ್ವಲ್ಪವೂ ಉಪಯುಕ್ತವಾಗಿಲ್ಲ. ತಿನ್ನುವ ಆಹಾರದಲ್ಲಿ, ಕುಡಿಯುವ ನೀರಿನಲ್ಲಿ, ಬಳಸುವ ಪದಾರ್ಥಗಳಲ್ಲಿ ಹಾನಿಕಾರಕ ವಸ್ತುಗಳು ಇದೆಯೇ ವಿನಃ ಮತ್ತಾವುದೂ ಇಲ್ಲ. ಇಂತಹ ಆಹಾರ ಸೇವನೆಯಿಂದ ನಾವು ಹಿಂದೆಂದೂ ಕಂಡರಿಯದ, ಕೇಳರಿಯದ ಹೊಸ ಹೊಸ ರೋಗಗಳಿಗೆ ಬಲಿಯಾಗುತ್ತಿದ್ದೇವೆ. ಆದ್ದರಿಂದ ಸಾವಯುವ ಕೃಷಿ ಪದ್ಧತಿಯೇ ಅತ್ಯುತ್ತಮವಾದುದು, ಅತ್ಯವಶ್ಯಕವಾದುದು.

ನೈಸರ್ಗಿಕ ಕೃಷಿ ಪದ್ಧತಿಯನ್ನು ಅನುಸರಿಸಿದರೆ ಹೆಚ್ಚು ಹಣದ ವೆಚ್ಚವಿರುವುದಿಲ್ಲ. ಸಾಲ ಪಡೆಯಲು ಬ್ಯಾಂಕಿನ ಮೆಟ್ಟಿಲನ್ನು ಏರಬೇಕಾಗಿಲ್ಲ. ಬ್ಯಾಂಕಿನಿಂದ ಸಾಲ ಪಡೆದು ಅದನ್ನು ತೀರಿಸುವುದಕ್ಕೆ ಸಾಧ್ಯವಿಲ್ಲವಲ್ಲಾ ಎಂದು ಹತಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳಬೇಕಾದ್ದಿಲ್ಲ.

ಮಣ್ಣಿನ ಪೌಷ್ಟಿಕಾಂಶಗಳನ್ನು ಕಾಪಾಡಲು ನೈಸರ್ಗಿಕ ಕೃಷಿ ಸಹಕಾರಿಯಾಗಿದೆ. ಅಷ್ಟೇ ಅಲ್ಲದೆ ಆರೋಗ್ಯಕರವಾದ ದವಸ, ಧಾನ್ಯ, ತರಕಾರಿ-ಹಣ್ಣು, ಹಂಪಲುಗಳನ್ನು ಉತ್ಪತ್ತಿಮಾಡಲು ಸಾವಯವ ಕೃಷಿ ವಿಧಾನ ಅತ್ಯವಶ್ಯ. ಆದ್ದರಿಂದ ಸಾವಯವ ಕೃಷಿ ಪದ್ಧತಿಗೆ 'ಸೈ' ಎನ್ನೋಣ. ರಾಸಾಯನಿಕ ಕೃಷಿ ಪದ್ಧತಿಗೆ ವೈಜ್ಞಾನಿಕ ಕೃಷಿ ಪದ್ಧತಿಗೆ 'ನೋ' ಎನ್ನೋಣ.

ಸಸ್ಯ ಸಂರಕ್ಷಣೆ ಹಾಗೂ ನೈಸರ್ಗಿಕ ಕೀಟನಾಶಕಗಳನ್ನು ತಯಾರಿಸುವ ವಿಧಾನ : ಯಾವುದೇ ಸಸ್ಯಗಳಾಗಲಿ, ಅವುಗಳನ್ನು ಹುಳು ಹುಪ್ಪಟಗಳು, ಅನೇಕ ಕೀಟಗಳು ನಾಶಮಾಡುತ್ತವೆ. ಹಲವು ಬೆಳೆಗಳಲ್ಲಿ ಶಿಲೀಂಧ್ರ ಹಾವಳಿ ಹೆಚ್ಚಾಗುತ್ತದೆ. ಇದನ್ನು ತಡೆಗಟ್ಟಲು ನೈಸರ್ಗಿಕ ಕೀಟನಾಶಕಗಳನ್ನು ತಯಾರಿಸಬಹುದು.

ನೀಮಾಸ್ತ್ರ : ಕಪ್ಪು ಮಣ್ಣಿನ ಹರವಿನಲ್ಲಿ ನೀರು ಮತ್ತು ಎರಡು ಕೆ.ಜಿ. ಆಕಳ ತಾಜಾ ಸಗಣಿ ಜೊತೆಗೆ ಆಕಳಿನ ಗಂಜಲ (10 ಲೀಟರ್) ಮತ್ತು ಬೇವಿನ ಎಲೆ (10 ಕೆ.ಜಿ.) ಬೆರೆಸಿ ಮೂರು ದಿನಗಳ ಕಾಲ ನೆರಳಲ್ಲಿ ಇರಿಸಿ ಪ್ರತಿದಿನವೂ ಮೂರು ಬಾರಿ ದೊಡ್ಡ ಕಟ್ಟಿಗೆಯಿಂದ ಚೆನ್ನಾಗಿ ಕಲಸಬೇಕು. ಮೂರು ದಿನಗಳ ಅನಂತರ ಅದನ್ನು ಮೊದಲು ತಟ್ಟಿಯಿಂದ ಅನಂತರ ಬಟ್ಟೆಯಿಂದ ಸೋಸಿ ಇಡಬೇಕು. ಹೀಗೆ ಸಿದ್ಧವಾದ ನೀಮಾಸ್ತ್ರವನ್ನು ನೀರು ಬೆರಸದೆ ಬೆಳೆಗೆ ಸಿಂಪಡಿಸಿದರೆ ಕೀಟಗಳು ಹಾಗೂ ಶಿಲೀಂದ್ರಗಳೂ ನಾಶವಾಗುತ್ತವೆ.

ಪಂಚಗವ್ಯ : ಪಂಚಗವ್ಯ ಎಂದರೆ ಹಸುವಿನ ಸಗಣಿ, ಗಂಜಲ, ಹಾಲು, ಮೊಸರು, ತುಪ್ಪ ಇವೈದು ಪದಾರ್ಥಗಳು ಸೇರಿವೆ. ಇವುಗಳನ್ನು ಸರಿಯಾದ ಪ್ರಮಾಣದಲ್ಲಿ ಮಿಶ್ರಮಾಡಿ ಬಳಸಿದರೆ ಆಶ್ಚರ್ಯಕರವಾದ ಪರಿಣಾಮಗಳು ಕಂಡುಬರುತ್ತವೆ. ಇದರಲ್ಲಿ ಇಂಧನವು ಅಡಕವಾಗಿದೆ. ಇದರ ಬಳಕೆಯಿಂದ ಜೈವಿಕ ಹಾಗೂ ಸಸ್ಯಗಳ ಶಾರೀರಿಕ ಕ್ರಿಯೆಗಳು ಸುಸೂತ್ರವಾಗಿ ನಡೆಯುತ್ತವೆ. ಇದರ ಬಳಕೆಯಿಂದ ಅಸಮತೋಲನ ದೂರವಾಗುತ್ತದೆ. ಇಂದಿಗೂ ಪೂಜೆ ಪುನಸ್ಕಾರಗಳಲ್ಲಿ ಶುದ್ಧೀಕರಣಕ್ಕಾಗಿ ಪಂಚಗವ್ಯವನ್ನು ಬಳಸಲಾಗುತ್ತದೆ. ಗಿಡಗಳಿಗೆ ಇದನ್ನು ಸಿಂಪಡಿಸಿದರೆ ಅನೇಕ ಕೀಟಗಳು ನಾಶವಾಗುತ್ತವೆ.

ಬ್ರಹ್ಮಾಸ್ತ್ರ : ಬೇವಿನ ಎಲೆ, ಹಾಗಲ ಎಲೆ, ಹೊಂಗೆ ಎಲೆ, ಸೀತಾಫಲದ ಎಲೆ, ಲಂಟಾನ (ಚದರಂಗಿ) ಎಲೆ, ಪೇರಲ ಎಲೆ, ದಾಳಿಂಬೆ ಎಲೆ ಮೊದಲಾದವನ್ನು (ಅಥವಾ ಇವುಗಳಲ್ಲಿ ಯಾವುದಾದರೂ 5ಎಲೆಗಳು) 40 ರಿಂದ 50 ಕೆ.ಜಿ.ಯವರೆಗೆ ಸಂಗ್ರಹಿಸಿ ರುಬ್ಬಿ ಅದನ್ನು ಕುದಿಯುವಂಥ ದೊಡ್ಡ ಮಣ್ಣಿನ ಹರವಿನಲ್ಲಿ ಸುಮಾರು 20 ಲೀಟರ್ ದೇಶಿ ಆಕಳ ಗಂಜಲುಹಾಕಿ 5 ಎಲೆಯನ್ನು ಬೆರೆಸಿ ನಾಲ್ಕು ಉಕ್ಕು ಬರುವ ತನಕ ಕುದಿಯಲು ಬಿಡಬೇಕು. ಹೀಗೆ ಕುದಿಸುವುದರಿಂದ ದ್ರಾವಣ ಮಾತ್ರ ಉಳಿಯುತ್ತದೆ. ಇದನ್ನು ಎರಡು ದಿನಗಳ ಕಾಲ ತಂಪಾಗಲು ಬಿಟ್ಟು ಅನಂತರ ಮಿಶ್ರಣವನ್ನು ಬಟ್ಟೆಯಿಂದ ಸೋಸಿ ಆ ದ್ರವವನ್ನು ಬೆಳೆಗಳಿಗೆ ಸಿಂಪಡಿಸಬೇಕು.

ಹುಳಿಮಜ್ಜಿಗೆ : ಹುಳಿಮಜ್ಜಿಗೆಯು ಎಲ್ಲ ರೋಗಗಳನ್ನು ತಡೆಗಟ್ಟುತ್ತದೆ ಎನ್ನುವರು. ಐದು ದಿನಗಳ ಮಜ್ಜಿಗೆಯನ್ನು ಹುಳಿಮಜ್ಜಿಗೆಯೆಂದು ಪರಿಗಣಿಸಬೇಕು. ಆದರೆ ದೇಶಿ ಆಕಳಿನ ಹುಳಿಮಜ್ಜಿಗೆಯೇ ಇದಕ್ಕೆ ಅವಶ್ಯಕ. ವಿದೇಶಿ ಹಸುವಿನ ಹುಳಿಮಜ್ಜಿಗೆ ಸಲ್ಲದು. ಇಂದಿಗೂ ಮನೆಗಳ ಮುಂದೆ ಬೆಳೆಸುವ ಕರಿಬೇವಿನ ಸೊಪ್ಪಿನ ಮರಕ್ಕೆ ಹುಳಿಮಜ್ಜಿಗೆಯನ್ನು ಹಾಕುವ ಪದ್ಧತಿ ಇದೆ. ಹೀಗೆ ನೈಸರ್ಗಿಕ ಕೀಟ ನಾಶಕಗಳನ್ನು ಉಪಯೋಗಿಸುವುದರಿಂದ ವೆಚ್ಚ ಕಡಿಮೆಯಾಗುತ್ತದೆ. ಭೂಮಿಯ ಫಲವತ್ತತೆಯನ್ನೂ ಸಹ ಕಾಪಾಡಬಹುದು.

ಯು.ಸಿ.ಎಸ್.

ತಮಿಳುನಾಡಿನ ನದಿಗಳು ಕೃಷಿಯಲ್ಲಿ ನೀರಿನ ಪಾತ್ರ ಪ್ರಮುಖವಾದುದು. ನೀರಿನ ಅನುಕೂಲವಿಲ್ಲದೆ ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ. ನದಿಗಳು ಉಗಮವಾಗಲು ಇಳಿಜಾರಾದ ಭೂ ಪ್ರದೇಶ ಹಾಗೂ ಘನವಾದ ಮಳೆ ಅತ್ಯವಶ್ಯಕ. ಇದು ಪರ್ವತ ಪ್ರದೇಶಗಳಲ್ಲಿ ಮಾತ್ರ ಕಂಡುಬರುತ್ತದೆ. ಆದ್ದರಿಂದ ಸಾಮಾನ್ಯವಾಗಿ ನದಿಗಳು ಬೆಟ್ಟ ಪ್ರದೇಶಗಳಲ್ಲಿ ಉಗಮವಾಗುತ್ತದೆ. ಬೆಟ್ಟದ ಇಳಿಜಾರಿನಲ್ಲಿ ಬೀಳುವ ಮಳೆಯಿಂದ ತೊರೆಗಳು ಉಂಟಾಗುತ್ತವೆ. ಹಲವು ತೊರೆಗಳು ಸೇರಿ ನದಿಗಳಾಗುತ್ತವೆ. ಈ ರೀತಿ ಉಗಮವಾಗುವ ನದಿಯು ಬೆಟ್ಟದ ಇಳಿಜಾರಿನಲ್ಲಿರುವ ಹಳ್ಳದ ಸರಹದ್ದುಗಳ ಮಾರ್ಗವಾಗಿ ಹರಿದು ಪೀಠಭೂಮಿಯನ್ನು ತಲುಪುತ್ತದೆ. ಈ ಪೀಠಭೂಮಿಯ ಮಾರ್ಗವಾಗಿ ಹರಿಯುವ ನದಿಯ ಎರಡು ಕಡೆಗಳಿಂದಲೂ ಹಲವು ಉಪನದಿಗಳು ಬಂದು ಸೇರುತ್ತವೆ. ಹೀಗಾದಾಗ ಪ್ರಮುಖ ನದಿಯ ನೀರಿನ ಪ್ರಮಾಣ

ಹೆಚ್ಚುತ್ತಾ ಹೋಗುತ್ತದೆ. ಹೀಗೆ ನದಿಯ ನೀರಿನ ಸಾಂಧ್ರತೆ ಹೆಚ್ಚಾದಂತೆಲ್ಲಾ ಅದರ ಬಯಲು ಸಹ ವಿಸ್ತರಿಸುತ್ತದೆ.

ಸಮತಲ ಪ್ರದೇಶಗಳಲ್ಲಿ ಇಳಿಜಾರು ಬಹಳ ಕಡಿಮೆಯಾಗಿರುತ್ತದೆ. ಆದ್ದರಿಂದ ನದಿ ನೀರೆಲ್ಲಾ ಒಂದೇ ಮಾರ್ಗದಲ್ಲಿ ಹರಿಯುವುದಿಲ್ಲ. ಈ ಸನ್ನಿವೇಶದಲ್ಲಿ ಪ್ರಮುಖ ನದಿಯಿಂದ ಉಪನದಿಗಳು ಹಲವು ವಿಭಜನೆ ಹೊಂದಿ ವಿವಿಧ ಪ್ರದೇಶಗಳ ಮಾರ್ಗವಾಗಿ ಹರಿದು ಕೊನೆಗೆ ಸಮುದ್ರವನ್ನು ಸೇರುತ್ತವೆ. ಉದಾಹರಣೆಗೆ ತಮಿಳುನಾಡಿನಲ್ಲಿ ಹರಿಯುವ ಕಾವೇರಿ ನದಿಯು ಕರ್ನಾಟಕ ರಾಜ್ಯದ ಕೊಡಗಿನ ಬೆಟ್ಟದಲ್ಲಿ ಉದ್ಭವವಾಗುತ್ತದೆ. ಈ ಸ್ಥಳದಲ್ಲಿ ಕಾವೇರಿ ನದಿಯು ಕಾರಂಜಿಯಾಗಿ ಹೊರ ಹೊಮ್ಮಿ ಬಹಳ ಚಿಕ್ಕದಾಗಿ ಕಾಣುತ್ತದೆ. ಇದು ನದಿಯು ಬೆಟ್ಟದ ಇಳಿಜಾರುಗಳನ್ನು ಹಾಯ್ದು ದಖ್ಖನ್ ಪ್ರಸ್ಥಭೂಮಿಯನ್ನು ಸೇರುತ್ತದೆ. ಈ ಪೀಠಭೂಮಿಯಲ್ಲಿ ಕಾವೇರಿ ನದಿಯ ಎರಡೂ ಕಡೆಗಳಲ್ಲಿ ಭವಾನಿ, ನೊಯಲ್, ಅಮರಾವತಿ ಮುಂತಾದ ಉಪನದಿಗಳು ಬಂದು ಸೇರುತ್ತವೆ.

ಹಲವು ಉಪನದಿಗಳು ಬಂದು ಸೇರುವುದರಿಂದ ಕಾವೇರಿಯು ಅಗಲವಾಗಿ ಸಮತಲ ಪ್ರದೇಶದ ಕಡೆಗೆ ಹರಿಯುತ್ತದೆ. ಹೀಗೆ ಹರಿಯುವಾಗ ಪೆನ್ನಾರ್, ವೆಟ್ಟಾರು, ಅರಸಲಾರು ಮೊದಲಾದ ಹಲವು ಉಪನದಿಗಳಾಗಿ ವಿಭಜನೆಯಾಗುತ್ತದೆ. ಕೊನೆಗೆ ಕಾವೇರಿಯು ಬಂಗಾಳಕೊಲ್ಲಿಯನ್ನು ಸೇರುತ್ತದೆ.

ತಮಿಳುನಾಡಿನಲ್ಲಿ ಒಟ್ಟು 97 ನದಿಗಳು ಹರಿಯುತ್ತವೆ.

1. ಅಡ್ಯೈಯಾರ್
2. ಅಮರಾವತಿ
3. ಅರಸಲಾರ್
4. ಅಗರಂ ಆರು
5. ಅಡಪ್ಪರ್
6. ಅಯ್ಯಾರು
7. ಅಲತು ಕಣ್ಣಿಯರ್
8. ಅಯನ್ ತರುವಿಯರ್
9. ಅರ್ಜುನ
10. ಅರಿಚ್ಚಂದ್ರ
11. ಭವಾನಿ
12. ಬಾಂಬರ್
13. ಚಿಟ್ಟಾರ್
14. ಕುನ್ನಾರ
15. ಚೆಯ್ಯಾರ್
16. ಜಿಂಜಿ
17. ಗೋಮುಖಿ
18. ಗೋದ್ವರ್
19. ಸದನಾ
20. ಗುಂಡಾರ್
21. ಹನುಮನ್ನದಿ
22. ಜಂಬೂ
23. ಕಪಿನಿ
24. ಕಲ್ಲಾರ್
25. ಕಮಂಡಲ
26. ಕಾವೇರಿ
27. ಕೆಡಿಲಮ್
28. ಕೊಲ್ಲಿಡಂ
29. ಗೋಮುಖಿ
30. ಕೌಂಡಿನ್ಯ
31. ಕುಡುಮುರುತ್ತಿ
32. ಕುಂದ
33. ಕೊಟ್ಟಗುಡಿ
34. ಕಾರಿ ಪೊಟ್ಟಾನ್
35. ಕರುಪ್ಪ
36. ಕರುಣಿಯರ್
37. ಕೊಟ್ಟಮಲ್ಯೈಯಾರು
38. ಕೋದ್ಯೈಯಾರು
39. ಕೌಶಿಕ
40. ಕುಂಡರ್
41. ಕಾಟ್ಟಾರ್
42. ಮಲಟ್ಟಾರ್
43. ಮಣಿಮುಕ್ತಾ
44. ಮಣಿಮುತ್ತಾರ್
45. ಮಯೂರ
46. ಮೋಯಾರ್
47. ಮುಡಿಕೊಂಡನ್
48. ಮಾರ್ಕಂಡ
49. ಮುಂದಲ್ ಓಡೈ
50. ಮೊಟ್ಟೈಯಾರ್
51. ಮುಲ್ಯೈಯಾರ್
52. ನೋಯ್ಯಲ್
53. ನಾಗಾ
54. ನಂಗಂಜೀಯರ್
55. ನಂದಲಾರ್
56. ನಾಟ್ಟಾರ್
57. ಓಡಂ ಪೊಕ್ಕಿ
58. ಪಚ್ಚೈಯಾರ್
59. ಪಾಂಬರ್
60. ಪಹ್‌ಲರಿ
61. ಪಾಲಾರ್
62. ಪರಂಬಿಕುಲಂ
63. ಪೊನ್ನೈಯಾರ್
64. ಪೈಕಾರಾ
65. ಪಾಂಡವೈಯರ್
66. ಪಾಮಿನಿಯರ್
67. ರಾಜಸಿಂಗಿಯಾರು
68. ರಮಾ
69. ಸಂಕರಾಭರಣಿ
70. ಶಣ್ಮುಖಾ
71. ಸೀಗೂರ್
72. ದಕ್ಷಿಣ ಪೆನ್ನಾರ್
73. ಸಿರುವಾಣಿ
74. ಸುವೇಥಾ
75. ಶರಭಂಗ
76. ಸಾರುಗಣಿ
77. ತಾಮ್ರಪರ್ಣಿ
78. ತೆನ್ಪ್‌ಪೆಣ್ಣಿ
79. ತೊಂಡೈಯಾರ್
80. ತಿರುಮಲೈ ರಾಜನ್
81. ತೆನ್ನಾರ್
82. ತಿರುಮಣಿ ಮುದುರು
83. ಅಪ್ಪರ್
84. ಅಪ್ಪರ್ ಗುಂಡರ್
85. ವೈಗೈ
86. ವೈಪ್ಪಾರ್
87. ವನ್ನಿಯರ್
88. ವೆನ್ನಾಟ್ರು
89. ವರಗಾ
90. ವಸಿಷ್ಠ
91. ವೀರಚೋಳನ್
92. ವೆಳ್ಳಾರ್
93. ವೇದ ಮುಲ್ಯೈಯಾರ್
94. ವೆಟ್ಟಾರ್
95. ವೆನ್ನಾರ್
96. ವಲವೈಕಾಲ್
97. ಉತ್ತರ ಪೆನ್ನಾರ್

ಈ ನದಿಗಳಲ್ಲಿ ಕಾವೇರಿ, ವೈಗೈ, ತಾಮ್ರಪರ್ಣಿ ಮುಂತಾದ ಜೀವ ನದಿಗಳು ವರ್ಷವಿಡೀ ಹರಿಯುತ್ತವೆ. ಆದರೆ ಅನೇಕ ನದಿಗಳು ಮಳೆಗಾಲದಲ್ಲಿ ಹರಿದು ಬೇಸಗೆಯ ಕಾಲದಲ್ಲಿ ಬತ್ತಿ ಹೋಗುತ್ತವೆ.

ಕಾವೇರಿ : ಇದು 760ಕಿ.ಮೀ. ಉದ್ದವಿದೆ. ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯಲ್ಲಿ ಮಡಿಕೇರಿ ಹತ್ತಿರ ತಲಕಾವೇರಿ ಎಂಬ ಸ್ಥಳದಲ್ಲಿ ಹುಟ್ಟಿ ಕರ್ನಾಟಕ ಮತ್ತು ತಮಿಳು ರಾಜ್ಯಗಳಲ್ಲಿ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಭವಾನಿ, ನೊಯ್ಯಲ್, ಅಮರಾವತಿ ಎಂಬುವು ಇದರ ಮುಖ್ಯ ಉಪನದಿಗಳಾಗಿವೆ. ತಮಿಳುನಾಡಿನಲ್ಲಿ ತಿರುಚಿರಾಪಳ್ಳಿ ಮತ್ತು ತಂಜಾವೂರ್ ಜಿಲ್ಲೆಗಳು ಈ ನದಿಯಿಂದ ಪ್ರಯೋಜನವನ್ನು

ಪಡೆಯುತ್ತವೆ. ಈ ಜಿಲ್ಲೆಗಳು ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲಾದ ಮೆಟ್ಟೂರು ಮತ್ತು ಕಲ್ಲಣೈ ಅಣೆಕಟ್ಟುಗಳಿಂದ ಹೆಚ್ಚಿನ ಪ್ರಯೋಜನವನ್ನು ಪಡೆದಿವೆ. ಅಷ್ಟೇ ಅಲ್ಲದೆ ಧರ್ಮಪುರಿಯಲ್ಲಿರುವ ಹೊಗೇನಕಲ್ಲು ಎಂಬಲ್ಲಿಯೂ ಇದಕ್ಕೆ ಜಲಪಾತವಿದೆ.

ಪೊನ್ನೈಯಾರ್ : ಮೈಸೂರು ಪೀಠಭೂಮಿಯಲ್ಲಿ ಹುಟ್ಟಿ ತಮಿಳು ನಾಡಿನ ಮೂಲಕ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ಪಾಲಾರ್ : ಸಹ ಮೈಸೂರು ಪೀಠಭೂಮಿಯಲ್ಲಿ ಹುಟ್ಟಿ, ತಮಿಳುನಾಡಿನ ಮೂಲಕ ಹರಿದು ಬಂಗಾಳ ಕೊಲ್ಲಿಯನ್ನು ಸೇರುತ್ತದೆ.

ವೈಗೈ : ಕಾರ್ಡಮಂ ಮಲೆಯಲ್ಲಿ ಹುಟ್ಟಿ ತಮಿಳುನಾಡಿನಲ್ಲಿ ಹರಿದು ಪಾಕ್ ಜಲಸಂಧಿಯನ್ನು ಸೇರುತ್ತದೆ. ಮಧುರೈ ಎಂಬ ನಗರವು ಈ ನದಿಯ ದಡದಲ್ಲಿದೆ.

ತಾಮ್ರಪರ್ಣಿ : ಪಶ್ಚಿಮ ಘಟ್ಟಗಳಿಗೆ ಸೇರಿದ ಅಗಸ್ತ್ಯ ಎಂಬ ಬೆಟ್ಟದಲ್ಲಿ ಹುಟ್ಟಿ, ತಮಿಳುನಾಡಿನಲ್ಲಿ ಹರಿದು ಉಪನದಿಗಳಾದ ಚಿತ್ರಾರು, ಮಣಿ ಮುತ್ತಾರುಗಳೊಡನೆ ಸೇರಿ ಮನ್ನಾರ್ ಕೊಲ್ಲಿಗೆ ಬೀಳುತ್ತದೆ.

ಯು.ಸಿ.ಎಸ್.

ತಮಿಳುನಾಡಿನ ನೀರಾವರಿ ಪದ್ಧತಿ ಭಾರತ ದೇಶ ಕೃಷಿ ಪ್ರಧಾನವಾದ ದೇಶ. ಕೃಷಿಕರು ಮಳೆಯನ್ನೆ ನಂಬಿದ್ದಾರೆ. ಆದರೆ ಕೆಲವೊಮ್ಮೆ ಮಳೆ ಬಾರದೆ ಇರುವುದು ಉಂಟು. ಅಥವಾ ಬೀಳುವ ಮಳೆಯು ಎಲ್ಲಾ ಭಾಗಗಳಲ್ಲಿಯೂ ಒಂದೇ ಸಮನಾಗಿ ಬೀಳುವುದಿಲ್ಲ. ಆದ್ದರಿಂದ ಮಳೆ ಬಾರದ ಸಮಯದಲ್ಲಿ ಬೇಸಾಯ ಮಾಡಲು ನೀರು ಬೇಕು. ಅದಕ್ಕೆ ನೀರಾವರಿಯು ಅತ್ಯವಶ್ಯಕವಾಗಿದೆ. ನದಿ, ಸರೋವರ, ಕೆರೆ, ಬಾವಿಗಳಲ್ಲಿರುವ ನೀರನ್ನು ತೆಗೆದು ಕಾಲುವೆಗಳ ಮೂಲಕ ಬೇಸಾಯ ಮಾಡುವ ಪ್ರದೇಶಗಳಿಗೆ ಹಾಯಿಸುವುದನ್ನು ನೀರಾವರಿ ಎಂದು ಕರೆಯುತ್ತೇವೆ. ನೀರು ಸಸ್ಯಗಳಲ್ಲಿ ಶೇ. 90 ರಷ್ಟು ಭಾಗವಿದ್ದು ಇದು ಬೆಳೆಯನ್ನು ಸದಾ ತೇವ ಭರಿತವಾಗಿ ಇಟ್ಟಿರುತ್ತದೆ. ನೀರು ಎಲೆಗಳ ಮುಖಾಂತರ ಆವಿಯಾಗುತ್ತದೆ. ಈ ಕೊರತೆಯನ್ನು ತುಂಬಲು ಮಣ್ಣು ನೀರನ್ನು ಸದಾ ಹೀರುತ್ತಿರುತ್ತದೆ.

ಪ್ರಧಾನವಾಗಿ ಮೂರು ವಿಧವಾದ ನೀರಾವರಿ ವ್ಯವಸ್ಥೆಗಳಿವೆ. ಅವುಗಳು. 1. ಕೆರೆನೀರಾವರಿ, 2. ಬಾವಿ ನೀರಾವರಿ, 3. ಕಾಲುವೆ ನೀರಾವರಿ

ಕೆರೆ ನೀರಾವರಿ : ಸ್ವಾಭಾವಿಕವಾಗಿ ದೊಡ್ಡ ದೊಡ್ಡ ಹಳ್ಳಗಳಲ್ಲಿ ಮಳೆ ನೀರು ಶೇಖರವಾಗುತ್ತದೆ. ಈ ಹಳ್ಳಗಳನ್ನು ಸರೋವರಗಳೆಂದು ಕರೆಯುವುದುಂಟು. ಮಳೆಗಾಲದಲ್ಲಿ ಕೆರೆಗಳು ನೀರಿನಿಂದ ತುಂಬಿ ತುಳುಕಾಡುತ್ತವೆ. ಕೆರೆಗಳಲ್ಲಿರುವ ನೀರನ್ನು ಕಾಲುವೆಗಳ ಮೂಲಕ ಬೇಸಾಯ ಮಾಡುವ ಪ್ರದೇಶಗಳಿಗೆ ಹಾಯಿಸುವುದನ್ನು ಕೆರೆ ನೀರಾವರಿ ಎನ್ನುತ್ತಾರೆ. ತಮಿಳುನಾಡಿನಲ್ಲಿ ಹಲವೆಡೆಗಳಲ್ಲಿ ಕೆರೆ ನೀರಾವರಿ ಪದ್ಧತಿ ಇಂದಿಗೂ ಬಳಕೆಯಲ್ಲಿದೆ. ಸಾಮಾನ್ಯವಾಗಿ ಈ ನೀರನ್ನು ಒದಗಿಸುವಾಗ ಇದರ ಪ್ರಮಾಣವನ್ನು ಕ್ಯೂಸೆಕ್ಸ್ ರೂಪದಲ್ಲಿ ಹೇಳಲಾಗುತ್ತದೆ. ಒಂದು ಕ್ಯೂಸೆಕ್ಸ್ ಎಂದರೆ ಪ್ರತಿ ಸೆಕೆಂಡಿಗೆ ಒಂದು ಘನ ಅಡಿಯ ವೇಗದಲ್ಲಿ ಚಲಿಸುವ ನೀರು ಎಂದರ್ಥ. ಇದೇ ರೀತಿ ಒಂದು ಗಂಟೇ ಇದೇ ಪ್ರಮಾಣದಲ್ಲಿ ನೀರು ಹರಿದರೆ ಇದರ ತೂಕ 100 ಟನ್‌ಗಳಷ್ಟು ಇರುತ್ತದೆ. ಬೆಳೆಗೆ ಕೊಡುವ ನೀರು ಉತ್ತಮ ಮಟ್ಟದ್ದಾಗಿರಬೇಕು. ನೀರಿನಲ್ಲಿ ಒಟ್ಟು ಕರಗುವ ಲವಣಗಳ ಪ್ರಮಾಣ, ಸೋಡಿಯಂ ಮತ್ತು ಬೋರಾನ್‌ಗಳ ಪ್ರಮಾಣ ಅತಿಮುಖ್ಯವಾದುದು. ಇವೆಲ್ಲವೂ ನೀರಿನಲ್ಲಿ ಕಡಿಮೆ ಪ್ರಮಾಣದಲ್ಲಿದ್ದರೆ ಸಸ್ಯ ಬೆಳೆವಣಿಗೆಯು ಸಮರ್ಪಕವಾಗಿರುತ್ತದೆ. ಪುದುಕೋಟ್ಟೈ, ರಾಮನಾಥಪುರಂ, ಚೆಂಗಲ್‌ಪೆಟ್ ಮುಂತಾದ ಕಡೆಗಳಲ್ಲಿ ಕೆರೆ ನೀರಾವರಿ ಪದ್ಧತಿಯು ಬಳಕೆಯಲ್ಲಿದೆ.

ಬಾವಿ ನೀರಾವರಿ : ಭೂಮಿಯ ಒಳಭಾಗದಲ್ಲಿರುವ ನೀರನ್ನು ತೆಗೆಯಲು ಬಾವಿಯನ್ನು ತೋಡಿಸುವ ಪದ್ಧತಿ ಪ್ರಾಚೀನಕಾಲದಿಂದಲೂ ಬಳಕೆಯಲ್ಲಿದೆ. ಬಾವಿಗಳಿಂದ ಏತಗಳ ಮೂಲಕ ಹಾಗೂ ಕಪಿಲೆಗಳ ಮೂಲಕ ನೀರನ್ನು ಎತ್ತುತ್ತಾರೆ. ಈಗೀಗ ವಿದ್ಯುಚ್ಛಕ್ತಿಯಿಂದ ಪಂಪುಗಳ (ಕೊಳವೆ) ಮೂಲಕ ನೀರನ್ನು ಎತ್ತಿ ಕೃಷಿ ಭೂಮಿಗೆ ಹಾಯಿಸುವ ವಿಧಾನವು ಹೆಚ್ಚು ಬಳಕೆಯಲ್ಲಿದೆ. ತಮಿಳುನಾಡಿನಲ್ಲಿ ಸುಮಾರು 18 ಲಕ್ಷ ಬಾವಿ ನೀರಾವರಿ ವ್ಯವಸ್ಥೆ ಇದೆ. ಅವುಗಳಲ್ಲಿ ಸೇಲಂ (35.701ಹೆಕ್ಟೇರ್) ಕೊಯಮುತ್ತೂರು (25.003 ಹೆಕ್ಟೇರ್) ತಿರುಚಿರಾಪಳ್ಳಿ (10.342ಹೆಕ್ಟೇರ್) ದಿಂಡಿಗಲ್ (9026 ಹೆಕ್ಟೇರ್) ತಿರುನಲ್‌ವೇಲಿ (5125 ಹೆಕ್ಟೇರ್) ಚೆಂಗಲ್‌ಪೆಟ್ (3625 ಹೆಕ್ಟೇರ್) ಭೂಮಿಯಲ್ಲಿ ಬಾವಿ ನೀರಾವರಿಯು ಬಳಕೆಯಲ್ಲಿದೆ. ಕೊಳವೆ ಬಾವಿಗಳನ್ನು ತೋಡಿ ನೀರನ್ನು ಹಾಯಿಸುವ ಪದ್ಧತಿಯು ಸೇಲಂ, ಚೆಂಗಲ್‌ಪೆಟ್, ಕೊಯಮತ್ತೂರ್ ಮತ್ತು ತಿರುಚಿರಾಪಳ್ಳಿಗಳಲ್ಲಿ ಬಳಕೆಯಲ್ಲಿದೆ.

ಕಾಲುವೆ ನೀರಾವರಿ : ಜಲಾಶಯಗಳಿಂದಲೂ ನದಿಗಳಿಂದಲೂ ಕಾಲುವೆಗಳ ಮೂಲಕ ನೀರಾವರಿಯನ್ನು ಮಾಡುವ ವಿಧಾನವನ್ನು ಕಾಲುವೆ ನೀರಾವರಿ ಎನ್ನುತ್ತಾರೆ. ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಜಲಾಶಯಗಳಲ್ಲಿ ಸಂಗ್ರಹಿಸಿದ ನಂತರ ಕಾಲುವೆಗಳ ಮೂಲಕ ನೀರಾವರಿಗೆ ಉಪಯೋಗಿಸುವ ವಿಧಾನವನ್ನು ಕಾಲುವೆ ನೀರಾವರಿ ವಿಧಾನವೆನ್ನುತ್ತಾರೆ. ತಮಿಳುನಾಡಿನಲ್ಲಿ ಮೆಟ್ಟೂರು ಅಣೆಕಟ್ಟು ಮತ್ತು ಗ್ರ್ಯಾಂಡ್ ಅಣೆಕಟ್ಟುಗಳು ಪ್ರಮುಖವಾದವು. ಕಾವೇರಿ ನದಿಗೆ ಮೆಟ್ಟೂರು ಅಣೆಕಟ್ಟನ್ನು ಕಟ್ಟಿದ್ದಾರೆ. ಇದು ತಂಜಾವೂರ್ ಜಿಲ್ಲೆಯ ಎಲ್ಲಾ ಭಾಗಗಳಿಗೂ ಬೇಸಾಯಕ್ಕೆ ಬೇಕಾದ ನೀರನ್ನು ಒದಗಿಸುವುದಲ್ಲದೆ ವಿದ್ಯುಚ್ಛಕ್ತಿಯ ಉತ್ಪಾದನೆಗೂ ಸಹಾಯಕವಾಗಿದೆ. ಮೆಟ್ಟೂರು ಅಣೆಕಟ್ಟಿನ ಮೂಲಕ 15500 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತಿದೆ.

ತಮಿಳುನಾಡಿನ ಮತ್ತೊಂದು ಪ್ರಸಿದ್ಧವೂ ಪ್ರಾಚೀನವೂ ಆದ ಅಣೆಕಟ್ಟು ಎಂದರೆ ಕಾವೇರಿ ನದಿಗೆ ಕಟ್ಟಿರುವ ಗ್ರ್ಯಾಂಡ್ ಅಣೆಕಟ್ಟು. ಇದನ್ನು ಕರಿ ಕಾಲ ಚೋಳನೆಂಬ ರಾಜನು ಕಟ್ಟಿಸಿದನು. ಇದು ಇಂದಿಗೂ ಸಾವಿರಾರು ಎಕರೆ ಜಮೀನುಗಳಿಗೆ ವ್ಯವಸಾಯ ಮಾಡಲು ನೀರಿನ ಸೌಲಭ್ಯವನ್ನು ಒದಗಿಸುತ್ತದೆ.

ಯು.ಸಿ.ಎಸ್.

ತಮಿಳುನಾಡಿನ ಮಣ್ಣು ಮಣ್ಣು ಪ್ರಕೃತಿಯ ಅಮೂಲ್ಯವಾದ ಕೊಡುಗೆ. ಇದು ಒಂದು ನೈಸರ್ಗಿಕ ಸಂಪತ್ತೂ ಹೌದು. ಇದು ಸಸ್ಯಕ್ಕೆ ಬೇಕಾದ ಪೋಷಕಾಂಶಗಳನ್ನು ಒದಗಿಸುತ್ತದೆ. ಅಷ್ಟೇ ಅಲ್ಲದೆ

ನೀರು, ಗಾಳಿ, ಉಷ್ಣತೆಯನ್ನು ಒದಗಿಸಿ ಬೆಳೆಗೆ ಆಧಾರವಾಗಿದೆ. ಮಾನವನ ಮೂಲಭೂತ ಅವಶ್ಯಕಗಳಾದ ಆಹಾರ, ಬಟ್ಟೆ, - ಇವು ಮಣ್ಣಿನಿಂದಲೇ ದೊರಕುತ್ತವೆ. 'ಮಣ್ಣಿಂದ ಕಾಯಾ ಒಳಗೆ ಮಾಯ' ಎಂಬ ಸಂತರ ವಾಣಿಯಂತೆ ಮಣ್ಣನ್ನು ಸಜೀವ ವಸ್ತು ಎನ್ನಬಹುದು. ಏಕೆಂದರೆ ಮಾನವ ಪಶು ಪಕ್ಷಿ ಸಸ್ಯ ಪ್ರಾಣಿಗಳಿಗೆ ಒಳಗೊಂಡಂತೆ ಸಕಲ ಜೀವ ರಾಶಿಗಳಿಗೂ ಮಣ್ಣೇ ಆಧಾರ.

ತಾಯಿ ಶಿಲೆಗಳು ಸಾವಿರಾರು ವರ್ಷಗಳಿಂದ ನೈಸರ್ಗಿಕ ಕ್ರಿಯೆಗಳಿಗೆ ಒಳಗಾಗಿ ಭೌತಿಕ, ರಸಾಯನಿಕ ಹಾಗೂ ಜೈವಿಕ ಕ್ರಿಯೆಗಳಿಂದ ಮಣ್ಣು ಉತ್ಪತ್ತಿಯಾಗುತ್ತದೆ. ಇದರಲ್ಲಿ ಅಸಂಖ್ಯಾತ ಸೂಕ್ಷ್ಮಾಣುಗಳು ಇದ್ದು ಅನೇಕ ರಸಾಯನಿಕ ಕ್ರಿಯೆಗಳನ್ನು ನಿರ್ವಹಿಸುತ್ತದೆ.

ತಮಿಳುನಾಡಿನಲ್ಲಿ ಮುಖ್ಯವಾಗಿ ಕಂಡುಬರುವ ಮಣ್ಣುಗಳೆಂದರೆ ಕೆಂಪುಮಣ್ಣು, ಕೆಂಪುಗೋಡುಮಣ್ಣು, ಕಪ್ಪುಮಣ್ಣು, ಜಂಬಿಟ್ಟಿಗೆ ಮಣ್ಣು, ಮೆಕ್ಕಲುಮಣ್ಣು, ಮರಭೂಮಿ, ಪರ್ವತ ಹಾಗೂ ವನ ಪ್ರದೇಶಗಳಲ್ಲಿಯ ಕ್ಷಾರಮಣ್ಣು.

ಕೆಂಪುಮಣ್ಣು ಹಾಗೂ ಕೆಂಪು ಗೋಡುಮಣ್ಣು : ಈ ಮಣ್ಣು ಹೆಸರಿಗೆ ತಕ್ಕಂತೆ ಕೆಂಪು ಬಣ್ಣದಾಗಿರುತ್ತದೆ. ಇದಕ್ಕೆ ಮಣ್ಣಿನಲ್ಲಿರುವ ಕಬ್ಬಿಣದ ಆಕ್ಸೈಡ್ ಮುಖ್ಯಕಾರಣ. ಈ ಮಣ್ಣುಗಳಲ್ಲಿ ಶೇ. 74 ಸುಮಾರು ಭಾಗ ಮರಳು ಇದ್ದು ಮಿಕ್ಕಭಾಗವು ಜೇಡಿಮಣ್ಣು ಹಾಗೂ ಬಂಡಿನಿಂದ ಕೂಡಿರುತ್ತದೆ. ಕೆಂಪು ಮಣ್ಣಿನ ಜಮೀನುಗಳಲ್ಲಿ ನೀರು ಸರಾಗವಾಗಿ ಬಸಿದು ಹೋಗುತ್ತದೆ. ಆದರೆ ನೀರನ್ನು ಸಂಗ್ರಹಿಸುವ ಶಕ್ತಿ ಈ ಮಣ್ಣುಗಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಇದರಲ್ಲಿ ಸಾರಜನಕವು ಕಡಿಮೆ. ಮರಳಿನ ಭಾಗ ಹೆಚ್ಚಾಗಿರುವುದರಿಂದ ಮಣ್ಣಿನ ಫಲವತ್ತತೆಯೂ ಸಹ ಕಡಿಮೆ. ಕೆಂಪು ಮಣ್ಣಿನ ಪ್ರದೇಶಗಳಲ್ಲಿ ಬತ್ತ, ರಾಗಿ, ಹೊಗೆಸೊಪ್ಪು ಹಾಗೂ ತರಕಾರಿಗಳನ್ನು ಬೆಳೆಯಲು ಸಾಧ್ಯವಾಗುತ್ತದೆ. ಕೆಂಪು ಮಣ್ಣನ್ನು ತಮಿಳುನಾಡಿನ ಸೇಲಂ, ಧರ್ಮಪುರಿ, ಕೊಯ್‌ಮತ್ತೂರ್ ತಿರುಚ್ಚಿ, ತಂಜಾವೂರ್, ರಾಮನಾಥಪುರಂ, ಮಧುರೈ, ತಿರುನಲ್ವೇಲಿ, ದಿಂಡಿಗಲ್ ನೀಲಗಿರಿ ಮುಂತಾದ ಪ್ರದೇಶಗಳಲ್ಲಿ ಕಾಣಬಹುದು.

ಜಂಬಿಟ್ಟಿಗೆ : ಇದು ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಈ ಮಣ್ಣಿನಲ್ಲಿ ಜೇಡಿ ಅಂಶ ಶೇ. 30 ಬಂಡು ಶೇ. 20, ಹಾಗೂ ಶೇ. 50, ಭಾಗ ಮರಳಿನಿಂದ ಕೂಡಿರುತ್ತದೆ. ಈ ಮಣ್ಣಿನಲ್ಲಿ ಸಿಲಿಕ ಕರಗಿ ಕೆಳಭಾಗಕ್ಕೆ ಬಂದು ಮೇಲ್ಭಾಗದಲ್ಲಿ ಕಬ್ಬಿಣ ಮತ್ತು ಅಲ್ಯೂಮಿನಿಯಂ ಆಕ್ಸೈಡ್ ಶೇಖರಣೆಯಾಗಿರುತ್ತದೆ. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಈ ಮಣ್ಣು ಇರುವುದರಿಂದ ಸ್ವಾಭಾವಿಕವಾಗಿ ಸುಣ್ಣದ ಅಂಶ ನೀರಿನಲ್ಲಿ ಕರಗಿ ಸುಣ್ಣದ ಕೊರತೆಯಿಂದಾಗಿ ಮಣ್ಣು ಆಮ್ಲಯುಕ್ತವಾಗಿದ್ದು ರಂಜಕ ಕಡಿಮೆಯಾಗಿರುತ್ತದೆ. ಮಣ್ಣಿನಲ್ಲಿ ಬತ್ತ, ರಾಗಿ, ಕಬ್ಬು, ರಬ್ಬರ್, ಗೋಡಂಬಿ ಬೆಳೆಯುತ್ತಾರೆ. ಸಾಮಾನ್ಯವಾಗಿ ಕರಾವಳಿ ಪ್ರದೇಶಗಳಾದ ಕೊಯಮತ್ತೂರ್ ನೀಲಗಿರಿ ಜಿಲ್ಲೆಗಳಲ್ಲಿ ಈ ಮಣ್ಣನ್ನು ಕಾಣಬಹುದು.

ಮೆಕ್ಕಲು ಮಣ್ಣು : ಸಾಮಾನ್ಯವಾಗಿ ನದೀ ಮುಖಜ ಭೂಪ್ರದೇಶಗಳಲ್ಲಿ ಕಂಡು ಬರುತ್ತದೆ. ಇದು ಮೈದಾನ ಪ್ರದೇಶಗಳ ನದಿಗಳ ಅಕ್ಕಪಕ್ಕಗಳಲ್ಲಿ ಹೆಚ್ಚಾಗಿ ಹರಡಿಕೊಂಡಿರುತ್ತದೆ. ಇದು ಇತರ ಎಲ್ಲಾ ಮಣ್ಣುಗಳಿಗಿಂತ ಫಲವತ್ತಾಗಿರುತ್ತದೆ. ಕಾರಣ ಇದರಲ್ಲಿ ಹೆಚ್ಚು ಭಾಗ ಬಂಡು ಹಾಗೂ ಜೇಡಿನಿಂದ ಕೂಡಿರುತ್ತದೆ. ಪ್ರತಿವರ್ಷವೂ ಮೇಲಿನ ಮಣ್ಣು ಹೊಸದಾಗಿ ಬಂದು ಸೇರುವುದರಿಂದ ಫಲವತ್ತತೆಯು ನೈಸರ್ಗಿಕವಾಗಿಯೇ ಇರುತ್ತದೆ. ಇದರಲ್ಲಿ ತೊಗರಿ, ಉದ್ದು, ಹೆಸರು, ಅಲಸಂದಿ ಮುಂತಾದ ಕಾಳುಗಳನ್ನು ಬೆಳೆಯುತ್ತಾರೆ. ಅಷ್ಟೇ ಅಲ್ಲದೆ ಕಬ್ಬು, ಶೇಂಗ, ಸೂರ್ಯಕಾಂತಿ, ಎಳ್ಳು, ಸೋಯಾ, ಅವರೆ, ತಾಳೆ ಮುಂತಾದ ಎಣ್ಣೆ ಕಾಳುಗಳನ್ನು ಬೆಳೆಯುತ್ತಾರೆ. ತಮಿಳುನಾಡಿನಲ್ಲಿ ರಾಮನಾಥಪುರಂ, ತಂಜಾವೂರ್, ಕನ್ಯಾಕುಮಾರಿ ಜಿಲ್ಲೆಗಳಲ್ಲಿ ಇಂತಹ ಬೆಳೆಗಳನ್ನು ಬೆಳೆಯುತ್ತಾರೆ.

ಕಪ್ಪು ಮಣ್ಣು : ಕಪ್ಪುಮಣ್ಣು ಅಗ್ನಿಪರ್ವತ ಪ್ರದೇಶಗಳಿಂದ ಹರಿದು ಬಂದು ಲಾವಾರಸದಿಂದ ಕೂಡಿರುತ್ತದೆ. ಕಪ್ಪು ಮಣ್ಣಿಗೆ ಈ ಬಣ್ಣ ಬರಲು ಜೇಡಿಯೊಂದಿಗೆ ಚದುರಿದ ಸ್ಥಿತಿಯಲ್ಲಿರುವ ಸಾವಯವ ಪದಾರ್ಥ, ಕಬ್ಬಿಣ ಹಾಗೂ ಮ್ಯಾಂಗನೀಸ್ ರಾಸಾಯನಿಕ ಸಂಯುಕ್ತಗಳು ಮುಖ್ಯ ಕಾರಣಗಳಾಗಿವೆ. ಇದರಲ್ಲಿಯ ಸಿಲಿಕ ಹಾಗೂ ಅಲ್ಯೂಮಿನಿಯಂ ಹಾಳೆಯಿಂದ ಜೋಡಿಸಲ್ಪಟ್ಟಿರುವ ಪದರ ಇರುತ್ತದೆ. ಈ ಜೋಡಣೆ ಒಂದಕ್ಕೊಂದು ಸಡಿಲವಾಗಿರುವುದರಿಂದ ತೇವಾಂಶ ಮಣ್ಣಿನಲ್ಲಿ ಹೆಚ್ಚಿದಾಗ ಮಣ್ಣಿನ ಕಣಗಳು ಉಬ್ಬುತ್ತವೆ. ಹಾಗೆಯೇ ತೇವಾಂಶ ಕಡಿಮೆಯಾದಾಗ ಕುಗ್ಗುತ್ತದೆ. ಆದ್ದರಿಂದ ಈ ಕಪ್ಪು ಮಣ್ಣಿನಲ್ಲಿ ಬೇಸಗೆ ಕಾಲದಲ್ಲಿ ಬಿರುಕುಗಳು ಕಂಡುಬರುತ್ತವೆ. ಇದು ಕೆಂಪು ಮಣ್ಣಿಗಿಂತ ಹೆಚ್ಚು ಫಲವತ್ತಾಗಿರುತ್ತದೆ. ಇದರಲ್ಲಿ ಜೇಡಿನ ಅಂಶ ಹೆಚ್ಚಾಗಿರುವುದರಿಂದ ರಂಧ್ರಗಳು ಬಹಳ ಚಿಕ್ಕದಾಗಿರುತ್ತದೆ. ಈ ಸಣ್ಣ ರಂಧ್ರಗಳಿಂದ ಸರಾಗವಾಗಿ ಮಣ್ಣಿನಿಂದ ನೀರು ಬಸಿದು ಹೋಗುವುದಿಲ್ಲ. ಇದರಲ್ಲಿ ತೇವಾಂಶ ಹಿಡಿದಿಟ್ಟು ಕೊಳ್ಳುವ ಶಕ್ತಿ ಇರುತ್ತದೆ. ಸುಣ್ಣ, ಮೆಗ್ನೀಷಿಯಂ, ಪೊಟ್ಯಾಷಿಯಂ ಹೆಚ್ಚಾಗಿದ್ದು, ರಂಜಕದ ಅಂಶ ಕಡಿಮೆ ಇರುವುದು ಕಂಡು ಬರುವುದು. ಈ ಮಣ್ಣಿನಲ್ಲಿ ನಿಂಬೆ ಹಾಗೂ ಸೂರ್ಯಕಾಂತಿಯು ಚೆನ್ನಾಗಿ ಬೆಳೆಯುತ್ತದೆ. ತಮಿಳುನಾಡಿನಲ್ಲಿ ಕೊಯಮತ್ತೂರ್, ಮಧುರೈ, ಚಂಗಲ್‌ಪೇಟ್, ತಿರುನಲ್ವೇಲಿ, ಸೇಲಂ, ಧರ್ಮಪುರಿ, ನೀಲಗಿರಿ, ವಿರುದನಗರ್, ಶಿವಗಂಗೆ, ದಿಂಡಿಗಲ್ ಮುಂತಾದ ಪ್ರದೇಶಗಳಲ್ಲಿ ಈ ಮಣ್ಣನ್ನು ಕಾಣಬಹುದು. ಹತ್ತಿ ಬೆಳೆಗೂ ಇದು ಫಲವತ್ತಾಗಿ ಇರುತ್ತದೆ.

ಇಷ್ಟೇ ಅಲ್ಲದೆ ತಿರುನಲ್ವೇಲಿ ಜಿಲ್ಲೆಯಲ್ಲಿ ಫಲವತ್ತತೆ ಇಲ್ಲದ ಬಂಜರು ಭೂಮಿಯ ಮಣ್ಣನ್ನು ಕಾಣಬಹುದು.

ಪರ್ವತ ಹಾಗೂ ವನ ಪ್ರದೇಶಗಳಲ್ಲಿ ಕಾಫಿ, ಟೀ, ರಬ್ಬರ್, ಏಲಕ್ಕಿ, ಕರಿಮೆಣಸು, ಲವಂಗ ಮುಂತಾದ ಸಂಬಾರ ಬೆಳೆಗಳನ್ನು ಬೆಳೆಯುತ್ತಾರೆ. ಏಲಗಿರಿ, ಶೆಕವಾಯ್, ಕಲ್ಪರಾಯನ್, ಅಗತ್ತಿಯರ್, ಆನೈಮಲೈ ಮುಂತಾದ ಪರ್ವತ ಪ್ರದೇಶಗಳಲ್ಲಿ ಸಂಬಾರ ಸಸ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಇವು ತಮಿಳುನಾಡಿನಲ್ಲಿ ಕ್ಷಾರಮಣ್ಣಿನ ಪ್ರದೇಶಗಳು ಫಲವತ್ತಾಗಿ, ಇರುವುದಿಲ್ಲ.

ವೆಲ್ಲೂರಿನ ಕೆಲವು ಪ್ರದೇಶಗಳು, ತಿರುನಲ್ವೇಲಿ, ಕಡಲೂರ್, ವಿಳ್ಳುಪುರಂ ಪ್ರದೇಶಗಳಲ್ಲಿ ಮೆಣಸಿನ ಕಾಯಿ, ಗೋಧಿ, ಸಜ್ಜೆ, ಹೀರೆ, ಸೋರೆ, ಹಾಗಲಕಾಯಿ, ಹತ್ತಿ, ಶೇಂಗ, ಮೆಕ್ಕೆಜೋಳ ಮುಂತಾದವನ್ನು ಬೆಳೆಯುತ್ತಾರೆ.

ಮಣ್ಣಿನ ಫಲವತತ್ತೆಯ ಸಂರಕ್ಷಣೆ - ಸಾವಯುವ ಗೊಬ್ಬರಗಳ ತಯಾರಿಕೆಯ ವಿಧಾನ

ಅಧಿಕ ಇಳುವರಿ ಪಡೆಯ ಬೇಕಾದರೆ ಮಣ್ಣು ಫಲವತ್ತಾಗಿರಬೇಕು. ಬೆಳೆಗಳಿಗೆ ಸಮತೋಲನ ಪೋಷಕಾಂಶಗಳ ಪೂರೈಕೆ ಬಹಳ ಮುಖ್ಯ. ಹೆಚ್ಚಾಗಿ ಈ ಪೋಷಕಾಂಶಗಳು ಗೊಬ್ಬರಗಳ ಮೂಲಕವೆ ದೊರೆಯುತ್ತವೆ.

ಪ್ರಾಚೀನ ಕಾಲದಿಂದಲೂ ರೈತರು ಸಾವಯವ ಗೊಬ್ಬರಗಳನ್ನು ಬೆಳೆಗಳಿಗೆ ಬಳಸುತ್ತಾ ಬಂದಿದ್ದಾರೆ. ಮಣ್ಣಿನ ಫಲವತ್ತತೆ ಹಾಗೂ ಉತ್ಪಾದನಾ ಶಕ್ತಿಯನ್ನು ಕಾಪಾಡಿಕೊಂಡು ಬರಲು ಸಾವಯುವ ಗೊಬ್ಬರಗಳು ಪ್ರಮುಖ ಪಾತ್ರ ವಹಿಸುತ್ತದೆ. ಸಾವಯವ ಗೊಬ್ಬರಗಳಾದ ಕೊಟ್ಟಿಗೆ ಗೊಬ್ಬರ, ಕಾಂಪೋಸ್ಟ್, ಹಸುರೆಲೆ ಗೊಬ್ಬರ, ಹಿಂಡಿ ಇತ್ಯಾದಿಗಳನ್ನು ಮಣ್ಣಿಗೆ ಸೇರಿಸಿದಾಗ ಆ ಮಣ್ಣಿನ ಸೇಂದ್ರಿಯ ಪ್ರಮಾಣ ಹೆಚ್ಚಾಗಿ ಜಮೀನಿನ ಫಲವತ್ತತೆ ಹೆಚ್ಚುತ್ತದೆ. ಈ ಸಾವಯವ ವಸ್ತುಗಳು ಸಸ್ಯ ಜನ್ಯವಾಗಿಯಾದರೂ ಇರಬಹುದು. ಪ್ರಾಣಿ ಜನ್ಯವಾಗಿಯಾದರೂ ಇರಬಹುದು ಅಥವಾ ಇವೆರಡರ ಮಿಶ್ರಣವಾಗಿಯಾದರೂ ಇರಬಹುದು. ಇವು ಮಣ್ಣಿನಲ್ಲಿರುವ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ಸಹಾಯಕವಾಗಿರುತ್ತವೆ. ಅಷ್ಟೇ ಅಲ್ಲದೆ ದುರ್ಬಲ ಆಮ್ಲಗಳಿಂದ ಮಣ್ಣಿನ ಕ್ಷಾರವು ಕಡಿಮೆಯಾಗುತ್ತದೆ. ಹೀಗೆ ಸಾವಯವ ಗೊಬ್ಬರಗಳು ಬೆಳೆಗೂ, ಮಣ್ಣಿಗೂ ಸಹಕಾರಿಯಾಗಿರುತ್ತದೆ.

ಮಣ್ಣಿನಲ್ಲಿರುವ ಸಾವಯವ ಪದಾರ್ಥಗಳು ಭೂ ಸವಕಳಿಯಿಂದಾಗಿ ಸಾಂಧ್ರ ಬೇಸಾಯ ಪದ್ಧತಿಯಿಂದಾಗಿ ಸೇಂದ್ರಿಯ ಪ್ರಮಾಣ ಕಡಿಮೆಯಾಗುತ್ತಾ ಬರುತ್ತದೆ. ಕೆಲವು ಬಾರಿ ಬೆಳೆಗಳ ತರಗು, ಸದೆ ಮುಂತಾದವುಗಳನ್ನು ಸುಡುವುದರಿಂದ ಸಾವಯವ ಪ್ರಮಾಣ ಮಣ್ಣಿನಲ್ಲಿ ಕಡಿಮೆಯಾಗುತ್ತದೆ. ಈ ತರಹದ ನಷ್ಟವನ್ನು ತಡೆಯಲು ಬೆಳೆಗಳಿಗೆ ಪ್ರತಿವರ್ಷ ಸಾಕಷ್ಟು ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಹಾಕುತ್ತಿರಬೇಕು. ಬೆಳೆಗಳ ಕೊಯ್ಲು ಆದ ಬಳಿಕ ಬೆಳೆಗಳ ಅವಶೇಷಗಳನ್ನು ಮತ್ತೆ ಮಣ್ಣಿಗೆ ಸೇರಿಸಬೇಕು. ಬೆಳೆ ಮಾಡುವಾಗ ದ್ವಿದಳ ಧಾನ್ಯಗಳನ್ನು ಮಿಶ್ರ ಬೆಳೆಯಾಗಿ ಅಥವಾ ಸರದಿ ಬೆಳೆಯಾಗಿ ಬಿತ್ತಿದರೆ ಭೂಮಿಯ ಫಲವತ್ತತೆಗಳನ್ನು ಕಾಪಾಡಿಕೊಂಡು ಬರಬಹುದು. ಭೂ ಸವಕಳಿಯನ್ನು ಸಾದ್ಯವಾದಷ್ಟು ಮಟ್ಟಿಗೆ ತಡೆಗಟ್ಟಲು ಕ್ರಮ ವಹಿಸಬೇಕು.

ಯು.ಸಿ.ಎಸ್.

ತಮಿಳುನಾಡಿನ ಸೊಪ್ಪುತರಕಾರಿಗಳು ಆಹಾರದಲ್ಲಿ ಸೊಪ್ಪು ಮತ್ತು ತರಕಾರಿ ಅತ್ಯಂತ ಮುಖ್ಯವಾಗಿರುತ್ತವೆ. ಇವುಗಳಲ್ಲಿ ರೋಗನಿರೋಧಕ ಶಕ್ತಿ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಹಾರದಲ್ಲಿ ದಿನಂಪ್ರತಿ 300 ಗ್ರಾಂನಷ್ಟಾದರೂ ಸೊಪ್ಪು/ತರಕಾರಿಯನ್ನು ಸೇವಿಸುವುದು ಒಳ್ಳೆಯದು. ಸೊಪ್ಪು ತರಕಾರಿಗಳು ವಾಣಿಜ್ಯ ಬೆಳೆಗಳೂ ಹೌದು.

ತರಕಾರಿಗಳನ್ನು ನಾಡ ತರಕಾರಿ, ಸೀಮೆ ತರಕಾರಿ ಎಂದು ವಿಂಗಡಿಸಬಹುದು.

ನಾಡ ತರಕಾರಿ ಎಂದರೆ ಸ್ಥಳೀಯವಾಗಿ ಬೆಳೆಯುವಂಥವು. ಇವು ನಮ್ಮ ದೇಶ ಅಥವಾ ರಾಜ್ಯದೊಳಗಿನವು. ಆಯಾ ನಾಡಿನ ಉಷ್ಣಹವಾಗುಣವನ್ನು ಅವಲಂಬಿಸಿಕೊಂಡು ಬೆಳೆಯುವಂಥವು. ಸೀಮೆ ತರಕಾರಿ ಎಂದರೆ ಕಡಿಮೆ ಉಷ್ಣ ಪ್ರದೇಶಗಳಿಂದ ಅಂದರೆ ಇಂಗ್ಲೆಂಡ್ ಮುಂತಾದ ದೇಶಗಳಿಂದ ತಂದು ಇಲ್ಲಿ ಬೆಳೆಸಿದಂಥವು. ಇವುಗಳನ್ನು ಹೆಚ್ಚಾಗಿ ನೀಲಗಿರಿ, ಕೊಡೈಕನಾಲ್ ಮುಂತಾದ ಕಡಿಮೆ ಉಷ್ಣವುಳ್ಳ ಪ್ರದೇಶಗಳಲ್ಲಿ ಬೆಳೆಸಬಹುದಾಂತಹವು. ತಮಿಳುನಾಡಿನ ಇತರ ಪ್ರದೇಶಗಳಲ್ಲಿ ಇವುಗಳನ್ನು ಚಳಿಗಾಲದಲ್ಲಿ ಮಾತ್ರ ಬೆಳೆಸಬಹುದು. ಅದೂ ಹದವಾಗಿ ಗೊಬ್ಬರ ಹಾಕಿ ಸರಿಯಾಗಿ ನೀರು ಹಾಯಿಸಿ, ಕಾಲಕಾಲಕ್ಕೆ ಕ್ರಿಮಿಕೀಟಗಳ ಬಾಧೆ ಬರದಂತೆ ಹೆಚ್ಚು ಜಾಗರೂಕತೆಯಿಂದ ಕೃಷಿ ಮಾಡಬೇಕಾಗುತ್ತದೆ. ಇಷ್ಟು ಮಾಡಿದರೂ ಬೆಳೆ ಅಷ್ಟೊಂದು ಉತ್ತಮವಾಗಿರವುದಿಲ್ಲ. ಹದವಾದ ಉಷ್ಣ ಪ್ರದೇಶಗಳಲ್ಲಿ ಬರುವಂತೆ ಫಸಲು ಬರುವುದಿಲ್ಲ. ತರಕಾರಿಯ ಗುಣವೂ ಅಷ್ಟಿರಲಾರದು. ತರಕಾರಿಗಳಲ್ಲಿ ಕಾಯಿ, ಗೆಡ್ಡೆಗೆಣಸು, ಸೊಪ್ಪು ದಂಟು ಎಂಬ ಬಗೆಗಳಿವೆ.

ಕಾಯಿ ವಿಭಾಗ : ಸಾಮಾನ್ಯವಾಗಿ ದಿನನಿತ್ಯ ಉಪಯೋಗಿಸುವ ಎಲ್ಲಾ ವಿಧದ ಕಾಯಿಗಳು, ಉದಾ: ಬದನೆ, ಬೆಂಡೆ ತಕಾಲಿ (ಟೊಮ್ಯಾಟೊ) ಕೊತ್ತವರೆಕಾಯಿ, ಅವರೆಕಾಯಿ, ಕುಂಬಳ, ಪಡವಲ, ಮೆಣಸಿನಕಾಯಿ, ಸೌತೆಕಾಯಿ, ಸೀಮೆ ಬದನೆ, ನುಗ್ಗೆಕಾಯಿ ಮುಂತಾದವು ಈ ವಿಭಾಗದಲ್ಲಿ ಬರುತ್ತವೆ.

ಕೆಲವು ಮುಖ್ಯ ತರಕಾರಿಗಳು : ಬದನೆ (ಸೋಲನಂ ಮೆಲೋನ್‌ಗೆನ- ಸೋಲನೇಸೀ ಕು.) : ಬದನೆಯನ್ನು ಎಲ್ಲಾ ಬಗೆಯ ಮಣ್ಣಿನಲ್ಲಿ ಬೆಳೆಸಬಹುದಾದರೂ ನೀರು ಹರಿದು ಹೋಗುವಂತೆ ಅನುಕೂಲಕರವಾದ ಮರಳುಮಿಶ್ರಿತ ನೆಲ ಯೋಗ್ಯ. ಹೆಕ್ಟೇರಿಗೆ ಸುಮಾರು 475 ಗ್ರಾಂ ಬೀಜಗಳನ್ನು ನೆಲದಲ್ಲಿ ಕಳಗಳನ್ನಾಗಿ ಮಾಡಿ ಬಿತ್ತಬೇಕು. ಬಿತ್ತಿದ 30 ದಿನಗಳಲ್ಲಿ ಸಾಲುಗಳನ್ನು ಮಾಡಿ ಗಿಡಗಳನ್ನು ತೆಗೆದು 70 x 60 ಸೆಂ.ಮೀ. ಅಂತರದಲ್ಲಿ ನೆಡಬೇಕು.

ಗೊಬ್ಬರ : ಹೆಕ್ಟೇರಿಗೆ 25 ಟನ್ ಹಟ್ಟಿಗೊಬ್ಬರದೊಂದಿಗೆ 50 ಕಿಲೋ ನೈಟ್ರೋಜನ್, 50 ಕಿಲೋ ಫೊಸ್ಫೇಟ್, 30 ಕಿಲೋ ಪೊಟ್ಯಾಷ್ ಅನ್ನು ಬೆರೆಸಿ ಅಡಿಗೊಬ್ಬರವಾಗಿ ಹಾಕಬೇಕು. ಗಿಡಗಳನ್ನು ನೆಟ್ಟು ಎರಡು ಬಾರಿ ಎಂದರೆ 3ನೇ ಮತ್ತು 6ನೇ ವಾರಗಳಲ್ಲಿ 25 ಕಿಲೋ ನೈಟ್ರೋಜನ್ ಅನ್ನು ಮೇಲ್ಗೊಬ್ಬರವಾಗಿ ಗಿಡಗಳಿಗೆ ಹಾಕಬೇಕು. ಗಿಡಗಳನ್ನು ನೆಡುವ ಮುನ್ನ ನೀರನ್ನು ಹಾಯಿಸಬೇಕು. ಅನಂತರ ನೀರಿನ ಪಸೆಯನ್ನು ನೋಡಿಕೊಂಡು 3 ಅಥವಾ 4 ದಿನಗಳಿಗೊಮ್ಮೆ ನೀರನ್ನು ಹಾಯಿಸಬೇಕು. ಒಳ್ಳೆಯ ನೀರಿನಾಂಶವಿರುವ ಭೂಮಿಯಾದರೆ 7 ದಿನಗಳಿಗೊಮ್ಮೆ ನೀರು ಹಾಯಿಸಿದರೂ ಸಾಕಾಗುತ್ತದೆ. ಎಕರೆಗೆ ಸುಮಾರು 8000-1000 ರಾತಲು ಉತ್ಪತ್ತಿ ಬರುತ್ತದೆ. ಹೆಚ್ಚೆಂದರೆ 15000 ರಾತಲು ಬೆಳೆ ಬರುವುದಕ್ಕೂ ಸಾಧ್ಯತೆ ಇದೆ.

ಬೆಂಡೆ (ಲೇಡೀಸ್ ಫಿಂಗರ್, ಹೈಬಿಸ್ಕಸ್ ಎಸ್ಕುಲೆಂಟಸ್-ಮಾಲ್ವೇಸೀ ಕು.) : ತಮಿಳುನಾಡಿನಲ್ಲಿ ಬೆಳೆಸುವ ಕಾಯಿ ಬಗೆಗಳಲ್ಲಿ ಬೆಂಡೆಕಾಯಿ ಅತ್ಯಂತ ಮುಖ್ಯವಾದುದು. ತಮಿಳುನಾಡಿನಂತಹ ಉಷ್ಣಪ್ರದೇಶ ಈ ಬೆಳೆಗೆ ಯೋಗ್ಯವಾಗಿರುತ್ತದೆ. ವರ್ಷವಿಡೀ ಬೆಳೆಯುವ ಈ ತರಕಾರಿ ಮಾರ್ಚ್‌ನಿಂದ ಆಗಸ್ಟ್‌ವರೆಗೆ ಹೆಚ್ಚು ಫಸಲನ್ನು ಕೊಡುತ್ತದೆ.

ಒಂದು ಹೆಕ್ಟೇರಿಗೆ 5 ಕಿಲೋ ಬೀಜ ಬಿತ್ತಬೇಕು. ಸಾಲುಗಳನ್ನು ಮಾಡಿದ ಅನಂತರ 60 x 20 ಸೆಂ.ಮೀ. ಅಂತರದಲ್ಲಿ ಬೀಜಗಳನ್ನು

ಬಿತ್ತಬೇಕು. ಬಿತ್ತಿದ 7 ದಿನಗಳಲ್ಲಿ ಗಿಡಗಳು ಮೊಳಕೆಯೊಡೆದು 35 ದಿನಗಳಲ್ಲಿ ಹೂಬಿಟ್ಟು ಕಾಯಿಗಳಾಗುತ್ತವೆ.

ಗೊಬ್ಬರ : ಒಂದು ಹೆಕ್ಟೇರಿಗೆ 25 ಟನ್ ಹಟ್ಟಿ ಗೊಬ್ಬರವನ್ನು 20 ಕಿಲೋ ನೈಟ್ರೋಜನ್, 50 ಕಿಲೋ ಪಾಸ್ಫೇಟ್ ಮತ್ತು 30 ಕಿಲೋ ಪೊಟ್ಯಾಷನ್ನು ಅಡಿಗೊಬ್ಬರವಾಗಿ ಹಾಕಬೇಕು. ಬಿತ್ತಿದ ನಾಲ್ಕನೇ ವಾರದಲ್ಲಿ 20 ಕಿಲೋ ನೈಟ್ರೋಜನನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ಬೀಜ ಬಿತ್ತಿದ ಕೂಡಲೆ ಒಮ್ಮೆ ನೀರನ್ನು ಹಾಯಿಸಬೇಕು. ಅನಂತರ 3ನೇ ದಿನ ನೀರನ್ನು ಹಾಯಿಸಬೇಕು. ಮೊಳಕೆ ಬಂದ ಮೇಲೆ ವಾರಕ್ಕೊಮ್ಮೆ ನೀರು ಹಾಯಿಸಿದರೆ ಸಾಕಾಗುತ್ತದೆ.

ತಮಿಳುನಾಡಿನಲ್ಲಿ ಸುಮಾರು 800 ಎಕರೆಯಷ್ಟು ಜಾಗದಲ್ಲಿ ಬೆಂಡೆಕಾಯಿಯನ್ನು ಬೆಳೆಸುತ್ತಾರೆ. ಇದು 100 ಸೆಂ.ಮೀ.ಯಿಂದ 200 ಸೆಂ.ಮೀ. ಎತ್ತರ ಬೆಳೆಯುತ್ತದೆ. ಒಂದೊಂದು ಗಿಡದಲ್ಲೂ 3-4 ಎಲೆಗಳಿರುತ್ತವೆ. 20ರಿಂದ 30 ಹೂಗಳು ಅರಳಿ ಕಾಯಿಗಳನ್ನು ಬಿಡುತ್ತವೆ. ಪ್ರತಿಯೊಂದು ಕಾಯಿಯಲ್ಲೂ 50-60 ಬೀಜಗಳಿರುತ್ತವೆ. ಎಕರೆಗೆ 8000-12000 ರಾತಲ್ ಫಸಲನ್ನು ಕೊಡುತ್ತದೆ. ಬೆಂಡೆಕಾಯಿಯಿಂದ ಬರುವ ಲೋಳೆಯಂತಹ ರಸವನ್ನು ಸೂಪ್ ತಯಾರಿಸಲು ಬಳಸುತ್ತಾರೆ. ಬೆಂಡೆಕಾಯಿಯನ್ನು ಉದ್ದುದ್ದ ಸೀಳಿ ಉಪ್ಪು ಹಾಕಿ ಒಣಗಿಸಿ ಸಂಡಿಗೆಯಂತೆ ಕರಿದು ಊಟದಲ್ಲಿ ಬಳಸುತ್ತಾರೆ.

ತಕಾಲಿ (ಟೊಮ್ಯಾಟೋ, ಲೈಕೊಸ್ಪೆರ್ಸಿಕಂ ಎಸ್ಕುಲೆಂಟಂ - ಸೋಲನೇಸೀ ಕು.) : ಫಲವತ್ತಾದ ಮರಳು ಮಿಶ್ರಿತ ಮಣ್ಣು ತಕಾಲಿ ಬೆಳೆಸಲು ಯೋಗ್ಯವಾದುದಾಗಿದೆ. ಮೇಲ್ಭಾಗದಲ್ಲಿ ಮರಳು ಮತ್ತು ಕೆಳಭಾಗದಲ್ಲಿ ಮಣ್ಣು ಇರುವ ನೆಲದಲ್ಲಿ ತಕಾಲಿ ಚೆನ್ನಾಗಿ ಫಸಲು ನೀಡುತ್ತದೆ. ಹೆಕ್ಟೇರಿಗೆ 300 ಗ್ರಾಂ ಬೀಜಬೇಕು. ಸಾಲುಗಳನ್ನು ಮಾಡಿ 75 x 60 ಸೆಂ.ಮೀ. ಅಂತರದಲ್ಲಿ ಬೀಜಗಳನ್ನು ಬಿತ್ತಬೇಕು. ತಕಾಲಿ ಬೆಳೆಗೆ ಅಕ್ಟೋಬರ್ ತಿಂಗಳು ಅತ್ಯಂತ ಉತ್ತಮ ಕಾಲ. ಡಿಸೆಂಬರ್ ತಿಂಗಳ ತನಕ ಇದನ್ನು ಬಿತ್ತಬಹುದು. ಬಿತ್ತನೆ ಮಾಡಿದ ಬಳಿಕ 3ನೇ ತಿಂಗಳಿನಿಂದ ಕಾಯಿ ಬಿಡುತ್ತದೆ. ಸುಮಾರು ಎರಡು ತಿಂಗಳ ಕಾಲ ಫಸಲನ್ನು ಕೊಡುತ್ತದೆ. ಇದನ್ನು ಕಾಯಿಗಳಾಗಿಯೂ ಹಣ್ಣುಗಳಾಗಿಯೂ ಬಳಸಲಾಗುತ್ತದೆ. ಸರಿಯಾಗಿ ಗೊಬ್ಬರ ಹಾಕಿ, ನೀರನ್ನು ಹಾಯಿಸಿದಲ್ಲಿ ಎಕರೆಗೆ 15000-20000 ರಾತಲ್ ಬೆಳೆಯನ್ನು ಪಡೆಯಬಹುದು. ಬೀಜ ಬಿತ್ತುವ ಮುನ್ನ ಒಂದೊಮ್ಮೆ ನೀರು ಹಾಯಿಸಬೇಕು. ಅನಂತರ 3ನೇ ದಿನ ಒಮ್ಮೆ ಮತ್ತು ಅಗತ್ಯಕ್ಕೆ ತಕ್ಕಂತೆ 7 ದಿನಗಳಿಗೊಮ್ಮೆ ನೀರು ಹಾಯಿಸುತ್ತಿರಬೇಕು. ನಾಟಿ ಮಾಡಿದ 30 ದಿನಗಳ ಬಳಿಕ ಗಿಡಗಳು ಬಾಗದಂತೆ ಆಧಾರವಾಗಿ ಕೋಲುಗಳನ್ನು ಊರಬೇಕು.

ಅವರೆಕಾಯಿ (ಡೊಲಿಕನ್ ಲ್ಯಾಬ್‌ಲ್ಯಾಬ್ - ಲೆಗ್ಯುಮಿನೇಸೀ ಕು.) ಹುರುಳಿಕಾಯಿ (ಬೀನ್) : ಇವೆರಡೂ ಒಂದೇ ಜಾತಿಗೆ ಸೇರಿದ ಎರಡು ತರಕಾರಿಗಳು. ಹುರುಳಿಕಾಯಿಯನ್ನು ಸೀಮೆ ಅವರೆಕಾಯಿ ಎಂದು ಕರೆಯುತ್ತಾರೆ. ನಾಡ ತರಕಾರಿಯಲ್ಲಿ ಅವರೆಕಾಯಿ ಮುಖ್ಯವಾದುದು. ಫಲವತ್ತಾದ ಮಣ್ಣಿರುವ ನೆಲದಲ್ಲಿ ಇವು ಚೆನ್ನಾಗಿ ಬೆಳೆಯುತ್ತವೆ. ಸಮತಟ್ಟಾದ ಪ್ರದೇಶದಲ್ಲಿ ಆಗಸ್ಟ್-ಅಕ್ಟೋಬರ್ ತಿಂಗಳಲ್ಲೂ ಗುಡ್ಡಪ್ರದೇಶಗಳಲ್ಲಿ ಮಾರ್ಚ್-ಮೇ ತಿಂಗಳಲ್ಲೂ ಇವು ಬೆಳೆಯುತ್ತವೆ. ಹುರುಳಿಕಾಯಿಯಲ್ಲಿ ನಾರಿಲ್ಲದ ಹುರುಳಿ ಕಾಯಿ, ನಾರುಳ್ಳ ಹುರುಳಿಕಾಯಿ, ಡಬಲ್ ಹುರುಳಿ ಕಾಯಿ (ಡಬಲ್‌ಬೀನ್), ಫ್ರೆಂಚ್ ಹುರುಳಿಕಾಯಿ (ಫ್ರೆಂಚ್ ಬೀನ್) ಎಂದು ಅನೇಕ ವಿಧಗಳಿವೆ. 50 x 30 ಸೆಂ.ಮೀ. ಅಂತರದಲ್ಲಿ ಒಂದೊಂದು ಗುಂಡಿಯಲ್ಲಿ 4-5 ಬೀಜಗಳನ್ನು ಬಿತ್ತಬೇಕು. ಇವುಗಳ ಅವಧಿ 90ರಿಂದ 120 ದಿನಗಳು. ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರ, 1 ಟನ್ ಸುಣ್ಣ 50ರಿಂದ 60 ಕಿಲೋ ನೈಟ್ರೋಜನ್, 200ರಿಂದ 240 ಕಿಲೋ ಫೊಸ್ಪೆಟ್, 140ರಿಂದ 180 ಕಿಲೋ ಪೊಟ್ಯಾಷ್ ಅನ್ನು ಅಡಿಗೊಬ್ಬರವಾಗಿ ಹಾಕಿದ ಮೇಲೆ ಬೀಜಗಳನ್ನು ಬಿತ್ತನೆ ಮಾಡಬೇಕು. ಬಿತ್ತಿದ 30ನೇ ದಿನ 50ರಿಂದ 60 ಕಿಲೋ ನೈಟ್ರೋಜನ್ ಅನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ಬಳ್ಳಿ ಜಾತಿಯಾಗಿದ್ದರೆ 3 ಮೀ. ಉದ್ದದ ಕೋಲುಗಳನ್ನು ಊರಿ ಬಳ್ಳಿಗಳು ಮೇಲಕ್ಕೇರುವಂತೆ ಕಟ್ಟಬೇಕು. ಅನಂತರ ಚಪ್ಪರ ಹಾಕಿ ಅದರಲ್ಲಿ ಬಳ್ಳಿಗಳು ಹರಡುವಂತೆ ಮಾಡಿದರೆ ಫಸಲು ಹೆಚ್ಚು ಸಿಗುತ್ತದೆ. ಎಕರೆಗೆ ಸಾಧಾರಣವಾಗಿ 6000-10000 ರಾತಲ್ ಕಾಯಿಗಳನ್ನು ಪಡೆಯಬಹುದು.

ಚೌಳಿಕಾಯಿ-ಕೊತ್ತವರೆಕಾಯಿ (ಸೈಯಮೊಪ್ಸಿಸ್ ಸೊರಲಿಯಾಯ್ಡ್ಸ್ - ಲೆಗ್ಯುಮಿನೋಸೀ ಕು.) : ಎಲ್ಲಾ ಬಗೆಯ ಮಣ್ಣಿನಲ್ಲೂ ವರ್ಷವಿಡೀ ಬೆಳೆಸಬಹುದಾದ ತರಕಾರಿ ಇದು. ಇದನ್ನು 45 x 22.5 ಸೆಂ.ಮೀ. ಅಂತರದಲ್ಲಿ ಜನವರಿ ತಿಂಗಳಲ್ಲಿ ಬಿತ್ತನೆ ಮಾಡಬೇಕು. ಹೆಕ್ಟೇರಿಗೆ ಸುಮಾರು 20 ಕಿಲೋ ಬೀಜಬೇಕು. ಬಿತ್ತಿದ 2ನೇ ತಿಂಗಳಲ್ಲಿ ಹೂಬಿಟ್ಟು ಅನಂತರ 15 ದಿನಗಳಲ್ಲಿ ಕಾಯಿಗಳಾಗಲು ಆರಂಭವಾಗುತ್ತವೆ. ಸುಮಾರು ಎರಡು ತಿಂಗಳ ಕಾಲ ಸರಾಗವಾಗಿ ಫಲವನ್ನು ನೀಡುತ್ತವೆ. ಎಕರೆಗೆ ಸುಮಾರು 4000-8000 ರಾತಲ್ ಕಾಯಿಗಳು ಉತ್ಪಾದನೆಯಾಗುತ್ತವೆ. ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರ, 25 ಕಿಲೋ ನೈಟ್ರೋಜನ್, 50 ಕಿಲೋ ಪಾಸ್ಫೇಟ್ ಅಡಿಗೊಬ್ಬರವಾಗಿ ಹಾಕಬೇಕು.

ಪಡವಲಕಾಯಿ (ಟ್ರೈಕೋಸ್ಯಾಂತಸಂ ಆಂಗಿನ - ಕುಕುರ್‌ಬಿಟೇಸೀ ಕು.) : ಫಲವತ್ತಾದ ಮರಳುಮಿಶ್ರಿತ ಮಣ್ಣುಳ್ಳ ನೆಲದಲ್ಲಿ ಈ ಕಾಯಿ ಚೆನ್ನಾಗಿ ಬೆಳೆಯುತ್ತದೆ. ಇದರಲ್ಲಿ ಎರಡು ಜಾತಿಗಳಿವೆ. ಕಾಯಿಗಳು ಸುಮಾರು 5-6 ಅಡಿ ನೀಳವಾಗಿರುವುದು ಒಂದು ಜಾತಿಯಾದರೆ 1ರಿಂದ $1^1/_2$ ಅಡಿಯಷ್ಟೇ ಉದ್ದವಿರುವಂತಹುದು ಇನ್ನೊಂದು ಜಾತಿ. ಜನವರಿ-ಫೆಬ್ರವರಿ ತಿಂಗಳಲ್ಲೂ ಜುಲೈ-ಆಗಸ್ಟ್ ತಿಂಗಳಲ್ಲೂ ಬಿತ್ತನೆ ಮಾಡಬಹುದು. ಹೆಕ್ಟೇರಿಗೆ ಎರಡು ಕಿಲೋ ಬೀಜಗಳು ಬೇಕಾಗುತ್ತವೆ. ಸುಮಾರು 4-5 ಅಡಿ ಅಂತರದಲ್ಲಿ ಗುಂಡಿಗಳನ್ನು ತೋಡಿ ಒಂದೊಂದು ಗುಂಡಿಯಲ್ಲೂ 6ರಿಂದ 8 ಬೀಜಗಳನ್ನು ಬಿತ್ತಬೇಕು. ಗಿಡಗಳು 5-6 ಅಡಿಗಳಷ್ಟು ಎತ್ತರಕ್ಕೆ ಬೆಳೆದಾಗ ಚಪ್ಪರವನ್ನು ಹಾಕಿ ಹರಡುವಂತೆ ಮಾಡಬೇಕು. ಅನಂತರ ಒಂದೊಂದು ಗುಂಡಿಯಲ್ಲೂ ಮೂರು ಗಿಡಗಳನ್ನಷ್ಟೇ ಉಳಿಸಿ ಉಳಿದ ಗಿಡಗಳನ್ನು ಕೀಳಬೇಕು. ಎರಡೂವರೆ ತಿಂಗಳಲ್ಲಿ ಹೂಬಿಟ್ಟು ಕಾಯಿಗಳಾಗಲು ಆರಂಭವಾಗುತ್ತವೆ. ಸುಮಾರು ಎರಡು ತಿಂಗಳವರೆಗೆ ಪ್ರತಿಗಿಡ ಫಸಲನ್ನು ಕೊಡುತ್ತದೆ. ಒಂದೊಂದು ಗುಂಡಿಯಿಂದಲೂ 10ರಿಂದ 20 ಕಾಯಿಗಳು ಸಿಗುತ್ತವೆ. ಎಕರೆಗೆ 5000-10000 ಕಾಯಿಗಳನ್ನು ಕೊಯ್ಯಬಹುದು. ಉದ್ದದ ಪಡುವಲಕಾಯಿಗಳಾದರೆ ಸ್ವಲ್ಪ ಕಡಿಮೆ ಉತ್ಪತ್ತಿಯನ್ನು ಕೊಡುತ್ತವೆ.

ಹಾಗಲಕಾಯಿ (ಬಿಟ್ಟರ್‌ಗಾರ್ಡ್, ಮೊಮಾರ್ಡಿಕ ಚರನ್ಷಿಯ) : ಫಲವತ್ತಾದ ಮರಳು ಮಿಶ್ರಿತ ಮಣ್ಣುಳ್ಳ ನೆಲ ಹಾಗಲಕಾಯಿ ಬೆಳೆಸುವುದಕ್ಕೆ ಯೋಗ್ಯವಾಗಿದೆ. ಇದರಲ್ಲಿ ಎರಡು ಜಾತಿಗಳಿವೆ. 6ರಿಂದ 9 ಅಂಗುಲ ಉದ್ದಕ್ಕೆ ಬೆಳೆಯುವ ಹಾಗಲಕಾಯಿಯನ್ನು ಕೊಂಬನ್ ಹಾಗಲಕಾಯಿ ಎಂದು ತಮಿಳಿನಲ್ಲಿ ಕರೆಯುತ್ತಾರೆ. ಒಂದರಿಂದ ಒಂದೂವರೆ ಅಂಗುಲ ಉದ್ದವಿರುವ ಇನ್ನೊಂದು ಜಾತಿಯಿದೆ. ಇದಕ್ಕೆ ತಮಿಳಿನಲ್ಲಿ ಮಿದಿ ಹಾಗಲಕಾಯಿ ಎನ್ನುತ್ತಾರೆ. ಮಿದಿ ಹಾಗಲಕಾಯಿಯಲ್ಲಿ ಕಹಿ ಕಡಿಮೆಯಿರುತ್ತದೆ. ಹೆಕ್ಟೇರಿಗೆ 1 ಕಿಲೋ ಬೀಜಬೇಕಾಗುತ್ತದೆ. ಒಂದೊಂದು ಗುಂಡಿಯಲ್ಲೂ 6 ಬೀಜಗಳನ್ನು ಬಿತ್ತಬೇಕು. ಬೆಳೆದ ಮೇಲೆ ನಾಲ್ಕು ಗಿಡಗಳನ್ನು ಉಳಿಸಿ ಉಳಿದವುಗಳನ್ನು ಕೀಳಬೇಕು. 1.8 ಮೀ. ಅಂತರದಲ್ಲಿ ಗುಂಡಿಗಳನ್ನು ಅಗೆದು ಬೀಜಗಳನ್ನು ಬಿತ್ತಬೇಕು. ಬಿತ್ತನೆಗೆ ಮೊದಲು 25 ಕಿಲೋ ಹಟ್ಟಿಗೊಬ್ಬರವನ್ನು ಹಾಕಬೇಕು. ಬಿತ್ತಿದ 30ನೇ ದಿನ 10 ಕಿಲೋ ಹಟ್ಟಿಗೊಬ್ಬರಕ್ಕೆ ಅರ್ಧ ಕಿಲೋ ಅಮೋನಿಯಂ ಸಲ್ಫೇಟನ್ನು ಬೆರೆಸಿ ಹಾಕಬೇಕು. ಅನಂತರ ಕೋಲುಗಳನ್ನು ಊರಿ ಚಪ್ಪರ ಹಾಕಿ ಬಳ್ಳಿಗಳು ಹರಡುವಂತೆ ಮಾಡಬೇಕು. ಎಕರೆಗೆ 90000 ರಾತಲ್ ಕಾಯಿಗಳನ್ನು ಕೀಳಬಹುದು.

ಕುಂಬಳಕಾಯಿ (ಆಶ್‌ಗಾರ್ಡ್, ಬೆನಿನ್‌ಕಸ ಸೆರಿಫೆರ ಮತ್ತು ಚೀನಿಕಾಯಿ, ಕುಕುರ್‌ಬಿಟ ಮೊಶ್ಚಾಟ -ಕುಕುರ್‌ಬಿಟೇಸೀ ಕುಂ.) : ಕೆರೆ, ಹಳ್ಳಗಳ ಬದಿಗಳಲ್ಲಿ ಎತ್ತರ ಪ್ರದೇಶಗಳಲ್ಲಿ ಹಾಗೂ ಬೇಲಿಗಳಲ್ಲಿ ಇವನ್ನು ಬೆಳೆಸಬಹುದು. 2 x 2 x 1 ಅಡಿ ಗುಂಡಿಗಳನ್ನು ಅಗೆದು ಚೆನ್ನಾಗಿ ಗೊಬ್ಬರವನ್ನು ಹಾಕಿ ಜುಲೈ - ಆಗಸ್ಟ್ ತಿಂಗಳಲ್ಲಿ ಗುಂಡಿಯೊಂದಕ್ಕೆ 4-5 ಬೀಜಗಳನ್ನು ಬಿತ್ತಬೇಕು. ಗುಂಡಿಯಿಂದ ಗುಂಡಿಗೆ 12 ಅಡಿ ಅಂತರವಿರಬೇಕು. ಕುಂಬಳಕಾಯಿ 6 ತಿಂಗಳ ಬೆಳೆಯಾದರೆ ಚೀನಿಕಾಯಿ 5 ತಿಂಗಳ ಬೆಳೆ. ಕಾಯಿಗಳು ನೆಲಕ್ಕೆ ತಾಗಿ ಹಾಳಾಗದಂತೆ ಬೈಹುಲ್ಲನ್ನು ಉರುಟುರುಟಾಗಿ ಸುತ್ತಿ ನೆಲದಲ್ಲಿ ಹರಡಿ ಅದರಲ್ಲಿ ಬಳ್ಳಿಗಳು ಹಬ್ಬುವಂತೆ ಮಾಡಬೇಕು. ಒಂದು ಎಕರೆಗೆ ಸುಮಾರು 1000 ಕಾಯಿಗಳು ಸಿಗುತ್ತವೆ. ಒಂದೊಂದು ಕಾಯಿಯೂ 10-15 ರಾತಲ್ ಭಾರವಿರುತ್ತದೆ.

ಸೌತೆಕಾಯಿ (ಕುಕುಂಬರ್, ಕುಕುಮಿಸ್ ಸಟೈವಸ್ - ಕುಕುರ್‌ಬಿಟೇಸೀ ಕು.) : ಗದ್ದೆಗಳಲ್ಲಿ ಮತ್ತು ಕಾಲುವೆಗಳಲ್ಲಿ ಇದನ್ನು ಬೆಳೆಸಬಹುದು. 6 ಅಡಿ ಅಂತರದಲ್ಲಿ ಬೀಜಗಳನ್ನು ಬಿತ್ತಬೇಕು. ಇದನ್ನು ಬೇಸಗೆ ಕಾಲದಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಕೊಡಗಳಲ್ಲಿ ನೀರನ್ನು ತಂದು ಗಿಡಗಳಿಗೆ ಸುರಿದು ಬೆಳೆಸುತ್ತಾರೆ. ಜುಲೈ-ಆಗಸ್ಟ್ ತಿಂಗಳಲ್ಲೂ ಇದನ್ನು ಬೆಳೆಸುತ್ತಾರೆ. ಈ ಕಾಲದಲ್ಲಾದರೆ ಹೆಚ್ಚು ನೀರು ಹಾಕುವ ಅಗತ್ಯವಿರುವುದಿಲ್ಲ. ಎರಡೂವರೆ ತಿಂಗಳಿಂದ ನಾಲ್ಕು ತಿಂಗಳವರೆಗೆ ಇದು ಫಸಲನ್ನು ನೀಡುತ್ತದೆ. ಎಕರೆಗೆ 10000-12000 ರಾತಲ್ ಕಾಯಿಗಳನ್ನು ಉತ್ಪಾದನೆ ಮಾಡಬಹುದು.

ತೊಂಡೆಕಾಯಿ (ಕೊಚ್ಚಿನಿಯ ಇಂಡಿಕ - ಕುಕುರ್‌ಬಿಟೇಸೀ ಕು.) : ಇದು ಬಳ್ಳಿಯಂತೆ ಬೆಳೆಯುವ ಗಿಡದ ಕಾಯಿ. ಮನೆಯ ಹಿತ್ತಿಲುಗಳಲ್ಲಿ 8 x 8 ಅಡಿ ಅಳತೆಯ ಚಪ್ಪರವನ್ನು ಹಾಕಿ ಮಧ್ಯದಲ್ಲಿ ಒಂದು ಗುಂಡಿಯನ್ನು ಅಗೆದು ಅದರಲ್ಲಿ ಎರಡು ಅಡಿ ಉದ್ದವಿರುವ ತೊಂಡೆಕಾಯಿಯ ಬಳ್ಳಿಯ 4-5 ತುಂಡುಗಳನ್ನು ನೆಡಬೇಕು. ಇವು ಬೇರುಬಿಟ್ಟು ಬೆಳೆಯಲಾರಂಭಿಸಿದಾಗ ಎರಡು ಬಳ್ಳಿಗಳು ಹರಡುವಂತೆ ಮಾಡಬೇಕು. ನಾಲ್ಕೈದು ತಿಂಗಳಲ್ಲಿ ಬಳ್ಳಿಯಲ್ಲಿ ಹೂಗಳು ಬಿಟ್ಟು, ಕಾಯಿಗಳಾಗಲಾರಂಭವಾಗುತ್ತವೆ. ಕಾಯಿಗಳಾಗಲು ಆರಂಭಿಸಿದರೆ ಕೆಲವು ವರ್ಷದ ಕಾಲದವರೆಗೂ ಕಾಯಿಗಳನ್ನು ಕೊಡುತ್ತಾ ಇರುತ್ತವೆ. ಪ್ರತಿ ಆರು ತಿಂಗಳಿಗೊಮ್ಮೆ ಗುಂಡಿಯನ್ನು ಸ್ವಲ್ಪ ಆರು ಕೆದಕಿ ಗೊಬ್ಬರವನ್ನು ಹಾಕಿ, ನೀರನ್ನು ಹಾಯಿಸುತ್ತಾ ಇರಬೇಕು. ತೊಂಡೆಕಾಯಿಯಲ್ಲಿ 1-2 ಅಂಗುಲ ಉದ್ದದ ಜಾತಿ ಒಂದಿದ್ದರೆ ಅರ್ಧ ಅಂಗುಲ ಉದ್ದದ ಇನ್ನೊಂದು ಜಾತಿಯೂ ಇದೆ. ಇದನ್ನು ಹಸಿಯಾಗಿಯೂ, ಬೇಯಿಸಿ ಪದಾರ್ಥದ ರೂಪದಲ್ಲೂ ಬಳಸಬಹುದು.

ಮೆಣಸಿನಕಾಯಿ : ಲವಣಾಂಶದಿಂದ ಕೂಡಿದ, ನೀರು ನಿಲ್ಲದೆ ಇರುವ ಪ್ರದೇಶಗಳಲ್ಲಿ ಇದನ್ನು ಬೆಳೆಸಬಹುದು. ಎಲ್ಲಾ ವಿಧದ ಮಣ್ಣಿನಲ್ಲೂ ಮೆಣಸಿನಕಾಯಿ ಬೆಳೆಯುತ್ತದೆ. ಮರಳು ಮಿಶ್ರಿತ ನೆಲದಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆ. ಹೆಕ್ಟೇರಿಗೆ 1250 ಗ್ರಾಂ ಬೀಜ ಬಿತ್ತನೆ ಮಾಡಬೇಕು. ಗಿಡಗಳನ್ನು 30 x 30 ಸೆಂ.ಮೀ. ಅಂತರದಲ್ಲಿ ನೆಡಬೇಕು.

ಹೆಕ್ಟೇರಿಗೆ 25 ಟನ್ ಹಟ್ಟಿಗೊಬ್ಬರ, 35 ಕಿಲೋ ಪಾಸ್ಫೆಟ್, 35 ಕಿಲೋ ಪೊಟ್ಯಾಷ್ ಅನ್ನು ಅಡಿಗೊಬ್ಬರವಾಗಿ ಹಾಕಬೇಕು. ಗಿಡಗಳನ್ನು ನೆಟ್ಟು 30, 60 ಮತ್ತು 90ನೇ ದಿನಗಳಲ್ಲಿ ಹೆಕ್ಟೇರಿಗೆ 75 ಕಿಲೋ ನೈಟ್ರೋಜನನ್ನು ಮೇಲ್ಗೊಬ್ಬರವಾಗಿ ಹಾಕಬೇಕು.

ಬೀಜ ಬಿತ್ತುವ ಮುನ್ನ ಒಂದೊಮ್ಮೆ ನೀರು ಹಾಯಿಸಬೇಕು. ಅನಂತರ 3 ದಿನಕ್ಕೊಮ್ಮೆ ಮತ್ತು ಅಗತ್ಯಕ್ಕೆ ತಕ್ಕಂತೆ ಏಳು ದಿನಗಳಿಗೊಮ್ಮೆ ನೀರು ಹಾಯಿಸುತ್ತಿರಬೇಕು. 30 ದಿನಗಳ ಅನಂತರ ಗಿಡಗಳು ಬಾಗದಂತೆ ಆಧಾರವಾಗಿ ಕೋಲುಗಳನ್ನು ಊರಬೇಕು. ಇದನ್ನು ಖಾರಕ್ಕಾಗಿ ಇತರ ತರಕಾರಿಗಳೊಂದಿಗೆ ಸೇರಿಸಿ ಅಡುಗೆ ಮಾಡಲು ಬಳಸುತ್ತಾರೆ.

ಸೀಮೆ ಬದನೆ (ಚೌಚೌ, ಸೆಚ್ಚಿಯಂ ಎಡುಲೆ - ಕುಕುರ್‌ಬಿಟೇಸಿ ಕು.) : ಇದನ್ನು ಬೆಂಗಳೂರು ಬದನೆ ಎಂದೂ ಕರೆಯುತ್ತಾರೆ. ಇದು ಸಮ ಉಷ್ಣ ಪ್ರದೇಶದಲ್ಲಿ ಬೆಳೆಯುವ ಒಂದು ಕಾಯಿ. ಎರಡು ಅಡಿ ಚೌಕದ ಗುಂಡಿಗಳನ್ನು ತೋಡಿ ಗೊಬ್ಬರವನ್ನು ಹಾಕಿ ಮೊಳಕೆ ಹೊರಗೆ ಕಾಣಿಸಿಕೊಳ್ಳುವ ಸೀಮೆ ಬದನೆಗಳನ್ನು ಗುಂಡಿಯೊಂದಕ್ಕೆ ಒಂದರಂತೆ ನೆಡಬೇಕು. ಅನಂತರ 10 x 10 ಅಡಿಯ ಚಪ್ಪರವನ್ನು ಹಾಕಿ ಬಳ್ಳಿಗಳು ಅದರಲ್ಲಿ ಹಬ್ಬುವಂತೆ ಮಾಡಬೇಕು. ಇದು ಕೆಲವು ವರ್ಷ ಕಾಲ ಕಾಯಿಗಳನ್ನು ಕೊಡುತ್ತಾ ಹೋಗುತ್ತದೆ.

ಹೂಕೋಸು (ಕಾಲಿಫ್ಲವರ್, ಬ್ರೆಸ್ಸಿಕ ಒಲೆರೇಸೀ ವರ್‌ಬೋಟಿರಿಸ್) : ಕೆಲವು ಹೂಗಳನ್ನು ತರಕಾರಿಯಾಗಿ ಉಪಯೋಗಿಸುತ್ತೇವೆ. ಅವುಗಳಲ್ಲಿ ಹೂಕೋಸು ಒಂದು. ಫಲವತ್ತಾದ ಮಣ್ಣಿನಿಂದ ಕೂಡಿದ ನೆಲದಲ್ಲಿ ಹೂಕೋಸು ಚೆನ್ನಾಗಿ ಬೆಳೆಯುತ್ತದೆ. ಹೆಕ್ಟೇರಿಗೆ 250 ಗ್ರಾಂ ಬೀಜಗಳನ್ನು ಬಿತ್ತಬೇಕು. ಎತ್ತರದ ಕಳಗಳನ್ನು ಮಾಡಿ ಬೀಜಗಳನ್ನು ಬಿತ್ತನೆ ಮಾಡಬೇಕು. ಅನಂತರ ಸಾಲುಗಳನ್ನು ಮಾಡಿ 60 x 65 ಸೆಂ.ಮೀ., 90 x 45 ಸೆಂ.ಮೀ ಅಥವಾ 90 x 60 ಸೆಂ.ಮೀ. ಅಂತರದಲ್ಲಿ ನೆಡಬೇಕು.

ಹೆಕ್ಟೇರಿಗೆ 30 ಟನ್ ಹಟ್ಟಿಗೊಬ್ಬರದೊಂದಿಗೆ 80 ಕಿಲೋ ನೈಟ್ರೋಜನ್, 200 ಕಿಲೋ ಫಾಸ್ಫೆಟ್ ಮತ್ತು 240 ಕಿಲೋ ಪೊಟ್ಯಾಶ್‌ನ್ನು ಅಡಿಗೊಬ್ಬರವಾಗಿ ಹಾಕಿ ಅನಂತರ ಬೀಜಗಳನ್ನು ಬಿತ್ತನೆ ಮಾಡಬೇಕು. ನೆಟ್ಟ 40ನೇ ದಿನ ಹೆಕ್ಟೇರಿಗೆ 80 ಹೂಗಳು ನೈಟ್ರೋಜನನ್ನು ಮೇಲ್ಗೊಬ್ಬರವಾಗಿ ಹಾಕಬೇಕು. 5-6 ದಿನಗಳಿಗೊಮ್ಮೆ ನೀರನ್ನು ಎರೆದರೆ

ಸಾಕಾಗುತ್ತದೆ. ಹೂಗಳು ಕಾಣಿಸಿಕೊಂಡ ಅನಂತರ ನೆಲ ಒಣಗದಂತೆ ನೀರನ್ನು ಹಾಯಿಸಬೇಕು. ಮೇಲ್ಗೊಬ್ಬರವನ್ನು ಹಾಕಿದ ಮೇಲೆ ಮಣ್ಣನ್ನು ಅಡಿಮೇಲು ಮಾಡಿ ಬುಡಗಳಿಗೆ ಹಾಕಬೇಕು. ಹೂಗಳು ಬಿಸಿಲಿನ ತಾಪಕ್ಕೆ ಬಾಡದಂತೆ ಅವುಗಳನ್ನು ಮುಚ್ಚಬೇಕು. ಇದು ಸ್ವಲ್ಪ ಹೆಚ್ಚು ಬೆಲೆಯ ತರಕಾರಿ.

ನುಗ್ಗೆ, ಬಾಳೆ, ಅಗಸಿ ಮುಂತಾದವುಗಳ ಹೂಗಳನ್ನೂ ತರಕಾರಿಯಾಗಿ ಬಳಸುತ್ತಾರೆ.

ಗೆಡ್ಡೆಗೆಣಸು : ಭೂಮಿಯಡಿಯಲ್ಲಿ ಕೆಲವು ಗಿಡಗಳ ಬೇರಿನ ಭಾಗಗಳು ಮತ್ತು ಭೂಮಿಯ ಮೇಲ್ಗಡೆ ಅವುಗಳ ದಂಟಿನ ಭಾಗಗಳು ದಪ್ಪವಾಗಿರುತ್ತವೆ. ಇವುಗಳಲ್ಲಿ ಮುಖ್ಯವಾಗಿ ಪಿಷ್ಟಾಂಶವಿರುತ್ತದೆ. ಇವುಗಳನ್ನು ಗೆಡ್ಡೆಗೆಣಸುಗಳೆನ್ನುತ್ತಾರೆ. ಕೆಲವು ಗಿಡಗಳ ಗೆಡ್ಡೆಗಳನ್ನೂ ದಂಟುಗಳನ್ನೂ ತರಕಾರಿಗಳಾಗಿ ಬಳಸುತ್ತಾರೆ. ಕೆಲವು ಮುಖ್ಯ ಗೆಡ್ಡೆಗೆಣಸುಗಳ ವಿವರವನ್ನು ಕೆಳಗೆ ಕೊಡಲಾಗಿದೆ.

1. ಮರಗೆಣಸು (ಕಸ್ಸಾವ ಟೇಪಿಯೋಕ, ಮನಿಹಾಟ್ ಯುಟಿಲೈಸ್ಸಿಮ - ಯೂಫೋರ್ಬಿಯೇಸೀ ಕು.) : ನೀರು ಹರಿದುಹೋಗುವುದಕ್ಕೆ ಅನುಕೂಲವುಳ್ಳ ಇಳಿಜಾರು ಪ್ರದೇಶಗಳಲ್ಲಿ ಕೆಂಪು ಮಣ್ಣಿನ ನೆಲದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಬೆಳೆಸಲು ಹೆಚ್ಚೇನೂ ನೀರು ಬೇಕಾಗಿಲ್ಲ. ಇದನ್ನು ಡಿಸೆಂಬರ್ - ಜನವರಿ ಮತ್ತು ಜುಲೈ - ಆಗಸ್ಟ್ ತಿಂಗಳಲ್ಲಿ ನಾಟಿ ಮಾಡಬಹುದು. ಒಂದು ಹೆಕ್ಟೇರಿಗೆ 12000-15000 ಗಿಡಗಳ ತುಂಡುಗಳನ್ನು 75 x 90 ಸೆಂ.ಮೀ. ಅಂತರದಲ್ಲಿ ನೆಡಬೇಕು. ನೆಡುವ ಮುನ್ನ ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರದೊಂದಿಗೆ 40 ಕಿಲೋ ನೈಟ್ರೋಜನ್, 40 ಕಿಲೋ ಪಾಸ್ಪೇಟ್ ಮತ್ತು 50 ಕಿಲೋ ಪೊಟ್ಯಾಷ್ ಅನ್ನು ಅಡಿಗೊಬ್ಬರವಾಗಿ ಹಾಕಬೇಕು. ನೆಟ್ಟ ಮೂರನೇ ತಿಂಗಳಲ್ಲಿ ಮತ್ತೊಮ್ಮೆ ಅಡಿಗೊಬ್ಬರದ ದಾಮಾಷೆಯಲ್ಲಿಯೇ ಮೇಲ್ಗೊಬ್ಬರವನ್ನು ಹಾಕಬೇಕು. ಗಿಡಗಳನ್ನು ನೆಟ್ಟ ಮೂರನೇ ದಿನ ನೀರು ಹಾಕಬೇಕು. ಅನಂತರ 15 ದಿನಗಳಿಗೊಮ್ಮೆ ಸ್ವಲ್ಪ ನೀರು ಹಾಯಿಸಿದರೆ ಸಾಕು. ಗಿಡಗಳು ಬೆಳೆಯುತ್ತಿರುವಾಗ 4-6 ಬಾರಿ ಮಣ್ಣನ್ನು ಮಗಚಿ ಹಾಕಬೇಕು. ನೆಟ್ಟ ಒಂದು ತಿಂಗಳೊಳಗೆ ಚಿಗುರದ ಗಿಡಗಳನ್ನು ಕಿತ್ತು ಹಾಕಿ ಆ ಜಾಗದಲ್ಲಿ ಹೊಸ ಗಿಡಗಳನ್ನು ನೆಡಬೇಕು. ಎಕರೆಯೊಂದಕ್ಕೆ ಸುಮಾರು 8000-10000 ರಾತಲ್ ಗೆಣಸುಗಳು ಸಿಗುತ್ತವೆ. ಈ ಗೆಣಸುಗಳನ್ನು ಬಿಲ್ಲೆಗಳಂತೆ ಕತ್ತರಿಸಿ ಒಣಗಿಸಿ, ಬೇಕಾದಾಗ ಬೇಯಿಸಿ ಗಂಜಿಯನ್ನು ಮಾಡಬಹುದು. ಇದರಿಂದ ಸಾಬಕ್ಕಿಯನ್ನು ಮಾಡುತ್ತಾರೆ.

ಸಿಹಿಗೆಣಸು (ಸ್ವೀಟ್ ಪೊಟ್ಯಾಟೊ, ಟೈಪೊಮೊಯಿ ಬಟಾಟಸ್ - ಕನ್‌ವಲ್‌ವುಲ್ಲೇಸೀ ಕು.) : ಎಲ್ಲಾ ವಿಧದ ಮಣ್ಣಿನಲ್ಲೂ ಈ ಗೆಣಸು ಬೆಳೆಯುತ್ತದೆ. ಇದನ್ನು ಬಳ್ಳಿ ಗೆಣಸು ಎಂದೂ ಕರೆಯುತ್ತಾರೆ. ಸಾಮಾನ್ಯವಾಗಿ 4-6 ತಿಂಗಳೊಳಗಾಗಿ ಫಲವನ್ನು ಕೊಡುತ್ತದೆ. ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ಹೆಕ್ಟೇರಿಗೆ 25000 ಗಿಡಗಳನ್ನು 75 x 20 ಸೆಂ.ಮೀ. ಅಂತರದಲ್ಲಿ ನೆಡಬೇಕು. ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರ, 25 ಕಿಲೋ ನೈಟ್ರೋಜನ್, 50 ಕಿಲೋ ಪೊಸ್ಪೇಟ್ ಮತ್ತು 75 ಕಿಲೋ ಪೊಟ್ಯಾಶ್ ಅನ್ನು ಅಡಿಗೊಬ್ಬರವಾಗಿ ಹಾಕಿದ ಅನಂತರ ಗಿಡಗಳನ್ನು ನೆಡಬೇಕು. ಎರಡು ತಿಂಗಳ ಬಳಿಕ 25 ಕಿಲೋ ನೈಟ್ರೋಜನ್, 50 ಕಿಲೋ ಫೊಸ್ಪೇಟ್ ಮತ್ತು 75 ಕಿಲೋ ಪೊಟ್ಯಾಷ್ ಅನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ಗೆಣಸುಗಳನ್ನು ಚೆನ್ನಾಗಿ ಪುಷ್ಟಿಗೊಂಡಾಗ ಎಲೆಗಳು ಹಣ್ಣಾಗಲಾರಂಭಿಸುತ್ತವೆ. ಸಾಮಾನ್ಯವಾಗಿ ಜನವರಿಯಿಂದ ಮಾರ್ಚಿ ತಿಂಗಳೊಳಗಾಗಿ ಗೆಣಸುಗಳನ್ನು ಅಗೆದು ತೆಗೆಯಬಹುದು.

ಎಕರೆಗೆ 8000-10000 ರಾತಲ್ ಗೆಣಸುಗಳನ್ನು ಪಡೆಯಬಹುದು. ಇದರಲ್ಲಿ ಕೆಂಪು ಮತ್ತು ಬಿಳಿ ಗೆಣಸುಗಳೆಂದು ಎರಡು ವಿಧಗಳಿವೆ. ಕೆಂಪು ಗೆಣಸಿಗೆ ಕಡಿಮೆ ಕಾಲಾವಧಿ ಮತ್ತು ಕಡಿಮೆ ಖರ್ಚು, ಆದರೆ ಇದು ಹೆಚ್ಚು ಸಿಹಿಯಾಗಿರುತ್ತದೆ. ಬಿಳಿ ಗೆಣಸನ್ನು ಬೆಳೆಸಲು ಹೆಚ್ಚು ಕಾಲಾವಧಿ ಬೇಕು. ಸಿಹಿಯೂ ಕಡಿಮೆ ಇರುತ್ತದೆ. ಹೆಚ್ಚು ಬೆಳೆದ ಗೆಣಸುಗಳಿಗೆ ಒಂದು ರೀತಿಯ ಹುಳ ಬರುವುದಕ್ಕೆ ಸಾಧ್ಯವಿರುವುದರಿಂದ ಅತಿಯಾಗಿ ಬೆಳೆಯುವ ಮುನ್ನವೇ ಅಗೆದು ತೆಗೆಯುವುದು ಒಳ್ಳೆಯದು.

3. ಆಲೂಗಡ್ಡೆ (ಪೊಟ್ಯಾಟೊ, ಸೋಲನಂ ಟ್ಯುಬೆರೋಸಮ್ - ಸೋಲನೇಸೀ ಕು.) : ಸಾಮಾನ್ಯವಾಗಿ ಎಲ್ಲ ವಿಧದ ಮಣ್ಣಿನಲ್ಲೂ ಆಲೂಗಡ್ಡೆಯನ್ನು ಬೆಳೆಸಬಹುದು. ಮರಳುಮಿಶ್ರಿತ ಮಣ್ಣಿರುವ ನೆಲದಲ್ಲಿ ಉತ್ತಮ ಬೆಳೆಯನ್ನು ಕೊಡುತ್ತದೆ. ಇದನ್ನು ಏಪ್ರಿಲ್, ಆಗಸ್ಟ್ ಮತ್ತು ಜನವರಿ ತಿಂಗಳಲ್ಲಿ ಬೆಳೆಸಲಾಗುತ್ತದೆ. ಆಲೂಗಡ್ಡೆಯಲ್ಲಿ ದೊಡ್ಡ ಆಲೂಗಡ್ಡೆ ಮತ್ತು ಸಣ್ಣ ಆಲೂಗಡ್ಡೆ ಎಂದು ಎರಡು ವಿಧಗಳಿವೆ. ಬಿತ್ತನೆಗೆ ದೊಡ್ಡ ಆಲೂಗಡ್ಡೆ ಹೆಕ್ಟೇರಿಗೆ 1600 ಕಿಲೋ ಬೇಕಾದರೆ ಚಿಕ್ಕ ಆಲೂಗಡ್ಡೆ 2000 ಕಿಲೋ ಬೇಕಾಗುತ್ತದೆ. ಮೊಳಕೆ ಕಾಣಿಸಿಕೊಂಡ ಆಲೂಗಡ್ಡೆಯ ಭಾಗಗಳನ್ನು ಕತ್ತರಿಸಿ 30 x 14 ಅಥವಾ 40 x 22 ಸೆಂ.ಮೀ. ಅಂತರದಲ್ಲಿ ನೆಡಬೇಕು. ಹೆಕ್ಟೇರಿಗೆ 15 ಟನ್ ಹಟ್ಟಿಗೊಬ್ಬರ, 120 ಕಿಲೋ ನೈಟ್ರೋಜನ್, 160 ಕಿಲೋ ಫೊಸ್ಪೇಟ್ ಮತ್ತು 60 ಕಿಲೋ ಪೊಟ್ಯಾಷನ್ನು ಅಡಿಗೊಬ್ಬರವಾಗಿ ಹಾಕಿ ಮೊಳಕೆಗಳನ್ನು ನೆಡಬೇಕು. ನೆಲವನ್ನು ಸಮತಟ್ಟುಗೊಳಿಸಿ ನೆಟ್ಟ ಅನಂತರ ವಾರಕ್ಕೊಮ್ಮೆ ನೀರನ್ನು ಹಾಕಬೇಕು. ಗಿಡಗಳು 15 ಸೆಂ.ಮೀ. ಉದ್ದಕ್ಕೆ ಬೆಳೆದಾಗ ಮಣ್ಣನ್ನು ಮಗುಚಿ ಗಿಡಗಳ ಬುಡಕ್ಕೆ ಹಾಕಬೇಕು. ಪ್ರತಿ ಎರಡು ವಾರಕ್ಕೊಮ್ಮೆ ಮಣ್ಣನ್ನು ನುಸುಲುಗೊಳಿಸಿದರೆ ಗಡ್ಡೆಗಳು ಪುಷ್ಟಿಯಾಗಿ ಬೆಳೆಯುತ್ತವೆ. ಎಕರೆಗೆ ಸುಮಾರು 10000-12000 ರಾತಲ್ ಆಲೂಗಡ್ಡೆಗಳನ್ನು ಪಡೆಯಬಹುದು.

ಮೂಲಂಗಿ (ರ್‍ಯಾಡಿಶ್, ರ್‍ಯಾಫನಸ್ ಸಟೈವಸ್-ಕ್ರೂಸಿಫೆರ ಕು.) : ಎಲ್ಲಾ ವಿಧದ ಮಣ್ಣಿನಲ್ಲೂ ಮುಲ್ಲಂಗಿ ಬೆಳೆಯುತ್ತದೆ. ನೀರು ಹರಿದು ಹೋಗುವುದಕ್ಕೆ ಅನುಕೂಲವುಳ್ಳ ಮರಳು ಮಿಶ್ರಿತ ಮಣ್ಣಿರುವ ನೆಲದಲ್ಲಿ ಉತ್ತಮ ಬೆಳೆಯನ್ನು ಕೊಡುತ್ತದೆ. ಇದನ್ನು ವರ್ಷವಿಡೀ ಬೆಳೆಸಬಹುದು. ಜೂನ್ ತಿಂಗಳಿಂದ ಫೆಬ್ರವರಿ ತಿಂಗಳವರೆಗೆ ಇದನ್ನು ಬೆಳೆಸಬಹುದು. ಮುಲ್ಲಂಗಿಯಲ್ಲಿ ಬಿಳಿ ಮುಲ್ಲಂಗಿ ಮತ್ತು ಕೆಂಪು ಮುಲ್ಲಂಗಿ ಎಂದು ಎರಡು ವಿಧ ಇದೆ. 6ರಿಂದ 8 ಅಂಗುಲ ಅಂತರದಲ್ಲಿ ಹೆಕ್ಟೇರಿಗೆ 12-15 ಕಿಲೋ ಬೀಜಗಳನ್ನು ಬಿತ್ತನೆ ಮಾಡಬೇಕು. 20ರಿಂದ 40 ದಿನಗಳೊಳಗಾಗಿ ಕೀಳಬಹುದು. ಹೆಚ್ಚುಕಾಲ ಮಣ್ಣಿನಡಿಯಲ್ಲಿ ಬಿಟ್ಟರೆ ಅಥವಾ ಹೆಚ್ಚು ನೀರನ್ನು ಹಾಕಿದರೆ ಬೆಳೆದು ನಾರಾಗುವುದು.

ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರದೊಂದಿಗೆ 75 ಕಿಲೋ ನೈಟ್ರೋಜನ್, 50 ಕಿಲೋ ಫೊಸ್ಪೇಟ್ ಮತ್ತು 90 ಕಿಲೋ ಪೊಟ್ಯಾಷ್‌ನ್ನು

ಅಡಿಗೊಬ್ಬರವಾಗಿ ಹಾಕಿದ ಅನಂತರ ಬಿತ್ತನೆ ಮಾಡಬೇಕು. ಎಕರೆಯೊಂದಕ್ಕೆ 10000-15000 ರಾತಲ್ ಮುಲ್ಲಂಗಿಯನ್ನು ಪಡೆಯಬಹುದು.

ಕ್ಯಾರೆಟ್ (ಕ್ಯಾರಟ್, ಡಾಸಿಸ್ ಕ್ಯಾರಟ -ಅಂಬೆಫೆರಕು.) : ಫಲವತ್ತಾದ ಅಂಟಿಲ್ಲದ ಮಣ್ಣಿನ ನೆಲ ಕ್ಯಾರೆಟನ್ನು ಬೆಳೆಸಲು ಯೋಗ್ಯವಾದುದಾಗಿದೆ. ಸಮತಟ್ಟಾದ ನೆಲದಲ್ಲಿ ಆಗಸ್ಟ್, ಡಿಸೆಂಬರ್ ತಿಂಗಳಲ್ಲೂ ಗುಡ್ಡ ಪ್ರದೇಶಗಳಲ್ಲಿ ಮಾರ್ಚ್, ಜುಲೈ ತಿಂಗಳಲ್ಲೂ ಬೆಳೆಸಬಹುದು. ಇದನ್ನು ಅರಿಸಿನ ಮುಲ್ಲಂಗಿ ಎಂದು ಕರೆಯುತ್ತಾರೆ. ಹೆಕ್ಟೇರಿಗೆ 6 ಕಿಲೋ ಬೀಜ ಬೇಕಾಗುತ್ತದೆ. ಒಂದೂವರೆ ಅಡಿ ಅಂತರದಲ್ಲಿ ಸಾಲುಗಳನ್ನು ಮಾಡಿ 60 x 20 ಸೆಂ.ಮೀ. ಅಂತರದಲ್ಲಿ ಬೀಜಗಳನ್ನು ಬಿತ್ತಬೇಕು. 14ರಿಂದ 16 ವಾರಗಳಲ್ಲಿ ಕ್ಯಾರೆಟ್‌ಗಳನ್ನು ಅಗೆದು ತೆಗೆಯಬಹುದು. ಹೆಕ್ಟೇರಿಗೆ 10 ಟನ್ ಕಾಂಪೋಸ್ಟ್, 1 ಟನ್ ಸುಣ್ಣ, 40 ಕಿಲೋ ನೈಟ್ರೋಜನ್, 160 ಕಿಲೋ ಫೋಸ್ಪೆಟ್, 180 ಕಿಲೋ ಪೊಟ್ಯಾಶ್‌ನ್ನು ಅಡಿಗೊಬ್ಬರವಾಗಿ ಹಾಕಬೇಕು. ಗಿಡಗಳನ್ನು ನೆಟ್ಟ 45ನೇ ಮತ್ತು 70ನೇ ದಿನ 40 ಕಿಲೋ ನೈಟ್ರೋಜನನ್ನು ಎರಡು ಬಾರಿ ಮೇಲ್ಗೊಬ್ಬರವಾಗಿ ಹಾಕಬೇಕು. ಸಮತಟ್ಟಾದ ನೆಲವಾದರೆ ಸುಣ್ಣವನ್ನು ಹಾಕುವ ಆವಶ್ಯಕತೆ ಇಲ್ಲ. ಎಕರೆಗೆ 10000-15000 ರಾತಲ್ ಕ್ಯಾರೆಟನ್ನು ಪಡೆಯಬಹುದು.

ಸುವರ್ಣಗೆಡ್ಡೆ (ಎಲಿಫೆಂಟ್ ಫುಟ್‌ಯಮ್, ಅಮಾರ್ಫೊಫ್ಯಾಲ್ಲಸ್ ಕ್ಯಾಂಫನುಲಟಸ್ - ಅರಾಯ್ಡೀಸೀ ಕು.): ತೇವಭರಿತ ಮರಳು ಮಿಶ್ರಿತ ಕೆಂಪು ಮಣ್ಣುಳ್ಳ ನೆಲ ಈ ಬೆಳೆಗೆ ಅತ್ಯಂತ ಯೋಗ್ಯವಾಗಿರುತ್ತದೆ. ಸಾಮಾನ್ಯವಾಗಿ ಮೇ-ಜೂನ್ ತಿಂಗಳಲ್ಲಿ ಇದನ್ನು ಬಿತ್ತನೆ ಮಾಡುತ್ತಾರೆ. ಹೆಕ್ಟೇರಿಗೆ 2500ರಿಂದ 3000 ಕಿಲೋ ಬೀಜದ ಗೆಡ್ಡೆಗಳು ಬೇಕಾಗುತ್ತವೆ. ಒಂದೊಂದು ಸುವರ್ಣಗೆಡ್ಡೆಯಲ್ಲಿ ಮೊಳಕೆಯೊಡೆಯುವಂತಿರುವ ಭಾಗಗಳು ಇರುತ್ತವೆ. ಅವುಗಳನ್ನು ತುಂಡುಮಾಡಿ, ಸೆಗಣಿಯಲ್ಲಿ ಅದ್ದಿ 20 ಸೆಂ.ಮೀ. ಆಳದ ಗುಂಡಿಗಳನ್ನು ಅಗೆದು 90 ಸೆಂ.ಮೀ. ಅಂತರದಲ್ಲಿ ನೆಡಬೇಕು. ಪ್ರತಿಯೊಂದು ಸುವರ್ಣಗೆಡ್ಡೆಯಿಂದ 6ರಿಂದ 8 ತುಂಡುಗಳು ಮೊಳಕೆಯೊಡೆದು ಬರುತ್ತವೆ. ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರವನ್ನು ಅಡಿಗೊಬ್ಬರವಾಗಿ ಹಾಕಿದ ಅನಂತರ ಬೀಜಗಳನ್ನು ನೆಡಬೇಕು. ನೆಟ್ಟ 3 ತಿಂಗಳಲ್ಲಿ ಹೆಕ್ಟೇರಿಗೆ 25 ಕಿಲೋ ನೈಟ್ರೋಜನ್, 25 ಕಿಲೋ ಫೋಸ್ಪೆಟ್ ಮತ್ತು 70 ಕಿಲೋ ಪೊಟ್ಯಾಷನ್ನು ಮೇಲ್ಗೊಬ್ಬರವಾಗಿ ಹಾಕಬೇಕು. 10 ದಿನಗಳಿಗೊಮ್ಮೆ ನೀರು ಹಾಯಿಸಿದರೆ ಸಾಕಾಗುತ್ತದೆ. ಇದು 7-9 ತಿಂಗಳವರೆಗೆ ಮಣ್ಣಿನಡಿಯಲ್ಲಿರುತ್ತದೆ. ಒಂದು ಎಕರೆಗೆ 800-1500 ರಾತಲ್ ಬೀಜಗಳು ಬೇಕಾಗುತ್ತವೆ. ಎಡೆಯಲ್ಲಿ 5-6 ಬಾರಿ ಮಣ್ಣನ್ನು ಅಗತೆ ಮಾಡಿ ಬುಡಗಳಿಗೆ ಹಾಕಬೇಕು. ಡಿಸೆಂಬರ್ ತಿಂಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಗೆಡ್ಡೆಗಳನ್ನು ಅಗೆದು ತೆಗೆಯಬಹುದು. ಒಂದೊಂದು ಗೆಡ್ಡೆಯೂ 4-6 ರಾತಲ್ ತೂಕವಿರುತ್ತದೆ. ದೊಡ್ಡ ಸುವರ್ಣಗೆಡ್ಡೆಗಳು 12-16 ರಾತಲಷ್ಟು ಭಾರವೂ ಇರುತ್ತದೆ. ಚಿತ್ತೂರು ಮತ್ತು ಅರ್ಕಾಡ್ ಜಿಲ್ಲೆಗಳಲ್ಲಿ 1ರಿಂದ 2 ರಾತಲ್ ಭಾರವಷ್ಟೇ ಇರುತ್ತವೆ. ಎಕರೆಗೆ ಸುಮಾರು 12000-15000 ರಾತಲ್ ಬೆಳೆ ಬರುತ್ತದೆ.

ಕೆಸುವಿನ ಗೆಡ್ಡೆ (ಕೊಲೊಕೆಸಿಯ, ಕೊಲೊಕೆಸಿಯ ಅಂಟಿಕೋರಂ - ಅರಾಯ್ಡಿಯ ಕು.) : ತೇವಭರಿತ ಫಲವತ್ತಾದ ಮಣ್ಣಿನಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಬಾಳೆತೋಟಗಳಲ್ಲಿ ಉಪಬೆಳೆಯಾಗಿಯೂ ಬೆಳೆಸುತ್ತಾರೆ. ಫೆಬ್ರವರಿ ತಿಂಗಳಲ್ಲಿ ನಾಟಿ ಮಾಡಬೇಕು. ನೆಲವನ್ನು 3-4 ಬಾರಿ ಅಗತೆ ಮಾಡಿ 60 x 60 ಸೆಂ.ಮೀ. ಅಂತರದಲ್ಲಿ ಗುಂಡಿಗಳನ್ನು ತೋಡಿ ಬೀಜಗಳನ್ನು ಬಿತ್ತನೆ ಮಾಡಬೇಕು. ಇದರಲ್ಲಿ ಬಿಳಿ ಕೆಸುವಿನ ಗೆಡ್ಡೆ ಮತ್ತು ಕಪ್ಪು ಕೆಸುವಿನ ಗೆಡ್ಡೆ ಎಂದು ಎರಡು ವಿಧವಿದೆ. ಹೆಕ್ಟೇರಿಗೆ 500ರಿಂದ 700 ಕಿಲೋ ಬೀಜಗಳು ಸಾಕಾಗುತ್ತವೆ. ಹೆಕ್ಟೇರಿಗೆ 10 ಟನ್ ಹಟ್ಟಿಗೊಬ್ಬರವಾಗಿ ಅಡಿಗೊಬ್ಬರವಾಗಿ ಹಾಕಬೇಕು. ನೆಟ್ಟ ಎರಡು ತಿಂಗಳಲ್ಲಿ ಹೆಕ್ಟೇರಿಗೆ 100 ಕಿಲೋ ನೈಟ್ರೋಜನ್, 50 ಕಿಲೋ ಫೋಸ್ಪೆಟ್ ಮತ್ತು 100 ಕಿಲೋ ಪೊಟ್ಯಾಷನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ನೆಡುವ ಮೊದಲೊಮ್ಮೆ ಮತ್ತು ನೆಟ್ಟ ನಾಲ್ಕನೇ ದಿನ ನೀರು ಹಾಕಬೇಕು. ಅನಂತರ 7-10 ದಿನಗಳಿಗೊಮ್ಮೆ ನೀರು ಹಾಕಿದರೆ ಸಾಕಾಗುತ್ತದೆ. ಮೂರು ಬಾರಿ ಮಣ್ಣನ್ನು ನುಸುಲುಗೊಳಿಸಿ ಬುಡಗಳಿಗೆ ಹಾಕತಕ್ಕದ್ದು. ನೆಟ್ಟ ಏಳು ತಿಂಗಳಲ್ಲಿ ಎಕರೆಗೆ ಸರಾಸರಿ 7000-8000 ರಾತಲ್ ಗೆಡ್ಡೆಗಳನ್ನು ಅಗೆದು ತೆಗೆಯಬಹುದು.

ನವಿಲುಕೋಸು (ಖೋಲ್-ಖೋಲ್, ಖೋಲ್‌ರಬಿ, ಬ್ರಸ್ಸಿಕ ಒಲೆರೇಸೀ ವರ್ - ಕಾಲೊ ರಪ ಕ್ರೂಸಿಫೆರಿ ಕು.) ಬೀಟ್ರೂಟ್ : ಮರಳು ಮಿಶ್ರಿತ ನೆಲದಲ್ಲಿ ನವಿಲುಕೋಸು ಚೆನ್ನಾಗಿ ಬೆಳೆಯುತ್ತದೆ. ಮಿತವಾಗಿ ಉಷ್ಣವಿರುವ ಪ್ರದೇಶ ಈ ಬೆಳೆಗೆ ಯೋಗ್ಯವಾಗಿರುತ್ತದೆ. ತಮಿಳಿನಲ್ಲಿ ಇದನ್ನು ನೂಲ್ಕೋಲ್ ಎಂದು ಕರೆಯುತ್ತಾರೆ. ಗುಡ್ಡಪ್ರದೇಶದಲ್ಲಾದರೆ ಮಾರ್ಚಿಯಿಂದ ಜುಲೈ ತಿಂಗಳವರೆಗೂ ಸಮತಟ್ಟಾದ ಪ್ರದೇಶಗಳಲ್ಲಾದರೆ ಆಗಸ್ಟ್‌ನಿಂದ ಡಿಸೆಂಬರ್ ತಿಂಗಳವರೆಗೂ ಇದನ್ನು ಬೆಳೆಸಬಹುದು. ಹೆಕ್ಟೇರಿಗೆ 400 ಗ್ರಾಂ ಬೀಜಗಳನ್ನು ಬಿತ್ತಬೇಕಾಗುತ್ತದೆ. 30 x 20 ಸೆಂ.ಮೀ. ಅಂತರದಲ್ಲಿ ನವಿಲುಕೋಸನ್ನು ನೆಡಬೇಕು. ಹೆಕ್ಟೇರಿಗೆ 25 ಟನ್ ಹಟ್ಟಿಗೊಬ್ಬರವನ್ನು ಅಡಿಗೊಬ್ಬರವಾಗಿ ಹಾಕಬೇಕು. ನೆಟ್ಟ ಅನಂತರ 5-6 ದಿನಗಳಿಗೊಮ್ಮೆ ನೀರು ಹಾಯಿಸಿದರೆ ಸಾಕಾಗುವುದು. ಇದರ ಕೃಷಿ ಸಾಮಾನ್ಯ ಎಲೆಕೋಸಿನಂತೆಯೇ ಆಗಿರುತ್ತದೆ. ಇದು ದಂಟು ತರಕಾರಿಯಾಗಿರುತ್ತದೆ. ಬಿತ್ತನೆ ಮಾಡಿದ 75-90 ದಿನಗಳಲ್ಲಿ ದಂಟು 3 ಅಂಗುಲ ದಪ್ಪಕ್ಕೆ ಉರುಟುರುಟಾಗಿ ಬರುತ್ತದೆ. ಈ ಸಮಯದಲ್ಲಿ ಅದನ್ನು ಅಗೆದು ಅಡುಗೆಗೆ ಅಥವಾ ಮಾರಾಟಕ್ಕೆ ವಿನಿಯೋಗಿಸಬೇಕು. ಇನ್ನಷ್ಟು ಕಾಲ ಬೆಳೆಯಲು ಬಿಟ್ಟರೆ ಅದು ನಾರಾಗುತ್ತದೆ.

ಬೀಟ್ರೂಟ್ ಮತ್ತು ನವಿಲುಕೋಸಿನ ಕೃಷಿ ಬಹಳಷ್ಟು ಮಟ್ಟಿಗೆ ಒಂದೇ ರೀತಿಯಾಗಿರುತ್ತದೆ. ಬಿತ್ತನೆಗೆ ಬೀಟ್ರೂಟ್ ಹೆಕ್ಟೇರಿಗೆ 5 ಕಿಲೋ ಬೇಕಾಗುತ್ತದೆ. ನವಿಲುಕೋಸನ್ನು 30 x 20 ಸೆಂ.ಮೀ. ಅಂತರದಲ್ಲಿ ನೆಟ್ಟರೆ ಬೀಟ್ರೂಟನ್ನು 40 x 10 ಸೆಂ.ಮೀ. ಅಂತರದಲ್ಲಿ ನೆಡಬೇಕು. ಉಳಿದಂತೆ ಎರಡು ತರಕಾರಿಗಳನ್ನು ಬೆಳೆಸುವ ರೀತಿ ಒಂದೇ ಆಗಿರುತ್ತದೆ.

ಈರುಳ್ಳಿ (ಆನಿಯನ್, ಅಲ್ಲಿಯಂ ಸೆಪ - ಲಿಲ್ಲಿಯೇಸೀ ಕು.) : ಎಲ್ಲ ಬಗೆಯ ಮಣ್ಣಿನಲ್ಲೂ ಇದನ್ನು ಬೆಳೆಸಬಹುದು. ಮರಳಿನಿಂದ ಕೂಡಿದ ನೆಲ ಈರುಳ್ಳಿ ಬೆಳೆಗೆ ಅತ್ಯಂತ ಯೋಗ್ಯವಾಗಿದೆ. ಈರುಳ್ಳಿಯಲ್ಲಿ ಎರಡು ವಿಧಗಳಿವೆ. 1) ಸಣ್ಣ ಈರುಳ್ಳಿ 2) ದೊಡ್ಡ ಈರುಳ್ಳಿ, ಸಣ್ಣ ಈರುಳ್ಳಿಯನ್ನು ಬೆಳೆಸಲು ಏಪ್ರಿಲ್-ಮೇ ತಿಂಗಳಲ್ಲಿ ಮತ್ತು ಅಕ್ಟೋಬರ್-ನವೆಂಬರ್ ತಿಂಗಳು ಉತ್ತಮವಾದರೆ ದೊಡ್ಡ ಈರುಳ್ಳಿಯನ್ನು ಬೆಳೆಸಲು ಮಾರ್ಚ್ ಮತ್ತು ಆಗಸ್ಟ್ ತಿಂಗಳು ಉತ್ತಮವಾಗಿರುತ್ತದೆ.

ಸಣ್ಣ ಈರುಳ್ಳಿಯಾದರೆ ಹೆಕ್ಟೇರಿಗೆ ಸುಮಾರು 1000-1250 ಕಿಲೋ ಬೀಜಗಳು ಬೇಕಾದರೆ ದೊಡ್ಡ ಈರುಳ್ಳಿ ಬೀಜಗಳು 7-8 ಕಿಲೋ

ಸಾಕಾಗುತ್ತವೆ. ಸಣ್ಣ ಈರುಳ್ಳಿಯನ್ನು ನೇರವಾಗಿ 10 x 10 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬಹುದು. ದೊಡ್ಡ ಈರುಳ್ಳಿಯನ್ನು ಬಿತ್ತನೆ ಮಾಡಿದ 30ನೇ ದಿನ ಗಿಡಗಳನ್ನು ಬೇರುಸಹಿತ ಕಿತ್ತು ಸಾಲುಗಳನ್ನು ಮಾಡಿ 10 x 10 ಸೆಂ.ಮೀ. ಅಂತರದಲ್ಲಿ ನೆಡಬೇಕು. ಹೆಕ್ಟೇರಿಗೆ 15 ಟನ್ ಹಟ್ಟಿಗೊಬ್ಬರವನ್ನು ಅಡಿಗೊಬ್ಬರವಾಗಿ ಹಾಕಬೇಕು. ಅನಂತರ 30ನೇ ದಿನ ಸಣ್ಣ ಈರುಳ್ಳಿಗೆ 30 ಕಿಲೋ ನೈಟ್ರೊಜನ್, 60 ಕಿಲೋ ಫೊಸ್ಫೆಟ್ ಮತ್ತು 30 ಕಿಲೋ ಪೊಟ್ಯಾಷನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ದೊಡ್ಡ ಈರುಳ್ಳಿಗೆ 30 ಕಿಲೋ ನೈಟ್ರೊಜನ್, 30 ಕಿಲೋ ಫೊಸ್ಫೆಟ್ ಮತ್ತು 30 ಕಿಲೋ ಪೊಟ್ಯಾಷನ್ನು ಮೇಲ್ಗೊಬ್ಬರವಾಗಿ ಹಾಕಬೇಕು.

ಬೆಳ್ಳುಳ್ಳಿ (ಗಾರ್ಲಿಕ್) : ಹೆಚ್ಚು ಆಮ್ಲೀಯ ಸಾರವಿಲ್ಲದ ಫಲವತ್ತಾದ ನೆಲ ಬೆಳ್ಳುಳ್ಳಿಯನ್ನು ಬೆಳೆಸುವುದಕ್ಕೆ ಯೋಗ್ಯ. ಹೆಕ್ಟೇರಿಗೆ 300-500 ಕಿಲೋ ಬೀಜ ಬೇಕಾಗುತ್ತದೆ. ಒಂದು ಅಡಿ ಅಂತರದಲ್ಲಿ ಪಾತಿಗಳನ್ನು ನಿರ್ಮಿಸಿ 10 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು. ನೆಲವನ್ನು 3-4 ಬಾರಿ ಅಗತೆ ಮಾಡಬೇಕು. ಕೊನೆಯ ಬಾರಿ ಅಗತೆ ಮಾಡಿದಾಗ ಹೆಕ್ಟೇರಿಗೆ 20 ಟನ್ ಹಟ್ಟಿ ಗೊಬ್ಬರವನ್ನು 65-75 ಕಿಲೋ ನೈಟ್ರೋಜನನ್ನು ಹಾಕಬೇಕು. ಬಿತ್ತನೆ ಮಾಡಿದ 30ನೇ ದಿನ 65 ಕಿಲೋ ನೈಟ್ರೋಜನನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ನೆಟ್ಟಕೂಡಲೆ ಒಂದು ಬಾರಿ ನೀರು ಹಾಕಬೇಕು. ಅನಂತರ ಮೂರು ದಿನಕ್ಕೆ ಒಮ್ಮೆ ನೀರು ಹಾಕಬೇಕು. ಬಳಿಕ 10 ದಿನಗಳಿಗೊಮ್ಮೆ ನೀರು ಹಾಕಿದರೆ ಸಾಕಾಗುವುದು. ಬೆಳ್ಳುಳ್ಳಿ ಕಾಣಿಸಿಕೊಂಡ ಅನಂತರ ನೀರು ಹಾಯಿಸುವುದನ್ನು ಕ್ರಮೇಣ ಕಡಿಮೆ ಮಾಡುತ್ತಾ ಬರಬೇಕು.

ಹೆಕ್ಟೇರಿಗೆ 2500-3000 ಕಿಲೋ ಬೆಳ್ಳುಳ್ಳಿಯನ್ನು ಉತ್ಪಾದನೆ ಮಾಡಬಹುದು.

ಸೊಪ್ಪು/ಎಲೆ ಮತ್ತು ದಂಟು ಬಗೆಗಳು

ಸೊಪ್ಪು: ಇವುಗಳಲ್ಲಿ ಎಲೆಗಳನ್ನೇ ಮುಖ್ಯವಾಗಿ ತಿನ್ನಲು ಬಳಸುವ ಭಾಗವಾಗಿರುತ್ತದೆ. ತಮಿಳುನಾಡಿನಲ್ಲಿ ಹಲವು ಬಗೆಯ ಸೊಪ್ಪುಗಳನ್ನು ಬೆಳೆಸುತ್ತಾರೆ. ಅವುಗಳಲ್ಲಿ ಮುಳ್ಳಿಕ್ಕೀರೆ, ಅರೆಕೀರೆ, ಸಿರಿ ಕೀರೆ, ಪೊನ್ನಾಂಗಣಿ ಕೀರೆ, ಮಣತಕಾಲಿ ಕೀರೆ, ಪಾಲಕ್ಕೀರೆ, ಬಸಳೆ, ನುಗ್ಗೆಸೊಪ್ಪು, ಅಗತ್ತಿ ಸೊಪ್ಪು ಮುಖ್ಯವಾಗಿರುತ್ತದೆ. ಅಲ್ಲದೆ ಸಂಬಾರ ಪದಾರ್ಥಗಳಾಗಿ ಬಳಸುವ ಕೊತ್ತಂಬರಿ ಸೊಪ್ಪು ಮೆಂತೆ ಸೊಪ್ಪು ಪುದೀನ ಸೊಪ್ಪು ಕರಿಬೇವು ಮುಂತಾದವುಗಳನ್ನು ಬೆಳೆಸುತ್ತಾರೆ.

ದಂಟು : ಹರಿವೆ ದಂಟು, ಬಾಳೆ ದಂಟುಗಳು ಈ ವಿಭಾಗದಲ್ಲಿ ಮುಖ್ಯವಾಗಿರುತ್ತವೆ. ಎಲೆಗಳನ್ನು ಮತ್ತು ದಂಟುಗಳನ್ನು ತರಕಾರಿಗಳಾಗಿ ಉಪಯೋಗಿಸಲಾಗುತ್ತದೆ. ಅಡುಗೆಯಲ್ಲಿ ಕೆಲವು ಗಿಡಗಳ ಎಲೆಗಳನ್ನಷ್ಟೆ ಉಪಯೋಗಿಸಿದರೆ ಮತ್ತೆ ಕೆಲವು ಗಿಡಗಳ ಎಲೆಗಳನ್ನು ಮತ್ತು ದಂಟುಗಳೆರಡನ್ನೂ ಉಪಯೋಗಿಸಲಾಗುತ್ತದೆ. ಈರುಳ್ಳಿಯಂತಹ ತರಕಾರಿಗಳಲ್ಲಿ ಎಲೆಗಳನ್ನು ಗೆಡ್ಡೆಗಳನ್ನು ಮತ್ತು ದಂಟುಗಳನ್ನು ತಿನ್ನಲು ಬಳಸುತ್ತಾರೆ. ನುಗ್ಗೆ ಮರದ ಕಾಯಿ ಹಾಗೂ ಎಲೆಗಳನ್ನು ಅಡುಗೆಯಲ್ಲಿ ಉಪಯೋಗಿಸುತ್ತಾರೆ. ಬಾಳೆ ಗಿಡದ ಕಾಯಿ, ಹೂ, ದಂಟು - ಈ ಮೂರನ್ನು ಅಡುಗೆಯಲ್ಲಿ ಬಳಸುತ್ತಾರೆ. ಸುವರ್ಣಗೆಡ್ಡೆ ಮತ್ತು ಕೆಸುವಿನ ಗೆಡ್ಡೆಯನ್ನು ಮತ್ತು ದಂಟುಗಳನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ದಂಟು ಬಗೆಗಳಲ್ಲಿ ನಾರಿನಾಂಶ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ.

ತಮಿಳುನಾಡಿನಲ್ಲಿ ಸೊಪ್ಪು / ಎಲೆ ಬಗೆಯ ತರಕಾರಿಯನ್ನು ಹೇರಳವಾಗಿ ಅಡುಗೆಯಲ್ಲಿ ಉಪಯೋಗಿಸುತ್ತಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಸೊಪ್ಪು ಮತ್ತು ದಂಟುಗಳ ಬಗ್ಗೆ ನೋಡೋಣ.

ಹರಿವೆ-ಮುಳ್ಳಿಕ್ಕೀರೆ (ಅಮರಾಂತಸ್ ಗಂಗೆಟಿಕ-ಅಮರಾಂತೇಸೀ) : ಇದೊಂದು ದಂಟು ಬಗೆಯ ಹರಿವೆ ಸೊಪ್ಪು. ಇದು ಬೆಳೆದಾಗ ದಂಟುಗಳಾಗಿಯೂ ಬಳಸಬಹುದು. ಎಲ್ಲಾ ಬಗೆಯ ಮಣ್ಣಿನಲ್ಲೂ ವರ್ಷವಿಡೀ ಬೆಳೆಸಬಹುದಾದ ಒಂದು ಬಗೆಯ ತರಕಾರಿ ಇದು.

ಎಕರೆಗೆ 30 ಗಾಡಿ ಹಟ್ಟಿಗೊಬ್ಬರವನ್ನು ಹಾಕಿ ನೆಲವನ್ನು ಚೆನ್ನಾಗಿ ಅಗೆದು ಸಮತಟ್ಟಾಗಿಸಿ ಅದರಲ್ಲಿ ಕಳಗಳನ್ನು ಮಾಡಿ ಬೀಜಗಳನ್ನು ಬಿತ್ತಬೇಕು. ಬಿತ್ತನೆ ಮಾಡಿದ ಮೇಲೆ ಮುಚ್ಚಿ ನೀರನ್ನು ಸಿಂಪಡಿಸಬೇಕು. ನೀರನ್ನು ಸಿಂಪಡಿಸದಿದ್ದರೆ ಇರುವೆಗಳು ಬಂದು ಬೀಜಗಳನ್ನು ತಿನ್ನುತ್ತವೆ. ಇರುವೆಗಳ ಕಾಟದಿಂದ ತಪ್ಪಿಸಿಕೊಳ್ಳಲು ಬೀಜಗಳನ್ನು ಬಿತ್ತುವ ಮೊದಲು ಕೈಗೆ ಸ್ವಲ್ಪ ಸೀಮೆಎಣ್ಣೆಯನ್ನು ಹಚ್ಚಿಕೊಳ್ಳಬೇಕು ಅಥವಾ ಬೀಜಗಳಿಗೆ ಸ್ವಲ್ಪ ಸೀಮೆಎಣ್ಣೆಯನ್ನು ಹಾಕಿ ಬಿತ್ತಬೇಕು. ಒಂದು ರಾತಲ್ ಮುಳ್ಳಿಕ್ಕೀರೆ ಬೀಜಗಳನ್ನು 5-6 ಸೆಂಟ್ಸ್ ನೆಲದಲ್ಲಿ ಬಿತ್ತಬಹುದು. ಬಿತ್ತಿದ ಬಳಿಕ ನೀರು ಹಾಯಿಸುತ್ತಿರಬೇಕು. ಗಿಡಗಳು 9-15 ಅಂಗುಲ ಉದ್ದಕ್ಕೆ ಬೆಳೆಯುವಾಗ ಅವುಗಳನ್ನು ಬುಡಸಹಿತ ಕಿತ್ತು ಸೊಪ್ಪಾಗಿಯೂ ದಂಟಾಗಿಯೂ ಅಡುಗೆಯಲ್ಲಿ ಬಳಸಬಹುದು. ಪ್ರತಿ ವಾರ ಕೆಲವು ಕಳಗಳನ್ನು ಮಾಡಿ ಬೀಜಗಳನ್ನು ಬಿತ್ತುತ್ತಿದ್ದರೆ ವರ್ಷವಿಡೀ ಫಸಲನ್ನು ನೀಡುತ್ತಿರುತ್ತದೆ. 3-4 ಸೆಂಟ್ಸ್ ನೆಲದಲ್ಲಿ ಒಂದು ಔನ್ಸ್ ಬೀಜ ಬಿತ್ತಿದರೆ ದಂಟು ಹರಿವೆ ಸೊಂಪಾಗಿ ಬೆಳೆದು ದಂಟುಗಳು ಮತ್ತು ಎಲೆಗಳು ಪುಷ್ಟಿಯಾಗಿರುತ್ತವೆ. ಇದರ ದಂಟುಗಳನ್ನೇ ಮುಖ್ಯವಾಗಿ ಅಡುಗೆಯಲ್ಲಿ ಉಪಯೋಗಿಸುವುದರಿಂದ ಇದನ್ನು ದಂಟು ಹರಿವೆ (ದಂಟು ಕೀರೆ) ಎಂದು ಕರೆಯುತ್ತಾರೆ. ಇದರಲ್ಲಿ 6-7 ತಿಂಗಳಷ್ಟು ದೀರ್ಘಕಾಲ ಬೆಳೆದಾಗ ಹರಿವೆ ಬಗೆಯೂ ಇದೆ. ಅಂತಹ ಹರಿವೆಯನ್ನು ಆರು ತಿಂಗಳ ದಂಟು ಹರಿವೆ ಎನ್ನುವುದುಂಟು. ಸುಮಾರು 6-9 ಅಂಗುಲ ಬೆಳೆಯುವಾಗ ಬೇರುಸಹಿತ ಕಿತ್ತು ಮನೆಯ ಹಿತ್ತಿಲಲ್ಲಿ ಎರಡು ಬದಿಗಳಲ್ಲಿ ಸಾಲುಗಳನ್ನು ಮಾಡಿ 2-3 ಅಡಿ ಅಂತರದಲ್ಲಿ ನೆಡುವುದೂ ಉಂಟು. ಇವು ಎರಡು ಅಡಿ ಎತ್ತರಕ್ಕೆ ಬೆಳೆಯುವಾಗ ಅದರಿಂದ ಹುಟ್ಟುವ ಟಿಸಿಲುಗಳನ್ನಷ್ಟೇ ಕಿತ್ತು ತರಕಾರಿಯಾಗಿ ಬಳಸಬಹುದು. ಹೀಗೆ ಟಿಸಿಲುಗಳನ್ನು ಕಿತ್ತರೆ ಆ ಜಾಗದಲ್ಲಿ ಮತ್ತೆ ಟಿಸಿಲುಗಳು ಹುಟ್ಟಿಕೊಂಡು ಬಹಳ ಕಾಲ ಸೊಪ್ಪನ್ನು ಮತ್ತು ದಂಟುಗಳನ್ನು ಕೊಡುತ್ತವೆ. ಎಡೆಯಲ್ಲಿ 4-6 ವಾರಗಳಿಗೊಮ್ಮೆ ಸ್ವಲ್ಪ ಹಟ್ಟಿಗೊಬ್ಬರ ಹಾಕಿ ನೀರನ್ನು ಹಾಯಿಸುತ್ತಿದ್ದರೆ ಒಂದೊಂದು ಗಿಡದಿಂದಲೂ 5-6 ತಿಂಗಳ ಕಾಲ ಸೊಪ್ಪನ್ನು ಕೀಳುತ್ತಾ ಇರಬಹುದು.

ಅರುಪ್ಪು ಕೀರೆ (ಅಮರಾಂತಸ್ ಟ್ರಿಸ್‌ಟಿಸ್ - ಅಮರಾಂತೇಸೀ ಕು.): ತಮಿಳುನಾಡಿನಲ್ಲಿ ಬೆಳೆಯುವ ಇನ್ನೊಂದು ಬಗೆಯ ಹರಿವೆ ಇದು. ಇದನ್ನು ತಮಿಳಿನಲ್ಲಿ ಅರಕ್ಕೀರೆ ಎಂದೂ ಕರೆಯುತ್ತಾರೆ. ಇದು ಕೇವಲ 6-9 ಅಂಗುಲವಷ್ಟೇ ಬೆಳೆಯುತ್ತದೆ. ಬೇಳೆಯ ಬದಲಿಗೆ ಈ ಹರಿವೆಯನ್ನು ಬೇಯಿಸಿ, ಅರೆದು ಅನ್ನದೊಂದಿಗೆ ಸೇರಿಸುವುದುಂಟು. ಉಪ್ಪು ನೀರಿರುವ ಪ್ರದೇಶಗಳಲ್ಲಿ ಈ ಹರಿವೆ ಚೆನ್ನಾಗಿ ಬೆಳೆಯುತ್ತದೆ. ಉಪ್ಪು ನೀರಿಲ್ಲದ

ಪ್ರದೇಶಗಳಲ್ಲಿ ಬೂದಿಯನ್ನಷ್ಟೇ ಗೊಬ್ಬರವಾಗಿ ಉಪಯೋಗಿಸಿ ಬೆಳೆಸುತ್ತಾರೆ. ಸಿರಿಕೀರೆ, ಪೊನ್ನಾಂಗಣಿ ಕೀರೆಗಳೂ ಅರಕ್ಕೀರೆಯಂತೆಯೇ ಬೆಳೆಸಬಹುದಾದ ಇನ್ನೆರಡು ವಿಧದ ಸೊಪ್ಪುಗಳು.

ಬಸಳೆ (ಬಸೆಲ್ಲ ಅಲ್ಬ, ಬಸೆಲ್ಲ ರುಬ್ರ-ಚೆನೊಪೋಡಿಯೇನಿಸೀ ಕು.): ತಮಿಳುನಾಡಿನಲ್ಲಿ ಸಾಮಾನ್ಯವಾಗಿ ಬೆಳೆಯುವ ಮತ್ತೊಂದು ಸೊಪ್ಪು ಬಸಳೆ. ಇದು ಬಳ್ಳಿಯಾಗಿ ಹರಡುವಂತಹ ಸೊಪ್ಪಿನ ಬಗೆ. ಎರಡು ಅಡಿ ಉದ್ದದ ಬಸಳೆ ದಂಟುಗಳನ್ನು ನೆಟ್ಟು ಅಥವಾ ಬೀಜಗಳನ್ನು ಹಾಕಿಯೂ ಇದನ್ನು ಬೆಳೆಸಬಹುದು. ನೆಟ್ಟು ಬಳ್ಳಿಗಳಾಗುವಾಗ ಬೇಲಿಗಳಲ್ಲಿ ಹಬ್ಬುವಂತೆ ಮಾಡಬಹುದು. ಅಥವಾ ಅಡಿ 3 ಅಡಿ ಎತ್ತರದಲ್ಲಿ ಚಪ್ಪರವನ್ನು ಹಾಕಿ ಅದರಲ್ಲಿ ಹರಡುವಂತೆ ಮಾಡಬಹುದು. ಒಂದೊಂದು ಗಿಡವೂ 5x5 ಅಡಿ ಹರಡಬಲ್ಲುದು. ಇದು ಬೆಳೆಯುತ್ತಿದ್ದಂತೆ ಟಿಸಿಲುಗಳು ಹುಟ್ಟಿಕೊಳ್ಳುತ್ತವೆ. ಈ ಎಳೆಯ ಟಿಸಿಲುಗಳನ್ನು ಕಿತ್ತು ತರಕಾರಿಯಾಗಿ ಅಡುಗೆಯಲ್ಲಿ ಉಪಯೋಗಿಸಬಹುದು. ಇದರ ದಂಟುಗಳು ದಪ್ಪವಾಗಿದ್ದರೆ ಅವುಗಳನ್ನೂ ಅಡುಗೆಯಲ್ಲಿ ಉಪಯೋಗಿಸಲಾಗುತ್ತದೆ. ದಂಟು ಎಳೆಯದಾಗಿದ್ದರೆ ಅದರಲ್ಲಿ ನಾರು ಇರುವುದಿಲ್ಲ. ಹಾಗಾಗಿ ಎಲೆಗಳೊಂದಿಗೆ ಈ ದಂಟುಗಳನ್ನು ಹಾಕಿ ಅಡುಗೆ ಮಾಡಬಹುದು. ಬಸಳೆಯಲ್ಲಿ ಹಸುರು ಮತ್ತು ಕೆಂಪು ಬಸಳೆ ಎಂದು ಎರಡು ವಿಧವಿದೆ. ಪಾಲಕ್ಕೀರೆ ಎಂಬ ಸೊಪ್ಪನ್ನು ತಮಿಳುನಾಡಿನಲ್ಲಿ ಬೆಳೆಸುತ್ತಾರೆ. ಇದು ಬಸಳೆಯ ಬಗೆಗೆ ಸೇರಿದ ಒಂದು ರೀತಿಯ ಸೊಪ್ಪು. ಬಸಳೆಯನ್ನು ಬೆಳೆಸುವ ರೀತಿಯಲ್ಲಿಯೇ ಇದನ್ನೂ ಬೆಳೆಸುತ್ತಾರೆ.

ನುಗ್ಗೆಸೊಪ್ಪು (ಮೊರಿಂಗ ಟೆರಿಗೊಸ್ಪೆರ್ಮ-ಮೊರಿಂಗೇಸೀ ಕು.) : ತಮಿಳುನಾಡಿನಲ್ಲಿ ಬೆಳೆಯುವ ಸೊಪ್ಪು ಬಗೆಯ ತರಕಾರಿಗಳಲ್ಲಿ ನುಗ್ಗೆ ಸೊಪ್ಪೂ ಒಂದು. ಇದನ್ನು ಮಳೆಯಿಲ್ಲದೆ ಇರುವ ಸಮಯದಲ್ಲಿ ಒಂದೂವರೆ - ಎರಡು ಅಂಗುಲ ದಪ್ಪವಿರುವ ನುಗ್ಗೆ ಗಿಡದ ತುಂಡುಗಳನ್ನು ಕತ್ತರಿಸಿ, ತುಂಡರಿಸಿದ ಜಾಗದಲ್ಲಿ ಸಗಣಿಯನ್ನು ಹಚ್ಚಿ 7-10 ದಿನಗಳವರೆಗೆ ಅಥವಾ ಅವುಗಳು ಚಿಗುರೊಡೆಯುವವರೆಗೆ ದಿನ್ನೆಗಳಲ್ಲಿ ಇಟ್ಟು, ಅನಂತರ ನೆಡಬೇಕಾದ ಸ್ಥಳದಲ್ಲಿ ನೆಡಬಹುದು. ಕೆಂಪು ಮಣ್ಣುಳ್ಳ ನೆಲದಲ್ಲಿ ನುಗ್ಗೆ ಸೊಂಪಾಗಿ ಬೆಳೆಯುತ್ತದೆ. ಇದರ ಸೊಪ್ಪಿನಲ್ಲಿ ಸಿ-ವಿಟಾಮಿನ್ ಇದೆ. ಇದು ಶಾಶ್ವತ ತರಕಾರಿ ಬಗೆಗೆ ಸೇರಿದುದಾಗಿದೆ. ಒಮ್ಮೆ ನೆಟ್ಟು ಬೆಳೆಸಿ ಬಿಟ್ಟರೆ ಸಾಕು, ಫಲ ಕೊಡುತ್ತಾ ಇರುತ್ತದೆ. ಉಳಿದ ತರಕಾರಿಗಳಂತೆ ಗಮನಹರಿಸಿ ಕೃಷಿ ಮಾಡಬೇಕಾದ ಅಗತ್ಯವಿಲ್ಲ.

ಕೊತ್ತಂಬರಿ ಸೊಪ್ಪು : ಫಲವತ್ತಾದ ಮಣ್ಣಿನಿಂದ ಕೂಡಿದ ನೆಲ ಕೊತ್ತಂಬರಿ ಸೊಪ್ಪನ್ನು ಬೆಳೆಸುವುದಕ್ಕೆ ಯೋಗ್ಯವಾದುದು. ಅಕ್ಟೋಬರ್-ನವೆಂಬರ್ ತಿಂಗಳು ಇದನ್ನು ಬೆಳೆಸುವುದಕ್ಕೆ ಉತ್ತಮ ಕಾಲ. ಹೆಕ್ಟೇರಿಗೆ ಸುಮಾರು 10 ಕಿಲೋ ಕೊತ್ತಂಬರಿ ಬೀಜಗಳು ಬೇಕಾಗುತ್ತವೆ. ಹೆಕ್ಟೇರಿಗೆ 25 ಗಾಡಿ ಹಟ್ಟಿಗೊಬ್ಬರವನ್ನು 45 ಕಿಲೋ ಯೂರಿಯಾ, 315 ಕಿಲೋ ಸೂಪರ್ ಪೊಸ್ಫೇಟನ್ನು ಹಾಕಿ ಉಳಬೇಕು. ಅನಂತರ ಕಳಗಳನ್ನು ಮಾಡಿ ಸಾಲಿನಿಂದ ಸಾಲಿಗೆ 22 ಸೆಂ.ಮೀ. ಅಂತರದಲ್ಲಿ ಬೀಜಗಳನ್ನು ಬಿತ್ತಬೇಕು. ಬೀಜಗಳನ್ನು ಎರಡಾಗಿ ಒಡೆದ ಅನಂತರ ಆರು ಗಂಟೆಗಳ ಕಾಲ ತಣ್ಣೀರಿನಲ್ಲಿ ನೆನೆಸಿ ಬಿತ್ತಿದರೆ ಚೆನ್ನಾಗಿ ಮೊಳಕೆಯೊಡೆಯುತ್ತವೆ. ಮೊಳಕೆಯೊಡೆಯಲು 10ರಿಂದ 20 ದಿನಗಳು ಬೇಕಾಗುತ್ತವೆ. ಬಿತ್ತನೆ ಮಾಡಿದ 90 ದಿನಗಳಲ್ಲಿ ಕಳೆಗಳನ್ನು ಕೀಳಬಹುದು. ಹತ್ತಿರ ಹತ್ತಿರವಿರುವ ಗಿಡಗಳನ್ನು ಕಿತ್ತು ಮಾರಾಟ ಮಾಡಬಹುದು. ನೆಲದ ಯೋಗ್ಯತೆಗೆ ಅನುಗುಣವಾಗಿ ಅಗತ್ಯಕ್ಕೆ ತಕ್ಕಂತೆ 7-10 ದಿನಗಳಿಗೊಮ್ಮೆ ನೀರನ್ನು ಹಾಯಿಸಬೇಕು. 30 ದಿನಗಳಲ್ಲಿ ಅಂದರೆ ಗಿಡಗಳಲ್ಲಿ ಹೂಬಿಡುವ ಮುನ್ನ ಬೇರುಸಹಿತ ಕಿತ್ತು ಉಪಯೋಗಿಸಬೇಕು. ಬೀಜಗಳಾಗಬೇಕಾದರೆ ಗಿಡಗಳನ್ನು ಕೀಳದೆ ಹಾಗೆಯೇ ಬಿಡತಕ್ಕದ್ದು. ಹೂಬಿಟ್ಟು ಕಾಯಿಗಳಾದಾಗ ಬೆಳೆಯಲು ಬಿಡಬೇಕು. ಬೆಳೆದಾಗ ಹಸುರು ಬಣ್ಣವಿರುವಾಗಲೇ ಗಿಡಗಳನ್ನು ಬುಡಸಹಿತ ಕಿತ್ತು ಒಣಗಿಸಬೇಕು. ಒಣಗಿಸಿದ ಗಿಡಗಳನ್ನು ದೊಣ್ಣೆಯಿಂದ ಬಡಿದು ಬೀಜಗಳನ್ನು ವಿಂಗಡಿಸಿ ನೆರಳಲ್ಲಿ ಒಣಗಿಸಿ ಸಂಗ್ರಹಿಸಿಡಬೇಕು.

ಕೊತ್ತಂಬರಿ ಸೊಪ್ಪನ್ನು ಮಸಾಲೆಯಾಗಿ ಅಡುಗೆಯಲ್ಲಿ ಬಳಸುತ್ತಾರೆ. ಸೊಪ್ಪಿನಿಂದ ಬರುವ ಸುಗಂಧ ಪರಿಮಳ ರುಚಿಯನ್ನು ಹೆಚ್ಚಿಸುತ್ತದೆ.

ಎಲೆಕೋಸು (ಕ್ಯಾಬೆಜ್, ಬ್ರಾಸ್ಸಿಕ ಒಲೆರೇಸೀ ವರ್ ಕ್ಯಾಪಿಟೇಟ ಕು.): ಎಲೆ ಬಗೆಗೆ ಸೇರಿದ ಒಂದು ತರಕಾರಿ. ಗುಡ್ಡಪ್ರದೇಶಗಳಲ್ಲಿ ಫಲವತ್ತಾದ ನೆಲದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಸಮತಟ್ಟಾದ ಪ್ರದೇಶಗಳಲ್ಲಿ ಮಳೆಗಾಲ ಮತ್ತು ಚಳಿಗಾಲದಲ್ಲಿ ಬೆಳೆಸಿದರೆ ಉತ್ತಮ ಬೆಳೆ ಬರುತ್ತದೆ. ಜನವರಿ, ಏಪ್ರಿಲ್ ಮತ್ತು ಆಗಸ್ಟ್ ತಿಂಗಳುಗಳು ಈ ಬೆಳೆಗೆ ಯೋಗ್ಯ ಕಾಲ.

ಒಂದು ಹೆಕ್ಟೇರಿಗೆ ಒಂದರಿಂದ ಒಂದೂಕಾಲು ಕಿಲೋ ಬೀಜ ಬೇಕಾಗುತ್ತದೆ. ನೀರು ನಿಲ್ಲದ ಹಾಗೆ ಎತ್ತರದ ಪಾತಿಗಳನ್ನು ನಿರ್ಮಿಸಿ ಬಿತ್ತನೆ ಮಾಡಬೇಕು. ಅನಂತರ 40 ದಿನಗಳಾಗುವಾಗ ಅವುಗಳನ್ನು ತೆಗೆದು 60 x 45ಸೆಂ.ಮೀ. ಅಥವಾ 60 x 60 ಸೆಂ.ಮೀ. ಅಂತರದಲ್ಲಿ ನೆಡಬೇಕು.

ಹೆಕ್ಟೇರಿಗೆ 30 ಟನ್ ಹಟ್ಟಿಗೊಬ್ಬರದೊಂದಿಗೆ 50 ಕಿಲೋ ನೈಟ್ರೋಜನ್, 100 ಕಿಲೋ ಪೊಸ್ಫೇಟ್ ಮತ್ತು 50 ಕಿಲೋ ಪೊಟ್ಯಾಷ್ ಅನ್ನು ಅಡಿಗೊಬ್ಬರವಾಗಿ ಹಾಕಬೇಕು. ನೆಟ್ಟ 30ನೇ ದಿನ 50 ಕಿಲೋ ನೈಟ್ರೋಜನನ್ನು ಮೇಲ್ಗೊಬ್ಬರವಾಗಿ ಹಾಕಬೇಕು. ಮೇಲ್ಗೊಬ್ಬರವನ್ನು ಹಾಕುವ ಸಂದರ್ಭದಲ್ಲಿ ಮಣ್ಣನ್ನು ಮಗುಚುವಂತೆ ಸಾಲುಗಳನ್ನು ಸ್ವಲ್ಪ ಅಗೆಯಬೇಕು. ವಾರಕ್ಕೆ ಎರಡು ಬಾರಿ ನೀರನ್ನು ಹಾಯಿಸಬೇಕು. ಕಾಯಿ ಕಾಣಿಸಿಕೊಂಡಾಗ ಅದು ಒಣಗದಂತೆ ಅಗತ್ಯಕ್ಕೆ ತಕ್ಕ ಹಾಗೆ ನೀರನ್ನು ಹಾಯಿಸುತ್ತಿರಬೇಕು. ಎಕರೆಗೆ 10000 ರಾತಲ್‌ವರೆಗೆ ಬೆಳೆಯನ್ನು ಪಡೆಯಬಹುದು.

ಗ್ರಂಥ ಋಣ

ವಿ.ಪಿ. ಸುಬ್ಬಯ್ಯ ಮುದಲಿಯಾರ್, ವ್ಯವಸಾಯ ನೂಲ್, ಭಾಗ I & III, ಅಮುದ ನಿಲಯಂ ಪ್ರೈ.ಲಿ., ಮದರಾಸು, 1956

ಆರ್.ನೇತಾಜಿ ಸೀತಾರಾಮನ್, ಕೆ. ಅರ್ಜುಣನ್, ವೇಳಾಣ್ಮೈಕ್ಕಳಂಚಿಯಮ್, ನ್ಯೂ ಸೆಂಚುರಿ ಬುಕ್ ಹೌಸ್ ಪ್ರೈವೇಟ್ ಲಿಮಿಟೆಡ್, ಚೆನ್ನೈ, 1982

ಎ.ಬಿ.ಬಿ.

ತಮಿಳುನಾಡಿನ ಹವಾಗುಣ ಒಂದು ಸ್ಥಳದ ಒಂದು ದಿನದ ಉಷ್ಣತೆ, ಬೀಳುವ ಮಳೆ, ಬೀಸುವ ಗಾಳಿ ವಾಯು ಮಂಡಲದಲ್ಲಿರುವ ಆರ್ದ್ರತೆ (ತೇವ) ಮೊದಲಾದವುಗಳನ್ನು ತಿಳಿಸುವುದಕ್ಕೆ 'ಹವಾಗುಣ' (Weathers) ಎಂದು ಹೆಸರು. ಹವೆಗೆ ಸಂಬಂಧ ಪಟ್ಟ ಸುದ್ದಿಗಳನ್ನು ಆಕಾಶವಾಣಿ ಮತ್ತು ದೂರದರ್ಶನ ಹಾಗೂ ವರ್ತಮಾನ ಪತ್ರಿಕೆಗಳಿಂದ ತಿಳಿದುಕೊಳ್ಳಬಹುದು.

ದೀರ್ಘಕಾಲದ ಹಾಗೂ ವಿಸ್ತಾರವಾದ ಪ್ರದೇಶದ ಸರಾಸರಿ ಹವಾಗುಣವನ್ನು ತಿಳಿಸುವುದೇ ವಾಯುಗುಣ (Climate). ಇದನ್ನು ಸಹ ದೂರದರ್ಶನ, ಆಕಾಶವಾಣಿ, ವರ್ತಮಾನ ಪತ್ರಿಕೆ ಮುಂತಾದ ಮಾಧ್ಯಮಗಳಿಂದ ತಿಳಿದುಕೊಳ್ಳಬಹುದು.

ಒಂದು ಪ್ರದೇಶದ ವಾಯುಗುಣವನ್ನು ಮುಖ್ಯವಾಗಿ ಆರು ಅಂಶಗಳಿಂದ ತಿಳಿದುಕೊಳ್ಳಬಹುದು.

1. ಯಾವುದೇ ಸ್ಥಳವಾಗಲಿ ಆ ಸ್ಥಳದಿಂದ ಭೂಮಧ್ಯ ರೇಖೆಗಿರುವ ದೂರ
2. ಸಮುದ್ರ ಕರಾವಳಿಗೆ ಇರುವ ದೂರ
3. ಸಮುದ್ರ ಮಟ್ಟದಿಂದ ಆ ಸ್ಥಳದ ಎತ್ತರ
4. ಅದರ ಉಷ್ಣತೆ
5. ಗಾಳಿ ಬೀಸುವ ದಿಕ್ಕು
6. ಮಳೆಯ ಪರಿಮಾಣ

ಭಾರತದ ವಾಯುಗುಣವನ್ನು ಋತುಕಾಲಕ್ಕನುಗುಣವಾಗಿ ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

1. ಬೇಸಗೆ ಕಾಲ
2. ನೈರುತ್ಯ ಮಾನ್ಸೂನ್ ಮಾರುತಗಳ ಕಾಲ
3. ನೈರುತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ
4. ಚಳಿಗಾಲ

1. **ಬೇಸಗೆ ಕಾಲ :** ಮಾರ್ಚ್ ಮಧ್ಯ ಭಾಗದಿಂದ ಮೇ ಅಂತ್ಯದವರೆಗೆ ಭಾರತದಲ್ಲಿ ಬೇಸಗೆ ಕಾಲ. ಇದನ್ನು ಹೆಚ್ಚು ಉಷ್ಣಾಂಶದ ಅವಧಿ ಹಾಗೂ ಮಾನ್ಸೂನ್ ಮಾರುತಗಳ ಪೂರ್ವದ ಅವಧಿ ಎಂದು ಸಹ ಕರೆಯುವರು. ಮಾರ್ಚ್ 21ರ ಮೇಷ ಸಂಕ್ರಾಂತಿಯ ಅನಂತರ ಸೂರ್ಯನ ಲಂಬ ಕಿರಣಗಳು ಸಮಭಾಜಕ ವೃತ್ತದಿಂದ ಎತ್ತರಕ್ಕೆ ಕ್ರಮೇಣ ಚಲಿಸುವವು ಇದಕ್ಕನುಗುಣವಾಗಿ 'ಉಷ್ಣ ಸಮಭಾಜಕ ವೃತ್ತ'ವೂ ಸಹ ಉತ್ತರದ ಕಡೆಗೆ ಜರುಗಿ, ಉತ್ತರ ಭಾರತದಲ್ಲಿ ಉಷ್ಣಾಂಶವು ಅಧಿಕಗೊಳ್ಳುವುದು.

2. ನೈರುತ್ಯ ಮಾನ್ಸೂನ್ ಮಾರುತಗಳ ಕಾಲ : ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮಳೆಗಾಲ ಈ ಕಾಲದಲ್ಲಿ ವಾರ್ಷಿಕ ಮಳೆಯ ಶೇ.75 ರಷ್ಟನ್ನು ಪಡೆಯುವುದಲ್ಲದೆ ಈ ಮಳೆಗಾಲದ ಅವಧಿ ಸರಾಸರಿ 100 ದಿನಗಳು.

3. ನೈರುತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ : ನೈರುತ್ಯ ಮಾನ್ಸೂನ್ ಮಾರುತಗಳು ಸೆಪ್ಟೆಂಬರ್ 15ರಿಂದ ಡಿಸೆಂಬರ್ ಮಧ್ಯಾಂತರದವರೆಗೆ ಕ್ರಮೇಣ ಹಿಮ್ಮೆಟ್ಟುವ ಸ್ಥಿತ್ಯಂತರ ಅವಧಿಯನ್ನು 'ಮಾನ್ಸೂನ್ ಮಾರುತಗಳ ನಿರ್ಗಮನಕಾಲ' ಎಂದು ಕರೆಯುವರು.

ಚಳಿಗಾಲ : ಭಾರತದಲ್ಲಿ ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಚಳಿಗಾಲವಿರುವುದು. ಇದು ಅತಿ ಕಡಿಮೆ ಉಷ್ಣಾಂಶದ, ಅತಿ ಕಡಿಮೆ ಮಳೆ ಹಂಚಿಕೆಯ ಹಾಗೂ ಅತಿಕಡಿಮೆ ಗುಡುಗು-ಸಿಡಿಲುಗಳಿಂದ ಕೂಡಿದ ಅವಧಿಯಾಗಿದೆ. ಇದಲ್ಲದೆ ದೇಶದ ಬಹುಭಾಗವು ಉಷ್ಣಾಂಶ ವಿಪರ್ಯಾಪ ಕ್ರಿಯೆಯಿಂದ ಮುಂಜಾನೆ ಕಾವಳ ಕವಿಯುವುದು ಸಾಮಾನ್ಯ.

ಮಾರುತಗಳು : ಚಳಿಗಾಲದಲ್ಲಿ ಈಶಾನ್ಯ ಮಾರುತಗಳು ಬೀಸುತ್ತವೆ. ಭೂಮಧ್ಯ ರೇಖೆಗೆ ದಕ್ಷಿಣದಲ್ಲಿರುವ ಪ್ರದೇಶಗಳಲ್ಲಿ ಉಷ್ಣವು ಅಧಿಕವಾಗಿರುವುದರಿಂದ ಗಾಳಿಯ ಒತ್ತಡ ಕಡಿಮೆಯಾಗಿರುತ್ತದೆ. ಆದ್ದರಿಂದ ಈ ಕಾಲದಲ್ಲಿ ವಾಯುವಿನ ಒತ್ತಡವಿರುವ ಮಧ್ಯ ಏಷ್ಯಾದಿಂದ ಭಾರತದ ಕಡೆಗೆ ದಕ್ಷಿಣಾಭಿಮುಖವಾಗಿ ಗಾಳಿಯು ಬೀಸುತ್ತದೆ. ಈಶಾನ್ಯ ಮಾರುತವು ನೆಲ ಭಾಗದಿಂದ ಬೀಸುವ ಕಾರಣ ಒಣಗಾಳಿ ಇರುತ್ತವೆ. ಇದು ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೀಸುತ್ತವೆ. ಈ ಗಾಳಿಗಳ ಒಂದು ಶಾಖೆಯು ಬಂಗಾಳಕೊಲ್ಲಿಯನ್ನು ದಾಟಿ ಬೀಸುವಾಗ ಸ್ವಲ್ಪಮಟ್ಟಿಗೆ ತೇವವನ್ನು ಹೀರಿಕೊಳ್ಳುತ್ತದೆ.

ಈ ಮಾರುತಗಳು ತಮಿಳುನಾಡಿನ ಕರಾವಳಿ ಪ್ರದೇಶಗಳಲ್ಲಿ ಮಿತವಾದ (ಅಂದರೆ ಸುಮಾರು 100ಸೆಂ.ಮೀ.) ರಷ್ಟು ಮಳೆಯನ್ನು ಕೊಡುತ್ತದೆ. ತಮಿಳುನಾಡಿಗೆ ಇದು ಮಳೆಗಾಲವಾಗಿರುತ್ತದೆ. ಅಷ್ಟೇ ಅಲ್ಲದೆ ತಮಿಳುನಾಡಿಗೆ ನೈರುತ್ಯ ಮಾರುತಗಳಿಂದ ಹೆಚ್ಚಿನ ಮಳೆಯಾಗುತ್ತದೆ. ತಮಿಳುನಾಡಿಗೆ ಸುಮಾರು ಶೇ. 32 ರಷ್ಟು ಮಳೆಯಾಗುತ್ತದೆ. ಈಶಾನ್ಯ ಮಾರುತದಿಂದ ಸುಮಾರು ಶೇ.48 ರಷ್ಟು ಮಳೆಯಾಗುತ್ತದೆ. (ಅಂದರೆ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ) ಕೆಲವೊಮ್ಮೆ ಈ ಮಾರುತಗಳಿಂದ ಮಳೆಯೂ ಸಹ ಬೀಳುವುದಿಲ್ಲ. ಈ ಸಂದರ್ಭದಲ್ಲಿ ಮಳೆಯನ್ನೇ ನಂಬಿ ಬಾಳುವ ಅಲ್ಲಿನ ಜನರು ನೀರಿಗಾಗಿ ಪರದಾಡಬೇಕಾಗುತ್ತದೆ.

ಯು.ಸಿ.ಎಸ್.

ತಮಿಳುನಾಡಿನಲ್ಲಿ ಬಾಳೆ ಕೃಷಿ ಬಾಳೆಹಣ್ಣು ಪ್ರಪಂಚದಲ್ಲಿ ಅತ್ಯಂತ ಜನಪ್ರಿಯವಾದ ಹಣ್ಣು. ಇತರ ಹಣ್ಣುಗಳಿಗೆ ಹೋಲಿಸಿದರೆ ಕಡಿಮೆ ಬೆಲೆಯಲ್ಲಿ ಹಾಗೂ ವರ್ಷದ ಎಲ್ಲಾ ಕಾಲಗಳಲ್ಲೂ ಸಿಗುವಂತಹ ಹಣ್ಣು. ಪಕ್ವವಾದ ಬಾಳೆಹಣ್ಣಿನಲ್ಲಿ ಶರೀರಕ್ಕೆ ಬೇಕಾಗುವ ಎಲ್ಲಾ ಪೋಷಕಾಂಶಗಳೂ ದೊರಕುತ್ತವೆ. ಮಾನವನು ಮೊತ್ತಮೊದಲು ನೆಟ್ಟು ಬೆಳೆಸಿದ ಹಣ್ಣಿನ ಗಿಡಗಳಲ್ಲಿ ಬಾಳೆಯೂ ಒಂದು. ರಾಮಾಯಣ ಮಹಾಭಾರತದಂಥ ಮಹಾಕಾವ್ಯಗಳಲ್ಲಿ ಕದಳಿ, ಕದಳೀವನ ಮುಂತಾದ ಪದಗಳನ್ನು ಸಾಕಷ್ಟು ಕಾಣಬಹುದು. ಬಾಳೆಹಣ್ಣುಗಳಲ್ಲಿ ಶರೀರಕ್ಕೆ ಅಗತ್ಯವಾದ ಪ್ರೋಟೀನ್, ಶರ್ಕರ ಪಿಷ್ಟ, ನಾರು, ಖನಿಜ ಪದಾರ್ಥ, ಜೀವಸತ್ವಗಳು ಮುಂತಾಗಿ ಸಾಕಷ್ಟು ಪ್ರಮಾಣದಲ್ಲಿ ಇರುತ್ತವೆ. ಕಲ್ಪವೃಕ್ಷವೆಂದು ಪ್ರಸಿದ್ಧವಾಗಿರುವ ತೆಂಗಿನ ಮರದಂತೆ ಬಾಳೆಯ ಮರವೂ ಒಂದಲ್ಲ ಒಂದು ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ.

ಬಾಳೆಯ ಬೇರು : ಅಶಕ್ತತೆಯನ್ನು ನಿವಾರಿಸಲು ಬಾಳೆಯ ಬೇರಿನ ಪುಡಿಯನ್ನು ಹಾಲಿನೊಂದಿಗೆ ಸೇವಿಸಬೇಕು. ಈ ರಸವು ಜಂತು ನಿವಾರಕ

ಮತ್ತು ರಕ್ತ ಸ್ರಾವವನ್ನು ತಡೆಗಟ್ಟುತ್ತದೆ. ಮಧುಮೇಹ ರೋಗದಿಂದ ಬಳಲುತ್ತಿರುವವರು ಬಾಳೆಯ ಬೇರಿನ ರಸಕ್ಕೆ ತುಪ್ಪ ಮತ್ತು ಸಕ್ಕರೆ ಬೆರೆಸಿ ಸೇರಿಸಿದರೆ ಉತ್ತಮ. ಪಶುಗಳಿಗೆ ಆಹಾರವನ್ನಾಗಿಯೂ ಬಾಳೆಯ ಬೇರನ್ನು ಉಪಯೋಗಿಸುತ್ತಾರೆ.

ಬಾಳೆಯ ಕಾಂಡ : ಕಾಂಡವನ್ನು ಸುಟ್ಟು ತಯಾರಿಸಿದ ಬೂದಿಯನ್ನು ಬಳಸಿದಲ್ಲಿ ಎದೆ ಉರಿಯನ್ನು ತಡೆಗಟ್ಟಬಹುದು. ಎಳೆದಿಂಡಿನಿಂದ ಪಲ್ಯ, ಸಾರು ಮುಂತಾದವುಗಳನ್ನು ತಯಾರಿಸಿ ತಿಂದಲ್ಲಿ ಕರುಳುಗಳಲ್ಲಿ ಹಾನಿಕಾರಕವಾದ ಅಣು ಜೀವಿಗಳಿದ್ದರೆ ಅವು ನಾಶವಾಗುತ್ತವೆ.

ಬಾಳೆಯ ಹಣ್ಣಿನ ಸಿಪ್ಪೆ : ಪಶುಗಳಿಗೆ ಇದನ್ನು ಆಹಾರವಾಗಿ ನೀಡುತ್ತಾರೆ. ಇದರಿಂದ ಬೂಟ್‌ಪಾಲಿಷ್ ಮತ್ತು ಪೇಸ್ಟ್‌ಗಳನ್ನು ತಯಾರಿಸುತ್ತಾರೆ.

ಬಾಳೆ ಎಲೆ : ಬಿಕ್ಕಳಿಕೆ ಇದ್ದಲ್ಲಿ ಬಾಳೆ ಎಲೆಗಳನ್ನು ಸುಟ್ಟು ತಯಾರಿಸಿದ ಬೂದಿ ಮತ್ತು ಜೇನುತುಪ್ಪವನ್ನು ಬೆರೆಸಿ ಸೇವಿಸಿದರೆ ತಕ್ಷಣ ಬಿಕ್ಕಳಿಕೆ ನಿಲ್ಲುತ್ತದೆ. ಎಲೆಗಳ ರಸವನ್ನು ಚರ್ಮರೋಗ ನಿವಾರಿಸಲು ಬಳಸುತ್ತಾರೆ. ಬುಟ್ಟಿ, ಗೊಂಬೆ, ಚಾಪೆ ಮೊದಲಾದ ಕರಕುಶಲ ವಸ್ತುಗಳನ್ನು ತಯಾರಿಸಲು ಹಾಗೂ ಹೂವು, ಮತ್ತಿತರ ಮೃದುವಾದ ಸರಕನ್ನು ಕಟ್ಟಲು ಬಾಳೆ ಎಲೆಗಳನ್ನು ಉಪಯೋಗಿಸುತ್ತಾರೆ. ಪಶುಗಳಿಗೂ ಇದು ಉತ್ತಮವಾದ ಆಹಾರ ಬಾಳೆ ಎಲೆಯಲ್ಲಿ ಊಟ ಮಾಡುವುದೆಂದರೆ ಬಲು ಸೊಗಸು. ಅಷ್ಟೇ ಅಲ್ಲದೆ ಅತ್ಯಂತ ಆರೋಗ್ಯಕರವಾದುದು.

ಬಾಳೆ ಹೂವು : ಆಮಶಂಕೆ, ಬಿಳಿಸೆರಗು ಮುಂತಾದ ತೊಂದರೆಗಳು ಇರುವಾಗ ಬಾಳೆಯ ಹೂವಿನ ರಸಕ್ಕೆ ಮಜ್ಜಿಗೆ ಸೇರಿಸಿ ಕುಡಿಯಬೇಕು. ಮೂತ್ರ ಜನಕಾಂಗದ ತೊಂದರೆಗಳು ಇದ್ದಲ್ಲಿ ಬಾಳೆಹೂಗಳ ರಸಕ್ಕೆ ಸೌತೇಕಾಯಿ ರಸವನ್ನು ಸೇರಿಸಿ ಕುಡಿದರೆ ಒಳ್ಳೆಯದು. ಬಾಳೆಹೂಗಳ ರಸವನ್ನು ಕಳಿತ ಬಾಳೇ ಹಣ್ಣಿನ ತಿರುಳನ್ನು ಹಸುವಿನ ಹಾಲಿನೊಂದಿಗೆ ಬೆರೆಸಿ ಕುಡಿಯುತ್ತಿದ್ದರೆ ಪದೇ ಪದೇ ಕಾಯಿಲೆ ಬೀಳುವುದನ್ನು ನಿವಾರಿಸಬಹುದು. ಬಾಳೆಹೂವುಗಳನ್ನು ತರಕಾರಿಯಾಗಿ, ಔಷಧಿಯಾಗಿ, ಕಾಗದ ತಯಾರಿಕೆಗಾಗಿ ಹಾಗೂ ಬಣ್ಣ ತಯಾರಿಸುವುದಕ್ಕಾಗಿ ಉಪಯೋಗಿಸಲಾಗುವುದು.

ಇಡೀ ಬಾಳೆಗಿಡಗಳನ್ನು ಸಾಂಪ್ರದಾಯಿಕವಾದ ಹಬ್ಬ ಹರಿದಿನಗಳಲ್ಲಿ ಧಾರ್ಮಿಕ ವಿಧಿಗಳಲ್ಲಿ, ಮದುವೆ ಮುಂಜಿ ಮುಂತಾದ ಶುಭ ಮುಹೂರ್ತಗಳಲ್ಲಿ ಉಪಯೋಗಿಸುತ್ತಾರೆ. ಬಾಳೆ ಹಣ್ಣನ್ನು ಸುಲಿದು ತಿನ್ನುವುದಲ್ಲದೆ ಚಿಪ್ಸ್, ಒಣಹಣ್ಣುಗಳ ರಸ, ಬಾಳೆಹಿಟ್ಟು, ಬಾಳೆಪುಡಿ, ಜಾಮ್, ಸಿಹಿಪಾನೀಯ, ಬ್ರಾಂದಿ ಮುಂತಾದ ಹಲವಾರು ಪದಾರ್ಥಗಳನ್ನು ತಯಾರಿಸಿ ಜೋಪಾನ ಮಾಡಿಟ್ಟು ಅನಂತರ ತಿನ್ನಲು ಬಳಸುತ್ತಾರೆ. ಅಂತಾರಾಷ್ಟ್ರೀಯ ವ್ಯಾಪಾರದ ದೃಷ್ಟಿಯಿಂದ ಬಾಳೆಹಣ್ಣು ಬಹಳ ಮುಖ್ಯವಾದುದು.

ಬಾಳೆಗಿಡದ ಪ್ರತಿಯೊಂದು ಭಾಗವೂ ಅತ್ಯಂತ ಉಪಯುಕ್ತವಾಗಿದೆ. ಪಂಚಾಮೃತ, ಕೋಸಂಬರಿ, ತಿಂಡಿ ಪ್ರಸಾದಗಳನ್ನು ಹಂಚಲು ಬಾಳೆ ಎಲೆಗಳನ್ನು ಉಪಯೋಗಿಸುತ್ತಾರೆ. ಈ ಉದ್ದೇಶದಿಂದ ತಮಿಳುನಾಡಿನ ತಂಜಾವೂರ್ ಜಿಲ್ಲೆಯೊಂದರಲ್ಲಿಯೇ ಸುಮಾರು 800 ಹೆಕ್ಟೇರ್ ಪ್ರದೇಶದಲ್ಲಿ ಎಲೆ ಬಾಳೆ ತಳಿಗಳನ್ನು ಬೆಳೆಯಲಾಗುತ್ತಿದೆ. ಪಳನಿ ಪಂಚಾಮೃತವನ್ನು ಮರೆಯಲು ಸಾಧ್ಯವೇ ? ಇದನ್ನು ಸಹ ಬಾಳೆ ಎಲೆಗಳಲ್ಲಿ ಭಕ್ತಾದಿಗಳಿಗೆ ಹಂಚುತ್ತಾರೆ.

ಬಾಳೆ ಗಿಡವು ಸಸ್ಯ ಕುಟುಂಬಕ್ಕೆ ಸೇರಿದ ಪ್ರಮುಖವಾದ ಏಕದಳ ಹಣ್ಣಿನ ಬೆಳೆ. ಇದು ಶೀಘ್ರಗತಿಯಲ್ಲಿ ಬೆಳೆಯುವಂತಹದು. ಅಂತೆಯೇ ಇದು ಬಹುವಾರ್ಷಿಕ ಸಸ್ಯ, ಯಾವುದೇ ಒಂದು ನಿರ್ದಿಷ್ಟ ಪ್ರದೇಶದಿಂದ ಅತಿಹೆಚ್ಚಿನ ಪ್ರಮಾಣದಲ್ಲಿ ಆಹಾರದ ಉತ್ಪತ್ತಿಯನ್ನು ಪಡೆಯಲು ಬಾಳೆಯಿಂದ ಮಾತ್ರವೇ ಸಾಧ್ಯ. ಭಾರತದಲ್ಲಿ ಬೆಳೆಯುವ ಹಣ್ಣಿನ ಬೆಳೆಗಳಲ್ಲಿ ಬಾಳೆ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನೂ ಮತ್ತು ವಿಸ್ತೀರ್ಣದಲ್ಲಿ ಎರಡನೆಯ ಸ್ಥಾನವನ್ನುಗಳಿಸಿದೆ.

ಬಾಳೆಹಣ್ಣುಗಳಲ್ಲಿ ಅನೇಕ ವಿಧಗಳಿವೆ. ಪೂವನ್, ಪಚ್ಚಬಾಳೆ, ಖಸ್ರಾಯ್, ರಸಬಾಳೆ, ಏಲಕ್ಕಿಬಾಳೆ, ಚಂದ್ರಬಾಳೆ, ಚಕ್ರಕೇಶಿ (ತೇನ್‌ಕದಳಿ) ಗ್ರೊಮಿಷೆಲ್, ಅಮೃತಸಾಗರ್, ಜೈಂಟ್‌ಗರ್ವನರ್, ಮಲವಾಳೈ, ಜೀರಿಗೆಬಾಳೆ, ರಾಜಾಪುರಿ, ಆನೆಕೊಂಬನ್ (ನಾಗಬಾಳೆ) ಸಿರುಮಲೈ, ಪೇಯ್‌ವಾಳೈ, ರಸತಾಳಿ, ಕದಳಿ, ನೇಂದ್ರಬಾಳೆ ಮುಂತಾದ. 300 ಕ್ಕೂ ಮೇಲ್ಪಟ್ಟ ಬಾಳೆ ತಳಿಗಳು ಇವೆ.

ಗ್ರೊಮಿಷೆಲ್, ಕ್ಯಾವೆಂಡಿಷ್, ರೋಬಸ್ಟ್ ಮುಂತಾದ ಬಾಳೆಹಣ್ಣುಗಳನ್ನು ಹೊರದೇಶಗಳಿಗೆ ಕಳುಹಿಸುತ್ತಾರೆ. ಇವು ಉತ್ತಮ ಸಂಗ್ರಹಣೆ ಮತ್ತು ಸಾಗಾಣಿಕೆ ಗುಣಗಳಿಂದ ಕೂಡಿರುತ್ತವೆ. ಶೈತ್ಯಾಗಾರದಲ್ಲಿ ದಾಸ್ತಾನುಮಾಡಿ ನಿಗದಿತ ಅವಧಿಯ ಹೊರ ತೆಗೆದಾಗ ಕೆಡದೆ ಆಕರ್ಷಕ ಬಣ್ಣ ಮತ್ತು ರುಚಿಗಳಿಂದ ಕೂಡಿರುತ್ತವೆ.

ರಸಬಾಳೆ, ಪಚ್ಚಬಾಳೆ ಮುಂತಾದ ಬಾಳೆಹಣ್ಣುಗಳನ್ನು ಹೆಚ್ಚು ಕಾಲ ಸಂಗ್ರಹಿಸಿ ಇಡಲಾಗುವುದಿಲ್ಲ.

ಬಾಳೆ ಗುಣವಿಶೇಷಗಳು

ಪೂವನ್ : ಈ ತಳಿ 13 ತಿಂಗಳಲ್ಲಿ ಫಲ ಕೊಡುತ್ತದೆ. ಎಲೆಗಳು ಸುಮಾರು 60 ಸೆಂ.ಮೀ. ಉದ್ದವಿರುತ್ತವೆ. ಮಧ್ಯಭಾಗದ ತಳಬಾಗ ಕೆನ್ನೀಲಿ ಗುಲಾಬಿ ಬಣ್ಣದಂತೆ ಇರುತ್ತವೆ. ಗೊನೆಗಳು ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ಹಣ್ಣು ಗೊನೆಗೆ ಬಿಗಿಯಾಗಿ ಅಂಟಿಕೊಂಡಿರುತ್ತದೆ. ಒಂದು ಗೊನೆಯಲ್ಲಿ 120 ರಿಂದ 250 ಹಣ್ಣುಗಳಿರುತ್ತವೆ. 8 ರಿಂದ 12 ಚಿಪ್ಪುಗಳಿರುತ್ತವೆ. ಪ್ರತಿ ಚಿಪ್ಪಿನಲ್ಲಿಯೂ 12 ರಿಂದ 15 ಹಣ್ಣುಗಳಿರುತ್ತವೆ. ರುಚಿಯಲ್ಲಿ ಸಿಹಿ-ಹುಳಿಗಳ ಸಮ್ಮಿಶ್ರಣವಾಗಿರುತ್ತವೆ. ತಿರುಳಿನಲ್ಲಿ ಅಪೂರ್ಣವಾಗಿ ವೃದ್ಧಿಹೊಂದದ ಬೀಜಗಳಿರುತ್ತವೆ. ಇವು ಚೆನ್ನಾಗಿ ಮಾಗಿದರೂ ಸಹ ಗೊನೆಯಿಂದ ಕಳಚಿ ಬೀಳುವುದಿಲ್ಲ. ನೀಲಗಿರಿ, ಪಳನಿ ಮುಂತಾದ ಕಡೆಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಸುತ್ತಾರೆ.

ರಸಬಾಳೆ : ಗಿಡಗಳು ಹೆಚ್ಚು ಎತ್ತರವಾಗಿ ಬೆಳೆಯುತ್ತವೆ. ಇದರ ಗೊನೆಗಳು ಸಾಧಾರಣವಾಗಿ ದೊಡ್ಡದಾಗಿದ್ದು ಸುಮಾರು 12 ರಿಂದ 25 ಕೆ.ಜಿ. ತೂಗುತ್ತವೆ. ಒಂದು ಗೊನೆಯಲ್ಲಿ 6 ರಿಂದ 7 ಚಿಪ್ಪುಗಳಿರುತ್ತವೆ. ಒಟ್ಟು 80 ರಿಂದ 130 ಹಣ್ಣುಗಳು ಇರುತ್ತವೆ. ಸಿಪ್ಪೆಯು ತೆಳ್ಳಗೆ ನಯವಾಗಿರುತ್ತದೆ. ತಿರುಳು ಬಿಗುವಾಗಿದ್ದು ಬೆಳ್ಳಗಿರುತ್ತದೆ. ರುಚಿಯಲ್ಲಿ ಈ ರಸಬಾಳೆಯನ್ನು ಬಿಟ್ಟರೆ ಮತ್ತೊಂದಿಲ್ಲ. ಇದನ್ನು ತಮಿಳುನಾಡಿನ ತಂಜಾವೂರ್, ಕುಂಭಕೋಣಂ ಮುಂತಾದ ಕಡೆಗಳಲ್ಲಿ ಬೆಳೆಸುತ್ತಾರೆ.

ಏಲಕ್ಕಿಬಾಳೆ : ಇದನ್ನು ನೈಪೂವನ್, ಸಫೇದ್‌ವೆಲ್ಚಿ ಎಂದೂ ಕರೆಯುವುದುಂಟು. ಇದರ ಗಿಡಗಳು ಎತ್ತರವಾಗಿ ಬೆಳೆಯುತ್ತವೆ. ಇದರ ಹುಸಿ ಕಾಂಡವು ತೆಳ್ಳಗಿರುತ್ತದೆ. ಎಲೆತೊಟ್ಟಿನ ಅಂಚು ಕೆಂಪು ಬಣ್ಣದಾಗಿರುತ್ತದೆ. ಗೊನೆಯ ತೂಕ ಸುಮಾರು 12 ಕಿ.ಗ್ರಾಂ. ಇದರಲ್ಲಿ 120 ರಿಂದ 150 ಹಣ್ಣುಗಳಿರುತ್ತವೆ. ತಮಿಳುನಾಡಿನಲ್ಲಿ ತಂಜಾವೂರ್, ತಿರುನಲ್ವೇಲಿ, ತಿರುಚ್ಚಿ ಮುಂತಾದ ಕಡೆಗಳಲ್ಲಿ ಬೆಳೆಸುತ್ತಾರೆ.

ಚಕ್ರಕೇಳಿ : ಇದನ್ನು ರಾಜಬಾಳೆ, ಪೊಂಕದಳಿ, ಜೀರಿಗೆಬಾಳೆ ಎಂದೂ ಕರೆಯುತ್ತಾರೆ. ಇದರ ಹುಸಿಕಾಂಡದ ಬಣ್ಣ ಹಳದಿ ಹಸುರು. ಅದರ ಮೇಲೆ ಕಪ್ಪು ಮಚ್ಚೆಗಳಿರುತ್ತವೆ. ಈ ಗಿಡಗಳು ಸುಮಾರು 3 ಮೀ. ಉದ್ದವಾಗಿರುತ್ತವೆ. ಗೊನೆಗಳು ಸಣ್ಣದಾಗಿರುತ್ತವೆ. ಗೊನೆಯಲ್ಲಿ ಸುಮಾರು 100 ಹಣ್ಣುಗಳು ಇರುತ್ತವೆ. ಸಿಪ್ಪೆಯ ಬಣ್ಣ ಹಳದಿ, ತಿರುಳೂ ಸಹ ಹಳದಿಯಾಗಿರುತ್ತದೆ. ಒಂದು ಗೊನೆಯಲ್ಲಿ 8-10 ಚಿಪ್ಪುಗಳಿರುತ್ತವೆ. ತಮಿಳುನಾಡಿನ ತಂಜಾವೂರ್ ಜಿಲ್ಲೆಯಲ್ಲಿ ಇದನ್ನು ವೀಳ್ಯೆದೆಲೆ ತೋಟಗಳಲ್ಲಿ ವಿಶೇಷವಾಗಿ ಬೆಳೆಸುತ್ತಾರೆ.

ಗ್ರೊಮಿಷೆಲ್ : ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧವಾದ ತಳಿ. ಅಮೆರಿಕಾ ಇಂಗ್ಲೆಂಡ್ ದೇಶಗಳಲ್ಲಿ ಇದನ್ನು ಮಾರ್ಟನಿಕ್ ಫಿಗ್ ಎಂದು ಕರೆಯುತ್ತಾರೆ. ಇದರ ಹುಸಿಕಾಂಡ ಹಳದಿ ಮಿಶ್ರಿತ ಹಸುರು ಬಣ್ಣವಿದ್ದು ಮೇಲೆಲ್ಲಾ ಕಂದು ಬಣ್ಣದ ಚುಕ್ಕೆಗಳಿಂದ ಕೂಡಿರುತ್ತದೆ. ಗಿಡುಗಳು 3 ಮೀ ಎತ್ತರವಿರುತ್ತವೆ. ಎಲೆಗಳು ಉದ್ದವಾಗಿರುತ್ತವೆ. ತಮಿಳುನಾಡಿನ ಕೊಯ್‌ಮತ್ತೂರು ಜಿಲ್ಲೆಯಲ್ಲಿ ಬೆಳೆಯುತ್ತಾರೆ. ತಿನ್ನಲು ರುಚಿಯಾಗಿರುತ್ತದೆ. ಆದರೆ ಬಹಳ ಬೇಗ ಬಾಡಿ ಹೋಗುತ್ತದೆ. ಇದರಿಂದಾಗಿ ಹಣ್ಣುಗಳ ಗಾತ್ರ ಮತ್ತು ಗುಣಮಟ್ಟ ಕಡಿಮೆಯಾಗುತ್ತದೆ.

ನಾಗಬಾಳೆ : ಇದನ್ನು ಆನೆಕೊಂಬನ್ ಎಂದು ಕರೆಯುವುದುಂಟು. ಇದರ ಹುಸಿಕಾಂಡ ಸಣ್ಣದಾಗಿರುತ್ತದೆ. ಇದು ಅಷ್ಟೇನೂ ಎತ್ತರವಾಗಿ ಬೆಳೆಯುವುದಿಲ್ಲ. ಇದರ ಗೊನೆ ಸಣ್ಣದಾಗಿರುತ್ತದೆ. ಹಣ್ಣಿನ ಗಾತ್ರವೂ ಸಣ್ಣದು. ಸಿಪ್ಪೆ ಸಾಧಾರಣವಾಗಿ ಮಂದ. ಪೂರ್ಣವಾಗಿದಾಗ ಬಂಗಾರ ಹಳದಿ ಬಣ್ಣದಿರುತ್ತದೆ. ಸಿಹಿಯಾಗಿರುತ್ತದೆ. ತಮಿಳುನಾಡಿನ ಕೊಯಮುತ್ತೂರ್, ತಿರುಚ್ಚಿ, ತಂಜಾವೂರ್ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ.

ಸಿರುಮಲೈ : ಇವುಗಳಿಗೆ ಬೆಟ್ಟ ಹಾಗೂ ಗುಡ್ಡ ಬಾಳೆಗಳು ಎನ್ನುತ್ತಾರೆ. ಇವುಗಳನ್ನು ಕೆಲವೆಡೆ ವೆಲ್ಲವಾಳೈ, ಮೂಲವಾಳೈ ಎಂದೂ ಕರೆಯುವುದುಂಟು. ರುಚಿಯಲ್ಲಿ ಹುಳಿ ಮತ್ತು ಸಿಹಿಗಳ ಸಮ್ಮಿಶ್ರಣವಾಗಿರುತ್ತದೆ. ಇದರ ಗೊನೆಗಳು 12ಕಿ.ಗ್ರಾಂ. ತೂಕವಿದ್ದು ಸುಮಾರು 90 ಹಣ್ಣುಗಳಿರುತ್ತವೆ. ಕರ್ಪೂರವಾಳೆ, ಹಜಾರ ಮುಂತಾದುವು ಈ ಗುಂಪಿಗೆ ಸೇರಿದ ಬಾಳೆಗಳಾಗಿವೆ. ಇದರ ಹಣ್ಣು ಬಲು ರುಚಿಯಾಗಿರುತ್ತದೆ. ತಮಿಳುನಾಡಿನ ಪಳನಿ, ಕೊಯಮತ್ತೂರ್ ಪ್ರದೇಶಗಳಲ್ಲಿ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಪಳನಿ ದೇವಾಲಯದಲ್ಲಿ ಪಂಚಾಮೃತಕ್ಕೆ ಇದರ ಹಣ್ಣನ್ನೇ ಬಳಸುವುದು.

ನೇಂದ್ರಬಾಳೆ : ಇದಕ್ಕೆ ಕಾಯಿಬಾಳೆ, ಮರಬಾಳೆ, ಫ್ರೆಂಚ್ ಪ್ಲಾಂಟೇನ್ ಎಂದು ಮುಂತಾಗಿ ಅನೇಕ ಹೆಸರುಗಳುಂಟು. ಇದನ್ನು ಕೇರಳದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. ಇದರ ಹುಸಿಕಾಂಡ ಕೆನ್ನೀಲಿ ಬಣ್ಣದಾಗಿರುತ್ತದೆ. 3 ರಿಂದ 6ಮೀ. ಎತ್ತರದವರೆಗೆ ಬೆಳೆಯುತ್ತದೆ. ಎಲೆಗಳು ಒರಟು. ಗೊನೆಗಳು ಸಣ್ಣದಾಗಿರುತ್ತವೆ. ಒಂದು ಗೊನೆಯಲ್ಲಿ 30 ರಿಂದ 35 ಕಾಯಿಗಳು ಇರುತ್ತವೆ. ಬಿಡಿಗೊನೆ ಸುಮಾರು 15 ಕಿ.ಗ್ರಾಂ. ಇರುತ್ತದೆ. ಇದರ ಸಿಪ್ಪೆ ಬಲು ದಪ್ಪವಾಗಿರುತ್ತದೆ. ತಿರುಳು ಬಿಗುವಾಗಿರುತ್ತದೆ. ಈ ಬಾಳೆಹಣ್ಣನ್ನು ತಿಂದರೆ ಒಗರಾಗಿಯೂ ಸಿಹಿಯಾಗಿಯೂ ಇರುತ್ತದೆ. ಇದನ್ನು ತಮಿಳುನಾಡಿನ ನೀಲಗಿರಿಯಲ್ಲಿ ಬೆಳೆಯುತ್ತಾರೆ.

ಬಾಳೆಗಿಡವು ಕೆಂಪುಗೋಡು ಮತ್ತು ಮರಳು ಮಿಶ್ರಿತವಾದ ಗೋಡುಮಣ್ಣುಗಳಲ್ಲಿ ಚೆನ್ನಾಗಿ ಫಲಿಸುತ್ತದೆ. ಇದಕ್ಕೆ ಕೊಟ್ಟಿಗೆ ಗೊಬ್ಬರ ಮತ್ತು ಹಸುರೆಲೆ ಗೊಬ್ಬರಗಳನ್ನು ಹಾಕಿದರೆ ಉತ್ತಮ. ಬಾಳೆಯು ಹಲವು ವಿಧದ ಮಣ್ಣುಗಳಲ್ಲಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿದೆ. ಆದರೂ ಆಳವಾಗಿರುವ, ಸಾರವತ್ತಾದ ಮತ್ತು ತೇವವನ್ನು ಹಿಡಿದಿಡುವ ಮಣ್ಣಾದರೆ ಉತ್ತಮ. ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಆಡುತೊರೈ ಬಾಳೆ ಸಂಶೋಧನಾ ಕೇಂದ್ರವು ಇದೆ. ಈ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ಬಾಳೆಗೆ ಅಧಿಕ ಪ್ರಮಾಣದ ಸಾವಯವ ಗೊಬ್ಬರವನ್ನು ಒದಗಿಸುವುದು ಅಗತ್ಯ ಎಂದಿದ್ದಾರೆ.

ಬಾಳೆಹಣ್ಣಿನ ಬೇಸಾಯವನ್ನು ಬಹುವಾರ್ಷಿಕ ಬೆಳೆಗಳ ಬೇಸಾಯ ಅಥವಾ ಪೆರೆನಿಯಲ್ ಪ್ಲಾಂಟೇಷನ್ ಎಂದು ಕರೆಯುತ್ತಾರೆ. ಬಾಳೆಹಣ್ಣಿನ ಸೇವನೆಗೆ ಇತ್ತೀಚೆಗೆ ಜನರು ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದಾರೆ. ಸೇವಿಸುವ ಆಹಾರ ಪೌಷ್ಟಿಕವಾಗಿರಬೇಕು. ಆದ್ದರಿಂದ ಬಾಳೆಹಣ್ಣನ್ನು ಸೇವಿಸುತ್ತಾರೆ.

ಯು.ಪಿ.ಎಸ್.

ತಮಿಳು ಪ್ರಾಚೀನ ಸಾಹಿತ್ಯದಲ್ಲಿ ಕೃಷಿ ತಮಿಳು ಜನತೆ ಪ್ರಾಚೀನ ಕಾಲದಿಂದಲೂ ಮಳೆಯನ್ನೇ ನಂಬಿ ಜೀವಿಸುತ್ತಾ ಬಂದಿದ್ದಾರೆ. ಮೊದಲಿನಿಂದಲೂ ಕೃಷಿಯನ್ನು ಆರಾಧಿಸುತ್ತಾ ಬಂದಿದ್ದಾರೆ. ಅವರು ಮಾಡುತ್ತಾ ಬಂದಿದ್ದ ಇತರ ಕಸುಬುಗಳೆಲ್ಲವೂ ಕೃಷಿಗೆ ಪೂರಕವಾಗಿದ್ದುವು. ಮಳೆಯಿಲ್ಲದೆ ಹುಲ್ಲು ಕೂಡ ಚಿಗುರುವುದಿಲ್ಲ ಎನ್ನುವರು. ಎತ್ತರವಾದ ಬೆಟ್ಟ, ಗುಡ್ಡ, ಕಾಡುಗಳಿಂದ ನೆರೆದಿದ್ದ ಪ್ರಾಚೀನ ತಮಿಳುನಾಡಿನಲ್ಲಿ ಕಾಲಕಾಲಕ್ಕೆ ತಪ್ಪದೆ ಮಳೆಯಾಗುತ್ತಿತ್ತು. ನಿರ್ದಿಷ್ಟ ಕಾಲಾವಧಿಯಲ್ಲಿ ನದಿ, ಕೆರೆ ಕುಂಟೆಗಳೆಲ್ಲವೂ ತುಂಬಿ ಹರಿಯುತ್ತಿದ್ದವು. ಹಾಗಾಗಿ ಕೃಷಿಯು ಸಮೃದ್ಧಗೊಂಡು ಬೆಳೆದುದರಿಂದ ಆಹಾರಕ್ಕೆ ಯಾವುದೆ ರೀತಿ ಕೊರತೆಯಿರಲಿಲ್ಲ. ಆದರೂ ಕೆಲವು ಕಾಲಘಟ್ಟಗಳಲ್ಲಿ ಪರ್ವಮಳೆಯಾಗದ ಕಾರಣ ಜನತೆ ಸಂಕಟಕ್ಕೊಳಗಾದದ್ದುಂಟು.

'ವೇಳಾಣ್' (ಕೃಷಿ) ಎಂಬ ತಮಿಳು ಪದಕ್ಕೆ ಕೊಡುಗೆ, ದಾನ, ಮಾಡುವ ಸಂಗಂ ಉಪಕಾರ ಮುಂತಾದ ಅರ್ಥಗಳಿವೆ. ಕಾಲದಲ್ಲಿ ಕೃಷಿಯೇ ಮುಖ್ಯ ಕಸುಬಾಗಿತ್ತು. ತಮಿಳರು ಶ್ರಮಜೀವಿಗಳಾದುದರಿಂದ ವ್ಯವಸಾಯದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ.

ವೇಳಾಣ್ ಎದಿರುಂ ವಿಡುಪ್ಪಿನ್ ಕಣ್ಣುಂ
(ತೊಲ್ ಕಾಪಿಯಂ: ಕಳವಿಯಲ್-17)
ವೇಳಾಣ್ ಪೆರುನೆಜಿ ವೇಣ್ಡಿಯ ಇಡತ್ತು ಲುಂ
(ತೊಲ್‌ಕಾಪಿಯಂ: ಕಳವಿಯಲ್-34)

ವೇಳಾಣ್ ಮಾನ್ದರ್ಕ್ಕು ಳದೂ ನಾಲ್ಲದು
ಇಲ್ಲೆನ ಮೊಳಿಬ ಪಿಱವ್ವೆ ನಿಗಳಚ್ಚೆ
(ತೊಲ್‌ಕಾಪಿಯಂ: ಮರಬಿಯಲ್-81)

ಎಂಬ ಸಾಲುಗಳು ತಮಿಳಿನ ಪ್ರಸಿದ್ಧವಾದ ವ್ಯಾಕರಣ ಗ್ರಂಥವಾದ 'ತೊಲ್‌ಕಾಪಿಯಂ'ನಲ್ಲಿ ಕಂಡುಬರುತ್ತವೆ. ಮೇಲಿನ ಮೂರು ಸಾಲುಗಳಲ್ಲಿ ಮೊದಲೆರಡು 'ಉಪಕಾರ' ಎಂಬ ಅರ್ಥವನ್ನು ಕೊನೆಯ ಪದ್ಯವು ಪರಂಪರಾಗತವಾಗಿ ಕೃಷಿಯಲ್ಲಿ ನಿರತವಾದ ಕೃಷಿಕ ಎಂಬ ಅರ್ಥವನ್ನು ಕೊಡುತ್ತದೆ.

ಕೃಷಿಯ ಪ್ರಾಚೀನತೆ : ಪ್ರಾಚೀನ ತಮಿಳುನಾಡಿನಲ್ಲಿಯ ನೆಲವನ್ನು ನಾಲ್ಕು ಭಾಗಗಳಾಗಿ ವಿಭಾಗಿಸಲಾಗಿತ್ತು. ಅವುಗಳೆಂದರೆ ಕುಱಿಂಜಿ (ಮಲೆ ಮತ್ತು ಮಲೆಯ ಸಮೀಪದ ಪ್ರದೇಶ), ಮುಲ್ಲೈ (ಕಾಡು ಮತ್ತು ಕಾಡಿನ ಸಮೀಪದ ಪ್ರದೇಶ), ಮುರುದಂ (ಬಯಲು ಸೀಮೆ, ಕೃಷಿ ಮತ್ತು ಬಯಲು ಸೀಮೆಯ ಸಮೀಪದ ಪ್ರದೇಶ). ನೆಯ್ದಲ್ (ಕಡಲು ಮತ್ತು ಕಡಲಿನ ಸಮೀಪದ ಪ್ರದೇಶ) ಎಂದು ವಿಭಜಿಸಿದ್ದರು. ಈ ನಾಲ್ಕು ಬಗೆಯ ನೆಲಗಳಲ್ಲಿ ನಾಲ್ಕು ಸಮುದಾಯಗಳು ಉಗಮಗೊಂಡು ಬೆಳೆದವು. ಅವುಗಳಿಗೆ ತಕ್ಕಂತೆ ಅವರ ಜೀವನ ಕ್ರಮಗಳಲ್ಲೂ ವ್ಯತ್ಯಾಸವುಂಟು.

ಪ್ರಾಚೀನ ತಮಿಳರ ಜೀವನ ಕ್ರಮಗಳನ್ನು ಐತಿಹಾಸಿಕ ಸತ್ಯಗಳನ್ನು ಸಂಗಂ ಸಾಹಿತ್ಯ ದಾಖಲಿಸುತ್ತದೆ. ಸಾಮಾನ್ಯವಾಗಿ ಕೃಷಿಯಲ್ಲಿ ಪುರುಷರೂ ಮಹಿಳೆಯರೂ ಒಟ್ಟಿಗೆ ದುಡಿಯುತ್ತಿದ್ದರು. ಆದರೂ ಸಂಗಂ ಸಾಹಿತ್ಯಗಳಲ್ಲಿ ಒಕ್ಕಲಗಿತ್ತಿಯರ ಪಾಲುಗಾರಿಕೆ ಹೆಚ್ಚಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಸಂಗಂ ಸಾಹಿತ್ಯಗಳಲ್ಲಿ ಕೃಷಿ ಮಹಿಳೆಯರು : 'ಮರುದಂ' ನೆಲದಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರನ್ನು 'ಒಕ್ಕಲಗಿತ್ತಿಯರು' ಎಂಬ ಸಾಮಾನ್ಯ ಪದದಿಂದ ಕರೆಯಲಾಗುತ್ತಿತ್ತು. ಅದೇ ರೀತಿ ಪುರುಷರನ್ನು 'ರೈತರು' ಎಂದೂ 'ಕೃಷಿಕರು' ಎಂದೂ ಕರೆಯಲಾಗುತ್ತಿತ್ತು. ಮಹಿಳೆಯರನ್ನು ಕೆಲವು ಪ್ರದೇಶಗಳಲ್ಲಿ 'ಕೆಲಸಗಾರರು' ಎಂದೂ ಕರೆಯಲಾಗುತ್ತಿತ್ತು. ಇವರು ಉತ್ತು ನೆಲವನ್ನು ಸಮಗೊಳಿಸುವುದು ಪೈರು ತೆಗೆಯುವುದು, ಪೈರು ನಾಟಿಮಾಡುವುದು, ಕಳೆ ತೆಗೆಯುವುದು, ಕೊಯ್ಲು ಹಾಗೂ ಒಕ್ಕಣಿಕೆ ಮುಂತಾದ ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು.

ಪೈರು ನಾಟಿಮಾಡುವಿಕೆ : ಗದ್ದೆಯನ್ನು ಹಲವು ಸಲ ಉತ್ತು ಪಕ್ವಗೊಳಿಸುವುದು ರೈತರ ಆದ್ಯ ಕರ್ತವ್ಯ. ಹೆಂಟೆ ಒಡೆದು ಹಳ್ಳ ಮೇಡುಗಳನ್ನು ಸಮ ಮಾಡಿ ಪೈರು ನಾಟಿ ಮಾಡುತ್ತಿದ್ದರು. ಇದನ್ನು 'ಪೆರುಪಾಣಾಱ್ಱು ಪ್ಪಡೈ' ಕೃತಿಯಲ್ಲಿ ಕೆಳಗಿನಂತೆ ಹೇಳಲಾಗಿದೆ.

ಪೈಂಜಾಯ್ ಕೊನ್ಱ ಮಣ್‌ಪಡು ಮರುಪ್ಪಿನ್
ಕಾರ್‌ಏಱು ಪೊರುದ ಕಣ್ ಅಗನ್ ಸೆಱುವಿನ್
ಉಳಾಅನ್ ನುಣ್ ತೊಳಿ ನಿರವಿಯ ವಿನೈ ಞರ್
ಮುಡಿನಾಱು ಅಳತ್ತಿಯ ನೆಡುನೀರ್‌ಚ್ ಚೆಱುವಲ್
(ಪೆರುಪಾಣಾಱ್ಱು ಪ್ಪಡೈ - ೨೦೯-೨೧೨)

(ಹಸುರು ಕೋರೆಹುಲ್ಲನ್ನು ಗುದ್ದಿ ತೆಗೆದ ಕೋಡಿನ
ಕರಿ ಎತ್ತುಗಳು ಯುದ್ಧಕ್ಕಿಳಿದ ವಿಶಾಲಗದ್ದೆಯನು
ಉಳದೆ ನುಣ್ಣಗಿನ ಕೆಸರನು ಸಮಗೊಳಿಸಿದ ರೈತರು
ಕಂತೆ ಬಿಡಿಸಿದ ಪೈರನು ನಾಟಿ ಮಾಡಿದ ನೀರಿನ ಗದ್ದೆ)

ಎಂಬ ಸಾಲುಗಳಲ್ಲಿಯ ವಿಚಾರಗಳನ್ನು ಗಮನಿಸಬಹುದಾಗಿದೆ. ಇದನ್ನೇ 'ಪೆರಿಯ ಪುರಾಣ' ಎಂಬ ಕೃತಿಯೂ ಕೆಸರಿನ ಗದ್ದೆಯನ್ನು ಸಮಗೊಳಿಸಲು ತುಳಿದು ಒಕ್ಕಲಗಿತ್ತಿಯರು ಪೈರು ನಾಟಿಮಾಡಿದರೆಂಬುದನ್ನು ಕೆಳಗಿನಂತೆ ತಿಳಿಸಿಕೊಡುತ್ತದೆ.

ಮಾದರ್ ನಾಱು ಪೆಱಿಪ್ಪವರ್ ಮಾಟ್‌ಚಿಯುಮ್
ಸೀದ ನೀಣ್‌ಮುಡಿ ಸೇರ್‌ಪ್ಪವರ್ ಸೆಯಿಗ್ಗೈಯುಮ್
ಓಸೈ ಯಾರ್ ಚೆಯ್ಯುಳುನರ್ ಒಳುಕ್ಕಮುಮ್
ಕಾದಲ್ ಸೆಯ್‌ವದೋರ್ ಕಾಟ್ ಚಿ ಮಲಿನ್ದದೇ (ಪೆರಿಯ ಪುರಾಣಂ)

(ಪೈರು ತೆಗೆವ ಪೆಣ್ಗಳ ಹಿರಿಮೆಯೂ
ತಣ್ಪು ಪೈರನು ಸೇರಿಸಿ ಕಟ್ಟುವವರ ಕೆಲಸವೂ
ದನಿಗಯ್ಯುತ್ತ ಗದ್ದೆ ಉಳುವವರ ನಡೆತೆಯೂ
ನೋಡುವವರ ಮನವನು ಸೆಳೆವ ದೃಶ್ಯ ಮಿಗಿದಿತ್ತೆ!)

ಎಂದು ವ್ಯಕ್ತಪಡಿಸಲಾಗಿದೆ. ಮೊಳೆಕೆಯೊಡೆದು ಚಿಗುರಿದ ಪೈರನ್ನು ತೆಗೆದು ಸೇರಿಸಿ ಕಂತೆ ಕಟ್ಟುವವರ ಕೆಲಸವನ್ನೂ ಶಬ್ದ ಮಾಡುವ ಗದ್ದೆಯಲ್ಲಿ ಕೆಲಸ ಮಾಡುವ ರೈತರ ನಡತೆಯನ್ನೂ ನೋಡುಗರನ್ನು ಆಕರ್ಷಿಸುವ ದೃಶ್ಯವನ್ನು ಮೇಲಿನ ಸಾಲುಗಳಿಂದ ತಿಳಿಯಬಹುದಾಗಿದೆ.

ಕಳೆ ತೆಗೆಯುವಿಕೆ : ನಾಟಿ ಮಾಡಿದ ಪೈರುಗಳು ಹುಲುಸಾಗಿ ಬೆಳೆದು ಬೆಳೆ ಸಮೃದ್ಧಿಯಾಗಬೇಕಾದರೆ ಕಳೆ ತೆಗೆಯುವುದು ಅತ್ಯಾವಶ್ಯಕ. ಏಕೆಂದರೆ ಪೈರುಗಳ ಜೊತೆ ಕಳೆಗಳೂ ಬೆಳೆದರೆ ಪೈರುಗಳಿಗೆ ಸಿಗಬೇಕಾದ ಸತ್ವಗಳನ್ನು ಅವೂ ಪಡೆಯುತ್ತವೆ. ಆದುದರಿಂದ ಕಳೆಗಳನ್ನು ಅತ್ಯಾವಶ್ಯಕವಾಗಿ ತೆಗೆಯಬೇಕಾಗುತ್ತದೆ. ಒಕ್ಕಲಗಿತ್ತಿಯರು ಕಳೆ ತೆಗೆದು ಪೈರುಗಳನ್ನು ಸಂರಕ್ಷಿಸುವ ಕೆಲಸವನ್ನು ಮಾಡುತ್ತಿದ್ದರೆಂಬುದನ್ನು 'ಪುಱನಾನೂಱ್ಱು'ನ ಒಂದು ಹಾಡಿನಿಂದ ತಿಳಿಯಬಹುದಾಗಿದೆ.

ಕೊಣ್ಣೈಕ್ ಕೂಳೈತ್ ತಣ್‌ತಳೈಕ್ ಕದ್ಯೆಸಿಯರ್
ಸಿಱುಮಾಣ್ ನೆಯ್‌ದಲ್ ಆಂಬಲೊಡು ಕಟ್‌ಕುಮ್
ಮಲಂಗು ಮಿಳಿರ್, ಸೆಱುವಿನ್ (ಪುಱನಾನೂಱ್-61)

ಎನ್ನುವ ಮೇಲಿನ ಪದ್ಯದ ಸಾಲುಗಳು ಒಕ್ಕಲಗಿತ್ತಿಯರು ಗದ್ದೆಗಳಲ್ಲಿ ಕಳೆತೆಗೆಯುವ ಚಿತ್ರಣವನ್ನು ನಮ್ಮ ಕಣ್ಮುಂದೆ ತಂದು ನಿಲ್ಲಿಸುತ್ತವೆ.

ತೆನೆಗಳನ್ನು ಕಾವಲು ಕಾಯುವಿಕೆ : ಹೊಲಗದ್ದೆಗಳಲ್ಲಿ ಪೈರುಗಳಲ್ಲಿನ ತೆನೆಗಳನ್ನು ಪಕ್ಷಿಗಳು ತಿನ್ನುತ್ತಿದ್ದುವು. ಇದನ್ನು ನಿಯಂತ್ರಿಸಲು ಮಹಿಳೆಯರು ಕಾವಲು ಕಾಯುತ್ತಿದ್ದರು.

ತೇಂಬಡು ಸಾರಱ್ ಸಿಱುದಿನೈಪ್ ಪೆರುಂಕುರಲ್
ಸೆವ್ವಾಯ್‌ಪ್ ಪೈಂಗಿಳಿ ಕವರ ನೀಮಱ್ಱು
ಎವ್ವಾಯ್‌ಚ್ ಚೆನ್ಱನೈ ಅವಣ್ ಎನಕ್ಕೂಱು
ಅನ್ನೈ ಆನಾಳ್ ಕಟಿಳ (ನಱ್ಱಿಣೈ - ೧೪೨)

ಹಿತವಾದ ಮಲೆಯ ಇಳಿಜಾರಿನಲ್ಲಿ ಕಿರು ನವಣೆ ತೆನೆಗಳನ್ನು ಕೆಂಪು ಬಾಯಿಯ ಹಸಿವಿನ ಗಿಳಿಗಳು ಇಷ್ಟಪಟ್ಟು ತಿನ್ನ ತೊಡಗಿವೆ. ಮಗಳೇ ನೀನು ಅಲ್ಲಿಲ್ಲದೆ ಎಲ್ಲಿಗೆ ಹೋಗಿದ್ದೆ ? ಎಂದು ತಾಯಿ ಮಗಳನ್ನು ಕೇಳಿದಳೆಂಬುದಾಗಿ ತಿಳಿದುಬರುತ್ತದೆ.

ಕೆಂಪು ಬತ್ತವನ್ನು ಕಾವಲು ಕಾಯುವಿಕೆ : ನವಣೆ ಪೈರುಗಳನ್ನು ಮಹಿಳೆಯರು ಕಾವಲು ಕಾಯುತ್ತಿದ್ದಂತೆಯೇ ಕೆಂಪು ಬತ್ತದ ಗದ್ದೆಗಳಲ್ಲೂ ಪಕ್ಷಿಗಳನ್ನು ಓಡಿಸುವ ಕೆಲಸಗಳನ್ನು ಮಹಿಳೆಯರೇ ಮಾಡುತ್ತಿದ್ದರೆಂಬುದನ್ನು ಕೆಳಗಿನ ಪದ್ಯದ ಸಾಲುಗಳು ತಿಳಿಸಿಕೊಡುತ್ತದೆ.

ಸೆನ್ನೆಲ್ ಉಣ್ಣ ಬೈನ್ ತೊಟ್ಟು ಮಂಞೈ
ಸೆಜೆವಳ್ಳೆ ಮಗಳಿರ್ ಒಪ್ಪಲಿನ್, ಪಜಿನ್ದು ಎಜಿನ್ದು
ತುಜೈ ನಣಿ ಮರುದತ್ತು ಇಜುಕ್ಕುಮ್ ಊರೊಡು (ಪುಜಂ - ೪೪)

ಕೆಂಪು ಬತ್ತವನ್ನು ಮುಖ್ಯ ಆಹಾರವನ್ನಾಗಿ ಮಾಡಿಕೊಂಡಿದ ಸೋಗೆ ನವಿಲುಗಳನ್ನು, ಬಳೆಗಳನ್ನು ಧರಿಸಿದ ಮಹಿಳೆಯರು ಓಡಿಸುವುದರಿಂದ ಅವು ನೀರಿನ ತೊರೆಗಳ ಪಕ್ಕದಲ್ಲಿದ್ದ ಮರುದ ಮರಗಳಲ್ಲಿ ತಂಗಿದ್ದವು ಎಂದು ಮೇಲಿನ ಸಾಲುಗಳು ಅನಾವರಣಗೊಳಿಸುತ್ತವೆ.

ಕೊಯ್ಲು ಮತ್ತು ಒಕ್ಕಣೆ : ಪೈರುಗಳು ಬೆಳೆದು ಪಕ್ವಗೊಂಡದ್ದನ್ನು ಅರಿತ ರೈತರು ತಕ್ಕ ಸಮಯದಲ್ಲಿ ಕೊಯ್ಲು ಕೆಲಸವನ್ನು ಮಾಡುತ್ತಿದ್ದರು. ಆದರೆ ಇಂದು ಯಂತ್ರಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಪ್ರಾಚೀನ ತಮಿಳು ಜನತೆ ಸಾಂಪ್ರದಾಯಿಕ ಕೊಯ್ಲು ಪದ್ಧತಿಯನ್ನು ಅನುಸರಿಸುತ್ತಿದ್ದುದರಿಂದ ಕೆಲಸಗಾರರು ಹೆಚ್ಚು ಅಗತ್ಯವಾಗಿತ್ತು.

ವಿನವಲ್ ಆಳೈವೆಲ್ ಪೋರ್ ಅಣ್ಣಲ್
.....................................ಗಿ೬೪ಇದು
ವಲ್‌ವಿಲ್ ಇಳೈಯಕ್ಕು ಅಲ್‌ಗುಪದಮ್ ಮಾಜ್ಞಾರ್
ತೊಲ್ ಕುಡಿ ಮನ್ನನ್ ಮಗಳೇ (ಪುಜಂ - ೩೫೩)

ಯಾರ ಮಗಳು ಇವಳು ಎಂದು ಕೇಳುತ್ತಾ ನಿಂತೆನು. ಇನ್ನು ನಾನು ಹೇಳುವುದನ್ನು ಕೇಳು. ಮಲೆಯಂತೆ ಗುಡ್ಡೆ ಹಾಕಿದ್ದ ಬತ್ತದ ಹೊರೆಗಳನ್ನು ಪ್ರತಿದಿನ ಬೆಳಗ್ಗೆ ಒಕ್ಕಣಿಕೆ ಮಾಡಿದ ಬತ್ತವನ್ನು ಬಲಿಷ್ಠ ವೀರರಿಗೆ ಕೊಡುವುದರಲ್ಲಿ ಬದಲಾವಣೆಯಿಲ್ಲದೆ ಪ್ರಾಚೀನ ಕುಲದ ಅರಸನ ಮಗಳವಳು.

'ನಜ್ಜಿನೈ' ಸಂಕಲನದಲ್ಲಿ ಕಂಡುಬರುವ ಕೃಷಿ ಕಸುಬು : ಸಂಗಂ ಕಾಲದ ತಮಿಳು ಜನತೆ ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲು ನೆಲಗಳಿಗನುಗುಣವಾಗಿ ಕಸುಬಿನ ಕ್ರಮಗಳನ್ನು ಕಲಿತು ಪರಿಣಿತಿ ಹೊಂದಿ ಅದರ ಪ್ರಕಾರ ತಮ್ಮ ಜೀವನದ ಮಜಲುಗಳನ್ನು ಔನ್ನತ್ಯಕ್ಕೇರಿಸಿಕೊಂಡರು. ನೆಲಗಳ ರಚನೆಗೆ ತಕ್ಕಂತೆಯೂ ಋತು ಬದಲಾವಣೆಗಳಿಗೆ ತಕ್ಕಂತೆಯೂ ಜೀವನದ ಪಥವನ್ನು ವೃದ್ಧಿಸಿಕೊಂಡರು ಎಂಬುದನ್ನು 'ನೆಜ್ಜಿನೈ' ಸಂಕಲನವು ಅನಾವರಣಗೊಳಿಸುವ ಕೃಷಿ ಕಸುಬು ಇಂತಿದೆ.

ಕೃಷಿ ಕಸುಬು : ನೀರು ಮತ್ತು ನೆಲ ಸಮೃದ್ಧಿಗಳನ್ನು ಹೊಂದಿದ್ದ ಭಾಗವಾಗಿಯೂ ಬಯಲು ಸೀಮೆ ಮತ್ತು ಬಯಲು ಸೀಮೆಯ ಸಮೀಪದ ಪ್ರದೇಶವಾಗಿಯೂ ಇದ್ದುದು ಮರುದಂ ನೆಲವಾಗುತ್ತದೆ. ಇಲ್ಲಿ ಜೀವಿಸಿದ್ದವರು ರೈತರು, ಒಕ್ಕಲಗಿತ್ತಿಯರು, ಮುಂತಾದವರಾಗಿದ್ದರು. ಇವರು ಮಾನವ ಬದುಕಿಗೆ ಮೂಲಭೂತವಾದ ಆಹಾರ ವಸ್ತುಗಳನ್ನು ಅಗತ್ಯವನ್ನರಿತು ಬೆಳೆದು ವೃದ್ಧಿಸಿದರು.

ನೆಲ : ಕೃಷಿ ಕಸುಬಿಗೆ ಅಡಿಪಾಯವಾಗಿರುವುದು ನೆಲ ಹಾಗೂ ನೀರು. ಸಂಗಂ ಕಾಲದ ತಮಿಳರು ನೆಲಗಳನ್ನು ಪ್ರಕೃತಿಗೆ ತಕ್ಕಂತೆ ವರ್ಗೀಕರಿಸಿ ಕೊಂಡು ತಮ್ಮ ಕಸುಬುಗಳನ್ನು ಮಾಡತೊಡಗಿದರು. ಇದನ್ನು

ನಿಲನೀರ್ ಆರಕ್ಕಿನ್ಜಂಗ್ ಕುಟೈಪ್ಪ
....
ಕುಜಿವಾ ಕೊನ್ಜ ಇಜೈಕ್ಕೊಡಿ ನಜೈಪ್ಪಾರ್
ನಜುಂಗಾಟ್ ಆರಂಜ್ ಚುಜ್ಜುವನ ಅಗೈಪ್‌ಯುಮ್ (ನಜ್ಜಿನೈ-1-4)

ಎನ್ನುವ ಪದ್ಯದ ಸಾಲುಗಳಿಂದ ತಿಳಿಯಬಹುದಾಗಿದೆ. ಮತ್ತೊಂದು ಹಾಡಿನಲ್ಲಿ 'ಉಲೋಚ್ಚನಾರ್' ಎಂಬ ಕವಿ

ಪೆಯಿನ್, ವಿಡುಮಾನ್ ಉಟೈಯಿನಂ ವೆಜುಪ್ಪತ್ ತೋನ್ಜಿ
ಇರುಂಗದಿರ್ ನೆಲ್ಲಿನ್ ಪಾಣರ್ ಅಹ್‌ದೇ
ವಜಿಪ್ಪಿನ್ ಮಾನೀರ್ ಮುನ್‌ಡಗತ್ತಾ ಅಯ್‌ಚ್ ಚೇಜುಪುರ್ಲಂದಿ
ಇರುಂಗಟೆಚ್ ಚೆಜುವಿನ್ ವೆಳ್ಳಿಪ್ಪು ವಿಳೈಯುಮ್

(ನಜ್ಜಿನೈ ೩೧೧: ೧-೪)

ಮೇಲಿನ ಪದ್ಯದ ಸಾಲುಗಳಲ್ಲಿ ನೆಲಗಳ ರಚನೆಯಿಂದ ಮಾಡಬಹುದಾದ ಕಸುಬುಗಳ ಕ್ರಮಗಳನ್ನು ಹೇಳಿದ್ದಾರೆ.

ನೀರು : ನೀರಿನ ಸಮೃದ್ಧಿಯನ್ನು ಸಂಗಂ ಕಾಲದ ಜನತೆ ಚೆನ್ನಾಗಿ ಅರಿತಿದ್ದರು. ಕೃಷಿ ಕೆಲಸಗಳನ್ನು ಮಾಡುವುದಕ್ಕೆ ಮೂಲಬೂತವಾದದ್ದು ನೀರು. ಪೈರುಗಳು ಸಮೃದ್ಧವಾಗಿ ಬೆಳೆಯಲು ಹುಲುಸಾಗಿ ಬೆಳೆಯನ್ನು ನೀಡಲು ನೀರು ಅತ್ಯಾವಶ್ಯಕವಾದದ್ದು ಎಂಬುದನ್ನು

ನೀರಿನ್ ಜಿಮ್ಮೈಯಾ ವುಲಗಮ್ ಪೋಲ (ನಜ್ಜಿನೈ - ೧:೬)

(ನೀರಿಲ್ಲದೆ ಲೋಕವಿಲ್ಲ)

ಈ ಪದ್ಯದ ಸಾಲಿನಲ್ಲಿ ಕವಿ ಕಬಿಲರು ಲೋಕಕ್ಕೆ ನೀರು ಅತ್ಯಾವಶ್ಯಕವಾದ್ದು ಎಂದು ಒತ್ತಿ ಹೇಳುತ್ತಾರೆ.

ಕಾಲೊಡು ಪಟ್ಟ ಮಾರಿ
ಮಾಲ್‌ವರೈ ಮಿಳಿಕ್ಕುಮ್ ಉರುಮಿನುಂಕೊಡಿದೇ

(ನಜ್ಜಿನೈ - ೨೯-೧೦)

ಎನ್ನುವ ಮೇಲಿನ ಹಾಡಿನ ಸಾಲುಗಳು ಗಾಳಿಯಿಂದ ಮಲೆ ಸಮೃದ್ಧವಾಗಿ ಸುರಿಯುತ್ತದೆ. ಎಂಬ ವಿಚಾರವನ್ನು ತಿಲಿಸುತ್ತದೆ.

ನೆಲವನ್ನು ಉಳುವಿಕೆ : ಕೃಷಿ ಕೆಲಸವೆಂಬುದು ನೆಲವನ್ನು ಪಕ್ವಗೊಳಿಸುವುದು, ಆ ರೀತಿ ಉಳುದು ನೆಲವನ್ನು ಪಕ್ವಗೊಳಿಸಿ ಪೈರುಗಳನ್ನು ಬೆಳೆಯಲು ತಕ್ಕಂತೆಯೂ ಪರ್ವನ್ನರಿತು ಪೈರುಗಳನ್ನು ನಾಟಿಗೊಳಿಸಲೂ ತಮಿಳರು ಕಲಿತಿದ್ದರು. ಬೆಳೆ ನೆಲಗಳಲ್ಲಿ ನಾಟಿ ಮಾಡುವುದಕ್ಕೆ ಮುಂಚೆ ನೀರನ್ನು ಹಾಯಿಸಿ ಎಮ್ಮೆಗಳಿಂದ ಉತ್ತು ಉಳುದು ಪಕ್ವಗೊಳಿಸುತ್ತಿದ್ದರೆಂಬುದನ್ನು

ಮಲೈಗಳ್ಳೆ ಡನ್ನ ನಿಲೈಪುಣರ್ ನಿಲಪ್ಪಿನ
ಪೆರುನೆಜ್ ಪಲ್‌ಕೂಟ್ ಟೆರುಮ್ಮೈ ಉಜಿವ (ನಜ್ಜಿನೈ - 60:1-2)

ಮೇಲಿನ ಸಾಲುಗಳಿಂದ ಎಮ್ಮೆಗಳನ್ನು ಉಳುವುದಕ್ಕೆ ಉಪಯೋಗಿಸುತ್ತಿದ್ದರು ಎಂಬುದನ್ನು ತಿಳಿಯಬಹುದು. ಪ್ರಾಚೀನ ತಮಿಳರು ಕೃಷಿ ಬದುಕಿಗೆ ತೊಡಗಿಸಿಕೊಳ್ಳುವ ಆರಂಭಿಕ ಘಟ್ಟದಲ್ಲಿ ಎತ್ತುಗಳಿಗೆ ಬದಲಾಗಿ ಎಮ್ಮೆಗಳನ್ನು ಉಳಲು ಬಳಸಿಕೊಳ್ಳುತ್ತಿದ್ದರು. ಕೃಷಿಕನ ಬಾಹುಬಲ ಹಾಗೂ ಎಮ್ಮೆಗಳು ಹೆಚ್ಚು ಬಲಿಷ್ಠವಾಗಿದ್ದುದೇ ಇದಕ್ಕೆ ಕಾರಣವಾಗಿತ್ತು.

ಮತ್ತು ಇನ್ನೊಂದು ಹಾಡಿನಲ್ಲಿ ದೊಡ್ಡ ಮಲೆಯ ಪಕ್ಕದಲ್ಲಿ ಉಳುದ ವಿಚಾರವನ್ನು ಸೆಂಗಣ್ಣನಾರ್ ಎಂಬ ಕವಿ ದಾಖಲಿಸಿದ್ದಾರೆ.

ಇರುಂಗಲ್ ಅಡಕ್ಕತ್ತು ಎನ್ನೆಯರ್ ಉಟುದ
ಕರುಂಗಾಜ್ ಸೆಂದಿನೈ............. (ನಟ್ರಿನೈ - ೧೨೨: ೧-೨)

ಗೊಬ್ಬರ : ನೆಲವನ್ನು ಎಮ್ಮೆಗಳಿಂದ ಉಳುದ ಅನಂತರ ಆ ನೆಲದಲ್ಲಿ ಸಾಕು ಪ್ರಾಣಿಗಳಾದ ಆಡು, ಹಸು, ಎಮ್ಮೆ ಮುಂತಾದವುಗಳ ಸಗಣಿಯನ್ನು ಸುರಿದು ನೆಲವನ್ನು ಪಕ್ವಗೊಳಿಸುತ್ತಿದ್ದರು.

ಇರುಂಬುನಿಜ್ಜು ಎರುಮೈ ಪೆರುಂಜ್ ಚೆವಿಕ್ಕು ಟಿವಿ
ಪೈನ್ನಾದು ಎರುವಿನ್ ನಂಗುದುಯಿಲ್ ಮಡಿಯುಮ್
(ನಟ್ರಿನೈ - ೨೭೧: ೧-೨)

ಎಂಬ ಹಾಡಿನಲ್ಲಿ ಬೆಳೆಯುವ ನೆಲಗಳಿಗೆ ಸಾಕು ಪ್ರಾಣಿಗಳ ಸಗಣಿಯನ್ನು ಸಂಗ್ರಹಿಸಿ ಹಾಕುತ್ತಿದ್ದರು ಎಂಬುದನ್ನು ತಿಳಿಸುತ್ತದೆ.

ನಾಟಿ : ನೆಲಕ್ಕೆ ಚೆನ್ನಾಗಿ ನೀರನ್ನು ಹಾಯಿಸಿ ಉಳುದು, ಗೊಬ್ಬರ ಹಾಕಿದ ಗದ್ದೆಗಳಲ್ಲಿ ಪೈರುಗಳನ್ನು ನಾಟಿ ಮಾಡಿದುದನ್ನು

ನೀರುಜು ಸೆಜುವಿಲ್ ನಾಜುಮುಡಿ ಯಟಿತ್ತನಿನ್ (ನಟ್ರಿನೈ - ೬೦:೭)

ಕೊಯ್ಲು : ಬತ್ತದ ತೆನೆಗಳು ಚೆನ್ನಾಗಿ ಬಲಿತು ಕೊಯ್ಲಿಗೆ ಸಿದ್ಧವಾದ ಗದ್ದೆಯಲ್ಲಿ ಅವುಗಳನ್ನು ಪಕ್ಷಿಗಳು ತಿನ್ನದಿರಲು 'ತಣ್ಣುಮೈ' ಎಂಬ ಶಬ್ದ ಮಾಡುವ ಸಾಧನವನ್ನು ಉಪಯೋಗಿಸುತ್ತಿದ್ದರು ಎಂಬುದನ್ನು

ವೆಣ್ಣೆಲ್ ಅವಿನರ್ ತಣ್ಣುಮೈ ವೆರೀಇಇಪ್
ಪಟಿನಪ್ ಪಲ್‌ಬುಳ್ ಇರಿಯಕ್ ಕಟಿನಿ (ನಟ್ರಿನೈ - ೩೫೦:೧-೨)

ಈ ಹಾಡಿನಲ್ಲಿ ಕಾಣಬಹುದಾಗಿದೆ.

ಕೊಯ್ಲು ಮಾಡಿದ ಬತ್ತದ ತೆನೆಗಳನ್ನು ಕಣಕ್ಕೆ ತಂದು ತೆನೆಯಿಂದ ಬೇರ್ಪಡಿಸುವ ಮರುದನಿಳ ನಾಗನಾರ್ ಕ್ರಮವನ್ನು ಕುರಿತು

ವಯಲ್‌ವೆಳ್ ಆಂಬಲ್ ಸೂಡುದರು ಪುದುವೀಳಕ್
ಕನ್ರುಡೈಪ್ ಪುನಿಜ್ಜಾ ದಿನ್ರ ಮಿಚ್ಚಿಲ
ಓಯ್‌ವಿಡು ನಡ್ಡೈಪ್ಪಗಡು ಆರುಮುರನ್ (ನಟ್ರಿನೈ - ೨೯೦: ೧-೩)

ಈ ಪದ್ಯದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

ಎನ್ನುವ ಹಾಡಿನ ಸಾಲುಗಳಲ್ಲಿ ಬತ್ತವನ್ನು ಕಟಾವು ಮಾಡಿದ ಅನಂತರ ಉಳಿದ ಕೂಳೆಯನ್ನು ಕರು ಹಾಕಿದ ಹಸು ಮೇಯುತ್ತಿತ್ತು ಎಂಬುದನ್ನು ಮನಮುಟ್ಟುವಂತೆ ವರ್ಣಿಸಿದ್ದಾರೆ.

ಮರುಬಿತ್ತನೆ : ಬತ್ತವನ್ನು ಕಟಾವು ಮಾಡಿದ ತಕ್ಷಣವೇ ಆ ನೆಲವನ್ನು ಪುನಃ ಪಕ್ವಗೊಳಿಸಿ ಬಿತ್ತನೆ ಮಾಡುವ ಪರಿಯನ್ನು ಈ ಕೆಳಗಿನ ಪದ್ಯದಲ್ಲಿ ವಿವರಿಸಲಾಗಿದೆ.

ಅರಿಕಾಲ ಮೂಜೆಯ ಅಂಗಣ್ ಅಗಲ್‌ವಯಲ್
ಮಜುಕಾಲ್ ಉಟುದ ಈರಚ್ ಚೆರುವಿನ್ (ನಟ್ರಿನೈ - ೨೧೦:೧-೨)

ಎನ್ನುವ ಸಾಲುಗಳಲ್ಲಿ ದಾಖಲಿಸಿದ್ದಾರೆ. 'ಮಿಳೈಕಿಟಾನ್ ನಲ್‌ವೇಟ್ಟನಾರ್' ಎಂಬ ಕವಿ.

ಕುಜೆಂಜಿ ನೆಲದ ಜನತೆಯ ಆಹಾರ ಪದ್ಧತಿ : ಕುಜೆಂಜಿ ನೆಲದ ಜನತೆ ಪರ್ವಮಳೆಗೆ ತಕ್ಕಂತೆ ನವಣೆ, 'ಐವನ' ಎಂಬ ಬತ್ತ, ಅವರೆ ಮುಂತಾದವುಗಳನ್ನು ಬಿತ್ತುವರು. ಕೆಲವು ಸ್ಥಳಗಳಲ್ಲಿ ಬಾಳೆಯನ್ನು ಬೆಳೆಯುತ್ತಿದ್ದರು. ಇವರು ಎತ್ತರವಾದ ಮರಗಳಲ್ಲಿ ಜೇನನ್ನು ತೆಗೆಯುತ್ತಿದ್ದರು.

ಕುಜೆಂಜಿ ನೆಲದ ಜನತೆಗೆ ನವಣೆಯೇ ಮುಖ್ಯ ಆಹಾರ ಧಾನ್ಯವಾಗಿತ್ತು. ಹಲಸಿನ ಹಣ್ಣು, ಸಿಹಿಗೆಣಸು, ಮರಗೆಣಸುಗಳನ್ನೂ ಜೇನನ್ನೂ ಪ್ರಕೃತಿ ದತ್ತವಾದ ಆಹಾರಗಳನ್ನು ಉಪಯೋಗಿಸುತ್ತಿದ್ದರು. ಹಂದಿ, ಮೊಲ, ಜಿಂಕೆ ಮುಂತಾದ ಪ್ರಾಣಿಗಳ ಮಾಂಸವನ್ನು ಆಹಾರವಾಗಿ ಸೇವಿಸುತ್ತಿದ್ದರು.

ಮುಲ್ಲೈ ನೆಲದ ಜನತೆಯ ಆಹಾರ ಪದ್ಧತಿ : ಮುಲ್ಲೈ ನೆಲದ ಜನತೆ ಹಾಲು ಮಿಶ್ರಿತ ನವಣೆಯ ಅನ್ನವನ್ನೂ ಅವರೆ ಬೇಳೆ ಮಿಶ್ರಿತ 'ವರಹು' ಅನ್ನವನ್ನೂ ಮುಖ್ಯ ಆಹಾರವಾಗಿ ಸೇವಿಸುತ್ತಿದ್ದರು. ಹಾಲಿನ ಉತ್ಪನ್ನಗಳಾದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಮುಂತಾದವು ಇವರ ಆಹಾರದಲ್ಲಿ ಹೆಚ್ಚು ಉಪಯೋಗಿಸುತ್ತಿದ್ದರು. ಮಾಂಸ ಬೆರೆತ ಅನ್ನವನ್ನೂ ಸೇವಿಸುತ್ತಿದ್ದರು.

ಮರುದ ನೆಲದ ಜನತೆಯ ಆಹಾರಪದ್ಧತಿ : ಮರುದ ನೆಲದ ಜನರ ಪ್ರಧಾನ ಕಸುಬು ಕೃಷಿ. ಕೆಂಪು ಮತ್ತು ಬಿಳಿ ಬತ್ತದ ಅಕ್ಕಿ ಇವರ ಪ್ರಮುಖ ಆಹಾರ. ಕಬ್ಬಿನ ರಸವನ್ನು ಕುಡಿಯುತ್ತಿದ್ದರು. ಇವರು ಅನ್ನದೊಡನೆ ಹೆಂಟೆಯ ಮಾಂಸವನ್ನು ಸೇರಿಸಿ ಉಣ್ಣುತ್ತಿದ್ದರು.

ನೆಯ್ದಲ್ ನೆಲದ ಜನರ ಆಹಾರಪದ್ಧತಿ : ಮೀನು ಹಿಡಿಯುವುದೇ ಈ ನೆಲದ ಜನರ ಪ್ರಮುಖ ಕಸುಬಾಗಿತ್ತು. ಇವರು ಉಪ್ಪನ್ನು ತಯಾರಿಸುತ್ತಿದ್ದರು ; ಮೀನುಗಳನ್ನು ಅಡುಗೆ ಮಾಡಿ ತಿನ್ನುತ್ತಿದ್ದರು. ಇವರಿಗೆ ಆಹಾರ ಧಾನ್ಯಗಳ ಕೊರತೆ ಇತ್ತು. ಆದುದರಿಂದ ನೆಯ್ದಲ್ ನೆಲದ ವಾಣಿಜ್ಯ ವಸ್ತುಗಳಾದ ಉಪ್ಪನ್ನೂ ಮೀನನ್ನೂ ಮಾರಾಟ ಮಾಡಿ ಧಾನ್ಯಗಳನ್ನು ಕೊಂಡು ಆಹಾರವಾಗಿ ಬಳಸುತ್ತಿದ್ದರು. ಸಂಗ್ರಹಿಸಿದ ಪದಾರ್ಥಗಳನ್ನು ಹೊರಗಿನ ಊರುಗಳಿಗೆ ಕೊಂಡೊಯ್ದು ಮಾರಿ ವಿನಿಮಯ ಸ್ವರೂಪದಲ್ಲಿ ಹೆಚ್ಚು ಬತ್ತವನ್ನು ಪಡೆದು ಹಡಗುಗಳಲ್ಲಿ ಹಾಕಿಕೊಂಡು ಬರುತ್ತಿದ್ದರು. ಕಡಲ ತೀರದಲ್ಲಿ ಬೆಳೆಯುವ ತೆಂಗು, ಎಳೆನೀರು, ಬಾಳೆ ಹಣ್ಣುಗಳು, ಹನೆ ನುಂಗು, ಗೆಣಸು ಮುಂತಾದವುಗಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದರು.

ದಿನಬಳಕೆಯ ವಸ್ತುಗಳು : ಸಂಗಂ ಸಾಹಿತ್ಯದಲ್ಲಿ ಪ್ರಮುಖವಾದ 'ಕಲಿತ್ತೊಗೈ' ಸಂಕಲನದಲ್ಲಿ ಪ್ರಾಚೀನ ತಮಿಳರು ಬಳಸುತ್ತಿದ್ದ ನಿತ್ಯ ಬಳಕೆಯ ವಸ್ತುಗಳ ಉಲ್ಲೇಖವಿದೆ.

ಸೌಂದರ್ಯ ಸ್ವಭಾವದವು : ಉಯ್ಯಾಲೆ, ಶೂಲ, ಮಡಕೆ, ಗೊಂಬೆ, ಹೊನ್ನಿನ ಬಟಲು.

ಉಪಯೋಗ ಸ್ವಭಾವದವು : ಏಣಿ, ಬಾಣ, ಬಿಲ್ಲು, ಒರಳು, ಒನಕೆ, ಮೊರ, ಕವಣೆ, ಶೂಲ, ಮಡಕೆ, ಹೊನ್ನಿನ ಬಟಲು.

ಒರಳು ಮತ್ತು ಒನಕೆ : ಕುಜೆಂಜಿ ನೆಲದ ಜನರು ಆಹಾ ಧಾನ್ಯವಾಗಿ ಉಪಯೋಗಿಸುತ್ತಿದ್ದ ನವಣೆ ಮತ್ತು ಬಿದಿರಿನ ಬತ್ತಗಳನ್ನು ಕುಟ್ಟಲು ಬಳಸುತ್ತಿದ್ದ ಒರಳು ಮತ್ತು ಒನಕೆಗಳನ್ನು ಚಂದನ ಮರದಿಂದಲೂ ಆನೆ ದಂತದಿಂದಲೂ ಮಾಡಲಾಗುತ್ತಿತ್ತು ಎಂಬುದನ್ನು-

ತಗೈಕೊಣ್ಡ ಏನಲುಳ್ ತಾಳ್‌ಕುರಲ್ ಉಱೀ
ಮುಗೈವಳರ್ ಸಾನ್ದು ಉರಲ್ ಮುತ್ತಾರ್ ಮರುಟ್‌ಪಿನ್
ವೈಸಾಲ್ ಉಲಕ್ಕೆ ವಯ್‌ನ್‌ವಯ್‌ನ್ ಒಚ್ಚೈಪ್

(*ಕಲಿತ್ತೊಗೈ - ೪೦: ೩-೫*)

(ಉತ್ತಮ ನವಣೆಹೊಲದೊಳು ಬಲಿತ ತೆನೆಯನು ಸೆಳೆದು
ಸುಗಂಧ ಚಂದನದ ಒರಳಲ್ಲಿ ಮುತ್ತಿನಂಥ ದಂತದಿಂದಾದ
ಒನಕೆಯಿಂದ ಅದಲು ಬದಲಾಗಿ ಕುಟ್ಟಿ)

ಪಾಡುಗಮ್ ವಾವಾಟಿ ತೋಟಿ ವಯಕ್ಕಳಿಱ್ಱುಕ್
ಕೊಡುಲಕ್ಕೈ ಯಾಗನಱ್ ಸೇಂಬಿನ್ ಇಲೈಗಳಗಾ

(ಕಲಿತ್ತೊಗೈ - ೪೧: ೧-೨)

(ಹಾಡೋಣ ಬಾ ಗೆಳತಿ ಬಾಳು ನೀ! ಬಲಿಷ್ಠ ಕರಿಯ
ಕೋಡಿನ ಒನಕೆಯಿಂದ ಕೋಸಿನ್ನೆಲೆಯ ಮೊರದಲಿ ಕೇರುತ್ತಾ)

ವೇಂಗೈ ತೊಲೈತ್ತ ವೆಱೆಪೊಱೆ ವಾರಣತ್
ತೇನ್ದು ಮರುಪ್ಪಿನ್ ಇನವಣ್ ಡಿಮಿರ್‌ಬೂದುಂ
ಸಾನ್ದ ಮರತ್ತಿನ್ ಇಯನ್ನ ಉಲಕ್ಕೈಯಾಲ್
ಐವನ ವೆಣ್ಣೆಲ್ ಅಱೈಯುರಟ್ ಪೆಯ್ದಿರುವಾಂ (ಕಲಿತ್ತೊಗೈ - ೪೩: ೧-೪)

(ಪಟ್ಟೆಪುಲಿಯಂ ಕೊಂದು ಮದವೇರಿದ ಚುಕ್ಕೆಗಳಿರ್ಪ ಆನೆಯ
ಬಲಿಷ್ಠ ಕೋಡಿನಿಂ ಧ್ವನಿಮಾಡಿ ಜತೆದುಂಬಿ ಮಧುವರಸಿದ
ಚಂದನ ಮರದ ಒನಕೆಯಿಂದ ವನಬತ್ತವಂ
ಕಲ್ಲೊರಳಲಿಟ್ಟು ಕುಟ್ಟುತ್ತ ದೇವನಂ ಬೇಡುವ ಹಾಗೆ)

ಮುಂತಾದ ಪದ್ಯದ ಸಾಲುಗಳಿಂದ ಅರಿಯಬಹುದಾಗಿದೆ.

ಮೊರ : ಕೋಸಿನ ಎಲೆಗಳಿಂದ ರಚಿಸಲಾದ ಮೊರಗಳನ್ನು ಬಳಸಲಾಗುತ್ತಿತ್ತು ಎಂಬ ಸುದ್ದಿಯನ್ನು

.... ನಱ್ ಸೇಂಬಿನ್ ಇಲೈಸುಳಗಾ (ಕಲಿತ್ತೊಗೈ : ೪೧-೨)

ಎಂಬ ಸಾಲಿನಿಂದ ತಿಳಿಯಬಹುದಾಗಿದೆ.

ತಿರುಕುಱಳಿನಲ್ಲಿ ಕಂಡುಬರುವ ಕೃಷಿ ವಿಚಾರಗಳು : ತಿರುವಳ್ಳುವರ ಕಾಲಘಟ್ಟದಲ್ಲಿ ತಮಿಳುನಾಡಿನಲ್ಲಿ ಜನ ಕೃಷಿ ಕಸುಬನ್ನು ಮೂಲಧಾರವಾಗಿ ಹೊಂದಿತ್ತು. ಇನ್ನಿತರ ಕಸುಬುಗಳಲ್ಲಿಯೂ ತೊಡಗಿತ್ತು. ಹಾಗಾಗಿ ತಿರುವಳ್ಳುವರು ಕೃಷಿ ವಿಚಾರಕ್ಕಾಗಿಯೇ ಪ್ರತ್ಯೇಕವಾದ ಅಧ್ಯಾಯವನ್ನು ತನ್ನ ಕೃತಿಯಲ್ಲಿ ವಿಭಾಗಿಸಿದ್ದಾರೆ. ತಮಿಳು ನಾಡಿನ ಜನರ ಮುಖ್ಯ ಆಹಾರಧಾನ್ಯವೆಂದರೆ ಇಂದಿನಂತೆ ಆ ಕಾಲದಲ್ಲೂ ಬತ್ತದ ಅನ್ನವೇ ಆಗಿತ್ತು. ಆದುದರಿಂದ ಬತ್ತವನ್ನೇ ಪ್ರಮುಖವಾಗಿ ಅಲ್ಲಿ ಬೆಳೆಯಲಾಗುತ್ತಿತ್ತು.

ತಿರುವಳ್ಳುವರು ರೈತರನ್ನು ಪ್ರಶಂಸೆ ಮಾಡಿ ಹೇಳುವಾಗ ಬಹುಪಾಲು ಮೊದಲ ವರ್ಗದವರಾದ ಉಳುಮಣ್ಮುದವರನ್ನೇ ತನ್ನ ಮನದಲ್ಲಿ ಪ್ರಮುಖವಾಗಿ ಪರಿಗಣಿಸಿದ್ದಾರೆ. 'ಶ್ರಮವಿದ್ದರೂ ಉಳುವೆಮೆಯೇ ಮೇಲದಕೆ', 'ತಾವು ಉತ್ತುದನುಂಡು ಬಾಳುವವರೇ ನಿಜದಿ ಬಾಳ್ವವರು', 'ತಮ್ಮ ಪರಿಶ್ರಮದಲಿ ಉಣುವ ಗುಣವುಳ್ಳ ರೈತರು' ಎಂಬ ಸಾಲುಗಳು ಇದನ್ನು ಎತ್ತಿತೋರಿಸುತ್ತವೆ.

ಕೃಷಿ ಕೆಲಸ ಮಾಡುವ ಕ್ರಮ : "ನೆಲದ ಮಣ್ಣೆಲ್ಲವನ್ನು ಅಲ್ಲದಿದ್ದರೂ ಅದರ ಕಾಲುಭಾಗವಾಗುವಷ್ಟು ಒಣಗಿಸಲು, ಒಂದು ಹಿಡಿ ಗೊಬ್ಬರವಿಲ್ಲದೆ ಬೆಳೆ ಹೆಚ್ಚುವುದು". (ಕುಱಳ್ - 1037)

"ಉಳುವುದಕ್ಕಿಂತ ಗೊಬ್ಬರ ಹಾಕುವುದು ಲೇಸು ; ಕಳೆತೆಗೆದ ಬಳಿಕ ನೀರು ಹಾಯಿಸುವುದಕ್ಕಿಂತ ಕಾವಲಿರುವುದು ಲೇಸು" (ಕುಱಳ್ - 1038)

ನೆಲವನ್ನು ಉತ್ತು ಅನಂತರ ಒಣಗಲು ಬಿಡುವುದು ಆ ಕಾಲದಲ್ಲಿದ್ದ ಪದ್ಧತಿಯಾಗಿ ತಿಳಿದುಬರುತ್ತದೆ. ಆ ರೀತಿ ಒಣಗಲು ಬಿಟ್ಟ ನೆಲವು ಗೊಬ್ಬರ ಹಾಕದಿದ್ದರೂ ಫಲ ನೀಡುವುದು ಎಂದು ಅಭಿಪ್ರಾಯ ಪಟ್ಟರು. ಆದರೆ ಗೊಬ್ಬರ ಹಾಕದೆಯೂ ಇರುತ್ತಿರಲಿಲ್ಲ ; ಗೊಬ್ಬರ ಹಾಕುವ ಕ್ರಮವನ್ನು ಅರಿತಿದ್ದರು. ಉಳುವಿಕೆ, ಎತ್ತು ಬಿಡುವಿಕೆ, ನೀರು ಹಾಯಿಸುವುದು, ಕಳೆ ತೆಗೆಯುವುದು, ಪೈರುಗಳನ್ನು ಕಾವಲು ಕಾಯುವುದು ಮೊದಲಾದ ಐದು ಬಗೆಯ ಕೆಲಸಗಳನ್ನು ಕ್ರಮ ಬದ್ಧವಾಗಿ ಮಾಡುತ್ತಿದ್ದರು ಎಂಬುದು ಮೇಲಿನ ಕುಱಳ್‌ಗಳಿಂದ ತಿಳಿದುಬರುತ್ತದೆ.

ಕಳೆ ತೆಗೆಯುವುದರ ಅಗತ್ಯವನ್ನು ಚೆನ್ನಾಗಿ ತಿಳಿದಿದ್ದ ತಿರುವಳ್ಳುವರು,

ಕೊಲೆಗಡುಕರಿಗೆ ಮರಣದಂಡನೆ ವಿಧಿಸಿ ದೊರೆ ದಂಡಿಪುದು,
ಕಳೆಯ ಕಿತ್ತು ಪೈರ ಕಾಯ್ವುದಕ್ಕೆ ಸಮವಹುದು (ಕುಱಳ್- ೫೫೦)

ಎಂದು ಹೇಳುತ್ತಾರೆ.

ವಂಡಿಕ್ಕಾರನ್ ಪಾಟ್ಟು (ಗಾಡಿ ಹೊಡೆಯುವ ಹಾಡು) : ತಮಿಳುನಾಡಿನಲ್ಲಿ ಗಾಡಿ (ಬಂಡಿ) ಹೊಡೆಯುವಾಗ ಹಾಡುವ ಹಾಡು. ಕೃಷಿ ಸಂಬಂಧಿ ವಸ್ತುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಲು ಬಗೆಬಗೆಯ ಎತ್ತಿನಗಾಡಿಗಳನ್ನು ರೈತರು ಉಪಯೋಗಿಸುತ್ತಿದ್ದರು. ಗೂಡುಬಂಡಿ, ತಟ್ಟೆಬಂಡಿ, ಬಿಲ್ಲುಬಂಡಿ ಮುಂತಾದವು. ಸರಕು ಸರಂಜಾಮುಗಳನ್ನು ಸಾಗಿಸುವಾಗ ಜಾತ್ರೆ, ಹಬ್ಬ, ಹರಿದಿನಗಳಲ್ಲಿ ದೂರದ ಊರಿಗೆ ಪ್ರಯಾಣ ಮಾಡುವಾಗ ಆಸರಿಕೆ - ಬೇಸರಿಕೆಗಳನ್ನು ಕಳೆಯಲು ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಅಂಥ ಹಾಡುಗಳಲ್ಲಿ ಕೆಲವು ಹೀಗಿವೆ:

ಗೂಡುಬಂಡಿ ಕಟ್ಟಿಕೊಂಡು ನಾನು
ಕುಂಭಕೋಣಂಗೆ ಕೊಂಡು ಹೋದೆ
ಕುಂಭಕೋಣ ವೈದ್ಯರಲ್ಲಿ ಆಗೋಲ್ಲ ಅಂದ್ರು

ತಟ್ಟೆ ಬಂಡಿ ಕಟ್ಟಿಕೊಂಡು ನಾನು
ತಂಜಾವೂರ್ಗೆ ಕೊಂಡು ಹೋದೆ
ತಂಜಾವೂರು ವೈದ್ಯ - ಉಳಿಯಲ್ಲ ಅಂದ್ರು

ಬಿಲ್ಲು ಬಂಡಿ ಕಟ್ಟಿಕೊಂಡು
ಬೀದಿಗುಂಟ ಹೋಗುತಿದ್ರೆ
ಮುಗಿದೋಯ್ತು ಎಂದು ಬಿಟ್ರು
ವೈದ್ಯ ಬಂದು ಮದ್ದು ಇಲ್ಲ

ಸಾಮಾನ್ಯವಾಗಿ ಈ ಹಾಡುಗಳನ್ನು ಯುವಕರೇ ಕಟ್ಟುತ್ತಿದ್ದುದರಿಂದ ಅವುಗಳಲ್ಲಿ ಪ್ರೀತಿ, ಶ್ರಮ, ಪ್ರೇಮ, ಕುಟುಂಬ, ಬೆಳೆ ಇತ್ಯಾದಿ ವಿಷಯಗಳಿರುತ್ತಿದ್ದುವು.

ಬೆಳೆ ಕಟಾವು ಮಾಡುವಾಗ ಹಾಡುವ ಹಾಡೊಂದನ್ನು ನೋಡೋಣ.

ಕಡಲೆ ಒಳ್ಳೆ ಬೆಳೆಗೆ ಹೋದ್ರೆ.
ಓಲೆ ಮಾಡ್ಸಿ ಹಾಕ್ತೀನಿ...

ಎಂದು ಮುಂತಾಗಿ ಹಾಡುವರು.

ಕೃಷಿ ಸಾಧನಗಳು : ನಾವುಕ್ಕರಸರ ಉಳುವ ಸಾಧನ : ತಮಿಳಿನ ಭಕ್ತಿ ಸಾಹಿತ್ಯದಲ್ಲಿ ಕಂಡು ಬರುವ 63 ಶೈವ ನಾಯನ್ಮಾರ್‌ಗಳಲ್ಲಿ 'ನಾವುಕ್ಕರಸರು' ಪ್ರಮುಖರಾಗಿದ್ದರು. ಇವರನ್ನು 'ಅಪ್ಪರ್' ಎಂದೂ ಕರೆಯಲಾಗುತ್ತಿತ್ತು. ಅವರು 'ಉಳವಾರಂ' ಎಂಬ ಉಳುವ ಸಾಧನವನ್ನು ತನ್ನ ಕೈಯಲ್ಲಿಟ್ಟು ಕೊಂಡಿದ್ದರು. ಅವರು ಆ ಸಾಧನವನ್ನು ದೇವಾಲಯದ ಆವರಣಗಳನ್ನು ಶುದ್ಧಿಗೊಳಿಸಲು ಉಪಯೋಗಿಸುತ್ತಿದ್ದರು. ಅದನ್ನು ಒಂದು ಆಯುಧವೆಂತಲೂ ಹುಲ್ಲು ತೆಗೆಯುವ ಸಾಧನವೆಂತಲೂ ಕರೆಯಲಾಗುತ್ತಿತ್ತು. ಅದು ಕಾಲಕ್ರಮೇಣ ಜನರು ಕೃಷಿ ಕೆಲಸಗಳಿಗೆ ಉಪಯೋಗಿಸುವ ಸಾಧನವಾಯಿತು. ಕೃಷಿಗೆ ಉಪಯೋಗಿಸಲಾಗುತ್ತಿದ್ದ ಸಾಧನಗಳಲ್ಲಿ ಎಷ್ಟೋ ನಾಶಗೊಂಡಿದ್ದರೂ ನಾವುಕ್ಕರಸರ ಈ ಸಾಧನಕ್ಕೆ ಮಾತ್ರ ಅಳಿವಿಲ್ಲ. ಅವರು ಕೈಯಲ್ಲಿಟ್ಟುಕೊಂಡಿದ್ದ ಸಾಧನ ಹುಲ್ಲು ತೆಗೆಯಲು ಉಪಯೋಗಿಸ ಲಾಗುತ್ತಿತ್ತೆ ಅಥವಾ ಈಗ ಬದಲಾವಣೆಯನ್ನು ಪಡೆದಿದೆಯೇ ಎಂಬುದನ್ನು ಅರಿಯಬಹುದಾಗಿದೆ.

ಹಳೆಯ ಜಿಲ್ಲೆಯಾದ 'ತೆನ್ನಾರ್ಕ್ಕಾಡು' ಜಿಲ್ಲೆಯ 'ತಿರುಕ್ಕಳಪ್ಪೂರ್' ಎಂಬ ಊರಿನಲ್ಲಿ ಕೃಷಿ ಸಾಧನಗಳಲ್ಲಿ ಒಂದು ಸಾಧನ 'ಉಳವಾರಂ' ಎಂಬುದಾಗಿದೆ. ಇಂದು ಕೂಡ ಅದರ ಹೆಸರು ಬದಲಾವಣೆಗೊಳಪಡದೆ ಹಾಗೆಯೇ ಇದೆ.

ಈ ಸಾಧನದ ಹಿಡಿಯನ್ನು ಮರದಿಂದಲೂ ಕೆತ್ತುವ ಚೂಪಾದ ಭಾಗವನ್ನು ಚಪ್ಪಟೆಯಾದ ಕಬ್ಬಿಣದ ತಗಡಿನಿಂದಲೂ ರಚಿಸಲಾಗಿದೆ. ಇದು ಕಳೆ ತೆಗೆಯುವ ಮತ್ತು ಮಣ್ಣು ಅಗೆಯುವ ಸಾಧನಗಳೆರಡೂ ಸೇರಿ ರೂಪುಗೊಂಡದ್ದಾಗಿದೆ. ನೇರವಾಗಿಲ್ಲದೆ ಬಾಗಿದ ಆಕಾರದಲ್ಲಿದೆ. ಇದನ್ನು ಕೈಯಲ್ಲೋ, ಬಟ್ಟೆ ಚೀಲದಲ್ಲೋ ಇಟ್ಟುಕೊಳ್ಳಬಹುದು. ಇದನ್ನು ಶುದ್ಧಗೊಳಿಸುವುದು ಸುಲಭ. ಕೈಗೆ ತೊಂದರೆಯಾಗುವುದಿಲ್ಲ. ಹುಲ್ಲನ್ನು ಯಾವ ಪ್ರಮಾಣದಲ್ಲಿ ಎಷ್ಟು ಆಳದಿಂದ ತೆಗೆಯಬೇಕೆಂಬ ಅಗತ್ಯಕ್ಕನುಗುಣವಾಗಿ ತೆಗೆಯಬಹುದು. ಇಂದು ತಿರುಕಳಪ್ಪೂರಿನಲ್ಲಿ ಕಾಲ್ನಡೆಗಳಿಗೆ ಹುಲ್ಲನ್ನು ತೆಗೆಯಲು ಈ ಸಾಧನ ಉಪಯೋಗವಾಗುತ್ತಿದೆ.

ಇನ್ನಿತರ ಕೃಷಿ ಸಾಧನಗಳು : ತಮಿಳುನಾಡಿನಲ್ಲಿ ಅಂದಿನಿಂದ ಇಂದಿನವರೆಗೆ ಕೃಷಿಯೇ ಪ್ರಧಾನವಾಗಿ ಕಂಡುಬಂದಿದೆ. ಒಂದೊಂದು ಕಾಲಘಟ್ಟದಲ್ಲೂ ಅದರ ಹೆಸರು, ಆಕಾರಗಳು ಬದಲಾವಣೆಗೊಂಡರೂ ಇಂದೂ ಗ್ರಾಮೀಣ ಪ್ರದೇಶಗಳಲ್ಲಿ ಉಪಯೋಗಿಸುತ್ತಿದ್ದಾರೆ ಎನ್ನಬಹುದು.

ಕೆಲವು ಕೃಷಿಸಾಧನಗಳ ಹೆಸರು ಮಾತಿನ ರೂಪದಲ್ಲೂ ಬರೆವಣಿಗೆಯ ರೂಪದಲ್ಲೂ ಒಂದೇ ರೀತಿಯಲ್ಲಿ ಉಚ್ಚರಿಸುವುದನ್ನು ನೋಡಬಹುದು.

ಬರೆವಣಿಗೆಯಲ್ಲಿ	**ಮಾತಿನಲ್ಲಿ**
ಮಣ್‌ವೆಟ್ಟಿ(ಗುದ್ದಲಿ)	ಮಣ್‌ವೆಟ್ಟಿ (ಗುದ್ದಲಿ)
ಏರ್ (ಏರು)	ಏಱು (ಏರು)
ಸಾಕ್ಕು (ಗೋಣಿಚೀಲ)	ಸಾಕ್ಕು (ಗೋಣಿಚೀಲ)
ತಾಳ್ (ಕಾಂಡ)	ತಾಳ್ (ಕಾಂಡ)
ಪತ್ತಾಯಂ (ಕಣಜ)	ಪತ್ತಾಯಂ (ಕಣಜ)
ಸೋಳಮ್ (ಜೋಳ)	ಸೋಳಮ್ (ಜೋಳ)
ಸುಮ್ಮಾಡು (ಸಿಂಬಿ)	ಸುಮ್ಮಾಡು (ಸಿಂಬಿ)
ಪೂಟ್ಟಾಂಕಯಿಱು (ಹಗ್ಗ)	ಪೂಟ್ಟಾಂಯಿಱು (ಹಗ್ಗ)

ಪ್ರಾಂತೀಯ ವೈವಿಧ್ಯತೆಗನುಗುಣವಾಗಿ ಕೃಷಿ ಸಾಧನಗಳು :

1. ಮಮ್‌ಪುಟ್ಟಿ - ಮಮ್‌ಟ್ಟಿ - ಮಮುಟ್ಟಿ = ಗುದ್ದಲಿ
2. ಕರುಕ್ಕುರುವಾ - ಪನ್ನರುವಾ - ಅಱುಪ್ಪರುವಾ = ಕುಡುಗೋಲು
3. ಕಳಕ್ಕೊಟ್ಟು - ಕಳಕ್ಕೊತ್ತು = ಕಳೆ ತೆಗೆಯುವ ಸಾಧನ
4. ಸಟ್ಟಿಕ್ ಕಲಪ್ಪೈ - ಕಲಪ್ಪೈ = ನೇಗಿಲು
5. ಕುದುರು - ಇರುವಾಸಲ್ = ಕಣಜ

ಈ ಮೇಲಿನ ಸಾಧನಗಳು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ರೂಪ ಬೇರೆಯಾಗಿಯೂ ಕರೆಯುವ ಹೆಸರು ಬೇರೆಯಾಗಿಯೂ ಕಂಡುಬರುತ್ತದೆ.

ಉದಾಹರಣೆ : ತೆನೆಗಳನ್ನು ಕೊಯ್ಯಲು ಉಪಯೋಗಿಸುವ ಸಾಧನಗಳನ್ನು ಆಯಾ ಪ್ರಾಂತ್ಯಕ್ಕೆ ತಕ್ಕಂತೆ ಕರೆಯಲಾಗುತ್ತದೆ. ತಂಜಾವೂರು, ತೂತ್ತುಕ್ಕುಡಿ, ಧರ್ಮಪುರಿ, ಸೇಲಂ ಮುಂತಾದ ಜಿಲ್ಲೆಗಳಲ್ಲಿ ತೆನೆಗಳನ್ನು ಕಟಾವು ಮಾಡಲು ಬಳಸುವ ಸಾಧನಗಳು ತಂಜಾವೂರಿನಲ್ಲಿ 'ಅರಪ್ಪರುವಾ (ಕುಡುಗೋಲು)' ಎಂದೂ ತೂತ್ತುಕ್ಕುಡಿಯಲ್ಲಿ 'ಪನ್ನರುವಾ (ಕುಡುಗೋಲು)' ಎಂದೂ ಸೇಲಂನಲ್ಲಿ 'ಅಱುವಾಳ್ (ಕುಡುಗೋಲು)' ಎಂದೂ ಕರೆಯಲಾಗುತ್ತದೆ.

1. ಅಱುಪ್ಪರುವಾ = ಬತ್ತವನ್ನು ಕೊಯ್ಯಲು
2. ಕರುಂಬುಕ್ಕತ್ತಿ = ಕಬ್ಬು ಕಡಿಯಲು
3. ಕಂಬರಕ್ಕತ್ತಿ = ಧಾನ್ಯ ತೆನೆಗಳನ್ನು ಕೊಯ್ಯಲು (ಸಜ್ಜೆ, ಜೋಳ, ರಾಗಿ)
4. ಕೋರೈಕ್ಕತ್ತಿ = ಕೋರೆ ಹುಲ್ಲನ್ನು ಕೊಯ್ಯಲು
5. ಇರುಂಬು ನಗಂ = ವೀಳೆಯದೆಲೆಯನ್ನು ಕೊಯ್ಯಲು ಬಳಸುವಂಥದು.

ತಮಿಳುನಾಡಿನಲ್ಲಿ ಕೃಷಿಯೆಂಬುದು ಸಂಗಂ ಕಾಲದಿಂದ ಇಂದಿನವರೆಗೆ ಜನರ ಜೀವದಂತೆ ಕ್ರಿಯಾಶೀಲವಾಗಿ ಬೆಳೆದು ಬರುತ್ತಿದೆ ಎಂಬುದನ್ನು ಸಂಗಂ ಸಾಹಿತ್ಯಗಳಲ್ಲೂ ತೇವಾರಂನಂಥ ಭಕ್ತಿ ಸಾಹಿತ್ಯಗಳಲ್ಲೂ ಸಾಕ್ಷ್ಯಾಧಾರಗಳು ಸಿಗುತ್ತವೆ. ಅಲ್ಲದೆ ಪುಱನಾನೂಱು, ನಱ್ಱಿಣೈ, ಕಲಿತ್ತೊಗೈ ಮುಂತಾದ ಸಾಹಿತ್ಯಗಳಲ್ಲೂ ಕಾಣಬಹುದಾಗಿದೆ. ಹೀಗೆ ಅಗಣಿತವಾದ ತಮಿಳು ಸಾಹಿತ್ಯದಲ್ಲಿ ಕೃಷಿಗೆ ಸಂಬಂಧಿಸಿದಂಥ 'ಉಳವಾರಂ' ಎಂಬ

ಪ್ರಾಚೀನ ಕೃಷಿ ಸಾಧನದಿಂದ ಆಧುನಿಕ ಸಾಧನಗಳವರೆಗೆ ಹಲವಾರು ಪುರಾವೆಗಳು ಸಿಕ್ಕಿವೆ. ತಮಿಳು ಸಾಹಿತ್ಯಗಳಲ್ಲಿ ಕೃಷಿಗೆ ಸಂಬಂಧಿಸಿದ ವಿಚಾರಗಳು ಸಾಕಷ್ಟು ದೊರೆಯುತ್ತವೆ. ಇಂಥ ಸಾಹಿತ್ಯ ಸಂಪತ್ತನ್ನು ಕಾಪಾಡಿಕೊಳ್ಳಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಗ್ರಂಥ ಋಣ :

ಸಂಗಂ ಇಲಕ್ಕಿಯಮ್ - ಕಲಿತ್ತೊಗ್ಯೆ - ನಚ್ಚಿನಾರ್ಕ್ಕಿನಿಯಾರ್ ಉರೈ ಪುಲ ವೇ. ಸೋಮಸುಂದರನಾರ್, ತೆನ್ನಿಂದಿಯ ಶೈವ ಸಿದ್ಧಾಂತನೂಲ್ ಪದಿಪ್ಪಗಂ, ಚೆನ್ನೈ.

ಸಂಗಂ ಇಲಕ್ಕಿಯಮ್ - ಕುಱುನ್ತೊಗೈ - ಮುನೈವರ್. ವಿ. ನಾಗರಾಸನ್ ನಿಯಾ ಚೆಂಬುರಿ ಬುಕ್ ಹೌಸ್, ಚೆನ್ನೈ - 21.

ತಮಿಳಗ ವರಲಾಱು - ಮಕ್ಕಳೂಮ್ ಪಣ್‌ಪಾಡುಮ್ - ಡಾ. ಕೆ.ಕೆ. ಪಿಳ್ಳೈ ಉಲಗತ್ ತಮಿಳಾರಾಯಿಚ್ಚಿ ನಿಱುವನಂ, ಚೆನ್ನೈ.

ತಿರುಕ್ಕುಱಳ್ - ಡಾ. ಎಸ್. ರಾಮಕೃಷ್ಣನ್

ತಮಿಳ್ ಇಲಕ್ಕಿಯ ವರಲಾಱು - ಮು. ವರದರಾಜನ್, ಸಾಹಿತ್ಯ ಅಕಾಡೆಮಿ, ಪುದುಡಿಲ್ಲಿ - 110001


ವಿ.ಕೆ. ಅನುವಾದ ಆರ್.ಎಂ.

ತರಕಾರಿ ಯಾವುದೇ ಆಹಾರಯೋಗ್ಯ ಸಸ್ಯದ ಹೊಸದಾದ ಹಸಿಯಾದ, ಕತ್ತರಿಸಿದ, ತಿನ್ನಲು ಯೋಗ್ಯವಾದ ಭಾಗವೇ ತರಕಾರಿ. ಕೆಲವು ಸಲ ಮರ, ಮರಗಳ ಭಾಗ ಕಾಯಿಗಳಿಗೂ ಅನ್ವಯಿಸುತ್ತದೆ. ಉದಾ : ನುಗ್ಗೆ, ಹಲಸು. ತರಕಾರಿಯನ್ನು ಕಾಯಿಪಲ್ಲೆ ಎಂದೂ ಕರೆಯುತ್ತಾರೆ. ಬೇರು, ಕಾಂಡ, ಎಲೆ, ಹೂ, ಹಣ್ಣು - ಹೀಗೆ ಸಸ್ಯದ ನಾನಾ ಭಾಗಗಳನ್ನು ಒಳಗೊಂಡಿರುತ್ತವೆ.



ಬೇರು ತರಕಾರಿಗಳು : ಮೂಲಂಗಿ, ಗಜ್ಜರಿ, ಗೆಣಸು, ಬೀಟ್‌ರೂಟ್, ಟರ್ನಿಫ್ ಇತ್ಯಾದಿ.

ಕಾಂಡ ತರಕಾರಿಗಳು : ಸುವರ್ಣಗೆಡ್ಡೆ, ಆಲೂಗೆಡ್ಡೆ, ಕೇಸುವಿನ ಗೆಡ್ಡೆ, ಬಾಳೆದಿಂಡು, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ.



ಎಲೆ ತರಕಾರಿಗಳು : ಎಲೆಕೋಸು, ದಂಟು, ಹರಿವೆ, ಚಿಲ್ಕರಿವೆ, ಕೀರೆ, ಮೆಂತ್ಯ, ಸಬ್ಬಸಿಗೆ, ನುಗ್ಗೆ, ಕೊತ್ತಂಬರಿ, ಕರಿಬೇವು ಇತ್ಯಾದಿ.


ಹೂ ತರಕಾರಿಗಳು : ಹೂಕೋಸು, ನುಗ್ಗೆ ಹೂ, ಬಾಳೆಹೂ, ಇತ್ಯಾದಿ

ಕಾಯಿ ತರಕಾರಿ : ಹುರುಳಿ, ಬೆಂಡೆ, ಬದನೆ, ಹಾಗಲ, ಹೀರೆ, ಸೋರೆ, ಪಡುವಲ, ಕುಂಬಳ, ಸೌತೆ, ನುಗ್ಗೆ ಇತ್ಯಾದಿ



ಬೀಜ : ಬಟಾಣಿ, ತೊಗರಿ, ಅವರೆ, ಅಲಸಂದೆ, ಉದ್ದು ಇತ್ಯಾದಿ.

ಉಪಯೋಗ : ತರಕಾರಿಗಳಲ್ಲಿ ದೇಹ ಪೋಷಣೆಗೆ ಅಗತ್ಯವಾದ ಕಬ್ಬಿಣ, ಕ್ಯಾಲ್ಸಿಯಂ, ಜೀವಸತ್ತ್ವ, ಎ, ಬಿ, ಸಿ ಮುಂತಾದವು ತರಕಾರಿಗಳಲ್ಲಿ ಅಧಿಕ ಮೊತ್ತದಲ್ಲಿರುವುದರಿಂದ ಇವುಗಳಿಗೆ ಮಹತ್ತ್ವದ ಸ್ಥಾನವಿದೆ. ಪ್ರೋಟೀನ್ ಮತ್ತು ಕಾರ್ಬೋಹೈಡ್ರೇಟ್ ಅಂಶಗಳು ಆಲೂಗೆಡ್ಡೆ, ಗೆಣಸು, ಬೀನ್ಸ್ ಮುಂತಾದವುಗಳಲ್ಲಿ ಹೆಚ್ಚಿನ ಮೊತ್ತದಲ್ಲಿವೆ.



ತರಕಾರಿ ಸಸ್ಯಗಳ ಉಗಮ ಹಾಗೂ ಉಪಯುಕ್ತ ಭಾಗಗಳ ವೈವಿಧ್ಯ ಮಾನವನ ಇತಿಹಾಸದಷ್ಟೇ ಪ್ರಾಚೀನವಾದುದು. ತರಕಾರಿಗಳನ್ನು ಪ್ರದೇಶ ಮತ್ತು ವಾಯುಗುಣಕ್ಕನುಗುಣವಾಗಿ ಬೆಳೆಯಲಾಗುತ್ತದೆ. ಉದಾ : ಎತ್ತರದ ಪ್ರದೇಶಗಳಲ್ಲಿ ಬೇಸಗೆಯಲ್ಲಿ ಮಾತ್ರ ಬೆಳೆಸಲಾಗುವ ತರಕಾರಿಗಳಿದ್ದರೆ ಉಷ್ಣ ವಲಯಗಳಲ್ಲಿ ವರ್ಷ ಪೂರ್ತಿ ಬೆಳೆಸಬಹುದಾದ ತರಕಾರಿಗಳಿವೆ. ತರಕಾರಿ ಬೇಸಾಯ ಉಷ್ಣತೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. ಫಲ ಬಿಡುವ ಸಸ್ಯಗಳಿಗೆ ಉಷ್ಣ ಹವೆ ಅಗತ್ಯವಿದ್ದರೆ (ಉದಾ : ಸೌತೆಕಾಯಿ, ಕುಂಬಳ, ತಿಂಗಳ ಹುರುಳಿ, ಬದನೆ, ಬೆಂಡೆ ಇತ್ಯಾದಿ) ಎಲೆ, ಕಾಂಡ ಮುಂತಾದ ಭಾಗಗಳಿಗಾಗಿ ಬೆಳೆಯಲಾಗುವ ತರಕಾರಿಗಳಿಗೆ ಸಾಧಾರಣವಾಗಿ ತಂಪು ಹವೆಯಿದ್ದರೆ ಸಾಕು (ಉದಾ : ಎಲೆಕೋಸು, ಬೀಟ್‌ರೂಟ್, ಗೆಡ್ಡೆಕೋಸು, ಆಲೂಗೆಡ್ಡೆ) ಹವಾಗುಣಕ್ಕನುಗುಣವಾಗಿ ತರಕಾರಿ ಬೆಳೆಗಳನ್ನು ಉಷ್ಣ ಆಶ್ರಯ, ತಂಪು ಆಶ್ರಯ ಎಂದು ವಿಭಾಗಿಸಬಹುದು.



ಕೆ.ಎಸ್.

ತಾಳೆ 'ಅರಕೇಸಿ' ಕುಟುಂಬಕ್ಕೆ ಸೇರಿದೆ. ಬೊರ್‍ಯಾಸಸ್ ಫ್ಲಾಬೆಲಿಫರ್ ಎಂಬುದು ಇದರ ವೈಜ್ಞಾನಿಕ ಹೆಸರು. ಇಂಗ್ಲಿಷಿನಲ್ಲಿ ಪ್ಯಾಲ್‌ಮೈರಾಪಾಮ್ ಎನ್ನುವರು. ಭಾರತ, ಮ್ಯಾನ್ಮಾರ್, ಶ್ರೀಲಂಕಾ ಮುಂತಾದ ದೇಶಗಳ ಶುಷ್ಕ ಹಾಗೂ ಮರಳು ಭೂಮಿಯ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈ ದೇಶಗಳ ಸಮುದ್ರತೀರಗಳಲ್ಲೂ ಇದು ಹುಲುಸಾಗಿ ಬೆಳೆಯುತ್ತದೆ.

ತೆಂಗಿನ ಮರವನ್ನು ಹೋಲುವ ಇದು 15-20 ಸೆಂ.ಮೀ. ಎತ್ತರಕ್ಕೆ ಬೆಳೆಯಬಲ್ಲದು. ಬೀಸಣಿಗೆ ಆಕಾರದ ಎಲೆಗಳಿರುತ್ತವೆ. ಎಲೆಯ ತೊಟ್ಟು ಮತ್ತು ಕಾಂಡ ಕಪ್ಪುಬಣ್ಣವಿದ್ದು ಹೊರಕವಚ ಗಟ್ಟಿಯಾದ ನಾರಿನಿಂದ

ಕೂಡಿದೆ. ಹೂಬಿಡುವ ಕಾಲ ನವೆಂಬರ್ ಡಿಸೆಂಬರ್ ತಿಂಗಳು. ಹೂಗಳಲ್ಲಿ ಹೆಣ್ಣು ಗಂಡು ಬೇರೆಯಾಗಿದ್ದು ಬೇರೆ ಬೇರೆ ಮರಗಳಲ್ಲಿ ಅರಳುತ್ತವೆ. ಹೂಗೊಂಚಲಿನ ದಿಂಡಿನಲ್ಲಿ ಸಿಹಿಯಾದ ರಸವಿರುತ್ತದೆ. ಹಣ್ಣು ದುಂಡಗಿದ್ದು ಹೊರಗವಚದಲ್ಲಿ ನಾರಿರುತ್ತದೆ. ಸಾಮಾನ್ಯವಾಗಿ ಹಣ್ಣಿನ ಒಳಗೆ ಮೂರು ಭಾಗಗಳಿದ್ದು ಒಂದೊಂದರಲ್ಲಿ ಒಂದೊಂದು ಬೀಜವಿರುತ್ತದೆ. ಹಣ್ಣು ಎಳೆಯದಾಗಿದ್ದಾಗ ನೀರಿನಂಶ ಹೆಚ್ಚಾಗಿರುತ್ತದೆ. ಇದನ್ನು ತಾಟಿನುಂಗು, ಸಿಹಿನುಂಗು, ತಾಳಿಬೊಂಡ ಮುಂತಾದ ಹೆಸರುಗಳಿಂದ ಕರೆಯುವರು. ಬೇಸಗೆಯಲ್ಲಿ ಇದರ ಬೇಡಿಕೆ ಹೆಚ್ಚು. ದಕ್ಷಿಣ ಭಾರತದಲ್ಲಿ ಆಂಧ್ರ ಮತ್ತು ಕೇರಳದ ಕರಾವಳಿ ಪ್ರದೇಶದಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಇತ್ತೀಚೆಗೆ ಕೃಷಿ ಯೋಗ್ಯವಲ್ಲದ ಭಾಗಗಳಾದ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ಬಯಲು ಸೀಮೆಗಳಲ್ಲಿ ಇದರ ಕೃಷಿ ಮಾಡಲಾಗುತ್ತಿದೆ.

ಹಣ್ಣು ಪಕ್ವವಾಗುತ್ತಿದ್ದಂತೆ ಒಳತಿರುಳು ಮೂಳೆಯಂತೆ ಗಟ್ಟಿಯಾಗುತ್ತದೆ. ಬೀಜ ಮೊಳೆಯುವಾಗ ಹಾಲಿನ ಬಣ್ಣದಿಂದ ಕೂಡಿದ್ದು ತಿನ್ನಲು ರುಚಿಯಾಗಿರುತ್ತದೆ. ಸ್ವಾಭಾವಿಕವಾಗಿ ಬೀಜಗಳಿಂದ ಇದರ ಸಸ್ಯಾಭಿವೃದ್ಧಿ. ಸಸ್ಯದ ತಳಭಾಗದ ಕಾಂಡ ಆರಂಭಿಕ ಹಂತದಲ್ಲಿ ಗಾತ್ರದಲ್ಲಿ ಹೆಚ್ಚಾಗುತ್ತದೆ. ಫಲ ನೀಡಲು 15-20 ವರ್ಷಗಳು ಬೇಕು. ಇದರ ಗೊಂಚಲಿನಿಂದ ನೀರಾ ಇಳಿಸುತ್ತಾರೆ. ಇದರಲ್ಲಿ ಶೇ. 12 ಸುಕ್ರೋಸ್ ಇದ್ದು ನಿರ್ದಿಷ್ಟ ಸಮಯದಲ್ಲಿ ಸಂಸ್ಕರಿಸದಿದ್ದರೆ ಹುದುಗಲು ತೊಡಗಿ ಹೆಂಡವಾಗುತ್ತದೆ. ಇದರಲ್ಲಿರುವ ಈಸ್ಟ್‌ಗೆ ಔಷಧೀಯ ಗುಣಗಳಿವೆ. ಇದು ಉತ್ತೇಜಕ ಹಾಗೂ ಕಫಹಾರಿ. ನೀರಾದಿಂದ ಬೆಲ್ಲವನ್ನೂ ತಯಾರಿಸುವರು. ಎರಡು ಮೂರು ತಿಂಗಳ ಸಸಿಗಳಲ್ಲಿ ಪಿಷ್ಟ ಹೆಚ್ಚಾಗಿರುವುದರಿಂದ ಅದನ್ನು ತಿನ್ನುವುದುಂಟು, ಇದರಲ್ಲಿ ಪಿಷ್ಟವನ್ನು ತಯಾರಿಸುವರು.

ಎಲೆಗಳ ತೊಟ್ಟುಗಳಲ್ಲಿ ಗಟ್ಟಿಯಾದ ನೀಳವಾದ ಕಡ್ಡಿಯಿದ್ದು ಇದರಿಂದ ಬ್ರಶ್ ಮತ್ತು ಬರಲುಗಳನ್ನು ತಯಾರಿಸುವುದುಂಟು. ಇದರಿಂದ ತೆಗೆಯುವ ನಾರಿಗೆ ಬ್ಯಾಸ್ಸೆನ್ ಎಂದು ಹೆಸರು. ತೊಟ್ಟಿನ ಅಂಚಿನ ಭಾಗದಲ್ಲಿ ದೊರೆಯುವ ನಾರು ಒಳ್ಳೆಯ ಗುಣಮಟ್ಟದ್ದು. ಆಂಧ್ರಪ್ರದೇಶದ ಕೃಷ್ಣ, ಗೋದಾವರಿ, ತಿನ್ನವೆಲ್ಲಿ, ತಿರುವಾಂಕೂರಿನ ದಕ್ಷಿಣ ಭಾಗಗಳಲ್ಲಿ ತಾಳೆಗೆ ಸಂಬಂಧಿಸಿದ ಕೈಗಾರಿಕೆಗಳಿವೆ. ಮರಗಳನ್ನು ಕತ್ತರಿಸಿ ಸರಗಳನ್ನು ಮಾಡಿ ಗುಡಿಸಿಲುಗಳ ನಿರ್ಮಾಣಕ್ಕೆ ಉಪಯೋಗಿಸುವರು. ಮರಗಳನ್ನು ಕತ್ತರಿಸಿ ದೋಣಿಯಂತೆ ಮಾಡಿ ನೀರು ಹಾಯಿಸಲು ಬಳಸುವರು. ಎಲೆಗಳಿಂದ ಬೀಸಣಿಗೆ, ಛತ್ರಿ, ಬುಟ್ಟಿ ಮತ್ತು ಚಾಪೆಗಳನ್ನು ಮಾಡುವರು.

ಎ.ಬಿ.ಪಿ.

ತುಂಬೆ ಇದು ಮೂಲಿಕೆ ಸಸ್ಯವಾಗಿದ್ದು, 'ಲೇಬಿಯೇಸೀ' ಕುಟುಂಬಕ್ಕೆ ಸೇರಿದೆ. ಸಸ್ಯವಿಜ್ಞಾನದ ಪರಿಭಾಷೆಯಲ್ಲಿ ಇದನ್ನು 'ಲ್ಯೂಕಾಸ್ ಆಸ್ಪೆರ' ಎನ್ನುವರು. ಭಾರತದ ಬಹುತೇಕ ಭಾಗಗಳಲ್ಲಿ ಹಾಗೂ ಮಾರಿಷಸ್, ಜಾವ, ಫಿಲಿಪೈನ್ಸ್ ದ್ವೀಪಗಳಲ್ಲಿ ತುಂಬೆಯನ್ನು ಕಾಣಬಹುದು.

ಸಸ್ಯವಿವರ : ತುಂಬೆ ಕುರುಚಲು ಇಲ್ಲವೆ ಪೊದೆಗಿಡವಾಗಿದ್ದು, 30-60 ಸೆಂ.ಮೀ. ಎತ್ತರಕ್ಕೆ ಬೆಳೆಯುತ್ತದೆ. ಬೀಜದಿಂದ ವಂಶಾಭಿವೃದ್ಧಿ ಹೊಂದುವ ಈ ಗಿಡ ಹೊಲಗದ್ದೆಗಳಲ್ಲಿ, ಪಾಳು ಬಿದ್ದ ಜಾಗಗಳಲ್ಲಿ,



ದಾರಿಯ ಇಕ್ಕೆಲಗಳಲ್ಲಿ ತಾನೇ ತಾನಾಗಿ ಬೆಳೆಯುತ್ತದೆ. ಇದರ ಕಾಂಡ ನೇರವಾಗಿದ್ದು, 4-5 ಕವಲುಗಳಿಂದ ಕೂಡಿರುತ್ತದೆ. ಕಾಂಡ, ಎಲೆಗಳ ಮೇಲೆ ಮೃದುವಾದ ರೋಮಗಳಿರುತ್ತವೆ. ಎಲೆಗಳ ಅಗಲ ಕಡಿಮೆ. ಮಧ್ಯಾರಂಭಿ ಮಾದರಿಯ ಹೂಗೊಂಚಲಿದ್ದು, ಹೂಗಳು ಬಿಳಿಯ ಬಣ್ಣದಲ್ಲಿರುತ್ತವೆ.

ಉಪಯೋಗ : ತುಂಬೆ ಔಷಧೀಯ ಸಸ್ಯವಾಗಿ ಬಳಕೆಯಲ್ಲಿದೆ. ಸೊಪ್ಪು ಅರೆದು ಹಚ್ಚಿದರೆ ಹಾವಿನ ವಿಷ ಶಮನವಾಗುವುದು. ಇದರ ರಸದ ಜೊತೆಗೆ ಜೇನು ಬೆರೆಸಿ ನೆಕ್ಕಿಸುವುದರಿಂದ ಮಕ್ಕಳ ಕಫದ ತೊಂದರೆ ನಿವಾರಣೆಯಾಗುತ್ತದೆ. ಮುಟ್ಟಿನ ಸಮಯದಲ್ಲಿ ಬರುವ ಹೊಟ್ಟೆ ನೋವಿನ ಪರಿಹಾರಕ್ಕೆ ಇದರ ಎಲೆಗಳನ್ನು ಮತ್ತು ಹೂಗಳನ್ನು ಸಮಪ್ರಮಾಣದಲ್ಲಿ ಅರೆದು ಉಂಡೆಗಳನ್ನಾಗಿಸಿ ದಿನಕ್ಕೆ ಎರಡರಂತೆ ಹಸುವಿನ ಹಾಲಿನಲ್ಲಿ ಸೇವಿಸಬಹುದು. ತುಂಬೆಯನ್ನು ಸಾಮಾನ್ಯವಾಗಿ ದಕ್ಷಿಣ ಭಾರತದ ಹಳ್ಳಿಗಳಲ್ಲಿ ಜ್ವರ ನಿವಾರಕ ಕಷಾಯದಲ್ಲಿ ಬಳಸುವರು. ಸಂಧಿವಾತ, ಕಜ್ಜಿ ತುರಿಕೆ, ಊದಿಕೊಂಡು ನೋವುಂಟು ಮಾಡುವ ಭಾಗಗಳಿಗೆ ತುಂಬೆಯ ಎಲೆಯ ರಸವನ್ನು ಹಚ್ಚುವರು. ಇದರ ಹೂಗಳನ್ನು ಜೇನುತುಪ್ಪದ ಜೊತೆಗೆ ಸೇವಿಸಿದರೆ ಕೆಮ್ಮು ಮತ್ತು ನೆಗಡಿಗೆ ಪರಿಹಾರ. ಪಾಳು ಭೂಮಿಯಲ್ಲಿ ಬೆಳೆದಿರುವ ತುಂಬೆಯನ್ನು ಹಸುರುಗೊಬ್ಬರವಾಗಿ ಬಳಸಿಕೊಳ್ಳಬಹುದು. ಕೇರಳದ ಓಣಂ ಹಬ್ಬದಲ್ಲಿ ತುಂಬೆಯ ಹೂವನ್ನು ರಂಗೋಲಿಗೆ ಬಳಸುತ್ತಾರೆ. ಶಿವನ ಪೂಜೆಗೆ ತುಂಬೆ ಹೂವು ಶ್ರೇಷ್ಠವಾದುದು.

ಕಾಡು ತುಂಬೆ : ಸಸ್ಯ ಶಾಸ್ತ್ರದಲ್ಲಿ 'ಲಿಯೋನೋಟಿಸ್ ನೆಪೆಟಿಪೋಲಿಯ' ಎಂದು ಗುರುತಿಸಲ್ಪಡುವ ಕಾಡು ತುಂಬೆ 'ಲೇಬಿಯೇಟ' ಕುಟುಂಬಕ್ಕೆ ಸೇರಿದೆ. ಮೂಲಿಕೆ ಸಸ್ಯವಾಗಿದ್ದು, ಭಾರತದ ಉಷ್ಣವಲಯ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯವಿವರ : ಕಾಡು ತುಂಬೆಯನ್ನು ಆಲಂಕಾರಿಕ ಸಸ್ಯವಾಗಿ ಬೆಳೆಸುವರು. ಇದರ ಎತ್ತರ ಸುಮಾರು 1.2-1.8 ಮೀ ಇರುತ್ತದೆ. ಕಾಂಡ ದಪ್ಪವಾಗಿದ್ದು ಕಾಂಡದ ಮೇಲೆ ರೋಮಗಳಿರುತ್ತವೆ. ಎಲೆ ತೊಟ್ಟು ಉದ್ದವಾಗಿದ್ದು, ಅಂಚು ಗರಗಸದಂತಿರುತ್ತದೆ. ಹೂ ಗೊಂಚಲು ಗಿಣ್ಣಿನ

ಸುತ್ತ ಆವರ್ತಗಳಲ್ಲಿ ಹುಟ್ಟುತ್ತದೆ. ಹೂವುಗಳು ಕಿತ್ತಳೆ, ಕೇಸರಿ ಬಣ್ಣದಲ್ಲಿದ್ದು ಆಕರ್ಷಕವಾಗಿರುತ್ತವೆ.

ಉಪಯೋಗ : ಔಷಧೀಯ ಮಹತ್ವ ಹೊಂದಿರುವ ಕಾಡುತುಂಬೆಯ ಬೀಜಗಳನ್ನು ಮಲೇರಿಯ ರೋಗ ಗುಣಪಡಿಸಲು ಬಳಸುವರು. ಇದರ ಬೂದಿಯನ್ನು ಚರ್ಮರೋಗಗಳಿಗೆ, ಸುಟ್ಟ ಗಾಯ ಮತ್ತು ಬೊಬ್ಬೆಗಳಿಗೆ ಹಚ್ಚುವುದುಂಟು ; ಜ್ವರ ನಿವಾರಕ ಔಷಧಿ ತಯಾರಿಸಲು, ವಿರೇಚಕಗಳನ್ನು ತಯಾರಿಸಲು ಬಳಸುವರು. ಎಲೆಗಳ ಕಷಾಯವನ್ನು ಪೊರ್ಟೊರೀಕೊದಲ್ಲಿ ಬಲವರ್ಧಕವಾಗಿ, ಬ್ರೆಜಿಲ್‌ನಲ್ಲಿ ಸಂಧಿವಾತ ರೋಗಗಳ ನಿವಾರಣೆಗೆ ಬಳಸುವರು.

ಕಾಳಿ ತುಂಬೆ : ಇದು ಲೇಬಿಯೇಟಿ ಕುಟುಂಬಕ್ಕೆ ಸೇರಿದ್ದು, ಸಸ್ಯಶಾಸ್ತ್ರದಲ್ಲಿ 'ಸಾಲ್ವಿಯ' ಎಂದು ಗುರುತಿಸುವರು. ಇದರಲ್ಲಿ ಅನೇಕ ಪ್ರಭೇದಗಳಿದ್ದು, ಸಾಲ್ವಿಯ ಈಜಿಪ್ಟಿಯಾಕ, ಸಾಲ್ವಿಯ ಪ್ಲೆಬಿಯ, ಸಾಲ್ವಿಯ ಕಾಕ್ಸೀನಿಯ, ಸಾಲ್ವಿಯ ಮುಕ್ರಾಫ್ಟಿಯಾನ, ಸಾಲ್ವಿಯ ಲ್ಯಾನೇಟ ಪ್ರಮುಖವಾದವು. ಉಷ್ಣವಲಯ ಹಾಗೂ ಸಮಶೀತೋಷ್ಣ ವಲಯಗಳು ಕಾಳಿತುಂಬೆಗೆ ಉತ್ತಮ ವಾತಾವರಣ. ಭಾರತದ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ಈ ಗಿಡ ಕಾಣಸಿಗುತ್ತದೆ.

ಸಸ್ಯವಿವರ : ಇದು 1-1½ ಸೆಂ.ಮೀ. ಎತ್ತರಕ್ಕೆ ಬೆಳೆಯುತ್ತದೆ. ಕಾಂಡ ಚಚ್ಚೌಕವಾಗಿರುತ್ತದೆ. ಎಲೆಗಳು ಅಭಿಮುಖ ಮಾದರಿಯಲ್ಲಿ ಜೋಡಣೆಗೊಂಡಿರುತ್ತವೆ. ಅಂತ್ಯಾರಂಭಿ ಮಾದರಿಯ ಹೂಗೊಂಚಲಿರುತ್ತದೆ. ಅಂದರೆ ಹೂಗಳು ಕಾಂಡದ ತುದಿಯಲ್ಲಿ ಬಿಡುತ್ತವೆ. ಕೆಂಪು, ನೀಲಿಕಂದು, ಇಲ್ಲವೆ ಬಿಳಿ ಬಣ್ಣದಲ್ಲಿರುತ್ತವೆ. ಉಭಯ ಪಾರ್ಶ್ವ ಸಮಾಂಗತೆ ಈ ಹೂವಿನ ವಿಶಿಷ್ಟ ಲಕ್ಷಣ.

ಉಪಯೋಗ : ಇದು ಆಲಂಕಾರಿಕ ಸಸ್ಯವಾಗಿದ್ದು ಉದ್ಯಾನಗಳಲ್ಲಿ ಬೆಳೆಸುವರು. ಕೆಲವು ಪ್ರಭೇದಗಳು ಔಷಧವಾಗಿ ಬಳಕೆಯಲ್ಲಿವೆ. ಸಾಲ್ವಿಯ ಈಜಿಪ್ಟಿಯಾಕ ಪ್ರಭೇದವನ್ನು ಕಣ್ಣಿಗೆ ಸಂಬಂಧಿತ ರೋಗಗಳನ್ನು ಗುಣಪಡಿಸಲು ಬಳಸುವರು. ಸಾಲ್ವಿಯ ಕಾಬೂಲಿಕ ಪ್ರಭೇದವನ್ನು ಜ್ವರ, ನೆಗಡಿ ಮತ್ತು ಶ್ವಾಸಕೋಶ ಸಂಬಂಧಿತ ತೊಂದರೆಗಳಲ್ಲಿ ಬಳಸುವರು. ಸಾಲ್ವಿಯ ಸ್ಪೈನೋಸ್ ಪ್ರಭೇದದ ಬೀಜಗಳು ಹಲ್ಲು ನೋವಿಗೆ ಉತ್ತಮ ಪರಿಹಾರ. ಸಾಲ್ವಿಯ ಅಫಿಸಿನ್ಯಾಲಿಸ್ ಪ್ರಭೇದದ ಎಲೆಗಳನ್ನು ಉಪಯೋಗಿಸಿ ಬಾಯಿ ಮುಕ್ಕಳಿಸುವುದರಿಂದ ಊತ ಕಡಿಮೆಯಾಗುತ್ತದೆ.

ವಿ.ಎನ್.ಕೆ.

ತುಪ್ಪದ ಹೀರೆಕಾಯಿ (ಸ್ಪಾಂಜ್ ಗಾರ್ಡ್) ಇದು ಕುಕರ್ಬಿಟೇಸೀ ಕುಟುಂಬಕ್ಕೆ ಸೇರಿದೆ. ಇದರ ಸಸ್ಯ ವೈಜ್ಞಾನಿಕ ನಾಮ ಲುಫ ಸಿಲಿಂಡ್ರಿಕ ಲಿನ್.

ಇದರ ಮೂಲಸ್ಥಾನ ಭಾರತ. ಈ ಕಾಯಿ ಮೃದುವಾಗಿರುವುದರಿಂದ 'ತುಪ್ಪದ ಹೀರೇಕಾಯಿ' ಎಂದು ಕರೆಯಲಾಗುತ್ತದೆ. ಉದ್ದವಾಗಿ ಹರಿದು ಸಾಗುವ ಈ ಬಳ್ಳಿಯನ್ನು ಚಪ್ಪರ, ಹಿತ್ತಿಲು ಮುಂತಾದ ಕಡೆ ಹಬ್ಬಿಸುತ್ತಾರೆ. ಸಾಮಾನ್ಯವಾಗಿ ಮನೆಯಂಗಳದಲ್ಲಿ ಬೆಳೆಯುತ್ತಾರೆ. ಫಲವತ್ತಾಗಿರುವ ವಿವಿಧ ಮಣ್ಣುಗಳಲ್ಲಿ ಇದನ್ನು ಬೆಳೆಯಬಹುದಾದರೂ ಮರಳುಗೋಡು ಮಣ್ಣಿನಲ್ಲಿ ಉತ್ತಮ ಇಳುವರಿ ಪಡೆಯಬಹುದು.

ಬೇಸಾಯ ಕ್ರಮ : ಒಂದು ಎಕರೆಗೆ 1.25 ರಿಂದ 1.50 ಕಿ.ಗ್ರಾಂ. ಬಿತ್ತನೆ ಬೀಜ ಬೇಕಾಗುತ್ತದೆ. ಬೇಸಾಯ ಮಾಡುವ ಭೂಮಿಯನ್ನು 3 ರಿಂದ 4 ಬಾರಿ ಉಳುಮೆ, ಅಗೆತ ಮಾಡಿ, ಕಳೆ ತೆಗೆದು, ಹೆಂಟೆ ಪುಡಿಮಾಡಿ, ಎಕರೆಗೆ 7 ರಿಂದ 10 ಟನ್ ಕೊಟ್ಟಿಗೆ ಗೊಬ್ಬರವನ್ನು ಮಿಶ್ರಣ ಮಾಡಬೇಕು. ಅನಂತರ 6 ಅಡಿ ಅಂತರದಲ್ಲಿ 2 ಅಡಿ ಅಗಲದ 4 ಅಂಗುಲ ಆಳದ ಗುಂಡಿಗಳನ್ನು ತೆಗೆದು ಪ್ರತಿ ಗುಂಡಿಯಲ್ಲಿ 4 ರಿಂದ 6 ಬೀಜಗಳನ್ನು ಬಿತ್ತಬೇಕು. ಬೀಜ ಬಿತ್ತಿದ 5-6 ದಿವಸಗಳಲ್ಲಿ ಮೊಳೆಯುತ್ತದೆ. ಮನೆ,



ಕೈ ತೋಟಗಳಲ್ಲಿ ಬೇಸಾಯ ಮಾಡುವಾಗ ಹಂಬನ್ನು ಚಾವಣಿ, ಚಪ್ಪರಗಳ ಮೇಲೆ ಹಬ್ಬಿಸುತ್ತಾರೆ. ಬೀಜ ಬಿತ್ತುವುದಕ್ಕೆ ಮೊದಲು ನೀರು ಹಾಕಬೇಕು. ಅನಂತರವೂ ನೀರನ್ನು ಕೊಡಬೇಕು. ಬೇಸಾಯಕಾಲ, ಮಣ್ಣು ಮತ್ತು ಹವಾಗುಣವನ್ನವಲಂಬಿಸಿ ವಿವಿಧ ಹವಾಗುಣಗಳಿಗೆ ಹೊಂದಿಕೊಂಡು ಬೆಳೆಯಬಹುದಾದರೂ ಒಣ ವಾತಾವರಣ ಒಳ್ಳೆಯದು. ಆದ್ದರಿಂದ ಉಷ್ಣವಲಯಗಳಲ್ಲಿ ಚೆನ್ನಾಗಿ ಬೆಳೆಯುತ್ತಾರೆ. ಮಳೆಗಾಲದಲ್ಲಿ ಬೆಳೆದ ಬೆಳೆಗೆ ಹೆಚ್ಚು ನೀರಾವರಿ ಬೇಕಿಲ್ಲದಿದ್ದರೆ, ಒಣ ಹವಾಗುಣದಲ್ಲಿ ಮೂರು ದಿವಸಗಳಿಗೊಮ್ಮೆ ನೀರು ಕೊಡಬೇಕಾಗುತ್ತದೆ. ವರ್ಷ ಪೂರ್ತಿ ಬೆಳೆಸುವಂತಹ ಸಾಧ್ಯತೆಯಿದ್ದರೂ ಬೇಸಗೆ ಮತ್ತು ಮಳೆಗಾಲದಲ್ಲಿ ಉತ್ತಮ ಇಳುವರಿ ಪಡೆಯಲು ಸಾಧ್ಯ.

ಬಿತ್ತಿದ 40 ದಿನಗಳಲ್ಲಿ ಹೂಬಿಟ್ಟು 60 ದಿನಗಳಲ್ಲಿ ಕೊಯ್ಲಿಗೆ ಬರುತ್ತವೆ. ಕಾಯಿಗಳು ಬಳ್ಳಿಗಳಿಗೆ ಭದ್ರವಾಗಿ ಅಂಟಿಕೊಂಡಿರು ವುದರಿಂದ ತೊಟ್ಟುಗಳನ್ನು ಬಲಿತಾಗ ಚಾಕುವಿನಿಂದ ಪ್ರತ್ಯೇಕಿಸಬೇಕು. ಎಕರೆಗೆ ಸುಮಾರು 1 ರಿಂದ 2 ಟನ್‌ವರೆಗೂ ಇಳುವರಿ ಪಡೆಯಬಹುದು.

ಉಪಯೋಗಗಳು : ಎಳೆಯ ಕಾಯಿಗಳನ್ನು ತರಕಾರಿಯಾಗಿ ಬಳಸಲಾಗುವುದು. ಬಲಿತಂತೆ ನಾರಿನ ಅಂಶದ ಜೊತೆಗೆ ಕಹಿಯ ಅಂಶವೂ ಹೆಚ್ಚುತ್ತದೆ. ಈ ತರಕಾರಿಯು ಶರೀರದಲ್ಲಿರುವ ಆಮ್ಲ ಗುಣವನ್ನು ಕಡಿಮೆ ಮಾಡುತ್ತದೆ. ಶರೀರವನ್ನು ತಂಪಾಗಿಡುತ್ತದೆ. ಬೇಸಗೆಯಲ್ಲಿ ಹೆಚ್ಚಾಗಿ ಉಪಯೋಗಿಸಿದರೆ ತಾಪ ಕಡಿಮೆಯಾಗುತ್ತದೆ. ಬೆವರಿನಿಂದ ಉಂಟಾದ ನಷ್ಟ ತುಂಬಿಕೊಡುತ್ತದೆ. ಬೀಜ ಮಲಬದ್ಧತೆಯನ್ನು ನಿವಾರಿಸುತ್ತದೆ.

ಆಫ್ರಿಕಾದಲ್ಲಿ ಇದನ್ನು ಸೊಪ್ಪು ತರಕಾರಿಗೂ ಬಳಸುತ್ತಾರೆ. ಕಾಂಡದಿಂದ ತೇದು ಪಡೆದ ರಸವನ್ನು ಉಸಿರಾಟದ ತೊಂದರೆಗೆ ಬಳಸುವರು. ಬೀಜದಿಂದ ಪಡೆದ ಎಣ್ಣೆಯನ್ನು ಆಲೀವ್ ಎಣ್ಣೆಯಂತೆ ಚರ್ಮರೋಗಗಳಿಗೆ ಬಳಸುತ್ತಾರೆ. ಪಿಷ್ಟ ರಂಜಕ, ಸಾರಜನಕ, ಕೊಬ್ಬು ಮತ್ತು ಸುಣ್ಣದ ಅಂಶಗಳನ್ನೊಳಗೊಂಡಿದೆ. ಧಾರವಾಡದ ಕಡೆ ಇದನ್ನು ತುಪ್ರಿಕಾಯಿ ಎನ್ನುತ್ತಾರೆ.

ಪೂಸಾ ಚಿಕ್ನಿ - ತಳಿಯ ಕಾಯಿಗಳು ಹಸುರಾಗಿದ್ದು ನಯವಾಗಿರುತ್ತವೆ. ಕೇವಲ 45 ದಿನಗಳಲ್ಲಿ ಹೂ ಬಿಡುವ ತಳಿಯು ವಸಂತ ಋತು ಮತ್ತು ಬೇಸಗೆಯಲ್ಲಿ ಕಾಯಿಗಳನ್ನು ಬಿಡುತ್ತದೆ.

ಕೆ.ಎಲ್.

ತುಮಕೂರು ಜಿಲ್ಲೆಯ ಕೃಷಿ ಕರ್ನಾಟಕದ ಮೂವತ್ತು ಜಿಲ್ಲೆಗಳ ಪೈಕಿ ಒಂದು. ಕೈಗಾರಿಕಾ ಮತ್ತು ಶೈಕ್ಷಣಿಕ ನಗರ. ಕಲ್ಪತರು ನಾಡು, ಕಲ್ಪವೃಕ್ಷದ ಬೀಡು, ತೆಂಗಿನಮರ ಎಂದೆಲ್ಲಾ ಕೀರ್ತಿ ಹೊಂದಿದೆ. ತುಮಕೂರು ಕರ್ನಾಟಕದಲ್ಲಿ ಆಗ್ನೇಯ ದಿಕ್ಕಿನಲ್ಲಿದ್ದು, ರಾಜಧಾನಿ ಬೆಂಗಳೂರಿಗೆ 68 ಕಿ.ಮೀ. ದೂರದಲ್ಲಿದೆ. ಗಂಗರು, ನೊಳಂಬರು, ಚಾಳುಕ್ಯರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಅರಸರು ಮೊದಲಾದ ಮನೆತನಗಳು ಜಿಲ್ಲೆಯನ್ನು ಆಳಿದ್ದಾರೆ.

ತುಮಕೂರು ಪದದ ನಿಷ್ಪತ್ತಿ : 955-56ರಲ್ಲಿ ನಿರ್ಮಿಸಲಾದ ಸೋಮೇಶ್ವರ ದೇವಾಲಯದ ಕಲ್ಲಿನ ಶಾಸನದಲ್ಲಿ 'ತುಮ್ಮೆಗೂರು' (ದೊಳ್ತುಮ್ಮೆಗಾರ ಕೆಜೆಯವೊಳೆದೊ...) ಎಂಬ ಉಲ್ಲೇಖ ಸಿಗುತ್ತದೆ. 'ತುಮ್ಮೆಗೂರು' ಜಿಲ್ಲೆಯ ಮೂಲ ಹೆಸರಾಗಿದ್ದು, ಇದರ ಆಂಗ್ಲ ರೂಪಾಂತರ 'ತುಮಕೂರು' ಎಂಬುದು ಎಲ್ಲರು ಒಪ್ಪಿಕೊಂಡಿರುವ ವಿಚಾರ. ಆದರೂ ಇನ್ನಿತರ ಅಭಿಪ್ರಾಯಗಳನ್ನು ನೋಡಬಹುದು. ತುಂಬೆ ಹೂ ಸಮೃದ್ಧವಾಗಿದ್ದರಿಂದ 'ತುಂಬೆಊರು' ಎಂದೂ ಜನಪದರ ಸಂಗೀತ ಸಾಧನವಾದ ತಮಟೆಯ ವ್ಯಾಪಕ ಬಳಕೆಯಿಂದ 'ತಮಟೆ ಊರು' ಇದರಿಂದ 'ತುಮಕೂರು' ಪದ ಬಂದಿದೆ ಎಂದು ಹೇಳುತ್ತಾರೆ. ಮತ್ತೊಂದು ಅಭಿಪ್ರಾಯದ ಪ್ರಕಾರ ಹೊಯ್ಸಳರ ಸಾಮಂತ 'ಬಾಚಿದೇವ'ನ ಕಾಲದಲ್ಲಿ ತುಮಕೂರು ಎತ್ತರವಾದ ಪ್ರದೇಶವಾದ್ದರಿಂದ, ಅಲ್ಲಿ ಸೈನಿಕರು ಯಾವುದಾದರೊಂದು ಎತ್ತರವಾದ ಬೆಟ್ಟದ ಮೇಲೆ ನಿಂತು ಕಷ್ಟಕಾಲದಲ್ಲಿ 'ಟುಮುಕಿ' ಎಂಬ ಸಾಧನದ ಮೂಲಕ ಎಚ್ಚರಿಕೆ ನೀಡುತ್ತಿದ್ದರು. ಇದರಿಂದ 'ತುಮಕೂರು' ಎಂಬ ಹೆಸರು ಬಂದಿದೆ ಎಂದು ಹೇಳುತ್ತಾರೆ.

ಜಿಲ್ಲೆಯ ವಿಸ್ತೀರ್ಣ : 2011ರ ಅಂಕಿಅಂಶಗಳ ಪ್ರಕಾರ ಜಿಲ್ಲೆಯ ಒಟ್ಟು ವಿಸ್ತೀರ್ಣ 10,597ಚ.ಕಿ.ಮೀ. ಇದು ವಿಸ್ತೀರ್ಣದಲ್ಲಿ ಕರ್ನಾಟಕದ 3ನೇ ಸ್ಥಾನದಲ್ಲಿದೆ. ರಾಜ್ಯದ ಒಟ್ಟು ವಿಸ್ತೀರ್ಣದಲ್ಲಿ ಶೇ. 5.525ರಷ್ಟು ಆಗುವುದು. ಈ ಜಿಲ್ಲೆಯು ಒಟ್ಟು 10 ರೆವಿನ್ಯೂ ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ, ಚಿಕ್ಕನಾಯಕನ ಹಳ್ಳಿ (1,113ಚ.ಕಿ.ಮೀ.), ಗುಬ್ಬಿ (1,221ಚ.ಕಿ.ಮೀ.), ಕೊರಟಗೆರೆ (652ಚ.ಕಿ.ಮೀ.), ಕುಣಿಗಲ್ (981ಚ.ಕಿ.ಮೀ.), ಮಧುಗಿರಿ (1,131ಚ.ಕಿ.ಮೀ.), ಪಾವಗಡ (1,358ಚ.ಕಿ.ಮೀ.), ಸಿರಾ (1,552ಚ.ಕಿ.ಮೀ.), ತಿಪಟೂರು (785ಚ.ಕಿ.ಮೀ.) ತುಮಕೂರು (1,026ಚ.ಕಿ.ಮೀ.), ತುರವೇಕೆರೆ (778 ಚ.ಕಿ.ಮೀ.), ಪಾವಗಡ ತಾಲ್ಲೂಕನ್ನು 1886ರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ತುಮಕೂರು ಜಿಲ್ಲೆಗೆ ಸೇರಿಸಲಾಯಿತು. ಈ ಜಿಲ್ಲೆಯು 50 ಹೋಬಳಿಗಳು, 321 ಗ್ರಾಮಪಂಚಾಯತ್‌ಗಳು, 2,574 ಜನವಸತಿ ಇರುವ ಗ್ರಾಮಗಳು, 131 ಜನವಸತಿ ಇಲ್ಲದ ಗ್ರಾಮಗಳು, ನಾಲ್ಕು ಪುರಸಭೆಗಳು, ಮೂರು ನಗರ ಸಭೆಗಳು, ಮೂರು ಪಟ್ಟಣ ಪಂಚಾಯಿತಿಗಳನ್ನು ಒಳಗೊಂಡಿದೆ. ನಾಲ್ಕು ಆಡಳಿತ ವಿಭಾಗಗಳಲ್ಲಿ ತುಮಕೂರು ಜಿಲ್ಲೆ ಬೆಂಗಳೂರು ವಿಭಾಗಕ್ಕೆ ಸೇರಿದೆ. ಜಿಲ್ಲೆಯಲ್ಲಿ ಮೂರು ರೆವಿನ್ಯೂ ಉಪವಿಭಾಗಗಳು ಇವೆ: ತುಮಕೂರು, ತಿಪಟೂರು, ಮಧುಗಿರಿ. ತುಮಕೂರು ಉಪವಿಭಾಗಕ್ಕೆ ತುಮಕೂರು, ಗುಬ್ಬಿ, ಕುಣಿಗಲ್ ತಾಲ್ಲೂಕುಗಳು, ತಿಪಟೂರು ಉಪವಿಭಾಗಕ್ಕೆ ತಿಪಟೂರು, ಚಿಕ್ಕನಾಯಕನಹಳ್ಳಿ ತುರುವೇಕೆರೆ ತಾಲ್ಲೂಕುಗಳು, ಮಧುಗಿರಿ ಉಪವಿಭಾಗಕ್ಕೆ ಮಧುಗಿರಿ, ಶಿರಾ, ಕೊರಟಗೆರೆ, ಪಾವಗಡ ತಾಲ್ಲೂಕುಗಳೂ ಸೇರಿವೆ. ತುಮಕೂರು ನಗರ 28 ಆಗಸ್ಟ್ 2010ರಂದು ಮಹಾನಗರ ಪಾಲಿಕೆಯ ಸ್ಥಾನಮಾನವನ್ನು ಪಡೆದುಕೊಂಡಿದೆ.

ಮೇಲ್ಮೈ ಲಕ್ಷಣ : ತುಮಕೂರು ಉತ್ತರ ಅಕ್ಷಾಂಶ 12º45'-14º20' ಮತ್ತು ಪೂರ್ವರೇಖಾಂಶ 76º21'-77º31' ನಡುವೆ ಇದೆ. ಈ ಜಿಲ್ಲೆಯ ಉತ್ತರಕ್ಕೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಪಶ್ಚಿಮಕ್ಕೆ ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯಜಿಲ್ಲೆ, ಪೂರ್ವಕ್ಕೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳು ಇವೆ. ಅನಿಯತ ಆಕಾರ ಮತ್ತು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆ. ಈಶಾನ್ಯ ಭಾಗ ಜಿಲ್ಲೆಯಿಂದ ಬೇರ್ಪಟ್ಟಿದೆ. ಆ ಭಾಗದಲ್ಲಿ ಪಾವಗಡ ತಾಲ್ಲೂಕು ಇದ್ದು, ಪಶ್ಚಿಮದ ಅಂಚಿನ ಒಂದು ಭಾಗವನ್ನು ಬಿಟ್ಟು ಉಳಿದ ಕಡೆಯಲ್ಲೆಲ್ಲ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಸುತ್ತುವರೆದಿದೆ. ಪಶ್ಚಿಮದ ಅಂಚಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಚಾಚಿಕೊಂಡಿದೆ.


ಜಿಲ್ಲೆಯನ್ನು ಇತರ ಜಿಲ್ಲೆಗಳಿಂದ ಬೇರ್ಪಡಿಸುವ ನೈಸರ್ಗಿಕ ಗಡಿಗಳಾದ ಸಮುದ್ರವಾಗಲಿ, ನದಿಗಳಾಗಿ ಅಥವಾ ಬೆಟ್ಟ ಶ್ರೇಣಿಗಳಾಗಲಿ ಇಲ್ಲ. ಕುಣಿಗಲ್ ತಾಲ್ಲೂಕಿನ ದಕ್ಷಿಣ ಭಾಗವು ಬೆಟ್ಟಗುಡ್ಡಗಳಿಂದ ಆವೃತ್ತವಾಗಿದೆ. ಉಳಿದಭಾಗ ಸಾಮಾನ್ಯವಾಗಿ ಉಬ್ಬು ತಗ್ಗುಗಳಿಂದ ಕೂಡಿದ ಮೈದಾನ ಪ್ರದೇಶವಾಗಿದೆ. ಜಿಲ್ಲೆಯ ಪಶ್ಚಿಮ ಭಾಗವು ಸ್ಥೂಲವಾಗಿ ದಕ್ಷಿಣ - ಆಗ್ನೇಯವಾಗಿ ಹಬ್ಬಿರುವ ಬೆಟ್ಟ ಶ್ರೇಣಿಗಳಿಂದ ಆವರಿಸಿದೆ. ಇದು ಚಿತ್ರದುರ್ಗ ಶಿಸ್ಟ್ ಪಟ್ಟೆಯ ವಿಸ್ತರಣೆಯಾಗಿದೆ. ಇವು ರಾಜ್ಯದಲ್ಲಿರುವ ಧಾರವಾಡ ಶಿಸ್ಟ್‌ಗಳ ಮಧ್ಯದ

ಗುಂಪಿನವು. ಜಿಲ್ಲೆಯ ಪೂರ್ವಭಾಗದಲ್ಲಿ ಗ್ರಾನೈಟು ಬೆಟ್ಟಗಳ ಕಿರಿದಾದ ಶ್ರೇಣಿ ಇದ್ದು, ಇದು ಕ್ಲೋಸ್‌ಪೇಟ್ (ಈಗಿನ ರಾಮನಗರ) ಗ್ರಾನೈಟುಗಳ ಉತ್ತರದ ವಿಸ್ತೃತ ಭಾಗವಾಗಿದೆ. ಸರಾಸರಿ 32ಕಿ.ಮೀ. ಅಗಲವಾಗಿರುವ ಇವು ಜಿಲ್ಲೆಯಲ್ಲಿ ದಕ್ಷಿಣೋತ್ತರವಾಗಿ ಹಬ್ಬಿವೆ. ದೇವರಾಯನದುರ್ಗ ಮತ್ತು ಮಧುಗಿರಿ ಬೆಟ್ಟಗಳು ಈ ಗುಂಪಿನವು. ಪೂರ್ವದ ಗ್ರಾನೈಟ್ ಶ್ರೇಣಿ ಚಿಕ್ಕನಾಯಕನಹಳ್ಳಿ, ಶಿರಾ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಹಬ್ಬಿದೆ. ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕಿನ ಉತ್ತರ ಭಾಗದಲ್ಲೂ ಇದಕ್ಕೆ ಸಮನಾಂತರವಾಗಿ ಪಶ್ಚಿಮದಲ್ಲಿರುವ ಶಿಸ್ಟ್ ಶಿಲೆಗಳಿಂದ ಕೂಡಿದೆ. ಕುಣಿಗಲ್ ತಾಲ್ಲೂಕಿನ ಮಧ್ಯದ ಮತ್ತು ದಕ್ಷಿಣದ ಭಾಗಗಳಲ್ಲಿ ಬೆಟ್ಟಗಳ ಇನ್ನೊಂದು ಗುಂಪಿದೆ. ಜಿಲ್ಲೆಯು ಹಲವಾರು ಶಿಖರಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ದೇವರಾಯನದುರ್ಗ (1,180ಕಿ.ಮೀ.), ನಿಜಗಲ್ (1,080ಮೀ.), ರಾಮದೇವರ ಬೆಟ್ಟ (1,176ಮೀ.), ಮಧುಗಿರಿದುರ್ಗ (1,190ಮೀ.), ಚನ್ನರಾಯನ ದುರ್ಗ (1,132ಮೀ.) ಹುತ್ರಿದುರ್ಗ (1,124ಮೀ.) ಮುಂತಾದವು.

ಹವಾಗುಣ : ಜಿಲ್ಲೆಯ ಹವಾಗುಣ ಸಾಕಷ್ಟು ಹಿತಕರ ಮತ್ತು ವೈಪರೀತ್ಯಗಳಿಂದ ಕೂಡಿದೆ. ಉತ್ತರದ ಭಾಗ ಶಿರಾದಿಂದ ಉತ್ತರಕ್ಕಿರುವ ಪ್ರದೇಶದ ಮತ್ತು ಪಾವಗಡದ ವಾಯುಗುಣ ಚಿತ್ರದುರ್ಗಜಿಲ್ಲೆಯನ್ನು ಹೋಲುತ್ತದೆ. ಈ ಭಾಗದಲ್ಲಿ ಬೇಸಿಗೆಯಲ್ಲಿ ಹೆಚ್ಚು ಸಕೆ. ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ಅವಧಿಯ ಉಷ್ಣಾಂಶದಲ್ಲಿ ನಿರಂತರ ಮತ್ತು ಸ್ಥಿರವಾದ ಏರಿಕೆ ಕಂಡುಬರುತ್ತದೆ. ದಿನದ ತಾಪಮಾನ ಗರಿಷ್ಠ 41^{o}ಸೆ. ವರೆಗೆ ತಲುಪುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಅತ್ಯಧಿಕ ಬಿಸಿಲಿರುತ್ತದೆ. ಜಿಲ್ಲೆಯ ಎಲ್ಲ ಭಾಗಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಗುಡುಗು ಸಹಿತ ಪರಿಸರಣ ಮಳೆಯಾಗುತ್ತದೆ. ಇದು ಮಾನ್ಸೂನ್ ಪೂರ್ವದ ಮಳೆಯಾಗಿದೆ. ಮಾನ್‌ಸೂನ್ ಅನಂತರ ತಾಪಮಾನದಲ್ಲಿ ಇಳಿಕೆ ಕಂಡುಬರುತ್ತದೆ. ಮಾನ್‌ಸೂನ್ ಅವಧಿಯಲ್ಲಿ ವಾಯುಗುಣ ಹಿತಕರವಾಗಿರುತ್ತದೆ. ಅಕ್ಟೋಬರ್ ಅನಂತರ ರಾತ್ರಿಯ ತಾಪಮಾನ ಕುಸಿಯುತ್ತದೆ. ಸಾಮಾನ್ಯವಾಗಿ ಡಿಸೆಂಬರ್ ಅತಿ ಹೆಚ್ಚು ತಂಪಾದ ತಿಂಗಳು. ಈ ತಿಂಗಳಿನಲ್ಲಿ ಕನಿಷ್ಠ ಉಷ್ಣತೆ 9^{o}ಸೆ. ಸಾಪೇಕ್ಷ ಆರ್ದ್ರತೆ ಮಾನ್‌ಸೂನ್ ಕಾಲದಲ್ಲಿ ಹೆಚ್ಚಿದ್ದರೆ, ಇತರ ತಿಂಗಳುಗಳಲ್ಲಿ ಮಧ್ಯಮ ಪ್ರಮಾಣದಲ್ಲಿ ಮತ್ತು ಬೇಸಗೆಯ ಮಧ್ಯಾಹ್ನಗಳಲ್ಲಿ ಕಡಿಮೆ ಪ್ರಮಾಣದಲ್ಲಿರುತ್ತದೆ. ಮಾರುತಗಳು ವಿಶೇಷವಾಗಿ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಹೆಚ್ಚಿನ ಬಲವನ್ನು ಪಡೆದುಕೊಳ್ಳುತ್ತದೆ.

ಮಳೆ : ಜಿಲ್ಲೆಯಲ್ಲಿ ಮಾರ್ಚ್‌ನಿಂದ ಮೇ ವರೆಗೆ ಬೇಸಗೆ ಕಾಲ, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನೈರುತ್ಯ ಮಾನ್‌ಸೂನ್ ಮಾರುತಗಳ ಕಾಲ, ಅಕ್ಟೋಬರ್ ಮತ್ತು ನವೆಂಬರ್ ಈಶಾನ್ಯ ಮಾನ್‌ಸೂನ್ ಮಾರುತಗಳ ಕಾಲ ಡಿಸೆಂಬರ್‌ನಿಂದ ಫೆಬ್ರವರಿಯವರೆಗೆ ಒಣ ಅಥವಾ ಚಳಿಗಾಲ ಕಂಡುಬರುತ್ತದೆ. ಜಿಲ್ಲೆಯಲ್ಲಿ ಸುಮಾರು 65 ಮಳೆ ಮಾಪನ ಕೇಂದ್ರಗಳಿವೆ. ಜಿಲ್ಲೆಯ ವಾಡಿಕೆ ಮಳೆಯ ದಿವಸಗಳು 45, 2009ರಲ್ಲಿಯ ವಾಸ್ತವಿಕ ಮಳೆ ದಿವಸಗಳು 41. ಪಾವಗಡದಲ್ಲಿ ಮಳೆಯ ದಿನಗಳು 35 ಆದರೆ ತುಮಕೂರಿನಲ್ಲಿ 54 ದಿನಗಳು. ಜಿಲ್ಲೆಯ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 687.9ಮಿ.ಮೀ., ಈ ಪ್ರಮಾಣವು ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. 2009ರಲ್ಲಿ ಜಿಲ್ಲೆಯ ಒಟ್ಟು ಮಳೆ 673ಮಿ.ಮೀ. ವಾರ್ಷಿಕ ವಾಡಿಕೆ ಸರಾಸರಿ ಮಳೆ 585 ಮಿ.ಮೀ. ತಾಲ್ಲೂಕುಗಳ ವಾರ್ಷಿಕ ಮಳೆ ಚಿಕ್ಕನಾಯಕನಹಳ್ಳಿಯಲ್ಲಿ 504ಮಿ.ಮೀ., ಗುಬ್ಬಿಯಲ್ಲಿ 618ಮಿ.ಮೀ. ಕೊರಟಗೆರೆ 638ಮಿ.ಮೀ., ಕುಣಿಗಲ್‌ನಲ್ಲಿ 701ಮಿ.ಮೀ., ಮಧುಗಿರಿಯಲ್ಲಿ 657ಮಿ.ಮೀ. ಪಾವಗಡದಲ್ಲಿ 486ಮಿ.ಮೀ., ಶಿರಾದಲ್ಲಿ 520 ಮಿ.ಮೀ., ತಿಪಟೂರಿನಲ್ಲಿ 613ಮಿ.ಮೀ., ತುಮಕೂರಿನಲ್ಲಿ 629ಮಿ.ಮೀ., ತುರುವೇಕೆರೆಯಲ್ಲಿ 666ಮಿ.ಮೀ.

ಜಿಲ್ಲೆಯ ಉತ್ತರದಿಂದ ದಕ್ಷಿಣಕ್ಕೆ ಸಾಗಿದಂತೆ ಸಾಮಾನ್ಯವಾಗಿ ಮಳೆ ಹೆಚ್ಚು. ನೈರುತ್ಯ ಮಾನ್‌ಸೂನ್ ಮಾರುತಗಳಿಂದ ಶೇ. 50ರಷ್ಟು



ಮಳೆಯನ್ನು ಪಡೆದರೆ, ಉಳಿದ ಶೇ. 50 ರಷ್ಟನ್ನು ಮಾನ್‌ಸೂನ್ ಪೂರ್ವದಲ್ಲಿ (ಏಪ್ರಿಲ್-ಮೇ) ಮತ್ತು ಈಶಾನ್ಯ ಮಾನ್‌ಸೂನ್ ಮಾರುತಗಳಿಂದ (ಅಕ್ಟೋಬರ್-ನವೆಂಬರ್) ಪಡೆಯುತ್ತದೆ. ಉಳಿದ ತಿಂಗಳು ಮಳೆ ರಹಿತವಾಗಿರುತ್ತವೆ. ಸೆಪ್ಟೆಂಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಅತಿ ಹೆಚ್ಚು ಮಳೆ ಬೀಳುತ್ತದೆ. ಈ ಅವಧಿಯಲ್ಲಿ ಅಸಂಖ್ಯಾತ ಕೆರೆಗಳು ತುಂಬಿ ತುಳುಕುತ್ತವೆ. ಮಳೆ ವಿಳಂಬವು ರೈತರ ಆತಂಕ ಮತ್ತು ಸಂಕಷ್ಟಕ್ಕೆ ಕಾರಣವಾಗುತ್ತದೆ. ಜಿಲ್ಲೆಯ ಕೆಲ ಭಾಗಗಳು ಬರ ಪೀಡಿತ.

ಕೃಷಿ ಭೂಮಿ : ಜನರ ಮುಖ್ಯ ಕಸುಬು ವ್ಯವಸಾಯ. 2011ರ ಜನಗಣತಿಯ ಪ್ರಕಾರ ಶೇ. 77.64 ರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಾರೆ. ಅಲ್ಲದೇ ಅವರಲ್ಲಿ ಹೆಚ್ಚಿನವರು ಕೃಷಿಯನ್ನು ಅವಲಂಬಿಸಿದ್ದಾರೆ.

ಅ) ಭೂ ಹಿಡುವಳಿಗಳು : 2005-06 ರ ಕೃಷಿ ಗಣತಿ ಪ್ರಕಾರ ಜಿಲ್ಲೆಯಲ್ಲಿ 4,22,603 ಭೂಹಿಡುವಳಿಗಳು ಇದ್ದು, ಅವುಗಳ ವಿಸ್ತೀರ್ಣ 6,98,640 ಹೆ. ಅದರಲ್ಲಿ ಅತಿಸಣ್ಣ ಭೂಹಿಡುವಳಿಗಳ ಸಂಖ್ಯೆ 2,06,989 ಅದರ ವಿಸ್ತೀರ್ಣ 99,015 ಹೆ. ಸಣ್ಣ ಭೂ ಹಿಡುವಳಿಗಳ ಸಂಖ್ಯೆ 1,07,924 ಅದರ ವಿಸ್ತೀರ್ಣ 1,54,043 ಹೆ. ಅರೆಮಧ್ಯಮ ಭೂಹಿಡುವಳಿಗಳ ಸಂಖ್ಯೆ 71,335, ಅದರ ವಿಸ್ತೀರ್ಣ 1,95,375ಹೆ. ಮಧ್ಯಮ ಭೂಹಿಡುವಳಿಗಳ ಸಂಖ್ಯೆ 31,929, ಅದರ ವಿಸ್ತೀರ್ಣ 1,84,670 ಹೆ. ದೊಡ್ಡ ಭೂಹಿಡುವಳಿಗಳ ಸಂಖ್ಯೆ 4,426 ಅದರ ವಿಸ್ತೀರ್ಣ 65,537ಹೆ. ಈ ಅಂಕಿ ಅಂಶಗಳಲ್ಲೇ ಸಂಘ-ಸಂಸ್ಥೆಗಳ ಒಡೆತನದ ಹಿಡುವಳಿದಾರರ ಸಂಖ್ಯೆ ಮತ್ತು ವಿಸ್ತೀರ್ಣ ಸೇರಿರುತ್ತದೆ.

ಭೂ ಉಪಯೋಗ : 2008-09ರ ಅಂಕಿಅಂಶಗಳ ಪ್ರಕಾರ ಭೂಬಳಕೆ ಇಂತಿದೆ. ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 10,64,755 ಹೆ.ಗಳಲ್ಲಿ ಅರಣ್ಯಕ್ಕೆ 45,177ಹೆ. (ಶೇ. 4) ವ್ಯವಸಾಯೇತರಕ್ಕೆ 84,276 ಹೆ. (ಶೇ. 8), ಬಂಜರುಭೂಮಿಗೆ 67,539 ಹೆ. (ಶೇ. 6), ಸಾಗುವಳಿಗೆ ಯೋಗ್ಯವಾದ ಬಂಜರುಭೂಮಿಗೆ 62,642 ಹೆ. (ಶೇ. 6), ಖಾಯಂ ಗೋಮಾಳಕ್ಕೆ 76,453 (ಶೇ. 7), ವೃಕ್ಷ ಮತ್ತು ತೋಪುಗಳಿಗೆ 21,033 ಹೆ. (ಶೇ. 2), ಬೀಳುಭೂಮಿಗೆ 92,561 ಹೆ. (ಚಾಲ್ತಿ - 63,698 (ಶೇ. 6), ಇತರೆ 28,863 (ಶೇ. 3), ನಿವ್ವಳ ಬಿತ್ತನೆಯಾದ ಪ್ರದೇಶಕ್ಕೆ 6,15,074 ಹೆ. (ಶೇ. 58), ಒಂದಕ್ಕಿಂತ ಹೆಚ್ಚು ಬಿತ್ತನೆಯಾದ ಪ್ರದೇಶಕ್ಕೆ 69, 341ಹೆ. ಹಂಚಿಕೆಯಾಗಿದೆ. ಜಿಲ್ಲೆಯ ಭೂಬಳಕೆಯನ್ನು ಅವಲೋಕಿಸಿದರೆ ಕೃಷಿಗೆ ಭೌಗೋಳಿಕ ವಿಸ್ತೀರ್ಣದಲ್ಲಿ ಅರ್ಧ ಪಾಲು ಸಿಕ್ಕಿರುವುದು ಗಮನಾರ್ಹವಾದುದು.

ಮಣ್ಣು : ಜಿಲ್ಲೆಯು ಹೆಚ್ಚು ಆಳವಿಲ್ಲದ ಕೆಂಪು ಮಣ್ಣನ್ನು ಹೊಂದಿದೆ. ಮಣ್ಣು ಸಾಮಾನ್ಯವಾಗಿ ಗಟ್ಟಿಯಾಗಿದ್ದು ಅಷ್ಟೇನೂ ಫಲವತ್ತಾದ್ದಲ್ಲ. ಕೆರೆ ನಾಲೆಗಳಿಂದ ನೀರಾವರಿಗೆ ಒಳಪಟ್ಟ ನೆಲ ಮಾತ್ರ ಫಲವತ್ತಾಗಿದೆ. ಜಿಲ್ಲೆಯ ದಕ್ಷಿಣ ಮತ್ತು ಪಶ್ಚಿಮ ತಾಲ್ಲೂಕುಗಳಲ್ಲಿ ಕೆಂಪು ಮಣ್ಣು (ರಾಗಿ ಮಣ್ಣು), ಉತ್ತರ ತಾಲ್ಲೂಕುಗಳಲ್ಲಿ ತಕ್ಕ ಮಟ್ಟಿಗೆ ಕಪ್ಪು ಮಣ್ಣು, ಪೂರ್ವದ ತಾಲ್ಲೂಕುಗಳಲ್ಲಿ ಮರಳು ಮಣ್ಣು ಹಂಚಿಕೆಯಾಗಿದೆ. ಒಟ್ಟಾರೆಯಾಗಿ ಜಿಲ್ಲೆಯ ಮಣ್ಣನ್ನು ಕೆಂಪು ಮರಳು, ಕಪ್ಪು ಮರಳು ಮಿಶ್ರಿತ ಜೇಡಿ ಎಂದು ವಿಂಗಡಿಸಬಹುದು. ಕಪ್ಪುಮಣ್ಣು 32.04 ಸಾವಿರ ಹೆ. ಪ್ರದೇಶಗಳಲ್ಲಿ, ಕಪ್ಪುಮಣ್ಣು 386.531 ಸಾವಿರ ಹೆ. ಪ್ರದೇಶಗಳಲ್ಲಿ, ಮರಳು ಮಣ್ಣು 37.975 ಸಾವಿರ ಹೆ.ಗಳಲ್ಲಿ ಹಾಗೂ ಮರಳು ಮಿಶ್ರಿತ ಜೇಡಿ 209.743 ಸಾವಿರ ಹೆ. ಪ್ರದೇಶಗಳಲ್ಲಿ ಹಂಚಿಕೆಯಾಗಿದೆ. ಇವುಗಳಲ್ಲಿ ಕಪ್ಪು ಮತ್ತು ಕೆಂಪುಮಣ್ಣು ವ್ಯವಸಾಯಯೋಗ್ಯವಾಗಿದ್ದು, ವಿವಿಧ ರೀತಿಯ ಬೆಳೆಗಳನ್ನು ಬೆಳೆಯಲಾಗುತ್ತದೆ.

ಅರಣ್ಯ : ಜಿಲ್ಲೆಯು ಮಧ್ಯ ಕರ್ನಾಟಕ ಪ್ರಸ್ಥಭೂಮಿ ಪ್ರದೇಶದಲ್ಲಿರುವುದರಿಂದ ಅರಣ್ಯ ಪ್ರದೇಶ ಜಿಲ್ಲೆಯ ಒಟ್ಟು ಭೂಬಳಕೆಯಲ್ಲಿ ಶೇ. 4 ರಷ್ಟು ಮಾತ್ರ ಕಂಡು ಬರುತ್ತದೆ. ಈ ಪ್ರಮಾಣ ಮುಂಚೆ ಶೇ. 8 ರಷ್ಟು ಇದ್ದು, ಹಲವಾರು ಕಾರಣಗಳಿಂದ ಅರಣ್ಯ ನಾಶಗೊಂಡಿದೆ. ಇಂದು ಅರಣ್ಯ ಪ್ರದೇಶ 45,177 ಹೆ. ಮಾತ್ರ. ಜಿಲ್ಲೆಯ ಬೆಟ್ಟ ಗುಡ್ಡಗಳ ಬಳಿ ಅರಣ್ಯ ಪ್ರದೇಶವು ಕೇಂದ್ರೀಕೃತವಾಗಿದೆ. ಇಲ್ಲಿ ವಿವಿಧ ಪ್ರಭೇದಗಳ ಸಸ್ಯವರ್ಗಗಳನ್ನು ಕಾಣಬಹುದು. ದೊಡ್ಡ ಮರಗಳಿಂದ ಹಿಡಿದು ಮುಳ್ಳಿನ ಪೊದೆಗಳವರೆಗೂ ವೈವಿಧ್ಯವನ್ನು ಒಳಗೊಂಡಿದೆ. ಅರಣ್ಯವು ಉಷ್ಣವಲಯದ ಎಲೆ ಉದುರುವ ಕಾಡುಗಳು ಪ್ರಭೇದಕ್ಕೆ ಸೇರುತ್ತದೆ. ಮಳೆಯ ಕೊರತೆಯಿಂದ ಮರಗಳು ಚಿಕ್ಕದಾಗಿದ್ದು, ತಿರುಚಿದ, ಗಂಟುಗಂಟಾದ ರೆಂಬೆ-ಕೊಂಬೆಗಳಿಂದ ಕೂಡಿವೆ. ಮರಗಳು ಪ್ರಭೇದಗಳ ಸಂಖ್ಯೆ ತೀರ ಕಡಿಮೆ. ಇವು ಇಂಧನಕ್ಕೆ ಮಾತ್ರ ಯೋಗ್ಯವಾಗಿವೆ.

ಇಲ್ಲಿಯ ನೈಸರ್ಗಿಕ ಸಸ್ಯವರ್ಗ ಶುಷ್ಕ ಪರ್ಣಪಾತಿ ಸ್ವರೂಪಿ. ಹೆಚ್ಚು ಮಳೆಯಾಗುವ ಪ್ರದೇಶದಲ್ಲಿ ಜಾಲರಿ, ದಿಂಡಿಗ, ಹೊನ್ನೆ, ಕರೀಮತ್ತಿ, ಅಳಲೆ, ತೋರಮತ್ತಿ, ಹುಣಿಸೆ, ತೇಗ, ಶ್ರೀಗಂಧ, ಬಾಗಿ, ಚಿಲಕಧೂಪ ಮುಂತಾದ ಮರಗಳೂ, ಕಡಿಮೆ ಮಳೆಯಾಗುವ ಪಾವಗಡ ಮತ್ತು ಜಿಲ್ಲೆಯ ಉತ್ತರ ಭಾಗಗಳಲ್ಲಿ ಕಗ್ಗಲಿ, ಕಾರೆ, ಕಕ್ಕೆ, ಚುಜ್ಜಲು ಮುಂತಾದ ಮರಗಳು ಕಂಡುಬರುತ್ತವೆ. ತಂಗಡಿ ಕಕ್ಕೆ ಮರಗಳು ಜಿಲ್ಲೆಯ ಎಲ್ಲೆಡೆ ಕಾಣಸಿಗುತ್ತದೆ. ಅಳಲೆ, ಹುಣಿಸೆ, ಸೀತಾಫಲಗಳೂ ವರಮಾನ ಸಂಪಾದನೆಯ ದೃಷ್ಟಿಯಿಂದ ಪ್ರಮುಖವಾದವು. ಜಿಲ್ಲೆಯ ದಕ್ಷಿಣ ಭಾಗ ಎತ್ತರ ಮತ್ತು ಸಮೃದ್ಧವಾಗಿ ಬೆಳೆದ ಮರಗಳನ್ನು ಒಳಗೊಂಡಿದೆ. ಜಿಲ್ಲೆಯ ಹವಾಗುಣ, ಮಣ್ಣು ಮಳೆಯು ವಿವಿಧ ಬಗೆಯ ಸಸ್ಯವರ್ಗಕ್ಕೆ ಯುಕ್ತವಲ್ಲ. ಸಾಕಷ್ಟು ಅರಣ್ಯ ಕೊರತೆಯಿಂದ ಇಲ್ಲಿ ಕೆಲವೇ ಕೆಲವು ವನ್ಯ ಜೀವಿಗಳ ಪ್ರಭೇದಗಳಿವೆ. ಇಂದು ಇಲ್ಲಿ ಹುಲಿ, ಚಿರತೆ ಸಂಪೂರ್ಣವಾಗಿ ಅವನತಿ ಹೊಂದಿವೆ. ಇಲ್ಲಿಯ ಪ್ರಮುಖ ವನ್ಯಜೀವಿಗಳು ಕರಡಿ, ಕಾಡುಹಂದಿ, ಕತ್ತೆಕಿರುಬ, ನರಿ, ಚುಕ್ಕೆ ಜಿಂಕೆ, ಮುಂಗುಸಿ ಮತ್ತು ಮೊಲ ಇತ್ಯಾದಿ. ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳ ಕಾಡುಗಳಲ್ಲಿ ಜಿಂಕೆಗಳ ಸಣ್ಣ ಸಣ್ಣ ಗುಂಪುಗಳಿವೆ. ಪಕ್ಷಿಗಳಲ್ಲಿ ಕಾಡುಕೋಳಿ, ನವಿಲು ಕಾಣಸಿಗುತ್ತವೆ. ಇಲ್ಲಿಯ ನೀರಿನ ತಾಣಗಳಿಗೆ ವರ್ಷದ ಕೆಲವು ತಿಂಗಳುಗಳಲ್ಲಿ ಬಾತುಕೋಳಿ, ದಾಸಗೋರೆಗಳು ಬರುತ್ತವೆ. ವಿಷಪೂರಿತ ಹಾಗೂ ವಿಷರಹಿತ ಹಾವುಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. 2008-09 ಸಾಲಿನಲ್ಲಿ ಅರಣ್ಯ ಇಲಾಖೆ ವತಿಯಿಂದ 7.19 ಲಕ್ಷ ಸಸಿಗಳನ್ನು ನಿಟ್ಟಿದೆ.

ನದಿಗಳು : ಜಿಲ್ಲೆಯಲ್ಲಿ ಜೀವನದಿಗಳಿಲ್ಲ. ಕೆಲವು ಸಣ್ಣ ನದಿಗಳು ಬೆಟ್ಟಗಳಲ್ಲಿ ಹುಟ್ಟಿ ಹರಿಯುತ್ತವೆ. ಬೇಸಗೆಯಲ್ಲಿ ಬತ್ತಿಹೋಗುವ ಈ ಹೊಳೆಗಳಲ್ಲಿ ಕೆಲವು ಅನೇಕ ಕೆರೆಗಳಿಗೆ ನೀರನ್ನು ಸಾಗಿಸುತ್ತವೆ. ಶಿಂಷಾ, ಜಯಮಂಗಳಿ ಮತ್ತು ಸುವರ್ಣಮುಖಿ ಜಿಲ್ಲೆಯ ಪ್ರಮುಖ ನದಿಗಳು.

ಶಿಂಷಾ : ಶಿಂಷಾನದಿಯು ದೇವರಾಯನದುರ್ಗದ ದಕ್ಷಿಣ ಭಾಗದಲ್ಲಿ ಹುಟ್ಟಿ, ನೈಋುತ್ಯ ದಿಕ್ಕಿನ ಕಡೆಗೆ ತುಮಕೂರು, ತುರುವೇಕೆರೆ, ಗುಬ್ಬಿ ಮತ್ತು ಕುಣಿಗಲ್ ಮೂಲಕವಾಗಿ ಹರಿಯುತ್ತದೆ. ಜಿಲ್ಲೆಯಲ್ಲಿ 100 ಕಿ.ಮೀ. ಹರಿದ ಮೇಲೆ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಿ, ಕಾವೇರಿ ನದಿಯನ್ನು ಸೇರುತ್ತದೆ. ಈ ನದಿಯು ಕಡಬ ಕೆರೆಗೆ ನೀರನ್ನು ಒದಗಿಸುತ್ತದೆ. ಅಲ್ಲದೇ ಇದು ಕೂಡ ಹಲವಾರು ತೊರೆಗಳಿಂದ ನೀರನ್ನು ಪಡೆದುಕೊಳ್ಳುತ್ತದೆ. ನಾಗ ತೊರೆಯು ಕಲ್ಲೂರು ಬಳಿ ಈ ನದಿಯನ್ನು ಸೇರುತ್ತವೆ. ನಾಗಿಣಿ ತೊರೆಯು ಕುಣಿಗಲ್ ಕೆರೆಯಲ್ಲಿ ಹುಟ್ಟಿ, ಹನುಮಪುರದ ಬಳಿ ಈ ನದಿಯನ್ನು ಸೇರುತ್ತದೆ. ಈ ಎರಡು ಹೊಳೆಗಳು ವೈಶಿಷ್ಟ್ಯವನ್ನು ಒಳಗೊಂಡಿವೆ. ಈ ನದಿಗೆ ಕುಣಿಗಲ್ ತಾಲ್ಲೂಕಿನ ಮಾರ್ಕೋನಹಳ್ಳಿ ಬಳಿ ನೀರಾವರಿ ಉದ್ದೇಶಕ್ಕಾಗಿ ಅಣೆಕಟ್ಟೆಯನ್ನು ನಿರ್ಮಿಸಲಾಗಿದೆ. ಈ ಜಲಾಶಯದ ಅಚ್ಚುಕಟ್ಟು ಪ್ರದೇಶ 4,500 ಹೆ.

ಜಯಮಂಗಳಿ : ಇದು ಉತ್ತರ ಪಿನಾಕಿನಿಯ ಉಪನದಿಯಾಗಿದೆ. ದೇವರಾಯನದುರ್ಗದ ಉತ್ತರ ಭಾಗದ ಜಲವಗೊಂಡಿಯಲ್ಲಿ ಹುಟ್ಟುತ್ತದೆ. ಎರಡು ಪ್ರಧಾನ ಹೊಳೆಗಳನ್ನು ಒಳಗೊಂಡಿದೆ. ದೇವರಾಯನದುರ್ಗದಿಂದ ಈಶಾನ್ಯ ದಿಕ್ಕಿಗೆ ಹರಿದು, ಮಧುಗಿರಿಯನ್ನು ಪ್ರವೇಶಿಸಿ, ಪೂರ್ವ ದಿಕ್ಕಿನ ಹೊಳವನಹಳ್ಳಿ ಬಳಿಯ ಗರುಡಾಚಲದಿಂದ ನೀರನ್ನು ಪಡೆದುಕೊಂಡು ತನ್ನ ಹರಿವಿನ ತೀವ್ರತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಪಶ್ಚಿಮ ದಿಕ್ಕಿನ ಕ್ಯಾಸವರದ ಬಳಿ ಸುವರ್ಣ ಮುಖಿಯಿಂದ ನೀರನ್ನು ಪಡೆದುಕೊಳ್ಳುತ್ತದೆ. ಈ ನದಿಯ ಉದ್ದ 65ಕಿ.ಮೀ. ಜಯಮಂಗಳಿ ಹರಿಯುವ ತಾಲ್ಲೂಕುಗಳು ತುಮಕೂರು, ಕೊರಟೆಗೆರೆ ಮತ್ತು ಮಧುಗಿರಿ.

ಸುವರ್ಣ ಮುಖಿ : ಸುವರ್ಣ ಮುಖಿಯ ಹೆಸರಿನಲ್ಲಿ ಎರಡು ನದಿಗಳು ಕಂಡುಬರುತ್ತವೆ. ಇವು ಹಲವು ತೊರೆಗಳ ಸಂಗಮ. ಒಂದು ಜಿಲ್ಲೆಯ ಪೂರ್ವದಿಕ್ಕಿನಲ್ಲಿದ್ದರೆ, ಮತ್ತೊಂದು ಪಶ್ಚಿಮ ದಿಕ್ಕಿನಲ್ಲಿದೆ. ಪೂರ್ವದ ಸುವರ್ಣ ಮುಖಿ ಚಿಕ್ಕ ಹೊಳೆಯಾಗಿದ್ದು; ತುಮಕೂರು, ಕೊರಟಗೆರೆ ಮತ್ತು ಮಧುಗಿರಿಯ ಮೂಲಕ 25 ಕಿ.ಮೀ. ಹರಿಯುತ್ತದೆ. ಅನಂತರ ಕ್ಯಾಸವರಹಳ್ಳಿಯ ಬಳಿ ಜಯಮಂಗಳಿ ನದಿಯನ್ನು ಸೇರುತ್ತದೆ. ಪಶ್ಚಿಮದ ಸುವರ್ಣವತಿಯು ವೇದಾವತಿ ನದಿಯ ಪ್ರಮುಖ ಉಪನದಿ. ಈ ನದಿಯು ಜಿಲ್ಲೆಯಲ್ಲಿ ಸುಮಾರು 100 ಕಿ.ಮೀ. ದೂರ ಹರಿದು ಅಂತಿಮವಾಗಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ 'ಕೂಡಲೂರು' ಬಳಿ ವೇದಾವತಿಯನ್ನು ಸೇರುತ್ತದೆ.

ಉತ್ತರ ಪಿನಾಕಿನಿ ನದಿಯು ಪಾವಗಡ ತಾಲ್ಲೂಕಿನ ಮೂಲಕ ಸ್ವಲ್ಪ ದೂರ ಹರಿಯುತ್ತದೆ. ಕುಮುದ್ವತಿಯು ಮಧುಗಿರಿಯ ಪೂರ್ವಗಡಿಯ ಮೂಲಕ ಹಾದು ಹೋಗುತ್ತದೆ. ರಾಜ್ಯದಲ್ಲಿ ಪೂರ್ವ - ಪಶ್ಚಿಮವಾಗಿ ಹಬ್ಬಿರುವ ಜಲವಿಭಾಗ ರೇಖೆ ಈ ಜಿಲ್ಲೆಯ ಮಧ್ಯದಲ್ಲಿ ಸಾಗಿದೆ. ಇದು ಜಿಲ್ಲೆಯ ಜಲವಿಭಾಗ ರೇಖೆಯಾಗಿಯೂ ಪರಿಣಮಿಸಿದೆ.

ಜಿಲ್ಲೆಯ ಮುಖ್ಯ ಜಲಾಶಯಗಳು ಕುಣಿಗಲ್ ತಾಲ್ಲೂಕು ಅಮೃತೂರಿನ 'ಮಾರ್ಕೋನಹಳ್ಳಿ' ಜಲಾಶಯ (ಶಿಂಷಾ), ಚಿಕ್ಕನಾಯಕನ ಹಳ್ಳಿ ತಾಲ್ಲೂಕು 'ಬೋರನ ಕಣಿವೆ'. ಜಲಾಶಯ (ಸುವರ್ಣಮುಖಿ), ಕುಣಿಗಲ್ ತಾಲ್ಲೂಕಿನ 'ಸಂಕನಪುರ ಅಣೆಕಟ್ಟು' (ನಾಗಿನಿ), ಮಾಗಡಿ ಕೆಂಪೇಗೌಡ ನಿರ್ಮಿಸಿದ 'ದೀಪಾಂಬುಧಿಕೆರೆ' ಮತ್ತು ಕುಣಿಗಲ್ ತಾಲ್ಲೂಕು ಮಂಗಳಗ್ರಾಮದ ಬಳಿ 'ನಾಗಿನಿ ನದಿ ಜಲಾಶಯ', ಅನೇಕ ಕೆರೆಗಳು, ತಲಪರಿಗೆಗಳು (ತೊರೆಗಳಲ್ಲಿ ತೋಡಿದ ಊಟೆಗಳು) ನೀರಾವರಿಗೆ ಉಪಯುಕ್ತವಾಗಿವೆ.

ನೀರಾವರಿ : ಜಿಲ್ಲೆಯಲ್ಲಿ ಸಾಮಾನ್ಯವಾಗಿ ನದಿ, ಕೆರೆ, ಬಾವಿ, ಕೊಳವೆಬಾವಿ, ಏತ ನೀರಾವರಿ ಮತ್ತು ಮಳೆಯಾಶ್ರಿತವಾಗಿ ವ್ಯವಸಾಯ ನಡೆಯುತ್ತದೆ. 2008-09 ಸಾಲಿನಲ್ಲಿ ನೀರಾವರಿಯಾದ ನಿವ್ವಳ ಪ್ರದೇಶ 1,61,404 ಹೆ., ಇದರಲ್ಲಿ ಕಾಲುವೆಗಳಿಂದ 2,648 ಹೆ., ಕೆರೆಗಳಿಂದ 25,578 ಹೆ., ಪ್ರದೇಶ, ಬಾವಿಗಳಿಂದ 10,58 ಹೆ., ಕೊಳವೆ ಬಾವಿಗಳಿಂದ 1,32,122 ಹೆ., ಪ್ರದೇಶ ನೀರಾವರಿ ಸೌಲಭ್ಯವನ್ನು ಪಡೆದಿವೆ. ಅಂಕಿ-ಅಂಶಗಳನ್ನು ಗಮನಿಸಿದಾಗ ನೀರಾವರಿಯಲ್ಲಿ ಸಿಂಹಪಾಲು ಕೊಳವೆ ಬಾವಿಗಳಿಗೆ ಸಲ್ಲುತ್ತದೆ. ಇದರಿಂದ ಅಂತರ್ಜಲಕ್ಕೆ ಅಧಿಕ ಪ್ರಮಾಣದ ಒತ್ತಡ ಉಂಟಾಗುತ್ತಿದೆ. 2010 ರಲ್ಲಿ ಅಂತರ್ಜಲದ ಜಿಲ್ಲಾ ಮೊತ್ತ 14.35 ಮೀ. ಮಾತ್ರ. ಜಿಲ್ಲೆಯಲ್ಲಿ ಏತ ನೀರಾವರಿಯ ಸಂಖ್ಯೆ 7.

ವ್ಯವಸಾಯ : ಜಿಲ್ಲೆಯು ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಮತ್ತು ಆಧುನಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡಿದೆ. ಇತ್ತೀಚೆಗೆ ಯಂತ್ರೋಪಕರಣಗಳ ಬಳಕೆ ಕೃಷಿಯಲ್ಲಿ ಹೆಚ್ಚಿದೆ. ಜೈವಿಕ ಗೊಬ್ಬರದೊಂದಿಗೆ ರಾಸಾಯನಿಕ ಗೊಬ್ಬರವು ಬಳಕೆಯಲ್ಲಿದೆ. ಒಟ್ಟಾರೆ ಕೃಷಿಯ ವಿಧಾನದಲ್ಲಿ ಆಧುನಿಕತೆ ಕಂಡುಬರುತ್ತದೆ.

ಬೆಳೆಗಳು ಮತ್ತು ಉತ್ಪಾದನೆ : ಜಿಲ್ಲೆಯಲ್ಲಿ (ಖಾರಿಫ್ ಮತ್ತು ರಾಬಿ) ಮುಂಗಾರು ಮತ್ತು ಹಿಂಗಾರು ಎರಡೂ ಅವಧಿಯಲ್ಲಿ ಕೃಷಿ ಮಾಡುವರು. ಇಲ್ಲಿಯ ಬೆಳೆಗಳನ್ನು ಆಹಾರ ಬೆಳೆಗಳು ಮತ್ತು ಆಹಾರೇತರ ಬೆಳೆಗಳೆಂದು ವಿಂಗಡಿಸಬಹುದು.

ಆಹಾರಬೆಳೆಗಳು : ಆಹಾರ ಬೆಳೆಗಳನ್ನು ಪ್ರಧಾನವಾಗಿ ಏಕದಳ ಮತ್ತು ದ್ವಿದಳ ಎಂದು ವಿಂಗಡಿಸಬಹುದು. ಬತ್ತ, ರಾಗಿ, ಕಡಲೆಕಾಳು ಬೆಳೆಗಳನ್ನು ಮೂರು ಅವಧಿಗಳಲ್ಲಿ, ಮುಸುಕಿನ ಜೋಳವನ್ನು ಖಾರಿಫ್ ಅವಧಿಯಲ್ಲಿ, ಕಡಲೆಕಾಯಿಯನ್ನು ಖಾರಿಫ್ ಮತ್ತು ರಾಬಿ ಬೇಸಗೆಯ ಅವಧಿಯಲ್ಲಿ, ಹುರುಳಿಯನ್ನು ಖಾರಿಫ್ ಮತ್ತು ರಾಬಿಯ ಅವಧಿಯಲ್ಲಿ ಬೆಳೆಯುವರು. ಜಿಲ್ಲೆಯಲ್ಲಿ ಬೆಳೆಯುವ ಪ್ರಮುಖ ಏಕದಳ ಬೆಳೆಗಳೆಂದರೆ ಬತ್ತ, ರಾಗಿ, ಜೋಳ, ಸಜ್ಜೆ, ಮುಸುಕಿನ ಜೋಳ, ಇತ್ಯಾದಿ, 2008-09 ರ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯ ಬೆಳೆಗಳ ವಿಸ್ತೀರ್ಣದಲ್ಲಿ ಬತ್ತ, ರಾಗಿ, ಜೋಳ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಬತ್ತ 39,753 ಹೆ., ರಾಗಿ 18,7252 ಹೆ., ಜೋಳ 2,245 ಹೆ., ಸಜ್ಜೆ 143 ಹೆ., ಮುಸುಕಿನ ಜೋಳ 20,065ಹೆ., ಇತರೆ ಏಕದಳ ಧಾನ್ಯಗಳು ಮತ್ತು ಉಪತೃಣ

ಬೆಳೆಗಳು 2,893 ಹೆ., ಹೀಗೆ ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು 2,52,315 ಹೆ. ವಿಸ್ತೀರ್ಣದಲ್ಲಿ ಕಂಡುಬಂದಿದೆ.

ದ್ವಿದಳ ಬೆಳೆಗಳು : ಕಡಲೆ 1,005 ಹೆ.ಗಳು, ತೊಗರಿ 15,689ಹೆ., ಇತರೆ ದ್ವಿದಳ ಧಾನ್ಯಗಳು 44,630 ಹೆ., ಒಟ್ಟು ದ್ವಿದಳ ಧಾನ್ಯಗಳು 61,324 ಹೆ. ಪ್ರದೇಶದಲ್ಲಿ ವ್ಯಾಪಿಸಿವೆ. ಒಟ್ಟು ಆಹಾರ ಧಾನ್ಯಗಳು 3,13,675 ಹೆ. ಪ್ರದೇಶಗಳಲ್ಲಿ ವಿಸ್ತರಿಸಿದೆ. ಅಡಕೆ 22,058 ಹೆ. ಇತರೆ ಮಸಾಲೆ ಮತ್ತು ಸಂಬಾರು ಪದಾರ್ಥಗಳು 6,070 ಹೆ. ಪ್ರದೇಶದಲ್ಲಿ ಹರಡಿದೆ.

2007-08ರ ಸಾಲಿನಲ್ಲಿ ಜಿಲ್ಲೆಯ ಆಹಾರ ಧಾನ್ಯಗಳ ಉತ್ಪತ್ತಿ ಈ ರೀತಿ ಇದೆ. ಬತ್ತ 85,396 ಟನ್, ರಾಗಿ 3,09,759 ಟನ್, ಜೋಳ 2,629 ಟನ್, ಸಜ್ಜೆ 135 ಟನ್, ಮುಸುಕಿನ ಜೋಳ 59,702 ಟನ್, ಇತರೆ ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು 960 ಟನ್, ಕಡಲೆ 511 ಟನ್, ತೊಗರಿ 11,386 ಟನ್, ಇತರೆ ದ್ವಿದಳ ಧಾನ್ಯಗಳು 35,049 ಟನ್, (ಒಟ್ಟು ಏಕದಳ ಧಾನ್ಯಗಳು ಮತ್ತು ಉಪತೃಣ ಬೆಳೆಗಳು 4,58,575 ಟನ್ ಒಟ್ಟು ದ್ವಿದಳ ಧಾನ್ಯಗಳು 46,946 ಟನ್) ಉತ್ಪಾದನೆಯಾಗಿದೆ. ಒಟ್ಟು ಆಹಾರ ಧಾನ್ಯಗಳು 5,05,521 ಟನ್.

ತೋಟಗಾರಿಕಾ ಬೆಳೆಗಳು : ತೋಟಗಾರಿಕಾ ಬೆಳೆಗಳನ್ನು ಹಣ್ಣುಗಳು ಮತ್ತು ತರಕಾರಿಗಳೆಂದು ವಿಂಗಡಿಸಬಹುದು. ಹಣ್ಣುಗಳಲ್ಲಿ ಮಾವು, ಬಾಳೆ, ಕಲ್ಲಂಗಡಿ, ಪರಂಗಿ, ಹಲಸು, ದಾಳಿಂಬೆ, ಮೋಸಂಬಿ, ಸೀಬೆ, ಸಪೋಟ ಪ್ರಮುಖವಾಗಿ ಕಂಡುಬರುತ್ತವೆ. ಜಿಲ್ಲೆಯಲ್ಲಿ ಒಟ್ಟು ಹಣ್ಣುಗಳು 20,107 ಹೆ. ವಿಸ್ತೀರ್ಣದಲ್ಲಿ ಕಂಡುಬರುತ್ತವೆ. ಅದರಲ್ಲಿ ಮಾವು 11,714 ಹೆ., ಬಾಳೆ 4,903 ಹೆ., ಕಲ್ಲಂಗಡಿ 460 ಹೆ., ಪರಂಗಿ 180ಹೆ., ಹಲಸು 127 ಹೆ., ದಾಳಿಂಬೆ 1,369 ಹೆ., ಮೋಸಂಬಿ 178 ಹೆ., ಸೀಬೆ 185 ಹೆ., ಸಪೋಟ 738 ಹೆ., ಇತರೆ ಹಣ್ಣುಗಳು 253 ಹೆ. 2008-09ರಲ್ಲಿ ಕಂಡುಬಂದಿದೆ.

ತರಕಾರಿಗಳಲ್ಲಿ ಈರುಳ್ಳಿ, ಬದನೆ, ಟೊಮ್ಯಾಟೊ, ಹುರುಳಿಕಾಯಿ, ಇತ್ಯಾದಿಗಳು ಪ್ರಮುಖವಾಗಿ ಕಂಡುಬರುತ್ತವೆ. 2008-09 ರಲ್ಲಿ ಈರುಳ್ಳಿ 417ಹೆ., ಬದನೆ 305 ಹೆ., ಟೊಮ್ಯಾಟೊ 632 ಹೆ., ಹುರುಳಿಕಾಯಿ 191 ಹೆ., ಇತರೆ ತರಕಾರಿಗಳು 851 ಹೆ. ಹೀಗೆ ಒಟ್ಟು ತರಕಾರಿಗಳು 2,396 ಹೆ. ಪ್ರದೇಶದಲ್ಲಿ ಕಂಡುಬಂದಿವೆ. ಬೆಳೆಯಾದ ಕಬ್ಬು ಜಿಲ್ಲೆಯಲ್ಲಿ 2,400 ಹೆ. ಪ್ರದೇಶದಲ್ಲಿ ವ್ಯಾಪಿಸಿದೆ. ಒಟ್ಟು ಆಹಾರ ಬೆಳೆಗಳು, 3,66,706 ಹೆ. ಪ್ರದೇಶದಲ್ಲಿ ಕಂಡುಬಂದಿವೆ.

ವಾಣಿಜ್ಯ ಬೆಳೆಗಳು : ಆಹಾರೇತರ ಬೆಳೆಗಳಲ್ಲಿ ಶೇಂಗಾ, ಸೂರ್ಯಕಾಂತಿ, ತಂಬಾಕು, ಹತ್ತಿ, ತೆಂಗು ಮುಖ್ಯವಾದವು. 2008-09ರಲ್ಲಿ ಜಿಲ್ಲೆಯ ಒಟ್ಟು ಆಹಾರೇತರ ಬೆಳೆಗಳು 3,17,709 ಹೆ. ಪ್ರದೇಶದಲ್ಲಿ ವ್ಯಾಪಿಸಿತ್ತು. ಶೇಂಗಾ 1,42,906 ಹೆ., ಸೂರ್ಯಕಾಂತಿ 11,611ಹೆ., ಇತರೆ ಎಣ್ಣೆಕಾಳುಗಳು 6,660 ಹೆ., ತಂಬಾಕು 19 ಹೆ., ಹತ್ತಿ 668 ಹೆ., ತೆಂಗು 1,31,870 ಹೆ., ಇತರೆ 1,56, 532 ಹೆ. ವ್ಯಾಪಿಸಿದೆ. ಒಟ್ಟು ಆಹಾರೇತರ ಬೆಳೆಗಳ ವಿಸ್ತೀರ್ಣ 3,17,709 ಹೆ. ತೆಂಗು ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ತುರುವೇಕೆರೆಯಲ್ಲಿ ಹೆಚ್ಚಾಗಿ ವ್ಯಾಪಿಸಿದೆ. ಒಟ್ಟು ಆಹಾರ ಮತ್ತು ಆಹಾರೇತರ ಬೆಳೆಗಳ ವಿಸ್ತೀರ್ಣ 6,84,415 ಹೆ.

2007-08ರ ಸಾಲಿನಲ್ಲಿ ಜಿಲ್ಲೆಯ ಆಹಾರೇತರ ಬೆಳೆಗಳ ಉತ್ಪತ್ತಿ ಇಂತಿದೆ. ನೆಲಗಡಲೆ 13,417ಟನ್, ಸೂಯಕಾಂತಿ 9,132 ಟನ್, ಇತರೆ ಎಣ್ಣೆಕಾಳುಗಳು 4,110 ಟನ್, ಒಟ್ಟು ಹಣ್ಣುಗಳು 94,165 ಟನ್, ಒಟ್ಟು ತರಕಾರಿಗಳು 12,145 ಟನ್, ಒಟ್ಟು ಮಸಾಲೆಗಳು ಮತ್ತು ಸಂಬಾರ ಪದಾರ್ಥಗಳು 1,41,113, ಟನ್, ಕಬ್ಬು 11,69,354 ಟನ್, ಹತ್ತಿ 2,848 ಟನ್, ತಂಬಾಕು 17 ಟನ್ ಉತ್ಪಾದನೆಯಾಗಿದೆ. ಎಲ್ಲಾ ಬೆಳೆಗಳ ಒಟ್ಟು ಉತ್ಪತ್ತಿ 10,73,822 ಟನ್.

2008-09ನೇ ಸಾಲಿನಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಅಡಿಯಲ್ಲಿ 3,96,393 ಸಸಿಗಳನ್ನು ವಿತರಿಸಲಾಗಿದ್ದು, ಅದು 8.05 ಹೆ. ಪ್ರದೇಶದಲ್ಲಿ ವ್ಯಾಪಿಸಿದೆ.

ತರಬೇತಿ : ತೋಟಗಾರಿಕೆ ಇಲಾಖೆಯಿಂದ ರೈತರಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರೈತರಿಗೆ ತೋಟಗಾರಿಕೆ ಬೆಳೆಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುವುದರಿಂದ ಹೆಚ್ಚಿನ ಇಳುವರಿಯನ್ನು ಪಡೆದುಕೊಂಡು ಆರ್ಥಿಕ ಮಟ್ಟವನ್ನು ಸುದಾರಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ 2005-06ರಲ್ಲಿ 360 ಜನರು, 2006-07ರಲ್ಲಿ 360, 2007-08ರಲ್ಲಿ, 305, 2008-09 ರಲ್ಲಿ 365 ಜನರು ತರಬೇತಿ ಪಡೆದಿದ್ದಾರೆ.

ರೇಷ್ಮೆ / ಹಿಪ್ಪುನೇರಳೆ : ಸರ್ಕಾರವು ವಿದೇಶಿ ವಿನಿಮಯವನ್ನು ಗಳಿಸುವ ಸಲುವಾಗಿ ರೇಷ್ಮೆ ಬೆಳೆಗೆ ಹೆಚ್ಚಿನ ಉತ್ತೇಜನವನ್ನು ಕೊಡುತ್ತಿದೆ. ರೈತರು ತಮ್ಮ ಆರ್ಥಿಕಾಭಿವೃದ್ಧಿಯನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ರೇಷ್ಮೆ ಕೃಷಿಯನ್ನು ವರ್ಷದಿಂದ ವರ್ಷಕ್ಕೆ ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. 31-03-2010ರ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ 3333.46 ಹೆಕ್ಟೇರ್ ಭೂಮಿಯಲ್ಲಿ ಹಿಪ್ಪು ನೇರಳೆಯನ್ನು ಬೆಳೆಯಲಾಗಿದೆ. ರೇಷ್ಮೆಗೂಡು 2313.38 ಟನ್ ಉತ್ಪಾದನೆಯಾಗಿರುತ್ತದೆ. ರೇಷ್ಮೆ ಕಸುಬು ಕೈಗೊಂಡ ರೈತರ ಸಂಖ್ಯೆ 9336.

ಪಶುಸಂಗೋಪನೆ : 31-03-2010ರ ಅಂತ್ಯದ ವೇಳೆಗೆ ಜಿಲ್ಲೆಯಲ್ಲಿ 18 ಪಶು ವೈದ್ಯ ಆಸ್ಪತ್ರೆಗಳು, 104 ಪಶು ಚಿಕಿತ್ಸಾಲಯಗಳು, 85 ಪ್ರಾಥಮಿಕ ಪಶುವೈದ್ಯ ಕೇಂದ್ರಗಳು, 10 ಸಂಚಾರಿ ಚಿಕಿತ್ಸಾಲಯಗಳು ಮತ್ತು 16 ಕೃತಕ ಗರ್ಭಧಾರಣೆ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ತಿಪಟೂರಿನಲ್ಲಿ 2 ತುಮಕೂರಿನಲ್ಲಿ 4 ಮಂಜುಗೆಡ್ಡೆ ಕಾರ್ಖಾನೆಗಳು ಇವೆ. ಇವುಗಳ ಸಾಮರ್ಥ್ಯ 12,000 ಟನ್ ಜಿಲ್ಲೆಯಲ್ಲಿ ಶೀತಲೀಕರಣ ಕೇಂದ್ರಗಳು ಇರುವುದಿಲ್ಲ.

ಜಿಲ್ಲೆಯಲ್ಲಿ 2003ರ ಜಾನುವಾರು ಗಣತಿ ಪ್ರಕಾರ 20,75,996 ಜಾನುವಾರುಗಳಿದ್ದು, 6,42,382 ಕೋಳಿಗಳಿದ್ದು, 233 ಚಿಕಿತ್ಸಾ ಕೇಂದ್ರಗಳಿದ್ದು (ಎಲ್ಲ ಸೇರಿ) ಅಂದರೆ 8,910 ಜಾನುವಾರುಗಳಿಗೆ ಒಂದು ಚಿಕಿತ್ಸಾ ಕೇಂದ್ರವಿರುತ್ತದೆ.

2003ರ ಜಾನುವಾರು ಗಣತಿ

ಕ್ರಮ. ಸಂಖ್ಯೆ	ಜಾನುವಾರುಗಳು	ಸಂಖ್ಯೆ
1.	ದನ-ಕರುಗಳು (ಸ್ಥಳೀಯ, ವಿದೇಶಿ, ಮಿಶ್ರತಳಿ)	5,03,799
2.	ಎಮ್ಮೆಗಳು	2,17,528
3.	ಕುರಿಗಳು (ಸ್ಥಳೀಯ, ವಿದೇಶಿ, ಮಿಶ್ರತಳಿ)	8,84,681
4.	ಮೇಕೆಗಳು	3,22,373
5.	ಹಂದಿಗಳು (ಸ್ಥಳೀಯ, ವಿದೇಶಿ, ಮಿಶ್ರತಳಿ)	13,317
6.	ಮೊಲಗಳು	465
7.	ನಾಯಿಗಳು	1,26,414
8.	ಇತರೆ	7,419
9.	ಕೋಳಿಗಳು	6,42,382

ಹೈನುಗಾರಿಕೆ : ಸ್ವಾತಂತ್ರ್ಯ ಪೂರ್ವದಲ್ಲಿ ಗುಜರಾತ್ ರಾಜ್ಯದ ಆನಂದ್‌ನಲ್ಲಿ ಪ್ರಾಥಮಿಕ ಸಹಕಾರಿ ಹಾಲು ಉತ್ಪಾದಕರ ಸಂಘಗಳು ಕಂಡಂತಹ ಯಶಸ್ಸನ್ನು ಬೇರೆ ರಾಜ್ಯಗಳಲ್ಲೂ ಸಹ ಕಾಣಬೇಕೆಂಬ ಮಹತ್ವಕಾಂಕ್ಷೆಯ ಹಿನ್ನೆಲೆಯಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರೀ ಅವರು ಡಾ. ಕುರಿಯನ್ ಅವರ ಮಾರ್ಗದರ್ಶನದಲ್ಲಿ ಹೈನುಗಾರಿಕೆ ಯಶಸ್ಸಿನ ಕನಸ್ಸನ್ನು ಕಂಡರು.

71 ಸಂಘಗಳ ನೋಂದಣಿ ಮತ್ತು ಕಾರ್ಯಚರಣೆಯೊಂದಿಗೆ ಅಮೂಲ್ ಮಾದರಿ ಯೋಜನೆಯಂತೆ ಉತ್ಪಾದಕನೆ ಒಡೆಯನೆಂಬುದನ್ನು ಜಾರಿಗೊಳಿಸಲು ದಿನಾಂಕ 30-03-1977ರಲ್ಲಿ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನೋಂದಣಿಯಾಯಿತು. ಇದರ ಕಾರ್ಯ ವ್ಯಾಪ್ತಿಯು ತುಮಕೂರು ಜಿಲ್ಲೆಗೆ ಸೀಮಿತವಾಗಿರುತ್ತದೆ.

ಡೈರಿ : 1976ರಲ್ಲಿ 30 ಸಾವಿರ ಲೀಟರ್ ಸಾಮರ್ಥ್ಯದ ಶೀಥಿಲ ಕೇಂದ್ರದೊಂದಿಗೆ ದಿನವಹಿ ಸರಾಸರಿ 3,600 ಕೆ.ಜಿ. ಹಾಲು ಶೇಖರಣೆಯೊಂದಿಗೆ ಪ್ರಾರಂಭವಾಯಿತು. ಪ್ರತಿ ವರ್ಷವೂ ಹಾಲು ಶೇಖರಣೆ ಹೆಚ್ಚಾದ ಕಾರಣ ಸಂಗ್ರಹಿಸಿದ ಹಾಲನ್ನು ಸಂಸ್ಕರಿಸಲು 1981ರಲ್ಲಿ ತುಮಕೂರಿನ ಮಲ್ಲಸಂದ್ರದ ಬಳಿ 60 ಸಾವಿರ ಲೀಟರ್ ಸಂಸ್ಕರಣಾ ಸಾಮರ್ಥ್ಯದ ಹಾಲಿನ ಡೈರಿಯನ್ನು ಪ್ರಾರಂಭಿಸಲಾಯಿತು. ದೂರಗಾಮಿ ಯೋಜನೆಯ ಅಡಿಯಲ್ಲಿ ಡೈರಿಯ ಸಾಮರ್ಥ್ಯವನ್ನು 1 ಲಕ್ಷ ಲೀಟರ್‌ಗೆ ಹೆಚ್ಚಿಸಲಾಗಿದೆ.

ದಿನವಹಿ 20,000 ದಿಂದ 30,000 ಲೀ.ಹಾಲು ಶಿಥಿಲೀಕರಿಸುವ ಸಾಮರ್ಥ್ಯವುಳ್ಳ 4 ಶಿಥಿಲ ಕೇಂದ್ರಗಳನ್ನು ಮಧುಗಿರಿ, ಶಿರಾ, ಕಿಬ್ಬನಹಳ್ಳಿ ಕ್ರಾಸ ಮತ್ತು ಯಡಿಯೂರುಗಳಲ್ಲಿ ಹೊಂದಿದೆ.

ಮೀನುಗಾರಿಕೆ : ಜಿಲ್ಲೆಯಲ್ಲಿ ವಿಫುಲವಾಗಿ ದೊರೆಯುವ ಜಲಸಂಪತ್ತು ಬಳಸಿಕೊಂಡು ಮೀನು ಉತ್ಪಾದನೆಯನ್ನು ಹೆಚ್ಚಿಸುವುದು, ಜನರಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದು, ಸಾಕಷ್ಟು ಉದ್ಯೋಗಾವಕಾಶವನ್ನು ಕಲ್ಪಿಸಿ ಬಡತನ ರೇಖೆಯಿಂದ ಮೇಲೆತ್ತಲು ನೆರವಾಗುವುದು, ಮೀನುಗಾರಿಕೆ ಇಲಾಖೆಯ ಉದ್ದೇಶವಾಗಿದೆ. 2008-09ನೇ ಸಾಲಿನಲ್ಲಿ 19,097.19 ಮೆಟ್ರಿಕ್ ಟನ್ ಮೀನುಗಳನ್ನು ಮಾರಾಟ ಮಾಡಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಹೇಮಾವತಿ ನಾಲಾ ಪಾದಾರ್ಪಣೆ ಮಾಡಿರುವುದರಿಂದ ಮೀನುಗಾರಿಕೆ ಅಭಿವೃದ್ಧಿಗೆ ವಿಫುಲವಾದ ಅವಕಾಶವಿರುತ್ತದೆ. ಜಿಲ್ಲೆಯಲ್ಲಿ ಕೆರೆಕಟ್ಟೆ ಜಲಾಶಯಗಳಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶವಿದೆ. ತೆಂಗಿನ ನಾಡೆಂದು ಕರೆಯಲಾದ ತುಮಕೂರು ಜಿಲ್ಲೆಯನ್ನು ಕೆರೆಗಳ ಬೀಡೆಂದು ಸಹ ಕರೆಯಬಹುದು. ತುಮಕೂರು ಜಿಲ್ಲೆ 1,691 ನೀರಾವರಿ ಕೆರೆಗಳನ್ನು ಹೊಂದಿದ್ದು, ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದೆ.

ಒಣ ಭೂಮಿ ಅಭಿವೃದ್ದಿ ಕಾರ್ಯಕ್ರಮಗಳು : 2008-09ನೇ ಸಾಲಿನಲ್ಲಿ ತುಮಕೂರು ವಿಭಾಗದಲ್ಲಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಟ್ಟು 797.892ಲಕ್ಷ ಖರ್ಚು ಮಾಡಿದ್ದು, 1,228 ಹೆ. ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಮಧುಗಿರಿ ವಿಭಾಗದಲ್ಲಿ 402.05 ಲಕ್ಷ ಖರ್ಚು ಮಾಡಿ 7144.20 ಹೆ. ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ. ಒಟ್ಟು ಜಿಲ್ಲೆಯಲ್ಲಿ 1199.94ಲಕ್ಷ ಖರ್ಚು ಮಾಡಿ 8372.20ಹೆ. ಪ್ರದೇಶವನ್ನು ಅಭಿವೃದ್ಧಿಪಡಿಸಲಾಗಿದೆ.

ಖನಿಜಸಂಪತ್ತು : ಜಿಲ್ಲೆಯಲ್ಲಿ ದೊರೆಯುವ ಪ್ರಮುಖ ಖನಿಜ ಸಂಪತ್ತುಗಳೆಂದರೆ ಆಸ್ಬೆಸ್ಟಾಸ್, ಕುರಂದ, ಮ್ಯಾಂಗನೀಸ್, ಚಿನ್ನ, ಫೆಲ್ಡ್‌ಸ್ಪಾರ್, ಸುಣ್ಣಕಲ್ಲು, ಕ್ವಾರ್ಟ್ಸ್ ಕಟ್ಟಡಕಲ್ಲು ಆಸ್ಬೆಸ್ಟಾಸ್ ನಿಕ್ಷೇಪಗಳು ಕುಣಿಗಲ್ ತಾಲ್ಲೂಕಿನ ಹುಲಿಯೂರು ಮತ್ತು ಹೊನ್ನಮಾಚನಹಳ್ಳಿ ಕೆರೆಯ ಬಳಿ ಹಂಚಿಕೆಯಾಗಿವೆ. ಕುಣಿಗಲ್ ತಾಲ್ಲೂಕಿನ ತಿಮ್ಮಸಂದ್ರಗಳಲ್ಲಿ ಕುರಂದ ದೊರೆಯುತ್ತವೆ. ಜಾನೆಹಾರ, ಹೊನ್ನೆಬಾಗಿ, ದೋರೆಗುಡ್ಡ, ಕರೆಕುರ್ಚಿ, ಹತ್ಯಾಲ, ಶಿವಸಂದ್ರ, ಕೊಂಡಿ, ಕುದುರೆಕಣಿವೆ ಪ್ರದೇಶಗಳಲ್ಲಿ ಮ್ಯಾಂಗನೀಸ್ ಗಣಿಗಳಿವೆ. ಕೆಲವು ಮ್ಯಾಂಗನೀಸ್ ಗಣಿಗಳಲ್ಲಿ ಸಿಗುವ ಇನ್ನೊಂದು ಖನಿಜ ಮೃದುವಾದ ಜೇಡಿಮಣ್ಣು. ಚಿನ್ನದ ನಿಕ್ಷೇಪಗಳು ಬೆಳ್ಳಾರ, ಅಜ್ಜನಹಳ್ಳಿಗಳ ಬಳಿ ಕಂಡುಬರುತ್ತವೆ.

ಪರಾಮರ್ಶನ ಗ್ರಂಥಗಳು

ಕನ್ನಡ ವಿಶ್ವಕೋಶ, ಸಂ. ಪು - 9

ಕನ್ನಡ ವಿಷಯ ವಿಶ್ವಕೋಶ ಭೂಗೋಳ ವಿಜ್ಞಾನ

2011ರ ಜನಗಣತಿ ವರದಿ

ಜಿಲ್ಲೆಯ ಅಧಿಕೃತ ವೆಬ್‌ಸೈಟ್‌ಗಳು

Tumakuru District Adminstration - www.tumkur.nic.in

Tumkurur city - www.tumurcity.gov.in

Tumkuru Zilla Panchayat - www. tumkurzillapanchayat.gov.in

Gram Panchayats of Karnataka Tumukuru District - www.panchamitra.Kar.in

www.Karunadu.gov.in

ವಿಕಿಪಿಡೀಯ

ವಕ್ತೃಗಳು

ಅ) ಶ್ರೀ ಬಿ.ಎನ್. ಗೋಪಾಲಕೃಷ್ಣ - ಯುವ ರೈತರು, ಬಡ್ಡಿಹಳ್ಳಿ, ತುಮಕೂರು.

ಆ) ಶ್ರೀಮತಿ ಆಶಾರಾಣಿ - ತುಮಕೂರು.

ಆರ್.ಪಿ.ಕೆ.

ತುರು(ಬಣವೆ) ಮತ್ತು ತುರುವಿನ್‌ಕ್ಕೋಲ್ (ಬಣವೆ ಕೋಲು) ಕೆಲವು ವರ್ಷಗಳ ಹಿಂದಿನವರೆಗೂ ಕೇರಳದಲ್ಲಿ ಒಬ್ಬ ಸಾಮಾನ್ಯ ರೈತನ ಮನೆಯಲ್ಲಿ ನಾಲ್ಕಾರು ಹಸು - ಕರುಗಳು, ಎರಡೋ ಮೂರೋ ಜೋಡಿ ಎತ್ತುಗಳು, ಒಂದೆರಡು ತುರು (ಬಣವೆ)ಗಳು ಸರ್ವೆ ಸಾಧಾರಣವಾಗಿದ್ದುವು. ಕಟಾವಿನ ಬಳಿಕ ಬತ್ತ ಮಿದಿಯುವ ಕೆಲಸ. ಅದಾದ ಬಳಿಕ ಬತ್ತ ಮತ್ತು ಅದರ ಬೀಜದ ಸಂರಕ್ಷಣೆಯ ಕೆಲಸಗಳು. ಜತೆ ಜತೆಗೆ ಬೈಹುಲ್ಲು ಒಣಗಿಸುವ ಮತ್ತು ಬಣವೆ ಮಾಡುವ ಕೆಲಸಗಳು.

ಬಣವೆ ನಿರ್ಮಾಣವನ್ನು ಮಲಯಾಳಂನಲ್ಲಿ 'ತುರುಪಿಡುಗ' ಎಂದು ಕರೆಯಲಾಗುತ್ತದೆ. ಬಣವೆ ನಿರ್ಮಿಸುವ ಜಾಗದಲ್ಲಿ ಗೆದ್ದಲು ಮುಂತಾದುವು ಹತ್ತದಂತೆ ಪುಟ್ಟ ತಳಪಾಯವನ್ನು (ಸಿಮೆಂಟ್ ತಳಗಳೂ ಸೇರಿದಂತೆ) ನಿರ್ಮಿಸಲಾಗುತ್ತದೆ. ಬಳಿಕ ಅದರ ಮಧ್ಯದಲ್ಲಿ ಬಣವೆ ಕೋಲನ್ನು (ತುರುವಿನ್‌ಕೋಲ್) ಭದ್ರವಾಗಿ ಗಟ್ಟಿಗೊಳಿಸಲಾಗುತ್ತದೆ. ಈ ಕೋಲು ಗಟ್ಟಿಯಾದ ಮರದಿಂದ ಮಾಡಿದ್ದಾಗಿದ್ದು ತುಂಬ ವರ್ಷಗಳ ಕಾಲ ಬಾಳಿಕೆ ಬರುತ್ತದೆ. ಸಣ್ಣ ರೈತರು ತೆಂಗಿನ ಮರವನ್ನೇ ತುರುಗೋಲಾಗಿ ಬಳಸಿಕೊಳ್ಳುವುದು ಸಾಮಾನ್ಯ. ತುರು (ಬಣವೆ)ವಿನ ಗಾತ್ರವಾಗಲಿ ಸಂಖ್ಯೆಯಾಗಲಿ ಆಯಾಯ ರೈತನ ಆರ್ಥಿಕ ಬಲದ ಸಂಕೇತಗಳೂ ಆಗಿದ್ದುವು. ಬಣವೆಯ ಕಣದಲ್ಲಿ ನಾಲ್ಕು ಕಡೆಗಳಿಗೂ ಪುಟ್ಟ ಕಂಬಗಳನ್ನು ನಾಟಿ ಅದರ ಮೇಲೆ ಅಡ್ಡಕ್ಕೂ ಉದ್ದಕ್ಕೂ ಬಡಿಗೆಗಳನ್ನು ಹಾಸಿ ತಳಪಾಯದ ನಿರ್ಮಾಣ ಬಳಿಕ 'ತುರುಪಿಡುವ' ಕೆಲಸ. ಇದು ತುಂಬ ಶ್ರದ್ಧೆ ಮತ್ತು ಕೌಶಲವನ್ನು ಬೇಡುವಂಥದು. ಸ್ವಲ್ಪ ಸ್ವಲ್ಪವೇ ಬೈಹುಲ್ಲನ್ನು ತುರುಕೋಲಿನ ಸುತ್ತಲೂ ಬಿಡಿಸಿಬಿಡಿಸಿ ಹಾಕಿ ಅದನ್ನು ತುಳಿದು ಭದ್ರಗೊಳಿಸುತ್ತ ಮೇಲೆ ಮೇಲೆ ಏರಿಸಬೇಕು. ಹಾಗೆ ಭದ್ರಗೊಳ್ಳದೆ ಹೋದರೆ ಸಾಕಷ್ಟು ಬೈಹುಲ್ಲನ್ನು ಮೇವಿಗೆ ಅಡಕುವುದು ಸಾಧ್ಯವಿಲ್ಲ. ಮಾತ್ರವಲ್ಲ ಮಳೆ ನೀರು ಒಳ ಸೇರಿ ಬೈಹುಲ್ಲೆಲ್ಲ ಹಾಳಾಗಿ ದನಕರುಗಳಿಗೆ ತೊಂದರೆಯಾಗಬಹುದು. ಹೀಗೆಯೇ ಮೇಲೆ ಮೇಲಕ್ಕೆ ಏರಿಸುತ್ತ ಹೋಗಬೇಕು. ತುರುಗೋಲಿನ ಗಾತ್ರಕ್ಕನುಗುಣವಾಗಿ ಬಣವೆಯ ಗಾತ್ರ ಕೂಡ ನಿರ್ಧಾರವಾಗುತ್ತದೆ. ಬೈಹುಲ್ಲಿನ ಗಾತ್ರ ಬಣವೆಯ ಗಾತ್ರವನ್ನು ನಿರ್ಣಾಯಿಸುವ ಪ್ರಧಾನಮಾನದಂಡ.

ಮೇಲು ಮೇಲಕ್ಕೆ ಸಾಗುವಂತೆ ತುರುವಿನ ಸುತ್ತಳತೆ ಕಿರಿದಾಗುತ್ತ ಸಾಗುತ್ತದೆ. ಬಣವೆಯ ಆಕಾರವನ್ನು ಕೆಡದಂತೆ ಉಳಿಸಿ ಕೊಳ್ಳಲು ಬಣವೆ ಕೋಲಿನ ಸುತ್ತಲೂ ಸಮಾನ ಸುತ್ತಳತೆಯಲ್ಲಿ ಹುಲ್ಲನ್ನು ಒಟ್ಟಬೇಕು. ಸಡಿಲವಾಗಿ ಹೊರಗೆ ಜೋತಾಡುವ ಬೈಹುಲ್ಲಿನ ಎಳೆಗಳನ್ನು ಕಿತ್ತು ತೆಗೆಯುತ್ತಾರೆ. ಬಣವೆಯ ತುದಿಯ ರಚನೆ ಕೂಡ ಶ್ರದ್ಧೆಯಿಂದ ನಿರ್ವಹಿಸಬೇಕಾದ ಕೆಲಸ. ಬಿದ್ದ ಮಳೆನೀರು ಒಳಸೇರದಂತೆ ಮತ್ತು ಸುತ್ತಲೂ ನೀರು ಜಾರುವಂತೆ ಬಣವೆಯ ರಚನೆ ಇರಬೇಕು. ಅದಕ್ಕಾಗಿ ಬಣವೆಯ ತುದಿಯು ಕೋಳಿಮೊಟ್ಟೆಯ ತುದಿಯಂತೆ ಇರುತ್ತದೆ. ಹೀಗೆ ಕೌಶಲ ಪೂರ್ಣವಾಗಿಯೂ ಪರಿಣಿತಿಯಿಂದಲೂ ರಚಿತವಾಗುವ ಬಣವೆಗಳು ಮಳೆಗಾಳಿಗಳನ್ನು ತಡೆದುಕೊಂಡು ವರ್ಷ ಪೂರ್ತಿ ದನಕರುಗಳಿಗೆ ಆಹಾರದ ಭದ್ರತೆಯನ್ನು ನೀಡಬಲ್ಲವು.

ಬತ್ತ ಮತ್ತು ಬೀಜ ಮನೆಯೊಳಗೆ ಸುರಕ್ಷಿತವಾಗಿ, ಬೈಹುಲ್ಲು ಬಣವೆಯಲ್ಲಿ ಸುರಕ್ಷಿತವಾಗಿ ಜೋಪಾನವಾದಾಗಲಷ್ಟೆ ರೈತನ ಮನಸ್ಸು ಮುದಗೊಳ್ಳುತ್ತದೆ. ಆಗಲೇ 'ಕಳಂ ಪಿರಿಯುಗ' (=ಕಣ ಬಿಡುವುದು) ಎಂಬ ಹಂತ ತಲಪುತ್ತದೆ. ಬಣವೆ ಏರಿಸಿ ಮುಗಿದ ದಿನ ಕೂಡ ಕಾರ್ಮಿಕರಿಗೆಲ್ಲ ಔತಣದ ಊಟ ನೀಡುವ ಸಂಪ್ರದಾಯ ಕೇರಳದಲ್ಲಿದೆ.

ಎಂ.ಟಿ.

ತುಳಸಿ ತುಳಸಿ 'ಲ್ಯಾಮಿಯೇಸಿ' ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ. ಇದನ್ನು ಸಸ್ಯಶಾಸ್ತ್ರದಲ್ಲಿ 'ಆಸ್ಸಿಮಂ ಬಸಲಿಕಂ' ಎನ್ನುವರು. ತುಳಸಿ ಹಾಗೂ ಇದರ ಪ್ರಭೇದಗಳನ್ನು ಏಷ್ಯಾ, ಆಫ್ರಿಕಾ ಹಾಗೂ ಅಮೆರಿಕಾದ ಉಷ್ಣ ಮತ್ತು ಸಮಶೀತೋಷ್ಣ ವಲಯಗಳಲ್ಲಿ ಯಥೇಚ್ಛವಾಗಿ ಬೆಳೆಯಲಾಗುತ್ತದೆ. ಭಾರತದ ಎಲ್ಲಾ ಕಡೆಯಲ್ಲೂ ತುಳಸಿ ಗಿಡಗಳು ಕಾಣಸಿಗುತ್ತವೆ.

1. ಕೃಷ್ಣ ತುಳಸಿ : ಇದನ್ನು ಸಸ್ಯಶಾಸ್ತ್ರೀಯ ಪರಿಭಾಷೆಯಲ್ಲಿ ಆಸ್ಸಿಮಂ ಸ್ಯಾಂಕ್ಟಂ ಎಂದು ಕರೆಯುತ್ತಾರೆ. ಪವಿತ್ರ ತುಳಸಿ, ಹೋಲಿ ಬಸಿಲ್ ಎಂದೂ ಕೂಡ ಕರೆಯುವರು. ಎಲೆಯ ಬಣ್ಣ ನೀಲಿಗೆಂಪು ಇದ್ದು ಹೆಚ್ಚು ಔಷಧೀಯ ಗುಣಗಳನ್ನು ಹೊಂದಿದೆ.

2. ರಾಮ ತುಳಸಿ : ಇದಕ್ಕೆ ಸಸ್ಯಶಾಸ್ತ್ರಿಯ ಪರಿಭಾಷೆಯಲ್ಲಿ ಆಸ್ಸಿಮಂ ಗ್ಯಾಟಿಸ್ಸಿಮಂ ಎನ್ನುವರು. ಅಲ್ಲದೆ ವನತುಳಸಿ ಎಂದೂ ಕರೆಯುವರು. ಇದರ ಎಲೆ ತಿಳಿ ಹಸುರು ಬಣ್ಣವಿರುತ್ತದೆ.

3. ಕರ್ಪೂರ ತುಳಸಿ : ಇದನ್ನು ಸಸ್ಯಶಾಸ್ತ್ರೀಯ ಪರಿಭಾಷೆಯಲ್ಲಿ ಆಸ್ಸಿಮಂ ಕಿಲಿಮ್ಯಾಂಡ್ರಿಕಂ ಎನ್ನುವರು.

4. ನಾಯಿ ತುಳಸಿ : ಇದನ್ನು ಸಸ್ಯಶಾಸ್ತ್ರೀಯ ಪರಿಭಾಷೆಯಲ್ಲಿ ಅಮೆರಿಕಾನಂ ಎಂದು, ಇಂಗ್ಲಿಷಿನಲ್ಲಿ ಹೋಂ ಬಸಿಲ್ ಎಂದು ಕರೆಯುವರು. ಇದರ ಎಲೆಗಳ ಮೇಲೆ ಮೃದುವಾದ ತುಪ್ಪಳವಿರುತ್ತದೆ.

ಆಕಾರ : ತುಳಸಿ ಗಿಡ ಸುಮಾರು 30-40 ಸೆಂ.ಮೀ. ಎತ್ತರವಿದ್ದು ಪೊದರಿನಂತೆ ಬೆಳೆಯುತ್ತದೆ. ಸಸ್ಯದ ಭಾಗಗಳಲ್ಲಿ ತೈಲಗ್ರಂಥಿಗಳಿದ್ದು ಹಿತವಾದ ಪರಿಮಳ ಬೀರುತ್ತವೆ. ಎಲೆಗಳು ಅಭಿಮುಖ ಮಾದರಿಯಲ್ಲಿ

ಜೋಡಣೆಗೊಂಡಿರುತ್ತವೆ, ಬಿಡಿ ಎಲೆ 3.75-5 ಸೆಂ.ಮೀ. ಉದ್ದವಿರುತ್ತದೆ. ಎಲೆಯ ಅಂಚಿನ ಉದ್ದಕ್ಕೆ ಗರಗಸದಂತಹ ಕಚ್ಚುಗಳಿರುತ್ತವೆ. ಹೂಗೊಂಚಲು ಕಾಂಡದ ಅಗ್ರಭಾಗದಲ್ಲಿ ಮೂಡುತ್ತದೆ. ಹೂಗೊಂಚಲಿಗೆ 'ರೇಸಿಮ್' ಎನ್ನುವರು. ಬಿಡಿ ಹೂವು 0.72 - 1.25 ಸೆಂ.ಮೀ. ಉದ್ದವಿರುತ್ತದೆ. ಹೂವಿನಲ್ಲಿ ಐದು ಎಸಳುಗಳಿರುತ್ತವೆ. ಹೂವಿನ ದಳಗಳು ಬಿಳುಪು, ಕೆನ್ನೀಲಿ ಇಲ್ಲವೆ ಕೆನ್ನೀಲಿ ಬಿಳುಪು ಬಣ್ಣದಲ್ಲಿರುತ್ತವೆ. ಕೇಸರಗಳು ನಾಲ್ಕು, ಅವು ದಳಗಳಿಗಿಂತ ಮುಂದಕ್ಕೆ ಚಾಚಿರುತ್ತವೆ. ಶಲಾಕೆಯು



ಎರಡಾಗಿ ಸೀಳಿರುತ್ತದೆ. ಅಂಡಾಶಯದಲ್ಲಿ ಎರಡು ಕೋಶಗಳಿರುತ್ತವೆ. ಬೀಜ ತುಂಬಾ ಸಣ್ಣ. ಪ್ರತಿ ಕಾಯಿಯಲ್ಲಿ ನಾಲ್ಕು ಬೀಜಗಳಿರುತ್ತವೆ. ಬೀಜಗಳು ದಟ್ಟ ಕಂದು ಇಲ್ಲವೆ ಕಪ್ಪು ಬಣ್ಣದಲ್ಲಿರುತ್ತವೆ.

ಹವಾ ಮತ್ತು ಭೂಗುಣ

ಬೇಸಾಯ : ಹೆಚ್ಚು ಮಳೆಯಾಗುವ ಹಾಗೂ ಹಿಮ ಸುರಿಯುವ ಪ್ರದೇಶಗಳು ತುಳಸಿ ಗಿಡಕ್ಕೆ ಒಗ್ಗುವುದಿಲ್ಲ. ಬೆಟ್ಟ ಪ್ರದೇಶಗಳಲ್ಲಿ ಮುಂಗಾರು ಬೆಳೆಯಾಗಿಯೂ ಮತ್ತು ಮೈದಾನ ಪ್ರದೇಶಗಳಲ್ಲಿ ಮುಂಗಾರು ಮತ್ತು ಹಿಂಗಾರು ಬೆಳೆಯಾಗಿಯೂ ಬೆಳೆಯಬಹುದು. ಸಾಧಾರಣ ಬಿಸಿಲು ಇದ್ದಲ್ಲಿ ಉತ್ತಮ.

ಸಾಧಾರಣ ಫಲವತ್ತತೆಯಿರುವ ಹಾಗೂ ನೀರು ಬಸಿಯುವ ಮರಳು ಮಿಶ್ರಿತ ಗೋಡುಮಣ್ಣು ಯುಕ್ತವಾದುದು. ಕಪ್ಪು ಜಿಗುಟು ಮಣ್ಣು ಹಾಗೂ ಮರಳು ಮಣ್ಣು ಒಳ್ಳೆಯದಲ್ಲ.

ಸಸ್ಯಾಭಿವೃದ್ಧಿ : ತುಳಸಿಯನ್ನು ಬೀಜ ಬಿತ್ತುವುದು ಹಾಗೂ ಕಾಂಡವನ್ನು ಕಸಿ ಮಾಡುವುದರ ಮೂಲಕ ಬೆಳೆಸಬಹುದು. ಬೀಜವನ್ನು ಮೊದಲು ಒಟ್ಲು ಪಾತಿಗಳಲ್ಲಿ ಬಿತ್ತಿ, ಸಸಿಗಳು ಸ್ವಲ್ಪ ದೊಡ್ಡದಾದ ಅನಂತರ ಕಿತ್ತು ನಾಟಿ ಮಾಡಬೇಕು. ಬೀಜ ಬಿತ್ತಲು ಮೇ-ಜೂನ್ ಹಾಗೂ ಅಕ್ಟೋಬರ್-ನವೆಂಬರ್ ಯೋಗ್ಯಕಾಲ. ಚೆನ್ನಾಗಿ ಬಿಸಿಲು ಬೀಳುವ ಕಡೆ 4 ಮೀ. ಉದ್ದ, 1 ಮೀ. ಅಗಲ ಹಾಗೂ 10 ಸೆಂ.ಮೀ. ಎತ್ತರ ಇರುವಂತೆ ಪಾತಿ ಮಾಡಿಕೊಂಡು ಅನಂತರ ಚ.ಮೀ. ಒಂದಕ್ಕೆ 1 ಕೆ.ಜಿ. ಕೊಟ್ಟಿಗೆ ಗೊಬ್ಬರ ಮತ್ತು 1 ಕೆ.ಜಿ. ಕೊಳೆತ ಎಲೆಗೊಬ್ಬರವನ್ನು ಮಣ್ಣಿನಲ್ಲಿ ಮಿಶ್ರಮಾಡಬೇಕು. ಬೀಜವನ್ನು ಪುಡಿಗೊಬ್ಬರ ಇಲ್ಲವೆ ಮರಳಿನೊಂದಿಗೆ ಬೆರೆಸಿ ಸಾಲುಗಳಲ್ಲಿ ಬಿತ್ತಬೇಕು. ಸುಮಾರು 125 ಗ್ರಾಂ. ಬಿತ್ತನೆ ಬೀಜದಿಂದ ಒಂದು ಹೆಕ್ಟೇರ್ ಪ್ರದೇಶಕ್ಕಾಗುವಷ್ಟು ಸಸಿಗಳು ದೊರೆಯುತ್ತವೆ. ಹನಿ ನೀರಾವರಿ ಮಾಡುವುದರಿಂದ ಬೀಜ ತೇಲುವುದಿಲ್ಲ. ಬಿತ್ತಿದ ಎರಡು ಮೂರು ದಿನಗಳಲ್ಲಿ ಅವು ಮೊಳೆಯುತ್ತವೆ. ಸಸಿಗಳು 5-10 ಸೆಂ.ಮೀ. ಉದ್ದವಿದ್ದಾಗ ಕಿತ್ತು ನಾಟಿ ಮಾಡಬೇಕು.

ಸಸಿಗಳನ್ನು ನೆಡುವುದು : ಭೂಮಿಯನ್ನು ಒಂದೆರಡು ಸಾರಿ ಚೆನ್ನಾಗಿ ಉಳುಮೆ ಮಾಡಿ ಸಮ ಮಾಡಬೇಕು. ಅನುಕೂಲಕ್ಕೆ ತಕ್ಕಂತೆ ಮಡಿಗಳನ್ನು ಮಾಡಿ ಸಾಕಷ್ಟು ಪ್ರಮಾಣದಲ್ಲಿ ಗೊಬ್ಬರ ಹರಡಿ ಸಮನಾಗಿ ಮಿಶ್ರ ಮಾಡಿದ ಅನಂತರ ಸಾಲು ಬದುಗಳನ್ನು ಮಾಡಿ ಸಸಿಗಳನ್ನು ನೆಡಬೇಕು. ನೆಡುವ ಕಾಲಕ್ಕೆ ಮಣ್ಣು ಹಸಿಯಾಗಿದ್ದರೆ ಒಳ್ಳೆಯದು. ಸಾಲುಗಳ ನಡುವೆ 60 ಸೆಂ.ಮೀ. ಮತ್ತು ಸಸಿಗಳ ನಡುವೆ 40 ಸೆಂ.ಮೀ. ಅಂತರವಿರಬೇಕು. ಸಸಿಗಳನ್ನು ನಾಟಿ ಮಾಡಿದ ಅನಂತರ ಸ್ವಲ್ಪಪ್ರಮಾಣದಲ್ಲಿ ನೀರು ಹಾಯಿಸಬೇಕು.

ಗೊಬ್ಬರ : ಹೆಕ್ಟೇರಿಗೆ 15-20 ಟನ್ ತಿಪ್ಪೆ ಗೊಬ್ಬರ, 60 ಕೆ.ಜಿ. ಸಾರಜನಕ, 40 ಕೆ.ಜಿ. ರಂಜಕ ಮತ್ತು 40 ಕೆ.ಜಿ. ಪೊಟ್ಯಾಷ್ ಸತ್ವಗಳನ್ನು ಕೊಡಬೇಕು. ಸಾರಜನಕವನ್ನು ಮೂರು ಭಾಗವಾಗಿಸಿ, ಒಂದು ಭಾಗವನ್ನು ಬಿತ್ತನೆ ಅಥವಾ ನಾಟಿಗೆ ಮುಂಚೆ ಮತ್ತು ಉಳಿದ ಭಾಗಗಳನ್ನು ನಾಟಿ ಮಾಡಿದ ಒಂದೆರಡು ತಿಂಗಳ ಅನಂತರ ಮೇಲುಗೊಬ್ಬರವಾಗಿ ಕೊಡಬೇಕು.

ಹೆಚ್ಚು ನೀರಿನ ಅಗತ್ಯವಿಲ್ಲ. ಮಳೆ ಇಲ್ಲದ ದಿನಗಳಲ್ಲಿ ವಾರಕ್ಕೊಮ್ಮೆ ನೀರು ಕೊಟ್ಟರೆ ಸಾಕು. ಮೊದಲ ಸುತ್ತಿನ ಅಂತರಬೇಸಾಯವನ್ನು ಸಸಿಗಳನ್ನು ನಾಟಿ ಮಾಡಿದ ಒಂದು ತಿಂಗಳ ಅನಂತರ ಮಾಡಬೇಕು. ಸಾಲುಗಳ ನಡುವೆ ಒಂದೆರಡು ಸಾರಿ ಕೈಯಾಡಿಸಿ ಕಳೆಗಳನ್ನು ಕಿತ್ತು ಹಾಕಬೇಕು. ಮೇಲ್ಮಣ್ಣನ್ನು ಸಡಿಲಗೊಳಿಸುವುದರಿಂದ ಕಳೆ ನಿಯಂತ್ರಣ ಸಾಧ್ಯ.

ಕೊಯ್ಲು ಮತ್ತು ಇಳುವರಿ : ಸಸಿಗಳನ್ನು ನಾಟಿ ಮಾಡಿದ 2-3 ತಿಂಗಳ ಬಳಿಕ ಕೊಯ್ಲು ಮಾಡಬಹುದು. ಸಸಿಗಳನ್ನು ಬುಡಮಟ್ಟಕ್ಕೆ ಕತ್ತರಿಸಿ ತೆಗೆಯುವುದರ ಜೊತೆಗೆ ಕೆಲವೊಮ್ಮೆ ಹೂಗಳನ್ನು ಮಾತ್ರವೇ ಬಿಡಿಸಿ ತೆಗೆಯುವುದೂ ಉಂಟು. ಕೊಯ್ಲಿನಲ್ಲಿ ಸಸಿಗಳನ್ನು ಬುಡಮಟ್ಟಕ್ಕೆ ಕತ್ತರಿಸಿದರೆ ಹೆಕ್ಟೇರಿಗೆ 12-15 ಟನ್ ಇಳುವರಿ, ಹೂ ತೆನೆಗಳಾದಲ್ಲಿ ಹೆಕ್ಟೇರಿಗೆ 3-4 ಟನ್ನುಗಳ ಇಳುವರಿ ಸಾಧ್ಯ. ಎರಡು ಮೂರು ತಿಂಗಳಿಗೊಮ್ಮೆ ಕೊಯ್ಲು ಮಾಡಬಹುದು.

ತೈಲೋತ್ಪಾದನೆ : ಕೊಯ್ಲು ಮಾಡಿದ ತರುವಾಯ ಹೂತೆನೆಗಳು ಅಥವಾ ಸಸಿಗಳನ್ನು ನಾಲ್ಕೈದು ಗಂಟೆಗಳವರೆಗೆ ಬಿಸಿಲಿನಲ್ಲಿ ಹರಡಿ ಒಣಗಿಸಬೇಕು. ಆಗ ಅವುಗಳಲ್ಲಿನ ತೇವಾಂಶ ಕಡಿಮೆಯಾಗುತ್ತದೆ.

ಅನಂತರ ಬಟ್ಟಿ ಸಾಧನಕ್ಕೆ ತುಂಬಿಸಿ ಬಿಸಿ ಹವೆಯನ್ನು ಹಾಯಿಸಬೇಕು. ಇದರಿಂದ ಹೊರಬಿದ್ದ ತೈಲಕಣಗಳು ಕೆಳಭಾಗದಲ್ಲಿನ ಪಾತ್ರೆಯಲ್ಲಿ ಸಂಗ್ರಹಗೊಳ್ಳುತ್ತವೆ. ಹೂತೆನೆಗಳಾದರೆ ಹೆಕ್ಟೇರಿಗೆ 12-14 ಕೆ.ಜಿ. ಮತ್ತು ಗಿಡಗಳಾದರೆ 20-22ಕೆ.ಜಿ. ಸುಗಂಧದೆಣ್ಣೆ ದೊರಕುತ್ತದೆ.

ರೋಗ ಮತ್ತು ಕೀಟಗಳು : ಸೊರಗು ರೋಗ, ಎಲೆಸೊರಗು ಮತ್ತು ಬಾಡುವ ರೋಗ ಮುಖ್ಯವಾದವು. ಸೊರಗು ರೋಗವು ಆಲ್ಟರ್ನೇರಿಯ ಪ್ರಭೇದದ ರೋಗಾಣುಗಳಿಂದ ತಗಲುತ್ತದೆ. ಪ್ರಾರಂಭಕ್ಕೆ ಎಲೆಗಳ ಮೇಲೆ ಹಳದಿ ಕಲೆಗಳು ಕಾಣಿಸಿಕೊಳ್ಳುತ್ತವೆ. ದಿನ ಕಳೆದಂತೆ ಅವು ಕಪ್ಪು ಬಣ್ಣಕ್ಕೆ ಮಾರ್ಪಟ್ಟು ಅಂತಹ ಎಲೆಗಳು ಉದುರಿ ಬೀಳುತ್ತವೆ. ಎಲೆ ಸೊರಗು ರೋಗವು ಕೊಲ್ಲೆಟೊಟ್ರೈಕಂ ಪ್ರಭೇದದ ರೋಗಾಣುಗಳಿಂದ ಉಂಟಾಗುತ್ತದೆ. ರೋಗ ತಗುಲಿದಾಗ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಇಂಥ ಎಲೆಗಳು ಬೇಗ ಉದುರಿ ಹೋಗುತ್ತವೆ. ಈ ಎರಡೂ ರೋಗಗಳ ಹತೋಟಿಗೆ ಡೈಥೇನ್ ಎಂ - 45 ಅನ್ನು 10 ಲೀಟರ್ ನೀರಿಗೆ 20 ಗ್ರಾಂ.ನಂತೆ ಬೆರೆಸಿ ಸಿಂಪಡಿಸಬೇಕು. ಬಾಡುವ ರೋಗವು ಫ್ಯುಸೇರಿಯಂ ಪ್ರಭೇದದ ರೋಗಾಣುಗಳಿಂದ ಬರುತ್ತದೆ. ಗಿಡಗಳು ಇದ್ದಕ್ಕಿದ್ದಂತೆ ಬಾಡಿ ಸಾಯುತ್ತವೆ. ಪ್ರಾರಂಭಕ್ಕೆ ಒಂದೆರಡು ರೆಂಬೆಗಳು ಬಾಡಿದಂತಾಗಿ ಅನಂತರ ಇಡೀ ಗಿಡ ಸೊರಗಿ ಸಾಯುತ್ತದೆ. ಮಳೆಗಾಲದಲ್ಲಿ ಈ ರೋಗದ ಹಾವಳಿ ಹೆಚ್ಚು. ಇದಕ್ಕೆ ಪರಿಹಾರಕವಾಗಿ ನಾಟಿ ಮಾಡುವ ಮುಂಚೆ ಸಸಿಗಳ ಬುಡಭಾಗವನ್ನು ಅಗಲಾಲ್ ಅಥವಾ ಮತ್ತಾವುದಾದರೂ ಔಷಧೀಯ ದ್ರಾವಣದಲ್ಲಿ ಅದ್ದಬೇಕು. ತುಳಸಿ ಗಿಡಕ್ಕೆ ಯಾವ ಹಾನಿಕಾರಕ ಕೀಟಗಳ ಬಾಧೆಯೂ ಇಲ್ಲ.

ತುಳಸಿಯ ಪ್ರಾಮುಖ್ಯ

ಧಾರ್ಮಿಕವಾಗಿ : ಭಾರತೀಯ ಸಂಸ್ಕೃತಿಯಲ್ಲಿ ತುಳಸಿಯ ಪಾತ್ರ ಮಹತ್ತ್ವದ್ದು. ತುಳಸಿ ಗಿಡ ಹಿಂದೂಗಳಿಗೆ ಪವಿತ್ರವಾದುದು. ತುಳಸಿ ಕಟ್ಟೆಯು ಇರದ ಹಿಂದೂಗಳ ಮನೆಯೇ ಇಲ್ಲ. ತುಳಸಿಯನ್ನು ಸ್ಪರ್ಶಿಸುವುದರಿಂದ ಪಾಪಗಳು ಪರಿಹಾರವಾಗುತ್ತವೆಯೆಂಬ ನಂಬಿಕೆಯಿದೆ.

ಪೂಜಾ ಕಾರ್ಯಗಳಲ್ಲಿ ತುಳಸಿ ಮುಖ್ಯವಾದದ್ದು. ಗಣಪತಿಯನ್ನು ಬಿಟ್ಟು ಉಳಿದ ದೇವತೆಗಳ ಅರ್ಚನೆಗೆ ಬಳಸುವರು. ಪೂಜೆಯಾದ ಅನಂತರ ತೀರ್ಥದ ಜೊತೆಗೆ ಅರ್ಚನೆಗೆ ಬಳಸಿದ ತುಳಸಿ ದಳಗಳನ್ನು ಪ್ರಸಾದವಾಗಿ ಕೊಡುತ್ತಾರೆ. ಆ ದಳಗಳನ್ನು ಕಿವಿಯಲ್ಲಿ, ಮುಡಿಯಲ್ಲಿ ಧರಿಸುವರು. ಶ್ರಾದ್ಧಕಾಲದಲ್ಲಿ, ದಾನಕಾಲದಲ್ಲಿ ತುಳಸಿ ಅತ್ಯವಶ್ಯಕ. ಮೃತಕಳೇಬರದ ಮೇಲೆ ತುಳಸಿಯನ್ನು ಇಟ್ಟು ಸುಟ್ಟರೆ ಮೃತನ ಆತ್ಮಕ್ಕೆ ಸದ್ಗತಿ ದೊರೆಯುತ್ತದೆಯೆಂಬ ನಂಬಿಕೆಯಿದೆ. ತುಳಸಿಯಿಂದ ವಿಷ್ಣುವನ್ನು ಪೂಜಿಸಿದರೆ ಜನ್ಮಾಂತರಾರ್ಜಿತ ಪಾಪಗಳು ನೀಗುತ್ತವೆ, ಮರಣಾನಂತರ ವಿಷ್ಣುಲೋಕ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆಗಳಿವೆ.

ಔಷಧವಾಗಿ : ಆರೋಗ್ಯದ ದೃಷ್ಟಿಯಿಂದ ಪ್ರತಿದಿನ 7 ರಿಂದ 8 ತುಳಸಿ ಎಲೆಗಳನ್ನು ತಿನ್ನುವುದು ಉತ್ತಮ. ಇದರಿಂದ ರೋಗ ನಿರೋಧಕ ಶಕ್ತಿ ವೃದ್ಧಿಯಾಗುವುದಲ್ಲದೆ ಬಾಯಿಯ ದುರ್ಗಂಧ ಕೂಡ ನಿವಾರಣೆಯಾಗುತ್ತದೆ. ತುಳಸಿ ರಸದಲ್ಲಿ ಏಲಕ್ಕಿ ಅರೆದು ಹಣೆ ಹಾಗೂ ಕಿವಿಯ ಭಾಗಕ್ಕೆ ಹಚ್ಚಿದರೆ ತಲೆನೋವು ಕಡಿಮೆಯಾಗುತ್ತದೆ. ತುಳಸಿ ಎಲೆಗಳನ್ನು ಅರೆದು ಜೇನುತುಪ್ಪದಲ್ಲಿ ಸೇವಿಸಿದರೆ ಕೆಮ್ಮು, ಕಫ, ಗಂಟಲು ಕೆರೆತ ಗುಣವಾಗುತ್ತದೆ. ಹಲ್ಲುನೋವು ಬಂದಾಗ 5-6 ತುಳಸಿ ಎಲೆಗಳನ್ನು ಅಗಿದರೆ ಕಡಿಮೆಯಾಗುತ್ತದೆ. ನಿಂಬೆರಸ ಹಾಗೂ ತುಳಸಿ ರಸ ಸೇರಿಸಿ ನಿತ್ಯವೂ ಸೇವಿಸಿದರೆ ಮೂತ್ರದೋಷ ನಿವಾರಣೆಯಾಗುತ್ತದೆ. ತುಳಸಿ ಎಲೆ, ಈರುಳ್ಳಿ ರಸ, ಕರಿಮೆಣಸುಗಳನ್ನು ಸಮಪ್ರಮಾಣದಲ್ಲಿ ಅರೆದು ಗುಳಿಗೆ ಮಾಡಿ ದಿನಕ್ಕೆರಡರಂತೆ ತೆಗೆದುಕೊಂಡರೆ ಮೂಲವ್ಯಾಧಿಯ ಉರಿ ಕ್ರಮೇಣ ಕಡಿಮೆಯಾಗುತ್ತದೆ. ತುಳಸಿ ಕಷಾಯ ಕುಡಿದರೆ ದೇಹ ಸದೃಢವಾಗುವುದರೊಂದಿಗೆ ಹೊಟ್ಟೆ ಸಂಬಂಧಿ ರೋಗಗಳನ್ನು ದೂರವಿರಿಸಬಹುದು. ಆಯುರ್ವೇದದ ಪ್ರಕಾರ ಹಂದಿಜ್ವರ ನಿವಾರಣೆಗೆ ತುಳಸಿ ರಾಮಬಾಣದಂತೆ, ಇದರಲ್ಲಿರುವ ಔಷದೀಯ ಗುಣಗಳು ಎಚ್1ಎನ್1 ರೋಗಾಣುಗಳು ಶರೀರ ಪ್ರವೇಶಿಸದಂತೆ ರಕ್ಷಿಸುತ್ತದೆ. ಒಟ್ಟಿನಲ್ಲಿ ಉತ್ತಮ ಆರೋಗ್ಯಕ್ಕಾಗಿ ತುಳಸಿ ಸೇವನೆ ಅತ್ಯಗತ್ಯ.


ಸೌಂದರ್ಯವರ್ಧಕವಾಗಿ : ಸ್ನಾನಕ್ಕೆ ಅರ್ಧಗಂಟೆ ಮೊದಲು ಅರಿಸಿನ ಹಾಗೂ ತುಳಸಿ ರಸ ಹಚ್ಚಿಕೊಂಡರೆ ಮುಖ ಮೃದುವಾಗಿ ಕಾಂತಿಯುಕ್ತವಾಗುತ್ತದೆ. ಅಲರ್ಜಿ ಮೊದಲಾದ ಚರ್ಮರೋಗ ಕೂಡ ವಾಸಿಯಾಗುತ್ತದೆ. ತುಳಸಿ ಎಲೆಗಳನ್ನು ಅರೆದು ಮುಖಕ್ಕೆ ಹಚ್ಚಿದರೆ ಕ್ರಮೇಣ ಮುಖದಲ್ಲಿರುವ ಕಲೆಗಳು ಮಾಯವಾಗುತ್ತವೆ. ತಲೆಹೊಟ್ಟು ನಿವಾರಣೆಗೆ ತುಳಸಿ ರಸವನ್ನು ಲೇಪಿಸಬಹುದು. ಇದರಿಂದ ಕೂದಲು ಉದುರುವುದೂ ಕಡಿಮೆಯಾಗುತ್ತದೆ. ತುಳಸಿ ಎಲೆಯ ರಸವನ್ನು ಎಣ್ಣೆಯಲ್ಲಿ ಕಾಯಿಸಿ ತಲೆಗೆ ಹಚ್ಚುವುದರಿಂದ ತಲೆಯಲ್ಲಿನ ಹೇನು, ಹೊಟ್ಟು ಬರುವಿಕೆ ನಿವಾರಣೆಯಾಗುತ್ತದೆ.

ಆಹಾರ ಪದ್ಧತಿಯಲ್ಲಿ : ತುಳಸಿ ನಳಪಾಕಕ್ಕೆ ಯೋಗ್ಯ ಸಸ್ಯವಾಗಿದ್ದು ಇಟಾಲಿಯನ್ ಪಾಕದಲ್ಲಿ ಪ್ರಮುಖವಾಗಿ ಬಳಸಲ್ಪಡುತ್ತದೆ. ಜೊತೆಗೆ ಇದು ತೈವಾನ್‌ನಂತಹ ಈಶಾನ್ಯ ಏಷ್ಯಾ ಹಾಗೂ ಥೈಲ್ಯಾಂಡ್, ವಿಯೆಟ್ನಾಂ, ಕಾಂಬೋಡಿಯ ಹಾಗೂ ಲಾವೋಸ್‌ನಂತಹ ಆಗ್ನೇಯ ಏಷ್ಯಾದ ಪಾಕ ಪದ್ಧತಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಸ್ಯದ ಜಾತಿ ಹಾಗೂ ತಳಿಯನ್ನು ಅವಲಂಬಿಸಿ ಎಲೆಗಳು ಸ್ವಲ್ಪ ಮಟ್ಟಿಗೆ ಆನಿಸ್‌ನ ರುಚಿಯನ್ನು ಹೊಂದಿರುತ್ತವೆ. ತುಳಸಿಯಿಂದ ಮಾಡಿದ ಸುಗಂಧದೆಣ್ಣೆಯನ್ನು ಸಿಹಿತಿಂಡಿಗಳ ತಯಾರಿಕೆಯಲ್ಲಿ ಬಳಸುವರು.




ವಿ.ಎಸ್.ಕೆ.


ಬೀಸು ಕಲ್ಲು




ರೋಣುಗಲ್ಲು



ಬತ್ತ ಕುಟ್ಟುವುದು



ಒರಳು ಕಲ್ಲು





ಮಾನವ ಸಂಸ್ಕೃತಿಯ ವಿಕಾಸದ ಹಾದಿಯಲ್ಲಿ ಕೃಷಿ ಅತ್ಯಂತ ಪ್ರಮುಖವಾದ ಅನ್ವೇಷಣೆ. ಕೃಷಿಯನ್ನು ಹೊರತುಪಡಿಸಿ ಸಮಾಜದ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಜಾಗತೀಕರಣ, ವಸಾಹತೀಕರಣಗಳ ಪ್ರಭಾವದಿಂದ ಇಡೀ ಭಾರತೀಯ ಸಮಾಜದ ಸ್ವರೂಪವೇ ಬದಲಾಗಿದೆ. ಇಲ್ಲಿ ಮೇಲ್ನೋಟಕ್ಕೆ ಕೃಷಿ ದೇಶದ ಬೆನ್ನೆಲುಬು ಎಂದು ಹೇಳಲಾಗುತ್ತಿದೆ. ಆದರೆ ಇಂದಿನ ದಿನಮಾನಗಳಲ್ಲಿ ಕೃಷಿಸಮುದಾಯ ವ್ಯವಸಾಯಕ್ಕೆ ಬೆನ್ನು ತಿರುಗಿಸುತ್ತಿದೆ. ಕೈಗಾರಿಕೆಗಳು ಹೆಚ್ಚು ಹೆಚ್ಚು ಸ್ಥಾಪನೆಗೊಳ್ಳುವ ಮೂಲಕ ದೇಶ್ಯಮೂಲ ಪಾರಂಪರಿಕ ಕೃಷಿಪದ್ಧತಿಗಳು ಕಣ್ಮರೆಯಾಗುತ್ತಿವೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ. ಈ ನಡುವೆಯೇ ಬಹುರಾಷ್ಟ್ರೀಯ ಕಂಪೆನಿಗಳು ಸರಬರಾಜು ಮಾಡುತ್ತಿರುವ ವಿವಿಧ ಹೈಬ್ರಿಡ್ ಬೀಜಗಳು, ಬಳಸುವ ವಿವಿಧ ರಾಸಾಯನಿಕಗಳು, ಆಧುನಿಕ ಉಪಕರಣಗಳು ನೆಲವನ್ನು ವಿಷಯುಕ್ತಗೊಳಿಸಿವೆ. ಅಗತ್ಯವಿರುವ ಆಹಾರೋತ್ಪಾದನೆಯ ಮೇಲೆ ತೀವ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ. ಈ ನಡುವೆ ದೇಶ್ಯಮೂಲ ಕೃಷಿ ಪರಂಪರಾಜ್ಞಾನ ಹಿನ್ನೆಲೆಗೆ ಸರಿಯುತ್ತಿರುವುದು ತೀವ್ರ ಕಳವಳಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಕಣ್ಮರೆಯಾಗುತ್ತಿರುವ ನೆಲಮೂಲಜ್ಞಾನ ಪರಂಪರೆಗಳನ್ನು ಶೋಧಿಸಿ, ಮರುಶೋಧಿಸಿ, ಸಂರಕ್ಷಿಸಿ, ಸಂವರ್ಧಿಸುವ ಪ್ರಯತ್ನಗಳೂ ನಡೆಯುತ್ತಿರುವುದು ಅತ್ಯಂತ ಆಶಾದಾಯಕ ಬೆಳವಣಿಗೆ. ಇದರ ಭಾಗವಾಗಿ 'ದಕ್ಷಿಣ ಭಾರತೀಯ ದೇಶಿ ಕೃಷಿವಿಜ್ಞಾನ ಕೋಶ' ಮಹತ್ವದ್ದು ಎಂದೆನಿಸುತ್ತದೆ. ಕರ್ನಾಟಕದ ಪಾರಂಪರಿಕ ಕೃಷಿ ವಿಧಾನಗಳು ಮತ್ತು ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲಿ ಪ್ರಚಲಿತವಿರುವ ಕೃಷಿ ವಿಧಾನಗಳು ಪರಸ್ಪರ ಸಾಮ್ಯತೆಯನ್ನು ಹೊಂದಿವೆ. ಆದ್ದರಿಂದ ನಾಡಿನ ಕೃಷಿಸಂಬಂಧೀ ಸಂಸ್ಕೃತಿ ವಿವರಗಳ ಜೊತೆಗೆ ಒಟ್ಟು ದಕ್ಷಿಣ ಭಾರತದ ಕೃಷಿ ಸಂಬಂಧೀ ಮಾಹಿತಿಗಳು ಇಲ್ಲಿ ಹೇರಳವಾಗಿವೆ. ಈ ಹಿನ್ನೆಲೆಯಲ್ಲಿ ಇಂಥ ಬೃಹತ್‌ಪ್ರಮಾಣದ ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ'ವನ್ನು ತಮಗೆ ಲಭ್ಯವಿದ್ದ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಅತ್ಯಂತ ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ, ಅರ್ಥಪೂರ್ಣವಾಗಿ ಸಂಯೋಜಿಸಿ ರೂಪಿಸುವಲ್ಲಿ ಕಾರ್ಯನಿರ್ವಾಹಕ ಸಂಪಾದಕ ಪ್ರೊ. ಆರ್ವಿಯಸ್ ಸುಂದರಂ, ಸಂಪಾದಕ ಪ್ರೊ. ಸ.ಚಿ. ರಮೇಶ ಮತ್ತು ಸಂಪಾದಕ ಮಂಡಳಿಯವರು ಅಹರ್ನಿಶಿ ಶ್ರಮಿಸಿದ್ದಾರೆ. ಅವರ ಶ್ರದ್ಧೆ, ಶ್ರಮಕ್ಕೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ